ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ಎಂಟನೆಯ ಸಂಪುಟ

"ಶಬ್ದಪಾರಮಾರ್ಗಮಶಕ್ಯಂ"
–ಕೇಶಿರಾಜ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು–೧೮

೧೯೯೫

KANNADA NIGHANTU - VOL-VIII
Second Edition : 2010
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : XXXIV + 8 + 7748 to 9021 + VIII Price : Rs. 350=00

ಮೊದಲನೆಯ ಮುದ್ರಣ – ೧೯೯೫
ಎರಡನೆಯ ಮುದ್ರಣ – ೨೦೧೦
ಪ್ರತಿಗಳು : ೨೦೦೦
ಬೆಲೆ : ಮುನ್ನೂರು ಐವತ್ತು ರೂಪಾಯಿಗಳು

@ ಹಕ್ಕುಗಳನ್ನು ಕಾಯ್ದಿರಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು (೨೦೧೦)

ಅಧ್ಯಕ್ಷರು

ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಗೌರವ ಕಾರ್ಯದರ್ಶಿಗಳು

ಪ್ರೊ. ಎಚ್.ಕೆ. ಮಳಲಿಗೌಡ

ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ

ಗೌರವ ಕೋಶಾಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಮುದ್ರಣ: ರಾಜಾ ಪ್ರಿಂಟರ್ಸ್
ನಂ.೫೯, ೪ನೆ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು– ೫೬೦ ೦೨೭.
ದೂರವಾಣಿ : ೨೨೨೩೪೪೦೬೬

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೯೫ನೆಯ ಮೇ ತಿಂಗಳಿನಲ್ಲಿ ಇದ್ದಂತೆ)

ಅಧ್ಯಕ್ಷರು

ಡಾ. ಜಿ. ಎಸ್. ಗಾಯಿ, ಪಿಎಚ್.ಡಿ. (೬-೨-೯೫ರ ವರೆಗೆ)

ಪ್ರಧಾನ ಸಂಪಾದಕರು

ಶ್ರೀ ಎನ್. ಬಸವಾರಾಧ್ಯ, ಎಂ.ಎ.

ಸದಸ್ಯರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
ಡಾ. ಆರ್.ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಡಾ. ಹಾ.ಮಾ. ನಾಯಕ, ಎಂ.ಎ., ಪಿಎಚ್.ಡಿ.
ಡಾ. ಜಿ.ಎಸ್. ಶಿವರುದ್ರಪ್ಪ, ಎಂ.ಎ., ಪಿಎಚ್.ಡಿ
ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿಎಚ್.ಡಿ.
ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಎಂ.ಎ. ಪಿಎಚ್.ಡಿ.
ಡಾ. ಕೆ.ವಿ. ರಮೇಶ್, ಎಂ.ಎ., ಪಿಎಚ್.ಡಿ.
ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ.

ಕರ್ನಾಟಕ ಸರ್ಕಾರದ ಪ್ರತಿನಿಧಿಗಳು

ಡಾ. ಸಿದ್ಧಯ್ಯ ಪುರಾಣಿಕ, ಡಿ.ಲಿಟ್. (೫-೯-೯೪ರವರೆಗೆ)

ಪರಿಷತ್ತಿನ ಅಧ್ಯಕ್ಷರು

ಶ್ರೀ ಗೊ.ರು. ಚನ್ನಬಸಪ್ಪ

ಪರಿಷತ್ತಿನ ಗೌರವ ಕಾರ್ಯದರ್ಶಿಗಳು

ಪ್ರೊ. ಎಸ್. ಶ್ರೀನಿವಾಸನ್, ಎಂ.ಎ.
ಪ್ರೊ. ಎಂ. ಜಿ. ನಾಗರಾಜ್, ಎಂ.ಎಸ್ಸಿ., ಎಂ.ಎ., ಎಂ.ಎಡ್.

ಪರಿಷತ್ತಿನ ಗೌರವ ಕೋಶಾಧಿಕಾರಿಗಳು

ಪ್ರೊ. ಹೆಚ್.ಆರ್. ದಾಸೇಗೌಡ, ಎಂ.ಎ., ಬಿ.ಎಲ್.

ಕನ್ನಡ ನಿಘಂಟು ಕಚೇರಿಯ ಸಿಬ್ಬಂದಿ

(೧೯೯೫ನೆಯ ಮೇ ತಿಂಗಳಿನಲ್ಲಿ ಇದ್ದಂತೆ)

ಪ್ರಧಾನ ಸಂಪಾದಕರು

ಶ್ರೀ ಎನ್. ಬಸವಾರಾಧ್ಯ, ಎಂ.ಎ.

ಉಪಸಂಪಾದಕರು

ಶ್ರೀಮತಿ ಉಮಾದೇವಿ, ಎಂ.ಎ.

ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ.

ಶ್ರೀಮತಿ ಎಂ.ಎಸ್. ಸುಜಯ, ಎಂ.ಎ.

ಸಹಾಯಕ ಸಂಪಾದಕರು

ಶ್ರೀ ಬಿ. ಆರ್. ಬಸವರಾಜ, ಎಂ.ಎ.

ಪೂರ್ಣಕಾಲದ ಸಹಾಯಕರು

ಶ್ರೀ ಕೆ. ಆರ್. ಶೇಷಗಿರಿ, ಎಂ.ಎ.

ಬೆರಳಚ್ಚುಗಾರ್ತಿಯರು : ಶ್ರೀಮತಿ ಎ. ನೇತ್ರಾವತಿಬಾಯಿ, ಶ್ರೀಮತಿ ಸಿ. ಎನ್. ವಿಜಯಲಕ್ಷ್ಮಿ

ಸಹಾಯಕರು : ಶ್ರೀ ರಾಘವೇಂದ್ರ ಪ್ರಸಾದ್, ಶ್ರೀ ಆರ್. ಶಂಕರಪ್ಪ, ಶ್ರೀ ರೇವಯ್ಯ

ಅಧ್ಯಕ್ಷರ ನುಡಿ

'ನಿಘಂಟು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟು' ಎಂದೇ ಖ್ಯಾತವಾಗಿರುವ ಈ ಮಹಾನಿಘಂಟಿನ ಎಂಟು ಸಂಪುಟಗಳನ್ನು ಅದು ಪ್ರಕಟವಾದ ೧೫ ವರ್ಷಗಳ ನಂತರ ಮತ್ತಷ್ಟು ಸುಂದರವಾಗಿ ಮರುಮುದ್ರಣಗೊಳಿಸಿ ಕನ್ನಡ ಕುಲಕೋಟಿಗೆ ಅರ್ಪಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡಿರುವುದು ಅದರ ಸಂಪನ್ನತೆ ಮತ್ತು ಅರ್ಹತೆಗಳಿಂದಾಗಿಯೇ ಎಂಬುದನ್ನು ಲೋಕದೆದುರು ಬಿಚ್ಚಿತೋರಿಸುವ ಸಾಧನಗಳಲ್ಲಿ ಮುಖ್ಯವಾದದ್ದು ಈ ಬೃಹತ್ ನಿಘಂಟು. ಕನ್ನಡದ ಸಮಸ್ತ ಜ್ಞಾನವನ್ನೂ ತನ್ನೊಳಗೆ ಐಕ್ಯಗೊಳಿಸಿಕೊಂಡಿರುವ ಈ ನಿಘಂಟಿನ ವಿವಿಧ ಸಂಪುಟಗಳಲ್ಲಿ ಶಬ್ದವೊಂದರ ಅರ್ಥ, ವಿವರಣೆ, ಉದಾಹರಣೆ ಒಮ್ಮೊಮ್ಮೆ ಅರ್ಥಪುಟವನ್ನು ದಾಟಿ ಒಂದು ಪುಟವನ್ನು ಆವರಿಸಿಕೊಂಡಿರುವುದುಂಟು.

ಕ್ರಿ.ಶ.೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭವಾಗಿ ಈ ಸಂಪುಟ ಯೋಜನೆ ಅನುಷ್ಠಾನಗೊಂಡ ೧೯೯೫ರವರೆಗೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಿಂದಲೂ ಉಲ್ಲೇಖಗಳನ್ನು ನೀಡಲಾಗಿರುವುದು, ಕೆಲವೊಮ್ಮೆ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗುವ ಸಂದರ್ಭಗಳನ್ನು ಜೊತೆಗಿರಿಸಿ ಕೊಟ್ಟಿರುವುದು, ಪ್ರತಿಯೊಂದು ಶಬ್ದವನ್ನೂ ನಾಮಪದ ಅಥವಾ ಕ್ರಿಯಾಪದವೆಂದು ಖಚಿತವಾಗಿ ವಿಂಗಡಿಸಿಕೊಂಡಿರುವುದು, ಅರ್ಥ ಸ್ಪಷ್ಟೀಕರಣಕ್ಕೆಂದು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯ ಅಥವಾ ವಾಕ್ಯತುಂಡುಗಳೇ ಮೂಲಕಾವ್ಯವನ್ನು ಓದಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸುವುದು – ಈ ಎಲ್ಲ ಅಂಶಗಳು ಇದರ ಅಪೂರ್ವತೆಯನ್ನು ಎತ್ತಿ ಹಿಡಿಯುವ ಸಾಕ್ಷಿಕಲ್ಲುಗಳಾಗಿವೆ. ನಿಘಂಟು ಎನ್ನುವುದೇ ತುಂಬ ವೈಜ್ಞಾನಿಕವಾದ, ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ, ಭಾಷೆಯಲ್ಲಿರುವ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸಬೇಕೆಂದು ತಿಳಿಸಿಕೊಡುವ ರಚನೆಯಾಗಿರುವುದರಿಂದ ಜ್ಞಾನೇಂದ್ರಿಯಗಳೆಲ್ಲದರ ಎಚ್ಚರದ ದುಡಿಮೆಯನ್ನು ಬಯಸುತ್ತದೆ. ಕನ್ನಡದ ಅಭಿಮಾನವನ್ನು ಮೈತುಂಬಿಕೊಂಡ ಘನ ವಿದ್ವಾಂಸರ ಸತತ ಪರಿಶ್ರಮದಿಂದ ಈ ಯೋಜನೆ ಶಿಸ್ತುಬದ್ಧವಾಗಿ ಯಶಕಂಡಿದೆ. ಮೊದಲ ಮುದ್ರಣದ ೧೦,೦೦೦ ಪ್ರತಿಗಳು ಕೆಲವೇ ವರ್ಷಗಳಲ್ಲಿ ಕನ್ನಡಿಗರ ಮನೆಯ ಕಪಾಟುಗಳನ್ನು, ಗ್ರಂಥಭಂಡಾರಗಳನ್ನು, ಶಾಲೆಕಾಲೇಜುಗಳನ್ನು ಅಲಂಕರಿಸಿದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಧನ್ಯತಾಭಾವವನ್ನು ತಳೆಯುವಂತಾಯಿತು. ಆದರೆ ನಿಘಂಟುವಿನ ಉಪಯುಕ್ತತೆಯನ್ನು ತಡವಾಗಿ ಅರ್ಥಮಾಡಿಕೊಂಡವರು ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರಿಷತ್ತಿಗೆ ದೂರವಾಣಿ ಕರೆ ಮಾಡಿ, ಮಾರಾಟ ವಿಭಾಗದಲ್ಲಿ ವಿಚಾರಿಸಿ, ಪುಸ್ತಕ ಮಳಿಗೆಗಳಲ್ಲಿ ಹುಡುಕಾಡಿ ಸಿಗದೆ ನಿರಾಶರಾಗಿದ್ದಾರೆ. ಮರುಪ್ರಕಟಿಸುವಂತೆ ಒತ್ತಾಯ ಮಾಡಿದ್ದಾರೆ.

ಎಂಟು ಸಂಪುಟಗಳಲ್ಲಿ, ಒಂಬತ್ತು ಸಾವಿರಕ್ಕಿಂತಲೂ ಅಧಿಕ ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ, ಎಲ್ಲರ ಮನೆಯನ್ನೂ ಬೆಳಗಬೇಕಾಗಿರುವ ಈ ನಿಘಂಟನ್ನು ಮುದ್ರಿಸುವುದಾಗಲೀ, ಮುದ್ರಿತ ಪ್ರತಿಗಳನ್ನು ಒಂದೆಡೆ ಜೋಡಿಸಿಡುವುದಾಗಲೀ, ಮಾರಾಟದ ವ್ಯವಸ್ಥೆ ಮಾಡುವುದಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಾಗಲೀ ಅಷ್ಟೊಂದು ಸುಲಭವಾದ ಕೆಲಸವಲ್ಲ. ಈ ಅಸಾಧ್ಯವನ್ನು ಸಾಧ್ಯವಾಗಿಸುವ ಧೈರ್ಯೋತ್ಸಾಹಗಳು ಪರಿಷತ್ತಿನೊಡಲಲ್ಲಿ ಚಿಮ್ಮುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಕಾರಣವಾಯಿತೆಂದರೆ ಅದನ್ನು ಯಾರೂ ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಮಾತುಗಳನ್ನು ಪ್ರೀತಿಯಿಂದ ಆಲಿಸುತ್ತಿರುವುದು, ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಸಾರ್ವಭೌಮ ಪ್ರತಿನಿಧಿಯೆಂದೇ ಭಾವಿಸುತ್ತಿರುವುದು ಕನ್ನಡದ ಭಾಗ್ಯವೆಂದೇ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಲವು ಒತ್ತಡಗಳ ನಡುವೆಯೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರೀತಿಯಿಂದ ಭಾಗವಹಿಸುತ್ತಿರುವುದು, ಸಮಾರಂಭಗಳಲ್ಲಿ ಕೊಟ್ಟ ಆಶ್ವಾಸನೆಗಳನ್ನು ಅತಿಶೀಘ್ರವಾಗಿ ಅನುಷ್ಠಾನಗೊಳಿಸುತ್ತಿರುವುದು, ಪರಿಷತ್ತಿನ ಎಲ್ಲಾ ಯೋಜನೆಗಳಿಗೂ ಹಸಿರು ನಿಶಾನೆ ತೋರುತ್ತಿರುವುದು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ – ಕನ್ನಡ ಸಂಸ್ಕೃತಿ ಮಂತ್ರಿಗಳ ಕಚೇರಿಯ ಹೊರಗೆ ಕಡತಗಳೊಂದಿಗೆ ಗಂಟೆಗಟ್ಟಲೆ ಕಾಯುತ್ತಿದ್ದುದನ್ನು ತಪ್ಪಿಸಿರುವುದು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ತಾಲ್ಲೂಕು ಸಮ್ಮೇಳನಗಳವರೆಗೆ ಎಲ್ಲವೂ ಅದ್ಧೂರಿಯಾಗಿ ನಡೆಯಲು ಬೇಕಾದಷ್ಟು ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿರುವುದು – ಇಂಥವನ್ನೆಲ್ಲಾ ಕಂಡಾಗ ಪರಿಷತ್ತಿನ ಅಧ್ಯಕ್ಷನಾಗಿ ನನಗೆ ಮನಸ್ಸು ತುಂಬಿ ಬರುತ್ತದೆ. ಆರುಕೋಟಿ ಕನ್ನಡಿಗರ ಪರವಾಗಿ ಅವರಿಗೆ ಕೃತಜ್ಞತಾ ಕುಸುಮಗಳನ್ನು ಅರ್ಪಿಸಬೇಕೆನ್ನಿಸುತ್ತದೆ. 'ಕನ್ನಡದ ಮುಖ್ಯಮಂತ್ರಿ' 'ಕನ್ನಡಿಗರ ಮುಖ್ಯಮಂತ್ರಿ' ಎಂದು ಅಭಿಮಾನದಿಂದ ನುಡಿಯಬೇಕೆನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಕನ್ನಡದ ಮೇಲಿನ, ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗಿನ ಈ ಅಖಂಡ ಪ್ರೀತಿ ಹೀಗೇ ಮುಂದುವರಿಯಲೆಂದು ಆಶಿಸುತ್ತೇನೆ.

ಕರ್ನಾಟಕ ಸರ್ಕಾರ ನಿಘಂಟು ಯೋಜನೆಯ ಮಹತ್ವವನ್ನು ಮನಗಂಡು ಒಂದು ಕೋಟಿ ರೂಪಾಯಿಗಳನ್ನು ಸಾಹಿತ್ಯ ಪರಿಷತ್ತಿಗೆ ಉದಾರವಾಗಿ ನೀಡಿದೆ. ಸರ್ಕಾರ ಹಣ ನೀಡಿರುವುದು ಪರಿಷತ್ತಿಗಾದರೂ ಇದು ಜನತೆಯ ಹಣ ಮತ್ತು ಇದರ ಅಂತಿಮ ಫಲಾನುಭವಿಗಳೂ ಜನತೆಯೇ. ಈ ಎಚ್ಚರವನ್ನಿರಿಸಿಕೊಂಡೇ ಸಾಹಿತ್ಯ ಪರಿಷತ್ತು ಬಹುಬೇಡಿಕೆಯ ಬೃಹನ್ನಿಘಂಟಿನ ಎಂಟು ಸಂಪುಟಗಳನ್ನು ಪುನರ್ಮುದ್ರಣಗೊಳಿಸುತ್ತಿದೆ. ಸರ್ಕಾರದ ಉದಾರ ಆರ್ಥಿಕ ನೆರವಿನ ಪರಿಣಾಮವಾಗಿ ನಿಘಂಟಿನ ಬೆಲೆಯನ್ನು ಸಾಮಾನ್ಯರೂ ಕೊಳ್ಳಲು ಮನಸ್ಸು ಮಾಡುವಂತೆ ಕಡಿಮೆಗೊಳಿಸಲಾಗಿದೆ. ಭಾಷೆ ಮತ್ತು ಸಾಹಿತ್ಯಾಭಿಮಾನದ ಸಂಕೇತವೆಂಬಂತೆ ಈ ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ರಾಜ್ಯ ಸರ್ಕಾರವನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಮತ್ತು ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರುಗಳನ್ನು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ನಿಘಂಟು ಯೋಜನೆ ಪ್ರಾರಂಭವಾದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರಿಂದ ಮೊದಲಗೊಂಡು ಮುಕ್ತಾಯವಾದಾಗ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರವರೆಗೆ ಇದನ್ನು ಆಸಕ್ತಿಯಿಂದ ಮುನ್ನಡೆಸಿಕೊಂಡು ಬಂದ ಎಲ್ಲ ಅಧ್ಯಕ್ಷರುಗಳಿಗೂ ನಿಘಂಟು ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಸಂಪಾದಕರು, ಸಿಬ್ಬಂದಿ ವರ್ಗದವರಿಗೂ ಅಂದವಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ. ಮರುಮುದ್ರಣದ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿ ವಿಶ್ವಾಸಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬೆಂಗಳೂರು
೫–೬–೨೦೧೦

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಅನುಬಂಧ

ಸಮಾಲೋಚನ ಸಮಿತಿ

(೧೯೪೩ರಲ್ಲಿ ಇದ್ದಂತೆ)

೧. ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ. ಎಲ್, ಬೆಂಗಳೂರು.

೨. ಡಾ॥ ಎಂ. ಗೋವಿಂದ ಪೈ, ಮಂಜೇಶ್ವರ.

೩. ಶ್ರೀ ಎಲ್.ವಿ. ರಾಮಸ್ವಾಮಿ ಅಯ್ಯರ್, ಎಂ.ಎ., ಬಿ.ಎಲ್, ಎರ್ನಾಕುಳಂ.

೪. ಡಾ॥ ಎ. ಎನ್. ಉಪಾಧ್ಯೆ, ಎಂ. ಎ, ಡಿ.ಲಿಟ್, ಕೊಲ್ಲಾಪುರ.

೫. ಆಸ್ಥಾನವಿದ್ವಾನ್ ರಾ. ಅನಂತಕೃಷ್ಣಶರ್ಮ, ಮೈಸೂರು.

೬. ಶ್ರೀ ಪಿ. ಎಂ. ಸೋಮಸುಂದರಂ, ಎಂ. ಎ., ಎಲ್.ಟಿ, ಬೆಂಗಳೂರು.

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೪೩ರಿಂದ ೧೯೯೫)

ಅಧ್ಯಕ್ಷರು

೧.	ಡಾ॥ ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಡಿ. ಲಿಟ್.	...	(೧೯೪೩ - ೧೯೫೭)
೨.	ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ.ಎ.	...	(೧೯೫೮ - ೧೯೬೬)
೩.	ಡಾ॥ ಡಿ. ಎಲ್. ನರಸಿಂಹಾಚಾರ್, ಎಂ.ಎ.	...	(೧೯೬೬ - ೧೯೭೧)
೪.	ಪ್ರೊ. ಕ. ವೆಂ. ರಾಘವಾಚಾರ್, ಎಂ.ಎ., ಬಿ.ಟಿ.	...	(೧೯೭೧ - ೧೯೭೨)
೫.	ಪ್ರೊ. ಎಂ. ಮರಿಯಪ್ಪಭಟ್ಟ, ಎಂ.ಎ., ಎಲ್.ಟಿ.	...	(೧೯೭೨ - ೧೯೮೦)
೬.	ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.	...	(೧೯೮೦- ೧೯೯೨)
೭.	ಡಾ॥ ಜಿ. ಎಸ್. ಗಾಯಿ, ಪಿಎಚ್.ಡಿ.	...	(೧೯೯೨ - ೧೯೯೫)
೮.	ಶ್ರೀ ಎನ್. ಬಸವಾರಾಧ್ಯ, ಎಂ.ಎ.	...	(೧೯೯೫ -)

ಉಪಾಧ್ಯಕ್ಷರು

೧.	ಡಾ॥ ಡಿ. ಎಲ್. ನರಸಿಂಹಾಚಾರ್, ಎಂ. ಎ.	...	(೧೯೫೮ - ೧೯೬೬)
೨.	ಡಾ॥ ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ. ಡಿ. ಲಿಟ್.	..	(೧೯೬೬ - ೧೯೭೮)
೩.	ಪ್ರೊ. ಡಿ. ಜವರೇಗೌಡ, ಎಂ. ಎ.	...	(೧೯೭೮ - ೧೯೮೯)
೪.	ಪ್ರೊ. ಕ. ವೆಂ. ರಾಘವಾಚಾರ್, ಎಂ. ಎ., ಬಿ. ಟಿ.	...	(೧೯೮೯ - ೧೯೭೧)
೫.	ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ. ಎ., ಬಿ. ಟಿ.	...	(೧೯೭೧ - ೧೯೮೦)
೬.	ಪ್ರೊ. ಸ.ಸ. ಮಾಳವಾಡ, ಎಂ. ಎ.	...	(೧೯೮೦ - ೧೯೮೬)

ಕಾರ್ಯದರ್ಶಿ ಮತ್ತು ಪ್ರಧಾನ ಸಂಪಾದಕರು

	ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ. ಎ.	...	(೧೯೪೩ - ೧೯೫೪)

ಪ್ರಧಾನ ಸಂಪಾದಕರು

೧.	ಪ್ರೊ. ಡಿ. ಎಲ್. ನರಸಿಂಹಾಚಾರ್, ಎಂ.ಎ.	...	(೧೯೫೪ - ೧೯೭೦)
೨.	ಪ್ರೊ. ಕ. ವೆಂ. ರಾಘವಾಚಾರ್, ಎಂ.ಎ., ಬಿ.ಟಿ.	...	(೧೯೭೧ - ೧೯೭೨)
೩.	ಪ್ರೊ. ಎಂ. ಮರಿಯಪ್ಪಭಟ್ಟ, ಎಂ.ಎ., ಎಲ್. ಟಿ.	...	(೧೯೭೨ - ೧೯೭೩)
೪.	ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ. ಎ., ಬಿ.ಟಿ.	...	(೧೯೭೩ - ೧೯೯೨)

೫.	ಶ್ರೀ ಎನ್. ಬಸವಾರಾಧ್ಯ, ಎಂ. ಎ.	...	(೧೯೯೨ -)

ಸಂಪಾದಕರು

೧.	ಡಾ॥ ಡಿ. ಎಲ್. ನರಸಿಂಹಾಚಾರ್, ಎಂ. ಎ.	...	(೧೯೫೪ - ೧೯೫೬)
೨.	ಶ್ರೀ ಎಲ್. ಗುಂಡಪ್ಪ, ಎಂ. ಎ.	...	(೧೯೫೭ - ೧೯೬೩)
೩.	ಶ್ರೀ ಎನ್. ಬಸವಾರಾಧ್ಯ, ಎಂ. ಎ.	...	(೧೯೬೩ - ೧೯೭೧)

ಸಮಿತಿಯ ಸದಸ್ಯರು

೧.	ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ.ಎ.	...	(೧೯೪೩ - ೧೯೫೮)
೨.	ಡಾ॥ ಡಿ. ಎಲ್. ನರಸಿಂಹಾಚಾರ್, ಎಂ. ಎ.	...	(೧೯೪೩ - ೧೯೫೪)
೩.	ಪ್ರೊ. ಕ. ವೆಂ. ರಾಘವಾಚಾರ್, ಎಂ. ಎ., ಬಿ. ಟಿ.	...	(೧೯೪೩ - ೧೯೬೯)
೪.	ಡಾ॥ ರಂ. ಶ್ರೀ. ಮುಗಳಿ, ಎಂ. ಎ., ಬಿ.ಟಿ., ಡಿ.ಲಿಟ್.	...	(೧೯೪೪ - ೧೯೭೩)
೫.	ಶ್ರೀ ಎನ್. ಲಕ್ಷ್ಮೀನಾರಾಯಣರಾವ್, ಎಂ.ಎ.	...	(೧೯೪೪ - ೧೯೭೯)
೬.	ವಿದ್ವಾನ್ ಮುಳಿಯ ತಿಮ್ಮಪ್ಪಯ್ಯ	...	(೧೯೪೪ - ೧೯೫೦)
೭.	ಶ್ರೀ ಕಾ. ಸ. ಧರಣೇಂದ್ರಯ್ಯ, ಎಂ.ಎ., ಬಿ.ಟಿ.	...	(೧೯೪೪ - ೧೯೭೧)
೮.	ಪ್ರೊ. ಡಿ. ಕೆ. ಭೀಮಸೇನರಾವ್, ಎಂ.ಎ.	...	(೧೯೪೪ - ೧೯೬೯)
೯.	ಪದ್ಮಭೂಷಣ ಡಾ. ಕೆ. ವಿ. ಪುಟ್ಟಪ್ಪ, ಎಂ.ಎ.,ಡಿ.ಲಿಟ್.	...	(೧೯೪೪ - ೧೯೭೨)
೧೦.	ಪ್ರೊ. ಕೆ. ಜಿ. ಕುಂದಣಗಾರ, ಎಂ.ಎ.	...	(೧೯೪೪ - ೧೯೭೫)
೧೧.	ಪ್ರೊ. ಸ. ಸ. ಮಾಳವಾಡ, ಎಂ.ಎ.	...	(೧೯೪೪ - ೧೯೮೭)
೧೨.	ಪ್ರೊ. ಎಂ. ಮರಿಯಪ್ಪಭಟ್ಟ, ಎಂ.ಎ., ಎಲ್.ಟಿ.	...	(೧೯೫೬ - ೧೯೮೦)
೧೩.	ಡಾ॥ ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.	...	(೧೯೬೧ -)
೧೪.	ಪ್ರೊ. ಡಿ. ಜವರೇಗೌಡ, ಎಂ.ಎ.	...	(೧೯೬೩ - ೧೯೮೨)
೧೫.	ಶ್ರೀ ಬಸವರಾಜ ಕಟ್ಟೀಮನಿ, ಎಂ.ಎಲ್.ಸಿ	...	(೧೯೬೯ - ೧೯೮೧)
೧೬.	ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.	...	(೧೯೬೯ -)
೧೭.	ಡಾ॥ ಜಿ.ಎಸ್. ಗಾಯಿ, ಪಿಎಚ್.ಡಿ.	...	(೧೯೭೦ - ೧೯೯೫)
೧೮.	ಡಾ॥ ಎ. ಎನ್.ಉಪಾಧ್ಯೆ, ಎಂ.ಎ., ಡಿ.ಲಿಟ್.	...	(೧೯೭೧ - ೧೯೭೫)
೧೯.	ಡಾ॥ ಹಾ. ಮಾ. ನಾಯಕ, ಎಂ.ಎ., ಪಿಎಚ್.ಡಿ.	...	(೧೯೭೨ -)
೨೦.	ಡಾ॥ ಜಿ. ಎಸ್. ಶಿವರುದ್ರಪ್ಪ, ಎಂ.ಎ., ಪಿಎಚ್.ಡಿ.	...	(೧೯೭೨ -)
೨೧.	ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ, ಎಂ.ಎ., ಪಿಎಚ್.ಡಿ.	...	(೧೯೭೬-)
೨೨.	ಡಾ॥ ಎಂ. ಚಿದಾನಂದಮೂರ್ತಿ, ಎಂ.ಎ., ಪಿಎಚ್.ಡಿ.	...	(೧೯೭೬ -)
೨೩.	ಶ್ರೀ ಎನ್. ಬಸವಾರಾಧ್ಯ, ಎಂ.ಎ.	...	(೧೯೮೨ -)
೨೪.	ಡಾ॥ ಕೆ. ವಿ. ರಮೇಶ್, ಎಂ.ಎ., ಪಿಎಚ್.ಡಿ.	...	(೧೯೮೨ -)
೨೫.	ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.	...	(೧೯೮೨ -)

ಮೈಸೂರು ಸರ್ಕಾರದ ಪ್ರತಿನಿಧಿಗಳು

೧.	ರಾಜಸೇವಾಸಕ್ತ ಡಿ.ಸಿ. ಸುಬ್ಬರಾಯಪ್ಪ, ಬಿ.ಎ.	...	(೧೯೪೯ - ೧೯೬೮)
೨.	ಪದ್ಮಶ್ರೀ ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರೀ	...	(೧೯೪೯ - ೧೯೭೦)
೩.	ಡಾ॥ ಸಿದ್ಧಯ್ಯಪುರಾಣಿಕ, ಐ.ಎ.ಎಸ್.	...	(೧೯೬೧ - ೧೯೯೪)
೪.	ಶ್ರೀ ವಿ. ಬಿ. ನಾಯಕ. ಎಂ.ಎ., ಎಲ್‌ಎಲ್.ಬಿ.	...	(೧೯೬೬ - ೧೯೮೨)

ಉಪಸಂಪಾದಕರು

೧.	ಶ್ರೀ ಎನ್. ಬಸವಾರಾಧ್ಯ, ಎಂ.ಎ.	...	(೧೯೫೬ - ೧೯೬೩)
೨.	ಶ್ರೀ ಎಚ್. ದೇಶಿಕಾಚಾರ್, ಎಂ.ಎ.	...	(೧೯೫೫ - ೧೯೬೬)
೩.	ಶ್ರೀ ಹೀ. ಚಿ. ಶಾಂತವೀರಯ್ಯ, ಎಂ. ಎ., ಬಿ. ಎಡ್.	...	(೧೯೬೭ - ೧೯೭೨)
೪.	ಶ್ರೀ ಆರ್.ವಿ. ಕುಲಕರ್ಣಿ, ಎಂ.ಎ., ಬಿ.ಎಡ್.	...	(೧೯೬೮ - ೧೯೮೦)

೫.	ಶ್ರೀ ಟಿ.ಆರ್. ಮಹಾದೇವಯ್ಯ, ಎಂ.ಎ.	...	(೧೯೬೯ - ೧೯೭೨)
೬.	ಶ್ರೀಮತಿ ಮಂಜುಳಾರಾವ್, ಎಂ.ಎ.	...	(೧೯೭೩ - ೧೯೪೪)
೭.	ಶ್ರೀಮತಿ ಎಂ.ಎನ್. ಜಾನಕಮ್ಮ, ಎಂ.ಎ.	...	(೧೯೭೩ - ೧೯೪೪)
೮.	ಶ್ರೀಮತಿ ಉಮಾದೇವಿ, ಎಂ.ಎ.	...	(೧೯೭೩ -)
೯.	ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ.	...	(೧೯೭೫ -)
೧೦.	ಶ್ರೀಮತಿ ಎಂ.ಎಸ್.ಸುಜಯ, ಎಂ.ಎ.	...	(೧೯೭೫ -)

ಸಹಾಯಕ ಸಂಪಾದಕರು

೧.	ಶ್ರೀ ಎನ್. ಬಸವಾರಾಧ್ಯ, ಎಂ.ಎ.	...	(೧೯೫೫ - ೧೯೫೬)
೨.	ಪಂಡಿತ ಎಚ್.ದೇಶಿಕಾಚಾರ್	...	(೧೯೫೫ - ೧೯೬೬)
೩.	ಶ್ರೀ ಜಿ. ಚಂದ್ರಶೇಖರಐತಾಳ, ಎಂ.ಎ.	...	(೧೯೬೨ - ೧೯೬೩)
೪.	ಶ್ರೀ ಹೀ.ಚಿ. ಶಾಂತವೀರಯ್ಯ, ಎಂ.ಎ., ಬಿ.ಎಡ್.	...	(೧೯೬೨ - ೧೯೬೭)
೫.	ಶ್ರೀ ಎಚ್.ಎ. ಕುಲಕರ್ಣಿ, ಎಂ.ಎ.	...	(೧೯೬೨ - ೧೯೬೩)
೬.	ಶ್ರೀ ಸಿ. ಓಂಕಾರಪ್ಪ, ಎಂ.ಎ.	...	(೧೯೬೩ - ೧೯೬೫)
೭.	ಶ್ರೀ ಕೆ. ರಾಘವೇಂದ್ರರಾವ್, ಎಂ.ಎ.	...	(೧೯೬೪ - ೧೯೬೫)
೮.	ಶ್ರೀ ಜಿ. ಜಿ.ಮಂಜುನಾಥನ್, ಎಂ.ಎ.	...	(೧೯೬೪ - ೧೯೬೭)
೯.	ಶ್ರೀ ಎಚ್. ಎಂ. ಪರಮೇಶ್ವರಯ್ಯ, ಎಂ.ಎ.	...	(೧೯೬೫ - ೧೯೬೬)
೧೦.	ಶ್ರೀಮತಿ ಎಂ. ಎನ್. ಲೀಲಾವತಿ, ಎಂ.ಎ.	...	(೧೯೬೭ - ೧೯೬೯)
೧೧.	ಶ್ರೀ ಆರ್. ವಿ. ಕುಲಕರ್ಣಿ, ಎಂ.ಎ.	...	(೧೯೬೭ - ೧೯೬೮)
೧೨.	ಶ್ರೀ ಪಿ. ರಾಮಕೃಷ್ಣಭಟ್ಟ, ಎಂ.ಎ.	...	(೧೯೬೭ - ೧೯೭೩)
೧೩.	ಶ್ರೀ ಕೆ. ಸುಬ್ಬಿಕೃಷ್ಣಶಾಸ್ತ್ರೀ	...	(೧೯೬೭ - ೧೯೬೭)
೧೪.	ವಿದ್ವಾನ್ ಹ.ವೆಂ. ನಾರಾಯಣಶಾಸ್ತ್ರೀ	...	(೧೯೬೭ - ೧೯೭೦)
೧೫.	ಶ್ರೀಮತಿ ಉಷಾಅಗ್ನಿಹೋತ್ರಿ, ಎಂ.ಎ., ಬಿ.ಎಡ್.	...	(೧೯೬೭ - ೧೯೭೫)
೧೬.	ಶ್ರೀ ಟಿ. ಆರ್. ಮಹಾದೇವಯ್ಯ, ಎಂ.ಎ.	...	(೧೯೬೭ - ೧೯೬೯)
೧೭.	ಶ್ರೀ ಟಿ. ಎಸ್. ಕೃಷ್ಣಮೂರ್ತಿ, ಎಂ.ಎ., ಬಿ.ಎಡ್.	...	(೧೯೬೯ - ೧೯೭೨)
೧೮.	ಶ್ರೀ ಪಿ. ಪದ್ಮನಾಭ ಭಟ್ಟ, ಎಂ.ಎ., ಬಿ.ಟಿ.	...	(೧೯೭೦ - ೧೯೭೨)
೧೯.	ಶ್ರೀಮತಿ ಮಂಜುಳಾರಾವ್, ಎಂ.ಎ.	...	(೧೯೭೦ - ೧೯೭೩)
೨೦.	ಶ್ರೀ ಎಚ್. ವಿ. ಶೇಷಾಚಾರ್, ಎಂ.ಎ.	...	(೧೯೭೦ - ೧೯೭೨)
೨೧.	ಶ್ರೀಮತಿ ಎಂ.ಎನ್.ಜಾನಕಮ್ಮ, ಎಂ.ಎ.	...	(೧೯೭೦ - ೧೯೭೩)
೨೨.	ಶ್ರೀ ರಾಘವೇಂದ್ರಾಚಾರ್ಯ ಹಡಗಲಿ, ಎಂ.ಎ.	...	(೧೯೭೦ - ೧೯೭೨)
೨೩.	ಶ್ರೀಮತಿ ಉಷಾಕುಮಾರಿ, ಎಂ.ಎ.	...	(೧೯೭೦ - ೧೯೭೨)
೨೪.	ಶ್ರೀ ವಸಂತರಾವ್ ಕಟ್ಟಿ, ಎಂ.ಎ., ಬಿ. ಎಡ್.	...	(೧೯೭೧ - ೧೯೭೨)
೨೫.	ಶ್ರೀಮತಿ ಎಸ್. ವಿಮಲ, ಎಂ.ಎ.	...	(೧೯೭೨ - ೧೯೭೪)
೨೬.	ಶ್ರೀಮತಿ ಬಿ. ಶಕುಂತಲ, ಎಂ.ಎ.	...	(೧೯೭೨ - ೧೯೮೨)
೨೭.	ಶ್ರೀಮತಿ ಉಮಾದೇವಿ, ಎಂ.ಎ.	...	(೧೯೭೨ - ೧೯೭೩)
೨೮.	ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ.	...	(೧೯೭೨ - ೧೯೭೫)
೨೯.	ಶ್ರೀಮತಿ ಎಂ. ಎಸ್. ಸುಜಯ, ಎಂ.ಎ.	...	(೧೯೭೨ - ೧೯೭೫)
೩೦.	ಶ್ರೀ ಟಿ. ತಿಪ್ಪಯ್ಯ, ಎಂ.ಎ.	...	(೧೯೭೨ - ೧೯೭೫)
೩೧.	ಶ್ರೀ ಬಿ. ಆರ್. ಬಸವರಾಜ, ಎಂ.ಎ.	...	(೧೯೭೯ -)
೩೨.	ಶ್ರೀ ಮಹೇಂದ್ರ ಎಂ.ಎ.	...	(೧೯೮೧ - ೧೯೮೨)

ಪ್ರತಿಕಾರರು

೧.	ಆಸ್ಥಾನ ವಿದ್ವಾನ್ ಎಂ.ಆರ್. ವರದಾಚಾರ್	...	(೧೯೬೦ - ೧೯೬೮)
೨.	ಶ್ರೀ ಎನ್.ಆರ್. ರಂಗಸ್ವಾಮಿ ಅಯ್ಯಂಗಾರ್	...	(೧೯೬೦ - ೧೯೭೪)
೩.	ಶ್ರೀಮತಿ ಬಿ. ಎನ್. ಮಾಲತಿ, ಎಂ.ಎ.	...	(೧೯೭೫ - ೧೯೭೮)

ಕರಡಚ್ಚು ತಿದ್ದಿದವರು

	ವಿದ್ವಾನ್ ಕೆ. ವೆಂಕಟೇಶಯ್ಯ	...	(೧೯೬೦ - ೧೯೭೦)

ಪಟ್ಟಿಕೆ ವಿಂಗಡಣಕಾರರು

೧.	ಶ್ರೀ ಕೆ. ರಾಮಣ್ಣ	...	(೧೯೬೦ - ೧೯೭೫)
೨.	ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್, ಎಂ.ಎ., ಬಿ.ಟಿ.	...	(೧೯೭೬ - ೧೯೮೦)

ಬೆರಳಚ್ಚುಗಾರರು

೧.	ಶ್ರೀ ಜಿ. ದಿವಾಕರಯ್ಯ	...	(೧೯೬೩ - ೧೯೬೪)
೨.	ಶ್ರೀ ಎಸ್. ಜಿ. ರಾಮಚಂದ್ರಶರ್ಮ	...	(೧೯೬೪ - ೧೯೬೫)
೩.	ಶ್ರೀ ಆ. ರ. ಆನಂದ್	...	(೧೯೬೫ - ೧೯೬೭)
೪.	ಶ್ರೀ ಎನ್. ಲಕ್ಷ್ಮೀಪತಿ	...	(೧೯೬೫ - ೧೯೬೮)
೫.	ಶ್ರೀಮತಿ ಎಂ. ಕೆ. ಉಷಾದೇವಿ	...	(೧೯೬೮ - ೧೯೬೯)
೬.	ಶ್ರೀಮತಿ ಆರ್. ರಮಾದೇವಿ	...	(೧೯೬೮ - ೧೯೬೮)
೭.	ಶ್ರೀಮತಿ ಎ. ನೇತ್ರಾವತಿಬಾಯಿ	...	(೧೯೬೯ -)
೮.	ಶ್ರೀಮತಿ ಕೆ. ರಮಾ	...	(೧೯೬೯ - ೧೯೭೧)
೯.	ಶ್ರೀಮತಿ ಸಿ.ಎನ್. ವಿಜಯಲಕ್ಷ್ಮಿ	...	(೧೯೭೧ -)

ಸಹಾಯಕರು

೧.	ಶ್ರೀ ಕೆ. ಅನಂತರಾಮಯ್ಯ	...	(೧೯೫೮ - ೧೯೬೫)
೨.	ಶ್ರೀ ಬಸಪ್ಪ	...	(೧೯೬೪ - ೧೯೬೭)
೩.	ಶ್ರೀ ಎಂ. ಮುನಿರಾಮ	...	(೧೯೬೪ - ೧೯೬೬)
೪.	ಶ್ರೀ ರಾಮಯ್ಯ	...	(೧೯೬೪ - ೧೯೬೬)
೫.	ಶ್ರೀ ಜಿ. ಸಿದ್ದಯ್ಯ	...	(೧೯೬೫ - ೧೯೬೫)
೬.	ಶ್ರೀ ಮಾದಪ್ಪ	...	(೧೯೬೫ - ೧೯೮೭)
೭.	ಶ್ರೀ ರಾಘವೇಂದ್ರಪ್ರಸಾದ್	...	(೧೯೬೬ -)
೮.	ಶ್ರೀ ವಿ. ಜಯರಾಮಯ್ಯ	...	(೧೯೬೭ - ೧೯೬೭)
೯.	ಶ್ರೀ ಶಂಕರಪ್ಪ	...	(೧೯೬೮ -)
೧೦.	ಶ್ರೀ ರೇವಯ್ಯ	...	(೧೯೬೮ -)

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳು (ಅಧಿಕಾರ ಪ್ರಯುಕ್ತ)

(೧೯೪೩ ರಿಂದ ೧೯೭೫)

೧.	ಶ್ರೀ ಒಂಟಮುರಿಯ ಶ್ರೀಮಂತ ಬಸವಪ್ರಭುರಾಜಾ ಲಖಮನಗೌಡ ಸರದೇಸಾಯಿ ಬಹದ್ದೂರ್	...	(೧೯೪೧ - ೧೯೪೬)
೨.	ಜಸ್ಟಿಸ್ ಲೋಕೂರ್ ನಾರಾಯಣರಾವ್ ಸ್ವಾಮಿರಾವ್	...	(೧೯೪೬ - ೧೯೪೭)
೩.	ಶ್ರೀ ತಿರುಮಲೆ ತಾತಾಚಾರ್ಯಶರ್ಮ	...	(೧೯೪೭ - ೧೯೪೯)
೪.	ಶ್ರೀ ಉತ್ತಂಗಿ ಚನ್ನಪ್ಪ	...	(೧೯೪೯ - ೧೯೫೦)
೫.	ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿ	...	(೧೯೫೦ - ೧೯೫೩)
೬.	ಶ್ರೀ ಎ.ಎನ್. ಮೂರ್ತಿರಾವ್	...	(೧೯೫೩ - ೧೯೫೪)

೭.	ಪದ್ಮಶ್ರೀ ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರೀ	...	(೧೯೫೪ - ೧೯೬೪)
೮.	ಪ್ರೊ. ಜಿ. ವೆಂಕಟಸುಬ್ಬಯ್ಯ	...	(೧೯೬೪ - ೧೯೬೯)
೯.	ಶ್ರೀ ಜಿ. ನಾರಾಯಣ	..	(೧೯೬೯ - ೧೯೭೮)
೧೦.	ಶ್ರೀ ಹಂಪ. ನಾಗರಾಜಯ್ಯ	...	(೧೯೭೮ - ೧೯೮೬)
೧೧.	ಶ್ರೀ ಹೆಚ್. ಬಿ. ಜ್ವಾಲನಯ್ಯ	...	(೧೯೮೬ - ೧೯೮೭)
೧೨.	ಶ್ರೀ ಆ. ರ. ಚಂದ್ರಹಾಸಗುಪ್ತ (ಸರ್ಕಾರದ ಆಡಳಿತಾಧಿಕಾರಿಗಳು)	...	(೧೯೮೭ - ೧೯೮೮)
೧೩.	ಶ್ರೀ ಐ. ಎಂ. ವಿಠ್ಠಲಮೂರ್ತಿ (ಸರ್ಕಾರದ ಆಡಳಿತಾಧಿಕಾರಿಗಳು)	...	(೧೯೮೮ - ೧೯೮೯)
೧೪.	ಪ್ರೊ. ಜಿ. ಎಸ್.ಸಿದ್ಧಲಿಂಗಯ್ಯ	...	(೧೯೮೯ - ೧೯೯೨)
೧೫.	ಶ್ರೀ ಗೊ.ರು. ಚನ್ನಬಸಪ್ಪ	...	(೧೯೯೨ - ೧೯೯೫)
೧೬.	ಡಾ॥ ಸಾ.ಶಿ. ಮರುಳಯ್ಯ	...	(೧೯೯೫ -)

ಪರಿಷತ್ತಿನ ಉಪಾಧ್ಯಕ್ಷರು (ಅಧಿಕಾರ ಪ್ರಯುಕ್ತ).

ರಾಜಸೇವಾಸಕ್ತ ಮಾಸ್ತಿ ವೆಂಕಟೇಶಅಯ್ಯಂಗಾರ್	...	(೧೯೪೩ - ೧೯೪೭)

ಪರಿಷತ್ತಿನ ಗೌರವ ಕಾರ್ಯದರ್ಶಿಗಳು (ಅಧಿಕಾರ ಪ್ರಯುಕ್ತ)

(೧೯೪೩ ರಿಂದ ೧೯೯೫)

ಶ್ರೀಯುತರಾದ:

೧.	ಬಿ. ವೆಂಕೋಬರಾವ್	...	(೧೯೪೩ - ೧೯೪೪)
೨.	ಕ. ವೆಂ. ರಾಘವಾಚಾರ್	...	(೧೯೪೪ - ೧೯೪೫)
೩.	ಕೆ. ರೇವಣ್ಣ	...	(೧೯೪೫ - ೧೯೪೬)
೪.	ಕ.ವೆಂ. ರಾಘವಾಚಾರ್	...	(೧೯೪೬ - ೧೯೪೭)
೫.	ಕೆ. ಗೋಪಾಲಕೃಷ್ಣರಾವ್	...	(೧೯೪೭ - ೧೯೪೮)
೬.	ಸಿ.ಕೆ. ನಾಗರಾಜರಾವ್	...	(೧೯೪೭ - ೧೯೪೭)
೭.	ಎಲ್. ಎಸ್. ಶೇಷಗಿರಿರಾವ್	...	(೧೯೪೭ - ೧೯೫೦)
೮.	ಸಿದ್ಧವನಹಳ್ಳಿ ಕೃಷ್ಣಶರ್ಮ	...	(೧೯೪೯ - ೧೯೫೦)
೯.	ಎಂ.ಎ. ನರಸಿಂಹಾಚಾರ್	...	(೧೯೫೦ - ೧೯೫೦)
೧೦.	ಕಾ. ಸ. ಧರಣೇಂದ್ರಯ್ಯ	...	(೧೯೫೦ - ೧೯೫೨)
೧೧.	ಸಿ.ಕೆ. ನಾಗರಾಜರಾವ್	...	(೧೯೫೨ - ೧೯೫೩)
೧೨.	ಎ.ಎನ್. ಮೂರ್ತಿರಾವ್	...	(೧೯೫೩ - ೧೯೫೪)
೧೩.	ರಾಜಸೇವಾಸಕ್ತ ಡಿ. ಸಿ. ಸುಬ್ಬರಾಯಪ್ಪ	...	(೧೯೫೪ - ೧೯೫೬)
೧೪.	ಜಿ. ವೆಂಕಟಸುಬ್ಬಯ್ಯ	...	(೧೯೫೪ - ೧೯೫೬)
೧೫.	ಡಿ.ಆರ್. ರಾಮಯ್ಯ	...	(೧೯೫೬ - ೧೯೫೮)
೧೬.	ಸಿ.ಕೆ. ನಾಗರಾಜರಾವ್	...	(೧೯೫೬ - ೧೯೫೬)
೧೭.	ಕೆ. ಗೋಪಾಲಕೃಷ್ಣರಾವ್	...	(೧೯೫೬ - ೧೯೬೧)
೧೮.	ಜಿ. ಶ್ರೀನಿವಾಸನ್	...	(೧೯೫೮ - ೧೯೫೯)
೧೯.	ಡಿ. ಆರ್. ರಾಮಯ್ಯ	...	(೧೯೫೯ - ೧೯೬೦)
೨೦.	ಅನ್ನದಾನಯ್ಯ ಪುರಾಣಿಕ	....	(೧೯೬೦ - ೧೯೬೩)
೨೧.	ಕೆ. ಎಂ. ಕೃಷ್ಣರಾವ್	..:	(೧೯೬೧ - ೧೯೬೪)
೨೨.	ಎಸ್. ಶಂಕರಪ್ಪ	...	(೧೯೬೩ - ೧೯೬೪)
೨೩.	ಕೆ. ಎಸ್. ನಿರಂಜನ	...	(೧೯೬೪ - ೧೯೬೫)

೨೪.	ಹೆಚ್. ಆರ್. ದಾಸೇಗೌಡ	...	(೧೯೭೪ - ೧೯೭೫)
೨೫.	ಜಿ. ಕೆ. ಗುಂಡೂರಾವ್	...	(೧೯೭೫ - ೧೯೭೫)
೨೬.	ಎಂ. ಎಚ್. ಕೃಷ್ಣಯ್ಯ	...	(೧೯೭೫ - ೧೯೭೫)
೨೭.	ಬಿ. ಎನ್. ಶಾಸ್ತ್ರೀ	...	(೧೯೭೫ - ೧೯೭೬)
೨೮.	ವೆಂಕಟೇಶ ಸಾಂಗಲಿ	...	(೧೯೭೬ - ೧೯೭೭)
೨೯.	ಹಂಪ. ನಾಗರಾಜಯ್ಯ	...	(೧೯೭೬ - ೧೯೭೯)
೩೦.	ಅ. ರಾ. ಮಿತ್ರ	...	(೧೯೭೯ - ೧೯೮೦)
೩೧.	ಹಂಪ. ನಾಗರಾಜಯ್ಯ	...	(೧೯೭೯ - ೧೯೮೪)
೩೨.	ವೆಂಕಟೇಶ ಸಾಂಗಲಿ	...	(೧೯೮೦ - ೧೯೮೫)
೩೩.	ಜಿ.ಕೆ. ಗುಂಡೂರಾವ್	...	(೧೯೮೪ - ೧೯೮೮)
೩೪.	ಡಿ. ಲಿಂಗಯ್ಯ	...	(೧೯೮೮ - ೧೯೮೨)
೩೫.	ಜಿ. ಅಶ್ವತ್ಥನಾರಾಯಣ	...	(೧೯೮೮ - ೧೯೮೯)
೩೬.	ಲಕ್ಷ್ಮಣ ತೆಲಗಾವಿ	...	(೧೯೮೯ - ೧೯೯೬)
೩೭.	ಹೊ.ವೆ. ನಾರಾಯಣಸ್ವಾಮಿ	...	(೧೯೯೨ - ೧೯೯೪)
೩೮.	ಚಂದ್ರಕಾಂತ ಪಡೇಸೂರ	...	(೧೯೯೪ - ೧೯೯೭)
೩೯.	ಜಿ. ವಿ. ಶಿವಸ್ವಾಮಿ	...	(೧೯೯೬ - ೧೯೯೭)
೪೦.	ಡಾ॥ ಸಾ. ಶಿ. ಮರುಳಯ್ಯ	...	(೧೯೯೯ - ೧೯೯೯)
೪೧.	ಬಿ. ಶ್ರೀನಿವಾಸರಾಜು	...	(೧೯೯೯ - ೧೯೯೦)
೪೨.	ಗೊ.ರು. ಚನ್ನಬಸಪ್ಪ	...	(೧೯೯೯ - ೧೯೯೨)
೪೩.	ಟಿ. ರಾಮಯ್ಯ	...	(೧೯೯೦ - ೧೯೯೨)
೪೪.	ಜಿ. ಚನ್ನವೀರಸ್ವಾಮಿ	...	(೧೯೯೨ - ೧೯೯೩)
೪೫.	ಪ್ರೊ. ಎಸ್. ಶ್ರೀನಿವಾಸನ್	...	(೧೯೯೨ - ೧೯೯೫)
೪೬.	ಪ್ರೊ. ಎಂ. ಜಿ. ನಾಗರಾಜ್	...	(೧೯೯೩ - ೧೯೯೫)
೪೭.	ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ	...	(೧೯೯೫ -)
೪೮.	ಕೆ.ಆರ್. ಇಕ್ಬಾಲ್ ಅಹಮದ್	...	(೧೯೯೫ -)

ಪರಿಷತ್ತಿನ ಗೌರವ ಕೋಶಾಧಿಕಾರಿಗಳು (ಅಧಿಕಾರ ಪ್ರಯುಕ್ತ)

(೧೯೪೩ ರಿಂದ ೧೯೯೫)

೧.	ರಾಜಸೇವಾಸಕ್ತ ಡಿ.ಸಿ. ಸುಬ್ಬರಾಯಪ್ಪ	...	(೧೯೪೦ - ೧೯೪೪)
೨.	ಪ್ರೊ.ಜಿ.ಪಿ. ರಾಜರತ್ನಂ	...	(೧೯೪೫ - ೧೯೪೫)
೩.	ಶ್ರೀ ಕೆ. ರೇವಣ್ಣ	...	(೧೯೪೬ - ೧೯೪೭)
೪.	ಶ್ರೀ ಎಂ. ವಾಸುದೇವಮೂರ್ತಿ	...	(೧೯೪೭ - ೧೯೪೯)
೫.	ಶ್ರೀ ಸಿ.ಕೆ. ನಾಗರಾಜರಾವ್	...	(೧೯೪೯ - ೧೯೫೨)
೬.	ಶ್ರೀ ಎಚ್.ಎಸ್. ಸೀತಾರಾಂ	...	(೧೯೫೨ - ೧೯೫೩)
೭.	ರಾಜಸೇವಾಸಕ್ತ ಡಿ.ಸಿ. ಸುಬ್ಬರಾಯಪ್ಪ	...	(೧೯೫೩ - ೧೯೫೪)
೮.	ಶ್ರೀ ಎನ್. ವರದರಾಜನ್	...	(೧೯೫೪ - ೧೯೫೬)
೯.	ಶ್ರೀ ಎಚ್. ಎಸ್. ಸೀತಾರಾಂ	...	(೧೯೫೬ - ೧೯೫೭)
೧೦.	ಶ್ರೀ ಜಿ. ಶ್ರೀನಿವಾಸನ್	...	(೧೯೫೭ - ೧೯೫೭)
೧೧.	ಶ್ರೀ ಎಚ್. ಎಸ್. ಸೀತಾರಾಂ	...	(೧೯೫೭ - ೧೯೫೯)
೧೨.	ಶ್ರೀ.ಜಿ. ಶ್ರೀನಿವಾಸನ್	...	(೧೯೫೯ - ೧೯೬೦)
೧೩.	ಶ್ರೀ ಆರ್. ಅನಂತರಾಮನ್	...	(೧೯೬೩ - ೧೯೬೪)

೧೪.	ಶ್ರೀ ಎ. ಸಿ. ಬೈರಪ್ಪ	...	(೧೯೬೪ - ೧೯೬೬)
೧೫.	ಶ್ರೀ ಎಸ್. ವರದರಾಜನ್	...	(೧೯೬೬ - ೧೯೭೭)
೧೬.	ಶ್ರೀಮತಿ ಎಸ್. ಪ್ರಮೀಳಾ	...	(೧೯೭೭ - ೧೯೭೮)
೧೭.	ಶ್ರೀ ಎಂ. ಪಿ. ದೇವರಾಜ್	...	(೧೯೭೮ - ೧೯೮೭)
೧೮.	ಶ್ರೀ ಎಸ್. ವಿ. ಶ್ರೀನಿವಾಸರಾವ್	...	(೧೯೮೯ - ೧೯೯೨)
೧೯.	ಪ್ರೊ. ಹೆಚ್. ಆರ್. ದಾಸೇಗೌಡ	...	(೧೯೯೨ - ೧೯೯೫)
೨೦.	ಶ್ರೀ ಎಂ. ಶ್ರೀರಾಮಯ್ಯ	...	(೧೯೯೫ -)

೧. ಗ್ರಂಥಗಳಿಂದ ಶಬ್ದಗಳನ್ನೂ ಪ್ರಯೋಗಗಳನ್ನೂ ಸಂಗ್ರಹಿಸಿಕೊಟ್ಟ ಸಹಾಯಕರು

ಶ್ರೀಯುತರಾದ:

೧. ಆರ್. ಎಸ್. ರಾಮರಾಯರು
೨. ಜಿ. ವರದರಾಜರಾಯರು
೩. ಡಿ. ಜವರೇಗೌಡರು
೪. ಎನ್. ಪ್ರಹ್ಲಾದರಾಯರು
೫. ಕೆ.ಎಸ್. ಕೃಷ್ಣಮೂರ್ತಿಯವರು
೬. ಟಿ.ಎಸ್. ಶಾಮರಾಯರು
೭. ಕೆ.ಜಿ. ಕುಂದಣಗಾರರು
೮. ಕುರುಗೋಡಪ್ಪನವರು
೯. ಐರಣಿಯವರು
೧೦. ಎಸ್. ಗುಂಡಪ್ಪನವರು
೧೧. ಡಿ. ರೇಣುಕಾಚಾರ್ಯರು
೧೨. ಎಚ್. ಶೇಷಯ್ಯಂಗಾರ್ಯರು
೧೩. ಎಲ್.ಆರ್. ಹೆಗ್ಗಡೆಯವರು
೧೪. ರಂ. ಶ್ರೀ. ಮುಗಳಿಯವರು
೧೫. ಚಿ.ನಾ. ವಿಶ್ವನಾಥಶಾಸ್ತ್ರೀ ಅವರು
೧೬. ಎಂ. ವಿ. ಗೋವಿಂದಯ್ಯನವರು
೧೭. ಎಂ. ಹನುಮಂತರಾಯರು
೧೮. ಟಿ.ವಿ. ಕೃಷ್ಣಪ್ಪನವರು
೧೯. ಎಚ್. ದೇವೀರಪ್ಪನವರು
೨೦. ಎಚ್.ಜಿ. ಆರ್. ಅಡಿಗ ಅವರು
೨೧. ಎಸ್.ಬಿ. ನಾಯಕ ಅವರು
೨೨. ತೀ.ನಂ. ಶ್ರೀಕಂಠಯ್ಯನವರು
೨೩. ಡಿ.ಎಲ್.ನರಸಿಂಹಾಚಾರ್ಯರು
೨೪. ಎಲ್. ಗುಂಡಪ್ಪನವರು
೨೫. ಎಂ. ಆರ್.ವರದಾಚಾರ್ಯರು
೨೬. ಎನ್.ಕೆ. ನರಸಿಂಹಮೂರ್ತಿಯವರು
೨೭. ಎನ್. ಬಸವಾರಾಧ್ಯರು
೨೮. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು
೨೯. ಎಚ್. ದೇಶಿಕಾಚಾರ್ಯರು
೩೦. ಎಸ್.ವಿ. ವೆಂಕಟನಾರಾಯಣಶಾಸ್ತ್ರೀ ಅವರು
೩೧. ಟಿ.ಎಸ್.ರಘುನಾಥಾಚಾರ್ಯರು
೩೨. ಜಿ. ವೆಂಕಟಸುಬ್ಬಯ್ಯನವರು
೩೩. ಡಿ.ವಿ. ಶೇಷಗಿರಿರಾಯರು
೩೪. ಎಸ್. ಬಸಪ್ಪನವರು
೩೫. ಎಸ್. ಎನ್. ಕೃಷ್ಣಜೋಯಿಸ್ ಅವರು
೩೬. ಎನ್. ಅನಂತರಂಗಾಚಾರ್ಯರು
೩೭. ರಂಗನಾಥಾಚಾರ್ಯರು
೩೮. ಎ.ಕೆ. ಪುಟ್ಟರಾಮು ಅವರು
೩೯. ಕೆ. ಹನುಮಂತರಾಯರು
೪೦. ಆರ್.ಎಲ್. ಅನಂತರಾಮಯ್ಯನವರು
೪೧. ಕೆ. ಎಂ. ಕೃಷ್ಣರಾಯರು
೪೨. ಕೆ. ಶಿವರಾಮ ಐತಾಳರು
೪೩. ವಾ.ದ. ಬೇಂದ್ರೆ ಅವರು
೪೪. ಎಂ. ಚಂದ್ರಶೇಖರ ಅವರು
೪೫. ಮಿರ್ಜಿ ಅಣ್ಣಾರಾಯರು
೪೬. ಜಿ. ಚಂದ್ರಶೇಖರ ಐತಾಳರು
೪೭. ಚಂದ್ರಶೇಖರ ಕಂಬಾರ ಅವರು
೪೮. ಹೀ.ಚಿ.ಶಾಂತವೀರಯ್ಯನವರು
೪೯. ಎಚ್. ಎ. ಕುಲಕರ್ಣಿ ಅವರು
೫೦. ಅ. ರಾ. ಮಿತ್ರ ಅವರು
೫೧. ಟಿ. ಆರ್. ಮಹಾದೇವಯ್ಯ ಅವರು
೫೨. ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರು
೫೩. ಕೆ. ವೆಂಕಟೇಶಯ್ಯ ಅವರು
೫೪. ಎಸ್. ಕೃಷ್ಣಭಟ್ಟ ಅವರು
೫೫. ಸಿ. ಓಂಕಾರಪ್ಪ ಅವರು
೫೬. ಟಿ. ಕೇಶವಭಟ್ಟ ಅವರು
೫೭. ಕೆ. ರಾಘವೇಂದ್ರರಾವ್ ಅವರು
೫೮. ಜಿ.ಜಿ. ಮಂಜುನಾಥನ್ ಅವರು

೫೯. ಬಿ. ಎಸ್. ಸಣ್ಣಯ್ಯ ಅವರು
೬೦. ಎಚ್. ಎಂ. ಪರಮೇಶ್ವರಯ್ಯ ಅವರು
೬೧. ಡಿ.ಎನ್. ರಾಮು ಅವರು
೬೨. ಆರ್. ಎಸ್. ನಾರಾಯಣಾಚಾರ್ ಅವರು
೬೩. ಎಚ್. ಎಸ್. ಹರಿಶಂಕರ್ ಅವರು
೬೪. ಕೆ. ಆರ್. ಶೇಷಗಿರಿ ಅವರು
೬೫. ಕೆ. ಎಸ್. ಮಧುಸೂದನ ಅವರು
೬೬. ಎ. ಎನ್. ಭಟ್ಟ ಅವರು

ಶ್ರೀಮತಿಯರಾದ:

೬೭. ಎ. ಎನ್. ಶಾಂತಾ ಅವರು
೬೮. ವಿ. ಅಮೃತ ಅವರು
೬೯. ಎಂ. ಜಿ. ಹಸ್ಮಕಲ್ ಅವರು
೭೦. ಗೌರಮ್ಮ ಅವರು

೨. ತಮ್ಮ ಕಡೆಯ ಜನಬಳಕೆಯ ಮಾತುಗಳನ್ನು ಸಂಗ್ರಹಿಸಿ ಕಳಿಸಿಕೊಟ್ಟಿರುವವರು:

ಶ್ರೀಯುತರಾದ:

೧. ಶಾಮಸುಂದರ ಕುಲಕರ್ಣಿಯವರು, ಬೆಳಗಾಂವಿ.
೨. ಜೆ. ರುದ್ರಪ್ಪನವರು, ಬೆಂಗಳೂರು.
೩. ಸುಬ್ಬರಾವ್ ಬಿ. ನಾಯಕರು, ಬೆಂಗಳೂರು.
೪. ಎಚ್. ಜಿ. ಬೆಂಗೇರಿಯವರು, ಹಾವೇರಿ.
೫. ಯ. ನಾ. ಉಡುಪ ಅವರು, ಕೋಟೇಶ್ವರ.
೬. ಎಚ್. ವೆಂಕಣ್ಣಾಚಾರ್ಯರು, ಸಾಗರ.
೭. ಹೀ. ಚಿ. ಶಾಂತವೀರಯ್ಯನವರು, ತಿಪಟೂರು.
೮. ಎಂ.ಎ. ನಾಯ್ಕ ಅವರು, ಅಂಕೋಲ.
೯. ರಾಮಕೃಷ್ಣ ಎ. ಪೈ ಅವರು, ಅಂಕೋಲ.

ಪರಿಷತ್ತಿನ ಅಧ್ಯಕ್ಷರ ಕೃತಜ್ಞತೆ

ಕನ್ನಡ ಸಾಹಿತ್ಯ ಪರಿಷತ್ತಿನ ಮಹೋನ್ನತ ಸಾಧನೆ ಸಿದ್ಧಿಗಳಲ್ಲಿ ಕನ್ನಡ ನಿಘಂಟು ನಿರ್ಮಾಣವೂ ಒಂದು. ಇದು ಅರ್ಧಶತಮಾನದ ಹಲವಾರು ವಿದ್ವತ್ ಪ್ರತಿಭೆಗಳ ಅಹೋರಾತ್ರಿ ದುಡಿಮೆಯ ಫಲ; ಸಾರ್ಥಕ ಶ್ರಮದ ಸತ್ಫಲವೂ ಹೌದು. ಚತುಷ್ಕೋಟಿ ಕನ್ನಡಿಗರ ಚೇತನಗನಸು ಇಂದು ನನಸಾಗುತ್ತಿರುವುದು ನಮಗೆ ನಿಮಗೆ ಹರ್ಷ ತಂದ ಸಂಗತಿ. ಆದರೂ ಇದರ ಸಿದ್ಧತೆಯ ಹಿನ್ನೆಲೆಯಲ್ಲಿ ಅವೆಷ್ಟೋ ವ್ಯಕ್ತಿ ಶಕ್ತಿಗಳ ಬೆವರಿನ ಹಳ್ಳ ಹರಿದಿದೆ ಎಂಬುದನ್ನು ಮರೆಯುವಂತಿಲ್ಲ. ಇಂದು ಕೆಲವರಷ್ಟೇ ಉಳಿದು, ಹಲವರು ಅಮರರಾಗಿದ್ದಾರೆ. ಅವರೆಲ್ಲರ ಅಂತರಾತ್ಮಗಳಿಗೆ ಪರಿಷತ್ತಿನ ಅನಂತ ಪ್ರಣಾಮಗಳು ಮೊದಲು ಸಲ್ಲುತ್ತವೆ.

ಕನ್ನಡ ನಿಘಂಟು ರಚನೆಯ ಕಲ್ಪನೆ ಕಣ್ತೆರೆದದ್ದು ೧೯೧೯ ಜುಲೈ ೨೭ರಂದು; ಕಾರ್ಯೋನ್ಮುಖವಾದದ್ದು ೧೯೪೪ ಜನವರಿ ೨೭ ರಂದು. ತಿಂಗಳಿಗೆ ಕೇವಲ ೨೦ ರೂಪಾಯಿಗಳ ಸಂಬಳದ ಒಪ್ಪೊತ್ತಿನ ಕೆಲಸಗಾರರಿಂದ ಹಿಡಿದು ೨೫ ರೂಪಾಯಿಗಳಷ್ಟೇ ರಾಯಧನ ಪಡೆಯುತ್ತಿದ್ದ ವಿದ್ವನ್ಮಣಿಗಳವರೆಗೆ ಸುಮಾರು ೭೬ ಜನರ ಒಂದು ಪಂಡಿತ ತಂಡದಿಂದ ಆರಂಭಗೊಂಡ ಈ ಕಾರ್ಯ ಎಂಟು ಸಂಪುಟಗಳ ಬೃಹತ್ ಪ್ರಮಾಣದಲ್ಲಿ ಇಂದು ಪರಿಣಾಮಗೊಳ್ಳುತ್ತಿದೆ. ಆದರೆ ಹಿಡಿದ ಕಾರ್ಯ ಕೈಗೂಡಿದೆಯೇ ಹೊರತು ಹಾಕಿದ ಯೋಜನೆ ಮುಕ್ತಾಯವಾಗಿಲ್ಲ. ಈಗಾಗಲೇ ರಚಿತವಾಗಿರುವ ಎಂಟು ಸಂಪುಟಗಳ ಪರಿಷ್ಕರಣ ಕಾರ್ಯದ ಅನಿವಾರ್ಯತೆ ಇದೆ. ಹಿಂದಿನ ಸಂಪುಟಗಳಲ್ಲಿ ಸೇರ್ಪಡೆಯಾಗದಿರುವ ಸಹಸ್ರಾರು ಶಬ್ದಗಳು ತಮ್ಮ ತಮ್ಮ ಅರ್ಥಗಳನ್ನು ಹೊತ್ತು ಹೊರಹೊಮ್ಮುವ ಅಗತ್ಯತೆ ಇದೆ. ಅಲ್ಲದೆ ಮೊದಲ ಐದು ಸಂಪುಟಗಳ ಪ್ರತಿಗಳು ಉಪಲಬ್ಧವಿಲ್ಲದೆ, ಅವುಗಳ ಬೇಡಿಕೆ ಬಹಳವಿರುವುದರಿಂದ, ಅವುಗಳ ಮರುಮುದ್ರಣಗಳು ಆಗಲೇಬೇಕಾಗಿದೆ. ಜೊತೆಗೆ 'ಅಬುಕುಳ ನಿಘಂಟು', 'ಕನ್ನಡ ಪಡನುಡಿ ನಿಘಂಟು' ಇವುಗಳ ಸೃಷ್ಟಿಯೂ ಆಗಬೇಕಿದೆ. ಈ ಎಡೆಯೇ ನಿವೇದಿಸಿಕೊಳ್ಳುವ ಮತ್ತೊಂದು ಅಂಶವೆಂದರೆ ಕನ್ನಡದ ಸೋದರೀ ಭಾಷೆಗಳ ದ್ವಿಭಾಷಾ ನಿಘಂಟು ನಿರ್ಮಾಣ. ಅಂದರೆ ಕನ್ನಡ - ತೆಲುಗು ನಿಘಂಟು, ಕನ್ನಡ-ಕೊಡಗು, ಕನ್ನಡ-ತಮಿಳು, ಕನ್ನಡ-ಮಲೆಯಾಳಂ, ತುಳು, ನೀಲಗಿರಿ, ತೋಡ, ತೊದವ ಮೊದಲಾದ ದ್ರಾವಿಡ ಭಾಷೆಗಳ ಕನ್ನಡ ನಿಘಂಟು ಪರಿಪೂರ್ಣ ಪ್ರಮಾಣದಲ್ಲಿ ಸಿದ್ಧವಾಗಬೇಕಿದೆ. ಅದು ಆಯಾಯ ಭಾಷೆಯ ಶುದ್ಧ ಶಬ್ದ ಉಚ್ಚಾರಣೆ ಮತ್ತು ನಿಷ್ಪತ್ತಿಗಳಿಂದ ಕೂಡಿರಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ಎಲ್ಲ ಆಲೋಚನೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ತು ನಿಘಂಟು ವಿಭಾಗವನ್ನು ತನ್ನ ನಿರಂತರಾಂಗವಾಗಿ ಪಡೆಯಲು ಇಚ್ಛಿಸಿ, ತನ್ನ ಯೋಜನೆಯನ್ನು ರಾಜ್ಯಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದೆ. ನಿಘಂಟುವಿನಂತಹ ತುಂಬು ವೈಜ್ಞಾನಿಕ ರಚನೆ ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ್ದರಿಂದ ನಿಘಂಟು ಕಮ್ಮಟ ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ಸಹಬಾಳ್ವೆ ನಡೆಸಬೇಕೆಂಬುದೇ ನನ್ನ ಅಪೇಕ್ಷೆ. ಇದು ಎಲ್ಲ ಕನ್ನಡಿಗರ ಸದಾಶಯವೂ ಆಹುದು. ನಮ್ಮ ಘನ ಸರ್ಕಾರ ಕನ್ನಡ ಕುಲಕೋಟಿಯ ಆಸೆ ಹಣ್ಣಾಗುವಂತೆಸಗಲು ಅನುವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಕಡೆಯದಾಗಿ, ಪರಿಷತ್ತಿನ ಕೃತಜ್ಞತೆಗೆ ಪಾತ್ರರಾದವರು ನಿಘಂಟು ನಿರ್ಮಾಪಕ ವರ್ಗದವರು. ಕಾಲಕಾಲಕ್ಕೂ ಬದಲಾಗುತ್ತ ಬಂದ ಎಲ್ಲ ಸಂಪಾದಕ ಮಂಡಲಿಗಳಿಗೆ, ಸಮಿತಿಗಳ ಸರ್ವಮಾನ್ಯ ಸದಸ್ಯರುಗಳಿಗೆ, ಪರಿಷತ್ತಿನ ಅಧ್ಯಕ್ಷರುಗಳು ಮತ್ತು ಅವರ ಅವಧಿಯ ಪದಾಧಿಕಾರಿಗಳಿಗೆ, ಕಚೇರಿಯ ಸಹಾಯಕ ಸಂಪಾದಕ ವರ್ಗಕ್ಕೆ ಪರಿಷತ್ತಿನ ಪರವಾಗಿ ಅನಂತಾನಂತ ಪ್ರಣಾಮಗಳು. ನಿಘಂಟು ಸೃಷ್ಟಿಯ ಆರಂಭದಿಂದ ಇಂದಿನವರೆಗೂ ನಿರಂತರ ಸೇವೆ ಸಲ್ಲಿಸುತ್ತಾ ಬಂದಿರುವ ಸ್ಥಾಯಿ ಸಂಪಾದಕ ಶ್ರೀ ಎನ್. ಬಸವಾರಾಧ್ಯರಿಗೆ ವಿಶೇಷ ವಂದನೆಗಳು ಸಲ್ಲುತ್ತವೆ. ಲಕ್ಷ ಲಕ್ಷ ಪ್ರಮಾಣದಲ್ಲಿ ಧನಸಹಾಯ ಮಾಡಿದ ಸರ್ಕಾರಗಳನ್ನೂ ನಿರ್ಲಕ್ಷಿಸುವಂತಿಲ್ಲ. ಅಂದಿನಿಂದ ಇಂದಿನವರಗಿನ ಎಲ್ಲ ಸರ್ಕಾರಗಳಿಗೂ, ಮುಖ್ಯವಾಗಿ ಇಂದಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್. ಡಿ. ದೇವೇಗೌಡ ಅವರಿಗೂ, ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಜೆ. ಹೆಚ್. ಪಟೇಲ್ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಬಿ. ಟಿ. ಲಲಿತಾನಾಯಕ್ ಅವರಿಗೂ, ಆ ಸರ್ಕಾರಗಳ ಕರಣಗಳಾಗಿ ಕಾರ್ಯನಿರ್ವಹಿಸಿದ ಕನ್ನಡಸಂಸ್ಕೃತಿ ಮತ್ತು ಅಭಿವೃದ್ಧಿ ಇಲಾಖೆಯ ಎಲ್ಲ ಅಧಿಕಾರಿಗಳಿಗೂ, ಮುಖ್ಯವಾಗಿ ಇಂದಿನ ಕಾರ್ಯದರ್ಶಿ ಶ್ರೀ ಅ. ರಾ. ಚಂದ್ರಹಾಸ ಗುಪ್ತ ಅವರಿಗೂ, ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರಿಗೂ, ಉಪನಿರ್ದೇಶಕರಾದ ಶ್ರೀ ಕಾ.ತ.ಚಿಕ್ಕಣ್ಣ ಅವರಿಗೂ, ಅವರ ಎಲ್ಲ ಅಧಿಕಾರಿ-ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

ಸರ್ವವಿಧದಿಂದಲೂ ನನ್ನೊಡನೆ ಸಹಕರಿಸಿ ಯೋಜನೆಯನ್ನು ಅಗುಮಾಡಲು ನೆರವಾಗುತ್ತಿರುವ ಪರಿಷತ್ತಿನ ಆಡಳಿತ ವರ್ಗದ ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೂ॥ ಕೆ.ಆರ್. ಇಕ್ಬಾಲ್ ಅಹಮದ್ ಹಾಗೂ ಶ್ರೀ ಎಂ. ಶ್ರೀರಾಮಯ್ಯ ಇವರುಗಳಿಗೆ, ಪರಿಷತ್ತಿನ ಸಿಬ್ಬಂದಿ ವರ್ಗಕ್ಕೆ, ಕೇವಲ ಇಪ್ಪತ್ತೈದು ದಿನಗಳಲ್ಲಿ ಒಂದು ಸಾವಿರದ ಎರಡು ನೂರು ಪುಟಗಳಿಗೂ ಮಿಕ್ಕ ನಿಘಂಟು ಹೊತ್ತಗೆಯನ್ನು ಮುದ್ರಿಸಿಕೊಟ್ಟಿದ್ದಲ್ಲದೆ, ರಟ್ಟು, ಕಾಣದೆ ಅನಾಥವಾಗಿ ಬಿದ್ದಿದ್ದ ಹಿಂದಿನ ೬ ಮತ್ತು ೭ನೆಯ ಸಂಪುಟಗಳಿಗೆ ರಕ್ಷಾಕವಚವನ್ನೂ ಹೊದಿಸಿ, ಮಾರುಕಟ್ಟೆಗೆ ಬಿಡಲು ಯೋಗ್ಯವನ್ನಾಗಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಮಹಮ್ಮದ್ ಸನಾವುಲ್ಲಾ, ಮತ್ತು ಉಪನಿರ್ದೇಶಕರಾದ ಶ್ರೀ ರವಿಶಂಕರ್ ಇವರಿಗೆ ಮತ್ತು ಕರಡು ಪರಿಶೀಲಿಸಿದ ಶ್ರೀ ಟಿ. ಆರ್. ಮಹಾದೇವಯ್ಯನವರಿಗೆ ಈ ದಿಸೆಯಲ್ಲಿ ನನಗೆ ನೈಜ ಹಾಗೂ ಋಜುಮಾರ್ಗದರ್ಶನ ಮಾಡುತ್ತಿರುವ ನನ್ನ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಗೊ. ರು. ಚನ್ನಬಸಪ್ಪನವರಿಗೆ, ಒಟ್ಟಾರೆ, ಈ ನಿಘಂಟು ಸಂಪುಟಗಳ ರಚನೆಯಲ್ಲಿ ನೆರವಾದ ಎಲ್ಲ ಸೋದರ ಸೋದರಿಯರಿಗೆ ಕೃತಜ್ಞತಾಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

" ಓಂ ತತ್ ಸತ್ "

ಯುವನಾಮ ಸಂವತ್ಸರದ
ವಿಜಯದಶಮಿ
೩.೧೦.೧೯೯೫

ಸಾ. ಶಿ. ಮರುಳಯ್ಯ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಪರಿಷತ್ತಿನ ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ೮೦ ವರ್ಷಗಳ ಇತಿಹಾಸದಲ್ಲಿ ಕನ್ನಡ-ಕನ್ನಡ ಬೃಹನ್ನಿಘಂಟುವಿನ ಪ್ರಕಟನೆ ಒಂದು ವಿಶಿಷ್ಟ ಮೈಲಿಗಲ್ಲು, ಸಾಧನೆಗಳ ಕಳಶ. ಕನ್ನಡಕ್ಕೆ ಆಕರವಾದ ಅಧಾರಪೂರ್ಣವಾದ ಸಮಗ್ರ ನಿಘಂಟು ರಚನೆ ಹಾಗೂ ಪ್ರಕಟನೆ, ಪರಿಷತ್ತು ೧೯೧೫ ಮೇ ೩ರಂದು ಸ್ಥಾಪಿತವಾದಾಗಲೇ ಅದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. ನಿಘಂಟು ಒಂದು ಜ್ಞಾನಸಾಗರ. ಇದು ಅಧ್ಯಯನಾಸಕ್ತರ ಬೌದ್ಧಿಕ ಮಟ್ಟದ ವಿಕಾಸಕ್ಕೆ ಆಧಾರ. ಅರಿವಿನ ಬೆಳಕಿನ ನಿರಂತರ ಪ್ರಕಾಶ ಇದರದ್ದು. ಅಂತಾಗಿ ಆಸಕ್ತರ ಜ್ಞಾನದಾಹಕ್ಕೆ ನೀರುಣಿಸುವ ನೆಲೆ. ಉದ್ದೇಶಪೂರ್ಣ ಹಿನ್ನೆಲೆಯೊಂದಿಗೆ ಆರಂಭಗೊಂಡ ನಿಘಂಟು ಯೋಜನೆ ಮೊದಲು ನಾಲ್ಕು ಸಂಪುಟಗಳಲ್ಲಿ ಮುಕ್ತಾಯಗೊಳ್ಳಬಲ್ಲದು ಎಂದು ತಿಳಿಯಲಾಗಿತ್ತು. ಆದರೆ 'ನಿಘಂಟುಗಳ ನಿಘಂಟು' ಕಾರ್ಯದಿಂದ ಆರಂಭವಾಗಿ ಕಾವ್ಯ, ಶಾಸನ, ಹೊಸಹೊಸಶಬ್ದಗಳ ಆಧುನಿಕ ಸೃಷ್ಟಿ, ಹೊಸ ಭಾಷಾಪ್ರಯೋಗಗಳು ಇತ್ಯಾದಿಗಳನ್ನು ಕಾಲಾನುಗುಣವಾಗಿ ಗಮನಿಸುತ್ತ ಬಂದಂತೆ ನಾಲ್ಕು ಸಂಪುಟಗಳ ನಿಘಂಟು ತನ್ನ ವ್ಯಾಪ್ತಿಯನ್ನು ಎಂಟು ಸಂಪುಟಗಳಿಗೆ ವಿಸ್ತರಿಸಿಕೊಳ್ಳಲೇಬೇಕಾಯಿತು.

ನಿಘಂಟುವಿನ ಕೆಲಸ ತಾಳ್ಮೆಗೊಂದು ಸವಾಲು. ಸಮರ್ಪಕತೆ, ನಿರ್ದಿಷ್ಟತೆ ಹಾಗೂ ನಿಕಷದ ಅಂಗಳದಲ್ಲಿ ಅಂಗೀಕಾರದ ಮುದ್ರೆ ಬಿದ್ದಮೇಲೆ ಅದು ಅಧಿಕೃತ ರೂಪುತಾಳುತ್ತದೆ. ಈ ಕೆಲಸವನ್ನು ನಾಡಿನ ಗಣ್ಯವಿದ್ವಾಂಸರಿಂದ ಕೂಡಿರುವ ಸಂಪಾದಕ ಮಂಡಳಿ ಅತ್ಯಂತ ಶಿಸ್ತಿನಿಂದ ಸಮರ್ಪಕವಾಗಿ ಮಾಡಿ, ಪರಿಷತ್ತಿಗೊಂದು ಹೆಸರು ತಂದುಕೊಟ್ಟು, ಸ್ತುತ್ಯಾರ್ಹವಾಗಿದೆ. ಆರಂಭಕ್ಕೆ ಐದುಸಾವಿರ ಪುಟಗಳಿರಬೇಕೆಂದು ಮಾಡಿದ್ದ ಅಂದಾಜು ಈಗ ಸುಮಾರು ಹತ್ತುಸಾವಿರ ಪುಟಗಳವರಗೆ ಸುಮಾರು ಎರಡು ಲಕ್ಷ ಪದಗಳನ್ನು ಒಳಗೊಂಡಿರುವ ಈ ಬೃಹನ್ನಿಘಂಟು ಭಾಷೆ ಮತ್ತು ಸಾಹಿತ್ಯಾಸಕ್ತರ ಪಾಲಿಗೆ ಚಿರವಿನೂತನ ಆಸ್ತಿ. ೧೯೯೩ರಲ್ಲಿ ಏಳನೆಯ ಸಂಪುಟವನ್ನು ಬಿಡುಗಡೆ ಮಾಡಿದ ತೃಪ್ತಿಯೊಡನೆ ಇದೀಗ ಎಂಟನೆಯ ಸಂಪುಟವನ್ನೂ ನಾಡವರ ಕೈಗಿಡಲು ನಮಗೆ ಹರ್ಷವಾಗುತ್ತಿದೆ.

ನಿಘಂಟು ಯೋಜನೆಯ ಈ ಕೊನೆಯ ಸಂಪುಟ, ಈವರೆಗೆ ನಿಘಂಟು ಸಿದ್ಧತೆಯ ಕಾರ್ಯದಲ್ಲಿ ದುಡಿದ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರು, ಪ್ರಧಾನ ಸಂಪಾದಕರು, ಸದಸ್ಯ ವಿದ್ವಾಂಸರು, ಸರ್ಕಾರದ ಪ್ರತಿನಿಧಿಗಳು, ಪರಿಷತ್ತಿನ ಅಧ್ಯಕ್ಷರು, ಪದಾಧಿಕಾರಿಗಳು, ನಿಘಂಟು ಕಛೇರಿಯ ಮತ್ತು ಪರಿಷತ್ತಿನ ಸಿಬ್ಬಂದಿವರ್ಗ - ಈ ಎಲ್ಲರಿಗೂ ಒಂದು ರೀತಿ ಧನ್ಯತೆಯ ಭಾವ ತರುತ್ತದೆಂದು ನಾನು ಭಾವಿಸಿದ್ದೇನೆ. ಆದರೆ ಇದು ಒಟ್ಟು ಯೋಜನೆಯ ಒಂದು ಆಧಾರಸ್ತಂಭ ಮಾತ್ರ. ಮುಂದಿನ ಹಂತದಲ್ಲಿ ನಡೆಯಬೇಕಾಗಿರುವ ಈ ಎಂಟೂ ಸಂಪುಟಗಳ ಪರಿಷ್ಕರಣ ಒಂದು ರೀತಿಯಲ್ಲಿ ನಿರಂತರ ಕಟ್ಟುಎಕೆಯ ಕಾರ್ಯ. ಹಾಗೆಯೇ ದ್ವಿಭಾಷಾ, ತ್ರಿಭಾಷಾ ಕೋಶಗಳು, ವಿಷಯ ಕೋಶಗಳು ಇತ್ಯಾದಿ ನಾನಾ ಬಗೆಯ ಅರ್ಥಕೋಶಗಳನ್ನು ರಚಿಸಲು ಮೂಲಸಾಮಗ್ರಿಯನ್ನು ಈ ಎಂಟು ಸಂಪುಟಗಳು ಒದಗಿಸುತ್ತವೆ. ಈ ದಿಸೆಯಲ್ಲಿ ಇನ್ನೂ ಆಗಬೇಕಾದ ಕೆಲಸ ಸಾಕಷ್ಟಿದೆ.

ಭಾಷೆಯ ಜೀವಂತಿಕೆ ಆಯಾ ಕಾಲದ ಹೊಸತುಗಳಲ್ಲಿನ ಹೊಸಶಬ್ದಗಳನ್ನು, ಪ್ರಯೋಗಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ಪೋಷಿಸುವುದಲ್ಲದೆ, ಹೊಸ ಆಯಾಮಗಳನ್ನು ಪಡೆಯುವುದರಲ್ಲಿದೆ. ಹೀಗಾಗಿ ಪ್ರಕಟವಾಗಿರುವ ಸಂಪುಟಗಳಲ್ಲಿ ಸಹಜವಾಗಿ ಹೊಸ ಶಬ್ದಗಳ ಸೇರ್ಪಡೆಗಳಿಗೆ ಗರ್ಭಸ್ಥ ನೆಲೆಯನ್ನು ಒದಗಿಸಿರುವ ಹಿನ್ನೆಲೆ ಇದೆ. ಅಂತೇ ನಿಘಂಟುವಿನ ಪರಿಷ್ಕರಣ ಆಯಾ ಕಾಲೀನ ಅಗತ್ಯವಲ್ಲದೆ ನಿರಂತರ ಕಾರ್ಯವಾಗಿದೆ. ಅನುಬಂಧ ನೀಡಿಕೆ, ಪರಿಷ್ಕರಣ ಇತ್ಯಾದಿಗಳ ಹಿನ್ನೆಲೆಯಲ್ಲಿ ಈ ನಿಘಂಟು ಯೋಜನೆ ಮುಂದಿನ ಹತ್ತುವರ್ಷಗಳ ಕಾಲವಾದರೂ ಮುಂದುವರಿಯುವ ಅವಶ್ಯಕತೆ ಇದೆ. ಈ ಪರಿಷ್ಕರಣ ಕಾರ್ಯವನ್ನು ಕೈಗೆತ್ತಿಗೊಳ್ಳಲು ನೆರವಾಗಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಲಾಗಿದೆ. ಅನುಬಂಧ ತಯಾರಿಕೆ ಮತ್ತು ಪರಿಷ್ಕರಣ ಕಾರ್ಯದಲ್ಲಿ ಹಾಲಿ ನಿಘಂಟು ಸಂಪಾದಕ ಸಮಿತಿಯನ್ನು ಪುನರ್‌ರಚಿಸಿ, ಸಮಿತಿಯಲ್ಲಿ ಅಧ್ಯಕ್ಷರು, ಪ್ರಧಾನ ಸಂಪಾದಕರು ಮತ್ತು ಎಂಟು ಜನ ಸದಸ್ಯರಿದ್ದು, ಜೊತೆಗೆ ಪರಿಷತ್ತಿನ ಪದಾಧಿಕಾರಿಗಳನ್ನು ಕೂಡಿಕೊಂಡಿರಬೇಕು ಎಂಬ ಅಂಶವನ್ನು ಆ ಪ್ರಸ್ತಾವನೆಯಲ್ಲಿ ತಿಳಿಸಿದೆ. ಹತ್ತು ವರ್ಷಗಳಿಗೆ ಸುಮಾರು ೭೭ ಲಕ್ಷ ರೂ.ಗಳ ಅಂದಾಜು ವೆಚ್ಚದ ವಿವರದ ಪ್ರಸ್ತಾವನೆ ಅದಾಗಿದೆ. ಅನುಬಂಧ ಹಾಗೂ ಪರಿಷ್ಕೃತ ಸಂಪುಟಗಳ ಮುದ್ರಣವೆಚ್ಚ ಮತ್ತು ಸಿಬ್ಬಂದಿ ವೇತನದ ಸಂಭವನೀಯ ಹೆಚ್ಚಳ ಈ ಅಂದಾಜಿನಲ್ಲಿ ಸೇರಿಲ್ಲ. ರಾಜ್ಯಸರ್ಕಾರ ಅವಶ್ಯಕವಾದ ಈ ಕಾರ್ಯಕ್ಕೆ ಪೂರ್ಣನೆರವಾಗುವುದೆಂಬ ಭರವಸೆ ನನ್ನದು.

ಈಗ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಈವರೆಗ ಪ್ರಕಟವಾಗಿರುವ ನಿಘಂಟಿನ ಎಳುಸಂಪುಟಗಳನ್ನು ಈಗಾಗಲೇ ಗಣಕಯಂತ್ರಕ್ಕೆ ಅಳವಡಿಸಲಾಗಿದ್ದು ಪರಿಷ್ಕರಣ ಕಾರ್ಯಕ್ಕೆ ಸುಲಭವಾಗುವಂತೆ ಮಾಡಲಾಗಿದೆ. ಹಾಗೆಯೇ ಎಂಟನೆಯ ಸಂಪುಟವನ್ನು ಅಳವಡಿಸಿಕೊಡಲೂ ಕನ್ನಡ ವಿಶ್ವವಿದ್ಯಾಲಯ ಒಪ್ಪಿಕೊಂಡಿದೆ. ಇದಕ್ಕಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಕೃತಜ್ಞತೆ ಸಲ್ಲಿಸುವೆ. ಅನುಬಂಧ ತಯಾರಿಕೆ ಮತ್ತು ಪರಿಷ್ಕರಣ ಕಾರ್ಯಗಳನ್ನು ಪರಿಷತ್ತಿನ ತಜ್ಞ ನಿಘಂಟು ಸಂಪಾದಕ ಮಂಡಳಿಯು ನೋಡಿಕೊಳ್ಳುತ್ತದೆ. ಅಲ್ಲದೆ ಈ ಯೋಜನೆಯ ಪೂರ್ಣನಿರ್ವಹಣೆಯ ಹೊಣೆ ಮೊದಲಿನಂತೆ ಪರಿಷತ್ತಿನದೇ ಆಗಿರಬೇಕೆಂಬ ತಜ್ಞರ ಸಮಿತಿಯ ಸಲಹೆ ಸಹಜವಾಗಿದೆ.

ಕನ್ನಡ-ಕನ್ನಡ ನಿಘಂಟು ಸಿದ್ಧತೆಯ ಕಾರ್ಯ ಸಂಪೂರ್ಣವಾಗಿ ಕರ್ನಾಟಕ ಸರ್ಕಾರದ ಯೋಜನೆಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರದ ಪರವಾಗಿ ಅದನ್ನು ನಿರ್ವಹಿಸುತ್ತಿದೆ. ರಾಜ್ಯ ಸರ್ಕಾರವು ಈ ಯೋಜನೆಗೆ ಉದಾರವಾಗಿ ಆರ್ಥಿಕ ನೆರವನ್ನು ನೀಡಿದೆ. ಆರಂಭಕ್ಕೆ ೧೫ ಲಕ್ಷ ರೂ.ಗಳ ಯೋಜನೆಯಾಗಿದ್ದು, ಈ ಕಾರ್ಯ ಮುಗಿಯುವ ವೇಳೆಗೆ ಒಂದು ಕೋಟಿ ರೂ.ಗಳನ್ನು ಮೀರಿದ್ದರೂ, ನಿಗದಿಯಾಗಿದ್ದ ಕಾಲಾವಧಿಯು ಮೀರಿದ್ದರೂ ಅದನ್ನು ವಿಸ್ತರಿಸಲು ಅವಕಾಶ ನೀಡಿ ಅನುದಾನವನ್ನು ಮಂಜೂರು ಮಾಡಿ ರಾಜ್ಯಸರ್ಕಾರ ತುಂಬು ಸಹಕಾರ ನೀಡಿದೆ. ಇದು ಕರ್ನಾಟಕ ರಾಜ್ಯಸರ್ಕಾರದ ಭಾಷೆ ಮತ್ತು ಸಾಹಿತ್ಯಾಭಿಮಾನದ ದ್ಯೋತಕವಾಗಿದೆ. ಇದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಂಬಂಧಿಸಿದವರಿಗೆಲ್ಲ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ.

ಕನ್ನಡ-ಕನ್ನಡ ನಿಘಂಟಿನ ಮುದ್ರಣದಂತಹ ಅನುಭವೀ ಹಾಗೂ ಪೂರ್ಣ ಪರಿಶ್ರಮದ ಕಾರ್ಯವನ್ನು ಸರ್ಕಾರಿ ಮುದ್ರಣಾಲಯದವರು ಅಚ್ಚುಕಟ್ಟಾಗಿ ಮಾಡಿಸಿಕೊಟ್ಟಿದ್ದಾರೆ. ಅದಕ್ಕಾಗಿ ಈ ಇಲಾಖೆಯ ನಿರ್ದೇಶಕರಿಗೆ ವಂದನೆ ಸಲ್ಲಿಸುತ್ತೇನೆ. ಈ ಕಾರ್ಯದಲ್ಲಿ ಸಹಕರಿಸಿದ ಮುದ್ರಣ ಇಲಾಖೆಯ ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೂ ಕೃತಜ್ಞತೆಗಳು.

ಪ್ರಸ್ತುತ ಎಂಟನೆಯ ಸಂಪುಟದ ಸಿದ್ಧತೆಯ ಕಾರ್ಯದಲ್ಲಿ, ನಿಘಂಟು ಸಂಪಾದಕ ಮಂಡಳಿಯ ಅಧ್ಯಕ್ಷರಾಗಿದ್ದ ದಿ॥ ಡಾ. ಜಿ.ಎಸ್. ಗಾಯಿ ಅವರ ಸೇವೆಯನ್ನು, ೧೯೫೫ರಿಂದಲೂ ನಿಘಂಟು ಕಾರ್ಯಾಲಯದಲ್ಲಿದ್ದು, ೧೯೭೦ರಲ್ಲಿ ಪ್ರಕಟವಾದ ಮೊದಲ ಸಂಪುಟದ ಸಂಪಾದಕರಾಗಿದ್ದು, ಈಗ ಪ್ರಕಟವಾಗುತ್ತಿರುವ ಕೊನೆಯ (ಎಂಟನೆಯ) ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಡಾ॥ ಜಿ.ಎಸ್. ಗಾಯಿ ಅವರ ನಿಧನಾನಂತರ ನಿಘಂಟು ಸಮಿತಿಯ ಅಧ್ಯಕ್ಷರೂ ಆದ ಪ್ರೊ॥ ಎನ್. ಬಸವಾರಾಧ್ಯ ಅವರ ಸತತ ಪರಿಶ್ರಮದ ಸೇವೆಯನ್ನು ಪರಿಷತ್ತು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತದೆ. ೧೯೪೪ರಿಂದ ಈವರೆವಿಗೆ ವಿದ್ಯುತ್ಪೂರ್ಣ ಸೇವೆ ಸಲ್ಲಿಸಿದ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ, ನಿಘಂಟು ಸಿಬ್ಬಂದಿ ವರ್ಗಕ್ಕೂ ಪರಿಷತ್ತು ಋಣಿಯಾಗಿದೆ. ಅಲ್ಲದೆ ಪರಿಷತ್ತಿನ ಪದಾಧಿಕಾರಿಗಳಿಗೆ, ಸಿಬ್ಬಂದಿ ವರ್ಗಕ್ಕೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಈ ಕಾರ್ಯದಲ್ಲಿ ನೆರವಾದ ಸರ್ವರಿಗೂ ಅನಂತ ನಮನಗಳು.

ದಿನಾಂಕ: ೧೦-೬-೧೯೯೫
ಬೆಂಗಳೂರು-೫೬೦ ೦೦೪

ಗೊ.ರು. ಚನ್ನಬಸಪ್ಪ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಅರಿಕೆ

ಕನ್ನಡ ಸಾಹಿತ್ಯ ಪರಿಷತ್ತಿಗೆ ಶಾಶ್ವತವಾದ ಕೀರ್ತಿಯನ್ನು ತಂದುಕೊಟ್ಟಿರುವ ಯೋಜನೆಗಳಲ್ಲಿ ಕನ್ನಡ ನಿಘಂಟುಯೋಜನೆ ಅತ್ಯಂತ ಪ್ರಮುಖವಾದುದು. ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು. ಈಗ ಪ್ರಕಟವಾಗುತ್ತಿರುವ ಎಂಟನೆಯ ಸಂಪುಟದೊಂದಿಗೆ ಈ ಯೋಜನೆಯ ಪ್ರಥಮಘಟ್ಟ ಮುಗಿದಂತಾಗುತ್ತದೆ. ಇದಾದ ಮೇಲೆ ಈ ನಿಘಂಟಿನ ಅನುಬಂಧದ ಸಿದ್ಧತೆ, ಪರಿಷ್ಕರಣಕಾರ್ಯ, ದ್ವಿಭಾಷಾ, ತ್ರಿಭಾಷಾ, ಬಹುಭಾಷಾ ನಿಘಂಟುಗಳ ನಿರ್ಮಾಣಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಈ ಸಂಬಂಧವಾಗಿ ಹತ್ತುವರ್ಷಗಳ ಒಂದು ಯೋಜನೆಯನ್ನು ಪರಿಷತ್ತು ಸರ್ಕಾರಕ್ಕೆ ಈಗಾಗಲೇ ಕಳಿಸಿಕೊಟ್ಟು ಅದರ ಅಂಗೀಕಾರದ ನಿರೀಕ್ಷಣೆಯಲ್ಲಿದೆ.

ಕನ್ನಡ ನಿಘಂಟಿನ ಕಡೆಯದಾದ ಈ ಎಂಟನೆಯ ಸಂಪುಟದಲ್ಲಿ 'ವ' ಕಾರದಿಂದ 'ಬ' ಕಾರದ ವರೆಗಿನ ಅಕ್ಷರಗಳ ಎಲ್ಲ ಶಬ್ದಗಳೂ ಸಮಾವೇಶಗೊಂಡಿವೆ. ಸರ್ವಾಂಗಸುಂದರವಾಗಿ ಪ್ರಕಟವಾಗಿರುವ ಈ ಎಂಟನೆಯ ಸಂಪುಟವನ್ನು ಕನ್ನಡ ಜನತೆಯ ಕೈಯಲ್ಲಿಡಲು ನನಗೆ ತುಂಬ ಸಂತೋಷವೆನಿಸಿದೆ. ಈ ನಿಘಂಟಿನ ರಚನಾಕಾರ್ಯಕ್ಕೆ ಕರ್ನಾಟಕಸರ್ಕಾರವು ನೀಡಿರುವ ಧನಸಹಾಯವನ್ನು ಅತ್ಯಂತ ಕೃತಜ್ಞತೆಯಿಂದ ಕನ್ನಡಿಗರೆಲ್ಲರೂ ನೆನೆಯಬೇಕಾಗಿದೆ.

ಕನ್ನಡ ನಿಘಂಟು ಸಂಪಾದಕ ಸಮಿತಿಯಲ್ಲಿ ನಾಡಿನ ಸುಪ್ರಸಿದ್ಧ ವಿದ್ವಾಂಸರು ಸದಸ್ಯರಾಗಿದ್ದುಕೊಂಡು ತಮ್ಮ ಜ್ಞಾನಾನುಭವಗಳ ಬೆಳಕನ್ನು ಚೆಲ್ಲಿ ಈ ನಿಘಂಟು ಶಾಸ್ತ್ರೀಯವಾಗಿ ರೂಪುಗೊಳ್ಳಲು ಕಾರಣಕರ್ತರಾಗಿದ್ದಾರೆ. ಇವರೆಲ್ಲರಿಗೂ ಗೌರವಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಮಹಾಕಾರ್ಯಕ್ಕಾಗಿ ನಿರಂತರವಾಗಿ ದುಡಿದು ಇಂದು ನಮ್ಮ ಮಧ್ಯೆ ಇಲ್ಲದಿರುವ ಸಲಹಾಸಮಿತಿ ಮತ್ತು ಸಂಪಾದಕಸಮಿತಿ ಸದಸ್ಯರಾಗಿದ್ದ ಶ್ರೀಯುತರಾದ ಬೆಳ್ಳಾವೆ ವೆಂಕಟನಾರಣಪ್ಪನವರು, ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯನವರು, ಎಂ. ಆರ್. ಶ್ರೀನಿವಾಸಮೂರ್ತಿಯವರು, ಎಂ.ಗೋವಿಂದ ಪೈ ಅವರು, ಎಲ್.ವಿ. ರಾಮಸ್ವಾಮಿ ಅಯ್ಯರ್ ಅವರು, ಡಾ॥ ವಿ.ಎನ್. ಉಪಾಧ್ಯೆ ಅವರು, ಆಸ್ಥಾನವಿದ್ವಾನ್ ಆರ್. ಅನಂತಕೃಷ್ಣಶರ್ಮ ಅವರು, ಪಿ.ಎಂ. ಸೋಮಸುಂದರಂ ಅವರು, ಡಾ॥ ಎ.ಆರ್. ಕೃಷ್ಣಶಾಸ್ತ್ರೀ ಅವರು, ಪ್ರೊ॥ ತೀ.ನಂ. ಶ್ರೀಕಂಠಯ್ಯನವರು, ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರು, ಪ್ರೊ॥ ಕ.ವೆಂ. ರಾಘವಾಚಾರ್ ಅವರು, ಪ್ರೊ॥ಎಂ. ಮರಿಯಪ್ಪಭಟ್ಟ ಅವರು, ಡಾ॥ರಂ. ಶ್ರೀ. ಮುಗಳಿ ಅವರು, ಪ್ರೊ॥ಸ.ಸ. ಮಾಳವಾಡ ಅವರು, ಎನ್. ಲಕ್ಷ್ಮೀನಾರಾಯಣರಾವ್ ಅವರು, ಪ್ರೊ॥ ಕೆ.ಜಿ. ಕುಂದಣಗಾರ ಅವರು, ಪದ್ಮಭೂಷಣ ಡಾ॥ ಕೆ.ವಿ. ಪುಟ್ಟಪ್ಪ ಅವರು, ಪ್ರೊ॥ ಡಿ.ಕೆ. ಭೀಮಸೇನರಾವ್ ಅವರು, ರಾಜಸೇವಾಸಕ್ತ ಡಿ.ಸಿ. ಸುಬ್ಬರಾಯಪ್ಪನವರು, ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರೀ ಅವರು, ಡಾ. ಸಿದ್ಧಯ್ಯಪುರಾಣಿಕ ಅವರು, ಬಸವರಾಜ ಕಟ್ಟೀಮನಿ ಅವರು, ಡಾ॥ ಜಿ.ಎಸ್. ಗಾಯಿ ಅವರು – ಈ ಮಹನೀಯರು ಸಲ್ಲಿಸಿರುವ ಅನುಪಮಸೇವೆಯನ್ನು ಅತ್ಯಂತ ಕೃತಜ್ಞತೆಯಿಂದ ನೆನೆಯಬೇಕಾಗಿದೆ. ಶಬ್ದಸಂಗ್ರಹಕಾರ್ಯದಲ್ಲಿ ನೆರವಾದ, ಇಂದು ನಮ್ಮಿಂದ ದೂರವಾಗಿರುವ ಅನೇಕ ವಿದ್ವಾಂಸರ ಸೇವೆಯನ್ನು ಇಲ್ಲಿ ಸ್ಮರಿಸಬೇಕಾಗಿದೆ. ಅಲ್ಲದೆ ಅಧಿಕಾರನಿಮಿತ್ತ ಸಂಪಾದಕ ಸಮಿತಿಯಲ್ಲಿ ಭಾಗವಹಿಸುತ್ತಿದ್ದ ಪರಿಷತ್ತಿನ ಪದಾಧಿಕಾರಿಗಳಲ್ಲಿ ಕೆಲವರು ಕಣ್ಮರೆಯಾಗಿದ್ದಾರೆ. ಅವರ ಸೇವೆಯನ್ನೂ ಇಲ್ಲಿ ದಾಖಲಿಸಬೇಕಾಗಿದೆ. ಅಂತೆಯೇ ನಿಘಂಟುರಚನಾಕಾರ್ಯಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾಗಿ, ಇಂದು ನಮ್ಮ ಮಧ್ಯೆ ಇಲ್ಲದಿರುವ ಇತರ ಮಹನೀಯರನ್ನೂ ನೆನಪಿಸಿಕೊಳ್ಳಬೇಕಾಗಿದೆ.

೧೯೬೨ರಿಂದ ಕನ್ನಡ ನಿಘಂಟುಸಂಪಾದಕಸಮಿತಿಯ ಅಧ್ಯಕ್ಷರಾಗಿದ್ದ ಡಾ॥ ಜಿ. ಎಸ್. ಗಾಯಿ ಅವರು ಈ ಸಂಪುಟದ ಮುದ್ರಣಪ್ರತಿಯ ಪರಿಶೀಲನೆ, ಕರಡಚ್ಚುಗಳ ತಿದ್ದುಪಡಿ ಮೊದಲಾದ ಕಾರ್ಯಗಳಲ್ಲಿ ವಿಶೇಷವಾದ ನೆರವನ್ನು ನೀಡಿದ್ದಾರೆ. ಎಂಟನೆಯ ಸಂಪುಟವನ್ನು ಕ್ಷಿಪ್ರದಲ್ಲೇ ಹೊರತರಬೇಕೆಂಬ ತೀವ್ರಾಕಾಂಕ್ಷೆಯಿಂದಿದ್ದ ಶ್ರೀಯುತರು ಈ ಸಂಪುಟ ಪ್ರಕಟವಾಗುವುದರೊಳಗಾಗಿ ದೈವಾಧೀನರಾದುದು ದುರ್ದೈವದ ಸಂಗತಿ. ಅವರ ಸೇವೆಯನ್ನೂ, ಸಹಕಾರವನ್ನೂ ವಿಶೇಷವಾಗಿ ಸ್ಮರಿಸಬೇಕಾಗಿದೆ.

ಸಂಗೀತದ ಪಾರಿಭಾಷಿಕಶಬ್ದಗಳಿಗೆ ಪ್ರೊ. ರಾ. ಸತ್ಯನಾರಾಯಣ ಅವರು, ಕೆಲವು ಸಂಸ್ಕೃತಶಬ್ದಗಳ ವಿವರಣೆಗಳ ಬಗೆಗೆ ವಿದ್ವಾನ್ ಎನ್. ರಂಗನಾಥಶರ್ಮಾ ಅವರು, ಜ್ಯೋತಿಷ ಮತ್ತು ಸೂಪಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಶಬ್ದಗಳಿಗೆ ವಿದ್ವಾನ್ ನ. ಕೃಷ್ಣಜೋಯಿಸ್ ಅವರು, ಪ್ರಾದೇಶಿಕಭಾಷಾಪ್ರಭೇದದ ಕೆಲವು ಶಬ್ದಗಳಿಗೆ ಆಯಾ ಭಾಷೆಗಳಲ್ಲಿ ಗ್ರಂಥರಚನೆಮಾಡಿರುವ ಹಲವಾರು ಗ್ರಂಥಕರ್ತರು – ಹೀಗೆಯೇ ಅನೇಕ ಜನ ವಿದ್ವಾಂಸರು ಅರ್ಥಗಳನ್ನೂ ವಿವರಣೆಗಳನ್ನೂ ತಮ್ಮ ಪತ್ರಗಳ ಮೂಲಕ ಬರೆದು ತಿಳಿಸಿದ್ದಾರೆ. ಅವರೆಲ್ಲರ ನೆರವನ್ನು ನಾವು ಅತ್ಯಂತ ಕೃತಜ್ಞತೆಯಿಂದ ನೆನೆಯಬೇಕಾಗಿದೆ.

ಎಂಟನೆಯ ಸಂಪುಟದ ಸಿದ್ಧತೆಯ ಕಾರ್ಯದಲ್ಲಿ ಹಿಂದಿನ ಅಧ್ಯಕ್ಷರೂ ಪ್ರಧಾನಸಂಪಾದಕರೂ ಆಗಿದ್ದ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ಸಲ್ಲಿಸಿರುವ ಸೇವೆಯನ್ನು ವಿಶ್ವಾಸದಿಂದ ನೆನೆಯುತ್ತೇನೆ.

ಕನ್ನಡ ನಿಘಂಟಿನ ಸಿಬ್ಬಂದಿವರ್ಗ ನಿಘಂಟು ಕಾರ್ಯದಲ್ಲಿ ಪರಿಣತರಾಗಿದ್ದಾರೆ. ನಿಘಂಟಿನ ಹಸ್ತಪ್ರತಿಯ ಬರವಣಿಗೆ, ಪರಿಷ್ಕರಣ ಕಾರ್ಯ, ಕರಡಚ್ಚು ಪರಿಶೀಲನೆ ಮೊದಲಾದ ಎಲ್ಲ ಹಂತಗಳಲ್ಲೂ ಸಮರ್ಪಣಬುದ್ಧಿಯಿಂದ ದುಡಿದಿದ್ದಾರೆ. ಅವರ ಸಹಕಾರವನ್ನು ತುಂಬುಹೃದಯದಿಂದ ಸ್ಮರಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪನವರು, ಗೌ॥ ಕಾರ್ಯದರ್ಶಿಗಳಾದ ಪ್ರೊ॥ ಎಸ್. ಶ್ರೀನಿವಾಸನ್ ಅವರು, ಪ್ರೊ॥ ಎಂ. ಜಿ. ನಾಗರಾಜ್ ಅವರು, ಗೌ॥ ಕೋಶಾಧಿಕಾರಿಗಳಾದ ಪ್ರೊ॥ ಹೆಚ್. ಆರ್. ದಾಸೇಗೌಡ ಅವರು ಮತ್ತು ಇಂದಿನ ಅಧ್ಯಕ್ಷರಾದ ಡಾ॥ ಸಾ.ಶಿ. ಮರುಳಯ್ಯನವರು, ಗೌ॥ ಕಾರ್ಯದರ್ಶಿಗಳಾದ ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು, ಪ್ರೊ॥ ಕೆ.ಆರ್. ಇಕ್ಬಾಲ್ ಅಹಮದ್ ಅವರು, ಗೌ॥ ಕೋಶಾಧಿಕಾರಿಗಳಾದ ಶ್ರೀ ಎಂ. ಶ್ರೀರಾಮಯ್ಯನವರು — ಇವರೆಲ್ಲರೂ ಈ ಸಂಪುಟ ಹೊರಬರಲು ಒತ್ತಾಸೆ ನೀಡಿದ್ದಾರೆ. ಇವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ನಿಘಂಟಿನ ಉಪಸಂಪಾದಕರಾಗಿ ನಿವೃತ್ತಿಹೊಂದಿರುವ ಶ್ರೀ ಟಿ. ಆರ್. ಮಹಾದೇವಯ್ಯನವರು ಎಂಟನೆಯ ಸಂಪುಟದ ಕರಡಚ್ಚನ್ನು ತಿದ್ದುವುದರಲ್ಲಿ ನೆರವಾಗಿದ್ದಾರೆ. ಅವರ ಸಹಕಾರವನ್ನಿಲ್ಲಿ ಸ್ಮರಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಸಂಪುಟಗಳನ್ನು ಪರಿಶೀಲಿಸಿದವರಿಗೆ ಕೆಲವು ನ್ಯೂನತೆಗಳೂ ಸ್ಖಾಲಿತ್ಯಗಳೂ ಕಂಡುಬರಬಹುದು. ಈ ನ್ಯೂನತೆಗಳ ಅರಿವು ನಮಗಾಗಿದೆ. ಈ ತೆರನ ಕಾರ್ಯವನ್ನು ಮೊದಲಬಾರಿಗೇ ಸರ್ವಸಮರ್ಪಕವಾಗಿ ನಿರ್ವಹಿಸುವುದು ಕಷ್ಟಸಾಧ್ಯವೆಂಬುದು ಈ ಕಾರ್ಯ ಮಾಡಿದವರಿಗೆಲ್ಲ ತಿಳಿದಿರುವ ಸಂಗತಿಯಾಗಿದೆ. ನಿಘಂಟಿನಲ್ಲಿ ಸಂಭವಿಸಿರಬಹುದಾದ ಈ ನ್ಯೂನತೆಗಳೂ ಸ್ಖಾಲಿತ್ಯಗಳೂ ನಮ್ಮ ಅಶ್ರದ್ಧೆಯಿಂದಾಗಲಿ ಅನವಧಾನದಿಂದಾಗಲಿ ಸಂಭವಿಸಿದವುಗಳಲ್ಲ. ಇವು ಅಗತ್ಯಮಾಹಿತಿಯ ಅಭಾವದಿಂದ, ಪ್ರಾಚೀನಕೃತಿಗಳ ಅಧಿಕೃತ ಸಂಸ್ಕರಣಗಳ ಕೊರತೆಯಿಂದ, ಪಾರಿಭಾಷಿಕ ಪದಗಳ ನಿಶ್ಚಿತಾರ್ಥಗಳನ್ನು ನಿಖರವಾಗಿ ತಿಳಿಸುವ ವಿದ್ವಾಂಸರ ಅಭಾವದಿಂದ ತಲೆದೋರಿರಬಹುದು. ಈ ನಿಘಂಟಿನ ಸಂಪುಟಗಳನ್ನು ಪರಿಶೀಲಿಸುವ ಸಹೃದಯವಿದ್ವಾಂಸರು ತಮಗೆ ಕಂಡುಬಂದ ನ್ಯೂನತೆಗಳನ್ನೂ ಸ್ಖಾಲಿತ್ಯಗಳನ್ನೂ ದಯವಿಟ್ಟು ಬರೆದು ತಿಳಿಸಿ ಈ ನಿಘಂಟಿನ ಉತ್ತಮಿಕೆಗೆ ಭಾಗಿಗಳಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಹಲವಾರು ವರ್ಷಗಳು ಅನೇಕವಿದ್ವಾಂಸರು ನಿರಂತರವಾಗಿ ಶ್ರಮಿಸಿದುದರ ಫಲವಾಗಿ ಸರ್ವಾಂಗಸುಂದರವಾಗಿ ಪ್ರಕಟವಾಗಿರುವ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಸ್ವಾಗತಿಸುವರು ಎಂದು ನಂಬಿದ್ದೇನೆ. ಕನ್ನಡಿಗರ ಬಹುದಿನದ ಆಸೆ ನೆರವೇರಿದೆ ಎಂಬ ಸಂತೃಪ್ತಿ ಸಮಾಧಾನಗಳಿಂದ ಈ ಕಡೆಯದಾದ ಎಂಟನೆಯ ಸಂಪುಟವನ್ನು ಕನ್ನಡ ಜನತೆಯ ಕೈಯಲ್ಲಿಡುತ್ತಿದ್ದೇನೆ.

ದಿನಾಂಕ : ೫ - ೧೦ - ೧೯೭೫
ಬೆಂಗಳೂರು : ೫೬೦ ೦೧೯

ಎಸ್. ಬಸವಾರಾಧ್ಯ
ಪ್ರಧಾನ ಸಂಪಾದಕ

ಪೀಠಿಕೆ

ಭಾರತಖಂಡದಲ್ಲಿ ನಿಘಂಟುರಚನೆ ಕ್ರಿ. ಪೂ.೪ನೆಯ ಶತಮಾನಕ್ಕಿಂತಲೂ ಮೊದಲೇ ಪ್ರಾರಂಭವಾಗಿದ್ದಿತೆಂದು ತಿಳಿದುಬರುತ್ತದೆ. ಸಂಸ್ಕೃತದಲ್ಲಿ 'ವೈದಿಕನಿಘಂಟು' ಮೊಟ್ಟಮೊದಲನೆಯದು. ಲೌಕಿಕ ನಿಘಂಟುಗಳಲ್ಲಿ ವ್ಯಾಡಿ, ವಾಚಸ್ಪತಿ, ವರರುಚಿ, ಕಾತ್ಯ, ಕಾತ್ಯಾಯನ, ಭಾಗುರಿ, ಧನ್ವಂತರಿ, ಅಮರಸಿಂಹ, ಪುರುಷೋತ್ತಮ, ಶಾಶ್ವತ, ಹಲಾಯುಧಭಟ್ಟ – ಇವರೇ ಮೊದಲಾದವರು ರಚಿಸಿರುವ ನಿಘಂಟುಗಳು ಮುಖ್ಯವಾದುವುಗಳು. ೧೮೯೦ರಲ್ಲಿ ವಾಮನ ಶಿವರಾಮ ಆಪ್ಟೆಯವರು, ೧೮೯೯ರಲ್ಲಿ ಪಾಶ್ಚಾತ್ಯ ವಿದ್ವಾಂಸರಾದ ಸರ್ ಮೋನಿಯರ್ ವಿಲಿಯಮ್ಸ್ ಅವರು ಸಾಕಷ್ಟು ಸಮಗ್ರವೂ ವ್ಯಾಪಕವೂ ಆದ ಸಂಸ್ಕೃತ-ಇಂಗ್ಲಿಷ್ ನಿಘಂಟುಗಳನ್ನು ರಚಿಸಿದ್ದಾರೆ.

ಕನ್ನಡದಲ್ಲಿ ನಿಘಂಟುರಚನಾಕಾರ್ಯ ಕ್ರಿ.ಶ. ೧೦ನೆಯ ಶತಮಾನದಲ್ಲಿಯೇ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ರನ್ನನ 'ರನ್ನಕಂದ' ಕನ್ನಡದ ಪ್ರಪ್ರಥಮ ಉಪಲಬ್ಧ ನಿಘಂಟು. ಅನಂತರ ಎರಡನೆಯ ನಾಗವರ್ಮನ 'ಅಭಿನವಾಭಿಧಾನಂ', ತರುವಾಯ 'ಕರ್ಣಾಟಕ ಶಬ್ದಸಾರಂ', 'ಕರ್ಣಾಟಕ ನಿಘಂಟು', ಚತುರಾಸ್ಯ ಬೊಮ್ಮರಸನ 'ಚತುರಾಸ್ಯ ನಿಘಂಟು', ಲಿಂಗಮಂತ್ರಿಯ 'ಕಬ್ಬಿಗರ ಕೈಪಿಡಿ', ವಿರಕ್ತ ತೋಂಟದಾರ್ಯನ 'ಕರ್ಣಾಟಕ ಶಬ್ದಮಂಜರಿ', ಅನಂತರ 'ಭಾರತ ನಿಘಂಟು', ಶೃಂಗಾರಕವಿಯ 'ಕರ್ಣಾಟಕ ಸಂಜೀವನಂ', ಚೆನ್ನಕವಿಯ 'ನಾನಾರ್ಥಕಂದ', ದೇವೋತ್ತಮನ 'ನಾನಾರ್ಥರತ್ನಾಕರ', ಸೂರ್ಯಕವಿಯ 'ಕವಿಕಂಠಹಾರ' – ಮೊದಲಾದ ನಿಘಂಟುಗಳು ಪ್ರಕಟವಾಗಿವೆ.

೧೯ನೆಯ ಶತಮಾನದಲ್ಲಿಯ, ರವರೆಂಡ್ ರೀವ್ (ಕ್ರಿ. ಶ.೧೮೩೨) ಅವರ 'ಕನ್ನಡ-ಇಂಗ್ಲಿಷ್' ನಿಘಂಟು ಪಾಶ್ಚಾತ್ಯವಿದ್ವಾಂಸರು ಸಿದ್ಧಪಡಿಸಿದ ನಿಘಂಟುಗಳಲ್ಲಿ ಮೊದಲನೆಯದು. ಅನಂತರ ಡೇನಿಯಲ್ ಸ್ಯಾಂಡರ್‌ಸನ್ (ಕ್ರಿ.ಶ.೧೮೫೫) ಅವರು ರೆವರೆಂಡ್ ರೀವ್ ಅವರ ನಿಘಂಟನ್ನು ಪರಿಷ್ಕರಿಸಿ, ವಿಸ್ತರಿಸಿ 'ಕನ್ನಡ-ಇಂಗ್ಲಿಷ್' ನಿಘಂಟನ್ನು ಪ್ರಕಟಿಸಿದರು. ತರುವಾಯ ಹೆಸರಿಸಬಹುದಾದ ನಿಘಂಟು ಎಂದರೆ ರೆವರೆಂಡ್ ಎಫ್. ಕಿಟ್ಟೆಲ್ (ಕ್ರಿ. ಶ.೧೮೯೫) ಅವರ 'ಕನ್ನಡ-ಇಂಗ್ಲಿಷ್' ನಿಘಂಟು. ಇದರ ರಚನೆಗೆ ಸುಮಾರು ೧೮ ವರ್ಷಗಳ ಕಾಲ ಹಿಡಿದಿದೆ. ಇದು ೧೭೫೨ ಪುಟಗಳನ್ನು ಒಳಗೊಂಡಿದೆ. ಈ ನಿಘಂಟು ಒಂದು ಶಾಸ್ತ್ರೀಯನಿಘಂಟಾಗಿದ್ದು ಪ್ರತಿಶಬ್ದಕ್ಕೂ ಆಕರವನ್ನು ಸೂಚಿಸಿರುವುದು ಇದರ ವೈಶಿಷ್ಟ್ಯವಾಗಿದೆ. ಒಟ್ಟು ೩೬ ಕನ್ನಡ ಗ್ರಂಥಗಳನ್ನು ಆಧಾರವಾಗಿ ಇಟ್ಟುಕೊಂಡಿರುವುದಾಗಿಯೂ ಅವುಗಳಲ್ಲಿಯೂ ಕೆಲವು ಗ್ರಂಥಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದೂ ಕಿಟ್ಟೆಲ್ಲರು ಹೇಳಿದ್ದಾರೆ. ಈ ನಿಘಂಟಿನ ರಚನೆಯ ಕಾಲಕ್ಕೆ ಅನೇಕ ಪ್ರಾಚೀನ ಕನ್ನಡ ಕಾವ್ಯಗಳು ಬೆಳಕು ಕಂಡಿರಲಿಲ್ಲ. ವಚನಸಾಹಿತ್ಯ, ದಾಸಸಾಹಿತ್ಯ ಕಿಟ್ಟೆಲ್ಲರಿಗೆ ಲಭ್ಯವಾಗಿರಲಿಲ್ಲ. ಕನ್ನಡ ಶಾಸನಗಳನ್ನು ಈ ನಿಘಂಟಿನಲ್ಲಿ ಬಳಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆ ಕಾಲಕ್ಕೆ ಈ ನಿಘಂಟು ಒಂದು ಸಮಗ್ರರಚನೆಯದೆಂದು ಪರಿಗಣಿತವಾಗಿದ್ದರೂ ಈ ಕೆಲವೊಂದು ಅರಕೊರೆಗಳೂ ಪರಿಮಿತಿಗಳೂ ಇದ್ದುದಂತೂ ನಿಜ. ಈ ಅರಕೊರೆಗಳನ್ನು ಮತ್ತು ಪರಿಮಿತಿಗಳನ್ನು ಗಮನಿಸಿದ ವಿದ್ವಾಂಸರಿಗೆ, ಕನ್ನಡದಲ್ಲಿ ಒಂದು ಪ್ರಮಾಣಭೂತವೂ ಸಮಗ್ರವೂ ಆದ, ಭಾಷಾಶಾಸ್ತ್ರನಿಯಮಗಳಿಗೆ ಅನುಸಾರವಾದ, ಚಾರಿತ್ರಿಕವಿವರಣೆಯಿಂದ ಕೂಡಿದ ನಿಘಂಟಿನ ರಚನೆ ಅವಶ್ಯವೆನಿಸಿತು.

ಕನ್ನಡ ನಿಘಂಟುರಚನೆ ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶಗಳಲ್ಲಿ ಒಂದಾಗಿತ್ತು. ಇದಕ್ಕನುಗುಣವಾಗಿ ದಿ॥ ಬೆಳ್ಳಾವೆ ವೆಂಕಟನಾರಣಪ್ಪನವರು ಹಲವಾರು ವಿದ್ವಾಂಸರ ನೆರವಿನಿಂದ 'ಷಟ್ಪದೀಕಾವ್ಯಗಳ ನಿಘಂಟು', 'ನಿಘಂಟುಗಳ ನಿಘಂಟು' ಮತ್ತು 'ಪಂಪಭಾರತ ನಿಘಂಟು' ಇವುಗಳನ್ನು ಸಿದ್ಧಪಡಿಸಿದರು. ೧೯೪೧ನೆಯ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಹೈದರಾಬಾದಿನಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲಸದಸ್ಯರ ವಾರ್ಷಿಕಾಧಿವೇಶನದಲ್ಲಿ ದಿ॥ ಡಾ.ರಂ. ಶ್ರೀ. ಮುಗಳಿಯವರು ಕನ್ನಡ ನಿಘಂಟು ರಚನೆಯನ್ನು ಕುರಿತು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಆ ಕಾರ್ಯವನ್ನು ಕೈಕೊಳ್ಳಬೇಕೆಂದು ಸೂಚಿಸಿದರು. ಅದರಂತೆ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಿಘಂಟು ರಚನಾಕಾರ್ಯವನ್ನು ಕೈಕೊಳ್ಳಬೇಕೆಂಬ ನಿರ್ಣಯ ಮಂಡನೆಯಾಯಿತು. ಆ ನಿರ್ಣಯವನ್ನು ಸಭೆಯು ಒಪ್ಪಿ ಒಂದು ಯೋಜನೆಯನ್ನು ಸಿದ್ಧಪಡಿಸಲು ಡಾ॥ ರಂ. ಶ್ರೀ. ಮುಗಳಿಯವರ ಸಂಚಾಲಕತ್ವದಲ್ಲಿ ಒಂದು ಉಪಸಮಿತಿಯನ್ನು ರಚಿಸಿತು. ಆ ಉಪಸಮಿತಿಯು ರಚಿಸಿದ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯು ಹಲವಾರು ಬಾರಿ ಚರ್ಚಿಸಿ ಒಂದು ಸಂಪಾದಕಸಮಿತಿಯನ್ನು ನೇಮಿಸಿತು. ಆ ಸಂಪಾದಕಸಮಿತಿಯಲ್ಲಿ ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಗಳು ಅಧ್ಯಕ್ಷರಾಗಿಯೂ ಪ್ರೊ॥ ಡಿ. ಎಲ್. ನರಸಿಂಹಾಚಾರ್, ಪ್ರೊ॥ ಕ. ವೆಂ. ರಾಘವಾಚಾರ್ ಸದಸ್ಯರಾಗಿಯೂ, ಪ್ರೊ॥ ತೀ.ನಂ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿಯೂ ಇದ್ದರು. ಈ ಯೋಜನೆಯ ಪ್ರಕಾರ ಸಂಪಾದಕಸಮಿತಿಗೆ ವಿವಿಧಾಂಗಗಳಲ್ಲಿ ಒದಗಬಹುದಾದ ಸಂದೇಹಗಳನ್ನು ಪರ್ಯಾಲೋಚಿಸಿ ಸಲಹ ಮಾಡುವುದಕ್ಕೂ ತಮಿಳು, ತೆಲುಗು, ಮಲೆಯಾಳಂ, ಪ್ರಾಕೃತ, ಮರಾಠಿ ಮೊದಲಾದ ಭಾಷೆಗಳಿಗೆ ಸಂಬಂಧಿಸಿದ ವಿಶೇಷಾಂಶಗಳನ್ನು ತಿಳಿಸಿ ಸಹಾಯ ಮಾಡುವುದಕ್ಕೂ ಒಂದು ಸಮಾಲೋಚನ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಈ ಸಮಾಲೋಚನ ಸಮಿತಿಯಲ್ಲಿ ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯನವರು, ಎಂ. ಗೋವಿಂದ ಪೈ ಅವರು, ಎಲ್. ವಿ. ರಾಮಸ್ವಾಮಿ ಅಯ್ಯರ್ ಅವರು, ಡಾ॥ ಎ. ಎನ್. ಉಪಾಧ್ಯೆ ಅವರು, ಆಸ್ಥಾನ ವಿದ್ವಾನ್ ಡಾ॥ ಅನಂತಕೃಷ್ಣಶರ್ಮ ಅವರು ಮತ್ತು ಪಿ.ಎಂ. ಸೋಮಸುಂದರಂ ಅವರು ಸದಸ್ಯರಾಗಿದ್ದರು. ಈ ಎಲ್ಲಾ ಏರ್ಪಾಡುಗಳೊಂದಿಗೆ ದಿನಾಂಕ ೨೭-೧೧-೧೯೪೪ ರಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ನಿಘಂಟು ಕಚೇರಿಯು ಕೆಲಸಮಾಡಲಾರಂಭಿಸಿತು. ಸುಮಾರು ೮೦ಕ್ಕೂ ಹೆಚ್ಚು ಜನ ವಿದ್ವಾಂಸರು ಈ ನಿಘಂಟಿನ ಶಬ್ದಸಂಗ್ರಹಕಾರ್ಯದಲ್ಲಿ ನೆರವಾಗಿದ್ದಾರೆ.

ಈ ನಿಘಂಟಿನಲ್ಲಿ ದೇಶ್ಯ, ತದ್ಭವ ಶಬ್ದಗಳನ್ನು ಮಾತ್ರ ಸೇರಿಸಿಕೊಂಡು ಒಟ್ಟು ಐದುಸಾವಿರ ಪುಟಗಳನ್ನು ೪ ಸಂಪುಟಗಳಲ್ಲಿ ಹೊರತರಬೇಕೆಂದು ಮೊದಲು ನಿರ್ಧರಿಸಲಾಗಿತ್ತು. ಆದರೆ ಹಲವಾರು ಮಹನೀಯರ ಅಭಿಪ್ರಾಯದ ಮೇರೆಗೆ ಕಾವ್ಯಾಧಾರವಿರುವ ಸಂಸ್ಕೃತಶಬ್ದಗಳನ್ನು, ಅನ್ಯದೇಶ್ಯಶಬ್ದಗಳನ್ನೂ, ಇನ್ನಿತರ ಧಾರ್ಮಿಕ, ದಾರ್ಶನಿಕ, ಪಾರಿಭಾಷಿಕ ಶಬ್ದಗಳನ್ನೂ ಈ ನಿಘಂಟಿನಲ್ಲಿ ಸೇರಿಸಬೇಕೆಂದು ತೀರ್ಮಾನವಾಯಿತು. ಅವರ ಪ್ರಕಾರ ಶಬ್ದಗಳನ್ನು ವಿವಿಧಮೂಲಗಳಿಂದ ಸಂಗ್ರಹಿಸಲಾಯಿತು. ಕನ್ನಡದ ಅತ್ಯಂತ ಪ್ರಾಚೀನ ಶಾಸನವಾದ ಸುಮಾರು ೪ನೆಯ ಶತಮಾನದ ಹಲ್ಮಿಡಿ ಶಾಸನದಿಂದ ಹಿಡಿದು ಈವರೆಗೆ ಉಪಲಬ್ಧವಿರುವ ಸಾವಿರಾರು ಶಾಸನಗಳನ್ನು ಪರಿಶೀಲಿಸಿ ಶಬ್ದಸಂಗ್ರಹ ಮಾಡಲಾಗಿದೆ. ಕನ್ನಡದ ಪ್ರಥಮ ಉಪಲಬ್ಧಕೃತಿಯಾದ 'ಕವಿರಾಜಮಾರ್ಗ' ದಿಂದ ಹಿಡಿದು ೧೯೭೦ನೆಯ ಇಸವಿಯ ವರೆಗಿನ ಮತ್ತು ಆ ತರುವಾಯದ ಕೆಲವು ಗ್ರಂಥಗಳಿಂದಲೂ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಮುದ್ರಿತ ಗ್ರಂಥಗಳಷ್ಟೇ ಅಲ್ಲದೆ ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನಾಲಯ ಮತ್ತು ಕನ್ನಡ ಅಧ್ಯಯನಸಂಸ್ಥೆಗಳಲ್ಲಿ ಸಂಗ್ರಹವಾಗಿರುವ ಅಮುದ್ರಿತ ಗ್ರಂಥಗಳಿಂದಲೂ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಕಿಟ್ಟೆಲ್ ಅವರ ಕೋಶದಲ್ಲಿರುವ ಪ್ರಯೋಗಸಹಿತವಾಗಿರುವ ಶಬ್ದಗಳನ್ನೂ ಪ್ರಯೋಗಾಧಾರವಿಲ್ಲದಿರುವ ಸಂಸ್ಕೃತಶಬ್ದಗಳನ್ನೂ ಯಥೋಚಿತವಾಗಿ ಸೇರಿಸಿಕೊಳ್ಳಲಾಗಿದೆ. ರೆವರೆಂಡ್ ರೀವ್, ಸ್ಯಾಂಡರ್‌ಸನ್, ಗ್ಯಾರೆಟ್, ಗಂಗಾಧರ ಮಡಿವಾಳೇಶ್ವರ ತೂರಮರಿ, ಗುರುರಾವವಿಠಲಮೋಹರ ಮುಂತಾದವರ ಪ್ರಕಟಿತನಿಘಂಟುಗಳಲ್ಲಿ, ಪ್ರಭಣ್ಣ, ಶ್ಯಾಮಣ್ಣ, ಅನಂತನಾರಾಯಣ-ಮುಂತಾದವರ ಅಪ್ರಕಟಿತನಿಘಂಟುಗಳಲ್ಲಿ ಇರುವ ಶಬ್ದಾರ್ಥಪ್ರಯೋಗಗಳನ್ನು ವಿಚಾರಮಾಡಿ ಸೂಕ್ತವೆನಿಸಿದ ಶಬ್ದಗಳನ್ನು ಅಂಗೀಕರಿಸಲಾಗಿದೆ. ಪ್ರಯೋಗಾಧಾರವಿರುವ ಜೈನ, ವೀರಶೈವ, ವೈಷ್ಣವ ಮೊದಲಾದ ಧಾರ್ಮಿಕಶಬ್ದಗಳೂ ಲಕ್ಷಣಗ್ರಂಥಗಳಲ್ಲಿ ಪ್ರಯೋಗವಾಗಿರುವ ಅಲಂಕಾರ, ಛಂದಸ್ಸು, ವ್ಯಾಕರಣ, ಕಾವ್ಯಮೀಮಾಂಸೆ ಮೊದಲಾದ ಪಾರಿಭಾಷಿಕಶಬ್ದಗಳೂ, ಸಂಗೀತ, ನೃತ್ಯ, ಶಿಲ್ಪ, ಚಿತ್ರ, ವಾಸ್ತು ಮುಂತಾದ ಕಲೆಗಳಿಗೆ ಸಂಬಂಧಿಸಿದ ಶಬ್ದಗಳೂ, ಅಶ್ವಶಾಸ್ತ್ರ, ಗಜಶಾಸ್ತ್ರ, ಗಣಿತಶಾಸ್ತ್ರ, ಸೂಪಶಾಸ್ತ್ರ,ಕಾಮಶಾಸ್ತ್ರ, ಜ್ಯೋತಿಷ, ಖಡ್ಗನೀತಿ, ರಾಜನೀತಿ, ರತ್ನಪರೀಕ್ಷೆ, ತರ್ಕ, ನ್ಯಾಯ, ವೈದ್ಯ- ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಪಾರಿಭಾಷಿಕಶಬ್ದಗಳೂ, ಹೆಚ್ಚಾಗಿ ಬಳಕೆಯಲ್ಲಿರುವ ವೈಜ್ಞಾನಿಕ ಪರಿಭಾಷೆಯ ಶಬ್ದಗಳೂ, ಪಠ್ಯಪುಸ್ತಕಗಳಲ್ಲಿ ಬಳಕೆಯಾಗಿರುವ ಶಬ್ದಗಳೂ ಒಂದು ಪರಿಮಿತಿಯಲ್ಲಿ ಸೇರ್ಪಡೆಯಾಗಿವೆ. ಉತ್ತರ ಕರ್ನಾಟಕ, ಮೈಸೂರು, ಕರಾವಳಿ ಮೊದಲಾದ ಪ್ರದೇಶಗಳ ಶಬ್ದಗಳನ್ನು ಅವಶ್ಯಕವೆನ್ನಿಸುವಷ್ಟನ್ನು ಈ ನಿಘಂಟು ಒಳಕೊಂಡಿದೆ. ಹೀಗೆ ಸುಮಾರು ಹತ್ತುಲಕ್ಷಪ್ರಯೋಗಗಳ ಪಟ್ಟಿಕೆಗಳನ್ನು ಈವರೆಗೆ ಸಂಗ್ರಹಿಸಿಡಲಾಗಿದೆ. ವಿಪುಲವಾದ ಈ ಶಬ್ದಸಂಗ್ರಹದಿಂದಾಗಿ ಕನ್ನಡ ನಿಘಂಟು ಮೊದಲು ಉದ್ದೇಶಿಸಿದುದಕ್ಕಿಂತ ಮಿಗಿಲಾಗಿ ಬೆಳೆದು ನಾಲ್ಕು ಸಂಪುಟಗಳ ಕಾರ್ಯ ಎಂಟು ಸಂಪುಟಗಳಿಗೆ ವಿಸ್ತಾರಗೊಂಡಿತು.

ಕನ್ನಡ ನಿಘಂಟು ಡೆಮ್ಮಿ ಚತುಷ್ಪತ್ರ ಆಕಾರದಲ್ಲಿ ಪ್ರಕಟವಾಗಿದೆ. ಇದರ ಪ್ರತಿಯೊಂದು ಪುಟದಲ್ಲಿಯೂ ಎರಡೆರಡು ಅಂಕಣಗಳಿದ್ದು, ಒಂದೊಂದು ಅಂಕಣದಲ್ಲಿ ೪೬ಸಾಲುಗಳಿವೆ. ಈ ನಿಘಂಟಿನಲ್ಲಿ ಸುಮಾರು ಎರಡು ಲಕ್ಷಕ್ಕೂ ಮೇಲ್ಪಟ್ಟು ಮುಖ್ಯೋಲ್ಲೇಖಗಳೂ, ಉಪಉಲ್ಲೇಖಗಳೂ, ನುಡಿಗಟ್ಟುಗಳೂ, ದೇಶ್ಯ, ಅನ್ಯದೇಶ್ಯ, ತತ್ಸಮ, ಸಮಸಂಸ್ಕೃತ, ತದ್ಭವ ಶಬ್ದಗಳೂ ಕಾವ್ಯಾಧಾರವಿರುವ ಸಂಸ್ಕೃತ ಶಬ್ದಗಳೂ, ಕಿಟ್ಟೆಲ್ ಅವರ ಕೋಶದ ಕಾವ್ಯಪ್ರಯೋಗಗಳಿಲ್ಲದ ಸಂಸ್ಕೃತಶಬ್ದಗಳೂ ಎಡೆಪಡೆದಿವೆ. ಈ ನಿಘಂಟಿಗ ಕಿಟ್ಟೆಲ್ ಅವರ ಕೋಶವನ್ನು ವಿಶೇಷವಾಗಿ ಬಳಸಿಕೊಳ್ಳಲಾಗಿದೆ. ಕೃತ್, ತದ್ಧಿತ ಪ್ರತ್ಯಯಗಳನ್ನೂ ಪ್ರಶ್ನೆ, ಅವಧಾರಣೆ, ಸಂಶಯ ಮುಂತಾದ ಭಾವಸೂಚಕಪ್ರತ್ಯಯಗಳನ್ನೂ ಅವ್ಯಯ, ಅನುಕರಣಶಬ್ದಗಳನ್ನೂ ಪ್ರತ್ಯೇಕ ಉಲ್ಲೇಖಗಳನ್ನಾಗಿ ತೋರಿಸಲಾಗಿದೆ. ಕ್ರಿ.ಶ. ಸುಮಾರು ೧೦೦೦ಕ್ಕೆ ಹಿಂದಿನ ಶಾಸನಗಳಲ್ಲಿ ದೊರೆಯುವ, ಭಾಷಾದೃಷ್ಟಿಯಿಂದ ವೈಶಿಷ್ಟ್ಯ ಕಂಡುಬರುವಂಥ ಅಂಕಿತನಾಮಗಳನ್ನು ಸೇರಿಸಿಕೊಳ್ಳಲಾಗಿದೆ. ದಿನನಿತ್ಯ ಬಳಕೆಯಲ್ಲಿರುವ ರೂಢಿಯ ಅನೇಕ ಶಬ್ದಗಳನ್ನು ಪ್ರಯೋಗಾಧಾರವಿಲ್ಲದಿದ್ದರೂ ಸೇರಿಸಿಕೊಳ್ಳಲಾಗಿದೆ. ಹಲವಾರು ನುಡಿಗಟ್ಟುಗಳೂ ಗಾದೆಗಳೂ ಇದರಲ್ಲಿ ಎಡೆಪಡೆದಿವೆ.

ಮುಖ್ಯೋಲ್ಲೇಖಗಳಾಗಿ ಬರುವ ಶಬ್ದಗಳನ್ನು ಕ್ರಿಯಾಪದ, ನಾಮಪದ, ಗುಣವಾಚಕ, ಅವ್ಯಯ, ಪ್ರತ್ಯಯ, ಸರ್ವನಾಮ, ಉಪಸರ್ಗ ಎಂದು ವಿಂಗಡಿಸಿದೆ. ಮುಖ್ಯಶಬ್ದಗಳ ಪಕ್ಕದಲ್ಲಿಯೇ ಅವುಗಳನ್ನು ದುಂಡುಕಂಸಗಳಲ್ಲಿ (ಕ್ರಿ) (ನಾ) (ಗು) (ಅ) (ಪ್ರ) (ಸ) (ಉಪ) ಎಂದು ಸೂಚಿಸಲಾಗಿದೆ. ತರುವಾಯ ಶಬ್ದಗಳಿಗಿರುವ ಅನೇಕಾರ್ಥಗಳನ್ನು ಸೂಚಿಸಿ ಪ್ರತಿಯೊಂದು ಅರ್ಥಕ್ಕೂ ಕಾಲಾನುಕ್ರಮದಲ್ಲಿ ಪ್ರಯೋಗಗಳನ್ನು ಕೊಡಲಾಗಿದೆ. ಶಬ್ದದ ವಾಚ್ಯಾರ್ಥವನ್ನು ಮೊದಲು ಕೊಟ್ಟು ಅನಂತರ ಲಕ್ಷ್ಯಾರ್ಥಗಳನ್ನು ತೋರಿಸಲಾಗಿದೆ. ಒಂದು ಶಬ್ದಕ್ಕೆ ಹಲವಾರು ಪರ್ಯಾಯ ರೂಪಗಳಿದ್ದರೆ ಅವುಗಳನ್ನು ಮುಖ್ಯಶಬ್ದದೊಂದಿಗೆ ತೋರಿಸಲಾಗಿದೆ. ಪರ್ಯಾಯರೂಪಗಳನ್ನು ವರ್ಣಾನುಕ್ರಮದಲ್ಲಿ ಆಯಾ ಸ್ಥಳಗಳಲ್ಲಿ ಕೊಟ್ಟು ಮುಖ್ಯಶಬ್ದಕ್ಕೆ 'ನೋ' ಎಂದು ನಿರ್ದೇಶಿಸಲಾಗಿದೆ. ಪ್ರತಿಯೊಂದು ಮುಖ್ಯಶಬ್ದಕ್ಕೂ ನಿಷ್ಪತ್ತಿಯನ್ನು ಆ ಶಬ್ದದ ಕೆಳಗೆ ಚೌಕಕಂಸದಲ್ಲಿ ಸೂಚಿಸಿದೆ. ಶಬ್ದ ಸಂಸ್ಕೃತವಾಗಿದ್ದರೆ [ಸಂ] ಎಂದೂ ದೇಶ್ಯವಾಗಿದ್ದರೆ [ದೇ]ಎಂದೂ ಸೂಚಿಸಿ ಇತರ ದ್ರಾವಿಡಭಾಷೆಗಳ ಜ್ಞಾತಿಶಬ್ದಗಳನ್ನು ಸೂಚಿಸಲಾಗಿದೆ. ಅನ್ಯದೇಶ್ಯಶಬ್ದವಾಗಿದ್ದರೆ ಅದು ಯಾವ ಭಾಷೆಯಿಂದ ಬಂದದ್ದು ಎಂಬುದನ್ನು <– ಚಿಹ್ನೆಯ ಮುಂದೆ ಆಧಾರಶಬ್ದಗಳನ್ನು ಕೊಟ್ಟು ತಿಳಿಸಲಾಗಿದೆ. ಶಬ್ದದ ನಿಷ್ಪತ್ತಿ ಖಚಿತವಾಗಿ ಗೊತ್ತಾಗದ ಕಡೆಗಳಲ್ಲಿ [?] ಪ್ರಶ್ನಾರ್ಥಕಚಿಹ್ನೆಯನ್ನು ಹಾಕಲಾಗಿದೆ. ಹೀಗೆ ಈ ನಿಘಂಟು ಭಾಷಾಶಾಸ್ತ್ರನಿಯಮಗಳಿಗೆ ಅನುಸಾರವಾಗಿಯೂ ಕನ್ನಡ ಭಾಷೆಯ ಅವಸ್ಥೆಗಳಿಗೆ ಅನುಗುಣವಾದ ಚಾರಿತ್ರಿಕವಿವರಣೆಯಿಂದ ಕೂಡಿಯೂ ಪ್ರಮಾಣಭೂತವಾಗಿಯೂ ಸಮಗ್ರವಾಗಿಯೂ ಇರುವಂತೆ ನೋಡಿಕೊಳ್ಳಲಾಗಿದೆ.

ಕನ್ನಡ ಭಾಷೆಯಲ್ಲಿ ಈ ಬಗೆಯ ಶಾಸ್ತ್ರೀಯವಾದ ನಿಘಂಟು ಸಿದ್ಧವಾಗುತ್ತಿರುವುದು ಇದೇ ಮೊದಲು. ನಮಗೆ ತಿಳಿದಂತೆ ಈ ತರನ ನಿಘಂಟು ಬೇರಾವ ಭಾರತೀಯ ಭಾಷೆಗಳಲ್ಲಿಯೂ ಈವರೆಗೆ ರಚಿತವಾದಂತೆ ಕಂಡುಬಂದಿಲ್ಲ. ಭಾಷಿಕ, ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಗಳನ್ನು ಕೈಕೊಳ್ಳುವವರಿಗೆ ಈ ನಿಘಂಟು ಒಂದು ಉಪಯುಕ್ತ ಆಕರಗ್ರಂಥವೆಂದು ಹೇಳಬಹುದಾಗಿದೆ. ಇದು ವಿದ್ವಾಂಸರಿಂದ ಹಿಡಿದು ಅಭ್ಯಾಸಿಗಳವರೆಗೆ ವಿವಿಧವರ್ಗಗಳ ಜನರಿಗೆ ಉಪಯೋಗಕ್ಕೆ ಬರಬಹುದಾಗಿದೆ. ಈ ನಿಘಂಟಿನಿಂದ ಅಗತ್ಯಗಳಿಗನುಸಾರವಾಗಿ ಸಾಮಾನ್ಯಸ್ವರೂಪದ ಹಾಗೂ ವಿಶಿಷ್ಟವಿಷಯಗಳ ಪ್ರತ್ಯೇಕ ನಿಘಂಟುಗಳನ್ನು ಸಿದ್ಧಪಡಿಸಿಕೊಳ್ಳಬಹುದಾಗಿದೆ.

ಪ್ರಮಾಣಭೂತವಾದ ಈ ನಿಘಂಟಿನ ರಚನಾಕಾರ್ಯವು ಬಹಳ ವಿಳಂಬವಾಗಿದೆ ಎಂಬ ಮಾತುಗಳು ಕೇಳಿಬಂದುದೂ ಉಂಟು. ಇಂತಹ ಕಾರ್ಯಗಳು ತ್ವರಿತಗತಿಯಲ್ಲಿ ಆಗುವಂತಹವುಗಳಲ್ಲ ಎಂಬುದಕ್ಕೆ ವಿಶ್ವದ ಪ್ರಮುಖ ನಿಘಂಟುಗಳಾದ 'ಆಕ್ಸ್‌ಫರ್ಡ್' ಮತ್ತು 'ವೆಬ್‌ಸ್ಟರ್' ನಿಘಂಟುಗಳ ರಚನೆಗೆ ತೆಗದುಕೊಂಡ ಕಾಲ ಮತ್ತು ತಗುಲಿದ ವೆಚ್ಚವನ್ನು ಗಮನಿಸಬಹುದಾಗಿದೆ.

ಆಕ್ಸ್‌ಫರ್ಡ್ ನಿಘಂಟು ಕ್ರಿ. ಶ. ೧೮೫೭ ರಲ್ಲಿ ಪ್ರಾರಂಭವಾಗಿ ೧೯೨೮ ರಲ್ಲಿ ಮುಕ್ತಾಯವಾಗಿದೆ. ಒಟ್ಟು ಹದಿನೈದು ಸಾವಿರಕ್ಕೂ ಹೆಚ್ಚು ಪುಟಗಳಿರುವ ಈ ನಿಘಂಟಿನಲ್ಲಿ ೪,೧೪,೮೨೫ ಪದಗಳೂ ಸಮಾಸಗಳೂ ಸೇರ್ಪಡೆಯಾಗಿವೆ. ೧೮ ಲಕ್ಷಕ್ಕೂ ಮಿಗಿಲಾದ ಪ್ರಯೋಗಗಳು ಈ ನಿಘಂಟಿನಲ್ಲಿವೆ. ಈ ನಿಘಂಟಿನ ರಚನಾಕಾರ್ಯದಲ್ಲಿ ೪ ಜನ ಪ್ರಧಾನಸಂಪಾದಕರೂ ೮೪ ಜನ ಉಪಸಂಪಾದಕರೂ ೬೫ ಜನ ಸಹಾಯಕಸಂಪಾದಕರೂ ೨೪ ಜನ ಕರಡಚ್ಚು ತಿದ್ದಿದವರೂ ೧೨೨೭ ಜನ ಖಾಸಗಿ ವಿದ್ವಾಂಸರೂ ದುಡಿದಿದ್ದಾರೆ. ಈ ನಿಘಂಟುರಚನೆಗೆ ಆ ಕಾಲಕ್ಕೆ ತಗುಲಿದ ವೆಚ್ಚ ೪೦ ಲಕ್ಷ ಪೌಂಡುಗಳು. ಇದು ಮೂರುಸಲ ಪರಿಷ್ಕರಣಗೊಂಡು ೧೬ ಮುದ್ರಣಗಳನ್ನು ಕಂಡಿದೆ. ವಿವಿಧ ಆಕಾರಗಳಲ್ಲಿ ಈ ನಿಘಂಟು ಹೊರಬಂದಿದೆ. ವಿಶ್ವದ ಬೇರಾವ ಭಾಷೆಯಲ್ಲಿಯೂ ಇಷ್ಟು ಸಮಗ್ರವಾದ ಉತ್ಕೃಷ್ಟವಾದ ನಿಘಂಟು ಇಲ್ಲ ಎಂಬ ಕೀರ್ತಿಗೆ ಇದು ಭಾಜನವಾಗಿದೆ.

'ವೆಬ್‌ಸ್ಟರ್' ನಿಘಂಟು 'ಆಕ್ಸ್‌ಫರ್ಡ್' ನಿಘಂಟಿನಷ್ಟೇ ದೊಡ್ಡದು. ಈ ನಿಘಂಟಿನಲ್ಲಿ ಅಮೆರಿಕಾದ ಕಾಗುಣಿತ, ಬ್ರಿಟಿಶ್ ಕಾಗುಣಿತಗಳಿಗೆ ಇರುವ ವ್ಯತ್ಯಾಸಗಳನ್ನು ತೋರಿಸಲಾಗಿದೆ. ಇದರಿಂದ ಎಲ್ಲ ದೇಶಗಳವರೂ ಇದನ್ನು ಬಳಸಬಹುದಾಗಿದೆ. ಮೆರಿಯಮ್ ಪ್ರಕಟಣಾ ಸಂಸ್ಥೆಯವರು ವೆಬ್‌ಸ್ಟರ್ ಕೋಶದ ಅಸಂಕ್ಷಿಪ್ತ ಆವೃತ್ತಿಯನ್ನು ಮೊದಲ ಬಾರಿಗೆ ೧೮೪೭ ರಲ್ಲಿ ಪ್ರಕಟಿಸಿದರು. ಈ ನಿಘಂಟು ಮುಂದೆ 'ವೆಬ್‌ಸ್ಟರ್ ಇಂಟರ್ ನ್ಯಾಷನಲ್ ಡಿಕ್ಷನರಿ' ಎಂಬ ಹೆಸರಿನಲ್ಲಿ ೧೮೯೦ ರಲ್ಲಿ ಮತ್ತೆ ಅಚ್ಚಾಯಿತು. ೧೯೦೯,೧೯೩೪,೧೯೬೨ ರಲ್ಲಿ ವೆಬ್‌ಸ್ಟರ್ಸ್ I, II, III ನ್ನೂ ಇಂಟರ್ ನ್ಯಾಷನಲ್ ಡಿಕ್ಷನರಿಗಳು ಕ್ರಮವಾಗಿ ಪ್ರಕಟಗೊಂಡಿವೆ. ಇದರಲ್ಲಿ ನಾಲ್ಕೂವರೆ ಲಕ್ಷಕ್ಕೂ ಮಿಗಿ ಶಬ್ದಗಳ ಅರ್ಥಪ್ರಯೋಗಗಳಿವೆ. ಅರುವತ್ತುಲಕ್ಷಕ್ಕೆ ಮಿಗಿದ ಉಲ್ಲೇಖಗಳಿವೆ. ಈ ನಿಘಂಟಿನ ತಯಾರಿಕೆಯ ವೆಚ್ಚ ಆ ಕಾಲಕ್ಕೆ ೩೫ಲಕ್ಷ ಡಾಲರುಗಳು. ಈ ಕಾರ್ಯಕ್ಕೆ ಹಿಡಿದ ಸಮಯ ಸುಮಾರು ೭೫ ವರ್ಷಗಳು. ಈ ಯೋಜನೆಯಲ್ಲಿ ಒಬ್ಬ ಪ್ರಧಾನಸಂಪಾದಕರು, ೬೫ ಜನ ಉಪಸಂಪಾದಕರು, ೧೩ಜನ ಸಹಾಯಕ ಸಂಪಾದಕರು, ೩೧ ಜನ ಆಡಳಿತವರ್ಗವಲ್ಲದೆ ವಿವಿಧ ವಿಜ್ಞಾನ ವಿಭಾಗಗಳಿಗೆ ನೆರವಾದ ಸಮಾಲೋಚಕರು ೧೯೬ ಜನ ಇದ್ದರು.

ದೇಶೀಯ ಭಾಷೆಗಳ ಕೆಲವು ನಿಘಂಟುಗಳ ಸ್ಥೂಲಪರಿಚಯ ಇಂತಿದೆ. ಆಂಧ್ರಪ್ರದೇಶ ಸಾಹಿತ್ಯಅಕಾಡಮಿಯ ತೆಲುಗು ಭಾಷೆಯ ಶ್ರೀ ಸೂರ್ಯರಾಯಾಂಧ್ರ ನಿಘಂಟುವು (ಅನುಬಂಧ ಸಂಪುಟವೂ ಸೇರಿ) ೮ ಸಂಪುಟಗಳಲ್ಲಿದೆ. ಇದು ೧೯೩೦ ರಲ್ಲಿ ಆರಂಭಗೊಂಡು ೧೯೭೨ ರಲ್ಲಿ ಮುಕ್ತಾಯಗೊಂಡಿದೆ. ಮದರಾಸು ವಿಶ್ವವಿದ್ಯಾನಿಲಯದ ತಮಿಳುಭಾಷೆಯ ನಿಘಂಟು ೬ ಸಂಪುಟಗಳನ್ನು ಹೊಂದಿದೆ. ಇದು ೧೯೨೪ರಲ್ಲಿ ಆರಂಭಗೊಂಡು ೧೯೩೬ರಲ್ಲಿ ಮುಕ್ತಾಯಗೊಂಡಿದೆ. ರೆವರೆಂಡ್ ಹೆಚ್. ಗುಂಡರ್ಟ್ ಅವರ ಮಲಯಾಳಂ ನಿಘಂಟು (೧ ಸಂಪುಟ) ಮಂಗಳೂರಿನಲ್ಲಿ ೧೮೭೨ ರಲ್ಲಿ ಪ್ರಥಮ ಮುದ್ರಣಗೊಂಡಿತು. ಇದರ ದ್ವಿತೀಯಮುದ್ರಣ ಕೇರಳದ ಕೊಟ್ಟಾಯಂನಲ್ಲಿ ೧೯೬೨ರಲ್ಲಿ ಆಯಿತು. ರೆವರೆಂಡ್. ಎ. ಮ್ಯಾನ್ನೆರ್ ಅವರ ತುಳುನಿಘಂಟು ೧೮೮೬ರಲ್ಲಿ ಪ್ರಥಮವಾಗಿ ಮುದ್ರಣಗೊಂಡಿತು. ರೆವರೆಂಡ್ ಎಫ್. ಕಿಟ್ಟೆಲ್ ಅವರ ಕನ್ನಡ -ಇಂಗ್ಲಿಷ್ ನಿಘಂಟು ೧೮೯೪ರಲ್ಲಿ ಪ್ರಥಮವಾಗಿ ಮುದ್ರಣಗೊಂಡಿತು. ಇದರಲ್ಲಿ ೧೭೫೨ ಪುಟಗಳಿವೆ. ಈ ನಿಘಂಟು ಮದರಾಸ್ ವಿಶ್ವವಿದ್ಯಾನಿಲಯದಿಂದ ಪರಿಷ್ಕೃತಗೊಂಡು, ವಿಸ್ತೃತಗೊಂಡು ನಾಲ್ಕು ಸಂಪುಟಗಳಲ್ಲಿ ೧೯೭೧ ರಲ್ಲಿ ಪ್ರಕಟವಾಯಿತು. ಇದರಲ್ಲಿ ಒಟ್ಟು ೧೭೭೭ ಪುಟಗಳಿವೆ.

ಈ ಪ್ರಮುಖನಿಘಂಟುಗಳ ಕಾರ್ಯವಿಧಾನ, ಇವಕ್ಕೆ ತಗುಲಿರುವ ವೆಚ್ಚ, ಹಿಡಿದ ಸಮಯವನ್ನು ಪರೀಕ್ಷಿಸಿದಾಗ ಕನ್ನಡ ನಿಘಂಟಿಗೆ ಹಿಡಿದಿರುವ ಸಮಯ, ತಗುಲಿರುವ ವೆಚ್ಚ ಅತಿಯಾದುದಲ್ಲವೆಂದು ಮೇಲ್ನೋಟಕ್ಕೇ ಕಂಡುಬರುತ್ತದೆ. ಅಲ್ಲದೆ ಕನ್ನಡ ನಿಘಂಟು ರಚನಾಕಾರ್ಯ ನಿಘಂಟುಕಚೇರಿಯ ಸೀಮಿತ ಸಿಬ್ಬಂದಿವರ್ಗದಿಂದ ಸಿದ್ಧವಾಗಿದಯೆಂಬುದನ್ನೂ ಈ ಸಂದರ್ಭದಲ್ಲಿ ಉಲ್ಲೇಖಿಸಬಹುದಾಗಿದೆ. (ಈ ನಿಘಂಟಿನ ಸಂಪಾದಕವರ್ಗ, ಸಿಬ್ಬಂದಿವರ್ಗಗಳ ವಿವರಗಳನ್ನು ಕಡೆಯಲ್ಲಿ ಕೊಟ್ಟಿರುವ ಅನುಬಂಧದಲ್ಲಿ ಕಾಣಬಹುದು).

ಮೊದಲನೆ ಸಂಪುಟದಿಂದ ಹಿಡಿದು ಕಡೆಯ ಸಂಪುಟಗಳವರೆಗೆ ಸಂಪಾದಕಸಮಿತಿಯ ಸದಸ್ಯರು ಒಟ್ಟು ೩೨೯ ಬಾರಿ ಸಭೆಸೇರಿ ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ನೀಡಿ ಈ ಬೃಹತ್ ಕಾರ್ಯವನ್ನು ಕೈಗೂಡಿಸಿಕೊಟ್ಟಿದ್ದಾರೆ.

ನಿಘಂಟಿನ ನಿಯಮಾವಳಿಗಳು

ನಿಘಂಟು ಸಂಪಾದಕಸಮಿತಿಯ ವಿದ್ವಾಂಸರು ಇದರ ರಚನೆಯ ಆರಂಭಕಾಲದಲ್ಲಿ ಹಲವಾರು ಬಾರಿ ಚರ್ಚಿಸಿ ಮಾಡಿರುವ ವಿಧಿವಿಧಾನಗಳನ್ನೂ, ನಿಯಮಾವಳಿಗಳ ರೂಪರೇಖೆಗಳನ್ನೂ ಯಥಾವತ್ತಾಗಿ ಇಲ್ಲಿ ಉದಾಹರಿಸಿದೆ.

ಕ್ರಿ.ಶ. ೧೮೦೦ ರವರೆಗಿನ ಗ್ರಂಥಗಳು ಮತ್ತು ಶಾಸನಗಳಲ್ಲಿ ದೊರೆಯುವ ಮಾತುಗಳನ್ನೂ ಭಾಷಾರೂಢಿಗಳನ್ನೂ ತೆಗೆದುಕೊಳ್ಳತಕ್ಕುದು.

೧. ಸಂಸ್ಕೃತಪದಗಳನ್ನು ಸೇರಿಸಬೇಕಾಗಿಲ್ಲ. ಕನ್ನಡದಲ್ಲಿ ಬೇರೆ ಅರ್ಥವುಳ್ಳ ಸಂಸ್ಕೃತಪದಗಳನ್ನು ಮಾತ್ರ ಸೇರಿಸಬೇಕು. ೨. ತದ್ಭವಗಳನ್ನೂ ಅನ್ಯದೇಶ್ಯಗಳನ್ನೂ ಸೇರಿಸಬೇಕು. ೩. ಪ್ರಯೋಗಗಳನ್ನೂ ಆಕರಗಳನ್ನೂ ಕೊಡಬೇಕು. ೪. ಸಾಧ್ಯವಾದ ಮಟ್ಟಿಗೆ ತಮಿಳು, ತೆಲುಗು ಮತ್ತು ಇತರ ದ್ರಾವಿಡಭಾಷೆಗಳಲ್ಲಿಯ ಮತ್ತು ಮರಾಠಿ ಮುಂತಾದ ಗೌಡಭಾಷೆಗಳಲ್ಲಿಯ ಜ್ಞಾತಿಶಬ್ದಗಳನ್ನು ಸೂಚಿಸಬೇಕು.

ಈ ಕೋಶಕ್ಕಾಗಿ ಹಿಂದಿನ ಸಾಹಿತ್ಯವನ್ನು ಚೆನ್ನಾಗಿ ಶೋಧಿಸಿ ಪ್ರಯೋಗಗಳನ್ನು ವಿಪುಲವಾಗಿ ಸಂಗ್ರಹಿಸಬೇಕು. ಕನ್ನಡದಲ್ಲಿ ಉಳ್ಳ ಗ್ರಾಮ್ಯವಲ್ಲದ ದೇಶ್ಯ ಮತ್ತು ತದ್ಭವಶಬ್ದಗಳೆಲ್ಲವೂ ಈ ಕೋಶದಲ್ಲಿ ಸೇರುವಂತೆ ನೋಡಿಕೊಳ್ಳಬೇಕು.

ಕ್ರಿ.ಶ. ಸು.೧೦೫೦ ರೊಳಗೆ ರಚಿತವಾದ ಕನ್ನಡಗ್ರಂಥಗಳಲ್ಲೂ ಶಾಸನಗಳಲ್ಲೂ ದೊರೆಯುವ ಎಲ್ಲ ದೇಶ್ಯ ಮತ್ತು ತದ್ಭವಪದಗಳನ್ನು ಪ್ರಯೋಗಪಟ್ಟಿಕೆಗಳಲ್ಲಿ ಸಂಗ್ರಹಿಸಬೇಕು. ಅಲ್ಲಿಂದ ಮುಂದೆ ಕ್ರಿ.ಶ. ಸುಮಾರು ೧೨೫೦ರೊಳಗೆ ರಚಿತವಾದ ಎಲ್ಲ ಗ್ರಂಥಗಳನ್ನೂ ಶಾಸನಗಳನ್ನೂ ಶೋಧಿಸಿ ರೂಪ, ಅರ್ಥ, ಅಪೂರ್ವತೆ ಈ ಮೊದಲಾದ ದೃಷ್ಟಿಗಳಿಂದ ಗಮನಾರ್ಹವಾದ ಪದಗಳನ್ನೆಲ್ಲ ಸಂಗ್ರಹಿಸಬೇಕು. ಮುಂದೆ ಕ್ರಿ.ಶ. ಸು.೧೮೦೦ ರ ಒಳಗೆ ರಚಿತವಾದ ಗ್ರಂಥ, ಶಾಸನಗಳಲ್ಲಿ ಮುಖ್ಯವಾದವುಗಳನ್ನು ಆರಿಸಿಕೊಂಡು ಅವುಗಳಲ್ಲಿ ದೊರೆಯುವ ಗಮನಾರ್ಹವಾದ ಪದಗಳನ್ನೆಲ್ಲಾ ಸಂಗ್ರಹಿಸಬೇಕು. ಅಂತೂ ಕನ್ನಡದಲ್ಲಿ ಪ್ರಯೋಗವಾಗಿರುವ ದೇಶ್ಯ ಮತ್ತು ತದ್ಭವಾದಿ ಪದಗಳಲ್ಲಿ ಯಾವುದೂ ಬಿಟ್ಟುಹೋಗದಂತೆ ನೋಡಿಕೊಳ್ಳಬೇಕು.

ಪ್ರಾಚೀನ ಕನ್ನಡಗ್ರಂಥಗಳಲ್ಲಿ ಸಂಸ್ಕೃತಸಮಾಸಶಬ್ದಗಳನ್ನು ಅತಿವಿಪುಲವಾಗಿ ಉಪಯೋಗಿಸಿರುವುದರಿಂದ ಅವುಗಳೆಲ್ಲವನ್ನೂ ಈ ಕೋಶದಲ್ಲಿ ಕೊಡಬೇಕಾದಲ್ಲಿ ಗ್ರಂಥದ ಗಾತ್ರವು ಒಂದಕ್ಕೆ ಎರಡರಷ್ಟಾಗುತ್ತದೆ; ಅವುಗಳಲ್ಲಿ ಕೆಲವನ್ನು ಮಾತ್ರ ಕೊಡಬೇಕೆಂದರೆ ಆಯ್ಕೆಯಲ್ಲಿ ತೊಡಕುಂಟಾಗುತ್ತದೆ; ಪ್ರಯೋಜನವೂ ಕಡಿಮೆಯಾಗುತ್ತದೆ. ಇದರ ಮೇಲೆ ಈಗಾಗಲೇ ದೊರೆಯುವ ಉತ್ತಮವಾದ ಸಂಸ್ಕೃತಕೋಶಗಳು, ಡಾ॥ ಕಿಟ್ಟೆಲ್ ಅವರ ಕನ್ನಡ ನಿಘಂಟು ಮೊದಲಾದುವುಗಳ ಸಹಾಯದಿಂದ ಈ ಸಂಸ್ಕೃತಶಬ್ದಗಳ ಅರ್ಥಗಳನ್ನು ಹೆಚ್ಚು ಶ್ರಮವಿಲ್ಲದೆ ನಿಷ್ಕರ್ಷೆಯಾಗಿ ತಿಳಿದುಕೊಳ್ಳಬಹುದು. ದೇಶ್ಯ ಮತ್ತು ತದ್ಭವಶಬ್ದಗಳನ್ನು ಕುರಿತಾದರೆ ಈ ಸೌಲಭ್ಯ ಸಾಲದು. ಡಾ॥ ಕಿಟ್ಟೆಲ್ ಅವರ ನಿಘಂಟು ರಚನೆಯಾದಾಗಿನಿಂದೀಚಗೆ ಅನೇಕ ಪ್ರಾಚೀನಗ್ರಂಥಗಳು ಬೆಳಕಿಗೆ ಬಂದಿವೆ; ಶಾಸನಗಳ ಶಬ್ದಸಂಗ್ರಹಕ್ಕಂತೂ ಅವರು ಕೈಹಾಕಿಯೇ ಇರಲಿಲ್ಲ. ಈ ಕೊರತೆಯನ್ನು ಸಾಧ್ಯವಾದ ಮಟ್ಟಿಗೆ ಪರಿಹರಿಸಿ ಕನ್ನಡದ ವ್ಯಾಸಂಗಕ್ಕೆ ನೆರವಾಗುವಂತೆ ಕೋಶವನ್ನು ರಚಿಸಿಬೇಕೆಂಬುದೇ ಸಮಿತಿಯ ಮುಖ್ಯೋದ್ದೇಶ. ಗ್ರಂಥದ ಪರಿಮಿತಿ, ಸಂಶೋಧನೆಯ ಆವಶ್ಯಕತೆ – ಈ ಮೊದಲಾದುವುಗಳನ್ನು ಗಮನದಲ್ಲಿಟ್ಟುಕೊಂಡು ಈ ಕೋಶದ ಮಟ್ಟಿಗೆ ಸಂಸ್ಕೃತಪದಗಳನ್ನು ಸೇರಿಸಿಕೊಳ್ಳಬೇಕಾಗಿಲ್ಲವೆಂದು ಹಿಂದೆ ಅಂಗೀಕರಿಸಿದ್ದ ತತ್ತ್ವವನ್ನೇ ಮತ್ತೆ ಸ್ಥಿರೀಕರಿಸಲಾಯಿತು.

ಕನ್ನಡದಲ್ಲಿ ಅರ್ಥವ್ಯತ್ಯಾಸಹೊಂದಿ ಪ್ರಯೋಗವಾಗಿರುವ ಸಂಸ್ಕೃತಶಬ್ದಗಳನ್ನೂ ಅರಿಸಮಾಸ ಮೊದಲಾದುವನ್ನೂ ಕೋಶದಲ್ಲಿ ಸೇರಿಸಬೇಕೆಂದು ಹಿಂದೆಯೇ ಉದ್ದೇಶಿಸಿದ್ದಂತೆ ಈಗಲೂ ತೀರ್ಮಾನಿಸಲಾಯಿತು.

ಕನ್ನಡ ಕಾವ್ಯಗಳಲ್ಲಿ ದೊರೆಯುವ ದೇಶ್ಯ ಮತ್ತು ತದ್ಭವ ಪಾರಿಭಾಷಿಕ ಶಬ್ದಗಳೆಲ್ಲವೂ ಕೋಶದಲ್ಲಿ ಅವಶ್ಯವಾಗಿ ಸೇರಿಯೇ ಸೇರುತ್ತವೆ. ಆದರೆ ಸಂಸ್ಕೃತ ಪಾರಿಭಾಷಿಕ ಶಬ್ದಗಳೆಲ್ಲವನ್ನೂ ಸೇರಿಸುವುದು ನಮ್ಮ ಕೋಶದ ವ್ಯಾಪ್ತಿಗೆ ಮೀರಿದ ವಿಷಯವಾಗುತ್ತದೆ. ಕನ್ನಡ ಕಾವ್ಯಗಳಲ್ಲಿ ದೊರೆಯುವ ಜೈನ, ವೀರಶೈವ ಮೊದಲಾದ ಪಾರಿಭಾಷಿಕಶಬ್ದಗಳನ್ನೆಲ್ಲಾ ಒಳಗೊಂಡ ಬೇರೊಂದು ಕೋಶದ ರಚನೆಯೇ ಆಗಬೇಕು. ಸದ್ಯಕ್ಕೆ ಅದನ್ನು ಕೈಕೊಳ್ಳುವುದು ಶಕ್ಯವಿಲ್ಲ.

ಕಿಟ್ಟೆಲ್ ಕನ್ನಡ ಇಂಗ್ಲಿಷ್ ಕೋಶದಲ್ಲಿರುವ ಸಂಸ್ಕೃತಪದಗಳನ್ನೆಲ್ಲಾ ಈ ಕೋಶದಲ್ಲಿ ಸೇರಿಸತಕ್ಕದ್ದು. ಜೊತೆಗೆ ಕನ್ನಡಕಾವ್ಯಗಳಲ್ಲಿ ದೊರಕುವ ಇತರ ಸಂಸ್ಕೃತಶಬ್ದಗಳನ್ನು ಸಾಧ್ಯವಾದಷ್ಟೂ ಸೇರಿಸತಕ್ಕದ್ದು.

ದೇಶ್ಯಶಬ್ದಗಳ ನಿಷ್ಪತ್ತಿಯಲ್ಲಿ ಇತರ ದ್ರಾವಿಡಭಾಷೆಗಳಲ್ಲಿರುವ ಜ್ಞಾತಿಶಬ್ದಗಳನ್ನು (Cognates) ಸೂಚಿಸತಕ್ಕದ್ದು.

ದೇಶ್ಯಪದಗಳಿಗೆ ಅರ್ಥ ಕೊಡುವಾಗ ಸಂಸ್ಕೃತ ಪರ್ಯಾಯ ಶಬ್ದಗಳನ್ನು ಸೂಚಿಸಬಹುದು.

೧೮೦೦ರಿಂದ ಈಚೆಗೂ ಗ್ರಂಥಸ್ಥವಾದ ಶಬ್ದಸಂಪತ್ತಿಯನ್ನು ಸಂಗ್ರಹಿಸಿ ಸೇರಿಸತಕ್ಕದ್ದು.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರಚಾರದಲ್ಲಿರುವ ಕ್ರಮಿಕ ಪಠ್ಯಪುಸ್ತಕಗಳಲ್ಲಿ ದೊರಕುವ ಸ್ಥಳೀಯಶಬ್ದಗಳನ್ನೂ ಜನಪದ

ಸಾಹಿತ್ಯದಲ್ಲಿ ಕಾಣುವ ಪದಗಳನ್ನೂ ಸಂಗ್ರಹಿಸಿ ಸೇರಿಸತಕ್ಕದ್ದು. ಈಗ ಪರಿಷತ್ತು ಕೈಗೊಂಡಿರುವುದು ಕನ್ನಡ-ಕನ್ನಡ ಕೋಶ ಮಾತ್ರವಾದ್ದರಿಂದ ಈ ಕೋಶದಲ್ಲಿ ಹಿಂದೀ ಪರ್ಯಾಯಪದಗಳನ್ನು ಸೇರಿಸುವುದು ಸೂಕ್ತವಲ್ಲ, ಆದರೆ ಈ ಕೋಶದ ಕೆಲಸ ಸ್ವಲ್ಪಕಾಲ ಮುಂದುವರಿದ ಮೇಲೆ, ಕನ್ನಡ-ಹಿಂದಿ- ಇಂಗ್ಲಿಷ್ ಕೋಶವೊಂದನ್ನು ತಯಾರಿಸುವ ವಿಷಯವನ್ನು ಪರಿಷತ್ತು ಪರಿಶೀಲಿಸಬೇಕು.

ಒಂದು ಧಾತುವಿನಿಂದ ನಿಷ್ಪನ್ನವಾದ ಎಲ್ಲ ಶಬ್ದಗಳನ್ನೂ ಪೃಥಕ್ಕಾಗಿ ಆಯಾ ಸ್ಥಾನದಲ್ಲಿ ಪ್ರತ್ಯೇಕವಾಗಿ ಕೊಡತಕ್ಕದ್ದು.

ಸಮಾಸಪದಗಳನ್ನು ಸ್ವತಂತ್ರಪದಗಳಂತೆಯೇ ಪರಿಗಣಿಸತಕ್ಕದ್ದು. ಎಂದರೆ ಅವುಗಳನ್ನು (ಪ್ರತ್ಯೇಕವಾಗಿ) ಯಥಾಸ್ಥಾನಗಳಲ್ಲಿ ಕೊಡತಕ್ಕದ್ದು.

ಸಂಜ್ಞಾಶಬ್ದಗಳು ಎಂದರೆ ಅಂಕಿತನಾಮಗಳು ಅಥವಾ ಕೇವಲ ವ್ಯಕ್ತಿಗಳ ಹೆಸರುಗಳು ನಿಘಂಟಿನಲ್ಲಿ ಬರಬೇಕಾದ್ದಿಲ್ಲವೆಂದೂ ಆದ್ದರಿಂದ ಕವಿಚರಿತೆಯಲ್ಲಿ ಬರುವ ಕನ್ನಡಕವಿಗಳ ಹೆಸರುಗಳನ್ನು ಸೇರಿಸುವುದು ಅವಶ್ಯವಲ್ಲವೆಂದೂ ಛಂದಸ್ಸು, ವ್ಯಾಕರಣ, ಅಲಂಕಾರ ಈ ಲಕ್ಷಣಶಾಸ್ತ್ರಗಳಿಗೆ ಸಂಬಂಧಪಟ್ಟ ಲಾಕ್ಷಣಿಕಶಬ್ದಗಳನ್ನು ಸೇರಿಸಬೇಕೆಂದೂ ಸಾಧಾರಣವಾಗಿ ಕನ್ನಡದಲ್ಲಿ ಪ್ರಯೋಗವಿಲ್ಲದ 'ಅಭಿಶುಃ', 'ಅಹಲ್ಲಕಃ', 'ನಿರ್ಲಯಿನೀ', 'ಮಂಕ್ಕು' ಮುಂತಾದ ಸಂಸ್ಕೃತಶಬ್ದಗಳನ್ನು ಬಿಡಬಹುದೆಂದೂ ಅ, ಅತಿಗಳಿಂದ ಮೊದಲಾಗುವ ಎಲ್ಲಾ ಸಂಸ್ಕೃತಶಬ್ದಗಳನ್ನೂ ಕೊಡಬೇಕಾಗಿಲ್ಲವೆಂದೂ ಅರ್ಥವಿಶೇಷವಿರುವ ಅಖ್ಯಾತಿ, ಅಭಾವ, ಅತಿರೇಕ, ಅತಿವ್ಯಾಪ್ತಿ, ಅತಿಸಾರ, ಅತ್ಯುಕ್ತಿ ಮುಂತಾದವುಗಳು ಇರಬಹುದೆಂದೂ ಗ್ರಂಥಾಧಾರವಿಲ್ಲದೇ ಇದ್ದರೂ ರೂಢಿಯಲ್ಲಿರುವ ಅಡಾವುಡಿ, ಪುಢಾರಿ, ತೊಂಬಾವಂಚ, ಚೋಳಿ, ಗಡಿಬಿಡಿ, ಮುಂತಾದ ಶಬ್ದಗಳೂ 'ಬೆಟ್ಟಕ್ಕೆ ಕಲ್ಲು ಹೊರು', 'ಓ ಲಕ್ಷ್ಮಣಾ ಎಂದುಕೊಂಡು ಹೋಗು', 'ಕಣ್ಣಿಗೆ ಎಣ್ಣೆ ಬಿಟ್ಟುಕೊ' ಮುಂತಾದ ನುಡಿಗಟ್ಟುಗಳೂ ಸೇರತಕ್ಕದೆಂದೂ ನಿರ್ಣಯವಾಯಿತು.

ಈಗ ನಿಘಂಟಿನ ವ್ಯಾಪ್ತಿ ವಿಸ್ತಾರವಾಗಿರುವುದರಿಂದ ಸಂಪಾದಕಸಮಿತಿಯ ೧೬.೬.೧೯೪೬ ನೆಯ ಸಭೆಯ ೯ನೆಯ ನಿರ್ಣಯವನ್ನು ಪುನರ್ವಿಮರ್ಶಿಸಿ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯಕ್ಕೆ ಸಂಬಂಧಪಟ್ಟ ಧಾರ್ಮಿಕ ಮತ್ತು ದಾರ್ಶನಿಕ ಶಬ್ದಗಳನ್ನು ಸೇರಿಸಬೇಕು.

ಧಾ, ಶಮಧಾ, ಕ್ರಿ ಇವುಗಳನ್ನು ಕ್ರಮವಾಗಿ ಧಾತು, ಶಬ್ದಮರ್ಣದರ್ಪಣದ ಧಾತುಪಾಠ, ಕ್ರಿಯಾಪದ ಎಂಬ ಅರ್ಥಗಳಲ್ಲಿ ಉಪಯೋಗಿಸಬಹುದು.

ಪ್ರಯೋಗಗಳನ್ನು ಕೊಡುವಾಗ ಅತ್ಯಂತ ಪ್ರಾಚೀನ ಪ್ರಯೋಗಕ್ಕೆ ಶಾಸನದಿಂದ ಮಾತ್ರ ಕಾಲವನ್ನು ಸೂಚಿಸಬಹುದು; ಗ್ರಂಥಪ್ರಯೋಗವಾದರೆ ಬೇಕಿಲ್ಲ.

ನಿಘಂಟಿನ ರಚನೆಯಲ್ಲಿ ಕಿಟ್ಟೆಲ್ ತನ್ನ ನಿಘಂಟಿನಲ್ಲಿ ಅನುಸರಿಸಿರುವ ಕ್ರಮವನ್ನೇ ಸ್ಥೂಲವಾಗಿ ಅನುಸರಿಸಬಹುದು. ಆದರೆ ಪಞ್ಚ-ಪಂಚ, ತನ್ದೆ-ತಂದೆ ಎಂದು ಮುಂತಾಗಿ ಸ್ಪಷ್ಟಪಡಿಸಿ ತೋರಿಸಬೇಕು. ಒಂದು ಶಬ್ದಕ್ಕೆ ಹಲವು ರೂಪಗಳಿದ್ದಾಗ, ಅವುಗಳಲ್ಲಿ ಅತಿ ಪ್ರಾಚೀನ ರೂಪದಿಂದ ಆರಂಭಿಸಿ, ಕಾಲದೃಷ್ಟಿಯಿಂದ ಅರ್ಥಗಳನ್ನೂ ಪ್ರಯೋಗಗಳನ್ನೂ ಆ ಪ್ರಾಚೀನರೂಪದ ಅಡಿಯಲ್ಲಿಯೇ ಕಾಣಿಸತಕ್ಕದ್ದು. ಮಿಕ್ಕ ರೂಪಗಳನ್ನು ಅವುಗಳ ಸ್ಥಾನಗಳಲ್ಲಿ ಕೊಟ್ಟು ಮೂಲಶಬ್ದಕ್ಕೆ ಸಂಬಂಧವನ್ನು 'ನೋ'ಎಂದು ಸೂಚಿಸತಕ್ಕದ್ದು. ಉದಾ. 'ಅಟ್ಟಿಜ್', 'ಅಕ್ಕಜ್', 'ಅಕ್ಕರು', 'ಅಕ್ಕರೆ' ಇತ್ಯಾದಿ. ಅಕ್ಕರೆ 'ಅಟ್ಟಿಜ್' ನೋ.

ಶಬ್ದಗಳನ್ನು ಕೊಡುವಾಗ ಪ್ರಕೃತಿರೂಪದಲ್ಲಿಯೇ ಕೊಡತಕ್ಕದು. ಉದಾ. ಮರ, ನೆಲ, ಕುಲಿ.

ನಾಮವಿಶೇಷ (adjective)ಗಳನ್ನು ವಿಶೇಷಣಕ್ಕೆ ಬದಲಾಗಿ ಗುಣವಾಚಕ (ಗು) ಎಂದು ನಿರ್ದೇಶಿಸತಕ್ಕದ್ದು. ಶಬ್ದಗಳ ಪ್ರಾದೇಶಿಕ ರೂಪಗಳನ್ನು (dialectal forms) ಸಾಮಾನ್ಯವಾಗಿ ಕೊಡಬೇಕಾದ್ದಿಲ್ಲ. ಆದರೆ ೧೮೦೦ ರ ವರೆಗಿನ ಗ್ರಂಥ ಶಾಸನಾದಿಗಳಲ್ಲಿ (ಲಿಪಿಕಾರನ ಪ್ರಮಾದಗಳ ಹೊರತು) ಪ್ರಾದೇಶಿಕರೂಪಗಳು ಕಂಡುಬಂದರೆ ಅವುಗಳನ್ನು ಸೇರಿಸತಕ್ಕದ್ದು. ಉದಾ: 'ಅಡ್ಕೆ', 'ಉಡುಗ'.

ರೇಫದೊಡನೆ ಸೇರಿದ ಸಂಯುಕ್ತಾಕ್ಷರಗಳನ್ನು ಬರೆಯುವಾಗ 'ರ' ಕಾರಕ್ಕೆ ಒತ್ತು ಕೊಟ್ಟಾಗಲಿ, ಅರ್ಕಾವೊತ್ತನ್ನು (ರ್) ಸೇರಿಸಿಯಾಗಲಿ ಬರೆಯಬಹುದು. ಉದಾ: ಸೂರ್ಕ, ಸೂರ್ಯ.

ಬಹುಸುಲಭವಾದ ಕ್ರಿಯಾಸಮಾಸಗಳನ್ನೂ ಸಮಾಸಪದಗಳನ್ನೂ ಸುಲಭವೆಂದು ಬಿಟ್ಟುಬಿಡದೆ ನಿಘಂಟಿನಲ್ಲಿ ಕೊಡಬೇಕು. ಉದಾ: ಅಗ್ಗಳಮಾಗು, ಅಗ್ಗಳಪದಾತಿ, ಅಗ್ಗಳಬಲಾಢ್ಯ, ಅಗ್ಗಳವಸ್ತು, ಅಗ್ಗಳವೀರದಳ ಇತ್ಯಾದಿ.

ಕಿಟ್ಟೆಲ್ ನಿಘಂಟಿನಲ್ಲಿ ಕಾಣಿಸಿರುವ ಪ್ರಯೋಗಾಧಾರವಿಲ್ಲದ ಶಬ್ದಗಳನ್ನು ಸೇರಿಸಿಕೊಳ್ಳತಕ್ಕದ್ದು. ಸ್ಕಾಂಡರ್‌ಸನ್ ಮುಂತಾದ ಇತರ ನಿಘಂಟುಗಳಲ್ಲಿನ ಶಬ್ದಾರ್ಥಪ್ರಯೋಗಗಳನ್ನು ವಿಚಾರಮಾಡಿ ಸೂಕ್ತವೆನ್ನಿಸಿದುವನ್ನು ಅಂಗೀಕರಿಸಬಹುದು.

ಅರ್ಥ ಸಂದಿಗ್ಧವಾದ ಕಡೆಗಳಲ್ಲಿ ಹೆಚ್ಚು ಪ್ರಯೋಗಗಳನ್ನು ಕೊಡಬೇಕಾಗುತ್ತದೆ. ಸ್ಪಷ್ಟವಾಗಿರುವ ಕಡೆ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಈ ಮೂರರಿಂದಲೂ ಒಂದೆರಡು ಪ್ರಯೋಗಗಳನ್ನು ಕೊಟ್ಟರೆ ಸಾಕು. ಪ್ರಯೋಗಗಳು ವಿಪುಲವಾಗಿದ್ದು ಸ್ವಾರಸ್ಯವಾಗಿದ್ದರೆ ಶತಮಾನಕ್ಕೊಂದೆರಡರಂತೆ ಕೊಡಲೂಬಹುದು. ಈ ಆಯ್ಕೆಯನ್ನು ಸಂಪಾದಕರ ವಿವೇಚನೆಗೇ ಬಿಡಲಾಗಿದೆ.

ಕ್ರಿಯಾಸಮಾಸಗಳನ್ನು ಕೂಡ ಇತರ ಸಮಾಸಗಳಂತೆಯೇ ಪ್ರತ್ಯೇಕವಾಗಿ ಯಥಾಸ್ಥಾನದಲ್ಲಿಯೇ ಕೊಡತಕ್ಕದ್ದು.

ಧಾತುಗಳಿಂದ ಸಾಧಿತವಾದ ಸಾಧಾರಣ ಕ್ರಿಯಾರೂಪಗಳನ್ನೆಲ್ಲ ಪಟ್ಟಿ ಮಾಡಬೇಕಾಗಿಲ್ಲ. ವಿಶಿಷ್ಟವಾದುವನ್ನು ಮಾತ್ರ ತೋರಿಸಿದರೆ ಸಾಕು.

ಪ್ರಾದೇಶಿಕವೆಂದು ಸ್ಪಷ್ಟವಾಗಿ ಗೊತ್ತಿರುವ ಶಬ್ದಪ್ರಯೋಗಗಳ ವಿಷಯದಲ್ಲಿ ಆ ಸಂಗತಿಯನ್ನು (ಉಕ) ಉತ್ತರಕರ್ನಾಟಕ, (ದಕ) ದಕ್ಷಿಣ ಕರ್ನಾಟಕ ಮತ್ತು (ಕರಾ) ಕರಾವಳಿ ಎಂಬ ಸಂಕೇತಗಳಿಂದ ಸೂಚಿಸತಕ್ಕದ್ದು.

'ಅಮ್', 'ಅನ್' ಅಂತವಾದ ನಾಮವಾಚಕಗಳನ್ನು ಅಕಾರಾಂತವಾಗಿಯೇ ತೋರಿಸಲಾಗುವುದು. ಉದಾ. ಅಗಲ್ದುರದ (ನಾ). ('ಅಗಲ್ದುರದಂ' ಅಥವಾ 'ಅಗಲ್ದುರದನ್' ಎಂಬುದಕ್ಕೆ ಬದಲಾಗಿ). ಹೀಗೆಯೇ ನೀಳ್ವೋಳ, ಬಟ್ಟದೊಡೆಯ, ಕೆಂಗಣ್ಣ ಇತ್ಯಾದಿ.

ಭೂತ ಭವಿಷ್ಯತ್ ಕೃದಂತನಾಮಗಳಲ್ಲಿ ನೇರವಾಗಿ ಬರತಕ್ಕವನ್ನು ಧಾತುವಿನ ಕೆಳಗೇ ಕೊಡತಕ್ಕದ್ದು. ಉದಾ. 'ಅಗವಟ್ಟಂ' ಶಬ್ದವನ್ನು 'ಅಗವಡು' ವಿನಲ್ಲಿ ಕೊಡಬೇಕು. ಹೀಗೆಯೇ 'ಬಂದಂ','ಬರ್ಪಂ', 'ಬಂದವನು', 'ಬಂದವಳು', 'ಬಂದುದು' ಇತ್ಯಾದಿ.

ಸಂಸ್ಕೃತಸಮಾಸಗಳಲ್ಲಿ ಎಲ್ಲವನ್ನೂ ಕೊಡಬೇಕಾಗಿಲ್ಲ. ಸಾಧಾರಣವಾಗಿ ಹೆಚ್ಚು ರೂಢಿಯಲ್ಲಿರುವ ಚಿಕ್ಕ ಚಿಕ್ಕವನ್ನು ಮಾತ್ರ ಸೇರಿಸಿಕೊಳ್ಳಬಹುದು. ಸಾಮಾನ್ಯವಾಗಿ ಎರಡಕ್ಕಿಂತ ಹೆಚ್ಚು ಶಬ್ದಗಳು ಕೂಡಿ ಆದ ಸಮಾಸಗಳನ್ನು ಸೇರಿಸುವ ಅಗತ್ಯವಿಲ್ಲ. ಅರ್ಥ ಸೌಕರ್ಯಕ್ಕೋಸ್ಕರ ಅವಶ್ಯವೆನ್ನಿಸಿದರೆ ವಿಶೇಷಸಂದರ್ಭಗಳಲ್ಲಿ ಮಾತ್ರ ದೊಡ್ಡಸಮಾಸಗಳನ್ನು ಕೊಡಬಹುದು.

- ಇಸು,- ಸು; - ಇಚು, - ಚು ಪ್ರತ್ಯಯಗಳು ಸೇರಿದ ರೂಪಗಳಲ್ಲಿ - ಇಸು,- ಚು ಸೇರಿದ ರೂಪಗಳನ್ನು ಮೂಲವಾಗಿ ಇಟ್ಟುಕೊಂಡು -ಸು,- ಇಚು ಸೇರಿದ ರೂಪಗಳನ್ನು ಪರ್ಯಾಯವಾಗಿ ಕೊಡಬೇಕು.

'ಅಗ', 'ನಡ' ಮುಂತಾದ ಎಕಾರಾಂತ ಪ್ರಕೃತಿಗಳಿಗೆ ೧೮೦೦ಕ್ಕೂ ಹಿಂದೆ 'ಅಗಿ' 'ನಡಿ' ಎಂಬ ಇಕಾರಾಂತ ರೂಪಗಳ ಪ್ರಯೋಗಗಳು ಕಂಡುಬಂದರೆ ಎರಡೂ ರೂಪಗಳನ್ನು ಉಲ್ಲೇಖಿಸತಕ್ಕದ್ದು. ೧೮೦೦ ರಿಂದೀಚೆಗೆ ಮಾತ್ರ ಕಾಣಬರುವ ಈ ಬಗೆಯ 'ಇ' ಕಾರಾಂತ ರೂಪಗಳನ್ನು ತೆಗೆದುಕೊಳ್ಳಬೇಕಾಗಿಲ್ಲ.

ಶಾಸನಗಳಲ್ಲಿ ಕುಳವಿರಬೇಕಾದ ಕಡೆಗಳಲ್ಲಿ ಅಟವನ್ನು ಬರೆದಿದ್ದರೆ ಯಥಾವತ್ತಾಗಿ ಉದ್ಧರಿಸಿ ಪಕ್ಕದಲ್ಲಿ ಕಂಸದಲ್ಲಿ ಕುಳವನ್ನು ತೋರಿಸಬೇಕು.

ತದ್ಭವಗಳನ್ನು ಪ್ರತ್ಯೇಕವಾದ ಉಲ್ಲೇಖಗಳಾಗಿಯೇ ಕೊಟ್ಟು ಅರ್ಥಪ್ರಯೋಗಗಳನ್ನು ತೋರಿಸಬೇಕು. ಅವನ್ನು ಮೂಲ ಸಂಸ್ಕೃತ ಶಬ್ದಗಳ ಕೆಳಗೆ ಸೇರಿಸಬಾರದು.

'ವಟ್ಟ', 'ವೆಳೆ' ಎಂಬಂಥ ಪೂರ್ವದ ಹಳಗನ್ನಡ ರೂಪಗಳನ್ನು 'ಬಟ್ಟ', 'ಬೆಳೆ' ಮುಂತಾದ ಅವುಗಳ ಹಳಗನ್ನಡ ರೂಪಗಳ ಕೆಳಗೆ ಕೊಟ್ಟು ವಿವರಿಸತಕ್ಕದ್ದು.

ಸು. ೧೬೦೦ರ ವರೆಗಿನ ಗ್ರಂಥಗಳಲ್ಲಿ ಶಕಟರೇಫವನ್ನು ಇಟ್ಟುಕೊಳ್ಳಬಹುದು.

ಜೈನ, ವೀರಶೈವ ಪಾರಿಭಾಷಿಕಶಬ್ದಗಳ ಸಂಗ್ರಹವನ್ನು 'ಹಿಂದೂದರ್ಶನ ಸಾರ' ದಿಂದ, ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ ಪಾರಿಭಾಷಿಕಶಬ್ದಗಳನ್ನು 'ಸನಾತನ ಧರ್ಮ', 'ಹರಿಭಕ್ತಸಾರ','ಶಿವಭಕ್ತಿಸಾರ', 'ಅನುಭವಾಮೃತ' - ಈ ಗ್ರಂಥಗಳಿಂದ ಸಂಗ್ರಹಿಸತಕ್ಕದ್ದು.

ಕವಿರಾಜಮಾರ್ಗ, ಕಾವ್ಯಾವಲೋಕನ, ಭಾಷಾಭೂಷಣ, ಛಂದೋಂಬುಧಿ, ಶಬ್ದಮಣಿದರ್ಪಣ, ಕವಿಜಿಹ್ವಾಬಂಧನ, ರಸರತ್ನಾಕರ, ಉದಯಾದಿತ್ಯಾಲಂಕಾರ, ಶಾರದಾವಿಲಾಸ, ಅಪ್ರತಿಮವೀರಚರಿತೆ - ಈ ಗ್ರಂಥಗಳಿಂದ ಲಾಕ್ಷಣಿಕಶಬ್ದಗಳನ್ನು ಸಂಗ್ರಹಿಸತಕ್ಕದ್ದು.

ಅರ್ಥ ಕೊಡುವಾಗ ಶಬ್ದದ ಒಂದು ಅರ್ಥ ಅದರ ಜ್ಞಾತಿಶಬ್ದದ ಅಥವಾ ಬೇರೊಂದು ಶಬ್ದದ ಅರ್ಥಕ್ಕೆ ಸಮಾನವಾಗಿದ್ದರೆ ಆ ಎರಡನೆಯ ಶಬ್ದವನ್ನು ಮಾತ್ರ ತೋರಿಸಿ ಅದರ ಹಿಂದೆ ಸಮಾನಾರ್ಥಕ ಚಿಹ್ನೆ (=) ಯನ್ನು ಹಾಕಬೇಕು. ಉದಾ. ಅಂಕುಸ ೧. = ಅಂಕುಶ ೧.

ಸಂಸ್ಕೃತದ ಅಂಕಿತನಾಮಗಳನ್ನು ಸಾಮಾನ್ಯವಾಗಿ ಬಿಡತಕ್ಕದ್ದು. ಆದರೆ, ಯಾವುದಾದರೂ ಹೆಸರು ಕೇವಲ ಅಂಕಿತನಾಮವಾಗಿ ಮಾತ್ರ ನಿಲ್ಲದೆ ಅದರಲ್ಲಿ ವಿಶೇಷಾರ್ಥ ಬೆಳೆದು ಬಂದಿದ್ದರೆ ಅಂಥ ಶಬ್ದವನ್ನೂ ಅದರ ವಿಶೇಷಾರ್ಥವನ್ನೂ ಕೊಡಬೇಕು. ಉದಾ: ಹರಿಶ್ಚಂದ್ರ, ಕುಂಭಕರ್ಣ, ಧರ್ಮರಾಯ, ಉತ್ತರಕುಮಾರ, ಆಷಾಢಭೂತಿ ಇತ್ಯಾದಿ.

ಸತ್ಯಹರಿಶ್ಚಂದ್ರ, ರಾಮಬಾಣ. ಸುಗ್ರೀವಾಜ್ಞೆ, ರಾವಣಸಂನ್ಯಾಸಿ, ಕುಂಭಕರ್ಣನಿದ್ರೆ, ದಾನದಲ್ಲಿ ಕರ್ಣ, ದುರ್ಯೋಧನನ ಮಾನ – ಇಂಥ ಶಬ್ದಗಳನ್ನೂ ನುಡಿಗಟ್ಟುಗಳನ್ನೂ ಸೇರಿಸಿಕೊಳ್ಳಬೇಕು. ಇವುಗಳಲ್ಲಿ 'ಸುಗ್ರೀವಾಜ್ಞೆ'ಯಂಥ ಸಮಸ್ತಪದಗಳನ್ನು ಪ್ರತ್ಯೇಕ ಉಲ್ಲೇಖಗಳಾಗಿಯೂ 'ದುರ್ಯೋಧನನ ಮಾನ'ಎಂಬಂಥ ನುಡಿಗಟ್ಟುಗಳನ್ನು 'ಮಾನ' ಮೊದಲಾದ ಪ್ರಧಾನಶಬ್ದಗಳ ಕೆಳಗೂ ತೋರಿಸಬೇಕು.

ಸಾಮಾನ್ಯಾರ್ಥವುಳ್ಳ ಶಬ್ದ ಅಂಕಿತನಾಮವೂ ಆಗಿದ್ದರೆ ಆಗ ಆ ಅಂಕಿತನಾಮಾರ್ಥವನ್ನೂ ಕೊಡಬೇಕು. ಉದಾ : ಅಂಗದ = ೧. ತೋಳ್ಬಳೆ. ೨. ವಾಲಿಯ ಮಗ. ಶಕುನಿ = ೧. ಹಕ್ಕಿ. ೨.ದುರ್ಯೋಧನನ ಸೋದರ ಮಾವ.

ಕನ್ನಡದಲ್ಲಿ ಬಳಸುವ ಸಂಸ್ಕೃತಶಬ್ದಗಳಲ್ಲಿ ವಿಕಾರವಿಲ್ಲದ ಅಥವಾ ಅಂತ್ಯದಲ್ಲಿ ಮಾತ್ರ ವಿಕಾರವಿರುವ ಶಬ್ದರೂಪಗಳನ್ನು ಎಂದರೆ ಕೇಶಿರಾಜನು ಸಮಸಂಸ್ಕೃತವೆಂದು ಭಾವಿಸಿರತಕ್ಕಂಥ ಶಬ್ದಗಳನ್ನು (ಸಂ) ಎಂದು ನಿರ್ದೇಶಿಸತಕ್ಕದ್ದು. ಉಳಿದವನ್ನು ಎಂದರೆ ಹೆಚ್ಚು ವಿಕಾರ ಹೊಂದಿರುವವನ್ನು ತದ್ಭವಗಳೆಂದು ಪರಿಗಣಿಸಿ (ದ್ಭ) ಎಂದು ನಿರ್ದೇಶಿಸತಕ್ಕದ್ದು. ಉದಾ: ರಾಜ (ಸಂ.), ಶ್ರದ್ಧೆ (ಸಂ.), ಮನ (ಸಂ.), ಯಶ (ಸಂ.), ಜಸ (ದ್ಭ), ರಾಯ (ದ್ಭ), ಸಡ್ಡೆ (ದ್ಭ), ಮನಸ್ಸು (ಸಂ.), ಯಶಸ್ಸು (ಸಂ).

ಕೇಶಿರಾಜನು 'ತತ್ಸಮ' ಗಳೆಂದು ಕರೆಯುವ ಶಬ್ದಗಳಲ್ಲಿ ಯಾವುವು ದೇಶ್ಯಗಳೆಂದೇ ನಿಶ್ಚಿತವಾಗಿವೆಯೋ ಅಂಥವನ್ನು (ನಾ) ಎಂದು ಮಾತ್ರ ನಿರ್ದೇಶಿಸಿದರೆ ಸಾಕು. ಉದಾ: ಅಂಗಣ, ಅಂಗಳ (ನಾ).

ಸಮಾಸದ ಒಂದು ಭಾಗವನ್ನು ಎತ್ತಿ ಪ್ರತ್ಯೇಕವಾಗಿ ಉಲ್ಲೇಖಿಸಬಾರದೆಂದು (೧೯೫೯ ನೆಯ ಅಕ್ಟೋಬರ್ ತಿಂಗಳ ಸಭೆಯಲ್ಲಿ) ಮಾಡಿದ್ದ ನಿರ್ಣಯವನ್ನು ಪುನರ್ವಿಮರ್ಶಿಸಿ ಸಮಾಸದ ಏಕದೇಶವಾದ ಶಬ್ದ ಸ್ವತಂತ್ರವಾಗಿ ಪ್ರಯೋಗವಾಗುವ ಸಂಭವವಿರುವಂತೆ ಕಂಡುಬಂದಲ್ಲಿ ಅದಕ್ಕೆ ಸ್ವತಂತ್ರವಾದ ಪ್ರಯೋಗ ಸದ್ಯದಲ್ಲಿ ಸಿಕ್ಕಿದ್ದರೂ ಅದನ್ನು ಸ್ವತಂತ್ರ ಉಲ್ಲೇಖವಾಗಿ ಕೊಡಬಹುದು– ಎಂದು ನಿರ್ಣಯಿಸಲಾಯಿತು. ಉದಾ: 'ಅಗಸವೊಗೊಂಬು' ಎಂಬಲ್ಲಿ 'ಅಗಸೆವೊ', 'ಅಟ್ಟುವಳಿಗೊಳ್'ಎಂಬಲ್ಲಿ 'ಅಟ್ಟುವಳಿ'.

ಶಬ್ದಗಳಿಗೆ ಅರ್ಥವನ್ನು ಕೊಡುವಾಗ ತಿಳಿದಮಟ್ಟಿಗೂ ಮೊದಲು ವಾಚ್ಯಾರ್ಥವನ್ನೂ ಆಮೇಲೆ ಲಕ್ಷ್ಯಾರ್ಥವನ್ನೂ ಕೊಡಲಾಗುತ್ತದೆ. ಎಲ್ಲ ಅರ್ಥಗಳಿಗೂ ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ತೋರಿಸಲಾಗುತ್ತದೆ. ಅರ್ಥದ ಪೌರ್ವಾಪರ್ಯ ಉಚಿತವಾಗಿ ಗೊತ್ತಾಗದ ಕಡೆ ಪ್ರಯೋಗಗಳ ಪ್ರಾಚೀನತೆಯನ್ನು ಅನುಸರಿಸಿ ಅರ್ಥ ಕೊಡಲಾಗುತ್ತದೆ.

ಪ್ರತ್ಯಯಗಳಲ್ಲಿ ಆಖ್ಯಾತ ಮತ್ತು ವಿಭಕ್ತಿಪ್ರತ್ಯಯಗಳನ್ನೂ ಅವುಗಳ ಸಂಬಂಧವಾಗಿ ಸೇರುವ ಆಗಮಗಳನ್ನೂ ಈ ನಿಘಂಟಿನಲ್ಲಿ ಸ್ವತಂತ್ರ ಉಲ್ಲೇಖಗಳಾಗಿ ತೋರಿಸುವುದಿಲ್ಲ. ಕೃತ್, ತದ್ಧಿತ ನಾಮಪ್ರತ್ಯಯಗಳನ್ನು, ಧಾತುಸಾಧಕಗಳಾದ – ಇಸು, -ಸು, - ಚು ಮುಂತಾದ ಪ್ರತ್ಯಯಗಳನ್ನು ಪ್ರಶ್ನೆ ಅವಧಾರಣೆ ಸಂಶಯ ಮುಂತಾದ ಭಾವಸೂಚಕ ಪ್ರತ್ಯಯಗಳನ್ನು ಪ್ರತ್ಯೇಕವಾಗಿ ತೋರಿಸಲಾಗುತ್ತದೆ.

ಕ್ರಿಯಾರೂಪಗಳಲ್ಲಿ ಅಸಾಧಾರಣವಾದುವನ್ನು ಆಯಾ ಧಾತುವಿನ ಕೆಳಗೆ ಸೂಚಿಸಲಾಗುತ್ತದೆ. ಉದಾ: ಆಗು - ಆಯ್ತು, ಆಯಿತ್ತು, ಆದತ್ತು; ಈ - ಇತ್ತು; ಕಾಣ್ - ಕಂಡು; ತೆಱು - ತೆತ್ತು ಇತ್ಯಾದಿ.

ಪ್ರತಿಯೊಂದು ಧಾತುವಿನ ಮುಂದೆಯೂ ಅದರ ಕೆಲವು ನಿರ್ದಿಷ್ಟ ರೂಪಗಳನ್ನು ಕೊಡಬೇಕು. ಉದಾಹರಣೆಗೆ: ಭೂತಕಾಲದ ಪ್ರಥಮೈಕವಚನ ಪುಲ್ಲಿಂಗರೂಪ. ನೋಡು - ನೋಡಿದಂ, ನಡೆ - ನಡೆದಂ ಇತ್ಯಾದಿ.

ಪ್ರತ್ಯಯಗಳಲ್ಲಿ ಶಬ್ದದ ಆದಿಯಲ್ಲಿ ಸೇರುವುದಕ್ಕೆ ಪೂರ್ವಪ್ರತ್ಯಯವೆಂದೂ ಮಧ್ಯದಲ್ಲಿ ಸೇರುವುದಕ್ಕೆ ಮಧ್ಯಪ್ರತ್ಯಯವೆಂದೂ ಅಂತ್ಯದಲ್ಲಿ ಸೇರುವುದಕ್ಕೆ ಪರಪ್ರತ್ಯಯವೆಂದೂ ಹೆಸರು ಕೊಟ್ಟು, ಇವಕ್ಕೆ ಕ್ರಮವಾಗಿ ಪೂ ಪ್ರ; ಮ ಪ್ರ; ಪರಪ್ರ - ಎಂದು ಸಂಕೇತವನ್ನು ಸೂಚಿಸಬಹುದು. 'ಪ್ರ' ಎಂದು ಮಾತ್ರವೇ ತೋರಿಸಿದಲ್ಲಿ ಪರಪ್ರತ್ಯಯ ಎಂದೇ ಅಭಿಪ್ರಾಯ.

ಕೆಲವು ಶಬ್ದಗಳು ಒಂದೇ ಮೂಲದಿಂದ ಬರದಿದ್ದರೂ ಕೆಲವು ಅಂಶಗಳಲ್ಲಿ ಮಾತ್ರ ಪರಸ್ಪರ ಹೋಲುವಂತೆ ಕಂಡುಬಂದಾಗ ಆ ಬಗ್ಗೆ ಗಮನ ಸೆಳೆಯುವುದಕ್ಕಾಗಿ 'ಪರಾ' (ಪರಾಮರ್ಶಿಸಿ) ಎಂದು ಸೂಚಿಸಲಾಗುತ್ತದೆ. ಒಂದೇ ಮೂಲದ ಶಬ್ದಗಳನ್ನು 'ನೋ.' (ನೋಡಿ) ಎಂದು ನಿರ್ದೇಶಿಸಲಾಗುತ್ತದೆ. ಉದಾ: ಅಕಸಾಲು 'ಅಕ್ಕಸಾಲೆ' ನೋ. ಅಟವಣೆ 'ಠವಣೆ' ಪರಾ.

ನಿಘಂಟಿನಲ್ಲಿ ಪ್ರತ್ಯೇಕ ಉಲ್ಲೇಖಗಳಾಗಿ ಒಂದೇ ಶಬ್ದರೂಪವನ್ನು ಹಲವು ಬಾರಿ ಕೊಡಬೇಕಾದ ಸಂದರ್ಭಗಳಲ್ಲಿ ಅನುಸರಿಸತಕ್ಕ ಆನುಪೂರ್ವಿ ರೂಪನಿಷ್ಪತ್ತಿ, ಜ್ಞಾತಿಶಬ್ದಗಳು ಮೊದಲಾದುವನ್ನು ತೋರಿಸುವ ಕ್ರಮ, ನಾಮಪಾಚಕ, ಕ್ರಿಯಾವಾಚಕಗಳ ಯಾವ ವಿಶೇಷರೂಪಗಳನ್ನು ಅವಶ್ಯವಾಗಿ ತೋರಿಸಬೇಕೆಂಬ ವಿಷಯ, ಪಾರಿಭಾಷಿಕ ಶಬ್ದಗಳನ್ನು ಸಂಗ್ರಹಿಸುವ ವಿಷಯ ಈ ಮೊದಲಾದವನ್ನು ವಿವರವಾಗಿ ಚರ್ಚಿಸಿ ನಿರ್ಣಯಕ್ಕೆ ಬರಲಾಯಿತು.

ನಿಘಂಟಿನಲ್ಲಿ ಪ್ರತ್ಯೇಕ ಉಲ್ಲೇಖವಾಗಿ ಕೊಡುವ ಶಬ್ದಗಳನ್ನು ಒಂದೇ ರೂಪದ ಶಬ್ದಗಳಾಗಿದ್ದರೆ ಈ ಕೆಳಗಿನ ಆನುಪೂರ್ವಿಯಲ್ಲಿ ತೋರಿಸತಕ್ಕುದು.

೧. **ಭಾಷೆ:** ಕನ್ನಡ, ತದ್ಭವ, ಸಂಸ್ಕೃತ, ಅನ್ಯದೇಶ್ಯ. ೨. **ಶಬ್ದಜಾತಿ:** ಒಂದೇ ಶಬ್ದರೂಪ ಬೇರೆ ಬೇರೆ ಜಾತಿಯದಾದರೆ ಅಂದರೆ ವ್ಯಾಕರಣಕ್ಕನುಸಾರವಾಗಿ ಕ್ರಿಯಾವಾಚಕ, ನಾಮವಾಚಕ, ಗುಣವಾಚಕ, ಸರ್ವನಾಮ, ಅವ್ಯಯ, ಪ್ರತ್ಯಯ ಮುಂತಾದ ಬೇರೆ ಬೇರೆ ಪಂಗಡಗಳಿಗೆ ಸೇರಿರುವುದಾದರೆ ಕ್ರಿಯಾವಾಚಕ (ಕ್ರಿ). ನಾಮವಾಚಕ (ನಾ). ಗುಣವಾಚಕ (ಗು). ಸರ್ವನಾಮ (ಸ). ಅವ್ಯಯ (ಅ). ಪ್ರತ್ಯಯ (ಪ್ರ). (ಸಂಖ್ಯಾವಾಚಕ, ಪರಿಮಾಣವಾಚಕ, ಪ್ರಕಾರವಾಚಕ ಇವೆಲ್ಲ ಗುಣವಾಚಕದ ಪ್ರಭೇದಗಳಾದ್ದರಿಂದ ಇವುಗಳನ್ನು ಗುಣವಾಚಕ ಸ್ಥಾನದಲ್ಲಿಯೇ ಕೊಡತಕ್ಕುದು).

ಈ ನಿಘಂಟಿನಲ್ಲಿ ಪ್ರತಿ ಉಲ್ಲೇಖಕ್ಕೂ ಸಂಬಂಧಿಸಿದಂತೆ ಕೊಡುವ ಅಂಶಗಳನ್ನು ಈ ಕೆಳಗೆ ವಿವರಿಸಿರುವಂತೆ ತೋರಿಸಲಾಗುತ್ತದೆ.

ವಾಚಕ: ಉಲ್ಲೇಖಿಸಿರುವ ಶಬ್ದ ವ್ಯಾಕರಣಕ್ಕೆ ಅನುಸಾರವಾಗಿ ಯಾವ ಪಂಗಡಕ್ಕೆ ಸೇರಿದ್ದು ಎಂಬುದನ್ನು (ಕ್ರಿ) ಕ್ರಿಯಾವಾಚಕ, (ನಾ) ನಾಮವಾಚಕ, (ಗು) ಗುಣವಾಚಕ ಮೊದಲಾದ ಸಂಕೇತಗಳಿಂದ ಸಾಧಾರಣ ಕಂಸ ( ) ಗಳೊಳಗೆ ಸೂಚಿಸಲಾಗುತ್ತದೆ.

ಅರ್ಥ: ಶಬ್ದದ ಅರ್ಥ ಸ್ಪಷ್ಟವಾಗುವಂತೆ ಬೇರೆ ಮಾತುಗಳಿಂದ ಆದಷ್ಟು ಸಂಕ್ಷೇಪವಾಗಿ ವಿವರಿಸಲಾಗುತ್ತದೆ. ಅದೇ ಅರ್ಥ ಬರುವ ಬೇರೆ ಶಬ್ದಗಳನ್ನೂ ಸಂಸ್ಕೃತದ ಪರ್ಯಾಯಶಬ್ದಗಳನ್ನೂ ಯಥೋಚಿತವಾಗಿ ಕೊಡಲಾಗುತ್ತದೆ. ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದರೆ ೧, ೨, ೩ ಮುಂತಾಗಿ ಸಂಖ್ಯೆಗಳನ್ನು ಕೊಟ್ಟು ವಿವರಿಸಿ ಅರ್ಥಭೇದಗಳನ್ನು ತೋರಿಸಲಾಗುತ್ತದೆ. ಸಾದೃಶ್ಯ ವೈದೃಶ್ಯಗಳಿರಬಹುದಾದ ಇತರ ಶಬ್ದಗಳಿಗೆ 'ಹೋ' (=ಹೋಲಿಸು), 'ಪರಾ' (= ಪರಾಮರ್ಶಿಸು) ಮೊದಲಾದ ಸಂಕೇತಗಳ ಮೂಲಕ ಗಮನ ಸೆಳೆಯಲಾಗುತ್ತದೆ.

ಪ್ರಯೋಗ: ಪ್ರತಿಯೊಂದು ಅರ್ಥಕ್ಕೂ ಸಾಧ್ಯವಾದ ಮಟ್ಟಿಗೂ ಶಾಸನ ಕಾವ್ಯಾದಿಗಳಿಂದ ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ಕೊಡಲಾಗುತ್ತದೆ. ಶಾಸನ ಪ್ರಯೋಗಗಳಿಗೆ ಅವುಗಳ ಆಕರದ ಜೊತೆಯಲ್ಲಿಯೇ ಕಾಲವನ್ನು ಸೂಚಿಸಲಾಗುತ್ತದೆ. ಉಳಿದ ಪ್ರಯೋಗಗಳಿಗೆ ಆಕರಗಳನ್ನು ಮಾತ್ರ ಸೂಚಿಸಲಾಗುತ್ತದೆ. ಅವುಗಳ ಕಾಲವನ್ನು ಸಂಕೇತಸೂಚಿಯಿಂದ ತಿಳಿದುಕೊಳ್ಳಬಹುದು.

ಸಂಸ್ಕೃತಶಬ್ದಗಳಿಗೆ ಸಾಮಾನ್ಯವಾಗಿ ಪ್ರಯೋಗಗಳನ್ನು ಕೊಡುವುದಿಲ್ಲ. ಆದರೆ ಸಂಸ್ಕೃತದಲ್ಲಿಲ್ಲದ ಅರ್ಥ ಕನ್ನಡದಲ್ಲಿ ಬೆಳೆದು ಬಂದಿದ್ದರೆ ಆ ಅರ್ಥಕ್ಕೆ ಪ್ರಯೋಗವನ್ನು ಕೊಡಲಾಗುತ್ತದೆ. ಅಲ್ಲದೆ ಶಬ್ದ ಅಪೂರ್ವವಾಗಿದ್ದರೆ, ವಿಶೇಷಾರ್ಥವುಳ್ಳದ್ದಾದರೆ, ಅರ್ಥಶಾಸ್ತ್ರ ಪರಿಭಾಷೆಯಾಗಿದ್ದರೆ ಅದರ ಅರ್ಥವನ್ನು ಖಚಿತಪಡಿಸುವುದಕ್ಕಾಗಿ ಉಚಿತವರಿತು ಪ್ರಯೋಗಗಳನ್ನು ಕೊಡಲಾಗುತ್ತದೆ.

ರೂಪನಿಷ್ಪತ್ತಿ ಮತ್ತು ಜ್ಞಾತಿಶಬ್ದಗಳು: ರೂಪನಿಷ್ಪತ್ತಿಯನ್ನೂ ಜ್ಞಾತಿಶಬ್ದಗಳನ್ನೂ ಚೌಕ ಕಂಸ [ ] ಗಳೊಳಗೆ ಸೂಚಿಸಲಾಗುತ್ತದೆ. ಉಲ್ಲೇಖಿಸಿದ ಶಬ್ದ ಯಾವ ಭಾಷೆಯದು ಎಂಬುದನ್ನು ಇಲ್ಲಿ ಸೂಚಿಸಲಾಗುತ್ತದೆ. ಸೂಚಿಸದೆ ಬಿಟ್ಟ ಶಬ್ದ ದೇಶ್ಯವೆಂದು ಭಾವಿಸತಕ್ಕುದು.

ದೇಶ್ಯ: ದೇಶ್ಯಶಬ್ದಕ್ಕೆ ಅದರ ರಚನೆ ಸ್ಪಷ್ಟವಾಗುವಂತೆ ಪ್ರಕೃತಿ ಪ್ರತ್ಯಯಗಳನ್ನು ವಿಭಜಿಸಿ ತೋರಿಸಲಾಗುತ್ತದೆ. ಉದಾ:

ಅಗಸಗಿತ್ತಿ (ಅಗಸ + - ಗಿತ್ತಿ); ನೋಂಪಿ (ನೋನ್ + - ಪಿ); ಅಣ್ಮ (ಅಣ್ + - ಕೆ).

ಸಮಾಸಗಳಲ್ಲಿ ಸೇರಿರುವ ಬೇರೆ ಬೇರೆ ಪ್ರಕೃತಿರೂಪಗಳನ್ನೂ ಕೊನೆಯಲ್ಲಿ ಸೇರುವ ಅಂತ್ಯಪ್ರತ್ಯಯಗಳನ್ನೂ ನಿರ್ದೇಶಿಸಲಾಗುತ್ತದೆ. ಇದು ವ್ಯಾಕರಣಸಮ್ಮತವಾದ ವಿಗ್ರಹವಾಕ್ಯವೆಂದು ಭಾವಿಸಲಾಗದು. ಖಚಿತವಾಗಿರುವಷ್ಟು ಭಾಗವನ್ನು ತೋರಿಸಿ ಉಳಿದದ್ದನ್ನು ಅಡ್ಡಗೆರೆ (–) ಯ ಮೂಲಕ ಸೂಚಿಸಲಾಗುತ್ತದೆ. ಲೋಪಾಗಮಾದಿ ಸಂಧಿಕಾರ್ಯಗಳನ್ನೂ ಮಧ್ಯದಲ್ಲಿ ಬರುವ ಆಗಮಗಳನ್ನೂ ತೋರಿಸುವುದಿಲ್ಲ.

ತೂಗುಸೊಡರ್ (ತೂಗು + ಸೊಡರ್); ತೂಗುಞ್ಞೊಡರ್ (ತೂಗು + ಸೊಡರ್); ಅಕ್ಕಜಜ್ಞೊಳ್ (ಅಕ್ಕಜ + ಕೊಳ್);
ಅದಿರುದುಟಿ (ಅದಿರು$_1$ + ತುಟಿ); ಮುಕ್ಕಣ್ಣ (< ಮೂ (< ಮೂಱು) + ಕಣ್ + - ಅ$_7$);
ನಾಣಲಿ (ನಾಣ್ + ಇಲ್ + - ಇ$_3$); ಬಳೆಗಾಱಿತಿ (ಬಳೆಗಾಱು + - ಇತಿ(<— ಇತ್ತಿ).

ಹೀಗೆ ತೋರಿಸಿರುವ ಶಬ್ದಗಳು ರೂಪದಲ್ಲಿ ಒಂದೇ ಆದರೂ ಬೇರೆ ಬೇರೆ ಮೂಲದವಾಗಿದ್ದು ಒಂದಕ್ಕಿಂತ ಹೆಚ್ಚು ಉಲ್ಲೇಖಗಳಾಗಿ ಪ್ರತ್ಯೇಕಸ್ಥಾನ ಪಡೆದಿದ್ದ ಸಂದರ್ಭದಲ್ಲಿ ಆಯಾ ಉಲ್ಲೇಖದ ಸಂಖ್ಯೆಯನ್ನು ಜೊತೆಯಲ್ಲೇ ಸೂಚಿಸಲಾಗುತ್ತದೆ.

ಅಚ್ಚುಕಟ್ಟು (ಅಚ್ಚು$_{2}$ + ಕಟ್ಟು$_{2}$); ಅಚ್ಚರಿವಡ (ಅಚ್ಚರಿ + ಪಡೆ$_{1}$); ಅಚ್ಚರಿಗವಿ (ಅಚ್ಚರಿ + ಕವಿ$_{1}$);
ಅಚ್ಚಮುತ್ತು (ಅಚ್ಚ$_{1}$ + ಮುತ್ತು$_{2}$); ಅಚ್ಚುಮೆಚ್ಚು (ಅಚ್ಚು$_{4}$ + ಮೆಚ್ಚು$_{2}$)

ತದ್ಭವ: ಸಂಸ್ಕೃತದಿಂದ ಅಥವಾ ಪ್ರಾಕೃತದಿಂದ ಬಂದ ಶಬ್ದಗಳನ್ನು ಮಾತ್ರ ತದ್ಭವ ಎಂದು ಪರಿಗಣಿಸಲಾಗಿದೆ. ತದ್ಭವಗಳಿಗೆ ಅವುಗಳ ಮೂಲಭಾಷೆಯನ್ನು ನಿಷ್ಪತ್ತಿಚಿಹ್ನೆ(<)ಯ ಮೂಲಕ ಸೂಚಿಸಿ ತೋರಿಸಲಾಗುತ್ತದೆ.

ಬಕುತಿ (< ಸಂ. ಭಕ್ತಿ); ಜತನ (< ಸಂ. ಯತ್ನ)

ಕನ್ನಡದಲ್ಲಿ ಬಳಕೆ ಇರುವ ಶಬ್ದರೂಪ ಮೂಲಭಾಷೆಯಿಂದ ನೇರವಾಗಿ ಬರದೆ ಬೇರೊಂದು ಭಾಷೆಯ ಮೂಲಕ ಬಂದಿರುವ ಸಂದರ್ಭದಲ್ಲಿ ನೇರಸಂಪರ್ಕವುಳ್ಳ ಭಾಷೆಯನ್ನು ನಿಷ್ಪತ್ತಿಚಿಹ್ನೆಯಿಂದ ಸೂಚಿಸಿ ಆ ಭಾಷೆಯ ಶಬ್ದರೂಪದ ಮುಂದೆ ಓರೆಯಾದ ಲಂಬಗೆರೆಯನ್ನು (/) ಕೊಟ್ಟು ಮೂಲಭಾಷೆಯನ್ನು ಸೂಚಿಸಲಾಗುತ್ತದೆ.

ಕಮ್ಮ (< ಪ್ರಾ. ಕಮ್ಮೊ /ಸಂ. ಸ್ಕಮ್ಮ); ಸಿರಿ (< ಪ್ರಾ. ಸಿರಿ./ ಸಂ. ಶ್ರೀ); ಅರಸ (< ತಮಿ. ಅರಶನ್./ ಸಂ. ರಾಜನ್)

ವೈದಿಕಭಾಷೆಯಲ್ಲಿ ಸ್ಕಮ್ಮ ಎಂಬ ಶಬ್ದ ಪ್ರಾಕೃತದಲ್ಲಿ 'ಕಮ್ಮೋ' ಎಂದು ಪ್ರಯೋಗವಾಗುತ್ತಿದ್ದು ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದು 'ಕಮ್ಮ' ಆಯಿತು. ಸಂಸ್ಕೃತದ 'ರಾಜನ್' ಶಬ್ದ ತಮಿಳಿನಲ್ಲಿ 'ಅರಶನ್' ಎಂದಾಗಿ ತಮಿಳಿನ ಮೂಲಕ ಕನ್ನಡಕ್ಕೆ ಬಂದು 'ಅರಸ' ಆಯಿತು ಎಂದು ಅಭಿಪ್ರಾಯ.

ಸಂಸ್ಕೃತ: ಸಂಸ್ಕೃತಶಬ್ದಗಳ ರಚನೆಯಲ್ಲಿ ಸೇರಿರುವ ಪ್ರಕೃತಿ ಪ್ರತ್ಯಯಗಳನ್ನು ಬಿಡಿಸಿ ತೋರಿಸುವುದಿಲ್ಲ; ಸಿದ್ಧವಾದ ಶಬ್ದರೂಪವನ್ನು ಮಾತ್ರ ಕೊಡಲಾಗುತ್ತದೆ. ನಿಷೇಧರೂಪಗಳನ್ನೂ ಉಪಸರ್ಗ ಸೇರಿದ ರೂಪಗಳನ್ನೂ ಬಿಡಿಸಿ ತೋರಿಸುವುದಿಲ್ಲ; ಕನ್ನಡದಲ್ಲಿ ಬಳಕೆಯಿರುವ ರೂಪಕ್ಕೂ ಸಂಸ್ಕೃತದ ಶಬ್ದರೂಪಕ್ಕೂ ಯಾವ ವ್ಯತ್ಯಾಸವೂ ಇಲ್ಲದ ಪಕ್ಷದಲ್ಲಿ (ಸಂ.)ಎಂದು ಸೂಚಿಸಲಾಗುತ್ತದೆ. ವ್ಯತ್ಯಾಸವಿದ್ದಲ್ಲಿ 'ಸಂ' ಎಂಬ ಸಂಕೇತದ ಜೊತೆಗೆ ಸಂಸ್ಕೃತದ ಶಬ್ದರೂಪವನ್ನೂ ತೋರಿಸಲಾಗುತ್ತದೆ.

ರೂಪಭೇದವಿಲ್ಲದ ಶಬ್ದಗಳು: ಫಲ (ಸಂ), ಗಣಿತ (ಸಂ), ಪ್ರಯತ್ನ (ಸಂ).

ಅಂತ್ಯದಲ್ಲಿ ಸ್ವಲ್ಪ ಮಾತ್ರ ವ್ಯತ್ಯಾಸವಿರುವ ಶಬ್ದಗಳು:
ಅಭಿಮಾನಿ (ಸಂ. ಅಭಿಮಾನಿನ್); ಕಾಮಿ (ಸಂ. ಕಾಮಿನ್); ಕಾಮಿನಿ (ಸಂ. ಕಾಮಿನೀ); ಗಂಗೆ (ಸಂ. ಗಂಗಾ);
ಮಾಲೆ (ಸಂ. ಮಾಲಾ).

ಹೆಚ್ಚು ವ್ಯತ್ಯಾಸವಿರುವ ಶಬ್ದಗಳು:
ವಿದ್ವಾಂಸ (ಸಂ. ವಿದ್ವಸ್); ಹನುಮಂತ (ಸಂ. ಹನುಮತ್); ಧನವಂತ (ಸಂ. ಧನವತ್)

ನಞ ಸಮಾಸರೂಪದ ಶಬ್ದಗಳು:
ಅನನ್ತ (ಸಂ.); ಅನನ್ತರ (ಸಂ.); ಅಜ್ಞಾನ (ಸಂ.)

ಉಪಸರ್ಗ ಸೇರಿದ ರೂಪಗಳು:
ದುರಭಿಮಾನ (ಸಂ.); ಸಕಾರಣ (ಸಂ.); ನಿಷ್ಕಾರಣ (ಸಂ.); ನಿರಂತರ (ಸಂ.)
ಮೇಲಿನ ಉದಾಹರಣೆಗಳಲ್ಲಿ
ಅ + ಜ್ಞಾನ, ಅನ್ + ಅನ್ತರ , ದುರ್ + ಅಭಿಮಾನ, ನಿಸ್ + ಕಾರಣ ಮುಂತಾಗಿ ಬಿಡಿಸಿ ತೋರಿಸುವುದಿಲ್ಲ.

ಸಂಸ್ಕೃತಸಮಾಸಗಳಲ್ಲಿ ಸೇರಿರುವ ಬೇರೆ ಬೇರೆ ಶಬ್ದರೂಪಗಳನ್ನು ಬಿಡಿಸಿ ತೋರಿಸಲಾಗುತ್ತದೆ. ಆದರೆ ರೂಪಸಿದ್ಧಿಗೆ ಸಹಾಯಕವಾದ ಪ್ರತ್ಯಯವೇ ಮೊದಲಾದ ಇತರ ಅಂಶಗಳನ್ನು ನಿರ್ದೇಶಿಸುವುದಿಲ್ಲ. ಅಂಥ ಕಡೆ ಯಾವುದೊ ಅಂಶವನ್ನು ಹೇಳದೆ ಬಿಟ್ಟಿದೆಯೆಂದು ಸೂಚಿಸುವುದಕ್ಕಾಗಿ ಅಡ್ಡಗೆರೆ (−)ಯನ್ನು ಬಳಸಲಾಗುತ್ತದೆ.

ಪಶುಪತಿ (ಸಂ. ಪಶು + ಪತಿ); ಕಂಜಾಕ್ಷ(ಸಂ. ಕಂಜ + ಅಕ್ಷಿನ್ + -); ಪದ್ಮನಾಭ (ಸಂ. ಪದ್ಮ + ನಾಭ + -)

ಪಶು, ಪತಿ ಎಂಬ ಎರಡು ಸಂಸ್ಕೃತಶಬ್ದಗಳು ಸೇರಿ 'ಪಶುಪತಿ' ಎಂಬ ಸಮಸ್ತಶಬ್ದವಾಗಿದೆಯೆಂದು ಮೊದಲನೆಯ ನಿಷ್ಪತ್ತಿ ಸೂಚಿಸುತ್ತದೆ. ಎರಡು ಮೂರನೆಯ ಉದಾಹರಣೆಗಳಲ್ಲಿ ಕಂಜ, ಅಕ್ಷಿ ಎಂಬ ಮತ್ತು ಪದ್ಮ, ನಾಭಿ ಎಂಬ ಶಬ್ದಗಳು ಕೂಡಿದಾಗ ಬೇರೆ ಯಾವುದೋ ಪ್ರತ್ಯಯ ಸೇರಿದೆ; 'ಕಂಜದಂತೆ ಅಕ್ಷಿಯುಳ್ಳವನು ಯಾವನೋ ಅವನು' 'ಪದ್ಮದಂತೆ ನಾಭಿಯುಳ್ಳವನು ಯಾವನೋ ಅವನು' ಎಂಬ ಅರ್ಥ ಕೊಡುವಂತೆ ಸೇರಿರುವ ಆ ಪ್ರತ್ಯಯವನ್ನು ಇಲ್ಲಿ ಕೊಡದೆ ಬಿಟ್ಟಿದೆ ಎಂದು ಈ ಅಡ್ಡಗೀಟು (−) ಸೂಚಿಸುತ್ತದೆ. ಉಪಪದ

ಸಮಾಸಗಳಲ್ಲಿ ಪೂರ್ವಪದದ ಪ್ರಕೃತಿರೂಪವನ್ನೂ ಉತ್ತರಪದದ ಧಾತುರೂಪವನ್ನೂ ತೋರಿಸಿ ಶಬ್ದಸಿದ್ಧಿಯಲ್ಲಿ ಆಗಿರಬಹುದಾದ ವ್ಯತ್ಯಾಸಗಳನ್ನು ಸೂಚಿಸಲು ಅಡ್ಡಗೆರೆಯನ್ನು (–) ಬಳಸಲಾಗುತ್ತದೆ. ಉದಾ: ಚಕ್ರಧರ (ಸಂ. ಚಕ್ರ + $\sqrt{ಧೃ}$ + -); ಕುಮ್ಭಕಾರ (ಸಂ. ಕುಮ್ಭ + $\sqrt{ಕೃ}$ + -); ಕ್ಷೇಮಕಾರಿ (ಸಂ. ಕ್ಷೇಮ + $\sqrt{ಕೃ}$ + -); ಸಾಮಗ (ಸಂ. ಸಾಮ + $\sqrt{ಗೈ}$ + -) ನಿತ್ಯಸಮಾಸಗಳನ್ನು ಬಿಡಿಸಿ ತೋರಿಸುವುದಿಲ್ಲ. ದಮ್ಪತಿ (ಸಂ. ದಮ್ಪತೀ).

ಅನ್ಯದೇಶ್ಯ: ದೇಶ್ಯ, ತದ್ಭವ ಮತ್ತು ಸಂಸ್ಕೃತಗಳು ಹೊರತಾಗಿ ಬೇರೆ ಭಾಷೆಗಳ ಶಬ್ದಗಳನ್ನು ಅನ್ಯದೇಶ್ಯಗಳೆಂದು ಇಲ್ಲಿ ವ್ಯವಹರಿಸಲಾಗುತ್ತದೆ. ಶಬ್ದ ಯಾವ ಭಾಷೆಯದೆಂದು ಗೊತ್ತಿರುವಾಗ ಆ ಭಾಷೆಯ ಹೆಸರನ್ನು ಸೂಚಿಸಲಾಗುತ್ತದೆ. ಮೂಲಭಾಷೆ ಗೊತ್ತಿಲ್ಲದಾಗ 'ಅನ್ಯದೇ' ಎಂದು ಸೂಚಿಸಲಾಗುತ್ತದೆ. ಕನ್ನಡವಲ್ಲದ ಈ ಅನ್ಯದೇಶ್ಯಶಬ್ದಗಳಿಗೂ ಆಯಾ ಶಬ್ದಕ್ಕೆ ಸಂಬಂಧಪಟ್ಟಂತೆ ಮುಖ್ಯವಾದ ಕೆಲವು ಭಾಷೆಗಳಿಂದ ಮಾತ್ರ ಜ್ಞಾತಿ ಅಥವಾ ಸಂವಾದಿ (Equivalent) ಶಬ್ದಗಳನ್ನು ಕೊಡಲಾಗುತ್ತದೆ. ಹೀಗೆ ಕೊಡುವಾಗ ಕನ್ನಡಕ್ಕೆ ನೇರಸಂಪರ್ಕವಿರಬಹುದೆಂದು ತೋರುವುದನ್ನು ಮೊದಲೂ ಉಳಿದವನ್ನು ಆಮೇಲೂ ನಿರ್ದೇಶಿಸಲಾಗುತ್ತದೆ.

ಅಕಟಾಯಿಸು (<– ಮರಾ. ಅವಿಡಣೇ; ಹಿಂ. ಅಕಡ್‌ನಾ); ಅಕಲು, ಅಕ್ಕಲು, ಅವಿಲು (<– ಆರಬ್ಬಿ. ಅಕ್ಕಲ್, ತುರ್ಕಿ. ಅಕಿಲ್, ಅಕ್ಲಿ; ನೇಪಾ. ಅಕ್ಕಲ್, ಅಕಿಲ್, ಅಕಲ್; ಮರಾ. ಅಕ್ಕಲ; ಹಿಂ. ಅಕ್ಲ್) ಕೋರ್ಟು (<– ಇಂ. Court); ರಸ್ತೆ (<– ಹಿಂ. ರಸ್ತಾ, ರಾಸ್ತಾ (ಪಾರಸಿ); ಕಚೇರಿ (ಹಿಂ. ಕಚಹರೀ)

ಜ್ಞಾತಿಶಬ್ದಗಳು: ದೇಶ್ಯಶಬ್ದಗಳಿಗೆ ಇತರ ಸೋದರಭಾಷೆಗಳಲ್ಲಿ ದೊರೆಯುವ ಜ್ಞಾತಿಶಬ್ದಗಳನ್ನು ತೋರಿಸಲಾಗುತ್ತದೆ. ಅರ್ಥಭೇದವಿದ್ದಲ್ಲಿ ಮಾತ್ರ ಅರ್ಥವನ್ನು ಬರೆದು ತೋರಿಸಲಾಗುತ್ತದೆ.

ಜ್ಞಾತಿಶಬ್ದಗಳನ್ನು ಈ ಅನುಕ್ರಮದಲ್ಲಿ ಕೊಡಲಾಗುತ್ತದೆ: ತಮಿ (ತಮಿಳು), ಮಲ (ಮಲೆಯಾಳ), ಕೊಡ (ಕೊಡಗು), ತುಳು (ತುಳು), ತೆಲು (ತೆಲುಗು), ಕೋಲಾ (ಕೋಲಾಮಿ), ನಾಯ್ಕಿ, ಪರ್ಜಿ, ಗಡಬ, ಗೊಂಡಿ, ಕುಇ, ಕುವಿ, ಕುರುಖ್, ಮಲ್ತೊ, ಬ್ರಾಹುಇ.

ಮೊದಲು ನಿಷ್ಪತ್ತಿಯನ್ನೂ ಆಮೇಲೆ ಜ್ಞಾತಿ ಮತ್ತು ಸಂವಾದಿ ಶಬ್ದಗಳನ್ನೂ ಕೊಡಲಾಗುತ್ತದೆ. ಜ್ಞಾತಿಶಬ್ದಗಳನ್ನು ಪ್ರಾರಂಭಿಸುವ ಮೊದಲು ಎರಡು ಲಂಬರೇಖೆಗಳಿಂದ (‖) ಭೇದವನ್ನು ಸೂಚಿಸಲಾಗುತ್ತದೆ.

ಅಚ್ಚುಗಟ್ಟು (ಅಚ್ಚು + ಕಟ್ಟು ‖ ತಮಿ. ಅಚ್ಚುಕಟ್ಟು; ತುಳು. ಅಚ್ಚಕಟ್ = ಅನುಕೂಲ)
ಅಡಿಗಲ್ಲು (ಅಡಿ + ಕಲ್ಲು (< ಕಲ್) ‖ ತಮಿ. ಅಡ್ಡಿಕ್ಕಲ್; ಮಲ. ಅಡಕ್ಕಲ್ಲು;
ಕೋತ. ಅಲ್ಗಿಲ್; ತುಳು. ಅಟ್ಟೆ = ಆಧಾರ; ತೆಲು. ಡಾಕಲಿ, ಡಾಕಲ್ಲು, ಡಾಗಲಿ, ಡಾಯಿ.

ನಿಷ್ಪತ್ತಿಯನ್ನು ಕೊಡದ ಜ್ಞಾತಿಶಬ್ದಗಳನ್ನು ಮಾತ್ರ ಕೊಡುವಲ್ಲಿಯೂ ಲಂಬರೇಖೆಗಳಿಂದಲೇ ಪ್ರಾರಂಭಿಸಲಾಗುತ್ತದೆ :

ಅಜಮಾಯಿಷಿ (‖ ಮರಾ. ಅಜಮಾಸ, ಅಜ್ಮಾಸ್; ಗುಜ. ಅಜಮಾಯಿಷ; ಹಿಂ. ಆಜ್‌ಮಾಈಸ್, ಪಾರ. ಆಝ್ಮಾಯಿಷ್)
ಅಡಪ, ಅಡಪ, ಹಡಪ (‖ ತಮಿ. ಅಡ್ಡಪ್ಪ (< ಅಡ್ಡೆ = ವೀಳೆಯದೆಲೆ + ಪ್ಪೆ = ಚೀಲ) ಮಲ. ಅಡಪ್ಪಮ್ ; ತೆಲು. ಅಡಪಮು, ಹಡಪಮು: ತುಳು. ಅಡಪ, ಹಡಪ).

ಪ್ರತಿಯೊಂದು ಕ್ರಿಯಾವಾಚಕದ ಕೆಳಗೂ ಅದರ ಭೂತನ್ಯೂನರೂಪ ವಿಶಿಷ್ಟರೀತಿಯದಾಗಿದ್ದಲ್ಲಿ ಅದನ್ನು ತೋರಿಸಲಾಗುತ್ತದೆ. ಉಲ್ಲೇಖಿಸಿದ ಶಬ್ದ ಯಾವ ಜಾತಿಯದೆಂದು ಸೂಚಿಸಿದ ಬಳಿಕ ಅರ್ಥವನ್ನು ಪ್ರಾರಂಭಿಸುವುದಕ್ಕೆ ಮೊದಲು ಈ ನ್ಯೂನರೂಪಗಳನ್ನು ತೋರಿಸಿ ಕೊನೆಯಲ್ಲಿ ಪೂರ್ಣವಿರಾಮವನ್ನು ಬಳಸಲಾಗುತ್ತದೆ.

ಅಡು (ಕ್ರಿ). ಅಟ್ಟು, ಬರ್ (ಕ್ರಿ) ಬಂದು, ಇಡು (ಕ್ರಿ). ಇಟ್ಟು, ಸಲ್ (ಕ್ರಿ). ಸಂದು,
ಉಗು (ಕ್ರಿ). ಒಕ್ಕು, ನಿಲ್ (ಕ್ರಿ). ನಿಲ್ದು, ನಿಂತು, ನಿಂದು, ಮಿಗು (ಕ್ರಿ). ಮಿಕ್ಕು,
ಕೊಲ್ (ಕ್ರಿ). ಕೊಂದು, ಸಾ (ಕ್ರಿ). ಸತ್ತು , ಗಿಜು (ಕ್ರಿ). ಗೆತ್ತು, ನೋ (ಕ್ರಿ). ನೊಂದು,
ತಜು (ಕ್ರಿ). ತತ್ತು, ಓ (ಕ್ರಿ). ಓತು, ಮಾಡು (ಕ್ರಿ). ಮಾಡಿ, ಮಾಡಿದು, ತರ್ (ಕ್ರಿ). ತಂದು,
ಕೇಳ್ (ಕ್ರಿ). ಕೇಳ್ದು, ಕೇಳಿದು, ಕೇಳಿ, ಕದಿ (ಕ್ರಿ). ಕದಿದು, ಕದ್ದು, ಗೆಲ್ (ಕ್ರಿ) ಗೆಲ್ದು, ಗೆಲಿದು, ಗೆದ್ದು.
ಗದಿ (ಕ್ರಿ) ಗೆದಿದು, ಗೆದ್ದು.

ಅಂತ್ಯಸ್ವರ 'ಇ' ಕಾರವಾಗಿ ಮಾತ್ರ ಮಾರ್ಪಟ್ಟು, ಅಥವಾ ಅಂತ್ಯದಲ್ಲಿ 'ದು' ಸೇರಿ ಆಗುವ ಸಾಧಾರಣ ಭೂತನ್ಯೂನ ರೂಪವನ್ನು ತೋರಿಸುವುದಿಲ್ಲ. ಉದಾ:

ಹೋಗು (ಕ್ರಿ), ಆಡು (ಕ್ರಿ), ಬಯಸು (ಕ್ರಿ), ಹರಸು (ಕ್ರಿ), ಹಾರು (ಕ್ರಿ), ಸೋರು (ಕ್ರಿ), ಕಡಿ (ಕ್ರಿ), ಹಿಡಿ (ಕ್ರಿ), ನಡೆ (ಕ್ರಿ), ಕಡೆ (ಕ್ರಿ), ಎಸೆ (ಕ್ರಿ) ಮಸೆ (ಕ್ರಿ) — ಈ ಕ್ರಿಯಾವಾಚಕಗಳ ಭೂತನ್ಯೂನರೂಪಗಳನ್ನು — ಹೋಗಿ, ಆಡಿ, ಬಯಸಿ, ಹರಸಿ, ಹಾರಿ, ಸೋರಿ, ಕಡಿದು, ಹಿಡಿದು, ನಡೆದು, ಕಡೆದು, ಎಸೆದು, ಮಸೆದು — ಎಂದು ತೋರಿಸುವುದಿಲ್ಲ. ಆದರೆ, ಸಾಧಾರಣರೂಪದ ಜೊತೆಗ ವಿಶೇಷರೂಪವೂ ಇದ್ದರೆ ಎರಡನ್ನೂ ತೋರಿಸಲಾಗುತ್ತದೆ.

ಮಾಡು (ಕ್ರಿ) ಮಾಡಿದು, ಮಾಡಿ, ಕೇಳು (ಕ್ರಿ) ಕೇಳಿದು, ಕೇಳಿ, ಕೆಯ್ಕೊಳ್ (ಕ್ರಿ) ಕೆಯ್ಕೊಂಡು,
ದಯಗೆಯ್ (ಕ್ರಿ) ದಯಗೆಯ್ದು, ದಯಮಾಡು (ಕ್ರಿ) ದಯಮಾಡಿ, ಬಟಿಸಲ್ (ಕ್ರಿ) ಬಟಿಸಂದು,
ಎಯ್ತರ್ (ಕ್ರಿ) ಎಯ್ತಂದು, ಬೀಲ್ಕೊಳ್ (ಕ್ರಿ) ಬೀಲ್ಕೊಂಡು (ಈ ನ್ಯೂನರೂಪಗಳನ್ನು ತೋರಿಸುವುದಿಲ್ಲ).

ನಾಮವಾಚಕಗಳಲ್ಲಿಯೂ ವಿಶೇಷರೂಪಗಳು ಕಂಡುಬಂದಲ್ಲಿ ಅವನ್ನೂ ತೋರಿಸಲಾಗಿದೆ. ಅಕ್ಕ, ಅಕ, ಅಕ್ಕಳ್ (ನಾ). ಬಹುವ. ಅಕ್ಕಂಗಳ್, ಅಕ್ಕಗಳು, ಅಕ್ಕಂದಿರು, ಅಕ್ಕದಿರು.

ಮಗ (ನಾ). ಬಹುವ. ಮಕ್ಕಳ್, ಮಗಂದಿರ್.

ಮಗಳ್, ಮಗಳು (ನಾ). ಬಹುವ. ಮಗಳ್ದಿರ್.

ಕನ್ನಡಸಾಹಿತ್ಯದಲ್ಲಿ ಅಡಕವಾದ ನಾನಾ ಧಾರ್ಮಿಕ ಕಾವ್ಯ ಶಾಸ್ತ್ರಗ್ರಂಥಗಳಿಂದ ವಿಪುಲವಾಗಿ ಶಬ್ದಸಂಗ್ರಹ ಮಾಡಲಾಗಿದೆ. ಹೀಗ ಸಂಗ್ರಹಿಸಿರುವ ಕನ್ನಡ ಸಂಸ್ಕೃತ ಶಬ್ದರಾಶಿಯಲ್ಲಿ ಬಹುಪಾಲಿನ ಪಾರಿಭಾಷಿಕ ಶಬ್ದಗಳು ಸೇರಿಹೋಗಿವೆಯೆಂದು ನಂಬಬಹುದು. ಆದರೂ ಆಗ ಪಾರಿಭಾಷಿಕ ಶಬ್ದಸಂಗ್ರಹವೊಂದನ್ನೇ ಗುರಿಯಾಗಿಟ್ಟುಕೊಂಡಿರಲಿಲ್ಲವಾದ್ದರಿಂದ ಕೆಲವು ಶಬ್ದಗಳು ಬಿಟ್ಟು ಹೋಗಿರುವುದು ಸಾಧ್ಯ. ಆದ್ದರಿಂದ ಈಗ ಮತ್ತೊಮ್ಮೆ ಪಾರಿಭಾಷಿಕಶಬ್ದಗಳನ್ನು ಸಂಗ್ರಹಿಸುವುದು ಅಗತ್ಯವೆಂದು ಭಾವಿಸಿ ಈ ಕೆಳಗೆ ತೋರಿಸುವ ಗ್ರಂಥಗಳಿಂದ ಶಬ್ದಸಂಗ್ರಹ ಮಾಡಬೇಕೆಂದು ತೀರ್ಮಾನಿಸಲಾಯಿತು. -

1) ಜೈನ: (ಅ) ಜೈನಧರ್ಮಪರಿಭಾಷೆ (ಪೂಜಾರರು) (ಆ)ಗೊಮ್ಮಟಸಾರ (ಕೇಶವವರ್ಣಿ) (ಇ) ವಡ್ಡಾರಾಧನೆ.

2) ವೀರಶೈವ: (ಅ) ಚೆನ್ನಬಸವಣ್ಣನವರ ವಚನ (ಆ) ಪ್ರಭುದೇವರ ವಚನ (ಇ) ಶಿವಾನುಭವ ಶಬ್ದಕೋಶ (ಈ) ಸಿದ್ಧಾಂತ ಶಿಖಾಮಣಿ

3) ಎಲ್ಲಾ ಭಾರತೀಯ ದರ್ಶನಗಳಿಗೂ:

(ಅ) ಹಿಂದೂದರ್ಶನಸಾರ (ಪೂರ್ತಿ) (ಆ) ಪಾತಂಜಲಯೋಗಸೂತ್ರ

ದ್ವೈತ: ಪುರಂದರದಾಸರ ಸುಳಾದಿಗಳು. ವಿಶಿಷ್ಟಾದ್ವೈತ: (ಅ) ವೇದಾರ್ಥಸಂಗ್ರಹ (ಆ) ಅರ್ಥಪಂಚಕ

4. ಇಸ್ಲಾಂ: ಇಸ್ಲಾಂಧರ್ಮ (ಮೈಸೂರು ವಿಶ್ವವಿದ್ಯಾನಿಲಯ)

5. ಕ್ರೈಸ್ತ: ಕನ್ನಡ ಬೈಬಲ್ (ಬೈಬಲ್ ಸೊಸೈಟಿ)

6. ಇತರ ಶಾಸ್ತ್ರೀಯ ಪಾರಿಭಾಷಿಕಶಬ್ದಗಳಿಗಾಗಿ ಈ ಕೆಳಗಿನ ಗ್ರಂಥಗಳಿಂದ ಶಬ್ದಸಂಗ್ರಹ ಮಾಡತಕ್ಕುದು.

೧. ಛಂದಸ್ಸು (ಅ) ಛಂದೋಂಬುಧಿ (ಎಂ. ಎ. ರಾಮಾನುಜಅಯ್ಯಂಗಾರ್)

(ಆ) ಕವಿಜಿಹ್ವಾಬಂಧನ (ಇ) ಕನ್ನಡ ಛಂದೋವಿಕಾಸ (ಈ) ಛಂದಸ್ಸಾರ

(ಉ) ಸಮಾಲೋಕನದ ಛಂದಸ್ಸಿನ ಲೇಖನಗಳು

೨. ವ್ಯಾಕರಣ: (ಅ) ಶಬ್ದಮಣಿದರ್ಪಣ (ಆ) ಶಬ್ದಾದರ್ಶ (ಇ) ಕನ್ನಡ ಮಧ್ಯಮ ವ್ಯಾಕರಣ

(ಈ) ಹೊಸಗನ್ನಡ ನುಡಿಗನ್ನಡಿ (ಉ) ನುಡಿಗಟ್ಟು (ಊ) ಕನ್ನಡ ಚೆನ್ನುಡಿ (ಬಸವನಾಳ)

೩. ಅಲಂಕಾರ: (ಅ) ಕವಿರಾಜಮಾರ್ಗ (ಆ) ಕಾವ್ಯಾವಲೋಕನ (ಇ) ರಸರತ್ನಾಕರ

(ಈ) ದಶರೂಪಕ (ಕೆ.ವಿ. ಸುಬ್ಬಣ್ಣ)

(ಉ) ಧ್ವನ್ಯಾಲೋಕ (ಡಾ.ಕೆ. ಕೃಷ್ಣಮೂರ್ತಿ) (ಊ) ಭಾರತೀಯ ಕಾವ್ಯಮೀಮಾಂಸೆ (ತೀನಂಶ್ರೀ)

(ಋ) ಕನ್ನಡ ಕೈಪಿಡಿ (ಛಂದಸ್ಸು, ವ್ಯಾಕರಣ, ಅಲಂಕಾರ ಮೂರಕ್ಕೂ)

೪. ವಿಮರ್ಶೆ: (ಅ) ನವ್ಯತೆ ಹಾಗೂ ಕಾವ್ಯಜೀವನ (ಗೋಕಾಕ್) (ಆ) ಕವಿಕಾವ್ಯಮಹೋನ್ನತಿ

(ಇ) ವಿಭೂತಿಪೂಜೆ (ಕುವೆಂಪು) (ಈ) ಅರಿಸ್ಟಾಟಲನ ಕಾವ್ಯಮೀಮಾಂಸೆ

(ಉ) ಶೈಲಿ (ಎಸ್.ವಿ. ರಂಗಣ್ಣ)

(ಊ) ವಿಮರ್ಶೆಯ ಪೂರ್ವ ಪಶ್ಚಿಮ(ಜಿ. ಎಸ್. ಶಿವರುದ್ರಪ್ಪ)

(ಋ) ಅಂತಿಗೊನೆ ಪೀಠಿಕೆ (ಕ. ವೆಂ. ರಾಘವಾಚಾರ್) ಮತ್ತು ಮುಖ್ಯವಾದ ಇತರ ಗ್ರಂಥಗಳು.

ಕರಿ, ಕರಿದು, ಕರಿಯ, ಕರ್, ಕಾರ್, ಕರು; ಬಿಳಿ, ಬಿಳಿದು, ಬಿಳಿಯ, ಬೆಳ್, ಬೆಳು; ಬಿಸಿ, ಬಿಸಿದು, ಬಿಸಿಯ, ಬಿಸು, ಬೆಂ ಮುಂತಾದ ಗುಣವಾಚಕರೂಪಗಳಲ್ಲಿ ವ್ಯಾಕರಣಕಾರರು ಮೂಲರೂಪವೆಂದು ಅಂಗೀಕರಿಸಿರುವ ಕರಿದು, ಬಿಳಿದು, ಬಿಸಿದು ಮುಂತಾದ ರೂಪಗಳನ್ನು ಪ್ರಧಾನಉಲ್ಲೇಖಗಳಾಗಿ ಕೊಟ್ಟು ಅವುಗಳ ಕೆಳಗೆ ಉಳಿದೆಲ್ಲ ರೂಪಗಳನ್ನೂ ತೋರಿಸತಕ್ಕುದು. ಕರಿ, ಬಿಳಿ ಮುಂತಾದ ರೂಪಗಳನ್ನು ಪ್ರತ್ಯೇಕ ಉಲ್ಲೇಖಗಳಾಗಿ ಕೊಟ್ಟು, ಅರ್ಥೋದಾಹರಣಗಳಿಗೆ 'ಕರಿದು' ನೋ. , 'ಬಿಳಿದು' ನೋ. ಎಂದು ಮುಂತಾಗಿ ಸೂಚಿಸತಕ್ಕುದು.

ಪ್ರಾಚೀನಗ್ರಂಥದ ಪ್ರತಿಗಳಲ್ಲಿ ಆಯಾ ಲೇಖಕರ ಮನೋಭಾವಕ್ಕನುಸಾರವಾಗಿ ಬೇರೆ ಬೇರೆ ರೂಪಗಳು ಕಂಡುಬರುವುದಾದರೆ ವ್ಯಾಕರಣ ಮತ್ತು ಭಾಷೆಯ ಜಾಯಮಾನಕ್ಕೆ ಅನುಸಾರವಾಗಿ ಯಾವುದು ಶುದ್ಧವೆಂದು ತೋರುತ್ತದೆಯೋ ಆ ರೂಪವನ್ನು ಪ್ರಧಾನವೆಂದು ಅಂಗೀಕರಿಸತಕ್ಕುದು. ಉದಾ: ಕೆಯ್, ಕಯ್, ಕೈ; ಮೆಯ್, ಮಯ್, ಮೈ; ಕೆಯ್ಯಾರ, ಕಯ್ಯಾರ, ಕೈವಾರ; ಮೆಯ್ಯಳಿ, ಮಯ್ಯಳಿ, ಮೈಯಳಿ; ಬಯ್, ಬೈ ಮುಂತಾದ ರೂಪಭೇದಗಳಲ್ಲಿ 'ಕೆಯ್', 'ಮೆಯ್', 'ಬಯ್' ಮುಂತಾದ ಅತ್ಯಂತ ಪ್ರಾಚೀನವಾದ ರೂಪದ ಕೆಳಗೆ ಉಳಿದ ರೂಪಗಳನ್ನು ಹೊಂದಿಸಿಕೊಟ್ಟು, ವರ್ಣಾನುಕ್ರಮದಲ್ಲಿ ಆಯಾ ಸ್ಥಾನದಲ್ಲಿ ತೋರಿಸುವ ಶಬ್ದರೂಪಗಳನ್ನು ಮುಖ್ಯರೂಪಕ್ಕೆ 'ನೋ' ಎಂದು ನಿರ್ದೇಶಿಸತಕ್ಕುದು.

ಕೀಳ್, ಕೀಳು (ಕ್ರಿ). ಕಿತ್ತ, ಕಿತ್ತು; ಕಿತ್ತು (ಕ್ರಿ). ಕಿತ್ತಿ, ಕಿತ್ತಿದ; ಗೆಲ್, ಗಲ್ಲು (ಕ್ರಿ). ಗೆಲ್ದು, ಗೆದ್ದ, ಗೆದ್ದು; ಗೆದಿ (ಕ್ರಿ). ಗೆದಿಯುತ್ತಾನೆ; ಕಳ್ (ಕ್ರಿ). ಕಳ್ದು, ಕದ್ದ, ಕದ್ದು; ಕದಿ (ಕ್ರಿ). ಕದ್ದ, ಕದಿಯುತ್ತಾನೆ.

ಮೇಲೆ ಸೂಚಿಸಿರುವಂತೆ ಕಿತ್ತು, ಕದಿ, ಗೆದಿ ಮೊದಲಾದ ಕೆಲವು ಕ್ರಿಯಾರೂಪಗಳು ಸ್ವತಂತ್ರಧಾತುಗಳಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ಗ್ರಾಂಥಿಕವೆಂದು ಪರಿಗಣಿಸಬಹುದಾದ ರೂಪಗಳನ್ನು ಅಂಗೀಕರಿಸಿ ಪ್ರತ್ಯೇಕ ಉಲ್ಲೇಖಗಳಾಗಿ ಕೊಡತಕ್ಕುದು.

ಮಱಸು, ಮಱೆಸು, ಮಱೆಯಿಸು; ಕೊಱಸು, ಕೊಱೆಯಿಸು ಮುಂತಾದ ರೂಪಗಳಲ್ಲಿ 'ಮಱಸು', 'ಕೊಱಸು' ಮುಂತಾದ ರೂಪಗಳನ್ನು ಪ್ರಧಾನವೆಂದು ಗಣಿಸಿ ಉಳಿದುವನ್ನು ಅವುಗಳೇ ಕೆಳಗೆ ಕೊಡತಕ್ಕುದು.

ಅನ್ತಃ ಶುದ್ಧಿ, ಅನ್ತಶ್ಶುದ್ಧಿ; ನಿಃಕಲ, ನಿಷ್ಕಲ; ಅನ್ತಃಸತ್ವ, ಅನ್ತಸ್ಸತ್ವ; ನಿಃಕಲಂಕ, ನಿಷ್ಕಲಂಕ; ಅನ್ತಃಸಾರ, ಅನ್ತಸ್ಸಾರ; ದುಃಶೀಲ, ದುಶ್ಶೀಲ; ದುಃಸಂಗ, ದುಸ್ಸಂಗ; ದುಃಸಹ, ದುಸ್ಸಹ- ಈ ರೀತಿಯ ದ್ವಿವಿಧ ರೂಪಗಳನ್ನು ಮೇಲಿನ ಶಬ್ದಗಳಲ್ಲಿರುವಂತೆ ವಿಸರ್ಗದ ಮುಂದೆ 'ಶಷಸ' ಕಾರಗಳು ಬಂದಾಗ ವಿಸರ್ಗವಿದ್ದರೂ ವಿಸರ್ಗವಿಲ್ಲದೆ ದ್ವಿತ್ವವಾದರೂ ಉಚ್ಚಾರದಲ್ಲಿ ಯಾವ ಭೇದವೂ ಕಾಣಿಸುವುದಿಲ್ಲವಾದ್ದರಿಂದ ಅವನ್ನು ಒಂದುಗೂಡಿಸಬಹುದು. 'ಶಷಸ' ಕಾರ ದ್ವಿತ್ವವುಳ್ಳ ರೂಪಗಳನ್ನು ಪ್ರಧಾನ ಉಲ್ಲೇಖಗಳಾಗಿ ತೋರಿಸತಕ್ಕುದು. ವಿಸರ್ಗಸಮೇತವಾದ ರೂಪಗಳನ್ನು ವರ್ಣಾನುಕ್ರಮದಲ್ಲಿ ತೋರಿಸಿ ಪ್ರಧಾನ ಉಲ್ಲೇಖಕ್ಕೆ 'ನೋ' ಎಂದು ನಿರ್ದೇಶಿಸತಕ್ಕುದು. 'ಶಷಸ' ಕಾರಗಳಿಲ್ಲದ ಬೇರೆ ವರ್ಣ ಪರವಾದಾಗ ಉಚ್ಚಾರಭೇದವಿರುವುದರಿಂದ ಆ ರೂಪಗಳನ್ನು ಬೇರೆ ಬೇರೆ ಉಲ್ಲೇಖಗಳಾಗಿಯೇ ತೋರಿಸತಕ್ಕುದು.

ಬಿಱುಗಾಳಿ, ಕಮ್ಮಣ್ಣು, ಬೆನ್ನೀರು - ಮುಂತಾದ ಶಬ್ದಗಳನ್ನು ಬಿಡಿಸಿ ತೋರಿಸುವ ಕ್ರಮ: ಬೆಟ್ಟಿತು + ಗಾಳಿ, ಕೆಚ್ಚನೆ + ಮಣ್ಣು,

ಬೆಚ್ಚನೆ+ ನೀರು; ಬಿರುಸು + ಗಾಳಿ, ಕಿಸು + ಮಣ್ಣು, ಬಿಸಿ + ನೀರು, ಬಿಜು + ಗಾಳಿ, ಕೆಂ + ಮಣ್ಣು, ಬೆಂ + ನೀರು - ಇವುಗಳಲ್ಲಿ ಯಾವುದು ಸರಿ?

ಬಿರುಸು + ಗಾಳಿ ಎಂದು ಬಿಡಿಸುವುದು ಸರಿಯಲ್ಲ. ಇಂಥ ಕಡೆ ಸ್ಪಷ್ಟವಾಗಿ ಕಾಣಿಸುವ ಶಬ್ದರೂಪಗಳನ್ನು ಬಿಡಿಸಿ ತೋರಿಸುವುದರ ಜೊತೆಗೆ ವ್ಯಾಕರಣದ ವಿವರಣೆಯಂತೆ ಅವುಗಳ ಮೂಲವನ್ನು ಸಾಧಾರಣ ಕಂಸಗಳೊಳಗೆ ಸೂಚಿಸತಕ್ಕುದು. ಉದಾ: ಬಿಜುಗಾಳಿ: ಬಿಜು (< ಬೆಟ್ಟಿತು) + ಗಾಳಿ; ಕೆಮ್ಮಣ್ಣು : ಕೆಮ್ (< ಕೆಮ್ಮನೆ)+ ಮಣ್ಣು; ಬೆನ್ನೀರು : ಬೆಮ್ (< ಬೆಚ್ಚನೆ) + ನೀರು.

ಅವನ್, ಅವಂ, ಅವನು; ಅವಳ್, ಅವಳು; ಇವನ್, ಇವಂ, ಇವನು; ಇವಳ್, ಇವಳು ಇವನ್ನು ತೋರಿಸುವುದು ಹೇಗೆ? ಯಾವುದನ್ನು ಮೂಲರೂಪವಾಗಿ ಭಾವಿಸಬೇಕು?

ಸರ್ವನಾಮಗಳೆಲ್ಲವನ್ನೂ ಕೊಡತಕ್ಕುದು. ಹಳಗನ್ನಡ ರೂಪಗಳನ್ನು ಮೂಲರೂಪಗಳಾಗಿಟ್ಟುಕೊಂಡು ಉಳಿದುವನ್ನು ಅ ಳ ಕೆಳಗೆ ಜೋಡಿಸಿ ಕೊಡತಕ್ಕುದು. ವರ್ಣಾನುಕ್ರಮದಲ್ಲಿ ಬರಬೇಕಾದ ಕಡೆ ಆಯಾ ಶಬ್ದವನ್ನು ಕೊಟ್ಟು, ಅರ್ಥೋದಾಹರಣಗಳಿಗೆ ಮೂಲಶಬ್ದವನ್ನು ' ನೋ' ಎಂದು ಸೂಚಿಸತಕ್ಕುದು. ಉದಾ: **ಅವಂ, ಅವನ್, ಅವನು (ಸ) ಅವಳ್, ಅವಳು (ಸ) ಇವಂ, ಇವನ್, ಇವನು (ಸ) ಇವಳ್, ಇವಳು (ಸ) ಅವನ್** 'ಅವಂ' ನೋ, **ಇವನ್** 'ಇವಂ' ನೋ, **ಅವನು** 'ಅವಂ' ನೋ, **ಇವಳು** 'ಇವಳ್' ನೋ.

ತದ್ಭವ, ಸಂಸ್ಕೃತಶಬ್ದಗಳಲ್ಲಿ ಅರ್ಥವಿವರಣೆಯಲ್ಲಿ ಮತ್ತೆ ಮತ್ತೆ ಬರೆದದ್ದನ್ನೆ ಬರೆಯುವ ಅಗತ್ಯವನ್ನು ತಪ್ಪಿಸುವುದಕ್ಕೆ ಯಾವುದಾದರೂ ಒಂದು ಕ್ರಮವನ್ನು ಗೊತ್ತುಮಾಡಬೇಕು. ಮೂಲಶಬ್ದದ ಎಲ್ಲಾ ಅರ್ಥಗಳೂ ತದ್ಭವಕ್ಕೆ ಇದ್ದರೆ, = ಚಿಹ್ನೆಯನ್ನು ಬಳಸಿ ಮೂಲಶಬ್ದವನ್ನು ಸೂಚಿಸಿದರೆ ಸಾಕು. ಕೆಲವು ಅರ್ಥಗಳು ಮಾತ್ರ ಸಮಾನವಾಗಿದ್ದರೆ, = ೧, = ೨, = ೩. ಮುಂತಾಗಿ ಮೂಲಶಬ್ದದೊಂದಿಗೆ ಅರ್ಥಸಂಖ್ಯೆಯನ್ನು ಸೂಚಿಸಬಹುದು. ಹೆಚ್ಚಿನ ಅಥವಾ ಮಾರ್ಪಾಟು ಹೊಂದಿದ ಅರ್ಥವನ್ನು ಪೂರ್ತಿಯಾಗಿ ಬರೆದು ತೋರಿಸಬೇಕು.

ತಕ್ಕ, ಕೆಟ್ಟ ಎಂಬ ಶಬ್ದಗಳು ಗುಣವಾಚಕಗಳಾಗಿ ಬಳಕೆಯಲ್ಲಿವೆ. ಆದರೆ ಇವು ತಗು, ಕಿಡು (ಕೆಡು) ಧಾತುಗಳಿಂದ ಆದ ನಿಷ್ಪನ್ನರೂಪಗಳು, ಇವನ್ನು ಸ್ವತಂತ್ರ ಉಲ್ಲೇಖಗಳಾಗಿ ಕೊಡುವುದ? ಅಥವಾ 'ತಗು' 'ಕಿಡು' 'ಕೆಡು' ಧಾತುಗಳ ಜೊತೆಗೆ ಸೇರಿಸಿ ಕೊಡುವುದೇ?

ಇವು ಧಾತುಗಳ ನಿಷ್ಪನ್ನರೂಪಗಳಾದರೂ ಗುಣವಾಚಕಪ್ರಯೋಗಗಳಲ್ಲಿ ಸ್ವತಂತ್ರಶಬ್ದಗಳು. ಇವಕ್ಕೆ ಪ್ರತ್ಯೇಕ ಸ್ಥಾನವುಂಟು. ಆದ್ದರಿಂದ ಇವನ್ನು ಪ್ರತ್ಯೇಕ ಉಲ್ಲೇಖಗಳಾಗಿಯೇ ಕೊಡಬೇಕು. 'ಸಲ್', 'ಮಿಗೆ' ಮುಂತಾದ ಇಂತಹ ಇತರ ಶಬ್ದಗಳಿಗೂ ಇದೇ ನಿಯಮ ಅನ್ವಯಿಸುತ್ತದೆ.

ಅಕ್ಕಪಕ್ಕ, ಅರಿವೆ ಅಂಚಟೆ, ಅರಿವೆ ಅಂಚಡಿ, ಎದುರು ಬದುರು, ಬಟ್ಟೆಬರೆ, ಬಡಬಗ್ಗ ಮುಂತಾದ ಕೂಡುನುಡಿಗಳಲ್ಲಿನ ಎರಡನೆಯ ಅಂಶವನ್ನು ಪ್ರತ್ಯೇಕ ಉಲ್ಲೇಖವಾಗಿ ಕೊಡಬೇಕೆ? ಅರ್ಥವನ್ನು ಕೊಡುವುದು ಹೇಗೆ?

ಸ್ವತಂತ್ರವಾಗಿ ಪ್ರಯೋಗಿಸಲಾಗದ ಶಬ್ದಗಳನ್ನು ಪ್ರತ್ಯೇಕ ಉಲ್ಲೇಖವಾಗಿ ಕೊಡಬೇಕಾಗಿಲ್ಲ. ಆ ಪ್ರಕಾರ ಇಂಥ ಎರಡನೆಯ ಅಂಶಗಳಿಗೆ ಬೇರೆ ಅರ್ಥವಿದ್ದರೆ, ಸ್ವತಂತ್ರವಾಗಿ ಪ್ರಯೋಗಿಸುವ ಸಾಧ್ಯತೆ ಇದ್ದರೆ ಆಗ ಮಾತ್ರ ಪ್ರತ್ಯೇಕ ಉಲ್ಲೇಖವಾಗಿ ಕೊಡತಕ್ಕುದು. ಇಲ್ಲವಾದರೆ ಕೊಡತಕ್ಕುದಲ್ಲ. ಇದರ ಪ್ರಕಾರ ಮನೆ ಗಿನೆ, ಜನ ಗಿನ, ಬಂದರ ಗಿಂದರೆ - ಮುಂತಾದ ಕಡೆಗಳಲ್ಲಿ ಗಿನೆ, ಗಿನ, ಗಿಂದರೆ ಮೊದಲಾದ ರೂಪಗಳನ್ನು ಪ್ರತ್ಯೇಕವಾಗಿ ಕೊಡಬೇಕಾಗಿಲ್ಲ.

ನಿಘಂಟಿನಲ್ಲಿ ಮುಖ್ಯಶಬ್ದಗಳಾಗಿ (Head Entry) ಸೇರ್ಪಡೆಯಾಗುವ ವರ್ಗಪಂಚಮಾಕ್ಷರಸಹಿತವಾದ ಶಬ್ದಗಳನ್ನು ಈಗ ವರ್ಗಪಂಚಮಾಕ್ಷರಸಹಿತ ಮತ್ತು ಬಿಂದುಸಹಿತ ಹೀಗೆ ಎರಡು ರೂಪಗಳಲ್ಲೂ ಕೊಡಲಾಗುತ್ತಿದೆ. ಉದಾಹರಣೆಗೆ ಅಕಲಙ್ಕ = ಅಕಲಂಕ, ಅಕಿಞ್ಚನ = ಅಕಿಂಚನ, ಅಕುಟಿಲಾನ್ತಃಕರಣ = ಅಕುಟಿಲಾಂತಃಕರಣ ಇತ್ಯಾದಿ. ಈ ವಿಧಾನದ ಅಸೌಕರ್ಯ, ವಿಪುಲವಾದ ಪುನರುಕ್ತಿ ಇವನ್ನೆಲ್ಲಾ ಗಮನಿಸಿ ಬಿಂದುಸಹಿತವಾದ ರೂಪವನ್ನು ಮಾತ್ರ ಮುಖ್ಯಶಬ್ದವಾಗಿ ಕೊಡಬೇಕೆಂದೂ ಕನ್ನಡವರ್ಣಮಾಲೆಯಲ್ಲಿ ಬಿಂದುವಿಗಿರುವ ಸ್ಥಾನಕ್ಕೆ ಅನುಗುಣವಾಗಿ ಶಬ್ದರೂಪಗಳನ್ನು ಅಳವಡಿಸಬೇಕೆಂದೂ ತೀರ್ಮಾನಿಸಲಾಯಿತು. ಇದರಂತೆ ಅಂಕ, ಅಂಗ, ಅಂಚೆ, ಅಂಟು, ಅಂದ, ಅಂದು, ಅಂಬು, ಅಂಶ, ಅಂಸ, ಅಕಟ, ಅಕಾರ, ಅಕ್ಕ, ಅಕ್ಕು,- ಈ ಕ್ರಮದಲ್ಲಿ ಮುಖ್ಯಶಬ್ದಗಳು ನಿಘಂಟಿನಲ್ಲಿ ಬರುತ್ತವೆ. ಶಾಸನಗಳಿಂದ ಉದಾಹರಿಸುವಾಗ, ಅಲ್ಲಿ ಶಬ್ದರೂಪವು ವರ್ಗಪಂಚಮಾಕ್ಷರಸಹಿತವಾಗಿದೆಯೆ, ಬಿಂದುಸಹಿತವಾಗಿದೆಯೆ ಎಂಬುದನ್ನು ಗಮನಿಸಿ, ಯಥಾವತ್ತಾಗಿ ಈಗಿನ ಪದ್ಧತಿಯನ್ನೇ ಅನುಸರಿಸಿ ಕೊಡತಕ್ಕುದು.

ಕಿಟ್ಟೆಲ್ ಅವರ ನಿಘಂಟಿನಿಂದ ಶಬ್ದಗಳನ್ನೂ ಅವಕ್ಕಿರುವ ಅರ್ಥಗಳನ್ನೂ ಬೇರಾವ ಪ್ರಯೋಗಗಳೂ ಇಲ್ಲದೆ ಕೇವಲ ಕಿಟ್ಟೆಲ್ ನಿಘಂಟಿನಿಂದಲೇ ಉದ್ಧರಿಸುವಾಗ ಪ್ರತಿಯೊಂದು ಅರ್ಥಕ್ಕೂ (ಕಿ) ಎಂದು ಸೂಚಿಸಬೇಕಾಗಿಲ್ಲ. ಶಬ್ದದ ವಾಚಕವನ್ನು ಕೊಟ್ಟ ಕೂಡಲೇ (ಕಿ) ಎಂದು ಸೂಚಿಸಿದರೆ ಸಾಕು.

ಕಿಟ್ಟೆಲ್ ಅವರು ಬೇರೆ ಬೇರೆ ನಿಘಂಟುಗಳಿಂದ ಶಬ್ದಗಳನ್ನು ಆರಿಸಿಕೊಂಡು ಆ ನಿಘಂಟುಗಳ ಆಕರವನ್ನು ಸೂಚಿಸುವಂತಹ ಶಬ್ದಗಳನ್ನು ಸೇರಿಸಿಕೊಂಡಾಗ ಕಿಟ್ಟೆಲ್ ಅವರು ಯಾವ ಆಕರವನ್ನು ಸೂಚಿಸುತ್ತಾರೋ ಅದೇ ಆಕರವನ್ನು ಸೂಚಿಸಲಾಗುವುದು. ಪ್ರಯೋಗಗಳನ್ನು ಉದ್ಧರಿಸುವಾಗ ಯಾವುದಾದರೂ ಪ್ರಯೋಗದಲ್ಲಿ ಸ್ಪಷ್ಟವಾಗಿ ಒಂದೆರಡು ಅಕ್ಷರಗಳು ಬಿಟ್ಟುಹೋಗಿವೆ ಎಂದು ಮನವರಿಕೆಯಾದಾಗ ಅಂತಹ ಸಂದರ್ಭದಲ್ಲಿ ಬಿಟ್ಟು ಹೋಗಿರುವ ಅಕ್ಷರವನ್ನಾಗಲಿ, ಅಕ್ಷರಗಳನ್ನಾಗಲಿ E∃ ಕಂಸದಲ್ಲಿ ಸೂಚಿಸುವುದಕ್ಕೆ ಬದಲಾಗಿ ಅಕ್ಷರ ಅಥವಾ ಅಕ್ಷರಗಳು ಬಿಟ್ಟು ಹೋಗಿರುವ ಪದವನ್ನೇ E∃ ಕಂಸದಲ್ಲಿ ಸೂಚಿಸಲಾಗುವುದು. ಉದಾಹರಣೆಗೆ– ದರ್ಪE∃ಣ ಇದಕ್ಕೆ ಬದಲಾಗಿ Eದರ್ಪಣ∃ಎಂದು ಸೂಚಿಸಲಾಗುವುದು.

ಸಂಸ್ಕೃತಶಬ್ದಗಳಿಗೆ ಪ್ರಾಚೀನ ಕಾವ್ಯಪ್ರಯೋಗಗಳು ಸಿಕ್ಕಿದಲ್ಲಿ ನಿಘಂಟುಗಳನ್ನು ಉದ್ಧರಿಸಬೇಕಾದ ಅವಶ್ಯಕತೆಯಿಲ್ಲ.

ಹಸ್ತಪ್ರತಿಯಿಂದ ಶಬ್ದಸಂಗ್ರಹ ಮಾಡಿರುವ ರಗಳೆಗಳು, ವಚನಗಳು, ಕಾವ್ಯಗಳು ಮುಂತಾದವುಗಳಿಗೆ ಮುದ್ರಿತ ಸಂಸ್ಕರಣಗಳಿಂದ ಆಕರವನ್ನು ಸೂಚಿಸುವಲ್ಲಿ ಸಂಪಾದಕರ ಅಥವಾ ಸಂಸ್ಥೆಗಳ ಹೆಸರಿನ ಮೊದಲ ಅಕ್ಷರವನ್ನು ಆಕರದ ಜೊತೆಯಲ್ಲಿ ಸೂಚಿಸತಕ್ಕುದು. ಉದಾ: (ಇಹರ. ದೇ); (ಚನ್ನವ. ಕ).

ಸಂಸ್ಕೃತದಲ್ಲಿ ವ್ಯಂಜನಾಂತ ಮತ್ತು ಸ್ವರಾಂತ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳಿದ್ದರೂ ಅವೆರಡರ ನಿಷ್ಪತ್ತಿ ಒಂದೇ ಆಗಿದ್ದ ಪಕ್ಷದಲ್ಲಿ ಅವನ್ನು ಒಂದೇ ಉಲ್ಲೇಖದ ಕೆಳಗೆ ವಿವೇಚಿಸಿ ನಿಷ್ಪತ್ತಿಯಲ್ಲಿ ಎರಡು ರೂಪಗಳನ್ನೂ ತೋರಿಸಬೇಕು. ಉದಾ. ಕಕುಭ [ಸಂ. ಕಕುಭ್, ಕಕುಭ]

ತದ್ಭವ ಶಬ್ದಗಳಿಗೆ ನಿಷ್ಪತ್ತಿಯನ್ನು ಸೂಚಿಸುವಲ್ಲಿ ಮೂಲ ಸಂಸ್ಕೃತ ಶಬ್ದರೂಪ ಸಂಸ್ಕೃತ ನಿಘಂಟುಗಳಲ್ಲಿ ಸಿಕ್ಕದಿದ್ದಾಗ ನಿಷ್ಪತ್ತಿಯಲ್ಲಿ '*' ಚಿಹ್ನೆಯೊಂದಿಗೆ ಸೂಚಿಸಬೇಕು. ಉದಾ: ಕಂಚಳಿಗೆ * ಸಂ. ಕಾಂಸ್ಯತಾಲಿಕಾ.

ಛಂದಸ್ಸಿನ ನಿಯಮದಂತೆ ಷಟ್ಪದಿಯ ೩ ಮತ್ತು ೬ನೆಯ ಪಾದಗಳ ಕೊನೆಯ ಅಕ್ಷರ ನಿಯತ ದೀರ್ಘಾಕ್ಷರಗಳು. ಆದ್ದರಿಂದ ಪ್ರಯೋಗದಲ್ಲಿ ಇವನ್ನು ದೀರ್ಘಾಕ್ಷರರೂಪದಲ್ಲೇ ಬರೆದು ತೋರಿಸಬೇಕಾದ ಅವಶ್ಯಕತೆಯಿಲ್ಲ.

ಕನ್ನಡ ಕಾವ್ಯಗಳಲ್ಲಿ ಈ [illegible]ಬ್ದವಿಲ್ಲದ, ಸಂಸ್ಕೃತನಿಘಂಟುಗಳಲ್ಲಿ ದೊರೆಯದ, ಕೇವಲ ಶಾಸ್ತ್ರಗ್ರಂಥಗಳಲ್ಲಿ ದೊರಕುವ ತೀರ ಪಾರಿಭಾಷಿಕಶಬ್ದಗಳನ್ನು [illegible]ಘಂಟನಲ್ಲಿ ಕೊಡಬೇಕಾಗಿಲ್ಲ.

ತದ್ಭವಶಬ್ದಗಳಿಗೆ ನಿಷ್ಪತ್ತಿಯನ್ನು ಸೂಚಿಸುವಾಗ ಅವಕ್ಕೆ ಸದೃಶರೂಪಗಳು ಇತರ ದ್ರಾವಿಡಭಾಷೆಗಳಲ್ಲಿ ಸಿಕ್ಕಿದರೆ ಕೊಡಬೇಕು.

ಯಾವುದಾದರೂ ಒಂದು ಶಬ್ದದ ಮೂಲರೂಪಕ್ಕೆ ಪ್ರಯೋಗ ಸಿಕ್ಕದಿದ್ದರೆ ಅಂತಹ ಸಂದರ್ಭದಲ್ಲಿ ಪ್ರಯೋಗ ಸಿಕ್ಕಿರುವ, ಮೂಲ ರೂಪಕ್ಕೆ ಸಮೀಪವಾಗಿರುವ ರೂಪವನ್ನೇ ಮುಖ್ಯೋಲ್ಲೇಖವಾಗಿ ತೆಗೆದುಕೊಂಡು ಅದರ ಜೊತೆಗೆ ಉಳಿದವನ್ನು ಪರ್ಯಾಯ ರೂಪಗಳಾಗಿ ಕೊಡಬೇಕು.

'ತವಕಕಾರ್ತಿ' ಎಂಬ ಶಬ್ದವಿದ್ದು, 'ತವಕಕಾಱ' ಎಂಬ ಶಬ್ದಕ್ಕೆ ಪ್ರಯೋಗಗಳು ಸಿಗದಿದ್ದರೂ ಆ ರೂಪವನ್ನು ಇರಿಸಿಕೊಳ್ಳಲಾಗಿದೆ. ಈ ಬಗ್ಗೆ ಚರ್ಚೆ ನಡೆದು ನಮಗೆ ಆ ರೂಪಕ್ಕೆ ಪ್ರಯೋಗಗಳು ಸಿಗದೆ ಇದ್ದರೂ, ಕಿಟ್ಟೆಲ್ ಅವರು ಅದನ್ನು ಉಲ್ಲೇಖ ಮಾಡಿರದಿದ್ದರೂ ಅಂಥ ರೂಪವನ್ನು ಇಟ್ಟುಕೊಂಡು ಸ್ತ್ರೀವಾಚಕ ರೂಪವನ್ನು 'ಪರಾ' ಎಂದು ಉಳಿಸಿಕೊಳ್ಳಬೇಕೆಂದೂ ಇಲ್ಲದಿದ್ದರೆ ನಿಷ್ಪತ್ತಿ ಕೊಡುವಾಗ 'ತವಕಕಾಱ' ರೂಪಕ್ಕೆ ಶೂನ್ಯ (ಂ)ವನ್ನು ತೋರಿಸಬೇಕಾಗುತ್ತದೆಂದೂ ಭಾವಿಸಿ ಮುಂದೆ ಇಂಥ ಶಬ್ದಗಳು ಬಂದಾಗ ಇದೇ ಕ್ರಮವನ್ನು ಅನುಸರಿಸಬೇಕೆಂದು ಆ ಬಗ್ಗೆ ಒಂದು ನಿರ್ಣಯವನ್ನು ಮಾಡಲಾಯಿತು.

ನಿಯಮಾವಳಿಗಳಲ್ಲಾಗಿರುವ ಕೆಲವು ಬದಲಾವಣೆಗಳು

ಈ ನಿಘಂಟುರಚನೆಯಲ್ಲಿ ಅನುಸರಿಸಿರುವ ವಿಧಿ, ವಿಧಾನಗಳನ್ನೂ ಹಾಗೂ ನಿಯಮಗಳನ್ನೂ ಈ ಹಿಂದೆ ತಿಳಿಸಲಾಗಿದೆ. ಅದರಂತೆಯೇ ಮೊದಲನೆಯ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಮುಂದಿನ ಸಂಪುಟಗಳನ್ನು ಸಿದ್ಧಪಡಿಸುವಾಗ ಮತ್ತು ನಿಘಂಟು ಸಂಪಾದಕ ಸಮಿತಿ ಕರಡುಪ್ರತಿಗಳನ್ನು ಚರ್ಚಿಸುವಾಗ ಮಾಡಿದ ಸೂಕ್ತವೆನಿಸುವ ಕೆಲವು ತಿದ್ದುಪಡಿಗಳಿಂದ ಹಿಂದಿನ ನಿಯಮಾವಳಿಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಅನಿವಾರ್ಯವಾಗಿ ಆಗಿವೆ. ಇಂತಹ ಬದಲಾವಣೆಗಳು ಸಂದರ್ಭೋಚಿತವಾಗಿ ಆಗಿವೆಯೇ ಹೊರತು ಮೊದಲು ಮೂಡಿದ್ದ ನಿಯಮಾವಳಿಗಳು ತಪ್ಪೆಂದು ಭಾವಿಸುವುದಕ್ಕೆ ಎಡೆಯಿಲ್ಲ. ಈ ಬದಲಾವಣೆಗಳಲ್ಲಿ ಮುಖ್ಯವಾದ ಕೆಲವನ್ನು ಸ್ಥೂಲವಾಗಿ ಈ ಕೆಳಗೆ ವಿವರಿಸಲಾಗಿದೆ.

ಮೊದಲ ಸಂಪುಟದ ನಿಯಮಾವಳಿಗಳಲ್ಲಿ ''ಅಗಡುಮಾಡು, ಅಗ್ಗಳಮಾಡು ಎಂಬಂತಹ ಸುಲಭಕ್ರಿಯಾಸಮಾಸಗಳನ್ನು ಈ ನಿಘಂಟಿನಲ್ಲಿ ಮುಖ್ಯೋಲ್ಲೇಖಗಳಾಗಿಯೇ ಕೊಟ್ಟಿದೆ '' ಎಂದು ಸೂಚಿಸಿದೆ. ಆದರೆ ಮುಂದಿನ ಸಂಪುಟಗಳಲ್ಲಿ 'ಆಗು', 'ಮಾಡು' ಎಂಬಿವು ಸೇರಿದ ಶಬ್ದರೂಪಗಳಲ್ಲಿ ವಿಶೇಷಾರ್ಥಗಳು ಕಂಡುಬಾರದಿರುವುದರಿಂದ ಆ ಶಬ್ದಗಳನ್ನು ಅವುಗಳಿಗೆ ಸಂಬಂಧಿಸಿದ ಮುಖ್ಯಶಬ್ದದ ಕೆಳಗೇ ಪದಸಮುಚ್ಚಯಗಳ ಸ್ಥಾನದಲ್ಲಿ ಕೊಡಲಾಗಿದೆ. ಉದಾಹರಣೆಗೆ:- 'ತಡವಾಗು', 'ತಡಮಾಡು' ಎಂಬಿವುಗಳನ್ನು 'ತಡ' ಎಂಬ ಮುಖ್ಯೋಲ್ಲೇಖದ ಕೆಳಗೆ ಪದಸಮುಚ್ಚಯಗಳಾಗಿ ಕೊಟ್ಟಿದೆ.

''ಒಂದೇ ಅರ್ಥದ ಹಲವಾರು ಶಬ್ದಗಳು ಸಮಾಸದ ಪೂರ್ವೋತ್ತರಪದಗಳಾಗಿ ಸೇರಿ ಆದ ಸಂಸ್ಕೃತಶಬ್ದಗಳು ಕನ್ನಡಕಾವ್ಯಗಳಲ್ಲಿ ವಿಪುಲವಾಗಿ ಸಿಕ್ಕುತ್ತವೆ. ಆದರೆ ಅವನ್ನೆಲ್ಲಾ ಈ ನಿಘಂಟಿನಲ್ಲಿ ಕೊಟ್ಟಿಲ್ಲ.'' ಎಂದು ಮೊದಲನೆಯ ಸಂಪುಟದ ನಿಯಮಾವಳಿಗಳಲ್ಲಿ ಹೇಳಿದೆ.

ಉದಾಹರಣೆಗೆ:- ''ಭೂಕಾಂತ, ಭೂಧವ, ಭೂಪತಿ, ಭೂರಮಣ; ರಾಜಕುಮಾರ, ರಾಜಪುತ್ರ, ರಾಜಸುತ, ರಾಜಕುಮಾರಿ, ರಾಜಪುತ್ರಿ, ರಾಜಸುತೆ'' ಎಂಬ ಶಬ್ದಗಳನ್ನು ಸೂಚಿಸಿದೆ. ಆದರೆ ಮುಂದಿನ ಸಂಪುಟಗಳಲ್ಲಿ ಓದುಗರ ಸೌಕರ್ಯಕ್ಕಾಗಿ, ಪ್ರಾಚೀನಕಾವ್ಯಗಳ ಪ್ರಯೋಗಗಳ ಪ್ರಚುರತೆಯನ್ನು ಗಮನಿಸಿ, ಅನಿವಾರ್ಯವಾಗಿ ಭೂಕಾಂತ, ಭೂಧವ, ಭೂಪತಿ ಎಂಬ ಕೆಲವು ಸಮಾಸಶಬ್ದಗಳನ್ನು ಮುಖ್ಯೋಲ್ಲೇಖಗಳಾಗಿ ಕೊಟ್ಟಿದೆ.

''ಗುಣವಾಚಕಗಳೆಲ್ಲ ನಾಮವಾಚಕಗಳ ಪ್ರಭೇದಗಳಾದುದರಿಂದ ಗುಣವಾಚಕಗಳಿಗೆ ಉದಾಹರಣೆಗಳಾಗಿ ಕೊಡುವ ಪ್ರಯೋಗಗಳನ್ನು ಸಂದರ್ಭಕ್ಕೆ ತಕ್ಕಂತೆ (ವಿಶೇಷ್ಯಗಳ ಲಿಂಗವಚನಾದಿಗಳಿಗನುಸಾರವಾಗಿ) ಅವುಗಳಿಗೆ ಕೊಟ್ಟಿರುವ ಅರ್ಥಗಳೊಂದಿಗೆ ಹೊಂದಿಸಿಕೊಳ್ಳಬೇಕು'' ಎಂದು ಮೊದಲನೆಯ ಸಂಪುಟದ ನಿಯಮಾವಳಿಯಲ್ಲಿ ಹೇಳಿದೆ. ಮುಂದಿನ ಸಂಪುಟಗಳಲ್ಲಿ, ಹೆಚ್ಚಿನ ಸ್ಪಷ್ಟತೆಗಾಗಿ ಪ್ರಯೋಗಗಳ ಸಂದರ್ಭಾನುಸಾರವಾಗಿ ಲಿಂಗಾನುಸಾರವಾದ ಅರ್ಥವನ್ನು ಕೊಟ್ಟಿದೆ. ಉದಾಹರಣೆಗೆ :- **ಪ್ರೇರಿತ** (ಗು). ೧. ಉತ್ತೇಜನಗೊಂಡ; ಪ್ರಚೋದನೆಗೊಳಗಾದ. (ನಾ). ೨. ಪ್ರಚೋದಿತವಾದುದು; ಹುರುಪುಗೊಂಡುದು. ೩.. ಪ್ರಚೋದನೆಗೊಂಡ ವ್ಯಕ್ತಿ; ಹುರುಪುಗೊಂಡ ವ್ಯಕ್ತಿ.

'ವಿತ್ತು, ವೆಟ್ಟ, ವೆಳೆ' ಮುಂತಾದ ವಕಾರಾದಿಯಾದ ಪೂರ್ವದ ಹಳಗನ್ನಡ ರೂಪಗಳನ್ನು 'ಬಿತ್ತು, ಬೆಟ್ಟ, ಬೆಳೆ' ಮುಂತಾದ ಬಕಾರಾದಿಯಾದ ಹಳಗನ್ನಡ ರೂಪಗಳ ಕೆಳಗೆ ಕೊಟ್ಟು ವಿವರಿಸಿದೆ ಎಂದು ಮೊದಲ ಸಂಪುಟದ ನಿಯಮಾವಳಿಯಲ್ಲಿ ಹೇಳಿರುವುದನ್ನೇ ಮುಂದಿನ ಸಂಪುಟಗಳಲ್ಲಿಯೂ ಅನುಸರಿಸಿದೆ.

ಇಂತಹ ವಕಾರಾದಿಯಾದ ಶಬ್ದರೂಪಗಳಿಗೆ ಹೆಚ್ಚುಮಟ್ಟಿಗೆ ಶಾಸನಪ್ರಯೋಗಗಳು ಇವೆ. ಪ್ರಾಚೀನ ಕಾವ್ಯಪ್ರಯೋಗಗಳು ಸಿಕ್ಕಿರುವ ಸಂದರ್ಭದಲ್ಲಿ ಮಾತ್ರ ಈ ವಕಾರಾದಿಯಾದ ಶಬ್ದರೂಪಗಳನ್ನು ಮುಖ್ಯೋಲ್ಲೇಖಗಳಾಗಿ ಮಾಡಿ ಬಕಾರಾದಿಯಾದ ರೂಪಗಳನ್ನು ಪರ್ಯಾಯಪದಗಳಾಗಿ ತೋರಿಸಿದೆ. ಉದಾಹರಣೆಗೆ:- 'ವಯಲ್', ಬಯಲ್; 'ವರ್', ಬರ್.

ಮೊದಲನೆಯ ಎರಡನೆಯ ಸಂಪುಟಗಳಲ್ಲಿ ಶಕಟರೇಫಾಂತವಾಗಿ ಬರುವ ಕೆಲವು ಧಾತುರೂಪಗಳಲ್ಲಿ ವ್ಯಂಜನಾಂತ ರೂಪಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಕೊಟ್ಟು, ಸ್ವರಾಂತರೂಪಗಳನ್ನು ಪರ್ಯಾಯಪದಗಳನ್ನಾಗಿ ಕಾಣಿಸಿದೆ. ಉದಾಹರಣೆಗೆ:- ಏಱ್, ಏಱು; ಕಾಱ್, ಕಾಱು.

ಶಬ್ದಮಣಿದರ್ಪಣದ ಧಾತುಪಾಠದಲ್ಲಿ ಶಕಟರೇಫಾಂತವಾದ ಶಬ್ದಗಳು ಸ್ವರಾಂತದಲ್ಲಿಯೇ ಇದ್ದು, ಜ್ಞಾತಿಶಬ್ದಗಳೂ ಸಾಮಾನ್ಯವಾಗಿ ಸ್ವರಾಂತದಲ್ಲಿಯೇ ಸಿಕ್ಕಿರುವ ಆಧಾರದ ಮೇಲೆ ಮೂರನೆಯ ಸಂಪುಟದಿಂದೀಚೆಗೆ ಶಕಟರೇಫ ಸ್ವರಾಂತ ಧಾತುಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಮಾಡಿ ವ್ಯಂಜನಾಂತಧಾತುಗಳನ್ನು ಪರ್ಯಾಯಪದಗಳಾಗಿ ಕೊಟ್ಟಿದೆ. ಉದಾಹರಣೆಗೆ:- ತೋಱು, ತೋಱ್; ಬೀಱು, ಬೀಱ್.

ಮೊದಲನೆಯ ಸಂಪುಟದಲ್ಲಿ ಸಂಧಿಕಾರ್ಯವಾಗದಿರುವ ಕೆಲವು ಶಬ್ದರೂಪಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಕೊಟ್ಟು ಸಂಧಿಯಾಗಿರುವ ಶಬ್ದರೂಪಗಳನ್ನು ಪರ್ಯಾಯಪದಗಳನ್ನಾಗಿ ಕಾಣಿಸಿದೆ. ಉದಾಹರಣೆಗೆ:- ಅಂಬುಕಂಡಿ, ಅಂಬುಗಂಡಿ; ಅಂಕಕಾಱ, ಅಂಕಗಾಱ.

ಮುಂದಿನ ಸಂಪುಟಗಳಲ್ಲಿ ಸಂಧಿಯಾದ ಶಬ್ದರೂಪಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಮಾಡಿ ಸಂಧಿಯಾಗದಿರುವ ರೂಪಗಳನ್ನು ಪರ್ಯಾಯಪದಗಳನ್ನಾಗಿ ಕೊಟ್ಟಿದೆ: ಉದಾಹರಣೆಗೆ:- ಕಲಿಗಾಲ, ಕಲಿಕಾಲ. ' – ಕಾಱ' ಮುಂತಾದ ಪ್ರತ್ಯಯಗಳು ಸೇರಿದ ರೂಪಗಳಿಗೂ ಸಹ ಇದೇ ನಿಯಮವು ಅನ್ವಯವಾಗಿದೆ. ಉದಾಹರಣೆಗೆ:- ಗನ್ನಗಾಱ, ಗನ್ನಕಾಱ.

ಮೊದಲ ಸಾಲ್ಕು ಸಂಪುಟಗಳಲ್ಲಿ ದ್ವಿತ್ವಸಹಿತವಾದ ಹಾಗೂ ದ್ವಿತ್ವರಹಿತವಾದ, ತುಕಾರಾಂತವಾದ ಕೆಲವು ಶಬ್ದಗಳಲ್ಲಿ ದ್ವಿತ್ವ ಸಹಿತವಾದುವನ್ನು ಮುಖ್ಯೋಲ್ಲೇಖಗಳನ್ನಾಗಿ ಮಾಡಿ ದ್ವಿತ್ವರಹಿತವಾದುವನ್ನು ಪರ್ಯಾಯರೂಪಗಳಾಗಿ ಕಾಣಿಸಿದೆ. ಉದಾಹರಣೆಗೆ:- ಒಳ್ಳಿತ್ತು, ಒಳ್ಳಿತು; ತಣ್ಣಿತ್ತು, ತಣ್ಣಿತು; ತೆಳ್ಳಿತ್ತು, ತೆಳ್ಳಿತು.

ನಾಲ್ಕನೆಯ ಸಂಪುಟದ 'ದಿಮ್ಮಿತು' ಎಂಬ ಶಬ್ದದ ಚರ್ಚೆಯಲ್ಲಿ ದ್ವಿತ್ವವಿರುವ ತುಕಾರಾಂತ ರೂಪಗಳು ವಿಕಲ್ಪದಿಂದ ಉಂಟಾಗುತ್ತವೆ ಎಂಬ ಶಬ್ದಮಣಿದರ್ಪಣದ ೭೭ನೆಯ ಸೂತ್ರಾನುಸಾರವಾಗಿ ದ್ವಿತ್ವರಹಿತಶಬ್ದರೂಪಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಮಾಡಬೇಕೆಂದು ತೀರ್ಮಾನಿಸಲಾಗಿದೆ. ಉದಾಹರಣೆಗೆ:- ದಿಮ್ಮಿತು, ದಿಮ್ಮಿತ್ತು; ದೊಡ್ಡಿತು, ದೊಡ್ಡಿತ್ತು; ಮೆಲ್ಲಿತು, ಮೆಲ್ಲಿತ್ತು.

ಮೊದಲನೆಯ ಸಂಪುಟದಲ್ಲಿ 'ಅಲೆಪು', 'ಅಲಪು' ಎಂಬಂತಹ '-ಪು' ಸೇರಿದ ರೂಪಗಳಲ್ಲಿ 'ಅಲೆಪು' ಎಂಬಂತಹ ಎಕಾರಸಹಿತವಾದ ಶಬ್ದಗಳನ್ನು ಮುಖ್ಯೋಲ್ಲೇಖಗಳನ್ನಾಗಿ ಕೊಟ್ಟು 'ಅಲಪು' ಎಂಬಂತಹ ಅಕಾರಸಹಿತವಾದ ಶಬ್ದಗಳನ್ನು ಪರ್ಯಾಯರೂಪಗಳನ್ನಾಗಿ ಕಾಣಿಸಿದೆ.

ಮುಂದಿನ ಸಂಪುಟಗಳಲ್ಲಿ, ಎಕಾರಾಂತವಾದ ಧಾತುಗಳಿಗೆ '- ಪು' ಸೇರಿದ ಶಬ್ದರೂಪಗಳಲ್ಲಿ ಎಕಾರಾಂತವು ಲೋಪವಾಗಿ ಅಕಾರವಾಗುತ್ತದೆಯಾದ್ದರಿಂದ ಅಂತಹವುಗಳನ್ನು ಮುಖ್ಯೋಲ್ಲೇಖಗಳಾಗಿ ಕೊಡಬೇಕೆಂದು ತೀರ್ಮಾನವಾಗಿ ಮುಂದಕ್ಕೆ ಆ ಕ್ರಮವನ್ನೇ ಅನುಸರಿಸಿದೆ. ಉದಾಹರಣೆಗೆ:- ತೆಱಪು, ತೆಱೆಪು; ಪದಪು, ಪದೆಪು; ಪರಪು, ಪರೆಪು.

''ಕರಿ, ಕರಿದು, ಕರಿಯ, ಕರೆ, ಕಾರ್, ಕರು; ಬಿಳಿ, ಬಿಳಿದು, ಬಿಳಿಯ, ಬೆಳ್, ಬೆಳು ಮುಂತಾದ ಗುಣವಾಚಕರೂಪಗಳಲ್ಲಿ ಕರಿದು, ಬಿಳಿದು ಎಂಬ ರೂಪಗಳನ್ನು ವ್ಯಾಕರಣಕಾರರು ಮೂಲರೂಪವೆಂದು ಅಂಗೀಕರಿಸಿದ್ದಾರೆ. ಈ ರೂಪಗಳನ್ನು ಮುಖ್ಯ ಉಲ್ಲೇಖಗಳಾಗಿ ಪರಿಗಣಿಸಿ ಅವುಗಳ ಕೆಳಗೆ ಉಳಿದ ರೂಪಗಳನ್ನು ತೋರಿಸಿದೆ. ಕರಿ, ಬಿಳಿ ಮುಂತಾದ ರೂಪಗಳನ್ನು ಪ್ರತ್ಯೇಕ ಉಲ್ಲೇಖಗಳಾಗಿ ಕೊಟ್ಟು, ಅರ್ಥೋದಾಹರಣೆಗಳಿಗೆ 'ಕರಿದು' ನೋ. 'ಬಿಳಿದು' ನೋ. ಎಂದು ಮುಂತಾಗಿ ಸೂಚಿಸಿದೆ'' ಎಂಬುದಾಗಿ ಮೊದಲನೆಯ ಸಂಪುಟದಲ್ಲಿ ಹೇಳಿದೆ.

ಈ ಕ್ರಮವನ್ನು ಅನುಸರಿಸುವಲ್ಲಿ ಕೆಲವು ವ್ಯತ್ಯಾಸಗಳು ತಲೆದೋರಿ, ಕಾರ್, ಬೆಳ್, ಬೆಳು ಇತ್ಯಾದಿ ರೂಪಗಳು 'ಕರಿದು', 'ಬಿಳಿದು' ಮುಂತಾದ ಗುಣವಾಚಕ ಅಥವಾ ನಾಮವಾಚಕ ಶಬ್ದಗಳಿಗೆ ಸಮಾಸದಲ್ಲಿ ಪೂರ್ವರೂಪಗಳಾಗಿ ಆದೇಶವಾಗಿ ಬರುವಂತಹ ರೂಪಗಳಾದುದುರಿಂದ, ಮುಖ್ಯಶಬ್ದದ ಪರ್ಯಾಯರೂಪಗಳಲ್ಲವೆಂದು ಪರಿಗಣಿಸಿ ಅವುಗಳಿಗೆ ಪ್ರತ್ಯೇಕ ಉಲ್ಲೇಖಗಳನ್ನು ಕೊಟ್ಟು ಮೂಲಶಬ್ದಗಳಿಂದ ನಿಷ್ಪತ್ತಿಯನ್ನು ಸೂಚಿಸಲಾಗಿದೆ. ಉದಾಹರಣೆಗೆ:- ಕಾರ್ (ನಾ). ಸಮಾಸದಲ್ಲಿ 'ಕರಿದು' ಎಂಬುದಕ್ಕೆ ಬರುವ ಆದೇಶ. [< ಕರಿದು]

ಮುಂದಿನ ಸಂಪುಟಗಳಲ್ಲಿ ಇಂತಹ ಆದೇಶ ರೂಪಗಳು ಗುಣವಾಚಕ, ನಾಮವಾಚಕ ಶಬ್ದಗಳಿಗೆ ಸಮಾಸದಲ್ಲಿ ಆದೇಶಗಳಾಗಿ ಬರುವ ರೂಪಗಳಷ್ಟೇ ಅಲ್ಲದೆ, ಇವೇ ನಾಮವಾಚಕ, ಗುಣವಾಚಕ ಶಬ್ದಗಳಲ್ಲವೆಂಬ ಕಾರಣದಿಂದ ದುಂಡುಕಂಸದಲ್ಲಿ (ನಾ). (ಗು). ಎಂದು ನಿರ್ದೇಶಿತವಾಗುತ್ತಿದ್ದುವನ್ನು (ಸಪೂರೂ) (ಎಂದರೆ 'ಸಮಾಸದ ಪೂರ್ವರೂಪ') ಎಂದು ಕೊಡಲಾಗಿದೆ. ಉದಾಹರಣೆಗೆ:- 'ನಿಟ್', 'ನಿಡಿ', 'ನಿಡು'.

ಸಂಸ್ಕೃತದ ಉಪಸರ್ಗಗಳು ಸೇರಿದ ಶಬ್ದರೂಪಗಳನ್ನು ನೇರವಾಗಿ [ಸಂ.] ಎಂದು ನಿರ್ದೇಶಿಸಿದ್ದು, ಉಪಸರ್ಗಗಳನ್ನು ಉಲ್ಲೇಖಗಳಾಗಿ ಕೊಟ್ಟಿಲ್ಲ. ಆದರೆ ಕೆಲವೊಮ್ಮೆ ಮಾತ್ರ ಇಂತಹ ಉಪಸರ್ಗಗಳು ದೇಶ್ಯಶಬ್ದಗಳೊಡನೆ ಸೇರಿ ಬಂದಾಗ, ಅವುಗಳನ್ನು ಬಿಡಿಸಿ ತೋರಿಸುವುದಕ್ಕಾಗಿ, ಅವುಗಳ ಉಲ್ಲೇಖವನ್ನು ಕೊಡಲಾಗಿದೆ. ಉದಾಹರಣೆಗೆ:- 'ದುರ್'-. ದುರ್ನಡತೆ [ದುರ್ - + ನಡತ]; ದುರ್ನಡೆ [ದುರ್ - + ನಡ್ಕೆ]

ಮೊದಲನೆಯ ಸಂಪುಟದಲ್ಲಿ ಸಮಸಂಸ್ಕೃತ ರೂಪಗಳನ್ನು ಒಟ್ಟಿಗೆ ಕೊಡಲಾಗಿದೆ. ಉದಾಹರಣೆಗೆ:- ಅನುಕರಣ, ಅನುಕರಣೆ [ಸಂ.]; ಅನುಕಂಪ, ಅನುಕಂಪೆ [ಸಂ. ಅನುಕಂಪಾ]

ಮುಂದಿನ ಸಂಪುಟಗಳಲ್ಲಿ ಅಂತ್ಯದಲ್ಲಿ ಮಾತ್ರ ಅಲ್ಪವಿಕಾರವಿರುವ ಸಮಸಂಸ್ಕೃತ ರೂಪಗಳನ್ನು, ಸಂಸ್ಕೃತ ರೂಪಗಳಂತೆಯೇ ಪ್ರತ್ಯೇಕ ಉಲ್ಲೇಖಗಳಾಗಿ ವಿವೇಚಿಸಲಾಗಿದೆ. ಉದಾಹರಣೆಗೆ:- ಗೋಧ [ಸಂ. ಗೋಧಾ]; ಗೋಧೆ [ಸಂ. ಗೋಧಾ]

ದ್ವಿರುಕ್ತಿಗಳನ್ನು ಆಯಾ ಮುಖ್ಯೋಲ್ಲೇಖಗಳ ಕೆಳಗೆ ಕೊಡಲಾಗಿದೆ. ಅವುಗಳನ್ನು ಪ್ರತ್ಯೇಕ ಉಲ್ಲೇಖಗಳಾಗಿ ಕೊಟ್ಟಿಲ್ಲ. ಆದರೆ ಒಂದೇ ಶಬ್ದರೂಪದ ಮುಖ್ಯೋಲ್ಲೇಖಗಳು ಒಂದಕ್ಕಿಂತ ಹೆಚ್ಚಾಗಿ ಬಂದಿದ್ದರೆ, ಅವುಗಳಿಗೆ ಸಂಬಂಧಿಸಿದ ಒಂದೇ ರೂಪದ ದ್ವಿರುಕ್ತಿಗಳು ಬಂದಿದ್ದಲ್ಲಿ ಮುಖ್ಯೋಲ್ಲೇಖಗಳ ಸಂಖ್ಯೆಗಳಿಗೆ ಅನುಗುಣವಾದ ಸಂಖ್ಯೆಗಳನ್ನು ಅವಕ್ಕೂ ಕೊಟ್ಟು, ಉಲ್ಲೇಖಿಸಿ ಮುಖ್ಯೋಲ್ಲೇಖಿತ ಶಬ್ದಕ್ಕೆ 'ಪರಾ' ಎಂದು ಸೂಚಿಸಿದೆ. ಉದಾಹರಣೆ:- ತರತರ¹ 'ತರ¹' ಪರಾ; ತರತರ² 'ತರ²' ಪರಾ.

ಶಬ್ದಾರ್ಥಗಳಿಗೆ ಉದಾಹರಣೆಯಾಗಿ ಕೊಟ್ಟಿರುವ ಕಾವ್ಯಪ್ರಯೋಗಗಳ ಆಕರ, ಸಂಕೇತ, ಕವಿಯ ಕಾಲಗಳನ್ನು ಮೊದಲನೆಯ ಸಂಪುಟದ ಸಂಕ್ಷಿಪ್ತಸೂಚಿಯಲ್ಲಿ ಸೂಚಿಸಿದೆ. ಅಲ್ಲಿ ಸೂಚಿಸಿರುವ ಕವಿಕೃತಿಕಾಲವನ್ನೇ ಅನುಸರಿಸಿ ಕಾಲಾನುಕ್ರಮದಲ್ಲಿ ಪ್ರಯೋಗಗಳನ್ನು ಕೊಟ್ಟಿದೆ.

ಇತ್ತೀಚಿನ ಕಾಲದ ಹೊಸಶೋಧನೆಗಳಿಂದ ಕವಿ ಕೃತಿಗಳ ಕಾಲವಿಚಾರದಲ್ಲಿ ವ್ಯತ್ಯಾಸಗಳು ಉಂಟಾಗಿದ್ದರೂ (ಉದಾಹರಣೆಗೆ - ಮೊದಲನೆಯ ನಾಗವರ್ಮನ 'ಛಂದೋಂಬುಧಿ', ಶಿಶುಮಾಯಣನ 'ಅಂಜನಾಚರಿತೆ', ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ') ಆರಂಭದಿಂದ ಸಂಕೇತಸೂಚಿಯಲ್ಲಿ ಕೊಟ್ಟಿರುವ ಕಾಲಕ್ರಮವನ್ನೇ ಅನುಸರಿಸಿದೆ. ಪರಿಷ್ಕರಣ ಸಂಪುಟಗಳಲ್ಲಿ, ಈ ಬದಲಾದ ಕಾಲಕ್ರಮವನ್ನು ಅನುಸರಿಸಲಾಗುವುದು.

ಸಂಸ್ಕೃತದ ಆಕಾರಂತ ಶಬ್ದರೂಪಗಳು ಸಾಮಾನ್ಯವಾಗಿ ಕನ್ನಡದಲ್ಲಿ ಎಕಾರಾಂತಗಳಾಗಿ ಪರಿವರ್ತನಗೊಳ್ಳುವುದರಿಂದಲೂ, ಸಂಸ್ಕೃತದ ದೀರ್ಘಾಂತ ಶಬ್ದರೂಪಗಳನ್ನು ಉಲ್ಲೇಖಿಸಿಲ್ಲವಾದ್ದರಿಂದಲೂ ಅಂತಹ ಶಬ್ದರೂಪಗಳ ಪ್ರಯೋಗಗಳನ್ನು ಎಕಾರಾಂತ ಶಬ್ದರೂಪಗಳಿಗೆ ಉದಾಹರಿಸಲಾಗಿದೆ. ಉದಾಹರಣೆಗೆ:- **ಅಭ್ಯುಪೇಗವಾರ್ತೆ:** ಈಗಲೀ ಎಪ್ಪರಲಿ ಖಳರಭಯೋಗವಾರ್ತಾಶ್ರವಣ ಬಹುದುರಿತಾಗಮವು ತನಗಾವುದೋ (ಶಕ್ಕಾಳ. ೧೯-೫). **ಆವಲೀಢೆ:** "ಹೇಳಾ, ಅವಹೇಳಾ, ಲೀಢಾ, ಅವಜ್ಞಾ, ಅವಲೀಢಾ - ಈ ೫ ಲೀಲೆ" (ಪಲಾಯು. ೧೧೯-೬೦).

ಶಾಸನಗಳಿಗೆ ಕಾಲವನ್ನು ಸೂಚಿಸುವಾಗ ಅವುಗಳ ಸಂಪಾದಕರು ಕೊಟ್ಟಿರುವ ಕಾಲವನ್ನೇ ಸಾಧಾರಣವಾಗಿ ಸ್ವೀಕರಿಸಿದೆ. ಶಕವರ್ಷದ ಕಾಲಕ್ಕೆ ೭೮ ವರ್ಷ ಸೇರಿಸಿ ಕ್ರಿಸ್ತಶಕದ ಕಾಲವನ್ನು ಸೂಚಿಸುವುದು ಕ್ರಮ. ಆದರೆ ಮುದ್ರಣವಾಗದೆ ಇರುವ, ಪ್ರಯೋಗ ಪಟ್ಟಿಕೆಗಳಿಂದ ತೆಗೆದುಕೊಂಡಿರುವ ಶಾಸನಪ್ರಯೋಗಗಳಲ್ಲಿ ಶಕವರ್ಷದ ಕಾಲವೇ ಇದ್ದು ಅವುಗಳನ್ನು ಹಾಗೆಯೇ ಸೂಚಿಸಿದೆ. (ಉದಾ - ಸೌಇ = South Indian Epigraphy, ಇಎ = Indian Epigraphy, ಬೊಂಕಶಾ = Bombay Karnataka Inscriptions). ಓದುಗರು ಅಂತಹವುಗಳಿಗೆ ೭೮ನ್ನು ಸೇರಿಸಿ ಕಾಲವನ್ನು ತಿದ್ದಿಕೊಳ್ಳಬೇಕು.

E 3 ಇ ಕಂಸ (Editorial bracket)ವನ್ನು ಕಾವ್ಯಪ್ರಯೋಗಗಳಲ್ಲಿ ಮಾತ್ರ ಬಳಸಿದೆ. ಸಂಪಾದಕರು ಸಂಯೋಜಿಸಿದ ಪಾಠವನ್ನು ಸೂಚಿಸುವಲ್ಲಿ ಬಳಸುವ ಈ ಚಿಹ್ನೆ ಶಾಸನಪ್ರಯೋಗಗಳಿಗೆ ಅನ್ವಯವಾಗುವುದಿಲ್ಲ.

ಮೊದಲನೆಯ ಸಂಪುಟದಲ್ಲಿ ಕಿಟ್ಟೆಲ್ ಅವರ ಕೋಶದಿಂದ ತೆಗೆದುಕೊಂಡ, ಪ್ರಯೋಗವಿಲ್ಲದ ಸಂಸ್ಕೃತ ಶಬ್ದಗಳಿಗೆ (ಕಿ). ಎಂದು ನಿರ್ದೇಶಿಸಿದೆ. ಮುಂದಿನ ಸಂಪುಟಗಳಲ್ಲಿ, ಅಂತಹ ಶಬ್ದಗಳಿಗೆ ಮೂಲಆಕರ ಸಂಸ್ಕೃತಕೋಶವಾದ್ದರಿಂದ (ಕಿ). ಎಂದು ನಿರ್ದೇಶಿಸುವ ಅಗತ್ಯವಿಲ್ಲವೆಂದು (ಕಿ). ಎಂದು ನಿರ್ದೇಶಿಸಿಲ್ಲ. ಉದಾಹರಣೆಗೆ:- 'ಚಕ್ರಯಾನ', 'ಚಕ್ರಿಕ'.

ಸಂಸ್ಕೃತದ ವ್ಯಂಜನಾಂತರೂಪಗಳ ಪ್ರಯೋಗಗಳನ್ನು ಸ್ವರಾಂತರೂಪಗಳಿಗೇ ಉದಾಹರಿಸಲಾಗಿದೆ. ಉದಾಹರಣೆಗೆ:- 'ಜಗತ್' ಎಂಬ ಪ್ರಯೋಗವನ್ನು 'ಜಗತ್ತು' ಕೆಳಗೆ ಕೊಡಲಾಗಿದೆ.

ಸಂಸ್ಕೃತಸಮಾಸಗಳನ್ನು ನಿಷ್ಪತ್ತಿಭಾಗದಲ್ಲಿ ದುಂಡುಕಂಸಗಳೊಳಗೆ ಬಿಡಿಸಿ ತೋರಿಸಲಾಗಿದೆಯೆಂದು ಮೊದಲ ಸಂಪುಟದಲ್ಲಿ ತಿಳಿಸಿದೆ. ಉದಾಹರಣೆಗೆ:- ಅಂತರ್ವಾಸ [ಸಂ. (ಅಂತರ್ + ವಾಸ)]

ಮುಂದಿನ ಸಂಪುಟಗಳಲ್ಲಿ (೭ನೆಯ ಸಂಪುಟದ ಮಧ್ಯಭಾಗದಿಂದ) ಸಮಾಸದ ಪೂರ್ವ ಮತ್ತು ಉತ್ತರ ಪದಗಳೆರಡೂ ಸಂಸ್ಕೃತವೇ ಆಗಿರುವುದರಿಂದ ಅವನ್ನೂ [ಸಂ.]ಎಂದೇ ಸೂಚಿಸಬಹುದೆಂದು ತೀರ್ಮಾನವಾಗಿದೆ. ಉದಾಹರಣೆಗೆ: ಬಹಿರ್ದ್ವಾರ [ಸಂ.], ಬಹಿರ್ಯಾನ [ಸಂ.]

ತದ್ಭವಶಬ್ದಗಳ ಮೂಲವನ್ನು ಹೇಳುವಾಗ '< ಸಂ.' ಎಂದು ಹೇಳಿ ಮೂಲ ಸಂಸ್ಕೃತಶಬ್ದವನ್ನು ತೋರಿಸಿದೆ. ಉದಾಹರಣೆಗೆ:- ನೇಮ [< ಸಂ. ನಿಯಮ]. ಸಮಸಂಸ್ಕೃತಶಬ್ದಗಳನ್ನು 'ಸಂ' ಎಂದು ಸೂಚಿಸುವುದರ ಜೊತೆಗೆ ಮೂಲ ಸಂಸ್ಕೃತಶಬ್ದವನ್ನು ತೋರಿಸಿದೆ. ಉದಾಹರಣೆಗೆ:- ಚರ್ಯೆ [ಸಂ. ಚರ್ಯಾ]

ದೇಶ್ಯ ಪ್ರತ್ಯಯ ಮತ್ತು ಮೂಲ ಅವ್ಯಯ ರೂಪಗಳಿಗೆ ನಿಷ್ಪತ್ತಿಯನ್ನು ಕೊಟ್ಟಿಲ್ಲ.

ದೇಶ್ಯ ಮತ್ತು ಸಂಸ್ಕೃತಶಬ್ದಗಳ ನಿಷ್ಪತ್ತಿ ಸಂದೇಹಾಸ್ಪದವಾಗಿದ್ದರೆ [ದೇ.?]; [ಸಂ.?] ಎಂದು ಸೂಚಿಸಲಾಗಿದೆ.

ಆದೇಶರೂಪಗಳನ್ನು ಮೂಲರೂಪದೊಡನೆ ಕೊಡದೆ ಪ್ರತ್ಯೇಕವಾಗಿ ಕೊಟ್ಟಿದ್ದರೂ ಆದೇಶರೂಪಗಳು ಸೇರಿದ ಸಮಾಸಗಳನ್ನು ಬಿಡಿಸಿ ಕೊಡುವಾಗ ಅವುಗಳ ಮೂಲರೂಪವನ್ನು ದುಂಡುಕಂಸದಲ್ಲಿ ನಿಷ್ಪತ್ತಿಭಾಗದಲ್ಲಿ ತೋರಿಸಿದೆ. ಉದಾಹರಣೆಗೆ:- ನಿಡುಮುಡಿ [ನಿಡು (< ನಿಡಿದು) + ಮುಡಿ$_2$]

ವಿರಾಮ ಚಿಹ್ನೆಗಳು (Punctuation Marks)

I. (.) ಪೂರ್ಣವಿರಾಮ (Full stop)

ಮುಖ್ಯಉಲ್ಲೇಖಿಗಳ ನಾಚಕ ನಿರ್ದೇಶನವಾದ ಅನಂತರವೂ, ಅರ್ಥವ್ಯಾಯೆಯನ್ನು ತೋರಿಸುವ ೧,೨ ಮುಂತಾದ ಸಂಖ್ಯೆಗಳ ಮುಂದೆಯೂ, ಅರ್ಥಪ್ರಯೋಗಗಳೇ ಮೊದಲಾದ ಎಲ್ಲ ವಿವರಗಳೂ ಮುಗಿದು ನಿಷ್ಪತ್ತಿಯನ್ನು ಪ್ರಾರಂಭಿಸುವ ಮೊದಲೂ, ಉದ್ಧರಿಸಿದ ಪ್ರಯೋಗಗಳ ಆಕರಗಳ ಸಂಕ್ಷಿಪ್ತ ಸೂಚನೆ ಮುಗಿದ ಮೇಲೆಯೂ, 'ನೋ', 'ಪರಾ', 'ಹೋ' ಮುಂತಾದ ಸಂಕೇತಗಳ ಮುಂದೆಯೂ, ನಿಷ್ಪತ್ತಿಯಲ್ಲಿ, ಸಮಾಸಗಳನ್ನು ಬಿಡಿಸಿ ತೋರಿಸಿದ ಮೇಲೆ ಜ್ಞಾತಿ ಅಥವಾ ಸಂವಾದಿ ಶಬ್ದಗಳನ್ನು ಕೊಡುವುದಕ್ಕೆ ಮೊದಲೂ ಪೂರ್ಣವಿರಾಮ ಚಿಹ್ನೆಯನ್ನು ಬಳಸಿದೆ. ಉದಾ- **ಅಂಟರಳೆ** (ನಾ). ಒಂದು ಜಾತಿಯ ಗಿಡ; ಅಂಟವಾಳ. **ಅಂಟಿಕ್ಕು** (ಕ್ರಿ). ೧. ಅಂಟಿಸು. ೨. ನಾಟಿಹಾಕು; ಕಸಿಮಾಡು: (೪). ೩. ಬೆಂಕಿಹಚ್ಚು (ಸ್ಕಾಂಡಂ). **ಅಕ್ಕಯ್ಯ** (ನಾ). ಅಕ್ಕನನ್ನು ಪ್ರೀತಿಯಿಂದ ಕರೆಯುವ ಮಾತು: ಅಕ್ಕ ಕೇಳವ್ವ, ಅಕ್ಕಯ್ಯ ನಾನೊಂದ ಕನಸ ಕಂಡ (ಪುಹಾದೇ. ೧೫-೨). **ಅಟ್ಟುಕುಳಿ** 'ಅಟ್ಟುಗುಳಿ' ನೋ. **ಅಟ್ಟ$_3$** (ಗು). ದಟ್ಟವಾದ; ಒತ್ತಾದ (?): 'ಅಟ್ಟಾಗು' ಪರಾ. **ಅಚ್ಚುಬೆಲ್ಲ** (ನಾ). 'ಉಂಡೆ ಬೆಲ್ಲ' ಹೋ. **ಅಕ್ಕಾಜಿ** (ನಾ).P 'ಅಣ್ಣಾಜಿ' 'ಭಾವಾಜಿ' 'ಮಾವಾಜಿ' ಇತ್ಯಾದಿ ಹೋ. **ಅಟಮಟಿಸು** (ಕ್ರಿ). [ಅಟಮಟ + - ಇಸು. / ತೆಲು. ಅಟಮಟಿಂಚು]

II. (,) ಅಲ್ಪವಿರಾಮ (Comma)

೧. ಪ್ರಧಾನ ಶಬ್ದ ಮತ್ತು ಅದರ ಇತರ ರೂಪಗಳನ್ನು ಒಂದೆಡೆ ಉಲ್ಲೇಖಿಸುವಾಗ ಮಧ್ಯದಲ್ಲಿ ಅಲ್ಪವಿರಾಮವನ್ನು ಬಳಸಲಾಗಿದೆ. ಉದಾ:- **ಅಕ್ಕಲು$_2$, ಅಖಿಲು. ಅಂಕಕಾಱಿ, ಅಂಕಂಗಾಱಿ, ಅಂಕಗಾಱಿ.**

೨. ಸಂಕೇತಸೂಚನೆಗಳಲ್ಲಿ ಸಂಪುಟ ಭಾಗಗಳನ್ನು ಸೂಚಿಸುವ ಅಂಕಿಗಳ ಮುಂದೆ ಅಲ್ಪವಿರಾಮವನ್ನು ಬಳಸಲಾಗಿದೆ. ಉದಾ:- **ಅಂಕೆ** (ಮೈಅ. ೧೫೩೮, ೧೬-೧೦; 1762). **ಅಕ್ಕಯ್ಯ** (ಎಕ. XIV, ಸಾಗರು. ೧೧೧-೩; 961). **ಅಂಬಲಗೊಟ್ಟಿಗೆ** (ಸೌಶಾ. IX-ii. ೪೪೬-೭೦; 1436).

III. (;) ಅರ್ಧವಿರಾಮ (Semicolon)

೧. ಒಂದೇ ಬಗೆಯ ಅರ್ಥವಿರುವಲ್ಲಿಯೂ, ಅರ್ಥದ ಛಾಯೆ ಸ್ವಲ್ಪಮಟ್ಟಿಗೆ ಭಿನ್ನವಾಗಿರುವಾಗಲೂ ನಡುವೆ ಅರ್ಧವಿರಾಮವನ್ನು ಬಳಸಲಾಗಿದೆ. ಉದಾ:- **ಅಗಣಿತ** (ಗು). ೧. ಎಣಿಸಿಲ್ಲದ; ಲೆಕ್ಕವಿಲ್ಲದ; ಲೆಕ್ಕಕ್ಕೆ ಮೀರಿದ. **ಅಕ್ಕರಗೊಟ್ಟಿ** (ನಾ). ವಿದ್ವಾಂಸರ ಸಭೆ; ವಿದ್ವಾಂಸರೊಡನೆ ಮಾಡುವ ಚರ್ಚೆ, ಸಲ್ಲಾಪ ಮುಂತಾದವು.

೨. ಪ್ರಯೋಗವನ್ನು ಕೊಡುವಾಗ ಒಂದು ಪ್ರಯೋಗ ಮುಗಿದು ಮತ್ತೊಂದು ಪ್ರಯೋಗ ಪ್ರಾರಂಭವಾಗುವ ಮುನ್ನ ಅವುಗಳ ನಡುವೆ, ಅರ್ಥವಿರಾಮವನ್ನು ಬಳಸಲಾಗಿದೆ. 'ಅಕ್ಕ' ಮೊದಲಾದ ಶಬ್ದಗಳಿಗೆ ಕೊಟ್ಟಿರುವ ಉದಾಹರಣೆಗಳನ್ನು ನೋಡಿ.

೩. ಸಂಕೇತಸೂಚನೆಗಳಲ್ಲಿ ಎಲ್ಲಾ ವಿವರಗಳು ಮುಗಿದ ಮೇಲೆ ಕಾಲನಿರ್ದೇಶಕ್ಕೆ ಮೊದಲು ಈ ಚಿಹ್ನೆಯನ್ನು ಬಳಸಲಾಗಿದೆ. ಉದಾ:- **ಅಕಸಾಲೆವಾಳು** (ನಾ). . . (ಸೌಶಾ. IX-ii. ೧೨೩-೨೬; 1059).

IV. (:) ವಿವರಣವಿರಾಮ (Colon)

ಶಬ್ದಕ್ಕೆ ಅರ್ಥವನ್ನು ಕೊಟ್ಟ ಮೇಲೆ ಪ್ರಯೋಗಗಳನ್ನು ಪ್ರಾರಂಭಿಸುವ ಮೊದಲು ವಿವರಣವಿರಾಮವನ್ನು ಉಪಯೋಗಿಸಲಾಗಿದೆ. ಉದಾ:- **ಅಂಕಿಸು$_2$** (ಕ್ರಿ). ಬಳಿ; ಲೇಪಿಸು: ಕುಂಕುಮದೊಳ್ಪುಡಿವೆರದ ಕಮ್ಮೆಣ್ಣೆಯ ಪಂಕವನುತ್ತಮಾಂಗದೊಳು ಅಂಕಿಸಿಕೊಂಡವಳಿರ್ದಳು (ಕುರಾಸಾಂ. ೩೩-೯೨). **ಅಕರ್ಮ** (ಅ). ತೆರಿಗೆಯಿಲ್ಲದೆ: ಭಟ್ಟರ್ಗೀಗಟ್ಟೆ ಒಡ್ಡಲಿ ಅಪಶೊನ್ನಿ ವಿಟ್ಟಾರಕರ (ಮೈಅ. ೧೫೩೮, ೧೬-೧೬; ಸು. 450).

V. (" " ' ') ಉದ್ಧರಣಚಿಹ್ನೆಗಳು (Quotation marks)

ನಿಘಂಟು, ವ್ಯಾಕರಣ, ಲಕ್ಷಣಗ್ರಂಥಗಳಿಂದ ಅರ್ಥಕ್ಕೆ ಆಧಾರವನ್ನು ಸೂಚಿಸುವಾಗ ಎರಡೆರಡಿರುವ ಉದ್ಧರಣಚಿಹ್ನೆಗಳನ್ನು ಬಳಸಲಾಗಿದೆ. ಉದಾ:- **ಅಂಕ$_2$** (ನಾ). ೫. ಭಾರವನ್ನು ಎತ್ತುವುದಕ್ಕೆ ಉಪಯೋಗಿಸುವ ಹಾರೆ; ಸನ್ನೆಕೋಲು: "ಅಂಕವನೆ ಭಾರವೆತ್ತುವದಕ್ಕುಂ" (ಕಶರ. ೧೦). ೬. ತೊಡೆ: "ಅಂಕಮುತ್ಸಂಗಮಕ್ಕು" (ಮಂಗರಾ. ೯೩-೧೭). ನೋ, ಪರಾ ಇವುಗಳನ್ನು ಸೂಚಿಸುವಲ್ಲಿ ಒಂದೊಂದು ಇರುವ ಉದ್ಧರಣಚಿಹ್ನೆಗಳನ್ನು ಬಳಸಲಾಗಿದೆ. **ಅಂಕಕಾತಿ** 'ಅಂಕಕಾರ್ತಿ' ನೋ. **ಅಂಕಗದ್ಯಾಣ** (ನಾ). 'ಅಂಕದೆಱೆ', 'ಅಂಕವಣ', 'ಅಂಕಸುಂಕ' ಪರಾ.

VI. [ ] ಚೌಕಕಂಸ (Square bracket)

ನಿಷ್ಪತ್ತಿಭಾಗವನ್ನು ಚೌಕಕಂಸದಲ್ಲಿ ತೋರಿಸಲಾಗುವುದು. ಉದಾ - **ಅಂಕುರಿಸು** (ಕ್ರಿ). [ಅಂಕುರ + - ಇಸ್ಸು] ಪ್ರಯೋಗಗಳಲ್ಲಿ ಪಾಠಾಂತರಗಳನ್ನು ಸೂಚಿಸುವಲ್ಲಿ ಚೌಕಕಂಸವನ್ನು ಬಳಸಿದೆ. ಉದಾ:- **ಅಂಗಜಾವ** (ನಾ). ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ ? ಡಿಂಗರಿಗನ ಮನೆಗೆ ಅಂಗಜಾವ[ಪಾಠಾಂ. ಜಾಹವ, ಜಾವಹ]ಕ್ಕೆ ಹೋಗಿದ್ದರೊಳರೆ ಕೂಡಲ ಸಂಗಮದೇವಾ (ಬಸವ. ೭೪೨). ಶಾಸನ ಮತ್ತು ಕಾವ್ಯಗಳಿಂದ ಪ್ರಯೋಗಗಳನ್ನು ಉದ್ಧರಿಸುವಾಗ ಅವುಗಳ ಸಂಪಾದಕರು ಚೌಕಕಂಸವನ್ನು ಬಳಸಿದ್ದರೆ ಅವುಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. ಉದಾ:- **ಅಗುರ್** (ಕ್ರಿ). ಧರೆಯಲ್ಲಂ ಪೊಗಟ್ಟನ್ತಿರೆ [ಪುರಿ]ಗೆರೆಯೊಳಗುರ್ತು ರೋಣಮಂ ಕಾದಮರೇಶ್ವರಪುರಮನೆಯ್ದಿದೋಂ . . . ಪಂಪಯ್ಯಂ (ಸೌಇ. XI-i, ೩೬-೨೩; 942).

VII. E ∃ ಇ ಕಂಸ (Editorial bracket)

E ∃ ಇ ಕಂಸವು ಸಂಪಾದಕರು ಸಂಯೋಜಿಸಿದ ಪಾಠವನ್ನು ಸೂಚಿಸುವಲ್ಲಿ ಬಳಸಿದೆ. ಇದನ್ನು ಸಾಮಾನ್ಯವಾಗಿ ಪ್ರಕೃತ ಶಬ್ದಕ್ಕೆ ಮಾತ್ರ ಉಪಯೋಗಿಸಿದೆ. ಶಾಸನಗಳಿಂದ ಪ್ರಯೋಗಗಳನ್ನು ಎತ್ತಿಕೊಂಡಾಗ ಅವುಗಳನ್ನು ತಿದ್ದಬೇಕಾದ ಸಂದರ್ಭಗಳಲ್ಲಿ E ∃ ಇ ಕಂಸವನ್ನು ಹಾಕಿದೆ. ಉದಾ:- **ಅಚ್ಛವೊ Eವ?∃ತ್ತಳಿಕೆ, ಅಜ್ಜವEವೊ∃ಡೆಯ, ಅಡಗುಶೇEಸೇ∃ಕ.** ಮುಖ್ಯಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರಯೋಗದಲ್ಲಿ ಕ್ವಚಿತ್ತಾಗಿ ಅರ್ಥವಿವರಣೆ ಮಾಡಬೇಕಾದ ಸಂದರ್ಭದಲ್ಲಿ E ∃ ಇ ಕಂಸವನ್ನು ಬಳಸಲಾಗಿದೆ. ಉದಾ:- **ಅಂಕ$_2$** (ನಾ). ೧೩. ಹೆಸರು: ಚೇರಮಾಂಕಂಗೆ ಬೆಸಸಿದ ಭಕ್ತ ಸತ್ಯೇಂದ್ರ ಚೋಳ ಕೃತಿ (ಭಾವಚಂ. ೧-೪೬). E ಚೇರಮಾಂಕ = ಚೇರಮ ಎಂಬ ಹೆಸರುಳ್ಳವನು ∃. **ಅಂಕಕಾಱ** (ನಾ). ೨. ಬಿರುದುಳ್ಳ ವೀರ (ಇದು ಬಿರುದಿನ ಭಾಗವಾಗಿ ಬರುವುದೂ ಉಂಟು): ನೆಲನದಿರೆವಂದು ತಾಗಿದ ಕಕ್ಕಲನ ತಮ್ಮನಪ್ಪ ಬಪ್ಪುವನಂಕಕಾಱನನೊಂದೆ ಮದಾಂಧಗಂಧಸಿಂಧುರದೊಳೋಡಿಸಿದ (ಪಂಪಭಾ. ೯-೫೨ ವ); Eಬಪ್ಪುವನಂಕಕಾಱ: ಬಪ್ಪುವಂ + ಅಂಕಕಾಱ = ಬಪ್ಪುವನೆಂಬ ಅಂಕಕಾಱ; ಇದನ್ನು ಬಪ್ಪುವನ + ಅಂಕಕಾಱ (= ಬಪ್ಪುವ ಎಂಬ ಒಡೆಯನ ಆಶ್ರಯದಲ್ಲಿರುವ ಅಂಕಕಾಱ) ಎಂದು ಬಿಡಿಸುವುದೂ ಸಾಧ್ಯ∃.

VIII. ( ) ದುಂಡುಕಂಸ (Round bracket)

ಮುಖ್ಯಉಲ್ಲೇಖಗಳ ಶಬ್ದಜಾತಿಯನ್ನು, ಸಂಕ್ಷಿಪ್ತಗಳನ್ನು, ಆಕರಗಳನ್ನು, ಪರ್ಯಾಯಶಬ್ದಗಳ ಮೂಲರೂಪಗಳನ್ನು ಸೂಚಿಸುವಲ್ಲಿ ದುಂಡುಕಂಸವನ್ನು ಬಳಸಲಾಗಿದೆ.

೧. ಮುಖ್ಯ ಉಲ್ಲೇಖಗಳ ಶಬ್ದಜಾತಿ:- **ಅಕ್ಕ** (ನಾ). **ಅಕ್ಕಚ್ಚಿ** (ನಾ). **ಅಗಲ್ಚು** (ಕ್ರಿ). - **ಅ$_3$** (ಅ). **ಅಕ್ಕುಡ$_2$** (ಗು).

೨. ಸಂಕ್ಷಿಪ್ತ:- **ಅಗಡೀದಿಗಡೀ** (ಗು). (ಉಕ).

೩. ಆಕರ:- **ಅಕ್ಕನ ಚೌರಿ** (ನಾ). ಒಂದು ಬಗೆಯ ಕಾಯಿಪಲ್ಯ (ಸ್ಕಾಂಡರ್).

೪. ಪರ್ಯಾಯ ಶಬ್ದಗಳ ಮೂಲರೂಪ:- **ಅಕ್ಕರೆಮಗ** (ನಾ). [ಅಕ್ಕರೆ$_1$ (< ಅಬ್ಕಱ್$_2$) + ಮಗ]

IX. - ಕೂಡುಗೆರೆ (Hyphen)

ಈ ಚಿಹ್ನೆ ಅಕ್ಷರ ಅಥವಾ ಅಕ್ಷರಗಳ ಹಿಂದಿದ್ದರೆ ಪ್ರತ್ಯಯವನ್ನು ಸೂಚಿಸುತ್ತದೆ; ಮುಂದಿದ್ದರೆ ಶಬ್ದದ ಆದ್ಯಂಶವನ್ನು ಸೂಚಿಸುತ್ತದೆ. ಉದಾ:- -ಅ$_2$, -ಅ$_3$, ಅಗ-$_1$.

X. – ಅಡ್ಡಗೀಟು (Dash)

ಈ ಚಿಹ್ನೆ ಹಿಂದೆ ಕೊಟ್ಟಿರುವ ಶಬ್ದವನ್ನು ಸೇರಿಸಿಕೊಂಡು ಓದಬೇಕೆಂಬುದನ್ನು ಸೂಚಿಸುತ್ತದೆ. ಉದಾ:-**ಅಡಕೆ ತಾಳಿಲ, ಅಡಕೆದಾಳಿಲ** (ನಾ). ಒಂದು ಬಗೆಯ ಪಲ್ಯ,-- ತಾಳಿದ. ಇಲ್ಲಿ -- ತಾಳಿದ ಎಂಬುದರ ಹಿಂದೆ ಒಂದು ಬಗೆಯ ಎಂಬುದನ್ನು ಸೇರಿಸಿಕೊಂಡು, ಒಂದು ಬಗೆಯ ತಾಳಿದ ಎಂದು ಅರ್ಥಮಾಡಿಕೊಳ್ಳಬೇಕು.

೭. ಅಕ್ಷರಗಳ ಗಾತ್ರ

೧೨ ಪಾಯಿಂಟ್ ದಪ್ಪ ಅಕ್ಷರ (12 point antic)

೧. ನಿಘಂಟಿನಲ್ಲಿ ಬರುವ ಮುಖ್ಯ ಶಬ್ದಗಳನ್ನು ಉಲ್ಲೇಖಿಸುವಲ್ಲಿ ಈ ಅಳತೆಯ ಅಕ್ಷರಗಳನ್ನು ಬಳಸಲಾಗಿದೆ.

೨. ಮುಖ್ಯ ಶಬ್ದದ ಜೊತೆಯಲ್ಲಿ ಕೊಟ್ಟಿರುವ ಅದರ ಇತರ ರೂಪಗಳಿಗೆ ಅರ್ಥ ಪ್ರಯೋಗಗಳನ್ನು ಕೊಡುವಾಗ ಆ ಒಂದೊಂದು ರೂಪಕ್ಕೂ ಈ ಅಳತೆಯ ಅಕ್ಷರವನ್ನು ಬಳಸಲಾಗಿದೆ. ಉದಾ:- **ಅಕ್ಕಸಾಲೆ** ಶಬ್ದದಲ್ಲಿ **ಅಕಸಾಲ, ಅಕಸಾಲೆ, ಅಕ್ಕಸಾಲ, ಅಕ್ಕಸಾಲಿ, ಅಗಸಾಲ, ಅಗಸಾಲೆ, ಅರ್ಕಸಾಲೆ.**

೧೨ ಪಾಯಿಂಟ್ ಸಾದಾ ಅಕ್ಷರ (12 point Roman)

೧. ಮುಖ್ಯಶಬ್ದಗಳಿಗೆ ಅರ್ಥಗಳನ್ನು ಕೊಡುವಾಗ ಈ ಅಳತೆಯ ಅಕ್ಷರಗಳನ್ನು ಬಳಸಿದೆ. ಉದಾ:- **ಅಡಕನಗೆ** (ನಾ). ಅದುಮಿಟ್ಟುಕೊಂಡ ನಗೆ; ಪರಿಮಿತವಾದ ನಗೆ.

೨. ಮುಖ್ಯಶಬ್ದದ ಜೊತೆಯಲ್ಲಿ ಕೊಡುವ ಅದರ ಇತರ ರೂಪಗಳಿಗೆ ಈ ಅಳತೆಯ ಅಕ್ಷರಗಳನ್ನು ಉಪಯೋಗಿಸಿದೆ. ಉದಾ:- **ಅಕ್ಕ$_1$, ಅಕ$_1$, ಅಕ್ಕಳ್** (ನಾ).

೩. ಒಂದು ಶಬ್ದದ ಅರ್ಥಕ್ಕೆ ಬೇರೆ ಕಡೆ ಆ ಶಬ್ದದ ಮುಖ್ಯರೂಪದ ಕೆಳಗಡೆ 'ನೋಡಿ' ಎಂದು ನಿರ್ದೇಶಿಸುವಾಗ ಈ ಅಳತೆಯ ಅಕ್ಷರಗಳನ್ನು ಬಳಸಿದೆ. ಉದಾ:- **ಅಕ್ಕಡ$_1$** 'ಅಕ್ಪಡ' ನೋ. **ಅಕಲು** 'ಅಕ್ಕಲು$_2$' ನೋ.

೪. ಬೇರೆ ರೀತಿ ಗೊತ್ತುಮಾಡಿಲ್ಲದ ಎಲ್ಲ ಕಡೆಗಳಿಗೂ ಈ ಅಳತೆಯ ಅಕ್ಷರಗಳನ್ನು ಬಳಸಿದೆ. ಉದಾ:- [ಜೈನ] [ವೀಶೈ] (ಕರಾ) (ದಕ) (ಉಕ) ನೋ. ಪರಾ. ಹೋ. (ಕ್ರಿ). (ನಾ). (ಗು). (ಪ್ರ). ಇತ್ಯಾದಿ.

೫. ವಿಶೇಷಾಂಶಗಳನ್ನು ವಿವರಿಸುವ ಕಡೆ IP ಈ ಚಿಹ್ನೆಯ ಮುಂದೆ ಈ ಅಳತೆಯ ಅಕ್ಷರಗಳನ್ನು ಉಪಯೋಗಿಸಿದೆ.

೧೦ ಪಾಯಿಂಟ್ ದಪ್ಪ ಅಕ್ಷರ (10 Point antic)

೧. ನುಡಿಗಟ್ಟುಗಳನ್ನೂ ವಿಶಿಷ್ಟರೂಪಭೇದಗಳನ್ನೂ ನಿರ್ದೇಶಿಸುವಲ್ಲಿ ಈ ಅಳತೆಯ ಅಕ್ಷರಗಳನ್ನು ಉಪಯೋಗಿಸಲಾಗಿದೆ. ಉದಾ:- **ಅಕ್ಕರ** ಶಬ್ದದ ಕೆಳಗೆ **ಅಕ್ಕರದ ಹೊಲಿಗೆ. ಅಟ್ಟ** ಶಬ್ದದ ಕೆಳಗೆ **ಅಟ್ಟಕ್ಕೇರು.**

೨. ನಿಷ್ಪತ್ತಿ ವಿಭಾಗದಲ್ಲಿ ಭಾಷೆಗಳ ಹೆಸರುಗಳನ್ನು ನಿರ್ದೇಶಿಸುವಲ್ಲಿ ಈ ಅಳತೆಯ ಅಕ್ಷರಗಳನ್ನು ಉಪಯೋಗಿಸಲಾಗಿದೆ. ಉದಾ:- **ತಮಿ. ಮಲ. ತುಳು. ತೆಲು. ಹಿಂ.**

೧೦ ಪಾಯಿಂಟ್ ಸಾದಾ ಅಕ್ಷರ (10 Point Roman)

೧. ಮುಖ್ಯ ಶಬ್ದಗಳಿಗೆ ಅರ್ಥಗಳನ್ನು ಕೊಟ್ಟ ಮೇಲೆ ಪ್ರಯೋಗಗಳನ್ನು ಉದ್ಧರಿಸುವಾಗ ಈ ಅಳತೆಯ ಅಕ್ಷರಗಳನ್ನು ಉಪಯೋಗಿಸಲಾಗಿದೆ. ಉದಾ:- **ಅಂಗವಟ್ಟ$_1$** (ನಾ). ಆಗಳಾ ತುಂಗಸ್ತನೆಯ ಮಂಗಳಮಾದಂಗದೊಳಂಗವಟ್ಟಮಂ ಸಂಗಡಿಸಿದಿಂಬಟಿಯಂ (ಬಾಧಪು. ೬ - ೧೦೪ ವ).

೨. ನಿಷ್ಪತ್ತಿವಿಭಾಗದಲ್ಲಿ ಜ್ಞಾತಿಶಬ್ದಗಳನ್ನೂ, ಆ ಶಬ್ದಗಳ ಅರ್ಥಗಳನ್ನೂ ವಿವರಿಸುವಲ್ಲಿ ಈ ಅಳತೆಯ ಅಕ್ಷರಗಳನ್ನು ಬಳಸಿದೆ. ಉದಾ:- **ಅಕ್ಕಿ$_1$** (ನಾ). [ದೇ. < * ಅರ್ಕಿ. || ತಮಿ. ಅರಿ, ಅರಿಚಿ; ಮಲ. ತುಳು. ಅರಿ; ಕೊಡ. ಅರಿ, ಅಕ್ಕಿ; ತೆಲು. ಅಕ್ಕುಳ್ಳು]

೮ ಪಾಯಿಂಟ್ ಸಾದಾ ಅಕ್ಷರ (8 Point Roman)

ಮುಖ್ಯ ಶಬ್ದಗಳಿಗೆ ಕೊಡುವ ಪ್ರಯೋಗಗಳ ಆಕರಗಳನ್ನು ಸೂಚಿಸುವಾಗ ಮತ್ತು 'ಪಾಠಾಂ' ಎಂಬುದನ್ನು ಸೂಚಿಸುವಾಗ ಈ ಅಳತೆಯ ಅಕ್ಷರಗಳನ್ನು ಬಳಸಲಾಗಿದೆ. ಉದಾ:- **ಅಂಕ್ಕ$_2$** ಶಬ್ದದಲ್ಲಿ (ಶ್ರೀಪಾಲ. ೪-೧೬); (ಎಕ. X, ಶ್ರೀನಿವಾ. ೨೬-೨೨; 870). **ಅನುವಿಸ್ಯು$_2$:** ಮನಮನನುವಿಸ[ಪಾಠಾಂ. ಉಪಮಿಸ]ಲಾಱದಂತೆಯುಸಿರ್ ಮಿಟ್ಟಿಗೊಳಿಸುವ ಸವಿಯುಂ (ಲೀಲಾವ. ೧೦-೪೫ ವ).

ಎನ್. ಬಸವಾರಾಧ್ಯ
ಪ್ರಧಾನ ಸಂಪಾದಕ

(ಹಿಂದಿನ ಸಂಪುಟಗಳಿಂದ ಮುಂದುವರಿದ)

ನಿಘಂಟಿನಲ್ಲಿ ಉದಾಹರಿಸಿರುವ ಗ್ರಂಥ, ಶಾಸನ ಮೊದಲಾದುವುಗಳ

ಸಂಕ್ಷಿಪ್ತಸೂಚಿ

ಕ್ರಮ ಸಂಖ್ಯೆ	ಸಂಕ್ಷಿಪ್ತ	ಹೆಸರು	ಕರ್ತೃ	ಕಾಲ	ಇತರ ವಿಷಯಗಳು
೧.	ಆದವ.ಮು.	ಆದಯ್ಯನ ವಚನಗಳು	ಆದಯ್ಯ (ಸಂ॥ ವೀರಭದ್ರಪ್ಪ ಕೊಪ್ಪಳ)	ಸು. ೧೧೬೦	ಶ್ರೀ ಮುರುಘಾಮಠ, ಧಾರವಾಡ.
೨.	ಇ.ಎ.	ಇಂಡಿಯನ್ ಎಪಿಗ್ರಫಿ	—	—	ಉದಕಮಂಡಲದ ಶಾಸನ ಕಚೇರಿಯಲ್ಲಿ ಸಂಗ್ರಹಿಸಿದುದು, ೧೯೫೬
೩.	ಇಚಸಾಂ.	ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ	ಮಲ್ಲಿಕಾರ್ಜುನ	೧೬ ನೆಯ ಶತ ?	ಶ್ರೀ ಮುರುಘಾಮಠ, ಧಾರವಾಡ.
೪.	ಈಹುಲಿ.	ಈಡೊಂದು ಹುಲಿಯೆರಡು	ಕೆದಂಬಾಡಿ ಜತ್ತಪ್ಪರೈ	೧೯೭೮	ಕೆದಂಬಾಡಿ ಜತ್ತಪ್ಪರೈ ಸನ್ಮಾನಸಮಿತಿ ಮಂಗಳೂರು, ದಕ್ಷಿಣಕನ್ನಡ.
೫.	ಉಮರ.	ಉಮರನ ಒಸಗೆ	ಅನು: ಡಿ.ವಿ. ಗುಂಡಪ್ಪ	೧೯೬೨ (೪ನೆಯ ಮುದ್ರಣ)	ಕಾವ್ಯಾಲಯ, ಮೈಸೂರು.
೬.	ಕಥನ.	ಕಥನ ಕವನಗಳು	ಕುವೆಂಪು	೧೯೩೬	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
೭.	ಕನ್ನಶಾ.	ಕನ್ನಡ ಗ್ರಂಥ ಸಂಪಾದನ ಶಾಸ್ತ್ರ	ಡಾ.ಎಂ.ಎಂ.ಕಲಬುರ್ಗಿ	೧೯೭೨	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೮.	ಕವಿವಿ.	ಕನ್ನಡ ವಿಷಯ ವಿಶ್ವಕೋಶ	—	—	ಕನ್ನಡ ಅಧ್ಯಯನಸಂಸ್ಥೆ, ಮೈಸೂರು.
೯.	ಕಸಂಸ್ಕೃ.	ಕನ್ನಡ ಸಂಸ್ಕೃತಿ	ಎಂ. ಮರಿಯಪ್ಪಭಟ್ಟ	೧೯೭೬	ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.
೧೦.	ಕುವ್ಯಾಭಾ. ವಾ.	ಕುಮಾರವ್ಯಾಸಭಾರತ (ಬಜಾರ್ ಎಡಿಷನ್)	ಕೃಷ್ಣಯ್ಯ ಮತ್ತು ವಾಜಪೇಯ ಗೋವಿಂದಯ್ಯ	—	—
೧೧.	ಕೃದೇವ.	ಕೃಷ್ಣದೇವರಾಯ	ತ್ರಿವಿಕ್ರಮ	೧೯೫೪	ಸುದರ್ಶನ ಮತ್ತು ಕೋ. ಬೆಂಗಳೂರು.
೧೨.	ಕೇದಾರ.	ಕೇಬಾವಿ ಬೋಗಣ್ಣನ ರಗಳೆ	ಹರಿಹರ (ಸಂ॥ ಫ. ಗು. ಹಳಕಟ್ಟಿ)	೧೨೦೦	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೧೩.	ಕೊಲ್ಲಿಮಾ.	ಕೊಲ್ಲೀಪಾಕ ಗ್ರಾಹಾತ್ಮ್ಯ	ಗುರುಮುದ್ದು ಸಂಗಮದೇವ	ಸು. ೧೬೦೦	ಹಸ್ತಪ್ರತಿ: ಕೆ. ೧೯೬೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೧೪.	ಗದಾದ.	ಗದಾಯುದ್ಧ ದರ್ಪಣ	ವ್ಯಾಖ್ಯಾನಕಾರ: ಪ್ರೊ.ಪಿ. ಸುಬ್ರಾಯಭಟ್ಟ	೧೯೬೫	ಜನತಾ ಪವರ್‌ಪ್ರೆಸ್, ಎಟ್ಟು, ದಕ್ಷಿಣಕನ್ನಡ.
೧೫.	ಗಿರಿಕೆ.	ಗಿರಿಕನ್ನಿಕೆ	ಭಾರತೀಸುತ	೧೯೬೬	ಶಾರದಾ ಪ್ರಕಟನಾಲಯ, ಬೆಂಗಳೂರು.
೧೬.	ಗುರುಪ.	ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ	ವಿರೂಪಾಕ್ಷಶಾಸ್ತ್ರಿ	೧೯೫೩	ಗಳಗನಾಥ ಸುರಸ ಗ್ರಂಥಮಾಲೆ, ಹಾವೇರಿ.
೧೭.	ಜೈನಕೋ.	ಜೈನ ಪರಿಭಾಷಾ ರತ್ನಕೋಶ	ತ.ಸು. ಶಾಮರಾಯ, ಹಂ.ಪ. ನಾಗರಾಜಯ್ಯ	೧೯೪೧	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೮.	ತಾತ್ಪನಿ.	ತಾತ್ಪರ್ಯ ನಿರ್ಣಯ ಟೀಕು	ಆನಂದ ತೀರ್ಥಮುನಿ	?	ಹಸ್ತಪ್ರತಿ:ಕೆ.ಎ.೧೧೯, ಕನ್ನಡ ಅಧ್ಯಯನಸಂಸ್ಥೆ, ಮೈಸೂರು.
೧೯.	ತ್ರೈಲೋಚಂ.	ತ್ರೈಲೋಕ್ಯಚಿಂತಾಮಣಿ	ಮಹತ್ತ್ವವಯೋಗಿ	೧೯೧೪	ಹಸ್ತಪ್ರತಿ:ಕೆ.ಎ.೨೭೪, ಕನ್ನಡ ಅಧ್ಯಯನಸಂಸ್ಥೆ, ಮೈಸೂರು.
೨೦.	ಧನಶಾ.	ಧನವಾಸ್ತು ನಿರ್ಣಯ	?	?	ಹಸ್ತಪ್ರತಿ: ಕೆ. ೬೪೪, ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು.
೨೧.	ಪಂಚತಂ.ಅ.	ಪಂಚತಂತ್ರ	ದುರ್ಗಸಿಂಹ (ಸಂ॥ ಎನ್. ಅನಂತರಂಗಾಚಾರ್)	೧೦೩೧	ಶಾರದಾಮಂದಿರ, ಮೈಸೂರು.
೨೨.	ಪಂಚಾತೀ.	ಪಂಚಾತೀತ	?	?	ಹಸ್ತಪ್ರತಿ: ಕೆ. ೧೪೦, ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು.

ಕ್ರಮ ಸಂಖ್ಯೆ	ಸಂಕ್ಷಿಪ್ತ	ಹೆಸರು	ಕರ್ತೃ	ಕಾಲ	ಇತರ ವಿಷಯಗಳು
೨೩.	ಪಂಪದೀ.	ಪಂಪಭಾರತ ದೀಪಿಕೆ	ಡಿ. ಎಲ್. ನರಸಿಂಹಾಚಾರ್	೧೯೭೧	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೨೪.	ಪದ್ಮಟೀ.	ಪದ್ಮಪುರಾಣದ ಟೀಕು	ಚಿಕುಪಾಧ್ಯಾಯ	೧೬೭೨	ಹಸ್ತಪ್ರತಿ: ಕೆ. ೫೩೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೨೫.	ಪದ್ಮಾಚ.	ಪದ್ಮಾವತಿಯ ಚರಿತೆ	ಪದ್ಮನಾಭ	ಸು. ೧೬೮೦	ಹಸ್ತಪ್ರತಿ: ಕೆ. ೧೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೨೬.	ಪದ್ಮಿಪ.	ಪದ್ಮಿನೀ ಪರಿಣಯ	ಚೆನ್ನಯ್ಯ	ಸು. ೧೬೨೦	ಹಸ್ತಪ್ರತಿ: ಕೆ. ೧೧೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೨೭.	ಪ್ರಭುಸಾಂ.	ಪ್ರಭುವಿನ ಸಾಂಗತ್ಯ	ಪರ್ವತೇಶ	ಸು. ೧೬೦೦	ಕೆ. ೫೮೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೨೮.	ಬರಕೋ.	ಬರಕೋ ಪದಾ ಬರಕೋ	ಶಿಶುನಾಳ ಷರೀಫ (ಸಂ॥ ಶಿವಾನಂದ ಗುಬ್ಬಣ್ಣವರ)	—	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧
೨೯.	ಬಾಹೂರ.	ಬಾಹೂರ ಬೊಮ್ಮಯ್ಯನ ರಗಳೆ	ಹರಿಹರ	೧೨೦೦	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೩೦.	ಬೊಂಕಶಾ.	ಬೊಂಬಾಯಿ ಕರ್ನಾಟಕ ಶಾಸನಗಳು	—	—	ಉದಕಮಂಡಲದ ತಾಸನಕಚೇರಿಯಲ್ಲಿ ಸಂಗ್ರಹಿಸಿದುದು.
೩೧.	ಭಾಹಬ್ಬ.	ಭಾರತೀಯ ಹಬ್ಬಗಳು	ಪಂಡಿತ ಚೆ.ಎ.ಕವಲಿ	೧೯೬೧	ಮನೋಹರ ಮುದ್ರಣಾಲಯ, ಧಾರವಾಡ.
೩೨.	ಮಧ್ಯಮ.	ಕನ್ನಡ ಮಧ್ಯಮ ವ್ಯಾಕರಣ	ತೀ.ನಂ.ಶ್ರೀಕಂಠಯ್ಯ	೧೯೩೯	ಮೈಸೂರು ಸರ್ಕಾರದ ಮುದ್ರಣಾಲಯ, ಬೆಂಗಳೂರು.
೩೩.	ಮಲ್ಲಕಾ.	ಮಲ್ಲಕವಿ ಸಂಯೋಜಿತ ಕಾವ್ಯಸಾರಂ	ಮಲ್ಲಕವಿ (ಸಂ॥ ಎನ್. ಅನಂತರಂಗಾಚಾರ್)	?	ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು.
೩೪.	ಮೂರುನಾ.	ಮೂರು ಗ್ರೀಕ್ ನಾಟಕಗಳು	ಅನು॥ ಕ. ವೆಂ. ರಾಘವಾಚಾರ್	?	—
೩೫.	ಮೈಎರಿ.	ಮೈಸೂರು ಎಪಿಗ್ರಾಫಿಕಲ್ ರಿಪೋರ್ಟ್	—	—	ಉದಕಮಂಡಲದ ಶಾಸನ ಕಚೇರಿಯಲ್ಲಿ ಸಂಗ್ರಹ ಮಾಡಿದುದು.
೩೬.	ಯೋಗದೀ.	ಯೋಗದೀಪಿಕಾ	ಅನು॥ ಪ್ರೊ.ಬಿ.ಭೀಮಸೇನರಾವ್	೧೯೭೦	ಬೃಂದಾವನ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಪ್ರೈ.ಲಿ, ಬೆಂಗಳೂರು.
೩೭.	ರಾಜಾವ.	ರಾಜಾವಳಿ ಕಥಾಸಾರ	ದೇವಚಂದ್ರ	೧೮೭೧	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
೩೮.	ರೀವ್ಸ್.	ರೀವ್ಸ್ ಇಂಗ್ಲಿಷ್ ಕನ್ನಡ ನಿಘಂಟು	ರೀವ್ಸ್	—	—
೩೯.	ವಚಸಾ.	ವಚನ ಧರ್ಮಸಾರ	ಎಂ.ಆರ್.ಶ್ರೀನಿವಾಸಮೂರ್ತಿ	೧೯೫೬	ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೪೦.	ವಿಪಕೀ.	ವಿಜಯದಾಸರ ಪದಕೀರ್ತನೆ ಭಾಗ I	ವಿಜಯದಾಸ	೧೮೫೦	ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರು, ೧೯೫೩
೪೧.	ವೀಶೈಪಾ.	ವೀರಶೈವ ಪಾರಿಭಾಷಿಕ ಶಬ್ದಗಳು	ಬಿ. ಶಿವಮೂರ್ತಿಶಾಸ್ತ್ರಿ	೧೯೬೧	—
					—
೪೨.	ಶಂದಾರ.	ಶಂಕರದಾಸಿಮಯ್ಯನ ರಗಳೆ	ಹರಿಹರ	೧೨೦೦	—
೪೩.	ಶಾಸಸಂ.	ಶಾಸನಸಂಗ್ರಹ	(ಸಂ॥ ಅಣ್ಣಿಗೇರಿ)	೧೯೭೫	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೪೪.	ಶಿವಶ.	ಶಿವಶರಣ ಕಥಾರತ್ನಕೋಶ	ತ.ಸು.ಶಾಮರಾಯ	೧೯೬೭	ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.
೪೫.	ಸಕವ.ಕ.	ಸಕಲ ಪುರಾತನರ ವಚನಗಳು (ಭಾಗ I, II, III)	(ಸಂ॥ ಡಾ. ಎಂ.ಎಸ್.ಸುಂಕಾಪುರ)	೧೯೭೮	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೪೬.	ಸಾಮಾರ.	ಸಾಮಾಸಿ ಮಾರರ ರಗಳೆ	ಹರಿಹರ	೧೨೦೦	ಹಸ್ತಪ್ರತಿ: ಓರಿಂ, ಮೈಸೂರು.
೪೭.	ಸೌಎ.	ಸೌತ್ ಇಂಡಿಯನ್ ಎಪಿಗ್ರಫಿ	—	—	ಉದಕಮಂಡಲದ ಶಾಸನ ಕಚೇರಿಯಲ್ಲಿ ಸಂಗ್ರಹಿಸಿದುದು.
೪೮.	ಹಪಸಂ.	ಹಸ್ತಿಕ ಪದಸಂಚಯ	ಟಿ. ಕೇಶವಭಟ್ಟ	೧೯೭೨	ವಾಗ್ದೇವಿ ಪ್ರಕಾಶನ ಮಂದಿರ, ಬೆಂಗಳೂರು.

ಸಂಕ್ಷಿಪ್ತಗಳು ಮತ್ತು ಸಂಕೇತಗಳು

೧. ಸಂಕ್ಷಿಪ್ತಗಳು

(ಅ)	ಅವ್ಯಯ
ಅಡಿಟಿ.	ಅಡಿಟಿಪ್ಪಣಿ
[ಅದ್ವೈತ]	ಅದ್ವೈತ ಸಿದ್ಧಾಂತ
ಅನು ॥	ಅನುವಾದಕ
ಅನ್ಯ.	ಅನ್ಯಭಾಷೀಯ
ಅನ್ಯದೇ.	ಅನ್ಯದೇಶ್ಯ
ಅರ.	ಅರಬ್ಬಿ ಭಾಷೆ
ಅರಿಕೆ	ಅರಿಕೆ
[ಅಶಿಷ್ಟ]	ಅಶಿಷ್ಟ ಪ್ರಯೋಗ
[ಅಶ್ವಶಾ]	ಅಶ್ವಶಾಸ್ತ್ರ
(ಆಲಂ)	ಆಲಂಕಾರಿಕವಾಗಿ
ಇಂ.	ಇಂಗ್ಲಿಷ್ ಭಾಷೆ
(ಉಕ)	ಉತ್ತರ ಕರ್ನಾಟಕ
ಉಪ-	ಉಪಸರ್ಗ
ಉದಾ.	ಉದಾಹರಣೆ
(ಏಕ)	ಏಕವಚನ
ಒಗಟು	ಒಗಟು
ಒರಿ.	ಒರಿಯಾ
ಓರಿಇ.	ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್
ಓರಿಲೈ.	ಗವರ್ನಮೆಂಟ್ ಓರಿಯಂಟಲ್ ಮ್ಯಾನಸ್ಕ್ರಿಪ್ಟ್ಸ್ ಲೈಬ್ರರಿ
ಕ.	ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ (ಉದಾ: ಚನ್ನವ.ಕ., ಬಸವ. ಕ., ಮಹಾದೇ. ಕ.)
(ಕರಾ)	ಕರಾವಳಿಯ ಪ್ರದೇಶ
[ಕಾಮಶಾ]	ಕಾಮಶಾಸ್ತ್ರ
[ಕಾವ್ಯಮಿಾ]	ಕಾವ್ಯಮಿಾಮಾಂಸೆ
ಕುಇ.	ಕುಇಭಾಷೆ
ಕುರುಖ್	ಕುರುಖ್‌ಭಾಷೆ
ಕುವಿ.	ಕುವಿಭಾಷೆ
ಕೃಶಾ.	ಕೃತಕಶಾಸನ
ಕೊಡ.	ಕೊಡಗುಭಾಷೆ
ಕೋತ.	ಕೋತಭಾಷೆ
ಕೋಲಾ.	ಕೋಲಾಮಿಭಾಷೆ
(ಕ್ರಿ).	ಕ್ರಿಯಾವಾಚಕ
[ಕ್ರೈಸ್ತ]	ಕ್ರೈಸ್ತಧರ್ಮ
[ಗಜಶಾ]	ಗಜಶಾಸ್ತ್ರ
[ಗಣಿತ]	ಗಣಿತಶಾಸ್ತ್ರ
(ಗಾದೆ)	ಗಾದೆ
(ಗು).	ಗುಣವಾಚಕ
ಗುಜ.	ಗುಜರಾತಿ ಭಾಷೆ
ಗೊಂಡಿ.	ಗೊಂಡಿಭಾಷೆ
[ಗ್ರಂಥಸಂ]	ಗ್ರಂಥಸಂಪಾದನೆ
[ಚಿತ್ರಶಾ]	ಚಿತ್ರಶಾಸ್ತ್ರ
[ಛಂದ]	ಛಂದಸ್ಸು
[ಜೈನ]	ಜೈನಧರ್ಮ
ಜೋಗುಳ	ಜೋಗುಳ
[ಜ್ಯೋತಿ]	ಜ್ಯೋತಿಶ್ಶಾಸ್ತ್ರ
ಟಿ.	ಟಿಪ್ಪಣಿ
ಟೀ.	ಟೀಕು (ಕೆ)
[ತಂತ್ರಶಾ]	ತಂತ್ರಶಾಸ್ತ್ರ
[ತತ್ತ್ವಶಾ]	ತತ್ತ್ವಶಾಸ್ತ್ರ
ತಮಿ.	ತಮಿಳುಭಾಷೆ
[ತರ್ಕ]	ತರ್ಕಶಾಸ್ತ್ರ
ತುಳು.	ತುಳುಭಾಷೆ
ತೆಲು.	ತೆಲುಗುಭಾಷೆ
(ದಕ)	ದಕ್ಷಿಣ ಕರ್ನಾಟಕ (ಹಳೆಯ ಮೈಸೂರು)
ದೇ.	ಎಚ್. ದೇವೀರಪ್ಪನವರ ಸಂಪಾದಿತಕೃತಿ
ದೇ. ॥	ದೇಶ್ಯ

ದೇಶೀ.	ದೇಶೀಯ
(ದ್ವಿರುಕ್ತಿ)	ದ್ವಿರುಕ್ತಿ
[ದ್ವೈತ]	ದ್ವೈತಸಿದ್ಧಾಂತ
(ನಪುಂ).	ನಪುಂಸಕಲಿಂಗ
(ನಾ).	ನಾಮವಾಚಕ
[ನಾಟ್ಯ]	ನಾಟ್ಯಶಾಸ್ತ್ರ
ನಾಯ್ಕ.	ನಾಯ್ಕಭಾಷೆ
ನೇಪಾ.	ನೇಪಾಳಭಾಷೆ
ನೋ.	ನೋಡಿ
[ನ್ಯಾಯ]	ನ್ಯಾಯಶಾಸ್ತ್ರ
ಪ	ಪಲ್ಲವಿ
ಪಂಜಾ.	ಪಂಜಾಬಿಭಾಷೆ
ಪರಾ.	ಪರಾಮರ್ಶಿಸಿ
ಪಾ.	ಪರಿಶಿಷ್ಟ
ಪರ್ಜ.	ಪರ್ಜಿಭಾಷೆ
[ಪಾಠಾಂ.]	ಪಾಠಾಂತರ
ಪಾರ.	ಪಾರಸಿಭಾಷೆ
ಪಾಲಿ.	ಪಾಲಿಭಾಷೆ
ಪೀ.	ಪೀಠಿಕೆ
ಪು	ಪುಟ
(ಪುಂ).	ಪುಲ್ಲಿಂಗ
(ಪುಂಸ್ತ್ರೀ).	ಪುಲ್ಲಿಂಗ ಮತ್ತು ಸ್ತ್ರೀಲಿಂಗ
ಪೋರ್ಚ್	ಪೋರ್ಚುಗೀಸ್
(ಪ್ರ).	ಪ್ರತ್ಯಯ
ಪ್ರಯೋ.	ಪ್ರಯೋಗ
ಪ್ರಾ.	ಪ್ರಾಕೃತಭಾಷೆ
(ಪ್ರಾದೇ)	ಪ್ರಾದೇಶಿಕ
ಬಿ	ಡಾ॥ ಎಲ್. ಬಸವರಾಜು ಅವರ ಸಂಪಾದಿತಕೃತಿ
(ಬಹುವ)	ಬಹುವಚನ
[ಬೌದ್ಧ]	ಬೌದ್ಧಧರ್ಮ
ಬ್ರಾಹೂಈ.	ಬ್ರಾಹೂಈಭಾಷೆ
(ಭವಿಕೃ)	ಭವಿಷ್ಯತ್ ಕೃದಂತ
[ಭಾಷಾಶಾ]	ಭಾಷಾಶಾಸ್ತ್ರ
[ಭೂಗೋಳ]	ಭೂಗೋಳಶಾಸ್ತ್ರ
(ಭೂತಕೃ)	ಭೂತಕೃದಂತ
(ಭೂತನ್ಯೂ)	ಭೂತನ್ಯೂನ
[ಭೌತವಿ]	ಭೌತವಿಜ್ಞಾನ
ಮರಾ.	ಮರಾಠಿಭಾಷೆ
ಮಲ.	ಮಲಯಾಳಂಭಾಷೆ
ಮಲ್ತೊ.	ಮಲ್ತೊಭಾಷೆ
ಮು.	ಮುನ್ನುಡಿ
[ಮುದ್ರಕ]	ಮುದ್ರಣಕಲೆ
ಮೂಲದ್ರಾ.	ಮೂಲದ್ರಾವಿಡ
[ಯೋಗ]	ಯೋಗಶಾಸ್ತ್ರ
[ರಾಜನೀ]	ರಾಜನೀತಿ
[ರಾಜ್ಯಶಾ]	ರಾಜ್ಯಶಾಸ್ತ್ರ
(ರೂಢಿ)	ರೂಢಿ
{ರೇಖಾಗ]	ರೇಖಾಗಣಿತ
ವ.	ವಚನ
[ವಾಸ್ತು]	ವಾಸ್ತುಶಿಲ್ಪ
[ವಿಜ್ಞಾ]	ವಿಜ್ಞಾನ
[ವಿಶಿಷ್ಟಾ]	ವಿಶಿಷ್ಟಾದ್ವೈತ
[ವೀಶೈ]	ವೀರಶೈವಧರ್ಮ
ವೃತ್ತಿ	ವೃತ್ತಿ
[ವೇದಾಂತ]	ವೇದಾಂತ
[ವೈದ್ಯಶಾ]	ವೈದ್ಯಶಾಸ್ತ್ರ
[ವ್ಯಾಕ]	ವ್ಯಾಕರಣ
ವ್ಯಾಖ್ಯಾ	ವ್ಯಾಖ್ಯಾನ
ಶತ.	ಶತಮಾನ
[ಶಿಲ್ಪಶಾ]	ಶಿಲ್ಪಶಾಸ್ತ್ರ
[ಶೈವ]	ಶೈವಧರ್ಮ

(ಸ).	ಸರ್ವನಾಮ
(ಸಪೂರೂ)	ಸಮಾಸದ ಪೂರ್ವರೂಪ.
ಸಂ.	ಸಂಸ್ಕೃತಭಾಷೆ
ಸಂ. ॥	ಸಂಜ್ಞಾದಿತ, ಸಂಗ್ರಾಹಿತ
[ಸಂಗೀತ]	ಸಂಗೀತಶಾಸ್ತ್ರ
[ಸಾಂಖ್ಯ]	ಸಾಂಖ್ಯಶಾಸ್ತ್ರ
[ಸಾಮುದ್ರಿ]	ಸಾಮುದ್ರಿಕಶಾಸ್ತ್ರ
ಸಿಂಧಿ.	ಸಿಂಧಿಭಾಷೆ
ಸು.	ಸುಮಾರು
ಸೂ.	ಸೂಚನೆ
(ಸ್ತ್ರೀ).	ಸ್ತ್ರೀಲಿಂಗ
ಹ.	ಫ. ಗು. ಹಳಕಟ್ಟಿಯವರ ಸಂಪಾದಿತಕೃತಿ
ಹಿಂ.	ಹಿಂದಿ–ಹಿಂದೂಸ್ತಾನಿ–ಉರ್ದುಭಾಷೆ
ಹೋ.	ಹೋಲಿಸಿ
(R)	Revised Edition
(S)	Supplement

೨. ಸಂಕೇತಗಳು

. . .	ಗ್ರಂಥಭಾಗವನ್ನು ಉದಾಹರಿಸುವಾಗ ನಡುವೆ ಕೆಲವು ಅಕ್ಷರಗಳನ್ನು ಬಿಡಲಾಗಿದೆ ಎಂದು ಸೂಚಿಸುತ್ತದೆ.
x x x	ಪ್ರಯೋಗದಲ್ಲಿ ಗ್ರಂಥಪಾತವಾಗಿರುವುದನ್ನು ಸೂಚಿಸುತ್ತದೆ.
?	ಸಂಪಾದಕೀಯಸಂದೇಹವನ್ನು ಸೂಚಿಸುತ್ತದೆ.
[ ]	ಸಂಪಾದಕೀಯವಾಗಿ ಮಾರ್ಪಡಿಸಿರುವ ಅಥವಾ ಸೇರಿಸಿರುವ ಅಕ್ಷರಗಳನ್ನೂ, ಅರ್ಥವಿವರಣೆ ಇತ್ಯಾದಿಗಳನ್ನೂ ಈ ಚಿಹ್ನೆಗಳ ನಡುವೆ ಕೊಡಲಾಗಿದೆ.
¶	ಈ ಚಿಹ್ನೆಯ ಮುಂದೆ ವಿಶೇಷಾಂಶಗಳನ್ನು ಕೊಡಲಾಗಿದೆ.
o	ಈ ಚಿಹ್ನೆ ಒಂದು ಶಬ್ದದ ಕೆಳಪಕ್ಕದಲ್ಲಿ ಇದ್ದರೆ, ಆ ಶಬ್ದವನ್ನು ಈ ನಿಘಂಟಿನಲ್ಲಿ ವಿಶೇಷಕಾರಣಗಳಿಗಾಗಿ ಪ್ರತಿಪಾದಿಸಿಲ್ಲವೆಂದು ಸೂಚಿಸುತ್ತದೆ. ಉದಾಹರಣೆಗೆ 'ಅಂಕಮವರ' ಶಬ್ದದ ಕೆಳಗೆ 'ದುವರ್ಕ' ನೋಡಿ.
>	ಒಂದು ರೂಪದಿಂದ ಮತ್ತೊಂದು ನಿಷ್ಪನ್ನವಾಗಿದೆ ಎಂಬುದನ್ನು ಸೂಚಿಸುತ್ತದೆ.
<	ಒಂದುರೂಪ ಮತ್ತೊಂದರಿಂದ ನಿಷ್ಪನ್ನವಾಗಿದೆ ಎಂಬುದನ್ನು ಸೂಚಿಸುತ್ತದೆ. ಮತ್ತು ಒಂದು ಶಬ್ದದ ರೂಪವನ್ನು ಮತ್ತೊಂದು ಮುಖ್ಯ ಶಬ್ದದ ರೂಪದ ಕೆಳಗೆ ವಿವೇಚಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.
~	ಒಂದು ಶಬ್ದಕ್ಕೂ ಮತ್ತೊಂದಕ್ಕೂ ಮೂಲ ಸಂಬಂಧವುಂಟು ಎಂಬುದನ್ನು ಸೂಚಿಸುತ್ತದೆ.
←	ಒಂದು ಶಬ್ದ ಬೇರೊಂದು ಭಾಷೆಯ ಶಬ್ದದಿಂದ ಎರವಲಾಗಿ ಬಂದದ್ದು ಎಂಬುದನ್ನು ಸೂಚಿಸುತ್ತದೆ. ಸಂಸ್ಕೃತ, ಪ್ರಾಕೃತ ಭಾಷೆಗಳಿಂದ ಬಂದ ಶಬ್ದಗಳ ವಿಷಯದಲ್ಲಿ ಈ ಚಿಹ್ನೆಯನ್ನು ಉಪಯೋಗಿಸಿಲ್ಲ.
*	ಈಗ ದೊರೆಯದ, ಆದರೆ ಹಿಂದೆ ಇದ್ದಿರಬೇಕೆಂದು ಊಹಿಸಲಾಗಿರುವ ರೂಪವನ್ನು ಸೂಚಿಸುತ್ತದೆ.
॥	ಈ ಚಿಹ್ನೆಯ ಮುಂದೆ ಜ್ಞಾತಿಶಬ್ದಗಳನ್ನು ಕೊಡಲಾಗಿದೆ. ಈ ಚಿಹ್ನೆಯ ಮುಂದೆ ಹೋಲಿಕೆಗಾಗಿ ಬೇರೆ ಭಾಷೆಗಳ ಶಬ್ದಗಳನ್ನು ಕೊಡಲಾಗಿದೆ.
=	ಒಂದು ಶಬ್ದಕ್ಕೂ ಮತ್ತೊಂದು ಶಬ್ದಕ್ಕೂ ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಸೂಚಿಸುತ್ತದೆ. ಉದಾ: ಅಂಬುಜಸಖ= ಅಂಬುಜಬಂಧು.
≡	ಒಂದು ಶಬ್ದವನ್ನು ಎರಡು ರೂಪಗಳಲ್ಲಿ ಬರೆಯಬಹುದಾದಾಗ, ಅವುಗಳಿಗೆ ಅರ್ಥ ವ್ಯುತ್ಪತ್ತಿಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಸೂಚಿಸುತ್ತದೆ. ಉದಾ: ಅಂತಃಸತ್ತ್ವ ≡ ಅಂತಸ್ಸತ್ತ್ವ.
Δ	ಈ ಚಿಹ್ನೆಯೊಂದಿಗಿರುವ ಶಬ್ದವು ಅದರ ಮುಖ್ಯೋಲ್ಲೇಖದ ಪೂರ್ವರೂಪವಿರಬಹುದೆಂಬುದನ್ನು ಸೂಚಿಸುತ್ತದೆ. ಉದಾ: Δ ಪದ್ಯ, 'ಹದ್ಯ' ನೋ.

೩. ೇತರ

ಅರಕ	ಅರಕಲಗೂಡು
ಅರಸೀ	ಅರಸೀಕೆರೆ
ಆನೆಕ.	ಆನೆಕಲ್
ೇಂಡಿ.	ೇಂಡಿ
ಉಡುಪಿ	ಉಡುಪಿ
ಎಡತೊ.	ಎಡತೊರೆ (ಕೃಷ್ಣನ. ಕೃಷ್ಣರಾಜನಗರ)
ಕಡೂರು.	ಕಡೂರು
ಕಾನಕಾ.	ಕಾನಕಾನಹಳ್ಳಿ
ಕುಂದಾಪು.	ಕುಂದಾಪುರ
ಕುಣಿಗ.	ಕುಣಿಗಲ್
ಕೃಷ್ಣರಾ.	ಕೃಷ್ಣರಾಜಪೇಟೆ
ಕೊಪ್ಪ.	ಕೊಪ್ಪ
ಕೋಲಾರ.	ಕೋಲಾರ
ಗುಂಡ್ಲುಪೇ.	ಗುಂಡ್ಲುಪೇಟೆ
ಗುಬ್ಬಿ.	ಗುಬ್ಬಿ
ಗೋರಿಬಿ.	ಗೋರಿಬಿದನೂರು
ಚನ್ನಗಿ.	ಚನ್ನಗಿರಿ
ಚನ್ನಪ.	ಚೆನ್ನಪಟ್ಟಣ
ಚನ್ನರಾ.	ಚನ್ನರಾಯಪಟ್ಟಣ
ಚಳ್ಳಕೆ.	ಚಳ್ಳಕೆರೆ
ಚಾಮರಾ.	ಚಾಮರಾಜನಗರ
ಚಿಂತಾಮ.	ಚಿಂತಾಮಣಿ
ಚಿಕ್ಕನಾ.	ಚಿಕ್ಕನಾಯಕನ ಹಳ್ಳಿ
ಚಿಕ್ಕಬ.	ಚಿಕ್ಕಬಳ್ಳಾಪುರ
ಚಿಕ್ಕಮ.	ಚಿಕ್ಕಮಗಳೂರು
ಚಿತ್ರದು.	ಚಿತ್ರದುರ್ಗ
ಜಗಳೂ.	ಜಗಳೂರು
ತರೀಕೆ.	ತರೀಕೆರೆ
ತಿಪಟೂ.	ತಿಪಟೂರು
ತಿರುಮ.	ತಿರುಮಕೂಡ್ಲು ನರಸೀಪುರ
ತೀರ್ಥಹ.	ತೀರ್ಥಹಳ್ಳಿ
ತುಮಕೂ.	ತುಮಕೂರು
ದಾವಣ.	ದಾವಣಗೆರೆ
ದೇವನ.	ದೇವನಹಳ್ಳಿ
ದೊಡ್ಡಬ.	ದೊಡ್ಡಬಳ್ಳಾಪುರ
ನಂಜನ.	ನಂಜನಗೂಡು
ನಗರ.	ನಗರ
ನಾಗಮಂ.	ನಾಗಮಂಗಲ
ನೆಲಮಂ.	ನೆಲಮಂಗಲ
ಪಾವುಗ.	ಪಾವುಗಡ
ಪುಂಗನೂ.	ಪುಂಗನೂರು
ಬಂಕಾಪು.	ಬಂಕಾಪುರ
ಬಾಗಪ.	ಬಾಗೆಪಲ್ಲಿ
ಬಾಗೇವಾ.	ಬಾಗೇವಾಡಿ
ಬೆಂಗಳೂ.	ಬೆಂಗಳೂರು
ಬೇಲೂರು.	ಬೇಲೂರು
ಬೌರಿಂಗ್	ಬೌರಿಂಗ್‌ಪೇಟೆ
ಮಂಗಳೂ.	ಮಂಗಳೂರು
ಮಂಜರಾ.	ಮಂಜರಾಬಾದ್
ಮಂಡ್ಯ.	ಮಂಡ್ಯ
ಮದ್ದಗಿ.	ಮದ್ದಗಿರಿ
ಮಳವ.	ಮಳವಳ್ಳಿ
ಮಾಗಡಿ.	ಮಾಗಡಿ
ಮಾಲೂರು.	ಮಾಲೂರು

ಮುಳಬಾ.	ಮುಳಬಾಗಲು
ಮೂಡಗೆ.	ಮೂಡಗೆರೆ
ಮೈಸೂರು.	ಮೈಸೂರು
ಮೊಳಕಾ.	ಮೊಳಕಾಲುಮುರು
ರಾಣೆಬೆ.	ರಾಣೆಬೆನ್ನೂರು
ಲಕ್ಷ್ಮೇಶ್ವ.	ಲಕ್ಷ್ಮೇಶ್ವರ
ಶಿಕಾರಿ.	ಶಿಕಾರಿಪುರ
ಶಿಡ್ಲಘ.	ಶಿಡ್ಲಘಟ್ಟ
ಶಿರಾ.	ಶಿರಾ
ಶಿವಮೊ.	ಶಿವಮೊಗ್ಗ
ಶೃಂಗೇರಿ.	ಶೃಂಗೇರಿ
ಶ್ರೀನಿವಾ.	ಶ್ರೀನಿವಾಸಪುರ
ಶ್ರೀರಂಗ.	ಶ್ರೀರಂಗಪಟ್ಟಣ
ಸಾಗರ.	ಸಾಗರ
ಸೊರಬ.	ಸೊರಬ
ಹಾನುಗ.	ಹಾನುಗಲ್ಲು
ಹಾವೇರಿ.	ಹಾವೇರಿ
ಹಾಸನ.	ಹಾಸನ
ಹಿರಿಯೂ.	ಹಿರಿಯೂರು
ಹುಣಸೂ.	ಹುಣಸೂರು
ಹೆಗ್ಗಡ.	ಹೆಗ್ಗಡದೇವನ ಕೋಟೆ
ಹೊನ್ನಾಳಿ.	ಹೊನ್ನಾಳಿ
ಹೊಸಕೋ.	ಹೊಸಕೋಟೆ
ಹೊಳಲ್ಕೆ.	ಹೊಳಲ್ಕೆರೆ
ಹೊಳೆನ.	ಹೊಳೆನರಸೀಪುರ

ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ಸಂಪುಟ	ಬಿಡುಗಡೆಯಾದ ವರ್ಷ	ಪುಟಗಳು	ತಬ್ಬಗಡು
೧.	೧೯೭೦	೧-೧೩೨೨	ಅ - ೧೨ (ಉಪಧ್ಮಾನೀಯ).
೨.	೧೯೭೬	೧೩೨೩-೨೪೭೪	ಕ - ಗಾಢಿಕೆ.
೩.	೧೯೭೭	೨೪೭೫ - ೩೪೪೨	ಗಾಢಿಸು - ತಿಮಿರ್$_1$.
೪.	೧೯೭೯	೩೪೪೩ - ೪೪೯೦	ತಿಮಿರ್$_2$ - ನಾಭಿ.
೫.	೧೯೮೪	೪೪೯೧ -೫೪೭೧	ನಾಭಿಕಮಲ - ಪಬ್ಬಟನೆ.
೬.	೧೯೮೦	೫೪೭೨ - ೬೪೪೦	ಪಾಉಗ್ಗಮಣ - ಬಿಲ್ಲ$_1$.
೭.	೧೯೮೩	೬೪೪೧ - ೭೭೪೭	ಬಿಲ್ಲ$_2$ - ಲೌಹಿತ್ಯ.
೮.	೧೯೮೫	೭೭೪೮ - ೯೦೨೧	ವ - ಟೂಂತ.

ಕನ್ನಡ ನಿಘಂಟು

ಎಂಟನೆಯ ಸಂಪುಟ

ವ

ವ$_1$ (ನಾ). ೧. ಕನ್ನಡ ವರ್ಣಮಾಲೆಯ ನಲವತ್ತೊಂಬತ್ತನೆಯ ಅಕ್ಷರ ; ಅವರ್ಗೀಯವ್ಯಂಜನದ ನಾಲ್ಕನೆಯ ಅಕ್ಷರ : ಕಂಠೋಷ್ಠ - ಔ . . . ದಂತೋಷ್ಠ - ವ (ಕೈಪಿಡಿ. ೫). ೨. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ: "ಘ ಢ ಭ ವಂ ನೆಜೆ ನಾಲ್ಕು" (ಮಂಗರಾ. ೧೦೪-೧೦).

ವ$_2$ (ಅ). ೧. ಅಥವಾ ; ಇಲ್ಲವೆ : ಒಂದು ರೇಖೆಯಿಂದ ಸುತ್ತಲ್ಪಟ್ಟು ಇರುವ ಪ್ರದೇಶವನ್ನು, ವ ಕ್ಷೇತ್ರವನ್ನು ವರ್ತುಳ, ಪರಿಧಿ - ವ - ವೃತ್ತವೆಂದು ಹೇಳುವುದು (ಭೂಮಿಅ. ೯); ಇಂಡಿಯಾ ವೈಸ್‌ರಾಯಿ ವ ಗವರ್ನರ್‌ಜನರಲ್‌ಯವರಿಂದ ಮಂಜೂರ್ ಮಾಡಲ್ಪಟ್ಟು (ಗ್ರಾಮಾಶ.೪ ಟೀಕೆ). ೨. ಮತ್ತು ; ಜೊತೆಗೆ : ಅಲ್ಲಿ ಅಮಲುಮಾಡುವಂಥ ವ ಪಾರುಪತ್ಯಮಾಡುವಂಥ ವ ಮೊಕಸ್ತರು (ರಾಚೇಂದ್ರ. ೧೨೫).

[< ಪ್ರಾ. ವಾಅ. / ಸಂ. ವಾ. / ಅರ. ಮರಾ. ವ]

-ವ$_3$ (ಪ್ರ). ಒಂದು ಕೃದಂತ ಭಾವವಾಚಕ ಪ್ರತ್ಯಯ : 'ಒಡ್ಡವ' ಪರಾ.

ವಂಕ$_1$, ಬಂಕ್ಕು$_2$, ಬಂಕ್ಕೆ$_2$, ವಂಕು (ನಾ). ೧. ಡೊಂಕು; ಕೊಂಕು ; ವಕ್ರ : ವಕ್ರ-ವಂಕ (ಶಬ್ದಾನು. ೬೦ ಪ್ರಯೋ). ೨. ನೀರಿನ ಹರಿವು, —ಪ್ರವಾಹ : ಮನದಾತಂಕವನು ಪರಿಹರಿಸಿ ಮುನ್ನಿನ ವಂಕದಲಿ ಮುಳುಗಿದವನೆದ್ದನು (ನಿಭಾಗ. ೯-೧೬-೪೬). ೩. ಅಗಸೆ ಬಾಗಿಲು ; ಹೆಬ್ಬಾಗಿಲು : ಎತ್ತ ಸುತ್ತಿ ಬಂದಡೂ ವಂಕದ ತಪ್ಪಲಿನಲ್ಲಿ ಹೋಗಬೇಕು (ಮೋಕಮಾ. ೧೫೫-೫೮೪); ಕಲಿ ಘಟೋತ್ಕಚ ನೋಡಿ ಬಾಗಿಲೊಳಗಿಪ್ಪಗಳ ಪಡಿಮುಖವ ದಾಂಟಿದನು ವಂಕಮಂ (ತುರಂಗ. ೧೯-೫೦). ೪. ದಾರಿ ; ಮಾರ್ಗ : ಕೋಟೆಯಿದ್ದುದು . . . ಘೋಟಕದ ಮದಕರಿಯ ಕಂಡಿಯ ದಾಟುಗಳ ಹುಲಿಮುಖದ ವಂಕದ ಕೂಟದುರುಶಾಲಾವಿಲಾಸದ ವಿವಿಧ ರಚನೆಯಲಿ (ತೊರಾ. ೫-೨-೪). ೫. "ಕೋಡು ಬಾಗಿದ ಎತ್ತು" (ಪಾನಕೋ. ೪೪). ೬. ಕುದುರೆಯನ್ನು ಏರುವಾಗ ಮತ್ತು ಸವಾರಿ ಮಾಡುವಾಗ ಕಾಲನ್ನಿಡಲು ಜೀನಿಗೆ ಅಳವಡಿಸಿರುವ ಬಳೆ ; ರಿಕಾಪು: ಹಿಡಿದ ವಾಳೆಯ ಸಡಿಲಿಸಿ ಮದದಿಂದುಬ್ಬಿ ಒಡನೆ ವಂಕವ ಮೆಟ್ಟಿ ನಿಂದು ಕಡುಗಲಿ ತುರಗಾರೋಹಕರೇಱಿದ ಕಡುಹನಿನ್ನೇನೆಂಬೆನದನು (ಅಂಚಿ. ೨೪-೨೯). ೭. (?) : ವಿಳಸಿತ ವಿಯತ್ತಳಂ ಕೊತ್ತಳಮಧಟರ ಗಂಡಗುಂಡಕಟ್ಟಳೆ ಮುಗಿಲಟ್ಟಳೆ ಪಗೆವರಾಳ್ವರೆ? ಬೀಳ್ವಳೆ ಬಗೆದಾಳ್ವರೆ ಮೆಱೆದುವರಿವಿಟಂಕಂ ವಂಕಂ (ಪುಷ್ಪಸ್ರ. ೭-೭೦). **ಬಂಕ್ಕು$_2$** : ೧. 'ಬಂಕೋಲು' ಪರಾ. ೮. ಒಂದು ಬಗೆಯ ಆಯುಧ : ಖಡ್ಗ . . . ಬಂಕು . . . ಜವದಾಡೆಯೆಂಬ ಬತ್ತೀಸಾಯುಧಪಾಣಿಗಳಾದ ಘನದೇವತೆಗಳರ್ಕುಂ (ವಿವೇಕ. ೨೧೪); ಕಯ್ದು ಮುಱಿಯೆ ಕಯ್ಯ ಹರಿಗೆಯ ತೆಗೆದಿಟ್ಟು ಬಯ್ದು ಮೂದಲಿಸಿ ಬಂಕಿನೊಳು ಕಾಯ್ದುಱಿದಳಿಯಲು (ಕುರಾಸಾ. ೧೨-೬೮). ೯. ಒಂದು ಬಗೆಯ ಆಭರಣ ; ವಂಕಿ : ರನ್ನದ ಬಂಕು, ವಜ್ರದ ಪೆಂಡೆಯ, ಕಂಕಣ ಮೊದಲಾದ ಬಗೆಬಗೆಯಾದ ನಗಗಳು ಅವನ ಮೈಮೇಲೆ ಝಗಝಗಿಸುತ್ತಿದ್ದುವು (ಕುಮಾಸಾ. ೩೬೦). **ಬಂಕ್ಕೆ$_2$** : ೧೦. ಕೊಕ್ಕೆ ; ಕೊಂಡಿ : ದಾರ ಪೋಣಿಸಿ ಇದನ್ನು ಆ ಬಂಕೆಗೆ ತೂಗ ಕಟ್ಟಿರಿ (ಮುಂಬಯಿ. ೫-೫೩). 'ವಂಕಿ' ಪರಾ. **ವಂಕು** : ೧. ತೆರೆಗಳ ಏರಿಳಿತದಲ್ಲಿ ಕಾಣುವ ವಂಕು . . . ಒಂದು ಬಗೆಯ ರೂಪರುಚಿಯನ್ನುಂಟುಮಾಡಿವೆ (ಸೌಂದಸ. ೨). 'ಕೊಂಕುವಂಕು' ಪರಾ. [< ಪ್ರಾ. ವಂಕ. / ಸಂ. ವಂಕ, ವಕ್ರ]

ವಂಕ$_2$ 'ಪಕ್ಕ' ನೋ.

ವಂಕದರ 'ವಂಕದಾರ' ನೋ.

ವಂಕದಾರ, ವಂಕದರ, ವಂಕಬಾರ (ನಾ). (ಕೋಟೆ ಮುಂತಾದುವುಗಳ ಹೆಬ್ಬಾಗಿಲಿನ ಸಮೀಪದಲ್ಲಿ ಮಾಡಿರುವ) ಚಿಕ್ಕ ಬಾಗಿಲು ; ಸಾರ್ವಜನಿಕರ ಉಪಯೋಗಕ್ಕಲ್ಲದ ಖಾಸಗಿ ಬಾಗಿಲು ; ಪಕ್ಷದ್ವಾರ : "ವಂಕದರಂ, ವಂಕದಾರಂ. ವಂಕಬಾರಂ - ಈ ೩ ವಕ್ರದ್ವಾರಕ್ಕೆ ಪೆಸರ್" (ಕಶಾ. ೫೯-೩೦೦); ಬಗ್ಗವಳ್ಳಿಯ ಬಳ್ಳಿಗಾವಣದೋಳಿಯಿಂ ಸೊಗಯಿಪ್ಪ ಸಮ್ಮಗ್ಗವಾಕ್ಷದ ವಂಕದಾರದ . . . ನಿವೇಶದೊಳ್ . . . ಸುಖಮಿರ್ಪಿನಂ (ಶಾಂತಿಪು. ೫-೭೯); ವಕ್ರದ್ವಾರ - ವಂಕದರ, ವಂಕದಾರ, ವಂಕಬಾರ (ಶಮದ. ೨೯೬ ಪ್ರಯೋ). **ವಂಕದರ** : ಕೋಟೆಗಾವಗಂ ಕೆಡಪುವ ಗಗ್ಗೆ ವಂಕದರದಿಂ ಪೊಱಮಟ್ಟಟಿವಾಳ್ಗಮಾನ್ಯೆಯಾಳ್ ಗಡಣಿಸೆ ಕಾದುತಿರ್ದುದು ಮಹೇಂದ್ರಪದಾತಿEತಾಕಿತಿನ ಮುತ್ತಿ ಸುತ್ತಲುಂ (ಚಂದ್ರಪ್ರ. ೫-೧೦೬); ಇನಿಯಂ ತಾಳ್ದಿದನೆಂದು ವಂಕದರದೊಳ್ನಿಂದಾರಯಲ್ಕಲ್ಲಿ ಬರ್ಪಿನೆಗಂ . . . ಚುಂಬಿಸಿ ಬಳಿಕ್ಕಂತಾತನಂ ಕೂಡಿದಳ್ (ವೀರವಿ. ೬-೧೦೯). **ವಂಕಬಾರ** : ವಕ್ರದ್ವಾರ — ವಂಕದರ, ವಂಕದಾರ, ವಂಕಬಾರ (ಶಮದ. ೨೯೬ ಪ್ರಯೋ); ವಂಕದರಂ, ವಂಕದಾರಂ, ವಂಕಬಾರಂ (ಶಬ್ದಾನು. ೬೭೮ ಪ್ರಯೋ). IP ಸಂಸ್ಕೃತದ 'ಪಕ್ಷ' ಮತ್ತು 'ವಕ್ರ' ಎಂಬ ಎರಡು ಶಬ್ದಗಳಿಗೂ 'ವಂಕ' ಎಂದು ತದ್ಭವವಾಗುವುದರಿಂದ ಅರ್ಥನಿರ್ಧಾರದಲ್ಲಿ ವ್ಯತ್ಯಾಸವಾಗ ಬಹುದು. ಸಂಸ್ಕೃತ ಸಾಹಿತ್ಯದಲ್ಲಿ 'ಪಕ್ಷದ್ವಾರ' ಎಂಬುದು ಅನೇಕ ಕಡೆಗಳಲ್ಲಿ ಬರುವ ಸಮಾಸ. ಆದರೆ 'ವಕ್ರದ್ವಾರ'ಕ್ಕೆ ಉಲ್ಲೇಖಗಳು ಸಿಕ್ಕಿಲ್ಲ.

[< ಸಂ. ಪಕ್ಷದ್ವಾರ]

ವಂಕಬಾರ 'ವಂಕದಾರ' ನೋ.

ವಂಕವಾಗಿಲು (ನಾ). = ವಂಕದಾರ : ಹುಲಿಮೊಗ ವಂಕವಾಗಿಲು ಕೋಟೆ ಕೊತ್ತಳ ಸಲಿಲಪೂರಿತದ ಪೇರಗಳು ನಲಿನಾಯತಾಕ್ಷಿ ನೋಡುತೆ ಬಂದಳು ಶಿವನೊಲಿದಿರ್ದ ನಂದನದೆಡೆಗೆ (ಮೋಹತ. ೨೪-೨೯). [ವಂಕ$_2$ (< ಪಕ್ಕ) + ಬಾಗಿಲು (< ಬಾಗಿಲ್)]

ವಂಕಿ, ಬಂಕಿ (ನಾ). ೧. (ವಸ್ತ್ರ, ವಸ್ತು ಮುಂತಾದುವನ್ನು) ತೂಗುಹಾಕಲು ಅಥವಾ ಹಿಡಿದುಕೊಳ್ಳಲು ಅನುಕೂಲವಾಗುವಂತೆ ತುದಿ ಅಥವಾ ಕೊನೆಯನ್ನು ಬಗ್ಗಿಸಿದ ಲೋಹದ ಕೊಂಡಿ, —ಕೊಕ್ಕೆ: ಉಷ್ಣಕಾಲದಲ್ಲಿ ಉಪಯೋಗಿಸುವ ಬಾಳದ ಬೇರಿನ ಪರದೆಗಳನ್ನು ಸುತ್ತಿ, ಮೇಲೆ ಕಬ್ಬಿಣದ ವಂಕಿಗೆ ತಗಲಿಸಿದ್ದಾರೆ (ಮಂಜುಕ. ೪); ಕಟ್ಟಿಗೆಗಳ ತುದಿಗಳಿಗೆ ನೂಲಿನ ಹಗ್ಗಗಳನ್ನು ಕಟ್ಟಿ ಅವುಗಳನ್ನು ಡವಿಕೆಯ ವಂಕಿಗಳಿಗೆ ತೂಗಹಾಕುವರು (ಕಭಾಗ. ೫೭). ೨. ತೋಳಿನಲ್ಲಿ ಧರಿಸುವ ಒಂದು ಬಗೆಯ ಆಭರಣ ; ತೋಳುಬಂದಿ ; ಕೇಯೂರ : "ಕೇಯೂರಂ, ಅಂಗದಂ — ೨ ಬಾಹುಪುರಿ ಹೆಸರು, ನಾಗಮುರಿಗೆ, ತೋಳುತೊಡಿಗೆ, ಬಾಜೂಬಂದು, ವಂಕಿ" (ಸಿದ್ಧಾಂಶಿ. ೨೦೧); ರತ್ನದ ವಂಕಿ ನಾಗಮುರಿಗಳಂ ಧರಿಸಿ (ಸೌಗಂಧಿ. ೮೮-೧೪). ೩. ಮೀನುಹಿಡಿಯುವ ಗಾಳ: ಎರೆಯ ವಂಕಿಯೊ ಕಳಿತ ಮೆಕ್ಕೆಯೊ ಹುರಿಯ ಬಲೆಯೋ . . . ಬಳಕೆಯನೀ ಸಮಂಜಸತರದ ಸಾತ್ವಿಕರೆತ್ತ ಬಲ್ಲರು (ಕುಮಾಅ. ೮-೭೬). ೪. (ಸುಗಂಧದ್ರವ್ಯಗಳನ್ನು ಇರಿಸುವ) ಕೊಂಬಿನಂತೆ ಬಾಗಿರುವ ಒಂದು ಬಗೆಯ ಭರಣಿ : ಜವಾದಿಯ ವಂಕಿ ಪೊಡರ್ವ ಗಂಧದ ಸಿಪ್ಪು ಕರ್ಪೂರದ ನಾಳಿಗಳ ಪಿಡಿದೊಡನೆ ನಡೆದರೊಲಿದು (ಪದ್ಮರಾ. ೮-೭) ; ಜವಾದಿಯ ವಂಕಿ ಕರ್ಪೂರದಿಂದಾದ ತೈಲದ ಕುಪ್ಪಿಗೆಗಳಾ ಗೃಹದೊಳು ಬಿಡಿಬಿಡಿಯಾಗಿಹವು (ಅಂಚಿಪ. ೩-೧೦೬). ೫. ಸುಗಂಧದ್ರವ್ಯಗಳನ್ನು ತೂಕಮಾಡಲು ಬಳಸುವ ಒಂದು ತೂಕ, —ಪ್ರಮಾಣ : ತೂಕಕಟ್ಟಣಿಗೆ . . . ಒಪ್ಪುವ ಜವ್ವಾಜಿಗೆ ವಂಕಿ (ವೃಹಾ. ಅನುಬಂಧ. ೧, ೩-೧೬). ೬. (ಮೇದರು ಬಳಸುವ) ಒಂದು ಬಗೆಯ ಬಾಗಿದ ಕತ್ತಿ: "ವಂಕಿಯೆನೆ ದೀವಿ ಮೇದರ ಕತ್ತಿಯಕ್ಕು" (ಮಂಗರಾ. ೧೧೩-೮). ೭. ಬಾಗಿರುವ ಒಂದು ಬಗೆಯ ಆಯುಧ : ತುಂಡಿಸುವ ವಂಕಿಯ ನೆಡುವ ಬಲ್ಲೆಹದ ಸೀಳುವಿಟ್ಟಿಯ . . . ಧಾಳಾಧೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಸಿನಲಿ (ಕುಮಾಕ. ೧೦-೯); ಪಾಶವಂಕುಶದ ವಂಕಿಯ ಲೌಡಿಯ ಜವದಾಡೆಯ . . . ಪೊಡರ್ಪು ಪಡಿತಳಿಸೆ (ರಾಜಶೇ. ೬-೧೦ ವ). ೮. (ಹೆಂಗಸರು ಬಳಸುವ) ಸಂತಾನನಿರೋಧದ ಒಂದು ಸಾಧನ : ಮಿತಸಂತಾನಯೋಜನೆಯಲ್ಲಿ ಹೆಂಗಸರು

ವಂಕಿ ಧರಿಸುವುದನ್ನು ಜನಪ್ರಿಯಗೊಳಿಸಲಾಗಿದೆ (ರೂಢಿ). ಬಂಕಿ : ೭. ಬಂಕಿಯಂ ತೂಗಿ ತೇಂಕುತ್ತುಂ ಪರಿವ ವೈರಿವೀರರುಮಂ ಮುದ್ಗರಮಂ ತಿರಿಪಿ ಪರಿವ ಮುದ್ಗರಗಲಿಗಳುಮಂ . . . ಕಂಬು (ಲೀಲಾವ. ೫-೧೧೪ ವ).

ವಂಕಿಯ ಕಸವ = ಒಂದು ಬಿರುದು (?) : ಪರಬಲ ಸೂಱೆಗಾಱನು ಮುಪ್ಪಿಡಿಯ ತಿಮ್ಮ ಧುರಧೀರ ವಂಕಿಯ ಕಸವ ಕರಡಿಯ ಕಾಟ ಬಿರಿದಿನ ಸಂಗಮನೆಂಬ ವರಸುಭಟರ ಕಳುಪಿದನು (ಕುಂಸಾಂ. ೧೯-೯೨). IP 'ಕಸವ' ಎನ್ನುವುದು ಪ್ರಸಿದ್ಧ ವೀರನೊಬ್ಬನ ಹೆಸರಾಗಿರಬಹುದು. [ದೇ. ॥ ತಮಿ. ವಜ್ಕಿ; ಮಲ. ವಂಕಿ; ತುಳು. ವಂಕಿ, ಉಗ್ಗಿ, ಒಗ್ಗಿ; ತೆಲು. ವಂಕಿ, ಒಂಕೆ./ ಸಂ. ವಕ್ರಿನ್]

ವಂಕಿಮ (ಗು). ಬಾಗಿರುವ ; ಕೊಂಕಿರುವ : ಸಾಗರದ ನಾಗರನ ಭೋಗರೆವ ಭೋಗಕುಲಬಲಮವ್ವಳಿಸಿದುದು ನಿರಂತರಂ, ತಟಗತ ಅಶೋಕವನ ವಂಕಿಮ ಶಿಲಾವೇಲೆಯಂ (ಶ್ರೀರಾಮಾ. ೩೩೧-೪). [< ಪ್ರಾ. ವಂಕಿಮ./ ಸಂ. ವಕ್ರಿಮನ್]

ವಂಕು 'ವಂಕ್' ನೋ.

ವಂಕುಡಿ, ಬಂಕುಡಿ (ನಾ). ೧. ಬಾಗಿರುವುದು; ಡೊಂಕಾದುದು; ಸೊಟ್ಟಗಾದುದು. ೨. ಬಾಗಿದ ಅಲಗುಳ್ಳ ಕತ್ತಿ; ಕಠಾರಿ; ಬಾಕು: "ಮುಕ್ಕಂಬಿಯ ಕಠಾರಿ ವಂಕುಡಿಗಳಕ್ಕುಂ" (ಮಂಗಾ. ೨೮-೩೬); ಉಡೆಯೊಳು ಕಟ್ಟಿದ ವಂಕುಡಿ ಕಯ್ಯೊಳು ಪಿಡಿದ ಸಬಳ ಕಾಲ ತೊಡರು ಬಿಡದೆ ಮೆಱೆಯೆ (ಕುಂಸಾಂ. ೧೨-೬೪). ಬಂಕುಡಿ : ೧. 'ಬಂಕುಡಿಗಾಲು' ಪರಾ. ೨. ಬೀರಗಚ್ಚೆಯನಮರ್ಚ ಬಂಕುಡಿಯಂ ಕಟ್ಟಿ . . . ಆ ಮೂವರುಂ ಗೃಹಮಂ ಪೊಱಮಟ್ಟು ರಾಜವೀಥಿಯೊಳ್ಸರಭಸಂ ಬರ್ಪಾಗಳ್ (ವೃಷವಿ. ೪೨-೨೧ ವ). 'ವಂಕಿ' ಪರಾ. [< ಪ್ರಾ. ವಂಕುಡ, ವಂಕುಣ./ ತೆಲು. ವಂಕಿಣಿ]

ವಂಕ್ಷಣ (ನಾ). ಕಿಬ್ಬೊಟ್ಟೆಯ ಕೆಳಭಾಗಕ್ಕೂ ತೊಡೆಯ ಮೇಲ್ಭಾಗಕ್ಕೂ ನಡುವೆ ಇರುವ ಭಾಗ; ತೊಡೆಯ ಸಂದು: "ತೊಡೆಯ ಸಂಧಿ ವಂಕ್ಷಣವೆಂಬುದು" (ಹಲಾಯು. ೮೬-೩೬೯). [ಸಂ.]

ವಂಖಣ (ನಾ). = ವಂಕ್ಷಣ : ಶಕ್ತಿಶಿವನಿಯಾ ಮುಷ್ಕದ ತಕ್ಕೆಡೆ ವಂಖಣಮದೆಂಬ ಪೆಸರದಕಕ್ಕುಂ (ಅಶ್ವಶಾ. ೯-೪೯). [< ಸಂ. ವಂಕ್ಷಣ]

ವಂಗ (ನಾ). ೧. ಒಂದು ಬಗೆಯ ಲೋಹ ; ತವರ ; ತ್ರಪು : ವಂಗ ಮಾಕ್ಷಿಕ ಹೇಮಲೋಹಂಗಳನೆಲ್ಲ ಹಿಂಗದೆ ಸಮಭಾಗೆ ಮಾಡಿ (ಸಾಳ್ವಸಾಂ. ೨೦). ೨. ಸೀಸಲೋಹ. ೩. ಬಂಗಾಳಪ್ರಾಂತ ಮತ್ತು ಆ ಪ್ರಾಂತಕ್ಕೆ ಸೇರಿದ ವ್ಯಕ್ತಿ : ಅಂಗ'ವಂಗ ಕಳಿಂಗ . . . ತುರುಷ್ಕ ಪ್ರವರ ನಾನಾದ್ವೀಪದೇಶಾಧೀಶ್ವರರುಂ . . . ಕೂಡಿ ನಡೆಯೆ (ಪಂಪಭಾ. ೯-೯೫ ವ); ವಂಗರ ಮುರಿದು ವರನೇಪಾಳ ಕರ್ವರ ಹೂಣಯರನು ವಿಶಾಲ ಕಾಂಭೋಜಾದಿಗಳನಪ್ಪಳಿಸಿದನು ತಿರುಗಿ (ಕುಮಾಸ. ೩-೨೭). ೪. ಹತ್ತಿ. ೫. ಬದನೆ ಗಿಡ. [ಸಂ.]

ವಂಗಡ, ಪಂಗಡ (ನಾ). ೧. ಗುಂಪು ; ಸಮೂಹ : "ಬಂಬಲ್, ತುಱುಗಲ್, ವಂಗಡಂ . . . ಗುಮ್ಮಿ, ಗೊಂದಣಿ (ಉಂದಲ್) — ಈ ೪೦ ಸಮೂಹಂ" (ಶಾಕಾ. ೫೬-೨೨೨); ಮನುಗಳ ವಂಗಡದ ಮುನಿಗಳ ಗೊಂದಣದ ಸುರರ ನೆರವಿಯ . . . ರಥಪ್ರತಾನದ ಪದಾತಿಬಲದರ್ಕೆಲದೊಳ್ (ಗಿರಿ. ೧೦-೭೯ ವ); ವಂಗಡದಲೆಂಬತ್ತು ಸಾವಿರ ತುಂಗಗಜಘಟೆ ಕವಿದವು (ಕುಮಾವ್ಯೂ. ೨-೭೮). 'ಒಗ್ಗಡ' ಪರಾ. ೨. ಬೇರೆಯಾದುದು ; ಪ್ರತ್ಯೇಕವಾದುದು : 'ವಂಗಡದೆಗೆ' ಪರಾ. ಪಂಗಡ: ೧. ನಡೆವಡವಿಯೋ ಬಲುಭುಜರ ಪಂಗಡವೊ ಸಬಳವೊ ನಭದ ಕಾಲ್ಗಳೊ . . . ಎನಲಾದುದು ಕುತೂಹಲಿಕೆ (ಕುಮಾಭಿ. ೪-೪೧). ೩. (ವರ್ಣ, ಮತ, ರಾಜಕೀಯ ಮುಂತಾದ ಕಾರಣಗಳಿಂದ ಬೇರೆ ಬೇರೆಯಾದ) ಜನರ ಗುಂಪು,—ವರ್ಗ: ಇವರಿಗೆ ಅರಿಯದಂತೆ ಆ ವರ್ಗದಲ್ಲಿ ಎರಡು ಪಂಗಡಗಳಾಗಿಬಿಟ್ಟವು (ರಂಗಾಯಿ. ೨೯); ಒಂದು ಪಂಗಡದ ಪುರೋಹಿತ ಅಥವಾ ನಾಯಕನು ಸಾಧಾರಣವಾಗಿ ಏಗೋಳ ಶಾಸ್ತ್ರಜ್ಞನಾಗಿರುತ್ತಿದ್ದನು (ತತ್ವಪ್ರಾ. ೪೮೧).

ಪಂಗಡವಾಗು = ಬೇರೆಯಾಗು ; ಪ್ರತ್ಯೇಕತೆಯನ್ನು ಹೊಂದು : ಪಂಗಡವಾದವ ಸಂಗಡ ಬಂದಾನೆ? (ಗಾದೆ).

[ದೇ. ॥ ತಮಿ. ವಜ್ಕಟ, ವಜ್ಕೊಡ; ತುಳು. ಪಂಗಡ; ತೆಲು. ವಂಗಡ, ವಂಗಸ]

ವಂಗಡದೆಗೆ (ಕ್ರಿ). ಪ್ರತ್ಯೇಕವಾಗು ; ಬೇರೆಯೆಂದು ಭಾವಿಸು : ಆದಿಲಿಂಗವೆಂಬುದು ಬೇಱೆಲ್ಲಕಾಣೆರೊ ವಂಗಡದೆಗೆದು ನೀವು ನುಡಿವಿರಿ ಭೋ (ಅವಚಂ. ೨೮೨-೧೫೫); ವಂಗಡದೆಗೆದು ನೀವು ನುಡಿಯದಿರಿ (ಪದಗೋ. ೨-೧೬೭). [ವಂಗಡ + ತೆಗೆ$_1$]

ವಂಗಡಿಸು (ಕ್ರಿ).೧. ಗುಂಪುಗೂಡು ; ಸಂದಣಿಸು : ಈತನೇ ನಮಗರ್ಜುನನು ಕೊಳ್ಳೀತನನು ಹೊಯ್ ಹೊಯ್ಯೆನುತ ಗತಭೀತರಿಟ್ಟಣಿಸಿದರು ಸಮಸಪ್ತಕರು ವಂಗಡಿಸಿ [ಪಾಠಾಂ. ಸೂರಿಯಲಿ] (ಕುಮಾಕ. ೧೫-೧೦); ಮಧುಸೂದನನ ವಿರಹದಲಿರ್ದರಾ ಗೋಪಿಯರು ವಂಗಡಿಸಿ (ಅಕ್ರೂಪ. ೫-೩). ೨. ಪ್ರತ್ಯೇಕವಾಗಿರಿಸು ; ಬೇರೆ ಮಾಡಿಡು : ವಂಗಡಿಸಿದ ಭೋಜ್ಯವಸ್ತುನಿವಹಂ ಬಱೆದಪ್ಪಿನಮಲ್ಲಿ ವಿಸ್ಮಯಂಬಡೆ ಸಕಲಾಮರರ್ ಸವಿದನಾ ಗಣಬಾಲಕನಾತ್ಮಲೀಲೆಯಿಂ (ವೃಷವಿ. ೫-೮೫).

[ವಂಗಡ + – ಇಸು$_2$]

ವಂಗಭಸ್ಮ (ನಾ). ರಾಸಾಯನಿಕಕ್ರಮದಿಂದ ಸುಟ್ಟು ತಯಾರಿಸಿದ ತವರದ ಪುಡಿ; ತವರದ ಭಸ್ಮ : ವಂಗಭಸ್ಮ, ಜಾಗಗಡ್ಡೆ, ಮಂಗರವಳ್ಳಿಬೇರು, ಇವು ಪ್ರತ್ಯೇಕ ೨ ಹಲ ಸಹ ಇವೆಲ್ಲವಂ ಚೂರ್ಣಿಸಿ . . . ತೆಗೆದುಕೊಳ್ಳೆ . . . ಕ್ಷಯಜ್ವರ, ಕ್ರಿಮಿರೋಗ ಮುಂತಾಗಿ ಮಾಣ್ಬುಂ (ಸಕವೈ. ೨೯೭). [ಸಂ.]

ವಂಚ 'ಬಂಚ' ನೋ.

ವಂಚಕ (ಗು). ೧. ಮೋಸಮಾಡುವ ; ವಂಚಿಸುವ ; ಕಪಟತನದ. (ನಾ). ೨. ಮೋಸ ಮಾಡುವವನು ; ಕಪಟಿ : ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡ ಇಂತೀ ತ್ರಿವಿಧದಲ್ಲಿ ವಂಚಕನಾದರೆ ಈಸು ವಿಧದೊಳಗೆ ಅಂಗವಿಲ್ಲ ಮೇಲೆ ಸತ್ಪುರುಷರ ಸಂಗವಿಲ್ಲ (ಬಸವ. ೮೮೮); ಇದಿರುಗಾಣದೆ ಕೊಲೆಗೆ ನಿರ್ಬಂಧದಲಿ ಬೆಸಸುವ ಕೃಷ್ಣನಕಟಾ ಮದಮುಖನೊ ದುರ್ಬೋಧಕನೊ ವಂಚಕನೊ (ಕುಮಾಭಿ. ೩-೨೮). ೩. ನರಿ ; ಜಂಬುಕ : "ಶಿವಾ . . . ವಂಚಕಃ, ಕ್ರೋಷ್ಟುಃ, ಫೇರುಃ, ಫೇರವಃ, ಜಂಬುಕಃ – ೧೦ ನರಿಯ ಹೆಸರುಗಳು" (ಸಿದ್ಧಾಂಶಿ. ೧೫೪). ೪. ಒಂದು ಜಾತಿಯ ಮುಂಗುಸಿ. ೫. ಒಂದು ಜಾತಿಯ ಇಲಿ ; ಮೂಗಿಲಿ. [ಸಂ.]

ವಂಚಕಿ (ನಾ). ಮೋಸಮಾಡುವವಳು ; ವಂಚಿಸುವವಳು : ದುರುಳೆಯರು ಕಪ್ಪೆಯರು ವಂಚಕಿಯರು ಜಗಳಗಂಟೆಯರು (ಬಸಪು. ೪೦-೫೩). [ವಂಚಕ + – ಇ$_2$]

ವಂಚನ (ನಾ). ೧. ಮೋಸ ; ಕಪಟ ; ಮೋಸಗಾರಿಕೆ : "ವಂಚನಂ, ಅತಿ ಸಂಧಾನಂ, ವ್ಯಳೀಕಂ, ಪ್ರತಾರಣಂ – ಈ ೪ ಆಱುಗೊಳ್ಳುದು" (ಹಲಾಯು. ೧೨೩-೬೩). ೨. ಭ್ರಮೆಗೊಳಿಸುವುದು ; ಭ್ರಾಂತಿಯನ್ನುಂಟುಮಾಡುವುದು. ೩. ಅಡ್ಡಿ ; ತಡೆ ; ಪ್ರತಿಬಂಧ. [ಸಂ.]

ವಂಚನೆ (ನಾ). ೧. = ವಂಚನ ೧: "ಮಾಂಚೆನೆ ವಂಚನೆ" (ಕವಿಕಂ. ೨೧೦); ಅರ್ಥ ಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಯಾಚಾರ (ಬಸವ. ೨೧೭); ಪಳಿವು ವಂಚನೆ . . . ವಿಕೃತಮಾಯಾವಳಿಗಳೆಂಬಿವು ನಿನ್ನೊಳಿಲ್ಲಲೆ ರಾಯ (ಕುಮಾಸ. ೧-೪೫). ೨.= ವಂಚನ ೨ : ಚಳಬಳಿಕೆ ಚಪ್ಪರಣೆ ವಂಚನೆ ನೇಹವೆಂಬೀ ಪರಿಯ ಮಾಯಾಮಯದ ಮಹಿಳಾಜನ ವಿರಾಜಿಸಿತು (ತೊರಾ. ೧-೫-೩೨). [ಸಂ. ವಂಚನಾ]

ವಂಚನೆಗಾತಿ (ನಾ). = ವಂಚಕಿ : ವೃಶ್ಚಿಕದೊಳನ್ಯಾಯ ವಂಚನೆಗಾತಿ ಸಲೆ ಧನುವಿನೊಳು ಗಾಡಿಕಾರ್ತಿ (ಏಕಶ್ಲೋ. ೪-೨೧-೨೨). [ವಂಚನೆ + – ಕಾತ್ತಿ$_5$]

ವಂಚನೆಗಾರ (ನಾ). ಮೋಸಮಾಡುವವನು ; ಕಪಟಿ : ಅವನೊಬ್ಬ ವಂಚನೆಗಾರ (ರೂಢಿ). [ವಂಚನೆ + – ಕಾರ$_1$ (< – ಕಾಱ)]

ವಂಚನೆಗೈ (ಕ್ರಿ). ಮೋಸಮಾಡು ; ವಂಚಿಸು : ಕ್ಷಿತಿಯೊಳಾರುಂಟೆನ್ನವೋಲ್ ನಿಜಸತಿಗೆ ವಂಚನೆಗೈದ ನರನೆಂದತಿಶಯದ ಶೋಕದಲಿ ನಡೆದನು (ನಳಚ. ೬-೩).

[ವಂಚನೆ + ಗೈ (< ಕೆಯ್$_1$)]

ವಂಚಿ (ನಾ). ೧. ಬಿದಿರಿನಿಂದ ರಚಿತವಾದ ಒಂದು ಬಗೆಯ ವಾದ್ಯ; ಕೊಳಲು. ೨. ಕೊಳಲನ್ನು ನುಡಿಸುವವನು ; ವೇಣುವಾದಕ : ವಂಚಿ ದುಗ್ಗಯ್ಯಂಗೆ ಮತ್ತರೊನ್ದು ಕಲುಕುಟಿಗ ಮಾರಸಿಂಘೋಜಂಗೆ ಮತ್ತರ್ನ್ನಾಲ್ಕು (ಸೌಇಇ. IX - i, ೮೭-೨೩; 1034). [< ಸಂ. ವಂಶೀ]

ವಂಚಿಗ (ನಾ). = ವಂಚಿ ೨ : ವಂಚಿಗಂಗಂ ಪಱೆಕಾಱರ್ಗ್ಗಂ ಪಾತ್ರಕ್ಕಂ

ದೇಸಿಗಭಾತ್ರಭೋಜನಕ್ಕಮೆಂದು ಸಮಕಟ್ಟಿ ತ್ರಿಕಾಳಭೋಗಂ ನಡೆವಂತಾಗಿ . . . ಕುಡೆ (ಸೌಂಇ. IX-i, ೮೦-೧೫; 1018). 'ವಂಸಿಗ' ಪರಾ. [ವಂಚ (< ಬಂಚ) + – ಇಗ]

ವಂಚಿತ (ಗು). ೧. ಕಪಟಕ್ಕೊಳಗಾದ ; ಮೋಸಹೋದ. (ನಾ). ೨. ಮೋಸಹೋದವನು ; ವಂಚನೆಗೊಳಗಾದವನು : "ವಿಪ್ರಲಬ್ಧಃ, ವಂಚಿತಃ – ೨ ವಂಚಿಸಿಕೊಂಡವನ ಪೆಸರು" (ಸಿದ್ಧಾಂತಿ. ೩೩೪); ಮನವು ನಪುಂಸಕವೆಂದೆ ನಾನವಳನು ಕರೆತರಲಟ್ಟಿದೆ ಮನವ ರಮಿಸಿತದಲ್ಲಿಯೆ ವಂಚಿತನಾದೆನು ಪಾಣಿನಿಯಂತಹ ಕಿತವ (ಇಂದಾಪ. ೮೬-೧೭). ೩. ಭ್ರಷ್ಟವಾದುದು ; ಚ್ಯುತವಾದುದು : ತುಳಸೀದಾಸನ ರಾಮಾಯಣ ಜನತೆಗೆ ದೊರೆಯದಿದ್ದರೆ, ಇಡೀ ಭಾರತ ತನ್ನ ಧರ್ಮದಿಂದ ವಂಚಿತವಾಗಿ . . . ಕ್ಷುದ್ರಧರ್ಮಗಳ ಪಾಲಾಗುತ್ತಿತ್ತು (ಭಾರದ. ೪೬೨). [ಸಂ.]

ವಂಚಿಸು (ಕ್ರಿ). ೧. ಮೋಸಮಾಡು ; ವಂಚನೆಗೊಳಿಸು ; ಠಕ್ಕಿಸು : ಇವನೆನ್ನಂ ವಂಚಿಸಿದನೆಂದು ಸುರಿಗೆಗಿತ್ತು ದಡದಡಿಸುತ್ತಮಿಱಿಯಲು (ಚಾವುಂಪು. ೧೪); ಪೆಱರ ಬಗೆಯನಱಿದು ಸಂಧಾನಂಗೆಯ್ದು ವಂಚಿಸುವುದು ವಂಚನೆಯೆಂಬುದು (ಪಂಚತಂ. ೨೧-೪); ಎಲವೊ ಕೌರವ ಹಿಂದೆ ವಂಚಿಸಿ ಕಳವಿನಲಿ ಜೂಜಾಡಿ ರಾಜ್ಯವ ಗೆಲಿದ ಗರ್ವವನುಗುಳು (ಕುಮಾರವ್ಯಾ. ೧೦-೪೯). ೨. ಮರೆಮಾಚು ; ಮುಚ್ಚು ; ಅಡಗಿಸು : "ವಂಚಿಸು–ಅಪಲಾಪೆ" (ಶಮಧಾ); ಬಂದ ಸಮಯವನಱಿತು ಇದ್ದುದ ವಂಚಿಸದಿದ್ದಡೆ ಕೂಡಲಸಂಗಮದೇವನೊಲಿದು ಸಲಹುವ (ಬಸವ. ೨೧೫). ಜನಪತಿಗೆ ಭಂಡಾರಿ ಹೇಳಿದುದನಿತುಮಂ ವಂಚಿಸದೆ ವಿವರಿಸಿ ಗೋಪಿ ಹೇಳುತ್ತ (ಬಸಪು. ೧೦-೬). ೩. ತಪ್ಪಿಸಿಕೊಳ್ಳು ; ನುಣುಚಿಕೊಳ್ಳು : ಕಡುಕೆಯ್ದು ಕುತ್ತೆ ವಂಚಿಸಿ ಬಿಡೆ ಬೀಸಿದೊಡೊಡನೆ ಬೀಸಿ . . . ವಿಘಾತದಿಂ ಪೊಯ್ದೊಡಾಂಕೆಗೊಂಡಣ್ಣೆ ಕಾದಿದರ್ ಕಡುಗಲಿಗಳ್ (ಗದಾಯು. ೮-೯); ಬೊಬ್ಬಿಟ್ಟದಿರಾಂತು ರಕ್ಕಸನ ಗಟ್ಟಿವಾಳಿಕೆಯ ವಂಚಿಸಿ ನೊಸಲೊಡೆವಂತೆ ಹೆಟ್ಟಿದ ವಜ್ರಮುಷ್ಟಿಯಲಿ (ಮೋಹತ. ೧೨-೮೮)

[ವಂಚನ + – ಇಸ್ಸು$_3$]

ವಂಚಿಸುಹ (ನಾ). ಮೋಸಮಾಡುವಿಕೆ ; ವಂಚಿಸುವಿಕೆ : "ವಿಪ್ರಲಂಭಃ, ವಿಸಂವಾದಃ, ವಿಪ್ರಳಾವಃ – ಈ ೩ ವಂಚಿಸುಹ" (ಹಲಾಯು. ೧೨೩-೬೩).

[ವಂಚಿಸು + – ಹ$_2$ (< – ಪ$_2$)]

ವಂಜಕ (ನಾ). ನಿರ್ಗತಿಕ; ದರಿದ್ರ(?) : ಬಂಡೆಗೆ ಮಕ್ಕಳು ವಂಜಕರಿಗೆ ಬೇಡಿತ್ತನೀವ ಕುಂಜರಾಂಬರಧರ (ಸೌಇ. XV, ೬೭೨-೧೬; ಸು. 15ನೆಯ ಶತ). [?]

ವಂಜುಲ, ವಂಜುಳ (ಗು). ೧. ಕೊಂಕಿದ; ಡೊಂಕಾದ. (ನಾ). ೨. ಒಂದು ಬಗೆಯ ಸಸ್ಯ ; ಬೆತ್ತದ ಗಿಡ ; ಹಬ್ಬೆ ಗಿಡ : "ವಂಜುಲಃ ನಿಚುಲಃ – ಈ ೨ ಹಬಸೇಗಿಡದ ಪೆಸರ್" (ಹಲಾಯು. ೩೨-೪೨). ೩. ಒಂದು ಬಗೆಯ ಸಸ್ಯ ; ನೆಮ್ಮಿಗಿಡ ; ತಿನಿಶ. ೪. ಒಂದು ಬಗೆಯ ಮರ ; ಅಶೋಕವೃಕ್ಷ. ೫. ಒಂದು ಬಗೆಯ ಮರ ಮತ್ತು ಅದರ ಹೂವು ; ಬಕುಳ. ೬. ಒಂದು ಬಗೆಯ ಹಕ್ಕಿ; ಹೊರಸು. ವಂಜುಳ : ೨. ಎಱಗದ ತೀರ ಭೂರುಹಮನೆಯ್ದೆ ಮೊದಲ್ಗಿಡೆ ಕೀಟ್ಟು ಬೆಂಗೆ ಬಿಟ್ಟೆಱಗಿದ ವಂಜುಳಪ್ರಕರಮಂ ಪರಿವರ್ಧಿಪ ಸಿಂಧುತೋಯದಂತೆ . . . ರಾಜ ಲೀಲೆ ಕಣ್ಣೆಱೆದುದು (ಪುಷ್ಪಸು. ೧೩-೬). ೩. "ತಿನಿಶಃ . . . ವಂಜುಳಃ, ಚಿತ್ರಕೃತ್–೭ ಹುಲಿಗೇಮರದ ಪೆಸರುಗಳು. ಹುಲಿಗಲಿ, ನೆಮ್ಮಿ, ಹೊಂಗೆ" (ಸಿದ್ಧಾಂತಿ. ೧೧೭). ೪. ಪನಸ ಬದರೀ ವಕುಳ ವಂಜುಳ . . . ಬಿಲ್ವಾಶ್ವತ್ಥಾದಿ ವೃಕ್ಷಂಗಳು ಸುಮನಸಭರಿತವಾಗಿ ಶೋಭಿಸುತಲಿತ್ತು (ಪುರಾವಿ. ೯೬). ೫. ಖರ್ಜೂರಂ ವಂಜುಳಮುಂ . . . ಮಂಜುಳ ದುದ್ಯಾನವನದೊಳೆರ್ಪವು ಪೆಂಪಿಂ (ಹಮ್ಮೀರ. ೪-೧೫). ೬. "ಜೀವಂಜೀವಃ . . . ವಂಜುಳಃ, ಕಪೋತಃ – ಈ ೬ ಹೊಱಸು" (ಹಲಾಯು. ೪೨-೧೦೦). [ಸಂ.]

ವಂಜುಳ 'ವಂಜುಲ' ನೋ.

ವಂಟ (ನಾ). ಆಳು; ಸೇವಕ: "ಠಕಾರಕ್ಕೆ ಟಕಾರಂ – ಠಕೋರ್ – ಕಟೋರ . . . ವಂಠ - ವಂಟ" (ಶಮದ. ೨೫೫ ಪ್ರಯೋ); ತನಗಿಲ್ಲದ ವಂಟ ತುಂಟ ಚೂಡಾರತ್ನಾ (ನಿಚಿವಾ. ೧೦೨೭). 'ಬಂಟ$_1$' ಪರಾ. [< ಸಂ. ವಂಠ]

ವಂಟಕ (ನಾ). ೧. ಭಾಗವಾಗುವಿಕೆ ; ಪಾಲಾಗುವಿಕೆ. ೨. ಪಾಲು ಮಾಡುವವನು ; ಭಾಗಮಾಡುವವನು. ೩. ಭಾಗ ; ಪಾಲು : "ಅಂಶಃ, ಭಾಗಃ, ವಂಟಕಃ – ೩ ಕೆಲವು ಭಾಗಕ್ಕೆ ಹೆಸರು; ಹಿಸ್ಸೆ, ಪಾಲು" (ಸಿದ್ಧಾಂತಿ. ೩೦೨). ೪. ಅವಿವಾಹಿತ ; ಬ್ರಹ್ಮಚಾರಿ : (ಕ). 'ವಂಠ' ಹೋ. [ಸಂ.]

ವಂಟಶಾಲೆ (ನಾ). ಅಡುಗೆಮನೆ ; ಪಾಕಶಾಲೆ : ವಂಟಶಾಲೆಯಲಿ ಅಡಿಗೆ ಮಾಡಬೇಕು (ಎಕ. IX (S), ದೇವನೂ. ೧೬-೩೦; 1697).

[<— ತೆಲು. ವಂಟಶಾಲ, ವಂಟಸಾಲ]

ವಂಟೆ 'ವೆಂಟೆ' ನೋ.

ವಂಟೆ (ನಾ). ಒಂದು ಬಗೆಯ ಮರ : ವಂಟೆ (ವೊಟಂಬಾ) – ಇದರ ಕಟ್ಟಿಗೆ ಮಿದು. ಕಾಯಿಯನ್ನು ಮಸಾಲೆಯಲ್ಲಿ ಹಾಕುವರು (ಕಭಾಗೃ. ೪೭); ವಾಟೆಗಿಡ, ವಂಟೆಮರ (ಮೃಡಿಗಿ. ೧೦-೧೬೨). [?]

ವಂಠ (ನಾ). ೧. ಆಳು ; ಸೇವಕ. ೨. ಕುಳ್ಳ; ಕುಬ್ಜ. ೩. ಕುಂಟ ; ಹೆಳವ. ೪. ಮದುವೆಯಾಗದವನು ; ಅವಿವಾಹಿತ. ೫. ಒಂದು ಬಗೆಯ ಆಯುಧ ; ಕೊಂತ. [ಸಂ.]

ವಂಠದೆಱೆ (ನಾ). ಒಂದು ಬಗೆಯ ತೆರಿಗೆ : ರಾಜಗುರು ಚಂದ್ರಮೌಳಿದೇವರ್ ಸಮಸ್ತ ಶಿವಗಣಸಹಿತಂ ಬಂದುಚಿತಪೂಜೆಯಂ ಸಾನಂದದೆ ಕೈಕೊಂಡು ವಂಠದೆಱೆಮಾನ್ಯಮಿದಕ್ಕೆಂದಾ ಕುಮಾರದೇವರ್ಗ್ಗಂದಾ ಸಿದ್ಧೇಶನೊಸೆವ ಧಾರೆಯನೆಱದರ್ (ಎಕ. VI, ಕಡೂರು. ೧೨-೩೦; 1233). [ವಂಠ + ತೆಱೆ$_3$]

ವಂಡು, ಬಂಡು$_1$ (ನಾ). ೧. ಕೆಸರು ; ರಾಡಿ : "ಕೆಸಱುರ್ಬುರ್ಬೆಱೆಱೆ ನೀರ್ಬೊಬ್ಬುಳಿಸಿ ಬುಳುಬುಳುಂದೇಂಕಿ ವೆಂಕಿವಂತೆಡೆಯ್ದು ಕಂಪಂ ಮಸಗುತ್ತುಂ ಬತ್ತೆ (ಜಗವಿ. ೧೭-೬೪); ಚಿಕ್ಕಾವಾಳೆ ವಂಡಿನೊಳಗಿಕ್ಕಿತಾ ಬೆಳಸಿನಂತೆ ಬಿಕ್ಕಿ ಬೀಗಿ ಬೆಳದಿಯಲ್ಲೆ ಸತ್ಯಭಾಮಿನಿ (ತ್ರಿಕೃಪಾ. ೪೧). ೨. (ಮದ್ಯ ಮೊದಲಾದ) ದ್ರವವಸ್ತುವಿನ ತಳದಲ್ಲಿ ನಿಲ್ಲುವ ಗಸಿ ; ಚರಟ. (ಗು). ೩. ಜವುಗಾದ : ವಂಡುಭೂಮಿಯಾಗಿ ಮಡಿಕಟ್ಟು ನೆಲವಾಗಿದ್ದರೆ ಮೊದಲು ಎಳ್ಳು ಬಿತ್ತಿ ಆ ಬೆಳೆಯನ್ನು ತೆಗೆದುಕೊಂಡು ಪುನಃ . . ಭೂಮಿಯ ಪರೀಕ್ಷಿಸಿ ಬಿತ್ತಬೇಕು (ಕೃಷಿಪ್ರ. ೨೭). 'ಒಂಡು' ಹೋ. ಬಂಡು$_1$. ೪. (ಗಟ್ಟಿಯಾದ) ರಸ : ಈ ಕವಳವನು ಹುಣಿಸೆಯ ಹಣ್ಣಿನ ಬಂಡಿನಲ್ಲು ಕಲಸಿ ಲೇಪವ ಮಾಡುವುದು (ಅಶ್ವಲೇ. ೧೦೫-೪).

[ದೇ. ॥ ತಮಿ. ವಣ್ಬಲ್; ತೆಲು. ವಂಡು, ವಂಡ, ವಂಡಲಿ]

-ವಂತ (ಪ್ರ). ಇದನ್ನು ಪಡೆದವನು, ಹೊಂದಿದವನು ಅಥವಾ ಇದನ್ನು ಪಡೆದುದು, ಕೂಡಿದುದು ಎಂಬ ಅರ್ಥದಲ್ಲಿ ನಾಮಪದದ ಮುಂದೆ ಬರುವ ತದ್ಧಿತಪ್ರತ್ಯಯ : ಅಲ್ಲಿ ಇದುಂಟೆಂಬರ್ಥದೊಳೆಲ್ಲಿಯುಮುಳ್ಳೊಡೆಯ ವಂತಶಬ್ದ ಮವಕ್ಕುಂ (ಕಾವ್ಯಾವ ೩೩೬); ವಂತ ಪ್ರತ್ಯಯಕ್ಕೆ – ಸಿರಿವಂತಂ, ಜಯವಂತಂ, ಜಸವಂತಂ, ಹೂನ್ನವಂತಂ (ಶಮದ. ೨೦೬ ಪ್ರಯೋ). 'ಪರಿಮಳವಂತ' ಪರಾ. [< ಸಂ. ಮತ್]

ವಂತಕಾರಿ 'ಹೊಂತಕಾಱೆ$_1$' ನೋ.

ವಂತಿಗೆ, ವತ್ತಿಗೆ (ನಾ). ೧. (ಧರ್ಮಕಾರ್ಯಕ್ಕಾಗಿ ನೀಡುವ) ಸಹಾಯ ಧನ ; ಕೊಡುಗೆಯ ಹಣ: ಸಂಟಿಗೆಯ ಶಿವಭಟ್ಟರು, ರಾಮನ ಗುಡಿ ಕಟ್ಟಲಿಕ್ಕೆ ಒಂದು ಪೈ ಕೂಡ ಕೊಡದವರು. ಅಂಥವರನ್ನು ಮಾರುತಿಗುಡಿ ಕಟ್ಟಿಸಲಿಕ್ಕೆ "ವಂತಿಗೆ" ಕೊಡಿ ಅಂದರೆ ಹೇಗಾದೀತು (ಪರಾವ. ೭); ಧರ್ಮಮಠವನ್ನು ಕಟ್ಟಿಸಲಿಕ್ಕೆಂದು ಇವರು ವಂತಿಗೆ ಕೂಡಿಸುತ್ತಿರುವರು (ಮೋಹೇವ. ೧೬). ೨. (ಸಾರ್ವಜನಿಕಸಂಸ್ಥೆ, ಸಂಘ, ಸಭೆ, ಸಮಾರಂಭ ಮುಂತಾದ ಕಾರ್ಯಗಳಿಗಾಗಿ ಸಾರ್ವಜನಿಕರಿಂದ ತೆಗೆದುಕೊಳ್ಳುವ) ಚಂದಾಹಣ ; ವರ್ಗಣೆ : ನಮ್ಮಲ್ಲಿ ಕೂಡಿದ ವಂತಿಗೆಯ ಹಣವು ನಲವತ್ತೈದು ರೂಪಾಯಿಗಳು (ಕಪವು. ೫-೧೮). ೩. ಕೊಡುಗೆ ; ಕಾಣಿಕೆ : ಭೂಗರ್ಭಶಾಸ್ತ್ರ, ಬಿಗೋಳಶಾಸ್ತ್ರ, ಭೌತಶಾಸ್ತ್ರ ಮುಂತಾದಭಾಗಗಳಲ್ಲೂ ಸಾಕಷ್ಟು ಪರಿಶ್ರಮವಹಿಸಿ, ಜ್ಞಾನಭಂಡಾರಕ್ಕೆ ತನ್ನ ವಂತಿಗೆಯನ್ನು ಸಲ್ಲಿಸಿದನು (ಸಸ್ಯಶ. ೫). **ವತ್ತಿಗೆ** : ೩. ವಿರೂಪಾಕ್ಷನಾಯಕರು ತಮಗೆ ವತ್ತಿಗೆಯಾಗಿ ಪಾಲಿಸಿದ ಹಾಸನದ ಸೀಮೆಯ ನಿಡಿವಿಡಿಯ ಗ್ರಾಮಕ್ಕೆ ಸಲುವಂಥ ಕಾಲುವಳಿಯ ವಿವರ (ಎಕ.V, ಹಾಸನ. ೧೫-೨೦; 1562).

[ದೇ. ॥ ತುಳು. ಒಂತಿಗೆ]

ವಂತು (ನಾ). ಸರದಿ ; ಪಾಳಿ : ತಂತಿನಲ್ಲಿ ವನಾಂತರದಲ್ಲಿ ವಂತು ವಂತು ವಂಶಂಗಳಲ್ಲಿ ಪಂಥ ಮಾಡುವಲ್ಲಿ . . . ಕೌಂತೇಯಸಹಾಯ ವಿಜಯವಿಠಲನಂಪ್ರಿಚಿಂತೆ ಮಾಡುವ ಕುಲವಂತಗೆ ಭಯವೆ (ವಿಸಾಸು. ೬೯-೫). 'ಒಂತು$_1$' ಪರಾ.

[ದೇ. ॥ ತೆಲು. ವಂತು]

-ವಂತೆ (ಪ್ರ). ಇದನ್ನು ಪಡೆದವಳು ಅಥವಾ ಉಳ್ಳವಳು ಎಂಬರ್ಥದಲ್ಲಿ ನಾಮಪದದ ಮುಂದೆ ಬರುವ ಒಂದು ತದ್ಧಿತಪ್ರತ್ಯಯ : 'ಪತಿವಂತೆ' ಪರಾ. [– ವಂತ + – ಎ$_2$]

ವಂದ 'ವರ್' ಪರಾ.

ವಂದಕ (ನಾ). ೧. ನಮಸ್ಕರಿಸುವವನು ; ವಂದಿಸುವವನು : ಮಾಯೆಯ ಬಲೆಗೆ ಸಿಲುಕದಿರು ಎಂದು ಪಿರಿಯರಸನು ಕರುಣದಲಿ ವಂದಕನ ತಿಳುಹಿದನು (ನಿಭಾಗ. ೧೧-೧೭-೪೮). ೨. ಒಂದು ಬಗೆಯ ಪರಾವಲಂಬೀಸಸ್ಯ : "ಜೀವಂತಿಗೆ, ಬಂದರಿಕೆ, ಬದನಿಕೆ, ರಾಸನಾ, ವಂದಕಗಿಡ" (ಸಸ್ಯನಿ. ೧೩೩). [ಸಂ.]

ವಂದನ$_1$ (ನಾ). ಸೆರೆ ; ಬಂಧನ : ಬಂಧನ – ವಂದನ (ಶಬ್ದಾನು. ೧೪೪ ಪ್ರಯೋ).

[< ಸಂ. ಬಂಧನ]

ವಂದನ$_2$ (ನಾ). ೧. (ಗೌರವ, ವಿನಯ, ಭಕ್ತಿ ಮುಂತಾದುವುಗಳನ್ನು ಸೂಚಿಸಲು ಮಾಡುವ) ನಮಸ್ಕಾರ ; ನಮನ : "ನತಂ ವಂದನಂ" (ಮಂಗರಾ. ೧೩೬-೩೯). ೨. ಹೊಗಳಿಕೆ ; ಸ್ತುತಿ. ೩. ಬೇಡುವುದು ; ಪ್ರಾರ್ಥಿಸುವುದು ; ಯಾಚನೆ. ೪. ತೋರಣ ; ವಂದನಮಾಲೆ. ೫. ಮನೋಹರವಾದುದು ; ರಮ್ಯವಾದುದು. ೬. ಪೂಜೆ ; ಆರಾಧನೆ. ೭. ಜಲಜಂತು ; ಜಲಚರ. ೮. ಕತ್ತಲೆ ; ಅಂಧಕಾರ. ೯. ಕಣ್ಣಿಗೆ ಕಾಣಿಸುವುದು; ಗೋಚರ ; ದೃಶ್ಯ. ೧೦. ನೀರು ; ಉದಕ : "ಜಲಚರಗಳು ನಿರ್ಮಲ ಕತ್ತಲೆ ತೋರಣ ಕಾಣಬಹುದು ಇದುಮ್ಮೆನಾಮಂ ಸಲೆ ವಂದನ ಶಬ್ದಂ" (ನಾನಾಕಂ. ೧೧೪); "ಪಯೋಜಂತು ಮನೋಹರಂ ತಿಮಿರ ತೋರಣ ಲೋಚನಗೋಚರಾರ್ಣವೆಂಬಿಂತಿವು ವಂದನಾಖ್ಯಂ" (ನಾನಾರ. ೮೮). ೧೧. [ತತ್ತ್ವಶಾ] ಒಂಬತ್ತು ವಿಧವಾದ ಭಕ್ತಿಗಳಲ್ಲಿ ಒಂದು : ನಮಸ್ಕರಿಸುವುದು : ಶ್ರವಣ, ಕೀರ್ತನ, ಸ್ಮರಣ, ಪಾದಸೇವೆ, ಪೂಜೆ, ವಂದನ, ದಾಸ್ಯ, ಸಖ್ಯ, ಆತ್ಮಾರ್ಪಣಮೆಂಬ ನವವಿಧಮಾಗಿರ್ಪುದೆಂದಱಿದಿಂತು ಪೀಠಸ್ಥಶಿವಲಿಂಗದ ಬಹಿರಂಗದ ಪೂಜೆಯಂ ವಿಸ್ತರಿಸಿ (ವಿವೇಕ. ೯೫); "ಶ್ರವಣಂ, ಕೀರ್ತನಂ, ವಿಷ್ಣೋಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ" ಎಂಬ ೯ ವಿಧ ಭಕ್ತಿಯಿಂದ ಪರಮಾತ್ಮನನ್ನು ಭಜಿಸುತ್ತಾ . . . ಚಿಂತಿಸುವವರಾರೋ, ಅವರೆ ಮುಕ್ತಿಯೋಗ್ಯರು (ಹಸಾರ. ೨೧-೫೧ ತಾತ್ಪರ್ಯ). ೧೨. ಒಂದು ಬಗೆಯ ಸಸ್ಯ : "ಆಮ್ರಸಾರಕಂ – ವಂದನ" (ಓಷಧಿ. ೧೨). [ಸಂ.]

ವಂದನಂಗೆಯ್ (ಕ್ರಿ). ನಮಸ್ಕರಿಸು ; ವಂದಿಸು : ಮುಂದೆ ಇಬ್ಬರು ಜಂಗಮಕೆ ಒಂದೊಂದು ಜಾಳಿಗೆಯಂ ಸಮರ್ಪಿಸಿ ವಂದನಂಗೆಯ್ದತಿವಿನಯದಿಂ ಜಂಗಮಾವಳಿಗೆ ಬಂದು ಪಾದಾರ್ಚನೆಗಳಂ ಮನವೊಂದಿ ಮಾಡಿ (ಬಸಪು. ೩೦-೨೦). [ವಂದನ$_2$ + ಕೆಯ್$_1$]

ವಂದನಮಾಲಿಕೆ (ನಾ). ಹಬ್ಬ , ಹರಿದಿನ ಇತ್ಯಾದಿ ವಿಶೇಷಸಂದರ್ಭಗಳಲ್ಲಿ ಅಲಂಕಾರಕ್ಕಾಗಿ ಬಾಗಿಲು, ಬೀದಿ, ಮುಂತಾದೆಡೆಗಳಲ್ಲಿ ಕಟ್ಟುವ ತಳಿರು, ಹೂವು, ಬಟ್ಟೆ ಮುಂತಾದುವುಗಳ ಮಾಲೆ ; ತೋರಣ : ಹರಿಚಂದನ ವಂದನಮಾಲಿಕೆಗಳ್ ಪರಿವೇಷ್ಟಿಸೆ ಮೆಱೆದುವು ಶಾಲಿಕೆಗಳ್ (ಚಂದ್ರಪು. ೪-೬೩ ರಗಳೆ).

[ಸಂ. ವಂದನಮಾಲಿಕಾ]

ವಂದನಮಾಲೆ, ವಂದನಮಾಳೆ (ನಾ). = ವಂದನಮಾಲಿಕೆ : "ಚತುರ್ವಿಂಶತ್ಯರ್ಹತ್ಪ್ರತಿಮಾವಿರಾಜಮಾನಹೇಮದಾಮವಿಲಂಬಿತ ಘಂಟಾಸಮನ್ವಿತ ವಂದನಮಾಲೆಗಳೊಳಂ (ಆದಿಪು. ೧೬-೩೭ ವ); ಓರನ್ನಮಾದ ಚಂದನದ ತಳಿರ ವಂದನಮಾಲೆಯೊಳಂ . . . ಚೆಲ್ವಿನ ಕುಲಗೃಹಮುಮಿರ್ಪಂತಿರ್ದ ವಸಂತಗೃಹಮಂ ಪೊಕ್ಕು (ಚಂದ್ರಪು. ೭-೯೫ ವ). ವಂದನಮಾಳೆ : ಶೈಳಪುರಂ ವಿರಾಜಿಸಿತೊ ಕಾಶ್ಮೀರಾಕ್ಷತಾಲೀಲೆಯಿಂ ವಿಳಸದ್ವಂದನಮಾಳೆಯಿಂ (ಪುಷ್ಪಪು. ೧೩-೧೧೮).

[ಸಂ. ವಂದನಮಾಲಾ]

ವಂದನಮಾಳೆ 'ವಂದನಮಾಲೆ' ನೋ.

ವಂದನಾರ್ಪಣೆ (ನಾ). ಸಭೆ, ಸಮಾರಂಭ ಮೊದಲಾದುವುಗಳ ಕೊನೆಯಲ್ಲಿ ಔಪಚಾರಿಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ,–ಆಭಾರವನ್ನು ಸೂಚಿಸುವುದು : ಸಮಾರಂಭದ ಕೊನೆಯಲ್ಲಿ ಸಂಘದ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು (ರೂಢಿ). [ಸಂ. ವಂದನಾರ್ಪಣ]

ವಂದನೀಯ (ಗು). ೧. ನಮಸ್ಕರಿಸಲು ಯೋಗ್ಯನಾದ ; ಪೂಜನೀಯ. ೨. ಸ್ತುತಿಸಲು ಅರ್ಹನಾದ. (ನಾ). ೩. ಗೌರವಾರ್ಹನಾದ ವ್ಯಕ್ತಿ ; ಪೂಜನೀಯವ್ಯಕ್ತಿ : ವಂದನೀಯರು ಮುನಿಗಳಿತ್ತಲು ಬಂದಿರೇತಕ್ಕಿರುಳು ನೀವು (ಕೌಶಿರಾ. ೧೯-೬೦); ವಂದನೀಯರ್ಗೆ ವಂದಿಸಿ . . . ಅನ್ಯೋನ್ಯ ಸಂಭಾಷಣೆಗಳಿಂದೆ ಮುದಿತರಾಗಿ ವಂದಿಸಿದರೆಲ್ಲರುಂ ಬಕದಾಲ್ಭ್ಯಮುನಿಗೆ (ಜೈಮಿಭಾ. ೩೩ ೨೫). [ಸಂ.]

ವಂದನೆ (ನಾ). ೧. ನಮನ ; ನಮಸ್ಕಾರ : ಸಂಧಿಸಿದ ಜನದ ವಂದನೆಗೆ ಮೊದಲೀ ಸ್ವಸ್ತಿಯೆಂದೊಡಾ ಭೂಸುರಂ ಪ್ರಿಯದೊಳಾ ಪ್ರಾಣಿಯಂ ಕೊಂದನಲ್ಲದೆ ಬೇಱೆ ಶಾಪ ಮೇತಕೆ (ಜೈಮಿಭಾ. ೨೬-೩೦). ೨. ಸ್ತುತಿ ; ಸ್ತೋತ್ರ : ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ . . . ವಂದನೆಯ ಮಱೆದು ನಿಂದಿಸುತಿರ್ದರಯ್ಯಾ (ಬಸವ. ೫೮೬); ನಿಂದಿಸುವವಗೆ ವಂದನೆ ಇಲ್ಲ (ನೀತಿಚಿಂ. ೬-೨೩). ೩. ಪೂಜೆ ; ಆರಾಧನೆ. ೪. [ತತ್ತ್ವಶಾ] ಒಂಬತ್ತು ಬಗೆಯ ಭಕ್ತಿಗಳಲ್ಲಿ ಒಂದು ; ನವವಿಧಭಕ್ತಿಗಳಲ್ಲಿ ಒಂದು ; ನಮಸ್ಕಾರ : ಭಕ್ತಿ ನವವಿಧ . . . ಗುರು ಪರಮ ನಿರುಪಮ ನಿರಾಮಯ ಪರಮಪದ ಪರಿಪೂರ್ಣನೆಂದರಿಯುವುದೆ ವಂದನೆಯು (ಗಗತಾ. ೩-೫೮). ೫. [ಜೈನ] ಒಬ್ಬ ತೀರ್ಥಂಕರನನ್ನೇ ಪೂಜಿಸುವುದು : ಏಕತೀರ್ಥಕರನಿಬಂಧನಮಪ್ಪ ವಂದನೆಯೆಂಬ ಹದಿನೆಂಟನೆಯ ಮೂಲಗುಣಂ (ಶ್ರಾವಕಾ. ೮೩). [ಸಂ. ವಂದನಾ]

ವಂದನೆಗೆಯ್, ವಂದನೆಗೈ (ಕ್ರಿ). ನಮನಮಾಡು ; ನಮಸ್ಕರಿಸು : ಬಂದಳಾಕ್ಷಣ ಸಖಿಯೊಡಗೂಡಿ ವಿಲಸಿತದಂದಣವಿಳಿದು ನಾರದಗೆ ವಂದನೆಗೆಯ್ದಳು (ಮೋಹತ. ೪೧-೩೨). ವಂದನೆಗೈ : ನಿಂತು ವಂದನೆಗೈದು ಕೇಳಿದನಿಂತು (ಗಗತಾ. ೧೯-೪).

[ವಂದನೆ + ಕೆಯ್$_1$]

ವಂದನೆಗೈ 'ವಂದನೆಗೆಯ್' ನೋ.

ವಂದರಿ (ನಾ). (ಸಾಮಾನ್ಯವಾಗಿ ಧಾನ್ಯ, ಹಿಟ್ಟು ಮುಂತಾದುವುಗಳನ್ನು ಹಸನು ಮಾಡಲು ಉಪಯೋಗಿಸುವ) ತೂತುಗಳಿರುವ ಒಂದು ಸಲಕರಣೆ ; ಜರಡಿ ; ಒಂದರಿ : ಹೃದಯಂಗಳು ವಂದರಿಯಂತೆ ಛಿದ್ರಮಾಗುವದಂ ನೋಡಿ (ಸೌಗಂಧಿ. ೨೯೬-೧೦); ಋಷಿಗಳು ವಂದರಿಯಿಂದ ಹಿಟ್ಟಿನಂತೆ, ತಮ್ಮ ಹೃದಯಗಳಿಂದ ವಾಣಿಯನ್ನು ಪವಿತ್ರಗೊಳಿಸಿ ಉಚ್ಚರಿಸುತ್ತಾರೆ (ಭಾರದ. ೪೮). [< ಒನಲಿ]

ವಂದರು (ನಾ). ಒಂದು ಬಗೆಯ ಭೋಜನಪರಿಕರ (?) : ಆ ಭೋಜನದ ಪರಿಕಾರಮೆನ್ತೆನ್ನಡೆ ಆರುಮಾನ ಅಕ್ಕಿ ಮಾನ ತುಪ್ಪ ಒಂದುಮಾನ ವಂದರು (ಮೈಆರಿ. ೧೯೨೭, ೧೫೧-೧೩; 870). [?]

ವಂದಾಕೆ (ನಾ). ಒಂದು ಬಗೆಯ ಪರಾವಲಂಬೀಸಸ್ಯ : "ಬದನಿಕೆ (ಬಂದಣಿಕೆ) – ವಂದಾಕಾ" (ತದ್ಭಕೋ. ೨೮). [ಸಂ. ವಂದಾಕಾ]

ವಂದಾರು (ಗು). ೧. ಸ್ತುತಿಸುವ ; ಸ್ತೋತ್ರಮಾಡುವ : ವಂ[ಪಾಠಾಂ. ಮಂ] ದಾರ Eರುಃಮುನೀಂದ್ರವೃಂದಾರಕವೃಂದಸೌಂದರಮುಮಾಸನ್ನಭವ್ಯವ್ಯೋಮಚರ ಭೂಚರನಿಚಯನಿಚಿತಮುಮಾಗಿ (ಆದಿಪು. ೩-೪೫ ವ); ವಂದಾರುಜನಕೆ ವಾಂಛಿತ ಫಲಗಳನೀವ ಮಂದಾರತರುಗೆ ಮಾಧವಗೆ . . . ಆನು ವಂದಿಪೆನು (ಹದಿಬ. ೭ ೧). (ನಾ). ೨. ನಮಸ್ಕರಿಸುವವನು ; ವಂದಿಸುವವನು : "ವಂದಾರುಃ, ಅಭಿವಾದಕಃ, — ೨ ಮುಗಿಯುವ ಸ್ವಭಾವವುಳ್ಳವನು, ಕೈಮುಗಿಯುವವನು, ನಮಸ್ಕರಿಸುವವನು" (ಸಿದ್ಧಾಂತಿ. ೩೩೦). ೩. ಹೊಗಳಿಕೆ ; ಸ್ತುತಿ. ೪. ಸ್ತೋತ್ರಮಾಡುವವನು : ಸ್ತುತಿಸುವವನು : ವಂದಾರು ಬಂದ ಘಾಲ್ಗುಣ ನಂದೀಶ್ವರದೊಳ್ ತ್ರಿಪೃಷ್ಠತನಯಂ ತನುವಂ ತಂದುಪವಾಸಕ್ಕಾ ನಿಜನಂದನದ ಸಹಸ್ರಕೂಟಚೈತ್ಯಾಲಯದೊಳ್ ಇರೆ (ಶಾಂತಿಪು. ೭. ೪೮) [ಸಂ.]

ವಂದಿ (ನಾ). ೧. (ರಾಜನ ಆಸ್ಥಾನದ) ಸ್ತುತಿಪಾಠಕ ; ಮಂಗಳಪಾಠಕ ; ಹೊಗಳುಭಟ್ಟ : ವಂದಿ ಪೊಗಳೆ ಜಾಗಿ ಕೊಟ್ಟುಂ (ಶಮದ. ೨೪೯ ಪ್ರಯೋ); ಗುರುಸುತ ನಿನ್ನ ಗರ್ವವ ಹೆಱಿಸುವವು ಭೀಮಾಸ್ತ್ರವೆಂದುದು ವಂದಿಸಂದೋಹ (ಕುಮಾಕ ೧೫-೧೪). 'ಬಂದಿ' ಹೋ. ೨. ಸೆರೆಯಾಳು ; ಬಂದಿ : "ಪ್ರಗ್ರಹಃ . ಗ್ರಾಹಕಃ . ವಂದೀ- ಈ ೩ ಬಂದಿ" (ಹಲಾಯು. ೧೨೫-೭೪). 'ವಂದಿಗ್ರಹ' ಪರಾ. ೩. ಲೂಟಿ ; ಸೂರೆ ; ಕೊಳ್ಳೆ : 'ಬಂದಿ' ಹೋ. [ಸಂ. ವಂದಿ. ವಂದಿನ್]

ವಂದಿಗ (ನಾ). ಜೊತೆಯವನು ; ಸಂಗಡಿಗ : ಎನ್ನ ಹವಣೇ ಹಗೆಯ ಗೆಲುವಡೆ ನಿನ್ನ ವಂದಿಗರಿರಲು ನೂಕದು ತನ್ನ ಸಾಹಸವೆಲ್ಲಿ ಪರಿಯಂತಹುದು ಕದನದಲಿ (ಕುಮಾವ್ಯೂ. ೧-೫೮), ವಂದಿಗರುಮಾರರಿಯದಂತೈದಿ ಗುರುಪಾದದ್ವಂದ್ವಕಮಲಂಗಳಿಗೆ ಯೆರಗಿ (ಸಮೋ. ೨೨-೬೬). [< ಒಂದಿಗ]

ವಂದಿಗೆ (ನಾ). ಜೊತೆ ; ಸಂಗಡ : ಚಂದದಿಂದವನೊಲೆದ ಮಾತನಾಲಿಸುತಾಗಲಂದು ಕರ್ಕಶವೀರರೈದಿ ಶಬರಿಯ ಪೊರೆಗೆ ವಂದಿಗೆಯೊಳವಳಿತ್ತ ಸತ್ಕಾರಮಂ ಕೊಂಡು ಹೃದಯದಾನಂದದಿಂದೆ (ವಂಕಾರಾ. ೧-೨ ೨೧). [< ಒಂದಿಗೆ]

ವಂದಿಗ್ರಹ (ನಾ). ೧. ಸ್ತುತಿಪಾಠಕರ ಮುತ್ತಿಗೆ. ೨. ಬಂಧನದಲ್ಲಿರಿಸುವುದು ; ಸೆರೆಯಲ್ಲಿಡುವುದು. ೧,೨ : ಮಹದ್ವಂದಿಗ್ರಹಂ ತ್ಯಾಗಿವ್ರತಯೋಗಂ ಜಳಪಕ್ಷಿಗಲ್ಲದೆ ಜನಕ್ಕಿಲ್ಲಲ್ಲಿ ಬೇಱೆಲ್ಲಿಯುಂ (ಪುಷ್ಪಸು. ೨-೨೯). [ಸಂ.]

ವಂದಿಜನ (ನಾ). (ರಾಜನ ಆಸ್ಥಾನದ) ಸ್ತುತಿಪಾಠಕರ ಗುಂಪು ; ಮಂಗಳಪಾಠಕರ ಸಮೂಹ : ಇತ್ತ ಪೊನ್ನ ಬುಧ ಮಾಗಧ ವಂದಿಜನಕ್ಕೆ ಕೊಟ್ಟ ಕೋ[ಡೆ]ಡಱದೆ ಬೇಡಿ[ಮೋ]ಡಿಮುದು ಜಾಗದ ಬೀರದ ಮಾತು ಕರ್ಣನಾ (ಪಂಪಭಾ. ೧-೯೯). [ಸಂ.]

ವಂದಿತ (ಗು). ೧. ನಮಸ್ಕಾರವನ್ನು ಹೊಂದಿದ ; ನಮಿಸಲ್ಪಟ್ಟ : ಶ್ರೀದಿವಿಜೇಂದ್ರವಂದಿತಪದಾಂಬುಜಂ . . . ಆದಿಪರಮೇಶ್ವರನೀಗಮಗಿಷ್ಟಸಿದ್ಧಿಯಂ (ನಾನಾರ. ೧). ೨. ಸ್ತುತಿಸಿದ ; ಕೊಂಡಾಡಿದ : ವಂದಿತಗುಣ ಪಲವೇಕಿನ್ನೊಂದನೆ ಕೇಳ್ಕಥೆಯನತ್ಯಪೂರ್ವಮಿದಂ (ಧರ್ಮಾಮೃ. ೧೨-೨೦೫). [ಸಂ.]

ವಂದಿಸು (ಕ್ರಿ). ೧. ತಲೆಬಾಗು ; ನಮಸ್ಕರಿಸು ; ಪ್ರಣಾಮ ಮಾಡು : ಕ್ರಿಯಾಪೂರ್ವಕಂ ವಂದಿಸಿ ಭಟ್ಟಾರ್ಗರ್ ಗುರುಭಕ್ತಿಗೆಯ್ದು . . . ಧರ್ಮಮಂ ಕೇಳ್ದ ತದನಂತರಂ (ವಡ್ಡಾರಾ. ೭೯-೧೫); ಕಂಡನು ಕೌರವೇಶ್ವರನ ಅಂದಣವನಿಳಿದರಸನಾತಗೆ ವಂದಿಸಿದನಾ ಮಾದ್ರಪತಿ (ಕುಮಾಕ. ೫-೧೩). ೨. ಸ್ತುತಿಸು ; ಸ್ತೋತ್ರಮಾಡು : ತದ್ವಿಷ್ಟಪನಾಥನಂ ನಮಿಸಿ ಪೂಜಿಸಿ ವಂದಿಸಿ ದೇವ ಮಾಟ್ಟುದೆನ್ನಿಷ್ಟಮನೆಂದು ಬೇಟ್ಟ ಪದದೊಳ್ (ಪುಷ್ಪಸು. ೩-೧೦೩); ನನ್ನ ಕೈಯಲ್ಲಾದದ್ದನ್ನೆಲ್ಲ ಮಾಡುತ್ತೇನೆ. ದೊರೆತದ್ದಕ್ಕೆ ದೇವರನ್ನು ವಂದಿಸುತ್ತೇನೆ (ಇಸ್ಲಾಂಸಂ. ೨೪೬). ೩. ಗೌರವಿಸು ; ಆದರಿಸು ; ಮನ್ನಿಸು : ವಂದಿಸುತುಂ ವಂದ್ಯರನಭಿವಂದಿಸುತುಂ ಬುಧರಂ . . . ಸಾರ್ತಂದಂ (ಪುಷ್ಪಸು. ೫-೫೯).

[ವಂದನ$_1$ + - ಇಸು$_3$]

ವಂದು 'ವರ್' ಪರಾ.

ವಂದುಗಿ (ನಾ). ಸ್ತುತಿಪಾಠಕ (?) : ಕೆಳೆಯರ್ವಂದುಗಿಗಳ್ ಅನೇಕರ್ಬ್ಬಾಳ ಕೂಡಿ (ಎಕ. VIII, ಸೊರಬ. ೫೪೨ ೩; 800). [< ಸಂ. ವಂದಿ?]

ವಂದ್ಯ$_1$ (ನಾ). ೧. ಒಂದು ಬಗೆಯ ಪರಾವಲಂಬೀ ಸಸ್ಯ : ವಂದ್ಯ ತೊಂಡೆಬೇರು . . . ನಶ್ಯಮಂ ಮಾಡಲು ಮಾಣ್ಬು (ವಾಶಾಚಿ. ೧೪-೪). ೨. ಗೋರೋಚನ.

[ಸಂ. ವಂದ್ಯಾ]

ವಂದ್ಯ$_2$ (ಗು). ೧. ಹೊಗಳಲು ಅರ್ಹವಾದ ; ಸ್ತುತಿಸಲು ಯೋಗ್ಯವಾದ. (ನಾ). ೨. ನಮಿಸಲು ಯೋಗ್ಯನಾದವನು ; ನಮಸ್ಕರಿಸಲು ಅರ್ಹನಾದವನು : ವಂದಿಸುತುಂ ವಂದ್ಯರನಭಿವಂದಿಸುತುಂ ಬುಧರಂ . . . ಉತ್ತರದಿಗಂತಮಂ ಸಾರ್ತಂದಂ (ಪುಷ್ಪಸು. ೫-೫೯); ಧರಣೀಪತಿ ವಂದ್ಯನಲ್ಲವೆ (ಕ್ಷೇಮಭಾ. ೨೬-೩೦). ೩. ಹೊಗಳಲು ಅರ್ಹನಾದವನು : ಬಂಧು ಬಳಗವ ಸಲಹಿ ಭೂಸುರವೃಂದವನು ನೆಱೆ ಹೊರೆವಡೆವ ಸುತ ವಂದ್ಯನೈ ಲೋಕಕ್ಕೆ (ಕುಮಾಶಾ. ೩-೮೧).

[ಸಂ.]

ವಂದ್ಯತೆ (ನಾ). ೧. ಹೊಗಳಲು ಅರ್ಹವಾಗಿರುವಿಕೆ . ೨. [ಜೈನ] ಪರಿವ್ರಾಜಕರ ಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರಪದಗಳಲ್ಲಿ ಒಂದು : ವಂದ್ಯತೆಯೆಂಬುದು ಪರಮವಂದ್ಯನರ್ಹದ್ದೇವನಂ ಭಕ್ತಿಯಿಂ ಬಂದಿಸಿ ತವದೊಳ್ ನೆಗೞ್ದೊಡೆ ದಿವ್ಯವಿಜಯ ಪರಮಾನುಪಮವಂದನೆಗಳಂ ಪಡೆಗುಂ (ಚಾವುಂರಾ ೨೫.೧).

[ಸಂ. ವಂದ್ಯತಾ]

ವಂದ್ಯೆ (ನಾ). ನಮಸ್ಕರಿಸಲು ಅರ್ಹಳಾದವಳು. [ಸಂ. ವಂದ್ಯಾ]

ವಂಧುರ (ನಾ). ರಥದಲ್ಲಿ ಸಾರಥಿಯು ಕುಳಿತುಕೊಳ್ಳುವ ಸ್ಥಳ. [ಸಂ.]

ವಂಧ್ಯ (ಗು). ೧. ಬರಡಾದ ; ಬಂಜರಾದ. ೨. ಪ್ರಯೋಜನವಿಲ್ಲದ ; ನಿಷ್ಫಲವಾದ. (ನಾ). ೩. ಬರಡಾದುದು ; ಬಂಜರು : ಚಂದ್ರತಲವು ಜನರಹಿತವಾದುದೆಂಬುದನ್ನು, ವಂಧ್ಯವೂ ಶೂನ್ಯವೂ ಆದ ಅದರ ಮುಖಭಾವವು ಪ್ರತಿಪಾದಿಸುವುದು (ಜ್ಯೋತಿರ್ವಿ. ೨೨೭). ೪. ಮಕ್ಕಳಿಲ್ಲದವನು ; ಸಂತಾನವಿಲ್ಲದವನು : ವಂಧ್ಯನಪವರ್ಗತ್ವಮಿಲ್ಲೆನುತೊದಱಿದುದು ವೇದಂ (ಶಂಕರಾ. ೧೬-೧೬). [ಸಂ.]

ವಂಧ್ಯಾಪಕ್ಷಿ (ನಾ). ಮಕ್ಕಳಿಗೆ ಬರುವ ಒಂದು ಬಗೆಯ ರೋಗ ; ಹಕ್ಕಿರೋಗ : ವಂಧ್ಯಾಪಕ್ಷಿದೋಷಲಕ್ಷಣವೆಂತೆನೆ : — ಬಹುಬಳಲಿಕೆ, ನೆತ್ತಿವಾಯಿ ಕುಳಿಬಿದ್ದಿಹುದು, ಕಾರುವುದು . . . ಉರಿತಾಪ ಉಂಟಾಗಿಹುದು. ಈ ಲಕ್ಷಣ ಉಂಟಾದರೆ ವಂಧ್ಯಾಪಕ್ಷಿ ಹಿಡಿದಿದೆ ಎಂದು ತಿಳಿವದು (ಸ್ಕಂದಸಾ. II, ೧೨). 'ಪಕ್ಷಿಗ್ರಹ' ಹೋ.

[?]

ವಂಧ್ಯಾಲಯ (ನಾ). ಬಂಜೆಯ ಮನೆ ; ಮಕ್ಕಳಿಲ್ಲದ ಮನೆ : ಸಲೆ ವಂಧ್ಯಾಲಯದಂತಿರೆ ಪಲಕಾಲಂ ಪುಷ್ಪವತಿಯೆನಾದಪೆನೆಂದುಂ ಫಲವತಿಯಾದ ಪೆನಿಲ್ಲೆಂದು ಲತಾಲಲಿತಾಂಗಿ ಬಾಡಿ ಪಾಡಱಿದೆಂಗುಂ (ಸಿಕುಮಾ. ೯-೯೮). [ಸಂ.]

ವಂಧ್ಯೆ (ನಾ). ೧. ಬಂಜೆ ; ಮಕ್ಕಳಾಗದವಳು : ವಂಧ್ಯಾಸತಿಯಾಗಿ [ಮಾಯ್ದೆ] ಪಿರಿದುಂ ದುಃಖಕ್ಕಿದೇಂ ನೋಂತೆನೋ (ಸಿಕುಮಾ. ೯-೧೦೩). ೨. ಬಂಜೆಯಾದ ಹಸು ; ಗೊಡ್ಡು ಆಕಳು : "ವಶಾ, ವಂಧ್ಯಾ — ೨ ಬಂಜೆಯಾದ ಆಕಳು" (ಸಿದ್ಧಾಂಶಿ. ೨೯೪).

ವಂಧ್ಯಾಸ್ತನಂಧಯ = ೧. ಬಂಜೆಯ ಹಾಲು ಕುಡಿಯುವವನು ; ಬಂಜೆಯ ಮಗ. ೨. (ಆಲಂ) ಅಸಂಭವವಾದುದು ; ಅವಾಸ್ತವವಾದುದು : ಕ್ಷಣಕಪ್ರತಿಬದ್ಧ ಜೀವನೊಳೊಣರದು ವಂಧ್ಯಾಸ್ತನಂಧಯಪ್ರತಿಮಮದಂ ಗುಣಿ ದೂಷಿಸೆ ಯುಕ್ತಿಗಳಿಂ ಕ್ಷಣಾರ್ಧಮುಂ ನಿಲ್ಲದು (ಶಾಂತಿಪು. ೮-೧೪೪); ನಿನ್ನ ಕಾಣ್ಕೆಗೆ ಪೊಱಗಾದಾ ವಸ್ತು ಭುವನದೊಳ್ ಪರಿಭಾವಿಸೆ ವಂಧ್ಯಾಸ್ತನಂಧಯೋಪಮಮಲ್ತೇ (ಚಂದ್ರಪ್ರ. ೩-೭).

[ಸಂ. ವಂಧ್ಯಾ]

ವಂಪಳ್ಳಿ (ನಾ). ಒಂದು ಊರಿನ ಹೆಸರು : ಚೋಳಿಗ ಮೊಟವರೆಯಾರ್ಮ್ಮಂಗೆ ಕೆಱೆಗೊಡಗೆಯ ರಾಜಾಮಾನಂ ಮೂಗಣ್ಣುಗಗಟ್ಟೆ ವಂಪಳ್ಳಿ ಸಾಮ್ಯವ ದಯಗೆಯ್ದು (ಎಕ. XII, ಮದ್ದೂರು ೧೦೨-೧೮. ಸು. 900 ?). [< ವನ$_2$ + ಪಳ್ಳಿ$_1$]

ವಂಶ (ನಾ). ೧. ಕುಲ ; ಸಂತತಿ : ಆತನಿಂದವ್ಯವಚ್ಛಿನ್ನಮಾಗಿ ಬಂದ ವಂಶಂ ಸೂರ್ಯವಂಶಮೆಂಬುದಾಯ್ತು (ಪಂಪಭಾ. ೧-೬೦ ವ); ಶ್ರೀಮದಮೃತಾಂಶುವಂಶವ್ಯೋಮಾಮೃತಕಿರಣಂ . . . ಸಾಹಸಭೀಮಂ (ಗದಾಯು. ೩-೧). ೨. ಒಂದು ಬಗೆಯ ಹುಲ್ಲಿನ ಜಾತಿಗೆ ಸೇರಿದ ಸಸ್ಯ ; ಬಿದಿರು : ಶಿಥಿಲತ್ವಂಬಡೆದಿರ್ಪ ವಂಶವೊರೆಯಲ್ ಕಿಚ್ಚೇಳದೇ (ಸೋಮೇಶ. ೮೦); ಕಂಠೀರವನವಿರಳ ಬಹಳವಂಶಶಿಂಶಪಾಶಮಿ ಶಿರೀಷ . . . ಭೂಜರಾಜಪರಿಕ್ಷೇಪದೊಳ್ . . . ಉಪಶಮಭಾವಮಂ ಕೆಯ್ಕೊಂಡರ್ಪಿನಂ (ವರ್ಧಮಾ. ೫-೬೨ ವ). ೩. ಬಿದಿರಿನಿಂದ ಮಾಡಿದ ವಾದ್ಯ ; ಕೊಳಲು ; ವೇಣು : ಕಾಹಳ ಶಂಖವಂಶ ವೀಣಾಸ್ವರಂಗಳೆಸೆಯೆ (ವಡ್ಡಾರಾ. ೮೪-೧); ಜನಿಯಿಸೆ ವೀಣಾಕ್ವಣಮುರಜನಿನದ ತಾಳಪ್ರಣಾದವಂಶಧ್ವನಿಗಳ್ ಜನಮನೊರಲ್ಕಿದುವು (ಅಜಿಪು. ೫-೧೩). ೪. ಬೆನ್ನಿನ ಮೂಳೆ ; ಕಶೇರ : "ನಿಟ್ಟೆಲುವಿನಲ್ಲಿಯುಂ ವಂಶಮೆಂಬುದು" (ಹಲಾಯು. ೧೩೪-೧೭). ೫. ಗುಂಪು ; ಸಮೂಹ. ೬. ಕಬ್ಬು. ೭. ಒಂದು ಬಗೆಯ ಮರ ; ಮತ್ತಿ.

[ಸಂ.]

ವಂಶಕಥನ (ನಾ). ಪುರಾಣ, ಕಾವ್ಯ ಇತ್ಯಾದಿಗಳಲ್ಲಿ ಬರುವ ರಾಜಕುಲದ ಚರಿತ್ರೆಯ ನಿರೂಪಣೆ : ಮಹಾಭಾರತದ ೧೮ ಪರ್ವಗಳಲ್ಲಿ ಬರುವ ಕಥಾಸಾರಾಂಶ ಇವು: — ವರ್ಣನೀಯರಾದ ನಾಯಕರುಗಳ ವಂಶಕಥನ, ಉತ್ಪತ್ತಿ ಮತ್ತು ಬಾಲ್ಯ (೧ ಆದಿಪರ್ವ) (ಭಾರತ. ೯೯). 'ವಂಶಾನುಚರಿತ' ಪರಾ. [ಸಂ.]

ವಂಶಕರ (ಗು). ೧. ಕುಲವನ್ನು ಬೆಳಗುವ ; ವಂಶವನ್ನು ಊರ್ಜಿತಗೊಳಿಸುವ : ವಂಶಕರಸಂತಾನಮಂ ಕಾಣದಾ ನೃಪತಿ . . . ಕುಟುಕುಕೊಡುತಿರ್ದ ತಾಯ್ಮಕ್ಕಿಯಂ ಕಂಡು, ಕಣ್ ನಟ್ಟು, ಕಾಲ್ ನಟ್ಟು ನಿಂದನು ಮರಂಬಟ್ಟು (ಶ್ರೀರಾಮಾ. ೯-೧೯೩). (ನಾ). ೨. ಮಗ. [ಸಂ.]

ವಂಶಚ್ಛೇದ (ನಾ). ೧. ಕುಲವನ್ನು ನಾಶಪಡಿಸುವುದು : ದುರ್ಬೋಧೆಗಳ ನಾನಾಚಂದದಲಿ ಬೋಧಿಸಿ ಸುನೀತಿಯನಂದಗೆಡಿಸಿ ತದೀಯವಂಶಚ್ಛೇದಮಾರ್ಗವನು ಒದಗೂಡಿ . . . ಕಳಿಂಗನೆ ಲೋಕವ ಕೊಂದನೆ (ಕುವಾಅ. ೯-೫೪). ೨. ಬಿದಿರನ್ನು ಕತ್ತರಿಸುವುದು : ಸಂಶಯಮೇಂ ನಿಲ್ಮಯ್ ನಿಜವಂಶಾಗತಮಪ್ಪ ವೃತ್ತಿಯೊಳ್ ಕರವಾಳಿಂ ವಂಶಚ್ಛೇದಮುಮಂ ಖರವಂಶಚ್ಛೇದಮುಮನೊಡನೆ ಪಡೆದತಿಬಳನಿಂ (ಪಂಪಾಮಾ. ೯-೧೩೪). ೧,೨ : ವಂಶಚ್ಛೇದಂ ಮೇದಱೊಳ್ . . . ಪಂಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧೦ ವ). [ಸಂ.]

ವಂಶಚ್ಛೇದಿ (ನಾ). ಬಿದಿರನ್ನು ಕತ್ತರಿಸಿ ಕುಕ್ಕೆ, ಚಾಪೆ ಮೊದಲಾದುವನ್ನು ಮಾಡುವ ವೃತ್ತಿಯುಳ್ಳವನು ; ಮೇದ : "ವಂಶಚ್ಛೇದಿ ಚಪಕಾರಕಂ" (ಮಂಗರಾ. ೧೧೧-೨). [ಸಂ. ವಂಶಚ್ಛೇದಿನ್]

ವಂಶಜ (ನಾ). ೧. ಕುಲದಲ್ಲಿ ಹುಟ್ಟಿದವನು ; ಪೀಳಿಗೆಯಲ್ಲಿ ಬಂದವನು ; ಸಂತಾನ : ವಂಶವಾಚಾರಂ ಮೀಱದ ಮದ್ವಂಶಜನೆ ಬೇಕು (ಬಸವ. ೨೪-೭). ೨. ಕುಲಜ ; ಸತ್ಕುಲದಲ್ಲಿ ಜನಿಸಿದವನು : ಶಿಷ್ಟರಶಿಷ್ಟಮೆನೆ ವಂಶಜರವಂಶಮೆನೆ . . . ಪಾಸಱೆಯೊಳ್ ಕೂಸನಪ್ಪಳಿಸಿ ಬಾಲನಿಬರ್ಹಾಗರ್ಹಶಾತಿರೇಕದಿಂ ಗತಶ್ರೀಕವಾಗಿ ನಿಜರಾಜಮಂದಿರಮಂ ಪೊಕ್ಕಂ (ಜಗವಿ. ೨-೫೬ ವ). ೩. ಬಿದಿರಕ್ಕಿ. [ಸಂ.]

ವಂಶದೊತ್ತು (ನಾ). ವಂಶಪಾರಂಪರ್ಯವಾಗಿ ದುಡಿಯುವ ತೊತ್ತು, — ಸೇವಕ ; ಬೀತದಾಳು : ಬಳಿದೊತ್ತು ಬಳಗದೊತ್ತು ವಂಶದೊತ್ತು ನಾನಯ್ಯಾ (ಬಸವ. ೬೫). [ವಂಶ + ತೊತ್ತು (< ತೊಲ್ತು)]

ವಂಶರೋಚನ (ನಾ). ಬಿದಿರಿನ ಗಿಣ್ಣುಗಳಲ್ಲಿ ದೊರೆಯುವ, ಔಷಧಿಗೆ ಉಪಯೋಗಿಸುವ ಒಂದು ಬಗೆಯ ಉಪ್ಪು ; ಬಿದಿರುಪ್ಪು : "ತುತ್ತಾ — ತವಕ್ಷೀರ, ವಂಶರೋಚನ" (ಓಷಧಿ. ೭೧). [ಸಂ. ವಂಶರೋಚನಾ]

ವಂಶರೋಚನೆ (ನಾ). = ವಂಶರೋಚನ : "ತ್ವಕ್ಕ್ಷೀರಾ (ತ್ವಕ್ಷೀರಂ), ವಂಶರೋಚನಾ-೨ ತವಕ್ಷೀರದ ಹೆಸರುಗಳು" (ಕರ್ನಾಂಔ. ೬೦೭). [ಸಂ. ವಂಶರೋಚನಾ]

ವಂಶಲೋಚನ (ನಾ). = ವಂಶರೋಚನ : "ತ್ವಕ್ಷಾರಿಕಾ-ವಂಶಲೋಚನ" (ಓಷಧಿ. ೬೬). [ಸಂ. ವಂಶಲೋಚನಾ]

ವಂಶವಿಹೀನ (ನಾ). ೧. ಸಂತಾನವಿಲ್ಲದವನು ; ಅಪುತ್ರಕ. ೨. ಹೀನಕುಲದಲ್ಲಿ ಹುಟ್ಟಿದವನು ; ಸತ್ಕುಲಪ್ರಸೂತನಲ್ಲದವನು : ದಾನವಾಂತಕ ಬೆಸಸು ವಂಶವಿಹೀನನ ನಿಮ್ಮಡಿಗಳೊಡನೆ ಸಮಾನಿಸುವರೇ ಸಾಹಿನಿತ ರಮಿಸೂನು ಕೈಮುಗಿಯೆ (ಕುವಾಕಾ. ೧೦-೪). [ಸಂ.]

ವಂಶವೃಕ್ಷ (ನಾ). (ಸಾಮಾನ್ಯವಾಗಿ ರಾಜರು, ಪ್ರಮುಖವ್ಯಕ್ತಿಗಳು ಮುಂತಾದವರ) ಮೂಲಪುರುಷನಿಂದ ಆರಂಭಿಸಿ ಎಲ್ಲ ಪಿತೃಗಳನ್ನೂ ಹೆಸರಿಸಿ ಪ್ರತಿಯೊಬ್ಬನ ಸ್ಥಾನವನ್ನೂ ನಿರ್ದೇಶಿಸುವ ವಿವರ ; ವಂಶಪರಂಪರೆ ; ವಂಶಾವಳಿ ; ☞ ಕೆಲವು ವೇಳೆ ವೃಕ್ಷದ ಆಕಾರದ ನಕಾಶೆಯಲ್ಲಿ ವಂಶಾವಳಿಯು ಸೂಚಿತವಾಗಿರುತ್ತದೆ : ಈ ವಂಶವೃಕ್ಷವನ್ನು ಸಮರ್ಥಿಸುವುದಕ್ಕೆ ಗ್ರಂಥಕರ್ತರು ಈ ರೀತಿ ವಾದಿಸಿದ್ದಾರೆ (ಕರ್ನಾಇ. ೧೪); ಇವರ ವಂಶವೃಕ್ಷವು ಹೇಮಾವತಿಸ್ತಂಭಶಾಸನದಲ್ಲಿ ಹೇಳಿಯಂತೆ, ಈಶ್ವರವಂಶದವರೆಂದು . . . ತಿಳಿಯುತ್ತದೆ (ನೊಳಂಬ. ೯). [ಸಂ.]

ವಂಶವೃದ್ಧಿ (ನಾ). ೧. ಕುಲದ ಏಳಿಗೆ ; ವಂಶದ ಅಭಿವೃದ್ಧಿ : ಮಕ್ಕಳನ್ನು ಪಡೆಯಲು ಸಾಮರ್ಥ್ಯವಿಲ್ಲದ ಗೃಹಸ್ಥನು ಕೇವಲ ವಂಶವೃದ್ಧಿಯ ಉದ್ದೇಶದಿಂದ ಕೆಲವು ಶಾಸ್ತ್ರಕರ್ಮಗಳೊಡನೆ ಮತ್ತೊಬ್ಬನನ್ನು ತನ್ನ ಪತ್ನಿಯೊಡನೆ ಬಿಡುತ್ತಿದ್ದ (ವಂಶವೃ. ೪೨). ೨. ದಟ್ಟವಾಗಿ ಬೆಳೆದ ಬಿದಿರಿನ ಪೊದರು, —ಮೆಳೆ. [ಸಂ.]

ವಂಶಸ್ಥ (ನಾ). ೧. ಒಳ್ಳೆಯ ಕುಲಕ್ಕೆ ಸೇರಿದವನು ; ಉತ್ತಮ ಮನೆತನದಿಂದ ಬಂದವನು ; ಸತ್ಕುಲೀನ. ೨. [ಛಂದ] ಒಂದು ಅಕ್ಷರವೃತ್ತದ ಹೆಸರು ; ಪ್ರತಿಪಾದದಲ್ಲಿಯೂ ಹನ್ನೆರಡು ಅಕ್ಷರಗಳನ್ನು ಹೊಂದಿದ್ದು, ಜತಜರಗಣಗಳನ್ನು ಉಳ್ಳ, ಜಗತಿ ಛಂದಸ್ಸಿನ ಒಂದು ಭೇದ : ದಿವಾಕರಾಕಾಶ ದಿನೇಶಪಾವಕರ್ಪವಿಶ್ರಮಂ ಬಂದಿರೆ ಸಪ್ತಸಂಖ್ಯೆಯೊಳ್ ಸಮಿಸ್ತರಂ ನಿಲ್ತಿರೆ ಸಂದುದಿಂತುದಾತ್ತವಂಶೆ ವಂಶಸ್ಥಮೆನಿಪ್ಪ ನಾಮದಿಂ (ಛಂದೋಂಬು. ೨-೧೫೩); ನೆಗಳ್ದ ವಂಶಸ್ಥಮಿರಲ್ ಜತಂಜರಂ (ಕೃಪಿ. ೬೦). [ಸಂ.]

ವಂಶಸ್ಥಲ (ನಾ). ಬಿದಿರುಗಳಿರುವ ಜಾಗ ; ಬಿದಿರುಮೆಳೆ : ಸ್ಥಲರಕ್ತಕಮಲಮಂ ಕೋಮಲಪದತಲಪದ್ಮರಾಗರುಚಿಯಂ ವಂಶಸ್ಥಲ[ಶಾಕಾ.ಳ]ಮಂ ತನುಪ್ರಭಾ ಮಂಡಲದಿಂದೆಂಟನೆಯ ಕೇಶವಂ ದ್ರಿಗುಣಿಸಿದಂ (ಪಂಪಾಮಾ. ೯-೩೦). [ಸಂ.]

ವಂಶಾನುಚರಿತ (ನಾ). ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತ ಎಂಬ ಪುರಾಣದ ಪಂಚಲಕ್ಷಣಗಳಲ್ಲಿ ಒಂದು ; ರಾಜಕುಲದ ಚರಿತ್ರೆಯ ನಿರೂಪಣೆ; ವಂಶಕಥನ : ವಂಶಾನುಚರಿತ - ಸೂರ್ಯ ಚಂದ್ರವಂಶಗಳ ಮತ್ತು ಆ ವಂಶದ ಪ್ರಸಿದ್ಧ ರಾಜರ ಚರಿತ್ರೆ (ಭಾರತ. ೧೩೫). [ಸಂ.]

ವಂಶಾವತಾರ (ನಾ). ಕುಲದ ಉಗಮ, —ಆರಂಭ : ಸಮಸ್ತವಸ್ತುವಿಸ್ತಾರ ಹಾರಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ ನೆಗಳ್ದ ಭರತಕುಲತಿಲಕರ ವಂಶಾವತಾರಮೆಂತಾದುದೆಂದೊಡೆ (ಪಂಪಭಾ. ೧-೫೮ ವ); ಶ್ರೀಮತ್ ಶಾನ್ತಿವರ್ಮರಸರ ವಂಶಾವತಾರಮೆಂತೆಂದೊಡೆ (ಶಾಕಾ. XX, ೧೪-೧೦; ೫೫೦). [ಸಂ.]

ವಂಶಾವಳಿ (ನಾ). ಪೀಳಿಗೆ ; ವಂಶಾನುಕ್ರಮ : ಇಂತೀ ಮೂವರುಂ ಬಂದ ವಂಶಾವಳಿಯುಮಂ ನಿಜಾವಳಿಯುಮನೊಳ್ಕಿತ್ತಾಗಿ ಹೇಟ್ಟೀ ನಿನ್ನ ಚೆನ್ನಭಾಷಿತಮದೊಳ್ಕಿತ್ತಾದುದು (ಗದಾಯು. ೨-೮ ವ); ಮೋರೆಸರ ಕದಂಬಕುಲದಲ್ಲಿ ಕದಂಬರ ವಂಶಾವಳಿಯು ಹೀಗೆ ಕೊಡಲ್ಪಟ್ಟಿದೆ (ಕರ್ನಾಇ. ೧೧). [ಸಂ. ವಂಶಾವಲಿ]

ವಂಶಾಸನ (ನಾ). ಬಿದಿರಿನಿಂದ ಹೆಣೆದ ಚಾಪೆ : "ವಂಶಾಸನಂ ಚಾಪೆ" (ಮಂಗರಾ. ೬೨-೩೦); ಬರಿಯ ಧರೆ ಆಸನದಿ ದುಃಖವು ಸರಿಯ ವಂಶಾಸನ ದರಿದ್ರವು (ಗಗರಾ. ೪-೨೨). [ಸಂ.]

ವಂಶಿಕ (ಗು). ೧. ಕುಲಕ್ಕೆ ಸಂಬಂಧಿಸಿದ. ೨. ಬಿದಿರಿಗೆ ಸಂಬಂಧಿಸಿದ. (ನಾ). ೩. ಸಂತತಿಯಿಂದಾದುದು ; ಪೀಳಿಗೆಯಿಂದಾದುದು : ಗುರುಸ್ಥಲ ಭಕ್ತವಂಶಿಕ ಲಿಂಗಸ್ಥಲ ಮಹೇಶ್ವರವಂಶಿಕ ಜಂಗಮಸ್ಥಲ ಪ್ರಸಾದಿವಂಶಿಕ (ಮೋಸಮಾ. ೧೩೭-೧೩೭). ೪. ವಂಶದಲ್ಲಿ ಬಂದವನು ; ವಂಶಸ್ಥ : ಅವನ ವಂಶಕ್ಕೆ ಭರತವಂಶವೆಂದೂ ಅವನ ವಂಶಿಕರಿಗೆ 'ಭಾರತ'ರೆಂದೂ ಹೆಸರಾಯಿತು (ವಚಭಾ. ೩೫); ಈತನ ವಂಶಿಕರ ವಿಷಯವಾಗಿಯೂ ಕೆಲವು ಸಂಗತಿಗಳು . . . ಕೈಬರೆಹದ ಕಾಗದದ ಗ್ರಂಥದಿಂದ ತಿಳಿದು ಬರುತ್ತವೆ (ಸಚಿತ್ರ V ಪ್ರಸ್ತಾವನೆ). ೫. ಒಂದು ಬಗೆಯ ಸುಗಂಧದ್ರವ್ಯ ; ಅಗುರುಚಂದನ. [ಸಂ.]

ವಂಶೋದ್ಧಾರ (ನಾ). ಕುಲದ ಉದ್ಧಾರ ; ವಂಶದ ಅಭಿವೃದ್ಧಿ : ವಂಶೋದ್ಧಾರಕ್ಕೆ ಪುತ್ರ ಬೇಕು ಎಂಬ ಸಣ್ಣ ಮಾತು ನನಗೆ ತಿಳಿಯದೆ ? (ಬೀಚಾ. ೧೭). [ಸಂ.]

ವಂಶೋದ್ಧಾರಕ (ನಾ). ಕುಲವನ್ನು ಉದ್ಧರಿಸುವವನು; ವಂಶವನ್ನು ಬೆಳಗುವವನು: ವಂಶೋದ್ಧಾರಕ ಒಬ್ಬ ಮೊಮ್ಮಗ ಹುಟ್ಟಿದರೆ ಸಾಕು ಎಂದರು (ನಿಂಗಾ. ೩೭); ಗಂಡುಮಗು ಹುಟ್ಟಿದಾಗ ಅವನು ವಂಶೋದ್ಧಾರಕ ಜನಿಸಿದನೆಂದು ಆನಂದಪಟ್ಟನು (ಯೂಧ). [ಸಂ.]

ವಂಶೋದ್ಭವ (ನಾ). (ಒಂದು ನಿರ್ದಿಷ್ಟವಾದ) ಕುಲದಲ್ಲಿ ಹುಟ್ಟಿದವನು, —ಜನಿಸಿದವನು : ಕ್ರಿ. ಶ. ೯೨೨ರ ಕಡಬಗೆರೆ ಶಾಸನದಲ್ಲಿ ಅಯ್ಯಪದೇವನ ಮಗನಾದ ಅಣ್ಣಿಗನು . . . ಕದಂಬವಂಶೋದ್ಭವ ಕಣ್ಣವಾರ ಮುದುದರ ದೇವಯ್ಯನ

ಮಗನೊಂದಿಗೆ ಕಾದಿದನೆಂದು ಹೇಳಿದೆ (ನೊಳಂಬ. ೩೭); ವೃಜನದವೋಲಿರ್ಪರಿಳೆಯೊಳು ಸುಜನರು ಚಾರುವಂಶೋದ್ಭವರಿವರು (ಇಂಚಾಸ. ೭೦-೩೬). [ಸಂ.]

ವಂಸ (ನಾ). ೧. ವಂಶ ; ಕುಲ : ಅಯ್ದುಕೊಳಗ ಗಟ್ಟಿಯುಮಂ ಈ ವಂಸದ ಪುಟ್ಟಿದವರ್ ಕಾದಿರಿಸುಗೆ (ಎಕ. III(ಇ), ಹೆಗ್ಗಡೆ. ೭೦-೩೪; 1057); ಮನ್ನೆಯ ವಾಯದಾಯ ಮಾನ್ಯ ಸಲ್ಲವು ಸರ್ವನಮಸ್ಯಮೆಂದು ಬಿಟ್ಟುಂ ನೆಗಳ್ದಂ ಡಾಕಮಣ್ಡಳಿಕನಚ್ಚರಿ ತನ್ನಯ ವಂಸಮುಳ್ಳಿನಂ (ಸೌಂಬ. XX, ೮೫-೩೨; 1124). ೨. ಕೊಳಲು: 'ವಂಸಕಾಱ' ಪರಾ.

[< ಸಂ. ವಂಶ]

ವಂಸಕಾಱ (ನಾ). ಕೊಳಲನ್ನು ಬಾಜಿಸುವವ[illegible] ಮತ್ತರು ೧೦ ವಂಸಕಾಱಂಗೆ ಮತ್ತರು ೫ (ಸೌಂಬ. IX - i, ೧೩೩-೩೦; 1068). [ವಂಸ + — ಕಾಱ]

ವಂಸಿಗ (ನಾ). = ವಂಸಕಾಱ : ಸೂಳೆವಾಳಂಗೆ ಮತ್ತರ್ಪತ್ನೆರಡು ವಂಸಿಗರ್ಪರ್ಗ್ಗೆ ಮಾಗಿ ಮತ್ತರ್ಪತ್ತನಾಲ್ಕು (ಸೌಂಬ. IX-i, ೧೦೦-೫೦; 1045); ವಂಸಿಗಂಗೆ ಮತ್ತರ್ ೧೦ ಪಾಡುವರಿರ್ಬರ್ಗ್ಗೆಂ ಮತ್ತರ್ ೩೦ (ಸೌಂಬ. XI-i, ೧೦೩-೨; ?). [ವಂಸ + — ಇಗ]

ವಕಾರ (ನಾ). 'ವ' ಎಂಬ ಅಕ್ಷರ : ಅನುನಾಸಿಕ ವಕಾರಕ್ಕೆ — ಸೇವಂ, ಸೋವೆ, ಸಾವೆ, ಜಾವಂ (ಶಮದ. ೧೬ ಪ್ರಯೋ). [ಸಂ.]

ವಕಾಲತ್ 'ವಕಾಲತ್ತು' ನೋ.

ವಕಾಲತ್‌ನಾಮೆ 'ವಕಾಲತ್ತುನಾಮೆ' ನೋ.

ವಕಾಲತಿ 'ವಕಾಲತ್ತು' ನೋ.

ವಕಾಲತ್ತು, ವಕಾಲತ್, ವಕಾಲತಿ (ನಾ). ೧. ನ್ಯಾಯಾಸ್ಥಾನದಲ್ಲಿ ಯಾವುದಾದರೂ ಮೊಕದ್ದಮೆಯಲ್ಲಿ ವಾದಿ ಅಥವಾ ಪ್ರತಿವಾದಿಯ ಪರವಾಗಿ ಪ್ರಶ್ನೋತ್ತರ ಅಥವಾ ವಾದವಿವಾದ ಮಾಡುವ ವೃತ್ತಿ, —ಉದ್ಯೋಗ ; ವಕೀಲಿ : ಉಚ್ಚತಮನ್ಯಾಯಾಲಯದ ನ್ಯಾಯಾಧೀಶಪದಧಾರಣ ಮಾಡಿದ್ದವರು ಯಾರೊಬ್ಬರೇ ಆಗಲಿ . . . ಯಾವುದೇ ಪ್ರಾಧಿಕಾರಿಯ ಸಮಕ್ಷಮ ವಕಾಲತ್ತನ್ನಾಗಲಿ ಕಾರ್ಯವನ್ನಾಗಲಿ ನಡೆಯಿಸತಕ್ಕುದಲ್ಲ (ಭಾಧಾನ. ೬೮); ನೀವು ಈ ಮೊಕದ್ದಮೆಯಲ್ಲಿ ವಕಾಲತ್ತು ವಹಿಸಬೇಕು(ಚಿತ್ರಕೂ. ೧೫೫). ೨. ಇನ್ನೊಬ್ಬರ ಪರವಾಗಿ ವಾದಿಸುವುದು ; ಪಕ್ಷ ವಹಿಸಿಕೊಳ್ಳುವುದು : ನೀನು ಇಷ್ಟು ಹೊತ್ತೂ ಅವಳ ಪರ ಮಾಡಿದ ವಕಾಲತ್ತು ನೋಡಿ ಅವಳ ನಡತೇನ ಒಪ್ಪಿದೀಯಾ ಅಂದುಕೊಂಡಿದ್ದೆನಮ್ಮ ! (ನಿಂದೆನೆ. ೧೯೪); ಹಾಗೆಲ್ಲ ಮನಸ್ಸಿದ್ದರೆ, ದೊಡ್ಡಪ್ಪನನ್ನು ಕೇಳಲು ಬೇರೆಯವರ ವಕಾಲತ್ತು ಅಗತ್ಯವಿದೆಯೆ? (ವಾಷ್ಟಲ್ಯ. ೧೧೦). ೩. ನ್ಯಾಯಾಲಯದಲ್ಲಿ ತನಗಾಗಿ ಮೊಕದ್ದಮೆ ನಡೆಸಲು ಮತ್ತೊಬ್ಬ ವ್ಯಕ್ತಿಯನ್ನು ನಿಯಮಿಸುವ ಅಧಿಕಾರವನ್ನು ಸೂಚಿಸುವ ಪತ್ರ, —ದಾಖಲೆ : ತಮ್ಮ ಕಡೆ ಯಾರಾದರೂ ಒಬ್ಬನಿಗೆ ತಮ್ಮ ಹೆಸರಿನ ವಕಾಲತ್ತಿನ ಕಾಗದ ಸಹಾ ಮುಂಬಯಿಗೆ ಕಳುಹಿಸಿ . . . ಹಣ ವರ್ಷಂಪ್ರತಿಯಲ್ಲು ಅವರಿಗೆ ಕೊಡಿಸಬೇಕು (ರಾಚೇಂದ್ರ. ೨೧೪). **ವಕಾಲತ್**: ೩. 'ವಕಾಲತ್‌ನಾಮೆ' ಪರಾ. **ವಕಾಲತಿ** : ೨. ಮೊದಲೇ ಛಂದಸ್ಸಿನ ಸಂಬಂಧದಲ್ಲಿ ವಕಾಲತಿ ಮಾಡುವುದು, ಪ್ರಾಯಶಃ ಅತಿಯೆಂದು, ಅನೇಕರಿಗೆ ಎನ್ನಿಸಬಹುದು (ನಿಬಂಧ. II, ೨೫೨). ೪. ನ್ಯಾಯಶಾಸ್ತ್ರ; ಕಾನೂನುಶಾಸ್ತ್ರ : 'ವಕಾಲತಿ' ಯನ್ನು ಓದಬೇಕೆಂದು ಅವನು ಆಲೋಚಿಸಿದ್ದನು (ಸರಳಾ. ೧೧).

[<— ಅರ. ಹಿಂ. ವಕಾಲತ್; ಮರಾ. ವಕಲಾತ್, ವಕಾಲತ್]

ವಕಾಲತ್ತುನಾಮೆ, ವಕಾಲತ್‌ನಾಮೆ (ನಾ). = ವಕಾಲತ್ತು ೩ : ಆದ್ದರಿಂದಲೇ ಒಂದು ಇತಿಹಾಸಕ್ಕೆ ಎರಡು ವಿರುದ್ಧಕಕ್ಷಿಗಳಲ್ಲಿ ವಕಾಲತ್ತುನಾಮೆ ಕೊಟ್ಟಿರುತ್ತದೆ (ನಿಬಂಧ. II, ೨೭೮); ಅವೇ ಪಾತ್ರಗಳಿಂದ ವಕಾಲತ್ತುನಾಮೆ ಹಾಕಿಸಿಕೊಂಡವರಂತೆ ಜಗಳಕ್ಕೆ ನಿಲ್ಲುತ್ತಿದ್ದಾರೆ (ಯಕ್ಷಬ. ೬). **ವಕಾಲತ್‌ನಾಮೆ** : ವಕಾಲತ್‌ನಾಮೆಯ ಮೇಲೂ ಸದರಿ ರೆಗ್ಯುಲೇಷನ್ ಮೇರೆಗೆ ಯಾವ ರುಸುಮನ್ನೂ ವಸೂಲ್ಮಾಡತಕ್ಕದ್ದಲ್ಲ (ಗ್ರಾಮಾಕ. ೪೪).

[ವಕಾಲತ್ತು + ನಾಮೆ./ ಹಿಂ. ಮರಾ. ವಕಾಲತ್‌ನಾಮಾ]

ವಕೀಲ (ನಾ). ೧. ನ್ಯಾಯಶಾಸ್ತ್ರದಲ್ಲಿ ಪದವಿಯನ್ನು ಪಡೆದು, ನ್ಯಾಯಾಸ್ಥಾನದಲ್ಲಿ ವಾದಿ ಅಥವಾ ಪ್ರತಿವಾದಿಯ ಪರವಾಗಿ ಪುರಾವೆಗಳ ಸಹಿತ ವಾದಮಾಡಲು ಶ್ರೇಷ್ಠನ್ಯಾಯಾಲಯದಿಂದ ಅಧಿಕಾರವನ್ನು ಪಡೆದವನು ; ವಕಾಲತ್ತು ಮಾಡುವವನು ; ಲಾಯರು : ಮೊಕದ್ದಮೆಗಳಿಗೆ ಫೀಜು ಏರ್ಪಾಡಾಗಿ ಈ ಬಾಬಿನಿಂದ ವಸೂಲಾದ ಹಣದ ಮೂರು ಪಾಲಿನಲ್ಲಿ . . . ಒಂದು ಪಾಲು ಕಕ್ಷಿಗಾರರ ಕಡೆಯ ವಕೀಲರಿಗೆ ಫೀಜಾಗಿ ಸಲ್ಲುತ್ತಿತ್ತು (ಮಹಾಮೆ. II, ೪೫); ಅವುಗಳನ್ನು ತೆಗೆದುಕೊಂಡು ವಕೀಲರ ಮನೆಗೆ ಹೋಗಿ ಕೋರ್ಟಿನಲ್ಲಿ ದಾವೇ ಮಾಡಬೇಕೇ? (ಮೋಹಿನೀ. [illegible]). ೨. ರಾಯಭಾರಿ ; ಪ್ರತಿನಿಧಿ ; ನಿಯೋಗಿ : ಇಕ್ಕೇರಿಯೊಳರ್ಪ ಪಾತುಶಾಹನ ವಕೀಲನಾಗಿರುತಿರ್ದ ಜನ್ನೋಪಂತಂಗೆ ಪರಿಧಾನಮನಿತ್ತು ಒಳಗು ಮಾಡಿಕೊಂಡು (ಕೆಳಗ. ೬-೩೭); ಮಾವಿನಿಸಾಹೇಬರು ವೀರರಾಜೇಂದ್ರಮಡೆಯರವರ ಕಂಡು, ಭೇಟಿ ಆಗಿ ವಕೀಲರಾಗಿ ನಿಂತರು (ರಾಚೇಂದ್ರ. ೧೪೨).

[<— ಅರ. ಹಿಂ. ಮರಾ. ವಕೀಲ್]

ವಕೀಲತನ (ನಾ). ವಕಾಲತ್ತು ನಡೆಸುವಿಕೆ : ಇವರನ್ನು ವಕೀಲತನಕ್ಕೆ ಕಳುಹಿಸಿ ಇದ್ದೇನೆಯಂತಾ [illegible] ಸ್ಟೂಯರ್ಟ್ ಸಾಹೇಬರು ಸಹಾ ಬರದು ಇದ್ದರು (ರಾಚೇಂದ್ರ. ೧೪೨). [ವಕೀಲ + — ತನ]

ವಕೀಲಿ (ನಾ). = ವಕಾಲತ್ತು ೧ : ವಕೀಲಿ ಕಲಿಯಲಿಕ್ಕಂತ ಹೋದಾಗ ಅವರಪ್ಪ ತೀರಿಕೊಂಡು ಎಲ್ಲಾ ಗೋಳಿಗೆ ಹಾಕಿ ಹೋಗ್ಯಾನ (ಅಪನಾ. ೧೧); ರಾಯರು ಮದರಾಸಿನ ವಕೀಲಿ ಪರೀಕ್ಷೆ ಮಾಡಿದ್ದಾರೆ (ರಾಯಕ. ೧). [<— ಅರ. ಹಿಂ. ಮರಾ. ವಕೀಲೀ]

ವಕೀಲಿವೃತ್ತಿ (ನಾ). ನ್ಯಾಯವಾದಿಯ ಕೆಲಸ ; ಲಾಯರನ ಉದ್ಯೋಗ : ಕಲ್ಕತ್ತದಲ್ಲಿ ಅವರ ವಕೀಲಿವೃತ್ತಿ ಚೆನ್ನಾಗಿಯೇ ಸಾಗುತ್ತಿತ್ತು (ರಾಜವ. ೬); ಎಲ್. ಎಲ್. ಬಿ.ಯಾಗಿದ್ದರೂ ನನ್ನಂತೆ ವಕೀಲಿವೃತ್ತಿಯನ್ನು ಪ್ರಾರಂಭಿಸಬಹುದಾಗಿತ್ತು (ನಿರ್ದೋಷಿ. ೬). [ವಕೀಲಿ + ವೃತ್ತಿ]

ವಕುಲ, ವಕುಳ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು ; ನಾಗಕೇಸರ ; ಬಕುಳ : ಬಾಸಣಿಸಿದುದುತ್ಕಟಕುಸುಮಾಸವಸೌರಭದೆ ದೆಸೆಗಳೊಡನಳಿಕುಳಮಂ . . . ವಕುಲಂ[ಪಾಲಾ. ೪೦] (ಆದಿಪು. ೬-೯೭). **ವಕುಳ** : ವನಕುಸುಮಗಳಂ ಬಗೆಗೆವಂದುವನಟ್ಟೆಯೊಳಾಯ್ದು ಕೊಯ್ದು ಮೆಲ್ಲನೆ ವಕುಳಾಳವಾಳತಳದೊಳ್ ಸುರಿದು (ಪಂಪಭಾ. ೨-೧೬); ವಕುಳ ಲವಂಗಂ ಜಾದಿ ಮೊದಲಾದನೇಕಂ ಪೂದೋಂಟಂ ಸುರಭಿಪರಿಮಳಾಮೋದಂಗಳ್ (ಎಕ. VIII, ಸಾಗರ. ೧೦೯-೫೦; 1042); IP ಇದೊಂದು ದೋಹದ ವೃಕ್ಷ. ಸುಂದರಸ್ತ್ರೀಯು ಮದ್ಯವನ್ನು ಇದರ ಮೇಲೆ ಉಗುಳಿದಾಗ ಹೂವು ಬಿಡುವುದೆಂಬ ಕವಿಸಮಯವಿದೆ.

[ಸಂ.]

ವಕುಶ (ನಾ). [ಜೈನ] ಪುಲಾಕ, ವಕುಶ, ಕುಶೀಲ, ನಿರ್ಗ್ರಂಥ, ಸ್ನಾತಕ ಎಂಬ ಐದು ಬಗೆಯ ಮುನಿವರ್ಗಗಳಲ್ಲಿ ಒಂದು ; IP "ವಕುಶ— ನಿರ್ಗ್ರಂಥ ಭೇದ — ಅಖಂಡಿತಬ್ರಹ್ಮಚರ್ಯ ವ್ರತಿಗಳಾಗಿಯೂ ಶರೀರೋಪಕರಣ ಸಂಸ್ಕಾರ ಯಶೋವಿಭೂತಿಗಳಲ್ಲಿ ಅಶಕ್ತರಾದವರು" (ಜೈನಕೋ. ೨೨೩): ಅಖಂಡಿತವ್ರತರುಂ ಶರೀರಸಂಸ್ಕಾರೋಪಕರಣಸುಖಯಶೋವಿಭೂತಿಭೂಷಾನುವರ್ತಿಗಳುಂ ಅವಿವಿಕ್ತ ಪರಿವಾರರುಂ ಸಕಲಚಾರಿತ್ರರುಂ ಅಪ್ಪ ವಕುಶರುಂ (ಶಸ್ತ್ರಪ್ರ. ೩೫೬). 'ಬಕುಶ' ಪರಾ.

[ಸಂ.]

ವಕುಷ್ಪಕ (ನಾ). ಒಂದು ಬಗೆಯ ಧಾನ್ಯ ; ಕಾಡುಹೆಸರು : "ವಕುಷ್ಪಕಂ ವನಮುದ್ಗಂ" (ಪ್ರಾಕೋ. ೧೪-೧೭). [?]

ವಕುಳ 'ವಕುಲ' ನೋ.

ವಕೋಟ (ನಾ). ಒಂದು ಬಗೆಯ ಹಕ್ಕಿ ; ಕೊಕ್ಕರೆ ; ಬಕಪಕ್ಷಿ: 'ಬಕೋಟ' ಪರಾ. [ಸಂ.]

ವಕ್ಕಣಿಸು 'ವಕ್ಕಾಣಿಸು' ನೋ.

ವಕ್ಕಣಿ 'ವಕ್ಕಾಣ' ನೋ.

ವಕ್ಕರಿಸು, ಒಕ್ಕರಿಸು (ಕ್ರಿ). ೧. (ತಿರಸ್ಕಾರಾರ್ಥದಲ್ಲಿ) ಉಂಟಾಗು ; ಒದಗು ; ಪ್ರಾಪ್ತವಾಗು : ಅವರಲ್ಲಿ ಕೆಲವರು ಬಹಳ ಪರಿತಾಪದಿಂದ ತಮಗೆಲ್ಲರಿಗೆ ವಕ್ಕರಿಸಿದ್ದ ಒಂದು ಅಸಹ್ಯವಾದ ಯಾತನೆಯನ್ನು ಹೇಳಿಕೊಂಡರು (ಕೆಲನೆ. ೧೪೭); ನಿನಗೆಲ್ಲೋ ಗ್ರಹಚಾರ ವಕ್ಕರಿಸಿದೆ (ನಮ್ಮೂರಿ. ೯). ೨. ನಷ್ಟವನ್ನು ಉಂಟುಮಾಡು ;

ಹಾನಿಮಾಡು : ಈ ಕೆಲಸ ಮಾಡಿ ಮುಗಿಸಿದ್ರೆ ಪಾಪ ಅವ್ನೀಗೆ ಏನಾದರೂ ಇನಾಮು ಕೊಡಬೇಕು. ಆದ್ರೆ ಮುನಿಸಿಪಲ್ ಪ್ರೆಸಿಡೆಂಟ್ರು ಕೈಬಿಚ್ಚಾರೇನಯ್ಯ ನಮಗೇ ವಕ್ಕರಿಸ್ತಾರೆ (ಎಮುಕ. ೫೬). ೩. (ಇನ್ನೊಬ್ಬರ ಮನೆಯಲ್ಲಿ) ಅನಪೇಕ್ಷಿತವಾಗಿ ಬಂದು ನಿಲ್ಲು ; ನಿಸ್ಸಂಕೋಚವಾಗಿ ಬಂದಿರು : ದಾಕ್ಷಿಣ್ಯವಿಲ್ಲದೆ ಇರು : ಬಂದು ವಕ್ಕರಿಸಿಯೇ ಬಿಟ್ಟ ಅಕ್ಕಟ ಸೊಳ್ಳೆ ಸಂಗೀತಗಾರ (ಚಂಡಮ. ೩೨-೩). ಒಕ್ಕರಿಸು : ೧. ಫಕ್ಕನೆ ವಸಂತದುರು ಘರ್ಮದೊಳು ದಾಕ್ಷಿಣ್ಯಮೊಕ್ಕರಿಸಲೆಳಗಾಳಿಯುರೆ ಬಿಡದೆ ಸುಳಿವಂತೆ ನಸುನಗೆಯನುರೆ ಮಿನುಗಿಸಿ ಒಕ್ಕಣಿಸಿದಳ್ (ಪರಶು. ೬-೫). ೨. ನಾಡಿದ್ದು ಒಕ್ಕರಿಸುತ್ತಾನಲ್ಲಾ (ಶನಿಮಾ. ೧೦೯); ನಿನ್ನಂಥ ಶನಿ ಒಕ್ಕರಿಸಿದ ಮೇಲೆ ದೇವರನ್ನು ನಂಬೋದಿಲ್ಲ ಅಂದರೆ ಸಾಧ್ಯವೇ? (ನಿಶಿಲಾ. ೨೬೪).

[< ವಕ್ರಿಸು./ ತೆಲು. ವಕ್ಕರಿಂಚು, ವಕ್ಕಳಿಂಚು]

ವಕ್ಕಾಣಿಭಟಾರ (ನಾ). ಒಬ್ಬಾತನ ಹೆಸರು : ವಕ್ಕಾಣಿಭಟಾರರ ಶಿಷ್ಯರ್ ಚಿಲ್ಲುಕಭಟಾರರ ಕಾಲಂ ಕರ್ಚ್ಚ ಕೊಟ್ಟ . . . ಕಿಟ್ಟೆಱೆ ಮೂನೂಱುಗಣ್ಣುಗಂ (ಎಕ. XII, ಶಿಶಾ. ೨೮-೪೦; 943). [< ವಕ್ಕಾಣ + ಭಟಾರ]

ವಕ್ಕಣ 'ವಕ್ಕಾಣ' ನೋ.

ವಕ್ಕಣಶಾಲೆ (ನಾ). ವಿದ್ಯಾರ್ಥಿಗಳಿಗೆ ಗ್ರಂಥಗಳನ್ನು ವ್ಯಾಖ್ಯಾನ ಮಾಡಿ ಹೇಳುವ ಜಾಗ, —ಮಠ : ತಮ್ಮ ವಕ್ಕಣಶಾಲೆಯಲು ತರ್ಕಶಾಸ್ತ್ರಮಂ ವ್ಯಾಖ್ಯಾನ ಮಾಡುವಂತಾಗಿ ಬಿಟ್ಟ ಗದ್ಯಾಣ ೩೦ (ಸೌಇಇ. XI-ii, ೧೫೯-೩೨; 1111).

[ವಕ್ಕಣ (< ವಕ್ಕಾಣ) + ಶಾಲೆ$_3$]

ವಕ್ಕಣಿಸು 'ವಕ್ಕಾಣಿಸು'ನೋ.

ವಕ್ಕಣೆ 'ವಕ್ಕಾಣ' ನೋ.

ವಕ್ಕಾಣ, ಒಕ್ಕಣೆ$_2$, ವಕ್ಕಣೆ, ವಕ್ಕಣ, ವಕ್ಕಣೆ, ವಖಣೆ, ವಖ್ಖಣೆ, ವಖ್ಖಾಣ (ನಾ). ೧. ವಿವರಣೆ ; ವಿಶದವಾದ ನಿರೂಪಣೆ ; ವ್ಯಾಖ್ಯಾನ : 'ವಕ್ಕಾಣಿಸು' ಪರಾ. ಒಕ್ಕಣೆ$_2$: ೧. ಆ ಕಾಗದದ ಒಕ್ಕಣೆಯನ್ನು ಓದಿ ತಿಳಿಸಲು (ಮುದ್ರಾಮಾ. ೧೬); 'ವಿನಯವೀಶಕ' ದಲ್ಲಿ ಪ್ರಸೇಂದ್ರರಾಜನ ಚಿತ್ರಶಾಲೆಯನ್ನು ವಿವರಿಸುವ ಹಲವು ಒಕ್ಕಣೆಗಳಿವೆ (ಭಾರದ. ೫೨೩). ೨. ಬರವಣಿಗೆ ; ಬರೆಹ ; ಲೇಖನ : ಲೆಕ್ಕಣೆಯನು ಬಿಟ್ಟು ಸೌಟನು ಓಡಿದೆನು ಒಕ್ಕಣೆ ನಿಂತಿತು ಹೀಗೆ (ಇಂಚಾಪ. ೪೮-೩೦); ರಾಜಕುಮಾರ ತಾಮ್ರಪಟದ ಒಕ್ಕಣೆಯನ್ನು ಓದಿದ (ಹಾಹುತ್ತ. ೧೦೩). ವಕ್ಕಣೆ : ೧. ತುರುಷ್ಕ ಜನಾಂತದ ನೃಪನ ಲೇಖನವು ಇಂತೆಂದು ಬಂದುದಿದರ ವಕ್ಕಣೆಯನೇಕಾಂತದೊಳೋದಿಕೊಳ್ಳನುತ (ಪ್ರಭಂಜ. ೩-೧೨). ೩. ಮಾತಿನ ಶೈಲಿ, —ಸರಣಿ : ಬರಸಿದ ರಾಯಸದ ಬಂಧುರದ ವಕ್ಕಣೆಯಿಂದ ಕಳುಹಿದ ಸುರಥಭೂಪತಿಗೆ (ಸನತ್ಕು. ೧೩-೨೦). ವಕ್ಕಣ: ೧. 'ವಕ್ಕಣಶಾಲೆ' ಪರಾ. ವಕ್ಕಣೆ : ೧. 'ವಕ್ಕಣಿಸು' ಪರಾ. ವಖಣೆ : ೧. ಶಿಲಾಶಾಸನದ ವಖಣೆಯ ವಿವರ (ಸೌಇಎ. ೧೯೨೯, ಕಾರಕಲ್. ೮೮೨-೩೨; 1391); ಧರ್ಮಶಾಸನದ ಪಟೆಯ ವಖಣೆಯ ಕ್ರಮವೆಂತೆಂದರೆ . . . ಭೂಮಿಯ ಚತುಸೀಮೆಯ ವಿವರ (ಸೌಇಇ. IX-ii, ೬೦೯-೯; 1544). ವಖ್ಖಣೆ : ೧. 'ವಖ್ಖಣಿಸು' ಪರಾ. ವಖ್ಖಾಣ: ೧. ವರ್ಗದ್ವಿತೀಯಾಕ್ಷರಂಗಳ್ಗೆ — ವಖ್ಖಾಣಂ, ದೆಖ್ಖಾಣಂ (ದೆಖ್ಖಾಳಂ) (ಕಮದ. ೧೫ ಪ್ರಯೋ).

[< ಪ್ರಾ. ವಕ್ಕಾಣ./ ಸಂ. ವ್ಯಾಖ್ಯಾನ./ ತೆಲು. ವಕ್ಕಣ, ವಕ್ಕಾಣ]

ವಕ್ಕಾಣಿಸು, ಒಕ್ಕಣಿಸು, ಒಕ್ಕಾಣಿಸು, ವಕ್ಕಣಿಸು, ವಕ್ಕಣಿಸು, ವಖ್ಖಣಿಸು, ವಖ್ಖಾಣಿಸು, ವಾಖಾಣಿಸು (ಕ್ರಿ). ೧. ವಿಸ್ತರಿಸಿ ಹೇಳು ; ನಿರೂಪಿಸು ; ವ್ಯಾಖ್ಯಾನ ಮಾಡು : ಭಟಾರರಾರಾಧನೆಯಂ ವಕ್ಕಾಣಿಸುವುದಂ ಕೇಳುತ್ತಿರ್ದಂ (ವಜ್ರಾಂ. ೮೩-೩); ತಪೋಧನರ್ಗ್ಗೆ ವಕ್ಕಾಣಿಸುತಮಿರ್ಪ್ಪ ಭಟ್ಟರ್ಗೆ ಮತ್ತರ್ ಮೂವತ್ತು (ಎಇ. XV, ೮೯-೪೨; 1060). ಒಕ್ಕಣಿಸು : ೧. ಕಕ್ಕಸದಿಂದೊಂದು ಬವರ ಬಂದಡಸಿತು ಒಕ್ಕಣಿಸಲು ಬಂದೆ ನಿನಗೆ (ಮೋಹತ. ೧೧-೭); ತೃಣವ ಪರ್ವತವ ಮಾಳ್ಪಂತೆ ನೀವವನನೊಕ್ಕಣಿಸುತಿಹಿರಿ ತೋರ ಮಾಡಿ (ಭರಚ. ೨೪-೯). ೨. ಬರೆಯಿಸು ; ಲೇಖಿಸು : ರಾಜಮಹಾರಾಜರುಗಳಿಗೂ . . . ಹೆಗ್ಗಡೆಗಳಿಗೂ ಅವರವರ ಅಂತಸ್ತು ಗೌರವಗಳಿಗೆ ತಕ್ಕಂತೆ ಒಕ್ಕಣಿಸಿದ ಲಗ್ನದ ಓಲೆಗಳನ್ನು ಯೋಗ್ಯರಾದ ರಾಯಸದವರು ಭಟರು ಒಯ್ದರು (ಶಾಂತಲಾ. ೯೬). ಒಕ್ಕಾಣಿಸು: ೧. ಕವಿಮಾರ್ಗದೊಳ್ . . . ಒಕ್ಕಾಣಿಸಲುಂ ಠವಣಿಸಲುಂ ಕಮ್ಮೆಸಲುಮಿವನಂತಾರ್ ಬಲ್ಲರೆನಿಸಿದಂ ಕವಿರತ್ನಂ (ಅಪಿಪು. ೧-೮೨). ವಕ್ಕಣಿಸು : ೧. ಶಿವನ ಈಶಾನಮೂರ್ತಿಯೆಯವಕ್ಕೆಯಧಿದೇವತೆಯೆನುತ್ತಲಪಿಳಾಗಮಂ ವ [ಶಾಂ. ೭] ಕ್ಕಣಿಸುತಿರಲ್ (ಲಿಶಿಲಿ. ೫೫-೯); ಜಕ್ಕಲಚ್ಚೆಯು ಶಿವಪುರಾಣಗಳ ಸ್ತ್ರೀಯರೊಳು ವಕ್ಕಣಿಪರು (ಮದೇಪು. ೨೮-೨೬). ೨. ಲಘುಪ್ರಬಂಧ, ಹರಟೆ— ಈ ಸಾಹಿತ್ಯಪ್ರಕಾರ ಇನ್ನೂ ಕವಲೊಡೆಯುತ್ತಲೆ ಇದೆ-- ಎಂದು ನಾನೊಂದೆಡೆಗೆ ವಕ್ಕಣಿಸಿದಾಗ "ಘೂಕ್" ಎಂದ ಸಮೀಕ್ಷಕರಿದ್ದಾರೆ (ಗಾಳಿಗ. VIII. ಮಚ್ಚಿಗೆಯ ಮಾಸು). ವಕ್ಕಣಿಸು: ೧. ಪಂಚಶತಬ್ಧಾತ್ರಸಂಚಯಕ್ಕೆ ಚಂಚದರ್ಥಶಾಸ್ತ್ರಪ್ರಪಂಚಮನ ವಂಚಕತೆಯಿಂ ಕಾಂಚನಮಯಾಸನದೊಳಿರ್ದು ವಕ್ಕಣಿಪ ವಿದ್ವನ್ಮುಖ್ಯನಂ . . . ಕಂಡು (ವರ್ಧಪು. ೧೬-೫ ಪ). ೨. ಸಕಲದೇಶಗಳ ಲೆಕ್ಕವಂ ವಖ್ಖಿಕ್ಕಣಿಸುವ ಕರಣೀಕರಂ (ಸ೗ಂಧಿ. ೧೧-೪). ವಖ್ಖಣಿಸು: ೧. ಅವರ್ಗ್ಗೆ ವ(ಒ)ಬ್ಬಿಣಿಸುವ ಭಟ್ಟರ್ಗಂ (ಇಅ. VIII, ೨೦-೫೦; 1077). ವಖ್ಖಾಣಿಸು: ೧. ವಿದ್ಯಾರ್ಥಿಗಳಾಹಾರದಾನಕ್ಕಂ ವಿದ್ಯಾರ್ಥಿಗಳ್ಗೆ ವಖ್ಖಾಣಿಸುವುಪಾಧ್ಯಾಯರ ಜೀವಿತಕ್ಕಂ . . . ಕೊಟ್ಟರ್ (ಕಇಅ. ೨೨-೭-೩೪; 1083). ವಾಖಾಣಿಸು : ೧. ಸ್ವಾಧ್ಯಾಯಮೆಂಬ ತಪಮಾಗಮಂಗಳಂ ವಾಖಾಣಿಸುವುದುಂ . . . ಧರ್ಮಮನುಪದೇಶಂಗೆಯ್ವುದುಂ ಪಂಚವಿಧಸ್ವಾಧ್ಯಾಯಮುಂ (ಶ್ರಾವಕಾ. ೧೬೩-೧೪). [ವಕ್ಕಾಣ+ —ಇಸು$_3$./ ತೆಲು. ವಕ್ಕಣಿಂಚು, ವಕ್ಕಾಣಿಂಚು]

ವಕ್ತವ್ಯ (ಗು). ೧. ಹೇಳಲು ಯೋಗ್ಯವಾದ ; ಹೇಳಬೇಕಾದ. ೨. ಹೇಳುವ ; ವಿವರಿಸುವ ; ವ್ಯಾಖ್ಯಾನಿಸುವ. (ನಾ). ೩. ಅಧೀನನಾದವನು ; ವಶವರ್ತಿ : "ವಕ್ತವ್ಯಃ — ೧ — ಕುಕ್ಷಿತನು — ಹೇಳಿದ ಹಾಗೆ ಮಾಡುವ ಅಧೀನನು, ಹೇಳತಕ್ಕ ಮಾತು ಮುಂತಾದ್ದು" (ಸಿದ್ಧಾಂತಕೌ. ೪೧೧). ೪. ವಿವರಣೆ ; ಹೇಳಿಕೆ ; ನಿರೂಪಣೆ : ತನ್ನ ಸ್ನೇಹಿತರ ಎದುರಿಗೆ ದೇಶಾಭಿಮಾನದ ತತ್ವಜ್ಞಾನದ ವಕ್ತವ್ಯಗಳ ಸುರುಳಿಗಳನ್ನು ಅಪ್ಪನ ಮುಂದೆ ಬಿಟ್ಟ ಇಡಲು ಅವನಿಗೆ ಏದೆಯೇ ಇಲ್ಲ (ಗಂಮಾಯಿ. ೧೬೭). ೫. ಖಂಡನೆ ; ನಿಂದೆ ; ತೆಗಳಿಕೆ. [ಸಂ.]

ವಕ್ತಾರ (ನಾ). ೧. ಚೆನ್ನಾಗಿ ಮಾತನಾಡುವವನು ; ವಾಗ್ಮಿ : ಕೇಳುವ ರಸಿಕರು ದೊರೆಯದ ಊರೊಳು ವಕ್ತಾರ ಮಾಡುವುದೇನು (ಇಂಚಾಪ. ೧೫೮-೭೮); ವಕ್ತಾರನ ಅಭಿಪ್ರಾಯದ ದೃಷ್ಟಿಯಿಂದ ಶಬ್ದಗಳಿಗೆ ವ್ಯಂಜಕತ್ವವಿರುವುದೆಂದು ನೀವೇ ಬಾಯಿಬಿಟ್ಟು ವಿವರಿಸಿರುವಿರಿ (ಧ್ವನ್ಯಾಲೋ. ೨೦೪). ೨. ಭಾಷಣಕಾರ ; ಉಪನ್ಯಾಸಕ : ವೇದಿಕೆಯ ಮೇಲೆ ವೇದವೂ ಕಾಣದತಿಗೂಢತತ್ವಗಳ ಹೊನ್ನ ಚಲೆ ಬೀಸುವನು ವಕ್ತಾರ (ನಡಬೂ. ೮೯-೪); ರಾಯರು ಹೆಸರಾಂತ ಲೇಖಕರು, ನುರಿತ ವಕ್ತಾರರು (ಜ್ಞಾಲಾಮೂ. ೩೯). ೩. ವಿವರಣೆ ನೀಡುವವನು : ವ್ಯಾಖ್ಯಾನಕಾರ : ಗ್ರೀಕ್‌ರುದ್ರನಾಟಕದ ಮೇಳ ಒಮ್ಮೊಮ್ಮೆ ಕವಿಯ ನಿಯೋಗಿಯೂ ಅವನ ಜೀವನದರ್ಶನದ ವಕ್ತಾರನೂ ಆಗಿರುತ್ತದೆ (ಸಾಹಿಪ್ರ. ೨೪೯); ಅವರು ಅರಬ್ಬೀತತ್ವಜ್ಞಾನದ ಅಧಿಕೃತ ವಕ್ತಾರರು ಎನ್ನುವ ಹಾಗಿಲ್ಲ (ತತ್ವಪ್ರಾ. ೧೧). ೪. ಒಬ್ಬರ ಅಥವಾ ಒಂದು ವಿಷಯದ ಪರವಾಗಿ ಅಧಿಕೃತವಾಗಿ ಮಾತನಾಡುವ ವ್ಯಕ್ತಿ ; ಪ್ರತಿನಿಧಿತ್ವ ವಹಿಸುವ ವ್ಯಕ್ತಿ. [ಸಂ. ವಕ್ತೃ]

ವಕ್ತೃ (ಗು). ೧. ಚೆನ್ನಾಗಿ ಮಾತನಾಡುವ ; ವಾಗ್ಮಿಯಾದ. ೨. ಪ್ರಾಮಾಣಿಕವಾದ ; ಋಜುತ್ವದ. (ನಾ). ೩. ಒಳ್ಳೆಯ ಮಾತುಗಾರ ; ವಾಗ್ಮಿ. ೪. ಉಪನ್ಯಾಸಕ ; ಭಾಷಣಕಾರ. ೫. ವ್ಯಾಖ್ಯಾನಕಾರ ; ವಿವರಣೆ ನೀಡುವವನು: ಶಬ್ದಪ್ರಾಮಾಣ್ಯವು ಹೇಳುವವರ ಯೋಗ್ಯತೆಯ ಮೇಲೆ ನಿಲ್ಲುತ್ತದೆ . . . ವಕ್ತೃವಿನ ಜ್ಞಾನವನ್ನು ಊಹಿಸಿ ಈ ಜ್ಞಾನಕ್ಕೆ ಪ್ರಾಮಾಣ್ಯವನ್ನು ತಿಳಿಯುವುದು (ಹಿಂದಸಾ. ೨೦); ಶಬ್ದದಿಂದ ಉತ್ಪನ್ನವಾದ ಜ್ಞಾನಪ್ರಾಮಾಣ್ಯವು ವಕ್ತೃವಿನ ಗುಣಾಧೀನವಾದುದು (ಭಾತತ್ತ್ವ. ೨೭೬). [ಸಂ.]

ವಕ್ತೃತ್ವ (ನಾ). ಚೆನ್ನಾಗಿ ಮಾತನಾಡುವ ಸಾಮರ್ಥ್ಯ, —ನೈಪುಣ್ಯ ; ವಾಕ್ಚಾತುರ್ಯ : ವಕ್ತೃತ್ವವು ಒಂದು ಕಲೆ. ಸಂಗೀತದಂತೆ, ಸಾಹಿತ್ಯದಂತೆ, ಶಿಲ್ಪದಂತೆ ವಕ್ತೃತ್ವವೂ ಹುಟ್ಟುಗುಣ (ಸಂಭಾಸ. ೩೪); ಶೀನೂನೇ ವಕ್ತೃತ್ವದಲ್ಲಿ ನರಹರಿಗಿಂತ ಮೇಲೆಂದು ಹೆಸರಾಗಿದ್ದನು (ಸಮಚೀ. ೧೫೪). [ಸಂ.]

ವಕ್ತ್ರ (ನಾ). ೧. ಮನುಷ್ಯನ ಮುಖದಲ್ಲಿ ಆಹಾರ ಪಾನೀಯಾದಿಗಳನ್ನು ಸೇವಿಸುವುದಕ್ಕೂ ಶಬ್ದದ ಉದ್ಗಾರಗಳಿಗೂ ಸಹಾಯಕವಾಗಿರುವ ಒಂದು ಅವಯವ ; ಬಾಯಿ : ವಾಕ್ಸ್ರೀವಕ್ತ್ರದೊಳತುಳಭುಜದೊಳೂರ್ಜಿತವಿಜಯಶ್ರೀ ವಿಸ್ತಾರಿಸೆ ನೆಗಟ್ಟಂ ಶ್ರೀವರ್ಮಂ (ಚಂದ್ರಪ್ರ. ೪-೧೦); ಸುಡು ತಾಂಬೂಲನಿಹೀನನವಕ್ತ್ರವ (ಸೋಮೇಶ. ೨೧). ೨. ಮುಖ ; ವದನ : ಶ್ರೀಮತೀವಕ್ತ್ರಚಂದ್ರಚ್ಛವಿ ಪರ್ಚಂ ಮಾಲ್ಪಿನಂ ಭೋಗಿಸಿದನಖಿಲಭೋಗಂಗಳಂ ವಜ್ರಜಂಘಂ (ಆದಿಪು. ೫-೨೨); ಏನುಮೆನ್ನದೆ ಮದ್ಭಕ್ತಮನಾ ಕಸಿಂಜಳಗನಾಗಳ್ ನೋಡುತಿರ್ದಂ (ಶಾಂತಿಪು. ೧೬೩). ೩ ಪಾತ್ರೆಯ ಬಾಯಿ ,—ಮೊತಿ. ೪. ಪಕ್ಷಿಯ ಕೊಕ್ಕು ,—ಚಂಚು. ೫. ಬಾಣದ ಅಗ್ರಭಾಗ. ೬. ಪ್ರಾರಂಭ ; ಆರಂಭ. ೭. ಒಂದು ಬಗೆಯ ಗಿಡದ ಬೇರು ; ನಂದಿಬಟ್ಟಲಿನ ಬೇರು. ೮. [ಛಂದ] ಒಂಬತ್ತು ಅಕ್ಷರಗಳ ಬೃಹತಿಛಂದಸ್ಸಿನ ಒಂದು ವರ್ಣಸಮವೃತ್ತ. ೯. ಗಣವಿನ್ಯಾಸದಲ್ಲಿ ವಿಷಮತೆಯುಳ್ಳ ಎಂಟು ಅಕ್ಷರಗಳ ಅನುಷ್ಟುಪ್ ಛಂದಸ್ಸಿನ ವಿಷಮಚತುಷ್ಪದಿಯ ಒಂದು ವರ್ಗ. ೧೦. [ಗಣಿತ] ಬೀಜಗಣಿತದಲ್ಲಿ ಬರುವ ಶ್ರೇಢಿಯ ಮೊದಲನೆಯ ಪರಿಮಾಣ ಅಥವಾ ಅಂಶ. ೧೧. [ನಾಟ್ಯ] (ನಾಲಿಗೆಗೆ ಸಂಬಂಧಿಸಿದ) ಆರು ವಿಧವಾದ ಅಭಿನಯಗಳಲ್ಲಿ ಒಂದು; IP "ಸಿಂಹದಂತೆ ಬಾಯನ್ನು ತೆರೆದು ನಾಲಗೆಯನ್ನು ನೀಡುವುದು. ನರಸಿಂಹಾಭಿನಯದಲ್ಲಿ ಇದನ್ನು ವಿನಿಯೋಗಿಸಬೇಕು" (ಅಸ್ಕರಂ . ೨೦೦ ಗದ್ಯಾನುವಾದ) : ನೀಡಿದ ನಾಲಗೆ ಋಜ್ವಂ ಊಧಿಸಿ ಸಿಂಹರೂಪಂ ಜೋಡಿಪ ನಾಲಗೆಯದೆಯ್ದೆ ವಕ್ತ್ರ [ಪಾಠಾಂ . ವಕ್ತ್ರ] ಮೆನಿಕ್ಕುಂ (ಅಸ್ಕರಂ . ೬-೧೫). [ಸಂ.]

ವಕ್ತ್ರಶ್ವಾಸ (ನಾ). (ದುಃಖ, ಆಯಾಸ ಮುಂತಾದುವುಗಳಿಂದ ಬಿಡುವ) ದೀರ್ಘವಾದ ಉಸಿರು; ನಿಟ್ಟುಸಿರು: ತಿದಿವೋಲ್ ದಿಗ್ಗಜರಾಜಿ ಗೋಣ್ಗುಸಿದು ವಕ್ತ್ರಶ್ವಾಸಮಂ ಬೀಱುತಿರ್ಪುದು . . . ಖಳನಪಾಲಾಕ್ಷೌಹಿಣೀಭಾರದಿಂ (ಜಗವಿ. ೧-೩೦). [ಸಂ.]

ವಕ್ತ್ರಾಂತರ (ನಾ). ಬಾಯಿಯ ಒಳಭಾಗ : ಹರಿ ನೀಂ ಮನ್ಮಿಂದೆ . . . ತೋಱು ವಕ್ತ್ರಾಂತರಮಂ (ಜಗವಿ. ೩-೬೩). [ಸಂ.]

ವಕ್ತ್ರೋದರ (ನಾ). = ವಕ್ತ್ರಾಂತರ : ವಿಸ್ತೃತವಕ್ತ್ರೋದರಭಾಗ ಭೂರಿಕಮಠ ಪ್ರಕ್ಷುಬ್ಧಕಲ್ಲೋಲಕಲ್ಪಿತಕೋಲಾಹಲಕಲ್ಪಕಾಲರಭಸಪ್ರಸ್ಪರ್ಧಿಯಂ ವಾರ್ಧಿಯಂ (ಕಾವ್ಯಸಾ. ೭೫). [ಸಂ.]

ವಕ್ರ (ಗು). ೧ ಕೊಂಕಿದ ; ಬಾಗಿದ ; ಡೊಂಕಾದ : 'ವಕ್ರತೆ' ಪರಾ. ೨. ಬಳಸಾದ ; ನೇರವಲ್ಲದ : 'ವಕ್ರೋಕ್ತಿ' ಪರಾ. ೩. ಕಪಟದ ; ಕುಹಕವಾದ. ೪. ಕ್ರೂರವಾದ. (ನಾ). ೫. ಕೊಂಕಿದುದು ; ಬಾಗಿದುದು ; ಡೊಂಕಾದುದು : "ವಕ್ರಂ, ವ್ಯಜಿನಂ, ಭಂಗುರಂ . . . ಈರ್ಮಿಮತ್ — ಈ ೧೨ ಕೊಂಕಿದುದು" (ಹಲಾಯು. ೧೧೬-೧೧); ಭರತಾಭ್ಯುದಯ ಚಂದ್ರೋದಯಕ್ಕುರ್ಬಿದತ್ತವಳ ಹೃದ್ಬಲಧಿ ಪಾಳು ಕೊರಕಲ್ ಬಂಡೆಯಿಂ ವಕ್ರಮಾಗರ್ಪ ಮೊರಡು ದಡದಂತಿರ್ದವಳ ಮೆಯ್ಯನುಚ್ಛ್ವಸಿತ ಹರ್ಷೋರ್ಮಿಮಾಲಾಸಮೂಹದಿಂದವ್ಯಳಿಸಿ ಮುಚ್ಚಿ (ಶ್ರೀರಾಮಾ. ೨೬-೭೦೪). ೬. ಕುಟಿಲವಾದುದು : ವಕ್ರಋಜುಮಿಶ್ರಜಗವದರ ಶೋಧನೆ ಧರ್ಮ (ಮಂಜುಕ. ೯೮); ನಮ್ಮ ಮನಸ್ಸು ಸ್ವಭಾವತಃ ವಕ್ರವಾದುದು (ಪರಶ. ೪೬). ೭. (ಹೊಳೆ, ತೊರೆ, ನದಿ ಮುಂತಾದುವುಗಳ) ತಿರುವು ; ಸುತ್ತು ; ಮುರಿವು. ೮. ತೊಂದರೆ ; ಅಡ್ಡಿ ; ವಿಘ್ನ : ಇದಕೆ ವಕ್ರವಪ್ಪುನ್ಮತ್ತಾಮಹಾಪಾತಕನಕ್ಕು (ಎಕ. XVI, ಪಾವಗ . ೧೧-೪೪; 754). ೯. [ಜ್ಯೋತಿ] ಮಂಗಳಗ್ರಹ ; ಅಂಗಾರಕ : "ವಕ್ರಃ, ಅಂಗಾರಕಃ, ಭೌಮಃ, ಲೋಹಿತಾಂಗಃ, ಧರಾತ್ಮಜಃ — ಈ ೫ ಮಂಗಳನ ಪೆಸರ್" (ಹಲಾಯು. ೯-೪೬); ಇನಾರ್ಕಿ ವಕ್ರಕ್ಷೀಣೇಂದುಗಳಶುಭಗ್ರಹಂ (ಜಾತಕ. ೨-೨). ೧೦. ಶನಿಗ್ರಹ. ೧೧. ಗ್ರಹಗಳ ಹಿನ್ನಡೆ. ೧೨. [ಛಂದ] ಎರಡು ಮಾತ್ರೆಗಳ ಕಾಲ ; ಗುರು : ಆದ್ಯಂತದೊಳ್ ಬರೆ ವಕ್ರಂ ಶಿಖಿ (ಛಂದೋಂಬು . ೧-೩೮). ೧೩. [ಸಂಗೀತ] "ಜನ್ಯರಾಗದ ಆರೋಹಣದಲ್ಲಿ ಅಥವಾ ಅವರೋಹಣದಲ್ಲಿ , ಕೆಲವು ವೇಳೆ ಎರಡರಲ್ಲೂ ಸ್ವರಗಳು ಕ್ರಮವಾಗಿ ಅನುಕ್ರಮಿಸದೆ ಹಿಂದು ಮುಂದಾಗಿಬರುವುದೂ ಉಂಟು. ಇಂತಹ ರಾಗಗಳು ವಕ್ರರಾಗಗಳೆನಿಸುತ್ತವೆ" (ಸಂಗೀಚಂ . ೬೨): ಆಧುನಿಕ ಕರ್ನಾಟಕಸಂಗೀತವೆಂದರೆ ಎಪ್ಪತ್ತೆರಡು ಮೇಳಕರ್ತಗಳ ಯೋಜನೆಯ ಆಶ್ರಯದಲ್ಲಿ ಸಂಪೂರ್ಣ, ಷಾಡವ, ಔಡವ, ಶುದ್ಧ, ವಕ್ರ ಎಂಬ ಭೇದಗಳನ್ನುಳ್ಳ . . . ಪದ್ಧತಿಯೆನ್ನಬಹುದು (ಕವಿಚೋ. I, ೭೮೭). ೧೪. [ನಾಟ್ಯ] ಗದ್ದದ ಎಂಟು ವಿಧವಾದ ವಿನ್ಯಾಸಗಳಲ್ಲಿ ಒಂದು ; IP "ಗಡ್ಡವನ್ನು ಅಡ್ಡಲಾಗಿ ಮಾಡುವುದು. ಗ್ರಹಾವೇಶವನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು" (ಅಸ್ಕರಂ . ೨೧೧ ಗದ್ಯಾನುವಾದ): ನಿಡುಬಿಬುಕಂ . . . ಕೀಳಡ್ಡಮಾಗಲ್ ಪಡೆದುದು ವೆಸರಿಂದ ವಕ್ರಮಂಗನವಲಕಂ (ಅಸ್ಕರಂ. ೬-೧೦೧). ೧೫. ಹಸ್ತಾಂಗುಲಿಯ ಏಳು ಭೇದಗಳಲ್ಲಿ ಒಂದು ; ಕೊಂಕಿಸಿದ ಕೈಬೆರಳುಗಳ ಅಭಿನಯ : ಸಂಯುತ, ವಿಯುತ, ವಕ್ರ, ವಲಿತ, ಹೆತಿತ, ಕುಂಚನ್ಮೂಲ, ಪ್ರಸೃತ — ಈ ಏಳು ಹಸ್ತಾಂಗುಲಿಯ ಭೇದಂಗಳ್ (ಅಸ್ಕರಂ . ೬-೧೧೩ ವ). [ಸಂ.]

ವಕ್ರಂಬರ್, ವಕ್ರಬರು (ಕ್ರಿ). ವಿಘ್ನಮಾಡು ; ವಿರುದ್ಧವಾಗಿ ನಡೆ ; ಅಡ್ಡಿಯಾಗು : ಭರತನುಮನಾಂ ಕುಡಲ್ಪಡದ ರಾಜ್ಯಂ ನಿನಗಕ್ರಮಮಣಮಲ್ತು ವಕ್ರಂಬಂದೊಡಮ್ಮಾಜ್ಞೆಗೆ ತಪ್ಪಿದೆಯೆಂಬು ನಿಲೆ ನುಡಿದು (ಪಂಚಾಮೃ. ೬-೨೧ ವ). ವಕ್ರಬರು : ಆವನಾದಡೆ ವಕ್ರಬನ್ದವನ ನಷ್ಟಸಂತತಿ ಅಕ್ಕು (ಪಾಣಾ . IX - i, ೧೦೨-೨೩; 1054). [ವಕ್ರ + ಬರ್ (< ವರ್)]

ವಕ್ರಗಚ್ಛ (ನಾ). [ಜೈನ] ಜೈನಮುನಿಗಳ ಒಂದು ಗುಂಪು: ಅವರೊಳಗೆ ಗೋಪಣಂದಿಪ್ರವರಗುಣರ್ . . . ವಕ್ರಗಚ್ಛದೊಳ್ ಪೆಸರ್ವಡೆದರ್ (ಎಕ . II, ೬೯-೨೩; 1100).

ವಕ್ರಗಚ್ಛಾಧಿಪ = ವಕ್ರಗಚ್ಛದ ಮುಖ್ಯಸ್ಥನಾದ ಜೈನಯತಿ : ಸ್ತೇಯಾದ್ರಿಶ್ರುತಬೂಳಚಂದ್ರಮುನಿಪಃ ಶ್ರೀವಕ್ರಗಚ್ಛಾಧಿಪಃ (ಎಕ . II, ೬೯-೧೧೯; 1100). [ಸಂ.]

ವಕ್ರಗತಿ (ನಾ). ೧. ಡೊಂಕಾದ ಚಲನೆ ,—ಗಮನ. ೨. ಹೀನವಾದ ನಡತೆ :ಜಿಯಾತಂ ನಿಸರ್ಗದಿಂ ವಕ್ರಗತಿಪರಿಣಾಮದಿನುದ್ಭವ್ರತ್ತಚಿತ್ತದಿನುನ್ಮತ್ತನಾದಂ (ಸುಜಮಾ. ೨-೫೭ ವ). ೧,೨: ವಕ್ರಗತಿ ಫಣಿಯೊಳ್ . . . ಒದವಿರ್ಪುದಲ್ಲದಿಲ್ಲಾನಾಡೊಳು (ಜಸಮಾ. ೨-೩೮). ೩. (ನೀರಿನ ಪ್ರವಾಹದ) ತಿರುವು ; ಬಾಗು ; ಮುರಿವು : ವಕ್ರಗತಿಯುಳ್ಳ ಆ ನದಿಯು ಅಸ್ಪಷ್ಟವಾಗಿ ತೋರಹತ್ತಿತು (ಸಾಪ್ತ್ರಿ. ೧). ೪. [ಜ್ಯೋತಿ] (ಗ್ರಹಗಳ) ಹಿನ್ನಡೆ. [ಸಂ.]

ವಕ್ರಗ್ರೀವ (ನಾ). ೧. ಕೊಂಕಿದ ಕತ್ತನ್ನುಳ್ಳುದು ; ಒಂಟೆ. ೨. ಬಾಗಿದ ಕೊರಳುಳ್ಳವನು ; ಡೊಂಕಾದ ಕತ್ತುಳ್ಳವನು : ಅವಸ್ಕಾರಗ್ರಹಗೃಹೀತರಂತೆ ವಕ್ರಗ್ರೀವರಾಗಿಯುಂ ನೆಲೆಗಿವುದರಂತೆ ಕಿವುಂಡುಗೇಳ್ದುಂ(ಪಂಚಮಂ. ೧೪-೧). [ಸಂ.]

ವಕ್ರಚಾರ (ನಾ). ೧. = ವಕ್ರಗತಿ ೧. ೨. = ವಕ್ರಗತಿ ೨. ೧,೨: ವಕ್ರಚಾರಂ ಸರ್ವಂಗಳೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ವ). [ಸಂ.]

ವಕ್ರತುಂಡ (ನಾ). ೧. ಕೊಂಕಿದ ಸೊಂಡಿಲನ್ನುಳ್ಳವನು ; ಗಣೇಶ : ಲಂಬೋದರಗೇತಕೆ ತರಳೋದರೆ . . . ವಕ್ರತುಂಡಗಕ್ಕರಿಸುವರಿಹರೇ (ಗಣೇಶ . ೫-೧೨೬). ೨. ಕೊಂಕಿದ ಕೊಕ್ಕನ್ನುಳ್ಳುದು ; ಗಿಣಿ. [ಸಂ.]

ವಕ್ರತೆ (ನಾ). ೧. ಕೊಂಕು ; ಡೊಂಕು : ಕಾಣಿಸಿತೊಂದು ದಸ್ಯುಶಿಶು . . . ಹಾ, ವಿಕೃತಿ ವಕ್ರತೆ ರೂಹುಗೊಂಡಂತೆ ! (ಶ್ರೀರಾಮಾ. ೨೨-೫೬೦). ೨. ಮೋಸ ; ಕಪಟ ; ವಂಚನೆ. ೩. ಓರೆಯಾಗಿರುವಿಕೆ ; ಕೊಂಕಿರುವಿಕೆ : ನಂಬಿಯಿನ್ನೀನೇಱುಂಜವ್ವನದುರ ವಣೆಯುಮಂ . . . ನೋಟದ ವಕ್ರತೆಯುಮಂ ಮುಖದ ಕಾಮಕಾರ್ಪಣ್ಯಮುಮಂ ದೃಷ್ಟಿಯ ದೈನ್ಯಮುಮನಱಿದು (ನಂದಿತ. ೪-೧೧). ೪. (ನಾದದ) ವಿರಿಳಿತ ; ತಿರುವು : ಮತ್ತ[ಪಾಠಾಂ . ತ್ತಂ]ವಳಿ ವಕ್ರತೆಯನಿವ ವಹಣಿ . . . ಇಂಪಂ ಕಡೆವ ಸುಧಾರಸಗಾನಂ ನಾನಾರಸದ ಲಹರಿಯ ರೂಪುವಡೆಯೆ ಪಾಡುವ ಗಾಯಕರೊಳಂ (ಗಿರಿ. ೨-೧೦೫ ವ). ೫. ಕುಟಿಲವಾಗಿರುವಿಕೆ ; ಋಜುವಾಗಿಲ್ಲದಿರುವಿಕೆ ; ನೇರವಾಗಿಲ್ಲದಿರುವಿಕೆ. ೬. [ಜ್ಯೋತಿ] ಗ್ರಹಗಳು ಹಿಮ್ಮೆಟ್ಟುವಿಕೆ ,—ಹಿಂದೆ ಚಲಿಸುವಿಕೆ. [ಸಂ. ವಕ್ರತಾ]

ವಕ್ರದೃಷ್ಟಿ (ನಾ). ೧. ಓರೆಯಾದ ದೃಷ್ಟಿ ; ನೇರವಲ್ಲದ ನೋಟ : ದೃಷ್ಟಿದೋಷ

ಗಳಿಂದ ಮಕ್ಕಳಲ್ಲಿ ತೋರಬಹುದಾದ "ವರಸೆಗಣ್ಣು, ಮೆಳ್ಳಗಣ್ಣು, ವಕ್ರದೃಷ್ಟಿ" ಮುಂತಾದ ನ್ಯೂನತೆಗಳನ್ನು ಮೊದಲಿನಲ್ಲೇ ಸರಿಪಡಿಸಬಹುದು (ನಿಮ್ಹದ. ೫೪). ೨. ಸಂಶಯಾತ್ಮಕವಾದ ದೃಷ್ಟಿ ; ಸರಳವಲ್ಲದ ಧೋರಣೆ : ಶ್ರೀ ಅರವಿಂದರ ಮೇಲೆಯೂ ಸರಕಾರದ ವಕ್ರದೃಷ್ಟಿಯು ಬಿತ್ತು (ಕಪಪು. ೭-೮೩); ಸಾಮಾನ್ಯವಾಗಿ ಜನರು ವಾಮಾಚಾರವನ್ನು ವಕ್ರದೃಷ್ಟಿಯಿಂದ ನೋಡುವುದುಂಟು (ಭಾರತ. ೨೨೭). [ಸಂ.]

ವಕ್ರದ್ವಾರ (ನಾ). ೧. = ವಂಕದಾರ : "ವಂಕದರಂ, ವಂಕದಾರಂ, ವಂಕಬಾರಂ — ಈ ೩ ವಕ್ರದ್ವಾರಕ್ಕೆ ಪೆಸರ್" (ಕಶಾ. ೫೯-೩೦೦); ವಕ್ರದ್ವಾರ — ವಂಕದರ, ವಂಕದಾರ, ವಂಕಬಾರ (ಶಮದ. ೨೯೬ ಪ್ರಯೋ); ಸೋಪಾನಗಳು, ಗುಪ್ತದ್ವಾರಗಳು, ವಕ್ರದ್ವಾರಗಳು — ಮುಂತಾದುವೆಲ್ಲಾ ನಿಮಗೆ ತಿಳಿದಿರಬೇಕು (ಮಂಜಕ. ೫೫-೩). 'ವಂಕದಾರ' ಪರಾ. ೨. ರಹಸ್ಯವಾದ ಬಾಗಿಲು ; ಗುಪ್ತದ್ವಾರ : ದುರ್ಗದ ವಕ್ರದ್ವಾರದಲ್ಲಿಯ ನಮ್ಮ ಕಾವಲರು ಆ ಬಾಗಿಲು ಅಲ್ಲಾಡುತ್ತಿದ್ದುದನ್ನು ನೋಡಿ . . . ನನಗೆ ವಾರ್ತೆಗೊಟ್ಟರು (ಸುಗಗಂ. ೧೨೫-೯). ☞ ಈ ಶಬ್ದದ ಅಸ್ತಿತ್ವವು ಚಿಂತನೀಯ. [ಸಂ.]

ವಕ್ರನಾಸಿಕ (ನಾ). ಗೂಬೆ ; ಘೂಕ. [ಸಂ.]

ವಕ್ರಬರು 'ವಕ್ರಂಬರ್' ನೋ.

ವಕ್ರಬುದ್ಧಿ (ನಾ). ೧. ಕಪಟವಾದ ಮನಸ್ಸು ; ಕುಟಿಲಸ್ವಭಾವ. ೨. ಕಪಟಮನಸ್ಸುಳ್ಳವನು ; ಕೆಟ್ಟಬುದ್ಧಿಯುಳ್ಳವನು : "ಕುಚರಃ, ಕುಟಿಳಾಶಯಃ — ಈ ೨ ವಕ್ರಬುದ್ಧಿ" (ಹಲಾಯು. ೬೪-೨೫೫). [ಸಂ.]

ವಕ್ರಭಣಿತಿ (ನಾ). ವ್ಯಂಗ್ಯೋಕ್ತಿ ; ವಕ್ರೋಕ್ತಿ : "ನಿಮ್ಮಪ್ಪು ಸಂಪಾದನೆ ಯಾರಿಗುಂಟು?" ಎಂದು ಅವರಲ್ಲಿ ಒಬ್ಬ ವಕ್ರಭಣಿತಿಯನ್ನು ಹಾರಿಸಿದನು (ಕಂಬಹು. ೧೧). [ಸಂ.]

ವಕ್ರಭಣಿತೆ (ನಾ). = ವಕ್ರಭಣಿತಿ : ಶಕ್ರನಳುಕುವ ದಾಹುಬಲ ರಿಪುಚಕ್ರದೊಳ ಗಿನ್ನಾರಿಗುಂಟದು ವಕ್ರಭಣಿತೆಗೆ ಸಲುವುದಶ್ವತ್ಥಾಮನೆನುತೆಚ್ಚ (ಕುವಾವಿ. ೮-೪೧).

[ಸಂ. ವಕ್ರಭಣಿತ]

ವಕ್ರವಚನ (ನಾ). ೧. ವ್ಯಂಗ್ಯೋಕ್ತಿ ; ವಕ್ರೋಕ್ತಿ : ಕಳಕಂಠಂ ಪುಗಿಲೆಂಬೀ ಕಳನಿನದಂ ವಕ್ರಮಾಗಿಯಂ ನೃಪನ ಮನಂಗೊಳಲಾರ್ತುದು ಪುರುಡಿಪ ನಲ್ಲಳ ನಲ್ಮೆಯ ವಕ್ರವಚನದಂದದಿನಾಗಳ್ (ಮಲ್ಲಿಪು. ೬-೧೦). ೨. ಸೊಗಸಾದ ಧ್ವನಿ ; ಇಂಪಾದ ಸ್ವರ : ದಶಕಂಠನಾ ಕಂಬುಕಂಠಿಯ ಕನಲ್ದೊನಲ್ದು ನುಡಿವ ವಚನಮೆ ಸುಗ್ಗಿಯ ಕಳಕಂಠಿಯ ಪುಗಿಲೆಂಬ ವಕ್ರವಚನದಂತೆ ತನಗೆ ಮದನರಾಗಹೇತುವಾಗೆ (ಪಂರಾಮಾ. ೯-೧೫೬ ವ). [ಸಂ.]

ವಕ್ರವಾಕ್ಯ (ನಾ). ೧. ಕೊಂಕುನುಡಿ ; ಸರಳವಲ್ಲದ ಮಾತು. ೨. = ವಕ್ರವಚನ ೨. ೧,೨: ವಕ್ರವಾಕ್ಯಂ ಕೋಕಿಳಂಗಳೊಳ್ ಉತ್ಕಂಠತೆ ಮಯೂರಂಗಳೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ವ). [ಸಂ.]

ವಕ್ರಶೃಂಗೆ (ನಾ). ಬಾಗಿದ ಕೊಂಬುಗಳನ್ನುಳ್ಳ ಹಸು : "ಬಿಳಿಯಾಕಳೇ ಧವಳೆ, ಸೊಟ್ಟಕೊಂಬಾಕಳೇ ವಕ್ರಶೃಂಗೆ" (ಸಿದ್ಧಾಂತಿ. ೨೯೪). [ಸಂ. ವಕ್ರಶೃಂಗ]

ವಕ್ರಸ್ತ (ನಾ). ಅಡ್ಡಿಯನ್ನುಂಟುಮಾಡುವವನು; ವಿಘ್ನವನ್ನು ಒಡ್ಡುವವನು: ಯಾ ಧರ್ಮಕ್ಕೆ ವಕ್ರಸ್ತರಾದವರುಯಧೋಗತಿಗಿಳಿವರು (ಸೌಅಆ. XX, ೧೭೭-೩೭; 1190).

[ವಕ್ರ + — ಸ್ತ]

ವಕ್ರಾಂಗಿ$_1$ (ನಾ). ಊನವಾದ ಅಂಗವುಳ್ಳವನು : ಮುಂದೈದುವ ತುರಂಗಮದ ಕೂಡೆ ನಡೆಯುತ್ತೆ ಬರಿದೊವಲುಡಿಗೆಯವರ ವಕ್ರಾಂಗಿಗಳನೊತ್ತೋಳವರನು . . . ಕಂಡನಾ ಕಲಿಪಾರ್ಥನು (ಕೃಮಭಾ. ೧೬-೨೦). [ಸಂ. ವಕ್ರಾಂಗಿನ್]

ವಕ್ರಾಂಗಿ$_2$ (ನಾ). ಒಂದು ಬಗೆಯ ಔಷಧೀ ಸಸ್ಯ : "ಕಟುಃ, ಕಟುಂಭರಾ . . . ವಕ್ರಾಂಗೀ, ಶಕುಲಾದನೀ — ೯ ಕಟುಕರೋಹಿಣೀ ಹೆಸರುಗಳು" (ಸಿದ್ಧಾಂತಿ. ೧೩೧).

[ಸಂ. ವಕ್ರಾಂಗೀ]

ವಕ್ರಿ (ಗು). ೧. ಬಾಗಿದ ; ಕೊಂಕಿದ ; ಡೊಂಕಾದ. (ನಾ). ೨. ಕೆಟ್ಟ ಬುದ್ಧಿಯುಳ್ಳವನು : "ಕುಚರಂ ನಿಯತಹಾರಿಕಂ ವಿಳಾಸಿಯೆನೆ ವಕ್ರಿಯೆನಿಸಿಕ್ಕು" (ಮಂಗರಾ. ೭೨-೨೩). ೩. ಒಂದು ಬಗೆಯ ಹುಲ್ಲು : "ವಕ್ರಿ ಮಾರುಳಿ ಕಂಬು ಕಸವೆ ಸಂದಂ ಕರಡೆಯಕ್ಕು" (ಮಂಗರಾ. ೩೩-೮). ೪. ಒಂದು ಬಗೆಯ ಬಳ್ಳಿ ; ಮಂಗುರವಳ್ಳಿ ; ಬಕ್ಕುಡಿ : "ಮಂಗುರವಳ್ಳಿ ವಕ್ರಿ ಬಕ್ಕುಡಿಯೆನಿಕ್ಕುಂ" (ಮಂಗರಾ. ೪೩-೪೩). ೫. [ಸಂಗೀತ] ದೋಷವುಳ್ಳ ಗಾಯಕರಲ್ಲಿ, ಒಂದು ವರ್ಗಕ್ಕೆ ಸೇರಿದವನು; ಕತ್ತನ್ನು ಕೊಂಕಿಸಿ ಹಾಡುವವನು ; ಕತ್ತು ಬಗ್ಗಿಸಿಕೊಂಡು ಹಾಡುವವನು : ಗಾಯಕದೋಷಗಳು : ೧. ಸಂದಷ್ಟ-ಹಲ್ಲು ಕಚ್ಚಿ ಹಾಡುವವನು . . . ೧೫ ವಕ್ರಿ — ಕತ್ತು ಕೊಂಕಿಸಿ ಹಾಡುವವನು (ಸಂಗೀಚಂ. ೧೦೩). ೬. [ಜ್ಯೋತಿ] ಗ್ರಹಗಳು ಹಿಂದೆ ಚಲಿಸುವಿಕೆ.

[ಸಂ. ವಕ್ರಿನ್]

ವಕ್ರಿತ (ಗು). ಬಾಗಿದ ; ಬಗ್ಗಿದ : ವಕ್ರಿತಕಂಧರಂ ಸ್ಮೇರವಕ್ತ್ರಸರೋರುಹಂ ಲಲಿತಾಯತೇಕ್ಷಣನಾಗಿ . . . ಮುರಾರಿ ಕೈಪಱೆಗಾಡಿದಂ (ಜಗವಿ. ೩-೫೩). [ಸಂ.]

ವಕ್ರಿಮ (ಗು). ೧. ಬಳಸಾದ; ಸುತ್ತಾದ: ಆ ದಿವ್ಯವಚನವಕ್ರಿಮಕ್ರಮಮೆ ತಮಗನುಗ್ರಹಪಕ್ಷಮಾಗೆ ಕೃಷ್ಣನಂ ಪರಮಾತ್ಮಸ್ವರೂಪನೆಂದಱಿದು ಗೋಪರ್ ಕೃತಕೃತ್ಯರಾಗಿರ್ಪಿನಂ (ಜಗವಿ. ೪-೧೧೦ ವ). ೨. ಕೊಂಕಿದ ; ಡೊಂಕಾದ : ಶಂಕರನ ವಕ್ರಿಮಲಪನಜನಕನ ಕ್ರೂರಶತ್ರುದಾರುಕ್ರಕಚನಿಭನೋಲಗಕ್ರೀಡೆ ಸೊಗಸೆ ಭೂಚಕ್ರೇಶನೀಕ್ಷಿಸಿದನು (ಉದ್ಯದೇ. ೭-೧೬). (ನಾ). ೩. ಡೊಂಕು ; ಕೊಂಕು ; ವಕ್ರತೆ : ವಕ್ರಿಮಂ ಸುಚರಿತದೊಳ್ ವಿಚಾರಿಸವೊಡಿಲ್ಲಳಕಾಳಿಯೊಳಲ್ಲದೆಲ್ಲಿಯುಂ. (ಚಂದ್ರಪು. ೧೧-೧೦೯) 'ಕಂಟಕವಕ್ರಿಮ' ಪರಾ. [ಸಂ. ವಕ್ರಿಮನ್]

ವಕ್ರಿಮೆ (ನಾ). ಕೊಂಕು; ವಕ್ರತೆ: ಆಂಡಯ್ಯನ 'ಕಬ್ಬಿಗರ ಕಾವ'ದ ರೂಪಕದ ವಕ್ರಿಮೆಯ ಆಕಾಂಕ್ಷೆಯದು (ಸಾಹಿವಿ. ೩೪). [< ಸಂ. ವಕ್ರಿಮನ್]

ವಕ್ರಿಸು (ಕ್ರಿ). ೧. ಡೊಂಕಾಗು ; ವಕ್ರವಾಗು : ಬೆಳಕು ಬೇರೆ ಬೇರೆ ವಸ್ತುಗಳಲ್ಲಿ ಹೊಕ್ಕು ಹೊರಡುವಾಗ ವಕ್ರಿಸುವುದಷ್ಟೆ (ಬಾಲಪ್ರ. II, ೯೧೧). ೨. ಪ್ರತಿಭಟಿಸು ; ವಿರೋಧಿಸು ; ಪ್ರತಿಕೂಲವಾಗು : ನಿಮ್ಮೀ ಕ್ರಮಕಮಲಕ್ಕೆಱಗದೆ ವಕ್ರಿಸಿ ಭೂಚಕ್ರದೊಳಗೆ ಬಾಳ್ವರುಮೊಳರೇ (ಪಂಪಭಾ. ೧೧-೩೦); ಭೂಮಂಡಲದೊಳು ವಕ್ರಿಸುವರಿಲ್ಲ ನಿನ್ನೀ ಸಿರಿಗೆ ರಾಜಧರ್ಮಕ್ರಿಯೆಗೆ ನಳಪುರೂರವ ಹರಿಶ್ಚಂದ್ರಾದಿ ಚಕ್ರವರ್ತಿಗಳ್ಕೆದೆ ಸೋಲ್ವರು (ಕೃಮಭಾ. ೨-೫೩). ೩. (ಅಮಂಗಳವನ್ನು ಸೂಚಿಸಲು) ಸ್ವರವನ್ನು ಮಾಡು ; ಕೂಗು : ಬಿಲ್ಲ ಬಿನ್ನಣಿಯನೊರ್ವನಂ ಕರೆದು ನಿಚ್ಚಂ ವಕ್ರಿಸುತ್ತಿರ್ಪ ನಿಚ್ಚಲವಕ್ಕಿಯನೆಚ್ಚು ಬಾಯೆಂದು ಪೇಳ್ವುದುಂ (ಪಂಚತಂ. ೧೨೭-೧೯); ಕಾಗೆ ವಕ್ರಿಸೆ ಸರಳ ಪ್ರಾರಂಭಕಾರ್ಯಮಂ ಮಾಣದರಾರ್ (ಪಂಚತಂ. ೨೩೪-೭). ೪. (ಗ್ರಹಗತಿಗಳು) ವಿರೋಧವಾಗಿ ಬರು ; ಕ್ರೂರವಾಗು : ನನ್ನ ಆಯರ್ದಾಯಕ್ಕೆ ಸೂರ್ಯಚಂದ್ರಗ್ರಹಗಳೆರಡೂ ವಕ್ರಿಸಿವೆ (ಕಥಾಮಂ. IV, ೧೦೮); ಅಂದ ಮೇಲೆ ಸೊಸೆಯ ಗ್ರಹಚಾರ ವಕ್ರಿಸಿದ ಹಾಗೇ ಎಂದು ಮತ್ತೆ ಹೇಳುವುದೇನು? (ಹೊಸಕ್ಷಿ. ೨೧). ೫. (ಇನ್ನೊಬ್ಬರ ಮನೆಯಲ್ಲಿ) ಅನಪೇಕ್ಷಿತವಾಗಿ ಒತ್ತಾಯದಿಂದ ಹೊಕ್ಕಿರು ; ನಿಸ್ಸಂಕೋಚವಾಗಿ ಬಂದಿರು ; ದಾಕ್ಷಿಣ್ಯವಿಲ್ಲದೆ ಇರು : ಹೇಗಾದರೂ ನೀನು ನಮ್ಮ ಮನೆಗೆ ಶನಿಗ್ರಹದಂತೆ ವಕ್ರಿಸಿರುವೆ (ಲಕ್ಷ್ಮೀಪ್ರ. ೪೪); ಮನೆಯಲ್ಲಿ ಇದ್ದ ಮಕ್ಕಳಿಗೆ ಕೇಳುವವರಿಲ್ಲದಾಗ ಈ ಶನಿ ವಕ್ರಿಸಿತಲ್ಲ ಎಂಬ ಸಿಡುಕು (ಹೊಸಕ್ಷಿ. ೨೮). 'ಒಕ್ಕರಿಸು', 'ವಕ್ಕರಿಸು' ಪರಾ.

[ವಕ್ರ + — ಇಸು$_3$./ ತೆಲು. ವಕ್ರಿಂಚು]

ವಕ್ರೀಕರಣ (ನಾ). ೧. ಬಾಗುವುದು ; ಬಗ್ಗುವುದು. ೨. [ವಿಜ್ಞಾ] ನೀರು, ವಾಯು, ಗಾಜು ಇತ್ಯಾದಿ ವಿಷಯಗಳಲ್ಲಿ ಭಿನ್ನಸಾಂದ್ರತೆಯುಳ್ಳ ಬೇರೊಂದು ವಾಹಕದ ಮೂಲಕ ಬಂದ ಬೆಳಕು ತನ್ನಲ್ಲಿ ಅಸಮ ಕೋನವಾಗುವಂತೆ ಹೊಕ್ಕಾಗ ಆ ಕಿರಣವನ್ನು ಒಂದು ಗೊತ್ತಾದ ಕೋನದಲ್ಲಿ ಓಲಿಸುವುದು : ಬೆಳಕು ಶೀಘ್ರವಾದ ದಾರಿಯಲ್ಲಿ ಚಲಿಸುವುದು ಈತನಿಗೆ ಗೊತ್ತಿತ್ತು. ಬೆಳಕಿನ ವಕ್ರೀಕರಣ (Refraction) ತಿಳಿದಿತ್ತು (ಶಿಲ್ಪಾ. ೧೦೧); ಬೆಳಕಿನ ಪ್ರತಿಫಲನ ಮತ್ತು ವಕ್ರೀಕರಣಗಳ ನಿಯಮಾವಳಿಗಳನ್ನೂ ಛಾಯೆಯ ಸ್ವಭಾವವನ್ನೂ ಅರಿತು ವಿವರಣೆ ನೀಡಿದ್ದಾರೆ (ತತ್ವಪ್ರಾ. ೪೯೯). [ಸಂ.]

ವಕ್ರೀಕರಿಸು (ಕ್ರಿ). ಓರೆಯಾಗಿಸು ; ಬಾಗಿಸು ; ಡೊಂಕಾಗಿಸು : ಶಂಕುಗಳಿಂದ ವಕ್ರೀಕರಿಸಿದ ಬೆಳಕು ಪ್ರತಿದೃಷ್ಟಿಕೋಲಿನ ಮೇಲೂ ಬೀಳಬಹುದು (ಕಟುಚ. ೫೦). [ವಕ್ರೀಕರಣ + − ಇಸು]

ವಕ್ರೆ (ನಾ). ಒಂದು ಬಗೆಯ ಔಷಧೀಸಸ್ಯ : "ಶಫಾಹ್ವಾ-ವಕ್ರೆ" (ಓಷಧಿ. ೧೬೫). [ಸಂ. ವಕ್ರಾ]

ವಕ್ರೋಕ್ತಿ (ನಾ). ೧. ಕೊಂಕುಮಾತು. ೨. ದ್ವಂದ್ವಾರ್ಥದ ನುಡಿ : ರಾವಣನಾ ದೂದವಿಗೆ ನಿನ್ನ ನುಡಿಗೊಡಂಬಟ್ಟಿನಾಕೆಯಂ ತಾಯೆಂದು ವಕ್ರೋಕ್ತಿಯಿಂ ನುಡಿವುದುಂ (ಪಂಪಾಮಾ. ೧೦-೧೯೨ ವ). ೩. [ಕಾವ್ಯಮಿಮಾ] ಒಂದು ಬಗೆಯ ಅರ್ಥಾಲಂಕಾರ ; ಶ್ಲೇಷೆ ಅಥವಾ ಕಾಕುವಿನಿಂದ ಅರ್ಥಾಂತರವನ್ನು ಕಲ್ಪಿಸಿ ಹೇಳುವುದು ; IP ಕುಂತಕನೆಂಬ ಅಲಂಕಾರಿಕನು ಇದನ್ನು ಕಾವ್ಯದ ಆತ್ಮವನ್ನಾಗಿ ಅಂಗೀಕರಿಸಿರುತ್ತಾನೆ. ಭಾಮಹನು ಅತಿಶಯೋಕ್ತಿಯನ್ನೇ ವಕ್ರೋಕ್ತಿಯೆಂದು ಹೇಳಿ, ಅದು ಎಲ್ಲಾ ಅಲಂಕಾರಗಳಿಗೂ ಮೂಲವೆಂದು ನಿರೂಪಿಸಿದ್ದಾನೆ : ನುಡಿದುದದೆ ಪದವಿಭಂಗತೆಗೊಡಂಬಡಂ ಪಡೆಯೆ ಮಗುಚ್ಚುಮರ್ಥಾಂತರದೊಳ್ ತೊಡರ್ದು ನಿಲೆ ನುಡಿವ ನುಡಿ ಬೆಲ್ಲೊದರಿಪ ವಕ್ರೋಕ್ತಿ ನಿಯತ ಕಾಕು ಶ್ಲೇಷಂ (ಕಾವ್ಯಾವ. ೬೦೧). i. ಶ್ಲೇಷೆಯ ಮೂಲಕ ವಕ್ರೋಕ್ತಿಗೆ ಉದಾಹರಣೆ : ಕುಮಾರಂ ಪುಷ್ಪದರ್ಶನದಿಂ ಕೆಯ್ಯಾಸಿದನೆಂಬುದೀತಿಗೆ ಪಾಟಿಯೆ ವಲಮೆಂದು ವಕ್ರೋಕ್ತಿಯಂ ನುಡಿದು (ಶಾಂತಿಪು. ೮-೮೨ ವ). ii. ಕಾಕುವಿನಿಂದ ಬೇರೊಂದು ಅಭಿಪ್ರಾಯವನ್ನು ತಿಳಿಸುವ ವಕ್ರೋಕ್ತಿಗೆ ಉದಾಹರಣೆ : ಈ ತೊಡವೇವುದೂ ರೂಪೆ ಸಾಲದೇ ಎಂದೆಂದೋರೊರ್ವರಾಕೆಯ ರೂಪಂ ವಕ್ರೋಕ್ತಿಯೊಳೆ ಪೊಗಟ್ಟು (ಪಂಪಭಾ. ೩-೪೬ ವ). [ಸಂ.]

ವಕ್ರೋಕ್ತಿನಿಪುಣ (ನಾ). ಚಾತುರ್ಯದ ಮಾತುಗಳನ್ನಾಡುವುದರಲ್ಲಿ ಪರಿಣತನಾದವನು : ಪ್ರತ್ಯುತ್ಪನ್ನಪ್ರತಿಭನುಂ ವಕ್ರೋಕ್ತಿನಿಪುಣನುಂ . . . ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು (ಅದಿಪು. ೧೪-೪೩ ವ). [ಸಂ.]

ವಕ್ಷ (ನಾ). ಎದೆ ; ಉರಸ್ಸು : ವಕ್ಷಮಂಬರಚರಶ್ರೀಗೇಹಮಂಬೊಂದೆ ರೂಪೆ ಗಡ ನೋಡಲೊಡಂ ಮರುಳ್ಗೊಳಿಸುಗುಂ ವಿದ್ಯಾಧರಸ್ತ್ರೀಯರಂ (ಆದಿಪು. ೧-೭೪); ತುಱುಗಿ ಕರಂಗಳಂ ಕೆದಱಿ ವಕ್ಷದೊಳುಜ್ಜಳತಾರಹಾರಮೇಂ ಮೆಱೆದನೋ ಭೂಪಂ (ಪುಷ್ಪಪು. ೩-೭೪). [ಸಂ. ವಕ್ಷಸ್]

ವಕ್ಷಸ್ಥಲ, ವಕ್ಷಸ್ಥಳ (ನಾ). = ವಕ್ಷ : ಜಲರಾಶಿಪ್ರಭವೆಯನವಿಕಲಕೃಷ್ಣ ಗುಣಾಮರಕ್ಕೆಯಂ ಮಿಗೆ ಲಕ್ಷ್ಮೀಲಲನೆಯನಾಂತು ವಕ್ಷಸ್ಥಲದೊಳ್ (ಕವಿಪ್ರ. ೩-೧೬೧); ಮಂದರಾಚಲಶಿಲಾತಳವಿಶಾಲಮೆನಿಪ ವಿಪುಲವಕ್ಷಸ್ಥಲಮುಂ (ಅಜಿಪು. ೫-೯೨ ವ). **ವಕ್ಷಸ್ಥಳ:** ದಿವ್ಯಾಯುಧಕೆ ಚಾಚದನು ವಕ್ಷಸ್ಥಳವನಸುರಾರಾತಿಯಡಹಾಯ್ದು (ಕುವಾದ್ರೋ. ೩-೬೦). [< ಸಂ. ವಕ್ಷಃಸ್ಥಲ]

ವಕ್ಷಸ್ಥಳ 'ವಕ್ಷಸ್ಥಲ' ನೋ.

ವಕ್ಷಸ್ಯಸ್ತಿಕ (ನಾ). ನೃತ್ಯದ ಒಂದು ಭಂಗಿ; IP "ಚತುರಸ್ರ ಹಸ್ತವನ್ನು ಮಾಡಿ ಕೈಗಳನ್ನು ಎದೆಯ ಹತ್ತಿರ ನಿಲ್ಲಿಸಿ ಉದ್ವೇಷ್ಟನ ಮಾಡಿ ಪಾರ್ಶ್ವಕ್ಕೆ ತಂದು ಎದೆಯನ್ನು ಸ್ವಲ್ಪ ಬಗ್ಗಿಸಿ ಕೈಗಳನ್ನು ವ್ಯಾವರ್ತ ಮಾಡಿ ಎದೆಗೆ ತಂದು ಮುಂಗೈಗಳನ್ನು ಸ್ವಸ್ತಿಕದಂತೆ ಹಿಡಿದು ಕಾಲುಗಳನ್ನೂ ಸ್ವಸ್ತಿಕದಂತೆ ಮಾಡಿ ನಿಲ್ಲುವುದು" (ಅಸ್ಮರಂ. ೨೫೮ ಗದ್ಯಾನುವಾದ): ಚತುರಸ್ರಂಗಳನಾಂತ ಹಸ್ತಮೆರಡಂ ವಕ್ಷಕ್ಕೆ ತಂದಿಟ್ಟುಮುನ್ನತದಿಂದಂ ಪೊಜಮಂಡಿಸುತ್ತೆ ಪಿರಿದುಂ ವ್ಯಾವರ್ತನಂಗೆಯ್ದು ನಿಶ್ಚಿತಭುಗ್ನಂಬಡೆದಿರ್ಪ ವಕ್ಷದೊಳೆ ನಿಂದುಂ ಸ್ವಸ್ತಿಕಂ ಮಾಡಿ ಕಾಲ್ ಸತತಂ ಸ್ವಸ್ತಿಕಮಾಗೆ ರಂಜಿಸಿತು ವಕ್ಷಸ್ವಸ್ತಿಕಾಖ್ಯಾನದಿಂ (ಅಸ್ಮರಂ. ೪-೪೩). [< ಸಂ. ವಕ್ಷಃಸ್ವಸ್ತಿಕ]

ವಕ್ಷೋಜ (ನಾ). ಎದೆಯಲ್ಲಿ ಮೂಡಿದುದು ; ಕುಚ ; ಸ್ತನ : ಮಂಡನಾಳಂಕರಣವಚನದಿಂ ವೃತ್ತವಕ್ಷೋಜದಿಂದೊಪ್ಪಿರ್ದ ವಾಕ್ಯಂದರಿ ಪರಮವಚೋವೃದ್ಧಿಯಂ ಮಾಡುಗೆಮ್ಮೊಳ್ (ಸುಕುಮಾ. ೧-೭). [ಸಂ.]

ವಕ್ಷೋರುಹ (ನಾ). = ವಕ್ಷೋಜ : ಅಂಭೋಜಕುಟ್ಮಳವಕ್ಷೋರುಹದಗ್ರ ಮಾಳ್ದುದೆಳೆಗರ್ಪಂ (ರಾಜಶೇ. ೪-೩೧). [ಸಂ.]

ವಖಣೆ 'ವಕ್ಕಾಣ' ನೋ.

ವಖಾರ, ವಖಾರು, ವಖಾರೆ (ನಾ). ಸರಕುಗಳನ್ನು ದಾಸ್ತಾನು ಮಾಡುವ ಸ್ಥಳ ; ಉಗ್ರಾಣ ; ಗೋದಾಮು : ಹದಿನೇಳನೆಯ ಶತಮಾನದಲ್ಲಿ ಇಂಗ್ಲಿಷರು ತಮ್ಮ ಬೇರೆ ಬೇರೆ ವಖಾರಗಳನ್ನು ಸ್ಥಾಪಿಸಿದರು (ಹಿಂದೂ. ೨೪೨); ಕೆಳಗಿನ ಅಂತಸ್ತಿನಲ್ಲಿ ಕತ್ತಲೆಗವಿದ ವಖಾರಗಳಿವೆ (ಕುಂಪಂ. ೧೪೭). **ವಖಾರು :** ಬಳಿಕ ಪೋರ್ಚುಗೀಜರು ಗೋವೆ ಮುಂತಾದ ಪಟ್ಟಣಗಳನ್ನು ಹಿಡುಕೊಂಡು ಅಲ್ಲಿ ತಮ್ಮ ವಖಾರುಗಳನ್ನು ಸ್ಥಾಪಿಸಿ . . . ಲಾಭವನ್ನು ಪಡಕೊಂಡರು (ಮುಂಬಹು. ೬-೧೫೫); ಸದ್ಯ ನಳಬಜಾರದಲ್ಲಿ ಫೇಲಭಾಯಿಯ ಕಬ್ಬಿಣದ ವಖಾರಿನಲ್ಲಿದ್ದೇವೆ (ರತ್ನಗೋ. ೬೬). **ವಖಾರೆ :** ಕೊರೆದಂಥ ಕಬ್ಬಗೆ ನೀರಲ್ಲಿ ಇರುವದಿಲ್ಲ, ಬಂದರದೊಳಗೆ ವಖಾರೆಗಳಲ್ಲಿರುತ್ತವೆ (ಮುಂಬಪ್ಯಾ. ೨೦೧). 'ಬಖಾರಿ' ಪರಾ.

[<— ಮರಾ. ವಖಾರ./ ಪ್ರಾ. ವಕ್ಕಾರ]

ವಖಾರು 'ವಖಾರ' ನೋ.

ವಖಾರೆ 'ವಖಾರ' ನೋ.

ವಖ್ಖಣಿಸು 'ವಕ್ಕಾಣಿಸು' ನೋ.

ವಖ್ಖಣೆ 'ವಕ್ಕಾಣ' ನೋ.

ವಖ್ಖಾಣ 'ವಕ್ಕಾಣ' ನೋ.

ವಖ್ಖಾಣಿಸು 'ವಕ್ಕಾಣಿಸು' ನೋ.

ವಗಲೆ (ನಾ). ತಾಂತ್ರಿಕರು ಪೂಜಿಸುವ ಒಬ್ಬ ದೇವತೆಯ ಹೆಸರು: (ಟಿ). 'ಬಗಲೆ' ಪರಾ. [ಸಂ. ವಗಲಾ]

ವಗೈರೆ (ನಾ). ಮುಂತಾದುವು ; ಮೊದಲಾದುವು ; ಇತ್ಯಾದಿ : ಬಾನ ವಗೈರೆ ಯರಡು ಯಸೆ ಪ್ರಕಾರ (ಮೈಲಾ. ೧೯೨೯, ೯೭-೩೪; 1933); ಪ್ರತಿಗ್ರಾಮಕ್ಕೂ ಹೋಗಿ ಅಲ್ಲಿ ಕೆರೆಗಳಲ್ಲಿರುವ ನೀರಿನ ಆಧಾರ ನೋಡಿ ಇಷ್ಟೇ ಸಾಗುವಳಿ ಆಗಬೇಕೆಂದು ವಗೈರೆ ನಡೆಸತಕ್ಕ ಕ್ರಮ (ಮಿಷಾಮಂ. II, ೫೭).

[<— ಅರ. ವಗೈರಹ್, ವಘೈರಾ; ಪಾರ. ವಘೈರಾ; ಹಿಂ. ವಗೈರಹ್; ಮರಾ. ವಗೈರಾ, ವಗೈರೆ]

ವಗ್ಗ$_1$ 'ಬಗ್ಗ$_1$' ನೋ.

ವಗ್ಗ$_2$ 'ಬಗ್ಗ$_2$' ನೋ.

ವಗ್ಗಯ್ಯ (ನಾ). ಮೈಲಾರಲಿಂಗನ ಭಕ್ತರು ಇಟ್ಟುಕೊಳ್ಳುವ ಹೆಸರು : ಗುಡ್ಡಾಪುರವೆಂಬಲ್ಲಿ ಮೈಲಾರಲಿಂಗನ ಗುಡಿಯುಂಟು. ಆ ದೇವತೆಯ ಭಕ್ತರು ವಗ್ಗಯ್ಯಗಳೆಂಬ ಹೆಸರು ಧರಿಸುವರು. ಬ್ರಾಹ್ಮಣರಿಂದ ಹೊಲಿಯರವರೆಗೆ ಬೇಕಾದ ಜಾತಿಯವರು ವಗ್ಗಯ್ಯಗಳಾಗಬಹುದು (ಕಭಾಗ. ೨೧೫). [< ಬಗ್ಗ + ಅಯ್ಯ$_1$]

ವಗ್ಗಸೇನೆ (ನಾ). ಒಂದು ಬಗೆಯ ಸೈನ್ಯ: ತುರಗದಳ ಪದಾತಿಬಲ ಬಿಲ್ಲುಣ ಲಖ್ಖಣ ವಗ್ಗಸೇನೆ ಭಹುವೆಡೆಯಿಂ ಬೆಳಗವತ್ತಿಯ ಕೋಟೆಯ ವುಚ್ಚಿ (ಮೈಲಾ. ೧೯೨೨; ೬೬-೬; ಸಂ. 1166). [ವಗ್ಗ$_2$ + ಸೇನೆ]

ವಚನ (ನಾ). ೧. ನುಡಿಯುವುದು ; ಮಾತನಾಡುವುದು. ೨. ನುಡಿ ; ಮಾತು : ವಚನದಲ್ಲಿ ನಾಮಾಮೃತ ತುಂಬಿ ನಯನದಲ್ಲಿ ಮೂರುತಿ ತುಂಬಿ . . . ನಿಮ್ಮ ಚರಣಕಮಲದಲಾನು ತುಂಬಿ (ಬಸವ. ೪೯೨); ವಚನದೊಳಿಲ್ಲ ಪೆರ್ಮೆಲೆಯೊಳಲ್ಲದೆ ಕರ್ಕಶವೃತ್ತಿ ವಕ್ರಿಮಂ ಸುಚರಿತದೊಳ್ ವಿಚಾರಿಸುವೊಡಿಲ್ಲಳಕಾಳಿಯೊಳಲ್ಲದೆಲ್ಲಿಯುಂ (ಚಂದ್ರಪ್ರ. ೧೧-೧೦೯). ೩. ವಾಗ್ದಾನ ; ಭಾಷೆ : ತಾವೇ ಕೊಟ್ಟು ವಚನಗಳನ್ನು ಒಂದೇ ಸವನೆ ಹೇಗೆ ಭಂಗಮಾಡುತ್ತ ಬಂದಿಯವರು (ಪ್ರಬಂಧ. ೫೬). 'ವಚನಭಂಗ' ಪರಾ. ೪. ಹಿತವಚನ ; ಬುದ್ಧಿಮಾತು : ಹಿಸುಣರ ಬಗೆಯ ನೀ ಕೇಳದಿರು ನೀ ಮನ ಬಿಗಿಸದಿರು ಸಲಿಸೆನ್ನ ವಚನವನೆಂದಳಾ ಕುಂತಿ (ಕುವಾಕಾ. ೧೦-೬೧). ೫. ಕಾವ್ಯದಲ್ಲಿ ಬರುವ ಗದ್ಯಭಾಗ,—ಗದ್ಯರಚನೆ : ಸಾಹಿತ್ಯದಲ್ಲಿ, ಚಂಪೂಗ್ರಂಥಗಳಲ್ಲಿ ಉಪಯೋಗಿಸಿದ ಸಣ್ಣ ದೊಡ್ಡ ಗದ್ಯಭಾಗಗಳಿಗೆ ವಚನ ಎಂದೆನ್ನುವದುಂಟು . . . ಅವು

ವರ್ಣನಾತ್ಮಕವೇ ಇರಲಿ, ಕಥನಾತ್ಮಕವೇ ಇರಲಿ, ಎರಡು ಪದ್ಯಗಳ ಸಂಬಂಧವನ್ನು ತೋರಿಸಲು ಉಪಯೋಗಿಸಿದ ಒಂದರ್ಥವಾಕ್ಯ ಇಲ್ಲವೆ ವಾಕ್ಯಶೇಷಗಳ ಇರಲಿ, ಆ ಎಲ್ಲ ಗದ್ಯಭಾಗಗಳು 'ವಚನ'ಗಳಿಂದ ಕರೆಯಲ್ಪಡುತ್ತಿರುವವು (ವಚರಾ. ೨ ಲೇಖನ). ೬. ಸರ್ವಜ್ಞಕವಿಯ ತ್ರಿಪದಿಬದ್ಧವಾದ ಪದ್ಯ ,—ಸೂಕ್ತಿ : ಏಳು ಸಾವಿರದ ಎನ್ನುತ್ತು ವಚನಗಳ ಹೇಳಿದನು ಕೇಳೊ ಸರ್ವಜ್ಞ(ಸರ್ವಜ್ಞ. ೨೪). ೭. ಶಿವಶರಣರ ಅನುಭಾವದ ನುಡಿ ,—ಸೂಕ್ತಿ; IP ಇದು ಮಧ್ಯಕಾಲೀನ ಸಾಹಿತ್ಯದ ಒಂದು ವಿಶಿಷ್ಟಪ್ರಕಾರ. ವೀರಶೈವಧರ್ಮ, ಭಕ್ತಿ, ಸಮಾಜಸುಧಾರಣೆ ಇತ್ಯಾದಿಗಳನ್ನು ಕುರಿತು ರಚಿಸಿದ, ಕೊನೆಯಲ್ಲಿ ಅಂಕಿತವನ್ನು ಹೊಂದಿರುವ, ಗದ್ಯ ಪದ್ಯಗಳ ನಡುವಣ ಮಾದರಿಯ ಸೂಕ್ತಿ.—ರಚನೆ. ಆಧುನಿಕಸಾಹಿತ್ಯಕ್ಷೇತ್ರದಲ್ಲೂ ಈ ಬಗೆಯ ಕೆಲವು ರಚನೆಗಳನ್ನು ಕಾಣಬಹುದು : ಆದ್ಯರ ವಚನ ಪರುಷ ಕಂಡಣ್ಣಾ . . . ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ (ಬಸವ. ೧೭೧); ಅಱುವತ್ತೆಂಟುಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯಾ (ಷಡ್ವ. ೫. ೩೫-೧೦೬). ೮. [ವ್ಯಾಕ] ವ್ಯಕ್ತಿ, ವಸ್ತು, ಸಂಗತಿ ಮೊದಲಾದುವುಗಳು ಒಂದೋ ಅಥವಾ ಹಲವೋ ಎಂಬುದನ್ನು ಸೂಚಿಸುವ ಸಂಜ್ಞೆ ,—ಪರಿಭಾಷೆ : ಅಧರೂಪದಿನಾ ಪ್ರಥಮಾವಿಭಕ್ತಿ ಲಿಂಗಾರ್ಥ ವಚನ ಸಂಬೋಧನದೊಳ್ ಪ್ರಭವಿಪ್ಪುದಾ ದ್ವಿತೀಯಾವಿಭಕ್ತಿ ಕರ್ಮದೊಳನಾಖ್ಯಂ ವರ್ತಿಸುಗುಂ (ಕಶಾದ. ೧೨೬); ಕನ್ನಡದಲ್ಲಿ ವಚನಗಳು ಎರಡು — ಏಕವಚನ, ಬಹುವಚನ (ಕೃವಿ. ೩೫).

ವಚನ ಕೊಡು = ಭಾಷೆಯನ್ನು ನೀಡು ; ಮಾತು ಕೊಡು : ನಿನ್ನ ಕೈಯಿಂದ ಆಗಲಾರದು, ಮಾಡಲು ವಚನ ಕೊಟ್ಟರೆ ಹೇಳುವೆ (ಕೊಚಾ. ೪೨). [ಸಂ.]

ವಚನಕಾರ (ನಾ). ಅನುಭಾವದ ನುಡಿಗಳನ್ನು ರಚಿಸಿದ ಶಿವಶರಣ ; ವಚನಗಳನ್ನು ರಚನೆ ಮಾಡಿದ ಶಿವಶರಣ : ವಚನಕಾರರು ನಿಜವಾದ ಸಮಾಜಸುಧಾರಕರಿಯವರು (ವಚಶಾ. ೧, ೧೭ ಮುನ್ನುಡಿ). [ಸಂ.]

ವಚನಕಾರ್ತಿ (ನಾ). ಅನುಭಾವದ ನುಡಿಗಳನ್ನು ರಚಿಸಿದ ಶಿವಶರಣೆ ; ವಚನಗಳನ್ನು ರಚನೆ ಮಾಡಿದ ಶಿವಶರಣೆ : ಅನೇಕ ಜನ ಶರಣೆಯರು, ವಚನಕಾರ್ತಿಯರು ತಮ್ಮ ಅನುಭಾವದ ಅಮೃತವಾಣಿಯನ್ನು ಬಿತ್ತರಿಸಿದರು (ಕರ್ನಾ. ೧೧೫). [ವಚನಕಾರ + — ತಿ (< — ಇತ್ತಿ)]

ವಚನಗುಪ್ತಿ (ನಾ). [ಜೈನ] ಮನ, ವಚನ ಮತ್ತು ಕಾಯ ಎಂಬ ಮೂರು ಬಗೆಯ ಗುಪ್ತಿಗಳಲ್ಲಿ ಒಂದು ; ಮಾತನ್ನು ನಿಗ್ರಹಿಸುವುದು ; ಮಾತಿನ ಮೇಲಿನ ಹಿಡಿತ ,—ಸಂಯಮ : ಹಿಂಸಾವಿರತಿ . . . ಪರಿಗ್ರಹವಿರತಿಗಳೆಂಬೀ ಐದು ವ್ರತಗಳ ಸ್ಥಿರತೆಗಾಗಿ ಐದ್ದೆದು ಭಾವನೆ(ಚಿಂತನೆ)ಗಳು ಹೇಳವೆ. ಹಿಂಸಾವಿರತಿವ್ರತಕ್ಕೆ ವಚನಗುಪ್ತಿ (ವಚನಪ್ರವೃತ್ತಿಯನ್ನು ತಡೆಯುವುದು) (ಜೈಧ. ೬೮). [ಸಂ.]

ವಚನಚತುರ (ನಾ). ಮಾತಿನಲ್ಲಿ ಜಾಣನಾದವನು ,—ನಿಪುಣ : ನೀತಿನಿರತನು ಮಾಕಾರವಂತನುಂ ವಚನಚತುರನುಮಪ್ಪುದ್ಧವನೆಂಬ ದೂತಮುಖ್ಯನನಟ್ಟಿದೊಡೆ (ಚಂದ್ರಪು. ೬-೧೫ ವ). [ಸಂ.]

ವಚನತ್ರಯ (ನಾ). [ವ್ಯಾಕ] ಏಕವಚನ, ದ್ವಿವಚನ, ಬಹುವಚನಗಳೆಂಬ ಮೂರು ವಚನಗಳು : ವಚನತ್ರಯಕ್ಕೆ — ಒರ್ವನೆ ಗಂಡನಲ್ತೆ ಜಗತೀತಳದೊಳ್ ಇರ್ಬರೆ ತೋಳ್ಗಳಲ್ತೆ ನೃಪತಿಗೆ ರಣದೊಳ್ (ಶಮದ. ೪೭ ಪ್ರಯೋ). [ಸಂ.]

ವಚನತ್ರಿತಯ (ನಾ). = ವಚನತ್ರಯ : ದೊರೆವಡೆದವ್ಯಯ ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ಸರಿ ವಚನತ್ರಿತಯಕ್ಕಂ ಸರಿಯೆನಿಸಿ ವಿಕಾರಮಿಲ್ಲದರ್ಥಮನೀಗುಂ (ಶಮದ. ೯೦). [ಸಂ.]

ವಚನದೋಷ (ನಾ). ೧. ಮಾತಿನಲ್ಲಿ ಉಂಟಾದ ತಪ್ಪು ,—ನ್ಯೂನತೆ ; ಮಾತಿನ ಪ್ರಯೋಗದಲ್ಲಿ ತಪ್ಪಾದ ಅರ್ಥ ಬರುವಿಕೆ : ವಚನಪಾತಕವೆನ್ನ ವಚನದೋಷಂಗಳೆನ್ನ ಕಾಡಿ ಕಾಡಿ ಕೆಡಿಸಿಹುವೆನ್ನ (ಬಸವ. ೨೫೨); ವಚನದೋಷಕೆ ಬೇಡಿಕೊಂಬವೋಲ್ಕಾಲ್ಗೆಱಗಿ ಸಂತೈಸಿದಂ ಪ್ರಿಯಳನು (ಜೈಮಿಭಾ. ೩೬-೧೭). ೨. [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; ಕರ್ತೃಪದವನ್ನು ಏಕವಚನದಲ್ಲಿ ಅಥವಾ ಬಹುವಚನದಲ್ಲಿ ಪ್ರಯೋಗಿಸಿ ಕ್ರಿಯಾಪದವನ್ನು ಅದಕ್ಕೆ ಹೊಂದಾಣಿಕೆಯಿಲ್ಲದೆ ಬಹುವಚನದಲ್ಲಿ ಅಥವಾ ಏಕವಚನದಲ್ಲಿ ಪ್ರಯೋಗಿಸುವುದು : ಬಂದುವು ಪಾವ್ಗಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊಳ್ ನಿಂದುದದೆಂಬುದುಂ ವಚನದೋಷವಿಶೇಷಂ (ಕವಿಪ್ರ. ೧-೧೧೦). [ಸಂ.]

ವಚನಪಲ್ಲಟ(ನಾ). [ವ್ಯಾಕ] ಏಕವಚನ ಮತ್ತು ಬಹುವಚನ ಪ್ರಯೋಗಗಳಲ್ಲಿ ಒಂದರ ಬದಲು ಇನ್ನೊಂದರ ಪ್ರಯೋಗ : ವಚನಪಲ್ಲಟ — (i) ಜಾತಿವಾಚಕ, ಸಂಖ್ಯೇಯವಾಚಕ, ವಿಧೇಯವಾಚಕಗಳ ಮೇಲೆ ಬಹುವಚನಕ್ಕೆ ಪ್ರತಿಯಾಗಿ ಏಕವಚನವು ವಿಕಲ್ಪವಿಂದ ಬರುವುದು. (ii) ಉಪಹಾಸ, ಗೌರವ ಇವುಗಳನ್ನು ತೋರಿಸುವಾಗ ಏಕವಚನಕ್ಕೆ ಪ್ರತಿಯಾಗಿ ಬಹುವಚನವು ಬರುವುದು (ಕೃವಿ. ೫೭). [ಸಂ.]

ವಚನಪಾತಕ (ನಾ). (ಕೆಟ್ಟ) ಮಾತಿನಿಂದ ಉಂಟಾಗುವ ಪಾಪ : ವಚನಪಾತಕವೆನ್ನ ವಚನದೋಷಂಗಳೆನ್ನ ಕಾಡಿ ಕಾಡಿ ಕೆಡಿಸಿಹುವೆನ್ನ (ಬಸವ. ೨೫೨). [ಸಂ.]

ವಚನಪ್ರೌಢಿ (ನಾ). ಮಾತಿನ ನೈಪುಣ್ಯ ,—ಪ್ರೌಢಿಮೆ : ವಚನಪ್ರೌಢಿಯನರ್ಥ ಪ್ರಚುರತೆಯಂ ಮೋಷದೃಷ್ಟಿಪರನಲ್ಲದವಂ ಶುಚಿಮತಿ ಪೊಗಟ್ಟುಂ ಮಾತ್ಸರ್ಯಚಿತ್ತನುನ್ಮತ್ತನಜಿರೊಡೇಂ ಪೊಗಟ್ಟಪನೇ (ಮಲ್ಲಿಪು. ೧-೨೭). [ಸಂ.]

ವಚನಭಂಗ (ನಾ). ಕೊಟ್ಟ ಮಾತನ್ನು ಮುರಿಯುವುದು ; ಭಾಷೆಗೆ ತಪ್ಪಿ ನಡೆಯುವುದು : ಪಾರಿವಾಳವನ್ನು ಬಿಟ್ಟರೆ ವಚನಭಂಗವಾಗುತ್ತದೆ (ಭಾರದ. ೧೦೩). [ಸಂ.]

ವಚನಭ್ರಷ್ಟ (ನಾ). ಕೊಟ್ಟ ಮಾತಿಗೆ ಎರವಾದವನು ; ಭಾಷೆಗೆ ತಪ್ಪಿದವನು : ಇದರಿಂದ ತನ್ನ ಸರ್ವನಾಶವಾದರೂ ವಚನಭ್ರಷ್ಟನಾಗಬಾರದು ಎಂಬ ನೀತಿಯು ಬೋಧಿಸಲ್ಪಟ್ಟಿದೆ (ಭಾರದ. ೧೦೩). [ಸಂ.]

ವಚನರಚನೆ (ನಾ). ಮಾತಿನ ರೀತಿ ,—ಒಕ್ಕಣೆ : ವೀರಪಾಂಡವರದಟನಾದನುಜಾರಿ ಹೇಳಿದ ವಚನರಚನೆಯ ಕೌರವಗೆ ಬಂದಱುಹೆ ಕೋಪಿಸಿ ಸಂಜಯನ ಜಱಿದ (ಕುವ್ಯಾಉ. ೫ ಸೂಚನೆ). [ಸಂ. ವಚನರಚನಾ]

ವಚನಶಾಸ್ತ್ರ (ನಾ). ಶಿವಶರಣರು ರಚನೆಮಾಡಿದ ಅನುಭಾವದ ನುಡಿಗಳ ತತ್ತ್ವಸಿದ್ಧಾಂತ : ಇವುಗಳಲ್ಲಿ ವಚನಕಾರರ ಗಮನವೆಲ್ಲಾ ಧರ್ಮದ ಕಡೆಗೆ . . . ಇಂಥ ರಚನೆಗೆ "ವಚನಶಾಸ್ತ್ರ" ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ (ಕಾವ್ಯಸ. ೧೦೩); ವಚನಕಾರರು ಈ ಸಿದ್ಧಾಂತಗಳ ತತ್ತ್ವಗಳನ್ನು ಕನ್ನಡದಲ್ಲಿಯೇ ಸುಲಭವಾಗಿ ಬೋಧಿಸಿದ್ದಾರೆ. ಅವರು ನಿರ್ಮಿಸಿದ ಈ ಕನ್ನಡವಾಙ್ಮಯಕ್ಕೆ 'ವಚನ ಶಾಸ್ತ್ರ' ಎಂಬ ಹೆಸರು ಉಂಟಾಗಿದೆ (ವಚಶಾ. ೧, ೧೭ ಮುನ್ನುಡಿ). [ಸಂ.]

ವಚನಶೂರ (ನಾ). ಮಾತಿನಲ್ಲಿ ಮಾತ್ರ ಶೂರನಾದವನು ; ನುಡಿಯಲ್ಲಿ ಮಾತ್ರ ಪರಾಕ್ರಮವಂತನಾದವನು : ವಚನಶೂರರು ನಾವು ಪಾರ್ಥಿವನಿಚಯವೇ ಭುಜಶೂರರು (ಕುವ್ಯಾಉ. ೧೫-೪). [ಸಂ.]

ವಚನಸಾಹಿತ್ಯ (ನಾ). ಶಿವಶರಣರು ರಚನೆಮಾಡಿದ ಅನುಭಾವದ ನುಡಿ ,—ವಾಙ್ಮಯ : ಆತ್ಮಜ್ಞಾನದ ಉನ್ನತವಿಚಾರಗಳಿಂದಾಗಿ ವಚನಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಕನ್ನಡಸಾಹಿತ್ಯವು ಕೊಟ್ಟ . . . ಅಮೂಲ್ಯಕಾಣಿಕ್ಕೆಯಾಗಿದೆ (ಕರ್ನಾ. ೬೫); ವಚನಸಾಹಿತ್ಯದ ಎರಡು ಶೈಲಿಗಳಿಗೆ ಬಸವಣ್ಣ ಮತ್ತು ಅಲ್ಲಮರು ಸೊಗಸಾದ ಪ್ರತಿನಿಧಿಗಳು (ಕೂನ್ನಿ. ೧೨). [ಸಂ.]

ವಚನಿಸು (ಕ್ರಿ). ೧. ಹೇಳು; ನುಡಿ; ಮಾತನಾಡು: ಮತ್ತರಡನೆಯ ವರವೇನು ವಚನಿಸು ಕೊಟ್ಟೆ ನಾ ನಿನಗೆ (ಕುವ್ಯಾಸ. ೧೫-೫೮); ಉಚಿತವಿದು ನಿನಗಲ್ಲವೆಂದಾ ಸಚಿವಪತಿ ನಯನೀತಿಯಿಂದವೆ ವಚನಿಸಿದನನ್ಯಾಯವೆಂದನು ಕಲಿವಿಭೀಷಣನು (ತೊರರಾ. ೩-೧೦-೪೧). ೨. ವಿವರಿಸು ; ವರ್ಣಿಸು : ಅರ್ಕನಂತೆಸೆವಾತ್ಮಯೋಗ ವಿಂತಿಹುದೆಂದು ಬೇರ್ಕೈದು ವಚನಿಸಲರಿದು (ಭರಚ. ೨-೯೧); ಬಂಧುವಿಂಗರ್ಘ್ಯವನು ಕೊಡುತಿರಲೊಂದು ಚಿತ್ರವದಾಯಿತದನೇನೆಂದು ವಚನಿಸಬಪ್ಪುದೆಲೆ ಭೂಪಾಲ ಕೇಳು (ಕೊಲಗಯ. ೫-೬). ೩. ಭಾಷೆ ನೀಡು ; ಮಾತು ಕೊಡು : ವಚನಿಸಿ ಮಾಡದಿಹ ಬಾಹಿರರು ನಾವಲ್ಲ (ಕುವ್ಯಾದ್ರೋ. ೧-೪೦). [ವಚನ + — ಇಸು]

ವಚನೀಯ (ಗು). ೧. ಹೇಳಲು ಯೋಗ್ಯವಾದ ; ಸೂಚಿಸಲು ಅರ್ಹವಾದ. ೨. ನಿಂದಿಸಲು ಯೋಗ್ಯವಾದ. (ನಾ). ೩. ದೂಷಣೆ ; ನಿಂದೆ. [ಸಂ.]

ವಚನೀಯತೆ (ನಾ). ೧. ದೂಷಣೆಗೆ ಗುರಿಯಾದುದು ; ತೆಗಳಿಕೆಗೆ ಈಡಾದುದು. ೨. ಗಾಳಿಸುದ್ದಿ ; ವದಂತಿ. ೩. ನಿಂದೆ ; ಅಪವಾದ : "ವಿಗಾನಂ, ವಚನೀಯತಾ — ಈ ೨ ಜಟ್ಟೆವಾಕ್" (ಹಲಾಯು. ೨೪-೧೪೬). [ಸಂ. ವಚನೀಯತಾ]

ವಚಸ್ಸು (ನಾ). ೧. ಮಾತು ; ನುಡಿ : ಆಕೆಯ ವಚಸ್ಸಿನಲಿ ತಾವರೆಯ ತಹೆನೆನುತ ಸಿಂಹವಿರಾವದಲಿ ವಿಕ್ರಮಿಸೆ ವಿಗಡನದಾವರಿಸಿ ಬಲುಬಾಲ ತಡೆದುದು ಪವನಜನ ಪಥವ (ಕುಮಾಅ. ೧೦-೧೫). ೨. ಪದ ; ಶಬ್ದ. ೩. ಆಜ್ಞೆ ; ಶಾಸನ. ೪. ವಾಕ್ಯ. [ಸಂ. ವಚಸ್]

ವಚಿಸು (ಕ್ರಿ). ೧. ಹೇಳು ; ನುಡಿ : ಬಲ ನಿರ್ನಾಮವಾಯ್ತೆಂದುಬ್ಬಿ ವಚಿಸುವ ಕೈಮಗಿದಕೋಯೆನುತ ಕವಿದೆಚ್ಚನು ಕಟುಸ್ಸಜನ (ತೊರರಾ. ೩-೬-೫೪); ಕುಚಿತಬುದ್ಧಿಯ ತನ್ನ ಮನದೊಳು ಮಡಗದೆ ವಚಿಸಿದ ಖಳರಾಯನೊಡನೆ (ಮೋಹತ. ೩೩-೧೩). ೨. ಸಾರು ; ಘೋಷಿಸು : ಸ್ವಾತ್ಮಶಿಕ್ಷಣಮೇ ಸ್ವರಾಜ್ಯವೆನ್ನುತ ವಚಿಸಿ ದೇಶಸೇವೆಯನೀಶಸೇವೆಯೆನಿಸಿ (ಅಮತಂ. ೧೩-೭). ೩. ಧ್ವನಿಮಾಡು ; ಕೂಗು : ಅಖಿಲಪಕ್ಷಿಗಳಲ್ಲಿ ಪಣ್ಣುಗಳ್ ಸವಿದು ಮದಿಸಿ ವಚಿಸುತಲಿರುವ ಮಂಜುಪದ್ಮಗಳ (ಸೌಗಂಧಿ. ೪೪-೯). ೪. ವಿವರಿಸು ; ವರ್ಣಿಸು : ಧರ್ಮಭಾಗವನಱಿದು ಶಾಸ್ತ್ರಮಂ ವಚಿಸುತಂ (ಪದ್ಮರಾ. ೯-೩೨); ವಚಿಸಲಚ್ಚರಿಯಮಮ ಲೋಕಪ್ರಚುರನಲ್ಲಾ ಸಿರಿಯೊಳು (ತೊರರಾ. ೬-೨೬-೫೧). ೫. ಪಠಿಸು ; ಜಪಿಸು : ಪರಮಸಂತೋಷದೆ ಶುಚಿವೆತ್ತು ರಣರಂಗದೊಳಗೆ ವಚಿಸಿದ ಶುಕ್ರದೇವರು ಕೊಟ್ಟ ಮಂತ್ರವ (ಮೋಹತ. ೪೦-೪೭). ೬. ವಚನದ ರೂಪದಲ್ಲಿ ಹೇಳು : ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ ವಚಿಸಿ ಅನುಭವಿಯಾದವ ಪಂಡಿತನಯ್ಯಾ (ಸಿದ್ಧವ. ಕ. ೩೪-೧೦೪); ಅಕ್ಕಮಹಾದೇವಿ ಮುಂತಾದ ಶರಣಶರಣೆಯರು ತಂತಮ್ಮ ವಿಶಿಷ್ಟವ್ಯಕ್ತಿತ್ವದ ಪಡಿನೆಳಲಾದ ವಚನಗಳನ್ನು ರಚಿಸಿದರು, ಅಲ್ಲ ವಚಿಸಿದರು (ತವಾ. ೪). [ವಚನ + — ಇಸ್ಸು$_3$]

ವಚೋಗುಪ್ತಿ (ನಾ). = ವಚನಗುಪ್ತಿ : ಆದರೆ ಅವೆಲ್ಲಕ್ಕೂ ಮೂಲ ವಚೋಗುಪ್ತಿ (ಮಾತಿನ ಮೇಲಿನ ಹತೋಟಿ) (ಭಾರದ. ೩೩೦). [ಸಂ.]

ವಚೋಲಹರಿ (ನಾ). ಮಾತಿನ ಶೈಲಿ, —ರೀತಿ : ಪದಸಂಚರಣೆಯಲಿ ಲಿಜಿ ತಿರುಗಿ ನೋಡದ ಬಿರಿದು ಬೇಟೆ ಕುಮಾರವಾಲ್ಮೀಕಿಯ ವಚೋಲಹರಿ (ತೊರರಾ. ೧-೧-೧). [ಸಂ.]

ವಚೋವಲ್ಲಭ (ನಾ). ವಾಗ್ದೇವಿಯ ಪತಿ ; ಬ್ರಹ್ಮ : ಕಾಲನೇಮಿಯ ಕಂಸಾಸುರನಾಗಿ ಪುಟ್ಟಿದುದ ನಾಂ ಬಲ್ಲೆ ವಚೋವಲ್ಲಭಾ (ಜಗವಿ. ೧-೬೮). [ಸಂ.]

ವಚೋವಿನ್ಯಾಸ (ನಾ). ಮಾತಿನ ಜೋಡಣೆ, —ರಚನೆ : ಚರಮುಖಪ್ರತಿಪನ್ನ ಬಂಧುರತರವಚೋವಿನ್ಯಾಸ ಕರ್ಣಜ್ವರವೊ ಕರ್ಣಾಮೃತವೊ ಕೇಳರೆಯೆಂದನಂಧನೃಪ (ಕುಮಾಅ. ೧೭-೧೪). [ಸಂ.]

ವಚೋವಿಸ್ತರ (ನಾ). (ವಿಷಯವನ್ನು) ವಿವರವಾಗಿ ಹೇಳುವಿಕೆ ; ಮಾತಿನ ಹರವು, —ವ್ಯಾಪ್ತಿ : ಸಂಬೋಧಿಸಿದ ಗುರುಗಳ ವಚೋವಿಸ್ತರಮಂ ಸುಕುಮಾರ ಮುನೀಶ್ವರನವಧಾರಿಸಿ (ಸುಕುಮಾ. ೧೨-೧೩ ವ); ನೀ ಮರುಳೆ ವಿದುರ ಭವದ್ವಚೋವಿಸ್ತರಕೆ ಪಡಿಸೂಣವುಂಟೆ (ಕುಮಾಸ. ೧೨-೯೨). [ಸಂ.]

ವಚ್ಚ$_1$ (ನಾ). ೧. ಓರೆ ; ಪಕ್ಕ ; ಅರುಗು : ಅವನ ಬಗಲ ಮೇಲೆ ಮಲ್ಲಾರಿ ಅದುಮಿಕೊಂಡಿದ್ದ. ಇದ್ದಕ್ಕಿದ್ದಂತೆಯೇ ಮಲ್ಲಾರಿ ವಚ್ಚವಾದ (ಭೀಮಕಾ. ೪). ೨. ಸುಳಿವು ; ಕುರುಹು ; ಜಾಡು : ನಾಯಕನ ಸೂಕ್ಷ್ಮದೃಷ್ಟಿ ಇವನು ಇಂಥವನೇ ಎಂಬುದನ್ನು ಥಟ್ಟನೆ ಕಂಡುಕೊಂಡಿತು . . . ಆದರೂ 'ವಚ್ಚ' ಕೊಡದೆ ಮಾತನಾಡಿದನು (ಮಲ್ಲಿ. ೧೨೪). [ದೇ. ॥ ತಮಿ. ವಚ್ಚೆ = ಬಾಗು, ಬಗ್ಗು]

ವಚ್ಚ$_2$ 'ಬಚ್ಚ$_1$' ನೋ.

ವಚ್ಚ$_3$ (ನಾ). ಎದೆ ; ವಕ್ಷಸ್ಥಲ : ನಲಿನಲಿದು ಚಂಚುವಿಂ ಪಿಡಿದು ಕಿರಣಂಗಳನ್ನೊಲವಿಂದಲೀಂಟಿ ವಚ್ಚದೊಳಟ್ಟು ಗಳದೊಳಗೆ ಲಲಿತಹಾರಂಗೈದು . . . ಏಂ ಪ್ರಿಯದ ನಲಿದುವೊ ಚಕೋರಿಗಳ್ (ಮಂಕಾರಾ. ೫-೬-೨೦). [< ಸಂ. ವಕ್ಷಸ್]

ವಚ್ಚ$_4$ (ನಾ). ವತ್ಸನಾಭವೆಂಬ ವಿಷಮೂಲಿಕೆ : ಸಿಲೆಯೊಳು ರನ್ನ ಪುಟ್ಟಿದೊಲು ಮೀರಿ ವಚ್ಚದೊಳೊಗೆದು ನಿರ್ವಿಷದೋರುವೊಲು ಖಳವಂಶಪಾರಾವಾರದೊಳು ಹರಿಶರಣ ಜನಿಸಿದನು (ಆನಂರಾ. ೪-೪-೧೮). 'ಬಚನಾಗ' ಪರಾ. [< ಸಂ. ವತ್ಸನಾಭ]

ವಚ್ಚಗೋತ್ರ (ನಾ). ಒಂದು ಗೋತ್ರದ ಹೆಸರು ; ವತ್ಸಗೋತ್ರ : ಪತ್ಮಂಗೆಟೆಯೊಡೆಯ ವಚ್ಚಗೋತ್ರದ ಕಣ್ಣಮ್ಮಯ್ಯನ ಮಗ ನಿರುಗಮ್ಮಯ್ಯನುಂ (ಎಕ. X, ಕೋಲಾರ. ೫೭-೭; 825). [< ಸಂ. ವತ್ಸಗೋತ್ರ]

ವಚ್ಚೆ (ನಾ). ಇಚ್ಛೆ; ಅಪೇಕ್ಷೆ : ಹುಚ್ಚನ ಕೈಗೆನ್ನ ಹಿಡಿದುಕೊಟ್ಟರೊಳಿತೆ . . . ಅಚ್ಚುತನ ದಾಸರ ಹೆಮ್ಮನೆ ಮುಂದಿನ ಚೊಚ್ಚಲಾದ ಉಡಿಯಾ ಮಗನಯ್ಯ ನಾನಯ್ಯ ಮುಚ್ಚುಮರೆಯಾತಕೆ ವಚ್ಚೆ ಅರದು Eವಚ್ಚೆ ಅರಿದು∃ ಬೇಳೊ (ಮೋಕ್ಷದೀ. ೮೮-೩). [?./ ತಮಿ. ವಚ್ಚೈ = ದಯೆ, ಕರುಣೆ]

ವಜನ 'ವಜನು' ನೋ.

ವಜನದಾರ 'ವಜನುದಾರ' ನೋ.

ವಜನು, ಒಜ್ಜೆ, ವಜನ, ವಜೆ, ವಜ್ಜೆ (ನಾ). ೧. ತೂಕ ; ಭಾರ : ತಾಯಿ ಮಕ್ಕಳ ಜಗಳ ನ್ಯಾಯ ಮಾಡುವರಾರೆ ವಾಲೇಗೆ ಮುತ್ತು ವಜನೇನ ಹಡದಮ್ಮ ನಾ ಆಡಿದ ಮಾತು ನಿಜವೇನೆ (ಹಳ್ಳಿಯ. ೧೩). ೨. (ಆಲಂ) ಗೌರವ ; ಘನತೆ ; ದೊಡಸ್ತಿಕೆ : ನೀ ಕೆಲಸಾ ಮಾಡಿಕೋತ ಹೋದ ಹಂಗ ಕಾಯದೆ ಕಾನೂನಿನ ಹಿತಿತ, ಭಾಷಾದ ವಜನು, ಹಿಂದು-ಮುಂದಿನ ವಿಚಾರ, ಎಲ್ಲಾ ತಾನ ಹಿಡಿತಕ್ಕ ಬರತಾವ (ಗಂಮಾಯಿ. ೧೬೯); ಗದರಿಸಿದರೆ ಆಗಲಿಲ್ಲ ; ಆ ಗದರಿಕೆಗೆ ಒಂದು 'ಇದು' (ವಜನು) ಇರಬೇಕು (ಮೂಯುದಾ. ೪೭). ಒಜ್ಜೆ : ೧. ಎತ್ತಲಾರದ ಒಜ್ಜೆ ಕತ್ತು ಮುರಿಯುವಂತೆ ಹೊತ್ತು ನಾ ನಿಲಾರೆ ಸಿದ್ಧರಾಮ (ಸಿದ್ಧಪು. ೬-೯೦); ಕುರುಡರನ್ನು ಒಜ್ಜೆ ಹೊರುವ ಪ್ರಾಣಿಗಳಂತೆ ಉಪಯೋಗಿಸುತ್ತಿದ್ದರು (ಕವಪು. ೬-೧೩೨). ೨. ಸುಂಕ ತಪ್ಪಿಸೆ ಹೇರನೊಪ್ಪಿಸಿದೆನಾದೊಡಂ ಶಪಿಸದೆನ್ನೊಜ್ಜೆಯಂ ಹಿಗ್ಗಿಸಿದೆ! (ಹಟ್ಟರ. ೩೫-೨). ೩. ಜವಾಬ್ದಾರಿ ; ಹೊಣೆಗಾರಿಕೆ : ಸಂಸಾರದಲ್ಲಿ ಬಹುಭಾಗದ ಒಜ್ಜೆಯು ಸ್ತ್ರೀಯರ ಮೇಲಿರುವುದು (ಗರತಿ. ೨೬). ವಜನ : ೨. ಪಡದಯ್ಯನ ವಜನ ಕಾಯಂ ಉಳೀಬೇಕಾದರೆ ಅವನಿಂದ ಗೌಡನ ಫಜೀತಿ ಮಾಡಿಸಬೇಕಾಗತದ (ಗ್ರಾಮಾಯ. ೯೪). ವಜೆ : ೧. ಪತ್ತು ಎತ್ತಿನಾ ವಜೆಯ ರತ್ನ ಬಸವಯ್ಯ ಮುತ್ತು ಪತ್ತು ಎತ್ತಿನ ವಜೆಯು ಬಳಿಕ ಬಸವಯ್ಯ (ಶರಲೀ. ೨೬೯-೮). ೪. ಬಿಡಿಕಾಗದಗಳು ಅಥವಾ ಹಾಳೆಗಳು ಹಾರಿ ಹೋಗದಂತೆ ಅವುಗಳ ಮೇಲಿಡುವ ಭಾರದ ವಸ್ತು : ಕಾಗದಗಳು ಗಾಳಿಗೆ ಹಾರದಂತೆ ರಂಗುರಂಗಿನ ಕಾಜಿನ ವಜೆಗಳು ಮೇಜಿನ ಮೇಲೆ. ಮೇಜಿನ ಸುತ್ತಲೂ ನಾಲ್ಕು ಕುರ್ಚಿಗಳು (ದಾಕೂಬ. ೨). ವಜ್ಜೆ : ೩. ಸಂಸಾರದಲ್ಲಿ ಗಂಡ ಹೆಂಡರ ಮೇಲೆ ಬಹಳ ದೊಡ್ಡ ವಜ್ಜೆ ಇರುವದು (ಉತ್ತಗ್ರ. ೮೮); ಸಾಲಿಗರ ಚಿಕ್ಕ ಪುಟ್ಟ ಹಣವನ್ನು ಕೊಟ್ಟು ತಲೆಯ ಮೇಲಿನ ವಜ್ಜೆಯನ್ನು ಸ್ವಲ್ಪ ಕಡಿಮೆಮಾಡಿಕೊಂಡನು (ಚಿಕಸಾ. ೯೨). [<— ಅರ. ವಝ್ಝ್, ವಜನ್; ಹಿಂ. ಮರಾ. ವಜನ್./ ಪ್ರಾ. ವೋಜ್ಜ./ ತುಳು. ಒಜನ್, ಒಜನೆ]

ವಜನುದಾರ, ವಜನದಾರ (ನಾ). ೧. ತೂಕವಾದುದು : (ಕ). ೨. ಗೌರವಾನ್ವಿತ ; ವರ್ಚಸ್ವಿ ; ಘನತೆಯುಳ್ಳವನು : ಆ ವ್ಯಕ್ತಿ ವಜನುದಾರ ಇದ್ದಾನೆ (ರೂಢಿ). ವಜನದಾರ : ೧. ಇಮಾರತಿಯ ಕಟ್ಟಿಗೆಯಲ್ಲಿ ಅನೇಕ ಜಾತಿ ಇದ್ದು . . . ಸಣ್ಣದು, ದೊಡ್ಡದು, ವಜನದಾರ ಮತ್ತು ಹಗುರು ವಗೈರೆ ಅನೇಕ ಭೇದಗಳು (ಮುಂಬಪ್ರಾ. ೨೦೦). [<— ಹಿಂ. ಮರಾ. ವಜನದಾರ್]

ವಜಾ (ನಾ). ತೆಗೆದುಹಾಕುವುದು ; ಕಳೆಯುವುದು ; ಬಿಡುವುದು : ಬೇರೀಜು ಕಂಟೀರಾಯಿ . . . ಪೈಕಿ ವಜಾ ಜಾರಿ ಯಿನಾಮತ್ತಿ (ಮೈಅಂ. ೧೯೭೯, ೪೨-೪೫; 1825); ಹಾಗಿಲ್ಲವಾದರೆ ಕೆಲಸದಿಂದ ವಜಾ ಮಾಡಲ್ಪಡುವರೆಂದು ಮದರಾಸ್ ಗೌರ್ನಮೆಂಟ್ ನವರು ಒಂದಾನೊಂದು ಕಾಲದಲ್ಲಿ . . . ಹುಕುಂ ಮಾಡಿರುವರು (ಗ್ರಾಮಾಕ. ೪).

ವಜಾ ಮಾಡಿಸು = ಇಲ್ಲವಾಗಿಸು ; ತೆಗೆದುಹಾಕಿಸು : ನಿನ್ನೆ ಮಟ್ಟಿಗಾದರೂ ನಿನ್ನ ಆ ಹಾಳು ಹಿಂದೀಯನ್ನು ವಜಾ ಮಾಡಿಸಿ ನಿನ್ನನ್ನು ಕ್ಲಬ್ಬಿಗೆ ಎಳೆದೊಯ್ಯೋಣವೆಂದು ಹೋಗಿದ್ದೆ (ನಡೆದಾ. II, ೮೬೮). ವಜಾ ಮಾಡು = ತೆಗೆದುಹಾಕು ; ಬಿಟ್ಟುಬಿಡು :

ಈ ವರ್ಷ ಮುಷ್ಕರದ ಪರಿಣಾಮವಾಗಿ ಮಾಲೀಕ ಅವನನ್ನು ವಜಾ ಮಾಡಿದ್ದನು (ಕುಮು. ೧೫೯); ಪಾಲುದಾರರು ಇಷ್ಟಬಂದಂತೆ ಅದನ್ನು ವಜಾ ಮಾಡಬಹುದೆಂದೂ ಭಾವಿಸಲಾಗದು (ರಾಜ್ಯಾಂಗ. ೨೧). [<— ಅರ. ವಝ್‌ಅ; ಹಿಂ. ಮರಾ. ವಜಾ]

ವಜಾಬಾಕಿ (ನಾ). ೧. ಕೊಟ್ಟ ಹಣವನ್ನು ಕಳೆದು ಉಳಿದಿರುವುದು. ೨. [ಗಣಿತ] ಕಳೆದು ಉಳಿದ ಅಂಶ ; ಶೇಷ : ತ್ರಿಕೋಣದಲ್ಲಿ ಶಿರಃಕೋಣದಿಂದ ಕೆಳಗಡೆ ಲಂಬ ಮಾಡಿ ಇರುವಾಗ ಉಭಯಪಾರ್ಶ್ವದ ವರ್ಗದ ವಜಾಬಾಕಿ ಕೆಳಗಡೆ ಎರಡು ಖಂಡದ ವರ್ಗದ ವಜಾಬಾಕಿಗೆ ಸಮವಾಗಿದೆ (ಭೂಮಿತಿ. ೫೨). 'ಜಾತಾಬಾಕಿ' ಪರಾ. [<— ಅರ. ವಝ್‌ಅಬಾಕೀ; ಮರಾ. ವಜಾಬಾಕೀ]

ವಜಾಮಟ್ಟು (ನಾ). (ಕೊಡಬೇಕಾದ ಬಾಕಿ ಹಣವನ್ನು) ತೆಗೆದುಹಾಕುವುದು ; ಬಿಟ್ಟುಬಿಡುವುದು ; ವಜಾ ಮಾಡುವುದು : ಗ್ರಾಮಮುನಿಷ್ ಕೋರ್ಟಿನಲ್ಲಿ ದಾವಾ ತರಬಹುದಾದಂಥ ಯಾವ ಮೊಬಲಗನ್ನಾದರೂ ವಜಾಮಟ್ಟು ಮಾಡಬೇಕೆಂಬು ದಾಗಿ ಶ್ರುತಿವಾದಿ ಹೇಳಬಹುದು (ಗ್ರಾಮೋ. ೨೯). [<— ಮರಾ. ವಜಾಮಾಟ್]

ವಜೀರ (ನಾ). ೧. ಪ್ರಧಾನಮಂತ್ರಿ ; ಅಮಾತ್ಯ ; ದಿವಾನ : ತಾನಾಳ್ವ ದೇಶದ ಖಾನ ವಜೀರರಂ ಕರಸಿ (ಮೈಲಾ. ೧೫೩೧, ೧-೧೬; 1310); ವಿರುಪರಾಜರಸಿನವರ ಸೇವಕ ವಜೀರ ಮೊನೆಯಾಳು ಮಾಡಿಸ್ತ ಸ್ತಂಭ (ಎಕ. XV.ಅರಕ. ೧೬೬-೨; 1559). ೨. ಕುದುರೆಯ ಸವಾರರ ಮುಖ್ಯಸ್ಥ : ಒತ್ತಿಗೆ ಸೇರಿ ಮೈದಡವಿದ ಸಹನಗೆ ಹತ್ತು ಸಾವಿರ ಟಂಕೆಯನು ಇತ್ತಪೆವೆಂದು ವಜೀರ ಮಲ್ಲಾಕರು ನೋವುತ್ತ ಮನದೊಳೆಯ್ದುವರು (ಕುರಾಪಾಂ. ೯-೬೦); ದಿಟ್ಟಿಸುತ ತುರಗದ ವಜೀರರು ಅಷ್ಟದಿಕ್ಕಿಲಿ ಕವಿದ ಬಲವನು ಕುಟ್ಟಿದರು ಅರಿಭಟರ ಸಿರವರಿದಿಟ್ಟಿರವನಿಯಲಿ (ಖಾಲೀ. ೫೫೧). ೩. ಶೂರ ; ಪರಾಕ್ರಮಿ : ಅತ್ಯದ್ಭುತ ಪರಾಕ್ರಮಶಾಲಿಗಳಪ್ಪ ವಜೀರರ್ಕಳೊಂದಾಗಿಯಪರಿಮಿತ ಸೈನ್ಯಸಮೂಹಸಹಿತಂ ತೆರಳ್ದು (ಕೀನ್ನ. ೨-೮).

[<— ಅರ. ವಝೀರ್; ಹಿಂ. ಮರಾ. ವಜೀರ್]

ವಜೀರಿಕೆ (ನಾ). ೧. ಸಚಿವನಾಗಿರುವಿಕೆ ; ಮಂತ್ರಿತ್ವ ; ದಿವಾನಗಿರಿ. ೨. ಯಾದಮಾನ್ಯ ; ಉಸ್ತುವಾರಿಕೆ : ಹೊಕ್ಕು ಚೆನ್ನಿಸ್ಸನ ವಜೀರಿಕೆ ಲೆಕ್ಕದಲಿ ಹನ್ನೆರಡು ಸಾವಿರ ಕಕ್ಕಸದ ತುರಗಗಳ ದುವ್ಯಾಳಿಸುತ ಹೊಗಲೇರಿ ದಿಕ್ಕು ದಿಕ್ಕಿಲಿ ಹರಿದು ಹೊಡೆದರು ಲೆಕ್ಕವಿಲ್ಲದ ತುರಗದವರನು (ಖಾಲೀ. ೫೫೬). [ವಜೀರ + — ಇಕೆ]

ವಜೀಲ (ನಾ). = ವಜೀರ ೨ : ಪ್ರಧಾನ ಕೇಸರಿಕಾನ ಗೋವೆಯನಾಳುತ ಯದ ನಿಜಾಮುದೀನ್ ಮಲುಕ ಅನೇಕ ವಜೀಲರು ಸಹವಾಗಿ ಗೋವೆಯ ಮುಖದಿಂ ದಂಡೆತಿ ಬಂದು ಮಿಡಿಜೆಯಲ್ಲಿ ಕಾದಿದಲ್ಲಿ (ಕೀ. I, ೬೨-೧೧; 1481).

[IP ಇದು 'ವಜೀರ' ಎಂಬುದರ ಅಪಲಿಖಿತವಿರಬಹುದು]

ವಜೆ 'ವಜನು' ನೋ.

ವಜ್ಜಡ (ನಾ). [ನಾಟ್ಯ] ನೃತ್ಯದ ಗತಿಭೇದಗಳಲ್ಲಿ ಒಂದು : ನಟನ ತಾಂಡವ ನಾಟ್ಯ ಪಟುನೃತ್ಯಲಾಸ್ಯದುತ್ಕಟ ನೇರು ತಿರುಪುರು ಲವಣೆಯೂ ದಿಟಮಂಡಿತ ಕುಂದಲ ಸುಟಿ ಲಾಗ ವೇಗ ಸಂಘಟಿತ ವಜ್ಜಡಗಳ್ ಮಾಳಾಸ ಭರತಮಾತಂಗದ ತಿರುಪು ಭಾಂಡಕ ಕುಹಳರ ಪರಿಯಿಂದಾಡುತಿರಲು (ಭೈರವೇ. ೧-೬೯೪). [?]

ವಜ್ಜನಿ (ನಾ). (?) : ಶ್ರೀಮತ್ ಪಂಚಲದೇವ[ಂ] ಸೆಬ್ಬಿ ಮೂವತ್ತನಾಳುತ್ತ[ಂ] ಎಂಧತ್ತನಾಲ್ವರ್ಗ್ಗಂ ಕಾಲಂ ಕಟ್ಟುಕೊಟ್ಟ ಸ್ಥಿತಿ ರೋಣ[ದ]ಪನ್ನಿರ್ವಱುಗದ್ಯಾಣಂ ಸಿದ್ಧಾಯ ಉಪ್ಪು ತುಪ್ಪ ಕಾಣಂ ರಸಂ ವಜ್ಜನಿಯುಂ (ಇಎ. XII, ೨೫೬-೧೬; 974). [?]

ವಜ್ಜಲು (ನಾ). ತೇವ ; ಕೆಸರು : ಮಜ್ಜಿಗೆಯನು ಹೊತ್ತು ಬರುತಿರೆ ಗೊಲ್ಲಿತಿ ವಜ್ಜಲ [ಪಾಠಾಂ. ವ್ರಜಲ] ಜಾರಿಬೀಳುತಲಿ ಮಜ ಭಾಪುರೆ ಬಸವಯೆನೆ ಪಿಡಿದನು ಸಜ್ಜನೆ ಧರ್ಕೆಯ ಕೊಡನ (ಬಸಪ. ೨-೯೭). 'ಒಜ್ಜಲು' ಪರಾ. [< ಸಂ. ಉದ್ರಲ]

ವಜ್ಜಟ, ವಜ್ಜೆಟ (ನಾ). ಒಬ್ಬ ನೊಳಂಬರಾಜನ ಹೆಸರು : ಪೊಗಟ್ಟೆನೊ ಧಾತ್ರಿಯೊಳ್ನೆಗಳ್ದ ವಜ್ಜಟನಂ ದಿಡೆಯಟ್ಟಿದೇಲ್ಗೆಯಂ (ಎಕ. II, ೫೯-೮೨; 974). ವಜ್ಜೆಟ : ಕಳ್ಳಾನ್ತಕ್ಕುಧಿತಾದ್ಧಿಧಿಷ್ಣಣಬಳಂ ಪಾತಾಳಮಲ್ಲಾನುಜಂ ಜೇತುಂ ವಜ್ಜೆಟದೇವಂ (ಎಕ. II (ಇ), ೬೮೨-೫; ಸು. 10ನೆಯ ಶತ?). [< ಸಂ. ವಜ್ರಟ]

ವಜ್ಜೆ 'ವಜನು' ನೋ.

ವಜ್ರ (ಗು). ೧ ಗಟ್ಟಿಯಾದ ; ದೃಢವಾದ ; ಬಲವಾದ : ಅವುಗಳ ವಜ್ರಮೂತಿಯ ಮೊನೆಯ ಸೊಗಸನ್ನು ಅನುಭವರಸಿಕರೇ ಬಲ್ಲರು (ನಂಬಿ. ೪೪). 'ವಜ್ರಕಾಯ' ಪರಾ. ೨. ಕಠಿಣವಾದ ; ಅಭೇದ್ಯವಾದ : ಈ ವಸುಂಧರಾರಾಜ್ಯಮೋಹಮೆಂಬ ವಜ್ರಲೋಹನಿಗಳಮಂ ಪಱಿಯೆ ಪೊಯ್ದ ರಾಜಕುಂಜರಂಗೆ ನಿನಗಪವರ್ಗಮಾರ್ಗಂ ನಿರರ್ಗಳಮೆ ವಲಂ (ಆದಿಪು. ೯-೬೨ ವ). 'ವಜ್ರಕವಾಟ' ಪರಾ. ೩. ಗಾಢವಾದ ; ಆಳವಾದ : 'ವಜ್ರನಿದ್ರೆ' ಪರಾ. (ನಾ). ೪. ಇಂದ್ರನ ಆಯುಧ ; ವಜ್ರಾಯುಧ ; ಕುಲಿಶ : ಇಳಾತಳದೊಳ್ ಕೆಡೆದತ್ತು ವಜ್ರದಿಂ ಸುರಪತಿ ಪೊಯ್ದ ಬೆಟ್ಟು ಕೆಡೆದಂತೆ ಜಟಾಯು ನಭೋವಿಭಾಗದಿಂ (ಪಂರಾಮಾ. ೯-೧೦೪); ಗಿರಿ ಘನ ವಜ್ರ ಕಿಱಿದೆನ್ನಬಹುದೇ ಬಾರದಯ್ಯಾ (ಬಸವ. ೬). ೫. ದೊಡ್ಡ ಮೋಡಗಳ ಘರ್ಷಣೆಯಿಂದ ಉಂಟಾಗುವ ವಿದ್ಯುದ್ಪ್ರವ್ಯ; ಸಿಡಿಲು; ಅಶನಿ: ಅಂಧಕಾರಪತದ್ವಜ್ರವಿಷಾಭಿಚಾರಿಕಜರಾತಂಕಾದಿ ಭೇದಂಗಳಪ್ಪುವಸರ್ಗಂಗಳಿಂ (ಆದಿಪು. ೧೭-೯); ವಜ್ರಘೋಷಾನಿಷ್ಠುರಭೀಷಣಘೋಷದಿಂ ಚೇದಿನಾಥಂ ಜಗನ್ನಾಥನಂ ನಿರ್ದಾಟಿಸಿ ನುಡಿಯೆಯುಂ (ಜಗವಿ. ೧೭-೪೬ ವ). ೬. ಯಾವುದೇ ವಿನಾಶಕಾರಿಯಾದ ಆಯುಧ — ಅಸ್ತ್ರ. ೭. ನವರತ್ನಗಳಲ್ಲಿ ಒಂದು ; ಹೀರ : ಕರಮಸೆದಿರ್ಪುದಾತತ ಗುಹಾದ್ಯಯವಜ್ರಮಯಿದರೀ ಪ್ರಭಾಪರಿಚಿತಪಾರ್ಶ್ವಮಗ್ರನಿಭೃತಾಂಬುಧರಂ ವಿಜಯಾರ್ಧಭೂಧರಂ (ಚಂದ್ರಪ್ರ. ೬-೨); ಭಂಗವಡೆದಸೆಗುಮವರ ಗೃಹಂಗಳ್ ಮಾಣಿಕದ ಸಂದೆಯಂ . . . ಉಜ್ಜಲಿಸಿ ಪೊಳೆವ ವಜ್ರದ ಬಸಿಲಿಂ (ಸೂತ್ರಪ. ೪-೧೫೧); ವಜ್ರವು ರತ್ನಗಳಲ್ಲಿ · ಶ್ರೇಷ್ಠವಾದ್ದು (ಮುಂಬಯಿ.೪-೧೬೯). ೮. ಸನ್ನೆ ಮೊದಲಾದ ಸಲಕರಣೆಗಳ ತುದಿಯಲ್ಲಿ ಅಳವಡಿಸುವ ಬಹಳ ಗಟ್ಟಿಯಾದ ಸಾಮಗ್ರಿ : ಸನ್ನೆಯ ಮತ್ತೊಂದು ಕೊನೆಯಲ್ಲಿ ಒಂದು ಮೊನಚಾದ ವಜ್ರವಿಯತ್ತದೆ (ಎಕ್ಸಾ. ೨). ೯. ರತ್ನಗಳನ್ನು ಕೊರೆಯಲು ಅಥವಾ ಕೆತ್ತಲು ಉಪಯೋಗಿಸುವ ಸಾಧನ ; ರತ್ನವೇಧಕ ಸೂಜಿ : ಶಲೆಯ ಕಡವೊಡೆ ವಜ್ರ ಭುವನವ ಬೆಳಗುವಡೆ ಮಾರ್ತಾಂಡ ದೈತ್ಯರ ಕುಲವ ಸವೆಯಲು ವಿಷ್ಣು (ಗಗಶಾ. ೧೭-೫೬). ೧೦. ಒಂದು ಬಗೆಯ ಸೇನಾರಚನೆ, —ವ್ಯೂಹ. ೧೧. ಮರಳು, ಸುಣ್ಣ, ಬೆಲ್ಲ, ಅಳಲೆಕಾಯಿ ಮೊದಲಾದುವುಗಳನ್ನು ಗೊತ್ತಾದ ಪ್ರಮಾಣದಲ್ಲಿ ಕೂಡಿಸಿ ಚೆನ್ನಾಗಿ ಅರೆದು ತಯಾರಿಸುವ, ಜಿಗುಟುಳ್ಳ ಗಟ್ಟಿಯಾದ ಒಂದು ಬಗೆಯ ಗಾರೆ : 'ವಜ್ರಗಾರೆ' ಪರಾ. ೧೨. ಪ್ರಾಣಿಗಳ ಚರ್ಮ ಮತ್ತು ಎಲುಬುಗಳನ್ನು ಬೇಯಿಸಿ ತಯಾರಿಸಿದ, ಬಿಸಿಯಲ್ಲಿರುವಾಗ ಬಲವಾಗಿ ಅಂಟಿಕೊಳ್ಳುವ, ಬಡಗಿ ಮುಂತಾದವರು ಉಪಯೋಗಿಸುವ ಒಂದು ಬಗೆಯ ಗಟ್ಟಿಯಾದ ಅಂಟು : 'ಮರವಜ್ರ' ಪರಾ. ೧೩. ಒಂದು ಬಗೆಯ ಮರ ಮತ್ತು ಅದರ ಕಾಯಿ ; ನೆಲ್ಲಿ ; ಆಮಲಕ. ೧೪. ಒಂದು ಬಗೆಯ ದರ್ಭೆ : 'ವಜ್ರಃ — ವಜ್ರ, ಕುಶ' (ಓಷಧಿ. ೧೫೪). ೧೫. ಒಂದು ಬಗೆಯ ಕಳ್ಳಿ ; ಮುಂಡಗಳ್ಳಿ : 'ವಜ್ರಗಳ್ಳಿ' ಪರಾ. ೧೬. ಎಳ್ಳುಹೂವು ; ತಿಲ : 'ವಜ್ರಪುಷ್ಪ' ಪರಾ. ೧೭. ಹದ ಮಾಡಿದ ಕಬ್ಬಿಣ ; ಉಕ್ಕು : 'ವಜ್ರಕವಚ' ಪರಾ. ೧೮. ಒಂದು ನರಕದ ಹೆಸರು : ಐದು ಮಂತ್ರಿನರಕಂಗಳಿಂ ಯುಕ್ತಮಾಗಿ ವಜ್ರವೆಂಬರಸುನರಕವಿಹುದು (ವಿವೇ. ೧೫೩). ೧೯. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಹದಿನೈದನೆಯದು : ವಿಷ್ಕಂಭ ಪ್ರೀತಿ . . . ವಜ್ರ ಸಿದ್ಧಿ . . . ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇ. ೫೬೨). ೨೦. [ಕಾವ್ಯಮೀ] ಪ್ರತಿಮುಖವೆಂಬ ಸಂಧಿಯ ಹದಿಮೂರು ಅಂಗಗಳಲ್ಲಿ ಒಂದು : ವಜ್ರಂ ಪ್ರತ್ಯಕ್ಷನಿಷ್ಠುರಂ — (ಒಬ್ಬನ) ಎದುರಿನಲ್ಲೆ ಆಡುವ ನಿಷ್ಠುರವಾಕ್ಯವು ವಜ್ರ (ದಶರೂ. ೩೭). [ಸಂ.]

ವಜ್ರಕವಚ (ನಾ). ೧. ವಜ್ರಖಚಿತವಾದ ಕವಚ : ವಜ್ರಿ ವಜ್ರಕವಚಕ್ಕೆ ನಿಜೋಜ್ವಳಕುಂಡಳಕ್ಕೆ ಕೆಯ್ಯಾಂತೊಡೆ . . . ಕೊಟ್ಟಂ (ಪಂಪಭಾ. ೯-೬೨). ೨. ಯುದ್ಧದಲ್ಲಿ ಯೋಧರು ಧರಿಸುವ ಗಟ್ಟಿಯಾದ ಹಾಗೂ ಅಭೇದ್ಯವಾದ ಉಕ್ಕಿನ ಕವಚ : ಬಿಲ್ಲು ತೀರು ವಜ್ರಕವಚ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾಧಿಸಾಧನವಿಶೇಷಗಳಿಂದಲು (ವಿವೇ. ೩೬೨). [ಸಂ.]

ವಜ್ರಕವಾಟ (ನಾ). ೧. (ವಜ್ರದ ಅಥವಾ ಉಕ್ಕಿನ) ಅಭೇದ್ಯವಾದ ಕದ ; ದುರ್ಭೇದ್ಯವಾದ ಬಾಗಿಲು : ಒಡವುದೆ ವಜ್ರಕವಾಟಮನಡರ್ವುದೆ ವಿಜಯಾರ್ಧ ಗಿರಿಯಂ . . . ಎಮ್ಮನೆ ಬೆಸಸಾ (ಆದಿಪು. ೧೩-೨೧). ೨. [ವೈದ್ಯ] ಒಂದು ಬಗೆಯ ಚೂರ್ಣ : ವಜ್ರಕವಾಟ — (ಅತಿಸಾರಕ್ಕೆ) — ಜಾಯಿಕಾಯಿ, ಜಾಯಿಪತ್ರಿ ತೊರೆಸಾಣೆಬೇರು, ಕಸಕಸೆ, ಅಜಮೋದ, ಹಿಪ್ಪಲಿ, ಎಲೆಮದ್ದು . . . ಚೂರ್ಣವಂ ಮಾಡಿ . . . ಕಟ್ಟುಮೊಸರು, ಜೇನುತುಪ್ಪದಲ್ಲಿ ಕೊಡಲು ಎಲ್ಲ ಅತಿಸಾರ ತೀರ್ಗುಂ (ಎಚ್ಮಂ. ೪೭). [ಸಂ.]

ವಜ್ರಕಾಂಡ (ನಾ). ೧. ಗಟ್ಟಿಯಾದ ಕಾಂಡ; ದೃಢವಾದ ದಂಟು. ೨. [ಜೈನ] ಷಟ್ಖಂಡಚಕ್ರವರ್ತಿಗೆ ತಾನಾಗಿ ಲಭಿಸಿದ ವಜ್ರದ ಬಿಲ್ಲು : ವಜ್ರಕಾಂಡಮೆಂಬ ಬಿಲ್ಲುಮಮೋಘಮೆಂಬ ಶರನಿಕರಮುಂ . . . ಆತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ (ಆದಿಪು. ೧೫-೩ ವ); ವಜ್ರಕಾಂಡಮೆಂಬ ಚಾಪದಿಂದಂ ಸಿಂಹಾಟಕಮೆಂಬ ಕೊಂತದಿಂದಂ . . . ಚಕ್ರಿಯ ನೋಂತ ನೋಂಪಿಯ ಫಲಕ್ಕಾಂ ಸಂಜ್ಞೆ ಲಕ್ಕಕ್ಕೆ ಕಂಡಱಿಯಿಂ (ಶಾಂತಿಪು. ೧೧-೬೪ ವ). [ಸಂ.]

ವಜ್ರಕಾಯ (ನಾ). ೧. ಬಹಳ ಗಟ್ಟಿಮುಟ್ಟಾದ ದೇಹ ; ದೃಢಶರೀರ. ೨. ವಜ್ರದಷ್ಟು ದೃಢವಾದ ಶರೀರವುಳ್ಳವನು ; ಕಟ್ಟುಮಸ್ತಾದವನು ; ದೃಢಶರೀರಿ : ಗಾಯಗಳಿಲ್ಲದೆ ರಣವನು ಗೆಲುವರೆ ವಜ್ರಕಾಯನೆ ಹೇಗೆ ನೀನು (ಗಂಜಾಪ. ೩೨-೧೦೦). [ಸಂ.]

ವಜ್ರಕೀಟ (ನಾ). ಕಲ್ಲು, ಮರ ಮುಂತಾದುವುಗಳಲ್ಲಿ ತೂತು ಕೊರೆಯುವ ಗಟ್ಟಿಯಾದ ಮೂತಿಯುಳ್ಳ ಒಂದು ಬಗೆಯ ಹುಳು ,—ದುಂಬಿ : ಇಂದ್ರ ನುಪಾಯದೊಳಟ್ಟಿದ ವಜ್ರಕೀಟಂಗಳ್ ಕರ್ಣನೆರದುಂ ತೊಡೆಯುಮಂ . . . ಉರ್ಚಿ ಪೋಗೆಯುಂ (ಪಂಪಭಾ. ೧-೧೦೮ ವ); ಸುರಪತಿಯ ಬೇಳಂಬವನು ವಿಸ್ತರಿಸಲೇತಕೆ ವಜ್ರಕೀಟೋತ್ಕರವ ಕಳುಹಿದರೆನ್ನ ತೊಡೆಗಳನಗಿದವು ಬಳಿಕ (ಕುವಾಕ. ೯-೩೧). [ಸಂ.]

ವಜ್ರಕೀಟಕ (ನಾ). = ವಜ್ರಕೀಟ : ಬಡಿಗುಂ ಕಾಲಂ ಮೆಲ್ಲನೆ ಪಡುಗುಂ ಸುಕ್ಕಿರ್ಕುಮಡರೆ ಸುಯ್ಗುಂ ಕಣ್ಣಂ ಬಿಡುಗು ಮತಿವಿಕಲನಕ್ಕುಂ ಕದಂಗಿ ತಿನೆ ವಜ್ರಕೀಟಕಂ ಬಸಿಱೊಳಗಂ (ಅಶ್ವಶಾ. ೧೧-೩೦). [ಸಂ.]

ವಜ್ರಕುಂಡಲ (ನಾ). ವಜ್ರಖಚಿತವಾದ ಕಿವಿಯ ಆಭರಣ : ಮುದ್ರಸಹಜಾತ ವಿದ್ಧಚ್ಛಿದ್ರಾನ್ವಿತಕರ್ಣಯುಗಳವಾಳಿಗಳೊಳ್ ಸಂವಿದ್ಯುತ್ತರಜಂಗೆ ಹರಿ ವಿಲಸದ್ರುಚಿಮದ್ವಜ್ರಕುಂಡಲಂಗಳನಿಟ್ಟಂ (ಶಾಂತಿಪು. ೧೦-೫೯); ಕಿವಿಯಲಿ ಇಡಿಸಿದನು ನವವಜ್ರಕುಂಡಲವ (ಸಿದ್ಧಪು. ೫-೯೬). [ಸಂ.]

ವಜ್ರಕುಡ್ಯ (ನಾ). ರತ್ನಖಚಿತವಾದ ಗೋಡೆ ,—ಭಿತ್ತಿ : ಕರುಮಾಡಂ ಕಣ್ಗೆವಂದತ್ತಮೃತಕರಶಿಲಾನಿರ್ಮಿತಂ . . . ವಜ್ರಕುಡ್ಯಂ ಹರಿನೀಲಸ್ತಂಭ ಮುದ್ಭಿದ್ರುಮಲಸದರರಂ ಮೌಕ್ತಿಕದ್ವಾರಬಂಧಂ (ರಾಜಶೇ. ೨-೧೩೦). [ಸಂ.]

ವಜ್ರಕ್ಷಾರ (ನಾ). ಒಂದು ಬಗೆಯ ಲವಣ :ವಜ್ರಕ್ಷಾರ — ವಜ್ರಗಳಿಯ ಕೊಂಬು, ಎಕ್ಕೆ, ಉಮ್ಮತ್ತ . . . ತ್ರಿಕಟುಕ, ಇಂಗು, ಉಳ್ಳಿಯಂ ಕೂಡಿ ಅಡುವುದು (ಎಚ್ಮಂ. ೪೭). [ಸಂ.]

ವಜ್ರಗಚ್ಚು (ನಾ). ರತ್ನಗಳನ್ನು ಕುಂದಣಿಸಲು ಬಳಸುವ ಅಂಟು : ''ವಜ್ರಗಳನ್ನು ಅಂಟಿಸಲು ಉಪಯೋಗಿಸುವ ಅಂಟು ; ವಜ್ರಗಚ್ಚು'' (Diamond Cement.ಇಂಕಾ). [ವಜ್ರ + ಗಚ್ಚು]

ವಜ್ರಗಳ್ಳಿ (ನಾ). ಒಂದು ಬಗೆಯ ಕಳ್ಳಿ ; ಮೊಂಡಗಳ್ಳಿ : ವಜ್ರಕ್ಷಾರಃ — ವಜ್ರಗಳ್ಳಿಯ ಕೊಂಬು, ಎಕ್ಕೆ, ಉಮ್ಮತ್ತ . . . ಉಳ್ಳಿಯಂ ಕೂಡಿ ಅಡುವುದು (ಎಚ್ಮಂ. ೪೭). [ವಜ್ರ + ಕಳ್ಳಿ]

ವಜ್ರಗಾರೆ (ನಾ). = ವಜ್ರ ೧೧ : ನಾಲ್ಕುಕಡೆಯ ಗೋಡೆಗಳೂ ಬಿಲ್ಲೆ ಕಲ್ಲುಗಳಿಂದ ಕಟ್ಟಿದ್ದುವು. ಮೇಲೆ ವಜ್ರಗಾರೆ ಹಾಕಿತ್ತು (ಚಿಂಗಾಳ್ವ. ೩೯); ದೇವಾಲಯದ ಗೋಪುರ . . . ಮಾಡುಗಳಲ್ಲಿ ವಜ್ರಗಾರೆಯಿಂದ ಜೋಡಿಸಿದ ಅದ್ಭುತಗಾತ್ರದ ಶಿಲೆಯ ಚಪ್ಪಡಿಗಳನ್ನು ನೋಡಿದರೆ ಇದು ಮಾನವನಿಂದ ಆಗುವ ಕಾರ್ಯವಾಗಿ ಕಂಡುಬರು ವುದಿಲ್ಲ (ದೇವಹಂ. ೪೯). [ವಜ್ರ + ಗಾರೆ]

ವಜ್ರಗಿರಿ (ನಾ). ೧.ವಜ್ರದಿಂದಾದ ಬೆಟ್ಟ ; ವಜ್ರದ ಪರ್ವತ : ನಿನ್ನೀ ಬೆಸಸಿದ ಚಕ್ರಮದೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು ನೀಂ ಬಿನ್ನನಿದೇಕೆರ್ಪೆಯದೆಂತೆನ್ನ ಗೆಲಲ್ ವಜ್ರಗಿರಿಯನಾರ್ಮಮೆ ವಜ್ರಂ (ಆದಿಪು. ೧೪-೧೨೯). ೨. ಒಂದು ಬಗೆಯ ವನಸ್ಪತಿ : ವಜ್ರಗಿರಿಯ ಬೇರಂ ಆಕಳ ಮಜ್ಜಿಗೆಯಲ್ಲಿ ಕೊಳ್ಳಲು ಪಾಂಡುಕಾಮಾಲೆ ಮಾಣ್ಗುಂ (ಎಚ್ಮಂ. ೧೩೦). [ಸಂ.]

ವಜ್ರಘುಟಿಕೆ (ನಾ). ವಜ್ರಕಾಯವನ್ನು ಸಿದ್ಧಿಸುವುದೆನ್ನಲಾದ ಒಂದು ಬಗೆಯ ಗುಳಿಗೆ : ಮುಕ್ತಿಗೆ ದೂರವಾದ ಲಿಂಗಾಂಗಿಗಳ ನೆನಹೆಂಬ ಜೋಡಂ ತೊಟ್ಟು ಅವರ ಕರುಣಪ್ರಸಾದವೆಂಬ ವಜ್ರಘುಟಿಕೆ ಧರಿಸಿ ಗುರುಕರುಣವೆಂಬ ಅಲಗಂ ಪಿಡಿದು ಮುಂಡ ಬಿದ್ದರೂ ತಲೆಯಲ್ಲಿಲ್ಲವೆ (ಸರ್ವಜ್ಞ. ೨೦೩-೯೨೪). [ಸಂ. ವಜ್ರಘುಟಿಕಾ]

ವಜ್ರತನು (ನಾ). = ವಜ್ರಕಾಯ ೨: ಲಂಘನಾಘಾತಮಂ ನಿತ್ತರಿಸುವೆತ್ತರಕೆ ವಜ್ರತನುವೇರ್ದನೆ ಮಹೇಂದ್ರಮಸ್ತಕಕಲ್ಪಮಾ ಶಕುನಿಶಿಲೆಗಾಂಜನೇಯಂ (ತ್ರಿಸಾಮಾ. ೪೦೩-೪). [ಸಂ.]

ವಜ್ರತುಂಡ (ನಾ). ೧. ದೃಢವಾದ ಕೊಕ್ಕು ,—ಚುಂಚು : ವಿನತಾಪುತ್ರನ ವಜ್ರತುಂಡಹತಿಗಂ ಮೆಯ್ಯಾಂತು . . . ನಾಗಾನಂದಮಂ ಮಾಡಿದಂ (ಪಂಪಭಾ. ೪-೨೬). ೨. ಗಟ್ಟಿಯಾದ ಕೊಕ್ಕನ್ನುಳ್ಳುದು ; ಹದ್ದು ; ಗೃಧ್ರ : ಬೆನ್ನ ಶರಧಿಯನೆಳೆಯಲಿಱಗೆ ಜಟಾಯುವಗ್ರಜ ಬಾಣಾತನುವಂ, ಭಟಚ್ಛಟಿಸಿ ಪ್ರಕಟವಾದನು ತಟಿದ್ಗರಿಗಳಿಂ ಗೃಧ್ರಮುಖ ವಜ್ರತುಂಡಂ (ತ್ರಿಸಾಮಾ. ೬೦೧-೪೪). ೩. ಗರುಡ. ೪. ಗಣಪತಿ. ೫. ಸೊಳ್ಳೆ. ೬. [ಜೈನ] ಷಟ್ಖಂಡಚಕ್ರವರ್ತಿಯ ವಶದಲ್ಲಿರುವ ಶಕ್ತ್ಯಾಯುಧ : ವಜ್ರತುಂಡಮೆಂಬ ಶಕ್ತಿಯುಂ ಸಿಂಹಾಟಕಮೆಂಬ ಕೊಂತವುಂ . . . ಆತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ(ಆದಿಪು. ೧೫-೩ ವ); ವಜ್ರತುಂಡಮೆಂಬ ಶಕ್ತಿಯಿಂದಂ ಮನೋವೇಗವೆಂಬ ಕಣೆಯಿಂದಂ . . . ನೆಱೆದೈಶ್ವರ್ಯದ ಮೇಗೆ ವಜ್ರ ಬೆಸದಾಳಂತಾಗಿಯುಂ (ಶಾಂತಿಪು. ೧೧-೬೪ ವ). [ಸಂ.]

ವಜ್ರತೈಲ (ನಾ). (ಚರ್ಮರೋಗಗಳ ನಿವಾರಣೆಗಾಗಿ ಬಳಸುವ) ಒಂದು ಬಗೆಯ ಎಣ್ಣೆ : ವಜ್ರತೈಲವ ತೆಗವರೆ : — ನರವಿಷ್ಕೆ, ಕೊಡಗವಿಷ್ಕೆ, ನರಿಯ ವಿಷ್ಕೆ . . . ಸುದುಪುಟುವಿಷ್ಕೆ ಆ ತೈಲವಂ ತೆಗೆದು ಆ ತೈಲದಿ ದೀಪವಂ ಹೊತ್ತಿಸಿ, ಆ ತೈಲವಂಬುಕ ಹೊಡೆದವರಿಗೆ ಇಡೆ ಒಂದು ನಾಡಿ ಹೋವುದು (ಎಚ್ಮಂ. ೨೧೬).

[< ಸಂ. ವಜ್ರತೈಲ]

ವಜ್ರದಂಡ (ನಾ). ೧. ಬಲವಾದ ಗದೆ : ಆ ವಜ್ರಗದೆಯಿಂದಲೆಱಗಿ ಪೊಡೆದಂ ಕೆಡೆಯೆನುತ್ತಾ ದಧೀಚಿಯಂ ಪಾತಕಂ ಮಿಗೆ ಘಾತಕಂ ಪೊಡೆಯಲಾ ವಜ್ರದಂಡದ ಹತಿಗೆ ದಿವ್ಯಮುನಿಯೊಡಲು ಜಜ್ಜರಿಯಾಗೆ (ವಿಜಪು. ೨-೧೩-೧೯). ೨. (ಇಂದ್ರನ) ವಜ್ರಾಯುಧ : ಬಲಿದು ಪೇರ್ಭಾಗEಪರ್ಬೀಗತಿಮುದ್ರೆಯ ವಜ್ರದಂಡದಿಂ ಬಲಿಸದಂದದಿ ಲಾಳವಂಡಿಗೆಯ ಜಡಿದು (ನವಮೋ. ೨೦-೬). [ಸಂ.]

ವಜ್ರದಂತ (ನಾ). ೧. ದೃಢವಾದ ಹಲ್ಲು ; ಗಟ್ಟಿಯಾದ ದಂತ. ೨. ದೃಢವಾದ ಹಲ್ಲನ್ನು ಹೊಂದಿರುವುದು ; ಬಹಳ ಗಟ್ಟಿಯಾದ ದಂತವನ್ನು ಪಡೆದಿರುವುದು ; ಹಂದಿ ; ವರಾಹ. ೩. ಇಲಿ ; ಮೂಷಕ. ೪. ಒಂದು ಬಗೆಯ ಸಸ್ಯ : ''ಕೇಸರಃ, ವಕುಳಃ — ೨ ಪದಳದ ಹುವ್ವಿನ ಗಿಡ, ವಕುಳವೃಕ್ಷ, ಹಲ್ಲುಮದ್ದು ಗಿಡ, ವಜ್ರದಂತಗಿಡ'' (ಸಿದ್ಧಾಖ್ಯ. ೨೬). [ಸಂ.]

ವಜ್ರದಂತಿ (ನಾ). ಒಂದು ಬಗೆಯ ಸಸ್ಯ : ಹಲ್ಲುಕುರುವಿಗೆ : — ವಜ್ರದಂತಿ, ಹಳೆಯ ಬದನೆಯ ಸೊಪ್ಪು, ಸೈಂಧವಲವಣ ಇವಂ ತೂಕವ ಮಾಡಿ ಇಕ್ಕಲು ಹಲ್ಲು ಕುರುವು ಮಾಣ್ಗುಂ (ಎಚ್ಮಂ. ೧೩೭). [ಸಂ. ವಜ್ರದಂತೀ]

ವಜ್ರದಾಳಿ (ನಾ). ವಜ್ರಖಚಿತವಾದ ಮಾಂಗಲ್ಯ ,—ತಾಳಿ : ತಿಸರಮಿದಾವುದಕ್ಕ ಧರಣೇಂದ್ರನ ಕೊಟ್ಟುದು ವಜ್ರದಾಳಿ ಕಣ್ಗೆಸೆವುದಿದಾವುದು (ಪಂಪಭಾ. ೪-೮೬).

[ವಜ್ರ + ತಾಳಿ (= ತಾಲಿ)]

ವಜ್ರದುಂಬಿ (ನಾ). = ವಜ್ರಕೀಟ : ವಜ್ರದುಂಬಿಗಳು ಹೆಬ್ಬಿದಿರನು ಕೊಱೆವೊಡೆಯುಜ್ಜುಗವೆತ್ತ ರೀತಿಯಲಿ ನಿರ್ಜರವೈರಿಯ ನಿಡಿದೋಳ ಶಿಲೀಮುಖ ವೆಚ್ಚವ ಮಾಡಿ ತೋಲ್ದಿದುದು (ಮೋಹತ. ೩೫-೪೦). [ವಜ್ರ + ತುಂಬಿ]

ವಜ್ರದೇಹ (ನಾ). ಗಟ್ಟಿಯಾದ ದೇಹ ; ದೃಢವಾದ ಶರೀರ. [ಸಂ.]

ವಜ್ರದೇಹಿ (ನಾ). = ವಜ್ರಕಾಯ ೨: ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನೈಕ್ಯನು ಮೆಲ್ಲಮೆಲ್ಲನೆ ಆದಹೆನೆಂಬನ್ನಬರ ನಾನೇನು ವಜ್ರದೇಹಿಯೆ ನಾನೇನು ಅಮೃತವ ಸೇವಿಸಿದೆನೆ (ಬಸವ. ೮೯೬). [ಸಂ. ವಜ್ರದೇಹಿನ್]

ವಜ್ರಧರ (ನಾ). ವಜ್ರಾಯುಧವನ್ನು ಧರಿಸಿದವನು ; ಇಂದ್ರ : ವಜ್ರಧರಂ ಸೆಱೆಗೆಯ್ದು ಪುಷ್ಕಳಾವರ್ತ ಘನಾಘನಂಗಳವೊಲಂಜನಕಾಂತಿಗಳುಗ್ರದಂತಿಗಳ್ ಮಾರ್ತುಡುಗಿಲಗವೇಟನೆಯಮಂ ತಡವಂದಮನಾಂತು ಕಂಭದೊಳ್ (ಪುಷ್ಪಪು. ೨-೫೭); ಜಂಭನ ಜಸದ ಝಾಡಿಗೆ ಬೆದಱದಿರಹ ವಜ್ರಧರನಂತೆ ಪಸರಿಸಿದ ಪರಿವಾರಮಧ್ಯದೊಳ ಸಮಬಲ ಹೊಳಕಿದನು . . . ಕಲಿಭೀಮ (ಕುಮಾಪ. ೭-೩೨). [ಸಂ.]

ವಜ್ರನಿದ್ರೆ (ನಾ). ಗಾಢವಾದ ನಿದ್ದೆ : ಘನಿತಮೌನಂ ವಜ್ರನಿದ್ರೆಯಿಂದೆಳ್ದವರೊ ಪೇಳಂಬೊಲಾ ಬಂಡೆ ಬಿದ್ದಿದ್ದುವಲ್ಲಲ್ಲಿ (ಶ್ರೀರಾಮಾ. ೩೭೪-೬೯). [ಸಂ. ವಜ್ರನಿದ್ರಾ]

ವಜ್ರನಿರ್ಘೋಷ(ನಾ). ಸಿಡಿಲಿನ ಜೋರಾದ ಶಬ್ದ ,—ಆರ್ಭಟ : "ಸಿಡಿಲ ಧ್ವನಿ (ವಜ್ರನಿರ್ಘೋಷಃ) ಸ್ಫೂರ್ಜಥುವೆಂಬುದು" (ಶಕಾಯು. ೧೧-೫೭). [ಸಂ.]

ವಜ್ರನೀಲಿ (ನಾ). ಒಂದು ಬಗೆಯ ಔಷಧೀಸಸ್ಯ : ವಜ್ರನೀಲಿಯ ಬೇರಿನ ತಿಗುಡನು, ಚಿಲ್ಲದ ಬೀಜ ೧೦ನು ಸಹ ಹಾಲು ಶರ್ಕರೆಯಲ್ಲಿ ಬೆರೆಸಿ ಕೊಡಲು ೮ ದಿನಕ್ಕೆ ಬಹುಮೂತ್ರ ಮಾಣುವುದು (ಸಕವೈ. ೩೭೫). [ಸಂ. ವಜ್ರನೀಲೀ]

ವಜ್ರಪಂಜರ (ನಾ). ೧. (ಪಶು,ಪಕ್ಷಿ ಮುಂತಾದುವುಗಳನ್ನಿಡುವ) ಬಹಳ ದೃಢವಾದ ಗೂಡು ; ಗಟ್ಟಿಯಾದ ಪಂಜರ : ನೆಲಸಿರ್ದ ವಜ್ರಪಂಜರಮಳಱುವಿನಂ ಪಾಯ್ದು ಸಿಂಧುರಾರಾತಿಯನುಜ್ಜಳತನುವನಭ್ರಪಥದತ್ತ ಲಂಘಿಸಲ್ಕಿರ್ದುದಂ ಚಮೂಪತಿ ಕಂಡಂ (ಆದಿಪು. ೧೬-೪೫). ೨. (ಆಲಂ) ಬಲವಾದ ರಕ್ಷಣೆ , ದೃಢವಾದ ಆಶ್ರಯ ; ಭದ್ರವಾದ ನೆಲೆ : ಅಂಜಿದರಂ ನಿಜಬಾಹುವಜ್ರಪಂಜರದೊಳಗಿಟ್ಟು ಕಾವ ಹರಿನನ್ನನಂ (ಸೌಂದ. XX, ೭೪-೧೫; 1112); ಅಂಜಿದರಾಗದು ಅಳುಕಿದರಾಗದು ವಜ್ರಪಂಜರದೊಳಗಿದ್ದರಾಗದು ತಪ್ಪದುವೋ ಲಲಾಟಲಿಖಿತ (ಬಸವ. ೬೦೭). [ಸಂ.]

ವಜ್ರಪಾತ (ನಾ). ಸಿಡಿಲಿನ ಹೊಡೆತ ,—ಪೆಟ್ಟು : ಆ ವಜ್ರಪಾತದಿಂ ಮೇಲೆವೇಟ್ಟಪೆನಱಿದು ಪೇಟಲುಂ ಕೇಳಲುಮಿನ್ನಾವಂಗಮೆನಶ್ಚಾಶ್ಚರ್ಯಾ ವಹಮೊಂದಾದುದಾಗಳದನುಸಿರ್ದಪ್ಪೆಂ (ಕಾದಂಬ. ೧೩೪); ಪಿಗತಪುರುಷಾಕಾರಂ ಭಾಗ್ಯಾನರ್ಥವಜ್ರಪಾತಸಂತಪ್ತಮಾನಮಾನಸನುಂ . . . ಆಗಿ (ಚಂದ್ರಪ್ರ. ೫-೯ ವ). [ಸಂ.]

ವಜ್ರಪುಷ್ಪ (ನಾ). ಎಳ್ಳುಹೂವು ; ತಿಲಪುಷ್ಪ : "ವಜ್ರಪುಷ್ಪಂ, ತಿಲಸ್ಯಯತ್ಪುಷ್ಪಂ - ಎಳ್ಳುಹೂವಿನ ಹೆಸರು" (ಕ್ರಾಂತಿ.೧೦೯). [ಸಂ.]

ವಜ್ರಬಯಿಸಣಿಗೆ, ವಜ್ರಬೈಸಣಿಗೆ, ವಜ್ರಬೈಸನಿಗೆ, ವಜ್ರಭಸಣಿಗೆ, ವಜ್ರವೈಸಣಿಗೆ (ನಾ). (?); IP ನಖರರು ಅಂದರೆ ವರ್ತಕರು ಸೇರುವ ಸಭೆಗೆ ಅಥವಾ ಅಂತಹ ಸಭೆಯಲ್ಲಿ ಹಿರಿಯರಾದವರು ಅಲಂಕರಿಸುತ್ತಿದ್ದ ಪೀಠಕ್ಕೆ ಈ ಹೆಸರಿರಬಹುದು ಅಥವಾ ಅಂತಹ ಸಭೆಯ ಗೌರವವನ್ನು ಸೂಚಿಸುವ ಸಾಧನವಿಶೇಷವಾಗಿರಲೂಬಹುದು : ಹರಿಹರದಲು ವಜ್ರಬಯಿಸಣಿಗೆಯಾಗಿ ಕುಳ್ಳಿರ್ದ ಮಹದೇವರಾಯ ಲಕ್ಷ್ಮೀನಾರಾಯಣ ದೇವರಿಗೆ ಕೊಟ್ಟ ಆಯವಾಯದ ಕ್ರಮವೆಂತೆಂದಡೆ (ಎಕ. XI, ದಾವಣ. ೫೯-೬೯; 1280). ವಜ್ರಬೈಸಣಿಗೆ : ವಜ್ರಬೈಸಣಿಗಿ(ಗೆ)ಯಾಗಿ ಕುಳ್ಳಿರ್ದು ತಂಮ ಸಮಯಾಚಾರದ ತೇಜಮನುದ್ಧರಿಸುವ ರಾಯಶ್ರೇಷ್ಠಿಯಪ್ಪ ಚಾಮುಂಡರಾಜ ಮಾಡಿಸಿದ ತ್ರಿಕೂಟ [ಪ್ರಾಸಾದ]ಕ್ಕೆ (ಎಇ. XIX, ೨೫-೬೨; 1245). ವಜ್ರಬೈಸನಿಗೆ : ಮಹಾವಡ್ಡ ವ್ಯವಹಾರಿಯ ವಜ್ರಬೈಸನಿಗೆ . . . ಇತ್ಯಾದಿ ರಾಜಲಾಂಛನಗಳು . . . ಶೋಭಿಸುತ್ತಿದ್ದವು (ರೂಲೇಖಾ. ೨೫೬). ವಜ್ರಭಸಣಿಗೆ : ಆ ನಾಡಪ್ರಭು ವಿನಾಯಕದೇವರಲಿ ವಜ್ರಭಸಣಿಗೆಯನಿಕ್ಕಿ ಎಲೆಯಾರ ಪೋಚಸೆಟ್ಟಿಯರ ಚಲುವಾಡಿ ಮಲಿಸೆಟಿಗೆ ಕೊಟ್ಟ ತೇಜ (ಮೈಕಾ ೧೯೫, ೧೧೯-೧೫;?). IP ಇಲ್ಲಿ ಬಂದಿರುವ 'ವಜ್ರಭಸಣಿಗೆ ಎಂಬುದು 'ವಜ್ರಭಸಣಿಗೆ'ಯ ಅಪಲಿಖಿತ. ವಜ್ರವೈಸಣಿಗೆ : ಶ್ರೀವಿರೂಪಾಕ್ಷದೇವರ ದಿವ್ಯಶ್ರೀಪಾದಪದ್ಮದ ಸನ್ನಿಧಿಯಲಿ ವಜ್ರವೈಸಣಿಗೆಯನಿಕ್ಕಿ ಕುಳ್ಳಿರ್ದು (ಎಕ. V, ಬೇಲೂರು ೭೫-೬೮;?). [ವಜ್ರ + ಬಯಿಸಣಿಗೆ]

ವಜ್ರಬೈಸಣಿಗೆ 'ವಜ್ರಬಯಿಸಣಿಗೆ' ನೋ.

ವಜ್ರಬೈಸನಿಗೆ 'ವಜ್ರಬಯಿಸಣಿಗೆ' ನೋ.

ವಜ್ರಭಸಣಿಗೆ 'ವಜ್ರಬಯಿಸಣಿಗೆ' ನೋ.

ವಜ್ರಮಕುಟ (ನಾ). ರತ್ನಖಚಿತವಾದ ಕಿರೀಟ ,—ಶಿರೋಭೂಷಣ : ವಜ್ರಮಕುಟದ ಹೊಳಹುಗಳ ಹೊಗೆ ಮಿಸೆಗೆದರಿನ ಬಿರುದಿನುಬ್ಬಟೆಯ . . . ರಾವ್ತರ ಗಡಣ ನಾಲಗೆದಳೆದುದೆನೆ ಹೊಳೆಹೊಳೆವಡಾಯುಧದ ಭಟರು ನೂಕಿದರು (ಕುಮಾರ್ಯೋ. ೫-೭೧). [ಸಂ.]

ವಜ್ರಮಹೋತ್ಸವ (ನಾ). ಸಂಘ, ಸಂಸ್ಥೆ ಮುಂತಾದುವುಗಳಿಗೆ ಅರುವತ್ತು ವರ್ಷ ತುಂಬಿದಾಗ ಆಚರಿಸುವ ಉತ್ಸವ ,—ಹಬ್ಬ : ಸಾಹಿತ್ಯಪರಿಷತ್ತಿನ ವಜ್ರಮಹೋತ್ಸವದ ಸಂದರ್ಭದ ನೆನಪಿಗಾಗಿ 'ವಜ್ರಮಹೋತ್ಸವಭವನ'ವನ್ನು ಕಟ್ಟಿದ್ದಾರೆ (ರೂಢಿ). [ಸಂ.]

ವಜ್ರಮುಷ್ಟಿ (ನಾ). ೧. ಬಿಗಿಯಾದ ಹಿಡಿ ; ಬಲವಾದ ಮುಷ್ಟಿ. ೨. ಒಂದು ಬಗೆಯ ಆಯುಧ : ವಜ್ರಮುಷ್ಟಿಯ ಪೊಯ್ದೊಳಂ ಬಾಣ ಕೋಳೊಳಮುಚ್ಚಳಿಸಿದ ಕಪಾಲದೋಡುಗಳಂ ಗಂಗೆಗಟ್ಟುತ್ತುಂ, ಮುಸುಂಡಿ ಬಿಂಡಿವಾಳ ವಜ್ರಮುಷ್ಟಿ ಮುದ್ಗರ ಚಕ್ರಪ್ರಾಪರಶುತೋಮರ ಪಾಶಾಂಕುಶಾದಿ ಶಸ್ತ್ರಾಸ್ತ್ರಂಗಳೊಳೆಚ್ಚುಮಿಚ್ಚುಮಿಱಿದುಂ ಪೊಯ್ದು . . . ಕಾದುವಾಗಳ್ (ಪಂಂರಾಮಾ. ೧೩-೭೬ ವ); ಬರಿಕೈಯ ಲೌಡಿಯ ವಜ್ರಮುಷ್ಟಿಗಳ ನಾಳಿವಿಲುಗಳ ರಾಯಜೋಧರ ಮೇಳವಣಿಗಳ ಚಿತ್ರಗತಿ ಶುಂಡಾಲವನು ನೋಡಿದರು ಗಜಸೇನಾಸಮುದ್ರದಲಿ (ಕುಮಾಭಾ. ೧೧-೧೯). ೩. ವಜ್ರಾಯುಧವನ್ನು ಧರಿಸಿದವನು ; ಇಂದ್ರ. ೪. (ಆಲಂ) ಬಿಡಿಸಿಕೊಳ್ಳಲಾರದಂತಹ ಬಲವಾದ ಹಿಡಿತ ,—ಅಂಕೆ : ಗೊತ್ತಿಲ್ಲದೆ ಸಾವಿನೆಡೆಗೆ ಅವರು ಜಾರಿದ್ದರು. ಅದರ ವಜ್ರಮುಷ್ಟಿಯಲ್ಲಿ ಸಿಕ್ಕಿದ್ದರು (ಸಮಚಿ. ೬೬೯). ೫. ಬಲವಾದ ಕಟ್ಟುಪಾಡು ,—ನಿಯಮ ,—ನಿರ್ಬಂಧ : ನಾಟ್ಯನಿಬಂಧನೆಗಳ ವಜ್ರಮುಷ್ಟಿಯಿಂದ ತನ್ನ ಪ್ರತಿಭೆಯನ್ನು ಬಿಡಿಸಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ (ಕಾವ್ಯಸ. ೨೧). [ಸಂ.]

ವಜ್ರಯೋಗ (ನಾ). [ಜ್ಯೋತಿ] ಲಗ್ನ ಮತ್ತು ಸಪ್ತಮಸ್ಥಾನಗಳಲ್ಲಿ ಶುಭಗ್ರಹಗಳೂ, ಚತುರ್ಥ ಮತ್ತು ದಶಮಸ್ಥಾನಗಳಲ್ಲಿ ಪಾಪಗ್ರಹಗಳೂ ಇರುವ ಯೋಗ : ಉದಯದೊಳಸ್ತದೊಳ್ ನಿಲೆ ಶುಭಗ್ರಹಮುಗ್ರಗಣಂ ಚತುರ್ಥಕರ್ಮದೊಳಿರೆ ವಜ್ರಯೋಗಮದು (ಜಾತಕ. ೧೩-೬); ವಜ್ರಯೋಗಕ್ಕೆ ತನೂ ೬ ಗಳಿಗೆ ಮೇಲೆ ತ್ಯಾಜ್ಯಾ (ಭಾಸ್ಕರ. ೭೦-೪). [ಸಂ.]

ವಜ್ರಲೇಪ (ನಾ). ಗಟ್ಟಿಯಾಗಿ ಅಂಟಿಕೊಳ್ಳುವ ಲೇಪನದ್ರವ್ಯ : ಉರದಿಂ ಪೆರ್ಮೊಲೆ ಬೆಂಗೆ ಮೂಡೆ ಬೆಮರಂಬುಂ ವಜ್ರಲೇಪಂಬೊಲಾಗಿರೆ ಕೀಲ್ಗೊಟ್ಟ ಬೆಡಂಗನೀಯೆ ಪುಳಕಂ ತೋಳ್ ತಳ್ತು ಗಂಟಿಕ್ಕಿದಂತಿರೆ (ಜಗವಿ. ೧೧-೬೦); ಪಾಪ ಹೋಯಿತು ಎಂದು ಸೋಪಾನಗಳನೇಱೆ ಕೋಪಕರ್ಮಗಳ ಬಿಡದಿರೆ ಅದು ವಜ್ರಲೇಪದಂತಿಹುದು (ಸರ್ವಜ್ಞ. ೯೩೧). [ಸಂ.]

ವಜ್ರವಹ್ನಿ (ನಾ). ಸಿಡಿಲಿನಿಂದುಂಟಾಗುವ ಬೆಂಕಿ : ಮೇರುಗಿರಿಯಂ ಮರಳೊತ್ತುವ ವಜ್ರವಹ್ನಿಯಂ ತಳದೊಳಗಿರ್ದಿಲ್ಲಾಗೆ ಪೊಸೆದಿಕ್ಕುವ ಸಿಂಗದ ಕೇಸರಂಗಳಂ ಸೆಳೆವಳವಂ ಸಮಂತು ತಳೆದಂ ರಣದೋಹಳನಾ ಕುಮಾರಕಂ (ಚಂದ್ರಪ್ರ. ೬-೨೮). [ಸಂ.]

ವಜ್ರವಿಡಿ (ನಾ). ಬಲವಾದ ಹಿಡಿತ ; ಬಿಗಿಯಾದ ಪಟ್ಟು : 'ವಜ್ರವಿಡಿವಿಡಿ' ಪರಾ. [ವಜ್ರ + ಪಿಡಿ$_2$]

ವಜ್ರವಿಡಿವಿಡಿ (ಕ್ರಿ). ಬಲವಾದ ಹಿಡಿತವನ್ನು ಹಿಡಿ ; ಬಿಗಿಯಾದ ಪಟ್ಟನ್ನು ಹಿಡಿ : ಒಂದೆಡೆಯೊಳ್ ಹಿಂಡನಗಲ್ದು ಗಂಡುಗೆದಱಿ ವಜ್ರವಿಡಿ[ವಿ]ದುದು ಬಿಗಿಬಿಗಿದು ಬಳೆದ ದೇಹಂಗೊಂಡಷ್ಟಾಂಗಪುಷ್ಟವಾಗಿ . . . ಕೈಪಱಿದ ದಂತಿ ಕಾಡೊಳ್ ಪೊಕ್ಕಂತೆ ಹೆಜಮೆಟ್ಟಿ ನಡೆನಡೆದು (ನಂದಿರ. ೧೮-೧೦). [ವಜ್ರವಿಡಿ + ಪಿಡಿ$_1$]

ವಜ್ರವೈಸಣಿಗೆ 'ವಜ್ರಬಯಿಸಣಿಗೆ' ನೋ.

ವಜ್ರಹತಿ (ನಾ). ವಜ್ರಾಯುಧದ ಹೊಡೆತ ,—ಪೆಟ್ಟು : ನಿಷ್ಠುರತೆಗಲ್ಲದೆ ಮನವನೀಯದು ಮಹಿಯ ಮೂಢಜನ . . . ವಜ್ರಹತಿಗಬ್ಬರಿಸಿದಲ್ಲದೆ ಗಿರಿಗಳೊಡೆಯವು (ಕುಮಾಭಾ. ೯-೪೫). [ಸಂ.]

ವಜ್ರಪರೀತಕೀಲೇಹ್ಯ (ನಾ). (ಅಳಲೆಕಾಯಿಯನ್ನು ಸೇರಿಸಿ ತಯಾರಿಸುವ) ಒಂದು ಬಗೆಯ ಲೇಹ್ಯ : ವಜ್ರಪರೀತಕೀಲೇಹ್ಯ - ಚಿತ್ರಮೂಲದ ಸೊಪ್ಪಿನ ರಸ ೮ ಹಲ, ಗಂಟುಭಾರಂಗಿ, ಬಜೆ, ಶುಂಠಿ . . . ಇವನ್ನೆಲ್ಲ ಕಷಾಯವ ಮಾಡಿಸಿ ಲೇಹ್ಯಪಾಕದಲ್ಲಿಳುಹಿ ತ್ರಾಣವರಿತು ದಿನಂಪ್ರತಿಯೂ ಪ್ರಾತಃಕಾಲಫಲ್ಲಿ ಸೇವಿಸೆ ಗ್ರಹಣಿ, ಅಗ್ನಿಮಾಂದ್ಯ, ಆಮಶೂಲೆ, ಗುಲ್ಮಶೂಲೆ, ಮಹೋದರ, ಗೆಂಡೆ ಇವೆಲ್ಲ ಪರಿಹರಮಕ್ಕುಂ (ಸಚಿಕ್ಷ. ೩೪೧). [ಸಂ.]

ವಜ್ರಹಸ್ತ (ನಾ). ೧. ಬಲಿಷ್ಠವಾದ ಕೈ : ಅರ್ಜುನನ ಮುಖವನ್ನು ಇಂದ್ರನು ಪ್ರೇಮದಿಂದ ತನ್ನ ಪುಣ್ಯಗಂಧವುಳ್ಳ ಕೈಯಿಂದ ತಡವುತ್ತ . . . ಅವನ ತೋಳುಗಳನ್ನು ತನ್ನ ವಜ್ರಹಸ್ತದಿಂದ ಮತ್ತೆ ಮತ್ತೆ ತಟ್ಟುತ್ತ . . . ನೋಡಿ ಸಂತೋಷಿಸುತ್ತ ಇದ್ದನು (ವಚಭಾ. ೧೨೬). ೨. ವಜ್ರಾಯುಧವನ್ನು ಧರಿಸಿದವನು ; ಇಂದ್ರ. [ಸಂ.]

ವಜ್ರಹಳಿ (ನಾ). (ಕುದುರೆಯ ಗೊರಸಿಗೆ ಹಾಕುವ) ಗಟ್ಟಿಯಾದ ಲೋಹದ ಸಾಧನ, — ಲಾಳ : ಹೊಸ ವಜ್ರಹಳಿವೆತ್ತ ರಥವಾಜಿನಿಚಯ . . . ಸಂದಳಿಸಿತು ಬಿಳರಾಯನೊಡನೆ (ಮೋಕತ. ೪೦-೬). [ವಜ್ರ + ಹಳ್ಳಿ (< ಪಟ್ಟಿ)]

ವಜ್ರಾಂಗ (ನಾ). ೧. ಗಟ್ಟಿಯಾದ ದೇಹ ; ದೃಢವಾದ ಶರೀರ. ೨. ದೃಢವಾದ ಶರೀರವುಳ್ಳವನು : ಇದು ಚಿತ್ರಂ ವಜ್ರಾಂಗಂಗೆ ದೃಢೀಕೃತಮಾ ದ್ರವಪ್ರಭಾವಂ ನಿಸ್ನೇಹದವಂಗೆ ಭುವನಭವನಪ್ರದೀಪಕತೆ ನಿನಗೆ ಜಿನ ಜಗತ್ತ್ರಯಮಿತ್ರಾ (ಚಂದ್ರಪ್ರ. ೭-೧೨). ೩. ಹಾವು ; ಸರ್ಪ. [ಸಂ.]

ವಜ್ರಾಂಗಿ$_1$ (ನಾ). ೧. ದೃಢವಾದ ದೇಹವುಳ್ಳವನು. ೨. = ವಜ್ರಕವಚ ೨: ವಿವಿಧವಜ್ರಾಂಗಿಗಳ ಸೀಸಕ ಕವಚಗಳ ತೊಟ್ಟತುಳಬಲರೇಱಿದರು ತೇಜಿಗಳ (ಕುಮಾಧೀ. ೪-೫೦); ಬಿಗಿದ ವಜ್ರಾಂಗಿ ಬತ್ತಳಿಕೆಯಿಂ ಇರದುಳಿದ ಸದಳಿಗರ ಸಾಧನಸಮಗ್ರಮುಂ . . . ಪರಿಶೋಭಿಪಿಡಿದು ರಂಜಿಸುತಿರ್ದುದು (ಚಿಬಪು. ೪೧-೫೬). [ಸಂ. ವಜ್ರಾಂಗಿನ್]

ವಜ್ರಾಂಗಿ$_2$ (ನಾ) ಒಂದು ಬಗೆಯ ವನಸ್ಪತಿ : "ಕಂಜಃ, ಪಾರಾವಾರಃ — ಈ ಎರಡು ವಜ್ರಾಂಗಿ" (ನಾಚಿರಾ. ೧೩೪). [ಸಂ.ವಜ್ರಾಂಗೀ]

ವಜ್ರಾಕರ (ನಾ). ವಜ್ರದ ಗಣಿ : ಆ ವಾಹಿನೀವ್ಯೂಹಂ . . . ವಜ್ರಾಕರದಂತ ನೇಕಪಮಿತತಿವಿಳಸಿತಮುಂ ಲಂಕಾಧಿಪತಿಯಂತತಿಪ್ರಬಲಬಾಹಾವಳೀವಳಯಿತಮುಂ . . . ಎನಿಸಿ (ಚಂದ್ರಪ್ರ. ೧೦-೩೦ ವ). [ಸಂ.]

ವಜ್ರಾಗ್ನಿ (ನಾ). = ವಜ್ರವಹ್ನಿ : ಗಿರಿದುರ್ಗಕ್ಕುಗ್ರವಜ್ರಾಗ್ನಿ ಕಾನನದುರ್ಗಕ್ಕೆ ಮಹಾದವಾಗ್ನಿ . . . ಎನೆ ತನ್ನುದ್ಯತ್ಪ್ರತಾಪಾಗ್ನಿ ನೀಱ್ದೆನಸುಂ ಪರ್ವಿ ವಿಗುರ್ವಿಸಲ್ ನೃಪಸುತಂ ವಿಕ್ರಾಂತಮಂ ತೋಱಿದಂ (ಪುಷ್ಪಪು. ೫ ೫೦). [ಸಂ.]

ವಜ್ರಾಘಾತ (ನಾ). ೧. ಸಿಡಿಲಿನ ಹೊಡೆತ, — ಪೆಟ್ಟು. ೨. (ಆಲಂ) ಆಕಸ್ಮಿಕ ಘಟನೆಯಿಂದ ಉಂಟಾಗುವ ಆಘಾತ : ಭಗತ್‌ಸಿಂಗ್‌ನ ರಕ್ಷಣೆಯ ಯೋಜನೆಗೆ ವಜ್ರಾಘಾತವಾದಂತಾಯಿತು (ಆತ್ಮಾರ್ಪ. ೧೪೫); ಈ ಸುದ್ದಿಯನ್ನು ಕೇಳಿ ಅವನ ಬಾಲಹೃದಯದ ಮೇಲೆ ವಜ್ರಾಘಾತವೇ ಆದಂತಾಯಿತು (ರಂಗರೂ. ೧೯೧). [ಸಂ.]

ವಜ್ರಾಭಿಘಾತ (ನಾ). ೧. = ವಜ್ರಾಘಾತ ೧. ೨. = ವಜ್ರಾಘಾತ ೨: ವಜ್ರಾಭಿಘಾತಾಭೀಳನಿಷ್ಠುರರೊದಗಿದರು ಕೌರವವ್ರಕೋದರರು (ಕುಮಾಗ. ೭-೧). [ಸಂ.]

ವಜ್ರಾಯುಧ (ನಾ). ೧. ದೃಢವಾದ ಆಯುಧ, —ಶಸ್ತ್ರ. ೨. ಇಂದ್ರನ ಆಯುಧ ; ಕುಲಿಶ : ಮಱೆದು ವಜ್ರಾಯುಧದ ಕೊನೆಯಲಿ ತುಜುಗಿಯ್ಯೆರಾವತದ ಮೇಲಕೆ ತೆಜನಱಿಯದಲೆ ಕೊಂಡು ಕುಂಭಸ್ಥಳಕೆ ಹಾಕಿದನು (ಸಂಭವ. ೫-೬೫); ಅವನು ಯಥೇಚ್ಛವಾಗಿ ಸೋಮಪಾನ ಮಾಡಿ, ತನಗಾಗಿಯೇ ತ್ವಷ್ಟೃವು ತಯಾರಿಸಿದ ವಜ್ರಾಯುಧವನ್ನು ಬೀಸುತ್ತಾ . . . ಯುದ್ಧಕ್ಕೆ ಹೊರಟು (ಭಾರದ. ೨೧). ೩. ಇಂದ್ರ ; ದೇವೇಂದ್ರ. [ಸಂ.]

ವಜ್ರಾವಲಂಬಿ (ನಾ). ೧. ವಜ್ರಾಯುಧಧಾರಿಯಾದ ಇಂದ್ರ. ೨. ವಜ್ರವೆಂಬ ರತ್ನಗಳನ್ನು ಹೊಂದಿರುವುದು. ೧,೨: ಆ ಮಹಾರ್ಣವಂ . . . ವಜ್ರಾವಲಂ [ಪಾಠಾಂ. ಳಂ]ಬಿಯಾಗಿಯುಂ ಕುಲಶೈಲಪಾನಸ್ವಭಾವಯುಕ್ತಮುಂ . . . ಎನಿಸಿದುದು (ಜಗವಿ. ೧-೪೪ ವ). [ಸಂ. ವಜ್ರಾವಲಂಬಿನ್]

ವಜ್ರಾಸನ (ನಾ). ೧. ರತ್ನಖಚಿತವಾದ ಪೀಠ. ೨. [ಯೋಗ] ಒಂದು ಬಗೆಯ ಆಸನ : ನಾವು ನಮ್ಮ ಎಡದ ಹಿಂಬಡವನ್ನು ವೃಷಣ ಗುದಗಳ ಮಧ್ಯದಲ್ಲಿರುವ ಆಧಾರಚಕ್ರದಲ್ಲಿಯ ಸುಷುಮ್ನೆಗೆ ಒತ್ತಬೇಕು . . . ಈ ಕವಿಗಳು ಎಡದ ಹಿಂಬಡವನ್ನು ಒತ್ತಲು ಹೇಳಿರುವರು. ಆದರೆ ಜ್ಞಾನೇಶ್ವರರು ಬಲದ ಹಿಂಬಡವನ್ನು ಒತ್ತಲು ಹೇಳಿರುವರು, ಅದನ್ನವರು ವಜ್ರಾಸನವೆಂದು ಕರೆದಿರುವರು (ಪರಪ. ೯೫). ೩. [ವಾಸ್ತು] ದೇಹದ ಮತ್ತು ಅಡ್ಡಹಾಯಿಸಿದ ಪಾದಗಳ ಮಧ್ಯದ ಕುಳಿಯಲ್ಲಿ ಕೈಗಳನ್ನು ಮೇಲ್ಮುಖವಾಗಿ ಇರಿಸಿ ಕುಳ್ಳಿರಿಸಿದ ಆಕೃತಿಯ ಭಂಗಿ : 'ವಜ್ರಾಸನಸ್ಥ' ಪರಾ. [ಸಂ.]

ವಜ್ರಾಸನಸ್ಥ (ನಾ). ೧. ವಜ್ರಾಸನವನ್ನು ಹಾಕಿ ಕುಳಿತುಕೊಂಡ ವ್ಯಕ್ತಿ. ೨. ವಜ್ರಾಸನದ ಭಂಗಿಯಲ್ಲಿ ಆಸೀನಗೊಂಡ ಮೂರ್ತಿ, —ವಿಗ್ರಹ : ಎಲ್ಲರೂ "ವಜ್ರಾಸನಸ್ಥ" ರಾದರೂ, ಅವರವರ ಭಂಗಿಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ (ಭಾರದ. ೫೧೪). [ಸಂ.]

ವಜ್ರಾಸ್ತ್ರ (ನಾ). ೧. ಇಂದ್ರನ ಆಯುಧ; ವಜ್ರಾಯುಧ; ಕುಲಿಶ. ೨. ಇಂದ್ರನ ವಜ್ರಾಯುಧದ ಶಕ್ತಿಯುಳ್ಳ ಒಂದು ಬಗೆಯ ಮಂತ್ರಾಸ್ತ್ರ ; ಐಂದ್ರಶರ : ಪರ್ವತಕೆ ವಜ್ರಾಸ್ತ್ರ ತಿಮಿರದ ಹಬ್ಬುಗೆಗೆ ರವಿಬಾಣ ಹಾವುಗಳೊಬ್ಬುಳಿಗೆ ಗರುಡಾಸ್ತ್ರವನು ಗಂಧರ್ವಪತಿಯೆಚ್ಚ (ಕುಮಾಅ. ೧೯-೩೫); ಅರ್ಜುನನು . . . ವಜ್ರಾಸ್ತ್ರದಿಂದ ಸಂಶಪ್ತಕರ ಸೇನೆಯನ್ನೆಲ್ಲಾ ಪುಡಿಗುಟ್ಟಿ ಭೀಮಸೇನನ ಸಹಾಯಕ್ಕೆ ಬಂದನು (ವಚಭಾ. ೨೮೨). [ಸಂ.]

ವಜ್ರಾಸ್ಥಿ (ನಾ). ದೃಢವಾದ ಮೂಳೆ ; ಬಲಿಷ್ಠವಾದ ಎಲುಬು : ದಧೀಚಿ . . . ತಪವಿರಲ್ಕಗೆವನಿತಕೆಯ್ತಂದು ಶಿವನೆಂದನೆಲೆ ಮುನಿಪ ನಿನ್ನಿಷ್ಟವಾವುದೆನೆ ದೇವ ದುಷ್ಟನ ಜಯಿಸಲು ಅವಯವದೊಳೆನಗೆ ವಜ್ರಾಸ್ಥಿಯಂ ಪಾಲಿಸೆನೆ (ವೀಶೈವು. ೨-೧೩ ೨೪). [ಸಂ.]

ವಜ್ರಿ$_1$ (ನಾ). ೧. ವಜ್ರಾಯುಧವನ್ನು ಧರಿಸಿದವನು ; ದೇವೇಂದ್ರ : ವಜ್ರಿ ವಜ್ರಕವಚಕ್ಕೆ ನಿಚ್ಚೋಜ್ವಳಕುಂಡಳಕ್ಕೆ ಕೆಯ್ಯಾಂತೊಡೆ . . . ಕೊಟ್ಟುಂ (ಪಂಪಭಾ. ೯-೬೨); ಆಯ್ತು ವಜ್ರಿಗಾಸನಕಂಪಂ (ಪುಷ್ಪಪು. ೯-೫೦). ೨. [ಜೈನ] ಹದಿನಾರನೆಯ ತೀರ್ಥಂಕರನಾದ ಶಾಂತೀಶ್ವರನ ಒಂದು ಹೆಸರು : ನೆಱೆದೈಶ್ವರ್ಯದ ಮೇಗೆ ವಜ್ರಿ ಬೆಸದಾಳಂತಾಗಿಯುಂ ಕಲ್ಪಮಂ ನೆಱೆಯಭ್ಯಂತರಸಿದ್ಧಿಯಂ ಪಡೆಯಂ (ಶಾಂತಿಪು. ೧೧-೮೫ ವ). ೩. [ಬೌದ್ಧ] ವಜ್ರಯಾನವೆಂಬ ಪಂಥದ ಒಬ್ಬ ದೇವತೆ : ಇಲ್ಲಿ ಬರುವ 'ವಜ್ರಿ' ಅಥವಾ 'ವಜ್ರಾ' ಬೌದ್ಧಧರ್ಮದ ವಜ್ರಯಾನದ ಆರಾಧ್ಯ ದೇವತೆಗಳಲ್ಲೊಬ್ಬಳು (ಕತಾಅ. ೧೧೭). [ಸಂ. ವಜ್ರಿನ್]

ವಜ್ರಿ$_2$ (ನಾ). ಒಂದು ಬಗೆಯ ವನಸ್ಪತಿ ; ಮೊಂಡಗಳ್ಳಿ : "ಮಹಾತರು ವಜ್ರಿಯೆಂದೊಡೆಲೆಗಳ್ಳಿಯಕ್ಕು" (ಮಂಗರಾ. ೪೧-೩೪); "ಗೋಧೂಮಃ — ಗೋಧಿ, ವಜ್ರಿ, ಕ್ಷಾರ" (ಓಷಧಿ. ೫೦). [ಸಂ. ವಜ್ರೀ]

ವಜ್ರೀ (ನಾ). ೧. ಒಂದು ಬಗೆಯ ಸಸ್ಯ ; ಕಳ್ಳಿಗಿಡ. ೨. ಒಂದು ಬಗೆಯ ಸಸ್ಯ ; ಅಮೃತಬಳ್ಳಿ. ೩. ಎಳ್ಳಿನ ಗಿಡದ ಹೂವು. ೪. ಹದಮಾಡಿದ ಕಬ್ಬಿಣ ; ಉಕ್ಕು. ೫. ನೇಗಿಲಿನ ತುದಿಗೆ ಸೇರಿಸುವ ಉಕ್ಕಿನ ಮೂತಿ : ನಿಷಧದ ವಿದೇಹದ ಜಿತ್ತೆEತ್ತೆಯ ವಜ್ರೀಯ ಮೊಲೆಯ ಕೆಚ್ಚಲ . . . ಕೂಟದಂತೆ ಮಹಾಪುರುಷರ ಸಮ್ಯಕ್ತ್ವದೊಳಾದ ಕೂಟಮುಮತಿಶಯಮೆಂದುಂದುರುಳಿ ಭಟ್ಟಾರಕರ ಸಮ್ಯಕ್ತ್ವಕ್ಕೆ ಮೆಚ್ಚಿ (ಧರ್ಮಾಮೃ. ೫-೧೯೯). [ಸಂ. ವಜ್ರಾ]

ವಜ್ರೋತ್ಸವ (ನಾ). = ವಜ್ರಮಹೋತ್ಸವ : ಶಾಲೆಯ ವಾರ್ಷಿಕೋತ್ಸವ, ರಜತೋತ್ಸವ, ಸುವರ್ಣೋತ್ಸವ, ವಜ್ರೋತ್ಸವ, ಶತಮಾನೋತ್ಸವ ಮುಂತಾದ ಸ್ಮಾರಕಗಳನ್ನು ಆಚರಿಸುವುದು (ಶಿಕ್ಷಣ. ೩೨೦). [ಸಂ.]

ವಜ್ರೋಳಿ (ನಾ). [ಯೋಗ] ಶರೀರವನ್ನು ದೃಢವಾಗಿಯೂ ಅಭೇದ್ಯವಾಗಿಯೂ ಮಾಡುವ ಒಂದು ಬಗೆಯ ಸಿದ್ಧಿ : ಈ ಪ್ರಕ್ರಿಯೆಗಳಿಂದ ವಜ್ರೋಳಿಯೆಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ವಜ್ರೋಳಿಯಿಂದ ಶರೀರವು ವಜ್ರದಂತೆ ಅಚ್ಛೇದ್ಯ ಮತ್ತು ಅಭೇದ್ಯ ವಾಗುವುದು (ಕರ್ನಾಸಂ. ೧೨೪). [ಸಂ. ವಜ್ರೋಲೀ = ಒಂದು ಬಗೆಯ ಅಂಗುಲಿ ವಿನ್ಯಾಸ]

ವಜ್ಜೆಟಿ 'ವಜ್ಜಟಿ' ನೋ.

ವಟ್ಟ[1] (ನಾ). (ವಿಶೇಷವಾಗಿ ಕಪ್ಪೆಯ ಧ್ವನಿಗೆ ಅನ್ವಯಿಸುವ ಮತ್ತು ಅಸ್ಪುಟವಾಗಿ, ಅರ್ಥರಹಿತವಾಗಿ ಶೀಘ್ರವಾಗಿ ತನಗೆ ತಾನೆ ಮಾತನಾಡುವುದನ್ನು ಸೂಚಿಸುವ) ಒಂದು ಅನುಕರಣ ಶಬ್ದ : 'ವಟಗುಟ್ಟು' ಪರಾ.

ವಟವಟ (ದ್ವಿರುಕ್ತಿ): ಕಪ್ಪೆಗಳ ವಟವಟಧ್ವನಿಯನ್ನು ಕೇಳಿದಾಗ ನೆಕ್ಕುದೋವನಿಗೆ . . . ಸಂಗೀತದ ನೆನಪಾಯಿತು (ಪುಸು. ೨೬೭); ನಿನ್ನ ವಟವಟ ಮಾತು ನಿಲ್ಲಿಸಮ್ಮಾ (ಮೂಯದಾ. ೪೭).

ವಟ್ಟ[2] 'ವಟ್ಟ'ನೋ.

ವಟ್ಟ[3] (ನಾ). ೧. ಒಂದು ಬಗೆಯ ಮರ ; ಆಲ : ಹಿಮವದ್ಗಿರೀಂದ್ರ ತಟನಿಕಟವರ್ತಿಗಳಪ್ಪಗಸ್ತ್ಯ ವಟಮುಂ ವಸಿಷ್ಠಪರ್ವತಂಗಳೆಂಬ ತೀರ್ಥಂಗಳೊಳೋಲಾಡುತ್ತುಂ . . . ಮೂಡಣದೆಸೆಗೆ ವಂದು (ಪಂಪಭಾ. ೪-೧೫ ವ); ಮಹಾಟವಿಯ ವಟವರಶಿರಾಗ್ರದೊಳೆರೆ ಜಟಾಯು ನೋಡಿದನ್ . . . ಮಿವರಂ ಮನುಜರಂ, ಪಂಚವಟ್ಟಭಿಮುಖಿಗಳಂ(ಶ್ರೀರಾಮಾ. ೧೪೪-೧). ೨. ಹುರಿ ; ಹಗ್ಗ : "ಕೋಲುಕಣ್ಣಿಗಳು ವಟುರಂ ವಟಮೆನಿಕ್ಕು" (ಮಂಗಾ. ೧೧೨-೫). ೩. ಚಿಕ್ಕಗುಳಿಗೆ ; ಸಣ್ಣಗೋಳ. ೪. ಒಂದು ಬಗೆಯ ತಿನಿಸು ; ವಡೆ. ೫. ಕವಡೆ. ೬. ಸಮಾನತೆ ; ಸಾದೃಶ್ಯ. ೭. ಗುಂಡಾಗಿರುವ ಆಕಾರ ; ವರ್ತುಲ. ೮. ಕಾಮ ; ಮನ್ಮಥ. ೯. ಆನೆಯ ಮದಜಲ. ೧೦. ಎಂಜಲು ; ಉಚ್ಛಿಷ್ಟ : "ಮದನಂ ತರು ಸರವಾನಿಯ ಮದ ವುಚ್ಛಿಷ್ಟಮೆದು ಶಬ್ದ ವಟಮಕ್ಕುಂ" (ನಾಸಾಂ. ೧೨೨); "ಮದಪೋಚ್ಛಿಷ್ಟಮದಂ ಕುಜಾತವಿವರಂ ನಾದಂ ವಟಾಖ್ಯಾನಮುಂ" (ನಾಸಾರ. ೯೭). [ಸಂ.]

ವಟಕ (ನಾ). ೧. ಗುಳಿಗೆ ; ಮಾತ್ರೆ : ತಾಳೀಶವಟಕ–ತಾಳೀಸಪತ್ರೆ, ಮೆಣಸು, ಶುಂಠಿ, ಹಿಪ್ಪಲಿ, ತವಕ್ಷೀರ . . . ಪುಟಪಾಕಂಗೈದು ತಾರೆಕಾಯಷ್ಟು ವಟಕಂ ಮಾಡಿ ನಿತ್ಯವೂ ಒಂದು ವಟಕವಂ ಸೇವಿಸೆ . . . ದಾಹಜ್ವರ, ವಾಂತ್ಯಾತಿಸಾರ, ಮೂಲವ್ಯಾಧಿ, ಮೊದಲಾದುವೆಲ್ಲವೂ ಮಾಣ್ಗುಂ (ಸಚ್ಚ. ೨೬೪); ಕವಳದ ಕಷ್ಟಿ ಶುಂಠಿ ಗಂಟುಭಾರಂಗೀ ಕಟುಕರೋಹಿಣಿ ಇವಂ ಚೂರ್ಣಿಸಿ ಹಳೆಬೆಲ್ಲ ಬೆರಸಿ ವಟಕವ ಮಾಡಿಕೊಡುವುದು (ದ್ರಾವ್ಯಾಚಿ. ೬-೬). ೨. ತುತ್ತು; ಕವಳ. ೩. ಒಂದು ಬಗೆಯ ತಿನಿಸು; ವಡೆ. ೪. ಎಂಟು ಮಾಷುಗಳ ಒಂದು ತೂಕ. [ಸಂ.]

ವಟಗುಟ್ಟು (ಕ್ರಿ). ವಟವಟ ಎಂದು ಶಬ್ದಮಾಡು ; ಅರ್ಥರಹಿತವಾಗಿ ಗೊಣಗುಟ್ಟು : ಕುಳಿತ ಕಡೆಯಿಂದಲೇ ಮುದುಕಿ ವಟಗುಟ್ಟಿದಳು (ಕಬ್ಬಿಕಾ. ೭೭); ಅವನಿಗೆ ಬಾಯಮುಚ್ಚಿಕೊಂಡಿರಲು ಆಗದೆ ಕಪ್ಪೆಯಂತೆ ಏನೇನೋ ವಟಗುಟ್ಟುತ್ತಾ ನನ್ನನ್ನು ಹಾಸ್ಯಮಾಡುತ್ತಿದ್ದ (ಶಾಲಿವಿ. ೬೯). [ವಟ್ಟ + ಕುಟ್ಟು]

ವಟಗುಡು (ಕ್ರಿ). = ವಟಗುಟ್ಟು : ಅಲ್ಲಿಯೇ ಸುಬವಾಗಿ ಬಿದ್ದಿರಬಹುದೆಂದು ವಟಗುಡುತ್ತಿದ್ದಳು (ನಾಚಿ. ೪೫); ಅವರು ತೀರ ಹುಚ್ಚನಂತೆ . . . ಮೂಯದಿನ ವಟಗುಡುತ್ತ ಸುತ್ತಾಡಿದರು (ಸ್ಮಾಚ. ೬೨). [ವಟ್ಟ + ಕುಡು (< ಕೊಡು)]

ವಟಪೂರ್ಣಿಮೆ (ನಾ). ಜ್ಯೇಷ್ಠಮಾಸದ ಹುಣ್ಣಿಮೆ ; ಪ ಮುತ್ತೈದೆಯರು ಸಾವಿತ್ರೀದೇವಿಯನ್ನು ಕುರಿತು, ಆಲದ ಮರವನ್ನು ಪೂಜಿಸುವ ದಿನ : ಜ್ಯೇಷ್ಠಶುದ್ಧಹುಣ್ಣಿವೆಗೆ ವಟಪೂರ್ಣಿಮಾ ಎಂದು ಹೆಸರು (ಭಾಹಬ್ಬ. ೦೮).

[ಸಂ. ವಟಪೂರ್ಣಿಮಾ]

ವಟರ (ಗು). ೧. ಕೆಡುಕನಾದ ; ದುಷ್ಟನಾದ. (ನಾ). ೨. ಕಳ್ಳ ; ಚೋರ. ೩. ಮೂರ್ಖ. ೪. ಹಗ್ಗ ; ರಜ್ಜು : "ಕೋಲುಕಣ್ಣಿಗಳು ವಟುರಂ ವಟಮೆನಿಕ್ಕು" (ಮಂಗಾ. ೧೧೨-೫). ೫. ಗಂಡುಹೋಳಿ ; ಹುಂಜ. ೬. ಬಟ್ಟೆ ; ವಸ್ತ್ರ. ೭. ಚಾಪೆ. ೮. ಪೇಟ. ೯. ಕಡೆಗೋಲು ; ಮಂತು. ೧೦. ಸುವಾಸನೆಯುಳ್ಳ ಒಂದು ಬಗೆಯ ಹುಲ್ಲು. [ಸಂ.]

ವಟವಟಿಸು (ಕ್ರಿ). = ವಟಗುಟ್ಟು : ಗಂಗವ್ವ . . . ಅತ್ತ ಇತ್ತ ಹೋದಂತೆ ಮಾತಿವಳು. ಏನೋ ವಿಚಾರಿಸಿದಳು. ವಟವಟಿಸಿದಳು (ಅಹಿಂಚ. ೧೨೯); ನಾಡೋಡಿಯವರು . . . ಕಟಕಟನೆ ಹಲ್ಲು ಕಡಿದು ಬಾಯಿಯಿಂದ ಏನೋ ವಟವಟಿಸಿಕೊಂಡರು (ಕಾಬಚೂ. ೨೪).

[< ವಟ್ಟ + − ಇಸು]

ವಟಸಾವಿತ್ರೀವ್ರತ (ನಾ). ಜ್ಯೇಷ್ಠಮಾಸದ ಶುಕ್ಲಪಕ್ಷದ ಪೌರ್ಣಿಮೆಯಂದು ಮುತ್ತೈದೆಯರು ಮುತ್ತೈದೆತನದ ಭದ್ರತೆಗಾಗಿ ವಟವೃಕ್ಷವನ್ನು ಪೂಜಿಸುವ ವ್ರತ: ಸಾವಿತ್ರಿಯಂತೆ ತಾವೂ ದೀರ್ಘಸುಮಂಗಲಿಯರಾಗಬೇಕೆಂದು ಮುತ್ತೈದೆಯರು ವಟಸಾವಿತ್ರೀವ್ರತವನ್ನು ಆಚರಿಸುತ್ತಾರೆ (ಭಾಹಬ್ಬ. ೯೧). [ಸಂ.]

ವಟಾಣಿ 'ಬಟಾಣಿ' ನೋ.

ವಟಾಯಿಸು (ಕ್ರಿ). ೧. ಹುಂಡಿ, ಚೆಕ್ಕು ಮೊದಲಾದುವುಗಳನ್ನು ವಟ್ಟವನ್ನು ಕೊಟ್ಟು ಮುರಿಸು : ಬಿಲ್ಲನ್ನು ಅವರು ಮುಂಚಿತವಾಗಿ ವಟಾಯಿಸುತ್ತಾರೆ (ಲಾಲಪ್ರ. ೧, ೮೯೭); ಹುಂಡಿಗಳನ್ನೂ ಚೆಕ್ಕುಗಳನ್ನೂ ವಟಾಯಿಸುವ ನೆವದಿಂದ ನನ್ನ ಬೊಕ್ಕಸವನ್ನೆಲ್ಲ ಬರಿದಾಗಿ ಮಾಡಿದೆ? (ಏಭಿಷ. ೧೯೧). ೨. ಒಂದು ದೇಶದ ನಾಣ್ಯಕ್ಕೆ ಬದಲಾಗಿ ಬೇರೆ ದೇಶದ ನಾಣ್ಯವನ್ನು ಕೊಡು ,—ವಿನಿಮಯ ಮಾಡು : ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪ್ರವೇಶಿಸುವಾಗ ವಿರ್ಚಗೆ ನಮ್ಮ ಕೈಯಲ್ಲಿದ್ದ ಪ್ರಯಾಣಿಕರ ಚೆಕ್ಕುಗಳನ್ನು ವಟಾಯಿಸುವ ಬೇಂಕರರು ಗಡಿಯಲ್ಲಿ ಸಿಕ್ಕಿ ನಮಗೆ ಆಯಾಯ ದೇಶದ ಹಣವನ್ನು ಕೊಡುವರು (ಪ್ರವಾಸಿ. ೧೨೯).

[< ವಟಾವ + − ಇಸು]

ವಟಾರ 'ವಟ್ಟಾರ' ನೋ

ವಟಾವ (ನಾ). ನಾಣ್ಯವನ್ನು ಇತರ ನಾಣ್ಯಕ್ಕೆ ವಿನಿಮಯ ಮಾಡಿಕೊಡಲು ತೆಗೆದುಕೊಳ್ಳುವ ದಲಾಲಿಹಣ ; ವಟ್ಟ ; ಕಮಿಷನ್ನು : ನಜರಾಣೆ ಎರಡು ಮೋಹರು ಇಲ್ಲದಿದ್ದರೆ ನಾನು ಕೊಡುತ್ತೇನೆ, ಮೂವತ್ತೈದು ರೂಪಾಯಿ ಹಾಗೂ ಎರಡು ರೂಪಾಯಿ ವಟಾವ (ಕುಂಹೊ.೫೭). [<— ಮರಾ. ವಟವ, ವಟಾವ]

ವಟಿ (ನಾ). ೧. ಆಲದ ಮರ ; ವಟವೃಕ್ಷ : ಆ ಸಚವನಿಂತು ನಿರ್ಮಲಚಿತ್ತದಿಂ ಬೆಸಸಲಾ ಸುಮಶರನರಸಿ . . . ಕೇಳಿ ತಿಳಿದು ತನ್ನಿಂ ಪಡೆದ ವಟಿಯ ಸಮಗ್ಗೆದು ವಲಿದು (ಸಮೋ. ೮-೫೪). 'ಕಿಮ್ಮವಟಿ' ಪರಾ. ೨. ಹುರಿ ; ಹಗ್ಗ : "ತಂತ್ರಿ ಗುಣಂ ವಟಿ" (ಮತ್ತತೋ. ೫೧-೬೫). [ಸಂ. ವಟೀ]

ವಟಿಕೆ (ನಾ). ೧. ಗುಳಿಗೆ ; ಮಾತ್ರೆ. ೨. ಚದುರಂಗದಾಟದಲ್ಲಿ ಕನಿಷ್ಠನಡೆಯ ಕಾಯಿ ; ಪೇದೆ. ೩. = ವಟಿಕ ೩. [ಸಂ. ವಟಿಕಾ]

ವಟು (ನಾ). ೧. (ಚಿಕ್ಕವಯಸ್ಸಿನ) ಬಾಲಕ ; ಹುಡುಗ ; ಮಾಣಿ : "ವಟುಃ, ಮಾಣವಕಃ – ಈ ೨ ಮಾಣಿ" (ಹಕಾಯು. ೬೩-೬೪೦). ೨. ಉಪನಯನ ಹೊಂದಿದ ಹುಡುಗ ; ವೇದಾಧ್ಯಯನ ಮಾಡುವ ಬ್ರಹ್ಮಚಾರಿ : ಇಂದ್ರಂ . . . ವಟುವಾಕೃತಿಯೊಳ್ ಬೇಡಿದನಾ ಸಹಜಕವಚಮಂ ಕುಂಡಳಮಂ (ವಂವಭಾ. ೧ ೧೦೦); ವಟು ಮರದುದ್ಭವಾದಂ . . . ಕರಂ ಬಳೆದಂ ಮನದಂತೆ ವಾಮನಂ (ಅರ್ಧನೇ. ೬-೨೪).

[ಸಂ.]

ವಟುಕ (ನಾ). ೧. = ವಟು ೧: ಆ ವಟುಕನುಂ ಹೊಯ್ದು ತಾಗಿದ ಠಾವನೊಯ್ಯನೆ ಮುಟ್ಟಿ ನೋಡುತ್ತಾವಗಂ ನಡುನಡುಗಿ (ಬೀಸಪು. ೫೧-೬). ೨. = ವಟು ೨: ವನಧಿಮೇಖಲೆಯೊಳೇ ಬ್ರಹ್ಮಬಂಧುವ ಕಂಡು . . . ಅನುವಿಡಿದು ವಟುಕ ಬಾಡಬರೆಡೆಯಲನಿತಿನಿತು ಶ್ರುತ್ಯಾದಿಗಳ ಕಲಿತನು (ವಂಕಾರಾ. ೫-೨೧-೪೩); ಎಲ್ಲೆ ಭಾಗಪುಚ್ಛನೆಂಬ ವಟುಕನೇ , ಶಕಟದಾಸನೂ ಸಿದ್ಧಾರ್ಥಕನೂ ಎಲ್ಲಿ ಹೋಗಿರುವರೋ, ಹಿಡಿದು ತರುವಂತೆ ಬಾಗುರಾಯಣನಿಗೆ ಹೇಳಿ ಬಾರೆಂದೆನಲು (ಮುದ್ರಾಮಂ. ೩೦೩). [ಸಂ.]

ವಟ್ಟಸುಳಿ 'ವಟ್ಟೃಸುಬಿ' ನೋ.

ವಟ್ಟ[1], **ವಟ್ಟ**[2], **ವಡ್ಡ**[2] (ನಾ). ೧. ಕೊಡಬೇಕಾದ ಮೊತ್ತದಿಂದ ಪೋತಮಾಡಿದ ಮೊಬಲಗು ; ಸೋಡಿ ; ತಳ್ಳುಪಡಿ : ವಿಶೇಷ ವಟ್ಟ ಕೊಟ್ಟು ನಾನು ಹಣವನ್ನು ತರಬೇಕಾಗಿ ಬಂತು (ಗಲಿಪ್ರ. ೭೮); ಮಟ್ಟು (discount) ಕೊಟ್ಟರೆ ಸುಮಾರು ಎಲ್ಲ ದೇಶದ ಹುಂಡಿಗಳನ್ನು ಕೊಳ್ಳಲು ಸಿದ್ಧರಾಗಿರುವರು (ಹಣಪ್ರ. ೭೧). ೨. ಸಾಲ ಕೊಡುವವನು, ಹಣ ಕೊಡುವಾಗ ಅಸಲಿನಿಂದ ಮುರಿದುಕೊಳ್ಳುವ ಹಣ,—ಬಡ್ಡಿ ; ಉತ್ತಾರ : ನೂಜೆಪ್ಪತಯ್ದು ಪೊನ್ನುಂ ಮಾಜೊಪ್ಪವುದರ್ಕೆ ವಟ್ಟಮಿಷ್ಟೂ ವಡ್ಡಂ ಮೂಜುಂ ವೀಸಮೆನಲ್ಕೇಟ್ಟುಜುಂ ಪೊನ್ನಮ್ಮುಲಿದು ತಾವೆನಿತಕ್ಕುಂ (ವ್ಯವಹಾ. ೨೭ ೧೨); ಲೆಕ್ಕ, ಬರಹ, ಕ್ರಯ, ಬಡ್ಡಿ, ವಟ್ಟ . . . ವಡ್ಡದ

ಮುಂಬಾಡಿ, ಪಚ್ಚಯರತಿ ಮೊದಲಾದವಂ ಬೇಱೆ ಬೇಱೆ ಲಕ್ಷಿಸಿ (ಏವೇಕ. ೮). ೩. ಒಂದು ನಾಣ್ಯವನ್ನು, ಅದಕ್ಕಿಂತ ಕಡಮೆ ಬೆಲೆಯ ನಾಣ್ಯಗಳಿಗೆ ಪರಿವರ್ತಿಸುವಾಗ, ಚಿಲ್ಲರೆ ಕೊಡುವವನು ಮುರಿದುಕೊಳ್ಳುವ ಹಣ : ಪಟ್ಟಣದೊಳು ಜನ ಕೊಟ್ಟ ಹೂವನೆಡೆವಟ್ಟ ಬಾಹಿರವಟ್ಟವೆಂದು ದಿಟ್ಟತನದೆ ಪೆಸರಿಟ್ಟು ವಟ್ಟವ ಕೊಂಬ ಸೆಟ್ಟಿಗಳಿರುತಿಹರಲ್ಲಿ (ಅಂಚಪ. ೩-೮೩); ಸಲ್ಲದ ಹೊನ್ನಿಗೆ ವಟ್ಟವಿಲ್ಲ (ಗಾದೆ). ೪. ಒಂದು ಬಗೆಯ ತೆರಿಗೆ : ಹಂನೆರಡಱ ಬಳಿಯ ಪಿರಿಯ ಪೆಂಬಱೆತಿಯ ವಟ್ಟಂ ಪಾರಿಕಾಯಮುಮಂ . . . ದೇವರಂಗಭೋಗಕ್ಕೆ ಧಾರಾಪೂರ್ವಕಂ ಮಾಡಿ ಕೊಟ್ಟರ್ (ಕೈಇ. ೫೭-೪೪-೧೯; 1170); ಹೊಂಬಳಿ ಮಗಮೆ ವಟ್ಟ ಕಟ್ಟಿಗೆ ಸಹ ಸರ್ವಾಬಾಧೆಪರಿಹಾರವಾಗಿ ಸರ್ವಮಾನ್ಯವಾಗಿ ಆಚಂದ್ರತಾರಕವಾಗಿ ಭೋಗಿಸೂದೆಂದು . . . ಕೊಟ್ಟ ತಾಮ್ರಶಾಸನ (ಮೈಅಂ. ೧೯೩೩, ೨೩-೪೯; 1384). 'ದೇವರಾಯವಟ್ಟ', 'ನಾಡುವಟ್ಟ' ಪರಾ. ೫. (ಯಾವುದಾದರೂ ಕಾರ್ಯಕ್ಕಾಗಿ) ಜಮೀನು ಮುಂತಾದುವುಗಳಲ್ಲಿ ಪಾಲನ್ನು ಅಥವಾ ಆದಾಯವನ್ನು ಬಿಟ್ಟು ಕೊಡುವುದು: 'ಬಿತ್ತುವಟ್ಟ' ಪರಾ. ೬. (ವ್ಯಾಪಾರದಲ್ಲಿ) ಮಧ್ಯಸ್ಥಿಕೆಯಿಂದ ಬರುವ ಲಾಭ ; ದಳ್ಳಾಳಿತನದಿಂದ ದೊರೆಯುವ ಹಣ ; ದಲ್ಲಾಳಿ. ೭. ತಕ್ಕಡಿಯ ತಟ್ಟೆಗಳ ಸಮತೋಲನಕ್ಕಾಗಿ ಹಾಕುವ ಹೆಚ್ಚಿನ ತೂಕ ; ಪೇರು ; ಕಾಣಿ : ತಕ್ಕಡಿಗೆ, ತೂಗುವ ಮುನ್ನ ವಟ್ಟ ಹಾಕು (ರೂಢಿ). ೮. ವ್ಯಾಪಾರದಲ್ಲಿ ಸಿಗುವ ಲಾಭ : ವಟ್ಟ ಇಲ್ಲದ ವ್ಯಾಪಾರ ಸೆಟ್ಟಿಗೇಕೆ? (ರೂಢಿ). ೯. ವ್ಯಾಪಾರದಲ್ಲಿ ಕೊಡುವ ಕೊಸರು,—ಹೆಚ್ಚು : ವ್ಯಾಪಾರದಲ್ಲಿ 'ವಟ್ಟ' (Extra) ಎಂಬುದು ಬೆಲೆಯಿಲ್ಲದೆ ಸಲ್ಲುವ ಹೆಚ್ಚಿನದು (ಸಂಕೋಧ. ೨೭). ೧೦. ನಷ್ಟ ; ಹಾನಿ : ಉಟ್ಟುದಂ ಬಿಗಿದೆಯ್ದಿ ಬಾ ಮುಸುಕಿಟ್ಟೆನುತ ಪೊಡಗೊಂಡು ಹೋದಡೆ ವಟ್ಟವೇ ನಿನಗೆನುತ ಮಂದಿಯೊಳು ಹುಗದಿರೆನುತ (ಬಸಪು. ೫-೩೩). ವಟ್ಟ$_2$: ೪. 'ಕಟಳೆವಟ' ಪರಾ. ವಡ್ಡ$_2$: ೧೧. (?) : ಅಂಗಡಿಯ ಬಡಗಣಾಳಿಗೆ ವಡ್ಡದಿಂ ಬಡಗಣಪುರದ ಕೇರಿಯುಮಂ ಸರ್ವನಮಶ್ಯಂ ಸರ್ವಬಾಧಾಪರಿಹಾರಮಾಗಿ ಕೊಟ್ಟರ್ (ಎಕ. VII, ೨ಕಾರಿ. ೧೫೧-೬೬; 1047).

[< ಪ್ರಾ. ವಟ್ಟಾ./ ಹಿಂ. ಮರಾ. ಬಟ್ಟಾ./ ತಮಿ. ವಟ್ಟು]

ವಟ್ಟಂಡೆಱು (ಕ್ರಿ). (ತೂಕ ಸಮವಿಲ್ಲದಾಗ, ತಕ್ಕಡಿಯ ಪರಡಿಗೆ ಹಾಕುವ ಕಾಣಿಯನ್ನು) ಸಮತೋಲನಕ್ಕಾಗಿ ಕೊಡು,—ನೀಡು : ವಟ್ಟಂದೆತ್ತುದು ಬೆಳ್ಳಿಯ ಬೆಟ್ಟಂ ಬಣ್ಣಿಂಗನಿಪ್ಪ ಕೋಟಶಿಲೆಯಂ ಬಟ್ಟಾಡಿದ ಬಾಹಾಬಲವಿಟ್ಟಳವೆಂಟನೆಯ ಕೇಶವಂಗಿದಿರಂಟೆ (ಪಂಪಾಮಾ. ೧೨-೬೮). [ವಟ್ಟ + ತೆಱು]

ವಟ್ಟಪಟ್ಟೆ (ನಾ). ವ್ಯಾಪಾರದಲ್ಲಿ ಕೊಡುವ ರಿಯಾಯತಿ ಅಥವಾ ಸೋಡಿಯ ವಿಷಯವನ್ನು ನಮೂದಿಸಿರುವ ಪತ್ರ : ಬರೆದ ಪತ್ರಗಳೂ ಖರೀದಿಯ ಮತ್ತು ಮಾರಾಟದ ಪಟ್ಟಿಗಳೂ ವಟ್ಟಪಟ್ಟಿಗಳೂ ಕಾಪಿಬುಕ್ಕಿನಲ್ಲಿ ಛಾಪಿಸುವದು (ಮುಂಬಾಮ್ಹಾ. ೨೭೯). [ವಟ್ಟ + ಪಟ್ಟಿ]

ವಟ್ಟಳೆ (ನಾ). ಭಾಗ ; ವಿಭಾಗ (?): ಅಕ್ಕಾಮ್ಬಿಕಾಪುರವೆನ್ದು ಅಗ್ರಹಾರವನು ಮಾಡಿ ಇಪ್ಪತ್ತುಯೆರಡು ವೃತ್ತಿಯ ವಟ್ಟಳೆಯನೂ ಮಾಡಿ ಬ್ರಾಹ್ಮರು ಧಾರೆಯೆನೆಱದು ಕೊಟ್ಟ ವೃತ್ತಿಗಳ ಗಣ ಸಂಖ್ಯೆಯ ವಿವರ (ಎಕ. VIII, ತೀರ್ಥಹ. ೨೧೮-೪೩; 1515). [?]

ವಟ್ಟಾರ$_1$, ವಟಾರ, ವಟ್ಟರ, ವಠಾರ, ವಠ್ಠಾರ (ನಾ). ೧. (ದೇವಸ್ಥಾನ, ಶಾಲೆ, ಮಠ, ಆಸ್ಪತ್ರೆ, ಮನೆ ಮೊದಲಾದುವುಗಳ) ಅಂಗಳ ; ಸುತ್ತುಗಟ್ಟುಳ್ಳ ಆವರಣ : ಸಿದ್ಧೇಶ್ವರದೇವರ ಕೇರಿಗೆ ಮೂಡಲು ಕೋಟೆಯೇ ಮೇರೆ ತೆಂಕಲು ಕರುವನ ಸತ್ರದ ವಟ್ಟಾರವೇ ಮೇರೆ (ಸೌಇ. XI - ii, ೧೮೨-೯; 1098). ವಟಾರ : ೧. ಚಿಕಿತ್ಸಾಮಂದಿರದ ಸಮೀಪದಲ್ಲೇ ವಿಶ್ವವಿದ್ಯಾನಿಲಯದ ವಟಾರವೂ ಇತ್ತು (ಆಳಿ. ೧೦೬); ಬೇರೆ ಇನ್ನಾವ ಸದ್ದೂ ಇರದೆ ನಿಶ್ಶಬ್ದವಾಗಿದ್ದ ಹಳೆಮನೆಯ ಆ ವಟಾರದಲ್ಲಿ ಸುಬ್ಬಣ್ಣಹೆಗ್ಗಡೆಯವರ ಕುಟ್ಟೂರಲಿನ ಸದ್ದೊಂದೇ ಸಾಮ್ರಾಟವಾಗಿತ್ತು (ಮಲೆಮ. ೪೦). ೨. ಕೆಲವು ಪುಟ್ಟಮನೆಗಳನ್ನು ಒಳಗೊಂಡ ಆವಾರ,—ಪ್ರದೇಶ : ಅವನ ತಾಯಿ ನಿಜವಾದೊಂದು ಕಾಗೆಯನ್ನು ಕೊಂದು, ಒಂದು ಹಗ್ಗಕ್ಕೆ ಕಟ್ಟಿದುದರಿಂದ ಒಂದೇ ಒಂದು ಕಾಗೆ ಆ ವಟಾರಕ್ಕೆ ಬರುತ್ತಿರಲಿಲ್ಲ (ಸ್ವಪ್ನಹೂ. ೨). ೩. ಮನೆತನ ; ಕುಲ ; ಒಕ್ಕಲು: ಒಬ್ಬ ಪ್ರಸಿದ್ಧಪುರುಷನಿಂದ ಅವರ ಮಕ್ಕಳು ಮೊಮ್ಮಕ್ಕಳುಗಳನ್ನು ಇಂತವರ ತೆಂಜೆ, ವಟಾರ, ಪಟ್ಟಡೆ ಎಂಬುದಾಗಿ ಕರೆಯುವ ವಾಡಿಕೆ. ಒಂದು ವಟಾರದಿಂದ ಇನ್ನೊಂದು ವಟಾರಕ್ಕೆ ಕೊಡುವಳಿ ತರುವಳಿ ಉಂಟು (ಹುಬ್ಬಿಹ. ೧೮). ವಟ್ಟರ : ೪. ಮನೆ ; ನಿವಾಸ : ಬೊಡೆಯ ಸಂಬಿರದೇವರಸರ ವಟ್ಟರದ ಮೂ x x x ದಂಗಡಿಯ ನಿವೇಶನದಿಂದುವಂ ಪ್ರಭುಮುಖ್ಯ ಮಹಾಜನಂಗಳಿಗೆ ಪಾದಪೂಜೆಯಂ ಕೊಟ್ಟು (ಕೊಲ್ಹಾಶಾ. ೧೩-೪೯; 1166). ವಠಾರ : ೧. ಹೇಱೆಂಗೆ ೫೦ ಹಸರ x x x. ಡಕೆ ಅರಿಸಿನ ಮೆಳಸು ದೇವರ ವಠಾರದಲಾರಿರ್ದ್ದಡಂ ಸರ್ಬಾ x x x (ಸೌಇ. IX - i, ೩೬೦-೫೭; ?); ಶಾಲಾವಠಾರದಲ್ಲಿದ್ದ ರಾಶಿರಾಶಿ ಕಸವನ್ನು ದೂರಕ್ಕೆ ಒಯ್ದು ಬೆಂಕಿ ಹಾಕಲಾಯ್ತು (ಕಾವೇರಿ. ೧೧೮). ೨. ಈ ವಠಾರದ ಜನರಿಗೆ ದಿನದಲ್ಲಿ ಗಡಿಯಾರ ನೋಡುವ ಅಗತ್ಯ ಬೀಳುವುದಿಲ್ಲ (ನಾಚಿಕೆ. ೧); ವಠಾರದ ಎಲ್ಲ ಮಕ್ಕಳಿಗೂ ರಾಯರ ಮೇಲೆ ಅಪಾರ ಸಲಿಗೆ (ಕಾಬಹು. ೧೨೧). ೩. ಈ ಒಕ್ಕಲುಗಳ ಸಮುದಾಯಕ್ಕೆ ಬೋರೆದೇವರ ವಠಾರ ಎನ್ನುವರು (ಬೋರೆದೇ. ೯). ೪. ವಠಾರ ಕಣ ತಿಪ್ಪೆ ಸಹ ನಾನು ಧರ್ಮಾದೀಕ್ಷಿತರ ಮೊಮಗನಾದ ಶಾಂಭಟರ ಕಡೆಯಿಂದಾ . . . ಶುದ್ಧ ಕ್ರಯಕ್ಕೆ ನಾನು ತೆಗದುಕೊಂಡು (ಎಕ. IX, ಬೆಂಗಳೂ. ೩-೯; 1855). ವಠ್ಠಾರ : ೧. ಆ ದೇವರ ವಠ್ಠಾರದ ಚತುಸ್ಸೀಮೆ ಮತೆಱ ವಠ್ಠಾರವೊಂದು ಸುತ್ತಲೂ ನಟ್ಟ ಕಲ್ಲು (ಮೈಅಂ. ೧೯೩೭, ೨೮-೪; 1238).

[< ಸಂ. ವೃತ್ತಾಗಾರ./ ತಮಿ. ವಟ್ಟಾರ; ತುಳು. ವಟಾರ; ತೆಲು. ವಟಾರ; ವಟಾರು]

ವಟ್ಟಾರ$_2$ (ನಾ). ಒಂದು ಊರಿನ ಹೆಸರು : ಮಟ್ಟಂ ತನ್ನ ಭಾಗಮಂ ಕುಡೆ ಆ ವಟ್ಟಾರ ಕುಷ್ಟ[ಂ] ದೇಗುಲಮಂ ಮಾಡಿಸಿ ಸರ್ವ್ವಬಾಧಪರಿಹಾರಮ್ ಶಂಕರಂ ನಾಲ್ಗಾಮುಣ್ಡುಗಂಯ್ಕೆ ಗಾತಿಯಮ್ಮನಾ ಬಾಱ[ಂ] ಪರಿಪಾಲಿಸಿ ನಿಲೆ ಪಡೆದೊಂ (ಎಇ. VII, ೨೧೩-೧೪; 874); IP ಇಲ್ಲಿ ಬಳಕೆಯಾಗಿರುವ ವಟ್ಟಾರ ಶಬ್ದವು 'ಭಟ್ಟಾರ' ಅಥವಾ 'ಬಟ್ಟಾರ' ಎಂಬುದರ ಅಪಲಿಖಿತ ವಿರಬಹುದೆಂಬ ಅಭಿಪ್ರಾಯವೂ ಇದೆ ; ದಕ್ಷಿಣತಃ ವಟ್ಟಾರಂ ನಾಮಗ್ರಾಮಃ (ಇಆ. XVI, ೨೪-೬೬; 1000). [?]

ವಟ್ಟಿಱೆ (ಕ್ರಿ). (?) : ವಟ್ಟಿಱೆ[ಪಾಠಾಂ ವಟ್ಟೆಪರಿ]ದು ನಾಂದು ಪೊಟ್ಟಯಿಸಿದಡ್ಡಳನುಂ ದಂಡೆಯೊಳ್ಕೋದು ಕೈದುವಂ ಕಾಣದೊನಕೆಯನೆತ್ತಿ ಪರಿವರಿಗಳುಮಂ (ಲೀಲಾವ. ೫ ೧೧೪ ವ). [?]

ವಟ್ಟೂರ್ (ನಾ). ಒಂದು ದೇಶದ ಹೆಸರು : ವಂಗಾಙ್ಗ ಕಳಿಙ್ಗ ವಟ್ಟೂರ ಮಗಧ . . . ಪ್ರಭೃತಿರನೇಕಪರನೃಪತಿಸಮೂಹಾವಮರ್ದ್ದಲಬ್ಧವಿಜಯೇ (ಇಆ. XIX, ೧೭-೭; 602). [? + ಊರ್]

ವಟ್ಟೃಸುಳಿ 'ವಟ್ಟೃಸುಱೆ' ನೋ.

ವಟ್ಟೃಸುಱೆ, ವಟ್ಟೃಸುಳಿ, ವಟ್ಟೃಸುಳಿ (ನಾ). [ವ್ಯಾಕ] ವ್ಯಂಜನದೊಡನೆ ಸೇರುವ ವೃತ್ತಾಕಾರವಾಗಿರುವ 'ಋ' ಕಾರದ ಚಿಹ್ನೆ : "ವಟ್ಟೃಸುಱೆ" ಪದಚ್ಛೇದ ಮಾಡಿದಾಗ "ವಟ್ಟ + ಋ ಸುಱೆ" ಎಂದಾಗುವುದಷ್ಟೆ (ಸಂಕೋಧ. ೨೦೪). ವಟ್ಟೃಸುಳಿ : ಈ 'ಋ' ಸ್ವರ ಸಂಕೇತವನ್ನು . . . ಮೈಸೂರ ಕಡೆ 'ವಟ್ರುಸುಳಿ', 'ವಟ್ಟುಸುಳಿ' ಮುಂತಾಗಿ ಇದನ್ನು ಕರೆಯುವರು. (ಸಂಕೋಧ. ೨೦೦). ವಟ್ಟೃಸುಳಿ : ಋತ್ವದ ಸ್ವರಚಿಹ್ನೆಯನ್ನು ಕನ್ನಡಸೀಮೆಯ ಕೆಲವೆಡೆ "ವಟ್ಟೃಸುಳಿ" (ವಟ್ರುಸುಳಿ) ಎನ್ನುತ್ತಾರೆ (ಸಂಕೋಧ. ೨೬). [< ಬಟ್ಟು + ಋ + ಸುಱೆ./ ತೆಲು. ವಟ್ರು ವಸುಡಿ, ವಟ್ರುಸುಡಿ]

ವಟ್ಟೆಬುಲ್ಲು (ನಾ). ಒಂದು ಬಗೆಯ ಹುಲ್ಲು : "ಇಲೌಷ - ವಟ್ಟೆಬುಲ್ಲು" (ಒಪಧಾ. ೧೩). [<— ತಮಿ. ವಟ್ಟಪ್ಪುಲ್]

ವಟ್ಠರ 'ವಟ್ಟಾರ$_1$' ನೋ.

ವಠಾರ 'ವಟ್ಟಾರ$_1$' ನೋ.

ವಠ್ಠಾರ 'ವಟ್ಟಾರ$_1$' ನೋ.

- ವಡ (ನಾ). ಒಂದು ತದ್ಧಿತಭಾವನಾಮಪ್ರತ್ಯಯ: 'ಪುಲ್ಲವಡ' ಪರಾ.

ವಡಂಜೆ (ನಾ). ಒಂದು ಬಗೆಯ ಬಟ್ಟೆ : ಮಾಂದಳಿರ ಪಟ್ಟೆ ಸಣ್ಣವಡಂಜೆಯುಂ ಪೊಂಬಟ್ಟೆ ಸಿರಿಗಣೆ ಗುಜ್ಜರಾಷ್ಟದ ಪಟ್ಟೆ (ಬಸಪು. ೧೧-೨೬). [?]

ವಡಕಂಡ (ನಾ). ಉತ್ತರ ದಿಕ್ಕಿನ ಸ್ಥಳ ; ಬಡಗುದಿಕ್ಕಿನ ಪ್ರದೇಶ : ವಾಣಿಗ ತೋಟ್ಟಂ ತೆನ್ಕಣ್ಡಮುಂ ವಡಕಣ್ಡಮುಂ ವಿನಿತೇಶ್ವರಕ್ಕಂ ಪೊಯ್ದಾರ್ (ಎಕ. IV, ಚಾಮರಾ. ೬೩-೭; 750). [< ಬಡಗು + ಕಂಡ$_1$]

ವಡಕರೆನಾಡು (ನಾ). ಒಂದು ಪ್ರದೇಶದ ಹೆಸರು ; ತಲಕಾಡಿನ ಸುತ್ತಲಿನ ಪ್ರದೇಶ : ಸ್ವಸ್ತಿಶ್ರೀ ವಿಕ್ರಮಾದಿತ್ಯರಸಂ ವಡ[ಕರೆ]ನಾಡು ಮುನೂಱುಮಾನಾಳು ತಿಟ್ಟು ಸುಗ್ಗಿಯುಳ್ಳನ್ದು ಪೊನ್ನಿಟ್ಟ ಧರ್ಮಕೆಡೆವಕ್ಕ ಪೊನ್ನಾನ್ಕೊಳ್ಳೆನೆನ್ದೋನುಂ . . . ಸಾಸಿರ್ವರ್ಪ್ಪಾರ್ವರ್[ರು]ಮನ್ಕೊನ್ದೋನ್ ಸಲ್ಗತಿಗೆ ಸಲ್ವೋನಕ್ಕೆ (ಮೈಆರ. ೧೯೩೩, ೫೯-೧; ಸು. ೩ನೆಯ ಶತ?). [< ಬಡಗು + ಕರೆ ? + ನಾಡು]

ವಡಗಣ 'ಬಡಗು' ಪರಾ.

ವಡಗಯ್ 'ಬಡಗಾಯ್' ನೋ.

ವಡಗಯ್ಗೇರಿ (ನಾ). ಉತ್ತರದಿಕ್ಕಿನ ಪ್ರದೇಶದಲ್ಲಿರುವ ಬೀದಿ,—ಓಣಿ : ವಡಗಯ್‌ಗೇರಿ ಮನೆ ಭಣತು ಭೂಮಿದಾನಮೆ ಕೊಟ್ಟಮ್ (ಮೈಆರ. ೧೯೧೯, ೧೧-೧೭; 5ನೆಯ ಶತ). [ವಡಗಯ್ (< ಬಡಗಾಯ್) + ಕೇರಿ]

ವಡಗಾಯ್ 'ಬಡಗಾಯ್' ನೋ.

ವಡಗು 'ಬಡಗು' ನೋ.

ವಡಪದ್ರಕ (ನಾ). ಒಂದು ಊರಿನ ಹೆಸರು : ಅನ್ಕೋಟ್ಟಕ ಚತುರಶೀತ್ಯನ್ನ (ನ್ನ)ರ್ಗ್ಗತ ವಡಪದ್ರಕಾಭಿಧಾನಗ್ರಾಮೇ(ಮ): (ಇಅ. XII, ೧೬೦-೪೬; 812).

[< ಸಂ. ವಟಪತ್ರಕ?]

ವಡಬ (ನಾ). ಸಮುದ್ರದಲ್ಲಿರುವ ಬೆಂಕಿ ; ಬಡಬಾಗ್ನಿ : ಕಡಲ ತೆರೆಗಳ ತಱುಬಿ ತುಡುಕುವ ವಡಬನಂದದಿ (ಕುವ್ಯಾಸ. ೧೫-೩೧); ಕಡಲೊಡಲ ವಡಬಂ ಬಿಡದೆ ತೀಡುವ ಬಿಱುಗಾಳಿಯ ತೀಟದಿಂ ದಳ್ಳಿಸಲ್ (ರಾಮಾಶ್ವ. ೨-೨೮). [ಸಂ. ವಡಬ, ವಡಬಾ]

ವಡಬಶಿಖಿ (ನಾ). = ವಡಬ: ವಡಬಶಿಖಿ ಪೀರ್ವ ಬಾಧೆಗೆ ಸೆಡೆದಿರದೇಳ್ತಂದು ಪುಂದ ಕೋಂಟೆಯ ಮಱೆಯೊಕ್ಕತಗಿದ ಕಡಲೆನೆ ಗುಣ್ಪಂ ಪಡೆದೆಸೆದುದು ಬಹಳಜಳಧಿಪರಿಪಾಲಯಂ (ತ್ರಿಪುವಿ. ೧೭-೧೮); ಕಂಬನಿಯ ಕಡಲೊಳಗೆ ಡಾವರಿಪ ವಡಬಶಿಖಿಯೆಂಬಿನಂ ಕಾಣಿಸುವಳಲ್ಲಿಟ್ಟಿಗವನೊಡಲನಿಂಬುಗೊಟ್ಟಂ(ಕೃಮಭಾ. ೧೩-೫೯).

[ಸಂ. ವಡಬಶಿಖಿನ್]

ವಡಬಾಗ್ನಿ (ನಾ). = ವಡಬ : ವಡಬಾಗ್ನಿ ಜಡವೊತ್ತುದೋ ಸಿಡಿಲು ಹೊಸ ಭಸಿತಮಿಡಕಲಿತುದೋ (ಹಚಕಾ. ೮-೧); ಮಹಾವಾರ್ಧಿಜಲವನೊಂದೇ ಸಾರಿ ಸುರಿಗೊಂಬ ಡಾವರದೊಳೆದ್ದ ವಡಬಾಗ್ನಿಯೋ . . . ಭಾವಿಸುವೊಡರಿದೆಂಬೊಲಾದುದು ಧನಂಜಯನ ಪಾವಕಾಸ್ತ್ರಂ (ಕೃಮಭಾ. ೧೩-೧೧). [ಸಂ.]

ವಡಬಾಜ್ವಾಲೆ (ನಾ). ಬಡಬಾಗ್ನಿಯ ಜ್ವಾಲೆ,—ಉರಿ : ಅವನೆನ್ನಂ ಸಮುದ್ರಮಧ್ಯದೊಳ್ ಬಿಸುಟು ಪೋಗಲ್ ವಡಬಾಜ್ವಾಲೆಯೊಳುಣ್ಬೊಡಂ ವಿಷಧರಂ ಬಾಯ್ಬಿಟ್ಟು ಮೇಲ್ವಾಯ್ದೊಡಂ . . . ನಿಜಲಲಾಟಜಾಪ್ರಸಿದ್ಧಾಕ್ಷರಂ ತೊಡೆವನ್ನಂ ಭಯಮೇಕೆ ದೇಹಿಗೆ (ದಶಕು. ೧೨ ೫೩). [ಸಂ. ವಡಬಾಜ್ವಾಲಾ]

ವಡಬಾನಲ, ವಡಬಾನಳ (ನಾ). = ವಡಬ : ಜಲನಿಧಿಯನುಜೆ ಕುಡಿವ ವಡಬಾ[ಪಾಂಂ. ಕಲ್ಪಾ]ನಲನ ನುಂಗುವ . . . ಕೋಟಿದಾವಾನಳಬಲಾನ್ವಿತಭಟರ ನಳನರ್ಬುದವ ತೋಱಿಸಿದ (ತೊಂಬರಾ. ೪-೭-೧೯). ವಡಬಾನಳ : ಮಾನವಗತಿಯೆಂಬ ಮದಮುಖಿವಾನವ ನಾನಾಖಚರರೆಲ್ಲರನು ಏನುಳಿಯದೆ ತಿಂದು ತಿರುಗಿ ನೋಡುತ ವಡಬಾನಳನಂತಿರುತಿಹನು (ತ್ರಿಪುಸಾಂ. ೫-೫೭); ಶರನಿಧಿಯ ವಡಬಾನಳನ ದಳ್ಳುರಿಯ ವರ್ಮವ ತಿವಿದ ತುಂಬಿಗೆ ಮರಳುದಲೆಯುಂಟಾದಡದು ಭವಭವದ ಪುಣ್ಯಫಲ (ಕುವ್ಯಾಸ್ತ್ರೀ. ೪-೨೬). [ಸಂ.]

ವಡಬಾನಲಚೂರ್ಣ (ನಾ). ಅಜೀರ್ಣವನ್ನು ಗುಣಪಡಿಸಲು ಉಪಯೋಗಿಸುವ ಒಂದು ಬಗೆಯ ಪುಡಿ,—ಚೂರ್ಣ : ವಡಬಾನಲಚೂರ್ಣಕ್ಕೆ ಯೋಗ :— ಸೈಂಧವಲವಣ ೧ ತೂಕ, ಕಬ್ಬುಪ್ಪು ೧ ತೂಕ . . . ಇಷ್ಟನ್ನೂ ಕುಟ್ಟಿ ಸಣ್ಣನಾಗಿ ಮಾಡಿ ಗರುಗದ ರಸದಲ್ಲಿ ಮೂಱುದಿನ ನೆನೆಯಿಕ್ಕಿ ಇದಂ ಗರುಗದ ರಸದಲ್ಲಿ ಇಂಗುವ ಹಾಗೆ ಅಡುವುದು (ಎಚಿವಿ. ೪೮). [ಸಂ.]

ವಡಬಾನಳ 'ವಡಬಾನಲ' ನೋ.

ವಡಬಾಮುಖ (ನಾ). ೧. = ವಡಬ : "ವಾರಿಧಿಯ ಕಿಚ್ಚು ವಡಬಾಮುಖಂ ಬಾಡಬಂ" (ಮಂಗರಾ. ೧೪-೯). ೨. ಅಧೋಲೋಕದ ದ್ವಾರ. ೩. ಪಾತಾಳ : "ಪಾತಾಳಮೆನಲು ವಡಬಾಮುಖಮೆನಲು ಬಲಿನಿಕೇತನಮೆನಲು ನಾಗಲೋಕ ಮೆನಲೊಪ್ಪುವ . . . ಪಾತಾಳಲೋಕಕ್ಕೆ ನಾಮಂ" (ಮಂಗರಾ. ೧೧೬-೧). [ಸಂ.]

ವಡಬೆ (ನಾ). ೧. ಹೆಣ್ಣುಕುದುರೆ: "ವಾಜಿನಿ ವಡಬೆ ವಾಮಿಯೆನೆ ಹೆಣ್ಣೆನಿಕ್ಕುಂ" (ಮಂಗರಾ. ೮೧-೧೨). ೨. (ಹೆಣ್ಣುಕುದುರೆಯ ರೂಪದಿಂದಿದ್ದು) ಸೂರ್ಯನಿಂದ ಅಶ್ವಿನೀದೇವತೆಗಳಿಗೆ ಜನ್ಮವಿತ್ತ ಅಶ್ವಿನಿ ಎಂಬ ಅಪ್ಸರೆ. ೩. ದಾಸಿ; ಸೇವಕಿ. ೪. ಸೂಳೆ; ವೇಶ್ಯೆ. [ಸಂ. ವಡಬಾ]

ವಡವಡ (ನಾ). ಒಂದೇ ಸಮನೆ ಮಾತನಾಡುವುದನ್ನು ಸೂಚಿಸುವ ಒಂದು ಅನುಕರಣಪದ : ಅವರು ವಡವಡ ಮಾತನಾಡುತ್ತಿದ್ದುದನ್ನು ಕೇಳಿ ತಲೆಚಿಟ್ಟು ಬಂದಿತು (ರೂಢಿ).

ವಡವುರ (ನಾ). ಒಂದು ಊರಿನ ಹೆಸರು : ಪೂರ್ವತಃ ವಡವುರಗ್ರಾಮಃ (ಇಅ. XI, ೧೫೯-೪೦; 806). [?]

ವಡಹ (ನಾ). ಒಂದು ಊರಿನ ಹೆಸರು : ಉತ್ತರತಃ ವಡಹಗ್ರಾಮಃ (ಇಅ. VI, ೬೮-೯; 808). [?]

ವಡಹು (ನಾ). (?): ಕೊಂಡಲಿಗಣಪರ ಸ್ಥೆನ ತೋಟದ ಭರಣ ೮ಕೆ ಗ ೩ ಗದೆ ಬೀಜವರಿ ಖ ೬ ವಡಹಿನ ಹಾದ ಖ ೧೩ ಉಭಯಂ ಖ ೧೯ಕೆ ಗ ೯ (ಮೈಆರ. ೧೯೨೯, ೯೨-೨೯; 1667). [?]

ವಡಾರ (ನಾ). (?): ಆಯದ ಸಿವುಡು ೨೦ ನೆಗಿಯಕ್ಕೆ ಸಿವುಡು ೮ ಗದ್ದೆಗಳ ಕೋರ್ರಿಗೆಯ್ದರೆ ಆದಂತ್ಯ ವಡಾರ ಖ ೧೯ಕೆ ಅಯಸಾಂಮ್ಮಲ್ (ಎಕ. XI, ಹಿರಿಯೂ. ೮೮-೧೮; 1589).

[?]

ವಡಿ$_1$ (ನಾ). ಕಾವು ; ಬಿಸಿ ; ಉಷ್ಣ : ಸಿಡಿಲ ಮಾರ್ಪೊಡಪೊಡನೆ ಸಿಂಹದ ಕಡುಬಲ್ಲು ಕಡಗಾಲದಗ್ನಿಯ ವಡಿಯು ಶರಬನ ಬೆಡಗು ಪೆರ್ಬುಲಿ ಲಂಘನವು . . . ಲಘು ಗೊಂಡಿತು (ನಾಗಚ. ೮-೨೩). [ದೇ. ॥ ತೆಲು. ವಡ, ವಡಗಾಲಿ]

ವಡಿ$_2$ (ನಾ). ೧. [ಛಂದ] ಪಾದದ ಮೊದಲಕ್ಷರ ಮತ್ತು ಪಾದಮಧ್ಯದ ಯತಿಯ ಮುಂದಿನ ಅಕ್ಷರವು ಸಜಾತೀಯವಾಗಿರುವಿಕೆ ; "ಪಾದದ ಮೊದಲಕ್ಷರವೂ ಪಾದದ ಮಧ್ಯದ ಯತಿಯ ಮುಂದಿನ ಮೊದಲಕ್ಷರವೂ, ಒಂದೇ ಆಗಲಿ ಸಜಾತಿಯಾದುದಾಗಲಿ ಇರುವುದು ವಡಿ" (ಕೃಪಿ. ೧೫೪): ವಡಿಯೆಂಬುದು ತೆಲುಗಿಂ ಪೇಳ್ದೆಡಗಲ್ಲದೆ ಕನ್ನಡಕ್ಕೆ ಪೇಳಿದುದಿಲ್ಲಂ . . . ಪದಪದ್ಯದ ಮೊದಲಕ್ಷರವದು ತಪ್ಪದೆ ನಡುವೆ ಯತಿವಿಲಾಸದೊಳಿಡಲುಂ ವಿದಿತದೆ ವಡಿಯಪ್ಪುದು (ಕವಿಚಿ. ೨-೧೮); ತೆಲುಗಿನ 'ವಡಿ' ಶಬ್ದದ ಮೂಲವೇನೆಂಬುದು ಇನ್ನೂ ನಿರ್ಣಯವಾಗಿಲ್ಲ. 'ವಡಿ' (ವಳಿ) ಶಬ್ದವು ಸಾಮಾಪ್ಯ, ದಾರಿ ಎಂಬರ್ಥಗಳುಳ್ಳ, 'ವಟಿ' ಎಂಬ ದ್ರಾವಿಡಶಬ್ದದಿಂದ ಬಂದಿರಬಹುದೆಂದು ತೆಲುಗುವಿದ್ವಾಂಸರು ಕೆಲವರು ತರ್ಕಿಸುವರು (ಶಮದ. ಮ. ೧೬ ಅವತರಣಿಕೆ). ೨. [ಸಂಗೀತ] ತಾಳದ ಲಯ : ವಡಿ ತಪ್ಪದೆ ಕೋಲಚಾರಿಗಳಿಂದ ಜಕ್ಕುಡಿ ಮೆಳೆದುವು ದೇವಾಲಯದಿ (ಮೋಹತ. ೧೮-೭).

[<— ತೆಲು. ವಡಿ]

ವಡಿ$_3$ (ನಾ). ಒಂದು ಬಗೆಯ ಬಾಗಿದ ಕತ್ತಿ,—ಖಡ್ಗ : 'ವಡಿಕತ್ತಿ' ಪರಾ.

[ದೇ. ॥ ತಮಿ. ವಟಿ; ಮಲ. ವಡಿ = ಸಣ್ಣ ಬೆತ್ತ; ಕೊತ. ವಡಿ]

ವಡಿಕತ್ತಿ (ನಾ). (ಕೊಡಗರು ಬಳಸುವ) ಒಂದು ಬಗೆಯ ಬಾಗಿದ ಕರವಾಳ,—ಖಡ್ಗ : ನಾಲ್ಕರು ವಡಿಕತ್ತಿಗಳನ್ನು ಬೀಸಿ ನಮ್ಮನ್ನು ಕೆತ್ತುವುದಕ್ಕೆ ಬಂದರು (ಹಲಿಹಾ. ೨೨೬). [ವಡ್ಡಿ + ಕತ್ತಿ]

ವಡಿಕಲು (ನಾ). (?) : ಮೂಲಸ್ಥನದೇವರ್ಗ್ಗೆ ಗಾಣ ಮಾನ್ಯ ದೇವರ ಕಂಮ ತವಗೆ ವಡಿಕಲ ಮಾನ್ಯ ಬರಸೆ ಹರಿಕಟು ಇನ ಮಾಡುವರ್ಸತ್ತವರ ಗಡಿಯಿ x x ಕಱುಗೆ ಮೂಲಸ್ಥಾನದೇವರ್ಗಲದೆ ಮೆಲದೆ ದೇ[ವ]ರ್ಗ್ಗೆ ಸಾಲದು (ಸೌಇಇ. IX-i, ೨೯೧-೩೪; 11ನೆಯ ಶತ). [?]

ವಡಿಕೆ (ನಾ). (ಉಪ್ಪನ್ನು ತಯಾರಿಸಲು) ಉಪ್ಪುನೀರನ್ನು ತಡೆದು ನಿಲ್ಲಿಸುವ ಪಾತಿ ; ಉಪ್ಪುಮಡಿ : ಸರ್ವಮಾನ್ಯ ಬ್ರಂಹ್ಮಸ್ವವಾಗಿ ಕ್ರಯಕ್ಕೆ ಕೊಂಡ ಕವಲಹೊಂಡ ಮುಂಡಗದೆಯಲಗದ ಸಿಂನೆ ಉಪ್ಪಿನ ವಡಿಕೆ ಜಾಳಿಗ (ಎಕ. VIII, ಸಾಗ. ೪೨; ೧೫೬).[IP ಇದು 'ಮಡಿಕೆ' ಎಂಬುದರ ಅಪಲಿಪಿತವಿರಬಹುದು]

– ವಡಿಗ (ಪ್ರ). 'ಇದರಲ್ಲಿ ವರ್ತಿಸುವವನು' ಎಂಬ ಅರ್ಥದಲ್ಲಿ ಸೇಗುವ ತದ್ಧಿತಪ್ರತ್ಯಯ : ಇದನಿವನಿಕ್ಕುವನೆಂಬಿಡೆಯೊಳ್ ವಡಿಗ ಪ್ರತ್ಯಯಮಕ್ಕುಂ . . . ವಡಿಗಕ್ಕೆ—ಕುಂಚವಡಿಗಂ, ಪುಲ್ಲವಡಿಗಂ, ಕಳ್ಳಡಿಗಂ (ಶಮದ. ೧೫೩ ಪ್ರಯೋ); ಮಾಲೆಯಿಂ ಜೀವಿಸುವಂ, ಮಾಲೆವಡಿಗಂ. ಏವಂ ಕಂಚುವಡಿಗಂ, ಪಹಿವಡಿಗಂ, ಪೂವಡಿಗಂ (ಶಬ್ದಾಮ. ೪೧೬ ಪ್ರಯೋ).

ವಡಿಬೀಸು (ನಾ). ಕತ್ತಿವರಸೆಗಳಲ್ಲಿ ಒಂದು ಬಗೆ : ಆ ಸ್ಥಾನದಲ್ಲಿಯೇ ನಿಂತು ಶೀಘ್ರಗಮನದ ಆದಿಯಲ್ಲಿ ಮುಂದಕ್ಕೆ ಬಂದಿಗೋಲನ್ನು ಚಾಚಿ ಯರಡು ಪಾರ್ಶ್ವಗಳಲ್ಲಿ ಪ್ರತ್ಯೇಕವಾಗಿ ಮೊದಲ ಹಾಗೆ ಬೀಸು ಆವುದು ಮಾಡಲು ತಕ್ಕಂಥಾದು ಅದು ವಡಿಬೀಸು ವೆಸಯೆಂತೆದು ನುಡಿಯಲ್ಪಡುವುದು (ಖಡ್ಗಚಿ. ೫-೫೧). [ವಡಿ + ಬೀಸು]

ವಡಿಯನಕಂಟಿ (ನಾ). ಒಂದು ಬಗೆಯ ಮುಳ್ಳುಗಿಡ : ವಡಿಯನಕಂಟಿ, ಎಕ್ಕಿಯ ಗಿಡಗಳು, ಮುಳಗಲಕಂಟಿ ಮುಂತಾದ ಗಿಡಗಳಿದ್ದರೆ ಅವುಗಳ ಬೇರುಸಹಿತ ಅಗಿದು ತೆಗೆಯಬೇಕು (ಕೃಪ್ರಾ. ೨೫).

[< ವಡಿಯ್ (IP <— ತೆಲು. ವಡಿಯ = ನಾಗದಂತಿ) + ಕಂಟಿ]

ವಡಿಲ ? (ನಾ). ಒಂದು ಬಗೆಯ ವೃತ್ತಿ (?) : ಮಠಕೆ ಕೊಡುವ ಹಣ ೪ ವಡಿಲವರು ತಾ ಬದ್ದ ಜಾಳಿನ ಮೇಲೆ (ಸಾಶಾ. ೧೪೩೬, ಉಪಾಪ್ರ. ೬೩೫-೧೧; 1407). [?]

ವಡು (ನಾ). ಅಡ್ಡಗಟ್ಟೆ ; ಅಣೆ : ಯಿಂಗುಳವಾಡಿ ಕುಣಗಿಹಳ್ಳಿಯ ಮಣ್ಣುಂ ಕಂದರ ಕಾಡುಕೋಡಿ ಹೊಂನಪ್ಪನ ವಡುಂ ಕಾರಿನಡ ಜಯತದ ಪಾಲ್ಗುಣೇಸ್ವರಗೆ ಕೊಟ್ಟ ಕೊಡಗ (ಮೈಅ. ೧೪೩೦, ೩೪-೯; 1380); ರಾಮಯ್ಯನು ಮಹನ್ತಯ್ಯನು ಸಹ ವಡುವ ಕಟಿಸಿದ ಬೆಗೆ ಕೊಡಗಿ ಹಾಕಿಕೊಟ್ಟ ಕ್ರಮವೆನ್ತೆಂದರೆ (ಎಕ. XI, ಹೊಳ್ಕೆ. ೧೨೬-೪; 16927). [< ಒಡ್ಡು$_2$]

ವಡುಗವಲಿ (ನಾ). ಒಂದು ಪ್ರದೇಶದ ಹೆಸರು : ಶ್ರೀಮಹಾವಲಿವಾಣರಸರ್ ವಿಜಯಾದಿತ್ಯನ್ . . . ವಡುಗವಲಿ ಪನ್ನಿಚಾಸಿರಮುಮ್ ಮಣ್ಣೈಯುನ್ಮೂಡಾಯುಮ್ ಪೃಥುವೀರಾಜ್ಯಂಗೆ[ಯೆ] (ಸಾಶಾ. IX-i, ೫-೫; ಸು. ೨೨೨೮ ಶಕ). [?]

ವಡೆ, ಒಡ್ಡೆ, ವೊಡೆ (ನಾ). ಕಡಲೆ, ಉದ್ದು ಮುಂತಾದ ಬೇಳೆಗಳನ್ನು ಕೆಲವು ಗಂಟೆಗಳ ಕಾಲ ನೀರಿನಲ್ಲಿ ನೆನೆಯಿಸಿ, ನಂತರ ರುಬ್ಬಿದ ಹಿಟ್ಟಿಗೆ ಸೊಪ್ಪು, ಉಪ್ಪು, ಕಾರ ಮುಂತಾದ ಸಂಬಾರಪದಾರ್ಥಗಳನ್ನು ಮಿಶ್ರಮಾಡಿ ಕರಿದು ತಯಾರಿಸುವ ಒಂದು ಬಗೆಯ ಖಾದ್ಯವಿಶೇಷ : ದಧಿಯಾಮ್ಮ ದುಗ್ಧಾದಿಯಲಿ ವ[ಪಾಶಾಂ. ವೊ]ಡೆಗಳಂ ಕಲಸಲದು ಕದಂಬಕಮಕ್ಕು (ಮಂಗರಾ. ೬೫-೬); ವ [ಪಾಶಾಂ. ವೊ] ಡೆಗೆ ಕಲಸುವ ತೆಱದಿ ಕಲಸಿದುದ್ದಿನ ಹಿಟ್ಟ ಕಡಲೆಯಂದದೊಳಗುಂಡೆಯಮಾಡಿ . . . ಸಕ್ಕರೆಯ ಪಾಕದೊಳಗಿಕ್ಕಿ ಕಟ್ಟುವುದು ಲಡ್ಡುಗೆಯನು (ಸೂಪಶಾ. ೧-೫೭); ಸುಖೀನುಂಡೆ ವಡೆ ಗಾರಿಗೆಯ . . . ಬಡಿಸಿದರೊಲವಿಂ (ಮೋಹತ. ೬-೫೨). **ಒಡ್ಡೆ$_3$** : ಸಂಡಿಗೆಗಳುದ್ದಿನೊಡೆ ಶರ್ಕರೆಯ ಜೇನ್‌ಬುರುಡೆ ಪಪ್ಪಳಂ (ಪರಿಪು. ೧೫-೬೨); ವಾಸನೆಯನ್ನು ಎರಚುತ್ತಿದ್ದ ಉದ್ದಿನ ಒಡೆಗಳನ್ನು ಸಾಹೇಬರು ಅರೆಕ್ಷಣ ನೋಡಿ, ಒಂದನ್ನು . . . ತಿಂದರು (ಪಾಗಮಾಂ. ೬೩). **ವೊಡೆ** : ಕಠುಪಾಯಕ್ಕೆ ವೊಡೆಗೆ ಉದ್ದು ಪ ೧ ಅಕ್ಕಿ ಪಂ ॥ ತುಪ್ಪಂ (ಎಕ. VI, ಮೂಡಗೆ. ೪೦-೧೫; 1552).

[ದೇ. ॥ ತಮಿ. ವಟ್ಟೈ; ತೆಲು. ವಡ; ತುಳು. ವಡೆ./ ಸಂ. ವಡಾ]

ವಡ್ಡ$_1$ (ಗು). ೧. ಹಿರಿಯ ; ಪೂಜ್ಯ : 'ವಡ್ಡಾರಾಧನೆ' ಪರಾ. ೨. ಹಳೆಯದಾದ ; ಪ್ರಾಚೀನ : 'ವಡ್ಡಾಚಾರ' ಪರಾ. ೩. ದೊಡ್ಡ ; ಬೃಹತ್ತಾದ : 'ವಡ್ಡದಾರಿ' ಪರಾ. [< ಪ್ರಾ. ವಡ್ಡ./ ಸಂ. ವೃದ್ಧ]

ವಡ್ಡ$_2$ 'ವಟ್ಟ' ನೋ.

ವಡ್ಡಂತಿ (ನಾ). ಹುಟ್ಟುಹಬ್ಬ ; ಜನ್ಮದಿನ : "ವಡ್ಡಂತಿ (ಒಡ್ಡಂತಿ) — ವರ್ಧಂತಿ" (ಕಡ್ಡಕೋ. ೬೯); ಹರಿದಿನವಿಂದು ಯಜ್ಞಾರಂಭದಿನ ವಡ್ಡಂತಿ ಲೇಸೆಂದು . . . ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆಂದ (ಅಪ್ಯಾಎ. ೭-೧೩); ಇಂದು ಯಜ್ಞಾರಂಭದಿನ ಜನ್ಮಗೋಚರಗ್ರಹಕ್ಷತ್ರಮೆಂದೆನುತಲಿ ಎಂದು ನಾನಾ ಪರಿಯಲರಮನೆಯ ರೊಕ್ಕವಂ ತಿಂದು . . . ರಾಜಗುರುತನದಿಂದಲೆಲ್ಲರಂ ಮರೆತಿಹಿರಿ (ಪಾರಂಗ. ೬೭-೧೪). 'ಒಡ್ಡಂತಿ' ಪರಾ. [< ವರ್ಧಂತಿ]

ವಡ್ಡದಾರಿ (ನಾ). ದೊಡ್ಡರಸ್ತೆ ; ಹೆದ್ದಾರಿ : ತೆಂಕಲು ಮೂತೆನೆಯ ಪಾನಸಿನ ವಾರಿಯ ಪತ್ತಿರೆ ಪಡುವಲು ಲಕ್ಕಳಿಗೆಯ ವಡ್ಡದಾರಿಯಿಂ ಬಡಗಲು (ಕೊಲ್ಲಾಶಾ. ೧೩-೩೧; 1166). [ವಡ್ಡ$_1$ + ದಾರಿ]

ವಡ್ಡಬೆವಹಾರಿ, ವಡ್ಡಬ್ಯವಹಾರಿ, ವಡ್ಡವ್ಯವಹಾರಿ (ನಾ). ಹಿರಿಯ ವರ್ತಕ, ವರ್ತಕರ ಮುಖಂಡ : ಮಲೆಯಾಳ ವಡ್ಡಬೆವಹಾರಿ ಕೊಮರ ಮೂರ್ಕ್ಕಶ್ರೀಸಯಂಜುಕಲಿಸ್ವಾಮಿದೇವರ್ಗೆ ಸಂದಾದೀವಿಗೆಯ ನಡೆಸುವನ್ಗಾಗಿ . . . ಬಿಟ್ಟು ಗದ್ಯಾನವಯ್ದು (ಸಾಶಾ. IX - i, ೨೬೭-೧೯; 1198); ಶ್ರೀ ಭೀಮೇಶ್ವರದೇವ ಲಬ್ಧವರಪ್ರಸಾದಂ ವಡ್ಡಬೆವಹಾರಿ ಬೀವಿಸೆಟ್ಟಿಯರು ಮಾಡಿಸಿದ ಪ್ರತಿಷ್ಠೆ (ಸಾಶಾ. IX - i, ೨೩೦-೧೫; 1134). **ವಡ್ಡಬ್ಯವಹಾರಿ** : ಗೊಂಮಟದೇವರ ಸುತ್ತಾಲಯದೊಳು ವಡ್ಡಬ್ಯವಹಾರಿ ಮೊಸಳೆಯ ಬಸವಿಸೆಟ್ಟಿಯರು . . . ವರಿಸನಿಬ್ಬಿಯಾಗಿ ಕೊಡುವ ಪಡಿ (ಎಕ. II, ೨೬೫-೬; ಸು 1165); ಶ್ರೀಮನ್ಮಹಾವಡ್ಡಬ್ಯವಹಾರಿ ಸಿಂಕಸೆಟ್ಟಿಯ ಮಗ ಸಿಂದಿಸೆಟ್ಟಿ (ಮೈಅ. ೧೯೪೬, ೩೧-೬: 1314). **ವಡ್ಡವ್ಯವಹಾರಿ** : ಶ್ರೀನಿಡುಂಗಾಲ್ನಾಡ ಶ್ರೀಮನ್ಮಹಾಮಲೆಯಾಳ ವಡ್ಡವ್ಯವಹಾರಿ . . . ಶ್ರೀಮತ್ಪಿವಶಕ್ತಿವರ್ದ್ಧತರ ಕಾಲಂ ಕರ್ಚ್ಚ ಧಾರಾಪೂರ್ವ್ವಕ(ಂ)ಮ್ಮಾಡಿ . . . ಬಿಟ್ಟು ಗದ್ಯಾಣಂ ೧೫೪ (ಸಾಶಾ. IX - i, ೧೭೯-೩೧; ಸು. 1113); ಅಲ್ಲಿಗೊರ್ಬ ವಡ್ಡವ್ಯವಹಾರಿ ಬಂದು ಬೀಡುಬಿಡುವುದುಂ (ಡಕಳು. ೪-೭೮ ವ). [< ಸಂ. ವೃದ್ಧವ್ಯವಹಾರಿನ್]

ವಡ್ಡಬ್ಯವಹಾರಿ 'ವಡ್ಡಬೆವಹಾರಿ' ನೋ.

ವಡ್ಡಮರ (ನಾ). ಹಳೆಯ ಮರ : ದೇವರಿಗೆ x x x ರಿರೆ ಬಡಗಲು ರಾಜಬೀದಿಯಿಂ ಪತ್ತಿರೆ ಮೂಡಲು ವಡ್ಡಮರದ ಮನೆಯಿಂ ಪತ್ತಿರೆ . . . ಪ್ರಭುಮುಖ್ಯ ಮಹಾಜನಂಗಳಿಗೆ ಪಾದಪೂಜೆಯಂ ಕೊಟ್ಟು (ಕೊಲ್ಲಾಶಾ. ೧೩-೪೫; 1166).

[ವಡ್ಡ$_1$ + ಮರ.]

ವಡ್ಡರಾಗಿ (ನಾ). ನೆನೆಯಿಸಿ ಒಣಗಿಸಿಗ ರಾಗಿ : ವಡ್ಡರಾಗಿ ಬೀಸಿ ಹುರಿಹಿಟ್ಟು ಮಾಡು (ಡೂಫ).

ವಡ್ಡರಾಗಿ ಹಿಟ್ಟು = ವಡ್ಡರಾಗಿಯನ್ನು ಬೀಸಿ ಮಾಡಿದ ಹಿಟ್ಟು : ವಡ್ಡರಾಗಿ ಹಿಟ್ಟು ಬಹಳ ಪೌಷ್ಟಿಕವಾದ ಆಹಾರ (ಡೂಫ). [ವಡ್ಡ + ರಾಗಿ.]

ವಡ್ಡರಾವುತ್ತ (ನಾ). ಹಿರಿಯ ರಾವುತ ; ಅಶ್ವಾರೋಹಿ : ವಡ್ಡರಾವುತ್ತರ ಮೊತ್ತಮೊದ್ದುಗೊಂಡು ಮಮ್ಮಳಿಯಾಗಿ ಕಾದುವ ಬೇವಸದೆಸಕದಿಂ ಮಾಮಸಕಂ ಮಸಗಿ (ಬಾಧಪು ೧೩-೮೪ ವ). [ವಡ್ಡ$_1$ + ರಾವುತ್ತ (< ರಾವುತ)]

ವಡ್ಡರಾವುಳ, ವಡ್ಡಲಾಉಳ, ವಡ್ಡಲಾಗುಳ, ವಡ್ಡಲಾವುಳ, ವಡ್ಡೆರಾವುಳ (ನಾ). ಒಂದು ಬಗೆಯ ತೆರಿಗೆ : ಶ್ರೀಮತ್ ವಡ್ಡರಾವುಳದ ಪೆರ್ಗ್ಗಡೆ ಸೋಮನಾಥಯ್ಯಂಗಳ ಬೆಸದೆ (ಸಾಶಾ. XX, ೩೪-೭; 1053); ಸಾಸಿರ ಪೇಜುಮತ್ತಿಂಗೆ ಪೆಜ್ಜುಂಕ ಬೆಲ್ಲೊಡೆ ವಡ್ಡರಾವುಳವೊಳಗಾಗಿ ಸುಂಕವೆಲ್ಲಂ ಪರಿಹಾರಂ ಮಾಡಿ ಬಿಟ್ಟುಂ (ಎಗಾ. XXVIII, ೩೫-೫೦; 1062). **ವಡ್ಡಲಾಉಳ** : ಗವಪೇಶ್ವರದೇವರ್ಗ್ಗೆ ಮೂಜುಲಕ್ಕ ಅಡಕೆಯ ಸುಂಕ ವಡ್ಡಲಾಉಳ ಹೆಜ್ಜುಂಕಮಂ ಬಿಟ್ಟರು (ಸಾಶಾ. IX - i, 238-4; 1142). **ವಡ್ಡಲಾಗುಳ**: ಪನ್ನಕೆಱೆ ವಡ್ಡಲಾಗುಳದ ಸುಂಕವೆರ್ಗ್ಗಡೆ ಸಂಗವಯ್ಯನುಂ ಬನವಾಸಿ ಪನ್ನಿರ್ಚ್ಚಾಸಿರದ ಸುಂಕವೆರ್ಗ್ಗಡೆ(ಡೆ) ಚಾವುಣ್ಡಮಯ್ಯನುಂ . . . ಅನ್ತನಿಬರುವಿಟ್ಟು (ಎಗಾ. XVI, ೭೮-೬೨: 1037). **ವಡ್ಡಲಾವುಳ** : ವಡ್ಡಲಾವುಳದ ಸುಂಕದವರು ಪೇಟ್ಗೆಂಗೆ ಕೊಳ್ವ ವೀಸವಂ ಪತ್ತು (ಎಗಾ. XVI, ೭೯-೬೭: 1037); ಸಪ್ತಾರ್ದ್ಧಿಲಕ್ಷೆಯ ವಡ್ಡಲಾವುಳದ ಸುಂಕಮುಮಂ ಪಡೆದು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ (ಸಾಶಾ. IX - i, ೨೨೩-೯; 1127). **ವಡ್ಡೆರಾವುಳ** : ಶ್ರೀಮತ್ ವಡ್ಡೆರಾವುಳದ ದಂಣ್ಡನಾಯಕಂ ನಾರಣಮಯ್ಯಂಗಳ್ (ಕಾಇ. ೧೦೭-೮-೧೭; 1078).

[ವಡ್ಡ? + ರಾವುಳ./ ತೆಲು. ವಡ್ಡರಾವಳಮು]

ವಡ್ಡಲಾಉಳ 'ವಡ್ಡರಾವುಳ' ನೋ.

ವಡ್ಡಲಾಗುಳ 'ವಡ್ಡರಾವುಳ' ನೋ.

ವಡ್ಡಲಾವುಳ 'ವಡ್ಡರಾವುಳ' ನೋ.

ವಡ್ಡವಾರ, ವೊಡ್ಡವಾರ (ನಾ). ಒಂದು ವಾರದ ಹೆಸರು ; ಶನಿವಾರ ; IP ಕೆಲವರು ಇದನ್ನು ಶನಿವಾರವೆಂದು, ಕೆಲವರು ಗುರುವಾರವೆಂದು, ಕೆಲವರು ಸೋಮವಾರವೆಂದು, ಕೆಲವರು ಮಂಗಳವಾರವೆಂದೂ ಅಭಿಪ್ರಾಯಪಡುತ್ತಾರೆ : ಕಳಶಜನನಿಂತು ಕೊಲಿಸಿದ ಏಳನೆ ಗದಂ ಧರ್ಮನಂದನಂ ಕ್ರೂರದಿನಂಗಳ ಪೆಸರಂ ಮಱೆಯಿಸಿ ಮಂಗಳವಾರಂ ವಡ್ಡ [ಪಾಠಾಂ. ಕಡ್ಡ]ವಾರಮೆಂಬಂತೆ ವಲಂ (ಗದಾಯು. ೩-೨೬); ಫಾಲ್ಗುಣಸುದ್ಧ ಪಂಚಮಿ ವಡ್ಡವಾರದಮ್ಮು . . . ಕೊಟ್ಟ ಕರಿಯ ನೆಲಂ (ಕಇಅ. ೧೨೦-೨೬-೬; 1055); ಸಿದ್ಧಾರ್ತ್ಥಿಸಂವತ್ಸರದ ಜ್ಯೇಷ್ಠದಮಾವಾಸೆ ವಡ್ಡವಾರ ಸೂರ್ಯ್ಯಗ್ರಹಣದಂದು (ಸೌಇಇ. IX - i, ೧೪೫-೨೬; 1079); ಕಾರ್ತ್ತಿಕಪುಣ್ಣಮೆ ವಡ್ಡವಾರದಂದಿನ ಸೋಮಗ್ರಹಣಪರ್ವ್ವನಿಮಿತ್ತಂ . . . ಭೂಮಿಯನಿಪ್ಪತ್ತುನಾಲ್ಕು ಮತ್ತರನಿತ್ತಂ (ಕೊಲ್ಹಾಶಾ. ೩-೪೦; 1070); ಜೇಷ್ಠಬಹುಳಚ್ಚಟ್ಟಿ ವಡ್ಡವಾರಂ ಶಾಶನ ನಿಂದುದು (ಎಕ. VII, ಶಿವಮೊ. ೧೦-೩; 1085?); ಶ್ರಾವಣಬಹುಳ ೫ ವಡ್ಡವಾರದಂದು (ಎಇ. XVIII, ೨೦೦-೨; 1107); ಸರ್ವ್ವಜಿತುಸಂವತ್ಸರದ ಫಾಲ್ಗುಣ ಪೌರ್ಣ್ಣಮಿ ವಡ್ಡವಾರದಂದು (ಎಕ. VIII, ಶಿವಮೊ. ೫೧-೧೬; 1108?); ಶ್ರಾವಣಸುದ್ಧ ೭ ವಡ್ಡವಾರ [ದಂದು] (ಸೌಇಇ. VIII, ೩೭೦-೭; 1124); ಮಾಘಬಹುಳ ೧೪ ವಡ್ಡವಾರದಂದು ಶಿವರಾತ್ರಿಯ ಪರ್ವನಿಮಿತ್ತವಾಗಿ ಕೊಟ್ಟ ಸುಂಕ (ಎಇ. XIX, ೩೮-೪೭; 1144); ವೈಸಾಖಬಹುಳಪಣ್ಣಮಿ ವಡ್ಡವಾರ (ಎಕ. IX, ಚನ್ನಪ. ೬೪-೮; 1176); ಜ್ಯೇಷ್ಠಸುದ್ಧ ೩ ವಡ್ಡವಾರ ಉತ್ತರಾಯಣ (ಮೈಆರಿ. ೧೯೨೮; ೯-೪೦; 1183); ಪುಶ್ಯ(ಷ್ಯ) ಬಹುಳ ೧೦ ವಡ್ಡವಾರ ಪುತ್ತರಾಯಣ ಸಂಕ್ರಮಣ ವ್ಯತೀಪಾತದಲು (ಇಅ. XII, ೯೭-೩೪; 1187); ವೈಶಾಖಬಹುಳ ೭ವಡ್ಡವಾರ ಉತ್ತರಾಯಣ (ಎಕ. VI, ಕಡೂರು. ೭೭-೨೭; 1194); ಸಕವರ್ಷಂ ೧೧೧೮ ನಳಸಂವತ್ಸರದ ಜೇಷ್ಠಸುದ್ಧ ೧೩ ವಡ್ಡವಾರದಂದು ಧಾರಾಪೂರ್ವಕಂ ಮಾಡಿ (ಎಕ. XIV, ಗುಂಡ್ಲುಪೇ. ೨೭-೧೮; 1196); ಶ್ರೀವೀರವಜ್ರದೇವ ವರ್ಷದ ೯ನೆಯ ವಿಷುಸಂವತ್ಸರದ ದ್ವಿತಿಯವೈಶಾಖ ಶು ೧ ವಡ್ಡವಾರದಂದು (ಕಕುಲ. ೬-೭೦; 1303); ಮಾಘಸುದ್ಧತ್ರಯೋದಶಿ ವಡ್ಡವಾರ ರೋಹಿಣೀನಕ್ಷತ್ರ ಕರ್ಕಟಕ ಲಗ್ನದಲ್ಲಿ (ಎಕ. V, ಹಾಸನ. ೬೫-೩೬; 1557?); ಫಾಲ್ಗುಣ ಬಹುಳದಮಾವಾಸ್ಯೆ ವಡ್ಡವಾರದಂದು ಸೂರ್ಯಗ್ರಹಣನಿಮಿತ್ತಂ (ಮೈಆರಿ. ೧೯೩೫, ೪೯-೮೨; 17ನೆಯ ಶತ?); ತದ್ವರ್ಷಾಭ್ಯನ್ತರದ ಕಾರ್ತ್ತಿಕಪೌರ್ಣ್ಣಮಾಸಿ ವಡ್ಡವಾರದಂದು (ಶಾಸಪ. ೭೭-೮); ಚೈತ್ರಶುದ್ಧಪಂಚಮಿ ವಡ್ಡವಾರ (ಶನಿವಾರ) ವಿಜಯನಾರಾಯಣಪ್ರತಿಷ್ಠೆ ಮಾಡಿದರೆಂದೂ . . . ಕಂಡುಬರುತ್ತದೆ (ಹೊಯ್ಸಾವಾ. ೨೧). ವೊಡ್ಡವಾರ : ಜಯಸಂವತ್ಸರದ ಕಾರ್ತಿಕ ಸುದ್ಧಪಂಚಮಿ ವೊಡ್ಡವಾರದಂದು ಹವಾಳಿ ಪಾಳೆಯದಲು (ಎಕ. V, ಹಾಸನ. ೨೯-೩; 1174).

[< ಸಂ. ವೃದ್ಧವಾರ./ ತೆಲು. ವಡ್ಡವಾರ = ಶನಿವಾರ]

ವಡ್ಡವ್ಯವಹಾರಿ 'ವಡ್ಡಬೆವಹಾರಿ' ನೋ.

ವಡ್ಡಳಭತ್ತ (ನಾ). ಒಂದು ಬಗೆಯ ಭತ್ತ : ಭೂಮಿಯಲು . . . ವಡ್ಡಳಭತ್ತ ಮೂಡೆ ೭೭ (ಸೌಇಇ. ೧೯೨೯, ಮಂಗಳೂರು. ೪೬೪-೪೧; 1325).

[ವಡ್ಡಳ? (IP <— ತೆಲು. ವಡ್ಲು = ಭತ್ತ) + ಭತ್ತ$_1$ (< ಬತ್ತ)]

ವಡ್ಡಾಗರ (ನಾ). ದೊಡ್ಡ ಸ್ಥಳ ; ಹಿರಿದಾದ ನೆಲೆ : ಪುರಿಗೆಱೆಯ ೪೮ ಸಾಸಿರ ಮತ್ತಭ್ಯೂಮಿಯಿಂದೊಳಗೆಲೆಯಂ ಮಾಱುವ ತಳದೊಕ್ಕಲು ವಡ್ಡಾಗರವಾಡಿಯಾಗಿ ಪೇಱಿನಲುಂ ತಲೆವೊಱೆಯಲೆಲ್ಲಿ ತಂದಡಂ ದೇವರ್ಗ್ಗೆ ಪನ್ನಾಯದ ಸುಂಕಮುಮಂ . . . ಬಟ್ಟರ್ (ಎಇ. XVI, ೩೩-೩೭; 1102); IP ಈ ಪ್ರಯೋಗದಲ್ಲಿರುವ 'ವಡ್ಡಾಗರವಾಡಿಯಾಗಿ' ಎಂಬುದು 'ವಡ್ಡಾಗರವಾದಿಯಾಗಿ' ಎಂದಿರಬಹುದು; ಕರಿಗಳ ಕಣಿ ಶಬರರ ನಿಧಿ ಮರಗಳ ವಡ್ಡಾಗರಂ ದವಾಗ್ನಿಯ ಸತ್ರಂ ಹರಿಣಂಗಳ ಹರವರಿ (ಚಂದ್ರಪು. ೫-೪೭). [ವಡ್ಡ$_1$ + ಆಗರ$_1$]

ವಡ್ಡಾಚಾರ (ನಾ). ಪ್ರಾಚೀನ ಸಂಪ್ರದಾಯ : ವಡ್ಡಾಚಾರವ ನುಡಿನುಡಿದಂದೆಡ್ಡವೆ ಪೊಗಳ್ವಂಗೆ ಗುಡ್ಡಶಾಸ್ತ್ರನ್ವಿತ ಸಂವಡ್ಡಿಯನೆನ್ದು ಪೊಗಳ್ವುದು ವಡ್ಡಬ್ಯವಹಾರಿ ಮುದ್ದನಂ ಧರೆ ಸತತಂ (ಸೌಇಇ. IX - i, ೨೯೭-೫೯; 1177). [< ಸಂ. ವೃದ್ಧಾಚಾರ]

ವಡ್ಡಾರಾಧನೆ (ನಾ). ೧. ಹಿರಿಯರ ಆರಾಧನೆ ; ಪೂಜ್ಯರ ಆರಾಧನೆ. ೨. ಕನ್ನಡ ಸಾಹಿತ್ಯದ ಒಂದು ಪ್ರಾಚೀನ ಗದ್ಯಗ್ರಂಥದ ಪ್ರಚಲಿತ ಹೆಸರು : ಈ ಪೇಬ್ದ ಪತ್ತೊಂಭತ್ತು ಕಥೆಗ[ಳಂ] ಶಿವಕೋಟ್ಯಾಚಾರ್ಯರ್ ಪೇಬ್ದೂ[ರ್] ವಡ್ಡಾರಾಧನೆ ಸಂಪೂರ್ಣಂ (ವಡ್ಡಾರಾ. ೧೯೪-೧೩); ವಡ್ಡಾರಾಧನೆಯ ಗದ್ಯಶೈಲಿ ಇಡೀ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾಗಿದೆ (ಕಸಾಚ. ೭೪).

[ವಡ್ಡ$_1$ + ಆರಾಧನೆ./ ಸಂ. ವೃದ್ಧಾರಾಧನಾ]

ವಡ್ಡಿ$_1$ 'ಬಡ್ಡಿ$_2$' ನೋ.

ವಡ್ಡಿ$_2$ (ನಾ). ಓಡ್ರದೇಶ; IP ಈಗಿನ ಒರಿಸ್ಸಾ : ವರಕೌಶಲ ಪಲ್ಲವ ವಡ್ಡಿ ಕಾಶ್ಮೀರ ಕುರುಜಾಂಗಣ ಹಮ್ಮೀರ (ಜ್ಞಾನಚ. ೩೭-೧೦೪). [< ಪ್ರಾ. ಓಡ್ಡ./ ಸಂ. ಓಡ್ರ]

ವಡ್ಡಿನಾಯಕ (ನಾ). ೧. ಬಡ್ಡಿವ್ಯಾಪಾರದ ಮುಖಂಡ. ೨. ತಿರುಪತಿಯ ವೆಂಕಟೇಶ್ವರನನ್ನು ಧನಾಕರ್ಷಣೆ ಮಾಡುವನೆಂದು ಆಲಂಕಾರಿಕವಾಗಿ ಕರೆದಿರುವ ಹೆಸರು : ಎನ್ನ ಗುಡ್ಡದಂತಹ ಪಾಪ ತರಿದು ಕಾಯೊ ವಡ್ಡಿನಾಯಕ ಸಾರೆ ಕರೆದು (ಜಗದಾ. ೩೨೫). [ವಡ್ಡಿ$_1$ (< ಬಡ್ಡಿ$_2$) + ನಾಯಕ]

ವಡ್ಡೆರಾವುಳ 'ವಡ್ಡರಾವುಳ' ನೋ.

ವಡ್ರ (ಗು). ೧. ದೊಡ್ಡದಾದ ; ವಿಶಾಲವಾದ. (ನಾ). ೨. ದೊಡ್ಡದು ; ವಿಶಾಲವಾದುದು : "ವಿಶಂಕಟಂ, ಪೃಥು, ಬೃಹತ್ . . . ವಡ್ರ, ಉರು, ವಿಪುಲಂ - ೯ ವಿಶಾಲವಾದದ್ದು, ಅಗಲವಾದದ್ದು, ದೊಡ್ಡದು" (ಸಿದ್ಧಾಂತಿ. ೩೩೯).

[ಸಂ.]

ವಣಖಾಣ (ನಾ). (ದನಗಳಿಗೆ ಹಾಕುವ) ಅಡವಿಯ ಹುಲ್ಲು ; ವನದ ಮೇವು : ಕಳುಕು ಕಂಡಿಕೆ ವಣಖಾಣ ನಿಬನ್ದಿ ನೂಲ ಹದಿಕೆ ಅಡಕೆಯ ಸುಂಕ ಬೆಳ್ಳಾಯ ಸುಂಕ . . . ಸರ್ವಬಾಧಾಪರಿಹಾರವಾಗಿ . . . ಅಶೇಷಮಹಾಜನಂಗಳ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಎಕ. VI, ತರೀಕೆ. ೨೦-೨೯; 1185).

[ವಣ್ಣ (IP <— ಸಂ. ವನ) + ಖಾಣ]

ವಣಪ್ರಮಾಣ (ನಾ). (?) : ಆ ಚೆಂನ್ನಪಟ್ಟಣದ ಚಾವಡಿಗೆ ಸಲುವ ಕಿಱುಗವರ ಸ್ಥಳದ ಸುಳ್ಳೆರಿಯ ಕಾಲುವಳಿ ಹಿರಿಯಕಮನೆಯ ವಣಪ್ರಮಾಣೆನಲ್ಲಿ ಕುಳ ಬಳಿ ಸಾಂಮ್ಯ ಸಹ ವರಹ ನಾಲ್ವತ್ತು ಹೊಂನು ತೆಱುವ ಬೆಟ್ಟಹಳಿಯೆಂಬ ಗ್ರಾವಲು ಹಿಂದೆ ಹತೆಂಟು ಕಾಲದಿಂದ ನಾಮನಷ್ಟವಾಗಿ ನಿನಾಮವಾಯಿತು (ಎಕ. IX (S), ಚನ್ನಪ. ೨೯೯-೯; 1397).

[ವಣ? + ಪ್ರಮಾಣ]

ವಣಾರ (ನಾ). ಒಬ್ಬ ಕ್ಷುದ್ರದೇವತೆಯ ಹೆಸರು (?): ಕ್ಷೇತ್ರಪಾಲ ವಣಾರ ಭೈರವ ಮೈಲಾರ . . . ಮಾರಿ ಮಸಣಿ ಸೊಸಣಿ ಮೊದಲಾದ ದೈತ್ಯರು ವರಮನೀಗುಮೆಂಬಾಸೆಯೊಳ್ ಓರ್ವರಂ ಕಂಡೊರ್ವರೆಱಗುವುದುಂ (ವದ್ಯಸಾ. II, ೮೨೦ ವ). [?]

ವಣಿಕ$_1$ (ನಾ). ವರ್ತಕ ; ವ್ಯಾಪಾರಿ : "ವೈದೇಹಕಃ, ಸಾರ್ಥವಾಹಃ, ನೈಗಮಃ, ವಾಣಿಜಃ, ವಣಿಕಃ . . . ಕ್ರಯವಿಕ್ರಯಿಕಃ — ೯ ವರ್ತಕತನ ಮಾಡುವವನ ಹೆಸರು, ಕೊಂಡು ಮಾರುವ ವ್ಯಾಪಾರಿಯು, ದುಕಾನ್‌ದಾರ" (ಸಿದ್ಧಾಂತಿ. ೨೯೭).

[ಸಂ. ವಣಿಚ್]

ವಣಿಕ$_2$ (ನಾ). (?): ಕಣಿಕದ ಬಟುವ ತೆಗೆದು ವಣಿಕ ಸೂಸಲನಿಕ್ಕಿ ಮಣಿದು ಪೈಠವದ ವರ್ತುಳ ಭಾಷಣಂಗೈದು ಲಣಿತ ಗವಿಯಿಂ ಪಚನಿಸುತ್ತ ಷರ್ಕರೆಗೂಡಿ . . . ನವ ಹೂರಗೆಯನರ್ಪಿಸಿದರಣಿವೆತ್ತು ಬಿಸಿಯ ಘೃತದಿ (ಲಿಂಗಪು. ೮-೧೦). [?]

ವಣಿಕಾತೃಣ (ನಾ). ಒಂದು ಬಗೆಯ ಹುಲ್ಲು : "ದುಗ್ಧಿಕಾಕಃ — ವಣಿಕಾತೃಣ" (ಓಷಧಿ. ೭೮). [ಸಂ.]

ವಣಿಕೆ (ನಾ). = ವಣಿಕಾತೃಣ: "ವಣಿಕಾ — ವಣಿಕಾತೃಣ" (ಓಷಧಿ. ೧೪೬).

[ಸಂ. ವಣಿಕಾ]

ವಣಿಗ₁ (ನಾ). = ವಣಿಕ₁ : ಸಾಸಿರ್ಬ್ಬರುಂ ಸ್ಥಳದ ಸಮಸ್ತ[ಹೊ]ನ್ನ ವಣಿಗರುಂ ತಮ್ಮ ಧರ್ಮ್ಮವಾಗಿ ಶ್ರೀಸಿದ್ಧೇಶ್ವರದೇವರಂಗಣದ ಮಠದ ಕಟುಕಲ್ಲು . . . ಹೇರಿಂಗೆ ಇರ್ಪತ್ತೈದೆಲೆಯ [ಂ] . . . ಬಿಟ್ಟರು (ಕಇಅ. ೧೫-೪-೧೯೯; ಸು. 1093).

[< ಸಂ. ವಣಿಜ್]

-ವಣಿಗ₂ (ಪ್ರ). ಒಂದು ತದ್ಧಿತಪ್ರತ್ಯಯ : ಕೈಕೊಳ್ಳುದು ವಣಿಗ ಪ್ರತ್ಯಯಮುಣ್ಬುದು ಜೀವಿತಮಾಗಿ ಬಱಿದೆ ತಿನುತಿರ್ಪವನೊಳ್ . . . ವಣಿಗ ಪ್ರತ್ಯಯಕ್ಕೆ – ಕೂಟ್ಟಣಿಗಂ (ಶಮದ. ೨೦೬); ಗ ಪ್ರತ್ಯಯೋ ವಣಿಗ ಪ್ರತ್ಯಯಶ್ಚ ವಾ ಭವತಃ . . . ಲಂಚದಿಂ ಜೀವಿಸುವಂ ಲಂಚಗಂ, ಲಂಚವಣಿಗಂ (ಶಬ್ದಾನು. ೪೧೫ ವೃತ್ತಿ).

-ವಣಿಗೆ (ಪ್ರ). (ಧಾತುಗಳಿಗೆ ಹತ್ತುವ) ಒಂದು ಭಾವನಾಮಪ್ರತ್ಯಯ : 'ನೆಱವಣಿಗೆ', 'ಬರವಣಿಗೆ' ಪರಾ.

ವಣಿಗ್ಗೇಹ (ನಾ). ವರ್ತಕನ ಮನೆ ; ವ್ಯಾಪಾರಿಯ ಗೃಹ : ಶ್ರೀನಿವಾಸ ದ್ವಿಚಾಧೀಶಪವಿತ್ರಾವಾಸವಿಸ್ತಾರದಿನೆಸೆವ ವಣಿಗ್ಗೇಹಸಂದೋಹದಿಂ ಶೋಭಿಪುದೆತ್ತಂ ನೋರ್ಪ್ಪಡಂ (ಕಇ. V, ೨೬-೨೬; 1147). [ಸಂ.]

ವಣಿಗ್ವರ (ನಾ). ಪ್ರಸಿದ್ಧನಾದ ವರ್ತಕ : ಈ ವಾನರಂ ಪೂರ್ವಜನ್ಮದೊಳ್ ಧ್ಯಾನಪುರದೊಳ್ ವಣಿಗ್ವರಂ [ಪಾಠಾಂ. ವಣಿಗ್ವಂಶಂ] ಕುಬೇರದತ್ತಂಗಂ ತದ್ವನಿತೆ ವಸುದತ್ತೆಗಂ ನಾಗದತ್ತನೆಂಬೊಂ ಮಗನಪ್ರತ್ಯಾಖ್ಯಾನಮಾಯೆಯಂ ಕೈಕೊಂಡು (ಆದಿಪು. ೫-೧೭ ವ); ವಣಿಗ್ವರರ್ ಗಂಧಿಗರ್ . . . ಜೂಜುಗಾಱರ್ ಮುಖ್ಯರೊದಗಿ ಬರುತಿರ್ದರೇಂ ವಣ್ಣಿಸುವೆನು (ಚೆಬಪು. ೪೭-೪೧). [ಸಂ.]

ವಣಿಗ್ವಾಟ (ನಾ). ವ್ಯಾಪಾರಸ್ಥರ ಬೀದಿ ; ಅಂಗಡಿಬೀದಿ : ಪಾಲ ಮುನ್ನೀರನಪಾಯಸ್ಥಾನಮೆಂದಾ ಪುರವರದ ವಣಿಗ್ವಾಟಹರ್ಮ್ಯಂಗಳೊಳ್ ಮುನ್ನಿನ ಸಂಚಾರಿಸ್ವಭಾವಂ ಪಱಿಪಡೆ ಪದಪಿಂ ಲಕ್ಷ್ಮಿ ನಿಶ್ಚಿಂತಮಿರ್ಪಳ್ (ವಂರಾಮಾ. ೧-೧೨೨); ವಣಿಗ್ವಾಟಪಂಕ್ತಿಗಳ್ಶೋಭಾಯಮಾನಮಾದುವು ರಾಜಮಾರ್ಗದೊಳ್ಪಹುಳಧನಸಂಪತ್ಸ ಮಾಜದಿಂದೆ (ಜೈಮಿಭಾ. ೬-೧೪). [ಸಂ.]

ವಣಿಗ್ವಿಟ (ನಾ). ವ್ಯಾಪಾರಿಯಾದ ವಿಟ : ಪೆಂಡಿರ ಬೇಟಮಮೇಳಿದಿಟಂ ಮಾಡದೆ ನುಡಿಯೆ ನಿರಾಕರಿಸಿ ಮತ್ತೊರ್ವಂ ಕೇಣಿಕಾಱವಿಟನಪ್ಪ ವಣಿಗ್ವಿಟನಿಂತೆಂದಂ (ಶಾಂತಿಪು. ೮-೯೬ ವ). [ಸಂ.]

ವಣಿಗ್ವಿದ್ಯೆ (ನಾ). ವ್ಯಾಪಾರವಿದ್ಯೆ ; ವಾಣಿಜ್ಯವಿದ್ಯೆ : ಅಸಿಮಷಿಕೃಷಿ ವಣಿಗ್ವಿದ್ಯಾಶಿಲ್ಪಕರ್ಮಂಗಳಿಂ ಶುದ್ಧವೃತ್ತಿಯಿಂದರ್ಥೋಪಾರ್ಜನಂಗೆಯ್ವ ವಾರ್ತೆಯುಂ . . . ನಿಮಗಿವು ಕುಲಾಚಾರಂಗಳೆಂದಱಿಯೆ ಪೇಟ್ಟು ಕೈಕೊಳಿಸಿ (ಆದಿಪು. ೧೫-೧೩ ವ); ವಾರ್ತೆಯೆಂಬುದಸಿಮಷಿಕೃಷಿವಣಿಗ್ವಿದ್ಯಾದಿಕರ್ಮಂಗಳೊಳ್ ವಿಶುದ್ಧಿವೃತ್ತಿಯಿನರ್ಥೋ ಪಾರ್ಜನಂಗೆಯ್ವುದಕ್ಕುಂ (ಅಚಿಪು. ೧೨-೧ ವ). [ಸಂ. ವಣಿಗ್ವಿದ್ಯಾ]

ವಣಿಜ (ನಾ). ೧. ವ್ಯಾಪಾರ ; ವಾಣಿಜ್ಯ. ೨. ವ್ಯಾಪಾರಿ ; ವರ್ತಕ : ಒರ್ವಂ ನಡುವಿರುಳ್ಳೋಗಿ ವಣಿಜರನೊಟ್ಟಯ್ಸಿ ವಂಚಿಸಿ ಕುಱಿದಂದೆನೆಂದಂ (ಸುಕುಮಾ. ೭-೧೫); ತಾರಾಗಣದೊಳು ಚಂದಿರನಿಪ್ಪ ಗಣನೆಯಿಂದೊಪ್ಪುತಿಹನು ಸಣ್ಣಣಾಖ್ಯದ ವಣಿಜ ಶಿರೋಮಣಿಯಲ್ಲಿ (ನಾಗಕು. ೧-೪೧). ೩. [ಜ್ಯೋತಿ] ಏಳನೆಯ ರಾಶಿ ; ತುಲಾರಾಶಿ.

[ಸಂ. ವಣಿಜ್]

ವಣಿಜಕ (ನಾ). = ವಣಿಜ ೨. [ಸಂ.]

ವಣಿಜಾಕರಣ (ನಾ). [ಜ್ಯೋತಿ] ದಿನದಲ್ಲಿ ಬರುವ ಬವಕರಣ, ಬಾಲವಕರಣ, ಕೌಲವಕರಣ, ತೈತುಲೆಕರಣ, ಗರಜೆಕರಣ, ವಣಿಜಾಕರಣ, ಭದ್ರೆ ಎಂಬ ಏಳು ಚರಕರಣಗಳಲ್ಲಿ ಒಂದು : ಗರಜಾಕರಣಕ್ಕೆ ಕಲ್ಯೋ ೧೧ ಗಳಿಗೆ ಮೇಲೆ ತ್ಯಾಜ್ಯಾ ವಣಿಜಾಕರಣಕ್ಕೆ ನಾಗಿ ತ್ಯಾಜ್ಯಾ ಇಲ್ಲಾ (ಭಾಸ್ಕರ. ೭೧-೭). [ಸಂ.]

ವಣಿಜೆ (ನಾ). = ವಣಿಜಾಕರಣ : ವಣಿಜೆ ಬವಕರಣ ಬಾಲವಕರಣ ಭದ್ರಾಕರಣ – ನಾಲ್ಕಱಲ್ಲಿ ಸಂಕ್ರಮವಾದೊಡೆ ಅರ್ಘವು [ಕುಂದುವದು] (ಲೋಕೋವ. ೧ ೨೭ ಟೀಕು); ವರತೈತುಲೆಯುಭಯಕುಲವ ತಾಂ ಸಲಹುವದು ಗರಜೆ ವಣಿಜೆಗಳೆಂಬ ಕರಣ ವಾಣಿಜ್ಯ ಮುಖ ಪರಿಪರಿಯ ಕರ್ಮಫಲಮಂ ಕೊಡುವುದ್ಕೆ ಶಕುನಿಯೆಂಬ ಕರಣದಿ ನೋಡು (ಚತುಪು. ೬-೧-೨೯). [ಸಂ. ವಣಿಜ]

ವಣಿಜ್ಯ (ನಾ). ವ್ಯಾಪಾರ ಮಾಡುವ ವೃತ್ತಿ : "ವಣಿಜ್ಯಂ, ವಾಣಿಜ್ಯಂ, ವಣಿಕ್ತ್ವಂ – ಈ ೩ ಹರದು" (ಹಲಾಯು. ೧೨೫-೭೬). [ಸಂ.]

ವಣಿಜ್ಯೆ (ನಾ). = ವಣಿಜ್ಯ : "ವಾಣಿಜ್ಯಂ, ವಣಿಜ್ಯಾ – ೨ ವರ್ತಕದ ಪೆಸರು, ವಾಣಿಜ್ಯ, ವ್ಯಾಪಾರ" (ಸಿದ್ಧಾಂತಿ. ೨೯೭). [ಸಂ. ವಣಿಜ್ಯಾ]

ವಣ್ಣ 'ಬಣ್ಣ' ನೋ.

ವಣ್ಣಾಕ (ನಾ). ಮಡಿವಾಳ ; ಅಗಸ : ನಗರೂರ ಬೆಳ್ಳಿಯರುಂ ಮರವೂರ ವಣ್ಣಾಕರುಂ ಕಲ್ಲದುಪಿನ ಮಾದಡಿಯು ಮೊದೂರ ಜಿಯಚಾಯರುಂ ನರಸಾಕ್ಷಿ (ಮೈಆರಿ. ೧೯೨೭; ೧೧೮-೪೫; 726 ?). IP ಇದು 'ವಣ್ಣಾತ' ಎಂಬುದರ ಅಪಲಿಖಿತ ವಿರಬಹುದು. [<— ತಮಿ. ವಣ್ಣಾತ್ತಾನ್]

ವಣ್ಣಿಸು 'ಬಣ್ಣಿಸು' ನೋ.

ವತಂಸ (ನಾ). ಕಿವಿಯಲ್ಲಿ ಧರಿಸುವ ಆಭರಣ : ನಾರೀಲೋಕಮಿದೆಂಬಿನಂ ನೆರೆದು ಬಂದತ್ತತ್ತಮುತ್ತಂ . . . ಕನನ್ಮಣಿವತಂಸಾಸ್ಫಾಲಿತಾಂಸಂ ಲಸದ್ಧೋರಾಂ ದೋಳನಜಾತಕಂಕಣಝಣತ್ಕಾರಂ ಪುರಸ್ತ್ರೀಜನಂ (ಚಂದ್ರಪು. ೧೦-೩). [ಸಂ.]

ವತನ, ವತನು (ನಾ). ೧. ವಂಶಪರಂಪರೆಯಾಗಿ ಬಂದ ಆಸ್ತಿ, –ಭೂಮಿ ; ಹಿರಿಯರಿಂದ ಬಂದ ಸ್ವತ್ತು : ಜಾಗೀರದಾರರ ವತನದಲ್ಲಿ ಹಿಂದೆ ಎಂದೂ ಪಾಲಾಗಿರಲಿಲ್ಲ (ಗ್ರಾಮಾಯ. ೯); ನೀನು ಪಿತೂರಿಯಾಗಿಲ್ಲವೆಂಬುದನ್ನು . . . ತೋರಿಸದಿದ್ದರೆ ನಿನ್ನ ವತನವನ್ನೇ ಖಾಲಸಾ ಮಾಡಿಸಿ ಬಿಡುವೆನು (ಹಬ್ಬಿಬ. ೨೭೩). ೨. ಇನಾಮಾಗಿ ಪಡೆದ ಭೂಮಿ ; ಜಹಗೀರು : ಲಡಾಯಿ ಮಾಡಾಕ ನಮ ಗೂಡ ಕೂಡಿದರ ಏಳೂರ ವತನಾವ ಕೊಡತೇವಿ (ಲೋಕಗೀ. ೨೨೦); ಆಕೆಯ ಮನೆತನದವರಿಗೆ ಬಾದಶಹನಿಂದ ವಂಶಪರಂಪರೆಯಿಂದ 'ವತನ' ಸಿಕ್ಕಿತೆಂದೂ, ಹಲಸಂಗಿಕೋಟೆಯ ಇತಿಹಾಸವಿದೆ (ಕವಪು. ೭-೨೨). ೩. ವಂಶಪರಂಪರಾಗತವಾದ ಉದ್ಯೋಗದಿಂದ ಬರುವ ಆದಾಯ, –ಗಳಿಕೆ : ಜೋಯಿಸರು . . . ಒಕ್ಕಲಿಗರಿಗೆ ಪಂಚಾಂಗ ಹೇಳುವದೇ ಇವರ ಮುಖ್ಯಉದ್ಯೋಗವು. ಆದರೂ ತಕ್ಕಮಟ್ಟಿಗೆ ವತನ ಸಂಪಾದಿಸಿಕೊಂಡು ಇವರು ಸುಖಿಯಾಗಿದ್ದಾರೆ (ಕಭಾಗೆ. ೮೬). ೪. ವಂಶಪರಂಪರೆಯಾಗಿ ಬಂದ ಉದ್ಯೋಗ, –ಕಸುಬು : 'ವತನದಾರ' ಪರಾ. ವತನು : ೧. ಏಕಾಕಿಯಾದ ಒಬ್ಬ ಮೂಲಗಾರನು ಅನುಭವಿಸಿದಂಥಾ ಒಂದು ವತನಿನ ಪರಾಧೀನವು . . . ಅವನ ವಾರಿಸ್ಥಾರನು ಅಭ್ಯಂತರಿಸಬಹುದು (ಪಾಶ್ಚಾವಿ. ೪೪೬).

[<— ಅರ. ಹಿಂ. ಮರಾ. ವತನ್./ ಪ್ರಾ. ವತ್ತಣ./ ಸಂ. ವರ್ತನ]

ವತನದಾರ (ನಾ). ೧. ವಂಶಪರಂಪರೆಯಾಗಿ ಬಂದ ಭೂಮಿಯನ್ನುಳ್ಳವನು, –ಸ್ವತ್ತನ್ನು ಹೊಂದಿರುವವನು : ವತನದಾರರೂ ವ್ಯಾಪಾರಸ್ಥರೂ ಹೊರ್ತಾಗಿ ಮಿಕ್ಕಾವವರೆಲ್ಲರು ಆಲಸ್ಯ, ಶರೆ – ಈ ಯೆರಡು ಕಾರಣಗಳಿಂದ ಬಡತನದ ಸ್ಥಿತಿಯಲ್ಲಿ ಇದ್ದಾರೆ (ಕಭಾಗೆ. ೨೨೮); ರಂಗಪ್ಪ ವತನದಾರನೂ ಅಲ್ಲ, ಯಾವೊಬ್ಬ ಉದ್ಯೋಗಿಯೂ ಅಲ್ಲ (ಮುಗಿಯು. ೨೨೬). ೨. ಜಹಗೀರನ್ನು ಪಡೆದಿರುವವನು; ಜಹಗೀರುದಾರ: ನರಸಿಂಗರಾಯ ದೇಸಾಯರಿಗಿಂತ ಎಷ್ಟೋ ಚಿಕ್ಕವನಾದರೂ ಸರಿಜೋಡಿಯ ವತನದಾರರು ಎಂಬ ಸಲಿಗೆ (ನಿರಾಭ. ೧೦೪); ಎಲ್ಲ ದೊಡ್ಡ ವತನದಾರರ ಮಕ್ಕಳೂ ಚಿಕ್ಕವಯಸ್ಸಿನಲ್ಲೇ ಆಸ್ತಿಪಾಸ್ತಿಯ ಬಗ್ಗೆ ಜಾಗೃತರಾಗುತ್ತಾರೆ (ಗಂಮಾಯಿ. ೫೦). ೩. ವಂಶಪರಂಪರೆಯಾಗಿ ಬಂದ ಅಧಿಕಾರದಲ್ಲಿರುವವನು, – ಉದ್ಯೋಗದಲ್ಲಿರುವವನು : ಅದರ ನಿತ್ಯದ ಕರ್ಚಿನಲ್ಲಿ ಎರಡು ಮಧ್ಯಮವರ್ಗದ ಕೆಳಕಾರಕೂನರನ್ನು . . . ಎಂಟು ವತನದಾರ ಕುಲಕರ್ಣಿಗಳನ್ನಾಗಲೀ ಸಾಕಬಹುದಿತ್ತು (ಹುಚ್ಚುಹು. ೬೯). [ವತನ + – ದಾರ್ಕ./ ಮರಾ. ವತನ್‌ದಾರ್]

ವತನಪತ್ರ (ನಾ). ಜಮೀನಿಗೆ ಸಂಬಂಧಿಸಿದ ಕಾಗದ, –ಪತ್ರ ; ಪಟ್ಟೆ ; ದಸ್ತಾವೇಜು : ನನ್ನ ಹೊಲದ ಬಗ್ಗೆ ವತನಪತ್ರ ಆದದ್ದು ಖರೆ ಅದೆ (ರೂಢಿ).

[ವತನ + ಪತ್ರ]

ವತನು 'ವತನ' ನೋ.

ವತಿ (ನಾ). ಕಡೆ ; ಪರ ; ಪಕ್ಷ.

ವತಿಯಿಂದ = ಪರವಾಗಿ ; ಕಡೆಯಿಂದ : ಅತ್ತ ಅಮೇರಿಕೆಯಲ್ಲಿ ಹಿಂದೂಸ್ಥಾನದ

ವಿರುದ್ಧವಾಗಿ ಪ್ರಚಾರಕಾರ್ಯಗಳು ಬ್ರಿಟಿಷ್ ಸರಕಾರದವರ ವತಿಯಿಂದಲೇ ವ್ಯವಸ್ಥೆಯಾಗುತ್ತಿದ್ದುವಂತೆ (ಸೇನಾಹ. ೨೮); ಸೈನ್ಸ್‌ಅಸೋಷಿಯೆಷನ್ನದ ವತಿಯಿಂದ ಒಂದು ಟ್ರಿಪ್ಪಿನ ಗೊಂದಲ ಪ್ರಾರಂಭವಾಯಿತು (ಸ್ವಪ್ನದ. ೨೨).

[<— ಮರಾ. ವತೀ, ವತೀನೇಂ]

ವತ್ತ 'ಬತ್ತ' ನೋ.

ವತ್ತಾ (ನಾ). (ಸ್ಥೂಲವಾದ ಶರೀರದ) ಬೊಜ್ಜು ; ಕೊಬ್ಬು (?): ಜಟ್ಟಿಸಾಧನೆಯಲ್ಲಿ ವತ್ತಾ ನಾಶವು ಆಗುವುದು. ಇದು ಸಾಧನೆಯ ಗುಣವು (ಖಡ್ಗಟೀ. ೫-೮೩). [?]

ವತ್ತಿಗೆ 'ವಂತಿಗೆ' ನೋ.

ವತ್ತುಗಾಯಿ (ನಾ). ಒಂದು ಬಗೆಯ ತೆರಿಗೆ, —ಸುಂಕ : ನಾರಾಯಣಭಟ್ಟರು ಎಱದು ಕೊಟ್ಟ ಸ್ಥಳಗಳಿಗೆ ಮುಡಗಡಿ . . . ಎಸೆ ಒಸಗೆ ಬಿಡಾರ ವತ್ತುಗಾಯಿ ಮೊದಲಾಗಿ ಆಉದೂ ಸಲ್ಲ (ಕಾ. I, ೫೪-೫; 1433?); ಶಾಸನಗಳಲ್ಲಿ ಬರುವ ತೆರುವಣಗಳು :— ತೆರು . . . ಬಿಡಾರ, ವತ್ತುಗಾಯಿ, ಅರವಸ್ತು (ತುಳುನಾ. ೨೭೧). [?]

ವತ್ಸ (ನಾ). = ವಕಾರ : ಪರದೊಳ್ ಪಬಮಂಗಳ್ ನೆಲಸಿರೆ ವತ್ಸಂ (ತಮದ. ೨೯೨).

[ಸಂ.]

ವತ್ಸ (ನಾ). ೧. ಹಸು, ಎಮ್ಮೆ ಮೊದಲಾದುವುಗಳ ಎಳೆಯ ಕರು : "ಕರವೆಳೆಗಱು ವತ್ಸ" (ವಸ್ತುಕೋ. ೮೯-೩); ಪರಿವಾರಸುರಭಿಯೆನಿಸುವ ನರಸಿಂಹ ನರೇಂದ್ರಮಹಿಷಿ ಚಾಗಲೆ ನಿಚ್ಚಂ ಪರಿಜನವತ್ಸಸ್ನೇಹದೆ ತೊರೆದಮೃತಮನಱಿದು ಕಱೆವುತಿರ್ಪುದು ಸಹಜಂ (ಎಕ. V, ಚೇಲೂರು. ೧೯೩-೫೬; 1161). ೨. ಗಂಡುಕರು ; ಹೋರಿಕರು : "ವತ್ಸದೊಳು ಹೋರಿ" (ಶಬ್ದಮಂ. ೩೪). ೩. ಮಗು ; ಶಿಶು : ವಿವಿಧ ರಕ್ಷಾವಿಧಿಯಂ ವತ್ಸಂಗೆ ನೆಗಟ್ಟ ಸಕಲಸುಹೃತ್ಸಂತತಿ ಪರಸೆ ನಂದನಿರ್ದಂ ಸುಖದಿಂ (ಜಗವಿ. ೩-೨೬); ನಂಬಿಯಣ್ಣನಾ ದೇವಾಲಯಕ್ಕೆ ಬಂದು ತಾಯ ಹೋಬಳಿಯನಾ ವತ್ಸನಱಿವಂದದಿಂ (ನಂಬಿರ. ೧೧-೬೧). ೪. ಮಗ ; ಪುತ್ರ. ೫. ಮಗನೆಂದು ಭಾವಿಸಿ ಸಂಬೋಧಿಸುವ ಅಕ್ಕರೆಯ ನುಡಿ : ವತ್ಸ ನಾರದನೆ, ಇದೆಲ್ಲಿಂದ ಭಂದಿತು? (ಶಾಕುಂತ. ೫೧ ೪); ದಿಟವೊರೆದೆ, ಹೇ ವತ್ಸ, ಗಿರಿವನ ಪ್ರೀತಿ ತಾಂ ದೈವಕೃಪೆ ದಲ್ (ಶ್ರೀರಾಮಾ. ೩೨ ೧೧೬). ೬. ಬಾಲಕ; ಹುಡುಗ. ೭. ಗುರುತು; ಲಾಂಛನ. ೧,೪,೭: ಭವದೀಯ ಮನೋಹರಬಾಲ್ಯವಿನೋದಾಮೃತದೊಳೆಯ್ದೆ . ತೀವಿದ ಮತ್ಸ್ಯಾಂತವನಿಂತೀ ವಿಷದಿಂ ತೀವುವುದೇ ಶ್ರೀವತ್ಸವತ್ಸವತ್ಸಸವತ್ಸಾ (ಜಗವಿ. ೩-೯೨). ೮. ಎದೆ ; ವಕ್ಷಸ್ಥಲ : "ಭುಜಮಧ್ಯಂ, ಉರಃ, ವಕ್ಷಃ, ಹೃದಯಂ, ವತ್ಸಃ — ಈ ೫ ಉರಂ" (ಹಲಾಯು. ೮೭-೩೭೩). ೯. ವರ್ಷ ; ಸಂವತ್ಸರ : "ಆ ವತ್ಸರಪ್ರತತಿಯಲಿ ವತ್ಸಮೆಂಬುದು" (ಮಂಗರಾ. ೧೪೧-೧೩). ೧೦. ಒಂದು ದೇಶದ ಹೆಸರು. [ಸಂ.]

ವತ್ಸಕ (ನಾ). ೧. = ವತ್ಸ ೧. ೨. ಒಂದು ಬಗೆಯ ಔಷಧೀಸಸ್ಯ ; "ಗಿರಿಮಲ್ಲಿಕಾ" (ಪಂಡಿತ. ೨೮೫) : "ಕೋಡಸಿಂಗೆ, ಕೋಡಮುರುಕ, ವತ್ಸಕ" (ಸಸ್ಯನಿ. ೧೩೬). [ಸಂ.]

ವತ್ಸಕಾಮೆ (ನಾ). ೧. ಕರುವಿಗಾಗಿ ಹಾತೊರೆಯುತ್ತಿರುವ ಹಸು : "ವತ್ಸಕಾಮಾ, (ತು)ವತ್ಸಳಾ — ಈ ೨ ಕಡುಗಂದಿ" (ಹಲಾಯು. ೪೫-೧೧೬). ೨. ಪುತ್ರಸಂತಾನವನ್ನು ಅಪೇಕ್ಷಿಸುವ ಹೆಂಗಸು. [ಸಂ. ವತ್ಸಕಾಮಾ]

ವತ್ಸಕುಲ (ನಾ). ೧. ಕರುಗಳ ಗುಂಪು, — ಸಮೂಹ : ಪಸುರ್ವುಲ್ಲೊಳ್ ತಾಂಗಿ ಕಾಳಿಂದಿಯೊಳ್ ತಿಳಿನೀರೂಡಿ ಮುರಾರಿ ವತ್ಸಕುಲಮಂ ಕಾದಂ ಮಹೋತ್ಸಾಹದಿಂ (ಜಗವಿ. ೩-೭೧). ೨. (ವತ್ಸನೆಂಬ ಋಷಿಯು ಮೂಲಪುರುಷನಾಗಿರುವ ಕುಲದ) ಒಂದು ಗೋತ್ರದ ಹೆಸರು : 'ವತ್ಸಕುಲತಿಲಕ' ಪರಾ. [ಸಂ.]

ವತ್ಸಕುಲತಿಲಕ (ನಾ). ವತ್ಸಕುಲಗೋತ್ರದವರಲ್ಲಿ ಶ್ರೇಷ್ಠನಾದವನು : ವತ್ಸಕುಲ ತಿಲಕನಭಿಜನವತ್ಸಲನಭಿಮಾನಮೂರ್ತಿ . . . ಪಂಪಂ (ಆದಿವು. ೧ ೩೦). [ಸಂ.]

ವತ್ಸಗೋತ್ರ (ನಾ). = ವತ್ಸಕುಲ ೨ : ನಯಶಾಲಿ ವತ್ಸಗೋತ್ರಶ್ರಯಣೀಯನ ನೇಕಸಕಳಶಾಸ್ತ್ರಾರ್ಥವಿನಿಶ್ಚಯಮತಿ ಕೃತಿ ಮಾಧವಸೋಮಯಾಜಿ ಸಲೆ ನೆಗಟ್ಟನಾ ಸಮುದ್ರಂಬರೆಗಂ (ಪಂಪಭಾ. ೧೪-೪೨). [ಸಂ.]

ವತ್ಸತರ (ನಾ). ಪಳಗಿಸಲು ಅರ್ಹವಾದ ವಯಸ್ಸಿನ ಹೋರಿ, —ಗೂಳಿ : "ದಮ್ಯಃ, ವತ್ಸತರಃ — ೨ ಹೊರುವದಕ್ಕೂ, ಎಳೆಯುವದಕ್ಕೂ, ಉಳುವದಕ್ಕೂ ತಿದ್ದಲ್ಪಟ್ಟ ಹೋರಿಗರ" (ಸಿದ್ಧಾಂತಿ. ೨೯೨). [ಸಂ.]

ವತ್ಸನಾಭ (ನಾ). ೧. ಒಂದು ಬಗೆಯ ಉಗ್ರವಾದ ವಿಷ : "ಶೃಂಗಿಕಃ, ವತ್ಸನಾಭ(ಗ್ರ): . . . ವಿಸ್ಫುಲಿಂಗಃ — ಈ ೬ ವಿಷಭೇದಂಗಳ್" (ಹಲಾಯು. ೧೦೬-೨೫). ೨. (?): ವಿಮಲವಾಹನಂ ವಿರಕ್ತಚಿತ್ತನಾಗಿಯುಂ . . . ದೀಕ್ಷಾಭರಮಂ ಕೆಯ್ಕೊಂಡು ಗೆಲ್ಲಂಗೊಳಲೆ ಬಗೆದನುತ್ಸಾಹದಿಂ ಜೈನಧರ್ಮೋದ್ಧರಣು ಭವ್ಯಾಬ್ಜಮಿತ್ರಂ ವಿನಯನಿಧಿ ಸುಹೃದ್ವತ್ಸಲಂ ವತ್ಸನಾಭಂ (ಅಜಿವು. ೨-೧೧೬). [ಸಂ.]

ವತ್ಸನಾಭಿ (ನಾ). ೧. ಒಂದು ಬಗೆಯ ವಿಷಯುಕ್ತವಾದ ಸಸ್ಯ ; ಬಚನಾಗ ; ಕಡಗೋಲಮಂಡೆ : "ರಕ್ತಶೃಂಗಿಕಂ — ವತ್ಸನಾಭಿ" (ಓಷಧಿ. ೧೩೫); ವತ್ಸನಾಭಿ, ಕಣಗಿಲ ಮುಂತಾದ ವಿಷವೃಕ್ಷಗಳು ಯಾವ ನೀರಿನ ದಂಡೆಯಲ್ಲಿ ಬೆಳೆಯುತ್ತವೋ ಅದನ್ನು ಸರ್ವಥಾ ಕುಡಿಯಬಾರದು (ಮುಂಬಯ. ೫-೧೫೬). ೨. ವತ್ಸನಾಭಿಗಿಡದ ಬೇರಿಂದ ತಯಾರಿಸಿದ ಕಟುವಾದ ವಿಷ : ಕಾಳಕೂಟಂ ವತ್ಸನಾಭಿಯಂ ಸಿಂಗಿಯಂ ಹಾಲಾಹಲಂಗಳಂ ಕಬ್ಬುನದ ಕೋವಿಯೊಳು ಮೇಳವಿಸಿ ಕಡುಗಾಸೆ . . . ಭುಗಿಲಿಡುವ ವಿಷವ ಕೇಳಬಹುದೇ (ಸಿದ್ಧರಾ. ೫-೧೪); ಕಾಲಕೂಟಂ ವತ್ಸನಾಭಿಯು ಹಾಲಹಲಮುಂ ಸಿಂಗಿ ಮೊದಲಾಭೀಳಗರಳಂಗಳನವೆಲ್ಲಂ ಕಲಸಿ ಅಱಿಯಿಸಲು (ಬಸವು. ೫೮-೫೫). [< ಸಂ. ವತ್ಸನಾಭ]

ವತ್ಸರ (ನಾ). ವರ್ಷ ; ಸಂವತ್ಸರ : ಇತ್ತ ಬಲದೇವನುಂ ಪುರುಷೋತ್ತಮನು ಮನೇಕವತ್ಸರಂ ರಾಜ್ಯಸುಖಾಯತ್ತಮನರ್ ನಿರವಧಿಸಂಪತ್ತಿಗೆ ನೆಲೆಯೆನಿಸಿ ನಾಡೆ ನಲಿಯುತ್ತಿರ್ದರ್ (ವಂರಾಮಾ. ೧೬-೪೩); ದುರ್ಮತಿ ವತ್ಸರದೊಳ್, ಸುತ್ತೇಂ, ಅತಿಪಾತಂ ಮಧುಪಾನವ್ಯಸನದೊಳ್, ಮಧುಪಾನವ್ಯಸನಮಾಱಡಿಯೊಳ್ ಆಱಡಿ ಪಾದರಿಯೊಳ್ ಪಾವರ ಬನದೊಳಲ್ಲದಿಲ್ಲಂ (ರಾಮಾಶ್ವ. ೮-೧). [ಸಂ.]

ವತ್ಸಲ, ವತ್ಸಳ (ಗು). ೧. ಅಕ್ಕರೆಯಿಂದ ಕೂಡಿದ ; ಮಮತೆಯನ್ನು ಹೊಂದಿರುವ. (ನಾ). ೨. ಅಕ್ಕರೆಯ ಭಾವನೆ ; ವಾತ್ಸಲ್ಯ ಮನೋಭಾವ. ೩. ಅಕ್ಕರೆ ಇರುವವನು ; ಪ್ರೀತಿಯುಳ್ಳವನು : "ಸ್ನಿಗ್ಧಃ, ವತ್ಸಲಃ, — ಸ್ನೇಹವುಳ್ಳವನ ಹೆಸರುಗಳು" (ಸಿದ್ಧಾಂತಿ. ೩೨೬). ವತ್ಸಳ : ೩. ವತ್ಸಳರೆನಿಸುವ ಬುಧರಿನಮತ್ಸರರಿಂ ಕೃತಿ ಕೃತಾರ್ಥಮಕ್ಕುಮಮೋಘಂ (ಜಗವಿ. ೧-೧೧). [ಸಂ.]

ವತ್ಸಲತ್ವ (ನಾ). ಪ್ರೀತಿ ; ಅಕ್ಕರೆ ; ವಾತ್ಸಲ್ಯ : ಮಾದಿರಾಜನ ರೂಪನಾಕ್ಷಣದೆ ಸಂಗಮೇಶ್ವರನಲ್ಲಿ ಕಂಡಷ್ಟಾಂಗವೆಱಗಿ ನಮಿಸುವ ಮಾತ್ರದಿ ಮುಂಗಡೆಯೊಳಿರೆ ಬಸವನಚ್ಚರಿವಡುತ ಪೊಡಮಡಲು ಹಿಂಗದಚಲಿತವತ್ಸಲತ್ವಂ ಸಾಂಗಮಾಗಿರಲು (ಬಸವು. ೨೦-೩೪). [ಸಂ.]

ವತ್ಸಲಾಂಛನ (ನಾ). ೧. ವಿಷ್ಣುವಿನ ವಕ್ಷಸ್ಥಳದಲ್ಲಿರುವ ಶ್ರೀವತ್ಸ ಎಂಬ ಚಿಹ್ನೆ, —ಕುರುಹು. ೨. ವಿಷ್ಣು : ಚತುರ್ಮುಖನ ನಾಲಗೆಯ ಹಾಸಿ ತುಟಿದಿಂಬು ಮಾಡಿದಾಕೆ ವತ್ಸಲಾಂಛನನ ಹೃದಯಕಮಲದಲಿ ಮನೆಯ ಹೂಡಿದಾಕೆ . . . ಹೀಗೆ ಕುಣಿಯೆ ಆನಂದಲಹರಿ ಈ ಜೀವ ಸೇರಿದಾಕೆ (ಹಾಡುಪಾ. ೫೯-೨).

[ಸಂ.]

ವತ್ಸಲೆ (ನಾ). = ವತ್ಸಕಾಮೆ ೧ : "ವತ್ಸಕಾಮಾ (ತು), ವತ್ಸಲಾ [ಪಾಠಾಂ. ಳಾ] — ಈ ೨ ಕಡುಗಂದಿ" (ಹಲಾಯು. ೪೫ ೧೧೬). [ಸಂ. ವತ್ಸಲಾ]

ವತ್ಸಳ 'ವತ್ಸಲ' ನೋ.

ವತ್ಸಾದನಿ (ನಾ). ಒಂದು ಬಗೆಯ ಬಳ್ಳಿ ; ಅಮೃತಬಳ್ಳಿ : "ಅಮೃತಾ, ವತ್ಸಾದನೀ, ಗುಳೂಚೀ — ಈ ೩ ಅಮರ್ದುವಳ್ಳಿ" (ಹಲಾಯು. ೧೦೧-೪೬೧).

[ಸಂ. ವತ್ಸಾದನೀ]

ವತ್ಸೆ (ನಾ). ೧. ಹೆಣ್ಣುಕರು. ೨. ಮಗಳು ; ಪುತ್ರಿ. ೩. ಮಗಳೆಂದು ಭಾವಿಸಿ ಸಂಬೋಧಿಸುವ ಅಕ್ಕರೆಯ ನುಡಿ : ಎಲೆ ವತ್ಸೆ, ವೀರನಾದ ಮಗನನ್ನು ಪಡೆ! (ಶಾಕುಂತ. ೫೦ ೧೨); ವತ್ಸೆ! ನಾನು ದಾರಿಯನ್ನು ತೋರಿಸುವೆನು (ಕಪಾಕುಂ. ೧೨೬). 'ವತ್ಸ' ಹೋ. [ಸಂ. ವತ್ಸಾ]

ವದ (ಗು). ೧. ಹೇಳುವ ; ಮಾತಾಡುವ. (ನಾ). ೨. ಚೆನ್ನಾಗಿ ಮಾತನಾಡುವವನು ; ಚತುರತೆಯಿಂದ ಮಾತನಾಡುವವನು : "ವದಃ, ವದಾವದಃ, ವಕ್ತಾ – ೩ ಮಾತು ಕಲಿತವನ ಪೆಸರು" (ಸಿದ್ಧಾಂತಿ ೩೩೨). [ಸಂ.]

ವದಂತಿ (ನಾ). ೧. ಜನರು ಆಡಿಕೊಳ್ಳುವ ಮಾತು : ಜನವಾರ್ತೆ ; ಗಾಳಿಸುದ್ದಿ : ಮತ್ತೆ ವೃಷಭಾಸುರನು ಪಡೆಗಳ ಮೊತ್ತವನ್ನೊಡಗೊಂಡು ಯುದ್ಧಕ್ಕುತ್ತಮನೆ ಬರುತಿಪ್ಪನೆಂಬ ವದಂತಿಯಾಗಿಹುದು (ಆರ್ಜುನ. ೧೦ ೨); ಒಂದು ದಿನ ಇದ್ದಕ್ಕಿದ್ದಂತೆ ಕರುಣಾ ಊರಿಗೆ ಬರುತ್ತಾಳೆ ಎಂಬ ವದಂತಿ ಹುಟ್ಟಿತು (ಶಿವರಾ. ೫೨). ೨. ಸುದ್ದಿ ; ವರ್ತಮಾನ. [ಸಂ. ವದಂತೀ/ IP ಇದು ಸಂಸ್ಕೃತದಲ್ಲಿ ಒಂದು ಬಹುವಚನದ ಕ್ರಿಯಾರೂಪ]

ವದಗೆಗುಪ್ಪೆ 'ಬದಗೆಗುಪ್ಪೆ' ನೋ.

ವದನ (ನಾ). ೧. ಮುಖ ; ಮೋರೆ; ಆನನ : ವದನಂ ಪೂರ್ಣಶಶಾಂಕನಂತೆಸೆಯೆ ಮೇಘಶ್ಯಾಮಳಾಂಗಂ ತ್ರಿಭಂಗದಿನಿಂಬಾಗಿರೆ . . . ತಾನಾಗಳಾಡಿದಳ್ (ಜಗವಿ. ೬-೧೬); ಒಸೆದು ನಂದೀಶ್ವರನ ವದನಮಂ ನೋಡುತುಂ (ನಂಬರ. ೧-೧೮). ೨. ಬಾಯಿ ; ಆಸ್ಯ : "ವದನಂ ಮುಖಂ . . . ಬಾಯಿಯೆನೆ ಕಬಳಿಕಂ" (ಮಂಗರಾ. ೧೩-೧); ಹೃದಯದಯಾಮೃತವಾಹಿನಿ.ವದನದೆ ಕಡೆಗೋಡಿವರಿದುದೆನೆ . . . ಮಹೀವಧುಗೆ ವನಜಭವನಿಂತೆಂದಂ (ಜಗವಿ. ೧-೨೮). ೩. ಮಾತನಾಡುವಿಕೆ ; ಹೇಳುವಿಕೆ. ೪. ಎದುರಿನ ಭಾಗ ; ಅಗ್ರಭಾಗ. [ಸಂ.]

ವದನಕೂಟ(ನಾ). ಮುತ್ತು ; ಚುಂಬನ : "ವದನಕೂಟಂ ಮುತ್ತು ಚುಂಬನಂ" (ಮಂಗರಾ. ೯೭-೧೬). [ವದನ + ಕೂಟ]

ವದನತಿಲಕ (ನಾ). ಮುಖದ ಮೇಲ್ಭಾಗ ಅಥವಾ ಹಣೆಯ ಮೇಲಿಡುವ ಬೊಟ್ಟು : ಏಂ ಸೊಗಯಿಸಿದುದೊ ವನಯುವತಿವದನತಿಲಕಂ ತಿಲಕಂ (ಶಾಂತಿಪು. ೭-೧೩೩). [ಸಂ.]

ವದನಪಂಚಕ (ನಾ). ೧. ಐದು ಮುಖಗಳು. ೨. ಐದು ಮುಖಗಳನ್ನು ಹೊಂದಿದವನು ; ಶಿವ ; ಈಶ್ವರ : ವದನಪಂಚಕ ವಿಹೃತಮದನಯತಿಹೃತ್ಕಂಜ . . . ಸುಖದ ನವ್ಯಭಾಗ್ಯಸುಪ್ರದ ಜಯತು (ವೀಶ್ವೇಪು. ೪-೧ ೧). [ಸಂ.]

ವದನರಸ (ನಾ). ಬಾಯಿಯ ರಸ ; ಲಾಲಾಜಲ; ಜೊಲ್ಲು : ವದನರಸಂ ಮದನರಸಂ ಪೊದಲ್ದುದೆನಿಸುವಿನಮಮರಿ ನರ್ತಿಸೆ (ಆದಿಪು. ೭-೧೯). [ಸಂ.]

ವದನವಿಕಾಸ (ನಾ). (ಸಂತೋಷದಿಂದ) ಮುಖ ಅರಳುವುದು : ವದನವಿಕಾಸದಿಂ ಬರವಿನೇಟ್ರರದಿಂದಮೆ ಕಾರ್ಯಸಿದ್ಧಿಯಾದುದನಱಿದು (ಪಂರಾಮಾ. ೧೧-೧೬೨). [ಸಂ.]

ವದನಿ (ನಾ). ಒಂದು ಬಗೆಯ ಸಸ್ಯ ; ಮೂಕೊರತಿ ಗಿಡ : "ಆ ವದನಿಯೆನಲು ಮೂಕೊಱತಿ" (ಮಂಗರಾ. ೩೭-೨೦). [?]

ವದನೆ (ನಾ). ಸುಂದರವಾದ ಮುಖವುಳ್ಳ ಹೆಂಗಸು; ಸುಂದರಿ : ಚಿತ್ತವೆರಡಾಗದಲೆ ಉತ್ತಮದೊಳಿರಬೇಕು ಚಿತ್ತ ವದನೆಯರ ಸುಳಿದಿರಲು ಅವರ ಮಹತ್ವವೆತ್ತಣದು (ಸರ್ವಜ್ಞ. ೫೩೫); ವದನೆ ಯೋಗಿಗೆ ಹೊಲ್ಲ ಬದನೆ ರೋಗಿಗೆ ಹೊಲ್ಲ (ಸರ್ವಜ್ಞ. ೧೨೯೩).

[ವದನ + – ಎ]

ವದನ್ಯ (ನಾ). ದಾನಿ ; ಉದಾರಿ : "ದಾನಿ ವದನ್ಯಂ" (ವ್ಯಾಕೋ. ೧೦೦ ೧೪). [ಸಂ.]

ವದರೆ (ನಾ). ೧. ಹತ್ತಿಯ ಗಿಡ. ೨. ಗೆಡ್ಡೆಗಳನ್ನು ಬಿಡುವ ಒಂದು ಬಗೆಯ ಸಸ್ಯ. [ಸಂ. ವದರ]

ವದಾನ್ಯ (ನಾ). ೧. ನಿರರ್ಗಳವಾಗಿ ಮಾತನಾಡುವವನು ; ವಾಕ್ಪಟು ; ವಾಗ್ಮಿ : "ವದಾನ್ಯಃ-೧. ಚೆನ್ನಾಗಿ ಮಾತಾಡುವವನು" (ಸಿದ್ಧಾಂತಿ. ೪೧೨). ೨. ಪ್ರಿಯವಾಗಿ ಮಾತನಾಡುವವನು : "ವದಾನ್ಯಂ ಪ್ರಿಯವಾದಿ" (ವ್ಯಾಕೋ. ೧೦೦ ೧೪); ಅನ್ಯರನು ನಿನ್ನವರ ಮಾಡಿಯನನ್ಯರನು ಬಾಹಿರರ ಮಾಡಿ ವದಾನ್ಯರನು ನಿಗ್ರಹಿಸೆಯೆಲೆ ಭೂಪಾಲ (ಕುಮಾಸ. ೧ ೨೯); ಸುರತರು ವದಾನ್ಯನುನ್ನತಶಾಸ್ತ್ರಾನೀಕನಿಪುಣನತಿಗಂಭೀರಂ . . . ಪ್ರಿಯೋನ್ನತವಾಕ್ಯಂ (ಲಾಸ್ಯರಂ. ೧-೩೨). ೩. ದಾನಿ ; ಉದಾರಿ : "ಪ್ರಿಯವಚನಂಬೆರಸಿ ಕೊಡುವವನಂ ವದಾನ್ಯನೆಂಬುದು" (ಹಲಾಯು. ೬೦ ೨೧೧). [ಸಂ.]

ವದಾನ್ಯತೆ (ನಾ). ಧಾರಾಳವಾಗಿ ದಾನಮಾಡುವಿಕೆ ; ಉದಾರತೆ : ಕಲಿತನಮಿಲ್ಲ ಚಾಗಿಗೆ ವದಾನ್ಯತೆ ಮೆಯ್ಯಲಿಗಿಲ್ಲ ಚಾಗಿ ಮೆಯ್ಯಲಿಯೆನಿಪಂಗೆ ಶೌಚಗುಣಮಿಲ್ಲ ಕರಂ ಕಲಿ ಚಾಗಿ ಶೌಚಗುಂ (ಏಕ. VII, ಶಿಕಾರಿ. ೧೩೬-೩೨; 1068); ಅಂತು ನಿಜವದಾನ್ಯತಾಗುಣ ವಿಶುದ್ಧಸಿದ್ಧರಸಪ್ರವಾಹಕ್ಕೆ ಸೇತುಗಟ್ಟುವಂತೆ ಪಟ್ಟಮಂ ಕಟ್ಟಿ (ವಂರಾಮಾ. ೭-೨೨ ವ).

[ಸಂ. ವದಾನ್ಯತಾ]

ವದಾನ್ಯತ್ವ (ನಾ). = ವದಾನ್ಯತೆ : ವಿದ್ಯೋಪಶಮಗಂಭೀರಸ್ಥಿರವದಾನ್ಯತ್ವ ಸಾಧುಜನಸಹಾಯತಾದಿಗುಣನಿಧಾನನಂ ನಿನ್ನನಂ ಮತ್ತೋರ್ವನನಲ್ಲಿಯುಂ ಕಂಡುಂ ಕೇಳ್ಬುಮಱಿಯೆಂ (ಶಾಂತಿಪು. ೩-೭೫ ೨). [ಸಂ.]

ವದಾನ್ಯೆ (ನಾ). ಕೊಡುಗೈಯವಳು ; ದಾನ ಮಾಡುವವಳು : ಜನಾರ್ದನ ವಂದ್ಯೆ ವದಾನ್ಯೆ ಮಾನ್ಯೆ . . . ಪರಾತ್ಪರೆ ಪಾಲಿಪುದೆನ್ನನಂಬಿಕೇ (ರಾಜಶೇ. ೧೩-೧೬೧).

[ಸಂ. ವದಾನ್ಯಾ]

ವದಾವದ (ನಾ). ೧. ಚೆನ್ನಾಗಿ ಮಾತನಾಡುವವನು ; ವಾಗ್ಮಿ : "ವದಃ, ವದಾವದಃ, ವಕ್ತಾ – ೩ ಮಾತು ಕಲಿತವನ ಪೆಸರು"(ಸಿದ್ಧಾಂತಿ. ೩೩೨). ೨. ಅತಿಯಾಗಿ ಮಾತನಾಡುವವನು. [ಸಂ.]

ವದಿಸು (ಕ್ರಿ). ಹೇಳು ; ನುಡಿ : ಕಣ್ಬುಡಿತೆಗಳಿಂದಾಕೆ ಪವಣ್ಗಟಿದಾ ಬಾಷ್ಪವಾರಿಯಂ ಸುರಿಯುತ್ತಂ ಕಣ್ಗೊಳಿಸದಿರ್ಕುಮೇ ಪೇಱ್ ಮಾಣ್ಗುಂ ಮದನಾಗ್ನಿಯೆಂದು ವದಿಪುವ ತೆಱದಿಂ (ಕಾದಂಬ. ೫೧೮); ಆಗಲೇ ನಾನು ವದಿಸಿದ ಮಹದ್ಕಾರ್ಯ ಅಂದರೆ . . . ಮುತ್ತಲ ಎಲೆಯ ಸಂಗ್ರಹ (ದೀಪಕ. II, ೨).

[ವದ + – ಇಸು]

ವದ್ದಿಪೆಣೆಮನೆ (ನಾ). ಒಬ್ಬಾತನ ಹೆಸರು : ಕೊವಲಾಲನಾಡಾಳ್ ವದ್ದಿಪೆಣೆಮನೆಯು ಬೇಡಿಕೊಂಡು ಪಟ್ಟಂಗಟ್ಟಿ (ಮೈಸೂ.೧೧೨೪, ೮೫-೪; 788). [?]

ವದ್ಧ್ರಿ (ನಾ). ಚರ್ಮದಿಂದ ತಯಾರಿಸಿದ ಪಟ್ಟಿ ; ಮಿಣಿ : "ಪಟ್ಟ್ರೀಸಂಜ್ಞೆಯದು ವರತ್ರೆಯೆನಿಕ್ಕುಂ" (ವ್ಯಾಕೋ. ೫೦ ೩೭). [< ಸಂ. ವರ್ತ್ರೀ]

ವದ್ಯ (ಗು). ೧. ಮಾತನಾಡಲು ಯೋಗ್ಯವಾದ ,–ಪ್ರಶಸ್ತವಾದ. (ನಾ). ೨. ಮಾತನಾಡುವುದು. ೩. ನುಡಿ ; ಮಾತು. ೪. ಚಾಂದ್ರಮಾನಮಾಸದ ಎರಡನೆಯ ಪಕ್ಷ ; ಕೃಷ್ಣಪಕ್ಷ : ಇವರು ಪ್ರತಿವರ್ಷ ಭಾದ್ರಪದ ವದ್ಯದಲ್ಲಿ ತಮ್ಮ ತಮ್ಮ ಬಳಗದ ಹಿರಿಮನುಷ್ಯನ ಮನೆಗೆ ಅಕ್ಕಿ, ತೆಂಗಿನಕಾಯಿ, ಬೆಲ್ಲ, ತಕ್ಕೊಂಡು ಹೋಗಿ ಅಡಿಗೇ ಮಾಡಿ . . . ಉಣ್ಣುವರು (ಕಭಾಗೆ. ೧೮೦); "ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು!" "ಸಾಜಮಾದರು ಪಕ್ಷವಿಧು ವದ್ಯವಹುದು!" (ಗಂ. ೩೫-೬).

[ಸಂ.]

ವಧ (ನಾ). ಕೊಲ್ಲುವುದು; ಕೊಲೆ : ವಧಮುಂ ಬಂಧನಮುಂ ಪರಾಭವಮು ಮಂಗಚ್ಛೇದಮುಂ ಪೊರ್ದುಗುಂ (ಪಂರಾಮಾ. ೧೨-೫೯); ದಿವಿಜವಧಪಟುಗೆ ನಿನಗಭಿಭವಮಿ ಶಿಶುವಧಮೆನಲ್ಕೆ ಮಾಣ್ಕೆನೆ . . . ಎಂದೊಡಱಿ ಪಾಸಱಿಯೊಳ್ ಕೂಸನಪ್ಪಳಿಸಿ (ಜಗವಿ. ೨-೫೮). [ಸಂ.]

ವಧಕಾರ (ನಾ). ೧. ಕೊಲೆಯನ್ನು ಮಾಡುವವನು ; ಕೊಲೆಗಾರ ; ಕೊಲೆಗಡುಕ. ೨. ವಧ್ಯಸ್ಥಾನದಲ್ಲಿ ಅಪರಾಧಿಗಳಿಗೆ ಮರಣದಂಡನೆ ಮುಂತಾದ ಶಿಕ್ಷೆಗಳನ್ನು ಕಾರ್ಯಗತಗೊಳಿಸಲು ನಿಯಮಿತನಾಗಿರುವವನು : ಸರಕಾರಿ ವಧಕಾರನು ಕಾದ ಕಬ್ಬಿಣದಿಂದ ಹೆಗಲಿನ ಮೇಲೆ ಕಾಯಿಸಿಟ್ಟ ಮೂರು ನೈದಿಲೆಗಳ ಗುಟ್ಟದ ಗುರುತು! ಆಗಿನ ಕಾಲದಲ್ಲಿ ಅಪರಾಧಿಗಳ ಹೆಗಲ ಮೇಲೆ ಇಂತಹ ಗುರುತನ್ನು ಸರಕಾರಿ ವಧಕಾರರು ಕಾಯಿಸಿಡುತ್ತಿದ್ದರು (ಯೋಧರು. ೭೮). [ಸಂ.]

ವಧಕಾಲ (ನಾ). ಕೊಲ್ಲುವ ಸಮಯ ; ಸಂಹಾರದ ವೇಳೆ : ಕರ್ಣನ ವಧಕಾಲವು ಸಮೀಪಿಸಿದ್ದರಿಂದ ಹೀಗೆ ಸರ್ಪಾಸ್ತ್ರ ವ್ಯರ್ಥವಾದದ್ದಲ್ಲದೆ, ಪರಶುರಾಮನು ಹೇಳಿಕೊಟ್ಟ ಮಹಾಸ್ತ್ರವೂ ಮರೆತು ಹೋಯಿತು (ವಚಭಾ. ೨೯೯). [ಸಂ.]

ವಧಾರ್ಥ 'ವಧಾರ್ಥಂ' ನೋ.

ವಧಾರ್ಥಂ, ವಧಾರ್ಥ (ಅ). ಕೊಲ್ಲುವುದಕ್ಕಾಗಿ ; ಕೊಲ್ಲುವ ಉದ್ದೇಶಕ್ಕಾಗಿ : ಆ ನೆಗೞ್ದಿಂದ್ರಂ . . . ಮುರಾಂತಕಂಗಾನತನಾಗಿ ಪುಯ್ಯಲಿಡೆ ಕೇಳ್ದು ಮದೀಯ

ವಧಾರ್ಥಮಾ ಸುಧಾಂಭೋನಿಧಿತಳ್ಪನಿಂದು ಗಡ ಪುಟ್ಟಿದಂ(ಜಗವಿ. ೩-೨೦). ವಧಾರ್ಥ : 'ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವೆ?' ಎಂದನು - ಕಾಪಾಲಿ - ಪೂಜಾಸ್ಥಾನಕ್ಕೆ . . . ವಧಾರ್ಥವಾಗಿ (ಕಪಾಲಿಂ. ೨೪). [ಸಂ.]

ವಧಿಯಿಸು 'ವಧಿಸು' ನೋ.

ವಧಿಸು, ವಧಿಯಿಸು (ಕ್ರಿ). ಕೊಲ್ಲು ; ಸಂಹರಿಸು ; ಸಾಯಿಸು : ಕಂಡು ಮಱುಗದೆ ಸೊನೆಗಾಱನ ದಂಡಿಯಲಿ ಮಗನಂ ವಧಿಸಿ ಆ ಮುಂಡವಂ ವಿಂಗಡಿಸಿ (ಬಸವು. ೨೪-೨೧); ಪುರಹರನು ಕರೆದರ್ಜುನನ ಸುರಪುರಕೆ ಪೋಗುತೆ ನೀನು ಬಳಿಕಾ ಸುರಸಮಿತಿಗಳ ವೈರಿಗಳ ವಧಿಸೆಂದು ಬೆಸಸುತ್ತ (ಕುವ್ಯಾಅ. ೬೦೧. ೭-೧೧೨); ವಿಧುಹಾಸನಂ ಪಲವುಪಾಯದಿಂದೀಗ ನಾಂ ವಧಿಸದಿರ್ದೊಡೆ ತನ್ನ ಸಂತತಿಗೆ ಧರೆಯನಾಳ್ವಧಿಕ ಸಂಪದಮಾಗದು (ಜೈಮಿಭಾ. ೩೧-೩೭). ವಧಿಯಿಸು : ಸಾಸಿಗನ್ನೆ ಹರಿ ನೀಂ ಪೆಣ್ಗೂಸಂ ವಧಿಯಿಸಿದೆ (ಜಗವಿ. ೧೭-೪೨); ರಾತ್ರಿಯೊಳೇಕಾಂತದೊಳಿರ್ದ ಸ್ಥೂಳಾಚಾರ್ಯರಂ ವಧಿಯಿಸಲವರ್ ಸಮಾಧಿಯಿಂ ಸ್ವರ್ಗಸ್ಥರಾದರ್ (ರಾಜಾವ. ೯೦-೯).

[ವಧ + – ಇಸ್ಸು]

ವಧು (ನಾ). ೧. ಮದುವೆಯ ಹೆಣ್ಣು ; ಮದುವಣಿಗಿತ್ತಿ ; ಮದುಮಗಳು : ಎಲ್ಲ ಕನ್ಯೆಯರಿಗೂ ಪ್ರಭುಗಳು ಮಾಂಗಲ್ಯಗಳನ್ನು ಕಟ್ಟಿದರು. ಮುಖ್ಯವಧುಗಳಿಬ್ಬರೂ ಈಗ ಪ್ರಭುಗಳ ಎಡಪಾರ್ಶ್ವದಲ್ಲಿ ಬಂದು ಕುಳಿತರು (ಶಾಂತಲಾ. ೧೧೧). ೨. ಹೆಂಗಸು ; ಸ್ತ್ರೀ : ಲಜ್ಜೆ ವಧುವಿಗೆ ಚಂದ ಅಜ್ಜ ಅಜ್ಜಿಗೆ ಚಂದ ಮಜ್ಜಿಗೆ ಊಟಕೆ ಚಂದ (ಇಂಚಾಪ. ೯೪-೫೬). ೩. ಹೆಂಡತಿ ; ಸತಿ : "ದಾರಂ ಕಳತ್ರಂ . . . ವಧು ಕ್ಷೇತ್ರಮಾ ಭಾರ್ಯೆ . . . ಹೆಂಡತಿಗೆ ನಾಮಮಕ್ಕುಂ" (ಮಂಗರಾ. ೯೦ ೬); ಆರಿಗೆ ವಧುವಾದೆ ಅಂಬುಜಾಕ್ಷಿ ಕ್ಷೀರಾಬ್ಧಿಕನ್ನಿಕೆ ಶ್ರೀಮಹಾಲಕುಮಿ (ಪುರಂದ.೩-೧೨೭ ಪಲ್ಲವಿ). ೪. ಮಗನ ಹೆಂಡತಿ ; ಸೊಸೆ. ೫. ಒಂದು ಬಗೆಯ ಗಂಧದ್ರವ್ಯ : "ಮರುನ್ಮಾಲಾ, ಮಾಲಾಪಿಶುನ, ಸ್ಪೃಕ್ಕಾ . . . ವಧೂಃ ,ಕೋಟಿವರ್ಷಾ, ಲಂಕೋಯಿಕಾ – ೧೦ ಸ್ಪೃಕ್ಕಯೆಂಬ ಗ್ರಂಧ್ಯದ್ರವ್ಯ, ಸಂಕೇಬೇರು" (ಸಿದ್ಧಾಂತಿ. ೧೪೩).

ವಧೂವರರ್, ವಧೂವರರು = ಮದುಮಗ ಮತ್ತು ಮದುಮಗಳು : ಅಂತು ನೆಱೆಯೆ ಕೈಗೆಯ್ದು ವಧೂವರರಿರ್ವರುಮಂ . . . ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಿಂಬದೊಳಿರಿಸಿದಾಗಳ್ (ಅದಿಪು. ೪-೪೨ ವ); ಅಂತಾ ವಧೂವರರಂ, ಮಂಗಳ ಪಸದನಂಗೊಳಿಸಿ ತಂದು . . . ಇದಿರೊಳ್ ನಿಱಿಸುವುದುಂ (ಲೀಲಾವ. ೧೩-೧ ವ); ವಧೂವರರು ಹಸೆಯ ಮೇಲೆ ಕುಳಿತಿದ್ದಾರೆ (ರೂಢಿ). [ಸಂ. ವಧು, ವಧೂ]

ವಧುತಾತ (ನಾ). ಹೆಂಡತಿಯ ತಂದೆ ; ಮಾವ : "ವಧುತಾತನೆನೆ ಹೆಣ್ಣ ಕೊಟ್ಟವನಕ್ಕು" (ಮಂಗರಾ. ೯೨-೧೩). [ಸಂ.]

ವಧುವಿಂಡು (ನಾ). ಸ್ತ್ರೀಯರ ಸಮೂಹ : ಗಂಡು ಮೆಚ್ಚುವುದಂಗನೆಯರ್ಗೆ ವರವಧುವಿಂಡೊಲಿವುದು ಪುರುಷರಿಗೆ (ಮೋಹತ. ೨೬ ೨೬). [ವಧು + ಪಿಂಡ್ಸು]

ವಧೂಗೃಹ (ನಾ). ೧. ಮದುವಣಗಿತ್ತಿಯ ಮನೆ. ೨. [ಜ್ಯೋತಿ] ಹನ್ನೆರಡು ರಾಶಿಗಳಲ್ಲಿ ಒಂದು ; ಕನ್ಯಾರಾಶಿ : ಕುಸುಮಘಟಾನ್ವಿತೆ ಕೊಳೆಗೊಂಡ ಸೀರೆಯಂ ಪೊದೆದು ವಸ್ತ್ರಮಂ ಧನಮನಪೇಕ್ಷಿಸಿ ಗುರುಕುಲಕ್ಕೆ ಮನಸಂತಸದಿಂ ಪೋಪಳ್ ವಧೂಗೃಹಾದಿತ್ರ್ಯಂಶಂ (ಜಾತಕ. ೧೯-೧೬). [ಸಂ.]

ವಧೂಜನ (ನಾ). ೧. ಸ್ತ್ರೀಯರು ; ಹೆಂಗಸರು : ನರಾಮರವಧೂಜನಂಬೆರಸಿ ರಾಗದಿಂದಾಡೆ (ಅದಿಪು. ೮-೨೧); ಪಿಡಿದೆತ್ತಿದ ಪೊನ್ನ ಕಳಶಮೆನಿಸಿದುದದಱೊಳಿರ್ದಿರ್ದ ವಧೂಜನದ ಕುಚಕಳಶಂ(ರಾಜಶೇ. ೧೦-೮೮). ೨. ಹೊಸದಾಗಿ ಮದುವೆಯಾಗಿರುವ ಹೆಣ್ಣುಮಕ್ಕಳು : ವಧೂಜನಕ್ಕೆ ಹೇಳತಕ್ಕ ಉಪದೇಶವು ಇಷ್ಟು ತಾನೆ; ಇದರ ಮೇಲೇನಿರುವುದು? (ಶಾಕುಂತ. ೫೭-೪). [ಸಂ.]

ವಧೂಟಿ (ನಾ). ೧. ತರುಣಿ ; ಯುವತಿ : ವಧೂಟೀಜನನೇತ್ರಾಕರ್ಷಣಾಲೇಪನ ಕಪಜಯಮಂ ಮಾನಿನೀಚಿತ್ತಸಮ್ಮೋಹನರೂಪಕ್ಕೆಗ್ಗನುತ್ಪಾದಿಸುವುದು ನೃಪರೂಪಂ (ಮಲ್ಲಿಪು. ೩-೩೧); ಆ ವಧೂಟಿ ತಾಂ ತನ್ನಯ ತಾಯ ತಂದೆಯನಗಲ್ದಿರಲಾಱದೆ . . . ತವರ್ಮನೆಯೊಳ್ ಪಲಕಾಲಮಿರ್ಪುದುಂ (ಪದ್ಮಸಾ. II. ೫೯೨). ೨. ಸ್ತ್ರೀ ; ಹೆಂಗಸು : ಗುರುಲಗ್ನದಿವಾಕರ . . . ಸಮಮಂದಿರದ ಸಮಾಂಶಕದೊಳಿರೆ ವಧೂಟೀಜನ್ಮಂ (ಜಾತಕ. ೩-೧೦); ರುಕ್ಮಿಣೀದೇವಿ ಮೊದಲಾಗಿಹ ವಧೂಟಿಯರ ವರ್ಗಮಂ ನೃಪತಿ ಸತ್ಕರಿಸಿದಂ (ಜೈಮಿಭಾ. ೩೪-೩೦). ೩. ಸೊಸೆ. [ಸಂ. ವಧೂಟೀ]

ವಧೂಬಂಧು (ನಾ). ಮದುವಣಗಿತ್ತಿಯ ಬಳಗದ ವ್ಯಕ್ತಿ ; ಹೆಣ್ಣಿನ ಸಂಬಂಧಿಕ : ಭಾಗ್ಯಾಧೀನಮಿನ್ನಿಂತರಿಂ ಪೆರತೆಲ್ಲಂ ಬಗೆಯಲ್ಕದಂ ನುಡಿವುದಲ್ಲಂ ದಲ್ ವಧೂಬಂಧುಗಳ್ (ಶಾಕುಂತ. ೫೬ ೯೫). [ಸಂ.]

ವಧೆ (ನಾ). ಕೊಲೆ ; ಸಂಹಾರ : ಓಡಿಂಬವಧೆ ಬಕಾಸುರವಧೆ . . . ಪೆಱವುಮುಪಾಖ್ಯಾನ ಕಥೆಗಳೊಳಮೊಂದುಂ ಕುಂದಲೀಯದೆ ಪೇಳ್ದೆಂ (ಪಂಪಭಾ. ೧೪-೫೨ ವ); ಪರಹಿಂಸೆ ಲೋಗರ ಹಳಿವುದೇ ವಧೆ ಶಸ್ತ್ರವಧೆ ವಧೆಯಲ್ಲ (ಕುವ್ಯಾಕ. ೧೭-೨೬). [ಸಂ. ವಧ]

ವಧ್ಯ (ಗು). ೧. ಕೊಲ್ಲಲು ಯೋಗ್ಯವಾದ ; ಕೊಲೆಗೆ ಅರ್ಹವಾದ. ೨. ದೇಹದಂಡನೆಗೆ ಗುರಿಯಾದ ; ದೈಹಿಕಶಿಕ್ಷೆಗೆ ಒಳಗಾದ. (ನಾ). ೩. ಕೊಲ್ಲಬೇಕಾದುದು ; ವಧೆಗೆ ಅರ್ಹವಾದುದು. ೪. ಅಪ್ರಿಯವಾದುದು : ಪದ್ಯಂ ವಧ್ಯಂ, ಗದ್ಯಂ ಹೃದ್ಯಂ (ರಾಮಾಶ್ವ. ೫-೧೪); ವಿಜ್ಞಾನಿಗಳ 'ಅಕಲು' ಹೃದ್ಯವಿದ್ದರು ವಧ್ಯ (ಅರಳು. ೪೨೦-೭). ೫. ಮರಣದಂಡನೆಗೆ ಗುರಿಯಾದವನು. ೬. ಕೊಲೆಗೆ ಅರ್ಹವಾದ ವ್ಯಕ್ತಿ : ಮಾಯಾಪರರು ಮಾಯೋಪಾಯವಧ್ಯರು (ಕುವ್ಯಾಗ. ೫-೬). ೭. ವೈರಿ ; ಶತ್ರು. [ಸಂ.]

ವಧ್ಯಮಾಲೆ (ನಾ). (ಸಂಪ್ರದಾಯದಂತೆ) ಮರಣದಂಡನೆಗೆ ಗುರಿಯಾದ ವ್ಯಕ್ತಿಯ ಕುತ್ತಿಗೆಗೆ ಹಾಕುವ (ಕೆಂಪು ಹೂವಿನ) ಹಾರ : ಈ ನನ್ನ ಕೊರಳಿಗೆ ವಧ್ಯಮಾಲೆಯನ್ನು ಹಾಕಿ ; ಮೃತ್ಯುಲೋಕದ ದಾರಿಯನ್ನು ನನಗೆ ತೋರಿಸಿ (ರಾಕ್ಷಮು. ೧೦೨). [ಸಂ. ವಧ್ಯಮಾಲಾ]

ವಧ್ಯಶಿಲೆ (ನಾ). ಕೊಲೆ ಮಾಡುವುದಕ್ಕೆಂದು ಇಟ್ಟಿರುವ ಶಿಲೆ ; ತಲೆಯನ್ನು ಕತ್ತರಿಸಲೆಂದು ಸಿದ್ಧಮಾಡಿಟ್ಟಿರುವ ಕಲ್ಲು : ಅಸುರಂ ಕನ್ನೆಯನುಯ್ದು ವಧ್ಯಶಿಲೆಯೊಳ್ ಪೊಯ್ವಲ್ಲಿ ಕೈಯಿಂ ಸಿಡಿಲ್ದು ಸಿಡಿಲ್ ಪೋಪವೊಲಂಬರಕ್ಕೆ ನೆಗೆದೆಂದಳ್ (ಜಗವಿ. ೩-೧೪); ಕೆಂಪುಬಟ್ಟೆಯನ್ನು . . . ಹೊದ್ದುಕೊಂಡು ಜೀಮೂತವಾಹನ ವಧ್ಯಶಿಲೆಯನ್ನೇರಿದನು (ಕಪಪು. ೭ ೧೦೪). [ಸಂ. ವಧ್ಯಶಿಲಾ]

ವಧ್ಯಾಭಾವ (ನಾ). ಕೊಲೆಗೆ ಅರ್ಹನಾದ ವ್ಯಕ್ತಿಯು ಇಲ್ಲದಿರುವಿಕೆ : ವಧ್ಯಾಭಾವದಿಂ ಹಿರಣ್ಯನೊಳ್ ಪ್ರಧಾನವ್ಯಾಪಾರಮಂ ನುಡಿಯುತಿರ್ದ ಶಶಿಪ್ರಭಾಪ್ರಿಯನ ರಥಕ್ಕಾಗಿ ಬೇಗನೆ ಬಂದು (ಚಂದ್ರಪು. ೬-೩೮ ವ). [ಸಂ.]

ವಧ್ರಿ (ನಾ). ತೊಗಲಿನ ಪಟ್ಟಿ ; ಚರ್ಮದ ಬಾರು : "ನಧ್ರೀ, ವಧ್ರೀ, ವರತ್ರಾ-೩ ತೊಗಲ ಮಿಣಿಯ ಪೆಸರು, ತೊಗಲ ಹಗ್ಗ" (ಸಿದ್ಧಾಂತಿ. ೩೧೫). [ಸಂ. ವಧ್ರೀ]

ವನ (ನಾ). ೧. ಕಾಡು ; ಅರಣ್ಯ : ವನದೊಳ್ ದಾವಾಗ್ನಿ ಪೂರ್ವಾಚಲದೊಳ ಹಿಮಕೃನ್ಮಂಡಲಂ ವಾರ್ಧಿಯೊಳ್ ಭೋಂಕೆನೆ ಬಂದೌರ್ವಾನಳಂ ಪುಟ್ಟುವವೊಲ್ (ಅಜಿಪು. ೭-೧೩); ಅನಿಬರನಾವ ವನದಲಿ ಕಂಡೆ ಕೂಡೆನಿತುಂಟು ಪರಿವಾರ (ಕುವ್ಯಾಅ. ೧-೨೦). ೨. ನೀರು ; ಉದಕ : "ವನಂ ವಾರಿ ಘನರಸಮೆನಲ್ ನೀರಿಂಗೆ ಪೆಸರಕ್ಕು"(ಮಂಗರಾ. ೧೨೦-೧); ವನಘನರಾಶಿಯಾಶಾದಿಗಂತದೊಳ್ ವರ್ಷದಾಶೀರ್ವಾದ ಮುದ್ರೆಯಿಂದೇರ್ದುದೆನೆ ಬಂದನೋಲಗಕೆ ವಿಶ್ವಾಮಿತ್ರಮುನಿವರಂ (ಶ್ರೀರಾಮಾ. ೨೮-೮). ೩. ತೋಟ ; ಉದ್ಯಾನವನ : "ಅಡವಿ. ಕಾನನಂ, ವನಂ – ಈ ೩ ತೋಟಕ್ಕೂ ಹೆಸರೆಂದು ಕೆಲವರನ್ನುವರು" (ಸಿದ್ಧಾಂತಿ. [illegible]). ೪. ಬೆಳಕು ; ರಶ್ಮಿ ; ಪ್ರಕಾಶ : "ವನಮುತ್ಸಾಹನಪ್ರಕಾಶನ ವಚನಂ" (ವಸ್ತುಕೋ. ೧೨೪-೩೭). ೫. ವಾಸಸ್ಥಳ ; ಮನೆ. ೬. ಮೋಡ. ೭. ಮರದ ಪಾತ್ರೆ. ೮. ಗುಂಪು ; ಸಮೂಹ : 'ವನಜವನ' ಪರಾ. ೯. ನೀರಿನ ಬುಗ್ಗೆ. ೧೦. ಹೇರಳ ; ಸಮೃದ್ಧಿ. "ವನ-೧. ನೀರು. ೨. ಅರಣ್ಯ, ಕಾಡು. ೩. ಮನೆ. ೪. ಉಗಮ, ಬುಗ್ಗೆ. ೫. ಜೋಗು, ಝರ. ೬. ಸಮೂಹ. ೭. ಮರಿಗೆ. ೮. ಮೇಘ. ೯. ಕಿರಣ" (ನಾನಾಶ. ೨೨೬). [ಸಂ.]

ವನಕರಿ (ನಾ). ಅಡವಿಯ ಆನೆ ; ಕಾಡಾನೆ : ವನಕರಿಕುಂಭಪಾಟನಪಟಿಷ್ಠ ಕಠೋರನಖಪ್ರಹಾರಭೇದನಗಳಿತಾಸ್ರರಕ್ತನವಮೌಕ್ತಿಕಪಂಕ್ತಿವಿಳಾಸಭಾಸುರಾನನಂ (ಪಂಪಭಾ. ೧೩-೫೧); ಅಂತು ದೀನಜನತಾಕಲ್ಪಾಂಘ್ರಿಪಂ ವನಕರಿ ಕದಡೆ ತಿಳಿದ ಸರೋವರದಂತೆ ಪ್ರಸನ್ನಾಂತರಂಗನಾಗಿರ್ಪನ್ನೆಗಂ (ಶಾಂತಿಪು. ೫-೧೪೮ ವ). [ಸಂ.ವನಕರಿನ್]

ವನಕುಸುಮ (ನಾ). ಕಾಡಿನ ಗಿಡ, ಮರ, ಬಳ್ಳಿಗಳಲ್ಲಿ ಬಿಡುವ ಹೂವು ; ಕಾಡುಹೂವು : ವನಕುಸುಮಂಗಳಂ ಬಗೆಗೆ ವಂದುವನಜ್ಯೋಯೊಳಾಯ್ದು ಕೊಯ್ದು . . . ತೊಟ್ಟು ಕರಮೊಪ್ಪಿದಳಾಕೆ ಬಸಂತಕಾಂತೆವೋಲ್ (ಪಂಪಭಾ. ೨-೧೬); ವನಕುಸುಮಾಸವಂಬೆರಸು ತನ್ನೊದವಂದ ನರೇಂದ್ರಸುಂದರೀಜನಮುಖಸೌರಭಕ್ಕೆ ಬಗೆ ಸೋಲಲೊಡಂ (ಮಲ್ಲಿಪು. ೫-೮೫). [ಸಂ.]

ವನಕೇಳಿ (ನಾ). ತೋಟದಲ್ಲಿ ತಿರುಗಾಡುವಿಕೆ ; ವನವಿಹಾರ : ವನಕೇಳೀವಿಭವಂ ಸಲೀಲಸಲಿಲಕ್ರೀಡಾವಿಳಾಸಂ ಸಮಸ್ತನಿಜಾಂತಃಪುರದೊಳ್ ಪೊದಟ್ಟೆಸೆಯೆ (ಆದಿಪು. ೧೧-೧೫೩); ವನಕೇಳಿಗೆಳಸಿ ಮನಸಿಜನನುಪಮತನ್ಮೂರ್ತಿವೆತ್ತು ಪುಗುವಂತಿರೆ ಮೋಹನರೂಪರುಂದ್ರಕಂದರ್ಪನರೇಂದ್ರಂ ಬಂದು ವಿಪುಳವನಮಂ ಪೊಕ್ಕಂ (ಕುಸುಮಾ. ೯-೧೦). [ಸಂ. ವನಕೇಲಿ]

ವನಕ್ರೀಡೆ (ನಾ).= ವನಕೇಳಿ : ಅಂತು ಬಂದ ಬಸಂತದೊಳ್ ಮಾದ್ರಿ ತಾಂ . . . ವನಕ್ರೀಡಾನಿಮಿತ್ತದಿಂ ಪೋಗಿ(ಪಂಪಭಾ. ೨-೧೫ ವ); ಅಬಲೆಯರೋರೊರ್ವರೊಂದೊಂದು ಪಾಂಗಿಂ ಬಗೆಗೊಂಡೇಟ್ಟನ್ನೆಗಂ ತನ್ನೊದನೆ ಹರಿ ವನಕ್ರೀಡೆಗೆಂಟ್ಟಿನಾಗಳ್ (ಜಗವಿ. ೧೪-೪೭); ಬನದೊಳ್ ಪೂಗೊಯ್ದು . . . ಮರನಡರ್ವಾ ಕಾವಣಕ್ಕೋಪ ತಂತಮ್ಮಿನಿಯರ್ ಸಯ್ತುಂಬುದಂ ವರ್ಷಸುಗೆ ಕವಿ ವನಕ್ರೀಡೆಯೊಳ್ ನಾಡೆ ರಮ್ಯಂ (ಸೂಕ್ತಿಸು. ೧೧-೧). [ಸಂ. ವನಕ್ರೀಡಾ]

ವನಗಜ (ನಾ).= ವನಕರಿ : ವನಗಜಯೂಥಮಳ್ಳಿ ಪೆಱಗಿರ್ದಿರದೊಡ್ಡಟೊಡೋಡುವಲ್ಲಿ ದಂತಿನಿ ಮೊಲೆಯೂಡೆ ನಿಂದು(ಶಾಂತಿಪು. ೨-೧೦೫); ವನಗಜಯೂಥಮಂ ಭರದಿನಟ್ಟುವ ಕೇಸರಿಯಂತೆ ದೈತ್ಯರುಳ್ನಿಬರುಮಂ ಮಹಾರಣದೊಳದ್ಭುತಮಾಗೆ ಕರುತ್ತು ಕಾದಿ (ಪಂರಾಮಾ. ೧೪-೧೩೩). [ಸಂ.]

ವನಚರ (ನಾ).೧. ಕಾಡಿನಲ್ಲಿ ಸಂಚರಿಸುವವನು ; ಬೇಡ : ವನಚರನಾಗಿ ಶಂಭುಗಿರಿಜಾತೆಯನೋತು ಪುಳಿಂದಿ ಮಾಡಿ . . . ಕವಿದನಾ ಬನಮಂ (ಪಂಪಭಾ. ೮-೧೪); ವನಚರನಾಗಿ ಕಾನನಚರಂ ಪೆಸರಿಂದೆ ಕುರಂಗನಾಗಿ ನೆಟ್ಟನೆ ಗಜಸಿಂಹಮಂ ಕೊಲುವನಶ್ರಮದಿಂದಮೆ ಬೇಡನಾಗಿ (ಪಾರ್ಶ್ವಪು. ೧೨-೬೬). ೨. ಕಾಡಿನಲ್ಲಿ ವಾಸಿಸುವ ಮೃಗ, ಪಕ್ಷಿ ಮುಂತಾದ ಜೀವಿ ; ವನ್ಯಜೀವಿ : ವನಬಿಗ ವನಮೃಗ ವನತರು ವನಚರ ವನವನಜನಿವಹಮುಳ್ಳನಿತುಂ ಸೀರನಿತುಮಣಮುಟೆದು ದಿಲ್ಲೆಂಬಿನಮುಂಡಂ ದಹನನಳರ್ದು ಖಾಂಡವವನಮಂ (ಪಂಪಭಾ. ೫-೯೭); ಕೋಗಿಲೇ ಗಿಳಿಯೇ ಕಂಡಿರೆ ಪೇಟೆಮೆಮ್ಮ ಪತಿಯಂ ಶ್ರೀರೂಪಕಂದರ್ಪನಂ ಎಂದು ವನತರುಲತಾ ವನಚರಂಗಳಂ ಕಂಡತಿಪ್ರಲಾಪಂಗೆಯ್ಯಾಗಳ್ (ಸುಕುಮಾ. ೧೨-೨೧ ವ). ೩. ನೀರಿನಲ್ಲಿ ಸಂಚರಿಸುವ ಮೀನು ಮೊದಲಾದ ಜಲಚರ : ವನಚರಪಾಲಿಕೆಲೆ ಪಾವನ ಸುಶೀಲಿಕೆಲೆ . . . ಸೇವಿತಮಲಪ್ರಹರಿ ಸ್ಫುಟವೇಣಿ ರಾಜಿಕುಂ (ಹಮ್ಮೀರ. ೧-೫೫). [ಸಂ.]

ವನಚರಿ (ನಾ). ಬೇಡತಿ ; ಕಿರಾತಸ್ತ್ರೀ : ವನಚರಿ ಬರೆ ವಿದ್ಯುಲ್ಲೇಖೆ ಬರ್ಪಂತೆ (ಅಜಿಪು. ೯-೩೨); ಮನೋನುರಾಗದಿಂ ವನಚರಿ ಪಾಡಿದಳ್ ಮಧುರಗೀತಿಗಳಂ (ಲೀಲಾವ. ೮-೩೨); ನೀರದರುಚಿಯಂ ಪೋಲ್ವ ಶರೀರದ ವನಚರಿ ತಮಾಳಲತೆವನೆಯೊಳ್ಕುಳ್ಕು . . . ಕಾರಿರುಳಿನ ಸಿರಿಯ ತೆಱದಿನೆಸೆವುತ್ತಿರ್ದಳ್ (ತ್ರಿಪುವಿ. ೨೭ ೬೯). [ಸಂ. ವನಚರೀ]

ವನಜ (ನಾ). ೧. ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ವನಜಾನೀಕಮೆ ಪಳ್ಳವೋಪ ತೆಱದಿಂ ಕಿಟ್ಟೆರ್ದು ಭೂಪಂ ತಪೋವನಮಂ . . . ಪೊಕ್ಕಂ (ಆದಿಪು. ೪-೮೩); ವನಜಂಗಳ್ ದಳವೇಱೆ ಚೂತಲತೆಗಳ್ ನೀರೇಱೆ . . . ಪುಂಡ್ರೇಕ್ಷುಚಾಪನ ಚಾಪಂ ಗೊಲೆಗೇಱೆ ಬಂದುದು ವಸಂತಂ ಸಂತತೋತ್ಸಾಹದಿಂ (ಧರ್ಮಾಮೃ. ೧೩-೧೦). ೨. ಆನೆ ; ಗಜ. ೩. ಕೊನ್ನಾರಿಗಡ್ಡೆ. ೪. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಒಂಬತ್ತನೆಯದಾದ ಬೃಹತಿಛಂದಸ್ಸಿನ ಒಂದು ವೃತ್ತ : ಆಗಳಗ್ನಿಮಯುದ್ವಯಸಂಯೋಗಮಾಗಿರೆ ಭಾವಿಸು ಭೂಭಾಗದೊಳ್ಪ್ರಗನೇತ್ರೆ ನೀಂ ನಾಗವರ್ಮನಿನೀ ವನಜಂ (ಛಂದೋಂಬು. ೨-೧೦೧). [ಸಂ.]

ವನಜಜ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ವನಜಜ ಬನ್ನಿಮಿತ್ತ ಹರ ಕುಳ್ಳಿರಿಮುನ್ನತಪೀಠದೊಳ್ (ಜಗವಿ. ೩-೫೯); ವನಜಜನಮಾವಾಸೆಯ ನನುದಿನವಿರಿಸದವೇಕೆ ಹುಣ್ಣಿಮೆಯನೆಸಗಿದಂ (ನಳಚಂ. ೨೦೬). [ಸಂ.]

ವನಜದಳ (ನಾ). ೧. ತಾವರೆ ಹೂವಿನ ಎಸಳು ; ಕಮಲಪುಷ್ಪದ ದಳ : ವನಜದಳಂಗಳೊಳೊಂದೊಂದನೆ ಮುಗಿಯಿಸಿ . . . ಪೂಗೊಳದೊಳಗೆ ಪೊಳೆದವಿಂದುಕರಂಗಳ್ (ಕಾದಂಬ. ೪೨೦). ೨. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹದಿನೇಳನೆಯ ಅತ್ಯಷ್ಟಿಛಂದಸ್ಸಿನ ಒಂದು ವೃತ್ತ : ವನಜದಳಂ ನನನ ನನಗಗಂ (ಛಂದೋಂಬು. ೨-೧೬೬ ಅಧಿಕಪಾಠ). [ಸಂ. ವನಜದಲ]

ವನಜನಾಭ(ನಾ). ಹೊಕ್ಕುಳಲ್ಲಿ ತಾವರೆಯ ಹೂವಿರುವವನು ; ಪದ್ಮನಾಭ ; ವಿಷ್ಣು : ಎನ್ನ ಪಗೆಯೆನಿಸಿರ್ದ ವನಜನಾಭಂ ಮತ್ತೊಂದು ತಾಣದೊಳ್ ಪುಟ್ಟಿದಂ (ಜಗವಿ. ೩-೨೨ ವ); ತಂದಿರಿಸಿದರು ಫಲವನು ವನಜನಾಭನ ಹೇಳಿಕೆಯಲಾಕ್ಷಣಕೆ (ಕುಮಾಹ. ೩-೨೫); ವನಜನಾಭನ ಧ್ಯಾನಕೆ ಸರಿಯುಂಟೆ (ಪುರಂದ. ೧-೨೯-೨). [ಸಂ.]

ವನಜಭವ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಅನುರೂಪಮಾಗೆ ಪುಟ್ಟಿಸಿ ವನಜಭವಂ ಚೂತರಾಜನಂ ಮಲ್ಲಿಗೆಯಂ ವನಮಿಥುನಂಗಳೊಳೇಂ ಮುನ್ನಿನ ತನ್ನ ಜಡಸ್ವಭಾವಮಂ ಮೀಱೆದನೋ (ಮಲ್ಲಿಪು. ೬-೪೩); ವನಜಭವನಲಿ ವರವ ಬೇಡಿದೆ (ಕಾಶಿಕಾ. ೨೩-೨೩). [ಸಂ.]

ವನಜಭವಾಂಡ (ನಾ). ಬ್ರಹ್ಮಾಂಡ : ಧನುವಿನ ಟಂಕೃತಂ ವಿಶಿಖಭೀಂಕೃತ ಮುತ್ಕಟಕೋಪ ಹೂಂಕೃತಂ ವನಜಭವಾಂಡಮಂ ಪುದಿಯೆ (ಜಗವಿ. ೧೫-೫). [ಸಂ.]

ವನಜಮಿತ್ರ (ನಾ). ತಾವರೆಯ ಗೆಳೆಯ ; ಸೂರ್ಯ.

ವನಜಮಿತ್ರಪುತ್ರ = ಸೂರ್ಯನ ಮಗ ; ಯಮ : ವನಜಮಿತ್ರಪುತ್ರಂ ದರಹಸಿತ ವದನಾರವಿಂದನಾಗಿ . . . ಆಟೋಪದಿಂ ಮುಟ್ಟಿವರ್ಪುದುಂ (ಜಗವಿ. ೭-೨೬ ವ). [ಸಂ.]

ವನಜವನ (ನಾ). ತಾವರೆ ಹೂವುಗಳ ಗುಂಪು , — ಸಮೂಹ : ವನಜವನಕ್ಕೆ ವಿಕಾಸಂ ದಿನಪತಿಯಿಂದಲ್ಲದುಟೆದೆಂದಕ್ಕುಮೆ (ಮಲ್ಲಿಪು. ೯-೯೪); ಅನುನಯದಿಂ ವನಜವನಮಂ ದಿನಪ ಪೊಗುವಂತೆ . . . ಅಯೋಧ್ಯಾಪುರವನಿನಕುಲ ಹರಿಶ್ಚಂದ್ರ ಭೂವರಂ ಪೊಗಲು (ಪಚಕಾ. ೧೪-೨೫). [ಸಂ.]

ವನಜವಲ್ಲಿ (ನಾ). ತಾವರೆಯ ಬಳ್ಳಿ ; ಕಮಲಿನಿ : ನವವನಜವಲ್ಲಿಗೆಱಗುವ ಝಷದ್ವಯಂಗಳವೆನೆ ಪಾರ್ಥಿವನ ನಯನಂಗಳೆಱಗಿದುವವಯವದಿಂ ನಿಂದ ಗಾಯಿಕಾಯುವತಿಯರೊಳ್ (ಶಾಂತಿಪು. ೩-೫೩). [ಸಂ. ವನಜವಲ್ಲೀ]

ವನಜಶರ (ನಾ). ೧. ತಾವರೆಯ ಹೂವಿನ ಬಾಣ.೨. ತಾವರೆ ಹೂವನ್ನು ಬಾಣವಾಗಿ ಉಳ್ಳವನು ; ಮನ್ಮಥ.

ವನಜಶರಹರ = ಮನ್ಮಥನನ್ನು ನಾಶಮಾಡಿದವನು ; ಶಿವ : ವನಜಶರಹರ ನಿಮಗೆ ಮನಸು ಮುನ್ನೆಱಗಿಹುದು ತನುವೆಱಗಲೇತಕ್ಕೆ (ವೃಷಭಾ. ೭-೩೭). [ಸಂ.]

ವನಜಸಂಭವ (ನಾ). ೧. = ವನಜಜ : ವಿಷ್ಣುಗೆ ಪಿರಿಯರ್ ಮತ್ತಿಲ್ಲ ದೇವರಿದುವೆ ಯಥಾರ್ಥಂ ಎನೆ ವನಜಸಂಭವನದಂ ಮನದೆ ಕೊಂಡು (ಜಗವಿ. ೧-೩೩ ವ); ಮನುಜರ ಮಾತೇನು ಘನವಲ್ಲ ವನಜಸಂಭವಗೂ ನಿಶ್ಚಯವಿಲ್ಲ (ಪುರಂದ. ಧಾ. ೬-೪). ೨. [ಛಂದ] ಅಂಶಗಣಗಳಲ್ಲಿ ಒಂದು ಗಣದ ಹೆಸರು ; ಬ್ರಹ್ಮಗಣ : ವನಜಸಂಭವಗಣಮಕ್ಕೆ ಮೊದಲೊಳತ್ತಲ್ ವನರುಹೋದರ ಗಣಯುಗಳಮದಕ್ಕೆ (ಛಂದೋಂಬು. ೫-೨೪೫).

ವನಜಸಂಭವಜನಕ = ಬ್ರಹ್ಮನ ತಂದೆ ; ವಿಷ್ಣು : ಸನಕಾದಿ ಮುನಿವಂದ್ಯ ವನಜಸಂಭವಜನಕ ಫಣಿಶಾಯಿ ಪ್ರಹ್ಲಾದಗೊಲಿದ ಶ್ರೀಕೃಷ್ಣ (ಪುರಂದ. ೧-೧೩-೨). [ಸಂ.]

ವನಜಾಕ್ಷ (ನಾ). ಕಮಲದಂತೆ ಸುಂದರವಾದ ಕಣ್ಣುಗಳುಳ್ಳವನು ; ವಿಷ್ಣು : ವನಜಾಕ್ಷನಿಂ ತವರ್ಮನೆ ತನಗದು ಗೆಂಟಾದ ಬೇದದಿಂದರ್ದಂತಾ ತನುಮಧ್ಯೆ ಪಾಗುಡಂಬೆರಸು ನಯಾನ್ವಿತರಪ್ಪ ನರರನಟ್ಟಿದೊಡೆ (ನೇಮಿಪು. ೮-೪೦); ವನಜಾಕ್ಷಂ ಪೊಗಳುತ್ತಿರಲನುಪಮ ಮೆಱೆಮಿಂಡದೇವಗಚಳಿತಪದಮಂ ವಿನಯದಿನಿತ್ತುಂ (ತ್ರಿಪುವಿ. ೬-೧೭). [ಸಂ. (ವನಜ + ಅಕ್ಷಿ + —)]

ವನಜಾಕ್ಷಿ (ನಾ). ಕಮಲದಂತೆ ಸುಂದರವಾದ ಕಣ್ಣುಳ್ಳವಳು ; ಕಮಲಾಕ್ಷಿ : ವನಜಾಕ್ಷಿ ದೋಷಿಯಲ್ಲದ ನಿನಗೆ ಕರಂ ಪೊಲ್ಲಗೆಯ್ದೆಂ (ಪಂಚತಂ. ೭೭-೧೯); ವನಜಾಕ್ಷಿ ಕೇಳೊತ್ತೆಯವಳಾದ ಬಳಿಕ ಇಂದಿನ ರಾತ್ರಿಯವನೊಡನೆ ಸುವಿಮಿರ್ದು ನಾಳೆ ಬರೆ ಅನುವ ಪೇಳುವೆನು (ಪ್ರೌಢರಾ. ೯-೩೨). [ಸಂ. ವನಜಾಕ್ಷೀ]

ವನಜಾತ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ ; ಕಮಲ : ತ್ರಿಜಗದಗ್ರದೊಳು ಪೂತಶಿಲೆಯೊಳಿಪ್ಪ ಸಿದ್ಧರ ಪದವನಜಾತಗಳಿಗೆಱಗುವೆನು (ತ್ರಿಪುರಾಂ. ೧-೮); ಪೂತಾತ್ಮ ಮುನಿಹೃದಯ ವನಜಾತ ಯಮತಾತ . . . ಸಂಗಮೇಶ್ವರ ಓತು ರಕ್ಷಿಸೆನ್ನಂ (ಪ್ರೌಢರಾ. ೯-೧). [ಸಂ.]

ವನಜಾತಾಹಿತ (ನಾ). ತಾವರೆಹೂವಿನ ವೈರಿ; ಚಂದ್ರ : ಆ ಶುಕ್ರನಿಂ ವನಜಾತಾಹಿತನಾ ವನೇಜರಿಪುವಿಂ ಪಂಕೇಜಮಿತ್ರಂ ಬಲಾಢ್ಯನೆನಿಕ್ಕುಂ (ಜಾತಕ. ೨-೧೨).

ವನಜಾತಾಹಿತ ಸೂನು = ಚಂದ್ರನ ಮಗ ; ಬುಧ : ವನಜಾತಾಹಿತಸೂನುದಂಪತಿ ನವಾಂಶಸ್ಥಾಯಿ . . . ವಿಲಗ್ನಕ್ಷೇತ್ರಮಂ ವೀಕ್ಷಿಸಲ್ ಜನಿಯಿಕ್ಕುಂ ಪುರುಷತ್ರಯಂ (ಜಾತಕ. ೩-೧೪). [ಸಂ.]

ವನಜಾರಿ (ನಾ). = ವನಜಾತಾಹಿತ : ವನಜಾರಿಯಿನುಪಚಯದೊಳ್ ಜನನಾಧಿಪನಿರೆ ಶುಭಗ್ರಹಂ ನೆಲಸಿರೆ . . . ಭೂಪತಿಯಕ್ಕುಂ (ಜಾತಕ. ೧೨-೮); ವನಜಾರಿಯ ಕಂದಿಪವೋಲ್ ದಿನಮದು ಕುಮುದಿನಿಯ ಪಿರಿದು ಕಂದಿಸಿದಪುದೇಂ (ಶಾಲಿಂಕ. ೩೮-೬೮).

[ಸಂ.]

ವನಜಾಲಯೆ (ನಾ). ಕಮಲವನ್ನು ನೆಲೆಯಾಗಿ ಉಳ್ಳವಳು ; ಲಕ್ಷ್ಮಿ : ವನವನಧಿಯಲ್ಲಿ ಜನಿಸಿದ ಘನಮೌಕ್ತಿಕದಂತೆ ಮೆಱೆವ ಮಲ್ಲಿಗೆಮುಗುಳಂ ವನಜಾಲಯೆ ಯಂತೊಪ್ಪುವ ವನಜಾನನೆಯೊರ್ವಳಾಯ್ಪಳಿಸಿಂಭ್ರಮದಿಂ (ರಾಜಶೇ. ೧೦-೩೬).

[ಸಂ. ವನಜಾಲಯಾ]

ವನಜಾಸ್ತ್ರ (ನಾ). ೧. = ವನಜಶರ ೧. ೨. = ವನಜಶರ ೨: ವನಜಾಸ್ತ್ರ ನಿನ್ನಯ ಪೊಳೆವ ಬೆರಳುಗಳ . . . ತೋರು (ನವಮೋ. ೭-೧೬). [ಸಂ.]

ವನಜೋದರ (ನಾ). ಹೊಕ್ಕುಳಲ್ಲಿ ಕಮಲವನ್ನು ಉಳ್ಳವನು ; ಕಮಲನಾಭ ; ವಿಷ್ಣು : ವನಜೋದರನುಂ ವಿಸ್ಮಯಮಿನಿತೊಗೆಯಲ್ ಮನದೊಳಂದು ಘನಜಘನೆಯ ಸಂಜನಿತಮನುಕ್ಷತಮಂ ಭೋಂಕೆನೆ ಕಳೆದಂ ಪಾದಪದ್ಮದೊಳ್ ಬಿಟ್ಟುಗಳ್ (ನೇಮಿಪು. ೭-೬೯); ವನಜೋದರನುದರದ ಲೋಕಕ್ಷಿಕಾಯದೊಳಾತನಾಜ್ಞೆಯಿಂ . . . ನೆಱೆ ಕಂಡಂ (ಜಗವಿ. ೫-೧೦೫). [ಸಂ.]

ವನತರು (ನಾ). ಅರಣ್ಯದಲ್ಲಿರುವ ಮರ : ವನತರುಪತ್ರಂಗಳನೊಯ್ಯನೆ ನೆಲೆಯಿಂ ಪತ್ತುವಿಡಿಸಿ ಕಳಿಕೆಗಮುತ್ಪತ್ತಿನಿಮಿತ್ತಮಾಗಿ ಶಿಶಿರಮುಮಿನಿಸಿನಿಸನೆ ತನ್ನ ನೆಱನನೞಿಪಿದುದೀಗಳ್ (ಆದಿಪು. ೧೧-೮೯); ವನತರುಲತಾಲತಾಂತಮನನಿತಂ ತವೆ ಕೊಂಡಿರೆಂದು ಪುಯ್ಮಲ್ಬುವವೊಲ್ ಜಿನುಗುತ್ತಮಳಿಗಣಂ ಬಱಿಯನೆ ಬರೆ ಬಂದುದು ವಿಲಾಸಿನೀಜನಮಾಗಳ್ (ಶಾಂತೀಶ್ವ. ೧೦-೧೪೫). [ಸಂ.]

ವನತಿಕ್ತಕೆ (ನಾ). ಒಂದು ಬಗೆಯ ಔಷಧೀಸಸ್ಯ ; ಅಗರುಶುಂಠಿ : ಪಾಠಾ, ಅಂಬಷ್ಠಾ, ವಿದ್ಧಕರ್ಣೀ . . . ವನತಿಕ್ತಕಾ – ೧೦ ಅಗರುಶೊಂಠಿ ಹೆಸರು, ಅಗಳುಶೊಂಠಿ" (ಸಿದ್ಧಾಂತಿ. ೧೩೧). [ಸಂ. ವನತಿಕ್ತಕಾ]

ವನದಂತಿ (ನಾ). = ವನಕರಿ : ಗಜಪ್ರಿಯಾಂಬರಚರರ್ ಜೀಯಯ್ಯ ಭಾಷ್ಪೆಂದು ಜೇಕರಿಪನ್ನಂ ವನದಂತಿ ಪೋರ್ವುದು ನಿಷಾದ್ಯಾರೂಢದಿಂ ಪೋರ್ವವೋಲ್ (ಶಾಂತಿಪು. ೨-೧೧೦); ಹೊಸಮದದ ವನದಂತಿ ಕದಳಿಯ ಕುಸುರಿಱಿದಂದದಲಿ ಘನಪೌರುಷವ ಮಾಡಿದನೆಂದನವನೀಪಾಲನನುಜಂಗೆ (ಕುಮಾರ್ಯ. ೮-೨೨).

[ಸಂ. ವನದಂತಿನ್]

ವನದಹನ (ನಾ). ಕಾಡಿನಲ್ಲಿ ಉಂಟಾಗುವ ಬೆಂಕಿ ; ದಾವಾಗ್ನಿ ; ಕಾಳ್ಗಿಚ್ಚು : ವನದಹನಂ ವನಾಂತರಮನೊರ್ಬಳಸಾಗಿರೆ ಮುತ್ತಿ ಸುತ್ತಿ ಸುತ್ತಿನ ನಡುವಿರ್ದE ರ್ದುE ಮಾಮರನನಟ್ಟಿದುದೀ ಮರನಂ ತಗುಳ್ದುದೆಂಬನೊಳೆಣೆಯಾಗೆ (ಆದಿಪು. ೯-೫೯); ಹಿಳಿದುರಿವ ಹೆಬ್ಬಿದಿರ ಗಂಟಿನ ಠಳಠಳತ್ಕಾರದಿ ದಿಶಾಮಂಡಳದ ಮೂಲೆಗಳೊಡೆದು ದದ್ಭುತವಾಯ್ತು ವನದಹನ (ಕುಮಾಸ. ೨೦-೫೭). [ಸಂ.]

ವನದುರ್ಗ (ನಾ). (ಶತ್ರುಗಳು ಪ್ರವೇಶಿಸಲು ಸಾಧ್ಯವಾಗದ ಹಾಗೆ) ದಟ್ಟವಾದ ಕಾಡಿನಲ್ಲಿ ರಚಿಸಿದ ಕೋಟೆ : ಉದಗ್ರತರುಗಹನದುಷ್ಪ್ರವೇಶಮಪ್ಪ ವನದುರ್ಗದುನ್ನತಿಯುಮನೊಳಕೊಂಡು (ಆದಿಪು. ೧೩-೫೭); ಗಿರಿದುರ್ಗ್ಗ ವನದುರ್ಗ್ಗ ಜಲದುರ್ಗ್ಗಾದ್ಯನೇಕದುರ್ಗ್ಗಂಗಳನಶ್ರಮದಿಂ ಕೊಣ್ಡ ಚಂಡಪ್ರತಾಪದಿಂ (ಎಕ. II, ೧೪೩-೪೩; 1131). [ಸಂ.]

ವನದುರ್ಗೆ (ನಾ). ಪಾರ್ವತಿಯ ಹೆಸರುಗಳಲ್ಲಿ ಒಂದು; ಚಾಮುಂಡಿ : ವನದುರ್ಗಾ ಭದ್ರಕಾಳೀ ಚಾಮುಂಡಾಂಬಾ ಗತಿರ್ಮಮ (ಎಕ XIV, ಮೈಸೂರು. ೧೩೩-೨೪; 1857).

[ಸಂ. ವನದುರ್ಗಾ]

ವನದೇವತೆ (ನಾ). ಅರಣ್ಯದ ಅಭಿಮಾನಿದೇವತೆ : ವನದೇವತೆಗಳ್ಗೆಲ್ಲಂ ಕರುಣಮಾಗೆ ಪಳಯಿಸುವ ಮಾದ್ರಿಯ ಸರಮಂ ಕುಂತಿ ಕೇಳ್ದು (ಪಂಪಭಾ. ೨-೨೨ ಪ); ವನದೇವತೆಯರಿರಾ ನಂದನದೇವತೆಯರಿರ . . . ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ (ಗಿರಿಕ. ೮-೭೭). [ಸಂ. ವನದೇವತಾ]

ವನದೇವಿ (ನಾ). ೧. = ವನದೇವತೆ : ವನದೇವೀಪ್ರಾಸಾದಮಿದೆನಿಪಗಕುಳದೊಳ್ ಕಪೋತಸಂಹತಿ ನೆಗೆದತ್ತೆನಿಪುವು . . . ಧೂಮತತಿ ತದ್ದಿನದೊಳ್ (ಕಾದಂಪು. ೧೪೫); ಪೂವಿನೊಳಾದ ಬೆಡಂಗು ನಾಡೆ ರಂಜಿಸೆ ವನದೇವಿಯರ್ ನಲಿದು ಮನ್ಮಥರಾಜನ ಬರ್ಪುದಕ್ಕೆ ರಾಗಿಸಿ ಮನಮೊಲ್ದು (ಧರ್ಮಾಮೃ. ೧೩-೧೩). ೨. ಪಾರ್ವತಿ; ಚಾಮುಂಡಿ : "ಚಾಮುಂಡಿ ಚರ್ಚೆ ಭೈರವಿಯೆನಲು ವನದೇವಿ" (ಮಂಗರಾ. ೫-೧೪).

[ಸಂ. ವನದೇವೀ]

ವನಧಿ (ನಾ). ಕಡಲು ; ಸಮುದ್ರ : ವನಧಿಪರೀತಭೂತಳದೊಳೀತನೆ ಸೋಲದ ಗಂಡಂ (ಪಂಪಭಾ. ೧-೨೬); ಹಳದಿಯ ಪೈರು ಬೆಳೆಬೆಳೆದು ಹಬ್ಬಿಯಿರೆ ಶಾಲಿವನ ವನಧಿಯ ಸುವಿಸ್ತೀರ್ಣಲಂಬಾಯಮಾನ ಸೈಕತವೇಲೆಯನು ಹೋಲಿ (ಚಿತ್ರಾಂಗ. ೫೨-೧೪೩೩). [ಸಂ.]

ವನಧಿಪೀತ (ನಾ). ಸಮುದ್ರದ ನೀರನ್ನೆಲ್ಲ ಕುಡಿದವನು ; ಅಗಸ್ತ್ಯಮುನಿ : "ವನಧಿಪೀತ[ಪಾಠಾಂ. ಪಿತ್ವ]ನಗಸ್ತಿ ಘಟಯೋನಿಯೆನಲಗಸ್ತ್ಯನೆನಿಕ್ಕು" (ಮಂಗರಾ. ೭೭-೧೦). [ಸಂ.]

ವನಧಿಸಂಭವ (ನಾ). ಸಮುದ್ರದಿಂದ ಜನಿಸಿದವನು ; ಚಂದ್ರ : ಅನುದಿನದೊಳವಗಡಿಪ ಸಂಸಾರಸಾಗರಕೆ ವನಧಿಸಂಭವನೆನಿಸುವೀ ಕಥಾಕುತುಕಮಂ ಮನದಂದು ಕೇಳ್ದುದು (ನಂದಿಮಾ. ೩-೨). [ಸಂ.]

ವನನರ (ನಾ). ೧. ಕಾಡುಮನುಷ್ಯ. ೨. ಕಾಡಿನಲ್ಲಿರುವ ಮನುಷ್ಯಾಕಾರದ ಪ್ರಾಣಿ ; ವಾನರ ; ಕಪಿ : ಕೀರ್ತಿಗೆ ಕೃತಜ್ಞತೆಗೆ ಪೆರ್ಚಿ ವನನರಬಲಂ ಕೊರಳೆತ್ತಿ ಕೈವೀಸಿ ಕೈವಾರಗೆಯ್ಯಲಾ ಘೇ ಉಘೇಧ್ವನಿಗೆ (ಶ್ರೀರಾಮಾ. ೩೯೩-೮೪೮). [ಸಂ.]

ವನನಾಗಾರಿ (ನಾ). ಕಾಡಾನೆಯ ಶತ್ರು ; ಸಿಂಹ : ಅಶ್ವಗ್ರೀವಂ ಆ ತ್ರಿಪೃಷ್ಠಂಗಿದಿರ್ಚಿ ವನನಾಗಾರಿಯನಾಂತ ದಂತಿಶಿಶುವೋಲ್ . . . ನೀಡಿಲ್ಲದಳ್ಳಾಡುಗುಂ (ಶಾಂತಿಪು. ೫-೨೭). [ಸಂ.]

ವನನಿಧಿ (ನಾ). = ವನಧಿ : ವನನಿಧಿಯಿಂದಂ ಚಂದ್ರಂ . . . ಒಗೆವಂತೆ ಪುಟ್ಟಿದನನಿವಾರ್ಯಸುತೇಜನೆನಿಪನಿನಜನ ತನಯಂ (ಪಂಪಭಾ. ೧-೧೨೧); ವನನಿಧಿ ಪೊಸಮುತ್ತಿನ ಮಣಿಗಳನಿದೆ ಚಲ್ಲಿದನೆನೆ ಮಣಿನಿಭತಾರೆಗಳ್ಮನಂಗೊಳಿಸಿರ್ಕುಂ (ರಾಜಶೇ. ೧೧-೩೯). [ಸಂ.]

ವನನಿವಾಸ (ನಾ). ಕಾಡಿನಲ್ಲಿ ವಾಸಮಾಡುವಿಕೆ; ಅರಣ್ಯವಾಸ : ಪುರುವಂಶದವರಿಗೆ ವನನಿವಾಸವು ಮುಪ್ಪಿನಲ್ಲಿ ಕುಲವ್ರತವಾಗಿರುವುದಪ್ಪೆ? (ಶಾಕುಂತ. ೧೦೬-೧೯). [ಸಂ.]

ವನಪಥ (ನಾ). ಕಾಡಿನ ದಾರಿ ; ಅರಣ್ಯಮಾರ್ಗ : ಮನುಮಾರ್ಗನಿಪುಣನೆನಿಸಿದ ನಿನಗಾಮಿ ರಾಜಮಾರ್ಗಮಂ ತೋಱೆ ಜಗಜ್ಜನಕೆ ನಗೆಯಲ್ತೆ ಕಳಭಂ ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ (ಆದಿಪು. ೮-೧೨). [ಸಂ.]

ವನಪಾಲ (ನಾ). ವನವನ್ನು ರಕ್ಷಿಸುವವನು ; ಉದ್ಯಾನಪಾಲಕ : ಬನದೊಡಮೆಯೊಳಾದೊಲವುಂ ವನಪಾಲನೊಳಾದ ಮೆಚ್ಚುಮೆಕ್ಕೆಕ್ಕೆಯಿನಂದನುವಿಸೆ (ಮಲ್ಲಿಪು. ೫-೬೦); ವನಪಾಲಂ ಕಾಣ್ಕೆಗೈದಂ ವಿಚಕಿಲದರಲಂ ಪಚ್ಚೆಯಂ ಬಾಳೆವಣ್ಣೊಳ್ಗೊನೆಯಂ (ರಾಜಶೇ. ೧೦-೨). [ಸಂ.]

ವನಪಾಲಕ (ನಾ). = ವನಪಾಲ : ವನಪಾಲಕರಂ ಘಾತಿಸಿ ಕೆಯ್ಕೊಂಡು ಬನಮನಿರೆಯಿರೆ . . . ವಿಶ್ವನಂದಿ ತಡೆಯದೆ ಬಂದಂ (ಶಾಂತಿಪು. ೭-೫೭); ಧಾಳಿಯಿಟ್ಟರು ಸುರವನಕೆ . . . ನಡುಗಿದರು ವನಪಾಲಕರು ನಿಮೋಣಾಗಿದವು ಹರಿಚಂದನಾದಿಗಳು (ಕುಮಾಸ. ೨೦-೨೩). [ಸಂ.]

ವನಪಾಲಿಕೆ (ನಾ). ತೋಟವನ್ನು ರಕ್ಷಿಸುವವಳು ; ಉದ್ಯಾನಪಾಲಿಕೆ : ಇಂತು ವನಪಾಲಿಕೆ ತಂದಿತ್ತ ಕಾಣ್ಕೆಯಂ ಕೈಕೊಂಡು (ಉದ್ಭಟ. ೯-೧೨ವ); ಮನ್ಮಥನ ಕಳಮವನಮೋಯೆನಲ್ ಕಳಮವನದೊಳ್ ಕಳಮವನಪಾಲಿಕೆಯರೊಪ್ಪುಗುಂ (ಪದ್ಮರಾ. ೮-೧೭). [ಸಂ. ವನಪಾಲಿಕಾ]

ವನಪ್ರಸ್ಥ (ನಾ). ೧. ಎತ್ತರವಾದ ಪ್ರದೇಶದಲ್ಲಿರುವ ವನ ; ಪ್ರಸ್ಥಭೂಮಿಯಲ್ಲಿರುವ ಕಾಡು. ೨. ವಾನಪ್ರಸ್ಥಜೀವನವನ್ನು ನಡೆಸುವಿಕೆ. [ಸಂ.]

ವನಪ್ರಿಯ (ನಾ). ೧. ಕೋಗಿಲೆ : "ವನಪ್ರಿಯಃ, ಪರಭೃತಃ, ಕೋಕಿಲಃ, ಪಿಕಃ – ೪ ಕೋಗಿಲೆ" (ಸಿದ್ಧಾಂತಿ. ೧೫೯). ೨. ಲವಂಗಪಟ್ಟೆ ; ದಾಲ್ಚಿನ್ನಿ. [ಸಂ.]

ವನಭೂಮಿ (ನಾ). ಕಾಡಿನ ನೆಲ ; ಕಾಡುಪ್ರದೇಶ; ಅರಣ್ಯಸ್ಥಳ : ಏಲಾಲವಂಗ ಲವಲೀವೇಲಾವನಭೂಮಿಯೊಳ್ ನಿಧೀಶ್ವರ ಸೈನ್ಯ ವ್ಯಾಲಗಜಂಗಳ್ . . . ಕಣ್ಗೆವಂದುವು (ಆದಿಪು. ೧೩-೨); ಭೂರಿಜಂಬುಮಧೂಕಪನಸಸ್ಫಾರರಸಪೂರಾನುಕಲಿತವಿಹಾರ ಸುರಮಹಿಳಾಭರಂಜಿಸುವವಿಳವನಭೂಮಿ (ಕುಮಾಸ. ೪-೩೦). [ಸಂ.]

ವನಭೋಜನ (ನೌ). (ವನವಿಹಾರದ ಸಮಯದಲ್ಲಿ) ಉದ್ಯಾನವನದಲ್ಲಿ ಎಲ್ಲರೂ ಒಟ್ಟಿಗೆ ಮಾಡುವ ಔಟ, —ಸಾಮೂಹಿಕ ಭೋಜನ : ವನಭೋಜನದ ಬಳಿಗೈತರಲರ್ಭಕರು (ಕೃಷ್ಣಗೋ. ೨-೮೧); ಅವರೂಪದಿನಗಳಲ್ಲಿ ಪ್ರಭುಗಳು ಇವರ ಸಂಗಡ ಸೇರಿ . . . ಅರಣ್ಯಗಳಲ್ಲಿ ಸಂಚರಿಸಿ . . . ಎಲ್ಲರೂ ಸೇರಿ ವನಭೋಜನ ಮಾಡಿದುದುಂಟು (ಶಾಂಚರಿ. ೧೨೨). [ಸಂ.]

ವನಮಂಜರಿ (ನಾ). ೧. ಕಾಡಿನ ಹೂವುಗಳ ಗೊಂಚಲು. ೨. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಇಪ್ಪತ್ತೆರಡನೆಯದಾದ ಆಕೃತಿ ಛಂದಸ್ಸಿನ ಒಂದು ವೃತ್ತ : ಭೂತಗಣಾಧಿಪನುಂ ಪಡೆದಾ ಕಡೆಯೊಳ್ನಿಲೆ . . . ನಾತಿಗನಿಂದಮಿದೇ ಸಕಳೋರ್ವಿತಲದೊಳ್ವನಮಂಜರಿ ಯೆಂಬುದು ನಾಮದೊಳ್ (ಛಂದೋಂಬು. ೨-೧೭೫); ಏಟುಂ ಭಗಣಂಗಳುಮೊರ್ಗುರುವುಂ ಬರಲಾ ವನಮಂಜರಿಯಪ್ಪುದು ಕೇಳ್ (ಕೃವಿ. ೬೦). [ಸಂ. ವನಮಂಜರೀ]

ವನಮಕ್ಷಿಕೆ (ನಾ). ಕಾಡುನೊಣ : "ದಂಶಃ, ವನಮಕ್ಷಿಕಾ – ೨ ಕಾಡುನೊಣ" (ಸಿದ್ಧಾಂತಿ. ೧೬೧). [ಸಂ. ವನಮಕ್ಷಿಕಾ]

ವನಮಯೂರ (ನಾ). ೧. ಕಾಡಿನಲ್ಲಿರುವ ನವಿಲು. ೨. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹದಿನಾಲ್ಕನೆಯದಾದ ಶಕ್ವರಿ ಛಂದಸ್ಸಿನ ಒಂದು ವೃತ್ತ : ಬಂದಿರೆ ಶಶಾಂಕದಿವಸೇಶಮರುದಿಂದ್ರರ್ . . . ಯತಿ ಪದಾರ್ಥದೊಳ್ ನಿಂದಂದೆಂದುಮಿದ ಕೇಳ ಪೆಸರಿಂ ವನಮಯೂರಂ (ಛಂದೋಂಬು. ೨-೧೪೯); ಒಪ್ಪೆ ಭಜಸಂನಗಗಮುಂ ವನಮಯೂರಂ (ಕೃವಿ. ೬೨). [ಸಂ.]

ವನಮಹತ್ತರ (ನಾ). ಉದ್ಯಾನದ ರಕ್ಷಣೆಯನ್ನು ವಹಿಸಿಕೊಂಡಿರುವವನು ; ವನಪಾಲಕ: ಆಗಳರಸನವಸರೋಚಿತಫಳಪ್ರಾಪ್ತಿಗೆ ಸಂತಸಂಬಟ್ಟು ವನಮಹತ್ತರಂಗೆ ಪೊಟ್ಟುಗೊಟ್ಟು (ಮಲ್ಲಿಪು. ೪-೩೪); ವನಮಹತ್ತರಂ ವಿಚಿತ್ರಪುಷ್ಪಫಲಹಸ್ತಂ ಬಂದು ಬಾಗಿಲೊಳ್ದರ್ದವನೆಂಬುದುಂ (ಚಂದ್ರಪ್ರ. ೨-೭೫). [ಸಂ.]

ವನಮಹಿಷ (ನಾ). ಅಡವಿಯ ಕೋಣ ; ಕಾಡುಕೋಣ : ದವನಕಂ ಬಂದು ಮಹಾಪ್ರತಿಹಾರನಪ್ಪ ಸುಭದ್ರನೆಂಬುದೊಂದು ವನಮಹಿಷನ ಸಾರೆಮಂದು . . . ನಿಲ್ಲೆಂಬುದುಂ (ಪಂಚತಂ. ೩೩-೦); ಇದೊ ಇಲ್ಲಿ ವನಮಹಿಷನುದ್ದಿಕೊಂಡ ಮರದಿಗುಡು (ಚಂದ್ರಪ್ರ. ೨೦-೦). [ಸಂ.]

ವನಮಹಿಷಿ (ನಾ). ಅಡವಿಯ ಎಮ್ಮೆ ; ಕಾಡೆಮ್ಮೆ : ದೆಸೆಗಳ್ಗೆ ಬೆರ್ಚಿ ಮೂಂಕಿಜ್ಜಿವ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ, ಪುಲಿಗಳಿನತಿಭಯಂಕರಾಕಾರಮಪ್ಪ ದ್ವೀತವನಕ್ಕೆ ಬಂದು (ಪಂಪಭಾ. ೭-೨೯ ವ). [ಸಂ. ವನಮಹಿಷೀ]

ವನಮಹೋತ್ಸವ (ನಾ). ಕಾಡಿನ ಅಭಿವೃದ್ಧಿಗಾಗಿ ಸರ್ಕಾರವು ಪ್ರತಿವರ್ಷವೂ ನಿರ್ದಿಷ್ಟ ದಿನದಂದು ಗಿಡಗಳನ್ನು ನೆಟ್ಟು ಆಚರಿಸಲು ಹಮ್ಮಿಕೊಂಡಿರುವ ಉತ್ಸವದ ರೀತಿಯ ಒಂದು ಕಾರ್ಯಕ್ರಮ : ಭಾರತವ: ವನಮಹೋತ್ಸವವನ್ನು ಪ್ರಾರಂಭಿಸಿದುದಕ್ಕಿಂತ ಬಹುಪೂರ್ವದಲ್ಲಿಯೇ ಅವು ಅಲ್ಲಿ ಬೆಳೆಯುತ್ತಲಿದ್ದವು (ಪ್ರಬಂಧ. ೯೫). [ಸಂ.]

ವನಮಾಲಾಧರ (ನಾ). ೧. ವನಮಾಲೆಯೆಂಬ ಕಾಡುಹೂವುಗಳ ಹಾರವನ್ನು ಧರಿಸಿದವನು ; ವಿಷ್ಣು. ೨. ವನಮಾಲೆಯೆಂಬ ಸ್ತ್ರೀಯನ್ನು ಹೊಂದಿದವನು; ವನಮಾಲೆಯೆಂಬುವಳ ಗಂಡ. ೧, ೨: ಶ್ರೀಧರನಿಂ ಸಕಲಧರಿತ್ರೀಧರನೆನೆ ಸಂದದೊಂದು ಸೊಬಗಿಂ ವನಮಾಲಾಧರನಾದನೆನಲ್ ಮಧುರಾಧರೆ ವನಮಾಲೆ ವಲ್ಲಭಾಗ್ರಣಿಯಾದಳ್ (ಪುಷ್ಪಪು. ೬-೨೨). [ಸಂ.]

ವನಮಾಲಾಸ್ಪದ (ನಾ). ೧. ವನಮಾಲೆಯನ್ನು ಧರಿಸಿದವನು ; ಕೃಷ್ಣ. ೨. ಜಲರಾಶಿಗೆ ಅಧಿಪತಿಯಾಗಿರುವವನು ; ವರುಣ. ೧, ೨: ಕುಂಭಕರ್ಣಾವತಾರಂ ದಂತವಕ್ತ್ರಂ ನಿಸರ್ಗವೈರದಿಂದಸುರವೈರಿಯ ಪೆಸರ್ಗಳ್ ತನಗಸಹ್ಯಂಗಳಾಗೆ . . . ವನಮಾಲಾಸ್ಪದನೆಂದು ಯಾದಃಪತಿಯನದಿರ್ಪಿಯುಂ . . . ಮಾಣದೆ (ಜಗವಿ. ೯-೫೩ ವ). [ಸಂ.]

ವನಮಾಲಿ, ವನಮಾಳಿ (ನಾ) = ವನಮಾಲಾಧರ ೧: ರಾಜಭವನದೊಳ್ ವನಮಾಲಿ ಲೀಲೆಯಿಂದಿರ್ದಂ (ಜಗವಿ. ೧೭-೬೦ ವ); ವನಮಾಲಿ ಪೊಗಳುತಿರಲು . . . ಅಗತನಯಾವರನೊಪ್ಪುತಿರ್ದನಾಸ್ಥಾಯಿಕೆಯೊಳ್ (ತ್ರಿಪುವಿ. ೧೩-೨೬). **ವನಮಾಳಿ** : ಕಾಳಿಯನಂ ಮರ್ದಿಪ ವನಮಾಳಿಗೆ ಸುಗಿದೀಗಳುಗುಳುತಿರ್ದನೊ ರಾಹುವ್ಯಾಳಂ ಮುನ್ನುಂಡಮರ್ದಂ ಪೇಟೆನಿಸಿದುದರಲ ಸುರಿವ ಬಲ್ಸುರಿ ಸುರರಾ (ಜಗವಿ.೩-೧೦೧). [ಸಂ. ವನಮಾಲಿನ್]

ವನಮಾಲೆ, ವನಮಾಳೆ (ನಾ). ೧. ಕಾಡುಗಳ ಸಾಲು ; ವನಪಂಕ್ತಿ : ವನಮಾಲೆಯಾಳ್ ವಿಹಾರಿಸಿ ವನಮಾಲೆಯೊಳಿಸಗುವಬ್ಜನೀಮಾರುತನಿಂ ವನಮಾಲೆ ಪೊಳೆಯೆ ಕೃಷ್ಣಂ ವನಮಾಲಯಮಾಯ್ತು ಲೀಲೆಗೆಂದೆನೆ ಸುಲಿದಂ (ಜಗವಿ. ೧೪-೬೨); ವನಮಾಲಿವರಿಶೋಭೆಯಿಂದನಿಮಿಷೋದ್ಯತ್ಪ್ರೀತಿಯಿಂ . . . ವಾರಿಧಿ ವಾರಿಜಾಕ್ಷನವೊಲೇಂ ಚೆಲ್ವಾಯ್ತೊ ಭೂಭಾಗದೊಳ್ (ಜಶಕು. ೧-೧೪). ೨. ಕಾಡಿನ ಹೂವುಗಳಿಂದ ರಚಿಸಿದ ಮಾಲೆ, —ಹಾರ ; II' ಎಲ್ಲ ಋತುಗಳ ಹೂವುಗಳಿಂದ ಕೂಡಿದ್ದು, ಮಧ್ಯದಲ್ಲಿ ಕದಂಬಹೂಗಳನ್ನುಳ್ಳ, ಕಾಲಿನವರೆಗೂ ನೇಲುವಂತೆ ಇರುವ ಒಂದು ಬಗೆಯ ವಿಶೇಷವಾದ ಹಾರ ; ಇದನ್ನು ಕೃಷ್ಣನು ಧರಿಸುತ್ತಿದ್ದನೆಂಬ ಪ್ರತೀತಿಯಿದೆ : ವನಮಾಲಿಯೊಳಿಸಗುವಬ್ಜನೀಮಾರುತನಿಂ ವನಮಾಲೆ ಪೊಳೆಯೆ ಕೃಷ್ಣಂ ಮನಮಾಲಯಮಾಯ್ತು ಲೀಲೆಗೆಂದೆನೆ ಸುಲಿದಂ (ಜಗವಿ. ೧೪-೬೨). ೧, ೨: ಹರಿಯಂತೆ ಚಾರುವನಮಾಲಾಭಿರಂಜಿತಂ ಹರನಂತೆ ಭೋಗಿನಿಕರಾಲಂಕೃತಂ . . . ಎನೆ ತಾರಕಾಂಬಕನ ಪೊಂಗೋಂಟೆ ಕಣ್ಗೆನಿಸದುದು (ಚಿಬಪು. ೪೧-೧೪). ೩. ನೀರಿನ ಸಮೂಹ ; ಜಲರಾಶಿ : ವನಮಾಲೆಯೊಳ್ ವಿಹಾರಿಸಿ ವನಮಾಲೆಯೊಳಿಸಗುವಬ್ಜನೀ ಮಾರುತನಿಂ ವನಮಾಲೆ ಪೊಳೆಯೆ (ಜಗವಿ. ೧೪-೬೨). **ವನಮಾಳೆ** : ೧, ೨: ವನಮಾಳಾಮಂಡನಂ ವಾರಿಯಹನಯನಂ . . . ಮಾರ್ತಾಂಡನಂತಾ ವಿಷಯದ ಬಿಳಸದ್ವಸ್ತುಸಂಭೂತವೃತಂ (ಶಾಂತೀಶ್ವ. ೧೩-೧೨೯). [ಸಂ. ವನಮಾಲಾ]

ವನಮಾಳಿ 'ವನಮಾಲಿ' ನೋ.

ವನಮಾಳೆ ' ವನಮಾಲೆ' ನೋ.

ವನಮುದ್ಗ (ನಾ). ಕಾಡು ಹೆಸರುಕಾಳು : "ಮಕುಷ್ಟಕಃ, ಮಯಷ್ಟಕಃ, ವನಮುದ್ಗಃ — ೩ ಕಾಡು ಹೆಸರುಕಾಳು" (ಸಿದ್ಧಾಂತಿ. ೨೩೯). [ಸಂ.]

ವನಮೃಗ (ನಾ). ೧. ಕಾಡುಪ್ರಾಣಿ ; ವನ್ಯಮೃಗ : ವನಚರಿ ಬರೆ ವಿದ್ಯುಲ್ಲೇಖೆ ಬರ್ಪಂತೆ ಬೆನ್ನಂ ವನಮೃಗರುಧಿರೋಲ್ಲಿಪ್ತಾಂಗನುತ್ತುಂಗಚಾಪಂ . . . ಕಿರಾತಂ

ಜನಿಯಿಸಿದನಿದಂ ಸಾಮ್ಯಂ ಬರಲ್ ಶೋಣಮೇಘಂ (ಆಪಿಪು. ೯-೩೨); ಟಂಕಾರರವಂ ಕಿವಿಯಂ ಭೋಂಕೆನೆ ಮಿಗೆ ತೀವೆ ಪುಗಲ್ ದೆಸೆಗಾಣದೆ ತಳ್ಪಂಕಗೊಳ್ಳುತಿರ್ಪ ವನಮೃಗಮಂ ಕವಿತಂದೆಚ್ಚುದಾಗ ವನಚರನಿಕರಂ (ಪಾರ್ಶ್ವನಾ. ೧೨-೭೬). ೨. ಕಾಡಿನಲ್ಲಿರುವ ಜಿಂಕೆ ಮುಂತಾದ ಸಾಧುಪ್ರಾಣಿ : ಮುನಿದಯ್ ನೂಱುಂ ಕುನ್ನಿಗಳನಿತುಮನೊರ್ಮೊದಲೆ ತೋಱೆ ಕೊಳ್ಳೊಳಿಸೆ ಮಹಾಮುನಿ ತಳರದೆ ಮೇರುವೊಲಿರೆ ವನಮೃಗದವೊಲುರ್ಕನುಟಿದು ಸುಟಿದುವು ನಾಯ್ಗಳ್ (ಯಶೋಧ. ೪-೪೩). [ಸಂ.]

ವನರಾಜಿಕ್ರೀಡೆ (ನಾ). ಕಾಡುಗಳಲ್ಲಿ ವಿಹರಿಸುವಿಕೆ ; ವನವಿಹಾರ : ವನರಾಜಿಕ್ರೀಡೆಯಂ ಯೌವನವನದೊಳೆ ತೋಱಲ್ . . . ಬಲ್ಲ ವಿದ್ಯಾಧರಸ್ತ್ರೀಜನದಿಂದಂ ಕಣ್ಗೆವಂದಂ ಸುಕವಿಜನೋಮಾನಸೋತ್ತಂಸಹಂಸಂ (ಆದಿಪು. ೧-೮೩).

[ಸಂ. ವನರಾಜಿಕ್ರೀಡಾ]

ವನರಾಶಿ (ನಾ). ೧. ಕಾಡುಗಳ ಸಮೂಹ ; ವನಪಂಕ್ತಿ. ೨. ನೀರಿನ ರಾಶಿ ; ಸಮುದ್ರ. ೧,೨: ವನರಾಶಿಯೊಳಗೆ ಬೆಳೆದೆಸೆವನೇಕ ವಿದ್ರುಮದ ಲತೆಯ ಪೊಂಪುಟಿಯವೊಲಾ ವನರಾಶಿಯೊಳಗೆ ಬೆಳೆದೆಸೆವನೇಕ ವಿದ್ರುಮದ ಲತೆಯ ಪೊಂಪುಟಿ ರಯ್ಯಂ (ಪುಷ್ಪಪು. ೯-೨೧). [ಸಂ.]

ವನರುಗ್ಮಾಂಧವ (ನಾ). ಕಮಲದ ಗೆಳೆಯ ; ಸೂರ್ಯ : ವಿಷ್ಣುವೇ ವನರುಗ್ಮಾಂಧವಬಿಂಬದೊಳ್ ನೆಲಸಿ ರಕ್ಷಿಕ್ಕುಂ ಜಗದ್ರಾತ್ರಮಂ (ವಿಷ್ಣುಪು. ೨-೨-೧೫೬).

[ಸಂ.]

ವನರುಹ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ : ವನರುಹಮೆಚ್ಚಮಪ್ಪ ಮೊಗಮಾದ ತಳಿರ್ತಳಮಾದ ಕೋಕಿಳಧ್ವನಿ ಸರಮಾದ . . . ಮಲ್ಲಿಗೆಯ ತುಂಬಿಯ ಕೂಟಮೆ ನೋಟಮಾದ ನಂದನವನಲಕ್ಷ್ಮಿ ಕಣ್ಗೆಸೆದು ತನ್ನನೆ ನೋಡಿಸಿದಳ್ ತದಾರ್ಯರಿಂ (ಶಾಂತಿಪು. ೭-೧೦); ಎನಗಾಗದ ವನರುಹಮಂ ಮನೆಮಾಡಿದಳೆಂದು ಕಂಡು ಮುಳಿವಂ ಶಶಿ (ರಾಜಶೇ.೧೨-೧೯). [ಸಂ.]

ವನರುಹನಾಭ (ನಾ). ಹೊಕ್ಕುಳಲ್ಲಿ ತಾವರೆಯನ್ನುಳ್ಳವನು ; ಪದ್ಮನಾಭ ; ವಿಷ್ಣು : ವನರುಹನಾಭನಾಭಿ ಸಿತಪಂಕಜಬೀಜಮೊ ಪದ್ಮಗರ್ಭನಾನನದೆ ಪೊದಳ್ವ ವೇದವಿಮಳಾಕ್ಷರಮಾಲೆಯೊ . . . ಎನಲ್ ವನಿತೆಯಿ ಮೌಕ್ತಿಕಾಕ್ಷವಲಯಂ ಕೊರಲೊಳ್ ಕರಮೊಪ್ಪಿ ತೋಱುಗುಂ (ಕಾದಂಪು. ೬೭೪); ವನರುಹನಾಭಂ ದುರ್ಯೋಧನನೆಂದೊಡೆ ಕೇಳ್ದು ಭೀಮಸೇನನ ಜಡಿದಂ (ಗದಾಯು. ೭-೪೨). [ಸಂ.]

ವನರುಹಭವ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ವನರುಹಭವನೆನಿಸಿದ ದಂಡನಾಯಕಂ ಕೇಶಿ ತಿರ್ದೆ ಪೇಟ್ಟಂ ಕವಿರನ್ನನ ಪೇಟ್ಟ ಕೃತಿ ಯಶಶ್ಶ್ರೀವನಿತೆಗಲಂಕೃತಿ ಯೆನಿಪ್ಪುದೊಂದಚ್ಚರಿಯೇ (ಗದಾಯು. ೧-೫೧). [ಸಂ.]

ವನರುಹಭವಾಂಡ (ನಾ). ಬ್ರಹ್ಮಾಂಡ : ವನರುಹಭವಾಂಡದೊಳಗೈವತ್ತು ಕೋಟಿಯೋಜನದ ವಿಸ್ತೀರ್ಣದಿಳೆಯಂ ಸಪ್ತಶರನಿಧಿಗಳನುವೇಷ್ಟಿಸಿರಲ್ (ಕ್ಷೇಮಿಭಾ. ೨-೧). [ಸಂ.]

ವನರುಹಮಿತ್ರ (ನಾ). ತಾವರೆಯ ಮಿತ್ರ ; ಸೂರ್ಯ : ವನರುಹಮಿತ್ರನಸ್ತಗಿರಿ ಮಸ್ತಕದಲ್ಲಿರೆ ನೋಡಿ ಬಾಡಿ ಬೆಚ್ಚನೆ ಬಿಸುಸುಯ್ದು ಬೇವಸದೆ ಬೆರ್ಚಿದುವಕ್ಕಟ ಜಕ್ಕವಕ್ಕಿಗಳ್ (ರಾಜಶೇ. ೧೩-೨೮). [ಸಂ.]

ವನರುಹವಿಷ್ಟರ (ನಾ). ಕಮಲವನ್ನು ಆಸನವಾಗಿ ಉಳ್ಳವನು ; ಬ್ರಹ್ಮ : ವನರುಹವಿಷ್ಟರಂ ರುಚಿರರೇಚಕಪೂರಕಕುಂಭಕಕ್ರಿಯಾಮನಮಿರೆ ನೆತ್ತಿಯೊಳ್ಪರ ನಿಮೀಲಿತದೃಷ್ಟಿ ನಿವಿಷ್ಟಮಾಗೆ . . . ಮಿನುಗುತುಮರ್ದಂ (ಗದಾಯು. ೬-೧೫). [ಸಂ.]

ವನರುಹೋದರ (ನಾ). ೧. ನಾಭಿಯಲ್ಲಿ ತಾವರೆಯನ್ನುಳ್ಳವನು ; ವಿಷ್ಣು. ೨. [ಛಂದ] ಅಂಶಗಣಗಳಲ್ಲಿ ಒಂದು ; ವಿಷ್ಣುಗಣ : ವನಜಸಂಭವಗಣಮಕ್ಕೆ ಮೊದಲೊಳತ್ತಲ್ ವನರುಹೋದರಗಣಯುಗಳಮದಕ್ಕೆ ರುದ್ರನದಱಂತ್ಯದೊಳಂದಿರ್ಕೆ ನಾಲ್ಕೆ ಗಣ (ಛಂದೋಂಬು. ೫-೨೪೫). [ಸಂ.]

ವನಲತೆ (ನಾ). ೧. ಕಾಡಿನಲ್ಲಿರುವ ಬಳ್ಳಿ ; ಅರಣ್ಯಲತೆ : ಭರತನ ಕಣ್ಗೆಱಕಮನೆ ಪಡೆದು ಚೆಲ್ವಿಂ ಮಱಸಿದುವುದ್ಯಾನಲತೆಗಳಂ ವನಲತೆಗಳ್ (ಆದಿಪು. ೧೧-೯೬). ೨. ಉದ್ಯಾನದಲ್ಲಿರುವ ಬಳ್ಳಿ : ವನಲತೆ ಕಾಮಿನೀನಿಕರಮಾದುದೊ ಕ್ಕೈರವಮಿತ್ರಲೇಖೆ ಮಾನಿನಿಯರ ತಂಡಮಾದುದೊ . . . ತಾನೆನಲ್ಪಧೂಜನಮಿರದಂಬು ಕೇಳಿಗೊಲಮಿಂ ನಡೆದತ್ತವನೀಶನಾಜ್ಞೆಯಿಂ (ತ್ರಿಪುವಿ. ೨೪-೭೫); ತನ್ವೀತನುವಲ್ಲಿಶ್ರೇಣಿ ಮುಂ ರಂಜಿಸೆ ವನಲತೆ ತಾಂ ಪಿಂತೆ ಬಂದಂ ಬಸಂತಂ (ರಾಜಶೇ. ೯-೪೪). ೩. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಇಪ್ಪತ್ತಾರನೆಯದಾದ ಉತ್ಕೃತಿ ಛಂದಸ್ಸಿನ ಒಂದು ವೃತ್ತ : ಅದಿತಿಜನಿವಹಮೆ ಮದಗಜದೆಡೆಗಳೊಳೊದವಿರೆ ಮೃದುಪದರಚನೆಯೊಳೊದವಿದೊಡಿದನಱಿವುದು ವನಲತೆ ಪೆಸರಿಂದಂ (ಛಂದೋಂಬು. ೨-೧೯೯). [ಸಂ. ವನಲತಾ]

ವನವಲ್ಲರಿ (ನಾ). ಕಾಡಿನಲ್ಲಿರುವ ಬಳ್ಳಿ ; ಅರಣ್ಯದ ಲತೆ: ಗಿರಿಗಳ ತರುಗಳಿರ ವನವಲ್ಲರಿಗಳಿರ ಮೃಗಗಳಿರ ರಾಮನ ತರುಣಿಯನು ರಾವಣನು ಕಳವಿನಲೊಯ್ದನೆಂಬುದನು ತರಣಿಕುಲಜಂಗಱುಹುವುದುಯೆಂದರಸಿ . . . ಒದಱಿದಳು ದೆಸೆದೆಸೆಗೆ ಬಾಯ್ಬಿಡುತ (ತೊರರಾ. ೩-೧೦-೩೩).

[ಸಂ. ವನವಲ್ಲರೀ = ಒಂದು ಬಗೆಯ ಹುಲ್ಲು]

ವನವಶಿ 'ವನವಾಸೆ' ನೋ.

ವನವಸಿ 'ವನವಾಸೆ' ನೋ.

ವನವಹ್ನಿ (ನಾ). ಕಾಡಿನ ಬೆಂಕಿ ; ದಾವಾನಲ ; ಕಾಳ್ಗಿಚ್ಚು : ಆ ಮಹಾವನವಹ್ನಿ ಭೂತಸ್ತೋಮ ಸಂಹೃತಿ ಕರ್ಮಶೌರ್ಯೋದ್ಭಾಮವವಗಾಹಿಸುತ ಬರುತಿರೆ ಮುಂದೆ ಚೂಣಿಯಲಿ ಧೂಮವಿಳಿದುದು (ಕುವಾಅ. ೨೦-೫೯). [ಸಂ.]

ವನವಾಟ (ನಾ). ೧. (ಕಾಡಿನಲ್ಲಿರುವ) ಮರಗಳ ಗುಂಪು,—ಶ್ರೇಣಿ,—ತೋಪು. ೨. ದೇವಲೋಕದ ಒಂದು ವೃಕ್ಷಪಂಕ್ತಿಯ ಹೆಸರು : ವರ್ತುಳಶ್ರೇಣಿ ವನವಾಟಚಕ್ರಾವರ್ತ ತೋಪು ಸಾಲು ಗೋಪುರಚಿತ್ರ ನರ್ತನವಾಟ ಕ್ರೀಡಾರಾಜಿ ಚಿತ್ರವ್ಯೂಹ ಕೋಣ ಕ್ರಮಗಳೆಂಬ ಹನ್ನೊಂದುವೃಕ್ಷಸನ್ನಿವೇಶಗಳುಂ ನಂದನೀಯಗಳಾಗಿರ್ಕುಂ (ವಿವೇಕ. ೨೧೧). [ಸಂ.]

ವನವಾಟಿ (ನಾ). = ವನವಾಟ ೧: ಗೋವತ್ಸಲೀಲೆ ತೊರೆಕರೆಯ ಮೇಲೆ ವನವಾಟಿ ಸೆಜ್ಜೆಸಾಲೆ (ಸೂರ್ಯಪಾ. ೩೫-೧). [ಸಂ. ವನವಾಟೀ]

ವನವಾಶಿ 'ವನವಾಸೆ' ನೋ.

ವನವಾಸ (ನಾ). ೧. ಕಾಡಿನಲ್ಲಿ ವಾಸಮಾಡುವುದು ; ಅರಣ್ಯದಲ್ಲಿ ಜೀವಿಸುವುದು : ನೀಗಿದುದೀಗಳೆಮ್ಮ ವನವಾಸಪರಿಶ್ರಮಮಿಾಗಳಾಳ್ವೆವಾ ಸಾಗರಮೇಖಳಾವೃತಧರಿತ್ರಿಯಂ (ಪಂಪಭಾ. ೭-೬೦); ಕೇಳಿಕೆಯ ನವಿಲುಗಳ ತುಂಬಿಯ ಮೇಳವದ ಗೀತದ ವಿನೋದವಲಾಳಿದರು ವನವಾಸಸಾಮ್ರಾಜ್ಯವನು ಸೊಗಸಿನಲಿ (ಕುವಾಅ. ೧೦-೧). ೨. ಕಾಡಿನಲ್ಲಿ ವಾಸಿಸುವವನು ; ಬೇಡ ; ಕಿರಾತ. ೩. ಒಂದು ದೇಶದ ಹೆಸರು ; ಈಗಿನ ಬನವಾಸಿ : ವನವಾಸದೇಶಾಧಿಪತಿ ಕುನ್ದರಾಜವಿಜ್ಞಾಪನದಿಂದಂ ಕಲಿದೇವೇಶ್ವರಸ್ವಯಂಭುದೇವರ ಗನ್ಧ ದೀಪ ಧೂಪ ನಿವೇದ್ಯಕ್ಕಂ . . . ಅಳೆದು ಕೊಟ್ಟ ಗಟ್ಟೆ ಮತ್ತರೆರಡು (ಮೃಅಂ. ೧೯೨೯, ೬೫-೫; 1024).

'ವನವಾಸಿ$_2$' ಪರಾ. ೪. (ಆಲಂ) ಬಹಳ ಕಷ್ಟದ ಬದುಕು ; ತೊಂದರೆಯ ಜೀವನ : ತಮಗೂ ತಮ್ಮ ಕುಟುಂಬಕ್ಕೂ ತಕ್ಕ ವಾಸದ ಮನೆ ದೊರಕದೆ 'ವನವಾಸ' ಮಾಡಬೇಕಾಗಿ ಬಂದಾಗ (ಶಕ್ತಿದ. ೬೭೬); 'ನಿನಗೂ ವನವಾಸಾ, ಬಿಂದಗೂ ವನವಾಸಾ' ಮಾತು ಮುಗಿಸುವಷ್ಟರಲ್ಲಿ ಅವರ ಕಂಠ ತುಂಬಿ ಬಂದಿತ್ತು (ಸೂಸಿ. ೪೨೧).

[ಸಂ.]

ವನವಾಸಿ$_1$ (ನಾ). ೧. ಕಾಡಿನಲ್ಲಿ ವಾಸಮಾಡುವವನು ; ಬೇಡ ; ಕಿರಾತ. ೨. ಕಾಡಿನಲ್ಲಿ ವಾಸಿಸುತ್ತ ವಾನಪ್ರಸ್ಥಜೀವನವನ್ನು ಮಾಡುವಂಥದು : ಕಾನನದೊಳಿಹ ಕಾಗೆ ವನವಾಸಿಯೆ (ಪುರಂದ. ೩-೧೯-೨). ೩. ತಪಸ್ವಿ ; ಋಷಿ.

[ಸಂ. ವನವಾಸಿನ್]

ವನವಾಸಿ$_2$ (ನಾ). ಒಂದು ನಾಡಿನ ಹೆಸರು ; ಬನವಾಸಿನಾಡು ; IP ಈಗಿನ ಉತ್ತರಕನ್ನಡಜಿಲ್ಲೆಯ ಸಿರಸಿತಾಲ್ಲೂಕಿನ ಒಂದು ಊರಿನ ಹೆಸರು : ಕಿಸುವೊಲಲ್ಲಾಮಸ್ಥಾನಮಧಿವಸತಿ ವಿಜಯಸ್ಕಂಧಾವಾರೇ ಆಲುಪೇಂದ್ರಂ ದ್ರಮ್ಮಂ

ವನವಾಸೀಮಾಯಾತಮತಿ ವಿಜಯಾದಿತ್ಯವಲ್ಲಭೇಂದ್ರೇ (ವಿ. XXXII, ೩೨-೩೨; 708); ಅರಂಕುಸವಿಟ್ಟೊದಂ ನೆನೆವುದೆನ್ನ ಮನಂ ವನವಾಸಿದೇಶಮಂ (ಪಂಪಭಾ. ೪-೩೦).

ವನವಾಸಿಪನ್ನಿರ್ವ್ವಾಹರ = ಹನ್ನೆರಡುಸಾವಿರ ಗ್ರಾಮಗಳಿಂದ ಕೂಡಿದ ವನವಾಸಿ ಎಂಬ ನಾಡು : ಶ್ರೀಮನ್ಮಹಾಮಣ್ಡಳೇಶ್ವರ ಕೀರ್ತಿವರ್ಮ ದೇವವ್ವನವಾಸಿವನ್ನಿರ್ವ್ವಾಹಿರಮನೇಕಧತ್ರಧಾ[ಯೆ]ಯಿಂದಮಾಳುತ್ತಮಿರೆ (ಸೌಂದಾ. XX, ೪೧-೧೫; 1068). [ಸಂ ವನವಾಸೀ]

ವನವಾಸೆ, ವನವಶಿ, ವನವಸಿ, ವನವಾಶಿ (ನಾ). = ವನವಾಸ್ಯಿ : ಕೊಯಿತೂಯಚಂಗಿ ವನವಾಸೆ ಹಾನುಂಕಲಕೊಂಡ ಶ್ರೀ ನಾರಸಿಂಹದೇವರು ಪೃಥಿವಿ ರಾಜ್ಯಂಗೆಯುತ್ತಿರೆ (ಎಕ. IV (K), ಚಾಮರಾ. ೧೪೬-೨; 1169). ವನವಶಿ : ಕೊಯಿತ್ತೂರ್ ಉಚ್ಚಜ್ಜಿ ವನವಶಿ ಪಾನುಜ್ಜಲ್ ಕತಿಯಾಗಕೊಣ್ಣಾ ಶನಿವಾರಸಿದ್ಧಿ ಗಿರಿದುರ್ಗ್ಗಮಲ್ಲ ಪ್ರತಾಪವೆಂಯ್ದಳ ವೀರವಲ್ಲಾಳದೇವನ್ (ಎಕ. IV (K), ಚಾಮರಾ. ೪೦೯-೪; 12ನೆಯ ಶತ). ವನವಸಿ : ಕೊಯಾಜೂರ್ ವನವಸಿಪಲಸಿ[ಗೈ]ಪಾನುಜ್ಜಲುಚ್ಚಜ್ಜಿ ಪೆಜ್ಜುಜ್ಜಿಯಾದಿಯಾಗಕ್ಕೊಣ್ಣಾ ಭುಜಬಲ ವೀರಗಂಗ ವಿಷ್ಣುವರ್ದ್ಧನ (ಎಕ. III (K), ಸುಂಡ್ಲುವೇ, ೧೧೧ ಸಿ; 1188). ವನವಾಶಿ : ಎಡೆದೊಜೆನಾಡುಂ ತುಡರ್ವ್ವನವೇಲಿಯುಂ [ಪಡ]ರ್ವ್ವನವಾಶಿಯುಂ (ಎಕ. III (K), ನಂಜನ. ೨೧೧-೪; 1021). 'ಬನವಾಸಿ' ಪರಾ. [< ಸಂ. ವನವಾಸೀ]

ವನವಿಹರಣ (ನಾ). ವಿನೋದಕ್ಕಾಗಿ ಉದ್ಯಾನವನದಲ್ಲಿ ಸುತ್ತಾಡುವುದು ; ವನವಿಹಾರ : ಅರಸನಾಕಿಯರ ವನವಿಹರಣಶ್ರಮಮಂ ವನಜವನವಿಹರಣಶ್ರಮದಿಂ ಕಳೆಯಲೆಂದುಮಲ್ಲಿಂ ಪೊಱಮಟ್ಟು ನಡೆವಲ್ಲಿ (ಆದಿಪು. ೭-೧೧೬ ವ); ವನವಿಹರಣಸಮುಚಿತಪರಿಮಿತ ಪರಿಜನಾವೃತನುಂ . . . ನಡೆತರ್ಪಾಗಳ್ (ರಾಜಶೇ. ೧೦-೧೫ ವ). [ಸಂ.]

ವನವಿಹಾರ(ನಾ). = ವನವಿಹರಣ : ಅಂತು ವನವಿಹಾರಾನಂತರಂ ಭರತೇಶಚಕ್ರವರ್ತಿ . . . ಅಂತಃಪುರಕರಿಣೀಗಣಂಬೆರಸು ಗಂಗಾಜಲಕ್ರೀಡಾಸಕ್ತಚಿತ್ತನಾಗಿ ತತ್ಪರಿಸರಪ್ರದೇಶ ಮನೆಯ್ದೆವಂದು (ಆದಿಪು.೧೧-೧೫೫ ವ); ಮೃಗತಿಶುನೇತ್ರಗೂಡಿ ನೃಪಪುಂಗವನುದ್ಭಟ ಭೂಮಿಪಾಲನೊಯ್ಯಗೆ ನಡೆತಂದನು ವನವಿಹಾರವಿನೋದವಿಲಾಸಮಾನಸಂ (ಉದ್ಭಟ. ೯-೮೧). [ಸಂ.]

ವನವೃಕ್ಷ (ನಾ). = ವನತರು ೧: ವನವೃಕ್ಷಗ್ರಸನಕ್ಕೆ ಮುಂಬರಿವ ದಾವಜ್ವಾಲೆಯೆಂಬಂತೆ ಬಲ್ಮುನಿಂ ಪೀಚರವೀರಸೈನ್ಯಸಹಿತಂ ಮೇಲೆತ್ತಿ ಬಂದಾಜಿಯೊಳ್ . . . ಸೂಜಿಗೊಂದಂ (ಖಂವಾ. ೧೪-೭೬). [ಸಂ.]

ವನವೃಕ್ಷನ್ಯಾಯ (ನಾ). [ತರ್ಕಶಾ] ಅನೇಕ ಮರಗಳ ಸಮೂಹದಲ್ಲಿ, ಒಂದು ಮರವು ಆ ಸಮೂಹದ ಅಂಗ ಎಂಬಂತೆ ಅನೇಕ ವಸ್ತುಗಳ ಸಮಷ್ಟಿರೂಪದಲ್ಲಿ, ಒಂದು ವಸ್ತುವು ಅದರ ಅಂಗ ಎಂಬುದನ್ನು ಸ್ಪಷ್ಟಪಡಿಸುವ ದೃಷ್ಟಾಂತ : ಹಿರಣ್ಯಗರ್ಭನ ಲಿಂಗಶರೀರ ವನವೃಕ್ಷನ್ಯಾಯದಿಂದ ಸಕಲಜೀವಲಿಂಗಶರೀರಗಳ ಸಮಷ್ಟಿ ಸಮೂಹ . . . ವನವೃಕ್ಷನ್ಯಾಯದಿಂದ ಸಮಸ್ತ ಸ್ಥೂಲಶರೀರಸಮಷ್ಟಿಯೇ ವಿರಾಟ್ಪುರುಷನು (ಹಿಂದಸಾ. ೧೫೬). [ಸಂ.]

ವನಶಿಖಿ (ನಾ). = ವನವಹ್ನಿ : ಲಯಾನಲಲುಠತ್ತಾಪಾಗ್ನಿಕೋಪಾಗ್ನಿಶೋಷಿತ ಯಿದ್ಧೋದ್ಧತಜೀವನಂ ವನಶಿಖಿವ್ಯೋದ್ಧತ್ತತಾಪಂ. . . . ಭರತಶ್ರೀಮಚ್ಛಮೂವಲ್ಲಭಂ (ವಿ. VI, ಚಕ್ರಮ. ೧೬೧-೧೧; 1137). [ಸಂ. ವನಶಿಖಿನ್]

ವನಶೃಂಗಾಟ (ನಾ). ಒಂದು ಬಗೆಯ ಮುಳ್ಳಿನ ಗಿಡ ; ನೆಗ್ಗಿಲು : "ವಲಂಕಷಾ . . . ಗೋಕ್ಷುರಕಃ, ವನಶೃಂಗಾಟಃ — ೭ ಪಲ್ಲೇರುಗಿಡದ ಹೆಸರುಗಳು, ನೆಗ್ಗಿಲು ಹೆಸರುಗಳು" (ಪಠ್ಯಾಂತ. ೧೫೪). [ಸಂ.]

ವನಷಂಡ (ನಾ). ೧. ಉದ್ಯಾನವನದಲ್ಲಿರುವ ಮರಗಳ ಗುಂಪು,— ಸಮೂಹ : ವಾಪೀಕೂಪಸರೋವರಸಮನ್ವಿತವನಷಂಡಮಭ್ಯಗತಪಂಚಪಂಚ ಪ್ರಾಸಾದಪಂಕ್ತಿಗಳುಮಂ (ಚಾವುಂಪು. ೪೪); ಏಕ್ಕೆಕಜಿನಗೃಹಾಂತರಿತವಾಪೀಕೂಪಕಮಲಾಕರಮಂಡಿತವನಷಂಡಮಭ್ಯಗತಪಂಚಪಂಚಪ್ರಾಸಾದಪಂಕ್ತಿಗಳೆಂದಂ (ಆದಿಪು. ೭-೨೦ ವ). ೨. ಮರಗಳ ಗುಂಪಿನಿಂದ ಕೂಡಿದುದು ; ಕಾಡು : ಚಂಡಮುನಿಪತಿ ದಕ್ಷಿಣದ ಭೂಮಂಡಲದ ಪಥವಿಡಿದು ಗಿರಿವನಷಂಡವನು ಕಳಿದೈದಿದನು ಕಾಕುತ್ಸ್ಥಭೂಪತಿಯ (ತೊರರಾ. ೬-೨೨). [ಸಂ.]

ವನಸಂಪಗೆ, ವನಸಂಪಿಗೆ (ನಾ). ಕಾಡುಸಂಪಿಗೆಮರ ಮತ್ತು ಅದರ ಹೂವು : "ಯಮಳಚ್ಛದಃ, —ಕಂಬಿವಾಳ, ವನಸಂಪಗೆ" (ಓಷಧಿ. ೧೬೧). ವನಸಂಪಿಗೆ : ಹಾಲೆ ಹೊಂಗೇತಕಿ ವನಸಂಪಿಗೆ ಹಿಂತಾಲ ಹೆಮ್ಮರ ಕಮ್ಮಾರಗಳು . . . ಅದರಿ ಮುಸುಕಿಹವು (ಕಂನವ. ೧೮ ೩೬); ಪುಷ್ಪವೃಕ್ಷಗಳಲ್ಲಿ ದೊಡ್ಡವೃಕ್ಷಗಳಾಗತಕ್ಕ ಸುಂದರಪುಷ್ಪ ಗಿಡಗಳು ಸಂಪಿಗೆ ವನಸಂಪಿಗೆ ನಾಗಸಂಪಿಗೆ ಕೋಲಸಂಪಿಗೆ ಕೆಂಡಸಂಪಿಗೆ ದುಂಡುಸಂಪಿಗೆ ಇವುಗಳೆಲ್ಲ ಬೀಜಗಳಾಗಿವೆ (ಕೃಪ್ರಕೃ. ೨೦೦). [< ಸಂ. ವನಚಂಪಕ]

ವನಸಂಪಿಗೆ 'ವನಸಂಪಗೆ' ನೋ.

ವನಸಿಂಹನ್ಯಾಯ (ನಾ). [ತರ್ಕಶಾ] ಲೌಕಿಕನ್ಯಾಯಗಳಲ್ಲಿ ಒಂದು ; ವನದಿಂದ ಸಿಂಹಕ್ಕೂ ಸಿಂಹದಿಂದ ವನಕ್ಕೂ ಪರಸ್ಪರ ರಕ್ಷಣೆ ಒದಗಿ, ಇವೆರಡೂ ಒಟ್ಟಾಗಿದ್ದಲ್ಲಿ ಜಯಿಸಲಶಕ್ಯವಾಗುತ್ತದೆ ಎಂಬ ದೃಷ್ಟಾಂತ : ಘನದೋರ್ದಂಡಪ್ರಭಾವಾರ್ಜಿತಧರಣಿಗುಹಾಸಿಂಹರಿರ್ ನೀಮುಮಿಗಳ್ ವನಸಿಂಹನ್ಯಾಯದಿಂ ದುರ್ಗದೊಳೆ ಬಲಿದು ನಿಂದಲ್ಲಿ ಬಂದೊತ್ತಿ ಚಕ್ರೇಶ್ವರನ ತಂತ್ರಂ ನಿಲ್ಕುಂ (ಆದಿಪು. ೧೬-೨೫). [ಸಂ.]

ವನಸುಮ (ನಾ). ಕಾಡಿನಲ್ಲಿ ಅರಳುವ ಹೂವು : ವನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ (ಕಪವ. ೭-೧೩೫). [ಸಂ.]

ವನಸೂರಣ (ನಾ). ಒಂದು ಬಗೆಯ ಔಷಧೀಸಸ್ಯ ಮತ್ತು ಅದರ ಗೆಡ್ಡೆ : "ಉದ್ಧ— ವನಸೂರಣ" (ಓಷಧಿ. ೧೫೫). [ಸಂ.]

ವನಸೌತೆ (ನಾ). ಒಂದು ಬಗೆಯ ಸೌತೆಬಳ್ಳಿ ಮತ್ತು ಅದರ ಕಾಯಿ ; ಕಾಡು ಸೌತೆ : "ಮರುಜಾ — ವನಸೌತೆ" (ಓಷಧಿ. ೧೧೩). [ವನ + ಸೌತೆ (< ಸವುತೆ)]

ವನಸ್ಥ (ಗು). ೧. ಕಾಡಿನಲ್ಲಿರುವ ; ಅರಣ್ಯದಲ್ಲಿ ವಾಸಮಾಡುವ. (ನಾ). ೨. ತಪಸ್ವಿ ; ಋಷಿ. [ಸಂ.]

ವನಸ್ಥಲ, ವನಸ್ಥಳ (ನಾ). ಕಾಡಿನ ಪ್ರದೇಶ ; ಅರಣ್ಯಸ್ಥಳ : ಎಲೆ ವನಸ್ಥಲ [ವಾಸಾ.ಳ]ಗಳಿರ ವೃಕ್ಷಂಗಳಿರ ಮೃಗಂಗಳಿರ . . . ಪಂಚಭೂತಂಗಳಿರ ದೆಸೆಗಳಿರ ಕಾವುದು (ಕೃಮಿಭಾ. ೧೯-೨೦). ವನಸ್ಥಳ : ಬಿದಜೆ ಮನಂ ವನಸ್ಥಳದೊಳೊಂದಿಭ ಮಿರ್ದುದು . . . ನೀಳನಗೇಂದ್ರಮೆಂಬಿನಂ (ಪಂರಾಮಾ. ೧೦-೧೫೯). [ಸಂ.]

ವನಸ್ಥಲಿ, ವನಸ್ಥಳಿ (ನಾ). = ವನಸ್ಥಲ : ಬೀಳ್ಕೊಂಡರಾ ಪರಿಚಯದ ವನಸ್ಥಲಿಗಳಂ, ಪುಲಿನಸ್ಥಲಿಗಳಂ, ಜಲಸ್ಥಲಿಗಳಂ (ಶ್ರೀರಾಮಾ. ೨೨೯-೩೨); ಈ ವನಸ್ಥಲಿಯಿಲ್ಲವೂ ಚೇತನವಾಗಿಯವಂತೆ ಕಾಣುತ್ತಿರುವುದೇಕೆ ಬಲ್ಲೆಯಾ ? (ಮಹಾಸಾ. ೨೩೩). ವನಸ್ಥಳಿ : ಬಿದಜೆ ಮನಂ ವನಸ್ಥಳಿಯೊಳೊಂದಿಭಮಿರ್ದುದು . . . ನೀಳನಗೇಂದ್ರಮೆಂಬಿನಂ (ಮಲ್ಲಿನಾ. ೧೦ ೮೮); ಆ ತರುಣಿ . . . ವನಸ್ಥಳಿಯಂತೆ ಪೃಥುಲಕುಚಾಲಂಕೃತೆಯುಂ . . . ಎನಿರ್ದಳ್ (ರಾಜಶೇ. ೭-೬೧ ವ). [ಸಂ. ವನಸ್ಥಲೀ]

ವನಸ್ಥಳ 'ವನಸ್ಥಲ' ನೋ.

ವನಸ್ಥಳಿ 'ವನಸ್ಥಲಿ' ನೋ.

ವನಸ್ಥಿತ (ಗು). ೧. ಕಾಡಿನಲ್ಲಿರುವ; ಅರಣ್ಯದಲ್ಲಿರುವ : ಆತ್ಮವಿರಾಗವರ್ತನೆ . . . ಮಾನಸಂಪತ್ತಿ ಕರಂ ವಿರಾಜಿಸೆ ವನಸ್ಥಿತಶಾಖಿನಿಕಾಯಮಾವಗಂ ಪೆತ್ತುದು ಚೆಲ್ವನಾ ಮುನಿಪನೊಳ್ ತಳಿದಂತೆ ತಪೋನಿಯೋಗಮಂ (ಚಂದ್ರಪ್ರ. ೨-೧೦೬). (ನಾ). ೨. ಕಾಡಿನಲ್ಲಿರುವವನು : ಕತಿಯಂ ಕೇಳಿಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನಸ್ಥಿತನಾದಂ ಗುರು ಪೇಟೆ (ಜಗವ. ೩-೬೧). [ಸಂ.]

ವನಸ್ಪತಿ (ನಾ). ೧. ಹೂವುಗಳನ್ನು ಬಿಡದೆ ಫಲವನ್ನು ನೀಡುವ ಆಲ, ಅರಳಿ ಮುಂತಾದ ಮರ : " ಪೂವಾಗದೆ ಕಾಯಹ ಮರನಂ ವನಸ್ಪತಿಯೆಂಬುದು" (ಹಲಾಯು. ೩೦-೨೫). ೨. ಮರ ; ವೃಕ್ಷ : ನೇಸಱುಲ್ ಮೂಡಲೊಡನೆ ಗೂಡುಗಳಂ ಗಿಳಿಗಳೆಲ್ಲಂ ಕುಟುಕುಗೊಳಲೆಂದು ಪೋಗೆ ಶಾಬಕನಿಕರಸನಾಥಮಾಗಿಯುಂ ನಿಶ್ಶಬ್ದತೆಯಂ ಶೂನ್ಯವಂತಿರ್ದ ಶಾಲ್ಮಲಿವನಸ್ಪತಿಯೊಳ್ (ಕಾದಂಪು. ೧೫೧); ಆ ಮಾಯಿದೇವರಸಂ ಸಂತೆಯುಮಂ ವನಸ್ಪತಿಯುಮಂ ಸರ್ವಾರ್ತ್ಥವಂ ಮಾಡಿದ ನೆರವೀ ಸಂತೆಯುಮಂ

ವನಸ್ಪತಿಯುಮಂ . . . ಉಪೇಕ್ಷಿಸಲ್ಬರಕವಕ್ಕುಂ (ಸೌಇ. XX, ೧೭೫-೪೪; 1190). ೩. ಮರ, ಗಿಡ, ಬಳ್ಳಿ ಮುಂತಾದ ಸಸ್ಯಜಾತಿ : ವನಸ್ಪತಿಗಳಿಂದ ಪುಷ್ಪಗಳನ್ನು ಕೊಯ್ದುಕೊಂಡು ಬನ್ನಿರಿ (ಶಾಕುಂತ. ೫೧-೮); ಶಹಾಮೃಗ . . . ಅದು ವನಸ್ಪತಿಗಳನ್ನು ತಿಂದು ಬದುಕುವುದು (ಮುಂಬಯಿ. ೪-೧೮೭). ೪. ಆಹಾರಪದಾರ್ಥಗಳ ತಯಾರಿಕೆಯಲ್ಲಿ ಬಳಸುವ, ಸಸ್ಯಮೂಲವಾದ ಒಂದು ಬಗೆಯ ಜಿಡ್ಡಿನ ಪದಾರ್ಥ : ಜಲಜನಕವನ್ನು ತೈಲದೊಂದಿಗೆ ಸಂಯೋಗ ಮಾಡಿ ಕೃತಕವಾದ ಕೊಬ್ಬುಗಳಾದ ಡಾಲ್ಡ, ವನಸ್ಪತಿ, ಪಕಾವ್ ಇವುಗಳನ್ನು ತಯಾರುಮಾಡುವರು (ಗೃಪವಿ. ೧೪). ೫. ಒಂದು ಬಗೆಯ ಸಸ್ಯ ; ಸೋಮಲತೆ. ೬. ಮರದ ಕಂಬ, ಗಣೆ, ತೊಲೆ ಮುಂತಾದುವು. ೭. [ಸಂಗೀತ] ಒಂದು ಬಗೆಯ ಲಯವಾದ್ಯ : ಆ ವಾದ್ಯಗಳ ಸಮೂಹದಲ್ಲಿ . . . ಭೂಮಿದುಂದುಭಿ, ವನಸ್ಪತಿ, ಔದುಂಬರ ಮುಂತಾದ ಲಯವಾದ್ಯಗಳೂ . . . ಹೆಸರಿಸಲ್ಪಟ್ಟವೆ (ಸಂಗೀಚಂ. ೧೦೦). ೮. [ಜೈನ] ಐದು ಬಗೆಯ ಸ್ಥಾವರಜೀವಗಳಲ್ಲಿ ಒಂದು ; ಗಿಡ, ಮರ, ಬಳ್ಳಿಗಳಲ್ಲಿರುವ ಜೀವ : ಸ್ಪರ್ಶನೇಂದ್ರಿಯಮಾತ್ರಂಗಳ್ ಸ್ಥಾವರಂಗಳೆಂಬುವವು ಪೃಥಿವ್ಯಪ್ತೇಜೋವಾಯು ವನಸ್ಪತಿಭೇದದಿಂ ಪಂಚವಿಧಂ (ಆದಿಪು. ೧೦-೬೩ ವ). [ಸಂ.]

ವನಸ್ಪತ್ಯ (ನಾ). ಹೂವುಬಿಟ್ಟು ಅನಂತರ ಫಲ ಕೊಡುವ ಮಾವು ಮುಂತಾದ ಮರ : "ಕುಸುಮಫಲವಪ್ಪ ತರು ವನಸ್ಪತ್ಯಮದು" (ಪಂಗರಾ. ೩೨-೨).

[< ಸಂ. ವಾನಸ್ಪತ್ಯ]

ವನಸ್ಪರ್ಧಿ (ನಾ). ಉದ್ಯಾನದೊಡನೆ ಸ್ಪರ್ಧಿಸುವುದು : ರಮಣೀಸಸ್ಮೇರ ವಕ್ತ್ರಾಂಬುರುಹವಿಸರದೊಳ್ . . . ಮಾನಿನೀಮಂದಹಾಸೋದ್ಗಮದೊಳ್ತಾನಿರ್ದನಾ ಸ್ಥಾನದೊಳತುಳ ವನಸ್ಪರ್ಧಿಯೊಳ್ಪುವಸಂತಂ (ರಾಜಶೇ. ೯-೭೭). [ಸಂ. ವನಸ್ಪರ್ಧಿನ್]

ವನಾಂತ (ನಾ). ೧. ಕಾಡಿನ ಗಡಿ, —ಎಲ್ಲೆ. ೨. ಕಾಡು ; ಅರಣ್ಯಪ್ರದೇಶ : ಅಲರ್ಗಳ ಕೀಚೆಸಟ್ಟು ಕಟಲದಂತು . . . ನಲಿವಾಡುವ ಸೋಗೆಯ ಸೋಗೆ ಸೂಸದಂತೆಲರೊಲವುಣ್ಕೆ ತೀಡಿದುದು ತಣ್ಣನೆ ಪಣ್ಣನೆ ತದ್ವನಾಂತದೊಳ್ (ಚಂದ್ರಪ್ರ. ೨-೧೦೧); ಕಪೋತದ ಬೊಟ್ಟಿನ ಕೆಂಡದಬ್ಬನೀವರನಭಿಧಾನಮಂ ತಳೆದ ಭೂರುಹಮೊಪ್ಪುಗುಮಾ ವನಾಂತದೊಳ್ (ರಾಜಶೇ. ೫-೫೭). [ಸಂ.]

ವನಾಂತರ (ನಾ). ೧. ಕಾಡಿನ ಮಧ್ಯಪ್ರದೇಶ ; ಅರಣ್ಯದ ಒಳಭಾಗ : ವನದಹನಂ ವನಾಂತರಮನೊರ್ಬಳಸಾಗಿರೆ ಮುತ್ತಿ ಸುತ್ತಿ ಸುತ್ತಿನ ನಡುವಿರ್ದ ಮಾಮರನನಟ್ಟಿದುದು (ಆದಿಪು. ೯-೫೯); ಪರಮಪಂಚವಟಪ್ರದೇಶದ ಘನವನಾಂತರಕೆ ಹರಸಿ ಕಳುಹಿದನು (ತೊರರಾ. ೩-೧-೨೫). ೨. ಉದ್ಯಾನವನದ ಮಧ್ಯಭಾಗ ; ತೋಟದ ಒಳಭಾಗ : ಸತ್ಯಭಾಮೆಯುಂ ಬರುತಿರ್ದು ಸವತಿಯಿರ್ದೆಡೆಗಾಂ ಪೋಪುದು ಪೊಲ್ತೆಂದು ಹರಿಯಲ್ಲಿಗೆ ತನ್ನ ತಂದರಸಿಯನಟ್ಟುವುದೆಂದಟ್ಟಿ ತಾನಾ ವನಾಂತರಮಂ ಪೊಕ್ಕು (ನೇಮಿಪು. ೭-೬೨ ವ); ಈಶ್ವರನಗಚೆಗೂಡಿ ಸಖಿಯರ್ವೆರಸಿ ತೊಳತೊಳಪ ನಂದನದ ಸಿರಿಯನೀಕ್ಷಿಸಿ ತಲೆಯನೊಲೆದೊಲೆದು ಪೊಗಳುತ್ತಲ್ಕೆತರಲ್ ತದ್ವನಾಂತರದೊಳು (ಚಟಪು. ೪೫-೪೪). ೩. ಇನ್ನೊಂದು ಕಾಡು ; ಬೇರೊಂದು ಅರಣ್ಯ. [ಸಂ.]

ವನಾಂತರಾಳ (ನಾ). ೧. ಕಾಡಿನ ಮಧ್ಯಭಾಗ ; ಕಾಡಿನ ನಡುವಿನ ಪ್ರದೇಶ : ಮೃಗಗಣಮೆ ಸುಖಂ ಬಾಟ್ಟುಂ ಸೊಗಯಿಸುವ ವನಾಂತರಾಳದೊಳ್ ಬಹುತೃಣದೊಳ್ (ಕವಿರಾ. ೩-೧೩೯). ೨. ಉದ್ಯಾನವನದ ಮಧ್ಯಭಾಗ ; ತೋಟದ ನಡುವಿನ ಪ್ರದೇಶ : ಸುರತಮಕರಧ್ವಜನ ಸುಭದ್ರೆಯ ವಿರಹಪರಿತಾಪದೊಳಾದ ಪದೆಮಾತಂ ಕರ್ಣಪರಂಪರೆಯಿಂ ಕೇಳ್ದು ಸಂತಸಂಬಟ್ಟು ಚಕ್ರಿ . . . ಆ ವನಾಂತರಾಳಕ್ಕೊರ್ವನೆ ಬಂದು (ಪಂಪಭಾ. ೫-೧೯ ವ); ಕಾಂತೆಯರ್ . . . ಬಂದು ನಿಂದು ಶೋಭಿಸಿದರ ಲಂಪಿನಿಂದಲರ್ಗಳಂ ತಿಱಿಯುತ್ತೆ ವನಾಂತರಾಳದೊಳ್ (ಉದ್ಭಟ. ೯-೩೩).

[ಸಂ. ವನಾಂತರಾಲ]

ವನಾಯು (ನಾ). ೧. ಒಂದು ದೇಶದ ಹೆಸರು. ೨. ಜಿಂಕೆ ; ಹರಿಣ : "ಹರಿಣಂ ವನಾಯುವೇಣಂ ಕುರಂಗಮೃಗ" (ಮ್ಯಾಕೋ. ೪೦-೨). ೩. ಕಾಡಿನಲ್ಲಿ ವಾಸಮಾಡುವ ಪ್ರಾಣಿ ; ನರಿ : "ದಂತಿ ವನಾಯು ತಾರಗೆ ಪಶುವ್ರಜ ಬೆಳ್ಳಗಮುಂ ಮೃಗಾಪ್ಪೆ" (ನಾನಾರ. ೮೨). [< ಸಂ. ವಾನಾಯು]

ವನಾಯುಜ (ನಾ). ಪರ್ಶಿಯನ್‌ದೇಶದಲ್ಲಿ ಹುಟ್ಟಿದ ಕುದುರೆ ; ಪಾರಸಿಕದೇಶದ ಕುದುರೆ : "ಪಾರಸೀಕದೇಶದಲ್ಲಿ ಹುಟ್ಟಿದುವು ವನಾಯುಜಂಗಳೆಂಬುದು" (ಹಲಾಯು. ೭೨-೨೮೫). [ಸಂ.]

ವನಾಲಯ (ನಾ). ೧. ಕಾಡಿನಲ್ಲಿರುವ ಮನೆ : ಸೋದರರು ಸಹಿತ ವನಾಲಯವ ಹೊಱವಂಟು ಸಾರಿದರೊಂದು ವಟಕುಜವ (ಕುವ್ಯಾವಿ. ೧-೧). ೨. ಕಾಡನ್ನು ಮನೆಯಾಗಿ ಉಳ್ಳ ಪ್ರಾಣಿ ; ವಾನರ ; ಕೋತಿ : ಸಾಲ್ಗುಮಿ ಕಿತವಸೌಜನ್ಯ ಮೆಲವೋ ವನಾಲಯಾ! (ಶ್ರೀರಾಮಾ. ೪೩೬-೨೨೫). [ಸಂ.]

ವನಾವಸಥ (ನಾ). ೧. ಕಾಡಿನಲ್ಲಿರುವ ಮನೆ. ೨. ಕಾಡಿನಲ್ಲಿ ವಾಸಮಾಡುತ್ತಿರುವವನು ; ಆರಣ್ಯಕ : ನಿಯತಂ ಭಾವನರುಂ ವನಾವಸಥರುಂ ಜ್ಯೋತಿಷ್ಕರುಂ ಕಲ್ಪವಾಸರುಮಾಗಿರ್ದ ಚತುರ್ವಿಧಾಮರರುದಾರರ್ ಸ್ತೋಮದೊಳ್ ಕೂಡೆ (ಪುಷ್ಪಪು. ೧೦-೧೩). [ಸಂ.]

ವನಾಶ್ರಯ (ನಾ). ೧. ಕಾಡನ್ನು ಆಶ್ರಯವಾಗಿ ಉಳ್ಳುದು ; ಅರಣ್ಯದಲ್ಲಿ ವಾಸಮಾಡುವಂಥದು. ೨. ಕಾಡಿನಲ್ಲಿ ವಾಸಮಾಡುವವನು, —ಆಶ್ರಯ ಪಡೆಯುವವನು. ೩. ಒಂದು ಬಗೆಯ ಪಕ್ಷಿ ; ಕಾಡುಕಾಗೆ ; ಡೊಂಬಕಾಗೆ : "ಶಿತಿಕಾಕಂ ವನಾಶ್ರಯಂ ಮೌಳಿ ದ್ರೋಣಾಮಾ ಕಾಕೋಳಮೆನೆ ಕಾಡಕಾಗೆ" (ಮಂಗರಾ. ೫೧-೪). [ಸಂ.]

ವನಿತ (ಗು). ೧. ಪ್ರಾರ್ಥಿಸಿದ ; ಬೇಡಿದ . ೨. ಇಚ್ಛಿಸಿದ ; ಬಯಸಿದ ; ಪ್ರೀತಿಸಿದ. ೩. ಸೇವಿಸಿದ ; ಆರಾಧಿಸಿದ. [ಸಂ.]

ವನಿತಾವೃತ್ತಿ (ನಾ). ೧. ಹೆಣ್ಣಾಗಿರುವಿಕೆ ; ಹೆಣ್ಣುತನ ; ಸ್ತ್ರೀತ್ವ : ಉತ್ತಮಗುಣತತಿ ವನಿತಾವೃತ್ತಿಯನೊಳಕೊಣ್ಡುದೆಂದು ಜಗಮೆಲ್ಲರಂ ಕಯ್ಯೆತ್ತುವಿನಂ ಅಮಳಗುಣಸಂಪತ್ತಿಗೆ ಜಗದೊಳಗೆ ಪೂಚಕಭೃಚ್ಛೆಯ ನೋಂತಳ್ (ಎಕ. II, ೧೧೮-೧೯; 1120). ೨. ಹೆಣ್ಣಿನ ರೀತಿ, —ನಡತೆ. [ಸಂ.]

ವನಿತಾಸಕ್ತಿ (ನಾ). ೧. ಹೆಣ್ಣಿನ ವಿಷಯದಲ್ಲಿ ತೋರುವ ಆಸಕ್ತಿ ; ಸ್ತ್ರೀಲೋಲುಪತೆ. ೨. ಹೆಣ್ಣಿನ ವಿಷಯದಲ್ಲಿ ತೋರುವ ಅನಾಸಕ್ತಿ ; ವೈರಾಗ್ಯ : ಮುಕ್ತಿಶ್ರೀಯೊಳ್ ತನಗಾಸಕ್ತಿಯೊಳಿರದೊಸೆದು ನೆರೆದನಜರಂ ವನಿತಾಸಕ್ತಿಯ ವರಂಗೆ ನೆರೆವನು[ರಕ್ತಿ]ಯನೊದವಿಸುವ ಮೆಚ್ಚದೇನಚ್ಚರಿಯೋ (ಶಾಂತಿಪು. ೧೨-೩೪). [ಸಂ. (ವನಿತಾ + ಸಕ್ತಿ); (ವನಿತಾ + ಅಸಕ್ತಿ)]

ವನಿತೆ (ನಾ). ೧. ಹೆಂಗಸು ; ಮಹಿಳೆ : ದೇವವನಿತೆಯರೆ ಪರಿವಿಡಿಯೊಳಡಿಗುಟ್ಟಿಯುಂ ದೇವಗಣಿಕೆಯರೆ ಕೊಳೆ ಪಾಡೆ ದನಿಮುಟ್ಟಿಯುಂ (ಆದಿಪು. ೭-೨೮ ರಗಳೆ); ವನಿತೆಯ ವದನಶ್ರೀಚಂದನರಸಮಂ ನಳಿನದಳದೆ ತೀವಿದಳೆನೆ ಲೋಚನರುಚಿಯಿರೆ (ರಾಜಶೇ. ೭-೫೦). ೨. ಹೆಂಡತಿ ; ಪತ್ನಿ : ಪ್ರಭಾಕರೀಪುರೀನಾಥಂ ಮಹಾಸೇನಂಗಂ ತದ್ವನಿತೆ ವಸುಂಧರೆಗಂ ಜಯಸೇನನೆಂಬ ತನೂಜನಾಗಿ ಗುರುಪುರುಷಾರ್ಥಮಂ ನೆಱೆಯೆ ಸಾಧಿಸಿ (ಆದಿಪು. ೩-೭೭ ವ); ವನಿತೆಯ ನೆಟಲೊಳಗಿರೆ ಲೋಚನಚಂದ್ರಿಕೆಯಿಂದ ಮೊಸರ್ವ ಶಶಿಮಣಿಮುಕುರಂ ನೆನೆಯಿಸಿತು ಹೃದಯಮಂ ಕಾಮಿನಿ ಪುಗೆ ನಡೆ ನೋಡಿ ಸೋಲ್ತು ಚೆಮರ್ಪುದು ಪತಿಯಂ (ಲೀಲಾವ. ೧೨-೮೭). ೩. ನಲ್ಲೆ ; ಪ್ರಿಯೆ. ೪. ಒಂದು ಬಗೆಯ ಸುಗಂಧದ ಬೇರು ; ಕರ್ಪೂರಶುಂಠಿ : "ವನಿತೆ ಷಡ್ಗಂಧಿ ಕರ್ಪೂರಶುಂಠಿ" (ಪಂಗರಾ. ೪೧ ೩೩). ೫. [ಜ್ಯೋತಿ] ಹನ್ನೆರಡುರಾಶಿಗಳಲ್ಲಿ ಆರನೆಯದು ; ಕನ್ಯಾರಾಶಿ : ವನಿತೆಯೊಳು ಕಮಲಾರಿಯಿದ್ದನು ಕನಕಮನ್ಮಥನೆಡೆಯೊಳಿದ್ದನು ಧನುವಿನೊಳಗಿನತನುಜನಿದ್ದನು ಭಗಣಚಕ್ರದಲಿ (ಶಾಶಿರಾ. ೧೩-೪೦). [ಸಂ. ವನಿತಾ]

ವನೀಪಕ (ನಾ). ಬೇಡುವವನು ; ಯಾಚಕ ; ಭಿಕ್ಷುಕ : ಎಡಱುಂದೀವ ಕಲ್ಪತರುವೆಂದು ವನೀಪಕಕೋಟಿ ಸಂತಸಂಬಡೆ . . . ವಾರಣಾವತಮನೆಯ್ದುದನಮ್ಮನ ಗಂಧವಾರಣಂ (ಪಂಪಭಾ. ೨-೯೮); ಅಂತವನಿಪನಿಕರಂ ಕೈಯಾಂತವನಿಪನಿಕರ Eವನೀಪಕರು3ಮೊಂದುಕೋಟಿಗೆ ಮಿಗಿಲೆಂಬಂತಾದೊಡಮೊಳಸೋರದೆ ಚಿಂತಿಸದಾಂತಿಱಿ ಗುಮಿಗುಮಿಱಿವ ಬೆಡಂಗಂ (ಗದಾಯು. ೧-೧೫). [ಸಂ.]

ವನೇಚರ (ನಾ). ೧. ಕಾಡಿನಲ್ಲಿ ಸಂಚರಿಸುವವನು ; ಬೇಡ ; ಶಬರ : ತದೀಯ ಮುನಿರಾಜಪೂಜಿತಚ್ಛಾಯೆಯಂ . . . ಮೆಟ್ಟದು ಮುಟ್ಟದು ವನ್ಯಮೃಗವನೇಚರನಿಕರಂ

(ಶಾಂತಿಪು. ೧೧-೧೧೧); ವನದೊಳ್ ವನೇಚರಂ ತನತ್ತು ಬಿಲ್ಲಾನದನಂತು ಕೀಸುವಂ (ಕಾವ್ಯಾವ. ೬೫೯). ೨. ತಪಸ್ವಿ ; ತಾಪಸ. ೩. ಅಸುರ ; ರಾಕ್ಷಸ. ೪. ಕಾಡುಮೃಗ ; ಹಿಂಸ್ರಪ್ರಾಣಿ. [ಸಂ.]

ವನೇಚರಪತಿ (ನಾ). ಬೇಡರ ಒಡೆಯ ; ಕಿರಾತನಾಯಕ : ಇದಿರೊಳ್ ಗರ್ಜಿಸಿ ವುಲಿ ನಿಲೆ ಬೆದಱೆ ಕರಂ ಶಬರಿ ಬರಿಯನಪ್ಪಲೊಡಂ ರೋಷದಿನಲರ್ದುದೊಂದು ಕಣ್ ರಾಗದೆ ಮುಗುಳ್ದುದದೊಂದು ಕಣ್ ವನೇಚರಪತಿಯಾ (ಚಂದ್ರಪು. ೫-೫೯). [ಸಂ.]

ವನೇಚರಿ (ನಾ). ಕಾಡಿನಲ್ಲಿ ಸಂಚರಿಸುವವಳು ; ಬೇಡಿತಿ ; ಶಬರಿ : ವನೇಚರಿ ಜನತಾವಿಲೋಚನವಶೀಕರಣಾಂಜನದಿಂ ಮನೋಭವಂ ವಿರಚಿಸಿ ಬ್ಬಣಮಂ ಬರೆದ ಚಿತ್ರದ ಪೆಣ್ಣಿನೆ ಕಣ್ಗೆ ವಂದಳೋ (ಮಲ್ಲಿಪು. ೧೦-೬೫). [ಸಂ. ವನೇಚರೀ]

ವನೇಜ (ಗು). ೧. ಕಾಡಿನಲ್ಲಿ ಹುಟ್ಟಿದ ಅಥವಾ ಕಾಡಿನಲ್ಲಿರುವ. (ನಾ). ೨. ತಾವರೆ ; ಕಮಲ : "ಚಂದ್ರ ಪತಂಗ . . . ವನೇಜ ಭೂಪ ಪಶುಪಾಲಕ ಸೌರಭಮಿಂತು ಗೋಪಶಬ್ದಂ" (ನಾನಾರ್ಥ. ೫೪). [ಸಂ.]

ವನೇಜಮಿತ್ರ (ನಾ). ತಾವರೆಯ ಗೆಳೆಯ ; ಸೂರ್ಯ : "ವಾಸವ . . . ವನೇಜಮಿತ್ರ ಸಂಕಾಶಮಿವರ್ಕಮಕ್ಕುಂ" (ನಾನಾರ್ಥ. ೧೪). [ಸಂ.]

ವನೇಜರಿಪು (ನಾ). ತಾವರೆಯ ವೈರಿ ; ಚಂದ್ರ : ವನೇಜರಿಪುವಿಂ ಪಂಕೇಜಮಿತ್ರಂ ಬಲಾಢ್ಯಂ (ಜಾತಕ. ೨-೧೨). [ಸಂ.]

ವನೇಜಾಕರ (ನಾ). ತಾವರೆಯ ಕೊಳ ; ಕಮಲಸರೋವರ : ಅವಳವಯವ ನವಲಾವಣ್ಯವನೇಜಾಕರದೊಳಾಳ್ದ ಮದನದ್ವಿಪದೊಪ್ಪುವಚಳಕುಂಭಸ್ಥಳಮೆಂಬ ವೊಲೆಸೆದುದು ಲಾಸ್ಯಕಂಪಿತಂ ಘನಜಘನಂ (ರಾಜಶೇ. ೧೨-೬೪). [ಸಂ.]

ವನೇಜಾತ (ಗು). ೧. ಕಾಡಿನಲ್ಲಿ ಹುಟ್ಟಿದ : ಜಾತಿವನೇಜಾತಪ್ರಸೂನಾವಳಿಯನಿಟ್ಟಿಸಿ ಸಂಪತ್ತುಮೆತ್ತಿರ್ದುದೆತ್ತಂ (ಜಗವಿ. ೪-೬೫). (ನಾ). ೨. ತಾವರೆ ; ಕಮಲ : "ಕೇತನ . . . ವನೇಜಾತ ಮೃಗಾರಿ ಕಲ್ಪಕುಜಶ್ರೇಷ್ಠಂ ಪುಂಡರೀಕಾಹ್ವಯಂ" (ನಾನಾರ್. ೧೯). [ಸಂ.]

ವನೇಭ (ನಾ). ಕಾಡಾನೆ : ಮದಗಂಧಮಿಂದೆ ಸಪ್ತಚ್ಛದಗಂಧಮನೀ ವನೇಭಮಾಘ್ರಾಣಿಸಿ ಪೆರ್ಚಿದ ಮಸಕದಿಂದೆ ಪಾಯಲ್ಕದಿರ್ವುಗೆಯ್ವುವುದು ನೋಡ ವನವೇದಿಕೆಯಂ (ಆದಿಪು. ೧೧-೬೨). [ಸಂ.]

ವನೇರುಹ (ನಾ). ತಾವರೆ ; ಕಮಲ : ಲಸದ್ವನೇರುಹಗೃಹಾಕೃಪಾನಯನಪಾತ ಸಾರಥ್ಯಕಂ (ವಸ್ತವಂ. ೪-೨೫). [ಸಂ.]

ವನೋತ್ಥ (ನಾ). ಕಾಡಿನಲ್ಲಿ ಹುಟ್ಟಿದುದು : ನೀಳಮೇಘೋತ್ಕರಮೆಂಬಂತಿರ್ದುದು . . . ಹಸ್ತಿಯೂಥಂ ವನೋತ್ಥಂ (ಚಂದ್ರಪು. ೫-೬೨). [ಸಂ.]

ವನೋದ್ದೇಶ (ನಾ). ವನಸ್ಥಳ ; ಉದ್ಯಾನಪ್ರದೇಶ : ಸುಧರ್ಮಾಚಾರ್ಯರನಾ ವನೋದ್ದೇಶದೊಳ್ ಕಾಣದೆ . . . ಪೋಗಿ (ಸುಖಮಾ. ೩-೨೩ ವ). [ಸಂ.]

ವನೋರಣ (ನಾ). ಕಾಡುಕುರಿ : "ಆ ಕೊಂಡಗುಜಿ ವನೋರಣಮಟವ್ಮವಿಯೆನಿಕ್ಕು" (ಮಂಗರಾ. ೪೮-೪). [ಸಂ.]

ವನೌಕಸ (ನಾ). ೧. ಕಾಡಿನಲ್ಲಿ ವಾಸಿಸುವವನು : ಮುನಿ ವನೌಕಸರೆಲ್ಲ ಕೇಳುವುದೆನ್ನ ಹುಯ್ಯಲನು (ಕಾಶಿಕಾ. ೬-೩೭). ೨. ಕಾಡಿನಲ್ಲಿರುವ ತಪಸ್ವಿ : ಆ ವನೌಕಸರಿಗೆರ್ದೆ ಮರುಗಿದತ್ತು (ಶ್ರೀರಾಮಾ. ೧೩-೪೬೬). ೩. ಕೋತಿ ; ಕಪಿ : "ಆ ವನೌಕಸಂ ಮರ್ಕಟಂ ಬಲಿಮುಖಂ . . . ಕೋಡಗಕ್ಕೆ ಪೆಸರಕ್ಕುಂ" (ಮಂಗರಾ. ೪೮-೯). [ಸಂ. ವನೌಕಸ್]

ವನೌಷಧಿ (ನಾ). ಕಾಡಿನಲ್ಲಿ ಬೆಳೆಯುವ ಔಷಧೀಸಸ್ಯ ; ವನಸ್ಪತಿ : ಸಸ್ಯಶಾಸ್ತ್ರದ ಅಧ್ಯಯನಕ್ಕೆ ಮೊದಲನೆಯ ಕಾರಣ ಆಹಾರಸಮಸ್ಯೆ ; ಎರಡನೆಯ ಕಾರಣ ಪಾಯಿಲೆಯನ್ನು ಗುಣಪಡಿಸಿ ಆಯುಷ್ಯವನ್ನು ಹೆಚ್ಚಿಸುವ ವನೌಷಧಿಗಳ ಅನ್ವೇಷಣೆ (ತತ್ತ್ವಪ್ರಾ. ೫೦೭). [ಸಂ.]

ವನ್ಯ (ಗು). ೧. ಕಾಡಿನಲ್ಲಿ ಹುಟ್ಟಿದ ಅಥವಾ ಬೆಳೆದ : ತುಂಗವನ್ಯ ಮತಂಗಜದಂತಾಘಾತನಿಪಾತಿತಸಲ್ಲಕೀಭಂಗಮಂ . . . ನೃವನೆಯ್ದಿದನುದ್ಯಚ್ಛೃಂಗಮನಾ ಶತಶೃಂಗಮಂ (ಪಂಪಭಾ. ೧-೧೧೫); ವನ್ಯಕುಸುಮದ ಚಿತ್ರಹಾರ ಕೇಯೂರ ಕರ್ಣಪೂರದ ಭೂಷಣಂಗಳೊಳಂ . . . ಬರೆ (ಜಗವಿ. ೪-೬೦ ವ). ೨. ಕ್ರೂರವಾದ ; ಉಗ್ರವಾದ. (ನಾ). ೩. ಕ್ರೂರಮೃಗ ; ಕಾಡುಪ್ರಾಣಿ. ೪. ಕಾಡುಸಸ್ಯ. ೫. ಕಾಡುಮನುಷ್ಯ ; ಅನಾಗರಿಕ ; ಅಸಂಸ್ಕೃತವ್ಯಕ್ತಿ : ಎನ್ನನೀ ಪರಿ ಬಯ್ದು ವರ್ತಿಸುತ್ತಿರ್ಪೆ ಸಾಮಾನ್ಯನೊಲ್ ವನ್ಯನೊಲ್ (ಶ್ರೀರಾಮಾ. ೭೩-೫೧೭). ೬. ಕಾಡಿನಲ್ಲಿ ಬೆಳೆದ ಹಣ್ಣು, ಗೆಡ್ಡೆ ಮುಂತಾದುವು. [ಸಂ.]

ವನ್ಯಮೃಗ (ನಾ). ಕಾಡುಮೃಗ ; ಕ್ರೂರಪ್ರಾಣಿ : ಉದಯಾಸ್ತಮಯಗತಾರ್ಕಂ ತದೀಯ ಮುನಿರಾಜಪೂಜಿತಚ್ಛಾಯೆಯನಾ ತ್ರಿದಶಪತಿರಕ್ಷಿಯಂ ಮೆಟ್ಟದು ಮುಟ್ಟದು ವನ್ಯಮೃಗ ವನೇಚರನಿಕರಂ (ಶಾಂತಿಪು. ೧೧-೧೧೧); ವನ್ಯಮೃಗಗಳ ನಡುವೆ ಗೋವು ಬಂದೇನಹುದು (ಮಂಜರಿ. ೩೦೯). [ಸಂ.]

ವನ್ಯಾಹಾರ (ನಾ). ಕಾಡಿನಲ್ಲಿ ದೊರೆಯುವ ಗೆಡ್ಡೆ, ಗೆಣಸು ಮುಂತಾದ ಆಹಾರ : ಈ ಮಹಿಯನುಳಿದು ಪದಿನಾಲ್ಕುವರುಷಂ ಮುನಿಸ್ತೋಮದೊಡವರೆದು ವನ್ಯಾಹಾರನಿಯಮದಿಂ ರಾಮನಿರವೇಳ್ಕು (ವಂಕಾರಾ. ೨-೮-೧೬). [ಸಂ.]

ವನ್ಯೆ (ನಾ). ೧. ದಟ್ಟವಾದ ಕಾಡು ; ಮಹಾರಣ್ಯ. ೨. ಜಲಪ್ರವಾಹ ; ಮಹಾಪೂರ. [ಸಂ. ವನ್ಯಾ]

ವಪನ (ನಾ). ೧. ಬೀಜವನ್ನು ಭೂಮಿಯಲ್ಲಿ ಬಿತ್ತುವಿಕೆ ; ಬಿತ್ತನೆ. ೨. ತಲೆಯನ್ನು ಬೋಳಿಸುವಿಕೆ ; ಮುಂಡನ : ವಪನ . . . ಮೊದಲಾಪ್ರಾಯಶ್ಚಿತ್ತಂಗಳಂ ಕೊಂಡು (ವಿವೇಕ. ೧೩೭); ವಿಧವೆಯಾದರೆ ಆಕೆಗೆ ವಪನ ಮಾಡಿಸಬೇಕೆಂಬುದು ನಿಜವಾದ ಧರ್ಮವೆ ಅಥವಾ ಬರಿಯ ಲೋಕರೂಢಿಯೆ? (ಕಪಾಸಾ. ೯೨). ೩. ಕ್ಷೌರಮಾಡುವ ಕತ್ತಿ. ೪. ವೀರ್ಯ ; ಶುಕ್ಲ. [ಸಂ.]

ವಪು (ನಾ). ೧. ದೇಹ ; ಶರೀರ : ಉಪವಾಸಪ್ರಚುರತೆಯಿಂ ವಪು ಗಿಡಿಗಿಡಿಜಂತ್ರ ಮಾದುದು (ಸುಖಮಾ. ೪-೪); ಈ ನಗದೇವತೆ . . . ಬಂದಾವಿರ್ಭವಿಸಿದೊಡೆನಗೆ ಮಹಾವಪುವಾಯ್ತು (ಜಗವಿ. ೪-೯೦). ೨. ಸಾರ ; ಸತ್ವ. ೩. ಸುಂದರವಾದ ಆಕಾರ; ಸುರೂಪ.

ವಪುರ್ವರ್ಜಿತಮದಾಪಹ = ಅನಂಗನ ಅಹಂಕಾರವನ್ನು ಮುರಿದವನು ; ಶಿವ : ವಪುರ್ವರ್ಜಿತಮದಾಪಹನೆ . . . ಸಂಗಮೇಶ್ವರ ರಕ್ಷಿಸೆನ್ನ (ಪ್ರಾಶಾ. ೭-೧). [ಸಂ. ವಪುಸ್]

ವಪುಜಲ (ನಾ). ದೇಹದಿಂದ ಹೊರಬರುವ ನೀರು ; ಮೂತ್ರ : "ವಪುಜಲಮನಲ್ಕೆ ಮೂತ್ರಮಕ್ಕುಂ" (ಮಂಗರಾ. ೯೭-೧೪). [ಸಂ.]

ವಪುಷ್ಮ (ನಾ). ಸುಂದರವಾದುದು : ಕನತ್ಕನಕಮಂಡನಮಂಡಿತಮಂ ವಪುಷ್ಮಮಂ ಸಂಪದುವೇತಮಂ ತರಿಸಿ ದಿಗ್ವಿಜಯಕ್ಕೆ ಜನೇಂದ್ರಚಂದ್ರದೇವಂ ಪೊಱಮಟ್ಟನೇಱಿ ಜಯಮಂ ಜಯಪರ್ವತಯಾನನಾಗಮಂ (ಶಾಂತಿಪು. ೧೦-೧೪೪ ಪ). [< ಸಂ. ವಪುಷ್ಮತ್]

ವಪುಷ್ಮಂತ (ಗು). ೧. ದೇಹವುಳ್ಳ ; ಸಶರೀರಿಯಾದ. ೨. ಬೆಲುವಾದ ; ಸುಂದರವಾದ. (ನಾ). ೩. ಸುಂದರವಾದ ಆಕಾರವುಳ್ಳವನು : ಮೂಜನೆಯ ವರ್ತ್ಮವೆಂಬೊ ಪ್ರವಯಸ್ಕನುಂ ವಪುಷ್ಮಂತನುಂ ಅರೋಗನುಂ . . . ಚಾರಿತ್ರವಂತನು ಮೆಂದಷ್ಟಗುಣಸಮನ್ವಿತನಕ್ಕುಂ (ಚಾವುಪು. ೫). [ಸಂ. ವಪುಷ್ಮತ್]

ವಪುಸಿದ್ಧಿ (ನಾ). ಮುಪ್ಪು, ವ್ಯಾಧಿ ಮುಂತಾದುವುಗಳಿಂದ ದೇಹವನ್ನು ರಕ್ಷಿಸಿಕೊಳ್ಳುವ ಸಿದ್ಧಿ ; ಕಾಯಸಿದ್ಧಿ (?): "ವಪುಸಿದ್ಧಿಯೊಳು ಮಜ್ಜನದೊಳು . . . ಅಸ್ತಮಯದೊಳ್ ಪ್ರವರ್ತಿಪುದು ನಿರ್ವಾಣನಾಮಂ" (ಮಂಗರಾ. ೧೪೮-೪೩). [ಸಂ.]

ವಪೆ (ನಾ). ೧. ಪೊಳ್ಳು ; ಟೊಳ್ಳು. ೨. ರಂಧ್ರ ; ಬಿಲ. ೩. ಮೂಳೆಯ ಪೊಳ್ಳುಭಾಗದಲ್ಲಿರುವ ಕೊಬ್ಬು ; ಮೇದಸ್ಸು : "ವಸೆ ಮೇದಂ ವಪೆ" (ಮಲ್ಲೂಕೋ. ೭೨-೨೦). ೪. ಜಠರವನ್ನು ಹೊಟ್ಟೆಯಲ್ಲಿರುವ ಇತರ ಅಂಗಗಳೊಂದಿಗೆ ಸಂಬಂಧಿಸುವ ಸೂಕ್ಷ್ಮವಾದ ಚರ್ಮದ ಪೊರೆ : ಹೆರವಸ್ತುಗಳಿಗೆ ವಿಶೇಷವಾಗಿ ಆತಂಕವಾಗುವ ಜಾಗಗಳು ಎರಡಿವೆ : ಅನ್ನನಾಳದ ಮೇಲ್ಭಾಗದಲ್ಲಿ . . . ಒಂದು, ಕೆಳಭಾಗ ವಪೆಯ ಮೂಲಕ ಹೊಟ್ಟೆಗೆ ಹೊರಪೆಡೆ ಇನ್ನೊಂದು (ಕುಟೂ. I, ೩೪೪). ೫. ಕೊಬ್ಬಿ ಮೇಲೆದ್ದು ಕಾಣುವ ಹೊಕ್ಕುಳು. ೬. ಮಣ್ಣಿನ ಒಡ್ಡು, – ರಾಶಿ :

ಸುಮಸ್ತಲತೆಗಳು ವಪೆಗಳಿಂದಲೂ ವೃದ್ಧಿಯಂ ಹೊಂದಿ ದಪ್ಪವಾದ ಫಲಗಳಂ ಧರಿಸುವವು (ಸೌಗಂಧಿ. ೪೩೪-೧೨). [ಸಂ. ವಪಾ]

ವಪ್ರೃ (ನಾ). ೧. ಕತ್ತರಿಸುವವನು ; ಬೋಳಿಸುವವನು. ೨. ಬೀಜವನ್ನು ಬಿತ್ತುವವನು. ೩. ತಂದೆ ; ಜನಕ. ೪. ಕವಿ. [ಸಂ.]

ವಪ್ರ (ನಾ). ೧. ಮಣ್ಣಿನ ದಿಣ್ಣೆ, -ದಿಬ್ಬ. ೨. ಹೊಲ, ಗದ್ದೆ ಮುಂತಾದ ಭೂಮಿ ; ಕ್ಷೇತ್ರ : "ವಪ್ರಂ, ಕ್ಷೇತ್ರಂ, ಕೇದಾರಂ — ಈ ೩ ಕೆಯ್" (ಸಲಾಯು. ೯೪-೪೨೦). ೩. ಸುತ್ತುಗೋಡೆ ; ಪ್ರಾಕಾರ : ಪರಿಖಾತ್ರಿತಯಕ್ಕೆ ಚತುಶ್ಶರಾಸನಾಂತರದೆ ಸುರಶರಾಸನಭಾಭಾಸುರಮೊಪ್ಪಿ ತೋಱುಗುಂ ಪಂಚರತ್ನ ಪಾಂಶೂಚ್ಚದೀಪ್ತಿದೀಪ್ರಂ ವಪ್ರಂ (ಆದಿಪು. ೬-೧೦೩); ಮುಗಿಲಂ ಮುಟ್ಟಿರ್ದುದೆಂಬಂತಿರೆ ಕರಮೆಸೆಗುಂ ವಿಶ್ರುತೋತ್ತುಂಗವಪ್ರಂ (ಸುಬಮಾ. ೧೦-೫೨). ೪. ಬೆಟ್ಟದ ತಪ್ಪಲು, - ಇಳಿಜಾರು ಪ್ರದೇಶ : "ಬೆಟ್ಟದ ತಪ್ಪಲಲ್ಲಿಯುಂ ವಪ್ರಮೆಂಬುದು" (ಸಲಾಯು. ೧೩೫-೨೪). ೫. ದಡ ; ತೀರ : ಭೋಜನಂಗೈದೊರಗಿದರ್ ನದೀವಪ್ರದಾ ಸಮತಲದೊಳೊಂದು ಶಾದ್ವಲದಿ (ಶ್ರೀರಾಮಾ. ೧೩೯-೩೯). ೬. ಪರಿವೇಷ ; ಪರಿವೃತ್ತ. ೭. ಕೋಟೆಯ ಹೆಬ್ಬಾಗಿಲು. ೮. ದೂಳು ; ರಜ. ೯. ತಂದೆ ; ಜನಕ. ೧೦. ಹೋರಿ, ಆನೆ ಮೊದಲಾದುವು ಮಣ್ಣುಗುಡ್ಡೆಗೆ ತಿವಿಯುವ ಆಟ ; ವಪ್ರಕ್ರೀಡೆ. ೧೧. ಒಂದು ಬಗೆಯ ಲೋಹ ; ಸೀಸ. ೧೨. ಕಂದಕ ; ಅಗಳು. ೧೩. ಸಮೂಹ ; ರಾಶಿ. [ಸಂ.]

ವಮಥು (ನಾ). ೧. ಓಕರಿಕೆ ; ವಾಂತಿ. ೨. ಆನೆಯ ಸೊಂಡಿಲಿನಿಂದ ಚಿಮ್ಮುವ ನೀರಿನ ತುಂತುರು : "ವಮಥುಃ, ಕರಶೀಕರಃ — ಈ ೨ ಆನೆಯ ಕೆಯ್ಯ ತುಂತುರ್ವನಿ" (ಹಲಾಯು. ೩೬-೬೩). [ಸಂ.]

ವಮನ (ನಾ). ೧. ಕಾರಿಕೆ ; ವಾಂತಿ : ಸಲಿಲಕ್ರೀಡೆಯಿನುಷ್ಣದಿಂ ವಮನದಿಂ ನಿಷ್ಠೀವದಿಂ ನಸ್ಯದಿಂ ಲಲನಾಸೇವೆಯಿನಾವಗಂ ಪ್ರಶಮಿಕುಂ ವ್ಯಾಯಾಮದಿಂ ಮೇಣ್ ಕಫಂ (ಲೋಕೋಪ. ೯-೬); ಈ ಜ್ವರವು ಊಟವಾದ ಮೇಲೆ ಕಾಣಿಸಿದರೆ ವಮನಮಾಡಿಸಲು ಶಮನವಾಗುವುದು (ಸಕವೃ. ೬೨). ೨. ವಾಂತಿ ಮಾಡಿಸುವ ದ್ರವ್ಯ. ೩. ಆಹುತಿ ಕೊಡುವುದು ; ಬಲಿಯನ್ನರ್ಪಿಸುವುದು. ೪. ನೋವು ; ಬಾಧೆ. [ಸಂ.]

ವಮನಕಾರಿ (ನಾ). ವಾಂತಿಮಾಡಿಸುವ ಔಷಧ : "ವಿರೇಚಕವಾಗಿಯೂ ವಮನಕಾರಿಯಾಗಿಯೂ ಉಪಯೋಗಿಸುವ ದ.ಅಮೆರಿಕದ ಒಂದು ಗುಲ್ಮದ ಬೇರು" (Ipecacuanha. ೧೦೦೫). [ಸಂ. ವಮನಕಾರಿನ್]

ವಮನದ್ರವ್ಯ (ನಾ). ವಾಂತಿಮಾಡಿಸುವ ಔಷಧಿಪದಾರ್ಥ : ವರ್ಧನಾನಿ = ವಮನದ್ರವ್ಯಂಗಳು (ವಿಷ್ಣುಪು. ೫೯). [ಸಂ.]

ವಮನಿಸು (ಕ್ರಿ). ಕಾರು ; ವಾಂತಿಮಾಡು : ನೆನಪಿನೇ ಕೇತಕಿಯ ಬನದೆಡೆಗೆ ಸಳಿಯದಿರು ಉರಗ ಹಾಲಾಹಲವ ವಮನಿಸೀತು (ಪಾಪಾ. ೫೪-೭).

[ವಮನ + - ಇಸ್ತು]

ವಮಿ (ನಾ). ೧. ವಾಂತಿ ; ಓಕರಿಕೆ : "ಪ್ರಧರ್ದಿಕಾ, ವಮಿಃ, ವಮಥುಃ — ೩ ಕಕ್ಕುರೋಗ, ವಾಂತಿ, ವಮನ" (ಸಿದ್ಧಾಂತಿ. ೧೦೪). ೨. ವಾಂತಿ ಮಾಡಿಸುವ ಔಷಧ ದ್ರವ್ಯ. ೩. ಬೆಂಕಿ ; ಅಗ್ನಿ. ೪. ವಂಚಕ ; ಮೋಸಗಾರ. [ಸಂ.]

ವಮ್ರಿ (ನಾ). ಇರುವೆ. [ಸಂ. ವಮ್ರಿ]

ವಮ್ರೀಕೂಟ (ನಾ). ಇರುವೆಯು ಕಟ್ಟಿದ ಮಣ್ಣಿನ ಗೂಡು ; ಹುತ್ತ ; ವಲ್ಮೀಕ : "ವಮ್ರೀಕೂಟಂ, ನಾಕುಃ, ವಲ್ಮೀಕಃ, ವಾಮಲೂರಃ — ಈ ೪ ಹುತ್ತು" (ಹಲಾಯು. ೧೦೮-೨೨). [ಸಂ.]

ವಯ (ನಾ). ೧. ಪ್ರಾಯ ; ವಯಸ್ಸು : ವಯಮಿರ್ಕೆ ನೀನ್ ನೋಡು ಗುಣಮನ್ (ಅಂತಿಗೂ. ೩೩-೬೭೨); ವಯ ಬಿರುಸು ಆಗಿದೆ. ಮದಿವಿ ಆಗಿಲ್ಲೆಂದರೆ, ಏನೋ ಕುಂದು ಕಾಣಿಸುತ್ತದೆ (ಚಿಟ್ಟಹೂ. ೪೧). ೨. ಹರಯ ; ಯೌವನ. ೩. ಪಕ್ಷಿ : 'ವಯೋಧಿಕ' ಪರಾ. [ಸಂ. ವಯಸ್]

ವಯಃಪರಿಣತ (ನಾ). ವಯಸ್ಸಾದವನು ; ವಯೋವೃದ್ಧ : ವಯಃಪರಿಣತನಾದೊಡಂ ಬಿಸುಡಲಾರ್ಪನೆ ರಾಗಿ ನಿಸರ್ಗಭಾವಮಂ (ಮಲ್ಲಿಪು. ೭-೧೨). [ಸಂ.]

ವಯಃಪರಿಣತಿ (ನಾ). ವಯಸ್ಸಿನಿಂದ ಉಂಟಾದ ಪರಿಪಕ್ವತೆ ; ಪ್ರೌಢತೆ : ವಯಃಪರಿಣತಿವೆತ್ತುಮೇನುದಯಕಾಲದ ರಾಗಮನಸ್ತಕಾಲದೊಳ್ ಪರಿಹರಿಸಲ್ಕಣಂ ನೆಱೆದನಿಲ್ಲ ದಿನಾಧಿಪನಂತೆ ದಲ್ (ಮಲ್ಲಿಪು. ೭-೧೨). [ಸಂ.]

ವಯಃಪ್ರಾಪ್ತ (ಗು). ೧. ವಯಸ್ಸಿಗೆ ಬಂದ ; ಪ್ರೌಢನಾದ : ಭವಾನೀಚರಣನನ್ನು ಆಕೆ ಓರ್ವ ವಯಃಪ್ರಾಪ್ತಬಾಲಕನ ಹಾಗೆಯೇ ಕಾಣುತ್ತಿದ್ದಳೆಂದರೆ ತಪ್ಪಲ್ಲ (ಇಪ್ಪಕ.೩೬೩). (ನಾ). ೨. ವಯಸ್ಸಿಗೆ ಬಂದವನು ; ಯೌವನಕ್ಕೆ ಕಾಲಿಟ್ಟವನು : ಆತನ ಮಗನಾದ ಪೂರ್ಣವರ್ಧನಕುಮಾರನು ಆಗತಾನೆ ವಯಃಪ್ರಾಪ್ತನಾಗಿದ್ದನು (ಹಕ್ಕುಮ. ೨೦). [IP ಸಂಸ್ಕೃತದಲ್ಲಿ ಪ್ರಾಪ್ತವಯಃ ಎಂಬುದು ಸರಿಯಾದ ರೂಪ]

ವಯಃಪ್ರಾಪ್ತೆ (ನಾ). ವಯಸ್ಸಿಗೆ ಬಂದವಳು ; ಯುವತಿ ; ತರುಣಿ : ಲುತ್ತಉನ್ನೀಸೆಯು ಕ್ರಮವಾಗಿ ವಯಃಪ್ರಾಪ್ತೆಯಾಗುತ್ತಿದ್ದಳು (ಕಪಾಕಂ. ೬೩).

[ವಯಃಪ್ರಾಪ್ತ + - ಎ]

ವಯಃಸ್ಥ (ಗು). ೧. ಪ್ರಾಯಕ್ಕೆ ಬಂದ ; ತಾರುಣ್ಯಾವಸ್ಥೆಯ. ೨. ವಯಸ್ಸಾದ ; ಮುದಿಯಾದ. (ನಾ). ೩. ಓರಗೆಯವನು ; ಸಂಗಡಿಗ. [ಸಂ.]

ವಯಃಸ್ಥೆ (ನಾ). ೧. ಓರಗೆಯವಳು ; ಗೆಳತಿ. ೨. ಒಂದು ಬಗೆಯ ಸಸ್ಯ ; ಹೊನ್ನಗನ್ನೆ ; ಸೋಮಲತೆ. ೩. ನೆಲ್ಲಿಯ ಮರ ; ಆಮಲಕವೃಕ್ಷ. ೪. ಕಾಕೋಳಿಸೊಪ್ಪು. ೫. ಸಣ್ಣ ಯಾಲಕ್ಕಿ. [ಸಂ. ವಯಃಸ್ಥಾ]

ವಯನು 'ವಯಿನ' ನೋ.

ವಯಲ್, ಬಯಲ್, ಬಯಲು, ಬೈಲು (ನಾ). ೧. ವಿಸ್ತಾರವಾಗಿಯೂ ಸಮತಟ್ಟಾಗಿಯೂ ಇರುವ ಭೂಮಿ ; ಮೈದಾನ : ದುಣ್ಣುಸಮುದ್ರದಾ ವಯಲುಳ್ಳಿಱುದಾರಾ ಮೇಗೆ ಪದಿರ್ಕ್ಕುಣ್ಣುಗಂ ಮಣ್ಣಂ (ಎಕ. IV, ನಾಗಮಂ. ೮೫-೬೫; 776). ೨. ಕಾಳಗ ಮಾಡುವ ಸ್ಥಳ ; ಯುದ್ಧಭೂಮಿ ; ರಣರಂಗ : ಮೂಱುವೆವೆಂಬ [ಮಾ]ಂಡಳಿಕರೀಯದ[ರೆ]ಂಬದಟರ್ ವಯಲ್ಗೆ ಮೆಯ್ದೋಱುವವೆಂಬ ಪೂಣಿಗರಡಂಗಿ [ಕು]ನುಂಗಿ ಸಿಡಿಲ್ದು ಜೋಲ್ದು ಕಾಯ್ದು[ಜೆ] ನಭಕ್ಕೆ ಪಾಱಿದುದು . . . ತೇಜದ ದಳ್ಳುರಿ ಪಾಂಡುರಾಜನಾ (ಪಂವಭಾ. ೧-೧೦೯). ಬಯಲ್ : ೧. ಬಯಲೊಳ್ ಪರ್ವುಗೆದೋಱಿ ನುಣ್ಪುಸಲೆಯೊಳ್ ಮೆಯ್ದೋಱಿ . . . ಯಥಾಸಾರನಿಪಾತಮುಣ್ಮೆದುದು ಮೇಘೋನ್ಮುಕ್ತಧಾರಾರವಂ (ಕಾದಂಬ. ೫೩೩); ನಯದಿಂ ವೈಹಾಳಿಯ ಬಯಲೊಪ್ಪಿತ್ತು ಪಟ್ಟಣದ ವನದೆಡೆಯೊಳ್ (ಗಿರಿಕ. ೨-೭೪). ೩. ನೆಲ ; ಭೂಮಿ : ಬಯಲೊಳಿಕ್ಕಿದ ಮೀನಂತೆ ಮಿಡುಕಿ ತಳಾಱನಂತೆ ನಿದ್ರೆಗೆಟ್ಟು (ಧರ್ಮಾಮೃ. ೧-೧೬೮); ಹರಿ ಪೋತಂದಡಿವಣ್ಣೆಗಳ್ ಬಯಲೊಳಿಲ್ಲಿಂದಿತ್ತವಿನ್ನಿಲ್ಲ (ಜಗವಿ. ೫-೩೧). ೪. ಏನೂ ಇಲ್ಲದಿರುವ ಸ್ಥಳ ; ಬರಿದಾದ ಜಾಗ ; ಶೂನ್ಯ : ಬಯಲನಪ್ಪಿದ ತೋಳ್ ಬಂಡೆಯಾಗೆ ಬಾಡಿದ ಲತೆಯಂತೆ ಕಂದಿ ಕುಂದುವ . . . ಪೊಚ್ಚಪೊಸ ಹರೆಯದ ಮುಗ್ಧಾಂಗನೆಯರೊಳಂ (ಗಿರಿಕ. ೨-೧೦೫ ವ); ಮಲ್ಲಿಗೆಯಲರಂ ಕೊಯ್ಯಲ್ ಮೆಲ್ಲನೆ ಕೈಯಿಕ್ಕಲೊಗೆದ ನಖರದ್ಯುತಿಯಂ ಮಲ್ಲೀಕುಟ್ಮಲಮೆಂದಾ ನಲ್ಲಳ್ಳಯಲಂ ತುಡುಂಕಿ ಕೌತುಕಮಾಂತಳ್ (ಉದ್ಯಟ. ೯-೬೨). ೫. ವ್ಯರ್ಥವಾದುದು ; ನಿರರ್ಥಕವಾದುದು : ತಾನವಿಚಾರಕ್ಕೆಂದೊಡೆಂಟಂ ನಿಮಿರ್ಪುದು ಬಯಲಂ ಭಾವಿಸುತ್ತಿರ್ಪುದಾತ್ಮೋದ್ಭವ ಮೂಲಚ್ಛೇದನೋಪಾಯವನೆಣಿಸದು ಮದ್‌ಬುದ್ಧಿ (ರತ್ನಾಕ. ೧೫); ನಾಟಕಸ್ತ್ರೀಯಂತೆ ಬಯಲ ಡಂಭವ ತೋಱಿ (ಪುರಂದ. ೨-೨೫-೪). ೬. (ರಹಸ್ಯ ಮುಂತಾದುವು) ಪ್ರಕಟವಾಗುವುದು ; ಬಹಿರಂಗವಾಗುವುದು : 'ಬಯಲ್ಪು', 'ಬಯಲ್ಪಡಿಸು' ಪರಾ. ೭. ಸಾವು ; ಮರಣ : 'ಬಯಲ್ಗೊಳಿಸು' ಪರಾ. ಬಯಲು : ೧. ಒಳ್ಳೆಯ ಹವೆಯ ಬಯಲಲ್ಲಿ ಸ್ವಲ್ಪ ಹೊತ್ತು ತಿರುಗಾಡಿ ಬಂದು ವಿಶ್ರಾಂತಿ ತಕ್ಕೊಂಡ ಬಳಿಕ ತಮ್ಮ ತಮ್ಮ ಉದ್ಯೋಗಗಳನ್ನು ಕೈಕೊಳ್ಳಬಹುದು (ಮುಂಬಯಿ. ೪-೨೫); ಬಯಲಿನ ಮತ್ತು ಶಾಲೆಯೊಳಗಣ ಆಟಗಳು ಈ ಎಲ್ಲ ಸಂದರ್ಭಗಳಲ್ಲೂ ಸಾಮೂಹಿಕಜೀವನಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬಹುದು (ಶಿಕ್ಷದ. ೩೧೯). ೪. ನಿನ್ನ ಹೊಯಿದೊಡೆ ಬಯಲ ಹೊಯಿದಂತೆ ನುಣುಚಿ ನುಣ್ಣನೆ ಕಡೆಗೆ ಖಂಡೆಯ ಜುಣುಗಿ ಹೋಯಿತಿದಾವ ಮಹಿಮೆಯ ಗುಣವೊ (ಪ್ರಭುಲಿಂ. ೧೯-೩೬); ಬನದೊಳಗೆ ಭೂಪನನಜಸಿ ಕಾಣದೆ ಬಯಲನಪ್ಪುವಳುರವಣಿಪ ಕಣ್ಣೇರಿನಲಿ ನಡೆತಂದಳಿಂದುಮುಖಿ (ನಳಚ. ೫-೩೨).

೫. ಸೂರ್ಯನಾರೋಗಣಿಗೆ ಸೊಡರೇ ಸಾಕಿದೇತಕೆ ಬಯಲ ಭಂಡತನ (ಕುಮಾರ್ಪ್ರೋ. ೪-೨೦); ಬಯಲಿಗೆ ಕೆಟ್ಟು ಪೊಲುತಿಹ ಕಾಯಮನಿಶನ ಭಕ್ತರಿಚ್ಛೆಗಂ ಪ್ರಿಯದೊಳಗಿತ್ತು (ನನ್ನಚಾ. ೬-೧೦೮). ೮. ಜಮೀನು; ಕೃಷಿಭೂಮಿ : ಊರಿಂ ಮೂಡ ಸಪಸಿ(?)ಂಗೆ ಗ[ರ್]ದ್ದೆಯುಂ ಬಯಲುಮಂ ಬಿಟ್ಟನ್(ಇಆ. XVIII.೩೧೨-೧೭; ಸು.11ನೆಯ ಶತ); ಯಿಂತೀ ಚತುಃಸೀಮೆಯಿಂದೊಳಗುಳ್ಳ ಮನೆ ಬಾವಿ ಮನೆಬಾಗಿಲ ಗದ್ದೆ ಮನೆಯ ಹಿಂದಣ ಬೆಟ್ಟು ತಿಪ್ಪೆ ಮಕ್ಕಿ ಮೆಕ್ಕೆ ಬಯಲು . . . ಯಿಂತೀ ಅಷ್ಟಭೋಗ ತೇಜಸ್ಸಾ(ಂ)ಮ್ಮ ಸಹಿತವಾಗಿ . . . ಧಾಚೆಯನೆರದು ಕೊಟ್ಟರು(ಸಾಇಇ. IX-ii, ೪೩೨-೧೭; 1400). ೯. ಸ್ಪಷ್ಟವಾದುದು ; ವ್ಯಕ್ತವಾದುದು : ಲೋಕಗತಿ ಮಾಯಾವಿಲಾಸ ವಿವೇಕಿಗಳಿಗಿದು ಬಯಲು ಫಲುಗುಣ ಸಾಹು ಗರ್ವವ ಬೀಳುಕೊಡು ಸೆಳೆ ಶರವ ಹಿಡಿ ಧನುವ (ಕುಮಾಧೀ. ೩-೫೯). ೧೦. ಬಾನು; ಆಕಾಶ: ಬಯಲಿಂಗೆ ಕಡೆಯಿಲ್ಲ ಮರುತಂಗೆ ತಡೆಯಿಲ್ಲ ರುಚಿಗೆ ಖಂಡಿತವಿಲ್ಲ (ಸರ್ವಜ. ೭-೨೮); ಪೊಡವಿ ಮುನಿವಡೆ ಬಯಲು ಬಡಿವಡೆ . . . ಬಿಡದಡುವ ಮಡಕೆಯುಂಬೆಡೆ ಹರಸಿ ರಕ್ಷಿಸುವ ನೀವೆನಗೆ ಶಾಪವೀವಡೆ ಧಟ್ಟಿಸಿ ನುಡಿದು ರಕ್ಷಿಸುವರಾರು (ಹಚಚಾ. ೮-೪೧). ೧೧. ಹಿಡಿತಕ್ಕೆ ಸಿಕ್ಕದಿರುವುದು,— ಹೊರತಾದುದು : ಬೇಂಟೆಯೊಳಲಗುಗಾಣಿಸದಿರ್ದ ಮೃಗವಿಲ್ಲಿಂದು ಪರಿಯಂತ ಬಳಕೆಗಿದು ಬಯಲೆಂಬ ಬಗೆ ಮಿಗೆ ಹೊಳಕುತಿದೆ ಹೃದಯದಲಿ ಮಾತಿದನಿಳಿಕೆಗಾಣದೆ ಮನೆಗೆ ಬಿಜಯಂಗೈಯಿ ನೀವು(ತೊರಾ. ೩-೮-೩೯). ೧೨. [ವೀಶೈ] ಆಕಾರವಿಲ್ಲದುದು; ನಿರಾಕಾರವಾದುದು : ಆರೂ ಅಱಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ ತೋಱಿದ ಗುರುವೇ (ಮಹಾದೇ. ಬ. ೨೨-೪೦); ಸೃಷ್ಟಿಪೂರ್ವದ ಪರವಸ್ತುವನ್ನೂ ಶೂನ್ಯವೆಂದೇ ನಿರ್ದೇಶಿಸುತ್ತಾರೆ. ಅದನ್ನು ಅಚ್ಚಗನ್ನಡಶಬ್ದ 'ಬಯಲು' ಎಂದೂ ನಿರ್ದೇಶಿಸುತ್ತಾರೆ (ಶೂನ್ಯಸಂ. ೩೦). ೧೩. ಶೂನ್ಯದಲ್ಲಿ ಒಂದಾಗುವುದು; ಐಕ್ಯ ; ಮುಕ್ತಿ : ಬಸವನಿರವನಱಿದು . . . ಬಸವನ ಬಯಲ ವಿಚಾರವ ತಿಳಿದು ಭ್ರಮೆಯನಳಿದು ಆನು ಬದುಕಿದೆನಯ್ಯಾ (ನೀಲಾ. ಕ. ೨೩-೬೯). ಬೈಲು: ೧. ಬೈಲಾ ಬಾವಿಗೆ ಬಂದಳೋರ್ವ ಬಾಲೆ (ಪುಂಡ. ೧-೩೭ ಪಲ್ಲವಿ); ಕೋಟೆ ಚೆನ್ನಯರು ಬಲ್ಲಾಳನ ಆಳುಗಳೊಂದಿಗೆ ಪಾಲೆ ದಾಟಿ, ಬೈಲು ಕಳೆದು, ಬೆಟ್ಟ ಹತ್ತಿ . . . ರಾಜಾಂಗಣಕ್ಕೆ ಬಂದು . . . ಉಪ್ಪರಿಗೆಯನ್ನು ಏರಿದರು (ಕೋಟಿಚೆ. ೧೪); ಗುಡಿಗಳ ಮುಂದಿನ ಬೈಲುಜಾಗದಲ್ಲಿ ಹೂದೋಟಗಳ ನಿರ್ಮಾಣವಾಗಬೇಕು (ಹಬ್ಬಬ. ೨೮). ೩. ನೀರಿನೊಳಗಣ ಕಪ್ಪೆ ಬೈಲಿಗೆ ಹಾಕಿದ ಹಾಗೆ (ಗಾದೆ). ೮. ಇಲ್ಲಿಯ (ಉ.ಕ.ಜಿಲ್ಲೆ) ಗದ್ದೆಭೂಮಿಯಲ್ಲಿ ಮಕ್ಕಿ ಬೈಲು ಕಾರು ಎಂದು ಮೂರು ವಿಧವು (ಮುಂಬಯಿ. ೫-೨೧೨). ೧೦. ಆತ್ಮನ ಇರವು ಘಟ ಮಠದೊಳಗೆ ಗ್ರಹಿಸಿಪ್ಪ ಬೈಲಿನ ಇರವಿನಂತೆ (ಮೋಸಿಮಾ. ೯೦-೩೫೭).

ಬಚ್ಚಬಯಲ್, ಬಚ್ಚಬಯಲು, ಬಟ್ಟಬಯಲ್, ಬಟ್ಟಬಯಲು, ಬಟ್ಟಬೈಲು = (ದ್ವಿರುಕ್ತಿ): ಬಚ್ಚಬಯಲ ತೆಱದಿಂ ಬಗೆಗೊಳಿಸಿ ಪಳಚ್ಚನೆಸೆವ ಪಳಿಕಿನ ಮಾಡಗಳೊಳ್(ಜಯಾಕಾ. ೧೦-೫೩); ಬಚ್ಚಬಯಲಂತೆ ಬಗೆಗೊಳಿಪ ಬಡನಡುವಿನ ಪಳಚ್ಚನೊಪ್ಪುವ ಪೂರ್ಣಚಂದ್ರಮಂಡಲಕೆ ಪಡಿಯಚ್ಚಾದ ಮುಖ (ಸಮ್ಯಕೌ. ೩-೬); ಸಚ್ಚಿದಾನಂದನ ಸಂಗ ಬಚ್ಚಬಯಲು (ಮೋಸಿಮಾ. ೬-೨೧); ಆ ಬಲಂ ನಡೆದುದು ಪೆರ್ದೋಱೆ ಪೆರ್ವಟು ಪೆರ್ವೆಟ್ಟುಗಳಱತಡಿಗೆಡೆದಳ್ಳೆ ಬಟ್ಟಬಯಲಪ್ಪಿನೆಗಂ (ಮಹಾದೇ. ೧೧-೧೧೦); ಭಕ್ತಿಸ್ಥಲವನಳಿದು ಭಾವವಡಗಿ ಬಟ್ಟಬಯಲ ಕೂಡಿ ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು (ನೀಲಾ. ಕ. ೬-೯); ಹಳುವ ತಪ್ಪಿದ ಹಕ್ಕಿ ಬಟ್ಟಬಯಲೊಳು ಸಿಕ್ಕಿಕೊಂಡು ತೊಳಲಾಡುವುದು ಗೂಡಿಗಾಗಿ (ಗಂ. ೮೬-೨); ಬಟ್ಟಬೈಲಾಗಿರುವ ಯಾವ ಸ್ಥಳದಲ್ಲಾದರು ನಿಂತುಕೊಂಡು ಸುತ್ತಲೂ ನೋಡಿದರೆ (ಭೂಗೋಳ. ೧). ಬಯಲ ಕುದುರೆಯ ಕೋಡು = (ಆಲಂ) ಬಿಸಿಲುಗುದುರೆಯ ಕೊಂಬಿನಂತೆ ಅಸಂಭವವಾದುದು ; ಭ್ರಮೆ : ಝಾಡಿಸುತ್ತಿದೆ ಬಯಲ ಕುದುರೆಯ ಕೋಡು ಮಱುಮೊನೆಗೊಂಡು ಜಗವನು ಮಾಡಲೀಸದು ನಿನ್ನ ಪದಕಮಲದಲಿ ನಿಜಮತಿಯ (ನಿಭಾಗ. ೩-೪-೨೬). ಬಯಲ ನೀರ್, ಬಯಲ ನೀರು = ಬಿಸಿಲುಗುದುರೆ ; ಮರೀಚಿಕೆ ; ಮೃಗಜಲ (?): ಬಯಲ ನೀರಂತೆ ಮಾರ್ಗಂ ಬಿಟ್ಟು ನಡೆಯದೆ (ಧರ್ಮಾಮೃ. ೫-೯೯); ನೆಲದ ಮಡಕೆಯಲ್ಲಿ ಬಯಲ ನೀರ ತುಂಬಿ (ಸಕವ. ಕ. I, ೬೧-೩೩).

ಬಯಲ ಬಯಲ್ = (ಆಲಂ) ಸಂಪೂರ್ಣವಾಗಿ ನಿರರ್ಥಕವಾದುದು : ಆನಿದನಱಿಯಲೆ ನಿನಗಿತ್ತೀ ನಳಿನಮುಮುರಿಗೆ ತೋಱಿದಲರಂತಿರೆ ಪರಿಮ್ಲಾನಮಿನಿ ತಾಯ್ತು ನೋಡಿದೆನೇನೆಂದೆಲೆ ಬಯಲ ಬಯಲೊಳಡಗಲ್ ಬಗೆವೈ (ಲೀಲಾವ. ೪-೬೩). ಬಯಲ ರವ = ಅಶರೀರವಾಣಿ; ಆಕಾಶವಾಣಿ: ಪ್ರಿಯತಮೆಯನಗಲ್ದ ಶರೀರಿಯ ಜೀವನಮೇವುದೆಂದು ಮರಣವನಾಂ ನಿಶ್ಚಯಮಂ ಮಾಡುವ ಪದದೊಳ್ ಬಯಲ ರವಂ ಪುಟ್ಟತಂತರಿಕ್ಷದೊಳಾಗಳ್ (ದಶಕು. ೪-೪೭). ಬಯಲಾಗು, ಬೈಲಾಗು = ೧. ಬರಿದಾಗು; ಖಾಲಿಯಾಗು : ಮೊನೆಯಂಬಲ್ಲಿವು ನಂಜಿನಂಬುಗಳಿನಲ್ . . . ಬೇಗದಿನುರ್ಚಿ ಪೊಗೆ ಪೆಣನಂ ಸಾಲಿಟ್ಟವೊಲಾಗೆ ಮೇದಿನಿಯೊಳ್ ಖೇಚರಸೇನೆ ಬೀಱೆ ಬಯಲಾದತ್ತಾಗಸಂ(ಪಂರಾಮಾ. ೯-೬೯). ೨. ವ್ಯರ್ಥವಾಗು ; ನಿಷ್ಪ್ರಯೋಜಕವಾಗು: ನಿರ್ಧನಿಕ ಬಯಸಿದ ಬಯಕೆ ಬಯಲಹುದಲ್ಲದೇ ಬೇಱೆ ಧನಿಕನಂತೆ ಸಮಸ್ತಸುಖ ಸಂಜನಿಸುವುದೆ (ಕುಮಾಬಾ. ೪-೫೫); ಹರಿ ಕೊಟ್ಟ ವರ ಬಯಲಾಯ್ತು (ಮೋಹಶ. ೪-೮೨). ೩. (ಗುಟ್ಟು, ಸುದ್ದಿ ಮುಂತಾದುವು) ಬಹಿರಂಗವಾಗು ; ಪ್ರಕಟವಾಗು : ಅವನ ಗೋಪ್ಯಕಾರ್ಯಗಳೆಲ್ಲ ಗೂಢಚಾರರಿಂದ ಬಯಲಾದವು (ಹಾಹುತ್ತ. ೮೭); ಚಿಕ್ಕರಾಯನ ಲಗ್ನದ ವಿಚಾರವನ್ನು ಮುಂದಕ್ಕೆ ಹಾಕುತ್ತ ಬಂದಿದ್ದರ ಇಂಗಿತವು ಈಗ್ಗೆ ಬೈಲಾಯಿತು (ಅಚ್ಚಮ. ೪). ೪. ಲೀನವಾಗು ; ಐಕ್ಯವಾಗು : ಆರೂ ಅಱಿಯದ ಬಯಲೊಳಗೆ ಬಯಲಾಗಿ ನಿಂದ ನಿಲವ ಹಿಡಿದೆನ್ನ ಕರದಲ್ಲಿ ತೋಱಿದ ಗುರುವೇ (ಮಹಾದೇ.ಬ. ೨೨-೪೦); ಸಂಗನ ಬಸವಣ್ಣನು ಕಪ್ಪಡಿಯ ಸಂಗಯ್ಯನೊಳಗೆ ಬಯಲಾದನು (ಅಖಂಡೇ. ೩೨೬-೨೮). ೫. ಕಾಣದಾಗು ; ಮಾಯವಾಗು : ಭೂತದಂತೆ ತಾಗುವ ಶಸ್ತ್ರಕ್ಕೆ ಸಿಕ್ಕದೆ ಬಯಲಾಗಿ ತಾಗಿ ಗರ್ಜಿಪ ಸಿಂಗದಂತೆ . . . ಹದಿನಾಱುಸಹಸ್ರವಿದ್ಯವನು ತುದಿಮೊದಲಿಂದೆ ವಿಸ್ತರಿಸಿದ ಕೌಟಿಲ್ಯನಿಧಿ ಶಂಬರಾಸುರಖಳನು (ಮೋಹಶ. ೧೧-೬೮); ನಿನಗೊಂದು ಚಿತೆ ಎಡೆಗೊಂಡ ವೇಳೆಯೊಳೆನ್ನ ನೆನೆವುದೆಂದು ನುಡಿದಳು ಬಯಲಾದಳೊಡನೆ (ಭರಚಿ. ೭-೬೨). ೬. ಸೌಯು ; ಮರಣಹೊಂದು : ಕಿನ್ನರೇಶ್ವರ ಗೊಮ್ಮಿದೇವಾ . . . ನೀನಿಂದು ಬಯಲಾದೈ (ಬಸಪು. ೩೬-೨); ಇಷ್ಟು ದಿನಗಳಾದರೂ ಏಕೆ ಬದುಕಿ ಇರಬೇಕು? ಹೆಂಡತಿ ಮಗುಗಳಂತೆ ಬಯಲಾಗಬಹುದಿತ್ತಲ್ಲ? (ಫಲಸಂ. ೩೯). ಬಯಲಿಗಿಕ್ಕು = ಗುಟ್ಟನ್ನು ರಟ್ಟುಮಾಡು ; ರಹಸ್ಯವನ್ನು ಪ್ರಕಟಗೊಳಿಸು : ಅಯ್ಯ ಭಕ್ತಂ ನೋಡ ಬಯಲಿಗಿಕ್ಕಿದನಿದಂ ಎಂತುಸುರದಿರ್ಪೆನ್ನೆಂತು ಪೇಳುವೆನಿದಂ (ತಿರುರ. ದೇ. ೨೦-೬). ಬಯಲಿಗೆ ಬರು = ಬೆಳಕಿಗೆ ಬರು ; ಪ್ರಕಟವಾಗು : ಪ್ರಾಧ್ಯಾಪಕ ಟಿ. ಬರೊ . . . ೧೯೫೭ ಮತ್ತು ೧೯೫೮ ರ ಅವಧಿಯಲ್ಲಿ ನಡಸಿದ ಸಂಶೋಧನೆಯ ಫಲವಾಗಿ ಪೆಂಗುಭಾಷೆ ಬಯಲಿಗೆ ಬಂದಿತು (ದ್ರಾನಿವಿ. ೧೭೨). ಬಯಲಿಗೆಳೆ = ಬಯಲಿಗಿಕ್ಕು : ಶಕುಂತಲೆ . . . ದುಷ್ಯಂತನ ಮಿಥ್ಯಾಚಾರವನ್ನು ಬಯಲಿಗೆಳೆಯುವಳು (ಕಾವ್ಯಸ. ೨೪); ಈ ರಹಸ್ಯವು ಕಾರ್ಡಿನಲನಿಗೆ ಚೆನ್ನಾಗಿ ಗೊತ್ತಿದ್ದುದರಿಂದ . . . ಬಯಲಿಗೆಳೆಯಲು ಸಂದರ್ಭವನ್ನು ಕಾಯುತ್ತಿದ್ದನು (ಯೋಧರು. ೩೭). ಬಯಲ್ಮಾಡು, ಬಯಲು ಮಾಡು, ಬೈಲುಮಾಡು = ೧. ಕಾಣದಂತೆ ಮಾಡು ; ಇಲ್ಲವಾಗಿಸು : ಹೂಡುವ ಜಗವನೊಂದೆವೆಯಾಟದೆ ಬಯಲ್ಮಾಡುವ ಮರಳಿ ಸೃಷ್ಟಿಸುವ ನೋಡುವ ತಾನಲ್ಲದವನಂತೆಯೊಳಹೊಱಗಾಡುವ ಚೇಷ್ಟಕನೀತ (ಮೋಹಶ. ೧೩-೭೯). ೨. ಬಹಿರಂಗಪಡಿಸು ; ಪ್ರಕಟಗೊಳಿಸು : ನಿರ್ಮಲೆಯಾಡಿದ ಮಾತು ಪ್ರಭಾಕರನ ನಡತೆಯನ್ನು ಬಯಲುಮಾಡಿಬಿಟ್ಟಿತು (ತೇಮೋಡ. ೧೧೭); ಯಡತೊರೆಯವರು ಎದುರುಬಿದ್ದು ತಮ್ಮ ಮನೋಭಾವವನ್ನು ಬೈಲುಮಾಡುವರು (ಕೆಲನಿ. ೩೧೧). ೩. ಖಾಲಿಮಾಡು ; ಬರಿದುಮಾಡು : ಕತ್ತಿ ಹಿಡಿದಿರುವರ ಕೈಗಳನ್ನು ಕಡಿದು ಬಂಡಿಗಳಂ ಬಯಲುಮಾಡಿ . . . ಓಡಿಹೋದರು (ಮಹಾಪಂ. I, ೮೬).

[ದೇ. ॥ ತಮಿ. ಮಲ. ವಯಲ್; ತುಳು. ಬಯಿಲು, ಬೈಲು; ತೆಲು. ಬಯಲು, ಬೈಲು]

ವಯಸ್ಸ (ನಾ). ವಯಸ್ಸು ; ಪ್ರಾಯ : ವಯಸಮನೀ ಶೀಲಮನೀ ವಿನಯಮನೆಯ್ದೆ ವಿದ್ಯೆಯಿಂ ಪುದಿದೊಡೆ ಮತ್ತೇವೇಱ್ಪುದೊ ನೀಮೆ ಜಗತ್ಪಾವನೆಯರಿರಕ್ಕ ನಿಮಗ ಮಗ್ಗಳರೊಳರೇ (ಆದಿಪು. ೦-೫೮); ಉದಯಂ ಮೊದಲಾಗಿ ಸುರೇಜ್ಯಂ ನಿಂದ ರಾಶಿವರಮೆಣಿಸಿ . . . ವಯಸಮನಱಿ ವಯೋನುಮಾನಕ್ರಮದಿಂ (ಜಾಶಶಿ. ೨೪-೩).

[ಸಂ. ವಯಸ್]

ವಯಸ್ಸ$_2$ (ನಾ). [ಅಶ್ವಶಾ] ಕುದುರೆಯ ನಡೆಗಳಲ್ಲಿ ಒಂದು ಬಗೆ : ದಾರೆ ಗತಿ . . . ಭೌಮಂ ವೈಹಾಯಸಂ ವಯಸ ಯಂತ್ರ ಕ್ಷೇತ್ರ ವಹಳಿ ಸತ್ಯಂ ದಾರಿ ಮೆಂಬ ಭೇದಂಗಳಿಂದಶ್ವಮನೇಱಲು ರೇಚಿಗನೃಪತಿ ತಾನೆ ಬಲ್ಲಂ (ಮದಶಿ. ೧-೨೧).

[?]

ವಯಸ್ಯ (ನಾ). ೧. ಹರೆಯದವನು ; ಸಮಾನಪ್ರಾಯದವನು : 'ಸಮವಯಸ್ಯ' ಪರಾ. ೨. ತಾರುಣ್ಯವನ್ನು ದಾಟಿದವನು ; ಪ್ರೌಢ ; ಹಿರಿಯ : ಆ ಚಲನಚಿತ್ರವನ್ನು ನೋಡಲು ವಯಸ್ಕರಿಗೆ ಮಾತ್ರ ಪ್ರವೇಶವುಂಟು (ರೂಢಿ).

ವಯಸ್ಕಮತಾಧಿಕಾರ = (ಆಯಾದೇಶಕ್ಕೆ ಅನ್ವಯಿಸುವಂತೆ) ಪ್ರೌಢವಯಸ್ಸಿನವರಿಗೆ ಮಾತ್ರ ದೊರೆಯುವ, ಮತವನ್ನು ಚಲಾಯಿಸುವ ಅಧಿಕಾರ : ಲೋಕಸಭೆಗೂ ಪ್ರತಿಯೊಂದು ರಾಜ್ಯದ ವಿಧಾನಸಭೆಗೂ ನಡೆಯಬೇಕಾದ ನಿರ್ವಾಚನಗಳು ವಯಸ್ಕಮತಾಧಿಕಾರದ ಆಧಾರದ ಮೇಲೆ ಇರತಕ್ಕದು (ಭಾಧಾನ. ೧೯೨). ವಯಸ್ಕರ ಶಿಕ್ಷಣ = ಪ್ರೌಢವಯಸ್ಸಿನವರಿಗೆ ಮಾಡಿಸುವ ವಿದ್ಯಾಭ್ಯಾಸ : ವಯಸ್ಕರ ಶಿಕ್ಷಣವನ್ನು . . . ಅರುಣೋದಯದಲ್ಲಿ ಆರಂಭಿಸಿದರೆ ಬೆಳಿತಲ್ಲವೆ? (ಗಾಳಿ. ೧೬೧). [ಸಂ.]

ವಯಸ್ಥ (ನಾ). ಪ್ರಾಯಕ್ಕೆ ಬಂದವನು ; ತರುಣ ; ಯುವಕ : "ವಯಸ್ಥಃ, ತರುಣಃ, ಯುವಾ — ೩ ಪ್ರಾಯದ ಹುಡುಗನ ಹೆಸರುಗಳು" (ಸಿದ್ಧಾಂತಿ. ೧೭೯).

[ಸಂ.]

ವಯಸ್ಥೆ (ನಾ). ೧. ಪ್ರಾಯಕ್ಕೆ ಬಂದವಳು ; ತರುಣಿ. ೨. ಓರಗೆಯವಳು ; ಸಂಗಾತಿ. ೩. ನೆಲ್ಲಿಯ ಮರ ; ಆಮಲಕವೃಕ್ಷ : "ತಿಷ್ಯಫಲಾ, ಆಮಲಕೀ, ಅಮೃತಾ, ವಯಸ್ಥಾ — ೪ ನೆಲ್ಲೀಮರ" (ಸಿದ್ಧಾಂತಿ. ೧೨೫). ೪. ಕಾಕೋಳಿಸೊಪ್ಪು : 'ವಾಯಸಸ್ಥೀಲೀ, ಸ್ವಾದುರಸಾ, ವಯಸ್ಥಾ — ೩ ಕಾಕೋಳಿಸೊಪ್ಪು" (ಸಿದ್ಧಾಂತಿ. ೧೪೫). ೫. ಹೊನಗೊನೆಸೊಪ್ಪು : "ಬ್ರಾಹ್ಮೀ, ಮತ್ಸ್ಯಾಕ್ಷೀ, ವಯಸ್ಥಾ, ಸೋಮವಲ್ಲರೀ — ೪ ಹೊನಗೊನೇಸೊಪ್ಪು" (ಸಿದ್ಧಾಂತಿ. ೧೪೪). ೬. ಅಳಲೆಗಿಡ. ೭. ಸಣ್ಣ ಯಾಲಕ್ಕಿ.

[ಸಂ. ವಯಸ್ಥಾ]

ವಯಸ್ಯ (ನಾ). ಓರಗೆಯವನು ; ಗೆಳೆಯ : ತದೀಯ ವಯಸ್ಯನಾತನೆಗ್ಗಂ ಮೊರ್ಕೊಂಡು ದೋಷಾನ್ವೇಷಣಮಂ ಬಾರಿಸಿ . . . ಬುದ್ಧಿವೇಱ್ಪೊಡಂಬಡಿಸಿದಂ (ಶಾಂತಿಪು. ೮-೭೯ ವ); ಕ್ಷಣಮಗಲ್ದು ನಿಲಲಾಱದೆ ಮೆಯ್ಮಱುಗಿ ಮದೀಯ ವಯಸ್ಯನನಱಸುತ್ತುಂ . . . ಚಿಂತಿಸಿದೆಂ (ಕಾದಂಪು. ೮೨೪). [ಸಂ.]

ವಯಸ್ಯೆ (ನಾ). ಗೆಳತಿ ; ಸ್ನೇಹಿತೆ : ಶಶಿಪ್ರಭಾದೇವಿಯ ವಯಸ್ಯೆ ಕನಕಪ್ರಭೆಯೆಂಬಳ್ ಬಂದು ಪೊಡೆಮಟ್ಟು ಕುಳ್ಳಿರ್ದಳ್ (ಚಂದ್ರಪು. ೫-೧೨೨ ವ); ಕಡೆಗಣ್ಣಿಂ ನೋಡಿದಳ್ ವಯಸ್ಯೆಯ ಮೊಗಮಂ (ಪುಷ್ಪಪು. ೩-೭೩). [ಸಂ. ವಯಸ್ಯಾ]

ವಯಸ್ಸು (ನಾ). ೧. ಬಾಲ್ಯ, ಯೌವನ ಮತ್ತು ವೃದ್ಧಾಪ್ಯ — ಎಂಬ ಬದುಕಿನ ಮೂರು ಅವಸ್ಥೆಗಳು. ೨. ಯಾವುದೇ ವ್ಯಕ್ತಿ ಅಥವಾ ಜೀವಿ ತಾನು ಹುಟ್ಟಿದಂದಿನಿಂದ ಕಳೆದಿರುವ ಜೀವಿತದ ಅವಧಿ, —ಕಾಲ ; ಪ್ರಾಯ : ಚಿಕ್ಕವಯಸ್ಸಿನಲ್ಲೇ ಬಾಳಿನ ಕಹಿ ಸಿಹಿ ಅನುಭವಗಳನ್ನು ಕಂಡಿದ್ದೀಯೆ (ಮನೋನಂ. ೮೧). ೩. ಹರೆಯ ; ಯೌವನ ; ತಾರುಣ್ಯ.

ವಯಸ್ಸಾಗು = ೧. ಪ್ರಾಯವಾಗು : ನಿನಗೆಷ್ಟು ವಯಸ್ಸಾಗಿದೆ? (ರೂಢಿ). ೨. ಮುಪ್ಪು ಬರು ; ವೃದ್ಧಾಪ್ಯವುಂಟಾಗು : ವಯಸ್ಸಾದ ಮೇಲೆ ನಿದ್ದೆ ಎಂಟು ತಾಸಿನಿಂದ ಆರಕ್ಕೆ, ಐದಕ್ಕೆ ಇಳಿವುದೆಂದು ಕೇಳಿದ್ದೇನೆ (ಗಾಳಿ. ೧೭೫). ವಯಸ್ಸಿಗೆ ಬರು = ಪ್ರಾಪ್ತವಯಸ್ಸನ್ನು ಹೊಂದು ; ಪ್ರಾಯಕ್ಕೆ ಬರು : ರವಿವರ್ಮನು ವಯಸ್ಸಿಗೆ ಬಂದ ಮೇಲೆ . . . ತನ್ನ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು (ಕರ್ನಾಅ. ೧೨). ವಯಸ್ಸು ಮೀರು = ಯೌವನವು ಕಳೆದು ಹೋಗು ; ತಾರುಣ್ಯಾವಸ್ಥೆಯನ್ನು ದಾಟು : ವಯಸ್ಸು ಮೀರಿದ ತರುವಾಯ ಸುಂದರಿಯರಾದ ತರುಣಿಯರನ್ನು ಗುಡುವೆಯಾದ ಪ್ರಭಾಕರನಂಥವರು ಇಲ್ಲದ ಅನುಮಾನವನ್ನೂ ಭಯವನ್ನೂ ಹೊಂದುವುದು ಸಹಜವೇ (ಕವಿಕ. ೩೬). [ಸಂ. ವಯಸ್]

ವಯಸ್ಯ 'ಬೈದ್ಯ' ನೋ.

ವಯಿನ, ವಯನು, ವೈನ (ನಾ). ೧. ಹಾದಿ ; ಮಾರ್ಗ : ಸಂಕಲ್ಪವೆತ್ತಲತ್ತಲೆ ವಯಿನ! ತಡೆದರೇಂ ತಡೆದಪನೆ? (ಹಚ್ಚರಿ. ೧೯-೭೨). ೨. ಹಂಚಿಕೆ; ಯುಕ್ತಿ ; ಉಪಾಯ : (ಕಿ). ೩. ಅಚ್ಚುಕಟ್ಟು ; ಒಪ್ಪ ; ಚೆನ್ನು : ಅಪರಂಜಿಯಂತೆ ವಯಿನವಾಗಿದ್ದ ಸಂಸಾರ (ಮಹಾಗ. ೨); ನಿನಗಾದರೂ ವಯಿನಾದ ಕಡೆ ನಿಮ್ಮಪ್ಪ ಗಂಡನ್ನ ತರಲಮ್ಮ! (ಮಹಾಗ. ೩೧). ವಯನು : ೩. ಬಹಳಷ್ಟು ಮುರುಡು, ಒಂದೆರಡು ವಯನು (ಚಂದ್ರಮಾ. ೧೭-೪). ವೈನ : ೨. ಅರಸಿ ಕೇಳೇ ನಾನು ವೈನದಿ ತರುವೆ ನಾನವನನ್ನು ಕಾತುರಗರೆಯದಿರು ಬರುವನಕ (ಜಿನಭಾ. ೨೯-೧೩); ದೊಡ್ಡಕಾರ್ಯಗಳಲ್ಲಿ ಜಯ ಸಿಕ್ಕುವಂತೆ ವೈನಂಗಳನ್ನು ಮಾಡುವ ಸಾಮರ್ಥ್ಯವುಳ್ಳವನು (ವಾಗ್ದೇವಿ. ೮೫). ೩. ಏನು ಕಾರಣ ಗಿರಿಜೆ ಕೊಂದಳು ದಾನವನ . . . ವೈನದಿಂ ವಿಸ್ತರಿಸಿಯೆನ್ನಜ್ಞಾನಕಲ್ಮಷ ತಿಮಿರಕತಿಸುಜ್ಞಾನದೀಪ್ತಿಯನೊಲಿದು ಕೃಪೆಮಾಡು (ಅಂದಿಕಾ. ೭-೩); ವೈನದಿಂ ಹಿಮಕರಂ ಎಂದೆನಿಸಿ ನಿಶಿಕರಂ (ಪರಶು. ೨೧-೨೫); ಈ ಕಾಫಿ ವೈನವಾಗಿಲ್ಲ (ಚೈತರ್ಮೆ. ೫೮). ೪. ರೀತಿ ; ಕ್ರಮ ; ಬಗೆ : ತಾನಾ ಲಂಕೆಯ ಶಿಖಿಗಾಹುತಿಯನಿತ್ತ ವೈನವೆಲ್ಲವ ತಿಳಿಹಿದನು (ಹನುಮ. ೮೮); ಇವುಗಳ ವೈನವನ್ನು ಆಖ್ಯಾತಪ್ರಕರಣದ ೫೪ನೇ ಸೂತ್ರದಲ್ಲಿ ವಿಸ್ತಾರವಾಗಿ ಹೇಳಿಧೇವೆ (ಹೊನಗ. ೮೨). ೫. ಜೋಕೆ ; ಎಚ್ಚರ : ವಾನರಾಧಿಪರೊಂದು ಬಿಲವ ಕಂಡದರೊತ್ತ ವೈನದಿಂ ಸಾರ್ದಿಟ್ಟಿಸಿದರೆಲ್ಲರೊಂದಾಗಿ ಜಾವಪರಿಯಂತರೊಲಿದು (ವೆಂಕಾರಾ. ೪-೧೭-೪೧). ೬. ಸಮಾಧಾನ ; ನೆಮ್ಮದಿ : ದಿವಸ್ಪತಿಮುಖ್ಯರುಂ ಪದುಳದಿಂದೆ ವಿಹಾರಿಸುತ್ತಿರೆ ವೈನಮಾದಪುದಾತ್ಮದೊಳ್ ಮುದದೆ ನೀವಿರಿಂ (ಹಾಲಾಸ್ಯ. ೧-೨-೧೮).

ವೈನವಾಗಿ, ವೈನಾಗಿ = ೧. ಅಚ್ಚುಕಟ್ಟಾಗಿ ; ಒಪ್ಪವಾಗಿ ; ಚೆನ್ನಾಗಿ : ಸ್ವರವೆತ್ತಿ ಅಳುತ್ತ ಬೈವ ಬಗೆಗಳನು ವೈನವಾಗಿ ಕೇಳಿದೆನು (ವಚಕಾ. ೩೫); ಮನೆಗೆಲಸ ವೈನಾಗಿ ನೋಡಿಕೊಂಡು ಹೋಗ್ತಾಳೆ (ಹೊಸಕ್ಷಿ. ೨೧೯). ೨. ಅಂದವಾಗಿ ; ಸೊಗಸಾಗಿ : ತಲೆ ಬಾಚಕೊಂಡ್ರೆ ನೀನು ವೈನಾಗಿ ಕಾಣ್ತೀಯ (ನನ್ನೂರು. ೨೬೧); ನಮ್ಮೂರ ಕೆಂಚನೇ ಅದಕ್ಕಿಂತ ವೈನಾಗಿ ಕುಣೀತಾನೆ (ಗಂಗಾ. ೪೧). ೩. ಸುಖವಾಗಿ ; ನೆಮ್ಮದಿಯಾಗಿ : ನೀನೂ . . . ವೈನಾಗಿ ಮನೇಲಿ ಬೆಚ್ಚಿ ಕೂರ್ಬೇಕು, ನಾ ಇದ್ದೋರ್ ಬದ್ದೋರ್ ಕಾಲ್ಹಿಡಿದು ದುಡಿಬೇಕು (ಪಂಚವಾ. ೧೩).

[ದೇ. ॥ ತಮಿ. ವಯಣಮ್; ತುಳು. ವಯನ, ವಯಿನ; ತೆಲು. ವಯಿನ, ವೈನ]

ವಯಿರ 'ಬೇರ$_1$' ನೋ.

ವಯಿರಮುಡಿ, ವೈರಮುಡಿ, ವೈರ್ಮುಡಿ (ನಾ). ೧. ವಜ್ರಗಳನ್ನು ಹುದುಗಿಸಿರುವ ಕಿರೀಟ : ಬ್ರಹ್ಮೋತ್ಸವಕಾಲದಲ್ಲಿ ವಯಿರಮುಡಿಯಂ ಧರಿಸಿ ತೆಗೆದ ನಂತರ . . . ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ತರುವಂತೆಯೂ . . . ನಿಬಂಧನೆ ಮಾಡಿ (ಮಹಾವಂ. ೩,೪೧); ನಮ್ಮ ಕೀರ್ತಿಯ ವಯಿರಮುಡಿಹರಳು ಕಳೆದಿಹುದು (ಅಮಾಂ. ೩೭-೧೨). ೨. (ಆಲಂ) ಶ್ರೇಷ್ಠ ವ್ಯಕ್ತಿ : ಕಾಯಿ, ತಾಯಿ . . . ಹೊನ್ನುನಡೆಯ, ಹೊನ್ನುನುಡಿಯ, ಕನ್ನಡಿಗರ ವಯಿರಮುಡಿಯ, ಒಡೆಯ ಕೃಷ್ಣನ (ಹೊಂಗಳು. ೯-೧೧). ವೈರಮುಡಿ: ೧. ಗರುಡಾರೋಹಣವಂಗೈದುಱೆ ರಂಜಿಪ ವೈರಮುಡಿಯ ಧರಿಸಿದ ಚಲುವಾ ನರಹರಿ ನಾರಾಯಣ ನೀಂ ವರವ ಕರುಣಿಸಿ ಶರಣಾಗತನ ಪೊರೆ ದೊರೆಯೇ (ಮೃಸೂಮ. ೨-೬೬); ಆ ನವರತ್ನರಂಜಿತಕಿರೀಟ . . . ಅತೀವಕಾಂತಿಯಿಂ ಭಾನುವಿನಂತೆ ವೈರಮುಡಿಯೆಂಬ ಶುಭಾಖ್ಯಮನಾಂತು ರಂಜಿಕುಂ (ಚಿಕ್ಕದೇ. ೭೫). ೩. ಮೇಲುಕೋಟೆಯ ಶ್ರೀರಂಗನಾಥನಿಗೆ ವಜ್ರದ ಕಿರೀಟವನ್ನು ತೊಡಿಸಿ, ನಡೆಸುವ ಒಂದು ಉತ್ಸವ : ಪೋರ್ಣೋಮಿಗೆ ನಂಜನಗೂಡಿಗೂ ವೈರಮುಡಿಗಾಗಿ ಮೇಲುಕೋಟೆಗೂ . . . ನಮ್ಮವರು ತಂಡತಂಡವಾಗಿ ಹೋಗಿಬಂದು ಪುಣ್ಯಸಂಪಾದನೆ ಮಾಡುತ್ತಿದ್ದರು (ಹುಟ್ಟಿಹ. ೭೪); ಮೈಸೂರು ದಸರ, ಬೆಂಗಳೂರು ಕರಗ, ಮೇಲುಕೋಟೆ ವೈರಮುಡಿ— ಸಾಕು ಇವುಗಳಲ್ಲಿ ಯಾವುದಾದರೂ ಒಂದಕ್ಕೆ ತಲೆದೂಗುತ್ತೀರಿ (ನಾಡಿಗೇ. ೧೧೭). ವೈರ್ಮುಡಿ : ೩. ಚಲುವರಾಯನ ಚೆಲುವದರುಶನ . . . ವೈರ್ಮುಡಿಯಾ ಲಲಿತಮಾದುತ್ಸವವ ನೋಡಿದರುಳಿವುದೆ ಬಹುಪಾತಕಂಗಳು (ಅರ್ಚಾವಿ. ೨೮-೨೧).

[<— ತಮಿ. ವಯಿರಮುಟಿ]

ವಯಿಸಾಖ 'ಬೇಸಗೆ' ನೋ.

ವಯೋಗುಣ (ನಾ). ವಯಸ್ಸಿಗೆ ಅನುಗುಣವಾದ ದೈಹಿಕ ಹಾಗೂ ಮಾನಸಿಕ ಪ್ರವೃತ್ತಿ, —ವರ್ತನೆ ; ವಯೋಧರ್ಮ : ನೀತಿನಿಯಮಗಳು ವಯೋಗುಣಕ್ಕೆ ತಕ್ಕವೂ ಆಗಿರಬೇಕು (ಶಿಕ್ಷದ. ೩೨೨). [ಸಂ.]

ವಯೋಧರ್ಮ (ನಾ). = ವಯೋಗುಣ : ಚಿಕಿತ್ಸೆಯಂ ಮಾಡುವಲ್ಲಿ ದೇಶಕಾಲ, ವಯೋಧರ್ಮ, ಅಗ್ನಿ ಬಲಾಬಲಗಳನ್ನು ನೋಡಿಕೊಂಡು ಚಿಕಿತ್ಸೆಯಂ ನಡೆಯಿಸುವುದು (ಸಕವೈ. ೨೪೦); ವಯೋಧರ್ಮಕ್ಕೆ ತಕ್ಕಂತೆ ಹೆಣ್ಣಿನ ಹಂಬಲ ಸಹಜವಾಗಿ ಬಂದಿರಬೇಕು (ಹೊಸಕ್ಷ. ೧೭). [ಸಂ.]

ವಯೋಧಿಕ (ನಾ). ೧. ವಯಸ್ಸಿನಿಂದ ಹಿರಿಯನಾದ ವ್ಯಕ್ತಿ ; ವಯೋವೃದ್ಧ : ಉಭಯಕುಲಸಹಾಯತ್ವಮಿತರೇತರೋಪಕಾರದಿಂ ಸಂಗತದೊಳಾದುದುಮನಲ್ಲಿಯ ವಯೋಧಿಕರಿರೆಗಳುಮಾಗಳುಮಱಿವರ್ (ಶಾಂತಿಪು. ೨-೭೭ ವ). ೨. ಪಕ್ಷಿಗಳಲ್ಲಿ ಶ್ರೇಷ್ಠವಾದುದು. ೧, ೨: ವಯೋಧಿಕನಾಗಿ ತಾರ್ಕ್ಷ್ಯನಲ್ತು . . . ಎನೆ ವೃದ್ಧನಿದೇಂ ವಿರುದ್ಧನೋ (ಪುಷ್ಪಪು. ೧೩-೩೫). [ಸಂ.]

ವಯೋನುರೂಪ (ನಾ). ವಯಸ್ಸಿಗೆ ತಕ್ಕುದು ; ವಯಸ್ಸಿಗೆ ಅನುಗುಣವಾದುದು : ದೇವಿಯರುಂ . . . ವಯೋನುರೂಪದಿಂ ಕುಮಾರಂಗನುಷ್ಠಿಸುತ್ತಿರ್ಪನ್ನೆಗಂ (ಭಾಪುಂಪು. ೩೪). [ಸಂ.]

ವಯೋವೃದ್ಧ (ನಾ). ವಯಸ್ಸಿನಿಂದ ಹಿರಿಯನಾದವನು ; ಮುದುಕ : ವಯೋವೃದ್ಧನುಂ ಬುದ್ಧಿವೃದ್ಧನುಂ ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು . . . ಪೋಗಲ್ವೇಱ್ಪುದುಂ (ಆದಿಪು. ೧೪-೪೩ ವ); ಜ್ಞಾನವೃದ್ಧಂ ತಪೋವೃದ್ಧಂ ವಯೋವೃದ್ಧನೀ ನರೇಶ್ವರಂ (ಕೃಷ್ಣಭಾ. ೩೨-೧೦). [ಸಂ.]

ವಯೋವೃದ್ಧೆ (ನಾ). ವಯಸ್ಸಾದವಳು ; ಮುದುಕಿ : ಗಾವಿಲ ವಯೋವೃದ್ಧೆಯರ ಸಂಭೋಗಾಂತರಂಗಳಲಿ . . . ಆಯುಷವಿಳಿದು ಹೋಗದೆ ದಿನದಿನದೊಳು (ಕುವ್ಯಾಲಾ. ೩ ೫೬). [ಸಂ. ವಯೋವೃದ್ಧಾ]

ವಯ್ಯುಂಭ (ನಾ). ಒಂದು ವಂಶ ಮತ್ತು ಆ ವಂಶಕ್ಕೆ ಸೇರಿದ ಒಬ್ಬಾತನ ಹೆಸರು : ಸ್ವಸ್ತಿಶ್ರೀವಯ್ಯುಂಭಮಹಾರಾಜರ್ ಪ್ರಿತುವೀರಾಜ್ಯಂಗೆಯೆ (ಮೈಅಾ. ೧೯೨೮, ೩೩-೧; 800). [?]

ವಯ್ಯಾರ 'ವೈಯಾರ' ನೋ.

ವಯ್ಯಾರಿ 'ವೈಯಾರಿ' ನೋ.

ವರ್, ಬರ್, ಬರು$_1$ (ಕ್ರಿ). ಬಂದ$_1$, ವಂದ (ಭೂತಕೃ). ಬಂದು$_1$, ವಂದು (ಭೂತನ್ಯೂ). ಬಪ್ಪ$_1$, ಬರ್ಪ, ಬಹ, ಬಹುದು, ವರ್ಪ, ವಹುದು (ವರ್ತಕೃ). ಬಾಹ (ಭವಿಕೃ). ಬ್ಬಾ$_2$, ಬಾರ$_4$ (ವಿಧ್ಯರ್ಥ). ವಾರ$_1$ (ನಿಷೇಧಾರ್ಥ). ೧. ಆಗಮಿಸು ; ಬಿಜಯಮಾಡು : ಸಸಿಮತಿ ಶ್ರೀಗನ್ತಿಯರ್ವ್ವನ್ನು ಮೇಲೆ ಅಱಿದಾಯುಷ್ಮಮನೆನ್ನು ನೋಡೆನಗೆ ತಾನಿನ್ತೆನ್ನು ಕಟ್ಟಪ್ಪಿನುಳ್ ತೊಱದಾರಾಧನೆ ನೋನ್ತು ತೀರ್ತ್ಥಗಿರಿ ಮೇಲ್ಪ್ಪರ್ಗ್ಗಾಲಯಕ್ಕೇಱಿದಾರ್ (ಎಕ. II, ೭೬-೨; ಸು. 700); ನೆಲಕ್ಕೆ ವರುತ್ತಿರ್ದ ವಿಮಾನಮೆಡೆಯಿಂದಂ ಮೇಗೆ ಮಗುಳ್ದುದಂ ಕಂಡುದಱಿಂ ದೇವರ್ಕಳುಂ ವಿದ್ಯಾಧರರ್ಕಳುಮಿಲ್ಲಿಂದಿತ್ತೀ ಕ್ಷೇತ್ರಕ್ಕೆ ವಾರರ್ (ವಡ್ಡಾರಾ. ೮೬-೧೦). ಬರ್: ೧. ಆಗ್ನೇಯದಿನನ್ತೆ ಬನ್ದು ಕಾಗಣಿತಟಾಕಂ ಪುನ ದಕ್ಷಿಣಸ್ಯದಿಸಿ ಬಹುಶ್ಶುಹಿಯೆ . . . ಕೆಂತಱಮ್ಮಿನ ದಿಣೆಂ ಪೂರ್ಬ್ಬದೆ ಕೂಡಿತ್ತು ಸೀಮಾನ್ತರಂ (ಎಕ. I, ೧-೨೩; 466); ತದಾಶ್ರಮದ ತರುಗಳ ಮೇಗಿರ್ದು ಪುಗಿಲ್ ಪುಗಿಲೆಂದಿತ್ತ ಬನ್ನಿಮಿರಿಮೆಂಬ ಪೊಂಬಣ್ಣದ ಕೋಗಿಲೆಗಳುಮಂ . . . ನೋಡಿ (ಪಂಪಭಾ. ೧-೧೧೫ ವ); ಬಾರೆಲೆ ತಂದೆ ಬಾರರಸ ಬಾ ಪೊರೆವಾಟ್ಟನೆ ಬಾಯೆನುತ್ತೆ . . . ಧಾತ್ರೀರಮಣರ್ ಮರಲ್ದು ಕರೆಯುತ್ತಿರೆಯುಂ (ಕಾದಂಪು. ೩೬೧); ನಗುತ್ತುಂ ಬರ್ಪ ನರಿಯಂ ಪಿಂಗಳಕಂ ದೂರಾಂತರದೊಳ್ ಕಂಡಿವಂ ತಡೆದು ಬರ್ಪ ಬರವೇ ಕಾರ್ಯಸಿದ್ಧಿಯಂ ಪೇಱ್ದಪ್ಪುದೆಂದು ಬಗೆವಿನಂ (ಪಂಚತಂ. ೫೫-೫); ಪ್ರಭುದೇವರು . . . ಅನಿಮಿಷದೇವರು ತಮಗೆ ಗುರುವೆಂದಱಿದು ಬಪ್ಪಲ್ಲಿ (ಶೂನ್ಯಸಂ. I, ೧೦-೨೮); ಹೊದಱುಗಿಡಿಗಳ ಹೊಗೆಯ ಹೇರಾಳದಲಿ ಬಹ ದಿವ್ಯಾಯುಧಕೆ ಚಾಚಿದನು ವಶ್ವಸ್ಥಳವನಸುರಾರಾತಿಯಡಹಾಯ್ದು (ಕುವ್ಯಾದ್ರೋ. ೩-೬೦); ಆದಂಥಾದ್ದನು ದೇವತಾಸೇವೆಗೆ ನಡದು ಬಾಹ ರೀತಿ ಬಿಟ್ಟದೇವೆ (ಎಕ. VII, ಶಿವಮೊ. ೮೨-೩೧; 1683). ೨. ಚಿಗುರು ; ಕೊನರು : ಸುಂದರಿ ಜೀವಲೋಕದ ಸುಖಕ್ಕೆ ಪರಾಙ್ಮುಖಿಯರ್ಕಳಾಗಿ ನಿನ್ನೊಂದಿಗರೀ ತಪಕ್ಕೆಳಸಿದಂದು ಮನೋಜನ ಬಲ್ಲ ಬಲ್ಲೆ ಪೂರ್ಣೇಂದುವಿನುಜ್ಜಳಿಕ್ಕೆ . . . ಬಂದೆಳಮಾವಿನೇಟ್ಟೆ ಬನೆದಂದು ನಿರರ್ಥಕಮಾಗದಿರ್ಕುಮೆ (ಕಾದಂಉ. ೫೫೪); ಮರನೆಲ್ಲಂ ಬಂದ ಮಂದಾರಮಾವನಂಗಂ ಮತ್ಸಮಮೆಂದು ಬೀಗಿ ಬಳೆದಂತಿರ್ಕುಂ . . . ಶ್ರೀಕಂದರಂ ಮಂದರಂ (ಅರ್ಧನೇ. ೧-೫). ೩. ಫಲಪುಷ್ಪಗಳಿಂದ ಕೂಡಿರು ; ಹೂವು, ಹಣ್ಣುಗಳಿಂದ ತುಂಬಿರು : ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿಸಂಪಗೆಯೆ ಕುಕಿಲ್ವ ಕೋಗಿಲೆಯೆ . . . ನೋಟ್ಪೊಡಾವ ಬೆಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ವಂಪಭಾ. ೪-೨೮); ಪಂಜರಾಂತರದ ಕನ್ನಡವಕ್ಕಿಯನೊಂದು ಬಂದ ಮಾಮರದೊಳ್ ಸಾರ್ಚು (ಕಾದಂಉ. ೫೯೪); ನನೆಯಂಬನೋಲಗದ ಸಾಲೆವೊಲಿರ್ದುವು ಬಂದ ಮಾವುಗಳ್ (ಕಬ್ಬಿಗಾ. ೬೧). ೪. ಪ್ರವಾಹವುಂಟಾಗು ; ನೆರೆಯುಂಟಾಗು : ಕಲ್ಲ ದೊಣೆಯನೆಯ ಬಂದ ತೊಱೆಯೊಳ್ ಪೋಪೆನೆಂಬನುಂ ಕ್ರೂರನಪ್ಪಾಪ್ತನಂ ಪಿಡಿದು ಮೋಕ್ಷಕ್ಕೆ ಪೋಪೆನೆಂಬನುಂ ಕರಮೆಗ್ಗರಲ್ದೆ ಚತುರರಲ್ಲರ್ (ಧರ್ಮಾಮೃ. ೭-೩೦). ೫. (ಪರಂಪರೆಯಿಂದ) ಮುಂದುವರಿ ; ನಡೆದುಬರು ; ಸಾಗು : ವೀರಜಿನೇಂದ್ರನಿಂ ಗಣಧರಾಗ್ರಣಿಯಂ ಕ್ರಮದಿಂದೆ ಬಂದ ವಿಸ್ತಾರದ ಜೈನಧರ್ಮದ ಮೊದಲ್ ಪರಮೇಶ್ವರರೆಂಬಿನಂ ಸದಾಚಾರಸಮೇತರಾದರೆಮಗೀಗೆ ಶಿವಾಸ್ಪದಮುಖ್ಯಸೌಖ್ಯಮಂ (ಶಾಂತಿಪು. ೧-೩); ಸೈಗೊಟ್ಟ ಗಂಗನಿಂ ಬಂದ ಧರ್ಮ್ಮಮಂ ಸಮುದ್ಧರಿಸಿದಂ (ಇಆ. XVIII, ೩೧೨-೨೬; 11ನೆಯ ಶತ); ಇಪ್ಪತ್ತನಾಲ್ಕುಸಂವತ್ಸರ ೨೪ ಪರ್ಯ್ಯನ್ತರವು ಬನ್ನನ್ತಹ ವುಣ್ಡೆಗೆಯನು ಹನ್ನೆರಡು ಪಣ್ಣಾಕದವರೊಳಗೆ ಆರುಂ ಅಳಿಹಲಾಗದು (ಎಕ. VI, ಕಡೂರು. ೧೩೩-೭; 1247 ?). ೬. ಸೇರು ; ಕೂಡು : ಬರೆ ಗರ್ಭಕ್ಕರಿವಸ್ತು ವಾಹನಚಯಂ ಕಯ್ಗೆಯ್ದೆ ವಂದತ್ತು ಪುಟ್ಟೆ ರಣೋತ್ಸಾಹದೆ ಚಕ್ರವರ್ತಿವಿಭವಂ ಪುಟ್ಟಿತ್ತು (ಗದಾಯು. ೧-೧೨); ಸಚರಾಚರಂಗಳು ಪಸರಕ್ಕೆ ಬಾರದಂದು . . . ಸೌರಾಷ್ಟ್ರಸೋಮೇಶ್ವರಾ ಆನು ನೀನು ಇಲ್ಲದಂದು ಅಂದೇನೊ ಇಂದೇನೊ (ಅದವ. ೧-೧); ಆ ಭೂಮಿಗೆ ಬಂದ ತೋಟ ಆರವೆ ಕಮ್ಮಿ ಮನೆ ಸಹಿತವಾಗಿ ಆ ಮೂಱೂರ ಗ್ರಾಮಾನುಮತದಿಂದ . . . ಕೊಟ್ಟರು (ಎಇ XXVII, ೧೬೨-೬೧; 1256). ೭. ದೊರಕು ; ಪ್ರಾಪ್ತವಾಗು ; ಲಭಿಸು : ಬಪ್ಪುದಂ ಕರೆದರ್ತ್ಥಿಪ್ರಕರಕ್ಕೆ ಕೊಟ್ಟು ವಿಮಳಶ್ರೀಕೀರ್ತಿಯಂ ತಾಳ್ದಿದಂ ನಿರುತಂ ಶ್ರೀ ಬುಧಚಂದ್ರದೇವಮುನಿಪಂ ವಾತ್ಸಲ್ಯರತ್ನಾಕರಂ (ಎಕ. VII, ಶಿವಮೊ. ೪-೮೭; 1122); ಎಮಗೀ ಪೆಟ್ಟಿಗೆಗಳೆಂತು ಬಕ್ಕೆಂದು . . . ಸಖಿಯರು ನೆರೆದು ಪೆಟ್ಟಿಗೆಗಳುಮನೊಡೆದು ಚೆಲ್ಲಿದರು ಕನಕ ರತ್ನಾಭರಣಜಾಲಮಂ (ನಂದಿರ. ೧೫-೬೦); ಕುಮಾರನನಿಕ್ಕಿ ಬಹ ರಾಜ್ಯವನು ಸುಡುಸುಡಲೇತಕೆಂದುಂ ನಿಖಿಳಪರಿವಾರ (ಕುವ್ಯಾದ್ರೋ. ೪-೪೭). ೮. ಹುಟ್ಟು ; ಜನಿಸು : ದಾಕ್ಷಾಯಣಿ ತನ್ನ ಬಸಿಱೊಳ್ ಬರ್ಪ ವರಮಂ ಬಯಸಿ ಮೇನೆ ತಪದೊಳಿರಲಿತ್ತಲ್ ದಾಕ್ಷಾಯಣಿ . . . ನಿಜಯೋಗದೊಳ್ ಸಂದು ಮೇನೆಯ ಘನಪುಣ್ಯೋದರದೊಳ್ ಪೊಕ್ಕು ಕರುಣದಿಂ ಬಂದವೆನೆಂದು ಬೆಸಸೆ (ಗಿರಿಕ. ಕಥಾಗರ್ಭಂ. ೧); ಇನಿತಲ್ಲದಂದಿನ ನರಸಿಂಹ ಕಲಿಯುಗದನುಜರ ಸಂಹರಿಸುವೊಡೆ ಮನುಜಾವತಾರದೆ ಬಂದರಸನ ಕಥೆ ವಿನುತವಿಜಯಂ ಕೇಳ್ದರಿಗೆ (ಕಂಪಸಿ. ೧-೧೮). ೯. ತೋಚು ; ತೋರು : ನಿಮ್ಮ ಚಿತ್ತಕ್ಕೆ ಬಹುದ ಮಾಡುವುದು (ಕುವ್ಯಾಕ. ೧-೨೯). ೧೦. ಉಂಟಾಗು ; ಒದಗು ; ಸಂಭವಿಸು : ಸಂಧಿಗಳುಂ ಕೆಲವೆಡೆಯೊಳ್ ಬಂದು ವಿರೂಪಂಗಳಾಗಿ ಸಮನಿಸಿ ಕವಿತಾಬಂಧನದೊಳಾಗೆ ದೋಷಾಬಂಧಗೆ ಶಶಲಕ್ಷ್ಯದಂತೆ ಕಱೆಯಂ ತರ್ಕುಂ (ಕವಿಗಾ. ೧-೯೮); ನೆಱೆಗೊಳೆ ಗಾಡಿ ನೋಟ್ಪ ಬಗೆ ಬರ್ಪುದುಮಾನೆ ದ[ಲ]ಂದು ದಂತಿಯಂ ನಿಱಿಸಿ ಮರಲ್ದು ನೋಡುವುದುಮೆನ್ನುಮನಾ ಸತಿ ಸೋಲದತ್ತ ಮತ್ತೆಱಗಿ ಬಱಲ್ದು ಜೋಲ್ದಳಿಸಿ ನೋಡಿದಳ್ (ವಂಪಭಾ. ೪-೭೬); ಕೊಂದವನು ದುಶ್ಶಾಸನನ ಮಗ ಬಂದುದಪರಾಧವು ಜಯದ್ರಥಗೆ (ಕುವ್ಯಾದ್ರೋ. ೮-೫೯). ೧೧. ಸಾಧ್ಯವಾಗು ; ಶಕ್ಯವಾಗು : ಇಂತು ಬರೆಯಲ್ ಬ್ರಹ್ಮಂಗಮೇಂ ಬರ್ಕುಮೇ (ಆದಿಪು. ೪-೪); ನೀರಟ್ಟೆ ಪೆರ್ಚೆ ನಿಲಲುಂ ಸೈರಿಸಲುಂ ಬಾರದಳ್ಕೆ ತನ್ನಿಂದಂ ತಾನೋರಂತೆ ಕುದಿದು ಮಱುಗುವ ಸಾರಂಗದ ಪೋರಿಯಂದಮಂ ನೆಱೆ ಪೋಲ್ತಂ (ಧರ್ಮಾಮೃ. ೧-೧೫೯); ಹೆಮ್ಮರನಿರ್ದೆಡೆಯಂ

ಱಿಂದಲೆತ್ತಬಹುದೇ ಬಲ್ಬಾರಮಂ (ಸೋಮೇಶ. ೭೬). ೧೨. ಹಿಡಿತಕ್ಕೆ ಸಿಕ್ಕು,—ಸಿಲುಕು : ಬಳಸುವೇಱುವ ಸುಟಿವಗಲ್ಲಿನ್ತಪ್ಪ ಚಾರಣದೋಷಮಲ್ಲದೆ ಪೊಟ್ಟವಟ್ಟಳೆಗೆ ಸಮನಾಗೆ ಗಿರಿಗೆಯ ಕೋಲ್ಮುಟ್ಟಿ ಮಿಗಲುಂ ನೆಲಲುಮಣಮಿಯದಿನ್ತೊನ್ದಳವಿಯೊಳ್ ಬರೆ ಪೊಱಗೊಳಗೆಡದೊಳಂ ಬಲದೊಳಂ . . . ಚಾರಿಸುವೋಜೆಯಂ ರಟ್ಟಕನ್ದರ್ಪ್ಪನನ್ತಾವಂ ಬಲ್ಲಂ (ಎಕ. II, ೧೩೩-೯೨; 982). ಬರು$_1$: ೧. ನಳಿನಲೋಚನ ಬರುತ ಕಂಡನು ವರಸರೋವರವ (ಕುವ್ಯಾದ್ರೋ. ೮-೨); ಅವು ಹಣ್ಣಾದವೆಂದರೆ ಬಿಸಲಿಗೂ ಗಾಳಿಗೂ ಅರಳಿ ಒಳಗಿನ ಹತ್ತಿ ಹೊರಗೆ ಬರುತ್ತದೆ (ಮುಂಬಯಿ. ೪-೨೭). ೯. ನಿನ್ನ ಮನಸ್ಸಿಗೆ ಬಂದ ಹಾಗೆ ಮಾಡು (ರೂಢಿ). ೧೦. ಬಂದದ್ದೆಲ್ಲ ಬರಲಿ ಗೋವಿಂದನ ದಯ ನಮಗಿರಲಿ (ಪುರಂದ. ೨-೭೪ ಪಲ್ಲವಿ).

ಬರುಬರು, ಬರಬರು (ದ್ವಿರುಕ್ತಿ): ಬಂದುಬಂದರುಹನ ನಿಳಯಮಂ ಮುಂದೆ ಕಾಣುತ್ತವೆ ಶಿವಾಲಯವೆಂದು ಮನೆಯಿಂದೆಂದುವುಂ ಹೊಱವಂಟಱಿಯಳಾಗಿ (ಬಸವು. ೫೨-೨೨); ಆ ಮುನೀಂದ್ರರು ಸರಸಿಜಾಕ್ಷನ ದರುಶನಕೆ ಬರಬರಲು [ಪಾಠಾಂ. ಸಂದರುಶನಕೆ ಬರಲು] (ತೊರರಾ. ೧-೮-೧೯); ಬರಬರಲು ತತ್ಕೋಸಲದ ರುಂಹರಿ ವಿರಾಜಿಸಿತಮಮ ಹರಹಿನ ಹರಿವ ಹೊಳೆಗಾಲುವೆಯ ಕೆಱೆದುಂಬುಗಳ ನೀರುಗಳ (ತೊರರಾ. ೧-೯-೫). ಬಂತುಪ್ಪು = (ಉಕ) ತಿಳ್ಳಿ ಮೊದಲಾದ ಆಟಗಳಲ್ಲಿ ಹೊಂದುವ ಸೋಲು : "ತಿರುಗುಪ್ಪು, ಹೊಳ್ಳುಪ್ಪು", "ಬಂತುಪ್ಪು" . . . ಮುಂತಾದ ಗುಲ್ಲುಬೊಬ್ಬೆಗಳು ಆಟಕ್ಕೆ ಬೇರೊಂದು ರುಚಿಯನ್ನು ತಂದಿರುವವು (ನಿರಾಭ. ೯೬). ಬಂದ ದಾರಿಗೆ ಸುಂಕವಿಲ್ಲ = (ಆಲಂ) ಉಪಯೋಗವಿಲ್ಲದಂತಾಗು ; ನಿರರ್ಥಕವಾಗು : ಹೊರಗಿನಿಂದ ಬಂದವರು ೧೫ ದಿನಕ್ಕಿಂತಲೂ ಹೆಚ್ಚಿಗೆ ಇರಲು ಪರವಾನಿಗೆ ಇಲ್ಲದ್ದರಿಂದ ನಾನು ಶಕ್ಯವಿದ್ದ ಮಟ್ಟಿಗೆ ಕೆಲವು ಸ್ಥಳಗಳನ್ನಷ್ಟೇ ನೋಡಿಕೊಂಡು "ಬಂದ ದಾರಿಗೆ ಸುಂಕವಿಲ್ಲವೆಂಬಂತೆ" ಹಾಗೇ ಹಿಂದಿರುಗಿದೆನು (ಕೈಲಾಸ. ೪೮); ಇದನ್ನು ಕೇಳಿಕೊಂಡು ವೈದ್ಯನು ಬಂದ ದಾರಿಗೆ ಸುಂಕವಿಲ್ಲದೆ ಹೋಗಬೇಕಾಯಿತು (ಭಜ್ಯೋಶಿ. ೧೧೩). ಬಂದ ದಾರಿ ಹಿಡಿ = (ಆಲಂ) ೧. (ಬಂದ ಕೆಲಸವು ಪೂರೈಸದೆ) ಮರಳು ; ವಾಪಸ್ಸಾಗು : ಹುಡುಗಿಯರೆಲ್ಲ ಬಂದ ದಾರಿ ಹಿಡಿದು ಹಿಂದೆ ಹೋದರು (ಕಾಲೂರ. ೧೦. ಕಥಾಸಾರ). ೨. ಸಾಯು ; ಮರಣವನ್ನು ಹೊಂದು: ಅವು ಕ್ರಮೇಣ ಹೊಟ್ಟೆಗಿಲ್ಲದೆ ನರಳಿ ಗೋತ ಹೊಡೆಯುತ್ತಿದ್ದುವು. ಈ ರೀತಿ ಐದು ಮಕ್ಕಳು ಬಂದ ದಾರಿ ಹಿಡಿದಿದ್ದುವು (ಪುನರು. ೭). ಬಂದ ಬರವು = ಆಗಮಿಸಿದ ಕಾರಣ : ಬಂದ ಬರವಾವುದೆಲ್ಲಿಂ ಬಂದಿರ್ ಭವದೀಯನಾಮಮೇನ್ (ಶಾಂತಿಪು. ೨-೧೯). ಬರಗೊಡು, ಬರಗುಡು = ೧. ಆಗಮಿಸಲು ಅವಕಾಶ ಮಾಡಿಕೊಡು ; ಬರಲು ಬಿಡು : ಮಗಳ ಗಂಡನ ಕೂಡೆ ಮಹದಾದಿ ದೈತ್ಯ ಜಗಳಕ್ಕೆ ಬರಗೊಡೆನೆನುತ ನೆಗಳಾನೆ ಮಿನ್ನಳನೊಳಕೊಂಡು ಬಂದು ಪೇರಗಳಾದುದಬ್ಧಿ ದ್ವಾರಕೆಗೆ (ಮೋಹತ. ೩-೫). ೨. ಉಂಟಾಗಲು ಅವಕಾಶ ಕೊಡು ; ಒದಗಲು ಆಸ್ಪದ ನೀಡು : ನಮ್ಮ ಕಡೆಗೆ ಜೀನಸು ಕಳುಹಿಸಬೇಡಿರೆಂದು ನಮ್ಮಿಂದ ಹೇಳಿಸಿಕೊಳ್ಳುವ ಪ್ರಸಂಗ ಮಾತ್ರ ಬರಗೊಡಬಾರದು (ಮುಂಬವ್ಯಾ. ೪); ದೇಶಾಧಿಪ ಕೃಷ್ಣರಾಯಂಗೆ ಖಳರಿಂದ ಮೋಸವ ಬರಗುಡೆನೆಂದು ಶೇಷ ಮಂಡಳಿಸಿದಂದದಿ ವಜ್ರದಾಳ್ವೇರಿ ಲೇಸಾದುದು (ಮೋಹತ. ೩-೮). ಬರತೆಗೆ, ಬರೆತೆಗೆ = ೧. ಹತ್ತಿರ ಬರುವಂತೆ ಸೆಳೆದುಕೊಳ್ಳು,—ಎಳೆ : ಬರತೆಗೆದುದೊ ನೃಪನ ಗುಣೋತ್ಕರಮೆನೆ ಕಟುಪಲ್ಕೆ ಕಡೆಯ ಬಾಗಿಲ್ವಾಡಂಬರೆಗಂ ಬಂದುದು ಕಾದಂಬರಿ ಪೊಱತಾಗಱಿಳ ಕನ್ಯಕಾನಿಕುರುಂಬಂ (ಕಾದಂಉ. ೧೬೯); ಸುತೆಯಪ್ಪುದನಱಿದು . . . ಮನದೊಳ್ ಲೋಕತ್ರಿತಯಮನಾಳ್ದಂತೆ ವಣಿಕ್ಪತಿ ಬರತೆಗೆದಪ್ಪಿಕೊಂಡು . . . ಪೇಟ್ಟುದುಂ (ಧರ್ಮಾಮೃ. ೩-೨೪೦). ೨. ಪಕ್ಕಕ್ಕೆ ಸರಿಸು ; ಓರೆಮಾಡು : ಅಳಿಮಾಲಾಕೇಶಮಂ ಮೆಲ್ಲನೆ ಬರತೆಗೆದಬ್ಬಾನನಾಮೋದಮಂ ಪೀರ್ದು ಲತಾಂಗಾಲಿಂಗಮಂ ಸಂಗಳಿಸಿ . . . ನಿಚ್ಚಂ ವನಶ್ರೀಗೊಲವಂ ಮಾಡುತ್ತುಮಿರ್ಕುಂ ಚತುರವಿಟನ ವೋಲ್ ದಕ್ಷಿಣಾಶಾಸಮೀರಂ (ಜಗವಿ. ೯-೯೧). ಬರಪಾರ್, ಬರವಾರ್, ಬರವಾರು = ಆಗಮನವನ್ನು ನಿರೀಕ್ಷಿಸು ; ಬರವನ್ನು ಎದುರುನೋಡು : ಪ್ರಿಯೆಯ ಬರಪಾರ್ವವೊಲಪ್ರಿಯಗಗನಚರೇಂದ್ರ ರುಂದ್ರಸೇನೆಯ ಬರಪಾರ್ವಯ ಮೂರ್ತಿಯುಮಂ ನಯಮೂರ್ತಿಯುಮಂ ಪೋಲ್ವರನಪಾರಪೌರುಷಪರರಂ . . . ಕಂಡು (ಶಾಂತಿಪು. ೩-೭೫); ಬರಪಾರದೆ ದೂದವಿಯರ ಹರಿಸದೆ . . . ಮನವೊಲ್ಲಾಗಳ್ ನೆರೆಯಲ್ ದೊರೆಕೊಳ್ವ ರತಮೆ ಸಂಕಲ್ಪರತಂ (ಕಾದಂಉ. ೩೧೮); ಪೊಟಲ್ಗಾಂ ಪೋದಪೆಂ ಭೋಜಭೂಭುಜನೆನ್ನಂ ಬರವಾರ್ಗುಮೆಂದು ಸರಥಂ ಬೀಟ್ಕೊಂಡು ಪೋದಂ (ಜಗವಿ. ೫-೧೧೪); ಘನಸಮಯಕ್ಕೆ ಬರ್ಪನೆನೆ ತಾಂ ಬರವಾರುತುಮಿರ್ಪುದೆಂದು ಮೆಲ್ಲನೆ ಪಲವಂದದಿಂ ನಿಲಿಸಿ ಮತ್ಪತಿ ಪೋಗೆ (ರಸರ. ೩-೧೫೮). ಬರಬರ = ಕ್ರಮವಾಗಿ ; ಕ್ರಮೇಣ : ಬರಬರ ಭಕ್ತಿಯರೆಯಾಯಿತ್ತು ಕಾಣರಣ್ಣಾ ಮೊದಲ ದಿನ ಹಣೆ ಮುಟ್ಟಿ ಮಱುದಿನ ಕೈಯ ಮುಟ್ಟಿ ಮೂಱೆಂಬ ದಿನಕ್ಕೆ ತೂಕಡಿಕೆ ಕಾಣರಣ್ಣಾ (ಬಸವ. ೨೨೦); ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ . . . ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ (ಬಸವ. ೮೯೨). ಬರಬರುತ್ತ, ಬರಬರುತ್ತೆ, ಬರುತ್ತಾ ಬರುತ್ತಾ = ೧. ಕ್ರಮವಾಗಿ ; ಕ್ರಮೇಣ : ಅಡವೀಕುರಿಗಳು ಮನುಷ್ಯರಿಗೆ ಮೊದಲು ಹೆದರಿದಾಗ್ಯೂ ಬರಬರುತ್ತ ಈಲಾಗುತ್ತವೆ (ಮುಂಬಯಿ. ೩-೧೦); ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೆಯಾಯಿತು(ಗಾಡೆ). ೨. ಆಗಮಿಸುತ್ತಿರಲು ; ಬರುತ್ತಿರುವಾಗ : ಅಡವಿಯಲ್ಲಿ ಒಂದು ನರಿಯಾಹಾರಂಬಡೆಯದೆ ಬರಬರುತ್ತೆ ಒಂದು ಸತ್ತ ಎತ್ತಂ ಕಂಡು (ಪಂಚತಂ. ೧೯-೬). ಬರಮಾಡಿಕೊಳ್ಳು = ಆಗಮನವನ್ನು ಬಯಸು ; ಸ್ವಾಗತಿಸು : ಇಂದುಗತಿಯು ಜನಕನನ್ನು ಒಳ್ಳೇ ಆದರದಿಂದ ಬರಮಾಡಿಕೊಂಡು ತನ್ನ ಮನೋಗತವನ್ನು ತಿಳಿಸಿದನು (ಸಾಹಿಸ. ೮೮); ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಬರಮಾಡಿಕೊಂಡು . . . ಈ ಲೇಖಕನಿಗೆ ಪ್ರೋತ್ಸಾಹ ನೀಡಲೆಂದು ಆಶಿಸುತ್ತೇನೆ (ಸಂಶೋಧ. XI, ಅರಿಕೆ). ಬರಮಾಡು = ಬರುವಂತೆ ಮಾಡು ; ಕರೆಸಿಕೊಳ್ಳು : ಮಧ್ಯೆ ಮತ್ತಾರೋ ಪ್ರವೇಶಿಸಿದುದರಿಂದ ಆತನಿಗೆ ನಾನು ಬರಮಾಡಿದ ಕಾರಣವನ್ನು ತಿಳಿಸಲಾಗಲಿಲ್ಲ (ರೂಢಿ). ಬರವೇಱ್, ಬರಂಪೇಳ್, ಬರಪೇಳು = ಬರಬೇಕೆಂದು ತಿಳಿಸು : ಆ ವಧೂವರರಂ ಪೋ ಬರವೇಱೆಂಬಂತಿರ್ದುದು ಸುರವಾರಸ್ತ್ರೀವಿಲಾಸಪರಿಣಯನಗೃಹಂ (ಆದಿಪು. ೮-೧೯); ಅಭಿವನಶ್ರೀಸ್ಥಳವನೆ ಮಾಡಿ ಕಪಿಲಸಿದ್ಧಮಲ್ಲಿಕಾರ್ಜುನದೇವನೆ ನೆಲಸಿ ನಿಂದು ಪುಂಣ್ಯ(ಪುಣ್ಯ)ಪಾಪಂಗಳಂ ಬರಂಪೇಳ್ದು [ಬೆ]ಸಂ ಪೇಳುತ್ತವಿರಲು (ಎಇ XXIII, ೧೯೪-೧೦; 1265); ತೆಗೆಸು ದೊದ್ದೆಯನುರವಣಿಸದಿರಿ ವಿಗಡಸುಭಟರು . . . ಭೀಮಾರ್ಜುನರ ಬರಪೇಳು (ಕುವ್ಯಾದ್ರೋ. ೧-೫೩). ಬರಸೆಳೆ, ಬರೆಸೆಳೆ = ಹತ್ತಿರಕ್ಕೆ ಬರಮಾಡಿಕೊಳ್ಳು : ಇಳಿದು ರಥವನು ಸಂಜಯನ ಬರಸೆಳೆದು ತಕ್ಕೈಸಿದರು (ಕುವ್ಯಾಗ. ೪-೨); ಬರಸೆಳೆದಪ್ಪಿ ಬೈದೊಡೆ ತೊಟ್ಟ ತೊಡಿಗೆಯ ಮುಱಿದಿಟ್ಟೆ ಗಡ ದೆಸೆದೆಸೆಗೆ (ಕುರಾಸಾಂ. ೩೫-೧೦೧); ತರುಣಫಣಿರಮಣಿಯಂ ಬಿಡದೆ ಪಿಡಿದುರುಳೆ ಬರೆಸೆಳೆವ ಸೋಗೆಯಂತೆ ಗೋಣ್ ತೆಗೆಯೆ ಬಿಟ್ಟು ಲಂಬಿಸುವ ಸೋರ್ಮುಡಿಯೊಳಂ (ವರ್ಧಪು. ೯-೬೦ ವ); ಮೃಡನು ಸೌಂದರನ ಬರೆಸೆಳೆದಪ್ಪಿ ಸನ್ನಿಧಿಯೊಳೆಡೆಗೊಟ್ಟು ಕುಳ್ಳಿರಿಸಿದಂ (ಸೌಂದಪು. ೬-೨೭). ಬರಹೋಗು, ಬರುಹೋಗು = ಬಂದು ಹೋಗು ; ವಾಪಸ್ಸಾಗು : ಕುದುರೆಯ ಮೇಲೆ ಇಲ್ಲವೆ ರಥಗಳೊಳಗೆ ಕೂತುಕೊಂಡು ಬರಹೋಗುವವರು (ಮುಂಬಯಿ. ೫-೩೦೦); ಬರುಹೋಗುವ ಪಾಂಥಸ್ಥರು ಇಳುಕೊಳ್ಳುವುದಕ್ಕಾಗಿ (ಮುಂಬಯಿ. ೪-೧೫೧). ಬರೆಪೀರ್ = ಚೆನ್ನಾಗಿ ಹೀರು ; ಅತಿಶಯವಾಗಿ ಪಾನಮಾಡು: ದರದಳಿತಕಮಲಕುಟ್ಮಳಪರಿಮಳವೆನಿಸಿರ್ದ ಸಹಜಮುಖಸೌರಭಮಂ ಬರೆಪೀರುತಿರ್ಪುದೆಂಬಂತಿರೆ ನಾಸಿಕ ನೀಳ್ಪುವೆತ್ತುದೀ ಬಾಲಕನಾ (ಕಾದಂಪು. ೪೨೧); ತರುಣಿಯ ಮುಖೇಂದುಕಮಲಾಕರದೊಳ್ ದೃಗ್ಗೋಳಕಾಂಕ ನೀಳಾಬ್ಜಮಳಂಕರಿಸೆ ವಿಟರಾಹುಭೃಂಗಂ ಬರೆ[ಪಾಠಾಂ. ಪರಿ]ಪೀರ್ದತ್ತಧರಚಂದ್ರಿಕಾಪರಿಮಳಮಂ (ಕಾವ್ಯಾವ. ೬೯೪). ಬರೆವರೆ = ಆಗಮಿಸುತ್ತಿರಲು ; ಬರುತ್ತಿರಲು : ದುರ್ಯೋಧನಂಗಂ ಭೀಮಂಗಮನುವರಂ ಪೊಣರ್ದಿರ್ದುದರಸನಂ ಬೇಗಂ ಪೋಗಿ ಕೆಯ್ಯೊಳ್ವಮೆಂದು ಬರೆವರೆ (ಪಂಪಭಾ. ೧೨-೧೧೮ ವ); ಪೆಣದಿನಿಗಳ ತಂಡಂ ಬಲ್ವೆಣಗಳನಱಸುತ್ತುಮಲ್ಲಿ ಬರೆವರೆ (ಗದಾಯು. ೪-೧೫); ಅಲ್ಲಿಂ ತಳರ್ದು ಮಧುಲಕ್ಷ್ಮೀಮಧುರತರವಿಳಾಸಮಂ ಬಗೆಗೊಂಡು ಪೊಗಳುತಂ ಬರೆವರೆ (ರಾಜಶೇ. ೧೦-೩೧ ವ). ಬಾಗರೆ = ಬಾಯೆಂದು ಕರೆ ; ಆಮಂತ್ರಿಸು : ಬಾಲನಂ ಬಾಗರೆದಳೊಡನಂಬಿಕೆ (ವೆಂಕಾರಾ. ೧-೧೦-೬); ಎದ್ದವರಿಗೆ ನಡಿಗೆ ಸ್ವಾಗತವೀಯುತ್ತಿತ್ತು.

ಏಳದವರಿಗೆ ಪಂಚರಸಾಯನಗಳು ಬಾಗರೆಯುತ್ತಿದ್ದವು (ರಕ್ತಧ್ವ. ೩೩೫).

[ದೇ. ॥ ತಮಿ. ಮಲ. ವರು; ತುಳು. ಕೊಡ. ಬರ್; ತೆಲು. ವಚ್ಚು; ಕೋಲಾ. ನಾಯ್ಕಿ, ಗಡಬ. ವರ್; ಪರ್ಜಿ. ವೆರ್; ಮಲ್ತೊ. ಬರೆ; ತೊದ. ಪೊರ್]

ವರ$_1$ (ಗು). ೧. ಬಯಸತಕ್ಕ ; ಅಪೇಕ್ಷಣೀಯವಾದ. ೨. ಶ್ರೇಷ್ಠವಾದ ; ಉತ್ತಮವಾದ : ಪಿರಿಯರ ಮಗಳೆಂದು ಬಿಟ್ಟೆಗಲಿತೆನೆಂದು ವರರೂಪವತಿ ತಾನೆಂದು . . . ಬಱಿದೆ ಬೆಱೆಯದನುಸರಿಸುವುದಾತ್ಮವಲ್ಲಭನ(ಹದಿಬ. ೩-೩೧); ವರತಪಸ್ವಿನಿಯಾಗಿ . . . ಎಲೆವನೆಯೊಳಿರುತಿಹಳಂತೆ! (ಚಿತ್ರಾಂಗ. ೭೨-೧೯೮೭). (ನಾ). ೩. ಬಯಕೆ ; ಅಪೇಕ್ಷೆ. ೪. ಶ್ರೇಷ್ಠವಾದುದು ; ಉತ್ತಮವಾದುದು. ೫. ಆರಿಸುವುದು ; ಆಯ್ಕೆ. ೬. ಬೇಡಿಕೊಳ್ಳುವಿಕೆ ; ಅನುಗ್ರಹಯಾಚನೆ. ೭. (ದೇವರು, ಗುರುಹಿರಿಯರುಗಳಿಂದ ದೊರಕುವ) ಇಷ್ಟಾರ್ಥದ ಪೂರೈಕೆ ; ಅನುಗ್ರಹ : ಆಳ್ದನೊಲ್ಲದ ಆಳಿನಲ್ಲಿ ಸಿರಿ ತೊಲಗಿದ ಅರಸಿನಲ್ಲಿ ವರವಿಲ್ಲದ ದೈವದಲ್ಲಿ ಫಲವೇನೊ (ಬಸವ. ೫೬೪); ಅರಿದ ಬೇಡಿದೆ ತನಗೆ ನೂಕದ ವರವ ವಚನಿಸಿ ಮಾಡದಿಹ ಬಾಹಿರರು ನಾವಲ್ಲ (ಕುವ್ಯಾದ್ರೋ. ೧-೪೦); ದೇವರು ವರ ಕೊಟ್ಟರೂ ಪೂಜಾರಿ ಕೊಡ (ಗಾದೆ). ೮. ದಾನ ; ಧರ್ಮ. ೯. ಉಡುಗೊರೆ. ೧೦. ವರದಕ್ಷಿಣೆ. ೧೧. ಮದುವೆಯಾಗುವ ಹುಡುಗ ; ಮದುಮಗ : ನೃಪಕನ್ನಿಕೆಗೆ ವರನಾರು ಲಗ್ನವದೆಂದು (ಕುವ್ಯಾಆ. ೧೧-೮); ವರನ ವಿಚಾರದ ಮಾತಂ ಪಿರಿಯರ್ ಪೇಳ್ವಾಗಲಾವಗಂ ಕನ್ನಿಕೆಯರ್ ಗುರುಲಜ್ಜಾನತವದನೆಯರುರೆ ಸೂಚಿಪರಲ್ತೆ ತಮ್ಮ ಮನದಿಂಗಿತಮಂ(ಧ್ವನ್ಯಾಲೋ. ೨೪೪). ೧ ೨. ಗಂಡ ; ಪತಿ : ರೇವಗವುಂಡನ ತಂಗೆ ಮೈಲಮಂ ಗೋಮಿನಿಯನ್ನಳಾಕೆಯ ವರಂ ಹರಿಯಂನನೆನಿಪ್ಪ ಮಗ್ಗಣಂ (ಸೌಇಇ. IX - i, ೨೪೯-೩೫; 1147). ೧೩. ಕುಂಕುಮಕೇಸರಿ. [ಸಂ.]

-ವರ$_2$ 'ವರಂ' ನೋ.

-ವರಂ, - ಬರ$_4$,- ಬರಂ, - ವರ$_2$ (ಪ್ರ). ವರೆಗೆ, ತನಕ, ಪರ್ಯಂತ ಎಂಬ ಅವ್ಯಯಾರ್ಥವನ್ನು ಸಾಧಿಸುವ ಒಂದು ಸೀಮಾರ್ಥಪ್ರತ್ಯಯ : ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ (ಕವಿರಾ. ೧-೩೬); ಮನ್ಮಥನ ಮೋಹನಯಂತ್ರಮಿದಪ್ಪುದಲ್ಲದಂದಿನಿತುವರಂ ಮನಂಗೊಳಿಸದು (ಆದಿಪು. ೪-೪೧); ಅನ್ನೆಗಮಿನ್ನೆಗಮೆನ್ನೆಗಮೆನ್ನದೆ ಕಡೆಗುಂಟು ಲೋಪಮಿದಿರೊಳ್ ಸೀಮೋತ್ಪನ್ನಂ ವರಂ ವರೆಗಮಿರೆ (ಶಮದ. ೨೪೮). 'ಅನ್ನೆವರಂ', '-ವರ$_2$', '-ವರೆಗಂ' ಪರಾ. -ಬರ$_4$: ಅಲ್ಲಿಂಬರ ತೋಟವೊಳಗಾಗಿ ಪಡುವಣ ಮೇರೆ ಅಡ್ಡಗಟ್ಟಲಿಂ ಬರ ತೆಂಕಣ ಮೇರೆ (ಸೌಇಇ. IX - i, ೨೭೩-೯೫; 1179); ನಾವೀಸು ದಿನಂಬರ ನಿನ್ನ ಈಸು ವಿವೇಕಿಯೆಂದಱಿಯೆವು (ಕುರಾಸಾಂ. ೧-೪೪). -ಬರಂ : ಪಂಚಮಹಾಪಾತಕನೆಮ್ಮನೇಱಿಂಟುವರುಷಂಬರಂ ಪಗೆವರಂ ಬಗೆವಂತೆ ದಂಡಿಸಿದಂ (ವಡ್ಡಾರಾ. ೪-೧೯); ನರಲೋಕಂಬರಮುಣ್ಮೆ ಪೊಣ್ಮಿದ ಪಯಃಪೂರಂಗಳಿಂದಂ . . . ವಿಶ್ವಾವನೀಭಾಗಮುಂ ನರನಾರೀಜನಮುಂ ಪವಿತ್ರತರಮಾಯ್ತು (ಆದಿಪು. ೭-೧೦೧); ಕನ್ನಮಯ್ಯಂಬರಮಾಗಂ ಸುಕವಿ ಬಗೆವೊಡಿನ್ನುಂ ಮುನ್ನುಂ (ಪಂಚತಂ. ೫-೮). -ವರ$_2$: 'ಅನ್ನೆವರ' ಪರಾ. [ದೇ. ॥ ತಮಿ. ತೆಲು. ವರ]

ವರಂಗೊಡು (ಕ್ರಿ). ಅನುಗ್ರಹಮಾಡು ; ವರವನ್ನು ಕೊಡು : ಮಾತಾಡಿದಂದರ್ಧರಾಜ್ಯದ ಪೆಂಪಂ ದಯೆಗೆಯ್ದವರ್ ಬೆಸಸಿದಂದಾಗಳ್ ವರಂಗೊಟ್ಟವರ್ . . . ಭೂಪರ್ ಧರಾಚಕ್ರದೊಳ್ (ಕಾದಂಪೂ. ೫೬೯).

[ವರ$_1$ + ಕೊಡು$_1$]

ವರಂಡ (ನಾ). ೧. ಮನೆ ಮೊದಲಾದ ಕಟ್ಟಡಗಳ ಮುಂದುಗಡೆ ಕಂಬಗಳ ಮೇಲೆ ಚಾವಣಿಯನ್ನು ಕೂರಿಸಿ ಮಾಡಿರುವ ಕೈಸಾಲೆ ,—ಮೊಗಸಾಲೆ. 'ವರಾಂಡ' ಪರಾ. ೨. ಗುಂಪು ; ಸಮೂಹ. ೩. ಮುಖದ ಮೇಲೆ ಏಳುವ ಗುಳ್ಳೆ ; ಮೊಡವೆ. [ಸಂ.]

ವರಂಬಡೆ (ಕ್ರಿ). (ದೇವರು, ಗುರುಹಿರಿಯರು ಮೊದಲಾದವರಿಂದ) ಇಷ್ಟಾರ್ಥವು ನೆರವೇರುವಂತೆ ಆಶ್ವಾಸನೆಯನ್ನು ಪಡೆ ; ವರವನ್ನು ಪಡೆ : ವರಂಬಡೆದ ಸಂತಸಂ ಮನದೊಳಾಗಲ್ . . . ಗರ್ಭಮಂ ತಾಳ್ದಿ (ಪಂಪಭಾ. ೧-೮೬); ಪದ್ಮಾವತೀದೇವಿಯಂ ಭಕ್ತಿಪೂರ್ವ್ವಕಮಾಹ್ವಾನಂಗೆಯ್ದು ವರಂಬಡೆದು (ಎಕ. VII, ಶಿವಮೊ. ೪-೨೯; 1122). [ವರ$_1$ + ಪಡೆ$_1$]

ವರಕ (ನಾ). ೧. ಹೊದಿಕೆ ; ಆವರಣ. ೨. ಬೇಡಿಕೆ ; ಕೋರಿಕೆ. ೩. ಬೇಡುವವನು ; ಅರ್ಥಿ. ೪. ಮದುವೆಗಾಗಿ ಹೆಣ್ಣನ್ನು ಕೇಳುವವನು. [ಸಂ.]

ವರಕರ (ನಾ). ವರವನ್ನು ಕೊಡುವ ಕೈ ; ಅನುಗ್ರಹಹಸ್ತ : ಹರಿಯ ವರಕರದನುಗ್ರಹನಿರೂಪಣಂ ಗುರುಕರಾಬ್ಜದಿಂ (ವಸ್ತವಂ. ೧-೩). [ಸಂ.]

ವರಕವಿ (ನಾ). ಶ್ರೇಷ್ಠನಾದ ಕವಿ : ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋಱಬಾರದು (ಕನಕ. ೩೩-೧). [ಸಂ.]

ವರಕು$_1$, ವರಖು, ವರ್ಖ (ನಾ). ಬೆಳ್ಳಿ , ಬಂಗಾರ ಮುಂತಾದ ಲೋಹಗಳ ಬಹುಸೂಕ್ಷ್ಮವಾದ ತಗಡು ,—ರೇಕು : ೧೦ನೇ ಲಿಯೋ ಎಂಬ ಧರ್ಮಾಧ್ಯಕ್ಷನು ಒಂದು ಸಮಾರಂಭಕಾಲದಲ್ಲಿ ಒಬ್ಬ ಹುಡುಗನ ಮೈತುಂಬ ಬಂಗಾರದ ವರಕು ಹಚ್ಚಿಸಿದನಂತೆ (ಮುಂಬಯಿ. ೫-೧೭೦); ಆಭರಣಗಳನ್ನು . . . ಚಿನ್ನದ ವರಕಿನ ಜತೆಗೆ ಕನ್ನಡಿ ಚೂರುಗಳ ಆಕಾರಗಳನ್ನು ಕತ್ತರಿಸಿ ಅಂಟಿಸಿ ಮಾಡುತ್ತಿದ್ದರು (ಯಕ್ಷಬ. ೧೫೭). ವರಖು : ವರಖು (ಭಂಗಾರ ವ ಬೆಳ್ಳಿ ವರ್ಣದ್ದು) (ಮುಂಬವ್ಯಾ. ೧೭೫). ವರ್ಖ : ಪುಡಿಗಳ ಮೇಲೆ ಕಿಮ್ಮತ್ತು ಆಗತಕ್ಕ ಜೀನಸಗಳು . . . ಭಂಗಾರ ಮತ್ತು ಬೆಳ್ಳಿ ವರ್ಖ (ಮುಂಬವ್ಯಾ. ೧೭೬); ಬಂಗಾರದ ವರ್ಖ ಹಚ್ಚಿದ ತ್ರಯೋದಶಗುಣಯುಕ್ತ ತಾಂಬೂಲವನ್ನು ಇಟ್ಟಿದ್ದರು (ಮಂಜುಕ. ೨೧). 'ರೇಕು' ಪರಾ.

[<— ಅರ. ಹಿಂ. ವರಕ್; ಮರಾ. ವರಖ್./ ತುಳು. ವರಕ್, ವರಕ; ತೆಲು. ವರಕು]

ವರಕು$_2$ (ನಾ). (?): ಸಾಣೆ ವರಕು ಮೀಟುಗಳಿಂ ಹದಗೊಳಿಸಿ (ವಿವೇಕ. ೨೩೭). [?]

ವರಖು 'ವರಕು$_1$' ನೋ.

ವರಗುಣಿ (ನಾ). -ಉತ್ತಮವಾದ ಗುಣಗಳುಳ್ಳವನು : ಜಗವಯ್ದೆ ಬಂಣಿಕುಂ ವರಗುಣಿ ದಂಡನಾಥಮುಖಮಂಡನನಂ ವಿಭು ನಾಗದೇವನಂ (ಕಇ, IV, ೧೩-೪೪; 1165). [ಸಂ. ವರಗುಣಿನ್]

ವರಗುರು (ನಾ).೧. ಶ್ರೇಷ್ಠನಾದ ಗುರು.೨. ಹಿರಿಯರಲ್ಲಿ ಹಿರಿಯನಾದವನು ; ಪರಮಗುರು : ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ ಪರಮಕಾರಣಿಕ (ಬಸವ. ೫೬೪). [ಸಂ.]

ವರಚಕ್ರಿ (ನಾ). ೧. ಶ್ರೇಷ್ಠವಾದ ಚಕ್ರಾಯುಧವುಳ್ಳವನು ; ವಿಷ್ಣು. ೨. ಚಕ್ರವಾಕಪಕ್ಷಿಗಳನ್ನು ಒಳಗೊಂಡುದು. ೧, ೨: ಹಂಸಲೋಚನಶೋಭಿಯಂತೆ ವರಚಕ್ರಿ ವರಚಕ್ರಿಯವೊಲು ಅನಿಮಿಷಾಶ್ರಯಮೂರ್ತಿಯೆನೆ . . . ರಂಜಿಸುವ ಕಾಸಾರಮಂ ಸರ್ವಮಂಗಳೆ ಕಂಡಳು (ಜೈಮಿಭಾ. ೧೫-೧೨). [ಸಂ. ವರಚಕ್ರಿನ್]

ವರಟ (ನಾ). ೧. ಹಂಸ. ೨. ಒಂದು ಬಗೆಯ ಹುಳು ; ಕಣಜ ; ಕಡಂದುರು. ೩. ಒಂದು ಬಗೆಯ ಧಾನ್ಯ. ೪. ಮಲ್ಲಿಗೆಹೂವು. [ಸಂ.]

ವರಟೆ (ನಾ). ೧. ಹೆಣ್ಣಂಚೆ ; ಹಂಸೆ : ರಕ್ತಪಂಕರುಹದೊಳಿರ್ಪ ಸದ್ವರಟೆಯಂತೆ . . . ತತ್ಕಮಲಾಕ್ಷಿಯೊಪ್ಪಿದಳ್ (ಉದ್ಭಟ. ೫-೫೬). ೨. ಕಡಜೀರಗೆ ಹುಳು ; ಕಡಂದುರು ; ಕಣಜ. [ಸಂ. ವರಟಾ]

ವರಡ, ವರಾಡ (ನಾ). ೧. ಒಂದು ಬಗೆಯ ತೆರಿಗೆ : ವೊಸಗೆ ಅಸಂತಾಯ ಅಕರ ಅನ್ಯಾಯ ಕಾಣಿಕೆ ಕಡಾಯ ಬಿಟ್ಟಿ ಬಿಡಾರ ಅಸೆ ಅಪ್ಪಣೆ ವರಡ ಸರಡ ಸರ್ವ ಬಾಧಾಪರಿಹಾರವಾಗಿ . . . ಧರ್ಮ್ಮವನು ಮಾಡಿ (ಕಇ. III, ೯-೬೨; 1538). ವರಾಡ : ೧. ಅಪುತ್ರಿಕವಿನಾಮವ ಮಾಡಿಕೊಂಬಲ್ಲಿ ಗ್ರಾಮವರಾಡದಲ್ಲಿ ಅರಮನೆಗೆ ಸಲ್ಲಿಸಿದ್ದುದು (ಎಕ. VIII, ಸಾಗರ. ೫೭-೯; 1562); ನೆರೆವರಿ ವರಾಡ ಕಡ . . . ಪರಿವಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ (ಕೆಳನ್ನ. ೭-೨೯). ೨. ಸಾರ್ವಜನಿಕರಿಂದ ಪಡೆಯುವ ವಂತಿಗೆ ; ಚಂದಾ : ಮೊದಲನೆಯ ವರ್ಷ ನಾವು ಹೊರಗಿನಿಂದ ವಂತಿಗೆ ವರಾಡಗಳನ್ನು ಬಿಡಬೇಕಾದೀತು (ಔದಾಉ. ೧೨೪). [?./ ತುಳು. ಒರಡ, ಒರಾಡ]

ವರಣ (ನಾ).೧. ಸುತ್ತುವರಿಯುವುದು. ೨. ಸುತ್ತಲಿನ ಆವರಣ ,— ಗೋಡೆ. ೩. ಕೋಟೆಯ ಪ್ರಾಕಾರ : "ಪ್ರಾಕಾರಃ, ವರಣಃ, ಸಾಲಃ — ೩ ಕೋಟೆಯ

ಹೆಸರುಗಳು" (ಸಿದ್ಧಾಂತಿ. ೯೯). ೪. ಪೂಜೆ ; ಅರ್ಚನೆ. ೫. ಪೂಜಾದ್ರವ್ಯ ; ಅರ್ಚನೆಯ ಸಲಕರಣೆ : ಭಟ್ಟರೇ ಸನ್ನಿಧಾನಕ್ಕೆ ಹೋಗಿ, ಸಂಕಲ್ಪ ಯಾರ ಹೆಸರಿನಲ್ಲಿ ಆಗಬೇಕು ತಿಳಿದುಕೊಂಡು ವರಣ ತೆಗೆದುಕೊಂಡು ಬನ್ನಿ (ಕೃಷ್ಣಭೂ. ೭೩). ೬. ಪೂಜಾರ್ಹನಾದ ವ್ಯಕ್ತಿ ; ಪೂಜ್ಯ : ಜನಕಂ . . . ದಾಮೋದರಂ ಪೆತ್ತ ತಾಯ್ ವಿನಯಾಳಂಕೃತೆ ವೀರಕಬ್ಬೆ ವರ[ಣಂ] [ಪಾಠಾಂ. ನಂ] ಶ್ರೀವೀರಭಟ್ಟಾರಕಂ (ವರ್ಧಮಾ. ೧-೨೩). ೭. ಆರಿಸುವಿಕೆ ; ಆಯ್ಕೆ : ನೆರೆದಿದ್ದ ಎಲ್ಲರೂ ಕೃಷ್ಣನ ವರಣಕ್ಕೆ ಅಭಿಮತರಾಗಿ ಹರ್ಷದಿಂದುದ್ಘೋಷಿಸಿದರು (ಭೀಷ್ಮಚ. ೧೫೮). 'ವರಿಸ್ಸು' ಪರಾ. ೮. ಮದುವೆಗೆ ಕನ್ಯೆಯನ್ನು ಆರಿಸುವಿಕೆ. ೯. ಬೇಡಿಕೆ ; ಯಾಚನೆ. ೧೦. ಒಂದು ಬಗೆಯ ಮರ. ೧೧. ಸಂಕ ; ಸೇತುವೆ. ೧೨. ಒಂಟೆ ; ಉಷ್ಟ್ರ. ೧೩. ಹೊಲಗದ್ದೆಗಳ ಬದು, —ಒಡ್ಡು : ವರಣವೆಂದರೆ ಗದ್ದೆಗಳ ತೆವರು (ಹಿಂದಸಾ. ೯೪). 'ವರಣಭೇದ' ಪರಾ. ೧೪. ಹಣದ ಭಾಗ, —ಪಾಲು (?) : ಕಟ್ಟೆಯ ಸೋಮನಾಥದೇವರಿಗೆ ನಂದಾದೀವಿಗೆಗಂ ಧೂಪಕ್ಕಂ ವಡ್ಡರಾವುಳದಲೂ ಹೆಜ್ಜುಂಕದಲೂ ತಿಂಗಳಿಂಗೆ ಸಲ್ವ ವರಣಮಂ ಕೊಟ್ಟರು (ಕಇಲ. ೩೭-೪೯-೧೭; 1134).

[ಸಂ.]

ವರಣಭೇದ (ನಾ). ನೀರು ಬಿಡುವುದಕ್ಕಾಗಿ ಗದ್ದೆಯಲ್ಲಿ ಕಟ್ಟಿದ ಒಡ್ಡನ್ನು ಒಡೆಯುವುದು: ಸಂಸ್ಕಾರವೆಂಬ ಕರ್ಮವು ವರಣಭೇದದಂತೆ ಪ್ರತಿಬಂಧಕ ನಿವಾರಣೆಯನ್ನು ಮಾತ್ರ ಮಾಡುವುದು . . . ವರಣವೆಂದರೆ ಗದ್ದೆಗಳ ತೆವರು. ರೈತನು ಗದ್ದೆಗೆ ನೀರನ್ನು ಹಾಯಿಸಬೇಕಾದರೆ ತೆವರನ್ನು ಮಾತ್ರ ತೆಗೆಯುತ್ತಾನೆ. ನೀರು ತನ್ನ ಸ್ವಭಾವದಿಂದಲೇ ಗದ್ದೆಯನ್ನು ಹಾಯುತ್ತದೆ. ಇದೇ ವರಣಭೇದ (ಹಿಂದಸಾ. ೯೪).

[ಸಂ.]

ವರಣಮಾಲಿಕೆ (ನಾ). ಸ್ವಯಂವರ ಸಮಯದಲ್ಲಿ ವರಿಸಿದುದರ ಸಂಕೇತವಾಗಿ ವಧುವು ವರನ ಕೊರಳಿಗೆ ಹಾಕುವ ಹಾರ : ಸಂಯುಕ್ತೆ ಸ್ವಯಂವರೋಚಿತವಾದ ವಸ್ತ್ರಾಭರಣಗಳಿಂದ ಅಲಂಕೃತೆಯಾಗಿ ವರಣಮಾಲಿಕೆಯನ್ನು ಕೈಯಲ್ಲಿ ಹಿಡಿದು ಧಾತ್ರೀಸಮೇತಳಾಗಿ ಸಭಾಮಂಟಪಕ್ಕೆ ಬಂದು ನಿಂತಳು (ಆರ್ಯಕೀ. ೪).

[ಸಂ. ವರಣಮಾಲಿಕಾ]

ವರಣಮಾಲೆ (ನಾ). = ವರಣಮಾಲಿಕೆ : ಭಕ್ತಿಶುಕ್ತಿಯಲಿ ಮುತ್ತುಗಳ ರಚಿಸಿ ಕೋದಿಹೆ ವರಣಮಾಲೆಯಂ (ಚಿತ್ರಾಂಗ. ೩೭-೧೦೧೪). [ಸಂ. ವರಣಮಾಲಾ]

ವರತ್ರೆ (ನಾ). ೧. ಚರ್ಮದ ಪಟ್ಟಿ : ರಥಶಕಟಾದಿಗಳಂ ಲೋಹರಜ್ಜು ವರತ್ರಾದಿಗಳಿಂ ತೆಗೆದು ಕಟ್ಟುವುದು ಆಲಾಪನಬಂಧಂ (ತತ್ತ್ವಪ್ರ. ೨೪೩). ೨. ಆನೆ ಅಥವಾ ಕುದುರೆಯ ತಂಗುಪಟ್ಟಿ : ಒಗೆದಂಭೋದಗಜಕ್ಕಮರ್ತ್ಯಪತಿ ಬೀಸುತ್ತಿರ್ಪ ಮುಕ್ತಾವರತ್ರೆಗಳೋ . . . ಪೇಟೆನೆ ಮಿಂಚುಗಳ್ಮಿರ್ದುದು (ಶಾಂತೀಶ್ವ. ೧೨-೪೨). [ಸಂ. ವರತ್ರಾ]

ವರದ (ಗು). ೧. ಅನುಗ್ರಹವನ್ನು ದಯಪಾಲಿಸುವ ; ಇಷ್ಟಾರ್ಥವನ್ನು ಪೂರೈಸುವ. (ನಾ). ೨. ಅನುಗ್ರಹಿಸುವಂತಹುದು ; ವರವನ್ನು ನೀಡುವಂತಹುದು : ವರದಂ ಪದ್ಮಾಂಕಿತಂ ತೋಳೆರಡು ನಿಶಿತವಜ್ರಪ್ರಭಾಭಾಸುರಂ ತೋಳೆರಡು (ಆದಿಪು. ೧-೭). ೩. ಬೇಡಿದುದನ್ನು ಕೊಡುವವನು ; ವರವನ್ನು ಅನುಗ್ರಹಿಸುವವನು : ಪರಮೇಶ್ವರ ಉಮಾವರ ಹರಿಣಧರಧರ ವರದನಾಗು (ಬಸಪು. ೫೩-೪೬); ವರದನಾದೈ ಶಂಭು ಕರುಣಾಕರ ಹಸಾದವು (ಕುವ್ಯಾಅ. ೨೨-೪೫).

[ಸಂ.]

ವರದಕ್ಷಿಣೆ (ನಾ). ೧. ಮದುವೆಯಲ್ಲಿ ಕನ್ಯಾಪಿತನು ವರನಿಗೆ ಗೌರವಯುತವಾಗಿ ಕೊಡುವ ಧನ. ೨. ಹೆಣ್ಣನ್ನು ತಂದುಕೊಳ್ಳಲು ವರನ ಕಡೆಯವರು ನಿಗದಿಪಡಿಸುವ ಹಣ, ಒಡವೆ, ವಸ್ತು ಮುಂತಾದುವು: ಶ್ರೀಮಂತರ ಮಗ, ಬೇಕಾದಷ್ಟು ವರದಕ್ಷಿಣೆ ಕೊಟ್ಟು ಹೆಣ್ಣು ಕೊಡುತ್ತಾರೆ (ತೇಮೋಡ. ೯೯); ನಾನು ವರದಕ್ಷಿಣೆಗೆ ನನ್ನ ಮಗನನ್ನು ಮಾರಿಕೊಳ್ಳುವವನಲ್ಲ (ಸ್ಮೃತಿಚಿ. ೨೦).

[ಸಂ. ವರದಕ್ಷಿಣಾ]

ವರದಹಸ್ತ (ನಾ). ಅನುಗ್ರಹವನ್ನು ನೀಡುವ ಕೈ: ದೇವಿಯ ವರದಹಸ್ತದಲ್ಲಿದ್ದ ಈ ಪುಷ್ಪವು ತಾನಾಗಿ ಶೇಷೆಯ ತಟ್ಟೆಗೆ ಉರುಳಿತು (ಶಾಂತಲಾ. ೨೫). [ಸಂ.]

ವರದಾನ (ನಾ). ೧. ಬೇಡಿದುದನ್ನು ನೀಡುವಿಕೆ ; ಅನುಗ್ರಹ : ಗೌತಮನ ವರದಾನವು ಉದಂಕನಿಗೆ ದೊರೆಯಲಿಲ್ಲ (ಮಣಿಸ. ೬೩). ೨. ಉತ್ತಮವಾದ ದಾನಗುಣ. ೩. ಉತ್ಕೃಷ್ಟವಾದ ಮದೋದಕ. ೧, ೨, ೩ : ವರದಾನಂ ನತಭದ್ರಲಕ್ಷಣಪದಂ . . . ದೇವ ಗಣಪಂ ರಕ್ಷಿಕ್ಕೆ (ಜಗವಿ. ೧-೫). [ಸಂ.]

ವರದಾನಿ (ನಾ). ಅತಿಶಯವಾದ ದಾನಗುಣವುಳ್ಳ ದೇವತೆ ಅಥವಾ ವ್ಯಕ್ತಿ : ಭಕ್ತರಿಗೆ ಬೇಡಿದ್ದ ಕುಡುವ ವರದಾನಿ ನೀ ನೋಡಯ್ಯ (ಸಮಾವ. ೧೨-೪೫); ಸೂನು ಬದುಕಿದಡಿಂದು ನಿನ್ನಂ ನೋನುವೆವು ಗುಡ್ತವ್ಪೆ ತಾಯ್ವರದಾನಿ ಎನ್ನದೆ (ಬಸಪು. ೪೮-೧೯). [ಸಂ. ವರದಾನಿನ್]

ವರದಿ (ನಾ). ೧. ಸುದ್ದಿ ; ವರ್ತಮಾನ ; ಸಮಾಚಾರ. ೨. ನಡೆದ ಸಂಗತಿ, ನೆರವೇರಿಸಿದ ಕಾರ್ಯಕ್ರಮ ಅಥವಾ ನಡೆಸಿದ ತನಿಖೆ ಮುಂತಾದ ವಿವರಗಳ (ಲಿಖಿತ) ನಿರೂಪಣೆ, —ಹೇಳಿಕೆ ; ರಿಪೋರ್ಟು : ಪೋಲೀಸಠಾಣೆಗೂ ವರದಿ ಕೊಡಲಾಯಿತು (ಶ್ಯಾಮತಾ. ೧೫); ಬಾಹ್ಯಪರೀಕ್ಷೆಯ ವರದಿ . . . ಇಪ್ಪತ್ತೇಳು ಪ್ಯಾರಾಗಳನ್ನೊಳಗೊಂಡಿತ್ತು (ವುನರು. ೮೮).

ವರದಿಮಾಡು = ವಿಚಾರವನ್ನು ತಿಳಿಸು ; ಸುದ್ದಿಯನ್ನು ಕೊಡು : ಯುಧಿಷ್ಠಿರನು ಕಳುಹಿಸಿದ್ದ ಬೇಡನು . . . ದುರ್ಯೋಧನನ ಆಡಳಿತಕ್ರಮವನ್ನು ಅವನಿಗೆ ವರದಿ ಮಾಡುವ ಸನ್ನಿವೇಶದಿಂದ ಕಾವ್ಯವನ್ನು ಪ್ರಾರಂಭಿಸಿದ್ದಾನೆ (ಭಾರದ. ೪೫೨); ಪೋಲೀಸರಿಗೆ ವರದಿ ಮಾಡಿದೆವು (ನಡೆದಾ. II, ೯೦೪).

[<— ಮರಾ. ವರದೀ, ವರ್ದೀ]

ವರದಿಕಾರ 'ವರದಿಗಾರ' ನೋ.

ವರದಿಗಾರ, ವರದಿಕಾರ (ನಾ). ೧. ಸುದ್ದಿ, ಶೋಧನೆ ಮೊದಲಾದ ವಿಷಯಗಳ ವಿವರಣೆಯನ್ನು ಬರೆದು ತಿಳಿಸುವವನು : ಬ್ರಿಟಿಷರ ಆಡಳಿತದಲ್ಲಿ ಸರ್ಕಾರಿ ವರದಿಗಾರರ ತಪ್ಪುವರದಿಗಳಿಂದಲೆ ಅನೇಕ ಹಿಂದೀಯರು ಶಿಕ್ಷೆಗೆ ಗುರಿಯಾಗಿದ್ದರು (ಸ್ವಾವೀರ. ೮೦). ೨. ವರ್ತಮಾನ ಪತ್ರಿಕೆ, ದೂರದರ್ಶನ ಮೊದಲಾದುವುಗಳಿಗೆ ಸುದ್ದಿಯನ್ನು ಸಂಗ್ರಹಿಸುವವನು ; ಬಾತಮೀದಾರ : ನನ್ನ ಸ್ನೇಹಿತ ಒಂದು ದಿನಪತ್ರಿಕೆಯ ವರದಿಗಾರನಾಗಿದ್ದಾನೆ (ರೂಢಿ). ವರದಿಕಾರ: ೧. ಕವಿಚರಿತೆಕಾರರೂ ಪುರಾತತ್ವಇಲಾಖೆಯ ವರದಿಕಾರರೂ ಮಂಗರಸನಿಗೂ ನಂಜುಂಡನಿಗೂ ಇರುವ ಬಾಂಧವ್ಯವನ್ನು ಕುರಿತು ಪ್ರಸ್ತಾಪಿಸಿರುವುದರಿಂದ . . . ವಿವರಗಳನ್ನು ಮೊದಲು ಇಲ್ಲಿ ಸಂಗ್ರಹಿಸಬಹುದು (ಕುಮಾಸಾಂ. ೧೭).

[ವರದಿ + — ಗಾರ (< — ಕಾಱ)]

ವರದಿಗಾರ್ತಿ (ನಾ). ವರ್ತಮಾನಪತ್ರಿಕೆ, ದೂರದರ್ಶನ ಮೊದಲಾದುವುಗಳಿಗಾಗಿ ಸುದ್ದಿಯನ್ನು ಸಂಗ್ರಹಿಸುವವಳು : ನನ್ನ ಸ್ನೇಹಿತೆ ಬೆಂಗಳೂರು ದೂರದರ್ಶನದ ವರದಿಗಾರ್ತಿಯಾಗಿ ಕೆಲಸಮಾಡುತ್ತಿದ್ದಾಳೆ (ರೂಢಿ).

[ವರದಿಗಾರ + — ತಿ$_1$ (< — ಇತ್ತಿ)]

ವರದಿಗೊಡು (ಕ್ರಿ). ಸುದ್ದಿಯನ್ನು ತಲುಪಿಸು; ಬಾತಮಿಕೊಡು: ಬೇಹಿನ ಚಾವಡಿಗೆ ಹೋಗಿ ನೀವು ವರದಿಗೊಟ್ಟುದಾಯ್ತೇನು? (ಚಿಟ್ಟಅ. ೫೧-೧೫).

[ವರದಿ + ಕೊಡು$_1$]

ವರದಿಸು (ಕ್ರಿ). ವಿಷಯವನ್ನು ತಲುಪಿಸು, —ನಿರೂಪಿಸು : ಅವಳ ಜಡೆಯಲ್ಲಿ ಅರೆಬಿರಿದ ಗುಲಾಬಿಹೂ ಎಲೆಸಹಿತ ಇತ್ತೋ ಇಲ್ಲವೋ ಎಂಬುದನ್ನು ಸವಿವರವಾಗಿ ವರದಿಸುತ್ತಾರೆ (ರೂಪಸಂ. ೩೯). [ವರದಿ + — ಇಸು$_3$]

ವರದೆ (ನಾ). ೧. ವರವನ್ನು ಕೊಡುವವಳು ; ಅನುಗ್ರಹವನ್ನು ನೀಡುವವಳು : ಸರಸ್ವತೀದೇವಿ ವರದೆಯಕ್ಕೆಮಗೆಂದುಂ (ಕಾವ್ಯಾವ. ೨); ಅಜನ ಪಟ್ಟದ ರಾಣಿ ವರದೆ ಕಲ್ಯಾಣಿ . . . ಅಮಲಸುಮತಿಯಂ ತಾಯೆನಗೆ ತಾಯೆ (ಜೈಮಿಭಾ. ೧-೪). ೨. ಕನ್ನಡನಾಡಿನ ಶಿವಮೊಗ್ಗಜಿಲ್ಲೆಯಲ್ಲಿ ಹುಟ್ಟುವ ಒಂದು ನದಿಯ ಹೆಸರು : ಪ್ರಸಿದ್ಧವರದಾ ಪುಣ್ಯಾಂಬು . . . ಯಮುನಾನೀಳೋರ್ಮಿನೀರಂ ಭುಜೋತ್ತುಂಗಂಗೀಗರಿಗಂಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ (ಪಂಪಭಾ. ೧೪-೩೧). [ಸಂ. ವರದಾ]

ವರನಾಳಿ (ನಾ). ಒಂದು ಬಗೆಯ ವಿದ್ಯೆ : ಭಾರಣೆ ವರನಾಳಿ ಕಡಲೋಟ ಮುಂತಾದ ಚಾರುಕೌಶಲ್ಯವಿದ್ಯೆಗಳ ಧಾರುಣಿ ಪೊಗಳೆ ಪೇಳ್ದೇಲಾಚಾರ್ಯರ ಚಾರುಚರಣ ಶರಣೆನಗೆ (ನಾಗಕು. ೧-೧೨). [?]

ವರಪೂಜೆ (ನಾ). ಮದುವೆಯ ಸಮಯದಲ್ಲಿ ಕನ್ಯೆಯ ತಾಯಿತಂದೆಯರು ವಿಧ್ಯುಕ್ತವಾಗಿ ವರನಿಗೆ ಮಾಡುವ ಪೂಜೆ ,—ಆದರ ಸತ್ಕಾರ ಮತ್ತು ಆಗಿನ ಸಮಾರಂಭ : ಮುಂದೆ ಕಾಶಿಯಾತ್ರೆ ಹೊರಟುಬಿಟ್ಟಿದ್ದ ಶ್ರೀನಿವಾಸನನ್ನು ಕರೆದು ಅವನ ಅತ್ತೆಮಾವಂದಿರು ವರಪೂಜೆ ಮಾಡಿ ಹಿಂದಕ್ಕೆ ಎಳೆದುಕೊಂಡು ಬಂದರು (ಅವತಂ. ೧೭). [ಸಂ. ವರಪೂಜಾ]

ವರಪ್ರದಾನ (ನಾ). ವರವನ್ನು ಅನುಗ್ರಹಿಸುವಿಕೆ ; ವರದಾನ : ಆತನಿಗೆ ಕಾಮರೂಪ, ಕಾಮಸಂಚಾರ, ವರಪ್ರದಾನ . . . ಬಿಟ್ಟು ಉಳಿದ ದೇವಧರ್ಮಗಳೆಲ್ಲ ಬರುವುವು (ಮಹಾಣ. ೧೧೪). [ಸಂ.]

ವರಪ್ರಸಾದ (ನಾ). ದೇವರು ಅಥವಾ ಗುರುಜನರಿಂದ ದೊರಕುವ ಅನುಗ್ರಹ ,—ಇಷ್ಟಾರ್ಥಸಿದ್ಧಿ : ಪೂರ್ದಲೊಡಂ ವಿನೇಯಜನಸಂಘಾತಕ್ಕೆ ಮಾಣಿಕ್ಯದೇವಪದಾಂಭೋಜವರಪ್ರಸಾದಮೆ ಜಯಂ (ಆದಿಪು. ೧೬-೭); ಶ್ರೀರಾಮನ ದಂಡಕಾರಣ್ಯಪ್ರವಾಸವು ಋಷಿಗಳಿಗೆ ಒಂದು ವರಪ್ರಸಾದದಂತೆಯೆ ಆಯಿತು (ಭಾರದ. ೮೯). [ಸಂ.]

ವರಮಾನ (ನಾ). ಗಳಿಕೆ ; ಆದಾಯ ; ಉತ್ಪನ್ನ : ಅವನ ಮಾಸಿಕವರಮಾನ ಇನ್ನೂರು ರೂಪಾಯಿಗಳಿರಬಹುದು (ಆಳಿ. ೩೦); ಬರುವ ವರಮಾನ ದಿನದಿನದ ವೆಚ್ಚಕ್ಕೆ ಸಾಲದಾದರೆ . . . ಕೂಡಿಡಲು ಸಾಧ್ಯವಿಲ್ಲ (ಹಣಪ್ರ. ೧೨). [?]

ವರಮಾನತೆರಿಗೆ (ನಾ). ಗಳಿಸುವ ಆದಾಯದ ಮೇಲೆ ಹಾಕುವ ತೆರಿಗೆ : ದುಡ್ಡಿದ್ದವನು ವರಮಾನತೆರಿಗೆಯಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂಬುದನ್ನು ಚಿಂತಿಸುತ್ತಾನೆ (ಪಂಜಪಂ. ೨೦೪). [ವರಮಾನ + ತೆರಿಗೆ (< ತೆಱಿಗೆ)]

ವರಮುಖಿ$_1$ (ನಾ). ಅನುಗ್ರಹದ ಕಡೆಗೆ ದೃಷ್ಟಿಯುಳ್ಳ ವ್ಯಕ್ತಿ ; ವರವನ್ನು ಯಾಚಿಸುವವನು : ಗಂಗೆವಾಳುಕರೆಲ್ಲ ವರಮುಖಿಗಳಾಗಿ ಮೂರ್ತಿಯಳಿದು ಹೋದರು (ಅವಚಂ. ೩೮-೧೬೩). [ಸಂ. ವರಮುಖಿನ್]

ವರಮುಖಿ$_2$ (ನಾ). ಸುಂದರವಾದ ಮುಖವುಳ್ಳವಳು : ಉರುಮಣಿಮಯ ಖಚಿತಾವತಂಸಗಳಿಂ ತರುಣಿಯ ಕರ್ಣಯುಗಳಂಗಳು ವರಮುಖಿ ಲಕ್ಷ್ಮಿಗೆ ನೀರಾಜಿಪ ಪಾತ್ರೆಯಿರವೆನೆ ಕಣ್ಗೆ ರಾಜಿಸಿದವು (ತ್ರಿಭುತಿ. ೨೦-೫೮).

[ಸಂ. ವರಮುಖೀ = ಒಂದು ಬಗೆಯ ಔಷಧದ್ರವ್ಯ]

ವರಯಿತ (ನಾ). ೧. ಕನ್ಯಾರ್ಥಿ ; ಮದುಮಗ ; ವರ. ೨. ಗಂಡ ; ಪತಿ : "ವರಯಿತಂ ಭರ್ತೃ ಧವಂ . . . ರಮಣನೆನೆ ಗಂಡನೆನಿಸಿಕ್ಕು" (ಮಂಗರಾ. ೯೧-೭).

[ಸಂ. ವರಯಿತೃ]

ವರಯೋಗ್ಯೆ (ನಾ). ಮದುವೆಯ ವಯಸ್ಸಿಗೆ ಬಂದವಳು ; ವಿವಾಹ ಯೋಗ್ಯಳಾದವಳು : ಅಂತು ವರಯೋಗ್ಯೆಯಾದ ಪತಿಂವರೆಯನಱಿದು ಅಪರಾಜಿತಂ . . . ತದನುರೂಪ ವರಾನ್ವೇಷಣವ್ಯಾಪಾರಪಾರಾಯಣನಾಗಿ (ಶಾಂತಿಪು. ೪-೮೮ ವ). [ಸಂ. ವರಯೋಗ್ಯಾ]

ವರರತ್ನ (ನಾ). ೧. ಶ್ರೇಷ್ಠವಾದ ರತ್ನ. ೨. [ಜೈನ] ಮೋಕ್ಷವನ್ನು ಪಡೆಯಲು ಸಾಧನವಾದ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯ. ೩. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : "ಹರನಯನ ವಹ್ನಿ ಪುರ ಶಿಖಿ ವರರತ್ನಂ . . . ಮಾರ್ಗತ್ರಯವದು ಮೂಱಱ ನಾಮಂ" (ವ್ಯವಹಾ. ೯-೩). [ಸಂ.]

ವರರುಚಿ (ನಾ). ೧. ಅತಿಶಯವಾದ ಕಾಂತಿ ,—ಪ್ರಭೆ. ೨. ಶ್ರೇಷ್ಠವಾದ ಅಭಿರುಚಿ ,—ಆಸಕ್ತಿ. ೩. ಪ್ರಸಿದ್ಧನಾದ ಒಬ್ಬ ಸಂಸ್ಕೃತ ವೈಯಾಕರಣಿಯ ಹೆಸರು ; IP ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಹೆಸರಿನ ಬೇರೆ ವ್ಯಕ್ತಿಗಳೂ ಇದ್ದಾರೆ : ವರರುಚಿಯ ಜಾಣ್ಮೆ ಗೋಪಾಲಿಕನ ಬೆಡಗು ಭಾಗುರಿಯ ಗೂಢತೆ ಇಂತಿವೆಲ್ಲವನು ಸಂವರಿಸಿಯಭಿನವಮಂಗನುಸುರಿದಂ (ಮಂಗರಾ. ೨-೪). [ಸಂ.]

ವರಲೆ (ನಾ). ೧. ಹೆಣ್ಣುಹಂಸ : ಕೊಟ್ಟುಗ ವರಲೆ ಕೊಂಚೆ . . . ಮೊದಲಾದಖಿಳಖಗಕುಲ ಬಿದ್ದುದುರಿಯೊಳಗೆ (ಕುವ್ಯಾಆ. ೨೦-೫೩). ೨. ಕ್ಷಣಜ ; ಕಡಂದುರು : ಪರಶುರಾಮನ ಬಾಣ ಘುನ್ನೂಱು ಗಾವುದ ಹೋಗುವದೆಂದು ದೇವೇಂದ್ರ ವರಲೆಯಾಗಿ ಬಿಲ್ಲ ಹೆದೆಯ ಕಡಿಯಲು (ಭೈರಸೂ. I, ೮೪).

[ಸಂ. ವರಲಾ]

ವರವರ್ಣಿನಿ (ನಾ). ೧. ಅತಿಶಯವಾದ ಮೈಕಾಂತಿಯುಳ್ಳವಳು ; ಸುಂದರಳಾದ ಸ್ತ್ರೀ : ವರವರ್ಣಿನಿಯೆ, ಮುನಿಯೆನಾಂ ನಿನ್ನ ಕೊರಳಿನ ಸುಧೆಯ ಗರಳಕ್ಕೆ (ಶ್ರೀರಾಮಾ. ೨೪೬-೪೯೪). ೨. ಶ್ರೇಷ್ಠಳಾದ ಹೆಂಗುಸು. ೩. ಲಕ್ಷ್ಮಿ. ೪. ದುರ್ಗೆ. ೫. ಸರಸ್ವತಿ. ೬. ಹೆಂಗುಸು ; ಸ್ತ್ರೀ : "ಮಹಿಳೆಯಬಳೆ ರಾಮೆ ವರವರ್ಣಿನಿಯೆನಲ್ಕೆ ಹೆಂಗೂಸೆನಿಕ್ಕು" (ಮಂಗರಾ. ೮೯-೧). ೭. ಪ್ರಿಯಂಗುಬಳ್ಳಿ. ೮. ಅರಿಸಿನ. ೯. ಅರಗು ; ಲಾಕ್ಷ. ೧೦. ಗೋರೋಚನ. ೧೧. ಕಟುಕರೋಹಿಣಿ.

[ಸಂ. ವರವರ್ಣಿನೀ]

-ವರವಿಗೆ '-ವರೆಗಂ' ನೋ.

ವರವಿಡಿ (ಕ್ರಿ). ವರವನ್ನು ಪಡೆ ; ಅನುಗ್ರಹವನ್ನು ಹೊಂದು : ಭೂಧವ ಶಮಿಯನರ್ಚಿಸಿ ವರವಿಡಿದು ವಿನೋದದೆ ನಡೆತಂದನಾಗ (ಕಂನವಿ. ೨೨-೯೯).

[ವರ$_1$ + ಪಿಡಿ$_1$]

ವರವೀ (ಕ್ರಿ). ವರವನ್ನು ಕೊಡು ,—ಅನುಗ್ರಹಿಸು : ನರನಾಗಿ ಬಂದು ವರವೀವ ಗುರುವಿಂಗೆ ಸರಿಯಾರ ಕಾಣೆ (ಸರ್ವಜ್ಞ. ೪೯). [ವರ$_1$ + ಈ$_2$]

ವರವು, ಬರ$_2$, ಬರವು (ನಾ). ಬರುವಿಕೆ ; ಆಗಮನ : ತನಗೆ ಮೃತ್ಯು ವರವಾನಱಿದೆ ಪೆರ್ತ್ವಾಣವಂಶದೊನ್ ಕಾಲನಿಗೇಕಸುದೆ . . . ಸುರ X ಗ ಗತಿಯುಳ್ಳೆಲೆಕೊಣ್ಣನ್ (ಎಕ. II, ೯೯-೧; ಸು. 700). ಬರ$_2$: ನರವು — ನರಂ, ನೆರಂ, ಬರಂ, ಎಟ್ಟರಂ, ನೊಳಂ ಎಂದಱಿವುದು (ಶಮದ. ೪೬ ಪ್ರಯೋ); ಪೆಣ್ಗಳಳ್ಳಿರಿಯುವೆದೆಯಿಂದ ಪಡೆಯಿಲರ ಬರಮಂ ಅಳ್ಳೆಯಂ ಕೊಳ್ಳಿಯಿಂದಿರಿವವೋಲ್ ಪೇಳಿದರ್ (ಕಾಲೂರ. ೧೫೮-೩೫೦). 'ನಲ್ಬರ' ಪರಾ. ಬರವು: ಗು[ರುಜನ]ದ ಪರಕೆಯುಂ ಬಂಧುರಪುಣ್ಯಫಳಾನುಬಂಧಮುಂ ನೆರೆದೆನ್ನೊಳ್ ಪರಮಾನುಭಾವಭರಮಂ ದೊರೆಕೊಂ[ಡು]ವವಿಂದು ಬರವಿನೊಳ್ ನಿಮ್ಮಡಿಯಾ (ಕವಿರಾ. ೩-೨೦೫); ದಂಡಕನೃಪತಿ . . . ರಿಸಿಯರ್ಕಳ ಬರವಂ ಕೇಳ್ದು ಬಂದು ಬಂದಿಸಿಯಭಿನಂದನಭಟಾರರ ಪಕ್ಕದೆ ವಿಚಾರಿಸಿ ಧರ್ಮಮಂ ಕೇಳ್ದು ಮೆಚ್ಚಿ (ವಡ್ಡಾರಾ. ೧೭೬-೮); ಸ್ತ್ರೀಯರಿಗೆ ನಿಜಪತಿಯ ಬರವಿನ ಪ್ರೀಯ ದೊರೆಕೊಂಬಂತೆ ಕಮಲದಳಾಯತಾಂಬಕ ಸತತ ಕದನೋತ್ಸಾಹ ತನಗೆಂದ (ಕುವ್ಯಾಅ. ಓರಿಇ. ೪-೪೦). [ದೇ. ॥ ತಮಿ. ವರವು]

ವರಶೆ 'ವರಿಸೆ' ನೋ.

ವರಶೆವಿನಿಯೋಗ (ನಾ). ಅಗ್ರಮರ್ಯಾದೆಯ ಒಂದು ವಿಧಿ : ಪರಕಾಲಸ್ವಾಮಿಗಳವರಿಗೆ ಮೊದಲು ತೀರ್ಥ ತಿರುಮಾಲೆ ವರಶೆವಿನಿಯೋಗ ಶ್ರೀಶಟಗೋಪ ಮುಂತಾದ ಸಕಲಮರಿಯಾದೆ (ಮೈಚಿರಿ. ೧೯೩೮; ೧೯-೭; 1811).

[ವರಶೆ (< ವರಿಸೆ) + ವಿನಿಯೋಗ]

ವರಸಾಮ್ಯ (ನಾ). ವಧೂವರರು ಪರಸ್ಪರ ಅನುರೂಪರಾಗಿರುವುದು ,—ಹೊಂದುವಂತಿರುವುದು : ತನಗೂ ಅವಳಿಗೂ ವರಸಾಮ್ಯ ಸ್ವಲ್ಪವೂ ಸರಿಹೋಗುವುದಿಲ್ಲ (ಸೋತುಗೆ. ೩೬); ಇನ್ನೂ ಚಿಕ್ಕ ವಯಸ್ಸು ಎನ್ನುವುದನ್ನು ಬಿಟ್ಟರೆ ಅವರಿಬ್ಬರಿಗೂ ಚೆನ್ನಾಗಿ ವರಸಾಮ್ಯವಾಗುತ್ತಿತ್ತು (ವಂಶವೃ. ೪೮೫). [ಸಂ.]

ವರಸೆ 'ವರಿಸೆ' ನೋ.

ವರಸೆದಪ್ಪು (ಕ್ರಿ). ಕ್ರಮವು ತಪ್ಪು ; ರೀತಿಗೆಡು : ವರವೇದಾಂತಶಾಸ್ತ್ರೋತ್ಕರ ರಹಸ್ಯವನು ವರಸೆದಪ್ಪದೆ ಕ್ರಮದಲೆಲ್ಲವನರಸಿ ಪೇಳುವೆವು (ಗಗತಾ. ೨-೪೩); ವರಸೆದಪ್ಪದೆ ಪೂಜೆಯಂಗೈದು (ಯಚೋರ. ೧೦೦). [ವರಸೆ (< ವರಿಸೆ) + ತಪ್ಪು$_1$]

ವರಸೆದಾರ (ನಾ). ಅಂಗಸಾಧಕ ; ಪೈಲವಾನ : ವರಸೆದಾರ ಕುಸ್ತಿಗೆ ಜನರೆದುರು ಆಖಾಡಕ್ಕೆ ಇಳಿಯುವಾಗಲೂ ಬಟ್ಟೆಯನ್ನು ಹೊದ್ದೇ ಇರಬೇಕು (ಭೀಮಕಾ. ೩೨).

[ವರಸೆ (< ವರಿಸೆ) + — ದಾರ$_4$]

ವರಸೆದಿರುಹು (ನಾ). ಕತ್ತಿಯನ್ನು ಚಕ್ರಾಕಾರವಾಗಿ ತಿರುಗಿಸುವುದು ,—ತಿರುವುವುದು : ಪ್ರಚಣ್ಡವೇಗದಿಂದ ಥಳಥಳಿಸುತ್ತಿರುವ ಆ ವರಸೆದಿರುಹಿನ ಮಣ್ಡಲಗಳನ್ನೊಡೆದು ಭೇದಿಸಿಬಿಡುವಾಸೆಯಿಂದ . . . ಹೋರಾಡುತ್ತಿರುವರು (ಬಿರುಗಂ. ೨೨-೧೭). [ವರಸೆ (< ವರಿಸೆ) + ತಿರುಹು$_2$ (< ತಿರಿಪ್ಪು$_2$)]

ವರಹ, ವರಹಾ (ನಾ). ೧. ಹಂದಿ; ವರಾಹ; ಸೂಕರ: ಕಾಡೆಮ್ಮೆಯ ಕೋಡು ವರಹ ದಂತಿಯ ದಾಡೆ . . . ಇತ್ತರೊಲಿದು (ನವಮೋ. ೧೯-೭೪). ೨. ಹಿಂದೆ ನಮ್ಮ ದೇಶದಲ್ಲಿ ಬಳಕೆಯಲ್ಲಿದ್ದ ವರಾಹದ ಮುದ್ರೆಯನ್ನು ಹೊಂದಿದ್ದ ಒಂದು ನಿರ್ದಿಷ್ಟಬೆಲೆಯ ಚಿನ್ನದ ನಾಣ್ಯ; IP ಇದರ ಬೆಲೆಯ ಬಗೆಗೆ ಭಿನ್ನಾಭಿಪ್ರಾಯಗಳಿವೆ : ನಾಲ್ವತ್ತು ವರಹಂನು ಸೋಮೇಶ್ವರದೇವರ ಭಂಡಾರಕ್ಕೆ ಮಾಸಪxಡಿಯಾಗಿ ಸಲಿಸುವಿರಿ (ಮೈಆರಿ. ೧೯೪೬, ೨೯-೧೮; 1530); ವರಹವೆಂದೆನಲು ಪಣ ಹತ್ತು (ಭಾಸ್ಕರ. ೭೬-೨); ರೊಕ್ಕ ಎರಡು ವರಹ ಕೊಟ್ಟು ಅಕ್ಕರೆಯ ಕರು ಸಾಕಿದೆ (ಕಎಪು. ೧೮-೯). ೩. ವರಹದ ನಾಣ್ಯದ ತೂಕಪ್ರಮಾಣ ; IP ಇದರ ತೂಕದ ಬಗೆಗೆ ಭಿನ್ನಾಭಿಪ್ರಾಯಗಳಿವೆ : ಹಿಪ್ಪಲಿ ನಾಲ್ಕು ವರಹ ತೂಕ, ಸಕ್ಕರೆ ಐದು ವರಹ ತೂಕ (ವೈದ್ಯಸಾ. I, ೧೧೪ ಟೀಕು); ಶುದ್ಧಿಮಾಡಿದ ನೇಪಾಳ ೧೦ ವರಹತೂಕ ಮೆಣಸು ಗದ್ಯಾಣ ೧ ತೂಕ . . . ತಿಲಪ್ರಮಾಣವಂ ಕಣ್ಣಿಗೆಚ್ಚಲು ಸನ್ನಿಪಾತಂ ಗುಣಮಕ್ಕುಂ (ಸಕವೈ. ೧೮೦). ವರಹಾ : ೧. 'ವರಹಾಕಟ್ಟು' ಪರಾ. ೨. ಸದರಿ ಬರದ ವರಹಾ ಒಂದಕ್ಕೆ ರೂಪಾಯಿ ಮೂರರ ಪ್ರಕಾರ ರಾಜರವರು ವರ್ಷಂಪ್ರತಿಯಲಲ್ಲಿ ತಲಚೇರಿಗೆ ಇಪ್ಪತ್ತನಾಲ್ಕುಸಾವಿರ ರೂಪಾಯಿ ಕೊಡಬೇಕು (ರಾಜೇಂದ್ರ. ೫೪). ೩. ಒಂದು ವರಹಾ ತೂಕ ಬಜೆಯನ್ನು ಬಿಸಿನೀರಿನಲ್ಲಿ ಅರೆದು ಕುಡಿಸಲು ವಮನವಾಗಿ ವಾತಜ್ವರವು ಶಮನವಾಗುವುದು (ಸಕವೈ. ೬೨). [< ಸಂ. ವರಾಹ]

ವರಹಮುದ್ರೆ (ನಾ). ವರಾಹದ ಗುರುತುಳ್ಳ ರಾಜಚಿಹ್ನೆ ,—ಲಾಂಛನ : ಮೆರೆವ ಪದವಿ ವರಹಮುದ್ರೆ, ಆಳು ಚಿನ್ನ, ಏನೆ ಇರಲಿ! (ಇಂಗೀತ. ೩೭-೭).

[< ಸಂ. ವರಾಹಮುದ್ರಾ]

ವರಹಾ 'ವರಹ' ನೋ.

ವರಹಾಕಟ್ಟು (ನಾ). ಚಿನ್ನ, ಮುತ್ತು ಮೊದಲಾದುವುಗಳಿಂದಾದ ಆಭರಣಗಳನ್ನು ತೊಳೆಯಲು, ಕಾಡುಹಂದಿಯ ಕೂದಲಿಂದ ಮಾಡಿದ ಕಟ್ಟು ,—ಬ್ರಶ್ಶು ; ವರಾಹಕೂರ್ಚ : (ಕಿ). 'ವರಾಹಕೇಶ' ಪರಾ.

[ವರಹಾ (< ವರಹ) + ಕಟ್ಟು$_2$]

ವರಹಾಕೂರ್ಚ (ನಾ). = ವರಹಾಕಟ್ಟು: (ಕಿ). [< ಸಂ. ವರಾಹಕೂರ್ಚ]

ವರಹಾಬಣ್ಣ (ನಾ). ವರಹವೆಂಬ ನಾಣ್ಯದ ಬಣ್ಣ ; ಅಪ್ಪಟಚಿನ್ನದ ಬಣ್ಣ : (ಕಿ). [ವರಹಾ (< ವರಹ) + ಬಣ್ಣ]

ವರಹಾವತಾರ (ನಾ).೧. ವಿಷ್ಣುವಿನ ಹತ್ತು ಅವತಾರಗಳಲ್ಲಿ ಮೂರನೆಯದು : ಸುರರುಲಿಯೆ ಬಾಹಾಬಲದಿಂ ವರಹಾವತಾರಮಂ ಹರಿ ತಾಳ್ದಂ (ದಶಾವ. ೪-೪೨). ೨. ವರಾಹದ ಅವತಾರವನ್ನು ತಾಳಿದ ವಿಷ್ಣು : ಮಂಗಳಂ ಜಯಮಂಗಳಂ . . . ಧರೆಯನುದ್ಧರಿಸಿದ ವರಹಾವತಾರಗೆ ತರಳನ ಕಾಯ್ದ ನರಸಿಂಹಗೆ (ಪುರಂದ. ೧-೨೩೧-೧). [< ಸಂ. ವರಾಹಾವತಾರ]

ವರಹೀನ (ನಾ). ರೂಪ, ಧನ, ವಯಸ್ಸು ಮುಂತಾದುವು ಯಾವುದೂ ಇಲ್ಲದವನು ; ಸರ್ವದರಿದ್ರ : ಕುಲಹೀನನಾದರೂ ವರಹೀನನಾಗಬಾರದು (ಗಾಡೆ).

[ಸಂ.]

ವರಾಂಗ (ನಾ). ೧. ಶ್ರೇಷ್ಠವಾದ ಅಂಗ ; ತಲೆ ; ಶಿರಸ್ಸು. ೨. ಯೋನಿ ; ಭಗ : ವರಾಂಗ ರಸನಾ ವೃಷಣೇಕ್ಷಣ ಶುಕ್ಲ ಸತ್ವಮಾಭ್ಯಂತರಮಾವ ಲಕ್ಷಣಮುಮಿಂತಿವೆ ಬಲ್ಲಿದನೋದಿನಿಷ್ಟದೊಳ್ (ಲೋಕೋಪ. ೧೧-೬೩); ಚರಣಾಂಗುಷ್ಠಾದಿ ವರಾಂಗಪರ್ಯಂತ ಕಲಾಭಿಜ್ಞ ಪಂಚಭದ್ರ ವಿದಗ್ಧ ವಿಟನಾಯಕರಂ ನೋಡಿ (ಹಮ್ಮೀರ. ೨-೯೨ ವ). ೩. ಸುಂದರವಾದ ದೇಹ; ಸುರೂಪ. ೪. ಸುಂದರವಾದ ಆಕಾರವುಳ್ಳವನು; ರೂಪವಂತ. ೫. ವಿಷ್ಣು. ೬. ಆನೆ. ೭. ಲವಂಗಪಟ್ಟೆ ; ದಾಲ್ಚಿನ್ನಿ. [ಸಂ.]

ವರಾಂಗಕ (ನಾ).೧. ಶ್ರೇಷ್ಠವಾದ ಅವಯವಗಳುಳ್ಳವನು. ೨. ಲವಂಗಪಟ್ಟೆ ; ದಾಲ್ಚಿನ್ನಿ. ೩. ಲವಂಗ : "ತ್ವಕ್, ಪತ್ರಂ, ಉತ್ಕಟಂ, ಭೃಂಗಂ, ತ್ವಚಂ, ಚೋಚಂ, ವರಾಂಗಕಂ — ೭ ಲವಂಗ" (ಸಿದ್ಧಾಂತಿ. ೧೪೫). [ಸಂ.]

ವರಾಂಗಿ (ನಾ). ೧. ಚೆಲುವೆ ; ಸುಂದರಿ : ಜಡೆ ಮರವಾವೆಂದು ನವಿಲ್ವಿಡಿಯಲೊಡರ್ಚಿರೆ ವರಾಂಗಿ ಬೆದರ್ದೀಕ್ಷಿಸೆ ಕಣ್ಗುಡಿವೆಳಗುಗಂಡು ಮಿಂಚೆಂದೊಡನದು ಗಱಿಗೆದರ್ದು ನರ್ತಿಸಿತಾಗಳ್ (ರಾಜಶೇ. ೧೦-೪೦). ೨. ಅರಿಸಿನ.

[ಸಂ. ವರಾಂಗೀ]

ವರಾಂಡ (ನಾ). = ವರಂಡ ೧ : ಆ ಒಳಅಂಗಳದ ನಾಲ್ಕು ಕಡೆಗಳಲ್ಲಿಯೂ ವರಾಂಡಗಳಿವೆ (ಭಾರದ. ೪೯೩); ಮನೆಯ ವರಾಂಡದಲ್ಲಿ ಸರೋಜ ಕಂಡುಬರಲಿಲ್ಲ (ಮಹಾಗ. ೧೨). [<— ಇಂ. verandah. / ಸಂ. ವರಂಡ]

ವರಾಕ (ಗು). ೧. ಕರುಣಾಜನಕವಾದ ; ದೀನವಾದ : ಉದ್ಯತ್ಕಂತುಚೇತಂ ತೊಬಲಲವಿರತಂ ಚಕ್ರವಾಕಂ ವರಾಕಂ (ಚಂದ್ರಪು. ೮-೧೦). ೨. ಹೀನನಾದ ; ಅಧಮನಾದ : ಬ್ರಹ್ಮಚರ್ಯನಿಷ್ಠಾಗರಿಮಂ ಕರಗುವಿನಮೆಳಸೆ ಕಣ್ಗಳ್ ವರಾಕಭಿಕ್ಷಾಕನಾಕೆಗಂದಿಂತೆಂದಂ (ಪಂರಾಮಾ. ೮-೬೧). (ನಾ). ೩. ಕರುಣಾಜನಕ ಸ್ಥಿತಿಯಲ್ಲಿರುವವನು ; ದೀನನಾದವನು. ೪. ಹೀನನಾದವನು ; ಅಧಮವ್ಯಕ್ತಿ ; ನೀಚ: ಅಪರ್ಣಾಪರಮೇಶರೆಂಬ ನಿಗಮೋಕ್ತಿಯನಾಕರ್ಣಿಸಿ ತನ್ನುತಿಗೆಯ್ಯದ ದುರ್ಣರಕೃತಿಕರನೆ ಲಬ್ಧವರ್ಣವರಾಕಂ (ರಾಜಶೇ. ೧-೨೦); ನಸಿದಾಯುಷಂ ಜಸಂ ಬಲಸಂಪದಗಳೆಲ್ಲ ಕುಸಿದು ಪೋಗದೆ ಮಾಣದನುಪದ ವಿಪದ್ಭಾವ ಪೊಸಗದಿಹುದೆ ವರಾಕ ತಿಳಿಯದೆ ದುರಾಧ್ಯತೆಯಿನಾಳೆ ಕೇಳ್ ಲೇಸೊದಗುಗುಮೆ (ವಂಕಾರಾ. ೫-೯-೨೩). ೫. ಶಿವ ; ಪರಮೇಶ್ವರ. ೬. ಯುದ್ಧ ; ಕದನ. ೭. ಅಶುದ್ಧವಾದುದು ; ದೋಷಯುಕ್ತವಾದುದು. [ಸಂ.]

ವರಾಕಿ (ನಾ). ೧. ದೀನಳಾದವಳು. ೨. ನೀಚಳಾದವಳು ; ಅಧಮೆ ; ಹೀನೆ : ಲಿಂಗದ ಪಾವನಾಂಗಮಂ ತೊಲಗದೆ ಬಾಯುಗುಳ್ ಸಿಡಿಯೆ ತೂಂತಿಱಿದಪ್ಪೆ ವರಾಕಿ (ವೃಷವಿ. ೯-೫೭); ಮಹಾನರಕ ನಿನಗಲ್ಲದೇಂ ಸುಖಮಹುದೆ ದುರ್ಮೇಧೆ ಕೇಕಯಾನ್ವಯ ವರಾಕಿ (ವಂಕಾರಾ. ೨-೬-೫೧). [ಸಂ. ವರಾಕೀ]

ವರಾಟ (ನಾ). ೧. ಕವಡೆ ; ಕಪರ್ದ : "ಕಪರ್ದಃ, ವರಾಟಃ — ಈ ೨ ಕವಡಿಕೆ" (ಹಲಾಯು. ೧೦೯-೪೨). ೨. ಹಗ್ಗ ; ರಜ್ಜು. ೩. ಒಂದು ದೇಶದ ಹೆಸರು : ವರಾಟನರೇಶ್ವರಾಟವೀಪಟು ವೀತಿಹೋತ್ರ ಪರಾಕು (ಯಾದಚಂ. ೩-೧ ವ). 'ವರಾಳ' ಪರಾ. [ಸಂ.]

ವರಾಟಕ (ನಾ). ೧. = ವರಾಟ ೧ : "ಕಪರ್ದಂ ವರಾಟಕಮೆನಲ್ಕವಡೆಯಕ್ಕುಂ" (ಮಂಗರಾ. ೧೨೨-೯); ೨೦ ವರಾಟಕ — ೧ ಕಾಕಿನಿ, ೪ ಕಾಕಿನಿ — ೧ ಪಣ (ಗಣಿಚ. ೨೮೨ ಅಡಿಟಿ). ೨. = ವರಾಟ ೨. ೩. ತಾವರೆಯ ಬೀಜಕೋಶ.

[ಸಂ.]

ವರಾಡ 'ವರಡ' ನೋ.

ವರಾಡಿಸು (ಕ್ರಿ). ಚಂದಾಕೂಡಿಸು ; ವಂತಿಗೆಯನ್ನು ಸೇರಿಸು (?): ಕೋಟೆ ಬಿರಾಡ ಸ್ಥಳದ ಸೇನಬೋವನ ಸಂಬಳದ ಬಗೆ ಸಹ ವರಾಡಿಸಿ ಬಾಹ ಸಿಸ್ತಿನಿಂದ (ಎಕ. VIII, ತೀರ್ಥಹ. ೭೯-೬೦; 1702); ಮಹಾಜನಂಗಳು ವರಾಡಿಸಿ ಕೊಡುತ್ತಿದ್ದ ಬಗೆಲು ಗ ೪೨ (ಮೈಆರಿ. ೧೯೪೩, ೪೪-೪೭; 1711). [ವರಾಡ (< ವರಡ) + — ಇಸು$_3$]

ವರಾತ$_1$, ಬರಾತ$_2$, ವರಾತು (ನಾ). ಮೇಲಿಂದ ಮೇಲೆ ಮಾಡುವ ಒತ್ತಾಯ ; ಪದೇಪದೇ ಕೇಳಿ ಪೀಡಿಸುವಿಕೆ ; ತಗಾದೆ : ಆ ದಳವಾಯಿ ಬೋನಿ ಮುತ್ತಣ್ಣನು ಹಣಕ್ಕೆ ವರಾತ ಮಾಡಿದಲ್ಲಿ (ರಾಜೇಂದ್ರ. ೧೧); ಅಮೀಲನು ವರಾತ ಮಾಡಿದಾಗ ಹಣವನ್ನು ಕಟ್ಟಬೇಕು (ಕಭವಿ. ೩೦೨). ಬರಾತ$_2$: ಅವನಿಗೆ ಮದುವೆ ಮಾಡಬೇಕಾಗಿದೆ. ಬೇಕಾದಷ್ಟು ಕಡೆಯಿಂದ ಹೆಣ್ಣಿನವರು ಬರಾತ ಮಾಡುತ್ತಿರುವರು (ದಾನಚಿಂ. ೪೨); ಸಾಹುಕಾರರು ತಮಗೆಲ್ಲಿ ಅರಮನೆಯಿಂದ ಬರಾತ ಬರುವುದೋ . . . ಎಂದು ಆದಷ್ಟು ಬಡತನವನ್ನು ವ್ಯಾಪಾರದಲ್ಲಿ ನಷ್ಟವನ್ನು ಮೇಲೆ ಹಾಕಿಕೊಳ್ಳತೊಡಗಿದರು (ಚಿದೇವ. ೨೩೧). ವರಾತು : ಕೆಲವು ದಿವಸದ ಮೇಲೆ ಆ ಮುನಿಯು ಹಿಂತಿರುಗಿ ಬಂದು ದ್ರವ್ಯವನ್ನು ಕೊಡು, ಕೊಡು

ಎಂದು ವರಾತುಮಾಡಿದನು (ನಿಜಚಿ. V, ೧೫); ದುಡ್ಡುಬೇಕು ಅಂತ ಅವನು ವರಾತು ಮಾಡುತ್ತಿದ್ದ (ಅನಾಥ. ೧೫೨). [<— ಅರ. ಬರಾತ್; ಮರಾ. ವರಾತ್ = ತಗಾದೆಪತ್ರ]

ವರಾತ$_2$ (ನಾ). (ವಿವಾಹಕ್ಕೆ ಹೊರಟ ಮದುಮಗನ) ಮೆರವಣಿಗೆ; ದಿಬ್ಬಣ : ವರಾತ ಹೊರಟಿತು. ಮುಂದೆ ಬಣ್ಣಬಣ್ಣದ ಸಮವೇಷದಲ್ಲಿದ್ದ ಬ್ಯಾಂಡಿನವರು (ಅನ್ನ. ೨೪೫); ಎಲ್ಲೆ ಹೊಂಟಿತು ವರಾತಾ? ಸಿನೇಮಾದ ತಯಾರೀ ಕಾಣಸ್ತದ (ದೀಪಹ. I, ೧೭೩). [<— ಮರಾ. ವರಾತ; ಹಿಂ. ಬರಾತ್, ಬಾರಾತ್./ ಸಂ. ವರಯಾತ್ರಾ]

ವರಾತಹಿಡಿ (ಕ್ರಿ). ಹಟಹಿಡಿ; ಮೊಂಡುಹಿಡಿ : ಆಕೆ "ಡಾಕ್ಟರರನ್ನು ಕರೆಯಿಸುವುದಿದ್ದರೆ ಮೋಡಗಾಂವಕರ ಬೇಡವೇ ಬೇಡ" ಎಂದು ವರಾತಹಿಡಿಯತೊಡಗಿದಳು (ಜಾರುಡಾ. ೬೨). [ವರಾತ$_1$ + ಹಿಡಿ$_1$ (< ಪಿಡಿ$_1$)]

ವರಾತು 'ವರಾತ$_1$' ನೋ.

ವರಾಯಿ (ನಾ). ಒಂದು ಬಗೆಯ ತೃಣಧಾನ್ಯ : ವರಾಯಿ ಅಕ್ಕಿ . . . ಫರಾಳದ ಅಕ್ಕಿ ನೋಡಿರಿ (ಮುಂಬಪ್ರಾ. ೧೭೫).

[<— ಮರಾ. ವರಈ, ವರಾಈ, ವರೀ./ ಪ್ರಾ. ವರಇಅ./ ಸಂ. ವ್ರೀಹಿ]

ವರಾರೋಹ (ಗು). ೧. ಉತ್ತಮವಾದ ನಿತಂಬವುಳ್ಳ. (ನಾ). ೨. ವಾಹನಗಳನ್ನು ಏರುವುದು; ಸವಾರಿ. ೩. ಆನೆ ಅಥವಾ ಕುದುರೆಯನ್ನೇರುವವನು; ಸವಾರ. ೪. ಶ್ರೇಷ್ಠನಾದ ಸವಾರ. [ಸಂ.]

ವರಾರೋಹೆ (ನಾ). ೧. ಲಾವಣ್ಯವತಿಯಾದ ಉತ್ತಮ ಸ್ತ್ರೀ : "ವರಾರೋಹಾ ಮುಖ್ಯವಪ್ಪ ಸ್ತ್ರೀ" (ಹಲಾಯು. ೮೦-೩೩೫); ಭಾರ್ಯೆಯಹಳೆನಗೀ ವರಾರೋಹೆ (ಶ್ರೀರಾಮಾ. ೧೩೧-೧೪೪). ೨. ನಿತಂಬ. [ಸಂ. ವರಾರೋಹಾ]

ವರಾರ್ಥಿ (ಗು). ೧. ಅನುಗ್ರಹವನ್ನು ಬಯಸುವ. (ನಾ). ೨. ಮದುವೆಗಾಗಿ ವರನನ್ನು ಹುಡುಕುವವನು : ವರಾರ್ಥಿಗಳು ಡಾ. ರಾಯರನ್ನು ಕಾಣುತ್ತಿದ್ದರು (ವಂಶವೃ. ೧೫೨). [ಸಂ. ವರಾರ್ಥಿನ್]

ವರಾಹ (ನಾ). ೧. ಹಂದಿ; ಸೂಕರ : ಈ ತೆಱದಿಂ ಪುಲಿಯಾದನತೀತಭವಾಂತರದೊಳೀ ವರಾಹನುಂ (ಆದಿಪು. ೫-೧೬); ವರಾಹನೆತ್ತಿದ ಡೋಱುಗಳ . . . ಕಡವೆ ತುಳಿದ ಹಚ್ಚೆಗಳ ಚಿಹ್ನದ ಬೇಡನಾಯಕರು ನೆರೆದರು (ಹಚಕಾ. ೫-೫). ೨. ವಿಷ್ಣುವಿನ ಹತ್ತು ಅವತಾರಗಳಲ್ಲಿ ಮೂರನೆಯದು; IP ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಕೊಲ್ಲಲು ಎತ್ತಿದ ಅವತಾರ : ಆದಿವರಾಹರೂಪದೊಳ್ ನೀನಂದೆತ್ತಿದ್ದೆ ಗೋಮಿನೀಧವ ದಂಷ್ಟಾಗ್ರದ ನೀಲಜಾಲಮಣಿಯೆಂಬಂತಾಗೆ ಭೂಗೋಳಮಂ (ಜಗಮಿ. ೧-೫೭); ಹರಿ ವರಾಹದ ರೂಪ ತಾಳಿಯೆ . . . ಧರೆಯ ಸಂಸ್ಥಾಪಿಸಿದುದು ಮೂರನೆಯ ಅವತಾರ (ಗಗಶಾ. ೧೯-೨೪). ೩. ವರಾಹದ ಅವತಾರವನ್ನು ಎತ್ತಿದ ವಿಷ್ಣು : ಅರಿ ಹಿರಣ್ಯಾಕ್ಷನ ಬಲಕೆ ಕೋಡೆಱಗಿ ನಿಂದ ವರಾಹನಂತಿರೆ ಪರಬಲಾಂತಕ ಭೀಮ ನಿಂದನು ತಱುಬಿ ಪರಬಲವ (ಕುಮಾಕ. ೧೫-೮); ವರಾಹನು ಕೆರಳುತತಿವೇಗದಲಿ ಜಲದಿಂದೆಬ್ಬಿ ಧಾರಿಣಿಯ . . . ಸತ್ವದೊಳಿರಿಸಿಯಂಕಕೆ ನಿಂದನಸುರಾಂತಕನು (ಪ್ರಭುಲಿಂ. ೩-೩೩). ೪. ವರಹವೆಂಬ ಚಿನ್ನದ ನಾಣ್ಯ : ಅದರ ಮೇಲೆ ವರಾಹದೇವರ ಆಕೃತಿ ಇದ್ದ ಕಾರಣ ಅದಕ್ಕೆ ವರಾಹವೆಂಬ ಹೆಸರು ಬಿತ್ತು (ಕಭಾಗೆ. ೨೮೦). ೫. ಒಂದು ಪರ್ವತದ ಹೆಸರು. ೬. ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಶಿವ ಸ್ಕಂದ . . . ವರಾಹ . . . ಬ್ರಹ್ಮಾಂಡವೆಂಬ ಪತ್ತೇ ಶಿವಪುರಾಣಂಗಳು (ವಿವೇಕ. ೯). ೭. ಹಂದಿಯಾಕಾರದಲ್ಲಿ ರಚಿಸಿದ ಸೇನಾವ್ಯೂಹ. ೮. ಒಂದು ನಿರ್ದಿಷ್ಟವಾದ ಅಳತೆ. ೯. ಟಗರು. ೧೦. ಎತ್ತು; ಹೋರಿ. ೧೧. ಮೊಸಳೆ. ೧೨. ಮೋಡ; ಮೇಘ. ೧೩. ಒಂದು ಬಗೆಯ ಔಷಧೀಸಸ್ಯ : "ವರಾಹಃ — ಬೋನಗಾರೆ, ವರಾಹ" (ಔಷಧಿ. ೧೪೫). ೧೪. [ನಾಟ್ಯ] ಸಂಯುತಹಸ್ತಗಳಲ್ಲಿ ಒಂದು : ೧. ಅಂಜಲಿ. ೨. ಕಪೋತ . . . ೧೯. ವರಾಹ (ಅಭಾನ್ಯ. ೪೮). [ಸಂ.]

ವರಾಹಕೆಱೆ (ನಾ). ಒಂದು ಕೆರೆಯ ಹೆಸರು : ಮೂಡಣ ದೆಸೆಯ ವ[ರಾಹ]ಕೆಱೆಯಂ ಮೂಡಣ ಪಳ್ಳ ಅದಱ ತೆಂಕಣ ದೆಸೆ [ಮಣ್ಣಗೆಱೆ] ಗೊಟ್ಟಂ (ಸೌಇಅ. XI-i, ೯ ೨೭; 862).

[ವರಾಹ + ಕೆಱೆ]

ವರಾಹಕೇಶ (ನಾ). = ವರಹಾಕಟ್ಟು : ನವರಾತ್ರಿಗೊಮ್ಮೆ ದೇವತೆಗಳ ಪರಿವಾರವೆಲ್ಲ . . . ವರಾಹಕೇಶದ ತಿಕ್ಕಾಟದಿಂದ ಶುದ್ಧರಾಗಿ ಪೂಜೆ ಪಡೆದು ಮತ್ತೆ ಸ್ವಸ್ಥಾನಕ್ಕೆ ತೆರಳುತ್ತಿದ್ದರು (ಗಂಮಾಯಿ. ೧೭೮). [ಸಂ.]

ವರಾಹಗಿರಿ (ನಾ). ಐವತ್ತುನಾಲ್ಕು ಕುಲಪರ್ವತಗಳಲ್ಲಿ ಒಂದು : ಶಂಖಕೂಟ . . . ವರಾಹಗಿರಿ ಮಯೂರನಗ ಚಾರುಧಿ ಶೈಲೇಂದ್ರವೆಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವಮೆಂಬ ಕೀಲಕಪರ್ವತಕ್ಕೆ ಬಡಗಣದಿಕ್ಕಿನಲ್ಲಿಹವು (ವಿವೇಕ. ೧೭೩). [ಸಂ.]

ವರಾಹಚರ್ವಿತ (ನಾ). [ಕಾಮಶಾ] ಹದಿನಾರು ಬಗೆಯ ದಂತಕ್ಷತಗಳಲ್ಲಿ ಒಂದು : ದಂತಹತಿ . . . ವರಾಹಚರ್ವಿತ ಪವಳಮಣಿ ಕಳಾದಂತವುರುಬಿಂದುಮಾಲ್ಯಂ ಸಪ್ತಬಿಂದು ತಂದಿಂತು ಪೆಸರ್ವೆತ್ತ ಪದಿನಾಱುಮಂ ಬಿತ್ತರಿಪುದುಚಿತಸಂಸ್ಥಾನಮಱಿದು (ಮನ್ಮಥ. ೧೩-೧೦); ತರದೆ ಬೆನ್ನೊಳು ಪಯೋಧರದೊಳೆ ರದಕ್ಷತಂ ನೆರೆದಿರೆ ವರಾಹಚರ್ವಿತಮಂತದು (ಜಪಸ. ೭-೩೩). [ಸಂ.]

ವರಾಹಚರ್ವಿತಕ (ನಾ). ೧. ವಾರಾಹಿಗಡ್ಡೆಯನ್ನು ತಿನ್ನುವುದು. ೨. = ವರಾಹಚರ್ವಿತ. ೧, ೨: ಪರಿಚಿಸೆ ವೃಕ್ಷಾರೋಹಣ ವರಾಹಚರ್ವಿತಕ ವೇಣು ದಾರಿತಕಂಗಳ್ ಕರಮೆಸೆಯೆ ಕಾಮಶಾಸ್ತ್ರದ ದೊರೆಯಾದುದು ಶಬರ ಶಿಶುಗಳುಜ್ಜುಗಮದಱೊಳ್ (ಚಂದ್ರಪು. ೫-೫೫). [ಸಂ.]

ವರಾಹಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ ಪದ್ಮಪುರಾಣ . . . ವ[ಪಾಂಗಾ. ವಾ]ರಾಹಪುರಾಣ . . . ಬ್ರಹ್ಮಾಂಡಪುರಾಣವೆಂಬವೇ . . . ಹದಿನೆಂಟು ಮೂಲಪುರಾಣಂಗಳ್ (ವಿವೇಕ. ೯). [ಸಂ.]

ವರಾಹಮತ (ನಾ). ಗದಾಯುದ್ಧದಲ್ಲಿ ಒಂದು ವರಸೆ : ಬವರಿ ಮತ್ಸ್ಯೋದ್ಗತಿ ವಿಲಂಘನ ವಿವಳಿತಾಂಗ ವರಾಹಮತ ಸಂಘ್ಟವನ ಪಾರಿಷ್ಯವ . . . ಲಘುವಿನ್ಯಸ್ತವೆಂಬೀ ವಿವರದಲಿ ಕಾದಿದರು (ಕುಮಾಗ. ೬-೨೫). [ಸಂ.]

ವರಾಹಮುದ್ರೆ (ನಾ). ಹಂದಿಯ ಚಿಹ್ನೆಯುಳ್ಳ ಲಾಂಛನ : ತಾರಕವೈರಿಯೊಳ್ ಪಡೆದ ಮಾಯೂರಧ್ವಜಂ ಪದ್ಮಲೋಚನನಿಂ ಪೆತ್ತ ವರಾಹಮುದ್ರೆ ಭಗವತ್ಕಾತ್ಯಾಯನೀ ದೇವಿ ಇತ್ತ ನುತಛತ್ರಮಿವೆಂಬೆ (ಕೇಅ. ೨-೨-೨೫; 1058). [ಸಂ. ವರಾಹಮುದ್ರಾ]

ವರಾಳ (ನಾ). ೧. ಕವಡೆ : "ವರಾಳಂ ವರಾಟದೊಳಗಾದುದದು ಕವಡೆ" (ಸಂಪಚಂ. ೨೯); ಗುಳಿಗೆ ವರಾಳಂ ರಗಳೆ ಪುಳಂ ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುಳಂಗಳಾದುವು (ಶಮದ. ೨೨ ವೃತ್ತಿ). ೨. ಹಗ್ಗ; ರಜ್ಜು. ೩. ಒಂದು ದೇಶದ ಹೆಸರು; ವರಾಟ : ಸವಲಕ್ಕ ವಿಂಜದ ವರಾಳದ . . . ನೃಪರಂ ಪಳಂಚಲೆದು ವೀರಶಿಖಾಮಣಿ ನಾಗವರ್ಮ್ಮನಂದದೆ ನೆಲನಂ ನಿಮಿರ್ಚ್ಚಿದವರಾರ್ಗ್ಗಳ ಚಕ್ರಿಯ ದಂಡನಾಯಕರ್ (ನಾಂದೇಚಾ. ೩-೧೫ ಪದ್ಯ; 1047); ಅಂಗ ವರಾಳ ಸಿಂಗಳಿಕ . . . ಯಾದವಮಹೀಭುಜಮೌಳಿಮಣಿಬ್ರಜಪ್ರಭಾಲಿಂಗಿತಪಾದಪೀಠಂ (ಸೌಇಅ. XX, ೪೬-೫; 1072). ೪. ವರಾಟದೇಶದ ರಾಜ : ವರಾಳನಂ ತುಳಿವ ಗಂಧಗಜಂ . . . ವೀರವಿಷ್ಣುಭೂಪಾಳಕಂ (ಎಕೆ. VII, ಶಿವಮೊ. ೫-೭; 1218). ೫. [ಸಂಗೀತ] ಒಂದು ರಾಗದ ಹೆಸರು. 'ವರಾಳಿ' ಪರಾ. [< ಸಂ. ವರಾಟ]

ವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಗೌಳ ವರಾಳಿ ವಸಂತಭೈರವಿ[ಯರಿ]ದೊಳವನವನೊಲ್ದು ಪಾಡಿದ (ತ್ರಿಭುಕಾ. ೬-೩೦); ಶ್ರೀರಾಗ ಭೈರವಿ ವರಾಳಿ . . . ಇವಾದಿಯಾದ ರಾಗಂಗಳಂ ಪಾಡುತ್ತಿರೆ (ಹಮ್ಮೀರ. ೨-೯೦); ವರಾಳಿ : — ೩೯ನೇ ಮೇಳಕರ್ತ ಝಾಲವರಾಳಿಯಲ್ಲಿ ಜನ್ಯ. ವಕ್ರರಾಗಾಂಗರಾಗ, ಕರುಣಾರಸಪ್ರಧಾನರಾಗ (ಸಂಗೀಚಂ. ೧೫೮). [ಸಂ. ವರಾಲೀ]

ವರಾಳಿಗುಟ್ಟು (ಕ್ರಿ). (?): ಆಲಸವು ನಿದ್ರೆಗಳು ಕವಿದುವು ಮೇಲುಗಾಳಗವೆಂದು ಖಳರು ವರಾಳಿಗುಟ್ಟಿತು ಹುಟ್ಟಿದುವು ಕುಱಿ ಕೋಣ ಕಾಟಗಳು . . . ಬೀಸಿದನು ಖಳನಿಂದ್ರಜಾಲವನು (ಕಾಶಿರಾ. ೨೨-೩೨). [?]

ವರಿ$_1$ (ನಾ). ೧. ಸುಂಕ; ತೆರಿಗೆ; ಕರ : ಗದೆಯ ಮೇಲೆ ರೊಕ್ಕ ಭತವನೂ ವರಿಯನಿಕಿ [ಅತ್ತಿ]ಕೆಱೆಯನೂ (ಸೌಇಅ. ೧೯೩೪, ಪುಂಗನೂ. ೧೫೬-೧೪; 1419);

ಅಡದೆಱೆ ಮಾದಾಱೆಕೆ ವೋಜನ ವರಿ . . . ನಾಯಿಂದನ ವರಿ (ಎಕ. XIV, ಗುಂಡ್ಲುಪೇ. ೧೨೯-೯೯; 1521). ೨. ಚಂದಾ ; ವಂತಿಗೆ : ಜನರಿಂದ ಕಂದಾಯ, ಕಾಣಿಕೆ ಮೊದಲಾದ ವರಿಗಳನ್ನು ತೆಗೆದುಕೊಳ್ಳುತಾ . . . ಇದ್ದ ಮುಖಂಡರನ್ನು ಪಾಳಯಗಾರರು ಎಂಬ ಹೆಸರಿನಿಂದ ಕರೆಯುತಿದ್ದರು (ಪಾಳೆಗಾ. ೨); ಆತ . . . ಗ್ರಾಮದ ಸಕಲಜನರಿಂದಲೂ 'ವರಿ' ಎತ್ತುತ್ತಾನೆ. 'ವರಿ' ಎಂದರೆ ಹಬ್ಬದ ಖರ್ಚಿಗಾಗಿ ಹಳ್ಳಿಯ ಪ್ರತಿಯೊಬ್ಬ ನಿವಾಸಿಯೂ ಯಜಮಾನನ ಕೈಗೆ ಕೊಡಬೇಕಾದ ಹಣ (ಸರ್ವಮಂ. ೧೯೦).

[ದೇ. ॥ ತಮಿ. ಮಲ. ತೆಲು. ವರಿ./ ಸಂ. ಬಲಿ]

-ವರ್ಿ₂ (ಪ್ರ). ಒಂದು ನಾಮವಾಚಕಪ್ರತ್ಯಯ : 'ಇಳವರಿ', 'ಮೇಲುವರ್ಿ₂', 'ಹೆಚ್ಚುವರಿ' ಪರಾ.

ವರಿಜ (ನಾ). (?): ಪರತತ್ವವುಂ ಬಸವಣ್ಣನೂ ಯೋಹದದೊಳಂ ವರಿಜವಿಲ್ಲೆಂದೆನುತ ಸಕಲ ಮಾಹೇಶ್ವರರು ಪೇಳ್ಯರ್ಕೆ (ವೀಶೈಪು. ೮-೧೭-೧೮). [?]

ವರಿಯಿಸು 'ವರಿಸು₂' ನೋ.

ವರಿವರಲ್ ? (ನಾ). (?): ಬಿಸಿಲಂ ಬೆನ್ನೊಳಿಕ್ಕಿ ನೀರ್ನೆಲನಱಸಿ ಗುಗ್ಗುರಿಗಲ್ಲ ವರಿವರಲ ತಱಿಮೊರಬಿನ ನುಚ್ಚುವಣಲ ನೀರಱಿದು ಪರಿದು ದಿಂಟೆಯ ದರಿಯ ಕುಳಿಯ ಕುತ್ತುಱ ಕುಱಿವಳ್ಳಮಂ ಕಂಡು (ಲೀಲಾವ. ೬-೪೨ ವ). [?]

ವರಿವಸಿತ (ಗು). ಪೂಜಿಸಿದ ; ಸೇವಿಸಿದ. [ಸಂ.]

ವರಿವಸ್ಯಿತ (ಗು). = ವರಿವಸಿತ. [ಸಂ.]

ವರಿವಸ್ಯೆ (ನಾ). ೧. ಸೇವೆ ; ಪರಿಚರ್ಯೆ : "ವರಿವಸ್ಯಾ, ಶುಶ್ರೂಷಾ, ಪರಿಚರ್ಯಾ, ಉಪಾಸನಂ — ೪ ಶುಶ್ರೂಷೆಗೆ ಹೆಸರುಗಳು" (ಸಿದ್ಧಾಂತಿ. ೨೨೫). ೨. ಗೌರವ ; ಮನ್ನಣೆ. [ಸಂ. ವರಿವಸ್ಯಾ]

-ವರಿವಿಗೆ '-ವರೆಗಂ' ನೋ.

ವರಿಶ 'ಬರಿಸ' ನೋ.

ವರಿಷ 'ಬರಿಸ' ನೋ.

ವರಿಷ್ಠ (ಗು). ೧. ಅತ್ಯುತ್ತಮವಾದ ; ಸರ್ವೋತ್ಕೃಷ್ಟವಾದ : ಅಮಳತತ್ವ ವರಿಷ್ಠಗೋಷ್ಠೀವಾಗ್ವರಿಷ್ಠಯಶಃಪ್ರತಿಷ್ಠಿತನು (ಬಸವು. ೨೧-೪). ೨. ಹಿರಿದಾದ ; ದೊಡ್ಡ : ಒಡೆದುದೂ ಕೂರ್ಮಪೃಷ್ಠವಹಿರಾಜವರಿಷ್ಠತನುಪ್ರತಿಷ್ಠೆಯಿಂದುಡಿದುದೂ ಶೇಷಕಂಠ ಕಠಿಣಾಸ್ಥಿ ಧರಾಭರದಿಂ (ಮಲ್ಲಿಪು. ೮-೧೩೧). ೩. ಅಗಲವಾದ ; ಹರವಾದ. ೪. ಭಾರವಾದ ; ತೂಕವುಳ್ಳ. ೫. ಮೇಲಿನ ; ಮೇಲುಮಟ್ಟದ : ಯಾವ ಮಾಸ್ತರರಾದರೂ ತಮ್ಮ ವರಿಷ್ಠ ಅಧಿಕಾರಿಯ ಅಪ್ಪಣೆಯನ್ನು ತೆಗೆದುಕೊಳ್ಳದೆ ಸಾಲಿಯನ್ನು ಬಿಟ್ಟು ಹೋಗಬಾರದು (ಪಾಶ್ವಾವಿ. ೪೪೩). (ನಾ). ೬. ಶ್ರೇಷ್ಠನಾದವನು ; ಅಗ್ರಗಣ್ಯ : ವಸಿಷ್ಠಗೋತ್ರವರಿಷ್ಠನುಂ . . . ಎನಿಸಿದ . . . ಮಧುವಪರಸಂ ನಿಜಜನಕನೆನಿಸಿದ (ಕಾಅ. ೫-೨-೧೫೫; 1058). ೭. ಹಿರಿದಾದುದು ; ದೊಡ್ಡದು : "ಬೃಹತ್ . . . ವಿಶಾಲಂ, ವ್ಯೂಢಂ, ವಿಪುಳಂ, ಭದ್ರಂ, ವರಿಷ್ಠಂ — ಈ ೧೨ ಹಿರಿದು" (ಹಲಾಯು. ೧೧೬-೧೪). ೮. ಮೇಲಧಿಕಾರಿ ; ಮುಖ್ಯಸ್ಥ : ನವಕರರ ರಜೆ ರುಚಿಕಟ್ಟಾಗಬೇಕಾದರೆ, 'ಉಹುಂ' ಎಂಬ ವರಿಷ್ಠನೆ ಬೇಕು (ಗಾಳಿಪ. ೫೮). ೯. ತಾಮ್ರ. ೧೦. ಮೆಣಸು. ೧೧. ಒಂದು ಬಗೆಯ ಪಕ್ಷಿ ; ತಿತ್ತಿರಿ. [ಸಂ.]

ವರಿಸ 'ಬರಿಸ' ನೋ.

ವರಿಸು₁, ಬರಸು₁, ಬರಿಯಿಸು, ಬರಿಸು (ಕ್ರಿ). ೧. ಬರುವಂತೆ ಮಾಡು ; ಬರಮಾಡು ; ಕರೆಯಿಸು : ಆ ಪೊಟ್ಟಿಂಗನ್ನನಲ್ಲಿಗೆ ವರಿಸವಂಗೆ ತಕ್ಕುದನಾನೆ ಬಲ್ಲೆಂ (ಪಂಪಭಾ. ೮-೭೨ ವ); ಬಿಕ್ಕಿಗನೆಟ್ಟತ್ತರ ಮಂನೆಯ ಬಿಕ್ಕಿಯುಂ ಬೀರಭಟ್ಟನುಮಂ ಬಾಳ್ಗುಳಿಗೆ ವರಿಸಿ (ಸೌಇ. IX - i, ೮೦-೨೪; 1018); ಅಗ್ನಿಭೂತಿಯುಂ ವಾಯುಭೂತಿಯುಮಂ ತನ್ನಲ್ಲಿಗೆ ವರಿಸಿ . . . ದಾನಸನ್ಮಾನಪುರಸ್ಸರಮವರ ಪೂರ್ವವೃತ್ತಿಯುಮಂ ಕಮ್ಮವಟ್ಟಿಯುಮನಿತ್ತು ಬೀಡಿಂಗೆವೋಗಿಮೆಂಬುದುಂ (ಸುಕುಮಾ. ೨-೧೩ ವ). ಬರಸು₁ : ೧. ತೆಂಕಣಗಾಳಿ ಮಂಕುಮಳೆ ಬರಸೀತು (ಗಾದೆ). ಬರಿಯಿಸು : ೨. ಉರುಟುಮಾಡು; ಒದಗಿಸು : ಸಲೆ ವಾಯೂದ್ಭವವೇಳೆಯೊಳ್ ನೆಗೞ್ದ ಭೂಕಂಪಾದಿಯುಂ ಶಕ್ರಮಂಡಲವಾ ವಾಸವವೇಳೆಯೊಳ್ ಬರಿಯಿಸಿರ್ದುತ್ಪಾತಮುಂ ವಾಯುಮಂಡಲಮಾರಯ್ಯೆ ಪರಸ್ಪರಂ ಕಿಡಿಸುಗುಂ (ಲೋಕೋಪ. ೪-೮೭). ಬರಿಸು : ೧. ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂತಿರಿಸುವೆಂ (ಕವಿರಾ. ೨-೧೦೪); ನಮ್ಮ ಪುರಾತನಪುಣ್ಯಮಿಲ್ಲಿಗೆ ಬರಿಸಿದುದೀ ಮುನೀಶ್ವರರಂ (ಆದಿಪು. ೫-೬೬); ಸಕಲಸುಭಟರ ಬರಿಸಿದನು ತರಿಸಿದನು ಪಟ್ಟಕೆ ಬೇಹ ವಸ್ತುಗಳ (ಕುಮಾಭಿ. ೧-೨೯). ೨. ಇಲ್ಲದ ಗುಣಗಳ ಬ[ಪಾಠಾಂ.ತ]ರಿಸೋದು ರೊಕ್ಕ (ಪುರಂದ. ೨-೪೮-೩); ಚಿಂತಾಮಣಿ ಮೊದಲಾದ ಬಗೆಬಗೆ ತರ್ಕಶಾಸ್ತ್ರಗಳ ಅಗಣಿತವಾಗಿ ಬಣ್ಣಿಸಿ ನರಸೇಂದ್ರಗೆ ಮಿಗೆ ಹರುಷವ ಬರಿಸಿದಳು (ಕಂನವಿ. ೮-೭೩). ೩. ಅಂಕುರಿಸುವಂತೆ ಮಾಡು ; ಹುಟ್ಟಿಸು : ಮೊಳಕೆ ಬರಿಸಿದ ಧಾನ್ಯಗಳಲ್ಲಿ 'ಸಿ' ಜೀವಾತು ಇದೆ (ಅಡುಸಾ. ೬೪).

ಬರಿಸಿಕೊಳ್, ಬರಿಸಿಕೊಳ್ಳು = ೧. ಬರಮಾಡಿಕೊಳ್ಳು ; ಕರೆಯಿಸು : ನರೇಂದ್ರಂ ಲಲಿತಾಂಗನಂ ಬರಿಸಿಕೊಂಡು (ಧರ್ಮಾಮೃ. ೨-೯೪); ಅಗ್ರಜನಾತ್ಮಜರನು ತನ್ನ ಪೊರೆಗೆ ಬರಿಸಿಕೊಂಡು . . . ಸಲಹಿದಳೊಲಿದು (ಕಂನವಿ. ೪-೭೯). ೨. ಉಂಟುಮಾಡಿಕೊಳ್ಳು : ದಾರಿಯಲ್ಲಿನ ಲೈಟುಕಂಬಕ್ಕೆ ಡಿಕ್ಕಿಹೊಡೆದು ಹಣೆಯಲ್ಲಿ ಬೋರೆ ಬರಿಸಿಕೊಂಡ (ಶಾಲೆಮ. ೨೧೮). [ವರ್ + — ಇಸ್ಸು₃]

ವರಿಸ್ಸು₂, ವರಿಯಿಸು (ಕ್ರಿ). ೧. ಆಯ್ದುಕೊಳ್ಳು ; ಆರಿಸು ; ಆಯ್ಕೆಮಾಡು : ವರಿಸದ ಕಾಂತೆಯಂ ವರಿಸಿಕೊಂಡ ಮನಃಪ್ರಿಯನಂ ನಿಜಸ್ವಯಂವರಸದನಕ್ಕೆ ಸೀಳ್ದು ಪೊಸತೋರಣಮಂ ಸಮಕಟ್ಟಿ ಪೋಪೆವು (ನಳಚಂ. ೪೧೧). ೨. ಮದುವೆಯಾಗು ; ಕೈಹಿಡಿ : ವರಿಸಿದವನೋ ಕೆಲವುದಿನ ಪತಿಕರಿಸಿದವನೋ (ಬಸವು. ೪೦-೪೩); ಎಲವೊ ಮಟ್ಟಿಯ ಮದನ ದರ್ಪೆಯ ತಿಲದ ಮನ್ಮಥ . . . ನಳನಮುಖಿಯನು ವರಿಸು ಬಾ (ಕುಮಾಅ. ೧೫-೨೧); ವೈದೇಹಿಯನು ವರಿಸುವಡೆ ಈಶದತ್ತ ಮಹೋಗ್ರತರಬಾಣಾಸನವ ತೆಗೆದೇಱಿಸುವ ಬಲುಸಾಸಿಗರು ಬಹುದು (ತೊರಾ. ೧-೧೩-೧೨). ೩. ಒಪ್ಪಿಕೊಳ್ಳು ; ಅಂಗೀಕರಿಸು : ಕೌರವನ ಸಿರಿ ಪಣ್ಮಾಂಗನಾವಿಭ್ರಮವ ವರಿಸಿತಲಾ (ಕುಮಾಗ. ೪-೬೦); ಕಾಮ್ಮಾಧ್ವರಕೆ ಮುನಿವರವಿಭಾಂಡುಕುಮಾರಕನ ನೀ ಕರೆಸಿಕೋ ತನ್ನುನಿವರನ ನಾಚಾರ್ಯಭಾವದಲಿ ವರಿಸು (ತೊರಾ. ೧-೫-೯); ಎಲೆ ಬೃಹಸ್ಪತಿ ಮತ್ಸಿತಾಮಹಂ ಕ್ರತುಗಳ್ಗೆ ಸಲೆ ನಿನ್ನ ತಾತನಂ ವರಿಸಿರ್ದನದಱಿಂದೆ ಕುಲಧರ್ಮಮಂ ಬಿಡದೆ ನೀನೆನಗೆ ಯಜ್ಞಮಂ ಮಾಡಿಸು (ಕೃಮಿಭಾ. ೫-೨೫). ೪. ಕವಿ ; ಆವರಿಸು : ಹರಗುಸಿರುವೆನೆ ತಮೋಗುಣವಾತನ ವರಿಸಿಹುದಜಗೆ ಪೇಳುವೆನೆ ಪರಿಹರಿಪೊಡೆ ಶಕ್ತನಲ್ಲವು (ಕಂನವಿ. ೪-೧೮). ವರಿಯಿಸು : ೧. ಅರಮಗಳಾರಂ ವರಿಯಿಪಳವನೇ ವರನು (ಜಯಕಾ. ೩-೬೬). [ವರಣ + — ಇಸ್ಸು]

ವರಿಸೆ, ಒರಸೆ, ವರಶೆ, ವರಸೆ (ನಾ). ೧. ಸಾಲು ; ಶ್ರೇಣಿ ; ಪಂಕ್ತಿ : ಗುರುಗಳು . . . ಎಲ್ಲರನ್ನೂ ವರಿಸೆಯಾಗಿ ನಿಲ್ಲಿಸಿ . . . ಲೆಕ್ಕಮಾಡಿ ನೋಡಿದರು (ನಗೆಗ. ೧೦). ೨. ಸರದಿ ; ಪಾಳಿ : ಹಗಲಿರುಳ ವರಿಸೆಯ ಕಣಾ ಬಾಗಿಲಂತೆ (ಗಿಳಿಂ. ೧೧೮-೧೧); ಸಾರಿನ ವರಿಸೆಯಾದ ಮೇಲೆ ಹುರಿದ ಮಾಂಸವನ್ನು ಬಡಿಸಲಾಯಿತು (ಪುನರು. ೨೯೦). ೩. ಚಾಳಿ ; ವರ್ತನೆ ; ನಡವಳಿಕೆ : ತಾಯಿಯ ವರಿಸೆ ಈಗ ಮಗಳಿಗೂ ಬಂತು (ಮಹಾಗ. ೨೨೪). ಒರಸೆ : ೨. ಸನ್ನೆಯು ತಿರುಪುಗಳ ತುದಿಗಳಿಗೆ ಬಡಿಯುವುದರಿಂದಾಗುವ ಒರಸೆಯಾದ ಎರಡು 'ಟಿಕ್' ಸದ್ದುಗಳ ನಡುವಿನ ಅವಧಿಯು ಅತ್ಯಲ್ಪವಾದರೆ ಅದಕ್ಕೆ ಚುಕ್ಕೆಯೆಂತಲೂ . . . ಸಂಕೇತ (ವಿಜ್ಞಾವಿ. ೨೫). ವರಶೆ : ೨. 'ವರಶೆವಿನಿಯೋಗ' ಪರಾ. ವರಸೆ : ೧. ಆ ಕುಮಾರಕನು . . . ಬೆಳಗುತಲಿರುವ ಮೊನೆಗಳುಂಟಾದ ಹಲ್ಲುಗಳ ವರಸೆಯಿಂದೊಪ್ಪುತ (ಕೃವಾಅ. ೧೬೧); ಒಂದು ವರಸೆ ಇಟ್ಟಿಗೆಗಳ ಅಂತರಪ್ರದೇಶಕ್ಕೆ ಸರಿಯಾಗಿ ಮೇಲಣ (ಅಥವಾ ಕೆಳಗಣ) ವರಸೆಯ ಅಂತರಪ್ರದೇಶವು ಸೇರಕೂಡದು (ಗಣಿಚ. ೧೯೫). ೨. ಇವರು ವರಸೆಯಾಗಿ ಮೇವಾಡವನ್ನು ಆಳಿದರು (ಆರ್ಯಕೀ. ೨೩). ೩. ಎಲ್ಲರೂ ಒಂದೇ ರೀತಿ ಅಲ್ಲ. ಜಾತಿಗೊಂದು ವರಸೆ! (ಅನ್ನಾವ. ೬೯). ೪. ಧಾಟಿ; ಶೈಲಿ: ನನೀಲಾಲನ ದನಿಯಿದ್ದಂತೆ! ಪೂರ್ತಿ ಅದೇ ರೀತಿಯದೇ ಮಾತಿನ ವರಸೆ! (ಸಾಹೆಬ್. ೨೫೦). ೫. ಕತ್ತಿ, ದೊಣ್ಣೆ ಮುಂತಾದುವುಗಳ ಪ್ರಯೋಗದಲ್ಲಿ ತೋರುವ ಕ್ರಮಬದ್ಧವಾದ ಕೌಶಲ, —ಚಮತ್ಕಾರ: ರೀತಿ ತಿಳಿದು ವರಸೆಗಳ ನೂತನ ಕತ್ತಿ ಕಠಾರಿದೊಣ್ಣೆಯ ಸಾಧಕೋತ್ತಮರಾಜಕುವರರು . . .

ಬೀದಿಯೊಳರ್ತಿಯೊಳೆಡೆಯಾಡುತಿರ್ಪರು (ಇನಿ. ೭-೧೮); ನೀನು ಇನ್ನೂ ಸರಿಯಾಗಿ ವರಸೆ ಕಲೀಬೇಕು (ಭೀಮಾ. ೬). ೬. ನಂಟು ; ಸಂಬಂಧ ; ವಾವೆ : ಶ್ರೀರಂಗಮ್ಮನು ದೂರದವಳಲ್ಲ. ಶ್ರೀದೇವಿಗೆ ದಾಯಾದಿ ವರಸೆಯಲ್ಲಿ ಅಕ್ಕನಾಗಬೇಕು (ಶ್ರೀರಾಯ. ೧೦೭); ಬೆಟ್ಟದ ಅರಸರು ದೊರೆಗಳಿಗೆ ವರಸೆಯಲ್ಲಿ ಚಿಕ್ಕಪ್ಪನಂತಿದ್ದರು (ಬಡಕ. ೩೪). ೭. ಹಂಚಿಕೆ ; ಯುಕ್ತಿ ; ಉಪಾಯ : ಪೆರ್ಬುಲಿಗಳನು ವರಸೆಯಿಂ ಗೂಡುಗಳೊಳಗೆ ತುಂಬಿಕೊಂಡು (ಕೃಷ್ಣವಿ. ೨-೬೭); ರಾಮಣ್ಣ ಪುನಃ "ನನಗೆ ಕೇಳಿಸಲೇ ಇಲ್ಲ" ಅಂತ ವರಸೆ ತೆಗೆದ (ಸುವಸಂ. ೫೯). ೮. ರೀತಿ ; ಗತಿ ; ಭಂಗಿ : ಮೆರವಣಿಗೆ ಸಮಯದಲ್ಲಿ ಗುಡ್ಡನ ಜೊತೆಯಲ್ಲಿ ವಿವಿಧ ವರಸೆಯಲ್ಲಿ ಹೆಜ್ಜೆ ಇಟ್ಟು ಕುಣಿಯುವುದು (ಬೋರೆದೇ. ೩೭). ೯. ಜೋಡಿ; ಜೊತೆ : ಸುಕುಮಾರಿ ನೀನಾರು ಗಾಡಿಯುತನವನೇನು ವರಸೆಯ ಮಾಡಿಕೊಂಡಿಹೆ ನೀನು ಮಾರ್ಗದಿ ಗೂಡಿದನು ನಮಗೀತನು (ಜಿನಭಾ. ೧೬-೫೦); ಮದುವೆಯ ಗಂಡು ಹೆಣ್ಣಿನ ವರಸೆ ಅನುರೂಪವಾಗಿದೆ (ರೂಢಿ). ೧೦. [ಸಂಗೀತ] ರಾಗ ; ಮಟ್ಟು: ಸಿನೀಮಾಗಳಲ್ಲಿ ಕನಿಷ್ಠಪಕ್ಷ ಅರ್ಧಕ್ಕರ್ಧ ಹಿಂದೂಸ್ತಾನೀ ವರಸೆಗಳೇ ಕೇಳಬರುತ್ತಿವೆ (ಗಾನಕ. ೫೫). [ದೇ. ॥ ತಮಿ. ವರಿಚ್ಚೆ; ತೆಲು. ವರುಸ]

ವರುಣ (ನಾ). ೧. ದ್ವಾದಶಾದಿತ್ಯದಲ್ಲಿ ಒಬ್ಬ : ಧಾತಾ . . . ವರುಣ . . . ವಿಷ್ಣುಗಳೆಂಬವರೇ ಕ್ರಮದಿಂ ದ್ವಾದಶಾದಿತ್ಯರು (ವಿವೇಕ. ೨೬೬). ೨. ನೀರಿನ ಅಧಿದೇವತೆಯೂ ಪಶ್ಚಿಮದಿಕ್ಪಾಲಕನೂ ಆಗಿರುವ ಒಬ್ಬ ದೇವತೆ : "ವರುಣಂ ಪಶ್ಚಿಮದಿಕ್ಪತಿ . . . ಪ್ರಚೇತಸಂ ಪೆಸರಿಂದಂ" (ವಸ್ತುಕೋ. ೮-೪೩); "ಪಚ್ಚಿಮದ ದೆಶೆಗೊಡೆಯ ಮುನ್ನೀರೆಱೆಯ ನೀರೊಟ್ಟಿಲಾಣ್ಮಂ ನೆಗೞ್ದೇರನೆನೆ ವರುಣನು" (ಕಬ್ಬಿಗ. ೧೪). ೩. ಒಂದು ಬಗೆಯ ಮರ ; ಬಿಲ್ವಪತ್ರೆ : "ವರುಣ : – ವರುಣ, ನವಿಲಡಿಯ ಮರ" (ಓಷಧಿ. ೧೪೫). ೪. ಸಮುದ್ರ. ೫. ನೀರು. ೬. ಸೂರ್ಯ. ೭. ವಿಷ್ಣು. [ಸಂ.]

ವರುಣಪಾಶ (ನಾ). ೧. ವರುಣನ ಆಯುಧವಾದ ಹಗ್ಗ: "ವಾರುಣೀ = ಮದ್ಯವುಂ, ವರುಣಪಾಶವುಂ" (ಕಾಶಕ. ೨೯೯); ವರುಣಪಾಶಕ್ಕಿಂತಲೂ ಬಿಗಿಯಾದ ನಿಮ್ಮ ಸ್ತೋತ್ರಪಾಶದಿಂದ ನಮ್ಮನ್ನು ನೀವು ಬಂಧಿಸಿರುವಾಗ ನಿಮ್ಮ ಆಶ್ರಮವೇ ನಮ್ಮ ಪಾಲಿಗೆ ಅಮರಾವತಿಯಾಗಿದೆ (ಚಿತಂಬಾ. ೪). ೨. ಒಂದು ಬಗೆಯ ಮೀನು. [ಸಂ.]

ವರುಣಬಾಣ (ನಾ). ಮಂತ್ರಿಸಿ ಬಿಟ್ಟಾಗ ಮಳೆಯನ್ನು ಸುರಿಸುವುದೆಂದು ನಂಬಲಾದ ಒಂದು ಬಗೆಯ ಬಾಣ : ಉರಿಯ ಬಾಣಕೆ ವರುಣಬಾಣವ . . . ತುಡುಕಿದನು (ಕೌಶಿಕಾ. ೨೨-೩೧). [ಸಂ.]

ವರುಣಾತ್ಮಜೆ (ನಾ). ಸಮುದ್ರದಲ್ಲಿ ಹುಟ್ಟಿದುದು ; ಮದ್ಯ ಮುಂತಾದ ಮಾದಕಪೇಯ : "ಸುರಾ . . . ವರುಣಾತ್ಮಜಾ . . . ಮದ್ಯಂ - ೧೩ ಹೆಂಡದ ಪೆಸರು, ದೇವಯೋಗ್ಯವಾದ ಮದ್ಯಕ್ಕೂ ಹೆಸರುಗಳು" (ಸಿದ್ಧಾಂತಿ. ೩೧೮).

[ಸಂ. ವರುಣಾತ್ಮಜಾ]

ವರುಣಾನಿ (ನಾ). ವರುಣನ ಹೆಂಡತಿ : ಸಹದೇವನುಂ . . . ವರುಣನ ಮಕರಮುಂ ವರುಣಾನಿಯ ಕೊರಲೊಳ[ಯ್ದೆ] ಮಿನುಗುಮೆಱೆಯೆಯುಱೆದ ವಸ್ತುಗಳೆಲ್ಲಮಂ ತಂದು ಮುಂದಿಟ್ಟಂ (ಪಂಪಭಾ. ೬-೩೨ ವ); ಮುನ್ನಿನ ಕಾಯ್ಪುಗೆಟ್ಟು . . . ಚಂಡಕಿರಣಂ ವರುಣಾನಿಯ ಕೈಯ ಕೆಂಬರಲ್ಗನ್ನಡಿಯಂತೆ ದಿಟ್ಟಿಗಳವಟ್ಟಿರೆ (ಪಂಗಾಮಾ. ೮-೨).

[ಸಂ.ವರುಣಾನೀ]

ವರುಣಾಲಯ (ನಾ). ವರುಣನ ವಾಸಸ್ಥಾನ ; ಕಡಲು ; ಸಮುದ್ರ : ಅರುಣೋದಯಪ್ರಭೆಯ, ಗಿರಿಶೃಂಗದುನ್ನತಿಯ ವರುಣಾಲಯಾಯತಿಯ ನಿರುಕಿಸಿದೊಡ ಹುದೇಂ? ಬೆರಗು, ಬರಿಬೆರಗು, ನುಡಿಗರಿದೆನಿಪ್ಪಾನಂಜ (ಮಂಕಿಕ. ೪೯೫). [ಸಂ.]

ವರುಣಾಶೆ (ನಾ). ಪಡುವಣ ದಿಕ್ಕು ; ಪಶ್ಚಿಮ : ತನ್ಮಹೀಧರಾವಧುಣಾಶಾವಿಶೇಷಕ ಮಾಗಿರ್ದ ಲೋಹಿತಾಕ್ಷ . . . ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ (ಆದಿಪು. ೭-೩೭); ವರುಣಾಶಾವನಜೂತವಲ್ಲಿ ಗಗನಾಲಂಬಕ್ಕೆ ಪರ್ಬಿರ್ದು ಭಾಸ್ಕರಚ್ಛತ್ರಂ ಬರೆ ಸಂಜೆಗೆಂಪೆನಿಪ ಭಾಸ್ವತ್ಪಲ್ಲವಂದಾಳ್ದು (ರಾಜಶೇ. ೧೩-೧೧೨). [ಸಂ. ವರುಣಾಶಾ]

ವರುಣಾಸ್ತ್ರ (ನಾ). = ವರುಣಬಾಣ : ಬಲಮೆಲ್ಲಮಂ ಸುಡುವ ಪಾವಕಜ್ವಾಲೆಯಂ ಕಲಿಲಕ್ಷ್ಮಣಂ ಕಂಡು ವರುಣಾಸ್ತ್ರದಿಂದದಂ ನಿಲಿಸಲ್ಕೆ (ಕೈಮಿಭಾ. ೨೦-೫೬). [ಸಂ.]

ವರುತ್ರ (ನಾ). ಹೊದೆಯುವ ವಸ್ತ್ರ ; ಉತ್ತರೀಯ. [ಸಂ.]

ವರುಶ 'ಬರಿಸ' ನೋ.

ವರುಷ 'ಬರಿಸ' ನೋ.

ವರುಷಂಗರೆ (ಕ್ರಿ). ಮಳೆಯನ್ನು ಸುರಿಸು ; ವರ್ಷಿಸು : ಎಲೆ ಕಾಂತ ನಿನ್ನ ಸವಿವಚನವರುಷಂಗರೆಯೆ ನಲವಿಂದೆನ್ನ ಹೃದ್ಧರಣಿಯತಿಪದಗೊಂಡು . . . ಸುಜ್ಞಾನಲತೆ ಪರ್ಬಿ ಪಲ್ಲವಿಸುತೆ (ನವಮೋ. ೬-೩). [ವರುಷ (< ಬರಿಸ) + ಕರ್ಪ್ಪ (< ಕಱ್ಪ್ಪ)]

ವರೂಥ (ನಾ). ೧. ಘರ್ಷಣೆಯಿಂದ ರಥಕ್ಕೆ ಧಕ್ಕೆಯಾಗದಿರುವಂತೆ ಸುತ್ತಲೂ ಅಳವಡಿಸುವ ಮರದ ಆವರಣ ಅಥವಾ ಚರ್ಮದ ಹೊದಿಕೆ : "ವರೂಥಃ, ರಥಗೋಪನಂ – ಈ ೨ ರಥದ ಕಟ್ಟುವಂಜರ" (ಹಲಾಯು. ೭೪-೨೯೫). ೨. ಕವಚ ; ಚಿಲಖತ್ತು. ೩. ಗುರಾಣಿ : ಢಾಲು. ೪. ರಕ್ಷಣೆ ; ಕಾಪು. ೫. ಗುಂಪು ; ಸಮೂಹ. ೬. ಚರ್ಮ. ೭. ಮನೆ. ೮. ಸೈನ್ಯ ; ಪಡೆ. ೯. ತೇರು ; ರಥ : ಅಂತುಭಯವರೂಥಿನಿಯ ವರೂಥಂಗಳ್ ಮಲ್ಲಾಮಲ್ಲಿಯಾಗೆ ಕಾದುವಾಗಳ್ (ಪಂಪಭಾ. ೧೦-೯೦ ವ); ನರರಿಂ ನರರಂ ಹರಿಯಿಂ ಹರಿಯಂ ವರೂಥಮಂ ತದ್ವರೂಥದಿಂದಿಟ್ಟು . . . ಮರುತ್ಸುತಂ ಮೋದಿ ತವಿಸಿದಂ ಮಾರ್ಬಲಮಂ (ಗದಾಯು. ೩-೮). [ಸಂ.]

ವರೂಥಿನಿ (ನಾ). ಪಡೆ ; ಸೈನ್ಯ : ಸರಿತ್ಸುತನ ಸುರಿವ ಸರಲ ಮಟೆಯೊಳಟೊದ ನಿಜವರೂಥಿನಿಯ ಸಾವುಂ ನೋವುಮೇವಮಂ ಮಾಡೆ (ಪಂಪಭಾ. ೧೧-೧೮ ವ); ಲಂಕೆಗೆತ್ತಿದಂ ಧರೆ ಕಿಱಿದೀ ವರೂಥಿನಿಗೆನಲ್ ವಿಲಯಾಂತಕನಂತೆ ಪೇಚರಂ (ಪಂರಾಮಾ. ೧೦-೧೧೩). [ಸಂ. ವರೂಥಿನೀ]

ವರೂಥಿನೀಪತಿ (ನಾ). ಸೈನ್ಯದ ಮುಖಂಡ ; ದಳಪತಿ : ಮುನ್ನಿನ ಮಾಟ್ಯೆಯೊಳೆ ವರೂಥಿನೀಪತಿಯಂ ಬೆಸಸಿದೊಡೆ (ಆದಿಪು. ೧೩-೭೮ ವ). [ಸಂ.]

ವರೆ$_1$ 'ಬರೆ$_1$' ನೋ.

– ವರ್ಷೆ$_2$, – ವಾರ್ಷೆ$_2$ (ಅ). ತನಕ ; ವರೆಗೆ : ಕೊಡಗೆಯಾಗಿ ಚಂದ್ರಾದಿತ್ಯವರೆ ಅನುಭವ್ಸಿ ಶುಖದಿಂ ಬಾಹರು (ಎಕ. X (S), ಚಿಕ್ಕಬ. ೮-೧೨; 1500); ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ (ಭಾವಗೀ. ೩೮೯). –ವಾರ್ಷೆ$_2$: ಮಹಾಜನ(ಅ) ಐವ[ದಿ]ನ್ನ X [ಕಾ]ಲಂ ಕಟ್ಟಿ ತುಪ್ಪದ [ತೆ]ಱೆಯ ಚನ್ನ್ರ ಸೂರ್ಯ್ಯ[ವಾರೆ] ದಾನಗೊಟ್ಟ (ಸೌಇಇ. XI-i, ೧೩-೧೧; 869); ನೀನಲ್ಲದನ್ಯದೈವವುಂಟೆಂಬವನ ಬಾಯ ಕೆನ್ನೆವಾರೆ ಸೀಳಿದಲ್ಲದೆ ಏನ್ನ ಮುನಿಸು ಹೋಗದಯ್ಯಾ (ಬಸವ. ೭೫೧). '– ವರಂ' ಪರಾ.

[ದೇ. ॥ ತಮಿ. ವರೈ, ವರೈವು = ಮಿತಿ, ಸೀಮೆ; ಮಲ. ವರೇ; ತೆಲು. ವರ = ಮೇರೆ]

– ವರೆಗಂ, – ವರವಿಗೆ, – ವರಿವಿಗೆ, – ವರೆಗೆ (ಅ). ತನಕ : ಚಂದ್ರಾದಿತ್ಯರ ಕಾಲಂ ವರೆಗಂ . . . ರಾಜ್ಯಾಭಿವ್ರಿ(ವೃ)ದ್ಧಿ ಸಲುತ್ತಿರೆ (ಇಆ. XII, ೨೧೯-೧೪; 814); ಆಯುಂ ಶ್ರೀಯುಂ . . . ನೃಪತಿ ನಿನಗೆ ನಿಜಸಂತತಿಯುಂ ನ್ಯಾಯದೆ ಪೆರ್ಬುವುದಕ್ಕೀ ತೋಯಧಿಧರ[ಣೀಧ]ರಾಧರ ಸ್ಥಿತಿವರೆಗಂ (ಕವಿರಾ. ೩-೨೦೬); ಇನ್ನೆವರೆಗಮಿರ್ದೆವಿನ್ನೆಮಗೆ ನಿತ್ತರಿಸಲ್ ನೆಱವಿಲ್ಲ (ಆದಿಪು. ೯-೮೯); ಅನ್ನೆಗಮಿನ್ನೆಗಮೆನ್ನೆಗಮೆನ್ನದೆ ಕಡೆಗುಂಟು ಲೋಪಮಿದಿರೊಳ್ ಸೀಮೋತ್ಸನ್ನಂ ವರಂ ವರೆಗಮಿರೆ (ಶಮದ. ೨೮೮). – ವರವಿಗೆ : ಮುಖ್ಯಅತಿಥಿಗಳು ಬರುವ ವರವಿಗೆ ಕಾರ್ಯಕ್ರಮವನ್ನು ಪ್ರಾರಂಭಿಸುವಂತಿಲ್ಲ (ರೂಢಿ). – ವರಿವಿಗೆ : ನೀನು ಎಲ್ಲಿಯವರಿವಿಗೆ ನನ್ನ ಜೊತೆ ಬರಲು ಸಾಧ್ಯವಾಗತ್ತೆ? (ರೂಢಿ). – ವರೆಗೆ : ಹನ್ನೆರಡುಯೋಜನವರೆಗೆ [ಪಾಠಾಂ. ತರದ, ವರೆಯ] ಭೋಜನಶಾಲೆಗಳು ವಿಸ್ತರಿಸಿದವು (ತೊರಾ. ೧-೭-೭); ಆ ಕಲ್ಲುಕಟ್ಟೆಯವರೆಗೆ (ತನಕ) ನೀವಿಬ್ಬರೂ ಓಡಿ (ಮಧ್ಯಮ. ೧೫೮). '– ವರಂ' ಪರಾ. [< – ವರ್ಷೆ$_2$ / ತಮಿ. ವರೈಕ್ಕುಮ್; ತೆಲು. ವರಕು]

– ವರೆಗೆ 'ವರೆಗಂ' ನೋ.

ವರೇಕು (ನಾ). [ಸಂಗೀತ] ರಾಗವನ್ನು ವಿಸ್ತಾರವಾಗಿ ಹಾಡುವಿಕೆ (?) : ಸುಬ್ಬಣ್ಣ ತನ್ನಪ್ಪಕ್ಕೆ ತಾನೇ ಕುಳಿತು ಪಿಟೀಲನ್ನು ನುಡಿಸುತ್ತ ತನಗೆ ತೋರಿದ ಸಂಗತಿ ವರೇಕುಗಳನ್ನು ಹಾಕುತ್ತ . . . ಗಾನಯೋಗದಲ್ಲಿ ಮಗ್ನನಾಗಿರುವನು (ಸುಬ್ಬಣ್ಣ. ೯); ಅವಳ ಹಾಡಿಕೆಯಲ್ಲಿ . . . ವರೇಕುಗಳು ಅವರಿಗೆ ತುಂಬ ಮೆಚ್ಚಿಕೆಯಾದವು (ರೂಪಸ. ೪೯). [?]

ವರೇಣ್ಯ (ಗು). ೧. ಬಯಸತಕ್ಕ ; ಅಪೇಕ್ಷಣೀಯವಾದ. ೨. ಮುಖ್ಯವಾದ ; ಪ್ರಧಾನವಾದ. ೩. ಅತ್ಯುತ್ತಮನಾದ ; ಶ್ರೇಷ್ಠನಾದ. (ನಾ). ೪. ಮುಖ್ಯವಾದುದು ; ಪ್ರಧಾನವಾದುದು :"ಪ್ರಶಸ್ತಂ ವರಂ ರಮಣೀಯಮಪರಂ ವರೇಣ್ಯಂ" (ಮಂಗರಾ. ೧೨೬-೨). ೫. ಶ್ರೇಷ್ಠನಾದವನು ; ಉತ್ತಮ ; ಅಗ್ರೇಸರ : ವಾಗ್ಮಿಪ್ರವರಂ ವರೇಣ್ಯನವನೀ ದೇವಾನ್ವಯಕ್ಕೆ (ಸುಕುಮಾ. ೨-೩೮); ಅಖಿಳಕಳಾನೈಪುಣ್ಯ ಜನವರೇಣ್ಯನುಮೆನಿಸಿ ಪೊಗಳ್ವೆವಡೆದು (ರಾಜಶೇ. ೪-೮೨ ವ). ೬. ಪಿತೃದೇವತೆಗಳ ಒಂದು ವಿಶಿಷ್ಟಪಂಗಡ. ೭. ಕುಂಕುಮಕೇಸರಿ. [ಸಂ.]

ವರೇಯುಗ್ರಾಮ (ನಾ). ಒಂದು ಊರಿನ ಹೆಸರು : ಮಾಱುಚ್ಛಮಱುಮನ್ನೋ ವರೇಯುಗ್ರಾಮೇ (ಇಆ. VI, ೫೬-೨೯; ೫೦). [? + ಗ್ರಾಮ]

ವರೋಪಚಾರ (ನಾ). ಮದುವೆಯ ಕಾಲದಲ್ಲಿ ಹೆಣ್ಣಿನ ಮನೆಯವರು ಮದುಮಗನಿಗೆ ಕೊಡುವ ಉಡುಗೊರೆ : ವರದಕ್ಷಿಣೆ, ವರೋಪಚಾರ . . . ಅವನಿಗೆ ಏನೂ ಬೇಕಿಲ್ಲವಂತೆ (ಸಚಿದಾ. II, ೧೦೦೧); ವರೋಪಚಾರ, ಬೀಗ, ಬೀಗಿತ್ತಿಯರ ಉಪಚಾರ . . . ಸಂಪ್ರದಾಯವನ್ನು ಅವರೂ ಬಲ್ಲರು (ದೂರಸ. ೧೪೬). [ಸಂ.]

ವರ್ಕರ (ನಾ). ೧. ಯಾವುದಾದರೂ ಪ್ರಾಣಿಯ ಮರಿ. ೨. ಕುರಿಮರಿ. [ಸಂ.]

ವರ್ಕುಣಿಕೆ (ನಾ). ಕುದುರೆಯ ಕಣ್ಣಿನ ಮೇಲಿನ ಚರ್ಮದ ಪೊರೆ: ಕಣ್ಣಂ ಮುಚ್ಚಿಹ ಪೊಟ್ಟೆಯ ಸನ್ನುತ ವರ್ಕುಣಿಕೆ (ಅಶ್ವಶಾ. ೯-೧೫). [?]

ವರ್ಖ 'ವರಕು$_1$' ನೋ.

ವರ್ಗ (ನಾ). ೧. ತೆಗೆದುಹಾಕುವಿಕೆ; ವರ್ಜನ. ೨. ಸಮಾನಧರ್ಮ, ಜಾತಿ ಮುಂತಾದುವುಗಳಿಗೆ ಸೇರಿದ ಮನುಷ್ಯರ ಪ್ರತ್ಯೇಕ ವಿಭಾಗ : ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ (ಬಸವ. ೪೭೨). ೩. ಒಂದೇ ಜಾತಿಗೆ ಸೇರಿದ ಪ್ರಾಣಿಸಮೂಹ. ೪. ಒಂದು ಗುಂಪಿಗೆ ಸೇರಿಸಲಾದ ವಸ್ತು, ವಿಷಯ ಮುಂತಾದುವು. ೫. ಗುಂಪು ; ಸಮೂಹ ; ಶ್ರೇಣಿ : ರವಿ ಮುಖ್ಯಂ ಗ್ರಹವರ್ಗದೊಳ್ (ಸೋಮೇಶ. ೪); ಮುಂದನಱಿಯದ ಗುರುವು ಹಿಂದನಱಿಯದ ಶಿಷ್ಯ ಸಂದೆರಡುವರ್ಗವಱಿಯದಿರ್ದುಪದೇಶ ಕೊಂದುಕೊಂಡಂತೆ (ಸರ್ವಜ್ಞ. ೮೪). 'ವರ್ಗಕಲಹ' ಪರಾ. ೬. ವಿಭಾಗ ; ಪಕ್ಷ ; ಪಂಗಡ. ೭. ಧರ್ಮ, ಅರ್ಥ ಮತ್ತು ಕಾಮ ಎಂಬ ಮೂರು ಪುರುಷಾರ್ಥಗಳು ; ತ್ರಿವರ್ಗ. ೮. ವರ್ಗೀಕೃತವಾದ ಶಬ್ದಗಳ ಒಂದು ಗುಂಪು. ೯. ಗ್ರಂಥದಲ್ಲಿನ ಪ್ರಕರಣ ; ಅಧ್ಯಾಯ. ೧೦. ಪ್ರಾಂತ್ಯ ; ಪ್ರದೇಶ. ೧೧. ಶಾಲೆಯ ತರಗತಿ ; ಇಯತ್ತೆ : ಅವನು ತನ್ನ ವರ್ಗದೊಳಗೆ ಓದುವ ಪುಸ್ತಕಗಳನ್ನೂ ಗಡಿಯಾಲವನ್ನೂ ಮಾರಿಕೊಂಡನು (ಮುಂಬಯಿ. ೪-೧೯೨); ಮಕ್ಕಳು ಗದ್ದಲಮಾಡದೆ ಸಾಲಾಗಿ ತಮ್ಮ ತಮ್ಮ ವರ್ಗಗಳಿಗೆ ಹೋಗುವರು (ಕಪಪು. ೫-೩). ೧೨. ಮೇಲಧಿಕಾರಿ ಅಥವಾ ಸರ್ಕಾರವು ತನ್ನ ನೌಕರನನ್ನು ಒಂದು ವಿಭಾಗದಿಂದ ಅಥವಾ ಊರಿನಿಂದ ಮತ್ತೊಂದು ವಿಭಾಗಕ್ಕೆ ಅಥವಾ ಊರಿಗೆ ಕಳಿಸುವುದು : ಪರವೂರಿಗೆ ವರ್ಗವಾದಾಗ ಅಗಲುವಿಕೆಯ ಕಣ್ಣೀರು ಸುರಿಸಿ ಹೋಗದವರು ಒಬ್ಬರೂ ಇರಲಿಲ್ಲ (ಕಂಬಾಹ. ೧೨೧); ನನಗೆ ಬೆಂಗಳೂರಿನಿಂದ ಇಲ್ಲಿಗೆ ವರ್ಗವಾದಾಗ . . . ಯತ್ನವಿಲ್ಲದೆ ರೈಲನ್ನು ಹತ್ತಿದೆ (ರಾಯಕ. ೨). ೧೩. ಕಂದಾಯದ ದಾಖಲೆಯಲ್ಲಿ ಪ್ರತ್ಯೇಕಸಂಖ್ಯೆಯಿರುವ ಜಮೀನಿನ ಒಡೆತನದ ನಮೂದು ; ಪಟ್ಟಾ : 'ವರ್ಗದಾರ' ಪರಾ. ೧೪. ಖಾತೆವಾರು ಜೋಡಿಸಿ ಬರೆದ ಲೆಕ್ಕ ; ವರ್ಗೀಕೃತವಾದ ಲೆಕ್ಕ : ವಾಸಪ್ಪಯ್ಯನವರ ಅಂಗಡಿಗೆ ಹೋಗಿ ಕುಳಿತು ಅವರ ಹಳೆಯ ಲೆಕ್ಕಗಳನ್ನು ನಕಲು ತೆಗೆಯುವುದಕ್ಕೂ, ವರ್ಗ, ಉಳಿಗಗಳನ್ನು ಇರಿಸುವುದಕ್ಕೂ ಸಹಾಯಮಾಡುತ್ತಿದ್ದರು (ಜಾಯದಾ. ೩). ೧೫. [ಗಣಿತ] ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಗುಣಿಸಿದಾಗ ಬರುವ ಲಬ್ಧ: ನಾಲ್ಕೆಂಬುದು ಎರಡರ ವರ್ಗ (ಕ್ರೋಡಿಸಿ. ೨೭೩). ೧೬. [ವ್ಯಾಕ] ಕಕಾರದಿಂದ ಮಕಾರದವರೆಗೆ ಇರುವ ಐದೈದು ವ್ಯಂಜನಗಳ ಒಂದೊಂದು ಗುಂಪು ; ಕವರ್ಗ ಮುಂತಾದುವು : ಎಯ್ದೆ ಕಕಾರದಿನಿರ್ಪತ್ತಯ್ದಕ್ಕರಮೆಯ್ದುವನ್ನೆಗಂ ಪರಿವಿಡಿಯಿಂದಯ್ದಯ್ದುಗೆಯ್ದು ವರ್ಣದಿನಯ್ದುಂ ವರ್ಗಂಗಳಕ್ಕುಂ (ಕಾವ್ಯಾವ. ೧೫); ಕಕಾರಂ ಮೊದಲಾಗಿ ಮಕಾರಪರ್ಯಂತಮೈದೈದುವರ್ಣಂಗಳೊಂದೊಂದು ವರ್ಗಮಾಗಿ, ವರ್ಗಮೈದಕ್ಕುಂ (ಶಮಾದ. ೧೩ ವೃತ್ತಿ).

ವರ್ಗಮಾಡು = ೧. ನೌಕರನನ್ನು ಬೇರೆ ಸ್ಥಳಕ್ಕೆ ಕಳಿಸು ,—ವರ್ಗಾಯಿಸು : ಸಾಹೇಬನು ಸಿಟ್ಟಾಗಿ ತನಗೆ ಬೇಗನೆ ವರ್ಗಮಾಡಿದರೆ ಹೇಗೆ? (ಕೊತಕಾ. ೪೧). ೨. [ಗಣಿತ] ಒಂದು ಸಂಖ್ಯೆಯನ್ನು ಅದರಿಂದಲೇ ಗುಣಿಸು : ಉಳಿದದ್ದನ್ನು ಅದರ ವರ್ಗಮಾಡಬೇಕು. ಲಾಂಬಿಗೂ ಕೂಡ ವರ್ಗಮಾಡಬೇಕು (ಭೂಮಿಅ. ೪೩). [ಸಂ.]

ವರ್ಗಂಗೊಳ್ (ಕ್ರಿ). ಗುಣಿಸಲ್ಪಡು : "ವರ್ಗಮೆಂದುಂ ಕೃತಿಯೆಂದುಂ ವರ್ಗಂಗೊಂಬುದರ್ಕೆ ಹೆಸರು" (ವೃವಹಾ. ೧೧-೨೪). [ವರ್ಗ + ಕೊಳ್$_1$]

ವರ್ಗಕಲಹ (ನಾ). ಸಮಾಜದ ವಿವಿಧಶ್ರೇಣಿಗಳಲ್ಲುಂಟಾಗುವ ಜಗಳ : ಸರ್ವರಿಗೂ ದೊರೆಯಬೇಕಾದ ಮೂಲಭೂತಹಕ್ಕುಗಳಿಗೆ ಭಂಗ ಬಂದು ವರ್ಗಕಲಹ ಪ್ರಾರಂಭವಾಗುತ್ತದೆ (ನವ್ಯಕಾ. ೧೮). [ಸಂ.]

ವರ್ಗಣಿ (ನಾ). ಚಂದಾ ; ವಂತಿಗೆ : ವರ್ಗಣಿ ಕೊಟ್ಟು ಸದಸ್ಯರಾಗುವುದೊಂದನ್ನು ಬಿಟ್ಟು ಗ್ರೀಸಿಯವರು ಇನ್ನೆಲ್ಲ ವಿಧದಲ್ಲೂ ವನಿತಾಸಮಾಜದ ಸಹಾಯಕರಾಗಿದ್ದಾರೆ (ದೇಜ್ಯೋಕಿ. ೨೨); ವಕೀಲರ ಗುಂಪು ವರ್ಗಣಿ ಕೂಡಿಸಿ ಮದುವೆಯ ವೆಚ್ಚದ ಭಾರವನ್ನು ಸಹ ವಹಿಸಲು ಒಪ್ಪಿದೆ (ಇಪ್ರಸ. ೪೬೯). [<— ಮರಾ. ವರ್ಗಣೀ]

ವರ್ಗಣಿದಾರ (ನಾ). ೧. ನಿಯಮಿತಕಾಲಕ್ಕೆ ನಿಗದಿಯಾದ ಹಣವನ್ನು ಕೊಟ್ಟು, ಪತ್ರಿಕೆ ಮೊದಲಾದುವನ್ನು ಪಡೆಯುವವನು ; ಚಂದಾದಾರ : 'ಸಿಟಿವಾಯಿಸ್' . . . ಹೊರಗಣ ಊರುಗಳಲ್ಲಿ ವರ್ಗಣಿದಾರರಿಲ್ಲದಿದ್ದರೂ . . . ಮುಂಬಯಿ ನಾಗರಿಕರು ವಿರಾಮವಾಗಿ ಓದುವಂಥ ಪ್ರಸಿದ್ಧಪತ್ರಿಕೆ (ಒಂಬಿದ. ೩). ೨. ಉತ್ಸವ, ಸಮಾರಂಭ ಮುಂತಾದ ಸಾರ್ವಜನಿಕಕಾರ್ಯ ಅಥವಾ ಧರ್ಮಕಾರ್ಯಗಳಿಗಾಗಿ ವಂತಿಗೆ ಕೂಡಿಸುವವನು : ನನ್ನ ಕಿಸೆಯೊಳಗಿಂದ ಒಂದು ರೂಪಾಯಿ ತೆಗೆದು ಅವಳಿಗೆ ಕೊಟ್ಟು ದಾರಿಗೆ ಹಚ್ಚು. ಈ ವರ್ಗಣಿದಾರರ ಕಾಟ ಹೆಚ್ಚಾಯಿತು (ಚಂದಾಟಿ. ೮೫). [<— ಮರಾ. ವರ್ಗಣೀದಾರ್]

ವರ್ಗತ್ರಯ (ನಾ). ಧರ್ಮ, ಅರ್ಥ ಮತ್ತು ಕಾಮವೆಂಬ ಮೂರು ಪುರುಷಾರ್ಥಗಳು ; ತ್ರಿವರ್ಗ : ಮುನಿಯಂ ಸಂಧಿಸಿ ವರ್ಗತ್ರಯಾನ್ವಿತಂ ನೆಗೞ್ದೆ ಬುಧಂ (ಮಧಕಿ. ೧-೫೯); ಜಯಮಂ ಧರ್ಮಕ್ಕೆ ಧರ್ಮಾನ್ವಯಮನಸದಳಂ ಸಾಧುವರ್ಗ್ಗಕ್ಕೆ ವರ್ಗ್ಗತ್ರಯಮಂ ತನ್ನಂತರಂಗಕ್ಕೊಡರಿಸೆ (ಎಕ. VII, ಶಿಕಾಂ. ೧೩೬-೧೦; ೧೦೬೫). [ಸಂ.]

ವರ್ಗದಾರ (ನಾ). ಪಟ್ಟಾಸಹಿತವಾಗಿ ಭೂಮಿಯನ್ನು ಪಡೆದಿರುವವನು ; ಜಮೀನಿನ ಒಡೆಯ : ಒಬ್ಬನ ಆಸ್ತಿಯ ಬಾಂದಗಲ್ಲು ದಾಟಿದ ಮೇಲೆ . . . ಮತ್ತೊಬ್ಬ ವರ್ಗದಾರನ ಸೊತ್ತು ಸರ್ವಸ್ವವೂ ಇರುತ್ತದೆ (ಪರಾವ. ೧೮).

[ವರ್ಗ + — ದಾರ್$_2$]

ವರ್ಗಪರೀಕ್ಷೆ (ನಾ). ತರಗತಿಯಲ್ಲೇ ನಡೆಯುವ ಪರೀಕ್ಷೆ : ವರ್ಗಪರೀಕ್ಷೆಯಲ್ಲಿ ಅವಳು ಚೆನ್ನಾಗಿ ಮಾಡಿದ್ದಾಳೆ (ದೂರಸ. ೨೩೦). [ಸಂ. ವರ್ಗಪರೀಕ್ಷಾ]

ವರ್ಗಪ್ರಾಸ (ನಾ). [ಛಂದ] ಅನುನಾಸಿಕವೊಂದನ್ನು ಬಿಟ್ಟು ಒಂದು ವರ್ಗದ ಮೊದಲ ನಾಲ್ಕು ಅಕ್ಷರಗಳು ಕ್ರಮವಾಗಿ ನಾಲ್ಕುಸಾಲುಗಳಲ್ಲಿರುವ ಒಂದು ಬಗೆಯ ಪ್ರಾಸ ; ಉದಾ : ಸಕಲಜನವಿನುತನಂ ಶತಮಖಸದೃಶ ವಿಶಾಲವಿವಿಧವಿಭವೋದಯನಂ ಪ್ರಗತಗುಣಗಣನನರಿಬಲವಿಘಟನನಂ ಕಂಡನಣುವನಾ ರಾಘವನಂ (ಕವಿಗಾ. ೨-೩೮): ವರ್ಗದಕ್ಕರಂಗಳ್ ನಾಲ್ಕುಂ ಸಂತಮಿರೆ ಪೇೞ್ದ ತಾಣದೊಳಂತಕ್ಕುಂ ಪ್ರಾಕೃನೋಕ್ತವರ್ಗಪ್ರಾಸಂ (ಕವಿಗಾ. ೨-೩೬). [ಸಂ.]

ವರ್ಗಭೇದ (ನಾ). ಸಮಾಜದಲ್ಲಿರುವ ಉಚ್ಚವರ್ಗ ಮತ್ತು ಕೆಳವರ್ಗಗಳೆಂಬ ಭೇದ : ವರ್ಗಭೇದವನ್ನು ನಮ್ಮ ಜನ ಸಂತೋಷದಿಂದ ಕಹಿಯಿಲ್ಲದೆ ಕಾಯ್ದಾರೆ. ಆದ್ದರಿಂದ ಈ ದೇಶಕ್ಕೆ ಮಾರ್ಕ್ಸಿಸಂ ಕೂಡ ವಿನಾಯತಿ (ಹೊಸಕ್ರಿ. ೨೪೧). [ಸಂ.]

ವರ್ಗಮೂಲ (ನಾ). [ಗಣಿತ] ಸಮಾನವಾದ ಎರಡುಸಂಖ್ಯೆಗಳನ್ನು ಗುಣಿಸಿದಾಗ ಬರುವ ಸಂಖ್ಯೆಗೆ ಮೂಲಸಂಖ್ಯೆ ; ವರ್ಗಮಾಡಿದ ಲಬ್ಧಕ್ಕೆ ಮೂಲವಾದ ಸಂಖ್ಯೆ; ಉದಾ : ನಾಲ್ಕರ ವರ್ಗ ಹದಿನಾರು ; ಹದಿನಾರರ ವರ್ಗಮೂಲ ನಾಲ್ಕು : ಉಗ್ಗಡದ ಘನವರ್ಗಮೂಲವನಱಿದೊಡೀ ಭವದ ಹಗ್ಗ

ಹರಿದೇಱುವೆನೆ ಮುಕ್ತಿಯ (ಪ್ರಪ್ಞಾಪ. ೭-೧೯); ಇವುಗಳ ಮೇಲೆ ಗುಣಾಕಾರ ಕೋಷ್ಠಕಗಳು, ವರ್ಗಗಳ ಮತ್ತು ವರ್ಗಮೂಲಗಳ ಕೋಷ್ಠಕಗಳು . . . ಮುಂತಾದುವು ಬರೆಯಲ್ಪಟ್ಟವೆ (ಗಣಿಚ. ೧೩). [ಸಂ.]

ವರ್ಗಾಕ್ಷರ (ನಾ). [ವ್ಯಾಕ] ಕಕಾರದಿಂದ ಮಕಾರದ ವರೆಗಿನ ಇಪ್ಪತ್ತೈದು ಅಕ್ಷರಗಳ ಸಮೂಹ ; ವರ್ಗೀಯಾಕ್ಷರ : ಇ ವರ್ಗಾಕ್ಷರಂಗಳಿರ್ಪತ್ತೈದಱ ಕಡೆಯಕ್ಕರಂಗಳವರ್ಗಂಗಳ್ (ಶಮದ. ೧೩. ವೃತ್ತ). [ಸಂ.]

ವರ್ಗಾಯಿಸು 'ವರ್ಗಿಸು' ನೋ.

ವರ್ಗಾವಣೆ (ನಾ). ೧. ವರ್ಗಾಯಿಸುವಿಕೆ ; ವರ್ಗಮಾಡುವಿಕೆ : ಅವನ ಹುದ್ದೆಯ ವರ್ಗಾವಣೆಗೆ ಅವಳೇ ಮುಖ್ಯಕಾರಣಳಾಗಿದ್ದಳು (ಪುಭಾ. ೨೨೨). ೨. ಅಧಿಕಾರ, ವಸ್ತು ಮುಂತಾದುವು ಒಬ್ಬನ ವಶದಿಂದ ಮತ್ತೊಬ್ಬನ ವಶಕ್ಕೆ ಹೋಗುವುದು; ಹಸ್ತಾಂತರ : ಎಲ್ಲಿನ್‌ಸ್ಕನ್ . . . ಎಂದು ಜನ ತಮ್ಮ ಆಡಳಿತವನ್ನು ತಾವೇ ನೋಡಿಕೊಳ್ಳಲು ಸಮರ್ಥರಾಗಿ ಅವರ ಕೈಗೆ – ತಾನಾಗಿಯೋ ಅಥವಾ ಬಲಾತ್ಕಾರದಿಂದಲೋ – ಅಧಿಕಾರ ವರ್ಗಾವಣೆಯಾಗಬಹುದು ಎಂದು ಯೋಚಿಸುತ್ತಿದ್ದನು (ದಾದಾನ. V, ೬೧೪). [< ವರ್ಗ + – ಅಣೆ]

ವರ್ಗಾವರ್ಗಿ (ನಾ). ನೌಕರಿ ಮುಂತಾದುವಕ್ಕೆ ಸಂಬಂಧಿಸಿದಂತೆ ಇಬ್ಬರು ನೌಕರರಿಗೆ ಪರಸ್ಪರ ಪ್ರಯೋಜನವಾಗುವಂತೆ ಒದಗುವ ವರ್ಗ : ಅವರೇನು ಮಾಡಬಹುದು? ವರ್ಗಾವರ್ಗಿ ಮಾಡಬಹುದು (ಕೊತಕಾ. ೪೨).

[<— ಮರಾ. ವರ್ಗಾವರ್ಗೀ]

ವರ್ಗಿಸು, ವರ್ಗಾಯಿಸು (ಕ್ರಿ). ೧. ಜೊತೆಮಾಡು ; ಕೂಡಿಸು ; ಸೇರಿಸು : ದುರ್ಗಂಧವೊಡಲ ಮೂಳರಿಗೆ ಮೂಳರ ತಂದು ವರ್ಗಿಸಿ ಸರಿಮಾಡಬಹುದು (ಭರಚ. ೯-೯೩). ೨. [ಗಣಿತ] ಗುಣಿಸು ; ಗುಣಾಕಾರ ಮಾಡು : ವರ್ತಿಸು ವರ್ಗಿಸು ಈಡಿಱಿ . . . ಕಾದಿಸು ಪೂಜಿಸು ಉತ್ತಮದಿಂ ಪೇಟೆ ಮೊದಲ ಗುಣಕಾರಂಗಳ್ (ವೃವಕಾ. ೧೦-೫). ವರ್ಗಾಯಿಸು : ೩. ನೌಕರನನ್ನು ಕೆಲಸದ ಮೇಲೆ ಬೇರೆ ಜಾಗಕ್ಕೆ ಕಳಿಸು ; ವರ್ಗಮಾಡು : ಮೊಘಾಸನು . . . ಕೆಲಕಾಲದ ಮೇಲೆ ಅಲ್ಲಿಂದ ಶಕ್ಷಣಮಂತ್ರಿಮಂಡಲಕ್ಕೆ ವರ್ಗಾಯಿಸಲ್ಪಟ್ಟನು (ಮೊಘಾಸಾ. ೪ ಮುನ್ನುಡಿ); ಇಬ್ಬರನ್ನು ವರ್ಗಾಯಿಸಿದರೆ . . . ಕೆಲಸ ನಡೆಸಲು ಒಬ್ಬರಾದರೂ ಉಳಿಯುವರು (ಪೂರಾಣ. ೨೨೦). ೪. ಅಧಿಕಾರ, ವಸ್ತು ಮುಂತಾದುವನ್ನು ಬೇರೆ ಸ್ಥಳಕ್ಕೆ ತೆಗೆದುಕೊಂಡು ಹೋಗುವಂತೆ ಮಾಡು ; ಸ್ಥಳಾಂತರಿಸು : ಸಾಕಷ್ಟು ಬೆಳೆದಿರುವ ಸಸಿಗಳನ್ನು ಹದಮಾಡಿರುವ ಜಮೀನಿಗೆ ವರ್ಗಾಯಿಸಬೇಕು (ತರಚ. ೬); ನಾಲ್ಕನೆಯ ಕಲೀಫ ಅಲಿ ಸರ್ಕಾರದ ಕೇಂದ್ರವನ್ನು ಇರಾಕಿನಲ್ಲಿಯ ಕೂಫಾಪಟ್ಟಣಕ್ಕೆ ವರ್ಗಾಯಿಸಿದನು (ಇಸ್ಲಾಂಸಂ. ೧೪). ೫. ಅಧಿಕಾರ, ವಸ್ತು ಮುಂತಾದುವನ್ನು ಇನ್ನೊಬ್ಬನ ವಶಕ್ಕೆ ಕೊಡು ; ಹಸ್ತಾಂತರಿಸು : ೧೮೫೫ರಲ್ಲಿ ದಿಲ್ಲೀ ಡಿವಿಜನ್ ಪಂಜಾಬುಅಧಿಕಾರಕ್ಕೆ ವರ್ಗಾಯಿಸಲ್ಪಟ್ಟಿತು (ಭೂಗೋಳ. ೫೯); ಆ ವೆಚ್ಚವನ್ನು . . . ಸರಕಾರದ ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು (ಪುಭಾ. ೧೧೧). ☞ ಈ ರೂಪವನ್ನು ಬಹುಶಃ ಹಿಂದೀಮೂಲದಿಂದ ಬಂದಿರುವ 'ದಬಾಯಿಸು', 'ಬದಲಾಯಿಸು' ಮುಂತಾದ ರೂಪಗಳ ಸಾದೃಶ್ಯದಿಂದ ಮಾಡಿಕೊಂಡಿರಬಹುದು.

[ವರ್ಗ + – ಇಸು]

ವರ್ಗೀಕರಣ (ನಾ). (ವಿಶೇಷವಾಗಿ ವಿಜ್ಞಾನವಿಭಾಗಗಳಿಗೆ ಸಂಬಂಧಿಸಿದಂತೆ ಮಾಡುವ) ವಿಂಗಡಣೆ ; ಪೃಥಕ್ಕರಣೆ : ಜೀವನಿಗೆ ಸಂಬಂಧಪಟ್ಟ ಸಿದ್ಧಾಂತಗಳ ಶ್ರೇಷ್ಠ ವರ್ಗೀಕರಣವಿದು (ಜೀವಾತ್ಮ. ೧೮); ನಾವು ಸದಾ ಮಾನವಜಾತಿಯನ್ನು ಇದೇ ರೀತಿಯಲ್ಲಿ ವರ್ಗೀಕರಣ ಮಾಡುತ್ತೇವೆ (ಪುಭಾ. ೨೫೩). [ಸಂ.]

ವರ್ಗೀಕರಿಸು (ಕ್ರಿ). ವರ್ಗಗಳನ್ನಾಗಿ ವಿಭಾಗಿಸು, –ವಿಂಗಡಿಸು : ಈ ಡಾನಪದ ನೃತ್ಯಗಳನ್ನು ಭಾರತದ ಆಡಳಿತ ವಿಭಾಗಗಳಂತಲ್ಲದೆ, ಭೌಗೋಳಿಕ ಪ್ರದೇಶಗಳ ರೀತ್ಯ ವರ್ಗೀಕರಿಸಿದ್ದೇವೆ (ಭಾರದಾ. ೨೫); ವರ್ಣಗ್ರಾಹಿಯನ್ನು ಆಧರಿಸಿಯೂ ರಂಗುಗಳನ್ನು ವರ್ಗೀಕರಿಸಬಹುದು (ಕವಿಕೋ. XI.೬೨೬).

[ವರ್ಗೀಕರಣ + – ಇಸು]

ವರ್ಗೀಯ (ಗು). ೧. ಒಂದು ಗುಂಪಿಗೆ ಸೇರಿದ. (ನಾ). ೨. [ವ್ಯಾಕ] ಅಕ್ಷರಗಳ ಒಂದು ಗುಂಪಿಗೆ ಸೇರಿದ ಅಕ್ಷರವರ್ಗ : ವ್ಯಂಜನಗಳು: – ವರ್ಗೀಯ : ಕ ಏ ಗ ಘ ಙ (ಕೃಪಿ. ೬). [ಸಂ.]

ವರ್ಗೀಯವ್ಯಂಜನ (ನಾ). [ವ್ಯಾಕ] 'ಕ' ಕಾರದಿಂದ 'ಮ' ಕಾರದ ವರೆಗೆ ಐದೈದಕ್ಷರಗಳ ಗುಂಪಾಗಿ ವಿಭಾಗಿಸಲ್ಪಟ್ಟಿರುವ ವ್ಯಂಜನ : ವ್ಯಂಜನಗಳಲ್ಲಿ ವರ್ಗೀಯವ್ಯಂಜನಗಳೆಂದೂ ಅವರ್ಗೀಯವ್ಯಂಜನಗಳೆಂದೂ ಎರಡುವಿಧ (ಶಬ್ದಾಮ. ೧); ವರ್ಗಗಳಿಗೆ ಸೇರುವುದರಿಂದ ಈ ೨೫ ವ್ಯಂಜನಗಳಿಗೂ ವರ್ಗೀಯವ್ಯಂಜನಗಳೆಂದು ಹೆಸರು (ಪಾಧ್ಯವಾ. ೧೩). [ಸಂ.]

ವರ್ಗೋದಿತ (ನಾ). = ವರ್ಗಪ್ರಾಸ : ವಿನುತಪ್ರಾಸಂ ಶಾಂತೋಪನತಂ ವರ್ಗೋದಿತಂ ಸಮಿಪಗತಂ ಮತ್ತನುಗತಮಂತಗತಂ ಸಂಜನಿತ ವಿಭೇದೋಕ್ತಿಯಿಂದ ಮಿಂತಾಱು (ಕವಿಕಾ. ೨-೩೧). [ಸಂ.]

ವರ್ಚಸ್ಕ (ನಾ). ಮಲ ; ಅಮೇಧ್ಯ : "ಶಮಲಂ ವರ್ಚಸ್ಕಂ . . . ಪುರೀಷಮುಚ್ಚಾರಂ" (ಪಾಪ್ರತೋ. ೭೨-೩೧). [ಸಂ.]

ವರ್ಚಸ್ವಿ (ನಾ). ೧. ಶಕ್ತಿಯುತವಾದುದು ; ಪ್ರಭಾವಿಯಾದುದು : ವಾಲ್ಮೀಕಿಯ ಉಪಮೆಗಳು ಸಾಮಾನ್ಯವಾಗಿ . . . ವರ್ಚಸ್ವಿಯಾದ ಉಪಮೆಗಳಾಗಿವೆ (ಭಾರದ. ೯೨). ೨. ಕಾಂತಿಯಿಂದ ಕೂಡಿದುದು ; ತೇಜಃಪೂರ್ಣವಾದುದು : ವರ್ಚಸ್ವಿಯಾದ ಸುಂದರರೂಪು, ಬಹು ಒಳ್ಳೆಯ ನಡತೆಯುಳ್ಳ ಹುಡುಗ (ಶಾಂತಲಾ. ೧೩). ೩. ಸಮರ್ಥ ; ಪ್ರಭಾವಶಾಲಿ : "ವರ್ಚಸ್ವೀ = ಪ್ರಭಾವವಂತಂ" (ಶಾಶಬ್ದ. ೨೩೩). ೪. ತೇಜಸ್ಸಿನಿಂದ ಕೂಡಿರುವವನು ; ತೇಜಸ್ವಿ : ವರ್ಚಸ್ವಿಯಾದ ಅವರನ್ನು ಕಂಡಕೂಡಲೆ ಗೌರವ ಹುಟ್ಟಿತು (ರೂಢಿ). ೫. ಚಂದ್ರ. [ಸಂ. ವರ್ಚಸ್ವಿನ್]

ವರ್ಚಸ್ಸು (ನಾ). ೧. ಶಕ್ತಿ ; ಸಾಮರ್ಥ್ಯ : ಎನ್ನ ವರ್ಚಸ್ಸಿಗೆ ವಕಾರವಾಗಿ ಬಂದಯಯ್ಯ ಬಸವಣ್ಣ (ಮೋಳಮಾ. ೨೦-೬೦); ವ್ಯಾಸಮುನಿಗಳ ವಾಗ್ಝರಿಯು ಗೀತೆಯಲ್ಲಿ ವಿಶೇಷವರ್ಚಸ್ಸಿನಿಂದ ಹರಿದಿದೆ (ಧರ್ಮಸಾ. ೧೧೧). ೨. ಕಾಂತಿ ; ತೇಜಸ್ಸು : "ವರ್ಚಃ, ತೇಜಃ . . . ರಶ್ಮಿಃ – ಈ ೧೧ ದೀಪ್ತಿ" (ಹಲಾಯು. ೧೨-೬೫). ೩. ಪ್ರಭಾವ : ಕೇಶವನ ಮೇಲಿದ್ದ ಭೀಮೂನ ವರ್ಚಸ್ಸನ್ನು ನೋಡಿ ಇವನೇ ಇದರಲ್ಲಿ ಹಾದಿ ತೋರಿಸಬಲ್ಲನೆಂದು ಅವರಿಗೆ ಮನವರಿಕೆಯಾಗಿತ್ತು (ಸಮಚೀ. ೨೦೦). ೪. ರೂಪ ; ಆಕಾರ. ೫. ಅಮೇಧ್ಯ ; ಮಲ . ೬. ವೀರ್ಯ ; ರೇತಸ್ಸು . ೭. ಬುಧಗ್ರಹ. [ಸಂ. ವರ್ಚಸ್]

ವರ್ಜ (ನಾ). ಬಿಡುವುದು ; ತ್ಯಾಜ್ಯ : ಹಸಿವೆಯಾದ ಹೊರತು ನಾನು ಕೂಳು ತಿನ್ನುವುದನ್ನು ವರ್ಜಮಾಡಿದೆನು (ಪ್ರೇಮವಿ. ೫೭). [ಸಂ.]

ವರ್ಜನ (ನಾ). ೧. ಬಿಡುವುದು ; ತ್ಯಜಿಸುವುದು : 'ವರ್ಜಿಸು' ಪರಾ. ೨. ಹಿಂಸಿಸುವುದು. ೩. ಕೊಲೆ ; ವಧೆ : "ವರ್ಜನಂ ಪ್ರಶಮನಂ . . . ಪ್ರಮಾಪಣಂ ಕೊಲೆಗೆ ನಾಮಂ" (ಮಂಗರಾ. ೮೮-೬೯). ೪. ಗ್ರಂಥಸಂಪಾದನೆ ಮಾಡುವಾಗ ಕವಿಯ ಪಾಠವನ್ನು ತಪ್ಪೆಂದು ತೀರ್ಮಾನಿಸಿ ಬಿಟ್ಟುಬಿಡುವುದು : ಕವಿ ಹೀಗೆ ಎಂದಿಗೂ ಬರೆದಿರಲಾರ ಎಂದು ತೀರ್ಮಾನಮಾಡಿ ಪಾಠವನ್ನು ಬಿಡುವುದು ವರ್ಜನ (ಕನ್ನಸಂ. ೧೬೭). [ಸಂ.]

ವರ್ಜನೀಯ (ಗು). ೧. ಬಿಡಬೇಕಾದ ; ತ್ಯಜಿಸಬೇಕಾದ. ೨. ಅಯೋಗ್ಯವಾದ ; ಉಚಿತವಲ್ಲದ. [ಸಂ.]

ವರ್ಜನೆ (ನಾ). ಬಿಡುವಿಕೆ ; ತ್ಯಾಜ್ಯ : ಆ ರಸಗಳಲ್ಲಿಯೂ ಶೃಂಗಾರದಲ್ಲಿ ಹೇಗೋ ಹಾಗೆ ಉಕ್ತದೋಷಗಳ ವರ್ಜನೆ ಕಂಡುಬರುತ್ತದೆ (ಧ್ವನ್ಯಾಲೋ. ೭೪ ಅಂಟು); ಮದ್ಯಮಾಂಸಗಳ . . . ವರ್ಜನೆ ಶ್ರೇಯಸ್ಕರ (ತತ್ತ್ವಪ್ರಾ. ೧೧೭). [ಸಂ. ವರ್ಜನ]

ವರ್ಜಿತ (ಗು). ಬಿಟ್ಟ; ಹೊರತುಪಡಿಸಿದ; ತ್ಯಜಿಸಿದ: ವರ್ಜಿತಪ್ರಜ್ಞಾನಪರನಂ . . . ಎನ್ನಂ ಸಲಹು (ಬಸವ. ೨೨-೫೧). [ಸಂ.]

ವರ್ಜಿಸು (ಕ್ರಿ). ೧. ಬಿಡು ; ತೊರೆ ; ತ್ಯಜಿಸು : ನಿನ್ನಸುವಂ ಪತಿಕಾರ್ಯದೆ ವರ್ಜಿ [ಪಾಕಾಂ. ನಚ್ಚಿ]ಸಿದ್ದೆ ನಿನ್ನನ್ನನಾವನಂಗಾಧಿಪತೀ (ಗದಾಯು. ೫-೨೨); ಬೆಸನಂಗಳೇಱುಮಂ ವರ್ಜಿಸಿ ಪಂಚೌದುಂಬರಂಗಳಂ ತೋಱಿದು ಮನಂಬೊಸೆದು

ಪದಾರ್ಥದೊಳೊಳಪೊಕ್ಕಿಸಗುವ ಸದ್ಯಕ್ಕಿ ತಾನವಂ ದರ್ಶನಿಕಂ (ಶಾಕ್ಯಭಿ. ೫೫-೨); ಕೊಡಾವೇಶದಿಂದ ಅವನು ತನ್ನನ್ನು ವರ್ಜಿಸಿದ್ದನು (ಹಂಚರಾ. ೭೪). ೨. ನಾಶಮಾಡು ; ಧ್ವಂಸಗೊಳಿಸು : ಅಜಮಿಳನಿಗೆ ನಿಜಪುರವನು ಕೊಟ್ಟಾನೆ ಕುಜನರನು ವರ್ಜಿಸಿದಾನೆ (ಕನ. ೧೫೭-೩). [ವರ್ಜನ + – ಇಸ್ಕು]

ವರ್ಜ್ಯ (ಗು). ೧. ಬಿಡಬೇಕಾದ ; ತ್ಯಜಿಸಲು ಯೋಗ್ಯವಾದ. ೨. ಇಲ್ಲದ ; ರಹಿತ : ವನಿತಾವಶುಪಂಡಕವರ್ಜ್ಯನಿವಾಸೋದ್ದೇಶದೆಡೆಗಳೊಳ್ ಚರಿಯಿಸುತುಂ ಮುನಿಪತಿ ವಿವಿಕ್ತಶಯ್ಯಾಸನಮೆಂಬಯ್ದನೆಯ ತಪದೊಳುಪಗತನಾದೊಂ (ಸಿಚುಮಾ. ೪-೮). (ನಾ). ೩. ಬಿಡಬೇಕಾದುದು ; ನಿಷಿದ್ಧ : ನಮ್ಮ ಆಚಾರ ವ್ಯವಹಾರಗಳಲ್ಲಾಗಲಿ ಮಂಗಳಸಮಾರಂಭಗಳಲ್ಲಾಗಲಿ ತಾಳಿಯ ಸೋಂಕು ವರ್ಜ್ಯ! (ಶಾಸಗಿ. ೧೯); ಈ ಹಾಳು ಇಸ್ಪೇಟುಆಟ ವರ್ಜ್ಯ! (ನಡದಾ. II, ೩೭೪). [ಸಂ.]

ವರ್ಣ (ನಾ). ೧. ಬಿಳಿ, ಕೆಂಪು, ಹಸುರು ಮೊದಲಾದ ಬಣ್ಣ ; ರಂಗು : ವಿಕಚಕರ್ಣಿಕಾರ ವರ್ಣಮುಂ . . . ದೀರ್ಘಾಯುಷ್ಯಮುಂ ತನಗನುಸಂಗತಮಾಗೆ (ಶಾಂತಿಪು. ೧೦ ಸ್ಕಂ ೪ ಪ); ಸುರಕಾರ್ಮುಕದ ವರ್ಣಗಳ ಮೆರೆದು ಮೋಹಿಸುವ ನಾನಾಕುಸುಮತತಿಯ ಕೇಸರದ ಧೂಳಿಯಂ ಕೆದರುತಿಹ ಗಾಳಿಯಂ ಕೆಳಗೊಂಡು (ಚಿತ್ರಾಂಗ. ೭೨-೧೯೬೧). ೨. ಬಣ್ಣದ ದ್ರವ , ಪುಡಿ ಮುಂತಾದುವು : ಅಕಟ ರೇಖೆಯಿನಪ್ಪವರ್ಣದ ಮಿಶ್ರವರ್ಣದೊಳಾದ ಕೌತುಕಮೆ ವೃಕ್ಷ ಲತಾದಿ ಜಾತಿಯೊಳೋದೆಯಂ ಗೆಡೆಗೊಂಡ ಚಿತ್ರಿಕನ ಭಾವಮೆ (ಮಲ್ಲಿಪು. ೫-೪೩). 'ವರ್ಣಪೂರ' ಪರಾ. ೩. (ದೇಹದ) ಹೊಳಪು ; ಕಾಂತಿ. ೪. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಪ್ರಕಾರದ ಪ್ರಾಚೀನ ಸಾಮಾಜಿಕ ವ್ಯವಸ್ಥೆಯಲ್ಲಿನ ಒಂದು ಪಂಗಡ : ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದಮಿನ್ನಪ್ಪ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಱುಪಲು (ಆದಿಪು. ೯-೬೨ ವ); ವಿಶ್ವಜಗ[ನ್ನಿ]ತಂ ಸಕಳವರ್ಣಾಶ್ರೇಷ್ಠಮಿ ವರ್ಣಮೆಂದೆನಸುಂ ಕೈಕೊಳೆ ಪೆಂಪುವೆತ್ತು (ಕಾಳ. ೩-೨-೫೬; 1038). ೫. ಅಕ್ಷರ : ಕಲಿಪಿದಾತಂ ವರ್ಣಮಾತ್ರಂ ಗುರು (ಸೋಮೇಶ. ೬); ಅಕ್ಕರಮುಂ ವರ್ಣಮುಮೆಂದಕ್ಕುಂ ಶುದ್ಧಾಕ್ಷರಕ್ಕೆ ನಾಮಂ (ತಮದ. ೨). ೬. ಕೀರ್ತಿ ; ಯಶಸ್ಸು. ೭. ಸದ್ಗುಣ. ೮. ಹೊಗಳಿಕೆ ; ಸ್ತುತಿ. ೯. ವೇಷಭೂಷಣ ; ಅಲಂಕಾರ. ೧೦. ರೂಪ ; ಆಕೃತಿ : ನಾನಾವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ (ಬಸವ. ೧೨). 'ವರ್ಣಶೂನ್ಯ' ಪರಾ. ೧೧. ಮೇಲುಹೊದಿಕೆ. ೧೨. ಆನೆಗೆ ಹೊದೆಸುವ ಬಣ್ಣದ ಬಟ್ಟೆ : "ವರ್ಣಃ, ಪರಿಸ್ತೋಮಃ, ಕುಥಃ, ಕುಥಾ, ವಮತಂ – ಈ ೫ ಪರಿಸ್ತೋಮಂ" (ಹಲಾಯು. ೫೧-೧೫೩). ೧೩. ಗುಣ ; ಸ್ವಭಾವ. ೧೪. ದೇಹಕ್ಕೆ ಗಂಧಾದಿ ಅನುಲೇಪನಗಳನ್ನು ಬಳಿಯುವುದು ; ಉದ್ವರ್ತನ. ೧೫. ಚಿನ್ನ ; ಬಂಗಾರ. ೧೬. ಕುಂಕುಮಕೇಸರಿ : "ಕುಂಕುಮಂ ಘುಸೃಣಾ ವರ್ಣಂ . . . ಜಾಪಕಂ – ಈ ೭ ಕುಂಕುಮಂ" (ಹಲಾಯು. ೮೯-೩೮೯). ೧೭. ಅಂದ ; ಶೋಭೆ : 'ವರ್ಣದಾಸಿ' ಪರಾ. ೧೪. ವ್ರತ ; ನೇಮ. ೧೯. [ಸಂಗೀತ] ಹಾಡುವ ಮನೋಧರ್ಮ : ರಾಗ ರೂಪ ತಾಳಲು ಅವಶ್ಯವಾಗಿ ನಾಲ್ಕು ಅವಯವಗಳುಂಟು. ಕ್ರಮವಾಗಿ ಅವು (೧) ವರ್ಣ, (೨) ಆರೋಹ, (೩) ಅವರೋಹ, (೪) ಸಂಚಾರಿ. ಹಾಡಬೇಕೆಂಬ ಮನೋಭಾವವೇ ವರ್ಣ (ಸಂಗೀಚಂ.೨೨). ೨೦. [ಕಾವ್ಯಮಿ] ಹಾಡುವುದಕ್ಕೆ ಅನುಕೂಲವಾಗುವಂತಿರುವ ದೇಶೀಯಬಂಧದ ಕಾವ್ಯರಚನೆ; ಹಾಡುಗಬ್ಬ : ನಿಬದ್ಧಗಾಯನದಲ್ಲಿ (೧) ಬರೇ ರಾಗಲಯಪ್ರಧಾನವಾದ ಪ್ರೌಢಬಂಧಗಳೂ (ಧ್ರುವ, ಪದ, ವರ್ಣ, ಗೀತ . . . ಇತ್ಯಾದಿ) . . . ಕೃತಿಗಳೂ ಸೇರುತ್ತವೆ (ಭಾರದ. ೫೪೨); ಪರಮೇಶ್ವರಭಾಗವತರೂ ಸ್ವಾತಿತಿಯನಾಳರೂ ಸುಂದರವಾದ ವರ್ಣಗಳನ್ನು, ಕೀರ್ತನೆಗಳನ್ನು ರಚಿಸುವುದರಲ್ಲಿ ಬಹಳ ಗಂಟೆಗಳ ಕಾಲ ಜೊತೆಯಲ್ಲಿ ಕಳೆಯುತ್ತಿದ್ದರು (ಸಂಗೀಚ. ೪೪). "ಶ್ವೇತ ಮೊದಲಾದ ವರ್ಣಂಗಳೊಳು ವಿಪ್ರಾದಿ ಜಾತಿಯೊಳು ವ್ರತದೊಳಕ್ಷರದೊಳು ವಿಶೋಭೆಯೊಳು ಗೀತದೊಳು ವೇಷದೊಳು ಶ್ರುತಿಯೊಳು ನಿರಂತರಂ ವರ್ಣಾಭಿಧಾನಮಕ್ಕುಂ" (ಮಂಗರಾ. ೧೫೫-೨೫). ೨೧. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ. ೨೨. [ಭಾಷಾಶಾ] ಧ್ವನಿಮಾ ; ಮೂಲಾಕ್ಷರ. ೨೩. [ದ್ರೈತ] ಇಷ್ಟತ್ತು ದ್ರವ್ಯಗಳಲ್ಲಿ ಒಂದು : ಪರಮಾತ್ಮ, ಲಕ್ಷ್ಮಿ . . . ವರ್ಣ, ಅಂಧಕಾರ, ಕಾಲ, ವಾಸನಾ, ಪ್ರತಿಬಿಂಬ ಎಂದು ದ್ರವ್ಯಗಳು ಇಷ್ಟತ್ತು (ಹಿಂಯಾ. ೨೭೫). [ಸಂ.]

ವರ್ಣಕ (ನಾ). ೧. ನಾಟ್ಯ ಮುಂತಾದ ಸಂದರ್ಭಗಳಲ್ಲಿ ಪಾತ್ರಧಾರಿಯು ಹಾಕಿಕೊಳ್ಳುವ ಮುಖವಾಡ, ವೇಷ, ಭೂಷಣ ಮುಂತಾದುವು. ೨. ಚಿತ್ರಣ ಮೊದಲಾದುವುಗಳಿಗಾಗಿ ಬಳಸುವ ಬಣ್ಣ, – ರಂಗು. ೩. ಮೈಗೆ ಲೇಪಿಸುವ ಸುಗಂಧದ್ರವ್ಯ ; ಅಂಗರಾಗ. ೪. ಅಕ್ಷರ ; ವರ್ಣ. ೫. ಗಂಧ ; ಚಂದನ. ೬. ಹೊಗಳುಭಟ್ಟ ; ಸ್ತುತಿಪಾಠಕ. ೭. ಬಣ್ಣನೆ ; ವರ್ಣನೆ : ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಟ್ಕೊಡೆ ಪಂಪನೆ ಪೇಟ್ಗುಂ (ಪಂಪಭಾ. ೧-೧೧); ನಗರಾರ್ಣವಸರಿದಟವೀನಗ . . . ಸಲಿಲಕ್ರೀಡಾದಿಗಳಾದಿಯಾಗೆ ಸರಸೋಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದಱೊಳ್ (ಕಾವ್ಯಾವ. ೧೫೬). ೮. ವ್ಯಾಖ್ಯಾನ ಕ್ರಮ : ವರ್ಣಕ ಎಂದರೆ ವ್ಯಾಖ್ಯಾನ ಮಾಡುವ ಬಗೆ (ಬ್ರಹ್ಮಭಾ. ೩೦). ೯. [ಕಾವ್ಯಮಿ] ದೇಶೀಯಬಂಧದ ಕಾವ್ಯರಚನೆಗಳಲ್ಲಿ ಒಂದು ಪ್ರಕಾರ ; ಹಾಡುಗಬ್ಬ : ವರ್ಣಕಕ್ಕಿಲ್ಲ ಲಕ್ಷಣಮೆಂಬ ಜನರ ನಾಣ್ನುಡಿಯನಲ್ಲೆನಿಸಿ ಪೇಳ್ದೆಂ ವಿನೂತನಕಾವ್ಯಮಂ (ಚಿಬಪ. ೧-೨೦); ಯಾವುದೊಂದು ವಿಶೇಷಕಾವ್ಯಲಕ್ಷಣವನ್ನಾಗಲಿ ಸಂಸ್ಕೃತಕಾವ್ಯದ ಮಾದರಿಯನ್ನಾಗಲಿ ಇಟ್ಟುಕೊಳ್ಳದೆ ಬರೆದಿಯವ ಪದ್ಯಕಾವ್ಯಕ್ಕೆ 'ವರ್ಣಕ'ವೆಂದೂ ಹೆಸರು ಸಲ್ಲುವಂತೆ ಹೇಳಬೇಕಾಗುತ್ತದೆ (ಕೃಪಿ. ೧೫೪). [ಸಂ.]

ವರ್ಣಕಕವಿ (ನಾ). ೧. ದೇಶೀಯಬಂಧದಲ್ಲಿ ಕಾವ್ಯರಚನೆ ಮಾಡುವವನು ; ಹಾಡುಗಬ್ಬವನ್ನು ರಚಿಸುವವನು : ಪಳಚ್ಚನಾದಚ್ಚವೆಳ್ದಿಂಗಳೊಳ್ ವಸ್ತುಕವಿಗಳ ಕಾವ್ಯಗೋಷ್ಠಿಯುಂ ವರ್ಣಕಕವಿಗಳ ಗೀತಗೋಷ್ಠಿಯುಂ ಮನಂಗೊಳಿಸೆ (ಪುಷ್ಪಪು. ೯-೧೫೫ ವ). ೨. ಭಾವಗೀತೆಗಳನ್ನು ಬರೆಯುವ ಕವಿ : ಅವಳು . . . ಶಲೇ, ಕೀಟ್ಸ್, ಟೆನಿಸನ್ನರಂತೆ ವರ್ಣಕಕವಿಗಳ (Lyrical poets) ಸಾಲಿಗೆ ಸೇರಿದವಳಾಗಿದ್ದಳು (ಪ್ರಬಿಂಧ. ೭೬). [ಸಂ.]

ವರ್ಣಕಕೃತಿ (ನಾ). = ವರ್ಣಕ ೯ : ಅಱುವತ್ತೇಳುಂ ಕಂದದೊಳ್ [ಪಾಕಾಂ. ಕಂದದ . ಉಯರ ಭಾರತದ ಕೃತಿಯೊಳಿರುತಿಹ ಶಬ್ದಾರ್ಥರಹಸ್ಯ ಪರಿಷ್ಕೃತಿಗೋ] ಉಱುವ ಮಹಾಭಾರತದೀ ವರ್ಣಕಕೃತಿಯೊಳ್ ತುಱುಗಿಹ ಶಬ್ದಾರ್ಥಕ್ಕೊಲ್ಮರಮಾಗಿಯೆ ಪೇಳ್ದೆನಖಿಲಶಬ್ದಾಂತರಮಂ (ಭಾಹಾ. ೬೦). [ಸಂ.]

ವರ್ಣಕರ್ಮ (ನಾ). ಬಣ್ಣದ ಕೆಲಸ ; ವರ್ಣಚಿತ್ರಣ : ಕಂಡು ನಿಷ್ಪಂದಳಾದಳು ಕನ್ಯೆ . . . ಕುಂಚಿಗೆಯ ವರ್ಣಕರ್ಮಂ ಚಿತ್ರಸ್ಥವಾದಂತೆವೋಲ್ (ಚಿತ್ರಾಂಗ. ೭-೧೭೦). [ಸಂ. ವರ್ಣಕರ್ಮನ್]

ವರ್ಣಕವಿತ್ವ (ನಾ). = ವರ್ಣಕ ೯: ವರ್ಣ್ಯಕವಿತ್ವದೊಳ್ ನೆಗರ್ದ್ದರ್(ಳ್ದ) ವೇದಾಂತಂಗಳೊಳು . . . ಸಮಸ್ತಕಳೆಯೊಳು ವಾಗೀಶನಿಂದಂ ಯಶೋಧಿಕರಾದರ್ (ಎಸಾ. XVIII, ೧೭೪-೧೫; 1067). [ಸಂ.]

ವರ್ಣಕಾರ (ನಾ). ಬಣ್ಣ ಹಾಕುವವನು ; ಬಣ್ಣಗಾರ : ಅವನ ಸಮಕಾಲೀನ ಮಿರಕನೆಂಬವನು ಸಹ ವರ್ಣಕಾರ(Colourist) ರಲ್ಲಿ ಬಹಳ ಪ್ರಸಿದ್ಧನು (ಭಾಚಿತ್ರ. ೨೯). [ಸಂ.]

ವರ್ಣಕೃತಿ (ನಾ). = ವರ್ಣಕ ೯ : ಬಗೆವೊಡೆ . . . ವರ್ಣಕೃತ್ಯಳಂಕೃತಿಗಾದಂ ಸೊಗಯಿಪ ನಾಯಕಮಣಿ ತಾನೆ ಗದಂ ಚಂದ್ರಪ್ರಭಾಭಿರಾಮಂ ನಾಮಂ (ಚಂದ್ರಪು. ೧೨-೨೦೨). [ಸಂ.]

ವರ್ಣಗಣ (ನಾ). [ಛಂದ] ಅಕ್ಷರವೃತ್ತದ ಪ್ರಸ್ತಾರಕ್ರಮದಲ್ಲಿ ಬಳಸುವ ಮ, ಯ, ರ, ಸ, ತ, ಜ, ಭ ಮತ್ತು ನ ಎಂಬ ಎಂಟುವಿಧದ ಗಣಗಳಲ್ಲಿ ಒಂದು ; ಅಕ್ಷರಗಣ : ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಅದು ವರ್ಣಗಣ, ಮಾತ್ರಾಗಣ ಎಂದು ಎರಡು ವಿಧ (ಕೃಪಿ. ೬೯); ಮಾತ್ರಾಗಣ ಹಾಗು ವರ್ಣಗಣಗಳ ಲೆಕ್ಕಾಚಾರವನ್ನು ಮೀರಿದ ಲಯ ಈ ವೃತ್ತದಲ್ಲಿ ನುಡಿಯುತ್ತದೆ (ಛಂದೋವಿ. ೪೫). [ಸಂ.]

ವರ್ಣಚತುಷ್ಕ (ನಾ). ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು ; ಚಾತುರ್ವರ್ಣ್ಯ : ವದನಂ ತೋಳ್ ತೊಡೆ ಪಾದಮೆಂಬಿವನಿವಂ ಶುಶ್ರೂಷೆಗೆಯ್ಯಲ್ಕೆ ಲಾಭದಲಂಪಿಂ ನಡೆಯಲ್ಕೆ ಕೈದುವಿಡಿಯಲ್ಕೋದಲ್ಕುಜಂ ಬೇಱೆ ತೋಱಿದೊಡಾ ವರ್ಣಚತುಷ್ಕಮಂ ಕುಮತಿಗಳ್ ತತ್‌ಸ್ಥಾನದೊಳ್ ಮುನ್ನ ಪುಟ್ಟದುವೆಂಬರ್ (ಆದಿಪು. ೯-೭೬). [ಸಂ.]

ವರ್ಣಚಿತ್ರ (ನಾ). ೧. ಬಣ್ಣಗಳಿಂದ ರಚಿತವಾದ ಚಿತ್ರ : ಶ್ರೀಮಂತ ಅನುಕೂಲಸ್ಥ ಮನೆತನಗಳ ಸ್ತ್ರೀಪುರುಷರು . . . ವರ್ಣಚಿತ್ರಗಳನ್ನು ರಚಿಸುತ್ತಿದ್ದರು (ಭಾರದ. ೫೨೪). ೨. ಬಣ್ಣದ ಚಲನಚಿತ್ರ : ಇತ್ತೀಚೆಗೆ ಆಗ್ಫಾಕಲರ್ ಇಲ್ಲವೆ ಗೇವಾಕಲರ್ ವಿಧಾನ ವರ್ಣಚಿತ್ರಗಳ ತಯಾರಿಕೆಯಲ್ಲಿ ಹೆಚ್ಚುಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ (ಕವಿಚೋ. VII. ೨೩೩). ೩. [ಕಾವ್ಯಮಿಮಾ] ಕನಿಷ್ಠಸಂಖ್ಯೆಯ ವ್ಯಂಜನಗಳನ್ನುಪಯೋಗಿಸಿ ರಚಿಸಿದ ಒಂದು ಬಗೆಯ ಪದ್ಯರಚನೆ ; ಚಿತ್ರಕವಿತ್ವದ ಒಂದು ಪ್ರಕಾರ. [ಸಂ.]

ವರ್ಣಚ್ಛವಿ (ನಾ). ಬಣ್ಣದ ಹೊಳಪು ; ವರ್ಣಕಾಂತಿ : ಉದಯದರುಣನ ಕರುವ ಹಿಡಿದಂದದಲಿ ವರ್ಣಚ್ಛವಿಯಿಲೊಪ್ಪುವ ಕುದುರೆಗಳ ತಳತಳಿಸಿ ಬೆಳಗುವ ಕೊಡನ ಹಳವಿಗೆಯ ಗದಗದಿಪ ಮಣಿಮಯದ ತೇರಿನ ಕದನಕೋಳಾಹಳನು . . . ನೋಡ್ಕೆ ದ್ರೋಣನವನು (ಕುಮ್ಮಾ. ೬-೫೪). [ಸಂ.]

ವರ್ಣಚ್ಯುತಕ (ನಾ). [ಕಾವ್ಯಮಿಮಾ] ಚಿತ್ರಕವಿತ್ವದ ಒಂದು ಪ್ರಕಾರ ; ಒಂದು ಪದ್ಯದ ಅರ್ಥವು ಸ್ಪಷ್ಟವಾಗಲು ಅಗತ್ಯವಾಗಿ ಬೇಕಾದ ಯಾವುದೇ ಒಂದು ಅಕ್ಷರವು ಪದ್ಯದ ಯಾವುದೇ ಒಂದು ಸ್ಥಾನದಲ್ಲಿ ಲೋಪವಾಗಿರುವಂತೆ ರಚಿಸಿದ ಪದ್ಯ : ತಳಮಳ[ಗೊ]ತ್ತುಂ ಜನಿತನಿಜಭೀತಿ ಮನಂಗೊಳೆ ಕಳವಳಿಸಿ ಚಲಿತ ನಿಲಲ್ಮಾದೆ [ಮೊ]ಕ್ಕಳ[ಮೊ]ಳಗೆ ಸುಖಿದರರಸಂ ಮನದೊಳ್ ಮುಳಿದಸಿಯನೆ ನೋ[ಡೆ] ಪರಿವಾರದವರ್ (ವರ್ಣಚ್ಯುತಕಂ) (ಕವಿಕಾ. ೨-೧೫೧). IP ಈ ಪದ್ಯದಲ್ಲಿ 'ಮುಳಿದಸಿಯನೆ' ಎಂಬಲ್ಲಿ 'ದ' ಅಕ್ಷರದ ನಂತರ 'ರ' ಎಂಬ ಅಕ್ಷರವನ್ನು ಸಂಯೋಜಿಸಬೇಕು. ಇಲ್ಲಿ 'ರ' ವರ್ಣಚ್ಯುತವಾಗಿದೆ. [ಸಂ.]

ವರ್ಣಛಂದಸ್ಸು (ನಾ). [ಛಂದ] ಅಕ್ಷರಗಣಗಳಿಂದಾದ ವೃತ್ತಗಳುಳ್ಳ ಛಂದಸ್ಸು ; ಅಕ್ಷರಛಂದಸ್ಸು : ವೃತ್ತ ಅಥವಾ ವರ್ಣಛಂದಸ್ಸು ಮುಖ್ಯವಾಗಿ ಸಂಸ್ಕೃತಛಂದಸ್ಸು (ಛಂದೋವಿ. ೪೪). [ಸಂ. ವರ್ಣಛಂದಸ್]

ವರ್ಣತ್ರಯ (ನಾ). ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಎಂಬ ಮೂರು ವರ್ಣಗಳು : ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದಮಿನ್ನಷ್ಟ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಱಿಪಲು (ಆದಿಪು. ೯-೭೨ ಪ); ಉಳಿದ ವರ್ಣತ್ರಯಕೆ ಬೆಸಕೈವಳತೆಯಲಿ ಶೂದ್ರನು ಕೃತಾರ್ಥನು (ಕುಮ್ಮಾ. ೬-೧೭). [ಸಂ.]

ವರ್ಣದಾಸಿ (ನಾ). ಚೆಲುವೆಯಾದ ದಾಸಿ ; ಸುಂದರಳಾದ ಸೇವಕಿ : ಒಂದೊಂದು ರಥದಲ್ಲಿಯೂ ಸರ್ವಾಲಂಕಾರಭೂಷಿತೆಯರಾದ ಮೂವರು ಮೂವರು ವರ್ಣದಾಸಿಯರನ್ನು ಇರಿಸಿ, ಅಂಥ ಐದುನೂರು ರಥಗಳನ್ನು ಕೊಟ್ಟನು (ಚಕ್ರವ. ೬೧). [ಸಂ. ವರ್ಣದಾಸೀ]

ವರ್ಣದ್ವೇಷ (ನಾ). ೧. ವಿಭಿನ್ನಜಾತಿಗಳಲ್ಲಿ ಪರಸ್ಪರ ಉಂಟಾಗುವ ವೈರ ; ಜಾತಿದ್ವೇಷ. ೨. ಸಾಮಾನ್ಯವಾಗಿ ಬಿಳಿಯರಿಗೆ ಕಪ್ಪುಜನಾಂಗಗಳ ಮೇಲೆ ಇರುವ ದ್ವೇಷ : ಬೇರೆ ಕಡೆಗೆ ಮನೆ ಹಿಡಿಯಬೇಕೆಂದರೆ ಇಂಗ್ಲಂಡಿನ ವರ್ಣದ್ವೇಷ ಅಡ್ಡಬರುತ್ತದೆ (ಹೊಸ್ಮ. ೨೦೦); ವರ್ಣದ್ವೇಷದಿಂದ ಮೊದಲುಗೊಂಡು ಮಿತಿಮೀರಿದ ಅಹಂಕಾರದವರೆಗೆ ಎಲ್ಲ ದುರ್ಗುಣಗಳೂ ಇಂಥ ಸಮಾಜರಚನೆಯಲ್ಲಿ ಮನೆ ಮಾಡಿಕೊಂಡಿರುತ್ತವೆ (ನವ್ಯಕಾ. ೧೯). [ಸಂ.]

ವರ್ಣಧರ್ಮ (ನಾ). ಆಯಾಯ ವರ್ಣದವರು ಪಾಲಿಸಬೇಕಾದ ಅವರವರ ಆಚಾರ, —ಧರ್ಮ : ಮೊದಲೊಳಾಂ ಬ್ರಾಹ್ಮಣಂ, ವರ್ಣಧರ್ಮವನಧಃಪಾತಿಸಲೆ? (ಹಚ್ಚೆ. ೧೪-೭೬); ವರ್ಣಗಳೂ ವರ್ಣಧರ್ಮಗಳೂ ವಿಧಿವತ್ತಾದುವುಗಳು (ಭಾರದ. ೧೧೭). [ಸಂ.]

ವರ್ಣನ (ನಾ). ೧. ಬಣ್ಣಹಾಕುವುದು ; ಬಣ್ಣತುಂಬುವುದು : "ವರ್ಣನಂ, ವರ್ಣನೀಯಂ = ಬಣ್ಣನೆ" (ಶಾಶಬ್ದ. ೨೯೦). ೨. ಬಣ್ಣಿಸಿ ಹೇಳುವುದು ; ವರ್ಣನೆ : ಅನುಗುಣಮಾಗೆ ವರ್ಣನಂ . . . ಸಯ್ತು ಪೇಳ್ವುದಿಂಪೆನಿಸೆ ಕವೀಶ್ವರಂ ಕೃತಿಯಂ (ಪುಸ್ತ. ೧ ೩೯); ವರ್ಣನದಿಂದ್ರಿಯನಂದನವನು ದಾಂಟುತೆ ದರ್ಶನಮುಕ್ತಿಯ ಸೇರಿ ವ್ಯಕ್ತಿತೆ ಮೈಮರೆವುದು ಸೌಂದರ್ಯಸಮಾಧಿಯೊಳಾನಂದವ ಹೀರಿ (ಪಟ್ಟಿಣಾ. ೨೪-೧೧). ೩. ಹೇಳಿಕೆ ; ಉಕ್ತಿ. ೪. ಹೊಗಳಿಕೆ ; ಸ್ತುತಿ ; ಸ್ತೋತ್ರ : "ಅರ್ಥವಾದಃ ಪ್ರಶಂಸಾ . . . ಶ್ಲಾಘಾ, ವರ್ಣನಂ – ಈ ೧೦ ಸ್ತುತಿಯ ನಾಮಂ" (ಹಲಾಯು. ೨೪-೧೪೪). [ಸಂ.]

ವರ್ಣನಾತ್ಮಕ (ಗು). ೧. ವರ್ಣನೆಗಳಿಂದ ತುಂಬಿದ. ೨. ವಿವರವಾದ ; ವ್ಯಾಖ್ಯಾನದಿಂದ ಕೂಡಿದ : ವರ್ಣನಾತ್ಮಕ ವ್ಯಾಕರಣವನ್ನು ಬರೆದ ಕೇಶಿರಾಜನ ಕಾಲಕ್ಕಾಗಲೆ ಪ್ರಾಸ ಅಗಿಹೋಗಿತ್ತು (ಡಾವಿ. ೩೩೭). [ಸಂ.]

ವರ್ಣನಾವೈಖರಿ (ನಾ). ಬಣ್ಣಿಸುವ ರೀತಿ ; ವರ್ಣನೆಯ ಶೈಲಿ : ಅಂಡಯ್ಯನ . . . ಪ್ರತಿಭೆಯು ಪ್ರಕಟವಾಗಿರುವುದು ವರ್ಣನಾವೈಖರಿಯಲ್ಲಲ್ಲ, ಅಚ್ಚಗನ್ನಡದ ವಿರಚನೆಯಲ್ಲಿ ! (ಸಾಹಿ ೧೭೦). [ಸಂ. ವರ್ಣನಾವೈಖರೀ]

ವರ್ಣನೆ (ನಾ). ೧. ವಿಷಯವೊಂದನ್ನು ವಿಸ್ತಾರವಾಗಿ ನಿರೂಪಿಸುವುದು, — ಬಣ್ಣಿಸಿ ಹೇಳುವುದು : ಅವುಗಳ ವರ್ಣನೆಯನ್ನು ಮುಂದಿನ ಅಧ್ಯಾಯದಲ್ಲಿ ಎತ್ತಿಕೊಳ್ಳುತ್ತೇವೆ (ಸಚ್ಚಕ್ರ. ೭೦); ಗುಣವರ್ಮನ ಶೃಂಗಾರಿಕವರ್ಣನೆಗಳಲ್ಲಿ ಉತ್ಸಾಹವನ್ನುವಮ್ಮು ಬಚ್ಚುಬಗೆಯಿದೆ (ಕೂಸಾ. ೫೧). ೨. ಹೊಗಳಿಕೆ ; ಪ್ರಶಂಸೆ : "ನುತಿಯರ್ಥವಾದಂ ವಿತರ್ದನಂ ವರ್ಣನೆ ಸ್ತುತಿ . . . ಶ್ಲಾಘೆಯೆನಲು ಕೊಡಾಟಮಕ್ಕುಂ" (ಮಂಗರಾ. ೨೬-೩). [ಸಂ. ವರ್ಣನಾ]

ವರ್ಣಪಂಚಕ (ನಾ). ೧. ಐದು ಅಕ್ಷರಗಳ ಸಮೂಹ. ೨. 'ನಮಃ ಶಿವಾಯ' ಎಂಬ ಐದು ಅಕ್ಷರಗಳುಳ್ಳ ಮಹಾಮಂತ್ರ ; ಪಂಚಾಕ್ಷರಿ : ವರ್ಣಪಂಚಕವತ್ಕ ಕಾಂತಿಜಿತಾರ್ಣವೋದ್ಭವಧೈರ್ಯ . . . ವರ್ಣಿಸುವೆ ನಾನೊಲಿದು ನೀನಾಕರ್ಣಿಸಯ್ಯ ಮದೀಯ ವಿಜ್ಞಾಪನವನು (ಬಸಪು. ೫-೧). [ಸಂ.]

ವರ್ಣಪಲ್ಲಟ (ನಾ). ೧. ಬಣ್ಣಗಳಲ್ಲುಂಟಾಗುವ ವ್ಯತ್ಯಾಸ : ಮಸೂರಗಳು ಉಂಟುಮಾಡುವ ಪ್ರತಿಬಿಂಬಗಳಲ್ಲಿ ಬೇರೆ ಬೇರೆ ಬಣ್ಣದ ಕಿರಣಗಳು ಒಂದೇಕಡೆ ಸಂಧಿಸದೆ ಇರುವುದರಿಂದ ಉಂಟಾಗುವ ನ್ಯೂನತೆಗೆ ವರ್ಣಪಲ್ಲಟವೆಂದು (Chromatic Aberration) ಹೆಸರು (ಭೌವಿ. ೧೭೬). ೨. [ಭಾಷಾಶಾ] ಒಂದು ಪದದಲ್ಲಿ ಸ್ವರ ಅಥವಾ ಸ್ವರಸಹಿತ ವ್ಯಂಜನಗಳ ಸ್ಥಾನಗಳಲ್ಲಿ ಉಂಟಾಗುವ ವ್ಯತ್ಯಾಸ ; ಅಕ್ಷರಪಲ್ಲಟ : 'ಪಾದರಸ' ವರ್ಣಪಲ್ಲಟವನ್ನು ಪಡೆದು 'ಪಾರದ' ವಾಯಿತು (ಭಾಷಾಶಾ. ೧೨೯). IP "ಭಾಷೆಯಲ್ಲಿ ನಡೆದ ಮೂರನೆಯ ಬದಲಾವಣೆಯೆಂದರೆ Metathesis ಇಲ್ಲವೆ ಅಕ್ಷರಪಲ್ಲಟ. ಇಂಥ ಶಬ್ದಗಳಲ್ಲಿ ಹಳಗನ್ನಡದ ರೂಪಗಳಿಗೂ ಇಂದಿನ ರೂಪಗಳಿಗೂ ತುಂಬಾ ವ್ಯತ್ಯಾಸ ಕಂಡುಬರುತ್ತದೆ. ೧೩ನೆಯ ಶತಮಾನದ ಕೇಶಿರಾಜನೇ ಮಲರ್, ಅಲರ್ — ಮೊದಲಾದ ಶಬ್ದಗಳು 'ಅರಲ್' ಆಗುತ್ತದೆಂದೂ, 'ಮರಲ್' ಎಂಬುದಂತೂ 'ಮಳಲ್', 'ಮಣಲ್' ಎಂದು ಕೂಡ ಆಗುತ್ತದೆಂದೂ ತನ್ನ ಕಾಲದಲ್ಲೇ ಒಪ್ಪಿತವಾದ ಅಕ್ಷರಪಲ್ಲಟಗಳನ್ನು ಹೇಳಿದ್ದಾನೆ" (ಭಾಷಾಶಾ. ೧೨೯). [ವರ್ಣ + ಪಲ್ಲಟ]

ವರ್ಣಪುಷ್ಪ (ನಾ). ೧. ಬಣ್ಣದ ಹೂವು. ೨. ಒಂದು ಬಗೆಯ ಹೂವು ; ನೆಲರುದ್ರಾಕ್ಷಿ ಹೂವು : "ವರ್ಣಪುಷ್ಪಂ, ಅಮಿಲಾತಕಂ – ಈ ೨ ಬಣ್ಣದ ಹೂ" (ಹಲಾಯು. ೩೫-೫೪). [ಸಂ.]

ವರ್ಣಪೂರ (ಗು). ೧. ಬಣ್ಣವನ್ನು ತುಂಬಿದ ; ಬಣ್ಣವಿಟ್ಟ. (ನಾ). ೨. ಬಣ್ಣದಿಂದ ತುಂಬಿದುದು ; ವರ್ಣಮಯವಾದುದು : ಬಳಸಿದ ನಂದನಂಗಳ ಪಸುರ್ಪಿನ . . . ನೀಳನೀರಜಾಕಳಿತತಟಾಕ ಮಂಗಳದ ಕರ್ಪಿನ ನೇರ್ಪಮರ್ದಂಗಜಂಗೆ ಮಂಗಳಕರವರ್ಣಪೂರಪರಿಮಂಡಳಮಾಯ್ತು ಸುರಮ್ಯಮಂಡಳಂ (ಅನಂಪು. ೧೧-೬). ೩. ವಿಧವಿಧವಾದ ಬಣ್ಣಗಳಿಂದ ಕೂಡಿದ ವಸ್ತ್ರ. ಚಿತ್ರ ಮುಂತಾದುವು : "ಬಣ್ಣವುರವೆಂದು ವರ್ಣಪೂರಂ" (ಶಪಾ ೬೩-೪೦೩). ೪. ಹಾಸುಗಂಬಳಿ ; ಜಮಖಾನೆ : 'ನವರತ್ನವರ್ಣಪೂರ' ಪರಾ. [ಸಂ.]

ವರ್ಣಭೇದ (ನಾ). ಬಿಳಿಯರು ಕಪ್ಪುಜನಾಂಗಗಳನ್ನು ಕೀಳಾಗಿ ಕಾಣುವ ಪ್ರವೃತ್ತಿ : ವರ್ಣಭೇದನೀತಿಯಿಂದ ಆಫ್ರಿಕಾದ ಜನರು ಅಪಾರಕಷ್ಟಕ್ಕೀಡಾಗಿದ್ದಾರೆ (ಇಂಪ್ರೆ). [ಸಂ.]

ವರ್ಣಮಾಲೆ (ನಾ). [ವ್ಯಾಕ] ಒಂದು ಭಾಷೆಯ ಮೂಲಾಕ್ಷರಗಳ ವ್ಯವಸ್ಥಿತವಾದ ಯಾದಿ ; ಅಕ್ಷರಮಾಲೆ : ಸ್ವರಗಳನ್ನೂ ಅನುಸ್ವಾರವಿಸರ್ಗಗಳನ್ನೂ ವ್ಯಂಜನಗಳನ್ನೂ ಒಂದು ಕ್ರಮದಲ್ಲಿ ಜೋಡಿಸಿಕೊಡುವ ಪದ್ಧತಿ ಹಿಂದಿನಿಂದ ಬಂದಿದೆ. ಈ ಜೋಡಣೆಗೆ ಕನ್ನಡ ವರ್ಣಮಾಲೆ ಎಂದು ಹೆಸರು (ಮಧ್ಯಮ. ೧೨); 'ಅಕ್ಷರ' ಎಂಬುದು ಭಾರತೀಯ ವರ್ಣಮಾಲೆಗೆ ಲಕ್ಷಣ-ಲಕ್ಷ್ಯಗಳೆರಡೂ ಆಗಿದೆ (ಸಂಶೋಧ. ೯).

[ಸಂ. ವರ್ಣಮಾಲಾ]

ವರ್ಣಲಾಭ (ನಾ). ೧. [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು ; ಜೈನಬ್ರಾಹ್ಮಣನಿಂದ ಅನುಗ್ರಹೀತನಾಗಿ ಬ್ರಾಹ್ಮಣತ್ವವನ್ನು ಪಡೆಯುವುದು : ಮಾತಾಪಿತೃಮತದಿಂ . . . ಬೇಱೊಂದುಮನೆಯೊಳ್ ಸ್ವತಂತ್ರನಾಗಿರ್ದು . . . ಧರ್ಮಮುಮನುಪಾರ್ಜಿಸುವಂತು ಮಕ್ಕಳಂ ಗೃಹಧರ್ಮದೊಳನುಷ್ಠಿಸುವುದು ವರ್ಣಲಾಭಕ್ರಿಯೆ (ಚಾವುಂಪು. ೨೧೬); ವಿವಾಹಿತನು ನಾಲ್ಕುಜನ ಜೈನಬ್ರಾಹ್ಮಣರಂ ತನ್ನ ಮನೆಗೆ ಕರೆತಂದು ಪೂಜಿಸಿ . . . ಅವರುಗಳಂ "ನೀನೂ ಬ್ರಾಹ್ಮಣನಾದೆ" ಯೆಂದು ಅನ್ನಿಸಿಕೊಳ್ಳುವುದೇ ವರ್ಣಲಾಭವೆಂಬ ೧೩ನೇ ಕರ್ಮವು (ಪುರುಷ. ೨೧೬). ೨. ತಂದೆಯ ಆಜ್ಞೆಯಂತೆ ಮದುವೆಯಾದ ಮಗನು ಪ್ರತ್ಯೇಕಸಂಸಾರವನ್ನು ಹೂಡುವಿಕೆ : ಆದಾನಕ್ರಿಯೆ . . . ವಿವಾಹ ವರ್ಣಲಾಭ . . . ನಿರ್ವೃತಿಯೆಂಬಯ್ತ್ತೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ); ವಿವಾಹಿತನಾಗಿ ಗೃಹಸ್ಥಾಶ್ರಮವಂ ಪಾಲಿಸುತ ಸ್ವಾತಂತ್ರ್ಯವಂ ವಹಿಸದೆ ಪಿತ್ರಾಜ್ಞೆಯಂ ಮೀರದೆ ಇರುವ ಪುತ್ರನಂ ತಂದೆಯು ನೋಡಿ ಶುಭದಿನದೊಳ್ ದೇವ, ಗುರು, ಅಗ್ನಿ, ದ್ವಿಜಸಾಕ್ಷಿಯಾಗಿ ಕೆಲವು ದ್ರವ್ಯಂಗಳಂ ಕೊಟ್ಟು ಎಲ್ಲೆ ಪುತ್ರನೇ ಈ ದ್ರವ್ಯಮಂ ಸ್ಮೀಕರಿಸಿ ಪ್ರತ್ಯೇಕವಾಗಿ ವಾಸಮಾಡು . . . ಎಂದು ಆಜ್ಞಾಪಿಸಬೇಕು. ಆ ಪುತ್ರನು ಪಿತೃವಾಕ್ಯವಂ ಪರಿಪಾಲಿಸುವುದೇ ವರ್ಣಲಾಭವೆಂಬ ೧೪ನೆಯ ಕರ್ಮವು (ಪುರುಷ. ೨೦೯).

[ಸಂ.]

ವರ್ಣವಿಕಾರ (ನಾ). ೧. ಬಣ್ಣಗೆಡುವಿಕೆ ; ನಿಸ್ತೇಜತೆ : ಅವಳು ಹೇಗೆ ಮೂಲೆ ಬಿಟ್ಟುಕೊಂಪ ವರ್ಣವಿಕಾರವಾಗಿದ್ದ ಬೆರಳುಗಳಿಂದ ತನ್ನ ಕೈಯನ್ನು ಅದುಮಿದ್ದಳು (ಪುಣಾ. ೧೬೦). ೨. [ವ್ಯಾಕ] ಸಮಾಸ, ಸಂಧಿ ಮುಂತಾದ ಕ್ರಿಯೆಗಳಾಗುವಾಗ ಉಂಟಾಗುವ ಅಕ್ಷರಸ್ವರೂಪಗಳ ವ್ಯತ್ಯಾಸ : ಪೂರ್ವಕಾಲದಿಂದಲೇ ಬಂದ ವಿದ್ಯಾಸಂಪತ್ತನ್ನು ರಕ್ಷಿಸಬೇಕಾದರೆ ಲೋಪ, ಆಗಮ, ಆದೇಶಾದಿ ವರ್ಣವಿಕಾರಗಳ ಪರಿಜ್ಞಾನ ಅವಶ್ಯ (ಸಂಶೋಧ. ೬೯). [ಸಂ.]

ವರ್ಣವಿಪರ್ಯಯ (ನಾ). = ವರ್ಣಪಲ್ಲಟ ೨: ಕೆಲವು ಶಬ್ದಗಳಲ್ಲಿ ವರ್ಣವಿಪರ್ಯಯವು ಕಂಡುಬರುತ್ತದೆ. ಉದಾ :- ಅಲರ್ > ಅರಳು; ನೆಲಲ್ > ನೆರಳು (ಕೃವಿ. ೬೨೨); ಈ 'ವರ್ಣವಿಪರ್ಯಯ'ವು (Metathesis) ಭಾಷಾಶಾಸ್ತ್ರಾಂತರ್ಗತವಾದ ಒಂದು ಲಕ್ಷಣ (ಸಂಶೋಧ. ೮೫). [ಸಂ.]

ವರ್ಣವಿಭಾಗ (ನಾ). ೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಪ್ರತ್ಯೇಕ ಭಾಗ: ಬ್ರಾಹ್ಮಣಾದಿ ವರ್ಣವಿಭಾಗವು ಯಾವಾಗ ಪ್ರಾರಂಭವಾಯಿತೆಂದು ವಿಚಾರಿಸಿದರೆ ಮಹಾಭಾರತಾದಿ ಪುರಾಣಗಳಿಂದ ಹೀಗೆ ತಿಳಿದುಬರುತ್ತದೆ (ಹಿಂದಸಾ. ೧೫೬). ೨. [ಭಾಷಾಶಾ] ಧ್ವನಿಭೇದ; ಧ್ವನಿ ವಿಭಜನೆ: "ಅಕ್ಷರ" ಎಂಬ ಶಬ್ದವನ್ನು ವರ್ಣವಿಭಾಗ (ಧ್ವನಿಯ ವಿಂಗಡಣೆ) ಮಾಡಿದರೆ . . . ಆರುಧ್ವನಿಗಳ ಸಮಾಮ್ನಾಯ ಕಾಣುತ್ತದೆ (ಸಂಶೋಧ. ೮).

[ಸಂ.]

ವರ್ಣವಿಲಾಸತೆ (ನಾ). ಶಬ್ದಸೌಂದರ್ಯ: ಶವರರ್ಣಾಕಾರಶ್ರೀಭವಮಾ ಶ್ರೀಕಾರಮವ್ಪುದಲ್ಲದೊಡುರುವರ್ಣವಿಳಾಸತೆ ಶಾಸ್ತ್ರಾದಿಶ್ರವಣತೆ ಶುಭಕರಣಭಾವಮೇಂ ಸಮನಿಪ್ಪುದೇ (ರಾಜಶೇ. ೧೪-೧೨೫). [ಸಂ. ವರ್ಣವಿಲಾಸತಾ]

ವರ್ಣವೃತ್ತ (ನಾ). [ಛಂದ] ಅಕ್ಷರಗಣಗಳಿಂದ ರಚಿತವಾದ ವೃತ್ತ; ಅಕ್ಷರ ವೃತ್ತ: ವರ್ಣಗಣನಿಯಮಕ್ಕೊಳಪಟ್ಟ ಪದ್ಯವು ವರ್ಣವೃತ್ತವು (ಕೃವಿ. ೬೯). [ಸಂ.]

ವರ್ಣವ್ಯತ್ಯಯ (ನಾ). ೧. [ಕಾವ್ಯಮೀ] ಕಾವ್ಯರಚನೆಯಲ್ಲಿ ಅಕ್ಷರಗಳನ್ನು ಪಲ್ಲಟಗೊಳಿಸಿ ರಚಿಸುವ ಒಂದು ಪ್ರಕಾರ ; ಈ "ವರ್ಣವ್ಯತ್ಯಯ ಎಂದರೆ ಅಕ್ಷರಗಳ ಸ್ಥಾನಗಳು ಹಿಂದುಮುಂದಾಗುವುದು" (ಕವಿಕಾ. ೨-೧೪೭ ಟಿಪ್ಪಣಿಗಳು). ಇದಕ್ಕೆ 'ಕವಿರಾ. ೨-೧೪೪' ರಲ್ಲಿ ಒಂದು ದೃಷ್ಟಾಂತವಿದೆ : "ಅವನಾಮಕತ್ವಕ್ಕುಚಯಂ ಕ್ರವನೊಚರಾಮಯದಪ್ಪಪಾಯದೆಗಳೊಳ್ ಸೆವಿಸೆವಮಲಹೈವಸುಮುಕ್ತಿಮಹಾದೇವ ನಿನ್ನನ್ನನಪ್ಪೊನಸಹಾಯಗುಣಂ". ೨. = ವರ್ಣಪಲ್ಲಟ ೨: ಒಂದು ಪದದಲ್ಲಿರುವ ಧ್ವನಿಗಳು ಸ್ಥಾನಪಲ್ಲಟವಾಗುವುದೇ ಅಕ್ಷರಪಲ್ಲಟ ಅಥವಾ ವರ್ಣವ್ಯತ್ಯಯ (ಭಾಷಾವಿ. ೪೪). [ಸಂ.]

ವರ್ಣವ್ಯವಸ್ಥೆ (ನಾ). ಪ್ರಾಚೀನ ಹಿಂದೂಸಾಮಾಜಿಕ ವ್ಯವಸ್ಥೆ : ಅವರವರ ವೃತ್ತಿವ್ಯವಸ್ಥೆಯೇ ಹಿಂದೆ ವರ್ಣವ್ಯವಸ್ಥೆಯಾಗಿತ್ತು (ಹಿಂದಸಾ. ೧೫೫). [ಸಂ. ವರ್ಣವ್ಯವಸ್ಥಾ]

ವರ್ಣಶಿಲ್ಪ (ನಾ). ೧. ಬಣ್ಣದ ಚಿತ್ರ. ೨. ಬಣ್ಣದ ಚಿತ್ರವನ್ನು ಬರೆಯುವುದು ; ವರ್ಣಚಿತ್ರಣ. ೩. ಧ್ವನಿಯ ಕೌಶಲಪೂರ್ಣವಾದ ರಚನೆ : ಅವರ ಶಾಂತರದ ಧ್ವನಿಯ ವರ್ಣಶಿಲ್ಪವನ್ನು ನಿರುಕಿಸಿದರೆ ಬಹುಬಣ್ಣಗಳ ವಿನ್ಯಾಸವನ್ನು ಕಾಣಬಹುದು (ಸಂಗೀತ. ೬). [ಸಂ.]

ವರ್ಣಶಿಲ್ಪಿ (ನಾ). ಬಣ್ಣದ ಚಿತ್ರಗಳನ್ನು ರಚಿಸುವ ಕಲಾವಿದ ; ವರ್ಣಚಿತ್ರಕಾರ : ಪ್ರಕೃತಿ ಒಂದು ಅದ್ಭುತವರ್ಣಶಿಲ್ಪಿ. ಅದು ಆಕೃತಿಗಳನ್ನು ರೂಪಿಸುವುದು ರೇಖೆಗಳಿಂದ, ಬಣ್ಣಗಳಿಂದ (ಸೌಂದಸೂ. ೧); ವರ್ಣಶಿಲ್ಪಿಗೆ ಬಣ್ಣ — ಕಾಗದ, ಕವಿಗೆ ಭಾಷೆ ಇವೆಲ್ಲವೂ ಅವನ ಭಾವಾಭಿವ್ಯಕ್ತಿಯ ಮಾಧ್ಯಮಗಳು (ಸೌಂದಸೂ. ೬೨). [ಸಂ. ವರ್ಣಶಿಲ್ಪಿನ್]

ವರ್ಣಶೂನ್ಯ (ಗು). ೧. ಬಣ್ಣವಿಲ್ಲದ ; ವರ್ಣರಹಿತವಾದ. (ನಾ). ೨. ಬಣ್ಣವಿಲ್ಲದವನು. ೩. ಆಕಾರವಿಲ್ಲದವನು ; ನಿರಾಕಾರ ಸ್ವರೂಪನಾದವನು. ೨, ೩ : ಈ ವರ್ಣಮಿಂ ವರ್ಣಶೂನ್ಯನ ಭೃತ್ಯಂಗೆಸವಂದಮಚ್ಚರಿ (ಜಗವಿ. ೧೫೧). [ಸಂ.]

ವರ್ಣಸಂಕರ (ನಾ). ೧. (ವಿವಾಹ ಸಂಬಂಧದಿಂದ) ಬೇರೆ ಬೇರೆ ಜಾತಿಗಳು ಒಂದುಗೂಡುವಿಕೆ ; ಜಾತಿಸಂಕರ : ಪ್ರಜಾಪತಿಯುಂ . . . ಯಥಾಯೋಗ್ಯಮುಪದೇಶಂಗೆಯ್ದು- ವರ್ಣಸಂಕರಮಾಗಲೀಯದೆ ತಂತಮ್ಮ ಜಾತಿಗಳೊಳ್ ನಿಲ್ಪುಮಂ ಕೊಳ್ಪುದೆಯುಮಂ ನಿಯೋಜಿಸಿ (ಆದಿಪು. ೪-೬೪ ವ). ೨. ಸ್ವಧರ್ಮವನ್ನು ಬಿಡುವುದು ; ಜಾತಿಕೆಡುವುದು : ದೇಶದ ವಿಭಜನೆಯ ಸಂದರ್ಭದಲ್ಲಿ ಅನೇಕ ಕಡೆ ವರ್ಣಸಂಕರಕ್ಕೆ ಆಸ್ಪದವಾಯಿತು (ಇಂಪ್ರೆ). ೩. ಬೇರೆ ಬೇರೆ ಬಣ್ಣಗಳ ಬೆರಕೆ ; ವರ್ಣಮಿಶ್ರಣ. ೧,೩: ವರ್ಣಸಂಕರಂ ಚಿತ್ರದೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧೪). ೪. ಅಕ್ಷರಗಳ ಹಾಗೂ ಪದಗಳ ಅಕ್ರಮವಾದ ಯೋಜನೆ ೩,೪: ಗುರುಲಘುಗಣನಂ ಕಿಬ್ಬುದು ಪಿರಿದಾದುದು ವರ್ಣಸಂಕರಂ ದಾನವನಿಂ ದೊರೆಯಾದುದು ಭೂವಲಯಂ ಪರಿಣತನಲ್ಲದನ ಕವಿತೆಗಂ ಚಿತ್ರಕ್ಕಂ (ಅನಂಪು. ೧೩-೩೧). [ಸಂ.]

ವರ್ಣಸಂಕರತೆ (ನಾ). ಬಣ್ಣಗಳ ಬೆರಕೆ : ರಾಜಸುತರ್ದುವಂದು . . . ಪಟ್ಟುದೀ ರಾಜಿಯ ವರ್ಣಸಂಕರತೆಯಿಂದೆ ಕೊಳಂಗಳನಂಗರಾಜನೀರಾಜನಲೀಲೆಗೆಂದು ರತಿ ತೀವಿದ ಬಣ್ಣವ್ಪರಂಗಳಂದದಿಂ (ಜಗವಿ. ೪-೭೫). [ಸಂ. ವರ್ಣಸಂಕರತಾ]

ವರ್ಣಸಂಯೋಜನೆ (ನಾ). ಬಣ್ಣಗಳು ಒಂದಕ್ಕೊಂದು ಹೊಂದುವಂತೆ ಬಳಸುವ ರೀತಿ , — ವಿನ್ಯಾಸ : ಅಜಂತಾಚಿತ್ರಗಳಲ್ಲಿನ ಸುಸಮೃದ್ಧ ಸತ್ವಪೂರ್ಣತೆ . . . ಸೊಗಸಾದ ವರ್ಣಸಂಯೋಜನಾವೈಖರಿ . . . ಇವು ಜಗತ್ತಿನ ಕಲೆಯಲ್ಲಿಯೆ ಅಸಮಾನವಾದುವು (ಭಾರದ. ೫೨೫). [ಸಂ. ವರ್ಣಸಂಯೋಜನ]

ವರ್ಣಾಂಧತೆ (ನಾ). ಬೇರೆ ಬೇರೆ ಬಣ್ಣಗಳ ವ್ಯತ್ಯಾಸವನ್ನು ತಿಳಿಯಲಾಗದ ಒಂದು ಬಗೆಯ ಕಣ್ಣಿನ ದೋಷ ; ಬಣ್ಣಗುರುಡು : ಕಾಡುಮೃಗಗಳಿಗೆ ಕಣ್ಣುದೃಷ್ಟಿ ಮಂದ . . . ವರ್ಣಾಂಧತೆಯೂ ಉಂಟು (ಪರಿಪೂ. ೧೬೬).

[ಸಂ. ವರ್ಣಾಂಧತಾ]

ವರ್ಣಾಧ್ವ (ನಾ). [ವೀಶೈ] ಮಹಾಲಿಂಗದಲ್ಲಿ ಉತ್ಪತ್ತಿಯಾದ ಸಾದಾಖ್ಯಿಗಳು ಜಗತ್ತಿನಲ್ಲಿ ಪ್ರಕಟವಾಗಲು ಸಹಾಯಕವಾಗಿರುವ ಆರು ಬಗೆಯ ಮಾರ್ಗಗಳಲ್ಲಿ ಒಂದು : ವರ್ಣಾಧ್ವ, ಪದಾಧ್ವ, ಮಂತ್ರಾಧ್ವ (ಇವು ಮೂರು ಶಬ್ದಾಧ್ವಗಳು), ತತ್ತ್ವಾಧ್ವ, ಕಲಾಧ್ವ, ಭುವನಾಧ್ವ (ಇವು ಮೂರು ಅರ್ಥಾಧ್ವಗಳು) (ಶಿವಾಪೂ. ೨ ಅಧಿಃ); ಮಂತ್ರಾಧ್ವ, ಪದಾಧ್ವ, ವರ್ಣಾಧ್ವಗಳು ನಾದಾತ್ಮಕವಾಗಿವೆ . . . ಐತ್ತೆರಡಕ್ಷರಗಳೇ ವರ್ಣಾಧ್ವ (ಶಿವಾಕೋ. ೨೨). 'ಪದಾಧ್ವ' ಪರಾ. [ಸಂ. ವರ್ಣಾಧ್ವನ್]

ವರ್ಣಾನುಕ್ರಮ (ನಾ). ಅಕ್ಷರಾನುಗುಣವಾದ ಜೋಡಣೆ ; ಅಕ್ಷರಾನುಕ್ರಮ : ಉಲ್ಲೇಖಪತ್ರಗಳನ್ನು . . . ವರ್ಣಾನುಗುಣವಾಗಿ ಹೊಂದಿಸಿಡುವುದೇ ವರ್ಣಾನುಕ್ರಮ (ಗ್ರಂಥಾಲ. ೪೮). [ಸಂ.]

ವರ್ಣಾಭಿಮಾನ (ನಾ). ತನ್ನ ಜಾತಿಯ ಮೇಲಿರುವ ಅಭಿಮಾನ : ಆರ್ಯರೀ ವರ್ಣಾಭಿಮಾನದತಿದರ್ಪದಿಂದಾರ್ಯತೆಯಿ ಅತಿವೃಷ್ಟಿಯಾಗೆ ಕೆಯ್ಮೊಲು ನೆರೆಯ ಪಾಲೊ ಅಥವಾ ಕೊಳಿಯ ಪಾಲೊ ತಾನಾಗುವುದು ನಿಶ್ಚಯಂ! (ಹಕ್ಕಿರ. ೬೨-೨೫).

[ಸಂ.]

ವರ್ಣಾಲ್ಪತೆ (ನಾ). ವಜ್ರದ ಐದುದೋಷಗಳಲ್ಲಿ ಒಂದು ; ಹೊಳಪು ಕಡಮೆಯಾಗಿರುವುದು : ವರ್ಣಾಲ್ಪತೆ ರೇಚೆ ತ್ರಾಸಂ ಕಾಕಪದಂ ಬಿಂದುವೆಂಬೈದು ದೋಷಂಗಳನುಳಿದ ಬಜ್ರರಮಂ ತೊಡವುಗಳೊಳ್ ಕೇವಣಿಸಿ ರಣಾಗ್ರದಲ್ಲಿ ತಳಿಯಲ್ ಫಾಯಂಬಡೆಯದೆ ಜಯಮಾದವುದು (ಹಾಲಾಸ್ಯ. ೨-೧-೫೫ ವ).

[ಸಂ. ವರ್ಣಾಲ್ಪತಾ]

ವರ್ಣಾವೃತ್ತಿ (ನಾ). [ಭಾಷಾಶಾ] ಏಕರೂಪದ ವರ್ಣ ಅಥವಾ ವರ್ಣಗಳು ಮತ್ತೆಮತ್ತೆ ಬರುವಂತೆ ಪದಗಳನ್ನು ಜೋಡಿಸಿ ರಚಿಸಿದ ಒಂದು ಬಗೆಯ ಶಬ್ದಾಲಂಕಾರ : ಇವು ವರ್ಣಾವೃತ್ತಿಗೆ ಸಲ್ಲುವು ಸಂದುಂ ಪ್ರಾಸದೆತೆಗೆ ಸಲ್ಲವು (ಕವಿದ. ೧೯); ವಿಕಸ್ವಾನಿಗಳನಜಿರು ವರ್ಣಾವೃತ್ತಿಯಂ ಮಾಟ್ಟುದು (ಕವಿದ. ೩೦ ವೃತ್ತಿ). [ಸಂ.]

ವರ್ಣಾಶ್ರಮ (ನಾ). ೧. ಜಾತಿಯ ಆಚಾರ, — ಸಂಪ್ರದಾಯ ; ಜಾತಿಧರ್ಮ : ಎಲ್ಲಿಯವು ವರ್ಣಾಶ್ರಮಂಗಳವೆಲ್ಲಿ ನೀತಿಗಳು ಎಲ್ಲಿಯ ಧರ್ಮಪ್ರವೃದ್ಧಿಗಳು (ಬಸವ. ೫೫-೬); ಅಪೂರ್ವನ ವರ್ಣಾಶ್ರಮದಂತೆ, ನಿನ್ನ ಕ್ರಿಸ್ತಧರ್ಮವೂ ಅಸತ್ಯವಾಗಿದೆ (ಅಕಾಂ. ೩೭೬). ೨. ಬ್ರಾಹ್ಮಣಾದಿ ವರ್ಣಗಳಲ್ಲಿರುವ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ಜೀವನದ ನಾಲ್ಕು ಘಟ್ಟಗಳು. [ಸಂ.]

ವರ್ಣಾಶ್ರಮಧರ್ಮ (ನಾ). = ವರ್ಣಾಶ್ರಮ ೧ : ಟೀಪುಸುಲ್ತಾನನು . . . ವರ್ಣಾಶ್ರಮಧರ್ಮಗಳನ್ನು ಕೆಡಿಸುತ್ತ . . . ಅನೇಕ ಧರ್ಮಕಾರ್ಯಗಳನ್ನು ನಾಶಮಾಡಿದನು (ಮಹಾವಂ. I, ೫೫೪); ಮನುಷ್ಯನ ಮುನ್ನಡೆಯಾದಂತೆ ಭಾರತದ ವರ್ಣಾಶ್ರಮಧರ್ಮ ಸುಳ್ಳಾಗುತ್ತಿದೆ (ಅಕಾಂ. ೨೭೬). [ಸಂ.]

ವರ್ಣಾಶ್ರಮವ್ಯವಸ್ಥೆ (ನಾ). ಆಯಾ ಜಾತಿಪದ್ಧತಿಗಳು ಕ್ರಮದಲ್ಲಿರುವಂತೆ ಮಾಡುವ ಏರ್ಪಾಟು, —ವ್ಯವಸ್ಥೆ : ಪದ್ಮನಾಭಮಹೀಭುಜಂ . . . ವರ್ಣಾಶ್ರಮವ್ಯವಸ್ಥೆಗಳಂ ಸ್ಥಸ್ಥಂ ಮಾಡಿಯುಂ . . . ಸಾಮ್ರಾಜ್ಯಮಂ . . . ನಿಜಾಯತ್ತಮುಮೆನಿಸಿದಂ (ಅಂಧ್ರಪು. ೨-೬೦ ವ). [ಸಂ. ವರ್ಣಾಶ್ರಮವ್ಯವಸ್ಥಾ]

ವರ್ಣ (ಗು). ೧. ಬಣ್ಣವನ್ನು ಹೊಂದಿದ ; ಬಣ್ಣವುಳ್ಳ. ೨. ಯಾವುದಾದರೊಂದು ಜಾತಿಗೆ ಸೇರಿದ. (ನಾ). ೩. ಚಿತ್ರಕಾರ. ೪. ಚತುರ್ವರ್ಣಗಳಲ್ಲಿ ಒಂದು ವರ್ಣಕ್ಕೆ ಸೇರಿದವನು. ೫. ವರ್ಣಾಶ್ರಮದ ಮೊದಲನೆಯ ಘಟ್ಟದಲ್ಲಿರುವವನು ; ಬ್ರಹ್ಮಚಾರಿ : ಯತಿಮೂರ್ತಿಯ ಬಲಿ ತಾಪಸಸುತನುವ ಸುರಧೇನು ವರ್ಣವೇಷದ ನಿಧಿ . . . ಕ್ಷಿತಿಯೊಳಗೀಶಾನಶಕ್ತಿ ದಾನವಿನೋದಂ (ಎಸ. V, ಬೇಲೂಯ. ೧೧೯-೪೨; ಸು. 1165); ಸ್ವಸ್ತಿಂದಾರಿಸುತಾ ವರ್ಣಿಯನಿಬರ್ಗೆ ಹಸ್ತಮಂ ಮುಗಿಮುಗಿದು ಬೀಳ್ಕೊಟ್ಟು (ಹರಶಿ. ೧೫-೬೯). ೬. ಯಾವುದಾದರೊಂದು ಜಾತಿಗೆ ಸೇರಿದವನು : "ವರ್ಣ = ಜಾತಿಮಂತಂ" (ಕಾಶಕ್ಕ. ೨೯೦); ಬ್ರಾಹ್ಮಣಾದಿ ವರ್ಣಗಳುಂ . . . ಸರ್ವದಾ ಶ್ರೀಮದ್ಭಿಭೂತಿಯನೇ ಧಾರಣಂಗೈಯಲ್ತಕ್ಕುದು (ವೀವೇ. ೭೨). ೭. ಬರಹಗಾರ; ಲೇಖಿಕ. [ಸಂ. ವರ್ಣಿನ್]

ವರ್ಣಿಕಾಭಂಗ (ನಾ). ಚಿತ್ರರಚನೆಯ ಆರು ಅಂಗಗಳಲ್ಲಿ ಒಂದು ; "ಆಯಾ ಅಂಗಕ್ಕೆ ಮತ್ತು ಆಯಾ ಭಾವಕ್ಕೆ ಉಚಿತವಾದ ವರ್ಣವೈವಿಧ್ಯಗಳನ್ನು ಪಯೋಗಿಸುವ ಕ್ರಮ" (ಸೌಂದಸ. ೧೩೦) : ಚಿತ್ರದಲ್ಲಿ ಮೊದಲ 'ಅಂಗ' 'ರೂಪಭೇದಾಃ' . . . ಕಡೆಯ ಅಂಗ 'ವರ್ಣಿಕಾಭಂಗ' (ಸೌಂದಸ. ೧೩೦). [ಸಂ.]

ವರ್ಣಿಕೆ (ನಾ). ೧. ಬಣ್ಣ ; ವರ್ಣ. ೨. ಮಸಿ ; ಶಾಯಿ. ೩. ಬಣ್ಣಹಾಕುವ ಕುಂಚ. ೪. ಲೇಖನಿ. ೫. ನಾಟಕದಲ್ಲಿಯ ಪಾತ್ರ. ೬. ನಾಟಕದ ಪಾತ್ರಕ್ಕೆ ಬಣ್ಣಗಳನ್ನುಪಯೋಗಿಸಿ ಮಾಡುವ ಪ್ರಸಾಧನ, ವೇಷಭೂಷಣ ಮುಂತಾದುವು : ಪಾತ್ರಗಳನ್ನು ರೂಪಿಸುವಲ್ಲಿ ವರ್ಣಿಕೆಯ(Make-up) ಕೆಲವು ಕ್ರಮಗಳು, ಇದರಂತೆ ಇನ್ನೂ ಹಲವು ನಿಯಮಗಳಿದ್ದೇ ಇವೆ (ಬಾಲಶ್ರ. III, ೧೨೬೪).

[ಸಂ. ವರ್ಣಿಕಾ]

ವರ್ಣಿತ (ಗು). ೧. ಬಣ್ಣ ಬಳಿದ ; ಬಣ್ಣ ತುಂಬಿದ. ೨. ಬಣ್ಣಿಸಿದ ; ವರ್ಣನೆ ಮಾಡಿದ. ೩. ಹೊಗಳಿದ ; ಸ್ತುತಿಸಿದ. [ಸಂ.]

ವರ್ಣಿನಾಥ (ನಾ). ಬ್ರಹ್ಮಚಾರಿಗಳಲ್ಲಿ ಶ್ರೇಷ್ಠನಾದವನು ; ಯತೀಂದ್ರ : ಬೇಗಮಂದರ್ . . . ವರ್ಣಿನಾಥರ್ (ಸುಖಮೂ. ೭-೪೮). [ಸಂ.]

ವರ್ಣಿನಿ (ನಾ). ೧. ಚತುರ್ವರ್ಣಗಳಲ್ಲಿ ಯಾವುದಾದರೊಂದು ವರ್ಣಕ್ಕೆ ಸೇರಿದವಳು. ೨. ಹೆಂಗಸು ; ಸ್ತ್ರೀ : "ರಾಮಾ . . . ವರ್ಣಿನೀ, ಸ್ತ್ರೀ . . . ಯುವತಿಃ — ಈ ೨೮ ಸ್ತ್ರೀಯರ್" (ಹಲಾಯು. ೭೯-೩೨೦). ೩. ಅರಿಸಿನ. [ಸಂ. ವರ್ಣಿನೀ]

ವರ್ಣಿಸು (ಕ್ರಿ). ೧. ಹೊಗಳು ; ಶ್ಲಾಘಿಸು : "ವರ್ಣಿಸು — ಸ್ತೋತ್ರೇ" (ಕವಧಾ). ೨. ಬಣ್ಣಿಸಿ ಹೇಳು ; ವಿಸ್ತಾರವಾಗಿ ನಿರೂಪಿಸು : ನೆಗಜ್ಜ ಕವಿತಾಗುಣಾರ್ಣವನ ವರ್ಣಿಸುವುದಂ ಪೊಗಟ್ಟು ಬಗೆದೋದುವರ್ ಮನದೊಳಾಟಿಸುವುದಂ ಪಡೆವರ್ (ಆದಿಪು. ೭-೨೭ ಗದ್ಯ); ಪರಮಮಾಹೇಶ್ವರರ ವಿಸ್ಮಯಚರಿತವಂ ವರ್ಣಿಸುವಡಾನೇತಱವನು (ಬಸವ. ೬೧-೭೭). [ವರ್ಣನ + — ಇಸು]

ವರ್ಣೀಯ (ನಾ). ಚತುರ್ವರ್ಣಗಳಲ್ಲಿ ಯಾವುದಾದರೊಂದು ವರ್ಣಕ್ಕೆ ಸೇರಿದವನು : ಆಯಾ ವರ್ಣೀಯರಿಗೆ ಉಕ್ತವಾಗಿದ್ದ ಕರ್ಮಗಳು ಕಾಲಕಾಲಕ್ಕೆ ಬದಲಾವಣೆಗಳಾಗುತ್ತಿದ್ದುದೂ ಕಂಡುಬರುತ್ತದೆ (ಭಾರದ. ೫೫೫). [ಸಂ.]

ವರ್ಣೇಶ್ವರ (ನಾ). = ವರ್ಣನಾಥ : ಸಪ್ತರ್ಷಿಗಳುಂ ಕ್ರಮಕ್ರಮದಿನಾ ವರ್ಣೇಶ್ವರಂಗಾದುವು (ಸುಖಮೂ. ೯-೪೫). [ಸಂ.]

ವರ್ಣೋತ್ತಮ (ನಾ). ಮೊದಲನೆಯ ವರ್ಣಕ್ಕೆ ಸೇರಿದವನು ; ಬ್ರಾಹ್ಮಣ : ನಾಮಪ್ಪೊಡೆ ವರ್ಣೋತ್ತಮರ್ ನಮಗತ್ಯಲಾರುಮಿಲ್ಲ (ಸುಖಮೂ. ೯-೧ ವ); ಅರಸುಗಳು ವರ್ಣೋತ್ತಮರ ದೆಸೆಗಂಜಬೇಕು (ಕುವಾಕು. ೬-೧೨). [ಸಂ.]

ವರ್ಣೋತ್ತಮತ್ವ (ನಾ). ಬ್ರಾಹ್ಮಣತ್ವ ; ಬ್ರಾಹ್ಮಣಿಕೆ : ಅತಿಬಾಲ ವಿದ್ಯಾಕುಲಾವಧಿವರ್ಣೋತ್ತಮತ್ವ . . . ಪ್ರಜಾಸಂಬಂಧಾಂತರಮೆಂಬ ಪತ್ತುಮಧಿಕಾರಂಗಳುಮನಱಿಪಿ (ಆದಿಪು. ೧೫-೧೬ ವ); ವರ್ಣೋತ್ತಮತ್ವಮೆಂಬುದು ವರ್ಣಂಗಳ್ಗೆಲ್ಲ ಮುತ್ತಮನಾಗಿ ತನ್ನುಮಂ ಪೆಱರುಮನುದ್ಧರಿಸುಗುಂ (ಚಾಪುಂಪು. ೨೬೮). [ಸಂ.]

ವರ್ತಕ (ಗು). ೧. ಇರುವ ; ವರ್ತಿಸುವ. ೨. ತೊಡಗಿರುವ ; ಮಗ್ನವಾದ. ೩. ವೃತ್ತಿಯನ್ನು ಕೈಕೊಂಡ, —ಅನುಸರಿಸುವ. (ನಾ). ೪. ನಡತೆ ; ವರ್ತನೆ : ಕೂಸು ಹೇತು ಕಲಸಿ ತಮ್ಮಪ್ಪನ ಬಾಯಲ್ಲಿ ಇಕ್ಕಿ ಮಿಕ್ಕುದ ತೊಡೆದಂತಾಯಿತ್ತು ವರ್ತಕ (ಸರ್ವಜ್ಞ. ೬೨-೬೩೧); ಉಪಯೋಗವಿಲ್ಲದ ಕೌಪೀನವನ್ನು ಕೊಟ್ಟು ಕಳುಹಿಸುತ್ತಿರುವಿರಿ. ನೀವು ಮಾಡುವ ಈ ಪರಿ ವರ್ತಕವು ಬಲು ಚಂದಾಗಿರುವದು (ಪುರಾವಿ. ೭೫). ೫. ವಾಣಿಜ್ಯ ; ವ್ಯಾಪಾರ : ಪ್ರತಿವರ್ಷದಲ್ಲಿಯೂ ಸುಮಾರು ೧೪೫ ಕೋಟಿರೂಪಾಯಿಗಳ ಪರಾಯದೇಶದ ವರ್ತಕವು ನಡಿಯುತ್ತದೆ (ಭೂಗೋಳ. ೬೯). ೬. ವರ್ತಿಸುವುದು ; ಪ್ರವೃತ್ತಿಪರವಾದುದು : ವೇದಚೋದಿತ ಜಾತಿಗಳು ಎರಡಾದಿಯಲಿ ವರ್ತಕ ನಿವರ್ತಕ (ಬಸವ. ೫೫೫-೧೯). ೭. ವ್ಯವಹರಿಸುವವನು : "ವರ್ತಕಃ, ವರ್ತಮಾನಃ -- ಈ ೨ ವ್ಯವಹರಿಸುವಂ" (ಕಾಶಕ್ಕ. ೧೩೬). ೮. ವ್ಯಾಪಾರ ಮಾಡುವವನು; ವ್ಯಾಪಾರಸ್ಥ : ಒಬ್ಬ ದೈವಜ್ಞ ವರ್ತಕನ ಬಳಿಗೆ ಹೋಗಿ . . . ಹೇಳಿಕೊಂಡನು (ಮುಂಬಯಿ. ೪-೫೦); ಮಲೆಯಾಳದ ಬಹುಭಾಗ . . . ಕ್ರಿ. ಪೂ. ದಿಂದಲೂ

ಹೊರನಾಡಿನ ವರ್ತಕರ ಸಂಪರ್ಕಕ್ಕೆ ಪಕ್ಕಾಗಿದೆ (ದ್ರಾಎಎ. ೧೨೦). ೯. ಕುದುರೆಯ ಗೊರಸು, –ಖುರಪುಟ : "ವರ್ತಕಃ – ಕುದುರೆಯ ಕಾಲುಗೊರಸು" (ಸಿದ್ಧಾಂತಿ. ೩೭೪). ೧೦. ಒಂದು ಬಗೆಯ ಹಕ್ಕಿ ; ಪುರಲೆ ; ಲಾವಕ್ಕಿ : ಗೂಳಿಗೆ ವರ್ತಕವೇ ಸಮಜೋಳಿ (ಉದ್ಭಟ. ೪-೮೮); ಕಂಕವರ್ತಕ ಕುರರೀಪ್ಲವಪ್ರಕರದಿಂದೆ ವಿರಾಜಿಕುಮುನ್ನತಂ ವನಂ (ಹಮ್ಮೀರ. ೪-೭೨). ೧೧. ಒಂದು ಬಗೆಯ ಮಣ್ಣು ಹುಳು : "ವರ್ತಕಃ . . . ವ್ಯಾಪಾರದ ಹುಳು" (ಸಿದ್ಧಾಂತಿ. ೩೭೪). [ಸಂ.]

ವರ್ತಕತನ (ನಾ). ವಾಣಿಜ್ಯ ; ವ್ಯಾಪಾರವೃತ್ತಿ : ನಮ್ಮ ರಾಜ್ಯದಲ್ಲಿ ವರ್ತಕತನ ಮಾಡಿಕೊಂಡಿರುವವರು . . . ಮೊದಲಾದವರಿಗೆ . . . ನಾನು ಕೇಳಿದೆನೆಂದು ಹೇಳು (ಕೃವಾಉ. ೪೦). [ವರ್ತಕ + – ತನ]

ವರ್ತಕಧರ್ಮ (ನಾ). ವಾಣಿಜ್ಯದ ರೀತಿ, ರಹಸ್ಯ ಮುಂತಾದುವು ; ವ್ಯಾಪಾರಧರ್ಮ : ವರ್ತಕಧರ್ಮ, ವಣಿಗ್ಧರ್ಮ ಎಂಬಿವುಗಳಲ್ಲಿ ವಾಣಿಜ್ಯದ ವೃದ್ಧಿಗಾಗಿಯೂ ಲಾಭದ ಪ್ರಾಪ್ತಿಗಾಗಿಯೂ ಕಂಡು ಕಾಣದ ಹಾಗೆಯೂ ಗೋಪ್ಯವಾಗಿಯೂ ಮಾಡುವ ಗುಟ್ಟುಗಳು (ಅರ್ಯಧ. ೧೨). [ಸಂ.]

ವರ್ತಕನಾವೆ (ನಾ). ವ್ಯಾಪಾರಿಗಳನ್ನೂ ವ್ಯಾಪಾರದ ಸರಕುಗಳನ್ನೂ ಒಯ್ಯುವ ಹಡಗು ; ವ್ಯಾಪಾರೀನೌಕೆ : ಅದು ದ್ವಾರಕೆಯಿಂದ ಅಮೂಲ್ಯವಸ್ತುಗಳನ್ನು ಹೇರಿಕೊಂಡು ಬರುತ್ತಿದ್ದ ಒಂದು ವರ್ತಕನಾವೆಯಾಗಿದ್ದಿತು (ಭಾರದ. ೨೭೨).

[ವರ್ತಕ + ನಾವೆ]

ವರ್ತಕಿ (ನಾ). ೧. ಒಂದು ಬಗೆಯ ಸಸ್ಯ : "ಆ ವರ್ತಕಿ[ಪಾಠಾಂ. ರ್ತಿಕೆ]ಯೆನಲ್ಕೆ ಮುರುಡಸೆ" (ಮಂಗರಾ. ೪೨-೩೮). ೨. ಪುರುಲೆಹಕ್ಕಿ ; ಲಾವಕ್ಕಿ. [ಸಂ. ವರ್ತಕೀ]

ವರ್ತನ (ಗು). ೧. ಇರುವ ; ವಾಸಮಾಡುವ. ೨. ನೆಲೆನಿಂತ ; ತಳವೂರಿದ. ೩. ತಿರುಗಿಸುವ ; ಹೊರಳಿಸುವ. ೪. ನಿಯಮಿಸುವ. (ನಾ). ೫. ಮುಂದೆ ಹೋಗುವಿಕೆ. ೬. ನಡತೆ ; ನಡವಳಿಕೆ : ಮುನ್ನಿಲ್ಲದ ತನ್ನ ವರ್ತನ ಮಿದೊಂದಾಶ್ಚರ್ಯಮಂ ತೋಱಿದಪ್ಪುದು (ಸುಕುಮಾ. ೨-೫೩). ೭. ಧರ್ಮ ; ಚಾರಿತ್ರ. ೮. ಬಳಕೆ ; ಉಪಯೋಗ ; ಪ್ರಯೋಜನ : "ವರ್ತನಂ ಬಳಕೆ" (ಕಾಶಕ್ಯ. ೨೮೧). ೯. ವ್ಯವಹಾರ ; ವ್ಯಾಪಾರ : "ವೃತ್ತಂ, ವೃತ್ತಿಃ, ವರ್ತನಂ . . . ಈ ೬ ವ್ಯವಹಾರಂ" (ಕಾಶಕ್ಯ. ೧೩೩). ೧೦. ಕಸುಬು ; ವೃತ್ತಿ : ಜಳಸ್ಥಳಯಾತ್ರಾದಿಯಂ ವೈಶ್ಯಂ ಶುಶ್ರೂಷಾದಿಯಂ ಶೂದ್ರಂ ವರ್ತನಂ ಮಾಡಿ (ಚಾವುಂಪು. ೩೬). ೧೧. ತಿರು ತಿರುಗಿ ಬರುವುದು ; ಆವರ್ತನ : ವರ್ತನಮಿಂತೀ ತೆಱನೆ ರಹಟಘಟಿಕಾನ್ಯಾಯಂ (ಪಂರಾಮಾ. ೧-೫೭). ೧೨. ತಿರುಗುವಿಕೆ : ತ್ರಿಭುವನದಗ್ರದಲ್ಲಿ ಮೂವತ್ತಾಱುಲ್ಕೋಕ ಅದಱ ಮಧ್ಯದಲ್ಲಿ ಇಪ್ಪತ್ತೈದು ಮಹಾಮೇರುವೆ ಹದಿನಾಱುವರ್ತನದ ಕೊಂಡಿ (ಮೋಳಿಮಾ. ೨೩೨-೭೮೫). ೧೩. ನೇಮಕ ; ನೇಮಕಾತಿ. [ಸಂ.]

ವರ್ತನಿ (ನಾ). ದಾರಿ; ಹಾದಿ ; ಮಾರ್ಗ. [ಸಂ.]

ವರ್ತನೆ (ನಾ). ೧. ವೃತ್ತಿ ; ಉದ್ಯೋಗ. ೨. ರೂಢಿ ; ಪರಿಪಾಟಿ ; ಸಂಪ್ರದಾಯ : ವರ್ತನೆಯ ನರ್ತನಕೆ ಪರಿವರ್ತನೆಯ ಸೊಬಗು. ಕಂದವೃತ್ತಗಳ ಝರಿ ತೊರೆಯ ನಡುವೆ ಹಸುರಿಗೆ ಗದ್ಯದುದ್ಯಾನ (ನೆಲಮು. ೩೩-೩). ೩. ಸ್ವಭಾವ ; ಗುಣ. ೪. ನಡವಳಿಕೆ ; ನಡತೆ : ಈ ಸುತ್ತುಬಳಸಿನ ವರ್ತನೆಯಿಂದ ಏನು ಪ್ರಯೋಜನ? (ಚಿಕರಾ. ೧೦೨); ಅವರು ಒಳ್ಳೆಯ ವರ್ತನೆ ಕಲಿಯಬೇಕು (ಶಿಕ್ಷದ. ೧೦೭). ೫. ನಿಯಮಿತವಾಗಿ ಗೊತ್ತುಪಡಿಸಿದುದು ; ನಿತ್ಯಗಟ್ಟಳೆ : ವರ್ತನೆಯವಳು ಹಾಲನ್ನು ತಂದು ಕೊಟ್ಟಳು (ಅವತಂ. ೨೦೬); ಇಲ್ಲಿ ವರ್ತನೆಹಾಲು ಹಾಕುತ್ತಾರೆಯೇ? (ರಂಗವ. ೮೮). ೬. ಗ್ರಾಮಾಧಿಕಾರಿಗಳಿಗೆ ಸಲ್ಲುವ ಹಣದ ರೂಪದ ಕಾಣಿಕೆ : ನಂನಮ್ಮ ವರ್ತನೆ ಉಡುಗರೆಯನು ಚೊಕ್ಕನಾಥದೇವರಿಗೆ . . . ಧಾರೆಯನೆಱದು ಕೊಟ್ಟೆವಾಗಿ (ಎಕ. IX, ಬೆಂಗಳೂ. ೮-೨೫; 1440); ಐದಾಯಿಪಂಚಾಳದವರಿಂದ ವರ್ತನೆ ವರುಷ ೧ಕ್ಕೆ ಮನೆ ೧ಕೆ ೩ (ಎಕ. XII, ಮದ್ದಗಿ. ೩೧-೧೦; 1656?). ೭. ಉದ್ದವನ್ನು ಅಳೆಯುವ ಒಂದು ಪ್ರಮಾಣ ; ಇನ್ನೂರು ಯೋಜನ : "ಆ ದಂಡಮೆರಡುಸಾವಿರಮಾಗೆ ಕ್ರೋಶಮಕ್ಕವು ನಾಲ್ಕುವರಲು ಯೋಜನಮಕ್ಕುಮಿಪ್ಪತ್ತು ವೆಳ್ಪಮಕ್ಕಿವು ಹತ್ತು ವರ್ತನಾಖ್ಯಂ" (ಮಂಗರಾ. ೯೬-೧೧).

ವರ್ತನೆ ಮನೆ = ಹಾಲು, ತರಕಾರಿ ಮುಂತಾದುವನ್ನು ದಿನಗಟ್ಟಳೆಯಾಗಿ ಮಾರಿ (ತಿಂಗಳಿಗೊಮ್ಮೆ) ಒಟ್ಟಾಗಿ ಹಣವನ್ನು ಪಡೆಯುವ ಕರಾರಿನ ಮೇಲೆ ಗೊತ್ತುಮಾಡಿಕೊಂಡ ಮನೆ : ಏನೋ ವರ್ತನೆಮನೆ ಅಂತ ನಾನು ಅಭಿಮಾನ ಇಟ್ಟುಕೊಂಡಿದ್ದರೆ ದರ್ಬಾರು ಮಾಡುತ್ತಾಳೆ ಇವಳು (ಹೂಹಣ್ಣು. ೧೦೮).

[ಸಂ. ವರ್ತನ]

ವರ್ತಮಾನ (ಗು). ೧. ಸುತ್ತುವ ; ತಿರುಗುವ. ೨. ಈಗ ಇರುವ ; ಚಾಲ್ತಿಯಲ್ಲಿರುವ. ೩. ಈಗಿನ ; ಈ ಕಾಲದ. (ನಾ). ೪. ವರ್ತಿಸುವವನು ; ವ್ಯವಹರಿಸುವವನು : "ವರ್ತಕಃ, ವರ್ತಮಾನಃ – ಈ ೨ ವ್ಯವಹರಿಸುವಂ" (ಕಾಶಕ್ಯ. ೧೩೩). ೫. ಘಟನೆ ; ವಿದ್ಯಮಾನ : ಇಂತಪ್ಪ ಭಾಷೆ ವ್ರತನೇಮಂಗಳ ನಾನಱಿಯೆನಯ್ಯಾ ಅಘಟಿತಘಟಿತ ವರ್ತಮಾನವ ನಾನಱಿಯೆನಯ್ಯಾ (ಬಸವ. ೫೧೧). ೬. ಸುದ್ದಿ ; ಸಮಾಚಾರ ; ವೃತ್ತಾಂತ : ಸಲೆ ವರ್ತಮಾನಮಿಂತೆಂದಱಿಪುತ್ತಲಿರ್ದ ಸಹದೇವನು (ಕಱಿಕಂ. ೨೦); ಹೈದರಲ್ಲಿಖಾನಬಹದರವರು ಈ ವರ್ತಮಾನ ಕೇಳಿ (ಹೈದರ. ೪೩). ೭. ಇರುವಿಕೆ : ಆ ಮಾರ್ಗದಲ್ಲಿ ಸೂರ್ಯಪ್ರಕಾಶದ ವರ್ತಮಾನವೇ ಇರುವುದಿಲ್ಲ (ಮುಂಬಯು. ೬-೪೨). ೮. [ವ್ಯಾಕ] ಮೂರು ಕಾಲಗಳಲ್ಲಿ ಒಂದು ; ಈಗ ನಡೆಯುವುದನ್ನು ಸೂಚಿಸುವ ಕಾಲ : ಭೂತವತಿ ವರ್ತಮಾನಂ ಖ್ಯಾತಭವಿಷ್ಯಂತಿ ಸರ್ವಸಾಧನಿಯೆಂಬಾಖ್ಯಾತವಿಭಕ್ತಿಗಳಕ್ಕುಂ (ಕಾವ್ಯಾವ. ೩೭೪); ಪ್ರಥಮಪುರುಷದ ವರ್ತಮಾನ ಭವಿಷ್ಯಂತಿಗಾದ ಗುಂ ಎಂಬುದು ಪರಮಾದೊಡಂ ಕ್ರಿಯಾಪದದೊಳ್ ಶಿಥಿಲತ್ವಮುಂಟು (ಶಮದ. ೪೪ ವೃತ್ತಿ).

[ಸಂ.]

ವರ್ತಮಾನಕಾಲ (ನಾ). [ವ್ಯಾಕ] ಈಗ ಇರುವ ಕಾಲ ; ಚಾಲ್ತಿಯಲ್ಲಿರುವ ಕಾಲ : ಈಗ, ಈ ಗಳಿಗೆಯಲ್ಲಿ, ನಡೆಯುತ್ತಿರುವುದು ವರ್ತಮಾನಕಾಲ (ಮಧ್ಯಮ. ೭೩).

[ಸಂ.]

ವರ್ತಮಾನಕ್ರಿಯೆ (ನಾ). [ವ್ಯಾಕ] ವರ್ತಮಾನಕಾಲದ ಅರ್ಥವನ್ನು ತಿಳಿಸುವ ಕ್ರಿಯಾಪದ : ವರ್ತಮಾನಕ್ರಿಯೆಯುಂ ವಿಧಿಕ್ರಿಯೆಯುಂ ಮಧ್ಯಮಪುರುಷಕ್ರಿಯೆಯುಂ ಉತ್ತಮಪುರುಷಕ್ರಿಯೆಯುಂ ಕೃಲ್ಲಿಂಗಮಾಗವು (ಶಮದ. ೭೩ ವೃತ್ತಿ).

[ಸಂ. ವರ್ತಮಾನಕ್ರಿಯಾ]

ವರ್ತಮಾನಗತಿ (ನಾ). [ವ್ಯಾಕ] ವರ್ತಮಾನಕಾಲದ ಅಪೂರ್ಣಕ್ರಿಯಾರೂಪ : ಕ್ರಿಯೆ ತಾಂ ಕ್ರಿಯಾರ್ಥಮಪ್ಪಲ್ಲಿಯಲಕ್ಕುಂ ವರ್ತಮಾನಗತಿಗುತ್ತುಮುತುಂ ದ್ವಯಮಕ್ಕುಂ (ಕಾವ್ಯಾವ. ೪೦೭). [ಸಂ.]

ವರ್ತಮಾನನ್ಯೂನ (ನಾ). = ವರ್ತಮಾನಗತಿ : ಧಾತುವಿಗೆ – ಉತ್ತಾ ಅಥವಾ – ಉತ್ತ ಎಂಬ ಪ್ರತ್ಯಯವನ್ನು ಸೇರಿಸಿದರೆ ವರ್ತಮಾನನ್ಯೂನರೂಪಗಳಾಗುತ್ತವೆ (ಮಧ್ಯಮ. ೧೦೧). [ಸಂ.]

ವರ್ತಮಾನಪತ್ರ (ನಾ). ಎಲ್ಲ ಪ್ರಕಾರದ ಪ್ರಚಲಿತ ವಿದ್ಯಮಾನವನ್ನು ಒಳಗೊಂಡು ಪ್ರತಿನಿತ್ಯ ಅಥವಾ ವಾರಕ್ಕೊಮ್ಮೆ ಪ್ರಕಟಗೊಳ್ಳುವ ಪತ್ರಿಕೆ : ದೇಶದ ಮೇಲೆ ನಡೆದ ಸುದ್ದಿಯನ್ನು ತಿಳಿದುಕೊಳ್ಳುವುದಕ್ಕಾಗಿ ವರ್ತಮಾನಪತ್ರಗಳನ್ನು ತರಿಸುತ್ತಾರೆ (ಮುಂಬಯು. ೪-೮೩). [ಸಂ.]

ವರ್ತಮಾನಪತ್ರಿಕೆ (ನಾ). = ವರ್ತಮಾನಪತ್ರ : ಓದುಗಾರಿಕೆಯ ಅಭಿವೃದ್ಧಿಯಾಗಲು ವರ್ತಮಾನಪತ್ರಿಕೆಗಳನ್ನು ತರಿಸುತ್ತಿದ್ದರು (ಹುಟ್ಟಿಹ. ೭).

[ಸಂ. ವರ್ತಮಾನಪತ್ರಿಕಾ]

ವರ್ತಿ (ನಾ). ೧. ದೀಪದ ಬತ್ತಿ : ಸಮೀರಣನೇರಣಿಗನಾಗೆ ನಿದಾಘದ ದೀಪ್ತಿ ವರ್ತಿಯೊಳ್ ಕಾಸೆ (ಅಜಿಪು. ೬-೭೦); ವರ್ತಿ ಉರೀತೋ ತೈಲ ಉರೀತೋ? (ಗಾದೆ). ೨. ಸೀರೆ ಮೊದಲಾದ ವಸ್ತ್ರಗಳ ಅಂಚು, – ಕರೆ : "ವರ್ತಿಃ, ವಸ್ತಿಃ, ದಶಾ, ಸಿಚೆ : – ಈ ೪ ಸೀರೆಯ ಕರೆ" (ಹಲಾಯು. ೯೦-೩೯೭). ೩. ಮೂಗುಪೆಟ್ಟಿನಿಂದ ಉಂಟಾದ ಬಾವು, – ಊತ. ೪. ಲೇಪನಕ್ಕಾಗಿ ಸುಗಂಧವಸ್ತುಗಳನ್ನು ಅರೆದು ಮಾಡಿದ ಬಿಲ್ಲೆ : "ಗಾತ್ರಾನುಲೇಪನೀ – ಮೈಯ ಪೂಸಲೆಂದು ಮಾಡಿದ ಗುಳಿಗೆ, ವರ್ತಿಯೆನಿಸುಗು" (ನಾಚಿರಾ. ೧೨೫). ೫. ಬಣ್ಣಬಣ್ಣಗಳಿಂದ ಕೂಡಿದ

ಹೊಳಪಿನ ಕಾಗದ ; ಬೇಗಡೆ : ಹಿಂದೆ ನವರಾತ್ರಿಯಲ್ಲಿ ಗೊಂಬೆಗಳನ್ನು ಕೂರಿಸುವಾಗ ಪಟ್ಟದ ಗೊಂಬೆಗಳಿಗೆ ವರ್ತಿಯಿಂದ ಮಾಡಿದ ಸೀರೆ, ಕುಪ್ಪಸ, ಪೇಟಾ ಮುಂತಾದು ವುಗಳನ್ನು ಮಾಡಿ ಅಲಂಕರಿಸುತ್ತಿದ್ದರು (ಮೂಢ). [ಸಂ.]

ವರ್ತಿಕೆ (ನಾ). ೧. ಬಣ್ಣ ಬಳಿಯುವ ಕುಂಚ. ೨. ಅರಳೆಯ ಹಂಜಿ : "ಹಂಜಿ [ಪಾಠಾಂ.ಚಿ] ವರ್ತಿಕೆಯಿಕ್ಕು" (ಮಂಗರಾ. ೬೧-೨೦). ೩. ದೀಪದ ಬತ್ತಿ. ೪. ಪುರುಳೆಹಕ್ಕಿ ; ಲಾವಕ್ಕಿ. [ಸಂ. ವರ್ತಿಕಾ]

ವರ್ತಿಸು (ಕ್ರಿ). ೧. ವರ್ತುಲಾಕಾರವಾಗಿ ತಿರುಗು : (೫). ೨. ನಡೆಯಿಸು ; ಚಲಾಯಿಸು : (೫). ೩. ಚಲಿಸು ; ಸರಿ ; ಗಮಿಸು. ೪. ಇರು ; ನೆಲಸು ; ವಾಸಿಸು : ಅಲರ್ದಿರ್ದ ಪುಂಡರೀಕದ ಕೆಲದೊಳ್ ವರ್ತಿಸುವ ಹಂಸಯುಗಮನೆ ಭೂಭೃತ್ತಿಲಕನ ಸಿತಾತಪತ್ರದ ಕೆಲದೊಳ್ ನರ್ತಿಸಿತು ಧವಳಚಾಮರಯುಗಳಂ (ಕಾದಂಪು. ೪೭೨); ಕಾಪುರುಷರ್ ತಾವಾರ್ತವರೆ ಶಾಂತರೂಪಿಂ ವರ್ತಿಸಿ ಜಿನರಾಜನಂತು ಮುಕ್ತಿಯನೀಯಲ್(ಸಮಪ. ೧-೧೨೪). ೫. ಬದುಕು ; ಜೀವಿಸು ; ಜೀವಂತವಾಗಿರು : ಕೃಚ್ಛ್ರಚಾಂದ್ರಾಯಣಪರ್ಣಭಕ್ಷ ಜಲಭಕ್ಷ ಸಮೀರಣಭಕ್ಷವೃತ್ತಿಯೊಳ್ ಕಾಯಮನೆಯ್ದಿ ಸಾರ್ದ ಬಲೊಕಂ ಮುನಿಗಳ್ ನಿಜಜೀವನಕ್ಕೆ ಯೋಗಾಯತಸೌಖ್ಯಮಂಬಮೃತಸೇವೆಯ ಕಾರಣವಾಗೆ ವರ್ತಿಪರ್ (ಜಗವ. ೧೬-೫೦). ೬. ನಡೆ ; ಚಾಲ್ತಿಯಲ್ಲಿರು : ಶಂಭವತೀರ್ಥನಾಥಸಂತಾನದಶಲಕ್ಷಕೋಟಿಸಾಗರೋಪಮಂ ವರ್ತಿಸುವಂದಾ ಕಾಲದೊಳ್ ತ್ರಿಜ್ಞಾನಧರಂ ಪುಟ್ಟದೊಡಂ (ಚಾವುಪು. ೧೦೩). ೭. ನಡೆದುಕೊಳ್ಳು ; ಆಚರಿಸು : ಅತಂ ಸ್ವತಂತ್ರನವನಾಜ್ಞೆಯಿಂ ಸರ್ವಮುಂ ವರ್ತಿಸುವುದು (ಪದ್ಮರಾ. ೧೦-೨೫೨); ವ್ಯಕ್ತಿಗಳೂ ಪಂಗಡಗಳೂ ತಮ್ಮ ಮೇಲಿನ ಹೊಣೆಯನ್ನು ಅರಿತು ವರ್ತಿಸಬೇಕಾಗುತ್ತದೆ (ಶಬ್ದ. ೩೧೯). ೮. ವ್ಯವಹರಿಸು : ಈ ರೀತಿ ವರ್ತಿಸುವ ವ್ಯಾಪಾರಿಯೆ ಯಶಸ್ಸು ದೊರಕಿಸುತ್ತಾನೆ (ರತ್ನಗೋ. ೨೦). ೯. ಬಳಕೆಯಾಗು ; ವಿನಿಯೋಗವಾಗು ; ಉಪಯೋಗವಾಗು : ದೊರೆಕೊಂಡ ಸಂಖ್ಯೆಯೊಳಮನುಕರಣ ದೊಳಂ ವರ್ತಿಕುಂ ಮಹಾಪ್ರಾಣಂಗಳ್ (ಕಾವ್ಯಾವ. ೨೨). ೧೦. ಉಂಟಾಗು ; ಸಂಭವಿಸು : ಸೂತ್ರಕೃರ್ಥವ್ಯತ್ತಿ ವರ್ತಿಸೆ ಬರೆದೆಂ (ಶಮದ. ೬ ಟೀಗಳ); ಗುರು ಪತಿಯ ನೇಮದಲಿಂದಿನೀ ವೃತ್ತಾಂತ ವರ್ತಿಸಿ[ಪಾಠಾಂ. ಪಸರಿಸಿ]ತಿಲ್ಲಿಪರಿಯಂತ (ಕುವಾಗ. ೪-೨೯); ವರ್ತಿಸಿತು ವದಟಿನಿಂ ಜಯರವಂ ಲೋಕದೊಳ್ (ಚಿಬಪು. ೪೦-೩೨). ೧೧. ತೊಡಗು ; ಉಪಕ್ರಮಿಸು : ಎಲೆಲೆ ರಿಪುಸಂವರ್ತನೊಳು ಕೊಡುಗುಳಿಕೆ ವರ್ತಿಸಲರಿದು (ಕುವಾದ್ರೋ. ೧೨-೧೦). ೧೨. ಆಚರಿಸುವಂತೆ ಮಾಡು ; ನಡೆದುಕೊಳ್ಳುವಂತೆ ಮಾಡು : ಅಭ್ಯಾಸವೆನ್ನ ವರ್ತಿಸಿತ್ತಯ್ಯಾ ಭಕ್ತಿಸಾಧ್ಯವಾಗದು ನಾನೇವನಯ್ಯಾ (ಬಸವ. ೫೧೨). ೧೩. ಇತರರು ನುಡಿದಂತೆ ನುಡಿ ; ಅನುಕರಿಸು : ಶಬ್ದಸಂಭಾಷಣೆಯ ನುಡಿಯ ವರ್ತಿ[ವಾಠಾಂ. ರ್ತಿ]ಸಿ ನುಡಿವೆ... ಎನ್ನ ಮನದಲೊಂದು ಹೃದಯದಲೊಂದು ವಚನದಲೊಂದು ನೋಡಾ (ಬಸವ. ೨೯೯). ೧೪. [ಗಣಿತ] ಗುಣಿಸು ; ಗುಣಾಕಾರ ಮಾಡು : ವರ್ತಿಸು ವರ್ಗಿಸು . . . ಕಾದಿಸು ಪೂಜಿಸು ಉತ್ತಮದಿಂ ಪೇಟೆ ಮೊದಲ ಗುಣಕಾರಂಗಳ್ (ವ್ಯವಹಾ. ೧೦-೫೧).

[ವರ್ತನ + – ಇಸ್ಕು]

ವರ್ತುಕ (ನಾ). ಒಂದು ತೂಕದ ಪ್ರಮಾಣ: ೨೮ ಗುಂಜಿಗೆ ೧ ವರ್ತುಕ ೩½ ವರ್ತುಕಕ್ಕೆ ೧ ತೊಲಿ (ಕಬಾಗೆ. ೨೮೯).

[IP ಇದು 'ವರಹ + ತೂಕ' ಎಂಬುದರ ಸವಕಳಿರೂಪವಾಗಿರಬಹುದು]

ವರ್ತುಲ, ವರ್ತುಳ (ಗು). ೧. ದುಂಡಾದ ; ಮಂಡಲಾಕಾರದ ; ಗೋಲಾಕಾರವಾದ : ನಕ್ಷತ್ರಪ್ರಸವದ ಸಂತುಷ್ಟಿ ; ಗ್ರಹನಿರ್ಮಾಣದ ವರ್ತುಲವೃಷ್ಟಿ (ಕೋಗಿ. ೫೮-೫೯). (ನಾ). ೨. ಗುಂಡಾಗಿರುವುದು ; ಗೋಳಾಕಾರವಾದುದು : "ವರ್ತುಲಂ ನಿಸ್ತಲಂ ವೃತ್ತಮೆನೆ ಬಟ್ಟಕ್ಕು" (ಮಂಗರಾ. ೧೩೨-೨೫). ೩. ಚೆಂಡು. ೪. ಒಂದು ಬಗೆಯ ಕಾಳು ; ಬಟಾಣಿ. ವರ್ತುಳ : ೨. "ನಿಸ್ತಲಂ, ವರ್ತುಳಂ, ವೃತ್ತಂ – ಈ ೩ ಬಟ್ಟಿಸ್ತು" (ಹಲಾಯು. ೧೨೪-೬೮); ಇಂತೀ ತ್ರಿವಿಧಭೇದ ವರ್ತುಳ ಗೋಮುಖ ಗೋಳಕಾಕಾರ ಕೂಡಿದ ಲಿಂಗವಾದಲ್ಲಿ (ಮೋಮಾ. ೬-೨೫).

[ಸಂ.]

ವರ್ತುಲನೃತ್ಯ (ನಾ). ಮಂಡಲಾಕಾರವಾಗಿ ಮಾಡುವ ಕುಣಿತ ; ರಿಂಗಣ ಗುಣಿತ : ಮೂವರೂ ಒಬ್ಬರೊಬ್ಬರ ಕೈವಿಡಿದು ವರ್ತುಲನೃತ್ಯವೆಸಗುತ್ತಾರೆ (ಚಂದ್ರಸ. ೧-೧೩). [ಸಂ.]

ವರ್ತುಳ 'ವರ್ತುಲ' ನೋ.

ವರ್ತುಳವಾಯು (ನಾ). ಚಕ್ರಾಕಾರವಾಗಿ ಸುತ್ತುತ್ತ ಹೋಗುವ ಗಾಳಿ ; ಸುಂಟರಗಾಳಿ : ವರ್ತುಳವಾಯುವಲ್ಲಿ ಎದ್ದ ತೃಣ ಪರ್ಣ ಕುಂಪಟ ಮುಂತಾದವನೆಲ್ಲವನು ದಂಡ ಸಾಕಾಗ ಮುಂತಾಗಿ ತೋಱಿ ಸಂಚಾರ ನಿಂದ ಮತ್ತೆ ಅವು ಮುನ್ನಿನ ಸಂಚದಂತೆ ನಿಂದವು (ಸಚವ. II, ೩೬೬-೩೮). [ಸಂ. ವರ್ತುಲವಾಯು]

ವರ್ತ್ಮ (ನಾ). ೧. ಹಾದಿ ; ದಾರಿ ; ಮಾರ್ಗ : "ಅಧ್ವಾ . . . ವರ್ತ್ಮ, ವರ್ತ್ಮನೀ . . . ನಿಗಮಃ – ಈ ೧೨ ಬಟ್ಟೆ" (ಹಲಾಯು. ೪೩-೧೦೫); ಕರಿಕುವರಿಸುತ್ತಟವಿಯಂ, ಕೃಷ್ಣಮಂ, ವರ್ತ್ಮಮಂ ನಿರ್ಮಿಸುತೆ ದಾಳಡುವುದಾ ಕರ್ಬು (ಶ್ರೀರಾಮಾ. ೭೧೩-೧೦೬). ೨. ಕಣ್ಣಿನ ರೆಪ್ಪೆ; ಕಣ್ಣವೆ: "ಕಣ್ಣ ಮುರಿದವೆಯ ವರ್ತ್ಮಮೆಂಬುದು" (ಮಂಗರಾ. ೧೩೯-೫). [ಸಂ. ವರ್ತ್ಮನ್]

ವರ್ತ್ಮನಿ (ನಾ). ಹಾದಿ ; ಮಾರ್ಗ. [ಸಂ.]

ವರ್ಧಂತಿ (ನಾ). ಹುಟ್ಟುಹಬ್ಬ ; ಜನ್ಮದಿನೋತ್ಸವ : ನಮ್ಮ ಮೈಸೂರು ಮಹಾರಾಜರವರ ವರ್ಧಂತಿಉತ್ಸವವನ್ನು ಮಾಡಿಸುತ್ತೇನೆ (ಕಿಂಕಥ. ೨೨).

[ಸಂ. ವರ್ಧಂತೀ]

ವರ್ಧಕ (ಗು). ೧. ಬೆಳಸುವ ; ವೃದ್ಧಿಗೊಳಿಸುವ. ೨. ಕತ್ತರಿಸುವ ; ವಿಭಜಿಸುವ. (ನಾ). ೩. ಹಿರಿಯ ; ವಯಸ್ಕ : "ವರ್ಧಕಃ, ವರ್ಧಮಾನಃ, ವೃದ್ಧಃ – ಈ ೩ ಟಿಯಂ" (ಕಾಶಕ್ಕ. ೧೩೩). ೪. ಮರಗೆಲಸದವನು ; ಬಡಗಿ. ೫. ಒಂದು ಬಗೆಯ ಸಸ್ಯ ; ಭಾರಂಗಿ. ೬. ವೃದ್ಧಿಗೊಳಿಸುವ ಸಲಕರಣೆ : ಆ ಪ್ರವಾಹವನ್ನು . . . ವರ್ಧಕ ಎಂಬ ಮತ್ತೊಂದು ಉಪಕರಣಕ್ಕೆ ಕೊಂಡೊಯ್ದು ಅಲ್ಲಿ ಅದರ ಬಲವನ್ನು ಸಾಕಷ್ಟು ವರ್ಧಿಸುತ್ತಾರೆ(ಎಕ್ಸಾ.೩ ೬೭). ೭. ಧಾಯಾಚಿತ್ರಗಳ ಮೂಲಬಿಂಬವನ್ನು ಪ್ರತಿತೆಗೆಯುವುದಕ್ಕೆ ಮೊದಲು ಅದನ್ನು ಸ್ಥಿರಗೊಳಿಸಲು ಬಳಸುವ ದ್ರಾವಕ : ಅದನ್ನು ಒಮ್ಮೆಗೇ, ವರ್ಧಕ (Developer) ಎಂಬ ನೀರಲ್ಲಿ ಮುಣುಗಿಸಿ, ಅತ್ತಿತ್ತ ಎಳೆಯಬೇಕು (ಬಾಲಪ್ರ. II, ೧೫೫). [ಸಂ.]

ವರ್ಧಕಿ (ನಾ). ಮರಗೆಲಸ ಮಾಡುವವನು ; ಬಡಗಿ : "ತ್ವಷ್ಟಾ, ಕಾಷ್ಠತಟ್, ತಕ್ಷಾ, ರಥಕಾರಃ, ವರ್ಧಕೀ – ಈ ೫ ಬಡಗಿ" (ಹಲಾಯು. ೧೬-೪೩). [ಸಂ.]

ವರ್ಧನ (ಗು). ೧. ಹಚ್ಚಿಸುವ ; ವೃದ್ಧಿಗೊಳಿಸುವ. ೨. ಹೆಚ್ಚಾಗುವ ; ವೃದ್ಧಿಹೊಂದುವ. (ನಾ). ೩. ಬೆಳವಣಿಗೆ ; ಅಭಿವೃದ್ಧಿ ; ಹೆಚ್ಚಳ : "ವರ್ಧನಂ = ಪರ್ಚುಗೆ" (ಕಾಶಕ್ಕ. ೨೮೫). ೪. ದೊಡ್ಡದು ; ಹಿರಿದು : "ವೃದ್ಧ . . . ವರ್ಧಿ, ವರ್ಧನಂ . . . ವಾರ್ಧಕ್ಯಂ – ಈ ೧೦ ಪಿರಿದು" (ಕಾಶಕ್ಕ. ೧೩೩). ೫. ಏಳಿಗೆಯನ್ನುಂಟುಮಾಡುವವನು ; ಅಭಿವೃದ್ಧಿಗೊಳಿಸುವವನು. ೬. ಕತ್ತರಿಸುವಿಕೆ ; ಛೇದನ : "ಕಲ್ಪನಂ, ಕರ್ತನಂ, ವರ್ಧನಂ, ಛೇದನಂ – ಈ ೪ ಕಡಿಹ" (ಹಲಾಯು. ೧೭೨-೪೪). [ಸಂ.]

ವರ್ಧನಿ (ನಾ). ೧. ಕಸಪೊರಕೆ : "ಸಮ್ಮಾರ್ಜನೀ, ವರ್ಧನೀ – ಈ ೨ ಕಸಕಿಲ್" (ಹಲಾಯು. ೫೦-೧೪೬). ೨. ಹಿಡಿ ಮತ್ತು ಮೂತಿಯಿರುವ ಒಂದು ಬಗೆಯ ಸಣ್ಣ ಪಾತ್ರೆ; ಗಳಂತಿಗೆ: "ವರ್ಧನೀ, ಗಳಂತಿಕಾ – ಈ ೨ ಗಣತಿಗೆ" (ಹಲಾಯು. ೫೩-೧೬೨). [ಸಂ. ವರ್ಧನೀ]

ವರ್ಧನೆ (ನಾ). ಬೆಳವಣಿಗೆ ; ಅಭಿವೃದ್ಧಿ : ತಾವು ನಾವು ದೊಸ್ತಾರರಾದ್ದರಿಂದಾ ಬಾಯಾಚಾರಕ್ಕೆ ಸಲುವಾಗಿ ಬಹಳ ಫಲವಾಗಿ ಇರುವಂಥಾದ್ದು ವರ್ಧನೆ ಆಗಿ ಇರ ಬೇಕು (ರಾಜೇಂದ್ರ. ೧೬೦). [ಸಂ. ವರ್ಧನ]

ವರ್ಧಮಾನ (ಗು). ೧. ಬೆಳೆಯುತ್ತಿರುವ ; ಹೆಚ್ಚುತ್ತಿರುವ : ವಿಂಧ್ಯಾ ಚಲದಂತೆ ವರ್ಧಮಾನೋತ್ಸೇಧನುಮಂಧಕಾರಾತಿಯಂತೆ ಭೈರವಾಕಾರನುಮಾಗಿ (ಪಂಪಭಾ. ೧೧-೧೧೬ ವ). (ನಾ). ೨. ಏಳಿಗೆ ; ಉತ್ಕರ್ಷ. ೩. ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ ; ಹರಳು ; ಔಡಲ : ವರ್ಧಮಾನ – ಬದ್ಧವಣ

(ಶಮರ. ೨೦೬ ಪ್ರಯೋ). ೪. ಮುಚ್ಚುಳ ; ಶ್ರಾವೆ : "ಶಾಳಾಜಿರಃ, ವರ್ಧಮಾನಃ, ಶರಾವಃ – ಈ ೩ ಶ್ರಾವೆ" (ಹಲಾಯು. ೫೨-೧೬೦). ೫. ದಕ್ಷಿಣಕ್ಕೆ ಬಾಗಿಲು ಇಲ್ಲದ ಒಂದು ಬಗೆಯ ಕಟ್ಟಡ : "ಸ್ವಸ್ತಿಕಃ, ವರ್ಧಮಾನಃ, ನಂದ್ಯಾವರ್ತಃ – ಈ ೩ ಮೊದಲಾಗುಳ್ಳುವು ಅರಮನೆಯ ಛಂದಂಗಳ್" (ಹಲಾಯು. ೫೧-೧೫೦); ಸ್ವಸ್ತಿಕವರ್ಧಮಾನ ನಂದ್ಯಾವರ್ತ ಸರ್ವತೋಭದ್ರ ವಳಭಿಚ್ಛಂದಮೆಂಬಯ್ದುಂ ಪ್ರಾಸಾದಂಗಳೊಳಂ . . . ತದ್ಭೂಮಿ ಕಣ್ಣೊಪ್ಪುಗುಂ (ಚಂದ್ರಪ್ರ. ೧೫-೨೧). ೬. ಬಗಟು ; ಒಡವು. ೫,೬: ಅದು ಸಂಯುತಹಸ್ತದಂತೆ ವಿಸ್ತೃತಸ್ವಸ್ತಿಕೋಪೇತಮುಂ ಶುದ್ಧಪ್ರಸಿದ್ಧಪ್ರಬಂಧದಂತೆ ವರ್ಧಮಾನಮಾನಿತಮುಂ . . . ಎನಿಪುದು (ಚಂದ್ರಪ್ರ. ೧೧-೬೯ ವ). ೭. [ನಾಟ್ಯ] ಇಪ್ಪತ್ತುಮೂರು ದೇಶೀಯಸ್ಥಾನಕಗಳಲ್ಲಿ ಒಂದು ; IP "ಪಾದಗಳನ್ನು ಅಡ್ಡಮಾಡಿ ಹಿಮ್ಮಡಿಗಳನ್ನು ಸೇರಿಸುವುದು" (ಲಾಸ್ಯರಂ. ೬೨ ಗದ್ಯಾನುವಾದ): ಚರಣದ ಮಡದೊಳ್ ಪತ್ತಿರೆ ಪಿರಿದಡ್ಡದೆ ಪದಮೆ ವರ್ಧಮಾನಮೆನಿಕ್ಕುಂ (ಲಾಸ್ಯರಂ. ೭-೩೪). ೮. ಸಂಯುತಹಸ್ತಗಳಲ್ಲಿ ಒಂದು ; IP "ಹಂಸಪಕ್ಷಹಸ್ತಗಳೆರಡನ್ನು ಒಂದಕ್ಕೊಂದು ಹಿಮ್ಮುಖವಾಗಿರುವಂತೆ ಮುಂಗೈಗಳಲ್ಲಿ ಕೂಡಿಸಿ ಹಿಡಿಯುವುದು" (ಲಾಸ್ಯರಂ. ೨೪೫ ಗದ್ಯಾನುವಾದ). 'ವರ್ಧಮಾನಹಸ್ತ' ಪರಾ. ೯. [ಜೈನ] ವರ್ತಮಾನತೀರ್ಥಂಕರರಲ್ಲಿ ಇಪ್ಪತ್ತುನಾಲ್ಕನೆಯವನಾದ ಮಹಾವೀರತೀರ್ಥಂಕರ : ಮಾಳ್ಕೆಮಗಟ್ಟಱಿಂದೆ ಶುಭಮಂ ಶ್ರೀವರ್ಧಮಾನಂ ಜಿನಂ (ವರ್ಧಪು. ೧-೧). ೨,೯ : ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂಪದಮೆಂದುಂ ವರ್ಧಮಾನಂ (ಅರ್ಧನೇ. ೧-೪೩). ೧೦. ಅವಧಿಜ್ಞಾನದ ಪ್ರಕಾರಗಳಲ್ಲಿ ಒಂದು ; ಸಮ್ಯಗ್ದರ್ಶನಾದಿ ಗುಣಗಳ ಅಭಿವೃದ್ಧಿಯಿಂದ ಪ್ರಾಪ್ತವಾಗುವ ಅಸಂಖ್ಯಾತಲೋಕಗಳ ಜ್ಞಾನ : ಹೀಯಮಾನವರ್ಧಮಾನಾವಸ್ಥಿತಾನುಗಾಮ್ಯ ನನುಗಾಮಿಸ್ವರೂಪದಿಂ ಷಟ್ಪ್ರಕಾರಮಪ್ಪ ದೇಶಪರಮಸರ್ವಾವಧಿಜ್ಞಾನಮುಂ (ಸಾಬಮಾ. ೮-೪ ವ); ವರ್ಧಮಾನಮೆಂಬುದು . . . ಅಸಂಖ್ಯಾತಲೋಕಂಬರಂ ನಿರಂತರಂ ಪೆರ್ಚುವುದು (ತತ್ತ್ವಪ್ರ. ೬೮). [ಸಂ.]

ವರ್ಧಮಾನಕ (ನಾ). ೧. ಒಂದು ಬಗೆಯ ಪಾತ್ರೆ. ೨. ಮುಚ್ಚುಳ : "ಶರಾವಮದು ವರ್ಧಮಾನಕಂ ತಾನಕ್ಕುಂ" (ಮ್ಯಾಕೋ. ೫೦-೨೯). ೩. [ಅಶ್ವಶಾ] ಕುದುರೆಯ ಮೈಮೇಲಿರುವ ಒಂದು ಬಗೆಯ ಗುರುತು,– ಚಿಹ್ನೆ : ಶ್ರೀವೃಕ್ಷಂ ಕನ್ನಡಿ ನಂದ್ಯಾವರ್ತಂ ವರ್ಧಮಾನಕಂ ಸ್ವಸ್ತಿಕಮೆಂಬೀ ವಿವಿಧಲಾಂಛನಂಗಳ ನಾವರಿಸಿದ ವಾಜಿಗಾಯ್ತು ತ್ರಿಂಶದ್ವರ್ಷಂ (ಅಶ್ವಶಾ. ೫-೩೬). [ಸಂ.]

ವರ್ಧಮಾನಹಸ್ತ (ನಾ). = ವರ್ಧಮಾನ ೮ : ಸಲೆ ಹಂಸಪಕ್ಷಮೆರಡುಂ ಸುಲಭದೆ ಮುಂಗಯ್ಯನೊಂದಕೊಂದೊಂದಿ ಕರಂ ನೆಲೆಗೊಂಡು ತಿರುಗೆ ಮೊಗಮಂ . . . ವರ್ಧಮಾನಹಸ್ತಮೆನಿಕ್ಕುಂ (ಲಾಸ್ಯರಂ. ೨-೩೬). [ಸಂ.]

ವರ್ಧಿತ (ಗು). ೧. ಬೆಳೆದ ; ಅಭಿವೃದ್ಧಿಹೊಂದಿದ. ೨. ದೊಡ್ಡದಾದ ; ಹಿಗ್ಗಿದ. ೩. ಕತ್ತರಿಸಿದ ; ಸೀಳಿದ. ೪. ತುಂಬಿದ ; ಪೂರ್ತಿಯಾದ. (ನಾ). ೫. ಬೆಳೆದವನು ; ಅಭಿವೃದ್ಧಿಹೊಂದಿದವನು : ಅತುಳಿತಗುರುಭಕ್ತಿಪ್ರಬುದ್ಧನು ಕಲಿತ ಗುರುಭಕ್ತಿಸ್ಥಿತನು ಗುರುಭಕ್ತಿವರ್ಧಿತಮ (ಬಸಪು. ೪೦-೧). [ಸಂ.]

ವರ್ಧಿಷ್ಣು (ಗು). ೧. ಬೆಳೆಯುವ ; ಅಭಿವೃದ್ಧಿಗೊಳ್ಳುವ. (ನಾ). ೨. ಏಳಿಗೆಯಾಗುತ್ತ ಇರುವುದು ; ಬೆಳೆಯುತ್ತಿರುವುದು : ಒಂದು ಅವಧಿಯವರೆಗೆ ವರ್ಧಿಷ್ಣುವಾಗಿದ್ದು ಅನಂತರ ಹೊಸಪೀಳಿಗೆಯ ಕಣ್ಣಿಗೇ ಬೀಳದಿರುವ ಅನೇಕ ಪುಸ್ತಕಗಳ ಚರಿತ್ರೆ ಇಂತಹುದು (ಸಾಹಿಪ್ರ. ೩೧೦). ೩. ಬೆಳೆಯುತ್ತ ಹೋಗುವವನು ; ಎತ್ತರವಾಗುತ್ತ ಹೋಗುವವನು : ಇದೇನೆಂದು ಜಾತಾದ್ಭುತಂ ನೋಟ್ಬರ ಕಣ್ಣಂ ಚೇತಮುಂ ಕಾಲ್ಗಿಡೆ ಕಡುಜವದಿಂ ವಿಷ್ಣು ವರ್ಧಿಷ್ಣುವಾದಂ (ಅರ್ಧನೇ. ೬-೨೮). [ಸಂ.]

ವರ್ಧಿಸು (ಕ್ರಿ). ಬೆಳೆ ; ಅಭಿವೃದ್ಧಿಗೊಳ್ಳು : ಇಳೆಯೊಳದಂಕುರಿಸಿ ಹರಿತ್ತುಳದೊಳ್ ವರ್ಧಿಸಿಯೆ ನೀಳ್ದು ಗಗನಕ್ಕಸುಹತ್ತುಳನಾರೀ[ನಯನಾಂ]ಬುವೆ ಬೆಳಸಿದುದೆನೆ ಕೀರ್ತಿವಲ್ಲಿಯಂ ಸತ್ತಿಗನಾ (ಗದಾಯು. ೧೦-೯); ದಿಶಾವ್ಯೋಮಾವಧಿ ಸ್ಥೂಲಮಪ್ಪೊಡಲಿಂ ವರ್ಧಿಸಿ . . . ಆರಭಟೆಯಿಂದಿರ್ದಂ ನಿಕುಂಭಾಸುರಂ (ಜಗವಿ. ೧೫-೬೨); ಬಾಲಾರ್ಕಶುಕ್ಲಪಕ್ಷಚಂದ್ರರಂದದೆ ಮೇಲೆ ವರ್ಧಿಸಿ ಸುತರಿರಲು (ಕಂಸವಿ. ೬-೧೧). [ವರ್ಧನ + – ಇಸ್ಸು]

ವರ್ನಣೆ (ನಾ). ಕುದುರೆಯ ಒಂದು ಅಂಗ (?): ಬೆಡ(ದು)ವಿನ ಸಮೀಪದೆಡೆಯುಂ ಪಡೆವುದು ವರ್ನ [ಪಾಶಾ. ನ್ನ] ಣಯದೆಂಬ ಪೆಸರಂ (ಅಶ್ವಶಾ. ೯-೨೬); ಬೇಡುವE ಬೆಡವಿ೩ನ ಸಮೀಪದೆಡೆಗಂ ಪಡೆವುದು ವರ್ನಣೆಯದೆಂಬ ಪೆಸರುಂ (ಅಶ್ವವೈ. ೮-೨೫). [?]

ವರ್ಪ 'ವರ್' ಪರಾ.

ವರ್ಮ$_1$ (ನಾ). ೧. ಹಗೆತನ ; ವೈರ : ಆ ನಿಂಗೀ ಕಾಲಾಗ ಹೌದಲ್ಲೊ ಇಷ್ಟು ನಿಮ್ಮದೂ ಅವರದೂ ವರ್ಮ? (ಮಂಚಿಹಾ. ೮೮); ಅವನ ವರ್ಮಾ ಕಟಗೊಂಡರ ನಾಳೆ ಈ ಊರಾಗ ನಿಂತು ನೀರ ಕುಡೀದ್ಯಾಂಗ ಮಾಡ್ಯಾನು (ಗ್ರಾಮಾಯ. ೧೫೩). ೨. ಭಾಷೆ ; ಆಣೆ ; ಮಾತು : 'ವರ್ಮಗೆಡು' ಪರಾ. ೩. ಗರ್ವ ; ಅಹಂಕಾರ : ಸರ್ವಾಂತರ್ಯಾಮಿ ಶಿವನಿರಲು ತನ್ನೊಳಗೆ ವರ್ಮವಿಹುದೇಕೆ (ಸರ್ವಜ್ಞ. ೪೪೧). [<— ತಮಿ. ವರ್ಮ, ವನ್ಮ]

ವರ್ಮ$_2$ (ನಾ). ಗುಟ್ಟು ; ರಹಸ್ಯ : ವ[ಪಾಶಾ.ಕ]ರ್ಮವನಱಿಯದ ಮಾಟ ಸಯಿದಾನದ ಕೇಡು (ಬಸವ. ೧೯೦); ಬೊಮ್ಮವೆಂದಿನ ಪರಿಯಲಿಪ್ಪುದು ವರ್ಮವಱಿಯದ ಮೂಢರುಗಳಾ ಬೊಮ್ಮ ಹುಟ್ಟಿತು ಹೊಂದಿತೆಂಬರು (ಸಮ್ಯಾ. ೭-೩೦). [< ಸಂ. ಮರ್ಮನ್]

ವರ್ಮ$_3$ (ನಾ). ೧. ಅಂಗರಕ್ಷೆಗಾಗಿ ತೊಡುವ ಉಕ್ಕಿನ ಕವಚ ; ಮೈಜೋಡು : "ಕವಚಂ ಜಗರಂ ಸನ್ನಾಹವುರಛದಮಂಗರಕ್ಷೆ ಕಂಕಟಕಂ ವರ್ಮವಿನಿತ್ತುಂ [ಕವಚಾಖ್ಯಂ]" (ಮ್ಯಾಕೋ. ೮೪-೧೨); ಶರನಿಧಿಯ ವಡಬಾನಳನ ದಳ್ಳುರಿಯ ವರ್ಮವ ತಿವಿವ ತುಂಬಿಗೆ ಮರಳುದಲೆಯುಂಟಾದಡದು ಭವಭವದ ಪುಣ್ಯಫಲ (ಕುಮಾರ್ಯೋ. ೪-೪೬). ೨. ಆಶ್ರಯ ; ಮರೆ ; ರಕ್ಷಣೆ : 'ವರ್ಮಿಗ$_2$' ಪರಾ. ೩. ಕತ್ತಿಯ ಒರೆ : "ವರ್ಮ, ಕೋಶಂ – ೨ ಕತ್ತಿ ಮೊದಲಾದುವನ್ನು ಇಡುವ ಒರೆ" (ಧನಂಜ. ೧೮೪-೫೫). ೪. ತೊಗಟೆ. ೫. ಕ್ಷತ್ರಿಯರ ಹೆಸರಿನ ಕೊನೆಯಲ್ಲಿ ಸೇರುವ ಒಂದು ಪದ. [ಸಂ. ವರ್ಮನ್]

ವರ್ಮಗೆಡು (ಕ್ರಿ). ಮಾತಿಗೆ ತಪ್ಪು; ವಚನಭಂಗಮಾಡು: ವರ್ಮಗೆಟ್ಟು ನುಡಿವ ಕರ್ಮಜೀವಿಗಳ ಬಾಯಲ್ಲಿ ಬಾಲ್ಬುಳ ಸುರಿಯದೆ ಮಾಣ್ಬುವೆ ಹೇಳಾ (ಅಖಂಡೇ. ೨೬೭-೭). [ವರ್ಮ$_1$ + ಕೆಡು$_1$]

ವರ್ಮಗ್ನ (ನಾ). ರಹಸ್ಯವನ್ನು ಬಲ್ಲವನು ; ಸತ್ಯವನ್ನು ತಿಳಿದವನು : ವರ್ಮಗ್ನ ಮಡಿವಾಳ ಮಾಚರಸ ಕಿನ್ನರನ ನಿರ್ಮೋಹಿ ಕಲಕ್ಕಾತ ಬ್ರಹ್ಮೈಯ್ಯ (ನವಮೋ. ೧-೧೪). [< ಸಂ. ಮರ್ಮಜ್ಞ]

ವರ್ಮವರ (ನಾ). ಮೈಜೋಡು ; ಕವಚ : ಬಿಲ್ಲು ತೀರು ಹೆದೆ ಬತ್ತಳಿಕೆ ಶಿರಸ್ತ್ರಾಣ ಮಧ್ಯತ್ರಾಣ ಪದತ್ರಾಣ ವರ್ಮವರ . . . ಮುಂತಾದ ಶತ್ರುಜಯಾತ್ಮರಕ್ಷಾದಿ ಸಾಧನವಿಶೇಷಗಳಿಂದಲೂ (ಏಕೇ. ೨೬೨). [< ವರ್ಮ$_3$]

ವರ್ಮಿಗ$_1$ (ನಾ). ರಹಸ್ಯವನ್ನರಿತವನು ; ಮರ್ಮಜ್ಞ ; ಜ್ಞಾನಿ : ಕರ್ಮಕ್ಕೆ ಕರ್ಮವನಿತ್ತು ತಾ ವರ್ಮಿಗನಾಗಬಲ್ಲಡೆ ಹೊಳೆಯಲ್ಲಿ ಹಾಕಿದ ಸೋರೆಯಂತೆ ಅನಿಲ ಕೊಂಡು ಹೋಹ ಎಲೆಯಂತೆ ಏತಕ್ಕೂ ಹೊಱಗಾಗಿ ಜಗದಾಶೆ ಇಲ್ಲದಿರ್ಪ ವೇಷಕ್ಕೆ ಒಳಗಲ್ಲದಾತನ ಜಗದೀಶನೆಂಬೆ (ಮೋಳಿಮಾ. ೧೯೭-೭೫೫). [ವರ್ಮ$_2$ + – ಇಗ]

ವರ್ಮಿಗ$_2$ (ನಾ). ಆಸರೆಕೊಡುವವನು ; ಆಶ್ರಯದಾತ : ನಿರ್ಮಲರ ಮನ ಕಲಕಿ ದೋಷಕೆ ವರ್ಮಿಗರು ನೀವಾದಿರೆಲೆ ಪಾತಕರೆ ಬಿಡಿರೂರ (ಬಿಜ್ಜಪು. ೧೦೬-೭೧). [ವರ್ಮ$_3$ + – ಇಗ]

ವರ್ಮಿತ (ನಾ). ಕವಚವನ್ನು ತೊಟ್ಟಿರುವವನು : "ವರ್ಮಿತಃ, ಕವಚಿತಃ, ಸನ್ನದ್ಧಃ, ದಂಶಿತಃ – ಈ ೪ ಕವಚದೊಟ್ಟವಂ" (ಹಲಾಯು. ೭೬-೩೦೬). [ಸಂ.]

ವರ್ಯ (ಗು). ೧. ಆರಿಸಿಕೊಳ್ಳಬೇಕಾದ ; ಆಯಬೇಕಾದ. ೨. ಯೋಗ್ಯವಾದ ; ಅರ್ಹವಾದ. ೩. ಉತ್ತಮವಾದ ; ಮಿಗಿಲಾದ ; ಮೇಲಾದ. (ನಾ).

೪. ಶ್ರೇಷ್ಠನಾದವನು : ಧುರಧರೆಯೊಳು ಮಾಱುಂತರನಿರದಿಕ್ಕಿ ಪರಾಕ್ರಮ್ಮಿಕಲಕ್ಕಿಗೆ ನಿಜಬಂಧುರಭುಜಮಂ ನೆಲೆಮಾಡಲು ಧರಿತ್ರಿಯೊಳು ವರ್ಯನಾರ್ಯಮಲ್ಲನೆ ಬಲ್ಲಂ (ಸೌಗಾ. XX. ೨೦೬-೬;೭). [ಸಂ.]

ವರ್ಯಜನ (ನಾ). ಉತ್ತಮಮಟ್ಟದ ಜನ ; ಶ್ರೇಷ್ಠಜನ : ಅವ್ರತಿಕಂಗೆಱಗದ ವೀರವ್ರತಮಂ ಕೇಳ್ದು ಹರ್ಷಮಂ ತಾಳ್ದದ ನಿನ್ನಬ್ರಹ್ಮಣ್ಯಂ ವರ್ಯಜನವ್ರೀಡಾಕರಮದಂ ವಿಚಾರಿಸವೇಡಾ (ಪಂರಾಮಾ. ೭-೫೧). [ಸಂ.]

ವರ್ಯೆ (ನಾ).೧. ತನ್ನ ಪತಿಯನ್ನು ತಾನೇ ಆರಿಸಿಕೊಳ್ಳುವವಳು ; ಸ್ವಯಂವರೆ. ೨. ಮದುವೆಗೆ ಯೋಗ್ಯಳಾದ ಕನ್ಯೆ : "ವರ್ಯಾ, ಪತಿಂವರಾ – ಈ ೨ ಕುಡಲ್ ನೆಱೆದ ಕೂಸು" (ಹಲಾಯು. ೭೯-೩೨). [ಸಂ. ವರ್ಯಾ]

ವರ್ಷ (ನಾ). ೧. ಮಳೆ ; ವೃಷ್ಟಿ : ಸಮುದಗ್ರಗ್ರಾವವರ್ಷಂ ಕಱೆಯೆ . . . ಗೋಪಗೋಪೀತತಿ ಮಱೆವುಗೆ ಗೋವರ್ಧನಾದ್ರೀಂದ್ರಮಂ . . . ಕೊಡೆವೊಲಂದೆತ್ತಿ ನಿಂದಂ ಮುಕುಂದಂ (ಜಗವಿ. ೪-೮೯); ಶರನಿಧಿ ಕವಿದಂತೆ ಕಱೆದುದಿಳೆಯೊಳ್ ವರ್ಷಂ (ಗಿರಿಕ. ೯-೫೧). ೨. ಮಳೆಯಂತೆ ಸುರಿಸುವಿಕೆ : 'ಪುಷ್ಪವರ್ಷ', 'ಶರವರ್ಷ' ಪರಾ. ೩. ವೀರ್ಯವು ಚಿಮ್ಮುವಿಕೆ. ೪. ಕಾಲಮಾನದ ಒಂದು ಪ್ರಮಾಣ ; ಹನ್ನೆರಡುತಿಂಗಳುಗಳ ಅವಧಿ ; ಸಂವತ್ಸರ : ಪರಮಾಯುಷ್ಕಮದಯ್ದಿರುಳ್ವೆರಸು ನೂಱ್ಪತ್ತುವರ್ಷಂ ನರದ್ವಿರದೌಘಕ್ಕೆ (ಕೋಕೋವ. ೧೧-೧೦೫); ಮೂವತ್ತು ವರ್ಷಗಳ ಹಿಂದೆ . . . ಕಥಾಸಂಗ್ರಹವೊಂದನ್ನು ಪ್ರಕಟಿಸಿತ್ತು (ಹೊಸಕ. ೨೬೭). ೫. ಭೂಮಂಡಲದ ಒಂಭತ್ತು ವಿಭಾಗಗಳಲ್ಲಿ ಒಂದು : ಜಂಬೂದ್ವೀಪದ ನವವರ್ಷಂಗಳೊಳ್ ಭಾರತವರ್ಷಮೊಂದನುಬೆದು ಮಿಕ್ಕಿನೆಂಟುವರ್ಷಂಗಳುಂ . . . ಭೂಸ್ವರ್ಗಂಗಳೆನಿಪುವು (ಚಱವಿ. ೩೧-೧೭). 'ನವವರ್ಷ' ಪರಾ. ೬. ಭಾರತದೇಶ. ೭. ಮೋಡ. ೮. ದಿವಸ.

ವರ್ಷಂಪ್ರತಿ = ಪ್ರತಿಯೊಂದು ವರ್ಷವೂ ; ವರ್ಷವರ್ಷವೂ : ಅವನಿಗೆ ವರ್ಷಂಪ್ರತಿ ಹದಿನೆಂಟುಸಹಸ್ರರೂಬಲ್ ವರಮಾನ ಬರುತ್ತಿತ್ತು (ವ್ಯಸಾ. ೩೪೦). ವರ್ಷಗಟ್ಟಳೆ$_2$ = ಹಲವಾರು ವರ್ಷಗಳ ತನಕ : ವರ್ಷಗಟ್ಟಳೆ ಶೂಲದ ಮೊನೆಯ ಮೇಲೆ ಕುಳಿತು ಸಮಾಧಿಮಗ್ನನಾಗಿದ್ದೆ (ಸುದಾ. 1, ೫೫೧). ವರ್ಷತೊಡಕು = ಯುಗಾದಿಯ ಮರುದಿನ; IP ಜನರು ಈ ದಿನವನ್ನು ಸಂತೋಷದಿಂದ ಕಳೆದರೆ, ವರ್ಷವೆಲ್ಲಾ ಸಂತೋಷದಿಂದ ಕೂಡಿರುತ್ತದೆ ಎಂಬ ನಂಬಿಕೆಯಿಂದ ಈ ದಿನವನ್ನು ಹಬ್ಬದ ಸಂಭ್ರಮದಲ್ಲಿ ಕಳೆಯುತ್ತಾರೆ : ಯುಗಾದಿಹಬ್ಬ ಆದ ಮಾರನೆಯ ದಿನ ಬಾಡಿನ 'ವರ್ಷತೊಡಕು' ಮಾದದ ಹೊರತು ನನ್ನೂರಿನವರ ತೊಡಕು ವರ್ಷವೆಲ್ಲಾ ಪರಿಹಾರವಾಗುವುದೇ ಇಲ್ಲ (ನನ್ನೂರು. ೩೩). ವರ್ಷದಪೆಚ್ಚು = ಮಗುವಿಗೆ (ಮೊದಲನೆಯ) ವರ್ಷ ತುಂಬಿದಾಗ ಮಾಡುವ ಹಬ್ಬ , – ಉತ್ಸವ : ಪಕ್ಕದ ಮನೆಯಾಕೆಯ ಮಗುವಿನ ವರ್ಷದ ಪೆಚ್ಚಿಗೆ ಕರೆದಿದ್ದಾರೆ (ರೂಢಿ). ವರ್ಷಾಕಾಲ$_2$ = ಹಲವಾರು ವರ್ಷಗಳು ; ಎಷ್ಟೋ ವರ್ಷಗಳ ಕಾಲ : ವರ್ಷಾಕಾಲ ಕಷ್ಟಪಟ್ಟಿದ್ದಕ್ಕೆ ಈಗ ಫಲ ಸಿಕ್ಕಿದೆ (ರೂಢಿ). [ಸಂ.]

ವರ್ಷಕಾರಿ (ನಾ). ಮಳೆಯನ್ನು ಸುರಿಸುವಂತಹುದು : ಕರಭದ ಕರಡಿಯ ಮೇಱ್ ವಾನರನೊಟ್ಟಿಯ ಪೋಲ್ಕೆಯಪ್ಪ ಮುಗಿಲಿಂದಂ ಭೋರ್ಗರೆದೆಱಗಿ ಕೊಂಡು ವೆರ್ಮೆ ಧರೆಯೊಳ್ ವರವರ್ಷಕಾರಿಯಾಗದು (ಅಭಿಮ. ೬-೪).

[ಸಂ. ವರ್ಷಕಾರಿನ್]

ವರ್ಷಕಾಲ (ನಾ). ಮಳೆಗಾಲ ; ವರ್ಷಾಕಾಲ : ಮಯೂರನ ನಾಟ್ಯವೀಕ್ಷಣಂ ಕೂಡುವ ಮುಗ್ಧ ತಿಂಗಳೊಳು ಭೋಗಿಗಳಿರ್ವರು ವರ್ಷಕಾಲದೊಳ್ (ಮಲ್ಲಿ. ೧೦-೨೧೨). [ಸಂ.]

ವರ್ಷಗಂತಿ 'ವರ್ಷಗಂದಿ' ನೋ.

ವರ್ಷಗಂದಿ, ವರ್ಷಗಂತಿ (ನಾ). ವರ್ಷಕ್ಕೊಮ್ಮೆ ಕರುಹಾಕುವ ಹಸು : "ಪ್ರತಿವತ್ಸರಂಗೌ: , ಸಮಾಂಸಮಿನಾ – ಈ ೨ ವರ್ಷಗಂದಿಯಪ್ಪ ಪಸು" (ಹಲಾಯು. ೪೫-೧೭). ವರ್ಷಗಂತಿ : ಆವುದಾನೊಂದು ವರ್ಷಗಂತಿಯಾಕಳುಂಟು ಅದು ಸಮಾಂಸಮಿನೆ (ನಾಚಂಗಾ.೬). [ವರ್ಷ + ಕಂದಿ$_1$]

ವರ್ಷಗಟ್ಟಳೆ$_1$ (ನಾ). ವ್ಯಕ್ತಿಯು ಸತ್ತು ಒಂದು ವರ್ಷ ಕಳೆದಾಗ ಮಾಡುವ ತಿಥಿ ; ವಾರ್ಷಿಕಶ್ರಾದ್ಧ : ನಾಳೆ ನಮ್ಮ ತಾತನ ವರ್ಷಗಟ್ಟಳೆಯಾದ್ದರಿಂದ ಊರಿಗೆ ಹೋಗಬೇಕು (ರೂಢಿ). [ವರ್ಷ + ಕಟ್ಟಳೆ$_1$]

ವರ್ಷಗಟ್ಟಳೆ$_2$ 'ವರ್ಷ' ಪರಾ.

ವರ್ಷಜ (ಗು). ೧. ಮಳೆಯಿಂದ ಉಂಟಾದ. ೨. ಮಳೆಗಾಲದಲ್ಲಿ ಹುಟ್ಟಿದ : 'ವರ್ಷಜಧನು' ಪರಾ. [ಸಂ.]

ವರ್ಷಜಧನು (ನಾ). ಮಳೆಬಿಲ್ಲು ; ಕಾಮನ ಬಿಲ್ಲು : ಹರಿ ವರ್ಷಜಧನುವಂ ಸಂಹರಿಸಲೊಡಂ ಜೈತ್ರಚಾಪಮಂ ಜಿನಚಂದ್ರಂ ಧರಿಯಿಸಿದಂ (ಶಾಂತಿವ. ೧೦-೧೩೫).

[ಸಂ. ವರ್ಷಜಧನುಸ್]

ವರ್ಷಣ (ನಾ). ಮಳೆ ; ವೃಷ್ಟಿ : ಮಣಿಘಂಟಿಕಾರವಂ ಕಿಂಕಿಣೀರವಂ ಕಱೆಯೆ ಬೇಱೆ ಕರ್ಣಾಮೃತವರ್ಷಣಮಂ ಜನನೇತ್ರಾಕರ್ಷಣಮಾದುದು ತಡತಡಾದ ಜಿನಬಾಳಕನಾ (ಮಲ್ಲಿವಿ. ೧೩-೫೦). [ಸಂ.]

ವರ್ಷಧರ (ನಾ).೧. ನೀರನ್ನು ಧರಿಸಿರುವಂಥದು ; ಮೋಡ. ೨. ಅಂತಃಪುರದ ಸೇವಕರಲ್ಲೊಬ್ಬನಾದ ನಪುಂಸಕ ; ಖೋಜಾ : ಅಂತಃಪುರಪರಿವಾರಜನ ನಿರ್ದಯಸಂಮರ್ದನಿಪತಿತಕುಬ್ಜವಾಮನವರ್ಷಧರನಿಕುರುಂಬಮುಂ . . . ಆಗಿ (ಆದಿಪು. ೪ -೩೫ ವ); ಬರ್ಬರಶಾಕಬಧಿರವರ್ಷಧರ . . . ಖಂಜರಂಜಕ ಸಮಾಜಮುಮಂ (ಚಂದ್ರಪು. ೬-೪೫ ವ). [ಸಂ.]

ವರ್ಷಧಾರೆ (ನಾ). ಮಳೆಯ ಸುರಿತ , – ಧಾರೆ : ಮುಸಲ – ವರ್ಷಧಾರೆ ಮುಗಿಲಿನಿಂದ ಸೋರೆ ಕುಣಿವ ನವಿಲು ನನ್ನ ಮನಂ, ನಲ್ಮೆಯುಕ್ಕಿ ಮಿರೆ! (ಪಕ್ಷಿಕಾ. ೩೫-೧). [ಸಂ. ವರ್ಷಧಾರಾ]

ವರ್ಷನಗ (ನಾ). ಭೂಮಿಯ ಒಂಬತ್ತು ಪರ್ವತಗಳನ್ನು ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸುವಂತೆ ಅಡ್ಡನಿಂತಿರುವ ಸಾಲುಪರ್ವತ : ಪಕ್ಷಚ್ಛೇದೋದ್ಯುಕ್ತನಪ್ಪ ಸುರರಾಜನ ಸೇನಾನಿಯೊಳ್ ತಾಗುವ ಪದದ ವರ್ಷನಗದಂತೆ ಬಂದು ತಾಗುವುದುಂ (ಶಾಂತಿವ. ೧೦-೧೬೬ ವ). [ಸಂ.]

ವರ್ಷಪರ್ವತ (ನಾ). = ವರ್ಷನಗ : ಮೂವತ್ತೈದುಂ ವರ್ಷಂಗಳುಂ, ಅನಿತುಂ ವರ್ಷಪರ್ವತಂಗಳುಂ . . . ಇನಿತುಂ ಭೂಸ್ವರ್ಗಂಗಳೆನಿಪುವು (ಚಱವಿ. ೩೧-೧೭).

[ಸಂ.]

ವರ್ಷಫಲ (ನಾ). ಯುಗಾದಿಯ ದಿನದಂದು ಪೂರ್ವಭಾವಿಯಾಗಿ ಹೇಳುವ ಪ್ರಸಕ್ತವರ್ಷದ ಮಳೆ, ಬೆಳೆ ಮೊದಲಾದುವುಗಳ ಫಲ : ಯುಗಾದಿಯಂದು ಪಂಚಾಂಗಪೂಜೆಯ ನಂತರ ಜೋಯಿಸರು ವರ್ಷಫಲವನ್ನು ತಿಳಿಸುತ್ತಾರೆ (ರೂಢಿ).

[ಸಂ.]

ವರ್ಷರ್ತು (ನಾ). ಶ್ರಾವಣ ಮತ್ತು ಭಾದ್ರಪದ ಮಾಸ ; ಮಳೆಗಾಲ : ವರ್ಷರ್ತು ಹರ್ಷಮನೆರಚುವಂತೆ ಕಾರ್ಮುಗಿಲ್ ಮುತ್ತಿ ಗಗನವನ್ನೆದೆ ಮಳಿಗರೆಯೆ (ಚಿತ್ರಾಂಗ. ೭೧-೧೫೭೭). [ಸಂ.]

ವರ್ಷವರ (ನಾ). = ವರ್ಷಧರ ೨ : "ಕ್ಲೀಬವ್ಯಪದೇಶಂ ವರ್ಷವರಂ ನಪುಂಸಕಂ" (ವಸ್ತುಕೋ. ೫೬-೨೬); ಇದಿರ್ವರ್ಷ ವರ್ಷ[ವಾಹಂ. ಪುರುಷ]ವರನಂ ಕಾದಂಬರೀ ದೇವಿಯೆಲ್ಲಿರ್ದಳೆಂಬುದುಂ (ಕಾದಂಬಾ. ೨೦೦). [ಸಂ.]

ವರ್ಷವರ್ಧಂತಿ (ನಾ). ವರ್ಷದ ಹುಟ್ಟುಹಬ್ಬ. [ಸಂ. ವರ್ಷವರ್ಧಂತೀ]

ವರ್ಷವರ್ಧನದಿನ (ನಾ). = ವರ್ಷವರ್ಧಂತಿ : ಕಟಕಟಿಸೂತ್ರಕುಂಡಲಹಟತ್ ಕಿರೀಟಾಂಗದಾದಿ ಮಣಿಭೂಷಣ ಭಾಜಟಲಿತಮೂರ್ತ್ಯುತ್ಕರ್ಷಂ ಸ್ಫುಟಹರ್ಷಂ ತನ್ನ ವರ್ಷವರ್ಧನದಿನದೊಳ್ . . . ಒಡ್ಡೋಲಗಂಗೊಟ್ಟರೆ (ಆದಿಪು. ೨-೨); ಒಂದು ದಿವಸಂ ತನ್ನ ವರ್ಷವರ್ಧನದಿನದೊಳು ಮಹಾಸನಾಸೀನನೋಲಗಂಗೊಟ್ಟಿರ್ಪುದುಂ (ಚಾವುಂಪು. ೧೩). [ಸಂ.]

ವರ್ಷವಾಚಕ (ನಾ). ಸಂವತ್ಸರಸೂಚಕವಾದುದು ; ವರ್ಷಸಂಬಂಧಿಯಾದುದು : ಈವರೆಂಬುದು ಈಷದ್ಭೂತಕಾಲಂ ; ಮೊನೆಯೇಡೆಂದು ಭೂತಕಾಲಂ ; ಇವು ವರ್ಷವಾಚಕಂಗಳಾಗಿ ಕಾಲೋಪಯುಕ್ತಂಗಳು (ಶಮಿದ. ೩೨೨ ವೃತ್ತಿ). [ಸಂ.]

ವರ್ಷಾಂತ (ನಾ). ಮಳೆಗಾಲದ ಕೊನೆ . ಕರಮೊಪ್ಪಿತ್ತುಷ್ಣೇತರಕಿರಣಂ ವರ್ಷಾಂತಸಮಯಜಳಧರಪಥದೊಳ್ (ಕವಿಕಾ. ೨-೭೮). [ಸಂ.]

ವರ್ಷಾಂತರ (ನಾ). ೧. ಇನ್ನೊಂದು ವರ್ಷ ; ಬೇರೊಂದು ವರ್ಷ. ೨. ಬಹಳ ಕಾಲ ; ದೀರ್ಘಸಮಯ : ವರ್ಷಾಂತರಗಳ ಬಿಂದೆಯೇ ಆಗಬೇಕಾಗಿದ್ದ ಈ ಕೆಲಸ ಈಗ ಮುಕ್ತಾಯದ ಘಟ್ಟಕ್ಕೆ ಬಂದಿದೆ (ರೂಢಿ). [ಸಂ.]

ವರ್ಷಾಕಾಲ$_1$ (ನಾ). ಮಳೆಗಾಲ : ಕಾಲವು ಸಂಕ್ಷೇಪದಿಂದ ಶೀತಕಾಲ, ಉಷ್ಣಕಾಲ, ವರ್ಷಾಕಾಲವೆಂದು ಮೂರುತೆರನಾಗಿರುವುದು (ಸಂಪೂ. ೧೫); ವರ್ಷಾಕಾಲದೊಳೊಂದು ದೆವಸಂ . . . ಮುದ್ದಣನರಮನೆಯಂ ಪೊಱಮಟ್ಟು (ರಾಮಾಶ್ವ. ೪-೬). [ಸಂ.]

ವರ್ಷಾಕಾಲ$_2$ 'ವರ್ಷ' ಪರಾ.

ವರ್ಷಾಗಮ (ನಾ). ಮಳೆಗಾಲದ ಆರಂಭ : ಆ ಪಾಹಿನೆಪ್ಪೂಹಂ . . . ವರ್ಷಾಗಮಸಮಯದಂತೆ ಬಹಳತರವಾರಿಧರಪರೀತಮುಂ (ಚಂದ್ರಪ್ರ. ೧೦-೩೦ ವ). [ಸಂ.]

ವರ್ಷಾಬ್ದಿಕ (ನಾ). = ವರ್ಷಗಟ್ಟಳೆ$_1$: ನಿನ್ನ ಅತ್ತೆಯವರ ವರ್ಷಾಬ್ದಿಕವಾದ ಮೇಲೆ ಮಾಡುವುದೇ ಸರಿ (ಶಾಂತಲಾ. ೧೯೧). [ಸಂ.]

ವರ್ಷಾಭು (ಗು). ೧. ಮಳೆಯಲ್ಲಿ ಹುಟ್ಟಿದ. (ನಾ). ೨. ಕಪ್ಪೆ : "ಭೇಕಂ ಶಾಲೂರಂ ಮಂಡೂಕಂ ವರ್ಷಾಭು ದರ್ದುರಂ" (ಪಸ್ತುಕೋ. ೨೩-೯); ತರಕ್ಷು ಪಶುಮೃಗ ಬಿಲಶಯರ್ ವರ್ಷಾಭು ನಕುಲ ಭುಜಂಗಜಾತಿಗಳು ಕುಲದ ವೈರವ ಮಱೆದು ಬೆರಸಿಹವು . . ಋಷ್ಯಶೃಂಗನ ಬಲದಲೆಡದಲಿ (ಕೌಶಿಕಾ. ೧-೫೦). ೩. ಹೆಣ್ಣು ಕಪ್ಪೆ: "ಭೇಕಿ ವರ್ಷಾಭು[ಪಾಠಾಂ. ಭ್ವಿ]ಯೆನೆ ಪೆಣ್ಗಪ್ಪೆಯಕ್ಕುಂ"(ಮಂಗರಾ. ೧೨೨-೯). ೪. ಸಣ್ಣಕಪ್ಪೆ. ೫. ಒಂದು ಬಗೆಯ ಹುಲ್ಲು ; ಹಂದಿಹುಲ್ಲು. ೬. ಮಣ್ಣುಹುಳು ; ಎರೆಹುಳು. ೭. ಹೊನ್ನೆಹುಳು. ಇಂದ್ರಗೋಪ. [ಸಂ. ವರ್ಷಾಭೂ]

ವರ್ಷಾಭ್ರ (ನಾ). ಮಳೆಗಾಲದ ಮೋಡ ; ಕಾರ್ಮೋಡ : ಕಾಮರೂಪಿಣಿ . . . ಸಿಡಿದಳಂಬರಕೊಡನೆ ವರ್ಷಾಭ್ರವೇಷದಿಂ (ಶ್ರೀರಾಮಾ. ೨೦೯-೪೦೬). [ಸಂ.]

ವರ್ಷಾಭ್ವಿ (ನಾ). ಹೆಣ್ಣುಕಪ್ಪೆ : "ಭೇಕಿ ವರ್ಷಾಭ್ವಿ[ಪಾಠಾಂ.ಭು]ಯೆನೆ ಪೆಣ್ಗಪ್ಪೆಯಕ್ಕುಂ" (ಮಂಗರಾ. ೧೨೨-೯). [ಸಂ. ವರ್ಷಾಭ್ವೀ]

ವರ್ಷಾಲಯ (ನಾ). ಮಳೆಗಾಲದಲ್ಲಿ ವಾಸಮಾಡುವ ಮನೆ : ಗೃಹಕೂಟಾಂಕ(ದ) ವರ್ಷಾಲಯದಿಂದಂ ಮಹಾಘರ್ಮಾಂತಾಭಿಧೇಯ ಧಾರಾಗೃಹದಿಂದಂ (ಶಾಂಪುಪು. ೧೧-೮೪ ವ). [ಸಂ.]

ವರ್ಷಾವಾಸ (ನಾ). ೧. = ವರ್ಷಾಲಯ : ಮಹಾಘರ್ಮಾಂತಮೆಂಬ ಧಾರಾಗೃಹಮುಂ ಗೃಹಕೂಟಮೆಂಬ ವರ್ಷಾವಾಸಮುಂ (ಆದಿಪು. ೧೫-೩ ವ); ಗೃಹಕೂಟಮೆಂಬ ವರ್ಷಾವಾಸಮುಂ ಪುಷ್ಕರಿಣಿಯುಮೆಂಬ ಶಯನಸದನಮುಂ (ಆದಿಪು. ೧೦-೧ ವ). ೨. [ಬೌದ್ಧ] "ಮಳೆಗಾಲದ ನಾಲ್ಕುತಿಂಗಳು ಹೊರಗೆ ಸಂಚಾರಕ್ಕೆ ಹೋಗದೆ ಆರಾಮದಲ್ಲಿ ವಾಸಮಾಡುವುದು" (ಬುದ್ಧಪ. ಮಿಲಿಂದ. ಪದವಿಷಯಸೂಚಿ. ೧೩೩); ನಾಗಸೇನನು . . . ವರ್ಷಾವಾಸಕ್ಕೆ ಅಲ್ಲಿ ನಿಂತನು (ಬುದ್ಧಪ. ಮಿಲಿಂದ. ೨೩). [ಸಂ.]

ವರ್ಷಾಶನ (ನಾ). (ಅಶಕ್ತರು, ವಿಧವೆಯರು ಮುಂತಾದವರಿಗೆ) ಉದರನಿರ್ವಾಹಕ್ಕಾಗಿ ವರ್ಷಕ್ಕೊಮ್ಮೆ ನೀಡುವ ಧನ ಅಥವಾ ಧಾನ್ಯ ರೂಪದ ನಿಯಮಿತವಾದ ಕೊಡುಗೆ ; ಜೀವನಾಂಶ ; ಪೋಟಿಗೆ (ಉಕ) : ರಾಜರಾಗಿದ್ದವರು ಸಹಾಯಮಾಡಿದರಲ್ಲ ಎನ್ನುವುದಾದರೆ ಕೆಲವು ಲಕ್ಷ ವರ್ಷಾಶನ ಕೊಡೋಣವಂತೆ (ಬೆಕಾ. ೧೦೨); ಬ್ರಿಟಿಷರು . . . ಅವರಿಗೆ ವರ್ಷಾಶನ ಕೊಟ್ಟು ಬೈಲಹೊಂಗಲದ ಕೋಟೆಯಲ್ಲಿ ಇಟ್ಟರು (ಕಪಪ್ರ. ೪-೯೪). [ಸಂ.]

ವರ್ಷಿಷ್ಠ (ಗು). ೧. ವಯಸ್ಸಿನಿಂದ ಅತ್ಯಂತ ಹಿರಿಯತನವುಳ್ಳ. ೨. ಬಹಳ ಹಳೆಯದಾದ. ೩. ಅತ್ಯಂತ ಸಮರ್ಥವಾದ ,—ಬಲಿಷ್ಠವಾದ. ೪. ಅತಿ ದೊಡ್ಡ ; ಬೃಹತ್ತಾದ. ೫. ಅತ್ಯುತ್ತಮವಾದ. [ಸಂ.]

ವರ್ಷಿಸು (ಕ್ರಿ). ಮಳೆಯಂತೆ ಸುರಿಸು , — ಕರೆ : ದಾನೋದಕವಂ ವರ್ಷಿಸುತ (ಸೌಗಂಧಿ. ೨೪೨-೧೮); ಯುಧಿಷ್ಠಿರನು ನಡುಗದೆ ಅಂಬುಮಳೆಯನ್ನು ವರ್ಷಿಸಿದನು (ವ್ಯಾಸಕಿ. ೩೭೯). [ವರ್ಷ + — ಇಸು$_3$]

ವರ್ಷೀಯ (ನಾ). ವಯಸ್ಸಾದವನು ; ಮುದುಕ : "ವೃದ್ಧಂ ಸ್ಥವಿರಂ ತಾಂ ವರ್ಷೀಯಂ . . . ದಶಮಿಸ್ಥಂ" (ಪಸ್ತುಕೋ. ೫೬-೨೭). [ಸಂ. ವರ್ಷೀಯಸ್]

ವರ್ಷೋಪಲ (ನಾ). ಆಲಿಕಲ್ಲು ; ಆಣಿಕಲ್ಲು : "ಆಲಿವರಲು ಮುಗಿಲ್ಗಲ್ಲೆಂದುಂ ತೋಱೆ ವರ್ಷೋಪಲಾಖ್ಯಂ" (ಸಭಾಂ. ೯೧). [ಸಂ.]

ವರ್ಷ್ಮ (ನಾ) ೧. ದೇಹ; ಶರೀರ: "ತನುಃ . . . ವರ್ಷ್ಮ, ಪುರಂ, ಪಿಂಡಂ, ಕ್ಷೇತ್ರಂ, ಗಾತ್ರಂ, ಅಪಘನಃ, ಮೂರ್ತಿಃ —ಈ ೧೭ ಶರೀರಂ" (ಹಲಾಯು. ೮೪-೩೫); ಘನಲಿಂಗದೊಳು ವರ್ಷ್ಮ ಬಯಲಾಗೆ (ಪ್ರಭುಪು. ೨-೯೧). ೨. ಅಳತೆ ; ಪ್ರಮಾಣ. ೩. ಎತ್ತರ ; ಔನ್ನತ್ಯ. ೪. ಸುಂದರವಾದ ರೂಪ ,—ಆಕಾರ. [ಸಂ. ವರ್ಷ್ಮನ್]

ವಲ್ (ಅ). ದಿಟವಾಗಿ ; ನಿಜವಾಗಿ (?): ಶ್ರೀ ಭದ್ರವಾಹುಸಚನ್ದ್ರ ಗುಪ್ತಮುನೀನ್ದ್ರಯುಗ್ಮದಿನೊಪ್ಪೆ ವಲ್(ಎಕ.II,೩೧-೧;ಸು.650); ಶ್ರೀಗತಿಚೇಷ್ಟಾವಿರಹಂ ಶುಭಾಂಗದೆ ಘನಮ್ಮೂಱುಮಾನ್ವಿಟ್ಟು ವಲ್ ಯತಿಯಂ ಪೇಟ್ಟ ವಿಧಾನದಿನ್ದು ತೋಱದೇ ಕಟ್ಟಿಸಿನಾ ಶೈಲದುಳ್ . . . ಸುಭಮುಮ್ ಸ್ವರ್ಲೋಕದಿಂ ನಿಶ್ಚಿತಮ್ (ಎಕ. II, ೭೭-೧; ಸು. 700). [IP ಇದು 'ದಲ್' ಎಂಬುದರ ಅಪಲಿಖಿತವಿರಬಹುದು]

ವಲ (ನಾ). ಒಂದು ಬಗೆಯ ದ್ವಿದಳಧಾನ್ಯ; ಅವರೆ: "ಕೂಗುರಿಯವರೆಗಳು ವಲಾಖ್ಯಂ" (ಮಂಗರಾ. ೪೫-೪೮). [IP ಇದು 'ವಲ್ಲ' ಎಂದಿರಬಹುದೆ?]

ವಲಂ, ವಲ್ಲಂ (ಅ). ದಿಟವಾಗಿ ; ನಿಶ್ಚಯವಾಗಿ ; ಖಂಡಿತವಾಗಿ : "ಏಗಂ ವಲಂ ವೆಱಂ ದಲ್ ತಾಗುಗುಮತಿನಿಶ್ಚಯಾರ್ಥಮಂ" (ಶಮದ. ೩೦೬); ಪುರುಷರ ಮೇಶ್ವರನಿಗೆವತರಿಸಿದನಿಂದರಸುವಡೆದೆವೆಂಬಂತೆ ವಲಂ[ಪಾಠಾಂ. ವೊಲೀ] ಪರಮಾನಂದವರಂಪರೆ ದೊರೆಕೊಂಡತ್ತಿಂತು ಪಂಚಭೂತಂಗಳೊಳಂ (ಆದಿಪು. ೭-೩೬); ಮೃತ್ಯುಂಜಯಂಗಧಿಕದೈವಮಿಲ್ಲಿದು ವಲಂ ಶ್ರುತ್ಯುಕ್ತಿ (ಪದ್ಮರಾ. ೧೦-೨೯). ವಲ್ಲಂ : ಏಗಂ, ವರಂ, ವಲಂ, ವಲ್ಲಂ, ವೆಱಂ (ಶಬ್ದಾನು. ೨೦ ಪ್ರಯೋ).

ವಲಕ್ಷ, ವಳಕ್ಷ (ನಾ). ೧. ಬಿಳಿಯ ಬಣ್ಣ ; ಶ್ವೇತವರ್ಣ. ವಳಕ್ಷ : ೧. ತರಕ್ಷುರಾಕ್ಷಸ ವಿಪಕ್ಷ ವಳಕ್ಷ ಸರಕ್ಷ ದೇಹ . . . ರಕ್ಷಿಪುದು (ರಾಜಶೇ. ೧-೧೦). ೨. ಬಿಳಿಯ ಬಣ್ಣವುಳ್ಳುದು ; ಬಿಳುಪಾದುದು : ಉಕ್ಷಪತಿ ಮುಂದೆ ಬಂದು ವಳಕ್ಷಂ . . . ಮುಂದೆ ನಡೆಯೆ ನಡೆದರ್ ವಿಭುಗಳ್ (ನೇಮಿಪು. ೬-೭೨). [ಸಂ.]

ವಲಗ್ನ (ನಾ). ಸೊಂಟ ; ನಡು : "ಅವಲಗ್ನಂ ವಲಗ್ನಮೂ ಮಧ್ಯಮೆನೆ ನಡುವೆನಿಕ್ಕುಂ" (ಮಂಗರಾ. ೯೬-೧೩). [ಸಂ.]

ವಲಜ, ವಳಜ (ನಾ). ೧. ಹೊಲ : "ವಲಜಂ - ೧ ಹೊಲ, ಊರುಬಾಗಿಲು ೨ ಕ್ಷೂ ಹೆಸರು" (ಸಿದ್ಧಾಂಶಿ. ೩೭೧). ೨. (ಊರು, ಮನೆ ಮುಂತಾದುವುಗಳ) ಹೆಬ್ಬಾಗಿಲು; ಮಹಾದ್ವಾರ : "ದ್ವಾರಂ ದ್ವಾರ್ವಲಜಂ" (ವಸ್ತುಕೋ. ೪೭-೧೨). ವಳಜ : ೨. "ದ್ವಾಃ, ದ್ವಾರಂ, ವಳಜಂ — ಈ ೩ ಬಾಗಿಲ್" (ಹಲಾಯು. ೫೦-೧೪೫). [ಸಂ.]

ವಲಜೆ (ನಾ). ಚೆಲುವೆ; ಸುಂದರಿ. [ಸಂ. ವಲಜಾ]

ವಲಟ (ನಾ). ಸುವಾಸನೆಯುಳ್ಳ ಮಣ್ಣು : "ಆಢಕೀ . . . ವೃತ್ತಾಳಿಕಂ, ಸುರಾಷ್ಟ್ರಜಂ — ಈ ೬ ವಲಟಮಣ್ಣೆಂಬ ಗಂಧದ್ರವ್ಯ" (ನಾಚಿಕಾ. ೧೧೧). [ಸಂ.]

ವಲನ, ವಳನ (ನಾ). ೧. ಚಲನೆ ; ಸರಿದಾಡುವಿಕೆ : 'ಚಲನವಲನ' ಪರಾ. ೨. ಅಲುಗಾಟ ; ಸ್ಪಂದನ : ಕಿನ್ನರೀ ಕರಕಿಸಲಯವ[ಪಾಠಾಂ. ಚ, ಚಾ]ಲನಸಮುತ್ಸನ್ನಕಾಕಲೀಕಲರವಮಿಲಿತಮಧುಕರತಂತ್ರೀಸಮಂಚಿತವಿಪಂಚೀಮಂದ್ರತಾರ ಮಧುರಮೂರ್ಛನಾಸನಾಥ (ಆದಿಪು. ೧೧-೭೪ ವ). ೩. ಸುತ್ತು ತಿರುಗುವಿಕೆ ; ಗುಂಡಗೆ ಚಲಿಸುವಿಕೆ : ಹಾಗಾದರೆ ನಿನ್ನ ಕೆಲಸವೇನು ಈಗ? ಸರಳರೇಖೆ. ನಿನ್ನ ರೇಖೆಯ ವಲನ ನನಗೇಕೆ? (ರತ್ನಧ್ವ. ೨೬೮). ೪. [ನಾಟ್ಯ] ಕಣ್ಣನ್ನು ವೃತ್ತಾಕಾರವಾಗಿ ಚಲಿಸುವುದು : ಭ್ರಮಣ, ವಲನ, ಪಾತ . . . ಪ್ರಾಕೃತ — ಈ ಒಂಬತ್ತು [ಸ್ವನಿಷ್ಠ] ಆಲಿಯ ಭೇದಂಗಳ್ (ಲಾಸ್ಯರಂ. ೩-೫೪ ವ); ಭರದಿಂ ಮೂಱುಂ ಮೂಲೆಯನಿರದೊಂದಲ್ ತಾರೆ ವಲನಮೆಂದೆನಿರ್ಕುಂ (ಲಾಸ್ಯರಂ. ೩-೫೫). ವಳನ : ೧. ಚಳದನಿಳಾಹತಕ್ಷುಭಿತ ಭಂಗುರತುಂಗತರಂಗಮಾಳಿಕಾವಳನಸಮುಚ್ಛಳನ್ಮೃಣಗಣಾತ್ತ . . . ಬಾಡವಾನಳಾವಿಳಜಳಮಂ ಮನಂ ಬಯಸಿ ನೋಡಿದರ್ಣವಮಂ ಗುಣಾರ್ಣವಂ (ಪಂಪಭಾ. ೪-೨೫). [ಸಂ.]

ವಲಭಿ, ವಳಭಿ (ನಾ). ೧. ಮನೆಯ ಚಾವಣಿ ,—ಸೂರು : "ಆಚ್ಛಾದನಂ, ವಲಭಿಃ — ಈ ೨ ಮನೆಯ ಹೊ(ದಿ)ದಕೆ" (ಹಲಾಯು. ೫೦-೧೪೮); ರಮಣೀಯತಾಗುಣ ಪತಾಕೆಯನೆ ಪಡೆಯುತ್ತ, ವಿವಿಕ್ತತಾಕಾರಣದೆ ರಾಗವನು ಪೆರ್ಚಿಸುತ ಪರಿನಮ್ರವಲಿಗಳಿಂ ಸೊಗಯಿಸುವ ವಲಭಿಗಳ ವಧುಗಳೊಂದಿಗೆ ಸೇವಿಸಿದರಲ್ಲ ಯುವಜನರು (ಧನ್ಯಾಲೋ. ೧೦೯). ವಳಭಿ : ೧. ಸೆಜ್ಜೆವನೆಯ ವಜ್ರದ ವಳಭಿಗಡರ್ಚು ಪಣ್ಣಿದ ಕಣ್ಣಿನಲೆಯಂತೆ ಕವಲ್ತು ದಾಂಗುಡಿವೋದ ಮಾಧವೀಲತೆಯ ಕೆಲದೊಳ್ (ಧರ್ಮನಾ. ೨-೮೨ ಪ). ೨. ಮನೆಯ ಎತ್ತರವಾದ ಭಾಗ ; ಉಪ್ಪರಿಗೆ : ರಾಜಭವನಂ ಪದ್ಮರಾಗಮಾಣಿಕ್ಯಕಳಶಪಟ್ಟಿಗಳಿಂ ರಾಜಹಂಸವನದಂತೆಯುಂ . . . ನಿರಂತರಚಂದ್ರಕಾಂತ ವಳಭೀವಳಯದಿಂ ಸಶಾರದಾಭ್ರಸಮುದಯದಂತೆಯುಂ . . . ಏಸೆವುದು (ಚಂದ್ರಪ್ರ. ೧೧-೭೮ ವ). "ವಲಭಿಚ್ಛಂದ' ಪರಾ. ೩. ಒಂದು ಪಟ್ಟಣದ ಹೆಸರು; IP ಈಗಿನ ಸೌರಾಷ್ಟ್ರದ ಒಂದು ಪಟ್ಟಣ : ಸುರಧಮೆಂಬುದು ನಾಡಲ್ಲಿ ವಳಭಿ[ಪಾಠಾಂ. ಳಂಬಿ]ಯೆಂಬುದು ಪೊಱಲ್ (ವಡ್ಡಾರಾ. ೧೩- ೪). [ಸಂ. ವಲಭೀ]

ವಲಭಿಚ್ಛಂದ, ವಳಭಿಚ್ಛಂದ (ನಾ). ಮುಂದಕ್ಕೆ ಚಾಚಿದ ಛಾವಣಿಯ ಭಾಗ : ಸಮೆದ ಚೆಲ್ವಿಂಗೆ ಸರ್ವತೋಭದ್ರಮೆನಿಸಿದ ಸರ್ವತೋಭದ್ರಂಗಳೊಳಂ ಛಂದೋವಿದ್ಯೆಯಂತೆ ನಾನಾಚ್ಛಂದಮಪ್ಪ ವಲ[ಪಾಠಾಂ. ಳ]ಭಿಚ್ಛಂದಂಗಳೊಳಂ . . . ಕೃತ ಸುಕೃತಜನಕ್ಕೆ ತಜ್ಜನ್ಮಭೂಮಿಯುಮಿರ್ಪಂತಿರ್ದ ನಗರಲಲನೆಯ ಲಪನಕ್ಕೆ ಲೀಲಾಲಲಾಮಲಕ್ಷ್ಮಿಯಂ ತಾಳಿ (ಆದಿಪು. ೬-೧೦೬ ವ). ವಳಭಿಚ್ಛಂದ : ಅತಿಲಲಿತಮತಿವಳಭಿಚ್ಛಂದಂಗಳಿಂ ಛಂದೋವಿದ್ಯೆಯುಮಂ ಸರ್ವತೋಭದ್ರಾಹ್ವಯ ವಿಶೇಷದಿಂ ನೋಂಪಿಯ ವಿಶೇಷಮಂ . . . ಸ್ವಸ್ತಿಕವಿಸ್ತಾರದಿಂ ವಿವಾಹಮುಮನನುಕರಿಸಿ ಶೋಭಿಸುವುದು (ಸುಕುಮಾ. ೧೦-೫೦ ವ); "ಉಪ್ಪರಿಗೆಯ ಸೊಗಸು" (ಸುಕುಮಾ. ಕೋಶ). [< ಸಂ. ವಲಭಿಚ್ಛದ]

ವಲಯ, ವಳಯ (ನಾ). ೧. ಕಡಗ ; ಬಳೆ : "ವಲಯಮೆನಲು ಕಂಕಣಮಕ್ಕುಂ" (ಮಂಗರಾ. ೧೦೦-೨೬); ಸರೋರುಹಕರ್ಣಪೂರಮುತ್ಪಲಕಟಕಂ ಮೃಣಾಲವಲಯಂ . . . ಇಂದುಮಂಡಲಮಧುರಾಸ್ಯೆಗೊಪ್ಪಿದುದು (ರಾಚಶೇ. ೪-೪೩). ೨. ಸಿಂಬೆ ; ಸುರುಳಿ. ೩. ವರ್ತುಲ ; ಪರಿಧಿ ; ಮಂಡಲ : ರಘುಜಂ. . . ಬೀಳ್ಕೊಂಡನಾಶ್ರಮಸ್ನೇಹಮಯ ವಲಯಮಂ ಬಾಷ್ಪಲೋಚನನಾಗಿ (ಶ್ರೀರಾಮಾ. ೧೩೮-೩೬೪); ಹೀಗೆ ಕೆಲಕಾಲ ಕಳೆದ ಮೇಲೆ ಶಿಬಿರದವರಲ್ಲಿ ಏನೋ ಒಂದು ಸಂಶಯದ ವಲಯ ಏರ್ಪಟ್ಟಿತು (ಗೋಪುರ. ೭೩). ೪. ವಿಭಾಗ ; ಪ್ರದೇಶ : ಪ್ರತಿಯೊಂದು ವಲಯದಲ್ಲಿಯೂ ವಾಯುಗುಣಕ್ಕನುಗುಣವಾಗಿ ಬೆಳೆಗಳಲ್ಲಿಯೂ ಪ್ರಾಣಿಗಳಲ್ಲಿಯೂ ತೋರಿಬರುವ ವ್ಯತ್ಯಾಸಗಳು . . . ವಿವರಿಸಲ್ಪಡುವುವು (ಭೂವಿ. ೨೪). 'ಉಷ್ಣವಲಯ' ಪರಾ. ೫. ಗುಂಪು ; ಸಮೂಹ : ಹರಿಯಿಲ್ಲದ ಪವನಾಧ್ವಂ ಹರಿಯಿಲ್ಲದ ಲೋಕಪಾಲಪರಿಷದ್ವಲಯಂ . . . ಹರಿ ನಿಲಿಲ್ಲದ ಮದೀಯ ಗೋಕುಲಮಫಲಂ (ಜಗವಿ. ೩-೧೫). ೬. ಒಂದು ಬಗೆಯ ಗಂಟಲು ರೋಗ : ಕೊರಳ ಹೊಱಗೂ ಒಳಗೂ ದಪ್ಪವಾಗಿ ಉನ್ನತವಾಗಿದ್ದ ಗಂಟು ಕಟ್ಟುವುದು. ಅದಱಿಂದ ಜ್ವರ, ಮೂರ್ಛೆ, ವೇದನೆಗಳುಂಟಾಗಿಹವು. ಅದು ವಲಯವೆಂಬ ಕಂಠರೋಗ (ಸೃಷ್ಟಿಕಾ. II, ೧೧೮). ವಳಯ : ೧. ಸರಸಮೃಣಾಳನಾಳವಳಯಂಗಳೊಳುಜ್ಜ್ವಳವೃತ್ತಮೌಕ್ತಿಕಾಭರಣಗಣಂಗಳೊಳ್ ಶಶಿಕರಂಗಳೊಳಾಱದೆ (ಪಂಪಭಾ. ೫-೧೬); ಮಂಜುಘೋಷಮಂ ಬೀಱುವ ಸಿಂಜಿನೀವಳಯಕಾಂಚಿಗಳೆಂಬಿವಱಿಂದದೊಂದು ಚೆಲ್ವೇಱಿರೆ ಭೋಗಿಭಾಮಿನಿಯರಾ ಮಡುವಿಂ ಪೊಱಮಟ್ಟರ್ (ಜಗವಿ. ೩-೧೦೨). ೩. ತನುಮಧ್ಯ ವಳಯದಲ್ಲಿ ಸಕಲಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ ಭಕ್ತಿಕಾರಣ ಬಸವನವಗ್ರಹಿಸಿಪ್ಪಲ್ಲಿ ಅದೆತ್ತಲಿದ್ದೆ (ಸಿದ್ಧವ. ಕ. ೨-೩). ೭. (ಸೈನ್ಯದ) ಮಂಡಲಾಕಾರವಾದ ವ್ಯೂಹ ; ವರ್ತುಲಾಕಾರವಾದ ರಚನೆ : ರಿಪುವಳಯಧೂಳೀಪಟನು ಹೊಕ್ಕನು ರಣವನಾ ದ್ರೋಣ ಹರಿಗೆ ಹಲಗೆ ಕೃಪಾಣ ತೋಮರ ಪರಶು ಕಕ್ಕಡೆ ಕೊಂತ ಮುದ್ಗರ ಸುರಗಿಯತಿಬಳಪಾಯ್ದಳವನಿರಿಸಿದನು ವಳಯದಲಿ (ಕುಮಾದ್ರೋ. ೪-೧೫). ೮. ಅಂಗಳ ; ಆವರಣ : ಕರಸಿದನು ಬಳಿಕಪಿಳಪೃಥ್ವೀಶ್ವರರನನುಪಮ ತುರಗಮೇಧಾಧ್ವರದ ಶಾಲಾವರಣಸೌಧಾವಳಿಯ ವಳಯದಲಿ ಹರುಷದಲಿ ಕುಳ್ಳಿರ್ದರುರುವಿಷ್ಟರಗಳಲಿ (ತೊರಂಗಾ. ೧-೭-೩೦). ೯. ಕುದುರೆಯ ಗೊರಸಿಗೆ ಹಾಕುವ ಬಳೆ : "ವಳಯಂ ಲೋಮಿವೆಸರಕ್ಕುಂ" (ಮಂಗರಾ. ೮೧-೧೩). [ಸಂ.]

ವಲಯಶಾಸನ (ನಾ). ಪರಿಧಿಗೆ ಸಂಬಂಧಿಸಿದ ಶಾಸನ ; ಎಲ್ಲೆಗೆ ಸೇರಿದ ಶಾಸನ : ಬೆಳ್ಳುರಿಗೆ ಸಲುವ ಶ್ರೀರಂಗಪುರದಿಂ ಜೀವಗಲ್ಲಿನ್ದಂ ನೈಋತ್ಯ ದಾಸಕೆರೆಯೊಳಗೆ ನಟ್ಟ ಕಲ್ಲಿಂದ ಪಡುವ ಮಿಶ್ರವಾಗಿ ನೈಋತ್ಯ ಇನ್ತೀ ವಲಯಶಾಸನವೊಳಿಗಾದ ಅಡ್ಡಗೆರೆಯ ಹಳ್ಳಿ ಸಹವಾಗಿ ಚಾಕೇನಹಳ್ಳಿಗೆ ಪ್ರತಿನಾಮವಾದ ದೇಮಸಮುದ್ರವೆಂಬ ಅಗ್ರಹಾರದ ವಲಯಶಾಸನದಾನಪಾಲನಯೋರ್ಮಧ್ಯೇ ದಾನಾಚ್ಛ್ರೇಯೋನುಪಾಲನಮ್ (ಎಕ. III (R), ಹಗ್ಗಡ. ೮೯-೨೩೬; 1493). [ಸಂ.]

ವಲಯಾಕಾರ, ವಳಯಾಕಾರ (ನಾ). ಮಂಡಲಾಕಾರವಾದುದು ; ವರ್ತುಲಾಕಾರವಾದುದು : ಪರ್ಯಾಯಂದಪ್ಪದೇಂ ಸುತ್ತಿಱಿದುವೊ ವಲ[ಪಾಠಾಂ. ಳ]ಯಾಕಾರದೊಂದೊಂದನತ್ಯಾಶ್ಚರ್ಯಂ ದ್ವೀಪಾಬ್ಧಿವರ್ಗಕ್ರಮಮದುವುಮಸಂಖ್ಯಾತಂ (ಆದಿಪು. ೧-೪೮). ವಳಯಾಕಾರ : ವಳಯಾಕಾರದೆ ಬಳಸಿದ ಜಳಧಿದ್ವೀಪಂಗಳಿಂದೆ ಕಡೆಯೊಳ್ ವಿಚಳಜ್ಜಳಚರಸಂಕುಳಕೋಳಾಹಳಮಿರ್ದತ್ತರ್ಣವಂ (ಆದಿಪು. ೧೧-೧೯). [ಸಂ.]

ವಲಯಾಕೃತಿ, ವಳಯಾಕೃತಿ (ನಾ). = ವಲಯಾಕಾರ : ವಲ[ಪಾಠಾಂ. ಳ]ಯಾಕೃತಿಯಿಂದಿದನೇಂ ಬಳಸಿದುದೊ ಸುರೇಂದ್ರಚಾಪಮಂಡಲಮೆನೆ ಬಳ್ಳಳ ಬಳೆದ ಪಂಚರತ್ನದ ಬೆಳಗಿಂದಂ ಬೆಳಪುದಲ್ಲಿ ಧೂಳಿಸಾಳಂ (ಆದಿಪು. ೧೦-೨೩). ವಳಯಾಕೃತಿ : ಮೇಲಿನ 'ಆದಿಪು' ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ವಲಯಿತ, ವಳಯಿತ (ಗು). ೧. ಸುತ್ತುಗಟ್ಟಿರುವ ; ಆವೃತವಾದ. (ನಾ). ೨. ಸುತ್ತುಗಟ್ಟಿದುದು : "ವೇಷ್ಟಿತಂ, ವಲಯಿತಂ . . . ಆವೃತಂ — ೫ ಈಚಿನವರಿಗೆ ಅಡ್ಡವಾಗಿರುವಂತೆ ಸುತ್ತಿಕೊಳ್ಳಲ್ಪಟ್ಟುದು" (ಸಿದ್ಧಾಂತಿ. ೩೪೭). ವಳಯಿತ : ೨. "ನಿವೃತಂ, ವೇಷ್ಟಿತಂ, ಪರಿವಿಷ್ಟಂ, ವಳಯಿತಂ, ಪರಿಕ್ಷಿಪ್ತಂ— ಈ ೫ ಸುತ್ತಲ್ಪಟ್ಟುದು" (ಹಲಾಯು. ೧೧೮-೨೭). [ಸಂ.]

ವಲವರ್ಮ (ನಾ). ಒಬ್ಬಾತನ ಹೆಸರು : ಕಂಗಪಾದಿ ಕೊಟ್ಟವಳ್ಳಿಪಾದಿ ವಲ್ಲಭಪಾದಿಯು ಮೂಱುಪಾದಿ ವಲವರ್ಮ್ಮನಾ ಮೇಕೆ ಮ x x x ಕೆಯ್ದನ್ದು (ಎಕ. XII, ಮಧುಗಿ. ೧೩-೨; ಸು. 750). [ವಲ್ + ವರ್ಮ್]

ವಲಸಿಗ (ನಾ). ಗುಳೆ ಬಂದವನು ; ನೆಲಸಲು ಬಂದವನು : ಸಿಪಾಯಿಗಳು ಅಥವಾ ವಲಸಿಗರು ತೋರ್ಪಡಿಸಿಕೊಳ್ಳದೆ ಸ್ಥಾಸ್ಥಾನ್ಯ ತಂಡಗಳಲ್ಲಿ ಒಂದು ಪ್ರದೇಶವನ್ನು ಕ್ರಮೇಣ ಆಕ್ರಮಿಸುವುದು (Infiltration. ಇಂಕನ). [ವಲಸೆ + — ಇಗ]

ವಲಸಿಗೆ (ನಾ). ವಲಸೆ ಬಂದ ವ್ಯಕ್ತಿಯ ನಡವಳಿಕೆ ,—ದೇಶಾಚಾರ : ಇಂಥಾ ಆಚಾರ, ವಲಸಿಗೆ, ಪದ್ಧತಿ ಅಥವಾ ಅಭ್ಯಾಸ ಇವುಗಳಲ್ಲಿ ಮನುಷ್ಯ ಮನುಷ್ಯರಿಗೆ ಭೇದವಿದೆ (ಅದೂ. ೩೨). [ವಲಸೆ + — ಇಗೈ]

ವಲಸೆ, ಒಲಸೆ (ನಾ). (ಆಕ್ರಮಣ, ಬರಗಾಲ ಮುಂತಾದ ಕಷ್ಟಪ್ರಸಂಗಗಳಲ್ಲಿ) ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನೆಲಸಲು ಹೋಗುವುದು ,—ಗುಳೆಹೋಗುವುದು : ಜಯಸಿಂಹನು ಉತ್ತರದಿಂದ ದಕ್ಷಿಣಕ್ಕೆ ವಲಸೆ ಹೊರಟು . . . ಐಹೊಳೆಯಲ್ಲಿ ಬಂದು ನೆಲಸಿದನು (ಮೃವಾಸ್ತು. ೬); ಈ "ಬುದ್ಧಿಜೀವಿ" ನವಶಿಕ್ಷಿತವರ್ಗವು ಕೇವಲ ಚಾಕರಿಯ ಆಸೆ, ಕಚೇರಿಯ ವಲಸೆಗಳಿಗೆ ಮನಸೋತು. . . ಬ್ರಿಟಿಷ್‌ಸಾಮ್ರಾಜ್ಯದ ಒಂದು ಆಧಾರವಾಗಿ ಉಳಿದದ್ದು ದೀರ್ಘ ಪರಿಣಾಮ (ಮಾವಾದ. ೧೫). ಒಲಸೆ : ರಣವಿಜಯಭೇರಿಗಳ ಹೊಯ್ಲಲಿ ಕುಣಿದುವಮರರ ಗರ್ಭ ರಿಪುಪಟ್ಟಣದಲಂದೊಲಸೆಗಳ ತೆಗೆದುವು ಗಿರಿಗುಹಾಂತರಕೆ (ಕೋಗಳಿ. ೧೬-೨೨).

ವಲಸೆ ಬರು = ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನೆಲಸಲು ಬರು ; ಒಕ್ಕಲು ಬರು : ಅನೇಕಜನ ಪಾರಸಿಕರು . . . ಫಲಪುಷ್ಪಸಮೃದ್ಧವಾದ ಇಂಡಿಯಾದೇಶಕ್ಕೆ ವಲಸೆಬಂದು ಗುಜರಾತಿನ ನಾನಾಭಾಗಗಳಲ್ಲಿ ನೆಲಸಿದರು (ಭಾಗೃಶಿ. ೧); ಇನ್ನಿತರ ದೇಶಗಳ ಜನರೂ ವಲಸೆಬಂದು ನೆಲಸುತ್ತಿರುತ್ತಾರೆ (ಶಿಕ್ಷದ. ೩೯೯). ವಲಸೆಯಾಗು = ಜನರು ಒಂದು ಪ್ರದೇಶದಿಂದ ಮತ್ತೊಂದು

ಪ್ರದೇಶಕ್ಕೆ ನೆಲಸಲು ಹೋಗು ; ಗುಳೆ ಹೋಗು : ದಕ್ಷಿಣಆಫ್ರಿಕದಲ್ಲಿ ವಲಸೆಯಾಗಿದ್ದ ಹಿಂದಿಯರು ಪಡುತ್ತಿದ್ದ ಕಷ್ಟಗಳನ್ನು ಕೇಳಿ ಭಾರತಸರ್ಕಾರವೂ ಪ್ರಜೆಗಳೂ ತುಂಬಾ ವ್ಯಾಕುಲಗೊಂಡಿದ್ದರು (ಸ್ವಾವೀರ. ೪೧). ವಲಸೆಹೋಗು = ವಲಸೆಯಾಗು : ಈಗ ರಾಜಸ್ಥಾನವೆಂದು ಪ್ರಸಿದ್ಧವಾಗಿರುವ ಪ್ರದೇಶಕ್ಕೆ ವಲಸೆಹೋಗಿ ಅಲ್ಲಿ ನೆಲೆಗೊಂಡರು (ಆರ್ಯಕೇ. ೧೩). [ದೇ. ॥ ತಮಿ. ವಲಚ್ಚೆ, ವಲಚಲ್; ತೆಲು. ವಲಸ]

ವಲಸೆಗಾರ (ನಾ). ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ನೆಲಸುವವನು ; ಗುಳೆ ತೆಗೆದು ಬಂದವನು : ಹೊಸದಾಗಿ ನಿರ್ಮಿಸಲ್ಪಟ್ಟ ಪ್ರದೇಶದಲ್ಲಿ ಮೊದಲು ವಲಸೆಗಾರರು (Nomads) ನಂತರದಲ್ಲಿ ದನಗಾರರು (Herdsmen) ಮುಂದಕ್ಕೆ ಬರುವುದು ಸಹಜವು (ಶುಳುನಾ. ೨೪).

[ವಲಸೆ + — ಗಾರ (< — ಕಾಱ)]

ವಲಸೆದೆಗೆ (ಕ್ರಿ). ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ನೆಲಸಲು ತೆರಳು ; ಗುಳೆ ತೆಗೆ : ಕಂಬಾವಿ ಭೋಗಣ್ಣನಭವನಂತ್ಯಜನಾಗಿ ತಾಂ ಬರಲ್ ಪೂಜಿಸಿದನೆಂದು ವಿಪ್ರರ್ ನಗರಮಂ ಬಿಟ್ಟು ಪೊಱಡಿಸಲ್ಕೂರ ಲಿಂಗಂಗಳಾತನ ಕೂಡೆ ವಲಸೆದೆಗೆಯೆ (ಚಟಪು. ೫೭-೨೩). [ವಲಸೆ + ತೆಗೆ]

ವಲಾಗ್ರ (ನಾ). ಬಾದಾಮಿ : (ಕಿ).

[<— ತೆಲು. ವಳಾಗ್ರ = ಉತ್ತಮಜಾತಿಯ ಅಡಕೆ]

ವಲಿ$_1$, ವಳಿ$_2$ (ನಾ). ೧. ದೇಹದ ಮೇಲಿನ ಚರ್ಮದ ಸುಕ್ಕು, —ಮಡಿಕೆ. ೨. (ಹೆಂಗಸಿನ) ಹೊಕ್ಕುಳಿನ ಮೇಲುಭಾಗದಲ್ಲಿ ಅಡ್ಡಲಾಗಿರುವ ಮೂರು ರೇಖೆಗಳು, —ಗೆರೆಗಳು : 'ತ್ರಿವಲಿ$_1$' ಪರಾ. ೩. ಅಲೆ ; ತರಂಗ : ಸರೋರುಹಿಣೀವನಂಗಳೊಳ್ ವಲಿ ತಲೆದೋಱದಂತು ನಲಿದಾಡುವ ಸೋಗೆಯ ಸೋಗೆ ಸೂಸದಂತೆಲರೊಲವುಣ್ಮೆ ತೀಡಿದುದು . . . ತದ್ವನಾಂತದೊಳ್ (ಚಂದ್ರಪ್ರ. ೨-೧೦೧); ವೇದವೇದಾಂತಗಳ ತತ್ವನಿರ್ಘುರಘೋಷ ಶಾಂತಿಶರಧಿಯ ಮೇಲೆ ವಲಿಯ ನೆಬ್ಬಿಸುತಲಿದೆ (ನಳ್ಳ. ೬೧-೪). ೪. ಹೊರಳುವಿಕೆ ; ಕೊಂಕು : ಆಹಾ, ಕೊಳದಿ ಬಾಲರವಿಯ ಅಂಬೆಗಾಲ ಲೀಲೆ, ಅಲೆಯ ವಲಿಯ ಮೇಲೆ (ನಡೆಂಬ. ೧-೨೦). ವಳಿ$_2$: ೨. ವಳಿಗಳೊಗೆದು ಮೆಯ್ಯಂ ಕೊಂಡರಟ್ಟೂಱು ನಾಲ್ಕಗ್ಗಳಿಸಿರೆ . . . ಶುದ್ಧನಕ್ಕುಂ (ಲೋಕೋಪ. ೧೧-೭); ನಡೆ ಮೆಲ್ಲನಾದುದು ವಳಿಯಡಂಗಿದುವು . . . ಲತಾತನ್ವಿಗಂದು (ಪದ್ಮರಾ. ೪-೨೯). ೩. ಆ ಸ್ಥಲ ಸುರಧನುವಿನ ಕೆಲವಳಿಯಂತೆ ಮರೀಚಿಕಾಜಲದ ವಳಿಯಂತೆ (ಮೋಳಿಮಾ. ೧೧೩-೪೪೬); ನೆಲೆಮೊಲೆ ಪೊಣರ್ವಕ್ಕಿಗಳಂ ವಳಿ ವಳಿಗಳನಾಸ್ಯಭಿಂಬಮಂಬುರುಹಮನಗ್ಗಲಿಸೆ ಕಲಹಂಸಯಾನೆಯರಲರ್ಗೊಳಕೆ ಬಿರ್ದುವಂದಂತಿರ್ದರ್ (ಅನಂಪು. ೭-೨೬). ೫. ಗೆರೆ ; ಸಾಲು : ಈ ಕಲಮಿನಲ್ಲಿ ೭೧ನೇ ಪಾನಿನಲ್ಲಿ ೨೨ನೇ ವಳಿಯಲ್ಲಿ . . . "ಸವಡ ಇದ್ದಲ್ಲಿ ಹಾಕಲಾದೀತೆಂದು" ಓದಿರಿ (ಮುಂಬಾ. ೨೮ ಪ್ರಸ್ತಾವನೆ). ೬. [ಸಂಗೀತ] ತಂತೀವಾದ್ಯವನ್ನು ನುಡಿಸುವಾಗ ತಂತಿಯನ್ನು ಜಗ್ಗಿ ನುಡಿಸುವುದು : "ವಳಿ — ವೀಣೆಯ ಒಂದು ಸ್ವರಸ್ಥಾನದಲ್ಲೇ ಎರಡು ಅಥವಾ ಮೂರು ಮುಂದಿನ ಸ್ವರಗಳು ನುಡಿಯುವಂತೆ ತಂತಿಯನ್ನು ನಿರ್ಣಯದಿಂದ ಜಗ್ಗಿಸುವುದು" (ಸಂಗೀಚಂ. ೨೬). ೭. ಒಂದು ಬಗೆಯ ಗಮಕ : ರೀತಿ ನೂತನಂಬಡೆಯೆ ವಳಿ ವಿಳಾಸಂಬಡೆಯೆ . . . ಪಾಡುತ್ತಿರೆಯುಂ (ಶಾಂತೀಶ್ವ. ೧೬-೬೭ ವ). [ಸಂ.]

ವಲಿ$_2$ (ನಾ). ೧. ಸಾಧು ; ಫಕೀರ : ಇದರ ಮುಖ್ಯತತ್ವ ವಲಿ ಅಥವಾ ಸಾಧುವಿನಿಂದ ಸರಿಯಾದ ಅಧ್ಯಾತ್ಮಶಿಕ್ಷಣ ಪಡೆಯುವುದು (ಇಸ್ಲಾಂಸಂ. ೨೭೨). ೨. ಸ್ನೇಹಿತ ; ಮಿತ್ರ : ವಲಿ ಎಂದರೆ ಮಿತ್ರ, ವಿಲಾಯತ್ ಅಂದರೆ ಮೈತ್ರಿ (ಇಸ್ಲಾಂಸಂ. ೨೭೨).

[<— ಅರ. ಹಿಂ. ಮರಾ. ವಲೀ]

ವಲಿ$_3$ (ನಾ). ೧. ಹೊತ್ತು ; ಸಲ ; ಬಾರಿ : ಶ್ರೀಮತು ಇ ಬೀರಕಲ್ಲ ಪ್ರತಿಷ್ಠೆಯ ಮೂರು ವಲಿ ಪೂಜೆ ನಮಸ್ಕಾರ ಮಾಡುವ ಸ್ಥನಿಕರಿಗೆ . . . ಮಾಚೆಯ ದ(ಂ)ಣ್ಣಾಯ್ಕರು ಧಾರಾಪೂರ್ಬ್ಬಕವಾಗಿ ಕೊಟ್ಟ ದತ್ತಿ (ಸೌಇಇ. IX-i. ೩೫೪-೭; 1320). ೨. (?) : ಬಿಸಜೆ ಪುಟ್ಟುವ ಗೊತ್ತಿದೆಂದು ಕೆಸರಂ ವಲಿ ಆಗ್ರಾಣಿಸುವುದಂದಮೆ ವರ್ಣಕುಲದೊಳು (ತಿರುಶ. ೭-೬೦). [?]

ವಲಿತ, ವಳಿತ (ಗು). ೧. ಸುತ್ತುವರಿಯಲ್ಪಟ್ಟ ; ಸುತ್ತುಗಟ್ಟಲ್ಪಟ್ಟ. ೨. ಹೊರಳಿದ ; ತಿರುಗಿದ ; ಕೊಂಕಿದ : ಸ್ಖಲಿತಗತಿ ಲುಲಿತಕುಂತಲೆ ವಲಿತನಿಜಗ್ರೀವೆ ಮಗುಚ್ಚು ನೋಡಿದಳೊರ್ವಳ್ . . . ಲಲಿತಾಂಗನನೊಲ್ದು ಸಗರಚಕ್ರೇಶ್ವರನಂ (ಅಜಿಪು. ೯-೩೮); ಕೆಳದಿಯರೊಳು ನೆವವಾಂತು ಅಲ್ಲಲ್ಲಿ ನಿಂತು ತಳರುತಲೆ ಹಿಂದಿರುಗಿದರಸಿಯ ವಲಿತಕಂಧರವಾದ ವದನೇಂದುವೆದೆಯೊಳಿದೆ ನಿಂದು (ಶಾಕುಂತ. ೧೮ ಅಡಿಟಿ). ೩. ಸುಕ್ಕುಗಟ್ಟಿದ : 'ವಲಿಮುಖ' ಪರಾ. (ನಾ). ೪. ಚರ್ಮದ ಮೇಲಿನ ಮಡಿಕೆ, —ಸುಕ್ಕು : "ವಲಿತಂ — ಮಯ್ಯ ತೆರೆ" (ಕಾಶಕ್ಕ. ೧೧೩); ವಲಿತ ಪಲಿತ ಪ್ರಸಾದವಪ್ಪಾ ಆಧಿ ವ್ಯಾಧಿ ಪ್ರಸಾದವಪ್ಪಾ . . . ಕೂಡಲಚನ್ನಸಂಗನ ಪ್ರಸಾದವಪ್ಪಾ (ಚನ್ನವ. ೯. ೬೫೫-೧೪೮೧). ೫. [ನಾಟ್ಯ] ಕೊರಳನ್ನು ತಿರುಗಿಸುವ ಒಂಬತ್ತು ವಿಧವಾದ ಭೇದಗಳಲ್ಲಿ ಒಂದು ; ಇ "ಕೆಳಕ್ಕೆ ಮಾಡಿರುವ ಮುಖವನ್ನು ನೆಟ್ಟಗೆ ಮೇಲಕ್ಕೆತ್ತುವುದು" (ಲಾಸ್ಯರಂ. ೨೫೯ ಗದ್ಯಾನುವಾದ) : ಕೆಳಮೊಗದಿಂ ಕೊಂಕದೆ ನೆಗಳ್ದೆತ್ತಿ ನೋಡೆ ವಲಿತಮೆನಿಕ್ಕುಂ (ಲಾಸ್ಯರಂ. ೨-೧೧೫). ೬. ಮೂವತ್ತು ವಿಧವಾದ ನೃತ್ಯಹಸ್ತಗಳಲ್ಲಿ ಒಂದು ; ಇ "ಲತಾಹಸ್ತಗಳೆರಡನ್ನು ಮೊಳಕೈಗಳಲ್ಲಿ ಸ್ವಸ್ತಿಕದಂತೆ ಹಿಡಿಯುವುದು" (ಲಾಸ್ಯರಂ. ೨೫೪ ಗದ್ಯಾನುವಾದ) : ಪೊಳೆವ ಲತಾಕರಮೆರಡುಂ ಮೊಳಕೈ ಸ್ವಸ್ತಿಕಮವಾಗೆ ವಲಿತಂ (ಲಾಸ್ಯರಂ. ೨-೭೬). ೭. ನೃತ್ಯದಲ್ಲಿ ತೊಡೆಯನ್ನು ಚಲಿಸುವ ಐದು ವಿಧವಾದ ಭೇದಗಳಲ್ಲಿ ಒಂದು ; ಇ "ಹೆಂಗಸರು ಜಾಗ್ರತೆಯಾಗಿ ನಡೆಯುವಾಗ ಆಗುವಂತೆ ಮೊಳಕಾಲನ್ನು ಒಳಕ್ಕೆ ಮಾಡುವುದು" (ಲಾಸ್ಯರಂ. ೨೬೨ ಗದ್ಯಾನುವಾದ) : ಮೊಳಕಾಲೊಡನೊಳಗತ್ತಂ ಸರಿಯಲ್ಕೆ ವಲಿತಮೆಂದೆನಿಸರ್ಕುಂ (ಲಾಸ್ಯರಂ. ೨-೧೫೯). ೮. ನೃತ್ಯದಲ್ಲಿ ಕೈಬೆರಳುಗಳನ್ನು ಚಲಿಸುವ ಏಳು ವಿಧವಾದ ಭೇದಗಳಲ್ಲಿ ಒಂದು : ಸಂಯುತ, ವಿಯುತ, ವಕ್ರ, ವಲಿತ, ಪತಿತ, ಕುಂಚನ್ಮೂಲ, ಪ್ರಸೃತ — ಈ ಏಳು ಹಸ್ತಾಂಗುಲಿಯ ಭೇದಂಗಳ್ (ಲಾಸ್ಯರಂ. ೩-೧೧೩ ವ). ವಳಿತ : ೧. ವ[ಪಾಠಾಂ. ಮಿ]ಳಿತಶಿಳೀಮುಖಮುತ್ಪಳದಳನಯನಂ ಕಂಜರಂಜಿತಂ ಜಯಲಕ್ಷ್ಮೀವಿಳಸಿತಮೆನೆ ದಿಟ್ಟಿಗೆ ಕೊಳುಗುಳಮಂ ಪೋಲ್ದತ್ತು ಪೂಗೊಳಂ ಕೌರವನಾ (ಗದಾಯು. ೬-೧೩). ೨. ಎಳವುಲ್ಗೆತ್ತು ಹರಿನ್ಮಣಿವಳಯಾಂಶುಗೆ ಸಾರ್ದ ದೀವದೆರಲೆಗೆ ಶಶಿಮಂಡಳದೆರಲೆಯ ಪದವಿಯನಾಕುಳವಳಿತಕಟಾಕ್ಷರುಚಿಯಿನ ಬಲೆಯರೀವರ್ (ವರ್ಧಪು. ೧-೭೫). ೯. ಸಂಸ್ಥಾನದ ಪೂರ್ಣಹಕ್ಕನ್ನು ಪಡೆಯದಿದ್ದರೂ ವ್ಯವಸ್ಥಿತವಾಗಿರುವ ದೇಶಭಾಗ ; ಅಧೀನ ಪ್ರಾಂತ : ಯೀ ತಳಕಾಡಿಗೆ ಶೇರಿದ ಮಳವಳೀಸ್ಥಳದ ನೆಲಮಾಕನಹಳಿಗೆ ವಳಿತವಾದ ಗುಳಘಟಗ್ರಾಮವನ್ನು (ಎಕ. XIV, ತಿರುಮ. ೨೦೬-೪; 994) ; ವುಂಮತ್ತೂರ ವಳಿತವಾದ ಕೊಣಗಲಾಪುರ ಗ್ರಾಮವಂನ್ನು ನಾರಾಯಣಪುರವೆಂಬ್ಬ ಅಗ್ರಹಾರವಂ ಮಾಡಿ ಸರ್ವಮಾನ್ಯವಾಗಿ . . . ಕೊಟ್ಟೆವಾಗಿ (ಎಕ XIV, ಚಾಮರಾ. ೨೬೦-೧೬; 1397). ೧೦. ಅಧೀನ ; ಅಂಕೆ ; ವಶ : ಆ ಕೂಚಿರಾಜಂ ಬೇತೂರು ಪ್ರಭೃತಿಗ್ರಾವಗಳಂ ವಳಿತಮಾಗಿ ಪಡೆದು ಸುಖದಿನಿರ್ಪ್ಪುದುಂ (ಎಕ. XI, ದಾವಣ. ೧೩-೫೪; 1271); ೧೧. ಅಧಿಕಾರ ; ಆಳ್ವಿಕೆ : ಬಾಚೆಯನಾಯಕನ ವಳಿತದ ಸ್ಥಳಂ (ಮುಂಬಾರಾ. X, ೨೫೫ -೪೬; 1219); ನರನ ತೆರಳಿಟ ತಂದು ತನ್ನೊಡನಱುಹಿದಗೆ ನೂಱೂನೆ ಹಯಸಾವಿರದ ವಳಿತವ ಬರಸಿಕೊಡುವೆನು (ಕುವ್ಯಾಕ. ೮-೩೬). ೧೨. ಭೂಮಿ ; ರಾಜ್ಯ.

[ಸಂ.]

ವಲಿತೆ (ನಾ). ಸುಕ್ಕುಗಟ್ಟಿದ ಚರ್ಮವುಳ್ಳವಳು : ಕಿರುಗೈದ ಕಣ್ಗಳಿಂ . . . ದಿಟ್ಟಿಸುತ್ತಾ ಶಿಥಿಲೆಯಾ ವಲಿತೆ ಆ ಸ್ಥವಿರೆ ಮೇಲೆಳ್ದಳತ್ರಿಭಾರ್ಯೆ (ಶ್ರೀರಾಮಾ. ೧೭೬-೧೪).

[ಸಂ. ವಲಿತಾ]

ವಲಿಮುಖ (ನಾ). ಸುಕ್ಕುಗಟ್ಟಿದ ಮುಖವುಳ್ಳ ಪ್ರಾಣಿ ; ಕಪಿ ; ಕೋತಿ : ವಲಿಮುಖಿ ನೀತಿಬಹಿರ್ಮುಖಿ ಮಲಿನಾತ್ಮನನೆನ್ನ ಮಾತುಗೇಳದೆ ನೀನೀ ಬಲನನೊಳಕೊಂಡೊಡೆಲೆ ಕಂಬಲಕಂ ಶಿವಭೂತಿಗಾದ ಕಥೆಯಂತಕ್ಕುಂ (ಪಂಚತಂ. ೧೦೬-೧೭೮); ಶಿವ ಶಿವ ವಲಿಮುಖರ ದೆಸೆಗೂಡೆ ದಳಪತಿ ನೀಲ ಹರಿತಂದ (ಕೌಶಿರಾ. ೨೦-೪೧). [ಸಂ.]

ವಲಿಮುಖಕೇತನ (ನಾ). ೧. ಕಪಿಯ ಲಾಂಛನವುಳ್ಳ ಪತಾಕೆ ; ಕಪಿಧ್ವಜ. ೨. ಕಪಿಧ್ವಜವುಳ್ಳವನು : ವಲಿಮುಖಕೇತನನಂ ಚಕಿತಲೋಚನಂ ರತ್ನಜಟ ನಿಜಪ್ರಾಣಭಯಾಕುಲಚಿತ್ತಂ ಪೌಲಸ್ತ್ಯಂ ಕೊಲಲುಟ್ಟಿದ ತೀಕ್ಷ್ಣಪುರುಷನೆಂದೀಕ್ಷಿಸಿದಂ (ಪಂರಾಮಾ. ೧೦-೫೧). [ಸಂ.]

ವಲಿಯ, ವಲೆಯ, ವಲ್ಲಿಯ (ನಾ). ಒಂದು ಬಗೆಯ ಹಕ್ಕಿ : ಬೆಳ್ಕಕ್ಕಿ ವಲಿಯಂ ಬಿಟ್ಟಿ ಜೂಗ ಹದ್ದೆಂಬಿವಂ ಸಾಳುವಂಗಳು ನೆಗೆದು ತಾಗಿ ಹೊಡೆಹೊಡೆದಿಳೆಯೊಳಿಕ್ಕಿದಡೆ ಹಕ್ಕಿಗಳ ಮಳೆಗಱೆಯುವಂತಾದುದು (ಹಚಚಾ. ೫-೪೩); ವಾಯಸ ವಲಿಯ ಹುದುಗಿದ ಪರಡೆ ಹಸುಬಗಳಳಿದುದಕೆ ಕಡೆಯಿಲ್ಲ ಬೇಂಟೆಯೊಳಗೊರ್ಮಿಳಾಪತಿಯ (ತೊರರಾ. ೩-೩-೧೭). **ವಲೆಯ** : "ವ್ಯಾಘ್ರಾಟಃ, ಭರದ್ವಾಜಃ — ಈ ೨ ವಲೆಯನ ಹಕ್ಕಿ" (ನಾಚರಾ. ೧೧೪). **ವಲ್ಲಿಯ** : "ಖಿಂಜನಃ — ವಲ್ಲಿಯಪಕ್ಷಿ" (ಓಷಧಿ. ೪೩).

[ದೇ. ‖ ತಮಿ. ವಲಿಯನ್, ವಲಿಯಾನ್]

ವಲೀಕ, ವಳೀಕ (ನಾ). ಹುಲ್ಲು, ತೆಂಗಿನ ಗರಿ ಮುಂತಾದುವುಗಳಿಂದ ಮಾಡಿದ ಧಾವಣಿ, —ಸೂರು. **ವಲೀಕ** : "ನೀವ್ರಂ, ವಳೀಕಂ (ಪಟಲಾಂತಂ) — ಈ ೨ ಸೂ(ಜು)ರು" (ಹಲಾಯು. ೫೧-೧೪೬). [ಸಂ.]

ವಲೀಮುಖ (ನಾ). = ವಲಿಮುಖ : 'ವಲೀಮುಖಧ್ವಜ' ಪರಾ. [ಸಂ.]

ವಲೀಮುಖಧ್ವಜ (ನಾ). = ವಲಿಮುಖಕೇತನ ೧ : ಜಾಂಬವಾಂಗದ ಸುಷೇಣಪ್ರಮುಖನಿವಿಳವಲೀಮುಖಧ್ವಜಪ್ರಧಾನರ್ ರಣರಸಿಕರಾಗಿ ನಡೆದರ್ (ಪಂರಾಮಾ. ೧೬-೨೬ ವ). [ಸಂ.]

ವಲೀವರ (ನಾ). ಒಂದು ಬಗೆಯ ಮರ : ವಲೀವರ, ಚಲ್ಲಾನೆ, ಮರದ ಎಗ್ಗೆ, ಅಣ್ಣಾ-ತಮ್ಮನ ಮರ, ಗೂಗ (ಮುಡಿಗಿ. ೩೧-೬೦೭). [?]

ವಲುಕಲ (ನಾ). ನಾರಿನಿಂದ ಮಾಡಿದ ಬಟ್ಟೆ ; ನಾರುಮಡಿ : ಜನಕಪುತ್ರಿಯ ಹಳುವಕಟ್ಟುವುದಕಟ ಸಾಲದೆ ವಲುಕಲವನಿತ್ತವಳು ಧೀ ತೆಗೆ (ರಾಮಾಣ. ೨-೨-೩೬).

[< ಸಂ. ವಲ್ಕಲ]

ವಲುಮ್ಮೆನೆ (ಅ). ಬಲವಾಗಿ ; ಉಗ್ರವಾಗಿ : ತನಗಿದಿರಾದ ದಂತಿಪಯ ಮಾನವಸೇನೆಯನೆಚ್ಚನಂತವೀರ್ಯನ ಶರವೃಷ್ಟಿಯೊಳ್ ಗಗನದಿಂ ನವ ಲೋಹಿತವೃಷ್ಟಿಗಳ್ ವಲುಮ್ಮೆನೆ ಕೊಳೆ ನಾಂದು ಕೆಂಪೆಸೆದು ತೊಟ್ಟನೆ ಬೆಳ್ಳಿಯ ಬೆಟ್ಟಮಲ್ತು ಜಾದಿನ ನಗಮೆಂಬ ಶಂಕೆಯನೆ ಮಾಡಿದುದಾ ವಿಜಯಾರ್ಧಪರ್ವತಂ (ಶಾಂತಿಪು. ೪-೩೩).

ವಲೆಯ 'ವಲಿಯ' ನೋ.

ವಲ್ಕ (ನಾ). ೧. ಮರದ ತೊಗಟೆ, —ತಿಗುಡು : "ತ್ಯಗ್ವಲ್ಕಲಂ ವಲ್ಕವೆನೆ ಮರದ ತಿಗುಡಕ್ಕು " (ಮಂಗರಾ. ೩೨-೩); ಬಬಲೆ ಪೆಗಲಿಂ ಚಂಚದ್ಬಲ್ಕಾಂಚಲಂ ಪೆಗಲಿಂಗೆ ಬಂದಬಲೆ ಜಡೆಗಳ್ (ಕಾದಂಬಿ. ೭೧೩). ೨. ಮರದ ತೊಗಟೆಯಿಂದ ಮಾಡಿದ ಬಟ್ಟೆ ; ನಾರುಮಡಿ : ಜನಪನಾ ಸಮಯ ಭೂಷಣವನಿತನಿತ ತೆಗೆದಿಟ್ಟು ವಲ್ಕಾಜಿನಗಳನು ಧರಿಸಿದನು (ತಿಮ್ಮಮಾ. ೧-೧೭). ೩. ಮೀನಿನ ಚರ್ಮದ ರಕ್ಷಣೆಗಾಗಿ ಒಂದರ ಮೇಲೊಂದರಂತೆ ಇರುವ ಪೊರೆ ; ಶಲ್ಕ. [ಸಂ.]

ವಲ್ಕಂದಳೆ (ಕ್ರಿ). ನಾರುಮಡಿಯನ್ನು ಉಡು, —ಧರಿಸು : ಸಳಿಳದೊಳೆ ನಾಂದ ವಲ್ಕಂದಳೆದಾಶ್ರಮತರುಗಳಲ್ಲಿ ಹಯಖುರಹತಿಯಿಂದಳುರ್ದೆದ್ದ ಧೂಳಿ ಪರಿಣತ ಜಳಜಸಬಾಭಂ ಪತಂಗತತಿವೊಲ್ ಬೀಳ್ಗುಂ (ಶಾಕುಂತ. ೧೭-೩೨).

[ವಲ್ಕ + ತಳೆ]

ವಲ್ಕನಿ (ನಾ). ಒಂದು ಬಗೆಯ ವನಸ್ಪತಿ ; ಭಾರಂಗಿ : "ಭಾರಂಗಿ ವಲ್ಕನಿ [ಪಾಠಾಂ. ರ್ಕಿನಿ, ಲ್ಕಿನಿ]ಯಕ್ಕು" (ಮಂಗರಾ. ೩೩-೧೯). [?]

ವಲ್ಕಲ (ನಾ). ೧. ಮರದ ತೊಗಟೆ. ೨. ನಾರುಮಡಿ : ಅಂತು ವಲ್ಕಲಾವೃತ ಕಟಿತಟನುಮಾಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ . . . ಕುಂಭಸಂಭವನಂ ಕಂಡು (ಪಂಪಭಾ. ೨-೪೫ ವ); ವಾರಿಜಮುಖಿಯರ್ ಸಖಿಯರ್ ತಾರಾಚಲನಾಥನರಸಿಗನುನಯದಿಂದಂ . . . ವಲ್ಕಲಮನೊಪ್ಪಲುಡಿಸುತ್ತಿರ್ದರ್ (ಗಿರಿ. ೯-೫). [ಸಂ.]

ವಲ್ಕಲವಸನ (ನಾ). ೧. ನಾರುಮಡಿ. ೨. ನಾರುಮಡಿಯನ್ನು ಧರಿಸಿದವನು : ಆಗಳವರ್ಗಳಾ ರೂಪಿನೊಳದಂ ನೆಗಟಲಂಜಿ ವಲ್ಕಲವಸನರುಂ . . . ಜಟಾಧರರುಂ ವಿಕದಂಡಿ ತ್ರಿದಂಡಿಗಳಪ್ಪ ಪರಿವ್ರಾಜಕರುಮಾಗಿ (ಅದಿಪು. ೯-೧೩ ವ).

[ಸಂ.]

ವಲ್ಕೆ (ನಾ). = ವಲ್ಕಲ ೧ : "ತ್ವಕ್, ವಲ್ಕಾ, ವಲ್ಕಲಂ — ಈ ೩ ಮರದ ಹೊಱಸೊಪ್ಪು" (ಹಲಾಯು. ೩೦-೨೯). [ಸಂ. ವಲ್ಕ]

ವಲ್ಗನ (ನಾ). ೧. ನಡೆಯುವುದು ; ಚಲಿಸುವುದು. ೨. ನೆಗೆಯುವಿಕೆ ; ಜಿಗಿತ : ವಲ್ಗನವಾಡುತ ಬಿಲ್ಲಳವೆದಿಗೆ ಸರಳ್ಗಳ ಸಾರ್ಚ ತುಯ್ದೆಸೆವ ಬಿಲ್ಗಾಱರ ಕೊಂಡಾಡಿದರು . . . ಆಮರಿಯರು (ಚಂಪ್ರಸಾಂ. ೯-೪೨). ೩. ಮಲ್ಲಯುದ್ಧದಲ್ಲಿ ಚಿಮ್ಮಿ, ನೆಗೆಯುವ ಒಂದು ಪಟ್ಟು, —ವರಸೆ : ಲಲಿತವಲ್ಗನಾವಷ್ಟೂಭದಿಂ ಮುಷ್ಟಿಕನೊಳ್ ಮುಸಲಪಾಣಿಯುಂ ಚಾಣೂರನೊಳ್ ಚಕ್ರಪಾಣಿಯುಂ ಪೊಣರೆ (ಹರಿವ�ಂ. ೬-೬೨ ವ). 'ವಲ್ಗಿಸು' ಪರಾ. ೪. [ಅಶ್ವಶಾ] ಕುದುರೆಯ ಐದು ವಿಧವಾದ ನಡಗೆಗಳಲ್ಲಿ ಒಂದು ; ಕಾಲನ್ನು ಚಿಮ್ಮುತ್ತ ಓಡುವುದು : ವಾಜಿರಾಜವಲ್ಗನದಿನುರಸ್ಥಲಂಬಿಡಿದು ಲಕ್ಷ್ಮಿಯ ಕೇಕರದಂತೆ ತೋರಮುತ್ತಿನ ತಿಸರಂ ತೆಱಂಬೊಳೆಯೆ (ಪಂರಾಮಾ. ೫-೧೦೯); ಆತಂ ಬೇಗಂ ಸುಶಿಕ್ಷಿತಮಪ್ಪ ಕುದಿರೆಯ ಬೆಂಗವಾಯ್ದೊಡೆ ಅದು ಲಂಘನ ವಲ್ಗನ ನಿಜಕ್ಕೆರ್ಗತಾದಿಗಳೊಳಪ್ಪ ಕ್ರಿಯೆಗಳೊಡಂಬಡೆ ಬಲ್ಲರಚ್ಚರಿವಡೆ ಪರಿದೊಡೆ (ಹರಿವಂ. ೫೩-೩೦ ವ). [ಸಂ.]

ವಲ್ಗನಗೈ (ಕ್ರಿ). ನೆಗೆ ; ಜಿಗಿ : ಕಲ್ಲಳ ಮಜ್ಜಿಗಳೊಳಗೆ ನಿಂದಲ್ಲಲ್ಲಿ ಬಿಲ್ಗಾಱರು ಬೀದಿವರಿದು ವಲ್ಗನಗೈವುತ ಕುವರನ ಮೇಲೆ ಸರಲ್ಗಳ ಮಳೆಯ ಕಱೆದರು (ಕುರಾಸಾಂ. ೪೫-೧೦೭). [ವಲ್ಗನ + ಕೈ, (< ಕೆಯ್,)]

ವಲ್ಗನೆ (ನಾ). ನೆಗೆದಾಟ ; ಹಾರಾಟ : ಸಾಕು ಮಾಡು ನಿನ್ನ ವಲ್ಗನೆಯನ್ನ! ಅವಳೆಂದು ಬರುತ್ತಾಳೋ ಎಂದು ಅಂದಿನಿಂದ ಹಂಬಲಿಸುತ್ತಿರಲಿಲ್ಲವೇ ನೀನು? (ಮಾಡಿಮ. ೧೫೬). [ಸಂ. ವಲ್ಗನ]

ವಲ್ಗಿತ (ಗು). ೧. ಚಲಿಸುವ. ೨. ಹಾರಿದ ; ನೆಗೆದ. (ನಾ). ೩. = ವಲ್ಗನ ೪ : ಅದ್ದಲಾಗಿ ಮಣಿತವ ತೋಱಿಸುವುದು ವಲ್ಗಿತವೆನಿಸಿಕೊಂಬುವುದು (ಅಶ್ವಲ. ೨೫-೩); ದೌರಿತಕ ಆಸ್ಕಂದಿತ ಪ್ಲುತ ವಲ್ಗಿತ ಚಾರುರೇಚಿತಗಳು (ಜ್ಞಾನಚ. ೪-೨೩).

[ಸಂ.]

ವಲ್ಗಿಸು (ಕ್ರಿ). ಮಲ್ಲಯುದ್ಧದಲ್ಲಿ ವಲ್ಗನವೆಂಬ ವರಸೆಯಿಂದ ಹೋರಾಡು : ಸ್ಪೋದ್ಧುಜದ್ವಂದ್ವಮಂ ಪದೆದಾಸ್ಫೋಟಿಸಿ ನಿಂದು ವಲ್ಗಿಸುತುಮಾ ಚಾಣೂರನಂ ನೋಡಿ ಕೋಪದೆ ಪೊಕ್ಕಾತನ ತೋಳ್ಗಳಂ ಪಿಡಿದು . . . ಕುಕ್ಕುಱಿಸಿದಂ ಭೂಭಾಗದೊಳ್ ಮಾಧವಂ (ಎಷ್ಟಾಪು. ೫-೫-೬೬). [ವಲ್ಗನ + — ಇಸ್ಯ]

ವಲ್ಗು (ಗು). ೧. ಸುಂದರವಾದ ; ಚೆಲುವಾದ : 'ವಲ್ಗುರೂಪೆ' ಪರಾ. (ನಾ). ೨. ಸೌಂದರ್ಯ ; ಚೆಲುವು : ಋಗ್ವೇದದಲ್ಲಿ 'ಸೌಂದರ್ಯ'ದ ಅರ್ಥವನ್ನು ವಿವಿಧವಾಗಿ ಪ್ರಕಟಪಡಿಸುವ ಪದಗಳಿವೆ . . . ಆ ಪದಗಳು ಇವು ; ಪ್ಶುರಸ್, ಪೆಶಸ್, ಅಪ್ಸಸ್, ದೃಶ್, ಶ್ರೀ, ವಪುಸ್, ವಲ್ಗು (ಸೌಂದಸ. ೪೬). ೩. ಒಳ್ಳೆಯದು ; ಉತ್ತಮವಾದುದು : "ಪ್ರಾಗ್ಯಂ . . . ಸಾಧು, ವಲ್ಗು, ಚಾರು, ಸುಷಮಂ, ವಾಮಂ, ಶುಭಂ, ವೇಶಲಂ — ಈ ೨೯ ಒಳ್ಳಿತು" (ಹಲಾಯು. ೧೧೪-೪).

[ಸಂ.]

ವಲ್ಗುತೆ (ನಾ). ಅಂದ ; ಸೌಂದರ್ಯ : ನೆಲದ ಸಿರಿ ಬಲ್ಲಿದ್ದೆ, ಮೈಬಲ್ಮೆ, ರಣಕೀರ್ತಿ, ಮೇಣ್ ಅರಸುಕುವರಿಯತನಂ ತೃಣವಾಗಿ ಋಣವಾಗಿ ಕಾಣಿಸಿದುವಬಲೆಯರ ಗುಣವಾದ ಫಲ್ಗುಣನ ಮೋಹಿಸುವ ವಲ್ಗುತೆಯ ಮುಂದೆ (ಚಿತ್ರಾಂಗ. ೨೫-೬೫).

[ಸಂ. ವಲ್ಗುತಾ]

ವಲ್ಗುರೂಪೆ (ನಾ). ಸುಂದರರೂಪವನ್ನು ಉಳ್ಳವಳು ; ಚೆಲುವೆ : ವಲ್ಗುರೂಪೆ ಸುಭದ್ರೆ ಕಣ್ಮುಂದೆ ಸುಳಿವನಕ ಫಲ್ಗುಣನು ಸಂನ್ಯಾಸಿ (ಮಂಕುಶ. ೨೭೬).

[ಸಂ. ವಲ್ಗುರೂಪಾ]

ವಲ್ಗುಲ (ನಾ). ತೊಗಲುಬಾವಲಿ. [ಸಂ.]

ವಲ್ಲೂದರ (ನಾ). ಅಂದವಾದ ಉದರ : ಸುರದಧರ ಮಣಿಬಂಧ ವಲ್ಲೂದರದ ನಾಭಿಸರೋಜಕಾಂತಿಯ . . . ಸುಭೂರಿಭಾಗ್ಯದ ಲಕ್ಷಣದ ಮೂರ್ತಿಯನು ನೆನೆ (ನಿಭಾಗ. ೩-೧೩-೩೫). [ಸಂ.]

ವಲ್ಲೆ (ನಾ). ಕುದುರೆಯ ಕಡಿವಾಣ,—ಲಗಾಮು ; ವಾಘೆ : "ವಲ್ಗಾ, ರಶ್ಮಿಃ, ಕಶಾ – ಈ ೩ ವಾಗೆ" (ಹಲಾಯು. ೭೩-೨೦೮). [ಸಂ. ವಲ್ಗಾ]

ವಲ್ಹನ (ನಾ). ೧. ತಿನ್ನುವಿಕೆ ; ಭುಜಿಸುವುದು. ೨. ಆಹಾರ ; ಉಣಿಸು. ೩. ಊಟ ; ಭೋಜನ : "ವಲ್ಹನಂ, ಅಭ್ಯವಹಾರಃ . . . ಆಹಾರಃ, ಭೋಜನಂ, ಸ್ಯದನಂ – ಈ ೧೧ ಊಟಂ" (ಹಲಾಯು. ೫೪-೧೭೦). [ಸಂ.]

ವಲ್ಮೀಕ (ನಾ). ೧. ಹುತ್ತ : ಆ ವಿಷಯಂ . . . ವಲ್ಮೀಕಾನೀಕದಂತೆ ಭಾಸ್ವದ್ಯೋಗಿಸಮಾಜವಿರಾಜಿತಮುಂ . . . ಎನಿವುದು (ವರ್ಧಪು. ೧-೪೬ ವ); ಅಮಿತೋದ್ಧದ್ಧುಲ್ಮವಲ್ಮೀಕಮನುಡಿದಿಱಿಯುತ್ತುಂ . . . ನಡೆದುದು ಬಳವತ್ಕಾಳಕಾಯಂ ಲುಳಾಯಂ (ಪುಷ್ಪದ. ೫-೭೫). ೨. ಕೊರಳು, ಎದೆ ಮುಂತಾದ ಕೆಲವು ಅಂಗಗಳು ಆನೆಯ ಚರ್ಮದಂತೆ ಒರಟಾಗಿ, ಊದಿಕೊಳ್ಳುವ ಒಂದು ಬಗೆಯ ರೋಗ : 'ಪಾದವಲ್ಮೀಕ' ಪರಾ. ೩. ವಾಲ್ಮೀಕಿ ಋಷಿ. [ಸಂ.]

ವಲ್ಲ (ನಾ). ೧. ಒಂದು ಬಗೆಯ ದ್ವಿದಳಧಾನ್ಯ ; ಅವರೆ : "ವಲ್ಲಃ, ನಿಷ್ಪಾವಃ – ಈ ೨ ಅವರೆ" (ಹಲಾಯು. ೯೬-೪೩). ೨. ಗೋಧಿಯ ಒಂದು ಪ್ರಕಾರ. ೩. ಗುಂಜಿಗಳ ಒಂದು ಪ್ರಮಾಣ. ೪. ಧಾನ್ಯಗಳನ್ನು ಮೊರದಲ್ಲಿ ಹಾಕಿ ಒನೆಯುವುದು. ೫. ತಡೆಯುವಿಕೆ ; ನಿಷೇಧ. [ಸಂ.]

ವಲ್ಲಂ 'ವಲಂ' ನೋ.

ವಲ್ಲಕಿ (ನಾ). ೧. ಒಂದು ಬಗೆಯ ತಂತೀವಾದ್ಯ : ಗಾಯಕೀಜನ ಗೀತಾನ್ವಿತವಲ್ಲಕೀಕ್ವಣಿತದೊಳ್ . . . ಪೊಂಪುಟಿವೋಗುತಿರ್ಪುವೆರಡುಂ ವಿದ್ಯಾಧರಶ್ರೇಣಿಗಳ್ (ಆದಿಪು. ೧-೭೦); ಸುರಮುನೀಶ್ವರ . . . ಮೊರೆವ ವಲ್ಲಕಿ ಸಹಿತ ನಾಮಾಮೃತವ ಬೀಱಿದನು (ಕಾಶಿಕಾ. ೧೯-೫೧). ೨. [ಜ್ಯೋತಿ] ಸಂಖ್ಯಾಯೋಗಗಳಲ್ಲಿ ಒಂದು ; ಏಳುಗ್ರಹಗಳೂ ಏಳುರಾಶಿಗಳಲ್ಲಿರುವ ಒಂದು ಯೋಗ : ಸಪ್ತಗ್ರಹಂ . . . ನಿಲೆ ಸಪ್ತಮಾಲಯದೊಳಕ್ಕುಂ ವಲ್ಲಕೀಸಂಜ್ಞಿತಂ (ಕಾಶಿತ. ೧೩-೫). 'ವಲ್ಲಕೀಯೋಗ' ಪರಾ. [ಸಂ. ವಲ್ಲಕೀ]

ವಲ್ಲಕೀಯೋಗ (ನಾ). [ಜ್ಯೋತಿ] ಜಾತಕನ ಜನ್ಮಕಾಲದಲ್ಲಿ ಏಳುಗ್ರಹಗಳೂ ಏಳುರಾಶಿಗಳಲ್ಲಿರುವುದು ; ಈ ಯೋಗದಲ್ಲಿ ಹುಟ್ಟಿದ ವ್ಯಕ್ತಿಯು ಸ್ವಂಗೀತಗಾರನೂ ನರ್ತಕನೂ ಆಗುತ್ತಾನೆಂಬ ನಂಬಿಕೆಯಿದೆ : ವಲ್ಲಕೀಯೋಗಜಾತನರಂ ಗಾಯಕ ನರ್ತಕಪ್ರಿಯತಮಂ ನಿಷ್ಣಾತಂ (ಕಾಶಿತ. ೧೩-೧೬). [ಸಂ.]

ವಲ್ಲಡಿ (ಕ್ರಿ). (?) : ಉಳ್ಳಾಗಲು ನಿನ್ನ ಉಳ್ಪಿಪ್ಪನೆಂದು ಎಲ್ಲ ಬಳಗ ಬಂಧು ಸೊಲ್ಲುಸೊಲ್ಲಿಗ ಪಾಡಿ ಬೆಲ್ಲಕ್ಕೆ ನೊಣಗಳು ವಲ್ಲಡಿಯದಂತೆ ಒಳ್ಪೇತನದಲ್ಲಿ ಉಲ್ಲಾಸರಾಗಿ ಗಲ್ಲಭೆ ಇಂದಲಿ ಚಲ್ಲವರಿದಿಪ್ಪರು (ವಿಜಯ. ೫೧-೨). [?]

ವಲ್ಲಭ (ನಾ). ೧. ಕಾದಲ ; ನಲ್ಲ ; ಪ್ರಿಯತಮ : ವಲ್ಲಭನ ತೋಳ ಸೋಂಕುಂ ಮಲ್ಲಿಗೆಯುಂ ಕುಂದದಿರ್ಕ ಸಂತತಂ (ಜಗವಿ. ೧೪-೭೭); ಪತಿಯ ನಿರೀಕ್ಷಿಪವು ಸಲೆ ಕಂಬನಿಯ ತುಂಬಿದವು ಸುಯ್ವುವು ಹಂಬಲಿಸಿದವು ಚಕ್ರವಾಕಗಳಲ್ಲಿ ವಲ್ಲಭರ (ತ್ರಿಷ. ೭-೧೫೫). ೨. ಗಂಡ ; ಪತಿ : ಬಂದಳದೊಂದು ವಿಭ್ರಮಂ . . . ಅದೊಂದು ದೇಸೆ ಪೊಸತಾಗಿರೆ ವಲ್ಲಭನಲ್ಲಿಗಟ್ಟಿಱಿಂ (ಜಗವಿ. ೨-೮೦); ಈಕೆ ಗಂಧರ್ವರ ರಮಣಿ . . . ಬಲ್ಲಿದರಿವಳ ವಲ್ಲಭರು (ಕುಸಾವಿ. ೨-೧೪). ೩. ಒಡೆಯ ; ಪ್ರಭು : "ಬಲ್ಲಹಂ ವಲ್ಲಭ ತಾನಧಿಪತಿಗೆ ನಾಮಮಕ್ಕುಂ" (ಕವಿಕಂ. ೧೪೮); ಎನ್ನ ವಲ್ಲಭೆದ್ದನೆದ್ದನು ಎನ್ನ ರತುನದ ಬೊಂಬೆಯೆದ್ದನು (ಕಾಶಿಕಾ. ೨೨-೬೭). ೪. ರಾಷ್ಟ್ರಕೂಟರಾಜರ ಹೆಸರು. ೫. ಗೊಲ್ಲ ; ಗೋವಳ : ಗೋಪಾಲಕರೂ ದನ ಮೇಯಿಸುವವರೂ . . . ಎರುವನ್, ಗೌಳ, ಗೋಪಾಲ, ಕೊಂಡಿ, ಸಾಬಲಿ, ವಲ್ಲಭ (ತಿಳುನಾ. ೧೭೧). [ಸಂ.]

ವಲ್ಲಭಗಾಮುಂಡ (ನಾ). ಒಬ್ಬಾತನ ಹೆಸರು : x x x ಗಾದಿಯರ ದಿಣ್ಣಿಗಗಾಮುಣ್ಡುರುಮೆನ್ನುವರು ವಲ್ಲಭಗಾಮುಣ್ಡುರುಂ ರುನ್ದಿವಚ್ಚರು ರುಣ್ದೆಮಾರಮ್ಮನುಂ . . . ಕೊಟ್ಟುದು (ಎಕ. II (R), ೬೮-೭; ೩ನೆಯ ಶತ).

[ವಲ್ಲಭ + ಗಾಮುಂಡ]

ವಲ್ಲಭಜನ (ನಾ). ಪ್ರಿಯಜನ ; ಆಪ್ತೇಷ್ಟರು : ಕರುಣಿಸಿ ಬಿಡು ವಲ್ಲಭಜನ ನಿರೀಕ್ಷಣೋತ್ಸುಕನಂ (ಕಾದಂಕಾ. ೭೩೮). [ಸಂ.]

ವಲ್ಲಭಪಾಡಿ (ನಾ). ಒಂದು ಸ್ಥಳದ ಹೆಸರು : ಕಂಗಪಾಡಿ ಕೊಟ್ಟವಳ್ಳಿಪಾಡಿ ವಲ್ಲಭಪಾಡಿಯು ಮೂಜುಪಾಡಿ ವಲವಮ್ಮನಾ ಮೇಕೆಮ x x x ಕೆಯ್ದುನ್ದು (ಎಕ. XII, ಮಧ್ಗಿ. ೧೩-೨; ಪು. 750). [ವಲ್ಲಭ + < ಪಾಡಿ]

ವಲ್ಲಭಿಕೆ (ನಾ). ಹೆಂಡತಿ ; ಪತ್ನಿ : ತ್ರಿಷಷ್ಟಿಸಂಖ್ಯಾತ ವಲ್ಲಭಿಕಾವಿಭ್ರಮಭ್ರೂಲತಾತ್ರಿಭಾಗಭಾಜನನುಮಾಗಿ (ಆದಿಪು. ೬-೧೩ ವ). [ಸಂ. ವಲ್ಲಭಿಕಾ]

ವಲ್ಲಭಿ (ನಾ). = ವಲ್ಲಭಿಕೆ : ವಲ್ಲಭಿಯರ್ ಪೊಲ್ದೆನೆ ಪುರಸ್ತ್ರೀಯರನ್ಯಾಯಮೆನೆ . . . ಪಾಸಱೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೩ ವ); ವಲ್ಲಭಿಯೆ ಬರವೇನು ಮುವಿದಲಿ ತಲ್ಲಣವೆ ತಲೆದೋಱುತಿದೆ ತಳುವಿಲ್ಲದುಸುರು (ಕುಸಾವಿ. ೩-೪೦).

[ಸಂ. ವಲ್ಲಭಾ]

ವಲ್ಲಭೋದ್ಯಾನ (ನಾ). ರಾಜೋದ್ಯಾನ : ಜನತಾವಲ್ಲಭಂ ವಲ್ಲಭೋದ್ಯಾನದಿಂ ಪೊಱಮಟ್ಟು (ಅನಂಪು. ೭-೫೪ ವ). [ಸಂ.]

ವಲ್ಲರಿ (ನಾ). ೧. ಲತೆ ; ಬಳ್ಳಿ : ವಧೂವರರಾಗವಿಷಯವಲ್ಲರಿ ಫಲಿತಮಾದುದು (ಜಗವಿ. ೨-೫೨ ವ); ವರತರುವಲ್ಲರೀಪ್ರಕರದಿಂ ಕರದಿಂ ಕರದಿಂಬುವೆತ್ತು (ರಾಜಶೇ. ೫-೭೬). ೨. ಗೊಂಚಲು ; ಗೊಂಡೆ : ತಲೆಯೊಳ್ ಸೀರೆಯನಿಕ್ಕಿ ಕೆಮ್ಮನೆ[ನೆ]ನಿತಂ ಪೂರ್ವಮುಗ್ರಾರಿ ವಂಶಲತಾವಲ್ಲರಿಗಳ್ಗೆ ದಾವಶಿವಿವೊಲ್ ಮೆಯ್ದೋಱಿ (ತಂಪಭಾ. ೩-೩೩); ನಲ್ಲನನಗಲಿ ಚೈತನ್ಯಗುಂದಿದ ಹೆಣ್ಣು ಕೊಲ್ಲದೆ ಬಿಡೆನೆಂಬ ಸ್ಮರನ ಬಲ್ಲನಂಗಡಿಯಸೆದವು ಅಶೋಕೆಯ ವಲ್ಲರಿ ಸಹಿತಿಟ್ಟುಕೊಂಡು (ಅಭಿಲೂ. ೩-೭೨).

[ಸಂ. ವಲ್ಲರೀ]

ವಲ್ಲವ೧ (ನಾ). ಒಂದು ರಾಜಮನೆತನ ಮತ್ತು ಆ ಮನೆತನಕ್ಕೆ ಸೇರಿದವನು ; ಪಲ್ಲವ : ವೆಳ್ಗುಳಿ ಚಳುಕ್ಕಿಯರ್ ವಲ್ಲವರ್ ಕೌಶಲರ್ ವಜ್ಜಣರ್ (ಎಕ. IV (R), ಆಮಾರಾ. ೧೩೨-೪೦; 1049). [< ಸಂ. ಪಲ್ಲವ]

ವಲ್ಲವ೨ (ನಾ). ೧. ದನ ಕಾಯುವವನು ; ಗೊಲ್ಲ : "ಗೋಪಾಳಿ, ವಲ್ಲವಃ – ಈ ೨ ತುಱುಕಾಱಂ" (ಹಲಾಯು. ೯೬-೪೩); ಬರುತಿರ್ದರ್ ಮೊತ್ತದಿಂ ವಲ್ಲವರಳಿಕಲಲಕ್ಕಲ್ವರ್ ಲೀಲೆಯಿಂದಂ (ಲೀಲಾವ. ೫-೯೪). ೨. ಅಡುಗೆಯವನು ; ಬಾಣಸಿಗ : "ಸೂಪಕಾರಂ ವಲ್ಲವಂ ಸೂದನೆಂದೆನಲು ಭೂಪರ್ಗಳ(ಡು)ಡಿಗೆಯವನಕ್ಕು" (ಮಂಗರಾ. ೮೦-೮). 'ಬಲ್ಲವ್ಯ' ಪರಾ. [ಸಂ.]

ವಲ್ಲವ್ಯ (ನಾ). (?) : ಕಳಕಳಿಪ ದರಹಾಸಕೌಮುದಿಯ ಸೌಮುದಿಯ ಪೊಳಪೊಳೆವ ಬಿಂಬೋಷ್ಠಪಲ್ಲವದ ವಲ್ಲವದ ನಲವಿನಿಂ ನೋಳ್ಪ ಯತಿತತಿಯ ಸುರತತಿಯ ಸಂತತಿಗೆ ಹರಿಯಿತ್ತರೆ (ವೆಂಕಾರಾ. ೧೦-೮-೨೬). [?]

ವಲ್ಲವಿ (ನಾ). ದನಕಾಯುವವಳು ; ಗೊಲ್ಲಿತಿ : ಸುಲಭಗುರುವಂ ಕಂಡು ವಂದವಂದವೊಯೆನಲ್ ಕಳಮಾಳಿಯೆಸೆದುವಲ್ಲಲ್ಲಿ ಚೆಲ್ವಂಗೆಯ್ವುತುಂ ಕಾಯ್ವ ವಲ್ಲವಿಯರಿಂ (ಪದ್ಮರಾ. ೮-೧೪); ಸರಿ ಯಾವುದೀ ವಲ್ಲವಿಯರ ಭಾಗ್ಯಕೆ (ಕೃಷ್ಣಗೋ. ೩-೭೪). [ಸಂ. ವಲ್ಲವೀ]

ವಲ್ಲಹ 'ಬಲ್ಲಹ೧' ನೋ.

ವಲ್ಲಾಂಡ (ನಾ). ಒಂದು ಬಗೆಯ ಸಸ್ಯ : "ಪಂಚಕ್ರಮಃ – ವಲ್ಲಾಂಡ" (ಓಷಧ. ೯೨). [?]

ವಲ್ಲಿ೧, **ಒಲ್ಲಿ** (ನಾ). ಹೊದೆಯುವ ವಸ್ತ್ರ ; ಉತ್ತರೀಯ : ನವನಿಕಾರಿಯ ವಲ್ಲಿ ಸೀರೆಗಳವಯವದ ರಕುತದಲಿ ತೋದವು (ಕುಸಾವಿ. ೮-೭೫); ಹರಿಕರುಣವೆ ಅಂಗಿ ಗುರುಕರುಣ ಮುಂಡಾಸು ಹರಿದಾಸರ ದಯವೆಂಬೊ ವಲ್ಲಿ (ಪುರಂದ. ೨-೧೫-೧); ಒಡ್ಡರಿಗೆಲ್ಲ . . . . ಒಂದೊಂದು ವಲ್ಲಿ ಒಂದೊಂದು ಅಂಗಿ ಕೊಡಿಸಿ ಕಳಿಸಿಕೊಟ್ಟರು (ಚಳಭಾ. ೧೬೪).

ಒಲ್ಲಿ : ಒಯ್ಯನೆ ಸಾರ್ದೊಲ್ಲಿಯನೆತ್ತಿಯಾಣ್ಮನ ಮಯ್ಯಾಡದೆಬ್ಬಱುಣ್ಮಾದವೊಲು ಶಯ್ಯೆಯೊಳವಳೊಂದಿದಳಾಗ ಕಾಮನ ಕಯ್ಯಸಿ ಮಱದೊಱೆವೊಗುವಂತೆ (ಸೊಬಸೂ. ೧೮-೮೧); ಬಿಗಿದುಟ್ಟ ಕಾಸೆ ಸುತ್ತಿದ ಚಂದ್ರಗಾವಿಯ ಮಿಗೆ ರಂಗುವೆತ್ತೊಲ್ಲಿ ಮೆಱೆಯೆ (ನಾಗಕು. ೮-೧೩); ನಲ್ಲ ಒಲ್ಲಿಯನೊಲ್ಲ ನೆಲ್ಲಕ್ಕಿ ಬೋನೊಲ್ಲ (ಸರ್ವಜ್ಞ. ೧೫೧೮). [ದೇ. ॥ ಮಲ. ಒಲ್ಲಿ, ಒಲ್ಲಿಯಲ್ ; ತುಳು. ಒಲ್ಲಿ, ಒಲ್ಲೆ ; ತೆಲು. ಒಲ್ಲಿಯ, ಒಲ್ಲೆ]

ವಲ್ಲಿ₂ (ನಾ). ೧. ಲತೆ ; ಬಳ್ಳಿ : ತರುಗುಲ್ಮಾಂಬ್ರಸವಲ್ಲಿಗಳ್ಗೆ ಜವೆಯೋರೊಂದೊಬ್ಬಳಂ ನಾಲ್ಗುಳಂ . . . ಇಕ್ಕುಗೆ ಸಾರ್ವಕಾಲಫಲಮಕ್ಕುಂ (ಲೋಕೋಪ. ೬-೬೦); ಸ್ಫಟಿಕವೆಂದೆಂಬ ಕಂದದಿನೊಗೆದು ನಾಡೆ ಧಿಣಿಧಿಟಿಲೆಂಬ ಕಿಡಿಗಳೇ ಮೊಳೆಗಳಾ ಸೂರ್ಯನುತ್ಕಟದ ಕಿರಣಂಗಳೇ ವಲ್ಲಿಯಗ್ರದ ಭಾಸ್ಕರನೆ ಫಳಂ (ಭಾವಚಿಂ. ೫-೬). ೨. ಭೂಮಿ. [ಸಂ.]

ವಲ್ಲಿಪಾಟು, ವಲ್ಲಿವಾಟ (ನಾ). ಎದೆಯ ಮೇಲೆ ಬರುವಂತೆ ಎಡಭುಜದ ಮೇಲೆ ಹೊದೆಯುವ ವಸ್ತ್ರ ; ಉತ್ತರೀಯ : ಉಡಿಯ ಸುತ್ತಿದ ವಲ್ಲಿಪಾಟನ ಕರದಲಿ ಪಿಡಿದು ರಂಜಿಪ ರನ್ನಸೆಳೆಯ ಕಡುಜಾಣ ಭರತಾಚಾರ್ಯನು ರಾಜಿಪ ಬೆಡಗನದೇನ ಬಣ್ಣಿಸುವೆ (ಕಂಚಿ. ೮-೫೭). ವಲ್ಲಿವಾಟ : ಚಿನ್ನಗಂಬಿಯ ಪಟ್ಟೆಪಟ್ಟಡಂಗಳನೊಲಿದು ಚೆನ್ನಾಗಿ ವಲ್ಲಿವಾಟವ ಪೊದೆದು (ನವಮೋ. ೧೭-೫೭). [ದೇ. ॥ ತಮಿ. ವಲ್ಲವಾಟ್ಟು, ವಲ್ಲವಟ್ಟು ; ತೆಲು. ವಲ್ಲೆವಾಟು, ವಲೆವಾಟು]

ವಲ್ಲಿಮಾಟ (ನಾ). ಬಳ್ಳಿಗಳನ್ನು ಹಬ್ಬಿಸಿದ ಮನೆ ; ಬಳ್ಳಿಮಾಡ ; ಲತಾಗೃಹ : ವಲ್ಲಿಮಾಟ – ಬಳ್ಳಿಮಾಡ (ಶಮದ. ೨೯೨ ಪ್ರಯೋ.). [ವಲ್ಲಿ₂ + ಮಾಟ₂]

ವಲ್ಲಿಯ 'ವಲಿಯ' ನೋ.

ವಲ್ಲಿವಾಟ 'ವಲ್ಲಿಪಾಟು' ನೋ.

ವಲ್ಲಿವೇಷ್ಟ (ನಾ). [ಕಾಮಶಾ] ಆಲಿಂಗನದ ಒಂದು ಪ್ರಭೇದ : ತಿಲತಂಡುಲಿತ ಪಾಲು ಜಲ ವಲ್ಲಿವೇಷ್ಟಾದಿ ಲಲಿತಾಲಿಂಗನ ಭ್ರಾಂತಾಂತ್ಯರಿತ ಚಲಜಿಹ್ವಾಪಾನವೆಂಬ ಲಘುಚುಂಬನಮಲೆವೊಲೆವ ಹುಡುಕುವ ತುಡುಕುವ (ಭೈರಸಾ. ೧, ೨೯೬). [ಸಂ.]

ವಲ್ಲೀವನ (ನಾ). ಬಳ್ಳಿಗಳಿಂದ ಕೂಡಿದ ಉದ್ಯಾನ ; ಲತಾವನ : ದೇವೀವಿಳಾಸಮಂ ನಿಜವಿಳಾಸದಿಂ ನಗುವವಲ್ಲಿ ವಲ್ಲೀವನಂ (ಆದಿಪು. ೧೦-೨೬); ಪುಷ್ಪಾಮೋದದಿಂದಾದುದಟ್ಟಮೆ ಭೃಂಗಕ್ಕೆನೆ ತಾಂಗದಾರ ಬಗೆಯಂ ತತ್ಕುಲ್ಲ ವಲ್ಲೀವನಂ (ಮಲ್ಲಿಪು. ೧೪-೧೪೨). [ಸಂ.]

ವಲ್ಲೂರ (ನಾ). ೧. ಒಣಗಿಸಿದ ಮಾಂಸ : "ಹವಣಱಿದು ಮಾಂಸಮಂ ತುಂಡುಗೆಯ್ದುಪ್ಪುಡಿದವಱಲ್ಲಿ ವಲ್ಲೂರಮೆನಿಸಿಕ್ಕು" (ಮಂಗರಾ. ೬೫-೫). ೨. ಪೊದೆ. ೩. ಉಸುಬಿನ ಬಯಲು ; ಮರಳುಗಾಡು. ೪. ಬಿತ್ತದೆ ಹಾಳಾದ ಜಮೀನು ; ಪಾಳುಭೂಮಿ. [ಸಂ.]

ವಶ₁ (ನಾ). ಕೊಬ್ಬು ; ನೆಣ : ಕೂಡೆ ವಿರೋಧಿಯಂ ತಱಿದು ತದ್ವಶ [ಪಾಶಾಂ. ದ್ರಸ]ಮಾಂಸದ ಭೂತಭೋಜನಂ ಮಾಡದೆ . . . ಸಂಧಿಮಾಡುವನೆ ಪಾಂಡವರೊಳ್ ಫಣಿರಾಜಕೇತನಂ (ಗದಾಯು. ೫-೪೯). 'ಬಸೆ₂' ಪರಾ. [ಸಂ. ವಶಾ]

ವಶ₂ (ಗು). ೧. ಅಧೀನವಾದ ; ಹತೋಟಿಗೆ ಒಳಪಟ್ಟ. ೨. ನಿಗ್ರಹಗೊಳಿಸಿದ ; ಅಂಕೆಗೆ ಒಳಪಡಿಸಿದ. ೩. ಆಕರ್ಷಣೆಗೆ ಸಿಲುಕಿದ ; ಮರುಳಾದ. (ನಾ). ೪. ಆಸೆ ; ಇಚ್ಛೆ ; ಬಯಕೆ. ೫. ಅಧೀನ ; ಅಂಕೆ ; ಹತೋಟಿ : ಆ ಗಜಂ ವಶಕ್ಕೆ ಕುಂಭಕ್ಕೊಳಗಾಗಿ ಕಟ್ಟುವಟ್ಟು ತನ್ನಂ ನೆನೆಯಲೊಡಂ (ಪಂಚತಂ. ಅ. ೨೧೮-೧೫); ನೀ ಹುಟ್ಟಿಸಿದಲ್ಲಿ ಹುಟ್ಟದೆ ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ ನೀವಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ (ಬಸವ. ೫೭). ೬. ಒಡೆತನ ; ಅಧಿಕಾರ. ೭. ಹುಟ್ಟು ; ಜನ್ಮ. ೮. ವೇಶ್ಯಾಗೃಹ. ೯. [ತತ್ತ್ವಶಾ] ಮನಸ್ಸಿನ ಹದಿನಾರು ವಿಕಾರಗಳಲ್ಲಿ ಒಂದು : ಇತರೇಯೋಪನಿಷತ್ತಿನಲ್ಲಿ ಸಂಜ್ಞಾನ (ಚೇತನಭಾವ), ಅಜ್ಞಾನ (ಈಶ್ವರಭಾವ) . . . ಕಾಮ, ವಶ ಈ ಹದಿನಾರು ಮನಸ್ಸಿನ ವಿಕಾರಗಳೆಂದಿಯವವು (ಅಮೃತ. ೬-೨೬ ಟೀಕೆ).

ವಶಂಮಾಡು, ವಶಮಾಡು = ೧. ಸ್ವಾಧೀನಕ್ಕೆ ತಂದುಕೊಳ್ಳು ; ಅಧೀನಗೊಳಿಸು : ವಿವಿಧಾಲಂಕಾರದಿಂ ರಂಜಿಸ ತಮಗೆ ವಶಂಮಾಡಿ ಶಬ್ದಂಗಳಂ ತಮ್ಮ ವಚಸ್ಸಂಪತ್ತಿ ಕರ್ಣಾಮೃತಮೆನೆ ರಸಭಾವಂಗಳಂ ತೋಱೆ (ಮಲ್ಲಿಪು. ೧-೨೩); ಮೃತ್ಯು . . . ಮೂರ್ತಿತ್ರಯಂಗಳ ತನಗೆ ನೆಱೆ ವಶಮಾಡಿಕೊಂಡಿಹಳು (ಕುವ್ಯಾಧ್ಯೋ. ೭-೩೫). ೨. ಸೆಳೆ ; ಆಕರ್ಷಿಸು ; ಮರುಳುಗೊಳಿಸು : ಎಲೆ ನೃಪಕುಲತಿಲಕ ಶ್ಯಾಮೆ ಸುಲೋಚನೆಯಂ ನಿನ್ನೀ ಚೆಲ್ವಿಂ ವಶಮಾಡುವೊಡೆ ಈ ಮಣಿಮುದ್ರಿಕೆ ನಿನಗಾಯ್ತು (ಜಯಕಾ. ೪-೭). ವಶವಾಗು = ಅಂಕೆಗೆ ಒಳಪಡು ; ಅಧೀನವಾಗು : ಮರ್ತ್ಯರಿಗೆ ತೊತ್ತಾಗಿ . . . ಕಾಲಂಗೆ ವಶವಾಗಿ ಮಾಡುವ ಭಕ್ತಿಗೆ ನಾಚರು ನೋಡಾ (ಆದಿಪು. ೧೧-೧೯). [ಸಂ.]

ವಶತಪ್ಪು (ಕ್ರಿ). ಸ್ವಾಧೀನತೆಯನ್ನು ಕಳೆದುಕೊಳ್ಳು ; ಎಚ್ಚರವಿಲ್ಲದಾಗು : ಎಲ್ಲವೂ ವ್ಯರ್ಥವಾಗಲು ಶಕ್ತಿಗುಂದಿ ವಶತಪ್ಪಿ ಬಿದ್ದಳು (ಬ್ರಹ್ಮಶಿ. ೫). [ವಶ₂ + ತಪ್ಪು₂]

ವಶತ್ವ (ನಾ). ಸ್ವಾಧೀನಪಡಿಸಿಕೊಳ್ಳುವಿಕೆ ; ವಶದಲ್ಲಿಟ್ಟುಕೊಳ್ಳುವಿಕೆ : ಆ ಪರಬ್ರಹ್ಮನಲಿ ತ್ರಿಜಗದ್ವ್ಯಾಪಕತ್ವ . . . ವಶತ್ವ ಈಶತ್ವಾದಿ ಗುಣಗಳಿಗೆ ಲೋಪವಿಲ್ಲ (ಹಸಾರ. ೧೬-೨೩). [ಸಂ.]

ವಶಪಡಿಸು. (ಕ್ರಿ). ಆಕರ್ಷಿಸು ; ಮರುಳುಗೊಳಿಸು : ಕಾಮಸೂತ್ರಗಳನ್ನು ರಚಿಸಿರುವ ವಾತ್ಸ್ಯಾಯನನು ಪರಸ್ತ್ರೀಯರನ್ನು ವಶಪಡಿಸಿಕೊಳ್ಳಲು ಅನೇಕ ಬಗೆಯಾದ ಉಪಾಯಗಳನ್ನು ಹೇಳಿದ್ದಾನೆ (ಭಾರತ. ೪೪೯). [ವಶಪಡು + – ಇಸು₃]

ವಶಪಡು (ಕ್ರಿ). ಅಧೀನಗೊಳ್ಳು ; ವಶವಾಗು : ಕಟ್ಟುನಿಟ್ಟಾದ ನಿಯಮಸಂಯಮಗಳು ಮನಸ್ಸನ್ನು ವಶಪಡುವಂತೆ ಮಾಡಿದ್ದವು (ರೂಢಿ). [ವಶ₂ + ಪಡು₂]

ವಶವರ್ತಿ (ನಾ). ೧. ಹಿಡಿತಕ್ಕೆ ಒಳಪಟ್ಟುದು ; ಸ್ವಾಧೀನ : ಲೋಕತ್ರಯಂ ತನಗೆ ವಶವರ್ತಿಯಾದುದಿನ್ನೇಕೆ ಧಾವತಿಯೆಂದು ಸುಖದಿಂದೆ ಪವಡಿಸಿದನೋ ಕಟ್ಟುವಿಲ್ಲಂ (ಕೈಮುಭಾ. ೩೦-೨೦); ಹಸಿವು ಕೊಂದಾ ಯೋಗಿ ವಸುಧೆಗೀಶ್ವರನಕ್ಕು ಪಶುಪತಿಯಕ್ಕು ಕೈಲಾಸವಾತಂಗೆ ವಶವರ್ತಿಯಕ್ಕು (ಸರ್ವಜ್ಞ. ೪೯೦). ೨. ಅಂಕೆಗೆ ಒಳಪಟ್ಟವನು ; ಅಧೀನ : ವಶವರ್ತಿ ಮಾಲ್ಕುಮಂಗಜವಿಶಿಖದಿನೀಕ್ಷಿಸಿದ ವಿಟರನವಯವದೊಳ್ . . . ಸಮುದಾಯಶೋಭೆಗಳ್ ರುಕ್ಮಿಣಿಯಾ (ಜಗವಿ. ೧೦-೧೮). [ಸಂ. ವಶವರ್ತಿನ್]

ವಶಿ₁ 'ಬಸೆ₂' ನೋ.

ವಶಿ₂ (ನಾ). ೧. ಅಧೀನನಾದವನು : ವೇಳೆಯುಮಾದುದು ವಶಿಯಹನಿನಿಯನು ಆದರು ಒಡವೆಯನಿಡಳು (ಗಾಥಾಸ. ೧೦-೩೯). ೨. ಇಂದ್ರಿಯವನ್ನು ನಿಗ್ರಹಿಸಿದವನು ; ಯತಿ : ಧನವ ಕೊಟ್ಟಡೆ ದಾನಿಯಾದ ತನುವ ಕೊಟ್ಟಡೆ ವೀರನಾದ ಮನವ ಕೊಟ್ಟಡೆ ವಶಿಯಾದ (ಚನ್ನವ. ಕ. ೫೩೦-೧೧೪೦). [ಸಂ. ವಶಿನ್]

ವಶ್ಯಿ (ನಾ). ನೇಗಿಲ ಗುಳವನ್ನು ಭದ್ರವಾಗಿ ಹಿಡಿಯುವ ಒಂದು ಸಾಧನ ; ಜಿಗುಳೆ : "ವಶಿ[ಪಾಶಾಂ. ಸಿ]ಯೆನಲು ಜಿಗುಟೆದೋಳಂ ಕೂಂಟೆ ಹರಿಕೆ ಕೋಟಿಶಮಕ್ಕುಂ" (ಮಂಗರಾ. ೧೦೯-೧). [?]

ವಶಿಕ (ಗು). ಬರಿದಾದ ; ಖಾಲಿಯಾದ. [ಸಂ.]

ವಶಿತ್ವ (ನಾ). ೧. ಅಂಕೆ ; ಹತೋಟಿ. ೨. ನಿಗ್ರಹ ; ದಮನ : ಪ್ರಕಟಿತದ ಪರಿವಿಡಿಯ ಕುಣಿಕೆಗಳಲಿ ವಶಿತ್ವದಲಿ ವೆಂಟಣಿಸಿ ರೇಚಕ ಪೂರಕದ ರಿಂಗಣವನಱಿವುದು ಯೋಗಸಿದ್ಧಿಗೆ ಲಕ್ಷಣವನು (ಕುವ್ಯಾಲಾ. ೪-೯). ೩. [ಯೋಗ] ಅಷ್ಟಸಿದ್ಧಿಗಳಲ್ಲಿ ಒಂದು ; ತನ್ನ ಇಚ್ಛೆಯಂತೆ ಇತರರನ್ನೂ ಇತರ ವಸ್ತುಗಳನ್ನೂ ಅಧೀನಗೊಳಿಸುವ ಅತಿಮಾನುಷ ಶಕ್ತಿ : ದಿಕ್ಪಾಲರೊಡಗೂಡಿದ ಜಗಮಂ ತನ್ನಧೀನಮಾಗಿ ನಡಸುವ ತನವೇ ವಶಿತ್ವಮೆಂದು ನಿಶ್ಚಿತಮಕ್ಕುಂ (ವಿವೇಕ. ೨೯೦). [ಸಂ.]

ವಶಿಷ್ಠ (ನಾ). ೧. ಸಪ್ತಋಷಿಗಳಲ್ಲಿ ಒಬ್ಬ ; ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಮಾನಸಪುತ್ರನೂ ಸೂರ್ಯವಂಶದ ಚಕ್ರವರ್ತಿಗಳ ಪುರೋಹಿತನೂ ಆಗಿದ್ದ ಪ್ರಸಿದ್ಧನಾದ ಋಷಿ. ೨. [ಜ್ಯೋತಿ] ಸಪ್ತರ್ಷಿಮಂಡಲದ ಏಳುನಕ್ಷತ್ರಗಳಲ್ಲಿ ಒಂದು : ಸಪ್ತರ್ಷಿಮಂಡಲ -- ಕೆಳಭಾಗದಲ್ಲಿ ಬಲಗಡೆಯಿಂದ ಎರಡನೆಯ ನಕ್ಷತ್ರವೇ ವಶಿಷ್ಠ (ಆಕಾಶ. ೬೦). 'ವಸಿಷ್ಠ' ಪರಾ. [ಸಂ.]

ವಶೀಕರಣ (ನಾ). ೧. (ಮಂತ್ರ, ತಂತ್ರಗಳಿಂದ ಮೋಡಿ ಮಾಡಿ ಇತರರನ್ನು) ಅಧೀನಮಾಡಿಕೊಳ್ಳುವಿಕೆ ; ವಶಪಡಿಸಿಕೊಳ್ಳುವಿಕೆ : ಮಾರಣ ವಶೀಕರಣ ದ್ವೇಷಣಾದಿಗಳ್ಗೆ ಪೆಱವುಮಿ ದೊರೆಯವರ್ಕೆ ಪಿರಿಯಮಾಗಮಂಗಳೆ ಪ್ರಮಾಣಂಗಳ್

(ಕಾದಂಬ. ೬೪೬); ಮಂತ್ರಸಿದ್ಧಿಯೊ ಮೇಣು ಶಾಬರಯಂತ್ರರಕ್ಷೆಯೊ ಮೇಣ್ ವರೌಷಧತಂತ್ರತಿಲಕವೊ ರಮಣರಿವರ್ಮೆವರ ವಶೀಕರಣ (ಕುವ್ಮಾಅ. ೧೫-೨೨). ೨. (ಮಂತ್ರ, ತಂತ್ರಗಳಿಂದ ಇತರರನ್ನು) ವಶಪಡಿಸಿಕೊಳ್ಳುವ ವಿದ್ಯೆ : ಇನ್ನೊಬ್ಬರಿಗೆ ಕೆಟ್ಟದು ಮಾಡುವುದಕ್ಕೆ, ಶತ್ರುಗಳ ಮೇಲೆ ಜಯ ಗಳಿಸುವುದಕ್ಕೆ ಅಭಿಚಾರಿಕಕರ್ಮಗಳೂ ಉಂಟು — ಮಾರಣ, ವಶೀಕರಣ, ಮೋಹನ, ಸ್ತಂಭನ ಉಚ್ಚಾಟನ ಇತ್ಯಾದಿ (ಭಾರದ. ೨೮). [ಸಂ.]

ವಶೀಕರಣಸಾಯಕ (ನಾ). (ಶತ್ರುಗಳನ್ನು) ವಶಗೊಳಿಸುವ ಅಸ್ತ್ರ : ವಶೀಕರಣಸಾಯಕದಿಂ ಭುವನತ್ರಯಂಗಳಂ ಸೋಲಿಪರಾರೊ ನೀಂ ಪುಗೆ ಯಮಾನನಮಂ ರತಿಜೀವಿತೇಶ್ವರಾ (ಮಲ್ಲಿಪು. ೧೪-೪೩). [ಸಂ.]

ವಶೀಕರಣೌಷಧ (ನಾ). ವಶಪಡಿಸಿಕೊಳ್ಳುವ ಔಷಧ ,—ಮದ್ದು : ಮನಸಿಜನಂಗನಾಜನ ವಶೀಕರಣೌಷಧಮಂಗಜನ್ಮನಂಬಿನ ಮದಶಕ್ತಿ ಮನ್ಮಥನ ಮೋಹನಯಂತ್ರಮಿದಪ್ಪುದು (ಅದಿಪು. ೪-೪೧). [ಸಂ.]

ವಶೀಕರಿಸು (ಕ್ರಿ). ವಶಪಡಿಸಿಕೊಳ್ಳು ; ಅಧೀನಗೊಳಿಸು : ಈ ಮೂವರತಿಬಳರು ಘೋರತರಸುತಪಪ್ರಭಾಮಿಸ್ತಾರಿಗಳಸಂಖ್ಯಾತಯುಗದಲಿ ವಾರಿಜೋದ್ಭವನನು ವಶೀಕರಿಸಿದರು ಭಕುತಿಯಲಿ (ಕುವ್ಮಾಕ. ೬-೨); ಆವರಿಗೆ ಹೇಗಾದರೂ ಚಂಚಲಿಸುತ್ತಿರುವ ಮನಸ್ಸನ್ನು ವಶೀಕರಿಸು (ಗುರುಚ. ೮೦). [ವಶೀಕರಣ + — ಇಸು]

ವಶೀಕಾರ (ನಾ). = ವಶೀಕರಣ. [ಸಂ.]

ವಶೀಕಾರಿಣಿ (ನಾ). ವಶೀಕರಣಶಕ್ತಿಯುಳ್ಳ ಒಂದು ಬಗೆಯ ವಿದ್ಯೆ : ಅಮಿತತೇಜನುಂ . . . ಉತ್ಸಾದಿನೀ ವಶೀಕಾರಿಣಿ[ಪಾಠಾ. ಕರಣಿ] ಅವೇಶಿನಿ . . . ಅಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಚಾವುಂಪು. ೧೯೫). [ಸಂ. ವಶೀಕಾರಿಣೀ]

ವಶೀಕೃತ (ಗು). ೧. ವಶಪಡಿಸಿಕೊಂಡ ; ಸ್ವಾಧೀನಕ್ಕೊಳಪಡಿಸಿದ : ವಶೀಕೃತವಧೂವರ್ಗನುಂ . . . ಆಗಿ . . . ಪಲಕಾಲಮರಸುಗೆಯುತುಮಿರೆ (ಚಂದ್ರಪು. ೪-೨೮ ವ) ; ನುತವಶೀಕೃತಭರ್ಗ ನಿತ್ಯಾಶ್ರಿತ ಮಹೇಶ್ವರಧರ್ಕ್ಷವರ್ಗ ಸಹಿತಘನಪ್ರತಿವೀರಮಾರ್ಗ ಬಹಿಷ್ಕೃತ ಸ್ವರ್ಗ (ಬಸಪು. ೩೬-೩೭). (ನಾ). ೨. ಸ್ವಾಧೀನ ; ವಶ : ನಿತಂಬಿನಿ ನಾನಾಪ್ರಕಾರದ ತತ್ಪುರಾಂಗಳಿಂ ಜೊತ್ತಿಸಿ ವಶೀಕೃತಂ ಮಾಡಿ(ಸುಬುಮಾ. ೬-೧೩ ವ). ೩. ವಶವಾದ ವ್ಯಕ್ತಿ ; ಅಧೀನನಾದವನು : ವಿಸ್ಮಯೋದಿತ ವಶೀಕೃತನಾದನುದಾರಮನ್ಮಥಂ (ಕಾವ್ಮಸಾ. ೫೩೫).

ವಶೀಲಾ 'ವಸೀಲು' ನೋ.

ವಶೀಲಿ 'ವಸೀಲು' ನೋ.

ವಶೀಲೆ 'ವಸೀಲು' ನೋ.

ವಶೆ (ನಾ). ೧. ಗೊಡ್ಡುಹೆಂಗಸು ; ಬಂಜೆ. ೨. ಬಂಜೆಯಾದ ಹಸು ; ಗೊಡ್ಡಾಕಳು : "ವಶೆಯೆನೆ ಬಂಜೆಯಕ್ಕು" (ಮಂಗರಾ. ೫೪-೪). ೩. ಹೆಂಗಸು ; ಸ್ತ್ರೀ. ೪. ಹೆಂಡತಿ ; ಪತ್ನಿ. ೫. ಆಕಳು ; ಹಸು. ೬. ಹೆಣ್ಣಾನೆ : ಮುನಿಯಂತೆ ಕರಿಯಂತೆ ಶಶಿಯಂತೆ ಭಟನಂತೆ ವನಕುಸುಮದಂತೆಯಿಶಾನ್ಮವೈಭವದಂತೆ ಘನತರವ್ರತವಶಾರೋಹಣೇಧೇನು ಸಂಸುರಭಿವೃಷಯುಕ್ತಮಾಗಿ . . . ವ್ರಜಮೆಸೆದುದು (ಚಿಬಪು. ೧೧-೧೪). ೫,೬ : ಮದಮಾತಂಗದ ವೋಲ್ ವಶಾವಿಳಸಿತಂ . . . ಶ್ರೀಮದ್ಧಯಾಮೂಲಧರ್ಮದ ವೊಲ್ ವಿಶ್ರುತಸುವ್ರತಾಚರಿತಮೇಂ ಬೆಲ್ಲಾಯ್ತೊ ಗವ್ಯಾಶ್ರಯಂ (ಲೀಲಾವ. ೫-೧೦೬). ೭. ಮಗಳು. ೮. ಗಂಡನ ತಂಗಿ. ೯. ಸೂಳೆ ; ವೇಶ್ಯೆ. [ಸಂ. ವಶಾ]

ವಶ್ಯ (ಗು). ೧. ಅಧೀನಗೊಳಿಸಬಹುದಾದ ; ಅಂಕೆಗೆ ಒಳಪಡಿಸಬಹುದಾದ. ೨. ಪಳಗಿಸಿದ ; ಹತೋಟಿಗೆ ತಂದ. ೩. ವಿನಯದಿಂದ ಕೂಡಿದ ; ನಮ್ರವಾದ. (ನಾ). ೪. ವಶಮಾಡಿಕೊಳ್ಳುವಿಕೆ ; ಅಧೀನಗೊಳಿಸುವಿಕೆ : ವಶ್ಯವ ಬಲ್ಲೆವೆಂದಂಬರಯ್ಯಾ ಬುದ್ಧಿಯನಱಿಯದ ಮನುಜರು ಕೇಳಿರಯ್ಯಾ (ಬಸವ. ೭೮). ೫. ವಶಪಡಿಸಿಕೊಳ್ಳುವ ವಸ್ತು ಮುಂತಾದುವು : ವಶ್ಯವಾವುದೆಂದಱಿಯದೆ ಮರುಳುಗೊಂಬಿರೆಲೆ ಗಾವಿಲಮನುಜರಿರಾ (ಬಸವ. ೭೮). ೬. ವಶೀಕರಣ ಶಕ್ತಿಯುಳ್ಳ ವಿದ್ಯೆ : ಯಂತ್ರ ಮಂತ್ರ ತಂತ್ರ ಸಿದ್ಧಿ ವಾದ ವಶ್ಯವ ಸಾಧಿಸುವ ಅಣ್ಣಗಳ ಕಣ್ಮನಕ್ಕೆ ಗಾಢಕತ್ತಲೆಗವಿಸಿ ಹೋಗಾದನು ನೋಡಾ ಪರಶಿವನು (ಅಖಂಡೇ. ೩೩-೨೦); ಅರಸುಮಕ್ಕಳು . . . ಪರಿಪರಿಯ ವಶ್ಯಗಳ ತಂತ್ರವ ಮೆರೆವ ತಿಲಕವು ಯಂತ್ರಮಂತ್ರವ ಜಪಿಸುತಿಹರಲ್ಲಿ . (ನಾಗಚ. ೬-೧೦೮). ೭. ಅಧೀನಕ್ಕೊಳಗಾದ ವ್ಯಕ್ತಿ ; ವಿಧೇಯಕವಾದ ವ್ಯಕ್ತಿ : ಗಂಡನ ಮೇಲೆ ಕೋಪ ಬಂದರೂ ಅದಕ್ಕೆ ಅವಕಾಶ ಕೊಡಲಾರದ ವಶ್ಯಳಾದ ಹೆಂಡತಿಯಂತೆ (ಮಹಾಸಾ. ೨೮). [ಸಂ.]

ವಶ್ಯತಿಲಕ (ನಾ). ಇತರರನ್ನು ತನ್ನೆಡೆಗೆ ಸೆಳೆಯುವ ಶಕ್ತಿಯುಳ್ಳ ತಿಲಕ : ತಿಗುರ ಗೆಲುವುದು ವಶ್ಯತಿಲಕಾದಿಗಳನಿಡುವುದು ಮೋಹನದ ಮದ್ದುಗಳ ಮಾಯೆಯ ಬೀಸುವುದು (ಕುವ್ಮಾಅ. ೧೩-೨). [ಸಂ.]

ವಶ್ಯದೀಪ (ನಾ). ವಶೀಕರಣ ಶಕ್ತಿಯುಳ್ಳ ದೀಪದ ಕುಡಿ : ಸಂಪೂರ್ಣವಾಗಿರುವ ಈ ನಿನ್ನ ದೇಹದ ಐಶ್ವರ್ಯವೆಂಬ ನಿಧಿಗೆ ವಶ್ಯದೀಪವನ್ನೆರಗಿಸಿಕೊಳ್ಳುವ ಆನ್ತರಿಕ ಮಹಿಮೆಯನ್ನು ಬಲ್ಲವನಿಂದ — ಅನುಭವಗೊಂಡು ಒದಮಿಕೊಳ್ಳಲೊಲ್ಲದೆ ನನ್ನನ್ನು ಹೀಗೆ ಹಾಳುಮಾಡುತ್ತಿರುವೆ ನೀನು (ಮಂತ್ರಶ. ೫೯-೯). [ಸಂ.]

ವಶ್ಯಮೂಳಿಕೆ (ನಾ). ವಶೀಕರಣ ಶಕ್ತಿಯುಳ್ಳ ಮೂಲಿಕೆ ,—ಬೇರು : ಚಿತ್ತೋದ್ಭವವಶ್ಯಮೂಳಿಕೆ ಜನೇಶೇಂದೂದಯಾದ್ರೀಂದ್ರಚೂಳಿಕೆಯಿಂದೆಂ ಪೊಗಟಲ್ಕೆ ಮತ್ತಱಿಯೆ ನಾನಾ ಲಕ್ಷ್ಮಣಾದೇವಿಯಂ (ಚಂದ್ರಪ್ರ. ೧೧-೧೧೧). [ಸಂ. ವಶ್ಯಮೂಲಿಕಾ]

ವಶ್ಯವಾಣಿ (ನಾ). ೧. ವಾಗ್ದೇವಿಯನ್ನು ವಶಪಡಿಸಿಕೊಂಡವನು : ಅವನೀಶ್ವರಚಕ್ರವರ್ತಿ ಹರ್ಷನರೇಂದ್ರಪ್ರವರಂ ಕುಡೆ ಪಡೆದಂ ವಶ್ಯವಾಣಿ ಕವಿಚಕ್ರವರ್ತಿವೆಸರಂ ಬಾಣಂ (ಪಂಚತಂ. ಅ. ೬-೧೬). ೨. ತನ್ನ ಮಾತಿನಿಂದ ಇತರರನ್ನು ವಶಪಡಿಸಿಕೊಳ್ಳುವವನು. [ಸಂ. ವಶ್ಯವಾಣೀ]

ವಶ್ಯಸುಪ್ತಿ (ನಾ). (ಮನೋರೋಗದಿಂದ ಬಳಲುತ್ತಿರುವ ರೋಗಿಗೆ) ಬಾಹ್ಯಪ್ರಚೋದನೆಯನ್ನುಂಟುಮಾಡಿ, ಕೃತಕವಾಗಿ ಬರಿಸುವ ಗಾಢನಿದ್ರೆಯಂಥ ಸ್ಥಿತಿ ; ಹಿಪ್ನೋಟಿಸಂ : ಬಾಹ್ಯಪ್ರಚೋದನೆಗೆ ಮಾತ್ರ ಗಮನಕೊಡುವ ಗಾಢನಿದ್ರೆಯಂಥ ಸ್ಥಿತಿ(ಯನ್ನು ಕೃತಕವಾಗಿ ಬರಿಸುವುದು); ವಶ್ಯಸುಪ್ತಿ (ಯನ್ನುಂಟುಮಾಡುವುದು) (Hypnotism. ಇಂಡಿಯ). [ಸಂ.]

ವಶ್ಯಾಂಜನ (ನಾ). ಮಂತ್ರಸಿದ್ಧರ ವಶೀಕರಣಶಕ್ತಿಯನ್ನು ಹೊಂದಿರುವ ಲೇಪನ, ಅಂಜನ, ಮುಲಾಮು ಮುಂತಾದುವು : ವನಿತಾವಶ್ಯಾಂಜನಕ್ಕೇಳಿದಿಕೆಯನಬಲೋನ್ಮಾದಚೂರ್ಣಕ್ಕಸತ್ಕೀರ್ತನಮಂ . . . ಉತ್ಪಾದಿಸುವುದು ನೃಪರೂಪಂ ಜನಾಶ್ಚರ್ಯರೂಪಂ(ಮಲ್ಲಿಪು. ೩-೩೧); ಚಿತ್ರಜೋದ್ಭವ ವಶ್ಯಾಂಜನಮಂಜರೀನಿಕರಮೋ (ಚಂದ್ರಪು. ೫-೫೬). [ಸಂ.]

ವಶ್ಯಾಕ್ಷರ (ನಾ). ವಶಪಡಿಸಿಕೊಳ್ಳುವ ಶಕ್ತಿಯುಳ್ಳ ಮಾತು ,—ನುಡಿ : ಇಂಪುವೆತ್ತ ನುಡಿಯಂ ವಶ್ಯಾಕ್ಷರಂ ಸುಯ್ಯೊಳುಣ್ಮಿದ ಕಂಪಂ ಮೃಗನಾಥ ಸೋಂಕಿನೊದವಂ ಮಂದಾನಿಳಂ ಕೊಟ್ಟನೊಲ್ಲದೆದೋರೊರ್ವರೊಳೊರ್ವರಂದು ಪಡೆದರ್ ಪಂಚೇಂದ್ರಿಯಪ್ರೀತಿಯಂ (ಮಲ್ಲಿಪು. ೬-೯೦). [ಸಂ.]

ವಷಟ್ಕಾರ (ನಾ). ೧. ಯಜ್ಞದಲ್ಲಿ ದೇವತೆಗಳನ್ನು ಉದ್ದೇಶಿಸಿ ಹವಿಸ್ಸನ್ನು ಅರ್ಪಿಸುವಾಗ ಹೇಳುವ ಮಂತ್ರಾಕ್ಷರ : ಚಾರುತರಯಜ್ಞವಿದ್ಯಾಹಾರಗರ ರವಂಗಳಿಂ ಸ್ವಧಾಕಾರ ವಷಟ್ಕಾರ ಸ್ವಾಹಾಕಾರೋಂಕಾರಧ್ವನಿ ನೆಗಟೆ ನೆಗಟ್ಟುದಾಹುತಿಧೂಮಂ (ಪಂಚಭಾ. ೬-೩೪). ೨. (ಆಲಂ) ಬಯ್ಗುಳು ; ಛೀಮಾರಿ :ಸ್ವಾಮಿ, ನಿನಗೆ ವಷಟ್ಕಾರ ಬೇಕಾಗಿದೆ ಅಂತ ಕಾಣುತ್ತೆ(ಸ್ವಾಮಿಸೂ. ೧೫೬). [ಸಂ.]

ವಷಟ್ಕೃತ (ನಾ). ದೇವತೆಗಳಿಗಾಗಿ ವಷಟ್ಕಾರವೆಂಬ ಮಂತ್ರೋಚ್ಚಾರಣೆಯೊಂದಿಗೆ ಅಗ್ನಿಗೆ ಅರ್ಪಿಸುವ ಹವಿಸ್ಸು ,—ಆಹುತಿ : "ಹುತಂ, ವಷಟ್ಕೃತಂ — ಈ ೨ ಬೇಳ್ವ ಹವಿ" (ಹಲಾಯು. ೬೯-೨೬೩). [ಸಂ.]

ವಷಟ್ಕೃತಿ (ನಾ). = ವಷಟ್ಕಾರ ೧: ವ್ಯಾಹೃತಿಯ ಶಿಕ್ಷಾಕ್ಷತದ ವಿಮಳಾಹುತಿ ಸ್ವಾಹಾವಷಟ್ಕೃತಿ ಸೋಹಿ ತಂದುದು ಸುರರ ಸುಹವಿರ್ಭಾಗಭೋಗಿಗಳ (ಕುವ್ಮಾಸ. ೭-೩೩). [ಸಂ.]

ವಷ್ಯಯಿಣಿ (ನಾ). ಬಹುಕಾಲದ ನಂತರ ಕರುಹಾಕಿದ ಹಸು : "ಕಡೆಗಂದಿ ವಷ್ಯಯಿಣಿ[ಪಾಠಾಂ. ಬಷ್ಯಯಣಿ]ಯಕ್ಕುಂ" (ಮಂಗರಾ. ೫೪-೪). [ಸಂ. ವಷ್ಯಯಿಣೀ]

ವಸ್ (ನಾ). ಅಧೀನವಾದುದು ; ಅಂಕೆಗೆ ಸಿಕ್ಕಿದುದು : ಬಸವರಾಜನ ಘನಚರಿತವಂ ಬಸವರಾಜನೆ ಬಲ್ಲನಲ್ಲದೆ ವಸ[ಪಾಠಾಂ. ಶ]ಮೆ ಯಾರಿಗೆ ಗಣಿದಿಸಲು (ಬಸಪು. ೬-೮). 'ಬಸ್' ಪರಾ. 'ಪರವಸ', 'ಬಿದಿವಸ' ಹೋ. [< ಸಂ. ವಶ]

ವಸ್ಸ (ನಾ). ಬಟ್ಟೆ ; ವಸ್ತ್ರ : 'ವಸಗ್ರಂಥಿ' ಪರಾ. [< ಸಂ. ವಾಸಸ್]

ವಸಂತ (ನಾ). ೧. ಆರುಋತುಗಳಲ್ಲಿ ಒಂದು ; ಚೈತ್ರ ಮತ್ತು ವೈಶಾಖಮಾಸಗಳಲ್ಲಿ (ಎಂದರೆ ಮಾರ್ಚಿ ತಿಂಗಳ ಮಧ್ಯದಿಂದ ಮೇ ತಿಂಗಳ ವರೆಗೆ) ಬರುವ ಋತು ; ಬಸಂತ : ಅಂತು ಭುವನಕ್ಕೆಲ್ಲಮೊಸಗೆವರ್ಪಂತೆ ಬಂದ ವಸಂತದೊಳೊಂದುದಿವಸಂ . . . ಬೇಂಟೆಯನೊರ್ವಂ ಬಂದು ಪೊಡವಟ್ಟು ಕಂಡಿಂತೆಂದಂ (ಪಂಪಭಾ. ೫-೬೫ ವ); ಶಶಿ ವಸಂತನ ಬಲುಹು ಮಾನ್ಯರನಿಱಿಯದೇ ತಂಗಾಳಿ ಧಾರ್ಮಿಕನೆ (ಕುಮ್ಮಾವಿ. ೨-೩೦). ೨. ಕಾಮದೇವನ ಸಹಚರನೆಂದು ಭಾವಿಸಲಾದ ವಸಂತಮಾಸದ ಅಧಿದೇವತೆ : ಸ್ಮರನಂ ಪೂಜಿಪ ರತಿಯಂ ಪಿರಿದರ್ಚಿಪ ಪರಕೆಯಂ ವಸಂತಂಗೆತ್ತುವ ನೆರೆದಿಂದುವನೊಲಿಸುವ ವಾರಿರುಹದಳಾಕ್ಷಿಯರ ಕಳಕಳಂ ಮನೆಮನೆಯೊಳ್ (ಜಗವಿ. ೨-೩೧). ೩. ಉತ್ಸವಕಾಲದಲ್ಲಿ ಪರಸ್ಪರ ಎರಚಾಡುವ, (ಅರಿಸಿನ, ಸುಣ್ಣ ಬೆರಸಿದ) ಬಣ್ಣದ ನೀರು ; ಓಕುಳಿ : ಚರಪು ಹಂಚಿಕೊಂಡು ವಸಂತ ಹುಯಿದುಕೊಂಡು ಸ್ನಾನಕ್ಕೆ ಹೊರಡುವುದು (ನಾಲ್ಕಾಕ. ೨) ; ಯುವತಿಯು ಎಡಗೈಯಲ್ಲಿ ವೀಳೆಯದೆಲೆ ಹಿಡಿದು ಬಲಗೈಯಲ್ಲಿ ಜೀರ್ಕೋಳವೆಯಲ್ಲಿ ವಸಂತದ ನೀರನ್ನು ತುಂಬಿ ಪ್ರಿಯನ ಆಗಮನವನ್ನು ನಿರೀಕ್ಷಿಸುತ್ತಿರುವಳು (ಹೊಯ್ಸಾಸಾ. ೨೮). 'ವಸಂತವಾಡು' ಪರಾ. ೪. ಆಮಶಂಕೆ ; ಅತಿಸಾರ. ೫. ಸಿಡುಬುರೋಗ. ೬. (ಆಲಂ) ಉಲ್ಲಾಸ ; ವಿಲಾಸ : ಎಸೆವ ವಸಂತಮಾಸದೆ ವಸಂತಮನಾಂತ ಕುಜಾತಪಲ್ಲವಪ್ರಸರದಿನಾ ವಸಂತಸಮಯಂ . . . ರಂಜಿಸುವಂತಿರಲ್ (ಕಾದಂಪು. ೭೧೯). 'ವಸಂತರಾಜ್ಯ' ಪರಾ. ೭. [ಸಂಗೀತ] ಒಂದು ರಾಗದ ಹೆಸರು : ನೀಲೋತ್ಪಳಿನಿ . . . ವಸಂತ . . . ವಸಂತಬಂಗಾಳ ಉಪಾಂಗಮೆಂಬ ಇಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು (ವಿವೇಕ. ೧೫೮) ; ವಸಂತ — ೧೭ನೇ ಮೇಳಕರ್ತ ಸೂರ್ಯಕಾಂತದಲ್ಲಿ ಜನ್ಯ . . . ಸಾಯಂಕಾಲದಲ್ಲಿ ಹಾಡಬೇಕಾದ ರಾಗ (ಸಂಗೀಚಂ. ೧೬೦). [ಸಂ.]

ವಸಂತಕ (ನಾ). = ವಸಂತ ೨ : ಯೋಗಿಗಂ ವಿಯೋಗಿಗಮರಿದಾಯ್ತು ಪೊಕ್ಕ ಪುಗಿಲಿಂತು ವಸಂತಕಚಕ್ರವರ್ತಿಯಾ (ಪಂಪಭಾ. ೫-೬೫) ; ಮನೆಯನಿವಕ್ಕೆ ಮರ್ಚಿಸಿದ ಮರ್ಚಿಸಿ ಕೂರಿಸಿದೆಯ್ದೆ ಕೂರ್ತು ನಟ್ಟಿನ ರುಚಿ ಬೆರ್ಚು ಬಿಚ್ಚತಿಕೆಯಂ ಬಗೆ ಕೂಡಿದ ಕೆಯ್ಗೆ ಮಾಡಿದೋಪನನುಱಿದೊತ್ತಿಗಿರ್ದೆಡೆಯೊಳೊಂದೆನಗಿತ್ತಪುದೋ ವಸಂತಕಂ ಮನಸಿಜಮಾರ್ಗಣಕ್ಕೆ ಗುಱಿಯೊಡ್ಡಿದನೆಂಬ ಮನಃಪ್ರವೃತ್ತಿಯಂ(ಶಾಂತಿಪು. ೮-೮೧). [ಸಂ.]

ವಸಂತಕಾಲ (ನಾ). = ವಸಂತ ೧ : ವಸಂತಕಾಲದಲ್ಲಿ ಒಂದುದಿನ ಮೂರುಸಂಜೆಯ ಮುಂದೆ ಗೋಪೀನಾಥಶಾಸ್ತ್ರಿಯು . . . ವರ್ತಮಾನಪತ್ರವನ್ನು ಓದುತ್ತಾ ಕುಳಿತಿದ್ದನು (ಮುಂಬಯಿ. ೪-೧೬೯). [ಸಂ.]

ವಸಂತಕುಸುಮ (ನಾ). ೧. ಪ್ರಮೇಹರೋಗ ನಿವಾರಣೆಯ ಶಕ್ತಿಯುಳ್ಳ ಒಂದು ಬಗೆಯ ಔಷಧೀಸಸ್ಯ. ೨. ವಸಂತಋತುವಿನ ಮೊದಲಲ್ಲಿ, ಮಾಸಲುಹಳದಿಬಣ್ಣದ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ : (ಮೃಚ್ಛಿಗಾ. ೬೪-೧೩೦೨). [ಸಂ.]

ವಸಂತಗೃಹ (ನಾ). ವಸಂತಕಾಲದಲ್ಲಿ, ಉದ್ಯಾನವನದಲ್ಲಿ ಕ್ರೀಡಿಸಲು ನಿರ್ಮಿಸಿದ ಮನೆ : ಕಂತುವೆ ವಜ್ರಾಯುಧಂಗೆ ಬೀಡಂ ಮಾಡಿಟ್ಟಂತೆ ಸೊಗಯಿಸಿದುದ್ಯಾನಾಂತರದೊಳ್ ಸಂತತಂ ವಸಂತಗೃಹಂಗಳ್ (ಶಾಂತಿಪು. ೮-೧೩). [ಸಂ.]

ವಸಂತಗೌರಿ (ನಾ). ಚೈತ್ರಮಾಸದಲ್ಲಿ ಮಾಡುವ ಗೌರಿಯ ಹಬ್ಬ : ಗೌರಿಗೆ ತೊಟ್ಟಿಲವಿರುವುದರಿಂದ . . . ಉಯ್ಯಾಲೆಗೌರಿ ಎಂದೂ ವಸಂತಕಾಲದಲ್ಲಿ ಬರುವುದರಿಂದ ವಸಂತಗೌರಿಯೆಂದೂ ಚೈತ್ರಗೌರಿಯ ಬೇರೆಬೇರೆ ಹೆಸರುಗಳು (ಭಾಹಬ್ಬ. ೬೨). [ಸಂ. ವಸಂತಗೌರೀ]

ವಸಂತಗೌಳ (ನಾ). [ಸಂಗೀತ] ಒಂದು ರಾಗದ ಹೆಸರು : ಸೌರಾಷ್ಟ್ರಗೌಳ . . . ವಸಂತಗೌಳ . . . ಮೋಹನಗೌಳವೆಂಬಷ್ಟಗೌಳಂಗಳೇ ಸಾಳಗದ ಮಿಶ್ರರಾಗಂಗಳು (ವಿವೇಕ. ೧೫೯). [ಸಂ. ವಸಂತಗೌಳ]

ವಸಂತತಿಲಕ (ನಾ). [ಛಂದ] ಒಂದು ವೃತ್ತದ ಹೆಸರು ; ಒಂದು ಪಾದದಲ್ಲಿ ಹದಿನಾಲ್ಕುಅಕ್ಷರಗಳನ್ನು ಹೊಂದಿರುವ ಶಕ್ವರೀಛಂದಸ್ಸಿನ ಒಂದು ಅಕ್ಷರಸಮವೃತ್ತ : ವ್ಯೋಮೇಂದು ಭಾನುಗಣಯುಗ್ಮದಿನತ್ತಲಕ್ಕುಂ . . . ನಾಮಂ ವಸಂತತಿಲಕಂ (ಛಂದೋಂಬು. ೨-೧೪೬) ; ೧೪ನೆಯ ಶಕ್ವರಿಯಲ್ಲಿ :- (೧) ಅಕ್ಕುಂ ವಸಂತತಿಲಕಂ ತಭಜಂಜಗಂಗಂ (ಕೈಪಿಡಿ. ೮೨). [ಸಂ.]

ವಸಂತದೂತ (ನಾ). ೧. ಕೋಗಿಲೆ. ೨. ಮಾವಿನ ಮರ. ೩. ಚೈತ್ರಮಾಸ. ೪. [ಸಂಗೀತ] ಒಂದು ರಾಗದ ಹೆಸರು. [ಸಂ.]

ವಸಂತದೂತಿ (ನಾ). ೧. ಒಂದು ಬಗೆಯ ಸಸ್ಯ ಮತ್ತು ಅದರ ಹೂವು ; ಇರವಂತಿಗೆ : ಇದಿರೊಳ್ ನನೆದೋಱೆ ವಸಂತದೂತಿಯೆನೆ ತಾನೆ ನೆಗಟ್ಟ ಮಾಧವಿಯೆನೆ ಸಂದದಿರ್ಮುತ್ತೆಯ ಪೂಗೊಂಚಲ ಪುದುವಿನೊಳೆಱಗಿದ ಮದಾಳಿಗಳ್ ಮಱೆದ ಪುವೇ (ಆದಿಪು. ೧೧-೧೦೮) ; ನನೆದೋಱೆತ್ತು ವಸಂತದೂತಿ (ಮಲ್ಲಿಪು. ೫-೬) ; ನಿನಗೆ ವಸಂತದೂತಿವೆಸರೊಪ್ಪುವುದೆಂತೆನೆ ಮುಂತೆ ಬಂದು ನೀನೆನಗೆ ವಸಂತನಾಗಮನಮಂ ನೆಱೆ ಸೂಚಿಸಿ ಕೊಟ್ಟೆಯೆಂದು ನಂದನವನಲಕ್ಷ್ಮಿ ಕೀರರವದಿಂ ಪೊಗೞ್ದಿತ್ತ ಪಸಾಯದಚ್ಚಮುತ್ತಿನ ಪೊಸಪಚ್ಚಮಂ ತಳೆದವೋಲದಿರ್ಮುತ್ತೆ ಮುಗುಳ್ತುದೆತ್ತಲುಂ (ಚಂದ್ರಪ್ರ. ೬-೪೧). ೨. ಹೆಣ್ಣುಕೋಗಿಲೆ. [ಸಂ. ವಸಂತದೂತೀ]

ವಸಂತದೂತಿಕೆ (ನಾ). = ವಸಂತದೂತಿ ೧ : "ಅದಿರ್ಮುತ್ತೆಯದಿರ್ಗಂತಿ ಮೆಂಥೆಯಮೆಂದು ಚೆಲ್ವನಾಂತು ಮಿನುಗುವ ವಸಂತದೂತಿಕೆಗೆ ಪೆಸರಕ್ಕು" (ಕಬ್ಬಿಕ್ಕೆ. ೧೭). [ಸಂ. ವಸಂತದೂತಿಕಾ]

ವಸಂತದ್ರುಮ (ನಾ). ವಸಂತಕಾಲದಲ್ಲಿ ಚಿಗುರುವ ಮರ ; ಮಾವಿನ ಮರ. [ಸಂ.]

ವಸಂತಪಂಚಮಿ (ನಾ). ಮಾಘಶುದ್ಧಪಂಚಮಿ ಮತ್ತು ಅಂದು ಆಚರಿಸುವ ಸರಸ್ವತೀಪೂಜೆ : ಮಾಘಶುದ್ಧ ೫ನೆಯ ದಿವಸ ವಸಂತಪಂಚಮಿಯ ಹಬ್ಬ . . . ಸರಸ್ವತೀಪೂಜೆ ಈ ದಿವಸ ನಡೆಯುವುದು (ಭಾಹಬ್ಬ. ೧೭೦). [ಸಂ. ವಸಂತಪಂಚಮೀ]

ವಸಂತಪೂರ್ಣಿಮ (ನಾ). ವಸಂತಋತುವಿನಲ್ಲಿ ಬರುವ ಹುಣ್ಣಿಮೆ : ಅಂದಿದೊ ವಸಂತಪೂರ್ಣಿಮಿಯ ಭೃಗುವಾರದಾ ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳುವಿಲ್ಲ (ಗೊಲ್ಕೊಥಾ. ೧೧-೨೬೧). [< ಸಂ. ವಸಂತಪೂರ್ಣಿಮಾ]

ವಸಂತಪ್ರಿಯ (ನಾ). ವಸಂತನ ಗೆಳೆಯ ; ಮನ್ಮಥ : ವಿಯೋಗಿಮಥನಕ್ಕೆಂದುಂ ವಸಂತಪ್ರಿಯಂ ಮುಳಿಸಿಂದಾರ್ದಲರಂಬುವೊಯ್ದು ತೆಗೆದಿರ್ಪಂ ಬಿಲ್ಲನುದ್ಯಾನದೊಳ್ (ಜಗವಿ. ೨-೧೬). [ಸಂ.]

ವಸಂತಬಂಗಾಳ (ನಾ). [ಸಂಗೀತ] ಒಂದು ರಾಗದ ಹೆಸರು : ನೀಲೋತ್ಪಳಿನಿ . . . ವಸಂತಬಂಗಾಳ ಉಪಾಂಗಮೆಂಬ ಇಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು (ವಿವೇಕ. ೧೫೮). [ಸಂ. ವಸಂತಬಂಗಾಲ]

ವಸಂತಭೈರವಿ (ನಾ). [ಸಂಗೀತ] ಒಂದು ರಾಗದ ಹೆಸರು : ವಸಂತಭೈರವಿ ಶಾಂತಮಲಹರಿ ನಾದರಾಮಶ್ರೀ ಎಂಬವೇ ರಾಮಕ್ರಿಯೆ ಮಿತ್ರರಾಗಂಗಳು (ವಿವೇಕ. ೧೫೯) ; ವಸಂತಭೈರವಿ ಗೌಳಮನಾ ವೀಣೆಯಲ್ಲಿ ಮುನಿ ಬಾಜಿಸಿದಂ (ವೀರವಿ. ೬-೮೯). [ಸಂ. ವಸಂತಭೈರವೀ]

ವಸಂತಮಂಟಪ (ನಾ). ಬೇಸಗೆಯ ದಿನಗಳಲ್ಲಿ ವಿಶ್ರಮಿಸಲೆಂದು ಉದ್ಯಾನವನಗಳಲ್ಲಿ, ಬೀದಿಯ ಬದಿಗಳಲ್ಲಿ ಹಾಗೂ ದೇವಾಲಯಗಳಲ್ಲಿ ರಚಿಸಿರುವ ಮಂಟಪ : (ಕಿ). [ವಸಂತ + ಮಂಟಪ]

ವಸಂತಮಂಡಪ (ನಾ). = ವಸಂತಮಂಟಪ : ದೇವಾಲಯದ ಹೊರಗಡೆ ಪೂರ್ವದಲ್ಲಿ ವಸಂತಮಂಡಪ, ಮಾಸ್ತಿಕಲ್, ೧೮ ಅಡಿ ಎತ್ತರದ ಚೆನ್ನಾಗಿ ಅಲಂಕರಿಸಿರುವ ದ್ವಾರ ಇವೆ (ಹೊಯ್ಸಾಸಾ. ೯೨). [ಸಂ.]

ವಸಂತಮಾಲಿಕೆ (ನಾ). [ಛಂದ] ಅರ್ಧಸಮವೃತ್ತಗಳಲ್ಲಿ ಒಂದು : ವಸಂತಮಾಲಿಕೆ :- ಇದರ ವಿಷಮಪಾದಗಳಲ್ಲಿ ಸಸಜಗಣಗಳೂ ಎರಡು ಗುರುಗಳೂ ಸಮಪಾದಗಳಲ್ಲಿ ಸಭರಯಗಣಗಳೂ ಬರುವುವು (ಕೃಷಿ. ೧೯). [ಸಂ. ವಸಂತಮಾಲಿಕಾ]

ವಸಂತಮಾಲು (ನಾ). ಬೇಸಗೆಯ ದಿನಗಳಲ್ಲಿ ವಿಶ್ರಮಿಸಿಕೊಳ್ಳುವುದಕ್ಕಾಗಿ ಕಟ್ಟಿರುವ ಭವನ : ಈ ಪರಿಯಯಿಂಪುಕಂಪಂ ಸೊಂಪುತಂಪಿನಿಂದಾ ಪರಿ ವಿರಾಜಿಪ ವಸಂತಮಾಲನು ಪೊಕ್ಕು ಭೂಪ ಬಾಣಾಖ್ಯನಾತ್ಮಜೆ ವೃಷಾದೇವಿ ಮಣಿಮಂಚಮುಮನೇರಲೊಡನೆ (ನವಮೋ. ೨೨-೪೫).

[ವಸಂತ + ಮಾಲ್ಯ (< ಮಹಾಲು)]

ವಸಂತಮಾಸ (ನಾ). ಚೈತ್ರಮಾಸ ; ಮಧುಮಾಸ : ಬಂದ ಮಾವಿನ ಪೊಸಪೂವಿನೊಳ್ ಪೊರೆದು ಪೊಣ್ಮಿದ [ಕ]ಂಪು ಮೊಗಂಗಳಂ ಚಳಿಲ್ಲೆನೆ ಕೊಳೆ ಪೊಯ್ಯೆ ತೀಡಿದುದು ತೆಂಕಣಗಾಳಿ ವಸಂತಮಾಸದೊಳ್ (ಪಂಪಭಾ. ೫-೩೪) ; ಎಸೆವ ವಸಂತಮಾಸದೆ ವಸಂತಮನಾಂತ ಕುಡಾತಪಲ್ಲವಪ್ರಸರದಿನಾ ವಸಂತಸಮಯಂ ರಂಜಿಸುವಂತಿರಲ್ (ಕಾದಂಪು. ೭೧೯).

[ಸಂ.]

ವಸಂತರಾಗ (ನಾ). [ಸಂಗೀತ] ಒಂದು ರಾಗದ ಹೆಸರು : ಸೌರಾಷ್ಟ್ರಿಗೌಳ ಫಳಮಂಜರಿ ಮೇಘರಂಜೀ . . . ತೋಡಿ ಮಕರಂದಿ ವಸಂತರಾಗಂ (ಹಮ್ಮೀರ. ೨-೯೦) ; ವಸಂತರಾಗವು . . . ಯಾವಾಗಲೂ ಹಾಡುವಂತಹುದು (ಚಕಾಪ್ರ. ೧೩೬). [ಸಂ.]

ವಸಂತರಾಜ್ಯ (ನಾ). (ಆಲಂ) ಸುಖ ಮತ್ತು ಸಂತೋಷದಿಂದ ಕೂಡಿದ ರಾಜ್ಯ : ಹರಿಯ ಬಿನ್ನಹವ ಲಾಲಿಸಿ ಕೃಪಾದೃಷ್ಟಿಯಿಂ ಕುರುರಾಜಗೆ ವಸಂತರಾಜ್ಯವಂ ಕೊಟ್ಟು ಶಂಕರನು ಸಕಲೋರ್ವಿಯಂ ಪಾಲಿಸುತ ರಜತಾಚಲದೊಳಗೆಸೆದಿರ್ದನು (ಭಗ್ನಾಚ. ೩-೫೫). [ಸಂ.]

ವಸಂತವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ವಸಂತವರಾಳಿ . . . ನಾಗವರಾಳಿ ಎಂಬವೇ ಸಪ್ತವರಾಳಿಗಳು (ಎವೇಕ. ೧೫೯). [ಸಂ. ವಸಂತವರಾಲೀ]

ವಸಂತವಾಡು (ಕ್ರಿ). ಬಣ್ಣದ ನೀರನ್ನು ಎರಚಾಡು ; ಓಕುಳಿಯಾಡು : ಸತಿ ಪುರುಷರಿಗೆ ನಾಗವಲ್ಲಿಯ ಶಾಸ್ತ್ರವಂ ಮಾಡಿ ವಸಂತವಾಡಿ . . . ಸಜ್ಜೆಗೃಹಕಂ ಕಳುಹಿಸಿ ಸಂತೋಷದಿಂದಿರಲು (ಯನಳ. ೫೬). [ವಸಂತ + ಆಡು]

ವಸಂತಸಖಿ (ನಾ). = ವಸಂತಪ್ರಿಯ : ಅನಂತರಮೊಡರ್ಚಿದ ವಸಂತಸುಖಿಸುಖಪರಮ ಕೋಟಿಯೆನಿಸಿದ ರತಾಂತಸುಖದೊಳಿನಿತಾನುಂ ಬೇಗಮಿರೆ (ಚಂದ್ರಪ್ರ. ೮-೬೯ ವ). [ಸಂ.]

ವಸಂತಸಮಯ (ನಾ). ವಸಂತಋತುವಿನ ಕಾಲ; ವಸಂತಮಾಸ : ಪರಿತಾಪಮನೆನಗೆ ನಿಶಾಕರನಾಗಿಸುಗುಂ ವಸಂತಸಮಯಾನುಗತಂ (ಕವಿಗಾ. ೩-೫೯) ; ಒಂದುದೆವಸಂ ವಸಂತಸಮಯದೊಳ್ ನಾಮಿರ್ವರುಂ ವನವಿಹಾರನಿಮಿತ್ತಂ ಪೋಗಿ (ಶಾಂತಿಪು. ೪-೧೪ ವ). [ಸಂ.]

ವಸಂತೋತ್ಸವ (ನಾ). ವಸಂತಋತುವಿನ ಆಗಮನವನ್ನು ಸೂಚಿಸಲು ಆಚರಿಸುವ ಹಬ್ಬ : ಕೇಳಿ ಕೀರಕೇಳಿ ಪಿಕಾಳಿಕೇಳಿ ಸಮ್ಮದಾಳಿಕುಳಾಂದೋಳಾ ರಾವಾವಿರ್ಭೂತವಸಂತೋತ್ಸವಂ ಪೊಂಪುಟಿಪೋಪುದುಂ (ಶಾಂತಿಪು. ೭-೧೫೩ ವ); ಆ ವಸಂತೋತ್ಸವಕೆ ಮಾಡಳೆ ನೇಂಪುರವನೊತ್ತೆಯನಿರಿಸಿ ತಾನೀ ವನಿತೆ ಗುರುಪೂಜೆಯಂ ಮಾಡಳೆ ದವನದಲ್ಲಿ (ಬಸಪು. ೪೨-೧೧). [ಸಂ.]

ವಸಗ್ರಂಥಿ (ನಾ). ಬಟ್ಟೆಯ ಗಂಟು : ಕರದಲ್ಲಿ ತದ್ವಸಗ್ರಂಥಿಯಂ ಪಿಡಿದು ಶಿವಹರಶಂಭು ಸಲಹು ನೀನೆಂಬ ರವದೊಳಗೆ ಮಠಕಿರದೆ ನಡೆತಂದು ಕೈಕೊಳ್ಳಿ ನಿಮ್ಮಮಳವಸ್ತ್ರಂಗಳಂ ಬೇಗನೆನಲು (ಕಿಂಶೇಷ. ೬-೨೦). [ವಸ್ತ್ರ + ಗ್ರಂಥಿ]

ವಸಡು (ನಾ). ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ ; ಒಸಡು : ಗಟ್ಟಿಯಾದ ಆಹಾರ ಪದಾರ್ಥಗಳನ್ನು ಕೊಟ್ಟರೆ, ಮಗುವು ಅದನ್ನು ಅಗಿದು ಅಗಿದು ಅದರ ವಸಡು ಬಲವಾಗುತ್ತದೆ (ಗೃಹವಿ. ೧೨೫). [< ಒಸಡು]

ವಸತಿ (ನಾ). ೧. ವಾಸಮಾಡುವಿಕೆ ; ನೆಲಸುವಿಕೆ ; ವಾಸ್ತವ್ಯ : ಅಶನಕೆ ನಡೆಯಿತು ವಾರಾನ್ನದೇರ್ಪಾಡು ವಸತಿಗೆ ಗೆಳೆಯರ ಬೀಡು (ಇಂಚಾಪ್ರ. ೨೭-೨೨). ೨. ವಾಸಮಾಡುವ ಸ್ಥಳ ; ಮನೆ ; ನಿವಾಸ : ಚೈತನ್ಯ ನಿದ್ರಿಸಿರುವೆಡೆಯೆಲ್ಲ ಜಡಲೋಕ ಕಲ್ಲು ಕಡ್ಡಿಕಸ ಅದಗರ್ಭ ಚೈತನ್ಯವೆಚ್ಚರಲು ಜಂತು ಜಗ ಜಡವೆ ಜೀವದ ವಸತಿ (ಮಂಜುಕ. ೧೦೮). ೩. (ಪ್ರವಾಸದ ಮಧ್ಯೆ) ತಂಗುವಿಕೆ ; ಇಳಿದುಕೊಳ್ಳುವಿಕೆ : ಈ ಹೊತ್ತು ಪ್ರಯಾಗಕ್ಷೇತ್ರದಲ್ಲಿ ಭಾಗೀರಥಿತಟಾಕದ ಮೇಲೆ ವಸತೀಮಾಡುತ್ತಾರೆ (ಮಂಜುಕ. ೨೦೧). ೪. (ಪ್ರವಾಸಿಗರು) ಇಳಿದುಕೊಳ್ಳಲು ತಕ್ಕುದಾಗಿರುವ ಸ್ಥಳಾವಕಾಶ, —ಸ್ಥಳಾನುಕೂಲ : ಆ ಚಾವಡಿಯಲ್ಲಿ ತಂಗಲು ವಸತಿ ಇದೆಯೋ ಎಂದು ಅಲ್ಲಿದ್ದವರನ್ನು ವಿಚಾರಿಸಿದೆವು (ಪ್ರತಾಪ. ೪೫). ೫. ಅನುಕೂಲ ; ಸೌಕರ್ಯ : ಚಿಕ್ಕದೇವರಾಜ ಒಡೆಯರವರು . . . ೧೨ ಸಾವಿರ ಮಗ್ಗದ ಜನಗಳನ್ನೂ ತಂದಿರಿಸಿ . . . ಇಲ್ಲಿ ಆದ ಜವಳಿ ಎಲ್ಲ ಸೀಮೆಗಳಿಗೂ ಹೋಗುವಂತೆಯೂ ಶ್ರೀರಂಗಪಟ್ಟಣದ ಅರಮನೆಗೂ ಬರುವಂತೆಯೂ ನಿಬಂಧನೆ ಮಾಡಿ ಪೇಟೆಯನ್ನು ವಸತಿಮಾಡಿಸಿದರು (ಮಹಾವಂ. ೧, ೧೧೦). ೬. ರಾತ್ರಿ ; ಇರುಳು : "ತಮಿ, ತಮಿಸ್ರಾ . . . ವಸತಿಃ, ವಾಸರೇಯಾ, ಶ್ಯಾಮಾ, ರಾತ್ರಿಃ — ಈ ೧೯ ಇರುಳಿನ ಪೆಸರ್" (ಹಲಾಯು. ೧೮-೧೦೮). ೭. ರೀತಿ ; ಬಗೆ : ಬಸುಱ ನಖದಲಿ ಸೀಳಿ . . . ಹೊಸ ರಣವ ಮಾಡಿದನು ಕಾಳಪ್ರಸರಕಾಗಲು ನೋಡಿ ದೇವನ ವಸತಿಗಂಜಿತು ಬ್ರಹ್ಮರುದ್ರಾದ್ಯಮರಗಣವೈದೆ (ಸಂಭವ. ೮-೧೧೭). ೮. ಜಿನಾಲಯ ; ಬಸದಿ : "ಜಿನಗೃಹದಲ್ಲಿಯುಂ ವಸತಿಯೆಂಬುದು" (ಹಲಾಯು. ೧೩೪-೨೧).

ವಸತಿಹೋಗು = ನೆಲಸಲು ಹೋಗು ; ಬಿಡಾರ ಮಾಡು : ಆ ಸಂಸಾರ ಬಯಲಿನ ಒಂದು ಕಡೆಯಿಂದ ಮತ್ತೊಂದು ಕಾಡಿಗೆ ವಸತಿಹೋಗುತ್ತಿದ್ದರು (ಮಲೆನಾ. ೨೦೪). [ಸಂ.]

ವಸತಿಗೃಹ (ನಾ). (ಪ್ರವಾಸಿಗರು) ತಂಗುವ ಸ್ಥಳ ; ಬಿಡಾರದ ಮನೆ : ನಮ್ಮ ಮನೆಗೆ ಅದೊಂದೇ ವಸತಿಗೃಹ (ಮಹಾಶ್ವ. ೮೫) ; ಸಾಧಾರಣವಾದ ವಸತಿಗೃಹವೊಂದರಲ್ಲಿ ಒಂದೆರಡು ಕೋಣೆಗಳನ್ನು ಬಾಡಿಗೆಗೆ ಗೊತ್ತುಮಾಡಿಕೊಂಡನು (ಪುನರು. ೩೦೯). [ಸಂ.]

ವಸತೆ (ನಾ). ಒಡೆತನ ; ಸ್ವಾಮ್ಯ (?) : ಇನ್ತೀ ಮಠಮುಮಂ ಕೆಯ್ಯುಮ ನಾವವಾಂತರ ವಸತೆ ನ್ಯಾಯಂಗಳು ಪುಟ್ಟಿದಡಂ ಸಾಸಿರ್ವರುಂ ಸ[ದ್]ಧರ್ಮದಿಂ ಪ್ರತಿಪಾಳಿಪರ್ (ಎಇ. XVIII, ೨೦೧-೪೫: 1162).

[IP ಇದು 'ವಸತಿ' ಎಂಬುದರ ಅಪಲಿಖಿತವಿರಬಹುದು]

ವಸಥ (ನಾ). = ವಸತಿ ೨ : "ಚಾವಡಿಯು ಮೇರೆಯಾಗರ ವಸದಂEಥಂ∃" (ಕವಿಕಂ. ೧೫೫) ; ವಸಥಕ್ಕೆಯ್ದು ಮಗನ ವದನಮನೀಕ್ಷಿಸಿಯೆರೆವರ್ಗಮರಮಹೀರುಹದಂತೊಸೆದಿತ್ತಂ ರಾಜಪ್ರಭರಾಜಂ (ಜಯಕಾ. ೨-೬೦). [ಸಂ.]

ವಸದಿ 'ಬಸದಿ' ನೋ.

ವಸನ (ನಾ). ೧. ವಾಸಿಸುವಿಕೆ ; ನೆಲಸುವಿಕೆ : 'ವಸಿಸು' ಪರಾ. ೨. ವಾಸಸ್ಥಳ ; ಮನೆ ; ನೆಲೆ. ೩. ಬಟ್ಟೆ ; ವಸ್ತ್ರ : ಬೆಳ್ದಿಂಗಳಂತಿರೆ ತೋಱುತ್ತೆಸೆವುತ್ತರೀಯವಸನಂ ರಾಜೇಂದ್ರಚಂದ್ರಾಂಕನಾ (ಕಾದಂಪು. ೨೮) ; ಮೈದೋರೆ ತಾರೆಗಳ್ ನಿಶೆಯ ವಸನದ ಕಾಂತಿಕುಸುಮಗಳ್ (ಚಿತ್ರಾಂಗ. ೨-೩೬). ೪. ಬಟ್ಟೆಯನ್ನು ಧರಿಸುವಿಕೆ. ೫. ನಡುಕಟ್ಟು ; ಡಾಬು. [ಸಂ.]

ವಸನಚ್ಛತ್ರ (ನಾ). ಬಟ್ಟೆಯಿಂದ ಮಾಡಿದ ಛತ್ರಿ : ಕಲತಕನ್ನಡಿ . . . ಜಲಧಿವಸನಚ್ಛತ್ರ ಉರ್ವೀಲಲನೆಯರನೀಕ್ಷಿಸುವುದವನಿಪತಿಲಕರುಷ್ಪವಡಿಸುವ ಸಮಯದೊಳು (ಕುಮಾಲಿ. ೩-೧೦೮). [ಸಂ.]

ವಸನಬಂಧಿಕೆ (ನಾ). ಬಟ್ಟೆಗಳನ್ನು ಹೊಲಿದು ಸೇರಿಸುವ ಸಾಧನ ; ಸೂಜಿ : "ಸೂಜಿ ಮತ್ತು ವಸನಬಂಧಿಕೆ [ಪಾಶಾ. ನಿ]ಯಕ್ಕು" (ಮಂಗರಾ. ೬೧-೧೯).

[ಸಂ. ವಸನಬಂಧಿಕಾ]

ವಸನವಿಹೀನ (ನಾ). ಬಟ್ಟೆಯಿಲ್ಲದವನು ; ದಿಗಂಬರ : ವಸನವಿಹೀನಂ ಕುಟಿಯೊಳಗೆ ಸರ್ವನಿಂ ಕುಟ್ಟುಪಟ್ಟವಂ ಚೋರವಿಭಾವಸುಗಳ ಭಯದಿಂದಾಕ್ರಂದಿಸುವಂ ಕಾನನದೊಳನಿಮಿಷಾಂತ್ಯತ್ರ್ಯಂಶಂ (ಜಾತಕ. ೧೯-೩೬). [ಸಂ.]

ವಸನಾಂಗ (ನಾ). [ಜೈನ] ಭೋಗಭೂಮಿಯ ನಿವಾಸಿಗಳಿಗೆ ಬಯಸಿದ ವಸ್ತ್ರಗಳನ್ನು ನೀಡುವ ಕಲ್ಪವೃಕ್ಷ : ಕುಡುಗುಂ ಚಿತ್ರಾವಳಿ ಪಟಿಯಡವಟ್ಟ ಸುವರ್ಣಚೇಲಮುಂ ತಿವಟಂ ಪೂವಡೆ ಕರ್ಪೂರಂ ನೆರೆವಂ ಮಣಲೆಡೆಯಂಟೆ

ರತ್ಯಂಗವಸನಮಂ ವಸನಾಂಗಂ(ಶಾಂತಿಪು. ೬-೧೧೧); ವಸನಾಂಗಾತೋದ್ಯಾಂಗಪ್ರಸವಾಂಗ . . . ವಿಭೂಷಣಾಂಗ ದಶಕಲ್ಪಕುಜಂ ಸೊಗಯಿಸುವುವು (ಚಂದ್ರಪ್ರ. ೩-೩೪). 'ದಶಾಂಗ' ಪರಾ. [ಸಂ.]

ವಸನಾಂಗಕುಜ (ನಾ). = ವಸನಾಂಗ : ಪಟಿ ಚಿತ್ರವಟಿ ಜೋಗಂ ಪಟಿಯಂ ದೇವಾಂಗಮೆಂಬ ವಸನಂಗಳನೇಂ ಘಟಿಯಿಸುವುವೊ . . . ವಸನಾಂಗಕುಜಂ (ಆದಿಪು. ೫-೩೪). [ಸಂ.]

ವಸನಾಂಚಲ (ನಾ). ಬಟ್ಟೆಯ ಕೊನೆ ; ವಸ್ತ್ರದ ಅಂಚು : ಝಳದ ಝೂಡಿಗೆ ಬೆವರಿ ವಸನಾಂಚಲದ ಗಾಳಿಗೆ ಮೊಗವನೆತ್ತಿದರು (ಕುಮಾರವ್ಯಾ. ೧೯-೧೮). [ಸಂ.]

ವಸನಾಶ್ರಯ (ನಾ). ಕೊಳೆಬಟ್ಟೆಯಲ್ಲಿ ಹುಟ್ಟಿಕೊಳ್ಳುವ ಒಂದು ಬಗೆಯ ಹೇನು ; ಕೂರೆ : "ವಸನಾಶ್ರಯಂ ಕೂಱೆಯಕ್ಕು" (ಮಂಗರಾ. ೪೯-೧೪). [ಸಂ.]

ವಸಲೆ (ನಾ). ಜಮೀನಿನ ತುಂಡು ; ಪಟ್ಟೆ ; ತಾಕು : ಶಂಕುವಿನ ಸಹಾಯದಿಂದ ಕಂಡುಹಿಡಿಯುವ ತ್ರಿಕೋಣ ಚತುಷ್ಕೋಣಗಳಿಗೆ "ವಸಲೆ"ಯೆಂದು ಹೇಳುವುದೂ ಉಂಟು. ವಸಲೆಯೆಂಬುದು "ತಾಕು"ಯೆಂದು ತಿಳಿವುದು (ಭೂಮಿಅ. ೩) ; ವಿಸ್ತಾರವಾದ ಒಂದು ಭೂಮಿಯಲ್ಲಿ ಲಾಂಬಿ ರುಂದಿ ಕಂಡುಹಿಡಿದು ಶಂಕು ಹತ್ತಿಸಿ ಸಣ್ಣಸಣ್ಣ ತ್ರಿಕೋಣ ಚೌಕೋಣಗಳಾಗಿ ವಿಂಗಡಿಸಲ್ಪಡುತ್ತದೆ. ಹಾಗೆ ವಿಂಗಡಿಸಲ್ಪಟ್ಟ ಒಂದು ಸಣ್ಣಸಣ್ಣ ತಾಕಿಗೂ ವಸಲೆಯೆಂಬ ಹೆಸರು (ಭೂಮಿಅ. ೧೩).

[<— ಅರ. ವಸಲೀ ; ಮರಾ. ವಸಲಾ]

ವಸವಂತ 'ಬಸಂತ' ನೋ.

ವಸವೂರ್ (ನಾ). ಒಂದು ಊರಿನ ಹೆಸರು : ಕಣ್ದು ನಾಟ್ಟೂಮಿಗರ್ಕಳುಂ ನಿನ್ದು ವಸವೂರ ಎಱೆದು ಕೊಟ್ಟೆಯಂ ಕೊಳ್ಳಲ್ಲಿ (ಎಕ. VIII, ಸೊರಬ. ೧-೪; 797?); ನಾಡಾಳ್ ಬಿಟ್ಟಿಗ ಎಱೆಗಗೊಳ್ಳಿನಾಡ ನಾಟ್ಟೂಮಿಗರ್ವ್ವಸವೂರುಳ್ಳಾ ನಾಡ ನಾಟ್ಟೂಮಿಗರ್ (ಎಕ. VIII, ಸೊರಬ. ೫೪೨-೨ ; ಸು. 800). [?]

ವಸಹಾತು 'ವಸಾಹತು' ನೋ.

ವಸಹಾವ್ಯಮಂತ್ರ (ನಾ). (?) : ವಸಹಾವ್ಯಮಂತ್ರಮಂ ಮೇಣಿಸೆವೋಂ ಹ್ರೀಂ ವಃ ಎನಿಪ್ಪ ಮಂತ್ರದಿನಭಿಮಂತ್ರಿಸಿ ಜಲಮಂ ಮೊಗದೊಳ್ ತಳೆಯೆ ಸಾಧ್ಯಮೆಂದಱಿಗೆ ತೆಱೆದೊಡಕ್ಷಿದ್ವಯಮಂ (ಲೋಕೋಪ. ೧೦-೧೦). "ವಾಯುಮಂತ್ರ" (ಲೋಕೋಪ. ೧೦-೧೦ ಟೀಕು). [? + ಮಂತ್ರ]

ವಸಾ (ನಾ). ಒಂದು ಅಳತೆಯ ಪ್ರಮಾಣ : ಹದಿನಾರು ಆಣೆ ಅಂದರೆ ೧ ವಿಶ್ವಾಸಿ, ೨೪ ವಿಶ್ವಾಸಿ ಅಂದರೆ ೧ ವಸಾ, ೨೪ ವಸಾ ಅಂದರೆ ೧ ಖಂಡಗ (ಮುಂಬಪ್ರಾ. ೧೩೧). [<— ಮರಾ. ವಸಾ]

ವಸಾರೆ$_1$ (ನಾ). ಹೊರಅಂಗಳ ; ಪಡಸಾಲೆ ; ಜಗಲಿ : ಹಿಂದಿನ ಕಾಲದಿಂದಲೂ . . . ಪಾಠಶಾಲೆಗಳಿದ್ದುವು. ಅವು ಅಲ್ಲಲ್ಲಿ ದೊರೆತ ಮಂಟಪ, ಛತ್ರ, ದೇವಾಲಯ ಪ್ರಾಕಾರ, ಸರ್ಕಾರದ ಖಾಲಿಕಟ್ಟಡದ ವಸಾರೆ ಇಂತಹ ಸ್ಥಳಗಳಲ್ಲಿ ನೆಲಸಿದ್ದುವು (ಮಹಾಮ. II, ೫೧) ; ವಸಾರೆಯಲ್ಲಿ ವ್ಯಾಸಪೀಠದ ಮುಂದೆ ಕುಳಿತಿದ್ದ ಸ್ವಾಮಿಗಳು ಅಮ್ಮನ ಹಾಡುಗಳನ್ನು ಕೇಳಿದರು (ಕಭವಿ. ೫೮೫). [<— ತೆಲು. ವಸಾರ, ವಸಾರಾ]

ವಸಾರೆ$_2$ (ನಾ). ಒಂದು ಬಗೆಯ ಔಷಧದ್ರವ್ಯ : "ಕಾಂಪಿಲ್ಯಃ, ಕರ್ಕಶಃ, ಚಂದ್ರಃ, ರಕ್ತಾಂಗಃ, ರೋಚನೀ — ೫ ಕಂಪಿಲ್ಲದ ಹೆಸರು, ರೋಚನೀಯೆಂಬುವ ಓಷಧಿ. ಇದನ್ನು ಘಟ್ಟದ ಕೆಳಗೆ ವಸಾರೆಯನ್ನುವರು" (ಸಿದ್ಧಾಂಶಿ. ೧೪೬). [<— ಮರಾ. ವಶಾಡೀ]

ವಸಾಹತ 'ವಸಾಹತು' ನೋ.

ವಸಾಹತು, ವಸಹಾತು, ವಸಾಹತ, ವಸಾಹತ್ತು (ನಾ). (ಬೇರೆ ಕಡೆಗೆ ಹೋಗಿ) ನೆಲಸುವ ಸ್ಥಳ ; ಪಾಳೆಯ ; ಬೀಡು : ವಾಡಿಕೆಯಂತೆ ವಸಾಹತಿನ ಸಂಸಾರಗಳು ಹಾಲುಸಕ್ಕರೆಯಾಗಿದ್ದುವು (ಸಾವಿಸ. ೪೪); ಪೋರ್ಚುಗೀಸರು ಇಂಡಿಯಾದಲ್ಲೇ ನೆಲೆಸಿ ಇಲ್ಲಿಯ ವಸಾಹತುಗಳನ್ನು ಸ್ಥಾಪಿಸಿಕೊಂಡು ಇರಬೇಕೆಂದು ಆಲ್ಬುಕರ್ಕನ ಆಸೆಯಾಗಿತ್ತು (ಪ್ರವಾಗ. II, ೨೫೯). ವಸಹಾತು : ಈ ತರದ ಹಗೆತನವು ಆಫ್ರಿಕಾ, ಫಿಜಿ ಮೊದಲಾದ ವಸಹಾತುಗಳಲ್ಲಿ ಮೈದೋರಿರುವುದು (ಏಚಾಮಂ. ೪೬). ವಸಾಹತ : ಈ ವಸಾಹತಗಳು ಕ್ರಮದಿಂದ ರಚಿಸಲ್ಪಟ್ಟಿರಲಿಲ್ಲ (ದಭಾಗ. ೨೪೩). ವಸಾಹತ್ತು : ವಸಾಹತ್ತುನಿಮಿತ್ತವಾಗಿ ಸಂಚರಿಸಿದ್ದ ಪಾಶ್ಚಾತ್ಯರು ಈ ದೇಶದ ವೇದ, ಮತ, ಧರ್ಮ, ಸಾಹಿತ್ಯ ಇತ್ಯಾದಿಗಳ ಬಗ್ಗೆ ಆಗಲೇ ಸಾಕಷ್ಟು ಅಭ್ಯಸಿಸಿದ್ದರು (ಪಾಶ್ಚಾವಿ. ೨೨೪). [<— ಅರ. ವುಸ್‌ಅತ್; ಹಿಂ. ವಸಅತ್; ಮರಾ. ವಸಾಹತ್, ವಸಾತ್, ವಸಾದ್]

ವಸಾಹತುಗಾರ (ನಾ). ಬೇರೆಕಡೆಗೆ ಹೋಗಿ ನೆಲೆನಿಲ್ಲುವವನು, — ಬೀಡು ಬಿಡುವವನು : ಆರ್ಯರು ಅಮೇರಿಕೆಯ ಯುರೋಪಿಯನ್ ವಸಾಹತುಗಾರರಂತೆ ಇಲ್ಲಿಯ ಮೊದಲಿನ ಜನಾಂಗವನ್ನು ಸಂಪೂರ್ಣವಾಗಿ ನಾಮಶೇಷ ಮಾಡಲಿಲ್ಲ (ಕರ್ಣಾಪು. ೭೯). [ವಸಾಹತು + — ಗಾರ (< — ಕಾಜ)]

ವಸಾಹತುಗಿರಿ (ನಾ). ಬೇರೆಕಡೆಗೆ ಹೋಗಿ ನೆಲೆಯೂರುವಿಕೆ ; ವಸಾಹತನ್ನು ಸ್ಥಾಪಿಸುವಿಕೆ : ಅನೇಕ ಪಾಶ್ಚಾತ್ಯರಾಷ್ಟ್ರಗಳು ತಾವಾಗಿ ವಸಾಹತುಗಿರಿಯ ನಾಶವನ್ನು ಮಾಡಿವೆ (ಏಶಿಸಂ. ೨೮). [ವಸಾಹತು + — ಗಿರಿ$_2$]

ವಸಾಹತುಷಾಹಿ (ನಾ). = ವಸಾಹತುಗಿರಿ : ಮಹಾಯುದ್ಧದ ನಂತರ ಏಷ್ಯಾಖಂಡದಲ್ಲೆಲ್ಲಾ ಕೋಲಾಹಲವುಂಟಾಗಿ ಪಾಶ್ಚಾತ್ಯರಾಷ್ಟ್ರಗಳು ತಾವಾಗಿಯೇ ವಸಾಹತುಷಾಹಿಗಳನ್ನು ಧ್ವಂಸಮಾಡಿದುವು (ರೂಫ). [<— ಮರಾ. ವಸಾಹತ್‌ಷಾಹೀ]

ವಸಾಹತ್ತು 'ವಸಾಹತು' ನೋ.

ವಸಿ$_1$ (ನಾ). ಸ್ವಲ್ಪ ; ತುಸು ; ಕೊಂಚ : ವಸಿ ಅಂಬಲಿ ಬಸಗಂಡರೆ ಹೊಟ್ಟೆ ತುಂಬತ್ತೆತ? (ಮುಸಿಗ. ೧೪೯) ; ನಿಂತಾವ ವಸಿ ಮಾತಾಡೋದ್ಕೆತೆ (ಚಂದಕೋ. ೪೫).

[< ಒಪ್ಪಟ್ಟಿ]

ವಸಿ$_2$ (ನಾ). ಮಂತ್ರ (?) : ಜ್ಞಾನಾರೂಢನಾದಲ್ಲಿ ಮಾನವರನಾಶ್ರಯಿಸಲಾಗದು . . . ಪೂಜೆಗೆ ಸಿದ್ಧಿ ಬಾರಿಸಲಾಗದು ಸಾಧಕ ವಸಿ ಹೇಳಿ ಸಾವಂತೆ ಮಾಡಲಾಗದು (ಮೋಮಾ. ೧೭-೩೦೩). [<— ತಮಿ. ವಚಿ?]

ವಸಿಗೆ 'ಪಸುಗೆ' ನೋ.

ವಸಿಗೆಗೆಯಿ (ನಾ). ಹಂಚಿದ ಭೂಮಿ ; ಭಾಗ ಮಾಡಿದ ಭೂಮಿ : ಅನ್ತು ಮೂವತ್ತು ಮತ್ತರೊಳಗೆ ಬಮ್ಮಂಜಗೆ ವಸಿಗೆಗೆಯಿ ಮ X X X ಕ[ಮ್ಮೂ]ಱರಿಗೆ ಮಾನ್ಯದ X X X ಗೆ X X X ತಿಱುವರು (ಸೌಣಾ. XI-i, ೫೬-೫೧; 1050).

[ವಸಿಗೆ (< ಪಸುಗೆ) + ಕೆಯಿ (< ಕೆಯ್$_2$)]

ವಸಿಯಿಸು 'ವಸಿಸು' ನೋ.

ವಸಿರ (ನಾ). ೧. (ಕ್ಷಾರವಾದ ಕಾಳುಗಳನ್ನು ಬಿಡುವ) ಒಂದು ಬಗೆಯ ಸಸ್ಯ ; ಗಜಹಿಪ್ಪಲಿ : "ಕರಿಪಿಪ್ಪಲೀ . . . ವಸಿರಃ — ೫ ಗಜಪಿಪ್ಪಲೀ ಹೆಸರುಗಳು" (ಸಿದ್ಧಾಂಶಿ. ೧೩೪). ೨. ಸಮುದ್ರದ ಉಪ್ಪು ; ಕಡಲುಪ್ಪು. [ಸಂ.]

ವಸಿಷ್ಠ (ಗು). ೧. ಅಧಿಕ ಶ್ರೀಮಂತಿಕೆಯುಳ್ಳ. (ನಾ). ೨. ಸಪ್ತಋಷಿಗಳಲ್ಲಿ ಒಬ್ಬ ; ವಶಿಷ್ಠ : ವ್ಯಾಸ ಕಶ್ಯಪ ವಸಿಷ್ಠ . . . ನಾರದಪ್ರಮುಖರಪ್ಪ ದಿವ್ಯಮುನಿಪತಿಗಳುಮೇಕಾದಶರುದ್ರರುಂ . . . ಪಾಂಡುರಾಜನುಮಂ ಕೊಂತಿಯುಮಂ ಪರಸಿ (ಪಂಪಭಾ. ೧-೧೪೭ ವ) ; ಏನೆಂದಡಂ ಹರಿಶ್ಚಂದ್ರನೇ ಸತ್ಯಸಂಧಾನನೆಂದಾ ವಸಿಷ್ಠಂ ನುಡಿಯಲು (ಹಚಕಾ. ೨-೧೩) ; ಕುಲಜರೆಲ್ಲರೊಳಗ್ರಜನ್ಮನು ಋಷಿ ವಸಿಷ್ಠನಲಾ (ಬಸಪು. ೫೭-೭೨). ೩. ಪ್ರಜಾಪತಿಗಳಲ್ಲಿ ಒಬ್ಬ. [ಸಂ.]

ವಸಿಷ್ಠದರ್ಭೆ (ನಾ). ಒಂದು ಬಗೆಯ ಹುಲ್ಲು : "ಕುಶಂ, ಕುಥಃ, ದರ್ಭಃ, ಪವಿತ್ರಂ — ೪ ದರ್ಭೆಹುಲ್ಲಿನ ಹೆಸರುಗಳು, ವಿಶ್ವಾಮಿತ್ರದರ್ಭೆ, ಬ್ರಹ್ಮದರ್ಭೆ, ವಸಿಷ್ಠದರ್ಭೆ, ತೃಣದರ್ಭೆ" (ಸಿದ್ಧಾಂಶಿ. ೧೫೦). 'ಕೌಶಿಕದರ್ಭೆ' ಪರಾ. [ಸಂ. ವಸಿಷ್ಠದರ್ಭ]

ವಸಿಷ್ಠಸ್ಮೃತಿ (ನಾ). ಹತ್ತೊಂಬತ್ತು ಧರ್ಮಶಾಸ್ತ್ರಗಳಲ್ಲಿ ಹತ್ತೊಂಬತ್ತನೆಯದು ; ವಸಿಷ್ಠನಿಂದ ಉಕ್ತವಾದ ಧರ್ಮಶಾಸ್ತ್ರ : ಮನುಸ್ಮೃತಿ . . . ಗೌತಮಸ್ಮೃತಿ ಶಾತಾತಪಸ್ಮೃತಿ ವಸಿ[ಷ್ಠಾಂ. ಶಿ]ಷ್ಠಸ್ಮೃತಿಗಳೆಂಬಿವೇ ಆಯಾಯಾ ನಾಮಧೇಯಮುಳ್ಳವರಿಂದುಕ್ತಮಾದ ಹತ್ತೊಂಬತ್ತು ಧರ್ಮಶಾಸ್ತ್ರಂಗಳು (ಏವೇಕ. ೬).

[ಸಂ.]

ವಸಿಸು, ವಸಿಯಿಸು (ಕ್ರಿ). ೧. ನೆಲಸು ; ವಾಸಮಾಡು : ಬಸವನಂ ಕೀರ್ತಿಸುವರೆಡೆಯಲಿ ವಸಿಸಿದಾ ಪ್ರಾಣಿಗಳಿಗಾದಡೆಯೆಸೆಯದೇ ಶಿವಭಕ್ತಿ

(ಬಸವು. ೭-೨೪); ವಸಿಸಿಯಿರೆ ಹದಿನಾಱುಸಾವಿರವಿಷಮವತ್ಸರವಾಗೆ ಸುರರುಬ್ಬಸದಿ ಹರಿಯನು ಸಾರೆ ಕರುಣಾಕರನು ತಾನಱಿದ (ಸಂಭವ. ೫-೭೦). ೨. ಜೀವಿಸು ; ಬದುಕು : ಬಸವ ಬಸವೆಂದನಿಶ ಭಜಿಸುತೆ ವಸಿಸಿ ಮೆರೆದಾ ವೀರ ಮಡಿವಳ ಶರಣಾಶರಣಾರ್ಥಿ (ಮಡಿವ. ೬). ವಸಿಯಿಸು : ೧. ಪದ್ಮೆಯೆಂಬ ಕೊಳದೊಳ್ ವಸಿಯಿಸಿರ್ಪ ಶ್ರೀಯಾದೇವತೆ ಕಂಡು (ವಡ್ಡಾರಾ. ೧೦೭-೧೮); ಇದಱೊಳ್ ಮಧ್ಯಮಕೂಟದೊಳ್ ವಸಿಯಿಪೆಂ (ಆದಿಪು. ೧೩-೧೬). [ವಸನ + — ಇಸ್ಸು]

ವಸೀಲಿ 'ವಸೀಲು' ನೋ.

ವಸೀಲು, ವಶೀಲಾ, ವಶೀಲಿ, ವಶೀಲೆ, ವಸೀಲಿ (ನಾ). ೧. ಬೆಂಬಲ ; ಸಹಾಯ ; ನೆರವು : "ವಸೀಲು — ಸಹಾಯ" (ಜಾನಕೋ. ೪೪). ವಶೀಲಾ : ೨. (ವರ್ಚಸ್ಸುಳ್ಳ ವ್ಯಕ್ತಿಗಳ) ಪ್ರಭಾವ ; ಶಿಫಾರಸ್ಸು : ಸರಕಾರ ನೌಕರನನ್ನು ವಶೀಲಾ ಮಾಡುವದಾಗಿ ಇನಾಂ ಪಡೆಯೋಣ ೧ ಸಂವತ್ಸರ ಬರಿ ಬೈದು ಜುರ್ಮಾನೆ (ಗ್ರಾಮಾಕ. ೧೮೧). ವಶೀಲಿ : ೧. ಏನಾದರೊಂದು ಲೆಕ್ಕ ಬಂದಾಗ ನಾನು ನೇರವಾಗಿ ಅಂಕಗಣಿತದ ಬಳಿಗೆ ಹೋಗದೆ ಬೀಜಗಣಿತದ ವಶೀಲಿಯಿಂದಲೆ ಹಗುರಾಗಿ ಕೆಲಸ ಮಾಡಿಸಿಕೊಳ್ಳುತ್ತೇನೆ (ಗಾಳಿಪ. ೧೭೭) ; ಇದಕ್ಕಾಗಿ ಅವನು ಹುಡುಗರ ವಶೀಲಿ ಸಂಪಾದಿಸಿದ್ದ (ಫಲಸಂ. ೧೭). ೨. ಅವರು ಲಕ್ಷ್ಮಿಯ ವಶೀಲಿಯಿಂದ ಬಂದದ್ದರಿಂದ ಅನೇಕರ ಲಕ್ಷ್ಯ ಅವರ ಕಡೆಗೆ ಹೋಯಿತು (ಇತಿಶ್ರೀ. ೧೧೯) ; ಮಧ್ವರಾಯರ ವಶೀಲಿಯಿಂದ ಅಲ್ಲಲ್ಲಿ ಕೆಲಸಕ್ಕೆ ಹತ್ತಿದ್ದಾರೆ (ಅನ್ನ. ೪೬). ವಶೀಲೆ : ೧. ನಾವು ಲಾಚಾರಿಯಿಂದಾ ವಶೀಲೆ ಇಲ್ಲದೆ, ನಮ್ಮ ಕುಟುಂಬ ಮಕ್ಕಳನ್ನು ಆ ಸಿದ್ಧೇಶ್ವರನ ಬೆಟ್ಟದ ಬೆನ್ನಿನ ಆಶ್ರಯದಲ್ಲಿ ಮೂರು ವರ್ಷ ಮಡಗಿ (ರಾಚಂದ್ರ. ೨೪೬). ೨. ವಶೀಲೆ ಇಲ್ಲವೆ ಮುಂಗೈ ಜೋರಿಲ್ಲದೆ ನೌಕರಿ ದೊರೆಯದೆಂಬುದು ಖಂಡಿತವೇ (ಪೋಜೇವ. ೨); ಶೀಲಕೆ ಬೆಲೆ ಕೊಡು, ವಶೀಲೆ ನಿಲ್ಲಿಸು, ಗುಣಗೌರವ ಮಾಡು (ಸೂರ್ಯಪಾ. ೯೯-೯). ವಸೀಲೆ : ೧. ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ ಮತ್ತು ಅನ್ಯದೇಶೀಯವೆಂದು ಗುರುತಿಸಲಾಗದ ಶಬ್ದಗಳೆಂದರೆ — ಕಚೇರಿ ... ವಸೀಲಿ (ವಸೀಲಾ), ಕಿಮ್ಮತ್ತು (ಕೀಮತ್)(ಭಾಷಾಶಾ. ೧೬೬). ೨. ಕಲೆಕ್ಟರಸಾಹೇಬರ ವರೆಗೆ ವಸೀಲಿ ಒಯ್ದು ನಿನಗೆ ಕೆಲಸ ಕೊಡಿಸುವ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆ (ಅಂಯಾ. ೫೦) ; ನನ್ನ ತ್ಯಾಗ, ಸೇವೆ, ಜಾತಿ ಮತ್ತು ವಸೀಲಿಗಳೆಲ್ಲವೂ ಉಪಯೋಗವಾದರೆ ನಾನೇ ಮಂತ್ರಿಯಾಗಿಬಿಡುತ್ತೇನೆ (ಪನ್ನೊಂದ. ೧೬).

ವಶೀಲಿ ಹಚ್ಚು = ಪ್ರಭಾವ ಬೀರು ; ಶಿಫಾರಸುಮಾಡು : ಒಬ್ಬರು ಹಾಗೆ ಅತ್ತಿತ್ತ ಸುಳಿದಾಡಿ ಆ ಕ್ವಾರದವನ ಕಿವಿಯೊಳಗೆ ಮೆಲ್ಲನೆ ಏನೋ ನುಡಿಯುತ್ತಿದ್ದರು. ಸರಿ. ತಮ್ಮ ತಲೆಯನ್ನು ಶೀಘ್ರವಾಗಿ ಸ್ವೀಕರಿಸಬೇಕೆಂದು ವಶೀಲಿಹಚ್ಚುತ್ತಿರಬಹುದು (ಮುಂಗಾಪು. ೮೭).

[<— ಅರ. ಹಿಂ. ವಸೀಲಾ ; ಪಾರ. ವಸೀಲ , ವಸೀಲತ್; ಮರಾ. ವಶಿಲಾ]

ವಸೀಲುದಾರ (ನಾ). ಪ್ರಭಾವವುಳ್ಳವನು ; ವರ್ಚಸ್ಸುಳ್ಳವನು : (ಕಿ).

[<— ಮರಾ. ವಶಿಲೇದಾರ್]

ವಸು (ಗು). ೧. ಸಂಪತ್ತಿನಿಂದ ಕೂಡಿದ ; ಶ್ರೀಮಂತವಾದ. ೨. ಸಿಹಿಯಾದ ; ಸವಿಯಾದ. ೩. ಒಳ್ಳೆಯ. ೪. ಒಣಗಿರುವ ; ಶುಷ್ಕವಾದ. (ನಾ). ೫. ಐಶ್ವರ್ಯ ; ಸಂಪತ್ತು : ವಸುವಂ ಸನ್ಮಾರ್ಗದೊಳಾರ್ಜಿಸುವಂ ವರ್ಧಿಸುವಂ (ಪುಷ್ಪಪು. ೩-೯); ವಸುವನಸುವನೊಡಲನೊಡಮೆಯುಮನೆಲ್ಲಮುಮನೊಪ್ಪಿಸು (ರಾಮಾಶ್ವ. ೧೪೨-೨೫). ೬. ಬೆಲೆಯುಳ್ಳ ಮಣಿ ,—ರತ್ನ : ನಿರತಿಶಯವಸು[ಪಾಶಾ. ಸ್ತು] ವಸನಮಣಿಭರಣಂಗಳಿಂ ಪೂಜಿಸಿ (ರಾಚಕೇ. ೪-೧೦೨ ವ). ೭. ಚಿನ್ನ ; ಬಂಗಾರ : "ವಸು ರಜತಮಾಗಿರ್ಪ ಧನಮದಕುಪ್ಪ ತದನ್ನಂ ಕುಪ್ಪಮಕ್ಕು" (ಮಂಗರಾ. ೧೭-೧೬). ೮. ನೀರು. ೯. ವಸ್ತು ; ಪದಾರ್ಥ. ೧೦. ಒಂದು ಬಗೆಯ ಔಷಧೀಮೂಲಿಕೆ. ೧೧. ಸರೋವರ. ೧೨. ಒಂದು ಬಗೆಯ ಮರ ; ಕೊಕ್ಕರೆಮರ : "ವಸು ಚಿನ್ನಧಾರೆ" (ಮಂಗರಾ. ೪೦-೩೨). ೧೩. ದೇವತೆಗಳ ಒಂದು ವರ್ಗ : ಮೇಲೆ ವಿದ್ಯಾಧರ . . . ವಸು ಗಂಧರ್ವ ಭೂತಗಣ . . . ದಿಕ್ಪಾಲಕರಿ ನೆರೆದುದು ವಿಮಾನದಲಿ (ಕುಮಾಚ. ೧೨-೨೪); ದಿಕ್ಪಾಲಕರು ವಸುಗಳು . . . ಅವರಾದರು ಪೂಜಿಸಲಿದೇಕೀ ಮಹಾಗಣಪತಿಯ (ಗಣಾ. ೫ ೧೦). 'ಅಷ್ಟವಸು' ಪರಾ. ೧೪. ಕುಬೇರ : ಅಸಮಾಕ್ಷ ನತಪಕ್ಷ ಲಸದಮಳಹಸ್ತ ಧೃತವಸುವಿಶದ ಶಶಿಕಾಂತ ಸುಸಮಸರ್ವಾರಿಗ ಗರ್ವಿಸಿದಬಿಳದಾನವಪ್ರಸರಾಭ್ರನಿರಸನಶ್ವಸನಮರುದಶನಭೂಷ (ಚಿಟಿಪು. ೪೦-೧). ೧೫. ಶಿವ. ೧೬. ಅಗ್ನಿ : "ಸಪ್ತಾರ್ಚಿಃ . . . ವಸುಃ . . . ವಹ್ನಿಃ . . . ಹುತಾಶನಃ — ಈ ೪೦ ಕಿಚ್ಚನ ಪೆಸರ್" (ಹಲಾಯು. ೧೨-೬೨). ೧೭. ಕಡಿವಾಣ ; ಲಗಾಮು. ೧೮. ದನಕರುಗಳ ಕೊರಳಿಗೆ ಕಟ್ಟುವ ಹಗ್ಗ ; ಕಣ್ಣಿ. ೧೯. ಎತ್ತಿನ ಕೊರಳಿಗೆ ನೊಗವನ್ನು ಸೇರಿಸಿ ಕಟ್ಟುವ ಹಗ್ಗ ; ಜೊತ್ತಗೆ. ೨೦. ಬೆಳಕಿನ ಕಿರಣ ,— ರಶ್ಮಿ : "ಉಸ್ರಃ, ಧಾಮ, ವಸುಃ . . . ಗೋ — ಈ ೩೨ ರಶ್ಮಿಗಳ ಪೆಸರ್" (ಹಲಾಯು. ೮-೩೯). ೨೧. ಸೂರ್ಯ. ೨೨. ಬೆಳಕು; ಕಾಂತಿ. ೨೩. ಮುಖ್ಯವಾದುದು. ೨೪. ಬಟ್ಟೆ ; ವಸ್ತ್ರ. ೨೫. ಹಾಲು ; ಗುರಾಣಿ : ಶರಧಿಯಂತಬುಜಾಕ್ಷನಂತೆ ಕೇಸರಿಯಂತೆ ಸರಸಿರುಹದಂತೆ ವಸುಚಕ್ರಪಂಚಾಸ್ಯರಣದುರುರಸೋನ್ಮಗ್ನಾಳಿಯಿಂದೆ ಶೋಭಿತಮಾಗಿ ಪಡೆ ಪಡೆಸಿನಿಂ ನಡೆದುದು (ಚಿಟಿಪು. ೪೧-೫೫). "ರತ್ನ, ಢಾಲು" (ಚಿಟಿಪು. ಕೋಶ). ೨೬. ಕಾಮ ; ಅರಣ್ಯ. ೨೭. ಹತ್ತಿರ ; ಸಮೀಪ. ೨೮. ಗಾಳಿ. ೨೯. ಪರ್ವತ ; ಬೆಟ್ಟ. ೩೦. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : "ಕರಿ ನಾಗ ವಸುವೆಂಟು" (ಮಂಗರಾ. ೧೦೪-೮); ಜ್ವಾಲೆ ವಾಯು ದಿನೇಶ ಯುಗ್ಮ ಶಶಾಂಕ ಪಾವಕರೆಂಬವರ್ಬಿಲೆಯಂ ಬರೆ ವಿಶ್ರಮಂ ವಸುಸಂಖ್ಯೆಯೊಳ್ನಿಲೆ . . . ಮಲ್ಲಿಕಾಮಾಲೆಯೆಂಬುದು ನಿಶ್ಚಯಂ (ಧಂದೊಂಬಾ. ೨-೧೬೮) ; "ಗುಣಮೆಸಿನ ದೇವಭೇದಂ ಗಣನಾಂಶುಕ ರತ್ನ ಕಿರಣ ನಿಕಟಂ ಸುಸಮೀರಣ ಮುಖ್ಯಂ ಬೆಟ್ಟಂಗಳ್ ಎಣಿಸಲ್ಪನ್ನೊಂದು ನಾಮ ವಸು ಶಿಖಂಗಳ್" (ನಾನಾಕಂ. ೪೯); "ಅನಲ ಗುಣಾಂಶು ರತ್ನ ನಿಕಟಂ ವಸು ಖೇಟಕ ಮುಖ್ಯ ವಸ್ತು ಕಾನನ ಸುರಭೇದ ಸಂಖ್ಯ ವಸುವಕ್ಕುಂ" (ನಾನಾರ. ೧೮). [ಸಂ.]

ವಸುಂಧಪತಿ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಬಿಸೆಯ ಸತ್ತಿಕುಮಾರ ವಸುನ್ಧಪತಿತನಯ (ಎಕ XVI, ಪಾಪುಗ. ೧೨-೧ ; ಸು. 754). [ವಸುಂಧ + ಪತಿ]

ವಸುಂಧರೆ (ನಾ). ೧. ದ್ರವ್ಯವನ್ನು ಹೊಂದಿರುವವಳು ; ಭೂಮಿ : ಮಕುಟಬದ್ಧಾಧಿಶರಾಗಳ್ ವಸುಂಧರೆಯಂ ಪರ್ವಿರೆ ಮೈಯನಿಕ್ಕಿಯುಮುದಾತ್ತೋತ್ಸಾಹದಿಂ ರಾಜಮಂದಿರಮಂ ಪೊಕ್ಕನುದಾರಸಾರವಿಭವಂ (ಆದಿಪು. ೧೨-೧೫೯); ನಿಜಾಚ್ಛಾಲಕ್ಷ್ಮಿಯ ಮೇಲೆ ವಸುಂಧರಾಭಾರಮಂ ನಿಱಿಸಿ ಸುಖದಿನಿರೆ (ಮಲ್ಲಿಪು. ೩-೨೩ ವ). ೨. ರಾಜ್ಯ ; ದೇಶ. [ಸಂ. ವಸುಂಧರಾ]

ವಸುಕ (ನಾ). ೧. ಒಂದು ಬಗೆಯ ಮರ ; ಕೊಕ್ಕರೆಮರ. ೨. ಎಕ್ಕದ ಗಿಡ : "ಅರ್ಕಾಪ್ಯಃ ವಸುಕಃ . . . ಅರ್ಕಪರ್ಣಾ — ೭ ಎಕ್ಕಗಿಡ" (ಶಿಚ್ಚಾಂಶಿ. ೧೩೧). ೩. ಒಂದು ಬಗೆಯ ಉಪ್ಪು ; ಸಮುದ್ರದ ಉಪ್ಪು : "ವಸುಕಮುಪ್ಪು" (ಮಂಗರಾ. ೪೩-೪೧). [ಸಂ.]

ವಸುಕರ (ನಾ). (ಪ್ರಕಾಶಮಾನವಾದ) ಕಿರಣಗಳುಳ್ಳವನು ; ಸೂರ್ಯ : "ನಿಶಿವೈರಿ . . . ವಸುಕರಂ ಪೂಷ್ಣನೆನೆ ಸೂರ್ಯನಕ್ಕುಂ" (ಮಂಗರಾ. ೧೦-೨). [ಸಂ.]

ವಸುಕಾಂತಿ (ನಾ). ಒಂದು ಬಗೆಯ ಸಸ್ಯ; ಹೊನ್ನಗನ್ನೆ : "ವಸುಕಾಂತಿ [ಪಾಶಾ. ತೆ]ಯೆನೆ ಹೊನ್ನಗೊನ್ನೆ" (ಮಂಗರಾ. ೪೦-೩೩). [ಸಂ.]

ವಸುಗರ್ಭ (ನಾ). ಹಿರಣ್ಯಗರ್ಭ ; ಬ್ರಹ್ಮ : ಬಿಸಜಾಕ್ಷನೆಂತಂತೆ ಸರ್ವಮಂಗಳ ಹೃದಯ ವಸುಗರ್ಭನಂತೆ ಮೃದುಮಧುರವಾಣಿವದನನೆನಿಸಿ (ಸಪಕೋ. ೩-೨೦). [ಸಂ.]

ವಸುಜಾಲಕ (ನಾ). ಹಳದಿಹೂವುಗಳನ್ನು ಬಿಡುವ ಒಂದು ಬಗೆಯ ಔಷಧೀಸಸ್ಯ : "ವಸುಜಾಲಕಂ ಹೊಮ್ಮುಗುಳು" (ಮಂಗರಾ. ೪೨-೩೯). [ಸಂ.]

ವಸುಧಾಚಕ್ರ (ನಾ). ಭೂಮಂಡಲ ; ಭೂವಲಯ : ಚಕ್ರಂ ಪ್ರಸನ್ನದಶದಿಕ್ಚಕ್ರಂ ಮುಂದಾಗಿ ನಡೆಯೆ ನಭದೊಳ್ ರಥಚಕ್ರಾಕ್ರಮಣಕಳಿಪವಸುಧಾಚಕ್ರಂ ಪಡೆಗೆಳ್ಳೆಯಾಗಿ ನಡುಗೆ ಸುರರ್ಕಳ್ (ಶಾಂತಿಪು. ೩-೧೧೨) ; ವಸುಧಾಚಕ್ರಂ ಪದಾಕ್ರಾಂತಿಯೆಸದಿರೆ ಭುಜಾಕ್ರಾಂತಿಯಿಂ ದಿಗ್ಗಜಂಗಳ್ ದೆಸೆಯಿಂ ಪಿಮ್ಮೆಟ್ಟೆ . . . ಯುದ್ಧಂ ದಂತವಕ್ರಾಭ್ರತಜನಿತಮಗುರ್ವಾದುದು (ಜಾವಿ. ೯-೭೭). [ಸಂ.]

ವಸುಧಾಜನ (ನಾ). ಭೂಮಿಯ ಮೇಲೆ ವಾಸಿಸುವ ಜನ : ವಸುಧಾಜನಮನವರತಂ ಸ್ವಸಮೂಹಿತಸಕಲಹಿತಮನಿಸಗುವ ಜಿನನೊಳ್ ವಸುಧೈಕ ಬಾಂಧವಾಖ್ಯೆಯನಸಮೋತ್ಸವದಿಂದೆ ಕೀರ್ತಿಸಿತ್ತಭಿಮತವಂ (ವರ್ಧಪು ೧೪-೭೩); ವಸುಧಾಜನಮಚ್ಚರಿವಡೆ ವಸುಧಾರಾದಿ ಪ್ರಭೇದಪಂಚಾಶ್ಚರ್ಯಂ ವಸುಮಿತ್ರಾವನಿಪನೃಪಾವಸಥಾಂಗಣದೊಳ್ ವಿಚಿತ್ರಮಾದತ್ತಾಗಳ್ (ಶಾಂತೀಶ್ವ. ೧೭-೧೦).

[ಸಂ.]

ವಸುಧಾತಳ (ನಾ). ೧. ಭೂಮಿ ; ಭೂತಳ : ವಸುಧಾತಳದೊಳಗೆಲ್ಲಿಯು ಮಸದೃಶಮಾಗಿರ್ಪ ರೂಪಿನೊಳ್ನಿನೊಳಾತಂ ವಸುದೇವನಂದದಂತೆಂದೊಸೆದು ನೃಪಂ ನೋಡಿ ಕೂಡೆ ಸಾರಥಿ ಬಂದಂ (ಬಿಷಾ. ೫-೨೨). ೨. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : ವಸುಧಾತಳಂ . . . ಒಂದಱ ನಾಮಂ (ವ್ಯವಹಾ. ೯-೧).

[ಸಂ. ವಸುಧಾತಲ]

ವಸುಧಾಧಿಪತಿ (ನಾ). ಭೂಮಿಯ ಒಡೆಯ ; ದೊರೆ : ವಸುಧಾಧಿಪತಿಯ ಕಟಕದೊಳಿಸೆದೊಪ್ಪೆ ಸುವರ್ಣರಚನೆ ಕೇವಣದೊಳ್ ಸೇರಿಸಿದುದಱಿಂದೀಗಳ್ ರಂಜಿಸಿದ ಮಹಾರತ್ನಮೆನಿಸಿದಂ ಕವಿರತ್ನಂ (ಗದಾಯು. ೧-೪೧). [ಸಂ.]

ವಸುಧಾಮರ (ನಾ). ಭೂಮಿಯ ಮೇಲಿರುವ ದೇವತೆಯೆಂದು ಭಾವಿಸಲ್ಪಡುವವನು ; ಬ್ರಾಹ್ಮಣ : ಆ ವಸುಧಾಮರಾಗ್ರಣಿಗೆ ಕಾಶ್ಮಪಿಯಿಂಬೊಳು ದಾತ್ರಕೀರ್ತಿಲಕ್ಷ್ಮೀವಿಭವಾಭರಾಮೆ (ಸುಖಮಾ. ೨-೪) ; ರಘುರಾಮಂ ಪುರದೊಡೆಯನ ಪಿಲವಸುಧೆಗೆ ಕಲ್ಪಾರಾಮಮೆನೆ ಕೊಟ್ಟಪಂ ವಸುಧಾಮರ ನೀಂ ಪೋಗಿ ಬೇಡಿಕೊಳ್ ಕಸವರಮಂ (ಪಂರಾಮಾ. ೭-೧೩೬). [ಸಂ.]

ವಸುಧಾಯೋಗ (ನಾ). [ಜ್ಯೋತಿ] ಜಾತಕನಲ್ಲಿ ಕಂಡುಬರುವ ಭೂಮಿಯನ್ನು ಹೊಂದುವ ಯೋಗ,—ಅದೃಷ್ಟ : ಚಂದ್ರನಿಂದ ಮುಂದೆ ೩ ರಲ್ಲಿ ೬ರಲ್ಲಿ ೧೦ನೆಯ ರಾಶಿಯಲ್ಲಿ ಶುಭಗ್ರಹವಿರಲು ವಸುಧಾಯೋಗಂ, ಬಹುತರದ ಭೂಮಿಲಾಭಮಕ್ಕುಂ (ಆಯುಜ್ಞಾ. ೨೫-೫).

ವಸುಧಾರೆ (ನಾ). ೧. ವಸುಗಳಿಗೆ ಎರೆಯುವ ತುಪ್ಪದ ಧಾರೆ. ೨. ಹೋಮಕ್ಕೆ ತುಪ್ಪವನ್ನು ಎರೆಯುವ ಪಾತ್ರೆ. ೩. ಕುಬೇರನ ರಾಜಧಾನಿ. ೪. ಗಂಗಾನದಿ. ೫. [ಜೈನ] ಪಂಚಾಶ್ಚರ್ಯಗಳಲ್ಲಿ ಒಂದು ; ಚಿನ್ನದ ಮಳೆ ಸುರಿಯುವುದು ; ಸುವರ್ಣವೃಷ್ಟಿ : ವಸುಧಾರೆ ನಾಡೆಯುಂ ಕಣ್ಗಸದಳಮಾಯ್ತು (ಆದಿಪು. ೧೦-೨); ವಸುಧಾರೆ ಕಜೆಯೆ ಧರಣಿಗೆ ವಸುಮತಿವೆಸರಾಯ್ತು ರತ್ನವೃಷ್ಟಿಗಳಿಂ ಚಿತ್ರಿಸೆ ಚಿತ್ರಮಾದುದು (ಪಾರ್ಶ್ವಪು ೧೧-೭೪).

[ಸಂ. ವಸುಧಾರಾ]

ವಸುಧಾವಳಯ (ನಾ). = ವಸುಧಾಚಕ್ರ : ಭಾಮಿಸಿದ ಜನಪದಂ ವಸುಧಾವಳಯ ವಿಲೀನವಿಶದವಿಷಯವಿಶೇಷಂ (ಕವಿರಾ. ೧-೩೬). [ಸಂ. ವಸುಧಾವಲಯ]

ವಸುಧೆ (ನಾ). ೧. ಸಂಪತ್ತಿನಿಂದ ಕೂಡಿರುವಂಥದು ; ಭೂಮಿ : ವಸುಧೆಯನೇನಿವರ್ದಿರುಣಾಬ್ಧದಲಂಗಳೊಳಲ್ಪಿಯಿಂದಮರ್ಚಿಸಿದರೊ ಪೇಲ್ಪೆಂಬ ನೆಗಮುಣ್ಮುವ ಫಾದತಲಂಗಳೊಂದು ಕೆಂಪಸವಿನಂ (ಆದಿಪು ೭-೨೨) ; ವಸುಧಾಂಗನೆ ಮೇಲ್ಕೊಂಡಳೊ ಪೊಸಪಸುರ್ವಚ್ಚೆಯ ವಿಳಾಸದಿಂದೆಸೆವ ದುಕೂಲಸಿಚಯಮನೆನೆ ತನ್ನದಿಯೆಸೆದುದು (ಜಗವಿ. ೬-೯). ೨. ರಾಜ್ಯ ; ದೇಶ. ೩. ನೆಲ ; ಜಮೀನು. ೪. ಸ್ವರ್ಗ.

ವಸುಧೈಕಕುಟುಂಬಕ = ಜಗತ್ತನ್ನು ಒಂದೇ ಕುಟುಂಬವೆಂದು ಭಾವಿಸುವವನು ; ಒಂದು ಬಿರುದು : ಮುನಿಪಸಹಸ್ರಭೋಜನಕರಂ . . . ಕವಿವಾದಿ ವಾಗ್ಮಿ ಗಮಕಂ ವಸುಧೈಕಕುಟುಂಬಕಂ ಸಭಾಜನಸುಜನೈಕಭಾಜನಮುವಿಂ ಜಿನಚಂದ್ರಮುನೀಂದ್ರನುರ್ವಿಯೊಳ್ (ಶಾಂತಿಪು ೧-೨೬). ವಸುಧೈಕಕುಟುಂಬಕ = ವಸುಧೈಕಕುಟುಂಬಕ : ಪರಮತಪೋನಿಧಾನ ವಸುಧೈಕಕುಟುಂಬ[ಕ] (ಎಸ II. ೬೯-೫೪; ಸಾ. 1100). ವಸುಧೈಕಬಾಂಧವ = ಜಗತ್ತಿಗೆಲ್ಲಾ ಒಬ್ಬನೇ ಬಂಧುವಾದವನು ; ಒಂದು ಬಿರುದು : ವಸುಧೈಕಬಾಂಧವ ಶ್ರೀಕರಣದ ರೇಚಿಮಯ್ಯದಣ್ಣನಾಯಕರು ಶಾನ್ತಿನಾಥದೇವರ ಪ್ರತಿಷ್ಠೆಯಂ ಮಾಡಿ ಧಾರಾಪೂರ್ವ್ವಕಂ ಕೊಟ್ಟರು (ಎಸ II. ೬೦೦-೨; ಸಾ. 1200). ವಸುಧೈಕಮಲ್ಲ = ಜಗತ್ತಿಗೆಲ್ಲಾ ಒಬ್ಬನೇ ಆದ ಪರಾಕ್ರಮಿ ; ಒಂದು ಬಿರುದು : ತ್ರಿಭುವನಮಲ್ಲನೆನಿಸಿದ ವಿಕ್ರಮಾದಿತ್ಯದೇವನಾತನ ತಮ್ಮಂ ವಸುಧೈಕಮಲ್ಲ ನೆನಿಸಿದಯ್ಯಣದೇವಂ (ಸಾಶಾ. XX.೧೯-೨೫: 1015). [ಸಂ. ವಸುಧಾ]

ವಸುಧೇಶ (ನಾ). = ವಸುಧಾಧಿಪತಿ : ವಸುಧೇಶನೊತ್ತಿದಂಬುಪ್ರಸನ್ನಧಾರೆಗೆ ಮೃಗಾಕ್ಷಿ ವದನಮನಿರದೊಡ್ಡಿಸೆ ಧಾರೆ ಚಕುರದೊಳ್ ನಿಲೆ ಪೊಸತಲರ್ದ ಸನಾಳಕಮಳಮೆನಿಸಿದುದು ಮೊಗಂ (ಶಾಂತಿಪು ೮-೩೭) ; ಬಿಸಡಾರಿ ಹರಿಯೊಳಿರೆ ವೀಕ್ಷಿಸೆ ಕನಕಾದಿಗ್ರಹಂ ಮಹಿನಾಥಂ ಜೋಯಿಸಿಗಂ ವಿತ್ತಾಧೀಶಂ ವಸುಧೇಶಂ ನಾವಿದಂ ನರೇಶ್ವರನಕ್ಕುಂ (ಕಾತಕ. ೨೨-೫). [ಸಂ.]

ವಸುಭಟ (ನಾ). ಒಂದು ಬಗೆಯ ಗಿಡ : ರಸವುಂಟುಂಗಡಿಯಲ್ಲಿ ಕಿಸುವುಂಟು ಸಾಲೆಯಲಿ ವಸುಭಟನು ಎಂಬ ಗಿಡನುಂಟು ವಾದಿಗಳು ಹಸಿದರೇಕೆಂದ (ಸರ್ವಜ್ಞ. ೧೯೭೧). [< ಸಂ. ವಸುಭಟ್ಟ]

ವಸುಮಣಿ (ನಾ). ಹೊಳೆಯುವ ಮಣಿ,—ರತ್ನ : ವಸುಮಣಿಯಂ ತ್ವಿಜಸದಿಂದೆಸೆವ ಸುವಸ್ತ್ರಂಗಳಧಿಕಸೌಗಂಧ್ಯಂಗಳ ಪ್ರಸರದ ಪಸರಂ ವಿಕ್ರಯವಸರಂ ಮೆಱೆದಿರ್ಪವು (ನಷ್ಟಚಾ. ೨-೨೫). [ಸಂ.]

ವಸುಮತಿ (ನಾ). ೧. = ವಸುಧೆ ೧: ಹರಂ ತೊತ್ತುಗೊಂಡನೆಂಬ ಕೌತುಕದ ಪೆಸರು ವಸುಮತಿಯಿಂ ತೀವೆ (ಸಂಬಪು ೮-೧೯) ; ವಿಷಯಲಂಪಟರಕ್ಷಲೀಲಾವ್ಯಸನಕೋಸುಗ ವೊತ್ತೆಯಿಟ್ಟರು ವಸುಮತಿಯನು (ಅವ್ಯಾಖ್ಯಾ. ೧೭-೧೧). ೨. ದೇಶ. ೩. ಶ್ರೀಮಂತ ಹೆಂಗಸು. ೪. ಲೋಕದ ಜನ : ವಸರಿಸೆ ಜರಾಯುವಟಲಂ ಪಸುಗೂಸುಗಳೊಡಲೊಳವನಗಲ್ಕುವ ಮತಿಯಂ ವಸುಮತಿಗಱಿಪಿ ಮಹಾತ್ಮಂ ಪ್ರಸೇನ ಜನ್ಮಾಮಧೇಯಮಂ ಪ್ರಕಟಿಸಿದಂ (ಆದಿಪು ೬-೬೫) ; ಅವನೀಶ್ವರನಾಗಳ್ . . . ಮೆಱೆದಂ ತನಿವನ್ನವಿತ್ತು ವಸುಮತಿಗೆ ವಸ್ತ್ರಭೂಷಾವಳಿಯಂ (ಪಂರಾಮಾ. ೬-೧೦೬).

[ಸಂ. ವಸುಮತೀ]

ವಸುಮತೀಗೀರ್ವಾಣ (ನಾ). = ವಸುಧಾಮರ : ಚವುಷಷ್ಟಿಕಳಾನ್ವಿತ ವಸುಮತೀಗೀರ್ವಾಣರುಂ (ಕಾಆ. ೯೪-೬೫-೨೫: 1124). [ಸಂ.]

ವಸುಮತೀಪತಿ (ನಾ). = ವಸುಧಾಧಿಪತಿ : ವಸುಮತೀಪತಿ ಬಳಿಕಲತಿಸಂತಸದ ಲಾತ್ಮಜೆಗಪಿಲವಿಭವದಿ ಹೆಸರನಿಟ್ಟನು ಮಾಯೆಯೆಂಬ ನವೀನನಾಮವನು (ವ್ರಭುಲೀ ೬-೨೪). [ಸಂ.]

ವಸುಮದ (ನಾ). ಐಶ್ವರ್ಯದಿಂದುಂಟಾಗುವ ಗರ್ವ ಧನಮದ : ಮೃಗಗಣಮೆ ಸುಖಂ ಬಾಜ್ಞಂ ಸೊಗಯಿಸುವ ವನಾಂತರಾಳದೊಳ್ ಬಹುತ್ಯಣದೊಳ್ ಬಗೆದಳಿಪಿ ಸುಲಿದು ನೋಡದೆ ಮೊಗಮಂ ವಸುಮದವಿರಾಮಕಲುಷಾಯತರಾ (ಕವಿರಾ. ೬-೧೬೯).

ವಸುವಿಭೇದಕ (ನಾ). ಚಿನ್ನವನ್ನು ಎಳೆಎಳೆಯಾಗಿ ಸೀಳುವವನು : ಅಕ್ಕಸಾಲಿಗ ; ಚಿನಿವಾರ : ಮಸಗಿ ಮುಂದಣ ಬಡಗಿ ಕಮ್ಮಾರ ವಸುವಿಭೇದಕ ತಾಮ್ರಮರ್ದನ. . . ಎಸೆವ ಹರದರ ಕೇರಿಗಳಲುಬ್ಬಿಸಿದನುಬ್ಬಿಜಿದಬ್ಬರಿಸಿ ಕಪಿ ಹವ್ಯವಾಹನನ (ತೊರಾ. ೫-೬-೫೨). [ಸಂ.]

ವಸುವಿರಹಿತ (ನಾ). ೧. ಐಶ್ವರ್ಯವನ್ನು ತ್ಯಜಿಸಿದವನು,—ತೊರೆದವನು. ೨. ಕಿರಣರಹಿತನಾದವನು. ೧,೨ : ವಸುವಿರಹಿತನಂಬರವಂ ಬಸುಟೆಯ್ದಿದನಾತ್ಮ ಬಂಧುಚಕ್ರದೊಳಟಲರ್ವಿಸೆಯಸ್ತ್ರಸಮಯರವಿಯಿಂತೆ ಸಚಿವನಾ ನಗಮನಪರಶೋಭಾ ಪರಮಂ (ಪಾರ್ಶ್ವಪು ೪-೪೯). [ಸಂ.]

ವಸುವೀರ್ಯ (ನಾ). ಬಂಗಾರವನ್ನು ರೇತಸ್ಸಾಗಿ ಉಳ್ಳವನು ; ಅಗ್ನಿ : "ವಸುಸಿತೇತರಗತಿ . . . ವಸುವೀರ್ಯನಾಶುಶುಕ್ಷಣಿ ವಹ್ನಿ ಶಿಖಿ . . . ಶುಚಿ ವಿರೋಚನೆನಿಕ್ಕುಂ" (ಮಂಗರಾ. ೧೪-೬). [ಸಂ.]

ವಸುಪರ (ನಾ). ಧನಹಾನಿ ; ದ್ರವ್ಯನಾಶ : ಕೂರಲಿವೇಟ್ಪುದು ಸತಿಯರ್ ಕೂರಮೊಡವರಿಂದ ವಸುಹರಂ ವಸುಹರಮಿನ್ಮಾರ್ಕೈವಡುಲಿದ ಸಾಹಸ ಯಾರಳವೊ ವಿಹಿತವಾತ್ಮಮಂ ಕೇಳ್ದಜಿಯಾ (ಮದತಿ. ೧-೭೨). [ಸಂ.]

ವಸುಹೀನ (ನಾ). ಐಶ್ವರ್ಯವಿಲ್ಲದವನು ; ಬಡವ : ವಸುಹೀನಂ ದುಶ್ಶಿಕ್ಷಂ ವ್ಯಸನಯುತಂ ದೇಶಕಾಲಬಲರಹಿತಂ . . . ಅನ್ಯಾಯಿಯೆನಿಪ ನರನೊಳೆಂದುಂ ವಿಜಿಗೀಷುಗಳಪ್ಪ ಮಹೀಭುಜರೆಂದುಂ ಸಂಧಿಮಾಡರ್ (ಪಂಚತಂ. ೨೨೧-೧೧). [ಸಂ.]

ವಸೂಲ್ 'ವಸೂಲು' ನೋ.

ವಸೂಲ್‌ಬಾಕಿ 'ವಸೂಲುಬಾಕಿ' ನೋ.

ವಸೂಲಾತಿ (ನಾ). ತೆರಬೇಕಾದ ಹಣವನ್ನು ವಸೂಲುಮಾಡುವುದು : ಈ ಸೈನ್ಯವನ್ನು ರವಿನ್ಯೂವಸೂಲಾತಿಕೆಲಸದಲ್ಲಿ ಉಪಯೋಗಿಸಬಾರದು (ಜಾಮವಂ. ೨೬೬).

[<— ಮರಾ. ವಸೂಲಾತಿ]

ವಸೂಲಿ 'ವಸೂಲು' ನೋ.

ವಸೂಲು, ವಸೂಲ್, ವಸೂಲಿ, ವಸೂಲ್ಲು (ನಾ). ಕೊಟ್ಟ ಸಾಲದ ಹಣ, ವಸ್ತು ಅಥವಾ ತೆರಿಗೆ ಬಾಕಿ ಮುಂತಾದುವನ್ನು (ಒತ್ತಾಯದಿಂದ) ವಾಪಸ್ಸು ಪಡೆಯುವುದು : ಹೋದ ತಿಂಗಳು ನಿನಗೆ ಕೊಟ್ಟ ಸಾಲವೇ ವಸೂಲು ಆಗದೆ ನಿಂತಿದೆ (ರೂಫಿ). ವಸೂಲ್ : ನಿನಗೆ ಕೊಟ್ಟ ದುಡ್ಡು ಕೊನೆಗೂ ವಸೂಲ್ ಆಗಲೇ ಇಲ್ಲ (ರೂಫಿ). ವಸೂಲಿ : ವಸೂಲಿಯು ಮುಗಿದದ್ದೇ ಕಾಣುತ್ತಿರಲಿಲ್ಲ (ಹುಚ್ಚಸ. ೫); ಹೊಲದ ವಸೂಲಿಯ ಕೆಲಸವನ್ನು ತಂದೆ ಬದುಕಿ ಇರುವವರೆಗೆ ಅವರೇ ಮಾಡುತ್ತಿದ್ದರು (ಜನಕೇ. ೩೨). ವಸೂಲ್ಲು: ಸುತ್ತೂರುಮಠದ ವಡೆರ ಮೂಲಮತ್ತವಂನ್ನು ಅಪ್ಪಹರ್ಸಿಕೊಂಡಿರ್ಪುವಂತ್ಹಾದ್ದಂನ್ನು ವಿಚಾರಣೆ ಮಾಡಿ ತಂಮ್ಮ ವಡವೆ ತಾಳು ವಸೂಲ್ಲು ಮಾಡಿಕೊಳುವಲ್ಲು (ಮೈಶಾ. ೧೯೩೦, ೪೩-೧೬ ; 1812).

ವಸೂಲಾಗು, ವಸೂಲಿಯಾಗು = ಬರಬೇಕಾದ ಹಣ ಅಥವಾ ಪದಾರ್ಥಗಳು ವಾಪಸ್ಸು ಬರು : ಅವರಿಂದ ವಸೂಲಾದಂಥ ಹಣವನ್ನು ನಮಗೆ ಕೊಡಿ (ರಾಜೇಂದ್ರ. ೯) ; ಹಾಗೆ ಕೊಟ್ಟಾಗ ಮಾತ್ರ ಸಾಲ ವಸೂಲಿಯಾಗದೆ ಹೋಯಿತು (ಮುಂಗಾಮು. ೬೧). ವಸೂಲು ಮಾಡು, ವಸೂಲಿ ಮಾಡು, ವಸೂಲ್ಮಾಡು, = ಬರಬೇಕಾದ ತೆರಿಗೆಯ ಹಣವನ್ನು ಅಥವಾ ಇತರ ಪದಾರ್ಥಗಳನ್ನು ಹಿಂದಕ್ಕೆ ಪಡೆದುಕೊಳ್ಳು : ಇಲ್ಲಿಗೆ ಬರುವ ಸಾಮಾನುಗಳ ಮೇಲೆ ರಾಜನ ಕಡೆಯವರು ಸುಂಕ ವಸೂಲುಮಾಡುತ್ತಾರೆ (ಪ್ರವಾಗ. II, ೨೬೫); ವಿಶೇಷಸಂದರ್ಭಗಳಲ್ಲಿ ಮಾತ್ರ ಪ್ರಜೆಗಳಿಂದ ಹಣ ವಸೂಲಿಮಾಡುತ್ತಿದ್ದರು (ಗಲಿಪ್ರ. ೨೧) ; ನಮ್ಮೂರಿನಲ್ಲಿ ಚಂದಾಹಣವನ್ನು ವಸೂಲ್ಮಾಡಲು ನನ್ನನ್ನು ಬೇಡಿಕೊಂಡಿದ್ದಾರೆ (ರಾಯಕ. ೫೧).

[<— ಅರ. ವಸೂಲ್, ವುಸುಲ್; ಹಿಂ. ವಸೂಲ್, ವಸೂಲೀ; ಮರಾ. ವಸೂಲ್]

ವಸೂಲುಬಾಕಿ, ವಸೂಲ್‌ಬಾಕಿ (ನಾ). ೧. ಹಣ ಅಥವಾ ದವಸವನ್ನು ಸಲ್ಲಿಸಬೇಕಾದಲ್ಲಿ ಸಂದಾಯವಾಗದೆ ಉಳಿದ ಬಾಕಿ :(ಕಿ). ವಸೂಲ್‌ಬಾಕಿ : ೨. ಹಳೆಯ ಮತ್ತು ಹೊಸಪದ್ಧತಿಗಳಿಗನುಗುಣವಾಗಿ ಪ್ರತಿ ಹಿಡುವಳಿದಾರನಿಗಿರುವ ಸಮಗ್ರ ಹಿಡುವಳಿಯ ವಿವರಣೆಗಳನ್ನೊಳಗೊಂಡ ನಿರೂಪಣೆಯ ತಪ್ಪೆ : (ರೈಸಗೆ. II, ೫೬೫). [<— ಮರಾ. ವಸೂಲ್‌ಬಾಕೀ]

ವಸೂಲ್ಲು 'ವಸೂಲು' ನೋ.

ವಸೆ (ನಾ). ನೆಣ ; ಕೊಬ್ಬು : ವೃಕಸೂಕರಮೃಗವೃಷಜಂಬುಕವಸೆಯಂ ಪಂಚಪಲ್ಲವಪ್ರಯುತಂ ಕಾಸಿ (ಲೋಕೋಪ. ೬-೨೬) ; ಕರುಳಿನ ಕುಸುರಿಗಳ ತಲೆಮಿದುಳ ಮೆತ್ತಿಗೆ ವಸೆಯ ತೊರಳೆಯ ತೊಂಗಲಲಿ ರಂಜಿಸಿತು ರಣಭೂಮಿ (ಕುವ್ಯಾಕ. ೧೯-೨೦). [ಸಂ. ವಸಾ]

ವಸ್ತು1 (ನಾ). ೧. ವಸ್ತು ; ಪದಾರ್ಥ : ಅಲೌಕೀಕವಸ್ತವೊ ಅಮಂದನಂದಾನೊ ಮೂಲಾಧಾರನೊ ಸಕಲಗುಣಪರಿಪೂರ್ಣನೊ (ತೀರ್ಥಮ. ೨೩-೩); ವಸ್ತ ಮುಂದಿಟ್ಟರಲು ವಶಮಾಡಿಕೊಳ್ಳದೆ ಅಸ್ತಮಾನವಿಡಿದು ಬಳಲಿ ಸೊರಗಿದಂತೆ (ವಿಸಾಸು. ೪೭-೨). ೨. ಚಿನ್ನ, ಬೆಳ್ಳಿ ಮುಂತಾದುವುಗಳಿಂದಾದ ಒಡವೆ ,—ಆಭರಣ : ನಮ್ಮ ದೇಶದವರು ಚಿನ್ನದ ವಸ್ತಗಳನ್ನು ಮಾಡಿಸಿ ಇಟ್ಟುಕೊಳ್ಳುತ್ತಾರೆ (ಮುಂಬಯಿ. ೪-೧೦೨); ಈ ಬಟ್ಟೆ , ಈ ವಸ್ತ ಎಲ್ಲಾ ನಿನಗಂತೆ ಅವ್ವ! (ಎರಸೆ. ೭೦).

[< ಸಂ. ವಸ್ತು./ ಮರಾ. ವಸ್ತ್]

ವಸ್ತ2 (ನಾ). ೧. ವಾಸಿಸುವ ಸ್ಥಳ ; ನಿವಾಸ ; ಮನೆ. ೨. ಗಂಡುಆಡು ; ಮೇಕೆ. [ಸಂ.]

ವಸ್ತಕಾರ (ನಾ). ಚಿನ್ನ, ಬೆಳ್ಳಿಗಳಿಂದ ಮಾಡಿದ ಒಡವೆ ,—ಆಭರಣ : ಜಾತಿಯ ತೆರುಹು ೯ ವರಹ ಚಿನ ೫ ವರಹ . . . ಧರ್ಮ್ಮದ ಮಾಂತಣಿಗೆ ಚಿನ ೭ ವರಹ ವಸ್ತಕಾರ ೭೦ (ಎಕ. IV (R), ಎಳಂದೂ. ೨-೧೬ ; 17ನೆಯ ಶತ.). 'ವಸ್ತಗಾರ' ಪರಾ.

[< ವಸ್ತ1]

ವಸ್ತಗಾರಪೆಟ್ಟಿಗೆ (ನಾ). (ಮದುವೆಯ ಸಂದರ್ಭದಲ್ಲಿ ಗಂಡಿನವರು ಹೆಣ್ಣಿಗೆ ಕೊಡುವ) ಒಡವೆ ಮತ್ತು ಉಡುಗೆ ತೊಡುಗೆಗಳಿರುವ ಪೆಟ್ಟಿಗೆ : ವಸ್ತಗಾರಪೆಟ್ಟಿಗೆ ಬೂವ್ವದ ಪೆಟ್ಟಿಗೆ ಅಡ್ಡಪೆಟ್ಟಿಗೆ ಇವುಗಳನ್ನೂ ಬೀದಿಯಲ್ಲಿ ಮೆರವಣಿಗೆ ಮಾಡಿಸಿ ಹೆಣ್ಣಿನ ಮನೆಯಲ್ಲಿಟ್ಟರು (ಹುಚ್ಚಸ. ೧೦) ; ವಸ್ತಗಾರಪೆಟ್ಟಿಗೆ, ಬುವ್ವದ ಪೆಟ್ಟಿಗೆ, ಅಡ್ಡಪೆಟ್ಟಿಗೆ ಇವುಗಳ ಮೆರವಣಿಗೆ ಆಗುತ್ತದೆ. ಈ ಪೆಟ್ಟಿಗೆಯಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಕೊಡಬೇಕಾದ ಎಲ್ಲಾ ಉಡುಗೆರೆಗಳನ್ನೂ ಇಟ್ಟಿರುತ್ತಾರೆ (ಹಳ್ಳಿಬಾ. ೭೧). [ವಸ್ತ1 + < ಆಗಾರ + ಪೆಟ್ಟಿಗೆ]

ವಸ್ತಾದ (ನಾ). ೧. ವಿಶೇಷವಾಗಿ ಗಾಯನ, ನರ್ತನ ಅಥವಾ ವ್ಯಾಯಾಮವನ್ನು ಕಲಿಸುವ ಗುರು ,—ಶಿಕ್ಷಕ. ೨. ಪಳಗಿಸ ಬಲ್ಲವನು ; ತರಬೇತು ಕೊಡತಕ್ಕವನು : ಕೆಲವು ಜಾತಿಯ ಕುದುರೆಗಳನ್ನು ವಸ್ತಾದರು ಮಾತ್ರವೆ ಪಳಗಿಸಬಲ್ಲರಂತೆ (ಜ್ವಾಲಾಮಂ. ೩). ೩. ಪರಿಣತ ; ನಿಷ್ಣಾತ : ಈ ಯಂತ್ರವನ್ನು ವಸ್ತಾದ ರಂಗಯ್ಯನೊಬ್ಬ ಮಾತ್ರ ನಡೆಸಬಲ್ಲ (ಜ್ವಾಲಾಮಂ. ೩). ೪. ಸದೆಬಡಿಯುವವನು; ಬಗ್ಗುಬಡಿಯುವವನು. ೫. ಒಡೆಯ ; ಯಜಮಾನ : "ವಸ್ತಾದ – ಗುರು ; ಸದೆಬಡೆಯುವವ ; ಒಡೆಯ" (ಜಾನಕೀ. ೪೫). 'ಉಸ್ತಾದ' ಪರಾ. [<— ಮರಾ. ವಸ್ತಾದ್./ ತೆಲು. ವಸ್ತಾದು]

ವಸ್ತಾದಿ (ಗು). ೧. ನುರಿತ ; ಪಳಗಿದ : ಅವನ ಬಾಯಿಂದ – ಎಂಥ ವಸ್ತಾದಿ ಕಳ್ಳನಿವನು ಎಂಬ ಪ್ರಶಂಸೋದ್ಗಾರವು ಹೊರಟು ಹೋಯಿತು (ಕಳ್ಳಾ. ೧೨). (ನಾ). ೨. ಸಮರ್ಥವ್ಯಕ್ತಿ : ಅನ್ನಬೇಕು ರಾಧಾದೇವಿಗೆ ವಸ್ತಾದಿಯೆಂದು (ಸ್ಕೂಲಮಿ. ೧೬೮). ೩. ಕುಸ್ತಿ, ಕತ್ತಿವರಸೆ ಮುಂತಾದುವನ್ನು ಮಾಡುವವನು ; ಮಲ್ಲ : ಈಗ ವಸ್ತಾದಿ ಬಂದಿದ್ದಾನೆ, ತೋರಿಸಬಾರದೇ ಗಂಡಸುತನವನ್ನು? (ಮಾಧವ. I, ೨೪); ದ್ವಿತೀಯರು ಮಾತ್ರ ತಮ್ಮ ವಸ್ತಾದಿಗಳನ್ನು ಹುರಿದುಂಬಿಸುತ್ತಾರೆ (ಪ್ರವಾಗ. II, ೨೮೩). ೪. ಆಸಾಮಿ ; ವ್ಯಕ್ತಿ : ನಿಮ್ಮ ಕಾಯಿದೆಯನ್ನು ಮೀರಿದೆನೆಂದು ಪೋಲೀಸಠಾಣೆಯ ಹೊರಗಿನ ಕಟ್ಟೆಯನ್ನು ಕೊಟ್ಟರೂ ಅಲ್ಲಿ ಮಲಗುವೆ. ಒಳ್ಳೇ ವಸ್ತಾದಿ. ಪೋಲೀಸರು ನಗಹತ್ತಿದರು (ಜಯಂತ. ೩೪೧) ; ಇಪ್ಪತ್ತು ಜನ ನಂಬರುಗಳ ಪೈಕಿ ಒಂದು ಡಜನ್ ನಂಬರುಗಳು . . . ಹೆಬ್ಬೆಟ್ಟಿನ ವಸ್ತಾದಿಗಳು (ನಮ್ಮೆಳ್ಳಿ. ೩೦). [<— ಮರಾ. ವಸ್ತಾದೀ]

ವಸ್ತ್ರಿ1 (ನಾ). (ಭಾರಿಮಳೆ ಬಂದು ಗೋಡೆಗಳಲ್ಲಿ ನೀರಿಳಿದುದರಿಂದುಂಟಾಗುವ) ತೇವ ; ಒದ್ದೆ : (ಕಿ). [< ಬಸ್ರಿ1]

ವಸ್ತ್ರಿ2 'ಬಸದಿ' ನೋ.

ವಸ್ತ್ರಿ3 (ನಾ). ೧. ವಾಸಿಸುವಿಕೆ ; ನೆಲಸುವಿಕೆ. ೨. ವಾಸ್ತವ್ಯ; ಮೊಕ್ಕಾಮು : ವಸ್ತ್ರಿಗಾಱನು ವಸ್ತ್ರಿಗೆ ಬಂದ ಹೊತ್ತಾಱೆ ಎದ್ದು ಹೊಱಟು ಹೋದ (ಪುರಂದ. ೩-೯-೪); ನಾರ್ವೇಕರರು . . . ಆ ಜಿಲ್ಲೆಯಲ್ಲಿಯೇ ಇವರ ವಸ್ತ ಬಹಳ ಇರುತ್ತದೆ (ಕಭಾಗ. ೧೦೫). ೩. ಹೊಕ್ಕುಳಿನ ಕೆಳಭಾಗ ; ಕಿಬ್ಬೊಟ್ಟೆ : "ವಸ್ತ್ರಿಃ ನಾಭೇರಧಃ – ಹೊಕ್ಕುಳು ಕೆಳಗಣ ಕಿರಿಹೊಟ್ಟೆ , ಕಿಬ್ಬೊಟ್ಟೆ" (ಸಿದ್ಧಾಂತ. ೧೯೦). ೪. ಮಲವಿಸರ್ಜನೆಯನ್ನು ಮಾಡಿಸುವ ಕ್ರಿಯೆಯಲ್ಲಿ ಬಳಸುವ ಒಂದು ಸಲಕರಣೆ ; ಪಿಚಕಾರಿ : ದ್ರವವನ್ನಾಗಲಿ ಅನಿಲವನ್ನಾಗಲಿ ಮಲನಾಳದೊಳಕ್ಕೆ ನುಗ್ಗಿಸುವುದು ; ಇದಕ್ಕಾಗಿ ಉಪಯೋಗಿಸುವ ಸಲಕರಣೆ ; ಪಿಚಕಾರಿ : ವಸ್ತ್ರಿ (Enema-ಇಂಗ್ಲಿ). ೫. ಪಿಚಕಾರಿಯ ಸಹಾಯದಿಂದ ದ್ರವ ಅಥವಾ ಅನಿಲವನ್ನು ಮಲನಾಳದ ಒಳಹೋಗಿಸಿ ಮಲವಿಸರ್ಜನೆಯಾಗುವಂತೆ ಮಾಡುವುದು : ಅದಱೊಳಗೆ ಎಣ್ಣೆಯನೆಱೆದು ವಸ್ತ್ರಿಯ ಹಿಡಿವುದು (ಅಶ್ವಮೇ. ೧೬-೪); ಕಹಿಪಡವಲ, ಮಗ್ಗಾರೆಸೊಪ್ಪು . . . ಇವನಿಕ್ಕಿ ಅಟ್ಟು ತೈಲದಿಂದ ವಸ್ತ್ರಿಯಂ ಮಾಡಲೆಲ್ಲ ಜ್ವರ ದೋಷಂಗಳುಂ ಸಹ ಮಾಣ್ಗುಂ

(ಸಕವೈ. ೧೨೯). ೬. ಬಟ್ಟೆಯ ಅಂಚು : "ವರ್ತಿಃ, ವಸ್ತಿಃ, ದಶಾ, ಸಿಚಃ — ಈ ೪ ಸೀರೆಯ ಕರೆ" (ಹಲಾಯು. ೯೦-೩೯೭). ೭. [ಯೋಗ] ಬಾಯಿಯಿಂದ ಮೂರುಮೊಳ ಬಟ್ಟೆಯನ್ನು ನುಂಗಿ ಮಲನಾಳದಿಂದ ಹೊರತೆಗೆಯುವ ಒಂದು ಕ್ರಿಯೆ : ಕುಳಿತಡೆ ನಾಭಿಪ್ರಮಾಣಮಾಗುವ ಜಲದಲ್ಲಿ ಕುಳಿತು ಆಧಾರಕುಂಚನದಿಂದೆ ಉದರವ ಪೂರಿಸಿ ಬಿಡುವುದು ವಸ್ತಿ ಎನಿಸೂದು (ಶಿವಪ್ರ. ೬-೬); ವಸ್ತಿಗುಣ :- ಹೃದ್ರೋಗಹರ, ಇಂದ್ರಿಯಬಾಹುಳ್ಯ, ಹಸ್ತಿಪಾದಗಳ ವಿದಾಹ . . . ಮೂರ್ಛೆರೋಗ ಮುಂತಾಗಿ ಗುಣವಾಗುವುವು (ಸಕವೈ. ೩೧).

ವಸ್ತಿಮಾಡು = ಬಿಡಾರ ಹೂಡು ; ನೆಲಸು ; ಮೊಕ್ಕಾಮುಮಾಡು : ಎತ್ತಿನ ಬಂಡಿಯ ಪ್ರವಾಸಿಗಳಿಗೆ ಪ್ಲೇಗಿನ ಭಯ ಬಹಳವಾದ್ದರಿಂದ ಅವರು ನಡುವೆಯೇ ದಾಂಡೇಗರದ ಗುಡಿಸಲಿನಲ್ಲಿ ಹತ್ತು ದಿವಸ ವಸ್ತಿಮಾಡಬೇಕಾಗುತ್ತಿತ್ತು (ಸ್ಮೃತಿಚಿ. ೨೬೭). ವಸ್ತಿಹೂಡು = ವಸ್ತಿಮಾಡು : ಯಾವಾಗ ಅಲ್ಲಿ ವಸ್ತಿ ಹೂಡುತಿ (ಹಳ್ಳಿಹಾ. ೫೮). [ಸಂ.]

ವಸ್ತಿಕರ್ಮ (ನಾ). = ವಸ್ತಿ$_3$ ೫ : ವಸ್ತಿಕರ್ಮವನ್ನು ಸಾಯಂಕಾಲದಲ್ಲಿ ಮಾಡುವುದು (ಸಕವೈ. ೨೫). [ಸಂ. ವಸ್ತಿಕರ್ಮನ್]

ವಸ್ತಿಕಾರ (ನಾ). = ವಸ್ತಿಗಾಱ : ಅವನು ಬಿಛಾಯತರಂತೆ ಪರದೇಶದ ವಸ್ತಿಕಾರನಂತೆ ಗಣನೆ ಇಲ್ಲದೆ ಇರುವನು (ಕೃಪಿಪ್ರ. ೨೧೩). [ಸಂ.]

ವಸ್ತಿಕುಹರ (ನಾ). (ಕಶೇರುಕ ಪ್ರಾಣಿಗಳ) ಕಿಬ್ಬೊಟ್ಟೆಯಲ್ಲಿ ಎಲುಬುಗಳು ಸುತ್ತುವರಿದುದರಿಂದ ಆದ ಬೋಗುಣಿಯಾಕಾರದ ಕುಳಿ : ತೊಡೆಗಳಲ್ಲಿನ ಮಾಂಸಖಂಡಗಳನ್ನು ಜಿಗಿಗೊಳಿಸುವುದರ ಮೂಲಕ ವಸ್ತಿಕುಹರದ ಭಾಗವನ್ನು (Pelvic region) ಮೇಲೇಳಿಸಬೇಕು (ಯೋಗದೀ. ೨೬೦) ; ಪ್ರಾಣಿದೇಹಕ್ಕೆ ಮುಖ್ಯವಾದ ಸಮತೋಲನ ಅದರ ವಸ್ತಿಕುಹರದಿಂದಲೇ (ಪಕ್ಷಿ. ೬). [ಸಂ.]

ವಸ್ತಿಗಾಱ (ನಾ). ಪ್ರಯಾಣದ ಮಧ್ಯೆ ತಾತ್ಕಾಲಿಕವಾಗಿ ಒಂದೆಡೆಯಲ್ಲಿ ಇಳಿದುಕೊಳ್ಳುವವನು, —ತಂಗುವವನು : ವಸ್ತಿಗಾಱನು ವಸ್ತಿಗೆ ಬಂದ ಹೊತ್ತಾಱೆ ಎದ್ದು ಹೊಱಟುಹೋದ (ಪುರಂದ. ೩-೯-೪). [ವಸ್ತಿ$_3$ + — ಕಾಱ]

ವಸ್ತಿಬಡು (ಕ್ರಿ). ಇಳಿದುಕೊಳ್ಳು ; ತಂಗು : ವಸ್ತೀಕಾರನಂತೆ ವಸ್ತಿಬಡುವೆನೆಂದು ನುಡಿವುದು ಘನತನವೆ (ವಿಸಾಸು. ೪೭-೨). [ವಸ್ತಿ$_3$ + ಪಡು$_1$]

ವಸ್ತಿಶೋಧನ (ನಾ). = ವಸ್ತಿ$_3$ ೫ : ದ್ರಾಕ್ಷಾದಿ ಮಧುರದ್ರವ್ಯಗಳಿಂದ ಹಳೆಯ ಸಗಣಿಯ ಸಂಸ್ಕಾರದ ದೆಸೆಯಿಂದ ಶುದ್ಧವಾಗಿ ಸಾಧಿಸಲ್ಪಟ್ಟ ತುಪ್ಪದಿಂ ಕೂಡಿದ ವಸ್ತಿಶೋಧನವು ಈ ಬಸುರಿಯಲ್ಲಿ ಯೋಗ್ಯವು (ಬಾಹಟೀ. ೨-೧-೬೬). [ಸಂ.]

ವಸ್ತಿಸ್ಥಾನ (ನಾ). ಕೆಳಹೊಟ್ಟೆ ; ಕಿಬ್ಬೊಟ್ಟೆ : ನಾಭಿಯ ಕೆಳಗಣ ವಸ್ತಿಸ್ಥಾನವೆಂಬ ಸ್ಥಳದಲ್ಲಿ ಆಶ್ರೈಸಿರ್ಪ ವಾತಾದಿ ದೋಷಗಳಿಂದ ಮೂತ್ರ ತಡೆವುದು (ಸಕವೈ. ೩೬೯). [ಸಂ.]

ವಸ್ತು (ನಾ). ೧. (ಇಂದ್ರಿಯಗೋಚರವಾದ) ಪದಾರ್ಥ ; ದ್ರವ್ಯ : ಈ ಪೊಟಲೊಳ್ ಮಹಾವಸ್ತುವರ್ಗಂಗಳಂ ಬಿಲಲ್ ನೆಱೆವನ್ನರಪ್ಪ . . . ಪರದರಾರ್ (ಸುಕುಮಾ. ೧೦-೧೧೭ ವ) ; ಸಿರ ಹಱಿದರೇನು ಕರುಳು ಕುಪ್ಪಳಿಸಿದರೇನು ಇಂತಪ್ಪ ಸಮಸ್ತವಸ್ತುವೆಲ್ಲವೂ ಹೋದರೇನು (ಬಸವ. ೬೯೦). ೨. ಧನ ; ಸಂಪತ್ತು : ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು (ಬಸವ. ೨೨೯) ; ನಿತ್ಯಾನಂದಗುಣಾಭಿರಾಮಸುತನಂ ಕಂಡುರ್ಬಿ . . . ತಾಯ್ತಂದೆಗಳ್ ಕೃತ್ಯೋದಾರದೊಳಿತ್ತರಂದು ಸಕಲರ್ಗಾನಂದದಿಂ ವಸ್ತುವಂ (ಹಮ್ಮೀರ. ೨-೨೪). ೩. ಚಿನ್ನ ; ಬಂಗಾರ : "ಆ ಕನಕಂ ಹಿರಣ್ಯಮರ್ಥಂ ವಸ್ತು ಋಕ್ಥಮಾ ರೈಸ್ವಂ ಸುವರ್ಣಮೆನಲು" (ಮಂಗರಾ. ೧೬-೧೬). ೪. ಅಸ್ತಿತ್ವ ; ಸತ್ಯ. ೫. ಯಾವುದಾದರೊಂದು ವಿಷಯದ ಸಾರ, —ತಿರುಳು. ೬. [ಕಾವ್ಯಮೀ] ಕಾವ್ಯ, ಕಾದಂಬರಿ, ನಾಟಕ ಮುಂತಾದುವುಗಳ ಕಥಾಭಾಗ : 'ವಸ್ತು'ವೆಂದರೆ ಕಾವ್ಯದಲ್ಲಿರತಕ್ಕ ಕಥಾಭಾಗ. ಇದಕ್ಕೆ 'ಇತಿವೃತ್ತ'ವೆಂದೂ ಹೆಸರು (ಕೈಪಿಡಿ. ೨೦೫) ; ಹಾಗೆ ಹಬ್ಬಿದ್ದ ಕಥೆಯನ್ನೇ . . . ವಾಲ್ಮೀಕಿಯು ಒಂದು ಮಹಾಕಾವ್ಯಕ್ಕೆ ವಸ್ತುವನ್ನಾಗಿ ಉಪಯೋಗಿಸಿಕೊಂಡಿರಬೇಕೆಂದು ತರ್ಕಿಸುತ್ತಾರೆ (ಭಾರದ. ೮೬). ೭. [ಸಂಗೀತ] ಒಂದು ಬಗೆಯ ಹಾಡಿನ ರಚನೆ, —ಬಂಧ : ಪಂಚತಾಲೇಶ್ವರ, ವರ್ಣಸ್ವರ, ವಸ್ತುವೆಂಬ ಹೆಸರಿನದು (ಚತುಪ್ರ. ೮೩). ೮. [ತತ್ತ್ವಶಾ] ಆತ್ಮ ; ಪರಬ್ರಹ್ಮ : ಬುದ್ಧಿಯಱಿವುದೊ ವಸ್ತುವನು (ಅಮೃತ. ೩-೧೨೧); ವಸ್ತುವು ಏನು ಎಂದರೆ ಸಚ್ಚಿದಾನಂದಸ್ವರೂಪವಾದ ಬ್ರಹ್ಮವು (ಈಶ್ವಸ್ವ. ೧೦-೧೪). ೯. [ಜೈನ] ಆಗಮಗ್ರಂಥಗಳಾದ ಪೂರ್ವಗಳಲ್ಲಿ ಇರುವ ಪ್ರಕರಣಗಳ ಹೆಸರು : ಇನ್ನು ಪ್ರತಿಯೊಂದು ಪೂರ್ವದಲ್ಲೂ ಅನೇಕ ಪ್ರಕರಣಗಳಿವೆ. ಈ ಪ್ರಕರಣಗಳಿಗೆ 'ವಸ್ತು'ಗಳೆಂದು ಹೆಸರು. ಈ ಪ್ರತಿಯೊಂದು ವಸ್ತುಗಳಲ್ಲೂ ಮತ್ತೆ ಇಪ್ಪತ್ತು ಇಪ್ಪತ್ತು ವಿಭಾಗಗಳಿವೆ (ಜೈನಪ. ೧೩೬). ೧೦. (ಆಲಂ) ಪ್ರಾಣದಂತೆ ಬಹುಪ್ರಿಯವಾದ ವ್ಯಕ್ತಿ : ನನ್ನ ವಸ್ತುವನ್ನು ಕಳೆದುಕೊಂಡು ತಲೆಗೆ ಮುಸುಕೆಳೆದುಕೊಂಡು . . . ನಿನ್ನ ಪ್ರಾಣಕ್ಕೆ ತಗುಲಿಬಿದ್ದಿದ್ದೇನೆ (ಮಹಾಗ. ೨). [ಸಂ.]

ವಸ್ತುಕ (ನಾ). ೧. ವಿಷಯದ ಸಾರ, —ತಿರುಳು. ೨. ವಸ್ತುವಿನಿಂದಾದ ಪದಾರ್ಥ, —ರಚನೆ : ವಸ್ತುವ ವಸ್ತುಕದಂತೆ ಘಟ ಆತ್ಮನಂತೆ ಉಭಯಕ್ಕೂ ಭಿನ್ನವಿಲ್ಲದೆ ಸಿದ್ಧಿಯಾಗಿ ಆ ಸಿದ್ಧಿ ಪ್ರಸಿದ್ಧಿಯಾಗಿ ಆ ಪ್ರಸಿದ್ಧಿ ಪ್ರಸನ್ನವಾಗಿ ಆ ಪ್ರಸನ್ನ ಪ್ರಸಂಗಕ್ಕೆ ಒಡಲಱತುದು (ಸರ್ವವ. ೯೮-೫೩೬). ೩. [ಕಾವ್ಯಮೀ] ವಸ್ತುಪ್ರಧಾನವಾದ, ಪ್ರಾಚೀನಕಾಲದ ಮಾರ್ಗೀಯವಾದ ಒಂದು ಬಗೆಯ ಕಾವ್ಯಪ್ರಕಾರ ; ಸಂಪ್ರದಾಯನಿಷ್ಠೆಯ ಮಾರ್ಗಶೈಲಿಯಲ್ಲಿ ರಚಿಸಿದ ಕಾವ್ಯಪ್ರಕಾರ : ಪ್ರಾಸಯತಿ ಗಣ ಗದ್ಯ ಪದ್ಯ ಸಮಾಸಯುತ ವಸ್ತುಕದ ಮುಂದೆ ವಿಳಾಸಮೇ ಸಾಮಾನ್ಯಮೀ ವರ್ಣಕಕವಿತೆಯೆಂದು ಓಸರಿಸದಿರಿ (ಬಸಪು. ೧-೨೧) ; ಕನ್ನಡ ಸಾಂಪ್ರದಾಯಿಕ ಕಾವ್ಯಗಳಲ್ಲಿ 'ವಸ್ತುಕ' ಎಂದೂ 'ವರ್ಣಕ' ಎಂದೂ ಲಾಕ್ಷಣಿಕರು ಎರಡು ಜಾತಿಗಳನ್ನು ಮಾಡಿರುವರು (ಕರ್ಣಾಜ. ೬). ೪. ಗದ್ಯಪದ್ಯಮಿಶ್ರವಾದ ಒಂದು ಬಗೆಯ ಕಾವ್ಯಪ್ರಕಾರ ; ಚಂಪು : ಚಿಕದೇವರಾಜವಿಜಯಂ ಮುಂತಾದುವು ಗದ್ಯಪದ್ಯೋಭಯಾತ್ಮಕವಾದ ಕಾವ್ಯಂಗಳ್ ಇದರ್ಕೆ ಚಂಪುವೆಂದುಂ ವಸ್ತುಕಮೆಂದುಂ ಪೆಸರ್ (ಅಪ್ರತಿ. ೧-೨೩ ವ) ; ಸಂಸ್ಕೃತಚಂಪೂಲಕ್ಷಣವನ್ನೂ ಸರಣಿಯನ್ನೂ ಅನುಸರಿಸಿ ಬರೆದಿರುವ ಗದ್ಯಪದ್ಯಾತ್ಮಕವಾದ ಕಾವ್ಯಕ್ಕೆ 'ವಸ್ತುಕ'ವೆಂದೂ . . . ಹೆಸರು ಸಲ್ಲುವಂತೆ ಹೇಳಬೇಕಾಗುತ್ತದೆ (ಕೈಪಿಡಿ. ೧೮೪). 'ವರ್ಣಕ' ಪರಾ. [ಸಂ.]

ವಸ್ತುಕಮಾರ್ಗ (ನಾ). ಸಂಪ್ರದಾಯನಿಷ್ಠವಾದ ವಸ್ತುಕಕಾವ್ಯದ ರೀತಿ ; ಮಾರ್ಗಶೈಲಿ : ಮದನಾರಿಯ ಶಬರಲೀಲೆಯಂ ವಸ್ತುಕಮಾರ್ಗದೊಳೊರೆದೆಂ (ಶಬಶಂ. ೫-೫೯). [ಸಂ.]

ವಸ್ತುಕವಿ (ನಾ). ವಸ್ತುಕಮಾರ್ಗದಲ್ಲಿ ಕಾವ್ಯ ರಚಿಸುವವನು ; ಮಾರ್ಗೀಯಶೈಲಿಯಲ್ಲಿ ಕೃತಿರಚನೆ ಮಾಡುವವನು : ಪವಮಾನಚತುಷ್ಕಯುತಂ ಯತಿಯುಂ ದಿವಸಾಧಿಪನೊಳ್ನಿಲೆ ವಸ್ತುಕವಿಪ್ರವರಸ್ತುತಮಪ್ಪುದು ತೋಟಕಮೆಂದ ವಧಾರಿಸು ನೀನಿದಂ (ಛಂದೋಂಬು. ೨-೧೨೬) ; ಮಿಗಿಲಾಗಿರ್ದಭಿಧಾನಸಂಹತಿಗಳಂ ಮೆಯ್ ಮೆಯ್ಯೊಳಿಟ್ಟಟ್ಟಱಿಂ ಪೊಗಟ್ಟೊರಂತೆ ಸಮಸ್ತವಸ್ತುಕವಿಗಳ್ ಚೆಲ್ಪಪ್ಪಿನಂ ಬಂಧುರೋಕ್ತಿಗಳಿಂ ನೀನಭಿವರ್ಣಿಸಿಂತಿದಂ (ಸುಕುಮಾ. ೧-೫೭). [ಸಂ.]

ವಸ್ತುಕಾರ 'ವಸ್ತುಗಾರ' ನೋ.

ವಸ್ತುಕಾವ್ಯ (ನಾ). ಸಂಪ್ರದಾಯನಿಷ್ಠವಾದ ಮಾರ್ಗಶೈಲಿಯ ಕಾವ್ಯ ; ವಸ್ತುಪ್ರಧಾನವಾದ ಕಾವ್ಯ : "ವಸ್ತುಕೃತಿ" ಎಂದರೆ ಸವಿಸ್ತರವಾದ ಕಥಾವಸ್ತುವನ್ನುಳ್ಳ ದೀರ್ಘಕಾವ್ಯವೆಂದು ತೋರುತ್ತದೆ ; "ವಸ್ತುಕಾವ್ಯ", "ವಸ್ತುಕ" ಎಂದು ಕರೆಯುವುದೂ ಇದೇ ಆಗಿರಬೇಕು (ಭಾರಮಿ. ೪೭೯). 'ವಸ್ತುವಿದ್ಯೆ' ಪರಾ. [ಸಂ.]

ವಸ್ತುಕೃತಿ (ನಾ). = ವಸ್ತುಕಾವ್ಯ : ಆದಿಪುರಾಣವಸ್ತುಕೃತಿಯಂ ಪೇಟ್ದಂ ಬೆಡಂಗಪ್ಪ ಮಾರ್ಗದೊಳಂ ದೇಸೆಯೊಳಂ ಪೊದಟ್ದೆಸೆವಿನಂ ಸಂಸಾರಸಾರೋದಯಂ (ಆದಿಪು. ೧೬-೭೮); ನಾನಾರಸಮಿರ್ಪ ವಸ್ತುಕೃತಿಯಂ ಪೇಟ್ದಗ್ಗಳಂ ಮೆಚ್ಚಿಪಂ (ಚಂದ್ರಪು. ೧-೫೧). 'ವಸ್ತುವಿದ್ಯೆ' ಪರಾ. [ಸಂ.]

ವಸ್ತುಕೋಶ (ನಾ). ೧. ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ ಲೇಖನಾದಿ ಭಾಗಗಳ ಸಂಗ್ರಹ. ೨. ಎರಡನೆಯ ನಾಗವರ್ಮನು ರಚಿಸಿದ ಒಂದು ಕನ್ನಡ ನಿಘಂಟಿನ ಹೆಸರು : ಇದು . . . ಶ್ರೀನಾಗವರ್ಮವಿರಚಿತಮಪ್ಪ ವಸ್ತುಕೋಶದೊಳ್ ನಾನಾರ್ಥಕಾಂಡಂ (ವಸ್ತುಕೋ. ೧೪೧-೧೩೬ ಗದ್ಯ). [ಸಂ.]

ವಸ್ತುಗತ (ಗು). ನೈಜವಾದ ; ಸಹಜವಾದ ; ಕಾಲ್ಪನಿಕವಲ್ಲದ : ಮಿಗೆ ವಸ್ತುಗತಸ್ಥಿತಿಯಂ ಬಗೆದಗ್ಗಳಮಾಗೆ ಪೇಳ್ದೊಡಕ್ಕುಮುದಾರಂ (ಕವಿರಾ. ೨-೭೯). [ಸಂ.]

ವಸ್ತುಗಾರ, ವಸ್ತುಕಾರ (ನಾ). ೧. (ಚಿನ್ನದ) ಒಡವೆಗಳನ್ನಿಡುವ ಪೆಟ್ಟಿಗೆ : ವರನಿಗೆ ಎಣ್ಣೆಸ್ನಾನಂ ಮಾಡಿ ಹಸೆಯ ಮೇಲೆ ಕುಳ್ಳಿರಿಸಿ ಕನ್ಯಾ ಬಳಿಗೆ ಮಂಗಳ ಸಾಮಗ್ರಿಗಳೊಡನೆ ತೈಲವಂ ತುಂಬಿದ ಪಾತ್ರೆಯನ್ನಿರಿಸಿ ವಸ್ತುಗಾರವೆಂಬ ಭಾಂಡವಂ ಕಳುಹಿಸಿ ಕೊಡಬೇಕು (ಪುರುಷ. ೨೦೭). ವಸ್ತುಕಾರ : ೨. (ಚಿನ್ನದ) ಒಡವೆ ; ಆಭರಣ : ತಂದ ಬಹುವಿಧವಸ್ತುಕಾರವನಂಮ ಕೊಳ್ಳಿನು ಗಜರಥಾಶ್ವವನಿಂದು ವದನೆಯರಿಗೆ ವಿಚಿತ್ರಾಂಬರ ವಿಭೂಷಣವ (ಕುಮಾಅ. ೧೭-೫); ಅತಿಪರುಷದೊಳೊರ್ವರ ಮನೆಯಿಂದ ವಸ್ತುಕಾರವನು ಅನುರಾಗದಿಂದಿತ್ತು ನೈಯೇಱಿಸಿ ಮತ್ತೆ ವಿನುತಭೂಷಣವಿತ್ತರಾಗ (ತ್ರೈಪಾಲ. ೧೦-೫೬); ಮಂಗಳವೆನಿರ್ಪ ವಸ್ತುಕಾರೋತ್ಕರಮಂ ಮಂಗಳಭೂಷಣ ಧರಿಸಿರ್ದಂಗನೆಯರ್ಕಣ್ಣ ಸೊಗಸನೀವುತ್ತಿರ್ದರ್ (ವೀರವಿ. ೯-೪೦). 'ವಸ್ತಕಾರ' ಪರಾ. [< ವಸ್ತು]

ವಸ್ತುಗೀತ (ನಾ). ಒಂದು ಬಗೆಯ ಹಾಡಿನ ರಚನೆ : ಚಚ್ಚಪುಟ ಚಾಚುಪುಟಾದಿ ಸಕಲತಾಳಸಂಚಾರಸಮುದಿತವಚ್ಚಿರ್ಪತ್ತೆಂಟು ವಸ್ತುಗೀತದೊಳಮತಿಪ್ರವೀಣನಪ್ಪ ಗಾಣಂ ಪಾಡಲೊಡರಿಸುವುದುಂ (ಮಲ್ಲಿಪು. ೮-೨೬). [ಸಂ.]

ವಸ್ತುತಂತ್ರ (ನಾ). ಪ್ರಯತ್ನವಿಲ್ಲದೆ ಪ್ರಮಾಣಾದಿಗಳಿಂದ ತಾನಾಗಿ ಉಂಟಾಗುವ ಜ್ಞಾನ : ಪ್ರಮಾಣಾದಿಗಳಿಂದ ಬಹುತಕ್ಕ ಜ್ಞಾನವು ವಸ್ತುತಂತ್ರವೆನ್ನಲ್ಪಡುವುದು . . . ಯಾವುದು ನೂರು ವಿಧಾಯಕಶಾಸ್ತ್ರದಿಂದ ಮಾಡಲಶಕ್ಯವೋ ನೂರುನಿಷೇಧಶಾಸ್ತ್ರಗಳಿಂದ ತಡೆಯಲಶಕ್ಯವೊ ಅದು ವಸ್ತುತಂತ್ರವೆಂದು ವಿವರಿಸುತ್ತಾರೆ (ಹಿಂದಸಾ. ೨೨೬). [ಸಂ.]

ವಸ್ತುತಃ (ಅ). ನಿಜವಾಗಿ ; ವಾಸ್ತವವಾಗಿ : ಈ ವಿಂಗತಣೆ ಕೇವಲ ನನ್ನ ಕಲ್ಪನೆ. ವಸ್ತುತಃ ಅವು ಎರಡಲ್ಲ (ಕೇಕಾತ್ಮ. ೬೭). [ಸಂ. ವಸ್ತುತಸ್]

ವಸ್ತುತತ್ವ (ನಾ). ಸ್ವಾಭಾವಿಕವಾಗಿರುವಂತಹುದು ; ಸಹಜವಾದುದು : ಮೂಲಕಂ ಬಾಲಂ ದೋಷಹರಮಬಾಲಂ ದೋಷಕರಮದಱಿಂ ಪ್ರತ್ಯಕ್ಷಪರಿಚ್ಛೇದ್ಯಂ ವಸ್ತುತತ್ವ[illegible]ದಿಂ ವ್ಯಭಿಚರಿಸುಗುಂ (ಶಾಂತಿಪು. ೮-೧೨೮ ವ). [ಸಂ.]

ವಸ್ತುತ್ವ (ನಾ). ವಸ್ತುವಾಗಿರುವಿಕೆ ; ದ್ರವ್ಯತ್ವ : ಜ್ಞಾನಾದಿ ಚೈತನ್ಯಧರ್ಮ ವ್ಯತಿರಿಕ್ತವಾ[illegible] ಅಸ್ತಿತ್ವ, ನಾಸ್ತಿತ್ವ, ವಸ್ತುತ್ವ — ಮೊದಲಾದ ಧರ್ಮಗಳು ಅಚೇತದ್ರವ್ಯದಲ್ಲಿಯೂ ಇವೆ (ಭಾರತ. ೧೮೦) ; ಅಲ್ಲಿಗೆ ಆದರ ವಸ್ತುತ್ವ ಮುಗಿಯಿತು (ಭಾವಗೀ. ೮). [ಸಂ.]

ವಸ್ತುಧ್ವನಿ (ನಾ). [ಕಾವ್ಯಮೀ] ಧ್ವನಿಯ ಒಂದು ಪ್ರಕಾರ ; ಯಾವ ವ್ಯತಿರೇಕವೂ ಅಲಂಕಾರವೂ ಇಲ್ಲದೆ ಸೂಚಿತವಾಗುವ ಧ್ವನಿ : ಧ್ವನಿತವಾದ ಅರ್ಥಸಮುದಾಯದಲ್ಲಿ, ರಸಧ್ವನಿಯೂ ಅಲಂಕಾರಧ್ವನಿಯೂ ಅಲ್ಲದಿರುವುದಕ್ಕೆಲ್ಲ ವಸ್ತುಧ್ವನಿಯೆಂದು ಹೆಸರು (ಭಾರಮೂ. ೨೬೩) ; ವಿಭಾವ, ಅನುಭಾವಗಳು ಕೂಡ ವ್ಯಂಗ್ಯವಾದಾಗ 'ವಸ್ತುಧ್ವನಿ'ಗೆ ಅವಕಾಶವಿದ್ದೇ ಇದೆ (ಧ್ವನ್ಯಾಲೋ. ೫೯ ಅಡಿಟ). [ಸಂ.]

ವಸ್ತುನಿಷ್ಠ (ಗು). ೧. ವಾಸ್ತವವಾದ ; ನೈಜವಾದ : ಜೀವನದ ಬಹಿರ್ಮುಖಗಳನ್ನೇ ದರ್ಶಿಸುವ ವಸ್ತುನಿಷ್ಠಕಲ್ಪನೆ (Objective Imagination) ಮನಸ್ಸಿನ ಮತ್ತು ಭಾವನೆಯ ಪರಿಣಾಮಗಳನ್ನು ದರ್ಶಿಸುವ ಭಾವನಿಷ್ಠಕಲ್ಪನೆ . . . ಇವೆಲ್ಲ ಕವಿಯ ಕಾವ್ಯಸೃಷ್ಟಿಯ ಉಪಕರಣಗಳು ಮಾತ್ರ (ಸೌಂದಸ. ೩೦). ೨. [ಕಾವ್ಯಮೀ] ವಸ್ತುಪ್ರಧಾನವಾದ : 'ವಸ್ತುನಿಷ್ಠಕಾವ್ಯ' ಪರಾ. (ನಾ). ೩. ವಾಸ್ತವಿಕವಾದುದು ; ನೈಜವಾದುದು : ಸೌಂದರ್ಯ ಎನ್ನುವುದು ವಸ್ತುನಿಷ್ಠವೋ ಮನೋನಿಷ್ಠವೋ ಎಂಬ ಎರಡು ಪ್ರಶ್ನೆಗಳೇಳುತ್ತವೆ (ಸೌಂದಸ. ೬೬) ; ವಸ್ತುನಿಷ್ಠವಾದ ಸತ್ಯದ ಗೆಲುವು ಕತೆಯ ಎದ್ದುಕಾಣುವ ವೈಶಿಷ್ಟ್ಯವಾಗಿದೆ (ಹೊಸಕ್ಷಿ. ೨೯೨). [ಸಂ.]

ವಸ್ತುನಿ[illegible]ವ್ಯ (ನಾ). [ಕಾವ್ಯಮೀ] ವಸ್ತುಪ್ರಧಾನವಾದ ಕಾವ್ಯ : ಕವಿಪ್ರಜ್ಞೆ ತನ್ನ ಸುಪ್ತಶಕ್ತಿಯ ವಿಕಾಸಕ್ಕಾಗಿ ತನ್ನಿಂದ ಆಚೆಗೆ ನಡೆದು ಬಾಹ್ಯಜಗತ್ತಿನ ರಾಗಗಳು ಮತ್ತು ಕ್ರಿಯೆಗಳೊಂದಿಗೆ ಬೆರೆತು ಕಾವ್ಯವನ್ನು ಸೃಷ್ಟಿಸುವುದು. ಇದನ್ನು 'ವಸ್ತುನಿಷ್ಠ' ಕಾವ್ಯ ಎಂದು ಕರೆಯಬಹುದು (ಸೌಂದಸ. ೧). [ಸಂ.]

ವಸ್ತುಪರಿಚ್ಛೇದ (ನಾ). [ಅದ್ವೈತ] ಸಾವಯವವಸ್ತುಗಳಲ್ಲಿರುವ ಸಜಾತೀಯ ಮತ್ತು ವಿಜಾತೀಯ ಭೇದ ; IP ಒಂದು ಮರಕ್ಕೂ ಮತ್ತೊಂದು ಮರಕ್ಕೂ ಇರುವ ವ್ಯತ್ಯಾಸ — ಸಜಾತೀಯ ಭೇದ. ಮರಕ್ಕೂ ಶಿಲೆಗೂ ಇರುವ ಭೇದ — ವಿಜಾತೀಯ ಭೇದ. ನಿರವಯವಾದ ಬ್ರಹ್ಮಕ್ಕೆ ಈ ಭೇದಗಳು ಇಲ್ಲ : ಒಂದು ವಸ್ತುವಿಹುದು ಒಂದು ವಸ್ತುವಿದಲ್ಲವೆಂಬುದೇ ವಸ್ತುಪರಿಚ್ಛೇದಮಕ್ಕುಂ (ವಿವೇಕ. ೨೫) ; ಬ್ರಹ್ಮವು . . . ಸಜಾತೀಯ ವಿಜಾತೀಯ ಭೇದರಹಿತವಾದ್ದರಿಂದ ವಸ್ತುಪರಿಚ್ಛೇದವಿಲ್ಲದ್ದು (ಭಾರತ. ೨೩೩). [ಸಂ.]

ವಸ್ತುಪುರುಷ (ನಾ). (ನಿರ್ದಿಷ್ಟವಾದ) ಪದಾರ್ಥದ ನೈಜತೆಯನ್ನು ಪರೀಕ್ಷಿಸುವವನು ; ನುರಿತವನು ; ಪರಿಣತ : ದೊರೆಯಱಿವ ವಸ್ತುಪುರುಷರ್ ಪರಿಕಿಸಿ ಬೆಲೆಮಾಡೆ ಗಂಗಮಂಡಲ ಚಕ್ರೇಶ್ವರ ಕಟಕೋತ್ತಮನಾಯಕ ವಿರಚನೆಯಿನ ನರ್ಘರತ್ನಮಾದಂ ರತ್ನಂ (ಗದಾಯು. ೧-೪೦) ; ಯಶೋಭದ್ರಾಂಬಿಕೆಯಂ ಕಂಡು ರತ್ನಕಂಬಲಮಂ ನಿಮಿರ್ಚಿ ತೋರ್ಪುದುಮಪೂರ್ವವಸ್ತುವಪ್ಪುದನಱಿದು ವಸ್ತುಪುರುಷರಿಂ ಬೆಲೆಯಿಡಿಸಿ (ಸುಕುಮಾ. ೧೦-೧೧೭ ವ). [ಸಂ.]

ವಸ್ತುಪ್ರದರ್ಶನ (ನಾ). ೧. ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ನಾನಾ ಬಗೆಯ ಪದಾರ್ಥಗಳನ್ನು ಜನರ ನೋಟಕ್ಕಾಗಿಯೂ ಮಾರಾಟಕ್ಕಾಗಿಯೂ ಜೋಡಿಸಿಡುವುದು : ಶಾಲೆಯಲ್ಲಿ ವಸ್ತುಪ್ರದರ್ಶನ ಏರ್ಪಡಿಸಬೇಕೆಂದು ಗುರುಗಳೂ ಹುಡುಗರೂ ನಿರ್ಧರಿಸಿದರು (ಕಪಪು. ೪-೩೭). ೨. = ವಸ್ತುಪ್ರದರ್ಶನಶಾಲೆ : ವಸ್ತುಪ್ರದರ್ಶನದ ಬಳಿ ಸುನಂದ ಗಾಡಿಯಿಂದಿಳಿದು ಟಿಕೇಟು ತೆಗೆಯಲು ಹೊರಟಳು (ದೂಟಟ್ಟ. ೧೨೦). [ಸಂ.]

ವಸ್ತುಪ್ರದರ್ಶನಶಾಲೆ (ನಾ). ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ನಾನಾಪ್ರಕಾರದ ವಸ್ತುಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕಾಗಿ ಜೋಡಿಸಿಟ್ಟಿರುವ ಸ್ಥಳ : ಪ್ರತಿವರ್ಷವೂ ಮೈಸೂರುಅರಮನೆಯ ಎದುರು ಮೈದಾನದಲ್ಲಿ ವಸ್ತುಪ್ರದರ್ಶನಶಾಲೆಯನ್ನು ತೆರೆಯುವುದು ವಾಡಿಕೆ (ರೂಢಿ). [ಸಂ. ವಸ್ತುಪ್ರದರ್ಶನಶಾಲಾ]

ವಸ್ತುಪ್ರದರ್ಶನಾಲಯ (ನಾ). = ವಸ್ತುಪ್ರದರ್ಶನಶಾಲೆ : ವಸ್ತುಪ್ರದರ್ಶನಾಲಯದಲ್ಲಿ ಪ್ರತಿದಿನ ಸಂಜೆ ಮನರಂಜನೆಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತಾರೆ (ರೂಢಿ). [ಸಂ.]

ವಸ್ತುಬಂಧ (ನಾ). = ವಸ್ತುಕಾವ್ಯ : ಇದು ಚೋದ್ಯಂ ಕವಿಶುದ್ಧತಂ ನವರಸಂ ನಿರ್ದೋಷಮೆಂದಿಗಳಾದುದು . . . ವಿದಿತ ಶ್ರೀಕವಿನಾಗವರ್ಮನ ವಚಸ್ಸಂದೋಹದಿಂ ದೋಷಮೊಂದದಲುಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂಗೆಯ್ದೊ (ಕಾದಂಬಿ. ೮೨೫). [ಸಂ.]

ವಸ್ತುಬಾಹ್ಯ (ನಾ). ಪದಾರ್ಥಗಳ ಹೊರರೂಪವನ್ನು ಮಾತ್ರ ಬಲ್ಲವನು : ಸುಬಿದುಃಬಿಗಳೆಂಬುದು ಸ್ವಪ್ನೇಂದ್ರಜಾಲಸನ್ನಿಭಂಗಳುಂ ಜೀವಿತಮರಣಂಗಳೆಂಬ[ವಿ]ಟ್ಟಳಮುಂ ಪುಸಿಯ ಪೊಟ್ಟಳಮುಮಕ್ಕುಮದ[ನ]ರ್ಕನಹೃದಯನುಮನೇಡಮೂಕನುಂ ತತ್ವಾಂಧನುಂ ವಸ್ತುಬಾಹ್ಯನುಂ ನಂಬುಗುಂ (ಶಾಂತಿಪು. ೮-೧೩೨ ವ). [ಸಂ.]

ವಸ್ತುಭಂಡ (ನಾ). (ವ್ಯಾಪಾರದ) ಪದಾರ್ಥಗಳ ಸರಕು, —ಮಾಲು : ಎತ್ತೈದಱ ಮೇಲೆ ವಸ್ತುಭಂಡವ ತುಂಬಿ ನಿತ್ಯನಿರಾಳಪಟ್ಟಣದಲ್ಲಿಗೆ ಮುಕ್ತಿಸೋಪಾನಕ್ಕೆ ನಡೆಯೆಂದು (ಶಿವಗೀ. ೧೯೦-೯೪೯). [ಸಂ.]

ವಸ್ತುಭಾವ (ನಾ). ಸಹಜಭಾವ ; ನೈಜತೆ : ಸತ್ಯಕ್ಕೆ ನಿಜರೂಪಾಗಿ ಕೃತ್ಯಕ್ಕೆ ತಪ್ಪದೆ ವಸ್ತುಭಾವದಲ್ಲಿ ಇದ್ದಾತನ ಭಕ್ತಿ ನಿಃಕಳಂಕ ಮಲ್ಲಿಕಾರ್ಜುನನ ನಿಶ್ಚಯದ ನಿಜವಾಸ (ಮೋಳಿಮಾ. ೧೮-೬೭). [ಸಂ.]

ವಸ್ತುಮಾಡು (ಕ್ರಿ). ಕೃತಿರಚನೆಯ ಮುಖ್ಯಕಥಾವಿಷಯವನ್ನಾಗಿಸು : ಬೇಟಮನೆ ವಸ್ತುಮಾಡಿಯೆ ಕವಿತ್ವ ವರ್ಣಕಕವಿತ್ವ ಕಾಯತತ್ತ್ವವಿದನೆನಿಸಿದತಿವಿದಗ್ಧನೊರ್ವನಿಂತೆಂದಂ (ಆದಿಪು. ೧೨-೨೨ ವ). [ವಸ್ತು + ಮಾಡು]

ವಸ್ತುಯುದ್ಧ (ನಾ). ಯುದ್ಧವೇ ಪ್ರಧಾನಕೃತಿವಸ್ತುವಾದುದು : ಗಾಂಧಾರಿಯ ಪುತ್ರರೊಳ್ ಮೊದಲಿಗಂ ದುರ್ಯೋಧನಂ ಧರ್ಮಯುದ್ಧದೊಳಂತಾತನನಿಕ್ಕಿ ಕ್ರೋಧನದಱಂ ಭೀಮಂ ಜಯೋದ್ಧಾಮನೆಂಬುದನೆಂಬಂತಿದು ವಸ್ತುಯುದ್ಧಮೆನಿಸಲ್ ಪೇಳ್ವುಂ ಗದಾಯುದ್ಧಮಂ (ಗದಾಯು. ೧-೩೩) ; "ವಸ್ತುಯುದ್ಧಂ — ಯುದ್ಧವಿರೂಪಣೆಯೇ ಪ್ರಧಾನವಸ್ತುವಾದ ಕಾವ್ಯ(?)" (ಗದಾಸಂ. ೯೭ ಟಿಪ್ಪಣಿ). [ಸಂ.]

ವಸ್ತುವಾಚಕ (ನಾ). [ವ್ಯಾಕ] ಭಾವನಾಮವಲ್ಲದ ನಾಮವಾಚಕ : ಭಾವನಾಮವನ್ನೇ ಒಂದು ಸ್ವತಂತ್ರವಾದ ವರ್ಗವಾಗಿ ಇಟ್ಟುಕೊಂಡು, ಮಿಕ್ಕ ನಾಮವಾಚಕಗಳನ್ನೆಲ್ಲಾ 'ವಸ್ತುವಾಚಕ'ಗಳೆಂದು ಕರೆಯುವುದುಂಟು (ಮಧ್ಯಮ. ೨೭). [ಸಂ.]

ವಸ್ತುವಿದ (ನಾ). ತತ್ವವನ್ನು ತಿಳಿದವನು : ವಸ್ತುವಿದರ್ ನಿನ್ನವೊಲಾರ್ ಬೆಱರ್ ಭುವನದೊಳ್ ಪ್ರಚ್ಛಂಡಧಾತ್ರೀಶ್ವರಾ (ಆದಿಪು. ೧೬-೫೯). [ಸಂ.]

ವಸ್ತುವಿದ್ಯೆ (ನಾ). ಕಾವ್ಯಲಕ್ಷಣದ ಕಲೆ (?) : ಪುದಿದ ಜಸಂ ಪೊದೆಟ್ಟ ಚಳಮೊಂದಿದಳಂಕೃತಿ ಕೈತ ದೇಸಿಯೆಂಬುದನೆನೆ ವಸ್ತುವಿದ್ಯೆಯೆನೆ ಕಬ್ಬಮೆ ಮುನ್ನಮವಂತಿವಲ್ಲದಲ್ಲದೆ ಪೆಱವಿಲ್ಲ ಕಬ್ಬಮೆನೆ ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು ಸಮಸ್ತಭಾರತಮುಮಾದಿಪುರಾಣಮಹಾಪ್ರಬಂಧಮುಂ (ಪಂಪಭಾ. ೧೪-೫೯); "ವಸ್ತುವಿದ್ಯೆಯೆನೆ — ಶಿಲ್ಪವಿದ್ಯೆಯೆನಲು (?)" (ಪಂಪದೀ. ೫೭೬). 'ವಸ್ತುಕಾವ್ಯ', 'ವಸ್ತುಕೃತಿ' ಪರಾ. [ಸಂ. ವಸ್ತುವಿದ್ಯಾ]

ವಸ್ತುಸಂಗ್ರಹಾಲಯ (ನಾ). ಅಪೂರ್ವವಾದ ಪದಾರ್ಥಗಳನ್ನು ಪ್ರದರ್ಶನಕ್ಕಾಗಿ ಸಂಗ್ರಹಿಸಿಡುವ ಸ್ಥಳ ; ಮ್ಯೂಸಿಯಂ : ವಸ್ತುಸಂಗ್ರಹಾಲಯಗಳಲ್ಲಿ ಇಡಲಾಗಿರುವ ಅವರ ಶಿಲ್ಪಕೃತಿಗಳು . . . ಉತ್ತಮಮಾದರಿಗಳಾಗಿವೆ (ನೊಳಂಬ. ೭೪) ; ಈ ಅವಶೇಷಗಳನ್ನು ಕಾಯ್ದು ಪ್ರದರ್ಶಿಸುವುದಕ್ಕಾಗಿಯೇ ಒಂದು ಪ್ರಾಚ್ಯ ವಸ್ತುಸಂಗ್ರಹಾಲಯವನ್ನು ಈಗ ನಿರ್ಮಿಸಿದ್ದಾರೆ (ಕರಿಕೋ. ೬, ೧೬೦). [ಸಂ.]

ವಸ್ತುಸ್ತವ (ನಾ). (ಮಹಾಪುರುಷನ) ಚರಿತ್ರೆಯನ್ನು ಕುರಿತ ನಿರೂಪಣೆಯಿರುವ ಸ್ತೋತ್ರ : ಭಣಿಪ್ರಭುಗಮೆತ್ತಮತ್ತಳಗಮಲ್ತೆ ರೂಪಸ್ತವಂ ಗುಣಸ್ತವಮುದಾತ್ತವೃತ್ತ ಭವದೀಯ ವಸ್ತುಸ್ತವಂ (ಆದಿಪು. ೧೩-೯೦); ವಸ್ತುಸ್ತವ ರೂಪಸ್ತವ ಗುಣಸ್ತವಂಗಳಿನಿಂದ್ರಂ ಭವರಿಪುವಂ ಸ್ತುತಿಯಿಸಿ (ಪುಷ್ಪಪು. ೧೧-೫೮). 'ಗುಣಸ್ತವ' ಪರಾ. [ಸಂ.]

ವಸ್ತುಸ್ಥಿತಿ (ನಾ). ೧. ವಾಸ್ತವ ಸಂಗತಿ ; ನಿಜವಾದ ಸ್ಥಿತಿ : ತಱಿಸಂದು ಕಲುವುಱಿದಿಂ ತೆಱೆದಿರೆ ಸೆಗಟ್ಟೆರ್ದುದೊಂದು ವಸ್ತುಸ್ಥಿತಿಯಂ ಮಱಸಿ ಪೆಱತೊಂದು ಮಾಱೈಯನಱಿಪುವುದುತ್ಪ್ರೇಕ್ಷೆಯೆಂಬುದಿಂತದಱ ತೆಱಂ (ಕವಿರಾ. ೬-೧೧೪) ; ನೀನು ನಿಜವಾಗಿಯೂ ನನ್ನ ಮಗನೇ ಎಂಬ ವಸ್ತುಸ್ಥಿತಿ ಇತ್ರೀಚೆಗೆ ನನಗೆ ತಿಳಿಯಿತು (ಪಾಪ್ರಾ. ೧೦೬). ೨. [ಜೈನ]ಜೀವಾದಿ ತತ್ವ, ಲೋಕಸ್ವರೂಪ ಮೊದಲಾದುವುಗಳ ಯಥಾವತ್ತಾದ ನಿರೂಪಣೆ : ಭರತಂ ಬೆಸಗೊಂಡಂ ಜಿನನಱಿವವಸ್ತುಸ್ಥಿತಿಯಂ (ಆದಿಪು. ೧೨-೬೨). [ಸಂ.]

ವಸ್ತುಸ್ವಭಾವ (ನಾ). ಒಂದು ಪದಾರ್ಥದ ನಿಜವಾದ ಗುಣ,— ಸಹಜಸ್ವಭಾವ : ವಸ್ತುಸ್ವಭಾವಕಥನಂ ವಾಸ್ತವಮುಪಮಾದ್ಯಶೇಷವಕ್ರೋಕ್ತಿ ವಿಪರ್ಯಸ್ತಂ ಸಮಸ್ತಲೋಕಮನಸ್ಸೋಭನಕಾರಿ ಚಾರುತರಪುರುಷಾರ್ಥಂ (ಕಾವ್ಯಾದರ್ಶ ೧-೧೦) ; ಶೈವಲ್ಕದೊಳಗಿದ್ದ ಸಿದ್ಧರು ವಸ್ತುಸ್ವಭಾವವೆಂದೀಕ್ಷಿಸುತಿಹರು ಜೀವಕಳ್ಳದೆ ಮುಕ್ತಿ ಪುದ್ಗಲಕಿಲ್ಲ ನಿರ್ಜೀವತತ್ವವಿದು ನಿಶ್ಚಯಿಸು (ಭರಚ. ೬೮-೪೫). [ಸಂ.]

ವಸ್ತೂತ್ಪ್ರೇಕ್ಷೆ (ನಾ). [ಕಾವ್ಯಮೀ] ಯಾವುದಾದರೊಂದು ವಸ್ತುವನ್ನು ಉತ್ಪ್ರೇಕ್ಷಿಸಿ ಹೇಳುವ ಒಂದು ಅಲಂಕಾರ : ವಸ್ತುಸ್ವರೂಪದಿಂದೊಂದು ವಸ್ತುವಂ ಪೆಱತೊಂದು ವಸ್ತುವೆಂದೆಣಿಸೆ ವಸ್ತೂತ್ಪ್ರೇಕ್ಷೆ (ಅಪ್ರಕಾ. ೪೯-೧೮); ಆವುದಾನೊಂದು ವಸ್ತುವಿಗೆ ವಸ್ತ್ವಂತರ ತಾದಾತ್ಮ್ಯಸಂಭಾವನಾ ವೇಳಲ್ಕೆ ವಸ್ತೂತ್ಪ್ರೇಕ್ಷಾ (ಕವಲ. ೨೭). [ಸಂ. ವಸ್ತೂತ್ಪ್ರೇಕ್ಷಾ]

ವಸ್ತೂಪಮಾನ (ನಾ). [ಕಾವ್ಯಮೀ] ಉಪಮಾಲಂಕಾರಗಳಲ್ಲಿ ಒಂದು ವಿಧ : ವನರುಹದಂತೆ ಮುಖಂ ಲೋಚನಮೆಸೆವುತ್ಪಲದವೋಲ್ ತಳಂ ತಳಿರಂತೆಂದನುರೂಪಮಾಗಿ ಪೇಳ್ದೊಡದೆನಸುಂ ವಸ್ತೂಪಮಾನಮೆಂಬುದು ಪೆಸರಿಂ (ಕವಿರಾ. ೩-೬೦). [ಸಂ.]

ವಸ್ತೂಪಮೆ (ನಾ). = ವಸ್ತೂಪಮಾನ : ವಸ್ತೂಪಮೆಗೆ : ಅಳಿಕುಳದಂತಳಕಚಯಂ . . . ಬೆಡಂಗುವೆತ್ತು ತೋರ್ಬುಂ ಸತಿಯಾ (ಕಾವ್ಯಾನ. ೬೬೯). [ಸಂ. ವಸ್ತೂಪಮಾ]

ವಸ್ತ್ಯ (ನಾ). ವಾಸಿಸುವ ಸ್ಥಳ ; ನಿವಾಸ ; ಮನೆ : "ಆವಾಸಃ . . . ವಸ್ತ್ಯಂ . . . ಆಲಯಃ — ಈ ೩೧ ಮನೆ" (ಹಲಾಯು. ೪೯-೧೩೬). [ಸಂ.]

ವಸ್ತ್ರ (ನಾ). ೧. ಬಟ್ಟೆ ; ಅರಿವೆ : ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ (ಬಸವ. ೬೦೦); ದುಕೂಲವನುಗಿದು ಹಾಯ್ಕಿದರಿದ್ದರಿವರೊಂದೊಂದು ವಸ್ತ್ರದಲಿ (ಕುಮಾಸ. ೧೪-೧೦೧). ೨. ಉಡುಪು ; ಉಡುಗೆ. [ಸಂ.]

ವಸ್ತ್ರಗಾಣಿಕೆ (ನಾ). ಪುಡಿ ಅಥವಾ ದ್ರವಪದಾರ್ಥವನ್ನು ಬಟ್ಟೆಯ ಮೂಲಕ ಶೋಧಿಸುವಿಕೆ ; ಸೋಸುವಿಕೆ: ಕಿರುನೆಲ್ಲಿ ಸಹಮೂಲವನ್ನು ತಂದು ನೆರಳಲ್ಲಿ ಒಣಗಿಸಿ ನೆಗ್ಗಿಲು ಸಹಮೂಲವನ್ನು ಅದೇ ರೀತಿ ಒಣಗಿಸಿ ಇಡಿದು ವಸ್ತ್ರಗಾಣಿಕೆ ಮಾಡಿ ಇಟ್ಟುಕೊಳ್ಳುವುದು (ಕಾಮಶಾ. ೨೬೫). [?./ ಮರಾ. ವಸ್ತ್ರಗಾಳ]

ವಸ್ತ್ರಗಾಲಿತ, ವಸ್ತ್ರಗಾಳಿತ (ನಾ). = ವಸ್ತ್ರಗಾಣಿಕೆ : ಬರಿ ಇದ್ದಲಿನ ಪುಡಿಯನ್ನು ವಸ್ತ್ರಗಾಲಿತ ಮಾಡಿ ಅದಕ್ಕೆ ನೀರು, ಗೋಂದು, ಸಕ್ಕರೆ ಮುಂತಾದುವನ್ನು ಹದವರಿತು ಬೆರಸಿ ಮಸಿಯನ್ನು ಮಾಡುತ್ತಿದ್ದುದೂ ಉಂಟು (ಕನ್ನಸಂ. ೪೪). ವಸ್ತ್ರಗಾಳಿತ : ನೆಲದಾಳ, ತುಱುವೆ, ನೆಗ್ಗಿಲು . . . ಇವಂ ವಸ್ತ್ರಗಾಳಿತವ ಮಾಡಿ (ವಿಷ್ಣು. ೪೯) ; ಚವ್ವ, ಉಳ್ಳಿ, ಇಲ್ಲಣ ಇವುಗಳನ್ನೆಲ್ಲಾ . . . ಚೂರ್ಣಿಸಿ ವಸ್ತ್ರಗಾಳಿತವಂ ಮಾಡಿ ಹಾಕಿ ಪಾಕದಲ್ಲಿಳಿಹಿಕೊಂಡು (ಸಕವೃ. ೭೧). [ಸಂ.]

ವಸ್ತ್ರಗಾಳಿತ 'ವಸ್ತ್ರಗಾಲಿತ' ನೋ.

ವಸ್ತ್ರಗಾಳಿಸು (ಕ್ರಿ). ಪುಡಿ ಅಥವಾ ದ್ರವಪದಾರ್ಥವನ್ನು ಬಟ್ಟೆಯ ಮೂಲಕ ಶೋಧಿಸು,—ಸೋಸು : ಶುಂಠಿ ೨ ಸೇರ ಲೋಹಭಸ್ಮ ಪಡಿ ೧ ಎಲ್ಲವನ್ನೂ ಚೂರ್ಣಮಾಡಿ ವಸ್ತ್ರಗಾಳಿಸಿ ಲೇಹ್ಯಪಾಕ ಮಾಡಿ . . . ಸೇವಿಸುವುದರಿಂದ ಕಾಸ, ಶ್ವಾಸ . . . ಗುಣವಾಗುವುವು (ಸಕವೃ. ಪರಿ. ೪೯೯). [ವಸ್ತ್ರ + ಗಾಳಿಸು$_2$]

ವಸ್ತ್ರದಾನ (ನಾ). ಬಟ್ಟೆಯನ್ನು ಧರ್ಮಾರ್ಥವಾಗಿ ನೀಡುವಿಕೆ : ಆದರದಿಂ ಗೋದಾನಂ ಸ್ತ್ರೀದಾನಂ ವಸ್ತ್ರದಾನಂ . . . ಶ್ರೀದಾನಂಗುಡುತುಮೊಪ್ಪಿದಂ ಗಿರಿರಾಜಂ (ಗಿರಿ. ೬-೬೬); ಓವಿ ಗುಂಡಯ್ಯಂಗೆ ಹರೆಯವನೀವ ಠಾವಿನೊಳಾವ ಗರಳಗ್ರೀವಸಹಿತಂ ಹೋದೆ ದಾಸನ ವಸ್ತ್ರದಾನಕ್ಕೆ (ಬಸವು. ೨೪-೭೨). [ಸಂ.]

ವಸ್ತ್ರನಿವಾಳಿ (ನಾ). ಬಟ್ಟೆಯಿಂದ ಇಳಿತೆಗೆದು ದೃಷ್ಟಿ ನಿವಾಳಿಸುವುದು : ಕಾಮಿನಿಯರುಪ್ಪಾರತಿಗಳಭಿರಾಮವಸ್ತ್ರನಿವಾಳಿ ರತ್ನಸ್ತೋಮ ಬಣ್ಣದ ಸೊಡರು ಸುಳಿದವು ಹರುಷದೊಗ್ಗಿನಲಿ (ಕುಮಾರಿ. ೯-೨೭). [ಸಂ.]

ವಸ್ತ್ರಭಿನ್ನಕ (ನಾ). ಬಟ್ಟೆಯನ್ನು ಕತ್ತರಿಸುವವನು ; ಸಿಂಪಿಗ : ಹರುಷಂದಳೆದು ಕರೆ ಏನೆ ಕರೆದು ತಂದರು ವಸ್ತ್ರಭಿನ್ನಕನ (ಶಂಕರಾ. ೭-೬೬); ಇಂಥ ಚಿತ್ರಪತ್ರವನ್ನು ಹೊಲಿಯುವ ವಸ್ತ್ರಭಿನ್ನಕನಾಗಿ ಶಂಕರದಾಸಿಮಯ್ಯ ಸಂತೋಷಸಾಮ್ರಾಜ್ಯವನ್ನು ಸೂರೆಗೊಂಡಿದ್ದನು (ಶರಚ. ೫೫). [ಸಂ.]

ವಸ್ತ್ರಮೃಗ (ನಾ). ಕೊಳೆಬಟ್ಟೆಯಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ಕ್ರಿಮಿ ; ಕೂರೆ : ಡುಂಡುಕನೆಂಬ ತಿಗುಣೆ ಮಾಡಿದ ದೋಷದಿಂ ಮಂದವಿಸರ್ಪಿಣಿಯೆಂಬ ವಸ್ತ್ರಮೃಗಂ ಕೆಟ್ಟುದು (ಪಂಚತಂ. ೧೨೨-೧೭). [ಸಂ.]

ವಸ್ತ್ರಾಂಗ (ನಾ). [ಜೈನ] ದಶಾಂಗಕಲ್ಪಕುಜಗಳಲ್ಲಿ ಒಂದು ; ಬಯಸಿದ ಬಟ್ಟೆಯನ್ನು ನೀಡುವುದೆಂದು ಭಾವಿಸಲಾದ ಮರ : ಭಾಜನಾಂಗದ ವಸ್ತ್ರಾಂಗದ ಭೂಷಣಾಂಗದಳವಂ ಚಕ್ರೇಶ್ವರಂ ತಾಳ್ದಿದಂ (ಆದಿಪು. ೪-೩೫) ; ಗೀರ್ವಾಣಾವ್ರಜಂ ತಂದು ನೀಡಿದ ವಸ್ತ್ರಾಂಗ ವಿಭೂಷಣಾಂಗ . . . ದೀಪಾಂಗವೃಕ್ಷದ ದಿವ್ಯಾಂಬರದಿಂದಲಂಕರಣದಿಂ ಪೂಮಾಲೆಯಿಂದಂಗರಾಗದಿನುದ್ಭ್ರಾಜಿಸುವಂತು ಪೂಜಿಸಿದನಿಂದ್ರಂ (ಪುಷ್ಪಪು. ೧೨-೧೩). [ಸಂ.]

ವಸ್ತ್ರಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಬಗೆ : ಸ್ಥಿರಸುಖದಿಂ ನಿಶ್ಚಲಾತ್ಮಕಮಾದಾಸನದಲ್ಲಿ ಸಿದ್ಧಾಸನ . . . ವಸ್ತ್ರಾಸನ . . . ಅರ್ಧಾಸನಾದಿ ಎಂಭತ್ತುನಾಲ್ಕು ಆಸನಭೇದಂಗಳು (ಏವೇಕ. ೧೩೧). [ಸಂ.]

ವಸ್ನ (ನಾ). ೧. ವಾಸಿಸುವಿಕೆ. ೨. ಸಿರಿ ; ಸಂಪತ್ತು. ೩. ವೇತನ. ೪. ಬಟ್ಟೆ ; ಅರಿವೆ. ೫. ಚರ್ಮ ; ತೊಗಲು. ೬. ಬೆಲೆ ; ಕಿಮ್ಮತ್ತು : "ಮೂಲ್ಯಂ, ವಸ್ನಃ, ಅವಕ್ರಯಃ — ೩ ಬೆಲೆ, ಕ್ರಯದ ಕಿಮ್ಮತ್ತು" (ಸಿದ್ಧಾಂತಶಿ. ೨೯೭). ೭. ಸಾವು ; ಮರಣ. [ಸಂ.]

ವಸ್ಸ (ನಾ). ಮಳೆಗಾಲ ; ವರ್ಷಾಕಾಲ : ಮಳೆಗಾಲದಲ್ಲಿ ನಾಲ್ಕುತಿಂಗಳು ಮಾತ್ರ ಒಂದು ಕಡೆ ಮುನಿಗಳು ವಾಸಿಸಬೇಕು. ಇದಕ್ಕೆ 'ಚಾತುರ್ಮಾಸ್ಯ' ವೆನ್ನುತ್ತಾರೆ. (ಹಿಂದುಗಳಲ್ಲೂ ಈ ಪದ್ಧತಿ ಇದೆ. ಬೌದ್ಧರು ಇದನ್ನು 'ವಸ್ಸ' ಎಂದು ಕರೆಯುತ್ತಾರೆ. ವಸ್ಸ < ಸಂ. ವಾಸ) (ಕಶಾಅ. ೮೫). [< ಪ್ರಾ. ವಸ್ಸ / ಸಂ. ವರ್ಷ]

ವಸ್ಸಾವಾಸ (ನಾ). ಮಳೆಗಾಲದ ನಾಲ್ಕು ತಿಂಗಳು ಒಂದೇ ಕಡೆಯಲ್ಲಿ ಮಾಡುವ ವಾಸ ; ಚಾತುರ್ಮಾಸ್ಯ : ಆಷಾಢದ ಹುಣ್ಣಿಮೆಯಿಂದ ಹಿಡಿದು ಮಾರ್ಗಶಿರದ ಹತ್ತನೆ ದಿನದ ತನಕ (ಜೂನ್ ಮಧ್ಯಭಾಗದಿಂದ ಅಕ್ಟೋಬರ್ ಮಧ್ಯದವರೆಗೆ) ಅವರು 'ವಸ್ಸಾವಾಸ' (= ವರ್ಷಾವಾಸ)ವನ್ನು ಪಾಲಿಸುತ್ತಿದ್ದರು (ಕಶಾಅ. ೮೫). [< ಸಂ. ವರ್ಷಾವಾಸ]

ವಹ (ನಾ). ೧. ಸರಕುಗಳನ್ನು ಹೊತ್ತು ಸಾಗಿಸುವಿಕೆ ; ಸಾಗಾಣಿಕೆ. ೨. ದಾರಿ ; ಮಾರ್ಗ. ೩. ವಾಹನ. ೪. ಗಾಳಿ. ೫. ಕುದುರೆ. ೬. ಎತ್ತಿನ ಹೆಗಲು : "ಸ್ಕಂದವೇಶಃ, ವಹಃ — ಈ ೨ ಹೆಗಲ್" (ಹಲಾಯು. ೪೪-೧೧೨). [ಸಂ.]

ವಹಣಿ, ವಹವಣಿ, ವಹಳಿ$_1$ (ನಾ). ೧. ಬೆಡಗು ; ಒಯ್ಯಾರ : ಮಱೆದುಂಬಿವಿಂಡು ಮುಂದೆ ಮಂಡಳಿಸಿ ಕಟ್ಟಿ ಬರೆ ಕಟ್ಟಿ ಬಂದು ರೂಪು ರೇಖೆವಡೆಯೆ . . . ನವಣಿ ಬಹುವಿಕೆವಡೆಯೆ ಬಹುವಿಧದ ವಹಣಿಯ ಮಾರಚಿತ್ರದ ಗತಿಗಳೊಳ್ ಮೆಱೆದು (ಅನಾಪು. ೨-೨೮ ವ); ಸರಸಹಾಸ್ಯದ ಹಾಸಕದ ವಹ[ಪಾಠಾಂ. ದಹ, ಹವ]ಣಿಗಳ ವೈಸಿಕದ ಸರಳಿಸುವ ಕುಕ್ಕುರಕದಂಬದ ವಿರಚಿತಾಡಂಬರದ ನವಶಾಬರಿಯರ್ಕೆದಿದರು (ಕೂರಾ. ೧-೫-೪೦). ೨. ನಡಗೆ ; ಗತಿ : ನಿಂದು ನಾನಾಪರಿಯ ವಹಣಿಗಳಿಂದ ತಾಳ ಸಮೇಳ ಸದ್ಗತಿಯಿಂದ . . . ದಾರಿಸುತಿರ್ದನ್ನೆ ಹಲವಂದದಲಿ ಮದ್ದಳೆಯ (ಪ್ರಭುಲಿಂ. ೫-೯). ೩. ರೀತಿ ; ಗತ್ತು ; ವೈಖರಿ : ಚಾಣೂರಮುಖ್ಯರು ನಡೆದು ಬಹ ವಹ[ಪಾಠಾಂ. ಹವ]ಣಿಯ ತದಾಸ್ಥಾನವನು ಮೆಚ್ಚಿಸಿತು (ಸಾಳ್ವಭಾ. ೨೨-೫೭); ಹೂಡಿದನು ದಂಡೆಯನು ವಹಣಿಯ ಮಾಡುತವೆ ಚಾಣೂರಮಲ್ಲನು ರೂಢಿಸಿದ ನೀಳಾದ್ರಿಯೊಳು ತೊಡರುವವೊಲಿದಿರೊದಗೆ (ಸಾಳ್ವಭಾ. ೨೨-೬೫). ೪. ಪ್ರವಾಹ ; ಹರಿವು : "ವಹಣಿ — ವಹನ = ಪ್ರವಾಹ, ತೆರೆ" (ಶಬ್ದಕೋ. ೭೯). ೫. ಓಟ ; ಶೈಲಿ : ಕವಿತೆಯ ವ[ಪಾಠಾಂ. ರ]ಹಣಿ ಲೇಸ್ಸೆ (ತೊರಾ. ೧-೨-೧೭). ೬. ಮಾರ್ಗ ; ಪದ್ಧತಿ : ನಮ್ಮ ಮಹಿಮೆಯ ಕೆಡಿಸಬೇಕೆಂಬುದಲ್ಲದೆ ಬೇಱೆ ವಹಣಿಯುಂಟೇ[ಪಾಠಾಂ. ವಹಿಣಿಯುಂಟೇ, ವಿಹರಿಸಲುಂಟೇ] ದಾನವಗೆ (ಕುರಾಸಾ. ೧೮-೧೬೧). ೭. ರೀತಿ ; ಬಗೆ : ಉದ್ರೇಕದಿಂದಲಿ ಸಿದ್ಧರಾಮನನೇಕ ವಹಣಿಯಲಣಕವಾಡುತಲಿರ್ದನಲ್ಲಮನ (ಪ್ರಭುಲಿಂ. ೧೩-೨೬); ಶೌರ್ಯದ ವಹಣಿಯೊಳ್ಮಾತುಂಟು ವಹಣಿ ವಿಹಿತೋಕ್ತಿಗಳಲೇನೆಂದ(ಕೋಗಯ. ೨೨-೧೦). ೮. [ಸಂಗೀತ] ಹಾಡುಗಾರಿಕೆಯ ಒಂದು ಪ್ರಕಾರ ; IP ಹೃದಯ, ಕಂಠ ಮತ್ತು ಶಿರಸ್ಸುಗಳಲ್ಲಿ ಹುಟ್ಟುವ ಮಂದ್ರ, ಮಧ್ಯ ಮತ್ತು ತಾರಗಳೆಂಬ ಸ್ಥಾನಗಳಲ್ಲಿ ಹುಟ್ಟಿ ಲೇಶಮಾತ್ರ ಸ್ಥಿರವಾಗಿ ಕಂಪಿಸುವ ಸ್ವರವಿಶೇಷ : ವಳಿ ವಹಣಿಯೊಳ್ಪೆರಸೆ ವಹಣಿ ತಿರುಪಿನೊಳಿಳಿಯೆ ಸುಳಿಸುಳಿದು ತಿರುಪು ಪೋಪೆಡೆಯೊಳಡಗುತ ಹೊಳೆಯೆ . . . ಪಂಚಮುಖದೊಳಗೆಲ್ಲ ಕೊಳಲ ದನಿ ತೊಳಲುತ್ತಿರೆ (ಅನಾರ. ದೇ. ೧೮೧-೨೨); ಗತಿ ಗಹಗಹಿಸಲ್ ಕಳಸೋನ್ನತಿ ಗಮಕಂ ವಹಣಿ . . . ಜತಿ ನೇವಣಿ ಮಿಗೆ ಸೊಂಪಾಹತ ಕಂಪಿತಮುಣ್ಮೆ ಪಾಡಿದಂ ಮುನಿಋಷಭಂ (ಏರವಿ. ೬-೯೦). ವಹವಣಿ : ೮. ವಳಿ ವಿಳಾಸಂಬಡೆಯೆ ವಹವಣಿ ಬಹಳಂಬಡೆಯೆ ತಿರಿಪು ತೊಮ್ಮೆವಡೆಯೆ . . . ಪಾಡುತ್ತಿರೆಯುಂ (ಶಾಂತೀಶ್ವ. ೧೬-೬೭ ವ). ವಹಳಿ$_1$: ೮. 'ವಹಳಿಕೆ' ಪರಾ. [< ಪ್ರಾ. ವಹಣ. / ಸಂ. ವಹನ. / ಮರಾ. ವಾಹಣ, ವಾಹಣೇ, ವಾಹಾಣ]

ವಹನ (ನಾ). ೧. ಹೊರುವಿಕೆ : ಬಳಿಕ ಕಡೆಯಲಿ ಹರಿಯ ವಹನವನೊಲಿದು ತಾ ಶ್ರೀಗರುಡನಾದನು ನಳನಾಭಂಗಧಿಕಪ್ರೀತನು ಸುರಸಮೂಹದಲಿ (ಸಂಭಪ. ೫-೪೧). ೨. ಸಾಗಾಣಿಕೆ ; ರವಾನೆ. ೩. ಹರಿಯುವುದು ; ಪ್ರವಹಿಸುವುದು. ೪. ಸಾಗಾಣಿಕೆ ಹಾಗೂ ಸಂಚಾರದ ಸಾಧನ ; ವಾಹನ. ೫. ದೋಣಿ ; ಹರಿಗೋಲು. [ಸಂ.]

ವಹನಕರ್ಮ (ನಾ). ಹೊರುವಿಕೆ ; ಒಯ್ಯುವಿಕೆ : ವಹನಕರ್ಮ-ಆಯುಧ, ಕವಚ, ಧಾನ್ಯ ಮುಂತಾದುವನ್ನು ಹೊರುವುದು (ಕಶಾಅ. ೨೫೬). [ಸಂ. ವಹನಕರ್ಮನ್]

ವಹನಪತ್ರ (ನಾ). ಒಬ್ಬ ವ್ಯಕ್ತಿ ಯಾವುದೇ ಹಕ್ಕುಬಾಧ್ಯತೆಯನ್ನು ಮತ್ತೊಬ್ಬ ವ್ಯಕ್ತಿಗೆ ವರ್ಗಾಯಿಸುವ ಪತ್ರ : ವಿನಿಮಯಪತ್ರಗಳು, ಚೆಕ್ಕುಗಳು, ಪ್ರಾಮಿಸರಿ ನೋಟುಗಳು, ವಹನಪತ್ರಗಳು . . . ಇವುಗಳ ವಿಷಯದಲ್ಲಿ ಮುದ್ರಾಂಕಶುಲ್ಕದ ದರಗಳು (ಭಾಧಾವಿ. ೨೮೬). [ಸಂ.]

ವಹಮಾನ$_1$ (ನಾ). ನಡತೆ ; ಚಾರಿತ್ರ್ಯ : ನಿಂದಿಸರಲೇ ಪ್ರಜೆಗಳಿನ್ನೆಗಂ . . . ಜಱೆದು ನಿಜವಂಶದೇಳ್ಗೆಯಂ ಕುಂದಿಸರಲೇ ಪೋಡಿಗಳೆದು ವಹಮಾನದೊಳ್ಸಂಧಿಸರಲೇ ಕೊಂಕುಕೊಱತೆಗಳನು (ಕೃಮಿಭಾ. ೧೮-೪೨); ಸಕಲಭೋಗವನೆಲ್ಲ ಭೋಗಿಸುತೆ ಸ್ತ್ರೀಯರ ಸುನಿಕರಕ್ಕೆ ಪಟ್ಟದಂಗನೆಯಾಗಿಯಿರುವೆನಲ್ ವಿಕಳತೆಯೊಳಿಂತು ವಹಮಾನವಿಲ್ಲದೆ ದಿಗಂಬರಿಯಾಗಿ ಪೋದಳ್(ಪ್ರಭುಪು. ೮-೭೦); ಮಾನಿಯಾದ ಮಹಾತ್ಮರಿಗೆ ವಹಮಾನವೇ ಕೇಳ್ ಸಂಚಿತಾರ್ಥಂ ಮಾನಮಿಗಳೆ ಪ್ರಾಣಮಿಹದೊಳು ಸುಖವ ಸಾರ್ಬುವುದು (ಶಂಕರಾ. ೧೨-೨೧). [< ವಹಣಿ]

ವಹಮಾನ$_2$ (ನಾ). ದಾನ ; ಕೊಡುಗೆ (?) : ಸಂಕಿಮಯ್ಯನಾಯಕರುಂ ಮಹದೇವಭಟ್ಟರುಂ ತಮ್ಮ ಅಕಸಾಲದಲು ತಮಗೆ ದೀಪಾವಳಿಯ ಪರ್ವದಲುಡಲು ಕುಡುವ ವಹಮಾನಮಂ ಸವಕಟ್ಟುವ ಪನ್ನಿರ್ವ್ವರಿಗೆ ಬಿಟ್ಟರ್ (ಸೌಇಇ. XI-ii, ೧೫೭-೫; 1104); ತಂಮ ತಾಯಿಗೆ ತಪ್ಪಿದವರು ತಂಮ ವಹಮಾನವನು ಹದಿನೆಂಟು ಜಾತಿಗೆ ಕೊಟ್ಟವರು (ಎಕ. XI, ಹೊಳ್ಳೆ. ೧೧೨-೩೦; 1554). [?]

ವಹಮಾನಿಕೆ (ನಾ). ನಡತೆ ; ಚಾರಿತ್ರ್ಯ : ನೋಡಿದರೆ ಹಿತವೆ ಮಾತಾಡಲಮೃತದ ಸೋನೆ ಕೂಡೆ ವಹಮಾನಿಕೆಯ ನಟಿಸಿ ಜಗದೊಳಗೆ ಮಾಡದುದ ಮಾಡಿ ಕೆಡಿಸುವಳು (ಗುರುಚೋ. ೮-೮೫). [ವಹಮಾನ$_1$ + — ಇಕೆ]

ವಹವಣಿ 'ವಹಣಿ' ನೋ.

ವಹಳಿ$_1$ 'ವಹಣಿ' ನೋ.

ವಹಳಿ$_2$ 'ವಾಹಳಿ' ನೋ.

ವಹಳಿಕೆ (ನಾ). = ವಹಣಿ ೮ : ಠಾಯೆ ಲವಣಿ ವಹಳಿಕೆ ಡಾಳಂಗಳಕಾರ ಪರಂಪರೆಯ ಆಯತಿಯಿಂ ರಂಜಿಪ ಶ್ರೀಸ್ಥಾನೋಪಾಯಸ್ವರದ ಚತುರ್ವಿಧದಂಡಿಯ ಗಾಯಕಿ ಪಾಡಿದಳತಿಚದುರಿಂದ (ಜಯಾಕಾ. ೧೪-೪೩). [ವಹಳಿ$_1$ (< ವಹಣಿ) + — ಇಕೆ]

ವಹಿ (ನಾ). ೧. ಜಮಾಖರ್ಚುಗಳನ್ನು ಬರೆದಿಡುವ ಪುಸ್ತಕ ; ಲೆಕ್ಕದ ಪುಸ್ತಕ ; ಕಡತ : ಅಂದವಳಿಯ ಗ್ರಾಮವನು ಕುಳವ ಕಡಿದು ನಾಡಿಗೆ ಉತ್ತಾರ ಕೊಟ್ಟು ಗೋವೆಗುತ್ತಿಯ ಕರಣೀಕರ ವಹಿಗೆ ಬರೆಸಿ (ಮೈಅರ. ೧೯೩೪, ೨೭-೧೧; 1430); ವಹಿಗಳಿಳುಹಿದವರರೆ ಸಂಗರಮಹಿಯ ಸೀಮಾವಳಯದಲಿ ತಹ ಬಹ ಕೃತಾಂತನ ದೂತರೆಣಿಕೆಯ ಕೊಳಲು ಪಿತೃಪತಿಯ (ತೊರಾ. ೬-೪೫-೬೩). ೨. ಪುಸ್ತಕ ; ಹೊತ್ತಿಗೆ : ಭಕ್ತವಿಜಯವೆಂದ ಕೂಡಲೆ ಅದು ನಿಖಿಲಭಾರತೀಯ ಸಾಧುಸಂತರ ದಿವ್ಯಚರಿತ್ರೆಗಳ ವಿವರಣೆಯ ವಹಿ ಎಂಬ ಭಾವನೆ ನನಗಾಯಿತು (ಕಭಪ. I, ಮುನ್ನುಡಿ). [<— ಮರಾ. ವಹೀ. / ಪ್ರಾ. ವಹಿಅ]

ವಹಿಕ (ನಾ). (ಮನುಷ್ಯನನ್ನು) ಹೊರುವವನು ; ವಾಹಕ : "ಮನುಷ್ಯರ ಹೊಱುವವರ್ ವಹಿಕರಕ್ಕು" (ಮಂಗರಾ. ೧೧೨-೬). [< ಸಂ. ವಾಹಿಕ]

ವಹಿತ್ರ (ನಾ). ದೋಣಿ ; ಹರಿಗೋಲು : ಸಿದ್ಧೇಷ್ಟಶಿಷ್ಟನಿಕಾಯಕ್ಕೆ ವಹಿತ್ರಮೆಂದು ಪೊಗಟ್ಪುಂ ವಿದ್ವಜ್ಜನಂ ದುರ್ಗನಂ (ಪಂಚತಂ. ೧೦-೨೨); ಉತ್ತರಿಸಲ್ಕೊಡರ್ಚಿದಂ ಭವಜಲರಾಶಿಯಂ ದಶರಥಂ ಜಿನರೂಪವಹಿತ್ರಯಾತ್ರೆಯಿಂ(ಪಂರಾಮಾ. ೬-೬೬). [ಸಂ.]

ವಹಿತ್ರಕ (ನಾ). = ವಹಿತ್ರ. [ಸಂ.]

ವಹಿನಿ, ವೈನಿ (ನಾ). ಅಣ್ಣನ ಹೆಂಡತಿ ; ಅತ್ತಿಗೆ : ವಹಿನೀ, ವಹಿನೀ, ದಾದಾನ ಮಸಿದೌತಿ ಉರುಳಿ ಹೋಯಿತು (ಸ್ಕೃತಿಚಿ. ೫೯). **ವೈನಿ** : ವೈನಿ (ಅಣ್ಣನ ಹೆಂಡತಿ) - ವೈನಿ ಬಂದನು (ಸುವರ್ಣ. ೩೨೫); ಅಂತೂ ಸುಂದರಕ್ಕ ನಡುವೆ ಬಂದು ಹೋದ ನಿಮಿತ್ತ ವೈನಿಯೊಡನೆ ಏನಾದರೂ ಮಾತನಾಡುವುದಕ್ಕೆ ಪ್ರವೇಶ ದೊರೆತಂತಾಯಿತು (ಪೂ. ೨೫).

[<— ಮರಾ. ವಹಿನೀ./ ಪ್ರಾ. ವಹುಣ್ಣೀ = ಗಂಡನ ಅಣ್ಣನ ಸೊಸೆ]

ವಹಿಲ, ವೈಲ (ನಾ). ಬೇಗ ; ತ್ವರೆ : ಏ ಮಲ್ಲಣಿ ಮಲ್ಲಣಿಯೆನುತಾ ಮಲ್ಲಣಕವಿವರಂ ವಹಿಲದೊಳ್ನಿಲ್ತುದ್ದಾಮವಿಕಲತೆಯನಾಂತು (ಉದ್ಯಟ. ೧೨-೫೬); ಯಮುನಾ ವರನದಿಯ ತೀರಕ್ಕೆ ಬಂದನು ಭೀಷ್ಮ ವಹಿಲದಲಿ (ಕುಮಾಅ. ೨-೨೬). **ವೈಲ** : ವೈಲಾದಿ ಮಿಗೆ ಶ್ರೀಲಕ್ಷ್ಮಿಯ ನೆನೆವುತಾ ರಾಯ ಬಂದನು ತನ್ನ ಪುರಕೆ (ಬಿಜ್ಜರಾ. ೭-೯೦); ನಿಲ್ಲದಲ್ಲಿಂದ ರಾಘವ ಪೊರಟು . . . ತೆರಳಿದಂ ಮಿಥಿಲಾಪುರಿಗೆ ವೈಲದೆ (ಪರಶಿ. ೨-೪).

[< ಪ್ರಾ. ವಹಿಲ್./ ಮರಾ. ವಹಿಲಾ./ ತೆಲು. ವೈಡಮು, ವೈಳಮು]

ವಹಿಲತನ (ನಾ). = ವಹಿಲ : ವಹಿಲತನಂ ಪದಗತಿಯಿಂ ಬಹುವಿಕೆ ಕೈಮಾಟ್ಟ ನವಣಿಯಿಂ ಸುಚರಮಿವಂ ಬಹುಭಂಜನೆಯೊಡ್ಡಣದಿಂದಹಮಹಮಿಕೆ ಮಿಕ್ಕು ಮೆಚ್ಚಿದುವಿರ್ವರ ಮೆಯ್ಯೊಳ್ (ಅನಂಪು. ೧೧-೫೯). [ವಹಿಲ + — ತನ]

ವಹಿವಾಟ್ 'ವಹಿವಾಟು' ನೋ.

ವಹಿವಾಟ್‌ದಾರ (ನಾ). ಜಮೀನಿನ ವ್ಯವಹಾರವನ್ನು ನೋಡಿಕೊಳ್ಳುವವನು ; ಹಿಡುವಳಿದಾರ : ನದೀ ಅಥವ ಕಾಲುವೆ ದಡದಲ್ಲಿರುವ ನಂಬರುಗಳ ವಹಿವಾಟ್‌ದಾರರಾದವರಿಗೆ ನದೀದಡದಲ್ಲಿರುವಂತ ಜಮೀನಿನ ಪೈಕಿ ಕೆಲ ಗುಂಟೆ ಭೂಮಿಯನ್ನು ಸಾಗುವಳಿಮಾಡುವ ಹಕ್ಕುಂಟು (ಭೂಮಿಅ. ೩೭).

[ವಹಿವಾಟ್ (< ವಹಿವಾಟು) + — ದಾರ್]

ವಹಿವಾಟ 'ವಹಿವಾಟು' ನೋ.

ವಹಿವಾಟಿ 'ವಹಿವಾಟು' ನೋ.

ವಹಿವಾಟಿಸು (ಕ್ರಿ). ಬಳಸು ; ವ್ಯವಹರಿಸು : ಪಟ್ಟಣವು ತುಂಬಿದಾಗ ಇದರಲ್ಲಿ ಅರಕಿಲ್ಲೆ ಹೊರ್ತಾಗಿ ೩೩ ಪೇಟೆಗಳಿದ್ದವು. ಅವುಗಳಲ್ಲಿ . . . ೨೩ ಪೇಟೆಗಳ ಹೆಸರುಗಳನ್ನು ಮ್ಯುನಿಸಿಪಾಲಿಟಿಯವರು ಈಗ್ಯೂ ವಹಿವಾಟಿಸುತ್ತಾರೆ (ಕಭಾಗ. ೫೨೯).

[ವಹಿವಾಟು + — ಇಸ್ತು]

ವಹಿವಾಟು, ವಹಿವಾಟ್, ವಹಿವಾಟಿ, ವಹಿವಾಟಿ, ವೈವಟ್ಟು, ವೈವಾಟ, ವೈವಾಟಿ, ವೈವಾಟು (ನಾ). ೧. ಕಾರ್ಯಭಾರ ; ಕಾರುಭಾರು ; ವ್ಯವಹಾರ : ಗೋಬಿಲೆಕುಟುಂಬದ ಎಲ್ಲಾ ವಹಿವಾಟನ್ನು ಮಾಮಾನೇ ನೋಡಬೇಕಾಯಿತು (ಸ್ಕೃತಿಚಿ. ೩೦); ಈಗ ಅವರ ಮಗನು ಊರಿನಲ್ಲಿ ವಹಿವಾಟನ್ನು ನೋಡಿಕೊಳ್ಳುತ್ತಿದ್ದಾನೆ (ಮಂಶವ್ಯ. ೩೭). ೨. ಬಳಕೆ ; ರೂಢಿ : 'ವಹಿವಾಟಿಸು' ಪರಾ. **ವಹಿವಾಟ್** : ೧. 'ವಹಿವಾಟ್‌ದಾರ' ಪರಾ. **ವಹಿವಾಟಿ** : ೧. ಕೋರ್ಟು ಕಚೇರಿ ವಹಿವಾಟ ಇದ್ದಾಂಗ ಕಾಣೂದಿಲ್ಲ (ಗ್ರಾಮಾಯ. ೩೩೫). ೨. ನಿತ್ಯದ ವಹಿವಾಟದ ದಾರಿ. ರಾತ್ರಿಯಾದರೇನಾಯಿತು . . . ದನ ಹಿಂಡುವ ಹೊತ್ತಿಗೆ ಮನೆ ಮುಟ್ಟುತ್ತೇನೆ (ಶ್ಯಾಮಕಾ. ೧೩). **ವಹಿವಾಟಿ** : ೨. ನಮ್ಮನೀಗೆ ಬಾರೋ ಅಂದರ ಮೊದಲಿಂದನ ವಹಿವಾಟೇ ಅಂತ ಆ ಮಲ್ಲೇಶಿ ಮನಿಗೇ ಹ್ಯಾದ (ನಡದಾ. I, ೨೭೭). **ವೈವಟ್ಟು** : ೧. ಪೇಷ್ಕೆಯಾಗಿ ನೇಮಿಸಿ ರಾಜ್ಯದ ವೈವಟ್ಟನ್ನು ಅವರ ಕೈಗೆ ಬಿಡುತ್ತೇನೆ (ಮುಸುಗ. ೪೯); ರಾಮಯ್ಯಗೌಡರು ಮನೆ ವೈವಟ್ಟನ ಗೋಜಿಗೇ ಹೋಗುವುದಿಲ್ಲವಂತೆ (ಕಾನೂರು. ೫೯೩). **ವೈವಾಟ** : ೧. ಮನೇ ವೈವಾಟವೆಲ್ಲವನ್ನು ಅವನ ಮಗನೇ ನೋಡಿಕೊಂಡು ಹೋಗುತ್ತಾನೆ (ಎಮುಕ. ೧); ಆ ಕಾಲದಲ್ಲಿ ಈಗಿನಂತೆ ವ್ಯಾಪಾರ ವೈವಾಟದ ಅನುಕೂಲತೆಗಾಗಿ ದೊಡ್ಡ ದೊಡ್ಡ ಬ್ಯಾಂಕುಗಳು ತಲೆಯೆತ್ತಿದ್ದಿಲ್ಲ (ಏಧಿವೃ. ೩೩). **ವೈವಾಟಿ** : ೧. ಅವನ — ಶ್ಯಾಮರಾಯನ ವೈವಾಟ ಬೆಳೆದಿತು (ದೀಪಹ. II, ೧೧೩). **ವೈವಾಟು** : ೧. ದೇವಸ್ಥಾನದ ವೈವಾಟು ನೋಡುತ್ತಾರೆ (ಸಂಸ್ಕಾರ. ೧೩೦); ನಾನು ಒಂದು ವೇಳೆ ಬಾರದಿದ್ದರೆ ನನ್ನ ವೈವಾಟುಗಳೆಲ್ಲ ನಿಮ್ಮ ಕೈಯಲ್ಲಿ ಭದ್ರವಾಗಿದೆ (ನಿಷ್ಕಾಮ. ೧೫೧).

[<— ಮರಾ. ವಹಿವಾಟ್, ವಹಿವಟ್]

ವಹಿಸು (ಕ್ರಿ). ೧. ಸಾಗು ; ಮುಂದುವರಿ : ಕವಿತೆಯ ವಹಣಿ ಲೇಸ್ಯ ಶೋಕಮುಖಿ ಸನ್ನಿಹಿತ ತಚ್ಛ್ಲೋಕಪ್ರಬಂಧಸುಕಾವ್ಯರಚನೆಯಲಿ ವಹಿಸಲೀ ಪದ್ಧತಿ ಪರಿಶ್ರುತವಹುದು (ತೊರಕಾ. ೧-೨-೧೭). ೨. ಹರಿ ; ಪ್ರವಹಿಸು : ಹಲವು ಸಮತಲದೆ ವಹಿಸುತಲೆ, ಪ್ರಪಾತದಲೆ ಇಳಿದು ನೆಲ ಮೆಟ್ಟ ಭೈರವನ ತೆರೆ ಮೊರೆದು (ಕಏವು. ೩೧-೩). ೩. (ಗಾಳಿಯಂತೆ) ಬೀಸು ; ತೀಡು ; ಸುಳಿ : ಚಿನ್ನ ಬೆಳ್ಳಿಗಳ ತುಂಗಘಟದೊಳ್ಕಹಿಪ ಸಿಲ್ವ ದಶಾಂಗಮುಖ್ಯದ ನಜುವೊಗೆಗಳಿಂ ತೊಂಗಲಿಪ ಸರಘಂಟೆಯಿಂ ಮೆಚ್ಚುವದನರಸ ಕಂಡ (ಸಾಳ್ವಭಾ. ೪-೪೧). ೪. ನಿರ್ಣಯಿಸು ; ನಿರ್ಧರಿಸು : ಮಹಿಷೆಯಮಳಾಭರಣಗಳು ತಾನಹವೆ ನೋಡೆನಲೊಗುವ ದೃಗುವಾರಿಗಳ ಧಾರೆಯಲಿ ಅಹುದಿದಲ್ಲೆಂಬೆಣಿಕೆ ಮನದಲಿ ವಹಿಸಲರಿಯದೆ ನೂಪುರಂಗಳವಹುದೆನುತ ಕೆಲತೆಗೆದು ತಲೆಗುತ್ತಿದನು ಸೌಮಿತ್ರಿ (ತೊರಕಾ. ೪-೨-೮). ೫. ತಾಳು ; ಕೈಗೊಳ್ಳು : ಜಗದೊಳ್ಸ್ವಧರ್ಮಮಂ ವಹಿಸ ದವರಾರು (ಚೈಮಭಾ. ೮-೪೪); ಮನೆಯ ಯಾವ ಭಾಗದಲ್ಲಿಯೂ ಆಹಾರವಸ್ತುಗಳು ಬಿದ್ದಿರದೆ ಚೊಕ್ಕಟವಾಗಿರುವಂತೆ ಜಾಗರೂಕತೆ ವಹಿಸುವುದು ಮುಖ್ಯ (ಅಯಸಾ. ೪೯). ೬. (ಕಾರ್ಯಭಾರವನ್ನು ಬೇರೆಯವರಿಗೆ) ಒಪ್ಪಿಸು ; ಪರಭಾರೆ ಮಾಡು : ಅಹುದಕ್ಕ ನೀವು ಹಿತವೆಯನೆನಗೆ ನಿಮ್ಮ ಮಹಿಷನೊಬ್ಬನೆ ಹಿತವಲ್ಲ ವಹಿಸಿಬಿಟ್ಟೆಮ್ಮ ಹೋರಿಸುತ ತಾ ನೋಡುತುತ್ಸಾಹದೊಳಿದ್ದಪನು (ಭರತ. ೧೪-೮೭); ಯಾರಿಗಾದರೂ ವಹಿಸಿದರೆ ಆಯ್ತು (ಮುನಿಮಾ. ೮೦). ೭. ಅಂಗೀಕರಿಸು ; ಒಪ್ಪಿಕೊಳ್ಳು : ಮಗಳು ಕಿಚ್ಚಯ ಪಕ್ಷವನ್ನು ವಹಿಸಿದ್ದನ್ನು ಕಂಡು ರಾಯರು ತಮ್ಮ ಮನಸ್ಸಿನಲ್ಲಿಯೇ ನಗ ಹತ್ತಿದರು (ದಾಸಹ. ೭೪). ೮. ಘಟನೆ, ಸಂದರ್ಭ ಮುಂತಾದುವುಗಳ ಕಾರ್ಯಭಾರವನ್ನು ಹೊರು : ಅವನು ಒಂದು ಸ್ತ್ರೀಪಾತ್ರವನ್ನು ವಹಿಸಿದ್ದನು (ಚಟ್ಟಹೂ. ೧೩). 'ಪಾತ್ರವಹಿಸು' ಪರಾ.

ವಹಿಸಿಕೊಡು = ಹೊರುವಂತೆ ಮಾಡು ; ಹೊರಿಸು : ಇದು ನಮ್ಮ ತಂದೆ ನನಗೆ ವಹಿಸಿಕೊಟ್ಟಿರುವ ಕೆಲಸ (ವಚಭಾ. ೩). ವಹಿಸಿಕೊಳ್ಳು = ೧. ಒಪ್ಪಿಕೊಳ್ಳು ; ಅಂಗೀಕರಿಸು : ಸಹಜಮೆಂದಂ ಶುಂಭನೊಪ್ಪಿದಂ ಶರಭನದನಹುದೆಂದನಂಧ ಕಾಸುರನುಳಿದರೆಲ್ಲರುಂ ವಹಿಸಿಕೊಂಡರ್ ಗಗನಮೂರ್ಧ್ನಿಮತಮೇ ತಮ್ಮ ಮತಮೆಂದು (ಚಟಪು. ೫೦-೮). ೨. ಪಕ್ಷಹಿಡಿ ; ಪಕ್ಷವನ್ನು ಸಮರ್ಥಿಸು : ಸುದೇಷ್ಣೆ . . . ತಮ್ಮನನ್ನು ವಹಿಸಿಕೊಂಡು ಮಾತನಾಡಿದಳು (ನಿಚಿಪು. IX, ೮); ಸಾವಿತ್ರಮ್ಮನವರು . . . ವಹಿಸಿಕೊಂಡು ಬರುತ್ತಿದ್ದುದರಿಂದ ಹೆಚ್ಚಾಗಿ ಅವಳನ್ನು ದಂಡಿಸುವುದೂ ಸಹ ಸಾಧ್ಯವಿಲ್ಲವಾಗುತ್ತಿತ್ತು (ಕೊನಭೇ. ೭೯). [ವಹನ + — ಇಸ್ತು]

ವಹುದು 'ವರ್' ಪರಾ.

ವಹ್ನಿ (ನಾ). ೧. ಬೆಂಕಿ ; ಕಿಚ್ಚು : ವಹ್ನಿ ಧರೆಯೊಳಗೆ ತೀವಿದ ಚಿಹ್ನಮಿದೆಂಬಂತೆ ಬಿಸಿಲ ಬೇಗೆ ಕರಂ ಮಧ್ಯಾಹ್ನದೊಳಳುರ್ದೊಡೆ (ಗಿರಿ. ೯-೨೦); ಮುನಿಯು ತನ್ನರ್ಧ ಠಾವನವರಿಗೆ ಕೊಟ್ಟು ಬಲುವಹ್ನಿ ಪುಟ ಮಾಡಿ ಬಿಲ್ಲನೇಱಿಸಿಕೊಂಡು ನೆಲದಲ್ಲಿ ಕಾಯ್ದಾರ್ಡ ಶುಕ್ರನುದಿಸಲು ಬೆಳಗಿತೆಂದು ನಿದ್ರಿಸಲು (ಪ್ರೌಢರಾ. ೮-೬೯). ೨. ಯಾಗದ ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವವನು ; ಅಷ್ಟದಿಕ್ಪಾಲಕರಲ್ಲಿ ಒಬ್ಬ ; ಆಗ್ನೇಯ ದಿಕ್ಕಿನ ಅಧಿಪತಿ : ತೊಡೆವೆಂ ಶಕ್ರನ ನಾಮಮಂ ತುಡುಕಿ ನೀರೊಳ್ ಮೆಟ್ಟುವೆಂ ವಹ್ನಿಯಂ (ಜಗವಿ. ೩-೨೧). ೩. ಒಂದು ಬಗೆಯ ಸಸ್ಯ ; ಚಿತ್ರಮೂಲಿಕೆ ; "ಚಿತ್ರಕ" (ಪಂಡಿತ. ೨೭೧). ೪. ಗಾಡಿ, ನೇಗಿಲು ಮುಂತಾದುವನ್ನು ಎಳೆಯುವ ಎತ್ತು, ಕುದುರೆ ಮೊದಲಾದುವು. ೫. ದೇಹದಲ್ಲಿ ಆಹಾರವನ್ನು ಪಚನಮಾಡುವ ಶಕ್ತಿ ; ಜಠರಾಗ್ನಿ. ೬. ಜಠರರಸ. ೭. ಪಚನಕ್ರಿಯೆ. ೮. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : ಪುರಬಾಣವಹ್ನಿಶರಗಣಮಿರೆ ನಾಲ್ಕುಂ ಪದದೊಳೋಜೆ ಯುಗ್ಮಗಳೊಳ್ ಪನ್ನೆರಡಿರ್ಪತ್ತೋಳಿಯೆ ಪನ್ನೆರಡಿರ್ಪತ್ತಾಗೆ ಮಾತ್ರೆಗಳ್ (ಛಂದೋಂಬು. ೪-೨೩೦); ಹರನಯನ ವಹ್ನಿ ಪುರಶಿವಿ . . . ಮಾರ್ಗತ್ರಯಮದು ಮೂಱಱ ನಾಮಂ (ವೃತಹಾ. ೯-೩). ೯. [ಛಂದ] ಅಕ್ಷರಗಣಗಳಲ್ಲಿ ಒಂದು ; ರಗಣ (– U –) : ಆದಿಯ ಮಧ್ಯಾಂತದೆ ಗುರುವಾದೊಡೆ ಶಶಿ ಸೂರ್ಯ ವಾಯು ಗುರುವಿರೆ ಧರೆ ಮತ್ತಾದಿಯ ಮಧ್ಯಾಂತದೆ ಲಘುವಾದೊಡೆ ಜಲ ವಹ್ನಿ ಗಗನ ಲಘುವಿಂ ನಾಕಂ (ಛಂದೋಂಬು. ೧ ೩೭ ಅಡಿಪದ್ಯ). ೧೦. [ಜೈನ] ಎಂಟು ಜನ ಲೋಕಾಂತಿಕ ದೇವರುಗಳಲ್ಲಿ ಒಬ್ಬ : ಬ್ರಹ್ಮಕಲ್ಪಾಂತವಾಸಿಗಳುಮಪ್ಪ ಸಾರಸ್ವತಾದಿತ್ಯ

ವಹ್ನ್ಯರುಣಗರ್ದತೋಯತುಷಿತಾವ್ಯಾಬಾಧಾರಿಷ್ಟರೆಂದಬೆಣ್ಬರುಂ ಲೋಕಾಂತಿಕದೇವರ್ ಬಂದು (ಅಪಿಪು. ೯-೬೦ ವ); ಬ್ರಹ್ಮಕಲ್ಪಾಂತರವಾಸಿಗಳಪ್ಪ ಸಾರಸ್ವತನುಮಾದಿತ್ಯನುಂ ವಹ್ನಿಯುಂ ವರುಣನುಂ ಗರ್ದತೋಯನುಂ ತುಷಿತತೋಯನುಮವ್ಯಾಬಾಧನುಂ ಅರಿಷ್ಟನುಮೆಂಬೆಣ್ಬರುಂ ಲೋಕಾಂತಿಕದೇವರಜಿತದೇವಾಂತಿಕಕ್ಕೆ ಬಂದು (ಅಪಿಪು. ೬-೭೦ ವ). [ಸಂ.]

ವಹ್ನಿಜ (ನಾ). ಅಗ್ನಿಯ ಮಗ ; ಸ್ಕಂದ ; ಕಾರ್ತಿಕೇಯ : "ಗೌರೀಸುತಂ . . . ಷಡಾನನಂ ವಹ್ನಿಜಂ ತಾರಕರಿಪು ಸ್ವಾಮಿ ಕಾರ್ತಿಕೇಯಂ" (ಮಂಗರಾ. ೫-೧೬). [ಸಂ.]

ವಹ್ನಿಜ್ವಾಲೆ (ನಾ). ಬೆಂಕಿಯ ಉರಿ ; ಅಗ್ನಿಶಿಖೆ ; ಕಾಲಯವನ ನೊಸಲ ವಹ್ನಿಜ್ವಾಲೆಯೋ ಕೌರವನ ಸೇನಾಜಾಲವೋ ಶಿವಯೆನುತ ಹೆದಱೆದನಂದು ಸುಕುಮಾರ (ಕುಮಾವಿ. ೬-೫). [ಸಂ. ವಹ್ನಿಜ್ವಾಲಾ]

ವಹ್ನಿರೇತಸ್ಸು (ನಾ). ೧. ಶಿವ. ೨. ಚಿನ್ನ. [ಸಂ. ವಹ್ನಿರೇತಸ್]

ವಹ್ನಿಶಿಖಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು : "ಕಮಲೋತ್ತರಂ, ಕುಸುಂಭಂ, ವಹ್ನಿಶಿಖಿಂ, ಮಹಾರಜನಂ — ೪ ಕುಸುಂಬಾಬಣ್ಣದ ಹುವ್ವು" (ಸಿದ್ಧಾಂತಿ. ೩೦೬). [ಸಂ.]

ವಹ್ನಿಸಖಿ (ನಾ). ಅಗ್ನಿಯ ಸ್ನೇಹಿತ ; ವಾಯು : ವಹ್ನಿಸಖಿನಾನೆಂಬೊಂದಹಂಕಾರಮಂ ತಳೆದಾ ಮಾರುತನಂ ಕರಂ ಪಿಡಿದು ತನ್ನೈಕಿಲ್ಗಳಿಂ ನಾಂದಿ . . . ಏಂ ಪರ್ಬಿತ್ತೊ ಹೈಮಾಗಮಂ (ರಾಜಶೇ. ೯-೭). [ಸಂ.]

ವಹ್ನಿಸೂಕ್ತ (ನಾ). ಅಗ್ನಿಯನ್ನು ಕುರಿತ ಸ್ತೋತ್ರಭಾಗ : ಸಹದೇವನುಪವಾಸದಲಿ ಮಿಂದು ಕುಶಾಗ್ರಸಂಸ್ತರಣದಲಿ ಪವಡಿಸಿ ಬೇಡಿಕೊಂಡನು ವಹ್ನಿಸೂಕ್ತದಲಿ (ಕುಮಾಸ. ೫-೧೬). [ಸಂ.]

-ವಳ, -ವಳ್ಳ, -ವಾಳ್ಳ (ಪ್ರ). ಪುಲ್ಲಿಂಗನಾಮವಾಚಕಗಳಿಗೆ ಹತ್ತುವ ಒಂದು ತದ್ಧಿತಪ್ರತ್ಯಯ : ಕೆಯ್ಯೊಂಡಿದನೀತಂ ನಡೆಯಿಪನೆನೆ ತೊದಳೇಂ ವಳಮೆಂದು ವಳ್ಳಮೆಂದಿವು ನೆಗಱ್ಗುಂ (ಕಾವ್ಯಾವ. ೩೨೪); ಇಲ್ಲಿ ಈತನಧಿಕಾರಿಯೆಂಬರ್ಥದಲ್ಲಿ ವಳ ವಳ್ಳಯಂಬೀ ಪ್ರತ್ಯಯಗಳು ಬರುತ್ತವೆ (ಭಾಷಾಭೂ. ೧೭೬ ಶಾಸ್ತ್ರಿ); ನಡೆಯಿಸುವನೀತನಿದನೆಂಬೆಡೆಯೊಳ್ ವಳ ವಳ್ಳಮಕ್ಕುಂ . . . ವಳಕ್ಕೆ—ಅಡಪವಳಂ, ಮಾಸವಳಂ . . . ವಳ್ಳಕ್ಕೆ — ಅಡಪವಳ್ಳಂ, ಮಾಸವಳ್ಳಂ (ಶಮದ. ೧೯೮). -ವಳ್ಳ : ಈ ನಿಯೋಗಮನೀತಂ ನಡೆಯಿಸುವನೆಂಬಲ್ಲಿ ವಳ ವಳ್ಳ ಆಯ್ತು ಪ್ರತ್ಯಯಂಗಳಕ್ಕುಂ (ಶಮದ. ೧೯೮ ವೃತ್ತಿ); ವಳ್ಳ -- ಇದರಲ್ಲಿ ಅಧಿಕಾರವುಳ್ಳ --- ಪಡೆವಳ್ಳ (ಕೈಪಡಿ. ೧೯). -ವಾಳ್ಳ : 'ಮಡಿವಾಳ್ಳ' ಪರಾ.

ವಳಕು (ನಾ). ತಂಟೆ ; ತಕರಾರು ; ವಿವಾದ : ನೆಟ್ಟನಾ ಕೂಟಸಾಕ್ಷಿಗಳ ನುಡಿದಾತನಳವಟ್ಟು ಬೆವಹಾರದೊಳು ಜೂಜಿನೊಳು ವಳಕಿನೊಳು ಕಟ್ಟದೆ ಸಹಾಯ ಸೂಚನೆಗಳಂ ಪರಪಕ್ಷಗಳ ಮಾಡಿದವನು . . . ನರಕಪುಂಜದೊಳು ಬೀಳ್ವರು (ವೀರೇಶ್ವ. ೪-೧೭-೩೫). [ದೇ. ॥ ತಮಿ. ವಟಕ್ಕು ; ತೆಲು. ವಳುಕು]

ವಳಕ್ಷ 'ವಲಕ್ಷ' ನೋ.

ವಳಕ್ಷಪಕ್ಷ (ನಾ). ತಿಂಗಳಿನ ಮೊದಲನೆಯ ಅರ್ಧಭಾಗ ; ಶುಕ್ಲಪಕ್ಷ : ವಳಕ್ಷಪಕ್ಷ ಚಂದ್ರಮನಂತೆ ದಿನಕ್ರಮಂ ವೃದ್ಧಿಗೊಂಡೊಪ್ಪುವ ಕುವರಂಗೆ ಜಾತಕರ್ಮಾದಿ ಸಂಸ್ಕಾರಂಗೆಯ್ದು (ಅದ್ಭುತ. ೫-೧೩). [ಸಂ. ವಲಕ್ಷಪಕ್ಷ]

ವಳಜ 'ವಲಜ' ನೋ.

ವಳನ 'ವಲನ' ನೋ.

ವಳಭಿ 'ವಲಭಿ' ನೋ.

ವಳಭಿಚ್ಛಂದ 'ವಲಭಿಚ್ಛಂದ' ನೋ.

ವಳಭಿಚ್ಛದೆ (ನಾ). ಮನೆಯ ಮೇಲಿನ ಹೊದಿಕೆ ; ಛಾವಣಿ : "ಮನೆಗೇಱಿಸಿದ ಹೊದಿಕೆ ವಳಭಿಚ್ಛದೆಯಿನಿಕ್ಕು" (ಮಂಗರಾ. ೫೯-೧೩). [ಸಂ. ವಲಭಿಚ್ಛದ]

ವಳಯ 'ವಲಯ' ನೋ.

ವಳಯಂದಪ್ಪು (ಕ್ರಿ). ವೃತ್ತಾಕಾರದ ಆವರಣವನ್ನು ದಾಟು, —ಮೀರು : ಬಳಸುವೇಱುವ ಸುಟಿವಲ್ಲಿನ್ತಪ್ಪ ಚಾರಣದೋಷಮಲ್ಲದೆ ಪೊಟ್ಟವಟ್ಟಳಿಗೆ ಸಮನಾಗಿ ಗಿರಿಗೆಯ ಕೋಲ್ಮುಟ್ಟಿ ಮಿಗಲುಂ ನೆಲಲುಮಣಮಿಯದಿನ್ತೊನ್ನಳವಿಯೊಳ್ ಬರೆ ಪೋಜಗೊಳಗೆಡದೊಳಂ ಬಲದೊಳಂ ಕಡುಗಡುಪಿನ್ನೆ ಬರ್ಪ್ಪ ವಳಯನ್ನಪ್ಪದೆ ಚಾರಿಸುವೋಜೆಯಂ ರಟ್ಟಕನ್ಪರ್ಪನನ್ತಾವಂ ಬಲ್ಲಂ (ಎಕ. II, ೧೩೬-೯೪; 982).

[ವಳಯ (= ವಲಯ) + ತಪ್ಪು]

ವಳಯಗ್ರಹಣ (ನಾ). ಸೂರ್ಯಬಿಂಬದ ಮಧ್ಯಭಾಗ ಮಾತ್ರ ಚಂದ್ರನಿಂದ ಮರೆಯಾಗಿ, ಸುತ್ತಲೂ ಬಳೆಯಾಕಾರದ ಬೆಳಕು ಕಾಣಿಸುವ ಸೂರ್ಯಗ್ರಹಣ ; ಪಾರ್ಶ್ವಗ್ರಹಣ : ಸುದ್ಧಪಕ್ಷದ ಪಾಡಿವದ ಬುಧವಾರಂ ವಳಯಗ್ರಹಣದೊಳೆಲ್ಲವೀಶ್ವರಯ್ಯಗೆ ಕೊಟ್ಟರ್ (ಎಕ. VIII, ಸೊರಬ ೭೧-೩೫; 938).

[ಸಂ. ವಲಯಗ್ರಹಣ]

ವಳಯಾಕಾರ 'ವಲಯಾಕಾರ' ನೋ.

ವಳಯಾಕೃತಿ 'ವಲಯಾಕೃತಿ' ನೋ.

ವಳಯಿತ 'ವಲಯಿತ' ನೋ.

ವಳರ್ಕ್ಕದೇಹ (ನಾ). ಬೆಳ್ಳಗಿರುವ ದೇಹ ; ಗೌರವರ್ಣದ ಶರೀರ : ಅಹಿನಾಥವಳರ್ಕ್ಕದೇಹದೊಳ್ ಸಾತ್ತ್ವಿಕಮೂರ್ತಿ ನಿನ್ನಭಯಹಸ್ತಸರೋಜದ ಕೆಂಪು ಕೂಡೆ ನಿತ್ಯತ್ಯಮನೊಪ್ಪುಗೊಳ್ವೆ ನಿಜನೀಲಸರೋಜನಿಭಾಂಗಕಾಂತಿಯಿಂ (ವಸ್ತುವ. ೮೯).

[ಸಂ. ವಲರ್ಕ್ಕದೇಹ]

ವಳವಾಳಿ (ನಾ). ಪ್ರತಿಜ್ಞೆಯನ್ನು ಪಾಲಿಸುವವನು ; ವೇಳೆವಾಳಿ : ಕವಡೆಯ ಬಿಂಮಂ ಬೋಳವಾಳಿ ವಳವಾಳಿಯಂ ಮೆಱದಿದಿರಾಂತ ಮಾರ್ವಲವಂ ತಳಿತಿಱಿದು (ಎಕ. VIII, ಸಾಗರ. ೧೨೫-೧೨; 1216); ಆ ಬಲ್ಲನ ಜೋಳವಾಳಿ ವಳವಾಳಿಯಂ ಮೆಱದು ಸುರಲೋಕಪ್ರಾಪ್ತನಾದಡೆ (ಎಕ. VIII, ಸಾಗರ. ೨೭-೧೧; 1241).

[IP ಇದು 'ವೇಳೆವಾಳ' ಎಂಬುದರ ಅಪಲಿಖಿತ]

ವಳಾವಳಿ (ನಾ). ೧. ತಳಮಳ ; ಚಡಪಡಿಕೆ ; ಕಾತರ : ಆಱಿಯದೆ ವಳಾವಳಿಯಿಂದ ನಾ ಮಾಡಿದಹೆನೆಂದು ಪ್ರತಿಜ್ಞೆಯಿಂದ ಕೈಕೊಂಡು ಇಲ್ಲದುದನುಂಟು ಮಾಡಿ (ಚಸ್ವ. ಕ. ೩೨೮-೬೫೩). ೨. ಗಡಿಬಿಡಿ ; ಸಂಭ್ರಮ : ನೀವು ಮಾಡಿದ ಯಜ್ಞಮುಖದ ವಳಾವಳಿಯೊಳಾವಿರಲು ಮುತ್ತಿತು ದೇವರಿಪುಬಲನಿಕರವಸ್ಯದ್ವಾರಕಾಪುರಿಯ (ಕುಮಾಅ. ೨-೨೩); ನಾನಂದು ನಿಮ್ಮ ಯಜ್ಞದ ವಳಾವಳಿಯೊಳಗೆ ತಾನಿರಲ್ಕತ್ತದನು ತಿಳಿದು ದ್ವಾರಾವತಿಯ ದಾನವನು ಸಾಲ್ಪನೆಂಬುವ ಮುತ್ತಿದನು (ಹರಿಂಗ. ೨೬-೨೨). [<— ಆರ. ವಲ್ವಾಲ್; ಮರಾ. ವಳವಳ್, ವಳವಳಾ]

ವಳಿ1 (ಕ್ರಿ). ತಿರುಗು ; ಬಾಗು : ನಡೆಯುವಾಗ ಇದ್ದಕ್ಕಿದ್ದ ಹಾಗೆ ಕಾಲು ವಳಿಯಿತು (ರೂಢಿ). 'ವಳಿಯಿಸು' ಪರಾ. [ದೇ. ॥ ತಮಿ. ವಲಿ]

ವಳಿ2 'ವಲಿ1' ನೋ.

-ವಳಿ3 (ಪ್ರ). ಕ್ರಿಯಾವಾಚಕಗಳನ್ನು ನಾಮವಾಚಕಗಳಾಗಿ ಪರಿವರ್ತಿಸುವ ಒಂದು ಭಾವವಾಚಕ ಕೃತ್ಪ್ರತ್ಯಯ : ನಡೆವಳಿ, ನುಡಿವಳಿ, ಸಲ್ವಳಿ — ಎಂಬಂತೆ, ವಳಿ ಪ್ರತ್ಯಯಂ ಮುಂತಾದುಱಿದ ಪ್ರತ್ಯಯಂಗಳಂ ಶಾಬ್ದಿಕರಿನನ್ತಿತರಱಿವುದು (ಶಮದ. ೨೧೫ ಪ್ರಯೋ); ವಳಿ--ನಡೆ, ನುಡಿ—ನಡೆವಳಿ, ನುಡಿವಳಿ (ಕೈಪಡಿ. ೧೯).

ವಳಿಕಾಱ (ನಾ). ಒಂದು ಕುಲಕ್ಕೆ ಸೇರಿದವನು ; ಬೀಳಿಗೆಯವನು ; ವಂಶಸ್ಥ (?) : ಯೀ ದಿನಂ ಮೊದಲಾಗಿ ಪ್ರಾಕುನಾದವರ ಹೆಸರ ಪುಣ್ಯರೂ ಆ ವಾಡ ವಳಿಕಾಱಪ್ರಭುಗಳ ಮನೆಯಲು ಯಿದ್ದರೂ ಸಮ (ಸೌಇ. IX-ii, ೪೩೬-೮೪; 1408).

[< ಬಱ್ಳಿ3 + — ಕಾಱ]

ವಳಿಗ (ನಾ). ಒಬ್ಬಾತನ ಹೆಸರು : ಆತನ ತಮ್ಮ ವಳಿಗಱ್ಗೆ ಮಣಿಗಱ್ಗೆ ಇಬ್ಬರ್ಗೆ ಇಟ್ಟು x x ಕಾದು ನಡೆಯ ಬಾಟ್ಟೆಡೆಯೊಳಂ x x ಪರಿಹಾರ ಕೊಟ್ಟು (ಎಕ. IV (R), ಚಾಮರಾ. ೧೧೫ ೭; ಸು. 10ನೆಯ ಶತ). [?]

ವಳಿಗೆ (ನಾ). ೧. ಕವಳ ; ತುತ್ತು : "ಬೇವಣಂ, ವಳಿಗೆ, ಕವಳಂ — ಈ ೩ ತುತ್ತಿಂಗೆ ಪೆಸರ್" (ಶಶಾ. ೬೫-೪೫೩); ಭ್ರಮೆಗೊಂಡು ಕಾಮುಕಂ ವಳಿಗೆಯನೆತ್ತಿ ಬೊಟ್ಟಿಡಲೊಡರ್ಚಿ ಬಟ್ಟೆಕ್ಕೆ ಪೊಗಟ್ಟೆಗಿಕ್ಕಿದಂ (ಅನಂಪು. ೧೧-೨೦); ಆಳಮಾಳಮಂತೆ ಠಮಾಳಂ ವಳಿಗೆ . . . ಪೇಳಿ ಜಟಸಂದೇಹಂ (ಶಮದ. ನ. ೩೫).

೨. ಉಂಡೆ ; ಮುದ್ದೆ : ತೂಗುವುದು ಮೂಱು ಪೊಂಪ(ಣ್ಬ)ಣಮಾಗಿರೆ ಮಾಡುವುದು ವ[ಪಾಠಾ. ಗು]ಳಿಗೆಯಂ ಕೆಯ್ಯಂದಂ ನಾಗಸುದಪ್ಪಗೆ ಪೂಸುವುದಾಗಳೆ ತತ್ಸಾನನಸ್ಯಲೇಪನ ವಿಧಿಯಿಂ (ಏಮುದ. ೫-೪೭). [< ಸಂ. ವಟಿಕಾ]

ವಳಿಗೊಳಿಸು (ಕ್ರಿ). ಅಲೆಗಳೇಳುವಂತೆ ಮಾಡು ; ತರಂಗಗಳೇಳುವಂತೆ ಮಾಡು : ಬಳಸಿ ಚಲಿಮಿಲಿಪ ವಿಹಗಂಗಳ ಕಳಕಳದೊಡನೆ ತೋರ್ದು ಸರಸೀಜಳಮಂ ವಳಿಗೊಳಿಸಿ ಕುಮುದಮುಖಮಂ ಪೆಳಱಿಸಿ ತೀಡಿತ್ತು ಸುಪ್ರಭಾತಸಮೀರಂ (ಶಾಂತೀಶ್ವ. ೧೧-೯೫). [ವಳ್ಳಿ$_2$ (= ವಲ್ಲಿ$_1$) + ಕೊಳ್$_1$ + − ಇಸು$_3$]

ವಳಿತ 'ವಲಿತ' ನೋ.

ವಳಿತ್ರಯ (ನಾ). (ಸಾಮಾನ್ಯವಾಗಿ ಹೆಂಗಸರ) ಹೊಟ್ಟೆಯ ಮೇಲಿರುವ ಮೂರು ಗೆರೆಗಳು ; ತ್ರಿವಳಿ : ನೀರೊಳಗಣ ರೇಖೆಯಂತೆ ಕಿಡೆ ಚಾರುವಳಿತ್ರಯಮಾ ಶಿರೀಷಕೋಮಳೆ ನವಮೇಘದಂತೆ ಗುರುಗರ್ಭಭರಾನ್ವಿತೆಯಾದಮೊಪ್ಪಿದಳ್ (ಕಾವ್ಯಸಾ. ೩೬೦ ಶೂದ್ರಕ) ; ಆಕೆಯ ವಳಿತ್ರಯಂಗಳುಂ ಪಗೆವರ ಶಕ್ತಿತ್ರಯಂ ಗಳುಮೊಡನೊಡನೆ ಕೆಟ್ಟುವು (ಪಂಪಭಾ. ೧-೧೪೦ ವ). [ಸಂ. ವಲಿತ್ರಯ]

ವಳಿದೆರೆ(ನಾ). ಹೊಟ್ಟೆಯ ಮೇಲಿರುವ ಚರ್ಮದ ಮಡಿಕೆ : ಸುಳಿನಾಭಿಯಿಂದ ವಳಿದೆರೆಗಳಿಂ ಪೊಂಪಾಂತು ನಳಿನಜಾಂಡಕೆ ಬಹುಸ್ಥಲವನೀಯುವ ಜಠರ (ಮಲ್ಲಾರಿ. ೫-೧೪). [ವಳ್ಳಿ$_2$ (= ವಲ್ಲಿ$_1$) + ತೆರೆ$_4$]

ವಳಿಯಿಸು (ಕ್ರಿ). ಬಾಗಿಸು ; ಬಗ್ಗಿಸು ; ಹೊರಳಿಸು : ನಿಬಿಳತುರಗಬಳದ ವಳಿಯಿಪ ವಾಳಜಾಳದ ಕೊನೆಗಳಿಂ ಬಿಡದೆ ಸಿಡಿವಕ್ಕಿಗಳ ಗಡಣಮಂ ಪಡೆದು ಪಗಲೊಳ್ ಪಗಿಲ್ದು ತೋರ್ಪ ತಾರಕಂಗಳುಂ (ವರ್ಧಪು. ೮-೪೦ ವ).

[ವಳ್ಳಿ$_1$ + − ಇಸು$_3$]

ವಳಿಯೆಱೆ (ನಾ). ಒಂದು ಊರಿನ ಹೆಸರು : ಉಪ್ಪವಳ್ಳಿಯ ಪೋಚಿಗಾಮುಣ್ಡ ವಳಿಯೆಱೆ ಮುದ್ದ ಮಾಗುಣ್ಡೆಯೆಱೆಗ (ಎಕ. XV, ಬೇಲೂರು. ೩೦೮-೧೩; 971). [?]

ವಳಿರೇಖೆ (ನಾ). ಹೊಟ್ಟೆಯ ಮೇಲಿನ ಚರ್ಮದ ಮಡಿಕೆಯಿಂದಾದ ಗೆರೆ : ವಳಿರೇಖೆ ಮಸುಳೆ ಗರ್ಭಂ ಬಳೆವುದುಮೊಡವಳೆದು ಸತಿಯ ಮಧ್ಯಂ ಚೆಲ್ವಂ ತಳೆದುದು (ಪಂರಾಮಾ. ೪-೪); ವಳಿರೇಖೆವಡೆದ ಬಡನಡು ತೊಲೆಯೆನೆ ಕುಚಜಘನಭಾರಮಂ ಕರತಲದೊಳ್ ನಿಲಿಸೆ ಲತಾಂಗಿಗೆ ನೀಸಲ್ ಕಲಿಪ ವಿಟಂ ತೂಗುವಂಗಜುಂಗೆಣೆಯಾದಂ (ಅಂಪು. ೭-೭೯). [ಸಂ. ವಲಿರೇಖಾ]

ವಳೀಕ 'ವಲೀಕ' ನೋ.

ವಳುಂಗವಮ್ಮ (ನಾ). ಒಬ್ಬಾತನ ಹೆಸರು : ಮಹಾಬಲಿಬಾಣರಸರ ಕರಣಿಗ ವಳುಂಗವಮ್ಮನ ಕಂಬಂ (ಎಕ. X, ಮುಳಬಾ. ೧೨೪-೨; ಸಿ. ೫೫೦?). [?]

ವಳೆ$_1$ 'ಬಳೆ$_1$' ನೋ.

ವಳೆ$_2$ 'ಬಳೆ$_2$' ನೋ.

ವಳೆಯ (ನಾ). ೧. ಮಂಡಲ ; ಆವರಣ ; ಸುತ್ತು : ಕರ್ನ್ನಿಕಾಮಧ್ಯ ಅಕ್ಷರದ ವಳೆಯವ ಮೊದಲುಗೊಂಡು ನಾಲ್ಕನೆಯ ವಳೆಯದಲ್ಲಿ ಜನಸ್ತುತಿ ರಿಯಂಯಂಬ ಪ್ರಬಂಧದ ನಾಮವನೋದಿಕೊಂಬುದು . . . ಎಂಟನೆಯ ವಳೆಯದಲ್ಲಿ ಸೂರಿ ವಿರಚಿತಾಯೆಂದು ಕವಿನಾಮವನೋದಿಕೊಂಬುದು (ಎಕ. VII, ಶಿಕಾರಿ. ೨೨೯-೮೬; 1100); ಕಪಿಲಸಿದ್ಧಮಲ್ಲೇಶ್ವರದೇವರ ಕ್ಷೇತ್ರದ ಚತುರಾಶ್ರಯದ ನಾಲ್ಕುಂ ದೆಸೆಯ ವಳೆಯ ದೊಳಗೆ(ಎಾ. XXIII, ೧೯೫-೪೬; 1265). ೨. ಕುದುರೆಯ ತುಂಟತನವನ್ನು ಅಡಗಿಸಲು ಕಟ್ಟುವ ಸೊಂಟಪಟ್ಟಿ ; ತಂಗುಪಟ್ಟಿ : 'ಕುದುರೆವಳೆಯ' ಪರಾ.

[< ಸಂ. ವಲಯ]

ವಳೆಯಶಾಸನ (ನಾ). ತಾಮ್ರಶಾಸನದ ಬಳೆ : ಯಾ ಗೊಪಗೊಂಡನ ಹಳೆಯನೂ . . . ಶ್ರೀವೆಂಕಟಾದ್ರಿಗರ್ಪಿತವಾಗಿ ಧಾರೆಯನೆಱದು ದಾನಪತ್ರಶಾಸನವನೂ ಕೊಟ್ಟು ವಳೆಯಶಾಸನಕೆ ಅಪ್ಪಣೆಯನು ಕೊಡಿಸಲಾಗಿ . . . ಹೆಬ್ಬಾರುಉಪಾಧ್ಯರು ಯಾ ಅಗ್ರಹಾರಕೆ ವಳೆಯಶಾಸನವನು x x x ಧ್ವಜಸೇವೆಯನೂ ನಿತ್ಯವಾಗಿ ನಡಸಿ (ಎಕ. XVI, ಪಾವುಗ. ೧೦೨-೧೨; 1541). [ವಳೆಯ + ಶಾಸನ]

-ವಳ್ಳ '-ವಳ' ನೋ.

ವಳ್ಳಾವಿ (ನಾ). ಒಂದು ಪ್ರದೇಶದ ಹೆಸರು : ವಳ್ಳಾವಿವಿಷಯ ಪಳ್ಳಾಗ್ರಾಮ ಕೆಱೆಗಾಲೂರ್ಪೊಸವಳ್ಳಿ ಮಿಾದುಣ್ಡವಳ್ಳಿ ಕಾಚಾಪ್ಪಳಿ ಕಾತುಳ್ಳಮುಳಿಯುಂ (ಮೈಅಂ. ೧೯೩೦, ೩-೧೮; ಸಿ. 475). [?]

ವಳ್ಳಿಗ್ಗಾಮೆ, ಬಳ್ಳಿಗಾಮೆ, ಬಳ್ಳಿಗಾವೆ (ನಾ). ಒಂದು ಊರಿನ ಹೆಸರು : ವಳ್ಳಿಗಾಮೆಯರ ದಾಸದಿಯುಂ ಅಮಲಿಯರ ದೇವದಿಯುಂ . . . ಮುಖವಾಗೆ ಎರಡುಂ ನಾಟ್ಕೆ ರಾಜಶ್ರಾವಿತಮಾಗೆ ಪ್ರಸಾದಂ ಕೆಯ್ಯೂರ್ (ಇಆ.XIX, ೧೮೪-೬; ೧೯೮ ಶತ). ಬಳ್ಳಿಗಾಮೆ : ಜಿಡ್ಡೂರಾಳ್ಗೆಯೆಟ್ಟತ್ತರ್ಕಂ ಬಳ್ಳಿಗಾಮೆಯ ಬಾಟೆಗೆ ಸಹಿತ ನಾಟ್ಗೂವುಣ್ಣುಗೆಯ್ದೆ (ಮೈಅಂ. ೧೯೨೯, ೭೮-೭; 964). ಬಳ್ಳಿಗಾವೆ : ಬಳ್ಳಿಗಾವೆಯ ತಳದ ಹುಲ್ಲೆಯ ಬಯಲೊಳ್ (ಮೈಅಂ. ೧೯೨೯, ೬೫-೮; 1024?); ರಾಜಧಾನಿ ಬಳ್ಳಿಗಾವೆಯ ನೆಲೆವೀಡಿನೊಳ್(ಎಕ. VII, ಶಿಕಾರಿ. ೧೨೦-೧೧; 1048). [< ವಳ್ಳಿ$_2$ + ಗಾಮ್ಮೆ (< ಗಾಮ)]

ವಳ್ಳಿಯೋಗ (ನಾ). ಒಂದು ಬಗೆಯ ಕಾಯಿ : ವಳ್ಳಿಯೋಗ:- ಈ ಕಾಯಂ ನೀರಲ್ಲಿ ತೇದು ನಸ್ಯಂಗೈಯಲು ಸರ್ವವಿಷ ಹರ (ವೈವೈ. ೭). [?]

ವಟಿ (ನಾ). ದಾರಿ ; ಮಾರ್ಗ : ಇಱಿಯದ ಬೀರಂ . . . ಕೇ[ಳ್ದ] ಮಾತಱಿಯದ ಮಾತು ತಮ್ಮ ಬಱುವಾತುಗಳೊಳ್ ಪುದಿದೆಗ್ಗರೆಯ್ದೆ ಕಣ್ಣೆಱೆವಿನಮಾರ್ ಕೆಱರ್ ವ[ಪಾಠಾ. ಪ]ಟಿಯದೇನೆಳೆಯಂ ಕಿಡಿಸಲ್ಕೆ ಬಲ್ಲರೋ (ಪಂಪಭಾ. ೪-೧೫); "ವಟಿಯದೇಂ— ಬೇರೆ ಮಾರ್ಗವೇನಿದೆ?" (ಪಂಪದೀ. ೧೭೧). 'ಬಟಿ$_3$' ಪರಾ.

[ದೇ. ॥ ತಮಿ. ಮಲ. ವಟಿ]

ವಟಿಗಟ್ಟ (ನಾ). ಒಬ್ಬಾತನ ಹೆಸರು : ವಟಿಗಟ್ಟನ ಮಗ ಪುಲಿಕಡ್ಡಅರಸರ್ ಸಿಯಗೆಲ್ಲರ್ಕ್ಕಾಗಿ ಕೊಮಾರನ್ ಕಿರ್ಕ್ಕೋಳತ್ತು ಬಗಬಳ್ಳಿಯುಳೆಱಿದು ಬಿಟ್ಟೊಂ (ಎಕ. XVI, ತುಮಕೂ. ೯೧-೮; ಸಿ. 775). [?]

ವಟಿತ (ನಾ). ಅಧೀನ ಪ್ರಾಂತ : ಅಧಿಕರಿಗವುಣ್ಣನೂ ಚರಮಗವುಣ್ಣನು ಶಿವಯಗವುಣ್ಣನು ಮುವರುಮಿಟ್ಟು ಇಗ್ಗಲಿಯೂರಾ ಗವತೆಯ ವಿಡಿಸಿದರದೆ ಬಿಟದು ವಟಿತಕೆ ಮದಿಗೆರೆ (ಮೈಅಂ. ೧೯೩೦, ೪೦-೯, ೧೫೦ ಶತ); ಶ್ರೀದಾಸಿರಾಜನೂರ್ಜ್ಜಿತನಾದಂ ವಿಖ್ಯಾತಕೀರ್ತ್ತಿಮಾರ್ತ್ತಣ್ಡನಿಭಂ ಚರಿತಂ ಸನ್ಮುನಿ ಮೂಳಸೂತ್ರವಟಿತಂ (ಕಾ. I, ೨೬-೨೪; 1161). [IP ಇದು 'ವಳಿತ' ಎಂಬುದರ ಅವಲಿಖಿತ]

ವಟುರೂರ್ (ನಾ). ಒಂದು ಊರಿನ ಹೆಸರು : ವಟುರೂರುಪ್ಪವಪಯ್ಯ (ಎಕ. IV, ಗುಂಡ್ಲುಪೇ. ೫೬-೮; ಸಿ. ೫೦೦?). [? + ಊರ್]

ವಾಂಗಿಭಾತು 'ವಾಂಗೀಭಾತು' ನೋ.

ವಾಂಗೀಬಾತ್ 'ವಾಂಗೀಭಾತು' ನೋ.

ವಾಂಗೀಭಾತು, ವಾಂಗಿಭಾತು, ವಾಂಗೀಬಾತ್ (ನಾ). ಸಾಮಾನ್ಯವಾಗಿ ಬದನೆಕಾಯಿ ಹಾಕಿ ತಯಾರಿಸುವ ಒಂದು ಬಗೆಯ ಕಲಸನ್ನ : ಪಾರದ ಎರಡು ತಿಂಡಿ, ಉಪ್ಪೇರಿ, ವಾಂಗೀಭಾತು (ರೂಪಸಂ. ೧೬). ವಾಂಗಿಭಾತು : ಈಗಿನ ಸಪ್ಪೆಕಾಲದಲ್ಲೂ ಈ ಪಠಿಂಗ ರೈತರಿಂದ ಕೀರು, ವಾಂಗಿಭಾತು ವಸೂಲ್ ಮಾಡೋ ಧೀರ ಶೇಕದಾರನಿದ್ದಾನಲ್ಲ (ಕಲನೆ. ೬೩); ಬೆಳಗಿನ ವಾಂಗಿಭಾತು ಸ್ವಲ್ಪ ನಿಮಗಾಗಿ ಇಟ್ಟಿದ್ದೀನಿ (ಟೀಲುಗೊಂ. ೭೧). ವಾಂಗೀಬಾತ್ : ಬರ್ತೀನಿ . . . ಏನ್ಮಾಡಿಸುತ್ತೀರೋ . . . ಕೀರು . . . ವಾಂಗೀಬಾತ್ (ಅನ್ನಾವ. ೫೭). [<— ಮರಾ. ವಾಂಗೀಭಾತ್]

ವಾಂಚಲ್ಯ, ವಾಂಛಲ್ಯ (ನಾ). ಪ್ರೀತಿ ; ಮಮತೆ : ಮಿತ್ರನನು ಕೈಸೆರೆಯ ದಿವಿಜರ ಮಿತ್ರೆಯರು ತಾವು ಪಿಡಿದರೆಂದೇ ಮಿತ್ರವಾಂಚಲ್ಯದಲಿ ಪೊಕ್ಕನೊ ಕೊಳವನೆಂಬಂತೆ (ಅಂದಿಕಾ. ೯-೨೬); ಅವಳಿಗೆ ಕಾಹಿಲೆ ಕಸಾಲೆಯಾದರೆ ನೋಡಿಕೊಳ್ಳಲಿಲ್ಲವೇ? ನನಗೇನು ವಾಂಚಲ್ಯವಿಲ್ಲವೇ? (ತಾಯಿಕ. ೧೨). ವಾಂಛಲ್ಯ : ಏಂ ಕಾರಣದಿ ಮೌನದಿಂದಿಹನಯ್ಯ ವಾಂಛಲ್ಯ(ಚಾಂಚಲ್ಯ)ಮುಣ್ಮೆ ಮನದಿ (ವೆಂಕಾರಾ. ೨-೮-೫); ಕೊಡಗಿನ ರಾಜರಿಗೂ . . . ಇಂಗ್ರೇಜಿಬಹಾದ್ದರ ಕಂಪನಿಸರಕಾರಕ್ಕೂ ಮಿತ್ರತ್ವ ವಾಂಛಲ್ಯವಿಟ್ಟು ನಡೆಯಬೇಕೆಂಬ ಅಪೇಕ್ಷೆ ನಮಗೆ ಇದೆ (ರಾಜೇಂದ್ರ. ೫೪); ತಾಯಿಗೇ ಇಲ್ಲದೆ ವಾಂಛಲ್ಯ ನಿಮಗೆಲ್ಲಿಂದ ಬರಬೇಕು? (ಸಂಧ್ಯಾರಾ. ೪೫). [< ಸಂ. ವಾತ್ಸಲ್ಯ]

ವಾಂಛನೀಯ (ಗು). ೧. ಅಪೇಕ್ಷಣೀಯವಾದ ; ಇಚ್ಛಿಸತಕ್ಕ : ರಾಷ್ಟ್ರದ ಜನಬಲ ಹೇಗೆ ಉಳಿಯುತ್ತದೆ, ವಾಂಛನೀಯದರಕ್ಕಿಂತ ಹೆಚ್ಚೇ, ಕಡಿಮೆಯೇ

(ಕವಿಕೋ೬, ೯೦೯). (ನಾ). ೨. ಅಪೇಕ್ಷಣೀಯವಾದುದು : ಹರುಷಗಡಲಲೆಗಳೊಳು ಮನವಾರೆ ಮಿಂದು . . . ಮೆರೆವಾ ಜೀವನಂ ವಾಂಛನೀಯಮಲ್ತೆ (ಭಾರಂಗ. ೩-೧೮).

[ಸಂ.]

ವಾಂಛಲ್ಯ 'ವಾಂಚಲ್ಯ' ನೋ.

ವಾಂಛಿತ (ಗು). ೧. ಬಯಸಿದ ; ಅಪೇಕ್ಷಪಟ್ಟ : ಅದಕ್ಕೆ ವಾಂಛಿತ ಮೃತ್ಯು ಅಥವಾ ಪುನರ್‌ಜನ್ಮ ಪ್ರಾಪ್ತವಾಗುತ್ತದೆ (ಆಶ್ರಮ. ೯೪). 'ವಾಂಛಿತಫಲ' ಪರಾ. (ನಾ). ೨. ಆಸೆ ; ಬಯಕೆ : ಮಿತ್ರಾ ನಿನ್ನ ವಾಂಛಿತವು ಪೂರ್ಣವಾಗಲಿಲ್ಲವೇನು? (ಮಂಜುಳ. ೬೨); ಗೋದಮ್ಮನವರೊಮ್ಮೆ ತಮ್ಮ ವಾಂಛಿತವನ್ನು ವ್ಯಂದಮ್ಮನವರೆದುರಿಗೆ ವ್ಯಕ್ತಪಡಿಸಿದರು (ಗೃಹಲ. ೩೭). ೩. ಬಯಸಿದುದು ; ಅಪೇಕ್ಷಿಸಿದುದು : ತ್ರಾಹಿ ಮಾಂ ಭಕ್ತಕುಲವಾಂಛಿತದ ಸುರವೃಕ್ಷ (ಪಚಕಾ. ೫-೭೯); ಫಡ ಸುರಧೇನುಗಳಲಾ ಕಱೆಯರೇ ಪರಬಲಕ್ಕೆ ವಾಂಛಿತವ (ಖಾಂಡೀ. ೪-೬೭).

[ಸಂ.]

ವಾಂಛಿತಫಲ (ನಾ). = ವಾಂಛಿತ ೩ : ವಾಂಛಿತಫಲವೀವನಾದ ಮುಖ್ಯಪ್ರಾಣ ಮಹಾನುಭಾವ (ಪುರಂದ. ೨-೧೪೦-೩); ವಂದಾರುಜನಕೆ ವಾಂಛಿತಫಲಗಳನೀವ ಮಂದಾರತರುಗೆ ಮಾಧವಗೆ . . . ವಂದಿಪೆನು (ಹದಿಬ. ೭-೧). [ಸಂ.]

ವಾಂಛಿಸು (ಕ್ರಿ). ಬಯಸು ; ಅಪೇಕ್ಷಿಪಡು : ಒಬ್ಬ ಸಭ್ಯಗೃಹಸ್ಥರು ನನ್ನ ಮೈತ್ರಿಯನ್ನು ವಾಂಛಿಸಿ . . . ನಾವಿಬ್ಬರೂ ದೈವವಶಾತ್ ಮಿತ್ರರಾದೆವು (ಕೋದಂಡ. ೪).

[ವಾಂಛೆ + – ಇಸು]

ವಾಂಛೆ (ನಾ). ಆಸೆ ; ಬಯಕೆ : ಇಂದ್ರಿಯಸುಖವಾಂಛೆಯಂ ಬಿಸುಟ್ಟು . . . ನಿಜಶುದ್ಧಾತ್ಮಭಾವನಾಜನಿತ ಪರಮಸುಖಾಮೃತರಸಸಂತೃಪ್ತರಪ್ಪ ಪುರುಷರಿಂದಾ ಪೂಜ್ಯಂ ಪರಿಹರಿಸಿ ಪಡುಗುಂ(ಪೂಜಾ. ೯೧); ಮನವುಂ ನೆನಹುಂ ವಾಂಛೆಯುಮನವರತಂ ಭಿನ್ನವಿಲ್ಲದಿರ್ಕುಂ ನಿಜದಿಂ (ಹಮ್ಮೀರ. ೨-೬೯). [ಸಂ. ವಾಂಛಾ]

ವಾಂಡೆರ್ಕು (ನಾ). ಒಂದು ಸ್ಥಳದ ಹೆಸರು (?) : ತಸ್ಮೀಮಾನ್ವರಂ ಕೊಳ್ಗಿನಿ ತೊಜೆವಿ ಪೇರಿರ್ವೆವಿ ವಾಣ್ಡೆರ್ಕ್ಕು ತುಟ್ಟಿಲುಂ . . . ಮುದುವುಣಿಸೆ ಮಾಳ್ಪೆಯುಳ್ ಕೊಡಿತ್ತು ಸೀಮೆ (ಎಕ. XVI, ಗುದ್ದಿ. ೭೫-೫೦; 733). [?]

ವಾಂತ (ನಾ). ವಕಾರದಿಂದ ಕೊನೆಯಾಗುವ ಶಬ್ದ : ವಾಂತಕ್ಕೆ – ಅವಿ . . . ಅಟ್ಟು (ಕಮಧಾ). [ಸಂ.]

ವಾಂತಶನ (ನಾ). ಹೊಲಸು ತಿನ್ನುವ ಪಿಶಾಚಿ : ಬ್ರಹ್ಮಸ್ವ ದೇವಸ್ವಾಪಹಾರವ ಮಾಡಿದಾ ಕಡುಪಾಪಿ ವಾಂತಶನಹನು (ನಿಭಾಗ. ೫-೧೨-೯). [< ಸಂ. ವಾಂತಾಶನ]

ವಾಂತಿ (ನಾ). ಕಾರಿಕೆ ; ವಮನ : ಆ ಮದ್ದು ವಾಂತಿಗೆ ಸಲ್ಲ (ಸರ್ವಜ್ಞ. ೧೪-೯೧); ಅರಳಿ . . . ಈ ಹಣ್ಣಿನಿಂ ಕರಕು ಮಾಡಿ ಬೆಣ್ಣೆಯಲ್ಲಿ ಕಲಸಿ ನುಂಗಿಸಲು ಮಕ್ಕಳ ವಾಂತಿ ಗುಣ (ಎಷ್ಟು. ೧); ಶಿವನ ರೇತಸ್ಸನ್ನಮರರು ಕೊಂಡು ನದಿಯಲ್ಲಿಯವರೆಲ್ಲರುಂ ವಾಂತಿಯಂ ಮಾಡಲು (ವಿಷ್ಣಿಪು. ೩-೨೧-೪೧).

ವಾಂತಿಮಾಡು = ೧. ಕಾರಿಕೊಳ್ಳು ; ಕಕ್ಕು : ಎಂದೂ ವಾಂತಿಮಾಡಿಕೊಳ್ಳದಿದ್ದ ಭೀಮಪ್ಪ ಅಂದು ವಾಂತಿಮಾಡಿಕೊಂಡಿದ್ದ (ಮಣ್ಣುಹ. ೧೨೭); ಯಾರು ಯಾರೋ ವಾಂತಿಮಾಡಿಕೊಳ್ಳುವದು, ಯಾರದೋ ಮೈ ಮೇಲೆ ಸಿಡಿಯುವದು (ಶ್ಯಾಮಕಾ. ೨೫). ೨. (ಆಲಂ) ಒಪ್ಪಿಸು ; ಅರ್ಪಿಸು : ಮೂರುತಿಂಗಳುಗಳಿಂದ ಹಗಲಿರುಳೂ ಓದಿದ್ದೆಲ್ಲವನ್ನೂ ಪರೀಕ್ಷೆಯ ದಿನ ವಾಂತಿಮಾಡಿದ್ದಾಯ್ತು (ಡಂಭಿ). ವಾಂತಿಮಾಗು = ಕಾರಿಕೊಳ್ಳು ; ವಮನವಾಗು : ಋಣಾತೂರ್ಯ, ಸ್ವೇಚ್ಛಾತೂರ್ಯ ಇಂತೀ ಮಾಟದಲ್ಲಿ ಮಾಡೆ ಉಂಡ ಓಗರ ವಾಂತಿಯಾದಂತೆ (ಮೋಮಾ. ೨೮-೧೧೫); ಕುಡಿದ ವಿಷವು ಹೊಟ್ಟೆಯೊಳಗೆ ನಿಲ್ಲದೆ, ದುಂಡರಿಸಿ, ವಾಂತಿಯಾಗಿ ಹೊರಗೆ ಬಿತ್ತು (ಮುಂಬಯಿ. ೫-೭೨). [ಸಂ.]

ವಾಂತಿಭೇದಿ (ನಾ). ವಮನ ಮತ್ತು ಅತಿಸಾರವು ಮುಖ್ಯಲಕ್ಷಣಗಳಾಗಿರುವ ಒಂದು ಬಗೆಯ ರೋಗ ; ಕಾಲರಾ : ವಿಷಮಜ್ವರ, ವಾಂತಿಭೇದಿ, ಆಮಶಂಕೆ, ಕ್ಷಯ ಮೊದಲಾದ ರೋಗಗಳು . . . ನೀರಿನ ಮೂಲಕ ಹರಡುವ ಸಂಭವವಿದೆ (ಆಯುಗಾ. ೮೪). [ಸಂ.]

ವಾಂತಿಭ್ರಮೆ (ನಾ). ಹೊಟ್ಟೆತೊಳಸಿ, ಓಕರಿಕೆ ಬರುವಂತಾಗುವುದು ; ಉಬ್ಬಳಿಕೆ : ವಾಂತಿಭ್ರಮೆಯಿಂದ ಕೊರಳು, ತುಟಿ, ಬಾಯಿ, ಮೂಗು ಸಹ ಒಣಗುತ್ತ . . . ಕಣ್ಣುಗಳು, ದೇಹ ಇವುಗಳು ಅರಿಸಿನವರ್ಣವಾಗಿ ಲಕ್ಷಣಗಳುಂಟಾಗುವುದೆ . . . ಪೈತ್ಯಜ್ವರವೆನಿಸಿಕೊಳ್ಳುವುದು (ಸಚಿತ್ರ. ೭೭). [ಸಂ. ವಾಂತಿಭ್ರಮ]

ವಾಂತಿಭ್ರಾಂತಿ (ನಾ). = ವಾಂತಿಭೇದಿ : ರಾಗಿಯನ್ನು ಮಿಷಯಾಗುವಂತೆ ಹುರಿಮ ನಿಂಬಿಹಣ್ಣಿನ ಹುಳಿಯಲ್ಲಿ ಅರೆದುಕೊಟ್ಟರೆ ವಾಂತಿಭ್ರಾಂತಿ ನಿಲ್ಲುವುದು (ಸಚಿತ್ರ. ಪಂ. ೪೦೯); ಆ ಹೆಣಗಳು ಕೊಳೆತು ನೀರೆಲ್ಲ ಕೆಟ್ಟು ಕುಡಿಯುವವರಿಗೆ ವಾಂತಿಭ್ರಾಂತಿ ಮುಂತಾದ ರೋಗಗಳು ಉದ್ಭವಿಸುತ್ತಿದ್ದವು (ಮುಂಬಯಿ. ೪-೧೨೭).

[ಸಂ.]

ವಾಂತ್ಯತಿಸಾರ (ನಾ). = ವಾಂತಿಭೇದಿ : ತಾಳೀಶವಟಕ . . . ಒಂದು ವಟಕವಂ ಸೇವಿಸೆ, ಅರುಚಿ . . . ವಾಂತ್ಯತಿಸಾರ, ಮೂಲವ್ಯಾಧಿ ಮೊದಲಾದುವೆಲ್ಲವೂ ಮಾಣ್ಗುಂ (ಸಚಿತ್ರ. ೩೬೪). [IP ಇದು 'ವಾಂತ್ಯತಿಸಾರ' ಎಂದಿರಬೇಕು]

ವಾಂಶ (ನಾ). ೧. ಬಿದಿರಿನಿಂದ ತಯಾರಿಸಿದುದು. ೨. ಕೊಳಲು ; ವೇಣು : ಒಪ್ಪುವ ವಾಂಶ ವೈಣ ಗೇಯಾದಿಗಳಿಂವು ಪೊಂಪುಲಿ ಸುರೇಶ್ವರಗಾಯಕವಾದನೋದಿತಂ (ಶಾಂತಿಪು. ೧೨-೨೨). [ಸಂ.]

ವಾಂಶಿ (ನಾ). ಬಿದಿರಿನಿಂದ ಉಂಟಾದುದು ; ಬಿದಿರಿನಲ್ಲಿ ಹುಟ್ಟಿದುದು : "ವಾಂಶೀ – ವಂಶರೋಚನ, ಬಿದಿರುಪ್ಪು" (ಓಷಧಿ. ೧೪೯). [ಸಂ. ವಾಂಶೀ]

ವಾಂಶಿಕ (ಗು). ೧. ಬಿದಿರಿಗೆ ಸಂಬಂಧಿಸಿದ ; ಬಿದಿರಿನ. ೨. ವಂಶಕ್ಕೆ ಸಂಬಂಧಿಸಿದ ; ಕುಲಕ್ಕೆ ಸಂಬಂಧಪಟ್ಟ : ಒಬ್ಬ ವಿಭೂತಿಮಂತನಾದ ವ್ಯಕ್ತಿಯು . . . ತನ್ನ ವಾಂಶಿಕ ಹಾಗು ಸಮಕಾಲಿಕಜೀವನದೊಳಗೂ ಸತ್ಪರೀಕ್ಷೆಯ ಸಂಧಿಕಾಲದಲ್ಲಿ . . . ವಿಭೂತಿಮಾನ್ ಪುರುಷನಿಗೆ ಶರಣುಹೋಗುವನು (ಪ್ರಬೋಧ. ೪೨). (ನಾ). ೩. ಬಿದಿರನ್ನು ಕಡಿಯುವವನು ; ಮೇದ . ೪. ಕೊಳಲು ನುಡಿಸುವವನು ; ವೇಣುವಾದಕ : ಮಾರ್ದಂಗಿಕವಾಂಶಿಕಪ್ರಹ್ವಮಾನವಾದ್ಯ ಮೃದಂಗವಂಶನಿನದಲಯಚ್ಛಂದಸುಂದರನಟತ್ಸುಂದರೀಸಂದೋಹಮುಮಭೂತಪೂರ್ವ ರಮಣೀಯಮುಮಾಗೆ (ಅದಿಪು. ೭-೩೭ ವ) ; ರಾಗಶುದ್ಧಿಯ ಪರಿಣತಿಯಂ ಮೆಱೆದು ವಾಂಶಿಕಂ ಬಾಜಿಸಿದಂ (ಪಲ್ಲಿಪು. ೮-೨೩). [ಸಂ.]

ವಾಂಶೆ (ನಾ). [ಸಂಗೀತ]ಮಧ್ಯಮಸ್ವರದಿಂದ ಹುಟ್ಟುವ ನಾಲ್ಕು ಶ್ರುತಿಗಳಲ್ಲಿ ಒಂದು : ರಂಜಕಿ ಪೂರ್ಣ ಅಲಂಕಾರಿಣಿ ವಾಂಶೆಯೆಂಬ ನಾಲ್ಕು ಶ್ರುತಿಗಳೇ ಮಧ್ಯಮಸ್ವರದಿಂ ಪುಟ್ಟಿದವು (ವಿವೇ. ೨೩೨). [< ಸಂ. ವಾಂಶೀ]

ವಾಂಶ್ಯ (ನಾ). ಒಂದು ಬಗೆಯ ಸಸ್ಯ : "ವಾಂಶ್ಯಂ – ಕೋಷ್ಠ" (ಓಷಧಿ. ೧೪೯); ಯತ್ಪಲೋಪಕ್ಕೆ – ಅಮಾವಾಸ್ಯಾ – ಅಮಾಸೆ, ಅವಸೆ . . . ವಾಂಶ್ಯ – ವಾಸ (ಕಮುದ. ೨೦೨ ಪ್ರಮೋ.). [ಸಂ.]

ವಾಂಸ (ನಾ). = ವಾಂಶ್ಯ : "ವಾಂಸ : – ತಮಾಲಪತ್ರ, ಗಂಧ" (ಓಷಧಿ. ೧೪೯).

[< ಸಂ. ವಾಂಶ್ಯ]

ವಾಃಕಣ (ನಾ). ನೀರಿನ ಹನಿ ; ಜಲಬಿಂದು : ಜೈನೋಕ್ತಿವಾರಾಶಿವಾಃಕಣದಿಂದಂ ಪಡೆದಿರ್ದ ಸಿದ್ಧಪದಮಂ ಕೈಕೊಳ್ವುದರ್ಕಡ್ಡಮೊಡ್ಡಣಮೊಡ್ಡಿರ್ದಳಶ್ಮನ್ಮಮಂ ತುಳಿಯಿಸಲ್ (ಶಾಂತಿಪು. ೧-೭); ತಳರ್ದ ವಿಯೋಗಿನೀನಯನವಾಃಕಣಸಂಕುಳದಂತೆ ತಾರಕಾವಳಿ ಮಸುಳ್ದತ್ತು (ಜಗ. ೧೬-೧೩೫). [ಸಂ.]

ವಾಃಕಣಿಕೆ (ನಾ). = ವಾಃಕಣ : ಅನಿಮಿಷಚಾಪದಂತೆ ಸಿರಿ . . . ತೃಣಾಗ್ರಗತವಾಃಕಣಿಕಾಗಣದಂತೆ [ಪಾಠಾಂ. ವಾಃಕಣಸಂಚಯದಂತೆ] ಸಂದ ಜೀವನಂ (ಪಂಚತಂ. ೫೯-೧೫).

[ಸಂ. ವಾಃಕಣಿಕಾ]

ವಾಃಪಟಿ (ನಾ). ನೀರುಹಂದಿ ; ಕಡಲುಹಂದಿ. [ಸಂ.]

ವಾಃಕೇಲಿ, ವಾಃಕೇಳಿ (ನಾ). ನೀರಾಟ ; ಜಲಕ್ರೀಡೆ. ವಾಃಕೇಳಿ : ಮನೋಜಂ ಸ್ವಚ್ಛ ವಾಃಕೇಳಿಸಮ್ಮದಕೆಂದೋವಿದ ಪದ್ಮಷಂಡಮೆಸೆಗುಂ ತನ್ನಂದನೋಪಾಂತದೊಳ್ (ಚಂದ್ರಪ್ರ. ೧-೧೦೪). [ಸಂ.]

ವಾಃಕೇಳಿ 'ವಾಃಕೇಲಿ' ನೋ.

ವಾಕರಿ (ನಾ). ಓಕರಿಕೆ ; ಉಬ್ಬಳಿಕೆ : ಕಟುವಿನಿಂದ ತನು ವಿಭ್ರಮಗೊಂಬುವುದು ವಗರಿನಿಂದ ವಾಕರಿ ನಿಲುವುದು (ಉದ್ಯೋಪ್ರ. ೬-೨೯-೧೮). [< ಓಕರ./ತೆಲು. ವಾಕರ]

ವಾಕರಿಕೆ, ವಾಕಳಿಕೆ (ನಾ). = ವಾಕರಿ : ಗಟ್ಟಿಯಾದ ವಸ್ತುಗಳನ್ನು ನುಂಗಲು ಹೋದರೆ ವಾಕರಿಕೆ ಎನ್ನುತ್ತಾನೆ (ಮನೋಜಾ. ೭೯). ವಾಕಳಿಕೆ : (ಕ).

ವಾಕರಿಕೆಯಾಗು = (ಆಲಂ) ಜುಗುಪ್ಸೆಯಾಗು ; ಅಸಹ್ಯವುಂಟಾಗು : ಗಂಡನೆಂದರೆ ಅವಳಿಗೆ ವಾಕರಿಕೆಯಾಗುವ ಹಾಗೆ ಆಗಿದೆ (ನಾಪೂರೀಲೀ. ೩೦೭).

[< ಓಕರಿಕೆ]

ವಾಕರಿಕೆಬರು (ಕ್ರಿ). ೧. ವಾಂತಿಯಾಗುವ ಹಾಗಾಗು ; ಹೊಟ್ಟೆ ತೊಳಸಿ ಬರು : ತಿಥಿಮನೆ ಊಟ ಮಾಡಿದ್ದೇನೆ. ಅದಕ್ಕೇ ವಾಕರಿಕೆಬರುತ್ತೆ (ಮನೋಜಾ. ೭೭); ಚಂಪಕಳಿಗೆ ತಲೆ ಸುತ್ತಿತು. ಶ್ಯಾಮಲಿಗೆ ವಾಕರಿಕೆಬಂದಿತು (ಹಸಾಹೊ. ೬೩). ೨. (ಆಲಂ) ಹೇಸಿಕೆಯಾಗು ; ಜುಗುಪ್ಸೆಯಾಗು : ಮುಗಿದ ಮೇಲೆ ಮೈಲಿಗೆಯಾಯಿತೆಂದು ವಾಕರಿಕೆಬರುವುದಿಲ್ಲ (ಪ್ರಶ್ನೆ. ೫೫). [ವಾಕರಿಕೆ + ಬರು$_1$ (< ವರ್)]

ವಾಕರಿಸು, ವಾಕಳಿಸು, ವಾಗಡಿಸು (ಕ್ರಿ). ೧. ಓಕರಿಕೆಯುಂಟಾಗು ; ವಾಂತಿಯಾಗುವಂತೆ ಆಗು : ಆಸೆಯಿಂದ ಊಟಕ್ಕೆ ಕುಳಿತ ಶಾಮು . . . ವಾಕರಿಸುತ್ತಾ ಹೋಗುತ್ತಾನೆ (ಮನೋಜಾ. ೭೩). ೨. (ಆಲಂ) ಹೊರದೂಡು ; ಹೊರಗೆ ಹಾಕು : ಕಾಣದೆ ಇರುವ ಈ ದೆವ್ವವನ್ನು ಮನಸ್ಸು ನುಂಗಲೂ ಆರದೆ, ವಾಕರಿಸಲೂ ಆರದೆ, ಅದಕ್ಕೆ ಬದಲಿಕ್ರಿಯೆಯಾಗಿ ದೇಹವು ಹೀಗೆ ವಾಂತಿ ಮಾಡಿಕೊಳುತ್ತಿದೆಯೆ? (ಮನೋಜಾ. ೦೫). ೩. ಹಿಂದಿರುಗಿಸು ; ಹಿಂದಕ್ಕೆ ಕೊಡು : ಅವಳ ಭೂಕಾಂತ ಧನಸೇವನ ಕೈಯ ಕೊಡಲವ ವಾಕರಿಸಿದ ಪಾಪಕಂಜಿ (ನನ್ನಕಾ. ೪-೩೦). ವಾಕಳಿಸು : (ಕ). ವಾಗಡಿಸು : ೧. ಉಗಲಿಚ್ಛೆಯಾಗದೆ ಮಂದಿ ಕೌತುಕಂದೋರಿ ವಾಗಡಿಸುತ್ತೆಯರೆಯ ಮೃತ್ತಿಕೆ ಭಸ್ಮಮಂ ಬಯಸುತೆ (ನವಮೋ. ೧೫-೬).

[< ಓಕರಿಸು]

ವಾಕಳಿಕೆ 'ವಾಕರಿಕೆ' ನೋ.

ವಾಕಳಿಸು 'ವಾಕರಿಸು' ನೋ.

ವಾಕು$_1$ (ನಾ). ಮಾತು ; ನುಡಿ : ಭೂಕಾಂತೆ ನಡನಡುಗುವಳು ನಿಷ್ಠುರವಾದ ವಾಕು ಬೇಡೆಚ್ಚಱಿಕೆ (ಪುರಂದ. ೨-೪೫-೩); ಚಕ್ರಿಯೆಲ್ಲರ ಮೃದುವಾಕಿಂದ ತಿಳುಹಿ ನಿಲ್ಲಿಸಿದ (ಭರಚ. ೫೯-೧೦). [< ಸಂ. ವಾಚ್]

ವಾಕು$_2$ (ನಾ). ೧. ಬಳೆ ; ಕಂಕಣ : "ಅವಾಪಕಃ, ಪಾರಿಹಾರ್ಯಃ – ೨ ಸೂಡಿಗವೆಂಬ ಕಡಗ . . . ವಾಕು, ತೋಡೆ, ಬಳೆ" (ಸಿದ್ಧಾಂತಿ. ೨೦೦). ೨. ತೋಳಿಗೆ ತೊಡುವ ಒಂದು ಬಗೆಯ ಆಭರಣ : ಅರಳೆಲೆ ಮಾಗಾಯಿ ಪುಲಿಯುಗುರುಡಿದಾರ ಬೆರಳುಂಗುರ ವಾಕಿನಿಂದ ಕೊರಳ ಪಾದಕೆ ಗೆಜ್ಜೆಯಂದುಗೆ ಇಟ್ಟಂದು ತರಳನೊಪ್ಪಿದ (ಪುಷ್ಪಚ. ೭-೪೫). 'ಕೈವಾಕು' ಪರಾ. [<— ಮರಾ. ವಾಕ, ವಾಂಕ]

ವಾಕುಚಿ (ನಾ). ಒಂದು ಬಗೆಯ ಔಷಧೀಸಸ್ಯ : "ಸೋಮವಲ್ಲಿ ವಾಕುಚಿಯಕ್ಕುಂ" (ವಸ್ತುಕೋ. ೩೭-೨೮); ದೇವದಾಳಿಯ ಬೇರು . . . ವಾಕುಚಿಯ ಬೀಜ, ಮದುವಾಗಲ ಗೆಡ್ಡೆ, ಇವಿಷ್ಟನು ಸಮಾನವಾಗಿ ಕೂಡಿಸಿಕೊಂಡು ಚೂರ್ಣಿಸಿ ತುಪ್ಪದಲ್ಲಿ ಅಟ್ಟು ಸೇವಿಸಲು ಸರ್ವಕೀಟಕವಿಷ ಪರಿಹರವಹುದು (ವೈದ್ಯಸಾ. II, ೨೨೪).

[ಸಂ. ವಾಕುಚೀ]

ವಾಕುಶಾಸ್ತ್ರ (ನಾ). ಶಬ್ದಶಾಸ್ತ್ರ : ವಸ್ತುವ ವಾಕುಶಾಸ್ತ್ರ ಬಿಂಡಿಸಬಲ್ಲುದೇ (ವಚಸಂ. ೬-೧೪). [ವಾಕು$_1$ + ಶಾಸ್ತ್ರ]

ವಾಕುಜಿ 'ಬಾಗುಜಿ' ನೋ.

ವಾಕುಸಿದ್ಧಿ (ನಾ). ಮಾತಿನ ಪರಿಣತಿ ; ವಾಕ್ಸಿದ್ಧಿ : ವಾಕುಸಿದ್ಧಿಗೆಯಧಿಪತಿಯ . . . ವಿನಾಯಕನಂಘ್ರಿಗೊಂದಿಸುವೆ (ಅಭಿಲೂ. ೧-೬). [ವಾಕು$_1$ + ಸಿದ್ಧಿ]

ವಾಕ್ಕಲಹ (ನಾ). ಮಾತಿನ ಜಗಳ ; ವಾಗ್ವಾದ : ಅವರಿಬ್ಬರ ವಾಕ್ಕಲಹ ನಿಂತು, ಯಾವಾಗ ಕೈ ಕೈ ಮಿಲಾಯಿಸುತ್ತೋ ನೋಡಬೇಕು (ರೂಢಿ). [ಸಂ.]

ವಾಕ್ಕಿಲ್ (ನಾ). ಬಾಗಿಲು : ಸ್ವಸ್ತಿಶ್ರೀಮನ್‌ಕೊಂಗೊಣಿಮುತ್ತರಸರ್ಕು ಇಪ್ಪತ್ತಾಆರನೆ ವರ್ಷದು x x x ಪುಲಿ ನೋಡಿ ಆಪ್ತದ ವಾಕ್ಕಿಲುಳ್ ಸಗು x x x ನೆಡೆ ಎಟದು ವಿಟ್ಟೊ (ಎಕ. X. ಕೋಲಾರ. ೭೮-೨; 751). 'ಬಾಗಿಲ್' ಪರಾ.

[ದೇ. ॥ ತಮಿ. ವಾಯಿಲ್; ಮಲ. ವಾಕಿಲ್; ತೆಲು. ವಾಕಿಲಿ; ಸಾಯ್ಕಿ. ವಾಕಲ್]

ವಾಕ್ಕು (ನಾ). ೧. ಮಾತು ; ನುಡಿ : ವಾಕ್ಕಿನೊಳಿಲ್ಲ ಮೇಣ್ ಪರಿಚಯಂ ಬಗೆ ಮೊಕ್ಕಳಮಂತುಟಲ್ತೆ (ಸೂಕ್ತಿಸು. ೧-೩೬); ಸೂರ್ಯನು ನಕ್ಕು ಲೋಕೋಪಕಾರದಲ್ಲಿ ನಿರತನಾಗಿ ಗಂಭೀರವಾದ ವಾಕ್ಕು ನುಡಿದನು (ಅರ್ಕಮಾ. ೨೧). ೨. ವಾಕ್ಕು, ಪಾಣಿ, ಪಾದ, ಪಾಯು ಮತ್ತು ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳಲ್ಲಿ ಒಂದು : ವಾಕ್ಕು ಮೊದಲಾದ ಕರ್ಮೇಂದ್ರಿಯಗಳು ಐದು (ಹಿಂದಸಾ. ೫೫). ೩. ನುಡಿಯ ಅಧಿದೇವತೆ ; ಸರಸ್ವತಿ : ಕಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಕೆಂಬ ದೇವಿಗೆ . . . ಶಾಸ್ತ್ರಪ್ರಾರಂಭದಲ್ಲಿ ನಮಸ್ಕರಿಸುವಾತನಪ್ಪೆಂ (ಶಮದ. ೧ ವೃತ್ತಿ). 'ವಾಕ್ಕು$_1$' ಪರಾ. [ಸಂ. ವಾಚ್]

ವಾಕ್ಕುಟಿಲ (ನಾ). ೧. ಮಾತಿನಿಂದ ಮಾಡುವ ಮೋಸ, –ವಂಚನೆ. ೨. ಮಾತಿನಲ್ಲಿ ವಂಚಿಸುವವನು. [ಸಂ.]

ವಾಕ್ಕೋವಿದ (ನಾ). ಮಾತಿನಲ್ಲಿ ಜಾಣನಾದವನು ; ವಾಕ್ಪಟು : ಬಿನ್ನಮಿದಂ ವಾಕ್ಕೋವಿದಂ ಸೌವಿದಂ (ಶಾಂತಿವು. ೩-೬೫); ಅವನವಳದೆಂಬವಿರ್ದಂತೆವೊಲಿರ್ದಪುವಾವ ನಾವಳಾವುದು ತಾನೆಂಬವವಂ ಪಾರದೆ ನಿಲಲಱಿಯವನ್ವಯಂ ತಾಗುವಲ್ಲಿ ವಾಕ್ಕೋವಿದರಿಂ (ಶಮದ. ೧೪೩). [ಸಂ.]

ವಾಕ್ಚತುರ (ನಾ). ಮಾತಿನಲ್ಲಿ ಚತುರತೆಯುಳ್ಳವನು : ಅವರು ವಾಕ್ಚತುರರಾಗಿದ್ದುದರಿಂದ, ಅವರ ಒಂದೊಂದು ಭಾಷಣವೂ . . . ಕಲಾಸೌಧವಾಗಿರುತ್ತಿತ್ತು (ಕಬಸಾ. ಪೀಠಿಕೆ. XXi); ವಾಕ್ಚತುರರಾದ ಗಂಗರಾಜರು ನಮ್ರತೆಯಿಂದ . . . ಎಂದರು (ಶಾಂತಲಾ. ೧೯). [ಸಂ.]

ವಾಕ್ಚಮತ್ಕೃತಿ (ನಾ). ಮಾತಿನಲ್ಲಿ ತೋರಿಸುವ ಚಾತುರ್ಯ, –ಜಾಣತನ : ನನ್ನ ಪತ್ನಿಯು ರೂಪವತಿಯೆಂದೂ ವಾಕ್ಚಮತ್ಕೃತಿಯುಳ್ಳವಳೆಂದೂ . . . ಚತುರೆಯೆಂದೂ ಬಲ್ಲೆನು (ಕವಿಕ. ೪೪). [ಸಂ.]

ವಾಕ್ಚಾಟು (ನಾ). = ವಾಕ್ಚಮತ್ಕೃತಿ : ಕುಮುದಚಂದ್ರನ ಒಳ್ಳುಡಿ ಪ್ರಭಾಚಂದ್ರನ ರಮಣೀಯವಾದ ವಾಕ್ಚಾಟು (ಜ್ಞಾನಚ. ೧-೩೬). [ಸಂ.]

ವಾಕ್ಚಾತುರ್ಯ (ನಾ). = ವಾಕ್ಚಮತ್ಕೃತಿ : ವಾಕ್ಚಾತುರ್ಯವಿದ್ದವನಾದರೆ ನಾಕ ಸೇರುವನೇ ? (ಗಾದೆ). [ಸಂ.]

ವಾಕ್ಚಾಪಲ್ಯ (ನಾ). ಮಾತನಾಡುವ ಚಪಲತೆ. [ಸಂ.]

ವಾಕ್ಶ್ರೀ (ನಾ). ಮಾತಿನ ಅಧಿದೇವತೆ ; ಸರಸ್ವತಿ : ಶ್ರೀಲಂ ಧರಿತ್ರಿಗಂ ವಾಕ್ಶ್ರೀಗಂ ಸಲೆ ಸವತಿಯೆನಿಸಲಾ ಪ್ರಣ್ಯಾಸುಧಾಭೋಗಿಗೆ ಮಾದೇವಿ ಮನೋವೇಗೆ ಮನೋನಯನೆ ತನ್ಮುದಾಸ್ಪದಮೆನಿಕುಂ (ಶಾಂತಿವು. ೯-೮೫); ಶ್ರೀ ವಕ್ಷಸ್ಥಳದೊಳ್ ವಾಕ್ಶ್ರೀ ವಕ್ಷ್ಯದೊಳತುಳ ಭುಜದೊಳೂರ್ಜಿತವಿಜಯಶ್ರೀ ವಿಸ್ತಾರಿಸೆ ನೆಗಟ್ಟಂ ಶ್ರೀವರ್ಮಂ (ಚಂದ್ರಪ್ರ. ೪-೧೦).

[ಸಂ.]

ವಾಕ್ಶ್ರೀಯುತ (ನಾ). ವಿದ್ವಾಂಸ : ಶ್ರೀಯುತನೊಳುದಾರತೆ ವಾಕ್ಶ್ರೀಯುತನೊಳಮತ್ಸರತ್ವಮಾಗದುದಾರಂ ಶ್ರೀಯುತನಮತ್ಸರಂ ವಾಕ್ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ (ಗದಾಯು. ೧-೪೯). [ಸಂ.]

ವಾಕ್ಪಟಲ (ನಾ). ಧ್ವನಿಯು ಹೊರಡುವ ಅಂಗ : ಆ ಕಾಲದ ಸುಮಾರಿಗೆ ಮಕ್ಕಳ ವಾಕ್ಪಟಲಗಳು ಸ್ಫುಟಗೊಂಡು ಧ್ವನಿ ಬದಲಾಯಿಸುವುದು (ಶಿಕ್ಷದ. ೧೫೫). [ಸಂ.]

ವಾಕ್ಪಟು (ನಾ). ವಾಕ್ಚಾತುರ್ಯವುಳ್ಳವನು ; ವಾಗ್ಮಿ : ಇದನ್ನು ಬಿಡಿಸುವುದರಲ್ಲಿ ಪ್ರತ್ಯಕ್ಷವಾಗುವ ನೈಪುಣ್ಯ ವಾಕ್ಪಟುವಿನ ವರ್ಗವನ್ನು ಸ್ಥಾಪಿಸಲು ಉತ್ಕೃಷ್ಟ ಸಲಕರಣೆ (ಕಬಸಾ. ಪೀಠಿಕೆ. XVi); ಇದನ್ನು ನೋಡಿ . . . ವಾಕ್ಪಟುಗಳಾಗಿದ್ದ ಹಲವರ ನಾಲಗೆ ಬಿಗಿಯಿತು (ನಂಬರು. ೨೯). [ಸಂ.]

ವಾಕ್ಪತಿ (ನಾ). ೧. ನಿರರ್ಗಳವಾಗಿ ಮಾತನಾಡಬಲ್ಲವನು ; ವಾಕ್ಪಟು ; ವಾಗ್ಮಿ : "ವಾಗೀಶಃ, ವಾಕ್ಪತಿಃ – ೨ ನಿರ್ದೋಷವಾಗಿ ಮಾತು ಕಲಿತವನ ಹೆಸರುಗಳು" (ಸಿದ್ಧಾಂತಿ. ೩೩೨). ೨. ಮಾತಿನ ಒಡೆಯ ; ಬೃಹಸ್ಪತಿ : "ಅಂಗಿರಸ . . . ವಾಕ್ಪತಿ ಜೀವಂ ಗುರುವೆಂಬಿನಿತುಮಿವು ಬೃಹಸ್ಪತಿನಾಮಂ" (ವಸ್ತುಕೋ. ೧೩-೭೩);

ಪಾಕ್ಷತಿಯೇ ಎದುರಿಗೆ ಬಂದಿರುವಾಗ ಆತನಪ್ಪಣೆಯಿಲ್ಲದೆ ವಾಕ್ಕು ಎಂತು ರೂಪಗೊಂಡು ಹೊರಬೀಳುವುದು? (ಮಹಾಂ. ೧೧೧). ೩. ಸರಸ್ವತಿಯ ಗಂಡ ; ಬ್ರಹ್ಮ : ನೆಱೆಯೆ ಪೊಗಟಲ್ಕೆ ವಾಕ್ಪತಿ ನೆಱೆಯಂ ಸುರಪತಿಯ ನೃತ್ಯಮಂ (ಅಜಿಪು. ೫-೫೧). ೪. ಪರಮಾರವಂಶದ ಒಬ್ಬ ದೊರೆಯ ಹೆಸರು. ೫. [ಜ್ಯೋತಿ] ನವಗ್ರಹಗಳಲ್ಲಿ ಐದನೆಯದಾದ ಬೃಹಸ್ಪತಿ ಗ್ರಹ ; ಗುರು : ಆ ಧರ್ಮಮಂದಿರದೊಳ್ ವಾಕ್ಪತಿಯರ್ದನೆಂದಱಿಗೆ ತಜ್ಜಂ ಜನ್ಮತತ್ಕಾಲದೊಳ್ (ಕಾತಂತ್ರ. ೨೪-೨). [ಸಂ.]

ವಾಕ್ಪರಿಣತ (ನಾ). ಮಾತಿನಲ್ಲಿ ಪರಿಣತಿ ಹೊಂದಿದವನು ; ವಾಕ್ಸಿದ್ಧಿಯುಳ್ಳವನು : ಪಿರಿದೆಂಬೀ ರೇಫಕ್ಕಾಚರಿಪರ್ ಭಾವಾರ್ಥಮಪ್ಪುದೊಂದು ಪುಕಾರಂ ಪರಮಾಗೆ ಬಿಂದುವಂ ವಾಕ್ಪರಿಣತರಿಂ ಸಿದ್ಧಮಾಯ್ತು ಪೆಂಪೆಂಬ ಪದಂ (ಶಮದ. ೨೧೨). [ಸಂ.]

ವಾಕ್ಪಾಟವ (ನಾ). ಮಾತಿನ ಜಾಣತನ ; ನುಡಿಯ ಚತುರತೆ : ರಾಜಕೀರ್ತಕವಾಕ್ಪಾಟವಮಲ್ಲದಿಲ್ಲ ಪೆಱತುಂ ವಾಕ್ಪಾಟವಂ ಸುತ್ತಲುಂ (ಶಾಂತಿಪು. ೩-೩). [ಸಂ.]

ವಾಕ್ಪಾರುಷ್ಯ (ನಾ). ಕಠಿಣವಾದ ಮಾತು ; ಬಿರುಸುನುಡಿ : ಅನೂನಬಳರಪ್ಪ ದಾನವಮಾನವರೆನಿಬರಾನುಂ ವಾಕ್ಪಾರುಷ್ಯದಿಂ ಕೆಟ್ಟರೆಂದು ವಾಕ್ಪಾರುಷ್ಯ ಮನೋದುಃಖಂ ತ್ರಿದೋಷಸಮುದಿತರೋಗಂ ಸಮನಿಸುಗುಂ (ಕಾತಂತ್ರ. ೯-೨೪). [ಸಂ.]

ವಾಕ್ಪೌರುಷ (ನಾ). ೧. ಮಾತನ್ನಾಡುವ ಸಾಮರ್ಥ್ಯ, —ಶಕ್ತಿ. ೨. ಬಡಾಯಿ ಕೊಚ್ಚುವುದು : ನಿನ್ನದು ಬರೀ ವಾಕ್ಪೌರುಷವೇ ಹೊರತು ಕಣ್ಣಿಗೆ ಕಾಣುವಂಥ ಕೆಲಸವನ್ನು ಮಾಡಿದ್ದನ್ನು ನಾನು ನೋಡಿಯೇ ಇಲ್ಲ (ರೂಢಿ). [ಸಂ.]

ವಾಕ್ಪುಗುಂಭನ (ನಾ). ಶಬ್ದಗಳನ್ನು ವ್ಯವಸ್ಥಿತವಾಗಿ ಜೋಡಿಸುವಿಕೆ : ವಿಳಾಸವತೀನಯನತ್ರಿಭಾಗದೊಳ್ ಸಂಗಳಿಸಿತ್ತೊ ಮೋಹನಮನಗ್ಗಳ ನಿನ್ನಯ ವಾಕ್ಪುಗುಂಭನಂ (ಚಂದ್ರಪ್ರ. ೧-೫೯). [ಸಂ.]

ವಾಕ್ಪ್ರಣಿಧಿ (ನಾ). ಮಾತಿನಿಂದ ಮಾಡುವ ಪ್ರಚೋದನೆ ; ಮಾತಿನಿಂದ ಚೋದಿಸುವುದು : ವಿಸಟಂಬರ್ಪಾನೆಯಂ ವಾಕ್ಪ್ರಣಿಧಿಯೊಳೆ ಬೆಸಂಬೆತ್ತು . . . ನೀರೂಡಿಸಿದಂ (ಚಂದ್ರಪ್ರ. ೯-೧೫). [ಸಂ.]

ವಾಕ್ಪ್ರೌಢ (ನಾ). = ವಾಕ್ಕೋವಿದ : ವಾಕ್ಕೋವಿದರಿಂ = ವಾಕ್ಪ್ರೌಢರಿಂದೆ (ಶಮದ. ೧೧೩ ಟೀಕೆ). [ಸಂ.]

ವಾಕ್ಪ್ರೌಢಿ (ನಾ). ಮಾತಿನ ನೈಪುಣ್ಯ, —ಪ್ರೌಢಿಮೆ : ಸುತತ್ತ್ವಾಭ್ಯುಪಯುಕ್ತಂ ಮಾಳ್ಪೆ ಜೈನಂ ವಚನಮಮಳವಾಕ್ಪ್ರೌಢಿಯಂ ನಮ್ಮೊಳಿಂದುಂ (ಚಂದ್ರಪ್ರ. ೧-೧). [ಸಂ.]

ವಾಕ್ಯ (ನಾ). ೧. ಮಾತು ; ನುಡಿ ; ಸೊಲ್ಲು : ಪಾವನಮೆನಿಸಿದ ವಾಕ್ಕೋಪಹಾರಂಗಳಿಂದರ್ಚಿಸಿದಂ ಶ್ರೀಮಲ್ಲಿಭಟ್ಟಾರಕಪದಯುಗಮಂ ಭಾರತೀ ಕರ್ಣಪೂರಂ (ಮಲ್ಲಿಪು. ೧೪-೨೧೩); ಭಟರು . . . ಕಟುವಚನವಿಕ್ಷೇಪ ರೋಷಸ್ಫುಟನವೇಲ್ಲಿತವಾಕ್ಯಭಂಗೀಘಟನವಿಘಟನದಿಂದ ಮೂದಲಿಸಿದರು ಮುಳಿಸಿನಲಿ (ಭಾಗ. ೫-೫೫). ೨. ಆಜ್ಞೆ ; ಆಣತಿ. ೩. ಹೇಳಿಕೆ ; ದೃಢವಚನ. ೪. [ವ್ಯಾಕ] ಒಂದು ಪೂರ್ಣಾರ್ಥವನ್ನು ಕೊಡುವಂತೆ ಸಮಂಜಸವಾಗಿ ಬಳಕೆಯಾದ ಪದಗಳ ಸರಣಿ ; ಪೂರ್ಣಾರ್ಥಬೋಧಕ ಪದವ್ಯವಸ್ಥೆ : ವಿದಿತಾರ್ಥಂ ಕ್ಷೋದಕ್ಷಮಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ ಪದಸಮುದಾಯಂ ವಾಕ್ಯಂ (ಕಾವ್ಯಾದ. ೪೫೩); ವಾಕ್ಯ ಎಂದರೆ ಒಂದು ಅರ್ಥವನ್ನು ಪೂರ್ಣವಾಗಿ ಹೇಳುವ, ಪರಸ್ಪರ ಸಂಬಂಧವುಳ್ಳ ಶಬ್ದಗಳ ಸಮುದಾಯ (ಕೈಪಿಡಿ. ೩೩). [ಸಂ.]

ವಾಕ್ಯದೀಪಕ (ನಾ). [ಕಾವ್ಯಮೀ] ವಾಕ್ಯದ ಒಂದು ಕ್ರಿಯೆಗೆ ಅನೇಕ ಕರ್ತೃಗಳ ಸಂಬಂಧವಿರುವುದು : ವಾಕ್ಯದೀಪಕಂ ಪ್ರತ್ಯೇಕಂ ಸಂಬಂಧಕಾರಣಂ : ಆತನುಮವನುಂ ಬಂದನೆಂಬಲ್ಲಿ ಬಂದನೆಂಬುದು ಪ್ರತ್ಯೇಕಂ ವರ್ತಿಸುವುದು, ಆತನುಂ ಬಂದುಂ ಅವನುಂ ಬಂದುಂ ಎಂದು (ಶಮದ. ನ. ೧೫೬ ಪ್ರಯೋ). 'ದೀಪಕಾಲಂಕಾರ' ಪರಾ. [ಸಂ.]

ವಾಕ್ಯದೋಷ (ನಾ). [ಕಾವ್ಯಮೀ] ವಾಕ್ಯದ ಅರ್ಥ, ರಸಗಳಿಗೆ ಕುಂದನ್ನುಂಟು ಮಾಡುವಂಥ ದೋಷ : ಕಾವ್ಯರಮಣೀಯತೆಗೆ ಭಂಗ ತರುವ ವಾಕ್ಯದ ದೋಷ : ವ್ಯವಹಿತಮೇಕಾರ್ಥಂ ವ್ಯರ್ಥವಪಕ್ರಮಮಪಿಳಲೋಕಶಾಸ್ತ್ರವಿರುದ್ಧಂ ಸುವಿದಿತ ಯತಿಭಂಗಂ ಭಿನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ (ಕಾವ್ಯಾದ. ೪೫೫). [ಸಂ.]

ವಾಕ್ಯನಿರ್ವಾಹ (ನಾ). ವಾಕ್ಯದ ಮುಗಿತಾಯ, — ಕೊನೆ : ಪ್ರಥಮೈಕವಚನಮಂ ಮೊದಲೊಳ್ ಪಲವಂ ಪೇಳ್ದು ವಾಕ್ಯನಿರ್ವಾಹದೊಳ್ ಕ್ರಿಯಾಬಹುವಚನಮಂ ಪುಗಿಸುವರ್ (ಶಮದ. ೧೪೨ ವೃತ್ತಿ). [ಸಂ.]

ವಾಕ್ಯಪರಿವರ್ತನ (ನಾ). [ವ್ಯಾಕ] "ಸಾಮಾನ್ಯ, ಸಂಯೋಜಿತ, ಮಿಶ್ರ ಎಂಬ ಮೂರು ಬಗೆಯ ವಾಕ್ಯಗಳಲ್ಲಿ ಒಂದನ್ನು ಕೊಟ್ಟರೆ, ಅದರಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿ ಮತ್ತೊಂದು ಬಗೆಯ ವಾಕ್ಯವಾಗಿ ಅನೇಕ ಸಂದರ್ಭಗಳಲ್ಲಿ ಮಾರ್ಪಡಿಸಬಹುದು. ಹೀಗೆ ಮಾರ್ಪಡಿಸುವುದಕ್ಕೆ ವಾಕ್ಯಪರಿವರ್ತನವೆಂದು ಹೆಸರು" (ಮಧ್ಯಮ. ೧೧೮). [ಸಂ.]

ವಾಕ್ಯಮಾಲೆ (ನಾ). ಅನೇಕ ವಿಭಕ್ತ್ಯರ್ಥಪದಗಳು ಕೂಡಿ ಆದ ವಾಕ್ಯ ರೂಪದ ಒಂದು ನಾಮಪದ : ಸಮುಪಾತ್ತಕ್ರಿಯೆಯುಂ ವಾಕ್ಯಮಾಲೆಯುಂ ಸುಕವಿರಚಿತನಾಮಮದಾದಂದಮರ್ಗುಂ ಲಿಂಗಂ (ಶಮದ. ೭೫). [ಸಂ. ವಾಕ್ಯಮಾಲಾ]

ವಾಕ್ಯವಿಚಿತ್ರ (ನಾ). ಮನೋಹರವಾಗಿ ಮಾತನ್ನಾಡುವವನು : ಫಲ್ಗುಣಮಿತ್ರ ವಾಕ್ಯವಿಚಿತ್ರ ರಕ್ಷಿಸು (ಹರಿಹಾ. ೯). [ಸಂ.]

ವಾಕ್ಯವಿಭಜನೆ (ನಾ). [ವ್ಯಾಕ] "ವಾಕ್ಯದಲ್ಲಿ ಜೋಡಣೆ ಹೊಂದಿರುವ ಅಂಗಗಳನ್ನೆಲ್ಲಾ ಬೇರ್ಪಡಿಸಿ ಅವುಗಳ ಸಂಬಂಧವನ್ನು ತೋರಿಸುವುದಕ್ಕೆ ವಾಕ್ಯವಿಭಜನೆ ಎಂದು ಹೆಸರು" (ಮಧ್ಯಮ. ೧೯೯). [ಸಂ. ವಾಕ್ಯವಿಭಜನ]

ವಾಕ್ಯವೃಂದ (ನಾ). ವಾಕ್ಯಗಳ ಗುಂಪು: ಯಾವ ದೇಶದಲ್ಲಿ ಗ್ರಂಥಸಮಾಲೋಚನೆಯು ಸಾಧಾರಣವಾಗಿ ಮೂರು ವಾಕ್ಯವೃಂದ(ಪ್ಯಾರಾ)ಗಳಲ್ಲಿ ಮುಗಿದು ಹೋಗುವುದೋ ಆ ದೇಶದಲ್ಲಿ ಒಂದು ಪ್ರಾಚೀನಗ್ರಂಥದ ಸಮಾಲೋಚನೆಯು ಉದ್ದವಾದರೆ ಆ ದೋಷವು ಅಕ್ಷಮ್ಯವಲ್ಲ (ಬಂಕಿಮ. ೪೫೬). [ಸಂ.]

ವಾಕ್ಯವೇಷ್ಟನ (ನಾ). ಬೇರೆ ಕಡೆಗಳಿಂದ ವಾಕ್ಯಗಳನ್ನು ಪ್ರತ್ಯೇಕಿಸಿ ತೆಗೆದುಕೊಂಡು ಆವರಣದಲ್ಲಿಡುವುದು : ಕರಗತ್ವದಿರ್ಗಯಲ್ಲದೆ ಪರಮಿರೆ ಪದ್ಯಾರ್ಧವಾಕ್ಯವೇಷ್ಟನದೆಡೆಗಂ ಸ್ಫುರದನುಕೃತಿಗಂ ಸ್ವರಮವು ಪರಮಿರೆ ಋತ್ವಕ್ಕಮಂತೆ ಸಂಧಿವಿಕಲ್ಪಂ (ತಮದ. ೬೧); ಮಾಂಟೇನನ ಪ್ರಬಂಧ ಚಿಂತನೆಗಳ, ವಾಕ್ಯವೇಷ್ಟನಗಳ ಮತ್ತು ಉಪಕಥೆಗಳ ಒಂದು ಸಂಕೀರ್ಣರಚನೆಯಗಿರುತ್ತದೆ (ಸಾಹಿತ್ಯ. ೩೩೪). [ಸಂ.]

ವಾಕ್ಯಶೇಷ (ನಾ). ಹೇಳಬೇಕಾದ ಮಾತಿನಲ್ಲಿ ಹೇಳದೆ ಬಿಟ್ಟ ಭಾಗ : ಪದನಿರ್ಧಾರದಲ್ಲಿ ವಿಪರ್ಯಯ, ವಾಕ್ಯಶೇಷ, ಅನುಮತ . . . ಇವುಗಳ ಅರ್ಥಪ್ರಯೋಗಗಳು ; ಶಾಸ್ತ್ರಗ್ರಂಥಗಳಲ್ಲಿ ವಿಧವಿಧವಾಗಿವೆ (ಭಾರತ. ೩೩೯). [ಸಂ.]

ವಾಕ್ಯಾನ್ವಯ (ನಾ). [ವ್ಯಾಕ] ವಾಕ್ಯವು ಕರ್ತೃ, ಕರ್ಮ ಮತ್ತು ಕ್ರಿಯಾನುಸಾರವಾಗಿ ಸಮಂಜಸವಾಗಿ ಹೊಂದಿಕೊಳ್ಳುವಿಕೆ : ಪರತಂತ್ರಕ್ಕೆ : ಅವನಧಿಕಪುಣ್ಯನವನೆ ಸೇವ್ಯಂ . . . ತಾನವಂ ಚದುರಂ, ತಾನವಳ್ ಚದುರೆ, ತಾನದು ಪಿರಿದು ; ಇದು ವಾಕ್ಯಾನ್ವಯಂ (ಶಮದ. ನ. ೧೫೪ ಪ್ರಯೋ). [ಸಂ.]

ವಾಕ್ಯಾರ್ಥ (ನಾ). ಇಡಿಯಾದ ವಾಕ್ಯದ ಒಟ್ಟು ಅರ್ಥ ; ವಾಕ್ಯದ ತಾತ್ಪರ್ಯಾರ್ಥ ; ಯಥಾರ್ಥ : ಉಪೇಕ್ಷೆಗೆಯ್ದದೆ ಸದಭಿಮತೋದಾತ್ತಕೀರ್ತಿಯಂ ಬಯಸುವವಂ ಪದವಾಕ್ಯಾರ್ಥಂಗಳೊಳೊಂದದಂತು ಪಿಂಗಿಸುಗೆ ದೋಷಮಂ ಕೃತಿಯಿಂದಂ (ಕಾವ್ಯಾದ. ೪೨೯); ವರ್ಣರಸಗಂಧಸ್ಪರ್ಶನಾಮಂಗಳೆಂಬಿನಮೆಪ್ಪತ್ತೆರಡೆಂಬ ತತ್ಪ್ರಕೃತಿಯಿಂ ಬೇಱೊರ್ದು ವಾಕ್ಯಾರ್ಥದಿಂ ಧ್ವನಿ ಬೇಱೊರ್ದೆಸೆವಂತದೇನೆಸೆದನೋ ಕಾಲಾಂತಕಾನಂತಕಂ (ಅಜಿಪು. ೧೪-೫೨). [ಸಂ.]

ವಾಕ್ಕೋಪಮೆ (ನಾ). [ಕಾವ್ಯಮೀ] ಉಪಮಾಲಂಕಾರದ ಒಂದು ಭೇದ ; ಒಂದು ವಾಕ್ಯಾರ್ಥವನ್ನು ಮತ್ತೊಂದು ವಾಕ್ಯಾರ್ಥದೊಂದಿಗೆ ಹೋಲಿಸುವುದು ; ಒಂದು ವಾಕ್ಯದಿಂದ ಬೇರೊಂದು ವಾಕ್ಯದ ವಸ್ತುಗಳ

ಹೋಲಿಕೆಯನ್ನು ಹೇಳುವುದು : ಭವದೀಯ ವದನಮಾಲೋಲವಿಲೋಚನ ಮುದಿತರಾಗಮಣಿವಿಳಸಿತಮಂ ಪ್ರವಿಕಸಿತಾಂಬುಜವನಮಂ ಸವಿಶೇಷಂ ಪೋಲ್ಕುಮೆಂಗೆ ವಾಕ್ಕೋಪಮೆಯಂ (ಕವಿರಾ. ೬-೮೨). [ಸಂ. ವಾಕ್ಕೋಪಮಾ]

ವಾಕ್ಶಕ್ತಿ (ನಾ). ೧. ಮಾತನ್ನಾಡುವ ಸಾಮರ್ಥ್ಯ,—ಶಕ್ತಿ. ೨. ಮಾತಿನ ಚಾತುರ್ಯ ; ವಾಕ್ಚತುರತೆ : ಅವರ ವಾಕ್ಶಕ್ತಿಯನ್ನು ಕಂಡು ಸಭೆ ಬೆರಗಾಯಿತು (ರೂಢಿ). [ಸಂ.]

ವಾಕ್ಶ್ರೀ (ನಾ). ೧. ಮಾತಿನ ಬೆಡಗು,—ಅಂದ. ೨. ಸರಸ್ವತಿ ; ವಾಣಿ : ಶ್ರೀವಧುವಿಂಗಱಿಗೆ ವಾಕ್‌ಶ್ರೀವಧುವಿಂಗಱನನಱನಂ ಕುಸುಮಾಸ್ತ್ರಾವಳಿಯಿಂದೋಲ್ಕೆಸಿದ ಭಾವೋದ್ಭವನಿಗೆ ನಮಗೆ ಸುಖಸಂಪದಮಂ (ಮದನ. ೧-೧); ಶ್ರೀರಾಮಾರಮಣಾ ವಾಕ್ಶ್ರೀರಾಮಾವಲ್ಲಭಾ ಯಶಃಶ್ರೀಕಾಂತಂ ವೀರಶ್ರೀಪತಿ ಮುನಿವೃಂದಾರಕಪದ ವಿನತನಾದನಭಿನವಪಂಪಂ (ಪಂಪಾಮಾ. ೧೫-೧). 'ವಾಕ್ಶ್ರೀ' ಪರಾ. [ಸಂ.]

ವಾಕ್ಸರಣಿ (ನಾ). ಮಾತಿನ ಓಘ,—ನಿರಂತರತೆ : ಭಾಷೆಯೂ ನಿರ್ದಿಷ್ಟವಾದ ಶಬ್ದರೂಪದಿಂದ, ವಾಕ್ಸರಣಿಯಿಂದ ಉಚ್ಚಾರಣದಿಂದ ಮತ್ತು ಅರ್ಥವಾಹಕತೆಯಿಂದ ಒಪ್ಪುವುದು (ಸಂಶೋಧ. ೬೬). [ಸಂ.]

ವಾಕ್ಸಾರ (ನಾ). ಮಾತೇ ಸತ್ತ್ವವಾಗುಳ್ಳವನು ; ಮಾತಿನ ಮಲ್ಲ : ಆರಯ ನೃಪರಾಯಂ ವಾಕ್ಸಾರರ್ ಕರ್ತವ್ಯಸಾರರಲ್ಲರದಂತಂತಾರುಮನಱಿವೆಂ ಕೇಳ್ ಸ್ಥಿತಿಸಾರಂ ನಿನ್ನನ್ನನಾವನಱಿವಬೆಡಂಗಾ (ಗದಾಯು. ೨-೭). [ಸಂ.]

ವಾಕ್ಸೌಂದರ್ಯ (ನಾ). ಮಾತಿನ ರಮಣೀಯತೆ ; ನುಡಿಯ ಸೊಗಸು : ದೆಸೆಗೆ ಪೊಣ್ಮುವ ನಿಜವಾಕ್ಸೌಂದರ್ಯದೆ ಪೋಲ್ವಂ ಪುರುನಂದನನಂ ಪೊಗೞ್ವ ಮಾಗಧಂ ಮಾಗಧನಂ (ಆದಿಪು. ೧೨-೧೧೫). [ಸಂ.]

ವಾಕ್ಸ್ವಾತಂತ್ರ್ಯ (ನಾ). ಮಾತನ್ನಾಡುವ ಹಕ್ಕು,—ಸ್ವತಂತ್ರತೆ : ಸಮಸ್ತ ನಾಗರಿಕರಿಗೂ ವಾಕ್‌ಸ್ವಾತಂತ್ರ್ಯಕ್ಕೆ ಮತ್ತು ಅಭಿವ್ಯಕ್ತಿಸ್ವಾತಂತ್ರ್ಯಕ್ಕೆ . . . ಅಧಿಕಾರವಿರತಕ್ಕುದು (ಭಾಧಾಸ. ೧೦). [ಸಂ.]

ವಾಖಾಣಿಸು 'ವಕ್ಖಾಣಿಸು' ನೋ.

ವಾಗಗೋಚರ (ನಾ). ಮಾತಿಗೆ ಸಿಲುಕದವನು ; ನುಡಿಗೆ ಅತೀತನಾದವನು ; ಪರಮಾತ್ಮ : ಶ್ರೀ ಗಜಾನನ . . . ಆಗಿಸ್ಕೆ ಬೇಗಿದನು ಭಕ್ತರ ವಾಗಗೋಚರ ದೇವಿ ರುಕ್ಮಿಣಿ ನಾಗವೇಣಿಯ ಪರಿಣಯದ ಶುಭಕಲಿತವಹ ಕೃತಿಯಾ (ಕರ್ಣಾ. ೬೧೨). [ಸಂ.]

ವಾಗಡಿಸು 'ವಾಕರಿಸು' ನೋ.

ವಾಗತ್ಯ$_1$ (ನಾ). ೧. ಅಮಂಗಳಕರವಾದುದು ; ಅಶುಭವಾದುದು : ವಾಂತಿಭೇದಿ ಎಂದು ಹೇಳುವುದಕ್ಕೇ ಜನಗಳಿಗೆ ವಾಗತ್ಯ, ಬಾಯಿ ಬರದು (ಕೆಲವೆ. ೨೩೯); ಏಕಾದಶಿಯ ದಿನ ಉಪವಾಸವನ್ನು ಬಿಟ್ಟಿದ್ದಳು. ಮುತ್ತಯ್ಯೆಯರು ಉಪವಾಸಮಾಡುವುದು ವಾಗತ್ಯವೆಂದು (ಎಂಸ. ೯೮). ೨. ಆಡಬಾರದ ಮಾತು ; ಅವಾಚ್ಯ : ಗಂಗೆಗೆ ಈ ಮಾತು ವಾಗತ್ಯವೆನಿಸಿತು (ಬಿಜುರಿ. ೪೧); ಒಬ್ಬಿಬ್ಬರಿಗೆ 'ಹಮಾಲಿ ಬರುತ್ತೀಯೇನು?' ಅಂದು ಕೇಳಿದರೇನೇ ಅವರಿಗೆ ವಾಗತ್ಯವೆನಿಸಿತು (ಮುಂಗಾಪು. ೧೦೨). ೩. ಅಸಮಾಧಾನ ; ಅಸಹನೆ : "ಮತ್ತೆ ಕನಸು ಅಂತೀಯಲ್ಲೆ ಅತ್ತಿಗಿ" ಎಂದು ಅದೊಂದು ಬಗೆಯ ವಾಗತ್ಯದಿಂದ ಆಕ್ಷೇಪಿಸಿದಳು ನಾಗಮ್ಮ (ಬಾಕುಬ. ೧೧೯); ಅದಕ್ಕೇಕೆ ವಾಗತ್ಯ? ಪ್ರಸಂಗವೇ ಅಂತಹದಿತ್ತು (ಸಿವಭಾ. ೯೧). 'ವಾಗತ್ಯಪಡು' ಪರಾ. ೪. ಬೇಡವಾದುದು ; ಅನಗತ್ಯವಾದುದು : ಶ್ರೀಕಾಂತನ ಮಡದಿ ಲಕ್ಷ್ಮಿಗೆ ಈ ಕುತೂಹಲೆವೇ 'ವಾಗತ್ಯ'ವೆನಿಸಿತು (ನಡದಾ. II. ೧೧೬೬). 'ಆಗಾತ್ಯ' ಪರಾ. [<— ತೆಲು. ಓಗಾತ್ಯಮು]

ವಾಗತ್ಯ$_2$, **ವಾಗಾತ್ಯ** (ನಾ). ೧. ರೀತಿ ; ಸಂಪ್ರದಾಯ : "ಕುಂಕುಮ ಹಚ್ಚಿಕೊಂಡು ಹೋಗರಿ" ಎಂದು ಸೊಸೆ ಕೂಗಿದಳು. ವಾಗತ್ಯಕ್ಕಾಗಿ ಆಗ ತಿರುಗಿ ಬಂದು . . . ಉಪದೇಶ ಮಾಡಿ ಹೊರಟುಹೋದಳು (ನಿರಾಭ. ೫೫); ಏನೇ ಆದ್ರೂ ಇದು ವಾಗತ್ಯವಾ, ಯಾಕ ತುಂಗವ್ವಾ? (ಬೀಳಿತ. ೨೪). ವಾಗಾತ್ಯ : ೨. ಒಪ್ಪ ; ಅಚ್ಚುಕಟ್ಟು : ಗೌಡರ ಹೊಲದ ಕಮತಾ ವಾಗಾತ್ಯದಿಂದ ಮಾಡಿಸಿಗೊಂಡ ಇದ್ದಬಿಡು (ಗ್ರಾಮಾಯ. ೪೫೪).

[<— ತೆಲು. ಓಗಿತಮು]

ವಾಗತ್ಯಪಡು (ಕ್ರಿ). ಅಸಮಾಧಾನಗೊಳ್ಳು ; ಅಸಹನೆಯಿಂದ ಕೂಡಿರು : ವಾಗತ್ಯಪಡುವುದೆ ವಿಧಿನಿಷೇಧಾಚರಣೆ ರೋಗಾನುಭವವೆಲ್ಲ ಉಗ್ರತಪವು (ವಿದಾಕೃ. ೨೫-೨). [ವಾಗತ್ಯ$_1$ + ಪಡು$_1$]

ವಾಗದ್ವೈತ (ನಾ). ಮಾತಿನಲ್ಲಿ ಮಾತ್ರ ಇರುವ ಅದ್ವೈತತತ್ವ : ಗುರು ಹಿರಿಯರು ತೋಱಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಪರಲ್ಲದೆ ಆಗುಹೋಗೆಬುದನಱಿಯರು (ಅವಚಂ. ೧೭ ೬೯); ಇಂತೀ ವಾಗದ್ವೈತದ ಮಾತಿನ ಮಾಲೆ ಸ್ವಯಂದ್ವೈತವ ಮುಟ್ಟಬಲ್ಲುದೇ (ಮೋಕಾಮಾ. ೯-೩೨). [ಸಂ.]

ವಾಗದ್ವೈತಿ (ನಾ). ವಾಗದ್ವೈತವನ್ನು ಪ್ರತಿಪಾದಿಸುವವನು : ಇಂತಹ ವಾಗದ್ವೈತಿಗಳು ಜಿಹ್ವಾಲಂಪಟಕ್ಕಾಗಿ, ಜಿಹ್ವೆಯ ಕೊನೆಯಲ್ಲಿ ನುಡಿವರಲ್ಲದೆ ಇವರ ಜ್ಞಾನವೇ ಗಟ್ಟಿಕೊಂಡು ನುಡಿಯಾಗಿಲ್ಲ (ಮೋಕಾಮಾ. ೭ ಪ್ರಸ್ತಾವನೆ).

[ಸಂ. ವಾಗದ್ವೈತಿನ್]

ವಾಗಧಿಪ (ನಾ). ಮಾತಿನ ಮೇಲೆ ಪ್ರಭುತ್ವವುಳ್ಳವನು ; ವಿದ್ವಾಂಸ : ಶಬ್ದ ತತ್ತ್ವಾಂಬುಧಿ ವಿವಿಧವಿಧಾನಾಲಂಕ್ರಿಯಾವೀ[ಚಮಾಲಾ]ವಿಧುರಗತಿವಿಲೋಡ್ಯಂ ತಳ್ತು ನಿಲ್ಪಪ್ಪುದಾ ವಾಗಧಿಪ ವಚನಮಾಲಾಪಾವನೀಯಗ[ಭೀರಂ] (ಕವಿರಾ. ೨-೧೫೪). [ಸಂ.]

ವಾಗನೀಸ (ನಾ). ದೊಡ್ಡ ಮನೆತನಗಳಲ್ಲಿ ಖಾಸಗಿ ಲೆಕ್ಕ, ಕಾಗದಪತ್ರ, ಭೋಜನ ಮೊದಲಾದುವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವನು : ತನ್ನ ಕಾರಭಾರಿಯನ್ನೂ ವಾಗನೀಸನನ್ನೂ ಕರೆಸಿ ಏನೇನು ಮಾಡಬೇಕೆಂಬುದನ್ನು ಅವರಿಗೆ ಹೇಳಿದನು (ಧಶ್ರಸ. ೧೨೨).

[<— ಹಾರ. ವಾಕ್‌ನವೀಸ್; ಮರಾ. ವಾಕ್‌ನವೀಸ್, ವಾಕನೀಸ್, ವಾಕೇನೀಸ್]

ವಾಗಾಡಂಬರ (ನಾ). ಮಾತಿನಲ್ಲಿಯ ಅಟ್ಟಹಾಸ ; ಬಡಾಯಿ : ಕದನಕರ್ಕಶ ಕ್ಷತ್ರಿಯಂಗೆ . . . ನಿಷ್ಕಾರಣಕಾಯಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು (ಆದಿಪು. ೧೪-೮೧೨); ಇಂಥ ವಾಗಾಡಂಬರದಿಂದ ಕಲಾಸಿದ್ಧಿಯಾಗುತ್ತದೆಯೆ? (ಒಬಿದ. ೧೨). [ಸಂ.]

ವಾಗಾತ್ಯ 'ವಾಗತ್ಯ$_2$'ನೋ.

ವಾಗಿಂದ್ರಿಯ (ನಾ). ಮಾತನಾಡಲು ಸಹಾಯಕವಾದ ಇಂದ್ರಿಯ ; ನಾಲಗೆ : ವರ್ಣೋಚ್ಚಾರಣೆಗೆ ಸಾಧನವಾಗಿಯೂ ಇಂದ್ರಿಯವಾಗಿಯೂ ಇರುವುದು ವಾಗಿಂದ್ರಿಯವೆನಿಸಿಕೊಳ್ಳುವುದು (ತತ್ತ್ವಶಾ. ೭). [ಸಂ.]

ವಾಗೀನು 'ವ್ಯಾಗನ್' ನೋ.

ವಾಗೀಶ (ನಾ). ೧. ಮಾತಿನ ಮೇಲೆ ಪ್ರಭುತ್ವವುಳ್ಳವನು : "ವಾಗೀಶಃ, ವಾಕ್ಪತಿಃ — ೨ ನಿರ್ದೋಷವಾಗಿ ಮಾತು ಕಲಿತವನ ಹೆಸರುಗಳು" (ಸಿದ್ಧಾಂಶಿ. ೩೩೨). ೨. ದೇವತೆಗಳ ಗುರು ; ಬೃಹಸ್ಪತಿ : ವಾಗೀಶನ ಕಥೆಯಂ ಚಲ್ವಾಗೀಶನ ಭಕ್ತರೆಡೆಯೊಳೋದುವನವನಾ ವಾಗೀಶಮುಖ್ಯ ಸುರಗುರು ವಾಗಿಶಕೃಪಾವಿಶೇಷದಿಂ ಸುಖಮಿರ್ಕುಂ (ವೃಷಭ. ೩೪-೧೩೩). ೩. ವಾಣೀಪತಿ ; ಬ್ರಹ್ಮ : 'ವಾಗೀಶಪಿತ' ಪರಾ. [ಸಂ.]

ವಾಗೀಶಪಿತ (ನಾ). ಬ್ರಹ್ಮನ ತಂದೆ ; ವಿಷ್ಣು : ಸದ್ವಾಗಿಶಪಿತಪರಂಧಾಮ . . . ಪಾಲಿಸೊ ಪೂರ್ಣಕಾಮ (ಮೋಹತ. ೧-೧). [< ಸಂ. ವಾಗೀಶಪಿತೃ]

ವಾಗೀಶ್ವರ (ನಾ). ೧. ಮಾತಿನ ಮೇಲೆ ಪ್ರಭುತ್ವವುಳ್ಳವನು. ೨. ವಾಣೀಪತಿ ; ಬ್ರಹ್ಮ. ೩. ಪರಮಾತ್ಮ : ಪರಮಗುಣ ಪರಶಕ್ತಿ ವಾಗೀಶ್ವರ . . . ಪರೋತ್ತಮ ಕರುಣಿಸುವುದೆಂದ (ಕುಮಾಹ. ೬-೮೭). [ಸಂ.]

ವಾಗೀಶ್ವರಿ (ನಾ). ನುಡಿಯ ಅಧಿದೇವತೆ ; ಸರಸ್ವತಿ. [ಸಂ. ವಾಗೀಶ್ವರೀ]

ವಾಗು (ನಾ). ಒಂದು ಬಗೆಯ ದೊಡ್ಡ ಮೀನು : "ವಾಗುಃ — ಮತ್ಸ್ಯಭೇದ" (ಓಷಧಿ. ೧೪೯). [< ಸಂ. ವಾಗುಸ]

ವಾಗುಂಜಿ 'ಬಾಗುಜಿ' ನೋ.

ವಾಗುಜಿ (ನಾ). ಒಂದು ಬಗೆಯ ಸಸ್ಯ ; ಕಾಡುಜೀರಿಗೆ : "ಅವಲ್ಗುಜಃ . . . ವಾಗುಜೀ, ಪೂತಿಫಲೀ — ೮ ಬಾಹುಜಿಗೆಯ ಹೆಸರುಗಳು" (ಸಿದ್ಧಾಂಶಿ. ೧೩೩).

[ಸಂ. ವಾಗುಜೀ]

ವಾಗುರ (ನಾ). (ಮೃಗಗಳು ಹಾಗೂ ಜಲಚರಗಳನ್ನು ಹಿಡಿಯಲು ಬಳಸುವ) ಬಲೆ ; ಜಾಲ : "ಮೃಗಜಾಲಿಕಂ ವಾಗುರಂ ಬೆಳ್ಗಾರವೆನಿಸಿಕ್ಕು" (ಮಂಗರಾ. ೧೧೨-೫). [ಸಂ. ವಾಗುರಾ]

ವಾಗುರಿ (ನಾ). = ವಾಗುರ : ಬೇಡರ ಕೋಲ್ಗೆ ವಾಗುರಿಗೆ ಶಸ್ತ್ರಕೆ ಕೂಳಿಗೆರಳ್ದ ನಾಯ ಕೂರ್ದಾಡೆಗೆ ನೇಣ್ಗೆ ಚಮ್ಮಟಿಗೆಗಂಶುಕಕಟ್ಟೊಳಗಾಗಿ ಬೆಟ್ಟಿದರ್ (ಅಂಪು. ೯-೪೩); ನಿನ್ನ ಭುಜಬಲ ವಾಗುರಿಯ ವೇಢೆಯಲಿ ಬೀಳದು ಕೃಷ್ಣಬುದ್ಧಿಮೃಗ (ಕುವಾಗ. ೮-೬೨). IP ಇದು 'ವಾಗುರೆ'ಯೆಂದಿರಬಹುದೇ?

[< ಸಂ. ವಾಗುರಾ]

ವಾಗುರಿಕ (ನಾ). ೧. ಬಲೆಯನ್ನು ಬೀಸಿ, ಜಿಂಕೆ ಮೊದಲಾದ ವನಚರಪ್ರಾಣಿಗಳನ್ನು ಹಿಡಿಯುವವನು ; ಬೇಟೆಗಾರ ; ವ್ಯಾಧ : "ಮೃಗಯುಃ, ಲುಬ್ಧಕಃ, ವ್ಯಾಧಃ, ವಾಗುರಿಕಃ — ಈ ೪ ಮಾವುಲಿಗಂ" (ಹಲಾಯು. ೯೮-೪೪೨). ೨. ಗಾಳ ಅಥವಾ ಬಲೆಯನ್ನು ಬೀಸಿ ಮೀನು ಮೊದಲಾದ ಜಲಚರಗಳನ್ನು ಹಿಡಿಯುವವನು ; ಮೀನುಗಾರ ; ಬೆಸ್ತ : ಮರದೊಳ್ ಕೀಲಿಸಿ ನಿಲೆ ಭೀಕರ ಕಾಳಿಂದೀಪ್ರವಾಹದೊಳ್ ತಂದು ಬಿಡಲ್ ಬರೆ ಕೌಶಾಂಬಿಗದಂ ವಾಗುರಿಕಂ ಕಂಡೊರ್ವನೊಯ್ದು ನಡಪಿದಂ (ನೇಮಿಪು. ೫-೧೧೦); ಸಮದ ಮತ್ಸ್ಯಕೂರ್ಮಂಗಳಂ . . . ತ್ರಿವಿಕ್ರಮಕಂಕಾಳದಂಡಮೆಂಬ ಗಾಳಮನಿಟ್ಟು ಸೆಳೆವ ವಾಗುರಿಕನುಂ . . . ತಾನೆ ನಿಜಮೆನಿಸಿ ರಂಜಿಪನವಂ (ವೃಷಪ. ೧೨-೨೬ ವ). [ಸಂ.]

ವಾಗುರಿಕೆ (ನಾ). ಬೇಡರ ಹೆಂಗಸು ; ಬೇಡತಿ : ವಾಗುರಿಕೆಯ ಮೊಲೆವೆಟ್ಟದ ಮೇಗಣ ಪರಿಪಕ್ವಬಿಂಬಫಲರಸಮಂ ಪೀರ್ದಾಗಳುಮರ್ದೆ ತಣ್ಣನೆ ತಣಿದೋಗಡಿ ಸಿರಲುಟ್ಟಿದ ಪಣ್ಣನೊಲ್ಲಂ ಭಿಲ್ಲಂ (ಅರ್ಧನೇ. ೬-೫೬). [ಸಂ. ವಾಗುರಿಕಾ]

ವಾಗುರೆ (ನಾ). = ವಾಗುರ : ಆ ವನಚರನ ಮನಃಪ್ರಿಯೆ . . . ದೃಕ್‌ಶಫರೀವಾಗುರೆ ಪೆಸರೊಳಾಕೆ ವಾಗುರೆಯೆಂಬಳ್ (ಅರ್ಧನೇ. ೬-೫೫); ಬೀಸಿದೊಳ್ವಲೆವೊಳೊಪ್ಪಿರೆ ಸಂಜೆಯ ಕೆಂಪು ಸಿಲ್ಕಿ ತದ್ವಾಗುರೆಯಲ್ಲಿ ಕಾಲುಡುಗಿ ಪಶ್ಚಿಮವಾರ್ಧಿಗೆ ಬಿಳ್ದುದೆಂಬಿನಂ ಬೇಗದೊಳಲ್ಲಿ ತತ್ಪಗಮದಂಗಿದುದಾಹೃತಲೋಹಿತಾಂಶುಕಂ (ವೃಷಪ. ೧೦-೬೭).

[ಸಂ. ವಾಗುರಾ]

ವಾಗುಷಿ 'ಬಾಗುಜಿ' ನೋ.

ವಾಗುಸ (ನಾ). ಒಂದು ಬಗೆಯ ದೊಡ್ಡ ಮೀನು : "ಶೃಂಗಿ, ಮದ್ಗುರ, ವಾಗುಸ, ನಂದ್ಯಾವರ್ತ — ಈ ೪ ಮೊದಲಾಗುಳ್ಳವು ಹೆಮ್ಮೀನು" (ನಾಬರಾ. ೬). [ಸಂ.]

ವಾಗುಳ (ನಾ). ಒಂದು ಬಗೆಯ ಸಸ್ಯ : "ದ್ರೋಣ : — ತುಂಬೆ, ದೊಡ್ಡಕಾಗೆ, ವಾಗುಳ" (ಓಷಧಿ. ೮೦). [< ಸಂ. ವಾಗುಣ]

ವಾಗೆ (ನಾ). ಲಗಾಮು ; ಕಡಿವಾಣ : ವಾರುವ ಮುಗ್ಗಿದಡೆ ವಾಗೆಯಲಿ ಆದರಿಸಬೇಕಲ್ಲದೆ ಅದ ಗಾರುಮಾಡಿ ಹೊಯ್ಯುವರೇ ಮಿಡಿಯನು (ಮೋಕಿಮಾ. ೫೨-೨೧೪); ವಾಗೆಯ ಬಾಗುಂ ಗಾಢಮುಂ ನೂಂಕುವ ಬಿಡುವ ಪೊಡರ್ಪುಂ ಪೊದಟ್ಟೊಪ್ಪಿರಲ್ (ಕುಸುಮಾ. ೭-೭೫). [ಸಂ. ವಾಗಾ]

ವಾಗ್ಗುಂಫ (ನಾ). (ಕಾವ್ಯಲಕ್ಷಣಕ್ಕೆ ಅನುಗುಣವಾದ) ಮಾತಿನ ರಚನೆ ; ನುಡಿಯ ಜೋಡಣೆ : ಉಪನ್ಯಾಸದ ವಿನ್ಯಾಸಂ ಬಲಂಚಿತ್ತೆಸೆಯೆ ನೃಪಸಭಾಮಧ್ಯದೊಳ್ ಪೆರ್ಚಿ ವಾಗ್ಗುಂಫದೊಳಾಗಳ್ ಬೆಟ್ಟಿನಲ್ಪಿಟ್ಟಿನಲೆಡೆಗುಡವಾಶ್ಚರ್ಯಮಂ ತಾಳ್ದಿ ನಿಂದು (ಸುಕುಮಾ. ೨-೧೫); ಅತಿ ಬಾಣಂ ಹರಿಯಂತಧಃಕೃತಮಯೂರಂ ತಾರಕಾರಾತಿಯಂತೆ . . . ಭಾರತದಂತಾತ್ತಧನಂಜಯೆ [ಕವಿಭವಂ] ವಾಗ್ಗುಂಫದೊಳ್ ನಾಕಿಗಂ (ಮಧ್ರಾಕೂ. ೧೪೧-೧೩೬). [ಸಂ.]

ವಾಗ್ಗುಪ್ತಿ (ನಾ). [ಜೈನ] ಮೂರು ಬಗೆಯ ಗುಪ್ತಿಗಳಲ್ಲಿ ಒಂದು ; ಮಾತನ್ನು ಲೌಕಿಕವಿಷಯಗಳಲ್ಲಿ ಪ್ರವರ್ತಿಸದಂತೆ ನಿಗ್ರಹಿಸುವುದು ; ಮಾತಿನ ಮೇಲಿನ ನಿಗ್ರಹ : ವಾಗ್ಗುಪ್ತಿ-ವಚನದ ಅಡಕಮುಂ, ಮನೋಗುಪ್ತಿ — ಮನದ ಅಡಕಮುಂ ಈರ್ಯಾಸಮಿತಿ . . . ನಡೆವಲ್ಲಿಯೊಳಪ್ಪ ಅಡಕಮುಂ (ತತ್ತ್ವಪ್ರ. ೨೬೯). 'ಕಾಯಗುಪ್ತಿ', 'ವಚನಗುಪ್ತಿ' ಪರಾ. [ಸಂ.]

ವಾಗ್ಗೇಯಕಾರ (ನಾ). ಸಂಗೀತಲಕ್ಷಣಬದ್ಧವಾದ ಸಾಹಿತ್ಯವನ್ನು ರಚಿಸುವವನು ; ಸಂಗೀತಕೃತಿಗಳನ್ನು ರಚಿಸುವವನು : ಈ ಪಾರಿಭಾಷಿಕ ಶಬ್ದವನ್ನು ಹೊಸಸಾಹಿತ್ಯಕ್ಕೆ ವಾಗ್ಗೇಯಕಾರರು ಕೊಟ್ಟದ್ದು ಒಳ್ಳೆ ಮಾರ್ಮಿಕವಾದ ಶಾಸ್ತ್ರಜ್ಞಾನದ ನಿದರ್ಶನವಾಗಿದೆ (ಜಗದಾ. ೬೫); ಪಲ್ಲವಿ ಶೇಷಯ್ಯರ್ . . . ಸ್ವತಃ ಒಳ್ಳೆಯ ಚತುರರಾದ ವಾಗ್ಗೇಯಕಾರರು (ಸಂಗೀತ. ೪೭). [ಸಂ.]

ವಾಗ್ಜಾಲ (ನಾ). ೧. ಮಾತಿನ ಸರಣಿ ; ಶಬ್ದಸಮೂಹ : ಶರಣರ ವಾಗ್ಜಾಲವ ಕಲಿತುಕೊಂಡು ನುಡಿವ ಕಾಕುಮನುಜರೆತ್ತ ಬಲ್ಲರು ನಿಮ್ಮ ನೆಲೆಯ (ಲಿಂಗವ. ೭-೨೫); ಈ ವಿಚಿತ್ರ ವಾಗ್ಜಾಲಕ್ಕೆ ಉದಾಹರಣೆಯನ್ನು ಬೇರೆಯಾಗಿ ಏಕೆ ಕೊಡಬೇಕು? (ನಂಬರು. ೨೧). ೨. ಆಡಂಬರದ ಮಾತು. [ಸಂ.]

ವಾಗ್ದತ್ತ (ಗು). ಮಾತು ಕೊಟ್ಟ ; ವಚನ ನೀಡಿದ. [ಸಂ.]

ವಾಗ್ದರಿದ್ರ (ಗು). ೧. ಕಡಮೆ ಮಾತನಾಡುವ ; ಅಲ್ಪಭಾಷಿಯಾದ. ೨. ಮಾತಾಡಲು ಶಕ್ತಿ ಸಾಲದ ; ವಾಗ್ಬಲವಿಲ್ಲದ. [ಸಂ.]

ವಾಗ್ದಾನ (ನಾ). ೧. ಮಾತು ; ಭಾಷೆ ; ವಚನ. ೨. ವಿವಾಹಸಂಬಂಧದಲ್ಲಿ ಪೂರ್ವಭಾವಿಯಾಗಿ ಮಾಡಿಕೊಳ್ಳುವ ಮಾತು ; ನಿಶ್ಚಯ.

ವಾಗ್ದಾನ ಮಾಡು = ವಚನ ನೀಡು ; ಭಾಷೆಕೊಡು : ಮಾಸ್ಟೋವಳ ಬಗ್ಗೆ ವಿವೇಕ ಹೇಳುವುದಾಗಿ ವಾಗ್ದಾನ ಮಾಡಿದ್ದರಿಂದ ಅವನವಳನ್ನು ನೋಡಲೇಬೇಕಾಗಿತ್ತು (ಪುನರು. ೨೨೨). [ಸಂ.]

ವಾಗ್ದೃಷ್ಟ (ನಾ). ಮಾತಿನ ಸಾಕ್ಷಿ,- ಪ್ರಮಾಣ : ನ್ಯಾಯ ವೈಶೇಷಿಕ ಮುಖಾನೇಕವಾದ ವಾಗ್‌ದೃಷ್ಟಾದಿ ವಿಧಿಯುಕ್ತಾದಿಗಳನೊಡಬಡಿಸುತಂ (ಬಸವು. ೫೧-೧೨). [ಸಂ.]

ವಾಗ್ದೇವತೆ (ನಾ). ಮಾತಿನ ಅಧಿದೇವತೆ ; ಸರಸ್ವತಿ : ರಣಬ್ಯಾಪಾರದೊಳು ಬಳ್ಗದೇವತೆ . . . ವಾಗ್ದೇವತೆ ವಿದ್ದಿಯೊಳು (ಎಕ. V, ಹಾಸನ. ೧೧೬-೩೨ ; 1123); ಉದಾತ್ತವಾಗ್ದೇವತೆಗುದ್ಭವಹೇತು ಕೋಶಗೃಹಮೆನೆ ಭುವನದೊಳಿದು ಪರೆದು ನಿಲ್ಪುದೊಂದಚ್ಚರಿಯೇ (ಕಾವ್ಯಾವ. ೪). [ಸಂ. ವಾಗ್ದೇವತಾ]

ವಾಗ್ದೇವಿ (ನಾ). = ವಾಗ್ದೇವತೆ : ಅರಾತೀಯಕವೀಶ್ವರರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ (ಗದಾಯು. ೧-೩೮); ಶ್ರೀವಾಗ್ದೇವಿಗೆ . . . ಇಳಾವಂದ್ಯೆಗೆ ಶಾಸ್ತ್ರ ಮುಖದೊಳವನತನಪ್ಪೆಂ (ಶಮದ. ೧. ೭೦೦೫). [ಸಂ. ವಾಗ್ದೇವೀ]

ವಾಗ್ದೋಷಕ (ನಾ). ಬಯ್ಯುವವನು ; ನಿಂದಕ : ಮೊದಲಲಾ ಮಾಹಿಷಕನನು ಮಧ್ಯದಲಿ ವೃಷಲೀವಲ್ಲಭನನಂತ್ಯದಲಿ ವಾಗ್ದೋಷಕನ ಕಂಡವರುಗಳ ಭಾಗ್ಯನಿಧಿ ಕದಡಿ ಹರಿವುದು (ಕುವಾಗು. ೪-೪೮). [ಸಂ.]

ವಾಗ್ಬಂಧನ (ನಾ). (ಮಂತ್ರಾದಿ ಪ್ರಯೋಗಗಳಿಂದ) ಮಾತನ್ನು ತಡೆಹಿಡಿಯುವಿಕೆ ; ಮೌನಗೊಳಿಸುವುದು : 'ವಾಗ್ಬಂಧನಂಗೈ' ಪರಾ. [ಸಂ.]

ವಾಗ್ಬಂಧನಂಗೈ (ಕ್ರಿ). ಮಾತನ್ನು ತಡೆಹಿಡಿ ; ಮೌನಗೊಳಿಸು : ನುಡಿಯ ಸತ್ಯಂಗೆಯ್ವುದನುಮಾನಮೆನಿಸಿದರೆ ಬಿಡುವೆನಸುಗಳ ತೃಣೋಪಮಮಾಗಿ ಭವದೀಯ ದಡಿಯೆಡೆಯಲೆಂದು ವಾಗ್ಬಂಧನಂಗೈದು ಮತ್ತುಸುರ್ದಳಿಷ್ಟಾರ್ಥದಿರವ (ಮಂಕಾರಾ. ೨-೬-೨೦). [ವಾಗ್ಬಂಧನ + ಗೈ (< ಕೆಯ್)]

ವಾಗ್ಬಲ, ವಾಗ್ಬಳ (ನಾ). ನುಡಿಯ ಶಕ್ತಿ ; ಮಾತಿನ ಸಾಮರ್ಥ್ಯ : ತಲೆದೋಱದೆ ವೈಷ್ಣವಡಂಗಡಂಗು ವಾಗ್ಬಲದ ಪೊಡರ್ಪ್ಪುವೇಡ ಗಡ (ಎಕ. II, ೬೯-೫೯; ಸು. 1100).

ವಾಗ್ಬಳ : ದಿಟನುಡಿವನ್ಯವಾದಿಮುಖಮುದ್ರಿತನುದ್ಧ[ತ]ವಾದಿ ವಾಗ್ಬಳೋದ್ಧಟ ಜಯಕಾಳದಣ್ಣಂ (ಎಕ. II, ೬೯-೪೮; ಸು. 1100). [ಸಂ.]

ವಾಗ್ಬಳ 'ವಾಗ್ಬಲ' ನೋ.

ವಾಗ್ಬಾಣ (ನಾ). (ಆಲಂ) (ಬಾಣದಂತೆ ಮನಕ್ಕೆ ನಾಟುವ) ತೀಕ್ಷ್ಣವಾದ ಮಾತು ; ಚುಚ್ಚುನುಡಿ : ಮರ್ಮದೊಳೂರಿದ ಏಳರ ವಾಗ್ಬಾಣದೆ ಸಂತರು ಬಹು ನರಳುವರು (ಇಂಚಾಪ. ೭೩-೫೫) ; ನಿನ್ನ ಮನಸ್ಸಿಗೆ ತೋರಿದ ಹಾಗೆಲ್ಲಾ ಮಾತನಾಡಿ ವಾಗ್ಬಾಣಗಳಿಂದ ನನ್ನನ್ನು ಏಂಡಿಸುತ್ತಿದ್ದೀಯೆ (ವಚಭಾ. ೨೬೪). [ಸಂ.]

ವಾಗ್ಬ್ರಹ್ಮ (ನಾ). ಬರಿಮಾತಿನ ಬ್ರಹ್ಮತತ್ವ : ವಾಗ್‌ಬ್ರಹ್ಮವ ನುಡಿವವರ ಕಂಡು ವಿಶೇಷವನ್ನು ಈಚೆಯಲ್ಲಿ ನುಡಿಯದೆ . . . ಹೊಱ ಇಲ್ಲದೆ ವರ್ಣಭೇದವಿಲ್ಲದೆ ಕೂಡಬೇಕು (ಮದೇವ. ೨೮೦-೪೩). [ಸಂ. ವಾಗ್ಬ್ರಹ್ಮನ್]

ವಾಗ್ಮಿ (ಗು). ೧. ಬಹಳ ಮಾತನಾಡುವ ; ಹರಟೆ ಹೊಡೆಯುವ. ೨. ಚೆನ್ನಾಗಿ ಮಾತನಾಡುವ ; ವಾಕ್ಪಟುವಾದ. (ನಾ). ೩. ಚೆನ್ನಾಗಿ ಮಾತನಾಡುವವನು ; ವಾಕ್ಪಟು : ಕವಿ ಗಮಕಿ ವಾದಿ ವಾಗ್ಮಿಪ್ರವರರ ಪಂಡಿತರ ನೆಗೞ್ದ ಮಾತಱಿವರ ಸಬ್ಬವದವರೊಡನಂತೊಸೆದನ್ನವಾಸದೋಲಗದೊಳರ್ದನಾಗಳ್ ಹರಿಗಂ (ಪಂಪಭಾ. ೩-೮೦); ಕವಿ ಗಮಕಿ ವಾದಿ ವಾಗ್ಮಿಗಳವಂದಿರಂ ಗೆಲ್ದು ಕನಕನನ್ನಿ ತ್ರೈವಿದ್ಯವಿಳಾಸಂ ತ್ರಿಭುವನಮಲ್ಲ ವಾದಿರಾಜಂ ದಲೆನಿಸಿದಂ (ಎಕ. VII. ಶಿವಮೊ. ೪-೬೧ ; 1122). ೪. ವಿದ್ವಾಂಸ ; ಪಂಡಿತ : "ಸೂರಿ ಬುಧಂ ಕವಿ ವಾಗ್ಮಿ . . . ವಿದ್ವಾಂಸಂ" (ಮಲ್ಲಿಕೂಲ. ೧೮-೪). ೫. ಅನೇಕರ ಪ್ರಶ್ನೆಗಳಿಗೆ ತಕ್ಷಣ ಏಕಕಾಲದಲ್ಲಿ ಉತ್ತರ ಹೇಳಬಲ್ಲವನು ; ಅವಧಾನಿ : "ಮೇಳ್ಪೆಸಿ ನಾನಾರವಕ್ಕೆ ಪ್ರತಿಗೈವವಂ ಚರ್ಮಣಂ ವಾಗ್ಮಿಯಕ್ಕುಂ" (ವಂಗರಾ. ೧೦೬-೧೬). ೬. ಬೃಹಸ್ಪತಿಯ ಹೆಸರುಗಳಲ್ಲಿ ಒಂದು. ೭. ಗಿಣಿ. 'ಚರ್ಮಣ' ಪರಾ. [ಸಂ. ವಾಗ್ಮಿನ್]

ವಾಗ್ಮಿತೆ (ನಾ). ಉತ್ತಮವಾದ ಮಾತುಗಾರಿಕೆ ; ವಾಕ್ಚಾತುರ್ಯ : ವಾಗ್ಮಿತೆಯಲ್ಲಿ ಅವರ ಐಹಿಕಸಾಹಸಗಳ ಚರಿತ್ರೆ ಅಡಗಿತ್ತು (ಕಬಸಾ. XIV, ಪೀಠಿಕೆ); ತಾಳಮದ್ದಳೆ ಕೂಟಗಳಿಂದ ನಮ್ಮಲ್ಲಿ ವಾಗ್ಮಿತೆ ಬೆಳೆದಿದೆಯೆಂಬುದು ನಿಜ . . . ಆದರೆ ಬಾಯ್ತುಂಬ ಮಾತನಾಡುವುದೆಂಬುದೇ ವಾಗ್ಮಿತೆಯಲ್ಲ (ಯಕ್ಷಬ. ೧೨೮). [ಸಂ. ವಾಗ್ಮಿತಾ]

ವಾಗ್ಮಿತ್ವ (ನಾ). = ವಾಗ್ಮಿತೆ : ಅವನೀತಳದೊಳ್ ಕವಿ ಗಮಕಿ ವಾದಿ ವಾಗ್ಮಿತ್ವ ತತ್ತ್ವಪಾರಗರೆಂದೇನವಯವದಿಂ ಬಣ್ಣಿಸುವುದೊ ಭುವನಂ ಶ್ರೀಪೂಜ್ಯಪಾದ ಭಟ್ಟಾರಕರಂ (ಸಿಕಮಾ. ೧-೧೬). [ಸಂ.]

ವಾಗ್ಯ 'ವಾಘೆ' ನೋ.

ವಾಗ್ಯತ (ನಾ). ಮಾತಿನಲ್ಲಿ ಸಂಯಮವುಳ್ಳವನು ; ಮಿತಭಾಷಿ [ಸಂ.]

ವಾಗ್ಯದಂಡೆ (ನಾ). ಕಡಿವಾಣದ ಹಗ್ಗ : ವಾಗ್ಯದಂಡೆಗೆ ವಾಮಕರವಿಕ್ಕಿ ಬಲಗೈಯ ಯೋಗ್ಯದ ಕುಂಚವ ನೆಗಹಿ ವಾಗ್ಯೋಗ ಹುಮ್ಮನೆ ಪೋಪ ವಾಹನದೊಂದು ಭಾಗ್ಯ ಸಾಲದೆ ರಾಜಸಬಿನ (ಭರಚ. ೪೯-೨೫). [ವಾಗ್ಯ (< ವಾಘೆ) + ದಂಡ್ಯೆ (< ದಂಡ್ಯಿ)]

ವಾಗ್ಯುದ್ಧ (ನಾ). ಮಾತಿನ ಜಗಳ ; ವಾಕ್ಕಲಹ : ಇದುವರೆಗೂ ನಡೆದ ವಾಗ್ಯುದ್ಧದಲ್ಲಿ ಇಬ್ಬರೂ ಸೋಲಲಿಲ್ಲ (ರೂಢಿ). [ಸಂ.]

ವಾಗ್ಯೋಗ (ನಾ). ೧. ರೂಢಿಯಲ್ಲಿರುವ ಮಾತಿನ ಸರಿಯಾದ ಕ್ರಮ: ಅನೃತಭಾಷಣಂ ಪರುಷಾಸಭ್ಯವಚನಂ ಮೊದಲಾಗುಳ್ಳುದು ಅಶುಭವಾಗ್ಯೋಗಂ (ತತ್ತ್ವಪ್ರ. ೨೫೫). ೨. ಭಾಷೆಯ ನಿಯಮಗಳನ್ನು ತಿಳಿಸುವ ಶಾಸ್ತ್ರ ; ವ್ಯಾಕರಣ: ಮಹಾಭಾಷ್ಯದಲ್ಲಿ ವ್ಯಾಕರಣವನ್ನು "ವಾಗ್ಯೋಗ" ಎಂತಲೂ ಕರೆದಿದೆ (ಸಂಶೋಧ. ೪೦). [ಸಂ.]

ವಾಗ್ರಮಣ (ನಾ). ಸರಸ್ವತಿಯ ಗಂಡ ; ಬ್ರಹ್ಮ : ನಮದಮರಕನಕಮೌಳಿಗಳಮರ್ದೊರಸಿದೊಡುದಿರ್ದ ರೇಣು ಪುಗೆ ಬಾಯ್ಗಳೊಳಾಗಮಮಂ ಪದೆದೋದುವ ವಾಗ್ರಮಣಂ ತಳೆದಂ ಹಿರಣ್ಯಗರ್ಭಾಖ್ಯತೆಯಂ (ರಾಜತೇ. ೧೪-೧೬೧). [ಸಂ.]

ವಾಗ್ರಮಣಿ (ನಾ). ಮಾತಿನ ಅಧಿದೇವತೆ ; ಸರಸ್ವತಿ : ಶ್ರೀರಮಣೀಮನೋರಮಣಂ ವಾಗ್ರಮಣೀರಮಣಾದ್ರಿರಾಜಪುತ್ರೀರಮಣೀಮನೋರಮಣಂ . . . ಈಗಭೀಷ್ಟಮಂ (ಕಾಆ. ೧-೨-೧; 1058). [ಸಂ. ವಾಗ್ರಮಣೀ]

ವಾಗ್ರಮ್ಯ (ನಾ). ಮಾತಿನ ಮೋಹಕತೆ ; ಶಬ್ದದ ರಂಜಕತೆ : ದಿಗ್ರಮಣಾನುತ ಶಂಭು ಸಕಲ ಗಣತತಿವೆರಸಿ ವಾಗ್ರಮ್ಯದಿಂದ ಸತ್ಕರಿಸಿ (ಎಕೃವಿ. ೬-೧೫-೪೨). [ಸಂ.]

ವಾಗ್ವಧು (ನಾ). ಮಾತಿನ ಅಧಿದೇವತೆ ; ಸರಸ್ವತಿ ; ವಾಣಿ : ಸಂಸಾರಸಾರೋದಯ ವಿರಚಿತದೊಳ್ ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ (ಆದಿಪು. ೧೬-೭೯); ವಕ್ತ್ರಪಂಕಜವರರಾಜಹಂಸ ವಧು ವಾಗ್ವಧು ರಂಜಿಸೆ . . . ವಿರಾಜಿಸಿದಂ ಕವಿತಾಮನೋಹರಂ (ಪಂರಾಮಾ. ೧-೧೫). [ಸಂ. ವಾಗ್ವಧೂ]

ವಾಗ್ವಧೂಟಿ (ನಾ). = ವಾಗ್ವಧು : ಮಾಘನಂದ್ಯಾಖ್ಯವಾಚಂ ಯಮಿರಾಜಂ ವಾಗ್ವಧೂಟೀನಿಟಿಳತಟಪಟನ್ನೂತ್ನಸದ್ರತ್ನಪ XXX (ಎಕ. II. ೬೪-೬೭; 1163). [ಸಂ.]

ವಾಗ್ವನಿತೆ (ನಾ). = ವಾಗ್ವಧು : ಜಿನವಚನವಿನಿರ್ಗತವಾಗ್ವನಿತೆಗೆ ಮಾಂಗಲ್ಯಕಾರಣಂ ಮಂಡನಮೊತನ ವಾಗ್ವಿಲಾಸಮಾದತ್ತೆನಿಸಿದನೀತನೆ ಸರಸ್ವತೀಮುಖಮುಕುರಂ (ಸಿಕಮಾ. ೧-೫೦). [ಸಂ. ವಾಗ್ವನಿತಾ]

ವಾಗ್ವರ (ನಾ). ೧. ವಾಣೀಪತಿ ; ಬ್ರಹ್ಮ : ತಳೆದೀ ಲೋಕಸಂಸ್ತುತ್ಯ ವಾಣಿಶ್ರೀಯಂ ವಕ್ತ್ರಾಬ್ಜದೊಳ್ ವಾಗ್ವರನೆನೆ ಮೆಱೆದಂ . . . ನಾರಸಿಂಹಕ್ಷಿತೀಶಂ (ಎಕ. XII. ಶಿಮಕೂ. ೩೮-೪; 1160); ಶ್ರೀವರ ವಾಗ್ವರಪ್ರಮುಖನಿರ್ಜರರಾದೊಡಮೊರ್ಮೆ ತೀವ್ರಗರ್ವಾವಿಳರಾಗಿ ಮರ್ಮಲೆಯೆ (ವೃಪಪು. ೧೨-೫೭). ೨. ದೇವತೆಗಳ ಗುರು ; ಬೃಹಸ್ಪತಿ : ದೇವದೇವ ಜಯ ವಾಗ್ವರ ವಾಗ್ವರವಂದ್ಯ ಶಂಕರಾ (ಶಬಶಂ. ೫-೨೭). [ಸಂ.]

ವಾಗ್ವಾದ (ನಾ). ಚರ್ಚೆ ; ವಿವಾದ : ಕ್ರಮವಾಗಿ ಗುತ್ತಿಗೆ ಕೊಡಲಾರದ ದುರ್ಬಲರನ್ನು ಹೊರಚ್ಚುಮಾಡಬೇಕೆಂಬ ರೈತರಿಗೂ ಈ ಕಾರಣದಿಂದಲೆ ಹೊರಗಾಗುವ ರೈತರಿಗೂ ತೀವ್ರ ವಾಗ್ವಾದ ತಲೆದೋರಿತು (ಪುನರು. ೨೭೧). [ಸಂ.]

ವಾಗ್ವಿದ (ನಾ). ಮಾತಿನ ಮೇಲೆ ಪ್ರಭುತ್ವವುಳ್ಳವನು ; ವಿದ್ವಾಂಸ ; ಪಂಡಿತ : ಕಲಾರ್ಥಂ ಪತ್ತುಪುದಂದಿಂದುಂದೆಂದೆತ್ತಂ ನುಡಿವವ್ಯಯಂಗಳೊಳ್ ವಾಗ್ವಿದರಿಂ (ಶಮದ. ೩೧೯). [ಸಂ. ವಾಗ್ವಿದ್]

ವಾಗ್ವಿದಗ್ಧತೆ (ನಾ). ಮಾತಿನ ಕೌಶಲ ; ವಾಕ್ಚಾತುರ್ಯ : ವಾಗ್ವಿದಗ್ಧತಾ ನಿಪುಣತೆಯೊಳ್ ಪಸರಿಸಿದಾ ಬಗೆ ಮನಮಂ ಪೊಸತಾಗೆ ನೆಗೞ್ಬಲಱಿಯನಾ ರಚನೆಯೊಳೇಂ ಬಸನಂ (ಕವಿಲೋ. ೧-೧೧); ವ್ಯವಹಾರಚಾತುರ್ಯ, ವಾಗ್ವಿದಗ್ಧತೆ . . . ಇವೂ ವಂಶಗತ (ಶಿಕ್ಷದ. ೯೦). [ಸಂ. ವಾಗ್ವಿದಗ್ಧತಾ]

ವಾಗ್ವಿಭವ (ನಾ). ೧. ಮಾತಿನ ವೈಭವ ; ವಾಕ್ಸಂಪತ್ತು : ಸುಭಗಕವಿ ಪಂಪನಿಂ ವಾಗ್ವಿಭವೋನ್ನತಿ ನೆಗೞ್ದು (ಅಜಿಪು. ೧೨-೩೯); ವಾಗ್ವಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ (ಕಾವ್ಯಾವ. ೮೨೩). ೨. ವಾಕ್ಸಂಪತ್ತುಳ್ಳವನು ; ವಾಕ್ಪಟು : ಶೂರನಾಗಿಯುಂ ತನುರಕ್ಷೈಕವಿಶಾರದಂ ಪ್ರಶಾಸ್ತ್ರಪ್ರವೀಣವಾಗ್ವಿಭವನಾಗಿಯುಂ ಕೃತಮಂತ್ರಂ (ಶಾಂತಿಪು. ೨-೪೩). [ಸಂ.]

ವಾಗ್ವಿಲಾಸ, ವಾಗ್ವಿಳಾಸ (ನಾ). ಮಾತಿನ ಬೆಡಗು, — ಲಾಲಿತ್ಯ : ಜಿನವಚನ ವಿನಿರ್ಗತವಾಗ್ವನಿತೆಗೆ ಮಾಂಗಲ್ಯಕಾರಣಂ ಮಂಡನಮಾತನ ವಾಗ್ವಿಲಾಸಮಾದತ್ತೆನಿಸಿದ ನೀತನೆ ಸರಸ್ವತೀಮುಖಮುಕುರಂ (ಸಿಕಮಾ. ೧-೫೦). ವಾಗ್ವಿಳಾಸ : ದೇವ ಬಿಜಯಂಗೆಯ್ದು ಕರುಣಮಂ ಕರುಣಿಪುದು . . . ಎಂದು ಪರವೆಯರ ತಾಯ್ ಬಿನ್ನಪಂ ಗೆಯ್ಯುತಿರೆ ಎಂದನಭವಂ ವಾಗ್ವಿಳಾಸಮಂ ಚೆಲ್ಲುತಿರೆ (ನಂಬರ. ೧೫-೧೮೪). [ಸಂ.]

ವಾಗ್ವಿವಾದ (ನಾ). ಚರ್ಚೆ ; ವಾದ : ಸಭಾಮಂಡಲಿಯ ಸೌಹೃದ ವಾಗ್ವಿವಾದದ ಕಳಕಳಿಕೆ ದಿಗುತಟವ ಗಬ್ಬರಿಸಿದುದು ಗಾಢದಲಿ (ಕುವಾಭಾ. ೧-೪೨). [ಸಂ.]

ವಾಗ್ವಿಸ್ತರ (ನಾ). ಮಾತಿನ ಹರಹು, — ವ್ಯಾಪ್ತಿ : ಪಾರ್ಥನ ಕರುಣ ರಸದಾಳಾಪ ವಾಗ್ವಿಸ್ತರಕೆ ಮನದಲಿ ಮಱುಗಿದನು ಮುರವೈರಿ ನಸುನಗುತ (ಕುವಾಕ. ೨೬-೩೦). [ಸಂ.]

ವಾಗ್ವಿಳಾಸ 'ವಾಗ್ವಿಲಾಸ' ನೋ.

ವಾಗ್ವೀರ (ನಾ). ೧. ಮಾತಿನ ಮೇಲೆ ಪ್ರಭುತ್ವವುಳ್ಳವನು ; ಪಂಡಿತ. ೨. (ಆಲಂ) ಮಾತಿನಲ್ಲಿ ಮಾತ್ರ ಶೂರನಾಗಿರುವವನು ; ಹೊಡಾಯಿಗಾರ : ವಾಗ್ವೀರನಾದ ಉತ್ತರಕುಮಾರನು ನಾಯಕತ್ವವನ್ನು ವಹಿಸಿಕೊಂಡು ವಿಜಯವನ್ನು ಸಂಪಾದಿಸಿಕೊಂಡು ಬರಬೇಕು (ಪ್ರಬಂಧ. ೨೬). [ಸಂ.]

ವಾಗ್ವೃತ್ತಿ (ನಾ). ೧. ಮಾತಿನ ಚರ್ಯೆ ; ನುಡಿಯ ರೀತಿ : ಪದೆಪಂ ಕೆಯ್ದೊಳುಂಟುಮಾಡಿ ನಯಮಂ ವಾಗ್ವೃತ್ತಿಯೊಳ್ ತೋಱೆ . . . ಕಾಮಿನಿ . . . ಬನಸುಂ ಮನಂಗೊಳಿಸಿದಳ್ ನಾನಾಪ್ರಕಾರಂಗಳಿಂ (ಸಿಕಮಾ. ೬-೧೧). ೨. ಮಾತಿನ ಆಶಯ, — ಬಯಕೆ : ಇನ್ನಾಸೆಗೆಯ್ದೊಡೆ ನಿಮ್ಮಾಜ್ಞೆಗೆ ತಪ್ಪದೆಂ ಸಲಿಸಿಮೊರ್ಮಿಂಗೆನ್ನ ವಾಗ್ವೃತ್ತಿಯಂ (ಪಂರಾಮಾ. ೬-೧೨೩). [ಸಂ.]

ವಾಗ್ಮೈಖರಿ (ನಾ). ಮಾತಿನ ರೀತಿ, — ಶೈಲಿ : ಸುಧೆ ಸುರಿವ ವಾಗ್ಮೈಖರಿಯ ಭಸ್ಮೋದ್ಧೂಳಧಾರಣೆಯ (ಗಗಕಾ. ೨-೩); ನಿನ್ನ ವಾಗ್ಮೈಖರಿಗೆ ನಾನೇನು ತಾನೇ ಪ್ರತಿಯಾಗಿ ಬಹುಮತಿಯನ್ನು ಕೊಟ್ಟೇನು (ಕವಿಕ. ೩೧). [ಸಂ. ವಾಗ್ಮೈಖರೀ]

ವಾಗ್ಮೈಭವ (ನಾ). = ವಾಗ್ವಿಭವ ೧ : ನೀನೆಮ್ಮೀ ರಾಭಸಿಕವೃತ್ತಿಯಂ ವಾಗ್ಮೈಭವದಿಂ ಕಳೆದು ಪೊರೆದೆಯಮ್ಮನನಿಂದ್ಮಾ (ಶಾಂತಿಪು. ೬-೯೦); "ಶ್ರೀ" ಯವರು . . . ವಾಗ್ಮೈಭವಶಾಲಿಗಳು (ಕಲಾಸಾ. XIV, ಪೀಠಿಕೆ). [ಸಂ.]

ವಾಗ್ವ್ಯಾಪಾರ (ನಾ). ವಾಗಿಂದ್ರಿಯದ ಮೂಲಕ ನಡೆಯುವ ವ್ಯವಹಾರ ; ಮಾತಿನ ಬಳಕೆ : ಅವರು ತಮ್ಮ ಮನೋವ್ಯಾಪಾರವನ್ನು ಪರಮಶಿವನ ಪದಂಗಳಲ್ಲಿಯು, ವಾಗ್ವ್ಯಾಪಾರವನ್ನು ಶಿವಭಕ್ತರಲ್ಲಿಯು . . . ಇರಿಸಿದವರಾಗಿ (ಪುರಾಪ. ೨೬೨). [ಸಂ.]

ವಾಘೆ, ವಾಗ್ಯ (ನಾ). ಕಡಿವಾಣ ; ಲಗಾಮು : "ಕುಶೆ ರಶ್ಮಿಯೆನೆ ವಾಘೆಯಿಕ್ಕು" (ಮಂಗರಾ. ೮೧-೧೨); ಸುಕಳಾಶ್ವಮಂ ಬೇಗದಿಂ ಬೆಂಗವಾಯ್ದು ರಾಘೆಯೊಳೊಂಕಿ ವಾಘೆಯೊಳ್ ನಿಲಿಸಿ ಕೆಲಬಲಕ್ಕಿಕ್ಕಿ (ಗಿರಿಕ. ೨-೧೦೫ ವ); ತೆಗೆ ತೆಗೆ ಸಾಕು ವಾಘೆಯ ಮರಳಿ ಹಿಡಿ ತೇಜಗಳ ತಿರುಹು (ಕುಮಾವಿ. ೬-೧೦). ವಾಗ್ಯ : ವಾರುವವನೇರುವೆಡೆ ವಾಗ್ಯದ ದಾರವನು ಹಿಡಿದಲ್ಲದಾಗದು (ಅಚಪ. ೧-೨೫).

[< ಸಂ. ವಾಗಾ. / ಮರಾ. ವಾಘಾ, ವಾಗಾ]

ವಾಙ್ಮಯ (ಗು). ೧. ಮಾತುಗಳಿಂದ ಕೂಡಿದ, — ತುಂಬಿದ. ೨. ಮಾತಿನ ಚಾತುರ್ಯದಿಂದ ಕೂಡಿದ ; ವಾಗ್ಮೈಖರಿಯಿಂದ ಕೂಡಿದ. (ನಾ). ೩. ಶಬ್ದದಿಂದ ಕೂಡಿದುದು. ೪. ಭಾಷೆ ; ಮಾತು ; ನುಡಿ. ೫. ಮಾತಿನ ಚಾತುರ್ಯ ; ವಾಗ್ಮೈಖರಿ. ೬. ಕಾವ್ಯ, ನಾಟಕ ಮುಂತಾದ ಸಾಹಿತ್ಯ ರಚನೆ : ವಾಙ್ಮಯಮನಿತರ್ಕಮಂಬಿ[ಕೆ]ಸರಸ್ವತಿ ಮನ್ಮುಖಪದ್ಮರಂಗದೇಟ್ಗೆಯನೆಡೆಗೊಂಡು ಕೊಂಡುಕೊನೆದೀಗರಿಗಂಗೆ ವಿಶುದ್ಧಬುದ್ಧಿಯಂ (ಪಂಪಭಾ. ೧-೫). ೭. ಒಂದು ಭಾಷೆಯಲ್ಲಿರುವ ಗ್ರಂಥಸಂಪತ್ತಿ : ಶಾಸ್ತ್ರಗ್ರಂಥಗಳು ವಾಙ್ಮಯ ; ಕವಿತೆ, ಕಾದಂಬರಿಗಳು ಸಾಹಿತ್ಯ (ಸಾಹಿಪ್ರ. ೯೧); ಪ್ರಚಾರವಾದಗಳೇ ತುಂಬಿದ ಬರವಣಿಗೆಯನ್ನು ವಾಙ್ಮಯವೆಂದು ಹೇಳಬಹುದಾದರೂ ಅದನ್ನು ಸಾಹಿತ್ಯವೆಂದು ಕರೆಯುವುದು ಸರಿಯಾಗಲಿಕ್ಕಿಲ್ಲ (ಸಾಸಮಾ. ೧೯). [ಸಂ.]

ವಾಙ್ಮಲ (ನಾ). ಮಾತಿನಲ್ಲಿರುವ ದೋಷ ; ವಾಕ್ಕಿನಲ್ಲಿರುವ ಕಳಂಕ : ಪೂಜ್ಯಪಾದಯತಿಪತಿಯ ಗುಣಸ್ತವನಂಗಳೊಮ್ಮೆ ನಾಲಗೆಗೆ ವಂದ ಮಾನವನ ವಾಙ್ಮಲ ನಿಂದವುದೇ (ವಾಲ್ಮಿಪು. ೧-೧೪). [ಸಂ.]

ವಾಙ್ಮಹಿಮೆ (ನಾ). ಮಾತಿನ ಪ್ರಭಾವ ; ನುಡಿಯ ಮಹತ್ವ : ಗೌತಮನ ವಾಙ್ಮಹಿಮೆಯೋ ಮೇಣಾಹಲ್ಯೆಯ ತಪೋಬಲಮೋ ಕಾಣೆನ್ (ಶ್ರೀರಾಮಾ. ೨೫-೨೦೬).

[ಸಂ. ವಾಙ್ಮಹಿಮನ್]

ವಾಙ್ಮಾಧುರ್ಯ (ನಾ). ಮಾತಿನ ಸವಿ, — ಇಂಪು ; ನುಡಿಯ ಮಾಧುರ್ಯ.

[ಸಂ.]

ವಾಙ್ಮುಖ (ನಾ). ಮಾತು, ಪ್ರಬಂಧ, ಭಾಷಣ ಮುಂತಾದುವುಗಳ ಆರಂಭ ; ಪೀಠಿಕೆ : "ಉಪನ್ಯಾಸಃ, ವಾಙ್ಮುಖಂ — ೨ ವಾಕ್ಯಾರಂಭದ ಹೆಸರುಗಳು" (ಸಿದ್ಧಾಂಶಿ. ೫೨). [ಸಂ.]

ವಾಚ (ನಾ). ೧. ಮಾತು ; ನುಡಿ : ಯೋಚಿಸಿ ನೋಡಲು ಸೋಜಿಗವಾಗಿದೆ ವಾಚಕ್ಕೆ ನಿಲುಕದ ಹರಿಯೆ (ಏಕಾಕ್ಷ. ೯-೪). ೨. (?) : ಆಚಗೌಂಡನ ಮನೆಗೆ ತೆರಳುತ ವಾಚದಲಿ ಕುಳ್ಳಿರುವ ದೊರೆಗಳ ಕಾಚ ಕಟ್ಟಲಿಕ್ಕಿಲ್ಲದಱುವೆಯ ಹಾಗೆ ಮಾಡುವೆನು (ರೇವಕಾ. ೧-೧೪). [ಸಂ. ವಾಚ್]

ವಾಚಂಯಮ (ನಾ). ೧. ಮೌನವ್ರತವನ್ನು ಪಾಲಿಸುವವನು. ೨. ಮುನಿ ; ಋಷಿ : "ಋಷಿಃ, ತ್ರಿಕಾಲದರ್ಶೀ, ಮುನಿಃ, ವಾಚಂಯಮಃ — ಈ ೪ ಋಷಿಗಳ್" (ಹಲಾಯು. ೬೮-೨೫೦). [ಸಂ.]

ವಾಚಂಯಮವಿಧಿ (ನಾ). ಮೌನವನ್ನು ಪಾಲಿಸುವಿಕೆ ; ಮೌನವ್ರತ : "ವಾಚಂಯಮವಿಧಿ (ಮೌನಂ)" (ಮಧ್ವಕೋ. ೫೭೬-೬೫). [ಸಂ.]

ವಾಚಂಯಮಿ (ನಾ). = ವಾಚಂಯಮ ೨ : ಪಂಡಿತತತಿವಿನತಂ ಮಾಘನಂದಾಖ್ಯ ವಾಚಂಯಮಿರಾಜಂ (ಎಕ. II, ೬೪-೬೭; 1103); ಬೀಳ್ಕೊಂಡರನಿಬರಂ ವಾಚಂಯಮಿಗಳಂ (ಶ್ರೀರಾಮಾ. ೧೭೬-೯೦). [ಸಂ. ವಾಚಂಯಮಿನ್]

ವಾಚಕ (ಗು). ೧. ಮಾತನಾಡುವ ; ಹೇಳುವ : ವಾಚಕಚಪಳತ್ವದಿಂದ ಮಾತನಾಡಿದಡೇನು ತ್ರಿವಿಧದ ಆಸೆ ಬಿಡದನ್ನಕ್ಕ (ಸಕವ. ಕ. I, ೬೭೦-೧೫೯೯). ೨. ಓದುವ ; ವಾಚಿಸುವ. ೩. ಸೂಚಿಸುವ ; ತಿಳಿಸುವ : 'ಪರಿಮಾಣವಾಚಕ' ಪರಾ. (ನಾ). ೪. ಮಾತಿಗೆ ಸಂಬಂಧಿಸಿದುದು : ಮಾನಸ ವಾಚಕ ಕಾಯಕಾಧೀನ ದಿನರ್ದಪುದಂತದಂ ನೀನತಿಭಕ್ತಿಯಿನಾಲಿಸೌ (ಹಾಲಾಸ್ಯ. ೧-೧೦-೨೧); ಸತ್ಯಮಿತಹಿತ ಭಾಷಣಾದಿಗಳು ವಾಚಕವು (ಹಂಪಸಾ. ೮೯). ೫. ಮಾತು ; ನುಡಿ : ವಾಚ್ಯ ವಾಚಕ ವಿಶೇಷ ವಿಶೇಷಣ ಲಕ್ಷ್ಯ ಲಕ್ಷಣಪ್ರಚುರತೆ ಕಾಳಿದಾಸನುಮನೇಳಿಸಿತೀ ಕೃತಿ ನಾಗವರ್ಮನಾ(ಛಂದೋಂಬು. ೧-೭). ೬. ಸಂದೇಶ ; ನಿರೂಪ : ಸನ್ನಿಧಾನದಲ್ಲಿ ಹೇಳಲು ಭಯವಾಗುತ್ತದೆ. ಆದರೂ ಮಂಡಲೇಶ್ವರರ ವಾಚಕವನ್ನು ಹೇಳುವವನು ನಾನು (ಶ್ರೀರಾಯ. ೨೪೪). ೭. ಓದುವವನು ; ಓದುಗ : ಆಳಿಕೆಯ ಕಾಲಗಳನ್ನು ತೋರಿಸುವ ವಂಶವೃಕ್ಷವನ್ನು ವಾಚಕರ ಸೌಕರ್ಯಕ್ಕಾಗಿ ಕೊಟ್ಟಿದೆ (ಕರ್ಣಾಅ. ೧೫). ೮. ಕಾವ್ಯವನ್ನು ಸಹೃದಯರ ಮನಮುಟ್ಟುವಂತೆ ರಾಗವಾಗಿ ಓದುವವನು ; ಗಮಕಿ : ಮಾನಿತಪದಮಂ ಪದಸಂಧಾನಮನರ್ಥಪ್ರತೀತಿಯಂ ಕವಿಹೃದಯಸ್ಥಾನಮನಱಿದೋದದೆ ಕಣ್ಣೇನೆಯ ಕರಡಿಯವೊಲೂಳ್ಪಪಂ ವಾಚಕನೇ (ಛಂದೋಂಬು. ೧-೩೦ ಅಡಿಪಡ್ಕ); ಪ್ರಕಟಿಸಿದತ್ತು ಪದ್ಮಜನ ಪಕ್ಕದೊಳ್ . . . ವಾಚಕಕೋಟಿಪುಣ್ಯಾಪಾಠಕತತಿ ಗಾಯಕಪ್ರತತಿ (ಪುಷ್ಪಸು. ೫-೨೧). ೯. ಮಾತನಾಡುವವನು : ವೇಷಗಳ್ಳರ ನಿಹತವ ನೋಡಿ ವಾಚಕರ ಪರಿಹಾಸಕನೀತಿಯ ತಿಳಿದು ಮತ್ತಾವ ರೀತಿನೀತಿಗಳಲ್ಲಿಯೂ ಮಾತ ತಾರದೆ . . . ಇಪ್ಪಾತ ತ್ರಿವಿಧದವನಲ್ಲ (ಸರ್ವವ. ೧೨೨-೬೨೪). ೧೦. [ಕಾವ್ಯಮೀ] ಪದಗಳಿಗೆ ಮುಖ್ಯವಾದ ಸಾಂಕೇತಿಕಾರ್ಥವನ್ನು ಬೋಧಿಸುವ ಶಬ್ದ : ರಾಷ್ಟ್ರಕಂ ಗೋಚರದೆಡೆಗಂ ವಿಷಯಂ ವಾಚಕವೆಂದಱಿಗೆ ವಸ್ತುತತ್ವಸ್ಥಿತಿಯಿಂ (ಮಧ್ವಕೋ. ೧೨೭-೫೯); ಆ ಪೈಬಿರೀರೂಪ ಶಬ್ದಸಮೂಹವೇ ವಾಚಕವೆಂದು ಲಾಕ್ಷಣಿಕವೆಂದು ವ್ಯಂಜಕವೆಂದು ತ್ರಿವಿಧವಾಗಿಹುದು. ಅದಱಲ್ಲಿ ವೃದ್ಧಸಂಕೇತಸಿದ್ಧಮಾಗಿ ಇದು ಘಟವಿದು ಪಟವೆಂಬ ರೀತಿಯಿಂ ಮುಖ್ಯಾರ್ಥಮಂ ಗೋಚರಿಪ ವಾಣಿಯೇ ವಾಚಕಶಬ್ದವೆನಿಸುವದು (ವಿವೇಕ. ೧೭೧). [ಸಂ.]

ವಾಚಕಗುರು (ನಾ). ಎಂಟುಬಗೆಯ ಗುರುಗಳಲ್ಲಿ ಒಬ್ಬ ; ತತ್ವವನ್ನು ಬೋಧಿಸಿ ಆತ್ಮಜ್ಞಾನವನ್ನು ನೀಡುವ ಗುರು : ವೇದದನುಮತವೆನಿಸಿದ ತತ್ವಸಂಪ್ರೀತಿಯನೆ ಬೋಧಿಸಿ ತಿಳುಹುವ ಕುಶಲನೆ ವಾಚಕಗುರುವಹನು (ಕೈವಲ್ಯ. ೮-೧-೨); ಆ ಶ್ರೀಗುರುವೇ ಸಾಧಕರಾದ ಶಿಷ್ಯರಧಿಕಾರಭೇದದಿಂ ಬೋಧಕಗುರು ವೇದಕಗುರು ನಿಷಿದ್ಧಗುರು ಕಾಮ್ಯಗುರು ಸೂಚಕಗುರು ವಾಚಕಗುರು ಕಾರಕಗುರು ವಿಹಿತಗುರುವೆಂದೆಂಟುತೆಱನಾಗಿರ್ಪರವರಲ್ಲಿ . . . ವಿಷಯಂಗಳ ಮಿಥ್ಯಾತ್ವದರ್ಶನದಿಂದಾತ್ಮಾನುರಾಗಪ್ರದನೇ ವಾಚಕಗುರು (ವಿವೇಕ. ೧೯). [ಸಂ.]

ವಾಚಕತ್ವ (ನಾ). ಅರ್ಥಗರ್ಭಿತವಾದುದು ; ಅರ್ಥದಿಂದ ಕೂಡಿದುದು : ಗುಣ ವೃತ್ತಿ, ವಾಚಕತ್ವ, ಇವೇ ಮೊದಲಾದ ಶಬ್ದವ್ಯಾಪಾರಗಳೆಲ್ಲವುಗಳಿಂದಲೂ ವಿಲಕ್ಷಣವಾದುದೇ ವ್ಯಂಜಕತ್ವ(ಧ್ವನ್ಯಾಲೋ. ೨೦೭); ಅರ್ಥವನ್ನು ಸ್ಮರಣಕ್ಕೆ ತರಲು ಅನುಕೂಲವಾದ ಪದಾರ್ಥದ ಸಂಬಂಧಕ್ಕೆ ಶಕ್ತಿ ಎಂದು ಹೆಸರು. ಇದಕ್ಕೆ ಸಮಯ, ಸಂಗತಿ, ಸಂಕೇತ, ವಾಚಕತ್ವ ಎಂಬೀ ಮುಂತಾಗಿ ನಾಮಾಂತರಗಳು (ಭಾಷಾತ್ವ. ೮೪೬). [ಸಂ.]

ವಾಚಕದೋಷ (ನಾ). ಮಾತಿನ ಮೂಲಕ ಉಂಟಾಗುವ ಪಾಪ : ಚಾಂಡಾಲಾದಿ ಹೀನಯೋನಿಯನ್ನೈದಿ ಅನುಚಿತತ್ವ ನಿಷ್ಠುರತ್ವ ಪುಸಿ ಪೈಶೂನ್ಯವೆಂಬೀ ನಾಲ್ಕು ವಾಚಕ ದೋಷಂಗಳಿಂ ಪಶುಪಕ್ಷಿಗಾಗಿ ಪುಟ್ಟಿ (ವಿವೇಕ. ೧೯೮). [ಸಂ.]

ವಾಚನ (ನಾ). ೧. ಓದುವುದು ; ಪಠನ : ಒಳ್ಳೆಯ ವಾಚನ ಎಲ್ಲ ವಿದ್ವತ್ತಿಗಿಂತಲೂ ಉತ್ತಮವಾದುದು (ಸಾಹಿಪ್ರ. ೫೮). ೨. ಹೇಳುವುದು ; ಘೋಷಿಸುವುದು. ೩. ಮಾತು ; ನುಡಿ : ತದೇಕಚಿತ್ತನಾಗಿ ನನ್ನ ವಾಚನವನ್ನು ಕೇಳುತ್ತ ಕುಳಿತ ವಿಶ್ವಾಸ ತಟ್ಟನೇ ತನ್ನ ಮಾತು ಮಿಂಚಿಸಿದ (ದಿಪಹ. II, ೪). [ಸಂ.]

ವಾಚನಾಲಯ (ನಾ). ಪುಸ್ತಕ, ವೃತ್ತಪತ್ರಿಕೆ, ನಿಯತಕಾಲಿಕ ಮುಂತಾದುವುಗಳನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ಓದಲು ಅನುಕೂಲ ಮಾಡಿಕೊಡುವ ಸ್ಥಳ : ವಾಚನಾಲಯದೊಳು ಆಕೆ ಬಂದಾಳೆಂದರಾಕೆ ಹೋದಳು ತನ್ನ ಮನೆಗೆ (ಚಂದ್ರವಿ. ೧೩೩-೪೯). [ಸಂ.]

ವಾಚನೆ (ನಾ). ೧. ಓದುವುದು ; ವಾಚಿಸುವುದು. ೨. ಮಾತು ; ನುಡಿ : ವಾ[ಪಾಠಾಂ. ಯೋ]ಚನೆಗೆಯಳವಲ್ಲ ಲೋಕಕಕೋಚರವು ತಾನಲ್ಲ ಧರ್ಮವು ಯೋಚಿಸಲಿಕ್ತಾಗಿ ಹುಟ್ಟಿತು ಭೂಮಿಮಧ್ಯದಲಿ (ಸಂಭವ. ೫-೨೮). ೩. [ಜೈನ] ಸ್ವಾಧ್ಯಾಯದ ಐದು ಅಂಗಗಳಲ್ಲಿ ಮೊದಲನೆಯದು ; ಆಗಮಗ್ರಂಥಗಳನ್ನು ಓದುವುದು : ವಾಚನೆಯುಂ ಪೃಚ್ಛನೆಯುಮನುಪ್ರೇಕ್ಷೆಯುಮಾಮಯಮುಂ ಧರ್ಮೋಪದೇಶಮುಮೆಂಬ ಪಂಚವಿಧಸ್ವಾಧ್ಯಾಯದೊಳಂ ನೆಱೆದು ನಿಸ್ಸಂಗರಾಗಿ (ಅಜಿಪು. ೧೨-೪ ವ); ಸ್ವಾಧ್ಯಾಯಮೆಂಬಗ್ಗಳಿಕೆಯ ತಪಮಂ ವಾಚನಾ ಪೃಚ್ಛನಾನುಪ್ರೇಕ್ಷಾಮ್ನಾಯೋಪದೇಶಕ್ರಮಪರಿಗಣನಾವ್ಯಕ್ತಸೂಕ್ತಿಮುಕ್ತಾವತಂಸಂ (ಮಲ್ಲಿಪು. ೧೧-೪೨).

[ಸಂ. ವಾಚನಾ]

ವಾಚಸ್ಪತಿ (ನಾ). ೧. ಮಾತಿನ ಅಧಿಪತಿ ; ಬೃಹಸ್ಪತಿ : ಈ ಮಾತಮೋಘಂ ಮಂದರಾಚಳನಿಶ್ಚಳಮಿದಂ ಚಳಿಯಿಸಲ್ ನಿಮ್ಮ ನೆಟ್ಟಿನ ವಾಚಸ್ಪತಿಗಮಶಕ್ಯಂ (ಶಾಂತಿಪು. ೮-೧೩೭ ವ); ಆ ನೆಗಳ್ದ ನಾರಸಿಂಹಧರಾನಾಥಂಗಮರಪತಿಗೆ ವಾಚಸ್ಪತಿವೋಲ್ ತಾನೆಸೆದಂ . . . ಹುಳ್ಳಚಮೂಪಂ (ಎಕ. II (R), ೪೭೬-೨೯; 1158). ೨. ಮಾತಿನ ಮೇಲೆ ಪ್ರಭುತ್ವವಿರುವವನು ; ವಾಕ್ಪಟು : ಆ ಭಗವಂತನ ಕೃಪೆಯಿಂದ ಮೂಕನು ವಾಚಸ್ಪತಿಯಾಗುವನು (ತಿಳಿಸಿ. ೧). ೩. ಬ್ರಹ್ಮ. ೪. ಒಬ್ಬ ಪ್ರಸಿದ್ಧ ಸಂಸ್ಕೃತ ನಿಘಂಟುಕಾರನ ಹೆಸರು. [ಸಂ.]

ವಾಚಳಕ (ನಾ). ಗಳಹುವವನು ; ಹರಟುವವನು : ವೇದಶಾಸ್ತ್ರಾಗಮಪುರಾಣ ಕವಿತ್ವಗಳೆಂಬ ನುಡಿಗಳಿಂದೆ ವಾಚಳಕರಾದವರಿಗೆ ತಾರಕಬ್ರಹ್ಮವು ಸಾಕ್ಷಾತ್ಕಾರವಾಗದು (ಅಖಂಡೇ. ೨೨೩-೬೫). [< ಸಂ. ವಾಚಾಲಕ]

ವಾಚಾಟ (ಗು). ೧. ಅತಿಯಾಗಿ ಮಾತನಾಡುವ ; ಹರಟುವ. (ನಾ). ೨. ವಾಗ್ವಾದ ; ಚರ್ಚೆ ; ತರ್ಕ : ಈ ವಾಚಾಟವನ್ನು ನೋಡುತ್ತ ಕುಳಿತಿದ್ದ ಹುಡುಗರಲ್ಲಿ ಒಬ್ಬ ಎದ್ದು ನಿಂತು . . . ಧೈರ್ಯದಿಂದ ನುಡಿದಾಗ (ಬೆಳುಮ. ೧೮). ೩. ಬಹಳ ಮಾತನಾಡುವವನು ; ಹರಟುವವನು : ಬಱಿ ಬೊಬ್ಬಾಟವೇತಕೆ ವಿಜಯಸಿರಿ ವಾಚಾಟರಿಗೆ ಮೆಚ್ಚುವಳೆ ತೋಱೂ ದ್ಯೂತಕೌಶಲವ (ಕಾಸ್ಕಾಸ. ೧೩-೪೭).

[ಸಂ.]

ವಾಚಾಮಗೋಚರ$_1$ (ನಾ). ೧. ಮಾತಿಗೆ ಸಿಗದುದು ; ಶಬ್ದಕ್ಕೆ ನಿಲುಕದುದು : ಶ್ರೀಚೋಳದೇಶವೊಪ್ಪಿಪ್ಪುದು ಧರಾತಳಕೆ ವಾಚಾಮಗೋಚರಮದಱ ವಿಸ್ತರಂ ಜಗಕೆ (ತಿರುರ. ದೇ. ೧-೬). ೨. ನುಡಿಯಬಾರದುದು ; ಅವಾಚ್ಯವಾದುದು : ತುಂಬಿದ ಸಭೆಯಲ್ಲಿ ಅವರು ನಿಮ್ಮನ್ನು ವಾಚಮಗೋಚರವಾಗಿ ಅವಮಾನ ಪಡಿಸಿದರು (ವಚಭಾ. ೨೪೧); ಸಂಪಾದಕನು . . . ಪತ್ರಿಕೆಯಲ್ಲಿ ವಾಚಾಮಗೋಚರವಾಗಿ ಮೋಹನನನ್ನು ಕೆಲವು ವರ್ಷಗಳಿಂದ ಬಯ್ಯುತ್ತಿದ್ದನು (ಪಂಜಪಂ. ೨೨೭).

[IP ಸಂಸ್ಕೃತದಲ್ಲಿ 'ವಾಚಾಂ' ಮತ್ತು 'ಅಗೋಚರ' ಎಂಬುವು ಎರಡು ಬೇರೆ ಬೇರೆ ಪದಗಳು]

ವಾಚಾಮಗೋಚರ$_2$ (ಅ). ಅವಾಚ್ಯವಾಗಿ ; ಬಾಯಿಗೆ ಬಂದಂತೆ : ವ್ಯಾಸರಾಯರನ್ನೂ ಅವರ ಮತವನ್ನೂ ವಾಚಾಮಗೋಚರ ನಿಂದಿಸಿದ ಪಂಡಿತರನ್ನು . . . ಅವಮಾನಿಸದೆ ಸನ್ಮಾನ ಮಾಡುತ್ತಲೇ ಬಂದರು. (ಕಭವಿ. ೧೧); ಶ್ಯಾಮ ಕಕ್ಕನನ್ನು ಒಂದು ದಿನ ಕರೆದು, ನಿನ್ನಂತಹ ಠಕ್ಕ ಬೇರೊಬ್ಬನಿಲ್ಲೆಂದು ವಾಚಾಮಗೋಚರ ಬೈದ (ಹೊಸಕ್ಷಿ. ೨೫೦). [< ವಾಚಾಮಗೋಚರ$_1$]

ವಾಚಾಮತೀತ (ನಾ). ೧. ಮಾತಿಗೆ ಮೀರಿದುದು ; ಶಬ್ದಕ್ಕೆ ನಿಲುಕದುದು : ಆಚಾರಮುಖದಿಂದ ಗುರುಸಮರ್ಪಣೆಗಳಂ ವಾಚಾಮತೀತಮೆನೆಯರ್ಚಿಸುವ (ವೀಕೃಪು. ೬-೧೮-೨). ೨. ಮಾತಿಗೆ ನಿಲುಕದವನು ; ಪರಮಾತ್ಮ : ಆ ಕುಲಚ್ಛರೆಯರಿಂ ಭೋಗಮಂ ಪೂಡೆಗಳ ಕೈಕೊಳ್ಳುತಾ ವಾಚಮತೀತನೊಪ್ಪುತಿರಲು (ವೀಕೃಪು. ೪-೧೦-೬೨). [IP ಸಂಸ್ಕೃತದಲ್ಲಿ 'ವಾಚಾಂ' ಮತ್ತು 'ಅತೀತ' ಎಂಬುವು ಎರಡು ಬೇರೆ ಬೇರೆ ಪದಗಳು]

ವಾಚಾಲ, ವಾಚಾಳ (ಗು). ೧. ಅತಿಯಾಗಿ ಮಾತನಾಡುವ ; ಹರಟುವ ; ಗಳಹುವ. (ನಾ). ೨. ನಾದ ; ಧ್ವನಿ : ಕಳಕೇಳೀಕೀರವಾರಾವತಕುಹರಣವಾಚಾಲ ಮುಚ್ಚಂಭಮಾಣೋತ್ಸಳರಾಜಂ . . . ಬಂದೊಯ್ಯನೇನೂದಿದುದೊ ಪಣವಧೂಗೇಹದಂ ಗಂಧವಾಹಂ (ಚಂದ್ರಪು. ೦-೪೫). ೩. ಅತಿಯಾಗಿ ಮಾತನಾಡುವವನು ; ಹರಟೆಮಲ್ಲ : ಗಟಪನೆಂದು ವಾಚಾಲಂ [ಪಾಠಾಂ. ಸೊರಹಂ] (ಶಮದ. ನ. ೩೩ ವೃತ್ತಿ). ಬಾದಶಹನ ಪ್ರಸನ್ನವೃತ್ತಿಯನ್ನು ಕಂಡು, ವಾಚಾಲನಾದ ಸಭಿಕನೊಬ್ಬನು ಎದ್ದು ನಿಂತು (ಕಸಿಂಹಾ. ೭೧). ವಾಚಾಳ : ೧. ಪರವಾಚಾಳನೃಪಾಳಜಾಳಕುಳನಾಶೋತ್ಕಾತನಿರ್ಘಾತ ವಾತರವಂ . . . ತಾನೆನೆ ಘೂರ್ಣಿಸಿತು . . . ಭೇರೀರವಂ (ಪುಷ್ಪಪು. ೫-೭). ೩. "ವಾಚಾಳಂ ಜಲ್ಪಾಕಂ ವಾಚಾಟಂ ವಾವದೂಕನಕ್ಕುಂ ಗಟಪಂ" (ಪಜ್ಜಿಮೂ. ೧೦೦-೧೩). ೪. ಚೆನ್ನಾಗಿ ಮಾತನಾಡುವವನು ; ವಾಕ್ಪಟು : ನರಯುಗ್ಮೋದಯದೊಳ್ ಬುಧಂ ನೆಲಸೆ ವಾಚಾಳಂ ಕಲಾವೇದಿ ಸೌಭ್ರಿರತಂ ಶಾಸ್ತ್ರವಿದಂ ಪ್ರಿಯಂವದನೆನಿಕ್ಕುಂ (ಜಾತಕಿ. ೧೭-೨೩). ೫. ಚೆನ್ನಾಗಿ ಮಾತನಾಡುವಂತಹುದು ; ಮಾತುಗಾರಿಕೆಯನ್ನು ಬಲ್ಲುದು : ಆತಂ ತನ್ನ ಮಗಳಪ್ಪ ಸುಮತಿಗೆ ಬಟೆಪಟೆಗೊಟ್ಟು ಮಗಳೊಡನೆ ವಾಚಾಳನಪ್ಪ ಗಿಳಿಯುಮನಟ್ಟಿದೊಡೆ (ವಡ್ಡಾರಾ. ೧೦೮-೨೩). [ಸಂ.]

ವಾಚಾಲಕ, ವಾಚಾಳಕ (ಗು). ೧. ಅತಿಯಾಗಿ ಮಾತನಾಡುವ ; ವಾಚಾಲ. ವಾಚಾಳಕ (ನಾ). ೨. ಅತಿಯಾಗಿ ಮಾತನಾಡುವವನು ; ಹರಟುವವನು : ಅರ್ಹಿತಾವಧಾನಿಯ ಕಟ್ಟು ಹೀಂಗಲ್ಲದೆ ಮಿಕ್ಕಿದುದೆಲ್ಲವೂ ವಾಚಾಳಕರ ಕಟ್ಟುಕದ ಮಾತು (ಸರ್ವಜ. ೧೧೨-೬೧೧); ಬೇಚರತ್ವದ ನೆಲೆಯ ಭೂಚರರು ಬಲ್ಲರೆ ವಾಚಾಳಕರ ಮಾತಿಗಿದು ಸಲ್ಲದು (ಪದಗೋ. ೧೦೨). ೩. ಮಾತುಗಾರ ; ವಾಕ್ಪಟು : ಬಂದಿರುವ ನೂರುಮಂದಿಯಲ್ಲಿ ಕೇಳಿದ ಮಾತುಗಳಿಗೆಲ್ಲಾ ಸರಿಯಾದ ಉತ್ತರವನ್ನು ಹೇಳುವ ವಾಚಾಳಕನು ಒಬ್ಬನೇ (ರೂಢಿ). [ಸಂ.]

ವಾಚಾಲಗಿತ್ತಿ (ನಾ). ಅತಿಯಾಗಿ ಮಾತನಾಡುವವಳು ; ಮಾತುಗಾತಿ. ವಾಚಾಲಗಿತ್ತಿಯಾದಾ ಸಾಗರೆಯು ಬಿಕ್ಕಿ ಬಿಕ್ಕಿ ಅತ್ತಳು (ದೇವಿಚಾ. ೧೫).

[ವಾಚಾಲ + – ಗಿತ್ತಿ]

ವಾಚಾಲತೆ, ವಾಚಾಳತೆ (ನಾ). ೧. ಅತಿಯಾಗಿ ಮಾತನಾಡುವಿಕೆ ; ಹರಟುವಿಕೆ : ಕೆಲವು ಸಲ ಪ್ರಮಾಣ ಮೀರಿದ ದೀರ್ಘತೆ, ವಾಚಾಲತೆಗಳೂ ತೋರಿವೆ (ಕಸಾಚ. ೧೩೨). ವಾಚಾಳತೆ : ೨. ನಿರರ್ಗಳವಾದ ಮಾತುಗಾರಿಕೆ ; ವಾಕ್ಪಟುತ್ವ : ನಿಜವಾದ ಜಾಣತನ ಮೌಢ್ಯದಂತೆ ಕಾಣುವುದು. ನಿಜವಾದ ವಾಚಾಳತೆ ಬಿಕ್ಕಳಿಸುವಿಕೆಯಂತೆ ಕಾಣುವುದು (ತತ್ವಶ್ರಾ. ೬೦೪). [ಸಂ. ವಾಚಾಲತಾ]

ವಾಚಾಲತ್ವ (ನಾ). = ವಾಚಾಲತೆ ೨ : ವಾಚಾಲತ್ವಮನೆಸಗಲ್ಲೋಚರಮೇ ಕಬ್ಬಗಡಲನುತ್ತರಿಸುವ ಜಾಣ್ಮೇಚರ್ಗೆ ಸರ್ವಶಾಸ್ತ್ರವಿಲೋಚನಮಪ್ಪದಟಸುಕವಿ ಪಂಚಾಸ್ಯನವೋಲ್ (ಉದ್ಭಟ. ೧-೨೨). [ಸಂ.]

ವಾಚಾಲಿತ (ನಾ). ಶಬ್ದದಿಂದ ಕೂಡಿದುದು ; ನಾದದಿಂದ ತುಂಬಿದುದು : ನೆಯ್ದಲ್ಲೊಳಂ ಮೇಲ್ಮರಲ್ದರಲುತ್ತಿರ್ದುವು ಚಂಚರೀಕಮಧುರವ್ಯಾಹಾರವಾಚಾಲಿತಂ (ಪಂರಾಮಾ. ೭-೬). [ಸಂ.]

ವಾಚಾಳ 'ವಾಚಾಲ' ನೋ.

ವಾಚಾಳಕ 'ವಾಚಾಲಕ' ನೋ.

ವಾಚಾಳತನ (ನಾ). ೧. ವ್ಯರ್ಥವಾದ ಮಾತು ; ಹರಟೆ : ವಾಚಾಳತನದೊಳಾನು ಕಾಳುಗೆಡದು ಕಳನೊಳಗೆ ಹೇಳದೆ ಹೆಱಸಾರಿ ಜೀವವುಳಿಯಲೆಂಬ ಮೊಳರ ಕುಲದವನಲ್ಲ (ತ್ರಿಪುಸಾಂ. ೧೨-೧೩೯). ೨. = ವಾಚಾಲತೆ ೨ : ಅವನು ಎಲ್ಲವನ್ನೂ . . . ಭಾವಪೂರಿತವಾಗಿ ಒಳ್ಳೆಯ ವಾಚಾಳತನದಿಂದ ಹೇಳುತ್ತಿರುವಾಗ ಕಾಲ ಕಳೆದು ಹೋದುದೇ ಒಲೆನಿನ್‌ಗೆ ತಿಳಿಯಲಿಲ್ಲ (ಮಲೆನಾ. ೭೯).

[ವಾಚಾಳ (< ವಾಚಾಲ) + – ತನ]

ವಾಚಾಳತೆ 'ವಾಚಾಲತೆ' ನೋ.

ವಾಚಾಳಿ (ಗು). ೧. ಅತಿಯಾಗಿ ಮಾತನಾಡುವ : ಬಲ್ಲಿದ ವಾಚಾಳಿ ನಾರದಮುನಿ ನಿನ್ನ ಬೊಲ್ಲೆಯ ಮಾತದಂತಿರಲಿ ಎಲ್ಲಿಂದ ಬಂದೆ ಸುದ್ದಿಯ ಪೇಳ್ವುದು (ಮೋಹತ. ೩೬-೧೪); ತಮ್ಮ ವಾಚಾಳಿ ಧರ್ಮಪತ್ನಿಯವರಲ್ಲಿಯಾದರೂ ಒಂದು ಕತಾಕೃತಿ ನಿಲುವನ್ನು ಕೇಳಬೇಕೆಂದು ಮನಸ್ಸು ಮಾಡಿದರು (ಕಾವೇರಿ. ೧೯). (ನಾ). ೨. ಬಹಳ ಮಾತನಾಡುವ ವ್ಯಕ್ತಿ ; ಮಾತಾಳಿ : ವಾಚಾಳಿ ಮೌನವದೇಕೆ ಹೇಳೆಲೆ ಹಿಮರೋಚಿ ಮಸ್ತಕನೊಳು ಸೆಣಸಿ ನಾಚದೆನೆನಬೇಡ (ಮೋಹತ. ೯-೧೨); ವಾಚಾಳಿಯಾದ ವಸುಧಾ – ಈಗ ಸದ್ಗೃಹಿಣಿ (ವಾಶಿಲ್ಪ. ೨೨೨).

[ಸಂ. ವಾಚಾಲೀ/ ಮರಾ. ವಾಚಾಳೀ/ ತುಳು. ವಾಚಾಲೆ = ಮಾತುಗಾರಿಕೆ]

ವಾಚಾಳಿತನ (ನಾ). ಬಹಳ ಮಾತನಾಡುವಿಕೆ : ಅಂಥ ನಾಲ್ಕೆಂಟು ಮಾತುಗಳು ಉಂಟುಮಾಡುವಂಥ ಪರಿಣಾಮ, ಘಂಟೆಗಟ್ಟಳೆ ಕೊರೆಯುವ ವಾಚಾಳಿತನದಿಂದ ಉಂಟಾಗಲಾರದು (ಯಕ್ಷಬ. ೧೨೪). [ವಾಚಾಳಿ + – ತನ]

ವಾಚಾಳೆ (ನಾ). ಅತಿಯಾಗಿ ಮಾತನಾಡುವವಳು : ಅಂತವುರಕ್ಕೆ ಪೋಪ ವಾಚಾಳೆಯನೊರ್ವಳಂ ಚಟುಳಚೇಟಕೆಯಂ ವಸುದೇವವಲ್ಲಭಂ ಹಿಡಿದು ಹಿಟಕವಾಡೆ (ಅರ್ಧನೇ. ೫-೭). [ವಾಚಾಳ (< ವಾಚಾಲ) + – ಎ$_2$]

ವಾಚಿ (ನಾ). ೧. ಅತಿಶಯವಾದುದು. ೨. ಸಚಿವ ; ಮಂತ್ರಿ. ೩. ಸರಸ್ವತಿ. ೪. ಗುಣ ; ಸ್ವಭಾವ : "ವಿಶೇಷಂ ಸಚಿವಂ ಸರಸ್ವತಿ ಗುಣಂಗಳ್ ವಾಚಿಯಕ್ಕುಂ" (ನಾನಾರ. ೧೦೪). ೫. [ವ್ಯಾಕ] ಒಂದು ಶಬ್ದದ ಅರ್ಥವ್ಯಾಪ್ತಿಯನ್ನು ಅಥವಾ ಅದರ ವ್ಯಾಪ್ತಿಯನ್ನು ಹೇಳುವ ಇನ್ನೊಂದು ಶಬ್ದ ; ಗುಣವಾಚಕ; ವಿಶೇಷಣ. [ಸಂ. ವಾಚಿನ್]

ವಾಚಿಕ (ಗು). ೧. ಮಾತಿನಿಂದಾದ ; ಶಾಬ್ದಿಕವಾದ : ಇವುಗಳಲ್ಲದೆ ಬೇರೆ ಕವಿಕಥಿತ ಕಾಯಿಕ ವಾಚಿಕ ಮಾನಸಿಕ ಉಪಪಾತಕಗಳೂ ನನಗೆ ತಟ್ಟಲಿ (ಶಿಳಿಸೆ. ೧-೧೬); ಭಾಷಣವೆಲ್ಲವೂ ವಾಚಿಕ ಅನುಭವವಾಗಿದೆ (ವ್ರಬುಂಧ. ೩೬). ೨. ಮಾತಿನ ಮೂಲಕ ತಿಳಿಸಿದ. (ನಾ). ೩. ಮಾತಿಗೆ ಸಂಬಂಧಿಸಿದುದು ; ಶಾಬ್ದಿಕವಾದುದು : ಪಾರುಷ್ಯ (ಕಾಠಿಣ್ಯ), ಅನೃತ, ಪೈಶೂನ್ಯ, ಅಸಂಬದ್ಧಪ್ರಲಾಪ ಈ ನಾಲ್ಕು ವಾಚಿಕವು (ಅರ್ಥಶಾ. ೧೧೯). ೪. ವಾರ್ತೆ ; ಸುದ್ದಿ ; ಸಮಾಚಾರ. ೫. ಹೇಳಿ ಕಳುಹಿಸಿದ ಮಾತು ; ಸಂದೇಶ : "ಸಂದೇಶವಾಕ್, ವಾಚಿಕಂ – ೨ ಹೇಳಿ ಕಳುಹಿಸುವ ಮಾತಿನ ಹೆಸರು" (ಸಿದ್ಧಾಂತಿ. ೫೪). ೬. [ನಾಟ್ಯ] ಆಂಗಿಕ, ವಾಚಿಕ, ಆಹಾರ್ಯಕ ಮತ್ತು ಸಾತ್ವಿಕಗಳೆಂಬ ನಾಲ್ಕು ಬಗೆಯ ಅಭಿನಯಗಳಲ್ಲಿ ಒಂದು ; ಭಾವಗಳನ್ನು ಮಾತಿನ ಮೂಲಕ ವ್ಯಕ್ತಗೊಳಿಸುವ ಅಭಿನಯ : ಅಂಗೋಪಾಂಗಂಗಳೊಳೆಸೆವಾಂಗಿಕಮಂ ಗಾನಪಠ್ಯದೊಳ್ ವಾಚಿಕ[ಪಾಠಾಂ. ಚಕ, ಚಿತ]ಮಂ ತುಂಗಕುಚೆ ಮೆಚ್ಚೆದಳ್ (ಆದಿಪು. ೯-೨೮); ಕಾವ್ಯನಾಟಕಾರ್ಥದ ಪೆಂಪಂ ಸಂಗಳಿಸಿ ಪೇಳೆ ವಾಚಿಕವು (ಲಾಸ್ಯರಂ. ೧-೫೧). ೭. [ಯೋಗ] ಕರ್ಮಯೋಗದ ಮೂರು ಬಗೆಗಳಲ್ಲಿ ಒಂದು : ಇವುಗಳು ಶಾರೀರ, ವಾಚಿಕ, ಮಾನಸಿಕವೆಂದು ಮೂರುಪ್ರಕಾರ . . . ವಾಚಿಕವೆಂದರೆ ಸತ್ಯವಾಗಿಯೂ, ಹಿತವಾಗಿಯೂ, ಪ್ರಿಯವಾಗಿಯೂ ಇರತಕ್ಕ ಪರಾಪವಾದಸಂಬಂಧವಿಲ್ಲದ ಮಾತುಗಳನ್ನಾಡುತ್ತಾ ಸಚ್ಛಾಸ್ತ್ರಪಾಠಪ್ರವಚನ ಪಾರಾಯಣಾದಿಗಳಲ್ಲಿ ಕಾಲಕ್ಷೇಪವನ್ನು ಮಾಡುತ್ತಿರುವುದು (ಹಿಂಯಸಾ. ೯೯). ೮. [ವೀಶೈ] ಗುರುವು ತನ್ನ ಶಿಷ್ಯನಿಗೆ ಪಂಚಾಕ್ಷರೀಮಂತ್ರವನ್ನು ಉಚ್ಚರಿಸಿ ಮಾಡುವ ದೀಕ್ಷೆ : ಉನ್ನತಧ್ವನಿಯೊಳುಚ್ಚರಿಸಿ ಪಂಚಾಕ್ಷರಿಯ ತನ್ನ ಶಿಷ್ಯಂಗೆ ಗುರು ಮೊಳ್ಪ ದೀಕ್ಷೆಯೇ ವಾಚಿಕಂ (ವೀಶೈಪು. ೬-೬-೬೬). [ಸಂ.]

ವಾಚಿಸು (ಕ್ರಿ). ೧. ಓದು ; ಪಠಿಸು : ಪಲವು ಕಪ್ಪಡಂಗಳೊಳ್ ಸುತ್ತಿರ್ಪುದೊಂದೋಲೆಯೊಳ್ ಬರೆದಿರ್ದ ಗಾಹೆಯಂ . . . ವಾಚಿಸಿ ನೋಡಿ (ವಂಚತಂ. ೧೯೩-೫); ವಾಚಿಸದೆ ವೇದಾರ್ಥನಿಚಯವನು . . . ನೀಚನಹ ಭೂಸುರನ ಕರುಳನು ತೋಚುವಳಲ್ಲೆ ಮೃತ್ಯು (ಕುವ್ಯಾಉ. ೪-೯೦); ಋಣಗಳೆಲ್ಲವು ಪೂರ್ವಸಂಚಿತಾಂಶಗಳು ಹಣೆಯೊಳದು ಲಿಖಿತ ಮಿರೆಯುಂ ವಾಚಿಸುವನಿಲ್ಲ (ಮಂಕುಕ. ೧೭೦). ೨. ಸೂಚಿಸು ; ತಿಳಿಸು : ವರದ್ರುಪದತನುಜಾಸ್ಯಯಂವರಕರಸುಗಳು ಬಹುದೆಂದು ವಾಚಿಸಿತಖಿಳಲೇಖಾರ್ಥ (ಕುವ್ಯಾಅ. ೧೧-೧೫); ಈಯಶೇಷಮಹೋತ್ಸವದ ಸುಶ್ರೇಯವನು ಕೈಕೊಂಡು ಬಂಧುನಿಕಾಯಸಹಿತೈತಹುದೆನುತ ವಾಚಿಸುದುದಾ ಲಿಖಿತ (ಹೊರರಾ. ೧-೧೬-೬). ೩. ಹೇಳು ; ನುಡಿ : ಕಾಣುತ ಸ್ಮರಪಿತನ ತಾಗಿದನು ವಾಚಿಸಿ ತನ್ನ ವಿಕ್ರಮವ (ಕೊಗಯ. ೨೨-೫೪). ೪. ವ್ಯಾಖ್ಯಾನಮಾಡು ; ವಿವರಿಸು : ವಾಚಿಪ ಶ್ರುತಿಗಳ್ಗೆ ನಿರುಪಮನೆನಿಸಿ ಅತಿ ರೌದ್ರಾಕಾರವಡೆದಭವನ ಕಂಡು ರತಿರಾಜ ಹವಣಿಸಿ ನಿಂದ (ಮೋಹತ. ೭-೨೬); ಆಱು ಶಾಸ್ತ್ರವು ನಾಲ್ಕು ವೇದಪುರಾಣದ ಸಾರದರ್ಥವ ನಿರ್ಣೈಸಿ ತೋಱಿ ವಾಚಿಸುವ ಬ್ರಾಹ್ಮಣವೀಧಿ ಬಹುಶೃಂಗಾರದೆ ಮೆಱೆದುವರ್ತಿಯಲಿ (ಕಂಪಂ. ೬-೪೧). [ವಾಚನ + – ಇಸು$_3$]

ವಾಚು (ನಾ). ಮುಂಗೈಗೆ ಕಟ್ಟಿಕೊಳ್ಳುವ ಅಥವಾ ಜೇಬಿನಲ್ಲಿಟ್ಟುಕೊಳ್ಳುವ ಚಿಕ್ಕ ಗಾತ್ರದ ಗಡಿಯಾರ : "ಹೋಯ್, ಗಂಟೆ ಎಷ್ಟಾಯ್ತು?" ಎಂದು ದಾರಿಯಲ್ಲಿ ಹೋಗುತ್ತಿದ್ದವನ ಕೈಯಲ್ಲಿಯ ವಾಚು ನೋಡಿ ಕೇಳಿದಳು (ಹೊಸಕ್ಷ. ೫೦).

[<— ಇಂ. Watch]

ವಾಚೆ (ನಾ). ೧. ಮಾತು ; ನುಡಿ. ೨. ಪವಿತ್ರವಾದ ಮಾತು ; ಸೂಕ್ತಿ. ೩. ಪ್ರತಿಜ್ಞೆ ; ಶಪಥ. [ಸಂ. ವಾಚಾ]

ವಾಚ್ಯ (ಗು). ೧. ಹೇಳಬಹುದಾದ ; ಹೇಳಲು ಯೋಗ್ಯವಾದ. ೨. ದೂಷಣೆಗೆ ಯೋಗ್ಯವಾದ ; ನಿಂದಿಸಲು ಅರ್ಹವಾದ. ೩. [ವ್ಯಾಕ] ವಿಶೇಷಕ ; ಆಖ್ಯಾತಕ. (ನಾ). ೪. ವಿಶೇಷಣ ; ಗುಣವಾಚಕ. ೫. ಕ್ರಿಯಾಪದ ಪ್ರಯೋಗ. ೬. [ಕಾವ್ಯಮೀ] ಶಬ್ದದ ನೇರವಾದ ಅರ್ಥ ; ಶಾಬ್ದಿಕವಾದ ಅರ್ಥ : ವಾಚ್ಯ ವಾಚಕವಿಶೇಷ್ಯ ವಿಶೇಷಣ ಲಕ್ಷ್ಯಲಕ್ಷಣಪ್ರಚುರತೆ ಕಾಳಿದಾಸನು ಮನೇಳಿಸಿತೀ ಕೃತಿ ನಾಗವರ್ಮನಾ (ಛಂದೋಂಬು. ೧-೭); ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರು ವಿಧ (ಕೃಪಿ. ೧೭೭). ೭. ನೇರವಾದ ಅರ್ಥದಿಂದ ಕೂಡಿದುದು ; ಸ್ಪಷ್ಟವಾಗಿ ವ್ಯಕ್ತವಾದುದು : ಲಲಿತಂ ಪ್ರತೀಯಮಾನೋಪಲಕ್ಷಿತಂ ವಾಚ್ಯಮಾದೊಡೊಪ್ಪದು ಕೃತಿ (ಲೀಲಾವ. ೧-೬೬); ಧ್ವನಿಯಿಂದ ಕೂಡಿದ ಮಾತನ್ನೂ ವಾಚ್ಯಕ್ಕಿಂತ ಮೇಲೆನ್ನಬಹುದು (ಧ್ವನ್ಯಾಲೋ. VIII, ಮುನ್ನುಡಿ). [ಸಂ.]

ವಾಚ್ಯತ್ವ (ನಾ). = ವಾಚ್ಯ ೬ : ವಾಚಕವಾಚ್ಯತ್ವದಿನಾ ಸೂಚಕಮಾ ಸೂತ್ರದಲ್ಲಿ ಶಬ್ದಾರ್ಥತ್ವದೊಳ್ಳೆ ಚತುರತೆಯಿಂ ತಿಳಿಯ್ಯೆ ಗೋಚರಮಲ್ತಿದು ಮದೀಯ ದಯೆಯಿಂದೆ ವಿನಾ (ಹಾಲಾಸ್ಯ. ೧-೭-೩೦). [ಸಂ.]

ವಾಚ್ಯಲಿಂಗ (ನಾ). ಒಂಬತ್ತು ಲಿಂಗಗಳಲ್ಲಿ ಒಂದು ; ವಿಶೇಷ್ಯದ ಲಿಂಗಕ್ಕೆ ಅನುಸಾರವಾಗಿರುವ ವಿಶೇಷ್ಯಾಧೀನಲಿಂಗ : ಬಗೆ ನೀನಾನ್ತಾನೆಂಬುಕ್ತಿಗಳುಂ ಗುಣವಚನಸರ್ವನಾಮಬಹುವ್ರೀಹಿಗಳುಂ ಕೃತ್ತದ್ಧಿತಸಂಜ್ಞೆಗಳುಂ ಸಲೆ ವಾಚ್ಯ ಲಿಂಗಮೆಂದೀ ಕ್ರಮದಿಂ (ಶಮದ. ೧೯); ಆನ್, ನಾನ್, ನೀನ್, ತಾನ್ ಎಂಬ ಶಬ್ದಗಳೂ ಈ ಜಾತಿಯವು. ಇವು 'ವಾಚ್ಯಲಿಂಗ'ಗಳು (ಕೃಪಿ. ೩೩). [ಸಂ.]

ವಾಚ್ಯಲಿಂಗಕ (ಗು). [ವ್ಯಾಕ] ವಿಶೇಷಣವಾಗಿರುವ. [ಸಂ.]

ವಾಚ್ಯಾಯನ (ನಾ). ವಾಚ್ಯನೆಂಬ ವೈದಿಕಮಹರ್ಷಿಯ ಪರಂಪರೆಗೆ ಸೇರಿದ ವ್ಯಕ್ತಿ : ಬುಧರ ಮತಿಸಂಪಾದನೆಗೆ ಮುಖಗೊಡದ ವಾಚ್ಯಾಯನರ ಚೇತನಕೆ ಹೋದ ಹೊಲಬಳವಡದ . . . ಶಿವನನು ಕಂಡನಬುಜಭವ (ಕುವ್ಯಾಕ. ೬-೧೭).

[ಸಂ.]

ವಾಚ್ಯಾರ್ಥ (ನಾ). ಶಬ್ದವನ್ನು ಕೇಳಿದ ಕೂಡಲೆ ತೋರುವ ಅರ್ಥ ; ನೇರವಾಗಿ ತಿಳಿಯುವ ಅರ್ಥ : ಪದಗಳಿಗೆ ವಾಚ್ಯಾರ್ಥ ಲಕ್ಷ್ಯಾರ್ಥಮೆಂದರ್ಥದ್ವಯಮಿಪ್ಪುದು (ವಿವೇಕ. ೪೪); ಒಂದು ಶಬ್ದವನ್ನು ಕೇಳಿದ ಕೂಡಲೇ ತಟ್ಟನೆ ಮನಸ್ಸಿಗೆ ಹೊಳೆಯುವ ಅದರ ಸುಪ್ರಸಿದ್ಧವಾದ ಅರ್ಥವು ಮುಖ್ಯಾರ್ಥ ಅಥವಾ ವಾಚ್ಯಾರ್ಥವೆನ್ನಿಸುತ್ತದೆ (ಕೃಪಿ. ೧೭೬). [ಸಂ.]

ವಾಜ$_1$ (ನಾ). ೧. ಶಿಲ್ಪಿ ; ಕುಶಲಕರ್ಮಿ : (ಕ). ೨. ಅಕ್ಕಸಾಲಿಗ ; ಚಿನಿವಾರ : ವಾಜನ ಕೇರಿಯಲ್ಲಿ ಸೂಜಿಯ ಮಾರುವ ಸೋಜಿಗದ ಹೆಣ್ಣೆ (ಕರಿ. ೫೩-೧೦); ಆವೇಶನಂ, ಶಿಲ್ಪಶಾಲಾ – ೨ ಅಕ್ಕಸಾಲಿಗರ ಕಾರ್ಖಾನೆ, ಪಟ್ಟಡಿಮನೆ, ವಾಜರ ಮನೆ (ಸಿದ್ಧಾಂತಿ. ೧೦೦). 'ಓಜ$_1$' ಪರಾ. ೩. ಬಡಗಿ : ಇದನ್ನು ಮಾಡುವವ ಹಾಗೂ ಇದರ ಯೋಗಕ್ಷೇಮ ನೋಡಿಕೊಳ್ಳುವವ ವಾಜರವನು (ಬೋರೆದೇ. ೨೫). [< ಒವಝು]

ವಾಜ$_2$ (ನಾ). ೧. ಪಕ್ಷಿಯ ಗರಿ, — ರೆಕ್ಕೆ : "ಪತ್ರ ತನೂಯಹ ವಾಜ ಪತತ್ರಚ್ಛದ ಪಿಂಛ ಪಕ್ಷನಾಮಂ ಗಱಿ" (ಮ್ಯಾಕೋ. ೪೧-೧೦). ೨. ಬಾಣದ ಗರಿ : "ಬಾಣದ ಗಱಿ ಪತ್ರಪಾಳಿ ವಾಜಮೆನಿಕ್ಕುಂ" (ಮ್ಯಾಕೋ. ೮೫-೧೯). ೩. ಯುದ್ಧ ; ಕದನ. ೪. ತುಪ್ಪ. ೫. (ಅನ್ನ, ಮೇಲೋಗರ ಮುಂತಾದ) ಆಹಾರಪದಾರ್ಥ. ೬. ಯಜ್ಞ ; ಯಾಗ. ೭. ಯಜ್ಞದ ಕಡೆಯ ಮಂತ್ರ. ೮. ಶಕ್ತಿ ; ಬಲ ; ಕಸುವು : ಲಿಂಗವನೊಂದು ಶಿಶುಗೆ ಗುರು ಧರಿಸೆ ವಾಜವೆ ಪಿಡಿಯಲು (ಏಕೋ. ೮-೧-೩೫). ೯. ವೇಗ ; ರಭಸ. ೧೦. ಕುದುರೆಯ ನಡಗೆಗಳಲ್ಲಿ ಒಂದು ಬಗೆ : "ರಂಹಃ, ತರಃ . . . ಜವಃ, ವಾಜಃ — ಈ ೮ ಕುದಿರೆಯ ವೇಗಂ" (ಹಲಾಯು. ೭೩-೨೮೯). ೧೧. ಒಂದು ಬಗೆಯ ಮರ : "ತರುಭೇದಂ ಘೃತ ಶಾಕಮಶ್ವಗತಿಯುಂ ತೂರ್ಣಂ ಮಖಾಂತ್ಯಂ ಛದಂ ನಿರುತಂ ವಾಜ [ಪಾಠಾಂ. ಜಿ]ಯೆನಿಕ್ಕು" (ನಾನಾರ. ೧೨೫). [ಸಂ.]

ವಾಜನಿಕ (ಗು). ಯಜ್ಞಕ್ಕೆ ಸಂಬಂಧಿಸಿದ ; ಯಾಗಕ್ಕೆ ಸಂಬಂಧಪಟ್ಟ (?) : ಭೀಮ ಫಲುಗುಣರು ಮನದೊಳಗೆ ಕೌರವನ ಕರುಳನು ತನಿರಕುತದಲಿ ಕುದಿಸಿದರು ವಾಜನಿಕಕರ್ಮಕ್ರಿಯೆಗೆ [ವಾಠಾಂ. ನಿಜಜನಿತಕರ್ಮಕ್ರಮವ, ವಾಚನಿತಕರ್ಮಕ್ರಿಯೆ]ಗೆ ನೆನೆವುದನಱಿದನಾ ಭೂಪ (ಕುಮಾಸ. ೧೪-೭೫). [ಸಂ.]

ವಾಜಪೇಯ (ನಾ). ಒಂದು ಬಗೆಯ ಯಜ್ಞ : ಅಗ್ನಿಷ್ಟೋಮ . . . ವಾಜಪೇಯ ಪೌಂಡರೀಕಾದಿ ಮಹಾಕ್ರತುಗಳಂ (ವಿವೇಕ. ೧೩೪); ನೂಱಶ್ವಮೇಧಂಗಳನನಿತೆ ವಾಜಪೇಯಂಗಳನೆಸಗಿ (ಅದ್ಭುತ. ೭-೧೭). [ಸಂ.]

ವಾಜಬಿ$_1$, ವಾಜಮಿ, ವಾಜವಿ, ವಾಜಿಬಿ, ವಾಜಿಮಿ, ವಾಜ್ಮೆ (ಗು). ೧. ತಕ್ಕ ; ಅರ್ಹವಾದ ; ಯೋಗ್ಯವಾದ : ಈ ಅಮರಸೂಳ್ಯದ ಮಾತನ್ನು ವಾಜಬಿ ದರಿಯಾಪ್ಪು ಮಾಡುವ ಬಗ್ಗೆ, ಮಲೆವಾರಿ ಕಮೀಷನ್‌ಸಾಹೇಬರು ಕೇಪ್ಟನ್ ಮಾವಿನಿಸಾಹೇಬರವರನ್ನು . . . ಕಳುಹಿಸಿಕೊಟ್ಟಿದ್ದರಿಂದ (ರಾಚೇಂದ್ರ. ೧೧೪); ಬಾಕಿ ನಿಂತದ್ದರಲ್ಲಿ ವಾಜಬಿ ಅಳತೆ ಮಾಡಿಸಿ ಸಮವಾಗಿ ಎರಡು ರಾಶಿ ಮಾಡಿಸಿ (ಮಹಾಮಂ. II, ೬೪). ೨. ವಾಡಿಕೆಯಾಗಿರುವ ; ರೂಢಿಯಲ್ಲಿರುವ : ಕುಲ್ಲು ಆದ ದವಸಕ್ಕೆ ವಾಜಬಿ ಆಯ ವಗೈರೆ ಹೋಗಲಾಗಿ (ಮಹಾಮಂ. II, ೬೪). (ನಾ). ೩. ಸಮಂಜಸವಾದುದು ; ಯೋಗ್ಯವಾದುದು ; ತಕ್ಕುದು : ಕಾಲುಪಾಲು ಹೊಲ ಯಾ ಕಾಜಿಗೆ ಸಲುವುದು ವಾಜಬಿಯಾಗಿಯಿದ್ದಲ್ಲಿ ಯಾಗಲೂ ಯಿವಗೆ ಬಿಡಿಕೊಡುವುದು (ಎಕ. VII (S), ಚನ್ನಗಿ. ೮೫-೨೭; 1821). ೪. ಕಾನೂನುಬದ್ಧವಾದುದು : ಯಾ ವಿಷಯವಾಗಿ ತಣ್ಟೆಬಣ್ಟೆಗಳ ಮಾಡಿದಲ್ಲಿ ನೀವು ವಾಜಬಿಯಿದ್ದ ಮೇರೆಗೆ ಚಂನ್ನಾಗಿ ದರ್ಯಾಪ್ತು ಮಾಡಿ ಸಾಬಕ್ಕು ಮಾಮುಲ್ಲು ಪ್ರಕಾರಕ್ಕೆ ನಡೆದುಕೊಳುವ ಹಾಗೆ . . . ಜೋರ ತಾಕಿಯಿತು ಮಾಡುವದು (ಮೈಅರಿ. ೧೯೩೦, ೪೩-೩೦; 1812). **ವಾಜಮಿ** : ೧. ನಾಕ ಮಂದಿ ಏನ ಹೇಳತಾರ ವಾಜಮಿ ಧಾರಣೆಗೆ ಕೊಡತೇವೆ (ಅನ್ನ. ೧೦೩); ಆಚಾರೆಪ್ಪ ಹೇಳೂದೆಲ್ಲ ವಾಜಮಿ ಮಾತು (ಗ್ರಾಮಾಯ. ೪೮). ೩. ಅವಳ ಮೊದಲ ಬಾಣಂತಿತನ ತೌರಿನಲ್ಲಿ ಆಗುವದು, ರೂಢಿಯಂತೆ, ಸಂಪ್ರದಾಯದಂತೆ ವಾಜಮಿ (ದಿಪಹ. I, ೧೯). **ವಾಜವಿ** : ೧. ವಾಜವೀ ಮಾತು. ಇದೇನು ಯಾರೋ ಒಳಗೆ ಬರುತ್ತಿರುವ ಹಾಗಿದೆ (ಶಿವಪ. ೭೧). **ವಾಜಿಬಿ** : ೧. ಸ್ವಾಮಿಗಳವರಿಗೂ ಇವರ ಪರಿವಾರಕ್ಕು ಸಹಾ ವಾಜಿಬಿ ಖರೀದಿಗೆ ಬೇಕಾದ ಸಾಮಾನು ಕೊಡಿಸಿಕೊಟ್ಟು (ಗುಯದ. ೧೦). **ವಾಜಮಿ** : ೧. "ವಾಜಮಿ = ಯೋಗ್ಯ" (ಜಾನಕೋ. ೪೪). ೩. ವಾಜಮಿಯಲ್ಲದ ಒಂದೂ ಮಾತನ್ನು ನಾನು ಅನ್ನುವವನಲ್ಲ (ಮರಮ. ೧೫೯). **ವಾಜ್ಮೆ** : ೩. ವಾಜ್ಮೆ ಹೌದಲ್ಲೊ ನಾ ಅಂಬೋದು? (ಮಂಚಿಹು. ೭); ನಿನಗ ಸಿಟ್ಟು ಬರೋದು ವಾಜ್ಮೆ, ನಾಚಿಕೆ ಆಗೋದೂ ವಾಜ್ಮೆ (ಪುರುಷ. ೧೪೩).

[<— ಆರ. ಹಿಂ. ವಾಜಿಬ್, ವಾಜಿಬೀ./ ಮರಾ. ವಾಜಬೀ, ವಾಜಬ್, ವಾಜವೀ, ವಾಜಿಬ್, ವಾಜಿಬೀ, ವಾಜೀಬ್, ವಾಜೀಬಿ./ ತುಳು. ವಾಜಬಿ, ವಾಜ್ಮೆ]

ವಾಜಬಿ$_2$ (ಅ). ೧. ಸರಿಯಾಗಿ ; ಸಮಂಜಸವಾಗಿ : ಕಾಲು ಪಾಲು, ಹೊಲಾ ಬಿಟ್ಟುಕೊಡದೆ ಯಿರ್ರುವದಕ್ಕೆ ಕಾರಣವೇನು ಸ್ಥಳದಲ್ಲಿ ವಾಜಬಿ ವಿಚಾರ್ರಿತಿ . . . ಕೊಡುವುದು (ಎಕ. VIII (S), ಚನ್ನಗಿ. ೮೫-೯೨; 1891). ೨. ವಾಡಿಕೆಯಾಗಿ ; ರೂಢಿಯಾಗಿ : ಮಾರ್ಗದಲ್ಲಿ ಮಾರ್ರಿಕೊಂಡ ಗೋಣಿಗೆ ವಾಜಬಿ ಬರತಕ ಸುಂಕ್ಕಾ ತೆಗೆದುಕೊಳುವದು (ಮೈಅರಿ. ೧೯೩೮, ೨೦-೮; 1816). [< ವಾಜಬಿ$_1$]

ವಾಜಮಿ 'ವಾಜಬಿ$_1$' ನೋ.

ವಾಜವಿ 'ವಾಜಬಿ$_1$' ನೋ.

ವಾಜಸನಿ (ನಾ). ವಾಜಸನೇಯಿಸಂಹಿತೆಯಿಂದ ವರ್ಣಿಸಲ್ಪಡುವವನು ; ವಿಷ್ಣು : ವಾಜಸನೇಯಾದಿ ಸಕಲೋಪನಿಷತ್ಪ್ರತಿಪಾದ್ಯನಾಗಿರ್ಪುದರಿಂದ ವಾಜಸನಿಯೆಂದು ವೆಸರ್ (ಭಾರಶಾಂ. ೪೩). [ಸಂ. ವಾಜಸನೀ]

ವಾಜಸನೇಯ (ನಾ). ೧. ವಾಜಸನೇಯಿಸಂಹಿತೆ ಅಥವಾ ಶುಕ್ಲ ಯಜುರ್ವೇದವನ್ನು ರಚಿಸಿದ ಋಷಿ ; ಯಾಜ್ಞವಲ್ಕ್ಯ. ೨. ಉಪನಿಷತ್ತುಗಳಲ್ಲಿ ಒಂದು ; ವಾಜಸನೇಯಿಸಂಹಿತೆ : ಶ್ರೀರುದ್ರ. ಬೃಹದಾರಣ್ಯಕ . . . ವಾಜಸನೇಯ[ವಾಠಾಂ. ವಾಜಸನಯ, ವಾಜಸನೇಯ] . . . ಮುಂಡಕವೆಂಬಿವು ಮೊದಲಾದವೇ ಉಪನಿಷತ್ತುಗಳು (ವಿವೇಕ. ೫). [ಸಂ.]

ವಾಜಿ (ಗು). ೧. ರಭಸವಾದ ; ವೇಗವುಳ್ಳ. ೨. ಕಸುವುಳ್ಳ ; ಸಮರ್ಥವಾದ. ೩. ರೆಕ್ಕೆಗಳುಳ್ಳ. (ನಾ). ೪. ರಭಸ ; ವೇಗ : ಮೊತ್ತದ ತುರಗಂಗಳು ಬೆಂಡೇಳೆ ರಥತತಿ ವಾಜಿಯೊಳ್ಕೆತರೆ [ವಾಠಾಂ. ನಾಲ್ಕೆಸೆಗೆಯ್ತರೆ] ಕವಿದು (ಹಚಕಾ. ೧೨-೩೦ ರಗಳೆ); ೫. ಕುದುರೆ ; ಅಶ್ವ : ಸೇನಾಪತಿ ಸ್ಥಪತಿ ಗೃಹಪತಿ ಪುರೋಹಿತ ಗಜ ವಾಜಿ ಸ್ತ್ರೀರತ್ನಗಳೆಂಬೇಱುಂ ಜೀವರತ್ನಂಗಳುಮಂ . . . ಅರ್ಚಿಸಿ (ಚಂದ್ರಪ್ರ. ೬-೧೦೧ ವ); ಪವನಜವಮಂ ಮುಂಚಿ ವಾಜಿಗಳೋಟಂಗೊಂಡುವು (ರಾಮಾಶ್ವ. ೩೦-೨). ೬. ಬಾಣ ; ಶರ : "ವಾಜೀ— ಕುದುರೆ, ಬಾಣ, ಹಕ್ಕಿ" (ಸಿದ್ಧಾಂತಿ. ೪೦೦). ೭. ರೆಕ್ಕೆಗಳುಳ್ಳುದು ; ಪಕ್ಷಿ ; ಹಕ್ಕಿ : ಸಂಚರಿಪ ಸಕಲ ಮೃಗಾಜಿಗಳ ವಾಜಿಗಳ ತಡಿವಿಡಿದ ವೃಕ್ಷಂಗಳ . . . ಕಂಡಳು (ಚಟುವ. ೩೪-೨೦). ೮. ಎಲುಬು. ೯. ಶತ್ರು : "ತುರಗ ವಿಯಚ್ಚರಾಸ್ಥಿ ರಿಪುಮಾರ್ಗಣಮೆಂಬಿವು ವಾಜಿಯಕ್ಕುಂ" (ನಾನಾರ. ೭೬). ೧೦. ಒಂದು ಬಗೆಯ ಸಸ್ಯ : 'ವಾಜಿದಂತಕ' ಪರಾ. ೧೧. ದುಂಬಿ. ೧೨. ಮೇಲೋಗರ. ೧೩. ಯಜ್ಞ. ೧೪. ರೆಕ್ಕೆ ; ಗರಿ : "ತರುವಿನೊಳುಂ ತುಂಬಿಯೊಳುಂ ತುರಗದೊಳುಂ ಶಾಖದೊಳಗೆ ಯಜ್ಞದಿ ಗರಿಯೋಳ್ ಸರಿಗಾರು ವಾಜಿ ಶಬ್ದಂ" (ನಾನಾಕಂ. ೧೪೭). [ಸಂ. ವಾಜಿನ್]

ವಾಜಿಕರಿ (ನಾ). ಒಂದು ಬಗೆಯ ಸಸ್ಯ ; ವಾಜಿಗಂಧ : "ವಾಜಿಕರೀ, ವಾಜಿಗಂಧ — ಈಯೆರಡುಂ ಅಂಗುರು" (ಓಷಧಿ. ೧೫೧). [?]

ವಾಜಿಖುರ (ನಾ). ಒಂದು ಬಗೆಯ ಸಸ್ಯ : "ವಾಜಿಖುರಾ — ಕರಿಯ ಗಿರಿಕರ್ಣಿಕೆ" (ಓಷಧಿ. ೧೫೧). [?]

ವಾಜಿಗಂಧ (ನಾ). ಒಂದು ಬಗೆಯ ಸಸ್ಯ ; ಅಂಗುರದ ಗಿಡ ; ಅಶ್ವಗಂಧ : "ವಾಜಿಕರೀ, ವಾಜಿಗಂಧ — ಈ ಯೆರಡುಂ ಅಂಗುರು" (ಓಷಧಿ. ೧೫೧).

[ಸಂ. ವಾಜಿಗಂಧಾ]

ವಾಜಿತರ (ನಾ). ಒಂದು ಬಗೆಯ ಕತ್ತೆ ; ಹೇಸರಗತ್ತೆ : "ಚಕ್ರಿಪತಿ ವಾಜಿತರ ಮೆನಲು ಪೇಸರಗತ್ತೆಯಕ್ಕು" (ಮಂಗರಾ. ೫೫-೯). 'ಅಶ್ವತರ' ಪರಾ. [ಸಂ.]

ವಾಜಿದಂತಕ (ನಾ). ಒಂದು ಬಗೆಯ ಸಸ್ಯ ; ಆಡುಸೋಗೆ : "ವೈದ್ಯಮಾತಾ . . . ವಾಜಿದಂತಕಃ — ೮ ಅಡ್ಡಸರದ ಗಿಡ, ಆಡುಸೋಗೇಗಿಡದ ಹೆಸರು" (ಸಿದ್ಧಾಂತಿ. ೧೩೫). [ಸಂ.]

ವಾಜಿದಂತಿಕೆ (ನಾ). ಒಂದು ಬಗೆಯ ಸಸ್ಯ : "ವಾಜಿದಂತಿಕಾ — ಕುರುಟಗೆ" (ಓಷಧಿ. ೧೫೧). [ಸಂ. ವಾಜಿದಂತಿಕಾ]

ವಾಜಿನಾಮ (ನಾ). ಒಂದು ಬಗೆಯ ಸಸ್ಯ ; ಕಹಿಪಡವಲಕಾಯಿ : "ವಾಜಿನಾಮ — ಕಹಿಪಡಲ" (ಓಷಧಿ. ೧೫೧). [ಸಂ.ವಾಜಿನಾಮನ್]

ವಾಜಿನಿ (ನಾ). ೧. ಹೆಣ್ಣುಕುದುರೆ : "ಅರ್ವತೀ. . . ವಾಮೀ, ಪ್ರಸೂತಾ, ವಾಜಿನೀ — ಈ ೫ ಘೋಟಿಗೆ" (ಹಲಾಯು. ೭೨-೨೮೬). ೨. = ವಾಜಿಗಂಧ. [ಸಂ. ವಾಜಿನೀ]

ವಾಜಿಪ (ನಾ). ಕುದುರೆಗಳನ್ನು ನೋಡಿಕೊಳ್ಳುವವನು ; ಕಾಸ್ತಾರ : ಪೋದುದು ಬೊಮ್ಮಂಗೆ ಶಿರಸ್ಸು ಭಾರ್ಗವನು ಕಣ್ಣಾಣಂ ನಳಂ ವಾಜಿಪಂ . . . ವಿಧಿಯುಂ ಮೀಱುವನಾವನೆ (ಸೋಮೇಶ. ೨೭). [ಸಂ.]

ವಾಜಿಬಳ (ನಾ). ಚತುರಂಗಬಲದಲ್ಲಿ ಒಂದು ; ಕುದುರೆಯ ಪಡೆ, — ಸೈನ್ಯ : ಬಳವದರಾತಿಸೇನೆ ಕಿಡೆ ವಾಜಿಬಳಂ ವೆಜಱಿಂಗೆ (ಎಕ. VIII, ಸೊರಬ. ೧೮೪-೭; 1032). [ಸಂ. ವಾಜಿಬಲ]

ವಾಜಿಬಿ 'ವಾಜಬಿ$_1$' ನೋ.

ವಾಜಿಭೋಜನ (ನಾ). ಕುದುರೆಯ ಆಹಾರವಾದ ಹುರುಳಿ, ಕಡಲೆ ಮುಂತಾದ ಧಾನ್ಯ : "ವಾಜಿಭೋಜನಃ -- ಕಡಲೆ, ಹೆಸರು, ಹುರುಳಿ" (ಓಷಧಿ. ೧೫೧). [ಸಂ.]

ವಾಜಿಮಿ 'ವಾಜಬಿ$_1$' ನೋ.

ವಾಜಿಮೇಧ (ನಾ). (ಚಕ್ರವರ್ತಿಸಾಮಂತರು ದಿಗ್ವಿಜಯದ ನಂತರದಲ್ಲಿ) ಕುದುರೆಯನ್ನು ಬಲಿಯನ್ನಾಗಿ ಅರ್ಪಿಸಿ ಮಾಡುವ ಯಾಗ ; ಅಶ್ವಮೇಧ : ರಾಘವಂ ಪಿಂತೆ ರಾವಣನಂ ಮಥಿಸಿ ವಾಜಿಮೇಧದೊಳ್ಬಾರ್ವರಂ ತಣಿಪಿದಂ (ಕ್ಷಮಿಳಾ. ೨-೨೫). [ಸಂ.]

ವಾಜಿಮೇಧಗೆಯ್ (ಕ್ರಿ). ಅಶ್ವಮೇಧಯಾಗವನ್ನು ಮಾಡು : ಕುಲಿಶಧರನ ಗೆದ್ದು ಕುವಲಯದೊಳು ಭುಜಬಲವಿಕ್ರಮದಲಿ ಸೌಭಾಗ್ಯದುನ್ನತಿಯಿಂದ ಬಲಿ ವಾಜಿಮೇಧಗೆಯ್ದಲು (ಪುರಂದ. ಧಾ. ೧-೧೩೫-೫). [ವಾಜಿಮೇಧ + ಕೆಯ್$_1$]

ವಾಜಿರಾಜಿ (ನಾ). ೧. ಕುದುರೆಗಳ ಗುಂಪು. ೨. ಪಕ್ಷಿಗಳ ಸಮೂಹ. ೧,೨ : ನಾಗಪೂಗಂಗಳಂ ವಾಜಿರಾಜಿಗಳೊಳಂಬಾಗಿರ್ದ ಸ್ಕಂದನೋದ್ದ್ರುಮಗಳಿಂದೆ . . . ಪುಂಡರೀಕಾಳಿಯಿಂ ಶರಕುಲದೊಳಾ ಗಿರೀಂದ್ರನ ಮಹಾಸೈನ್ಯಮೆನೆ ಬಳಸಿದ ಕಾನನಂ ಕಣ್ಗೆಸೆದುದು (ಚಿಲಪು. ೫೩-೧೫). [ಸಂ.]

ವಾಜಿವದನ (ನಾ). ಕುದುರೆಯ ಮುಖವನ್ನು ಧರಿಸಿದ ವಿಷ್ಣುವಿನ ಒಂದು ರೂಪ ; ಹಯವದನ : ವಾಜಿವದನ ಭಾರ್ಗವ ಕೃಷ್ಣದೇವರ ನೆನೆದು ಮೂಜಗದೊಳು ಚೇತನ ಜಡವ್ಯಾಪ್ತಿಯ ತಿಳಿಯೆ . . . ವಾಜಪೇಯಯಜ್ಞಫಲ ಬರುವದು ಜನಕೆ (ವಿದಾಕೃ. ೬೧-೨೪). [ಸಂ.]

ವಾಜಿವಲ್ಲಭ (ನಾ). ಒಂದು ಬಗೆಯ ಸಸ್ಯ ; ನೆಲಗುಂಬಳ : "ವಾಜಿವಲ್ಲಭ - ನೆಲಗುಂಬಳ" (ಓಷಧಿ. ೧೫೨). [?]

ವಾಜಿಶಾಲಹರ (ನಾ). ಯಜ್ಞಶಾಲೆಯನ್ನು ಧ್ವಂಸಮಾಡಿದವನು ; ಶಿವ : ಚಕ್ರಾ[illegible]ಹನಾನನ ವಾಜಿಶಾಲಹರ ಶುಕ್ರಶಿಷ್ಯಾಧಿಪಶಿರೋಮಾಲ . . . ಸಂಗಮೇಶ ರಕ್ಷಿಪುದೆನ್ನನು (ಪ್ರೌಢರಾ. ೬-೧). [ಸಂ.]

ವಾಜಿಶಾಲೆ (ನಾ). ಕುದುರೆಯ ಲಾಯ ; ಅಶ್ವಶಾಲೆ : "ವಾಜಿಶಾಲಾ, ಮಂದುರಾ — ಈ ೨ ಕುದಿರೆಯ ಮಂದಿ(ದು)ರಂ" (ಹಲಾಯು. ೫೦-೧೪೧). [ಸಂ. ವಾಜಿಶಾಲಾ]

ವಾಜೀಕರ (ಗು). ಕಾಮೋದ್ದೀಪನಗೊಳಿಸುವ ; ಸಂಭೋಗದ ಅಭಿಲಾಷೆಯನ್ನು ತೀವ್ರಗೊಳಿಸುವ : ವಾಜೀಕರ ಔಷಧಯೋಗಗಳನ್ನು ಸೇವಿಸಲು ಇಚ್ಛಿಸುವ ಪುರುಷನು ಮೊದಲು ಶರೀರವನ್ನು ವಿರೇಚನಾದಿಗಳಿಂದ ಶೋಧಿಸಿಕೊಂಡು . . . ವಾಜೀಕರಯೋಗಗಳನ್ನು ಸೇವಿಸಬೇಕು (ವೃದ್ಧಸಾ. II, ೨೪೭). [ಸಂ.]

ವಾಜೀಕರಣ (ನಾ). ೧. ಕಾಮೋದ್ದೀಪನೆ ; ಭೋಗಾಭಿಲಾಷೆ : ವಿಧವಿಧವಾದ ಪುಷ್ಟಿಕರವಾದ ಆಹಾರಗಳ ಭೋಜನವ ಮಾಡುವುದರಿಂದಲೂ . . . ಮಾನವರಿಗೆ ವಾಜೀಕರಣವಹುದು (ವೃದ್ಧಸಾ. II, ೨೪೭). ೨. ಕಾಮೋದ್ದೀಪನಸಾಧನೆಗಳಿಂದ ಸಂಭೋಗದ ಅಭಿಲಾಷೆಯನ್ನು ತೀವ್ರಗೊಳಿಸುವುದು. ೩. = ವಾಜೀಕರಣ ತಂತ್ರ : ಮನುಷ್ಯ . . . ಸತ್ಸಂತಾನವನ್ನು ಪಡೆಯುವುದಕ್ಕೋಸ್ಕರ ವಾಜೀಕರಣವೆಂಬ ವಿಧಿಯುಂಟು (ಕವಿಕೋ. I, ೮೫೦). [ಸಂ.]

ವಾಜೀಕರಣತಂತ್ರ (ನಾ). [ವೈದ್ಯಶಾ] ಆಯುರ್ವೇದದ ಒಂದು ಅಂಗ; ಕಾಮೋದ್ದೀಪನವನ್ನು ಸಾಧಿಸುವ ಪ್ರಯೋಗಗಳನ್ನು ತಿಳಿಸುವ ಶಾಸ್ತ್ರೀಯವಾದ ಕ್ರಮ ; ವೀರ್ಯವೃದ್ಧಿ ಮಾಡುವ ಸಾಧನಗಳನ್ನು ತಿಳಿಸುವ ತಂತ್ರ, — ಶಾಸ್ತ್ರ : ಆಯುರ್ವೇದವನ್ನು ಶಲ್ಯ, ಶಾಲಾಕ್ಯ, ಕಾಯಚಿಕಿತ್ಸಾ, ಕೌಮಾರಭೃತ್ಯ, ಅಗದತಂತ್ರ (ವಿಷಚಿಕಿತ್ಸಾ), ರಸಾಯನತಂತ್ರ ಮತ್ತು ವಾಜೀಕರಣ ತಂತ್ರಗಳೆಂದು ಎಂಟು ವಿಧವಾಗಿ ಮಾಡಿದ್ದಾರೆ (ಕವಿಕೋ. I, ೮೫೦). [ಸಂ.]

ವಾಜೀಕರದ್ರವ್ಯ (ನಾ). [ವೈದ್ಯಶಾ] ಕಾಮೋದ್ದೀಪನವನ್ನುಂಟುಮಾಡುವ ವಸ್ತು : ಯಾವ ದ್ರವ್ಯವು ತನ್ನ ಗುಣಗಳ ಪ್ರಭಾವದಿಂದ ತನ್ನನ್ನು ಸೇವಿಸುವ ಪುರುಷನನ್ನು ಸಂಭೋಗದಲ್ಲಿ ಕುದುರೆಯಂತೆ ಸಮರ್ಥನನ್ನಾಗಿ ಮಾಡುವದೋ ಆ ದ್ರವ್ಯವನ್ನು ವಾಜೀಕರದ್ರವ್ಯವೆಂದು ವೈದ್ಯಶ್ರೇಷ್ಠರಾದ ಋಷಿಗಳು ಹೇಳಿರುವರು (ವೃದ್ಧಸಾ. II, ೨೪೬). [ಸಂ.]

ವಾಜೀತ (ನಾ). ೧. ಕುದುರೆಗಳಲ್ಲಿ ಉತ್ತಮವಾದುದು ; ಶ್ರೇಷ್ಠವಾದ ಕುದುರೆ. ೨. ಪಕ್ಷಿಗಳ ಒಡೆಯ ; ಗರುಡ. ೧, ೨ : ಸ್ವಸ್ತಿಶ್ರೀಪ್ರಿಯನರ್ಜುನೋರ್ಜಿತಯಶಂ ವಾಜೀಶಯಾನೋತ್ಸವಂ . . . ಏಸೆದಂ ಶ್ರೀವಿಷ್ಣುಸಾಮ್ಯಾನ್ವಯಂ (ಎಕ. V, ಬೇಲೂರು. ೧೧೪-೬; 1173). [ಸಂ.]

ವಾಜುಪೇಯಾಜಿ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ನೆಕುಣ್ಣರಾ ವಾಜುಪೇಯಾಜಿಯಾ ಮಗನ್ ಜನ್ನಯ್ಯಟ್ಟದು (ಎಕ. VII, ಶಿಕಾರಿ. ೪೫-೫೯; ಸಿ. 890 7). 'ಸೋಮಯಾಜಿ' ಪರಾ. [< ಸಂ. ವಾಜಪೇಯಯಾಜಿನ್]

ವಾಜ್ಜಿ 'ವಾಜಬಿ$_1$' ನೋ.

ವಾಟ$_1$ (ನಾ). (ನೆಲ, ಛಾವಣಿ ಮುಂತಾದುವುಗಳ) ಇಳಿಜಾರು ; ಇಳುಕಲು : ಪ್ರವಣಃ — ಕ್ರಮದಿಂದ ವಾಟವಾಗಿ ಇಳಿಯತಕ್ಕ ನೆಲ (ಸಿದ್ಧಾಂತಶಿ. ೩೮೮).

[ದೇ. ॥ ತಮಿ. ಮಲ. ವಾಟ್ಟಮ್; ತೆಲು. ವಾಟಮು]

ವಾಟ$_2$ (ನಾ). ೧. ಕಟ್ಟುಡದ ಸುತ್ತಲೂ ಇರುವ ಬೇಲಿ, — ಆವರಣ ; ಪೌಳಿ. ೨. ಆವರಣವುಳ್ಳ ಪ್ರದೇಶ ; ಅಂಗಳ : ಗೋಪುರಂಗಳನುಳ್ಳ ವಾಟಂಗಳಗಣಿತಂ [ಪಾಠಾಂ. ಗೋಪುರಗಳುಳ್ಳಾ ಕವಾಟಂಗಳಗಣಿತಂ] ಗೃಹಮಸಂಖ್ಯಾತಂಗಳು (ಚಿಲಪು. ೨೯೬). ೩. ಊರು ಅಥವಾ ಹಳ್ಳಿಯನ್ನು ಸುತ್ತುಗಟ್ಟಿರುವ ಆವರಣ, — ಪ್ರಾಕಾರ, — ಗೋಡೆ ಇತ್ಯಾದಿ : (ಕಿ). ೪. ಮಾರ್ಗ ; ಹಾದಿ : ಸ್ವಸ್ತ್ಯನವರತಪರಮಕಲ್ಯಾ[ಣಾಭ್ಯು]ದಯ ಸಹಸ್ರಫಳಭೋಗಭಾಗಿನಿ ವಾಟ[ಕ್ಕೆ] ಮದದ್ವಿರದಗಾಮಿನಿ ರಾಯಜಗದಲ[ಮನೋ]ಜರತಿ (ಕಇಅ. ೯೧-೧-೬೭; 1082); ಮುಂದೆಸೆದುದು ಗಡಕಾಚಯವಾಟ ಜತಿಗಳೆರ್ದೆಗಾಟ ವಿಟರ ಕಣ್ಮಮರ್ದೂಟ (ಉದ್ಧವ. ೪-೧೫). ೫. ನೆಲೆ ; ಆಗರ ; ವಾಸಸ್ಥಾನ : ಕರಿತುರಗದೇರಾಟ ಶರಚಾಪಗಳ ಕೂಟ ಸರಿದೂರೆಗಳೊಡನಾಟ ಸಕಲಕಲೆಗಳ ವಾಟ . . . ಭಾವಜ್ಞರುಗಳ ದೊರೆಯಾತ (ವಂಕಾರಾ. ೨-೧-೨೬); ನಾರಿಯರ್ ತಮ್ಮ ತಮ್ಮ ವಾಟ ಹೊಂದಲು (ಪ್ರಸಭಾ. ೬೫-೯). ೬. ಮಠ ; ಆಶ್ರಮ : ಅವರ ಸಾಮಾಜಿಕಜೀವನವನ್ನು ಕಾಣಬೇಕಾದರೆ ಅವರ "ವಾಟ"ಗಳಿಗೆ ಹೋಗಬೇಕು. ವಾಟಗಳೆಂದರೆ ಬುದ್ಧಸನ್ಯಾಸಿಯರಿರುವ ಮಠಗಳು (ಬಾಲಪ್ರ. I, ೩೮೪). ೭. ಗ್ರಾಮ ; ಹಳ್ಳಿ : ಪಟ್ಟಿ ಮತ್ತು ವಾಟೀ, ವಾಟಗಳಿಗೆ ದನಗಾರರ ಹಟ್ಟಿ(ಗ್ರಾಮ) ಮತ್ತು ತೋಟವೆಂದು ಎರಡೂ ಅರ್ಥಗಳಿದ್ದುದು ಕೋಶಗಳಿಂದ ನಿದರ್ಶನಕ್ಕೆ ಬರುತ್ತಿದೆ (ಕರ್ಣಾಪೂ. ೫). ೮. ತೋಟ ; ವನ : ಪಟ್ಟಿ ಮತ್ತು ವಾಟೀ, ವಾಟಗಳಿಗೆ ದನಗಾರರ ಹಟ್ಟಿ (ಗ್ರಾಮ) ಮತ್ತು ತೋಟವೆಂದು ಎರಡು ಅರ್ಥಗಳಿದ್ದುದು ಕೋಶಗಳಿಂದ ನಿದರ್ಶನಕ್ಕೆ ಬರುತ್ತಿದೆ (ಕರ್ಣಾಪೂ. ೫). ೯. ವಟವೃಕ್ಷದಿಂದ ತಯಾರಾದುದು. ೧೦. ಒಂದು ಬಗೆಯ ಸಸ್ಯ: "ವಾಟ — ಗುಳ್ಳ, ಕಳ್ಳಂಗಡಲೆ, ಕುರುಟಿಗೆ" (ಓಷಧಿ. ೧೫೯). [ಸಂ.]

ವಾಟಕ (ನಾ). ತೋಟ ; ಉದ್ಯಾನ : "ವಾಟಕಮೆನೆ ಬಾಡಗಮದು" (ಚಾಸಿ. ೧೧೮). [ಸಂ.]

ವಾಟಗ (ನಾ). ನೀರು ಕುಡಿಯುವ ಪಾತ್ರೆ ; ಲೋಟ : ನೀರು ಕುಡಿಯಬೇಕೆಂದು ಕೈಯಲ್ಲಿ ಎತ್ತಿದ ವಾಟಗ ಹಾಗೆಯೇ ಇರುತ್ತಿದ್ದಿತು (ಅಕ್ಕಾಪಿ. ೨೧); ಕಳುವೂಟ ಆದ ಮೇಲೆ ನಮ್ಮ ಕಡೆಯ ಎರಡು ಬೆಳ್ಳಿಯ ವಾಟಗಗಳು ಕಣ್ಮರೆಯಾಗಿ ಈ ಜಗಳದ ನಾಟಕ ಸಮಾಪ್ತಿಯಾದಂತಾಯಿತು (ಸ್ವೆನ. ೨೮). [<— ಮರಾ. ವಾಟಗಾ]

ವಾಟಣಿ (ನಾ). ಪಾಲು ; ಹಿಸ್ಸೆ : ಇಂಥವನಿಗೆ ಅಣ್ಣ ತಮ್ಮಂದಿರ ವಾಟಣಿಯಂಥ ಪ್ರಶ್ನೆಯಲ್ಲಿ ಮಾತಾಡಗೊಡುವುದಿಲ್ಲ (ಮನೆಬೆ. ೫); ನಾವು ಅಣ್ಣ ತಮ್ಮಂದಿರು ಇನ್ನೂ ವಾಟಣಿ ಮಾಡಿಕೊಂಡಿರುವದಿಲ್ಲ (ಗಂಮಾಯಿ. ೨೧೦).

[<— ಮರಾ. ವಾಟಣೀ, ವಾಂಟಣೀ]

ವಾಟಾಘಾಟ , ವಾಟಾಘಾಟಿ (ನಾ). ವಾದ ವಿವಾದ ; ಚರ್ಚೆ : ಅಕ್ಕ ಅತ್ತೆಯ ಮನೆಗೆ (ಪಾಪ , ಅತ್ತೆಯಿಲ್ಲದ ಅತ್ತೆಯ ಮನೆ) ಹೋಗುವ . . . ವಾಟಾಘಾಟ ನಡೆದು . . . ಮರುದಿನ ಅಕ್ಕ ಹೊರಡುವುದೆಂದು ಗೊತ್ತಾಯಿತು (ವ್ಯನಿ. ೨೨೮). **ವಾಟಾಘಾಟಿ** : ಹಲಕಿ ಜಾತಿಯ ಗೋದಿಕಾಳು ಕೂಡಿದ್ದ ಮಾಲವನ್ನು ಅತ್ತ ಕಡೆಗೆ ಕಳಿಸಿಸಬಾರದೆಂಬದರ ಬಗ್ಗೆ ವಾಟಾಘಾಟಿಯು ನಡದಿಯತ್ತದೆಂದು ವರ್ತಮಾನಪತ್ರಗಳ ಮೇಲಿಂದ ಕೇಳಬಲ್ಲೆವು (ಮುಂಬಾ. ೯೭) ; 'ಮಗುವಿಗೆ ಹೆಸರೇನಿಡಬೇಕು?' ಎನ್ನುವ ಒಗಟು ಕುರಿತು ದೀರ್ಘಕಾಲ 'ವಾಟಾಘಾಟಿ'ಯಾಗಿ ಕೊನೆಗೆ . . . ನಾಮಕರಣಮಾಡಿದರು (ಕೋಟಸೀ. ೧೧). [<— ಮರಾ. ವಾಟಘಾಟ್, ವಾಟಾಘಾಟ್]

ವಾಟಾಘಾಟಿ 'ವಾಟಾಘಾಟ' ನೋ.

ವಾಟಿ (ನಾ). ೧. ನೆಲೆ ; ಹಕ್ಕೆ : ಈಟಿಯ ಪಿಡಿಯುತ ವಾಟಿಯೊಳಿರುತಿಹ ಕೂಟದ ಮೃಗಗಳ ನೋಟದಿ ನೋಡುತ (ಹಮಚ. ೧೮-೧೩). ೨. ತೋಟ ; ವನ : ಮೆಱೆವ ಹಟ್ಟದಪದ್ಮಾಕರವಾಟಿಗಳ ಮುಂದೆ ತರಳನೊರೆದ ನುಡಿಯಂತೆ (ಕರಚಾ. ೧-೭) ; ಆ ದೇವಾಲಯವನ್ನು ಅದರ ಪಕ್ಕದ ವಾಟಿಯನ್ನು . . . ಶಾಲೆಗಾಗಿ ಕೊಟ್ಟಿದೆ ಎಂದು ಸುದ್ದಿ ಬಂದಿತು (ಸ್ಮೃಕ. ೮-೯೭). ೩. ನಿವೇಶನ. ೪. ಮನೆ ; ನಿವಾಸ. ೫. ಹಾದಿ ; ಮಾರ್ಗ : "ವಾಟೀ = ಬೀದಿಯುಂ, ತೋಟಮುಂ" (ಕಾಶಕ. ೧೩೭). ೬. ಪದಾರ್ಥಗಳನ್ನು ಮಾರುವ ಸ್ಥಳ ; ಅಂಗಡಿ : ನನ್ನ ವಾಟಿಯಲ್ಲಿ ಕುಡಿಯುವುದಕ್ಕೆ ಬಂದವರು ನನ್ನೊಂದಿಗೆ ಮಾತನಾಡಬಾರದೆ? (ಸ್ಮೃಕ. ೮-೧೦೯). ೭. ಟೊಂಕ. [ಸಂ. ವಾಟೀ]

ವಾಟಿಕಾರ (ನಾ). ಅಂಗಡಿಯ ಯಜಮಾನ ; ಅಂಗಡಿಕಾರ : ಇವನು ಇತ್ತ ವಾಟಿಕಾರನೊಂದಿಗೆ ಮಾತನಾಡುತ್ತಿರುವಾಗ ಅತ್ತ ಮಾರ್ಲೋಪೀಲ್ ಕಿವಿಯಲ್ಲಿ . . . ಎಂದನು (ಸ್ಮೃಕ. ೮-೧೧೧). [ವಾಟಿ + – ಕಾರ (< – ಕಾಱ)]

ವಾಟಿಕೆ (ನಾ). ೧. ತೋಟ ; ಉದ್ಯಾನ. ೨. ಆವರಣ ; ಪ್ರಾಕಾರ.

[ಸಂ. ವಾಟಿಕಾ]

ವಾಟಿಸು (ಕ್ರಿ). ಆವರಿಸು ; ಮುತ್ತು ; ಕವಿ : ಕೋಟೆ ವಾಟಿಸಿದ ಕಟ್ಟಲೆಯಂ ಸುತ್ತಿ ಮುತ್ತಿದ ಬೆಳ್ಳಂಗಳೆ ಬೀಡುವಿಟ್ಟಂತೆ ಕಟ್ಟಲಿಸುವೆಲೆವಳ್ಳಿಯಂ ಬಳಸಿ ಕಟಿಯೆ ಪೂತ ಮಲ್ಲಿಗೆಗಳುಂ . . . ಎಸೆಯೆ (ಲೀಲಾವ. ೬-೬೦ ವ). [ವಾಟ್$_2$ + – ಇಸು$_3$]

ವಾಟಿಹುಳಿ (ನಾ). ಒಂದು ಬಗೆಯ ಹುಳಿಯ ಹಣ್ಣು ; ಆಮಸೋಲು : ಬೇವಿನ ಕಡ್ಡಿ , ಹುಣಿಸೆಕಡ್ಡಿ , ಜೀರಿಗೆ , ವಾಟಿಹುಳಿ ಇವಂ ಸಮನಾಗಿ ಅರೆದು ಸಕ್ಕರೆ ವೆರಸಿ ಸೇವಿಸಲು ಸಕಲಪೈತ್ತಿಕರೋಗಗಳು ಗುಣಮಕ್ಕುಂ (ಸಕವೈ. ೧೩೪).

[<— ತುಳು. ವಾಟಿಪುಳಿ , ಓಂಟಿಪುಳಿ , ಓಟಿಪುಳಿ]

ವಾಟೆ$_1$ (ನಾ). ೧. ಒಂದು ಬಗೆಯ ತೆಳ್ಳನೆಯ ಬಿದಿರು : ಮಂಟಪದ ಒಂದು ಭಾಗ , ಬಿದಿರುಗೂಟಗಳನ್ನು ನೆಟ್ಟು ವಾಟೆಯ ತಟ್ಟೆಗಳನ್ನು ಮರೆಕಟ್ಟಿದುದರಿಂದ , ನಿವಾಸ ಯೋಗ್ಯವಾದ ಕೋಣೆಯಾಗಿ ಪರಿವರ್ತಿತವಾಗಿತ್ತು (ಮಲೆಮ. ೬೬೫) ; ಕೆಲವು ಕಡೆಗಳಲ್ಲಿ ಗುರಗಿಬಿದಿರು , ಕೆಂಜಗಿ , ವಾಟೆ , ಕ್ಯಾದಿಗೆ . . . ಮುಂತಾದ ಗಿಡಬಳ್ಳಿ ಪೊದೆಗಳಿದ್ದವು (ಪಂಚಪಂ. ೨). ೨. ಒಂದು ಬಗೆಯ ಸಸ್ಯ : (ಮೃಡಿಗಿ. ೫೬-೧೧೮೨). [< ಓಟೆ$_1$]

ವಾಟೆ$_2$ (ನಾ). ೧. (ಮಾವು ಮುಂತಾದ) ಹಣ್ಣಿನೊಳಗಿರುವ ಓಟೆ ; ಗೊರಟೆ : ಆ ವೃಕ್ಷಗಳು ವಾಟೆಯಿಲ್ಲದೆ ತಿರುಳುಗಳಿಂದ ತುಂಬಿರುವ ಫಲಂಗಳಂ ಧರಿಸುವವು (ಸೌಗಂಧಿ. ೪೬೬-೧೦). ೨. (ತೆಂಗಿನ) ಚಿಪ್ಪು ; ಪರಟೆ : (ತು). ೩. ತೊಗಟೆ ; ಸಿಪ್ಪೆ : ಆ ವಾ[ಪಾಕಾಂ. ವೋ]ಟೆಯೊಳಗೆಯುಟ್ಟಿನ ಹುಡಿಯ ತಡಹಿಕೊಂಡು ಗೊಂದಣದ ಸಂಭಾರಮಂ ಮೆತ್ತಿ (ಸೂಪಶಾ. ೪-೭೪) ; ಬಿಲ್ವಪತ್ರೆವಾಟೆಯ ರಸ . . . ಬಣಶುಂಠಿರಸದಿಂದಾದರೂ ಇವೆಲ್ಲವಂ ಸಮಭಾಗವಾಗಿ ಕೂಡಿ ಅರೆದು ಕದಡಿ ಹೊಟ್ಟೆಗೆ ತೆಗೆದುಕೊಳ್ಳಲು ವಾಂತಿ ವಿರೇಕಂ ನಿಲ್ಲುವುದು (ಸಕವೈ. ೨೬೬). [< ಓಟೆ$_2$]

ವಾಟೆ$_3$ (ನಾ). (?) : ನಾಟಿ ವದನದಿ ಪೊಕ್ಕು ವಕ್ತ್ರ ಮೇಲಾಗಿ . . . ವಾಟೆ ಹರವರಿಯಾಗಲುಳಿದ ದಳ ನಿಲದೆ ಕಾಲಾಟಗೊಳಲು (ಜಿನಮು. ೨೬-೯). [?]

ವಾಟೆಗಿಡ (ನಾ). ಒಂದು ಬಗೆಯ ಹುಳಿಯ ಹಣ್ಣು ಬಿಡುವ ಸಸ್ಯ : ವಾಟೆಗಿಡ , ವಂಟೆಮರ (ಮೃಡಿಗಿ. ೧೦-೧೬೨). 'ವಾಟಿಹುಳಿ' ಪರಾ. [ವಾಟಿ$_1$ + ಗಿಡ (< ಗಿಡು)]

ವಾಟೆಬಾಳೆ (ನಾ). ಒಂದು ಬಗೆಯ ಬಾಳೆ ; ಕಪ್ಪುರಬಾಳೆ : ಬಾಳೆಯ ಗೊನೆಗಳಲ್ಲಿ ಒಂದು ವಾಟೆಬಾಳೆಯ ಗೊನೆಯ ಎರಡು ಹೆಣಿಗೆ ಚೆನ್ನಾಗಿ ಕಳಿತು ಹಣ್ಣಾಗಿ . . . ಕಂಗೊಳಿಸುತ್ತಿದ್ದುವು (ಮಲೆಮ. ೬೬೫). [ವಾಟೆ$_2$ + ಬಾಳೆ$_1$ (< ಬಾಟೆ)]

ವಾಟೆಹಿಂಡಲು (ನಾ). ಬಿದಿರಿನ ಪೊದರು ; ಬಿದಿರುಮಳೆ : ಆ ವಾಟೆಹಿಂಡಲ ಹತ್ರ ಮಟ್ಟನಲ್ಲಿ ಕತ್ತಲಾದ ಮ್ಯಾಲೆ ಅವರಿಬ್ಬರೂ ಒಟ್ಟಾಗ್ತಾರಂತೆ (ಮಲೆಮ. ೪೭೩).

[ವಾಟೆ$_1$ + ಹಿಂಡಲು (< ಹಿಂಡಿಲ್)]

ವಾಟೋಳಿ (ನಾ). ಹಾಳು ; ನಾಶ : ಮನೀ ಹೊಲಾ ಎಲ್ಲಾ ನಾಲ್ಕ ದಿನದಾಗ ವಾಟೋಳಿ ಮಾಡಿ ಇಡತಾನ (ನಿಸರ್ಗ. ೨೧೩). [<— ಮರಾ. ವಾಟೋಳಾ]

ವಾಟ್ಯಾರಣಿ (ನಾ). ಒಂದು ಬಗೆಯ ಸಸ್ಯ : "ವಾಟ್ಯಾರಣಿಃ – ಬಿಳಿಯ ಲೊಕ್ಕಿ , ತುರುವೆ , ಕಳ್ಳಂಗಡಲೆ" (ಓಷಧಿ. ೧೫೧). [?/ ಸಂ. ವಾಟ್ಯಾಯನೀ = ಬಿಳಿಯ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ]

ವಾಟ್ಯಾಲಕ (ನಾ). ಒಂದು ಬಗೆಯ ಸಸ್ಯ : "ಬಲಾ, ವಾಟ್ಯಾಲಕಃ – ೨ ಚಿಟ್ಟುಸರಳು ಗಿಡ, ಹರಳ ಬೀಜವು" (ಸಿದ್ಧಾಂತಿ. ೧೫೬). [ಸಂ.]

ವಾಟ್ಯೆ (ನಾ). ಒಂದು ಬಗೆಯ ಸಸ್ಯ : "ವಾಟ್ಯಾ – ಹತ್ತಿ , ನೆಲದಾಳು" (ಓಷಧಿ. ೧೪೯). [ಸಂ. ವಾಟ್ಯಾ]

ವಾಡ 'ಭಾಡ' ನೋ.

ವಾಡಬ (ನಾ). ೧. ಬೀಜದ ಕುದುರೆ. ೨. ಸಮುದ್ರದೊಳಗಿರುವ ಕುದುರೆಯ ಮುಖದಿಂದ ಹುಟ್ಟಿದುದೆಂದು ಭಾವಿಸಲಾದ ಬೆಂಕಿ; ಬಡಬಾನಲ : ಗಗನಾರ್ಣವದ ವಾಡಬಗಣವೂ ಕೌತುಕವೆನಿಸಲೆಚ್ಚಾಡಿದರು ಬಿಲ್ಲವರು (ಕುಮಾಧೀ. ೪-೧೬) ; ಘನನಿನದದೊಳಿದಿರಾದರು ರಿಪುಬಲವನಧಿವಾಡಬ ರೆನಿಸುವರು (ತ್ರಿಪುಸಾಂ. ೨೧-೨೩೯). ೧, ೨ : ಧುರದಂತೆ ಮಖದಂತೆ ವಾಡ ಬಾನ್ನಿತಂ . . . ತಾನೆಂದುದಧಿ ಕಂಗೆ ಮಂಗಳಮಾದುದು (ಚಿಬಪು. ೨೨-೮). ೩. ಬ್ರಾಹ್ಮಣ. ೪. ಪಾತಾಳ ಲೋಕಗಳಲ್ಲಿ ಒಂದು ; ಅತಳ. ೫. ಘನವಾದುದು ; ಅಧಿಕವಾದುದು. "ಅತಳಂ ತುರಗಂ ಘನ ವಿಪ್ರೇಶಂ ವಡಬಂ ಮನಸಿಜಶರಸಂಖ್ಯೆಯಿಂದ ವಾಡಬ ಶಬ್ದಂ" (ನಾನಾಕಾ. ೪೩). [ಸಂ.]

ವಾಡವ (ನಾ). ೧. ಬೀಜದ ಕುದುರೆ. ೨. = ವಾಡಬ ೨. ೩. ಬ್ರಾಹ್ಮಣ. ೨, ೩ : ಆ ಸಮುದ್ರಂ . . . ಮಹಾಗ್ರಹಾರದಂತೆ ವಾಡವೋಜೇತಪ್ರಖ್ಯಾತಮುಂ . . . ಪಯೋಜಾತನೇತ್ರನಂತೆ ಪೀತಾಂಬರಮುಮಾಗಿರ್ಪುದು (ಕುಸುಮಾ. ೧-೨೨ ವ). ೪. ಪಾತಾಳಲೋಕಗಳಲ್ಲಿ ಒಂದು ; ಅತಳ. ೫. ಕುದುರೆಯ ಲಾಯ ; ಅಶ್ವಶಾಲೆ. ೬. ಹೆಣ್ಣುಕುದುರೆಗಳ ತಂಡ. ೭. ದೇಶ ; ರಾಷ್ಟ್ರ. "ದಾನವಾವಾಸ ಜನಾಂತ ವಿಪ್ರ ತುರಗಂ ಬಡಬಾನಲ ವಾ[ಪಾಕಾಂ. ಬಾ]ಡವಾಹ್ವಯಂ" (ನಾನಾರ. ೧೪). [ಸಂ.]

ವಾಡವಾಗ್ನಿ (ನಾ). = ವಾಡಬ ೨. [ಸಂ.]

ವಾಡವಾನಲ (ನಾ). = ವಾಡಬ ೨. [ಸಂ.]

ವಾಡವೇಯ (ನಾ). ೧. ಎತ್ತು ; ವೃಷಭ. ೨. ಬ್ರಾಹ್ಮಣ. ೩. ಬೀಜದ ಕುದುರೆ. [ಸಂ.]

ವಾಡಪ್ಯ (ನಾ). ಬ್ರಾಹ್ಮಣರ ಸಮುದಾಯ. [ಸಂ.]

ವಾಡಿ 'ಪಾಡಿ$_2$' ನೋ.

ವಾಡಿಕೆ (ನಾ). ರೂಢಿ ; ಅಭ್ಯಾಸ ; ಪದ್ಧತಿ : ಪುತ್ರೋತ್ಪತ್ತಿಯನ್ನು ಕುರಿತ ಚಿಂತೆಗಾಗಿ ಆ ಕಾಲದಲ್ಲಿ ಈ ರೀತಿಯಾಗಿ ಅರಸರುಗಳು ಇಬ್ಬರು ಮೂವರು ಮಡದಿಯರನ್ನು ಮಾಡಿಕೊಳ್ಳುವುದು ವಾಡಿಕೆಯಿತ್ತು (ವ್ಯಾಸಚಿ. ೪೩) ; ಗತಿಸಿದವರ ಅಸ್ಥಿಯನ್ನೂ ಬೂದಿಯನ್ನೂ ಗಂಗೆಯಲ್ಲಿ ಬಿಡುವುದು ಜನರ ವಾಡಿಕೆ (ನನದಿ. ೧೧).

ವಾಡಿಕೆಯಾಗಿ = ಪದ್ಧತಿಯಂತೆ ; ಸಾಮಾನ್ಯವಾಗಿ : ವಾಡಿಕೆಯಾಗಿ ಗಿಡದ ಟೊಂಗೆಗಳ ಕುಡಿಯಲ್ಲಿ ಮೊಗ್ಗೆಗಳಾಗುವವು (ಮುಂಬಯಿ. ೩-೩೬) ; ಆ ಸ್ಥಿತಿಯ ವರ್ಣನೆಯು ಐಕ್ಕದ ಭಾಷೆಯಲ್ಲಿಯೆ ವಾಡಿಕೆಯಾಗಿ ಮಾಡಲ್ಪಟ್ಟಿರುವದು (ವಚರ. ೧೬).

ವಾಡಿಕೆಯಾಗು = ಪದ್ಧತಿಯಾಗು ; ಚಾಲ್ತಿಯಲ್ಲಿರು : ದಸರೆಯ ಹಬ್ಬದಲ್ಲಿ

ನಾವು ಪರಸ್ಪರ ಬನ್ನಿಯ ಎಸಳುಗಳನ್ನು ಕೊಡುತ್ತ 'ಬಂಗಾರವನ್ನು ತೆಗೆದುಕೊಂಡು ಬಂಗಾರದಂತೆ ಇರೋಣ' ಎನ್ನುವುದು ವಾಡಿಕೆಯಾಗಿದೆ (ರಂಗರೂ. ೧೧೨).

[ದೇ. ॥ ತಮಿ. ವಾಟಕ್ಕೈ ; ತುಳು. ವಾಡಿಕೆ, ವಾಡಿಗೆ ; ತೆಲು ವಾಡುಕ]

ವಾಡುವರಡು (ನಾ). ಒಂದು ಬಗೆಯ ಸಸ್ಯ : ವಡುವಾರದ ಗಿಡ, ಎಡತರಿ, ವಾಡುವರಡು, ಒದವಿನ, ಒಡತರೆ (ಮೃಡಿಗಿ. ೩೦-೫೦). [?]

ವಾಡೆ$_1$ (ನಾ). ೧. ಬಾವಿಯ ಒಳಭಾಗದ ಗೋಡೆಯನ್ನು ಕಟ್ಟಲು ಉಪಯೋಗಿಸುವ ಸುಟ್ಟ ಮಣ್ಣಿನ ವರ್ತುಳ, — ಬಿಲ್ಲೆ : (ಕ). ೨. ದವಸ ಧಾನ್ಯಗಳನ್ನು ಸಂಗ್ರಹಿಸಿಡುವ ಸ್ಥಳ : ಕಣಜದಲ್ಲಿ, ಹಗೆವುಗಳಲ್ಲಿ, ವಾಡೆಗಳಲ್ಲಿ ಬೇಕಾದ ಧಾನ್ಯಗಳಿವೆ. ನೀನು ಬೇಕಾದುದಂ ತೆಗೆದುಕೊ (ಶುಕಸ. ೨೧೮); ಈ ಸೇನೆಗಳ ವಡಗೂಡಿ ನಡೆದರೆ ಬ್ಯಾಡರ ಭಯವಿಲ್ಲವೆಂದು ವಾಡೆಗಳ ಸರಕುಗಳಂ ಗಾಡಿಗಳ ಮೇಲೆ ತುಂಬಿ ಕೂಡೆ ಬರುವ ನಾಡುನಾಡಿನ ಘನವರ್ತಕರು ಕೆಲಂಬರು (ಸೌಗಂಧಿ. ೧೫೨-೯). [< ಓಡೆ$_1$]

ವಾಡೆ$_2$ 'ಬಾಡ' ನೋ.

ವಾಡೆಮಡಿಗೆ (ನಾ). ಒಂದು ಬಗೆಯ ಸಸ್ಯ : ಗುರುವಾಡೆ, ಜಂಗಮ, ವಾಡೆಮಡಿಗೆ (ಮೃಡಿಗಿ. ೩೯-೭೦೧). [?]

ವಾಢಾವಾ (ಗು). ೧. ಹೆಚ್ಚುವರಿಯಾಗಿರುವ ; ಅಧಿಕವಾದ : ಆನಂದಪ್ಪನ ಈ 'ವಾಢಾವಾ' ಭೂಮಿಯಲ್ಲಿ ಅತಿಕ್ರಮಣ ಮಾಡಿ ಕಾಲು ಕೆದರಿ ಜಗಳ ತೆಗೆಯುವಲ್ಲಿ ಜಿಗಳೂರಿನ ಬೀರಪ್ಪ ಹೆಸರಾಗಿದ್ದ (ಮನೆಚಿ. ೧೩೮). (ನಾ). ೨. ಹೆಚ್ಚಾದುದು ; ಅಧಿಕವಾದುದು : ಮೊದಲಿನ ಹಳ್ಳವಿದ್ದ ಸ್ಥಳದಲ್ಲಿ 'ವಾಢಾವಾ' ಆದ ಮಡಿಕಟ್ಟು ೨ ಎಕರೆ ಭೂಮಿ ಮಾತ್ರ ಅವನದಾಗಿ ಉಳಿದಿತ್ತು (ಮನೆಚಿ. ೧೩೮).

[<— ಮರಾ. ವಾಢಾವಾ, ವಾಢವಾ, ವಾಢವ]

ವಾಣ$_1$ 'ಬಾಣ$_2$' ನೋ.

ವಾಣ$_2$ (ನಾ). ೧. ಬಾಣ ; ಶರ. ೨. ನೂರು ತಂತಿಗಳಿರುವ ಒಂದು ಬಗೆಯ ವಾದ್ಯ : ಅಷ್ಟು ಪ್ರಾಚೀನಕಾಲದಲ್ಲೆ ವೀಣೆಯೂ ನೂರುತಂತಿಗಳ ವಾಣವೆಂಬ ವಾದ್ಯವೂ . . . ಇದ್ದುವು (ಭಾರದ. ೩೮೦). [ಸಂ.]

ವಾಣರ (ನಾ). ಕಪಿ ; ವಾನರ : ಸುಗ್ರೀವಂ ವೀರರ ಸಾಸಕೆ ಪೊಗಟ್ಟು ಒಡನೆಯೆ ಸೀತೆಯಂ ಪಿಂತರ್ಪ ಕಜ್ಜಮನಣಿಗೆಯ್ದು, ಪಲವೆಡೆಯ ವಾಣರರಂ ನೆರೆಯಿಸಿದಂ (ಅದ್ಭುತ. ೩೭-೭). [< ಸಂ. ವಾನರ]

ವಾಣರಸ 'ಬಾಣರಸ' ನೋ.

ವಾಣರಾಸಿ 'ಬಾರಣಾಸಿ' ನೋ.

ವಾಣಿ$_1$ 'ಬಾಣಿಗ' ನೋ.

ವಾಣಿ$_2$ (ನಾ). ಸೊಕ್ಕಿದವಳು ; ಪಾನಮತ್ತೆ : "ವಾಣಿಯೆನೆ ಮುಗ್ಧೆಯಕ್ಕು" (ಮಂಗರಾ. ೯೦-೬). ॥ ಇಲ್ಲಿ ಮಂಗರಾಜನು 'ಮುಗ್ಧೆ' ಎಂಬ ಶಬ್ದವನ್ನು 'ಪಾನಮತ್ತೆ' ಎಂಬರ್ಥದಲ್ಲಿ ಬಳಸಿದಂತೆ ತೋರುತ್ತದೆ. 'ವಾಣಿನಿ' ಪರಾ.

[< ಸಂ. ವಾಣಿನೀ]

ವಾಣಿ$_3$ (ನಾ). ೧. ಶಬ್ದ ; ಧ್ವನಿ : ಕಡಲ ವಾಣಿಯವಳ ವಾಣಿ ಕೂಗಿ ರೇಗಿ ಬರುವಳು (ವಾಂಚಜ. ೧೧-೧). ೨. ಮಾತು ; ನುಡಿ : ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱೊಂದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು (ಆದಿಪು. ೧-೯); ಪಾಣಿ ಚಿಗುರಿನ ಹಾಗೆ ವಾಣಿ ಜೇನಿನ ಹಾಗೆ ಮನವೇಕೆ ಕಲ್ಲಿನ ಹಾಗೆ (ಇಂಚಾಪ. ೮೩-೨). ೩. ಗಾನ ; ಸಂಗೀತ : ಕರ್ಣಾಟಕ ಜನದ ಕರ್ಣವೀಣಾತುಂಬಿ ನಿನ್ನ ವಾಣಿಗೆ ವಿಕಂಪಿಸಿ, ಜೇಂಕೃತಿಯ ಬೀರಿ, ರಸದ ನವನೀತಮಂ ಹೃದಯದಿ ಮಥಿಸುವಂತೆ ಗಾನಗೆಯ್ (ಶ್ರೀರಾಮಾ. ೫-೧೨೬). ೪. ನವಿಲಿನ ಧ್ವನಿ : "ವಾಣೀ, ಕೇಕಾ — ಈ ೨ ನವಿಲ ಧ್ವನಿ" (ಹಲಾಯು. ೪೧-೯೯). ೫. ನುಡಿಯ ಅಧಿದೇವತೆ ; ಸರಸ್ವತಿ : ಪಿರಿದುಂ ಸಂತೋಷದಿಂ ವಾಣಿ ಬಂದು ಸಮಂತರ್ಕೆ ನವೀನಸೌರಭದ ವೋಲ್ ಜಿಹ್ವಾಗ್ರದೊಳ್ ರುದ್ರನಾ (ಜಗವಿ. ೧-೬); ಲಕ್ಷ್ಮಿಗಿತ್ತುರಮನಾನನಮಂ ವರವಾಣಿಗಿತ್ತು ಕೂರ್ಪತಿಶಯ ಮಾಗೆ ಮಾಡಿ (ಪುಷ್ಪಪು. ೩-೧೩).

ವಾಣಿಪುರಸ = ಸರಸ್ವತಿಯ ಪತಿ ; ಬ್ರಹ್ಮ : ನೃಪನ ಹೆಣನೊಳು ಪ್ರಾಣವಂ ತುಂಬುವ ಸಮರ್ಥರು ಮೇಣೊಳರೆ ನೀವಲ್ಲದನ್ನರು ವೇಮನಾರಾಧ್ಯ ವಾಣಿಯರಸನ ಹರಿಯ ವಶವೇ (ಬಸಪು. ೪೬-೭೮). [ಸಂ. ವಾಣೀ]

ವಾಣ್ಮೆ (ನಾ). ೧. ನೇಯುವುದು ; ನೇಯ್ಗೆ : "ವಾಣಃ, ವ್ಯೂತಿಃ— ೨ ನೇಯುವುದರ ಪೆಸರು" (ಸಿದ್ಧಾಂತಿ. ೩೧೫). ೨. ನೇಯುವ ಸಾಧನ ; ಮಗ್ಗ. [ಸಂ.]

ವಾಣಿಗ (ನಾ). ವ್ಯಾಪಾರ ಮಾಡುವವನು ; ವ್ಯಾಪಾರಿ : ಸೂಳೆಗೆಯ್ವ ವಿಟರ ತಲೆಗಳ ಮೇಲೆ ಹುಲ್ಲಂ ಕಟ್ಟಿದೆಯೆಲೋ ಬೊಳ ವಾಣಿಗನಾದೆ (ಬಸಪು. ೨೮-೨೦).

[< ಸಂ. ವಣಿಜ್]

ವಾಣಿಗತೋಟ (ನಾ). ಒಂದು ತೋಟದ ಹೆಸರು : ಮಟ್ಟುವರುಂ ದೇವೇನ್ದ್ರರು ವೆಲೆಕೊಣ್ಡು ವಾಣಿಗತೋಟ್ಟಂ ತೆನ್ಕಣ್ಣಮುಂ ವಡಕಣ್ಣಮುಂ ವಿನಿತಿಶ್ವರಕ್ಕಂ ಪೊಯ್ದೂರ್ (ಎಕ. IV (R), ಚಾಮರಾ. ೧೪೭-೭; 750). [ವಾಣಿಗ + ತೋಟ$_1$ (< ತೋಂಟ)]

ವಾಣಿಗಿತ್ತಿ (ನಾ). ವ್ಯಾಪಾರ ಮಾಡುವವಳು : ಓಣಿಯೊಳಗೊಬ್ಬ ವಾಣಿಗಿತ್ತಿಯು ಕುಳಿತು ಕಾಣದೆ ಮೂರು ಲೋಕಂಗಳಲ್ಲಿ ನಡದಾಡುತ್ತಿವ್ವಳು ನೋಡ ಆ ವಾಣಿಗಿತ್ತಿಯ ಕೊಂಡು ಮೂರುಲೋಕವ ನುಂಗಿದಲ್ಲದೆ ಪ್ರಾಣಲಿಂಗದ ಸಂಬಂಧವು ಕಾಣಸದು ನೋಡ (ನಿರಾಗೂ. ೧೧-೪೩). [ವಾಣಿಗ + — ಇತ್ತಿ]

ವಾಣಿಜ$_1$ 'ವಾಣಿಯ$_1$' ನೋ.

ವಾಣಿಜ$_2$ (ನಾ). ೧. ವ್ಯಾಪಾರಮಾಡುವವನು ; ವರ್ತಕ : ಆಣಮುತ್ತಿಗೆ ವೆಗ್ಗಳ ಬೆಲೆಗಟ್ಟುವ ವಾಣಿಜರಿರ್ದರಿಕ್ಕೆಲದಿ (ಮೋಹತ. ೩-೪೯); ಇತ್ತರದಂಗಡಿಗೇರಿಲಿ ಮಾಱುವರರ್ತಿಯಿಂದಲ್ಲಿ ವಾಣಿಜರು (ಬಸಪು. ೧-೪೯). ೨. ಒಂದು ಬಗೆಯ ಸಸ್ಯ : "ವಾಣಿಜಃ = ನಬಿ" (ಓಷಧಿ. ೧೫೦). [ಸಂ.]

ವಾಣಿಜತನ (ನಾ). ವ್ಯಾಪಾರ ; ವಾಣಿಜ್ಯ : ರೇಣು ಮಾಣಕವಾದರೂ ವಾಣಿಜತನ ಬಿಟ್ಟಾನೇ? (ಗಾದೆ). [ವಾಣಿಜ್ಯ + — ತನ]

ವಾಣಿಜಿಕ (ನಾ). ವ್ಯಾಪಾರಿ ; ವರ್ತಕ : ಚಿತ್ರರದೊಳಗೈತಹ ವಾಣಿಜಿಕರ ಮೊತ್ತವ ಬಣ್ಣಿಪರಾರು (ಕಂನವಿ. ೧೧-೩೯). [ಸಂ.]

ವಾಣಿಜ್ಯ (ನಾ). ೧. ಕೊಳ್ಳುವ ಹಾಗೂ ಮಾರುವ ವ್ಯವಹಾರ ; ವ್ಯಾಪಾರ : ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ (ಸರ್ವಜ. ೧೮೯-೮೮೪); ಆರಂಭವದು ಬೇಡ ವಾಣಿಜ್ಯವದು ಬೇಡ (ವಿನಾರ. ದೇ. ೧೫೫-೧೧೭). ೨. (ವ್ಯಾಪಾರದ ವಿಷಯಕ್ಕೆ ಸಂಬಂಧಿಸಿದ) ಲೆಕ್ಕಪತ್ರಗಳನ್ನು ತಿಳಿಸುವ ಶಾಸ್ತ್ರ : ಅವರು ಚರಿತ್ರೆ, ಭೂಗೋಳ, ವಾಣಿಜ್ಯ, ವ್ಯವಸಾಯ ಮೊದಲಾದ ನಾನಾಲೋಕವ್ಯಾಪಾರ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗಿರುವುದಷ್ಟೆ? (ಸಾಹಿಕ. ೬೧). [ಸಂ.]

ವಾಣಿಜ್ಯತನ (ನಾ). = ವಾಣಿಜತನ : (ಕ). [ವಾಣಿಜ್ಯ + — ತನ]

ವಾಣಿಜ್ಯಮಾರುತ (ನಾ). "೩೦° ಉ. ಅಕ್ಷಾಂಶ ಮತ್ತು ೩೦° ದ. ಅಕ್ಷಾಂಶಗಳ ನಡುವೆ ಭೂಮಧ್ಯರೇಖೆಯ ಕಡೆಗೆ, ಭೂಮಿಯ ಸುತ್ತು ಚಲನೆಯಿಂದ ಪಶ್ಚಿಮಕ್ಕೆ ತಿರುಗಿ ಸದಾ ಬೀಸುವ ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳ ಒಂದು ಮಾರುತ" (Trade-wind. ಇಂಕನಿ): ಉಷ್ಣವಲಯ (Torrid Zone)ದಲ್ಲಿ ಹೆಚ್ಚಿನ ಒತ್ತಡವಿರುವ ಕಡೆಯಿಂದ ಸಮಭಾಜಕವೃತ್ತದ ಕಡೆಗೆ ಮಾರುತಗಳು ಬೀಸುತ್ತವೆ. ಇವೇ ಬಹುಮುಖ್ಯವಾದ ವಾಣಿಜ್ಯಮಾರುತಗಳು (Trade winds) (ಭೂಮಿವಿ. ೫೯). [ಸಂ.]

ವಾಣಿಜ್ಯವೀಥಿ (ನಾ). ವ್ಯಾಪಾರ ನಡೆಯುವ ಬೀದಿ, — ಕೇರಿ ; ಮಾರುಕಟ್ಟೆ : ಜನವಲ್ಲಾಡಿದುದು ಕ್ರಯವಿಕ್ರಯದ ವಾಣಿಜ್ಯವೀಥಿಯಲಿ (ಕುವ್ಯಾಗ. ೪-೧೧).

[ವಾಣಿಜ್ಯ + ವೀಥಿ]

ವಾಣಿಜ್ಯೋದ್ಯಮಿ (ನಾ). ದೊಡ್ಡ ವ್ಯಾಪಾರಸ್ಥ : ವಾಣಿಜ್ಯೋದ್ಯಮಿ ಗ್ರಿಗರಿ ಎಫಿಮೊವಿಶ್ ಕುಲಶೋವ್ . . . ಇಬ್ಬರನ್ನುಳಿದು ಎಲ್ಲರೂ ಹಾಜರಾಗಿದ್ದರು (ಪುಸಾ. ೩೦). [ಸಂ. ವಾಣಿಜ್ಯೋದ್ಯಮಿನ್]

ವಾಣಿನಿ (ನಾ). ೧. ಕುಡಿತದಿಂದ ಮತ್ತೇರಿದವಳು; "ಸೊಕ್ಕಿದವಳು" (ನಾಚಾಕಿ): "ವಿದಗ್ಧೆಯುಂ ಮುಗ್ಧೆಯಮಾಗಿರ್ಪವಳ್ ವಾಣಿನಿಯೆಂಬುದು" (ಹಲಾಯು. ೮೦-೩೩೫).

IP 'ಹಲಾಯು' ೮೦-೩೩೫ ರ ಮೂಲಶ್ಲೋಕದಲ್ಲಿ "ಸ್ತ್ರೀ ವಿದಗ್ಧಾ ಚ ಮತ್ತಾ ಚ ವಾಣಿನೀತ್ಯಭಿಧೀಯತೇ" ಎಂದಿದೆ. 'ಹಲಾಯುಧ'ದ ಟೀಕಾಕಾರನು 'ಮುಗ್ಧೆ' ಎಂಬ ಶಬ್ದವನ್ನು 'ಪಾನಮತ್ತೆ' ಎಂಬರ್ಥದಲ್ಲಿ ಬಳಸಿದಂತೆ ತೋರುತ್ತದೆ. ' ವಾಣ್ಯ' ಪರಾ. ೨. ನೃತ್ಯಗಾತಿ ; ನರ್ತಕಿ : "ವಾಣಿನೀ — ನಟ್ಟುವವಳು, ದೂತಿಕೆ" (ಸಿದ್ಧಾಂತಿ. ೪೦೧). ೩. ಬುದ್ಧಿಶಾಲಿಯಾದ ಹೆಂಗಸು. [ಸಂ. ವಾಣಿನೀ. / ತೆಲು. ವಾಣಿನಿ]

ವಾಣಿಯ$_1$, ವಾಣಿಜ$_1$ (ನಾ). ೧. ವ್ಯಾಪಾರ ; ವಾಣಿಜ್ಯ : ನಿಮ್ಮ ದೇಶದೊಳುಳ್ಳ ಸಕಲವಸ್ತುಗಳ ವಾಣಿಯವ ಮಾಡದೆ ಸುಯಜ್ಞದ ಕಾಣಿಕೆಯನೀವುದು (ಕುವ್ಯಾಸ. ೩-೬೫); ಎಸೆವ ಸುರತ್ನಜಾತಿಗಳನಾಣಿಯ ವಾಣಿಯ ರೀತಿ ಧಾತ ನಿಟ್ಟಿಸಲರಿದಾ ಪುಟಂಗಳಿಡದೆತ್ತುವ ರಂಗಂ (ನನ್ನಚಾ. ೨-೨೨). ೨. ವಿನಿಮಯ ; ಅದಲುಬದಲು: ಕೌರವರ ನೂರ್ವರ ಗೋಣಬನ ಕಾಳಗದೊಳಿನ್ನಯ ಕೇಣಿ ತನ್ನಯ ಗದೆಗೆ ದುರಿಯೋಧನನ ತೊಡೆಗಳಿಗೆ ವಾಣಿಯವು ದುಶ್ಶಾಸನನ ತನಿಶೋಣಿತವ ತಾ ಕುಡಿಯದಿರೆ ನಿನ್ನಾಣೆ (ಕುವ್ಯಾಸ. ೧೫-೩೭). ೩. (ಆಲಂ) ಬೌಕಾಸಿ : ಗಿಡುಗನೆಱಗುವ ಶುಕನ ಶೋಕವ ಮಾಣಿಸ್ಯೆ ವಾಣಿಯವ ಭಕುತರಲಿ . . . ಸಲಹು (ಕುವ್ಯಾಸ. ೧೪-೧೫೩). **ವಾಣಿಜ$_1$** : ೧. ಅರೆದಾಡಿನ ಪಾಲೊಳದಂ ಪೊರೆದಾಸವದಿಂದೆ ತೀವಿ ಸೊರೆಯೊಳ್ ತಿಂಗಳ್ವರೆಗಂ ಧಾನ್ಯದ ರಾಸಿಯೊಳಿರಿಸುಗೆ ವಾಣಿಜದ ಹಿಂಗು ಕಡು ಲೇಸಕ್ಕುಂ (ಲೋಕೋಪ. ೭-೭೧) ; ಶೃಂಗಿಯ ಬೇರುಂ ವಾಣಿಜದಿಂಗುಂ ಬೆಳ್ಳುಳ್ಳಿ ತಿಗಡೆ ಸೈಂಧವಮೀ ಪಂಚಾಂಗಮುಮಂ ಸಮಭಾಗೆ ತುರಂಗಕೈಱ್ಱಿ[ಯಲದು] ಸರ್ವಶೂಲಾಪಹರಂ (ಅಶ್ವಶಾ. ೧೧-೯).

[< ಪ್ರಾ. ವಾಣಿಅ ; ವಾಣಿಜ್ಜ. / ಸಂ. ವಾಣಿಜ್ಯ]

ವಾಣಿಯ$_2$ 'ಬಾಣಿಗ' ನೋ.

ವಾಣೀಪತಿ (ನಾ) ಬ್ರಹ್ಮ : ವಾಣೀಪತಿಗೆ ಚಾತುರ್ಯಮಂ . . . ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ (ಪಚಕಾ. ೧-೧) ; ವಾಣೀಪತಿಯು ನಮಗೆ ದೀರ್ಘಾಯು ಕೊಡಲಿ (ಪುರಂದ. ಧಾ. ೧-೧ ಪಲ್ಲವಿ). [ಸಂ.]

ವಾತ (ಗು). ೧. ಬೀಸಿದ ; ತೀಡಿದ. (ನಾ). ೨. ಗಾಳಿ ; ವಾಯು: ಗಂಗಾತರಂಗೋಪಮಾನಚಳಚ್ಚಾಮರವಾತಪೀತನಿಜಘರ್ಮಾಂಭಃಕಣಂ . . . ಇರ್ದನಂದು ಸುಬಿದಿಂ ವಿದ್ವಿಷ್ವವಿದ್ರಾವಣಂ (ಪಂಪಭಾ. ೩-೮೫); ವಾತದಿನೊಂದನೊಂದೊರಸೆ ನಂದನದೊಳ್ಸುರಿವಾಮ್ರಭೂರುಹವ್ರಾತದ ತಳ್ತ ಪಣ್ಗಳ ಮಹಾರಸದಿಂ ವರಗಂಧಶಾಲಿಗಳ್ . . . ಒಳ್ಪೆಳಸಾಗಿ ರಂಜಿಕುಂ (ತ್ರಿಪುವಿ. ೨-೩೭). ೩. ಶರೀರದಲ್ಲಿರುವ ವಾತ, ಪಿತ್ತ, ಕಫಗಳೆಂಬ ಮೂರು ಬಗೆಯ ಧಾತುಗಳಲ್ಲಿ ಒಂದು : ವಾತಂ ಪಿತ್ತಂ ಕಫಮೆಂಬೀ ತೆಱದಿಂ ಮೂಱು ದೋಷಂ (ಕಾವ್ಯಾವ. ೪೭೦); ವಾತ ಪಿತ್ತ ಶ್ಲೇಷ್ಮಾದಿ ದೋಷತ್ರಯವಾದ ವಸ್ತುಗಳಿವು (ಸಕವೈ. ೭ ಪೀಠಿಕೆ). ೪. ಗಾಳಿಯ ಅಧಿದೇವತೆ ; ವಾಯುದೇವ : "ಪವಮಾನಂ ಶ್ವಸನಂ . . . ವಾಯು ವಾತಮನಿಲಂ ಸಮೀರಣಂ ಪೃಷದಶ್ವಂ" (ಮಧ್ವಾಕೋ. ೮-೪೪). 'ವಾತಜ' ಪರಾ. ೫. ಕೀಲುಗಳು ಊದಿಕೊಂಡು ಉರಿ ಮತ್ತು ನೋವು ಉಂಟಾಗುವ ಒಂದು ಬಗೆಯ ರೋಗ ; ಸಂಧಿವಾತ : ಗಣಿಕೆಯಂ ಸಮೂಲವಂ ಅಂಬಲದಲ್ಲಿ ಅರೆದು ನೆತ್ತಿಗೆ ಒತ್ತಲು ಮೈಯ ಪೂಸಲು ಜಲಗದ ಶೋಫ ವಾತ ಗುಣ (ಎವೈವಿ. ೪); ಇವೊತ್ತು ಬೆಳಗ್ಗೆ ನನ್ನ ಬಲಹೆಗಲಿನಲ್ಲಿ ಇದ್ದಕ್ಕಿದ್ದ ಹಾಗೆಯೇ ವಾತದ ಹಾಗಾಗಿದೆ (ನಟಿಂಥ. II, ೧೪೮). ೬. ಒಂದು ಬಗೆಯ ಸಸ್ಯ : "ವಾತಃ = ಕರಿಯ ಲೊಕ್ಕಿ" (ಓಷಧಿ. ೧೫೦). ೭. (ಕಂಸನ ಪ್ರೇರಣೆಯಿಂದ ಬಲರಾಮ, ಕೃಷ್ಣರನ್ನು ಕೊಲ್ಲಲು ಬಂದ) ಬಿರುಗಾಳಿಯ ರೂಪದ ಒಬ್ಬ ರಾಕ್ಷಸನ ಹೆಸರು ; ತೃಣಾವರ್ತ : ವಾತ ಶಕಟಾದಿ ದೈತ್ಯರ ಘಾತಿಸಿದ ರಂಗ ನಿನ್ನ ಪೋತತನಕಂಜುವೆನು (ಪುರಂದ. ಧಾ. ೪-೫೦-೧). ೮. ಎರಡು ಲಘುಗಳು ಮತ್ತು ಒಂದು ಗುರು ಇರುವ ಅಕ್ಷರಗಣ ; ಸಗಣ ; (UU –): ಮಗಣಂ ಭೂಮಿಯೆನಿಕ್ಕುಂ ಯಗಣಂ ಜಲ ರಗಣಮಗ್ನಿ ಸಗಣಂ ವಾತಂ (ಛಂದೋಂಬು. ೧-೩೯ ಅಡಿಪದ್ಯ). [ಸಂ.]

ವಾತಕ (ನಾ). ಒಂದು ಬಗೆಯ ವೃಕ್ಷ ; ಮೊಳಗಿನ ಮರ : "ಮೊಳಗಿನ ಮರ - ವಾತಕ, ಶೀತಲೆ, ಅಪರಾಜಿತೆ, ಅಶನಪರ್ಣೆ" (ನಾಟಿಂಗ. ೬). [ಸಂ.]

ವಾತಕಿ$_1$ (ಗು). ೧. ವಾತರೋಗವನ್ನು ಹೊಂದಿದ ; ಸಂಧಿವಾತದ. (ನಾ). ೨. ವಾತರೋಗವನ್ನು ಉಳ್ಳವನು ; ಸಂಧಿವಾತವುಳ್ಳವನು : "ವಾತವ್ಯಾಧಿಪರೀತಂ ವಾತಕಿ" (ಮಧ್ವಾಕೋ. ೭೩-೩೭). [ಸಂ. ವಾತಕಿನ್]

ವಾತಕಿ$_2$ (ನಾ). ಒಂದು ಬಗೆಯ ಸಸ್ಯ : "ವಾತಕೀ-ಹೆಗ್ಗುಳ್ಳ" (ಓಷಧಿ. ೧೫೦).

[?]

ವಾತಕ್ಷಯ (ನಾ). ವಾತಪ್ರಕೋಪದಿಂದ ಉಂಟಾಗುವ ಒಂದು ಬಗೆಯ ಕ್ಷಯ : ವೀರಭದ್ರರಸ . . . ನಾಲ್ಕುಗುಂಜಿಪ್ರಮಾಣವನ್ನು ತಾಮ್ರದ ಬಟ್ಟಲಲ್ಲಿ ಇರಿಸಿ ಹಿಪ್ಪಲಿ ಬಿಸಿನೀರಲ್ಲಿ ಕೊಡುವುದು. ವಾತಕ್ಷಯಂ ಕೆಡುವುದು (ಎವೈವಿ. ೫೦); ಕೊರಳಿನಲ್ಲಿಯೂ ಪಾರ್ಶ್ವಗಳಲ್ಲಿಯೂ ಕುಯ್ಯುತ್ತಾ . . . ಮೈ ತಣ್ಣನಾಗಿರ್ಪುದೆ ವಾತಕ್ಷಯ ಲಕ್ಷಣಂ (ಸಕವೈ. ೨೪೬). [ಸಂ.]

ವಾತಖಾಸ (ನಾ). ವಾತಪ್ರಕೋಪದಿಂದ ಉಂಟಾಗುವ ಕೆಮ್ಮು : ಅಳ್ಳೆಯಲ್ಲಿ ಶೂಲವು ಮಂಡೆನೋವು ಸಹ ಉಂಟಾಗಿಹುದೆ ವಾತಖಾಸಮೆಂದು ಪೇಳುವುದು (ಸಕವೈ. ೨೦೬). [ವಾತ + ಖಾಸ$_1$]

ವಾತಗವಾಕ್ಷ (ನಾ). ಕಟ್ಟಡಗಳ ಒಳಗೆ ಗಾಳಿ ಬರಲು ಗೋಡೆಯಲ್ಲಿ ಮಾಡಿರುವ ಕಂಡಿ ; ವಾತಾಯನ : ಆತನನಾಗಳ್ ನೋಡುವ ಕೌತೂಹಳದಿಂ ಸುಧಾಗೃಹಾಗ್ರಂಗಳೊಳಿರ್ದಾ ತರಳೇಕ್ಷಣೆಯರ್ಕಳ್ ವಾತಗವಾಕ್ಷಂಗಳೆಡೆಗೆ ತಡೆಯದೆ ನಡೆದರ್ (ಶಾಂತಿಪು. ೬-೫). [ಸಂ.]

ವಾತಗುಲ್ಮ (ನಾ). ೧. ಕೀಲುಗಳು ಊದಿಕೊಂಡು ಉರಿಯೂ ನೋವೂ ಉಂಟಾಗುವ ಒಂದು ಬಗೆಯ ರೋಗ ; ಸಂಧಿವಾತ : ವಾಯುವಿಳಂಗ . . . ಚಿತ್ರಮೂಲ, ಇವುಗಳ ಕಲ್ಕಮಂ ತುಪ್ಪ ನಾಲ್ಕುಮಡಿ ಹಾಲಲ್ಲಿ ಅಟ್ಟುಕೊಡಲು ವಾತಗುಲ್ಮ ಮಾಣ್ಗುಂ (ಎವೈವಿ. ೮೧). ೨. ಅತಿಬಿರುಸಿನಿಂದ ಬೀಸುವ ಗಾಳಿ ; ಬಿರುಗಾಳಿ. ೧, ೨ : ಮಿಗೆ ವಾತಗುಲ್ಮ ಪರಿವೃತರಾಗಿಯುಂ ನಿರೋಗಿಗಳು . . . ಕುಲಗೋತ್ರಮಧ್ಯಸ್ಥಿತಿ ಗಳಾಗಿಯುಂ ಸೊಗಯಿಪೇಕಾಕಿಗಳೆನಿಸಿ ಶಿವನನೊಲಿಸಿದ ಮುನೀಶ್ವರರು ಕಣ್ಗೆಸೆದರು (ಪಚಕಾ. ೬-೩೬). [ಸಂ.]

ವಾತಘ್ನ (ನಾ). ಒಂದು ಬಗೆಯ ಸಸ್ಯ: "ವಾತಘ್ನಂ-ಕೋಷ್ಠ" (ಓಷಧಿ. ೧೫೦). [ಸಂ.]

ವಾತಘ್ನಿ (ನಾ). ಒಂದು ಬಗೆಯ ಸಸ್ಯ ; ಸಾಲಪರ್ಣಿ : "ವಾತಘ್ನೀಃ-ಒಂದೆಲೆಹೊನ್ನೆ, ಸುರಹೊನ್ನೆ, ಕಳ್ಳಂಗಡಲೆ" (ಓಷಧಿ. ೧೫೦). [ಸಂ. ವಾತಘ್ನೀ]

ವಾತಜ (ಗು). ೧. ವಾಯುವಿನಿಂದ ಹುಟ್ಟಿದ. (ನಾ). ೨. ವಾಯುವಿನ ಮಗ ; ಹನುಮಂತ : ವಾತಜನ ಮೂಲಿಕೆಗೆ ಕಪಿಬಲ ಚೇತರಿಸಿದುದು (ಕೌಶಿರಾ. ೩೬-೨೦). ೩. ಭೀಮ : ಆತನು . . . ವಾತಜನನಱಸಿದನು ಮೂದಲಿಸಿದನು ಸರಳನಲಿ (ಕುವ್ಯಾಕ. ೨೦-೧೯). [ಸಂ.]

ವಾತಜನ್ಯ (ಗು). ವಾತಪ್ರಕೋಪದಿಂದ ಉಂಟಾದ : ಈ ಉಪದ್ರವಗಳುಂಟಾದುದೆ ವಾತಜನ್ಯವಿಷೂಚಿಯೆಂದರಿವುದು (ಸಕವೈ. ೩೫೭). [ಸಂ.]

ವಾತಜಾತ (ನಾ). ವಾಯುದೇವರ ಅವತಾರವೆಂದು ಪರಿಗಣಿಸಲಾದ ಮಧ್ವಾಚಾರ್ಯ : ಭೂತಲದೊಳಪ್ರತಿಮನೆನಿಪ ಶ್ರೀಯತಿವರನ ಪ್ರೀತಿಯಿಂ ಭಜಿಸೆ ಇಷ್ಟಾರ್ಥಗಳ ಸಲಿಸುವ ವಾತಜಾತನ ಸ್ಮರಿಸಿರೈ (ಪುರಂದ. ಧಾ. ೧-೪೭ ಆನಪಲ್ಲವಿ). [ಸಂ.]

ವಾತಜಿಹ್ವೆ (ನಾ). ವಾತರೋಗದಿಂದ ನಾಲಗೆಗೆ ಉಂಟಾಗುವ ಒಂದು ಬಗೆಯ ರೋಗ : ವಾತಜಿಹ್ವೆ ಎಂಬುದು ಮರದ ಎಲೆಯ ಹಾಗೆ ನೀಲವರ್ಣವಾಗಿ ಬಹಳ ಒಡೆದುಕೊಂಡಿಹುದು (ವೃದ್ಧಸಾ. II, ೧೦೭). [ಸಂ. ವಾತಜಿಹ್ವಾ]

ವಾತಜ್ವರ (ನಾ). ವಾತದೋಷದಿಂದ ಉಂಟಾಗುವ ಜ್ವರ : ಸಾಸಿವೆಪ್ರಮಾಣದಲ್ಲಿ ಗುಳಿಗೆಯಂ ಮಾಡಿ ನೆಳಲಲ್ಲಾಱಿಸಿ ರಾಸ್ನೆ, ಕಾರಗಣಸಿನ ರಸಗಳಲ್ಲಿ ಕೊಡಲು ವಾತಜ್ವರ ಹರ (ಎವೈವಿ. ೧೩) ; ಮೈ ನಡುಗುತ್ತ . . . ಶರೀರವೆಲ್ಲವೂ ಭಾರವಾಗಿರುವುದೇ ವಾತಜ್ವರವೆನಿಸಿಕೊಂಬುದು (ಸಕವೈ. ೬೨). [ಸಂ.]

ವಾತದಂತ (ನಾ). ಶ್ಲೇಷ್ಮವಾತಗಳಿಂದ ಉಂಟಾಗುವ ಒಂದು ಬಗೆಯ ಹಲ್ಲಿನ ರೋಗ : ವಾತದಂತ ಎಂಬ ದಂತರೋಗದಲ್ಲಿ ದಂತಗಳು ಸಡಿಲಿ ಬೀಳುವುವು . . . ಈ ರೋಗ ಶ್ಲೇಷ್ಮವಾತಗಳಿಂದ ಉಂಟಾಗುವುದು (ವೃದ್ಧಸಾ. II, ೧೨೨). [ಸಂ.]

ವಾತಧಾತು (ನಾ). ೧. ಶರೀರದಲ್ಲಿರುವ ವಾತ, ಪಿತ್ತ ಮತ್ತು ಕಫಗಳೆಂಬ ಮೂರು ಬಗೆಯ ದ್ರವ್ಯಗಳಲ್ಲಿ ಒಂದು. ೨. ಮಣಿಕಟ್ಟಿನ ಬಳಿ ಇರುವ ಮೂರು ಬಗೆಯ ನಾಡಿಗಳಲ್ಲಿ ಒಂದು : (ಕ). [ಸಂ.]

ವಾತನಯನ (ನಾ). ವಾತದಿಂದ ಉಂಟಾಗುವ ಒಂದು ಬಗೆಯ ಕಣ್ಣು ರೋಗ : ವಾತನಯನಕ್ಕೆ : ಉಬ್ಬಿಯ ಔಷಧಿ – ಲೊಕ್ಕಿಯ ಕಗ್ಗಿ . . . ಆಡಿನ ಹಿಕ್ಕೆ ಇಷ್ಟನ್ನೂ ಕದಡಿ ಅಂಬಿಲವ ಹಾಕಿ ಕಾಸಿ ಉಬ್ಬಿಯಂ ಕೊಂಬುದು (ವೈದ್ಯವಿ. ೧೮೦). [ಸಂ.]

ವಾತನಾಡಿ (ನಾ). = ವಾತಧಾತು ೨. [ಸಂ.]

ವಾತನಾರಾಯಣ, ವಾತನಾರಾಯಣಿ (ನಾ). ತಿನ್ನಬಹುದಾದ ಹಣ್ಣುಗಳನ್ನು ಬಿಡುವ ಹಾಗೂ ಸಂಧಿವಾತದ ಚಿಕಿತ್ಸೆಗೆ ಬಳಸುವ ಬೇರುಗಳುಳ್ಳ ಒಂದು ಬಗೆಯ ಸಸ್ಯ : ಸಣ್‌ಕತ್ತಿ, ಸಂಕೇಶ್ವರಿ, ವಾತನಾರಾಯಣ, ಕೆಂಪುಕೆಂಚಗ, ನೀರಂಗಿ (ಮೃಡಿಗಿ. ೨೯-೫೬೩). ವಾತನಾರಾಯಣಿ : (ಕ).

[<– ತಮಿ. ವಾತನಾರಾಯಣ]

ವಾತನಾರಾಯಣಿ 'ವಾತನಾರಾಯಣ' ನೋ.

ವಾತನಾಶನ (ನಾ). ಒಂದು ಬಗೆಯ ಸಸ್ಯ ; ಹರಳುಗಿಡ : "ವಾತಾನಾಶನಃ - ಔಡಲ" (ಓಷಧಿ. ೧೫೧). [ಸಂ.]

ವಾತನೀಯ (ನಾ). ಒಂದು ಬಗೆಯ ಸಸ್ಯ : "ವಾತನೀಯಃ - ಹೆಬ್ಬಿದಿರು" (ಓಷಧಿ. ೧೫೧). [?]

ವಾತಪಾತಕ (ನಾ). ಒಂದು ಬಗೆಯ ಮರ ; ಮುತ್ತುಗದ ಮರ : "ವಾತಪಾತಕಃ - ಮುತ್ತುಗ" (ಓಷಧಿ. ೧೫೦). [< ಸಂ. ವಾತಪೋಥಕ]

ವಾತಪಿತ್ತಜ್ವರ (ನಾ). ವಾಯು ಮತ್ತು ಪಿತ್ತದ ಪ್ರಕೋಪದಿಂದ ಉಂಟಾಗುವ ಜ್ವರ ; ಸಂಧಿವಾತದಿಂದ ಕೂಡಿದ ಜ್ವರ : ವಾತಜ್ವರ, ಪಿತ್ತಜ್ವರ, ಶ್ಲೇಷ್ಮಜ್ವರ, ವಾತಪಿತ್ತಜ್ವರಂ . . . ಆಗಂತುಕಜ್ವರವೆಂದು ಎಂಟು ಪ್ರಕಾರವಾಗಿರುವುದು (ಸಕವೈ. ೭೨).

[ಸಂ.]

ವಾತಪೂರಣ (ನಾ). ೧. ಬಾವುಟ; ಪತಾಕೆ : ದೆಸೆಗೆ ಬೆಸೆದು ಬಿಜ್ಜನೆ ಬೀಗುವ ಪೂಸಸಿರಿವಂತನಂತೆ ವಾತಪೂರಣಂಗಳೊಳಂ ಪರಭಾಗಂಬಡೆದು (ಶಾಂತಿಪು. ೧೦-೨೧ ವ); ವ್ಯಾಸಹಸ್ತ್ರೋದ್ವೇಷಪೂರಣವಾತಪೂರಣರಾಜಿ ರಾಜಿಸಲು (ಬಸವಪು. ೬-೨೧). ೨. ಹಾವು; ಸರ್ಪ (?) : ಸಂಗರಾರ್ಜುನಂ ಸಿದ್ಧನಂತಾ ಸಿದ್ಧಕ್ಷೇತ್ರಮಂ ಪುಗುತಂದನ ದೆಂತಪ್ಪುದೆಂದೊಡೆ ಇಂದ್ರಜಾಲಿಗನಂತುರಿಯನುಗಬ್ಬ ಬಳ್ಳುಗಳಂ ವಾತಪೂರಣಂಗಳಂ ನೊಂದಂತೆ ದೆಸೆದೆಸೆಗೆ ಪೊಂಗುವ ಗೂಗೆಗಳಂ . . . ಅತಿ ಭಯಂಕರಾಕಾರಮಪ್ಪುದು (ಕಾವ್ಯಸಾ. ೫೨೯ ಶೂದ್ರಕ). [ಸಂ.]

ವಾತಪೋಥ (ನಾ). ಒಂದು ಬಗೆಯ ಮರ ; ಪಲಾಶ ; ಮುತ್ತುಗ : "ಪಲಾಶಃ, ಕಿಂಶುಕಃ, ಪರ್ಣಃ, ವಾತಪೋಥಃ - ೪ ಮುತ್ತುಗದ ಗಿಡ" (ಸಿದ್ಧಾಂತಿ. ೧೧೮). [ಸಂ.]

ವಾತಪ್ರಕೃತಿ (ನಾ). ವಾತಪ್ರಕೃತಿ, ಪಿತ್ತಪ್ರಕೃತಿ, ಶ್ಲೇಷ್ಮಪ್ರಕೃತಿ, ಮಿಶ್ರಪ್ರಕೃತಿ ಎಂಬ ದೇಹದ ನಾಲ್ಕು ಬಗೆಯ ಸ್ಥಿತಿಗಳಲ್ಲಿ ಒಂದು ; ವಾತಪ್ರಧಾನವಾದ ದೇಹಸ್ಥಿತಿ : ಸ್ವಪ್ನದಲ್ಲೂ ಆಕಾಶದಲ್ಲೂ ತಾನು ಹಾರಿಯಾಡುವುದ ಕಾಣ್ಬನು: ಅಂಥವನನ್ನು ವಾತಪ್ರಕೃತಿಯುಳ್ಳವನೆಂದು ನಿಶ್ಚೈಸುವುದು (ಸಕವೈ. ೧೬) ; ಕಪ್ಪಾದವಳು ಉಷ್ಣಮುಂ ಶೀತಳಮಿಶ್ರವಾದ ದೇಹವುಳ್ಳವಳು ಹಲವಂ ನುಡಿವಳು, ಈ ಸ್ತ್ರೀ ವಾತಪ್ರಕೃತಿಯವಳು (ಕಾಮಶಾ. ೨೧೪). [ಸಂ.]

ವಾತಪ್ರಕೋಪ (ನಾ). ೧. ಗಾಳಿಯ ಆಧಿಕ್ಯ,—ಹೆಚ್ಚಳ. ೨. ತೀವ್ರವಾದ ವಾತದೋಷ : ವಾತಪ್ರಕೋಪದ ಚಕ್ಕುರೋಗಂಗಳೆಲ್ಲ ಕೆಡುಗು (ವೈದ್ಯವಿ. ೧೯೨) ; ಮುಖವಿಕಾರವುಂಟಾಗಿ . . . ಉಂಡ ಅನ್ನ ದಕ್ಕದ ಲಕ್ಷಣವೆ ವಾತಪ್ರಕೋಪವೆಂದರಿದು ಚಿಕಿತ್ಸೆಯಂ ಮಾಡುವಲ್ಲಿ . . . ಪ್ರಯೋಗಂಗೈವುದು (ಸಕವೈ. ೧೫೧). [ಸಂ.]

ವಾತಪ್ರಮಿ (ನಾ). ೧. ಬಹಳ ವೇಗದಿಂದ ಚಲಿಸುವ ಒಂದು ಜಿಂಕೆ : "ನ್ಯಂಕು ಕೃಷ್ಣಸಾರಂ ವಾತಪ್ರಮಿಯೆನೆ ಬೆಳ್ಮಿಗ" (ಮ್ಯಾಕೋ. ೪೧-೭). ೨. ಒಂದು ಬಗೆಯ ಮರ ; ಮುತ್ತುಗ: "ವಾತಪ್ರಮೀಃ, ವಾತಮೃಗಃ, ವಾತಪೋತೋತ್ಥಃ - ಈ ಮೂಱುಂ ಮುತ್ತುಗ" (ಓಷಧಿ. ೧೫೧). [ಸಂ. ವಾತಪ್ರಮೀ]

ವಾತಪ್ರಮೇಹ (ನಾ). ಒಂದು ಬಗೆಯ ಮೂತ್ರರೋಗ : ಮೂತ್ರ ಕೆಂಚನೆ ಪೋಪುದುಂ . . . ವಾತಪ್ರಮೇಹದ ಲಕ್ಷಣ (ವೈದ್ಯವಿ. ೧೩೮). [ಸಂ.]

ವಾತಫಲ (ನಾ). ಒಂದು ಬಗೆಯ ಸಸ್ಯ ; ಬೆಲ್ಲವತ್ತ : "ವಾತಸಾರಃ, ವಾತಫಲಃ - ಈಯೆರಡುಂ ಬೆಲ್ಲವತ್ತ" (ಓಷಧಿ. ೧೫೧). [ಸಂ.]

ವಾತಬರ್ಬರ (ನಾ). ಒಂದು ಬಗೆಯ ಸಸ್ಯ : "ವಾತಬರ್ಬರಃ - ಕಕ್ಕೊರಲೆ" (ಓಷಧಿ. ೧೫೧). [?]

ವಾತಭುಕು (ನಾ). ಗಾಳಿಯನ್ನೇ ಆಹಾರವಾಗಿ ಉಳ್ಳುದು ; ಹಾವು : ಮಸ್ತಕದೊಳಗ್ಗಿಯ ಮುಡಿವನಂತೆ ಕೆನ್ನೆಯ ವಾತಭುಕುವಿನಿಂ ಕೆದಕುವನವೊಲ್ . . . ಬಲುದುರ್ಘಟದ ಯುಕುತಿಯಂತಿಚ್ಛೈಪರೇ (ಪಜಿಲ. ೨-೨೩). [ಸಂ. ವಾತಭುಜ್]

ವಾತಮಂಡಳಿ (ನಾ). ವರ್ತುಲಾಕಾರವಾಗಿ ಸುತ್ತಿ ಬರುವ ಗಾಳಿ ; ಸುಂಟರ ಗಾಳಿ : "ವಾತೂಳಂ ವಾತ್ಯೆ ವಾತಮಂಡಳಿಯಕ್ಕುಂ" (ಮಸ್ತುಕೋ. ೮-೪೫).

[ಸಂ.ವಾತಮಂಡಲೀ]

ವಾತಮೂಲವ್ಯಾಧಿ (ನಾ). ವಾತರೋಗದಿಂದುಂಟಾಗುವ ಮೊಳೆರೋಗ : ಹಿಕ್ಕೆ ಹಿಕ್ಕೆಯಾಗಿ ಮಲ ಪೋಪುದು ; ವಿಷ್ವಸ್ತಂಭ ಮಾಡುತಿರ್ಕುಂ ; ಮೈ ವಿವರ್ಣಮಕ್ಕು; ಮಾಂಸದಂತೆ ಪೋಪುದು ; ಕಲ್ಲ ಮೊಳೆ ತೋರ್ಕುಂ ; ಸರ್ವಗುದಶೂಲೆಯಕ್ಕುಂ. ಇದು ವಾತಮೂಲವ್ಯಾಧಿಯ ಲಕ್ಷಣ (ವೈದ್ಯವಿ. ೧೪೦). [ಸಂ.]

ವಾತಮೃಗ (ನಾ). ೧. = ವಾತಪ್ರಮಿ ೧ : "ವಾತಪ್ರಮೀಃ, ವಾತಮೃಗಃ - ೨ ವಾಯು ಮೃಗದ ಹೆಸರು, ಗಾಳಿಗೆಯೆದುರಾಗಿ ನೆಡಿಯುವ ಸ್ವಭಾವವುಳ್ಳ ಹುಲ್ಲೆಯೆಂಬುವ ಮೃಗ" (ಸಿದ್ಧಾಂತಿ. ೧೫೪). ೨. = ವಾತಪ್ರಮಿ ೨ : "ವಾತಪ್ರಮೀಃ, ವಾತಮೃಗಃ, ವಾತಪೋತೋತ್ಥಃ— ಈ ಮೂಱುಂ ಮುತ್ತುಗ" (ಓಷಧಿ. ೧೫೧). [ಸಂ.]

ವಾತಮೈ (ನಾ). ವಾತದಿಂದ ಕೂಡಿದ ಶರೀರ,—ದೇಹ : ಸಪ್ಪನ ಮಾರಿ, ಬಟ್ಟಿನ ಮೂಗು, ತುಸು ವಾತಮೈ (ಪಾಲ. ೧೩). [ವಾತ + ಮೈ$_1$ (< ಮೆಯ್$_2$)]

ವಾತರೋಗ (ನಾ). ವಾತದೋಷದಿಂದುಂಟಾಗುವ ವ್ಯಾಧಿ ; ಸಂಧಿವಾತ: ಲಾಗಿಸಿ ಝಳಪಿಸಿ ಜಡದನುವಿಂ ಬಹುವಿಧವೆನಿಸುವ ವಾತರೋಗಾದ್ರಿಯ ಹೊಡೆ (ಕಲ್ಯಾಣೇ. ೩೩) ; ಬಹಳ ನೀರು ಉಂಟಾದ ದೇಶವು ಅನುಪದೇಶವೆನಿಸಿಕೊಂಡು ಶ್ಲೇಷ್ಮವ್ಯಾಧಿ ವಾತರೋಗಗಳನ್ನುಂಟುಮಾಡುವುದು (ಸಕವೈ. ೧೫). [ಸಂ.]

ವಾತರೋಗಿ (ನಾ). ವಾತರೋಗವುಳ್ಳವನು ; ಸಂಧಿವಾತವನ್ನು ಹೊಂದಿದವನು : "ವಾತಕೀ, ವಾತರೋಗೀ – ೨ ವಾತರೋಗದವನ ಹೆಸರುಗಳು" (ಸಿದ್ಧಾಂತಿ. ೧೮೫). [ಸಂ.]

ವಾತವಲಯ (ನಾ). [ಜೈನ] ಅನಂತವಾದ ಲೋಕವನ್ನು ಸುತ್ತಿರುವ ವಾಯು ಸಮೂಹ : ತದನಂತರ ಸಮಯದೊಳ್ ವಾತವಲ[ಪಾಠಾಂ. ೪]ಯಮುಟ್ಟಿಯೆ ಜೀವಪ್ರದೇಶಂಗಳಂ ಲೋಕಪ್ರದೇಶಮಂ ಪರ್ವಿ (ಆದಿಪು. ೧೬-೪೯ ವ). [ಸಂ.]

ವಾತವಾಜಿ (ನಾ). ಒಂದು ಬಗೆಯ ಸಸ್ಯ : "ವಾತವಾಜಿ--ಕಾಡ ಪಾರಿವಾಳ" (ಓಷಧಿ. ೧೫೧). [?]

ವಾತವೃಷೆ (ನಾ). ಒಂದು ಬಗೆಯ ಧಾನ್ಯ : "ವಾತವೃಷಾ – ಕಂಚಿನ ಧಾನ್ಯ" (ಓಷಧಿ. ೧೫೧). [?]

ವಾತಶರೀರ (ನಾ). = ವಾತಮೈ. [ಸಂ.]

ವಾತಶರೀರಿ (ನಾ). ವಾತದ ಮೈಯನ್ನು ಹೊಂದಿದವನು. [ಸಂ. ವಾತಶರೀರಿನ್]

ವಾತಶೋಣಿತ (ನಾ). ಶರೀರದಲ್ಲಿ ವಾಯು ಮತ್ತು ರಕ್ತವು ಕೆಟ್ಟುಹೋಗುವ ಒಂದು ಬಗೆಯ ಸಂಧಿವಾತ ರೋಗ : ಗ್ರಹಣೀಗಜಕೇಸರಿಲೇಹ್ಯ . . . ಸೇವಿಸಲು ವಾತಗ್ರಹಣಿ . . . ವಾತಶೋಣಿತ, ಪಾಂಡುಕೃಶತ್ವ ಮುಂತಾದ ಸಕಲ ರೋಗಗಳೂ ಗುಣಮಕ್ಕುಂ (ಸಕವೈ. ೩೪೦). [ಸಂ.]

ವಾತಶ್ಲೇಷ್ಮಜ್ವರ (ನಾ). ವಾತಪ್ರಕೋಪ ಮತ್ತು ಶ್ಲೇಷ್ಮದಿಂದ ಉಂಟಾಗುವ ಜ್ವರ : ಗುಳಿಗೆಯುಂ ಅಲ್ಲದ ರಸದಲ್ಲಿ ಕೊಳ್ಳೆ . . . ವಾತಶ್ಲೇಷ್ಮಜ್ವರ, ತ್ರಿದೋಷಜ್ವರ ಇವೆಲ್ಲಾ ಮಾಣುವುವು (ವೈದ್ಯವಿ. ೮೩). [ಸಂ.]

ವಾತಸನ್ನಿ (ನಾ). ವಾತಪ್ರಕೋಪದಿಂದ ಉಂಟಾಗುವ ಸನ್ನಿಪಾತ:

ಅತಿಕಡಿದಾದ ಜ್ವರ ಉಂಟಾಗಿ ಮಹಾವೇಗವಾದ ನಾಡಿಗಳನುಳ್ಳುದಾಗಿರ್ಪುದೆ ವಾತಸನ್ನಿಯ ಲಕ್ಷಣವೆಂದರಿವುದು (ಸಕವೈ. ೧೭೧). [ವಾತ + ಸನ್ನಿ]

ವಾತಸಾರ (ನಾ). = ವಾತಫಲ : "ವಾತಸಾರಃ, ವಾತಫಲಃ - ಈಯೆರಡುಂ ಬೆಲ್ಲವತ್ತ" (ಓಷಧಿ. ೧೫೧). [ಸಂ.]

ವಾತಸುತ (ನಾ). ೧. ವಾಯುವಿನ ಮಗ. ೨. ಹನುಮಂತ : ವಾತಸುತ ಬಳಿಕನ್ನಯದ ಪರಿಜಾತದಭ್ಯುದಯವನು ಬಹುರೂಪಾತಿಶಯವಹ ಪರಿಯ ಬನ್ನೈಸಿದನು ರಘುಪತಿಗೆ (ತೊರರಾ. ೪-೧-೧೬). ೩. ಭೀಮ : ವಾತಸುತ ಪರಬಲಭಯಂಕರ ಸೋತನೋ ಪ್ರತಿಮಲ್ಲನೆಂದರು ಕೃಷ್ಣ ಫಲುಗುಣರು (ಕುಮಾಸ. ೨-೧೦೨). [ಸಂ.]

ವಾತಹ (ನಾ). ೧. ಒಂದು ಬಗೆಯ ಸಸ್ಯ. ೨. ಬೆಳ್ಳುಳ್ಳಿ ; ಲಶುನ : "ವಾತಹಾ - ಬೆಳ್ಳುಳ್ಳಿ" (ಓಷಧಿ. ೧೫೦). [ಸಂ.ವಾತಹನ್]

ವಾತಾಜೀರ್ಣ (ನಾ). ವಾತಪ್ರಕೋಪದಿಂದ ಉಂಟಾಗುವ ಅಜೀರ್ಣ : ಕಲ್ಲುಪ್ಪು, ಗಾಜುಲವಣ . . . ಅಂಬಿಲದಲ್ಲಿ ಕುಡಿಯೆ ವಾತಾಜೀರ್ಣ ಪರಿಹರ (ಸಕವೈ. ೩೬೫). [ಸಂ.]

ವಾತಾತಪಿಕ (ನಾ). [ವೈದ್ಯಶಾ] ರಸಾಯನವಿಧಿಯ ಎರಡು ಪ್ರಯೋಗಗಳಲ್ಲಿ ಒಂದು ಬಗೆ; ಅನಿಲರೂಪದಿಂದ ದ್ರವ್ಯಗಳನ್ನು ಬಿಸಿಮಾಡುವ ಕ್ರಿಯೆ : ಈ ರಸಾಯನವಿಧಿಯ ಪ್ರಯೋಗವನ್ನು ಕುಟೀಪ್ರಾವೇಶಿಕ, ವಾತಾತಪಿಕವೆಂದು ಎರಡು ತೆಱನಾಗಿ ಋಷಿಗಳು ಹೇಳಿರುವರು (ವೈದ್ಯಶಾ. II, ೨೫೩). [ಸಂ.]

ವಾತಾತಿಸಾರ (ನಾ). ವಾತದೋಷದಿಂದ ಉಂಟಾಗುವ ಭೇದಿ : ಕಂಪಾಗಿ ನೊರೆಗೂಡಿ ಅಡಿಗಡಿಗೆ ಅಲ್ಪಸ್ವಲ್ಪವಾಗಿ ಒಂದೊಂದು ವೇಳೆ ಕೂಗುತ ಹೊಟ್ಟೆ ಕಳವುದೆ ವಾತಾತಿಸಾರ ಲಕ್ಷಣ (ಸಕವೈ. ೩೦೬). [ಸಂ.]

ವಾತಾಪಿ (ನಾ). ೧. ಒಂದು ಊರಿನ ಹೆಸರು ; P ಚಾಳುಕ್ಯರ ರಾಜಧಾನಿಯಾಗಿದ್ದ, ಇಂದಿನ ಬಿಜಾಪುರ ಜಿಲ್ಲೆಯ ಬಾದಾಮಿ : ಚಲಿಕ್ಯೋ ವಲ್ಲಭೇಶ್ವರಃ ಧರಾಧರೇಂದ್ರ ವಾತಾಪಿಮಜೇಯಂ ಭೂತಯೇಭುವಃ (ಎಇ XXVII, ೮-೪; 513) ; ವಾತಾಪೀ ವಾಸ್ತವ್ಯಾಯ ವತ್ಸಗೋತ್ರಾಯ ತ್ರೈತ್ಯಚರಣಾಯ ನಾಗಶರ್ಮ್ಮಣಃ ಪುತ್ರಾಯ ಬಾಣಶರ್ಮ್ಮಣೇ (ಎಇ. V (R), ಕೃಷ್ಣರಾ. ೪೮-೩೩ ; ಸಿ. 725). 'ಬಾದಾಮ್ಮಿ$_1$' ಪರಾ. ೨. (ಅನೇಕ ಋಷಿಗಳ ಹೊಟ್ಟೆಯೊಳಗೆ ಆಹಾರರೂಪದಲ್ಲಿ ಪ್ರವೇಶಿಸಿ, ಅನಂತರ ಅವರ ಹೊಟ್ಟೆಯನ್ನು ಸೀಳಿ ಹೊರಕ್ಕೆ ಬರುತ್ತಿದ್ದನೆಂದೂ ಇದನ್ನು ತಿಳಿದ ಅಗಸ್ತ್ಯಮುನಿ ಇವನನ್ನು ತನ್ನ ಹೊಟ್ಟೆಯಲ್ಲಿಯೇ ಜೀರ್ಣಿಸಿಕೊಂಡನೆಂದೂ ಹೇಳಲಾಗುವ) ಒಬ್ಬ ರಾಕ್ಷಸನ ಹೆಸರು : ವಾತಾಪಿ ಇಲ್ವಲರ ಕಥೆಯನ್ನು 'ವಾತಾಪಿ' ಎಂಬ ರೂಪದ ವಿವರಣೆಗಾಗಿ ಸೃಷ್ಟಿಸಿ ಅನ್ವಯಿಸಿಕೊಂಡಿರಬಹುದು (ಸಂಶೋಕ. ೧೩೭).

ವಾತಾಪಿಗಣಪತಿ = ಬಾದಾಮಿಯಲ್ಲಿ ಪ್ರಸಿದ್ಧವಾಗಿರುವ ಗಣಪತಿಯ ದೇವಸ್ಥಾನ ಮತ್ತು ಅಲ್ಲಿಯ ಗಣಪತಿ : ಮುತ್ತುಸ್ವಾಮಿ ದೀಕ್ಷಿತರು ಈ ರಾಗದಲ್ಲಿ ವಿಘ್ನೇಶ್ವರನ ಮೇಲೆ 'ವಾತಾಪಿಗಣಪತಿಂ ಭಜೇಹಂ' ಕೃತಿಯನ್ನು ಅಮೋಘವಾಗಿ ರಚಿಸಿದ್ದಾರೆ (ಸಂಗೀಚಂ. ೧೪೦). [ಸಂ.]

ವಾತಾಪ್ತ (ನಾ). ವಾಯುವಿನ ಗೆಳೆಯ ; ಅಗ್ನಿ : ಉರಿಯದಿರು ವಾತಾಪ್ತ . . . ದುರ್ಗರ್ವಮಂ ಹರಿಯಜೇಂದ್ರರ್ ಬಿಟ್ಟು ಪೂರ್ವಸ್ಪೃತಿಯ ಮಾಳ್ಪುದು (ವಿಕೋಪು. ೨-೬೩). [ಸಂ.]

ವಾತಾಪ್ತನೇತ್ರ = ಅಗ್ನಿಯನ್ನು ಕಣ್ಣಾಗಿ ಉಳ್ಳವನು ; ಶಿವ : ವಾತಾಪ್ತ ನೇತ್ರನಂ ತನ್ನೊಳುಂ ಕಾಣ್ಬ ಪಳುಕಿನ ಕನ್ನಡಿಯೊಳು ಪೊಳೆವ ಭೂತಳವ ಬೆಳಗುವ ದ್ವಾದಶಾತ್ಮಪ್ರಭೆಗಳೋತು ರವಿಕಾಂತದಮಲಪ್ರಭೆಯ ನುಂಗಿ ಮಿಗೆ ತಾ ತೋಱಲಾ ಪಳುಕು ಕಾಣಿಸದ ಮಾಳ್ಕೆಯಿಂ ಶಿವನೊಳಿಹ ಗುರುಧುರೀಣಂ (ವಿಕೋಪು. ೭-೨೪). [ಸಂ.]

ವಾತಾಯನ (ನಾ). ಕಟ್ಟಡಗಳಲ್ಲಿ ಗಾಳಿ, ಬೆಳಕು ಬರುವಂತೆ ಗೋಡೆಯಲ್ಲಿ ಮಾಡಿರುವ ಕಿಂಡಿ ; ಗವಾಕ್ಷಿ : ಪ್ರಾಸಾದಲಕ್ಷ್ಮಿಯ ಕರ್ಣೋತ್ಪಲಂಗಳಂತೆ ವಾತಾಯನವಿವರಂಗಳೊಳ್ ಪಾರವತಂಗಳೆಸೆಯೆಯುಂ (ಕಾದಂಪು. ೫೧೩); ನಿಧುವನ ನಿಕೇತನದ ವಾತಾಯನಂಗಳೊಳ್ಮುಸುಳ್ದು . . . ರಂಜಿಸಿಯುಂ (ರಾಜಶೇ. ೧೨-೩೯ ವ). [ಸಂ.]

ವಾತಾಯನಿತ (ಗು). ರಂಧ್ರಗಳಿಂದ ಕೂಡಿದ ; ತೂತಾದ : ಮೊನೆಯಲಗಿನಂಬುಗಳ ಬಿಡುಸರಿಗನಿಬರಂಗವ ತೆತ್ತು ವಾತಾಯನಿತವಿಗ್ರಹವಾಯ್ತು ನಿಗ್ರಹದತಿ ಮಹಾರಥರು (ಕುಪ್ಪಾದ್ರೋ. ೧೨-೨೨). [ಸಂ.]

ವಾತಾಯು (ನಾ). ಜಿಂಕೆ ; ಎರಳೆ : ಮಾಯೆಯಲಿ ಮಾರೀಚನಾ ವಾತಾಯುವಾಗಿಯೆ ಸುಳಿಯಲು (ತೊರರಾ. ೩-೮-೧೬); ಘನಕಾರುಣ್ಯರಸಾನ್ವಿತಂ ಪೊರೆದನಾ ವಾತಾಯುವಂ ಮೋಹದಿಂ (ಎಷ್ಟಾಪು. ೨-೩-೧೨). [ಸಂ.]

ವಾತಾರಿ (ನಾ). ೧. ಹರಳುಗಿಡ ಮತ್ತು ಅದರ ಬೀಜ : ಜಳದೊಳ್ ರಾಶ್ಮೆ . . . ತಗ್ಗಿ ವಾತಾರಿ ನೆಗ್ಗಿಲೆರಟ್ಟುಳ್ಳಮೆನಿಪ್ಪಿವಂ ಕುಡೆ ಕಷಾಯಂ ಮಾಡಿ (ಲೋಕೋಪ. ೯-೨೬೮). ೨. ಒಂದು ಬಗೆಯ ಸಸ್ಯ : "ವಾತಾರಿ – ನೀಲವೃಕ್ಷ, ಗೇರು, ಹೆಮ್ಮರ" (ಓಷಧಿ. ೧೫೦). [ಸಂ.]

ವಾತಾಲಿ (ನಾ). ಬಿರುಗಾಳಿ ; ಚಂಡಮಾರುತ : ಗಡಗಡನೆ ಪೊಡವಿ ನಡುಗಿತು . . . ಮುಂಗಾರ ವಾತಾಲಿಗೊಲೆವ ಕದಲಿಕೆಯಂತೆ (ವೈಶಾಬಿ. ೮೮-೬೦).

[ಸಂ. ವಾತಾಲಿ, ವಾತಾಲೀ]

ವಾತಾವರಣ (ನಾ). ೧. (ಭೂಮಿಯ ಸುತ್ತಲೂ ಇರುವ) ಗಾಳಿಯಿಂದ ಕೂಡಿದ ಪ್ರದೇಶ ; ವಾಯುವಲಯ : ನಮ್ಮ ಭೂಮಿಯಿಂದ ಹೊರಕ್ಕೆ ಹೊರಟುಹೋಗಬಹುದಾದ ಉಷ್ಣವು ನಮ್ಮ ವಾತಾವರಣದಲ್ಲಿರುವ ನೀರಿನ ಆವಿಯಿಂದ ತಡೆಯಲ್ಪಡುವುದು (ಭೌಶಾ. ೨೯೭); ಭೂಮಿಯನ್ನು ಒಂದು ವಾಯುವಿನ ಪೊರೆ ಆವರಿಸಿದೆ. ಇದನ್ನು ಭೂಮಿಯ ವಾತಾವರಣ ಎನ್ನುತ್ತಾರೆ (ಆಕಾಶ. ೧೮). ೨. ಹವಾಮಾನ ; ವಾಯುಗುಣ : ಆ ದೇಶದ ವಾತಾವರಣ ನಮಗೆ ಒಗ್ಗಲಿಲ್ಲ (ರೂಢಿ). ೩. (ಆಲಂ) ಪರಿಸ್ಥಿತಿ ; ಸನ್ನಿವೇಶ : ಚಿಕ್ಕಪುಟ್ಟ ಸಂಗತಿಗಳನ್ನು ಭೂತಗನ್ನಡಿಯಲ್ಲಿ ತೋರಿಸಿ ವಾತಾವರಣವನ್ನು ಕೆದಕತೊಡಗಿದಳು (ಭಾರಥಿ. ೧೬೦). [ಸಂ.]

ವಾತಾಶನ (ನಾ). ೧. ಗಾಳಿಯೊಂದು ಮಾತ್ರ ಆಹಾರವಾಗಿರುವುದು : ತ್ರಿದಿನ ಕ್ಕೊರ್ಮೆ ಫಲಾದನಂ ನೆಗಳ್ದುದಾತಂಗೊಂದು ತಿಂಗಳ್ ದ್ವಿಮಾಸದೊಳಾಱುಂ ದಿನಕೊರ್ಮೆ ತತ್ಪಳಚಯಾಹಾರಂ . . . ಮಾಸಪಂಚಕದೊಳಾಯ್ತಾತಂಗೆ ವಾತಾಶನಂ (ಶಬಕಂ. ೨-೯೯). ೨. ಹಾವು. [< ಸಂ. ವಾತಾಶಿನ್]

ವಾತಾಪತಿ (ನಾ). ಗಾಳಿಯ ಹೊಡೆತ, – ಪೆಟ್ಟು : ಮನುವಂಶಮಂಡನಂ . . . ದೀಪಂ ವಾತಾಹತಿಯಿಂ ನಂದುವಂತೆ ಮೂರ್ಛೆಗೆ ಸಂದಂ (ಪಂಗಾಮಾ. ೯-೧೧೬). [ಸಂ.]

ವಾತಾಹಾರ (ನಾ). ಗಾಳಿಯನ್ನೇ ಆಹಾರವಾಗಿ ಉಳ್ಳವನು : ಅವನು . . . ವಾತಾಹಾರನಾಗಿ ಉಗ್ರತಪಸ್ಸನ್ನು ಹಿಡಿದಿದ್ದಾನೆ (ವಚಭಾ. ೩೭೪). [ಸಂ.]

ವಾತಿ$_1$ (ನಾ). ೧. ಗಾಳಿ ; ವಾಯು. ೨. ವಾಯುಪುತ್ರ ; ಹನುಮಂತ : ವಾತಿ ಪರವೆಣ್ಗೆ ಶರಣಾಯಾತಂಗಸುರಂ ಬಿಯಕ್ಕೆ ಗುಪ್ತಂ ರಿಪುಸಂಘಾತಕ್ಕೆ ಪರಾಕ್ರಮನೆನೆ ಭೂತಲಮೇನೆಂದು ಕೇಶಿಯಂ ಬಣ್ಣಿಪುದೋ (ಕಾವ್ಯಾವ. ೭೫೭); ಶರಧಿಮಧ್ಯದ ಮತ್ಸ್ಯಕೇಶನಿದಿರೊಳ್ ವಾತಿಯುರು ಜಯಸ್ತಂಭದೊಳ್ ರಾಮನಾಧಿಕ್ಯಮಂ ಬರೆಯುತಿರೆ (ಪದ್ಮರಾ. ೧೧-೧೬೪). ೩. ಸೂರ್ಯ. ೪. ಚಂದ್ರ. [ಸಂ.]

ವಾತಿ$_2$ (ನಾ). ಒಂದು ಬಗೆಯ ಹಕ್ಕಿ : "ವಾತೀ - ಕೆಂದಲೆಗನ ಹಕ್ಕಿ" (ಓಷಧಿ. ೧೫೯). [?]

ವಾತಿಕ (ನಾ). ೧. ವಾತಪ್ರಕೃತಿಯುಳ್ಳದು ; ವಾತವುಳ್ಳದು : ವಾತಪ್ರಕೃತಿಯ ಗುಣಂಗಳ್ ಮಾತಾಪಿತೃಗಳ್ಗೆ ಮುನ್ನಮುಳ್ಳೊಡೆ ಮಱಿಯುಂ ವಾತಿಕನಕ್ಕುಂ (ಅಶ್ವಶಾ. ೯-೮೬). ೨. ಚಾತಕಪಕ್ಷಿ. [ಸಂ.]

ವಾತುಲ (ಗು). ೧. ವಾತರೋಗದಿಂದ ಬಾಧಿತವಾದ ; ವಾತರೋಗಕ್ಕೆ ಒಳಗಾದ. ೨. ಹುಚ್ಚಿನಿಂದ ಕೂಡಿದ. (ನಾ). ೩. ಬಿರುಗಾಳಿ. ೪. ಇಪ್ಪತ್ತೆಂಟು ಬಗೆಯ ಶೈವಾಗಮಗಳಲ್ಲಿ ಒಂದು : ಕಾಮಿಕ, ಯೋಗಜ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು . . . 'ಸಿದ್ಧಾಂತ'ಗಳೆಂಬ ಸಂಜ್ಞೆಯನ್ನು ಪಡೆದಿವೆ (ಭಾರದ. ೭೨). [ಸಂ.]

ವಾತುಲಾಗಮ, ವಾತುಳಾಗಮ (ನಾ). ಇಪ್ಪತ್ತೆಂಟು ಬಗೆಯ ಶೈವಾಗಮಗಳಲ್ಲಿ ಒಂದು : ಶಿವಾಗಮಗಳಲ್ಲಿ ವಾತುಲಾಗಮವೇ ಸರ್ವೋತ್ಕೃಷ್ಟವಾದುದು (ಶಿವಾಸೂ. ೯-೨೫ ಟೀಕೆ). ವಾತುಳಾಗಮ : ಶೈವಾಗಮವು ಕಾಮಿಕಾಗಮ ಮೊದಲು ವಾತುಳಾಗಮದವರೆಗೆ ಇಪ್ಪತ್ತೆಂಟು ಎಂದು ಪರಿಗಣಿತವಾಗಿದೆ (ಭಾರದ. ೭೨); ಶೈವಾಗಮದಲ್ಲಿ . . . 'ಶೈವಾಗಮ', 'ವೇದ್ಯಾಗಮ' ಅಥವಾ ಶಾಕ್ತಾಗಮ, ವಾತುಳಾಗಮ ಅಥವಾ ತಾಂತ್ರಿಕಾಗಮ' ಮತ್ತು 'ವೀರಶೈವಾಗಮ' ಎಂದು ನಾಲ್ಕು ಒಳಭೇದಗಳಿವೆ (ಭಾರದ. ೭೪). [ಸಂ.]

ವಾತುಳಾಗಮ 'ವಾತುಲಾಗಮ' ನೋ.

ವಾತೂಲ, ವಾತೂಳ (ಗು). ೧. = ವಾತುಲ ೧. ೨. = ವಾತುಲ ೨. (ನಾ). ೩. ಸುಂಟರಗಾಳಿ ; ಬಿರುಗಾಳಿ. ೪. = ವಾತುಲ ೪ : 'ವಾತೂಲಾಗಮ' ಪರಾ. ವಾತೂಳ : ೩. "ವಾತೂಳಂ ವಾತ್ಯೆ ವಾತಮಂಡಳಿಯಕ್ಕುಂ" (ಮಸ್ಯಕೋ. ೦-೮೫). ೪. ವಾತೂಲದೊಳು ಸೇರಿದಾಱನೆಯ ಲೀಲೆಯ ಮಹಾಬ್ರಹ್ಮಾಂಡ ಪುರಾಣದಲ್ಲಿ ಭಿಕ್ಷಾಟಣವನೆಂದು ಪೇಳುತ್ತಿರ್ದನಾಚಾರ್ಯನು (ವೀಶೈಪು. ೨-೨-೪).

[ಸಂ.]

ವಾತೂಲಾಗಮ (ನಾ). = ವಾತುಲ ೪ : ಆ ಸಿದ್ಧಾಂತಭೇದಂಗಳಾವವೆಂದೊಡೆ ಕಾಮಿಕಾಗಮ ಯೋಗಚಾಗಮ . . . ಕಿರಣಾಗಮ ವಾತೂಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ (ವಿವೇಕ. ೬೨). 'ವಾತುಲಾಗಮ' ಪರಾ.

[ಸಂ.]

ವಾತೂಲಿಕೆ, ವಾತೂಳಿಕೆ (ನಾ). ವರ್ತುಲಾಕಾರವಾಗಿ ಸುತ್ತಿ ಬರುವ ಗಾಳಿ ; ಸುಂಟರಗಾಳಿ : ಅವಿರಳವಾತೂಲಿ [ಪಾಶಾ. ೪] ಕಾಭ್ರಮಣಪರಿಗತತೂಳಿಕಾತಳಮಪ್ಪ ಮನಕ್ಕೆಂತಾನುಂ ಕಾಲಲಬ್ಧವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಚಂದ್ರಪ್ರ. ೪-೧೮ ವ). ವಾತೂಳಿಕೆ : ನೆಗಪುತ್ತುಂ ಗಗನತಳಕ್ಕಗಣಿತ ವಾತೂಳಿಕಾಳಿಯಂ ಕಾಯ್ದು ಸಮಂತೊಗೆದ ಕಡುವಿಸಿಲ ಪಸರಮನುಗುಟುತ್ತುಂ ಬಂದುದತುಳಭೀಷ್ಮಂ ಗ್ರೀಷ್ಮಂ (ಕುಸುಮಾ. ೦-೧೧೪) ; ಆ ಗಂಗಾತರಂಗಿಣೀ ತುಂಗವಾತೂಳಿಕಾಸಂಗದಿಂದಳ್ಳಾಡುತ್ತುಮಿರ್ದ ತೀರದ್ವಯಪರ್ಯಂತಕಾಂತಾರ ತರುನಿಕರಶಾಖಾಶಿಖಾವಳಯಾಗ್ರಂಗಳೆಂದುದಿರ್ದು ಬೆಟ್ಟು (ಬಾಧಪು. ೧೦-೭೧ ವ).

[ಸಂ. ವಾತೂಲಿಕಾ]

ವಾತೂಳ 'ವಾತೂಲ' ನೋ.

ವಾತೂಳಿ (ನಾ). = ವಾತೂಲಿಕೆ : ವಾತೂಳೀಚಾಳನೊಲ್ನಿಲೆಗಜಬಳಿಕತರಸ್ಥಾಳಧೂಳೀ ಪ್ರಜಾಳಪ್ರೋತಕ್ಕೋಣೀತಳಂ . . . ಲೋಕಕ್ಕಗರ್ವಂ ಪಡೆದು ಬಿಡದೆ ಬಂದತ್ತು ದುರ್ಗ್ರೀಷ್ಮಕಾಲಂ (ಬಾಧಪು. ೪-೭೬). [ಸಂ. ವಾತೂಲೀ]

ವಾತೂಳಿಕೆ 'ವಾತೂಲಿಕೆ' ನೋ.

ವಾತೋದರ (ನಾ). ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ಊದಿಕೊಳ್ಳುವ ಒಂದು ಬಗೆಯ ರೋಗ : ಈ ಎಣ್ಣೆಯಂ ಹಾಲಲ್ಲಿ ತೆಗೆದುಕೊಳ್ಳೆ ವಾತೋದರ ಮಾಣ್ಪುಂ (ಎಷ್ಟೆ. ೪). [ಸಂ.]

ವಾತೋದರಿ (ನಾ). ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ಊದಿಕೊಳ್ಳುವ ಒಂದು ಬಗೆಯ ರೋಗ : ಅಂತಪ್ಪ ರೇಚೆಯ(ಯ್ದುಂ) ಚಿಂತಿಸದಾ ಪ್ರೋಥಮಧ್ಯದೊಳ್ ತೋರ್ಪೊಡೆ ಬಾಱ್ಪುಂ ತುರಗಮೇಕವಿಂಶತಿವರುಷಂ ಸಾಯ್ಪುಂ ಬಟ್ಟೆಕ್ಕೆ ವಾತೋದರಿಯೊಳ್ (ಅಶ್ವಶಾ. ೫-೨೭). [ಸಂ. ವಾತೋದರಿನ್]

ವಾತ್ಯೆ (ನಾ). = ವಾತೂಲಿಕೆ : "ಸುಟ್ಟುರೆಘಾಳಿಯಂ ವಾತ್ಯಾ ಎಂಬುದು" (ಹಲಾಯು. ೧೪-೭೭). [ಸಂ.ವಾತ್ಯಾ]

ವಾತ್ಸಕ (ನಾ). ಕರುಗಳ ಹಿಂಡು : "ವಾತ್ಸಕಂ, ಧೇನುಕಂ - ಈ ೨ ಕ್ರಮದಿಂದ ಕರುಗಳ ಹಿಂಡಿಗೂ ಆಕಳ ಹಿಂಡಿಗೂ ಬೇರೆಬೇರೆ ಹೆಸರು. ಎಳೆಕರುಗಳ ಹಿಂಡು, ವಾತ್ಸಕ" (ಸಿದ್ಧಾಂತಿ. ೫೯೨). [ಸಂ.]

ವಾತ್ಸಲ್ಯ (ನಾ). ೧. (ಹಿರಿಯರು ಕಿರಿಯರ ಬಗ್ಗೆ ತೋರುವ) ಮಮತೆ; ಅಕ್ಕರೆ; ವಾಂಛಲ್ಯ : ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬಲ್ಗಣ್ಣಿಯೊಳ್ಕಟ್ಟುವಡೆದು (ಜೈಮಿಭಾ. ೧೮-೬೦) ; ತಾಯಿ ಮಕ್ಕಳನ್ನು ಪ್ರೀತಿಸುತ್ತಾಳೆ : ಇದು ವಾತ್ಸಲ್ಯ (ಧರ್ಮಸಾ. ೨೩). ೨. [ಜೈನ] ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಏಳನೆಯದು ; ತನ್ನ ಸಹಯೋಗಿಗಳನ್ನೂ ಸತ್ಯಮಾರ್ಗಾವಲಂಬಿಗಳನ್ನೂ ಅತ್ಯಂತ ಸ್ನೇಹದಿಂದ ಕಾಣುವುದು : ಜಿನಪ್ರಣೀತಮಪ್ಪ ಧರ್ಮಾಮೃತಂಗಳೊಳ್ ಮಿಥ್ಯಾನುರಾಗಮಂ ಪತ್ತುವಿಡಿಸುವುದು ವಾತ್ಸಲ್ಯಂ (ಚಾವುಂಪು. ೨೪೧) ; ಜಿನಪ್ರಣೀತ ಧರ್ಮಾಮೃತದೊಳ್ ನಿತ್ಯಾನುರಾಗತೆ ವಾತ್ಸಲ್ಯಂ (ತತ್ತ್ವಪ್ರ. ೨೬೫).

[ಸಂ.]

ವಾತ್ಸ್ಯಾಯನ (ನಾ). ೧. ಕಾಮಶಾಸ್ತ್ರವನ್ನು ರಚಿಸಿದ ಒಬ್ಬ ಮುನಿಯ ಹೆಸರು : ಪುಲ್ಲಶರನುಮಂ ಚಲ್ಲದೊಳ್ ಪದವಡಿಸಲುಂ ವಾತ್ಸ್ಯಾಯನನುಮಂ ಮತ್ಸರದೊಳ್ ಗೆಲಲುಂ . . . ಬಲ್ಲವರಾಗಿ ಮದನನ ಪರಿಚಾರಿಕೆಯರಂಬೆತ್ತುವಂತೆ ಪೂವನೆತ್ತುವ ಪುಷ್ಪಲಾವಿಕಾಚತುಷ್ಷಥದೊಳ್ (ಶಾಂತಿಪು. ೯-೭೨ ವ) ; ವಾತ್ಸ್ಯಾಯನನಂ ಪೊಱವೊಱಸು ಮಾಟ್ಟ ಕಂಡವರಂ ಮೂವಣ್ಣಂಬರಿಪ ನವವಾರವಿಳಾಸಿನಿಯರಿರುತಿರ್ಪ ನೆಲೆವನೆಗಳಿನೊಪ್ಪುವ ಸೂಳೆಗೇರಿ ಸೊಗಯಿಸುತಿರೆ (ಜಗವಿ. ೨-೨೧ ಅಡವಟ್ಟ). ೨. ಕಾಮಶಾಸ್ತ್ರ : ಸತ್ಕಾವ್ಯನಾಟಕವಾತ್ಸ್ಯಾಯನನೃತ್ತಗೀತ . . . ವಾದ್ಯಶಕುನೋದ್ಯದ್ಹೃದ್ಯವಿದ್ಯಾಕದಂಬಕನುಂ ಚಂದ್ರಕವೀಂದ್ರನೊರ್ವನೆ ಬಲ್ಲಂ ಪೆರ್ಜಲ್ಲರೇ (ಮದಕಿ. ೧-೫೧); ಪಂಡಿತವಕ್ಕಿಗಳಂ ನಿಜಕರಾಗ್ರದಿಂ ಪಿಡಿದೊಡಗೊಂಡು ಪೋಗಿ ನಿಜಗೃಹದೊಳೋವಿಯಾ ಗಿಳಿಯ ಮುದ್ದುತನಕ್ಕೊಲ್ದು ವಾತ್ಸ್ಯಾಯನಮನೋದಿಸಿ ರಸಾಲರಮಣನೆಂಬ ಪೊಸವೆಸರಿಟ್ಟು (ರಾಜಶೇ. ೧-೧೩೫ ವ). ೩. ಪ್ರಸಿದ್ಧ ನ್ಯಾಯಶಾಸ್ತ್ರಕಾರನೊಬ್ಬನ ಹೆಸರು. [ಸಂ.]

ವಾದ (ನಾ). ೧. ಮಾತನಾಡುವುದು ; ಮಾತನಾಡುವಿಕೆ. ೨. ಮಾತು ; ಸಂಭಾಷಣೆ : "ವಾದಃ, ವಾದನಂ, ವಾದನೀಯಂ - ಈ ೩ ಮಾತು" (ಕಾಶಕೃ. ೫೯). ೩. ವಿವರಣೆ ; ವ್ಯಾಖ್ಯಾನ. ೪. ಚರ್ಚೆ ; ವಿವಾದ : ವೇದಶ್ರುತಿಗಳ ತಿಳಿಯಲಱಿಯದೆ ವಾದವ ಮಾಡುವರೆಲ್ಲಾ ಕೇಳಿ (ಬಸವ. ೫೪೫); ರಾವಣ ಕೇಳು ರಾಮನ ಬಲದೊಳೊಂದತಿವಾದ ಹುಟ್ಟಿತು (ಕೌಶಿಲಾ. ೧೮-೨೬). ೫. ತತ್ತ್ವನಿರ್ಣಯಕ್ಕಾಗಿ ಮಂಡಿಸುವ ಮಾತು ; ಪ್ರತಿಪಾದನೆ : ವೈಷ್ಣವವಾದಿ ಹರಿಯೆ ಪರವೆಂದು ಭೂವರಗೃಹದ್ವಾರದೊಳ್ ಬರೆದು ಪತ್ರಂಗಟ್ಟೆ ಕೇಳ್ದು ವಾದಕ್ಕೆ ನೃಪಸಭೆಗೆಯ್ದಿದಂ ಗುರುವರಂ (ಪದ್ಮರಾ. ೯ ಸೂಚನೆ) ; ವಾದಕ್ಕೆಂದುಜ್ಜುಗಿಸಿದ ವಾದಿಗಳಂ ಜಯಿಸಲೆಂದು ಬಸವಾಧಿಪನಾಮೋದಂ ಮಿಗೆ ಬರಲಟ್ಟಿದ (ವೃಷವಿ. ೩೭-೬೬). ೬. ವಾಗ್ಯುದ್ಧ ; ವಾಕ್ಕಲಹ : ನಿಮ್ಮ ವಾದ ಬಿಡಿಸಲು ನನಗೆ ಸಾಧ್ಯನಿಲ್ಲ (ರೂಢಿ). ೭. ಸಿದ್ಧಾಂತ ; ಮತ : ಯಾವ 'ವಾದ'ಕ್ಕೂ ಮಾರುಹೋಗದೆ ಸಾಹಿತ್ಯವು ಮಾನವೀಯವ್ಯಕ್ತಿತ್ವದ ಮೂಲದ್ರವ್ಯದ ಉದಾತ್ತೀಕರಣ ಇಲ್ಲವೆ ಊರ್ಧ್ವಮುಖಿತೆಯ ಕಡೆಗೆ ತನ್ನ ಲಕ್ಷವನ್ನು ಪೂರೈಸಬೇಕು (ನವ್ಯಕಾ. ೧೯). ೮. ಧ್ವನಿ ; ನಾದ. ೯. ಬೀದಿಮಾತು ; ಗಾಳಿಸುದ್ದಿ. ೧೦. ಕೀಳುಲೋಹಗಳನ್ನು ಚಿನ್ನವನ್ನಾಗಿ ಮಾರ್ಪಡಿಸುವ ಒಂದು ಬಗೆಯ ವಿದ್ಯೆ ; ರಸವಾದ : ವಾದದ ಹೇಮ ಸ್ವಯ ಹೇಮವ ಕೂಡಿ ವೇದಿಸಲಿಕ್ಕೆ ವಿಭೇದವಾದುದಿಲ್ಲ (ಸಕವ. ಕ. II, ೫೦೩-೧೪೪೮); ವಾದ ವಶ್ಯ ವಯೋನಿರೋಧನ . . . ಸಾಧಿಸಿಹ ಘುಟಿಕಾವಾದುಕಾಸಿದ್ಧಿಗಳ ಪಡೆದಿಹ ಸಾಧಕರು ಮೊದಲಾಗಿ ಕಾಲಾಧೀನರಾಗಿಹರು (ಅಮೃತ. ೨-೩೭). ೧೧. [ನ್ಯಾಯ] ನ್ಯಾಯದರ್ಶನದ ಹದಿನಾರು ಬಗೆಯ ಪದಾರ್ಥಗಳಲ್ಲಿ ಒಂದು : ಗೌತಮೋಕ್ತನ್ಯಾಯವು ಪ್ರಮಾಣ ಪ್ರಮೇಯ . . . ವಾದ ಜಲ್ಪ ವಿತಂಡ . . . ನಿಗ್ರಹಸ್ಥಾನಗಳೆಂಬ ಷೋಡಶಪದಾರ್ಥಂಗಳಂ ನಿರೂಪಿಸುತ್ತಲೀ ಪ್ರಪಂಚಕೆ ಪರಮೇಶ್ವರ ಕರ್ತೃಕಮಂ ನಿಶ್ಚಯಿಸುವುದು (ವಿವೇಕ. ೧೦).

ವಾದಮಾಡು = ಚರ್ಚಿಸು ; ಚರ್ಚೆಮಾಡು : ಅರಸನು ವಾದಿರಾಜರಿಗೆ ಮಾಡುತ್ತಿರುವ ಸತ್ಕಾರಕ್ಕೆ ಸಹಿಸದೆ ಅವರೊಡನೆ ತಾನು ವಾದಮಾಡಬೇಕೆಂದನು (ಕಥಪಿ. ೧೬೦). ವಾದಹೂಡು = ಚರ್ಚೆಗೆ ತೊಡಗು ; ವಾದಿಸು : ನಾವು ಹಾಗೆ ಮಾಡೋದು ತಪ್ಪು, ಅನಾರೋಗ್ಯ ಎಂದೆಲ್ಲಾ ವಾದಹೂಡಿದರು (ಮನೋನಂ. ೨-೪) ; ಅವನು ಅಲ್ಲಿದ್ದ ವಕೀಲನೊಬ್ಬನೊಡನೆ ವಾದಹೂಡಿ, ಅದರಲ್ಲಿಯೇ ಮಗ್ನನಾಗಿದ್ದನು (ಪುನರು. ೧೩೮). [ಸಂ.]

ವಾದಂಗೆಯ್ (ಕ್ರಿ). ತತ್ತ್ವನಿರ್ಣಯಕ್ಕಾಗಿ ವಾದಮಾಡು ; ಮಂಡಿಸು : ವಾದಂಗೆಯ್ದುಣ್ಮೆದ ಪರವಾದಿಗಳಂ ಗೆಲ್ದು ಜಸಮನಾಳ್ದಿರುತುಂ ಸಮ್ಮೋದದೆ ಪಸೆನಿಂದಂ ಮಹಿಮೋದಧಿ (ವೃಷಪಿ. ೩೯-೩೪). [ವಾದ + ಕೆಯ್]

ವಾದಕ (ನಾ). ೧. ಮಾತನಾಡುವವನು. ೨. ವೀಣೆ ಮೊದಲಾದ ವಾದ್ಯಗಳನ್ನು ನುಡಿಸುವವನು,—ಬಾಜಿಸುವವನು : ನಾನಾತೋದ್ಯ ವಾದ್ಯಂಗಳನೆ ಮೆಚ್ಚಿಂದು ಮೆಚ್ಚಂಗೊಳಲ್ ವಾದಕರ್ ಬಂದಿರೆ . . . ಚೆಲ್ವಾಗುದಾಸ್ಥಾನರಂಗಂ (ಆದಿಪು. ೨-೩) ; ಪಾತ್ರವಾಡೆ ವಾದಕಂ ಬಾಜಿಸಿದಂ (ಶಮದ. ೨೪೯ ವ್ಯಯೋ). [ಸಂ.]

ವಾದಕಿ (ನಾ). ವಾದ್ಯಗಳನ್ನು ನುಡಿಸುವವಳು,—ಬಾಜಿಸುವವಳು : ಕುಡುಪುಂ ಕಯ್ದುಂ ಜತಿಯೊಳ್ ತತತಡವರೆ ವಾದಕಂಗೆ ಪೂರ್ವಿಂ ಜತಿಯಂ ತೊಡರದೆ ನಡೆಯಿಸಿ ಪೂರ್ವಿದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಿಕಿಯಾದಳ್ (ಆದಿಪು. ೯-೩೨).

[ವಾದಕ + - ಇ]

ವಾದಕ್ಕಿ (ನಾ). ಜೀರಿಗೆ ಜಾತಿಗೆ ಸೇರಿದ ಒಂದು ಬಗೆಯ ಕಾಳು ; ಓಮು ; ಅಜವಾನ : ಚವ್ಯ, ಹಿಪ್ಪಲೀಮೂಲ . . . ವಾದಕ್ಕಿ, ಜೀರಿಗೆ . . . ಇವಿಷ್ಟನು ಅಷ್ಟಾವಶೇಷವಾಗಿ ಕಷಾಯವ ಕಾಸಿ ಜೇನುತುಪ್ಪ ಬೆರಸಿ ಕೊಡಿಸಲು ತ್ರಿದೋಷದಿಂದ ಉಂಟಾದ ಸ್ವರಭಂಗ ಶಮನವಹುದು (ವೃದ್ಧಸಾ. I. ೧೭೬). [< ಓದಕ್ಕಿ]

ವಾದಗೋಷ್ಠಿ (ನಾ). ಚರ್ಚೆ ನಡೆಯುವ ಸಭೆ ; ಚರ್ಚಾಕೂಟ : ಹಿಂದಿನ ಕಾಲದ ವಾದಗೋಷ್ಠಿಗಳ ಒಂದು ವಿಸ್ತೃತಚಿತ್ರವನ್ನು ಪದ್ಮಣಾಂಕನ ಪದ್ಮರಾಜಪುರಾಣದಲ್ಲಿ ನೋಡಬಹುದು (ಕಶಾಅ. ೨೨೩ ಅಡಿಟಿ). [ಸಂ.]

ವಾದಗ್ರಸ್ತ (ಗು). ವಾದಕ್ಕೆ ಗುರಿಯಾದ ; ಚರ್ಚಾಸ್ಪದವಾದ : ಕವಿರಾಜಮಾರ್ಗ . . . ರಚನಕಾರನು ಯಾರೆಂಬ ವಿಷಯವು ಮಾತ್ರ ತುಂಬ ವಾದಗ್ರಸ್ತವಾಗಿದೆ (ಕಸಾಚ. ೫೨). [ಸಂ.]

ವಾದನ (ನಾ). ೧. ಧ್ವನಿಯುಂಟಾಗುವುದು. ೨. ವಾದ್ಯಗಳನ್ನು ನುಡಿಸುವಿಕೆ,—ಬಾಜಿಸುವಿಕೆ : ವಾದನಮಿಲ್ಲದೆಯುಂ ಮಿಗೆ ನಾದಂಗೆಯ್ದುವು ಸುರಾನಕಾನೀಕಂಗಳ್ (ವರ್ಧಪು. ೧೩-೮೦); ವಾದನಕ್ಕೆಂದು ತೆಗೆದುಕೊಂಡ ಕೊಳಲು ಚಿಗುರಿದರೆ ಅದು ವೇಣುವಾಗಿರುವುದೆಂತು ? (ಮಹಾಸಾ. ೫೫). ೩. ವಾದ್ಯಸಂಗೀತ. [ಸಂ.]

ವಾದನದಂಡ (ನಾ). ವಾದ್ಯವನ್ನು ನುಡಿಸಲು ಉಪಯೋಗಿಸುವ ಕಮಾನು, ಕುಡುಹು ಮುಂತಾದುವು : ವಾದನದಂಡಂ ಕುಡುಮಿಂಚಾದುದು ನೇಣಾದುದಮರ ಚಾಪಂ ವರದಂಭೋದಮದು ಧಕ್ಕೆಯಾದುದು ವಾದಕನಾದುದು ನಟತ್ಕಳಾಪಿಗೆ ಗಗನಂ (ಸೂತ್ರಸಿ. ೧೦-೧೬೬); ತನು ವಾದ್ಯಂ ನಾಲಗೆ ವಾದನದಂಡಂ (ಶಮದ. ೩೪). [ಸಂ.]

ವಾದಪುಲಿ (ನಾ). ಒಬ್ಬಾತನ ಹೆಸರು : ಅರಬದ್ಧಗಿಯರ ವಾದಪುಲಿ ಮಾಡಿದಾನ್ (ಎಕ. VIII, ಸೊರಬ. ೧೦-೯; ೫೦೦). [?]

ವಾದವಿವಾದ (ನಾ). ೧. ಯಾವುದಾದರೊಂದು ವಿಷಯಕ್ಕೆ, ಒಬ್ಬರು ಹೇಳಿದುದಕ್ಕೆ ಪ್ರತಿಯಾಗಿ ಮತ್ತೊಬ್ಬರು ಹೇಳುವ ಹೇಳಿಕೆ : ಈ ವಾದವಿವಾದಗಳನ್ನು ವಿವರವಾಗಿ ಪರಿಶೀಲಿಸಿ ನೋಡದ ಹೊರತು ಈ ವಿವರಣೆಯೂ ಸ್ಪಷ್ಟವಾಗುವುದಿಲ್ಲ (ದ್ರಾವಿವಿ. ೨೨). ೨. ಜಗಳ ; ವಾಕ್ಕಲಹ ; ವಾಗ್ಯುದ್ಧ : (ಮುಂಬಯಿ. ಕಿ). [ಸಂ.]

ವಾದಸರಣಿ (ನಾ). ವಾದವನ್ನು ಮಂಡಿಸುವ ಕ್ರಮ,—ರೀತಿ : ಅವನ ಇಡೀ ಭಾವ - ಭಂಗಿ-ವಾದಸರಣಿ-ನೆಚ್ಚು ಎಲ್ಲವನ್ನೂ ಕಂಡು, ನಗೆ ಧರ್ಮವೀರರಾದ ಆ ಹುತಾತ್ಮರ ನೆನಪಾಯಿತು (ಎಲಯೋ. ೧೭) ; ಡೈರಕ್ಟರಿಗೂ ಇವನ ವಾದಸರಣಿ ಹಿಡಿಸಲಿಲ್ಲ (ಹಸುಹೂ. ೩೨೫). [ಸಂ.]

ವಾದಿ (ನಾ). ೧. ಮಾತನಾಡುವವನು. ೨. ತತ್ತ್ವನಿರ್ಣಯಕ್ಕಾಗಿ ವಾದಿಸುವವನು ; ತಾರ್ಕಿಕ : ಮೊದಲೊಳ್ ಮುಳ್ ಮೇಗೆ ವಿಚಿತ್ರದಳತರಕ್ತಪ್ರಸೂನ ಮೆಂಬಿನತಱೊಳಾಗದು ಶಾಲ್ಮಲಿವನರುಹಮಾವುದಂತರಂ ನಿನಗಮಿದಿರ ವಾದಿಗಮಧಿಪಾ (ಶಾಂತಿಪು. ೮-೧೫೨); ವೇದ ಸ್ವಯಂಭುವೆಂಬ ವಾದಿ ನೀ ಕೇಳೆಲವೋ (ಬೃಸ. ೫೭೧). ೩. ವಿಷಯವನ್ನು ವಿಶದವಾಗಿ ನಿರೂಪಿಸುವವನು ; ವ್ಯಾಖ್ಯಾನಕಾರ : "ನೃಪನಲ್ಲಿ ವಾದಿಯಲಿ ನರೇಂದ್ರನೆಂದೆನಿಸು" (ಮುಗಾರಾ. ೧೪೪-೨೬). ೪. ಒಂದು ಮತ ಅಥವಾ ಸಿದ್ಧಾಂತವನ್ನು ಬೋಧಿಸುವವನು : ಧರ್ಮ ವೇದಾಂತ ಸಿದ್ಧಾಂತಗಳಲ್ಲಿ ಪ್ರಮಾಣ ಪ್ರಮೇಯೋಪನ್ಯಾಸ ದೃಷ್ಟಾಂತ ಸಮನ್ವಯದಿ ಸದ್ಯುಕ್ತಿ ನಿರೂಪಕರಾದ ವಾದಿಗಳಂ (ಎವೇಕ. ೨೨೬). ೫. ನ್ಯಾಯಾಸ್ಥಾನ, ಆಯೋಗ ಮೊದಲಾದ ನ್ಯಾಯನಿರ್ಣಯಸ್ಥಾನಗಳಲ್ಲಿ ದಾವಾ ಹಾಕುವವನು ; ಫಿರ್ಯಾದಿ: ವಾದಿಯು ತನ್ನ ದಾವಾ ಅರ್ಜಿಯಲ್ಲಿ ಅಂಥಾ ಮನುಷ್ಯನನ್ನು ನೇಮಿಸಿದ್ದರೆ, ಪ್ರತಿವಾದಿಯು ಸಹ ಒಬ್ಬನನ್ನು ನೇಮಿಸಬೇಕೆಂದು . . . ತಿಳಿಸತಕ್ಕದ್ದು (ಗ್ರಾಮಾ. ೧೭) ; ವಾದಿ ಮತ್ತು ಪ್ರತಿವಾದಿಗಳು ಸಂಕಟದಿಂದ ಸುತ್ತಾಡುತ್ತಿದ್ದರು (ಪುನರು. ೨೩). ೬. ಅಸಂಬದ್ಧವಾಗಿ ಮಾತನಾಡುವವನು ; ವಿತಂಡವಾದಿ : ನಿನ್ನಂಥ ವಾದಿಗಳ ಹತ್ತಿರ ಮಾತನಾಡಿ ಉಪಯೋಗವಿಲ್ಲ (ರೂಢಿ). ೭. [ಸಂಗೀತ] ವಾದಿ, ಸಂವಾದಿ, ವಿವಾದಿ ಮತ್ತು ಅನುವಾದಿ ಎಂಬ ನಾಲ್ಕು ಮುಖ್ಯ ಸ್ವರಗಳಲ್ಲಿ ಒಂದು : ಈ ಸ್ವರವು ವಾದಿ, ಸಂವಾದಿ, ಹಾಗೆಯೇ ವಿವಾದಿ ನಂತರ ಅನುವಾದಿ (ಎಂಬ) ನಾಲ್ಕು ವಿಧದ್ದೆಂದು ಹೇಳಿದೆ (ಚತುಪ್ರ. ೩೨). 'ವಾದಿಸ್ವರ' ಪರಾ.

ವಾದಿಕೋಳಾಹಳ = ತಾರ್ಕಿಕರಲ್ಲಿ ಕೋಲಾಹಲವನ್ನುಂಟುಮಾಡುವವನು ; ಒಂದು ಬಿರುದು : ಇನ್ತು ನಿರವದ್ಯಸ್ಯಾದ್ವಾದಭೂಷಣರುಂ ಗಣಪೋಷಣಸಮೇತರುಮಾಗಿ ವಾದೀಭಸಿಂಹ ವಾದಿಕೋಳಾಹಳ ತಾರ್ಕಿಕಚಕ್ರವರ್ತ್ತಿಯೆಂಬ ನಿಜಾನ್ವಯನಾಮಂಗಳನೊಳಕೊಂಡು (ಎಕ. II (R), ೫೬೯-೩೪; 1124). ವಾದಿಚಕ್ರಾಂಕುಶ = ತಾರ್ಕಿಕರ ಸಮೂಹಕ್ಕೆ ಅಂಕುಶದಂತಿರುವವನು ; ಒಂದು ಬಿರುದು : ಪೋ ಸಾಲ್ವುದು ವಾದಿ ವೃಥಾಯಾಸಂ ವಿಬುಧೋಪಹಾಸಮನು ಮಾನೋಪನ್ಯಾಸಂ ನಿಂನೀ ತೇಥೋವಾಸಂ ಸಂದಪುದೇ ವಾದಿಚಕ್ರಾಂಕುಶನೊಳ್ (ಎಕ. II (R), ೮೧-೪೦; 12ನೆಯ ಶತ). ವಾದಿಚತುರ್ಮುಖ = ತಾರ್ಕಿಕರ ಗುಂಪಿನಲ್ಲಿ ಬ್ರಹ್ಮನಂತಿರುವವನು ; ಒಂದು ಬಿರುದು : ವಾದಿಚತುರ್ಮ್ಮುಖ ರಾಮಚಂದ್ರತ್ರೈವಿದ್ಯದೇವರಂ ವಾದಿವಜ್ರಾಂಕುಶ ಶ್ರೀಮದಕಳಂಕತ್ರೈವಿದ್ಯದೇವರುಮಾ ಪರಮೇಶ್ವರನ ಗುಡ್ಡುಗಳು (ಎಕ. II (R), ೭೧-೯೮; 1163). ವಾದಿಚೂಡಾಮಣಿ = ತಾರ್ಕಿಕರಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : [ಪೊಂಚೊಳಲ] ಕರ್ತ್ತು ವಾದಿಚೂಡಾಮಣಿ ಕ[ನ್ನೆ]ಯ ದೇವರು ಪುತ್ರಂ ಚಟ್ಟಪಾರ್ಯ್ಯಂ ಪೇಳ್ದಂ (ಸೌಂಸಾ. XX, ೭೪-೪೪; 1112). ವಾದಿವಜ್ರಾಂಕುಶ = ತಾರ್ಕಿಕರಿಗೆ ವಜ್ರಾಂಕುಶದಂತಿರುವವನು ; ಒಂದು ಬಿರುದು : ಪೋ ಸಾಲ್ವುದು ವಾದಿ ವೃಥಾಯಾಸಂ ವಿಬುಧೋಪಹಾಸಮನು ಮಾನೋಪನ್ಯಾಸಂ ನಿಂನೀ ತೇಥೋವಾಸಂ ಸಂದಪುದೆ ವಾದಿವಜ್ರಾಂಕುಶನೊಳ್ (ಎಕ. II (R), ೧೭೩-೧೫೫; 1145); ವಾದಿವಜ್ರಾಂಕುಶ ಎಂದು ಹೆಸರಾದ ಶುಭಕೀರ್ತಿಗಳು ಬೌದ್ಧರನ್ನೂ ಮೀಮಾಂಸಕರನ್ನೂ ಸೋಲಿಸಿದ್ದರು (ಕಶಾಅ. ೧೦೬). ವಾದೀಭಸಿಂಹ = ತಾರ್ಕಿಕನೆಂಬ ಆನೆಗೆ ಸಿಂಹದಂತಿರುವವನು ; ಒಂದು ಬಿರುದು : ಇನ್ತು ನಿರವದ್ಯ ಸ್ಯಾದ್ವಾದಭೂಷಣರುಂ ಗಣಪೋಷಣಸಮೇತರುಮಾಗಿ ವಾದೀಭಸಿಂಹ ವಾದಿಕೋಳಾಹಳ ತಾರ್ಕಿಕ ಚಕ್ರವರ್ತ್ತಿಯೆಂಬ ನಿಜಾನ್ವಯನಾಮಂಗಳನೊಳಕೊಂಡು (ಎಕ. II (R), ೫೬೯-೩೪; 1124). [ಸಂ.ವಾದಿನ್]

ವಾದಿತ (ಗು). ೧. ವಾದ್ಯಗಳನ್ನು ನುಡಿಸಿದ,—ಬಾರಿಸಿದ : ಯುಗಪದ್ವಾದಿತ ದೇವದುಂದುಭಿಗಳಿಂದಾಯ್ತೆಯ್ದೆ ಶಬ್ದಾತ್ಮಕಂ (ಆದಿಪು. ೧೦-೨೧); ವಾದಿತ ವಲ್ಲಕೀಗುಣರವೋದ್ಭವನೂತನದಿವ್ಯಗೀತಸಾರೋದಿತಮೋದೆ . . . ಪಾಲಿಸು ಶಾರದೆಯೆಮ್ಮ ನಾವಗಂ (ಯಾದಚಂ. ೧-೬). (ನಾ). ೨. ವಾದ್ಯಗಳನ್ನು ನುಡಿಸುವಿಕೆ,—ಬಾರಿಸುವಿಕೆ : "ವಾದಿತದೊಳ್ ತಾಳದ ಸಮನಾದುದು ಲಯಂ" (ಪಾಸೂಲೀ. ೭೯-೨೪). ೩. ವಾದ್ಯಸಂಗೀತ. [ಸಂ.]

ವಾದಿತ್ರ (ನಾ). ೧. ವಾದ್ಯ : ಕಣ್ಗೊಪ್ಪುವ ಜಯಗಜಮಂ ಲೀಲೆಯಿಂದೇಱೆ ವಾದಿತ್ರಾರಾವಂ ವಂದಿವೃಂದಧ್ವನಿ ಜಯಜಯಕೋಲಾಹಲಂ ಮಂಗಲಾಲಂಕಾರಂ ಯಾತ್ರೋತ್ಸವಪ್ರಸ್ತುತಮೆನೆ ತಳರ್ದಂ ರಾಗದಿಂ ರಾಜರಾಜಂ (ಆದಿಪು. ೧೩-೪೩). ೨. ವಾದ್ಯಸಂಗೀತ : ದಿವಿಜವಾದಕಕರಹತತತವಿತತಘನಸುಷಿರಾವನದ್ಧವಾದಿತ್ರಂ ಸಂಗೀತತೂರ್ಯಮಾಗೆ (ಶಾಂತಿಪು. ೧೦-೬೦ ವ). [ಸಂ.]

ವಾದಿರಾಜಗುಳ್ಳ (ನಾ). ಒಂದು ಬಗೆಯ ಬದನೆಯ ಕಾಯಿ : "ಕ್ಷುದ್ರವೃಂತಾಕಃ - ವಾದಿರಾಜಗುಳ್ಳ" (ಚಾಮುಂಡಾ. ೧೯-೧೦೦) ; ಮಧ್ವಮತಸ್ಥರು ಬದನೆಕಾಯಿಯನ್ನು

ನಿಷಿದ್ಧವೆಂದು ತಿರಸ್ಕರಿಸಿದ್ದರೂ ವಾದಿರಾಜರಿಂದ ಪರಿಗೃಹೀತವಾದುದೆಂದು ವಾದಿರಾಜಗುಳ್ಳವನ್ನು ಬಳಸುತ್ತಾರೆ (ರೂಢಿ). [ವಾದಿರಾಜ + ಗುಳ್ಳ]

ವಾದಿಸು (ಕ್ರಿ). ೧. ಚರ್ಚೆಮಾಡು ; ಚರ್ಚಿಸು : ಆ ಮಧುವನಾ ಕೈಟಭನ ಮುಱಿದೀ ಮಹಾತ್ಮಕನೊಡನೆ ವಾದಿಸುವೀ ಮರುಳನೇನೆಂಬೆನ್ನೆ ಶಿಶುಪಾಲಬಾಲಕನ (ಕುಮಾಸ. ೯-೩೦). ೨. ತತ್ತ್ವನಿರ್ಣಯಕ್ಕಾಗಿ ಪ್ರತಿಪಾದಿಸು, —ವಾದಮಾಡು : ಉಚಿತಾಲೋಚನೆಯಿಂದ ಶನ್ನ ನಿಜವಂ ತಾಂ ಕಾಣದೇ ವಾದಿಪಾ ವಚನಬ್ರಹ್ಮದೆ ಮುಕ್ತಿಯೇ (ಸೋಮೇಶ. ೯೮) ; ಭಾರತಿಗಳು ವಾದಿಸುತಿಹ ತಾರ್ಕಿಕರು ವಾಚಕರು ವಿನೋದಿಗಳೆಸೆದರರ್ತಿಯಲಿ (ಕಂನಿ. ೮-೨೬).

ವಾದಿಸಾಡು = ಚರ್ಚಿಸು ; ಚರ್ಚೆಮಾಡು : ಆತನ ಶಿಷ್ಯರೂ ಅಧಿಕಾರಿಯೂ ವಾದಿಸಾಡಹತ್ತಿದರು (ಧರ್ಮಾರ. ೧೫೯). [ವಾದ + — ಇಸ್ಸು]

ವಾದಿಸ್ವರ (ನಾ) = ವಾದಿ ೭ : ಒಂದು ರಾಗದ ಸ್ವರೂಪಪ್ರತ್ಯೇಕತೆ ಎತ್ತಿ ತೋರಲು ಯಾವ ಸ್ವರ ಪದೇ ಪದೇ ಉಪಯೋಗವಾಗುವುದೋ ಆ ಸ್ವರ, ವಾದಿಸ್ವರ, ಈ ಸ್ವರವೇ ಆ ರಾಗದ ಜೀವಸ್ವರವೂ ಹೌದು (ಸಂಗೀಚಂ. ೨೦). [ಸಂ.]

ವಾದೀಂದ್ರ (ನಾ). ವಾದಿಗಳಲ್ಲಿ ಶ್ರೇಷ್ಠನಾದವನು, - ಪ್ರಸಿದ್ಧನಾದವನು : ಸ್ವಸಂವಿತ್ಪರಂಪರೆ ಪೋಕುಂ ಪ್ರಳಯಕ್ಕೆ ತತ್ಕ್ಷಣಕ ಮಿಥ್ಯಾವಾದಿವಾದೀಂದ್ರರಿಂ (ಶಾಂತಿಪು. ೮-೧೧೫). [ಸಂ.]

ವಾದು 'ಬಾದು' ನೋ.

ವಾದುಗುಟ್ಟು 'ಬಾದುಗುಟ್ಟು' ನೋ.

ವಾದುಗೆಯ್ 'ಬಾದುಗೆಯ್' ನೋ.

ವಾದ್ಯ (ನಾ). ೧. ನುಡಿಸುವ, ಊದುವ ಅಥವಾ ಹೊಡೆದು ಬಾರಿಸುವ ವೀಣೆ, ಕೊಳಲು, ತಬಲ ಮುಂತಾದ ಸಂಗೀತ ಸಾಧನ : ವಾದ್ಯಕ್ಕೆ ಬಂಧವಲ್ಲದೆ ನಾದಕ್ಕೆ ಬಂಧವುಂಟೆ (ಸಕವ. ಕ. ೧, ೪೬೩-೪೪) ; ಮೊಳಗಿದವು ಬಱಸಿಡಿಲ ಕಣ್ಗೆಯ ಕಳಚಿದಂತಿರೆ ವಾದ್ಯಚಯವು (ಕುಮಾರ್ಯ. ೧೧-೫). ೨. ವಾದ್ಯಸಂಗೀತ. ೩. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಕುಸುಮ ಶರಬಾಣಮುಂದ್ರಿಯವಿಷಗಣ ರಥ ಪಂಚಭೂತಮಾರ್ಗಣಸಹಿತಂ ಶಶಿಮುಖಿಯರು ವಸುಧೀಶರು ಸಕಲಕುಶಲಭಕ್ಷಗಳ್ ವಾದ್ಯವೈದಱ ಪೆಸರುಂ (ಭಾಸ್ಕರ. ೭೩-೯).

ವಾದ್ಯವಿದ್ಯಾಧರ = ವಾದ್ಯಗಳನ್ನು ನುಡಿಸುವುದರಲ್ಲಿ ವಿದ್ಯಾಧರನಂತಿರುವವನು ; ಒಂದು ಬಿರುದು : ವಾದ್ಯವಿದ್ಯಾಧರ [ನೊ]ಳ್ಪರಸಂಕ[ಶಂಕ]ರಂ ಕಪ್ಪುರವರ್ಷನ್ರಿಪಗೆ ನೆಗರ್ದ್ದನೆಟೆಗಮಹೀಶ ತದನುಜ (ಸೌಂಶಾ. XX, ೫೦-೧೫ ; 11ನೆಯ ಶತ). [ಸಂ.]

ವಾದ್ಯಕಾರ (ನಾ). ವೀಣೆ ಮೊದಲಾದ ಸಂಗೀತವಾದ್ಯಗಳನ್ನು ಬಾಜಿಸುವವನು, - ನುಡಿಸುವವನು : ಇಂದು ನಾವು... ಒಂದು ಸಂಗೀತಕಾರ್ಯಕ್ರಮವನ್ನು ನೋಡಿದಲ್ಲಿ ನಮಗೆ ಕಾಣುವುದು ತಂಬೂರಿ, ಗಾಯಕರು ಮತ್ತು ವಾದ್ಯಕಾರರು (ಭಾರದ. ೫೬೫). [ಸಂ.]

ವಾದ್ಯಕೋಣ (ನಾ). [ಸಂಗೀತ] ವಾದ್ಯಗಳನ್ನು ನುಡಿಸುವ ಕೋಲು, ಕುಡುಪು, ಮುಂತಾದ ಸಾಧನ : "ಅಪಕೃತ್ಯಂ ವಾದ್ಯಕೋಣಾಂ ಗುಡಂ ಅಪಮಾನಂ ಪಡೆಯಂತಕಂ ಮದನಶಿಕ್ಷೋಪಾಯ ದಂಡಾಹ್ವಯಂ" (ನಾನಾರ. ೧೨೮). [ಸಂ.]

ವಾದ್ಯಗಾರ (ನಾ). = ವಾದ್ಯಕಾರ : ವಾದ್ಯಗಾರರೆಲ್ಲರೂ ಒಂದು ಬಾಗಿಲಲ್ಲಿ ಕುಳಿತರು (ಕವಿಕ. ೪೯); ಅವುಗಳ ಮಧ್ಯೆ ನೃತ್ಯಗಾರರ, ನೃತ್ಯಗಾತಿಯರ, ವಾದ್ಯಗಾರರ ಚಿತ್ರಗಳು ಇತ್ಯಾದಿ ಕೆತ್ತನೆ ಇರುತ್ತದೆ (ನೋಳಂಬ. ೧೧೫).

[ವಾದ್ಯ + - ಗಾರ (<- ಕಾಱ)]

ವಾದ್ಯಗೋಷ್ಠಿ (ನಾ). ಅನೇಕ ವಾದ್ಯಗಳ ವಾದನಕಚೇರಿ : ವಾದ್ಯಗೋಷ್ಠಿಯಲ್ಲಿಯೂ ಇತರ ಭಾಗಗಳ ನೃತ್ಯಶಾಲೆಗಳಲ್ಲಿಯೂ... ಅನೇಕ ಬಗೆಯ ಘನವಾದ್ಯಗಳು ಕಾಣಬರುತ್ತವೆ (ಭಾರದ. ೫೪೫). [ಸಂ.]

ವಾದ್ಯಭಾಂಡ (ನಾ). ೧. (ಜಲತರಂಗವೆಂಬ) ವಾದ್ಯಕ್ಕೆ ಬಳಸುವ ಬಟ್ಟಲು. ೨. ವಾದ್ಯಸಮೂಹ. [ಸಂ.]

ವಾದ್ಯಮೇಳ (ನಾ). ವಾದ್ಯಗಳ ಸಮೂಹ, - ಗುಂಪು : ಈ ವೀರಗಾಥವನ್ನು ವಾದ್ಯಮೇಳದೊಂದಿಗೆ ಹಾಡದ ಮನೆಯಿಲ್ಲ, ಗ್ರಾಮವಿಲ್ಲ (ಭಾರದ. ೪೫೭).

[ಸಂ.ವಾದ್ಯಮೇಲ]

ವಾದ್ಯವಿತಾನ (ನಾ). = ವಾದ್ಯಮೇಳ : ವರಸುದತಿಯರು ಸೂಸಿದರು ಸೇಸೆಯನುದಿತ ಮಂಗಳಘೋಷವಾದ್ಯವಿತಾನರಭಸದಲಿ (ಕುಮಾವಿ. ೯-೨೪). [ಸಂ.]

ವಾದ್ರೀಣಸ (ನಾ). ಮೂಗಿನ ಮೇಲೆ ಕೊಂಬುಳ್ಳ ಒಂದು ಬಗೆಯ ಪ್ರಾಣಿ ; ಖಡ್ಗಮೃಗ; ಘೇಂಡಾಮೃಗ. [ಸಂ.]

ವಾನ (ಗು). ೧. (ಜೋರಾಗಿ) ಬೀಸಿದ. ೨. ಒಣಗಿದ ; ಶುಷ್ಕವಾದ. ೩. ಕಾಡಿಗೆ ಸಂಬಂಧಸಿದ. (ನಾ). ೪. ಬೀಸುವಿಕೆ. ೫. ಒಣಗಿದ ಅಥವಾ ಒಣಗಿಸಿದ ಹಣ್ಣು, ಕಾಯಿ ಮುಂತಾದವು : "ವಾನಂ, ಶುಷ್ಕಂ - ಈ ೨ ಒಣಗಿದ ಕಾಯ್" (ಹಲಾಯು. ೩೧-೩೫). ೬. ಮರಗಿಡಗಳ ಗುಂಪು. ೭. ನೇಯುವಿಕೆ ಅಥವಾ ಹೊಲಿಯುವಿಕೆ. ೮. ಬದುಕುವಿಕೆ ; ಜೀವಿಸುವಿಕೆ. ೯. ಗತಿ ; ಚಲನೆ. ೧೦. ಸುಗಂಧದ್ರವ್ಯ. ೧೧. ಕರ್ಮದ ಫಲ. ೧೨. ಕೊರತೆಯಿಲ್ಲದಂಥದು; ಅಭಿವೃದ್ಧಿಯುಳ್ಳದು. ೧೩. ಬೆಟ್ಟದ ತಪ್ಪಲು ; ಸಾನು : "ಅಕ್ಷೀಣ ಶಲಾಟು ಕರ್ಮಫಲ ಸಾಧನ ವಾನಶಬ್ದ" (ನಾನಾರ. ೯೧). ೧೪. ಆನೆಯ ಮದ : "ಕರಿಯ ಮದ ಗಿರಿಯ ತಪ್ಪಲು ವರಚಲ್ಲುವುದಾರಕರ್ಮಗಳ್ ಕಾಯಾಱುಂ ಧರೆಯೊಳು ವಾನಾಖ್ಯಂ" (ನಾನಾಕಂ. ೧೧೩). ೧೫. ಮಾದಕಪಾನೀಯ : "ಮೈರೇಯಮಾಸವಂ . . . ವಾನಂ ಕಲ್ಯಂ ವಾರುಣಿ ಕಾದಂಬರಿಯದು . . . ಕಳ್ಳುಂ" (ವಸ್ತುಕೋ. ೯೨-೫). ೧೬. ಗೋಡೆಯಲ್ಲಿ ಕೊರೆದ ತೂತು ; ಕನ್ನ. ೧೭. (ಬಿದಿರಿನ) ಕಡ್ಡಿಯ ಚಾಪೆ. [ಸಂ.]

ವಾನಪ್ರಸ್ಥ (ನಾ). ೧. ಬ್ರಾಹ್ಮಣನು ಆಚರಿಸಬೇಕಾದ ಚತುರಾಶ್ರಮಗಳಲ್ಲಿ ಮೂರನೆಯದು ; ದ್ವಿಜನು ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮಗಳನ್ನು ತೀರಿಸಿಕೊಂಡು ತಪಸ್ಸು ಮತ್ತು ಪೂಜಾದಿ ಕಾರ್ಯಗಳಲ್ಲಿ ನಿರತನಾಗಲು ಕಾಡಿಗೆ ಹೋಗಿ ಜೀವಿಸುವುದು : ಪುರುಕುಲಜರ್ ಬಳಿಕಂ ವಾನಪ್ರಸ್ಥಕ್ಕಳವಡೆ ತಾಂ ವೃಕ್ಷಮೂಲಮಂ ಮನೆಗೈವರ್ (ಶಾಖಂತ. ೧೦೬-೧೮೬) ; ಮನುಷ್ಯನ ಆಧ್ಯಾತ್ಮಸಂಪತ್ತಿಗೆ ಅನುಕೂಲಿಸುವ ಜೀವನದ ಹಂತಗಳಿಗೆ ಆಶ್ರಮಗಳೆಂದು ಹೆಸರು. ಇವು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸವೆಂದು ನಾಲ್ಕು (ಭಾಕತ್ತ. ೭೮). ೨. ಚತುರಾಶ್ರಮಗಳಲ್ಲಿ ಮೂರನೆಯ ಆಶ್ರಮದಲ್ಲಿ ಇರುವವನು : ಬ್ರಹ್ಮಚಾರಿಯುಂ ಗೃಹಸ್ಥನುಂ ವಾನಪ್ರಸ್ಥನುಂ ಭಿಕ್ಷುಕನುಮೆಂದು ನಾಲ್ವರಪ್ಪರ್ (ಚಾವುಂಪು. ೨೨೭); ಬ್ರಹ್ಮಚಾರಿಯುಂ ಗೃಹಸ್ಥನುಂ ವಾನಪ್ರಸ್ಥನುಂ ಭಿಕ್ಷುಕನುಮೆಂದು ಜೈನಾಗಮದೊಳ್ ಆಶ್ರಮಂ ಚತುರ್ವಿಧಂ (ತತ್ತ್ವಪ್ರ. ೨೮೭). ೩. ಮುತ್ತುಗದ ಮರ. ೪. ಹಿಪ್ಪೆಯ ಮರ : "ಮಧೂಕಃ, ಗುಡಪುಷ್ಪಃ, ಮಧುದ್ರುಮ, ವಾನಪ್ರಸ್ಥಃ, ಮಧುಷ್ಠೀವಃ- ೫ ಯಿಪ್ಪೇಗಿಡ, ಹಿಪ್ಪೇಮರ" (ಸಿದ್ಧಾಂತಿ. ೧೧೮). [ಸಂ.]

ವಾನಬ್ಯಂತರ (ನಾ). [ಜೈನ] ಭವನವಾಸಿಗ, ವಾನವ್ಯಂತರ, ಜ್ಯೋತಿಷ್ಕ ಮತ್ತು ಕಲ್ಪವಾಸಿ ಎಂಬ ನಾಲ್ಕು ವಿಧವಾದ ದೇವತೆಗಳಲ್ಲಿರುವ ಒಂದು ವರ್ಗ ಮತ್ತು ಆ ವರ್ಗಕ್ಕೆ ಸೇರಿದ ದೇವತೆ : ಕಿನ್ನರ ಕಿಂಪುರುಷ ಮಹೋರಗ ಗಂಧರ್ವ ಯಕ್ಷರಾಕ್ಷಸಭೂತಪಿಶಾಚಾಭಿಧಾನದಿನಷ್ಟವಿಧರಪ್ಪ ವಾನಬ್ಯಂತರರುಂ... ಒಂದಾಗಿ (ಸಾಬುಮಾ. ೮-೬೬ ಪ). [< ವಾನವ್ಯಂತರ]

ವಾನರ (ನಾ). ಕಪಿ ; ಮಂಗ : ವಾನರವಾರಣೋಷ್ಟ್ರಖರಮತ್ಸ್ಯಕಲೇವರ ಪೂತಿಗಂಧಮೇನೇನೊಳವುಳ್ಳುವೊಂದೆಡೆಗೆ ಬಂದುಮಿಮಂದಿನ ಮೆಯ್ಯ ಗಂಧದುದ್ದಾನಿಗೆ ವಾರದೆಂಬಿನಮದೇಂ ನೆಱೆ ಪೋಲ್ತುದೊ . . . ಪಾಂಗವಂದಿರಾ (ಆದಿಪು. ೫-೯೦) ; ಶಿಂಶುಮಾರಕನ ವಾನರನ . . . ಗುಣವಾ ನರೇಂದ್ರನೊಳಿರಲುಬೇಹುದು (ಕುಮಾಕು. ೩-೧೦೯). [ಸಂ.]

ವಾನರಕುಲ (ನಾ). ೧. ಕಪಿಯ ವಂಶ ; ಕಪಿಕುಲ : ಏನು ಮರುಳಾದೆಯೇ ಎಲೆ ಭಾರತೀ ವಾನರಕುಲದೊಳಗೆ ಶ್ರೇಷ್ಠನಾದವಗೆ (ಪುರಂದ. ಧಾ. ೧-೧೫ ಅನುಪಲ್ಲವಿ).

೨. ಕಪಿಕುಲಕ್ಕೆ ಸೇರಿದವನು : ವಾನರಕುಲಂ, ನರವರಂ, ವಾಲಿಯ ಸಹೋದರಂ ಸುಗ್ರೀವನಲ್ತೆ ಆ ಓಜೋನ್ನಿತಂ? (ಶ್ರೀರಾಮಾ. ೪೭೫-೧೧). [ಸಂ.]

ವಾನರಚಿಹ್ನ (ನಾ). ೧. ತನ್ನ ಬಾವುಟದಲ್ಲಿ ಕಪಿಯ ಲಾಂಛನವನ್ನುಳ್ಳವನು ; ಅರ್ಜುನ : ವಾನರಚಿಹ್ನ ನಿನ್ನ ಕುಲದೇವತೆಯುಂ ನೆನೆಯೆಂದೆನುತ್ತೆ ಸಂಧಾನಿಸಿ ನಾರಿಯೊಳ್ ವಿಷಮಬಾಣಮನಾರ್ದಿಸೆ (ಮಹಾನೇ. ೧೨-೨೫೯). ೨. [ಜೈನ]ಸುಗ್ರೀವ : ವಾನರಚಿಹ್ನಂ ತನ್ನಭಿಮಾನಂ ನಿಂದತ್ತು ಪೂಣ್ಕೆ ಸಂದತ್ತೆನಗೆಂದೇನೆಸೆದನೊ ದಶವದನಂ ಜಾನಕಿಯಂ ಲಂಕೆಗುಯ್ದನೆಂದಱಿಪಲೊಡಂ (ವಂಠಾಮಾ. ೧೦-೩೨). [ಸಂ.]

ವಾನರಧ್ವಜ (ನಾ). ೧. ಕಪಿಯ ಲಾಂಛನವಿರುವ ಬಾವುಟ ; ಕಪಿಧ್ವಜ : ತಳತಳಿಸಿತಾ ಬೆಂಕೆ ತುಂತುರ್‌ಮುಗಿಲ ನಡುವೆ ವಾನರಧ್ವಜದ ಚಿಹ್ನೆಯ ಚಿತ್ರದಾಕಾರಂ (ಶ್ರೀರಾಮಾ. ೬೯೯-೧೦೧೩). ೨. ಕಪಿಧ್ವಜದ ಲಾಂಛನವುಳ್ಳವನು : ಮಹಾಸಾಮಂತ XXX ವಾನರಧ್ವಜ ವೃಷಭಲಾಂಛನ [ಶೋ|ಣಿತಪುರಾಧೀಶ್ವರ . . . ಶ್ರೀಮತ್ ಕಚ್ಚಾಗನಿರ್ಗುನ್ನದೇವನು (ಎಕ. IV(R), ಚಾಮರಾ. ೧೧೪-೨;ಸಂ.10ನೆಯ ಶತ). ೩. ಅರ್ಜುನ.

[ಸಂ.]

ವಾನರಧ್ವಜಿನಿ (ನಾ). ಕಪಿಗಳ ಸೈನ್ಯ : ದಶತಿರಗೆ ಘೇ ಎಂದು ರಾಕ್ಷಸಧ್ವಜಿನಿ ; ದಶರಥಸುತಗೆ ಘೇ ಎಂದು ವಾನರಧ್ವಜಿನಿ ! (ಶ್ರೀರಾಮಾ. ೭೫೫-೩೭೫). [ಸಂ. ವಾನರಧ್ವಜಿನೀ]

ವಾನರಪತಾಕ (ನಾ). = ವಾನರಚಿಹ್ನ ೧ : ಹರಿಯ ಚಕ್ರವ ತುಡುಕಿಸುವೆ ವಾನರ ಪತಾಕನ ರಥವ ಹಿಂದಕೆ ಮುರಿಯಲಿಸುವೆನು (ಕುಮಾಧೀ. ೧-೪೧). [ಸಂ.]

ವಾನರಬಲ (ನಾ). = ವಾನರಧ್ವಜಿನಿ : ಜಲದಕಾಲಮಂ . . . ವಾನರಬಲಸಹಿತಂ ತೇಜೋನಿಧಿ ದಶರಥತನೂಭವಂ . . . ಋಷ್ಯಮೂಕನಗದೊಳ್ ಕಲಿದಂ (ಪಂಚಮಾ. ೨೩೭-೧೩) [ಸಂ.]

ವಾನರರೂಪು (ನಾ). ಕಪಿಯ ಆಕೃತಿ : ಹನುಮಂ . . .ವಾನರವಿದ್ಯೆಯಂ ತಳೆದು ವಾನರರೂಪುಮನಾಂತು ವಿದ್ವಿಷತ್ಸೇನೆಯೊಳಾನೆಯಂ ಕುದುರೆಯಂ . . .ತವೆ ಕೊಂದಂ (ಪಂಠಾಮಾ. ೧೦-೨೧೪). [ವಾನರ + ರೂಪು]

ವಾನರವಿದ್ಯೆ (ನಾ). [ಜೈನ] ವಾನರರೂಪವನ್ನು ಹೊಂದುವ ಒಂದು ಬಗೆಯ ವಿದ್ಯೆ : ಹನುಮಂ . . .ವಾನರವಿದ್ಯೆಯಂ ತಳೆದು ವಾನರರೂಪುಮನಾಂತು ವಿದ್ವಿಷತ್ಸೇನೆಯೊಳಾನೆಯುಂ ಕುದುರೆಯುಂ . . . ತವೆ ಕೊಂದಂ (ಪಂಠಾಮಾ. ೧೦-೨೧೪).

[ಸಂ. ವಾನರವಿದ್ಯಾ]

ವಾನರಸತ್ತ್ವ (ನಾ). [ಕಾಮಶಾ] ಸ್ತ್ರೀಯರ ಹನ್ನೆರಡು ಬಗೆಯ ಮನೋಧರ್ಮಗಳಲ್ಲಿ ಒಂದು ; ಕಪಿಗಳಂತೆ ಚಂಚಲಸ್ವಭಾವದಿಂದ ಕೂಡಿರುವುದು : ಕಣ್ಗಳ ತಿರುಗುತಿರ್ಪಳು ಉಗುರೊತ್ತು ಪಲ್ಕಚ್ಚುಗಳಿಗೆ ಪ್ರಿಯಳು ಚಂಚಲಚಿತ್ತದವಳು ಇವಳು ವಾನರಸತ್ತ್ವದ ಸ್ತ್ರೀ (ಕಾಮಶಾ. ೨೧೬). [ಸಂ.]

ವಾನರಿ (ನಾ). ೧. ಹೆಣ್ಣುಕೋತಿ ; ಹೆಣ್ಣುಕಪಿ : ನೋಡು, ನಡೆ ಒಳಗೆ, ಅತ್ತಿಗೆಗೆ ಬದಲೊರ್ವ ವಾನರಿಯ (ಶ್ರೀರಾಮಾ. ೧೪೮-೧೪೫); ಅವನು ಹೆಂಗಸನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿದರೆ ಅದು ವಾನರಿಯಾಗುತ್ತದೆ (ಬಾಳಿವ. ೧೧). ೨. ನಸುಗುನ್ನಿಗಿಡ : "ವಾನರೀ - ನಸುಕುನ್ನಿ" (ಓಷಧಿ. ೧೫೦). [ಸಂ. ವಾನರೀ]

ವಾನವ್ಯಂತರ (ನಾ). = ವಾನಬ್ಯಂತರ : ಯಾನಾಮಾನಾರೂಢಕಲ್ಪಜಜ್ಯೋತಿಷ್ಕ ವಾನವ್ಯಂತರಭವನಾಮರನಿಕಾಯಪರಿವೇಷ್ಟಿತಂ . . . ಅನೇಕಾಲಂಕಾರರತ್ನ ಪ್ರಭಾಪ್ರಸರದೊಳಂ ಗಗನತಳಮನಳಂಕರಿಸಿ (ಆದಿಪು. ೧೧-೧೪ ವ) ; ದೇವಗತಿ ನಾಲ್ಕಕ್ಕುಮೆಂತೆನೆ ಭವನವಾಸಿಗ ವಾನವ್ಯಂತರ ಜ್ಯೋತಿಷ್ಕ ಕಲ್ಪವಾಸಿ ಭೇದಭಿನ್ನತ್ವದಿಂ (ಶಾಂತಿಪು. ೧೨-೬). [ಸಂ.]

ವಾನವ್ಯಂತರಿಗ (ನಾ). = ವಾನಬ್ಯಂತರ : ಭೇರೀರವದಿಂ ವಾನವ್ಯಂತರಿಗರುಂ . . . ಘಂಟಾಟಂಕಾರದಿಂ ಕಲ್ಪಾಮರರುಮಱಿದು ತಂತಮ್ಮಾಸನಂಗಳಿಂದಿಟ್ಟಿದು ತೀರ್ಥಕರಂಗೆ ಕರಂಗಳಂ ಮುಗಿಯೆ (ಆದಿಪು. ೪-೭ ವ). [ವಾನವ್ಯಂತರ + - ಇಗ]

ವಾನಸ್ಪತ್ಯ (ನಾ). (ಮಾವು ಮೊದಲಾದ) ಹೂವುಗಳಿಂದ ಕಾಯಾಗಿ ಹಣ್ಣುಬಿಡುವ ಮರ : "ಪೂವಾಗಿ ಕಾಯಹ ಮರನಂ ವಾನಸ್ಪತ್ಯಮೆಂಬುದು" (ಹಲಾಯು. ೩೦-೨೫). [ಸಂ.]

ವಾನಾಯು (ನಾ). ೧. ಭಾರತದ ವಾಯವ್ಯದಿಕ್ಕಿನಲ್ಲಿರುವ ಒಂದು ದೇಶ. ೨. ಜಿಂಕೆ. [ಸಂ.]

ವಾನಾಯುಜ (ನಾ). ವಾನಾಯು ದೇಶದಲ್ಲಿ ಹುಟ್ಟಿದ ಕುದುರೆ : ಆಜಾನೇಯಂ ವಿನುತಕುಲೇಜಾತಂ ತುರಗಸಮಿತಿ ಬಾಹ್ಲೀಕ ಕಾಂಭೋಜಹಯಂ ವಾನಾಯುಜ ವಾಜಿಕುಳಂ ಪಾರಸೀಕಮೆಂದಱಿಗವಱೊಳ್ (ವಸ್ತುಕೋ. ೬೬-೯); ಲಾಯದಲಿ ಲಂಬಿಸಿದವೊಲು ವಾನಾಯುಜದ ಸಾಲೆಸೆದುದು (ಕುಮಾದ್ರೋ. ೧೭-೯). [ಸಂ.]

ವಾನೀರ (ನಾ). ಒಂದು ಬಗೆಯ ಬೆತ್ತ ; ಲಾಳದ ಗಿಡ : "ವಾನೀರಃ . . . ವೇತಸಃ- ಈ ೫ ಹ(ಬ್ಲೆ)ಚ್ಚೆಯ ಮರಂ" (ಹಲಾಯು. ೩೩-೪೮). [ಸಂ.]

ವಾನೇಚರ (ಗು). ವನದಲ್ಲಿ ತಿರುಗುವ, -ಅಲೆದಾಡುವ : ನಿರ್ಮಳಜಳಯಚಿಯಂ ಸ್ಫಾಟಿಕಗ್ರಾವಬದ್ಧಾವನಿಯೊಳ್ ವಾನೇಚರಸ್ತ್ರೀಭ್ರಮಮನತಳನೀಳಾತ್ಮಪಾಂಚಾಳಿಕಾ ದರ್ಶನದೊಳ್ ತಾಳುತ್ತಮೆತ್ತಂ ಸುಟಿವುದು ಮಹಿಭೃದ್ಗೇಹದೇಣೇಸಮೂಹಂ (ಚಂದ್ರಪ್ರ. ೧-೧೪೭). [< ಸಂ. ವನೇಚರ]

ವಾನೇಯ (ಗು). ೧. ಕಾಡಿನಲ್ಲಿರುವ ; ಅರಣ್ಯದ : 'ವಾನೇಯನಾಗ' ಪರಾ. ೨. ನೀರಿಗೆ ಸಂಬಂಧಿಸಿದ. (ನಾ). ೩. ಒಂದು ಬಗೆಯ ಸುವಾಸನೆಯ ಹುಲ್ಲು ; ನಾಗರಮುಸ್ತೆ : "ವಾನೇಯಂ-ಗೇಱು" (ಓಷಧಿ. ೧೫೦). ೪. ಒಂದು ಜಾತಿಯ ಕುದುರೆ ; ವಾನೇಯಪ್ರದೇಶಕ್ಕೆ ಸೇರಿದ ಕುದುರೆ : ಬಿಸಕಾಂಭೋಜಕ ಬಾಹ್ಲೀಕ ಸ್ಕಂಧವಾರಬ್ಧ ತೈತಿಲಂ ವಾನೇಯಂ ಪೆಸರ ಕ್ಷೇತ್ರದ ಹಯಕಾ ಪೆಸರೆ ಪೆಸರ್ ಜಾತಿಗಳ್ ಗುಣಾಧಾರಂಗಳ್ (ಅಶ್ವಶಾ. ೬-೭೬). [ಸಂ.]

ವಾನೇಯನಾಗ (ನಾ). ಕಾಡಾನೆ : ವಳಚ್ಚಂದನಶಾಖಾಂದೋಳದಿಂದಂ ಚಟಿತಚಟಿತ ಮಾಯ್ತುಚ್ಚರತ್ಕೀಚಕಪ್ರಸ್ವನಿತಂ ವಾನೇಯನಾಗಸ್ಫುಟಿತಕಟಮದಾಮೋದಭಾರಂ ಸಮಾರಂ (ಅರ್ಧನೇ. ೫-೧೬). [ಸಂ.]

ವಾನ್ಪಯಿರು (ನಾ). ಮಳೆಯ ನೀರಿನಿಂದ ಬೆಳೆಯುವ ಬೆಳೆ ; ಕುಷ್ಮಿಬೆಳೆ : ಯಾ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾನ್‌ಪಯಿರು ಪುನ್‌ಪಯಿರು . . . ಕಟಳೆವಟ ವಿರಿ ಮಿಾನಬೆಲೆ ಸಂತೆ ಉಂಬಾದ ಹಲ ಉಪಾಧಿಗಳೂ ಸಹ ಸೇರ್ದಿ ಕೊಟ್ಟಿವಾಗಿ (ಸ್ವೋಗ್ರಾ. IX-ii, ಅಜ-೭ ; 1470). [<— ತಮಿ. ವಾನ್ಪಯಿರ್]

ವಾಪನ (ನಾ). ೧. ನೆಲದಲ್ಲಿ ಬೀಜವನ್ನು ಬಿತ್ತುವಿಕೆ. ೨. ಕೂದಲನ್ನು ಬೋಳಿಸುವಿಕೆ ; ಮುಂಡನ ಮಾಡುವಿಕೆ. ೩. ಬಟ್ಟೆಯನ್ನು ನೇಯುವಿಕೆ.

[ಸಂ.]

ವಾಪರಿಸು (ಕ್ರಿ). ಬಳಕೆಗೆ ತರು ; ಉಪಯೋಗಿಸು : ಆಮೇಲೆ ಅದನ್ನು ವಾಪರಿಸುವವರು ಏನೂ ತಕರಾರಿಲ್ಲದೆ, ಮಾಲಿಕರಿಗೆ ಅದನ್ನು ನವಾಸಮಾಡಿ ವಾಪಸ ಕೊಡದೆ ಇದ್ದರೆ ಪುಣ್ಯ (ಸಾಹ್ಯಾ. ೨೬).

[ವಾಪರ್ಯು (P <— ಮರಾ. ವಾಪರ್) + – ಇಸ್ಯು]

ವಾಪಸ್ 'ವಾಪಸು' ನೋ.

ವಾಪಸು, ವಾಪಸ್, ವಾಪಸ್ಸು (ಅ). ಮರಳಿ ; ಹಿಂದಕ್ಕೆ : ಅಸಲು ಸನದು ಶ್ರೀಸ್ವಾಮಿಗಳವರ ಮಠಕೆ ವಾಪಸು ಕೊಡುವುದು (ಮೈಲಾ. ೧೫೩೪, ೫೨-೧೬ ; 1812); ರೂಪಾಯಿಗಳನ್ನೆಲ್ಲ ವಾಪಸು ಪಡೆಯಬೇಕೆಂಬ ಇಚ್ಛೆ ಅವರಿಗಿರಲಿಲ್ಲ (ಪಾಂಡೇ. ೪೪). **ವಾಪಸ್** : ದಹನಕ್ರಿಯೆ ಮುಗಿಸಿಕೊಂಡು ಜನರೆಲ್ಲ ವಾಪಸ್ ಬಂದರೂ ಇನ್ನೂ ಆಡುತ್ತಲೇ ಇದ್ದ (ವಾಡಿಗೇ. ೧೨). **ವಾಪಸ್ಸು** : ಅವರು ವಾಪಸ್ಸು ಮನೆಗೆ ಬಂದಾಗ ಸುಸ್ತಂದ, ಶೇಬಿರ ಬಂದಿರಲಿಲ್ಲ (ದೋಬ್ಬಿ. ೩೦); ಮದುವೆ ಮುಗಿದ ನಂತರ ಎಲ್ಲರೂ ವಾಪಸ್ಸು ಮನೆಗೆ ಬಂದರು (ಕೊಪೆಟ್ಲ. ೫೮).

ವಾಪಸ್‌ಮಾಡು =. (ಒಮ್ಮೆ ಕೊಟ್ಟ ವಸ್ತು, ಹಣ ಮುಂತಾದುವನ್ನು) ಹಿಂದಕ್ಕೆ ಕೊಡು ; ಹಿಂದಿರುಗಿಸು : ಈ ರೀತಿ ಪ್ರತಿಯನ್ನು ಓದಿ ಪರೀಕ್ಷಿಸಿದ ನಂತರ ಮುದ್ರಣಾಕ್ಷರಸಂಯೋಜಕನಿಗೆ ವಾಪಸ್ ಮಾಡಬೇಕು (ಮುದ್ರ. ೬೧). **ವಾಪಸಾತಿ**= ಮರಳಿಬರುವುದು ; ಹಿಂತಿರುಗುವುದು : ಒದಗಿಸಿದ ಹಣಕಾಸಿನ ವಾಪಸಾತಿಗೆ ಸರ್ಕಾರದ ಗ್ಯಾರಂಟಿಯನ್ನು ಕೋರುವುದೂ ಇಲ್ಲ ; ಒಪ್ಪುವುದೂ ಇಲ್ಲ (ಅಂಚೆಕಾ. ೧೧೬).

[<— ಪಾರ. ಹಿಂ. ಮರಾ. ವಾಪಸ್]

ವಾಪಸ್ಸು 'ವಾಪಸು' ನೋ.

ವಾಪ್ಪಿ (ನಾ). ೧. ಬೀಜವನ್ನು ಬಿತ್ತುವಿಕೆ. ೨. ಬೀಜವನ್ನು ಬಿತ್ತುವ ಸಲಕರಣೆ; ಕೂರಿಗೆ : "ವಾ[ವಾಕಾಂ. ವ್ಯಾ]ಪಿ ಕೂಱಿಗೆ ಸದ್ದೆಯಡ್ಡೆಯಕ್ಕುಂ" (ಮಂಗರಾ. ೧೦೯-೧). ೩. ಒಂದು ಬಗೆಯ ಆಯುಧ : ಯಾವ ಯಾವ ಆಯುಧಂಗಳು ಎಂದರೆ ಗರಗಸ . . . ವಾಪಿ ಗಂಡುಗತ್ತರಿ (ಧನಸಿ. ೧೭-೫). [ಸಂ. ವಾಪಿನ್]

ವಾಪ್ಪಿ (ನಾ). ೧. ಬಾವಿ ; ಕೂಪ : ಆ ಮಾನಸ್ತಂಭಂಬರಮೇಕೈಕ ಜಿನಗೃಹಾಂತರಿತ ವಾಪೀಕೂಪಕಮಲಾಕರಮಂಡಿತವನಷಂಡಮಧ್ಯಗತಪಂಚಪಂಚಪ್ರಾಸಾದಪಂಕ್ತಿಗಳಿಂದಂ (ಅದಿಪು. ೭-೨೦ ವ); ಕ್ಷಿತಿಜಂ ಹತ್ತಱೊಳಿನಜಂ ಚತುರ್ಥದೊಳ್ ಚಂದ್ರನಸ್ತದೊಳ್ ನಿಲೆ ವಾಪೀಪತನದೆ . . . ಮಡಿಗುಂ (ಜಾತಕಿ. ೨೩-೪). ೨. ಚಿಕ್ಕಹೊಂಡ ; ಕುಂಟೆ : "ನಿಪಾನಂ, ಉದಪಾನಂ, ವಾಪೀ, ಆಹಾವಃ- ಈ ೪ ಬೆಂಚೆ" (ಹಲಾಯು. ೧೧೩-೬೨). ೩. [ಜ್ಯೋತಿ] ಜನನಕಾಲಕ್ಕೆ ಲಗ್ನಕುಂಡಲಿಯಲ್ಲಿ ಇರುವ ಗ್ರಹಗಳ ಸ್ಥಾನದಿಂದ ತಿಳಿದುಕೊಳ್ಳುವ ಆಕೃತಿಯೋಗಗಳಲ್ಲಿ ಒಂದು : ಗ್ರಹಂಗಳಿಲ್ಲದೆ ಬಱದಾಗೆ ಕೇಂದ್ರಮನಿತುಂ ದೊರೆಕೊಂಡುದೆ ವಾಪಿನಾಮದಿಂ (ಜಾತಕಿ. ೧೩-೬). [ಸಂ. ವಾಪಿ, ವಾಪೀ]

ವಾಪಿತ (ಗು). ೧. ಬೀಜವನ್ನು ಬಿತ್ತಿದ. ೨. ಕೂದಲನ್ನು ಬೋಳಿಸಿದ. [ಸಂ.]

ವಾಪಿತೆ (ನಾ). ೧. ಕೂದಲನ್ನು ತೆಗೆಸಿಕೊಂಡವಳು ; ವಿಧವೆ. ೨. ಸಂನ್ಯಾಸಿನಿ. [ವಾಪಿತ + - ಎ]

ವಾಪೀಮೂಲ (ನಾ). ಬಾವಿಯ ಮೂಲ,- ಬುಡ : ಪದ್ಮರಾಗಮಣಿಯಂ ಗೃಧ್ರಂ ತಂದು ವಾಪೀಮೂಲದ ವಂಶಸ್ತಂಭದೊಳಿಕ್ಕಿದುದನಱಿದು (ಚಾವುಂಪು. ೬೦). [ಸಂ.]

ವಾಪೀಯೋಗ (ನಾ). = ವಾಪ್ಪಿ ೩ : ಮನುಜಂ . . . ಸ್ವಲ್ಪಸೌಖ್ಯಕ್ಕೆ ಭಾಜನನಕ್ಕುಂ ಬಹುಯೋಗದೊಳ್ ನೆಗೞ್ದ ವಾಪೀಯೋಗದೊಳ್ ಪುಟ್ಟಿದಂ (ಜಾತಕಿ. ೧೩-೧೭); ನಾಲ್ಕು ಕೇಂದ್ರಗಳಲ್ಲೂ ಗ್ರಹವಿಲ್ಲದೆ ನಾಲ್ಕು ಪಣಫರಗಳಲ್ಲಾಗಲೀ ನಾಲ್ಕು ಆಪೋಕ್ಲಿಮ ರಾಶಿಗಳಲ್ಲಾಗಲೀ ಎಲ್ಲ ಗ್ರಹಗಳೂ ಇದ್ದರೆ ವಾಪೀಯೋಗ (ಜಾತಕಿ. ೧೩-೬ ಟೀಕು). [ಸಂ.]

ವಾಪೇಯ (ನಾ). ಒಂದು ಬಗೆಯ ಮರ ; ಹೊನ್ನೆಮರ : "ವಾಪೇಯಃ- ಹೊನ್ನೆ" (ಓಷಧಿ. ೧೫೦). [< ಸಂ. ವಾಪ್ಯ]

ವಾಮ (ಗು). ೧. ಎಡಗಡೆಯ ; ಎಡಭಾಗದ : 'ವಾಮಪದ' ಪರಾ. ೨. ಚೆಲುವಾದ ; ಮನೋಹರವಾದ : ಪ್ರಮದಾಹಸ್ತವಿನ್ಯಸ್ತವಾಮಕ್ರಮಕಮಳನುಂ . . . ಆಗಿ (ಪಂಪಭಾ. ೯-೨೮ ವ); ವಾಮನನನುಳಿದದಾವಂ ಭೂಮಿಯೊಳಂತನ್ನದೇವತೆಯ ನಿಟ್ಟಿಸುಗುಂ ವಾಮಪ್ರದೀಪಮಿರ್ದುಂ ತಾಮಸೆಯೊಳ್ ಕಾಮಿಪಂತೆ ಮಿಂಚುಂಬುಳುವಂ (ಹೂದಚಂ. ೧೬-೩೮). ೩. ವಿರೋಧವಾದ ; ಪ್ರತಿಕೂಲವಾದ. ೪. ಕೊಂಕಾದ ; ವಕ್ರವಾದ. ೫. ಕೀಳಾದ ; ನೀಚ : 'ವಾಮಸುಖಿ' ಪರಾ. ೬. ಕೆಟ್ಟ ; ದುಷ್ಟ : 'ವಾಮಮಾರ್ಗ' ಪಾರಾ. ೭. ಕುಳ್ಳಾದ ; ಗಿಡ್ಡಾದ. (ನಾ). ೮. ಬಲಭಾಗವಲ್ಲದುದು ; ಎಡಭಾಗ : ವಾಮಂ ಕರತಳಮದು ಕೆಂದಾಮರೆಯರಲೆ ನಿಪುದುಚಿತಪರ್ಯಂಕದೊಳುದ್ದಾಮಮುಪದೇಶಹಸ್ತಮವಾಮಂ ಮಾರ್ದವಮನ ಧನಯಿಪುದು ಮುನಿಯಾ (ಅದಿಪು. ೫-೬೯); ಪರಮಋಷಿಗಳ ಹೋಮದಲಿ ಶಿಖಿವರನ ಬಲಗೊಂಡರು ಕುಮಾರಿಯ ವರಿಸೆ ವೈದಿಕದಿಂದ ಬಂದಳು ವರನ ವಾಮದಲಿ (ಕುಸಾಪಿ. ೧೦-೭೭). ೯. ಸುಂದರವಾದುದು ; ಚೆಲುವಾದುದು : "ಕಮನೀಯಂ ಚಾರುರನ್ಯಂ ರುಚಿರಮತಿಮನೋಹಾರಿ . . . ಸುಮನೋಜ್ಞಂ ವಲ್ಗು ವಾಮಂ ಪ್ರಿಯಮದು ಮಧುರಂ ಮಂಜುಳಂ ಮಂಜುಸೌಮ್ಯಂ" (ಮ್ಯಾಕೋ. ೧೦೭-೫೦). ೧೦. ಸುಂದರವಾದ ವಸ್ತು ; ಚೆಲುವಾದ ವಸ್ತು : 'ವಾಮ' ಎಂದರೆ ಸುಂದರವಸ್ತು (ಸೊಂದಸ. ೪೩ಅಡಿಟಿ). ೧೧. ಬಯಸಿದ ವಸ್ತು ; ಪ್ರಿಯವಸ್ತು : ವಾಮಗಳೆಂದರೆ ಕಾಮಿತವಾದ ವಸ್ತುಗಳು (ಬ್ರಹ್ಮಭಾ. ೨೯೧). ೧೨. ಒಳ್ಳಿತು ; ಶುಭ : "ಪ್ರಾಗ್ರಂ, ಪ್ರಾಗ್ರಪರಂ, ಪ್ರವೇಕಂ . . . ಚಾರು, ಸುಷಮಂ, ವಾಮಂ, ಶುಭಂ, ಶೇಶಲಂ- ೨೯ ಒಳ್ಳಿತು" (ಹಲಾಯು. ೧೧೪-೪). ೧೩. ವಿರೋಧ ; ಪ್ರತಿಕೂಲತೆ : "ಪ್ರತಿಕೂಲದಲ್ಲಿಯುಂ ವಾಮಮೆಂಬುದು" (ಹಲಾಯು. ೧೩೪-೨೨). ೧೪. ಕೇಡು ; ಹಾನಿ. ೧೫. ಸಂಪತ್ತು ; ಆಸ್ತಿ. ೧೬. ಶಿವ ; ಈಶ್ವರ. ೧೭. ಕಾಮ ; ಮನ್ಮಥ. ೧೮. ಕೆಚ್ಚಲು. ೧೯. ಸ್ತನ. ೨೦. [ವೀಶೈ] ನಾಲ್ಕುಬಗೆಯ ಶೈವಪ್ರಭೇದಗಳಲ್ಲಿ ಒಂದು : ಆ ಶೈವವೇ ವಾಮ ದಕ್ಷಿಣ ಮಿಶ್ರ ಸಿದ್ಧಾಂತವೆಂದು ನಾಲ್ಕು ತೆಱನಾಗಿರ್ಪುದವಱಲ್ಲಿ ಶಕ್ತಿಪರವಾದುದೇ ವಾಮವೆನಿಸುವುದು . . . ಪರಶಿವ ಪರವಾದುದೇ ಸಿದ್ಧಾಂತಮಕ್ಕುಂ (ವೆಚೇಶ. ೬೭). [ಸಂ.]

ವಾಮಕುಕ್ಷಿ (ನಾ). ೧. ಹೊಟ್ಟೆಯ ಎಡಭಾಗ,- ಎಡಪಕ್ಕ. ೨. (ಸಾಮಾನ್ಯವಾಗಿ ಮಧ್ಯಾಹ್ನದ ಊಟವಾದ ಮೇಲೆ) ಎಡಮಗ್ಗುಲಿಗೆ ತಿರುಗಿ ಮಲಗುವುದು : ಸೋಮವಾರ ಮಧ್ಯಾಹ್ನ ವಾಮಕುಕ್ಷಿಯನ್ನು ತೀರಿಸಿ ಉಜ್ವಲಾಚಹಾದ ಸಿದ್ಧತೆಯಲ್ಲಿದ್ದಳು (ಸಂಜೀವ. ೧೫೦); ವಾಮಕುಕ್ಷಿಗೆಂದು ಮಂಚದ ಮೇಲೆ ಅಡ್ಡವಾದ ನಿರ್ಮಲೆಯ ತಾಯಿ ಎದ್ದು ಕಿಡಕಿಯಿಂದ ಹೊರಗೆ ನೋಡಿದಾಗ . . . ನಿರ್ಮಲೆ ಮನೆಯ ಕಡೆಗೆ ಓಡಿಬರುತ್ತಿದ್ದಳು (ಮೂರುದಾ. ೨೬೫).

ವಾಮಕುಕ್ಷಿಮಾಡು = (ಮಧ್ಯಾಹ್ನ) ಎಡಮಗ್ಗುಲಾಗಿ ಮಲಗು : ಒಂದು ದಿನ ಅಪರಾಹ್ನಕಾಲದಲ್ಲಿ ಸಂತನು ತನ್ನ ಶಯನಾಗಾರದಲ್ಲಿ ವಾಮಕುಕ್ಷಿಮಾಡುತ್ತಿರಲು (ಅಂಬಿಕೆ. ೧೬೭). ವಾಮಕುಕ್ಷಿಯ ಗೆಯ್ = ವಾಮಕುಕ್ಷಿಮಾಡು : ಮಾವೀರ ! ಮಾಧೀರ ! ನಾವಣಂ ವಾಮಕುಕ್ಷಿಯ ಗೆಯ್ಯ ! (ಪೆಬ್ಬೆ. ೪೯-೨೫೯). ವಾಮಕುಕ್ಷಿಯಾಗು = ವಾಮಕುಕ್ಷಿಮಾಡು : ನಮ್ಮ ಮಧ್ಯಾಹ್ನದ ಊಟವಾಗಿ ವಾಮಕುಕ್ಷಿಯಾಗಿ ಎದ್ದ ಮೇಲೆ ಅವಳ ನ್ಯಾಯವಿಚಾರಣೆಯಾಗಲಿ (ಹುಬ್ಬಾಬ. ೬೬); ಮಧ್ಯಾಹ್ನ ಊಟವಾದ ಮೇಲೆ . . . ಅವನು ಎಂದೂ ವಾಮಕುಕ್ಷಿಯಾಗುವುದಿಲ್ಲ (ದೀಪಹ. II, ೨). [ಸಂ.]

ವಾಮಕ್ಷೇಮ (ನಾ). ಕಷ್ಟ ಮತ್ತು ಸುಖ ; ಆಗುಹೋಗು ; ಯೋಗಕ್ಷೇಮ : ಎನ್ನ ವಾಮ [ವಾಕಾಂ. ಯೋಗ] ಕ್ಷೇಮ ನಿಮ್ಮದಯ್ಯಾ ಎನ್ನ ಹಾನಿವೃದ್ಧಿ ನಿಮ್ಮದಯ್ಯಾ (ಬಸವ. ೬೦); ಲಿಂಗಪೂಜೆಯ ಮಾಡುವ ಭಕ್ತರ ವಾಮಕ್ಷೇಮ ತನ್ನದೆಂದು ಶಿವನು ರಕ್ಷಿಪನು (ಭೈರಸೂ. I, ೬೧೫). 'ಯೋಗಕ್ಷೇಮ' ಪರಾ. [ಸಂ.]

ವಾಮದೇವ (ನಾ). ೧. ಶಿವ ; ಈಶ್ವರ : "ಈಶಾನಃ . . ಧೂರ್ಜಟಿಃ, ವಾಮದೇವಃ . . . ನೀಲಲೋಹಿತಃ- ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೨); ವಾಮದೇವಮುಕಾರವಿಂದ ಆದಿ ಶ್ರೀಶೈಲನಾಮಾದಿಪ XXತಾಧಿಪತಿಯಾದಂತ ಶ್ರೀಮಲ್ಲಿಕಾರ್ಜುನಸ್ವಾಮಿಯವರ ಅಂಗರಂಗವೈಭವ ಅಮ್ಮುತಪಡಿ ದೀಪಾರಾದನೆ ಸೇವಿಗೆ (ಎಕ. V(R), ತಿರುವಾ. ೧೫೯-೬; 1673). ೨. ಒಬ್ಬ ಋಷಿಯ ಹೆಸರು : ವಾಮದೇವಾತ್ರಿ ಗಾಲವ ಗುರುವಸಿಷ್ಠ ವಿಶ್ವಾಮಿತ್ರರಂ ಕರೆಸಿ ಹಯಮೇಧಲಕ್ಷಣವನಾ ಮುನಿಗಳಂ ಕೇಳ್ದು (ಪೈಪುಭಾ. ೨೦-೩). ೩. [ವೀಶೈ] ಉಪಾಸನೆಗೆ ಯೋಗ್ಯರಾದ ನಾಲ್ಕುವಿಧ ಬ್ರಹ್ಮಮೂರ್ತಿಗಳಲ್ಲಿ ಒಂದು ಮೂರ್ತಿ : ತತ್ಪುರುಷ ಅಘೋರ ವಾಮದೇವ ಸದ್ಯೋಜಾತರೆಂಬ ಚತುರ್ವಿಧಬ್ರಹ್ಮಮೂರ್ತ್ಯುಪಾಸನೆಗಳಿಂ (ವೆಚೇಶ. ೬೮). ೪. ಈಶ್ವರನ ಐದು ಮುಖಗಳಲ್ಲಿ ಒಂದು : ಮಣ್ಣೆಲ್ಲ ಮಹಾದೇವನ ಸದ್ಯೋಜಾತ ಮುಖ ನೋಡಾ ನೀರೆಲ್ಲ ವಾಮದೇವಮುಖ ನೋಡಾ (ಸಿದ್ಧವ. ೯೦-೫೫೫); ಅಲರ್ದ ದಾಸಳದ ಪೊಸಗೆಂಪಂ ಪಳಕೆಯ್ದು ವಾಮದೇವೋಜ್ಜ್ವಳವದನಂ ಸೊಗಯಿಸಿರ್ದುದ ಗಜಾಧವನಾ (ಶಟಕಂ. ೫-೪). [ಸಂ.]

ವಾಮನ (ಗು). ೧. ಕುಳ್ಳಾದ ; ಗಿಡ್ಡಾದ. (ನಾ). ೨. ಕುಳ್ಳು ; ಗಿಡ್ಡು. ೩. ಎತ್ತರವಿಲ್ಲದ ಮನುಷ್ಯ ; ಕುಳ್ಳ : ಕುಬ್ಜವಾಮನಬಧಿರಮೂಕಕಿರಾತೋನ್ಮತ್ತ ಜಡಜನಂಗಳುಮಂ . . . ಕೊಟ್ಟು (ಅದಿಪು. ೪-೫೫ ವ); ಆಸ್ಥಾನವಲ್ಲಭನ ಮನಮನಱಿದು ನಗಿಸುವ ಕುಬ್ಜವಾಮನಬಧಿರಮೂಕರ್ ಮೊದಲಾದ ಪಲತೆಱದ ಸಬ್ಬವಗಾಱರಿಂ ಹಾಸ್ಯರಸಮುಂ . . . ನೆಗೆಱುತ್ತುಮಿರೆ (ಜಗವಿ. ೨-೩೯ ವ). ೪. ವಿಷ್ಣುವಿನ ದಶಾವತಾರಗಳಲ್ಲಿ ಐದನೆಯದು ; ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿಯಲು ವಿಷ್ಣುವು ಧರಿಸಿದ ಕುಬ್ಜಾವತಾರ : ವಾಮನಪದಹತಿವಿದಳಿತ ಜೀಮೂತವಿಮುಕ್ತಬಹಳಧಾರೆಗಳಿಂದಂ ತಾ ಮುನಿಜನಾಪಕಾರಕ ಧೂಮಧ್ವಜನೆಯ್ದೆ ನಂದಿ ಪೋದತ್ತಾಗಳ್ (ಅರ್ಧನೇ. ೬-೩೫); ಕ್ಷಿತಿಯ ಈರಡಿಗೆಯ್ದು ವಾಮನ ತ್ರುವಿ ಯತಿವಂಶಜನನ ಭಾರ್ಗವರೂಪ ತ್ರುವಿ (ಪುರಂದ. ಧಾ. ೧-೧೬೫-೫). ೫. ಅಷ್ಟದಿಗ್ಗಜಗಳಲ್ಲಿ ಒಂದು ; ದಕ್ಷಿಣದಿಕ್ಕಿನ ದಿಗ್ಗಜ : ತಡಂಗೆಡದುದಂಜನ ಮುರ್ಕುಡಿಗಿತ್ತು ವಾಮನಂ . . . ಇರದಾಲಿಸಿ ತತ್ಪಟಹಪ್ರಣಾದಮಂ (ಪುಷ್ಪಪು. ೫-೮);

ಆ ಕೂರ್ಮನ ಬೆನ್ನರುಗಿನೊಳಿಂದ್ರಾದಿ ದಿಕ್ಕೆಂಟಱಲ್ಲಿ ಕ್ರಮದಿಂದ್ಕೆರಾವತ ಪುಂಡರೀಕ ವಾಮನ . . . ಸುಪ್ರತೀಕಮೆಂದೆಂಟು ದಿಗ್ಗಜಗಳಾದೊಡೆ (ಏವೇಕ. ೧೪೯). ೬. 'ಕಾವ್ಯಾಲಂಕಾರಸೂತ್ರವೃತ್ತಿ'ಎಂಬ ಸಂಸ್ಕೃತ ಅಲಂಕಾರಗ್ರಂಥದ ಕರ್ತೃವಿನ ಹೆಸರು : ವಾಮನನುಂ ರುದ್ರಟನುಂ ಭಾಮಹನುಂ ದಂಡಿಯುಂ ಮನಂಗೊಳೆ ಪೇಟ್ಟಂತೀ ಮಹಿಗೆ ನೆಗಟೆ ಪೇಟ್ಟಂ ದಾಮೋದರತನಯನೀ ವಚೋಲಂಕೃತಿಯಂ (ಕಾವ್ಯಾವ. ೯೬೧). ೭. ಒಂದು ಬಗೆಯ ಗಿಡ ; ಅಂಕೋಷ್ಠಗಿಡ : "ವಾಮನಂ-ಕೋಷ್ಠ"(ಓಷಧಿ. ೧೫೦). ೮. ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಪರಮಶೈವ ಸ್ಕಂದ ಲೈಂಗ್ಯಾವಿರಳ ನಾರದ ಮತ್ಸ್ಯಕೂರ್ಮಸ್ಫುರಿತ ವಾಮನ . . . ಸಾಂಗದಿಂದ ಷ್ಟಾದಶಪುರಾಣಂಗಳೊಳೆಸೆವ ಭಸಿತಸೇವಾಸಂಗವಾಯಿತ್ತು (ಬಸವ. ೪೩-೭೬). [ಸಂ.]

ವಾಮನಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು ; ವಿಷ್ಣುವಿನ ವಾಮನಾವತಾರವನ್ನು ಕುರಿತ ಪುರಾಣ : ಬ್ರಹ್ಮಪುರಾಣ ಪದ್ಮಪುರಾಣ . . . ವಾಮನಪುರಾಣ ಕೂರ್ಮಪುರಾಣ ಮತ್ಸ್ಯಪುರಾಣ ಗಾರುಡಪುರಾಣ ಬ್ರಹ್ಮಾಂಡಪುರಾಣವೆಂಬವೇ . . . ಹದಿನೆಂಟು ಮೂಲಪುರಾಣಂಗಳು (ಏವೇಕ. ೯). [ಸಂ.]

ವಾಮನಮುದ್ರೆ (ನಾ). (ಸಾಮಾನ್ಯವಾಗಿ ಗಡಿಕಲ್ಲಿನ ಮೇಲೆ ಕೆತ್ತಲ್ಪಟ್ಟ) ವಿಷ್ಣುವಿನ ವಾಮನಾವತಾರದ ಚಿತ್ರ,-ಲಾಂಛನ : ವಾಮನಮುದ್ರೆಯ ನಾಲ್ಕು ಕಲ್ಲೊಳಗಣ ನಿವೇಶನದೊಳಗೆ ನಮ್ಮ ಹಂನೆರಡು ಮನೆಯಿಂ ಮೂಡಲುಕ್ಕಂ ಬಟ್ಟೆಗೆಂದು . . . ಕೊಟ್ಟರು (ಎಇ. XIX , ೨೫-೫೦; 1245); ಅಯಿಪ್ಪಂಡುಗಗದ್ದೆಯ ಚತುಸೀಮೆಗೆ ವಾಮನಮುದ್ರೆಯ ಕಲ್ಲ ನೆಡಿಸಿ (ಎಇ. VI (R), ಕೃಷ್ಣರಾ. ೯೬-೧೧; 1424).

ವಾಮನಮುದ್ರೆಕಲು, ವಾಮನಮುದ್ರೆಕಲ್ಲು = ವಾಮನನ ಲಾಂಛನವನ್ನು ಕೆತ್ತಿರುವ ಕಲ್ಲು : ಮೂಡ ಅಲತಾಳಿನಲಿ ನೆಟ ವಾಮನಮುದ್ರೆ ಕಲು (ಎಇ. IV (R), ಪಿರಿಯಾ. ೧೧೪-೮೨; 1567); ಈ ಗ್ರಾಮಗಳ ಚತುಃಸೀಮೆಯ ಗಡಿಗಳಲಿ ಸ್ಥಾಪಿತವ ಮಾಡಿಸಿ ಕೊಟ್ಟು ವಾಮನಮುದ್ರೆ ಕಲ್ಲುಗಳ ಚತುಃ ಸೀಮೆ ಭೂಮಿ (ಎಇ, VII, ಶಿವಮೊ. ೨-೧೩೫; 1641). ವಾಮನಮುದ್ರೆಶಿಲೆ = ವಾಮನಮುದ್ರೆಕಲು : ಸ್ವಾಮಿಯವರ ಬುದ್ಧಿನಿರೂಪದ ಮೇರೆಗೆ ವಾಮನಮುದ್ರೆಶಿಲಾಪ್ರತಿಷ್ಠೆ (ಎಇ. XII, ಚಿಕ್ಕನಾ. ೪೫-೨೪; 1832?); ಹೂವಿನ ಕೆರೆಗ್ರಾಮಕ್ಕೆ ಸಲುವ ಚತುಸ್ಸೀಮೆಗೂ ವಾಮನಮುದ್ರೆ ಶಿಲಾಪ್ರತಿಷ್ಠೆಯನ್ನು ಮಾಡಿಸಿ (ತುಳುನಾ. ೨೬೯). [ಸಂ. ವಾಮನಮುದ್ರಾ]

ವಾಮನಾಕಾರ (ನಾ). ವಿಷ್ಣುವಿನ ಐದನೆಯ ಅವತಾರವಾದ ಕುಬ್ಜರೂಪ : ಬಲಿಯಂ ಮೆಯ್ಯ ರಸಾತಳಕ್ಕಿಳಿಪಿದ್ಕೆ ನೀಂ ವಾಮನಾಕಾರದಿಂ (ಜಗವಿ. ೧-೫೯). [ಸಂ.]

ವಾಮನಾವತಾರ (ನಾ). ೧. = ವಾಮನ ೪ : ಈ ಮೇಲಿನ ವಾಕ್ಯಗಳಲ್ಲಿ ವಾಮನಾವತಾರವು ಸಂಪೂರ್ಣರೂಪದಿಂದ ಹೇಳಿದಂತಾಗುತ್ತದೆ (ಭಾರದ. ೧೪೫). ೨. (ಆಲಂ) ಕುಳ್ಳಾಗಿರುವವನು ; ಕುಬ್ಜ : ವಯಸ್ಸಿನಿಂದ ದೊಡ್ಡವನಿರಬಹುದೇ. ಅದರೆ ಈ ವಾಮನಾವತಾರ ಅವಳ ಭುಜಕ್ಕೂ ಮುಟ್ಟುತ್ತಾನೋ, ಇಲ್ಲವೋ (ಮೂಡುದಾ. ೪೦). [ಸಂ.]

ವಾಮನಿ (ನಾ). ಒಂದು ಬಗೆಯ ಸಸ್ಯ : "ವಾಮನೀ- ಹತ್ತಿ , ತೊಂಡೆ" (ಓಷಧಿ. ೧೪೯). [< ಸಂ. ವಾಮನ]

ವಾಮನೆ (ನಾ). ಒಂದು ಬಗೆಯ ಸಸ್ಯ ; ಅಗಳುಶುಂಠಿ: "ವಾಮನಾ - ಅಗುಳುಶುಂಠಿ" (ಓಷಧಿ. ೧೪೯). [ಸಂ. ವಾಮನ]

ವಾಮನೇತ್ರೆ (ನಾ) . ೧. ಸುಂದರವಾದ ಕಣ್ಣುಗಳುಳ್ಳವಳು ; ಮನೋಹರವಾದ ಕಣ್ಣುಗಳುಳ್ಳವಳು. ೨. ಹೆಂಗಸು ; ಸ್ತ್ರೀ : "ರಾಮಾ, ವಾಮಾ, ವಾಮನೇತ್ರಾ, ಪುರಂಧ್ರೀ . . . ಯುವತಿಃ- ಈ ೨೮ ಸ್ತ್ರೀಯರ್" (ಹಲಾಯು. ೭೯-೩೨೭).

[ಸಂ. ವಾಮನೇತ್ರಾ]

ವಾಮಪಂಥ (ನಾ). ಸಮಾಜವಾದಿ ಅಥವಾ ಕಮ್ಯುನಿಸ್ಟ್‌ಧೋರಣೆಯುಳ್ಳ ರಾಜಕೀಯಪಕ್ಷ ; ಎಡಪಕ್ಷ : ವಾಮಪಂಥದ ಸದಸ್ಯರು ಇಂದು ವಿಧಾನ ಸಭೆಯ ಕಲಾಪಗಳಿಗೆ ಬಹಿಷ್ಕಾರ ಹಾಕಿದರು (ರೂಢಿ). [ಸಂ.]

ವಾಮಪಕ್ಷ (ನಾ). = ವಾಮಪಂಥ : ಚುನಾವಣೆಯ ಕಾಲದಲ್ಲಿ ವಾಮಪಕ್ಷದವರು ಭರದಿಂದ ಕೆಲಸ ನಿರ್ವಹಿಸಿದರು (ರೂಢಿ). [ಸಂ.]

ವಾಮಪದ (ನಾ). ಎಡಗಾಲು : ಕನಕಮಣಿಖಚಿತಸಿಂಹಾಸನದೊಳ್ ನೀಡಿರ್ದ ವಾಮಪದನಖರುಚಿ ಕಾಂಚನಹರಿಪೀಠಮುಮಂ ಮುತ್ತಿನ ಪೀಠಮಿದೆನಿಸಿತವನಿಪತಿಯಡಿ ಮೊದಲೊಳ್ (ಶಾಂತಿಪು. ೩-೪೭); ಕುಪಿತಪ್ರಮದಾಜನವಾಮಪದಾಲಕ್ತಕದೆ ಪಲ್ಲವಿಪ್ಪುದಶೋಕಂ (ಚಂದ್ರಪು. ೨-೧೧). [ಸಂ.]

ವಾಮಪಾದ (ನಾ). = ವಾಮಪದ : ಪರಿವಾರಪರಿವೃತನುತ್ತುಂಗಸಿಂಹಾಸನಾಸೀನನಧಸ್ಸ್ಥಿತಮಣಿಮಯಪೀಠವೇದಿಕಾವಿನ್ಯಸ್ತವಾಮಪಾದಂ . . . ಒಡ್ಡೋಲಗಂಗೊಟ್ಟರೆ (ಅದಿಪು. ೨-೨ ವ). [ಸಂ.]

ವಾಮಭಾಗ (ನಾ). ಎಡಭಾಗ ; ಎಡಪಾರ್ಶ್ವ : ಬಲಗಲದೆಡೆಯೊಳು ಗರ್ಭಂ ನಿಲೆ ಪುರುಷಂ ವಾಮಭಾಗದಿಂ ಸ್ತ್ರೀಯೆರಡುಂ ಕೆಲದೊಳಮಳ್ಗಳು . . . ಪುಟ್ಟುವರೆಂದುಂ (ಮದಪಿ. ೧-೮೪); ಮಂತ್ರಿಗಳು ಮೆಚ್ಚಿದರು ವಾಮಭಾಗದಲಿ (ಕುವ್ಯಾಲಿ. ೮-೬೫). [ಸಂ.]

ವಾಮಭುಜ (ನಾ). ಎಡಹೆಗಲು : ಪಂಚದ್ರೌಪದಿಸುತ ಸೋಮಕಾದಿಗಳು . . . ಅತಿಚಿಂತಿಸಿದರಂದಿರುಳುಪಹತಿಯ ಸೂಚಿಸುವ ವಾಮಭುಜಾಕ್ಷಿಕಂಪದಲಿ (ಕುವ್ಯಾಗ. ೮-೬); ವಾಮಭುಜದಿಂ ಜಗುಳ್ದತ್ತು ವೀರತೂರ್ಯಂ ನಿದ್ರೆಗಂಕುಶವೆನಲ್ ನಗರರಕ್ಷಕರಾ (ಶ್ರೀರಾಮಾ. ೪೬೪-೫೧೦). [ಸಂ.]

ವಾಮಮಾರ್ಗ (ನಾ). ೧. ಅಡ್ಡದಾರಿ ; ದುರ್ಮಾರ್ಗ : ಸೋತ ಮನಸ್ಸು ವಾಮಮಾರ್ಗದಿಂದ ಸಾಗಲು ಮುಂದುವರಿಯಹತ್ತಿತು (ಅಪವಾ. ೧೦); ಹಣವನ್ನು ವಾಮಮಾರ್ಗದಿಂದ ಸಂಪಾದಿಸಿ ಊರಲ್ಲೊಬ್ಬ ಗಣ್ಯವ್ಯಕ್ತಿಯಾಗತೊಡಗಿದನು (ಕಿರಿಕಾ. ೧೯೦). ೨. = ವಾಮಾಚಾರ ೨ : ಆ ಮಂತ್ರವಾದಿಯು ವಾಮಮಾರ್ಗದಿಂದ ಕ್ಷುದ್ರದೇವತೆಗಳನ್ನು ಒಲಿಸಿಕೊಂಡಿದ್ದಾನೆಂಬ ಪ್ರತೀತಿ ಇದೆ (ರೂಢಿ). [ಸಂ.]

ವಾಮಯ್ಯದೇವ (ನಾ). ಒಬ್ಬಾತನ ಹೆಸರು : ಪೃಥಿವೀಗಾಮುಣ್ಡಸ್ವಾಮಿಯ ಮಗಂ ಗಾಮುಣ್ಡಸ್ವಾಮಿಯ ತಮ್ಮಂ ವಾಮಯ್ಯದೇವಂಗೆ ಕೊಟ್ಟ ಕೊಡಂಗೆ (ಎಇ. X, ಮುಳಬಾ. ೧೦೮-೭; ಸು. 950). [ವಾಮ + ಅಯ್ಯ + ದೇವ]

ವಾಮಲೂರ (ನಾ). ಹುತ್ತ ; ವಲ್ಮೀಕ : ಸುರನಂದನ ವಾಮಲೂರುಓರ ಬಂಧುರವರಮೃತ್ತಿಕಾತತಿಗಳುಂ ಸುರರಾಜನದೊಂದು ಪೇಟ್ಕೆಯಿಂ ಸುರಪಥದಿಂದೆ ಬಂದುವಭಿಷೇಕಮಹೋತ್ಸವದೊಳ್ ಮುಕುಂದನಾ (ಜಗವಿ. ೮-೧೧೩). [ಸಂ.]

ವಾಮಲೋಚನೆ (ನಾ). ಸುಂದರವಾದ ಕಣ್ಣುಗಳುಳ್ಳವಳು : ವಿಯೋಗಮಂ ಮಾಡಿದ ವಾಮಲೋಚನೆಯರಂಗದೊಳಾಲಿಯ ಸೂಸುನಿರ್ಗಳಬ್ಬೂಡದೆ ತಂದು ಪೆರ್ಮೊಲೆಯೊಳೊತ್ತಿದ ಪಂಕಜಪತ್ರಜಾಳಮಿರ್ಪೋಡದೆ ಪಾಸಿದೊಳ್ಕಳಿರ್ಗಳುಂ ನೆಱೆ ಬಾಡದೆ ಸೈತು ಪೋಕುಮೇ (ಚಂದ್ರಪು. ೨-೨೪); ವಾಮಲೋಚನೆಯಿರ್ದೆಡೆಗಲರ್ಮಟ್ಟೆಯಿಂದಾ ಮಹಿಮನು ಬಂದನಾಗ (ಶ್ರೀಪಾಲ. ೯-೫೧). [ಸಂ. ವಾಮಲೋಚನಾ]

ವಾಮವಿದ್ಧ (ನಾ). [ನಾಟ್ಯ] ಹತ್ತು ಬಗೆಯ ಆಕಾಶಮಂಡಲಗಳಲ್ಲಿ ಒಂದು : ಅತಿಕ್ರಾಂತ, ದಂಡಪಾದ, ಕ್ರಾಂತ, ಲಲಿತಸಂಚರ, ಸೂಚೀವಿದ್ಧ, ವಾಮವಿದ್ಧ, ವಿಚಿತ್ರ, ವಿಕೃತ, ಅಲಾತ, ಲಲಿತ ಈ ಹತ್ತು ಆಕಾಶಮಂಡಲಂಗಳ್ (ಲಾಸ್ಯರಂ. ೮-೪ ವ). [ಸಂ.]

ವಾಮತರೀರ (ನಾ). ಶರೀರದ ಎಡಭಾಗ ; ವಾಮಾಂಗ : "ಸವ್ಯಂ ವಾಮಶರೀರಂ" (ಮಸ್ತಕೋ. ೧೧೪-೧೫). [ಸಂ.]

ವಾಮಸುಖ (ನಾ). ಕೀಳಾದ ಸುಖ ; ಕ್ಷುದ್ರವಾದ ಸುಖ : ಎಸಗುವ ವಾಮಸುಖಂಗಳ ದೆಸೆಗೆಸಗದೆ ಮಸಗದೆಸಗದಿರ್ದೆಡೆಯಿಂದಿರ್ದಸದೃಶದಿವಿಜ ಸುಖಾಮೃತರಸದಿಂ ತನ್ನಿಂದೆ ತಾನೆ ತಣ್ಣನೆ ತಣಿದಂ (ಸುಕುಮಾ. ೧೨-೪೮). [ಸಂ.]

ವಾಮಾಂಕ (ನಾ). ಎಡತೊಡೆ : ವಾಮಾಂಕದೊಳಿಟ್ಟೊಳ್ಳಿಂ ಭೂಮಿಗೆ ತಾಂ ಶ್ಲೋಕಯುಗಳಮಂ ಸೊಲ್ಲಿಸಿದಾ ಶ್ರೀಮದ್ವರಾಹಮೂರ್ತ್ಯಧಿರಾಮಕ್ಷೇತ್ರಮನಭೀಕ್ಷಿಸಿದನವನೀಶಂ (ಯಾದಚಂ. ೧೬-೧೬೬). [ಸಂ.]

ವಾಮಾಂಗ (ನಾ). ೧. ದೇಹದ ಎಡಭಾಗ,- ಎಡಪಾರ್ಶ್ವ : ಸುಮ್ಮಾನದಿಂ ಜನೇಶ್ವರನ ದಕ್ಷಿಣಭಾಗಮಮ್ಮೆಲ್ಲೆನೆಂದು ವೊಕ್ಕಣಿಸಿತಲ್ಲದೆ ಸಿಂಹವೆಮ್ಮೊಡನೆ ವಾಮಾಂಗಮೆಂದಾಡಿತಿಲ್ಲ (ಕೃಷ್ಣಿಭಾ. ೨೬-೫೭). ೨. ಸುಂದರವಾದ ಅಂಗವುಳ್ಳವನು ; ಚೆಲುವ : ವಾಮಾಂಗಸೋಮವಾಹನರೋಮೋಜ್ವಲಕೂಪಕೋಟಿಶಿವಲಿಂಗಧರಾ . . . ಬಸವೇಶ ನಮೋ (ಹಮ್ಮೀರ. ೫-೬). [ಸಂ.]

ವಾಮಾಂಗಿ (ನಾ). ೧. ಸುಂದರವಾದ ದೇಹವುಳ್ಳವಳು ; ಚೆಲುವೆ. ೨. (ಶಾಸ್ತ್ರಗಳ ಪ್ರಕಾರ ಗಂಡನ) ದೇಹದ ಎಡಭಾಗವಾಗಿರುವವಳು ; ಅರ್ಧಾಂಗಿ ; ಹೆಂಡತಿ : ಜೀಮೂತಕೇತು ತಪಮಂ ಪ್ರೇಮದೊಳಂ ಮಾಡೆ ಪುತ್ರನಂ ಪಡೆಯಲ್ಕಂ ವಾಮಾಂಗಿಯ ಮುಡಿಯರಲಂ ಹೇಮಾಚಲದಿಂಬಿನಲ್ಲಿ ಶಂಕರನಿತ್ತಂ (ಹಮ್ಮೀರ. ೨-೧೫) ; ಅಂಗನೆ ಪುರುಷನಾರ್ಧಾಂಗಮೆಂಬುದಕೆ ನಿನ್ನ ವಾಮಾಂಗಿಯಾದ ಕಾಂತೆಯಂ ಬೇಡಿದೊಡೆ (ಕೃಮಿಭಾ. ೨೬-೫೬). [ಸಂ. ವಾಮಾಂಗೀ]

ವಾಮಾಂಘ್ರಿ (ನಾ). ಎಡಗಾಲು, - ಪಾದ : ಕಲಿಕರ್ಣನಾಯುಷ ಹೋಯಿತಿದೆ ಯೆಂದೊರಸಿದನು ವಾಮಾಂಘ್ರಿಯಲಿ ನೆಲನ (ಕುವ್ಯಾಕ. ೧೬-೧೫); ಪೆಂಡೆಯದ ವಾಮಾಂಘ್ರಿ ಮೆಱೆದಿರೆ ಹಿಂಡುದೇವರ ಹಾಹೆದೊಡರಲಿ ಗಂಡುಗಲಿ . . . ಖಡ್ಗವ ಕೊಂಡು ಝಳಪಿಸಿದ (ಕಾಶಿರಾ. ೪೧-೩). [ಸಂ.]

ವಾಮಾಕ್ಷಿ (ನಾ). ೧. ಸುಂದರವಾದ ಕಣ್ಣುಗಳುಳ್ಳವಳು. ೨. ಹೆಂಗಸು ; ಸ್ತ್ರೀ : ವಾಮಕರಾಂಬುಜದಿಂ ತದ್ವಾಮಾಕ್ಷಿಯ ಮುಖಮನೆತ್ತಿ ಮುದ್ದಿಸುತೆ ಕಲಾರಾಮಂ ಬಿಗಿಯಪ್ಪಿದಂ (ಕುದ್ಭಟ. ೬-೧೦೪). [ಸಂ. ವಾಮಾಕ್ಷೀ (ವಾಮ + ಅಕ್ಷಿ + -)]

ವಾಮಾಚಾರ (ನಾ). ೧. ದುರಾಚಾರ ; ದುರ್ಮಾರ್ಗ. ೨. (ವೇದ ವಿರುದ್ಧವಾದ) ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಆಚಾರ ; ಪಂಚಮಕಾರ ಗಳಿಂದ ಕೂಡಿದ ಶಕ್ತಿಪೂಜೆ : ವಾಮಾಚಾರದಲ್ಲಿ ಉದಾತ್ತಅರ್ಥದ ಅವರಣದೊಡನೆ, ಪಂಚಮಕಾರಗಳ ಶಬ್ದಪ್ರತಿಮೆಗಳು ಇಂದಿಗೂ ಪೂಜ್ಯವಾಗಿ ಉಳಿದಿವೆ ! (ಕರ್ನಾಟ. ೧೩೬); ಸಾಮಾನ್ಯವಾಗಿ ಜನರು ವಾಮಾಚಾರವನ್ನು ವಕ್ರದೃಷ್ಟಿಯಿಂದ ನೋಡುವುದುಂಟು. ವಾಮಾಚಾರವು ಅತಿರಹಸ್ಯವಾದುದು (ಭಾರತ. ೨೨೬). ೩. ಮಾಟ ; ಅಭಿಚಾರ. [ಸಂ.]

ವಾಮಾನಿಕೆ (ನಾ). ೧. ಅನುಚಿತವಾದುದು ; ನಿಷಿದ್ಧವಾದುದು : ಫರಂಗಿಯವರ ಹೆಂಗಸರು ಹೀಗೆಯೇ ವಿನೋದವಾಗಿ ಕಾಲಾ ಕಳೆಯುತಾ ಇರುತ್ತಾರಲ್ಲ. ಅವರಲ್ಲಿ ಇದು ವಾಮಾನಿಕೆಯಲ್ಲ (ಅರೂಬು. ೦೦). ೨. ಅಳುಕು ; ಹಿಂಜರಿಕೆ : ಮೇಲೆ ಬಿದ್ದು ಕೊಂಡು ನಾವೇ ಹೋಗಿ, ಹೇಗಿದೀರಿ ? ಎಂದು ರೋಗಿಯನ್ನು ಕೇಳುವುದಕ್ಕೆ ವಿನೋ ವಾಮಾನಿಕೆ (ಮಾನೂಸಂ. ೬೬). [< ವಾಮ + - ಇಕೆ]

ವಾಮಾರ್ಧ (ನಾ). ಎಡಗಡೆಯ ಅರ್ಧಭಾಗ ; ಎಡಪಾರ್ಶ್ವ : ಸಿಂಹವು ದೊಯೆಯ ಬಲಭಾಗವನ್ನು ಅಪೇಕ್ಷಿಸಿತಲ್ಲದೆ ವಾಮಾರ್ಧವನ್ನಲ್ಲ (ನೀತಿಬಂ. XIII, ೨೬). [ಸಂ.]

ವಾಮಾರ್ಧಾಂಗ (ನಾ). ಹೆಂಡತಿಯನ್ನು ತನ್ನ ಶರೀರದ ಎಡಗಡೆಯ ಅರ್ಧಭಾಗವಾಗಿ ಧರಿಸಿದವನು ; ಅರ್ಧನಾರೀಶ್ವರ ; ಶಿವ : ವಾಮಾರ್ಧಾಂಗ ಮಹಿಮೋತ್ತುಂಗ ಕೂಡಲಸಂಗಮೇಶ್ವರಲಿಂಗ ಮಾಂ ತ್ರಾಹಿ (ಬಸಪು. ೬೧-೪೯). [ಸಂ.]

ವಾಮಿ (ನಾ). ೧. ಹೆಣ್ಣುಕುದುರೆ : "ಅರ್ವತೀ, ವ(ವಾ)ಡ(ಬ)ಬಾ, ವಾಮಿ, ಪ್ರಸೂತಾ Eಕಾತೆ, ವಾಜಿನೀ- ಈ ೫ ಫೋಲಿಗೆ" (ಹಲಾಯು. ೭೨-೨೦೬). ೨. ಈದ ಕುದುರೆ. ೩. ಹೆಣ್ಣಾನೆ : "ವಾಮಿ- ಈದ ಕುದುರೆ, ಹೆಣ್ಣಾನೆ" (ಓಷಧಿ. ೧೪೯). ೪. ಹೆಣ್ಣುಕತ್ತೆ. ೫. ಹೆಣ್ಣುನರಿ. [ಸಂ. ವಾಮಾ]

ವಾಮೆ (ನಾ). ೧. ಹೆಂಗಸು ; ಸ್ತ್ರೀ : ಕಾಮರೂಪಿನ ವಾಮೆಯುಸಿರ್ದರಾಲಿಸುತಾಗ ರಾಮದೂತಂ ನುಡಿದಂ (ವೆಂಕಾರಾ. ೫-೧-೪೭). ೨. ಸುಂದರಿ ; ಚೆಲುವೆ : ಮುಟ್ಟಿದೊಡೆ ಸುಖದ ಸೋಂಕಂ ಪುಟ್ಟಿಸುವಾ ವಾಮೆ ವಾಮೆಯಾದೊಡೆ ಮುನ್ನಂ ಬಟ್ಟದುವೆನಿಸುವ ಮೊಲೆ ನಿರ್ವೆಟ್ಟಿದುವಾದುವು ನೃಪಂಗೆ ಬೆನ್ ಸೋಂಕಲೊಡಂ (ಯಶೋಧ. ೨-೫೮). ೩. ಹೆಂಡತಿ ; ಪತ್ನಿ : ಉದಗ್ರಬಲೋದ್ಭಟದೇವಂ ವಾಮೆಯೊಡನೆ ಮೇಳಿಸುತುರ್ವಿಯನುರ್ವಿಂ ಪಾಲಿಸುತಿರ್ದಂ (ಉದ್ಭಟ. ೨. ಸೂಚನೆ). ೪. ಗೌರಿ ; ಪಾರ್ವತಿ : ವಾಮೆ ಮಹಾಜ್ಯೇಷ್ಠಗುಣಸ್ತೋಮಾನ್ವಿತೆ ರೌದ್ರಿ ಕಾಳಿ . . . ಸರ್ವಭೂತದಮನಿ (ಹಾಲಾಸ್ಯ. ೪-೧೭-೧೭); ಸಂಕ್ಷೇಪವಾಗಿ ಶಕ್ತಿಯು . . . ವಾಮಾ, ಜ್ಯೇಷ್ಠಾ, ರೌದ್ರೀ ಎಂಬ ಸಂಜ್ಞೆ ಗಳಿಂದಲೂ ಇರುತ್ತಾಳೆ (ಭಾರತ. ೨೨೨). ೫. ಲಕ್ಷ್ಮಿ. ೬. ಸರಸ್ವತಿ. ೭. ಒಂಟೆ : "ವಾಮಾ-ಒಂಟೆ, ಸ್ತ್ರೀ" (ಓಷಧಿ. ೧೪೯). ೮.(ಆಲಂ) ಅಮಂಗಳ ; ಅಶುಭ : ಒಳ್ಳೆಯ ಕೆಲಸಕ್ಕೆಂದು ಹೊರಟಾಗ ಬೆಕ್ಕು ಅಡ್ಡಬಂದರೆ ವಾಮೆ (ಡಂಖಿ). [ಸಂ.ವಾಮಾ]

ವಾಯ (ನಾ). ೧. ಮೋಸ ; ಕಪಟ : ಹರಿಶ್ಚಂದ್ರರಾಯನನುಹೂಯದಿಂ ತನ್ನಾಶ್ರಮಕ್ಕೊಯ್ದು ವಾಯದವರಾಧಮಂ ಹೊಲ್ಸಿ ಸಾಮ್ರಾಜ್ಯಮಂ ಕೊಂಡ ವಿಶ್ವಾಮಿತ್ರನು (ಹಟಾ. ೪ ಸೂಚನೆ); ವಾಯಕಂಜದಿರಂಜದಿರಿ ಫಡ ಬಾಯ ಬಿಟ್ಟರೆ ಹೋಹುದೇ ನಿಮ್ಮಾಯುಷಕೆ ಹೊಣೆ ತಾನು ಹೇಳಿತ ಮಾಡಿ ಬೇಗದಲಿ (ಕುವ್ಯಾರ್ಜು. ೧೪-೩೭). ೨. ಕಾರಣ ; ನಿಮಿತ್ತ : ಕಾಯವಿಲ್ಲದ ಹೆಣನ ವಾಯವಿಲ್ಲದೆ ಜವನೆಳೆದೊಯ್ವನೆಂಬ ವಾಯಕ್ಕೆ ವಾಯವನೇನೆಂಬೆ (ಅವಚಂ. ೧೨೯-೫೦೦); ಹರಿಬಿಕ್ಕಲ್ಲದ ನಾಯಕರ ಸುಡು ಹೊಟ್ಟೆಹೊರೆಕರ ವಾಯಕಿವದಿರ ಸಂತವಿಟ್ಟನು ಸ್ವಾಮಿಕಂಟಕರ (ಕುವ್ಯಾರ್ಜು. ೧೦-೫೦). ೩. ಉಪಾಯ ; ತಂತ್ರ ; ಹಂಚಿಕೆ : ನಿಮ್ಮೂರಿಗೆಮ್ಮೆವರನು ನೀ ಕರಸಿ ವಾಯದಲಿ ಜೂಜಾಡಿ ಕಪಟದ ದಾಯದಲಿ ಸೋಲಿಸಿ ಯುಧಿಷ್ಠಿರರಾಯನರಸಿಯ ಸುಲಿಸಿತಕೆ ಫಲವಾಯ್ತೆ (ಕುವ್ಯಾಗ ೮-೧೨); ವಾಯಕರ್ಜುನನ ತಲೆ ಬಿಲ್ದಪುದೆ ಕೃಷ್ಣನ ಸಹಾಯಮಿರಲು (ಕೃಮಿಭಾ. ೯-೨೨). ೪. ಹುಸಿ ; ಸುಳ್ಳು : ವಾಯವಳಿದುದು ಸತ್ಯವುಳಿದುದಿದು ಸೋಜಿಗಂ (ವಾಸೀಠ. ದೇ. ೨೭೯-೧೪); ಆಯುಧಂಗಳಲೇನು ನೀ ನಾಗಾಯುತದ ಬಲನೆಂಬರಾ ನುಡಿ ವಾಯವೋ ಕಲಿಭೀಮ ದಿಟವೋ ನೋಡಬೇಹುದಲೆ (ಕುವ್ಯಾಸ. ೨-೯೩). ೫. ಹಾಳು ; ನಾಶ : ಆಗಮ ಬಲ್ಲಿತ್ತೆಂಬೆನೆ ವಾಯ ಹೊಂದಿತ್ತು ಇದು ಕಾರಣ ಕೂಡಲಸಂಗಯ್ಯನೇ ನಿತ್ಯ ಉಳಿದ ದೈವವೆಲ್ಲಾ ಅನಿತ್ಯ (ಬಸವ. ೫೫೨); ಬೇಯದ ಕೊಡದೊಳು ತುಂಬಿದ ನೀರು ಕೊಡದೊಡನೆ ವಾಯವಪ್ಪಂತೆವೋಲ್ . . . ಕಾಯಕದೊಳುಱೆ ವಾಚಕದೊಳು ಮಾನಸದೊಳಗೆ ಹೇಯವೆಂದೆನಿಸಿ ಶುದ್ಧತೆಯಿಲ್ಲದಿರ್ದೊಡವು ವಾಯವಪ್ಪುವು ತಾನು ಮಾಡಿದ ಸಮಸ್ತಭಕ್ತಿಗಳೊಡನೆ ಸತ್ಯಮಾಗಿ (ಸಿದ್ಧೇಸ್ವ. ೨೨-೪೦). ೬. ಭ್ರಮೆ ; ಭ್ರಾಂತಿ; ಮಿಥ್ಯೆ : ಕಾಯದ ಕಳವಳವ ವಾಯವೆಂದಱಿಯಬಲ್ಲಡೆ ದೇವ ಗುಹೇಶ್ವರನ ನಿಲವು ತಾನೆ (ಅವಚ. ೮೭-೩೦೬); ಎನ್ನ ಸತಿಯೆಂಬುದಿದು ತಾ[ನೆ]ಲ್ಲ ವಾಯವಿದು ಎಂದು ಬಸವಂ ಭಕ್ತಿಯಿಂ ನುಡಿವುತಿರಲು (ಬಸಂ. ೧೩-೨೪). ೭. ತೋರಿಕೆ ; ನಟನೆ ; ಸೋಗು : ಈ ವಾಯದ ಮಾತಿಂಗಾನು ಬೆಱಗಾದೆನು (ಅವಚಂ. ೧೯೧-೨೬೩); ವಾಯದ ಬೇಟದೊಳ್ ನಮವ ನಾಣೆಲಿಯೆನ್ನವೊಲನ್ಯಳಾವಳ್ (ಜಯಮಾ. ೧೩-೭೪). ೮. ವ್ಯರ್ಥ ; ನಿಷ್ಫಲ ; ನಿಷ್ಪ್ರಯೋಜಕ : ಮಾಯದ ಸಂಸಾರವ ನಚ್ಚಿ ವಾಯಕ್ಕೆ ಕೆಟ್ಟು ಬಜುದೊಱೆವೊಗಬೇಡ (ಬಸವ.೬೨೪); ಆಯತಾರ್ಜನು ಪರಶುರಾಮನೊಳಾಯುಧದ ಶ್ರಮಗಲಿತು ಬಳಿಕದು ವಾಯವಾದೊಡೆ ಬಂದನಾ ಗಜಪುರಿಗೆ ಕಲಿಕರ್ಣ (ಕುವ್ಯಾಅ. ೬-೪೨). ೯. ಹಟ ; ದುರಭಿಮಾನ : ಕಾಯದ ಕಳವಳಕ್ಕಂಜಿ ಪ್ರಾಣ ಹೋದಲ್ಲಿ ಭವ ಹಿಂಗದು ಪ್ರಕೃತಿ ಬಿಡದು ವಾಯಕ್ಕಾದರೆ ಸತ್ತು ದೇವರ ಕೂಡಿದವೆಂಬರು (ಸರ್ವಜ್ಞ. ೧೧-೫೨); ವಾಯ ಕಿಂತಕಟ ಸುಕುಮಾರನಂ ಕೊಂದನೀ ರಾಯನಜ್ಞೆಂ ನೆಱೆ ಸುಡಲಿ (ಕೃಮಿಭಾ. ೧೧-೭೪). [< ಪ್ರಾ. ವಾಯ. / ಸಂ. ವ್ಯಾಜ./ ಮರಾ. ವಾಯ]

ವಾಯದ 'ವಾಯಿದೆ' ನೋ.

ವಾಯದೆಜ್ಜರ 'ವಾಯಿದೆಜ್ಜರ' ನೋ.

ವಾಯನ (ನಾ). ಮದುವೆ, ಹಬ್ಬ, ವ್ರತ ಮುಂತಾದ ಶುಭಪ್ರಸಂಗಗಳಲ್ಲಿ ದೇವರಿಗೆ ಅರ್ಪಿಸುವ ಹಾಗೂ ವಿಶೇಷವಾಗಿ ಬ್ರಾಹ್ಮಣ, ಮುತ್ತೈದೆಯರಿಗೆ ಕೊಡುವ ಹಣ್ಣುಕಾಯಿ, ಆಹಾರಪದಾರ್ಥ ಮೊದಲಾದುವುಗಳ ಕಾಣಿಕೆ; ಬಾಗಿನ ; ಉಪಾಯನ : ಶ್ರೀಪಾದರಾಯರು . . . ದೇವಿಗೆ ಅರ್ಘ್ಯವಿತ್ತು ವಾಯನ ಗಳನ್ನರ್ಪಿಸಿದರು (ಕಭಾ. ೨೯). 'ಬಾಯನ' ಪರಾ. [ಸಂ.]

ವಾಯವಿಡಂಗ 'ವಾಯುವಿಳಂಗ' ನೋ.

ವಾಯವಿಡಂಗ 'ವಾಯುವಿಳಂಗ' ನೋ.

ವಾಯವ್ಯ (ಗು). ೧. ಗಾಳಿಗೆ ಸಂಬಂಧಿಸಿದ ; ವಾಯುವಿಗೆ ಸಂಬಂಧಪಟ್ಟ. (ನಾ). ೨. ಎಂಟುದಿಕ್ಕುಗಳಲ್ಲಿ ಒಂದು ; ಪಶ್ಚಿಮ ಮತ್ತು ಉತ್ತರಗಳ ನಡುವಿರುವ ದಿಕ್ಕು : ಪಡುವ ವರದಸಮುದ್ರದ ಸೀಮೆಯಿಂ ನಟ್ಟ ಕಲ್ಲಿಂದಂ ಸೀ ಬಸುವೀಮರವೊಳಗಾಗಿ ವಾಯವ್ಯ ಸಣಬದ ಸೀಮೆಯಿಂ (ಎಕ. III(R), ಹೆಗ್ಗಡ. ೮೯-೨೨೬; 1493); ವಾಯವ್ಯದ ಉಸಿರಾಟದಲು ಅಗೂ ಅದರಾಚೆಗ ಅಡಕಿಲವಾಗಿವೆ ವಿಶದದಲಿ ಪಲ ದಿನ್ನೆಗಳು (ಅರಳು. ೨೦೪-೩). ೩. ವಾಯವ್ಯದಿಕ್ಕಿನ ದೇವತೆ : ವಿಜ್ಞಾನದಲ್

ಬ್ರಹ್ಮನನ್ನರ್ಯ್ಯಮ ವರುಣ ವಾಯವ್ಯ ಚೇರ ಚೋಟ ಪಾಣ್ಡ್ಯರ್ಕಳನ್ನಡೆಗೊಣ್ಡು ಕನ್ನರದೇವನ ಕರು ಮಾಂ XXX(ಎಕ. III (೩), ಹೆಗ್ಗಡ. ೫೯-೧೫೫ ; 1033) ; ತ್ರಿಪುರವನಾ ಪರಿವೃಢನಾಳುತಿರಲು . . . ವಾಯವ್ಯನ ಮರುಳು ಮಾಡುತ ಧನದನನು ದೊರೆಗಡಿಸಿದನು (ತ್ರಿಪುರಾಂ. ೬-೬೬). ೪. ಒಂದು ಬಗೆಯ ಸಸ್ಯ ; ಕಡಸಿಗೆ : "ವಾಯವ್ಯಾ - ಕಡಿಸಿಗನು" (ಓಷಧಿ. ೧೫೦). [ಸಂ.]

ವಾಯವ್ಯಸ್ನಾನ (ನಾ). ದಿವ್ಯ, ವಾರುಣ, ವಾಯವ್ಯ, ಮಾನಸ ಮತ್ತು ಆಗ್ನೇಯಗಳೆಂಬ ಐದು ವಿಧವಾದ ಸ್ನಾನಗಳಲ್ಲಿ ಒಂದು ; ಗೋವುಗಳ ಪಾದಧೂಳಿಯ ಸ್ಪರ್ಶ : ದಿವ್ಯಸ್ನಾನ ವಾರುಣಸ್ನಾನ ವಾಯವ್ಯಸ್ನಾನ ಆಗ್ನೇಯಸ್ನಾನವೆಂಬ ಪಂಚವಿಧಸ್ನಾನಂಗಳೊಳಗೆ (ವಿವೇಕ. ೧೨೬) ; ಗೋವುಗಳ ಪಾದ ಧೂಳಿಯ ಸ್ಪರ್ಶವೇ ವಾಯವ್ಯಸ್ನಾನವು (ಅಜ್ಞಾನಿ. ೪-೬೪). [ಸಂ.]

ವಾಯವ್ಯಾಸ್ತ್ರ (ನಾ). ವಾಯುವನ್ನು ಅಭಿಮಂತ್ರಿಸಿ ಬಿಡುವ ಒಂದು ಬಗೆಯ ಅಸ್ತ್ರ : ಪೂಡವಿಪತಿ ಕೋದಂಡ ಧರಿಸುತ ತೊಡಚಿ ವಾಯವ್ಯಾಸ್ತ್ರದಿಂದವೆ ಕಡಿಯೆ (ಕೌಶಿರಾ. ೨೫-೪೫) ; ವಾಯವ್ಯಾಸ್ತ್ರದಿಂದೆ ಶೋಷಿಸಿದನಾ ಜಲವನರ್ಜುನಂ (ಕೃಷ್ಣಭಾ. ೧೩-೧೫). [ಸಂ.]

ವಾಯಸ (ನಾ). ೧. ಕಾಗೆ : ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು (ಕಾವ್ಯಾವ. ೪೦೨) ; ಸುಗೀತದ ರಸದ ಮಧುವಿಂಗಾಂತ ಕಿವಿ ವಾಯಸ ಸೃಗಾಲಧ್ವನಿಗೆ ಸೊಗಸಿತೆ (ಕುವ್ಯಾಗ. ೩-೨೦). ೨. ಒಂದು ಬಗೆಯ ಸಸ್ಯ : "ವಲಃ - ಆವರೆ, ವಾಯಸ" (ಓಷಧಿ. ೧೫೫). ೩. ಒಂದು ನರಕದ ಹೆಸರು : ಸರ್ಪ ಕೂರ್ಮ ವಾಯಸ ಗೃಧ್ರ ಉಲೂಕವೆಂಬೈದು ಮಂತ್ರಿರನರಕಂಗಳಿಂ ಸಂಯೋಗಿಸಿ ಪದ್ಮವೆಂಬರಸುನರಕವಿಪುದು (ವಿವೇಕ. ೧೫೫). [ಸಂ.]

ವಾಯಸಾದಿನಿ (ನಾ). ಒಂದು ಬಗೆಯ ಗಿಡ : "ವಾಯಸಾದಿನೀ - ಕಾಗಿದೊಂಡೆ" (ಓಷಧಿ. ೧೫೧). [< ಸಂ. ವಾಯಸಾದಿನೀ]

ವಾಯಸಾರಾತಿ (ನಾ). ಕಾಗೆಯ ವೈರಿ ; ಗೂಬೆ : "ಉಲೂಕಃ, ವಾಯಸಾರಿಃ, ಪೇಚಕಃ - ೩ ಗೂಗೆ, ಗೂಬೆ" (ಕಿಷ್ಕಿಂ. ೧೫೩). [ಸಂ.]

ವಾಯಸಾರಿ (ನಾ). ೧. = ವಾಯಸಾರಾತಿ. ೨. ಗುಗ್ಗುಳ ; ಅಗರುಚಂದನ. ೩. ಒಂದು ಬಗೆಯ ಕಬ್ಬು ; ಹೆಗ್ಗಬ್ಬು : "ವಾಯಸಾರಿ- ಹೆಗ್ಗಬ್ಬು, ಗುಗ್ಗುಳ, ಗೂಗೆ" (ಓಷಧಿ. ೧೫೧). [ಸಂ.]

ವಾಯಸಿ (ನಾ). ೧. ಹೆಣ್ಣುಕಾಗೆ. ೨. ಒಂದು ಬಗೆಯ ಸಸ್ಯ ; ℙ ಅನೇಕ ಬಗೆಯ ಸಸ್ಯಗಳಿಗೆ ಈ ಹೆಸರಿದೆ : "ವಾಯಸೀ - ಕಂಗುಂಗೆ, ಕಾಡದೊಂಡೆ, ಕಾಡತ್ತಿ, ಚೀಲ್ಕೆತ, ಬಲ್ಲುಗಣೆಕೆ, ಕೊಡಸಿಗ, ಹೆಣ್ಣಕಾಗೆ" (ಓಷಧಿ. ೧೫೦). ೩. ಗಣೆಕೆಯ ಗಿಡ ಮತ್ತು ಅದರ ಸೊಪ್ಪು; ಕಾಕಮಾಚಿ : "ವಾಯಸಿ ಕಾಕಮಾಚಿ ಪೆಸರಿಂ" (ಮತ್ತುಕೋ. ೩೭-೨೬). [ಸಂ. ವಾಯಸೀ]

ವಾಯಸೋಲಿ (ನಾ). ಜ್ವರವನ್ನು ಹೋಗಲಾಡಿಸಿ ತಂಪನ್ನುಂಟುಮಾಡುವ, ಸಿಹಿಯಾಗಿರುವ ಒಂದು ಬಗೆಯ ಮೂಲಿಕೆ : "ವಾನೀರಕಃ-ಮೊದೆ, ವಾಯಸೋಲಿ, ಕೋಟಿ (ಓಷಧಿ. ೧೫೧). [ಸಂ. ವಾಯಸೋಲೀ]

ವಾಯಾಬ್ಯ (ನಾ). ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ನಡುವೆ ಇರುವ ದಿಕ್ಕು; ವಾಯವ್ಯದಿಕ್ಕು : ಕೂಡಿದ ಠಾವು ವಾಯಾಬ್ಯದ ಮೂಲೆ (ಎಕ. VI, ಕಡೂರು. ೪೯-೨೨; 1291) ; ಆ ಪುರದ ವಾಯಾಬ್ಯದ ಕೋಣೆಯ ನಗರೇಶ ಬ್ರಹ್ಮಪುರಿಯ ನಾಲಕಲ್ಲ ದೇವದಾನದ ಒತ್ತಿನ ಮೂಲೆಯ ಲಿಂಗಮುದ್ರೆಯ ಕಲ್ಲು (ಎಕ. XI, ಚಿತ್ರದು. ೪-೩೯ ; 1328);

[ℙ ಇದು 'ವಾಯವ್ಯ' ಎಂಬುದರ ಅಪಲಿಖಿತ]

ವಾಯಿದೆ, ವಾಯದೆ, ವಾಯ್ದೆ (ನಾ). ೧. ಮಾತು ; ವಾಗ್ದಾನ: ಘಾಯಿದೆ ನೋಡಿ ವಾಯಿದೆ ಕಳಕೊಂಡ (ಗಾದೆ). ೨. ಕಾಲಾವಕಾಶ ; ಅವಧಿ ; ಗಡುವು: ಸಾಲ ತೀರಿಸುವ ವಾಯಿದೆಯನ್ನು ಮುಂದಕ್ಕೆ ಹಾಕಬೇಕಾಗುವುದು (ಹಣಪ್ರ. ೧೫೬) ; ಮೂರೂರಾತ್ರಿ ವಾಯಿದೆ ಕೊಟ್ಟು, ಆ ವಾಯಿದೆ ಕಳೆದ ಮೇಲೆ ನಗರದಲ್ಲಿ ಒಂದು ಪಿಳ್ಳೆಯೂ ಇರಕೂಡದೆಂದು ಡಂಗುರ ಹೊಡೆಸಿದನು (ಪ್ರವಾ. II, ೮೨). ೩. ಒಪ್ಪಿಗೆ ; ಒಡಂಬಡಿಕೆ : (ಕ). ವಾಯದೆ: ೨. ಆ ಕಡೆಯಿಂದ ಗಾಳಿ ಬೀಸುತ್ತಿತ್ತು. ಇನ್ನು ಮೇಲೆ ಆ ಕಡೆಯಿಂದ ಬೀಸುವುದಿಲ್ಲ, ಅದರ ವಾಯದೆ ಮುಗಿದು ಹೋಯಿತು (ಕಿಂಕಥ.೨೫). ವಾಯ್ದೆ : ೨. ಒಂದು ತಿಂಗಳ ವಾಯ್ದೆ ಕೊಟ್ಟು ಆ ಮಹಾನುಭಾವನಿಗೆ ಕೋರ್ಟು ನೋಟೀಸು ಕೊಡುತ್ತೆ (ಏಕಾಂಗಿ. ೧೯೭) ; ನಾಳೆಯವರೆಗೆ ವಾಯ್ದೆ ಇದೆ (ದೇಶಥಿ. ೬೫).

ವಾಯಿದೆ ಗೇಣಿ = "ಸಾಲ ಕೊಡಲು ಕೊಟ್ಟ ಮುದ್ದತು ಗೇಣಿ" (ಜಾನಕೋ. ೪೪). [<— ಅರ. ವಾಅದಾ, ವಾಇದಾ, ವಾದಾ ; ಹಿಂ. ವಾಇದಾ, ವಾದಾ ; ಮರಾ. ವಾಈದಾ, ವಾಯದಾ]

ವಾಯಿದೆಜ್ವರ, ವಾಯದೆಜ್ವರ (ನಾ). ನಿಯಮಿತ ದಿನಗಳ ವರೆಗೆ ಇರುವ ಜ್ವರ ; ಕಟ್ಟಲೆಜ್ವರ : ಮೂರು ದಿನ ಕಳೆದು ಹೋಗಿದೆ. ಇದು ವಾಯಿದೆಜ್ವರ. ಇಪ್ಪತ್ತು ದಿನ ಕಳೆಯಬೇಕು (ಕಾವೇರಿ. ೨೦೫). ವಾಯದೆಜ್ವರ : ಅವರ ಮಗ ಚಂದ್ರಶೇಖರ ವಾಯದೆಜ್ವರ ಬಂದು ಮಲಗಿದವನು ಮತ್ತೆ ಮೇಲಕ್ಕೇಳಲಿಲ್ಲ (ಬೆಳುಮ.೯).

[ವಾಯಿದೆ + ಜ್ವರ]

ವಾಯಿಧಾರೆ 'ಬಾಯ್ಯಾರೆ' ನೋ.

ವಾಯಿಲ್ (ನಾ). ಒಂದು ಬಗೆಯ ತೆಳುವಾದ ಮತ್ತು ಅರೆಪಾರದರ್ಶಕವಾದ ಹತ್ತಿಯ ಅಥವಾ ಉಣ್ಣೆಯ ಬಟ್ಟೆ : ಲಾಂಗ್‌ಕ್ಲಾತ್, ಚೀಟ, ವಾಯಿಲ್, ಮಸ್ಲಿನ್, ಮಲ್ ಇವನ್ನು ಸಾದಾನೇಯ್ಗೆ ಉಪಯೋಗಿಸಿ ನೇಯುವರು (ಗೃಹವಿ. ೭೩).

[<— ಇಂ. Voile]

ವಾಯಿವಡಂಗ 'ವಾಯುವಿಳಂಗ' ನೋ.

ವಾಯಿವಿಡಂಗ 'ವಾಯುವಿಳಂಗ' ನೋ.

ವಾಯಿವಿಳಂಗ 'ವಾಯುವಿಳಂಗ' ನೋ.

ವಾಯು (ನಾ). ೧. ಗಾಳಿ ; ಅನಿಲ : "ಪವನಃ, ಶ್ವಸನಃ, ವಾಯುಃ, ಮರುತ್ . . . ಗಂಧವಹಃ, ಹರಿಃ, ಮಹಾಬಲಃ — ಈ ೨೦ ಗಾಳಿಯ ಪೆಸರ್" (ಹಲಾಯು. ೧೪-೭೫); ಮನ ಮುಟ್ಟದ ಮಜ್ಜನ ತನು ತಾಗದ ದೇಹಾರ . . . ವಾಯು ತಾಗದ ಲಿಂಗದ ಠಾವ ತೋಱೆ ಗುಹೇಶ್ವರ (ಅವಚಂ. ೯೪-೪೧) ; ಭೂಮಿಯನ್ನು ಎಲ್ಲಾ ಕಡೆಯೂ ವಾಯು ಆವರಿಸಿಕೊಂಡಿದೆ (ಭೂವಿವ.೪೨). ೨. ಪ್ರಪಂಚದಲ್ಲಿ ಪದಾರ್ಥಗಳ ಮೂಲ ವಸ್ತುಗಳೆನಿಸಿದ ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶ ಎಂಬ ಪಂಚಮಹಾಭೂತಗಳಲ್ಲಿ ಒಂದು : ಪೃಥಿವಿಯಪ್ಪುತೇಜವಾಯುವಾಕಾಶ ನಿರಂಜನದೇವಾ ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ ಕಾಣಲಾರಿಗೆಯೂ ಬಾರದಯ್ಯಾ (ಬಸವ. ೮೧೬) ; ಈ ಪ್ರಕಾರ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬೈದು ಅಪ್ಪು ತತ್ತ್ವಾಂಶದಿಂದ ಪಂಚಭೂತಗಳ ಚೇಷ್ಟೆ ಹೇತುಗಳಾಗಿಹವೂ. ಪೃಥ್ವಿಯ ಭಾಗವೆ ವಾಯುವೆನಿಸಿಕೊಂಡಿತು (ಸಾನಾಗು. ೧೨-೪) ೩. ದೇಹದಲ್ಲಿರುವ ಮುಖ್ಯವಾದ ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ ಎಂಬ ಐದು ಬಗೆಯ ವಾಯುಗಳಲ್ಲಿ ಪ್ರತಿಯೊಂದು. ೪. ಗಾಳಿಯ ಅಧಿದೇವತೆ ; ಮಾರುತ : ಮಂತ್ರಾಕ್ಷರನಿಯಮದಿನಭಿಮಂತ್ರಿಸಿ ಬರಿಸಿದೊಡೆ ವಾಯುದೇವಂ ಬಂದೇಂ ಮಂತ್ರಂ ಪೇಳೆನೆ (ಪಂಪಭಾ. ೧-೧೨೪) ; ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು (ಪುರಂದ.ಧಾ. ೧-೫೫-೬). ೫. [ವೈದ್ಯಶಾ] ವಾತವ್ರಕೋಪದಿಂದ ಉಂಟಾಗುವ, ದೇಹದ ಕೀಲುಗಳು ಹಿಡಿದುಕೊಳ್ಳುವ ಒಂದು ಬಗೆಯ ರೋಗ,—ವ್ಯಾಧಿ ; ಸಂಧಿವಾತ : ಬಚೆಯಲ್ಲಿ ಒಂದು ಗುಳಿಗೆಯಂ ಕೊಡಲು ವಾಯುಮಾಣ್ಗುಂ (ವೈದ್ಯವಿ. ೩೪). ೬. [ಛಂದ] ಒಂದು ಅಕ್ಷರಗಣದ ಹೆಸರು ; ಸಗಣ : ಆದಿಯ ಮಧ್ಯಾಂತದೆ ಗುರುವಾದೊಡೆ ಶಶಿ ಸೂರ್ಯ ವಾಯು ಗುರುವಿರೆ ಧರೆ ಮತ್ತಾದಿಯ ಮಧ್ಯಾಂತದೆ ಲಘುವಾದೊಡೆ ಜಲವಹ್ನಿಗಗನ ಲಘುವಿಂ ನಾಕಂ (ಛಂದೋಂಬು. ೧-೩೭ ಅಡಿಪದ್ಯ).

ವಾಯುಕುಮಾರ (ನಾ). ವಾಯುವಿನ ಮಗ ; ಹನುಮಂತ : ವಾಯುಕುಮಾರಗೆ ಮಂಗಳ ರಘುರಾಯಸೇವಕಗೆ ಮಂಗಳ . . . ಸಂಜೀವರಾಯಗೆ ಮಂಗಳ (ಪುರಂದ.ಧಾ. ೩-೧೬೭ ಪಲ್ಲವಿ). [ಸಂ.]

ವಾಯುಗುಣ (ನಾ). ೧. ವಾಯುವಿನ ಗುಣ ; ಗಾಳಿಯ ರುಚಿ : ವಾಯುಗುಣವ

ಸರ್ಪ ಬಲ್ಲುದು ಮಧುರಗುಣವನಿಱುಹೆ ಬಲ್ಲುದು (ಮಡಿಮಾ. ೪೦-೫೫). ೨. ವಾತಾವರಣ ; ಹವಾಮಾನ : ಒಂದು ಪ್ರದೇಶದಲ್ಲಿ ಗಾಳಿಯು ಯಾವ ಕಡೆಯಿಂದ ಬೀಸುವುದು, ಅದರಲ್ಲಿ ಎಷ್ಟು ಶಾಖವಿದೆ ಮತ್ತು ಎಷ್ಟು ತೇವವಿದೆ ಎಂಬೀ ವಿಷಯಗಳನ್ನು ತಿಳಿದರೆ ಆ ಪ್ರದೇಶದ ವಾಯುಗುಣವನ್ನು ಅಥವಾ ಹವವನ್ನು ತಿಳಿದಂತಾಗುವುದು (ಭೂರಗು.೩೩). [ಸಂ.]

ವಾಯುಗುಲ್ಮ (ನಾ). ೧. ಅತಿ ತೀವ್ರವಾಗಿ ಬೀಸುವ ಗಾಳಿ ; ಸುಂಟರಗಾಳಿ ; ಬಿರುಗಾಳಿ. ೨. [ವೈದ್ಯಶಾ] (ಅಂತ್ರಪಟಲದ ಮಡಿಕೆ ಜಡ್ಡುಗಟ್ಟುವುದರಿಂದ ಉಂಟಾಗುವ) ತೀವ್ರವಾದ ಸಂಧಿವಾತ ; ವಾತಗುಲ್ಮ : ಮಂಗರ xxx ಬಳ್ಳಿ, ರಕ್ಕಸಿಗೆಡ್ಡೆ . . . ಇವು ಸ್ತಮಾನಂಗೊಂಡು ಅರೆದು . . . ಸೇಮಿಸೆ ಹೊಟ್ಟೆಯಲ್ಲಿರುವ ಗೆಡ್ಡೆ, ಅಡ್ಡಗೈ, ಗರ, ವಾಯುಗುಲ್ಮಂ, ಇವು ಮಾಣುವುವು (ವೈದ್ಯವಿ. ೨೦೦). [ಸಂ.]

ವಾಯುಜ (ನಾ). ೧. ವಾಯುವಿನ ಮಗ ; ಹನುಮಂತ : ಪರನಾರಿಗೆ ವಾಯುಜ ಸ್ವಯಂ ತಾನೆನಲುರ್ವರೆಗೆ ಗಿರಿಜಾತ್ಮಭವನೆನೆ ವರವಿಕ್ರಮನುನ್ನತೋನ್ನತಂ ತಾನೆನಿಕುಂ (ಮಡಿಕಿ.೧೦-೧೪); ಕಾದಡರಿದೊಂದು ಮಲೆನಾಡಾಗಿ ನೆತ್ತಿಯ ಬಯಲ್ ಸೀಮೆಗೇರುತಿರೆ ವಾಯುಜನ ಕಪಿ ಮಹಾಕಾಯಮ್, ಇಳಿದುದು ಕಂದರದ ಕಡೆಗೆ (ಶ್ರೀರಾಮಾ. ೪೦೪-೩೬). ೨. ಭೀಮ. [ಸಂ.]

ವಾಯುನಂದನ (ನಾ). ವಾಯುದೇವನ ಮಗ ; ಭೀಮ : ವಾಯುನಂದನ ಧನಂಜಯನೊಳೆರವಿಲ್ಲ ಮಾದ್ರೇಯರೊಳ್ತಪ್ಪಿಲ್ಲ (ಕೃಷ್ಣಭಾ. ೨-೫೪). [ಸಂ.]

ವಾಯುಪಂಚಕ (ನಾ). ದೇಹದಲ್ಲಿರುವ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಐದು ಬಗೆಯ ವಾಯುಗಳು : ವಿಚಾರಿಸೆ ಸಮಾನೋದಾನವಾ ವ್ಯಾನಮಂತಪಾನಂ ಪ್ರಾಣವೂ ಈ ವಾಯುಪಂಚಕಮುಂ (ವೀಶೈವಿ. ೭-೩-೧೪); ಪ್ರಾಣೋಪಾನವ್ಯಾನೋದಾನಸಮಾನಗಳೈದನ್ನು ವಾಯುವಿನ ಅಯಿದು ಭಾಗಗಳಿಂದ ಉತ್ಪನ್ನವಾದವುಗಳಾದ್ದರಿಂದ ವಾಯುವಂಶವಾದ್ದರಿಂದಲು ವಾಯುಪಂಚಕವೆಂದು ಹೇಳುವರು (ವೇದಾಂಪು. ಸಾಂಖ್ಯಸೂತ್ರ). [ಸಂ.]

ವಾಯುಪಟ್ಟ (ನಾ). [ದ್ವೈತ] ವಾಯುದೇವನ ಅಧಿಕಾರ, —ಪಟ್ಟ : ಶ್ರೀವಾದಿರಾಜರು, ತಮ್ಮ ಗುರುಗಳಂತೆ . . . ಸುಪ್ರಸಿದ್ಧರಾಗಿದ್ದಾರೆ. ದ್ವೈತಿಗಳ ನಂಬಿಕೆಯ ಪ್ರಕಾರ ಮುಂದಿನ ವಾಯುಪಟ್ಟ ಇವರದು (ಜಗದಾ. ೯೮). [ಸಂ.]

ವಾಯುಪಡೆ (ನಾ). ಮೂರುಬಗೆಯ ಸೇನಾಬಲಗಳಲ್ಲಿ ಒಂದು; ವಿಮಾನದ ಮೂಲಕ ಆಕಾಶದಲ್ಲಿದ್ದು ಯುದ್ಧಮಾಡುವ ಸೈನ್ಯ : ನಮ್ಮ ಭಾರತದ ವಾಯುಪಡೆಯಲ್ಲಿ ಅನೇಕ ಸಮರ್ಥನಾಯಕರಿದ್ದಾರೆ (ರೂಢಿ). [ವಾಯು + ಪಡೆ]

ವಾಯುಪಥ (ನಾ). ವಾಯುವು ಚಲಿಸುವ ದಾರಿ ; ಆಕಾಶಮಾರ್ಗ : ಪಾಲ್ಗಡಲನುಪಾಯದಿಂ ಕಡೆಯ ರಾಹುಗೆ ವಾಯುಪಥಾಗ್ರಮೆಂಬ ಪೆರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ (ಕಾವ್ಯಸಾ. ೯೩೮ ಶೂದ್ರಕ) ; ವಾಯುಪಥದೊಳ್ ಶಿತಾಸ್ತ್ರಂಗಳ್ ಪೊಂ[ಕ]ಂಗಿಡಿಸೆ ಸುಗಿದಂ ಭಾರ್ಗವನಿದೇಂ ಪ್ರತಿಜ್ಞಾಗಾಂಗೇಯಂಗದಿರದಿದಿರ್ನಿಲ್ವನ್ನರೊಳರೇ (ಪಂಪಭಾ. ೧-೮೦). [ಸಂ.]

ವಾಯುಪಥಿಕ (ನಾ). ಆಕಾಶಮಾರ್ಗದಲ್ಲಿ ಸಂಚರಿಸುವವನು ; ದೇವತೆ : ಮೂಡೇವರ ದೇವನ ಗೃಹದೊಳು ಬಲುಭೇದದ ಧ್ವಜನಿಕರಗಳು ವಾದಿಸಿ ವಾಯುಪಥಿಕರೊಡನವರಿಗೆ ಹಾದಿಯ ಕೊಡದಿರುತಿಹವು (ತ್ರಿಪುಸಾಂ. ೭-೭೮). [ಸಂ.]

ವಾಯುಪುತ್ರ (ನಾ). ೧. ವಾಯುದೇವನ ಮಗ. ೨. ಹನುಮಂತ. ೩. ಭೀಮ : "ಕುರುವೈರಿ ವಾಯುಪುತ್ರಂ ವೃಕೋದರನೆನಲು ಭೀಮನಕ್ಕುಂ" (ಮಂಗರಾ. ೭೮-೩). [ಸಂ.]

ವಾಯುಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು : ಯಾವ ಪುರಾಣ ಯಾವ ಕಲ್ಪಕ್ಕೆ ಸೇರಿದ್ದು? — ಬ್ರಾಹ್ಮಕಲ್ಪ — ಬ್ರಹ್ಮಪುರಾಣ . . . ಶ್ವೇತಕಲ್ಪ - ಶೈವ ಅಥವಾ ವಾಯುಪುರಾಣ (ಭಾರಗ. ೧೪೭). [ಸಂ.]

ವಾಯುಪ್ರಾಣಿ (ನಾ). [ವೀಶೈ] ಉಸಿರಾಡುವ ಜೀವಿ ; ಶರೀರಧಾರಿ : ಆದಿ ಅನಾದಿಯ ನಿತ್ಯಾನಿತ್ಯವ ತಿಳಿಯಲಱಿಯದೆ ವಾಯಕ್ಕೆ ಪರಬ್ರಹ್ಮವ ನುಡಿವ ವಾಯುಪ್ರಾಣಿಗಳವರೆತ್ತ ಬಲ್ಲರೋ ಆ ಪರಬ್ರಹ್ಮದ ನಿಜದ ನಿಲವ (ಮಹಾದೇ. ಬ. ೧೦೦-೨೩೫) ; ಎನಿಸಿದನು ಮಂತ್ರಪಿಂಡ ಎನಿಸದೆ ಮಾಂಸಪಿಂಡ ಎನಿಸದೆ ವಾಯುಪ್ರಾಣಿ ಎಂದು ಬಸವಣ್ಣ ಎನಿಸಿದನು ಲಿಂಗಪ್ರಾಣಿ ಎಂದು (ಸಿದ್ಧಪು. ೨೬-೯೯). [ಸಂ.]

ವಾಯುಬಲ (ನಾ). ೧. ಗಾಳಿಯ ಬಲ, — ಶಕ್ತಿ : ವಾಯುಬಲದಿಂದ ನಡೆಯುವ ಯಂತ್ರಗಳನ್ನು ಇಂದು ಇಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ (ರೂಢಿ). ೨. ವಾಯುದೇವನ ಬಲ, —ಸಾಮರ್ಥ್ಯ : ಕೃಷ್ಣನು, "ನಿನ್ನಲ್ಲಿರುವ ವಾಯುಬಲವನ್ನು ತೋರಿಸು ಭೀಮ"! ಎಂದನು (ಮಹಭಾ. ೭೯). [ಸಂ.]

ವಾಯುಭಕ್ಷ (ನಾ). ಗಾಳಿಯನ್ನು ಆಹಾರವಾಗಿ ಸೇವಿಸುವಂಥದು; ಹಾವು : "ವಾಯುಭಕ್ಷಃ - ಸರ್ಪ" (ಓಷಧಿ. ೧೫೧). [ಸಂ.]

ವಾಯುಭುಗ್ಭೂಷ (ನಾ). ಗಾಳಿಯನ್ನು ಸೇವಿಸುವ ಸರ್ಪವನ್ನು ಆಭರಣವಾಗಿ ಉಳ್ಳವನು ; ನಾಗಭೂಷಣ ; ಶಿವ : ವಾಯುಭುಗ್ಭೂಷನುತ್ತಮವೇಷನಳಿ ತಿಮಿರಪೂಷಂ . . . ಪಂಪಾವಿರೂಪಾಕ್ಷನೆಮಗೀಗೆ ಭಕ್ತಿಜ್ಞಾನಸಂಪದವನು (ಹಚಕಾ. ೧-೮). [ಸಂ.]

ವಾಯುಮಂಡಲ (ನಾ). (ಭೂಮಿಯ ಸುತ್ತ ಇರುವ) ವಾತಾವರಣ : ಕೃಷ್ಣವರ್ಣಮನುಳ್ಳುದು ವಾಯುಮಂಡಲಮನುಳ್ಳುದು ತನ್ನ ನಾಲ್ಕು ದಿಕ್ಕಿನೊಳಂ (ಪ್ರತಿಜ್ಞಾ. ೧೦-೫೪) ; ವಾಯುಮಂಡಲದ ಮೇಲುಭಾಗದಲ್ಲಿ ಗಾಳಿಯ ಚಲನೆಯನ್ನು ಗಮನಿಸಿ (ಭೂವಿವಿ. ೪೭). [ಸಂ.]

ವಾಯುಮಾರ್ಗ (ನಾ). ಗಾಳಿಯು ಚಲಿಸುವ ದಾರಿ, — ಪಥ ; ಆಕಾಶಮಾರ್ಗ : ವಾಯುಮಾರ್ಗದ ಮೂಲಕ ಇಂದು ಅವರು ಹೊರದೇಶಕ್ಕೆ ಹೊರಟರು (ರೂಢಿ). [ಸಂ.]

ವಾಯುಮೃಗ (ನಾ). ಗಾಳಿಗೆ ಎದುರಾಗಿ ನಡೆಯುವ ಸ್ವಭಾವವುಳ್ಳ ಒಂದು ಬಗೆಯ ಹುಲ್ಲೆ : "ವಾತಪ್ರಮೀಃ, ವಾತಮೃಗಃ — ೨ ವಾಯುಮೃಗದ ಹೆಸರು, ಗಾಳಿಗೆಯೆದುರಾಗಿ ನಡಿಯುವ ಸ್ವಭಾವವುಳ್ಳ ಹುಲ್ಲೆಯೆಂಬುವ ಮೃಗ. ಇದು ಕಡಹದ ಜಾತಿಯಲ್ಲಿ ಭೇದವು" (ಸಿದ್ಧಾಂಶಿ. ೧೫೪). [ಸಂ.]

ವಾಯುಯಾನ (ನಾ). ೧. ವಾಯುಮಾರ್ಗದಲ್ಲಿ ಮಾಡುವ ಪ್ರಯಾಣ. ೨. ಆಕಾಶದಲ್ಲಿ ಪ್ರಯಾಣಮಾಡುವ ವಿಮಾನ ಮೊದಲಾದ ಸಾಧನ : ಮಿಶ್ರ ಲೋಹಗಳು . . . ವಾಯುಯಾನದಲ್ಲಿ ಇದರ ಉಪಯೋಗವು ವಿಶೇಷವಾಗಿದೆ (ತಿಲ್ಪನಾ. ೩೧೬). [ಸಂ.]

ವಾಯುರಯ (ನಾ). ೧. ವಾಯುವೇಗ ; ಅತ್ಯಂತ ವೇಗ. ೨. ವಾಯುವೇಗವನ್ನುಳ್ಳುದು ; ಅತ್ಯಂತ ವೇಗವಾಗಿ ಚಲಿಸುವಂತಹುದು : ಮೀಂಟಿ ದಾಂಟಿ ಕಂಟಳಿಸಿ ಪೊದಳ್ದು ಪಾಯ್ದು ಪರಿಯಿಟ್ಟುದು ವಾಯುರಯಂ ಹಯದ್ವಯಂ (ರಾಜಶೇ. ೧೩-೯೧). [ಸಂ.]

ವಾಯುರೋಗ (ನಾ). = ವಾಯು ೫ : ಸಂಗ್ರಹಣಿ, ಅಷ್ಟಾದಶಕುಷ್ಠ, ವಾಯುರೋಗಂಗಳಿಗೆ ಅನುಪಾನದಲ್ಲಿ ಕೊಡುವುದು (ವೈದ್ಯವಿ. ೫೦). [ಸಂ.]

ವಾಯುಲಿಂಗ (ನಾ). [ವೀಶೈ] ಈಶ್ವರನ ಐದು ಲಿಂಗಸ್ವರೂಪಗಳಲ್ಲಿ ಒಂದು ; ವಾಯುಸ್ವರೂಪವಾದ ಲಿಂಗ : ವಾಯುಲಿಂಗವೆಂದರೆ ಚಲಿಸುವ ವಾಯುವೇ ಲಿಂಗವಾಗಿಯೂ ಆಕಾಶಲಿಂಗವೆಂದರೆ ಬಯಲೇ ಲಿಂಗವಾಗಿಯೂ ಹಿಂದೆ ತಿಳಿಸಿದ ಕ್ಷೇತ್ರಗಳಲ್ಲಿ ಈಗಲೂ ಕಾಣುತ್ತಿವೆ (ಶಕ್ತಿವಿ. ೩೦). [ಸಂ.]

ವಾಯುವಿಕಾರ (ನಾ). ದೇಹದಲ್ಲಿ ವಾತಪ್ರಕೋಪದಿಂದ ಉಂಟಾಗುವ ರೋಗ ; ವಾತಕ್ಷೋಭೆ : ಕ್ಷೀರಧಾರಾ (ನೊರೆಹಾಲು) ಗುಣ — ಇದನ್ನು ಸೇವಿಸಲು . . . ವಾಯುವಿಕಾರ, ನೇತ್ರರೋಗ, ವಿಷರೋಗ ಸಹ ಗುಣಮಕ್ಕುಂ (ಸಕ್ಷೇ. ೨೮). [ಸಂ.]

ವಾಯುವಿಹಾರ (ನಾ). ಗಾಳಿಸೇವನೆಗೆಂದು ವಿಹರಿಸುವಿಕೆ, — ಸಂಚರಿಸುವಿಕೆ : ಅವರು ಪ್ರತಿದಿನವೂ ವಾಯುವಿಹಾರಕ್ಕೆ ಹೋಗುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ (ರೂಢಿ). [ಸಂ.]

ವಾಯುವಿಳಂಗ, ವಾಯವಡಂಗ, ವಾಯವಿಡಂಗ, ವಾಯಿವಡಂಗ, ವಾಯಿವಿಡಂಗ, ವಾಯಿವಿಳಂಗ (ನಾ). ಒಂದು ಬಗೆಯ ಮರ ಮತ್ತು ಕ್ರಿಮಿನಾಶಕಗುಣವುಳ್ಳ ಅದರ ಕಾಯಿ ; ಕ್ರಿಮಿಘ್ನ : ಮಣಿಶಿಲೆ, ಗಂಧಕ,

ಗೋಮೂತ್ರ, ವಾಯುವಿಳಂಗ, ಸಾಸುವೆಎಣ್ಣೆ, ಪಾದರಸ ಇವಿಷ್ಟನು ಸಮಾಂಶವಾಗಿ ಮರ್ದಿಸಿ ಮಂಡೆಗೆ ಇಕ್ಕಿಸಲು ಹೇನು ಸತ್ತು ಹೋಹುದು (ವೃದ್ಧಸಾ.II, ೧೪೩) ; ಶುಂಠಿ, ಭದ್ರಮುಸ್ತೆ, ವಾಯುವಿಳಂಗ, ದೇವದಾರು, ಬೆಲ್ಲವತ್ತದ ಬೇರು ಇವುಗಳನ್ನು ಕಷಾಯ ಕಾಯಿಸಿ ಕುಡಿಯೆ ಶ್ಲೇಷ್ಮಜ್ವರ ಶಮನವಾಗುವುದು (ಸಕವೃ. ೯೦). ವಾಯುವಡಂಗ : "ವೇಲ್ಲ -- ವಾಯುವಡಂಗ" (ಗಂಗಾಮ. ೨೯೭). ವಾಯುವಿಡಂಗ : "ಕೃಮಿಘ್ನ -- ವಾಯುವಿಡಂಗ" (ಗಂಗಾಮ. ೧೫೫). ವಾಯುವಡಂಗ : "ಮೋಘ . . . ವಾಯುವಡಂಗದ ಗಿಡ" (ಗಂಗಾಮ. ೨೬೪). ವಾಯಿವಿಡಂಗ : "ತಂಡುಲ . . . ವಾಯಿವಿಡಂಗ" (ಗಂಗಾಮ. ೧೪೬). ವಾಯಿವಿಳಂಗ : ಪಂಚಲವಣ, ಯವಕ್ಷಾರ . . . ವಾಯಿವಿಳಂಗ, ತಾರೇಕಾಯಿ, ನೆಲ್ಲಿಯಕಾಯಿ, ಇವುಗಳ ಸಮಾನ ಚೂರ್ಣವಂ ಮಾಡಿ ತುಪ್ಪದಲ್ಲಿ ಮೆಲ್ಲುವುದು (ವಿವೈದ. ೧೬೮). [ದೇ. ॥ ತಮಿ. ವಾಯುವಿಳಙ್ಗಮ್, ವಾಯ್ವಿಲಙ್ಗಮ್ ; ತುಳು. ವಾಯಿಲಾಂಗ್, ವಾಯಿವಿಲಂಗ ; ತೆಲು. ವಾಯುವಿಳಂಗ, ವಾಯಿವಿಳಂಗ. / ಸಂ. ವಿಡಂಗ. / ಹಿಂ. ವಾಯವಿಡಂಗ ; ಮರಾ. ವಾವಡಿಂಗ, ವಾವಡಂಗ ; ಗುಜ. ವಾವಡಿಂಗ]

ವಾಯುವೇಗ (ನಾ). ೧. ಗಾಳಿಯ ವೇಗ. ೨. ಅತ್ಯಂತವೇಗ : ಜವನುಂ ತಾಂ ವಾಯುವೇಗಯುತನುಂ ಯಮನುಂ (ಪಪ್ರಕೋ. ೧೧೮-೩) ; ಮುನಿದು ರಾವಣ ತೇರನಟ್ಟಿದ ವಾಯುವೇಗದಲಿ (ಕಾಶಿಕಾ. ೩೭-೨೧). [ಸಂ.]

ವಾಯುವೇಗಿ (ನಾ). ೧. ಗಾಳಿಯಂತೆ ತೀವ್ರಗತಿಯುಳ್ಳುದು. ೨. ಅತ್ಯಂತ ವೇಗವಾಗಿ ಚಲಿಸುವ ಒಂದು ಜಾತಿಯ ಕುದುರೆ : ವಾಯುವೇಗಿಯನತುಳ ಬಲಿಯನಡೇಯಮುಖನಂ ತನ್ನಿ (ಬಸವ. ೫೯-೩೯). [ಸಂ. ವಾಯುವೇಗಿನ್]

ವಾಯುಸಂಚಾರ (ನಾ). ೧. ಗಾಳಿಯ ಚಲನೆ,—ಓಟ : ಅನೇಕ ಸಾಧಾರಣಪ್ರಾಣಿಗಳಲ್ಲಿ ವಾಯುಸಂಚಾರ ಚರ್ಮದ ಮೂಲಕ (ಕಿಬಚಿ. ೩೬). ೨. ತಿರುಗಾಟ ; ವಾಯುವಿಹಾರ : ಸಂಜೆ ವಾಯುಸಂಚಾರಕ್ಕೆಂದು ಹೊರಟು ಅವರು ಮನೆ ತಲುಪಿದಾಗ ರಾತ್ರಿ ಎಂಟು ಗಂಟೆಯಾಯಿತು (ರೂಢಿ). [ಸಂ.]

ವಾಯುಸಖಿ (ನಾ). ಗಾಳಿಯ ಮಿತ್ರ ; ಬೆಂಕಿ : ಮತ್ತೆಯಾಹವನೀಯ ಗಾರುಹಪತ್ಯ ದಕ್ಷಿಣ ವಾಯುಸಖಿರಾದರು ತ್ರಿವೇಣುಕವಾ ರಥಾಗ್ರದಲಿ (ಕುಮಾಕ. ೭-೪). [ಸಂ.]

ವಾಯುಸುತ (ನಾ). ೧. ವಾಯುವಿನ ಮಗ : ಗಂಟರೊಳರೆಯ ಮೇಲೆ ಕುಳಿತಿರ್ಪನೆಕೃಟಿಯೊಳಾ ದಿವ್ಯತೇಜಸ್ಸಿ . . . ವಾಯುಸುತನಾಂಜನೇಯಂ! (ಶ್ರೀ ರಾಮಾ. ೫೯೭-೧೪೩). ೨. ಹನುಮಂತ : ರಾಜಸೂಯವ ಕೊಳಲು ವಾಯುಸುತ ಬಂದಿಹನು (ಪುರಂದ. ಧಾ. ೧-೧೭೫-೪). ೩. ಭೀಮ : ರುದ್ರನೊಳು . . . ವಾಯುಸುತನೊಳು ಭಟನೊಳುಗ್ರದೊಳು ತೋಳ್ಗಳೊಳು ಭೀಮನಾಮಂ (ಮಂಗರಾ. ೧೪೯-೪೮); ವಾಯುಸುತ ಜಾತಿಯಲಿ ಹಲಗೆಯಡಾಯುಧವ ಕೊಂಡರಿಭಟನ ಮೇಲ್ವಾಯದಡೆ . . . ಹಗೆ ಮಾಯವಾದನು (ಕುಮಾದ್ರೂ. ೧೩-೫೭). [ಸಂ.]

ವಾಯುಸೇನೆ (ನಾ). = ವಾಯುಪಡೆ : ಲಕ್ಷ್ಮೀನಾರಾಯಣರಿವರೊಳು ಹಿರಿಯರು . . . ವಾಯುಸೇನೆಯೊಳಧಿಕಾರಿಯಾಗಿರುವರು (ಇಂಬಾಪ. ೭೪-೫೮). [ಸಂ. ವಾಯುಸೇನಾ]

ವಾಯುಸೇವನೆ (ನಾ). (ಸ್ವಚ್ಛವಾದ) ಗಾಳಿಯನ್ನು ಸೇವಿಸುವುದು : ವಾಯುಸೇವನೆಗಾಗಿ ಅವರು ಪ್ರತಿದಿನ ಲಾಲ್‌ಬಾಗಿಗೆ ಹೋಗುವರು (ರೂಢಿ). [ಸಂ. ವಾಯುಸೇವನ]

ವಾಯುಸ್ತಂಭ (ನಾ). ಪಾರ್ಥಿವಸಿದ್ಧಿ, ಅಪ್ಪತ್ತ್ವ, ತೈಜಸ, ವಾಯು, ಅಂಬರ, ಮಾನಸ, ಅಹಂಕಾರ ಮತ್ತು ಬುದ್ಧಿ ಎಂಬ ಅಷ್ಟಸಿದ್ಧಿಗಳಲ್ಲಿ ಒಂದು ; ಗಾಳಿಯಲ್ಲಿ ನಿರಾಧಾರವಾಗಿ ದೇಹವನ್ನು ಎತ್ತಿ ನಿಲ್ಲಿಸುವ ಒಂದು ಬಗೆಯ ವಿದ್ಯೆ : 'ಜಲಸ್ತಂಭ' ಪರಾ. [ಸಂ.]

ವಾಯುಸ್ತಂಭನ (ನಾ). = ವಾಯುಸ್ತಂಭ : ವಾಯುಸ್ತಂಭನ ವಾದ ವಶ್ಯ ಅಂಜನಾಸಿದ್ಧಿ ಘಟಿಕಾಸಿದ್ಧಿ ಮಂತ್ರತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ . . . ಲಿಂಗವಂತ ನೆನಿಸಿಕೊಂಬುದಿಲ್ಲ (ಮಡಿಮಾ. ೩೩-೬೧). 'ಜಲಸ್ತಂಭನ' ಪರಾ. [ಸಂ.]

ವಾಯುಹತಿ (ನಾ). ಗಾಳಿಯ ಹೊಡೆತ,—ಪೆಟ್ಟು : ವಾಯುಹತಿಯಲಿ ಮೇಘದೊಡ್ಡಿಂಗಾಯಸವು ಕರ್ಣಾಸ್ತ್ರಹತಿಯಲಪಾಯವರಿರಾಯರಿಗಪೂರ್ವವೆ (ಕುಮಾಕ. ೧೪-೬). [ಸಂ.]

ವಾಯ್ಕಾಲು 'ಬಾಯ್ಕಾಲ್' ನೋ.

ವಾಯ್ದೆ 'ವಾಯಿದೆ' ನೋ.

ವಾರ$_1$ 'ಬರ್' ಪರಾ.

ವಾರ$_2$ (ನಾ). ೧. ಭೂಮಿಯ ಮಾಲೀಕರಿಗೆ, ಗೇಣಿದಾರನು ಸಲ್ಲಿಸುವ ಫಸಲಿನ ಅರ್ಧಭಾಗ ; ಕೋರು : ಕೊಟ್ಟಗುತ್ತಿಗ ವಾರವುಂಟೆಂದಟ್ಟಿ ನಿನ್ನವರಿಂದವೆನ್ನಂ ಕಟ್ಟಿ ಕುಟ್ಟಿಪುದರಸ ಧರ್ಮವೆ (ಬಸವ. ೨೭-೫೨) ; ಮಾದಸೆಟಿ ಆದಿಯಾಗಿ ಮಾಡಿಕೊಂಡ ತೋಟಕೆ ಕೊಟ ವಾರ ಗ ೨೫ (ಸೌಇಇ. IX-ii, ೪೭೬-೨೮; 1508) ; ಬ್ರಾಹ್ಮಣರು . . . ಹೊಲಗದ್ದೆಗಳನ್ನು ವಾರಕ್ಕೋ ಗುತ್ತಿಗೆಗೋ ಕೊಡುತ್ತಿದ್ದರು (ಶಕುಂ. ೯೨) ೨. ವಾರಕ್ಕೆ ತೆಗೆದುಕೊಂಡ ಭೂಮಿಯ ಫಸಲಿನ ಮೇಲೆ ಹಾಕುವ ತೆರಿಗೆ,—ಕಂದಾಯ: ಸುವರ್ನಾದಾಯ ವಾರ ಕಾರುಸೇಸೆ ಸಿದ್ಧಾಯ . . . ಯೇನುಳ ಸರ್ವಸ್ವಾಮ್ಯವನೂ ನೀಉ ಆಗುಮಾಡಿಕೊಂಡು (ಸೌಇಇ. IX-ii, ೪೪೦-೨೪; 1419); ಸರಕಾರದ ವಾರದ ಭೂಮಿಯಲಿ ಆಗಲಿ ಯಿವರು ಮಾಡಿಯಿರುವ ಕಂದಾಯದ ಸುಂ ಭೂಮಿಯಲಿ ಆಗಲಿ ನಡಶಿಕೊಂಡು ಬರುವದು (ಮೃಲಂ. ೧೯೩೦, ೪೨-೬; 1822).

ವಾರಕ್ಕೆ ಕೊಡು = ಭೂಮಿಯ ಒಡೆತನವನ್ನು ಉಳಿಸಿಕೊಂಡು, ಅದರಲ್ಲಿ ಬರುವ ಫಸಲಿನ ಅರ್ಧಭಾಗವನ್ನು ತೆಗೆದುಕೊಳ್ಳುವ ಕರಾರಿನ ಮೇಲೆ ಭೂಮಿಯನ್ನು ಬೇರೊಬ್ಬನಿಗೆ ಸಾಗುವಳಿಗೆ ಕೊಡು : ನಾವು ನಮ್ಮ ಹೊಲಗಳನ್ನೆಲ್ಲಾ ವಾರಕ್ಕೆ ಕೊಟ್ಟಿದ್ದೇವೆ (ರೂಢಿ). ವಾರದ ದವಸ = ಭೂಮಿಯನ್ನು ವಾರಕ್ಕೆ ತೆಗೆದುಕೊಂಡ ಗೇಣಿದಾರನು ಜಮೀನಿನ ಮಾಲೀಕರಿಗೆ ಸಲ್ಲಿಸಬೇಕಾದ ದವಸ,—ಧಾನ್ಯ : ಆಗ ಕೆಲವು ರೈತರು ಅರಮನೆಗೆ ಕೊಡತಕ್ಕ ಕಂದಾಯ, ವಾರದ ದವಸ ಮುಂತಾದುವನ್ನು ನಾವು ಕೊಡುವುದಿಲ್ಲ, ಎನ್ನುತ್ತಿ ಕಂದಾಯವನ್ನು ಸಲ್ಲಿಸದೆ ದಂಗೆಯೇಳುವ ಯೋಚನೆಯಲ್ಲಿದ್ದರು (ಒಡೆ. ೫೧)

[ದೇ. ॥ ತಮಿ. ಮಲ. ವಾರಮ್ ; ಕೊಡ. ವಾರ ; ತೆಲು. ವಾರಕಮು = ಬೆಳೆಯು ಬಂದ ನಂತರ ಬಡ್ಡಿಯಿಲ್ಲದೆ ಹಿಂದಕ್ಕೆ ಪಡೆಯುವ ಕರಾರಿನ ಮೇಲೆ ಬೆಳೆಗಾರರಿಗೆ ವ್ಯವಸಾಯಕ್ಕಾಗಿ ಮುಂಗಡವಾಗಿ ಕೊಡುವ ಹಣ]

ವಾರ$_3$ (ನಾ). ೧. ಹೊದಿಕೆ ; ಆಚ್ಛಾದನೆ. ೨. ಗುಂಪು ; ಸಮೂಹ : ಚಾಪದುತ್ಕಟದ ಯೋಧರ ವಾರಂ . . . ಆರ್ಭಟಿಸಿ ಭೀಕರದಿಂದೆ ಕಡಂಗಿ ಸಂಗರಕ್ಕುರವಣಿಸಾರ್ದ ಪೊಕ್ಕು (ಹಮ್ಮೀರ. ೩-೪೦) ; ಸುಧೆಯ ರಸದಿಂಪನಾ ದೇವತೆಗಳ ವಾರ ಬಲ್ಲಂತೆ . . . ದುರ್ಜೀವಿಗಳ್ ತಿಳಿಯಬಲ್ಲರೆ ಮಹೀತಳದೊಳು (ನಂದಿಮಾ. ೧-೨೧). ೩. ರಾಶಿ ; ಒಟ್ಟಿಲು. ೪. ದೊಡ್ಡ ಸಂಖ್ಯೆ. ೫. ಸರತಿ ; ಪಾಳಿ : ವಾರಂ ಬಂದುದು ನಿಂದುದು ಜನವಿಂದೇರಯ್ಯಮೆನಲ್ಕೊಯ್ಯೆನೆನುತೆ ಪುಣ್ಡಾರಯೆ (ಉದ್ಯದೇ. ೫-೧೨). ೬. ಭಾನುವಾರದಿಂದ ಶನಿವಾರದ ವರೆಗಿನ ಅಥವಾ ಯಾವುದೇ ಏಳು ದಿನಗಳ ಅವಧಿ ; ಸಪ್ತಾಹ : ಹಾಲ ಧಾರೆಗು ಸಹ ಅಕ್ಕಿಮೂಡೆ ೧೦ ತಿಂಗಳು ತಿಂಗಳು ತಪ್ಪದೆ ತಿಂಗಳಲ್ಲಿ ೧೭ ಹೋಹಾಗ ನಡವ ವಾರ ೧ ಮತ್ತಂ ಇಪ್ಪತ್ತೈದು ೨೫ ಹೋಹಾಗ ನಡವ ವಾರ ೧ ಅಂತು ತಿಂಗಳಲ್ಲಿ ಯೆರಡು ವಾರ ಸಮುದಾಯ ನಡವುದಕ್ಕೆ ಅಕ್ಕಿಮೂಡೆ ೧೨ (ಎಇ. XX, ೯೪-೪೯; 1556) ; ಅವರು ಊರಿನಿಂದ ಬರುವುದಕ್ಕೆ ಇನ್ನೂ ಒಂದು ವಾರವಾಗುತ್ತದೆ (ರೂಢಿ). ೭. ಭಾನುವಾರ ಮುಂತಾಗಿ ಸೂರ್ಯ ಮೊದಲಾದ ಗ್ರಹಗಳು ಅಧಿಪತಿಗಳಾಗಿರುವ ಸಪ್ತಾಹದ ಪ್ರತಿಯೊಂದು ದಿವಸ : ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್ ಮುಂಜಿಬಂಧನಕ್ರಿಯೆಯಂ ಮಾಡಿದ ಬಟಿಕ್ಕೆ (ವಜ್ರಾಂ. ೭೩-೨೧) ; ವಾರವೆಂದಟ್ಟಿಯೆ ದಿನವೆಂದಟ್ಟಿಯೆ ಏನೆಂದಟ್ಟಿಯೆನಯ್ಯಾ (ಬಸವ. ೪೯೦). ೮. ನಿರ್ದಿಷ್ಟದಿನಗಳಲ್ಲಿ ಆಚರಿಸುವ ಉಪವಾಸ, ವ್ರತ ಮುಂತಾದ ಕಟ್ಟಳೆ : ಊರಲ್ಲಿ ರೋಗಾದಿಗಳು ಹಬ್ಬಿದರೆ, ಏನಾದರೂ ಸಂಭವಿಸಿದರೆ ಈ ದೇವತೆಗಳೇ ಮೂಲಕಾರಣರೆಂದು ತಿಳಿದು ವಾರಗಳನ್ನು ಆಚರಿಸುವರು (ಕನ್ನಡಾ. ೧೫). ೯. ಅವಕಾಶ ; ಆಸ್ಪದ; ಸಂದರ್ಭ : "ಅವಸರಮುಂ ವಿಸರಮುಮಱಿ ವಾರಂ" (ಪಪ್ರಕೋ. ೧೨೫-೪೬).

೧೦. ಶಿವ; ಈಶ್ವರ. ೧೧. ಬಾಗಿಲು; ದ್ವಾರ. ೧೨. ನದಿಯ ಇನ್ನೊಂದು ತೀರ.

ವಾರವಾರ (ದ್ವಿರುಕ್ತಿ) : ವಾರವಾರಕೆ ಪೂಜೆಗೊಂಬುವ ಹಾರ ಮುಕುಟಾಭರಣ ಕುಂಡಲಧಾರ ಭುಜಕೇಯೂರಭೂಷಿತ (ಪುರಂದ. ೨-೧೩೮-೧). ವಾರಂಪ್ರತಿ = ಪ್ರತಿವಾರವೂ ; ಎಲ್ಲ ಸಪ್ತಾಹದಲ್ಲೂ : ಅವನು ವಾರಂಪ್ರತಿ ಕೆಲಸದ ಮೇಲೆ ಹಳ್ಳಿಯಿಂದ ಪಟ್ಟಣಕ್ಕೆ ಬರುತ್ತಾನೆ (ರೂಢಿ). ವಾರಕೊಡು = ಪ್ರತಿಸಪ್ತಾಹದಲ್ಲೂ ಒಂದು ನಿರ್ದಿಷ್ಟದಿನದಂದು (ಬಡ ವಿದ್ಯಾರ್ಥಿ ಮುಂತಾದವರಿಗೆ ಉಚಿತವಾಗಿ) ಊಟವನ್ನು ನೀಡು : ಅವರ ಮನೆಯಲ್ಲಿ ಇಬ್ಬರು ಓದುವ ಹುಡುಗರಿಗೆ ವಾರಕೊಟ್ಟಿದ್ದಾರೆ (ರೂಢಿ). ವಾರಮಾಡು = (ಹರಕೆ ಮುಂತಾದುವನ್ನು ತೀರಿಸಲು) ಪ್ರತಿಸಪ್ತಾಹದಲ್ಲೂ ನಿರ್ದಿಷ್ಟದಿನದಂದು ವ್ರತ, ಉಪವಾಸ ಮುಂತಾದುವನ್ನು ಆಚರಿಸು : ಗುರುವಾರ ಅವರು ವಾರ ಮಾಡುವುದರಿಂದ ಅಂದು ಒಂದೇ ಹೊತ್ತು ಊಟಮಾಡುತ್ತಾರೆ (ರೂಢಿ). [ಸಂ.]

ವಾರಂವಾರ (ಅ). ಪದೇ ಪದೇ ; ಪುನಃ ಪುನಃ ; ಮತ್ತೆಮತ್ತೆ : ಕುಸುಮಬಾಣನ ಮತ್ತು ನನ್ನಯ ಕುಸುಮದಾಸ್ತರಣವನು ಪ್ರೇಮದೆ ಪಸರಿಸುವುದಕೆ ನೀನು ವಾರಂವಾರ ನೆರವಾದೆ (ಪಾರ್ವತಿ. ೭) ; ಒಂದು ಅತಿ ಕೋಮಲ ಉತ್ತರೀಯದ ಸೆರಗು ವಾರಂವಾರ ಹಾರಿ ಬಂದು ನನ್ನ ಗಲ್ಲಕ್ಕೆ ತಾಕುತ್ತಿತ್ತು (ಇಪ್ಪತ್ತು. ೧೫೨). [ಸಂ. ವಾರಂವಾರಂ]

ವಾರಕ $_1$ (ಗು). ೧. ತಡೆಯುವ ; ನಿವಾರಿಸುವ. (ನಾ). ೨. ತಡೆಯುವವನು ; ಅಡ್ಡಿಪಡಿಸುವವನು : ಬಾರಿಪ ನಿಮ್ಮ ತರ್ಜನದಿನೀ ಜನದೊಂದುಲಿ ಮಾಣ್ಕೆ ಮಾಣೆವಾವಾರೆಮಗಿಲ್ಲ ವಾರಕರೆನುತ್ತುಮ ಮಾರ್ಜಡಿವಂದದಿಂ ಪ್ರತೀಹಾರಿಯರಂ ಪೊದಟ್ಟುವೆಳವೆಂಡಿರ ನೂಪುರದಿಂಚರಂ (ಪಾಪ್ಪಪು. ೭-೩೫). ೩. ಒಂದು ಜಾತಿಯ ಶ್ರೇಷ್ಠವಾದ ಕುದುರೆ ; ಜಾತ್ಯಶ್ವ. ೪. ಕುದುರೆಯ ನಡಗೆಯಲ್ಲಿ ಒಂದು ಬಗೆ ; ಒಂದು ಬಗೆಯ ಅಶ್ವಗತಿ. [ಸಂ.]

ವಾರಕ $_2$ (ನಾ). ಬಳುವಳಿ ಅಥವಾ ಕಾಣಿಕೆಯಾಗಿ ಕೊಡುವ ಒಡವೆ, ವಸ್ತು ಮುಂತಾದುವು : ಏನಯ್ಯ ಅರಸರ ವಾರಕದ ಮಾಣಿಕದುಂಗುರಮಂ ಕಿಡಿಸಿ ಬಂದಿರೆ (ವಡ್ಡಾರಾ. ೫-೧೦) ; ನಿಮ್ಮ ವಾರಕದೊಡವೆಯ ನಿಮಗರ್ಪಿಸಲಱಿಯದ ಕರ್ಮಿ ನಾನಯ್ಯಾ (ಗಣಭಾ. ೪೩-೬೧) ; ಇವದಿರ ತಲೆಗಳಿವು ವಾರಕದವಿವನರೆಗಳಿಗೆಯಲಿ ತಾ ಕೊಂಬೆನು (ಪ್ರೌ. ೧೨-೨೯).

ವಾರಕದ ಚಿನ್ನ = ಬಳುವಳಿ ಅಥವಾ ಕಾಣಿಕೆಯಾಗಿ ಕೊಡುವ ಚಿನ್ನ : ಧರ್ಮನು ತನ್ನ ಭಂಡಾರವೆಲ್ಲಾ ತೀರಲು ದಳವಾಯಿ ಮೊದಲಾದ ರಾಜ್ಯದ ವಾರಕದ ಚಿನ್ನವನ್ನೆಲ್ಲಾ ಸೋತನು (ಭೈರಪಾ. ೧, ೧೦೧).

[?. / ಸಂ. ವಾಲಕ = ಉಂಗುರ, ಬಳೆ ಮೊದಲಾದ ಆಭರಣ]

ವಾರಕ $_3$ (ನಾ). (ಶರೀರದ) ಅರ್ಧಭಾಗ : ಪಂಚಮುಖದ ಚೆಲ್ವಿಂ ಪಾರ್ವತೀ ವಾರಕದೊಡಲ ಭಸ್ಮಾಂಗದಿಂದಂ ಸಕಲಪ್ರಮಥರ ಗಡಣದಿಂ ಪ್ರತ್ಯಕ್ಷನಾದ ಶಿವ (ಶಂಕರಾ. ೫-೬೧). [?]

ವಾರಕರಿ (ನಾ). (ಪ್ರತಿವರ್ಷವೂ) ನಿಶ್ಚಿತವಾದ ದಿನದಂದು ತೀರ್ಥಕ್ಷೇತ್ರಕ್ಕೆ ಹೋಗುವ ಭಕ್ತ : ಅಂದು ಪಂಢರಪುರದಲ್ಲಿ ಲಕ್ಷಗಟ್ಟಿ ವಾರಕರೀ ಜನರು ಕಲೆತಿದ್ದರು (ಹಂಪಾ. ೧೪೬) ; ಪ್ರತಿದ್ವಾದಶಿಗೆ ಪಂಢರಪುರಕ್ಕೆ ಹೋಗುವವರೂ ಕೆಲವರುಂಟು. ಅವರಿಗೆ "ವಾರಕರಿ" ಯೆಂದೆನ್ನುತ್ತಾರೆ (ಕಭಾಗೆ. ೧೫೨). [<— ಮರಾ. ವಾರಕರೀ]

ವಾರಕಾಂತೆ (ನಾ). ಸೂಳೆ; ವೇಶ್ಯೆ: ವಾರಕಾಂತೆಯರ ಭೂಷಣಕಾಂತಿಯ ಕೆಂಬಿಸಿಲ್ಗಳಾವಗಮೆಸೆಯುತ್ತಿರಲ್ (ಕಾದಂಪು. ೩೦೨). [ಸಂ. ವಾರಕಾಂತಾ]

ವಾರಗಾರ (ನಾ). ಭೂಮಿಯ ಒಡೆಯನಿಗೆ ಅದರ ಬೆಳೆಯಲ್ಲಿ ಅರ್ಧ ಭಾಗವನ್ನು ಕೊಡುವ ಒಪ್ಪಂದದಿಂದ ಭೂಮಿಯನ್ನು ಸಾಗುವಳಿ ಮಾಡುವವನು ; ಕೋರು ಕೊಡುವವನು : ವಾರಗಾರ್ರೇನು ಬಿತ್ತಿದ್ದಾರೋ ಇಲ್ಲವೊ ತಿನ್ನಕ್ಕಾದರೂ ನಾಕು ರಾಗಿಕಾಳಾಗಬೇಕಲ್ಲ (ಚಂಗಾಳ್ವ. ೨೦೮).

[ವಾರ್ $_2$ + - ಗಾರ (< - ಕಾಱ)]

ವಾರಗುತ್ತಿಗೆ (ನಾ). "[ರೈತನು ತಾನು ಬೆಳೆದದ್ದರಲ್ಲಿ ಒಂದು ಭಾಗವನ್ನು (ಸಾ.ಅರ್ಧವನ್ನು)ಜಮೀನ್ದಾರನಿಗೆ ಕೊಡುವಂತೆಯೂ ಜಮೀನ್ದಾರನು ರೈತನ ಉಳುಮೆಗೆ ಬೇಕಾದ ಪಶುಗಳನ್ನೂ ಬಿತ್ತನೆಯ ಕಾಳನ್ನೂ ಕೊಡುವಂತೆಯೂ ಮಾಡಿಕೊಂಡ] ವಾರಗುತ್ತಿಗೆ" (Metayage. ಇಂಕನ).

[ವಾರ್ $_2$ + ಗುತ್ತಿಗೆ (< ಗುತ್ತಗೆ]

ವಾರಗೇರಿ (ನಾ). ಸೂಳೆಯರ ಬೀದಿ ; ವೇಶ್ಯಾವೀಧಿ : ವಾರಗೇರಿಯೊಳೇಱುಂ ಜೌವನದ ನೀಱೆಯರ ಮೇಲುದಱ ಸೆಱಂಗಮೋಸರಿಸಿ . . . ಪಶ್ಚಿಮಾನಿಲಂ ಮೈದೋಱುಲೊಡಂ (ರಾಜಶೇ. ೨-೧೭). [IP ಇಲ್ಲಿ 'ವಾರಸ್ತ್ರೀಯರ ಕೇರಿ' - ಎಂಬರ್ಥದಲ್ಲಿ ಮಧ್ಯಮಪದಲೋಪವಾಗಿ 'ವಾರಗೇರಿ' ಎಂದು ಪ್ರಯೋಗವಾಗಿರಬಹುದು. (ಗ್ರಂಥದಲ್ಲಿ 'ಕೇರಿ' ಶಬ್ದವನ್ನು 'ಱ' ಬಳಸಿ ಪ್ರಯೋಗಿಸಿರುವುದೂ ತಪ್ಪು) ಸಂಸ್ಕೃತದಲ್ಲಿ 'ವಾರಾ' ಶಬ್ದಕ್ಕೆ 'ವೇಶ್ಯೆ' ಎಂಬರ್ಥವಿದೆಯೇ ಹೊರತು 'ವಾರ' ಶಬ್ದಕ್ಕಿಲ್ಲ. ಆದರೆ ಯಾವ ಸಂಸ್ಕೃತಕೋಶಕಾರರೂ 'ವಾರಕಾಂತೆ', 'ವಾರಸ್ತ್ರೀ' ಮುಂತಾದ ಶಬ್ದಗಳನ್ನು 'ವಾರಾ' ಶಬ್ದದಿಂದ ನಿಷ್ಪನ್ನ ಮಾಡಿಲ್ಲ. 'ವಾರ=ಸಮೂಹ, ಸರದಿ' ಎಂಬರ್ಥಗಳಿಂದ 'ಸಮೂಹಕ್ಕೆ ಒದಗುವ ಸ್ತ್ರೀ', 'ಸರದಿಯ ಮೇಲೆ ದೊರಕುವ ಸ್ತ್ರೀ' – ಮುಂತಾಗಿ ಅರ್ಥೈಸಿದ್ದಾರೆ. ಇದು ಇನ್ನೂ ಪರಿಶೀಲನಾರ್ಹವಾಗಿದೆ]

ವಾರಣ (ನಾ). ೧. ತಡೆಗಟ್ಟುವಿಕೆ ; ನಿರೋಧ. ೨. ಕಳೆಯುವಿಕೆ ; ನಿವಾರಣೆ. ೩. ಮರೆಮಾಡುವಿಕೆ ; ಮುಚ್ಚುವಿಕೆ. ೪. ಕಾಪಾಡುವಿಕೆ ; ರಕ್ಷಣೆ. ೫. ಅಡ್ಡಿ ; ತಡೆ. ೬. ಕೆರೆಯ ಏರಿ ; ಕಟ್ಟೆ. ೭. ಆನೆ ; ಗಜ : ಅಂತು ವಿಕ್ರಿಯಾಬಲದಿಂ ಗೀರ್ವಾಣವಾರಣಂ ವಿಗುರ್ವಿಸೆ (ಅಜಿಪು. ೪-೨೩ ಪ) ; ವಜ್ರಬಾಹುಕುಮಾರಂ ವಾರಣಮನೇಱಿದಂ ದಿಗ್ವಾರಣಮಂ ದಿಕ್ಕುಮಾರರೇಱುವ ತೆಱದಿಂ (ಪಂಚಾಮೃ. ೨-೯). ೮. ಆನೆಯ ಸೊಂಡಿಲು. ೯. ಯುದ್ಧಕವಚ. ೧೦. ಬಾಗಿಲು ; ದ್ವಾರ. ೧೧. ಒಂಟೆ : "ಕರಭದಲ್ಲಿಯುಂ ವಾರಣಮೆಂಬುದು" (ಹಲಾಯು. ೧೩೨-೯). ೧೨. ಮೋಡ ; ಮೇಘ. ೧೩. ಕಡಲು ; ಸಮುದ್ರ. "ತಟಾಕಬಂಧನಂ ಜಲಧರ ಶೀಘ್ರಗಾಮಿ ಗಜಮೆಂಬಿವು ವಾರಣಶಬ್ದ" (ನಾನಾರ. ೧೦೦). [ಸಂ.]

ವಾರಣಬುಸೆ (ನಾ). ಬಾಳೆಯ ಗಿಡ : "ಕದಳೀ, ವಾರಣಬುಸಾ, ರಂಭಾ . . . ಬಾಳೆಗಿಡದ ಹೆಸರುಗಳು" (ಸಿದ್ಧಾಂತಿ. ೧೩೭). [ಸಂ. ವಾರಣಬುಸಾ]

ವಾರಣಮುಖ (ನಾ). ಆನೆಯ ಮುಖವುಳ್ಳವನು ; ಗಣೇಶ : ವೀರಗಣಮುಂ ಪ್ರಮಥಸಾರನಿವಹಂ ಸಮದವಾರಣಮುಖಂ ನವಮಯೂರಪತಿವಾಹಂ ಸೇರಿ ನೆರೆದೊಪ್ಪಿರೆ (ರಾಜಶೇ. ೧೪-೮೮). [ಸಂ.]

ವಾರಣರಣ (ನಾ). ಆನೆಗಳ ಯುದ್ಧ : ವಾರಣರಣದೆ ಮದೀಯಾಧೋರಣಾರಣ ವಿದ್ಯೆ ಮೆಱೆಗುಂ (ಜಗಮಿ. ೧೩-೧೦೯). [ಸಂ.]

ವಾರಣವಾಹನ (ನಾ). ೧. ಆನೆಯನ್ನು ವಾಹನವಾಗಿ ಹೊಂದಿರುವುದು. ೨. ಮೋಡವನ್ನು ವಾಹನವಾಗಿ ಉಳ್ಳವನು ; ಇಂದ್ರ. ೩. ಕುಬೇರ : ವಾರಣವಾಹನಂ ಪೃಥುತರಾಷ್ಟಭುಜಂ ವಿಜಯಾಂಗನಾಗೃಹದ್ವಾರದನೇಕಶಾಖೆಯೆನೆ . . . ಕುಬೇರಯಕ್ಷನೊಸೆದೀ ಕೃತಿಗೀಗೆ ಗುಣಪ್ರತಿಷ್ಠೆಯಂ (ಮಲ್ಲಿಪು. ೧-೮). [ಸಂ.]

ವಾರಣವೈರಿ (ನಾ). ಆನೆಯ ಶತ್ರು ; ಸಿಂಹ : ವಾರಣವೈರಿಯನೇಱಿ ಮಹಾರಣದೊಳಗುರ್ವಿಪ(ವ)ರ್ವ ತಾ(ರಾ)ರಯ ಬಲದಿ(ಬ)ಂ ಬೇರಿಂದೆ ಕಿಡಿಸಿ ಯಕ್ಷಕುಮಾರಿ ಸದಾ ಕೂರ್ಮ ರಕ್ಷಿಸುಗೆ (ಅಜಿಪು. ೧-೭). [ಸಂ.]

ವಾರಣಶಿ 'ಬಾರಣಾಸಿ' ನೋ.

ವಾರಣಶಿಕ್ಷೆ (ನಾ). ಆನೆಗಳನ್ನು ಪಳಗಿಸುವ ವಿದ್ಯೆ ; ಆನೆಗಳಿಗೆ ತರಬೇತು ನೀಡುವ ವಿದ್ಯೆ : ವಾರಣಶಿಕ್ಷೆಯಂ ತುರಗಶಿಕ್ಷೆಯನೊಪ್ಪುವ ಚಾಪವಿದ್ಯೆಯಂ . . . ಈತನಲ್ಲದಿಳೆಯೊಳ್ ಮಿಗೆ ಬಲ್ಲವರಾರ್ (ದಶಕು. ೧೧-೯೬). [ಸಂ. ವಾರಣಶಿಕ್ಷಾ]

ವಾರಣಸೈನ್ಯ (ನಾ). ಆನೆಗಳ ಪಡೆ ; ಗಜಸೈನ್ಯ : ವಾರಣಸೈನ್ಯಶಿರಸ್ಸಿಂದೂರಂ ಪ್ರತಿಕೂಲಮಾರುತಾಹತಿಯಿಂದುತ್ಸಾರಿತವಾಗಿರ್ದವುದೆನೆ ದಾರುಣಮಾದತ್ತು ಸುತ್ತಲುಂ ದಿಗ್ಭಾಹಂ (ಜಗಮಿ. ೧೮-೪೭). [ಸಂ.]

ವಾರಣಹಸ್ತ (ನಾ). ೧. ಆನೆಯ ಸೊಂಡಿಲು : "ವಾರಣಹಸ್ತದಗ್ರ . . . ಪುಷ್ಕರಮೆನಿಸರ್ಕು" (ನಾನಾರ. ೨೦). ೨. ಒಂದು ಬಗೆಯ ತಂತೀವಾದ್ಯ. [ಸಂ.]

ವಾರಣಾಗ್ರ (ನಾ). (?): ಹೃದಯಸರೋಜದ್ವಾದಶದಳಂಗಳ ಮ್ಯಾಲೆ ಪದವಿಟ್ಟು

ಚರಿಸುತಿಹ ಹಂಸನ ಗತಿಯ ನಿಲಿಸಿ ವಿಧು ಸೂರ್ಯರಡೆಯಾಡುತಿರ್ಪೀಡಪಿಂಗಳ ಸುಷುಮ್ನಮಮಾರ್ಗವನು ತಡೆದು ಮುದದಿ ಚರಣಾಂಗುಷ್ಠವಾರಣಾಗ್ರಪರಿಯಂತ ಪದುಳದೆ ಸತ್ರಾಣಗೊಳಿಸಿರ್ಪ ಪ್ರಾಣವಾಯದನು ಪಶ್ಚಿಮಮಾರ್ಗದೊಳ್ಕಡಿಸಿ ತ್ರಿಕೂಟಸ್ಥಾನದೊಳು ನಿಲ್ಲಿಸುತ್ತೆ (ನವಮೋ. ೬-೨೭). [ಸಂ.]

ವಾರಣಾರೋಪಕ (ನಾ). ಆನೆಯ ಸವಾರಿ ಮಾಡುವವನು ; ಮಾವುತ: ಓರಣಿಸಿನಿಂದ ವಾರಣಾರೋಪಕವ್ಯೂಹದಿಂ ಕಿಷ್ಕಿಂಧತೆಯನವ್ವುಗೈದ ಮಂದಸೌಂದರ್ಯಮನೊಳಕೊಂಡು (ರಾಜಶೇ. ೫-೧೯ ವ). [ಸಂ.]

ವಾರಣಾಸಿ 'ಬಾರಣಾಸಿ' ನೋ.

ವಾರಣಾಸ್ಯ (ನಾ). = ವಾರಣಮುಖಿ : ಆ ವನಿತೆಗೆ ವಾರಣಾಸ್ಯಂ ತನ್ನ ಕೊಡಲಿಯಗ್ರದೊಳು ಪೂಜಾರಚಿತವಾಗಿರ್ದ ಪುಷ್ಪವಂ ಕರುಣಿಸಲ್ಕೆ (ವೀಶ್ವಸು. ೬-೧೫-೧೦) ; ಚೂತಫಲಮಂ ಶಂಭು ಪಿತಿದಿರಲು ಶರಜನ್ಮ ವಾರಣಾಸ್ಯರು ಬೇಡೆ (ವ್ಯಾಧರಾ. ೧-೧೧). [ಸಂ.]

ವಾರಣಿ (ನಾ). ಸೂಳೆ ; ವೇಶ್ಯೆ: ಕೇಳು ವಾರಣಿಯರೊಳು ಹರಳಿಸುವ ಸತಿಯರುಂ ನಾಳಿಕಾಹಂಸಿಯಿಂತತಿವಿಲಕ್ಷಣ (ಪ್ರಭುಪು. ೫-೭೨). [?]

ವಾರಣಿಸು (ಕ್ರಿ). ತಡೆಗಟ್ಟು ; ವಿರೋಧಿಸು : ಮೂಲೋಕದ ಹುಟ್ಟನಲ್ಲಿ ಒಂದು ವಾರಣ ಬಂದು ಊರೆಲ್ಲರ ಬಿಲ್ಕೆವುತ್ತದೆ ಆದಾರಿಗೂ ಅಶಕ್ಯ ಆ ವಾರಣವ ವಾರಣಿಸು [ಪಾಠಾಂ. ವಾರಿಸು]ವರಿಲ್ಲ (ಸಚಮ. ೨. ೩೬-೧೯); ಅಣದದಬುಜಭವಾಂಡ ಘಟ ವಾರ [ಪಾಠಾಂ.ಸ]ಣಿಪ ಕುಕ್ಕಿದಡುಗುರಲಿಳೆ ಬಿಜ್ಜಣಿಪ . . . ಕಡುಕಾಹುರದ ಸಿಂಗಣಿಕಗಳನರ್ಬುದವನತಿಬಲ ತಾರ ತೋಱಿಸಿದ (ತೊರಾ. ೪-೭-೨೩). [ವಾರಣ + - ಇಸ್ಕು]

ವಾರಣೇಂದ್ರ (ನಾ). ಉತ್ತಮವಾದ ಆನೆ : ವಾರಣೇಂದ್ರ ಮಣಿಹೇಮ ವರಸ್ತ್ರೀ ಸಾರವಸ್ತುಚಯಮಂ ಕ್ರಮದಿಂ ಕೆಯ್ಸಾರಲಾಟಿಸುವೊಂದಿಂ ತಡವಲ್ಕೇಕಾರಣಂ ಕುರುಪತೀ ಎಮಗೀಗಳ್ (ಕಾವ್ಯಾವ. ೧೩೬). [ಸಂ.]

ವಾರತೆ, ವಾರುತಿ, ವಾರ್ತಿ (ನಾ). ಸುದ್ದಿ ; ಸಮಾಚಾರ : ಇಂತು ಜಸವೆತ್ತೆಸೆವ ಗುರುವರನ ವಾರತೆ ದಿಗಂತಂಗಳೊಳ್ ತೀವೆ (ವದ್ಧರಾ. ೯-೪) ; ನಿಜಸುತೆ ರತಿವೇಗೆಯನೊಸೆದು ಸುಕಾಂತಂಗೆ ಪ್ರೇಮದಿ ಧಾರೆಯೆಱೆದ ವಾರತೆಯಂ . . . ಕೇಳ್ದು (ಜಯಿಕಾ. ೧೨-೬೦). ವಾರುತಿ : ನಿನ್ನ ವಾರುತಿ ಕೇಳುವುದು ಒಂದಾನಂದ (ಎಸಾಂ. ೯-೬); ಸ್ಪಷ್ಟದಲ್ಲಿ ಇದೆ ವಾರುತಿ ಪೇಳಲಾಯ್ತು (ತಿರ್ಥಾ. ೬೬೭). ವಾರ್ತಿ : ಭವತಾರ ನಿನ್ನಾಳಿಗೆ ಬರುವುದು ಕೀರ್ತಿ ನಿನ್ನ ವಾರ್ತಿ ಭವ್ಯ ಕೇಳಿದರಿಂದ ಮುಕ್ತಿ (ಮೋಹ್ಮದೀ. ೨೨). [< ಸಂ. ವಾರ್ತಾ]

ವಾರತೆಕೇಳು 'ವಾರತೆಗೇಳು' ನೋ.

ವಾರತೆಗೇಳು, ವಾರತೆಕೇಳು (ಕ್ರಿ). ಸುದ್ದಿಯನ್ನು ಕೇಳು ; ಸಮಾಚಾರವನ್ನು ತಿಳಿ : ಧೀರ ಲಲಿತ ನಿನ್ನ ವಾರತೆಗೇಳಿ ಕುಮಾರಿ ಹೆಗ್ಗರ ಹೊಡೆದಂತೆ ಆರೊಯ್ದಿರೋ ನಿನ್ನನೆಂದು ಹಮ್ಮೈಸುತ ಧಾರುಣಿಯೊಳು ಪೊರಳಿದಳು (ಶ್ರೀಪಾಲ. ೭-೭೩) ; ಕಡುಚೆಲ್ವ ನಿನ್ನ ವಾರತೆಗೇಳಿದಾಕ್ಷಣ ಕುಡುವಿಲ್ಲನಲೆಗೊಳಗಾದೆ (ಕಂನವ. ೧೦-೩೪). ವಾರತೆಕೇಳು : ಧಾರುಣಿಯೊಳ್ ದಯವಾರುಧಿಯೆಂದೆಂಬ ವಾರತೆಕೇಳಿ ವಂದಿಪೆನು (ಕರಾ. ೧-೩). [ವಾರತೆ + ಕೇಳು (< ಕೇಳ್)]

ವಾರದೊಡಿಗೆ (ನಾ). ಬಹುಮಾನವಾಗಿ ಕೊಡುವ ಆಭರಣ (?) : ವಾರದೊಡಿ[ಪಾಠಾಂ.ದಡಿ]ಗೆಯ ಬಂಗಾರವ ದುಗುಲದ ಸೀರೆಯ ದಿಂಡುವಿಂಡುಗಳ ಆ ರಾಮಚಂದ್ರ ವೈದೇಹಿಗೆ ಕೊಟ್ಟನು (ರಾಮವಿ. ೯-೪೦). [< ವಾರಕ್ಕ ? + ತೊಡಿಗೆ (< ತೊಡುಗೆ)]

ವಾರನಾಯಕ (ನಾ). (ಸೈನಿಕರ) ಗುಂಪಿನ ಅಧಿಪತಿ ; ಸೇನಾನಾಯಕ : ಭೂರಿವಿಕ್ರಮವ ನುಡಿದು ನಿನ್ನ ಬೋಳ್ಕಿಪ ವಾರನಾಯಕರ ಪಂಥವನು ತೋಱುವೆ ಈ ಸಮರದೊಳು (ತ್ರಿವಿಸಾಂ. ೧೫-೧೬೭). [ಸಂ.]

ವಾರನಾರಿ (ನಾ). = ವಾರಕಾಂತೆ : ಇವಳೇಂ ಕುಲನಾರಿಯೊ ವಾರನಾರಿಯೋ (ಪಂಪಭಾ. ೮-೬೨) ; ವಾರನಾರಿಯರನುಭವಂಗಳು ಕ್ರೂರವಲ್ಲದೆ ಮಾರ್ದವಂಗಳೆ (ಬಸವು. ೪೦-೮೦). [ಸಂ. ವಾರನಾರೀ]

ವಾರಪತ್ರಿಕೆ (ನಾ). ವಾರಕ್ಕೆ ಒಮ್ಮೆ ಪ್ರಕಟವಾಗುವ ಪತ್ರಿಕೆ; ಸಾಪ್ತಾಹಿಕ: ಕನ್ನಡದಲ್ಲಿ ಈಗ ಅನೇಕ ವಾರಪತ್ರಿಕೆಗಳು ಪ್ರಕಟವಾಗುತ್ತಿವೆ (ರೂಪಿ). [ಸಂ. ವಾರಪತ್ರಿಕಾ]

ವಾರಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ: (ಮೃಚ್ಛಿಗ. ೪೭-೧೩೯). 'ನಿತ್ಯಮಲ್ಲಿಗೆ' ಪರಾ. [ವಾರ, + ಮಲ್ಲಿಗೆ]

ವಾರಮುಖಿ (ನಾ). ಸೂಳೆಯರಲ್ಲಿ ಪ್ರಮುಖಳಾದವಳು : "ರಾಜಕುಳಪ್ರತಿಬದ್ಧಾ ವಾರಸ್ತ್ರೀ, ವಾರಮುಖ್ಯಾ — ಈ ೩ ವಿಳಾಸಿನಿಯರ್" (ಹಲಾಯು. ೦೦-೩೩೬). 'ವಾರಗೇರಿ' ಪರಾ. [ಸಂ. ವಾರಮುಖ್ಯಾ]

ವಾರಲ್ (ನಾ). ಸುಲಿಗೆ ; ಲೂಟಿ (?) : ಕೊಳಗುಪ್ಪೆ ಪೆಟ್ಟವಸಿ ಅರ್ಧಂ ಕಾನಸೊಪ್ಪಿನರ್ಧಂ ವಾರಲರ್ಧಂ ಕರ್ಪಟಿಣ್ಣಂ ನೂಲ್ಪೆತ್ತೆನ್ನು(ಣ್ಣು)ಕೊಂಬೆಗಾರೊಡಂ ಪಡೆಯಂ ಮೆಣ್ಣ (ಎಣ್ಣ) ಮೂಡೆ ಜಮಳಿ ಒನ್ದು ಇದು ಗೋಪ(ಪಾ)ಲದೇವರಾದತ್ತಿ (ಎಇ. XXI, ೭೮-೧೫; ೩೩೫ ಶತ). [ದೇ. ॥ ತಮಿ. ವಾರಲ್]

ವಾರವದಂಬುಲ? (ನಾ). (?) : ಇತ್ತೊಡೆ ಬೇಟಮಿಯದೊಡೆ ಕಾಟಮದುಂ ಬೆಲೆವೆಣ್ಣ ಬಾಳುಕಂಬತ್ತುವ ಬೇಟಮಂ ಸುಡು ಪರಾಕಿಯ ನೋಂಪಿಯ ಗಂಡರೀವ ಕಿಟ್ಟುತ್ತುರಿ ಕಪ್ಪುರಂ ತುಡುಗೆ ವಾ[ಪಾಠಾಂ.ದಾ, ದ್ಯಾ]ರವದಂಬುಲಮಚ್ಚವಾಸಿಗಂ ಸುತ್ತುವ ಬಣ್ಣ ಸಣ್ಣಮಿವು ಬೇಟದ ಕೂಟದ ಸುಗ್ಗಿಯೆನ್ನಿರೇ (ಅನಂಪು. ೬-೪೭). [? + ತಂಬುಲ]

ವಾರವಧು (ನಾ). = ವಾರಕಾಂತೆ : ವಾರವಧೂಜನಮಾರಂ ಮಾರಾನ್ತಕಪದಪ [ಯೋ] XXX ನಮಳಂ ಕಾರುಣ್ಯಪರಂ ಧರ್ಮಾಧಾರಂ ಬೀರಣನನ್ಯವನಿತಾದೂ[ರಂ] (ಸೌಶಾ. XI-ii. ೧೨೧-೧೯ ; 1072) ; ಭೃತ್ಯಹಮೊಪ್ಪುಗುಂ . . . ಚತುರಖೇಚರವಾರವಧೂ ನಿಧಾನಮಾದಿತ್ಯಪುರಂ ಪುರಂದರಪುರಪ್ರತಿಮಂ ಪುಗರತ್ನಗೋಪುರಂ (ಚಂದ್ರಪು. ೬-೫). [ಸಂ. ವಾರವಧೂ]

ವಾರವನಿತೆ (ನಾ). = ವಾರಕಾಂತೆ : ಪರಿವಾರವಾರವನಿತಾಪರಿವೃತನರಮನೆಯೊಳರಸಂ ಅಂಬರತಳದೊಳ್ ವರತಾರಾಪರಿಗತಶಶಧರನಂತೊಪ್ಪಿರೆ (ಕವಿಕಾ. ೨-೧೦); ಒರ್ವಳನಂಗರಾಗರಸರಸಿಕತೆಯಿಂದಮಪ್ಪರಃಸಮುದಯದೊಳಮರವಾರವನಿತೆಯಾದಳ್ (ಕಾಂತಿಪು. ೬-೧೫೩ ವ). [ಸಂ. ವಾರವನಿತಾ]

ವಾರವಾಣ (ನಾ). ೧. ರವಿಕೆ ; ಕುಪ್ಪಸ : "ಕಂಚುಕಃ, ವಾರವಾಣ, ಕೂರ್ಪಾಸಃ, ನಿಚೋಳಕಃ — ಈ ೪ ಕುಪ್ಪಸಂ" (ಹಲಾಯು. ೧೧-೩೯). ೨. ಕವಚ ; ಅಂಗರಕ್ಷೆ : "ಕವಚಂ ಕಂಚುಕಿ ವಾರವಾಣಮೆನಿಕ್ಕುಂ" (ನಾನಾ. ೧೩) ; ಭರದಿಂ ಕೋಡಗಮೆಯ್ದೆ ಮೆಯ್ಗುರಿದರಣ್ಣಂಗಳ್ಕಿಲಜ್ಜರ್ ಬಿಗುರ್ತಿರವಂ ಕಾಣದೆ ಗುಜ್ಜರಲ್ಲಿ ನುಗುಳ್ದರ್ ತದ್ವಾರವಾಣಂಗಳೊಳ್ ಸರಿದರ್ ತಾಂ ಪೊಱಗಾವ[ಲರ್] (ಮಿತ್ರಗೋ. ೫೧-೪೦). [ಸಂ.]

ವಾರವಾಣಕ (ನಾ). = ವಾರವಾಣ ೧ : "ವಾರವಾಣಕಂ ಕಂಚುಕಂ ಕೂರ್ಪಾಸಕಂ ನಿಚೋಲಕಂ" (ತ್ರಾಹೋ. ೭೮-೨೧). [ಸಂ.]

ವಾರವಾಳಿ (ನಾ). ಪ್ರತಿನಿತ್ಯದ ಸರದಿ (?) : ಪರಿಯದೆ ವಾರವಾಳಿಯುಣಿಸಿಂಗೆ ಸಮರ್ಥರಾನಸಿವಟ್ಟು ಬಂದೆರೆಯದೆ . . . ವೀರವೃತ್ತಿಯನೆ ಪಾಟಿಸಿ ಮೋಕ್ಷಸುಖಕ್ಕೆ ಚಿತ್ತಮಂ ತಿರಿಪುತುಮಿರ್ದ ಜೈನಮುನಿಪುಂಗವರಿಂ ಮಿಗಿಲಾರೊ ಲೋಕದೊಳ್ (ಧರ್ಮಾಮೃ. ೧೨-೫೦). [< ಸಂ. ವಾರಪಾಲಿ ?]

ವಾರವಿಲಾಸಿನಿ, ವಾರವಿಳಾಸಿನಿ (ನಾ). = ವಾರಕಾಂತೆ : ವಾರವಿಲಾಸಿನೀ ಲಟಹನರ್ತನ ಚಂಚಲಕಾಂಚಿದಾಮಮಂಜೀರಕಕಿಂಕಣೀರಣತದಿಂ . . . ಅಂದದೇಂ ಸೊಗಯಿಸಿರ್ದುದೊ ತತ್ಪುರಂ (ಆದಿಪು. ೮-೫೦). ವಾರವಿಳಾಸಿನಿ : ವಾರವಿಳಾಸಿನೀ ನಿಕರಮಿಕ್ಕುವ ಚಾಮರದಿಂ ಸುರತ್ನಕೋಟೀರ ಮರೀಚಿಯಿಂ ಪದಕಕಾಂತಿಯಿನಿರ್ಮಡಿ ಚೆಲ್ವುವೆತ್ತ ಧಾತ್ರೀರಮಣರ್ ಸ್ವಯಂವರಕೆ ಬಂದರ್ (ನಳಚಂ. ೩೦೦). [ಸಂ. ವಾರವಿಲಾಸಿನೀ]

ವಾರವಿಳಾಸಿನಿ 'ವಾರವಿಲಾಸಿನಿ' ನೋ.

ವಾರಶಿವಿ (ನಾ). ಒರೆಯಾಗಿರುವ ಶಿವೆ,—ಕೂದಲುಗಂಟು (?) : ದೊರೆಗಳವರು . . . ಈ ದೇವಸ್ಥಾನದ ಕಂಭದಲ್ಲಿ ಸಿಂಹಾಸನದ ಮೇಲೆ ವಾರಶಿವಿಸಹಿತವಾಗಿರುವಂತೆ ತಮ್ಮ ಭಕ್ತವಿಗ್ರಹವನ್ನು ಮಾಡಿಸಿ, ದೇವಸ್ಥಾನದ ಮುಂಭಾಗದಲ್ಲಿ ಕಾಶಿ ಕೆಲಸದ ಕಲ್ಲಿನಿಂದ ದೊಡ್ಡದಾಗಿ ಕಲ್ಯಾಣಿ ಎಂಬ ಸರೋವರವನ್ನು ಕಟ್ಟಿಸಿದರು (ಮಹಾವಂ. I, ೧೫೬). [< ಒರೆ,? + < ಶಿವೆ ?]

ವಾರಶೂಲ (ನಾ). ಶುಭಕಾರ್ಯಗಳನ್ನು ನಡೆಸುವ ಅಥವಾ ಶುಭಕಾರ್ಯಗಳಿಗೆ

ಹೊರಡುವ ಸಂದರ್ಭಗಳಲ್ಲಿ ತ್ಯಜಿಸಬೇಕಾದ ಅಮಂಗಳಕರವಾದ ದಿನ : "ತಿಥಿ ವಾರಘಟಿಕಾಖ್ಯೆಯಿಂ ರಾಹುಯೋಗಿಣಿ ವಾರಶೂಲಂಗಳು" (ಮಂಗರಾ. ೧೮-೨೦). [ಸಂ.]

ವಾರಶೂಲೆ (ನಾ). = ವಾರಶೂಲ : (ಕ). [ಸಂ. ವಾರಶೂಲ]

ವಾರಸ 'ವಾರಸು' ನೋ.

ವಾರಸತಿ (ನಾ). = ವಾರಕಾಂತೆ : ವಾರಸತಿಯರ ಮೊತ್ತದಲಿ ಪೆಸರೆನಿಸಿ ನಿನ್ನುವನೀ ಕಟಕದೊಳಗೆ ವೃತ್ತಕುಚೆ ನಿನಗೊಸಗೆಗಳನೊಳ್ಪಿತ್ತೆನಲು ಮಾಡಿಸುವೆನು (ಬಸವು. ೨೮-೨೩). [ಸಂ. ವಾರಸತೀ]

ವಾರಸದಾರ 'ವಾರಸುದಾರ' ನೋ.

ವಾರಸು, ವಾರಸ (ನಾ). ವಂಶಪರಂಪರೆಯಿಂದ ಬರುವ ಆಸ್ತಿಯ ಹಕ್ಕು ; ಪಿತ್ರಾರ್ಜಿತಹಕ್ಕು : ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ಹೀಗೆ ವಾರಸು ಹಕ್ಕುಂಟು (ಪ್ರವಾಗ. II, ೪೮೦). ವಾರಸ : ಬಾಲಭುಜಂಗನು ಏಳು ಎಂಟು ವರ್ಷದ ವನಿರಬಹುದು, ಆಗ ತಮಣದೀಕ್ಷಿತರು ಆತನ ವಾರಸಾ ವಿಚಾರಮಾಡಿಸುವುದಕ್ಕಾಗಿ ಆತನನ್ನು ಕರಕೊಂಡು . . . ಹೋದರು (ಕಲಿಬಿ. ೨೮) ; ಈ ಅವಧಿಯಲ್ಲಿಯೇ ಎಲ್ಲಿ ಗೌಡರ ಮನೆತನದ ವಾರಸಾ ಪ್ರಕರಣವೂ ತಲೆಯೆತ್ತುವದೋ ಎಂದು ಅವರಿಗೆ ದೂರದ ಚಿಂತೆಯುಂಟಾಗಿತ್ತು (ಗ್ರಾಮಾಯ. ೨೦೭). 'ವಾರಸದಾರ' ಪರಾ.

[<— ಆರ. ಹಿಂ. ವಾರಿಸ್ = ಹಕ್ಕುದಾರ ; ಮರಾ. ವಾರಸ್, ವಾರೀಸ್ = ಉತ್ತರಾಧಿಕಾರಿ]

ವಾರಸುದಾರ, ವಾರಸದಾರ (ನಾ). ೧. ವಂಶಪರಂಪರೆಯಿಂದ ಬರುವ ಆಸ್ತಿಯ ಹಕ್ಕು ಪಡೆದವನು ; ಪಿತ್ರಾರ್ಜಿತ ಆಸ್ತಿಯ ಹಕ್ಕುದಾರ : ತಮ್ಮ ಆಸ್ತಿಪಾಸ್ತಿಗೆ ವಾರಸುದಾರನಾದ ಸೋದರಸಂಬಂಧಿಯನ್ನು ಕಂಡರೆ ಅವನ ಚಿಕ್ಕತಾಯಿಯರಿಗೆ ತುಂಬ ವಾತ್ಸಲ್ಯ (ಪುನರು. ೫೪); ಸಂತತಿಯಾಗಲಿ ವಾರಸುದಾರರಾಗಲಿ ಇಲ್ಲದೆ ಇದ್ದ ಪಕ್ಷದಲ್ಲಿ . . . ರಾಜನನ್ನು ನೇಮಿಸುವುದು ರಾಜನೀತಿಗೆ ವಿರುದ್ಧ (ಪ್ರಶಾಪ. ೧೦೮). ೨. ಪೋಷಕ ; ಮೇಲ್ವಿಚಾರಕ : ಆ ಬಾಲಕನಿಗೆ ತಂದೆ ತಾಯಿಂದಿರಿಲ್ಲ, ನಾವೇ ಅವನ ವಾರಸುದಾರರು (ರೂಢಿ). ವಾರಸದಾರ : ೧. ಅವನ ಹೊಟ್ಟೆಯಿಂದ ಯಾರೂ ಮಕ್ಕಳಿಲ್ಲ. ನಾವೇ ಅವನಿಗೆ ವಾರಸದಾರರು (ಮೂಕಿನೇ. ೬೧); ತಂದೆಯ ಧನಕ್ಕೆ ಮಕ್ಕಳೇ ವಾರಸದಾರರಲ್ಲವೇ ? (ಸಾಲಂಗಾ. ೬೫). ೨. ನಾವು ಹಿರಿದಾದ ಸಂಸ್ಕೃತಿಯ ವಾರಸದಾರರು (ಭಾರಸಂ. ೧೦೨).

[ವಾರಸು + - ದಾರ್. / ಮರಾ. ವಾರಸ್‌ದಾರ್, ವಾರಸೇದಾರ್, ವಾರೀಸ್‌ದಾರ್]

ವಾರಸೌಂದರಿ (ನಾ). = ವಾರಕಾಂತೆ : ವಾರಸೌಂದರಿಯರ್ ಚಾಮರಮಿಕ್ಕೆಯುಂ (ಆದಿಪು. ೧೨-೧೨೯). [ಸಂ. ವಾರಸೌಂದರೀ]

ವಾರಸ್ತ್ರೀ (ನಾ). = ವಾರಕಾಂತೆ : ವಾರಸ್ತ್ರೀನಿಕುರುಂಬದಿಂ . . . ವೀರರಿಂದೋರಂತೊಪ್ಪಿದುದುನ್ನತಿಕ್ಕೆಯೊದವಿ ಭೂಪಾಲನೊಡ್ಡೋಲಗಂ (ಧರ್ಮಾಮೃ. ೪-೧೫೧). [ಸಂ.]

ವಾರಾಂಗನೆ (ನಾ). = ವಾರಕಾಂತೆ : ಸಲೆ ಪೊಂದಳಿರ್ಗಳ್ ತೋರಣಮೆನೆ ಕರಮೆಸೆವುವು ವಾರಾಂಗನೆಯರ ನಿವಾಸದೊಳಗುಂ ಪೊಜಗುಂ (ಸಿಕುಮಾ. ೯-೬೧) ; ಒಬ್ಬಳು ಪ್ರೌಢವತಿಯೆಂಬಿಂದುಮುಖಿ ವಾರಾಂಗನಾಮಣಿಯೊಂದು ದಿನದಲಿ ತನ್ನ ಸದನಾಂಗಣದೊಳೊಪ್ಪೆಸೆದು (ಬಸವು. ೪೦-೩). [ಸಂ. ವಾರಾಂಗನಾ]

ವಾರಾಕರ (ನಾ). ನೀರಿಗೆ ಆಶ್ರಯವಾದುದು ; ಸಮುದ್ರ : ಈ ಕೃತಿ ರಸಿಕಜನದ ಶ್ರುತಿ ಮಂಡನದಾಕೃತಿ . . . ಶ್ರೀಕರಮೊಪ್ಪುವ ಭಕ್ತಿಸುಧಾವಾರಾಕರಮಥನಂ (ಉದ್ಭಟೇ. ೧-೨೭). [ಸಂ.]

ವಾರಾಣಸಿ (ನಾ). ಗಂಗಾನದೀತೀರದಲ್ಲಿರುವ, ಹಿಂದೂಗಳ ಪ್ರಸಿದ್ಧವಾದ ಯಾತ್ರಾಸ್ಥಳ ; ಕಾಶೀಕ್ಷೇತ್ರ : ಬಹುಳೋಪಾಯದೊಳಾರ್ಜಿಸುತ್ತ ಧನಮಂ ತನ್ನಾಳ್ದನಂ ದೈವವೆಂದಹಿತರ್ ತನ್ನವರನ್ಯರೆನ್ನದಣುಮಾತ್ರಂ ಪೋಗದೊಲ್ ತ್ರಾಸಿನಂತಿಹನೊಕ್ಕಲ್ಗತಿಪ್ರೀತಿಪಾತ್ರನಿಳೆ ಮೆಚ್ಚಲ್ ಶಾನುಭಾಗಾಬ್ಧಿನೀ ಮಹಿವಾರಾಣಸಿಯಪ್ಪನ್ನೆ (ಸೋಮೇಶ. ೬೨) ; ಜಯಭೂಪಾಲಂ ಲೀಲೆಯಿನೆಯ್ತಂದಂ ವಾರಾಣಸಿವೆಸರ ನಗರಿಗಂದು (ಜಯಕಾ. ೩ ಸೂಚನೆ). [ಸಂ. ವಾರಾಣಸೀ]

ವಾರಾನ್ನ (ನಾ). ವಾರದಲ್ಲಿ ಒಂದು ದಿನ ಸರದಿಯ ಪ್ರಕಾರ (ಬಡವಿದ್ಯಾರ್ಥಿ ಮುಂತಾದವರಿಗೆ) ಉಚಿತವಾಗಿ ನೀಡುವ ಅಥವಾ ಬೇರೆಯವರ ಮನೆಯಲ್ಲಿ ಉಚಿತವಾಗಿ ಪಡೆಯುವ ಊಟ : ನಾಲ್ಕಾರು ವಿದ್ಯಾರ್ಥಿಗಳಿಗೆ ವಾರಾನ್ನ ನೀಡುತ್ತಿದ್ದರು (ನಡೆಹಾ. II, ೧೫೫) ; ತಾವು ವಾರಾನ್ನ ಮಾಡಿಕೊಂಡು ಬೀದಿಯ ದೀಪದ ಕೆಳಗೆ ಓದಿ ಬುದ್ಧಿವಂತರಾದುದನ್ನು ವಿವರಿಸಿದರು (ನಾಡಿಗೇ. ೧೯). [ಸಂ.]

ವಾರಾಶಿ (ನಾ). = ವಾರಾಕರ : ಭವವಾರಾಶಿನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ (ಆದಿಪು. ೨-೭) ; ವಾರಾಶಿಧೀರಸ್ವರಮಂ ತಳ್ಳೊಯ್ಯಜೇಂದ್ರಾದ್ಯಮರ ಜಯಜಯಧ್ವಾನದಿಂದಾಗಳೆಬ್ಬಾದರದಿಂ ಕುಳ್ಳಿರ್ದಂ . . . ಮುಕುಂದಂ (ಜಗವಿ. ೧-೫೩). [ಸಂ.]

ವಾರಾಶಿದುರ್ಗ (ನಾ). ಸಮುದ್ರದ ಮಧ್ಯದಲ್ಲಿರುವ ಕೋಟೆ ; ಜಲದುರ್ಗ : ಆ ಜರಾಸಂಧನ ಪರಾಕ್ರಮತೇಜದಿಂ ನಿಲಲಾಜದಂಜಿ ಪಯೋಜನಾಭನು ನಿರ್ಮಿಸನೆ ವಾರಾಶಿ [ಪಾಠಾ. ಚೌರಾಸಿ] ದುರ್ಗಗಳ (ಬಸವು. ೫೪-೩೬). [ಸಂ.]

ವಾರಾಸಿ (ನಾ). = ವಾರಾಕರ : ವಾರಾಸಿಯೊಳ್ ಘೂರ್ಣನಪ್ರಸರಂ ಕಾನನದೊಳ್ ಮೃಗೇಂದ್ರರುತಿ ಮೆಯ್ವೆರ್ಚಲ್ಕೆ (ಪುಷ್ಪಪು. ೮-೨೫); ಚಾರ್ವಾಕ ಜಿನಬೌದ್ಧಕುಮತ ಮತವಾರಾಸಿಗೌರ್ವಾನಲಂ . . . ಪಾಲ್ಬುಱಿಕೆ ಸೋಮೇಶಂ (ಉದ್ಭಟೇ. ೨-೭೨).

[< ಸಂ. ವಾರಾಶಿ]

ವಾರಾಹ (ಗು). ೧. ವರಾಹಕ್ಕೆ ಸಂಬಂಧಿಸಿದ. (ನಾ). ೨. ಹಂದಿ ; ವರಾಹ. ೩. ವರಾಹಾವತಾರದ ವಿಷ್ಣು : ರೂಢಿಯನು ಕದ್ದೊಯ್ದ ದನುಜನ ದಾಡೆಯಿಂದಲಿ ಸೀಳಿಯವನಿಯ ಕೂಡೆ ನೆಗಹಿದ ಸೀತೆಯರಸನುದಾರ ವಾರಾಹ (ಕೌಶಿರಾ. ೧೪-೨೮). ೪. ಹದಿನೆಂಟು ಮಹಾಪುರಾಣಗಳಲ್ಲಿ ಒಂದು ; ವರಾಹಪುರಾಣ : ಪರಮಶೈವ ಸ್ಕಂದ ಲೈಂಗ್ಯಾವಿರಳ ನಾರದ . . . ಬ್ರಹ್ಮಾಂಡ ವಾರಾಹ . . . ಸಾಂಗದಿಂದಷ್ಟಾದಶಪುರಾಣಂ (ಬಸವು. ೪೩-೭೬). ೫. ಒಂದು ಬಗೆಯ ಮರ.

[ಸಂ.]

ವಾರಾಹಿ (ನಾ). ೧. ಹೆಣ್ಣುಹಂದಿ. ೨. ಸಪ್ತಮಾತೃಕೆಯರಲ್ಲಿ ಒಬ್ಬಳು : "ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಮಾಹೇಂದ್ರೀ, ಚಾಮುಂಡಾ — ಈ ೭ ಸಪ್ತಮಾತೃಕೆಯರ ಪೆಸರ್" (ಹಲಾಯು. ೪-೧೭). ೩. ಒಂದು ಬಗೆಯ ಸಸ್ಯ ; ಹಂದಿಗೆಡ್ಡೆ : " ಕೌಮಾರಿ-ವಾರಾಹಿ" (ಓಷಧಿ. ೪೨). ೪. ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿ, ದಕ್ಷಿಣಕನ್ನಡಜಿಲ್ಲೆಯಲ್ಲಿ ಹರಿದು, ಅರಬ್ಬಿ ಸಮುದ್ರವನ್ನು ಸೇರುವ ಪಶ್ಚಿಮವಾಹಿನಿಯಾದ ಒಂದು ನದಿ ಮತ್ತು ಅದಕ್ಕೆ ಸಂಬಂಧಿಸಿದ ಜಲವಿದ್ಯುತ್ ಯೋಜನೆಯ ಹೆಸರು. ೫. [ಸಂಗೀತ] ಸ್ವರದ ಒಬ್ಬ ಅಧಿದೇವತೆ : ಬ್ರಾಹ್ಮಿ ಮಾಹೇಶ್ವರಿ ಕೌಮಾರಿ ವೈಷ್ಣವಿ ವಾರಾಹಿ ಮಾಹೇಂದ್ರಿ ಚಾಮುಂಡಿಯೆಂಬವರೇ ಕ್ರಮದಿಂದಾ ಷಡ್ಜಾದಿ ಸ್ವರಾಧಿದೇವತೆಗಳು (ವಿವೇಕ. ೨೩೧). [ಸಂ. ವಾರಾಹೀ]

ವಾರಿ$_1$ 'ಬಾರಿ$_1$' ನೋ.

ವಾರಿ$_2$ (ನಾ). ೧. ನೀರು ; ಜಲ : ವಾರಿಯನಬ್ಜಮಾಲೆ ಮೊಗೆದಂಬುಧಿಯಿಂ ತರಲಲ್ಲಿ ಕೂಡೆ (ಕುಸುಮಾ. ೬-೨೨) ; ವಾರಿಯನೊಪ್ಪೆ ಸೂಸೆ ಪೆಱಮೆಟ್ಟುವ ತಪ್ಪಿಸಿಕೊಳ್ಳ . . . ಸಲಿಲಕೇಳಿಯೊಳಿರ್ದುದು ಕಾಮಿನೀಜನಂ (ನಳಚಂ. ೧೪೦). ೨. ಆನೆಯನ್ನು ಕಟ್ಟುವ ಸ್ಥಳ ; ಕರೋಟಿ. ೩. ಆನೆಯನ್ನು ಹಿಡಿಯಲು ಮಾಡಿರುವ ತಗ್ಗಾದ ಸ್ಥಳ,—ಹಳ್ಳ : "ಆನೆಯ ಹಿಡಿವ ಠಾವು ವಾರಿಯೆಂಬುದು" (ಹಲಾಯು. ೩೭-೭೦). ೪. ಒಂದು ಬಗೆಯ ಸಸ್ಯ ; ಮುಡಿವಾಳ. ೫. ಹಿಡಿಯುವಿಕೆ : ಒರೊಂದೆಡೆಯೊಳನಂಗನ ವಾರಿಗೆ ವಿಟಕುಂಜರಪ್ರಲೋಚನವಿಧಿಯಿಂ ವಾರಸ್ತ್ರೀಯರ್ ಗಣಕಾವಾರದ ಪಿಡಿಗಳೆನೆ ಕೂರ್ತು ಕಣ್ಣೆಸೆದಿರ್ದರ್ (ವರ್ಧಮಾ. ೮-೮೨). ೬. ದೈವದ ಹಾಗೂ ಅರಸರ ಸಂಬಂಧದಲ್ಲಿ ಕೈಕೊಳ್ಳುವ ಅಖಂಡವಾದ ನಿಷ್ಠೆ : ವಾರಿಯ ನಿನ್ನ ಲೆಂಕರದೆ ಸತ್ತಪರಕ್ಕಟ ಮಾಣಿಸೆಂ ಗಳಾ (ವರ್ಧಪು. ೯-೬೬) ; ತಾಳುಗೆಯನುರ್ಚ ನೆತ್ತಿಯ ಗಾಳಂ ಗಗನದೊಳೆಟಲ್ಪ ವಾರಿಯ ಬೀರರ್ ಪಾಳಿಯೊಳೆಸೆದರ್ (ಯಶೋಧ. ೧-೫೫). [ಸಂ.]

ವಾರಿಕಲ್, ವಾರಿಕಲ್ಲು (ನಾ). ನಿರ್ಗಲ್ಲು ; ಆಲಿಕಲ್ಲು : ಇರದೆ ಹಸ್ತಾಗ್ರದಿಂ ತೆಗೆದಿಡುವ ಗುಂಡುಗಳ್ ಪರಿಕಿಸಲ್ ವಾರಿಕಲ್ ಕಣ್ಗಳೇ ಮಿಂಚುಗಳ್ . . . ಎನಲ್

ದುಷ್ಕರಿ ವಿಲಯಕಾಲದ ಮಹಾಮೇಘದಂತೆ ಗರ್ಜಿಸುತೆ ನಡೆತರುತಿರ್ದನು (ಚಂಪು. ೨೫-೫೧). ವಾರಿಕಲ್ಲು : ಇಷ್ಟಭಾವವನಱಿವ ಚಿತ್ರ ದೃಷ್ಟವನಱಿವುದಕ್ಕೆ ಶ್ರುತದೃಷ್ಟವೆಂತುಟೆಂದಡೆ ವಾರಿಕಲ್ಲು ನೋಡ ನೋಡಲಿಕ್ಕೆ ನೀರಾದಂತೆ (ತೋಳಮಾ. ೭೫-೨೯.); ವಾರಿಕಲ್ಲು ಪುತ್ಥಳಿ ಅಪ್ಪವನೊಡಗೂಡಿದಂತೆ ಮಾಡಿತ್ತೆನ್ನ . . . ಶ್ರೀಗುರುವಿನ ಉಪದೇಶ (ಅಬಂಡೇ. ೨೦-೧೦). [ವಾರ್ + ಕಲ್ಲ್]

ವಾರಿಕಲ್ಲು 'ವಾರಿಕಲ್' ನೋ.

ವಾರಿಕಾಜಿ (ನಾ). ಗ್ರಾಮಾಧಿಕಾರಿ : ಆ ಧರ್ಮ್ಮ ವಾರಿಕಾಜಿರೆತ್ತಿ ನಡಿಸುವರು ಶ್ರೀ ಶ್ರೀ (ಸೌಶಾ. IX-i, ೩೪೪-೫೦; 1228); ಸಮಸ್ತ ವಾರಿಕಾಜಿರುಂ ವರುಷಂಪ್ರತಿ ಆರಯ್ದು ಪ್ರತಿಪಾಳಿಸಿ ನಡಸುವರು (ಸೌಶಾ. XVIII, ೨೩೫-೯ : 1254). [ವಾರಿ? + - ಕಾಜಿ]

ವಾರಿಕೇಳಿ (ನಾ). ನೀರಿನಲ್ಲಿ ಆಡುವುದು ; ನೀರಾಟ ; ಜಲಕ್ರೀಡೆ : ದಿಶಾಗಜರಾಜಿಯ ವಾರಿಕೇಳಿಕಾಸಾರಮೊ . . . ಭಾವಿಪಂದದೆನೆ ಕೌತುಕಮಾಯ್ತು ಮಹಾಸರೋವರಂ (ಚಂದ್ರಪ್ರ. ೫-೩೮) ; ಮೊರೆವ ಮಜ್ಜಿದುಂಬಿಗಳ ಸೊಗಯಿನ ಸರಸಿಗಿಳಿದರು ತಮ್ಮೊಳೊಬ್ಬೊಬ್ಬರ ನಿರೀಕ್ಷಿಸಿ ವಾರಿಕೇಳಿಗೆ ಮಾಡಿದರು ಮನವ (ಹೂರಾ. ೨-೭-೪).

[ಸಂ. ವಾರಿಕೇಲಿ]

ವಾರಿಜ (ನಾ). ನೀರಿನಲ್ಲಿ ಹುಟ್ಟಿದುದು ; ಕಮಲ : ವಾರಿಜ ಮಲಯಜ . . . ಕರ್ಪೂರ ಮೃಣಾಲಾದಿಗಳುಂ ಬಾಸಿಲಾಜವೆ ದಲವನ ದಾಹಜ್ವರಮಂ (ಅದಿಪು. ೨-೧೩) ; ಭೂರಿಭೂರುಹಶಿಖರಿಯನದರಿತು ಹಕ್ಕಿ ವಾರಿಜ ಮುಗಿದುವಲ್ಲಲ್ಲಿ (ಮೋಹತ. ೧೫-೬). [ಸಂ.]

ವಾರಿಜಗಂಧಿ (ನಾ). ೧. ಕಮಲದ ಹೂವಿನ ವಾಸನೆಯುಳ್ಳದು ; ತಾವರೆಯ ಗಂಧವುಳ್ಳದು : ವಾರಿಜಗಂಧಿವಿಭಾತಸಮೀರಂ ನಿಜಸುರಭಿ ನಿನ್ನ ಸುಯ್ಯದಱೊಳ ದೆಂತೋರಂತಕ್ಕುಮೊ ಪರಗುಣಹಾರಿಗೆ ನಿಜಗುಣಮದೇಕೆ ಸಮನಿಸಿದಪುದೋ (ಶಾಂತಿಪು. ೫-೮೫). ೨. ಕಮಲದ ಹೂವಿನ ಸುವಾಸನೆಯುಳ್ಳವಳು : ವಾರಿಜಗಂಧಿ ಕೇಳ್ ನಿನಗಾನೊಳಗಾಗಿ ಸಾರಸತ್ಪತಿಯ ವಿಸ್ತರಿಪೆ (ತೋಪಚ. ೩೯-೨).

[ಸಂ. ವಾರಿಜಗಂಧೀ (ವಾರಿಜ + ಗಂಧ + -)]

ವಾರಿಜದಳಲೋಚನ (ನಾ). ಕಮಲದ ದಳದಂತೆ ಕಣ್ಣುಗಳುಳ್ಳವನು ; ಕೃಷ್ಣ : ವಾರಿಜದಳಲೋಚನ ಭೂರಮಣ ಅಚ್ಯುತಾನಂತ . . . ಪುರಂದರವಿಠಲ ಸರ್ವೋತ್ತಮ (ಪುರಂದ. ಧಾ. ೪-೧೦೬-೫). [ಸಂ. ವಾರಿಜದಲಲೋಚನ]

ವಾರಿಜನಾಭ (ನಾ). ಹೊಕ್ಕುಳಲ್ಲಿ ಕಮಲವುಳ್ಳವನು ; ವಿಷ್ಣು : ಅಜೇಯಂ ಪೋಲ್ಕುಮಾ ಮತ್ತಗಜಂ ವಾರಿಜನಾಭನಂ (ಕವಿರಾ. ೨-೧೩೪); ವಾರಿಜನಾಭನ ಕರುಣವೆ ಸ್ಥಿರ ಸಂಸಾರವು ಎರವು (ಪುರಂದ. ಧಾ. ೫-೨೬ ಪಲ್ಲವಿ). [ಸಂ. (ವಾರಿಜ + ನಾಭ + -)]

ವಾರಿಜನೇತ್ರ (ನಾ). ಕಮಲದಂತೆ ಕಣ್ಣುಳ್ಳವನು ; ಕೃಷ್ಣ : ವಾರಿಜನೇತ್ರನೊಮ್ಮೆ ಕುಲವರ್ಧನಮಾಗಲೆವೇಳ್ಕುಮೆಂದು ತದ್ಭಾರಕಿಯಿಂಬ ತನ್ನ ಪುರಮಂ ಜಲರಾಶಿಯೊಳಾಳಿಪಲ್ಲಿ (ಹರಿವಂಶ. ೨-೧೬). [ಸಂ.]

ವಾರಿಜನೇತ್ರೆ (ನಾ). ಕಮಲದಂತಹ ಕಣ್ಣುಳ್ಳವಳು ; ಸುಂದರಿ : ವಾರಿಜನೇತ್ರೆ ದಿವ್ಯಗುಣಭೂಷಣೆ ಭವ್ಯಜನಾನುರಾಗೆ ನಿಷ್ಕಾರಣಮೇಕೆ ಪೂನ್ಕೆ (ಧರರ್ಮಾ. ೪-೧೫೩).

[ಸಂ. ವಾರಿಜನೇತ್ರಾ (ವಾರಿಜ + ನೇತ್ರ + -)]

ವಾರಿಜಬಾಂಧವ (ನಾ). ತಾವರೆಯ ಮಿತ್ರ ; ಸೂರ್ಯ : ವಿಮಲಂ ಹಯ . . . ವಾರಿಜಬಾಂಧವ ವಾರಿಜೋದ್ಭವ ವಾರಿಜಮೈರಿ ವಾರಿಜವಿಲೋಚನ ವಾರಿಜ ಹಂಸವಾಚಕಂ (ಪಾನಾರ. ೯). [ಸಂ.]

ವಾರಿಜಭವ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ : ಶ್ರೀರಮಣಮಿಬ್ಬುಧಪತಿ ವಾರಿಜಭವಾದಿಬೃಂದಾರಕಪ್ರಚಯಕೋಟೀರಮಾಣಿಕ್ಯಪ್ರಭಾರಾಜಿತಾಂಘ್ರಿಯುಗ . . . ಪಾಲಿಪುದೆನಗೆ ಚಾರುಮತಿಯಂ (ಕಬ್ಬಿಗ. ೧). [ಸಂ.]

ವಾರಿಜಭವಾಂಡ (ನಾ). ಕಮಲದಲ್ಲಿ ಹುಟ್ಟಿದ ಬ್ರಹ್ಮನು ಸೃಷ್ಟಿಸಿದ ವಿಶ್ವ ; ಬ್ರಹ್ಮಾಂಡ : ಈ ಬಲದಬ್ಬರಣಿ ವಾರಿಜಭವಾಂಡವ ಗಬ್ಬರಿಸೆ ಘಾಡಿಸಿತು ಶಲ್ಯನ ರಥದ ಬಳಸಿನಲಿ (ಕುವಾಶ. ೨-೬೦). [ಸಂ.]

ವಾರಿಜಮಿತ್ರ (ನಾ). = ವಾರಿಜಬಾಂಧವ : ವಾರಿಜಮಿತ್ರನಿಂ ಬಹನೆ ಕೂ ಶಶಿ ನೀಂ ಪೆಱಸಾರು ಸಾರು ಕೂ . . . ತಾರೆ ತಮಂಧ ಸಾರೆನುತೆ ಕೂಗುತಲಿರ್ದುದು ತಾಮ್ರಚೂಡನುಂ (ಸೂಕ್ತಿಸು. ೯-೨೮) ; ವಾರಿಜಮಿತ್ರಂ ಕರದಿಂ ವಾರುಣಿಯಂ ಪಿಡಿದು ಸೇವಿಸಿದ ಕಾರಣದಿಂದೋರಂತಂಬರಮಂ ಬಿಟ್ಟಾರಯ್ದನೆ ನಡುಗಿ ಕೆಡೆದನಸ್ತಾಚಲದೊಳ್ (ಬಾಧಪ್ರ. ೫-೩). [ಸಂ.]

ವಾರಿಜಮುಖಿ (ನಾ). ಕಮಲದಂತೆ ಮುಖವುಳ್ಳವಳು ; ಸುಂದರಿ : ವಾರಿಜಮುಖಿ ಭೂವಂ ಗಂಭೀರವಾಹಿನಿಯ ತೀರದೊಳ್ ನಿಮ್ಮ ಮುಖಾಂಭೋರುಹದೊಳ್ ಪಡಿಯಚ್ಚಂಭೋರುಹಮಂ ನೆಚ್ಚಲೊಲ್ದಲ್ಲೊರ್ಮೆ ಗಡಂ (ಪಂಡಾಮಾ. ೧೧-೯೫); ವಾರಿಜಮುಖಿಯರ್ವಾಡಿದರಾರಯ್ದಿತಿರಾಗಜಾತಿರೀತಿಯನಱಿದುಂ (ಪಂಪೂರ. ೨-೯೫).

[ಸಂ. ವಾರಿಜಮುಖೀ(ವಾರಿಜ + ಮುಖ + -)]

ವಾರಿಜರಿಪು (ನಾ). ೧. ಕಮಲದ ಶತ್ರು ; ಚಂದ್ರ. ೨. [ಛಂದ] ಚಂದ್ರಗಣ : ಮರುದರ್ಕ ವಾಯು ಲಘು ಮುಂದೆ ಬರೆ ಸುರಮರುದ್ದಿನೇಶಗಂ ವಾರಿಜರಿಪು ಸುರಪಾರ್ಶ್ವಲಗಂ ಮರುದರ್ಕವಾಯು ರವಿಯಾಶನುದ್ಧತಂ (ಛಂದೋಜಾ. ೬-೨೧೨). [ಸಂ.]

ವಾರಿಜವಿರೋಧಿ (ನಾ). = ವಾರಿಜರಿಪು ೧ : ಆ ರಾತ್ರಿಯೊಳು ಜಲಂಧರನ ಮುಖ ಶಶಿಗೆ ಮುರಾರಿಯಿಕ್ಕಿದ ಚಕ್ರಮೆನಲು ತೇಜಂಗುಂದಿ ವಾರಿಜವಿರೋಧಿಯಾ ಪರಿವೇಷದಿಂದೊಪ್ಪುತಿರ್ಪ ವೇಳೆಯೊಳು (ಭಾವಚಿಂ. ೬-೫). [ಸಂ. ವಾರಿಜವಿರೋಧಿನ್]

ವಾರಿಜವಿಲೋಚನ (ನಾ). = ವಾರಿಜನೇತ್ರ : ತ್ರಿಜಗ ತಲ್ಲಣಿಸಿದುದು ವರ ವಾರಿಜವಿಲೋಚನ ಕೇಳಿದನು (ಕುವಾದ್ರೋ. ೧೩-೧೭). [ಸಂ.]

ವಾರಿಜವೈರಿ (ನಾ). = ವಾರಿಜರಿಪು ೧ : "ವಿಮಲಂ ಹಯ ಮುಖ್ಯ . . . ವಾರಿಜವೈರಿ ವಾರಿಜವಿಲೋಚನ ವಾರಿಜ ಹಂಸವಾಚಕಂ" (ಪಾನಾರ. ೯). [ಸಂ.]

ವಾರಿಜಸಂಭವ (ನಾ). = ವಾರಿಜಭವ : ವಾರಿಜಸಂಭವಾಂಡಮಕಳಂಕ ಗುಣಾಂಕ ವೃಷೇಂದ್ರನುದ್ಯಶಪೂರಮಳುಂಬಮಾಗಿ ಸಲೆ ತೆಕ್ಕನೆ ತೀವೆ (ವೃಷಪ. ೫-೫೫). [ಸಂ.]

ವಾರಿಜಸದ್ಮ (ನಾ). ಕಮಲವನ್ನೇ ಮನೆಯಾಗುಳ್ಳವಳು ; ಲಕ್ಷ್ಮಿ : ವಾರಿಜಸದ್ಮ ಸದ್ಮದೊಳಗಿರ್ದವೊಲಿಂ ನುತಿಸಿದ್ದ ಪಾರದಂ ಪಾರದೆ ಬಂದು ತೋರ್ಕೈ (ವಿಕ. VIII, ಸೊರಬ ೨೬೧-೨೬; 1408). [ಸಂ. ವಾರಿಜಸದ್ಮಾ (ವಾರಿಜ + ಸದ್ಮ + -)]

ವಾರಿಜಾಂಬಕ (ನಾ). = ವಾರಿಜನೇತ್ರ : ವಾರಿಜಾಂಬಕನ ಪದವಲ್ಲವಕೆ ಮಣಿಯುತಿರಲಾ ರಾಯನಂ ತೆಗೆದು ತಳ್ಳಿಸಲ್ (ಭೈಮಭಾ. ೨-೪೯). [ಸಂ.]

ವಾರಿಜಾಕ್ಷ (ನಾ). = ವಾರಿಜನೇತ್ರ : ವಾರಿಜಾಕ್ಷನು ಸುತನನರ್ಥಿಸಿ . . . ಮಾರಹರನಂ ಬಹುಯುಗಂಗಳೊಳೋಲಯಿಸಿದನಲಾ (ಬಸಪು. ೫೪-೪೧) ; ನಾರಿಯರ ಮನೆಗೆ ಪೋಪ ವಾರಿಜಾಕ್ಷನೆ ಬಾರೊ (ಪುರಂದ. ಧಾ. ೪-೬೨-೪).

[ಸಂ. (ವಾರಿಜ + ಅಕ್ಷಿ + -)]

ವಾರಿಜಾಕ್ಷಿ (ನಾ). = ವಾರಿಜನೇತ್ರೆ. [ಸಂ. ವಾರಿಜಾಕ್ಷೀ]

ವಾರಿಜಾನನೆ (ನಾ). = ವಾರಿಜಮುಖಿ : ವಾರಿಜಾನನೆ ಸೆಂಡನಿರ್ಕಲದೊಳ್ ನಿಮಿರ್ದು ಕರಾಗ್ರದಿಂ ಜಾಜಿ ಮೆಟ್ಟುತೆ ಪೊಯ್ಯಲ್ (ದಶಕು. ೧೨-೩೦) ; ಚಾಯದ್ರಾಕ್ಷಾರಾಮದಲ್ಲಿಗೆ ವಾರಿಜಾನನೆ ಹೋಗು (ಬಸಪು. ೪೦-೨೯).

[ಸಂ. ವಾರಿಜಾನನಾ (ವಾರಿಜ + ಆನನ + -)]

ವಾರಿಜಾರಾತಿ (ನಾ). = ವಾರಿಜರಿಪು ೧ : ನಿಡುಗಣ್ಬಂಕಜಪತ್ರಮಂ ಪಳಯಿ ವಕ್ಷಂ ವಾರಿಜಾರಾತಿಯಂ ಜಡಿಯಲ್ . . . ನರೇಂದ್ರಸೂನು ತಳೆದಂ ತಾರುಣ್ಯಲಾವಣ್ಯಮಂ (ರಾಜಶೇ. ೪-೧೦೭). [ಸಂ.]

ವಾರಿಜಾಸನ (ನಾ). ಕಮಲವನ್ನು ಪೀಠವಾಗಿ ಉಳ್ಳವನು ; ಬ್ರಹ್ಮ : ವಾರಿಜಾಸನ ಮಸ್ತಕ್ಕಂತನ ವಾಸುದೇವ ದೃಗರ್ಚಿತಾಶೂರ ಶುಂಭನಿಶುಂಭಮುಖ್ಯಕುದೈತ್ಯಹಾರಿಣಿ (ಹಾಲಾಸ್ಯ. ೪-೫-೧೬). [ಸಂ.]

ವಾರಿಜಾಸನೆ (ನಾ). ಕಮಲವನ್ನೇ ಪೀಠವನ್ನಾಗಿ ಉಳ್ಳವಳು; ಸರಸ್ವತಿ : ವಾರಿಜಾಸನೆ ಸಕಲಶಾಸ್ತ್ರವಿಚಾರದುದ್ಭವೆ ವಚನರಚನೋದ್ಧಾರೆ . . . ಸಿದ್ಧಿದಾಯಕಿಯೆ (ಕುವಾಲ. ೧-೫). [ಸಂ. ವಾರಿಜಾಸನಾ (ವಾರಿಜ + ಆಸನ + -)]

ವಾರಿಜೋದರ (ನಾ). = ವಾರಿಜನಾಭ : ವಾರಿಜೋದರ ಕೃಷ್ಣ ಬಂದನು (ಕುವಾಲ. ೪-೫೪). [ಸಂ.]

ವಾರಿಜೋದ್ಭವ (ನಾ). = ವಾರಿಜಭವ : ವಾರಿಜೋದ್ಭವನನ್ನರಪ್ಪ ಧರಾಮರರ್ಪಲರುಂ ಸದಾಚಾರರಪ್ಪರೆ ನೋಡ ಕೂರ್ತು ಜಿನೇಂದ್ರದೀಕ್ಷೆಯ ನಾಂತರ್ (ಧರ್ಮಾಮೃ. ೮-೭೦) ; ವಾರಿಜೋದ್ಭವಸೂನು . . . ಬರೆ (ಸಾಳ್ವಭಾ. ೩೦-೨). [ಸಂ.]

ವಾರಿಡು (ಕ್ರಿ). (ಆಲಂ) ನೀರಿನಂತೆ ಪ್ರವಹಿಸು ; ನೀರಿನ ಪ್ರವಾಹದಂತೆ ಹರಿ : ಒಡೆದು ನಾನಾಥಟ್ಟುಗಳ ಮೈವಿಡಿದು ವಾರಿಡುವರುಣಜಲದಲಿ ಕಡಿಕುಗಳು ಬೆಂಡೇಳೆ ದಂತಿಗಳಚ್ಚಿ ಕೊಡೆನೆಗೆಯೆ (ಕುಮಾಧೀ. ೪-೮). [ವಾರಿ + ಇಡು]

ವಾರಿತ (ಗು). ೧. ಅಡ್ಡಿಪಡಿಸಲ್ಪಟ್ಟ ; ತಡೆದ ; ಪ್ರತಿರೋಧಿಸಿದ. ೨. ನಿವಾರಿಸಲ್ಪಟ್ಟ ; ತೆಗೆದು ಹಾಕಿದ : ವಾರಿತಾಹಂಕಾರನಂ ಹೂಂಕಾರ ಮದಧಿಕ್ಕಾರನಂ ಗತಮಾರಕರ್ಮವಿಕಾರನಂ ವೀರಾವತಾರನನು ಲೋಕಪಾವನ ಕಾರಕನನಾಲೋಕಿಸುತ್ತೆ (ಬಸವ. ೫-೧೬). [ಸಂ.]

ವಾರಿದ (ನಾ). ನೀರನ್ನು ಕೊಡುವಂತಹುದು ; ಮೋಡ ; ಮೇಘ : ವಾರಿದಂ ತನ್ನೊಳೆ ಕತಿಪಯ ವಾರ್ದಿಂದುವಂ ಪೇಱೆ ತಂದಂತದಱಿಂದಂ ಲೋಕಮಂ ತೀವುವುದು . . . ಎನೆ ಪೆಂಪರ್ಣವಕ್ಕೆನೊ ಚೋದ್ಯಂ (ಜಗವಿ. ೧-೪೫). ಉರಗಬಲದುರವಣೆಯೊ ವಾರಿದತರುಗಳುಪಶಾಖೆಗಳೂ ಕಾಲನ ಹರವರಿಯೊ ಹೆಬ್ಬೆಳಿಸ ಮುತ್ತುವ ವಿಹಗಸಂತತಿಯೊ . . . ಅಬ್ಬರಿಸಿ ಗಬ್ಬರಿಸಿದುವು ದಿಗುತಟವನು ಶರವ್ರಾತ (ಕುಮಾಧೀ. ೪-೧೫). [ಸಂ.]

ವಾರಿದಪಥ (ನಾ). ಮೋಡಗಳು ಸಂಚರಿಸುವ ಮಾರ್ಗ ; ಆಕಾಶ : "ತಾರಾಪಥಂ ವ್ಯೋಮಮಂತರಿಕ್ಷಂ ನಭಂ ವಾರಿದಪಥಂ . . . ಗಗನಮಕ್ಕುಂ" (ಮಂಗರಾ. ೯-೭೧). [ಸಂ.]

ವಾರಿಧರ (ನಾ). ೧. ನೀರನ್ನು ಧರಿಸಿರುವುದು ; ಮೋಡ : ಪಾರಾವಾರಗಂಭೀರಂ ವಾರಿಧರೋದಾರಂ . . . ಆರಯೆ ಚಿಕದೇವರಾಯನತಿರವಿತೇಜಂ (ಅಪ್ರಾ. ೩೪-೧೫). ೨. ಮದೋದಕವನ್ನು ಸುರಿಸುವ ಆನೆ. ೧,೨ : ಆ ವಾಹಿನೀವ್ಯೂಹಂ . . . ವರ್ಷಾಗಮಸಮಯದಂತೆ ಬಹಳತರವಾರಿಧರಪರೀತಮುಂ . . . ದೆಸೆ ಬೆಸಲಾದಂತೆಯುಂ ಕತಿಪಯವ್ರಯಾಣಂಗಳಂ ನಡೆಯೆ ನಡೆಯೆ (ಚಂದ್ರಪ್ರ. ೧೦-೩೦ ವ). [ಸಂ.]

ವಾರಿಧಿ (ನಾ). ೧. ಕಡಲು ; ಸಮುದ್ರ : ವಾರಿಧಿಯಿಂ ಸುಖನಿಧಿ ಕುಠೀರವವಿಷ್ಟರ ದಿನಧಿಕನಮರಾಲಯದಿಂ ಧೀರಂ ಫಣಿಗ್ಯಹದಿಂದಂ ವೀರಂ ಮಣಿಗಣದಿನಜರ ನನಲನಿನನಘಂ (ಶಾಂತಿಪು. ೯-೨೧೧) ; ಆ ವಾರಿಧಿಯಿಂದವಾರಮಹಿಮಂ . . . ಪುಟ್ಟುಗುಂ ನಂದನಂ (ಜಗವಿ. ೨-೮೩). ೨. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : ಕುಟ್ಮಲಮೆಂಬ ಮಯೂರಂ – ಭಜಸನಗಗಂ–ಯತಿ ಪಂಚಮದೊಳ್ ಅಥವಾ ವಾರಿಧಿಯೊಳ್ (ಛಂದೋಂಬು. ೨-೧೩೨ ಅಡಿಟ). [ಸಂ.]

ವಾರಿಧಿಗರ್ಭ (ನಾ). ಸಮುದ್ರದಲ್ಲಿ ಹುಟ್ಟಿದವನು ; ಚಂದ್ರ : ವಾರಿಧಿಗರ್ಭನಂ . . . ದುರಿತೋಪಹಾರಿಯಂ ಕಾರಣಮಿಲ್ಲದೀಯಧಮನೆಂಜಲಮಾಡಿದನೆಂದು ಶಂಖವಾಚಾರಧರಂಗೆ ಪುಯ್ಕಲಿಡುವಂದದೊಲಿರ್ದುದು ಸುಪ್ರಭಾತದೊಳ್ (ಸುಕ್ತಿಸು. ೯-೨೫). [ಸಂ.]

ವಾರಿನಾಥ (ನಾ). ೧. ಸಮುದ್ರ. ೨. ಸಮುದ್ರದ ದೇವತೆ; ವರುಣ. ೩. ಮೋಡ ; ಮೇಘ. [ಸಂ.]

ವಾರಿನಿಧಾನ (ನಾ). ಕಡಲು ; ಸಮುದ್ರ : ಆ ನೆಗಟ್ಟ ಮಹಾವಾರಿನಿಧಾನಂ ಪರಿವೇಷ್ಟಿಸಿರ್ದ ಜಂಬೂದ್ವೀಪಂ ತಾನೆಸೆದುದು ವೃತ್ತತೆಯಿಂ ದಾನವಮರ್ದನನ ಕೂರ್ಮಮೂರ್ತಿಯ ತೆಱದಿಂ (ಜಗವಿ. ೧-೨೪). [ಸಂ.]

ವಾರಿನಿಧಿ (ನಾ). = ವಾರಿಧಿ ೧ : ತರುಣೇಂದು ದಿನಕ್ರಮದಿಂ ಪರಿವರ್ಧಿಸಿ ವಾರಿನಿಧಿಯನೊದವಿಪ ತೆಱದಿಂ (ಜಗವಿ. ೩-೪೦) ; ವಾರಿನಿಧಿ ಮುನಿ ಕುಡಿದ ಕಪಿ ಕಯ್ಯಾರೆ ಕಟ್ಟಿದ ಕುಂದುಗಳೆವೊಡೆ ಸೇರಿತೀ ಪುರಸಿರಿಯನೆನೆ ಜಳಪಾತಿಕೆಯು ಬಳಸಿ ಹೊಂಗೋಂಟೆ ರಂಜಿಪುದು (ಸಾಳ್ವಭಾ. ೨-೬). [ಸಂ.]

ವಾರಿನಿರ್ಗಮ (ನಾ). ೧. ನೀರು ಹೊರಬರುವ ಸ್ಥಳ. ೨. ನೀರಿನ ಸುಳಿ : "ವಾರಿನಿರ್ಗಮಂ ಪುಟಭೇದಂ" (ಮಲ್ಲಿಕೋ. ೨೫-೧೪). [ಸಂ.]

ವಾರಿಪಂಚಕ (ನಾ). [ವೀಶೈ] ಕರಣಹಸಿಗೆಯ ಪಂಚೀಕರಣಗಳಲ್ಲಿನ ಒಂದು ಪಂಚಕ : ಸಾರೆ ಬುದ್ಧಿಯಪಾನವಾಯು ಜಿಹ್ವೇಂದ್ರಿಯಮುಮಾ ರಸಂ ಗುಹ್ಯೇಂದ್ರಿಯಂಗಳ್ಕೆದು ನೋಡೆ ವಾರಿಪಂಚಕವಿನ್ನು ಹಂಕಾರವಾವ್ಯಾನವಾಯು ನೇತ್ರೇಂದ್ರಿಯದೊಳು (ವೀಶೈಪ್ರ. ೭-೩-೧೨). [ಸಂ.]

ವಾರಿಫೇನ (ನಾ). ೧. ನೀರಿನಲ್ಲಿ ಬರುವ ನೊರೆ ; ಬುರುಗು ; ಬುದ್ಬುದ. ೨. ಒಂದು ಬಗೆಯ ಸಸ್ಯ ; ಕಡಲ ನಾಲಗೆ : "ವಾರಿಫೇನಂ ಕಡಲನಾಲಗೆಯದಕ್ಕುಂ" (ಮಂಗರಾ. ೪೩-೪೨). [ಸಂ.]

ವಾರಿಬಂಧ (ನಾ). ಆನೆಗಳನ್ನು ಹಿಡಿಯುವುದು : ಈಗಿನ 'ಖೆಡ್ಡಾ' ಕಾರ್ಯಕ್ರಮದಂತೆ ಆನೆಗಳನ್ನು ಹಿಡಿಯುತ್ತಿದ್ದಂತೆ ಕಾಣಿಸಬಹುದು. ಇದನ್ನು ಅಭಿಲಷಿತಾರ್ಥಚಿಂತಾಮಣಿಯಲ್ಲಿ 'ವಾರಿಬಂಧ'ವೆಂದು ಕರೆದಿದೆ (ಕರಾಖ. ೨೬೩). [ಸಂ.]

ವಾರಿಭರ (ನಾ). ನೀರಿನ ಹೊಡೆತ,–ರಭಸ : ವಾರಿಭರಂಗಳಂ ಗಳಿತಮಾಗೆ ಮನೋಹರಿಯಂಗರಾಗಂ . . . ತಳಿದನುಜ್ವಳಕುಂಕುಮಪಂಕದಿಂ ಪ್ರಿಯಂ (ವೀರಾವ. ೧೩-೧೪೯). [ಸಂ.]

ವಾರಿಯಂತ್ರ (ನಾ). ೧. ನೀರನ್ನು ಚೆಲ್ಲುವ ಯಂತ್ರ ; ಜೀರ್ಕೊಳವೆ : ನೃಪಕರವಾರಿಯಂತ್ರಮುಪಮುಕ್ತಮೃಗೋದ್ಭವಮಿಶ್ರಧಾರೆಗಳ್ ದ್ವಿಪಪತಿಕುಂಭಸನ್ನಿಭ ಕುಚಾಚಲಮಂ ಮುಗಿಲಂತೆ ಮುತ್ತೆ (ರಾಜಶೇ. ೧೦-೭೫). ೨. ನೀರನ್ನು ಮೇಲೆತ್ತುವ ಯಂತ್ರ , — ಚಕ್ರ. [ಸಂ.]

ವಾರಿರಮ್ಯ (ನಾ). ಕಡಲು ; ಸಮುದ್ರ : "ವಾರಾಶಿ ಸಿಂಧು . . . ಉದ್ಯತ್ಸಮುದ್ರಕಕ್ಕುಂ ವಾರಿರಮ್ಯಂ" (ಮಂಗರಾ. ೧೫೦-೨). [ಸಂ.]

ವಾರಿರುಹ (ನಾ). = ವಾರಿಜ : ವಾರಿರುಹಕ್ಕಿನಂ ಕುವಲಯಕ್ಕಮೃತಾಂಶು . . . ಈಶ್ವರಭಕ್ತಿಗೆ ಭರ್ತನಾಸಮಾಳ್ಪೋರಗೆಯಾಗಿ ಸಂಕಲಿಯೊಳಂ ನೆರೆವಾಸೆಯೊಳಿರ್ದ ಸೌಂದರಂ (ಸಂಬಂ. ೧೪-೨) ; ದರವಿಕಸದ್ವಾರಿರುಹಮನಾ ಕಾಂತೆ ನಿಶೆಯ ಕಡೆಯೊಳ್ ಕಂಡಳ್ (ಪುಷ್ಪಸ. ೩-೧೨೦). [ಸಂ.]

ವಾರಿರುಹಸಂಭವ (ನಾ). = ವಾರಿಜಭವ : ಇಂದ್ರನಲ್ಲಿ ಮಿಗೆ ನಿರ್ಜರರಂ ನೆಱೆ ಕೂಡಿ ಕೊಂಡು ಬಂದಾತುರನಾಗಿ ವಾರಿರುಹಸಂಭವನಂ ನುತಿಗೆಯ್ದು (ಕಾಸ್ಕರಂ. ೧-೨). [ಸಂ.]

ವಾರಿರುಹಾಕರ (ನಾ). ಕಮಲಗಳಿರುವ ಸರೋವರ ; ತಾವರೆಯ ಕೊಳ : ಉಗುರ್ವಿಸಿಯವ್ಪುವೊರ್ಮೆ ಪುಗೆ ವಾರಿರುಹಾಕರವಾರಿ ಸುಯ್ಯ ಬೆಂಕೆಗಳೊಳೆ ಪೊಕ್ಕ ನಂದನವನಂ ಕೊರಗಿರ್ಪವು . . . ಮದೀಯ ವಿಯೋಗದೊಳೆನ್ನ ನಲ್ಲಳಾ (ಶಾಂತಿಪು. ೮-೯೫). [ಸಂ.]

ವಾರಿವಾಹ (ನಾ). ಮೋಡ ; ಜಲದ : "ಸ್ತನಯಿತ್ನು ವಾರಿವಾಹಂ ಘನಾಘನಂ ಧೂಮಯೋನಿ ಮೇಘಂ ಜಲದಂ" (ವಸ್ತುಕೋ. ೧೦-೫೮). [ಸಂ.]

ವಾರಿವಾಹವಾಹ (ನಾ). ಮೋಡವನ್ನು ವಾಹನವನ್ನಾಗಿ ಉಳ್ಳವನು ; ಇಂದ್ರ : ವಾರಿವಾಹವಾಹನೊಳೊದವಿದ ವೈರದಿಂ ವಾರಿಧಿಯೊಳ್ಕೊಕ್ಕ ಭೂರಿಭೂಧರಂಗಳ್ ಪಳಂಚಲೆಂದು ಪಟುತೆಯಿಂದಿದಿರ್ಚಿ ನಿಂದವೆಂಬಂತೆ ಸಾರ್ತಂದು (ರಾಜಶೇ. ೧-೧೦೨ ವ). [ಸಂ.]

ವಾರಿವಿಹಾರ (ನಾ). = ವಾರಿಕೇಳಿ : ಲಲಿತಲತಾಂಗಿಯರ್ ತುಮುಳಕೇಳಿಯ ವಾರಿವಿಹಾರದೊಳ್ ಪಳಂಚಲೆವವನೀಶನಂದನನನಾಜಿದೆ . . . ಒಡ್ಡಿದರ್ . . . ಅಬ್ಜವಿಚಿತ್ರಪತ್ರಮಂ (ಶಾಂತಿವ್ರ. ೮-೩೮). [ಸಂ.]

ವಾರಿಶತ್ರ (ನಾ). ನೀರನ್ನು ದಾನಮಾಡುವ ಸ್ಥಳ ; ಅರವಂಟಿಗೆ : ಭೈರವದೇವರ್ಗ್ಗಲ್ಲಿಯ ವಾರಿಶತ್ರಕ್ಕಂ ಸರ್ವನಮಶ್ಯಮಾಗೆ ಬಿಟ್ಟ ಕನ್ನೆ ಮುನ್ನುಱಿ ಬಳಿಯ ದುದ್ಬಿಯಾಲು (ಸಿಇಇ. IX-i, ೧೧೯-೩೧; 1057). [ವಾರಿ + ಶತ್ರ]

ವಾರಿಶಿಲೆ (ನಾ). = ವಾರಿಕಲ್ : ಆಜ್ಯವು ಮಹದಲ್ಲಿ ಬೆರಸುವಾಗ ವಾರಿಶಿಲೆ ನೋಡ ನೋಡಲಿಕ್ಕೆ ನೀರಾದಂತೆ ಇರಬೇಕು (ಮೋಳಿಮಾ. ೨೭೦-೫); ಬಜ್ಜರದ ರತ್ನವೃಷ್ಟಿಯನುಜ್ಜವದಿಂದಮರರೆಯ್ದೆ ಸುಂದರಪತಿಗಂ ಸಜ್ಜೆನಿಸಿ ಕರೆದರೋ ಎನೆ ಪಜ್ಜಳಿಸಿದ ವಾರಿಶಿಲೆಗಳೇನೊಪ್ಪಿದವೋ (ಹಾಲಾಸ್ಯ. ೨-೩-೮). [ಸಂ. ವಾರಿಶಿಲಾ]

ವಾರಿಶೂಕ (ನಾ). ನೀರಿನ ಮೇಲಿನ ಪಾಚಿ ; ಹಾವಸೆ : "ವಾರಿಶೂಕಂ ಶೈವಳಂ ಸೇವಾಳಮೆನೆ ಹಾವಸೆಗೆ ಪೆಸರು" (ಮಂಗರಾ. ೧೨೪-೧೮). [ಸಂ.]

ವಾರಿಷ 'ಬರಿಸ' ನೋ.

ವಾರಿಸು (ಕ್ರಿ). ೧. ಬೇಡವೆಂದು ಹೇಳು; ನಿರೋಧಿಸು ; ತಡೆ: "ಬಾರಿಪುದೆನೆ ವಾರಿಪುದದು" (ಚಕುನಿ. ೭೬) ; ಶ್ರೀವರ್ಧನಂ ಮೊದಲಾಗಿ ಅನಿಬರುಂ . . . ಕೈದುಗಳತ್ತ ಕೈಯಂ ನೀಡಲ್ ಬಗೆವನ್ನೆಗಂ ಭಟ್ಟಾರರ್ ವಾರಿಸಿದರ್ (ವಡ್ಡಾರಾ. ೯೯-೧೮); ವನವಾಸದೊಳಿರ್ಪೆನೆಂದು ದುರ್ವಾರಪರಾಕ್ರಮಂ ತಳರೆ ಬಾರಿಸಿ ವಾರಿಸಿ ಕುಂತಿ ಮಾದ್ರಿಯರ್ ಬೆನ್ನಬೆನ್ನನೆ ಬರೆ (ಪಂಪಭಾ. ೧-೧೧೪). ೨. ಇಲ್ಲದಂತೆ ಮಾಡು ; ನಿವಾರಿಸು : ತೊಡೆಯುತ್ತುಂ ತೊಂಡೆವಾಯಂ ಶ್ರಮಜಲಕಣಮಂ ಮೇಲುದಿಂ ವಾರಿಸುತ್ತುಂ (ಸೂತ್ರಸು. ೮-೧೬೭); ಹಸಿವು ನೀರಡಕೆ ಸಂತಾಪವ ನೆಱೆ ವಾರಿಸಿಕೊಂಡು ಬಲಗೂಡಿ ತೆರಳ್ದು (ಮೋಹಕ. ೧೯-೬೦). 'ಬಾರಿಸ್ಸು' ಪರಾ. [< ವಾರಣ + - ಇಸ್ಸು]

ವಾರಿಸೇಚನ (ನಾ). ನೀರನ್ನು ಚಿಮುಕಿಸುವುದು ; ಜಲವನ್ನು ಸಿಂಪಡಿಸುವುದು : ವೀರರತಿಸಾಮ್ರಾಜ್ಯಪಟ್ಟದೊಳ್ ಬೆಮರ್ವನಿಯ ವಾರಿಸೇಚನದಿಂದೆ ಕೃತಕೃತ್ಯನಾದಂತೆ ರಾರಾಜಿಸಿದನು (ಕೃಮಿಭಾ. ೧೧-೨೪). [ಸಂ.]

ವಾರು (ನಾ). ಉದ್ದವನ್ನು ಆಳೆಯುವ ಒಂದು ಅಳತೆ ; ಒಂದು ಗಜ : ಹತ್ತವಾರೀನ ಹೂವಿನ ಶಾಲ್ಗೋಳು (ಮಲ್ಲಿಗೆ. ೧೩) ; ಒಂದು ವಾರು ಕೆಂಪು ಅರಿವೆಗೆ ಹತ್ತಾಣೆ (ಚೆನಬಾ. ೧೮೫). [<— ಮರಾ. ವಾರ್]

ವಾರುಣ (ಗು). ೧. ವರುಣನಿಗೆ ಸೇರಿದ,—ಸಂಬಂಧಪಟ್ಟ. (ನಾ). ೨. ಒಂದು ಬಗೆಯ ಅಸ್ತ್ರ ; ವಾರುಣಾಸ್ತ್ರ. ೩. ನೀರು. ೪. ಒಂದು ಊರಿನ ಹೆಸರು: ಆಚನ ಚಮುಂಡರನು ಆ ಭಟರಕರು ವಾರುಣದ ಸಾಂಧಿನಾಥಸ್ವಮಿಯ ಮಡಿಸಿದರು (ಎಕ. V (R), ಮೈಸೂರು. ೧೮೦-೩; 10 ನೆಯ ಶತ). [ಸಂ.]

ವಾರುಣಪತ್ರಿ (ನಾ). ವರುಣಮಂತ್ರದಿಂದ ಅಭಿಮಂತ್ರಿಸಿ ಬಿಡುವ ಬಾಣ,-ಅಸ್ತ್ರ ; ವಾರುಣಾಸ್ತ್ರ : ಜ್ವಳನಪತ್ರಿಯಂ ಕಡಿದು ವಾರುಣಪತ್ರಿಯನ್ನೆಂದ್ರಬಾಣಮಂ ಕಳೆದು . . . ಕಾದಿದನೇಂ ಕಲಿಯೋ ಗುಣಾರ್ಣವಂ (ಪಂಪಭಾ. ೧೧-೪೩).

[ಸಂ. ವಾರುಣಪತ್ರಿನ್]

ವಾರುಣಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು : ಸನತ್ಕುಮಾರಪುರಾಣ ನಾರಸಿಂಹಪುರಾಣ . . . ವಾರುಣಪುರಾಣ . . . ಭಾರ್ಗವಪುರಾಣವೆಂಬವೇ . . . ಹದಿನೆಂಟು ಉಪಪುರಾಣಂಗಳ್ (ವಿವೇಕ. ೭). [ಸಂ.]

ವಾರುಣಸ್ನಾನ (ನಾ). ಐದು ಬಗೆಯ ಸ್ನಾನಗಳಲ್ಲಿ ಒಂದು ; ನೀರಿನಿಂದ ಮಾಡುವ ಸ್ನಾನ : ದಿವ್ಯಸ್ನಾನ ವಾರುಣಸ್ನಾನ ವಾಯವ್ಯಸ್ನಾನ ಮಾನಸಸ್ನಾನ ಆಗ್ನೇಯಸ್ನಾನವೆಂಬ ಪಂಚವಿಧಸ್ನಾನಂಗಳ್ (ವಿವೇಕ. ೧೧೫); ಜಲದಿಂದ ಮಾಡುವ ಸ್ನಾನವೇ ವಾರುಣಸ್ನಾನ (ಅಜ್ಞಾವಿ. ೪). [ಸಂ.]

ವಾರುಣಾಸ್ತ್ರ (ನಾ). = ವಾರುಣಪತ್ರಿ : ಅನಲಾಸ್ತ್ರದಿನಿಸೆ ದಿವಿಜಂ ದನುಜೇಂದ್ರಂ ವಾರುಣಾಸ್ತ್ರದಿಂ ಖಂಡಿಸಿದಂ (ಪಂರಾಮಾ. ೧೦-೨೦೭) ; ಸುಧನ್ವಂ ಕೆರಳ್ದು ಕೋದಂಡಕತಿವೆಳಗದೊಳ್ವಾರುಣಾಸ್ತ್ರಮಂ . . . ತೆಗೆದೆಚ್ಚಂ (ಕೃಮಿಭಾ. ೧೩-೧೩). [ಸಂ.]

ವಾರುಣಿ (ನಾ). ೧. ವರುಣನ ದಿಕ್ಕು ; ಪಶ್ಚಿಮ ; ಪಡುವಲು : "ವಾರುಣೀ, ಪ್ರತೀಚೀ, (ಪ್ರತ್ಯಕ್) - ಈ ೩ ಪಡುವಣ ದೆಸೆ" (ಹಲಾಯು. ೧೭-೧೦೧). ೨. ವರುಣನ ಹೆಂಡತಿ : ಲಂಬೂಷೆ . . . ವಾರುಣ್ಯಾದರ್ಶೆ ಶ್ರೀ ಹ್ರೀ ಧೃತಿಯೆಂಬೆಣ್ಬರುಂ ದಿಕ್ಕನ್ಯೆಯರಂ ಮರುದೇವಿಮಹಾದೇವಿಗೆ ಚಾಮರಮನಿಕ್ಕಲುಂ . . . ಸೌಧರ್ಮೇಂದ್ರಂ ಬೆಸಸುವುದುಂ (ಆದಿಪು. ೭-೩ ವ) ; ವಾರುಣಿ [ಪಾಠಾಂ. ಧಾರಿಣಿ] ಕಳ್ಳನೀಂಟಿ ಮಜೀದಿಕ್ಕಿದ ಬಟ್ಟಲೊ . . . ಪೇಟೆನಲ್ಕೆ ನೀಹಾರಮಯೂಖಮಂಡಲಮದೇನೆಸೆದಿರ್ದುದೊ ಪಶ್ಚಿಮಾದ್ರಿಯೊಳ್ (ಲೀಲಾವ. ೩-೩). ೩. ಪಶ್ಚಿಮ ದಿಕ್ಕನ್ಯೆ ; ಪಶ್ಚಿಮಾಂಗನೆ. ೪. ಹೆಂಡ ; ಮದ್ಯ : ಆವಂ ಗಡ ವಾರುಣಿಯಂ ಸೇವಿಸಿ ನಾಣ್ಗೆಡದನುಬೀದನಂಬರಮಂ ರಾಜೀವಸಖಂ ವಾರುಣಿಯಂ ಸೇವಿಸಲೊಡಮಾತ್ಮತೇಜಮಸ್ತಮಿಸುವಿನಂ (ಪಂರಾಮಾ. ೧೧-೧೭೯). ೫, ೪ : ತುಂಬಿದ ರತ್ನತೆಯಿಂ ನಿಜಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗೆಟ್ಟಂಬೋಲ್ ತೇಜಂ ಮಸುಳ್ವಿನಮಂಬರಮಂ ಬಿಸುಟನಾಗಳಂಬುಜಮಿತ್ರಂ (ಪಂಪಭಾ. ೩-೨೩) ; ದಿನಲಕ್ಷ್ಮೀಕಾಂತೆ ಮೆಯ್ವಾಟ್ಟಿಬೀದು ಗಗನರಂಗಾಗ್ರದಿಂ ವಾರುಣೀ ಸೇವನೆಗೆಯ್ತರ್ಪಲ್ಲಿ (ಕಾದಂಪು. ೫೦೭). ೫. ಒಂದು ಬಗೆಯ ಗರಿಕೆ ಹುಲ್ಲು ; ದೂರ್ವೆ. ೬. ಒಂದು ನಾಡಿಯ ಹೆಸರು : ತರಳ ತಿಳಿ ನಾಡಿಗಳ ಔದಶಗಳಿಗೆ ನಾವುಗಳಾಯುರು ಸುಷುಮ್ನೆಯು ಪಿಂಗಳೆಯು ಯಿಡಾ ಸರಸ್ವತಿ ಪೂಷ ವಾರುಣಿ (ಗಿಗಾ. ೯-೧೧). ೭. ಒಂದು ಬಗೆಯ ಗಿಡ ಮತ್ತು ಅದರ ಕಹಿಹಣ್ಣು ; ಹಾವುಮೆಕ್ಕೆ : "ವಾರುಣಿ[ಪಾಠಾಂ. ಳಿ] ಬಲಿರ್ಬುಧ್ನಾಕ್ಷಿ ಹಾವುಮೆಕ್ಕೆ" (ಮಂಗರಾ. ೪೪-೪೪). ೮. ಒಂದು ಬಗೆಯ ಮರ; ಬಯಿನೆ : "ವಾರುಣಿ [ಪಾಠಾಂ. ವಾರಣ]ಮೆನಲ್ ಬಯಿನೆ" (ಮಂಗರಾ. ೩೫-೧೫). ೯. [ಜ್ಯೋತಿ] ಒಂದು ನಕ್ಷತ್ರದ ಹೆಸರು; ಶತಭಿಷ ನಕ್ಷತ್ರ: ನುತ ವೈಶಾಖದ ಬಹುಳ ಪ್ರತಿಪದಿಯೊಳ್ ಔತಿವೆರಸು ವಾರುಣಿಗಿ (ಮಿ)ವಜೊಳ್ ಸತತಂ ಮಟ್ಟೆ ಕೊಳ್ಳದೊಡೊಳ್ಳಿತು ಕೊಂಡೊಡೆ ಪೊಲ್ಲವೆಂದನೊಳ್ಳಿನ ಉಟ್ಟಂ (ಉಟ್ಟಮಿ. ೮-೯೯). ೧೦. ಚೈತ್ರಕೃಷ್ಣತ್ರಯೋದಶಿ. [ಸಂ. ವಾರುಣೀ]

ವಾರುಣೀನಾಡಿ (ನಾ). = ವಾರುಣಿ ೬ : ಗೋದೆ ವಾರುಣೀನಾಡಿಯಲ್ಲಿ . . . ಪುಟ್ಟಿಪಾದು ಅಲ್ಲಿಗಲ್ಲಿ ಪೊಂದಿಕೊಂಡಿಪ್ಪವು (ಹಸಾರ. ೮-೧೯ ಶಾಸ್ತ್ರರ್ಯ).

[ಸಂ. ವಾರುಣೀನಾಡಿ]

ವಾರುತಿ 'ವಾರತೆ' ನೋ.

ವಾರುಧಿ (ನಾ). ಕಡಲು ; ಸಮುದ್ರ : ಕೂಡಲಸಂಗನ ಶರಣರು ರಸದ ವಾರುಧಿಗಳು (ಬಸವ. ೭೯೧) ; ಅಖಿಳಜಗದಳಲುರಿಯ ನಂದಿಸುವ ಪಾರದಿಯೆ ಸಂಸಾರವಾರುಧಿಯನುತ್ತರಿಪ ಗುರುವಾದವ ತಂದು ತೋಱೊತ್ತಲಾ (ಹಚಕಾ. ೫-೮೪).

[< ಸಂ. ವಾರ್ಧಿ, ವಾರಿಧಿ]

ವಾರುವ (ನಾ). ಕುದುರೆ ; ಅಶ್ವ : ವಾರುವ ಮುಗ್ಗಿದಡೆ ವಾಗೆಯಲಿ ಆದರಿಸಬೇಕಲ್ಲದೆ ಅದ ಗಾಯಮಾಡಿ ಹೊಯ್ಯುವರೇ ಮಿಡಿಯನು (ಮೋಕಾಮಾ. ೫೨-೨೧೪) ; ಪಲವುಂ ವಿಧಂಗಳಿಂ ತುಱುಗಿ ಮೆಟ್ಟುವ ವಾರುವದೊಂದು ವಲ್ಗನಕ್ಕಲುಗೆ ಕದಂಬಿಮೊಳ್ ಕನಕಕುಂಡಲಂ (ಚಂದ್ರಪ್ರ. ೩-೫೧) ; ಬರಬರಲ್ ವಾರುವನ ಮಱೆ ಗರ್ದಭಾಕಾರ ಮಾದೊಲಾಯ್ತು (ಚಟಪು. ೩೧-೨೦). 'ವಾವುರ' ಪರಾ.

[?. / ತೆಲು. ವಾರುವ, ವಾವುರ. / ಸಂ. ವಾಡವ]

ವಾರುವದಳ (ನಾ). ಕುದುರೆಯ ಸೈನ್ಯ ; ಅಶ್ವದಳ : ವಾರುವದಳ ಸಹ ರಣಧೂಳಿಪಾನ ಮುಂದೋರಂತೆ ನಡೆದನುಬ್ಬಿನಲಿ (ಕಂನಿ. ೧೧-೪೩).

[ವಾರುವ + ದಳ್ಳ (= ದಲ)]

ವಾರುವಸೇನೆ (ನಾ). = ವಾರುವದಳ : ಆನೆಗಳು ಮುಗ್ಗಿದವು ವಾರುವಸೇನೆ ಕಾಲನು ನಿಗುರಿದುವು (ಮೂಲರಾ. ೧-೪೧). [ವಾರುವ + ಸೇನೆ]

ವಾರ್ಪೆ$_1$ (ನಾ). ವೇಶ್ಯೆ ; ವಾರಸ್ತ್ರೀ : ನಾರಿಯ ನಯನಾಪಹಾರಿಯ ಚಿತ್ತಾನುಸಾರಿಯ ಸುಖಸೌಖ್ಯತೆಯ ವಾರೆಯ ರಂಗನ ವಿರಹೆಯ ರತಿಸುಖವಾರಿಯದೆಂದು ಘಟಿಪುದೊ (ಶತಕಾಂ. ೨೩-೧೬). [ಸಂ. ವಾರಾ]

- ವಾರ್ಪೆ$_2$ '- ವರ್ಪೆ' ನೋ.

ವಾರ್ಚರ (ನಾ). ನೀರಿನಲ್ಲಿ ಚಲಿಸುವುದು ; ಜಲಚರ ; ಮೀನು : ವಾರ್ಚರ ಕಮಠ ಕಿಟಿ ನರಸಿಂಹ ವಾಮನಾಚ್ಯಾಚ್ಯುತ ಮಹಾವತಾರಾಪಹರ ಕಥೆಗಳಂ . . . ನಿಚ್ಚನಿಚ್ಚಂ ಪಠಿಸುವರ್ (ರಾಘಚ. ೧-೩೬). [ಸಂ.]

ವಾರ್ಚರಧ್ವಜ (ನಾ). ಮೀನನ್ನು ಧ್ವಜದಲ್ಲಿ ಉಳ್ಳವನು ; ಮನ್ಮಥ ; ಮೀನಕೇತನ : ವಾರ್ಚರಧ್ವಜ ಯಮ ತ್ರಿಪುರದಹನಜ ಮಸ್ತಹೃತಿ ದಕ್ಷಾಧ್ವರಗಳ . . . ಪೌರಾಣಕಾವ್ಯಂಗಳಂ ಬಿಡದೆ ನಿಚ್ಚನಿಚ್ಚಂ ಪಠಿಸುವರ್ (ರಾಘಚ. ೧-೩೬). [ಸಂ.]

ವಾರ್ಡು (ನಾ). ೧. ಪಟ್ಟಣದ ಆಡಳಿತವಿಭಾಗ : ಈಗ ಮೂರುಸಲವಾದರೂ ಈ ವಾರ್ಡಿಗೆ ಅವರೊಬ್ಬರು ಆರಿಸಿ ಬರಲೇಬೇಕು (ಅಪನಾ. ೮೮). ೨. ಆಸ್ಪತ್ರೆ ಮೊದಲಾದ ಕಡೆ ರೋಗಿಗಳಿಗೆ ಚಿಕಿತ್ಸೆಗಾಗಿ ನಿಗದಿ ಮಾಡಿರುವ ಸ್ಥಳ, — ಭಾಗ : ಉಳಿದ ವಾರ್ಡುಗಳಲ್ಲಿ ಪೇಶಂಟರು ನಿಮ್ಮ ದಾರಿ ಕಾಯುತ್ತಿರಬಹುದು (ವಿಜಯಾ. ೧೯) ; ಆಸ್ಪತ್ರೆಯಲ್ಲಿ ಮೂಲೆಯ ವಾರ್ಡೊಂದರಲ್ಲಿ ಆವಾಸಸ್ಥಾನವಾಗಿದ್ದ ಈ ದೇಹದಿಂದ ತುಂಬ ನೊಂದು ಅಗಲಿದೆ (ಎಮುಕ. ೬೪). [<— ಇಂ. ward]

ವಾರ್ತ (ಗು). ೧. ಉತ್ತಮಸ್ಥಿತಿಯಲ್ಲಿರುವ ; ಆರೋಗ್ಯವಾದ: (ಪ್ರ). ೨. ಸಾರವಿಲ್ಲದ ; ಸತ್ತ್ವರಹಿತವಾದ: (ಪ್ರ). (ನಾ). ೩. ಆರೋಗ್ಯ ; ಕ್ಷೇಮ: (ಪ್ರ). ೪. ಕೆಲಸಕ್ಕೆ ಬಾರದ ವಸ್ತು: (ಪ್ರ). ೫. ಕೀಳುತನ ; ಕ್ಷುದ್ರತನ: (ಪ್ರ). ೬. ಸಮಾಚಾರ ; ವಾರ್ತೆ: (ಪ್ರ). ೭. ವೈದಿಕಪದ್ಧತಿ: (ಪ್ರ). ೮. ಜಾಣ್ಮೆ; ಚಾತುರ್ಯ: (ಪ್ರ). ೯. ನೋಡಿದುದು ; ಪ್ರತ್ಯಕ್ಷ: (ಪ್ರ). ೧೦. ಆರೋಗ್ಯವಂತ ; ಸ್ವಸ್ಥವಾಗಿರುವವನು: "ಕಲ್ಯನೆನೆ ವಾರ್ತನೆನೆ ಕುತ್ರವಿಲ್ಲದನಕ್ಕು" (ಮಂಗರಾ. ೭೧-೧೪). ೧೧. ವೃತ್ತಿನಿರತನಾದವನು ; ಉದ್ಯೋಗಶೀಲ ವ್ಯಕ್ತಿ. [< ಸಂ. ವಾರ್ತ್ತ]

ವಾರ್ತಾಸಲಾಪೆ (ನಾ). (ಕೇಂದ್ರ ಹಾಗೂ ರಾಜ್ಯ ಸರ್ಕಾರದ) ಸಮಾಚಾರವನ್ನು ತಿಳಿಸುವ ಇಲಾಪೆ : ಭಾರತಸರ್ಕಾರದ ವಾರ್ತಾಸಲಾಪೆಯವರು ಚಿತ್ರಪ್ರದರ್ಶನವನ್ನು . . . ನಡೆಸಿದರು (ನಿಟ್ಟೂಶಾಂ. iv. ಅಂಕೆ). [(ಸಂ. ವಾರ್ತಾ) + ಸಲಾಪೆ]

ವಾರ್ತಾಕ (ನಾ). ಒಂದು ಬಗೆಯ ಸಸ್ಯ ಮತ್ತು ತರಕಾರಿಯಾಗಿ ಬಳಸುವ ಅದರ ಕಾಯಿ ; ಬದನೆ : ಹಗರಣಗರು ಕಂಗೊಳಿಪ ಸರ್ವಾಂಗಭೂಷಿತವಾರ್ತಾಕಫಲ ಲಿಂಗಕುರವಣೆಯ ಜೆಡೆಗಳ ಧರಿಸಿ ಬರಲು (ಲಕಚಂ. ೩-೧); ಬಸವಣ್ಣನಂ ಬಂದಿವಿಡಿಯ ವೇಳ್ಕೆಂದು ಸಂತಸದೆ ತಸ್ಕರರೆಯ್ದೆ ತಮ್ಮ ಕಂಠಂಗಳೊಳಗೆಸೆವ ವಾರ್ತಾಕದೊಳ್ಕೆಡಿಗಳಂ ಧೌತವಸ್ತ್ರಂಗಳಿಂ ಕಟ್ಟಕೊಂಡು ಮಿಸುಪ ಭಕ್ತರ ನಡುವೆ ಬಂದಿರಲ್ (ಆರಾಚ. ೧-೧೩-೧೬). [ಸಂ.]

ವಾರ್ತಾಚರ (ನಾ). ಸಮಾಚಾರವನ್ನು ತೆಗೆದುಕೊಂಡು ಹೋಗುವವನು ; ಸುದ್ದಿಯನ್ನು ತಲಪಿಸುವವನು ; ದೂತ : ನಿಜಾಗಮನವಾರ್ತೆಯಂ ಜನಕನಲ್ಲಿಗೆ ವಾರ್ತಾಚರರ ಕೈಯೊಳಿಟ್ಟುವುದುಂ (ಚಂದ್ರಪ್ರ. ೬-೮೭ ವ). [ಸಂ.]

ವಾರ್ತಾಪ್ರಪಂಚ (ನಾ). ಸಮಾಚಾರದ ವಿವರ ; ಸುದ್ದಿಯ ವಿಸ್ತಾರ : ವೀರನೊಳಂಬಂ ವೀರಮೇಳಾಪಕದೊಳಿರ್ದು ವಾರ್ತಾಪ್ರಪಂಚಮಂ ತಂತಮ್ಮ ಸುದ್ದಿಕಾಱರಿಂ ಕೇಟ್ಟು (ಸಾಸಾ. XX. ೪೯-೨೩; 1070). [ಸಂ.]

ವಾರ್ತಾಫಲಕ (ನಾ). ಸಮಾಚಾರವನ್ನು ಬರೆದಿರುವ ಹಲಗೆ ; ಸುದ್ದಿಯ ಹಲಗೆ : ದಾರಿಯ ಒಂದು ಚೌಕದಲ್ಲಿ ವಾರ್ತಾಫಲಕ ಇತ್ತು (ಕಥಕ. ೪೪). [ಸಂ.]

ವಾರ್ತಾಭಾರ (ನಾ). ಗಹನವಾದ ಸುದ್ದಿ,—ಸಮಾಚಾರ : ಊರೊಳಗೆ ಗುಜುಗುಜಿಸಿ ವಾರ್ತಾಭಾರ ಮಸಗಿತು ನೆರೆದ ನೆರವಿಯೊಳು (ಕುವ್ಯಾವಿ. ೩-೧೦೬). [ಸಂ.]

ವಾರ್ತಾವಹ (ನಾ). ೧. ಸಮಾಚಾರವನ್ನು ಅಥವಾ ಸುದ್ದಿಯನ್ನು ಮುಟ್ಟಿಸುವವನು. ೨. ಕಾವಡಿಯನ್ನು ಹೊರುವವನು : "ವಾರ್ತವಹಃ ವೈವಧಿಕಃ-೨ ಕಾವಡಿ ಹೊರುವವನ ಪೆಸರು" (ಸಿಕ್ಕಾಂತಿ. ೩೦೨). [ಸಂ.]

ವಾರ್ತಾವಾಹಕ (ಗು). ೧. ಸಮಾಚಾರವನ್ನು ಸಾಗಿಸುವ ; ಸುದ್ದಿಯನ್ನು ಒಯ್ಯುವ : ಪ್ರಯಾಣಸೌಕರ್ಯಗಳೂ ವಾರ್ತಾವಾಹಕಸಾಧನಗಳೂ ಇಲ್ಲದೆ ಇದ್ದುದೂ ಆ ವಿಕಚಕ್ರಾಧಿಪತ್ಯದ ಕನಸು ಬರಿಯ ಕನಸಾಗಿಯೇ ಉಳಿದುಕೊಂಡದ್ದಕ್ಕೆ ಕಾರಣಗಳೆಂದು ತೋರುತ್ತದೆ (ರಾಜ್ಯಶಾ. ೧೦). (ನಾ). ೨. ಸುದ್ದಿಯನ್ನು ಒಯ್ಯುವಂತಹುದು ; ಸಮಾಚಾರವನ್ನು ತಲಪಿಸುವಂತಹುದು. ೩. ಸುದ್ದಿಯನ್ನು ಒಯ್ಯುವವನು ; ಸಮಾಚಾರವನ್ನು ತಲಪಿಸುವವನು. [ಸಂ.]

ವಾರ್ತಾಹರ (ನಾ). = ವಾರ್ತಾಚರ : ತಾತಾಪೀತದೇವನುಂ ವಿಲಾಸವತೀ ಮಹಾದೇವಿಯುಮಾರ್ಯಶುಕನಾಸನುಂ ವಾರ್ತಾಹರರನಟ್ಟಿದೊಡೆ (ಕಾದಂಬಾ. ೬೩೩) ; ನಿಜಾಗಮನವಾರ್ತೆಯಂ ಜನಕನಲ್ಲಿಗೆ ವಾರ್ತಾಹ [ಪಾಕಾಂ. ಚ] ರರ ಕೈಯೊಳಿಟ್ಟುವುದುಂ (ಚಂದ್ರಪ್ರ. ೬-೮೭ ವ). [ಸಂ.]

ವಾರ್ತಿ 'ವಾರತೆ' ನೋ.

ವಾರ್ತಿಕ (ನಾ). ೧. ಸಮಾಚಾರಕ್ಕೆ ಸಂಬಂಧಿಸಿದುದು; ಸುದ್ದಿಗೆ ಸೇರಿದುದು. ೨. ಉದ್ಯೋಗಕ್ಕೆ ಸಂಬಂಧಿಸಿದುದು ; ವ್ಯವಹಾರಕ್ಕೆ ಸೇರಿದುದು. ೩. ಸಮಾಚಾರವನ್ನು ತರುವವನು ; ಸುದ್ದಿಗಾರ. ೪. ಬೇಹುಗಾರ ; ಗುಪ್ತಚಾರ. ೫. ಗುರು ; ಮಹೋಪಾಧ್ಯಾಯ. ೬. ವೈಶ್ಯ : ವಾರ್ತಿಕರಕೀರ್ತಿಯೆನೆ ಮಾರ್ಗಾನಾರಮಾರ್ಗಮೆನೆ . . . ಕೈಕೊಳ್ಳದೆ . . . ಕೂಸನಪ್ಪಳಿಸಿ (ಜಗವಿ. ೨-೫೫ ವ). ೭. ಮೂಲ ಶಾಸ್ತ್ರಗ್ರಂಥಕ್ಕೆ ಬರೆದ ಟೀಕೆ, – ವ್ಯಾಖ್ಯಾನ : ವಾರ್ತಿಕವೆಂದರೆ ಮೂಲಕಾರರು ಹೇಳಿರುವುದರಲ್ಲಿ ಹೇಳಬೇಕಾದುದನ್ನು ಬಿಟ್ಟಿರುವುದು, ತಪ್ಪು ಹೇಳಿರುವುದು, ಹೇಳಿದುದನ್ನೇ ಪುನಃ ಹೇಳುವುದು ಇವೇ ಮೊದಲಾದ ದೋಷಗಳನ್ನು ಪರಿಹರಿಸುವ ಗ್ರಂಥ (ಹಿಂದುಸಾ. ೧೫೦); ಶ್ರೀಹರ್ಷನು ಬರೆದ ಒಂದು ವಾರ್ತಿಕವಿದ್ದಂತೆ ತಿಳಿದು ಬರುತ್ತದೆ (ಭಾರಮೂ. ೨೦). ೮. ಪಾಣಿನಿಯ ಸೂತ್ರಗಳಿಗೆ ಕಾತ್ಯಾಯನನು ಬರೆದ ಪ್ರಸಿದ್ಧವಾದ ಟೀಕೆ. [< ಸಂ. ವಾರ್ತ್ತಿಕ]

ವಾರ್ತಿಕಕಾರ (ನಾ). ೧. ಮೂಲಶಾಸ್ತ್ರಗ್ರಂಥಗಳಿಗೆ ಟಿಪ್ಪಣಿ ಬರೆಯುವವನು; ಟೀಕಾಕಾರ; ವ್ಯಾಖ್ಯಾನಕಾರ : ಹಿಂದಿನ ವೃತ್ತಿಕಾರ ವಾರ್ತಿಕಕಾರರ ಅಭಿಪ್ರಾಯಗಳು ಕಲವು ವಾರ್ತಿಕ ವ್ಯಾಖ್ಯಾನಕಾರರಿಂದ ನಿರಾಕರಿಸಲ್ಪಟ್ಟಿದುವು (ಹಿಂದುಸಾ. ೧೫೦). ೨. ಪಾಣಿನಿಯ ಸೂತ್ರಗಳಿಗೆ ಪ್ರಸಿದ್ಧವಾದ ಟೀಕೆಯನ್ನು ಬರೆದ ಕಾತ್ಯಾಯನ. [< ಸಂ. ವಾರ್ತ್ತಿಕಕಾರ]

ವಾರ್ತೆ (ನಾ). ೧. ನೆಲಸಿರುವಿಕೆ ; ವಾಸಿಸುವಿಕೆ. ೨. ಜೀವನೋಪಾಯ ಮಾರ್ಗ ; ವೃತ್ತಿ ; ಉದ್ಯೋಗ : "ಜೀವನಂ, ವೃತ್ತಿಃ, ಆಜೀವಃ, ವಾರ್ತಾ—ಈ ೪ ಬಾಲ್ಕೆ" (ಪಲಾಮಾ. ೧-೪೧೭). ೩. ಕೃಷಿ; ವ್ಯವಸಾಯ. ೪. ಜೀವನಕ್ರಮ, — ಧೋರಣೆ : ಅಸಿ ಮಷಿ ಕೃಷಿ ವಣಗ್ವಿದ್ಯಾಶಿಲ್ಪಕರ್ಮಂಗಳಿಂ ಶುದ್ಧವೃತ್ತಿಯಿಂದ ಧೂರ್ತಾರ್ಜನಂಗೆಯ್ವ ವಾರ್ತೆಯುಂ (ಆದಿಪು. ೧೫-೧೩ ವ). ೫. ಒಂದು ಬಗೆಯ ವಿದ್ಯೆ : ನ್ಯಾಯಶಾಸ್ತ್ರದಲ್ಲಿ ವಿದ್ಯೆ ಆನ್ವೀಕ್ಷಕೀ ತ್ರಯೀ ವಾರ್ತಾ ದಂಡನೀತಿ ಎಂದು ಸಾಮಾನ್ಯವಾಗಿ ನಾಲ್ಕುವಿಧವೆಂದು ವಿಂಗಡಿಸುವರು . . . ವಾರ್ತಾ ಎಂಬುದು ಕೃಷಿ ವಾಣಿಜ್ಯ ಶಿಲ್ಪ ಮೊದಲಾದ ವಿದ್ಯೆ (ಹಿಂದುಸಾ. ೧೧೨). ೬. ಸುದ್ದಿ ; ಸಮಾಚಾರ ; ವೃತ್ತಾಂತ : ದೂತಂ ದಶ್ವನ ವಾರ್ತೆಯಂ ನುಡಿದು ಮೇಗಂ ನೋಟ್ಪೊಡಿಲ್ಲೆಂಗೆ (ಕೋಕೋಪ. ೧೦-೬) ; ಮಗನು ರಣದಲಿ ಮಡಿದ ಬೀಡುಗಳೊಳಾದುದು ವಾರ್ತೆ (ಕುವ್ಯಾದ್ರೋ. ೭-೧) ; ಕಲಕಂಠನುಲಿ ಘೋಷಿಸಿತು ಜಗಕೆ ರಾಮಾಗಮನವಾರ್ತೆಯಂ (ಶ್ರೀರಾಮಾ. ೧೫-೪೦೪). ೭. ಮಾತು ; ನುಡಿ. ೮. ಬದನೆಗಿಡ. ೯. ದುರ್ಗೆಯ ಒಂದು ಹೆಸರು. ೧೦. ಬಹಿರಂಗಪಡಿಸುವುದು ; ಪ್ರಕಟಣೆ. ೧೧. ಸಮಾನವಾಗಿರುವಿಕೆ ; ಸಮತೆ. ೧೨. ಕೀಳುತನ ; ಕ್ಷುಲ್ಲಕತನ : "ಸಮದಲ್ಲಿ ಪ್ರತ್ಯಕ್ಷದಲ್ಲಿ ಹೊಲ್ಲೆಹನುಡಿವ ಗುಮಿತದಲಿ ವಾರ್ತೆಯೆಂಬುದು" (ಮಂಗರಾ. ೧೫೫-೭೦).

[ಸಂ. ವಾರ್ತಾ]

ವಾರ್ತೆಗೇಳ್ (ಕ್ರಿ). ಸಮಾಚಾರವನ್ನು ಕೇಳು ; ಸುದ್ದಿಯನ್ನು ಆಲಿಸು : ಅಂತಾದೆಸೆಯಿನೆಸೆವ ವಿಹಗನಿನಾದಮುಮಂ ವಾರ್ತೆಗೇಳಲಾನೊಡರಿಸಿದಂ (ಕಾದಂಪು. ೬೧೦).

[ವಾರ್ತೆ + ಕೇಳ್]

ವಾರ್ಧಕ (ನಾ). ೧. ಹೆಚ್ಚಳ ; ಅಭಿವೃದ್ಧಿ. ೨. ವಯಸ್ಸಾಗಿರುವಿಕೆ ; ಮುದಿತನ ; ಮುಪ್ಪು : "ವಾರ್ಧಕಂ ಅಂದರೆ ಮುದುಕತನಕ್ಕು ಪೆಸರಾಗುವುದು" (ಸಿಕ್ಕಾಂತಿ. ೧೭೯) ; ಬಾಲ್ಯದೊಳ್ ವಿದ್ಯಾಭೂಮಿಯರ್ಥ ಮಿತ್ರರೆಂಬಿವನುಪಾರ್ಜಿಸಿ ಬಳಿಯಂ ಜವ್ವನದೊಳು ಕಾಮಭೋಗಮನನುಭವಿಸಿ ವಾರ್ಧಕದೊಳು ಧರ್ಮಮೋಕ್ಷಂಗಳಂ ಸೇವಿಸುವುದು (ಮಾದಪು. ೧-೫೦ ವ). ೩. ವಯಸ್ಸಾದವನು ; ಮುದುಕ ; ವೃದ್ಧ : ಧರ್ಮಜ್ಞರಧರ್ಮಮೆನೆ ವಾರ್ಧಕ[ಶಾಕಾಂ. ವೃದ್ಧ]ರಸಂಬದ್ಧಮೆನೆ ಪಾಸಟೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೫ ವ). ೪. ಮುದುಕರ ಗುಂಪು ; ವೃದ್ಧರ ಸಮೂಹ : "ವಾರ್ಧಕಂ . . . ಮುದುಕರ ಗುಂಪಿಗೆ ಹೆಸರು" (ಸಿಕ್ಕಾಂತಿ. ೧೭೯). ೫. [ಛಂದ] ಒಂದು ಷಟ್ಪದಿಯ ಹೆಸರು : ಷಟ್ಪದಿ . . . ಇದು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂದಾರು ವಿಧವು (ಕೃವಿ. ೧೫). 'ವಾರ್ಧಕಷಟ್ಪದಿ' ಪರಾ. [ಸಂ.]

ವಾರ್ಧಕಷಟ್ಪದಿ (ನಾ). [ಛಂದ] ಒಂದು ಷಟ್ಪದಿಯ ಹೆಸರು ; "ಪಂಚಮಾತ್ರಾಗಣವು ಒಂದೆರಡು ನಾಲ್ಕೈದನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ, ಮೂರಾರನೆಯ ಪಾದಗಳಲ್ಲಿ ಆರಾರೂ ಒಂದು ಗುರುವೂ ಇದ್ದರೆ ವಾರ್ಧಕಷಟ್ಪದಿಯಾಗುವುದು" (ಕೃವಿ. ೧೭) : ವಾರ್ಧಕಷಟ್ಪದಿಯ ಚರಣದಲ್ಲಿ ಕುಸುಮಷಟ್ಪದಿಯ ಚರಣದ ಇಮ್ಮಡಿ ಗಣಗಳು ಸೇರಿರುತ್ತವೆ (ಛಂದೋವಿ. ೧೭೪).

[ಸಂ. ವಾರ್ಧಕಷಟ್ಪದೀ]

ವಾರ್ಧಕ್ಯ (ನಾ). ವಯಸ್ಸಾಗಿರುವಿಕೆ ; ಮುಪ್ಪು ; ಮುದಿತನ : ಭೀಮವ್ವ ವಾರ್ಧಕ್ಯದಲ್ಲಿ ಉಡುಪಿ, ಕಾಶಿ, ಪ್ರಯಾಗಗಳ ತೀರ್ಥಯಾತ್ರೆಯನ್ನು ಮಾಡಿ ಬಂದಳು (ಕರ್ನಾಕ. ೨೦೫). [ಸಂ.]

ವಾರ್ಧರ (ನಾ). ನೀರನ್ನು ಧರಿಸಿರುವುದು ; ಮೋಡ : ಶರಧಿಯ ರತ್ನಮಂ ನೆಱೆಯೆ ಕಳ್ದು ಜಳಾಹರಣಕ್ಕೆ ಬರ್ಪ ವಾರ್ಧರಕುಳಮೊಯ್ದು ಕೊಟ್ಟೊಡವಜೆಂದ ಮಲಂಕೃತಮಾದುದಕ್ಕುಮಂಬರತಳಂ (ಪುಷ್ಪಪು. ೪-೯೧) ; ಸುರಧನು ರನ್ನವಲ್ಲಣದ ಮಾಳ್ಕೆಯೊಳೊಪ್ಪಿರೆ ಬಳ್ಕಿಮಿಂಚು ವಿಸ್ಫುರಿತವಿಲೀನದಂತಿರೆ ಘನಧ್ವನಿ ಹೇಷಿತಮಾಗೆ ತುಂಗವಾರ್ಧರಮದು ತೋಜೆ ನೀಲತುರಗಂಬೊಲದು ಪದೆದೇಱಿ (ಶಬರಂ. ೨-೭೦).

[ಸಂ.]

ವಾರ್ಧಿ (ನಾ). ೧. ಕಡಲು; ಸಮುದ್ರ : ಅದಱೊಳ್ ವಾರ್ಧಿಯೇಱುಂ ಕುಲೋರ್ವೀಧರವೇಱುಂ . . . ಕೂಡೆ ಕಂಡು (ಜಗವಿ. ೩-೬೨); ಗಗನಮಂ ಪೃಥ್ವಿಯಂ ವಾರ್ಧಿಯಂ . . . ಕಾಮಿಸಿದನ್ (ಶ್ರೀರಾಮಾ. ೧೨-೩೦೬). ೨. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : ಕರ ಪುರ ವಾರ್ಧಿಯಾಗೆ ಗುರು (ಧಂಡೋಂಬು. ೫-೨೪೧).

[ಸಂ.]

ವಾರ್ಧಿಕ (ನಾ). ೧. = ವಾರ್ಧಕ ೨ : ಭವವ ಬಳಸುವ ತನುವಿನಲಿ ಕೌಮಾರ ಯೌವನ ವಾರ್ಧಿಕಂಗಳಲಿ ತನು ವಿಕಾರಿಸುವದು (ಕುವ್ಯಾಧ್ಯ. ೩-೪೪). ೨. ಒಂದು ಬಗೆಯ ಹಕ್ಕಿ : "ವಾರ್ಧಿಕಃ - ಕೆಂದಲಿಗನ ಹಕ್ಕಿ" (ಓಷಧಿ. ೧೫೦). ೩. = ವಾರ್ಧಕ ಷಟ್ಪದಿ : ವಾರ್ಧಿಕದ ಷಟ್ಪದಿಯ ಮೊದಲ ಪದದೇಳಿಗೆಯುಮಿರ್ಪತ್ತು ಮಾತ್ರೆಯುಂ ದೆಸೆದಿರ್ಪುಂ (ಧಂಡೋಂಬು. ೫-೨೫೯ ಅವಿಶದ್ಧ) ; ಷಟ್ಪದಿಗಳಲ್ಲಿ ವಾರ್ಧಿಕ ದೊಡ್ಡದು. ಅದು ಐದುಮಾತ್ರೆಗಳ ಗಣದಿಂದ ರಚಿತವಾಗುತ್ತದೆ (ಸಂಶೋಧ. ೧೩೫). [< ಸಂ. ವಾರ್ಧಕ]

ವಾರ್ಧಿಕೆ (ನಾ). ವಯಸ್ಸಾದವಳು ; ಮುದುಕಿ ; ವೃದ್ಧೆ : ಶರದೊಳಗೊಂದು ಕಪ್ಪಿನ ಕುರುಳಿಲ್ಲೆನೆ ನರತ ವಾರ್ಧಿಕೆಯಲ್ತೆ ನಾನು (ಭರಚ. ೫೯-೧೧). [ಸಂ. ವಾರ್ಧಿಕಾ]

ವಾರ್ಧಿವಿಭು (ನಾ). ಸಮುದ್ರದ ಒಡೆಯ ; ವರುಣ : "ಪ್ರಚೇತಸಂ ವಾರ್ಧಿವಿಭು ಪಾಶಿ ಪ್ರತ್ಯಗ್ದಿಶಾರಮಣನೆನೆ ವರುಣನಕ್ಕುಂ" (ಮಂಗರಾ. ೧೫-೧೦). [ಸಂ.]

ವಾರ್ಧುಷಿಕ (ನಾ). ಬಡ್ಡಿಯ ಹಣದಿಂದ ಜೀವನ ನಡೆಸುವವನು : ಅಂತ್ಯದೊಳು ವಾರ್ಧುಷಿಕನನು [ವಾಙ್ಮಾ. ವಾಗ್ಭೋಷಕನ] ಕಂಡವರುಗಳ ಭಾಗ್ಯನಿಧಿ ಕದಿತ ಹರಿವುದು (ಕುವ್ಯಾಉ. ೬೦೩. ೪-೪೯); ಲೋಭಿ ಚೋರ ಮಲ್ಲ ವಾರ್ಧುಷಿಕ ಪತಿತ ವ್ರಾತ್ಯ ಸೋಮವಿಕ್ರಯಿಯರಾದಿಯಾದ ದುರಾಚಾರಿಗಳ ಮನೆಗಳೊಳೊರ್ಮೆಯುಂ ತಿರಿದುಂಡ ದೇಹಮಂ ಪೊರೆಯಲಾಗದು (ಭಾರಶಾಂ. ೩೭-೨೬೫). [ಸಂ.]

ವಾರ್ಬಿಂದು (ನಾ). ನೀರಿನ ಹನಿ ; ಜಲಕಣ : ವಾರಿದಂ ತನ್ನೊಳೆ ಕತಿಪಯ ವಾರ್ಬಿಂದುವಂ ಪೇಱಿ ತಂದಂತದಱಿಂದಂ ಲೋಕಮಂ ತೀವ್ರಪುದು (ಜಗವಿ. ೧-೪೫) ; ದೂದವಿಗವಳಿಂತೆಂದಳ್ ಗರಗರಿಕೆ ಕೊರಲೊಳೀ ಕ್ಷಣದೊಳ್ಪಾರ್ಬಿಂದು ಮಿಡುಕೆರ್ದೆಯೊಳ್ ಕೊದವೆ ಪುಳಿಂದನ ಕಣೆಗಟ್ಟಿ ನಿಂದ ವನಹರಿಣಿಯವೊಲ್ (ಹುಕೋಚ. ೨-೪೧). [ಸಂ.]

ವಾರ್ಮಾನುಷಿ (ನಾ). ಅಪ್ಸರೆ ; ಜಲಕನ್ಯೆ : ಜಿತಶತ್ರುವೆಂಬ ಪೆಸರಾಯ್ತನ್ನರ್ಥಂ . . . ಭುಜೋತ್ಪಾತಾಸಿಧಾರಾಂಬುವಿಂದಿತ್ತಂ ಶ್ರೀವಧೂಗಂ ಜಯಪ್ರಮದೆಗಂ ವಾರ್ಮಾನುಷೀಜನ್ಮಮಂ (ಪಂರಾಮಾ. ೧೦-೭೩). [ಸಂ. ವಾರ್ಮಾನುಷೀ]

ವಾರ್ಲಿಪಿ (ನಾ). ನೀರಿನಿಂದ ಬರೆದ ಅಕ್ಷರ ; ಜಲಲಿಪಿ : ಗರಳಂ ಸುಧೆ ಕರ್ಮಪಾಶ ಮಂಬುರುಹಗುಣಂ ಸರೋಜಭವ ದುರ್ಲಿಪಿ ವಾರ್ಲಿಪಿ ಕಾಯಜಂ ತೃಣಾಂಕುರಮಣೆ ಮಾದಿಸಿದ್ದಿಯಣುವಪ್ಪುದು ಭಕ್ತಿರತಂಗೆ ಲೋಕದೊಳ್ (ವೃಷವಿ. ೩-೭೨). [ಸಂ.]

ವಾರ್ವಾಂಧೆ (ನಾ). ನೀರನ್ನು ಕುಡಿಯಬೇಕೆಂಬ ಹಂಬಲ ; ನೀರಡಿಕೆ : ಉಗ್ರಗ್ರೀಷ್ಮದೊಳ್ ಸಾವುಜವಿತತಿ ತೊಟಲ್ಪತ್ತು ವಾರ್ವಾಂಧೆಯಿಂದಂ (ಚಂದ್ರಪು. ೯-೬೯). [ಸಂ. ವಾರ್ವಾಂಧಾ]

ವಾರ್ಷ (ಗು). ೧. ಮಳೆಗಾಲಕ್ಕೆ ಸಂಬಂಧಿಸಿದ. ೨. ಒಂದು ವರ್ಷಕ್ಕೆ ಸಂಬಂಧಿಸಿದ ; ವಾರ್ಷಿಕ. (ನಾ). ೩. ಒಂದು ಬಗೆಯ ಸಸ್ಯ : "ವಾರ್ಷಃ - ಮಳಲುದರಸಿ" (ಓಷಧಿ. ೧೫೦). ೪. (?) : "ಮಾನದೊಳಂ ವಾರ್ಷಂ" (ಮಲ್ಲಿಕೋ. ೧೩೮-೧೨೦). [ಸಂ.]

ವಾರ್ಷಿಕ (ಗು). ೧. ವರ್ಷಕ್ಕೊಮ್ಮೆ ಬರುವ. ೨. ಒಂದು ವರ್ಷಕ್ಕೆ ಸಂಬಂಧಿಸಿದ ; ಒಂದು ವರ್ಷದ : ಈ ಪ್ರಕಾಶನಕ್ಕೆ ದೊರೆಯಬಹುದಾದ ವಾರ್ಷಿಕ, ಪ್ರೇರಕ, ಪೋಷಕ ಸದಸ್ಯರ ಸಹಾಯವೇ ಕರಾವಲಂಬನ (ಸಂಶೋಧ. VI, ಅಂಕಿ). ೩. ಮಳೆಗಾಲಕ್ಕೆ ಸಂಬಂಧಿಸಿದ ; ವರ್ಷಾಕಾಲದ. (ನಾ). ೪. ಒಂದು ಬಗೆಯ ಔಷಧೀಸಸ್ಯ ; ನೀರಾಮೆಬಳ್ಳಿ : "ವಾರ್ಷಿಕಂ - ತ್ರಾಯಮಾಣೆ ಎಂಬ ಗಂಧದ್ರವ್ಯ, ದರಸಿ, ಬದಿರುಪ್ಪು" (ಓಷಧಿ. ೧೫೦). [ಸಂ.]

ವಾರ್ಷಿಕಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ : "ಮುಕ್ತಬಂಧಃ – ವಾರ್ಷಿಕಮಲ್ಲಿಗೆ" (ಓಷಧಿ. ೧೨೬). [< ಸಂ. ವಾರ್ಷಿಕಮಲ್ಲಿಕಾ]

ವಾರ್ಷಿಕವರದಿ (ನಾ). ಯಾವುದೇ ಸಂಸ್ಥೆಯು ಪ್ರತಿವರ್ಷವೂ ಲೆಕ್ಕಪತ್ರವಿಭಾಗದವರ ಪರಿಶೀಲನೆಗಾಗಿ ಆಯಾ ವರ್ಷದ ತನ್ನ ಕೆಲಸಗಳ ಬಗೆಗೆ ಮತ್ತು ಹಣಕಾಸಿನ ಆಯವ್ಯಯಗಳ ಬಗೆಗೆ ಸಿದ್ಧಪಡಿಸಬೇಕಾದ ವಿವರ : ಶಾಲೆಯ ಮಂತ್ರಿಮಂಡಲದ ಸಹಕಾರಮಂತ್ರಿಯು ವಾರ್ಷಿಕವರದಿಯನ್ನು ಓದಿದನು (ಕವಪು. ೫-೨೧). [ವಾರ್ಷಿಕ + ವರದಿ]

ವಾರ್ಷಿಕೆ (ನಾ). ಒಂದು ಬಗೆಯ ಔಷಧೀಸಸ್ಯ : "ವಾರ್ಷಿಕಾ – ಅಗುಳುಶುಂಠಿ" (ಓಷಧಿ. ೧೫೦). [ಸಂ. ವಾರ್ಷಿಕ]

ವಾರ್ಷಿಕೋತ್ಸವ (ನಾ). ಸಂಘ, ಸಂಸ್ಥೆ ಹಾಗೂ ವಿದ್ಯಾಶಾಲೆಗಳು ವರ್ಷಕ್ಕೊಮ್ಮೆ ನಡೆಸುವ ಸಾಂಸ್ಕೃತಿಕಸಮಾರಂಭ : ನಮ್ಮ ಶಾಲೆಯ ವಾರ್ಷಿಕೋತ್ಸವ ಬಂದಾಗ ನೀವಿಬ್ಬರೂ ಸೇರಿ ಲೋಬ್ಲಿಕ್‌ನ ಚಟುವಟಿಕೆಯನ್ನು ತೋರಿಸಬಹುದು (ಶಾಲಮ. ೧೩೩). [ಸಂ.]

ವಾರ್ಷ್ಣೇಯ (ನಾ). ೧. ವೃಷ್ಣಿವಂಶದಲ್ಲಿ ಹುಟ್ಟಿದವನು ; ಯಾದವ. ೨. ಕೃಷ್ಣ : ದ್ರೋಣಾಚಾರ್ಯನಿರಲಾಗಿ ವಾರ್ಷ್ಣೇಯನು ಹೇಗೆ ಪೂಜ್ಯನು ? (ಭೀಷ್ಮಚ. ೧೦೩). [ಸಂ.]

ವಾರ್ಷತ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಫಲ ; ಹೆಗ್ಗುಳ್ಳ.

[ಸಂ.]

ವಾಲ್, ವಾಲ್ಲು (ನಾ) ಉತ್ಸವಸಮಯದಲ್ಲಿ ದೇವರು, ರಾಜ ಮುಂತಾದವರಿಗೆ ಹಿಡಿಯುವ ಛತ್ರಿ ; ಆಪ್ತಾಗಿರಿ : ಇರ್ಕಲದೊಳ್ ವಿರಾಜಿಪ ಸುಚಾಮರವ್ಯಂದದೆ ವಾಲ್ಗಳಿಂದೆ . . . ಧವಳಾಂಬರಾಂಚಳಾತರ್ಕಿತ ಮಸ್ತವೇಷ್ಟನಯುತಂ (ಹಾಲಾಸ್ಯ. ೨-೧೫-೪೬). ವಾಲ್ಲು: ಸಾಧಾರಣ ಬರುದುಗಳು . . . ಭಂಗಾರದ ಬೆತ್ತ ಕನಕಚಾಮರ ೨ ವಾಲುಗಳು ೨ ನೃಸಿಂಹಮುಖಿ (ಗುರುಪ್ರ. ೧೧). [?]

ವಾಲ, ವಾಳ$_2$ (ನಾ). ೧. ಕೂದಲು ; ಕೇಶ : ಚಮರಮೃಗೀಗಣ ವಾಲಮುಮತಿಕೃಪಣಾನ ಪಣಮುಂ ಬಾಟಲ್ಕೆ ಸಾರವಾರುಮನೆಂದುಂ (ವೀಕಾವ. ೧-೪೯). ೨. ಬಾಲ ; ಪುಚ್ಛ : ದೀರ್ಘವಾಲಂ ಪೃಥುಸ್ಕಂಧಂ ಸುನಾಸಾಪುಟಮಮರ್ದ ತುರಂಗಂಗಳಂ ಕಾಣ್ಕೆಗೈದಂ (ರಾಜಶೇ. ೧೨-೧೦೧). ೩. ಒಂದು ಬಗೆಯ ಸುವಾಸನೆಯ ಬೇರು ; ಲಾಮಂಚ ; ಮುಡಿವಾಳ : ವಾಲ ನಿರಿ ಚಮರಿ ದೃಢಮೂಲ ಮುತ್ತಿನ ರಂಧ್ರದಲ್ಲಿ ಸಾಲಿಡಿದ ಪರಿಮಳದ ಕುಸುಮತತಿಯಾ ಮಾಲೆಯಿಂ ಸಿಂಗರದ ಮೇಲುಕಚ್ಚೆಸೆಯಲ್ ನಿಜಾಲಯಂ ಕಣ್ಗೆ ಮಂಗಳಮಾದುದು (ಮನೋವಿ. ೧-೨೬). ವಾಳ$_2$: ೧. "ಕೇಶಃ . . . ಶಿರೋರುಹಃ, ವಾಳಃ - ಈ ೭ ತಲೆಯ ನವಿರ್" (ಹಲಾಯು. ೪೭-೪೭೬). ೨. ಪೊಸತಾದಜಿನವೊಂದು ಪೆಸರಾಂತು ವಾಳವಾ ಮಿಸುಪ ಕುಂಚವದಾಗಿ ಪಿಡಿದು (ಭೈರವೇ. ೫-೫೫). ೩. ಬಾಳದ ಬೇರು (ವಾಳ) (ಮುಂಬ್ಯಾ. ೧೬೯). ೪. ಬೇಳೆನ ಕೊಂಡಿ : "ಆ ದ್ರುತಪುಚ್ಛ ವಾಳಮೆನೆ ಚೇಟ ಬಾಲಕ್ಕೆ ನಾಮಂ" (ಮಂಗರಾ. ೧೧೯-೫೫). [ಸಂ.]

ವಾಲಕ, ವಾಳಕ್ಕ$_2$ (ನಾ). ೧. ಎಳೆಯ ವಯಸ್ಸಿನವನು ; ಬಾಲಕ ; ಹುಡುಗ. ೨. ಬಳೆ ; ಕಂಕಣ. ೩. ಉಂಗುರ. ೪. ಉಂಗುರವನ್ನಿಡುವ ಬೆರಳು ; ಅನಾಮಿಕ. ೫. (ಆನೆ ಅಥವಾ ಕುದುರೆಯ) ಬಾಲ; ಲಾಂಗೂಲ. ೬. ಒಂದು ಬಗೆಯ ಸುವಾಸನೆಯ ಬೇರು; ಲಾಮಂಚ. ವಾಳಕ್ಕ$_2$: ೬. "ವಾಳಕಂ – ಮುಡಿವಾಳ" (ಓಷಧಿ. ೧೫೦). [ಸಂ.]

ವಾಲಗ$_1$ (ನಾ). ೧. ರಾಜನ ಸಭೆ; ದರ್ಬಾರು: ಬೇಗದಿಂದೆಚ್ಚೆತ್ತಾ ಮಱುವಾಲಗ ವಿತ್ತು ವಾಲಗ ಹರಿಸಿ ವಜ್ರಾಯುಧನಂದದಿ (ಬಿಜ್ಜಲಾ. ೪-೬೬) ; ವೃಷಭಾಂಕ ತಾಂ ವಿಶ್ವಮಂದಿರನ ವಾಲಗವ ಪೊಗಿಸಲ್ಕೆ (ಪರಶು. ೧೧-೨). ೨. ಸೇವೆ ; ಊಳಿಗ ; ಕೈಂಕರ್ಯ : ಹರಿಸುರೇಂದ್ರಾದಿಗಳಿಂದ ವಾಲಗವ ಕೊಂಬಾತನು (ಭೈರಸಾ. I. ೧೧೭) ; ಆಲದೆಲೆಯ ಮೇಲೆ ಪರಮಪುರುಷನಂದು ಕಾಲವರಿತು ಬಂದು ಪವಡಿಸಲು ವಾಲಗವನು ಮಾಡಿ ಕೊಂಡಾಡಿ ಜೀವರ ಮೂಲಕರ್ಮಂಗಳ ತೀರುವಂತೆ ಮಾಡಿದ (ವಿದಾಸ್ಯ. ೨೯-೧) ; ಈ ದೇವದಾಸಿಯರು ಜೋಗತಿಯರಾಗಿ ದೇವತೆಯ ವಾಲಗ ಮಾಡಿ ಚೌರಿ ಬೀಸುವರು (ಕನ್ನಡಾ. ೧೪). 'ಓಲಗ$_1$', 'ಓಲಗ$_2$' ಪರಾ.

[ದೇ. ॥ ತಮಿ. ಮಲ. ಓಲಕ್ಕಮ್; ತುಳು. ತೆಲು. ಓಲಗ]

ವಾಲಗ$_2$ (ನಾ). ೧. ನಾಗಸ್ವರ : ಶೇಷನ ವಾಲಗಕ್ಕೆ ಒಂದು ವೈಭವದ ಸ್ಥಾನವೇ ಇತ್ತು (ಕಂಪಾ. ೧೦೨) ; ಕೋಗಿಲೆಯು ವಾಲಗವನ್ನು ಮಾಡುತ್ತ ಮುಂದೆ ಮುಂದೆ ಹೊರಟಿತು (ಕಮಾ. ೮೨). ೨. (ಆಲಂ) ಕೂಗು ; ಅರಚಾಟ : ಸಂಜೆಯ ಮುಂದೆ ನರಿಗಳ ವಾಲಗವು ಆರಂಭವಾದ ಕೂಡಲೇ . . . ಹೊರಟ (ಕುಂಹಿ. ೭೬). [< ಓಲಗ$_3$]

ವಾಲಗಂಗೊಳ್ (ಕ್ರಿ). ಸಭೆಯನ್ನು ನಡೆಸು ; ದರ್ಬಾರು ಜರುಗಿಸು : ಇಂತಪ್ಪ ಸಡಗರದಿ ವಾಲಗಂಗೊಂಡು ಭೂಕಾಂತ ಬಾಣಾಖ್ಯ . . . ಪ್ರಮುಖರ ಬೀಳ್ಕೊಟ್ಟೊಲವಿನಿಂ (ನವಮೋ. ೨೧-೧೦). [ವಾಲಗ$_1$ + ಕೊಳ್$_1$]

ವಾಲಪ್ಪು (ನಾ). ಒಂದು ಬಗೆಯ ಹುಲ್ಲು : "ವಾಲಪ್ಪು – ತೃಣ" (ಓಷಧಿ. ೧೫೦). 'ವಾಲುಕ್ಕ' ಪರಾ. [ಸಂ. ?]

ವಾಲಚಿತ್ರ (ನಾ). ಕುಂಚದಿಂದ ಚಿತ್ರಿಸಿದ ಪಟ (?) : ಅಲಾಬ್ಬುವು ಸಾಲುಸತ್ರಿಗೆ ಚಿಮ್ಮುವ ವಾಲಚಿತ್ರದ ಪಟದಿಂದ ಬಾಲೆಯರಾಡುವ ಬಹುಬಗೆಪಾತ್ರದ ಕೋಲಾಟವೆಸೆದುವರ್ತಿಯಲಿ (ಕಂಸವಿ. ೯-೬೨). [ವಾಲ ? + ಚಿತ್ರ]

ವಾಲಧಿ, ವಾಳಧಿ (ನಾ). ಕೂದಲಿನಿಂದ ತುಂಬಿದ ಬಾಲ, - ಪುಚ್ಛ : ಪೀನ ಮಾಂಸಕಟಶ್ಲಿಷ್ಟನುಮತಿದೀರ್ಘಸ್ನಿಗ್ಧಕೃಷ್ಣಮದನುಮನಪೂರ್ವದೀರ್ಘವಾಲಧಿಯುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ಲುದುಂ (ಆದಿಪು. ೧೨-೫೩ ವ) ; ಕಳಚಿದನು ದಾಡೆಗಳ ಭರಿಕೈಗಳನು ತುಂಡಿಸಿ ವಾಲಧಿಯ ಬರಸೆಳೆದು ಕೊಡಹಿದನಾನೆಗಳ ನಾನಾವಿಧಾನದಲಿ (ಕುವಾಗ. ೧-೫೮). ವಾಳಧಿ : ಧರಾತಳವರಿಳಂಬಿವಾಳಧಿ . . . ಬಂದುದಂದು ಮುಹುರುತ್ಕಟಭುಪದ್ರವನೊಂದು ಪುಂಗವಂ (ಚಂದ್ರಪ್ರ. ೨-೨೮) ; ವಾಳಧಿಯಿಂದುರಿ ನೆಗೆದೊಡೆ ಕಾಳೆಗಮುಂ ಪಿರಿದು ಭಯಮುಮಧಿಪತಿಗಕ್ಕುಂ (ಅಶ್ವತಾ. ೪-೬೯). [ಸಂ.]

ವಾಲಬ್ಬೆ (ನಾ). ಒಬ್ಬ ದೇವತೆಯ ಹೆಸರು : ಮಲಯ್ಯಂ ವಾಲಬ್ಬೆಯಂ ಮಾಡಿಸಿದಂ ಮಾಡಿದಂ ಕಲ್ಲಚಾರಿ (ಎಇ. IV (R), ಎಳಂದೂ. ೧೫೬-೨; 1000). [ವಾಲ$_7$ + ಅಬ್ಬೆ$_1$]

ವಾಲವ್ಯಜನ (ನಾ). ಚಮರೀಮೃಗದ ಕೂದಲಿನಿಂದ ಮಾಡಿದ ಚಾಮರ : "ಚಾಮರಂ, ಪ್ರಕೀರ್ಣಕಂ – ೨ ಬೀಸುವ ಚೌರಿಗಳು . . . ವಾಲವ್ಯಜನದ ಪೆಸರು" (ಸಿದ್ಧಾಂತಿ. ೨೪೪). [ಸಂ.]

ವಾಲಹಸ್ತ (ನಾ). = ವಾಲಧಿ : "ಲೋಮವುಚ್ಛಂ, ಲಾಂಗೂಲಂ, ವಾಲಹಸ್ತಃ, ವಾಳಧಿಃ – ಈ ೪ ಬಾಲಂ" (ಹಲಾಯು. ೭೨-೨೮೬). [ಸಂ.]

ವಾಲಾಗ್ರ, ವಾಳಾಗ್ರ (ನಾ). ೧. ಬಾಲದ ತುದಿ, – ಕೊನೆ : ಆ ಮಹೀಧರದ ಚೂಲಿಕಾಗ್ರದಿಂ ವಾಲಾಗ್ರಮಾತ್ರಾಂತರಿತಮಾಗಿ . . . ವಿಮಾನಂಗಳ್ ಕಿಕ್ಕಿಱಿಗಿಱಿದಿರೆ (ಸುಕುಮಾ. ೧೧-೬೦ ವ) ; ದೆಸೆದೆಸೆಗೆ ವಾಲಾಗ್ರಮಂ ನೀಡಿ ತೆಗೆತೆಗದಿಳೆಯೊಳಪ್ಪಳಿಸಿ ಕೊಂದನವರೆಲ್ಲರಂ ಕಲಿಹನುಮನು (ಕೃಮಿಭಾ. ೧೬-೪೧). ೨. ಸೂಕ್ಷ್ಮವಾದ ಒಂದು ಬಗೆಯ ಅಳತೆ : ತನ್ನಿಚತವಾಲಾಗ್ರಂಗಳಂ ಪ್ರತಿಸಮಯದಿಂ ಒಂದೊಂದಂ ಅಪಕರ್ಷಣಂ ಮಾಡಿದೊಡೆಂದಿಂಗೆ ತೀರ್ಗುಮಾ ಕಾಲಮಂ ಅದ್ಧಾಪಲ್ಯೋಪಮ ಮೆಂಬುದು (ತತ್ತ್ವಪ್ರ. ೧೭೫) ; ಆ ತ್ರಸರೇಣುಗಳೆಂಟಾಗಲೊಂದು ವಾಲಾಗ್ರವೆನಿಸುಗುಂ (ವೆಚೇಕ. ೨೫೯). ವಾಳಾಗ್ರ : ೩. ತಲೆಯ ಕೂದಲಿನ ತುದಿ : ದೇವರ್ಕಳ್ ಸನತ್ಕುಮಾರಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ . . . ನೀಡುಂ ಭಾಮಿಸಿ ನೋಡಿ (ವಡ್ಡಾರಾ. ೬೭-೨). [ಸಂ.]

ವಾಲಾಯ್ಯ$_1$ (ನಾ). ಸದಾಕಾಲ ; ನಿರಂತರ : ಮೂರ್ಲೋಕಕೆ ಮುಖ್ಯನ ಭಾವಶೋಷನ ವಾಲಾಯದಿ ನೆರೆ ನಂಬಲು (ಹನುಮ. ೭೫).

[ದೇ. ॥ ತಮಿ. ವಾಲಾಯಮ್ = ಸಮಾನವಾಗಿರುವಿಕೆ, ಪದ್ಧತಿ, ಸಲಿಗೆ ; ತೆಲು. ವಾಲಾಯ]

ವಾಲಾಯ್ಯ$_2$ (ಅ). ನಿರಂತರವಾಗಿ ; ಯಾವಾಗಲೂ : ಏಳೇಳು ಲೋಕವನ್ನು ಆಳುವ ಸಮರ್ಥರು ಶ್ರೀಲೋಲ ನಿನ್ನ ದಾಸರೆಂದರಾಗೆ ಪಾಲಿಸುತಿಪ್ಪರು ಎಲ್ಲೆಲ್ಲಿ ಚರಿಸಿದರು ವಾಲಾಯ ಬೆನ್ನ ಬಿಡದೆ ನಿತ್ಯ (ಪುರಾಸಾ. ೮-೧); ಮೂಲೋಕಪೂಜ್ಯರೆಂದೆನಿಸರ್ಪ ಸತ್ಕಥೆಯ ವಾಲಾ[ಪಾಠಾಂ. ರಾರಾ]ಯ ಕೇಳುತಂ ಬಧಿರತೆಯನಾಂತು (ವಂಕಾರಾ. ೨-೯-೪೬). 'ಓಲಾಯ' ಪರಾ. [< ವಾಲಾಯ್ಯ$_1$]

ವಾಲಿಶ (ನಾ). ಬಲೆ ; ಗಾಳ : ಒಂದು ದಿನ ಒಬ್ಬ ಮೀನುಗಾರನು ವಾಲಿಶವನ್ನು ತೆಗೆದುಕೊಂಡು ತನ್ನ ಮಗನೊಡನೆ ಮೀನುಗಳನ್ನು ಹಿಡಿಯಲು ಕೊಳಕ್ಕೆ ಹೋದನು (ಬುದ್ಧಚಾ. ೧೫೩). [< ಸಂ. ವಲಿಶ]

ವಾಲು$_1$ (ಕ್ರಿ). ೧. ಒಂದು ಪಕ್ಕಕ್ಕೆ ಬಾಗು ; ಓರೆಯಾಗು : ಅವನು ಕುದುರೆಯ ಮೇಲೆ ಒಂದು ಕಡೆಗೆ ಸ್ವಲ್ಪ ವಾಲಿ ಕುಳಿತಿದ್ದನು (ಮಲೆನಾ. ೧೫೭). ೨. ತಿರುಗು ; ಹೊರಳು : ಕೆಲವರು ಯುಕ್ತಿಯಿಂದ ತಮ್ಮ ಮೇಲೆ ತಪ್ಪು ಹೊರಬಾರದೆಂದೂ ಅದು ಜನರ ಮೇಲೆಯೇ ವಾಲಬೇಕೆಂದೂ . . . ಅವರ ಬಾಯಿಂದ ನುಡಿಸುವರು (ಶಿಶಾಪ. ೮೯). ೩. ಆಕರ್ಷಿತವಾಗು ; ಒಲವನ್ನು ಹೊಂದು ; ಒಲಿ : ಅರಮನೆಯ ಜನ ಕೂಡ ತಮ್ಮ ಕಡೆಗೆ ವಾಲಿದ್ದಾರೆ (ಚಕಾಂ. ೨೩೪). 'ಓಲು$_1$' ಪರಾ. [ದೇ. ॥ ತೆಲು. ವಾಲು, ವ್ರಾಲು]

ವಾಲು$_2$ (ನಾ). ಕತ್ತಿ ; ಖಡ್ಗ : ನಡು ಸುತ್ತಿದ ವಾಲು ನುಂಗೊರಳು ಹತ್ತಿದ ಮಣಿ ದಂಡೆ ತೋಳ ರಕ್ಷೆಗಳು ರಾಜೋತ್ತುಂಗನಣುಗಗೊಪ್ಪಿದುವು (ಭರತ. ೨೫-೨೬) ; ಹಗಲು ಪಂಜುಗಳು ಹಾಕುವ ವಾಲು ಚಮರಾವು . . . ಮುಗಿಲವನಿಯು ಮುನಿದರೆ ಕಾದಿ ಗೆಲುವೆನೆಂಬಗಣಿತದವರೊದಗಿದರು (ಅಮುಸಾಂ. ೨-೯೫). [< ಬಾಳ್$_3$. / ತೆಲು. ವಾಲು]

ವಾಲ್ಯು 'ವಾಲ್' ನೋ.

ವಾಲುಕ, ವಾಳುಕ (ನಾ). ೧. ಮರಳು ; ಉಸುಕು : ಮಹಾಸುಕ್ಷೇತ್ರವಾಸದ ವಾಲುಕದ ಮಱೆಯ ಅಪ್ಪುವಿನಂತೆ (ಮೋಕಾ. ೮೨-೩೨೬). ೨. ಒಂದು ಬಗೆಯ ಔಷಧೀಸಸ್ಯ : ಬೂರದ ಕಾಯಿ ರಸದಿಂ ಸೋಂಕಿಸಲು ಅಂಗುರವ ತೇದು ವಾಲುಕದಲ್ಲಿ ಹಾಕಿ ಮರ್ದಿಸಿ ತೊಡೆಯಲು ಬಂಗು ಮಾಣ್ಗುಂ (ವೈದ್ಯವಿ. ೧೩೦). ವಾಳುಕ : ೧. "ವಾಳುಕಮೆನಲ್ ಸಿಕತಮೆನೆ ಮಳಲಕ್ಕು" (ಮಂಗರಾ. ೧೨೨-೧೧). ೩. ಒಂದು ಬಗೆಯ ಸೌತೆ : "ವಾಳು[ಪಾಠಾಂ. ಲು]ಕಮೆನಲ್ ಸೌತೆ" (ಮಂಗರಾ. ೪೪-೪೬). [ಸಂ. ವಾಲುಕಾ]

ವಾಲುಕಪ್ರಭೆ (ನಾ). [ಜೈನ] ಏಳು ನರಕಗಳಲ್ಲಿ ಒಂದು ; ಮರಳಿನಿಂದ ತುಂಬಿರುವ ನರಕ : ಅಲ್ಲಿಂದತ್ತಲೇಕರಜ್ಜುಪ್ರಮಾಣಾಂತರದೊಳ್ ಮೇಘೆಯೆಂಬ ಪೆಸರ ವಾಲುಕಪ್ರಭೆಯೆಂಬ ಮೂಱನೆಯ ನರಕಮಿರ್ದುದು (ಅಜಿವು. ೧೧-೬ ವ); ಮೂಱನೆಯ ವಾಲುಕಪ್ರಭೆಯೊಳ್ ಪುಟ್ಟಿ ದುರಂತದುಃಖದಿಂ ಬೇವುದು ಜೀವಂ ಪತ್ತುಸಾಗರಾಂತಂಬರೆಗಂ (ಮಲ್ಲಿಪು. ೧೩-೧೪೮). [< ಸಂ. ವಾಲುಕಾಪ್ರಭಾ]

ವಾಲುಕಾಪ್ರಭೆ, ವಾಳುಕಾಪ್ರಭೆ (ನಾ). = ವಾಲುಕಪ್ರಭೆ : ವಾಲುಕಾಪ್ರಭೆಯೊಳ್ . . . ಪಂಚದಶಲಕ್ಷಬಿಲಂಗಳಪ್ಪುವು (ತತ್ತ್ವಪ್ರ. ೧೨೦). ವಾಳುಕಾಪ್ರಭೆ : ಅಲ್ಲಿಂ ಕೆಳಗೇಕರಜ್ಜ್ವಂತರದೊಳಷ್ಟವಿಂಶತಿಸಹಸ್ರಯೋಜನಬಾಹಲ್ಯದಿಂ ವಾಳುಕಾಪ್ರಭೆಯೆಂಬ ಮೂಱನೆಯ ನರಕಂ (ಸುಕುಮಾ. ೧೧-೪೧ ವ). [ಸಂ. ವಾಲುಕಾಪ್ರಭಾ]

ವಾಲುಕಾಸ್ತಂಭ (ನಾ). (ಸುಂಟರಗಾಳಿಯಿಂದ ಮೇಲಕ್ಕೇಳುವ) ಕಂಬದಾಕಾರದ ಮರಳಿನ ಸಮೂಹ : ಸುಟ್ಟರಗಾಳಿಯಿಂದುಂಟಾಗುವ ವಾಲುಕಾಸ್ತಂಭಗಳು (ಮುಂಬಯಿ. ೫-೭) ; ಈ ಭಯಂಕರವಾದ ಬಿರುಗಾಳಿ . . . ಮರಳುಗಾಡುಗಳಲ್ಲಿ - ಮುಖ್ಯವಾಗಿ ಸಹಾರಾಮರುಭೂಮಿಯಲ್ಲಿ ಕಾಣಿಸಿಕೊಂಡಾಗ ಭಯಂಕರವಾದ ವಾಲುಕಾಸ್ತಂಭ (Sand Spouts) ಅಥವಾ ಮರಳಿನ ಸ್ತಂಭಗಳನ್ನು ಉಂಟುಮಾಡುತ್ತದೆ (ಭೂವಿವ. ೬೭). [ಸಂ.]

ವಾಲುಕಿ, ವಾಳುಕಿ (ನಾ). ಒಂದು ಬಗೆಯ ಸೌತೆ : "ವಾಲುಕೀ - ಮಳಲಸೌತೆ" (ಓಷಧಿ. ೧೫೦). ವಾಳುಕಿ : "ವಾಳು[ಪಾಠಾಂ. ಲು]ಕೀ, ಕರ್ಕಟೀ – ಈ ೨ ಸೌತೆ" (ಹಲಾಯು. ೩೫-೫೬). [ಸಂ. ವಾಲುಕೀ]

ವಾಲುಕ್ಯ (ನಾ). ಒಂದು ಬಗೆಯ ಹುಲ್ಲು : "ವಾಲುಕ್ಯಂ - ಭೂತೃಣಂ" (ಓಷಧಿ. ೧೫೦). 'ವಾಲಪ್ಪು' ಪರಾ. [ಸಂ.?]

ವಾಲುರ್ಸಿ (ನಾ). ಒಂದು ಬಗೆಯ ಸಸ್ಯ : ವಾಲುರ್ಸಿ, ಮಳೆಪಗಡೆ (ಮೈಡಿಗಿ. ೭೮-೧೬೦೪). [?]

ವಾಲುವರಿ (ನಾ). ಒಂದು ಬಗೆಯ ತೆರಿಗೆ (?) : ವಾಸಿಲುವರಿ ವಾಲುಪರಿ . . . ಬಳಕುನೀರು ಊರ ಸಂತೆ ಮೊದಲಾದ ಹಲ ಉಪಾಧಿಗಳು ಸಹ . . . ಸಂವತ್ಸರಂ ಪ್ರತಿಊ ತಪ್ಪದೆ ನಡಸುವುದಕ್ಕೆ ಕೊಟ್ಟು (ಸಾಇಸಾ. IX-ii, ೪೬೬-೬; ಸಿ. 1472).

[ವಾಲು ? + ವರಿ$_1$]

ವಾಲೆ (ನಾ). ೧. ಪತ್ರ ; ಕಾಗದ : ಚರರುತ್ಪ್ರೇಕ್ಷೆಯಂ ನುಡಿದಂದು ವಾಲೆಗಳೀಯೆ ಭ್ರಾಮಕದಿಂದವೋದಿಸಿ ಕೇಳಿ ನೃಪ ರುತು ವಿದರ್ಭನುತ್ತರವ (ಅಂಬಿಕಾ. ೪೮-೨೬). ೨. ಕಿವಿಯಲ್ಲಿ ಧರಿಸುವ ಒಡವೆ ; ಕರ್ಣಾಭರಣ : ಕಿವಿಗೆ ವಾಲೆಯನ್ನಿಟ್ಟು ಮಾತ್ರದಲ್ಲಿ ಸಕಲ ಚಿಂತೆಯನ್ನೂ ಪರಿಹರಿಸುವ ಲಕ್ಷಣವನ್ನುಳ್ಳದ್ದಾಗಿ . . . ಪೂರ್ಣಚಂದ್ರನೋಪಾದಿಯಲ್ಲಿ ಒಪ್ಪಿಸಲ್ಪಟ್ಟಿರುವುದೇ ತಾಟಂಕಗುಣ (ಸಕವೃ. ೬೭) ; ವಾಲೆ ಮೂಗುತಿ ಹೊನ್ನ ಹೂವು ತೂಗುವ ತುಂಬು (ಎದಾಕ್ಷ. ೧೧-೩). ೩. ಒಂದು ಬಗೆಯ ಮರ ; ತಾಳೆ : ವಾಲೆ ಹೆದ್ದರಣ ತ್ಕಾರಣ . . . ಮೊದಲಾದ ಗಗನಮಂ ತುದುಕುವ ವೃಕ್ಷಂಗಳ್ (ಸೌಗಂಧಿ. ೫೪-೫). [< ಓಲೆ]

ವಾಲ್ಮೀಕಿ (ನಾ). ೧. ಹುತ್ತದಲ್ಲಿ ವಾಸಿಸುವುದು ; ಹಾವು : ಮಯೂರಂ ತಾಂಡವಕ್ಕಾರಂಭಿಸಲೊಡಂ ತಾನುಂ ವಾಲ್ಮೀಕಿಯಿನೆ ಪುತ್ತನೊಂದು ವ್ಯಾಳಂ ಪೊಜಮಟ್ಟು ಕೀಡುವ ತಂಬೆಲರ್ಗೆ ಮೆಯ್ಯೊಡ್ಡಿ ಪರಿದು (ರಾಮಾಶ್ವ. ೪೨-೧೯). ೨. ರಾಮಾಯಣವನ್ನು ರಚಿಸಿದ ಒಬ್ಬ ಪ್ರಸಿದ್ಧ ಋಷಿ : ನೆಗಟ್ಟರ್ ವ್ಯಾಸರ್ವಾಲ್ಮೀಕಿಗಳೆನೆ ನೆಗಟ್ಟುಭಯಕವಿ ಗಳೆಮಗಭಿವಂದ್ಯರ್ (ಗದಾಯು. ೧-೮) ; ವಾಲ್ಮೀಕಿಮುನಿವರಂ ತನ್ನ ಶಿಷ್ಯರ್ವೆರಸಿ ನಡೆತಂದು . . . ಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು (ಕೃಮಿಭಾ. ೧೯-೩೮). [ಸಂ.]

ವಾಲ್ಲವ (ನಾ). ಒಡೆಯ ; ಸ್ವಾಮಿ : ಸ್ವಸ್ತಿಶ್ರೀ ಅಕಾಲವರಿಷಾ (ವರ್ಷ) ಪ್ರಿಥುವೀ (ಪೃಥ್ವೀ) ವಾಲ್ಲವ (ವಲ್ಲಭ) ಮಾರಜಾದಿ (ಮಹಾರಾಜಾಧಿ) ರಾ[ಜ] ಪರಮೇಶ್ವರಾ (ರ) (ಎಇ. XXI, ೨೦೮-೧; 883).

[IP ಇದು ಸಂಸ್ಕೃತದ 'ವಲ್ಲಭ' ಎಂಬ ಶಬ್ದದ ಅಪಲಿಖಿತವಿರಬಹುದು]

ವಾವದೂಕ (ಗು). ೧. ನಿರರ್ಗಳವಾಗಿ ಮಾತನಾಡುವ ; ವಾಚಾಳತನವುಳ್ಳ. ೨. ಅತಿಯಾಗಿ ಮಾತನಾಡುವ ; ಹರಟುವ. (ನಾ). ೩. ಅತಿಯಾಗಿ ಮಾತನಾಡುವವನು ; ಹರಟೆಮಲ್ಲ. ೪. ವಾದಮಾಡುವವನು ; ವಾದಿ : ಅನೇಕೋಪಪತ್ತಿಗಳಿಂ ಚಾರ್ವಾಕಕಾರುಣಿಕವಾವದೂಕನಂ ಕರುಣರಸಾಸ್ಪದಂ ಮಾಡಿ (ಶಾಂತಿಪು. ೪-೧೫೭ ಎ) ; ತರ್ಕಮಂ ಬಿಟ್ಟು ತಾನುಮುರುತರವಾವದೂಕರುಂ ಸರಿದು ಪೋಗರೆ (ಅರಾಚಿ. ೪-೧-೯). [ಸಂ.]

ವಾವಲ್, ಬಾವಲ್, ಬಾವಲಿ$_1$, ಬಾವಲು, ಬಾವುಲಿ$_1$, ಬಾವುಲು (ನಾ). ಹಗಲಿನಲ್ಲಿ ಮರಗಿಡಗಳಿಗೆ ತಲೆಕೆಳಗಾಗಿ ನೇತುಬಿದ್ದಿದ್ದು, ರಾತ್ರಿಯಲ್ಲಿ ಹಾರಾಡುವ, ಅಗಲವಾದ ರೆಕ್ಕೆಗಳುಳ್ಳ, ನರಿಮುಖದ ಒಂದು ಬಗೆಯ ಪಕ್ಷಿ ; ಕಪ್ಪಟದ ಹಕ್ಕಿ : ಪುರುಳಿ . . . ವಾವಲ್ ದುರಿಸೆ ಗಿಳಿ ಪರ್ದು (ಸೂಕ್ತಿಸು. ೩-೧೪೬). ಬಾವಲ್ : "ಪದಮಸ್ತಕಂ ಬಾವಲೆನಿಸಿಕ್ಕು" (ಮಂಗರಾ. ೫೨-೧೧) ; ಮೆಯ್ ಬಾತ ಬಾವಲ ನಾತಕ್ಕೆಣೆಯಾಗಿ ನಾಱೆ (ಸುಕುಮಾ. ೪-೪೭) ; ತಲೆಕೆಟಗಾಗಿರ್ಪುವು ಬಾವಲಂತೆ ವೀಭತ್ಸಕುಕ್ಷಿತಾಕಾರಂಗಳ್ . . . ಮಹಾಪೂತಿಗಂಧಭರಿತಾವನಿಗಳ್ (ವರ್ಧಪು. ೧೧-೪). ಬಾವಲಿ$_1$: ಕವಿದ ಕಿವಿಗಳಿಂ ಬಾವ[ಶಾಂ. ದ]ಲಿಪಿಂದು ಪಕ್ಕಮಂ ಬಡಿವಂತೆಯುಂ . . . ಮುಗಿಲವರ್ಣಮಾಗಿ ಬರ್ಪ ಗೋಕುಲಮಂ . . . ನೋಡುತ್ತುಮಿರೆ (ಲೀಲಾವ. ೫-೮೫ ಎ); ಬಾವಲಿ ಕೀರಂಚೆ ಪರಡೆ ಪರ್ದು ಹಸುಬಂ ಗಿಡುಗಂ (ಸೂಕ್ತಿಸು. ೩-೧೪೫). ಬಾವಲು : ಒತ್ತಿ ತೆಗೆವುದೆಂದು ಭೂವರನುಸುರೆ ಜಟ್ಟಿಗಳು ತಾವೊತ್ತಿಪಿಡಿಯಲೆತ್ತಿದನಾಗ ತೂಗುತ ಬಾವಲಂತಿದ್ದರಂದವರು (ಭರಚಿ. ೪೯-೧೦೩). ಬಾವುಲಿ$_1$: ರಣಪದ್ದು ಬಾವುಲಿ ಪಂಗ ಗರುಡ ಮೊದಲಾದ . . . ಖಗಮೃಗದ ನೆರವಿಯಾರ್ಣ್ಯದೊಳು ಬರುತಿರ್ದಳು (ನವಮೋ. ೮-೧೦). ಬಾವುಲು : ಊಸರವಳ್ಳಿಯಂತೆ ಎನ್ನಿರವು ಬಾವುಲ ಬಾಳುವೆಯ ತೆಱನಂತೆ (ಬಸವ. ೫೯೨) ; ಬಾವುಲು ತಲೆಕೆಳ ಗಾಗಿದ್ದಡೆ ತಪಸ್ವಿಯೆ (ಸಕವ. ೯.II, ೫೯೦-೧೬೪) ; ಪುರುಷೋತ್ತಮನೆ ನಿನ್ನೊಂದು ಮಾಯೆಯ ಕತ್ತಲೆಯ ಬಾವುಲುಗಳಾವು (ನಿಭಾಗ. ೯-೧೦-೨೩).

[ದೇ. ॥ ತಮಿ. ಮಲ. ವಾವಲ್, ವವ್ವಾಲ್ ; ತುಳು. ಬಾವಲಿ, ಬಾವೊಲಿ ; ಕೋಲಾ. ವೆಲಪೆ ; ಕುವಿ. ಬಾಪ್ಲ]

ವಾವಿ$_1$, ವಾವೆ (ನಾ). ೧. ನಂಟು ; ಸಂಬಂಧ : ವಾವಿ ವೀರಾವೇಶವುಪಮೆ ವೂಜೆ ಗಳಂದೀ ವೇಳೆ ವೈಷಮ್ಯದೊಳು ತಾವೌಚಿತ್ಯವಂದಗಳೆಂದು ನಡೆವರ್ಗೆ ಶ್ರೀವಲ್ಲಭ ನೀನೊಲಿವೆ (ಶಶಾಸಾ. ೭೭-೯೭); ಹೇವಗೇಡಿಗಳಿಗೆ ವಾವಿಯೇನು? ವರಸೆಯೇನು? (ಗಾದೆ). ೨. ಕ್ರಮ ; ರೀತಿ : ಭಾವಿಸುತೆ ತರಬೇಕೊ ಉದ್ದಂಡಿಕೆಯೊಳೀಗ ಸೇವಕರ ಬಿಟ್ಟು ಪಿಡಿ ತರಿಸಬೇಕೋ ಇದಱ ವಾವಿಯಂ ಪೇಳು (ಪ್ರಭುಪು. ೮-೨೭). ವಾವೆ : ೧. ವಾವೆಯು ತಪ್ಪಿತು ಮನಭಾವವ ಜಱೆವಾರು ಮಾನ್ಯರು (ಕಾಲಸಂ. ೧೩೫-೨೨); ವಾವೆಯೆಲ್ಲಿಹುದಯ್ಯ ವೈಕುಂಠಪತಿಗೆ (ಪುರಂದ. ಧಾ. ೩-೧೦೦ ಪಲ್ಲವಿ) ; ಆ ವೀರಭದ್ರನಾಯಕಂ . . . ವಾವೆಯಂ ತಮಗೆ ಚಿಕ್ಕಪ್ಪಂದಿರಾದ ಶಿವಪ್ಪನಾಯಕ ವೆಂಕಟಪ್ಪನಾಯಕರುಮಂ . . . ಪ್ರೀತಿಯಿಂ ನಡೆಸಿಕೊಳುತ್ತುಂ (ಕೆಳನ್ಯ. ೬-೧೫) ; ಅವಳು ವಾವೆಯಲಿ ಈತನಿಗೆ ಮಗಳಂತೆ (ನವರಾ. III. ೪೭).

ವಾವೆವರಸೆ = ಸಂಬಂಧದ ಕ್ರಮ, —ರೀತಿ : ವಾವೆವರಸೆಯು ತಪ್ಪಿ ವೈರಿವರ್ಗವು ಹೆಚ್ಚಿ . . . ಕಾವರಾರೈ ಸಾಧುಸಜ್ಜನರನೀಗ (ಕನಕ. ಧಾ. ೧೩೦-೨) ; ವಿವಾಹಾದಿ ಬಂಧನಗಳೂ ವಾವೆವರಸೆಗಳಾವುವೂ ಇರಕೂಡದೆಂದು ವಾದಿಸುವರೆಷ್ಟೋ ಮಂದಿಯುಂಟು (ಜೀವಾಕ್ಷ. ೨೬೪). [ದೇ. ॥ ತೆಲು. ವಾವಿ. / ಸಂ. ಜಾಮಿ]

ವಾವಿ$_2$ 'ಬಾವಿ' ನೋ.

ವಾವಿಲಿ (ನಾ). ಒಂದು ಬಗೆಯ ಗಿಡ ; ಲೊಕ್ಕಿ : "ಸಿಂಧುಕಃ, ಸಿಂಧುವಾರ, ಇಂದ್ರಸುರಸಃ, ನಿರ್ಗುಂಡೀ, ಇಂದ್ರಾಣಿಕಾ - ವಾವಿಲೀಗಿಡದ ಹೆಸರುಗಳು" (ಸಿದ್ಧಾಂತಿ. ೧೨೭). [<— ತೆಲು. ವಾವಿಲಿ. / ಸಂ. ವಾವಲ]

ವಾವಿಲಿಗೆ (ನಾ). ಸುಂಕ; ತೆರಿಗೆ (?) : ಹದಿನೆಂಟು ಕಂಯಿ ಮನೆಯ ನಿವೇಶನಮಂ ಊರೊಳಗಣ ಗಾಣಂಗಳಲ್ಲಿ ಗಾಣವಾವಿಲಿಗೆಯುಂ (ಕಇಶ. ೪೬-೪-೨೨; 1152). 'ಗಾಣವಾವಿಲಿಗೆ' ಪರಾ. [?]

ವಾವಿವರ್ತನ, ವಾವೆವರ್ತನ (ನಾ). ಸಂಬಂಧಮಾಡುವಾಗ ಅನುಸರಿಸ ಬೇಕಾದ ಕ್ರಮ, —ನಿಯಮ : ಸೋದರಭಾವನಳಿಯನೊ ಮೈದುನನೊ ಮೇಣಾವನೋ ನಿನಗೆ ವಾವಿವರ್ತನಗಳನು ಕಂಡೆವು (ಉತ್ತರಾ. ೧೦-೩೯). ವಾವೆವರ್ತನ : ವಾವೆವರ್ತನವಿಲ್ಲ ಸತ್ಯಕೆ ಪಾವಕನ ಮುಟ್ಟುವರು ಪೆಣ್ಗಳನಾವ ಪರಿಯಲಿ ನಂಬಬಹುದೆ (ಗಾಳಿ. ೩-೨೫). [ವಾವಿ$_1$ + ವರ್ತನ]

ವಾವಿವರ್ತನೆ, ವಾವೆವರ್ತನೆ (ನಾ). = ವಾವಿವರ್ತನ : ಅವರು ವಾವಿವರ್ತನೆಗಳನ್ನೆಣಿಸದೆ ಯಾವ ಪುರುಷನನ್ನು ನೋಡಿದರೂ ಬಯಸುವರು (ಕೃವಾಅ. ೨೧೬) ; ಆ ವಿದೇಹಜೆಯವಳಿಮಕ್ಕಳು ದೇವ ನಿನಗನ್ಯರೆ ವಿಚಾರಿಸು ವಾವಿವರ್ತನೆಯುಂಟೆ ಪೇಳ್ಳೆ (ಅರ್ಜಾವಿ. ೪-೧೦). ವಾವೆವರ್ತನೆ : ಯದುರಾಯರು ಆದಿಯಾಗಿ ನಮ್ಮ ಅರಮನೆಯ ಸಂಪ್ರದಾಯವನ್ನೂ ೧೩ ಮತ್ತು ೧೮ ಮನೆತನಗಳ ವಾವೆವರ್ತನೆ, ಗೋತ್ರ ಸೂತ್ರಗಳನ್ನೂ ಚೆನ್ನಾಗಿ ತಿಳಿದಿರುವ ಅಪ್ಪಾಜಯ್ಯನಿಗೆ ಸಮುಖದ ಒಟ್ಟು ಕರಣೀಕತನವನ್ನು ನೇಮಕ ಮಾಡಿದೇವೆ (ಮಹಾವಂ. I, ೧೩೧).

[ವಾವಿ$_1$ + ವರ್ತನೆ]

ವಾವಿವರ್ತನೆದಪ್ಪು (ಕ್ರಿ). ಸಂಬಂಧಮಾಡುವಲ್ಲಿ ಅನುಸರಿಸುವ ಕ್ರಮವು ತಪ್ಪಿಹೋಗು : ಅವರಿಗೆ ನಾನಿನ್ನು ಮಗಳಾಗಬೇಕೆಂದು ವಾವಿವರ್ತನೆದಪ್ಪಿ ಕೇಳುವರೆ (ಯನಳ. ೪೭). [ವಾವಿವರ್ತನೆ + ತಪ್ಪು$_1$]

ವಾವುರ (ನಾ). ೧. ಸವಾರಿಮಾಡುವ ಸಾಧನ ; ವಾಹನ : ಚೇತೋಭವನು ಗಿಳಿವಾವುರವನಾರೋಹಿಸಿದನರ್ಥಿಯಲಿ (ಆನಂರಾ. ೧-೧೯-೧೧). ೨. ಕುದುರೆ : ಬಗಸೆಗಂಗಳ ನೋಟದಂಬುಗಳುಗಿವ ಪುರ್ಬಿನ ಚಾಪಕೆಳೆಚಿಗುರುಗಳ ಸಿಂಜಿನಿದೊಡಿಸಿ

ಮದನಂಗಿತ್ತು ಸವಿಯೊಗುವಾ ಸೊಗಸುನುಡಿವಾವುರವನೇರಿಸಿ ಬಗೆಬಗೆಯ ವೈಯಾಳಿಸುತ ವಿರಹಿಗಳ ಕಳವಳಗೊಳಿಸುತ್ತೆತಂದುದು ಸಖೀನಿವಹಾ (ಅನಂರಾ. ೧-೨೩-೧೪). 'ವಾರುವ' ಪರಾ. [<— ತೆಲು. ವಾವುರ]

ವಾವೆ 'ವಾವಿ$_1$' ನೋ.

ವಾವೆವರ್ತನ 'ವಾವಿವರ್ತನ' ನೋ.

ವಾವೆವರ್ತನೆ 'ವಾವಿವರ್ತನೆ' ನೋ.

ವಾಶಿ (ನಾ). ೧. ಅಬ್ಬರ ; ಕಿರಿಚಾಟ ; ಆರ್ಭಟ. ೨. ಆಕ್ರಮಣಕ್ಕೆ ಮುನ್ನ ಸೈನಿಕರು ಕೂಗುವ ಕೂಗು ; ರಣಘೋಷ. ೩. ಶಬ್ದ ; ಧ್ವನಿ. ೪. ಹಾಡುವುದು. ೫. ಮರ ಮೊದಲಾದುವನ್ನು ಕೆತ್ತಲು ಅಥವಾ ಕಡಿಯಲು ಬಳಸುವ, ಅಗಲವಾದ ಬಾಯುಳ್ಳ ಒಂದು ಬಗೆಯ ಸಾಧನ ; ಬಾಚಿ ; ಕೊಡಲಿ. [ಸಂ. ವಾಶೀ]

ವಾಶಿಕೆ (ನಾ). ಆಡುಸೋಗೆಯ ಗಿಡ ; "ಅಡಸಾಲದ ಗಿಡ" : (ಗಂಗಾಮ. ೨೦೬).

[ಸಂ. ವಾಶಿಕಾ]

ವಾಶಿತ (ಗು). ೧. ಅಬ್ಬರಿಸಿದ ; ಕಿರಿಚಿದ ; ಗರ್ಜಿಸಿದ. ೨. ಹಾಡಿದ ; ಪದ ಹೇಳಿದ. ೩. ಕಂಪುಳ್ಳ ; ಸುವಾಸನೆಯುಳ್ಳ. (ನಾ). ೪. ಪಕ್ಷಿ ಅಥವಾ ಪ್ರಾಣಿಯ ಕೂಗು, — ಧ್ವನಿ : "ವಾಶಿತಂ, ರುತಂ — ೨ ತಿರಶ್ಚಾಂ-ಮೃಗ ಪಕ್ಷ್ಯಾದಿಗಳ ಧ್ವನಿಗೆ ಹೆಸರುಗಳು" (ಕ್ಷೀಂಕಾ. ೫೬). [ಸಂ.]

ವಾಶಿತೆ (ನಾ). ೧. ಹೆಣ್ಣಾನೆ ; ಪಿಡಿ : "ವಾಶಿತಾ — ಹೆಣ್ಣಾನೆ" (ಲಿಪಧಿ. ೧೪೯). ೨. ಹೆಂಗಸು ; ಸ್ತ್ರೀ. [ಸಂ. ವಾಶಿತಾ]

ವಾಶ್ಚರ (ನಾ). ೧. ನೀರಿನಲ್ಲಿ ಚಲಿಸುವಂಥದು. ೨. ಮೀನು : ವಾಶ್ಚರಪತಾಕಾವಲೇಪ ವನದಾವನಿಭಸಾಶ್ಚರ್ಯಸೌಂದರ್ಯ ಭಾಸುರಾರ್ಯಾಧಿಪತಿ . . . ರಕ್ಷಿಪುದು ಲೋಕವನಜಸ್ರಮುಂ ನೀಲಕಂಠ (ಅರಾಚ. ೧-೧೧-೧) ; ಪದ್ಮಪರಾಗವಾಸ ವಾಶ್ಚರಚಪಲಾಕ್ಷಿ ಪೊಚ್ಚಪೊಸವೆಣ್ಬಲೆ ಸಿಂಗರವಾಂತು ತೋಱಿದಳ್ (ರಾಜಶೇ. ೨-೬).

[ಸಂ.]

ವಾಶ್ಚರಲಗ್ನ (ನಾ). [ಜ್ಯೋತಿ] ಮೀನರಾಶಿಯ ಮುಹೂರ್ತ, — ಲಗ್ನ : ವಾ[ಪಾಠಾಂ.ಪುಂ]ಶ್ಚರಲಗ್ನಮಪ್ಪ ಗೃಹದೊಳ್ ಚಂದ್ರಂ ನಿಲಲ್ ಕೂಡೆ ಭಾಸ್ಕರಿಜನ್ಮಂ ತಮದೊಳ್ . . . ತದ್ಬಾಲಕಂ ಪುಟ್ಟುಗುಂ (ಜಾತಕ. ೪-೨೩). [ಸಂ.]

ವಾಶ್ಚಾರ (ನಾ). ೧. ಜಲಚರ. ೨. ಮೀನು : ವಾಶ್ಚಾರಪದರಿಪು ಹರಿಶ್ಚಂದ್ರಶುಚಿದ್ಯುತ್ಸ ವಾಶ್ಚಾಕ್ಷಿಪದಭೋಗಿ ಪುಂಶ್ಚಾಂಕ ಸದ್‌ಭಕ್ತವಾತ್ಸಲ್ಯ . . . ಪೊರೆಗೆ ಮತ್‌ಸ್ವಾಮಿ ಸಿದ್ಧನಂಜ (ಗುರುಚಾ. ೧-೫). [ಸಂ.]

ವಾಷ್ಪಣ (ನಾ). ನೀರಿನ ಹನಿ ; ಜಲಬಿಂದು : ಕೊಳದೊಳ ಮಿಂದು . . . ಮಂಜುಳಗತಿ ಮತ್ತಹಸ್ತಿ ಪಿಡಿಯರ್ಪೆಡೆಗೆಯ್ದಿ ಭುಜಂಗಲೀಲೆಯಂ ತಳೆದೆಳೆಮುತ್ತ ನೊತ್ತೆಗುಡುವಂತಿರೆ ಸೂಸಿತು ವಾಷ್ಪಣೌಘಮಂ (ರಾಜಶೇ. ೫-೬೬). [ಸಂ.]

ವಾಷ್ಪ (ನಾ). ೧. ಕಣ್ಣೀರು ; ಕಂಬನಿ. ೨. ಆವಿ ; ಹಬೆ : "ಉಷ್ಣಂ ವಾ[ಪಾಠಾಂ. ಬಾ]ಷ್ಪಮೆನೆ ಸೆಗಳೆಯಕ್ಕು" (ಮಂಗರಾ. ೧೪-೮). [ಸಂ.]

ವಾಸ$_1$ (ನಾ). ಬಿದಿರಿನಿಂದ ಮಾಡಿದ ಒಂದು ಬಗೆಯ ಊದುವ ವಾದ್ಯ ; ಕೊಳಲು : ಶಬ್ದದಿಂದ ಸಪ್ತಸ್ವರದೊಳಗಾದ ನಾನಾಘೋಷವಾಸಂಗಳಲ್ಲಿ . . . ಗುರುಪ್ರಸಾದಿಗೆ ಲಿಂಗಪ್ರಸಾದವಿಲ್ಲ (ಸಕವ. ಕ. III, ೧೪೫-೨೦೫) ; ಬಾಜಿಸಿದಂ ಮುರವೈರಿ ವಾಸಮಂ (ಜಗವಿ. ೫-೩) ; ದಂಡಿಗೆಯ ತಾಳದಾವುಜದ ಲಸತ್‌ಸಂಗೀತದ ವಾಸದ ನಿನದಂಗಳ್ಪರೆದಳುರ್ದು ಸವಿಯನೇಂ ಸೂಸಿದುವೋ (ರಾಜಶೇ. ೧೨-೬೦). [< ಸಂ. ವಾಂಶ]

ವಾಸ$_2$ (ಗು). ೧. ಸುವಾಸನೆಯಿಂದ ಕೂಡಿರುವ ; ಸುಗಂಧಭರಿತವಾದ. (ನಾ). ೨. ಸುವಾಸನೆ ; ಪರಿಮಳ. ೩. ಸುಗಂಧದ್ರವ್ಯ. ೪. ಒಂದು ಬಗೆಯ ಔಷಧೀಸಸ್ಯ ; ಆಡುಸೋಗೆ : ವಾಸದ ರಸದೊಳು ತ್ರಿಕಟುಕಚೂರ್ಣವ ಲೇಸಾಗಿ ಸೇರಿಸಿ . . . ಕೊಡೆ ಶ್ವಾಸ ಕಾಸಗಳಾರ್ತ್ತಣವಳಿಗು (ಸಾಳ್ವಸಾಂ. ೧೯). ೫. ನೆಲಸುವುದು ; ವಾಸ್ತವ್ಯ : ವಾಸಕೆ ಯೋಗ್ಯವಲ್ಲ ಗೋಕುಲವಿನ್ನು ಬೇಸಱವಾಯತಲ್ಲ (ಪುರಂದ. ೪-೧೦೭ ಪಲ್ಲವಿ). ೬. ವಾಸಮಾಡುವ ಸ್ಥಳ ; ಮನೆ ; ನಿವಾಸ : ರಕ್ತದ ಹುತ್ತ ಕೀವಿನ ಬಾವಿ ರೋಮದ ಸೀಮೆ ತ್ವಕ್ಕಿನಿಕ್ಕೆ ಮಾಂಸದ ವಾಸ . . . ಎಲುವಿನ ಬಲುಹಿಂದಪ್ಪ ಈ ಕಾಯ ಹೇಯ (ಆದಪ. ೧೫-೩೪) ; ಫಣಿ ತನ್ನನೆ ಮುಟ್ಟುವುದೆಂಬ ಭೀತಿಯಿಂ ಕಡಲೊಳು ವಾಸಮಂ ರಚಿಸಿ ಪೊಕ್ಕಿರುತಿರ್ಪ ಪರೀಕ್ಷಿತಂಗೆ ಮುಂದಡಸಿದುದೊಂದು ಸರ್ಪ (ಕಶಿಕಾಂ. ೨೭) ; ವಾಸ ತಪ್ಪಿದರೂ ಹಾಸಲಿಕ್ಕೆ ತಪ್ಪಲಿಲ್ಲ (ಗಾಡಿ). ೭. ಮಲಗುವ ಮನೆ ; ಶಯ್ಯಾಗೃಹ : ವಾಸದ ದೀಪಕ್ಕೆ ವಾಯು ವಿರೋಧವಲ್ಲದೆ ಮಹಾಹೇತುವಿನ ವಹ್ನಿಗೆ ಅದು ಪ್ರೀತಿಯ ಸಂಗ (ಸಕವ. ಕ. I, ೧೧೫-೭೪೭). ೮. ಮನೆ ಕಟ್ಟುವ ಸ್ಥಳ ; ನಿವೇಶನ. ೯. ಅರಿವೆ ; ಬಟ್ಟೆ : ಧವಳವಾಸೋನ್ವಿತಂ ಮತ್ತಮೊರ್ವಂ ಬರುತಿರ್ದಂ (ಕಾದಂಪು. ೩೬) ; ಮಹಾನುಭಾವಿಗಳ ಸಂಗ ಮಣಿದ ಅಲಗಿನ ಮೊನೆಯ ಗುಣದಂತಿರಬೇಕು ರೂಹುಗೊಂಡಡೆ ನೆಲನ ಕಲ್ಲು ವಾಸದಂತಿರಬೇಕು (ಮೋಕಿಮಾ. ೮೮-೩೫೧).

ವಾಸವಸ್ತ್ರಶೇಷ = ಅಪರಕ್ರಿಯೆಯ ವಿಧಿಯಲ್ಲಿ ಬಳಸುವ ಪ್ರೇತವಸ್ತ್ರದ ಭಾಗ : ಪ್ರಭುಗಳು ಪುರೋಹಿತರ ಸಲಹೆಯಂತೆ ಸ್ನಾನಮಾಡಿ, ವಾಸವಸ್ತ್ರಶೇಷವನ್ನುಟ್ಟು ಉತ್ತರಕ್ರಿಯಾಧಿಕಾರತ್ವದ ದರ್ಭೆಗಳನ್ನು ಸ್ವೀಕರಿಸಿ . . . ಪಿತೃಭೂಮಿಗೆ ಬರಿಗಾಲಿನಲ್ಲಿ ಹೊರಟರು (ಶಾಂತಲಾ. ೧೮೫). **ವಾಸಾದಿಘೃತ** = ಆಡುಸೋಗೆ ಮುಂತಾದ ಔಷಧೀಸಸ್ಯಗಳಿಂದ ಮಾಡಿದ ಒಂದು ಬಗೆಯ ತುಪ್ಪ: ವಾಸಾದಿಘೃತ — ಆಡುಸೋಗೆ, ದಾಸಾಳ, ಅಮರದವಳ್ಳಿ ಈ ಮೂರನ್ನು ಕಷಾಯವಿಕ್ಕಿ ತುಪ್ಪವ ಹೊಯ್ದು . . . ಇಳುಹಿಕೊಂಡು ಸೇವಿಸಲು ರಕ್ತಸ್ರಾವ ಪರಿಹರ (ಸಕವ್ಯ. ೨೦೬). **ವಾಸಾದಿಲೇಹ್ಯ** = ಆಡುಸೋಗೆ ಮುಂತಾದ ಔಷಧೀಸಸ್ಯಗಳಿಂದ ಮಾಡಿದ ಒಂದು ಬಗೆಯ ಲೇಹ್ಯ: ವಾಸಾದಿಲೇಹ್ಯ - ಆಡುಸೋಗೆ ಸೇ ೧೨, ನೆಲಗುಳ್ಳ, ಹೆಗ್ಗುಳ್ಳ, ಕಳ್ಳಂಗಡಲೆ . . . ತವಕ್ಷೀರ ಇವನ್ನು ಬಗೆಯೊಂದಕ್ಕೆ ಒಂದು ಸೇರಿನಂತೆ ಹಾಕಿ ಚೂರ್ಣಮಾಡಿ (ಸಕವ್ಯ. ಪರಿ. ೪೭೯). [ಸಂ.]

ವಾಸಂತ (ಗು). ೧. ವಸಂತಋತುವಿನ ; ಚೈತ್ರಮಾಸದ : ವಾಸಂತಕಾಂತಾರ ರಂಗಮಂ ಶೃಂಗಾರಗೈಯಲ್ಕೆ ಬಂಗಾರದಂಗದಾ ಶೃಂಗಿ . . . ಸಾರ್ದುದು ಹತ್ತೆ (ಶ್ರೀರಾಮಾ. ೨೩೧-೧೦೧). (ನಾ). ೨. ವಸಂತಋತು ; ಚೈತ್ರಮಾಸ : ಆಕೆ ತೋರಿದಳ್, ಪೂವಾಗಿ ಪೋಗಿ ಮಿಡಿಗಾಯ್ಗಳಂ ಪಡೆದೊಡಲ ವಾಸಂತದಂತ್ಯದ ರಸಾಲದೋಲ್ (ಚಿತ್ರಾಂಗ. ೫೦-೧೬೬೯). ೩. ಒಂದು ಬಗೆಯ ಸಸ್ಯ : "ವಾಸಂತಃ - ತಿಲಕವೃಕ್ಷ, ತಾರೆ, ಕರಿಯ ಹೆಸರು" (ಲಿಪಧಿ. ೧೪೯). [ಸಂ.]

ವಾಸಂತಿ (ನಾ). ೧. ಒಂದು ಬಗೆಯ ಬಳ್ಳಿ ಮತ್ತು ಅದರ ಹೂವು : ಸುರಹೊನ್ನೆಯ ವಾಸಂತಿಯ ಸುರಗಿಯ ಚಂಪಕದ . . . ನಸುಬಿರಿದರಲಿಂದರ್ಚಿಸಿದ ನವನಿಪತಿ ಜಿನಪತಿಯಂ (ಪಂರಾಮಾ. ೧೨-೪) ; ಈ ಕೋಮಳೆ ಕಾಮಕ್ಲಿಷ್ಟೆ ಚಿತ್ತಕ್ಕಳಲ ನೊಲವುಮಂ ಪುಟ್ಟಿಪಳ್ ನೋಡೆ ಪತ್ರಾವಳಿ ಶೋಪಂಬೆತ್ತ ಚೈತ್ರಾಗಮಪವನಪರಿಸ್ಪೃಷ್ಟ ವಾಸಂತಿಯಾವೋಲ್ (ಶಾಲಿಂಹ. ೩೫-೬೧). ೨. ಒಂದು ಬಗೆಯ ಮಲ್ಲಿಗೆ : "ಜಾತಿ ಮಾಳತಿ ವಾಸಂತಿ ಮಾಧವಿ . . . ಕುಂದಂ ಕೇತಕ್ಕಾಹ್ವಯಂ" (ಮಾಕೂಕೋ. ೩೦-೩೪).

[ಸಂ. ವಾಸಂತೀ]

ವಾಸಂತಿಕ (ಗು). ೧. ವಸಂತಕಾಲದ ; ಚೈತ್ರಮಾಸಕ್ಕೆ ಸಂಬಂಧಿಸಿದ. (ನಾ). ೨. ವಸಂತಋತು ; ಚೈತ್ರಮಾಸ. ೩. (ನಾಟಕದಲ್ಲಿಯ) ಹಾಸ್ಯಗಾರ ; ವಿದೂಷಕ : "ವೈಹಾಸಿಕಃ, ಕೇಳಿಕರಃ, ವಾಸಂತಿಕಃ - ಈ ೩ ನಗಿಸುವಾತಂ" (ಹಲಾಯು. ೭೧-೨೬೮). ೪. ಅಭಿನಯಿಸುವವನು ; ನಟ. [ಸಂ.]

ವಾಸಂತಿಕೆ (ನಾ). ೧. = ವಾಸಂತಿಕ ೨ : ಬಿಲ್ಲಂ ಗೊಲೆಗತ್ತಿ ಹೂಡಿದನ ಮೋಘಾಸ್ತ್ರಂಗಳಂ ದರ್ಪಕಂ ದಿಗಿಲೆಂದಿತ್ತು ವಿಯೋಗಿವೃಂದಹೃದಯಂ ವಾಸಂತಿಕಾ ಮಾಸದೊಳ್ (ಗಿರಿಕ. ೭-೩೭). ೨. ಒಂದು ಬಗೆಯ ಗಿಡ ಮತ್ತು ಅದರ ಹೂವು; ಸೇವಂತಿಗೆ : ವಾಸಂತಿಕಾಪುಷ್ಪವು ಅಂದರೆ ಸೇವಂತಿಗೆ ಹೂವನ್ನು ಧರಿಸಿದಲ್ಲಿ . . . ಶರೀರಕ್ಕೆ ತಂಪನ್ನುಂಟುಮಾಡುವುದು (ಸಕವ್ಯ. ೪೩). ೩. ಸಪ್ತಮಾತೃಕೆಯರಲ್ಲಿ ಒಬ್ಬಳು ; ವೈಷ್ಣವಿ : ವಾಸಂತಿಕಾದೇವಿಲಬ್ಧವರಪ್ರಸಾದಂ ಯಾದವಕುಳಾಂಬರ ದ್ಯುಮಣಿ ಮಂಡಳಿಕಚೂಡಾಮಣಿ . . . ಪ್ರತಾಪಹೊಯ್ಸಳಬಲ್ಲಾಳದೇವರು (ಎಕ. II (R), ೫೬೫-೨೫; 1173) ; ವೈಷ್ಣವಿಯು ಹಿಂದಿನ ಕೈಗಳಲ್ಲಿ ಶಂಖ ಚಕ್ರ ಏಳುಹೆಡೆಸರ್ಪದ

ಛತ್ರವನ್ನು ಹೊಂದಿರುವಳು. ಇದನ್ನೇ ವಾಸಂತಿಕಾ ಎಂದು ಕರೆಯುವರು (ಹೊಯ್ಸಾ. ೮೮).
[ಸಂ. ವಾಸಂತಿಕಾ]

ವಾಸಕ (ಗು). ೧. ವಾಸಕ್ಕಾಗಿ ಕಟ್ಟಿದ. ೨. ವಾಸನೆ ಕಟ್ಟಿದ ; ಸುಗಂಧಗೊಳಿಸಿದ. (ನಾ). ೩. ವಾಸಸ್ಥಾನ ; ನೆಲೆ; ಮನೆ. ೪. ಮಲಗುವ ಮನೆ ; ಶಯನಗೃಹ : 'ವಾಸಕಸಜ್ಜಿಕೆ' ಪರಾ. ೫. ಸುಗಂಧ ; ಸುವಾಸನೆ. ೬. ಸುಗಂಧದಿಂದ ಕೂಡಿರುವುದು ; ಸುವಾಸನೆಯಿಂದ ತುಂಬಿರುವುದು. ೭. ಒಂದು ಬಗೆಯ ಸಸ್ಯ ; ಆಡುಸೋಗೆ : "ವಾಸಕಃ- ತಾರೆ, ಆಡಸೋಗೆ" (ಓಷಧಿ. ೧೪೯). ೮. ಬಟ್ಟೆ ; ವಸ್ತ್ರ. ೯. ಒಂದು ಬಗೆಯ ಪಕ್ಷಿ : ಆ ವನಂಗಳೊಳು ಶುಕ ಪಿಕ . . . ಗಿಡಗ ರುಕ್ಮಕ ವಾಸಕ ಮೊದಲಾದ ಚಿತ್ರರೂಪಶಕ್ತಿಗಳುಳ್ಳ ಪಕ್ಷಿಕುಲಂಗಳುಂ (ಏವೇಕ. ೨೧೨).
[ಸಂ.]

ವಾಸಕಸಜ್ಜಿಕೆ (ನಾ). [ಕಾವ್ಯಮೀ] ಶೃಂಗಾರನಾಯಿಕೆಯರಲ್ಲಿ ಒಂದು ಪ್ರಭೇದ ; ಶಯನಗೃಹವನ್ನು ಶೃಂಗರಿಸಿ, ವೇಷಭೂಷಣಗಳಿಂದ ಅಲಂಕೃತಳಾಗಿ ಗಂಡನ ಅಥವಾ ಪ್ರಿಯಕರನ ಬರವನ್ನು ನಿರೀಕ್ಷಿಸುತ್ತಿರುವ ಹೆಣ್ಣು : ಮಗಧಸೌಂದರಿ ತನ್ನ ಪಾಳೆಯದೊಳಂ ವಾಸಕಸಜ್ಜಿಕೆಯಾಗಿ (ಅರ್ಥನೇ ೩-೧೦೭ ವ) ; ತನ್ನಂ ಮಂದಿರಮಂ ವಾಸಕಸಜ್ಜಿಕೆ ಪುರುಷನ ಬರವಱಿದು ಸಿಂಗರಂಗೆಯಲಕ್ಕುಂ (ರಸರ. ೩-೯೯ ಸೂತ್ರ). [ಸಂ. ವಾಸಕಸಜ್ಜಿಕಾ]

ವಾಸಕಾಲು (ನಾ). ಬಾಗಿಲಿನ ಚೌಕಟ್ಟು : ಬಾಗಿಲುವಾಡ ; ಬಾಗಿಲ ಚೌಕಟ್ಟು ; ವಾಸಕಾಲು (Door-case. ಇಂಕನಿ). [<— ತಮಿ. ವಾಚಱ್‌ಕಾಲ್]

ವಾಸಕಾಱ 'ವಾಸಗಾಱ' ನೋ.

ವಾಸಗಾಱ, ವಾಸಕಾಱ (ನಾ). ಕೊಳಲನ್ನು ಊದುವವನು ; ವೇಣುವಾದಕ : "ವೇಣುಧ್ಮ, ವೈಣವಿಕ - ವಾಸಗಾಱ" (ನಾಚಿರಾ. ೬). ವಾಸಕಾಱ : ಜಗತೀಶಂ ನೋಟ್ಟು ಕಣ್ಗಂ ನುಡಿವ ದನಿಗಮಿಂಬಾಗಿ ಕುಳ್ಳಿರ್ದರಂದೋಳಿಗಳಿಂ ದಂಡಾಧಿಪರ್ . . . ನೆತ್ತಕರ್ ವಾಸಕಾಱರ್ ನಗೆಕಾಱರ್ ವಾದ್ಯಕರ್ (ಅನಂಪು. ೨-೨೬).
[ವಾಸ್ + - ಕಾಱ]

ವಾಸಗೃಹ (ನಾ). ೧. ವಾಸಿಸುವ ಸ್ಥಳ; ಮನೆ. ೨. ಮಲಗುವ ಕೋಣೆ ; ಶಯ್ಯಾಗಾರ : "ಗರ್ಭಾಗಾರಂ, ವಾಸಗೃಹಂ - ೨ ಮಲಗುವ ಮನೆ" (ಸಿದ್ಧಾಂತಿ. ೧೦೧). [ಸಂ.]

ವಾಸಚ್ಛಲ (ನಾ). ಬಟ್ಟೆಗೆ ಪರ್ಯಾಯವಾದುದು : ಏಳನ ತೆಳುದೊಗಲುಗಿದು ವಾಸಚ್ಛಲವ ಸಲಿಸಿದವನ ಜಠರದೊಳೊಳಗರುಳನುಗಿದಬುಜವದನೆಯ ಮುಡಿಗೆ ಮುಡಿಸಿದನು (ಕುವ್ಯಾಕ. ೧೯-೮೩). [ಸಂ.]

ವಾಸತೇಯಿ (ನಾ). ಇರುಳು ; ರಾತ್ರಿ : "ತಮೀ, ತಮಿಸ್ರಾ . . . ವಾಸತೇಯೀ, ಶ್ಯಾಮಾ, ರಾತ್ರಿಃ - ಈ ೧೯ ಇರುಳಿನ ಪೆಸರ್" (ಪಲಾಯು. ೧೮-೧೦೮). [ಸಂ. ವಾಸತೇಯೀ]

ವಾಸನ (ನಾ). ೧. ವಾಸವಾಗಿರುವುದು ; ವಾಸ್ತವ್ಯ. ೨. ವಾಸಸ್ಥಳ; ಮನೆ. ೩. ಸುಗಂಧ ; ಸುವಾಸನೆ : 'ವಾಸನಿಸು' ಪರಾ. ೪. ಸುಗಂಧವನ್ನು ಕೂಡಿಸುವುದು. ೫. ಮುಚ್ಚಿರುವುದು ; ಆಚ್ಛಾದನಗೊಂಡಿರುವುದು. ೬. ಹೊದಿಕೆ ; ಆವರಣ ; ಮುಸುಕು. ೭. ಬಟ್ಟೆ ; ವಸ್ತ್ರ. ೮. ಪೆಟ್ಟಿಗೆ ; ಭರಣಿ. ೯. ಅರಿವು ; ತಿಳಿವು. ೧೦. (ಧ್ಯಾನದ) ಒಂದು ಭಂಗಿ. ೧೧. ಸಂಸ್ಕಾರ : "ವಾಸನಮು ಸಂಸ್ಕಾರಮಕ್ಕುಂ" (ಮಂಗರಾ. ೧೩೫-೩೭). [ಸಂ.]

ವಾಸನಾಕ್ಷಯ (ನಾ). ೧. ರಾಗದ್ವೇಷಾದಿಗಳು ಇಲ್ಲದಿರುವಂಥದು : ಪರಶಿವತಂತ್ರದುರುಗೌಣ ಮುಖ್ಯಗಳ್ವಾಸನಾಕ್ಷಯನಾಸಿಕಂ . . . ರಾಮನಾಥಾರ್ಯರಿಂಗೆ (ವಿಕೋಪು. ೧-೫೯). ೨. ರಾಗದ್ವೇಷಾದಿಗಳ ನಾಶ, - ಕೊನೆ : ಮೊದಲ ಭೂಮಿ ಸುಬೇಚ್ಛೆ ಯೆರಡನೆಯದು ಸದಾತ್ಮವಿಚಾರ ಮೂಱನಿಪುದು ಕಣಾ ನಿಸ್ಸಂಗ ನಾಲ್ಕದು ವಾಸನಾಕ್ಷಯವು . . . ತುರಿಯಾತೀತವೇ ಏಳನೆಯ ಭೂಮಿಕೆಯು (ಅಮೃತ. ೬-೬).
[ಸಂ.]

ವಾಸನಾನಂದ (ನಾ). ಎಂಟು ಬಗೆಯ ಆನಂದಗಳಲ್ಲಿ ಒಂದು : ನಿದ್ರೆ ತಿಳಿದಾಕ್ಷಣದಲ್ಲಿ ತೋರ್ಪುದೇ ವಾಸನಾನಂದವೆನಿಸುವುದು (ಏವೇಕ. ೨೪). [ಸಂ.]

ವಾಸನಾಬಲ (ನಾ). ಹಿಂದಿನ ಜನ್ಮದ ಸಂಸ್ಕಾರದ ಪ್ರಭಾವ : ಬುದ್ಧಿ ಮೂಲತಃ ಸತ್ವಗುಣಯುಕ್ತವಾದುದರಿಂದ, ಕೇವಲ ಆನಂದಕ್ಕೆ ಮಾತ್ರ ಎಡೆಗೊಡುವಂತಿದ್ದರೂ ಅದರ ವಾಸನಾಬಲದಿಂದ ಆನಂದದ ಬದಲು ತದ್ವಿರುದ್ಧವಾದ ಅನುಭವಗಳು ಜೀವಕ್ಕೆ ಒದಗುತ್ತವೆ (ಸೌಂದಸ. ೧೧೧). [ಸಂ.]

ವಾಸನಾವಾಸನ (ನಾ). ಸುಗಂಧಕ್ಕೆ ಆಶ್ರಯವಾಗಿರುವುದು : ವಾಸನಾವಾಸನ [ಪಾಠಾಂ.ದ] ಪರಿಮಳೋಶ್ವಾಸನಾಸಿಕವಂ ನೆನೆವನಳಿಯಾಸೆಯಲಿ (ಬಸಪು. ೪೨-೨೬). [ಸಂ.]

ವಾಸನಿಸು (ಕ್ರಿ). ೧. ಕಂಪುಬೀರು ; ಸುವಾಸನೆ ಹರಡು : ಪದ್ಮಪುಷ್ಪವು ಅರಳಿ ವಾಸನಿಸಿತು (ಚಿನ್ನಸಾ. ೫೫). ೨. ಸುಗಂಧ ಬೀರುವಂತೆ ಮಾಡು ; ಕಂಪುಗೊಳಿಸು : (ಕಿ). ೩. (ನೆತ್ತಿಯನ್ನು) ಮೂಸಿ ನೋಡು ; ಆಘ್ರಾಣಿಸು : ತನ್ನೆದೆಯಲ್ಲಿ ತಕ್ಕವಿಸುತ್ತ ವಾಸನಿಸುತ್ತ ಚುಂಬಿಸುತ ಪುಲ್ಲಮುಖಸರಸೀರುಹನಪ್ರತಿಮಭಕುತರ ದೇವನಾಶ್ರಿತವಲ್ಲಭನ ಮೊಗ ನೋಡಿ ನಗುತಿಂತೆಂದನವನೀಶ (ನಿಭಾಗ. ೧೦-೯೦-೨೨) ; ಕರ್ಮೂಗಿಂದ ನೆಲನ ವಾಸನಿಸಿ ಮೇಘಾಳಿಯನಾರೈವ ಚತುಷ್ಪದಿ ವೇಗದಿ ನಡೆದುವಾಕ್ಷಣದಿ (ಮೋಹತ. ೧೯-೧೩) ; ಝಾಳಿಸುವ ಕಣ್ಣೀರನೊರೆಸಿ ಮಂಡೆಯ ನಿಗರ ವಾಸನಿಸಿ ನುಡಿದನು (ತುರಂಗ. ೨೬-೧೮) ; ನೆತ್ತಿಯ ವಾಸನಿಸಿದರೆ ಸತ್ತಿಗೆ ಹಿಡಿದ ಹಾಗೆಯೇ ? (ಗಾದೆ). 'ವಾಸಿಸು' ಪರಾ. [ವಾಸನ + - ಇಸ್ಸು]

ವಾಸನೆ (ನಾ). ೧. ಹಿಂದಿನ ಸ್ಮರಣೆಯಿಂದ ಉಂಟಾಗುವ ತಿಳಿವಳಿಕೆ,— ಜ್ಞಾನ. ೨. ಜನ್ಮಾಂತರದ ವಿಷಯವನ್ನು ಸ್ಮರಣೆಗೆ ತರುವ ಒಂದು ಬಗೆಯ ಶಕ್ತಿ. ೩. ಹಿಂದಿನ ಒಳ್ಳೆಯ ಅಥವಾ ಕೆಟ್ಟ ಕ್ರಿಯೆಗಳಿಂದ ಮನಸ್ಸಿನ ಮೇಲೆ ಅಗೋಚರವಾಗಿ ಉಂಟಾಗುವ ಪ್ರಭಾವ ,—ಪರಿಣಾಮ ,—ಸಂಸ್ಕಾರ ಮತ್ತು ಅದರಿಂದ ಉಂಟಾಗುವ ನೋವು, ನಲಿವು ಮುಂತಾದ ಭಾವನೆ : ಉಪನಯನಂ ಗೆಯ್ಯದೆಯುಂ ಸ್ವಪೂರ್ವವಾಸನೆಯ ಬಲದಿನಂತಾತಂ ವೇದಪುರಾಣ ವೇದಿಯಾದಂ (ವರ್ಧಮಾ. ೬-೧೮) ; ನಾಟಕದಲ್ಲಿ ಪಾತ್ರವಹಿಸಿದ ವಾಸನೆ ಅವನ ಸಾಮಾನ್ಯ ನಡತೆಗೂ ಅಂಟಿಕೊಂಡಿತ್ತು (ಆಲಹೂ. ೯೧). ೪. ಬಯಕೆ ; ಆಕಾಂಕ್ಷೆ ; ಆಸೆ : ಗುರುವಿಂಗೆ ತನುವನರ್ಪಿಸಿದಲ್ಲದೆ ತನುವಿನ ವಾಸನೆ ಹಱಿಯದು ಲಿಂಗಕ್ಕೆ ಮನವನರ್ಪಿಸಿದಲ್ಲದೆ ಮನದ ವಾಸನೆ ಹಱಿಯದು (ಅಖಂದೇ. ೭೭-೫೫) ; ಅಡವಿಯನು ಹೊಗಬಹುದು ಮಡದಿಯನು ಬಿಡಬಹುದು ಬಿಡದೆ ಧ್ಯಾನದೊಳಿರಬಹುದು ವಾಸನೆಯ ಕೊಡಹಲಳವಲ್ಲ (ಸರ್ವಜ್ಞ. ೫೩೧). ೫. ಊಹೆ ; ಕಲ್ಪನೆ. ೬. ಅಜ್ಞಾನ ; ಮೌಢ್ಯ. ೭. (ಆಲಂ) ಸಹವಾಸ ; ಜೊತೆ ; ಒಡನಾಟ : ದಾಮೋದರಭಟ್ಟರಂ ಪ್ರೇಮದಿಂ ಸೋಂಕಿದೆನೆ ಕೇಶವಪ್ಪೈಸರ ವಾಸನೆಯುಂಟೆ (ಬಸರ. ೧೦-೪೬). ೮. [ದ್ವೈತ] ಇಪ್ಪತ್ತು ಬಗೆಯ ದ್ರವ್ಯಗಳಲ್ಲಿ ಒಂದು : ಪರಮಾತ್ಮ, ಲಕ್ಷ್ಮಿ, ಜೀವಾತ್ಮ . . . ವರ್ಣ, ಅಂಧಕಾರಕಾಲ, ವಾಸನಾ, ಪ್ರತಿಬಿಂಬ ಎಂದು ದ್ರವ್ಯಗಳು ಇಪ್ಪತ್ತು (ಹಿಂದಸಾ. ೨೭೫).
[ಸಂ. ವಾಸನಾ]

ವಾಸನೆ (ನಾ) ೧. ಕಂಪು ; ಗಂಧ : "ಸೊವಡೆಂದು . . . ನಾತಮುಮೆಂದು ಸಲೆ ವಾಸನೆಗೆ ಪೆಸರ್" (ಕಬ್ಬಿಕೈ. ೫೪) ; ಆಸವದಾಭ್ರದ ಫಣಿಯ ನಿವಾಸದ ನೆಲ್ಲರಳ ಬೆಲ್ಲವತ್ತದರಿಷ್ಟಾಭಾಸದ ಮದ್ಯದ ಪಲಸಿನ ವಾಸನೆ ನಿಶ್ವಾಸಮೆನೆ ಹಯಂಗಳ್ ಶುಭದಂ (ಅಶ್ವಶಾ. ೩-೧೯) ; ವಾಸನೆ ಮೇಲಿಂದ ಸುಟ್ಟ ಕುಸಬಿಯ ಎಣ್ಣೆಯೋ ಒಂದೆತ್ತಿನ ಘಾಣದ್ದೋ ಇದರ ಪರೀಕ್ಷೆ ಮಾಡುತ್ತಾರೆ (ಮುಂಬವ್ಯಾ. ೩೭). ೨. ಸುಗಂಧ ; ಪರಿಮಳ : ವಾಸನೆಯಿಂದಮೆ ಸಮೆದ ವಿಳಾಸಮನೊಳಕೊಂಡು ಗಂಧಕುಟಿ ಸೊಗಯಿಪುದಾ ವಾಸನೆ ಸೋಂಕಿದರಂ ಸುಖವಾಸನೆವೆರಸಮೃತಪದಮನಿರದೆಯ್ದಿಸುಗುಂ (ಪಾರ್ಶ್ವಪು. ೧೬-೭೩) ; ಧೂಪ ವಾಸನೆಯಿಂದ ಮುನ್ನ ಉಮಾಪತಿಯ ಮುಂದೆಸೆಯೊಳುದಿತ ವ್ಯಾಪಿತಾಂತರ್ಗತಸುವಾಸನೆ ರಂಜಿಸುತ್ತಿರಲು (ಬಸಪು. ೩೩-೭). ೩. ಕೆಟ್ಟನಾತ ; ದುರ್ಗಂಧ : ಕೆಟ್ಟು ಹೋದ ಹಣ್ಣಿನಿಂದ ವಾಸನೆ ಬರುತ್ತಿದೆ (ರೂಢಿ). ೪. ಸುಗಂಧಗೊಳಿಸುವುದು. ೫. ವಾಸಿಸುವುದು. ೬. ನೆಲೆ ; ಆಶ್ರಯ. ೭. ಬಟ್ಟೆ ; ವಸ್ತ್ರ. ೮. (ಆಲಂ) ಜಾಡು ; ಸುಳಿವು : ಆಕೆಯ ಹತ್ತಿರ ದುಡ್ಡಿನ ವಾಸನೆ ಸಿಕ್ಕಿದ ಕೂಡಲೆ ಆತ ಎಲ್ಲವನ್ನೂ ತೆಗೆದುಕೊಂಡು ಬಿಡುತ್ತಾನೆ (ರೂಢಿ).
[ಸಂ. ವಾಸನ]

ವಾಸನೆಗಟ್ಟು (ಕ್ರಿ). ಸುವಾಸನೆಯ ದ್ರವ್ಯವನ್ನು ಹಾಕು ; ಬಣ್ಣ ಕಟ್ಟು : ಇವಳು ವಾಸನೆಗಟ್ಟಿದ ಮದ್ಯದಂತೆ ನನ್ನನ್ನು ಉನ್ಮಾದಗೊಳಿಸುತ್ತಿದ್ದಾಳೆ (ವಚಭಾ. ೧೮೯). [ವಾಸನೆ + ಕಟ್ಟು]

ವಾಸನೆವಿಡಿ, ವಾಸನೆಹಿಡಿ (ಕ್ರಿ). ೧. ಪರಿಮಳವನ್ನು ಗ್ರಹಿಸು : ನಾಸಿಕೇಂದ್ರಿಯ ನಿನ್ನ ತನುಗಂಧಕೆಳಸಿ ಮೇಲ್ಪೂಸಿದ ಪುಣಗು ಕಸ್ತುರಿಯ ವಾಸನೆವಿಡಿಯದು (ಕಂಜವಿ. ೯-೧೮೨). ವಾಸನೆಹಿಡಿ : ೨. (ಅಲಂ) ಪತ್ತೆಹಚ್ಚು ; ಜಾಡುಹಿಡಿ : ಅವನು ಲಂಚದ ವಾಸನೆಹಿಡಿದು, ಅದು ಪರರ ಕೈಗೆ ನುಣುಚಿಕೊಂಡು ಹೋಗದಿರಲೆಂದು ತವಕಗೊಂಡನು (ಪುನರು. ೫೦೮). [ವಾಸನೆ + ಹಿಡಿ]

ವಾಸನೆಹಿಡಿ 'ವಾಸನೆವಿಡಿ' ನೋ.

ವಾಸನೆಹುಲ್ಲು (ನಾ). ನಿಂಬೆವಾಸನೆಯುಳ್ಳ ಒಂದು ಬಗೆಯ ಹುಲ್ಲು : (ಕಿ). [ವಾಸನೆ + ಹುಲ್ಲು (< ಪುಲ್)]

ವಾಸಭವನ (ನಾ). ಮಲಗುವ ಮನೆ ; ಶಯ್ಯಾಗೃಹ : "ಪ್ರಘಣಾಂತರದೊಳ್ ವಾಸಭವನಮೆನೆ ಪೆಸರ್ವಡೆಗುಂ" (ಮಮ್ಮಟಕೋ. ೪೮-೧೮). [ಸಂ.]

ವಾಸಯಷ್ಟಿ (ನಾ). ಪಕ್ಷಿಗಳು ಹಾರಿ ಬಂದು ಕುಳಿತುಕೊಳ್ಳುವುದಕ್ಕೆ ಇಟ್ಟಿರುವ ಕೋಲು : ದಿನಾಂತಂ ಮನೋಹರಮಾಗಿರ್ದುದು ವಾಸಯಷ್ಟಿಗತಶುಂಭತ್ತಾಮ್ರ ಚೂಡವ್ರಜಂ (ಪಂಚತಂ. ಅ. ೧೭೫-೨೦). [ಸಂ.]

ವಾಸರ, ಬಾಸರ (ನಾ). ೧. ಓರೆಯಾಗಿರುವುದು ; ಏರುಪೇರು : (ಕಿ). ೨. ಪೇರುಕಟ್ಟುವುದಕ್ಕಾಗಿ ತಕ್ಕಡಿಯ ಪರಡೆಯಲ್ಲಿಡುವ ಹೆಚ್ಚಿನ ತೂಕ ; ಕಾಣೆ : ತ್ರಾಸಿನ ಗುಣದಿಂದ ವಾಸರದಣಿಯಿಂದ ಕಾಸಿ ಕರಗುವದಕ್ಕೆಂದ ವೀಸವೀಸವ ನಾನಾಬಗೆ ಗಳಿಸುವ ಜಗದೀಶನಾದರೆ ಬಿಡಬೇಡ (ಅಮುಸಾಂ. ೩-೧೧೮). ೩. ಲೋಪ ; ದೋಷ : ನೀವಾಜ್ಞೆಮಾಡಿದ ನುಡಿಗೆ ವಾಸರವು ಇನಿತು ಬಂದರೆ ನಿಮ್ಮ ಸೇವಕನಿನಿತು ಅಲ್ಲವು (ಜ್ಞಾನಸಿಂ. ೩-೧೮). ಬಾಸರ : ೨. 'ಬಾಸರ' ಅಂದರೆ 'ಕಾಣೆ' - ಹೆಚ್ಚಿನ ತೂಕ (ಪರಪ. ೨೧೧). [< ಓಸರ]

ವಾಸರ (ನಾ). ೧. ಹಗಲು ; ಬೆಳಗು : ಅನುಚರನವೊಲಾಲೋಕಮಂ ಪತ್ತುವಿಟ್ಟೋಸರಿಸಿತ್ತಾವೇಗದೊಳ್ ವಾಸರಮನುಚರಿವೊಲ್ ಸಂಜೆ ಸಂಜಾತರಕ್ತಾಂಬರದಿಂದಂ ಬಾಸಣಿಪ್ಪಂತೆಸೆದುದಸದಳಂ ಸಾಂದ್ರಶೋಣಾಂಶುಜಾಲಂ (ಕಾದಂಬ. ೮೧೬) ; ವಾಸರಮುಖದರ್ಶನದಿಂದೋಸರಿಸುವ ಚಕ್ರವಾಕದರ್ದೆಯದವಟಲಂತಾ ಸಮಯದೊಳವನಿಪನಟಲೋಸರಿಸಿದುದಾ (ಚಂದ್ರಪ್ರ. ೫-೨೧). ೨. ದಿನ ; ದಿವಸ : ಅನ್ನೆ ಗಮಾಷಾಢ ಪೌರ್ಣಮಾಸೀವಾಸರ ಸಾಯಂತನ ಸಮಯದೊಳ್ (ಆದಿಪು. ೬-೫೧ ವ) ; ಪಾಶುಪತಶರವೆನ್ನ ಸತ್ವವಿಳಾಸವದೆ ಫಲುಗುಣನ ಕೈಯಲಿ . . . ಆ ಸುಭಟನೊಬ್ಬ ನನುಳಿಯೆ ಮಿಕ್ಕೇಸು ಪಾಂಡವರುಗಳನೊಂದೇ ವಾಸರದಲವಗಡಿಸು ಹೋಗು (ಕುಮಾಅ. ೨೨-೪೬). [ಸಂ.]

ವಾಸರಂಬರಂ (ಅ). ದಿನದ ವರೆಗೆ ; ದಿವಸದ ತನಕ : ವಾಗೀಶನಾಯ್ಕರೆಂಬ ಪರಭಕ್ತಂ . . . ತನುಜೆಯಂ ಪಿಳ್ಳೆನಾಯ್ಕರ್ಗಲ್ಲದಾರ್ಗೆ ಕುಡೆನೆಂದು ನುಡಿದು ಹರಿಸದಿಂದಿರ್ಪನಿತಱೊಳಗವಳ್ ಸಾಯಲ್ಕೆ . . . ಇವಳನುರುಘಟದೊಳಿರಿಸುವೆಂ ಪಿಳ್ಳೆನಾಯ್ಕರ್ ಬರ್ಪ ವಾಸರಂಬರಮೆನುತ್ತೆ (ಅರಾಚ. ೨-೨-೪೪). [ವಾಸರ + - ಬರಂ (< - ವರಂ)]

ವಾಸರಕರ (ನಾ). ಬೆಳಗನ್ನುಂಟುಮಾಡುವವನು ; ಸೂರ್ಯ : ಆ ಸೇನಾರಜದಿಂ ಪರಿಧೂಸರಮಾದುದು ನಿಜಾಂಗಮಂ ತೊಳೆಯಲ್ಕೆಂದೋಸರಿಸದೆ ಪೊಕ್ಕಂತಿರೆ ವಾಸರಕರನಪರವಾರಿನಿಧಿಯೊಳ್ ಪೊಕ್ಕಂ (ರಾಜಶೇ. ೬-೨೬). [ಸಂ.]

ವಾಸರಪತಿ (ನಾ). ಹಗಲಿನ ಒಡೆಯ ; ಸೂರ್ಯ : ವಾಸರ [ಪಾಶಾ. ವ]ಪತಿ ಬಿಸುಗದಿರಿಂ ಪೇಸದೆ ತವೆ ಪೀರ್ಗುಮೆಂಬ ಮಱುಕದೊಳಂಭೋಜಾಸನನಂಬುಜವನಮಂ ಬಾಸಣಿಸಿದನೆನಿಪುವಿಡಿದ ತಾವರೆಯೆಲೆಗಳ್ (ಕಾವ್ಯಾವ. ೨೩೭). [ಸಂ.]

ವಾಸರವ (ನಾ). ಕೊಳಲಿನ ನಾದ, -ಧ್ವನಿ : "ತತ್ತರಿಯ ಪಿತೃತಂ ವಾಸರವವಕ್ಕು" (ಮಂಗರಾ. ೨೪-೮). [ವಾಸ + ರವ]

ವಾಸರಾಧಿಪ (ನಾ). = ವಾಸರಪತಿ : ಸಿರಿಶೈಲದೊಳ್ ವಸಿರ್ಪರ್ . . . ಅಘತಿಮಿರಸಂದೋಹವಾಸರಾಧಿಪರೂಪರು (ಅರಾಚ. ೧-೧-೬೭). [ಸಂ.]

ವಾಸವ (ಗು). ೧. ದೇವೇಂದ್ರನಿಗೆ ಸಂಬಂಧಿಸಿದ. ೨. ವಸುಗಳಿಗೆ ಸಂಬಂಧಿಸಿದ. (ನಾ). ೩. ಇಂದ್ರ : ಘಾಸುರದೇವಕೋಟಿವಿಭುವಪ್ಪ ಮಹರ್ದ್ಧಿಕನಪ್ಪ ವಾಸವಂಗಾಸನಕಂಪಮಂ ಪಡೆದು ಶೀರ್ಥಕರತ್ವಮನಿತ್ತಂ (ಆದಿಪು. ೧೬-೮೦) ; ದೇಶಾಧಿಪತಿ ಹರಿಶ್ಚಂದ್ರರಾಯನ ಸತ್ಯ ವಾಸವನ ಸಭೆಯೊಳಗೆ ನೆಗಳ್ದ ಪ್ರಸಂಗದಿಂ ಕೌಶಿಕ ವಸಿಷ್ಠಮುನಿಗಳಿಗೆ ಘನತರದ ಸಂವಾದಮಂ ಮಾಡಿತಂದು (ಹಚಕಾ. ೧ ಸೂಚನಾಪದ್ಯ). ೪. ಒಂದು ಬಗೆಯ ಸಸ್ಯ ಮತ್ತು ಅದರ ಬೀಜ : "ವಾಸವಃ - ಕೊಡಸಿಗನ ಬೀಜ, ಇಂದ್ರಗೋಪದ ಹುಳು" (ಓಷಧಿ. ೧೪೯). [ಸಂ.]

ವಾಸವಗಜ (ನಾ). ಇಂದ್ರನ ಆನೆ ; ಐರಾವತ : ಅದೇಂ ಗೆಲೆವಂದುದೊ ವಾಸವಗಜವಿಲಾಸಮಂ (ಅಜಿಪು. ೫-೬೬) ; ವಾಸವಗಜದೊಡನಡರ್ವ ವಿಳಾಸದ ಸುರಜನದ ಹಾರಿ ಪೋಲ್ವುದು ಗಿರಿಗಜ್ಜಾಸನನೆ ಪಂಚರತ್ನದ ಸೂಸಕಮಂ ಮಾಲೆವೂವ ನೆಲಲಿಕ್ಕಿದವೋಲ್ (ಪುಷ್ಪಪು. ೧೦-೬೮). [ಸಂ.]

ವಾಸವಚಾಪ (ನಾ). ಕಾಮನ ಬಿಲ್ಲು ; ಇಂದ್ರಧನುಸ್ಸು : ವಾಸವಚಾಪಮೆಂಬ ಮಣಿಮಂಟಪದೊಳ್ ಮೊಱಗೆಂಬ ವಾದ್ಯಮಂ ಗೋಸನೆಮೇಘಮೆಂಬ ತೆರೆಯಿಂದೆ ತಟನ್ನಟಿ ಬಂದು ನಾಟ್ಯವಿನ್ಯಾಸದೆ ಕೊಂಕಿ ನಿಂದು (ಅನಂಪು. ೯-೧೨). [ಸಂ.]

ವಾಸವತಿ (ನಾ). ಹೆಚ್ಚು ಬಟ್ಟೆಗಳಿರುವ ಮನೆ, - ಗೃಹ : "ಬಹುವಸ್ತ್ರ ವರ್ತಿಸಿಹ ಮನೆ ವಾಸವತಿಯಕ್ಕುಂ" (ಮಂಗರಾ. ೫೮-೯). [ಸಂ. ವಾಸವತೀ]

ವಾಸವಸ್ತ್ರೀ (ನಾ). ೧. ಇಂದ್ರನ ಹೆಂಡತಿ ; ಶಚೀದೇವಿ. ೨. ಸ್ವರ್ಗಲೋಕದ ಹೆಣ್ಣು ; ಅಪ್ಸರೆ : ವಾಸವಸ್ತ್ರೀಯರ ಮುಖಾಬ್ಜಾಸವಸಂಬಂಧಿಗಳಪ್ಪ ಶೇಷಾಕ್ಷತಂಗಳನೀಶ್ವರನ[ಂ] ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ಳಂತೆ ಸೇಸೆಗೊಳುತ್ತುಂ . . . ದೇವವಿಮಾನಮಂ ಪೊಕ್ಕಾಗಳ್ (ಪಂಪಭಾ. ೮-೨೬ ವ). [ಸಂ.]

ವಾಸವಾಂಗನೆ (ನಾ). ಇಂದ್ರನ ಹೆಂಡತಿ ; ಶಚೀದೇವಿ : ವಾಸವಾಂಗನೆಗೆ ಪಾಸಟ ಚಾಗಲದೇವಿ ಧಾತ್ರಿಯೊಳ್ (ಎಕ. VIII, ನಗರ. ೪೭-೧೧೪; ೧೦೬೩). [ಸಂ. ವಾಸವಾಂಗನಾ]

ವಾಸವಾಶೆ (ನಾ). ಇಂದ್ರನ ದಿಕ್ಕು ; ಪೂರ್ವದಿಕ್ಕು : ಬಾಲದಿವಾಕರ ಗರ್ಭವಾಸವಾಶೆಗೆ . . . ದೊರೆಯಾಗಿ ಗರ್ಭನಿಲಯಾರ್ಭಕನುನ್ನತಿಯಂ ನಿಮಿರ್ಚಿದಳ್ (ಆದಿಪು. ೮-೩೦). [ಸಂ. ವಾಸವಾಶಾ]

ವಾಸವಾಸನ (ನಾ). [ಯೋಗ] ಒಂದು ಬಗೆಯ ಆಸನ : ಸ್ಥಿರಸುಖದಿಂ ನಿಶ್ಚಲಾತ್ಮಕಮಾದಾಸನದಲ್ಲಿ ಸಿದ್ಧಾಸನ . . . ವಾಸವಾಸನ . . . ಅರ್ಧಾಸನಾದಿ ಎಂಭತ್ತು ನಾಲ್ಕು ಆಸನಭೇದಂಗಳು (ವಿವೇಕ. ೧೩೧). [ಸಂ.]

ವಾಸಸ (ನಾ). ಅರಿವೆ ; ಬಟ್ಟೆ ; ವಸ್ತ್ರ : ಸುರರ್ಗಮಲಭ್ಯಮೆಂದೆನಿಪ ವಾಸಸದೊಂದುಡೆ ಸಾರಸೌರಭಕ್ಕಿರದೆಡೆಯಾದ ಪೂಸುವನುಲೇಪನಮುಜ್ವಲಕಲ್ಪ ವಲ್ಲರೀ . . . ಕಣ್ಗೆಸೆದಳ್ ಶಿವದೇವಿಯಾವಗಂ (ಮಹಾನಂ. ೮-೫೭). [< ಸಂ. ವಾಸಸ್]

ವಾಸಸ್ಥಲ, ವಾಸಸ್ಥಳ (ನಾ). ವಾಸಿಸುವ ಜಾಗ ; ನೆಲಸುವ ಪ್ರದೇಶ : ಬೇಸಗೆಯಲ್ಲಿ ಪಕ್ಷಿಗಳು ತಮ್ಮ ವಾಸಸ್ಥಲವನ್ನು ಬಿಟ್ಟು ತಂಪಾದ ಜಾಗವನ್ನು ಹುಡುಕುತ್ತ ಹೊರಡುವುವು (ರೂಢಿ). ವಾಸಸ್ಥಳ : ನಿಮ್ಮ ವಾಸಸ್ಥಳ ಯಾವುದು ? (ರೂಢಿ). [ಸಂ.]

ವಾಸಸ್ಥಳ 'ವಾಸಸ್ಥಲ' ನೋ.

ವಾಸಸ್ಥಾನ (ನಾ). = ವಾಸಸ್ಥಲ : ದೂರದಲ್ಲಿ ಕಾಡುಜನದ ವಾಸಸ್ಥಾನದ ಸಮೀಪದ ಮರಗಳು ಕಾಣುತ್ತಿದ್ದವು (ಮಲೆನಾ. ೨೦೩). [ಸಂ.]

ವಾಸಸ್ಸು (ನಾ). ೧. ಬಟ್ಟೆ ; ವಸ್ತ್ರ : ದೆಸೆಗೇ ವಾಸಸ್ಸು ರಾಜ್ಯಪ್ರಸರಣವು ನಿರ್ಲಜ್ಜೆ ಜಟೆ ರಂಜಿಸುವ ಧೂಳೀದೂಸರದ ಗಂಗಾಧರನವೋಲು (ಕುಮಾಕು. ೪-೧೧೧) ; ಚಿತೆಯ ಮೇಲಿನಿಂದ ಒಂದು ವಾಸಸ್ಸನ್ನು ತಂದು ನಮ್ಮಮ್ಮನ ಕತ್ತಿಗೆ ಹಾಕಿದರು (ಮಾಮಾರಾ. ೧೧೩). ೨. ತೆರೆ ; ಪರದೆ. ೩. ಮೇಲುಹೊದಿಕೆ ; ಆಚ್ಛಾದನೆ. [ಸಂ. ವಾಸಸ್]

ವಾಸಾಕೋಷ್ಠ (ನಾ). ಕುದುರೆಯ ಒಂದು ಅವಯವ : ಆಸನದಿಂ ಕೆಟಗಣ ಬರಿಗಾಸನ್ನಂ ಕೋಷ್ಠಮೆಂಬ ಪೆಸರದಕ್ಕುಂ ವಾಸಾಕೋಷ್ಠದ ಕೆಲ ರೇಖಾಸೆಯೆ ತಾಂ ಕುಕ್ಷಿಯೆಂಬ ಪೆಸರಂ ಪಡೆಗುಂ (ಅಶ್ವಶಾ. ೯-೪೦). [ವಾಸಾ + ಕೋಷ್ಠ]

ವಾಸಾಗಾರ (ನಾ). ೧. ಮನೆ ; ನಿವಾಸ. ೨. ಮಲಗುವ ಕೋಣೆ ; ಶಯನಗೃಹ : "ಶಯನಸ್ಥಾನಂ, ವಾಸಾಗಾರಂ - ಈ ೨ ಸೆಜ್ಜೆಯ ಮನೆ" (ಹಲಾಯು. ೪೯-೧೪೦).

[ಸಂ.]

ವಾಸಾಘೃತ (ನಾ). ಆಡುಸೋಗೆ ಮುಂತಾದುವನ್ನು ಸೇರಿಸಿ ತಯಾರಿಸಿದ, ದೀರ್ಘಕಾಲದ ಜ್ವರವನ್ನು ಗುಣಪಡಿಸುವ ಒಂದು ಬಗೆಯ ತುಪ್ಪ : ವಾಸಾಘೃತ - ಆಡುಸೋಗೆ, ಅಮರದವಳ್ಳಿ, ತಾರೆಕಾಯಿ, ನೆಲ್ಲಿಚಟ್ಟು, ಗಂಡುತುರುಚೆ ಇವು ಪ್ರತ್ಯೇಕ ಮೂರು ಪಲಂಗಳನ್ನು ಸೇರಿಸಿ ಚೆನ್ನಾಗಿ ಅರೆದು ಒಂದು ಕೊಳಗ ನೀರಿನಲ್ಲಿ ಹಾಕಿ ಚೆನ್ನಾಗಿ ಕಾಯಿಸಿ . . . ಅರ್ಧಪಾವು ತುಪ್ಪ ಸೇರಿಸಿ ಚಿಕ್ಕಣಪಾಕದಲ್ಲಿ ತೆಗೆದು ಶೋಧಿಸಿಕೊಂಡು ಬಂದ ಘೃತವನ್ನು ಸೇವಿಸಲು ಜೀರ್ಣಜ್ವರಂ ಗುಣಮಕ್ಕುಂ (ಸಕನೃ. ೧೧೪). [< ವಾಸ$_2$ + ಘೃತ]

ವಾಸ್ತಿ$_1$, ವಾಸೆ$_1$ (ನಾ). ೧. ಪ್ರತಿಜ್ಞೆ ; ಶಪಥ ; ಸಂಕಲ್ಪ : ಸಿರಿಯಾಳನಂದದಲಿ ಆ ಸುತನನರ್ತಿಸೆನು ಹೊಮ್ಮಳೆ ಸೂಸವೇಳನು ಚೋಳನಂತಿದು ವಾಸಿ (ಬಸವು. ೯-೩೩) ; ಯಜ್ಞತುರಗಮಿದು ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ . . . ತನಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು (ಕೃಷ್ಣಮಿಶ್ರಾ. ೨೦-೭). ೨. ಹುರುಡು ; ಸ್ಪರ್ಧೆ ; ಮೇಲಾಟ : "ವಾಸಿಯೆ ಪಂಥಂ" (ಭಾರನಿ. ೧೨) ; ಕೊಕ್ಕು ಬೆಕ್ಕಸಂಬಡೆ ನುಡಿಗುಂ ನೀರ್ಗಾಗೆ ವಾಸಿಯಿಂದಂ (ಜೀವಸಂ. ೧೬೪-೩೧) ; ಬಿಡು ವಾಸಿಯಂ ತನ್ನೊಡನೆ ಗೋತ್ರಹತ್ಯಾದೋಷಮಂ ಕಳಿದುಕೊಂಬ ಮಬಿಕೆ ಏಸು ಹರಿಗಳ್ಳೇಕು ನಿನಗೈಸನೀವೆ ನಾನು (ಕೃಷ್ಣಮಿಶ್ರಾ. ೨೫-೩೨). ೩. ಛಲ ; ಹಠ : ವಾಸಿಯೇ ಮಕ್ಕಳುಗಳೊಡನೆಂದಿರ್ದಡತಿವೆಗ್ಗಳನು ನಿಜೆಂದುಂಬ ಸುರಿದನು ಪವನಜನ ಮೇಲೆ (ಕುಮಾರ್ಯ. ೧೩-೧೦) ; ಆಹವವಿದೀಗ ಬಲ್ಲರೆ ನಿಲು ಪಲಾಯನವ ಮಾಡದಿರು ವಾಸಿ ನಿನಗುಂಟಾದರೆ ಈಗಿಲ್ಲಿ ಕಾಳಿಗಂಗೊಟ್ಟೆನ್ನ ಜಯಿಸಿ ನೀ ಪೋಗು (ಶಾರಂಗ. ೭೩-೩೨). ೪. ಕೀರ್ತಿ ; ಹೆಸರು : ಆ ಜಂಗಮ ಹೆಣ್ಣು ಬೇಡಿದರೆ ಸಂಸಾರಿ ಎಂದು ಹೊನ್ನ ಬೇಡಿದರೆ ಆಶಕನೆಂದು ಮಣ್ಣು ಬೇಡಿದರೆ ಬದ್ಧಕನೆಂದು ಇಷ್ಟಕ್ಕೆ ನೊಂದ ಮತ್ತೆ ಭಕ್ತಿವಾಸಿಗೆ ಹೋರಲೇಕೆ (ವೋಳಿಮಾ. ೫೩-೨೧೯) ; ವಾಸಿಯನು ಬಿಸುಟಕಟ ಜೀವದಲಾಸೆ ಮಾಡಿದೆವು (ಕುಮಾಕ. ೧೩-೩). ೫. ಗುಣಮಟ್ಟ ; ದರ್ಜೆ : ಚಿನ್ನವ ಕೊಂಬಲ್ಲಿ ಅದಱ ಬಣ್ಣವ ಕಂಡು ಬಣ್ಣ ವಾಸಿಯ ಕುಱುಹಿಟ್ಟು ಅದು ತನಗೆ ಚೆನ್ನಾದಡೆ ಕೊಂಬ ಅಲ್ಲದೊಡಲ್ಲ (ಸಕನ. ಕ. II,೨೪೨-೫). ೬. ಕೆಚ್ಚು ; ಸ್ಥೈರ್ಯ : ಬೀಸಿ ಬಿಡೆ ಮಾಧವಂ ಭೂತಳಕೆ ಬಿದ್ದು ಮಿಗೆ ಗಾಸಿಯಾದಂ ದೇಹಬಲಮಿಳಿದುದುಜೆ ಮನದ ವಾಸಿ ಪಯ್ಸರವಾಯ್ತು (ಚಿಬಪು. ೨೫-೩೫). ೭. (ತನ್ನ ಶೌರ್ಯದ ಬಗ್ಗೆ ಇರುವ) ಆತ್ಮವಿಶ್ವಾಸ ; ಅಭಿಮಾನ : ನಿಷ್ಠುರಭಾಷೆಯ ನುಡಿದ ಮತ್ತೆ ರಣದಲ್ಲಿ ವಾಸಿಗೆ ಸಾಯಬೇಕು (ವೋಳಿಮಾ. ೩೬-೧೫೨); ಆ ಹರಿಬದಲಿ ಕೆಡುಹುವುದರಿಯನವಗಡಿಸಿದೊಡೆ ಸಾವರು ವಾಸಿಯು [ಪಾಶಾಂ. ಪಂಥವು]ಳ್ಳವರು (ಕುಮಾಕು. ೬-೨೪). ೮. ಘನತೆ ; ಮೇಲ್ಮೆ ; ಹಿರಿಮೆ : ಕೊಟ್ಟರೆ ವಾಸವಾದ್ಯರು ನಗರೇ ಸೀತೆಯನಂಜಿ ರಾಘವಗೆ ವಾಸಿಯಿಲ್ಲದ ಬದುಕು ಬೇಯಲಿ (ಕೌಶಿರಾ. ೨೩-೩) ; ನೃಪರನು ಜಜ್ಜಿದು ತಂದೆನು ವಾಸಿಗೋಸುಗ ನಿನ್ನ ನಾನು (ನಿಭಾಗ. ೧೦-೮೭-೧೫). ೯. ಅಹಂಕಾರ ; ಗರ್ವ ; ಮದ : ಕೊಡುವುದು ಕನ್ನೆಯ ನಡೆವುದು ನಣ್ಣನು ಪಡೆವುದು ಬೇಡಿದ ನಾಡ ಒಡೆಯನೆ ಬಂದ ಸೌಜನ್ಯವ ಮೆಱೆವುದು ಬಿಡುವುದು ವಾಸಿ ದೂಸಕವ (ವರ್ಧಚ. ೬-೬೩); ಆ ಶೂರ್ಪನಖಿಯ ನುಡಿ ಕೇಳುತ್ತ ಕನಲುತಂ ವಾಸಿಯಿಂ ಖರದೂಷಣಾದಿಗಳು ಬಲವೆರಸಿ ಬೇಸರದೆ ರಣಮುಖಕೆ ಬರಲು (ವೆಂಕಾರಾ. ೧-೨-೧೮). ೧೦. ಗೊಡವೆ ; ವಿಚಾರ : ಗಂಗವಳ್ಳಿಯ ದೊರೆಯನ್ನು ವಧಿಸೆಂದು ರಾಜಾಜ್ಞೆ ಯಾಗಿದೆ. ಧರ್ಮಾಧರ್ಮ ವಾಸಿ ನಿನಗೇಕೆ ? (ಹಾಹತ್ತ. ೧೯). ೧೧. ಭಾಗ ; ಪಾಲು : 'ಅರೆವಾಸಿ', 'ಕಾಲುವಾಸಿ' ಪರಾ. ೧೨. ದೇಹಸ್ಥಿತಿಯಲ್ಲಿ ಉಂಟಾಗುವ ಸುಧಾರಣೆ, — ಗುಣ : ವಾಸಿ ಆಗೋ ತರಹಾನೇ ಇಲ್ಲ (ಮುನಿಮಾ. ೧೫) ; ವಾಸಿ ಆಗದ ರೋಗಕ್ಕೆ ರಾತ್ರಿಮದ್ದು ಮಾಡಿದರೂ ವ್ಯರ್ಥ (ಗಾಜೆ). ೧೩. ಮೇಲು; ಉತ್ತಮ : ರಾಜಸೂಯವು ನನಗೆ ಮೀರಿದ್ದು ಎಂದು ಅದರ ಯೋಚನೆಯನ್ನು ಬಿಟ್ಟುಬಿಡುವುದೇ ವಾಸಿ (ವಚಭಾ. ೭೬) ; ಇನ್ನು ಮೇಲೆ ತಾನು ಎಚ್ಚರಿಕೆಯಿಂದಿರುವುದು ವಾಸಿ (ದೂಷಿಟ್ಟು. ೧೩೬). ೧೪. ಸಾಲವಾಗಿ ಕೊಟ್ಟ ಹಣಕ್ಕೆ ಹಣ ಅಥವಾ ಧಾನ್ಯದ ರೂಪದಲ್ಲಿ ಕೊಡುವ ಬಡ್ಡಿ (?) : ಬಂಗಮಂಜು[ವ] ಮೊದಲಾದ ಹಿರಿಯರು ಲೋಕಬೆಟ್ಟೆಂಬ ಬಾಳಿಕೆಯನು ಬಾಳಿ ಬಂದಲ್ಲಿ ಅಲ್ಲಿಯ ತೆರು [ಸಿ]ದ್ದಾಯ ಬಡ್ಡಿ ವಾಸಿ ಹೊಂನು ಭತ್ತವನು ಕಾಲಕಾಲಕ್ಕೆ ನಡಸತೀರದೆಯಿರಲಾಗಿ (ಸೌಇಇ. IX - ii, ೪೬೦-೧೩; 1465) ; ನೀಉ ಕಟಿಸ್ತ ಕೆಱೆಯ ಕೆಳಗಣ ಗದೆಯ ಅಳತೆಯ ಕೋಲಿನ ವಾಸಿಗೆ ನಾಉ ಹೆಚ ಕಟಿದು ಖಂಡುಗ ಸಪಕಾರ ಭಾಗ ೧೫ . . . ೮ ಖಂಡುಗದ ಮರ್ಯಾದೆಯಲೂ ಕಡುಗುತ್ತಗೆಯಾಗಿ ಸಲ್ಲಿಸಲುಳವರು (ಪಿಕ. X. ಮುಳಾ. ೧೭೬ ೬, 1503). 'ತಲವಾಸಿ' ಪರಾ. ೧೫. ಬಯಕೆ ; ಆಸೆ (?) : ಬರಿಯ ಭಾಷೆಯಿಂ ಪೋಗಾಡಿಕೊಳಲು ಪರನಾರಿಯರ ವಾಸಿಯಂ ಕಲಿತ ಯೊ ಮತಿಯಿಂ ಭವದ್ವಂಶ ನಾಶಮಾಗದೆ ಪೋಗುವುದೆ ಮೂಢ (ವೆಂಕಾರಾ. ೫-೯ ೨೪). ವಾಸೆ$_2$: ೨. ಆರೊಡನೆ ಸಮರಂಗಕ್ರೋಧಮದಾರೊಡನೆ ಮನ್ಮಥನ ವಧೆಯ ವಿಕಾರವಾರೊಡನುಬ್ಬುಗೊಬ್ಬಿನ ವಾಸೆ ಭೇಸಗಳು (ಅಂದಾಕಾ. ೨೫ ೨೫). ೭. ವಾಸೆಯಿಲ್ಲದೆ ಮಂತ್ರಮಂ ಪರಿಗ್ರಹಿಸುವಭಿಲಾಷೆಯಿಂದೊಜಿಲ್ದು ಅತುಳಾಯಮ್ಮನಾಲಯದಿ ದಾಸಗೆಲಸ ಮಾಡಿ (ತಿರುಶ. ೩-೪೪)

ವಾಸಿಪಂಥ = ಪಣ ಮತ್ತು ಪ್ರತಿಜ್ಞೆ : ರಾಜನಿಯೋಗದವರೆಲ್ಲಾ ಹರಕಪೇಶ್ವರ ಬಾಣನೆಂದು ನುತಿಸುತ್ತಿರಲು ಮಯೂರಂಗೆ ವಾಸಿಪಂಥಂ ಪುಟ್ಟಿ ಹರಿಯಿಂದಲೆನ್ನಂಗ ಸುವರ್ಣವಾಯಿತ್ತು ಒಂದು ದಿನಕ್ಕೆ ಹರನಿಂದ ಪರವಿಲ್ಲೆಂಬುದೇನು ಕಾರಣವೆಂದು ಮಯೂರ ಸೂರ್ಯನ ನುತಿಸಿ ಕೇಳಲು (ಭೃಗುಮ. I, ೪೬).

[ದೇ. ii ತಮಿ. ವಾಚಿ; ತುಳು. ವಾಸಿ, ವಾಶಿ; ತೆಲು. ವಾಸಿ]

ವಾಸಿ$_2$ (ನಾ). ೧. ವಾಸ ಮಾಡುವುದು. ೨. ವಾಸಿಸಿರುವವನು ; ನೆಲಸಿರುವವನು : ಧಾರಿಣಿಯ ವಾಸಿಗಳ್ಗಿಹುದೊಂದು ಹಿತವಾರ್ತೆ ಆರಯ್ಯುದಾರ್ತರ್ ಅತ್ಯಾರ್ತರಾ ಪದವ (ಮಂಜಕಿ. ೩೬೬) 'ನಗರವಾಸಿ' ಹೋ. ೩. ಪರಿಮಳದಿಂದ ಕೂಡಿರುವುದು ; ಸುವಾಸನೆಯುಳ್ಳುದು. ೪. ಬಟ್ಟೆಯನ್ನು ಧರಿಸಿರುವುದು. ೫. ಬಟ್ಟೆ ; ಅರಿವೆ ; ವಸ್ತ್ರ (?) : ವಾಸಿಯನೊದರಿ, ರಾಮನ ಸುವಾಸಿನಿಯನೊರ್ಕಯ್ಯೊಳ ವುಂಚಿಟ್ಟು ಘೋರವಜ್ರಾಸಿಯಂ ಕೊಂಡು ಪೇಚರಂ ಪಾಯ್ದನ್ ವಿಹಂಗೇಶನಂ (ಶ್ರೀರಾಮಾ. ೨೪೯-೫೭೧). [ಸಂ. ವಾಸಿನ್]

ವಾಸಿ$_3$ (ನಾ). ಮರವನ್ನು ಕೆತ್ತುವ, ಆಗಲ ಬಾಯಿಯಿರುವ ಒಂದು ಬಗೆಯ ಕಬ್ಬಿಣದ ಸಾಧನ ; ಬಾಚಿ ; ಉಳಿ. [ಸಂ.]

ವಾಸಿಗ (ನಾ). ಹೆಸರು ಗಳಿಸಿದವನು ; ಕೀರ್ತಿಶಾಲಿ : ದೇಶವೆಮ್ಮದು ಹೇಳುವೊಡೆ ಪರದೇಶ ಬಿರುದಿನ ಬಿಂಕಕಾಱರ ವಾಸಿಗರನಲ್ಲೆನಿಸುವಲ್ಲಮನೆಂಬ ಪೆಸರೆನಗೆ (ಪ್ರಭುಲಿಂ. ೫-೧೩). [ವಾಸಿ$_1$ + - ಗ$_2$]

ವಾಸಿತ (ಗು). ೧. ಪರಿಮಳದಿಂದ ಕೂಡಿದ ; ಸುವಾಸನೆಯುಳ್ಳ : ವಿತತೋದ್ಯತ್ಪಟವಾಸವಾಸಿತ ದಿಶಾಕಾಂತಾಗಣಂ ನಿರ್ಭರೋತ್ಕಿತ ಪಿಷ್ಟಾತಕಪಿಂಜರೀಕೃತ ವಿಯಚ್ಚಕ್ರಂ (ಅದಿಪು. ೬-೩೮) ; ಗರಳೇಂದೀವರವಾಸಿತೋಗ್ರವಿಷಮಂ ಪುಣ್ಯಾಮೃತಂ ನಿರ್ವಿಷೀಕರಣಂ ಗೆಯ್ವೊಲೊರ್ಮೆಗೊರ್ಮೆಗರ್ದೆಯೊಳ್ ಬೈಕಿಟ್ಟೆಯೊಳ್ . . . ನಾಲ್ವರಿರ್ವರ್ವರೆ ಯುಗ್ಮದ್ವಯಮಾದರ್ (ಶಾಂತಿಪು. ೬-೧೫೩). (ನಾ). ೨. ವಾಸನೆ ಕಟ್ಟಿದ ವಸ್ತು ; ಸುಗಂಧಗೊಳಿಸಿದ ಪದಾರ್ಥ : "ಭಾವಿತಂ, ವಾಸಿತಂ ೨ ವಾಸನೆ ಕಟ್ಟಿದ ವಸ್ತುವಿನ ಹೆಸರುಗಳು" (ಸಿದ್ಧಾಂತಿ. ೨೦೯). [ಸಂ.]

ವಾಸಿತೆ (ನಾ). ೧. ಹೆಂಗಸು : "ರಾಮಾ, ವಾಮಾ, ವಾಮನೇತ್ರಾ . . . ವಾಸಿತಾ, ವರ್ಣಿನೀ, ಸ್ತ್ರೀ, ಸೀಮಂತಿನೀ, ಅಂಗನಾ . . . ಯುವತಿಃ - ಈ ೨೮ ಸ್ತ್ರೀಯರ್" (ಹಲಾಯು. ೭೯-೩೨೭). ೨. ಹೆಣ್ಣು ಆನೆ : "ವಾಸಿತಾ - ೧. ಹೆಂಗುಸು. ೨. ಹೆಣ್ಣಾನೆ" (ಸಿದ್ಧಾಂತಿ. ೫೯೨). [ಸಂ.ವಾಸಿತಾ]

ವಾಸಿತೋಱು, ವಾಸೆದೋರು (ಕ್ರಿ) ೧. ಸಮಾಧಾನವುಂಟಾಗು : ವಾಸಿತೋಱುತು ಮನಕೆ ಜನಕಮಹೀಶಸುತೆ ನಿನಗಂದು ಭವಬಾಣಾಸನದ ಭಾರಣೆಯ ಬಿಗುವಿನ ಜಗುಳುದಲೆಯಿಂದ ದಾಶರಥಿಗಾ ರಮಣಿ ರಾಣೀವಾಸವಾದಳು (ತೊರಾ. ೩-೭-೧೭). ವಾಸೆದೋರು : ೨. ಉಚಿತವಾಗು; ತಕ್ಕುದಾಗಿರು : ಕೇಸರಿ ಮುಂದಾನೆ ಬಿರುದ ಹೊಗಳಿದರೆ ವಾಸೆದೋರದು (ಸೌಂದಕಾ. ೪-೬). [ವಾಸಿ$_1$ + ತೋಱು]

ವಾಸಿನಿ (ನಾ). ೧. ವಾಸಿಸುವವಳು ; ಇರುವವಳು : ಪರಮಾಗಮಮೂರ್ತಿ . . . ವಿಬುಧೋತ್ಕರಮಾನಸಾಬ್ಜವಾಸಿನಿ ಸರಸ್ವತೀದೇವಿ ವರದೆಯೆಕೈಮಗೆಂದುಂ (ಕಾಮಾನ. ೨). ೨. ಉಡುಪನ್ನು ಧರಿಸಿದವಳು. ೩. ಮರಾಟಿಮೊಗ್ಗು : "ವಾಸಿನೀ - ಧಾತಕೀಕುಸುಮ" (ಒಷಧಿ. ೧೪೯). [ಸಂ. ವಾಸಿನೀ]

ವಾಸಿಬೀಳು (ಕ್ರಿ). ಮಾತುಕತೆ ನಡೆ ; ಒಪ್ಪಂದವಾಗು : ಇನಜನ ದಾಶರಥಿ ಪತಿಕರಿಸಿದನು ಗಡ ಪರಮಮೈತ್ರಿಯಲಿ ವಾಸಿಬಿದ್ದುದು ಗಡ ಶರೀಯ ಮಹೀಶನಲಿ ತಮ್ಮನಲಿ (ತೊರಾ. ೪-೪-೮). [ವಾಸಿ₁ + ಬೀಳು₁ (< ಬೀಟ್₁)]

ವಾಸಿಲುವರಿ (ನಾ). ಒಂದು ಬಗೆಯ ತೆರಿಗೆ : ಯೀ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾನ್‌ಪಯಿರು ಪುನ್‌ಪಯಿರು ವಾಸಿಲುವರಿ ವಾಲುವರಿ . . . ಮಾನ ಬೆಲೆ ಸಂತೆ ಉಂಟಾದ ಹಲ ಉಪಾಧಿಗಳೂ ಸಹ ಸೇರ್ಸಿ ಕೊಟ್ಟೆವಾಗಿ (ಸೌಇ. IX - ii, ೪೬೩-೬; 1470); ವಾಸಿಲುವರಿ ವಾಲುವರಿ ಶಕುಕಡಿಮೆ ತಱೆಕಡಮೆ . . . ಮೊದಲಾದ ಹಲ ಉಪಾಧಿಗಳು ಸಹ . . . ಸಂವತ್ಸರಂಪ್ರತಿಯೂ ತಪ್ಪದೆ ನಡಸುವುದಕ್ಕೆ ಕೊಟ್ಟು (ಸೌಇ. IX - ii, ೪೬೬-೬; ಸಿ. 1472). [← ತಮಿ. ವಾಚಲ್‌ವರಿ]

ವಾಸಿವಟ್ಟ (ನಾ). ಗೌರವದ ಸ್ಥಾನ, - ಪದವಿ ; ಪ್ರತಿಷ್ಠೆ : ಆ ಜಂಗಮ ಮುಂದೆ ಬಂದು ನಿಂದಿರಲು ತಾ ಕುಳಿತಂತೆ ಇದ್ದು . . . ಲೇಸ ನುಡಿಯದೆ ವಾಸಿವಟ್ಟಕ್ಕೆ ಕೂಳನಿಕ್ಕುವ ಧಾತರಿಗೆಲ್ಲಿಹದೋ ಜಂಗಮಲಿಂಗದ ಪೂಜೆ (ಮೋಮಾ. ೩೦-೧೨೬) ; ವಾಸಿವಟ್ಟವ ನೋಡಿದನೆ ಲಕ್ಷ್ಮಿಜನವರಲಿ (ಕುವಾಕ. ೫-೩೧) ; ಬಹಳ ದ್ವೇಷಗಳನಿಟ್ಟಿಹುದು ಮನದಲಿ ವಾಸಿವಟ್ಟವ ಮಾಡುವುದು ಹಿರಿಯರನು ಕಂಡವರ ದೂಷಿಸುವುದು . . . ವರರ ವಿನಾಶವನೆ ಬಯಸುವುದಧರ್ಮ (ಪ್ರಜ್ಞಾಚ. ೯-೬). [ವಾಸಿ₁ + ಪಟ್ಟ₃?]

ವಾಸಿವಾಳಿಕೆ (ನಾ). ಛಲದಿಂದ ಕೂಡಿದ ಬಾಳು ,—ಬದುಕು : ವಾಸಿ ಲೇಸಭಿಮಾನವರ್ಗದ ವಾ[ಪಾರಾ. ರಾ]ಸಿವಾಳಿಕೆ ಲೇಸು (ತೊರಾ. ೪-೨-೪೧).

[ವಾಸಿ₁ + ಬಾಳಿಕೆ₁ (< ಬಾಳ್ಕೆ)]

ವಾಸಿಷ್ಠ (ಗು). ೧. ವಸಿಷ್ಠನಿಗೆ ಸಂಬಂಧಿಸಿದ. ೨. ವಸಿಷ್ಠನಿಂದ ರಚಿತವಾದ: 'ವಾಸಿಷ್ಠಪುರಾಣ' ಪರಾ. (ನಾ). ೩. ವಸಿಷ್ಠನ ಮಗ. [ಸಂ.]

ವಾಸಿಷ್ಠಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು : ಸನತ್ಕುಮಾರಪುರಾಣ . . . ವಾಸಿಷ್ಠಪುರಾಣ ಲೈಂಗ್ಯಪುರಾಣ . . . ಭಾರ್ಗವ ಪುರಾಣವೆಂಬವೇ ಆಯಾಯ ನಾಮಧೇಯಮುಳ್ಳವರಿಂ ನಿರೂಪಿತಂಗಳಾದ ಹದಿನೆಂಟು ಉಪಪುರಾಣಂಗಳು (ವಿವೇಕ. ೯). [ಸಂ.]

ವಾಸಿಸು (ಕ್ರಿ). ೧. ವಾಸಮಾಡು ; ನೆಲೆಗೊಳ್ಳು ; ಇರು : ಒಂದೆ ಮನದಲಿ ಸಿಂಧುಶಯನ ಮುಕುಂದ ಎನೆ ಎಂದೆಂದು ವಾಸಿಪನಾ ಮಂದಿರದೊಳಗೆ (ಪುರಂದ. ೧-೧೪೭-೧) ; ಪಟ್ಟಣಗಳಲ್ಲಿ ವಾಸಿಸುವ . . . ಕುಟುಂಬಗಳ ಆದಾಯವನ್ನನುಸರಿಸಿ ಸಲೆಯನ್ನು ಅನುಗೊಳಿಸಬಹುದು (ಅಯಾಶಾ. ೨೪). ೨. ಮೂಸು ; ಆಘ್ರಾಣಿಸು : "ವಾಸಿಸು-ಆಘ್ರಾಣೇ" (ಶಮಧಾ) ; ಸುಣಿ . . . ನಭಮಂ ನುಂಗಲೊಡರ್ಚಿದಂತೆ ಮೇಘಮಂ ನೋಡಿ ದೆಸೆದೆಸೆಯಂ ವಾಸಿಸಿ ನಲವಜೆದು (ಪಂಚತಂ. ೪೬-೬) ; ಹೊಸತೊಂದು ತಾವರೆಯರಲ ಕೈವಿಡಿದು ವಾಸಿಸುತ ಮಾತಾಡಿದರೇನು (ಭರತ. ೪೨-೨೩). ೩. ಮೂಸುವಂತೆ ಮಾಡು ; ಆಘ್ರಾಣಿಸುವಂತೆ ಮಾಡು : ಘ್ರಾಣದಾಹಾರವ ಜಂಗಮವ ವಾಸಿಸುವೆ ಜಿಹ್ವೆಯಾಹಾರವ ಜಂಗಮವನೂಡಿಸುವೆ (ಬಸವ. ೪೨೯). ೪. ಪರಿಮಳವನ್ನು ಬೀರು ; ಸುಗಂಧಯುಕ್ತವಾಗು : ಆ ಸಕಳಸ್ಥಾನಿವಹದ ಪೂಸಿದ ಮೃಗಮದದ ಪುಡಿಯ ಪೂವಿನ ರಜದಿಂ ವಾಸಿಸಿದ ನೀರ ಕದಡಿಂದಾಸವದೊಳ್ ಸೊರ್ಕಿ ಬೆಂಡು ನುಗುಟ್ಟುವು ಮೊಂಗಳ್ (ಪಂಪಭಾ. ೫-೬೫) ; ವಾಸಿಸಲ್ಕೆ ಪಸರಿಸಿದ ಪಲವುಮಲರ ನೆರವಿಯ ನೀರ್ವೂಗತೊಳಗೆ ಪರಿವ ಚಂದನರಸಪ್ರವಾಹಕೃತಕವಾಹಿನಿಗಳುಂ . . . ಮನೋಹರಂಗಳೆ ನಿಸರ್ದುವು (ಚಂದ್ರಪ್ರ. ೧-೧೦೫ ವ). ೫. ಗಮಗಮಿಸುವಂತೆ ಮಾಡು ; ವಾಸನೆಕಟ್ಟು ; ಸುಗಂಧಗೊಳಿಸು : ಕಮಳನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೆಜವಕ್ಕಿಯಂ ನೀವುಂ ಬಂದೊಡೆ ಬೆರಸಿಯಟ್ಟುದು ಕೂಟುಮಪ್ಪುದಱಿಂ ವಾಸಿಸಿದಕ್ಕಿಯ ಕೂಟಂ ಸುಂಗುಗುಮುಟ್ಟಿದ ಕೂಟನುಗುಟ್ಟುಂ (ವಡ್ಡಾರಾ. ೨೭-೬) ; ಬಸಿಲೊಳದನಿಟ್ಟು ಚಂಪಕಕುಸುಮದಿನಿಂಬಾಗೆ ನಿಟ್ಟಲುಂ ವಿಧಿಯಿಂ ವಾಸಿಸಿದೊಡೆ ಚಂಪಕತೈಲಂ ವಸುಧಾಧಿಪ ಯೋಗ್ಯಮಕ್ಕುಂ (ಲೋಕೋಪ. ೭-೧೭). ೬. (ಆಲಂ) ಅನುಭವಿಸು (?) : ನಿಲೆ ವಾಸಿಸಿ ಪಲವು ಭವಂ ನೆಲಸಿದ ಮಿಥ್ಯಾತ್ವದೊಂದು ದುರ್ವಾಸನೆಯಂ ಸಲೆ ವಾಸಿಸಿದಾತಂ ಪೊರ್ದಲೊಲ್ಲನತಿವಿಮಳಚೈತನನುದ್ವಾಸನೆಯಂ (ಸಮಾನ. ೮-೨೩೪). 'ವಾಸನಿಸು' ಪರಾ.

[ವಾಸನ + - ಇಸು₃]

ವಾಸು₁ (ಕ್ರಿ). ಪಠಿಸು ; ವಾಚನಮಾಡು : ಸಂಜೆಯ ವಂದನೆಯ ಅಂಜದಲೆ ವಾಸುವದು ಸಂಜೆಯಂಜಿಕೆಯನೊಡಗೂಡಲಾ ಸಂಜೆ ನಂಜಿನಂತಕ್ಕು (ಸರ್ವಜ್ಞ. ೯೨೩).

[< ವಾಚಿಸು. / ತಮಿ. ವಾಚಿ]

ವಾಸು₂ (ನಾ). ೧. ಸರ್ವವ್ಯಾಪಕನಾದವನು ; ಪರಮಾತ್ಮ ; ಭಗವಂತ. ೨. ಆತ್ಮ ; ಜೀವ. ೩. ವಿಷ್ಣು. ೪. [ಜ್ಯೋತಿ] ಪುನರ್ವಸು ನಕ್ಷತ್ರ. [ಸಂ.]

ವಾಸುಕಿ (ನಾ). ೧. ಅಷ್ಟಫಣಿಗಳಲ್ಲಿ ಒಂದು ; P ದೇವತೆಗಳೂ ರಾಕ್ಷಸರೂ ಕ್ಷೀರಸಾಗರವನ್ನು ಕಡೆಯುವಾಗ ವಾಸುಕಿಯನ್ನು ಮಂದರಪರ್ವತಕ್ಕೆ ಹಗ್ಗದಂತೆ ಸುತ್ತಿ ಕಡೆದರು ಎಂದು ಭಾವಿಸಲಾಗಿದೆ : ತಮ್ಮ ತಮ್ಮ ಪೆಡೆಗಳಿಂದಾ ಇಂದ್ರಾಗ್ನಿ ಮೊದಲಾದೆಂಟುದಿಕ್ಕಿನ ಭೂಮಿಯಂ ಕ್ರಮದಿಂ ಪೊತ್ತು ಅನಂತ ತಕ್ಷಕ ವಾಸುಕಿ . . . ಕಾಳವೆಂಬಷ್ಟಕುಲಫಣಿಗಳಿರ್ಕುಂ (ವಿವೇಕ. ೧೫೦). ೨. ಒಂದು ಬಗೆಯ ಹಾವು : ಬೆನ್ನಿನಲ್ಲಿ ನೈದಲಪುಷ್ಪದ ಆಕಾರವುಳ್ಳದು ವಾಸುಕಿಯೆನಿಸಿಕೊಂಬದು (ವಿಷಚಿ. ೨-೬). [ಸಂ.]

ವಾಸುಗಿ, ಬಾಸುಗಿ (ನಾ). ೧. = ವಾಸುಕಿ ೧ : ಕನ್ನಡಂಗಳೊಳೆಂದುಂ ವಾಸುಗಿಯುಮಱಿಯಲಾಱದೆ ಬೇಸಱುಗುಂ ದೇಶಿ ಬೇಱೆವೇಱಪ್ಪುದಱಿಂ (ಕವಿರಾ. ೧-೪೬) ; ನಡೆಗಲ್ಲಂದುಂ ಬಿಟ್ಟೊಂ ಕೊಡೆ ನೆಗೆದಪುದುರ್ವಿಯೆಂದು ವಾಸುಗಿ ಪಲವುಂ ಪೆಡೆಯಂ ಶಿಶು ನಡೆವೆಡೆಯೊಳ್ ಪಡೆದಾಂತು ಸಹಸ್ರಫಣನೆನಲ್ ವಿಸರ್ವಡೆದಂ (ಪಂಪಾಮಾ. ೩-೧೨೯). ೨. ಒಂದು ಬಗೆಯ ವೀಣೆ : ವಾಸುಗಿಯು ನಾಗಸರವೀಣೆ ತುಂಬುರವೀಣೆಯಾ ಸುನಾರದವೀಣೆ . . . ಗಾನ ಸಂಗೀತರಸ ರಚನೆ ಪ್ರಚುರವೆತ್ತು (ನವಮೋ. ೧೭-೪೨). ಬಾಸುಗಿ : ೧. ರತ್ನಸರ್ಪಳಱಿಯರೆ ದಿಟದಿಂ ಮಾನಸರಱಿಯರೆ ಬಾಸುಗಿ ತಾನಱಿಯನೆ (ಕಬ್ಬಿಗಾ. ೧೫೭) ; ವಾಸುಕಿ - ಬಾಸುಗಿ (ಶಮದ. ೨೫೫ ಪ್ರಯೋ) ; ಅವನ ಭಕ್ತ್ಯತಿಶಯಂಬೇಳ್ಪೊಡೆ . . . ನಾಲಗಿರ್ಚ್ಚಾಸಿರಮನುಳ್ಳ ಬಾಸುಗಿಗಳವೆ (ಪದ್ಮರಾ. ೪-೧೪). [< ಸಂ. ವಾಸುಕಿ. / ಪ್ರಾ. ವಾಸುಣ, ವಾಸುಗಿ]

ವಾಸುಗಿವಕ್ಕಿ (ನಾ). ಒಂದು ಬಗೆಯ ಹಕ್ಕಿ : ತೋಱೆತು ವಾಯಸನೆ ಡಗಡೆಯೆಡದಿಂದೆ ಹಾಱೆತು ಹಂಗ ದಕ್ಷಿಣಕೆ ದೂಱೆತು ಬಲದ ಭಾಗದಲ್ಲಿ ಮುಂಗಟ್ಟಿ ಪಾಱೆತು ವಾಸುಗಿವಕ್ಕಿ (ಮೋಹಕ. ೬-೨೫). [ವಾಸುಗಿ? + ಪಕ್ಕಿ]

ವಾಸುದೇವ (ನಾ). ೧. ವಿಷ್ಣು : ಕ್ರಿ.ಪೂ. ಒಂದು ಮತ್ತು ಎರಡನೆಯ ಶತಮಾನದ ಕೆಲವು ಶಾಸನಗಳು ಗರುಡವಾಹನನಾದ ವಾಸುದೇವನ ಮತ್ತು ಸಂಕರ್ಷಣನ ಪೂಜೆಯ ಅಂಶಗಳನ್ನು ಸೂಚಿಸುತ್ತವೆ (ಭಾರದ. ೨೫೩). ೨. ವಸುದೇವನ ಮಗ ; ಕೃಷ್ಣ : ಅತುಳ ಗೀತಾನಕಧ್ವಾನಮುಣ್ಬುತ್ತಿರೆ ಪೊಕ್ಕಂ ವಾಸವಾವಾಸವನಿಟ್ಟಿಪ ನಿಡಾವಾಸವಂ ವಾಸುದೇವಂ (ಜಗವಿ. ೯-೧೩೪) ; ಕಂಡೆ ನಾ ಗೋವಿಂದನ . . . ಶ್ರೀಕೃಷ್ಣನ ವಾಸುದೇವ ಅಚ್ಯುತಾನಂತನ (ಪುರಂದ. ೧-೯೦-೧). ೩. [ಜೈನ] ಅರ್ಧಚಕ್ರವರ್ತಿಗಳಲ್ಲಿ ಒಬ್ಬ; P "ಇವರಿಗೆ ನಾರಾಯಣ ಎಂದು ಹೆಸರಿದೆ. ಇವರು ತ್ರಿಖಂಡಕ್ಕೆ ಒಡೆಯರಾಗಿರುತ್ತಾರೆ" (ಆದಿಪು. ಜೈನ ಪಾರಿಭಾಷಿಕ ಶಬ್ದ ಕೋಶ) : ಸುವಿದುಚ್ಚಾದಿಗಳುಮಂ ತೀರ್ಥಕರಚಕ್ರಧರಬಲದೇವ ವಾಸುದೇವಪ್ರತಿವಾಸುದೇವಕಥಾಸಂಬಂಧಮುಮಂ ನಿರ್ಣಯಮಾಡಿದಾಗಳ್ (ಆದಿಪು. ೧೦-೬೩ ವ). ೪. [ತತ್ತ್ವಶಾ] ಪರಮಾತ್ಮನ ಒಂದು ರೂಪ : ವ್ಯೂಹಗಳು ನಾಲ್ಕು – ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂದು (ಭಾತತ್ತ್ವ. ೭೦೩). [ಸಂ.]

ವಾಸುಪೂಜ್ಯ (ನಾ). [ಜೈನ] ಹನ್ನೆರಡನೆಯ ತೀರ್ಥಂಕರನ ಹೆಸರು: ಶ್ರೀವಾಸುಪೂಜ್ಯಜಿನನಂ ದೇವಂ ಮಹಿಮಾವಿಶೇಷಭಾಸುರನಂ ಭಾವಿಸುವೆಂ ದ್ವಾದಶನಂ ಕೇವಳಬೋಧಪ್ರಭಾವಲಾಭನಿಮಿತ್ತಂ (ಭಾಧಪು. ೧೭-೩೯೫). [ಸಂ.]

ವಾಸೈ₁ 'ವಾಸಿ₁' ನೋ.

ವಾಸೈ₂ (ನಾ). ಒಂದು ಬಗೆಯ ಸಸ್ಯ ; ಆಡುಸೂಳೆ : "ವಾಸಾ-ಆಡಸೊಳೆ" (ಒಷಧಿ. ೧೪೯). [ಸಂ. ವಾಸ]

ವಾಸೆದೋರು 'ವಾಸಿತೋಱು' ನೋ.

ವಾಸೋದಕ (ನಾ). ಸತ್ತವರಿಗೆ ಸಂಸ್ಕಾರಸಮಯದಲ್ಲಿ ಒದ್ದೆಬಟ್ಟೆಯನ್ನು ಹಿಂಡಿ ಕೊಡುವ ತರ್ಪಣ : ಪ್ರಭುಗಳು ಪುರೋಹಿತರ ಸಲಹೆಯಂತೆ ಸ್ನಾನಮಾಡಿ . . . ವಾಸೋದಕಕುಂಭವನ್ನು ಕೈಯಲ್ಲಿ ಹಿಡಿದು . . . ಪಿತೃಭೂಮಿಗೆ ಬರಿಗಾಲಿನಲ್ಲಿ ಹೊರಟರು (ಶಾಂತಲಾ. ೧೮೫). [ಸಂ.]

ವಾಸ್ತವ (ಗು). ೧. ನೈಜವಾದ ; ಯಥಾರ್ಥವಾದ : ವಾಸ್ತವಭಕ್ತಿಯುತಂ ರೂಪಸ್ತವನಮಣಿಪ್ರವಾಳಮಂ ಜನನಾಸ್ಥಾನಸ್ತವನಮನೊದವಿಸಿ ಭುವನಸ್ತುತನಾದ ಗ್ಗಳಂಗಮಗ್ಗಳರೊಳರೇ (ವರ್ತ್ಮಪ್ರ. ೧-೬೧) ; ವಾಸ್ತವಸಂಗತಿ ಬೇರೆಯೇ ಇರುವಂತಿದೆ (ಬೋರೆದೇ. ೬). (ನಾ). ೨. ಸ್ವಾಭಾವಿಕವಾದುದು ; ಸಹಜವಾದುದು : ಮೊಘಲ್‌ಕಲೆ ನಿರೂಪಣಾತ್ಮಕವೂ ಸಾಹಿತ್ಯಿಕವೂ ವಾಸ್ತವವೂ ಆಗಿತ್ತು (ಭಾರದ. ೫೨೯) ; ವಾಸ್ತವವಾಗಿ ಭಿನ್ನರಾಗಿರುವ ಜೀವ ಜಗತ್ತುಗಳು ನಿತ್ಯಸತ್ಯವಸ್ತುವೆನಿಸಿದ ಪರಮಾತ್ಮನಿಗೆ ಶರೀರವಾಗಲಾರವು (ಶಕ್ತಿವಿ. ೧೭). ೩. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ಬಗೆ ; ವಸ್ತುವಿನ ಸ್ವಭಾವವನ್ನು ಹೇಳುವಾಗ ಇದ್ದುದನ್ನು ಇದ್ದಂತೆ ಹೇಳುವುದು : ವಸ್ತುಸ್ವಭಾವಕಥನಂ ವಾಸ್ತವಮುಪಮಾದ್ಯಶೇಷವಕ್ರೋಕ್ತಿವಿಪರ್ಯಸ್ತಂ ಸಮಸ್ತಲೋಕಮನಸ್ತೋಭನಕಾರಿ ಚಾರುತರಪುರುಷಾರ್ಥಂ (ಕಾವ್ಯಾವ. ೬೦೬) ; ಸಾದೃಶ್ಯಮೂಲಕವಲ್ಲದೆ ಇರುವ ಅರ್ಥಾಲಂಕಾರಗಳೂ ಎಷ್ಟೋ ಇರುವುದರಿಂದ ವಾಮನಮತವನ್ನು ಒಪ್ಪದೆ ರುದ್ರಟನು ೧. ವಾಸ್ತವ, ೨. ಔಪಮ್ಯ, ೩. ಅತಿಶಯ, ೪. ಶ್ಲೇಷ – ಇವುಗಳನ್ನು ಅನುಸರಿಸಿ ವಿಭಾಗಮಾಡುತ್ತಾನೆ (ಕೃಸಿಡಿ. ೨೫೨). [ಸಂ.]

ವಾಸ್ತವಂ (ಅ). ನಿಜವಾಗಿ ; ದಿಟವಾಗಿ : ಹುಡುಕುತಿರೆ ಕಣ್ಗೆ ಬೀಳ್ದುದೊ ವಾಸ್ತವಂ ಸ್ವರ್ಣನಿಧಿರಾಶಿ (ಶ್ರೀರಾಮಾ. ೬೪ ೨೫೦). [< ವಾಸ್ತವ]

ವಾಸ್ತವಿಕ (ಗು). ೧. ನಿಜವಾದ ; ದಿಟವಾದ : ಪ್ರತಿನಿಮಿಷವನ್ನು ಉಪಯುಕ್ತವಾದ ಕೆಲಸದಲ್ಲಿ ವೆಚ್ಚಮಾಡುವುದರಿಂದ ವಾಸ್ತವಿಕಸುಖವೂ ಮರ್ಯಾದೆಯೂ ದ್ರವ್ಯವೂ ದೊರೆಯುವವು (ಮುಂಬಯಿ. ೪-೧೯೦). (ನಾ). ೨. ನಿಜವಾದುದು ; ವಾಸ್ತವವಾದುದು : ಮಾಂತ್ರಿಕ ದೈವಿಕ ನೈಸರ್ಗಿಕ ಯೌಕ್ತಿಕ ವಾಸ್ತವಿಕಗಳೆಂಬ ಪಂಚಭೇದಸಾಧನಗಳಿಂದಲುಂ (ವಿವೇಕ. ೨೬೩); ನೀನು ಹೇಳಿದ್ದು ವಾಸ್ತವಿಕವೇ ಸರಿ (ಮುಂಬಯಿ. ೪-೬೮). ೩. ಸಹಜವಾದುದು ; ಸ್ವಾಭಾವಿಕವಾದುದು : ಶಿಕ್ಷಣತತ್ವವನ್ನು ಆದಷ್ಟು ವಾಸ್ತವಿಕಮಾರ್ಗದಲ್ಲಿ ರೂಪಿಸುವುದು ಬಳಕೆಗೆ ಬರುತ್ತಿದೆ (ಶಿಕ್ಷದ. ೪೦೮). ೪. ಸರಿಯಾದುದು ; ಉಚಿತವಾದುದು ; ಯೋಗ್ಯವಾದುದು : ಅವರ ಅಭಿಪ್ರಾಯವು ವಾಸ್ತವಿಕವಿದೆ (ಮುಂಬಯಿ. ೪-೭೪) ; ಅವರ ಮುಂದಿನ ಶಿಕ್ಷಣಕ್ಕೆ ವಾಸ್ತವಿಕವೂ ಫಲದಾಯಕವೂ ಆದ ಸಲಹೆ ನೀಡುವಂತಿರಬೇಕು (ಶಿಕ್ಷದ. ೩೬೨). [ಸಂ.]

ವಾಸ್ತವಿಕತೆ (ನಾ). ಸಹಜವಾದುದು ; ಸ್ವಾಭಾವಿಕವಾದುದು : ಇಂಗ್ಲಿಷಿನ 'Realism' ಎಂಬುದಕ್ಕೆ ಸಮಾನಪದ ನಮ್ಮ "ವಾಸ್ತವಿಕತೆ" (ಸಮಾಲೋ. ೧೧೧).

[ಸಂ. ವಾಸ್ತವಿಕತಾ]

ವಾಸ್ತವ್ಯ (ಗು). ೧. ವಾಸಿಸುವ ; ನೆಲಸುವ. ೨. ವಾಸಿಸಲು ಯೋಗ್ಯವಾದ. (ನಾ). ೩. ವಾಸ ; ಮೊಕ್ಕಾಮು : ತುಳುವರೆಂದರೆ ತುಳುಭಾಷೆಯನ್ನಾಡುವವರೋ? ಅಥವಾ ತುಳುದೇಶದಲ್ಲಿ ವಾಸ್ತವ್ಯ ಮಾಡಿಕೊಂಡಿರುವವರೋ? (ತುಳುನಾ. ೯) ; ಬಸವಂತಿಗೆ ಮಾತುಕೊಟ್ಟಂತೆ, ಅಂದಿನಿಂದಲೇ ನನ್ನ ವಾಡೆಯ ವಾಸ್ತವ್ಯ ಸುರುವಾಯಿತು (ದೀಪಹ. II, ೧೭೩). ೪. ವಾಸಮಾಡುತ್ತಿರುವವನು : "ವಾಸ್ತವ್ಯಃ, ಮನೆಯೊಳಿರಲ್ತಕ್ಕಂ" (ಕಾಶಕ್ಕ. ೧೭೧). [ಸಂ.]

ವಾಸ್ತು (ನಾ). ೧. ಮನೆ ಮುಂತಾದ ಕಟ್ಟಡಗಳನ್ನು ಕಟ್ಟಲು ಯೋಗ್ಯವಾದ ಜಾಗ ; ಗೃಹನಿರ್ಮಾಣಕ್ಕೆ ತಕ್ಕ ಸ್ಥಳ, – ನಿವೇಶನ : ಆ ವರನಿಧಿಲಾಭದಿನುಂ ಪಾವನಪರಿಪಕ್ವಪುಣ್ಯದಿನುಮೆನೆ ಮತ್ತಂ ಆ ವಾಸ್ತುವಿನೊಳ್ ವಾಸ್ತುಸುಕೋವಿದರೊಳ್ನೆನೆ ನೆಗಳ್ದಿದರ್ ಸಿರಿವೊಳಲಂ (ಸೌನಂದ. ೧-೪೧). ೨. ಮನೆ ; ನಿವಾಸ : ಸ್ವಸ್ತಿಶ್ರೀಯರ್ಪ್ಪತ್ತಮವಾಸ್ತು ಜಯಶ್ರೀಯ ವಿಲಸಿತಾವಾಸಂ ಲೋಕಸ್ತುತ್ಯೆ ಯಶೋವನಿತೆಯ ವಿಸ್ತಾರಸ್ತನಮೆಸೆವ ಹೊಯ್ಸಳವಂಶಂ (ಎಕ. V, ಅರಸೀ. ೩೮-೨; 1174). ೩. ಮನೆಯ ಒಡೆಯ, –ಯಜಮಾನ : "ವಾಸ್ತುಃ - ಮನೆಯೊಡೆಯಂ" (ಕಾಶಕ್ಕ. ೧೬೧). ೪. ಅರುವತ್ತುನಾಲ್ಕು ಕಲೆಗಳಲ್ಲಿ ಒಂದು ; ಕಟ್ಟಡ ನಿರ್ಮಾಣ ವಿದ್ಯೆ : ಶಿಲಾಕರ್ಮಮುತ್ಕರಣಂ ಚಿತ್ರವಿವಕ್ಷೆ ವಾಸ್ತು ಶಕುನಜ್ಞಾನಂ . . . ಯಂತ್ರಪ್ರಯೋಗಮಖಿಲಮ್ಯಾಹೋತ್ಕರಮೆಂಬಿನಿತಱೊಳಂ ಬಲ್ಲರೆಲ್ಲರುಂ ಮೆಚ್ಚಪಡೆದನತಿಕೌಶಲಮಂ (ಪುಷ್ಪಪ್ರ. ೪-೫೯) ; ವಾಸ್ತುಶಿಲ್ಪದಲ್ಲಿ ಶಿಲ್ಪವೂ ಅಡಕವಾಗಿದೆ. ಪಾಶ್ಚಾತ್ಯ (European) ಸಂಪ್ರದಾಯದಲ್ಲಿ ವಾಸ್ತು ಬೇರೆ (Architecture), ಶಿಲ್ಪ ಬೇರೆ (Sculpture). ಆದರೆ ಭಾರತೀಯ ವಾಸ್ತುಶಿಲ್ಪದಲ್ಲಿ ಈ ಭೇದವಿಲ್ಲ (ಭಾರದ. ೯೧೦).

[ಸಂ.]

ವಾಸ್ತುಕ (ನಾ). ಒಂದು ಬಗೆಯ ಸೊಪ್ಪಿನ ಗಿಡ ; ಚಕ್ರೋತ : "ವಾಸ್ತುಕಮೆಂಬುದು ಚಕ್ರವತ್ತ" (ಹಲಾಯು. ೨೭-೧೦). [ಸಂ.]

ವಾಸ್ತುಕರ್ಮ (ನಾ). ೧. ಕಟ್ಟಡನಿರ್ಮಾಣ ವಿದ್ಯೆ ; ವಾಸ್ತುಶಿಲ್ಪ. ೨. ಗೃಹ ಪ್ರವೇಶಕ್ಕೆ ಮೊದಲು ಗೃಹಶಾಂತಿಗಾಗಿ ಮಾಡುವ ಪೂಜಾದಿ ವಿಧಿ : ಅಖಿಲಕೃತ್ಯ ಋಷಿಗಳಿಗೆ ವಾಸ್ತುಕರ್ಮಾದಿ ಬಲಿಶಾಂತಿಕರ್ಮಂಗಳಂ ನೆಗಳ್ದಾ ಜಿತೇಂದ್ರಿಯರ್ . . . ಸುಪವಿತ್ರ ಪತ್ರವೇಶ್ಮಂಬೊಕ್ಕರ್ (ಶ್ರೀರಾಮಾ. ೧೪೪-೬೮). [ಸಂ. ವಾಸ್ತುಕರ್ಮನ್]

ವಾಸ್ತುಕಲೆ (ನಾ). = ವಾಸ್ತು ೪ : ಪುರಾತನಪಟ್ಟಣಗಳೂ ಕಟ್ಟಡಗಳೂ . . . ವಾಸ್ತುಕಲೆಯು ಕ್ರಮೇಣ ಹೇಗೆ ವೃದ್ಧಿಹೊಂದಿತೆಂಬುದನ್ನು ತೋರಿಸಿಕೊಡುತ್ತವೆ (ಮೈವಾಸ್ತು. ೨೨). [ಸಂ. ವಾಸ್ತುಕಲಾ]

ವಾಸ್ತುಕ್ರಮ (ನಾ). ಕಟ್ಟಡನಿರ್ಮಾಣ ಶಾಸ್ತ್ರ : ಎಸೆದುವಲ್ಲಲ್ಲಿ ವಾಸ್ತುಕ್ರಮಂಬಿಡದು ರಂಜಿಸುವ ಮಜ್ಜನಶಾಲೆಯುಂ . . . ಭೋಜನಶಾಲೆಯುಂ (ಚಿಒಪ. ೫-೪೯). [ಸಂ.]

ವಾಸ್ತುಪತಿ (ನಾ). ೧. ಕಟ್ಟಡ ಮನೆ ಮುಂತಾದುವುಗಳ ಶಂಕುಸ್ಥಾಪನೆಯಲ್ಲಿ ಅಧಿಷ್ಠಿಸುವ ದೇವತೆ; ಗೃಹಾಧಿದೇವತೆ. ೨. (ಆಲಂ) ನಿರ್ಮಾಣಕರ್ತೃ ; ಶಿಲ್ಪಿ : ಶ್ರೀಕರ್ಣಾಟಕರಾಜ್ಯವಾಸ್ತುಪತಿಯಂ . . . ವಿದ್ಯಾರಣ್ಯವರೇಣ್ಯನಂ ಚತುರಚಾತುರ್ವ್ಯೆದ್ಯನಂ ವಂದಿಪೆಂ (ಗಿಲಿಂ. ೫೧-೧). [ಸಂ.]

ವಾಸ್ತುವಿದ್ಯೆ (ನಾ). = ವಾಸ್ತು ೪ : ಅನಂತವಿಜಯಂಗೆ ವಿಚಿತ್ರಕಲೆಯುಮಂ ವಾಸ್ತುವಿದ್ಯೆಯುಮನುಪದೇಶಂಗೆಯ್ದು (ಆದಿಪು. ೮-೬೦ ವ); ಇದುವರೆಗೂ ವಾಸ್ತುವಿದ್ಯೆ ಎಲ್ಲಾ ಗುಹಾಂತರ್ದೇವಾಲಯಗಳಲ್ಲಿ ವ್ಯಕ್ತವಾಗಿತ್ತು (ಮೈವಾಸ್ತು. ೬೫). [ಸಂ. ವಾಸ್ತುವಿದ್ಯಾ]

ವಾಸ್ತುವಿಧೇಯ (ನಾ). ವಾಸ್ತುಶಾಸ್ತ್ರಕ್ಕೆ ಅನುಗುಣವಾದುದು : ರಾಯನಾಜ್ಞೆಯೊಳಿಭಪುರದ ಹೊಱಗಾಯತದ ಭೂಮಿಯಲಿ ವಾಸ್ತುವಿಧೇಯವೆನಲಳವಡಿಸಿದರು ಹನ್ನೆರಡುಯೋಜನವ (ಕುಮಾಪ. ೭-೧೩). [ಸಂ.]

ವಾಸ್ತುಶಾಂತಿ (ನಾ). ಕಟ್ಟಡನಿರ್ಮಾಣಕ್ಕಾಗಿ ಪಾಯವನ್ನು ಹಾಕುವಾಗ ಅಥವಾ ಹೊಸಮನೆಯನ್ನು ಪ್ರವೇಶಿಸುವಾಗ ಮಾಡುವ ಶುದ್ಧಿಕಾರ್ಯದ ವಿಧಿ ; ಗೃಹಶಾಂತಿ : ಒಂದು ತಿಂಗಳಲ್ಲಿ ಮನೆ ಸಿದ್ಧವಾಯಿತು. ಆದರೆ ವಾಸ್ತುಶಾಂತಿಗೆ ನಮ್ಮಲ್ಲಿ ಏನಿತ್ತು? (ಸ್ಮೃತಿಚಿ. ೩೨೬). [ಸಂ.]

ವಾಸ್ತುಶಾಸ್ತ್ರ (ನಾ). ವಾಸ್ತುಕಲೆಯನ್ನು ವಿವರವಾಗಿ ತಿಳಿಸುವ ಶಾಸ್ತ್ರ : ಸಕಲಕಲಾವಿದರಿಗೆ ಅನುಗುಣವಾದ ವಸತಿಕಲ್ಪನೆ ಮುಂತಾದ ಎಲ್ಲಾ ವಿಷಯಗಳ ಪ್ರತಿಪಾದನೆ ಇರುವ ಭಾಗವನ್ನು ವಾಸ್ತುಪ್ರಕರಣವೆಂದು ಉಲ್ಲೇಖಿಸಿದ್ದಾರೆ. ಅದೇ ಭಾಗವನ್ನು ಪ್ರತ್ಯೇಕವಾಗಿ ಮತ್ತಷ್ಟು ವಿಸ್ತಾರವಾಗಿ ತಿಳಿಸುವ ಶಾಸ್ತ್ರವನ್ನು ವಾಸ್ತುಶಾಸ್ತ್ರವೆಂದು ಕರೆಯುತ್ತಾರೆ (ಭಾರದ. ೭೭) ; ವಾಸ್ತುಶಾಸ್ತ್ರವು ಬ್ರಹ್ಮ, ವಿಷ್ಣು, ಮಹೇಶ್ವರರಿಂದ ಇಂದ್ರ, ಬೃಹಸ್ಪತಿ, ನಾರದರಿಗೆ ಅನುಗ್ರಹಿಸಲ್ಪಟ್ಟಿತೆಂದೂ ಅವರ ಮೂಲಕ ಅನೇಕ ಋಷಿಗಳಿಗೆ ಬಂದಿತೆಂದೂ ಶಾಸ್ತ್ರ ಹೇಳಿದೆ (ಮೈವಾಸ್ತು. ೨೧). [ಸಂ.]

ವಾಸ್ತುಶಿಲ್ಪ (ನಾ). ಕಟ್ಟಡಗಳ ನಕ್ಷೆಯನ್ನು ತಯಾರಿಸಿ, ನಿರ್ಮಾಣಮಾಡುವ ಕಲೆ ; ಗೃಹನಿರ್ಮಾಣ ಕಲೆ : ಇವರ ಕಾಲವೇ ಕರ್ನಾಟಕವಾಸ್ತುಶಿಲ್ಪದ ವೈಭವದ ಕಾಲ (ಮೈವಾಸ್ತು. ೧೩) ; ಸುಮಾರು ೫೦ ವರ್ಷಗಳಿಗಿಂತ ಹಿಂದೆ ಭಾರತೀಯವಾಸ್ತುಶಿಲ್ಪದ ವಿಚಾರದಲ್ಲಿ ಪಾಶ್ಚಾತ್ಯವಿದ್ವಾಂಸರಲ್ಲಿ ಅನೇಕ ತಪ್ಪುಭಾವನೆಗಳು ಹರಡಿದ್ದವು (ಭಾರದ. ೪೯೦). [ಸಂ.]

ವಾಸ್ತುಶಿಲ್ಪಿ (ನಾ). ಕಟ್ಟಡಗಳನ್ನು ನಿರ್ಮಾಣಮಾಡುವವನು.

[ಸಂ. ವಾಸ್ತುಶಿಲ್ಪಿನ್]

ವಾಸ್ತೋಷ್ಪತಿ (ನಾ). ೧. ಮನೆಯ ಅಥವಾ ನಿವೇಶನದ ಅಧಿದೇವತೆ. ೨. ಇಂದ್ರ ; ದೇವೇಂದ್ರ : ವಾಸ್ತೋಷ್ಪತಿ ವಿಧಿಮುಖ್ಯ ಸುರಸ್ತೋಮಾಂಬಕ ಚಕೋರಕಕ್ಕುಂ ಯತ್ಸ್ವೇಜಸ್ತತಿ ಚಂದ್ರಿಕೆಯೊಗ ಕೌಸ್ತುಭಮಿಪ್ಪಿತಮನೆಮಗೆ ಹರಿವಕ್ಷಸ್ಥಂ (ದಿವ್ಯಚ. ೧-೧೦). [ಸಂ.]

ವಾಹ (ಗು). ೧. ಹೊರುವ ; ಒಯ್ಯುವ. (ನಾ). ೨. ಹೊರುವುದು. ೩. ಭಾರವನ್ನು ಹೊರುವ ಆಳು, –ಸೇವಕ. ೪. ಭಾರವನ್ನು ಹೊರುವ (ಎತ್ತು, ಕತ್ತೆ ಮುಂತಾದ) ಪ್ರಾಣಿ. ೫. ಕುದುರೆ ; ಅಶ್ವ : ಈ ನಭಸ್ಥಲದೊಳ್ ಪೋಗುತಮೆನ್ನನಿಂತುರದೆ ನೀಂ ನಿನ್ನೊಂದು ವಿದ್ಯಾತಪೋಬಲದಿಂ ದಾಂಟಿದೆ ವಾಹದಂತಿರದಱಿಂ ವಾಹತ್ವಮಂ ತಾಳ್ಪಿ ಭೂತಲದೊಳ್ ಪೋ ನೆಲಸೆಂದು ಕೊಟ್ಟನೆನಗಾ ವೈಮಾನಿಕಂ ಶಾಪಮಂ (ಕಾದಂಬ. ೬೧೩) ; ಚಿತ್ರಾಂಗದನಚ್ಚರಿದಾಳ್ದಿ ವಾಹಮಂ ಬರಿಸಿ ನೊಸಲೊಳೆಸೆವ ಓಲೆಯಿರೆ ಕೊಂಡಿಂತು ವಾಚಿಸಿದಂ (ರಾಮಾಶ್ವ. ೧೨೪-೧೫). ೬. ಬಂಡಿ, ಗಾಡಿ, ರೈಲು ಮುಂತಾದ ಸಂಚಾರಸಾಧನ ; ವಾಹನ. ೭. ಗಾಳಿ ; ವಾಯು. ೮. ತೋಳು ; ಬಾಹು. ೯. ಪ್ರವಹಿಸುವಂಥದು ; ಪ್ರವಾಹ : ಭರತವಾಹಿನಿ ದಾಂಟಿದತ್ತು ಮಂದಾಕಿನಿಯ ವಾಹಮಂ (ತ್ರಿರಾಮಾ. ೧೭೪-೫೯೮). ೧೦. (ಸುಮಾರು ಒಂದು ಟನ್ ತೂಕಕ್ಕೆ ಸಮವಾದ) ಒಂದು ಅಳತೆಯ ಪ್ರಮಾಣ : ಒಂದು ಸೊಲ್ಲಗೆಯೇ ನಿಕುಂಜವದು ನಾಲ್ಕಾಗಲೊಂದು ಕುಡಬವದು ನಾಲ್ಕಾಗಲೊಂದು ಪ್ರಸ್ಥವಾ ಪ್ರಸ್ಥವೆರಡಾಗಲೊಂದು ವಾಹವದು (ವಿವೇಕ. ೮). [ಸಂ.]

ವಾಹಕ (ಗು). ೧. ಭಾರವನ್ನು ಹೊರುವ. ೨. (ಸುದ್ದಿ, ಪತ್ರ, ವಿದ್ಯುತ್ತು ಮುಂತಾದುವನ್ನು) ಒಯ್ಯುವ ; ಸಾಗಿಸುವ (ನಾ). ೩. ಭಾರವನ್ನು ಹೊರುವ ಸಾಧನ : ಬೈಸಿಕಲ್, ಮೊ. ಗಳಲ್ಲಿ ಸಾಮಾನು ಹೇರುವ ಭಾಗ : ಹೊರಿಗೆ ; ವಾಹಕ (Carrier. ಇಂಕಸಾ). ೪. ಭಾರವನ್ನು ಹೊರುವವನು. ೫. (ವಿದ್ಯುತ್ತು, ಸಂದೇಶ ಮುಂತಾದುವನ್ನು) ಒಯ್ಯುವ ಸಾಧನ : ಉಕ್ಕಿನ ಹಾದಿಯು ಒಂದು ಕಂಬಿಯ ವಿದ್ಯುತ್ತನ್ನು ಸಾಗಿಸುವ ವಾಹಕವಾಗುವುದು (ವಿಜ್ಞಾವಿ. ೫೩) ; ಒಂದು ವಾಹಕದಲ್ಲಿ (ಕಂಡಕ್ಟರ್) ವಿದ್ಯುತ್‌ಪ್ರವಾಹ ಹರಿಯಲು ಎಲೆಕ್ಟ್ರಾನುಗಳ (ಋಣವಿದ್ಯುತ್ಕಣಗಳ) ಚಲನೆಯೇ ಕಾರಣ (ಕಪಿಕೋ. ೬೫೩). ೬. ಮಾಧ್ಯಮ ; ಮಧ್ಯವರ್ತಿ : ವಚನ ಕಾರರಿಂದ ಕನ್ನಡಕ್ಕೆ ಒದಗಿದ ಪುಷ್ಟಿ ಎಷ್ಟು ವಿಧವಾದುದು, ಅದರಲ್ಲೂ ತತ್ವಶಾಸ್ತ್ರದ ವಾಹಕವಾಗಿ ಅದು ಪಡೆದುಕೊಂಡ ಶಕ್ತಿಯೆಷ್ಟು ಎಂಬುದರ ಮೇಲೂ ಕೆಲಸ ನಡೆಯ ಬೇಕಾಗಿದೆ (ಕೂನ್ಯಕು. ೧೩೬) ; ಕೇಶವರಾಯರ ಓಪಿಯಂ ಗುಂಗು ಅವರ ನೆನಹುಗಳಿಗೆ ಸಹಜವಾದ ವಾಹಕವಾಗಿದೆ (ಸುಮಜೀ. ೨೫ ಟೀಕೆ). ೭. ನಡೆಸುವವನು ; ಸಾಗಿಸು ವವನು : ಸಕಲಬ್ರಹ್ಮಾಂಡಗಳೆಂಬ ಯಂತ್ರಗಳ ವಾಹಕ ನಮ್ಮ ಕೂಡಲ ಚನ್ನಸಂಗಯ್ಯ (ಚನ್ನವ. ಕ. ೨೫೦-೫೮೨). ೮. ರಥವನ್ನು ನಡೆಸುವವನು ; ಸಾರಥಿ : ನಾನಾಚಂದ ದಾಪತ್ತಿನಲಿ ಹರಿ ನಿಜಭಕ್ತಸಂತತಿಯ ಮುಂದೆ ನಿಲುವವೊಲವನಿಪಾಲರ ದಂದುಗದ ಹೊತ್ತಿನಲಿ ನಿಜಹಯವೃಂದವನೆ ಚಾಚುವನು ವಾಹಕನು (ಕುಮಾಶ. ೬-೧೦) ; ಎಯ್ದುವಂಬನುಂ ಖಂಡಿಸಿ ಕೂಡೆ ಪೊಕ್ಕು ತಿವಿದೊತ್ತಿ ವಿದಾರಿಸೆ ದಿವ್ಯವಾಹಕರ್ ಚಂಡನ ದಂಡ ವೋಡಿದುದು (ಹಮ್ಮೀರ. ೬-೪೪). ೯. ಕುದುರೆ ಸವಾರ ; ರಾವುತ : ವಾಜಿಯುಂ ವಾಹಕರುಂ ಮರುಳ್ಪಡೆಯುಮಾಗಡೆ ತಮ್ಮೊಡನಾಡೆ ರಾಗದಿಂ ವಾಹಕರಟ್ಟೆಯುಂ ತುರಗ ದಟ್ಟೆಯುಮಾಡಿದುವಾಜಿರಂಗದೊಳ್ (ಪಂಪಾಮಾ. ೧೩-೬೫) ; ಬೊಲ್ಲನ ಕೂಡೆ ಮಂಗಳ ನನ್ನಿರದೆ ಕೊಂಗನನಸಮನಂ ತನ್ನ ಬೋರನನಿಸದಿರಿ ವಾಹಕರಿರಾ ನೀವು (ಬಸವು. ೫೯-೪೦). [ಸಂ.]

ವಾಹಕತ್ವ (ನಾ). ೧. ಕುದುರೆ ಮುಂತಾದ ಪ್ರಾಣಿ ಅಥವಾ ವಾಹನವನ್ನು ಏರಿ ಸಾಡುವ ಸವಾರಿ : ಜನಪತಿಪುತ್ರನಂ ಶುಭಮುಹೂರ್ತದೊಳೋರಗೆಗೊಂಡ ಮಂತ್ರಿಪುತ್ರನೊಳೊಡಗೂಡಿ . . . ಓದಲಿಚ್ಚು ಮುದಮೊಂದಿರೆ ಕಲ್ತರನೂನವಿದ್ಯೆಯಂ ಘನತರಶಸ್ತ್ರಶಾಸ್ತ್ರಹಯಹಸ್ತಿವಿಶೇಷಕವಾಹಕತ್ವಮಂ (ರಾಜಶೇ. ೪-೭೬) ; ಪೊಸತುದ್ವೇಗಾಶ್ವಮೆಂದೇಱದೊಡೆ ಸಮನಿಕುಂ ವಾಹಕತ್ವಕ್ಕೆ ಭಂಗಂ (ರಾಜಶೇ. ೧೩-೨೫). ೨. (ಶಾಖ, ವಿದ್ಯುತ್ತು ಮೊದಲಾದುವನ್ನು) ಸಾಗಿಸುವುದು ; ವಹನ : ವಾಹಕತ್ವ (Conductivity. ಇಂಕಸಾ). [ಸಂ.]

ವಾಹನ (ನಾ). ೧. ಹೊರುವಿಕೆ : 'ವಾಹಿಸು' ಪರಾ. ೨. (ಕುದುರೆಯಂತೆ) ನಡೆಸುವಿಕೆ. ೩. (ರಥ, ಬಂಡಿ, ರೈಲು ಮುಂತಾದ) ಒಯ್ಯುವ ಸಾಧನ : ಜಂಗಮದ ಸನ್ನಿಧಿಯಲ್ಲಿ ನಾನು ವಾಹನವನೇಱಲಮ್ಮೆ ಏಱೆದರೆ ಭವ ಹಿಂಗದು (ಬಸವ. ೩೯೬) ; ವಾಹನಮುಂಟು ದಿವ್ಯರಥವಾಂ ವೆರವಾಹವಕೇಳಿ ಗೆಂಬೊಡಿಲ್ಲಾಹವಮೆನ್ನನೇಕೆ ಬರವೇಟ್ಟನೆನಲ್ ತಿಳಿದೆಂ ಸ್ವಚಿಹ್ನಮಂ (ಜಾಮಿ. ೮-೧೧) ; ಈ ಕಡೆಗಳಲ್ಲಿ ಓಡಾಡುವ ಬಸ್ಸು ಇತರ ವಾಹನಗಳನ್ನು ನಡೆಸುವವರೂ ಬಹುವಾಗಿ ತುಳು ಮಾತನಾಡುವವರು (ಡ್ರಾವಿ. ೩೮೮). ೪. ರಥಕ್ಕೆ ಹೂಡುವ ಕುದುರೆ, ಎತ್ತು ಮುಂತಾದ ಪ್ರಾಣಿ : "ವಾಹನಂ, ಧೋ ರಣಂ, ಯುಗ್ಮಂ, ಯಾನಂ, ಪತ್ರಂ–ಈ ೫ ರಥವ ಹೂಡುವ ಕುದಿರೆ" (ಹಲಾಯು. ೭೪-೨೯೫). ೫. [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರಪದಗಳಲ್ಲಿ ಒಂದು : ವಾಹನಮೆಂಬುದು ಪರಮಪದ ವಾಹನನಪ್ಪ ಜಿನಪತಿಯಂ ಪೊರ್ದಿ ಮಣಿಸುವರ್ಣ ಪಾದುಕಾದಿ ವಾಹನಪರಿತ್ಯಾಗಂಗೆಯ್ದು ಮಹಾತಪದೊಳ್ ನೆಗೞ್ದೊಡೆ ದಿವ್ಯವಾಹನಂಗ ಳಧಿಪತಿಯಕ್ಕುಂ (ಚಾವುಂಪು. ೨೭೧). [ಸಂ.]

ವಾಹನಸೌಕರ್ಯ (ನಾ). ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಇರುವ ವಾಹನದ ಅನುಕೂಲತೆ, –ಸೌಲಭ್ಯ : ಮೈಸೂರಿನಲ್ಲಿ ಚಾಮುಂಡಿ ಬೆಟ್ಟದ ಕೆಳಗಿನಿಂದ ಮೇಲಕ್ಕೆ ಹೋಗಲು ವಾಹನಸೌಕರ್ಯವಿದೆ (ರೂಢಿ). [ಸಂ.]

ವಾಹನಹೀನ (ನಾ). ವಾಹನವನ್ನು ಕಳೆದುಕೊಂಡಿರುವವನು : ಶಸ್ತ್ರಹೀನರ ಕೂಡೆ ವಾಹನಹೀನರಲಿ ಕೈಮಾಡಲನುಚಿತ (ಕುಮಾಶ. ೨೬-೧೭). [ಸಂ.]

ವಾಹಸ (ನಾ). ಒಂದು ಬಗೆಯ ಹಾವು ; ದಾಸರಹಾವು ; ಹೆಬ್ಬಾವು : "ತ್ರಿಲಿಂಗಃ, ಗೋನಾಸಃ, ವಾಹಸಃ, ಅಜಗರಃ, ಶಯುಃ – ಈ ೫ ಪರ್ವಾವು (ಹೆಬ್ಬಾವು)" (ಹಲಾಯು. ೧೦೬-೨೦). [ಸಂ.]

ವಾಹಳಿ, ವಹಳ್ಳಿ, ವಾಹಾಳಿ, ವಾಳಿ (ನಾ). ೧. ಕುದುರೆಸವಾರಿಯನ್ನು ಪ್ರದರ್ಶಿಸುವ ಅಥವಾ ಆಟವನ್ನು ಆಡುವ ಬಯಲು, –ಮೈದಾನ : ವಿಭುಗಟ್ಟೆಯ ಸೆಂದನಾಡಲಾನೆಯ ಪರಿ ನೋಡಲೆಂದೊಲೆದು ಮಾಡಿದ ವಾಹಳಿಗಳ್ ಮನೋಹರಂ (ಶಾಂತಿಪು. ೯-೧೪೪) ; ಕದನಕ್ಕೋಣೇತಳಂ ವಾಹಳಿ . . . ನಾಳೆ ಸೆಂಡಾಡದೆ ಮಾಣಂ (ವರ್ಧಮಾ. ೪-೨೧). ೨. ಕುದುರೆ, ವಾಹನ ಮುಂತಾದುವುಗಳ ಸವಾರಿ : ಹರಿದಶ್ವಂ ಬಂದಪಂ ವಾಹಳಿಗೆನುತರುಣಂ . . . ಕುಂಕುಮಪುನರಸಮಂ ಸಿಂಪಿಸುತಿರ್ದನೆಂಬಂತಿರಲೆತ್ತಂ ನೀಳ್ಪು ಪೊಣ್ಮಿತ್ತುದಯಸಮಯದೊಳ್ ಶೋಣ ಸೂರ್ಯಾಂಶುಜಾಲಂ (ಕಾದಂಪು. ೧೪೧) ; ರಾಯಕುವರರ ಕಳಕಳದಿಂದರಸುಗಳ ವಿಳಸಿತ ವರವಾಜಿಗಳ ವಾಹಳಿಗಳಿಂದೆಳಸಿಹುದಾ ಬಹರ್ವಳೆಯ (ಕುರಾಸಾಂ. ೪-೮೧). ೩. ಕುದುರೆಯ ನಡಗೆಯ ಒಂದು ಭೇದ (?) : ಭಂಜಳಿ ಮುರಳಿ ಝಳಂಬಿ ವಾಹಳಿ [ಪಾಶಾಂ. ಹೊಣೆ] ರೂಪು ರಂಜಿಪ ರೇಚಿಯೆಂದೆಂಬ ಮಂಜುಳಮಾದ ಪಡಂಗದೊಳಾ ಹಯ ರಂಜನೆವಡೆದುದು (ತ್ರಿಪಾಲ. ೪-೧೨). ವಹಳ್ಳಿ : ೩. ದಾರೆಗಟಿಲಯಪೊಯ್ದು ಕಾಯಕ್ಷಂ . . . ಹರಿ ಬಂಧನಮಂ ಭೌಮಂ ವೈಹಾಯಸಂ ವಯಸ ಯಂತ್ರಕ್ಷೇತ್ರವಹಳಿ ಸತ್ಯಂ ದಾರಿಮೆಂಬ ಭೇದಂಗಳಿಂದಶ್ವಮನೇಱಲು ರೇಚಿಗನೃಪತಿ ತಾನೆ ಬಲ್ಲಂ (ಮದಕಿ. ೧-೨೧). ವಾಹಾಳಿ : ೪. ವಾಹನದಂತೆ ಬಳಸುವ ಆನೆ, ಕುದುರೆ ಮುಂತಾದ ಪ್ರಾಣಿ ? ಪರಿವಾರಂ ಪ್ರಿಯಕಾಮಿನೀಸಮುದಯಂ ವಾಹಾಳಿ ಶಾಸ್ತ್ರೋತ್ಕರಂ ಬೆರಸಾಹ್ವಾನವಿಧಾನದಿಂ ಬರಿಸಿ ತಾಂ ದಿಕ್ಪಾಳರಂ ಪಾದರಂ . . . ನಿಲಿಸಿದಂ ಪೂರ್ವಾದಿ ದಿಗ್ಭಾಗದೊಳ್ (ವರ್ಧಮಾ. ೧೨-೨೫). ವಾಳ್ಳಿ : ೨. ವಾಹಳಿ, ವಾಳಿ (ಶಬ್ದಾಮ. ೧೬೦ ಪ್ರಯೋ). ೫. "ಕುದುರೆ ಸವಾರಿ ಮುಂತಾದ ದೃಶ್ಯ ; ದೃಶ್ಯವಾದೀಜಗತ್ತಿನ ಆಗುಹೋಗು" (ಅವಚಂ. ಕೋಶ): ನಿತ್ಯನಿರಾಕಾರಘನವು ಶಕ್ತಿಯಿಲ್ಲದಿದ್ದರೆ ವಾಳಿ [ಪಾಶಾಂ. ಆಗಳೇ] ಬಯಲಾದಹುದು (ಅವಚಂ. ೧೯೯-೮೯೯). 'ವೈಹಾಳಿ' ಪರಾ. [?. / ಸಂ. ವಾಹ್ಯಾಲೀ = ಕುದುರೆಗಳ ಓಡಾಟದ ಮಾರ್ಗ. / ತಮಿ. ವಾಳಿ = ಕುದುರೆಯಂತೆ ಚಕ್ರಾಕಾರವಾಗಿ ಸುತ್ತುವಿಕೆ; ತೆಲು. ವಯಾಳಿ, ವಯ್ಯಾಳಿ = ನಾಗಾಲೋಟ, ರಥ; ವಾಹ್ಯಾಳಿ = ಸವಾರಿ, ವಿಹಾರ ; ವಾಳಿ = ಮೃಗಗಳು ಸಂಚರಿಸುವ ದಾರಿ]

ವಾಪಳಿತನ (ನಾ). ಕುದುರೆಸವಾರಿ ; ಅಶ್ವಾರೋಹಣ : ವಾಪಳಿತನದೊಳ್ ನಳನನಿಳಿಕೈವ ಶಾಳಿಹೋತ್ರನನಾಳಿಗೊಳ್ಳ ಫೋಳಾಯಿಲರ್ ನೆರೆದು (ರಾಜಶೇ. ೬-೧೧ ವ). [ವಾಪಳ + - ತನ]

ವಾಹಾರೋಪಣ (ನಾ). ಕುದುರೆಸವಾರಿ : ನೃಪನೀತಂ ತುರಗಪ್ರಿಯಂ ವಿಷಮವಾಹಾರೋಪಣಾತ್ಯಂತಲೋಲುಪಂ (ಪಂಪಾಮಾ. ೪-೧೦೫) ; ವಾಹಾರೋಪಣಲೀಲೆ ತನ್ನ ಮನಮಂ ತರ್ಕಿಸೆ ಬಾಲ್ಯಾದಿ ಸಸ್ನೇಹರ್ ತನ್ನ ಸಮಾನರಪ್ಪ ಕುವರರ್ ಸ್ವಪ್ರೇರಣಾಜಾತಸೋತ್ಸಾಹರ್ ಭೋಂಕೆನೆ ವಾಜಿಶಾಲೆಯೊಳಗಿಂದಂತಪ್ಪುದುಂ (ಮಹಾನೇ. ೪-೫). [ಸಂ.]

ವಾಹಾಳಿ 'ವಾಹಳಿ' ನೋ.

ವಾಹಿ (ಗು). ೧. ಹೊರುವ ; ಒಯ್ಯುವ. (ನಾ). ೨. ತೇರು ; ರಥ. [ಸಂ. ವಾಹಿನ್]

ವಾಹಿಕ (ನಾ). ೧. ಎತ್ತುಗಳು ಎಳೆಯುವ ಬಂಡಿ, ರಥ ಮುಂತಾದುವು. ೨. ದೊಡ್ಡಭೇರಿ ; ನಗಾರಿ. ೩. ಒಂದು ಬಗೆಯ ಸಸ್ಯ. [ಸಂ.]

ವಾಹಿಕೆ (ನಾ). ಒಂದು ಬಗೆಯ ಸಸ್ಯ : "ವಾಹಿಕಾ - ಚಿತ್ರಮೂಲ" (ಓಷಧಿ. ೧೫೦). [ಸಂ. ವಾಹಿಕ]

ವಾಹಿತ್ಥ (ನಾ). ಆನೆಯ ಕುಂಭಸ್ಥಳದ ಕೆಳಗಿನ ಭಾಗ : "ವಾಹಿತ್ಥಂ, ಕುಂಭಸ್ಯ ಅಧಃ - ಆನೆ ಕುಂಭಸ್ಥಳದ ಕೆಳಗಡೇ ಪ್ರದೇಶಕ್ಕೆ ಹೆಸರುಗಳು" (ಕರ್ನಾಕಾ. ೨೪೭). [ಸಂ.]

ವಾಹಿನಿ (ನಾ). ೧. ಹರಿಯುವಂಥದು ; ಹೊಳೆ ; ನದಿ : ವಾಹಿನಿಯೊಳೋಡುವುದು ಯಾನಪಾತಂಗಳೊಳ್ . . . ಅಲ್ಲದಿಲ್ಲ (ಉದ್ಯಪ. ೨-೧೫) ; ಮೋಹಿನಿ ಸಂಧ್ಯಾವಳಿಯರಿಬ್ಬರು ಬೇಹುಕಾಹಿನವರು . . . ಸಂತೋಷದ ವಾಹಿನಿಯೊಳ್ ಗೋಲಾಡಿದರು (ಯಾ೩ಗ. ೫-೫). ೨. ಪಡೆ ; ದಳ ; ಸೈನ್ಯ : "ಪೃತನಾ, ಸೇನಾ, ಧ್ವಜಿನೀ, ಪತಾಕಿನೀ, ವಾಹಿನೀ, ಬಳಾ . . . ಅನೀಕಂ - ಈ ೧೦ ಪಡೆ" (ಹಲಾಯು. ೭೫-೭೦೨) ; ನಿನಗೆ ಸಹಾಯಂ ದಶರಥಜನನಾಥಂ ತತ್ಸಹಾಯದಿಂ ಲುಬ್ಧಕವಾಹಿನಿಯಂ ಮರ್ದಿಸು (ಪಂಪಾಮಾ. ೪-೪೨) ; ಆ ನಾಕಾಧಿಪನ ಸಿರಿಯ ಜಱಿದುದಂದವರ ವಾಹಿನಿ ಸಕಲಜನಮೋಹಿನಿ (ಭಾವಟಿ. ೮-೧೫). ೧, ೨ : ವಿದಳಿತವಾದ ಕುಟಕಕದಂಬದಿನುರ್ದಿದ ವಾಹಿನೀಸಮೂಹದಿಂ . . . ಮಹೋದ್ಧತರಾಜಹಂಸತೇಜದಿನೆಸೆದತ್ತು ರಾಜ್ಯವಿಭವಂ ಜಳದಾಗಮಚಕ್ರವರ್ತಿಯಾ (ಜಗವಿ. ೪-೬೫). ೩. ಸೈನ್ಯದ ಒಂದು ತುಕಡಿ ; ಎಂಬತ್ತೊಂದು ಆನೆಗಳು, ಎಂಬತ್ತೊಂದು ರಥಗಳು, ಇನ್ನೂರುನಲವತ್ತು ಮೂರು ಕುದುರೆಗಳು ಮತ್ತು ನಾನೂರೈದು ಪದಾತಿಗಳುಳ್ಳ ಒಂದು ಸೇನಾವಿಭಾಗ : ತ್ರಿಗುಣಿಸು ಗುಲ್ಮಮನದು ನೆಟ್ಟಗೆ ವಾಹಿನಿಯಕ್ಕುಮಂತೆ ತದ್ವಾಹಿನಿಯಂ ತ್ರಿಗುಣಿಪುದುಂ ಪೃತನೆಯಿದಂ ತ್ರಿಗುಣಿಸೆ ಪೆಜತೇನೋ ಚಮುವೆನಲ್ಪೆ ಸರ್ವಡೆಗುಂ (ಪಂಪಾಮಾ. ೧೩-೭) ; ಈ ಗಣವೆಂಬ ಬಲದ ಲೆಕ್ಕವನಿಕ್ಕಿ ಮತ್ತೊಮ್ಮೆ ೩ ಉಱಿಂದ ಗುಣಿಸಲು ಬಂದ ಲಬ್ಧ ಆನೆ ೮೧ ರಥ ೮೧ ಕುದಿರೆ ೨೪೩ ಕಾಲಾಳು ೪೦೫. ಇದು ವಾಹಿನಿಯೆಂಬ ಬಲವಪುದು (ವೃವಹಾ. ಅನುಬಂಧ. ೧-೧೦). [ಸಂ. ವಾಹಿನೀ]

ವಾಹಿನೀಕ (ನಾ). ೧. ಪ್ರವಾಹವುಳ್ಳುದು ; ಹರಿಯುವಂಥದು. ೨. ಪಡೆ ; ಸೈನ್ಯ. ೧, ೨ : ಆ ಘನಸಮಯಂ . . . ವಿಪಕ್ಷಗತಿವಿರೋಧಕಮಾಗಿಯುಂ ಪರಿಗತಭಂಗವಾಹಿನೀಕಮುಮೆನಿಸಿರ್ದುದು (ರಾಜಶೇ. ೯-೧೧೫ ವ). [ಸಂ.]

ವಾಹಿನೀಪತಿ (ನಾ). ೧. ನದಿಗಳ ಒಡೆಯ ; ಕಡಲು ; ಸಮುದ್ರ. ೨. ಸೇನೆಯ ಒಡೆಯ ; ದಳಪತಿ : ವಿಕ್ರಾಂತವಿಜಯನೆಂಬ ವಾಹಿನೀಪತಿಗೆ ಬಲಮಂ ಕೂಡಿಸೆಂದು ಪೇಳ್ದು (ಪಮ್ಮೂರ. ೩-೮ ವ). ೧, ೨ : ಆ ಮೂರ್ಧಾಭಿಷಿಕ್ತಮುವ್ಪಿಂ . . . ಅನೂನವಾಹಿನೀಪತಿಯಾಗಿಯುಂ ಅಭಂಗಾನುಷಂಗನುಂ ವಿನೀತವಿನತಾನಂದನನಾಗಿಯುಂ ಅಪಕ್ಷಪಾತಪ್ರಚಾರನುಂ . . . ಎನಿಪಂ (ಚಂದ್ರಪ್ರ. ೨-೭ ವ). [ಸಂ.]

ವಾಹಿನೀಪ್ರಿಯ (ನಾ). ೧. = ವಾಹಿನೀಪತಿ ೧. ೨. = ವಾಹಿನೀಪತಿ ೨. ೧, ೨ : ಶ್ರೀಜನ್ಮನಿಳಯನಖಿಲಮಹೀಜೀವನಮೂರ್ತಿ ವಾಹಿನೀಪ್ರಿಯನೇಂ ರಾರಾಜಿಸಿದನೊ (ಚಂದ್ರಪ್ರ. ೫-೧). [ಸಂ.]

ವಾಹಿನೀರಮಣ (ನಾ). ೧. = ವಾಹಿನೀಪತಿ ೧. ೨. = ವಾಹಿನೀಪತಿ ೨. ೧, ೨ : ಪರಚಕ್ರಭಯಂಕರಶೀಲೆ ವಾಹಿನೀರಮಣಸಮ್ಮಿಶ್ರಿಸಲ್ಲಲಿತ ರಾಜ್ಯರಮಾವಧು ವಂದು ಲೀಲೆಯಿಂ (ಪುಷ್ಪಪು. ೪-೮೬). [ಸಂ.]

ವಾಹಿಸು (ಕ್ರಿ). ಹೊರುವಂತೆ ಮಾಡು ; ಹೊರಿಸು ; ಹೇರು : "ಅಹಿತಂ ನಿಹಿತಂ ತಿರೋಹಿತಂ ನ್ಯಸ್ತಮೆನೆ ವಾಹಿಸಲ್ಕಕ್ಕು" (ಮಂಗರಾ. ೧೩೬-೪೦). [ವಾಹನ + - ಇಸು]

ವಾಹ್ಯ (ಗು). ೧. ಹೊರತಕ್ಕ ; ಹೊರಬೇಕಾದ. (ನಾ). ೨. ವಾಹನ ; ಬಂಡಿ ; ರಥ. ೩. ಭಾರವನ್ನು ಹೊರುವ ಎತ್ತು, ಕುದುರೆ ಮುಂತಾದ ಪ್ರಾಣಿ. [ಸಂ.]

ವಾಹ್ಯಕ (ನಾ). ಬಂಡಿ ; ರಥ : 'ಕಂಬಲಿವಾಹ್ಯಕ' ಪರಾ. [ಸಂ.]

ವಾಹ್ಯಾಳಿ (ನಾ). ಕುದುರೆಸವಾರಿ : ಆತ್ಮಕ್ಕೆತ್ಸಂ – ವಾಹ್ಯಾಳಿ – ವೈಹಾಳಿ, ವೈಹ್ಯಾಳಿ. ಬಹುಳದಿನಿಲ್ಲಿ ಪದಮಧ್ಯಲೋಪಮಿಲ್ಲ (ಶಮುದ. ೨೭೫ ಪ್ರಮೋ). [ಸಂ. ವಾಹ್ಯಾಲೀ = ಕುದುರೆಗಳ ಓಡಾಟದ ಮಾರ್ಗ]

ವಾಹ್ಯಾಳಿಸು (ಕ್ರಿ). ಕುದುರೆಯನ್ನು ಏರು ; ಅಶ್ವಾರೋಹಣ ಮಾಡು : ಲೀಲೆಯಿಂದೀ ಕಡೆಗೆ ಬಹ ನಿನ್ನಾಳುತನವನು ತೋರೆನಲು ವಾಹ್ಯಾಳಿಸುತ ಪುಷ್ಪಕದ ರಣಸನ್ನದ್ಧನಾಗಿರ್ದ (ಆನಂರಾ. ೧-೧೩-೭). [ವಾಹ್ಯಾಳಿ + - ಇಸು]

ವಾಳ$_1$ (ನಾ). ಮೈಮೇಲೆ ಬೆಳೆಯುವ ದುರ್ಮಾಂಸದ ಗಡ್ಡೆ, — ಗ್ರಂಥಿ : ಬೆನ್ನಿಗೆ ವಾಳ ಆಗಿದೆಯೊ (ಅಶ್ವಮೇ. ೯೦) ; ಅವರ ಬೆನ್ನಿನ ಮೇಲೆ ಒಂದು ಸಣ್ಣ ಗಂಟಿನ ಹಾಗೆ ಆಗಿ, ಅದು ದೊಡ್ಡದಾಗುತ್ತಾಗುತ್ತ ದೊಡ್ಡ ವಾಳವಾಯಿತು (ಕಲಿಬಿ. ೮೨). 'ತೊಡೆವಾಳ' ಹೋ. [<— ತುಳು. ವಾಳ, ವಾಳೆ, ವಾಳ್ಯ. / ಮರಾ. ವಾಳಾ]

ವಾಳ$_2$ 'ವಾಲ' ನೋ.

-ವಾಳ್ಯ '– ವಳ' ನೋ.

ವಾಳಕ್ಕ$_1$ (ನಾ). ಸೌತೆಕಾಯಿ : 'ವಾಳಕಾಭಾತು' ಪರಾ. [< ಸಂ. ವಾಲುಕಾ]

ವಾಳಕ್ಕ$_2$ 'ವಾಲಕ' ನೋ.

ವಾಳಕಾಭಾತು (ನಾ). ಸೌತೆಕಾಯಿ ಹಾಕಿ ಮಾಡಿದ ಒಂದು ಬಗೆಯ ಕಲಸನ್ನ : ಹಪ್ಪಳ ಸಂಡಿಗಿ . . . ವಾಂಗೇಭಾತ ವಾಳಕಾಭಾತ ಮಿರ್ಚೇಭಾತ . . . ಎಲ್ಲಾ ಅನುಕೂಲಪ್ರಕಾರ ದಿನಂಪ್ರತಿ ಇದ್ದೇ ಇರತಾವ (ತಿಮಗು. ೫೪). [< ವಾಳಕ್ಕ$_1$ + ಭಾತು]

ವಾಳದಂಡ (ನಾ). ಬಾಲ ; ಪುಚ್ಛ : ಶೃಂಗಯುಗಳದಭಂಗಂಗೆ ಕಕುದ್ವಳಯದ ಪ್ರಕೃತಿರಹಿತಂಗೆ ವಾಳದಂಡದ[ವಾಕಾಂ. ಡೆಯ] ಬೋಳೆಯಂಗೆ ಬಸವಣ್ಣಂ ಮೈಯಿಕ್ಕಿ ಕುಳ್ಳಿರ್ದು (ಬಸಪು. ೪-೭೧) ; ಆ ಸ್ಮೃತಿಪುರಾಣಂಗಳೆಂಬವೇ ಸುಳಿ ತೀರ್ಥಜಾಳವೇ ವಾಳದಂಡಂ ಸುನಿರ್ಮಳ ಪರಮಶೈವಾಗಮಂ ಪ್ರಾಣವಾದ ವೃಷಭಂ ಶಿವಂ ನೆನೆಯೆ ಪುಟ್ಟಿ (ವೀಚಿನಾ. ೨-೧-೪೬). [ಸಂ. ವಾಲದಂಡ]

ವಾಳಧಿ 'ವಾಲಧಿ' ನೋ.

ವಾಳಪ್ರಕರ (ನಾ). ಬಾಲದಲ್ಲಿನ ಒತ್ತಾಗಿರುವ ಕೂದಲು : ತುರಂಗಂ ಬಾಲಂ ಕೆದಱುತ್ತಿರೆ ವಾಳಪ್ರಕರದಿಂದೆ ತಾಂ ಪೇಟ್ಟುಂ ತನ್ನರಸಂಗೆ ಶುಭಾಶುಭಮನೆರಡುಂ ತೆಱದಿಂದಮಪ್ಪುದಂ ಪ್ರಕಟಿಸುಗುಂ (ಅಶ್ವಶಾ. ೪-೫೯). [ಸಂ. ವಾಲಪ್ರಕರ]

ವಾಳವಾಯಜ (ನಾ). ನವರತ್ನಗಳಲ್ಲಿ ಒಂದು ; ವೈಡೂರ್ಯ : "ವೈಡೂರ್ಯಂ, ವಾಳವಾಯಜಂ–ಈ ೨ ವೈಡೂರ್ಯಂ" (ಹಲಾಯು. ೨೯-೨೧). [ಸಂ. ವಾಲವಾಯಜ]

ವಾಳಾಂದೋಳ (ನಾ). (ಚಾಮರದ) ಕೂದಲಿನ ಅಲುಗಾಟ, — ತೂಗಾಟ : ಕ್ರಮದಿಂ ಸೂಬ್ಸಿಡದೆ ಸನತ್ಕುಮಾರ ಮಾಹೇಂದ್ರರಿಕ್ಕಿದರ್ ಚಾಮರಮಂ ವಿಮಲಜ್ಞಾನಿಗೆ ಶರದಿಂದುಮಯೂಖಿಸ್ತೋಮಮೆನಿಸೆ ವಾಳಾಂದೋಳಂ (ಮಹಾನೇ. ೪-೯೪). [ಸಂ. ವಾಲಾಂದೋಲ]

ವಾಳಾಗ್ರ 'ವಾಲಾಗ್ರ' ನೋ.

ವಾಳಾದಾನ (ನಾ). ಬಾಲ ; ಪುಚ್ಛ : ವಾಳಧಿಯಿಂದುರಿ ನೆಗೆದೊಡೆ ಕಾಳೆಗಮುಂ ಪಿರಿದು ಭಯಮುಮಧಿಪತಿಗಕ್ಕುಂ ವಾಳಾದಾನಮುಮಂತಾ ವಾಳಧಿಯುಂ ಜ್ವಲಿತಮಾಗಲಪಜಯಮಕ್ಕುಂ (ಅಶ್ವಶಾ. ೪-೬೯). [< ಸಂ. ವಾಲಧಾನ]

ವಾಳಾವಳಿ (ನಾ). "ಒಡೆಯ ಸತ್ತರೆ ತಾನೂ ಸಾಯುವೆನೆಂಬ ಲೆಂಕನ ಆಡಂಬರ" (ಅವಚಂ. ಟೀಕೆ) : ಹೇಳ ಕೇಳಿಲ್ಲದ ವಾ [ಪಾಠಾಂ. ಮ,ವ] ಳಾವಳಿಯ ಬಟ್ಟೆಯ ಶಬ್ದ ಬಯಲ ಹೋರಟೆ ಅಂಗಸುಪಿಗಳಿಗೆ ಲಿಂಗವಿಲ್ಲಾಗಿ ಗುಹೇಶ್ವರನೆಂಬ ಶೀಲ ಸೀಮೆಯ ಮೀಟಿ ಕಾಡಿತ್ತು (ಅವಚಂ. ೭೪-೩೭). "ವಳಾವಳಿ = ಅವಿರತವಾದ ಮನಸ್ಸಿನ ಉದ್ವೇಗ, ಕಳವಳ, ಆಡಂಬರ" (ಅವಚಂ. ಕ. ಕೋಶ).

[II] ಇದು 'ವೇಳೆವಾಳಿ' ಎಂಬುದರ ಅಪಲಿಪಿತವಿರಬಹುದೇ ?]

ವಾಳಿ$_1$ 'ವಾಹಳಿ' ನೋ.

ವಾಳಿ$_2$ (ಗು). ೧. ಮಾತುಕೇಳದ ; ಚಂಡಿ ಸ್ವಭಾವದ : "ವಾಳಿ—ಇರಳು ; ಎಡಹುರಿ ; ಚಂಡಿ" (ಜಾನಕೋ. ೪೫). 'ವಾಳಿಯಾವು' ಪರಾ. ೨. ಕೀಳಾದ; ನೀಚತನದಿಂದ ಕೂಡಿದ : ಕೀಳು ಮೇಲೆಂಬುವದು ವಾಳಿಜನಕಲ್ಲದಲೆ ಕೀಳು ಶರಣರಿಗೆ ಸಮರಸವು ಕಾಯಕವು ಆಳ್ವ ದಂಡಿಗೆಯು ತಳ್ಳುದಕೆ (ಕನ್ನಕಾ. ೨೦೩). (ನಾ). ೩. ಕೀಳು ; ಹೀನಾಯವಾದುದು : 'ವಾಳಿಸು' ಪರಾ. [?]

ವಾಳಿಕಾರ (ನಾ). ತೋಟಿ, ತಳವಾರ ಮುಂತಾದ ಗ್ರಾಮನೌಕರ : ವಿಭವಸಂವತ್ಸರ ಪುಷ್ಯ ಬ ೧ ಲು ವಾಳಿಕಾರ ಬಿಟ್ಟ ಮಾನಿಯ (ಎಕ್ಷ. X, ಶ್ರವಾ. ೨೪-೩;೨).

[< ಒಲಿಕಾಜ]

ವಾಳಿಯಾವು (ನಾ). ಅಗಡುದನ ; ತುಂಟಹಸು : ಜೂರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ವಾಳಿ[ಪಾಠಾಂ. ಒಜೆ, ಓಜೆ, ವಜೆ]ಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ (ಬಸವ. ೭೫೪) ; ಹಾಲುಹಳ್ಳವಿರಲಿಕ್ಕೆ ವಾಳಿಯ Eಯಾತಿ ವ ತರಲೇಕೆ (ಹಡ. ಧಾ. ೩೩-೨).

[ವಾಳಿ$_2$ + ಆವು]

ವಾಳಿಸು (ಕ್ರಿ). ಕೀಳಾಗಿ ಮಾತನಾಡು ; ಹೀನಾಯವಾಗಿ ನುಡಿ : ಸುರಾಸುರ ಮಾನವರದಱಿಂದ ವಾಳಿಸಿ ಕಾಳುಗರಾದರು (ಜೊಗಾಂಪ. ೩-೪) ; ಕೇಳ ಭಾಗೀರಥಿ ವಿಳುಮಕ್ಕಳ ಕೊಂದಿ, ಬಹಳಕೀರ್ತಿಯ ಪಡೆದಿ ಲೋಕದೊಳಗ ತಾಳ ಈ ಮಾತಿಗೆ ವಾಳಿಸುವರ ನಿನಗ, ಕೇಳಿ ನಾಚಿಕಿ ಹ್ಯಾಂಗ ಬರಲಿಲ್ಲವ (ಕರ್ನಾಕ. ೨೩೮).

[ವಾಳಿ$_2$ + - ಇಸು$_2$ ./ ತೆಲು. ವಾಲಿಂಚು]

ವಾಳುಕ 'ವಾಲುಕ' ನೋ.

ವಾಳುಕಪ್ರಕರ (ನಾ). ಮರಳಿನ ರಾಶಿ : ಅಮಿತಾಂಭೋನಿಧಿ ವಾಳುಕಪ್ರಕರಮಂ ಪುಂಜೀಕೃತಂ ಮಾಡಿ (ಸಕಮಾ. ೫-೩೩). [< ಸಂ. ವಾಲುಕಾಪ್ರಕರ]

ವಾಳುಕಾಪ್ರಭೆ 'ವಾಲುಕಾಪ್ರಭೆ' ನೋ.

ವಾಳುಕಿ 'ವಾಲುಕಿ' ನೋ.

ವಾಳೆ (ನಾ). (?) : ವಾಳೆ (ಲಾಳೆ)= ಲಿಂಗವತ್ತಿಗೆ (ಶಮದ.ಪಠಿ. ೨). [?]

ವಾಳೆಯ (ನಾ). ಯೋಗ್ಯವಾದುದು ; ಸರಿಯಾದುದು : ಕಡುಹಿನ ಕಾಳಕೂಟದ ನರಿಗೆ ನಂಜಿನ ಹೊನಲು ಬೆರೆಸಿದರೆ ವಾಳೆಯವೆ (ಕುವ್ಯಾಸ. ೧೪-೬೧). [?]

ವಾಳೆಜೆಯ (ನಾ). ಒಬ್ಬಾತನ ಹೆಸರು : ಕಳಿಯ ವಾಳೆಜೆಯನ್ ನಿಜಿಸಿದ (ಎಸಾ. IX, ೨೦-೧೩; ಸು.೪೦೦). [?]

ವಾಳೋದ್ಭಾತ (ನಾ). ಬಾಲದ ಹೊಡೆತ,—ಪೆಟ್ಟು : ವದನೋಗ್ರಸ್ಪನದಿಂದಮೊದೆರಡು ವಾಳೋದ್ಭಾತದಿಂ ಮೂಜುನಾಲ್ಕು ಸುರುಳ್ವುರುಳ್ವಿನೆಗ ವೇಣಶ್ರೇಣಿಯಂ ಪಾಯ್ದು ಕೊಂದುದನೇವೇಳ್ವುದೊ ಶತ್ರುಸಂಪರಣಕೇಳೀಶೀಪ್ಸುಮಂ ವ್ಯಾಪ್ತುಮಂ (ಪುಷ್ಪಸ. ೫-೭೧). [ಸಂ. ವಾಲೋದ್ಭಾತ]

ವಾಳ್ಗಟ್ಟು 'ಬಾಳ್ಗಟ್ಟು' ನೋ.

ವಾಟ್ಕೆ 'ಬಾಟ್ಕೆ' ನೋ.

ವಾಟ್ಕೆಗೊಳ್ (ಕ್ರಿ). ಸುದ್ದಿಯನ್ನು ಕೇಳು ; ಸಮಾಚಾರವನ್ನು ತಿಳಿ : ಇಂದಿನ ಬಂದಾ ಕಾಬೂದ ವಾಟ್ಕೆಗೊಂಡೂಚೆ ಪಾಬೂರುದು ಮನಮುಮೆರ್ದೆಯುಮೇನಂ ಪೇಬ್ಸೆಂ (ಪಂಪಭಾ. ೪-೬೬). [ವಾಟ್ಕೆ (< ಬಾಟ್ಕೆ) + ಕೊಳ್$_1$]

ವಿ$_1$ (ನಾ). ೧. ಹಕ್ಕಿ ; ಪಕ್ಷಿ : "ಶಕುನಿ . . . ಪಕ್ಷಿ ವಿ ವಿಗ ವಿಹಾಯಸಂ ಪತಗಂ ಪತಂಗಂ . . . ಶಕುಂತಿಯೆನೆ ಪಕ್ಷಿ" (ಮಂಗರಾ. ೫೦-೧). 'ವಿಪತಾಕೆ' ಪರಾ. ೨. ಕುದುರೆ. ೩. ಹೋಗುವವನು. ೪. ಲಗಾಮು. ೫. ಸೋಮರಸ. [ಸಂ.]

- ವಿ$_2$ (ಪ್ರ). ಧಾತುಗಳಿಂದ ಭಾವನಾಮಗಳನ್ನು ನಿರ್ಮಿಸುವ ಒಂದು ಕೃತ್ಪ್ರತ್ಯಯ : ವಕಾರಕ್ಕೆ—ತೊಟವಿ, ಅಳವಿ, ಬಳವಿ (ಶಮದ. ೫೧೦ ಪ್ರಯೋ).

ವಿಂಖ (ನಾ). ೧. ನಡಗೆ ; ಚಲನೆ : "ಗತಿಃ, ವಿಂಖಃ, ವಿಹಾರಃ, ಪರಿಸರ್ಪಾ, ಪರಿಕ್ರಮಃ — ಈ ೫ ನಡೆಪ" (ಹಲಾಯು. ೧೫೦-೪೧). ೨. ಕುದುರೆಯ ಗೊರಸು, - ಖುರಪುಟ. [ಸಂ.]

ವಿಂಗಡ, ವಿಂಗಡಿ (ನಾ). ೧. ಹಂಚುವಿಕೆ ; ವಿಭಾಗಿಸುವಿಕೆ : "ಪುಷ-ವಿಭಾಗೇ, ವಿಂಗಡದೊಳ್" (ಕಾಕಕ್ಕ. ೧೯೨). ೨. ವಿಭಾಗ : ಬಿರಾಡದಿಂದ . . . ವಿಂಗಡ ಪಂದಿಗದ್ದಗ್ರಾಮದಲು (ಮೈಅಂ. ೧೯೫, ೪೪-೧೯; 1708). ೩. ಪ್ರತ್ಯೇಕವಾದುದು ; ಒಂಟಿಯಾದುದು : ಹಂಗಿನರಮನೆಯಿಂದ ವಿಂಗಡದ ಗುಡಿ ಲೇಸು (ಸರ್ವಜ್ಞ. ೧೫೩.೪). ೪. ಪ್ರತ್ಯೇಕತೆ ; ಭಿನ್ನತೆ : ವಿಂಗಡವು ಬಾಳ ಸಂಗಡವೇ ಬೇಕು, ಪಂಗಡವು ಏಕೆ ನನಗೆ ? (ಅರಳು. ೬೩-೧೦). ವಿಂಗಡಿ: ೨. ಸಕಲಸುವರ್ಣಾದಾಯ ದವಸಾದಾಯ ಸಹ ಕಂ ಗು ೧೩೭ ೩ % ವಿಂಗಡಿ ಮಣಿಹ ಸುಂಕ (ಎಕ್ಷ. IX, ನೆಲಮಂ. ೫೧-೧೪; 1603).

[< ಸಂ. ವಿಘಟನ. / ತುಳು. ವಿಂಗಡ; ತೆಲು. ವಿಂಗಡ, ವಿಂಗಳ. / ಮರಾ. ವಿಘಡ]

ವಿಂಗಡಣೆ (ನಾ). ಹಂಚುವಿಕೆ ; ವಿಭಾಗ ಮಾಡುವಿಕೆ : ಸಸ್ಯಗಳ ವಿಕಾಸ, ವಂಶಾವಳಿಯ ಮೂಲ, ವರ್ಗೀಕರಣ, ವಿಂಗಡಣೆ ಅಥವಾ ಹಂಚಿಕೆ ಮುಂತಾದ ಅನೇಕ ಮೂಲಭೂತತತ್ವಗಳಿಗೆ ಹೊಂದಿಸಿದುದರಿಂದ ಆ ತತ್ವಗಳು . . . ಸಸ್ಯಶಾಸ್ತ್ರದ ತತ್ವಗಳಿಗೆ ಅನುಗುಣವಾಗಿವೆ (ಸಸ್ಯ. ೫೪). [ವಿಂಗಡ + - ಅಣೆ$_1$]

ವಿಂಗಡಿ 'ವಿಂಗಡ' ನೋ.

ವಿಂಗಡಿಸು (ಕ್ರಿ). ೧. ಹಂಚು ; ವಿಭಾಗಮಾಡು : ಆ ಅಗ್ರಹಾರದ ಪಳ್ಳಿಗಳಿಗೆಯೂ ತಂಮ ಭಂಡಾರಸ್ಥಲದ ಒಕ್ಕಲುಗಳಿಗೆಯೂ ಸಂವಾಜವಾಗದ ಹಾಗೆ ಆ ಧರ್ಮಸ್ಥಲಕ್ಕೆ ತೆಲುವ ಒಕ್ಕಲುಗಳನು ವಿಂಗಡಿಸಿ ಕುಡ ಹೇಳಿ (ಮೈಅಂ. ೧೪೩, ೪೨-೨೨ ; 1418) ; ಮಡದಿಯರು ಮೂವರಿಗೆ . . . ವಿಂಗಡಿಸಿ ಕೊಟ್ಟನು ನೃಪತಿ ಪರಮೋದನವನುಚಿತದಲಿ (ತೊರಾ. ೧-೭-೫೭). ೨. ಪ್ರತ್ಯೇಕಿಸು ; ಬೇರೆಮಾಡು : ದೊರೆರಾಯ ನರಸರಾಜೇಂದ್ರ ಸಾಕಿದ ಬಲು ಗುರಿಕಾಱ ಮನ್ನೆಯರುಗಳ ಪಿರಿದು ವಿಂಗಡಿಸುತಾಳೇಳು ಪೌಜುಗಳಿಂದರಿಬಲಾಂಬುಧಿಯನು ಮೊಗೆದ (ಕವಪ. ೧೫-೯೯). ೩. ಭೇದಮಾಡು ; ಪಕ್ಷಪಾತ ತೋರಿಸು : ಜಂಗಮವೆಂದು ವಂದಿಸಿ ಮಾಡಿ ಪಂಕ್ತಿಯಲ್ಲಿ ವಿಂಗಡಿಸಿ ಲೆಕ್ಕವ ಮಾಡುವ ದಂಡದ ಮನೆಯಲ್ಲಿ ಕೂಳನುಂಬ ಜಂಗಮವು ಬಂಡುಗೆಲೆದು ಬೇಡಿ ತಂದ ಭಂಡಡೊಂಬರ ಎಂಜಲ ತಿಂದಂತೆ (ಮೋಳಮಾ. ೧೫೮-೭೦೬). ೪. ಕತ್ತರಿಸು ; ತುಂಡು ಮಾಡು : ಬಿಡದೆ ನೂಱೆಂಭತ್ತು ಪರಿಯಂತಡಸಿ ಸಾರಥಿಸಹಿತ ರಥವಂಗಡವ ವಿಂಗಡಿಸಿದನು ಸಂಗರರಂಗಮಧ್ಯದಲಿ (ತೊರಾ. ೩-೭-೪೬). ೫. ಇಲ್ಲವಾಗು ; ಕಳೆದು ಹೋಗು (?) : ಬಿಡಬೀಸದಿರಿ ಬಿಸುಡದಿರಿ ಕಡೆಗೆ ಸದ್ಗುರುವೆ ಒಡಲೊಡವೆ ಮಡದಿ ವಿಂಗಡಿಸಿ ಬಿಟ್ಟನು ಗುರುವೆ (ದೀಪ್ಟೋ. ೧೪-೩೩೨) ; ಸರಸಿಜಗಂಧಿಯ ಧವಳಶೋಭನ ಶ್ರುತಿವೆರಸಿ ಪಾಡುವ ರಾಗರಸದಿ ಪರೆದುದು ಮನಸ್ತಾಪ ವಿಂಗಡಿಸಲು ಎಣ್ಣೆಯರಿಸಿನಗೊಟ್ಟರೆಲ್ಲರಿಗೆ (ಮೋಹಕ. ೧೭-೪೦).

[ವಿಂಗಡ + - ಇಸು$_2$ ./ ತೆಲು. ವಿಂಗಡಿಂಚು, ವಿಂಗಳಿಂಚು]

ವಿಂಗೀತ (ನಾ). ಕೆಟ್ಟ ಸಂಗೀತ (?) : ಸ್ವರಭೇದವಿಲ್ಲದಿಪ ಸಂಗೀತ ವಿಂಗೀತ ಸರಸವಿಲ್ಲದ ಸತಿಯ ಭೋಗ ತನುರೋಗ (ಹಡ. ೪೨-೧).

[II] ಇಲ್ಲಿ ಪ್ರತಿಧ್ವನಿಶಬ್ದವನ್ನು ಸ್ವತಂತ್ರವಾಗಿ, ವಿಯದ್ಭಾರ್ಥದಲ್ಲಿ ಕಲ್ಪಿಸಲಾಗಿದೆ]

ವಿಂಜ$_1$ (ನಾ). ವಿಂಧ್ಯದೇಶ : ಪೂಣ್ದು ಪೋಗಿ ಡಂಗರ ಸವಲಕ್ಕವಿಂಜದ ವರಾಳದ ಲಂಜಿಯ ಚಕ್ರಗೊಟ್ಟದಗ್ಗದ ನೃಪರಂ ಪಳಂಚಲೆದು ವೀರಶಿಖಾಮಣಿ ನಾಗವರ್ಮ್ಮನಂದದೆ ನೆಲನಂ ನಿಮಿರ್ಚ್ಚಿದವರಾರ್ಗ್ಗಳ ಚಕ್ರಿಯ ದಂಡನಾಯಕರು (ನಾಂದೆಪ್ರ. ೩-೧೫ ; 1147). 'ಬಿಂಜ' ಪರಾ. [< ಸಂ. ವಿಂಧ್ಯ]

ವಿಂಜ$_2$ (ನಾ). ಒಬ್ಬಾತನ ಹೆಸರು : ರಣಸ [ಸಾ]ಗರನಾ ಆಳು ವಿಜ್ಞನ್ ಪ್ರ[ಹಾ]ರ ಭೂಷಣನಾ ಮಗನ್ (ಎಸಾ IX, ೧೭-೨; ಸು. ೫೦೦). [?]

ವಿಂದಾಣ 'ಬಿನ್ನಾಣ' ನೋ.

ವಿಂದಾಣಗೊಳ್ (ಕ್ರಿ). ಮಲ್ಲಯುದ್ಧದ ವರಸೆಯನ್ನು ತೋರಿಸು;

ಪಟ್ಟುಹಾಕು : ಮೋಹಮಲ್ಲನ ಕೆಡಹಿ ವಿಂದಾಣಗೊಂಡು ನೆಗ್ಗೊತ್ತಿ ಗೋಣ ಮುಱೆದು ಹಾಕಿದ ಬಲ್ಲಿದನ ನಿರ್ವಾಣಪೂಜೆಯ ಮಾಡಿದರು (ಶ್ರೀಪಾಲ. ೧೪-೯೪).

[ವಿಂದಾಣ (< ಬನ್ನಾಣ) + ಕೊಳ್$_1$]

ವಿಂಧ್ಯ (ನಾ). ೧. ಏಳು ಕುಲಪರ್ವತಗಳಲ್ಲಿ ಒಂದು ; ಉತ್ತರ ಹಿಂದೂಸ್ಥಾನ ಮತ್ತು ದಖನ್ನಿನ ಮಧ್ಯದಲ್ಲಿರುವ ನೀಳವಾದ ಪರ್ವತಾವಳಿ : ಬಳಿಯಲ್ಕಣ್ಮೆದುದಿಲ್ಲ ವಿಂಧ್ಯಗಿರಿಯುಂ ತನ್ನಾಜ್ಞೆಯಿಂದೆ (ಪಂಪಭಾ. ೪-೨೦) ; ವಿಂಧ್ಯಂ ನಗಮಗಾಪತಿ ಸೌಗಂಧ್ಯಂ . . . ಈ ಭರತಭೂಭಾಗ ಭೂಷಣಮೆಸಗುಂ (ವರ್ಧಪು. ೧೬-೫೦). ೨. ಕಾಡು ; ಅಡವಿ : ಹಿಂದಣಗಲಿ ಓಡಿಪಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ (ಮಹಾದೇ. ಬ. ೧೩೬-೧೧೩). ೩. ಬೇಟೆಗಾರ ; ಬೇಡ. ೪. ಒಂದು ದೇಶದ ಹೆಸರು : ನಡೆದುದು ಭೂರಿಬಲ . . . ವಿಂಧ್ಯ ಬೋಟಕ ವಾರಶಿಕ ಸಾಂಬ್ರಾಣಿ ಹುರುಮಂಜಿಗಳ ಬಳಿವಿಡಿದು (ಹರಿಹ. ೪-೯-೪). [ಸಂ.]

ವಿಂಶತಿ (ನಾ). ಒಂದು ಸಂಖ್ಯೆ ; ಇಪ್ಪತ್ತು : ವಿಂಶತಿಸಹಸ್ರವರ್ಷ ವರ್ಯಂತಸ್ಮೃತಾಹಾರನುಂ ವಿಂಶತಿಸಮುದ್ರೋಪಮಾಯುಷ್ಯನುಂ . . . ಆಗಿ ಮಣಿಚೂಳಾಮರೇಶ್ವರನಿರೆ (ಶಾಂತಿಪು. ೭-೭೭ ವ) ; ಕರಿ ದಶ ರವಿ ಮನುಜರಾಜರ್ ಬರೆ ವಿಂಶತಿಮಾತ್ರೆಯಿಂದೆ ಪಟ್ಟದಿ ನಡೆಗುಂ (ಛಂದೋಂಬು. ೫-೨೫೯ ಅಡಿಪಠ್ಯ). [ಸಂ.]

ವಿಕಂಕತ (ನಾ). ಒಂದು ಬಗೆಯ ಮರ ; ಹುಳಿಬೇಲ : "ಸ್ಯಾದ್ಯಕಂಟಕಃ, ವಿಕಂಕತಃ . . . ವ್ಯಾಘ್ರಪಾತ್ - ೫ ಹಲುಮಾಣಕ ಮರದ ಹೆಸರು ; ನಾಯಿಬೇಲ" (ಸಿದ್ಧಾಂತಿ. ೧೨೦). [ಸಂ.]

ವಿಕಂಪಿಸು (ಕ್ರಿ). ಅತಿಯಾಗಿ ನಡುಗು : ವಿಕಂಪಿಸಿದಳುತ್ಕಂಠೆ ನಿಂದುದು ಹರಿವ ಕಾಲಮಂತೆ ನಿಂದುದು ಸೃಷ್ಟಿ (ಚಿತ್ರಾಂಗ. ೪೦-೧೧೦೨); ತೆಳುಗಾಳಿಗೊಯ್ಯನೆಯ ನಿರಿನಿಂ ವಿಕಂಪಿಸುವ ಪಟಕನಿರ್ಮಲ ನದಿಯ ಪುಲಕಿತಮುಕುರದಲ್ಲಿ ಮಜ್ಜನಕ್ಕುಜ್ಜುಗಿಸಿ (ಶ್ರೀರಾಮಾ. ೧-೯). [ವಿಕಂಪನ + - ಇಸು$_3$]

ವಿಕಚ (ಗು). ೧. ಅರಳಿದ ; ಬಿರಿದ : ಮಧುಕರಮದು ಭೋಂಕನೆ ಪಾಯ್ದೆಱಂಕೆ ನಾಂದೊಡೆ ಜಿನುಂಗಿ ನೆಲಸಿದುದು ವಿಕಚನಕಾಬ್ಜಿನಿಯೊಳ್ (ಆದಿಪು. ೧೧-೬೦); ವಿಕಚಕರ್ಣಿಕಾರವರ್ಣಮುಂ . . . ತನುಗನುಸಂಗತಮಾಗೆ (ಶಾಂತಿಪು. ೧೦-೯೪ ವ). ೨. ವಿಸ್ತಾರಗೊಂಡ ; ಹರಡಿದ ; ವಿಸ್ತೃತವಾದ : ವಿಕಚಪಕ್ಷ ಮಂಡಿತ ಶಿಖಿಂಡಿವಾಹನನುಂ . . . ಎನಿಸಿದ ಕಾರ್ತಿಕೇಯನುಮಂ (ಕಾದಂಪು. ೪೧೩). ೩. ಪ್ರಕಟವಾದ ; ಸುಸ್ಪಷ್ಟವಾದ. ೪. ಹೊಳೆಯುವ. ೫. ಕೂದಲಿಲ್ಲದ ; ಬೋಳಾದ. (ನಾ). ೬. ಅರಳಿದುದು ; ಬಿರಿದುದು. [ಸಂ.]

ವಿಕಚತೆ (ನಾ). ೧. ಅರಳಿದುದು ; ವಿಕಾಸಗೊಂಡುದು. ೨. ಕೂದಲಿಲ್ಲದಿರುವಿಕೆ ; ಬಕ್ಕತನ. ೧,೨ : ಸಾಯಂತನ ತರಣಿಯಂತೆ ಪರಿಹೃತಾಂಬರನುಂ ದಿನಮುಖಸರೋಜಾಕರದಂತೆ ವಿಕಚತಾಸಮೇತನುಂ . . . ಆಗಲೊಡಂ (ಚಂದ್ರಪ್ರ. ೯-೪೨ ವ). [< ಸಂ. ವಿಕಚತ]

ವಿಕಚನ (ನಾ). ಅರಳುವಿಕೆ ; ವಿಕಾಸ : ಆದ್ಯರನುಭವಸೂರ್ಯನುದಯಂ ವೇದ್ಯಮಾಗೆ ಮಂದಿಯ ಮಾನಸಮಧ್ಯದೊಳ್ಸಂವಿತ್ಸರೋಜಂ ವಿಕಚನಮನೈದಿ (ಕ್ಷತ್ರಿಯಾ. ೧-೩). 'ವಿಕಚಿಸು' ಪರಾ [< ವಿಕಚ]

ವಿಕಚಿಸು (ಕ್ರಿ). ಅರಳಿಸು ; ವಿಕಾಸಗೊಳಿಸು : ಧ್ವಾಂತದಿಂದಂ ಮುಗಿದ ಹೃದಯನೀರೇಜಮಂ ಜೈನವಾಕ್ಯಾಮ XX ಭಾನುಜ್ಯೋತಿಯಿನ್ದಂ ವಿಕಚಿಸಿ (ಎಕ. VII, ಶಿಕಾಂ. ೧೯೬-೧೭; 1212). [ವಿಕಚ + - ಇಸು$_3$]

ವಿಕಜ್ಜಲ, ವಿಕಜ್ಜಳ (ನಾ). ಕಾಡಿಗೆಯ ಲೇಪವನ್ನು ಕಳೆದುಕೊಂಡುದು. ವಿಕಜ್ಜಳ : ವಿಕಜ್ಜಳಕೃತರೇಚಿಕಾರಚನಮಾದುದು ಲೋಚನಯುಗ್ಮಂ . . . ಇಂದುಮಂಡಳಲಲಿತಾಸ್ಯೆ ಪೇಟ್ಟ್ ನಿಜಮನಃಪ್ರಿಯನಪ್ಪಿದನೋ ಅಗಲ್ದನೋ (ಚಂದ್ರಪ್ರ. ೮-೭೬). [ಸಂ.]

ವಿಕಜ್ಜಳ 'ವಿಕಜ್ಜಲ' ನೋ.

ವಿಕಟ (ಗು). ೧. ವಿಕಾರವಾದ ; ಕುರೂಪಗೊಂಡ : ವಿಕಟಾಂಗೋಪಾಂಗ ಜಾತ್ಯಂಧಕಿಯೆನಿಸಿದ ಮಾತಂಗಿ ತಾನೆತ್ತಲಾತ್ಯಂತಿಕಸದ್ಧರ್ಮೋಪದೇಶಂ ಸಮನಿಸುವುದೆತ್ತ (ಸುಕುಮಾ. ೫-೪೮). ೨. ಭೀಕರವಾದ ; ಭಯಾನಕವಾದ : ಬೆಳೆದಿರ್ದ ಬಿದಿರುಮೆಳೆ ಪವನಸಂಘರ್ಷಣೆಗೆ ಘೀಂಕರಿಸಲಿಭದಂತೆವೋಲ್ ವಿಕಟರವಗೈದು, ಕಂಪಿಸಿತು ಕಾಂತಾರಮಾ ಕೀಚಕಧ್ವನಿಗೆ (ಚಿತ್ರಾಂಗ. ೫೧-೧೪೧). ೩. ಉಗ್ರವಾದ ; ಕ್ರೂರವಾದ : ಪ್ರಕುಪಿತ ಮೃಗಪತಿಶಿಶುಸನ್ನಿಕಾಶರತಿವಿಕಟಭೀಷಣಭ್ರೂಭಂಗರ್ ನಕುಲಸಹದೇವರ್ಪರ್ವರು ಮಹಾಲಕಾಲಾಗ್ನಿರೂಪಮಂ ಕೆಯ್ಯೊಂದರ್ (ಪಂಪಭಾ. ೭-೮). ೪. ತೋರವಾದ ; ದಪ್ಪವಾದ : ಜಗುನೆಯ ಮಡುವಂ ತಮ್ಮರಸಿಯರ ವಿಕಟನಿತಂಬಬಿಂಬಗಳ ಕಟ್ಟಣೆಯೊಳಮರೆ ಬಿಗಿದೊಗೆದ ಮೊಲೆಗಳಳ್ಳೇಜೆನೊಳಳ್ಳಾಡಿ ತಳ್ಳಂಕಂಗುಟ್ಟಿ ನೀರಾಟಮಾಡುವಾಗಳ್ (ಪಂಪಭಾ. ೫-೬೨ ವ). ೫. ದೊಡ್ಡ ; ಭಾರಿಯಾದ : ಅತಿವಿಕಟಶಾಲ್ಮಲಿವಿಟಪಿಯೊಳಿರುಂ ಬಚೆಯುಮುರ್ಚುವುದುಂ (ಸುಕುಮಾ. ೧೧-೪೭ ವ); ಬಲಗರ್ವಮಂ ತಾಳ್ದಿದಂ ಬಲಾಚ್ಛುತರ ಕೂಟದಿಂ ಜನಕನುಗ್ರವನ್ಯದ್ರಿಪಂ ಬಲಂಬಡೆದುದೆಂಬಿನಂ ವಿಕಟದಂತಕೂಟಂಗಳಿಂ (ವಂಗಾಮಾ. ೪-೫೩). ೬. ಸೊಕ್ಕಿದ ; ಉನ್ಮತ್ತ. ೭. ಚೆಲುವಾದ ; ಅಂದವಾದ : ದೇದೀಪ್ಯಮಾನಪ್ರಭಮೇಂ ಕಣ್ಗೆಂಬು ವೆತ್ತಿರ್ದುದೊ ವಿಕಟಹಟದ್ರತ್ನಕೂಟಂ ಕಿರೀಟಂ (ಚಂದ್ರಪ್ರ. ೨-೫೬). (ನಾ). ೮. ವಿಕಾರವಾದುದು ; ವಿಕೃತವಾದುದು : ಅನ್ಯಾಯ ವಿಕಟಂಗಳೆನಿತೊ ಸೃಷ್ಟಿಕ್ರಮದಿ! ಸೊನ್ನೆ ಜನವಾಕ್ಯಲ್ಲಿ (ಮಂಕುಕ. ೨೩೪). ೯. ಡೊಂಕಾದುದು ; ವಕ್ರವಾದುದು : ಕಟಮುಂ ವಿಕಟಮಾಗದಿರೆ ಹರಿ ಶುಭದಂ (ಅಶ್ವಾಶ. ೧-೨೮). ೧೦. ಅಂದಗೇಡಿಯಾದವನು ; ಕುರೂಪಿ : ಅಲ್ಲಿರ್ದೊಡುರ್ವಿಲಸಿತಂ ನೋಡುವೊಡುಗ್ರರತನ್ಮನುಷ್ಯಂ ವಿಕಟನೆನಿಕುಂ (ಜಾತಕ. ೨೧-೨೨). ೧೧. ಶ್ರೇಷ್ಠವಾದುದು ; ಉತ್ತಮವಾದುದು : "ಒಳ್ಳಿತಱಲ್ಲಿಯುಂ ವಿಕಟಮೆಂಬುದು" (ಹಲಾಯು. ೧೩-೮). ೧೨. ವಿಡಂಬನೆ : 'ವಿಕಟಕವಿ' ಪರಾ. ೧೩. ಒಂದು ನರಕದ ಹೆಸರು : ಸಂಕಟ ವಿಸಂಕಟ ಸುವಿಶಾಲ ಕಟ ವಿಕಟ ವೆಂಬೈದು ಮಂತ್ರಿನರಕಂಗಳಂ ಮೋಹಿಸಿ ವಿಕರಾಳವೆಂಬರಸುನರಕವಿಹುದು (ವಿವೇ. ೧೫೩). ೧೪. [ನಾಟ್ಯ] ನೃತ್ಯದ ಮೂರು ಭೇದಗಳಲ್ಲಿ ಒಂದು : ಪರಿಪರಿಯ ರೂಪನಾಂಬುದು ತರುಣೇ ಕೇಳ್ ವಿಕಟಮೆನಿಪುದು (ಲಾಸ್ಯರಂ. ೧-೬೮). [ಸಂ.]

ವಿಕಟಕಟಾಕ್ಷ (ನಾ). ಉಗ್ರವಾದ ಕಣ್ಣುಗಳುಳ್ಳವನು ; ಶಿವ : ಪಟುಕೋಪಾಟೋಪ ಬದ್ಧಭ್ರುಕುಟಿ . . . ಪದ್ಮರಾಗಾರುಣವಿಕಟಕಟಾಕ್ಷಂ (ರಾಜಶೇ. ೬-೯೯). [ಸಂ.]

ವಿಕಟಕವಿ (ನಾ). ೧. ಉತ್ತಮನಾದ ಕವಿ ; ಶ್ರೇಷ್ಠಕವಿ : ಆ ಪರಿ ತಾನಿಲ್ಲದಿರೆಯುಮಾ ಪರಿಯರ್ಪಂತೆ ವಸ್ತುಜಾತಮನೆಲ್ಲಂ ಸ್ಥಾಪಿಸಿ ಹೃದಯವ ಸೆಳೆವಾಲಾಪಂ ವಿಕಟಕವಿಸಿದ್ಧಮೆಸೆವುದು ಧರೆಯೊಳ್ (ಧ್ವನ್ಯಾಲೋ. ೨೪೩). ೨. ವಿಡಂಬನೆ ಮಾಡುವ ಕವಿ ; ಹಾಸ್ಯಕವಿ : ಅವರೊಳಗೆ ವಿದ್ವತ್ಕವಿಯಾಗಿಯೂ ವಿಕಟಕವಿಯಾಗಿಯೂ ಪ್ರಸಿದ್ಧವಾದ ತೆನ್ನಾಲ ರಾಮಕೃಷ್ಣನಿರುವನು (ಕಥಾಮಂ. IV, ೪೩). [ಸಂ.]

ವಿಕಟಕವಿತ್ವ (ನಾ). ಹಾಸ್ಯಕವಿತ್ವ : ಒಬ್ಬ ಅರಸುಗಳೆ, ಹಜಾಮರೆ, ಹಾರುವರೆ, ಶುರುಕರೆ . . . ಹೊಲೆಯರೆ — ಇವರೆಲ್ಲರನ್ನು ಒಂದು ಮಾಲೆಯಲ್ಲಿ ಪೋಣಿಸಿದ ವಿಕಟಕವಿತ್ವವು ಪ್ರಶಂಸನೀಯವೆಂದು ಯಾರು ಹೇಳಲಿಕ್ಕಿಲ್ಲ? (ಗದುಕಾ. ೬, ಮುನ್ನುಡಿ). [ಸಂ.]

ವಿಕಟಗಾತ್ರ (ನಾ). ದೊಡ್ಡ ದೇಹವುಳ್ಳುದು : ಮೃದುಕಳಶವೃತ್ತಪುಷ್ಕರಗೋತ್ರನಂ ಸುಸಂವೃತಪ್ರೋಹಪಳಿಹಸ್ತವಿಕಟಗಾತ್ರನಂ . . . ಸಂಪದುಪೇತಮಂ ತರಿಸಿ (ಶಾಂತಿಪು. ೧೦-೧೫೩ ವ). [ಸಂ.]

ವಿಕಟತೆ (ನಾ). ಪ್ರತಿಕೂಲವಾಗಿರುವುದು ; ವಿಪರೀತತೆ ; ವಿಪರ್ಯಾಸ : ಪ್ರಕಟಪಾಪರಿಗಹುದು ಸಾಮ್ರಾಜ್ಯಕವು ಧರ್ಮಾತ್ಮರಿಗೆಯೂ ಪರಿ ವಿಕಟತೆಯಸುರರಾಜ್ಯ ವೆಂದುದು ಪೌರಜನ ಮಱುಗಿ (ಕುಮಾಪ. ೮-೯೯). [ಸಂ. ವಿಕಟತಾ]

ವಿಕಟನೃತ್ತ (ನಾ). [ನಾಟ್ಯ] ವಿಷಮ, ವಿಕಟ ಮತ್ತು ಲಘುವೆಂಬ ನೃತ್ತದ ಮೂರು ಭೇದಗಳಲ್ಲಿ ಒಂದು : ನೃತ್ತವು ವಿಷಮ, ವಿಕಟ, ಲಘು ಎಂದು ಮೂರು ವಿಧ . . . ವಿಧವಿಧವಾದ ರೂಪವನ್ನು ಹೊಂದಿರುವುದೇ ವಿಕಟನೃತ್ತವು (ಲಾಸ್ಯರಂ. ೨೧೯ ಗದ್ಯಾನುವಾದ). [ಸಂ.]

ವಿಕಟಬಂಧ (ನಾ). ದೀರ್ಘಸಮಾಸಗಳ ಕ್ಲಿಷ್ಟವಾದ ಶೈಲಿ : 'ಸಂದಾನಿತಕ' ವೇ ಮೊದಲಾದುವಲ್ಲಿ ವಿಕಟಬಂಧವೇ ಉಚಿತವಾಗುವುದರಿಂದ ಮಧ್ಯಮಸಮಾಸ ಮತ್ತು ದೀರ್ಘಸಮಾಸದ ಸಂಘಟನೆಗಳೇ ಬರುತ್ತವೆ (ಧ್ವನ್ಯಾಲೋ. ೧೮೨). [ಸಂ.]

ವಿಕಟಮುಖಿ (ನಾ). ಕೋಪದಿಂದ ಉಗ್ರವಾದ ಮುಖವುಳ್ಳವಳು : ಮರಳಿ ಸಂಧ್ಯಾಲಬ್ಧಿಯಾಗಿಯುಂ ಕಣ್ಕೆರಳಿ ವಿಕಟಮುಖಿಯಾವಿಷ್ಟೆಯಾಗಿ, ಭೂತಿನಿಯಂತೆ ಸೌಮಿತ್ರಿಯಂ ನೋಡಿ (ಶ್ರೀರಾಮಾ. ೨೪೧-೩೫೩). [ಸಂ. ವಿಕಟಮುಖೀ]

ವಿಕಟಾಂಗ (ನಾ). ೧. ವಿಕಾರಗೊಂಡ ಅಂಗ : ವಿಕಟಾಂಗದ ಮುನಿರೂಪಿಂ ಪ್ರಕಟಯಶಂ ಬಂದು (ವೇಮಿಪು. ೧-೧೮೧) ; ವಿಕಟಾಂಗೋಗ್ರ ವಿರೂಪ ವಿಷ್ಣುರಕರ ಕ್ರೂರಾರಿ ಶೀತೋಷ್ಣ ದುಷ್ಕುಟಸ್ತುಸ್ಮಿತಿಯೆಂತುಟೆಂದಱಿಯಂ (ಚಿಕಸಂ. ೧೮೦-೩೬). ೨. ವಿಕಾರವಾದ ದೇಹವುಳ್ಳವನು ; ಅಂದಗೇಡಿ : ಆ ರಣದಲ್ಲಿ ರಣಭೀಮಂ ಪೆಣನಾದಂ ಮದನವಿಲಾಸಂ ಕದನದೊಳಳಿದಂ ವಿಜಯಚೂಡಂ ವಿಕಟಾಂಗನಾದಂ (ಹಮ್ಮೀರ. ೩-೫೨ ವ) ; ಕಾಲುಗುರಿನಿಂದ ನೆತ್ತಿಯ ತನಕ ನನ್ನಂ ಹೋಲುತಿಹನಾತ ವಿಕಟಾಂಗ ಕರಿಯಣ್ಣಾಂ (ಕವಪು. ೧೧-೧). [ಸಂ.]

ವಿಕಟಾಂಗಿ (ನಾ). = ವಿಕಟಾಂಗ ೨ : ಉಡುರಾಜಂ ನಿಲೆ ಲಗ್ನದೊಳ್ ಕಿವುಡನುನ್ಮತ್ತಂ ಪರಪ್ರೇಷಿತಂ ಜಡನಂಧಂ ವಿಕಟಾಂಗಿ ಮೂಕಂ (ಜಾತಿಕ. ೧೮-೬). [ಸಂ. ವಿಕಟಾಂಗಿನ್]

ವಿಕಟಾಕ್ಷರ (ನಾ). ಕರ್ಕಶವಾದ ಅಕ್ಷರ ; ಶ್ರುತಿಕಟುವಾದ ಅಕ್ಷರ : ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ ತೊಡರದೆ ಸಕ್ಕದದ ಪದಂ ಪವಣಾಗಿರೆ ಮೆಲ್ಲುವೆತ್ತು . . . ನಿಲೆ ಪೇಳ್ಬುದು ನೀತಿನಿರಂತರಕ್ರಮಂ (ಕವಿಹಾ. ೧-೧೪೯). [ಸಂ.]

ವಿಕತ್ಥನ (ಗು). ೧. ತನ್ನನ್ನು ತಾನೇ ಹೊಗಳಿಕೊಂಡು ಮಾತಾಡುವ ; ಬಡಾಯಿಕೊಚ್ಚುವ. ೨. ಹೊಗಳಿದಂತೆ ಮಾಡಿ ಅಪಹಾಸ್ಯಮಾಡುವ; ವ್ಯಂಗ್ಯವಾಗಿ ಹೊಗಳುವ. (ನಾ). ೩. ಆತ್ಮಸ್ತುತಿ ; ಬಡಾಯಿ. ೪. ಇಲ್ಲದುದನ್ನು ಹೊಗಳುವುದು ; ಮಿಥ್ಯಾಸ್ತುತಿ. ೫. ಮೆಚ್ಚಿ ಹೊಗಳುವಿಕೆ ; ಶ್ಲಾಘನೆ : "ಅರ್ಥವಾದಃ . . . ವಿಕತ್ಥನಂ, ಸ್ತವಃ, ಶ್ಲಾಘಾ, ವರ್ಣನಂ – ಈ ೧೦ ಸ್ತುತಿಯ ನಾಮಂ" (ಹಲಾಯು. ೨೪-೧೪೪). [ಸಂ.]

ವಿಕಥೆ (ನಾ). [ಜೈನ] ಪಾಪಕರ್ಮಕ್ಕೆ ಕಾರಣವಾಗುವಂಥ ಕಥೆ : ಅಱಿವುಳ್ಳಂ ವಿಕಥೆಯೊಳ್ ಮನಂ ನಿಱಿಸುಗುಮೇ (ಪಂರಾಮಾ. ೩-೬). [ಸಂ. ವಿಕಥಾ]

ವಿಕರಣ (ನಾ). ಅನೇಕ ರೂಪಗಳನ್ನು ತಾಳುವ ಸಾಮರ್ಥ್ಯ ; ವಿಕ್ರಿಯೆ ; ಮಾಯಾಶಕ್ತಿ : ದೇವಿಯೊಳೊರ್ವರೊರ್ವರ್ ದೇವಿಯ ಪರಿವಾರರಪ್ಪರೋಗಣಮುಂ ತದ್ದೇವಿ ವಿಕರಣಸಂಭವದೇವಿಯರುಂ ಪಲಬರೆನಗೆ ಪೊಗಟಲಳುಂಬಂ (ಆದಿಪು. ೬-೧೫) ; ವಿಕರಣಸಂಭವದೇವೀಪ್ರಕರಂ ಸಕಳೋಪಕರಣನಿಕರಾತ್ತಕರಂ ಬಂದಿದಿರೊಳ್ ನಿಂದುದು ನಲವಿಂದಂ (ಚಂದ್ರಪ್ರ. ೪-೬೩ ರಗಳೆ). [ಸಂ.]

ವಿಕರಾಲ, ವಿಕರಾಳ (ಗು). ೧. ಅತಿಭಯಾನಕವಾದ ; ಅತ್ಯಂತ ಭೀಕರವಾದ. ವಿಕರಾಳ : ೧. ಕತ್ತಲಿನ ನರದಲ್ಲಿ ತತ್ತರಿಸಿ ತೊಳಲುತಿದೆ ಬಳ್ಳುಗಳ ವಿಕರಾಳ ಕೂಗು (ಸಡಬಿ. ೧೦೨-೨) ; ಗಂಗವ್ವನದೊಂದು ಅಕರಾಳ ವಿಕರಾಳ ಚಿತ್ರವು ಆಕೆಯ ಬಗೆಯಲ್ಲಿ ಮನೆಮಾಡಿಕೊಂಡುಬಿಟ್ಟಿತ್ತು (ಗಂಮಾಯಿ. ೧೫೦). (ನಾ). ೨. ಅತಿಭಯಾನಕವಾದುದು ; ವಿಕಾರವಾದುದು : ಗತಕಾಲದ ಭೂತಗನ್ನಡಿಯಲ್ಲಿ ಭವಿಷ್ಯದ ಚಿತ್ರ ವಿಕರಾಳವಾಗಿ ಕಾಣಿಸುತ್ತದೆ (ಹೊಸಕ್ಷಿ. ೨೮೩). ೩. ಒಂದು ನರಕದ ಹೆಸರು : ವಿಕರಾಳ ಪ್ರಕಂಪ ಪದ್ಮ ಸುವಕ್ತ್ರ ಕಾಲವೆಂಬೈದು ಮಂತ್ರಿಸರಕಂಗಳಿಂ ಕೂಡಿ ಅಘೋರವೆಂಬರಸುನರಕವಿಹುದು (ವಿವೇಕ. ೧೫೨). [ಸಂ.]

ವಿಕರಾಳ 'ವಿಕರಾಲ' ನೋ.

ವಿಕರಾಳಾಲೋಕ (ನಾ). ಕ್ರೂರವಾದ ಕಣ್ಣುಗಳುಳ್ಳವನು : ವಿಕರಾಳಾಲೋಕ ನೀಪಜ್ಜಳಗತನಳಿನೀಶ್ಯಾಮಂ . . . ಒಪ್ಪಿದಂ ದ್ವೀಪಿಲಾಂಗೂಲಕೃತೋಷ್ಣೀಷಂ ಶಿರೋಳಂಕೃತ ವರವಿಕಸತ್ಕಿಂಕಿರಾತಂ ಕಿರಾತಂ (ಚಂದ್ರಪ್ರ. ೫-೫೭). [ಸಂ. ವಿಕರಾಲಾಲೋಕ]

ವಿಕರಿಸು (ಕ್ರಿ). ೧. ಬೇರೆ ರೂಪ ತಾಳು ; ಬದಲಾಗು : ಹರನಾಜ್ಞೆಯಿಂ ಪ್ರಕೃತಿ ವಿಕರಿಸುದದಱಿನಿಂ ವರಮಹತ್ವಂ ಜನಿಸಿತು (ಲಶಿಪು. ೨೬-೩) ; ನೀನು ಬೇಕ್ಕಿಸದಿರಲ್ ದೇಹ ನೆಱೆ ವಿಕರಿಪುದೆ (ವಿಕೋಪು. ೧೪-೯೧). ೨. ವಿಕೃತವಾದ ಸಹವಾಸವನ್ನು ಹೊಂದು ; ವ್ಯಭಿಚಾರ ಮಾಡು : ಸುಕುಮಾರನೆಂಬನೊರ್ವಂ ವಿಪ್ರಸೂನು ಕುಬ್ಜಕೆಯೊಳರ್ದಲ್ಲಿಯ ಸಮಸ್ತಪರವಧುಗಳೋಳ್ ವಿಕರಿಸಿ ನೃಪಂ ಪೊಱಮಡಿಸೆ ಪರವಿಷಯಕೆ ಬಂದಿರೆ (ಪದ್ಮರಾ. ೧೧-೧೫೨). [ವಿಕಾರ + - ಇಸ್ತು$_3$]

ವಿಕರ್ಣ (ನಾ). ೧. ಒಂದು ಬಗೆಯ ಬಾಣ : ಕೊಂದನಂಕದ ವಿಕರ್ಣನನೊಂದೆ ವಿಕರ್ಣದಿಂ ನರಂ (ಪಂಪಭಾ. ೮-೧೦೭) ; ಮೆಯ್ಯೊಳ[ಬ್ಬಿ]ಡಿದ ವಿಕರ್ಣಕೋಟಿಯೊಳಣಂ ನೆಲ ಮುಟ್ಟದೆ ಮೋಡೆ ಬಿಟ್ಟೊಡಂಬಡಿಸಿದನಯ್ಯ ಶೌಚಗುಣದುನ್ನತಿಯಂ ಸುರಸಿಂಧುನಂದನಂ (ಪಂಪಭಾ. ೧೧-೪೭). ೨. ಕರ್ಣನ ಒಬ್ಬ ಮಗನ ಹೆಸರು : ಅಂಗರಾಜಂ . . . . ವಿಕರ್ಣಂಬೆರಸರ್ಣವನಿನಾದದಿಂದಾರುತ್ತುಂ ಬಂದು ಗುಣಾರ್ಣವನೊಳ್ ತಾಗೆ (ಪಂಪಭಾ. ೮-೧೦೬ ವ). ೩. ಧೃತರಾಷ್ಟ್ರನ ಮಕ್ಕಳಲ್ಲಿ ಒಬ್ಬನ ಹೆಸರು. [ಸಂ.]

ವಿಕರ್ತನ (ನಾ). ೧. ಸೂರ್ಯ ; ರವಿ : "ಸೂರಃ . . . ವಿಕರ್ತನಃ, ಅರ್ಕಃ . . . ಹರಿಃ – ೧೨ ಸೂರ್ಯನ ನಾಮಂಗಳು" (ಸಿದ್ಧಾಂಶಿ. ೩೨). 'ವಿಕರ್ತನೋದ್ಭವ' ಪರಾ. ೨. ಒಂದು ಬಗೆಯ ಸಸ್ಯ ; ಎಕ್ಕ. ೩. ತಂದೆಯ ರಾಜ್ಯವನ್ನು ಆಕ್ರಮಿಸಿಕೊಂಡ ಮಗ. [ಸಂ.]

ವಿಕರ್ತನೋದ್ಭವ (ನಾ). ೧. ಸೂರ್ಯನ ಮಗ. ೨. ಶನಿ : ತೇಜದಿಂ ದಿನರಾಜ ತಾರಕರಾಜ . . . ವಿಕರ್ತನೋದ್ಭವ ರಾಹುಕೇತುಗಳ ಒಟೆಯೊಳು ಸುರರಾಜ ಶಿಖಿ ಯಮರಾಜ ರಾಕ್ಷಸರಾಜ ವಾರಿಧಿರಾಜ ಮಾರುತರಾಜ ರಾಜೇಶಾನರೋಲ್ಕೆಸೆ (ಬಸಪು. ೧೦-೩೦). [ಸಂ.]

ವಿಕರ್ಮ (ಗು). ೧. ಕರ್ಮವಿಲ್ಲದ ; ಕರ್ಮರಹಿತವಾದ. ೨. ಆಕ್ರಮವಾಗಿ ವರ್ತಿಸುವ. (ನಾ). ೩. ಅನೇಕ ಬಗೆಯ ಕರ್ಮ ; ವಿಧವಿಧವಾದ ಕಾರ್ಯ. ೪. ನ್ಯಾಯಸಮ್ಮತವಲ್ಲದ ಕಾರ್ಯ : ನಿಮ್ಮ ನಾವೋಲ್ಕೆಸಿ ನಿಮಗೆ ವಿಕರ್ಮವನು ಮಾಡುವುದು ನಮಗದು ಧರ್ಮವಲ್ಲ (ಕುಮಾವಿ. ೩-೨). ೫. ಪ್ರಾರಬ್ಧಕರ್ಮ : ಘನವಿಕರ್ಮದ ವಿಲಗದಲಿ ನಿಜತನುಜಶೋಕದ ತಗಹಿನೊಳಗರ್ಜುನನು ಧೈರ್ಯದರಿದ್ರನಾದನು (ಕುಮಾದ್ರೋ. ೮-೩೨). [ಸಂ. ವಿಕರ್ಮನ್]

ವಿಕರ್ಷಕ (ನಾ). ಅಸಹ್ಯಕರವಾದುದು; ತಿರಸ್ಕರಣೀಯವಾದುದು: ಮಾರ್ದಮಿಕನೂ ವಿಕರ್ಷಕನೂ ಆದ ಭಾವ ಅವಳ ಕಣ್ಣುಗಳಲ್ಲಿ ಬರೆದಂತಿತ್ತು (ಪುನರು. ೧೯೬). [ಸಂ.]

ವಿಕರ್ಷಣೆ (ನಾ). ದೂರ ತಳ್ಳುವುದು ; ದೂರ ಸರಿಯುವಂತೆ ಮಾಡುವುದು : ಒಂದು ಚೇತನದಲ್ಲಿ ಧರ್ಮಾರ್ಥಕಾಮಸಂಬದ್ಧವಾದ ಆಕರ್ಷಣೆಗೂ ಮುಕ್ತಿಯ ವಿಕರ್ಷಣೆಗೂ ಉಂಟಾಗುವ ಘರ್ಷಣೆಯಿಂದ ಕಾವೂ ಹುಟ್ಟುತ್ತದೆ, ಕಲೆ ಉದಿಸುತ್ತದೆ (ಕಾವ್ಯಕಲಾ. ೧) ; ಸಾಮಾನ್ಯ ಪರಮಾಣುಗಳಿಗೂ ಈ ಹೊಸಬಗೆಯ ಪರಮಾಣುಗಳಿಗೂ ಮಧ್ಯೆ ಇರುವ ಆಕರ್ಷಣೆಯು ಒಂದು ಅವಧಿಕ ಅಂತರದ ಒಳಗೆ ವಿಕರ್ಷಣೆಯಾಗಿ ಪರಿವರ್ತಿತವಾಗುತ್ತಿದೆ ಎಂದೇಕೆ ಊಹಿಸಬಾರದು? (ನಿಶಲು. ೨೬೨). [ಸಂ. ವಿಕರ್ಷಣ]

ವಿಕರ್ಷಿಸು (ಕ್ರಿ). ದೂರಕ್ಕೆ ತಳ್ಳು ; ಆಕರ್ಷಣೆ ಇಲ್ಲದಂತೆ ಮಾಡು : "ಹಿಂದಕ್ಕೆ ಅಟ್ಟು . . . ಅಂಗೀಕರಿಸದಿರು ; ಹತ್ತಿರ ಬರಗೊಡದಿರು ; ವಿಕರ್ಷಿಸು" (Repel. ೧೦೬೧). [< ವಿಕರ್ಷಣೆ + - ಇಸ್ತು$_3$]

ವಿಕಲ, ವಿಕಳ (ಗು). ೧. ಊನವಾದ ; ಅಂಗಹೀನವಾದ. ೨. ಬೆದರಿದ ; ಗಾಬರಿಯಾದ. ೩. ಉದ್ವಿಗ್ನವಾದ ; ಖಿನ್ನವಾದ. ೪. ನಿಷ್ಪ್ರಯೋಜಕವಾದ. ೫. ಕೊರತೆಯುಳ್ಳ. ೬. ಒಣಗಿದ ; ಬತ್ತಿದ. (ನಾ). ೭. ಊನವಾದುದು ; ಅಸಮಗ್ರವಾದುದು : ಒಂದು ಸುಸಂಬದ್ಧತೆಯ ನಿಯಮಕ್ಕೆ ಒಳಗಾಗುವ ಆವತ್ತಿಯನ್ನು ಸ್ವೀಕರಿಸದಿದ್ದರೆ ಆ ಕಲೆಯು, ವಿಕಲವಾಗುತ್ತದೆ! (ಕರ್ಣಾಟ. ೪೯೯). ೮. ಭ್ರಮೆ ; ಭ್ರಾಂತಿ : ವಿಕಲವೆಡೆಗೊಡವರ್ ಬಾಯ್ದೆಱೆಯೊಳಕ್ಷರಂ ಸಕಲೀಕರಿಸಿ ತೋಱೆಯಡಗಿ ಪ್ರವಾಹಮಿರ್ಪಕಲಂಕ ಸುಸ್ಥಲವನಱಿಯದ ಕವೀಂದ್ರರ ಕವಿತ್ವವೇತಕ್ಕೆ (ವಿಕೋಪು. ೧-೩೮). ೯. ಹತ್ತು ಬಗೆಯ ಕಾಮಾವಸ್ಥೆಗಳಲ್ಲಿ ಒಂದು ; ಹಂಬಲಿಸಿ ಕೊರಗುವಿಕೆ ; ಖಿನ್ನತೆ : ಅಭಿಲಾಷೆ ಚಿಂತೆ ಸಂಸ್ಮೃತಿ ವಿಭುಗುಣನುತಿ ಸಂತಾಪನ ಕ್ರಿಯಾದ್ವೇಷ ವಿಕಲ[ಪಾಠಾಂ. ೪] ಮೌನ ಮೂರ್ಛೆ ಮರಣಮೆಂಬ ದಶಾವಸ್ಥಾದಿ ವಿಚಾರಪರರಿಂ (ವಿವೇಕ. ೧೦೪). ೧೦. [ಸಂಗೀತ] "ವಿಕಲಸ್ವರಸ್ಥಾನ ಶುದ್ಧವಿಲ್ಲದೆ ಹಾಡುವವನು" (ಸಂಗೀಚಂ. ೧೦೩). ವಿಕಳೆ : ೮. ಅಕಟ ಮಗಳಿಗಿದಾವ ದೆಸೆಯಲಿ ವಿಕಳೆ ಬಂದುದೊ (ಪ್ರಭುಲಿಂ. ೫-೬೦). ೯. ಸತಿ ಭೂವರನ ಕೇಳಿದಳವನಿಪತಿಯ ವಿಯೋಗ ವಿಕಳದಲಿ (ಚಿಕಾಂಚ. ೫-೧೩). ೧೧. ಕೊರತೆ ; ಕಡಿಮೆ : ಸಕಲಲಕ್ಷಣವು ವಸ್ತುಕೆ

ವರ್ಣಕಿಷ್ಟು ವಿಕಳವಾದರು ದೋಷವಿಲ್ಲ (ಭರಚ. ೧-೯). ೧೨. ಭ್ರಾಂತಿಗೊಂಡವನು ; ಭ್ರಮೆಹೊಂದಿದವನು : ವಿಕಳನಾದೆನು ಪಂಚೇಂದ್ರಿಯಧಾತುವಿನಿಂದ ಮತಿಗೆಟ್ಟೆನು ಮನದ ವಿಕಾರದಿಂದ (ಬಸವ. ೪೭). [ಸಂ.]

ವಿಕಲತೆ, ವಿಕಳತೆ (ನಾ). ೧. ದುಗುಡ ; ದುಃಖ ; ವ್ಯಾಕುಲತೆ : ವಿಭೀಷಣನೆಂದೆಂಬುತ್ತಮ ಬಲವಾಸುದೇವ ಮರಣಮವೆಯ್ದಲ್ ಚಿತ್ತದ ವಿಕಲತೆ ಯಿಂದಾನತ್ತೊಡೆ ಲಲಿತಾಂಗನೆಯ್ದಿ ಬೋಧಿಸಿದೆನ್ನಂ (ಆದಿಪ. ೨೫-೨). ೨. ದಿಗ್ಭ್ರಮೆ ; ದಿಗ್ಭ್ರಾಂತಿ. ವಿಕಳತೆ : ೨. ಇದು ಕೆಂಡವೋ ಉರಿಯೋ ಅಗಲಾಪುದೆನುತ್ತ ಭೂಸುರರಾಗ ವಿಕಳ[ಪಾಠಾಂ. ಲ]ತೆಯಿಂದ ಭಯಯುತರಾಗುತಿರೆ (ಬಸಪು. ೫೬-೩೧). ೩. ಹಂಬಲಿಸಿ ಕೊರಗುವ ಸ್ಥಿತಿ ; ಬಿನ್ನತೆ ; ವಿಕಳಾವಸ್ಥೆ : ಭಕ್ತಿರತಿಯ ವಿಕಳತೆಯ ಯುಕ್ತಿಯನೇನ ಬೆಸಗೊಂಬರಯ್ಯಾ (ಬಸವ. ೫೧೬). ೪. ಭ್ರಮೆ ; ಭ್ರಾಂತಿ ; ಮರುಳುತನ : ವಿಕಳತೆಯನತಿಗಳೆದವರ್ ಸಾತ್ವಿಕರೆನಿಸುತುತ್ಕೃಷ್ಟವಾಗಿಪ ಮುಕುತಿವನೆಗ್ಮೆದುವರು (ಕಾವೇಮ. ೪೭-೫೬) ; ನೀವು ವಿಕಳತೆಯಿಂದ ಭ್ರಮಿಸಲಿನಿತಾಯ್ತು (ನವಮೋ. ೮-೫೦). ೫. ಅಸಂಪೂರ್ಣವಾಗಿರುವಿಕೆ ; ಅಸಮಗ್ರತೆ : ನಿರ್ಘಟದಲ್ಲಿ ಘಟ ಹುಟ್ಟಿ ಪ್ರಕಟಿಸುವುದ ಕಂಡೆ ನಿರ್ವಿಕಳತೆಯಲ್ಲಿ ವಿಕಳತೆಯು ಹುಟ್ಟಿ . . . ಆ ಉಭಯದ ಗತಿಗೆಟ್ಟವರ ಕಂಡೆ (ತೋಮಾ. ೧೦-೭೬). 'ನಿರ್ವಿಕಳತೆ' ಪರಾ.

[ಸಂ. ವಿಕಲತಾ]

ವಿಕಲಭಾಷೆ (ನಾ). ಭ್ರಾಂತಿಜನ್ಯವಾದ ಮಾತು : ರಾಘವನ ಸುದ್ದಿಯನೀಕೆಗೆ ಪೇಳ್ದುದಾಗದೇ ಕರ್ಣಪಿಶಾಚಮಿ ವಿಕಲ[ಪಾಠಾಂ. ಳ]ಭಾಷೆ ನಿರನ್ನವಿಕಾರಮಾಗದೇ (ಪಂರಾಮಾ. ೧೧-೯೧). [ಸಂ. ವಿಕಲಭಾಷಾ]

ವಿಕಲಾಂಗ, ವಿಕಳಾಂಗ (ನಾ). ಅಂಗಹೀನನಾದವನು ; ಅಂಗವಿಕಲ : "ವಿಕಲಾಂಗಃ, ಪೊಳಂಡ : -- ಈ ೨ ಅಂಗಹೀನರ್" (ಹಲಾಯು. ೬೪-೨೩೩). ವಿಕಳಾಂಗ : "ಪೊಳಂಡ ವಿಕಳಾಂಗನಕ್ಕುಂ" (ಮಂಗರಾ. ೭೩-೨೫). [ಸಂ.]

ವಿಕಾಲಾಕ್ಷ (ನಾ). ದೃಷ್ಟಿದೋಷವುಳ್ಳವನು : ಉದಯಸ್ಥಂ ದಿನನಾಥನಾಗೆ ವಿಕಲಾಕ್ಷಂ ನಿರ್ಭಯಂ ನಿರ್ದಯಂ (ಜಾತಕ. ೧೭-೧). [ಸಂ.]

ವಿಕಲಾಕ್ಷರ (ನಾ). [ವ್ಯಾಕ] ಸ್ವರರಹಿತವಾದ ಅಕ್ಷರ ; ವ್ಯಂಜನಾಕ್ಷರ : ವಿಕಲಾಕ್ಷರಂ ಪಂಚೋತ್ತರತ್ರಿಂಶವದಕೆ ಸ್ವರಮೊದಗ ಸಕಲಾಕ್ಷರಾಹ್ವಯಮಕ್ಕುಂ (ರಾಘಚ. ೨-೫೬). [ಸಂ.]

ವಿಕಲಿತ, ವಿಕಳಿತ (ಗು). ೧. ಗೊಂದಲಗೊಂಡ ; ವಿಚಲಿತವಾದ : ಜಯಂತರು . . . ಆ ವಿಕಲಿತ ಮನಸ್ಸಿನಲ್ಲಿಯೇ ಅಲ್ಲಿಂದೆದ್ದು . . . ಕಾಲೇಜ್ ಆವರಣದಿಂದ ಹೊರಬಿದ್ದರು (ಒಂಚಿ. ೮೭). (ನಾ). ೨. ವಿಚಲಿತನಾದವನು : ವಿಕಲಿತನಾಗಿ ರಕ್ಕಸ ಭರದಿ ದುಬಿದಿ ಸುಯ್ದು ಮಂತ್ರಿ ಪ್ರಕರಕಿತೆಂದ (ಕಾಶಿಕಾ. ೨೩-೨೨). ವಿಕಳಿತ : ೧. ಶೋಕಂ ಮಿಗೆ ಫಣಿರಾಜಪತಾಕಂ ವಿಕಳಿತವಿವೇಕಶೂನ್ಯಂ [ಪಾಠಾಂ. ವಿಗಳಿತವಿವೇಕ ನವಿರಳ] ಬಾಹ್ಯೋದ್ರೇಕಂ . . . ಮೂರ್ಛೆಗೆ ಸಂದಂ (ಗದಾಯು. ೩-೭೭). [ಸಂ.]

ವಿಕಲೆ (ನಾ). ೧. ಮುಟ್ಟಾಗಿರುವ ಹೆಂಗಸು. ೨. ಒಂದು ವಿಘಳಿಗೆಯ ಅರವತ್ತನೆಯ ಒಂದು ಅಂಶ : ಒಂದು ಅಂಶಕ್ಕಿಂತಲೂ ಕಡಿಮೆಯಾದ ಕೋಣವನ್ನು ಅಳೆಯಬೇಕಾಗಿ ಬರುವುದರಿಂದ ಈ ಅಂಶವನ್ನು ೬೦ ಸಮಭಾಗಗಳಾಗಿ ವಿಭಾಗಿಸಿ ಪ್ರತಿಯೊಂದಕ್ಕೂ ೧ ಕಲೆ (Minute) ಎಂಬ ಹೆಸರನ್ನು ಕೊಟ್ಟಿದೆ. ಇಂತಹ ಪ್ರತಿಯೊಂದು ಕಲೆಯೂ ೬೦ ವಿಕಲೆಗಳಾಗಿ (Seconds) ವಿಭಾಗವಾಗಿದೆ (ಜ್ಯೋರ್ವಿ. ೨೬೦).

[ಸಂ. ವಿಕಲಾ]

ವಿಕಲೇಕ್ಷಣ (ನಾ). ದೋಷಪೂರ್ಣವಾದ ದೃಷ್ಟಿಯುಳ್ಳವನು : ಕುಜಂ . . . ನೆಲಸೆ ಕುಳೀರಮಂದಿರದೊಳರ್ಥಯುತಂ ವಿಕಲೇಕ್ಷಣಂ ಬುಧಂ ಜಲನಿಧಿಯಾನ ಲಬ್ಧಧನನಕ್ಕುಮವಂ (ಜಾತಕ. ೧೭-೧೯). [ಸಂ.]

ವಿಕಲ್ಪ (ನಾ). ೧. ಒಂದಕ್ಕಿಂತ ಹೆಚ್ಚು ವಸ್ತು, ವಿಷಯಗಳಲ್ಲಿ ಒಂದನ್ನು ಮಾತ್ರ ಆಯ್ದುಕೊಳ್ಳುವ ಅವಕಾಶ ; ಐಚ್ಛಿಕತೆ. ೨. ಅನಿಶ್ಚಿತತೆ ; ಸಂದಿಗ್ಧತೆ : ಭವಬಂಧನವಲ್ಲಿಯದೊ ಸಂಕಲ್ಪ ವಿಕಲ್ಪವೆಂಬ ಸಂದೇಹ ಕಳೆದುಳಿದವಂಗೆ (ಬಸವ. ೬೭೦). ೩. ಸಂದೇಹ ; ಅನುಮಾನ ; ಸಂಶಯ : ಚಾಡಿಗಳಿಂದ ಯಜಮಾನನ ಮನಸ್ಸಿನಲ್ಲಿ ಜಗನ್ನಾಥನ ವಿಷಯಕ್ಕೆ ವಿಕಲ್ಪ ಬರದಿದ್ದರೂ . . . ಪರೀಕ್ಷಿಸಿ ನೋಡ ಬೇಕೆಂಬ ಲವಲವಿಕೆ ಹುಟ್ಟಿತು (ಮುಂಬಾ. ೪-೫೧). ೪. ಸಂಚು ; ಉಪಾಯ ; ತಂತ್ರ. ೫. ಎರಡುಯುಗಗಳ ನಡುವಣ ಕಾಲಾವಧಿ, -ಯುಗ : ಭುವನಜನಜೀವ ನೋಪಾಯವೃತ್ತಿಯಂ ತೋಜೆ ಕೊಟ್ಟು ಕೃತಕೃಷಿಕರ್ಮ ವ್ಯವಪ್ಯತಿಯಿಂ ಕೃತಯುಗಮೆಂಬ ವಿಕಲ್ಪಮನಾದಿಕಾಲದೊಳ್ ಪುಟ್ಟಿಸಿದಂ (ಪಂರಾಮಾ. ೧-೯೩). ೬. ಪ್ರಕಾರ ; ವಿಧ ; ಬಗೆ : ಅವಱ ವಿಕಲ್ಪಮೆ ಪೆಱವು ಪೂಜಾವಿಶೇಷಮಕ್ಕುಂ (ಆದಿಪು. ೧೨-೧೪) ; ಕೊಲೆಯ ವಿಕಲ್ಪಕೋಟಿಗಳೆ ದುಷ್ಕೃತಂ (ಪಂರಾಮಾ. ೫-೮). ೭. ತಪ್ಪು ; ದೋಷ ; ಪ್ರಮಾದ : 'ವಿಕಲ್ಪಾರ್ಥ' ಪರಾ. ೮. ಭೇದ ; ಭಿನ್ನತೆ ; ವ್ಯತ್ಯಾಸ : ಅದು ದಿವಿಜೇಂದ್ರಲೋಕಮಿದು . . . ಮನುಷ್ಯಲೋಕಮೆಂಬಿದುವೆ ವಿಕಲ್ಪಮಲ್ಲಿ ಸುರಕಾಂತೆ ದಲಿಲ್ಲಿ ಮನುಷ್ಯಕಾಂತೆಯೆಂಬಿದುವೆ ವಿಕಲ್ಪಂ (ಆದಿಪು. ೪-೧೯) ; ಎಲ್ಲಾ ಬಗೆಯಲ್ಲೂ ಅವರಿಗೂ ನಮಗೂ ಸ್ನೇಹವೇ ಹೊರ್ತು ವಿಕಲ್ಪ ಯೋಚಿಸಲಿಕ್ಕೆ ಇಲ್ಲಾ (ರಾಜೇಂದ್ರ. ೪೫). ೯. ಕಲ್ಪಿತವಾದ ಸಂಗತಿ ; ಹೀಗೆ ಇದ್ದಿರಬಹುದೆಂಬ ತಾರ್ಕಿಕವಾದ ಗ್ರಹಿಕೆ : ಬರಿಯ ಶಬ್ದದಿಂದ, ವಿಷಯವಿಲ್ಲದೇ ಉಂಟಾಗತಕ್ಕ ಜ್ಞಾನಕ್ಕೆ ವಿಕಲ್ಪವೆಂದು ಹೆಸರು (ಒಂದಸಾ. ೧೦೪) ; 'ಮೊಲದ ಕೊಂಬು' ಎಂಬ ಮಾತನ್ನು ಕೇಳಿ ಉಂಟಾಗುವ ಪ್ರತ್ಯಯಕ್ಕೆ ಗೋಚರವಾಗುವ ವಸ್ತುವು ಲೋಕದಲ್ಲಿ ಎಲ್ಲಿಯೂ ಇರುವುದಿಲ್ಲ. ಆದರೂ ಇಂಥದೊಂದು ವಸ್ತುವು ನಿಜವಾಗಿದ್ದಂತೆ ನಾವು ತತ್ಕಾಲಕ್ಕೆ ಕಲ್ಪಿಸಿಕೊಳ್ಳಬಹುದಾಗಿರುವುದು. ಈ ಬಗೆಯ ಪ್ರತ್ಯಯಕ್ಕೆ 'ವಿಕಲ್ಪ'ವೆಂದು ಹೆಸರು (ಬ್ರಹ್ಮಭಾ. ೬). ೧೦. [ವ್ಯಾಕ] ಒಂದು ಅಕ್ಷರ ಅಥವಾ ಪದದ ಜಾಗದಲ್ಲಿ ಅದರ ಇನ್ನೊಂದು ರೂಪ ಪರ್ಯಾಯವಾಗಿ ಬರುವುದು ಮತ್ತು ಒಂದು ಸಲ ಬರುವ ಅಥವಾ ಬಾರದ ಐಚ್ಛಿಕಸ್ಥಿತಿ : ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತದೊಳಾ ಲಕಾರಕ್ಕೆ ವೇಟ್ಟೆನದಱಿಂ ಕ್ಷಳನು (ತಮಾದ. ೫) ; ಸಮಾಸವಲ್ಲದಲ್ಲಿಯೂ ವಕಾರ ವಿಕಲ್ಪವಾಗಿ ಬರುವುದುಂಟು (ಕ್ಷಪ್ರ. ೧೧). 'ಸಂಧಿವಿಕಲ್ಪ' ಪರಾ. ೧೧. [ವೇದಾಂತ] ಚಿತ್ತವೃತ್ತಿಯ ಐದು ಪ್ರಕಾರಗಳಲ್ಲಿ ಒಂದು : ಚಿತ್ತವೃತ್ತಿಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿಗಳೆಂದು ಐದು ಪ್ರಕಾರ . . . ಬರಿಯ ಶಬ್ದದಿಂದ ವಿಷಯವಿಲ್ಲದೇ ಉಂಟಾಗತಕ್ಕ ಜ್ಞಾನಕ್ಕೆ ವಿಕಲ್ಪವೆಂದು ಹೆಸರು (ಒಂದಸಾ. ೧೦೪). ೧೨. = ವಿಕಲ್ಪಾಲಂಕಾರ : ಸಮಾಸೋಕ್ತಿ ಪರ್ಯಾಯೋಕ್ತಿ ಆಕ್ಷೇಪ . . . ಪರಿಸಂಖ್ಯೆ ವಿಕಲ್ಪ ಸಮುಚ್ಚಯ . . . ಭಾವಿಕ ಉದಾತ್ತವೆಂಬ ಅಱವತ್ತೈದಲಂಕಾರಗಳಿಂದೊಡಗೂಡಿ (ವಿವೇಕ. ೧೭೯). ೧೩. [ಗಣಿತ] ಸಾಲಾಗಿಟ್ಟ (ವಸ್ತು) ಶ್ರೇಣಿಯಲ್ಲಿ ಆಯಾವಸ್ತುಗಳ ಸ್ಥಾನಪಲ್ಲಟ ಮಾಡುವುದರಿಂದ ಉಂಟಾಗುವ ಬೇರೆಬೇರೆ ಗುಂಪುಗಳ ಗಣನೆ : ವಿಕಲ್ಪ ಎಂಬುದು ಬೀಜಗಣಿತದ ಒಂದು ಶಾಖೆ (permutations and combinations). ಈ ಶಾಖೆಯನ್ನು ಜೈನರು ವಿಶೇಷವಾಗಿ ಬೆಳಸಿದರು (ಗಣಿಚ. ೨೦೩). [ಸಂ.]

ವಿಕಲ್ಪಗತಿ (ನಾ). = ವಿಕಲ್ಪ ೧೦ : ಪಗಲಿರುಳಿಂಬಲ್ಲಿ ವಿಕಲ್ಪಗತಿಯಿನಾ ವ್ಯಂಜನಾಂತಪದೊಳ್ ಪೇಳ್ದರ್ ಸೂಳಿಗಳ್ (ಶಮದ. ೧೦೯). [ಸಂ.]

ವಿಕಲ್ಪಬಿಂದು (ನಾ). [ವ್ಯಾಕ] ಒಂದು ಪದವು ಅಬಿಂದುಕ ಅಥವಾ ಸಬಿಂದುಕ ಆಗಿರಬಹುದಾದ ರೂಪ ಮತ್ತು ಹಾಗೆ ಇರುವ ಪದ : ವಿಕಲ್ಪಬಿಂದುಗೆ - ಕದಂಪ್ಯ, ಕದವು ; ಕೊಡಂಕೆ, ಕೊಡಕೆ (ಶಮದ. ೬೬ ಪ್ರಯೋ). [ಸಂ.]

ವಿಕಲ್ಪಾರ್ಥ (ನಾ). ೧. ಅಥವಾ ಎಂಬ ಅರ್ಥ : ಳಲಿಯಿವುದು ವಿಕಲ್ಪಾರ್ಥಂ ಕಱಿಲದೆ ಮೇಣೆಂಬ ಶಬ್ದದೊಳ್ (ಶಮದ. ೬೧೫). ೨. ತಪ್ಪುಕಲ್ಪನೆ ; ವಿಪರೀತಾರ್ಥ : ನಿಮ್ಮನ್ನೇ ಕಂಡು ಮಾತನಾಡಿದರೆ ಸರಿಹೋಗುವುದೆಂದು ಅವರೊಂದಿಗೆ ಇಲ್ಲಿಗೆ ಬಂದೆವು. ನೀವು ವಿಕಲ್ಪಾರ್ಥ ಮಾಡಿಕೊಳ್ಳಬಾರದು (ಕುಟಾ. ೪೬). [ಸಂ.]

ವಿಕಲ್ಪಾಲಂಕಾರ (ನಾ). [ಕಾವ್ಯಮೀ] ಸಮಾನಬಲವುಳ್ಳ ಯಾವುದಾದರೂ ಎರಡು ಕಾರ್ಯವಿಧಾನಗಳಿಗೆ ಪರಸ್ಪರ ವಿರೋಧವುಂಟಾಗಿ ಯಾವು ದಾದರೂ ಎರಡು ಕಾರ್ಯ ನಿಶ್ಚಿತವಾದಾಗ ಅದನ್ನು ಆಯ್ದುಕೊಳ್ಳುವುದು ; ಒಂದು ಬಗೆಯ ಅಲಂಕಾರ : ಸಮಬಲಮಾಗಿಯೊಂದರ್ಕೊಂದು ವಿರುದ್ಧಮಾಗಿರ್ಪ ಕಜ್ಜಂಗಳೊಳಾವುದನಾದೊಡಮೊಂದನೆಸಗಲ್ವೇಟ್ಪುದೆಂಬುದು ವಿಕಲ್ಪಾಲಂಕಾರಂ

ಎಂತೆನೆ : – ದೊರೆದೊರೆಗಳಿರಾ ಕೇಳಂ ಪರಿಪರಿಯೊಳ್ನನ್ನಬಟ್ಟು ಬಸವಳಿಯುದಿಂ ನರಪತಿಯಡಿನೆಲಲೊಳ್ಕೀರ್ ಸುರಪತಿಯತಿನೆಲಲೊಳಾದೊಡಂ ಸೊಗವಾಟಂ (ಅವ್ರತಿ. ೧೦೦-೧೧) ; ಸಂಧಿ ವಿಗ್ರಹವೆರಡು ಒಮ್ಮೆಲೆ ಪ್ರಾಪ್ತವಾದಡೆ ಎರಡರೊಳು ಒಂದಾಗುವುದೆಂದು ಪೇಳಲ್ಕೆ ವಿಕಲ್ಪಾಲಂಕಾರವೆನಿಸುವುದು (ಕುವಲ. ೧೦೫) ; ಒಂದನ್ನು ಸಮ್ಮತಿಸಿದಲ್ಲಿ ಮತ್ತೊಂದನ್ನು ಸಮ್ಮತಿಸಲಾಗದ ಪಕ್ಷದ್ವಯದಲ್ಲಿ ಯಾವುದಾದರೂ ಒಂದು ಪಕ್ಷವನ್ನು ಸಮ್ಮತಿಸುವುದಕ್ಕಿರುವ ಸಂದರ್ಭವನ್ನು ತೋರ್ಪಡಿಸುವುದೇ ವಿಕಲ್ಪಾಲಂಕಾರವೆನ್ನಿಸಿಕೊಳ್ಳುವದು (ಕೃಪಿ. ೩೪೪). [ಸಂ.]

ವಿಕಲ್ಪಿತ (ಗು) ೧. ಸಿದ್ಧವಾದ ; ಅಣಿಯಾದ. ೨. ವಿಭಾಗವಾದ. (ನಾ). ೩. ಪ್ರತ್ಯೇಕ ವಿಭಾಗವಾಗಿ ಮಾಡಿದುದು ; ವಿಶಿಷ್ಟಪ್ರಕಾರವಾಗಿ ವ್ಯವಸ್ಥೆಮಾಡಿದುದು : ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯ ನಿರ್ಗೀತಿಯನೀ ತೆಱತ್ತು ತಱಿಸಲ್ಗೆ ಬುಧೋತ್ತಮರ್ (ಕವಿರಾ. ೨-೧೦೧) ; ಗಜತುರಗರಥಪದಾತಿಮಹೋಕ್ಷಗಂಧರ್ವನಟೀವಿಕಲ್ಪಿತಮಾದೇಱುಂ ಪಡೆಯುಂ . . . ತನಗೆ ಪ್ರಸಿದ್ಧಮಾಗೆ (ಶಾಂತಿಪು. ೪-೧೧೧ ವ). [ಸಂ.]

ವಿಕಲ್ಪಿಸು (ಕ್ರಿ). ೧. ಬಗೆಬಗೆಯಾಗಿ ಊಹಿಸು,—ಕಲ್ಪಿಸು : ಕೋಷದಾಗ್ರಹ ನೆನ್ನನಗಲ್ಚನೊ ಕಾಣದೆನ್ನನೆಲ್ಲಿರದಱಸುತ್ತಮಿರ್ದಪನೂ ಬಾಲತಮಾಲವನಾಂತ ರಾಳದೊಳ್ ಎಂದು ವಿಕಲ್ಪಿಸುತ್ತಮಿರ್ದು (ಕಾದಂಪು. ೬೫). ೨. ಬೇರೆ ರೀತಿಯಾಗಿಸು ; ವ್ಯತ್ಯಾಸಗೊಳಿಸು : ಆತನಿಂ ಪಿರಿಯನೆಂಬುಂತಪ್ಪವಜೆನಿಳಪಾದಾನಮಂ ಮಱೆಮಾಡಿ ವಿಕಲ್ಪಿಸುವರ್-ಕೃಷ್ಣನಿಂ ಪಿರಿಯಂ ಬಲಭದ್ರಂ. ದುರ್ಯೋಧನನಿಂ ಕಿಱಿಯಳ್ ದುಶ್ಶಳೆ-ಎಂಬಂತೆ (ಕಮಾದ. ೧೩೧ ಪ್ರಯೋ) ; ಮನುಷ್ಯನು ಸಂಕಲ್ಪಿಸಿದ್ದನ್ನು ವಿಧಾತನು ವಿಕಲ್ಪಿಸುತ್ತಾನೆ ಎಂದು ಆರಿಯೆ (ಬಂಮಾ. ೨೦೭). [ವಿಕಲ್ಪ + - ಇಸು]

ವಿಕಸನ (ನಾ). ೧. ಅರಳುವಿಕೆ ; ವಿಕಾಸ : ವಿಲೋಚನಂಗಳಲ್ಲಮಿವಳಿಗಳ್ ಮುದಮಲ್ದಿದು ವಿಕಸನಂ (ಕವಿರಾ. ೩-೨೪) ; ಹರಿಕರಾಬ್ಜವಿಕಸನಭಾಸ್ವನ್ಮಂಡಲದಂತೊಪ್ಪುವ ಕೋದಂಡಂ ಶಾರ್ಙ್ಗಾಖ್ಯಮೋವುಗಮ್ಮಂ ನಿಚ್ಚಂ (ವಿಷ್ಣು. ೧-೧-೧೨). ೨. ಬೆಳವಣಿಗೆ ; ವೃದ್ಧಿ ; ಅಭ್ಯುದಯ : ಸಾಮಾಜಕಜೀವನದ ವಿಕಸನಕ್ಕೂ ತಕ್ಕಷ್ಟು ಗಮನ ಕೊಡಬೇಕು (ಶಿಕ್ಷಣ. ೧೩೬). [ಸಂ.]

ವಿಕಸಿತ (ಗು). ೧. ಅರಳಿದ ; ವಿಕಾಸವಾದ : ವಿಕಸಿತ ನಾನಾಪುಟನತಿ ವಿಕಂಪಿತಾ ತಾಮ್ರ ದಶನವಸನಂಬದ್ಧಭ್ರುಕುಟಿಪುಟಂ ಭರತೇಶ್ವರನಕಾಲ ಯಮರಾಜಲೀಲೆಯಂ ಕೈಕೊಂಡಂ (ಆದಿಪು. ೧೪-೨೪) ; ವಿಕಸಿತನೀಲನೀರಜದಳಂಬೊಲಿರಲ್ ಗಜಿ . . . ಪೂವಿನಿಂ ಸಮೆದ ಪಕ್ಕಿಯಿದೆಂಬಿನಮಾಗಳೊಂದು ಸಾರಿಕೆ ಪರಿತಂದುದು (ಕಾದಂಪು. ೬೦). ೨. ಅಭಿವೃದ್ಧಿ ಹೊಂದಿದ. (ನಾ). ೩. ಅರಳಿದುದು ; ಪ್ರಫುಲ್ಲವಾದುದು : ವಿಕಸಿತಮಾದ ಕಾಂಚನಸರೋರುಹಷಂಡದ ಪರ್ಬುಮಂ . . . ಶುಕತತಿ ನೋಡಿ ನೋಡಿ ನೆಱೆ ನಿಟ್ಟಿಸಲಾಱದೆ ಮಂಜುಳಾರವಂ ಪ್ರಕಟಿಸೆ ಪರ್ಬುಗೊಂಡು ಸುಲಿದಾಡುವುದಲ್ಲಿಯ ಕೆಯ್ಗೊಲುಗಳೊಳ್ (ಜಗು. ೨-೮) ; ಪರ್ವತಾಗ್ರದಲಿ ವನಜ ವಿಕಸಿತವಾದೊಡೆಯು ಸಜ್ಜನರುಗಳು ಸುದಿದೆರಡನಾಡರು (ಕುವಾಉ. ೩-೧೨೬). [ಸಂ.]

ವಿಕಸಿತವಡೆ (ಕ್ರಿ). ೧. ಅಗಲವಾಗು ; ವಿಸ್ತಾರವಾಗು : ವಿಕಸಿತವಡೆ ದಂತರಾಳಗರ್ಭದ ಗೃಹ ಶುಕನಾಸಿಯ ಮಂದಿರದೆ ಬಳುತವಸ್ತಲ ಶ್ರೀರಂಗೇಶ ಸಾಹಸ್ರಮುಖಿನ ತಲ್ಪದೊಳೆಸದಿಹನು (ಕಂಪಾ. ೭-೧೩). [ವಿಕಸಿತ + ಪಡೆ]

ವಿಕಸಿಸು (ಕ್ರಿ). ೧. ಅರಳು ; ಬಿರಿ : ಸಾಂದೀಪನಿಸೆವ ವಿದ್ಯೆ ಮುಕುಂದನ ಸಂಗತಿಯೊಳತಿವಿಕಾಸಮನೊಳಕೊಂಡಂದೆಸೆದುದು ಪೂಗೊಳದರವಿಂದಿನಿ ದಿನಕರನ ಸಂಗದಿಂ ವಿಕಸಿಪವೋಲ್ (ಜಗು. ೭-೯). ೨. ಬೆಳವಣಿಗೆ ಹೊಂದು ; ಅಭಿವೃದ್ಧಿಯಾಗು : ವ್ಯಕ್ತಿತ್ವ ಪರಿಪೂರ್ಣವಾಗಿ ವಿಕಸಿಸುವಂತೆ ಸನ್ನಿವೇಶವನ್ನು ಕಲ್ಪಿಸಬೇಕು (ಶಿಕ್ಷಣ. ೩೭). [ವಿಕಸನ + - ಇಸು]

ವಿಕಸೆ (ನಾ). ಒಂದು ಬಗೆಯ ಸಸ್ಯ ; ಮಂಜಿಷ್ಠೆ : "ಕಾಡುಬಳ್ಳಿ, ಸೋಮಲತೆ . . . ವಿಕಸೆ, ಬಿಂಗಿ, ಮಂಜಿಷ್ಠ, ಯೋಜನವಲ್ಲಿ" (ಸ್ಮಾ. ೧೧೪). [ಸಂ. ವಿಕಸಾ]

ವಿಕಸ್ವರ (ಗು). ೧. ಅರಳುವ ; ವಿಕಾಸವಾಗುವ ; ವಿಸ್ತಾರವಾಗುವ. ೨. (ಧ್ವನಿಯಂತೆ) ಗಟ್ಟಿಯಾದ ; ಘನವಾದ. (ನಾ). ೩. ಅರಳಿದುದು ; ಪ್ರಫುಲ್ಲವಾದುದು : ಆಕೆಯ ವದನಬಿಂಬವು ಶಾರದಾಂಭೋಜದಂತೆ ವಿಕಸ್ವರವಾಗಿ ಲಾವಣ್ಯಪೋಷಕವಾಗಿ ಒಪ್ಪುತ್ತಿದ್ದಿತು (ಲಕ್ಷ್ಮೀಪ್ರ. ೨೮೩). [ಸಂ.]

ವಿಕಸ್ವರಾಲಂಕಾರ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಒಂದು ವಿಶೇಷಸಂಗತಿಯನ್ನು ಸಾಮಾನ್ಯದಿಂದಲೂ, ಇನ್ನೊಂದು ವಿಶೇಷದಿಂದಲೂ ಪುಷ್ಟೀಕರಿಸಿ ಹೇಳುವುದು : ಒಂದು ವಿಶೇಷಮುಂ ಸಮರ್ಥಿಸುವುದಕ್ಕೆ ಸಾಮಾನ್ಯಮುಂ ಅದುಂ ಸಮರ್ಥಿಸುವುದರ್ಕೂಂದು ವಿಶೇಷಮುಂ ಪೇಳೆಯದು ವಿಕಸ್ವರಾಲಂಕಾರಂ - ಎಂತೆನೆ – ತನ್ನಂ ನೆಱೆ ನೆಮ್ಮಿದರಂ ತನ್ನವೊಲುನ್ನತನೆನಿಕ್ಕುಮಿಯಪ್ರತಿಮಂ ಮುನ್ನೆಗಟ್ಟ ಪಿರಿಯರುಂ ಶ್ರೀಮನ್ನಾರಾಯಣ ನುಮಿಣಸಲಂತೆ ವೊಲ್ಕೆಸೆ (ಅವ್ರತಿ. ೧೦೬-೨೨) ; ಮೊದಲು ವಿಶೇಷವ ಪೇಳಿ, ಅದಕ್ಕೆ ದೃಷ್ಟಾಂತಭೂತವಾದ ಸಾಮಾನ್ಯವ ಪೇಳದಕ್ಕೂ ತೃಪ್ತಿಬಡದೆ ಪುನಃ ಉಪಮಾರೀತಿಯಿಂದಲಾಗಲಿ ಅಥವಾ ಅರ್ಥಾಂತರನ್ಯಾಸರೀತಿಯಿಂದಾಗಲಿ ವಿಶೇಷವು ವರ್ಣಿಸೆ ವಿಕಸ್ವರಾಲಂಕಾರವೆನಿಪ್ಪುದು (ಕುವಲ. ೧೧೭). [ಸಂ.]

ವಿಕಳ 'ವಿಕಲ' ನೋ.

ವಿಕಳಗೊಳ್ (ಕ್ರಿ). ಮರುಳಾಗು ; ಭ್ರಾಂತಿಹೊಂದು : ಅಕಟ ಬಸವಯ್ಯ ಭಕ್ತಿಯ ಮರುಳು ತಲೆಗೇಱಿ ವಿಕಳಗೊಂಡಿತೊ ಪೇಳು ಸುಮ್ಮನಿರದೇತಕ್ಕೆ . . . ಕರವೆತ್ತಿ ಪಿಡಿವನೆಂದೆಂಬುದೇನು (ವ್ರಾಕ್ಷರಾ. ೫೧-೩) ; ನಾ ನಿನ್ನ ಸಮ್ಮುಖವಿದಿ ಸಾಕಾರದಿಂ ನಿಂದಿರಲು ಗೆಲ್ಲದೆ ವಿಕಳಗೊಂಡವರಂದದಿ ನಿರಾಯುಧನುಮಾಗಿ ನಿಲ್ಲುವರೆ ಕಲಿವೀರಭಟರು (ನವಮೋ. ೧೨-೫೦). [ವಿಕಳ (= ವಿಕಲ) + ಕೊಳ್]

ವಿಕಳಗೊಳಿಸು (ಕ್ರಿ). ೧. ಭ್ರಮೆಗೊಳಿಸು ; ಬುದ್ಧಿಯನ್ನು ಕೆಡಿಸು ; ಮತಿಗೆಡಿಸು : ಅಕಟ ಮರುಳಾದ್ಯ . . . ಶೂರ್ಪಣಾದಿ ನಿನ್ನ ವಿಕಳಗೊಳಿಸಿದಳಂಗಜನ ಮೋಹಕದ ಮದ್ದಿನಲಿ (ತೊಂರಾ. ೩-೭-೩೪). ೨. ಕಳವಳಕ್ಕೆ ಈಡುಮಾಡು ; ಗಾಸಿಗೊಳಿಸು : ನಡುಳನನು ನೋಯಿಸಿದ ಸಹದೇವಕನ ಘಾಯಂಬಡಿಸಿದನು ಸಾತ್ಯಕಿಯ ಮಸೆಗಾಣಿಸಿದನಾ ಪಾಂಚಾಲ ಕೈಕಯರ ವಿಕಳಗೊಳಿಸಿದನು (ಕುವಾಪ ೧೩-೪೦).

[ವಿಕಳಗೊಳ್ + - ಇಸು]

ವಿಕಳತನ (ನಾ). ಭ್ರಮೆ ; ಭ್ರಾಂತಿ : ಯುಕುತಿ ತೋಱದೆ ಮತ್ತೆ ಜೂಜಿನ ವಿಕಳತನಕೆಡೆಗೊಂಡು ಕೌರವ ಶಕುನಿಗಳ ದುರ್ನೀತಿಗೊಳಗಾದನು ಮಹೀಪಾಲ (ಕುವಾಸ ೬೫೩ ೧೭-೪೭) ; ನೀ ನಿನ್ನ ವಿಷಯದ ವಿಕಳತನವನು ಬಿಟ್ಟು ಸಲೆ ಸಾತ್ವಿಕದ ಬುದ್ಧಿಯಲೀಕ್ಷಿಸು (ಪ್ರಭುಲೀ ೭-೨೦). [ವಿಕಳ (= ವಿಕಲ) + - ತನ]

ವಿಕಳತೆ 'ವಿಕಲತೆ' ನೋ.

ವಿಕಳತೆಗೊಳ್ (ಕ್ರಿ). ಭ್ರಾಂತನಾಗು ; ಬುದ್ಧಿಗೆಡು ; ಮತಿಗೆಡು : ಅಂಗದ ನಿರಾಭಾರಿಗಳೆಲ್ಲರು ಕೂಡಿ ಲಿಂಗದ ಹೊಲಬ ಬಲ್ಲೆವೆಂದು . . . ಕೀಳರೊಳಗೆ ಸಕಲಭೋಗವ ಮಾಡುವ ವಿಕಳತೆಗೊಂಡವರ ನೋಡಾ (ಮೋಮಾ. ೧೭೦-೬೫೪) ; ಅಕಟ ನಾ ಪಾಪಿಯಾದೆನು ಈಸುಕಾಲವು ಸಕಲಜೀವಿಯನೆಲ್ಲ ಕೊಂದೆ ವಿಕಳತೆಗೊಂಡೆನು (ನಸ್ನಕಾ. ೮-೧೨೨). [ವಿಕಳತೆ (= ವಿಕಲತೆ) + ಕೊಳ್]

ವಿಕಳತ್ವ (ನಾ). ದಿಗ್ಭ್ರಮೆ ; ದಿಗ್ಭ್ರಾಂತಿ ; ಕಕ್ಕಾಬಿಕ್ಕಿ : "ಬೆಬ್ಬಳಮೆಂದೆನೆ ವಿಕಳತ್ವಮೆಂದು ತಿಳಿಗೆ ವಿದಗ್ಧರ್" (ಭಾಪು. ೫೨). [ಸಂ. ವಿಕಲತ್ವ]

ವಿಕಳಧ್ವನಿ (ನಾ). ೧. ದುಃಖದ ಧ್ವನಿ. ೨. ಪಕ್ಷಿಗಳ ಇಂಪಾದ ನಿನಾದ ; ಹಕ್ಕಿಗಳ ಇಂಚರ. ೧, ೨ : ಆ ವನಂ ವನಧಿಯಂತೆ ವಲ್ಲಕಿಯಂತೆ ವರಪ್ರವಾಳ ಮಾಂತಿತಮುಂ . . . ವಿರಹಿಯಂತೆ ವಿಧಿವಾಹನದಂತೆ ವಿಕಳಧ್ವನಿವಿಳಸಿತಮುಂ . . . ಎನಿಸಿದುದು (ರಾಜತೀ. ೨-೭೮ ವ).

[ಸಂ. ವಿಕಲಧ್ವನಿ (ವಿಕಲ + ಧ್ವನಿ); (ವಿ + ಕಲ + ಧ್ವನಿ]

ವಿಕಳಪಾಣಿ (ನಾ). ಒಂದು ಕೈಯುಳ್ಳವನು : "ವಿಕಳಹಸ್ತಂ ವಿಕಳಪಾಣಿಯೊರ್ಕ್ಕಿಯನಕ್ಕುಂ" (ಮಂಗರಾ. ೧೧೫-೬). [ಸಂ. ವಿಕಲಪಾಣಿ]

ವಿಕಳಮತಿ (ನಾ). ಭ್ರಾಂತಿಗೊಂಡವನು ; ಮತಿಗೆಟ್ಟವನು : ಸ್ವಕರಸ್ಥನಾದ ಹರಿಯಂ ಬಿಟ್ಟು ಕಟ್ಟಿದಂ ಗರ್ದಭಾಕೃತಿಹರಿಯನು ವಿಕಳ[ಪಾಠಾ. ಲ]ಮತಿ ಯಾಗಿರ್ದನೀತಂ (ಕೃಮಿಭಾ. ೨೫-೬೦). [ಸಂ. ವಿಕಲಮತಿ]

ವಿಕಳವ್ರತ (ನಾ). ವ್ರತಕೆಟ್ಟವನು ; ವ್ರತಗೇಡಿ : ಸ್ಖಲಿತವಚನನ ಯೋಗಿನಿಂದಾಟಳನ ವಿಕಳವ್ರತನ ಲೋಕಾವಳಿಗಳಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ (ಕುಮಾರ್ಯೋ. ೮-೩೮). [ಸಂ. ವಿಕಲವ್ರತ]

ವಿಕಳಹಸ್ತ (ನಾ). = ವಿಕಳಪಾಣಿ : "ವಿಕಳ[ಪಾಠಾಂ. ಏಕ]ಹಸ್ತಂ ವಿಕಳಪಾಣಿಯೊರ್ಕೈಯನಕ್ಕು" (ಮಂಗರಾ. ೧೧೫-೬). [ಸಂ. ವಿಕಲಹಸ್ತ]

ವಿಕಳಾಂಗ 'ವಿಕಲಾಂಗ' ನೋ.

ವಿಕಳಾವಸ್ಥೆ (ನಾ). ಖಿನ್ನತೆ ; ಹಂಬಲಿಸಿ ಕೊರಗುವ ಅವಸ್ಥೆ : ಹಗಲು ನಾಲ್ಕುಜಾವ ನಿಮ್ಮ ಕಳವಳದಲ್ಲಿಪ್ಪೆನು ಇರುಳು ನಾಲ್ಕುಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮಜ್ಜೆದೊಜಗಿದೆನು (ಮಹಾದೇ. ಬ ೩೭-೭೯); ಪನ್ನಗೇಂದ್ರಾಭರಣ ಕೇಳು ನಿನ್ನ ವಿಕಳಾವಸ್ಥೆಯಲ್ಲಿ ಎನ್ನ ಪ್ರಾಣಬಿಡುವ ಹಾಗೆ ಎಂದಿಗಪ್ಪುದೋ (ಸುಸಾರ. ೭೧ ಪಲ್ಲವಿ). [ಸಂ. ವಿಕಲಾವಸ್ಥಾ]

ವಿಕಳಿತ 'ವಿಕಲಿತ' ನೋ.

ವಿಕಳಿಸು (ಕ್ರಿ). ವಿಕಳಾವಸ್ಥೆಯನ್ನು ಹೊಂದು ; ಹಂಬಲಿಸಿ ಕೊರಗು ; ಖಿನ್ನವಾಗು : ಭುಕ್ತಿಯನುಳಿವ ವಿಕಳ[ವಾಳಾಂ. ಲಿ]ಸುವ ನುಡಿಯಡಗಿ ಸುಮ್ಮನಿರ್ಪ ಕಡುಸೊರಗಿ ಮೂರ್ಛಿಸುವ . . . ಬಿಡುಗಂಗಳ ಸಟಾಣಿಯರ್ ಸಲೆ ದಶಾವಸ್ಥೆಯೊಳ್ ಕಣ್ಣೆಸೆದರು (ಚಟಪು. ೧೯-೩೧). [ವಿಕಳ (= ವಿಕಲ) + - ಇಸ್ಸು]

ವಿಕಳೇಂದ್ರಿಯ (ನಾ). ೧. ನಿಷ್ಕ್ರಿಯವಾದ ಇಂದ್ರಿಯ. ೨. [ಜೈನ] ತ್ರಸಕಾಯಗಳಲ್ಲಿ ಒಂದು ಭೇದ ; ದ್ವೀಂದ್ರಿಯ, ತ್ರೀಂದ್ರಿಯ ಹಾಗೂ ಚತುರಿಂದ್ರಿಯಗಳ ಜೀವ : ಸೂಕ್ಷ್ಮವನಸ್ಪತಿಕಾಯಂಗಳ್ . . . ಪುಟ್ಟುತ್ತುಂ ಸಾವುತ್ತುಮಿರ್ಕುಮವಱೊಳೇಕೇಂದ್ರಿಯಂಗಳಲ್ಲದೆ ವಿಕಳೇಂದ್ರಿಯಂಗಳುಂ ಸಕಳೇಂದ್ರಿಯಂಗಳುಂ ಪುಟ್ಟುವುವಲ್ಲವು (ಸುಕುಮಾ. ೧೧-೫೦ ವ). [ಸಂ. ವಿಕಲೇಂದ್ರಿಯ]

ವಿಕಳೇಂದ್ರಿಯಜಾತಿ (ನಾ). [ಜೈನ] ಹದಿನಾರು ಕರ್ಮಪ್ರಕೃತಿಗಳಲ್ಲಿ ಒಂದು : ಏಕೇಂದ್ರಿಯಂ ವಿಕಳೇಂ [ಪಾಠಾಂ. ಲೇಂ]ದ್ರಿಯಜಾತ್ಯಾತಪೋದ್ಯೋತಸ್ಥಾವರ ಸಾಧಾರಣ ಸೂಕ್ಷ್ಮಂಗಳೆಂಬ ಪದಿನಾಱುಪ್ರಕೃತಿಗಳುಮಂ (ಆಪಪು. ೧೦-೧೪ ವ) ; ಏಕೇಂದ್ರಿಯ ವಿಕಳೇಂದ್ರಿಯಜಾತ್ಯಾತಪೋದ್ಯೋತಸ್ಥಾವರ ಸಾಧಾರಣಸೂಕ್ಷ್ಮಂಗಳೆಂಬ ಷೋಡಶ ಕರ್ಮಪ್ರಕೃತಿಗೆ ವಿಳಯಂ ಮಾಡಿ (ಶಾಂತಿಪು. ೧೧-೧೧೧ ವ). [ಸಂ. ವಿಕಲೇಂದ್ರಿಯಜಾತಿ]

ವಿಕಾರ (ನಾ). ೧. ಬದಲಾವಣೆ ; ಮಾರ್ಪಾಟು ; ಸ್ಥಿತ್ಯಂತರ : ಅನ್ಯಗರ್ಭಿಣೀಜನದ ವಿಕಾರಮಾಸತಿಯೊಳಾಗವೆ ತಾಂ ನೆಲಸಿರ್ಪ ತಾಣದೊಳ್ ಜನನವಿಕಾರಿ ಪಾಡ್ಯದ ವಿಕಾರಮನೇಕಿರಲೀವನೆಂಬಿನಂ (ಪಪುಪು. ೯-೧೧೬). ೨. ಬೇರೆಯ ಆಕಾರವನ್ನು ಹೊಂದುವಿಕೆ ; ರೂಪಾಂತರ : ಬಂಗಾರದಿಂದ ಉಂಗುರ ಉಡಿದಾರಗಳಾಗುತ್ತವೆ. ಅವು ಆಗುವುದಕ್ಕೆ ಮುಂಚೆ ಬಂಗಾರವು ಅವುಗಳ ಸಾಮ್ಯಾವಸ್ಥೆಯಾಗಿತ್ತು. ವಿಕಾರವಾಗುತ್ತಲೆ ವಿಷಮತ್ವಕ್ಕೆ ಆರಂಭವಾಗುತ್ತದೆ (ಜೀವಾತ್ಮ. ೧೫೫). ೩. ಮನಸ್ಸಿನ ವಿಕೃತಿ ; ಚಿತ್ತವೃತ್ತಿಯ ವ್ಯತ್ಯಾಸ : ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ (ಬಸವ. ೭೩೯) ; ಕೌರವೇಂದ್ರನ ಮತವೊ ನಿನ್ನ ವಿಕಾರವೋ ಹೆಂಗಳ್ಳವಿದ್ಯೆಯನಾರು ಕಲಿಸಿದರು (ಕುಮಾಅ. ೨೨-೩೬). ೪. ವಿದ್ರೂಪತೆ ; ಕುರೂಪ : ಕೂದಲುದುರಿದ ಬೋಳುಪರ್ಬಿನ ವಿಕಾರದಾ . . . ಸ್ಥವಿರೆಯಂ ಕಂಡೊಡನೆ ಕೈಕೆ ನಡೆದಳ್ ಬಳಿಗೆ (ಶ್ರೀರಾಮಾ. ೨೧-೫೫೧). ೫. ವ್ಯಾಧಿ ; ರೋಗ. [ಸಂ.]

ವಿಕಾರಚೇಷ್ಟೆ (ನಾ). ಅಸಹಜವಾದ ನಡವಳಿಕೆ ; ಅಸ್ವಾಭಾವಿಕವಾದ ನಡತೆ : ನೋಟಂ ನೃಪಸುತನೊಳ್ ಕಣ್ಗೇಟುಂ ಮನದೊಳ್ ವಿಕಾರಚೇಷ್ಟೆಗಳೊಡಲೊಳ್ ನಾಟಿ ಬೆದಱೆದಳನಂಗನ ಬೇಟೆಯೊಳೊಳಗಾದ ಹರಿಣಿಯೆನೆ ತರುಣಿ ಕರಂ (ಚಂದ್ರಪ್ರ. ೫-೧೨೧). [ಸಂ. ವಿಕಾರಚೇಷ್ಟಾ]

ವಿಕಾರತೆ (ನಾ). ಖಿನ್ನತೆ ; ವ್ಯಾಕುಲತೆ : ತಿರುಗಿ ನೋಡುತ ತಲೆಯ ದೆಸೆಯಲಿ ಕುರುಕುಲೇಶನನತಿವಿಕಾರತೆಯಿರವ ಕಂಡಂ (ಕುಮಾಸಂ. ೧ ೨೫). [ಸಂ. ವಿಕಾರತಾ]

ವಿಕಾರಿ (ಗು). ೧. ವಕ್ರಸ್ವಭಾವದ ; ವಿಕೃತಸ್ವಭಾವದ : ಕಾಳು ನುಡಿದೆ ಕಾರಿತರುವಲಿ ನೀನೆ ಕುಡಿದೆಯೊ ನಿನ್ನ ಸಂಗದದ ಓರಗೆಯ ಮಕ್ಕಳಿಗೆ ಕೊಟ್ಟೆಯೊ (ಬಸವು. ೧೪-೨೬) ; ವಿಕಾರಿವಿಪ್ರನ ಕಾಳುಶಾಪದ ಫಲವಲಾ (ಕುಮಾಕ. ೯-೧೨). (ನಾ). ೨. ವಕ್ರಸ್ವಭಾವದ ವ್ಯಕ್ತಿ : ತಪವ ಮಾಡಿ ವಿಕಾರಿಗಳು ಬ್ರಹ್ಮಂಗೆ ಬಂದಿಯನಿಕ್ಕಿದರು (ಕುಮಾಕ. ೬-೧೩) ; ಕೌರವರು ದುಷ್ಟರು . . . ಸೈಂಧವನು ವಿಕಾರಿಗಳ ಗುರು (ರಾಜಸೂ. ೮೮). ೩. ಅರುವತ್ತು ಸಂವತ್ಸರಗಳಲ್ಲಿ ಒಂದು ; ಮೂವತ್ತುಮೂರನೆಯ ಸಂವತ್ಸರ : ವಿಕಾರಿಸಂವತ್ಸರದ ವೈಶಾಖಶುಧ ೧೫ಲು . . . ಶೃಂಗಾರಮ್ಮನು ಮಾಡಿದನ್ನಾ ಶೃಂಗಾರಸಾಗರದ ಅಗ್ರಹಾರದ ಗ್ರಾಮಕೆ ಶುಭಮಸ್ತು (ಎಕ. XII, ಕುಣಿಗ. ೨೯-೧; 1599). [ಸಂ. ವಿಕಾರಿನ್]

ವಿಕಾರಿಸು (ಕ್ರಿ). ಬೇರೆ ಬೇರೆ ರೂಪವಾಗು ; ರೂಪಾಂತರ ಹೊಂದು : ಜಲದೊಳಗೆ ಪ್ರತಿಬಿಂಬ ವಿಕಾರಿಸುತಿದ್ದರೇನು ಆ ವಿಕಾರ ಜಲಕಲ್ಲದೆ ಸೂರ್ಯಂಗಿಲ್ಲದಂತಿಷ್ಟನಯ್ಯ ಸೌರಾಷ್ಟ್ರಸೋಮೇಶ್ವರನು (ಅಪವ. ೩-೯). [ವಿಕಾರ + - ಇಸ್ಸು]

ವಿಕಾರ್ಯ (ಗು). ೧. ಬದಲಾಗುವ ; ರೂಪಾಂತರಗೊಳ್ಳುವ. (ನಾ). ೨. ರೂಪಾಂತರ ಹೊಂದುವುದು ; ಬದಲಾಗುವುದು : ವಿಕಾರ್ಯಮೆಂದು ರೂಪಾಂತರನುನೆಯ್ದುವುದು (ಶಮಪ. ೧೨೭ ವೃತ್ತಿ). ೩. ರೂಪಾಂತರವಾದುದು ; ಬೇರೆ ರೂಪವನ್ನು ತಾಳಿದುದು. ೪. ರೂಪಾಂತರ ಹೊಂದುವವನು ; ಬದಲಾವಣೆಯಾಗುವವನು : ಹಾಲು ಮೊಸರಂದದ ವಿಕಾರ್ಯನು ಕೇಳು ಸ್ವರ್ಗದವೋಲು ಪ್ರಾಪ್ಯನು (ಅಮೃತ. ೬-೨೧). [ಸಂ.]

ವಿಕಾಶ (ನಾ). ೧. ಪ್ರಕಟವಾಗುವಿಕೆ ; ಪ್ರದರ್ಶನ. ೨. ಅರಳುವಿಕೆ ; ವಿಕಾಸ : 'ವಿಕಾಶಿಸು' ಪರಾ. ೩. ಮುಕ್ತವಾದ ಮಾರ್ಗ. [ಸಂ.]

ವಿಕಾಶಿಸು (ಕ್ರಿ). ಅರಳಿಸು ; ವಿಕಾಸಗೊಳಿಸು : ಗಿರಿಜಾನಯನ ಕುಮುದಚಂದ್ರಮ ವಿಕಾಶಿಸು ನಿನ್ನ ಭಕ್ತಹೃತ್ಕುಮುದಮಂ ಪಂಪಾವಿರೂಪಾಕ್ಷ (ಚಟಪು. ೪-೧). [ವಿಕಾಶ + - ಇಸ್ಸು]

ವಿಕಾಶ್ಯ (ನಾ). [ನಾಟ್ಯ] ವಿವರ್ತಿತ, ಕಂಪಿತ, ವಿಸೃಷ್ಟ, ನಿಗೃಹೀತ, ಸಂದಷ್ಟ, ಸಮುದ್ಗ, ಉದ್ವೃತ್ತ, ವಿಕಾಶ್ಯ, ಆಯತ ಮತ್ತು ರೇಚಿ ಎಂಬ ಹತ್ತು ಬಗೆಯ ಅಧರಭೇದಗಳಲ್ಲಿ ಒಂದು ; ॥ "ಮೇಲಿನ ಹಲ್ಲುಗಳು ಕಾಣುವಂತೆ ಮುಗುಳ್ನಗೆ ನಕ್ಕು ತುಟಿಗಳನ್ನು ವಿರಳಮಾಡುವುದು. ಮಂದಹಾಸದಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೬೯ ಗದ್ಯಾನುವಾದ) : ಸಂತತ ಮುಗುಳ್ನಗೆಯಿಂ ಪಲ್ಲಂ ತೋಱಲ್ ಕೇಳ್ ವಿಕಾಶ್ಯದಧರಮೆನಿಕ್ಕುಂ (ಲಾಸ್ಯರಂ. ೩-೮೫). [ಸಂ.]

ವಿಕಾಸ (ನಾ). ೧. ಅರಳುವಿಕೆ ; ವಿಕಸನ : "ಉನ್ಮೀಳಿತಂ . . . ವ್ಯಾಕೋಚಂ, ವಿಕಾಸಃ - ಈ ೯ ಅಲರ್ವುದರ್ಕೆ ಪೆಸರ್" (ಹಲಾಯು. ೩೧-೩೩). ೨. ವಿಸ್ತಾರ ; ವೈಶಾಲ್ಯ : 'ವಿಕಾಸಗೊಳ್ಳು' ಪರಾ. ೩. ಗಗನ ; ಆಕಾಶ : (ಕ). ೪. ಪ್ರಕಟನ ; ಪ್ರದರ್ಶನ. ೫. ಬೆಳವಣಿಗೆ ; ಅಭಿವೃದ್ಧಿ : ಜೀವನವಿಕಾಸವಿಲ್ಲದೆ ಸಾಹಿತ್ಯದ ಉದಯವೂ ಇಲ್ಲ, ವಿಕಾಸವೂ ಇಲ್ಲ (ಕಸಾಚ. ೩). ೬. ಮುದ ; ಉಲ್ಲಾಸ : ಸರೋಜಪತ್ರವೀಜನವವನಂ ವಿಕಾಸಮನೊಡರ್ಚೆ (ಮಲ್ಲಿಪು. ೪-೧೦೯). ೭. ಕ್ರಮವಾಗಿ ಬೆಳೆದು ಮಾರ್ಪಡುವಿಕೆ, -ಉತ್ತಮಾವಸ್ಥೆಯನ್ನು ಹೊಂದುವಿಕೆ ; ಉತ್ಕ್ರಾಂತಿ : ವಿಕಾಸ, ವಿಕಸನ, ಪರಿಣಾಮ (Evolution. ಇಂಇನಿ). [ಸಂ.]

ವಿಕಾಸಗೊಳಿಸು (ಕ್ರಿ). ಅರಳಿಸು ; ಹಿಗ್ಗಿಸು : ಅಲೌಕಿಕವ್ಯಕ್ತಿಗಳು ಕುಂಠಿತವಾದ ಜೀವನವನ್ನೂ ಸಾಹಿತ್ಯವನ್ನೂ ತಮ್ಮ ಆಂತರಿಕಬಲದಿಂದ ವಿಕಾಸಗೊಳಿಸಬಹುದು (ಕಸಾಚ. ೩). [ವಿಕಾಸ + ಕೊಳ್ + - ಇಸ್ಸು]

ವಿಕಾಸಗೊಳ್ಳು (ಕ್ರಿ). ೧. ವಿಸ್ತಾರವಾಗು ; ಹಿಗ್ಗು : ಆಂಟಿಮೊನಿ . . . ಪೆಡಸಾದ ಲೋಹವಾದರೂ ಕರಗಿ ಗಟ್ಟಿಯಾಗುವಾಗ ವಿಕಾಸಗೊಳ್ಳುವ ಗುಣವನ್ನು ಪಡೆದಿದೆ (ಕವಿಕೋ. I, ೧೯೬). ೨. ಬೆಳೆದು ಮಾರ್ಪಡು : ಬ್ರಾಹ್ಮಿಲಿಪಿ ಪಹ್ಲವಿಯ ಅರಮೇಯಿಕ್ . . . ಲಿಪಿಯಿಂದ ವಿಕಾಸಗೊಂಡಿದೆ (ದ್ರಾವಿವಿ. ೪೯). [ವಿಕಾಸ + ಕೊಳ್ಳು (< ಕೊಳ್)]

ವಿಕಾಸನ (ನಾ). ವಿಸ್ತರಿಸುವಿಕೆ ; ಅರಳುವಿಕೆ : ಶಶ್ವದ್ವಿಕಾಸನಹ್ರಾಸನಕ್ರಮಗಳಿಂ

ವಿಶ್ವದಲಿ ನರ್ತಿಸುತೆ ಪೌಯೊನ್ನತಿಯೊಳ್ ಸ್ವಸ್ವರೂಪವನರಸುವಾಟ ಪರಚೇತನದ ಹೃನ್ಮದ್ವಿಲಾಸವೆಲೊ (ಮಂಜು. ೫೩೧). [ಸಂ.]

ವಿಕಾಸಲಕ್ಷ್ಮಿ (ನಾ). ೧. ಅರಳುವ ಶೋಭೆ. ೨. ಸಂತೋಷದ ಸಮೃದ್ಧಿ. — ಆಧಿಕ್ಯ. ೧,೨ : ಲಕ್ಷ್ಮೀಮಹಾದೇವಿ ಕಮಲನಿಲಕ್ಷ್ಮಿಯಂತೆ ವಿಕಾಸಲಕ್ಷ್ಮಿಯನಪ್ಪುಕೆಯ್ಯಿ (ಮಲ್ಲಿಷ. ೪-೫೯). [ಸಂ. ವಿಕಾಸಲಕ್ಷ್ಮೀ]

ವಿಕಾಸವಾದ (ನಾ). [ವಿಜ್ಞಾನ] ಜೀವವು ಕ್ರಮಕ್ರಮವಾಗಿ ಮಾರ್ಪಡುತ್ತ ಬೆಳವಣಿಗೆ ಹೊಂದುವುದೆಂಬ ವಾದ ; ಉತ್ಕ್ರಾಂತಿವಾದ : "ಗರ್ಭಧಾರಣವಾಗುವುದರಿಂದ ಭ್ರೂಣವು ಹೊಸದಾಗಿ ಸೃಷ್ಟಿಯಾಗುವುದಿಲ್ಲವೆಂದೂ, ಹಿಂದಿನಿಂದ ಬಂದದ್ದೇ ವಿಕಾಸವಾಗುವುದೆಂದೂ ಹೇಳುವ ವಾದ ; ವಿಕಾಸವಾದ ; ಪರಿಣಾಮವಾದ" (Theory of Evolution. ೧೦೬೨) ; ಡಾರ್ವಿನ್ನನು ವಿಕಾಸವಾದವನ್ನು ಆರಂಭಿಸಿದ (ಕಪ್ಪಣ್ಣ. ೧೭೦). 'ಪರಿಣಾಮವಾದ' ಪರಾ. [ಸಂ.]

ವಿಕಾಸಿ (ಗು). ೧. ಅರಳುವ ; ಹಿಗ್ಗುವ. ೨. ಸ್ಫುಟವಾಗುವ ; ಪ್ರಕಟವಾಗುವ ; ಗೋಚರಿಸುವ : ಆ ದಿವ್ಯಾನುಭಾವಂ ಐರಾವತಗಜಕುಂಭಸ್ಥಾರಣವಿಶ್ಲಿಷ್ಟ ವಿಕಾಸಿಕೇಯೂರಂ ಕೇಯೂರದೊಳೊರಸೆ ಸುರೇಂದ್ರನೊಳೋರಾಸನಮಿರ್ಪನರ್ಹ ದಾಸ್ಥಾಯಿಕೆಯೊಳ್ (ಶಾಂತಿಪು. ೫-೧೫೩). [ಸಂ. ವಿಕಾಸಿನ್]

ವಿಕಾಸಿಸು (ಕ್ರಿ). ಅರಳಿಸು ; ಹಿಗ್ಗಿಸು : ಮಾಯಿದೇವಾರ್ಯ ದೇಶಿಕೋದ್ಯಾನು ಮಮ್ಮಪಾಣಿಜಮಂ ವಿಕಾಸಿಸುಗೆ ನಿಜತೇಜದಿಂ (ಜಜ್ಜರಾ. ೧-೧೫).

[ವಿಕಾಸ + - ಇಸು.]

ವಿಕಾಳಿಸು (ಕ್ರಿ). ಅತಿಶಯವಾಗು : ಕಾಳಿಮದ ಕೂಟಮೆನಗಿಲ್ಲೆಂಬ ಮುಳಿಸತಿ ವಿಕಾಳಿಸಲಮಲಕೀರ್ತಿಕಾಂತೆ ಪೂಜಮುಟ್ಟು ಲೋಕಾಳಿಯಂ ತಿರುಗುವಳಿನಲ್ಕೆ ರಾಮನ ಯಶೋವಿಸ್ತರವನೇವೊಗಳ್ವೆನು (ಕೃಮಭಾ. ೧೫-೧೪). 'ವಿಟಾಳಿಸು', 'ವಿತಾಳಿಸು' ಪರಾ. [ವಿಕಾಳ ? + - ಇಸು.]

ವಿಕಿರ (ನಾ). ೧. ಎರಚಿದ ವಸ್ತು ; ಬೆಲ್ಲಿದ ಪದಾರ್ಥ. ೨. ಹಕ್ಕಿ ; ಪಕ್ಷಿ : "ವಿಕಿರಂ ನಗೌಕಸಂ ವಾಜಿ ದ್ವಿಜಂ ಪಕ್ಷಿ" (ಮಂಗರಾ. ೫೦-೧). ೩. ಬಾವಿ ; ಕೂಪ. ೪. ವೃಕ್ಷ ; ಮರ. ೫. ಹಬ್ಬುಗೆ ; ಪ್ರಸಾರ : ಆಯತಾಕ್ಷಿಯರಾಗಲರ್ಗಳಂ ಬೆಲ್ಲಿದರ್ . . . ಕಟಾಕ್ಷದ ಮರೀಚಿಗಳ ವೀಚಿಗಳ ವಿಕಿರದೊಡವೆ (ಕೃಮಭಾ. ೫೯-೧೧).

[ಸಂ.]

ವಿಕಿರಣ (ನಾ). ೧. ಚೆದರುವಿಕೆ ; ಕೆದರುವಿಕೆ : ಕೇಶವ ತನ್ನ ವೃತ್ತಿತ್ವದಲ್ಲಿ ಘಟಕಗಳ ವಿಕಿರಣದಿಂದ ತ್ರಸ್ತನಾಗಿದ್ದಾನೆ (ಹೊಸ್ಕ. ೨೯೬). ೨. ಪ್ರಸಾರ ; ಹರಡಿಕೆ. ೩. ಹರಿದು ಹಾಕುವಿಕೆ ; ಛಿನ್ನವಿಚ್ಛಿನ್ನಗೊಳಿಸುವಿಕೆ. ೪. ಕೊಲೆ ; ಹಿಂಸೆ. ೫. ಅರಿವು ; ಜ್ಞಾನ. ೬. ಎಕ್ಕದ ಗಿಡ ; ಅರ್ಕ. ೭. [ಭೌತಶಾ] ಮಾಧ್ಯಮದ ಸಹಾಯವಿಲ್ಲದೆ ಬೆಳಕಿನ ಕಿರಣಗಳಂತೆ ಪ್ರಸರಿಸುವಿಕೆ : ನಿರ್ವಾಯುಸ್ಥಳದಲ್ಲಿಯೂ (vaccuim) ಅನಿಲಗಳಲ್ಲಿಯೂ ಶಾಖವು ವಿಕಿರಣದ (Radiation) ಮೂಲಕ ಹರಡುತ್ತದೆ (ತಿಲ್ಲಾ. ೧೫೧). [ಸಂ.]

ವಿಕೀರಣ (ನಾ). ಎಕ್ಕದ ಗಿಡ ; ಅರ್ಕ : "ಅರ್ಕಾಹ್ವಃ . . . ವಿಕೀರಣಃ, ಮಂದಾರಃ, ಅರ್ಕಪರ್ಣಾ — ೭ ಪೈಕಗಿಡ, ಯಕ್ಕೇಗಿಡ, ಸೂರ್ಯವೃಕ್ಷ" (ಅಮ್ಮಾಂ. ೧೬೦). [ಸಂ.]

ವಿಕೀರ್ಣ (ಗು). ೧. ಚೆದರಿದ ; ಕೆದರಿದ ; ಹರಡಿದ : ಪಾನಪ್ರದೇಶದಂತೆ ಪರಿಗತಮಧುಕೋಶಶತಮುಂ ವಿಕೀರ್ಣವಿವಿಧಕುಸುಮಮುಂ . . . ಮುನಿಜನಸೇವಿತಮುಮೆನಿಪುದು (ಕಾದಂಪು. ೧೦೦). ೨. ಆವರಿಸಿದ ; ತುಂಬಿದ : ಸಿಂಹಗಜವೃಷಭಗರುಡಮಯೂರಚಂದ್ರಾರ್ಕಹಂಸಾರವಿಂದಚಕ್ರಾಭಿಧಾನಧ್ವಜ ವಿಕೀರ್ಣಪತಾಕಾವನೀಪರಿವೃತಮುಂ (ಶಕ್ತ್ಯಪ್ರ. ೧೬೨) ; ಬುಧತಾತನ ತಿಳಿದೊನ್ನಂ ವಿದಿತಾಶಾವಳಿವಿಕೀರ್ಣಪೂರ್ಣವಿಲಾಸಂ (ಪಮ್ಮಿರಾ. ೨-೬೬). ೩. ವಿಶಾಲವಾದ : ಧನುರ್ಗುಣವೇಗತಾಡನಾಕಳಿತವಿಕೀರ್ಣಕೋಷ್ಠಮನೆ ಕೂರ್ಮವಿನಿರ್ಮುರ ಪೃಷ್ಠಭಾಗ ಮೆಂದಳಘಟಿತರಾಂಸಮಂ ದಿಗಿಭಕುಂಭಮಿವೆಂದು ಧರಿತ್ರಿ ಬಂದು ನಿಶ್ಚಲತೆಯಿನಿರ್ಪಳಲ್ತೆ ಭುಜಮಂಡಳದೊಳ್ ವಸುಧಾಧಿನಾಥನಾ (ಚಂದ್ರಪ್ರ. ೩-೫೧). ೪. ಸೀಳಿದ ; ಹರಿದ. ೫. ಹೆಸರಾದ ; ಪ್ರಸಿದ್ಧವಾದ ; ವಿಖ್ಯಾತವಾದ. [ಸಂ.]

ವಿಕುಪ್ರಕ (ನಾ). [ನಾಟ್ಯ] ನೃತ್ಯದ ಒಂದು ಭಂಗಿ : ವಿಕುಪ್ರಕ ಕುಪ್ರಕಮೆಂಬ ಭೇದದೊಳ್ ಪರಿಣತಿ ರಂಜಿಸುತ್ತುಮಿರೆ ರಂಜಿಸಿದರ್ ಪೊಸದೇಸೆಕಾರ್ತಿಯರ್ (ಅಪಪು. ೫-೩೧). 'ಕುಪ್ರಕ' ಪರಾ. [?]

ವಿಕುರ್ವಾಣ (ಗು). ೧. ಮನಃಸ್ಥಿತಿ ಅಥವಾ ರೂಪವನ್ನು ಬದಲಿಸುವ. ೨. ಸಂತೋಷಪಡುವ ; ಹರ್ಷಗೊಂಡಿರುವ. (ನಾ). ೩. ಸಂತೋಷದಿಂದ ಕೂಡಿರುವವನು : "ಹರ್ಷಮಾಣಃ, ವಿಕುರ್ವಾಣಃ, ಪ್ರಮನಾಃ, ಹೃಷ್ಟಮಾನಸಃ — ೪ ಸಂತೋಷದಿಂದ ಕೂಡಿದ ಮನಸ್ಸುಳ್ಳವನು" (ಅಮ್ಮಾಂ. ೬೫೪). [ಸಂ.]

ವಿಕೂಣಿತ (ನಾ). [ನಾಟ್ಯ] ನಾಟ್ಯಮುದ್ರೆಯಲ್ಲಿ ತೋರುವ ಮೂಗಿನ ಆರು ವಿನ್ಯಾಸಗಳಲ್ಲಿ ಒಂದು ; IP "ಮೂಗನ್ನು ಸಂಕುಚಿಸುವುದು ಎಂದರೆ ಮುದುರಿಸುವುದು. ಹಾಸ್ಯ, ಅಸೂಯೆ, ಜುಗುಪ್ಸೆ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೭೬ ಗದ್ಯಾನುವಾದ) : ಪತ್ರಲ್ಹಾಸ ಜುಗುಪ್ಸಾವೃತ್ತಿಯೊಳೆ ವಿಕೂಣಿತಾಖ್ಯನಾಸಿಕಮೆನಿಕುಂ (ಲಾಸ್ಯರಂ. ೩-೭೪).

[ಸಂ. ವಿಕೂಣಿತಾ]

ವಿಕೃತ (ಗು). ೧. ಬದಲಾದ ; ರೂಪಾಂತರ ಹೊಂದಿದ ; ವ್ಯತ್ಯಾಸವಾದ. ೨. ಭಯಂಕರವಾದ : ಚೀರಿದತ್ತೊಂದು ರಣಶಕುನಿ, ಕಿವಿಗೊಟ್ಟು ಕೇಳ್, ದುಶ್ಶಕುನಗರ್ಭಶವಿಕೃತ ವಿಕಟರವದಿಂದೆ! (ಚಿತ್ರಾಂಗ. ೧೦-೨೩೧). ೩. ವಿಕಾರರೂಪವನ್ನು ತಳೆದ. ೪. ರೋಗಿಷ್ಠವಾದ. ೫. ಕೆಟ್ಟ ; ದುಷ್ಟ : ಇದೇನಘಟಮಾನಮೋ ವಿಕೃತಘೋರ ಸಂಸಾರಂ (ಸುಖಮಾ. ೪-೬೧). ೬. ಅಸಹ್ಯ ಬರುವಂತಹ ; ಜುಗುಪ್ಸೆಯನ್ನುಂಟು ಮಾಡುವ. (ನಾ). ೭. ಬದಲಾದವನು ; ಬದಲಾವಣೆಗೆ ಒಳಪಟ್ಟವನು : ಸಂಕುಚದ್ಬುದ್ಧಿಗೆ ವಿಕೃತನಾದಂತೆ ಕಂಡರೂ ಆ ಮೂಲವಸ್ತುವು ಅಥವಾ ಪರಮಾತ್ಮನೂ ಅಚ್ಚು ಅಳಿಯದೆ ಇದ್ದಕ್ಕಿದ್ದ ಹಾಗೆಯೆ ಇರುವನು (ವಚಂ. ೯). ೮. ಕುರೂಪ ; ವಿದ್ರೂಪತೆ : ಶ್ರೀ ಎಂದರೆ ಸೌಂದರ್ಯವೆಂಬ ಅರ್ಥವಿಯವಂತೆ ಅಶ್ರೀ ಎಂದರೆ ವಿಕೃತವೆಂದೂ ಅರ್ಥವಿದೆ (ಸೌಂದ. ೪೪). ೯. ಜುಗುಪ್ಸೆ ; ಅಸಹ್ಯ : ವಿಕೃತಕ್ಕೆ ಸಂದ ನಾಗ್ಮಮುಮಪಹಿಂಸೆಯೆಂಬ ಜನವಾದಮುಮಲ್ಲದೆ ಪೇಟ ಜೀವತತ್ವಮುಮನಜೀವತತ್ವ[ಮು]ಮನೆತ್ತಲಿವರ್ ಜಿನತತ್ವತಾತ್ಪರ್ಯಕರ್ (ಶಾಂತಿಪು. ೯-೧೩೨). ೧೦. ವಿಚಿತ್ರವಾದುದು ; ಅಸಾಮಾನ್ಯವಾದುದು : ಜಂಭಾರಿ ವಿಕೃತವಾಡುವ ರಂಭಾನಟಿಯಂತೆ ಲಾಸ್ಯದೊಳ್ ತಾಂಡವಮುದ್ಭ್ರಂಭಿಸೆ ಗಣಿಕೆಯರೊಡನಾರಂಭಿಸಿದರಪೂರ್ವ ನರ್ತನಾರಂಭಣಮಂ (ಶಾಂತಿಪು. ೧೦-೭೪). ೧೧. ರೋಗಿ ; ಕಾಯಿಲೆ ಇರುವವನು : "ಗ್ಲಾನಃ, ಗ್ಲಾಸ್ನುಃ, ಆಮಯಾವೀ, ವಿಕೃತಃ . . . ಅಭ್ಯಾಂತಃ -ಕ್ತ ರೋಗ ಉಳ್ಳವನ ಹೆಸರುಗಳು" (ಅಮ್ಮಾಂ. ೧೭೫). ೧೨. ಮನಸ್ಸಿನ ವಿಕಾರ ; ಮನೋವಿಕಾರ : ಲಿಂಗ ಮೂರ್ತಿಯೊಳರ್ಚನಾಸಕ್ತಂಗೆ ನಿದ್ರಾಹಾರಮೈಥುನಸಂಗಭಯವಿಕೃತಂಗಳೆಂದುಂ ಹೊಂದದು (ಬಸವ. ೪೭-೯೨). ೧೩. ದೀನನಾದವನು ; ದೈನ್ಯಾವಸ್ಥೆಗೆ ಗುರಿಯಾದವನು : "ವಿಕೃತಃ, ವಿಪ್ರಲಬ್ಧಃ — ಈ ೨ ದೈನ್ಯಂಬಟ್ಟನಂ" (ಹಲಾಯು. ೧೩-೩೫) ; " ವಿಕೃತಂ ವಿಪ್ರಲಬ್ಧನೆನೆ ಸಲೆ ದೈನ್ಯನಕ್ಕುಂ" (ಮಂಗರಾ. ೬೨-೫೧). [ಸಂ.]

ವಿಕೃತಕಾಮ (ನಾ). ಅಶ್ಲೀಲವಾದ ಕಾಮಚೇಷ್ಟೆ ; ಅಸಭ್ಯವಾದ ಲೈಂಗಿಕಭಾವ : ನರಕಯಲ್ಲಿರುವ ಮ್ಯಾಥೂಸ್‌ನ ವಿಕೃತಧರ್ಮಶ್ರದ್ಧೆ, ವೆಸ್ಪ್ ಇಂಡಿಯನ್‌ನ ವಿಕೃತಕಾಮ ಅವನಿಗೆ ಅಕ್ರಿಯವಾಗಿವೆ (ಹೊಸ್ಕ. ೫೧೦). [ಸಂ.]

ವಿಕೃತದಂತ (ನಾ). ೧. ವಕ್ರವಾದ ಹಲ್ಲು. ೨. ವಕ್ರವಾದ ಹಲ್ಲುಳ್ಳವನು : ಚಾಪವೃಷಮೇಷವಾಗಿರೆ ಪಾಪಾಲೋಕನದೆ ವಿಕೃತದಂತನೆನಿಕ್ಕುಂ (ಕಾಶಿ. ೫೧-೩೦).

[ಸಂ.]

ವಿಕೃತವೇಷಿ (ನಾ). ಅಸ್ವಾಭಾವಿಕವಾದ ವೇಷವನ್ನು ತೊಟ್ಟವನು : ಸುದತಿಯರು ಮೈಮಜೆತಿವನ ಬೆಂಬತ್ತಿ ಪೋಪುದು ಚೋದ್ಯವೀ ವಿಕೃತವೇಷಿ ಯಾದ (ವೀತಿಪು. ೫-೧-೧೯) [ಸಂ. ವಿಕೃತವೇಷಿನ್]

ವಿಕೃತಾಂಗ (ನಾ). ೧. ವಿಕಾರವಾದ ದೇಹ ಭಂಗಿ : ವಿಕೃತಾಂಗ ವೇಷಭಾಷಾಪ್ರಕಾರ ಕೃತಹಾಸಹೇತುಕಂ ಹಾಸ್ಯಂ (ಕಾವ್ಯಾವ. ೧೦೯). ೨. ವಿರೂಪಗೊಂಡ

ಶರೀರವುಳ್ಳವನು ; ವಿಕಾರವಾದ ಶರೀರವುಳ್ಳವನು: ವಿಕೃತಾಂಗರ್ ವಿಕೃತಾಯುಧರ್ ವಿಕೃತವೇಷರ್ ಪೂಣ್ಕೆಯಿಂ ದಾನವಾಂತಕನೊಳ್ ತಳ್ತಿಱಿದು . . . ದೆಸೆಬೆಟ್ಟುಂ ಪಾಱಿದರ್ ಬೇಗದಿಂ (ಜಗವಿ. ೧೮ ೧೨). [ಸಂ.]

ವಿಕೃತಾಂಗಿ (ನಾ). ವಿದ್ರೂಪವಾದ ದೇಹವುಳ್ಳವನು : ವಿನಾದುದೋಯೆನುತ್ತಂ ಪಿತಾಮಹನ ದೈನ್ಯಾನನವನೀಕ್ಷಿಸುತ ನುಡಿದನಾ ವಿಷ್ಣು ವಿಕೃತಾಂಗಿಗಳ ಪರಿಕಿಸುತ್ (ವೀಪ್ರಪು ೩-೧೬-೩೦). [ಸಂ. ವಿಕೃತಾಂಗಿನ್]

ವಿಕೃತಿ (ನಾ). ೧. (ಮನಸ್ಸು, ಉದ್ದೇಶ, ಆಕಾರ, ವಸ್ತು ಮೊದಲಾದುವುಗಳ) ಬದಲಾವಣೆ ; ವ್ಯತ್ಯಾಸ ; ಮಾರ್ಪಾಡು. ೨. ಬೇನೆ ; ರೋಗ. ೩. ಉದ್ರೇಕ ; ಉದ್ವೇಗ. ೪. ಕೋಪ; ಕ್ರೋಧ. ೫. ಭಟ್ಟಿಯಿಳಿಸಿದ ದ್ರವ ; ಆರ್ಕ. ೬. ಕುರೂಪ ; ವಿಕಾರ : ಕಾಣಿಸಿತೊಂದು ದಸ್ಮ ಶಶು, ಮುಳ್ ಮಣ್ಣು ತರಗೆಲೆಯಿಡಿದ ನೆಲದ ಮೇಲಿರುವೆ ಮುತ್ತಿ, ಹಾ, ವಿಕೃತಿ ವಕ್ರತೆ ರೂಪುಗೊಂಡಂತೆ! (ಶ್ರೀರಾಮಾ. ೨೨-೫೦೦). ೭. ಅರುವತ್ತು ಸಂವತ್ಸರಗಳಲ್ಲಿ ಇಪ್ಪತ್ತುನಾಲ್ಕನೆಯ ಸಂವತ್ಸರ : ಮತ್ತಮಾ ವರ್ಷವೇ ಪ್ರಭವ . . . ವಿಕೃತಿ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವವೇಕ. ೨೬೩). ೮. [ಛಂದ] ಪ್ರತಿಪಾದದಲ್ಲಿ ಇಪ್ಪತ್ತುಮೂರು ಅಕ್ಷರಗಳಿರುವ ಒಂದು ಛಂದೋವೃತ್ತ : ಉಕ್ತ ಅತ್ಯುಕ್ತಿ . . . ವಿಕೃತಿ ಸಂಕೃತಿ ಅತಿಕೃತಿ ಉತ್ಕೃತಿ ಎಂದಿಪ್ಪತ್ತಾಜು ಛಂದಂಗಳಕ್ಕುಂ (ಛಂದೋಂಬು. ೧-೪೬ ವ). ೯. [ವ್ಯಾಕ] ದೀರ್ಘಸ್ವರ : ಸಪ್ತವರ್ಣಂ ಪ್ರಕೃತಿ ನವವರ್ಣಮದು ವಿಕೃತಿ ಪೋಡಶಂ ಸ್ವರಗಳಿನಿಸಿದುವು (ರಾಘವ. ೨-೫೬). ೧೦. [ಸಾಂಖ್ಯ] ಮೂಲವಸ್ತುವಿನಿಂದ ಉದ್ಭವಿಸಿದ ಇನ್ನೊಂದು ರೂಪ ; ಪ್ರಕೃತಿಯಿಂದ ಹುಟ್ಟಿದುದು : ಪುರುಷನು ಪ್ರಕೃತಿಯೂ ಅಲ್ಲ ವಿಕೃತಿಯೂ ಅಲ್ಲ ಎಂದು ಸಾಂಖ್ಯರು ಹೇಳುತ್ತಾರೆ (ಬ್ರಹ್ಮಾ. ೯೮ ಆದಿಪ). ೧೧. [ಯೋಗ] ಪ್ರಕೃತಿ, ಪ್ರಕೃತಿವಿಕೃತಿ, ವಿಕೃತಿ ಮತ್ತು ಉದಾಸೀನವೆಂಬ ನಾಲ್ಕುಬಗೆಯಾದ ವ್ಯಾವಹಾರಿಕ ವಸ್ತು : ಭುವನದಿಂ ಧರೆ ಧರಣಿಯಿಂದುದ್ಭವಿಸಿತೋಷಧಿ ಓಷಧಿಗಳಿಂದವತರಿಸಿ ತಾನಾದಿಪುರುಷಪ್ರಕೃತಿವಿಕೃತಿಗಳು (ಖಾಖಾ. ೪-೬) ; ವಿಕೃತಿಯೆಂದರೆ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಮನಸ್ಸು, ಪ್ರಾಣ ಎಂದು ಹನ್ನೆರಡು (ಹಿಂದಾಸಾ. ೧೯೪). ೧೨. ನಲವತ್ತೈದು ಬಗೆಯ ಮಂತ್ರ ಸಾಧನಗಳಲ್ಲಿ ಒಂದು : ಮಾತೃಕಾಚಕ್ರ ಸರ್ವತೋಭದ್ರ . . . ವಿಕೃತಿ . . . ಎಂಬ ಪಂಚಚತ್ವಾರಿಂಶನ್ಮಂತ್ರಸಾಧನಗಳೊಳು ಪ್ರಚ್ಛಿಗೊಂಡು (ವವೇಕ. ೬೦).೧೩. [ಸಂಗೀತ] ಒಂದು ಬಗೆಯ ಹಾಡಿನ ರೀತಿ (?) : ದರು ಪರಿ ವಿಕೃತಿ ವಿಂದಾಣವೆಂಬ ಚರ್ಚುರ್ವಿಧದಂಡಿಯಲ್ಲಿ . . . ಪಾಡಿ ಮೋಹಿಸುವ ಗಾಯಕರಿಂ (ವವೇಕ. ೧೯೦). [ಸಂ.]

ವಿಕೃತಿಡೋಜು (ಕ್ರಿ). (ಹಾಸ್ಯಕ್ಕಾಗಿ) ಮುಖ, ಮೈ ಮೊದಲಾದುವುಗಳಲ್ಲಿ ವಿಕಾರಗಳನ್ನು ತೋರು; ವಕ್ರಭಂಗಿ, ವಕ್ರಮುದ್ರೆಗಳನ್ನು ತೋರು : ಬಯವಿಧವಿಕಟವೇಷದಿಂ ವಿಕೃತಿ[ಪಾಖಾಂ.ತ]ಡೋಜೆ ನಗೆಯಿಂ ಬೀಜೆ ನಲಿದು ನರ್ತಿಪ ಭೃಂಗಿರಿಟಿಯಿಂ (ಶಬಶಂ. ೧-೭೯ ವ). [ವಿಕೃತಿ + ತೋಜು]

ವಿಕೃತಿಸ್ವರ (ನಾ). ೧ = ವಿಕೃತಿ ೯ : ಸಿದ್ಧನಂಬೇಶನೆಂಬ ವೀರಶೈವಕವಿ . . . ಹ್ರಸ್ವಸ್ವರಗಳನ್ನು "ಪ್ರಕೃತಿಸ್ವರ"ಗಳೆಂದೂ, ದೀರ್ಘಸ್ವರಗಳನ್ನು "ವಿಕೃತಿಸ್ವರ"ಗಳೆಂದೂ ಹೆಸರಿಸಿದ್ದಾನೆ (ಸಂತೋಧ. ೧೬). ೨. [ಸಂಗೀತ] ರಿ, ಗ, ಮ, ಧ ಮತ್ತು ನಿ ಎಂಬ ಸ್ವರಗಳು : ಉಳಿದ ಋಷಭ, ಗಾಂಧಾರ, ಮಧ್ಯಮ, ಧೈವತ, ನಿಷಾದಗಳು ವಥಕದಲ್ಲಿ ಕಾಣಿಸಿಯವ ನಿರ್ದಿಷ್ಟಶ್ರುತಿಗಳನ್ನೇ ಅಲ್ಲದೆ, ವ್ಯತ್ಯಸ್ತ ಶ್ರುತಿಸಂಜ್ಞೆಗಳನ್ನೂ ಹೊಂದಿ, ಧ್ವನಿಭೇದ ಪ್ರಕಟಿಸುವ ಕಾರಣ ವಿಕೃತಿಸ್ವರಗಳೆನಿಸಿಕೊಂಡಿವೆ (ಸಂಗೀಚಂ. ೧೫೫). [ಸಂ.]

ವಿಕೃಷ್ಟ (ಗು). ೧. ಎಳೆದಾಡಿದ. ೨. ಸೆಳೆದುಕೊಂಡ ; ಆಕರ್ಷಿಸಿದ. ೩. ವಿಸ್ತರಿಸಿದ ; ನೀಳಗೊಳಿಸಿದ. ೪. ಶಬ್ದಮಾಡಿದ ; ಧ್ವನಿ ಮಾಡಿದ. (ನಾ). ೫. [ನಾಟ್ಯ] ಮೂಗಿನ ಆರು ಬಗೆಯ ವಿನ್ಯಾಸಗಳಲ್ಲಿ ಒಂದು ; IP "ಮೂಗನ್ನು ಅರಳಿಸುವುದು, ರೋಷ, ಪೀಡೆ, ಪವರಿಕೆ, ವಾಸನೆ ನೋಡುವುದು ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಅಸ್ಮರಂ. ೨೭೬ ಗದ್ಯಾನುವಾದ) : ಅತ್ಯಂತರೋಷದಿಂದೌನ್ನತ್ಯದೆ ಮೂಗರಲ್ದ ಭಾವಮದುವೆ ವಿಕೃಷ್ಟಂ (ಅಸ್ಮರಂ. ೩-೭೪). [ಸಂ.]

ವಿಕೃಷ್ಟಿ (ನಾ). [ನಾಟ್ಯ] ಇಪ್ಪತ್ತು ಬಗೆಯ ಕೈಚಲನೆಗಳಲ್ಲಿ ಒಂದು : ಧೂನನ, ಶ್ಲೇಷ . . . ಆಕೃಷ್ಟಿ, ವಿಕೃಷ್ಟಿ . . . ತರ್ಜನ – ಈ ಇಪ್ಪತ್ತು ಕರಕರ್ಮಭೇದಂಗಳ್ (ಅಸ್ಮರಂ. ೪-೧೫ ವ). [ಸಂ.]

ವಿಕೇಂದ್ರೀಕರಣ (ನಾ). ಒಂದು ಕೇಂದ್ರದಲ್ಲಿ ಒಟ್ಟುಗೂಡಿಸಿರುವ ಆಡಳಿತಾಧಿಕಾರ, ಉದ್ದಿಮೆ, ವ್ಯವಸಾಯ ಇತ್ಯಾದಿ ವ್ಯವಸ್ಥಿತ ಕಾರ್ಯಕಲಾಪಗಳನ್ನು ಪ್ರತ್ಯೇಕಿಸಿ ಬೇರೆ ಬೇರೆ ಸ್ಥಳಗಳಿಗೆ ಹಂಚುವಿಕೆ ; ಸ್ಥಳೀಯ ಅಧಿಕಾರಕ್ಕೆ ಕೆಲವು ಬಾಬುಗಳನ್ನು ವರ್ಗಾಯಿಸುವಿಕೆ : ಆಡಳಿತದಲ್ಲಿ ವಿಕೇಂದ್ರೀಕರಣವನ್ನು ತರುವುದು ಪ್ರಜಾಪ್ರಭುತ್ವದ ಬಹುಮುಖ್ಯವಾದ ಅಂಶ (ರೂಢಿ). 'ವಿಕೇಂದ್ರೀಕರಿಸು' ಪರಾ. [ಸಂ.]

ವಿಕೇಂದ್ರೀಕರಿಸು (ಕ್ರಿ). ಒಂದು ಕೇಂದ್ರದಲ್ಲಿಯೆ ಒಟ್ಟುಗೂಡಿರುವ ಅಧಿಕಾರ ಮೊದಲಾದುವನ್ನು ಬೇರೆ ಬೇರೆ ಕೇಂದ್ರಗಳಿಗೆ ಹಂಚು, —ವಿಂಗಡಿಸು : ಜವಾಬ್ದಾರಿಯನ್ನು ಅಗತ್ಯವರಿತು, ಔಚಿತ್ಯವರಿತು ವಿಕೇಂದ್ರೀಕರಿಸುವುದು ಒಳ್ಳೆಯದು (ಶಿಕ್ಷಪ್ರ. ೩೧೯). [ವಿಕೇಂದ್ರೀಕರಣ + - ಇಸು]

ವಿಕೋಪ (ನಾ). ೧. ಅತಿಶಯವಾದ ಸಂತಾಪ, —ಕ್ಲೋಭೆ. ೨. ಅನರ್ಥ ; ದುಷ್ಪರಿಣಾಮ. ೩. ಕೋಪ ; ಕ್ರೋಧ.

ವಿಕೋಪಕ್ಕೆ ಮುಟ್ಟು = ಪರಿಸ್ಥಿತಿ ಕೈಮೀರು, —ಹತೋಟಿ ತಪ್ಪು, —ಗಂಭೀರವಾಗು : ಗುಸುಗುಸು ಮಾತು ಒಂದು ದಿನ ವಿಕೋಪಕ್ಕೆ ಮುಟ್ಟಿ ದೊಡ್ಡ ಅನಾಹುತವಾಗುವದರಲ್ಲಿತ್ತಲ್ಲ (ಮೂಯದಾ. ೧೫೨). ವಿಕೋಪಕ್ಕೆ ಹೋಗು = ವಿಕೋಪಕ್ಕೆ ಮುಟ್ಟು : ಪ್ರಸಂಗ ವಿಕೋಪಕ್ಕೆ ಹೋಗಬಹುದೆಂದು ಸಂಕ್ಷೇಪವಾಗಿ ಬರೆಯಲಾಗಿದ್ದಿತು (ರಂಗರೂ. ೬೦). [ಸಂ.]

ವಿಕೋಶ (ಗು). ೧. ಹೊದಿಕೆಯಿಲ್ಲದ ; ಆವರಣವಿಲ್ಲದ. ೨. ಒರೆಯಿಂದ ಹೊರಕ್ಕೆ ತೆಗೆದಿರುವ. (ನಾ). ೩. [ನಾಟ್ಯ] ಇಪ್ಪತ್ತು ಬಗೆಯ ಸಂಚಾರಿದೃಷ್ಟಿಗಳಲ್ಲಿ ಒಂದು ; IP "ರೆಪ್ಪೆಗಳನ್ನರಳಿಸಿ ಬಿಡಿಯದೆ ಆಲಿಗಳನ್ನು ತಿರುಗಿಸುವುದು" (ಅಸ್ಮರಂ. ೨೭೧ ಗದ್ಯಾನುವಾದ) : ಶೂನ್ಯ, ಮಲಿನ, ಶ್ರಾಂತ . . . ವಿಕೋಶ, ವಿಭ್ರಾಂತ, ವಿಪ್ಲುತ, ತ್ರಸ್ತ, ಮದಿರೆ – ಈ ಇಪ್ಪತ್ತು ಸಂಚಾರಿದೃಷ್ಟಿಗಳು (ಅಸ್ಮರಂ. ೩-೭ ವ). [ಸಂ.]

ವಿಕೋಶದೃಷ್ಟಿ (ನಾ). = ವಿಕೋಶ ೩ : ಅಲರ್ದವೆಪೊಯ್ಮದೆಯಾಲಿಗಳೊಲವಿಂ ತಿರುಗಲ್ ವಿಕೋಶದೃಷ್ಟಿಯೆನಿಕ್ಕುಂ (ಅಸ್ಮರಂ. ೩-೩೭). [ಸಂ.]

ವಿಕ್ಕ (ನಾ). ಆನೆಯ ಮರಿ ; ಮರಿಯಾನೆ : ನಡುವಿರ್ದಬ್ಬರ ಪೋತವಿಕ್ಕಳಭಂಗಳ್ [ಪಾಠಾಂ. ಬಕ್ಕಪೋತಕಲಭಂಗಳ್] ಕೂಡೆ ಸಾರ್ದಿರ್ಕಲಂಬಿಡದಿಂಬಿದೆಳೆಯಾನೆಗಳ್ ಬರೆ . . . ಯೂಥತತಿಯಿಂ ಚೆಲ್ವಾದುದಾ ಕಾನನಂ (ಜಗವಿ. ೧೭-೫); ಕದುಪಿನ ವಿ [ಪಾಠಾಂ. ಚ]ಕ್ಕ ಪೋತಕರಿಣಿ ಗಣಮಂ ನವಪಲ್ಲವಂಗಳಂ ಮುದಗೊಳಿ ಮುನ್ನೆ ಮೇಯಿಸಿ ಬಳ್ಕಿದು ಮೇದು . . . ಒಲೆದೂಡಿ ಪೊದಬ್ಬ ಶಯ್ಯೆಯೊಳ್ ಮದಕರಿ ಮುನ್ನಮೊಯ್ದಿರಿಸಿ ತಾಂ ಬಳಿಕರ್ಪುದು ರಮ್ಯಶಯ್ಯೆಯೊಳ್ (ವಾರ್ತಾಪು. ೪-೧೧೩). 'ಬಿಕ್ಕ' ಪರಾ. [ಸಂ.]

ವಿಕ್ಕಿರ (ನಾ). ಹಕ್ಕಿ ; ಪಕ್ಷಿ : ವಿಷ್ಕರ-ವಿಕ್ಕಿರ (ಶಮದ. ೨೬೫ ಪ್ರಯೋ) ; ಗರಿಯ ವಿಕ್ಕಿರನೊ ಕಿನ್ನರನೊ ಬಗೆವೆದೆಯ ಮಾಧುರಿಯನರುಹೆಮಗೆ (ಗಿಳಿಮಂ. ೭-೭೩). 'ವಿಕಿರ' ಪರಾ. [ಸಂ. ವಿಷ್ಕರ]

ವಿಕ್ರಮ (ನಾ). ೧. ಹೆಜ್ಜೆಯಿಡುವಿಕೆ ; ಪಾದನ್ಯಾಸ. ೨. ಹೆಜ್ಜೆ ; ಪಾದ ; ಅಡಿ : ಜಲದಾಧ್ವಂಬರಮೆತ್ತಿದಂಭ್ರಯ ನಪಾಂಶುಶ್ರೇಣಿ ತಾರಾಗಣಚ್ಛಲದಿಂದಿರ್ದಿನಮಿನ್ನುಮಂದವನಿಚಕ್ರಂ ವಿಕ್ರಮಕ್ಕೆಯ್ದದಾ ಬಲಿಯಂ . . . ಮೆಟ್ಟಿ ರಸಾತಳಕ್ಕಿಟ್ಟಿದ್ದೆ ನೀಂ ವಾಮನಾಕಾರದಿಂ (ಜಗವಿ. ೧-೫೯). ೩. ಪ್ರಯಾಣ ; ಸಂಚಾರ : ಭೂಪಾಲಕರು . . . ಗಂಗಾಕೂಲದುತ್ತರಭಾಗದಲಿ ಮಾಡಿದರು ವಿಕ್ರಮವ (ಖಾಖಾ. ೧-೧). ೪. ಪರಾಕ್ರಮ ; ಶೌರ್ಯ : ವಿಕ್ರಮ|ಂ| ಕ್ರಮಮಾಂ ವಿಕ್ರಮದಾತನೆಂ (ಪಂಪಭಾ.೧೧-೬೨). ೨, ೪: ಆಕ್ರಮಿಪೆಡೆಯೊಳು ಮೂಜುಂ ವಿಕ್ರಮದಾಯಾಸಮಾಯ್ತು ಮುಂ ಚಕ್ರಿಗೆನುತ್ಪಾಕ್ರಾಂತಸಮಸ್ತಜಗಚ್ಚಕ್ರಂ ನೃಪನೊಂದೆ ವಿಕ್ರಮಂ ನಗುತಿರ್ಕುಂ (ಕಾದಂಪೂ. ೯) ; ಅಂಬುಜನಾಭನಂತೆ ವಿಸ್ತಾರಿತವಿಕ್ರಮಂ ದ್ಯುಮಣಿಯಂತಿರೆ

ಸತ್ರದವರ್ತಿಯೆಂಬುದೀ ಧಾರಿಣಿ ಮಾಚಿದೇವನರಪಾಳನಂ (ಎಕ. XI, ದಾವನ. ೪೩-೫೭; 1164). ೫. ಶೂರ ; ಪರಾಕ್ರಮಿ : ಆಕ್ರಮಿಸಿದುದಿಗ ದ್ವಿಗುಣವಾದುದು ಬುದ್ಧಿ ವಿಕ್ರಮರಾದೆವೆನ್ನೊಡೆಯ (ಭರಟ. ೬೯-೧೪೨). ೬. ವಿಷ್ಣುವಿನ ಒಂದು ಅವತಾರ ; ತ್ರಿವಿಕ್ರಮ : ಒಂದಡಿಯನಿಟ್ಟು ಹರಿ ಮತ್ತೊಂದಡಿಗಡಿಯೆತ್ತುವಾಗಳುಂ ವಿಕ್ರಮನಾದಂದಿನ ಸಂಸ್ಕಾರಂ ಬಿಡದೆಂದೆನೆ ಬಗೆಗೊಳಿಸಿದಂ ತಳರ್ನಡೆವೆಡೆಯೊಳ್ (ಜಗಿ ೩-೪೨). ೭. ಅರುವತ್ತು ಸಂವತ್ಸರಗಳಲ್ಲಿ ಒಂದು ; ಹದಿನಾಲ್ಕನೆಯ ಸಂವತ್ಸರದ ಹೆಸರು : ಸಡಗರದ ತಿಟ್ಟಮ್ಮಂ ವಿಕ್ರಮಮೆಂಬ ವರ್ಷದೊ[ಳ್] ಗೋಶಹಸ್ರಮಿಟ್ಟೊ[ಂ] (ಸೌಇ. XX, ೧೬-೪; 920). ೮. ಉಜ್ಜಯಿನಿಯ ಪ್ರಸಿದ್ಧರಾಜನಾಗಿದ್ದ ವಿಕ್ರಮಾದಿತ್ಯನ ಹೆಸರು : 'ವಿಕ್ರಮಶಕ' ಪರಾ. ೯. ಕಲ್ಯಾಣಿ ಚಾಲುಕ್ಯರ ರಾಜನಾಗಿದ್ದ ಆರನೆಯ ವಿಕ್ರಮಾದಿತ್ಯನ ಹೆಸರು: 'ವಿಕ್ರಮವರ್ಷ' ಪರಾ. ೧೦. ಸಾಹಸಕೃತ್ಯ, ಕ್ರೀಡೆ, ವಿದ್ಯೆ ಇತ್ಯಾದಿಗಳಲ್ಲಿ ಸಾಧಿಸುವ ಅತ್ಯುಚ್ಛವಾದ ಮಟ್ಟ ; ಹಿಂದಿನ ದಾಖಲೆಗಳನ್ನು ಮೀರಿಸುವ ದಾಖಲೆ : ವಿಕ್ರಮ ಸ್ಥಾಪಿಸುವ ಮಕ್ಕಳೂ ಆಗಾಗ ಹುಟ್ಟುತ್ತಾರೆಂಬುದು ಅವರಿಗೆ ತಿಳಿದಿದೆ (ಗಾಳಿ. ೧೫೩). ೧೧. [ಅಶ್ವಶಾ] ಕುದುರೆಯ ಐದು ಬಗೆಯ ನಡಗೆಗಳಲ್ಲಿ ಒಂದು : ಬಿಂಕಂಬಡೆದುದು ವಿಕ್ರಮಮಂಕಿತಮುಪಕಂಠಮುಪಜ ಮುಪಜವಮೆಂಬಯ್ದುಂ ಕಣ್ಗೊಳಿಸುವ ಧಾರೆಗಳಂ ಕುದುರೆಯ ಕಾಲ್ಗೆ ಕೋಡಗಱಿ ಯೊಳವಕ್ಕುಂ (ಮಲ್ಲಿಪು. ೯-೩೬). [ಸಂ.]

ವಿಕ್ರಮದರಿದ್ರ (ನಾ). ಪರಾಕ್ರಮಹೀನನಾದವನು ; ಹೇಡಿ : ನಿಮಗೆ ಸದರವೆ ಪಾರ್ಥನೆಲೆ ವಿಕ್ರಮದರಿದ್ರರಿಂ ವೃಥಾಸಂಭ್ರಮಿತರಿರಾ (ಕಿಷ್ಕಿಂಧೆ ೧-೭೦). [ಸಂ.]

ವಿಕ್ರಮವರ್ಷ (ನಾ). ಕಲ್ಯಾಣದ ಚಾಲುಕ್ಯರಾಜ ಆರನೆಯ ವಿಕ್ರಮಾದಿತ್ಯನು ತನ್ನ ಹೆಸರಿನಲ್ಲಿ ಸ್ಥಾಪಿಸಿದ ಶಕ : ಎಸೆವ ಸಕವರ್ಷಮಂ ಮಾಣಿಸಿ ವಿಕ್ರಮವರ್ಷಮೆಂದು ತನ್ನಯ ಪೆಸರಂ ವಸುಮತಿ ನೆಗಳ್ಚಿದ ಸಾಹಸಿಗಂ ಜಗದೇಕದಾನಿ ಧರ್ಮವಿನೋದ (ಸೌಇ. XX, ೧೩-೨೯; 11, 12 ನೆಯ ಶತ). [ಸಂ.]

ವಿಕ್ರಮಶಕ (ನಾ). ಉತ್ತರಭಾರತದಲ್ಲಿ ಪ್ರಚಲಿತವಿರುವ ಒಂದು ಶಕ ; ಉಜ್ಜಯಿನಿಯ ಅರಸನಾಗಿದ್ದ ವಿಕ್ರಮಾದಿತ್ಯನಿಂದ ಕ್ರಿಸ್ತಪೂರ್ವ ಐವತ್ತೇಳರಲ್ಲಿ ಸ್ಥಾಪಿತವಾಯಿತೆಂದು ಹೇಳಲಾದ ಶಕ : ಭರತಖಂಡದಲ್ಲಿ ಪ್ರಸಿದ್ಧವಾಗಿರುವ ಶಕಗಳು ಎರಡು – ಉತ್ತರಭಾರತದಲ್ಲಿ ವಿಕ್ರಮಶಕ, ದಕ್ಷಿಣಭಾರತದಲ್ಲಿ ಶಾಲಿವಾಹನಶಕ (ಕಶಾಅ. ೫೨). [ಸಂ.]

ವಿಕ್ರಮಹೀನ (ನಾ). ಶೌರ್ಯವಿಲ್ಲದವನು ; ಹೇಡಿ : ವಿಕ್ರಮಹೀನಂ ಗುಚ್ಛಕುಲಕ್ರಮವೇಬಾಟ್ಟೆ (ನೇಮಿಪು. ೧೨-೨೩೩). [ಸಂ.]

ವಿಕ್ರಯ (ನಾ). ಮಾರಾಟ ; ಬಿಕರಿ : "ಕ್ರಯಂ ವಿಕ್ರಯಂ ಕೊಳ್ಳುಕೊಡುಹಂ" (ಮಂಗರಾ. ೧೦೨-೨) ; ಹೋಟಲಾಹಾರವಿಕ್ರಯದ ಮನೆ, ಮದ್ಯಮಂ ಮಾರುವಂಗಡಿ . . . ಇಂತು ಹಬ್ಬಿದೆ ಪಟ್ಟಣದ ಬೃಹಜ್ಜೀವನಂ (ಪಕ್ಷಿಕಾ. ೨೯-೪೧). [ಸಂ.]

ವಿಕ್ರಯಶಾಲೆ (ನಾ). ಮಾರಾಟದ ಸ್ಥಳ ; ಅಂಗಡಿ : "ಪಣ್ಯಂ, ವಿಕ್ರಯಶಾಲಾ, ಆಪಣಃ, ವಿಪಣಿಃ – ಈ ೪ ಅಂಗಡಿ" (ಪಲಾಯು. ೫೦-೧೪೧). [ಸಂ. ವಿಕ್ರಯಶಾಲಾ]

ವಿಕ್ರಯಿಕ (ನಾ). ಮಾರಾಟ ಮಾಡುವವನು ; ವ್ಯಾಪಾರಿ : "ವಿಕ್ರೇತಾ, ವಿಕ್ರಯಿಕಃ - ೨ ಮಾರುವವನ ಹೆಸರುಗಳು" (ಸಿದ್ಧಾಂತಿ. ೨೯೭). [ಸಂ.]

ವಿಕ್ರಯಿಸು (ಕ್ರಿ). ಮಾರು ; ಮಾರಾಟ ಮಾಡು : ಕಟ್ಟಿಗೆಗಳಂ ಕೈಯಾರೆ ಕಡಿಕಡಿದೊಟ್ಟಿ . . . ಮೋಳಿಗೆಮಾರ ವಿಭುವಂಗಡಿಯೊಳಗೆ ವಿಕ್ರಯಿಸಿಯದಱಿಂದ ಒಸೆದು ಜಂಗಮಕೋಟಿಗಾರಾಧಿಸುತ್ತಿರಲು (ಬಸಪು ೩೦-೪); ಅದರ ಮೇಲಿನ ರತ್ನಗಳನ್ನು ಬಿಚಿಸಿ ಅವುಗಳನ್ನೂ, ಚಿನ್ನವನ್ನೂ ಬಿಡಿಬಿಡಿಯಾಗಿ ವಿಕ್ರಯಿಸಲಾಗುವುದು (ರತ್ನಗೋ. ೯).

[ವಿಕ್ರಯಿ + – ಇಸ್ತು]

ವಿಕ್ರಾಂತ (ಗು). ೧. ಹೆಜ್ಜೆಯಿಟ್ಟ ; ದಾಟಿ ಹೋದ. ೨. ಪರಾಕ್ರಮಿಯಾದ ; ಶೂರನಾದ : ಪುಷ್ಕಲಂ ಶತ್ರುಘ್ನನಿಂ ಬೆಸನಾಂತು ತಳ್ಳದೆ ಮಱುಂತ ವಿಕ್ರಾಂತರಾಜಪುತ್ರನಂ ಸರಲ ಸೋನೆಯಿಂ . . . ತಡೆದಂ (ರಾಮಾಶ್ವ. ೯೨-೧೧). (ನಾ). ೩. ಶೂರ ; ಪರಾಕ್ರಮಿ: ವಿಕ್ರಾಂತಾರಾತಿಗಳಂ ಕಳಿಪಿ ಧರೆಯಂ ನಿಷ್ಕಂಟಕಂ ಮಾಡಿ (ಎಕ. VII, ಶಿಕಾರಿ. ೧೩೬-೧೪ ; 1068). ೪. ಶೌರ್ಯ ; ಪರಾಕ್ರಮ : ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಮಧಿಕಂ ಪ್ರತಾಪಂ ಪೋಗೀತಂಗೆಣೆಯೆ ದ್ವಿಜರ್(ಪಂಪಭಾ. ೧-೮೦) ; ಅಗಣಿತದೋರ್ಬಲದಿಂ ಸಂಯುಗದೊಳ್ ಮಱುಂತ ವೈರಿರಾಜನನೇನುಂ ಬಗೆಯದುಬದಿಱಿವ ವಿಕ್ರಾಂತಗುಣಮನುತ್ಸಾಹಶಕ್ತಿಯೆಂಬರ್ ವಿಬುಧರ್ (ಪಂಚತಂ. ೨೯೫-೫). ೫. ಹೆಜ್ಜೆಯಿಡುವುದು. [ಸಂ.]

ವಿಕ್ರಿಯರ್ದ್ಧಿ (ನಾ). [ಜೈನ] ತಪಸ್ಸಿನಿಂದ ದೊರೆಯುವ ಎಂಟು ಬಗೆಯ ಸಿದ್ಧಿಗಳಲ್ಲಿ ಒಂದು : ಇರ್ವತ್ತುಸಾಸಿರದಾಱುನೂರ್ವರ್ ವಿಕ್ರಿಯರ್ದ್ಧಿಪ್ರಾಪ್ತರುಂ (ಆದಿಪು. ೧೬-೪೦ ವ). 'ಕ್ರಿಯಾಗೋಚರರ್ದ್ಧಿ' ಪರಾ. [ಸಂ.]

ವಿಕ್ರಿಯಾಗಜ (ನಾ). ರೂಪಪರಾವರ್ತನೆಯ ಶಕ್ತಿಯನ್ನು ಹೊಂದಿದ ಆನೆ : ಮುನ್ನಮೆ ಪಾಂಡುಕಮೆಬಳಿವನಕ್ಕಡರ್ದುದಿದೇಂ ಮನಃಪವನವೇಗಿಯೊ ಶಕ್ರನ ವಿಕ್ರಿಯಾಗಜಂ (ಮಲ್ಲಿಪು. ೧೨-೯೪). [ಸಂ.]

ವಿಕ್ರಿಯಾಬಲ, ವಿಕ್ರಿಯಾಬಳ (ನಾ). ಬೇಕಾದ ರೂಪ, ಆಕಾರ ಮುಂತಾದುವನ್ನು ತಾಳುವ ಶಕ್ತಿ ; ಮಾಯಾಶಕ್ತಿ : ಅಂತು ವಿಕ್ರಿಯಾಬಲದ ಗೀರ್ವಾಣವಾರಣಂ ವಿಗುರ್ವಿಸೆ (ಅಜಿಪು. ೪-೨೩ ವ) ; ಬಲದೇವಾಕೃತಿಯಂ ಸರಾಗನಮರಂ ನಿಷ್ಪಾಣಮಂ ವಿಕ್ರಿಯಾಬಲದಿಂ ನಿರ್ಮಿಸೆ ಕಂಡು ಲಕ್ಷ್ಮಣನದಂ . . . ಬಿಟ್ಟಂ ಧರಾತಳದೊಳ್ (ಪಂರಾಮಾ. ೧೬-೪೯). ವಿಕ್ರಿಯಾಬಳ : ಸೂಕ್ಷ್ಮಾಂಗನಾಗರ್ಪನಾಗಳೆ ದಿಗ್‌ವ್ಯಾಪಕನಪ್ಪನಿಂತು ಪಲವುಂ ಚೋದ್ಯಂಗಳಂ ವಿಕ್ರಿಯಾಬಳದಿಂದಾಡಿ ಮಹೇಂದ್ರಜಾಲಿಗನುಮಂ ಪೋಲ್ತಂ ಸುರಾಧೀಶ್ವರಂ (ಆದಿಪು. ೭-೧೨೨). [ಸಂ.]

ವಿಕ್ರಿಯಾಬಳ 'ವಿಕ್ರಿಯಾಬಲ' ನೋ.

ವಿಕ್ರಿಯಾಶಕ್ತಿ (ನಾ). = ವಿಕ್ರಿಯಾಬಲ : ವಾಹನಾಮರವಿಕ್ರಿಯಾಶಕ್ತಿಸಂಜನಿತ ವಾಜಿಸಾಮಜಾದ್ಯನೇಕಯಾನಂಗಳನೇಱಿ ಪೋಗಿ (ಚಂದ್ರಪು. ೪-೭೬ ವ). [ಸಂ.]

ವಿಕ್ರಿಯೆ (ನಾ). ೧. ಬದಲಾವಣೆ ; ವ್ಯತ್ಯಾಸ : ಪುನಃ ಪುನಃ ಯಂತ್ರವು ಕೆಲಸ ಮಾಡಬೇಕಾದರೆ ಅದರಲ್ಲಿ ನಡೆಯುವ ವಿಕ್ರಿಯೆಗಳಿಂದ (changes) ಕಾರ್ಮಿಕದ್ರವ್ಯವು ಅದು ಮೊದಲಿದ್ದ ಸ್ಥಿತಿಗೇ ಪುನಃ ತರಲ್ಪಡಬೇಕು (ಭಾಇಪ. ೨೬೦). ೨. ಸಹಜಸ್ಥಿತಿಯ ಪರಿವರ್ತನೆ ; ಪ್ರಕೃತಿವಿಕಾರ : "ವಿಕೃತಿ, ವಿಕ್ರಿಯಾ - ೨ ಪರಿಣಾಮರೂಪವಾಗಲಿ, ವಿವರ್ತರೂಪವಾಗಲಿ ಸೋಪಾಧಿಕ ಪ್ರಕೃತಿಯಿಂದ ಹುಟ್ಟುವ ವಿಕಾರಗಳೆಲ್ಲಕ್ಕೂ ಕಾರ್ಯ ಪ್ರಪಂಚಮಾತ್ರಕ್ಕೂ ಹೆಸರುಗಳು" (ಸಿದ್ಧಾಂತಿ. ೩೬೦). ೩. ವ್ಯಾಧಿ ; ರೋಗ. ೪. (ಕೋಪ, ಈರ್ಷ್ಯೆ ಮೊದಲಾದ) ಮನೋವಿಕಾರ. ೫. ಇಷ್ಟ ಬಂದಂತೆ ಬದಲಾವಣೆಗಳನ್ನು ತಟ್ಟನೆ ನಿರ್ಮಿಸುವ ಅದ್ಭುತಶಕ್ತಿ ; ಮಾಯೆ : ಅವಧಿಯಂ ಧರಣೀಂದ್ರನಱಿದು ವಿಕ್ರಿಯೆಯಿಂ ದೇವರ್ ಬೆಸಸಿದಂತು ಮಾಡಿ (ಚಾವುಂಪು. ೩೫); ಸಪ್ತಧಾತುದ್ರವಮಂ ವಿಧಿಯಿಂ ತಂದೆಱೆವರ್ ಸಪ್ತಧಾತುಗಳ್ ಕರಗುವಿನೆಗಂ ವಿಕ್ರಿಯೆಯಿಂದಂ (ಸುಬಮಾ. ೧೧-೪೫). [ಸಂ. ವಿಕ್ರಿಯಾ]

ವಿಕ್ರುಷ್ಟ (ಗು). ೧. ಗಟ್ಟಿಯಾಗಿ ಕೂಗಿದ ; ಭಾವಾವೇಶದಿಂದ ಉದ್ಗರಿಸಿದ. ೨. ಬಿರುಸಾದ ; ಕರ್ಕಶವಾದ. (ನಾ). ೩. ಸಹಾಯ ಯಾಚನೆಯ ಕೂಗು. ೪. ಬಿರುದನಿ ; ಕಠೋರವಾದ ಧ್ವನಿ : "ಬೆಟ್ಟಿತಪ್ಪ ಧ್ವನಿಯಂ ವಿಕ್ರು(ಕೃ)ಷ್ಟವೆಂಬುದು" (ಪಲಾಯು. ೨೩-೧೯೯). [ಸಂ.]

ವಿಕ್ರೇಯ (ಗು). ಮಾರಲು ಯೋಗ್ಯವಾದ ; ವಿಕ್ರಯಿಸಲು ಅರ್ಹವಾದ. [ಸಂ.]

ವಿಕ್ಲಬ (ಗು). ೧. ಭಯಪಟ್ಟ ; ಗಾಬರಿಗೊಂಡ. ೨. ಹೆದರುವ ಸ್ವಭಾವವುಳ್ಳ ; ಭೀರುವಾದ. ೩. ಸಂತ್ರಸ್ತವಾದ ; ವಿಹ್ವಲವಾದ. (ನಾ). ೪. ದುಃಖ ; ವಿಷಾದ : ಅಸ್ಮನ್ಮನೋ[ಸ]ಬಳಂ(?) ತೀರ್ವಡೆ ತೀರ್ಗುಮಾ ಪರಮಹಂಸಸ್ವಾಮಿಯಿಂದೆಂದು ವಿಕ್ಲಬದಿಂ ತಾಂ ಬರವೇಟ್ಟುದುಂ (ಸುಬಮಾ. ೩-೬); ಆಯಮನದರ್ಪದೆ ಪುತ್ರವಿಯೋಗವಿಕ್ಲಬಂ (ಚಂದ್ರಪು. ೫-೧೯). [< ಸಂ. ವಿಕ್ಲವ]

ವಿಕ್ಲಿಷ್ಟ (ಗು). ೧. ತುಂಬಾ ನೊಂದುಕೊಂಡ ; ಅತಿದುಃಖಿತವಾದ. ೨. ಗಾಯಗೊಂಡ. ೩. ನಾಶವಾದ. (ನಾ). ೪. ಅಸ್ಪಷ್ಟವಾದ ಉಚ್ಚಾರಣೆ ; ತಪ್ಪುಉಚ್ಚಾರಣೆ ; ಉಚ್ಚಾರದೋಷ. [ಸಂ.]

ವಿಕ್ಷತ (ಗು). ೧. ಹರಿದ. ೨. ಏಟು ಬಿದ್ದ ; ಗಾಯವಾದ : ಬ್ರಹ್ಮದಂಡೆಯ

ಬೇರು, ದೇವದಾರು, ತುಪ್ಪದಲ್ಲಿ ಅರೆದು ಪೂಸುಗೆ, ವಿಕ್ಷತಕ್ಷುದ್ರವ್ರಣಗಳು ತೀರ್ಗುಂ (ಎಷ್ಟಾ. ೧೫೪). (ನಾ). ೩. ಗಾಯ ; ಹುಣ್ಣು. [ಸಂ.]

ವಿಕ್ಷಿಪ್ತ (ಗು). ೧. ಚೆದರಿದ ; ಹರಡಿದ. ೨. ಬೇಡವೆಂದು ತೆಗೆದುಹಾಕಿದ ; ಪರಿತ್ಯಕ್ತ. ೩. ಕಳಿಸಿದ ; ರವಾನಿಸಿದ. ೪. ಉದ್ವಿಗ್ನ ; ವಿಹ್ವಲವಾದ. ೫. ಕಕ್ಕಾಬಿಕ್ಕಿಯಾದ ; ದಿಗ್ಭ್ರಾಂತವಾದ. ೬. ವಿಚಿತ್ರ ಸ್ವಭಾವದ ; ಮನಸ್ಸಿನ ಲಹರಿ ಬಂದಂತೆ ನಡೆದುಕೊಳ್ಳುವ : ಅವನ ವಿಕ್ಷಿಪ್ತ ಸ್ವಭಾವದಿಂದ ಮನೆಯಲ್ಲಿ ಎಲ್ಲರೂ ಬೇಸತ್ತಿದ್ದರು (ಹೂಸ್ಕ. ೧೯೬). (ನಾ). ೭. ವಿಚಿತ್ರಸ್ವಭಾವದ ವ್ಯಕ್ತಿ : ಬಳಕರು ವಿಕ್ಷಿಪ್ತರಾದ ಸಂತರು (ಸ್ವತಃ. ೪) ; ಈ ಗುಲಗಂಜಿ ಕಣ್ಣಿನ . . . ನಿಷ್ಠುರವಾದಿಯಾದ ವಿಕ್ಷಿಪ್ತನು ಬ್ಯಾಂಕಿನಲ್ಲಿ ಪರಿಚಿತವ್ಯಕ್ತಿಯಾಗಿರಬೇಕು (ಗಂಮಾಯಿ. ೩೦). ೮. [ಯೋಗ] ಚಿತ್ತಸ್ಥಿತಿಯ ಐದು ವಿಧಗಳಲ್ಲಿ ಒಂದು ; ಅಸ್ಥಿರತೆ ; ಚಂಚಲತೆ : ವಿಕ್ಷಿಪ್ತವೆಂದರೆ ಯಾವುದರಲ್ಲಿಯೂ ಸ್ಥಿರವಾಗಿ ನಿಲ್ಲದೆ ಚಂಚಲವಾಗಿರುವುದು (ಹಿಂದಸಾ. ೧೦೨). ೯. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; P "ವಿದ್ಯುದ್ಭ್ರಾಂತ ಮತ್ತು ದಂಡಪಾದಚಾರಿಗಳನ್ನು ಕ್ರಮವಾಗಿ ಮಾಡಿ, ಕೈಗಳನ್ನು ಮುಂದುಗಡೆ, ಹಿಂದುಗಡೆ ಮತ್ತು ಪಾರ್ಶ್ವಗಳು ಇವುಗಳಲ್ಲಿ ಉದ್ವೇಷ್ಟಿತ ಮತ್ತು ಅಪವೇಷ್ಟಿತಗಳಿಂದ ರೇಚಿತ ಮಾಡುವುದು" (ಅಸ್ಕರಂ. ೨೫೯ ಗದ್ಯಾನುವಾದ) : ಮಿಗೆ ವಿದ್ಯುದ್ಭ್ರಾಂತಮುಮಂ ನೆಗಳ್ದಿರ್ದಾ ದಂಡಪಾದ ಚಾರಿಯುಮಂ ತೊಟ್ಟಗೆ ಸಮೆದುಂ ಕ್ರಮದಿಂದಂ ಸೊಗೆಯುವ್ದುದ್ವೇಷ್ಟಿತಮುಮನಪ ವೇಷ್ಟಿತಮುಂ ಸರಿಯಾಗಿ ಕೈಗಳಂ ಬಿತ್ತರದಿಂದಂ ಮುಂತೆ ಹಿಂತೆ ರೇಚಿತಮನದಂ ವಿರಚಿಸಿ ಕೈಯಿರಡಂ ಕೇಳ್ ಬರಿಯೆರಡಕ್ಕೆಯ್ದಾಸಲ್ಕೆ ವಿಕ್ಷಿಪ್ತಾಖ್ಯಂ (ಅಸ್ಕರಂ. ೪-೧೨೪). [ಸಂ.]

ವಿಕ್ಷಿಪ್ತತನ (ನಾ). ವಿಚಿತ್ರವಾದ ಸ್ವಭಾವ : ವಿಕ್ಷಿಪ್ತತನವನ್ನು ಅವಲಂಬಿಸಿ, ನಾಟ್ಯಸಂಸ್ಥೆಯು ಕೆಟ್ಟರೆ ಸಮಾಜವು ಕೆಟ್ಟೀತು (ಪ್ರಬಂಧ. ೨೪). [ವಿಕ್ಷಿಪ್ತ + - ತನ]

ವಿಕ್ಷಿಪ್ತತೆ (ನಾ). ೧. ನಿಯಮರಾಹಿತ್ಯ ; ನಿಯಮರಹಿತತೆ : ಛಂದಸ್ಸಿನ ನಾವೀನ್ಯದೊಡನೆ, ವೃತ್ತದ ವಿಕ್ಷಿಪ್ತತೆ, ಅತಿಪ್ಲುತತೆಯೂ ಸರಳರಗಳೆ ಮೊದಲಾದವುಗಳಲ್ಲಿ ಕಂಡುಬರುತ್ತವೆ (ಸಾಹಿ. ೬೮). ೨. ಚಿತ್ತಲಹರಿ ಬಂದಂತೆ ನಡೆದುಕೊಳ್ಳುವ ರೀತಿ : ತಾಯಿಯ ವಿಕ್ಷಿಪ್ತತೆಯು ಅವನನ್ನು ವಿಷ್ಣನನ್ನಾಗಿಸಿತ್ತು (ಸಮಚೇ. ೨೮೧).

[ಸಂ. ವಿಕ್ಷಿಪ್ತತಾ]

ವಿಕ್ಷುಬ್ಧತೆ (ನಾ). ಕ್ಷೋಭೆ ; ವಿಪ್ಲವ ; ಅಶಾಂತಿ : ಅಂದಂದಿಗೆ ಸಮಾಜಸಾಗರದ ವಿಕ್ಷುಬ್ಧತೆಗಳನ್ನು ತಡೆದು ನಿಲ್ಲಿಸುವ ಸೀಮೆ(ಎಲ್ಲೆ)ಯೆನಿಸಿರುವ ಸ್ಮೃತಿಗಳು . . . ಅಂದಂದಿನ ಸ್ಥಿತಿಗತಿಗಳನ್ನು ನಿರ್ದೇಶಿಸಲು ಮಾರ್ಗದರ್ಶಕವಾಗಿವೆ (ಭಾಸಂದ. ೬೧).

[ಸಂ. ವಿಕ್ಷುಬ್ಧತಾ]

ವಿಕ್ಷೇಪ (ನಾ). ೧. ಚೆದರುವಿಕೆ ; ಹರಡುವಿಕೆ : ಪುಷ್ಪಾಂಜಲಿವಿಕ್ಷೇಪಂಗೆಯ್ದಿಱಗಿ ಪೊಡವಟ್ಟು (ಶಾಂತಿಪು. ೧೦-೬೧ ವ). ೨. ಚಲನೆ ; ಅಲುಗಾಟ : ಚಮರೀಲೋಲಲಾಂಗೂಲಮಾಲಾವಲಿವಿಕ್ಷೇಪಂಗಳಿಂ ತಚ್ಚಮರರುಹ ಮಹಾಶೋಭೆ ಕೈಗಣ್ಮೆ (ಪಂಪಭಾ. ೯-೧೪) ; ಚಮರೀಜಕಾಂತೆಯರ್ ಸಿತಚಮರದ ವಿಕ್ಷೇಪದಿಂದಮೆಸೆದರ್ (ಕಾದಂಪು. ೪೭೩). 'ಕಟಾಕ್ಷವಿಕ್ಷೇಪ' ಪರಾ. ೩. ಕಳಿಸುವಿಕೆ ; ರವಾನೆ. ೪. ಇಡುವಿಕೆ ; ಇರಿಸುವುದು : 'ಕ್ರಮವಿಕ್ಷೇಪ' ಪರಾ. ೫. ಬೇರೆ ಕಡೆಗೆ ತಿರುಗಿಸುವುದು ; ಗತಿಯನ್ನು ಬದಲಿಸುವುದು. ೬. (ಬೇರೆಯವರ ಮತ, ವಾದ ಮುಂತಾದವುಗಳ) ಖಂಡನೆ ; ನಿರಾಕರಣೆ. ೭. ಭಯ ; ಗಾಬರಿ. ೮. ಕಕ್ಕಾಬಿಕ್ಕಿ ; ದಿಗ್ಭ್ರಮೆ. ೯. ಅಡ್ಡಿ ; ವಿಘ್ನ : ಪರಪರಿಣಯ[ಕರಣಮದಿ]ತ್ಪರಿಕಾಗಮನಂ ಭುಜಂಗ[ವಿಕ್ಷಿ]ತ ಮನಂಗಾಂತರಕೇಳಿ ಕಾಮತೀವ್ರಾತುರತೆ ಚತುರ್ಥವ್ರತಕ್ಕೆ ವಿಕ್ಷೇಪಂಗಳ್ (ವರ್ಧಮಾ. ೭-೧೧). ೧೦. ಚಿತ್ತಚಾಂಚಲ್ಯ ; ಚಿತ್ತವಿಭ್ರಮೆ : ಲಯ ವಿಕ್ಷೇಪವು ಕಷಾಯಗಳು ಮೊದಲಾದಂತರಾಯಗಳಗಣಿತಗಳಾಗಿಹವು ಯೋಗಾಭ್ಯಾಸಕಾಲದಲಿ (ಅಮೃತ. ೬-೧೧). ೧೧. ಗದೆಯನ್ನು ಬೀಸುವುದು ; ಗದೆಯ ಆಘಾತ : ಆವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಮತಿಪರಿಚಿತರಾಗಿ ಕಾದುವಾಗಳ್ (ಪಂಪಭಾ. ೧೩-೯೨ ವ). ೧೨. ಗದಾಯುದ್ಧದಲ್ಲಿ ಒಂದು ವರಸೆ : ಬವರಿಮತ್ತೊಡ್ಡಲಿತಿ . . . ಪಾರಿತ್ಪವ ಗದಾಪರಿರಂಭ ವಿಕ್ಷೇಪ . . . ಎಂಬೀ ವಿವರದಲಿ ಕಾದಿದರು (ಕುವ್ಯಾಗ. ೬-೨೫). ೧೩. [ಕಾವ್ಯಮೀ] ಕಾವ್ಯಾನಂದದಲ್ಲಿ ಪರ್ಯವಸಾನವಾಗುವ ಚಿತ್ತದ ನಾಲ್ಕು ಅವಸ್ಥೆಗಳಲ್ಲಿ ಒಂದು : ಕಾವ್ಯಾರ್ಥವನ್ನು ಗ್ರಹಿಸುವುದರಿಂದ ಆಗುವ ಆನಂದವು (ಚಿತ್ತ) ವಿಕಾಸ, ವಿಸ್ತಾರ, ಕ್ಷೋಭ ಮತ್ತು ವಿಕ್ಷೇಪವೆಂದು ನಾಲ್ಕು ವಿಧ (ಕೃಚಿ. ೫೦೦). ೧೪. [ನಾಟ್ಯ] ಹತ್ತೊಂಬತ್ತು ಪ್ರಕಾರದ ದೇಶೀಯ ಆಕಾಶಚಾರಿಗಳಲ್ಲಿ ಒಂದು; IP "ಕಾಲನ್ನು ಮುಂದಕ್ಕೆ ನೀಡಿ ಜಾಗ್ರತೆ ಹಿಂದಕ್ಕೆ ತರುವುದು" (ಅಸ್ಕರಂ. ೬೨೪ ಗದ್ಯಾನುವಾದ) : ಮುಂತೆತ್ತಿದ ಪದಕುಂಚಿತಮಂ ತಳೆದುಂ ನೀಡೆ ಕೇಳ್ ಪುರಾಕ್ಷಿಪ್ತಾಖ್ಯಂ ಮುಂತಾಗಸಕೆತ್ತುತ್ತಂ ಕಾಂತೇ ತವ ತೆಗೆಯ ಕೂಡೆ ವಿಕ್ಷಿಪ್ತಾಖ್ಯಂ (ಅಸ್ಕರಂ. ೬-೪೧). ೧೫. [ವೇದಾಂತ] ಭ್ರಾಂತಿಯನ್ನು ಹುಟ್ಟಿಸುವ ಶಕ್ತಿ ; ಮಾಯೆ : ತಾನೇ ಕರ್ಮ ಕರ್ತೃ ತಾನೇ ಕರ್ಮಫಲಭೋಕ್ತೃವೆಂದು ಬಗೆದು ದೇಹಾಭಿಮಾನಿಯಾದ ಚಿದಾಭಾಸಜೀವನು ತಾನೇ ವಿಕ್ಷೇಪವೆನಿಸುವುದು (ವಿವೇ. ೪೩); ಅಹಂಕಾರ ಮಮಕಾರಗಳಿಂದ ಸಕಲವ್ಯಾಪಾರಗಳು ಮಾಡುವದೇ ವಿಕ್ಷೇಪ (ಸಾಸಾಗು. ೫೦-೭). [ಸಂ.]

ವಿಕ್ಷೇಪಣ (ನಾ). ೧. ಅಲುಗಾಟ ; ಚಲನೆ : ಈ ಕಳಾಳಾಪೆ ಸುರೇಂದ್ರಕಾಂತೆಯೆನುತುಂ ವಡನೋಟ್ಟವರ್ಗಕ್ಷಿಪಕ್ಷ್ಮವಿಕ್ಷೇಪಣಮೊಂದೆ ಮಾಡುವುದಿವಳ್ ಮನುಜಾಂಗನೆಯೆಂಬ ಭೇದಮಂ (ಆದಿಪು. ೩-೨೦). ೨. (ಹೂವು ಮೊದಲಾದುವನ್ನು) ಬೆಲ್ಲುವಿಕೆ ; ಸೂಸುವಿಕೆ : ಚತುಃಕೋಣಾ ಕಳಶಂಗಳನ್ನು ಪುಷ್ಪಾಕ್ಷತವಿಕ್ಷೇಪಣಂಗೆಯ್ದು (ಆದಿಪು. ೪-೫೦ ವ). [ಸಂ.]

ವಿಕ್ಷೇಪಣಿ (ನಾ). [ಜೈನ] ಆಕ್ಷೇಪಿಣಿ, ವಿಕ್ಷೇಪಣಿ, ಸಂವೇದನಿ ಮತ್ತು ನಿರ್ವೇದನಿ ಎಂಬ ನಾಲ್ಕು ಬಗೆಯ ಧರ್ಮಕಥೆಗಳಲ್ಲಿ ಒಂದು ; ಮಿಥ್ಯಾವಾದವನ್ನು ಖಂಡನೆಮಾಡುವ ಕಾಲದಲ್ಲಿ ಹೇಳುವ ಕಥೆ : ನಿಜಮತನಿರೂಪಣದೊಳ್ಪರಮತದೂಷಣಂಗೆಯ್ದುದು ಮೇಣ್ ಪರಮತಕಥನದೊಳ್ ನಿಜಮತಪ್ರಕಾಶನಂಗೆಯ್ದುದು ವಿಕ್ಷೇಪಣಿಯೆಂಬುದು (ಜಾವುಂಪು. ೬೦೦).

[< ಸಂ. ವಿಕ್ಷೇಪಿಣೀ]

ವಿಕ್ಷೇಪಶಕ್ತಿ (ನಾ). [ವೇದಾಂತ] ಭ್ರಾಂತಿಯನ್ನು ಹುಟ್ಟಿಸುವ ಶಕ್ತಿ ; ಮಾಯೆ : ಆವರಣ ವಿಕ್ಷೇಪಶಕ್ತಿಗಳಾವರಿಸೆ ಪರವಸ್ತುವನು ಜಗಜೀವರೂಪಾಗಿಹುದು ಸ್ವಾಪ್ನಪದಾರ್ಥದಂದದಲಿ (ಅಮೃತ. ೫-೫೭) ; ಅವಿದ್ಯೆಗೆ ಆವರಣಶಕ್ತಿ, ವಿಕ್ಷೇಪಶಕ್ತಿ ಎಂದರಡು ಸ್ವಭಾವಗಳು ಇರುವುವು. ಆವರಣಶಕ್ತಿಯಿಂದ ವಸ್ತುಸ್ವರೂಪವು ಮುಚ್ಚಲ್ಪಡುವುದು. ವಿಕ್ಷೇಪಶಕ್ತಿಯಿಂದ ವಸ್ತು ವಿಚಿತ್ರವಾಗಿ ಕಾಣುವುದು (ಹಿಂದಸಾ. ೨೧೩).

[ಸಂ.]

ವಿಕ್ಷೋಭ (ನಾ). ೧. ಚಂಚಲತೆ ; ಅಸ್ಥಿರತೆ ; ಹೊಯ್ದಾಟ. ೨. ಮನಸ್ಸಿನ ಉದ್ವಿಗ್ನತೆ ; ವ್ಯಗ್ರತೆ. ೩. ಘರ್ಷಣೆ ; ತಿಕ್ಕಾಟ : ತಂತುಗಳ ಕಂಪನ-ವಿಕ್ಷೋಭದಿಂದ ತಂತುಕಂಪನ ಮಾತ್ರವೇರ್ಪಡುತ್ತದೆ (ಕಿರಾತ್ಯ. ೧೫೧). ೪. ಆನೆಯ ವಕ್ಷಭಾಗದ ಪಾರ್ಶ್ವ : ಆ ದಿವಿಜಗಜಂ . . . ಪೀನೋನ್ನತಚತಮಾಂಸ ವಿಕ್ಷೋಭನಮಜಹುತ್ಪಿಯುಂ . . . ಎನಿಸಿ (ಆದಿಪು. ೪-೨೦ ವ). [ಸಂ.]

ವಿಕ್ಷೋಭಿತ (ಗು). ಕ್ಷೋಭೆಗೊಂಡ ; ಹೊಯ್ದಾಡುವ : ಚಿರವಿಕ್ಷೋಭಿತ ಸಿಂಧುತೋಯಶಿಶಿರಂ . . . ಚಕ್ರಿಯನಾಜಿಸಿತ್ತು ವಿಜಯಾರ್ಧೋನ್ನಾಂತಮಂದಾನಿಲಂ (ಆದಿಪು. ೧೩-೯) ; ತಿಮಿವಿಕ್ಷೋಭಿತದೀರ್ಘಕಾಂಬು ಕುದಿವಂತಾಯ್ತುಷ್ಣದಿಂ (ಶಾಂತಿಪು. ೮-೯). [ಸಂ.]

ವಿಖಂಡ (ನಾ). ಭಾಗ ; ವಿಭಾಗ ; ಖಂಡ : ನವನವವ್ಯೂಹಂಗಳಬುದೋದ್ಭವನ ಪಾಳಿ ವಿಖಂಡನವರಸ ನವವಿಧಗ್ರಹನಾಟಕಂಗಳ ಲಕ್ಷಣವನಱಿದು . . . ನವರಸವನಾರ್ದೆದು ನಡೆವುದು (ಕುವ್ಯಾಬಾ. ೪-೩೬). [ಸಂ.]

ವಿಖ್ಯಾತ (ಗು). ೧. ಹೆಸರುವಾಸಿಯಾದ ; ಖ್ಯಾತವಾದ ; ಪ್ರಸಿದ್ಧವಾದ : ಪರಮಸುಖಪದಶಿಕ್ಷಿಧರ್ಮಕಾಮಾರ್ಥಮೋಕ್ಷಸ್ಥಿರವಿಷಯ ವಿಶೇಷಾಖ್ಯಾನ ವಿಖ್ಯಾತತತ್ಪ್ರ (ಕವಿರಾ. ೩-೨೧೦); ಆತಂಗಮಾಕೆಗಂ ವಿಖ್ಯಾತಯಶಂ ಪುಟ್ಟಿದಂ

(ಶಮದ. ೧೧೩ ಪ್ರಯೋ). ೨. ಹೆಸರಿಸಿದ ; ಕರೆದ. (ನಾ). ೩. ಪ್ರಸಿದ್ಧಿ ; ಖ್ಯಾತಿ : ವಿಖ್ಯಾತದಿಂ ಸರಸಿ ಕಾಸಾರ ಕೊಳನು (ಮಂಗರಾ. ೨೩-೧೪). ೪. ಹೆಸರಾದವನು ; ಪ್ರಸಿದ್ಧನಾದವನು : ಧಾತ್ರೀತನಯಂ . . . ಜಾಪಾನಿಮೇಷಸ್ಥನಾಗಿರೆ ವಿಖ್ಯಾತನನೇಕಶತ್ರು ಸಚಿವರ ಸ್ವಲ್ಪಾತ್ಮಜಂ ಶೂರಂ (ಜಾತಕ. ೧೭-೨೦) ; ಎನ್ನ ಭಂಡಾರಕ್ಕೆ ಬರೆಯಿಸುವೆನೀತನಂ ಉನ್ನತಜ್ಞಾನಯುತ ಗಣಕವಿಖ್ಯಾತನಂ (ಬಸಪು. ೫-೧೦೨). [ಸಂ.]

ವಿಖ್ಯಾತದಾನ (ನಾ). ೧. ಶ್ರೇಷವಾದ ದಾನ. ೨. ಪ್ರಸಿದ್ಧನಾದ ದಾನಿ ; ಉತ್ತಮದಾನಿಯೆಂದು ಪ್ರಸಿದ್ಧನಾದವನು : ಆ ಮೂರ್ಧಾಭಿಷಿಕ್ತಮುಖ್ಯಂ ವಿಖ್ಯಾತದಾನನಾಗಿಯುಮಮದವೃತ್ತಿವರ್ತನನುಂ . . . ಎನಿಪಂ (ಚಂದ್ರಪ್ರ. ೨-೮). [ಸಂ.]

ವಿಖ್ಯಾತಿ (ನಾ). ಹೆಸರುವಾಸಿ ; ಪ್ರಖ್ಯಾತಿ ; ಪ್ರಸಿದ್ಧಿ : ವಿಖ್ಯಾತಿ ಕಳೆ ಸೌಭಾಗ್ಯ . . . ದಾಕ್ಷಿಣ್ಯಮೆಂಬವು ಮಹಾತಿಶಯಮನೆ ಪೆರ್ಚಿದುವು ಯುಧಿಷ್ಠಿರನರೇಶ್ವರನಾಳ್ವ ಭೂತಳದೊಳ್ (ಕೈಮಿಭಾ. ೨-೬). [ಸಂ.]

ವಿಖ್ಯಾತಿವೆಱು (ಕ್ರಿ). ಹೆಸರನ್ನು ಹೊಂದು ; ಪ್ರಸಿದ್ಧಿಯನ್ನು ಪಡೆ : ಸನ್ಮುನಿವಲ್ಲಭರ ಜನ್ಮಂಗಳೆಲ್ಲವಿವು ಘನತಿವಾರ್ಚನೆಯಿಂದ ಪಾವನವೆನಿಸಿ ವಿಖ್ಯಾತಿವೆತ್ತರು (ಬಸಪು. ೫೭-೭೩). [ವಿಖ್ಯಾತಿ + ಪೆಱು]

ವಿಗಡ (ಗು). ೧. ಉಗ್ರವಾದ ; ಭೀಕರವಾದ ; ಭಯಂಕರವಾದ : ವಿಗಡತಪವನು ಮಾಡತೊಡಗಿದನಸುರಕರ್ಮದಲಿ (ಸಂಭಪ. ೮-೩) ; ಕಾಲುಗೊಲೆಯಲಿ ವಿಗಡಕರಿ ತುಳಿದಾಡಿತಿಱಿದಿದಿರಾದ ಪಟುಭಟರ (ಕುವ್ಯಾದ್ರೋ. ೩-೧೬). ೨. ಮಿಗಿಲಾದ ; ಘನವಾದ : ವಿಗಡಭಕ್ತನು . . . ನೆಗಳುವಂ ತಿರ್ಯಗ್ಗಿರಿಶನು ಭೂತಳಾಗ್ರದೊಳು (ಬಸಪು. ೪೯-೪೨). ೩. ಬಲವುಳ್ಳ ; ಸಮರ್ಥವಾದ ; ಪರಾಕ್ರಮಿಯಾದ : ಕರಿಘಟೆಗಳ್ಳೆನೂಱು ರಥ ಸಾವಿರದ ಮೂನೂಱೆರಡುಸಾವಿರ ತುರಗದಳವೆಂಬತ್ತುಸಾವಿರ ವಿಗಡ ಪಾಯದಳ ತೆರಳಿ ತಂತಕಪುರಿಗೆ (ಕುವ್ಯಾಗ. ೧-೩೯) ; ದಾಣೆ ದಡಿಗಳ ವಿಗಡದೂತರು ನೆರೆದುದಮಮ (ಅಂಬಿಕಾ. ೫-೧೪). ೪. ಆರ್ತವಾದ ; ವ್ಯಾಕುಲಗೊಂಡ ; ಕಳವಳ ಹೊಂದಿದ: ವಿಗಡಜೀವಿಗಳ ದುಷ್ಕರ್ಮಲೇಪವ ಹಱೆವ ಬಗೆಗಾವುದತ್ಯಧಿಕ (ಲಕಿಚಿಂ. ೪೧-೨). (ನಾ). ೫. ಶೌರ್ಯ ; ಪರಾಕ್ರಮ ; ಸಾಮರ್ಥ್ಯ : ಪರಶುರಾಮನ ವಿಗಡವನು ನೆಱೆಯಱಿಯದಲ್ಲಿಗೆ ಸೊಗಸಿ ಮುತ್ತಲು ಮೇಘವನಿಲನ ಕಾದಿದಂತಾಯ್ತು (ಸಂಭಪ. ೨೬-೯೦). ೬. ವ್ಯತಿರಿಕ್ತತೆ ; ವಿರೋಧ : ಆರು ಯಿದಕ್ಕೆ ವಿಗಡ ಆಚರಿಸಿದರು ಅವರು ತನ್ನೆ ತಾಯಿಗಳ ವಾರಣಾಸಿಯಲಿ ಕೊನ್ನ ಪಾಪಕೆ ಹೋಹರು (ಎಕಿ.IX, ಮೊಡ್ಡಬಿ. ೫-೨೪ ; 1580). ೭. ಬಾಧೆ; ಕೋಟಳೆ : ಹಗೆಯನುರಗನ ಚಾರವನಿತೆಯನಗಡುಮಕ್ಕಳ . . . ಸೋರುತಿಹ ಮಾಳಿಗೆಯ ನಂಬಿದ ಮೂಢನಿಕರಕೆ ವಿಗಡ ತಪ್ಪದು ಕೆಲವು ದಿನಕೆ (ಅಕ್ಕಾಚ. ೨-೧೭). ೮. ಅತಿಶಯ ; ಆಧಿಕ್ಯ : ನೆಗೆವ ತಾರಾಕದಂಬಂ ಮೌಕ್ತಿಕಾಭರಣ ವಿಗಡದಿಂ ಬರ್ಪ ಕತ್ತಲೆದುಱುಂಬಂ ನಾರಿಯೆನೆ ಸಂಜೆ ಕಣ್ಗೆಸೆದುದು (ವಿಕೋಪಾ. ೭-೮೫). ೯. ವೀರ ; ಶೂರ; ಪರಾಕ್ರಮಿ: ಹಗಲುಕ್ಕೆದೀವಿಗೆಯ ಬರುದಿನವಿಗಡನಿವನಾರೆನಲು . . . ಕೌರವರಾಯನೈತಂದ (ಕುವ್ಯಾಅ. ೭-೨೬). ೧೦. ಉದ್ಧಟ; ದುಡುಕಿನ ಸ್ವಭಾವದವನು : ವಿಗಡನೀ ಕಲಿಭೀಮನೀ ಕೈದುಗಳನೀತಂಗೀಯದಿರಿ . . . ಎಂದು ಸುರರಿಗೆ ನುಡಿದನವನಿಶ (ಕುವ್ಯಾವಿ. ೧-೧೩). ೧೧. ದುರುಳನಾದವನು; ದುಷ್ಟ : ಸುಗುಣರ ಮನ್ನಿಸಿ ವಿಗಡರ ಮಗ್ಗಿಸಿ ಬಗೆಗೊಳೆ ಧರ್ಮವ (ಗಿತಗೋ. ೪೩-೩). [< ಸಂ. ವಿಕಟ]

ವಿಗಡತನ (ನಾ). ೧. ಪರಾಕ್ರಮ ; ಶೌರ್ಯ : ಯಾವಗಹುದಿದು ಹಿಂದೆ ಬಂದೆಸುವೀ ವಿಗಡತನ ನಿನಗೆ ಮೆಱೆವುದು ಕರ್ಣ (ಕುವ್ಯಾದ್ರೋ. ೬-೭೪). ೨. ದುರುಳತನ ; ದುಷ್ಟತನ : ಅಗಡು ಮಾಡಿದ ನಿಮ್ಮ ಮಕ್ಕಳ ವಿಗಡತನಕಂಜಿದರೊ ದುರಿತದ ಸೊಗಡಿಗಂಜಿದರೋ ಪೃಥಾಸುತರು (ಕುವ್ಯಾಸ. ೧೫-೪೭) ; ಜಗದೊಳಗೆ ಇನ್ನೊಂದು ಬಾರಿ ಮಹಪುರುಷರಂ ವಿಗಡತನದಿಂದಲತಿಕ್ರಮಿಸಿ ಕೊಲ್ಲದೊಲುಪೀ ಬಗೆಯಱಿತು ಶಿಕ್ಷಿಸೆನ್ನಂ (ತುರಂಗ. ೮೯-೧೧). [ವಿಗಡ + - ತನ]

ವಿಗಡವಿಕ್ರಮ (ನಾ). ಮಹಾಶೂರ ; ಬಹಳ ಪರಾಕ್ರಮಿ : ಹಗೆಯನಾದರೆ ಕುಂದೆ ಗುಣದಲಿ ವಿಗಡವಿಕ್ರಮ ವೀರದೈತ್ಯನ ಮಗ ಮಹಾಬಲ ಸಾಟು ಸೈರಿಸಿ (ಕೌಶಿರಾ. ೭೬-೧೯). [ವಿಗಡ + ವಿಕ್ರಮ]

ವಿಗಡವಿಗ್ರಹ (ನಾ). ಭೀಕರವಾದ ಕಾಳಗ ; ಉಗ್ರವಾದ ಯುದ್ಧ : ಅಗ್ಗಳೆಯನೆಚ್ಚನು ನರನ ಮೈಯಲಿ ತಳಿತವಂಬುಗಳೇನನೆಂಬೆನು ವಿಗಡವಿಗ್ರಹವ (ಕುವ್ಯಾದ್ರೋ. ೯-೫೫). [ವಿಗಡ + ವಿಗ್ರಹ]

ವಿಗಡಿಸು (ಕ್ರಿ). ೧. ಬಾಧೆಪಡಿಸು ; ಕೋಟಳೆಗೊಳಿಸು ; ಭಂಗಪಡಿಸು : ಪಂಚಾಗ್ನಿ ತನ್ನತಿವಿಗಡಿಸಲ್ ತಿಳಿದು ಕಾಮಿನಿಯೆ ನಿನಗೆ ನಾ ಸಿತಗಳನ ಬೇಡಿ ಪತಿಯಂ ಕೊಡಿಪೆನೆಂಬುಮೆಯ ಚರಣಾಂಬುಜಕ್ಕೆ ಶರಣು (ಲಕಿಚಿಂ. ೧೪-೫೭) ; ರಣವನದನೇನೆಂಬೆನೆ ಧಾರುಣಿಪತಿಯೆ ವಿಗ್ರಹದ ವಿಸ್ತಾರಣ ನಿಗುರ್ಗಣೆ ವಿಗಡಿಸಿತು ವಿಬುಧರ ವಿಡಾಯಿಗಳ (ಕುವ್ಯಾಅ. ೧೨-೨೩). ೨. ಅಸ್ಥಿರವಾಗು ; ಕ್ಷೋಭೆಗೆ ಒಳಗಾಗು : ಪ್ರಳಯಾರ್ಣವದೊಳೆದ್ದೆ ಜಗವಳಿದು ಕಳಗಿಳಿಯೆ ಕೂರ್ಮರೂಪಂ ಧರಿಸಿ ವಿಗಡಿಸಿದಜಾಂಡಮಂ ನಾವೆಯಂದದೆ ನೀನು ಶಿವನಾಜ್ಞೆಯಿಂದ ನಿಲಿಸಿ ಸೊಗಸನಿತ್ತೀ ಧರೆಗೆ ರಕ್ಷಕನೆನಿಸಿಕೊಂಡು ಬಗೆಯದೆ ಧರಾತಳವ ಕೊಲುವುದುಚಿತವೆ ಪೇಳು (ಲಕಿಚಿಂ. ೧೯-೧೬) ; ಮಗಳ ಮನ ವಿಗಡಿಸಿತು ನಾಲ್ವರು ಬೆಗಡುಗೊಳಿಸಿದರು (ನಳಚ. ೩-೬೫). ೩. ವಿರೋಧಿಸು ; ಪ್ರತಿಭಟಿಸು : ಮಹಾತ್ಮನನಂತರೂಪವನು ವಿಗಡಿಸಲು ಜಯವಹುದೆ (ಕುವ್ಯಾಧ್ರೋ. ೧-೨೧). 'ಬಿಗಡಿಸು' ಹೋ.

[ವಿಗಡ + - ಇಸ್ಸು]

ವಿಗಡೆ (ನಾ). ೧. ಸಾಮರ್ಥ್ಯವುಳ್ಳವಳು ; ಬಲಿಷ್ಠೆ : ಬಗೆಬಗೆಯ ಕೈದುಗಳ ವಿಗಡೆಯರ್ ಕಾಳಗಕೆ ಮುಂಕೊಳುತಿರ್ದರು (ಕೈಮಿಭಾ. ೧೬-೪). ೨. ದುರುಳೆ ; ದುಷ್ಟೆ : ನೀವು ಮಾನ್ಯರು ನಿಮ್ಮ ದಾಸಿ ಮಹಾವಿಗಡೆ (ಬಸಪು. ೫೫-೩೬) ; ಬಡಮನವಿಲ್ಲದೆ ಸಡಗರದೊಳಗಿಹ ವಿಗಡೆಯಾದರೆ ಇನ್ನ ನೆನೆಯೆ (ಕಪೂಚ. ೧೩-೪೬).

[ವಿಗಡ + - ಎ]

ವಿಗತ (ಗು). ೧. ಹೊರಟುಹೋದ ; ತೆರಳಿದ. ೨. ಅದೃಶ್ಯವಾದ ; ಇಲ್ಲವಾದ. ೩. ಅಗಲಿದ ; ಬೇರ್ಪಟ್ಟ. ೪. ಸತ್ತ ; ಮರಣಹೊಂದಿದ. ೫. ಇಲ್ಲದಿರುವ ; ರಹಿತವಾದ. ೬. ಕಳೆದುಹೋದ ; ನಷ್ಟವಾದ. (ನಾ). ೭. ಪಕ್ಷಿಗಳ ಹಾರಾಟ. [ಸಂ.]

ವಿಗತಕೃಪ (ನಾ). ಕರುಣೆಯಿಲ್ಲದವನು ; ನಿರ್ದಯನಾದವನು : ಇದಜೊಳಗಾನಿವನನಿಕ್ಕಿ ಕೋಪಮನಾಱಿಪ್ಪುದೆ ಪಂಥಮೆಂದು ಬಂದಂ ತದಗ್ರದೇಶಕ್ಕೆ ಕೋಣಪಂ ವಿಗತಕೃಪಂ (ಚಂದ್ರಪ್ರ. ೫-೪೨). [ಸಂ.]

ವಿಗತಜೀವಿತ (ನಾ). ಜೀವ ಹೋದವನು ; ಸತ್ತವನು : ರೌದ್ರಪರಿಣಾಮದಿಂ ವಿಗತಜೀವಿತನಾಗಿ (ಶಾಂತಿಪು. ೭-೬೧ ವ) ; ಕ್ರೂರತರವಿಷವಿಭೇದ್ಯಂ ಧಾರಿಣಿಯೊಳ್ ಬಿರ್ದು ವಿಗತಜೀವಿತನಾದಂ (ಪಂಚತಂ. ೨೬೯-೧೬). [ಸಂ.]

ವಿಗತನಿದ್ರೆ (ನಾ). ನಿದ್ದೆಯಿಂದ ಎದ್ದವಳು ; ಎಚ್ಚರಾದವಳು : ಮುನಿಕುಮಾರರೋದುವ ವೇದನಿನಾದದಿಂ ವಿಗತನಿದ್ರೆಯಾಗಿ ಪಾಂಡುರಾಜಂಗಮಲ್ಲಿಯ ಮುನಿಜನಂಗಳ್ಗಮಱಿಪಿದೊಡವರಾ ಕನಸುಗಳ್ಗೆ ಸಂತೋಷಂಬಟ್ಟು (ಪಂಪಭಾ. ೧-೧೪೦ ವ). [ಸಂ. ವಿಗತನಿದ್ರಾ]

ವಿಗತನಿಮೇಷ (ನಾ). ಎವೆ ಬಡಿಯದವನು ; ಕಣ್ಣು ತೆರೆದುಕೊಂಡೇ ಇರುವವನು : ಉತ್ಸೃಷ್ಟಸಕಲವ್ಯಾಪಾರನುಂ ವಿಗತನಿಮೇಷನುಮೆನಿಸಿ ಬರೆದ ನಂತೆಯುಂ ಕುಡರಿಸಿದನಂತೆಯುಂ . . . ಇರ್ದಂ (ಕಾದಂಪು. ೮೨೮). [ಸಂ.]

ವಿಗತಪಾಪ (ನಾ). ಪಾಪವಿಲ್ಲದವನು ; ಪಾಪರಹಿತನಾದವನು ; ಪರಮಾತ್ಮ : ಜಯ ಜಯ ಪರಮೇಶ್ವರ ಪರಮದೇವ . . . ಸರ್ವಜ್ಞ ಸರ್ವಹಿತ ವಿಗತಪಾಪ (ವರ್ಧಮಾ. ೧೪-೬). [ಸಂ.]

ವಿಗತಮರಣ (ನಾ). ಸಾವಿಲ್ಲದವನು ; ಅಮರ ; ದೇವತೆ : ಜಯಜಯ ಶಾಂತಿಕಿರಣ ಜಯಜಯ ವಿಗತಮರಣ ಜಯಜಯ ದುರಿತಹರಣ ಜಯ ಜಯತು ಜಯತು (ಪಚಕಾ. ೫-೬೯). [ಸಂ.]

ವಿಗತಮಳ (ನಾ). ದೋಷವಿಲ್ಲದುದು ; ನಿರ್ಮಲವಾದುದು : ವಿಗತಮಳಮುಪಾತ್ತಾರಾತಿ [ಸಾ] ರ್ಥಾರ್ಥವೀರಂ . . . ಸಾಗರಂಬೋಲ್ ಸೊಗಯಿಸಿ ಧರಣಿ[ಚಕ್ರಾಂಬ]ರಾಕ್ರಾಂತಮಕ್ಕುಂ (ಕವಿಗಾ. ೩-೨೧೬). [ಸಂ. ವಿಗತಮಲ]

ವಿಗತರೋಷ (ನಾ). ಕೋಪವಿಲ್ಲದವನು : ಉದ್ಭೂತದೋಷರಂ ವಿಗತರೋಷರಂ . . . ಮಲಧಾರಿದೇವರಂ ದೇವರೆಂದು ಬಿನ್ನಪ್ಪುದು ಜಗಂ (ಸುಖಮಾ. ೧-೨೦). [ಸಂ.]

ವಿಗತವಿಕಾರ (ಗು). ೧. ಯಾವ ಬದಲಾವಣೆಯನ್ನೂ ಹೊಂದದ; ನಿರಂತರವಾಗಿ ಇದ್ದ ರೂಪದಲ್ಲಿಯೆ ಇರುವ : ವಿಗತವಿಕಾರಾಕಾರಂ ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ (ಕವಿಕಾ. ೩-೧೫೭). (ನಾ). ೨. ಯಾವ ವಿಕಾರವನ್ನೂ ಹೊಂದದವನು ; ಸ್ಥಿರಸ್ವಭಾವದವನು : ವಿಗತವಿಕಾರ ನಚಲಗಮ್ಮನದ್ಯಯನಾತ್ಮ ನೋಡು (ಕವ್ಯಾಧೀ ೩-೪೩). [ಸಂ.]

ವಿಗತಾಂತರಾಯ (ನಾ). ವಿಘ್ನಗಳನ್ನು ನಿವಾರಿಸಿಕೊಂಡವನು ; ನಿರಾತಂಕನಾದವನು : ಉಗ್ರಸೇನಂ ಸಯಾದವಬ್ಯಂದಂ ವಿಗತಾಂತರಾಯನೆಸೆದಂ (ವಿಷ್ಣುಪು. ೫-೫-೧೩೫). [ಸಂ.]

ವಿಗತಾಭರಣ (ನಾ). ಆಭರಣಗಳನ್ನು ಕಳಚಿರುವಿಕೆ ; ನಿರಾಭರಣನಾಗಿರುವಿಕೆ : ಜಾತರೂಪಮಂಜುಳನೆಸೆದಂ . . . ವಿಗತಾಭರಣಪ್ರಧನಾಗಿ ನಿಶ್ಚಳಂ (ಪುಷ್ಪಪು. ೧೩-೧೦೬). [ಸಂ.]

ವಿಗತಾಭ್ಯುದಯ (ನಾ). ಏಳಿಗೆಯಿಲ್ಲದವನು ; ಅಭ್ಯುದಯಹೀನ : ಸುಯೋಧನನ್ಯಪತಿ ವಿಗತಾಭ್ಯುದಯನಾದನೆನುತ್ತ ಕರ್ಣಾದಿಗಳು ಕಳವಳಿಸೆ (ಕವ್ಯಾದ್ರೋ. ೧೦-೪೦). [ಸಂ.]

ವಿಗತಾರ್ತವೆ (ನಾ). ಮುಟ್ಟು ನಿಂತುಹೋದ ಹೆಂಗಸು : "ನಿಷ್ಕಳಾ, ವಿಗತಾರ್ತವಾ - ಹೊಲೆನಿಂತುಹೋದ ಮುದಿಕಿಯಂಥಾವಳ ಹೆಸರುಗಳು" (ಸಿದ್ಧಾಂತಿ. ೧೭೩). [ಸಂ. ವಿಗತಾರ್ತವಾ]

ವಿಗತಾಸು (ನಾ). ಜೀವ ಹೋದವನು ; ಸತ್ತವನು : ಲೋಕೋನ್ನತನಷ್ಟ ದಿವ್ಯಪುರುಷಂ ವಿಗತಾಸುವನೊಯ್ಯನಟ್ಟಲೆಂ ನಿನ್ನಮಾಂ (ಕಾದಂಪು. ೯೫೭) ; ವಿಜಿತನೋ ವಿಗತಾಸುವೋ ಧರ್ಮಜನ ಪದನೇನೆನುತ ಚಿಂತಾರಜನಿಯಲಿ ಕಂಗಟ್ಟುದಾ ಬಲ (ಕವ್ಯಾತ. ೩-೪೭). [ಸಂ.]

ವಿಗತಾಹಾರತ್ವ (ನಾ). [ಜೈನ] ಆಹಾರಸೇವನೆ ಮಾಡದಿರುವಿಕೆ ; ನಿರಾಹಾರದಿಂದಿರುವುದು ; ॥ಕೇವಲಜ್ಞಾನ ಉತ್ಪತ್ತಿಯಾದಾಗ ಉಂಟಾಗುವ ಹತ್ತು ಅತಿಶಯಗಳಲ್ಲಿ ಒಂದು : ಗಗನಗಮನಮುಂ ಉಪಸರ್ಗಾಭಾವಮುಂ ವಿಗತಾಹಾರತ್ವಮುಂ . . . ಅನಂತದರ್ಶನತ್ವಮುಮೆಂಬ ಘಾತಿಕ್ಷಯಮುಷ್ಟ ದಶಗುಣಂಗಳುಂ (ಚಾವುಂಪು. ೮೨). [ಸಂ.]

ವಿಗಲಿತ, ವಿಗಳಿತ (ಗು). ೧. ಜಿನುಗಿದ ; ಸೋರಿದ. ೨. ಕಳಚಿದ ; ಉದುರಿದ. ೩. ಕರಗಿದ ; ಅದೃಶ್ಯವಾದ. ೪. ಹೊರಟುಹೋದ ; ಕಳೆದುಹೋದ. ೫. ಚೆದರಿದ ; ಹರಡಿದ. ೬. ಸಡಿಲವಾದ ; ಶಿಥಿಲವಾದ. ೭ (ಕೂದಲಿನಂತೆ) ಬಿಚ್ಚಿದ ; ಅಸ್ತವ್ಯಸ್ತವಾದ. ೮. ಹೊಮ್ಮಿದ ; ಸೂಸಿದ : ತದೀಯ ಮುನೀಶ್ವರಮುಖವಿಗಲಿತವ್ಯದುವಾಕ್ಯರ ಗಂಭೀರಧ್ವನಿಯನಾಲಿಸಿ . . . ಜಾತಿಸ್ಮರನಾಗಿ (ಸುಖಮಾ. ೧೧-೭೭ ವ). ವಿಗಳಿತ : ೫. ಘನಗಾಂಡೀವವಿಗಳಿತ ವಿಶಿವಿಸಿರದ ವಹಿಗೆ ವಂಚಿಸದೆ ಲಾವಣಿಗೆಗೊಳಲಲಸಿ ಯಮನನು ಜೀವಿಗಳು ಜದರಾಯ್ತು (ಕವ್ಯಾಕ.೧೪-೨೮). ೮. ಕತೆಗೇಳ್ವನಶ್ರು ವಿಗಳಿತ ಕಮಲಲೋಚನಂ (ಶ್ರೀರಾಮಾ. ೧೬-೪೭೭). ೯. ಜಾರಿದ ; ಸರಿದ : ವಿಗತಾಲೋಕಂ ಶಿವಪದವಿಗಳಿತಮನಿಸಿದ ಜನಕ್ಕೆ . . . ನೀನಾದೆ ನಾಥ ಕಣ್ಣಿಂ ಗತಿಯುಂ (ಚಂದ್ರಪು. ೩-೬). [ಸಂ.]

ವಿಗಳನ (ನಾ). ರಸವು ಒಸರುವಿಕೆ ; ರಸಸ್ರಾವ : ಗಿಡುವಿನ ವಿಗಳನದಿಂದೊಕ್ಕುಡುಗದ ಸರಸೀಸರಿತ್ಸರ[ಪ್ರ]ಸರಂ ಕಾಲ್ದಿಡಿದು ಪರಿತಂದು ನೆರೆವುದು ಬಿಡದೆ ವನಾಂತರದೊಳೆಸೆವ ನವವಿಟಪಿಗಳೊಳ್ (ವರ್ಧಮಾ. ೧-೪೨). [ಸಂ. ವಿಗಲನ]

ವಿಗಳಿತ 'ವಿಗಲಿತ' ನೋ.

ವಿಗಳಿತಮಾಯ (ನಾ). ಮಾಯೆಯನ್ನು ಮೀರಿದವನು ; ಮಾಯಾತೀತ ; ನಿರ್ಮಾಯ : ಶರಣಸಮೇತಂ ವಿಗಳಿತಮಾಯಂ . . . ಶ್ರೀಕಂಠಂ ನಗಮಂ ಸಾರ್ದಂ ಸೊಗಯಿಂದಿರ್ದಂ (ಹಾಲಾಸ್ಯ. ೧-೧-೨೧ ರಗಳೆ). [ಸಂ. ವಿಗಲಿತಮಾಯ]

ವಿಗಳಿತತೋಕ (ನಾ). ದುಃಖವನ್ನು ಕಳೆದುಕೊಂಡ ವ್ಯಕ್ತಿ ; ಸಾಂತ್ವನ ಹೊಂದಿದ ವ್ಯಕ್ತಿ : ನೀವಸ್ತೋಕಪುಣ್ಯರ ತಿಳುಹಿ ವಿಗಳಿತಶೋಕರೆನಿಸುವುದಂಧನೃಪ ಗಾಂಧಾರಿದೇವಿಯಿತ (ಕವ್ಯಾಗ. ೧೦-೧೧). [ಸಂ. ವಿಗಲಿತಶೋಕ]

ವಿಗಲೆಗೆ 'ವಿಘಲೆಗೆ' ನೋ.

ವಿಗಾನ (ನಾ). ೧. ಅಬದ್ಧವಾದ ಗಾಯನ ; ಅಪಶ್ರುತಿಯ ಹಾಡುಗಾರಿಕೆ. ೨. ಬೈಗುಳು ; ನಿಂದೆ : "ವಿಗಾನಂ, ವಚನೀಯತಾ - ೨ ರಚ್ಚೆವಾಕ್" (ಹಲಾಯು. ೨೪-೧೫೬). ೩. ವಿರುದ್ಧವಾದ ಹೇಳಿಕೆ ; ದೋಷಪೂರ್ಣವಾದ ಮಾತು : ಪ್ರತಿಯೊಂದು ಉಪನಿಷತ್ತಿನಲ್ಲಿಯೂ ಸೃಷ್ಟಿಸಲ್ಪಡುವ ಆಕಾಶವಾದಿಗಳ ವಿಷಯದಲ್ಲಿ ಶ್ರಮವೇ ಮುಂತಾದ್ದರ ವಿಗಾನವಿದ್ದರೂ ಸ್ವಪ್ನಿನ ವಿಷಯದಲ್ಲಿ ಯಾವ ವಿಗಾನವೂ ಇಲ್ಲ (ಬ್ರಹ್ಮಭಾ. ೬೦೭). [ಸಂ.]

ವಿಗುಣ (ಗು). ಗುಣವಿಲ್ಲದ ; ಗುಣಶೂನ್ಯವಾದ : ಸುಗುಣ್ಯಕಪಕ್ಷ ರಾದವಿಳಸಜ್ಜನರೆನ್ನ ವಿಗುಣಕಾವ್ಯದೊಳರ್ಪ ದೋಷಂಗಳಂ ತಿದ್ದಿ (ವರ್ಧವ. ೧-೪). [ಸಂ.]

ವಿಗುಣ (ನಾ). ಅಶುಭ ; ವಿಘ್ನ : ಮಾಯದ ಕೈಯಲ್ಲಿ ಓಲೆ ಕಂಠವ ಕೊಟ್ಟರೆ ಲಗುನ ವಿಗುನವ ಬರೆಯಿತ್ತು ನೋಡಾ (ಅವಚಂ. ೯-೩೩). [< ಸಂ. ವಿಘ್ನ]

ವಿಗುರ್ಬಣೆ[1] 'ವಿಗುರ್ವಣೆ[1]' ನೋ.

ವಿಗುರ್ಬಣೆ[2] 'ವಿಗರ್ವಣೆ[2]' ನೋ.

ವಿಗುರ್ಬಿಸು 'ವಿಗುರ್ವಿಸು[1]' ನೋ.

ವಿಗುರ್ವಣಶಕ್ತಿ (ನಾ). ಮಾಯಾಶಕ್ತಿ ; ರೂಪಪರಾವರ್ತನ ಶಕ್ತಿ : ವಿಗುರ್ವಣಶಕ್ತಿಯವೋಲ್ ಅವಧಿಯಿಂ ಸೌಧರ್ಮ್ಯಶಾನಕಲ್ಪದ್ವಯದಾತದೇವರ್ ಸ್ವಕೀಯಧ್ವಜದಂಡಮಾದಿಯಾಗಿ ರತ್ನಪ್ರಭಾವನ್ಮಧಸ್ತನಭಾಗಂಬರಂ ಕಾಣ್ಬರ್ (ತತ್ತ್ವಪ್ರ. ೨೧೭). [< ಸಂ. ವಿಕುರ್ವಾಣಶಕ್ತಿ]

ವಿಗುರ್ವಣೆ[1], **ವಿಗುರ್ಬಣೆ**[1] (ನಾ). ೧. ಭೀಕರತೆ ; ರೌದ್ರತೆ : ಮೇಘಕಾಲದ ವಿಗುರ್ವಣೆಯಂ ಪಡೆದಂ ವಿಯಚ್ಚರಂ (ಪುಣ್ಯಾಸ್ರ. ೨-೩೮). ೨. ರಭಸ ; ವೇಗ : ಪದಹತಿಯಿಂ ನೆಲಂನ್ನಡುಗೆ . . . ಕರಾಭಿಘಾತದೆ ವಿಗುರ್ವ್ವಣೆಯ[ಂ] ಭಗಣಂ ಧರಾತಳಕ್ಕುದಿರೆ (ಸೌಂದ. XI-೫, ೧೦೩-೨; 1070). **ವಿಗುರ್ಬಣೆ**[1] : ೧. ಅವ ಯುಗದಲಿ ಕಂಡುದಿಲ್ಲಿಂತೀ ವಿಗುರ್ಬ[ಪಾಕಾ. ಗುರ್ವ, ದುರ್ವ, ಗೂರ್ಬ]ಣೆಯನು ಮಹಾಹವ ಕೋವಿದರೊಳು (ತೊರಾ. ೬-೪೦-೩೧). ೨. ಭಯಗೊಳಿಸುವಿಕೆ ; ಹೆದರಿಸುವಿಕೆ : ಅಂಜಲದೇಕೋ ಲೋಕವಿಗುರ್ಬಣೆಗೆ (ಬಸವ. ೬೯೯). ೪. ತೊಂದರೆ ; ಕ್ಲೇಶ : ಎನ್ನವನೆ ಸರ್ವಾಂಗಸೌಂದರ ನಿನ್ನ ಕಣ್ಣಿಂಗಹ ವಿಗುರ್ಬಣೆ [ಪಾಕಾ. ವಿಗುರ್ಬಗ]ಗೆಂತು ಸೈರಿಸುವೆ (ಬಸವ. ೧೫-೬೭). [ವಿಗುರ್ವಿಸು[1] + - ಅಣೆ[1]]

ವಿಗುರ್ವಣೆ[2], **ವಿಗುರ್ಬಣೆ**[2] (ನಾ). ರೂಪಪರಾವರ್ತನಶಕ್ತಿ ; ರೂಪಾಂತರಗೊಳಿಸುವ ಮಾಯಾಶಕ್ತಿ : ನಯನಮನೋಹರಂ ಮನುಜನಿರ್ಮಿತಮಲ್ಲದು . . . ಭೋಗಭೂಮಿಯ ಭವನಾಂಗಭೂಜದ ವಿಗುರ್ವಣೆ ಸಂಶಯಮೇಪುದು (ಪಾಪ್ರಪು. ೨-೭೫) ; ಹಗಲು ಕತ್ತಲೆ ಕವಿವಂತಾಯ್ತು ದುಷ್ಪಗೈವಗಳ ವಿಗುರ್ವಣೆಯಿಂದ (ಭರಚ. ೩೪-೪೮). **ವಿಗುರ್ಬಣೆ**[2] : ಬಳಿಕ್ಕಿನ ವಿಗುರ್ಬಣೆಗಳೆಂಬುದು ಮುನಿಯ ಗೊಜ್ಜಾಟದಿಂ ನಮಗೆ ಬಪ್ಪ ಕಜ್ಜದಲ್ಲ ಸಂಕಟವಿದಕ್ಕೆ ಹೆದಜದಿರ್ದಡೆ ಮುಂದೆ ಲೇಸುಂಟು (ಪಚಕಾ. ೬-೫೬). [ವಿಗುರ್ವಿಸು[2] + - ಅಣೆ[1]]

ವಿಗುರ್ವಿಸು[1], **ವಿಗುರ್ಬಿಸು** (ಕ್ರಿ). ೧. ಭಯಾನಕವಾಗು ; ಭೀಕರವಾಗು : ಅಗುರ್ವು ಪರ್ವೆ ವಿ[ಪಾಕಾ. ಬಿ]ಗುರ್ವಿಸಿದ ಬಿಲ್ಲಳಂ ಕಂಡು ಭಯಂಗೊಂಡು (ಪಂರಾಮಾ. ೫-೭೭ ವ) ; ನರ್ತಿಸುವ ಕಬಂಧದಿಂದೊಜೆವ ಲೋಹಿತಧಾರೆಗಳಿಂ ನಭಂ ವಿಗುರ್ವಿಸುವುದು (ಶಾಪಮಂ. ೭೬೫; ಎಕ. VII, ಶಿಕಾಂ.೨೪೨ ; 1180ನೋ). ೨. ಬೆದರಿಸು ; ಭಯಗೊಳಿಸು : ಲೋಕಭೀಕರತರಕಾಳಕೂಟದ ವಿಗುರ್ವಿಪ ಕೂಟವೆನಿಪ್ಪುದಾಂತ ದುರ್ದ್ಧರರಿಪುಸಂಕುಳಕ್ಕೆ ವಿಭು ಪೇಯಿಯ ಸಾಪಣೆಯಗ್ರವಿಕ್ರಮಂ (ಕೊಲ್ಹಾಶಾ. ೧೩-೧೫ ; 1180) ; ಅದಟು ಸಾಮಂತಸಂದೋಹಮಂ ವಿಗುರ್ವಿಸಿ ಭೇರಿಯಂ ಸೂಳ್ಪಿಸಿ ನಿಂದರೊಡ್ಡಿ (ಜ್ಞಾನಚಂ. ೧-೪೧). ೩. ಅಧಿಕವಾಗು ; ಅತಿಶಯವಾಗು : ಉರ್ವಿ

ಪರ್ವಿದುದೋರಂತೆ ಕರಂ ವಿಗುರ್ವಿಸಿ ತಮಿಸ್ರಾನೀಕಮಾ ಲೋಕಮಂ (ಶಾಂತೀಶ್ವ. ೧೧-೨೦). ೪. ಮೆರೆ ; ಪ್ರದರ್ಶಿಸು : ವೈರಿವರ್ಗದೊಳ್ ದೋರ್ವಲಮಂ ವಿಗುರ್ವಿಸಿ . . . ಪುತ್ರ ನೀಂ ಮುದದೆ ಮಾಡು ಮದೀಯಮನಪ್ರಮೋದಮಂ (ಶಾಂತೀಶ್ವ. ೪-೧೭೪). ವಿಗುರ್ಬಿಸು : ೪. ರಾಜ್ಯದೊಳುರ್ಬ್ಬಿಯೊಳ್ ವಿಗುರ್ಬಿಸಿದ ನಿದೇನಗುರ್ಬೊ ನಿಜದೋರ್‌ಬಳದುನ್ನತಿ ದುರ್ವಿನೀತನಂ (ಎಕ. VIII, ನಗರ. ೩೫-೨೯ ; 1077). ೫. ಉದ್ಧಟನಾಗು ; ಸೊಕ್ಕು : ಕಡುರ್ಬ್ಬಿನಿಂ ವಿಗುರ್ಬ್ಬಿಸುವರ ಮೀಸೆಯಂ ಸುಡುವ ತೇಜದಳುರ್ಕೆ (ಎಕ. XI, ದಾವಣ. ೮೫-೨೨; 1143). 'ಬಿಗುರ್$_1$', 'ಬಿಗುರ್ವು' ಪರಾ. [ವಿಗುರ್ವು$_2$ + - ಇಸ್ಸು. / ತೆಲು. ವಿಗುರ್ವಿಂಚು]

ವಿಗುರ್ವಿಸ್ಸು$_2$, ವಿಗೂರ್ವಿಸು (ಕ್ರಿ). ಮಾಯಾಶಕ್ತಿಯಿಂದ ನಿರ್ಮಿಸು ; ವಿಕುರ್ವಾಣಶಕ್ತಿಯಿಂದ ಸೃಷ್ಟಿಸು : ಮನೋಹರನೆಂಬ ಯಕ್ಷಂ . . . ತಣ್ಗಾಳಿಯಂ ವಿಗುರ್ವಿಸಿ ದೇಹಕ್ಕಾಪ್ಯಾಯನಂ ಮಾಡಿ (ವಡ್ಡಾರಾ. ೫೬-೧೨). ವಿಗೂರ್ವಿಸು : ವಿಗೂರ್ವಿಸುವ ಶಕ್ತಿಯನೊಡೆಯರುಂ . . . ಪ್ರತ್ಯಕ್ಷಮಾಗಱಿವರು (ಶ್ರಾವಕಾ. ೪೭-೩) ; ಪಲವು ರೂಪುಗಳನೊರ್ಮೊದಲೊಳೆ ವಿಗೂರ್ವಿಸುವುದು ಕಾಮರೂಪಿತ್ವಮೆಂಬುದು (ಶ್ರಾವಕಾ. ೯೪-೧೦). [< ಸಂ. ವಿಕುರ್ವಾಣ + - ಇಸ್ಸು$_3$]

ವಿಗೂರ್ವಿಸು 'ವಿಗುರ್ವಿಸ್ಸು$_2$' ನೋ.

ವಿಗ್ಗನಲೆ (ನಾ). ಒಂದು ಊರಿನ ಹೆಸರು : ಕರಡಿಕುಱುಕಿ ಮೇಲ ಕಾರಱೆಂ ವಿಗ್ಗನಲೆ ಕುನ್ದರ್ಕುಱುಕಿಯ ಮೂಡ್ಡೆ ಒಱ್ಪೆಂ (ಎಕ. X (S), ಚಿಕ್ಕಮ. ೬೬-೨೧; 850). [?]

ವಿಗ್ರ (ಗು). ೧. ಮೂಗಿಲ್ಲದ. (ನಾ). ೨. ಮೂಗಿಲ್ಲದವನು : "ವಿಗ್ರ ಎಂಬುದು ಮೂಗಿಲ್ಲದವಂ" (ಹಲಾಯು. ೧೦೦-೪೫೬). [ಸಂ.]

ವಿಗ್ರಹ (ನಾ). ೧. ಹಬ್ಬುಗೆ ; ವಿಸ್ತರಣ ; ವಿಸ್ತಾರ : "ವಿಸ್ತಾರಃ, ವಿಗ್ರಹಃ, ವ್ಯಾಸಃ – ೩. ಕಿರಿದಾಗಿರುವುದನ್ನು ಪಿರಿದಾಗಿ ಮಾಡುವಿಕೆ, ವಿಸ್ತಾರ, ವಿಶಾಲತೆ" (ಸಿದ್ಧಾಂತ. ೩೬೩). ೨. ಆಕಾರ ; ಆಕೃತಿ ; ರೂಪ : ಶ್ರೀಮಹಾಗುರು ಬಲೋದಗ್ರವಿಗ್ರಹಂ . . . ಪ್ರೇಮದಿಂದೆಮಗೆ ಭಕ್ತಿಯನಿಲೆಗೆ (ಸ್ಥಾಗ. ೧-೧). ೩. ದೇಹ ; ಶರೀರ : ಹಿಮಶಿಖರಿಶಿಖರಸಮವಿಗ್ರಹಸನಾಥನಂ ಕುಮುದದಳಧವಳರುಚಿರುಚಿರ ವೃಷನಾಥನಂ (ಆದಿಪು. ೭-೨೭ ರಗಳೆ) ; ವಿಗ್ರಹದೊಳಿದಿರಾಂತ ಕರಿಗಳ ವಿಗ್ರಹಂಗಳು ಕೆಡೆಯೆ ಕಾದಿ ಸಮಗ್ರಬಲ ಜೋದಾಳಿ ಕೊಂಡುದು ಸುರರ ಕೋಟೆಗಳ (ಕುಮಾರಪಾ. ೪-೯೦). ೪. ಪ್ರತಿಮೆ ; ಮೂರ್ತಿ : ವಿಗ್ರಹಗಳ ನಿರ್ಮಾಣಕೌಶಲ್ಯವನ್ನಂತೂ ವರ್ಣಿಸಲು ಅಸಾಧ್ಯ (ಮೈಮಾಸ್ತು. ೬೧) ; ಈ ಶಿಲ್ಪಶಾಸ್ತ್ರಗಳು . . . ವಿಗ್ರಹ ಹೇಗಿದ್ದರೆ ಸುಂದರ, ಹೇಗಿದ್ದರೆ ಸುಂದರವಲ್ಲ - ಎಂಬ ಎರಡು ದೃಷ್ಟಿಗಳನ್ನು ಮಂಡಿಸುತ್ತವೆ (ಸೌಂದಸ. ೧೨೫). ೫. ಜಗಳ ; ಕಲಹ : 'ವಿಗ್ರಹಿಸು' ಪರಾ. ೬. ಕಾಳಗ ; ಯುದ್ಧ : ಅಹಿತರ್ ಸಂಧಿಯುಮಂ ವಿಗ್ರಹಮುಮನಾತನೊಡರ್ಚರ್ (ಶಾಂತಿಪು. ೧೦ ೧೧೪) ; ಪೊಲ್ಲದು ದುರಾಗ್ರಹಮಾತನೊಳಾಗ ವಿಗ್ರಹಂ (ಪಂಚಾಮೃ. ೧೧-೨). ೭. ಭಾಗ ; ಅಂಶ ; ವಿಭಾಗ. ೮. ಆಕಾಶ ; ಗಗನ. ೯. ಉದಾರಗುಣ ; ಔದಾರ್ಯ : "ವಿಸ್ತರಂ ಕಾಳಗಮತ್ಯುದಾರ ಗಗನಾಂಗಣ ಮೆಂಬಿವು ವಿಗ್ರಹಾಹ್ವಯಂ" (ನಾನಾರ. ೯೯). ೧೦. [ವ್ಯಾಕ] (ಸಮಾಸ ಮೊದಲಾದುವುಗಳ ಘಟಕಗಳನ್ನು) ವಿಭಜಿಸುವಿಕೆ ; ವಿಂಗಡಿಸಿ ಇಡುವಿಕೆ : 'ವಿಗ್ರಹವಾಕ್ಯ' ಪರಾ. [ಸಂ.]

ವಿಗ್ರಹಂಗೆಯ್ (ಕ್ರಿ). ಕಾಳಗಮಾಡು ; ಯುದ್ಧಮಾಡು : ಅಗ್ರದುಭಯಬಲಂ ವಾಗ್ರೋಗ್ರವಿಗ್ರಹಂಗೆಯ್ಯುತಿರೆ (ಹಮ್ಮೀರ.೬-೪೦ ವ). [ವಿಗ್ರಹ + ಕೆಯ್$_1$]

ವಿಗ್ರಹಕರಾಳ (ನಾ). ೧. ವಿಕಾರವಾದ ರೂಪವುಳ್ಳವನು ; ಕುರೂಪಿ. ೨. ಯುದ್ಧದಲ್ಲಿ ಭೀಕರನಾದವನು. ೧, ೨: ಆ ನೃಪಂ . . . ಸಪ್ತಾಂಗಸಂಗಿಯಾಗಿಯುಂ ಸಪ್ತಾಂಗಸಂಗಿಯಲ್ತು ವಿಗ್ರಹಕರಾಳನಾಗಿಯುಂ ವಿಗ್ರಹಕರಾಳನಲ್ತು (ಪುಷ್ಪಪು. ೯-೩೯ ವ). [ಸಂ. ವಿಗ್ರಹಕರಾಲ]

ವಿಗ್ರಹಭಂಜಕ (ನಾ). ಪ್ರತಿಮೆಗಳನ್ನು ಭಂಗಿಸುವವನು ; ಮೂರ್ತಿಭಂಜಕ : ಸೂರ್ಯದೇವತೆಯ ಪ್ರತಿಮೆಯನ್ನು ವಿಗ್ರಹಭಂಜಕರು ಕತ್ತರಿಸಲಾಗಿ ಮತ್ತೆ ಅದರ ಕೈಗಳನ್ನು ಬಂಗಾರದಲ್ಲಿ ಮಾಡಿಟ್ಟರು (ಭಾರದ. ೫೧೦). [ಸಂ.]

ವಿಗ್ರಹಲೀಲೆ (ನಾ). ೧. ಆಕೃತಿಯ ಸೌಂದರ್ಯ ; ರೂಪದ ಬೆಡಗು. ೨. ಯುದ್ಧಕ್ರೀಡೆ ; ರಣಕೇಳಿ. ೧, ೨ : ಬಾಲಾಶೋಕಂ ವಿಗ್ರಹಲೀಲೆ ರಜೋವಿಕೃತಿ . . . ಇಲ್ಲ ಬನದೊಳಲ್ಲದೆ ಜನದೊಳ್ (ಪುಷ್ಪಪು. ೨-೨೮). [ಸಂ. ವಿಗ್ರಹಲೀಲಾ]

ವಿಗ್ರಹವಾಕ್ಯ (ನಾ). [ವ್ಯಾಕ] ಸಮಾಸದಲ್ಲಿ ಘಟಕಾವಯವಗಳನ್ನು ವಿವರಿಸುವ ಮಾತುಗಳ ಗುಂಪು ; ಸಮಾಸದ ಅರ್ಥವನ್ನು ಬಿಡಿಸಿ ಹೇಳುವ ವಾಕ್ಯ : ಸಮಾಸಶಬ್ದದಲ್ಲಿ ಸೇರಿಯವ ಪ್ರಕೃತಿಗಳಿಗೆ ಅರ್ಥದಲ್ಲಿ ಪರಸ್ಪರ ಸಂಬಂಧವಿರುತ್ತದೆ. ಆ ಸಂಬಂಧವನ್ನು ವಿವರಿಸಿ ಹೇಳುವುದಕ್ಕೆ ವಿಗ್ರಹವಾಕ್ಯ ಎಂದು ಹೆಸರಿದೆ (ಕೃಸಿದಿ. ೨೦); ಸಮಾಸದ ಅರ್ಥವನ್ನು ಬಿಡಿಸಿ ಹೇಳುವ ಮಾತುಗಳ ಗುಂಪಿಗೆ 'ವಿಗ್ರಹವಾಕ್ಯ'ವೆಂದು ಹೆಸರು (ಮಧ್ಯಮ. ೧೪೧). [ಸಂ.]

ವಿಗ್ರಹಾರಾಧನೆ (ನಾ). ದೈವತ್ವವನ್ನು ಆರೋಪಿಸಿದ ಪ್ರತಿಮೆಗಳ ಆರಾಧನೆ ; ಮೂರ್ತಿಪೂಜೆ : ವಿಗ್ರಹಗಳಲ್ಲಿ ಅನುಪ್ರವೇಶವೂ ಆರಾಧಕರಿಗೆ ಅನುಗ್ರಹವೂ ಸಂಭವಿಸುವುದೆಂದು ವಿಗ್ರಹಾರಾಧನೆ ಮುಖ್ಯವಾಗಿ ಅನುಷ್ಠಾನಕ್ಕೆ ಬಂದಿರುತ್ತದೆ (ಹಿಂದೂಸಾ. ೭೨). [ಸಂ. ವಿಗ್ರಹಾರಾಧನಾ]

ವಿಗ್ರಹಿಸು (ಕ್ರಿ). ೧. ಜಗಳವಾಡಿಸು; ಘರ್ಷಣೆಯುಂಟಾಗುವಂತೆ ಮಾಡು : ಮಂದಿರದಲಾಟದಲಿ ಜೀವರ ವೃಂದವನು ವಿಗ್ರಹಿಸಿ ಕಾಡುವವಂದಿರನು ಮನುಕುಳಿಗಳಲಿ ಹೊಗೆಯಿಂದ ಕೊಲಿಸುವರು (ನಿಭಾಗ. ೫-೧೧-೩೯). ೨. ಭಾಗಮಾಡು ; ಸೀಳು ; ಹೋಳುಮಾಡು : ಅಂಬಿಕಾಸತಿ ವಿಗ್ರಹಿಸಿ ಹಸ್ತದಲಿ ತಿರುಹಿಟ್ಟಳು ರಸಾತಳಕೆ (ಕೆಟೆಮಾ. ೩-೨೫). [ವಿಗ್ರಹ + - ಇಸ್ಸು$_3$]

ವಿಘಟ (ನಾ). ಒಡೆದವನು ; ಭೇದಿಸಿದವನು : ನೂರ್ವರೊಳೊರ್ವನಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣವಯಸ್ಕನಾಗಿ ಘೃತಘಟವಿಘಟನುಮಾಗಿ ಪುಟ್ಟುವುದುಂ (ಪಂಪಭಾ. ೧-೧೩೧ ವ). [ಸಂ.]

ವಿಘಟನ (ನಾ). ೧. ಒಡೆಯುವುದು : ಇಂದ್ರನಟ್ಟಿದಂ ನಿನಗಿದಱ ಪೆಸರ್ ದೇವದತ್ತಮೆಂಬುದು ನಿನಗಭ್ಯುದಯಕರಂ ಶಂಖಂ ರಿಪುಹೃದಯಕವಾಟಪುಟವಿಘಟನಂ ನೋಡರಿಗಾ (ಪಂಪಭಾ.೬-೪). ೨. ವಿಭಜನೆ ; ವಿಂಗಡಣೆ : ಒಬ್ಬನು ಬಲ್ಲನಗ್ಗದ ಧರ್ಮಮುದ್ರಾಘಟನವಿಘಟನವ (ಕುಮಾಅ. ೧೫-೬). ೩. ನಾಶ; ಅಳಿವು : ದುರಿತತಿಮಿರವಿಘಟನಪಟುವೆನಿಪ ವಿಮಲಕೇವಲಜ್ಞಾನಭಾನೂದಯಮಾಗೆ (ಆದಿಪು. ೭-೧೩ ವ) ; ಮುನಿಪದನಖದೀಪ್ತಿಶರಚ್ಛಂದ್ರಿಕೆ . . . ಮಾಡುಗಘತಮೋ ವಿಘಟನಮಂ (ಮಲ್ಲಿಪು. ೧-೧೨). ೪. ವಿಸರ್ಜನೆ ; ಮುಕ್ತಾಯ : ಆ ರೀತಿ ನಡೆದ ಪುನಸ್ಸಮಾಯೋಜನವು ತತ್ಕಾಲದಲ್ಲಿರುವ ಲೋಕಸಭೆಯ ವಿಘಟನವಾಗುವವರೆಗೂ ಲೋಕಸಭೆಯಲ್ಲಿಯ ಪ್ರತಿನಿಧಿತ್ವದ ಮೇಲೆ ಪ್ರಭಾವವುಳ್ಳುದಾಗಿರತಕ್ಕುದಲ್ಲ (ಭಾಧಾಸ. ೪೧). [ಸಂ.]

ವಿಘಟಿತ (ಗು). ೧. ಒಡೆದ ; ಸೀಳಿದ ; ಹೋಳುಮಾಡಿದ : ಸ್ವಕೀಯ ಪರಿಧಾವನವೇಗವಿಘಟಿತವೈರಿಬಾಲಶಕಟನೆಂಬ ಶಕಟನುಮಂ . . . ಕರೆದು (ಜಡಿವಿ. ೩-೨೨ ವ). (ನಾ). ೨. [ಕಾಮಶಾ] ಚುಂಬನದ ಹನ್ನೆರಡು ಪ್ರಕಾರಗಳಲ್ಲಿ ಒಂದು : ಬರೆತೆಗೆದೋಪಳ ತುEಕತಿಯಂ ಕರಶಾಖೆಗಳಿಂದ ಪಿಡಿದು ನಾಲಗೆಗೊನೆಯಿಂ ಪರಿಮರ್ದಿಸಿ ಚುಂಬನಮಂ ನರನಿರದುಜ್ಜುಗಿಸೆ ವಿಘಟಿತಂ ತಾನೆನಿಕುಂ (ಮನ್ಮಥವಿ. ೧೨-೬). [ಸಂ.]

ವಿಘಟಿಸು (ಕ್ರಿ). ೧. ಮುರಿ ; ಸೀಳು ; ಭಂಜಿಸು. ೨. ಅಗಲಿಸು ; ಬೇರ್ಪಡಿಸು. ೧, ೨ : ಆ ರಾಜಸುತಂ ಕೀರ್ತಿಸುಧಾರಸದಿಂ ತಂಪುವಡೆದು ಪರಿಪೂರ್ಣಕಳಾಧಾರಂ ಸಕಳೇಂದುರಥಂ ವೈರಿಮನೋರಥರಥಾಂಗಮಂ ವಿಘಟಿಸಿದಂ (ಪಂರಾಮಾ. ೨-೬೫). ೩. ಬೇರ್ಪಡು ; ಅಗಲು : ಆ ಮಹಾತ್ಮನ ಆತ್ಮೀಯಸಾಂಸಾರಿಕಮನೋರಥಂಗಳೊಡನೆ ರಥಾಂಗಂಗಳ್ ವಿಘಟಿಸೆಯುಂ (ಚಂದ್ರಪ್ರ. ೨-೪೬ ವ). ೪. ಬೇರೆಯಾಗು ; ವ್ಯತ್ಯಾಸವಾಗು : ತಾಳಮೇಳದ ಗತಿಯ ಗಮಕದ ಹೀಲಣೆಯ ಕಾಲಾಟ ವಿಘಟಿಸಿ ಚಾಳಿಯಲಿ ತಪ್ಪಿಬ್ಬುವೊಳುತಲಿರ್ದಳಾ ಮಾಯೆ (ಪ್ರಭುಲಿಂ. ೭-೨೬). ೫. ಪ್ರತಿಭಟಿಸು ; ಸ್ಪರ್ಧಿಸು : ವೈರಿಗಜಘಟಾವಿಘಟನನೊಳ್ ವಿಘಟಿಸಿ ಬಿಲ್ಗಲ್ತು (ಪಂಪಭಾ. ೨-೫೭ ವ). [ವಿಘಟನ + - ಇಸ್ಸು$_3$]

ವಿಘನಿಸು (ಕ್ರಿ). ಗೌರವಿಸು ; ಮಾನ್ಯಮಾಡು ; ಮನ್ನಿಸು (?) : ಕಾಣ್ಕೆಗೊಟ್ಟಾ ಗುರುಜಘನೆ ಕೈಮುಗಿಯೆ ಕಾಣಿಕೆಯ ವಿಘನಿಸಿ ಕೈಕೊಳುತಾಕೆಗೆ ಬನದಕಾ ಪ್ರಘಟಿತಾನಂದ ಕೈಮುಗಿದ (ಭರಚ. ೪೨-೪೧). [ವಿಘನ್ಯ + - ಇಸು]

ವಿಘಸ (ನಾ). ೧. ಅರ್ಧಂಬರ್ಧ ಜಗಿದ ತುತ್ತು. ೨. ಯಜ್ಞಾಹುತಿ, ನೈವೇದ್ಯಗಳ ಶೇಷ. ೩. ಊಟಮಾಡಿ ಉಳಿದ ಆಹಾರ : "ಭೋಜನಕ್ಕಾಗಿ ಮಿಕ್ಕುದು ವಿಘಸಮಕ್ಕುಂ" (ಮಂಗರಾ. ೬೫-೭). [ಸಂ.]

ವಿಘಸಾಶಿ (ನಾ). ಯಜ್ಞಶೇಷವನ್ನು ಸೇವಿಸುವವನು : ವಿಘಸಾಶಿಗಳಾದ ಮನುಜೋತ್ತಮರನೆ ಅನುಸರಿಸಿ ಆಂ ಸನ್ಮತಿಗೆಯ್ವೆನಲ್ಲದೆ ಪೆರತೊರ್ವರಂ ನುತಿಗೆಯ್ವುದೆನಗೆ ಲೇಶಮುಂ ಸಹ್ಯಮಾಗಿರದು (ಭಾರಕಾಂ. ೧೧-೩೨).

[< ಸಂ. ವಿಘಸಾಶಿನ್]

ವಿಘಳಿಗೆ 'ವಿಘಟಿಗೆ' ನೋ.

ವಿಘಟಿಗೆ, ವಿಗಟಿಗೆ, ವಿಘಳಿಗೆ (ನಾ). ಒಂದು ಕಾಲಪ್ರಮಾಣ ; ಗಳಿಗೆಯಲ್ಲಿ ಅರುವತ್ತನೆಯ ಒಂದು ಭಾಗ ; ಇಪ್ಪತ್ತುನಾಲ್ಕು ಸೆಕೆಂಡುಗಳಷ್ಟು ಕಾಲ : "ವಿಘಟಿಗೆ . . . ಅಱುವತ್ತು ಪುಟ್ಪರಲು ಘಟಿಗೆಯೊಂದಕ್ಕುಂ" (ಮಂಗರಾ. ೧೯-೪). ವಿಗಟಿಗೆ : ಮೂವತ್ತು ಗಳಿಗೆ ವಿಗಟಿಗೆಯೊ[ಪಾಠಾಂ.ವಿಘ್ಯೊ]ಳಾವುದು ಮಜಿ ಪುಟ್ಪಿತದಱ ಗಲಿಗೆಯ ವರಿಸಂ (ಅಶ್ವಶಾ. ೫-೨೯). ವಿಘಳಿಗೆ : ಚಟುಕು ಮೂನ್ನೂಱುವತ್ತು ಕೂಡಿದಡೆ ಒಂದು ವಿಘಳಿಗೆ (ಅವಚಂ. ೧೪೨-೬೫೪) ; ಒಂದು ಲಕ್ಷದ ಮೇಲೆ ತೊಂಬತ್ತೊಂದು ಸಾವಿರಜಂಗಮಕ್ಕಿಂದಂದು ಮಾಡಿದ ಪದಪದಾರ್ಥಾವಳಿಗಳೆಲ್ಲವನು ಒಂದು ವಿಘಳಿಗೆಯೊಳಗೆ ಸವೆಯಲು ಕುಂದದೇಗುವೆಮ (ಬಸವ. ೯-೧೬).

[< ಸಂ. ವಿಘಟಿಕಾ]

ವಿಘಾತ (ನಾ). ೧. ನಾಶ ; ಧ್ವಂಸ : 'ವಿಘಾತಿಸು' ಪರಾ. ೨. ಕೊಲೆ ; ವಧೆ. ೩. ನಿರೋಧ ; ವಿಘ್ನ ; ಅಡ್ಡಿ : ದೇವೇಂದ್ರಂ . . . ತಪೋವಿಘಾತಂ ಮಾಡಿಮೆಂದು ತನ್ನ ನಚ್ಚನಚ್ಚರಸಿಯರುಮನಾಱುಂ ಋತುಗಳುಮಂ ಗಂಧರ್ವರುಮಂ ಕಾಮದೇವನಂ ದಂಡನಾಯಕಂ ಮಾಡಿ ವೇಱ್ಗುಗಳ್ (ಪಂಪಭಾ. ೬-೪೦ ವ). ೪. ವಿಟು ; ಹೊಡೆತ ; ಪೆಟ್ಟು : ಈತನುಱುಬಿಗೆ ಬೆದಱಿತುರುಸಂಘಾತದಲಿ ಹೆಬ್ಬಂದಿಯೊಂದು ವಿಘಾತದಲಿ ಹಾಯ್ದುದು ಕಿರಾತವ್ರಜವನೊಡದುಳಿದು (ಕುಮಾಅ. ೧೩-೩೨); ತನ್ನ ಸ್ಥಾನವ ಕಾದುಕೊಂಡುಯಿರುವಲ್ಲಿ ಅದಕ್ಕೆ ವಿಘಾತವ ಮಾಡಿದರೆ ಕಬ್ಬುವದು (ವಿಚಿಚಿ ೩-೫). ೫. ಬಿಟ್ಟುಬಿಡುವುದು ; ತ್ಯಾಗ. [ಸಂ.]

ವಿಘಾತಕ (ನಾ). ೧. ಕೊಲ್ಲುವವನು ; ನಾಶಮಾಡುವವನು. ೨. ಬಾಧಕ ವಾದುದು ; ವಿಘ್ನಕಾರಿಯಾದುದು. [ಸಂ.]

ವಿಘಾತಿ$_1$ (ನಾ). ನಾಶಪಡಿಸುವವನು ; ನಾಶಮಾಡುವವನು : ಶಾಂತಿನಾಥಂ ಮಿಥ್ಯಾಡಂಬರವಿಘಾತಿ ಘಾತಿಕದಂಬತರುಗಹನದಹನನೆನೆ ನೆಗಳ್ದಜರಂ (ಶಾಂತಿಪು. ೧೨-೨೬). [ಸಂ. ವಿಘಾತಿನ್]

ವಿಘಾತಿ$_2$ (ನಾ). ೧. ಅಳಿವು ; ನಾಶ : ಈ ತಳೋದರಿಯಿಂದ ಕುಲಕೆ ವಿಘಾತಿ ತಪ್ಪದು (ಕಾಶಿಕಾ. ೨೩-೧೨). ೨. ಕೇಡು ; ಕೆಡುಕು ; ಹಾನಿ : ಪುರುಷಾರ್ಥವನು ತಮಗೆ ಮಾಡಿದವರುಗಳಿಗೆ ವಿಘಾತಿಯ ಹೂಡಿದವದಿರು ನರಕದೊಳಗೋಲಾಡ ದಿಹರೇ (ಕುವ್ಯಾಭಾ. ೩-೧೨೨); ನೋಡಿದೆ ಕುಂತೀಕುಮಾರ ತಾಮ್ರಧ್ವಜಂ ಮಾಡಿದ ವಿಘಾತಿಯಂ ನಮ್ಮೆಲ್ಲರಂ ಧುರದೊಳೀಡಿಱಿದುರುಳ್ಚಿ ಹಯಮಂ ಕೊಂಡು ರತ್ನಪುರಿಗೈದಿದಂ (ಧ್ವಮಿಭಾ. ೨೬-೨). ೩. ಹಗೆತನ ; ವಿರೋಧ ; ವೈರ : ಭೀಮಾರ್ಜುನರ ಕೂಡೆ ವಿಘಾತಿ ಕೈಯೊಡನುಚಿತವೇ ಕೆಡೆನುಡಿವುದೀ ಲೋಕ (ಕುವ್ಯಾಅ. ೨೧-೫೦) ; ಮಾಡಿದ ವಿಘಾತಿಯಂ ಮಱೆದು ಸುತನಂ ಕೂಡಿಕೊಂಡು ನೃಪನಧ್ವರಕೆ ಪೋಪಮಟ್ಟು ಬಂದು ಕಾಂಬುದು ಕುಂತಿದೇವಿ ಪಾಂಚಾಲತನುಜೆಯರ (ಧ್ವಮಿಭಾ. ೬೨-೫೬). ೪. ಹೊಡೆತ; ಪ್ರಹಾರ : ಹಡಗು ಜಲಧಿಯೊಳೋಡಿ ಗಿರಿಗಳನೆಡಹಿ ನುಗ್ಗಾದಂತೆ ಸುಭಟರ ಗಡಣ ಗಜವನು ತಾಗಿ ತಾಗಿ ವಿಘಾತಿಯಲಿ ನೊಂದು (ಕುವ್ಯಾಉದ್ಯೋ ೬-೨೮). [ಸಂ.]

ವಿಘಾತಿಸು (ಕ್ರಿ). ಧ್ವಂಸಮಾಡು ; ನಾಶಗೊಳಿಸು : ಅತಿರಥರುರವಣೆಯ ವದಹತಿಯ ಧೂಳಿಯ ಮಬ್ಬನುಬ್ಬರದ ಧರಧುರವದೊಂದೆಸೆ ಪದಾತಿಯ ಹೊರಳಿಗಳದೊಂದೆಸೆ ವಿಘಾತಿಸಿತರಿಭಟನನು (ಕುವ್ಯಾಕ. ೧೧-೩೬).

[ವಿಘಾತ + - ಇಸು]

ವಿಘೂರ್ಣನ (ನಾ). ೧. ಹುಯ್ದಾಟ , ಕ್ಷೋಭೆ ; ಅಲ್ಲೋಲಕಲ್ಲೋಲ : ಮುಳಿಸು ವಿಘೂರ್ಣನಂ ತಿಳಿವುದಂಬು . . . ಅಕ್ಷಿಕಾಂತಿ ಮಿಂಬೊಳಪೆನೆ ಮೇರೆದಪ್ಪಿದ ರತಾಮೃತವಾರ್ಧಿಯಿನೀಸಿ ಮೂಡುತುಂ ಮಾಬುಗುತುಮಿರ್ಪರ್ (ಶಾಂಪು. ೬-೧೨೦). ೨. ಚಕ್ರಾಕಾರವಾಗಿ ಸುತ್ತುವಿಕೆ, – ತಿರುಗುವಿಕೆ. ೩. ಆಧಿಕ್ಯ ; ಅತಿಶಯ : 'ವಿಘೂರ್ಣಿಸು' ಪರಾ. [ಸಂ.]

ವಿಘೂರ್ಣಿಸು (ಕ್ರಿ). ಅತ್ಯಧಿಕವಾಗು : ಗೋತ್ರನಗಂ ಪಿಳಿಗಿತ್ತೊ ಸಾಗರಂ ತಳರ್ದುದೊ ಮೇರೆಯಿಂದಮುಬ್ಬಿದಂದಿನಿತದ್ಭುತಮಾದ ನಾದಮಗ್ಗಳಿಸದೆನಲ್ ವಿಘೂರ್ಣಿಸಿದು ರ್ದರ್ಬಲದೊಳ್ ಸಮರಾನಕಸ್ವನಂ (ಪಂಪಾಮಾ. ೧೩-೩೫). [ವಿಘೂರ್ಣನ + - ಇಸು]

ವಿಘ್ನ (ನಾ). ಅಡ್ಡಿ ; ತೊಡರು ; ಪ್ರತಿಬುಧ : ತ್ರಿವಿಧವಿಘ್ನಂಗಳಿಗೆ ಪರಿಹಾರವನು ಕೇಳ್ (ಗಗತಾ. ೧೩-೧೬). [ಸಂ.]

ವಿಘ್ನರಾಜ (ನಾ). ವಿಘ್ನಗಳನ್ನು ನಿರ್ಬಂಧಿಸುವವನು ; ಗಣೇಶ : "ವಿಘ್ನರಾಜಂ ವಿನಾಯಕಂ . . . ಲಂಬೋದರನೆನಿಕ್ಕುಂ" (ಮಂಗರಾ. ೫-೧೬). [ಸಂ.]

ವಿಘ್ನಹ (ಗು). ಅಡ್ಡಿಗಳನ್ನು ನಾಶಮಾಡುವ : ಜಂಗಮವ ತಣಿಪಿ ಶಿವಸಿದ್ಧ ವಿಘ್ನಹಲಗ್ಗವೆಂದು ಓಂ ಪೂರ್ಣವೆನಲು (ಸಿದ್ಧರಾ. ೯-೭೭). [ಸಂ. ವಿಘ್ನಹನ್]

ವಿಘ್ನೇಶ (ನಾ). = ವಿಘ್ನರಾಜ : ಈಗೆ ನಮಗಿಷ್ಟಾರ್ಥವನು ನಿರ್ವಿಘ್ನದಾಯಕವ . . . ಕಾರುಣ್ಯನಿಧಿ ವಿಘ್ನೇಶನೊಲವಿನಲಿ (ವಿಭಾಗ. ೧-೧-೩). [ಸಂ.]

ವಿಘ್ನೇಶ್ವರ (ನಾ). ೧. = ವಿಘ್ನರಾಜ : ನಿರ್ವಿಘ್ನವಾಗಿ ಸತ್ಸಾಧನೆ ನಡೆಯುವುದಕ್ಕೆ ವಿಘ್ನೇಶ್ವರನ ಪ್ರಾರ್ಥನೆಯು ಆವಶ್ಯಕ (ಹರಾಶಾ. ೧೩೦೦ ಪುಟ). ೨. ಒಂದು ಬಗೆಯ ಮಹಾಮಂತ್ರ : ವಿಘ್ನೇಶ್ವರ ವಿಶಾಲ . . . ಭೈರವ್ಯಾದಿ ಮಹಾಮಂತ್ರಂಗಳಂ . . . ಬೇಱೆ ಬೇಱೆ ವಿವೇಚಿಸಿ ನೋಡಿ (ವಿವೇ. ೧೧). [ಸಂ.]

ವಿಘ್ನೇಶ್ವರಾಗಮ (ನಾ). ಲಲಿತಾಗಮದ ನಾಲ್ಕು ಭೇದಗಳಲ್ಲೊಂದು : ಲಲಿತ ಲಲಿತೋತ್ತರ ಕೌಮಾರತಂತ್ರ ವಿಘ್ನೇಶ್ವರಾಗಮವೆಂದು ಲಲಿತಾಗಮದ ನಾಲ್ಕು ಭೇದಂಗಳು (ವಿವೇ. ೭೧). [ಸಂ.]

ವಿಚಕಿಲ, ವಿಚಕಿಳ (ನಾ). ೧. ಒಂದು ಬಗೆಯ ಮಲ್ಲಿಗೆ : ಮುಕ್ತಾಮಾಲಿಕೆಯಂ ನವವಿಚಕಿಳಮಾಲಿಕೆಗೆತ್ತಿಳಿಸಿ ಸುಲಿಪುವಳಿಕಳಭಂಗಳ್ (ಪಂಪಾಮಾ. ೫-೧೧೬); ವನಪಾಲಂ ಕಾಣ್ಕೆಗೈದಂ ವಿಚಕಿಲದಲರಂ (ರಾಜಶೇ. ೧೦-೨). ೨. ಒಂದು ಬಗೆಯ ಮರ ; ಮದನವೃಕ್ಷ. ವಿಚಕಿಳ : ೧. "ಪೊಂದಾವರೆಯ ವಿಚಕಿಳದ ನಸುಬಿರಿದಲರಿಂ ದರ್ಚಿಸಿದನವನಿಪತಿ ಜಿನಪತಿಯಂ (ಪಾಪು. ೪-೩); ಮಧುಮಿತ್ರ ಜಗಜ್ಜೈತ್ರಾಯುಧ ಗೃಹಮೆನೆ ವಿಕಚವಿಚಕಿಳಂ ಸೊಗಯಿಸುಗುಂ (ಚಂದ್ರಪು. ೭-೫೦). [ಸಂ.]

ವಿಚಕಿಳ 'ವಿಚಕಿಲ' ನೋ.

ವಿಚಕ್ಷಣ (ಗು). ೧. ಸ್ಪಷ್ಟವಾಗಿ ಕಾಣಬಲ್ಲ ; ದೂರದರ್ಶಿಯಾದ. ೨. ಸಮರ್ಥವಾದ ; ಪರಿಣತವಾದ : ಆದರದ ಮಾತುಗಳು, ವಿಚಕ್ಷಣಚಿಕಿತ್ಸೆ ಇವೆಲ್ಲವೂ ಅವರ ಮೇಲೆ ಮರೆಯಲಾಗದ ಪರಿಣಾಮವನ್ನುಂಟುಮಾಡಿತ್ತು (ಮಹೋದಂ. ೧೭). (ನಾ). ೩. ವಿದ್ವಾಂಸ ; ಪಂಡಿತ : ರಸವತ್ಕವಿತಾಮಾರ್ಗಂ ರಸೆಯಲ್ಲಿ ವಿಚಕ್ಷಣರ್ಕಳಿಂ ಪೊಸತೆನಿಕುಂ (ರಾಜಶೇ. ೧-೩೩). ೪. ಪರಿಣತವಾದುದು : ಇಂತಿದು ಚಿತ್ರಕಥಾಭಿರೂಪನಿಂತಿದು ಗಜವಾಜಿಲಕ್ಷಣಮಿಚಕ್ಷಣನೀ ಶುಕನುದ್ಧತಾಂಶುಕಂ (ಕಾದಂಪು. ೫೮). [ಸಂ.]

ವಿಚಕ್ಷಣೆ (ನಾ). ಕೌಶಲ ; ಚಾತುರ್ಯ : ಈ ವಿತರಣೆ, ವಿಚಕ್ಷಣೆ, ಅಂತಸ್ಸ, ಗೌರವಗಳ ಅಳತೆಗೆ ಸರಿತೂಗಿಸುವುದು ಗಂಗರಾಜರಿಗೆ ಮಾತ್ರ ಸಾಧ್ಯವಿದ್ದಿತು (ಕಾಂತಲಾ. ೧೯). [ಸಂ. ವಿಚಕ್ಷಣ]

ವಿಚಯ (ನಾ). ಅನ್ವೇಷಣೆ ; ಶೋಧನೆ : "ವಿಚಯನಂ, ವಿಚಯಃ, ವಿಚಾರೋ ವಿಚಾರಣಮೆಂದೊಡಮೇಕಾರ್ಥಂ" (ತತ್ತ್ವಪ್ರ. ೩೪೬). [ಸಂ.]

ವಿಚಯನ (ನಾ). = ವಿಚಯ : "ಅನ್ವೇಷಣಂ, ವಿಚಯನಂ, ಮಾರ್ಗಣಂ, ಮೃಗಣಾ, ಮೃಗಃ - ೫ ಹುಡುಕಿ ನೋಡುವಿಕೆ" (ಸಿದ್ಧಾಂತಿ. ೬೬೬). [ಸಂ.]

ವಿಚರ್ಚಿಕೆ (ನಾ). ನವೆಯಿಂದ ಕೂಡಿದ ಒಂದು ಬಗೆಯ ಚರ್ಮವ್ಯಾಧಿ ; ತುರಿಕೆ : ವಿಚರ್ಚಿಕೆಯೆಂಬಾಮಯಕಂ ಶಸ್ತ್ರವಿಱದು ಬಱಿವುದು ಕೇಱಂ (ಅಶ್ವಶಾ. ೧೪-೧೯). [ಸಂ. ವಿಚರ್ಚಿಕಾ]

ವಿಚಲ (ಗು). ೧. ಅಲ್ಲಾಡುವ ; ಕಂಪಿಸುವ. ೨. ಅಹಂಕಾರವುಳ್ಳ; ದುರಭಿಮಾನಿಯಾದ. (ನಾ). ೩. ಚಂಚಲವಾದುದು ; ಅಸ್ಥಿರವಾದುದು : ವಿಚಲಮಪ್ಪುದೆ ಕೃಷ್ಣಹೃದಯಂ (ಕೃಮಿಭಾ. ೨೬-೧೮). [ಸಂ.]

ವಿಚಲತೆ, ವಿಚಳತೆ (ನಾ). ೧. ಅಲೆದಾಟ ; ಸಂಚಾರ : ರಾವಣನು . . . ಬಳಿಕ ನೋಡಿದ ನರ್ಮದೆಯ ತೀರದಲಿ ಸೇನೆಗಳ ನಿಲಿಸಿ ಬನದತಿಶಯಗಳನು ಮನಗೊಳಿಪ ಕುವಲಯ ಕಮಲ ರಾಜಿಪ ಕೊಳಗಳನು ವಿಹರಿಸುವ ಜಲವಿಹಗಗಳ ವಿಚಲತೆಯ (ಉತ್ತರ. ೧೯-೧೯). ೨. ಚಂಚಲತೆ ; ಅಸ್ಥಿರತೆ. ವಿಚಳತೆ : ೨. ವಿಚಳತೆಯಿಲ್ಲ ಚಿತ್ತದೊಳಪಾಂಗದೊಳಲ್ಲದೆ . . . ತಲ್ಲತಾಂಗಿಯಾ (ಚಂದ್ರಪ್ರ. ೧೧-೧೦೯).

[ಸಂ. ವಿಚಲತಾ]

ವಿಚಲಿತ, ವಿಚಳಿತ (ಗು). ೧. ಅಲುಗಾಡುವ ; ಅಲ್ಲಾಡುವ. (ನಾ). ೨. ಉದ್ರೇಕ ; ಕ್ಷೋಭೆ : ಪುಳಕತತಿ ತಾಗುವುದೊ ಬಾಲೋತ್ಪಳಸಬಾಂಕ ಕವರ್ದಿಗೆನುತ ವಿಚಲಿತಮಪ್ಪ ನಿಜಾತ್ಮದಿಂದಾಲಿಂಗಿಸುವ ಪರಿಯೊ (ಬಸವ. ೬೫-೨೪). ೩. ವ್ಯಗ್ರನಾದವನು; ಕ್ಷೋಭೆಗೊಂಡವನು : ಅದರಿಂದ ಅವನು ಅಷ್ಟು ವಿಚಲಿತನಾಗಿರಲಿಲ್ಲ (ದೀಪಜ. II, ೩೭೯). ವಿಚಳಿತ : ೧. 'ವಿಚಳಿತಶ್ಮಶ್ರು' ಪರಾ.

[ಸಂ.]

ವಿಚಳತೆ 'ವಿಚಲತೆ' ನೋ.

ವಿಚಳಿತ 'ವಿಚಲಿತ' ನೋ.

ವಿಚಳಿತಶ್ಮಶ್ರು (ನಾ). ಅಲ್ಲಾಡುವ ಮೀಸೆಯುಳ್ಳವನು : ಪಟುಕೋಪಾಟೋಪ ಬದ್ಧಭ್ರುಕುಟಿ ವಿಚಳಿತಶ್ಮಶ್ರು . . . ಧನುರ್ಜ್ಯಾಲತಾಸಂಘಟಿತಾಮೋಘಾಸ್ತ್ರದಿಂ ತತ್ಕರಟಿಬಿದುವನಾರ್ದೆಚ್ಚಂ (ರಾಜತೇ. ೬-೧೯). [ಸಂ. ವಿಚಲಿತಶ್ಮಶ್ರು]

ವಿಚಾರ ([illegible] ವಿಮರ್ಶೆ ; ಪರ್ಯಾಲೋಚನೆ ; ಪರಾಮರ್ಶೆ. ೨. ವಿವೇಕ ; ವಿವೇಚನೆ : ವಿಚಾರದಲ್ಲಿ ಕಡಿಮೆಯಾದರೂ ಆಚಾರದಲ್ಲಿ ಕಡಿಮೆ ಇಲ್ಲ (ಗಾದೆ). ೩. ತೀರ್ಮಾನ ; ನಿರ್ಧಾರ. ೪. ವಿಷಯ ; ಸಂಗತಿ : ಕೆಲವೊಮ್ಮೆ ಅಂಥ ವಿಚಾರಗಳನ್ನು ವಿಸ್ತಾರದ ಭೀತಿಯಿಂದ ಕೈಬಿಡಲಾಗಿದೆ (ದ್ರಾವಿವಿ. ೧೦ ಹಿನ್ನೆಲೆ). ೫. ನ್ಯಾಯ ನಿರ್ಣಯ,—ತೀರ್ಮಾನ : ಮಹಿಶೂರನಗರದ ಹೋಬಳಿ ಸೀಮೆ ವಿಚಾರದ ಗೋಪಾಲರಾಜೈಗೆ ಬರಸಿ ಕಳಹಿದ ನಿರೂಪ (ಮೈಆರಿ. ೧೯೩೮, ೭೯-೨; 1840).

ವಿಚಾರದ ಚಾವಡಿ = ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರು ಸ್ಥಾಪಿಸಿದ ಆಡಳಿತಕಛೇರಿಗಳಲ್ಲಿ ಒಂದು ; ನ್ಯಾಯವನ್ನು ಪರಾಮರ್ಶಿಸುವ ಚಾವಡಿ : ಪಟಣದ ಹೊಬಳಿ ವಿಚಾರದ ಚಾವಡಿ ವಳತದ ನಾಗಮಂಗಲಸ್ಥಳದ ಕಲಿದೇವನದಳ್ಳಿ ಗ್ರಾಮ (ಮೈಆರಿ. ೧೯೩೩, ೫೬-೯ ; 1760) ; ಕಾವೇರಿಗೆ ಉತ್ತರಪಾರ್ಶ್ವದಲ್ಲಿರುವ ಗಡಿಗಳಿಗೆ ಪಟ್ಟಣದ ಹೋಬಳಿಯ ವಿಚಾರದ ಚಾವಡಿ ಎಂಬದಾಗಿ ನಿಬಂಧನೆ ಮಾಡಿದರು (ಮಹಾವಂ. I, ೧೪೭). [ಸಂ.]

ವಿಚಾರಕ್ರಮ (ನಾ). ವಿಷಯನಿರೂಪಣೆಯ ರೀತಿ ; ವಿಚಾರಪದ್ಧತಿ : ಚಾರುಶ್ರೀನೃಪತುಂಗವಿಚಾರಕ್ರಮಮಾರ್ಗಗಣನೆಯೊಳ್ ಪರಮಾಲಂಕಾರವಿಭಾಗಂ ವಿವಿಧಾಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ (ಕವಿರಾ. ೨-೨). [ಸಂ.]

ವಿಚಾರಕ್ಷಮ (ನಾ). ೧. ಯೋಚಿಸಲು ಯೋಗ್ಯವಾದುದು ; ಪರಿಶೀಲಿಸಲು ಅರ್ಹವಾದುದು : ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ . . . ಕಾವ್ಯಮೆಂದನ್ನಿತಸುಕವಿಜನಂ ಮೆಚ್ಚೆ (ಅಪಿಪು. ೧-೨೬). ೨. ಯುಕ್ತಾಯುಕ್ತತೆಯ ಪರಿಶೀಲನೆಯಲ್ಲಿ ದಕ್ಷನಾದವನು ; ವಿವೇಚನೆ ಮಾಡುವುದರಲ್ಲಿ ಸಮರ್ಥನಾದವನು : ಅನೂನಶಕ್ತ್ಯನ್ವಿತಂ ವಿಚಾರಕ್ಷಮನೆಂಬ ನೆಗೞ್ತೆಯಿನ್ನೆ ಬಲ್ಲಾಳನೃಪಾಳಂ ಕಾರ್ತಿಕೇಯನನ್ತೊಟ್ಟಿಪ್ಪಂ (ಎಕ.V.ಆರಸೀ.೩೮-೧೬ ; 1171). [ಸಂ.]

ವಿಚಾರಗೇಡಿ (ನಾ). ತಿಳಿವಳಿಕೆ ಇಲ್ಲದವನು ; ಅವಿವೇಕಿ : ಗಂಧರ್ವ ನಾರಿಯರು ಪುರುಷರು ವಿನೋದವಿಹಾರಲೀಲೆಯೊಳೆಯ್ದುಯೆಯ್ದು ವಿಚಾರಗೇಡಿಗಳಾಗಿ ತಾವವರಿದ್ದರಣ್ಣದಲಿ (ಬಸವು. ೩೪-೭) ; ನೀವಾದರೂ ಈ ವಿಚಾರಗೇಡಿಗೆ ತಿಳಿಹೇಳಿರಿ (ಹಬ್ಬಾಟ. ೬೪). [ವಿಚಾರ + ಕೇಡಿ]

ವಿಚಾರಗೋಷ್ಠಿ (ನಾ). ಒಂದು ಗೊತ್ತಾದ ವಿಷಯದ ಬಗ್ಗೆ ನಾನಾ ಮುಖವಾಗಿ ನಡೆಸುವ ಸಮಾಲೋಚನೆಯ ಸಭೆ ; ವಿಮರ್ಶೆಯ ಗೋಷ್ಠಿ : ಎಂ.ಎ. ತರಗತಿಯಲ್ಲಿ ಆವಶ್ಯಕವಾಗಿ ಪಾತ್ರವಹಿಸಬೇಕಾಗಿದ್ದ ವಿಚಾರಗೋಷ್ಠಿಗಳ ವಿಷಯದಲ್ಲೂ ಅವನ ಉತ್ಸಾಹವು ಇಂಗಿಹೋಗಿತ್ತು (ದೂರಸ. ೨೮೫). [ಸಂ.]

ವಿಚಾರಜ (ನಾ). ವಿಷಯಮಂಥನದಿಂದ ಹುಟ್ಟಿದುದು ; ವಿಚಾರಜನ್ಯ ವಾದುದು : ನಿನ್ನಿಚ್ಛಾಪ್ರಕಾರಗಳೆ ನಿಯಮಗಳ್ ಪ್ರಕೃತಿಗೆ . . . ವಿಚಾರಜಂ ಮತಿಮಿತಿಯ ತತ್ತ್ವಸಿದ್ಧಾಂತಂಗಳಂ ಮೀರ್ವ ಯೋಗಸಿದ್ಧಿಗಳಾತ್ಮಸಾಧಕಗೆ। (ಶ್ರೀರಾಮಾ. ೭೨೬-೪೭೦). [ಸಂ.]

ವಿಚಾರಣಾಧಿಕಾರಿ (ನಾ). "(ಅಧಿಕಾರಪೂರ್ವಕವಾಗಿ) ವಿಚಾರಣೆ ನಡೆಸುವವನು, ವಿಚಾರಣಾಧಿಕಾರಿ" (Inquisitor. ಇಂಗ್ಲಿ). [ಸಂ.]

ವಿಚಾರಣಾಸಮಿತಿ (ನಾ). ವಿವಾದದ ಬಗ್ಗೆ ತನಿಖೆ ನಡೆಸಲು ಅಧಿಕೃತವಾಗಿ ನಿಯೋಜಿತವಾಗಿರುವ ಸಮಿತಿ, — ಆಯೋಗ : ರಾಜನ ನ್ಯಾಯಾಲಯವು ಈ ವಿಚಾರಣಾಸಮಿತಿಗಳ ಕಾರ್ಯಗಳನ್ನು ಪರಿಶೀಲಿಸುತ್ತಿತ್ತು (ಭಾರದ. ೫೬). [ಸಂ.]

ವಿಚಾರಣೀಯ (ನಾ). ವಿಮರ್ಶಿಸಲು ತಕ್ಕುದಾದುದು; ಪರಿಶೀಲನೆ ಮಾಡಲು ಅರ್ಹವಾದುದು : ದ್ರಾವಿಡ ಎಂದು ಕರೆಯಬೇಕಾದ ಒಂದು ಕುಲ ಇದ್ದಿತೇ ಎನ್ನುವುದು ವಿಚಾರಣೀಯವಾಗಿದೆ (ನಮ್ಮನು. ೧೪). [ಸಂ.]

ವಿಚಾರಣೆ (ನಾ). ೧. (ಯಾವುದಾದರೊಂದು) ವಿಷಯವನ್ನು ಪರೀಕ್ಷಿಸುವುದು ,—ಪರಿಶೀಲಿಸುವುದು : "ಚರ್ಚಾ, ಸಂಖ್ಯಾ, ವಿಚಾರಣಾ - ಪ್ರಮಾಣದಿಂದ ಅರ್ಥವನ್ನು ಪರೀಕ್ಷಿಸುವಿಕೆಯ ಹೆಸರುಗಳು" (ಸಿದ್ಧಾಂತಿ. ೪೪). ೨. ಅಪರಾಧದ ತನಿಖೆ ,- ಶೋಧನೆ : "ಕೇಳುವುದು ; ಕೇಳಿಕೆ ; ಪ್ರಶ್ನೆ ; ವಿಚಾರಣೆ" (Inquiry. ಇಂಗ್ಲಿ). ೩. ವಾದ ಮಾಡುವುದು ; ಚರ್ಚೆ ; ವಾದಿಸುವುದು. ೪. [ತತ್ತ್ವಶಾ] ಆತ್ಮವಿಚಾರವನ್ನು ಮಾಡುವುದು : ವಿಚಾರಣಾ - ಆತ್ಮವಿಚಾರವನ್ನು ಮಾಡುವುದು (ಅಮೃತ. ೬-೬ ಟೀಕು) ; ಜ್ಞಾನಭೂಮಿಕೆಗಳು . . . "ವಿವಿದಿಷಾ", "ವಿಚಾರಣಾ". . . "ತುರ್ಯಗಾ" ಎಂದೇಳು (ಭಾರದ. ೨೨೭).

ವಿಚಾರಣೆಮಾಡು = (ಮೊಕದ್ದಮೆ, ವ್ಯಾಜ್ಯ ಇತ್ಯಾದಿಗಳ ಸಂಬಂಧದಲ್ಲಿ) ತನಿಖೆಮಾಡು ; ಶೋಧನೆನೆಡೆಸು : ನ್ಯಾಯಾಧಿಪತಿಯು . . . ಇವರಿಬ್ಬರನ್ನೂ ಚೆನ್ನಾಗಿ ವಿಚಾರಣೆ ಮಾಡಿದನು (ನೀಕಿಟು. X, ೧೯) ; ಗ್ರಾಮಕೋರ್ಟಿನವರು ವಿಚಾರಣೆ ಮಾಡಬಹುದಾದ ವ್ಯಾಜ್ಯಗಳು (ಗ್ರಾಮಾ. ೨೦). ವಿಚಾರಣೆಯಾಗು = (ಮೊಕದ್ದಮೆ, ವ್ಯಾಜ್ಯ ಇತ್ಯಾದಿಗಳು) ಪರೀಕ್ಷೆಗೆ ಒಳಗಾಗು ; ತನಿಖೆಯಾಗು : ವ್ಯಾಜ್ಯವು ಬೆಂಚಿನಿಂದಲೇ ವಿಚಾರಣೆಯಾಗಬೇಕೆಂದು ಪ್ರತಿವಾದಿ ಅಪೇಕ್ಷಿಸಿ ಅಂಥಾ ಮನುಷ್ಯನನ್ನು ನೇಮಿಸಿದ್ದರೆ (ಗ್ರಾಮಾ. ೧೭). [ಸಂ. ವಿಚಾರಣಾ]

ವಿಚಾರದೂರ (ನಾ). = ವಿಚಾರಗೇಡಿ : ಕ್ರೂರಚಿತ್ತನು ನಂಬಿಕೆಯೆಂಬ ವಿಚಾರದೂರನು ಮಂದೆವಾಳದಿ ಮಾರಮರ್ದನನೆಂದಿನಿತು ಭಯವಿಲ್ಲದಾತ್ಮದಲಿ ಕಾಳುಗೆಲಸಂಗಳಿಗೆ ಕಳುಪುತ . . . ಕೀಳಾಳಿನಂದದಿ ಮಾಡಿಸುತ್ತಿರಲು (ಬಸವು. ೨೬-೫೭).

[ಸಂ.]

ವಿಚಾರಧಾರೆ (ನಾ). ಆಲೋಚನೆಯ ಧಾಟಿ ; ವಿಚಾರದ ಓಟ, — ಗತಿ : ಈಸ್ಮಿಲಸನ ವಿಚಾರಧಾರೆಯ ಗತಿಯಲ್ಲಿ ಗಮನಾರ್ಹವಾದ್ದು ಒಂದಿದೆ (ಬದ್ಧಪ್ರ. XXXIV, ನಾಟಕದ ಸಮಸ್ಯೆ). [ಸಂ. ವಿಚಾರಧಾರಾ]

ವಿಚಾರಪರ (ನಾ). ಚಿಂತನಶೀಲನಾದ ವ್ಯಕ್ತಿ : ವಿಚಾರಪರರು ತಮ್ಮ ಅಸ್ತಿತ್ವದಲ್ಲಿ ಸಂದೇಹಪಡರು (ಜೀವಾತ್ಮ. ೧೫). [ಸಂ.]

ವಿಚಾರಪರತೆ (ನಾ). (ವಿಚಾರವನ್ನು ಕುರಿತು) ಚಿಂತಿಸುವಿಕೆ ; ಚಿಂತನಶೀಲತೆ : ಜನರ ವಿಚಾರಪರತೆಯನ್ನು ತುಳಿದು (ಶಕ್ತಿದ. ೬೫). [ಸಂ. ವಿಚಾರಪರತಾ]

ವಿಚಾರಭ್ರಷ್ಟ (ನಾ). = ವಿಚಾರಗೇಡಿ : ಶಿಷ್ಟಜನದೂರನೆ ವಿಚಾರಭ್ರಷ್ಟನೇ ಗರ್ವಿತನೆ ಸುಜನಾರಿಷ್ಟನೇ ತಾಮಸನೆ ನೀತಿವಿಹೀನನೇ ಏಳನೆ (ಬಸಪು. ೪೫-೨೧). [ಸಂ.]

ವಿಚಾರಲಹರಿ (ನಾ). = ವಿಚಾರಧಾರೆ : ಸರ್ವಸಾಧಾರಣವಾಗಿ ವೈಖಾನಸ ಮತ್ತು ಪಾಂಚರಾತ್ರಾಗಮಗಳಲ್ಲಿನ ವಿಚಾರಲಹರಿಯಲ್ಲಿ ಏಕವಾಕ್ಯತೆ ಇರುವುದು ಕಂಡು ಬರುತ್ತದೆ (ಭಾರದ. ೭೫). [ಸಂ.]

ವಿಚಾರವಂತ (ನಾ). ಆಲೋಚಿಸುವ ಸಾಮರ್ಥ್ಯವುಳ್ಳವನು ; ವಿಚಾರಜ್ಞ : ನನ್ನ ತಂದೆ ವಿಚಾರವಂತ (ಮಣಿಸ. ೩). [< ಸಂ. ವಿಚಾರವತ್]

ವಿಚಾರವಾದ (ನಾ). (ಯಾವುದಾದರೂ) ವಿಷಯವನ್ನು ಪರ್ಯಾಲೋಚಿಸುವ ವಾದ, –ಸಿದ್ಧಾಂತ : ವಿಚಾರವಾದವು ಅವನಿಗೆ ಬಹಳವಾಗಿ ಹಿಡಿಸಿದೆ (ದೂರಸ. ೨೧). [ಸಂ.]

ವಿಚಾರವಾದಿ (ನಾ). ವಿಚಾರವಾದವನ್ನು ಅನುಸರಿಸುವವನು : ಶುದ್ಧ ವಿಚಾರವಾದಿಗೆ ಅವುಗಳಲ್ಲಿ ಯಾವ ಅರ್ಥವೂ ಕಾಣುತ್ತಿರಲಿಲ್ಲ (ದೂರಸ. ೮೦). [ಸಂ. ವಿಚಾರವಾದಿನ್]

ವಿಚಾರವಿನಿಮಯ (ನಾ). ಆಲೋಚನೆಗಳ ಪರಸ್ಪರ ವಿನಿಮಯ : ತಮ್ಮ ದಣಿ ಸೂಚಿಸಿದ್ದ ಪ್ರದಾನಸಂಬಂಧವಾದ ವಿಚಾರವಿನಿಮಯದಲ್ಲಿ ಇಡೀ ದಿನ ಕಳೆದು ಹೋಯಿತು (ಪುನರು. ೩೦೭). [ಸಂ.]

ವಿಚಾರವೇದಿಕೆ (ನಾ). ಆಲೋಚನೆಯ ಅಭಿವ್ಯಕ್ತಿಗೆ ಸೂಕ್ತವಾದ ಸ್ಥಾನ : ಹಿರಿಯ ಹೊತ್ತಗೆಯನ್ನು ಹೊರತರುವುದರ ಮೂಲಕ ಒಂದು ಹೊಸ ವಿಚಾರವೇದಿಕೆಯನ್ನು ಸಿದ್ಧಪಡಿಸಿದನು (ದ್ರಾವಿವಿ. ೧೬ ಹಿನ್ನೆಲೆ). [ಸಂ. ವಿಚಾರವೇದಿಕಾ]

ವಿಚಾರವ್ಯಾಪ್ತಿ (ನಾ). ವಿಷಯದ ಹರಹು ; ವಿಚಾರದ ವಿಸ್ತಾರ : "ಆಲೋಚ್ಯಾಂಶಗಳು, ವಿಚಾರವ್ಯಾಪ್ತಿ" (Terms of reference. ಪತ್ರಿನಿ. ೮೩). [ಸಂ.]

ವಿಚಾರಶಕ್ತಿ (ನಾ). ಆಲೋಚನೆ ಮಾಡುವ ಸಾಮರ್ಥ್ಯ : ನಿದ್ದೆಯ ಹೊತ್ತಾಯಿತೆಂದರೆ . . . ಆಕಳಿಕೆಗಳು ಬರಹತ್ತುತ್ತವೆ. ವಿಚಾರಶಕ್ತಿಯು ಕುಂದುತ್ತದೆ (ಮುಂಬಯಿ. ೪-೧೩೧). [ಸಂ.]

ವಿಚಾರಶಾಸ್ತ್ರ (ನಾ). [ಅದ್ವೈತ] ವೇದಾರ್ಥವನ್ನು ತಿಳಿಸುವ ಶಾಸ್ತ್ರ ; ವೇದಾಂತ ವಿಚಾರ : ಗಹನವಾದ ಮಾರ್ಗವನ್ನು ಬಿಟ್ಟು ಸುಲಭವಾದ ಮಾರ್ಗದಲ್ಲಿ ಮಾಡುವ ವಿಚಾರಕ್ಕೆ ಲಾಘವತರ್ಕವೆಂದರ್ಥ. ಈ ರೀತಿ ಮಾಡಲ್ಪಡುವ ವಿಚಾರಶಾಸ್ತ್ರವೂ ಸಹ ವೇದಕ್ಕೆ ಸಂಬಂಧಪಟ್ಟು ವೇದದಲ್ಲೇ ಸೇರಿದಂತಿರುವುದರಿಂದ ವಿಚಾರಶಾಸ್ತ್ರವನ್ನು ವೇದದಂತೆ ಗೌರವಿಸುವರು (ಹಿಂದಸಾ. ೧೮೫). [ಸಂ.]

ವಿಚಾರಸಂಕಿರಣ (ನಾ). = ವಿಚಾರಗೋಷ್ಠಿ ೧ : ಈ ಅವಧಿಯಲ್ಲಿಯ ವಿವಿಧಭಾಷೆಗಳ ಸಾಹಿತ್ಯಸಮಾಲೋಚನೆಯನ್ನು ಕುರಿತ ವಿಚಾರಸಂಕಿರಣವು ಬನಾರಸ ಸಮ್ಮೇಲನದಲ್ಲಿ ನಡೆಯಿತು (ಸಾಸಮಾ. ೭೫). [ವಿಚಾರ + ಸಂಕಿರಣ]

ವಿಚಾರಸರಣಿ (ನಾ). = ವಿಚಾರಧಾರೆ : ಬಾಳೊಂದು ಸ್ವಾಂತವೆಂದೂ . . . ಸ್ವಾಂತದುರಂತಗಳಿಂದ ಸಮನ್ವಿತವೆಂದೂ ಒಂದು ವಿಚಾರಸರಣಿಯಿದೆ (ಸಾಹಿಸ. ೧೦೭) ; ವಿಚಾರಸರಣಿಯಿಂದ ಅವಳೊಬ್ಬ ಪ್ರಗತಿಪರಳು (ಕರ್ನಾಕ. ೬೯). [ಸಂ.]

ವಿಚಾರಸ್ಥಾನ (ನಾ). ೧. ವಿಷಯಗಳನ್ನು ತಿಳಿಯತಕ್ಕ ಸ್ಥಳ. ೨. ಪಕ್ಷಿಗಳ ಸಂಚಾರದ ಸ್ಥಳ ; ಹಕ್ಕಿಗಳು ಹಾರಾಡುವ ಜಾಗ. ೧, ೨ : ಅಳಿದುಳಿದು ಭಂಗಮಯಮಾಗಿರ್ದು ಮುರಿದ ನೃಪದಳಮಲ್ಲ ಬಹುವಿಚಾರಸ್ಥಾನಮಾಗಿರ್ದು ತಿಳಿಯಲ್ಕುಪದ್ರವಸ್ಥಳಮಲ್ಲಮೆನಿಸಿರ್ದುದಾ ವಿಮಲಸರಸಿ ಕಣ್ಗೆ (ಜೈಮಿಭಾ. ೧೫-೧೪). [ಸಂ.(ವಿಚಾರ + ಸ್ಥಾನ); (ವಿ + ಚಾರ + ಸ್ಥಾನ)]

ವಿಚಾರಿಸು (ಕ್ರಿ). ೧. ಯೋಚಿಸು ; ಚಿಂತಿಸು ; ಆಲೋಚಿಸು : ಮನದೊಳಣಂ ವಿಚಾರಿಸದೆ ಸೈರಣೆಗೆಟ್ಟಱಿವೆತ್ತವೋದುದೀ ಮನಸಿಜನೆಂಬ ಪಾತಕನಿನಿಂತಪ ಹಾಸ್ಯಮನೆಯ್ದಲಕ್ಕುಮೇ (ಕಾದಂಪೂ.೮೪೬) ; ವಿಚಾರಿಸಲು ನರನ ನುಡಿ ಹೊಳ್ಳಾಗದಾ ಮುರಹರನ ಬಲುಹುಳ್ಳನ್ನಬರವೆನಲು (ಕುವ್ಯಾದ್ರೋ. ೮-೬೩). ೨. ಪರೀಕ್ಷಿಸು ; ಪರಾಮರ್ಶಿಸು: ಅಱಿಯದೆಯುಂ ವಿಚಾರಿಸದೆಯುಂ ನೃಪ ನಿಱ ನೆಗಟ್ಟನ್ನೆಯಲ್ಲೆ ಯಾನಱಿವೆನದಂತೆ ಕರ್ಣನೆಣೆಗಂ ತೊಣೆಗಂ ನೃಪರಾರುಮಿಲ್ಲ (ಪಂಪಭಾ. ೧೨-೧೦೦); ಕೃಷ್ಣೆಯ ಸೂನುಗಳಪ್ಪ ಪಂಚಪಾಂಡವರ ಶಿರಂಗಳಂ ನೆಱೆ ವಿಚಾರಿಸದಕ್ಕಟ ಕೊಂಡು ಬರ್ಪುದೇ (ಗದಾಯು. ೯-೩೩); ಚಾರುಕವಿತೆಯ ಬಳಕೆಯಲ್ಲ ವಿಚಾರಿಸುವಡಳವಲ್ಲ (ಕುವ್ಯಾಅ. ೧-೭). ೩. ಕೇಳು ; ಪ್ರಶ್ನೆಮಾಡು ; ಪ್ರಶ್ನಿಸು : ದಂಡಕನೃಪತಿ . . . ಭಟಾರರ ಪಕ್ಕದೆ ವಿಚಾರಿಸಿ ಧರ್ಮಮಂ ಕೇಳ್ದು ಮೆಚ್ಚಿ ನಂಬಿ ಶ್ರಾವಕಬ್ರತಂಗಳಂ ಕೈಕೊಂಡು ಶ್ರಾವಕನಾಗಿ (ವಡ್ಡಾರಾ. ೧೭೬-೯); ನಾಯಕನು ನೇರವಾಗಿಯೇ ನಾಯಕಿಯ ಕುಲಗೋತ್ರಗಳನ್ನು ವಿಚಾರಿಸುತ್ತಾನೆ (ಸಂಕವ. ೨೭). ೪. ಪರಿಶೋಧನೆ ಮಾಡು ; ತನಿಖೆ ಮಾಡು : ಪೆಣ್ಬುಯ್ಯಲಂ ವಿಚಾರಿಸದೆ ಪುರುಷಂ ಪೋಗಲಾಗದು (ವರ್ಧಪು. ೧೬-೫೮) ; ಅಯ್ಯೋ ಇದಂ ವಿಚಾರಿಸುವರಿಲ್ಲಾ ಎನುತೆ ಬಂದನುರವಣಿಸಿ (ತಿರುರ.ದೇ. ೧೪-೧೪).

ವಿಚಾರಿಸಿಕೊಳ್ಳು = ೧. ತನಿಖೆಮಾಡು ; ಪರಿಶೋಧನೆಮಾಡು : ಯಾವ ವಿಷಯದಲ್ಲೂ ಸರಿಯಾಗಿ ವಿಚಾರಿಸಿಕೊಳ್ಳದೆ ದುಡುಕಬಾರದು (ರೂಢಿ). ೨. ಮಾನ್ಯ ಮಾಡು ; ಉಪಚರಿಸು : ಅವರ ಮನೆಯಲ್ಲಿ ಅತಿಥಿಗಳನ್ನು ತುಂಬ ಚೆನ್ನಾಗಿ ವಿಚಾರಿಸಿಕೊಂಡರು (ರೂಢಿ). ೩. (ಆಲಂ) ತರಾಟೆಗೆ ತೆಗೆದುಕೊಳ್ಳು ; ಆಕ್ಷೇಪಣೆ ಮಾಡು : ಒಂದೇ ತಡವೆ ಗುಣವಂತ, ಪ್ರತಾಪಕುಮಾರಿ ಇವರಿಬ್ಬರ ಮೇಲಿನ ಹಗೆಯೂ ತೀರುವುದು. ಆಮೇಲೆ ವಿಚಾರಿಸಿಕೊಳ್ಳುವೆನು (ಆರ್ಯಕ. ೧೧೬). [ವಿಚಾರ + - ಇಸ್ಸು]

ವಿಚಾರಿಸುಹ (ನಾ). ವಿಚಾರಣೆ ಮಾಡುವಿಕೆ : "ಅದುವದು – ವಿಚಾರಿಸುಹಂ" (ಶಮದ. ಪರಿ. ೨). [ವಿಚಾರಿಸು + - ಹ್ಯ (< - ಪ್ಯ)]

ವಿಚಿಂತ (ನಾ). ದುಃಖವಿಲ್ಲದವನು ; ನಿಶ್ಚಿಂತನಾದವನು : ನಲ್ಮೆಗಡಲೊಳ್ ಮುಟುಗಾಡಿ ವಿಚಿಂತನಾಗಿ . . . ಮಱೆವೊಕ್ಕೆನೊ ನಾಥನೆ ನಿನ್ನ ಹಸ್ತಮಂ (ವಸ್ತವಂ. ೩-೨೪). [ಸಂ.]

ವಿಚಿಂತಾಂತರ (ನಾ). ದುಃಖವಿಲ್ಲದಿರುವಿಕೆ ; ನಿಶ್ಚಿಂತತೆ : ಮನೋಜ್ಞ ಪ್ರತತಿಕುಳದೊಳಾದೊಂದವಸ್ಥಾವಿಚಿಂತಾಂತರದೊಳ್ ಕೈಕೊಂಡು ಪರ್ಯಷ್ಟಿ ಯನನವರತಂ ಮಾಟ್ಟ ಶೀಳೋತ್ಕರಂ ಕೂಡಿರೆ ವೈಯಾಪೃತ್ಯವೆಂಬೀ ತಪದೊಳೆಸಗಿದಂ (ಸುಕುಮಾ. ೪-೧೭). [ಸಂ.]

ವಿಚಿಕಿತ್ಸನ (ನಾ). ೧. ಶಂಕೆ ; ಸಂಶಯ. ೨. ತಪ್ಪು ಹೊರಿಸುವುದು ; ದೋಷಾರೋಪಣೆ ಮಾಡುವುದು : ಭೋಗಕಾಂಕ್ಷೆಯೊಳ್ ವಿಮುಖತೆಯುಂ ಮುನಿಜನ ತನುಮಳ ವಿಚಿಕಿತ್ಸನವರ್ಜನಮುಂ ತ್ರಿಮೂಢತಾನಿರಸನಮುಂ . . . ಎಂದು ಪೇಟ್ಟೀಯೆಂಟು ಗುಣಂಗಳುಂ ಸಮ್ಯಗ್ದರ್ಶನಾವಯವಂಗಳ್ (ಆದಿಪು. ೫-೫೭). [ಸಂ.]

ವಿಚಿಕಿತ್ಸೆ (ನಾ). ಶಂಕೆ; ಸಂಶಯ; ಸಂದೇಹ : ಭಯಮಖಿಲಕಾಂಕ್ಷೆ ವಿಚಿಕಿತ್ಸೆ ಯನ್ಯದೃಷ್ಟಿಪ್ರಶಂಸೆ ಸಂಸ್ತವನಮೆಂಬೀ ಕ್ರಿಯೆ ಸಮ್ಯಗ್ದೃಷ್ಟಿಗೆ ನೋಡೆ ಯಥಾಕ್ರಮಧಿಂ ವ್ಯತಿಕ್ರಮಂ ತಾನಕ್ಕುಂ (ಸುಕುಮಾ. ೬-೪೫). [ಸಂ. ವಿಚಿಕಿತ್ಸಾ]

ವಿಚಿತಿ (ನಾ). ಪದ್ಯವನ್ನು ಹೇಳುವಾಗ ನಿಲ್ಲಿಸುವ ಉಸಿರ್ದಾಣ ; ಯತಿ: ಭೂರ್ಭುವಸ್ವಾದಿಪದ್ಧತಿಯಿಂ ಕಲ್ತಿರುಮಿಲ್ಲಮಾ ವಿಚಿತಿಯೊಳ್ ನೀಮಗ್ನಿಮೀಳೇ ಪುರೋಹಿತಮೆಂದೋದಿದಿರಿಲ್ಲ (ಸುಕುಮಾ. ೨-೩೬). [ಸಂ.]

ವಿಚಿತ್ರ (ಗು). ೧. ಆಶ್ಚರ್ಯಕರವಾದ. ೨. ಅನೇಕ ಬಣ್ಣಗಳಿಂದ ಕೂಡಿದ ; ನಾನಾ ವರ್ಣದ : ನಿರ್ಭರರತೋದೀರ್ಣಾರ್ಣವಂ ಘೂರ್ಣಿಸಲ್ ಮಸಗಿತ್ತಂದು ವಿಚಿತ್ರಚಿತ್ರಿತಸುಧಾಶ್ರೀರಮ್ಯಹರ್ಮ್ಯಂಗಳೊಳ್ (ಶಾಂತಿಪು. ೮-೧೦೨). ೩. ನಾನಾ ಬಗೆಯ ; ಹಲವು ವಿಧವಾದ : ಲಳಿತವಿಚಿತ್ರ ಪತ್ರಫಲಪುಷ್ಪಯುತಾಟವಿ ಸೊರ್ಕಿದಾನೆಯಂ ಬೆಳೆವುದು (ಪಂಪಭಾ. ೧-೫೪) ; ಮಿಂಚುವ ವಿಚಿತ್ರಪತ್ರಾವಳಿಗಳಂ ಬರಸಿ ಮಂಗಳದ್ರವ್ಯಂಗಳಂ ಕೂಡೆ ತಂದಿರಿಸಿ (ನಂಬರ. ೫-೨೭). ೪. ಚೆಲುವಾದ ; ಸುಂದರವಾದ : ಮೊದಲೊಳ್ ಮುಳ್ ಮೇಗೆ ವಿಚಿತ್ರದಳಿತರಕ್ತಪ್ರಸೂನಮೆಂಚಿನಿತ ಱೊಳಾಗದು ಶಾಲ್ಮಲಿ ವನರುಹಮಾವುದಂತರಂ ನಿನಗಮಿದಿರ ವಾದಿಗಮಧಿಪಾ (ಶಾಂತಿಪು. ೮-೧೫೨). ೫. ಬಣ್ಣಗೊಟ್ಟ; ಬಣ್ಣಹಾಕಿದ: ವಿಚಿತ್ರಚಿತ್ರಭಿತ್ತಿ ತಂತನ್ಯಮಾನವಾತಾಯನಪರೀತಮತ್ತವಾರಣಕ್ರೋಡೀಕೃತ ಚಂದ್ರಕಾಂತಕಾಂತ. ಸುಧಾವೇದಿಕಾಮಧ್ಯ ಭೂಮ್ಯಂತರಾಳದೊಳ್ (ಶಾಂತಿಪು. ೮-೮೬ ವ).

(ನಾ). ೬. ಆಶ್ಚರ್ಯಕರವಾದುದು; ಬೆರಗುಗೊಳಿಸುವಂತಹದು; ವಿಸ್ಮಯಕರವಾದುದು: ವಿಚಿತ್ರಂ ಮತ್ತಂ ದೇವಿಯರ್ ನೋಡನೋಡಲೊರ್ವ ಶತವೃದ್ಧನಾಗಿ ನಿಂದಿರ್ದಂ (ನಂದಿ. ೬-೨) ; ಗೊರವ ನಿನ್ನಯ ಶೌರ್ಯಮದಿರ್ಕೆ ಖಡ್ಗಮಿಧನುಶರಮೆತ್ತ ನಿನ್ನ ತಪಮೆತ್ತ ವಿಚಿತ್ರಮಿದಲ್ತೆ ಧಾತ್ರಿಯೊಳ್ (ಶಬಶಂ. ೪-೩೦) ; ಚಿತ್ರಾಂಗದೆಯ ಕಥೆ ವಿಚಿತ್ರಮೆಂದಾಡುವರ್ (ಚಿತ್ರಾಂ. ೬೬-೧೪೧೦) ೭. [ಛಂದ] ಅಕ್ಷರಛಂದಸ್ಸಿನಲ್ಲಿ ಆರನೆಯ ಛಂದಸ್ಸಾದ ಗಾಯತ್ರಿಯಲ್ಲಿ ಒಂದು ಪ್ರಭೇದದ ಹೆಸರು; ಎರಡು ಯಗಣವಿರುವ ವೃತ್ತ : ಪಯೋಯುಗ್ಮದಿಂದಂ ಪಯೋಜಾಯತಾಕ್ಷೀ ಪ್ರಯೋಗವ್ಪಪ್ಪಿದ್ದಂ ನಿಯುಕ್ತಂ ವಿಚಿತ್ರಂ (ಛಂದೋಂಬು. ೨-೭೭). ೮. [ನಾಟ್ಯ] ಹತ್ತು ಬಗೆಯ ಆಕಾಶಮಂಡಲಗಳಲ್ಲಿ ಒಂದು ಬಗೆ : ಶುದ್ಧವಿಚಿತ್ರ[ಪಾಠಾಂ. ಚಿತ್ರ, ಪವಿತ್ರ]ಮೆಂಬ ಪೂರ್ವರಂಗಪ್ರಸಂಗದೊಳ್ . . . ಪುಷ್ಪಾಂಜಲಿವಿಕ್ಷೇಪಣಾದಿ ನಾಂದೀವಿಧಿಯಂ ನಿರ್ವರ್ತಿಸಿ (ಅಭಿಪ್ರ. ೭-೧೧೫ ವ) ; ಅತಿಕ್ರಾಂತ . . . ವಿಚಿತ್ರ ವಿಸ್ಫುತ ಅಲಾತ ಲಲಿತ ಈ ಹತ್ತು ಆಕಾಶಮಂಡಲಂಗಳ್ (ಲಾಸ್ಯರಾ. ೬-೪ ವ). [ಸಂ.]

ವಿಚಿತ್ರಲಲಿತ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಹದಿನೈದನೆಯ ಛಂದಸ್ಸಾದ ಅತಿಶಕ್ವರಿಯಲ್ಲಿ ಒಂದು ಬಗೆ ; ನಸನಭಯಗಣಗಳಿರುವ ಒಂದು ವೃತ್ತ : ತ್ರಿದಶ ಮರುದಿಂದ್ರಪುರಚಂದ್ರಸಲಿಲಂಗಳ್ ಕುದಿಯೊಳಿರೆ ತಳ್ತು ಹರರಲ್ಲಿ ಯತಿ ನಿಲ್ಕುಂ ವಿದಿತಮಿದು ಧಾರಿಣಿಯೊಳಬ್ಜದಳನೇತ್ರೇ ಸದಮಲವಿಚಿತ್ರಲಲಿತಂ (ಛಂದೋಂಬು. ೨-೧೫೮).

[ಸಂ.]

ವಿಚಿತ್ರಾಂಗಿ (ನಾ). ಸುಂದರವಾದ ಅವಯವಗಳನ್ನುಳ್ಳವಳು ; ಚೆಲುವೆ : ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪೋಲಿಸುವಂತುಟೇಮ್ಮರುಳವೇ ರೂಪಂ ವಿಚಿತ್ರಾಂಗಿಯಾ (ಅಭಿಪ್ರ. ೬-೦೫). [ಸಂ. ವಿಚಿತ್ರಾಂಗೀ]

ವಿಚಿತ್ರೋಕ್ತಿ (ನಾ). ಆಶ್ಚರ್ಯಕರವಾದ ಮಾತು ; ಬೆರಗುಗೊಳಿಸುವ ನುಡಿ : ಕರಜಳಧರ ಕಳಧೌತೋತ್ಕರವರ್ಷದೆ ವಂದಿನಂದ[ನಾ]ವಳಿಗಳ ವಿಸ್ತರಿಪುವೆನೆ ದಾನಮವಿಳೋರ್ವ್ವರೆಗೆ ವಿಚಿತ್ರೋಕ್ತಿ ರೂಪವಿದ್ಯಾಧರಿಯ (ಪೊಗ್ಗ. XX. ೪೯-೬೭; 1076 ?). [ಸಂ.]

ವಿಚೂರ್ಣಿತ (ಗು). ವಿಶೇಷವಾಗಿ ಪುಡಿಮಾಡಿದ ; ಬಹಳ ಪುಡಿಮಾಡಿದ : ಆಯತವಾಮಹಸ್ತಳಕ್ಷಿಣವಜ್ರ[ವಿ]ಚೂರ್ಣಿತಾದ್ರಿ ವಜ್ರಾಯುಧನೆಂಬ ದೊಡ್ಡಿವೆಸರಂ . . . ತಳರ್ದಂ ನೃಪಾತ್ಮಜಂ (ಶಾಂತಿಪು. ೬-೫೬). [ಸಂ.]

ವಿಚೇಷ್ಟೆ (ನಾ). ಚಲನೆಯಿಲ್ಲದಿರುವಿಕೆ ; ನಿಷ್ಪಂದವಾಗಿರುವ ಸ್ಥಿತಿ : ಅಜೀವು ಮಱವೆಗಳೊಂದನೊಂದನು ಮುಱಿದು ನೂಕಿದವವನಿಪತಿ ಕಡುವೆಱಗ ಕೇಣಿಯ ಕೊಂಡವೋಲಿದ್ದನು ವಿಚೇಷ್ಟೆಯಲಿ (ಕುಮಾ. ೧೪-೪). [ಸಂ. ವಿಚೇಷ್ಟ]

ವಿಚ್ಛಳಾಕಾರ (ನಾ). ಹೊಳೆಯುತ್ತಿರುವ ಆಕೃತಿ : ಮದಾಂಧಗಂಧಸಿಂಧುರಂ ಕರಿಣೀವೃಂದಂಗಳಿಂ ಪರಿವೇಷ್ಟಿತನಾಗಿ . . . ಲೀಲೆಯಿಂ ಬಂದು ಸ್ವಚ್ಛವಿಚ್ಛಳಾಕಾರ [ಪಾಠಾಂ. ವಿಚ್ಛಾಳಾಕ, ಲಿಚ್ಛಾಳಾಕ]ಮಪ್ಪ ಮಧುವಂ ಪೊಕ್ಕು ಮನೋಹಾರಿಗಳಪ್ಪ ಕರಿಣೀಗಣದೊಡನೆ ಕ್ರೀಡಿಸುವುದಂ ಮೂವರುಂ ಕಂಡು (ವಡ್ಡಾರಾ. ೬೬-೨೧).

[ಸಂ. ವಿಚ್ಛಲಾಕಾರ ?]

ವಿಚ್ಛಾಯ (ಗು). ೧. ನೆರಳಿಲ್ಲದ ; ಛಾಯೆಯಿಲ್ಲದ. (ನಾ). ೨. ರತ್ನ ; ಮಣಿ. ೩. ಕಾಂತಿಹೀನವಾದುದು ; ಮಂಕಾದುದು : ಚತುರಂಗ ಚಮೂಚಕ್ರಪಾಂಶುಪಟಲದಿಂದಂ ದಿಙ್ಮುಖಿಂಗಳುಂ ವಿರೋಧಿವರಪಾಲಪ್ರಿಯ ಸವಿಮುಖಿಂಗಳುಂ ವಿಚ್ಛಾಯಂಗಳಾಗೆಯುಂ (ಅಭಿಪ್ರ. ೧೩-೭೭ ವ) ; ಕಡುರೋಮದ ವಿಚ್ಛಾಯದ ಕಡುಮುಳಿಸಿನ ಚಪಳವೃತ್ತಿಲೋಲುಪದಾ ಜಡಭಾವದ ಹರಿಗಳ್ಕುಂ . . . ಮರಣಭಯಂ (ಅಶ್ವಶಾ. ೬-೧೨). ೪. ಹಕ್ಕಿಗಳು ಗುಂಪಾಗಿ ಹಾರುವಾಗ ನೆಲದ ಮೇಲೆ ಬೀಳುವ ಅವುಗಳ ನೆರಳು. [ಸಂ.]

ವಿಚ್ಛಾಯತೆ (ನಾ). ಕಾಂತಿಹೀನತೆ; ತೇಜೋಹೀನತೆ : ಜೀವಂ ತನುವಿಂ ಕಳರಲೊಡಂ ವಿಚ್ಛಾಯತೆಗೊಳಗಾದುವು ತೊಳಗುವವರ ಸೌಂದರತಮಗಳ್ (ಅಭಿಪ್ರ. ೫-೩೭). [ಸಂ. ವಿಚ್ಛಾಯತಾ]

ವಿಚ್ಛಾಯತ್ವ (ನಾ). = ವಿಚ್ಛಾಯತೆ : ಬಾಹ್ಯಾಭ್ಯಂತರತಪೋನುಷ್ಠಾನದಿಂ ಪಟುತರತಪನತಾಪನಿಷ್ಟೀತಸಾರತರುವೋಲ್ ನಿಸ್ಸಾರವಿಚ್ಛಾಯತ್ವಗಸ್ಮಿಸಿರಾ ಜಾಲಮಾತ್ರತನುಯಂತ್ರನುಂ . . . ಅಪ್ಪ ಯತಿಗೆ ಯಾಚನಾಪರಿಷಹಜಯಮಱಿಯೆ ಪಡುಗುಂ (ಶತ್ರುಪ್ರ. ೩೩೭). [ಸಂ.]

ವಿಚ್ಛಾಯೆ (ನಾ). = ವಿಚ್ಛಾಯತೆ : ಅಂಗವಿಚ್ಛಾಯೆಯ ತೆಱದ ರಂಧ್ರಂಗಳೂದುವ ಬಸುಱ . . . ಪೆಱಿಕೆಯು ನಾತವಧಿಕಭಯಂಕರವು ಪಸರಿಸಲು (ಬಸವ. ೪೭-೫೦).

[ಸಂ. ವಿಚ್ಛಾಯಾ]

ವಿಚ್ಛಿತ್ತಿ (ನಾ). ೧. ತುಂಡುಮಾಡುವಿಕೆ ; ಕತ್ತರಿಸುವಿಕೆ. ೨. ಬಿರುಕು ಬಿಟ್ಟಿರುವುದು ; ಒಡಕು ; ಸೀಳು. ೩. ತಡೆ ; ಅಡ್ಡಿ ; ಆತಂಕ : ಕೋಟಿಗಾಳಿಗದ ಪರಂಪರೆಗೆ ವಿಚ್ಛಿತ್ತಿ ಬಂದು ಒದಗಿತು (ಕರ್ಣಾಜು. ೬೨) ; ಒಂದು ದಿನ ಭಟ್ಟರಿಗೆ ಛಳಜ್ವರ ಬಂದು ಸಾಧನೆಗೆ ಸ್ವಲ್ಪ ವಿಚ್ಛಿತ್ತಿ ಬಂದಿತ್ತು (ರಾಮಾಸ. ೧೩). ೪. ಬೇರೆಮಾಡುವುದು ; ವಿಚ್ಛೇದನ : ಕೇವಲ ಕ್ಷುಲ್ಲಕಕಾರಣಗಳಿಗಾಗಿ ದಾಂಪತ್ಯವಿಚ್ಛಿತ್ತಿಗೆ ಅನುಮತಿಯನ್ನು ಕೊಡುತ್ತ ಹೋದರೆ ಸಮಾಜವ್ಯವಸ್ಥೆಯ ಕಟ್ಟುಪಾಡೂ . . . ಉಳಿಯುವ ಬಗೆ ಹೇಗೆ (ಪುಂಲ. ೧೫೯). ೫. ಇಲ್ಲದಂತೆ ಮಾಡುವುದು ; ನಾಶ : ಸಾಕ್ಷಾತ್ಪರಂಪರಾಭೇದದಿಂ ಪ್ರತ್ಯಕ್ಷಮುಂ ಇತ್ತೆಱನಲ್ಲಿ ಅಜ್ಞಾನವಿಚ್ಛಿತ್ತಿಯುಂ ಸದ್ಜ್ಞಾನೋತ್ಪತ್ತಿಯುಂ . . . ಸಾಕ್ಷಾತ್ಪ್ರತ್ಯಕ್ಷ ಫಲಂ (ತತ್ತ್ವಪ್ರ. ೪). ೬. ಕದಿಯುವಿಕೆ ; ಕಳ್ಳತನ : "ವಿಚ್ಛಿತ್ತಿ [ಪಾಠಾಂ. ನಿಶ್ಚಿಪ್ರ] ಚೌರ್ಯಂ ಸ್ವೇಯಮೆನಲ್ ಕಳವಕ್ಕು" (ಮಂಗರಾ. ೬೭-೫). ೭. ಗಡಿ ; ಸೀಮೆ ; ಎಲ್ಲೆ. ೮. [ಛಂದ] ಪದ್ಯವನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ನಿಲ್ಲಿಸುವ ಉಸಿರ್ದಾಣ ; ಯತಿ. [ಸಂ.]

ವಿಚ್ಛಿದುರ (ಗು). ಭಗ್ನವಾದ; ಛಿದ್ರಗೊಂಡ : ಅಂತು ವಿದುರಂ ವಿಚ್ಛಿದುರಮನನಾಗಿ ಬಿಲ್ಲನುಡಿವುದುಂ (ಪಂಪಭಾ. ೯-೫೯ ವ). [< ಸಂ. ವಿಚ್ಛಿದ್ರ]

ವಿಚ್ಛಿನ್ನ (ಗು). ೧. ಒಡೆದ ; ಸೀಳಿದ. ೨. ವಿಭಾಗವಾದ ; ಬೇರೆಯಾದ. ೩. ತಡೆಗಟ್ಟಿದ ; ಅಡ್ಡವಾದ. ೪. ನಿಂತುಹೋದ ; ಮುಗಿದ. ೫. ಹರಿದ ; ಪ್ರವಹಿಸಿದ : ಅಂತು ನಿರುತ್ತರನಾಗಿ ಪ್ರತಿವಾದೀಂದ್ರಂ ವನಪ್ರವಿಷ್ಟಕರೀಂದ್ರ ವಿಚ್ಛಿನ್ನಮದಸಲಿಲಪ್ರವಾಹನಾಗಿರ್ದೊಡಂಬಟ್ಟು ಕುಡಿಸೆ (ಶಾಂತಿಪು. ೬-೧೪೪ ವ). (ನಾ). ೬. ಬೇರೆಯಾಗುವಿಕೆ ; ಅಗಲುವಿಕೆ : ನಿನಗಮೆನಗಮೇತಱೊಳಂ ವಿಕಲ್ಪಮುಂ ವಿಚ್ಛಿನ್ನಮುಮಿಲ್ಲೆಂದು ನುಡಿಯುತಿರ್ವನ್ನೆಗಂ (ಪಂಪಭಾ. ೪-೪೫ ವ). ೭. ಚಲ್ಲಾಪಿಲ್ಲಿ ; ಚದುರಿಹೋದುದು : ಪನ್ನಗೇಂದ್ರಾಭರಣ ನಿಮಗೆಂದುನ್ನಿಸಿದ ಚೆಲುವಕ್ಕಿಯವು ವಿಚ್ಛಿನ್ನವಾದವಱಟಕಟ (ಬಸವ. ೨೭-೧೩). [ಸಂ.]

ವಿಚ್ಛುರಿತ (ಗು). ಬಳಿದ ; ಲೇಪಿಸಿದ : ಹರಿಚಂದನವಿಚ್ಛುರಿತಾಂಗರಾಗನತಿ ಯಚಿರಹಾರನೆಂದೆನಿಸದನೊ . . . ಪಾಂಡ್ಯನ್ಯಪೇಂದ್ರಂ (ಶಾಂತಿಪು. ೫-೧೩೭). [ಸಂ.]

ವಿಚ್ಛೇದ (ನಾ). ೧. ತುಂಡುಮಾಡುವಿಕೆ ; ಕತ್ತರಿಸುವುದು. ೨. ಬಿಡುವಿಕೆ ; ತೊರೆಯುವಿಕೆ : ಅವರಲ್ಲಿ ಆಗಲಿದ್ದ ವಿಚ್ಛೇದವು ತಪ್ಪಿ ಸಂಸಾರ ಕೂಡಿತು (ಬಂಟಮ. ೧೩೭). 'ವಿವಾಹವಿಚ್ಛೇದ' ಪರಾ. ೩. ಗ್ರಂಥದ ಭಾಗ ; ಅಧ್ಯಾಯ ; ಪರಿಚ್ಛೇದ. ೪. ಅವಕಾಶ ; ಬಿಡುವು. [ಸಂ.]

ವಿಚ್ಛೇದನ (ನಾ). ೧. ತುಂಡುಮಾಡುವಿಕೆ ; ಕತ್ತರಿಸುವಿಕೆ : "ಕಲ್ಪನಂ ವಿಚ್ಛೇದವಂ ಕರ್ತನಂ ವರ್ಧನಂ ಕಡಿಪಂ" (ಮಂಗರಾ. ೧೪-೧೧). ೨. ವಿಶ್ಲೇಷಣೆ ; ವಿಭಜನೆ: 'ವಿಚ್ಛೇದಿಸು' ಪರಾ. ೩. ಬಿಡುವಿಕೆ ; ತ್ಯಜಿಸುವಿಕೆ ನಾನು ನಿನ್ನ ಉನ್ನತಿಗಾಗಿ ಯತಿಸುತ್ತೇನೆ. ಆದರೆ ನಿನ್ನೊಡನೆ ಅಸಮಾಧಾನ ಹೊಂದಿದಾಗ ಈ ಸಂಬಂಧವನ್ನು ವಿಚ್ಛೇದನ ಮಾಡುತ್ತೇನೆ (ನಿಚೆಲ. 238) ; 'ದಾಂಪತ್ಯ ವಿಚ್ಛೇದನ' ಪರಾ. [ಸಂ.]

ವಿಚ್ಛೇದಿಸು (ಕ್ರಿ). ೧. ನಾಶಗೊಳಿಸು ; ಇಲ್ಲದಂತೆ ಮಾಡು : ಭವಕಾಂತಾರ ವಿಹಾರದೊಳ್ ವಿಷಯಮಂ ವಿಚ್ಛೇದಿಸಲ್ ಚಿತ್ತಸಂಭವನಂ ಸಂಹರಿಸಲ್ ಕಷಾಯಭಟರಂ ಬೆನ್ನಟ್ಟಲಾರ್ಪೀ ಮಹಾತ್ಮಮಸಾಯಂ ತಮಗಾಗೆ (ಅಜಿಪು. ೧-೫). ೨. ವಿಶ್ಲೇಷಣೆಮಾಡು ; ವಿಭಜಿಸು : ಅವಳು ಸ್ನೇಹ ಮತ್ತು ಪ್ರೇಮಗಳನ್ನು ವಿಚ್ಛೇದಿಸಿ ನೋಡಲು ಶಕ್ತಳಾಗಿದ್ದಳು (ಹೆಮಂತ. ೨೫೬). [ವಿಚ್ಛೇದನ + - ಇಸು]

ವಿಜಅರಸ (ನಾ). ಒಬ್ಬಾತನ ಹೆಸರು : ವೀರಾಪುರುಷ ಸಮಕ್ಷಮದೆ ಕೇಕಯಪಲ್ಲವರಂ ಕಾದೆಱೆದು ಪೆತ್ತಜಯನಾ ವಿಜಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಱುವಳ್ಳಿಉಂ ಕೊಟ್ಟಾರ್ (ಮೃಅಂ. ೧೯೩೬, ೧೬-೧೨; 450).

[< ವಿಜಯ್ $_2$ + ಅರಸ್ $_1$]

ವಿಜಕ್ಕ (ನಾ). ಒಬ್ಬಾಕೆಯ ಹೆಸರು : ನವಿಲೂರ ಗಣದ ಬಾಳಂಬಾಕಸ್ತಿಯರ್ ಮಗಳ್ ವಿಜಕ್ಕಂ ಪರೋಕ್ಷವಿನಯಂಗೆಯ್ದು ಕಲ್ಲನಿಱಿಸಿದಳ್ (ಎಕ.VI, ಕಡೂರು ೧೫೯-೧೪; 961). [< ವಿಜಯ್ $_2$ + ಅಕ್ಕ $_1$]

ವಿಜಣನಾಯ್ಗ (ನಾ). ಒಬ್ಬಾತನ ಹೆಸರು : ವಿಜಣನಾಯ್ಗರಾ ಮಗನ್ ಕಾಳ್ತಿದೆ . . . ಸ್ವರ್ಗ್ಗಾಲಯಕ್ಕೇಱಿದೊನ್ (ಎಇ. IX, ೧೭-೫; ಸಿ.800).

[< ವಿಜಯ್ $_2$ + < ಅಣ್ಣ $_1$ + ನಾಯ್ಗ (< ನಾಯಗ)]

ವಿಜನ (ಗು). ೧. ಜನರಿಲ್ಲದ ; ನಿರ್ಜನವಾದ ; ಏಕಾಂತವಾದ : ಕಾಮಳ್ಳಿ ಗಿಳಿಗಳುಲಿ ಕೇಳಿಸಿತ್ತಿಂಪಾಗಿ ಕಾನನದ ವಿಜನನೀರವದಿ (ಚಿತ್ರಾಂಗ. ೨೦-೫೪). (ನಾ). ೨. ನಿರ್ಜನವಾದುದು ; ಏಕಾಂತವಾದುದು : ಶಾಂತಿಯನ್ನಳವಡಿಸೆ ವಿಜನಮಹ ಠಾವಿನೊಳ್ ಕುಳ್ಳಿರ್ದು . . . ಉಭಯದಿಟ್ಟಿಗಳ ನಾಸಾಗ್ರದಲಿ ನೆಲೆಗೊಳಿಸೆ (ವೆಂಕಾರಾ. ೨-೧೦-೨೨) ; ಪ್ರತ್ಯೇಕವೂ ವಿಜನವೂ ಆದ ಸ್ಥಳದಲ್ಲಿ ಗೃಹವಧುವಿನಂತೆ ಯಾರನ್ನೋ ನಿರೀಕ್ಷಿಸಿಕೊಂಡು ಕುಳಿತಿದೆಯೋ ಏನೋ (ನಿಬಂಧ. II, ೧೦೬). [ಸಂ.]

ವಿಜಪಿಲ (ನಾ). ಕೆಸರಿರುವ ಸ್ಥಳ : "ಪಿಚ್ಛಲಂ ವಿಜಪಿಲ[ಪಾಠಾಂ.ಲಕಂ]-ಈ ೨ ಕೆಸಱುಳ್ಳೆಡೆ" (ಹಲಾಯು. ೧೧೨-೫೬). [ಸಂ.]

ವಿಜಯ್ $_1$ (ನಾ). ಒಂದು ಬಗೆಯ ಔಷಧೀಸಸ್ಯ : ಜಾಕಾಯಿ, ಜಾಪತ್ರೆ . . . ಅಳಲೆಕಾಯಿ, ವಿಜಯ, ಎಳ್ಳು ಇವಂ ಪ್ರತ್ಯೇಕ ಸಮಾನವಾಗಿ ಚೂರ್ಣಿಸಿ . . . ಎಣ್ಣೆಯಲ್ಲಿ ಕೊಡಲು ಆಮಾತಿಸಾರಂ ಪರಿಹರವಹುದು (ಸಕತ್ರೆ. ೩೧೪). [ಸಂ. ವಿಜಯಾ]

ವಿಜಯ್ $_2$ (ನಾ). ೧. ಗೆಲುವು ; ಯಶಸ್ಸು : ಜೈನಶಾಸನದೇವಿಕುಳಮುಂ ಸಮಂತು ಸಮಸಂದಿಷ್ಟಾರ್ಥಮಂ ಮಾಟ್ಕೆ ಕಾಂತನ್ಯಲೋಕಸ್ತುತ ನಿನ್ನೊಳಿಂದು ವಿಜಯಂ ಭದ್ರಂ ಶುಭಂ ಮಂಗಳಂ (ಪುಷ್ಪಪು. ೮-೬೪). ೨. ಗೆಲುವು ಪಡೆದವನು ; ಜಯಶಾಲಿ ಯಾದವನು : ನಡೆ ವಿಜಯನಾಗೆಂದು ತನುವನು ತಡವಿದರು (ಕುವ್ಯಾಪ್ರೊ. ೪-೫೩) ; ವಿಜಯನಾಗೈ ಕಂದ (ಶಾಶಾ. ೨೮-೬). ೩. ಪಾಂಡವರಲ್ಲಿ ಮೂರನೆಯವನಾದ ಅರ್ಜುನನ ಹೆಸರುಗಳಲ್ಲಿ ಒಂದು : ಭುಜವಿಜಯದೆ ವಿಜಯನುಮನಿಱಿಸಿದಂ ನರಸಿಂಹಂ (ಪಂಪಭಾ. ೧-೩೬) ; ದಿವ್ಯಾಸ್ತ್ರಮಂ ವಿಜಯಂಗಿತ್ತವನೀತನೀತನೆ (ಪಂಪಾಶ. ೩೧). ೪. ವೈಕುಂಠದ ದ್ವಾರಪಾಲಕರಲ್ಲಿ ಒಬ್ಬನ ಹೆಸರು : ಜಯನ ವಿಜಯನ ದೈತ್ಯಜನ್ಮವನು ಈತನೊದೆದನು (ಕುವ್ಯಾಉ. ೯-೫೪). 'ಜಯ' ಪರಾ. ೫. ಅರುವತ್ತು ಸಂವತ್ಸರಗಳಲ್ಲಿ ಒಂದು; ಇಪ್ಪತ್ತೇಳನೆಯ ಸಂವತ್ಸರ : ಪ್ರಭವ ವಿಭವ . . . ವಿಜಯ ಅಕ್ಷಯವೆಂದಱುವತ್ತು ತೆಜನಾಗಿಹುದು (ವಿವೇಕ. ೩೨೧). ೬. ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು : ಕಾಮಿಕೆ, ಯೋಗಜ . . . ವಿಜಯ, ನಿಶ್ವಾಸ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). ೭. ವೈಖಾನಸಾಗಮದಲ್ಲಿ ಸಂಹಿತೆಗಳೆಂದು ಪ್ರಖ್ಯಾತಿಗೊಂಡ ಎಂಟು ವಿಭಾಗಗಳಲ್ಲಿ ಒಂದು : ಮರೀಚಿಮಹರ್ಷಿಪ್ರೋಕ್ತವಾದ . . . ವೀರ, ವಿಜಯ, ವಿಮಲ, ಕಲ್ಪಗಳೆಂಬ ಎಂಟು ಆಗಮಗಳು "ಸಂಹಿತೆ"ಗಳೆಂದೂ . . . ಪ್ರಖ್ಯಾತವಾಗಿವೆ (ಭಾರದ. ೭೫). ೮. ಶೂರ ; ವೀರ. ೯. ಯುದ್ಧ ; ಸಮರ : "ಧುರಜೈತ್ರಾಭಯ ಪಾರ್ಥರಿಂತು ವಿಜಯಾಖ್ಯಂ" (ನಾನಾರ. ೯೫).

ವಿಜಯಮಂಡನ = ಗೆಲುವಿನಿಂದ ಶೋಭಿಸುವವನು ; ಒಂದು ಬಿರುದು : ಬನವಾಸೆನಾಡನೊಸೆದಾಳ್ದು ವಿರಾಜಿಪ ಬಳ್ಳಿಗಾವೆಯೊಳು ಸ್ಥಿರವಿರುತಿರ್ದ್ದಪಂ ವಿಜಯಮಂಡನ ರೇಚಣದಂಡನಾಯಕಂ (ಎಕ.VIII(S), ಶಿಕಾರಿ. ೩೩೪-೧೬ ; 1100). [ಸಂ.]

ವಿಜಯಂಗೆಯ್ (ಕ್ರಿ). ಹೊರಡು ; ಪ್ರಯಾಣಬೆಳೆಸು ; ⅊ ಇದು ರಾಜರು, ಗುರುಹಿರಿಯರ ಆಗಮನ, ನಿರ್ಗಮನಗಳನ್ನು ಕುರಿತು ಹೇಳುವಾಗ ಗೌರವಸೂಚಕವಾಗಿ ಬಳಸುವ ಪದ : ಗಂಗಮಂಡಲಿಕಂ ದೇವನಿವಾಸದತ್ತ ವಿಜಯಂಗೆಯ್ದಂ ನೊಬಂಬಾನ್ತಕಂ (ಎಕ. II, ೫೯-೧೧೩ ; 974). [ವಿಜಯ್ $_2$ + ಕೆಯ್ $_1$]

ವಿಜಯಚ್ಛಂದ (ನಾ). ಐನೂರು ಎಳೆಗಳುಳ್ಳ ಒಂದು ವಿಧವಾದ ಹಾರ : ಸಾಸಿರದೆಂಟುತೋರಮುತ್ತಿನ ಸರದಿಂದ್ರಚ್ಛಂದಂ ಮೊದಲಾಗೆ ವಿಜಯಚ್ಛಂದಹಾರದೇವ ಚ್ಛಂದಾರ್ಧಹಾರ ರಶ್ಮಿಕಲಾಪಗುಚ್ಛನಕ್ಷತ್ರಮಾಲಾರ್ಧಗುಚ್ಛಮಾಣವಕಾರ್ಧಮಾಣ ವಕಂಗಳೆಂಬ ಸನ್ನೊಂದು ನಾನಾರತ್ನಸುವರ್ಣಫಲಕವಿರಚನಾದಿಭೇದದಿಂ (ಆದಿಪು. ೮-೫೫ ೨) ; ⅊ "೫೦೪ ಎಳೆಗಳುಳ್ಳ ಹಾರವು, ಇದನ್ನು ಅರ್ಧಚಕ್ರವರ್ತಿಗಳೂ ಬಲದೇವ, ಕಾಮದೇವ ಮೊದಲಾದವರೂ ಧರಿಸುತ್ತಾರೆ" (ಆದಿಪು. ಕೊಶ). [ಸಂ.]

ವಿಜಯಜಾತಿ (ನಾ). [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಜಾತಿ ಎಂಬ ಸೂತ್ರಪದದ ನಾಲ್ಕುವಿಭಾಗಗಳಲ್ಲೊಂದು ; ⅊ ವಿಜಯಜಾತಿಯಿಂದ ಚಕ್ರವರ್ತಿತ್ವವುಂಟಾಗುತ್ತದೆ : ದಿವ್ಯಜಾತಿಯಿಂದಹಮಿಂದ್ರತ್ವಮುಂ ವಿಜಯಜಾತಿಯಿಂದ ಚಕ್ರವರ್ತಿತ್ವಮುಂ . . . ಪಡೆಯಲಕ್ಕುಂ (ಚಾವುಂಪು.೨೨೮). 'ದಿವ್ಯಜಾತಿ' ಪರಾ. [ಸಂ.]

ವಿಜಯತೆ (ನಾ). ಗೆಲುವಿನ ಸ್ಥಿತಿ ; ಗೆಲುವು ; ಜಯ : ಏಱೆ ಶಿವರತಿ ತೋಱೆ ದೃಷ್ಟವನೂಱೆ ವಿಜಯತೆ ಸಾಱೆ ಪುರದೊಳು ಬೀಱೆ ವಾಸನೆ ಹೇಱೆ ನಿಂಬಿಯ ಸೂಱೆಯೆಲ್ಲರಿಗೆ (ಬಸವಪು. ೩೬-೨೮). [ಸಂ. ವಿಜಯತಾ]

ವಿಜಯದಶಮಿ (ನಾ). ಆಶ್ವಯುಜಶುದ್ಧದಶಮಿ ಮತ್ತು ಅಂದು ಆಚರಿಸುವ ಹಬ್ಬ ; ನವರಾತ್ರಿಯ ಕೊನೆಯ ದಿನ : ವಿಜಯದಶಮಿದಿವಸ ನಡೆಸಿದ ಕಟ್ಟಳೆಗಳು (ಮಹಾವಂ. I, ೩೮); ವಿಜಯದಶಮಿಯ ಸುಮುಹೂರ್ತದಲ್ಲಿ ವಿಜಯಯಾತ್ರೆ ಹೊರಡುವುದೆಂದು ನಿಶ್ಚಯವಾಯಿತು (ಶಾಂತಲಾ. ೧೪೭).

[ಸಂ. ವಿಜಯದಶಮೀ]

ವಿಜಯದ್ವಿಪ (ನಾ). ರಾಜನು ದಿಗ್ವಿಜಯಕ್ಕೆ ಹೊರಡುವಾಗ ಏರುವ ಆನೆ ; ಜಯಗಜ : ಪಳಿಕಿನ ಶಿಲಾಪಟ್ಟಂ ಪ್ರಸ್ಥಾನದೊಳ್ ವಿಜಯದ್ವಿಪಾವಳಿಯ ದರಿಗೊಂಡುದ್ದೇಶಂ ಚಕ್ರವರ್ತಿಯ ನಾಮದಗ್ಗಳದ ಸಿರಿಯಂ ಪೋಲ್ವನ್ನಂ ತದ್ವಿಪಾಳಿ ದಿಗಂತದೊಳ್ ತಳೆದುದು ಜಯಸ್ತಂಭಶ್ರೀಯಂ ತ್ರಿಕೂಟಮಹೀಧರಂ (ಶಾಂತಿಪು. ೧೧-೧೮). [ಸಂ.]

ವಿಜಯಧ್ವಜ (ನಾ). ಜಯದ ಸೂಚಕವಾದ ಪತಾಕೆ ; ಜಯಧ್ವಜ : ಅನುವರದೊಳ್ ವಜ್ರಾಯುಧನನಿಕ್ಕಿ ವಿಕ್ರಾಂತದಿಂದ ವಿಜಯಧ್ವಜಮಂ ತನಗೆತ್ತಿಸಿದಂ . . . ನಿಜಶೌರ್ಯಬಳಂ (ಸಿಕಿಮಾ. ೬-೫) ; ಅಱಿಕೆದಾಣದೊಳೆಸೆವಂತೊಂದಿಸುತುಂ ವಿಜಯಧ್ವಜವ್ಯಂದಮಂ . . . ಸಾರ್ತಂದಂ (ಪುಷ್ಪಪು. ೫-೫೯). [ಸಂ.]

ವಿಜಯನಗರ (ನಾ). ೧. ಗೆಲುವನ್ನು ಪಡೆದುದಕ್ಕಾಗಿ ಕಟ್ಟಿದ ನಗರ. ೨. ಒಂದು ಊರಿನ ಹೆಸರು ; ⅊ ಈಗಿನ ಹಂಪೆ ಮತ್ತು ಹೊಸಪೇಟೆ ಪ್ರದೇಶ, ವಿಜಯನಗರ ಅರಸುಮನೆತನದ ರಾಜಧಾನಿಯಾಗಿದ್ದಿತು : ವೀರಶ್ರೀ ನಾರಸಿಂಹ ಸ ವಿಜಯನಗರೇ ರತ್ನಸಿಂಹಾಸನಸ್ಥಃ (ಎಕ.VIII,ಶಿವಮೊ.೧-೩೪; 1513).

[ಸಂ.]

ವಿಜಯಪಟಹ (ನಾ). ಗೆಲುವನ್ನು ಸೂಚಿಸಲು ಬಾರಿಸುತ್ತಿದ್ದ ಪಟಹ,– ಒಂದು ಬಗೆಯ ಚರ್ಮವಾದ್ಯ : ದುರಿತಾರಿಯನಭವಂ ಗೆಲ್ದಿರೆ ಮೊಱಗುವ ವಿಜಯಪಟಹದಂತೆ ನವಾಂಭೋಧರರವದಿನೇಱುಕೋಟಿಯಮರೆ ಸುರದುಂದುಭಿ ಗಳೊಡನೆ ಮೊಱಗಿದುವಾಗಳ್ (ಶಾಂತಿಪು. ೧೦-೨೧). [ಸಂ.]

ವಿಜಯಪತಾಕೆ (ನಾ). = ವಿಜಯಧ್ವಜ : ದಂಡನಾಯಕರು ಕಗ್ಗೊಲೆಯನ್ನೆಸಗಿದ ವಿಜಯಪತಾಕೆಯನ್ನು ಮೆರೆದಾಗ . . . ನಾವು ಅಂಥದೇ ವಿಚಿತ್ರವ್ಯಾಪಾರವನ್ನು ಗಮನಿಸಬಹುದಲ್ಲವೆ ? (ಪುನರು. ೧೯೭). [ಸಂ. ವಿಜಯಪತಾಕಾ]

ವಿಜಯಪಟ್ಟೆ (ನಾ). ಒಂದು ಬಗೆಯ ವಾದ್ಯ : ಒಂದೊಂದು ರಾಜವಂಶವೂ ತನಗೇ ವಿಶಿಷ್ಟವಾಗಿದ್ದ ವಾದ್ಯ ಅಥವಾ ವಾದ್ಯಗಳನ್ನೂ . . . ಪಡೆದಿದ್ದಿತು . . . ನಾಗ-ವಿಜಯಪಟ್ಟೆ (ಕಶಾಅ. ೩೩೬).

ವಿಜಯಪಟ್ಟೆಘೋಷಣ = ಒಂದು ಬಿರುದು : ನಾಗಧ್ವಜಪ್ರತಾಪ ವಿಜಯಪಟ್ಟೆಘೋಷಣ (ಎಇ. III, ೨೩೨-೭ ; 1070). [ವಿಜಯ್ $_2$ + ಪಟ್ಟೆ $_1$]

ವಿಜಯಪ್ರಶಸ್ತಿ (ನಾ). ಗೆಲುವನ್ನು ಘೋಷಿಸುವ ಪ್ರಶಂಸಾಕಾವ್ಯ ; ಜಯಪತ್ರಿಕೆ : ಆ ವೃಷಭಾದ್ರಿಯ ಮೇಲಿಳಾಭಿತ್ತಿಯೊಳ್ ಆತ್ಮೀಯ ವಿಶ್ವವಿಶ್ವಂಭರಾವಿಜಯಪ್ರಶಸ್ತಿಯನಟ್ಟಿಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ (ಆದಿಪು. ೧೩-೭೦ ವ). [ಸಂ.]

ವಿಜಯಪ್ರಸ್ಥಾನ (ನಾ). ದಿಗ್ವಿಜಯಕ್ಕಾಗಿ ಹೊರಡುವ ಪ್ರಯಾಣ ; ಕ್ಷೇತ್ರಯಾತ್ರೆ : ವ್ಯೋಮಭಾಗಮನೆಯ್ದಿರ್ದುದು ಚಕ್ರವರ್ತಿ ವಿಜಯಪ್ರಸ್ಥಾನ ಭೇರೀರವಂ (ಆದಿಪು. ೧೧-೧೦) ; ಘರ್ಜಿಸಿತ್ತು . . . ವಿಜಯಪ್ರಸ್ಥಾನಭೇರೀರವಂ (ಪುಷ್ಪಪು. ೫-೭). [ಸಂ.]

ವಿಜಯಬೀಜ (ನಾ). ಒಂದು ಬಗೆಯ ಔಷಧೀಸಸ್ಯ : ಗ್ರಹಣಿಯಿಂದ ಅತಿಸಾರ ನಿಲ್ಲದಿದ್ದರೆ ವಿಜಯಬೀಜದ ಎಲೆಯನ್ನು ಹುರಿದು ಎಲವದ ಹಗಿನು, ಸಜ್ಜರಸ . . . ಇವಂ ಸಮಾನವಾಗಿ ಚೂರ್ಣವ ಮಾಡಿ . . . ಗುಂಜಿಯ ತೂಕ ಕೊಡುವುದು (ವೈದ್ಯ. ೧೮೦). [ವಿಜಯ$_1$ + ಬೀಜ]

ವಿಜಯಬೀರವಣ (ನಾ). ದಿಗ್ವಿಜಯದಲ್ಲಿ ಗೆದ್ದ ಸೈನಿಕರ ಜೀವನನಿರ್ವಹಣೆಗೆ ಪ್ರಜೆಗಳು ಕೊಡುತ್ತಿದ್ದ ತೆರಿಗೆ : ವಿಜಯಬೀರವಣ ಕೊಡತಿವಣ ಬಾಣ ಎಳ್ಳು ಭತ್ತವೆನಿಸಿದ ಪೂರ್ವಾಯ ಮತ್ತಂ ಅಪೂರ್ವಾಯಮೊಳಗಾಗಿ ಗ್ರಾಮಕೆ . . . ಕೊಟ್ಟರು (ಮೃಅರಿ. ೧೯೪೦,೭-೨೬; 1206). [ವಿಜಯ$_2$ + ಬೀರವಣ]

ವಿಜಯಭೇರಿ (ನಾ). ಗೆಲುವನ್ನು ಘೋಷಿಸುವ ಭೇರಿ ; ಜಯಭೇರಿ : ಉತ್ತರಭಾರತವಿಜಯೋದ್ಯೋಗಮಂ ಭರತರಾಜನಱಿಪಲೆಂದು ವಿಜಯಭೇರಿಯಂ ಪೊಯಿಸಿದಾಗಳ್ (ಆದಿಪು. ೧೩-೪೧ ವ). [ಸಂ.]

ವಿಜಯಮಂಗಳ (ನಾ). ಗೆಲುವಿನ ಹಬ್ಬ ; ವಿಜಯೋತ್ಸವ : ಅಂತು ವಿಜಯಮಂಗಳಂ ನೆಗೞೆ ಗೋಕುಲಮಂ ಪೊಕ್ಕು ನಂದನಂದನಂ . . . ಸುಖ ದಿಂದಿರ್ದನ್ನೆಗಂ (ಜಗವಿ. ೪-೫೮ ವ). [ಸಂ. ವಿಜಯಮಂಗಲ]

ವಿಜಯಮಿತ್ರ (ನಾ). ಅರ್ಜುನನ ಗೆಳೆಯ ; ಕೃಷ್ಣ : ಜಯಜಯಜನಾರ್ದನ ಮುಕುಂದ ಮುರಮರ್ದನ ವಿಜಯಮಿತ್ರ ಗೋವಿಂದ ಪಕ್ಷಿವಾಹನ (ಕೃಷ್ಣಭಾ. ೧೧-೩೬). [ಸಂ.]

ವಿಜಯಯಾತ್ರೆ (ನಾ). = ವಿಜಯಪ್ರಸ್ಥಾನ : ವಿಜಯದಶಮಿಯ ಸುಮುಹೂರ್ತದಲ್ಲಿ ವಿಜಯಯಾತ್ರೆ ಹೊರಡುವುದೆಂದು ನಿಶ್ಚಯವಾಯಿತು (ಶಾಂತಲಾ. ೧೪೭). [ಸಂ. ವಿಜಯಯಾತ್ರಾ]

ವಿಜಯರಾಜ್ಯ (ನಾ). ಗೆಲುವಿನಿಂದ ಸಂಪಾದಿಸಿದ ರಾಜ್ಯ : ಶ್ರೀಮದ್ಧುವನೈಕಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚನ್ದ್ರಾರ್ಕ್ಕತಾರಂಬರಂ ಸಲುತ್ತಮಿರೆ (ಸೌಇಇ. XX, ೪೬-೪ ; 1072). [ಸಂ.]

ವಿಜಯಲಕ್ಷ್ಮಿ (ನಾ). ಜಯದ ಅಧಿದೇವತೆ : ವಿದ್ವಿಷ್ಟಚಮುಚಕ್ರ ಪಾಂಶುಪಟಲಮನೆ ನಿಜವಿಜಯಲಕ್ಷ್ಮಿಪರಿಣಯನೋತ್ಸವಪ್ರಾರಂಭ ಪಿಷ್ಟಾತಕಚೂರ್ಣಮೆಂದುಂ . . . ಬಗೆವ ಬಾಹುಬಲಿಕುಮಾರಂ (ಆದಿಪು. ೧೪-೮೪ ವ) ; ಸಿಂಹಾಸನದರ್ಕೆಲದೊಳ್ ನಿಂದ ವೀರಲಕ್ಷ್ಮಿ ವಿಜಯಲಕ್ಷ್ಮಿಯಳ್. . . ವೀರಸೇಸೆಯನಿಕ್ಕುವಂತೆ ಬಿಂಕದಿಂ ಕೊಂಕಿ ನಿಂದು (ಗಿರಿಕ. ೨-೧೦೫ ವ). [ಸಂ. ವಿಜಯಲಕ್ಷ್ಮೀ]

ವಿಜಯವೀರವಣ (ನಾ). = ವಿಜಯಬೀರವಣ : ಕುಮಾರಗಾಣಿಕೆ ೨ ಹಾ ೨ ವಿಜಯ ವೀರವಣ ಪ ೧ (ಎಕ. VIII(R), ಹಾಸನ. ೧೧೨-೬೬ ; ಸು. 1230). [ವಿಜಯ$_2$ + ವೀರವಣ]

ವಿಜಯಶಾಲಿ (ನಾ). ಗೆಲವನ್ನು ಪಡೆದವನು ; ವಿಜಯಿ : ಪುರಜನರೆಲ್ಲ ವಿಜಯಶಾಲಿಯಾಗಿ ಬಂದ ಪ್ರಭುಗಳ ಮೇಲೆ ಹೂಮಳೆ ಕರೆದರು (ಶಾಂತಲಾ. ೨೩೪). [ಸಂ. ವಿಜಯಶಾಲಿನ್]

ವಿಜಯಶ್ರೀ (ನಾ). ಗೆಲುವಿನ ಅಧಿದೇವತೆ ; ಜಯಲಕ್ಷ್ಮಿ : ಅಂತು ಪೊಱ ಮಟ್ಟುತ್ತರಭರತದ ವಿಜಯಶ್ರೀವಿವಾಹಮಹೋತ್ಸವಪ್ರಾರಂಭದೊಳ್ ದಿಕ್ಪಾಲಕರ ಕೆದಱುವ ಪಿಷ್ಟಾತಕಚೂರ್ಣಮೆನಿಸುವ ರಜಃಪುಂಜಮುಮಂ . . . ನೋಡುತ್ತುಂ ನಡೆಯೆ (ಆದಿಪು. ೧೩-೪೪ ವ) ; ದೈವದತ್ತಲೊಲೆದಿಹುದತ್ತ ವಿಜಯಶ್ರೀಯ ಕುಡಿನೋಟ (ಕುವಾದ್ರೋ. ೪-೨). [ಸಂ.]

ವಿಜಯಸಂವತ್ಸರ (ನಾ). ಅರುವತ್ತು ಸಂವತ್ಸರಗಳಲ್ಲಿ ಒಂದು : ವಿಜಯ ಸಂವತ್ಸರ ಇಪ್ಪದಾ ಎಂಟನೆಯೊಳು (ಎಕ. X, ಕೋಲಾರ. ೬-೨ ; 753). [ಸಂ.]

ವಿಜಯಸಖಿ (ನಾ). = ವಿಜಯಮಿತ್ರ : ಇಂದಿರಾಪತಿ ವಿಜಯಸಖಿ ಅರವಿಂದನಾಭ ಪುರಂದರಾರ್ಚಿತ ನಂದಕಂದ ಮುಕುಂದ ರಕ್ಷಿಸು ನಮ್ಮ (ಹರಿಹಾ. ೧೨). [ಸಂ.]

ವಿಜಯಸಾರಥಿ (ನಾ). ಅರ್ಜುನನ ರಥವನ್ನು ನಡೆಸಿದವನು ; ಪಾರ್ಥಸಾರಥಿ ; ಶ್ರೀಕೃಷ್ಣ : ಸುಜನರ ಪೊರೆಯುವ ಕುಜನರ ತರಿಯುವ ವಿಜಯಸಾರಥಿ ನಮ್ಮ ವಿಜಯವಿಠಲರೇಯ (ವಿದಾಕೃ. ೨೦-೩). [ಸಂ.]

ವಿಜಯಸೇಸೆ (ನಾ). ಗೆಲುವಿಗಾಗಿ ಸೂಸುವ ಅಕ್ಷತೆ,—ಸೇಸೆ : ವಿಜಯಶೇಷ -ವಿಜಯಸೇಸೆ [ಪಾಠಾಂ. ಸಿ] (ಶಮದ. ನ. ೬೦೮ ಪ್ರಯೋ). [ವಿಜಯ$_2$ + ಸೇಸೆ$_1$]

ವಿಜಯಸ್ತಂಭ (ನಾ). ಗೆಲವಿನ ನೆನಪಿಗಾಗಿ ನೆಡುವ ಕಂಬ : ಸ್ಮರನೃಪತಿಯ ವಿಜಯಸ್ತಂಭವೆನಿಪ ತರುಣಿಯ ಬಟ್ಟ ನುಣ್ಮೊಡೆ (ಇಷಾಂ. ೫-೯). [ಸಂ.]

ವಿಜಯಾಗಮ (ನಾ). ಕಾಮಿಕಾದಿ ಇಪ್ಪತ್ತೆಂಟುದಿವ್ಯಾಗಮಗಳಲ್ಲಿ ಹನ್ನೊಂದನೆಯದು : ಆ ಸಿದ್ಧಾಂತಭೇದಂಗಳಾವವೆಂದೊಡೆ -೧. ಕಾಮಿಕಾಗಮ . . . ೧೧. ವಿಜಯಾಗಮ . . . ೨೮. ವಾತುಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ (ವಿವೇಕ. ೬೨). [ಸಂ.]

ವಿಜಯಾಜ್ಞೆ (ನಾ). [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಆಜ್ಞೆಯೆಂಬ ಸೂತ್ರ ಪದದ ಮೂರು ಬಗೆಗಳಲ್ಲಿ ಒಂದು : ವಿಜಯಾಜ್ಞೆಯೆಂಬುದು ಚಕ್ರಧರಪುಣ್ಯದಿಂ ದೇವವಿದ್ಯಾಧರ ನರೇಂದ್ರರಂ ವಶ್ಯಂ ಮಾಟ್ಟುದು (ಚಾವುಂಪು. ೨೩೦). [ಸಂ. ವಿಜಯಾಜ್ಞಾ]

ವಿಜಯಾದಿತ್ಯ (ನಾ). ಒಬ್ಬಾತನ ಹೆಸರು ; P ಆಳುಪವಂಶದ ಒಬ್ಬ ಅರಸನ ಹೆಸರು: ವಿಜಯಾದಿತ್ಯ ಆಳುಪೇನ್ದ್ರ ಪರಮೇಸ್ವ(ಶ್ವ)ರ ಅಧಿರಾಜರಾಜನ್ ಉತ್ತಮಪಾಣ್ಡ್ಯನ್ (ಎಇ. IX, ೨೨-೧; 800). [ಸಂ.]

ವಿಜಯಾನಂದ (ನಾ). [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹದಿನಾರನೆಯದಾದ ಅಷ್ಟಿ ಎಂಬ ಛಂದಸ್ಸಿನ ಒಂದು ವೃತ್ತ : ವನು ಧಾತ್ರೀಚಕ್ರಂ ಸುರಪಪವನಂ ಜಾತವೇದಂ ಮನೋಜನ್ಮಧ್ವಂಸಂ ಪದದ ಕಡೆಯೊಳ್ ಚೆಲ್ವನಾಳ್ಪೆಯ್ದೆ ನಿಲ್ಕುಂ ವಿಶ್ರಾಮಂ ದಿವಸಕರನೋಳ್ಕಾಂತೆ ವಿದ್ವಜ್ಜನಾನಂದಂ ಛಂದಂ ನೆಗೞ್ದ ವಿಜಯಾನಂದಮಕ್ಕುಂ (ಛಂದೋಂಬು. ೨-೧೬೨). [ಸಂ.]

ವಿಜಯಾನಕ (ನಾ). ವಿಜಯೋತ್ಸವದಲ್ಲಿ ಬಾರಿಸುವ ನಗಾರಿ : ಶಂಖಿಕಾಹಳಾವ್ರಜ ವಿಜಯಾನಕಧ್ವನಿ ವಿಜೃಂಭಿಸೆ . . . ನಾಕಜರಜನರ್ಕೆಲಂಬಿಡದದೇಂ ನಡೆಗೊಂಡರೊ ಮೇಘಮಾರ್ಗದೊಳ್ (ಜಗವಿ. ೧-೪೧). [ಸಂ.]

ವಿಜಯಾರ್ಧ (ನಾ). [ಜೈನ] ಒಂದು ಪರ್ವತದ ಹೆಸರು ; ಭರತಕ್ಷೇತ್ರದ ನಡುವೆ ಪೂರ್ವಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರಭಾರತ ದಕ್ಷಿಣಭಾರತ ಎಂದು ಎರಡಾಗಿ ಪೂಡಿರುವ ಪರ್ವತ : ಇದು ವಿಜಯಾರ್ಧಮೆನ್ನ ಪೆಸರುಂ ವಿಜಯಾರ್ಧಮಲಂಘ್ಯಮೆಂದುಮಿಂತಿದು ಪೆಱರ್ಗಾನುಮಿನ್ನೆ ಗಮಲಂಘ್ಯನೆಂ (ಆದಿಪು. ೧೩-೧೫). [ಸಂ.]

ವಿಜಯಾಸ್ತ್ರ (ನಾ). ಗೆಲ್ಲಲು ಸಾಧನವಾದ ಆಯುಧ : ಸ್ಮರಂಗೆ ವಿಜಯಾಸ್ತ್ರಂ . . . ಎಂಬುದು ಜನಂ ರೂಪಂ ಮಹಾದೇವಿಯಾ (ಪುಷ್ಪಪು. ೯-೪೬). [ಸಂ.]

ವಿಜಯಿ$_1$ (ನಾ). ಒಂದು ಬಗೆಯ ಗಿಡ ; ಸೆಣಬು : "ವಿಜಯಿಯೆನೆ ಭಂಗಿ" (ಮಲಗಾ. ೩೫-೧೫). [< ಸಂ. ವಿಜಯಾ]

ವಿಜಯಿ$_2$ (ಗು). ೧. ಗೆದ್ದ ; ಗೆಲುವನ್ನು ಪಡೆದ. (ನಾ). ೨. ಗೆದ್ದವನು ; ಜಯಶಾಲಿ : ಆ ಭುವನತ್ರಯವಿಜಯಿಯಪ್ಪ ರೂಪಾತಿಶಯದೊಡನಮಳ್ಳೆದಂತೆ ಬಳೆದ . . . ತೀರ್ಥಕರಕುಮಾರಂ (ಶಾಂತಿಪು. ೧೦-೯೨ ವ). [ಸಂ. ವಿಜಯಿನ್]

ವಿಜಯಿಸು (ಕ್ರಿ). ಶೋಭಿಸು ; ವಿಜೃಂಭಿಸು : ಕಿನ್ನರಗೇಯನಿಸ್ವನಂ ವಿಜಯಿಸೆ [ಪಾಠಾಂ. ಭಜಿಯಿಸೆ] . . . ನಾಕಜರಜನರ್ಕೆಲಂಬಿಡದದೇಂ ನಡೆಗೊಂಡರೊ ಮೇಘಮಾರ್ಗದೊಳ್ (ಜಗವಿ. ೧-೪೧). [ವಿಜಯ$_2$ + ಇಸು$_3$]

ವಿಜಯೆ (ನಾ). = ವಿಜಯಿ$_1$: ಮುಳ್ಳುಸುಂಡೆ . . . ಗುಗ್ಗುಳ ವಿಜಯಾ

(ಭಂಗಿಸೊಪ್ಪು) ಅತಿಮಧುರ . . . ಮಗ್ಗಾರೆಬೇರು — ಇವನ್ನು ಬಗೆಯೊಂದಕ್ಕೆ ಒಂದು ಸೇರಿನಂತೆ ಹಾಕಿ ಚೂರ್ಣಿಸಿ (ಸಕವೃ. ಪರಿ. ೪೮೮). [ಸಂ. ವಿಜಯಾ]

ವಿಜಯೇಶ್ವರ (ನಾ). ಗೆಲುವನ್ನು ಪಡೆದವನು ; ಶಿವ : ಮಲುಹಣನನಾ ಮಲುಹಣಿಯನಾ . . . ಮಲಹರಂ ವಿಜಯೇಶ್ವರಂ ನಿಜಪುರಕೆ ಕೊಂಡೊಯ್ದು (ಬಸಪು. ೪೨-೬೯). [ಸಂ.]

ವಿಜಯೋತ್ಸವ (ನಾ). ೧. ಗೆಲುವು ದೊರೆತುದರಿಂದ ಉಂಟಾದ ಸಡಗರ,-ಉತ್ಸಾಹ : ಕೃಷ್ಣಾಯೆನುತರ್ಜುನನ ತಲೆ ಬೀಳಲು ವಿಜಯೋತ್ಸವದೊಳೆದಿದಂ ಬಭ್ರುವಾಹನಂ ನಿಜಪುರಕೆ (ಕೃಮಿಭಾ. ೨೩-೪೯). ೨. ಗೆಲುವು ಸಿಕ್ಕಿದುದಕ್ಕಾಗಿ ಮಾಡುವ ಸಂತೋಷಸಮಾರಂಭ : ವಿಜಯೋತ್ಸವವೂ ಕುಮಾರಜನ್ಮೋತ್ಸವವೂ ಒಟ್ಟಿಗೇ ಆದ ಪರಮಾನಂದದಲ್ಲಿ ವಿಷ್ಣುವರ್ಧನನು ಆ ದೇವರ್ಗ . . . ದತ್ತಿಯನ್ನು ಬಿಡುತ್ತಾನೆ (ಸವತಿ.VII. ಪ್ರಸ್ತಾವನೆ). ೩. ಆಶ್ವಿನಮಾಸದ ದಶಮಿಯಂದು ವಿಷ್ಣುವನ್ನು ಕುರಿತು ಮಾಡುವ ಹಬ್ಬ,—ಉತ್ಸವ. [ಸಂ.]

ವಿಜಯೋತ್ಸಾಹಿ (ನಾ). ೧. ಗೆಲುವನ್ನು ಪಡೆಯುವ ಉತ್ಸಾಹದಲ್ಲಿರುವವನು : ಸಮರಸಿದ್ಧರಾಗಿ ಬಂದ ಕುರುಪಾಂಡವವೀರರೆಲ್ಲ ವಿಜಯೋತ್ಸಾಹಿಗಳಾಗಿ ಕದನಕುತೂಹಲರಾಗಿ ಶಂಖಧ್ವಾನ ಮಾಡುತ್ತಿದ್ದಾರೆ (ಭಾರ. ೧೧೧). ೨. ಗೆಲುವಿನಿಂದ ಸಂತೋಷವನ್ನು ಹೊಂದಿದವನು : ಯುದ್ಧಕ್ಕೆ ಹೋದವರು ವಿಜಯೋತ್ಸಾಹಿಗಳಾಗಿ ಹಿಂದಿರುಗಿದರು (ರೂಢಿ). [ಸಂ. ವಿಜಯೋತ್ಸಾಹಿನ್]

ವಿಜಯೋಪಚಿತ (ಗು). ಗೆಲುವಿನಿಂದ ಕೂಡಿದ : ಉಚಿತವಿತರೇತರಗುಣಸ್ತುತಿರಚನೆ ಗುಣಯುಕ್ತರಿಗೆ ವಿಜಯೋಪಚಿತ ರಣನಾಟಕಕೆ ಜವನಿಕೆಯಾಯ್ತಲೇ ರಜನಿ (ಕುಮಾಶ. ೧-೨೧). [ಸಂ.]

ವಿಜಸಿರ್ತಿ (ನಾ). ಒಬ್ಬಾತನ ಹೆಸರು : ಮಾರತ್ತಿಗಳ ಮಗನ್ ಧೂಲ ಅವನ್ ವಿಜಸಿರ್ತ್ತಿರಾ ಕಾಳೆಗದುಳ್ ಕದನಗರುಳ್ ಎಚ್ಚೆದು ಸರ್ಗ್ಗ ಪುಕ್ಕದುನ್ (ಎಇ.X(S), ಚಂದಾಮಾ. ೧೬೬-೬ ; ೫೧೮ ತತ). [?]

ವಿಜಾತಿ (ನಾ). ೧. ಬೇರೆ ಜಾತಿಯಿಂದ ಹುಟ್ಟಿದುದು ; ಭಿನ್ನಜಾತಿಗೆ ಸೇರಿದುದು. ೨. ಬೇರೆಯ ಜಾತಿ,—ವರ್ಗ : ಚಿಬ್ಬು ಸಂಜನಿಸಿರಲು ಗೋಧೂಮವರ್ಣನಕ್ಕುಬೆದ ಸರ್ವಂಗಳ್ ವಿಜಾತಿಯಕ್ಕು (ಮಂಗರಾ. ೧೧೯-೯). ೩. ಹೀನಕುಲ ; ಕೀಳುಜಾತಿ : ಎಸೆವ ವಿಷವುಂಟಾಗಿಯುಂ ವಿಷಂ ತಾನಲ್ಲ . . . ಪ್ರತಿಕೂಲವುಂಟಾಗಿಯುಂ ಹೆಸರಿಡಲು ಪ್ರತಿಕೂಲವಿಲ್ಲಲ್ಲಿ ಕಡೆಗೆ ಶೋಧಿಸೆ ವಿಜಾತಿಗಳುಂಟೆನಲು ವಿಜಾತಿಗಳೆಲ್ಲ ವಸುಧೆಗೆ ವಿಚಿತ್ರವೆಂದೊಡೆದುಳುಳಿಗೆ ನೋಡಿದ ಕೊಳನನಾ ಭೂಪನು (ಪಚಿಕಾ. ೩-೮೨); ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ಜಾತಿ ವಿಜಾತಿಯಿನಬೆಡ ದೇವನೊಲಿದಾತನೇ ಜಾತ (ಸರ್ವಜ್ಞ. ೯೭೬). ೪. ಹಕ್ಕಿಗಳ ಜಾತಿ ; ಪಕ್ಷಿಕುಲ. ೩,೪ : ಅಬಲನೆಮಗೆ ಮಾಡಿದವಂ ನಿತ್ತರಿಸಂ ತಿರ್ಯಗ್ಜಾತಿಯೊಳೆರಡಿಲ್ಲದೆಯಿಂ ವಿಜಾತಿ ಪುಟ್ಟದೆ ಮಾಣಾಂ (ಕಾದಂಬಾ. ೪೮೪) ; ಕುಮುದದಿಂ ಪ್ರತಿಕೂಲದಿಂ ವಿಜಾತಿಗಳ ಸಂಗಮದಿಂದೆ ಜಡಜೀವನೋಪಾಯದಿಂ ಭಂಗಸಮಿತಿಯಿಂದಿರ್ಪ ತಾವರೆಗೊಳಂ (ಭಾವಚಿಂ. ೩-೫೫) ; ಇದರ್ಕೆಯೆ ನಿನಗಿಂತು ವಿಜಾತಿಯೊಳಮಧೋಗತಿಯೊದವಿತ್ತು (ರಾಮಾಶ್ವ. ೧-೧೩). ೫. ಮಾಲತೀ ಪುಷ್ಪಗಳಿಂದ ಕೂಡಿಲ್ಲದುದು. ೩,೫ : ಮಧುಮಾಸಕುಸುಮಸಮೃದ್ಧಿಯಂತೆ ವಿಜಾತಿಯುಂ . . . ಎನಿಸಿದೆಱುಂಚೆವನೆಯ ರೂಪಾತಿಶಯಮನೆವೆಯಕ್ಕದೆ ನೋಡುತ್ತಂ (ಕಾದಂಪು. ೪೯). [ಸಂ.]

ವಿಜಾತೀಯ (ಗು). ಬೇರೆ ಜಾತಿಯ ; ಭಿನ್ನಜಾತಿಯ : ವಿಜಾತೀಯಾವ್ಯವಧಾನಲಘೂತ್ಪತ್ತಿಸದೃಶಾಪರಾಪರೋತ್ಪತ್ತಿಯೆಂಬಿವಱಂ ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳಾತ್ಮಾಭಿಧಾನಮಂ ಪುಟ್ಟಿಸುಗುಂ (ಆದಿಪು. ೨-೯ ವ). [ಸಂ.]

ವಿಜಾತೀಯದ್ವಿತ್ವ (ನಾ). [ವ್ಯಾಕ] ಬೇರೆ ವರ್ಗದ ಅಕ್ಷರ ; ವಿಜಾತಿಯ ಸಂಯುಕ್ತಾಕ್ಷರ: ವಿಜಾತೀಯದ್ವಿತ್ವವು ಸಜಾತೀಯವಾಗಿ ಮಾರ್ಪಡುವ ಹೊಸಗನ್ನಡಕ್ಕೆ ಸರಿಯಾಗಿ ಅದು 'ಅದಕ್ಕೆ' ಎಂಬ ರೂಪ ತಾಳಿದೆ (ಸಂಶೋಧ. ೬೩). [ಸಂ.]

ವಿಜಾತೆ (ನಾ). ಮಕ್ಕಳನ್ನು ಹಡೆದವಳು ; ತಾಯಿಯಾದವಳು. [ಸಂ. ವಿಜಾತಾ]

ವಿಜಾರ (ನಾ). ಪಾಯಿಜಾಮ ; ಇಜಾರ : ವಿಜಾಪುರದಲ್ಲಿ ವಿಜಾರದವರೆಷ್ಟು ಜನ ಅಂದ ಹಾಗೆ (ಗಾಜೆ). [<— ಮರಾ. ವಿಜಾರ. / ತುಳು. ವಿಜಾರೆ]

ವಿಜಾಲಕ (ನಾ). ಬೆಳಕಿಂಡಿ ; ಗವಾಕ್ಷಿ ; ವಾತಾಯನ : "ಗವಾಕ್ಷಂ ವಿಜಾಲಕಂ ವಾತಾಯನಂ ಜಾಳಮನೆಲ್ ಬೆಳಕ ಕಂಡಿಯಕ್ಕುಂ" (ಮಂಗರಾ. ೬೦-೧೪). [ಸಂ.]

ವಿಜಿಗೀಷಣ (ನಾ). ಗೆಲುವನ್ನು ಬಯಸುವವನು; ಜಯಾಕಾಂಕ್ಷಿಯಾದವನು : ರೋಷಣಪ್ರತಿವೀರರಾಜಿಗೀಷಣಾಧಿಕಶೂರ ಹಿಮಕರಭೂಷಣಾಚ್ಛಾಧಾರ ಬಸವಕುಮಾರ ಮಾಂ ತ್ರಾಹಿ (ಬಸಪು. ೨೦-೩೮). [< ಸಂ. ವಿಜಿಗೀಷು]

ವಿಜಿಗೀಷು (ಗು). ೧. ಗೆಲ್ಲಬೇಕೆಂಬ ಬಯಕೆಯುಳ್ಳ. (ನಾ) ೨. = ವಿಜಿಗೀಷಣ : ವಿಜಯಶ್ರೀಗೃಹಮೆನಿಸುವ ವಿಜಯಪ್ರಸ್ಥಾನಶಿಬಿರನೃಪಮಂದಿರಮಂ ವಿಜಿಗೀಷು ಬಂದು ಪೊಕ್ಕಂ ವಿಜಯಾಲಂಕಾರಬಾಹುಭರತಮಹೀಶಂ (ಆದಿಪು. ೧೧-೨೬) ; ಹೆಡೆಮುಚ್ಚಿದ್ದಿತು ಡ್ಯೊಡ್ಡಾಸ್ಮಮಂತ್ರದಿ ವಿಜಿಗೀಷುಗೆ ಹಿಂಸಾಬುದ್ಧಿ (ಕೋಗಿಲೆ. ೪೯-೯). [ಸಂ.]

ವಿಜಿಗೀಷುತೆ (ನಾ). ಗೆಲ್ಲಬೇಕೆಂಬ ಬಯಕೆ ; ಜಯಾಕಾಂಕ್ಷೆ : ವಿಜಿಗೀಷುತೆಯಿಂ ದೇವ ನೆಗೞ್ದೆ ದೇವ ನೀನೆ ದೇವನೆ ಅಲ್ಲೇ (ಆದಿಪು. ೧೩-೨೬). [ಸಂ. ವಿಜಿಗೀಷುತಾ]

ವಿಜಿಗೀಷುತ್ವ (ನಾ). = ವಿಜಿಗೀಷುತೆ : ವಿಜಿಗೀಷುತ್ವದೊಳೊಂದಿ ಗೋವುಳಿಗನಪ್ಪಂ . . . ಹರಿಯೆಂಬ ದೊಡ್ಡವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ (ಪಂಪಭಾ. ೯-೧೭). [ಸಂ.]

ವಿಜಿಗೀಷುವೃತ್ತ (ನಾ). ಗೆಲುವನ್ನು ಬಯಸುವ ಸ್ವಭಾವವುಳ್ಳವನು : ಉಂಡುಪಟ್ಟಿರ್ಪನನಣಮೆ ನಿರುದ್ಯೋಗಿಯಂ ಭೂಪನೆಂಬರ್ ಎಂದು ವಿಜಿಗೀಷುವೃತ್ತೋದ್ಯುಕ್ತನಾಗಲ್ ಬಗೆದು (ಪಂಪಭಾ. ೪-೧೧) ; ವಿನತಾಪುರಮಂ ಪೊಕ್ಕು ಬಟೆಯಂ ಸಹಜ ವಿಜಿಗೀಷುವೃತ್ತನಪ್ಪುದಱಂ ದಿಗ್ವಿಜಯೋದ್ಯೋಗಮನೆತ್ತಿಕೊಂಡು (ಚಂದ್ರಪ್ರ. ೭-೨೭ ವ). [ಸಂ.]

ವಿಜಿಗೀಷುವೃತ್ತಿ (ನಾ). ಗೆಲ್ಲಬೇಕೆಂಬ ಬಯಕೆ,—ಹಂಬಲ : ಚತುರ್ವಿಧರಾಜವೃತ್ತಮನುದಾತ್ತಮಪ್ಪಂತಾಚರಿಸುತ್ತುಂ ವಿಜಿಗೀಷುವೃತ್ತಿಯನೆತ್ತಿಕೊಂಡು ವಿಕ್ರಮಾವಲಂಬಿಯಾಗಿ (ಅಜಿಪು. ೨-೪೭ ವ); ವಿಕ್ರಮಭೂಪನ . . . ಶೂರತೆಯೂ ವಿಜಿಗೀಷುವೃತ್ತಿಯೂ ಲೋಕದಲ್ಲಿ ಅತ್ಯದ್ಭುತವೆನಿಸಿದವು (ಕವಿಚ. ೬೨). [ಸಂ.]

ವಿಜಿಗೀಷೆ (ನಾ). = ವಿಜಿಗೀಷುತೆ. [ಸಂ. ವಿಜಿಗೀಷಾ]

ವಿಜಿತ (ಗು). ೧. ಗೆಲ್ಲಲ್ಪಟ್ಟ ; ಜಯಿಸಲ್ಪಟ್ಟ : ನಿಜರೂಪ ವಿಜಿತಮಕರಧ್ವಜನಪಿಳದಿಶಾಂತರಪ್ರತಿಷ್ಠಿತಕೀರ್ತಿಧ್ವಜನದನಾಳ್ಯಂ ಧರಣೀಧ್ವಜನೆಂಬಂ (ಚಂದ್ರಪ್ರ. ೬-೬); ವಿಜಿತಸುವರ್ಣಭೂಧರಸುಪ್ರತಾಪ ಜಿತಾಸುಗತಿಮಿತ್ರ ಪೂರ್ಣತೇಜೋ ವಿಜಿತದಿನಕರ (ಬಸಪು. ೫-೧). (ನಾ). ೨. ಗೆಲ್ಲಲ್ಪಟ್ಟವನು ; ಜಯಿಸಲ್ಪಟ್ಟವನು : ವಿಜಿತನೋ ದಿಗತಾಸುವೋ ಧರ್ಮಜನ ಹದನೇನು (ಕುಮಾಶ. ೩-೪೭) ; ಆ ಮಣಿ ಮೆಚ್ಚಿದುದು ತಯಾನಭೋಮಾನಿಜಸುಪ್ರತಾಪವಿಜಿತಂ ಪರಿತಂದಾ ಮಹಿತರಾಜಶೇಖರ ಭೂಮೀಶ್ವರನಂಘ್ರಿಕಮಳಂ ಸೇವಿಪವೊಲ್ (ರಾಜಶೇ. ೫-೨೬). [ಸಂ.]

ವಿಜಿತಬಲ (ನಾ). ಯುದ್ಧದಲ್ಲಿ (ಪ್ರತಿಪಕ್ಷದ) ಸೈನ್ಯವನ್ನು ಗೆದ್ದವನು : ರಜನಿಯೆಂಬ ಮದೋತ್ಕಟದಿಗ್ಗಜದ ಕುಂಭಸ್ಥಳಕೆ ಮೋಹಿದ ವಿಜಿತಬಲನಂಕುಶದ ತಲೆಮಾಣಿಕವಿದೆಂಬಂತೆ ಗಜಗಲಿಸಿತಿನಬಿಂಬ (ತೋರಾ. ೧-೧೫-೨). [ಸಂ.]

ವಿಜಿತೇಂದ್ರಿಯ (ನಾ). ಇಂದ್ರಿಯಗಳನ್ನು ನಿಗ್ರಹಿಸಿದವನು : ಶಾಂತರುಱ್ ವಿಜಿತೇಂದ್ರಿಯರು ವೇದಾಂತನಿಷ್ಠರು (ಕುಮಾಅ. ೧೮-೧೨). [ಸಂ.]

ವಿಜುಗುಪ್ಸತೆ (ನಾ). [ಕಾವ್ಯಮೀ] ಸ್ಥಾಯಿಭಾವಗಳಲ್ಲಿ ಒಂದು ; ಬೀಭತ್ಸದ ಸ್ಥಾಯಿಭಾವ : ರತಿ ಪರಿಹಾಸಂ ಶೋಕೋದ್ಗತಮುತ್ಸಾಹಂ ಭಯಂ ಪ್ರಕೋಪಂ ವಿಜುಗುಪ್ಸತೆ ವಿಸ್ಮಯಾಶಯತ್ವಂ ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ (ಕಾವ್ಯಾಪ. ೭೯೪). [< ಸಂ. ವಿಜುಗುಪ್ಸಿತ]

ವಿಜುಲಿ (ನಾ). ಒಂದು ಬಗೆಯ ನಂಜಿಕೊಳ್ಳುವ ಪದಾರ್ಥ : "ಧಾನ್ಯಾದಿ ಪಿಷ್ಟಮುಂ ಮಿದಿದು ಪುದಿಯಲ್ಕೆ ಸತ್ತುಕಮಕ್ಕು ತುಟಿದ ಕಚ್ಚರಿಯ್ಯೆದೆ ವಿಜುಲಿ [ಪಾಠಾಂ. ಖಜುಳಿ, ವಿಜುಳಿ]ಯಕ್ಕು" (ಮಂಗರಾ. ೬೫-೬). [< ಸಂ. ವಿಜೀಲ]

ವಿಜೃಂಭ (ನಾ). ೧. ಹುಬ್ಬುಗಂಟಿಕ್ಕುವುದು. ೨. ಹೆಚ್ಚಳ ; ಆಧಿಕ್ಯ : ಕಾರ ಕಾದಂಬಿನಿ ಮಾಟ್ಕುಮೇ ಬಿರಯಿಗಂಗಜವಹ್ನಿವಿಜೃಂಭಮಂ ವಿಳೋಳಾಂಬಕವಾರಿಯಂ ಹೃದಯತಾಪಮನುತ್ಕಳಿಕಾಪ್ರಪಂಚಮಂ (ಚಂದ್ರಪ್ರ. ೪-೩೩). ೩. ಪ್ರದರ್ಶನ ; ಆಡಂಬರ : (ಕ). [ಸಂ.]

ವಿಜೃಂಭಣ (ನಾ). ೧. ಅರಳುವುದು ; ಬಿರಿಯುವುದು. ೨. ಹೆಚ್ಚಳ : ಪುದಿದು ಪೊದಟ್ಟ ವಿಕ್ರಮ ವಿಜೃಂಭಣಮಂ ತೊಱೆದಾಳ್ಪೆಸಕ್ಕೆ ಪೂಣ್ದೊದವಿದ ಭೀತಿಯಿಂದೆಱಗಲನ್ಯನೃಪಾವಳಿ (ಎಗೆ. XIII, ೪೪-೩೦; 1112) ; ವಿನುರಂ ಪಿರಿದೊ ತಾಂ ನೆರೆದತ್ತು ಪಯೋಧರದ್ವಯಾಭೂರಿ ವಿಜೃಂಭಣಕ್ಕೆ (ಚಂದ್ರಪ್ರ. ೫-೧೧೯). ೩. ಆಕಳಿಕೆ : ಅನಿಬರುಂ . . . ಪಲ್ಕೋಪಮತ್ರಯಾಯುಷ್ಮಾವಸಾನದೊಳೋಷಧಿಗಳಂತೆ ಫಲಕಾಂತದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ (ಆದಿಪು. ೫-೬೯ ವ). ೪. ಹರಡುವಿಕೆ ; ವಿಸ್ತಾರ. ೫. ಅಬ್ಬರ ; ಆಟೋಪ ; ಆರ್ಭಟ : ರಾಸಭವಿಜೃಂಭಣಕ್ಕೇನೋಸರಿಪುದೆ ಪೋಗಿ ತಾಟ ಪಣ್ಗಳನೊಲವಿಂ ಲೇಸಪ್ಪುವ ನಾಸ್ಯಾದಿಸಿ ಗೋಸಮಿತಿಯನಲ್ಲಿ ಮೆಲ್ಲನಾಡಿಸಿ ಬರ್ಪೆಂ (ಜಗವಿ. ೪-೪೦). ೬. ಉದ್ಭಟತನ; ಔದ್ಧತ್ಯ : ನೋಡೆನಾಂ ನೋನೆನೆ ನೋಡೆ ಕಂಸನ ವಿಜೃಂಭಣಮು ಜಯಿಸಲ್ ಸಮರ್ಥನಂ ಭೂನುತನಂ ಯಶೋವಿದಿತನಂ ಸುತನಂ ಪಡೆವೊಂದು ನೋಂಪಿಯಂ (ಜಗವಿ. ೨-೬೮). [ಸಂ.]

ವಿಜೃಂಭಣಕ್ರಮ (ನಾ). ವಿಕಾಸದ ಹೆಜ್ಜೆ ; ಬೆಳವಣಿಗೆಯ ಹೆಜ್ಜೆ : ಕ್ರಮದೆ ವಿಜೃಂಭಣಕ್ರಮದೆ ಕೊಂಡು ಧರಾತಳಮಂ ರಸಾತಳಕ್ಕಮರವಿರೋಧಿಯಂ ಕಟುಪಿದೆಂ (ಜಗವಿ. ೧-೭೨). [ಸಂ.]

ವಿಜೃಂಭಣೆ (ನಾ). ೧. ಹೆಚ್ಚಳ ; ಅತಿಶಯ ; ಮೇಲ್ಮೆ : ಡಂಭನೊಳು ಬಲುರಣವ ಮಾಡಿದನೆಂಬವೊಲ್ ಸಂಕ್ಷೇಪಿಸಿದಿರಿ ವಿಜೃಂಭಣೆಯೊಳರುಹಿದಡೆ ಕೇಳುವೆನತಿ ಮನೋಮುದದಿ (ಕೋಗಳು. ೯-೧೦). ೨. ವೈಭವ ; ಆಡಂಬರ : ತಿಮ್ಮಪ್ಪ ನಾಯಕನೆಂಬಾತನು ಬಹಳ ವಿಜೃಂಭಣೆಯಿಂದ ತ್ರಿಯಂಬಕರಾಯನನ್ನು ಹಂಬಾಲಿಸುತ್ತಿದ್ದನು (ರಾವಿಜ. ೧೫೩) ; ಪುತ್ರೋತ್ಸವವು ಬಹಳ ವಿಜೃಂಭಣೆಯಿಂದ ದೇಶದಲ್ಲೆಲ್ಲಾ ಜರುಗಿತು (ಮಣಿಸ. ೪೧). ೩. ರಭಸ ; ಜೋರು : ತ್ರಿದಶೇಂದ್ರ ಮಕುಟಮಂ ಪೊಡೆದ ದೈತ್ಯಗದೆಯಂ ಸಿಡಿಲ್ದ ಶಕಳಮೆ ತಾನಾದುದು ಕೃಷ್ಣ ನಿನ್ನ ಗದೆಯೆನೆ ಗದೆಯ ವಿಜೃಂಭಣೆ ಭಯಾವಹಂ ದಾನವನಾ (ಜಗವಿ. ೯-೬೧). [ಸಂ. ವಿಜೃಂಭಣ]

ವಿಜೃಂಭಿತ (ಗು). ೧. ಅರಳಿದ ; ಬಿರಿದ ; ವಿಕಾಸಗೊಂಡ : ಪಾವಕದಿಕ್ಕಿನಂತೆ ವನದಂತೆ ವಿಜೃಂಭಿತಪುಂಡರೀಕವಿಂದೀವರನಾಭರಮ್ಮಂ ಸಭೆಯಂತೆ . . . ಸಮುತ್ಕಳಿಕಾಕುಳಂ ಕೊಳಂ (ಪುಷ್ಪಪ್ರ. ೨-೫೩). ೨. ಆಕಳಿಸಿದ. ೩. ವಿಸ್ತಾರವಾದ ; ದೊಡ್ಡದಾದ : ಕಾರ್ಯವು ಜರುಗದೆ ಮತ್ತು ಶೀಲವಾಗಲೀ ಭಾವನೆಯಾಗಲೀ ಪ್ರದರ್ಶಿತವಾಗದಿರುವ ಸಂದರ್ಭಗಳಲ್ಲಿ ಮಾತ್ರ ವಿಜೃಂಭಿತ (Elaborate) ಶೈಲಿಯು ಅಗತ್ಯವೆನಿಸುತ್ತದೆ (ಅರಿಕಾ. ೧೫೭). ೪. ಮೆರೆದ ; ಪ್ರದರ್ಶಿಸಿದ : ನಿಜಗರಿಮಾವಿಜೃಂಭಿತವೃತ್ತಿಯಲಿ ಕೊಪ್ಪರಿಗೆಗಳಿಗೆಯ್ದು . . . ಪೊನ್ನ ತಂಬುಗೆಗಳೊಳು ಮೊಗೆಮೊಗೆದು (ಬಸಪು. ೫೮-೬೮). (ನಾ). ೫. ಕೇಳಿ ; ಚೇಷ್ಟೆ : ನರೇಂದ್ರಂ . . . ಮನೋಭವವಿಜೃಂಭಿತಂಗಳಂ ಮನದೊಳ್ ಭಾವಿಸುತ್ತಂ ವಿಸ್ಮಯಾಕ್ಷಿಪ್ತಚಿತ್ತ ನಿಂತೆಂದಂ (ಕಾದಂಪು. ೯೭೦). [ಸಂ.]

ವಿಜೃಂಭಿಸು (ಕ್ರಿ). ೧. ಅರಳು ; ಬಿರಿ ; ವಿಕಾಸವಾಗು : ವಿಜೃಂಭಿಸಿದುದು ಯೌವನೋದಯವಿಲಾಸಮನುಕ್ರಮದಿಂ ಮದಂಗದೊಳ್ (ಕಾದಂಪು. ೭೧೯). ೨. ಉಬ್ಬು ; ಊದು : ಬಿಸುಸುಯ್ದೊಡಂ ಬೆಮರ್ವೊಡಮುದರಂ ವಿಜೃಂಭಿಸುವೊಡಂ . . . ವಾಜಿಗೆ ಪಿಪ್ಪಲಿ ಶುಂಠಿ ಸೈಂಧವಂ ಗಿಡಿವುದು ಮೂಗಿನೊಳ್ (ಲೋಕೋಪ. ೯-೨೨೭). ೩. ಆಕಳಿಸು : ಬೊಕ್ಕಣದ ಬೂದಿಯನುಃಪೆನಲೂದಿ ಮೂಗಿನೊಳ್ ಪೊಕ್ಕೊಡೆ ಸೀಂತು ಮಾಣ್ಬೆರದೆ ಪಾಯ್ದು ವಿಜೃಂಭಿಸಿ ಕೊಂಬನೇಱಿ ಪೂರ್ವಿಕ್ಕಿ ಕುಮಾರತಾಪಸರನೇಡಿಸುತಿರ್ದುದದೊಂದು ಕೋಡಗಂ (ಸೂಕ್ತಿಸು. ೩-೧೯೪). ೪. ಶೋಭಿಸು ; ಚೆಲುವಾಗು : ಅಪಾಂಗಮಾಳಿಕೆ ವಿಜೃಂಭಿಸಿ ನಿಲ್ಪನೆಗಂ . . . ಒತ್ತೆಗೆ ನಿಂದೆಳವೆಂಡಿರೊಪ್ಪಿದರ್ (ಜಗವಿ. ೧೬-೧೧೧) ; ಶಿವಭಕ್ತಜನವ್ರಜಂ ವಿಜೃಂಭಿಸಿ ನೆಲಸಿರ್ದ ಪಟ್ಟಣಮಿದು (ರಾಜಶೇ. ೧೩-೪). ೫. ಅತಿಶಯವಾದ ಆಟೋಪದಿಂದಿರು : ಮೊಱೆವುತ್ತೇಳುತ ವಿಜೃಂಭಿಸುವ ತತ್‌ಘಟಸರ್ಪನಂ ನೋಡಿ (ಬಸಪು. ೫೧-೫೯) ; ಆಗಳೊಂದುದ್ದಂಡಪ್ರಚಂಡಕಂಠೀರವಂ . . . ಲಂಘಿಸಿ ವಿಜೃಂಭಿಸಿ ಕುಂಭಶಿರಃಪ್ರದೇಶಮಂ ಕೊನೆಯಿಗುರಿಂದ ಸೀಳ್ದು (ರಾಜಶೇ. ೫-೧೧೬). ೬. ಸಡಗರಿಸು ; ಉತ್ಸಾಹಿಸು : ಇತ್ತ ವಸಂತನಿತ್ತ ಮಲಯಾನಿಲನಿತ್ತ ಮಧುವ್ರತಾಳಿ ಮತ್ತಿತ್ತ ಮದೋತ್ಕಕೋಕಿಲಕದಂಬಕವೆಯ್ದೆ ವಿಜೃಂಭಿಸಿತ್ತು (ಕಾದಂಪು. ೮೮೨). ೭. (?) : ಶುನಕಶಕುನಮಂ ಪೇಳ್ಪೆಂ . . . ರುಡಾರ್ತನ ಗೃಹಕ್ಕೆ ಪೊಪೆಡೆಯೊಳಂ ಬಿದಿರ್ದಂಗಮಂ ವಿಜೃಂಭಿಸೆ ವಿಚೇಷ್ಟೆಗೆಯ್ದೆ ಪುಗೆ ದೀಪ್ತಮಂ ಬೆರ್ಬಿ ಜಾಗರಮದಾನರಂ ನಿರುಜನೆಂಗೆ (ಲೋಕೋಪ. ೧೨-೨೯). "ಶ್ವಾನಂ ತನ್ನ ದೇಹಮಂ ಕೊಡಹಿಕೊಂಡುಚ್ಛ್ವಾಸದಿಂ ಬೆರ್ಚುತ್ತಿರಲ್" (ಲೋಕೋಪ. ೧೨-೨೯ ಬೇಕಿ).

[ವಿಜೃಂಭಣ + - ಇಸು$_3$]

ವಿಜೃಂಭೋದ್ಧುರ (ಗು). ೧. ಸ್ವೇಚ್ಛೆಯಾಗಿ ಅರಳುತ್ತಿರುವ. ೨. ನಿರಾತಂಕವಾಗಿ ಆಕಳಿಸುತ್ತಿರುವ. ೧,೨ : ವಿರಹಿಗಳಂತೆ ಮೃಣಾಳೋತ್ಕರವಲಯಾಂಕಿತ ವರೇಕರೆಣ್ಯದಂತೆ ವಿಜೃಂಭೋದ್ಧುರ ಪುಂಡರೀಕಸಂಕುಳಮುರಗಾನ್ವಯದಂತ ನಂತಪದ್ಮೋಪೇತಂ . . . ಸರೋವರಂ (ಕಾದಂಪು. ೬೪೧). [ಸಂ.]

ವಿಜೇತ (ಗು). ೧. ಗೆದ್ದ ; ಜಯಿಸಿದ : ಕೇವಲ ವಿಜೇತವ್ಯಕ್ತಿಯೊಬ್ಬ ಆ ಮೌಲ್ಯವನ್ನು ನಿಷ್ಕರ್ಷಿಸುತ್ತಿದ್ದನು (ಶಿಕ್ಷ. ೭.೨೫). (ನಾ). ೨. ಗೆದ್ದ ವ್ಯಕ್ತಿ ; ಜಯಶಾಲಿ : ದೇವರನಾಮಗಳ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸಮಾರಂಭದಲ್ಲಿ ಬಹುಮಾನಗಳನ್ನು ಹಂಚಲಾಯಿತು (ರೂಢಿ). [ಸಂ. ವಿಜೇತೃ]

ವಿಜ್ಜಣಿಗೆ 'ಬಿಜ್ಜಣಿಗೆ' ನೋ.

ವಿಜ್ಜದರ 'ಬಿಜ್ಜಾದರ' ನೋ.

ವಿಜ್ಜನ 'ಬಿಜ್ಜಣ' ನೋ.

ವಿಜ್ಜನಸತಿ (ನಾ). ಚಾಮರ ಬೀಸುವವಳು : ಬಳುಕುವ ಚಮರಿಯ ಪೊಸ ಸೀಗುರಿಗಳು ಜಡಿಯಲ್ಬುಡುಗುವ ಫಣಿಗಳಿಗಾಹುತಿಗೊಡುವಂತಿಹ ವಿಜ್ಜನಸತಿಯರೆನೆ ಮಡದಿಯರೊಪ್ಪಿದರು (ವೀರೇಚ. ೧-೧೪). [ವಿಜ್ಜನ (< ಬಿಜ್ಜಣ) + ಸತಿ$_1$]

ವಿಜ್ಞ (ಗು). ೧. ತಿಳಿದ ; ವಿದ್ವತ್ತಿನಿಂದ ಕೂಡಿದ : ಸಜ್ಞವಿಜ್ಞಭಕ್ತಿಯುಕ್ತಜೀವನವೇ ಕರ್ಮವು (ಅರಳು. ೨೯೯-೮). (ನಾ). ೨. ತಿಳಿದವನು ; ವಿದ್ವಾಂಸ : ಆ ಧರ್ಮದಲ್ಲಿ ಕಾಲಕ್ಕೆ ತಕ್ಕಂತೆ ಹಲವು ಸುಧಾರಣೆಗಳನ್ನು ತಂದು ವರ್ಧಮಾನನು ಅದನ್ನು ಪ್ರಚಾರಗೈದನೆಂದೂ ವಿಜ್ಞರು ತಿಳಿಸುವರು (ತೀರ್ಥಕ. ೩೦). [ಸಂ.]

ವಿಜ್ಞತೆ (ನಾ). ಪಾಂಡಿತ್ಯ ; ಜ್ಞಾನ : ಪ್ರತ್ಯಕ್ಷವಾಗಿ ಲಭಿಸುವ ಫಲವನ್ನು ಪರಿತ್ಯಜಿಸಿ ಅಪ್ರತ್ಯಕ್ಷಕ್ಕೆ ಕೈಒಡ್ಡುವುದು ವಿವೇಕವೂ ಅಲ್ಲ, ವಿಜ್ಞತೆಯೂ ಅಲ್ಲ (ಅರ್ಥಧ. ೨).

[ಸಂ. ವಿಜ್ಞತಾ]

ವಿಜ್ಞಪ್ತಿ (ನಾ). ವಿಜ್ಞಾಪನೆ ; ಬಿನ್ನಹ. [ಸಂ.]

ವಿಜ್ಞವೇಷ (ನಾ). ಪಾಂಡಿತ್ಯದ ಸೋಗು,— ವೇಷ : ನಮ್ಮ ಯುವಕರ ಯೌವನಧರ್ಮ ಎಂದೂ ಚಿರಕಾಲ, ಸಾಲ ತಂದ ಮುಪ್ಪಿನ ಮುಖವಾಡವನ್ನು ತೊಟ್ಟು ವಿಜ್ಞವೇಷವನ್ನು ಹಾಕದು ಎಂಬುದನ್ನು ನಾನು ಬಲ್ಲೆ (ನಿಬಂಧ. I, ೪೯೫). [ಸಂ.]

ವಿಜ್ಞಾತ (ಗು). ೧. ತಿಳಿಯಲ್ಪಟ್ಟ ; ಗೊತ್ತಾದ. ೨. ಪ್ರಸಿದ್ಧವಾದ ; ಖ್ಯಾತ. ೩. ಪರಿಣತ ; ನಿಷ್ಣಾತವಾಗಿರುವ : ಲಬ್ಧಕಷಾಯವೈರಿಜಯನಂ ವಿಜ್ಞಾತ ನಿಶ್ಶೇಷವಾಙ್ಮಯನಂ . . . ವಂದಿಪೆಂ (ಚಂದ್ರಪ್ರ. ೧-೨೧). [ಸಂ.]

ವಿಜ್ಞಾತೃ (ನಾ). ಬಲ್ಲವನು ; ವಿದ್ವಾಂಸ : ಈತನಿಗಿಂತ ಬೆಳೆಯಾದ ವಿಜ್ಞಾತೃವಿಲ್ಲ (ಬ್ರಹ್ಮಭಾ. ೨೬೮). [ಸಂ.]

ವಿಜ್ಞಾನ (ನಾ). ೧. (ವಿಶೇಷವಾದ) ಅರಿವು ; ತಿಳಿವಳಿಕೆ : ವಿಜ್ಞಾನಂ ವಿಜ್ಞಾನಾಂತರ ಗ್ರಾಹಕಮಕ್ಕುಮವ್ವೊಡಾವ ಮಾಟ್ಕೆಯೊಳ್ ವಿಜ್ಞಾನಾಂತರಮಪ್ಪುದು

(ಆದಿಪು. ೨-೧೦ ವ) ; ಜ್ಞಾನ ವಿಜ್ಞಾನ ಸುಜ್ಞಾನ ಮಹಾಜ್ಞಾನ ಅಪರಜ್ಞಾನ ಇಂತೀ ಪಂಚಜ್ಞಾನವ ದಹ್ಮಮಾಡಿ (ಮೋಕ್ಷಮಾ. ೧೫೪-೫೦೧). ೨. ಪ್ರಾವೀಣ್ಯ ; ನೈಪುಣ್ಯ. ೩. ಭೌತ, ರಸಾಯನ ಮೊದಲಾದ ವಿಷಯಗಳ ವಸ್ತುಜ್ಞಾನ : ಹಿಂದಿನ ಕಾಲದಲ್ಲಿ ವಿಜ್ಞಾನವೇ (Science) ಬೇರೆ, ತತ್ವಶಾಸ್ತ್ರವೇ (Philosophy) ಬೇರೆ ಎಂಬ ವಿವೇಚನೆಯು ಸ್ಪಷ್ಟವಾಗಿರಲಿಲ್ಲ (ಭಾಶಪ. ೫). ೪. [ಯೋಗ] ಐದು ಬಗೆಯ ಯೋಗಗಳಲ್ಲಿ ಒಂದು : ಪ್ರಥಮದ ದಾರಿ ತಾರಕಯೋಗವಲ್ಲಿಂದೇರಲಾ ವಿಜ್ಞಾನವೆರಡನೆ ಯೋಗವೆನಿಸುವುದು (ಗಗಾ. ೨೦-೧೭). [ಸಂ.]

ವಿಜ್ಞಾನದೃಷ್ಟಿ (ನಾ). ಎಚ್ಚರಿಕೆಯಿಂದ ಪರೀಕ್ಷಿಸಿ ತಿಳಿಯುವುದು : ವಿಜ್ಞಾನದೃಷ್ಟಿಯಿಲ್ಲದ ವ್ಯಾಸಂಗ ಅಸಂಪೂರ್ಣ (ರೂಢಿ). [ಸಂ.]

ವಿಜ್ಞಾನಮಯ (ನಾ). [ವೇದಾಂತ] ಜೀವಾತ್ಮನನ್ನು ಆವರಿಸಿಕೊಂಡಿರುವ ಐದು ಬಗೆಯ ಆವರಣಗಳಲ್ಲಿ ಒಂದು ; ಜ್ಞಾನ ಮತ್ತು ಇಂದ್ರಿಯಗಳೊಂದಿಗಿರುವ ಬುದ್ಧಿ : ಪಂಚಕೋಶ ಅನ್ನಮಯ (ಸ್ಥೂಲದೇಹ), ಪ್ರಾಣಮಯ (ಉಸಿರು), ಮನೋಮಯ (ಮನಸ್ಸು), ವಿಜ್ಞಾನಮಯ (ಬುದ್ಧಿ), ಆನಂದಮಯ (ವಿಷಯಸುಖದ ಅನುಭವ)(ಅಮೃತ. ೩-೧೫ ಟೀಕು) ; ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಸ್ವರೂಪನಾಗಿ (ಪಸಾರ. ೪-೧೬ ವಡಾರ್ಥ). [ಸಂ.]

ವಿಜ್ಞಾನಮಯಕೋಶ (ನಾ). = ವಿಜ್ಞಾನಮಯ : ಪ್ರತ್ಯಗಾತ್ಮಚೈತನ್ಯ ಚ್ಛಾಯೆಯೊಡಗೂಡಿ ಲೋಹಕಾಂತ ಕುಂತದಂತಿರ್ದಹಂಕಾರಮುಂ ಜ್ಞಾನೇಂದ್ರಿಯಂಗಳುಂ ಕೂಡಿ ವಿಜ್ಞಾನಮಯಕೋಶವೆನಿಸುವುದು (ವಿತೀ. ೪೧) ; ಬುದ್ಧಿ, ಜ್ಞಾನೇಂದ್ರಿಯಗಳು ಸೇರಿ ವಿಜ್ಞಾನಮಯಕೋಶವಾಗುವುದು (ಹಿಂದಾಸಾ. ೧೪೭). [ಸಂ.]

ವಿಜ್ಞಾನವಿದ (ನಾ). ವಿದ್ವಾಂಸ ; ಪಂಡಿತ : ಕ್ಲೇಶಸಹಿಷ್ಣು ಸುತೇಜನಮಾತ್ಮ ಸುಮಂತ್ರಿಸಮೇತನಖಿಲವಿಜ್ಞಾನವಿದಂ (ಪಂಚತಂ. ೪. ೧೫೯-೩೦೯). [ಸಂ.]

ವಿಜ್ಞಾನಶಕ್ತಿ (ನಾ). ವಿಷಯಗಳನ್ನು ಅರಿಯುವ ಬಲ ; ಜ್ಞಾನಶಕ್ತಿ : ಏನನೇನನೆಲೆ ಪೇಳ್ವೆನಣ್ಣ . . . ದಾನಶಕ್ತಿಯಭಿಮಾನಶಕ್ತಿ ವಿಜ್ಞಾನಶಕ್ತಿ ಸಲೆ ಗೋಪಣನ್ಯಿಯ (ಎಕ. II. ೬೯-೭೧ ; 1100). [ಸಂ.]

ವಿಜ್ಞಾನಾಂತರ (ನಾ). ಬೇರೊಂದು ವಿಜ್ಞಾನ : ವಿಜ್ಞಾನಂ ವಿಜ್ಞಾನಾಂತರಂ ಗ್ರಾಹಕಮಕ್ಕುಮಪ್ಪೊಡಾವ ಮಾಟ್ಕೆಯೊಳ್ ವಿಜ್ಞಾನಾಂತರಮಪ್ಪುದು (ಆದಿಪು. ೨-೧೦ ವ).

[ಸಂ.]

ವಿಜ್ಞಾನಾತ್ಮ (ನಾ). [ಅದ್ವೈತ] ಅರಿವುಳ್ಳವನು : ಜೀವ (ಪ್ರಾಣವನ್ನು ಧರಿಸಿರುವವನು), ಶರೀರ (ಶರೀರವುಳ್ಳವನು), ವಿಜ್ಞಾನಾತ್ಮ (ಬುದ್ಧಿಯುಳ್ಳವನು) ಇವೆಲ್ಲ ಪರ್ಯಾಯಗಳು (ಬ್ರಹ್ಮಭಾ. ೧೬೧ ಅಡಿಟಿ). [ಸಂ. ವಿಜ್ಞಾನಾತ್ಮನ್]

ವಿಜ್ಞಾನಿ (ನಾ). ೧. ವಿಶೇಷವಾದ ಜ್ಞಾನವುಳ್ಳವನು ; ಜ್ಞಾನಿ. ೨. ಭೌತ, ರಸಾಯನ ಮೊದಲಾದ ಶಾಸ್ತ್ರಗಳನ್ನು ತಿಳಿದವನು ; ವೈಜ್ಞಾನಿಕ : ವಿಜ್ಞಾನಿಗಳ ಜೀವನವನ್ನು ಮತ್ತು ಅವರ ಸಂಶೋಧನೆಗಳನ್ನು ವಿವರಿಸುವ ಗ್ರಂಥಗಳು ಇಂಗ್ಲೀಷಿನಲ್ಲಿ ಅಲ್ಲೊಂದು, ಇಲ್ಲೊಂದು ಇರಬಹುದು (ಸಸ್ಯ.V,ಅಂಕಿ).

[ಸಂ. ವಿಜ್ಞಾನಿನ್]

ವಿಜ್ಞಾನಿಕ (ನಾ). = ವಿಜ್ಞಾನಿ. [ಸಂ.]

ವಿಜ್ಞಾಪನ (ನಾ). ಮನವಿ ; ಬಿನ್ನಹ ; ಅರಿಕೆ : ಬರುತಿರ್ದಳ್ ಪ್ರತೀಹಾರಿ ಭೂವಳಯಾಧೀಶ್ವರನಲ್ಲಿಗಾಗಿ ನಯದಿಂ ವಿಜ್ಞಾಪನೋತ್ಸಂಥಿಯಿಂ (ಕಾದಂಪು. ೨೪) ; ಇದು . . . ಸುರಜ್ಯೇಷ್ಠವಿಜ್ಞಾಪನಾಕರ್ಣನ ಸುಧಾರ್ಣವಾವತರಣೋದ್ಯೋಗವರ್ಣನಂ (ಜಗವಿ. ೧-೯೦ ವ). [ಸಂ.]

ವಿಜ್ಞಾಪನಂಗೆಯ್ (ಕ್ರಿ). ಮನವಿಮಾಡಿಕೊಳ್ಳು ; ಅರಿಕೆಮಾಡು ; ಬಿನ್ನಹಮಾಡು : ಆ ಕ್ಷಣದೊಳಾಹವಭಜ್ಞನೆನಿಸುವ ಕರ್ಣಸುತ ವೃಷಧ್ವಜನೆದ್ದು ನಗುತೆ ಕೈಮುಗಿದು ನಿಂದು ವಿಜ್ಞಾಪನಂಗೆಯ್ದ[ಪಾಂಂ.ಗೈದ]ನು (ಪೈಮಭಾ. ೨-೩೭) ; ಅಮಾತ್ಯಂಬೆರಸು ಭರದಿನೈತಂದು . . . ಆದ್ಯಂತಕಾರ್ಯಸ್ಥಿತಿಯನೊಸೆದು ವಿಜ್ಞಾಪನಂಗೆಯ್ದು (ರಾಜಶೇ. ೫-೧೩೩). [ವಿಜ್ಞಾಪನ + ಕೆಯ್[1]]

ವಿಜ್ಞಾಪನಪತ್ರಿಕೆ (ನಾ). ಅರಿಕೆಮಾಡಿಕೊಳ್ಳುವ ಪತ್ರ ; ಬಿನ್ನವತ್ತಳೆ ; ಮನವಿಪತ್ರ : ಕಛೇರಿಯ ನಿಯೋಗವು ಮುಖ್ಯಮಂತ್ರಿಗಳಿಗೆ ವಿಜ್ಞಾಪನಪತ್ರಿಕೆಯನ್ನು ಕೊಟ್ಟಿತು (ರೂಢಿ). [ಸಂ. ವಿಜ್ಞಾಪನಪತ್ರಿಕಾ]

ವಿಜ್ಞಾಪನೆ (ನಾ). = ವಿಜ್ಞಾಪನ : ಹಿರಿಯರಿಗೆ ಕಿರಿಯನು ಮಾಡುವ ವಿಜ್ಞಾಪನೆಗಳು (ರೂಢಿ). [ಸಂ. ವಿಜ್ಞಾಪನ]

ವಿಜ್ಞಾಪಿತ (ಗು). ಅರಿಕೆ ಮಾಡಿದ ; ಬಿನ್ನವಿಸಿದ ; ಮನವಿ ಮಾಡಿಕೊಂಡ.

[ಸಂ.]

ವಿಜ್ಞಾಪಿಸು (ಕ್ರಿ). ಅರಿಕೆಮಾಡು ; ಬಿನ್ನವಿಸಿಕೊಳ್ಳು : ತಮ್ಮ ಪಾದಪದ್ಮಗಳಿಗಭಿವಂದಿಸಿ ವಿಜ್ಞಾಪಿಸಿದೆನೆಂದು ತಿಳುಹಿ ಬಾರೆಂದು ನನ್ನಂ ಕಳುಹಿದಳು (ಪಾಗಂಧಿ. ೩೭೦-೫). [ವಿಜ್ಞಾಪನ + -ಇಸ್ವು]

ವಿಜ್ಞಾಪ್ತಿ (ನಾ). = ವಿಜ್ಞಪ್ತಿ. [ಸಂ.]

ವಿಜ್ಞಾಸಾರ (ನಾ). ಬಲ್ಲವನು ; ವಿದ್ವಾಂಸ : ಸಾರುವೆವು ನಿಮ್ಮಡಿಯ ಸರಿಚರಣಾರವಿಂದವನೆಂದು ವಿಜ್ಞಾಸಾರರುದಿಸಿದರಸುರವಂಶದಲಧಿಕತೇಜದಲಿ (ತೊರಾ. ೧-೮-೨೧). [ಸಂ.]

ವಿಜ್ವರ (ಗು). ೧. ಜ್ವರದಿಂದ ಬಿಡುಗಡೆಹೊಂದಿದ ; ಜ್ವರವಿಲ್ಲದ. (ನಾ). ೨. ಆತಂಕವಿಲ್ಲದಿರುವವನು ; ನಿರಾತಂಕವ್ಯಕ್ತಿ : ಉಜ್ವಲಿಪ ಕೋಪಾನಲನ ಬಲು ಕಜ್ಜಳವ ಕೆಲಕೊತ್ತಿ ಮನದಲಿ ವಿಜ್ವ[ಪಾಠಾ.ಜ್ಞ]ರನು ವಸುಧೆಯನು ಮೇಲಿರಿಸಿದನು ವಾರಿಧಿಯ (ನಭಾಗ. ೩-೭-೪೪). [ಸಂ.]

ವಿಟ್[1] (ನಾ). ೧. ಚಾತುರ್ವರ್ಣಗಳಲ್ಲಿ ಮೂರನೆಯದಾದ ವೈಶ್ಯವರ್ಗ ಮತ್ತು ಆ ವರ್ಗಕ್ಕೆ ಸೇರಿದವನು : ಭರಿತಭೋಜನ ದಕ್ಷಿಣೆಯಲಾದರಿಸಿದನು ಗುರುಬಂಧು ಜನಭೂಸುರರ ವಿಟ್ ಶೂದ್ರಾದಿಗಳನುಚಿತದಲಿ ಭೂಪಾಲ (ತೊರಾ. ೧-೪-೧೧). ೨. ಮನುಷ್ಯ ; ಮಾನವ : "ಮನುಷ್ಯಃ . . . ಪುರುಷಃ, ಪೂರುಷಃ, ವಿಟ್ - ಈ ೧೨ ಮಾನಸರ್" (ಹಲಾಯು. ೫೫-೧೭೬). [< ಸಂ. ವಿಶ್]

ವಿಟ್[2] (ನಾ). ಮಲ ; ವಿಷ್ಠೆ : "ವರ್ಚಃ . . . ಕಿಟ್ಟಂ, ವಿಟ್, ವಿಷ್ಠಾ . . . ಮಲಂ - ಈ ೧೩ ವಿಷ್ಠೆ" (ಹಲಾಯು. ೧೦೫-೧೫೫). [< ಸಂ. ವಿಷ್]

ವಿಟ (ನಾ). ೧. ಕಾಮುಕ ; ವಿಷಯಾಸಕ್ತ ; ವಿಲಾಸಿ : ವಿಟನಱಿಗುಂ ಕುವಿಟಂ ಸ್ತ್ರೀರತರಹಸ್ಯದೊಳಗೞ್ದಪನೇ (ಆದಿಪು. ೧-೨೦) ; ಸುರಗೋಪಂಗಳು ಮಾಲಿಕಲ್ಲುಮೆಳವುಲ್ಲುಂ . . . ಎಸೆಗುಂ . . . ನಾನಾಭೂಷಣಾನೀಕಮಂ ಧರಣೀವಲ್ಲಭಗಂಬುದಾಗಮವಿಟಂ ತಂದಿಕ್ಕಿದೊಂದಂದದಿಂ (ಜಗವಿ. ೪-೨೦); ವಿಟನಾದವಗೆ ಮಠವಾದರೇನು ? (ಗಾಪ). ೨. ಉಪಪತಿ ; ಜಾರ : "ವೇಶ್ಮಾಪತಿಃ, ಭುಜಂಗಃ, ವಿಟಂ, ಪಲ್ಲವಿಕಃ - ಈ ೪ ಜೊಜಗಂ" (ಹಲಾಯು. ೬೩-೨೨೭). ೩. ಶೃಂಗಾರವಿಷಯಗಳಲ್ಲಿ ನಾಯಕನಿಗೆ ಸಹಾಯಕರಾಗಿ ಬರುವ ನಾಲ್ಕು ಮಂದಿಯಲ್ಲಿ ಒಬ್ಬ : ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕರ್ಕೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ (ಪಂಪಿಬಾ. ೪-೭೯ ವ) ; ಅತಿಚದುರಂ ಮದನಾಗಮಯುತನದಟಂ ವರಕಳತ್ರಯುತನುಂ ಸುಜನಂ ಸತತಗುಣೋಪಾರ್ಜಿತನುತನಾಪ್ತಂ ವಿಟನೆನಿಪ್ಪವಂ (ಮದಪ. ೧೦-೩೭). ೪. ಮೋಸಗಾರ ; ಠಕ್ಕ. ೫. ಒಂದು ಬಗೆಯ ಖನಿಜಲವಣ : "ಪಿದ್ಗ — ವಿಟ, ಲವಣ" (ಓಷಧಿ. ೧೭೩). [ಸಂ.]

ವಿಟಂಕ (ನಾ). ೧. (ವಿಶೇಷವಾಗಿ ಪಾರಿವಾಳ ಮುಂತಾದ)ಪಕ್ಷಿಗಳು ವಾಸಿಸಲು ಅನುಕೂಲವಾಗಲೆಂದು ಮನೆಯ ಸೂರಿನ ತುದಿಯಲ್ಲಿ ಅಳವಡಿಸಿರುವ ಗೂಡು ; ಲೋವೆ : ಪದ್ಮರಾಗಾಂಚಿತಕಲಶಮಿನಗ್ರಾವ ದಿವ್ಯದ್ವಿಟಂಕಾವರಣಂ (ರಾಜಶೇ. ೨-೧೩೦). ೨. ತುದಿ ; ಅಗ್ರ ; ಶಿಖರ : ಸಕಲಮಕುಟಬದ್ಧಮಕಿರೀಟಕೋಟಿವಿಟಂಕಸನಾಥಪದ್ಮರಾಗಮಣಿಕಿರಣಾರುಣಿತ ವೌಕ್ತಿಕವಿಂತನೀಭೂತದುಕೂಲವಿತಾನಂ (ಶಾಂತಿಪು.೧-೧೧ ವ) ; ವಿಕಟ ಜರಾ(ಟಾ)ಜೂಟಕೋಟೀವಿಟಂಕಂ (ವಿಗ. XVI, ೭೧-೩೮; 997). ೩. ಒಂದು ಬಗೆಯ ಸಸ್ಯ : "ಮುದ್ಗರಫಲಃ — ವಿಟಂಕ" (ಓಷಧಿ. ೧೨೭). ೪. (?) : ವಿಕಸಿತ ವಿಯತ್ಪಳಂ

ಕೊತ್ತಳಮಧರ ಗಂಡಗುಂಡಕಟ್ಟಳೆ ಮುಗಿಲಟ್ಟಳೆ ಪಗೆವರಾಳ್ವರ? ಬೀಳ್ವಳೆ ಬಗೆದಾಳ್ವಱೆ ಮೆಱೆದುವರಿವಿಟಂಕಂ ವಂಕಂ (ಪಜ್ಜುನ ೭-೭೦). [ಸಂ.]

ವಿಟಂಕಪಾಳಿ (ನಾ). = ವಿಟಂಕ ೧ : ವಿಶೇಷರತ್ನಸ್ಫೋಮಾಭಿರಾಮ ರಚಿತೋರುಗವಾಕ್ಷಲಕ್ಷಂ ಗೋಮೇಧಿಕಾಂಚಿತ ನವೀನವಿಟಂಕಪಾಳೀ . . . ಸದನವಿಂತು ಸಲೆ ಶೋಭಿಸುಗುಂ (ಹಮ್ಮೀರ ೮-೩೮). 'ಕಪೋತಪಾಲಿ' ಪರಾ. [ಸಂ. ವಿಟಂಕಪಾಲೀ]

ವಿಟಕೋವಿದ (ನಾ). ಚತುರನಾದ ಜಾರ : ವಿಟಕೋವಿದಂ ನಂಬಿ ಹೊಂಗಠಾರಿಯ ಕೋಲುವಿಡಿದು (ಬಸಪು ೨೬-೧೧). [ಸಂ.]

ವಿಟಗಾತಿ (ನಾ). ಸೂಳೆ ; ವೇಶ್ಯೆ : (ಕ). [ವಿಟ + - ಕಾತ್ಯಿ]

ವಿಟಗಾರ (ನಾ). ಸೂಳೆಯ ಸಹವಾಸ ಮಾಡುವವನು ; ವ್ಯಭಿಚಾರಿ : ರಮಣೀಯವಾಗಿರುವ ಬೆಟ್ಟ ಸಹ್ಯಾಚಲನಿತಂಬವ ನಿಟ್ಟಿಸುತೆ ವಿಟಗಾರನಂದದೆ ತಟ್ಟನೇ ಹೊರಟೆದ್ದು ಲಗುಬಗೆಯಿಂದ ಸಾಗಿದನು (ರಘುವಂ. ೪-೫೨).

[ವಿಟ + - ಗಾರ (< - ಕಾಱ)]

ವಿಟಗಾರಿಕೆ (ನಾ). ಸೂಳೆಗಾರಿಕೆ ; ಹಾದರ : ಮಗನ ಕೂಡೆ ವಿಟಗಾರಿಕೆ ಮಾಡಿ ಒಡವೆ ವಸ್ತು ವೆಚ್ಚವಾದುದಕ್ಕಳೋ (ಬ್ರಹ್ಮ ೯೮). [ವಿಟಗಾರ + - ಇಕೆ]

ವಿಟಗಾರ್ತಿ (ನಾ). = ವಿಟಗಾತಿ : (ಕ). [ವಿಟಗಾರ + - ತಿ₂ (< - ಇತ್ತಿ)]

ವಿಟಚರ್ಯೆ (ನಾ). ವಿಟನು ಮಾಡುವ ಶೃಂಗಾರಚೇಷ್ಟೆ : ಅವಳಿಗೆ ಬೇಕಾಗಿದ್ದದ್ದು ಲಲ್ಲೆಯಲ್ಲ, ವಿಟಚರ್ಯೆಯೂ ಅಲ್ಲ (ಬಂಕಾಮ. ೨೦೪). [ಸಂ. ವಿಟಚರ್ಯಾ]

ವಿಟಚೇಷ್ಟೆ (ನಾ). = ವಿಟಚರ್ಯೆ : ಹಿರಿದು ವಿಟಚೇಷ್ಟೆಗಳಿನಾರಂ ಸರಕುಮಾಡದೆ ನಂಬಿಯಣ್ಣಂ ಪರಮಲೀಲೆಯೊಳುದ್ಧಚಮ್ಮಾವುಗೆಗಳಂ ಮೆಟ್ಟಿ ಸರಸರನೆ ನಡೆತಂದು (ಬಸಪು ೨೬-೧೪). [ಸಂ. ವಿಟಚೇಷ್ಟಾ]

ವಿಟಜಂಗಮ (ನಾ). ವಿಷಯಲಂಪಟನಾದ ಜಂಗಮ : ಕೊಟ್ಟು ವಿಟಜಂಗಮಕೆ ರಾಯನ ಪೆಟ್ಟಿಗೆಯ ಪೊನ್ನಂ ಬೆಳಿಸಿ ಸತಿಯುಟ್ಟುದಂ ಸುಗಿದಿತ್ತು ಮೆಱೆದನು ಕಟಕದೊಳು ಬಸವ (ಬಸಪು ೧೧ ಸೂಚನೆ). [ಸಂ.]

ವಿಟಜನ (ನಾ). ಕಾಮುಕರಾದ ಜನ : ಕೆಡಿಸಿತಧರದ ರಾಗ ರಾಗವ ಬಡತನವ ಹೆಚ್ಚಿಸಿತು ನಡುವಿನ ಬಡತನವು ವಿಟಜನಕೆನಲು ನಡೆತಂದಳಿಂದುಮುಖಿ (ಕಬ್ಬಾಪಿ ೫-೩೫). [ಸಂ.]

ವಿಟತತ್ವ (ನಾ). ಸೂಳೆಗಾರಿಕೆ ; ವ್ಯಭಿಚಾರ ; ಹಾದರ : ಆ ಪರಾರ್ಧ್ಯರ್ಧೇಂದು ಲಲಾಟಿಯರಾ ಪೂರ್ಣಲಲಾಟನು ತಮ್ಮ ಲಲಾಟತಟರಂಜನೆಯಿಂ ವಿಟತತ್ವಾಭಿಮುಖಂ ಮಾಡಿ ರಂಜಿಸಿಯುಂ (ಸುಕುಮಾ. ೧೦-೧೦೧ ವ). [ಸಂ.]

ವಿಟತನ (ನಾ). = ವಿಟತತ್ವ : ನಾಡೊಳೂರೊಳು ನೀನೆ ನಿನಗಾರ್ ಪಾಡು ದೊರೆತನದಲ್ಲಿ ವಿಟತನದಲ್ಲಿ ಕೊಡುವಲ್ಲಿ (ಬಸಪು ೪೨-೬). [ವಿಟ + - ತನ]

ವಿಟತ್ವ (ನಾ). = ವಿಟತತ್ವ : ಕೂಟದೊಳ್ ಕುಶಲನಪ್ಪುದು ಕೇಳಿಮಿದಿಂತುಟೆಂದು ಚರ್ಚಿಸಿ ನುಡಿವಂತು ಬೇಱೆ ಪೆಱತಾವುದು ಕೇಳಿಕೆಯುಂ ವಿಟತ್ವಮುಂ (ಶಾಂತಿಪು ೮-೯೧) ; ಆ ಸರಸಿರುಹಮುಖಿಯರ ಲಾಂಛನಗಳನಲ್ಲಿ ತಾಮಾಳ್ವರ ವಿಟತ್ವಮನಂತು ತಪ್ಪದುಸುರಲು (ಬಸಪು ೧೨ ೫೬). [ಸಂ.]

ವಿಟಪ (ನಾ). ೧. ಮರದ (ಎಳೆಯ) ಕೊಂಬೆ ; ಚಿಸಿಲು : ಕುಸುಮಂ ಸ್ಮಿತಮಳಿನಯನಂ ಕಿಸಲಯಮಧರಂ ಭುಜದ್ವಯಂ ವಿಟಪಂ ಮತ್ತಸುವಲ್ಲಭೆ ಲತೆ (ಕವಿರಾ. ೩-೧೪) ; ದಳಫಳಕುಸುಮವಿಸರವಿಡಿದ ವಿಟಪಂಗಳೊಳ್ ಪೂಗೊಯ್ದಲೆಂದ ಬಲೆಯರ್ನೆರೆದು (ರಾಜಶೇ ೧೦-೫೬ ರಗಳೆ). ೨. ಪೊದೆ ; ಹೊದರು : "ಉಲಪಃ, ಸ್ತಂಭಃ, ಗುಲ್ಮಃ, ವೀರುತ್, ವಿಟಪಃ -ಈ ೫ ಪೊದಱು" (ಪಲಾಯು. ೩೧-೩೬). [ಸಂ.]

ವಿಟಪರ್ಣ (ನಾ). ಕೊಂಬೆಯಲ್ಲಿರುವ ಎಲೆ : ಅಶ್ವತ್ಥವಿಲ್ಲಿ ಬಾಡಿದೊಡೇನು ? ಚಿಗುರಲ್ಲಿ ; ನಶ್ವರತೆ ವಿಟಪಪರ್ಣಂಗಳಲಿ ಮಾತ್ರ (ಮಂಜಿಕ. ೮೮೬). [ಸಂ.]

ವಿಟಪಿ (ನಾ). ೧. ಕೊಂಬೆಗಳುಳ್ಳುದು ; ಮರ : ಮಲಯಾನಿಲನೊಯ್ಯನೆ ಪಣ್ತೆಲೆಯಂ ನೆಲೆಯಿಂ ಕಳಲ್ಚುಗುಂ ವಿಟಪಿಗಳೊಳ್ (ಕವಿರಾ. ೩-೫೪) ; ಆ ಭಾಂಡೀರಮೆಂಬ ಮಹಾವಟವಿಟಪಿಯೋಳ್ . . . ರಾಜೀವಲೋಚನಂ ಕ್ರೀಡಿಸಿದಂ (ಜಗಪಿ ೪-೪೬ ವ) . ೨. ಅತ್ತಿಮರ. [ಸಂ. ವಿಟಪಿನ್]

ವಿಟಪೀವರ (ನಾ). ೧. ದೃಢಕಾಯನಾದ ಜಾರ. ೨. ದೊಡ್ಡಮರ ; ಮಹಾವೃಕ್ಷ. ೧,೨ : ಮುಗುಳ್ಗೆಯೊಳಲರಕ್ಕಿಯೊಳ್ಗೆದು ಸಲೆ ರಾಜಿಸುವ ತನುಲತೆಯೊಳೊಪ್ಪಿರ್ದರೆಳವಣ್ಣಳಚ್ಚ ಪೊಸಜವ್ವನದೊಳಾವಗಂ ವಿಟಪೀವರಾಶ್ರಯದೊಳು (ಕೃಷ್ಣಿಭಾ. ೬-೨೬). [ಸಂ. (ವಿಟ + ಪೀವರ) ; (ವಿಟಪೀ + ವರ)]

ವಿಟಪುರುಷ (ನಾ). = ವಿಟ ೧ : ನಾಲ್ವಿಧದ ವಿಟಪುರುಷರಿಂ ರತಿಸುಖವ ಪಡೆವೆವೆಂದು (ಸವನೋ. ೨-೫೪). [ಸಂ.]

ವಿಟಮಿನ್ 'ವಿಟಮಿನ್ನು' ನೋ.

ವಿಟಮಿನ್ನು, ವಿಟಮಿನ್ (ನಾ). ಶರೀರವ್ಯಾಪಾರಕ್ಕೂ ರೋಗಗಳ ನಿವಾರಣೆಗೂ ಅಗತ್ಯವಾದ ಆಹಾರಾಂಶ ; ಜೀವಾತು ; ಅನ್ನಾಂಗ : ದೇಹದಲ್ಲಿ ವಿಟಮಿನ್ನುಗಳ ಕೊರತೆಯುಂಟಾದಾಗ ರೋಗಗಳು ತಲೆದೋರುತ್ತವೆ (ರೂಢಿ). ವಿಟಮಿನ್ : ವಿಕದಳಧಾನ್ಯಗಳಾದ ಅಕ್ಕಿ, ರಾಗಿ, ಗೋಧಿ, ಜೋಳಗಳ ಅಂಕುರದಲ್ಲಿ ಎಣ್ಣೆ ಇರುತ್ತದೆ. ಈ ಎಣ್ಣೆಯಲ್ಲಿ ವಿಟಮಿನ್ 'ಇ' ಇರುತ್ತದೆ (ಗೃಹವಿ. ೩೨) ; ತರಕಾರಿಗಳಲ್ಲಿ ವಿಟಮಿನ್ ಸತ್ವಗಳಿವೆ (ಶರಬಿ ೬೩). [<— ಇಂ. Vitamin]

ವಿಟವೃತ್ತ (ನಾ). = ವಿಟಗಾರಿಕೆ : ಕಲ್ಲುದಲ್ಲೆ ವಿಟರಿಂ ವಿಟವೃತ್ತಮನೆಮ್ಮೊಳಲ್ಲಿ ಗಾಮೊವಜರೆಮೆಂಬವೋಲ್ಮೊರೆವ ಮೆಲ್ಲೆಸೆಯುತ್ತಿರೆ ಸೂಟಸೂಟದೇಂ ಸವಿದುವೊ ಬಣ್ಣವಣ್ಣಿಗೆಯ ಪೂಗಳ ಸೌರಭಮಂ ಮದಾಳಿಗಳ್ (ಆದಿಪು ೧೧-೧೫೩). [ಸಂ.]

ವಿಟವೃಷಭ (ನಾ). ಶ್ರೇಷ್ಠನಾದ ಜಾರ : ವೈನತೇಯನ ಚಿತ್ತವೃತ್ತಿಯಂತೆ ಭುಜಗದ್ವೇಷಿಯಾಗಿರ್ದು(ದ)ನಜೆದುರಗವನಿತೆಯಂತೆ ಕೋಳ್ಪಟ್ಟಿ ಮುಳಿದಿರ್ದಳಂ ಪಟೆಗೆ ಮುಳಿದಳೆಂದು ವಿಟವೃಷಭನಾಕೆಯಂ ತಿಳಿಪಲಡಿಗೆಱಗಿ (ಶಾಂತಿಪು ೮-೮೩ ವ).

[ಸಂ.]

ವಿಟವೇಷ (ನಾ). ಜಾರನ ವೇಷ : ಪೂಱಮಟ್ಟನೊಲವಿಂದ ವಿಟವೇಷದೀಶ್ವರಂ (ಇಷಂ.ದೇ ೩೭-೧೧). [ಸಂ.]

ವಿಟಾಳ (ಗು). ೧. ಅಪವಿತ್ರವಾದ ; ಕಲ್ಮಷದಿಂದ ಕೂಡಿದ : ವಿಕಾಳಿಸುತೆ ಕೌರವನ ಬುದ್ಧಿ ವಿಟಾಳಸಂಗತಿಯಾಯ್ತಲಾ ಪಿಸುಣಾರ ಕೆರಳಿಚದು (ಕಬ್ಬಾಸ. ೧೨-೪೭). (ನಾ). ೨. ಅಪವಿತ್ರತೆ ; ಮಾಲಿನ್ಯ : ಲೀಲೆಯಲಿ . . . ರಮಿಸುವುದು ಮನದ ವಿಟಾಳವಿಲ್ಲದೆ ಬದುಕಿ ನಿಮ್ಮೊಳಗೆ (ಕಬ್ಬಾಸ. ೧೬-೪೨).

[< ಪ್ರಾ. ವಿಟ್ಠಾಲ. / ಮರಾ. ವಿಟಾಳ]

ವಿಟಾಳಚರಿತ (ನಾ). ಅಪವಿತ್ರನಾದವನು ; ಕಳಂಕದಿಂದ ಕೂಡಿದವನು : ಖಳರಿಗೆ ತಾ ಜನ್ಮಭೂಮಿ ವಿಟಾಳಚರಿತರ ತೌರುಮನೆ ದುಶ್ಶೀಲರಿಗೆ ದರ್ಪಣ (ಕಬ್ಬಾಕ. ೯-೨೦). [ವಿಟಾಳ + ಚರಿತ]

ವಿಟಾಳಿಸ್ಸು₁ (ಕ್ರಿ). ಹರಡು ; ವ್ಯಾಪಿಸು : ಕಾರ್ಬೊಗೆ ವಿಟಾಳಿಸಿತು ಕೂಡೆ ಶಿಖಿಯೋಳಿಗೆಯ ವಿಷ ಸುಡುತ ಬರುಕಿರ್ದುದರಿಯೆಡೆಗೆ (ಶಂಂಗ. ೬೯-೫೦).

[< ವಿತಾಳಿಸು]

ವಿಟಾಳಿಸ್ಸು₂ (ಕ್ರಿ). ೧. ಅಪವಿತ್ರಮಾಡು ; ಹೊಲೆಗೊಳಿಸು : ಕಾಲದೇಶಾಗಮದ ನಿಗಮದ ಡಾಳವಱೆದ್ಧೈಹಿಕಪರತ್ರ ವಿಟಾಳಿಸದೆ ನಡೆ ಕಂದ (ಕಬ್ಬಾಸ. ೧೬-೬೨). ೨. ಹೇಸಿಗೆಯುಂಟಾಗು ; ಜುಗುಪ್ಸೆಯಾಗು : ಮಗಳ ವಿಟಾಳಿಸಿತೆ ಸಿರಿರಾಜ್ಯಸಂಪದ (ನಳಚಿ ೭-೩೧). [ವಿಟಾಳ + - ಇಸ್ಸು]

ವಿಟಿ (ನಾ). ವಿಲಾಸಿನಿ : ಕೇರಳವಿಟೀಕಟಿಸೂತ್ರಾಗುಣಮಣಿ . . . ಉದಾರಂ ಸರಸ್ವತೀಮಣಿಹಾರಂ (ಆದಿಪು ೧-೬೨) ; ಸ್ಮರಬಾಣಾರ್ತ ವಿಟೀವಿಟಾಳಿಗೆ ವಿಯೋಗಂ ಪೂರ್ವಸಂಭೋಗಸಂಸ್ಮರಣಂ ದೂತನ ಕೆಯ್ಯೊಳ್ಬುವವಿನಾಣಂ (ಶಾಂತಿಪು ೮-೧೫೫).

[ವಿಟ + - ಇ₂]

ವಿಟಿಯ್ಯ (ನಾ). ಒಬ್ಬಾತನ ಹೆಸರು : ಉರ್ವವಳ್ಳಿಯ ಚಾಮಯ್ಯನುಂ ಇನ್ನವೂರದ ವಿಟಿಯ್ಯನುಂ ಮಂಗಳಂ (ಎಕೆ.VI, ಚಿಕ್ಕಮ.೩-೧೬ ; ೫೦೦?). [? + ಅಯ್ಯ₂]

ವಿಟೆ (ನಾ). = ವಿಟಿ : ಪುರವರದ ವೀಧಿಯೊಳೊರಲಿ ತಿರುಕರು ದ್ವಾರದ್ವಾರಗಳ ಚರಿಸಿ ಅನ್ನವ ಬೇಡುತಿಹರಾ ವಿಟ ವಿಟೆಯರನು ಬೆಂಬಳಿಯರಸಿ ತಿರುಗುವರಲ್ಲಿ ರತಿಯಾತುರದ ಮನದಿಂದಾ (ಚಿಂಕಾಮ. ೬೦೪-೧೪). [ವಿಟ + - ಎ₂]

ವಿಟ್ಟದಿರ (ನಾ). ಒಂದು ಬಗೆಯ ಕಗ್ಗಲಿಮರ : "ಅರಿಮೇದಃ, ವಿಟ್ಟದಿರಃ — ೨ ದುರ್ಗಂಧವುಳ್ಳ ಕಗ್ಗಲಿಗಿಡ" (ಸಿದ್ಧಾಂತಿ. ೧೨೩). [ಸಂ.]

ವಿಟ್ಟರ (ನಾ). ಹೊಲಸು ತಿನ್ನುವ ಪ್ರಾಣಿ ; ಹಂದಿ : ವಿಟ್ಟರಂ . . . ಊರೊಳಗಿನ ಹಂದಿಯ ಹೆಸರು" (ಸಿದ್ಧಾಂತಿ. ೩೧೩). [ಸಂ.]

ವಿಟ್ಟಪ್ಪರಸ (ನಾ). ಒಬ್ಬಾತನ ಹೆಸರು : ಮಹಾಸಾಮನ್ತರ್ ವಿಟ್ಟಪ್ಪರಸರ್ ಕೊವಳಾಳನಾಡು ಮೂನೂಱುಂ ಆಳ್ (ಮೈಆರ. ೧೯೨೬,೧೦೦-೩ ; ೨ನೆಯ ತತ).

[ವಿಟ್ಟು$_2$ (< ಬಿಟ್ಟು$_2$) + ಅಪ್ಪ$_1$ + ಅರಸ$_1$]

ವಿಟ್ಟರ$_1$ (ನಾ). ದೇವತೆಗಳ ಗುರು ; ಬೃಹಸ್ಪತಿ : ಈ ಕಥೆಯ ಸಂಕ್ರಂದನಂ ವಿಟ್ಟರನ ಮುಂದೆ ಮುದದೊಳು ದ್ವಾರಪಾಲಕಗೆ ಪೇಳೆಯವ ಮಂದಸ್ಮಿತವನಾಗಿ ನೋಡುತಂ (ಪ್ರಭುಪು. ೬-೩೪). [< ಸಂ. ವಿಠರ]

ವಿಟ್ಟರ$_2$ (ನಾ). ಆಸನ ; ಪೀಠ. 'ಪದುಮವಿಟ್ಟರ' ಪರಾ. [< ಸಂ. ವಿಷ್ಟರ]

ವಿಟ್ಟಗೆಜೆ (ನಾ). ಒಂದು ಊರಿನ ಹೆಸರು : ವಿಟ್ಟಗೆಜೆಗಳ ಎಡೆನಾಡಗಾಮಂ ಮನ್ನೆಱ್ಪಳಾ ಕೈಯಿನ್ ಕಲಿಂಮರಾನ್ ಎಱ್ದುಕೊಣ್ಡಾಳುತ್ತಿರೆ (ಎಕ.VIII, ಸೊರಬ. ೧-೨ ; 967). [ವಿಟ್ಟ$_7$ + ಕೆಜೆ]

ವಿಟ್ಟು$_1$ 'ಬಿಡು$_1$' ಪರಾ.

ವಿಟ್ಟು$_2$ 'ಬಿಟ್ಟು$_2$' ನೋ.

ವಿಟ್ಟೆ 'ವಿಷ್ಟೆ' ನೋ.

ವಿಟ್ಠಲ (ನಾ). ಪಂಢರಪುರದಲ್ಲಿ ವಿಠೋಬನೆಂದು ಪೂಜಿಸಲ್ಪಡುವ ಕೃಷ್ಣ : ಪಕ್ಷಿವಾಹನ ಸಿರಿಪುರಂದರ ವಿಟ್ಠಲನ ನಿಜದಾಸನೆ (ಪುರಂದ. ೧-೫-೩). [ಸಂ.]

ವಿಠಲ (ನಾ). = ವಿಟ್ಠಲ : ಜಯಹರಿ ಪುರಂದರವಿಠಲನ ಬಲವಯ್ಯ ಸುಜನರಿಗೆ (ಪುರಂದ. ೧-೨-೧) ; ಬಾಲೆಯರ ಮನೆಗೆ ಪೋಗಿ ಹಾಲು ಮೊಸರು ಕದ್ದು ಇಂಥ ಲೀಲೆ ಮಾಡದಿರು ನಮ್ಮ ಲೋಲ ಪುರಂದರವಿಠಲ (ಪುರಂದ. ೩-೧೭೪-೩). [ಸಂ.]

ವಿಠ್ಠಲ (ನಾ). = ವಿಟ್ಠಲ : ಕಣ್ಣಾಮುಂದೆ ಬಂದು ನಿಲ್ಲೊ . . . ವಿಜಯವಿಠ್ಠಲರಂಗ (ವಿದಾಕೃ. ೧೯-೫) ; ಭಕ್ತಪ್ರಿಯ ವಿಠ್ಠಲಾ ಕರುಣಿಸಿದರ ಫಲಾ ದೊರತೀತು (ಗಿಱುಗೆ. ೯೭). [ಸಂ.]

ವಿಡ (ನಾ). ಒಂದು ಬಗೆಯ ಕೃತಕಲವಣ : 'ವಿಡಲವಣ' ಪರಾ. [ಸಂ.]

ವಿಡಂಗ (ನಾ). ೧. ಒಂದು ಬಗೆಯ ಔಷಧಿಸಸ್ಯ ಮತ್ತು ಅದರ ಹಣ್ಣು ; ವಾಯುವಿಳಂಗ; P ಕರುಳಿನಲ್ಲಿ ಹುಳುಗಳ ನಿವಾರಣೆಗಾಗಿ ಇದನ್ನು ಔಷಧಿಯಂತೆ ಬಳಸಲಾಗುತ್ತದೆ : "ಕೀಟಮಾರಃ - ವಿಡಂಗ"(ಓಷಧಿ. ೩೪) ; ಮರಿಚಂ ಚವ್ಯಂ ವಿಡಂಗಂ . . . ಯವಕ್ಷಾರಮೆಂದಿಂತಿವೆಲ್ಲಂ ಸಮನಾಗಿ ಕೂಡಿ ಕಟಿವೆರಸು ಮತಂಗಜಕಿಕ್ಕೆ ಶೂಲೆ . . . ಅರುಚಿತ್ವಮೆಂಬಿವಂ ಮಾಣಿಸುಗುಂ (ಲೋಕೋಪ. ೯-೨೫೫) ; ದಾಡಿಮಂ . . . ವಿಡಂಗಂ ಕೂಡೆ ಕುಳನೇಡಕಮುಮಱೆ ರೂಢಿಯ ಕುಳನೆಂದು ಱಱದಪಭ್ರಂಶತೆಯೊಳ್ (ಶಾಪ. ೨೦). ೨. ಜಾಣ. ೩. (ಆಲಂ) ದಡ್ಡ ; ಮೂರ್ಖ : ಕುಂಚದ ಕನಿಷ್ಠರುಂ ತರಟಿನ ವಿಡಂಗರುಂ ಮಿಂಚುದಲೆ ಒಣಕರುಂ ನಿಡುಗಯ್ಯ ದಡಗರುಂ . . . ಸುತ್ತ ಮುತ್ತಿರಲು (ವಾಗೀರ. ದೇ. ೨೫೪-೨೧). [ಸಂ.]

ವಿಡಂಬ (ನಾ). ೧. ಅನುಕರಣೆ : ತವಕಿಗರು ಮಗಧೇಂದ್ರರಾಯನ ಭವನವನು ಹೊಕ್ಕರು ವಿಡಂಬದ ವಿಪ್ರವೇಷದಲಿ (ಕುಮಾಸ. ೨-೬೧). ೨. ಸೋಗು ; ವೇಷ : ಅಱಿದಂ ತ್ವದೀಯಚರಿತದ ತೆಱನಂ ಮಾನುಷವಿಡಂಬಮಂ ಮುಱೆದಪೆ ನೀಂ (ಜಗವಿ. ೮-೧೩). ೩. ತೋರಿಕೆ ; ಆಡಂಬರ : ಸೀಗುರಿ ಬೇಡ ಬೀಸದಿರ್ ಕೊಡೆಯ ವಿಡಂಬಮೇಕೆ (ಪುಷ್ಪಪು. ೧೩-೯೬). ೪. ಅಣಕ ; ಪರಿಹಾಸ್ಯ : ಮುಂದೆ ನಿಂದರಂ ಕಾಣದೆ ತಕ್ಕೆಡೆಯೊಳ್ ಕಡೆಗಣಿಸುವ ನೃಪವಿಡಂಬಮಿವು ಲಕ್ಷ್ಮಿ ನಿನ್ನ ದೂಸಱನಲ್ತೇ (ಗದಾಯು. ೯-೮). ೫. ಅಲ್ಲಗಳೆಯುವಿಕೆ ; ತಿರಸ್ಕಾರ. ೬. ಮೋಸ ; ವಂಚನೆ: ಬೆಂಬಲಕೆ ತಾನೆಂದು ಬಯಲ ವಿಡಂಬದಲಿ ಕಾಳಿಗವ ಮಸೆವರೆ ನಂಬಿ ಕೆಟ್ಟರಿ ಕೃಷ್ಣನನು ನೀವೇನ ಮಾಡುವಿರಿ (ಕುಮಾಬೀ. ೧-೫೯). ೭. ಕಪ್ಪ ; ತೊಂದರೆ : ಪಂಚವಿಧಸಮಿತಿಯುಕ್ತಂ ಪಂಚಭವಂಗಳ ವಿಡಂಬಮಂ ಸ್ತಂಭಿಸಿದಂ (ಅರ್ಧಪು. ೧೫-೨೯) ; ಕೀಚಕವಿಡಂಬವ ಕೇಳು ಭೂಪಾಲ (ಕುಮಾವಿ. ೨-೨). [ಸಂ.]

ವಿಡಂಬಕ (ನಾ). ೧. ಅನುಕರಿಸುವಿಕೆ ; ಅನುಕರಣೆ. ೨. ಅಣಕಿಸುವವನು ; ಪರಿಹಾಸಕ : ಕಾಮಶುದ್ಧಿಯೆಂಬುದು ವಿಗತಕಾಮರುಂ ಜಿತೇಂದ್ರಿಯರುಂ ಸ್ವದಾರ ಸಂತುಷ್ಟರುಮಾಗಿರ್ಪುದುಮುಱೆದ ಸಾವದ್ಯಾಹಾರಮಶುದ್ಧಮೆಂದಿಂತು ನಡೆಯದೊರೆಲ್ಲಂ ವಿಟರುಂ ವಿಡಂಬಕರುಮೆಂದಱೆಗೆ (ಚಾವುಂಪು. ೨೨೨). [ಸಂ.]

ವಿಡಂಬಡಂಬರ (ನಾ). ಆಡಂಬರದ ಕೋಲಾಹಲ : ಜಗಮನದಿರ್ಪಲಾರ್ಪ ಬಿರುದಾಂತ ಬಲಂಗಳನೆತ್ತಿ ನುಂಗಿ ಮತ್ತುಗುಱದ ಭೀರಪರ್ವತನಿಕರಂಗಳ ಬಾಱ್ಮೊದಲಾದ ಚಾಗದೋಲಗದ ವಿಡಂಬಡಂಬರಕೆ ಕಣ್ಣಿಲೆಯಾದ ವಿಲಾಸಮೊಪ್ಪೆ (ಅನಂಪು. ೨-೨೮). [ಸಂ.]

ವಿಡಂಬನ (ಗು). ೧. ತಿರಸ್ಕಾರಕ್ಕೆ ಯೋಗ್ಯವಾದ : ಈ ವಿಡಂಬನದೈಹಿಕವ ಸಂಭಾವಿಸುತ ಪರಲೋಕಹಿತವನು ನೀವು ನೆನೆಯದೆ ಕೆಟ್ಟುದಕೆ ಬೆಱಗಾದೆ ನಾನು (ಕುಮಾಗ. ೧-೨೨). (ನಾ). ೨. ಅನುಕರಿಸುವುದು ; ಅನುಕರಣೆ : ವೇಶ್ಯಾವಿಡಂಬನವಱಿವ ಕಥೆಗೇಳ್ವ ಬಿಡದೆ ಸಿಂಗರಿಸಿ ನಲ್ಲರ ಗೋಷ್ಠಿಯೊಳಗಿಪ್ಪ ಮಡದಿಯರನೀಕ್ಷಿಸುತಲವನೀಶನೆಯ್ತಂದನಾ ಸೂಳೆಗೇರಿಯೊಳಗೆ (ಹಚಕಾ.೪-೯) ; ಹಾಸ್ಯವು ಅನೇಕ ಮುಖವಾಗಿ ಪ್ರಕಟಗೊಂಡ ಜೀವನದಲ್ಲಿಯ ವಿವರವನ್ನು ಎತ್ತಿ ತೋರಿಸಿದೆ. ಅಣಕ, ವಿಡಂಬನ, ವಿನೋದ, ವ್ಯಂಗ್ಯೋಕ್ತಿ, ವಿದಗ್ಧತೆ — ಹೀಗೆ ಮೊದಲಾಗಿ ಹಾಸ್ಯ ಪ್ರಕಟವಾಗಿದೆ (ಸೆಮಚೀ. ೩೭ ೭೦೫). ೩. ತೋರಿಕೆ ; ಆಡಂಬರ ; ಪ್ರದರ್ಶನ : ಅಂಬರದತ್ತಣ್ಗೆ ಸಂದ ಪುಸಿಯ ಕಳವಿನ ಬಲ್ಪಡೆಯೆನೆ ತೋರ್ಪ ಮಾಯಾವಿಡಂಬನದಿಂ ಕುದುರೆಯಂ ಕಳ್ಚುಯ್ಯ ವಿದ್ಯುನ್ಮಾಲಿವೆಸರ ರಕ್ಕಸನ ಪೆರ್ವಡೆ ತುಬ್ಬಾದತ್ತು (ರಾಮಾಶ್ವ. ೧೧೦-೧೫). ೪. ಅಣಕ ; ಪರಿಹಾಸ್ಯ : ಕಾದಂಬರಿಯು ನೀನು ಇಲ್ಲದ ಗುಣಗಳನು ಪಕ್ಷಪಾತದಿಂದ ಕಲ್ಪಿಸಿ ಹೇಳಿದೆಯೆಂದು ಆಗಾಗ್ಗೆ ವಿಡಂಬನವ ಮಾಡಿ ನುಡಿಯುತಿರುವಳು (ವಚಕಾ. ೮೯) ; ಕನ್ನಡಿಯಂತುಳಾಕೆಯುಂ ಪ್ರತಿಬಿಂಬರೀತಿಯಂ ಕೈಕೊಂಡಳಾ ಜನದ ಮನದ ವಿಕೃತಿಗೆ ತನ್ನ ಮೆಯ್ ವಿಡಂಬನಮಪ್ಪವೋಲ್ (ಶ್ರೀರಾಮಾ. ೨೩-೬೦೧). ೫. ಅಲ್ಲಗಳೆಯುವಿಕೆ ; ತಿರಸ್ಕಾರ : 'ವಿಡಂಬನಂಗೆಯ್' ಪರಾ. [ಸಂ. ವಿಡಂಬನ, ವಿಡಂಬನಾ]

ವಿಡಂಬನಂಗೆಯ್ (ಕ್ರಿ). ಹೀಗಳೆ ; ಮೂದಲಿಸು : ಲಕ್ಷ್ಮಿಯಂ ವಿಡಂಬನಂ ಗೆಯ್ದು ನಿತಱೊಳಂ ಮಾಣದೆ (ಗದಾಯು. ೯-೧೨ ಪ) ; ದುರ್ವಿಷಯವಶನಾಗಿ ಪ್ರತಿಭೆ ಪೋಗಿ ಅಂಜುಬಾಂಬಕಿ ಕೈಕೆಗಾಳಾದನೆನ್ನುತ ವಿಡಂಬನಂಗೆಯ್ದುಳಿದಪರೆ (ಮಂಕಾಂ. ೨-೬-೪೩).

[ವಿಡಂಬನ + ಕೆಯ್$_1$]

ವಿಡಂಬನಗೀತ (ನಾ). ಅಣಕವಾಡು : ಪದ್ಯನಾಟಕ ಗೀತನಾಟಕ, ಒಪೆರಾ . . . ವಿಡಂಬನಗೀತ, ಅಣಕು ವಾಡು-ಎಲ್ಲವೂ ಇಂದು ಕನ್ನಡದಲ್ಲಿ ನೆಲೆಗೊಂಡಿವೆ (ನವ್ಯಕಾ. ೨೪). [ಸಂ.]

ವಿಡಂಬನಚಿತ್ರ (ನಾ). ಗೇಲಿಯುಂಟುಮಾಡಲು ಬರೆದ ಚಿತ್ರ ; ಅಣಕಚಿತ್ರ : ವಿಡಂಬನಚಿತ್ರ ಬರೆ : ಒಂದು ವ್ಯಕ್ತಿಯನ್ನು ವಿಡಂಬನರೀತಿಯಲ್ಲಿ ರೇಖಿಸು (Cartoon.ಇಂಕಸ). [ಸಂ.]

ವಿಡಂಬನೆ (ನಾ). ೧. ಅನುಕರಣೆ : ಶಂಬರಾರಿಯ ಶಸ್ತ್ರಪತಿಯ ವಿಡಂಬನೆಯ ಧಿಕ್ಕರಿಸಿ ತೋಱುವೆನು (ಪ್ರಭುಲಿಂ. ೧೦-೩). ೨. ಅಣಕ ; ಅಪಹಾಸ್ಯ : ಯುವಕನೊಬ್ಬನು . . . ಮುದುಕನ ನಟನೆ ಮಾಡಿ ತೋರಿಸಿದಲ್ಲಿ ಅದು ಅಣಕವಾಗುವುದಿಲ್ಲವೇ ? ಇದಕ್ಕೂ ಹೆಚ್ಚಿನ ವಿಡಂಬನೆ ಯಾವುದು ? (ಹೆಮಾಂಶ. ೩೩೨) ; ಅಂತಃಪುರದ ಈ ಕಥೆಯನ್ನು ಕೇಳಿ ಗಿಣಿಯು ನನ್ನ ಭಾಗ್ಯದ ಬಗ್ಗೆ ಎಂತಹ ವಿಡಂಬನೆ ಮಾಡಿದೆ (ಬಾಣಭ. ೧೨೫). [ಸಂ. ವಿಡಂಬನಾ]

ವಿಡಂಬನೆಗೈ (ಕ್ರಿ). ಹೀಗಳೆ ; ಮೂದಲಿಸು : ಕೇವಲ ಬಹಿರಂಗದ ಲಾಂಛನ ಬರಿಯ ಪ್ರದರ್ಶನಕ್ಕೆ ಸೇರಿದ್ದು, ಅದನ್ನು ಘಟ್ಟಿವಾಳಯ್ಯ ಎಂಬ ಭಕ್ತ ಮಾರ್ಮಿಕವಾಗಿ ವಿಡಂಬನೆಗೈದಿದ್ದಾನೆ (ಕ್ರಾಸ್ತಕು. ೧೨೭). [ವಿಡಂಬನೆ + ಗೈ(< ಕೆಯ್$_1$)]

ವಿಡಂಬರ (ನಾ). = ವಿಡಂಬನ ೨ : ಭಾವಿಸಲು ಭಕ್ತಿಕ್ರಿಯಾಮಹಿಮಾ ವಿಡಂಬರಸಾನುಭವರಹ ಶೈವರಿಗೆ ನಿಮಿತ್ತವು ನಿನ್ನಸಮಭಕ್ತಿ (ಬಸಪು. ೪೦-೮೧). [ಸಂ.]

ವಿಡಂಬಿ (ಗು). ಅತಿಶಯಿಸುವ ; ಮೀರುವ : ಆಡುವವಹಿವಿಲಾಸದಿಂದೆಡೆಯುಡುಗದೆ

ರತ್ನದಿನನೂನಗಾಂಭೀರ್ಯದಿನಾ ಕಡಲನವಗಯಿಸಿ ತೋರ್ಪುದು ವಿಡಂಬಿ ಮಹಿಮಾವಳಂಬಿ ಕೌಶಂಬಿಪುರಂ (ಸುಕಮಾ. ೧-೭೭). [ಸಂ. ವಿಡಂಬಿನ್]

ವಿಡಂಬಿತ (ಗು). ೧. ಅನುಕರಿಸಿದ ; ಅನುಕರಣೆಮಾಡಿದ. ೨. ಅಣಕಿಸಿದ ; ಪರಿಹಾಸ್ಯಮಾಡಿದ. ೩. ವಂಚಿಸಿದ ; ಮೋಸಗೊಳಿಸಿದ. ೪. ಪೀಡೆಗೊಳಗಾದ ; ಹಿಂಸೆಗೊಳಗಾದ. ೫. ಹೀನವಾದ ; ತುಚ್ಛವಾದ. ೬. ನಿರಾಶೆಗೊಂಡ. [ಸಂ.]

ವಿಡಂಬಿಸು (ಕ್ರಿ). ೧. ಅನುಕರಣೆಮಾಡು ; ಅನುಕರಿಸು : ಇತ್ತ ಲಾಂಧನಚ್ಛಲದಿಂ ಶೋಕಾನಲದಗ್ಧಮಪ್ಪ ಮಹಾಶ್ವೇತಾಹೃದಯಮಂ ವಿಡಂಬಿಸುವಂತೆಯುಂ . . . ಆಗಿ (ಕಾದಂಪೂ. ೯೮೨) ; ಪೊಂಬಳಯಿಗೆ ಮಿಂಚು ಮಣಿತೋರಣ ಕಣ್ಗೊಂಬಿಂದ್ರಧನು ಕುಸುಮಾಳಿ ಇಂಬುಗೊಂಡಾಲಿಕಲ್ಲಾಗಲಾ ನಗರಿ ವಿಡಂಬಿಸಿದುದು ಕಾರ ಸಿರಿಯ (ಕರಾಸಾಂ. ೭-೭೯). ೨. ಅಣಕಿಸು ; ಹಂಗಿಸು ; ಪರಿಹಾಸ್ಯಮಾಡು : ಸಂತತಂ ಪೌರಜನಂ ವಿಡಂಬಿಸುಗುಮೆಂದಳಿದುಂ ಮಳಿದುಂ ಸಮಂತು ಧಾತ್ರೀರಮಣಂ ದಿನಂಗಳಿನಿತಂ ಕಳಿವಂ ನಿಜಧೈರ್ಯವೃತ್ತಿಯಿಂ (ನಳಚಂ. ೬೨) ; ಆಕಟ ವಿಡಂಬಿಸಿತೆ ವಿಧಿಯೆನ್ನ (ಕುವಾಆ. ೧-೬). ೩. ಅಲ್ಲಗಳೆ ; ತಿರಸ್ಕರಿಸು : ಆ ರಾಜ್ಯವನು ವಿಡಂಬಿಸಿ ಬಂದ ಕುಮಾರಗರಸುತನವಾಯ್ತು (ವ್ರಯುಜ. ೨-೯೨). ೪. ಮೋಸಮಾಡು ; ವಂಚಿಸು : ಬೆಸನಂಗಳ್ತನುವಿಚ್ಛೆಗೊಯ್ವುವದಱಿಂ ಲಕ್ಷ್ಮೀವಿಡಂಬಂ ವಿಡಂಬಿಸದಂತಾಗಿರೆ . . . ಆತ್ಮವಂತನೆನಿಸೆಂದುಂ ರಾಜವಿದ್ಯಾಧರಾ (ಕಾದಂಪೂ. ೫೭೪) ; ಆತನೆ ಪತಿಯೆಂದೆನ್ನ ವಿಡಂಬಿಸಿ ಮಾತ ಹಿರಿದನಾಡಿದೆಯ (ಶ್ರೀಪಾಲ. ೫-೯೪). [ವಿಡಂಬನ + - ಇಸು]

ವಿಡಕ (ನಾ). ಬಿದಿರಿನ ದೊಡ್ಡ ಬುಟ್ಟಿ ; ಹೆಡಗೆ : "ವಿಡಕ [ಪಾಠಾಂ. ವಿದಕ,ನೀಡ] ಮೆನೆ ಹೆಡಗೆಯಕ್ಕುಂ" (ಮಂಗರಾ. ೬೨-೫೧). [?]

ವಿಡಲವಣ (ನಾ). ಒಂದು ಬಗೆಯ ಕೃತಕಲವಣ : "ವಿಡ[ಪಾಠಾಂ. ಬಿಡು] ಲವಣಮದು ಕೃತಕಮೆನಿಸಿಕ್ಕು" (ಮಂಗರಾ. ೪೩-೪೧). [ಸಂ.]

ವಿಡಾ 'ಬೀಡಾ' ನೋಡಿ

ವಿಡಾಯ, ಬಿಡಯ್ಯ, ಬಿಡಿಯ್ಯ, ಬಿಡೆಯ್ಯ, ವಿಡಾಯಿ (ನಾ). ೧. ಬೆಡಗು ; ಒನಪು ; ಒಯ್ಯಾರ : "ವಿಡಾಯಮಿನಲ್ ವಹಣಿಯಕ್ಕು" (ಭಾರವಿ. ೬) ; ಲಿಂಗಸಂಗಿಗಳೆಲ್ಲ ಕೇಳುವುದು ಮಾಯೆ ಮೋಹಿಸಿ ಮುಟ್ಟಿ ಬಂದ ವಿಡಾಯವನು ಮುಱಿದಲ್ಲಮಪ್ರಭುರಾಯನಾಡುತಲಿರ್ದ ಪರಿಯನು ಲಿಂಗಲೀಲೆಯಲಿ (ಪ್ರಭುಲಿ. ೬-೧) ; ಮುದ್ದುಮೊಗದೊಳ್ ಮಂದಸ್ಮಿತಂ ನೋಡದಂತಿರೆ ನೋಳ್ಪೊಂದು ವಿಡಾಯವಱಿಯೊಳ್ . . . ಮಱೆಯೆ ಕಣ್ಗಂಬಾದರಬ್ಜಾಸ್ಯೆಯರ್ (ರಾಜಶೇ. ೧೧-೩೨). ೨. ವಿಜೃಂಭಣೆ ; ಮೆರೆತ ; ಆಡಂಬರ : ವಿನಿಯೋಗವಿತತಿಯ ವಿಡಾಯದ ವಿಳಾಸದ ವಿನೋದದ ವಿಭವದ ವಿಭ್ರಮದ ಪೆಂಪಿಂಪನೀಯೆ (ಪದ್ಮರಾ. ೫-೩) ; ವಿನುತವಿಭವದ ವಿಡಾಯದೊಳ್ ನಡೆಗೊಳ್ಪ ನೂತನರಥಾಂಗಂಗಳ ರಥಂಗಳಿಟ್ಟಣಿಸಿ ಸಂಭ್ರಮದಿಂದೆ ನಡೆಗೊಂಡುವು (ಚಿಬಪು. ೬೫-೧೦). ೩. ಸಂಭ್ರಮ ; ಸಡಗರ : ಹಲವು ಪಯಣದಲಿ ಬಂದು ನೆಲಸಿದ ಕಟಕದ ಕೆಲದೋನೆಯನೇಱಿ ಬಲುವಿಡಾಯದೊಳೆಯ್ದುತಿರ್ದ (ಚಾಚ. ೩೭-೧೩). ೪. ರೀತಿ ; ಗತ್ತು : ಬಿರುದರಾಯರ ರತುನರಾಜೆಯಲರಿಬಲಾರ್ಣವ ।।ಜಱು ಮಿಗಲಳ್ಳಿಱಿಯುತದೆ ಬಹುವಿಧದ ವಾದ್ಯವಿಡಾಯ ರಭಸದಲಿ (ಕುವಾಭೀ. ೩-೨೩) ; ಆಯತದ ಭಾರಣೆಯ ಮುಷ್ಟಿವಿಡಾಯದಲಿ . . . ಬಿಡದೊಡನೆ ಬಡಿದಾಡಿದರು (ಅಂದಾ. ೧೩-೧೮). ೫. ಸೊಗಸು ; ಅಂದ ; ಶೋಭೆ : ಅರಸಂಚೆಗೆ ನಡೆಯ ವಿಡಾಯಮನು . . . ಒರೆವುತ ಕಮಲಾಯತಾಕ್ಷಿಯರಿಹರು (ಕರಾಸಾಂ. ೩-೪೩) ; ಕುಣಿವ ಸೋಗೆಗಳ ಸಮುದಾಯದ ವಿಡಾಯದಿಂ . . . ಮನಂ ಪೆರ್ಚಿಸುವುದು (ವಂಕಾರಾ. ೪-೧೮-೩). ೬. ಜಂಭ ; ಗರ್ವ ; ಅಹಂಕಾರ : ಬಾಯಬಡಿಕನ ನೂಕಿನುತ್ತ ವಿಡಾಯದಲಿ ಹೊಱವಂಟ ರಕ್ಕಸರಾಯ ಪುಷ್ಪಕವೇಱಿ ನಭದಲಿ ನೋಡಲ್ಕಿತಂದ (ಕಾಶಿಕಾ. ೧೭-೧೪) ; ಪಚ್ಚೆ ಮಾಣಿಕ ಪವಳದ ಮಾಲೆ ಮುತ್ತಿನ ಕುಚ್ಚು ಪಾಳೆಯ ತುಂಬಿ ತೊಱೆ ಅಚ್ಚರಿಮಟ್ಟನು ನಮಿರಾಜನೀಕ್ಷಿಸಿ ನುಚ್ಚುನೂಱಾಯ್ತು ವಿಡಾಯ (ಭರಚ. ೩೯-೭೭). ೭. ಯುಕ್ತಿ ; ಉಪಾಯ : ತಾಯೆ ಸಂಶಯವಿಲ್ಲ ನೈಷಧರಾಯನೀತನು ಸೂತನಲ್ಲ ವಿಡಾಯದಲಿ ಬಂದಿಹನು ಕುಹಕಕುರೂಪಿವೇಷದಲಿ (ನಳಚ. ೪-೫೦). ೮. ಭ್ರಮೆ ; ಮಾಯೆ : ಇದನೆಸಗೆ ಕುಂದಪ್ಪುದೆಮ್ಮ ಕುಲಕೆ ಎಂದೆಂಬುದೊಂದು ಬಯಲ ವಿಡಾಯಮಂ ಬಿಟ್ಟು . . . ಪರದುಗೆಯ್ವುದಕೆ ಮೌಲ್ಯಮಂ ಹಡೆಯದೊಡೆ ಕಾರ್ಯಮಹುದೇ (ಸಮ್ಮಕಾ. ೧೧-೮). ೯. ದಟ್ಟಣೆ ; ನೆರವಿ : ಸೆಳೆವ ಸಿಂಧದ ಕಟವ ಹೀಲಿಯ ವಳಯ ತೋಮರ ಚಮರ ಡೊಂಕಣಿಗಳ ವಿಡಾಯದಲಮಮ [ಪಾಠಾಂ. ವಿಡಾಯಿಯಲಮಮ] ಕೆತ್ತುದು ಗಗನವಳ್ಳಿಯೆ (ಕುವಾಬಿ. ೪-೩೨). ಬಿಡಯ್ಯ : ೫. ಬಿಗಿದವೆಡಮುಂಟಪದ ಬಿಂಗಾರಿಗಳ ಬಿಡ[ಪಾಠಾಂ. ಡೆ]ಯದ ಚಮರ . . . ಕಂಬದ ವಜ್ರಮಯ ಧಾರೆಗಳ ಲೆಸೆದುದು ಭದ್ರಮಂಟಪವಮಲ ಮಣಿಮಯದ (ಕುವಾಆ. ೧೪-೧೨). ಬಿಡಿಯ್ಯ : ೧. ಕೀಳಿಗಾಕಳು ತೊರೆವುದಲ್ಲದೆ ಮೇಲುಬೊಂಬಿನಲಾವ ಬಿಡಿಯಕೆ ಲಾಲಿಸುತವಾಗದಕೆ ತೊರೆವುದೆ (ಸಂಭಪ. ೯-೭೩). ೪. ತನ್ನ ಚತುರೊಡಾಯರಾಜಬಿಡಿಯವಿ ಪಾಂಥರನ್ನಿಡುವ (ಚಿನಮು. ೩-೨೭). ಬಿಡೆಯ್ಯ : ೪. ಘುಡುಘುಡಿಸಿದನು ರೊಷವಹ್ನಿಯ ತಡಿಯ ಹೊಕ್ಕನು ಬಿಗಿದ ಹುಬ್ಬಿನ ಬಿಡೆಯ ಬವರಿಯ ಲಳಿಯ ಲವಣೆಯ ಲೋಚನದ್ವಯದ (ಕುವಾಪೆ. ೧೫-೫೬) ; ಲಗಡಿಯಲಿ ಲಟಕಟಿಸುವಂತರಲಗಡಿಯಲಿ ಲಾಲಿಸುವ ಡೊಕ್ಕರಣಿಗಳ ಬಿಗುಹಿನ ಬಿಡೆಯ ಬಿನ್ನಾಣದಲಿ ಹೆಣಗಿದರು (ಕುವಾಕ. ೧೯-೪೩). ೧೦. ಅಟ್ಟಹಾಸ ; ದರ್ಪ : ಸುಳಿದು ಖಗಪತಿಯಂತೆ ಹೊಯ್ಲಲಿ ಬಳಸಿ ಬಿಗಿದೆಱಗಿದರು ಬಿಡೆಯದ ಮತ್ತಗಜದಂತೆ (ಕುವಾಗ. ೭-೨). ವಿಡಾಯಿ : ೨. ಹೂಸಿಕದ ಹೂಣಿಗತನವ ಸೊನ್ನಾರವಿದ್ಯೆಯ ಸಾಹಸೋನ್ನತಿಯ ಸೊಗಸ ಹುಟ್ಟಿಸಿ ಸುಲಿವ ರಸವಾದಿಗಳನಿವರ ವಿಡಾಯಿಗಳ ನಂಬುಗೆಯ ಕೇವಣ ಪಾಡುಕಾಱರ ಕರ್ಣ ನೋಡು (ಕುವಾದ್ರೋ. ೧೭-೨೫) ; ತನ್ನ ವಿಡಾಯಿ ವಹಣಿಗಳ ಡಂಬಗಾರಿಕೆಯ ಅರ್ಥವಿಲ್ಲದ ಅನರ್ಥಕ್ಕೆ ನಮ್ಮ ಅರಮನೆಯನ್ನೂ ರಾಜ್ಯವನ್ನೂ ಕೋಲ್ಟೆತ್ತುಬಿಡಲು ಸಿದ್ಧಮಾಡಿಕೊಳ್ಳುತ್ತಿರುವನು (ಮಂತ್ರಶ. ೧೪೯-೮). ೩. ಹೊಂದೇರಿನ ವಿಡಾಯಿಯಲಿ . . . ನೋಡು ಗರುಡಿಯ ಜಾಣ ದ್ರೋಣನನು (ಕುವಾಭೀ. ೩-೮) ; ಇಂತು ನಾನಾವಿಲಾಸದ ವಿಡಾಯಿಗಳಿಂದೆ ಕಂತುಹರನರಸಿ ವೈವಾಹಮಂಟಪದೆಡೆಗೆ ಸಂತಸದೊಳ್ಕೆತಂದು (ಚಿಬಪು. ೩೭-೫೫). ೪. ಎಡಗಾಲ ತೊಡರಬಾವುಲಿ ನಡೆಗೆಸೆವ ವಿಡಾಯಿ ಜಗಮನಂಗೆಯ್ಯೊಳ್ ನೋಟ್ಪೊಡೆ ತೋರ್ಪನೆಂಬ ನುಡಿ ನೇರ್ಪಡೆದೊಪ್ಪಿರಲಿಂದ್ರಜಾಲಿಗಂ ಮಿಗೆ ಬಂದಂ (ರತಿಕು. ೩-೧೧೧) ; ಹಿಳಿದ ಛಲದ ವಿಡಾಯಿ ಧೈರ್ಯದ ತಳಿತ ಭೀತಿಗೆ ಕಾಲುವೊಳೆಯಾದಳಿಮನದ ಭೂಪಾಲನಿರವನು ಕಂಡನಾ ಪಾರ್ಥ (ಕುವಾದ್ರೋ. ೧೪-೯). ೫. ಆ ಸುಕುಮಾರಿ ಚಾರು ನವರತ್ನ ವಿಭೂಷಣಸಂಚಯಂಗಳಂ ಲೇಸೆನಿಸಿರ್ದ ಮೆಯ್ಗೆ ಕಡುಭಾರ ವಿಡಾಯಿಗಳೆಂದು ಪುಷ್ಪಮಾಲಾಸಮುದಾಯಮಂ ಮುಡಿಗೆ ಭಾರಮಿದೆಂದು (ಬಾಧಪು. ೨-೫೮). ೬. ವಿಳಾಸಿನಿಯರ ವಿಡಾಯಿಯೊಳರಸಿ ಬಂದಳು (ಕುವಾಉ. ೬೦೩. ೧೧-೫೭). ೧೧. ಆಧಿಕ್ಯ ; ಹೆಚ್ಚಳ ; ಅತಿಶಯತೆ : ವಿವಿಧವಾದ್ಯಂಗಳ ವಿಡಾಯಿಯಿಂದಾರ್ಭಟಿಸಿ ತಿವಿ ಬಸುಜನುಗಿ ಕರುಳನಗಿಯೆನುತ್ತಾಹವ ಕೃವಗಡಿಸಿದುದು ವಜ್ರನಾಭನಿದಿರೊಳ್ ನಿಂದು ಸರಳ್ಗಳೆಗಳಂ ಕಳೆವುತೆ (ಚಿಬಪು. ೩೯-೩).

ವಿಡಾಯಕಾರ್ತಿ (ನಾ). ಒಯ್ಯಾರಿ ; ಒನಪುಗಾತಿ : ಪಾಯವಧಾರೆಂದು ನೆಲನನುಗ್ಗಡಿಪ ವಿಡಾಯಕಾರ್ತಿಯರು ಮುಂಬರಲು . . . ಪೊಕ್ಕನು ರಕ್ಕಸರಾಯನೋಲಗಶಾಲೆಯನು (ಕರಾಸಾಂ. ೧೭-೨೩).

[ವಿಡಾಯಕಾಱಿ + - ತ್ತಿ (< - ಇತ್ತಿ)]

ವಿಡಾಯಕಾಱಿ (ನಾ). ಜಂಬಗಾರ ; ಗರ್ವಿಷ್ಠ : ತಾಯ ತಂಗಿಯ ಕೆಳದಿಯರ ವಿಮಾನದೊಳೊಯ್ಯಾರದಿಂದಿಟ್ಟು ತನ್ನ ಸ್ತ್ರೀಯರ ಮನೆಯೊಳಿರಿಸಿ ಬಂದನೇನು ವಿಡಾಯಕಾಱಿನೊ ನಮಿರಾಜ (ಭರಚ. ೩೯-೭೧). [ವಿಡಾಯ + - ಕಾಱಿ]

ವಿಡಾಯಗ (ನಾ). = ವಿಡಾಯಕಾಱಿ : ಕೋಡಿಗನೋ ವಿಡಾಯಗನೊ ಕೋವಿದ ಮುಗ್ಧರ ದೇವನೊ (ಹಮ್ಮೀರ. ೫-೫೦). [ವಿಡಾಯ + - ಗ]

ವಿಡಾಯಗೆದು, ವಿಡಾಯಿಗೆದು (ಕ್ರಿ). ಸೊಕ್ಕು ಅಡಗು ; ಗರ್ವವಿಲ್ಲದಾಗು : ದಾಯ ತಪ್ಪಿತು ಗರುವರಾಟ ವಿಡಾಯಗೆಟ್ಟಿತು ವಿಟರ ನೋಟ ನವಾಯಕಾಱರ ಕೂಟ ಕುಸಿದುದು ಮಾರಶರಹತಿಗೆ (ಕುವಾಆ. ೧೩-೪೫). ವಿಡಾಯಿಗೆದು : ಸಾಯಲಾದನು ಧೃಷ್ಟಕೇತು ವಿಡಾಯಿಗೆಟ್ಟನು ಭೋಜನು (ಕುವಾದ್ರೋ. ೨-೫೯). [ವಿಡಾಯ + ಕೆದು]

ವಿಡಾಯದೋಜು (ಕ್ರಿ). ಆಡಂಬರವನ್ನು ಪ್ರಕಟಿಸು ; ವೈಭವವನ್ನು ಪ್ರದರ್ಶಿಸು : ಹೊನ್ನಪೀಠದಲಿ ಕುಳಿತು ಮುತ್ತಿನ ಹಾರ ರನ್ನದಾಭರಣವ ತೋಜಿ ಕನ್ನೆಯನೊಲಿಸುವೆನೆಂದು ನೃಪತಿಯೊರ್ವ ತನ್ನ ವಿಡಾಯದೋಜಿದನು (ಜೀವಂಸಾಂ. ೧೦-೬೬). [ವಿಡಾಯ + ತೋಜು]

ವಿಡಾಯವಂತ (ನಾ). = ವಿಡಾಯಕಾಱ : ಅಹಂಬ್ರಹ್ಮವೆಂದು ನಿಜದಾಯ ವಱಿಯದೆ ನಿತ್ಯರೆಂದು ಬೇವುತ್ತಿಹ ವಿಡಾಯವಂತರ ಕಂಡು ನಿತ್ಯರೆಂದವರ ಪೊರ್ದದೆ ಚರಿಪನಬ್ಜಶರಣಂ (ಸಿದ್ಧೇಶ್ವ. ೨೨-೧೯೦). [ವಿಡಾಯ + - ವಂತ]

ವಿಡಾಯವೆಜು (ಕ್ರಿ). ಬೆಡಗಿನಿಂದ ಕೂಡಿರು ; ಒಯ್ಯಾರದಿಂದಿರು : ರಾಯಂಚೆ ಪೊಣರ್ವಕ್ಕಿಗಳೆಡೆಯಾಟದ ರಾಯಬೀದಿಯೊ ತುಂಬಿಗಳ ಲಾಯಮೊ ಪೇಳೆನಲಾ ತುಂಗಭದ್ರೆ ವಿಡಾಯವೆತ್ತೆಸೆದುದು ಕಣ್ಗೆ (ಕರಾಸಾಂ. ೨-೮೨). [ವಿಡಾಯ + ಪೆಜು$_1$]

ವಿಡಾಯಿ 'ವಿಡಾಯ' ನೋ.

ವಿಡಾಯಿಗೆಡಿಸು (ಕ್ರಿ). ಗರ್ವವನ್ನು ಅಡಗಿಸು ; ಸೊಕ್ಕನ್ನು ಮುರಿ: ಅಖಿಳನೃಪರ ವಿಡಾಯಿಗೆಡಿಸಿದ ಚಂದ್ರಧರಚಾಪಾಯುಧವ ಗೆಲಿದೊಳಿಸಿದನು ರಘುನಾಥನವನಿಜೆಯ (ತೊರರಾ. ೧-೧೬-೬). [ವಿಡಾಯಿಗೆಡು (< ವಿಡಾಯಗೆಡು) + - ಇಸು$_3$]

ವಿಡಾಯಿಗೆಡು 'ವಿಡಾಯಗೆಡು' ನೋ.

ವಿಡಿಸು 'ಬಿಡಿಸು' ನೋ.

ವಿಡು 'ಬಿಡು' ನೋ.

ವಿಡೂರ$_1$ 'ವಿಡ್ಡೂರ' ನೋ.

ವಿಡೂರ$_2$ (ನಾ). ಒಂದು ಬಗೆಯ ರತ್ನ ; ವೈಡೂರ್ಯ : ವಿಡೂರ ಧರಣೀಜ ವಿಶೇಷರತ್ನ ಸ್ತೋಮಾಭಿರಾಮರಚಿತೋರುಗವಾಕ್ಷಲಕ್ಷಂ (ಹಮ್ಮೀರ. ೮-೩೮). [ಸಂ.]

ವಿಡೂರಜ (ನಾ). = ವಿಡೂರ$_2$: ಮಂಜುಳವಿಡೂರಜಭೂಷಣೆ ಚಂದ್ರಕಾಂತಿಯಂ ಕನಕಪರಿಷ್ಕೃತಿದ್ಯುತಿಕೃತಾತಪೆ ನೀಂ ತಡೆ (ರಾಜಶೇ. ೭-೮೮). [ಸಂ.]

ವಿಡೂರಭೂಮಿ (ನಾ). ವೈಡೂರ್ಯಗಳಿಂದ ಕೂಡಿರುವ ಭೂಮಿ : ದೇವರ ದೇವ ವಿಡೂರಭೂಮಿ ವೈಡೂರ್ಯದಿನೆಂತು . . . ಪೂಜ್ಯಮಂತಾರ್ಯಭವದ್ಗುರುತ್ವಮೆ ಮದೀಯ ಗುರುತ್ವಸಮಗ್ರಕಾರಣಂ (ಶಾಂತಿಪು. ೧೦-೧೦೦). [ಸಂ.]

ವಿಡೂರಮಣಿ (ನಾ). = ವಿಡೂರ ೩: ಮುಖ್ಯಪೀಠಮೆಸೆದತ್ತು ವಿಡೂರಮಣಿ ಪ್ರಭಾಪ್ಲುತಂ (ಮಲ್ಲಿಪು. ೧೪-೧೮೮). [ಸಂ.]

ವಿಡೂರಾವನಿ (ನಾ). = ವಿಡೂರಭೂಮಿ : ವಿಡೂರಾವನಿಯೊಳ್ವೈಡೂರ್ಯರತ್ನಂ ಜನಿಯಿಸೆ (ಮಲ್ಲಿಪು. ೮-೯೧). [ಸಂ.]

ವಿಡ್ಡಿ (ನಾ). ವಿರೋಧ ; ದ್ವೇಷ : ಆ ಸಮಯದಲ್ಲಿ ಹಯರತ್ನ ಮಂತದ್ವೃಷಭದಾಸನೊಳು ವಿಡ್ಡಿಯಂ ಮಾಡಿ ಕೆಡಿಸಿದುದನಱಿದಾ ಸುದಂಡಾವನೀಶಂ ಕೆಕ್ಕಳಂಗೆರಳೆ (ಸಮ್ಯಕ್ತ. ೧೧-೭೩). [< ವಿಡ್ಡೂರ ?]

ವಿಡ್ಡುರ 'ವಿಡ್ಡೂರ' ನೋ.

ವಿಡ್ಡೂರ, ವಿಡೂರ$_1$, ವಿಡ್ಡುರ (ನಾ). ೧. ತೊಂದರೆ ; ಆಪತ್ತು : ಜಯಮಂಗಳಂ . . . ಅಡ್ಡಬಿದ್ದ ಜನರ ವಿಡ್ಡೂರಗಳ ಕಳೆದು ದೊಡ್ಡವರ ಮಾಳ್ಪ ಸಿರಿವಿಜಯವಿಠ್ಠಲಗೆ (ವಿದಾಕ್ಷ. ೪೧-೩). ೨. ಅಡ್ಡಿ ; ಆತಂಕ : ಮಹತ್ಕಾರ್ಯಗಳನ್ನು ಸಾಧಿಸುವಲ್ಲಿ ಅಡೆತಡೆಗಳು ವಿಘ್ನ ವಿಡ್ಡೂರಗಳು ಇದ್ದೇ ಇರುತ್ತವೆ (ಪಶಿಸಂ. ೩); ನೆನೆಸಿದುದು ನೆನಸಿದಂತಾಗದಿರಲು ಒಂದಲ್ಲ ಒಂದು ವಿಘ್ನ ವಿಡ್ಡೂರಗಳು ಬಂದೇ ಬರುತ್ತವೆ (ಕರಿಕಾ. ೩೭). ೩. ನೋವು ; ಹಿಂಸೆ : ಸಡ್ಡೆಮಾಡದೆ ರಕ್ಕಸನ ಕೂರ್ಗಣೆಗಳ ವಿಡ್ಡೂರವನು ಹಾಜಹೊಯ್ದು ಅಡ್ಡವಾತಿಯಲಿ ಸ್ಯಂದನ ಸೂತವಾಜಿಯ ಒಡ್ಡವಣೆಯ ಖಂಡಿಸಿದ (ಮೋಹತ. ೪೦-೫೪) ; ವಾಯು ದೋಷರಹಿತವಾಗಿ ನಿಜವಾಗಿದ್ದರೆ ಶರೀರಕ್ಕೆ ವ್ಯಾಧಿ ವಿಡ್ಡೂರಗಳೆಲ್ಲದೆ ಸುಖವಾಗಿಹುದು (ವೈದ್ಯಕಾ. I, ೪೦೩). ವಿಡೂರ$_1$: ೧. ವಿಡೂರ ಬಂದದ್ದು ಆಡೂರಿಗೆ ಹೋದರೆ ಬಿಟ್ಟೀತೆ ? (ಗಾದೆ). ವಿಡ್ಡುರ : ೨. ದೊರೆತನಂ ನಡೆಯದೊಲ್ವಿಡ್ಡುರಮಡಸಿಸೆ ತಾನೆ ಬಂದು ಬಿಳಿಗಿಯ ಭೂಪಂ . . . ಒರೆಯಲ್ (ಕೆಳನ್ಯ. ೧೧-೬೧). 'ವಿಡ್ವರ' ಪರಾ.

[? ./ ತುಳು. ವಿಡ್ಡೂರ, ವಿಡೂರ ; ತೆಲು. ವಿಡ್ಡೂರಮು]

ವಿಡ್ವರ (ನಾ). ಆಪತ್ತು ; ತೊಂದರೆ : ಏಸೆವನುರಾಧೆಯ ತೆಂಕಣದೆಸೆಯೊಳ್ ಗ್ರಹಸಮಿತಿ ನಡೆಯೆ . . . ವಸುಮತಿಯೊಳ್ ವಿಡ್ವರಂಗಳಕ್ಕುಮಮೋಘಂ (ಜಟ್ಟಿಮಾ. ೭-೬೮) ; ಚಂದ್ರಸೂರ್ಯರಂದಾ(ತಾ)ವಗ ರಾಹು ಭಕ್ತಿ ಸಲೆ ವಿಡ್ವರಮದ್ಭುತ ರಾಜಘಟ್ಟನಂ (ಜಟ್ಟಿಮಾ. ೧೦ ೫). [?. / ತೆಲು. ವಿಡ್ವರ. / II ತೆಲುಗುಕೋಶಕಾರರು ಈ ಶಬ್ದವನ್ನು ಸಂಸ್ಕೃತವೆಂದು ಹೇಳಿದ್ದಾರೆ. ಆದರೆ ಸಂಸ್ಕೃತಕೋಶಗಳಲ್ಲಿ ಈ ಶಬ್ದ ಸಿಕ್ಕಿಲ್ಲ]

ವಿಡ್ವರಾಪ (ನಾ). ಹೊಲಸು ತಿನ್ನುವ ಪ್ರಾಣಿ ; ಹಂದಿ. [ಸಂ.]

ವಿಢಾಳಿಸು (ಕ್ರಿ). ಚೆನ್ನಾಗಿ ಬೀಸು ; ಗಾಳಿಹಾಕು : ಹಡಪ ಕಾಳಾಂಜಿ ಕುಂಚದ ಬೀಸಣಿಗೆಯ ವಂಗಡ ವಿಢಾಳಿಪ ಚಾಮರಗಳ (ಕೃಷ್ಣಗೋ. ೨-೨೨).

[< ಢಾಳಿಸು$_1$]

ವಿಣೆ (ನಾ). (?) : ಶುನಕನ ಶಕುನಂ . . . ಫಲಮಾಗೆ ಪೋಪೊಡಂ ಕುಂಟೆಯೊಳ್ ವಿಣಿಗಳೊಳ್ ಮುಟ್ಟನೀಯೆಡೆಗಳೊಳ್ (ನಿಂದು) ಮೂತ್ರಿಸುವೊಡಂ . . . ಮಟೆಗಳೊಳ್ಬಿತುಮಕ್ಕುಂ (ಜಟ್ಟಿಮಾ. ೩-೩ ೮೧೪). [?]

ವಿಣುಮಂಗಲ (ನಾ). ಒಂದು ಸ್ಥಳದ ಹೆಸರು : ವಿಣುಮಂಗಲದ ಎಮ್ಮೆ ತೊಜು ಕೊಳೆವ ತೊಟ್ಟಟ್ಟಿ ಕಡೆಯಂ ಪಲರನಾನ್ತಿಱೀದು ಸತ್ತು ಸಗ್ಗಯದರ್ (ಎಕ. X, ಶಿವಪ್ಪ. ೫೯ ೨ ; ಸು. ೫೦೦). [ವಿಣು? + ಮಂಗಲ]

ವಿಣ್ಣುಗೋವರಸ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀಮಾನ್ ವಿಣ್ಣುಗೋವರಸರ್ XX ದುಗ್ಗಮಾರರ್ ಸೇನೆ ಮಗ XXX ನಾಲ್ವದಿನ್ಸರ್ ಕಸಪ್ರ XXX ಪೊನ್ನೊಱೆ ಬಿಟ್ಟದು (ಎಕ. X, ಚಂತಾಮ. ೧೫೬ (ಬ)-೧; ಸಿ. ೮೦೦). [ವಿಣ್ಣುಗೋವ + ಅರಸ$_1$]

ವಿಣ್ಮೂತ್ರ (ನಾ). ೧. ಹೇಲು ಮತ್ತು ಉಚ್ಚೆ ; ಮಲಮೂತ್ರ : ವನಿತಾಸೇವನೆ ರೂಕ್ಷಮಕ್ಕೆ ಪಸಿವಾಗುಟ್ ಚಿಂತೆ ವಿಣ್ಮೂತ್ರವೇಗನಿರೋಧಂ ಶ್ರಮಮತ್ಯ ಜೀರ್ಣಮಿವಱಿಂ ಕಾರ್ಗಾಲದೊಳ್ ಮಾರುತಂ ಜನಿಯಿಕ್ಕುಂ (ಲೋಕೋಪ. ೯-೪); ವಿಣ್ಮೂತ್ರಮಂ ವಿಸರ್ಜಿಸದ ಕಾಮಿಸದ ಕೋಪಿಸದ ಕರ್ಮದ್ವಯಂ ರೂಪಿಸದ ನಿರ್ಮಾಯನು (ಸಿದ್ಧಕಾ. ೧-೩). ೨. ಒಂದು ನರಕದ ಹೆಸರು : ಲೋಹಸ್ತಂಭ ವಿಣ್ಮೂತ್ರ ವೈತರಣೀನದಿ . . . ಎಂಬವೇ ರಾಜರಾಜೇಶ್ವರನರಕಂಗಳಕ್ಕುಂ (ವಿವೇಕ. ೧೭೯). [ಸಂ.]

ವಿತಂಡ (ನಾ). ೧. ಹುರುಳಿಲ್ಲದ ವಾದ ; ಅರ್ಥವಿಲ್ಲದ ಮಾತು : (ಕಿ). ೨. ನಿರರ್ಥಕವಾದುದು ; ಹುರುಳಿಲ್ಲದುದು : ಇಂದ್ರನ ಅಹಂಕಾರವು ಕಳಚಿ ಬೀಳಬೇಕು ಈಶ್ವರನ ತಾಂಡವ ವಿತಂಡವಾಗಬೇಕು (ಕೈಲಾಸ. ೧೬).

[ಸಂ. ವಿತಂಡಾ]

ವಿತಂಡವಾದ (ನಾ). ಹುರುಳಿಲ್ಲದ ವಾದ ; ಅರ್ಥವಿಲ್ಲದ ಮಾತು : ಜ್ಞಾನಿಗಳು ಭಗವಂತನ ಅಸ್ತಿತ್ವವನ್ನು ಒಪ್ಪಿರುವಾಗ ದೇವರೇ ಇಲ್ಲವೆಂಬ ನಿಮ್ಮ ವಿತಂಡವಾದವನ್ನು ಒಪ್ಪುವುದು ಹೇಗೆ ಸಾಧ್ಯ? (ಅನಾಮಿ. ೬೩). [< ಸಂ. ವಿತಂಡಾವಾದ]

ವಿತಂಡಾವಾದ (ನಾ). = ವಿತಂಡವಾದ : ವಿತಂಡಾವಾದವೆಂಬ ಸರ್ವಶೂನ್ಯ ವಾದವನ್ನು ಖಂಡಿಸಬೇಕಾದರೆ ಪ್ರಯೋಜನವೇ ಬ್ರಹ್ಮಾಸ್ತ್ರವಾಗಿರುವುದು (ಹಿಂದೇಸಾ. ೧೫೭).

[ಸಂ.]

ವಿತಂಡೆ (ನಾ). = ವಿತಂಡ ೨ : ನ್ಯಾಯವೇ ಪ್ರಮಾಣ . . . ಜಲ್ಪ ವಿತಂಡೆ . . . ಜಾತಿ ನಿಗ್ರಹಸ್ಥಾನಗಳೆಂಬ ಷೋಡಶಪದಾರ್ಥಂಗಳಂ ಪೇಳುತ್ತ (ವಿವೇಕ. ೧೨) ; ನ್ಯಾಯದರ್ಶನದಲ್ಲಿ ಪ್ರಮಾಣ ಪ್ರಮೇಯ . . . ವಿತಂಡಾ ಹೇತ್ವಾಭಾಸ ಛಲ ಜಾತಿನಿಗ್ರಹಸ್ಥಾನ ಎಂಬ ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದೇಸಾ. ೧೧೨).

[ಸಂ. ವಿತಂಡಾ]

ವಿತಂತು (ನಾ). ೧. ಸೂತ್ರವಿಲ್ಲದುದು ; ನಿರಾಧಾರವಾದುದು. ೨. ಮಂಗಳಸೂತ್ರವನ್ನು ಕಳೆದುಕೊಂಡವಳು ; ವಿಧವೆ : ದೇಶಮುಖನ ವಿತಂತುವು ಮೊಗಲರ ಸಹಾಯಾರ್ಥವಾಗಿ ದಂಡನ್ನು ಕಟ್ಟಿಕೊಂಡು ಹೋಗಿ ಸೋತು ಕೈಸೆರೆಯಾದಳು (ಧರ್ಮಪ. ೧೨೦) ; ನಾನು ವಿಧವೆಯನ್ನೇ ಮದುವೆಯಾಗುವುದು . . . ವಿತಂತುವಿಗೆ ಒಂದು ಕೂಸಿದ್ದರು ಸರಿಯೆ (ರಾಮಾನಿ. ೪೩). ೩. ಒಳ್ಳೆಯ ಕುದುರೆ ; ಉತ್ತಮಾಶ್ವ. [ಸಂ.]

ವಿತಂದ್ರ (ಗು). ಆಲಸ್ಯವಿಲ್ಲದ ; ಬಳಲಿಕೆಯಿಲ್ಲದ : ಜಯ ಜಯ ಶಿವಾಂಗಸಂಗತ ಮಂಗಳಾಕಾರ ಜಯಜಯ ವಿತಂದ್ರ ವೃಷಭೇಂದ್ರ ಚತುರತುರಂಗ (ರಾಜಶೇ. ೧೪-೧೬೯ ರಗಳೆ). [ಸಂ.]

ವಿತಂದ್ರತ್ವ (ನಾ). ಆಲಸ್ಯವಿಲ್ಲದಿರುವಿಕೆ ; ಬಳಲಿಕೆಯಿಲ್ಲದಿರುವಿಕೆ ; ಚಟುವಟಿಕೆ : ಪರಿಯಂದ್ರಂ ಭೂತಿಸಾಂದ್ರಂ ಕುಡುಗೆಮಗೆ ವಿತಂದ್ರತ್ವಮಂ ಶ್ರೀವೃಷೇಂದ್ರಂ (ರಾಜಶೇ. ೧-೯). [ಸಂ.]

ವಿತತ (ಗು). ೧. ಹರಡಿಕೊಂಡಿರುವ ; ವಿಸ್ತಾರವಾದ : ಭವದೀಯಮಂತ್ರಿಯಂ ವಿತತಮರೀಚಿಮೇಚಕಿತನೂತ್ನವಿರಾಜಿತರತ್ನಮುದ್ರಿಕಾವೃತಕರದಿಂ ತಪಕ್ಕೆ ತಱೆಸಂದೆಂ (ಸುಕುಮಾ. ೮-೫೨). ೨. ಒಳ್ಳೆಯ ; ಉತ್ತಮವಾದ ; ಶ್ರೇಷ್ಠವಾದ : ವಿತತಮಂತ್ರಾಸ್ಥಾನ ವೇದಸ್ಮೃತಿಪುರಾಣ ಷಡಂಗವಿಂದ್ರನ ಸುತನ ದೆಸೆಯುಚ್ಚಾಟನ ಸ್ತಂಭಾದಿ ವಿದ್ಯಗಳು ಕ್ಷಿತಿಪ ಕೇಳ್ಕೆ ಕರ್ಣನತ್ತಲು (ಕುಮಾಕ. ೨೨-೫). ೩. ಮಾಡಿದ ; ಸಿದ್ಧಗೊಳಿಸಿದ. (ನಾ). ೪. ವೀಣೆ ಮೊದಲಾದ ತಂತೀವಾದ್ಯ : ಇಂತಿದು ವಿತತಾದಿವಾದ್ಯವಿದನಿಂತಿದು ಚಿತ್ರಕಥಾಭಿರೂಪನಿಂತಿದು ಗಜವಾಜಿಲಕ್ಷಣವಿಚಕ್ಷಣನೀ ಶಂಕನುದ್ಗತಾಂಶುಕಂ (ಕಾದಂಪು. ೫೪); ತತವಿತತಘನಸುಷಿರವಾದ್ಯಪ್ರತಿಮಿಳಿತಷಡ್ಜಾದಿ ಸಪ್ತಶ್ರುತಿಗಳಿಂ ಪುಗೆ (ಬಸಪು. ೧-೪೮). [ಸಂ.]

ವಿತತಗಣ (ನಾ). ೧. ಶ್ರೇಷ್ಠವಾದ ಗುಂಪು. ೨. ಶ್ರೇಷ್ಠವಾದ ಗಣಗಳ ಸಮೂಹವನ್ನು ಹೊಂದಿರುವವನು ; ಈಶ್ವರ : ಪ್ರತಿರಹಿತ ನುತವಿಹಿತ ಶರದಮಯ ಭರಿತಜಯ ವಿತತಗಣ ಚತುರಗುಣ ಸುರರಾಜ ವರತೇಜ ಸಿತಗಳನೆ ಯತಿಬಳನೆ ಶರಣಾಗು ಗುರುಮೂರ್ತಿ ಪಂಪಾಪುರಾಧೀಶ್ವರ (ಪಚಕಾ. ೧-೫). [ಸಂ.]

ವಿತತಭಾಷಿತ (ನಾ). ಅತಿಯಾಗಿ ಮಾತನಾಡುವವನು : ವಿತತಭಾಷಿತನಪ್ಪ ತನ್ನಿಂಗಿತವನವರಾಯತವನಱಿಯದ ಕ್ಷಿತಿಪನವ ಮೂಢಾತ್ಮನೈ (ಕುಮಾಅ. ೩-೪೮). [ಸಂ.]

ವಿತತಯಶ (ನಾ). ಅಧಿಕವಾದ ಖ್ಯಾತಿಯುಳ್ಳವನು ; ಬಹಳ ಪ್ರಸಿದ್ಧನಾದವನು : ವಿತತಯಶಂಗಾ ವಿಪ್ರಂಗೆ . . . ಗುಣಾನ್ವಿತೆ ಸತಿ ಸಜ್ಜನಿಕೆಗರುಂಧತಿ ಮಿಗಿಲ್ ಕೌಂಡಿಕಬ್ಬೆಯಿಂಬಳ್ (ಧರ್ಮೋಪಂ. ೧-೧೬). [ಸಂ. ವಿತತಯಶಸ್]

ವಿತತಾಟವಿ (ನಾ). ವಿಸ್ತಾರವಾದ ಕಾಡು ; ಮಹಾರಣ್ಯ : ಅತಿನಿಶಿತದರ್ಭಸೂಚೀ ಹತಿಗಳಿದ ತೆಱದಿನುಗ್ರಕರನತುಳವನಸ್ವತಿಸಂಕೀರ್ಣವೆನಿಪ್ಪೀ ವಿತತಾಟವಿಯಲ್ಲಿ ಸಲಿಸನೆಂದುಂ ಕರಮಂ (ಚಂದ್ರಪು. ೫-೫೧). [ಸಂ.]

ವಿತತಾಭಿಮಾನ (ನಾ). ಹೆಚ್ಚಿನ ಅಭಿಮಾನ; ವಿಶೇಷವಾದ ಗೌರವ : ವಿತತಾಭಿಮಾನ ನೀತಿಕ್ಷತಿಗಂ ಶಿವಭಕ್ತಿಧರ್ಮನಿರ್ಮಳಕೀರ್ತಿಚ್ಯುತಿಗಧಟನಪ್ಪೊಡಂ ಭೂಪತಿಯಳ್ಕಲ್ಪೇಳ್ಕುಮಮಳಗುಣಗಣನಿಳಯಾ (ರಾಜಶೇ. ೧೩-೨೨). [ಸಂ.]

ವಿತತಿ (ನಾ). ೧. ವಿಸ್ತಾರ ; ಹರಹು. ೨. ಹೆಚ್ಚಳ ; ಆಧಿಕ್ಯ : ವಿವಿಧವಿಧ ವಾದ್ಯಧ್ವನಿಗಳಂ ತವೆಯಿನಿತು ತಾಂ ಕೇಳಲೀಯದು ಕವಿ ಗಮಕಿ ವಾಗ್ಮ್ಯಾದಿಜನ ಸಸ್ತವನರವವಿತತಿ ಅವನವಗಡಿಸುತಿರ್ಪ (ಬಸಪು. ೫-೨೯). ೩. ಗುಂಪು ; ಸಮೂಹ : ಇದು ಸಕಲವಿಬುಧಜನವಿತತಿ ಕಾವ್ಯಾಲಂಕಾರನೀತಿ ನಿಬಂಧನಮುಂ ಛಂದೋಮಹಾರ್ಣವಮುಂ ಕವಿತಾಮಹಾರ್ಣವಂ (ಮದಕಿ. ೦-೬೬ ವೆ) ; ಕ್ಷತ್ರಿಯರ ವಂಶದ ವೀರಪಾರ್ಥಿವ ವಿತತಿ ಕುಳ್ಳಿರ್ದುದು ಸರಾಗದಲಿ (ಕುಮಾಅ. ೧೩-೬). ೪. ಮರಗಳ ಗುಂಪು. ೫. ಸಾಲು ; ಪಂಕ್ತಿ. [ಸಂ.]

ವಿತತ್ವ (ನಾ). ತತ್ತ್ವಕ್ಕೆ ವಿರುದ್ಧವಾದುದು; ಕುತತ್ತ್ವ : ತತ್ವವಿತತ್ವಸಂಸೇವ್ಯ ನಿಕುರುಂಬಾಶಯಕರ್ದಮಮಾತ್ಮವಚನಬೋಧೋದಾರಕ್ಷೀರಕ್ಷಾಳಿತಮಾಗೆ (ಶಾಂತಿಪು. ೧೨-೩ ವ). [ಸಂ.]

ವಿತಥ (ಗು). ೧. ಸತ್ಯವಲ್ಲದ ; ಸುಳ್ಳಾದ : ಆರಯ್ದಲ್ಲೀವಹಿಂಸಾವಿರತಿವಿತಥವಾಕ್ಯಂ . . . ಬಹ್ವಾರಂಭಾಕಾಂಕ್ಷೆಯೆಂದಿಂತಿವು ಜಿನಗದಿತಾಣುವ್ರತಂಗಳ್ (ಸುಕುಮಾ. ೬-೯) ; ವಿತಥೋಕ್ತಿಯಲ್ತಜಂ ಪಶುಪತಿ ಸಾರ್ಜ್ಜಿಯೆನಿಪ್ಪ ಮೂವರುಂ ಶುಭಕೀರ್ತ್ಯವ್ರತಿ ಸನ್ನಿಧಿಯೊಳ್ ನಾಮೋಚಿತಚರಿತರ ತೋರ್ಪ್ಪಡಿತರವಾದಿಗಳಳವೇ (ಎಕ. II, ೧೪೦-೧೪೯; 1145). ೨. ವ್ಯರ್ಥವಾದ ; ನಿಷ್ಫಲವಾದ. (ನಾ). ೩. ಸುಳ್ಳು ; ಅಸತ್ಯ : ಸುತನು ಸಾರಥಿಯೆಂದು ಸಾರಿಸು ವಿತಥವಲ್ಲಿದು ಪಕ್ಷಪಾತಸ್ಥಿತಿಯನಾಡೆವು ಕವಲುನಾಲಗೆಯಿಲ್ಲ ತನಗೆಂದ (ಕುಮಾಅ. ೯-೧೭). ೪. ವ್ಯರ್ಥವಾದುದು ; ನಿಷ್ಫಲವಾದುದು. [ಸಂ.]

ವಿತಥಭಾಷಿತ (ನಾ). ಸುಳ್ಳುಹೇಳಿಕೆ ; ಅಸತ್ಯದ ನುಡಿ : ವಿತಥಭಾಷಿತವನ್ನ ವಿತ್ತಾಹೃತಿ ಪರವ್ಯಾಪಾರವಾತ್ಮಸ್ತುತಿ . . . ಧರ್ಮಕರ್ಮಚ್ಯುತಿಗಳಿವು ದೋಷಾಂಕುರಂಗಳು (ಕುಮಾಅ. ೧೫-೧೪). [ಸಂ.]

ವಿತಥರುಚಿ (ನಾ). [ಜೈನ] ಮಿಥ್ಯಾದೃಷ್ಟಿಯುಳ್ಳ ವ್ಯಕ್ತಿ : ಎಂತು ನಿಜರುಚಿ ಸಮನ್ವಿತ ಶ್ರುತಜ್ಞಾನದಿಂ ಅಱಿಗುಂ ಅಱಿಪುಗುಂ ಅಂತೆ ವಿತಥರುಚಿಯುಂ ಶ್ರುತಜ್ಞಾನದಿಂ ಅಱಿಗುಂ ಅಱಿಪುಗುಂ (ತತ್ತ್ವಪ್ರ. ೭೨). [ಸಂ.]

ವಿತರಣ (ನಾ). ೧. ದಾಟುವುದು ; ಪಾರಾಗುವುದು. ೨. ಕೊಡುಗೆ ; ದಾನ : ಮದವದ್ವೈರಿನರೇಂದ್ರಮಣ್ಣಳಿಕಸೇನಾಭಂಜನಂ ವೀರನೀರದದುರ್ವಾರಸಮೀರಣ ವಿತರಣಕ್ರೀಡಾವಿನೋದಂ ಪ್ರತಾಪದಿಳೀಪಂ (ಎಕ. VII, ೫ಕಾಂ. ೧೩೬-೨೪ ; 1086) ; ಆ ರಾಜಶಿರೋರತ್ನನ ವೀರದ ವಿತರಣದ ಪೆರ್ಮೆಯುಂ ರಿಪುಭೂಭೃದ್ಧಾರಿದ್ರ್ಯಮು ಮುಪಚಿತಪರಿವಾರಜನಾನೂನಲಕ್ಷ್ಮಿಯುಂ ಪ್ರಕಟಿಸುಗುಂ (ಚಂದ್ರಪ್ರ. ೨-೫). ೩. ಹಂಚುವಿಕೆ ; ವಿಭಾಗಿಸುವಿಕೆ : ನದೀಕಣಿವೆಯಲ್ಲಿನ ನೀರಿನ ಉಪಯೋಗ ವಿತರಣ ಅಥವಾ ನಿಯಂತ್ರಣ ಇವಕ್ಕೆ ಸಂಬಂಧಪಟ್ಟ ಯಾವುದಾದರೂ ವಿವಾದದಲ್ಲಿ ಅಥವಾ ದೂರಿನಲ್ಲಿ ನ್ಯಾಯನಿರ್ಣಯ ಮಾಡುವುದಕ್ಕೆ ಸಂಸತ್ತು ವಿಧಿದ್ವಾರಾ ಅವಕಾಶವನ್ನು ಕಲ್ಪಿಸಬಹುದು (ಭಾಧಾನ. ೧೪೮). ೪. ಬಿಡುವಿಕೆ ; ತ್ಯಜಿಸುವಿಕೆ ; ತ್ಯಾಗ : ವಿತರಣ ಧೈರ್ಯ ವಿದ್ಯಾಗೌರವಂಗಳಲಿ ಸುರಮಹೀಜನ ರಾಜರುದ್ರರ ಚರಿತೆಗಳಿಗಿಮ್ಮಡಿಯೆನಿಸಿ ಸತ್‌ಪುರುಷನಲ್ಲಿಗೆ ಸಲಹಬಂದನು ಬಸವವಿಭುವೆನುತ (ಬಸಪು. ೫-೬೪). ೫. ಉದಾರತೆ ; ಔದಾರ್ಯ : ಶ್ರೀಯಂ ವಿತರಣದೊಳ್ ವಾಕ್‌ಶ್ರೀಯಂ ರಾಜನ್ಯವೃತ್ತಿಯೊಳ್ . . . ಅತಿಶಯಿಸಿ ನೆಗೞ್ದನಧಿನವಪಂಪಂ (ವಂರಾಮಾ. ೨-೧). [ಸಂ.]

ವಿತರಣಪ್ರಥಿತ (ನಾ). ಕೊಡುವುದರಲ್ಲಿ ಪ್ರಸಿದ್ಧನಾದವನು ; ದಾನ ಶೀಲತೆಯಲ್ಲಿ ಕೀರ್ತಿಯನ್ನು ಹೊಂದಿದವನು : ಅತನುಗುಣೋನ್ನತಂ . . . ವಿತರಣಪ್ರಥಿತಂ . . . ಎಂದದೇಂ ಸ್ತುತಿಯಿಸಿದತ್ತೊ ಸಂತಸದೆ ಪೌರಜನಂ ಪ್ರಭುವಂಶಮೇರುವಂ (ಪುಷ್ಪಸು. ೩-೧೩೨). [ಸಂ.]

ವಿತರಣವಿನೋದ (ನಾ). ದಾನಮಾಡುವುದರಲ್ಲಿ ಸಂತೋಷಿಸುವವನು : ವರಗುರು ತನ್ನಂ ಸುದ್ದಗೆ ವರೆಯಿಸೆ ಮೂಱನೆಯ ತಾಣದೆರಡಕ್ಕರಮುಂ ಸ್ವರದೊಳಮಂತಸ್ಥೆಯೊಳಂ ಬರೆಯನೆ ವಿತರಣವಿನೋದನದನೇಕಱೀವಂ (ಪುಷ್ಪಸು. ೪-೫೬). [ಸಂ.]

ವಿತರಣವ್ಯಾಪಾರ (ನಾ). ಕೊಡುವ ಕ್ರಿಯೆ ; ದಾನಕಾರ್ಯ : ಕನ್ನೆಯೊಳ್ ಚಾಂದ್ರಿ ಕೂಡಿರೆ ಮೇಧಾವಿ ಮಹಾಗುಣಾಂಬುನಿಧಿ ಯುಕ್ತಿಜ್ಞಂ ವಿಭೀತಂ ಕ್ಷಮಾಪರನನ್ಯೋನ್ಯಸುಖಾನ್ವಿತಂ ವಿತರಣವ್ಯಾಪಾರಶೂರಂ ನರಂ (ಕಾಶಿ. ೧೭-೨೩). [ಸಂ.]

ವಿತರಣಶೌಂಡ (ನಾ). ದಾನಮಾಡುವ ಸಾಮರ್ಥ್ಯವುಳ್ಳವನು ; ದಾನಶೂರ : ಧೃತಶಶಿಖಂಡ ಜಿತಸುಮಕಾಂಡ ವಿತರಣಶೌಂಡ ಭೃತಜಗದಂಡ (ಶಾಕುಂತ. ೧೧೬ ಅಡಿಟಿ). [ಸಂ.]

ವಿತರಣೆ (ನಾ). ೧. ಹಂಚುವುದು ; ವಿತರಿಸುವುದು ; ವಿನಿಯೋಗ : ಮಹಾಮಂಗಳಾರತಿ ಮುಗಿದು ಪ್ರಸಾದ ವಿತರಣೆಯಾಯಿತು (ದೀಪಹ. II, ೧೧೪). ೨. ಕೆಲಸ ಕಾರ್ಯಗಳನ್ನು ನಡೆಸುವ ಸಾಮರ್ಥ್ಯ ; ನಿರ್ವಹಣಾಶಕ್ತಿ : ದೊಡ್ಡದಾದ ಸೈನ್ಯವನ್ನು ಬಹಳ ವಿತರಣೆಯಿಂದ ನಡೆಯಿಸಿಕೊಂಡು . . . ಬರುತ್ತಿದ್ದನು (ರಾವಿಜ. ೧೫೪) ; ವಿತರಣೆ, ವಿಚಕ್ಷಣೆ, ಅಂತಸ್ತು, ಗೌರವಗಳ ಅಳತೆಗೆ ಸರಿತೂಗಿಸುವುದು ಗಂಗರಾಜನಿಗೆ ಮಾತ್ರ ಸಾಧ್ಯವಿದ್ದಿತು (ಶಾಂತಲಾ. ೯೯). ೩. ಓರಣ ; ಅಚ್ಚುಕಟ್ಟು ; ಸಮರ್ಪಕತೆ : ವಿಧವಿಧವಾದ ಭಕ್ಷಭೋಜ್ಯಗಳಿಂದ ಕೂಡಿದ ಅಡಿಗೆಯ ಪದಾರ್ಥಗಳನ್ನೆಲ್ಲಾ ಬಹಳ ವಿತರಣೆಯಿಂದ ಬಡಿಸಿದ್ದಾಯಿತು (ಗುಣಸಾ. ೭೮) ;

ರಾಮರಾಯನು ತನ್ನ ಸ್ವಾಗತದ ಏರ್ಪಾಡುಗಳನ್ನು ನೋಡಿ ಅಚ್ಚರಿಗೊಂಡನು. ಎಮ್ಮ ಆದರ, ಎಮ್ಮ ವಿತರಣೆಗಳಿಂದ . . . ಸಿದ್ಧಗೊಳಿಸಲ್ಪಟ್ಟಿದೆ (ಶ್ರೀರಾಯ. ೧೭೮). [ಸಂ. ವಿತರಣ]

ವಿತರಿಸು (ಕ್ರಿ). ೧. ದಾಟು ; ಹಾಯ್ದುಹೋಗು. ೨. ಕೊಡು ; ದಾನಮಾಡು : ಸಗುಣ ಗುರುಸಿದ್ಧೇಶ ತವ ಬರಿದೆಗೆದರಳ ಪುಟನೆಗೆದು ಧಿಂಕಿಡುತಗಲ್ಲ, ನಾಸಿಕದಿಂದ ವಾಸಿಪ ಸೊಗಸನಿದ ನೀನೆನಗೆ ವಿತರಿಸು (ಕ್ಕಿವ. ೩-೫-೫೫) ; ಬರ್ಹಿಗಳು ಅತಿಸಮೀಪದೆ ಪೋದರೂ ಭೂಪತಿಯು ಶರಸಂಧಾನ ಮಾಡದೆ ವಿತರಿಸಿದನವುಗಳಿಗೆ ಅವುಗಳ ಪ್ರಾಣದಾನವನು (ರಘುವಂ. ೯-೬೭). ೩. ಬಿಡು ; ತ್ಯಜಿಸು ; ತ್ಯಾಗಮಾಡು : ಚತುರಂಬುಧಿವೃತಧಾಮತ್ರಿತಳವಂ ವಿತರಿಸಿ . . . ಕೃತಕೃತ್ಯಂ ಬಂದಿರ್ದಪನೀ ಚರಮಾಂಗನನುಪಮಗುಣತುಂಗಂ (ಕುಮುರಾ. ೨೦-೨೧). [ವಿತರಣ + - ಇಸ್ಪು]

ವಿತರ್ಕ (ನಾ). ೧. ವಾದ ; ಚರ್ಚೆ. ೨. ಊಹೆ ; ಕಲ್ಪನೆ : ಷಟ್ತರ್ಕವಿತರ್ಕಭೇತ್ರೃತೆ . . . ಏಂ ಚೋದ್ಯಮೆ ವರ್ಧಮಾನಮುನಿಯೊಳ್ ವಿದ್ಯಾತ್ರಯಾಧೀಶನೊಳ್ (ಚಂದ್ರಪ್ರ. ೧-೩೧). ೩. ಅನುಮಾನ ; ಶಂಕೆ ; ಸಂಶಯ : ಬಗದು ವಾರ್ಗರ್ದ್ವಿತಯಗತಿಗಳಂ ಪ್ರಗುಣಗುಣಗಣೋದಯರ್ಕಳ್ ವಿತರ್ಕದಿಂ ಸೊಗಯಿಸುವಂತು ವಚನರಚನೆಯಿಂ ನೆಗಟ್ದಿರೆ ಪೇಟ್ದಿ ರಸವಿಶೇಷದೊಳ್ (ಕವಿಗಾ. ೨-೯೮). ೪. [ಕಾವ್ಯಮೀಮಾ] ಮೂವತ್ತು ಮೂರು ಸಂಚಾರಿಭಾವಗಳಲ್ಲಿ ಒಂದು ; ಹೀಗೋ ಹಾಗೋ ಎಂದು ವಿಚಾರಮಾಡುವುದು : ಮತಿ ಲಜ್ಜೆ ವಿತರ್ಕ . . . ಅಪಸ್ಮಾರಗಳೆಂಬ ಮೂವತ್ತು ಮೂಜು ಸಂಚಾರೀಭಾವಂಗಳಿಂ (ವಿವೇ. ೨೨೬) ; ಹೀಗೋ ಹಾಗೋ ಎಂದು ವಿಚಾರಮಾಡುವುದು ವಿತರ್ಕ (ಭಾರಮೀ. ೩೪೬). ೫. [ಬೌದ್ಧ] ''ಮನಸ್ಸನ್ನು ವಿಷಯಕ್ಕೆ ಅರ್ಪಿಸಿ ಚಿಂತಿಸುವುದು ವಿತರ್ಕ'' (ಬುದ್ಧಪ. ಮಿಲಿಂದ. ಕೋಶ) : ವಿತರ್ಕದ ಲಕ್ಷಣವೇನು ? ವಿತರ್ಕದ ಲಕ್ಷಣವು ಅರ್ಪಣ (ಬುದ್ಧಪ. ಮಿಲಿಂದ. ೦೫೫). [ಸಂ.]

ವಿತರ್ಕಿತ (ಗು). ೧. ತರ್ಕ ಮಾಡಿದ. ೨. ಊಹಿಸಿದ. (ನಾ). ೩. [ನಾಟ್ಯ] ಇಪ್ಪತ್ತು ಬಗೆಯ ಸಂಚಾರಿದೃಷ್ಟಿಗಳಲ್ಲಿ ಒಂದು ಬಗೆ ; IP ''ರೆಪ್ಪೆಗಳನ್ನು ಮತ್ತು ಆಲಿಗಳನ್ನು ಜಾಗ್ರತೆ ತಿರುಗಿಸುವುದು. ಊಹೆ, ವಿಮರ್ಶೆ ಇವುಗಳನ್ನು ತೋರಿಸುವಾಗ'' (ಲಾಸ್ಯರಂ. ೨೭೦ ಗದ್ಯಾನುವಾದ) : ಘನತರದೆವೆಯಾಲಿಯೆ ಭೋಂಕನೆ ತಿರುಗೆ ವಿತರ್ಕಿತಾಖ್ಯದೃಷ್ಟಿಯೆನಿಕ್ಕುಂ (ಲಾಸ್ಯರಂ. ೩-೩೨). [ಸಂ.]

ವಿತರ್ಜೆ (ನಾ). ಭಯ ; ಭೀತಿ ; ಹೆದರಿಕೆ : ದುರ್ಜನರಿಗಂಜುವುದು ಲೋಕವು ಸಜ್ಜನರ ಲೆಕ್ಕಿಸದು ತಾಕ್ಷ್ಯನ ಸಜ್ಜೆಯೊಳಗಿಹ ದಂದಶೂಕನನರ್ಚಿಸುವರೊಲಿದು ಉಜ್ಜ್ವಲಿತ ಭಕ್ತಿಯಲಿ ಬಹಳ ವಿತರ್ಜೆಯಲಿ ಮೂಢಾತ್ಮರಿಕ್ಕಿದ ಹಜ್ಜೆಯಿಮ ಲೋಕಕ್ಕೆ (ಕುವಾಉ. ೪-೨೦). [< ಸಂ. ವಿತರ್ಜನ?]

ವಿತರ್ದಿ (ನಾ). ವೇದಿಕೆ ; ಜಗಲಿ ; ಕಟ್ಟೆ : ಎಸೆಯ ಕರದೊಳು ಮಾಧವೀಲತೆ ಯಸಿಯೆಸಳ ರನ್ನದ ವಿತರ್ದಿಯೊಳಸದಳಂ ರಂಜಿಸುವ ಮಣಿಮಯಕನಕಪೀಠದೊಳು ಕುಸುಮಶರಸತಿ . . . ಸೊಗಯಿಸಿದಳು (ಕುಮುರಾ. ೨-೬೬). [ಸಂ.]

ವಿತರ್ದಿಕೆ (ನಾ). = ವಿತರ್ದಿ : ಋತುಮತಿದೇವಿ ರನ್ನದ ವಿತರ್ದಿಕೆಯೊಳ್ನೆಲಸಿರ್ದು (ಪಂರಾವಮ. ೩-೭೦) ; ಪಳಿಕಿನ ಭಿತ್ತಿ ರನ್ನದ ವಿತರ್ದಿಕೆ ಮುತ್ತಿನ ತೋರಣಂ (ಚಂದ್ರಪ್ರ. ೧೫-೫೭). [ಸಂ. ವಿತರ್ದಿಕಾ]

ವಿತಲ, ವಿತಳ (ನಾ). ಕೆಳಗಿನ ಏಳುಲೋಕಗಳಲ್ಲಿ ಒಂದು ; ಏಳು ಪಾತಾಳಲೋಕಗಳಲ್ಲಿ ಎರಡನೆಯದು : ಅಮ್ಮಮಾ ಚವುಡಯ್ಯಗಂಜಿ ಜಲಂ ಮುರಿದು ವಿತಲ[ಪಾಠಾಂ. ಳ]ಕ್ಕಿಳಿಯಿತೆನೆ ಬಿಮ್ಮಳಿದು ನೆಜೆ ಸರಿಯಲದು ತಾಯ್ಮಳಲುಗಾಣಿಸಲು (ಬಸಪು. ೩೨-೩೬) ; ಅತಳದಾಶ್ಚರ್ಯಮಂ ವಿತಲ[ಪಾಠಾಂ. ಳ]ದ ವಿಚಿತ್ರಮಂ ಸುತಳದ ರುಚಿಯಂ ಮಹಾತಳದ ಮಣಿಮಯೋನ್ನತಿಯಂ ತಳಾತಳದ ತಾಣದತಿಶಯಮಂ . . . ನೋಡಿ (ಹ್ಮಮಭಾ. ೨೪-೧೨). **ವಿತಳ** : ತೆರೆತೆರೆಯ ತಿವಿದೆದ್ದು ಗಗನವನಿರದೊದೆದು ವಿತಳಕ್ಕೆ ಸುಳಿ ಭೋಂಕರಿಸಿ ಸಾಗರನುಬ್ಬುಗವಳವ ಕೊಂಡ ವೊಲು ಕುಣಿದ (ಕುವಾಉ. ೧-೧೯) ; ಅತಳ ವಿತಳ ಸುತಳ ಮಹಾತಳ ತಳಾತಳ ರಸಾತಳ ಪಾತಾಳ (ಪುರಂದ. ಧಾ. ೩-೮೭-೫). [ಸಂ.]

ವಿತಸ್ತಿ (ನಾ). ವಿಸ್ತರಿಸಿದ ಅಂಗೈಯಲ್ಲಿ, ಹೆಬ್ಬೆರಳಿನಿಂದ ಕಿರುಬೆರಳಿನವರೆಗೆ ಇರುವ ಉದ್ದ ; ಸುಮಾರು ಹನ್ನೆರಡು ಅಂಗುಲದ ಅಳತೆ ; ಗೇಣು : ಅಧಿನವಶುಂಭತ್ಕೌಸುಂಭವೇಣಿಕಾಬಂಧೋಲ್ಲಸನ್ಮಲ್ಲಿಕಾಮುಕುಲಾಕಾರವಿತಸ್ತಿ ಮಾತ್ರಾಸಿಧೇನುಕೋಶ (ಆದಿಪು. ೧೩-೪೫ ವ) ; ಏಕೈಕವಾರವಿತಸ್ತಿಮಾತ್ರಾಸಿಧೇನು ಚಾಲನೋಚ್ಚಲಿತದಕ್ಷಿಣಕರಕಲಿತಕನಕಕಂಕಣಝಣತ್ಕಾರನುಂ (ಚಂದ್ರಪು. ೮-೮೨ ವ). [ಸಂ.]

ವಿತಳ 'ವಿತಲ' ನೋ.

ವಿತಳ್ಕಂಕ (ನಾ). ವಿಶೇಷವಾದ ಭಯ ; ಹೆಚ್ಚಾದ ಅಂಜಿಕೆ : ತೆರೆ ಕಣಾವಳಿ ಬುದ್ಬುದಂ ಪೆರ್ದರೆ ವಿತಳ್ಕಂಕಂ ವಿಕಾರಂ ನೊರೆಗಳಾವರ್ತಂ . . . ಎಸೆವ ಸುಸಮುದ್ರಂ (ಶಂಕಾ. ೧-೩೧). [ವಿ - + ತಳ್ಕಂಕ]

ವಿತಾಡಿತ (ಗು). ೧. ಬಡಿದ ; ಹೊಡೆದ. (ನಾ). ೨. [ನಾಟ್ಯ] ಒಂಬತ್ತು ಬಗೆಯ ಎವೆಯ ಭೇದಗಳಲ್ಲಿ ಒಂದು ಬಗೆ ; IP ''ಮೇಲಿನ ರೆಪ್ಪೆಯಿಂದ ಕೆಳಗಿನ ರೆಪ್ಪೆಯನ್ನು ಬಡಿಯುವುದು'' (ಲಾಸ್ಯರಂ. ೨೭೩ ಗದ್ಯಾನುವಾದ) : ನುತಿಪಡೆದ ಪ್ರಸೃತಂ ಕುಂಚಿತಮುನ್ಮೇಷಿತನಿಮೇಷಿತ . . . ವಿತಾಡಿತಂ [ಪಾಠಾಂ. ವಿಚಾಲಿತ] ಸಮಮೆನಿಪ್ಪಯವಯೊಂಬತ್ತುಂ (ಲಾಸ್ಯರಂ. ೩-೪೯). [ಸಂ.]

ವಿತಾಡ್ಯಮಾನ (ಗು). ಬಡಿಯುವ ; ಹೊಡೆಯುವ ; ತಾಗುವ : ಪ್ರಲಂಬಕರ್ಣಾಭರಣಮಕರಿಕಾವಿತಾಡ್ಯಮಾನಕಪೋಲಫಲಕಂ (ಶಾಂತಿಪು. ೭-೧೩ ವ). [ಸಂ.]

ವಿತಾನ (ನಾ). ೧. ಹರಹುವಿಕೆ ; ಹಬ್ಬುಗೆ ; ವಿಸ್ತಾರ : ಮೌನದಿ ಗಾನದ ತಾನ ವಿತಾನ ಮೌಢ್ಯದಿ ಜ್ಞಾನ ಜಾಡ್ಯದಿ ಪ್ರಾಣ ! (ಕಉಶ್ರಾ. ೯೭-೧೪) ; ರೂಢಿಗೊಂಡ ಛಂದಸ್ಸಿನ ತಾನ ವಿತಾನಗಳಲ್ಲಿ ಸಹ ಅವರು ನವೀನಲಹರಿಗಳನ್ನು ವಿರಿಚಿತಗಳನ್ನು ಗುರುತಿಸಿ ಮೂಡಿಸಿ ಓದುಗನ ಮನವನ್ನು ಸೆಳೆಯುತ್ತಾರೆ (ನಪ್ಕಾ. ೩೮). ೨. ಹೆಚ್ಚುಗೆ ; ಆಧಿಕ್ಯ. ೩. ಗುಂಪು ; ಸಮುದಾಯ : ನಗೆಗಣ್ಣಿಂ ಸೂಸಿದುವಾನಂದಬಾಷ್ಪಬಿಂದುವಿತಾನಂ (ಪಂರಾಮಾ. ೪-೨೫) ; ವಿಟವಿತಾನಕ್ಕೆ ಪೊಸಬೇಟದ ಸೊಂಪು ನೆರೆಯೆ (ರಾಮಾಶ್ವ. ೧೭-೪). ೪. ಸಾಲು ; ಪಂಕ್ತಿ : ಬಳವದ್ರೀಚೀವಿತಾನಂ ಪ್ರಬಳಘುಳುಘುಳುಧ್ವಾನ ಮಂಭೋನಿಧಾನಂ (ಜಗವಿ. ೧-೨೩) ; ಬಳಸಿ ಸುತ್ತುಂ ಆ ವಿಮಾನದ ವಿತಾನಮಂ ಮಾಲೆಯೆಳಲಿದ ಕನಕಲಘುಘಂಟಿಕಾಶ್ರೇಣಿ (ಶ್ರೀರಾಮಾ. ೨೧೭-೧೩೯). ೫. ಸಿಂಹಾಸನ, ಮಂಟಪ ಮೊದಲಾದುವುಗಳ ಮೇಲೆ ಕಟ್ಟುವ ಬಟ್ಟೆ ; ಮೇಲ್ಕಟ್ಟು : ಎತ್ತಿದ ಮುತ್ತಿನ ಮಂಟಪಂ ಮನಂಗೊಳಿಪ ವಿತಾನಪಂಕ್ತಿ (ಪಂಪಭಾ. ೧-೧೦೭) ; ಉಜ್ಜ್ವಳ ಮೌಕ್ತಿಕವಿತಾನಂ ಥಳಥಳಿಪುವು ಪುರದ ನಿಳಯನಿಳಯದೊಳೆಲ್ಲಂ (ಜಗವಿ. ೨-೨೪). ೬. ಯಾಗ ; ಯಜ್ಞ : ''ಯಾಗಃ . . . ವಿತಾನಃ . . . ಸತ್ರಂ — ಈ ೧೨ ಯಾಗಂ'' (ಹರಿವಾಯು. ೬೯-೨೬೦). ೭. ಯಾಗ ಮಾಡುವ ಕಟ್ಟೆ ; ಯಜ್ಞವೇದಿಕೆ. ೮. ಸಮಯ ; ಸಂದರ್ಭ. ೯. ಆಲೋಚನೆ ; ವಿಚಾರ. ೧೦. ಏನೂ ಇಲ್ಲದಿರುವುದು ; ಶೂನ್ಯ : ''ವಿಚಾರದೊಳು ಮೇಲ್ಕಟ್ಟದೊಳವಧಿಯೊಳು ಶೂನ್ಯದೊಳ್ಕಖಮೊಳು ವಿತಾನಮಕ್ಕುಂ'' (ಮಂಗರಾ. ೧೪೫-೨೯). ೧೧. ಸಾರವಿಲ್ಲದುದು ; ಸತ್ತ್ವರಹಿತವಾದುದು. ೧೨. ಹೀನವಾದುದು ; ತುಚ್ಛವಾದುದು. ೧೩. ಮಂಕಾಗಿರುವುದು ; ದಡ್ಡತನದಿಂದ ಕೂಡಿರುವುದು. ೧೪. ದಡ್ಡವ್ಯಕ್ತಿ ; ಮಂಕ : ''ವಿತಾನಂ — ೧ ಯಜ್ಞವಿಶೇಷ, ವಿಸ್ತಾರ, ತುಚ್ಛವಾದ್ದಕ್ಕೂ ಮಂದನಾದವನಿಗೂ ಹೆಸರಾದಾಗ — ೪'' (ಸಿದ್ಧಾಂಜಿ. ೪೦೧). ೧೫. ಅವಸರ ; ಶೀಘ್ರ ; ಜಾಗ್ರತೆ : ''ಮಖಂ ಪ್ರಸರಂ ಶೂನ್ಯ ವಿಚಾರ ಪೆಚ್ಚುಗೆಗಳುಂ ಮೇಲ್ಕಟ್ಟು ಶೀಘ್ರಂ ವಿತಾನಂ ಸಮಾಖ್ಯಾನಂ'' (ನಾನಾರ. ೧೧೬). ೧೬. [ಜೈನ] ಒಂದು ನರಕಬಿಲದ ಹೆಸರು : ವಾಲುಕಾಪ್ರಭೆಯೊಳ್ ತಪ್ತ . . . ವಿತಾನ . . . ವಿಕಲ್ಪದಿಂ ಪಂಚದಶಲಕ್ಷ ಬಿಲಂಗಳಪ್ಪುವು (ತತ್ತ್ವಪ್ರ. ೧೨೦). [ಸಂ.]

ವಿತಾನಕ (ನಾ). ೧. ವಿಸ್ತಾರ ; ಹರಹು. ೨. ಮೇಲ್ಕಟ್ಟು ; ವಿತಾನ. ೩. ಮೇಲ್ಕಟ್ಟನ್ನುಳ್ಳುದು : ಹಿಡಿಂಬವನಮಂ ಪೊಕ್ಕಂ ಮರುನ್ನಂದನಂ ಅದು . . . ನಿರ್ಝರೋಚ್ಚಳಿತಶೀಕರಶೀತಳವಾತನರ್ತಿತೋನ್ಮದಶಬರೀಜನಾಳಕಮದಾಯತ ವೇತ್ರಲತಾವಿತಾನಕಂ (ಪಂಪಭಾ. ೩-೧೦). [ಸಂ.]

ವಿತಾನಾಂಬರ (ನಾ). ಮೇಲುಕಟ್ಟಿನ ಬಟ್ಟೆ : ಚರರಾ ವಿತಾನಾಂಬರಮನಿಂದೊಯ್ದು ರಾಯಂಗೆ ತೋಱಿಸಲು (ಪದ್ಮರಾ. ೫-೧೭). [ಸಂ.]

ವಿತಾಲ, ವಿತಾಳ$_1$ (ನಾ). ೧. [ಸಂಗೀತ] ತಪ್ಪಾಗಿ ತಾಳಹಾಕುವಿಕೆ. ೨. ಗಾಯಕನ ದೋಷಗಳಲ್ಲಿ ಒಂದು ; ತಾಳಹೀನವಾಗಿ ಹಾಡುವವನು: ಗಾಯಕದೋಷಗಳು . . . ೧೦. ವಿತಾಲ — ತಾಳಹೀನವಾಗಿ ಹಾಡುವವನು (ಸಂಗೀಚಂ. ೧೦೩). **ವಿತಾಳ$_1$** : ೩. ಒಂದು ಬಗೆಯ ತಾಳ : ಭಂಗತಾಳ ಉಪಭಂಗ ತಾಳ ವಿಭಂಗತಾಳ ವಿತಾಳ ಶುದ್ಧತಾಳ ಅನುತಾಳವೆಂಬಾಱು ವರ್ಗ ಸಂಖ್ಯಾಭೇದ ಮಾಗಿಹವೆಂದು ಪೇಳ್ವ ಭರತಶಾಸ್ತ್ರಪರಿಣತರಪ್ಪ ತಾಳಧಾರಿಗಳಿಂ (ವಿವೇಕ. ೧೯೨). [ಸಂ.]

ವಿತಾಳ$_1$ 'ವಿತಾಲ' ನೋ.

ವಿತಾಳ$_2$ (ನಾ). ೧. ಹೆಚ್ಚಳ ; ಆಧಿಕ್ಯ ; ಅತಿಶಯ. ೨. ವಿಸ್ತಾರ ; ಹರಹು : 'ವಿತಾಳಿಸು' ಪರಾ. ೩. ಅಡೆತಡೆ ; ವಿಘ್ನ ; ಪ್ರತಿಬಂಧ : ಖಳರಲಿ ಸತ್ಕಳೆಗಳನು ನೆಱೆ ಕೇಳದವರಲಿ ಮಂತ್ರಬೀಜವನಾಲಿಯಿಲ್ಲದವಂಗೆ ರೂಪು ವಿಲಾಸ ವಿಭ್ರಮವ ಹೇಳುವಂತಿರೆ ನಿಮ್ಮ ವಿದುರನ ಕೇಳಿಸಿದರಾ ಕಾರ್ಯಗತಿಗೆ ವಿತಾಳವಾಗದೆ ಬೊಪ್ಪಯೆಂದನು ನಗುತ ಕುರುರಾಯ (ಕುಮಾಸ. ೧೨-೬೨). ೪. ಚಿಂತೆ ; ವ್ಯಥೆ : ಆಳು ಹಿರಿದಿದ್ದೇನು ಫಲ ಹೀಹಾಳಿದ್ದವಕೆ ಬೇಱೆ ಪರಿಯ ವಿತಾಳವಿಲ್ಲ ವಿಪಕ್ಷಪಾತದೊಳೆಂದನಂಧನೃಪ (ಕುವಾಕ. ೧೫-೭). [?/. ಸಂ. ವಿತಾನ]

ವಿತಾಳಿಸು (ಕ್ರಿ). ೧. ಹೆಚ್ಚಾಗು ; ಅಧಿಕವಾಗು : ಗಾಳಿ ಬೆಂಬಲವಾಗಲುರಿಯ ಧಡಾಳವನು ನಿರ್ಣೈಸಬಹುದೆ ವಿತಾಳಿಸಿತಲ್ಕೆ ನಿಮ್ಮ ಗಾರುಡವೆಂದನಾ ನೃಪತಿ (ಕುವಾಅ. ೧೭-೧೫); ನೃಪಬಾಧೆ ಬಾಧಿಸದಧಿಕದುರ್ಧಯದ ಬಂದಿ ಹೋಗದಾಸಱು ವಿತಾಳಿಸಿ ನಿಂದಿರದು ನೆಲೆಗೊಳ್ಳದಾ ಜನವೃಂದದಲಿ ಕಟ್ಟಾಸೆ ದಶರಥನೃಪನ ರಾಜ್ಯದಲಿ (ತೂರರಾ. ೧-೩-೨೮). ೨. ಆವರಿಸು ; ವ್ಯಾಪಿಸು : ಪೋಡಿ ಕೊಪ್ಪರಿಸಿದುದು ಧೈರ್ಯವ ನೀಡಿಱಿದುದವದೆಸೆ ವಿತಾ[ಪಾಠಾಂ. ಕಾ]ಳಿಸಿ ಪೇಡತನ ಭುಲ್ಲೈಸುತಿದ್ದುದೆ ಭಾನುನಂದನನ (ಕುವಾಅ. ೧೯-೩೭) ; ಧಗೆ ವಿತಾಳಿಸಿ ಖರಮರೀಚಿಯ ತಗಡುವಿಸಿಲಿನ ತೊಱೆಗೆ ಹರಿಣಾಳಿಗಳು ಹರಿವಂದದಲಿ ಹರಿಬಲ ಹೊಕ್ಕುದಿನಸುತನ (ತೂರರಾ. ೪-೧೦-೧೦). ೩. ಮೀರು ; ತಪ್ಪಿಹೋಗು ; ವಿಘಟಿಸು : ಕಾಳು ಮಾಡಿದವಕಟ ಸಂಧಿ ವಿತಾಳಿಸಿತು ಕೈಯೆಡೆಯ ಶಿಶು ರಣಕೇಳಿಯಲಿ ನಿಲಲರಿದೆನುತ ಬಾಯಱಿದನು ರಾಮ (ತೂರರಾ. ೬-೧೦-೬೫). ೪. ಗರ್ವಿಸು ; ಸೊಕ್ಕು ; ಬೀಗು : ಶಿವನಂದು ಕರುಣಮಂ ತಾಳಿ ಸಿರಿಯರಸನಂ ಕರೆದೆಂದನೀ ಪರಿ ವಿತಾಳಿಸಿ ಜಗಕ್ಕೆ ಕೇಡಂ ತಂದ ಸಿಸನಸುಂಗೊಳ್ಳೆಂದು ನೇಮವೀಯೆ (ಚಿಬಪು. ೩೩-೪). ೫. ಕೈಗೂಡದಿರು ; ನಿಷ್ಫಲವಾಗು : ಭಾಷೆ ವಿತಾಳಿಸಿತು ಹುತವಹಗೆ ತನುವನು ಬೇಳುವೆನು (ಸಿಭಾಗ. ೧೦-೯೯-೩೮). ೬. ಎಚ್ಚರತಪ್ಪು ; ಮೂರ್ಛೆಹೋಗು : ನಿನ್ನವರನ್ನ ಮಾತನು ಕೇಳ ಮನ್ನಿಸದೆ ಮೇಲಗಾಣದೆ ನೀರುಕುಡಿದು ವಿತಾಳಿಸಿದರಿಂದೆನ್ನ ಮಾತನು ಕೇಳ ನೀನುತ್ತರವ ರಚಿಸು (ಕುವಾಅ. ೨೩-೩೭). ೭. ಮಗ್ನವಾಗು ; ಲೀನವಾಗು ; ಐಕ್ಯವಾಗು : ಲೀಲೆಯಲಿ ಬಳಿಕವದಿರೊಡನೆ ವಿತಾಳಿಸಿತು ಮನ (ಕುವಾಸ. ೯-೨೯). 'ವಿಕಾಳಿಸು', 'ವಿಟಾಳಿಸು' ಪರಾ. [ವಿತಾಳ$_2$ + - ಇಸು$_3$]

ವಿತೀಪಾತ (ನಾ). [ಜ್ಯೋತಿ] ವಿಷ್ಕಂಭ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಒಂದು ; ವ್ಯತೀಪಾತ : ರುಧಿರೋದ್ಗಾರಿಸಂಪಚ್ಚರದ ಶ್ರಾವಣ ಸುದ್ಧಪುಣ್ಣಮೆ ಬುಧವಾರದಂದು ಸೋಮಗ್ರಹಣಸಂಕ್ರಮಣವಿತೀಪಾತನಿಮಿತ್ತದಂದು ಶ್ರೀಮತ್ತ್ರೈಲೋಕ್ಯಮಲ್ಲ ಶ್ರೀ ಕೇಸವದೇವ . . . ಬಿಟ್ಟ ಧರ್ಮ್ಮಂ (ಕಇ. ೩೪-೪೭- ೧೭; 1145).

[P ಇದು ಸಂಸ್ಕೃತದ 'ವ್ಯತೀಪಾತ' ಎಂಬುದರ ಅಪಲಿಖಿತ]

ವಿತುನ್ನ (ನಾ). ಒಂದು ಬಗೆಯ ಸಸ್ಯ : "ವಿತುನ್ನಂ, ಸುನಿಷಣ್ಣಕಂ — ೨ ನೀರುಚೆಂಚಲಿ" (ಸಿದ್ಧಾಂಶಿ. ೧೪೬). [ಸಂ.]

ವಿತುನ್ನಕ (ನಾ). ೧. ಕೊತ್ತಂಬರಿಬೀಜ ; ಧನಿಯಾ : "ಧತ್ರಾ, ವಿತುನ್ನಕಂ, ಕುಸ್ತುಂಬರು, ಧಾನ್ಯಕಂ — ೪ . . . ಕೊತ್ತುಂಬರೀ ಬೀಜ" (ಸಿದ್ಧಾಂಶಿ. ೨೮೫). ೨. ಮೈಲುತುತ್ತ ; ಗಂಧಕಾಮ್ಲ : "ತುತ್ಥಾಂಜನಂ, ಶಿಖಿಗ್ರೀವಂ, ವಿತುನ್ನಕಂ, ಮಯೂರಕಂ, ಕರ್ಪರೀ — ೫ . . . ಮೈಲುತುತ್ಥದ ಹೆಸರುಗಳು" (ಸಿದ್ಧಾಂಶಿ. ೩೦೫). ೩. ಕಿರಿನೆಲ್ಲೀಕಾಯಿ ಗಿಡ : "ವಿತುನ್ನಕಃ . . . ಶಿವಾ, ತಾಮಲಕೀ — ೭ ಕಿರಿನೆಲ್ಲೀಗಿಡದ ಹೆಸರು" (ಸಿದ್ಧಾಂಶಿ. ೧೪೧). [ಸಂ.]

ವಿತೃಷ್ಣ (ನಾ). ೧. ಆಸೆಯಿಲ್ಲದವನು ; ಆಶಾರಹಿತನಾದವನು : ಅಂತು ಪರಿತ್ಯಕ್ತಸಕಳಸಾಮ್ರಾಜ್ಯನುಂ ದೃಷ್ಟಾನುಭೂತಶ್ರಾವಕವಿಷಯವಿತೃಷ್ಣನುಮಾಗಿ (ಆದಿಪು. ೩-೭೮ ವ). ೨. ಬಾಯಾರಿಕೆಯಿಲ್ಲದವನು ; ತೃಷೆಯಿಲ್ಲದವನು. ೧,೨ : ಮಹಾತಪಸ್ವಿ ಮತ್ತಂತೆ ವಿತೃಷ್ಣನೆಂಬ ಸಮಶೀಲತೆಯಂ ತಳೆದಿರ್ದುಮೇನೊ ಸೈದ್ಧಾಂತಿಕ ಚಕ್ರವರ್ತಿ ಮುನಿಚಂದ್ರಮುನೀಂದ್ರನೆ ವಂದ್ಯನುರ್ವಿಯೊಳ್ (ಚಂದ್ರಪ್ರ. ೧-೨೭). [ಸಂ.]

ವಿತೆ (ನಾ). ಪ್ರಯೋಜನವಿಲ್ಲದುದು ; ವ್ಯರ್ಥವಾದುದು ; ನಿಷ್ಫಲವಾದುದು : ಋತ್ವಕ್ಕಿತ್ಯಂ . . . ವೃಥಾ — ವಿತೆ, ವೃದ್ಧಿ — ವಿದ್ಧಿ (ಶಮದ. ೨೬೮ ಪ್ರಯೋ) ; ತೆಗೆತೆಗೆ ! ನಿನ್ನ ಮುಂಗತೆಯಂ ವಿತೆಯಂ (ರಾಮಾಶ್ವ. ೧೧೮-೩); ನೀಚರನೊಳ್ಪಿದರಂಗೆಯ್ದುಪೆ ನೆಂಬುಜ್ಜುಗಂ ವಿತೆಯಲ್ತೇ (ನೀತಿಮಂ. I. ೩೭೦). [< ಸಂ. ವೃಥಾ./ ತೆಲು. ವಿತಾ, ವಿತ]

ವಿತ್ತ (ಗು). ೧. ಪ್ರಸಿದ್ಧನಾದ ; ಪ್ರಖ್ಯಾತನಾದ. ೨. ವಿಚಾರಮಾಡಿದ ; ಪರಿಶೀಲಿಸಿದ. ೩. ಸಂಪಾದಿಸಿದ ; ಗಳಿಸಿದ. (ನಾ). ೪. ಪ್ರಸಿದ್ಧವಾದುದು ; ಪ್ರಖ್ಯಾತವಾದುದು : "ವಿನ್ನಃ, ವಿತ್ತಃ, ವಿಚಾರಿತಃ — ೩ ವಿಚಾರಿಸಲ್ಪಟ್ಟದ್ದು, ಪ್ರಸಿದ್ಧವಾಗಿ ಕೇಳಿ ತಿಳಕೊಳ್ಳಲ್ಪಟ್ಟದ್ದು" (ಸಿದ್ಧಾಂಶಿ. ೩೫೦). ೫. ಪ್ರಸಿದ್ಧನಾದವನು : "ಪ್ರತೀತಃ, ಪ್ರಥಿತಃ, ಖ್ಯಾತಃ, ವಿತ್ತಃ, ವಿಜ್ಞಾತಃ, ವಿಶ್ರುತಃ — ೬ ಧನಾದಿಗಳಿಂದ ಪ್ರಸಿದ್ಧನಾದವನ ಪೆಸರು" (ಸಿದ್ಧಾಂಶಿ. ೩೨೫). ೬. ಸಂಪಾದಿಸಿದುದು ; ಹಣ : ಭೋಗದೊಳ್ ವೈಶ್ರವಣಂಗತ್ತೆತ್ತಲುಂ ವಿತ್ತದೊಳಧಿಕನೆನುತ್ತಿರ್ಪಿನಂ ಸಂದಂ (ಸುಕುಮಾ. ೧೧-೩೭); ವಿತ್ತವುಳ್ಳವರ್ಗಳೆನ್ನಂ ಕೊಂಬುದು (ಹಚಕಾ. ೧೧-೨೩); ದಾನವಿಲ್ಲದ ವಿತ್ತ ಬುಧಸನ್ಮಾನವಿಲ್ಲದ ರಾಜ್ಯ . . . ಶರಸಂಧಾನವಿಲ್ಲದ ಸಮರ ಮೆಱೆಯದು (ಕುವಾಅ. ೩-೫೦). ೭. ಬಲ ; ಶಕ್ತಿ. ೮. ಚಿನ್ನ ; ಬಂಗಾರ : 'ವಿತ್ತವಣಿಜ' ಪರಾ. ೯. [ಜ್ಯೋತಿ] ಲಗ್ನದಿಂದ ಎರಡನೆಯ ಸ್ಥಾನ: 'ವಿತ್ತಭವನ' ಪರಾ. [ಸಂ.]

ವಿತ್ತಪ (ನಾ). ಐಶ್ವರ್ಯಕ್ಕೆ ಒಡೆಯನಾದವನು; ಕುಬೇರ : ಸರ್ವಸ್ವಮಂ ಕೊಂಡು ಕೂಗಿಡಿಪೆಂ ವಿತ್ತಪನಂ ಪರಾಭವಿಸುವೆಂ ದಕ್ಷಾಧ್ವರಧ್ವಂಸಿಯಂ (ಜಗಪಿ. ೩-೨೧). [ಸಂ.]

ವಿತ್ತಪಸಖ (ನಾ). ಕುಬೇರನ ಸ್ನೇಹಿತ ; ಶಿವ : ವಿತ್ತಪಸಖಾನಂದಯುತರಾವರಣಗಳಿಂ . . . ಶಂಖಕರ್ಣಾಚಾರ್ಯ ಕೈಲಾಸದಿಂ ನಡೆತಂದು (ವಿಕೋಪು. ೭-೫೪). [ಸಂ.]

ವಿತ್ತಭವನ (ನಾ). [ಜ್ಯೋತಿ] ಲಗ್ನದಿಂದ ಎರಡನೆಯ ಸ್ಥಾನ : ಇಂದು ನಿಲೆ ತುರ್ಯಗೃಹದೊಳ್ ಮಂದಂ ನಿಲೆ ವಿತ್ತಭವನದೊಳ್ . . . ಅಸ್ಮಾಹತಿಯಿಂದಮವಂ ಬಿರ್ದು ಪುಟಿತು ಲಯವಾಗದಿರಂ (ಜಾತಕ. ೨೩-೧೪). [ಸಂ.]

ವಿತ್ತರ 'ಬಿತ್ತರ' ನೋ.

ವಿತ್ತವಣಿಜ (ನಾ). ಚಿನ್ನದ ವ್ಯಾಪಾರಿ ; ಸರಾಫ : "ವಿತ್ತವಣಿಜಂ ಚಿನ್ನವರದಂ" (ಮಂಗರಾ. ೧೦೫-೧೪). [ಸಂ.]

ವಿತ್ತಸ್ಥಾನ (ನಾ). = ವಿತ್ತಭವನ : ಉಡುರಾಜಂ . . . ನೆಲಸೆ ವಿತ್ತಸ್ಥಾನದೊಳ್ ವಿತ್ತಮಂ ಪಡೆಗುಂ ಬೃಂದಿಗನಕ್ಕುಂ (ಜಿಕಾಪ. ೧೮-೬). [ಸಂ.]

ವಿತ್ತಾಧೀಶ (ನಾ). = ವಿತ್ತಪ : ಬಿಸಜಾರಿ ಹರಿಯೊಳಿರೆ ವೀಕ್ಷಿಸೆ ಕನಕಾದಿಗ್ರಹಂ ಮಹೀನಾಥಂ ಜೋಯಿಸಿಗಂ ವಿತ್ತಾಧೀಶಂ ವಸುಧೇಶಂ ನಾವಿದಂ ನರೇಶ್ವರನಕ್ಕುಂ (ಜಾತಕ. ೨೦-೫) ; ಪೆಱಸಾರ್ ಕೋಣಪ ನೂಂಕದಿರ್ ಪವನ ವಿತ್ತಾಧೀಶ ನೀಂ ಕಾಣ್ಕೆಯಂ ನೆಱೆ ನೀಡು . . . ಎನುತಲ್ಲಿ ಕೂಡೆ ಜಡಿದಂ ಮಾಕಾಲನಾ ಕಾಲದೊಳ್ (ಶಬಶಂ. ೧-೮೩). [ಸಂ.]

ವಿತ್ತಾನುವರ್ತಿನಿ (ನಾ). ಹಣವನ್ನು ಅನುಸರಿಸುವವಳು ; ವೇಶ್ಯೆ ; ಸೂಳೆ : ದಿನನಾಥಾಲಯಲಗ್ನದೊಳ್ ಕುಜ ಬುಧ ತ್ರಿಂಶಾಂಶಮಾದಂದು ಕೋಕನದಪ್ರದ್ವಿಷನಲ್ಲಿ ಕೂಡೆ ಪುರುಷಾಚಾರಾಢ್ಯೆ . . . ಭಾರ್ಗವಾಂಶದೊಳಗಮ್ಯಾಸಕ್ತೆ ವಿತ್ತಾನುವರ್ತಿನಿ (ಜಾತಕ. ೨೨-೭). [ಸಂ. ವಿತ್ತಾನುವರ್ತಿನೀ]

ವಿತ್ತಾರ್ಥಿ (ನಾ). ಹಣವನ್ನು ಬೇಡುವವನು; ಯಾಚಕ: ದೀನಜನದಾನನಿರತ

ನನೂನಗುಣೋತ್ತಮಸುಸತ್ಯ ತಾಪಸಲೋಕಾದಾನಂ ವಿತ್ತಾರ್ಥಿಗ . . . ಅರ್ತಿವಂ (ಶಾಂತಿಪ. ೧-೨೮). [ಸಂ. ವಿತ್ತಾರ್ಥಿನ್]

ವಿತ್ತ (ನಾ). ೧. ಜೀವನೋಪಾಯಕ್ಕಾಗಿ ಬಿಟ್ಟ ದತ್ತಿ ,— ಉಂಬಳಿ : ಮುನ್ನಿನ ಭಾಗಮಲ್ಲದ ಮತ್ತವೊನ್ದು ಭಾಗಮು ತೇಜಸಾಮ್ಮವಿತ್ತಿಗಾ ಬಳ ೧೦ ಕೊಳ್ವುದೆನ್ದು ನುಡಿಯಲ್ . . . ಪೂರ್ವ್ವದ ವಿತ್ತಿ ಪೋಪುದರ್ಕ್ಕೆ ಗಾವುಣ್ಡರ ಕೊಟ್ಟ ಮತ್ತವೊನ್ದು ಭಾಗಕ್ಕೆ ತೇದಸಾಮ್ಮವಿತ್ತಿ XXX (ಶಾಸಾ. IX-i , ೧೨೩-೨೦; 1059) ; ಬೆಮ್ಮತ್ತನೂರ ವಿತ್ತಿಯೊಳಗಣ ನಗರೇಱ ಕಾಮಗಳುಡನ ಮಗ ಬೆನಕಗಳುಡನ ಕೈಯ್ಕಲು . . . ಬೆಮ್ಮತ್ತನೂರ ವಿತ್ತಿ ವೊಳಗೆಱೆಯ ವಿತ್ತಿಯ ನಾಡಪ್ರಭುಗಳು ಕೊಟ್ಟು (ಎಕ. XI. ಚತ್ರದು. ೧೨-೧೫ ; ಸು. 1286). ೨. ಒಂದು ಬಗೆಯ ಆದಾಯತೆರಿಗೆ : ಮಲ್ಲಿಕಾರ್ಜುನದೇವರ ವಿತ್ತಿ XXX ಆ ಭುವೇಸ್ವರದೇವರ ವಿತ್ತಿ XXX ನ್ನಯ ದೇವರ ವಿತ್ತಿ ಯಿಪ್ಪನು ಬರೂರ ಸಿದ್ದೇದೇವರ ಮಗ ವೀರಪಗೆ ಧಾರೆವೂರ್ವ್ವಾಗಿ ಬಿಟ್ಟ ಧರ್ಮ್ಮ (ಎಕ. XI. ದಾವಣ. ೧೨೦-೨೮ ; ಸು. 1360). ೩. ಜೀವನೋಪಾಯ ; ಕಸುಬು ; ಉದ್ಯೋಗ : ಋತ್ವಿಕ್ಕಿತ್ಯಂ . . . ವೃತ್ತಿ — ವಿತ್ತಿ, ವೃಥಾ — ವಿತೆ (ಶಮದ. ೨೬೮ ಪ್ರಯೋ). [< ಸಂ. ವೃತ್ತಿ]

ವಿತ್ತಕಾಱ (ನಾ). ಕಸುಬುದಾರ ; ಉದ್ಯೋಗಸ್ಥ : ನಾಡೋಜನು ಮರ ಕಬುನ ಕೆಲಸಕೆ ವಿತ್ತಿಕಾಱರುಯಿವರು ತೂಬ ಮಾಡಿದರು (ಎಕ. X. ಚಂತಾಮ. ೬೮-೧೮; 1378).

[ವಿತ್ತಿ + - ಕಾಱ]

ವಿತ್ತೀಯ (ಗು). ಹಣಕಾಸಿಗೆ ಸೇರಿದ ; ಐಶ್ವರ್ಯಕ್ಕೆ ಸಂಬಂಧಿಸಿದ ; ವಿತ್ತದ : ಧಾರ್ಮಿಕ ಆಚರಣೆಗೆ ಸಂಬಂಧಪಟ್ಟಿರುವ ಯಾವುದಾದರೂ ಆರ್ಥಿಕ, ವಿತ್ತೀಯ, ರಾಜಕೀಯ ಅಥವಾ ಇತರ ಲೌಕಿಕಕ್ರಿಯೆಯನ್ನು ವಿನಿಮಯಗೊಳಿಸಲು (ಭಾಧಾಸ. ೧೫).

[ಸಂ.]

ವಿತ್ತು 'ಬಿತ್ತು' ನೋ.

ವಿತ್ತೇಶ (ನಾ). ಐಶ್ವರ್ಯಕ್ಕೆ ಒಡೆಯನಾದವನು ; ಕುಬೇರ : ಐರಾಮಹಾದೇವಿಯರುದರದೊಳಂ ಬರ್ಪ ಲೋಕೇಶನಂ ಬೆಚ್ಚರಮಾ ವಿತ್ತೇಶನಂ ಪೇಱ್ದುದು (ಶಾಂತಿಪು. ೯-೧೬) ; ಸುರಪಂ ಮಂದಾರದಿಂದಚ್ಯುತನರುಣಸರೋಜಾತದಿಂ . . . ಪದ್ಮಜಂ ಹೇಮಪದ್ಮೋತ್ಕರದಿಂ ವಿತ್ತೇಶನುದ್ಯತ್ನಕಕುಸುಮದಿಂ ಮಾರುತಂ ದಿವ್ಯಸೌಗಂಧಿರಜಸೌಗಂಧದಿಂದರ್ಚಿಸೆ ನಿಜಪದಮಂ ಭರ್ಗನೊಪ್ಪರ್ದನಾಗಳ್ (ರಾಜಶೇ. ೧೪-೧೬೫). [ಸಂ.]

ವಿತ್ತೈಷಣ (ನಾ). ಹಣವನ್ನು ಪಡೆಯಬೇಕೆಂಬ ಬಯಕೆ ; ಶ್ರೀಮಂತನಾಗುವ ಅಪೇಕ್ಷೆ : ಪುತ್ರೈಷಣ ವಿತ್ತೈಷಣ ದಾರೈಷಣಂಗಳೆಂಬ ಈಷಣತ್ರಯವನುಳಿದು (ಆದವ. ಮು. ೧೧-೧೫೧); ವಿತ್ತೈ [ಪಾಠಾಂ. ಅರ್ಥೈ]ಷಣ ಪುತ್ರೈಷಣ ದಾರೈಷಣಮೆಂಬ ಈಷಣತ್ರಯದಿಂ (ವಚೋ. ೧೪೬). [ಸಂ.]

ವಿತ್ಪತ್ತಿ (ನಾ). ಮೂಲ ; ಹುಟ್ಟು ; ವ್ಯುತ್ಪತ್ತಿ : (೬). [< ಸಂ. ವ್ಯುತ್ಪತ್ತಿ]

ವಿತ್ಪನ್ನ (ನಾ). ೧. ಮೂಲನಾದವನು ; ಕಾರಣನಾದ ವ್ಯಕ್ತಿ : ಉದ್ಯಾನವನವನು ಕೆಡಿಸಿ ಕಳೆದಿರಲ ಮುನ್ನ ಮುಱಿದವರಾರೆನುತ ವಿತ್ಪನ್ನರನು ಕೊಲಗಿಸುತ ಸುರಪನ ಮನ್ನಣೆಯ ಗಂಧರ್ವಬಲ ಬೆರಸಿದುದು ಪರಬಲವ (ಕುವ್ಮಾ. ೧೪-೯). ೨. ಪರಿಣತನಾದವನು ; ನಿಷ್ಣಾತನಾದವನು : ಜಗನ್ನಿವಾಸನು ಕೃಷ್ಣನಿಂ ವಿತ್ಪನ್ನರುಂಟೇ ಜಗಕೆ (ಕೋಗಯ. ೬-೨೪). [< ಸಂ. ವ್ಯುತ್ಪನ್ನ]

ವಿತ್ಪನ್ನತೆ (ನಾ). ಹುಟ್ಟು ; ಮೂಲ ; ವ್ಯುತ್ಪನ್ನತೆ : ಮನ್ನಿಸದಿರವಿವೇಕವನು ವಿತ್ಪನ್ನತೆಗೆ ಕುಂದಹುದು ಹಬ್ಬುವುದಿನ್ನು ನಿಮ್ಮಭ್ಯುದಯಲತೆ (ಕೊರರಾ. ೫-೩-೬೯).

[< ಸಂ. ವ್ಯುತ್ಪನ್ನತಾ]

ವಿತ್ರಸ್ತ (ಗು). ೧. ಅಂಜಿದ ; ಭಯಗೊಂಡ : ವಿತ್ರಸ್ತಕರ್ಮಂರಿಪುವ ಜಗತ್ತ್ರಯದೀವಕನ ಕಾಣ್ಕೆಗೊಳಗಾದುದು ಲೋಕತ್ರಯಮದನುಕ್ರಮದೊಳ್ ವೇತ್ರಾಸನಳ್ಳುರೀಮ್ಮದಂಗಸಮಾನಂ (ಆದಿಪು. ೧-೪೭) ; ವಿತ್ರಸ್ತಸಮಸ್ತನಿಶಾಟವರ್ಗ (ಪಂಚಮಂ. ೧೨-೧೪). (ನಾ). ೨. ಹೆದರಿದವನು ; ಭಯಗೊಂಡವನು. [ಸಂ.]

ವಿತ್ರಾಸ (ನಾ). ಅಂಜಿಕೆ ; ಭಯ ; ಭೀತಿ : ಧಾತ್ರಿಗಧಿಪತಿಯಪ್ಪುದೆಂದು ಭರತಗೆ ಪೇಳೆ ವಿತ್ರಾಸಭಕ್ತಿಯಿಂದಿಚ್ಛೆಗೈಯದೆ ಧರೆಯ ಶತ್ರುಘ್ನಸಹವಾಗಿ ಬಂದು ಶ್ರೀರಾಮನಂ ಕಂಡ ಕೈಕಾತ್ಮಭವನು (ವಂಕಾರಾ. ೧-೩-೧೩). [ಸಂ.]

ವಿತ್ರಾಸಿತ (ಗು). ಭಯವನ್ನುಂಟುಮಾಡಿದ : ಚತುರಾನನಸಂಸ್ಕಾರಸಂಯುತೋಪನ್ಯಾಸವಿತ್ರಾಸಿತಪರಮತನುಂ . . . ಆಗಿ (ಚಂದ್ರಪು. ೪-೮೦ ವ). [ಸಂ.]

ವಿದ (ಗು). ೧. ತಿಳಿದ ; ಅರಿತ ; ಬಲ್ಲ. (ನಾ). ೨. ತಿಳಿದವನು ; ಬಲ್ಲವನು ; ಜ್ಞಾನಿ : ಸಕಲಮಂತ್ರಾಸ್ತ್ರವಿದನೀ ರಣಕಲಾಪಂಡಿತಂ (ಶ್ರೀರಾಮಾ. ೩೦-೭೪) : ಮೂರ್ತಿಯೊಂಗೆ ದರ್ಶನಾರ್ಹವೆನುಪ ವಿದರು, — ವಿಶ್ವಕರ್ಮ ಗುಡಿಯನೇಕೆ ಸಿಂಗರಿಸಿದನಿಂತು? ನುಡಿವರೆ? (ಚಂತಪ್ರ. ೩೭-೧೪). [ಸಂ.]

ವಿದಗ್ಧ (ಗು). ೧. ಬೆಂಕಿಯಿಂದ ಸುಟ್ಟ ; ದಹಿಸಲ್ಪಟ್ಟ. ೨. ತಾಪಕ್ಕೆ ಗುರಿಯಾದ ; ತಪಿಸುವ. ೩. ಚೆನ್ನಾಗಿ ಬೆಂದ ; ಪಕ್ವವಾದ. ೪. ಹಾಳಾದ ; ನಾಶಗೊಂಡ. ೫. ನೊಂದ ; ಕಷ್ಟಕ್ಕೊಳಗಾದ. ೬. ವಂಚನೆಯಿಂದ ಕೂಡಿದ ; ಕಪಟದ: ತಿಳಿದದಂ ಮುಗ್ಧಯಾ ತಂತ್ರಮಂ ಮುಗುಳುನಗೆ ನಕ್ಕನು ವಿದಗ್ಧಲಂಕೇಶ್ವರಂ (ಶ್ರೀಕಾಮಾ. ೨೪೫-೪೬೦). ೭. ವಿದ್ವತ್ತಿನಿಂದ ಕೂಡಿದ ; ಪಾಂಡಿತ್ಯವುಳ್ಳ : ವಿದಗ್ಧ ವಿದ್ವಜ್ಜನಪಾರಿಜಾತಷಟ್ಕರ್ಕ. . . ಮಾಮಾಂಸ ಮಾನಸಸರೋವರ ರಾಜಹಂಸರ್ (ಶಾಸಾ. XX. ೪೬-೧೭ ; 1072) : ಬನದೊಡಮೆಯೊಳಾದೊಲವುಂ ವನಪಾಲನೊಳಾದ ವೆಚ್ಚುವೆಂಕ್ಕೆಕ್ಕೆಯಿನಂದನುವಿಸೆ ವಿದಗ್ಧಚತುರಾನನನಾದಂ ಪ್ರೀತಿವಿಕಸಿತಾನನನಾದಂ (ಮಲ್ಲಿಪು. ೫-೬೦). ೯. ಅರಗಿದ ; ಜೀರ್ಣವಾದ. ೧೦. ಸರಿಯಾಗಿ ಅರಗದಿರುವ, — ಪಚನವಾಗದ. ೧೧. ಗೌರವಕ್ಕೆ ಪಾತ್ರವಾದ. ೧೨. ಸೊಬಗಿನಿಂದ ಕೂಡಿದ ; ಚೆಲುವಾದ; ಸುಂದರವಾದ : ವಿದಗ್ಧಸುರಸುಂದರೀನಯನಸುಂದರಂ ನಿನ್ನ ರೂಪಿದೆತ್ತ (ಆದಿಪು. ೧೩-೮೪). (ನಾ). ೧೩. ಪಂಡಿತ ; ವಿದ್ವಾಂಸ : ವಿಟಜನಕ್ಕೆ ತೊಡರ್ವ ಚಾರಿಯೆನಿಪ ಸೂಳೆಗೇರಿಯಿಂ ವಿದಗ್ಧಹೃದಯಹಾರಿಯಿಂ . . . ಸಮಸ್ತವಸ್ತುಭುವನದಿಂ (ಪಂಪಭಾ. ೧-೫೦ ರಗಳೆ) ; ಸಿರಿಯನುಳ್ಳವನೇ ವಿದಗ್ಧನು ಸಿರಿಯನುಳ್ಳವನೇ ಮಹಾತ್ಮನು . . . ಸಿರಿರಹಿತ ಶಿವನಾದೊಡಾಗಲಿ ಸರಕು ಮಾಡದು ಲೋಕವು (ಕುವ್ಮಾ. ೩-೩೮). ೧೪. ನಿಪುಣನಾದವನು ; ಚತುರ : 'ವಿದಗ್ಧತನ' ಪರಾ. ೧೫. ವಂಚನೆಯಿಂದ ಕೂಡಿದವನು ; ಕಪಟಿ : 'ವಿದಗ್ಧಶರಣ' ಪರಾ. ೧೬. ಅಜೀರ್ಣದಿಂದ ಉಂಟಾಗುವ ಒಂದು ಬಗೆಯ ರೋಗ : ಅಜೀರ್ಣವೆಂಬ ವಿಷೂಚಿಯು ಆಮವೆಂದು, ವಿದಗ್ಧವೆಂದು, ವಿಷ್ಟಂಭವೆಂದು ಮೂಱುವಿಧವಾಗಿರ್ಪುದು. ವಿದೆಯುಂತ ಕಾಣಿಸುವುದು ವಿದಗ್ಧವೆನಿಸಿಕೊಂಬುದು (ಸಕ್ಕ. ೬೫೮). [ಸಂ.]

ವಿದಗ್ಧತನ (ನಾ). ಜಾಣತನ ; ಚತುರತೆ ; ಕೌಶಲ : ತರಳೆ ಮನ್ಮಥನಂಕ ಕಾರ್ತಿಯೊ ಅರರೆ ಎನಲಾ ಮುಗ್ಧಮಿಂದನ ಚರಣಯುಗಳಕ್ಕೆಱಗಿ ತನ್ನ ವಿದಗ್ಧತನ ವೆಸೆದು ಪಡಿಗವಂ ತರವೇಳ್ದು (ಬಸಪು. ೧೨-೬). [ವಿದಗ್ಧ + - ತನ]

ವಿದಗ್ಧತೆ (ನಾ). ೧. ಪಾಂಡಿತ್ಯ ; ಜ್ಞಾನ : ಪರಮಪದಾರ್ತ್ಥನಿರ್ನ್ನಯಮನಾಂತ ವಿದಗ್ಧತೆ ದುರ್ನ್ನಯಂಗಳೊಳ್ಪರಿಚಯಮೆಂದುಮಿಲ್ಲದತಿಮುಗ್ಧತೆ ತನ್ನಿನಿಯಂಗೆ ಚಿತ್ರದೊಳ್ (ಎಕ. II. ೧೨೮-೮ ; 1121). ೨. ಕುಶಲತೆ ; ನೈಪುಣ್ಯ. [ಸಂ. ವಿದಗ್ಧತಾ]

ವಿದಗ್ಧವೃತ್ತಿ (ನಾ). ಪ್ರೌಢಿಮೆ ; ಪ್ರಾವೀಣ್ಯ ; ಚತುರತೆ : ಮತ್ತನುಜೆಯರುದ್ಧ ನರ್ತನದ ಗೀತದೊಳಾದ ವಿದಗ್ಧವೃತ್ತಿಯಂ ಪರಿವೀಕ್ಷಿಸುವುದು ನೀಂ (ನೇಮಪು. ೩-೧೭೪). [ಸಂ.]

ವಿದಗ್ಧಶರಣ (ನಾ). ೧. ಪಂಡಿತರಿಗೆ ಆಶ್ರಯವಾಗಿರುವವನು. ೨. ವಂಚಕರಿಗೆ ಆಶ್ರಯವಾಗಿರುವವನು. ೧,೨ : ಆ ನೃಪಂ ಸಪ್ತಾಂಗಸಂಗಿಯಾಗಿಯುಂ ಸಪ್ತಾಂಗ ಸಂಗಿಯಲ್ತು . . . ವಿದಗ್ಧಶರಣನಾಗಿಯುಂ ವಿದಗ್ಧಶರಣನಲ್ತು (ಪುಷ್ಪಪು. ೯-೩೯ ವ).

[ಸಂ.]

ವಿದಗ್ಧಾಜೀರ್ಣಜ್ವರ (ನಾ). ಅಜೀರ್ಣದಿಂದ ಉಂಟಾಗುವ ಒಂದು ಬಗೆಯ ಜ್ವರ : ಅಜೀರ್ಣಜ್ವರವು ಮೂರು ತೆರನಾಗಿರುವುದು . . . ಪಿತ್ತದೋಷದಿಂದ ಹುಟ್ಟಿದ ಅಜೀರ್ಣಜ್ವರವು ವಿದಗ್ಧಾಜೀರ್ಣಜ್ವರವೆಂದೂ ಹೇಳಲ್ಪಟ್ಟಿದೆ (ಸಕ್ಕ. ೧೦೦). [ಸಂ.]

ವಿದಗ್ಧೆ (ನಾ). ೧. ಚತುರಳಾದವಳು ; ಜಾಣೆ : ಕಾಂತನಂ ಮೆಚ್ಚಿಸಲ್ ವಿದಗ್ಧೆ

ಪುರುಷಾಯಿತಂ ತಗುಳೆ ನರ್ತಕೀಲೀಲೆಯಿಂದದೊಂದು ಪೊಸಗಾರ ಸೋಗೆನವಿಲಾಟಮಂ ತಾಳ್ದಿದಳ್ (ಆದಿಪು. ೧೨-೧೪) ; ಓದಿಸದಿರ್ ಗಿಳಿಯಂ ನಿನ್ನೀ ದಂತಮನೆಸೆವ ದಾಡಿಮಿಬೀಜಂಗೆತ್ತಾದರದಿಂ ಕರ್ದುಕುಗುವೆಂದೋದಿಸುತಿರ್ದಳ್ ವಿದಗ್ಧೆ ಮುಗ್ಧೆಯನೊಲವಿಂ (ಗಿರಿಕ. ೪-೧೨೬). ೨. ತಾಪಕ್ಕೆ ಗುರಿಯಾದವಳು ; ತಪಿಸುತ್ತಿರುವವಳು : ಮುಗ್ಧೆ ಭವದ್ವಿರಹದೊಳೆ ವಿದಗ್ಧೆಯಿ ತಾನಾದಳೆಂದು ನೀಂ ನೆರೆದೊಡೆ ಕೇಳ್ವಿಗ್ಧತೆಯಿಂದೆ ವಿದಗ್ಧೆಯ ಮುಗ್ಧೆಯೆನಿಪ್ಪಳ್ ಬಳಿಕ್ಕಿದೇನಚ್ಚರಿಯೋ (ರಾಜಶೇ. ೧೧-೧೦೨). [ಸಂ. ವಿದಗ್ಧಾ]

ವಿದತ್ತೂರ್ (ನಾ). ಒಂದು ಸ್ಥಳದ ಹೆಸರು : ಕದಮ್ಬೂರಾ ನಾಲ್ಪದಿನ್ನರು ವಿದತ್ತೂರು ನಾಮಿದ ಪನ್ನೆಮು ಅಲ್ಲಿಯ ಈರೆದೆತ್ತರಾ ಪೊರುಳ್ಳ xxx ಱ ಮುನಿಗಿತ್ತು (ಎಕ. X, ಕೋಲಾರ. ೭-೬; 760). [? + ಊರ್]

ವಿದರ್ಭ (ನಾ). ೧. ಒಂದು ದೇಶದ ಹೆಸರು ; ℙ ಈಗಿನ ಮಧ್ಯಪ್ರದೇಶದ ಬಿರಾರ್ : ಕಳಿಂಗಕುರುನೇಪಾಳನಿಷಧವಿದರ್ಭಧರಣೀಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ (ತೊರಕ. ೧-೭-೧೪) ; ವಿದರ್ಭನರನಾಥ ರಥಾಂಗಸುಧಾಮಯೂಖ ಪರಾಕು (ಯಾದಚಂ. ೩-೧ ವ). ೨. ವಿದರ್ಭ ದೇಶದ ದೊರೆ : ಅಳಿಯನನು ಕಾಣದೆ ವಿದರ್ಭನು ತೊಳಲಿಸಿದನನುಚರರ ನಾನಾಹಳುವದಲಿ ಹಳ್ಳಿಯಲಿ (ತೊರಕ. ೩-೨-೧೬). ೩. ವಿದರ್ಭದೇಶದ ವ್ಯಕ್ತಿ. ೪. [ಕಾವ್ಯಮಿ] ಕಾವ್ಯರಚನೆಯ ಮೂರು ರೀತಿಗಳಲ್ಲಿ ಒಂದು ; ಮಾಧುರ್ಯವ್ಯಂಜಕವಾದ ವರ್ಣಗಳಿಂದ ಕೂಡಿದ್ದು, ದೀರ್ಘಸಮಾಸಗಳಿಲ್ಲದಿರುವ ಲಲಿತವಾದ ಶೈಲಿ : ಪದರಚನಾತಿಶಯಂ ರೀತಿ ದಲದುವುಂ ನಿಯತವರ್ಣಗುಂಫನಗುಣದೊಂದೊದವಿಂ ಮೂದೆಱನಕ್ಕುಂ ವಿದರ್ಭ ಪಾಂಚಾಲ ಗೌಡವಿಷಯನಿಱುದ್ದಂ (ಕಾವ್ಯಾವ. ೭೮೧). [ಸಂ.]

ವಿದರ್ಭಜೆ (ನಾ). ೧. ವಿದರ್ಭರಾಜನ ಮಗಳು. ೨. ದಮಯಂತಿ. ೩. ಅಗಸ್ತ್ಯನ ಹೆಂಡತಿ ; ಲೋಪಾಮುದ್ರೆ. ೪. ಕೃಷ್ಣನ ಹೆಂಡತಿ ; ರುಕ್ಮಿಣಿ. [ಸಂ. ವಿದರ್ಭಜಾ]

ವಿದಲ, ವಿದಳ (ಗು). ೧. ಎರಡಾಗಿ ಹೋಳಾದ ; ಸೀಳಿದ. ೨. (ಹೂವು ಮುಂತಾದುವುಗಳಂತೆ) ಅರಳಿದ ; ಬಿರಿದ. (ನಾ). ೩. ಹೋಳು ಮಾಡುವಿಕೆ ; ಸೀಳುವಿಕೆ. ೪. ಯಾವುದಾದರೊಂದು ವಸ್ತುವಿನ ಚೂರು—ತುಂಡು. ೫. ಸೀಳಿದ ಬಿದಿರಿನಿಂದ ಮಾಡಿದ ಬುಟ್ಟಿ. ೬. ಎರಡು ಬೇಳೆಯಾಗುವ ತೊಗರಿ, ಕಡಲೆ ಮುಂತಾದ ಕಾಳು ; ದ್ವಿದಳ ಧಾನ್ಯ. ವಿದಳ : ೫. ಎಲೆ ಹೇರು ೧೦೦ ಕೆ ವ ಗ ೨ ವಿದಳ ಹೇರು ೧೦೦ ಕೆ ವ ಗ ೨ . . . ವಿದಳದ ಹೇರು ದವಸದ ಹೇರುಯಿವು ಮುನ್ನಾದ ಸಮಸ್ತ ವಿವಹಾರಕೆ (ಎಕ. XII, ಸಿರಾ. ೭೬-೬ ; 1379). ೬. "ವಿದಳಂ ಪರ್ಪಾಖ್ಯಂ" (ವಸ್ತುಕೋ. ೯೫-೨೧) ; ರಸಭಂಡವೈದು ವಿದಳವಿಪ್ಪತ್ತೈದು . . . ದಶದಿಕ್ಕಿನ ಕಾಲ್ನಡೆಯಱುತ್ತಾಱುಕೋಟಿ (ಶಿವಗೀ. ೧೮೯-೯೫೬) ; ಉಪ್ಪು ಹುಳಿ ಬೆಲ್ಲ ಯೆಂಣೆ ತುಪ್ಪ ವಿದಳ ಬೂಸಕಾಯಿ . . . ಜವಳಿ ಮುಂತಾಗಿ (ಎಕ. VII, ಶಿವಮೊ. ೨೮-೧೭; 1670). ೭. ನಿವಾರಣೆ ; ಪರಿಹಾರ : ಜೀವಾದಿ ಪದಾರ್ಥಂಗಳೊಳಾವುದು ಸಂದಿಗ್ಧಮಾದೊಡಂ ಬಲಗೊಳೆ ಭವ್ಯಾವಳಿಗೆ ವಿದಳಮಕ್ಕುಂ ದೇವನನೀ ತೀರ್ಥಕರನ ಪುಣ್ಯಮಗಣ್ಯಂ (ಅಜಪು. ೫-೭೦). [ಸಂ.]

ವಿದಲನ, ವಿದಳನ (ಗು). ೧. ಸೀಳುವ ; ಹೋಳುಮಾಡುವ. ೨. ನಾಶ ಮಾಡುವ ; ಧ್ವಂಸಗೊಳಿಸುವ. (ನಾ). ೩. ಸೀಳುವಿಕೆ ; ಎರಡು ಭಾಗಗಳಾಗಿ ಹೋಳು ಮಾಡುವಿಕೆ. ೪. ನಾಶ ; ಧ್ವಂಸ. ೫. ನಾಶಮಾಡಿದವನು ; ಧ್ವಂಸಗೊಳಿಸಿದವನು: ಶ್ರುತಿಪುಟಲಲಿತಾಕಲಿತಭುಜಂಗಮ ಹೃದಯಂಗಮ ಪದ . . . ದ್ಮಾನಂಗಮದವಿದಲನ . . . ಮಹಂತಜಯ (ಉದ್ಭವ. ೨-೧). ವಿದಳನ: ೧. ವೈರಿಭಟಗಜವಿದಳನೋದ್ಧತಸಿಂಹ ಲಂಕಾನಗರನಿರ್ದಹನ . . . ಭುವನಪ್ರಾಣಜಂ ವಂದೆ (ತೊರಕ. ೧-೧-೪). ೨. ಬೊಮ್ಮಿದೇವನು . . . ಇರ್ಪನುರುಸಂಸಾರ ಮಾಯಾದರ್ಪವಿದಳನಮೂರ್ತಿ (ಬಸಪು. ೩೧-೧). ೩. ವಿದಳನ . . . ದುರ್ಭೋಗ್ಯ ನಾನಾವಿಧಾಸಂಪ್ರಾತತೀವ್ರವೇದನಾರೂಪಂಗಳಾಗಿ ಶಿವದ್ರೋಹಿಗಳಿಗೆ ನಿಷ್ಕಾರುಣದಿಂ ಮೂಳ್ಪ ಶಿಕ್ಷಾಲೇಶಮೆಂದನಿಸಿ (ವಿವಹ. ೧೪೧). ೪. ದಾನವರ ದಳವನ್ನು ವಿದಳನ ಮಾಡುವ ರುದ್ರನಾಮದಲ್ಲಿ ಮೃತಸಂಜೀವಿನಿಯ ಅಮೃತಧಾರೆಯು ಹರಿಯುತ್ತದೆಂದು ತೋರುತ್ತದೆ (ಕೋಹಿನೂ. ೧೪). [ಸಂ.]

ವಿದಲಿತ, ವಿದಳಿತ (ಗು). ೧. ಸೀಳಲ್ಪಟ್ಟ ; ಹೋಳಾದ : ಆಕಾಶಂಬರಂ ಪರ್ವಿದ ಮಣಿಮಯಕೂಟಂಗಳಿಂದಲ್ಲಿಮಾದ್ರದ್ರದನೇಂದ್ರ ಸ್ಖೂಲದಂತಾಹತಿವಿದಲಿ [ಪಾಶಾ. ೪]ತ ಗೋಶೀರ್ಷಸಾರದ್ರವಾವೋದದಿನೆತ್ತಂ ಗಂಧವಾಹಂ ಮಗಮಗಿಸೆ ಬೆಡಂಗೀ ನಗೇಂದ್ರೋಪಕಂಠಂ (ಅಜಪು. ೧೩-೬೭). ೨. ಅರಳಿದ ; ಬಿರಿದ ; ವಿಕಸಿತವಾದ : ವಿದಲಿ[ಪಾಶಾಂ. ೪]ತಪುಷ್ಪಮಾಲಿಕೆಗಳಿಂ ಮಳಯೋದ್ಭವದಿಂ ತೊಳಪ್ಪ ರನ್ನದ ತೊಡವಿಂದಳಂಕರಿಸಿ (ಚಂದ್ರಪು. ೬-೮೦); ವಿದಲಿತ ಪುಷ್ಪಸೌರಭದಿನಚ್ಚುತಕಲ್ಪದ ಶುಕ್ಲಲೇಶ್ಯೆ ಲೆಪ್ಪದ ಕರು ವಜ್ರದಂಡದ ಬಲಂ ಪೊಳೆಪುದ್ಗತಿಗ್ಮರೋಚಿ ಬಣ್ಣಿದ ರುಚಿ ಮಿಂಚು ಮಿಂಚು ಪೆಜಕಣ್ಣೆಜವಾಗಿರೆ (ಅಸಂಪು. ೬-೧೮). ವಿದಳಿತ: ೧. ಹರಿವಿದಳಿತಮದಗಜ ಕುಂಭರಕ್ತಸಿಕ್ತಾರ್ದ್ರವೌಕ್ತಿಕಪ್ರಕರದವೋಲ್ ಕರಮಸೆವ ದಾಡಿಮಿಬೀಜರಾಜಿಯಿಂ ತೆಗೆದು ರಸವನಾಸ್ವಾದಿಸಿದೆಂ (ಕಾದಂಪು. ೮೭). ೨. ವಿದಳಿತ ನುತ ಶತಪತ್ರದ ಪುದುವಿನೊಳಿರದಗಲೆವೋದ ಹಂಸನನಲಸಲ್ ಪದೆದೆಳಸುವ ಪೆಣ್ಣಂಚೆಯ ಪದ ಕೊರಲಿಂಚರದ ಸರಮೆ ಸವಿ ಕಿವಿಗಿದಲೊಳ್ (ಪಂಪಭಾ. ೫-೫೭) ; ವಿದಳಿತ ಪದ್ಮಸೌರಭಕೆ ಸಂದಣಿಗೊಳ್ಳ, ಮಧುವ್ರತಪ್ರತಾಪದಿಂ . . . ಒಪ್ಪುವುದೊಂದು ಪೂಗೊಳಂ (ಗಿರಿಕ. ೪-೧೬). (ನಾ). ೩. ಸೀಳಿದುದು ; ಹೋಳುಮಾಡಿದುದು. ೪. ಚಿಗುರಿದುದು. ೩,೪ : ವಿದಳಿತವಾದ ಕಂಟಕಕದಂಬದಿನುರ್ದಿದ ವಾಹಿನೀಸಮೂಹದಿನಭವ್ಯದ್ಧಿಮೆತ್ತ ಭುವನಾಶ್ರಯದಿಂ . . . ಎಸೆದತ್ತು ರಾಜ್ಯವಿಭವಂ ಜಳದಾಗಮ ಚಕ್ರವರ್ತಿಯಾ (ಜಗವಿ. ೪-೩೫). ೫. ಚದುರಿದುದು ; ಚಲ್ಲಾಪಿಲ್ಲಿಯಾದುದು : ಕಲಿತ ಬಲ ಶತಕೋಟಿಗಿದಿರಾಗಳಿದವದ್ರಿಗಳಂತೆ ಹರಿಪದವಳಯ ವಿದಳಿತವಾಯ್ತು ಮೇಘವ್ರಾತದಂದದಲಿ (ಋಷ್ಯಾಧೀ. ೭-೯). [ಸಂ.]

ವಿದಲಿತವನರುಹ (ನಾ). ೧. ಅರಳಿದ ತಾವರೆ. ೨. [ಛಂದ] ವರ್ಣ ಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಇಪ್ಪತ್ತೈದನೆಯ ಅಭಿಕೃತಿ ಎಂಬ ಛಂದಸ್ಸಿನ ಒಂದು ವೃತ್ತ: ಅದಿತಿಜಪುರಮದಕರಿಗಣನಿವಹದೊಳೆಸೆದೊಡನಿರೆ . . . ವಿದಲಿ [ಪಾಶಾಂ. ೪] ತವನರುಹ [ಪಾಶಾಂ. ಸರಸಿಜ] ವನಮನೆಲೆಸೆದುದು (ಛಂದೋಂಬು. ೨-೧೫೫). [ಸಂ.]

ವಿದಲೆ (ನಾ). ದ್ವಿದಳಧಾನ್ಯ : ವಿದಲೆ ವೃಕ ಗೋಧಿ ಕಡಲೆ ಎಳ್ಳು ಅಗಸೆ . . . ಹುರವಲ್ಲಿ ಮುಂತಾದ ಧಾನ್ಯಕ್ಕೆ ಪ್ರತಿಹೇಱೊಂದಕ್ಕೆ ಹಾಗ (ಎಕ.V. ದೇಲೂರು. ೭೫-೯೪; 1382). [ಸಂ. ವಿದಲ]

ವಿದಳ 'ವಿದಲ' ನೋ.

ವಿದಳನ 'ವಿದಲನ' ನೋ.

ವಿದಳಹುಗ್ಗಿ (ನಾ). ಹೆಸರು ಮುಂತಾದ ಬೇಳೆಯನ್ನು ಅಕ್ಕಿಯೊಂದಿಗೆ ಹಾಕಿ ಮಾಡುವ ಒಂದು ಬಗೆಯ ಖಾದ್ಯ : ಎರಡುಮಾನುದಕೊಮ್ಮಾನ ವಿದಳವ ಹಾಕಿಯರೆಬೆಂದ ಸಮಯದೊಳು ಸರಿಯಕ್ಕಿಯಂ ಹೊಯಿವುತ . . . ತೆಂಗಾಯ ತುಱುವಲಂ ತೆಗೆದು ಮತ್ತಾ ವಿದಳಹುಗ್ಗಿಯೆಂದೊಲಿದು ಹೆಸರಂ ಕರೆವುದು (ಸೂಪಶಾ. ೩-೪). [ವಿದಳ (= ವಿದಲ) + ಹುಗ್ಗಿ (< ಪುಲ್ಗಿ)]

ವಿದಳಾನ್ನ (ನಾ). = ವಿದಳಹುಗ್ಗಿ : ಅಪರಿಮಿತಮಪ್ಪ ವಿದಳಾನ್ನ ಪತ್ರಫಲಶಾಕ ಭೋಜನಂಗಳ ವಿಷಮುಂ ವ್ಯಪಗತಮಂಬಿಲದಧಿಯಿಂಗುಪಶಮಮಕ್ಕುಂ (ಖಮದ. ೨-೧೩೫). [ಸಂ. ವಿದಲಾನ್ನ]

ವಿದಳಿತ 'ವಿದಲಿತ' ನೋ.

ವಿದಳಿತಸರಸಿಜ (ನಾ). = ವಿದಲಿತವನರುಹ ೨ : ಅದಿತಿಜಪುರಮದಕರಿಗಣ ನಿವಹದೊಳೆಸೆದೊಡನಿರೆ . . . ವಿದಳಿತಸರಸಿಜವನಮನಲೆಸೆದುದು (ಛಂದೋಂಬು. ೨-೧೫೫). [ಸಂ. ವಿದಲಿತಸರಸಿಜ]

ವಿದಳಿಸು (ಕ್ರ). ೧. ಸೀಳು ; ಎರಡು ಭಾಗಮಾಡು : ವಿದಳಿಸೆ ಘನದಂತಿ ಬಿಸಿಲ್ಗುದುರೆಗಳಂ ಪನಿತು ಪೆತ್ತ ನೆತ್ತರ ಪನಿಯಂದದಿನಲ್ಲಲ್ಲಿಗೆ ಕಱೊಳಿಸಿದತ್ತು ಕಾರ್ಮುಕದೊಳಿಂದ್ರಗೋಪಕಳಾಪಂ (ಜಗವಿ. ೪-೧೩). ೨. ನಾಶಮಾಡು ;

ಇಲ್ಲವಾಗಿಸು ; ಧ್ವಂಸಗೊಳಿಸು : ಮದನಮದಾಂಧಕಾರಮನದಿರ್ಪಿ ಮಹೋದ್ಧತ ಮೋಹಮಲ್ಲನಂ ವಿದಳಿಸಿ (ವರ್ಧಪು. ೧೫-೮೬) ; ವಿದಳಾನ್ನ ಸರ್ವಶಾಕಂ ಕದಶನ ಮಿವನುಂಡವರ್ಗ ಶುಂಠಿಗಳುಂ ತಕ್ರದೊಳೊಂದಿದ ಭಯಮುಂ ಮೇಣ್ ವಿದಳಿಸುಗುಂ ತದ್ವಿಷಂಗಳಂ (ಪಮದ. ೨-೧೩೬). [ವಿದಳನ (= ವಿದಲನ) + - ಇಸ್ಕು]

ವಿದಾಯ (ನಾ). ಮನೆಗೆ ಬಂದ ಅತಿಥಿ, ಬಂಧು ಮುಂತಾದವರನ್ನು ಕಳುಹಿಸಿ ಕೊಡುವಿಕೆ ; ಬೀಳ್ಕೊಡುಗೆ : ನೋವು ಕೊಡುತ್ತಿದ್ದುದು ಆ ವಿದಾಯ . . . ಆದರೆ ಶ್ರೀಧರನಿಗೆ ಅದು ಅತ್ಯಂತ ಪ್ರಾಮಾಣಿಕವಾದ ವಿದಾಯ (ಪಾತ್ರಲ್ಲಿ. ೨೮) ; ಕಣ್ಣುಗಳಿಂದ ಧಾರಾಕಾರವಾಗಿ ಅಶ್ರುಜಲ, ವಿದಾಯದ ಸಮಯವನ್ನು ನೆನೆದು, ಸುರಿಯುವುದೂ ಕಾಣಿಸಿತು (ಅಳಾ. ೮). [<— ಆರ. ಬಿದಾಅ , ವಿದಾಅ ; ಹಿಂ. ಮರಾ. ವಿದಾ, ವಿದಾಈ, ಬಿದಾ, ಬಿದಾಈ. / ಸಂ. ವಿದಾಯ]

ವಿದಾರಕ (ಗು). ೧. ಸೀಳುವ ; ಹೋಳುಮಾಡುವ. ೨. ನಾಶಮಾಡುವ. (ನಾ). ೩. ಸೀಳುವಂತಹುದು ; ಒಡೆಯುವಂತಹುದು : ಹೃದಯವಿದಾರಕವಾದ ಈ ಜ್ಞಾತಿವೈರವನ್ನು ನೋಡಿ ತಾನು ಹೇಗೆ ತಾನೆ ಸೈರಿಸಬಹುದು (ಭೀಷ್ಮ. ೭೩). ೪. ಸೀಳುವವನು ; ಹೋಳುಮಾಡುವವನು : ಭೂರಿಕಳಾವಿಬೋಧಿತ ಸುಧಾಕರ ರೂರ್ಜಿತಸಾಧುಸುಪಥನಿಸ್ತಾರಕರಂಗಜಾತಮಹಿಜಾತವಿದಾರಕರ್ (ಸುಕುಮಾ. ೧-೨೨). ೫. ನಾಶಗೊಳಿಸುವವನು ; ಧ್ವಂಸಮಾಡುವವನು : ದಾರಕರೂಪದ ಜಿನವ್ಯಂದಾರಕನೊಡನೊಡನೆ ಬಾಲಕೇಳಿಗಳಂ ವ್ಯಂದಾರಕರೆ ಮಾಡಿ ದುರಿತವಿದಾರಕನ ಮನಕ್ಕೆ ಮಾಡಿದರ್ ಸಂತಸಮಂ (ಆದಿಪು. ೫-೭೨). ೬. ಪ್ರವಾಹದ ಮಧ್ಯದಲ್ಲಿದ್ದು ನೀರನ್ನು ವಿಭಾಗಿಸುವ ಮರ ಅಥವಾ ಕಲ್ಲುಬಂಡೆ : ''ಕೂಪಕ, ವಿದ್ಧಾರಕ-ಹೊನಲನ್ ಇಬ್ಬಗೆ ಮಾಡುವ ಕಡಲು'' (ಸ್ಥಾಚಾ. ೪). ೭. ಬತ್ತಿದ ನದಿಯೊಳಗೆ ತೋಡಿದ ಹಳ್ಳ , —ತಗ್ಗು : ''ಕೂಪಕಾಃ , ವಿದಾರಕಾಃ —- ೨ ಬಲುಮಗಳಾಗಿ ತೋಡಲ್ಪಟ್ಟ ಮರಳ ಹಳ್ಳ ಮುಂತಾದವುಗಳು, ನೀರೂರಿ ಬರುವ ಹಳ್ಳಗಳು'' (ಸಿದ್ಧಾಂಶಿ. ೭೮). ೮. ಉಪ್ಪುಮಣ್ಣಿನ ನೆಲ ; ಚೌಳುಭೂಮಿ. [ಸಂ.]

ವಿದಾರಣ (ಗು). ೧. ಸೀಳುವ ; ಹೋಳುಮಾಡುವ ; ವಿಭಾಗಿಸುವ : ಬ್ರಾಹ್ಮಣ ಕ್ಷತ್ರಿಯರ ನಡುವೆ ಈ ಚಿತ್ರಗತಭೇದ ಒಂದು ಎಲ್ಲೆಯನ್ನು ಮುಟ್ಟಿ ವಿಚ್ಛೇದ ವಿದಾರಣರೇಖೆಯಿಂದ ಸಾಮಾಜಿಕ ವಿಪ್ಲವದ ಅಗ್ನಿಜ್ವಾಲೆ ಧಗಧಗಿಸತೊಡಗಿತು (ನಬಂಧ. I. ೧೦೧). (ನಾ). ೨. ಸೀಳುವಿಕೆ ; ಎರಡಾಗಿ ಕತ್ತರಿಸುವಿಕೆ : ಶೂಲಾರೋಹಣಕ್ರಕಚವಿದಾರಣಕಾರಾಗಾರವಿನಿವೇಶನಸರ್ವಸ್ವಹರಣಾದಿಗಳಂ ಇಲ್ಲಿಯೆ ಪಡುಗುಂ (ಶತ್ರುಪ್ರ. ೩೭). ೩. ಸೀಳುವಿಕೆಯಿಂದುಂಟಾದ ಗಾಯ : ಹದುಳಿಸ್ನಂಜದಿರು ಬಾಣಳಿದ ವಿದಾರಣವಿದು ವಿಚಾರಿಸಲೆದ ಬರಿದು ತಾ ನೊಂದನಿದೆ ನೋಡೆನ್ನ ಗಾಯವನು (ಕುವಾವಿ. ೮-೫೭). ೪. ಪೀಡಿಸುವಿಕೆ ; ಹಿಂಸೆಗೊಳಿಸುವಿಕೆ. ೫. ಕೊಲ್ಲುವಿಕೆ ; ಸಾಯಿಸುವಿಕೆ : ಶ್ರವಣವಿವರದೊಳ್ ತಪ್ತಾಯಸಮಂ ಪೊಯ್ದಂತೆ ದಾರಕವಿದಾರಣಮುಂ ದಾರಪರಾಭವಮುಂ ತನಗಬಲನೆರ್ದೆವಲುವ ನೊದವಿಸೆ (ಪಂಚಾಮಾ. ೯-೪೬ ವ). ೬. ನಾಶಮಾಡುವವನು; ಧ್ವಂಸಗೊಳಿಸುವವನು: ಗುಣರಹಿತಶಂಕರ ತರುಣಚಂದ್ರಚೂಡವಾರಣ ದನುಜವಿದಾರಣ . . . ಫಣಿರಾಜಕಂಕಣ ಸಲಹು (ಉದ್ಭರೇ. ೬-೫೦): ಮಿಗಿದರಿನೃಪಮದವಿದಾರಣ . . . ಅ ಜಯಂಧರರಾಜ ರಾಜಿಪನು (ನಾಗಚ. ೨-೧೦೧). ೭. ಕಾಳಗ ; ಯುದ್ಧ : ''ಸಮಿತಿ ಸಂಗ್ರಾಮಂ . . . ವಿದಾರಣ ಯುದ್ಧಂ . . . ಸಂಖ್ಯಮೆಂದನಲು ಕಾಳಿಗಕೆ ನಾಮಮಕ್ಕುಂ'' (ಮಂಗರಾ. ೮೫-೨೮). ೮. ಒಂದು ಬಗೆಯ ಮರ ; ಕಣಗಿಲೆ. ೯. [ಜೈನ] ಪಂಚವಿಂಶತಿಕ್ರಿಯೆಗಳಲ್ಲಿ ಒಂದು: ಪಂಚವಿಂಶತಿಕ್ರಿಯೆಗಳು — ೧ ಸಮ್ಯಕ್ತ್ವಕ್ರಿಯೆ . . . ೧೮ ವಿದಾರಣ (ಆಲಸ್ಯದಿಂದ ಶ್ರೇಯಸ್ಕರ ಕ್ರಿಯೆಯನ್ನು ಮಾಡದಿರುವುದು ಮತ್ತು ಅನ್ಯರ ಪಾಪಕರ್ಮವನ್ನು ಪ್ರಕಟಿಸುವುದು) (ಜೈನಧ. ೬೪). [ಸಂ.]

ವಿದಾರಣಂಗೆಯ್ (ಕ್ರಿ). ಸೀಳು; ಭೇದಿಸು : ಮದವತ್ಕರಿಗಳ ಬದುವಂ ವಿದಾರಣಂಗೆಯ್ದು ಕೊಲ್ವ ಕಂಠೀರವಕಂ ಕದನದೊಳರಿನೃಪರಂ ಕೋಪದೆ ಕೊಲ್ವೆನಗಂ ಸಹಾಯಮಂಬರುಮೊಳರೇ (ಗದಾಯು. ೩-೪೮). [ವಿದಾರಣ + ಕೆಯ್]

ವಿದಾರಿ[1] (ಗು). ೧. ಸೀಳುವ; ಭೇದಿಸುವ. (ನಾ). ೨. ನಾಶಮಾಡುವವನು : ಸಹಜದೊಳ್ ವೈರಿವೀರವಿದಾರಿಯುಂ ಆಜೇಯನುಮಪ್ಪ ದಮಿತಾರಿಗೆ ಷಾಡ್ಗುಣ್ಯದೊಳ್ ಯಾನಮುಮುಪಾಯಚತುಷ್ಟಯದೊಳ್ ದಂಡಮುಮಲ್ಲದುಲಿದ ಗುಣಪಂಚಕಮು ಮುಪಾಯತ್ರಯಮುಂ ದೊರೆಯಲ್ಲವು (ಶಾಂತಿಪು. ೨-೫೧ ವ). ೩. [ಸಂಗೀತ] ''ರಾಗವರ್ಧನಿಕ್ರಮ—ಅಕ್ಷಿಪ್ತಕ್ರಮದಲ್ಲಿ ರಾಗಸ್ವರೂಪ ತೋರಿದ ಮೇಲೆ ಸವಿಸ್ತಾರವಾಗಿ ರಾಗಾಲಾಪನೆ ಮಾಡುವ ಕ್ರಮ . . . ಇಳುವರಿಯ ಹಂತಗಳಿಗೆ 'ವಿದಾರಿ' ಅಥವಾ 'ಆಯತ್ತ' ಗಳೆಂದು ಹೆಸರು'' (ಸಂಗೀಚಂ. ೨೯): ರಾಗವರ್ಧನಿಯನ್ನೇ ಕರಣ ಎಂದೂ ಕರೆಯಲಾಗುತ್ತದೆ. (ಇದಾದ) ನಂತರ ಲೋಕದಲ್ಲಿ ಮುಕ್ತಾಯ ಎಂಬ ಹೆಸರುಳ್ಳ ವಿದಾರಿಯನ್ನು ಹಾಡಬೇಕು. ಮೊದಲನೆಯ ಮತ್ತು ಎರಡನೆಯ ರಾಗವರ್ಧನಿಗಳನ್ನು ಪ್ರತ್ಯೇಕಿಸುವುದರಿಂದ ಇದನ್ನು ವಿದಾರೀ ಎನ್ನುತ್ತಾರೆ (ಚತುಪ್ರ. ೬೫). [ಸಂ. ವಿದಾರಿನ್]

ವಿದಾರಿ[2] (ನಾ). ೧. ಒಂದು ಬಗೆಯ ಸಸ್ಯ ; ಬಳ್ಳಿಸುಂಡೆ : ''ಮಾರಿಕಾ - ಬಳ್ಳಿ ಸುಂಡೆ, ವಿದಾರಿ'' (ಓಷಧಿ. ೧೫೫). ೨. ಬಿಳಿಯ ಕುಂಬಳ : '' ವಿದಾರೀ, ಕ್ಷೀರಶುಕ್ಲಾ, ಇಕ್ಷುಗಂಧಾ, ಕ್ರೋಷ್ಟೀ — ೪ ಬಿಳೀಕುಂಬಳದ ಹೆಸರು'' (ಸಿದ್ಧಾಂಶಿ. ೧೩೭). ೩. ಮೂರೆಲೆಹೊನ್ನೆ. ೪. ತೊಡೆಸಂದಿನಲ್ಲಿ ಉದಿಕೊಳ್ಳುವ ಒಂದು ಬಗೆಯ ರೋಗ. [ಸಂ. ವಿದಾರೀ]

ವಿದಾರಿಕೆ (ನಾ). ೧. ಒಂದು ಬಗೆಯ ಸಸ್ಯ ; ಮೂರೆಲೆಹೊನ್ನೆ. ೨. ತೊಡೆಸಂದಿಯಲ್ಲಿ ಬಾವು ಬರುವ ಒಂದು ಬಗೆಯ ರೋಗ : ಮತ್ತೊಂದೆಡೆಯೊಳ್ ತನುವುಮಂ ಮನೆಯುಮನಲಂಕರಿಸಿ ಬರವಂ ಪಾರ್ದಿರ್ದ ರಥಾಂಗಸಂತತಿಯಂತಿ ರುಳುಗಬೆಯೆ ಬಂದ ಚಿತ್ರೇಶ್ವರಂಗೆ ದಾರಿಕೆ ವಿದಾರಿಕೆಯಾದಂತೆ ನೊಂದಿಂತೆಂದಳ್ (ಅನಂಪು. ೮-೩೬ ವ). [ಸಂ. ವಿದಾರಿಕಾ]

ವಿದಾರಿಗಂಧೆ (ನಾ). ಒಂದು ಬಗೆಯ ಸಸ್ಯ ; ಮೂರೆಲೆಹೊನ್ನೆ : ''ವಿದಾರಿಗಂಧಾ, ಅಂಶುಮತೀ, ಶಾಲವರ್ಣೀ, ಸ್ಥಿರಾ, ಧ್ರುವಾ - ೫ ಮೂರೆಲೆಹೊನ್ನೆ ಹೆಸರು'' (ಸಿದ್ಧಾಂಶಿ. ೧೩೮). [ಸಂ. ವಿದಾರಿಗಂಧಾ]

ವಿದಾರಿತ (ಗು). ೧. ಸೀಳಿದ ; ಭೇದಿಸಲ್ಪಟ್ಟ : ತದೀಯಕೌಕ್ಷೇಯಕ ಧಾರಾವಿದಾರಿತ ಶರೀರನುಮಾಗಿ ಬಿಲ್ದಿರ್ದ ಶರಾಚಾರ್ಯರಂ ಕಂಡು (ಪಂಪಭಾ. ೧೩-೫೫ ವ) ; ಕರಾಳಕರವಾಳಧಾರಾವಿದಾರಿತಮದವದರಾತಿಮಂಡಲೇಶ್ವರಪ್ರಚಂಡಶುಂಡಾಲನಂ . . . ಕಂಡು (ಪಂಚತಂ. ೧೫-೩೧). (ನಾ). ೨. ನಾಶಗೊಂಡವನು ; ಧ್ವಂಸನಾದವನು : ಅವುಗಳಿಂದ ವಿದಾರಿತನಾಗದೆ ನಾನು ಸುರಕ್ಷಿತವಾಗಿ ಪಾರಾಗುವುದೆಂತು? (ಪರಪ. ೭೭). [ಸಂ.]

ವಿದಾರಿಸು (ಕ್ರ). ೧. ಸೀಳು; ಇಬ್ಭಾಗಮಾಡು ; ಭೇದಿಸು : ಹೃದಯಮ ನಟಲವಿಂದುಜೆ ವಿದಾರಿಸುವುದಿಂತು ಕುಸುಮಮಯಮಲ್ತು (ಕವಿರಾ. ೩-೧೦೧) ; ಉದ್ಯತ್ತನಂ ನಾರಸಿಂಹನ ರೂಪಂ ನಖದೊಳ್ ವಿದಾರಿಸಿ (ಕಾಪ್ರಾಪ್ರ. ೬೫೫); ಕರಿಶಿರಮಂ ವಿದಾರಿಸೆ ಕರಾಗ್ರದ ಖಡ್ಗದೆ ವಜ್ರಪಾತದಿಂ ಗಿರಿ ಬರಿದಂತೆ ಮೇಣ್ಬರಿದುದು (ರಾಜಶೇ. ೬-೧೦೩). ೨. ಕೊಲ್ಲು ; ವಧಿಸು ; ಸಾಯಿಸು : ಈ ಮುಟ್ಟುಗೆಟ್ಟ ದುರಾತ್ಮನಂ ವಿದಾರಿಸುವೆನೆಂದಾ ವಾನರಚರಾಮರಂಗೆ ಮುಳಿಸನುಬ್ಬಿವಂತು ಧರ್ಮೋಪದೇಶಂಗೆಯ್ದು (ಪಂಪಾಮಾ. ೧೦-೧೧೯ ವ) ;'ಸುರೇಂದ್ರನು ಪೂರ್ವದಲಿ ವೃತ್ರನ ವಿದಾರಿಸೆ ಬಂದುದಾತಗೆ ಜನಿತಕಲ್ಮಷರೋಷವಾ ದಿನಕೆ (ತೊರಾ. ೧-೧೦-೨).

[ವಿದಾರಣ + -ಇಸ್ಕು]

ವಿದಾಹ (ನಾ). ೧. ಅತಿಯಾದ ತಾಪ , —ಕಾವು : ನಿನ್ನತುಳನಾಮಜಪಕ್ರಿಯೆಯಲ್ಲಿ ನಿಟ್ಟೆವಟ್ಟನತಿಶಯಾಂಗಿ ಸಾಧಿಸಿದಪಳ್ ನಿಜದೇಹವಿದಾಹಮುಕ್ತಿಯಂ (ಚಂದ್ರಪು. ೮-೮೩) ; ಪಾನ, ಅಭ್ಯಂಗನ, ಸೇಚನವಸ್ತಿ ಮೊದಲಾದ ಕ್ರಿಯಗಳಂ ಮಾಡಿಸಲು . . . ಶಿರೋರೋಗ, ವಾತರೋಗ, ಅಂಗಪಾದಕೇಶವಿದಾಹಗಳಿಲ್ಲವು ಪರಿಹರಮಕ್ಕುಂ (ಸಕವ್ಯ. ೧೪೯). ೨. ಅತಿಯಾದ ದಾಹ,— ಬಾಯಾರಿಕೆ. [ಸಂ.]

ವಿದಿಕ್ಕು (ನಾ). ಎರಡು ದಿಕ್ಕುಗಳ ನಡುವಿನ ದಿಸೆ ; ಈಶಾನ್ಯ, ವಾಯವ್ಯ ಮುಂತಾದ ಉಪದಿಕ್ಕು : ವಾಮನಮುದ್ರೆಯ ಕಲ್ಲಿಂದಂ ತೆಂಕಲುಯಂಬೀ ದಿಕ್ಕು ವಿದಿಕ್ಕಿನ ನೀರರ್ಕಲೊಳಗುಳ್ಳ ಹಿತ್ತಿಲು ಕೊಪ್ಪಂ (ಎಕ.VIII. ತೀರ್ಥಹ. ೧೪೪-೧೭; 1421);

ಉಕ್ಕಿದವು ನದಿ ಧೂಮಕೇತು ವಿದಿಕ್ಕಿನಲಿ ತೋಱಿದವು (ತೂರರಾ. ೬-೩೬-೧೫) ; ಪೃಥ್ವಿ ಆಕಾಶಂಗಳಿಲ್ಲದಂದು ದಿಕ್ಕು ವಿದಿಕ್ಕುಗಳಿಲ್ಲದಂದು . . . ನಿಮ್ಮ ನೀವಱಿಯದೆ ಅನಂತಕಾಲವಿರ್ದಿರಂದು (ಅಜಿಪು. ೯-೨). [< ಸಂ. ವಿದಿಶ್]

ವಿದಿತ (ಗು). ೧. ಬಲ್ಲ ; ತಿಳಿದ ; ಅರಿತ. ೨. ಪ್ರಸಿದ್ಧವಾದ ; ಪ್ರಖ್ಯಾತವಾದ : ಅದಱೊಳಗಂ ಕಿಸುವೂಲಲಾ ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ ಸದಭಿಸ್ತುತಮಪ್ಪೊಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ (ಕವಿರಾ. ೧-೩೭); ವಿದಿತ ವೇದಾರ್ಥದೊಳು ನಡೆದು . . . ಲೋಭಮಂ ತೊಱೆದೊಡಂ ತುದಿಗೆ ರಾಜ್ಯಾಂತರಂ ನರಕವೆಂಬುದು ತಪ್ಪದರಸುಗಳಿಗಿದು ನಿಶ್ಚಯಂ (ಹಚಕಾ. ೮-೨೬). ೩. ಅನುಮೋದಿಸಿದ ; ಒಪ್ಪಿದ. (ನಾ). ೪. ಎಲ್ಲರಿಗೂ ತಿಳಿದುದು ; ಪ್ರಸಿದ್ಧವಾದುದು : ವಿದಿತಂ ಪ್ರಾತೀತಿಕಂ ಕೋಮಳಮತಿಸುಭಗಂ ಸುಂದರಂ (ಆದಿಪು. ೧-೨೫) ; ವಿದಿತಂ ಕುರುಜಾಂಗಣಮೆಂಬುದು ವಿಷಯಂ ಭೂತಳಾಗ್ರದೊಳ್ ಕಡುಚೆಲ್ವಿಂದೊದವಿರ್ದುದು (ಧರ್ಮಾಮೃ. ೯-೬) ; ಹದಿಬದೆಯರ ಪೆಸರ್ಗೊಂಡು ಪೊಗಳ್ವುದು ವಿದಿತವೈಸಲೆ ವೈದಿಕರಿಗೆ (ಹದಿಬ. ೨-೧೫). ೫. ಅರಿವು ; ತಿಳಿವಳಿಕೆ. ೬. ವಿಚಾರ ; ಆಲೋಚನೆ. ೭. ಒಪ್ಪಿಗೆ ; ಸಮ್ಮತಿ : ಪದವಿಗಳು ಗಿದವಿಗಳವೇತಕೆ ಮದನಹರ ನಿಮ್ಮ ಚಲಭಕ್ತಿಸುಪದವಿಯಂ ಕೃಪೆಯಿಂ ಪ್ರಸಾದಿಸಿ ಸಲಹು ನೀವೆನಗೆ ವಿದಿತವೆನಲು (ಬಸಪು. ೨-೨೪). ೮. ತಿಳಿದವನು; ಪಂಡಿತ; ಜ್ಞಾನಿ. [ಸಂ.]

ವಿದಿತಪಡಿಸು (ಕ್ರಿ). ತಿಳಿಯಪಡಿಸು ; ಗೊತ್ತಾಗುವಂತೆ ಮಾಡು : ಅವನಿಂದ ತಾವು ಮಾಡಿಸಿದ ಅಪರಾಧವನ್ನು ಮಾತ್ರ ಅವರು ಸುಂದರಿಗೆ ವಿದಿತಪಡಿಸಿರಲಿಲ್ಲ (ಪಳ್ಳಕಾ. ೯೦). [ವಿದಿತ + ಪಡು$_1$ + - ಇಸು$_3$]

ವಿದಿತಾತ್ಮ (ನಾ). ೧. ವಿಖ್ಯಾತನಾದವನು ; ಕೀರ್ತಿವಂತ : ಉದಯ ಕೈಂಟಱೊಳಿಂದು ಕೂಡೆ ಸರುಜಂ . . . ಲಾಭಸಂಸ್ಥಾನದೊಳ್ ವಿದಿತಾತ್ಮಂ ಪಡೆಪಾಳಿ (ಜಾಹಿ. ೧೮-೮). ೨. ತನ್ನನ್ನು ತಾನು ಅರಿತುಕೊಂಡವನು. [ಸಂ. ವಿದಿತಾತ್ಮನ್]

ವಿದಿತೆ (ನಾ). ತಿಳಿದವಳು; ಅರಿತವಳು : ವಿದಿತೆಯೆನಾಂ ತನಗೆಲ್ಲಂದದೊಳಂ ಪರಿಹೃತ ಸಮಸ್ತಸಂಗಯನೆನ್ನೀ ಹೃದಯಂ ನೋಡಲ್ಬಯಸಿದವುದಕಾರಣಪಕ್ಷಪಾತಿಯೆನಿಸಿದ ತನ್ನಂ (ಕಾದಂಬಿ. ೧೯೨). [ಸಂ. ವಿದಿತಾ]

ವಿದಿತೋಮಾವರ (ನಾ). ೧. ಪ್ರಸಿದ್ಧಳಾದ ಪಾರ್ವತಿಯ ಪತಿ ; ಶಿವ. ೨. ಪ್ರಸಿದ್ಧವಾದ ಕೀರ್ತಿಗೆ ಒಡೆಯನಾದವನು. ೧, ೨ : ಅರಿಗೋತ್ರಭೇದಿ ವಿಬುಧೇಶ್ವರನಲ್ಲಂ ಧೃತಕಳಾಕಳಾಪಂ ದೋಷಾಕರನಲ್ಲಂ ವಿದಿತೋಮಾವರನಾತ್ತ ಭುಜಂಗನಲ್ಲನೀ ಭೂಪಾಳಂ (ಕವಿರಾ. ೩-೧೧೨). [ಸಂ.]

ವಿದಿಶ (ನಾ). = ವಿದಿಕ್ಕು : "ಅಂತರಾಳದಿಶಃ, ವಿದಿಶಃ, ಪ್ರದಿಶಃ—ಈ ೩ ಗೊಂಟುಗಳ ಪೆಸರ್" (ಹಲಾಯು. ೧೭-೧೦೨). [ಸಂ. ವಿದಿಶ್]

ವಿದಿಶೆ (ನಾ). = ವಿದಿಕ್ಕು : "ಪ್ರಾಚಿಯವಾಚಿ ಪ್ರತೀಚಿಯುದೀಚಿಯಾಶಾಚತುಷ್ಟಂ ಪರಿವಿಡಿಯಿಂದವಾ ಚ[ತುಃ]ಪ್ರದಿಶ ವಿದಿಶೆಗಳ್" (ವಸ್ತುಕೋ. ೯-೪೯). [ಸಂ. ವಿದಿಶ್]

ವಿದೀರ್ಣ (ಗು). ೧. ಸೀಳಿದ ; ಮುರಿದ ; ಭೇದಿಸಲ್ಪಟ್ಟ. ೨. ತೆರೆದ ; ಅಗಲವಾಗಿ ಬಿರಿದ : 'ವಿದೀರ್ಣಾನನ' ಪರಾ. ೩. (ಅಂತರಂಗಕ್ಕೆ ಸಂಬಂಧಿಸಿದಂತೆ) ನೊಂದ ; ಗಾಸಿಗೊಂಡ : ತಂದೆಯ ವಿದೀರ್ಣಹೃದಯದ ಬೇಡಿಕೆಯೆಲ್ಲವೂ ಆ ಒಂದೊಂದು ನುಡಿಯಲ್ಲೂ ಧ್ವನಿತವಾಗುತ್ತಿತ್ತು (ಹೊಸಕ್ತಿ. ೪೪). (ನಾ). ೪. ಸೀಳಿದುದು ; ಭೇದಿಸಲ್ಪಟ್ಟುದು : ಕಲ್ಲಿದ್ದಲ ಗಣಿಯನ್ನು ವಿದ್ಯುತ್ತಿನ ಶಿಖೆ ಪ್ರವೇಶಿಸಿದುದಾದರೆ . . . ಭೂಗರ್ಭವು ನೂರು ಹೋಳಾಗಿ ವಿದೀರ್ಣವಾಗಿ ಬಿಡುತ್ತದೆ (ನಿಬಂಧ. ೧.೧೭). ೫. (ಅಂತರಂಗಕ್ಕೆ ಸಂಬಂಧಿಸಿದಂತೆ) ನೊಂದುದು; ಗಾಸಿಗೊಂಡುದು : ಅವನ ಮನಸ್ಸು ಅಧೀರವಾಗಿತ್ತು ; ಹೃದಯವು ವಿದೀರ್ಣವಾಗಿತ್ತು (ಸಮುಜೀ. ೫೮೭) ; ತನ್ನ ಮಗನ ಮುಖದ ವಿಷಣ್ಣತೆ ನೆನೆನೆನೆದು ಅಪೂರ್ವನ ತಾಯಿಯ ಹೃದಯವೂ ವಿದೀರ್ಣವಾಗಿ ಹೋಗಿದೆ (ಇಪ್ರಕ. ೭೪). ೬. ಮನಸ್ಸಿಗೆ ಆಘಾತವಾದ ವ್ಯಕ್ತಿ : ವ್ಯಥೆಯಿಂದ ವಿದೀರ್ಣಳಾಗಿ ಹೋಗುವ ಅಸಹಾಯಹೆಣ್ಣಿನ ಹೃದಯದಂತೆ ಅವಳೆದೆ ಬಿರುಕು ಬಿಟ್ಟು ಹೋಗಿತ್ತು (ಅಲ್ಪವಿ. ೪) ; ರಾಜ ವಿದೀರ್ಣನಾಗಿ ಹೋದ (ವಂಶವೃ. ೩೦೦). [ಸಂ.]

ವಿದೀರ್ಣಹೃದಯೆ (ನಾ). ಮಾನಸಿಕವಾಗಿ ನೊಂದವಳು ; ದುಃಖಿನಿ : ನೀಮುಚ್ಚಯಿನಿಗೆ ಬಿಜಯಂಗೆಯ್ದುರೆಂಬುದನಾಂ ಕೇಯೂರಕನ ಪೇಟ್ಕೆಯಿಂದಱಿದು ಭೋಂಕನೆ ವಿದೀರ್ಣಹೃದಯೆಯಾಗಿ (ಕಾದಂಬಿ. ೫೪೬). [ಸಂ. ವಿದೀರ್ಣಹೃದಯಾ]

ವಿದೀರ್ಣಾನನ (ನಾ). ೧. ಅಗಲವಾಗಿ ತೆರೆದ ಬಾಯಿ. ೨. ಅಗಲವಾಗಿ ತೆರೆದ ಬಾಯುಳ್ಳವನು : ಇಂತುದ್ಯತ್ತರಾರೆಂಬಿನಂ ಗ್ರಸನಾಟೋಪದಿನೆಯ್ದುದಂ ಹರಿಯನುತ್ಕರ್ಣಂ ವಿದೀರ್ಣಾನನಂ (ಜಗವಿ. ೫-೪೫). [ಸಂ.]

ವಿದು$_1$ 'ಬಿದು$_1$' ನೋ.

ವಿದು$_2$ (ನಾ). ೧. ಆನೆಯ ಕುಂಭಸ್ಥಳದ ಮಧ್ಯಭಾಗ : ಶುಂಡಾಳನಿಕಾಯಮಂ ವದನದಿಂದಿಱೆದೆತ್ತಿ ವಿದುಪ್ರದೇಶಮಂ ಸೀಳಿ ಬಿಸುಟ್ಟು ಸಂಹರಿಪ ಕಾಲನವೊಲ್ ತ್ರಿಜಗದ್ವಿಭೂಷಣಾಳಗಜೇಂದ್ರಮ್ಮೆತರಲು (ಪುಣ್ಯಾಸ್ರ. ೨-೮). ೨. ನೀರಾನೆ. [ಸಂ.]

ವಿದುರ (ಗು). ೧. ತಿಳಿದ ; ಬಲ್ಲ ; ನುರಿತ. (ನಾ). ೨. ವಿದ್ವಾಂಸ ; ಪಂಡಿತ : "ಜ್ಞಾತಾ, ವಿದುರಃ, ವಿಂದುಃ - ೩ ತಿಳಿಯುವ ಸ್ವಭಾವವುಳ್ಳವನ ಪೆಸರುಗಳು" (ಸಿದ್ಧಾಂಕಿ. ೩೩೧). ೩. ವಂಚಕ ; ಕಪಟಿ. ೪. ಮಹಾಭಾರತದ ಧೃತರಾಷ್ಟ್ರ ಹಾಗೂ ಪಾಂಡುವಿನ ತಮ್ಮ : ಆದರಂಬೆರಸು ಪೆತ್ತರಂದು ಧೃತರಾಷ್ಟ್ರ ವಿಖ್ಯಾತ ಪಾಂಡುರಾಜ ವಿದುರರ್ಕಳಂ ಕ್ರಮದೆ ಮೂವರುಂ ಮೂವರಂ (ಪಂಪಭಾ. ೧-೮೬); ತಿಳುಹಿದನು ವಿದುರನು ಮಹೀಪತಿತಿಲಕನನು ನಯನೀತಿಧರ್ಮಂಗಳ ಸುಸಂಗತಿಯಿಂದ ನೂಕಿದರಿವರು ಯಾಮಿನಿಯ (ಕುವ್ಯಾಉ. ೩ ಸೂಚನೆ). [ಸಂ.]

ವಿದುರ್ಮಣಿ (ನಾ). [ಅಶ್ವಶಾ] ಕುದುರೆಯ ಕಿವಿಯ ಸಮೀಪದ ಒಂದು ಅಂಗಭಾಗ : ಕಿವಿಯ ಪೊಱಗಣ್ಣ ಬಿದುವೆಂಬ ಪೆಸರಕ್ಕುಂ ಬಿದುವಿನ ಸಮೀಪದೆಡೆಗೆ ವಿದುರ್ಮಣಿಯೆಂಬ ಪೆಸರಕ್ಕುಂ (ಅಶ್ವಶಾ. ೮೮-೬). [ಸಂ.?]

ವಿದುಲ, ವಿದುಳ (ನಾ). ಒಂದು ಬಗೆಯ ಜಲಸಸ್ಯ ; ಬೆತ್ತ : "ಪರಿವ್ಯಾಧಃ, ವಿದುಲಃ, ನಾದೇಯೀ, ಅಂಬುವೇತಸಃ - ೪ ನೀರುಹಬ್ಬೆಗಿಡ" (ಸಿದ್ಧಾಂಕಿ. ೧೧೮). ವಿದುಳ : ಕತ್ತಕಾಚು ಪೊಬರಿ ಉತುತೆ ಬೆಲ ವಿದುಳ ಬೂಸ ಮುಂತಾಗಿ (ಎಕ.VIII. ಶಿರ್ಥಹ. ೭೩-೨೪; 1674). [ಸಂ.]

ವಿದುಷಿ (ನಾ). ಪಾಂಡಿತ್ಯವನ್ನು ಹೊಂದಿದವಳು ; ಪಂಡಿತೆ : ವಿಜಯನಗರದ ರಾಜಸ್ತ್ರೀ ಗಂಗಾದೇವಿ ಎಂತಹ ವಿದುಷಿ ? (ಭಾರದ.೪೮೯); ಪ್ರೌಢಕಾವ್ಯವನ್ನು ರಚಿಸಿದ ವಿದುಷಿಯರು ಈ ಕಾಲದಲ್ಲಿದ್ದಾರೆ (ಕರ್ನಾಕ. ೪೧). [ಸಂ. ವಿದುಷೀ]

ವಿದುಳ 'ವಿದುಲ' ನೋ.

ವಿದೂರ (ಗು). ೧. ಅತಿದೂರದ ; ಬಹುದೂರದಲ್ಲಿರುವ. ೨. ಪಡೆಯಲಸಾಧ್ಯವಾದ; ನಿಲುಕದ. ೩. ಇಲ್ಲವಾದ ; ರಹಿತ. (ನಾ). ೪. ಬಹಳ ದೂರ ; ಅತಿದೂರ. ೫. ಇಲ್ಲವಾದುದು ; ರಹಿತವಾದುದು : ಗುಣಯುಕ್ತಮುಂ ದೋಷವಿದೂರಮುಮಾಗೆ ಮೆಚ್ಚಿ ಕೈಕೊಳ್ಳುದಿದಂ (ಶಮದ.೪). ೬. ಬಹಳ ದೂರದಲ್ಲಿರುವವನು : ನಿಖಿಳಗುಣಶೃಂಗಾರಿ ಕುಸುಮವಿಶಿಖವಿಕಾರವಿದೂರಂ (ಬಸಪು. ೬೨-೨). ೭. ನವರತ್ನಗಳಲ್ಲಿ ಒಂದಾದ ವೈಡೂರ್ಯವು ದೊರಕುವ ಬೆಟ್ಟ ಅಥವಾ ಒಂದು ಸ್ಥಳದ ಹೆಸರು. [ಸಂ.]

ವಿದೂರಗತ (ನಾ). ಬಿಟ್ಟುದು ; ಕಳೆದುದು : ಇದು ವಿದಿತ ವಿರುದ್ಧಾರ್ಥಕ್ಕುದಾ ಹೃತಂ ಹರಣಮಾತ್ರಮಿನ್ನಪ್ಪುವನುಂ ಸದಭಿಮತಕಾವ್ಯಪದವಿಧಿವಿದೂರಗತಮಾಗೆ ಪರಿಹರಿಕೆ ಬುಧರ್ಕಳ್ (ಕವಿರಾ. ೧-೮೩). [ಸಂ.]

ವಿದೂರಪಾತ (ನಾ). ಅತಿದೂರದ ಎಸೆತ : ನಗವನೊಡ್ಡಿದರೊಂದೆ ಸರಳಲಿ ಹುಗಿಲುಗಳೆವ ವಿದೂರಪಾತದಿ ಗಗನಯಂತ್ರವನೆಸುವ ಜೋಕೆಯ ಜೋದವಿದ್ಯದಲಿ . . . ದಂತಿ ಶಿಕ್ಷೆಗೆ ಮಿಗಿಲು ಭಗದತ್ತಾದಿಗಳಿಗೆಂದುದು ಕುಮಾರಕರ (ಕುವ್ಯಾಉ. ೭-೩). [ಸಂ.]

ವಿದೂಷಕ (ಗು). ೧. ಕಲುಷಿತಗೊಳಿಸುವ ; ಮಲಿನಗೊಳಿಸುವ. ೨. ತಪ್ಪು ಕಂಡುಹಿಡಿಯುವ ; ಹುಳುಕು ಹುಡುಕುವ. ೩. ನಿಂದಿಸುವ ; ದೂಷಿಸುವ. ೪. ಹಾಸ್ಯದ ; ತಮಾಷೆಯ : ನೀನು ಮದನವ್ರತವಾಗಿ ರತಿ ರಾಗಿಣಿಯರತ್ತ ಬಿರ್ದುಗೊಂಡಾಡುವ ನಸೆಯ ದಾಹದ ದೆಶ್ಯಾಳವು ಕಾಲರುದ್ರನ ಫಾಲಾಕ್ಷಿಯಲ್ಲಿಯೂ

ವಿನೋದಬಾಷ್ಪವನ್ನೊರೆಯಿಸುವಂತಹ ವಿದೂಷಕಲೀಲೆಯಾಗಿದೆ (ಮಂತ್ರಶ. ೭೧-೯). (ನಾ). ೫. ಹೊಲೆಗೊಳಿಸುವವನು ; ಭ್ರಷ್ಟಗೊಳಿಸುವವನು : ಹೀನಸತ್ಕರು ಸತ್ಕಧರ್ಮವಿಹೀನರರ್ಥಪರಾಯಣರು ಕುಜನಾನುರಕ್ತರು ವರ್ಣಧರ್ಮಾಶ್ರಮ ವಿದೂಷಕರು . . . ಕಲಿಯುಗದ ಮನುಜರು (ಕುವಾಆ. ೧೦-೩೪). ೬. ದೋಷಾರೋಪಣೆ ಮಾಡುವವನು ; ನಿಂದಕ ; ದೂಷಕ. ೭. ಉಲ್ಲಾಸಿ; ವಿನೋದಶೀಲ. ೮. ಹಾಸ್ಯಮಾಡುವವನು ; ಹಾಸ್ಯಗಾರ. ೯. ವಿಷಯಲಂಪಟ ; ಕಾಮುಕ. ೧೦. [ಕಾವ್ಯಮಿ] ಶೃಂಗಾರ ಮತ್ತು ವಿನೋದದ ಕ್ರೀಡೆಗಳ ವಿಷಯಗಳಿಗಾಗಿ ನಾಯಕನಿಗೆ ಆಪ್ತಸಹಾಯಕರಾಗಿ ಇರುವ ನಾಲ್ಕು ಮಂದಿ ಭೋಗಸಖರಲ್ಲಿ ಒಬ್ಬ : ಆಗಳ್ ತನ್ನೊಡನೆ ತೊಟಲ್ವ ನಾಗರಕ ವಿಟ ವಿದೂಷಕ ಪೀಠಮರ್ದಕರ್ಕಳನಿರಲ್ಕೀಯ್ದು (ಪಂಪಭಾ. ೧-೧೧೦ ವ) ; ಬಚ್ಚನಾಲಗೆಯ ಬೀಳೆಂದು ಹಾಸಂಗಿಯಂ ಪಚ್ಚೆಯ ವಿದೂಷಕನುರುಳ್ದಿದಂ ಬಾಲೆಯರ ಮಚ್ಚಿಸುವ ಕಟಿವಾತುಗಳ ಜಾಣ್ಮೆಗಳಿಂದೆ ಪಗಡೆಯಾಡುವ ನೆವದೊಳು (ಚೈಮಭಾ.೬-೩೧). [ಸಂ.]

ವಿದೂಷಕತನ (ನಾ). ಹಾಸ್ಯ ; ತಮಾಷೆ : ವಿದೂಷಕತನದಿಂದ ಇಲ್ಲವೆ ವಿಚಿತ್ರವರ್ಣನೆಯಿಂದ ಮಕ್ಕಳನ್ನು ನಗಿಸಬಹುದು. ಆದರೆ ಹೃದಯದಿಂದ ಬರುವ ನಗೆಯಲ್ಲ ಇದು (ಕಥಕ. ೧೬). [ವಿದೂಷಕ + - ತನ]

ವಿದೇಶ (ನಾ). ತನ್ನದಲ್ಲದ ದೇಶ ; ಹೊರನಾಡು ; ಪರದೇಶ : ದೇಶವಿದೇಶಗಳವರ ವ್ಯಾಪಾರ ವ್ಯವಹಾರಗಳಲ್ಲಿ ಯಾವ ಪಕ್ಷದವರಿಗೂ ಅನ್ಯಾಯವಾಗದಂತೆ . . . ವ್ಯವಹಾರಧರ್ಮ, ಪರಸ್ಪರವಿಶ್ವಾಸ ಇವು ಸ್ಥಾಪಿತವಾಗಬೇಕು (ಪಣಪ್ರ. ೮೧). [ಸಂ.]

ವಿದೇಶಭ್ರಮಣ (ನಾ). ಪರದೇಶದಲ್ಲಿ ಮಾಡುವ ಸಂಚಾರ ,—ತಿರುಗಾಟ : ಅವಗಡವನೇವೇಳುವೆನು ಪಾರ್ಥಂಗೆ ಬಂದುದಕಾಲಗತಿಯೈಸಲೆ ವಿದೇಶಭ್ರಮಣವಾಯ್ತು (ಕುವಾಆ. ೧೪-೧). [ಸಂ.]

ವಿದೇಶವ್ಯವಹಾರ (ನಾ). ಒಂದು ದೇಶವು ಪರದೇಶಗಳೊಂದಿಗೆ ನಡೆಸುವ ಕಾರ್ಯಭಾರ : ರಾಷ್ಟ್ರದ ವಿದೇಶವ್ಯವಹಾರ ನೀತಿ, ಸಾರ್ವಜನಿಕ ಆಡಳಿತ, ರಕ್ಷಣಾ ಸಿದ್ಧತೆ - ಇತ್ಯಾದಿ ಹಲವಾರು ರೀತಿನೀತಿಗಳು ಪಕ್ಷಗಳಿಂದಲೇ ರೂಪಿಸಲ್ಪಟ್ಟು ಕಾರ್ಯಗತ ಮಾಡಲ್ಪಟ್ಟುವು (ರಾಜಪ. ೨). [ಸಂ.]

ವಿದೇಶಾಂಗ (ಗು). ನೆರೆಹೊರೆಯ ಮತ್ತು ದೂರದ ರಾಷ್ಟ್ರಗಳಿಗೆ ಸಂಬಂಧಿಸಿದ : ಲೋಕಸಭೆಯಲ್ಲಿ ವಿದೇಶಾಂಗನೀತಿಯನ್ನು ಕುರಿತು ದೀರ್ಘಚರ್ಚೆ ನಡೆಯಿತು (ರಂಭಿ). [ಸಂ.]

ವಿದೇಶಿ (ಗು). ೧. ಹೊರನಾಡಿಗೆ ಸಂಬಂಧಿಸಿದ ; ಪರದೇಶಕ್ಕೆ ಸೇರಿದ : ಚುರುಕಾಗಿ ವಿದೇಶವ್ಯಾಪಾರ ನಡೆಯುತ್ತಿರುವ ಪ್ರದೇಶಗಳಲ್ಲೆಲ್ಲ ಹಲವು ಕಟ್ಟುಪಾಡುಗಳೂ ಸುವಿಧಾನಗಳೂ ಏರ್ಪಟ್ಟು ಆ ಕೆಲಸಕ್ಕೆ ಸಹಕಾರಿಯಾಗುತ್ತವೆ (ಪಣಪ್ರ. ೮೪). (ನಾ). ೨. ಹೊರದೇಶದವನು ; ಪರದೇಶಿ : ವಿದೇಶಿಯರು ಕೊಟ್ಟ ಸಾಲಗಳು (ಪಣಪ್ರ. ೨೨೭). [ಸಂ. ವಿದೇಶಿನ್]

ವಿದೇಶಿಕಾಲಿ (ನಾ). ವಿಶೇಷವಾದ ಸೊಬಗನ್ನುಂಟುಮಾಡುವವನು ; ರಸಿಕ : ಜಗಕೆ ಜಿನೇಂದ್ರರುಕ್ತಿಯೆ ಸರಸ್ವತಿಯಾಕೆಗೆ ರಮ್ಯರೂಪು ಚಿತ್ರಗುಣವಿಳಾಸಮಿಲ್ಲಿನಲೆವೇಡಿವನುತ್ತಮಕಾವ್ಯದೊಳ್ . . . ಬಗೆ ಬಗೆ ಮಾತು ಮಾತು ಸತಿ ಭಾರತಿ ಕೊಳ್ಳಿ ವಿದೇಶಿಕಾಲಿನೊಳ್ (ಅರ್ಧನೇ. ೧-೩೮). [(ಸಂ.ವಿ-) + < ದೇಸಿಗಾಲಿ]

ವಿದೇಶಿವಿನಿಮಯ (ನಾ). ಒಂದು ದೇಶಕ್ಕೂ ಪರದೇಶಗಳಿಗೂ ಸಂಬಂಧಿಸಿದ ಕೊಡುಕೊಳ್ಳುವ ವ್ಯವಹಾರ : ವಿದೇಶಿವಿನಿಮಯ, ಬಡ್ಡಿಯ ದರಗಳು ಇವುಗಳನ್ನು ಸ್ಥಿಮಿತದಲ್ಲಿ ನಡಸುವುದಕ್ಕೆ . . . ಕಳವಳ ಪಡಬೇಕಾಗಿಲ್ಲ (ಪಣಪ್ರ. ೩೧೪). [ಸಂ.]

ವಿದೇಶೀಯ (ಗು). ೧. = ವಿದೇಶಿ ೧ : "ವಿದೇಶೀಯ ರಾಜ್ಯ" ಎಂದರೆ ಭಾರತವಲ್ಲದ ಇತರ ಯಾವುದೇ ರಾಜ್ಯ ಎಂದು ಅರ್ಥ (ಭಾಧಾಸ. ೨೨೩). (ನಾ). ೨. = ವಿದೇಶಿ ೨ : ವಿದೇಶೀಯರು ನಮ್ಮ ಸಂಪ್ರದಾಯಗಳನ್ನು ಕಲಿಯ ಹೋದರೆ ಹೀಗೆಯೇ ನಗೆಗೀಡಾಗಬಹುದು (ಸಮಜೀ. ೫೭೩). [ಸಂ.]

ವಿದೇಹ (ಗು). ೧. ಶರೀರವಿಲ್ಲದ ; ಅಮೂರ್ತ. ೨. ಗತಿಸಿದ ; ದೇಹತ್ಯಾಗಮಾಡಿದ. (ನಾ). ೩. ಶರೀರವಿಲ್ಲದವನು ; ಅನಂಗ ; ಕಾಮ. ೪. ಶರೀರವನ್ನು ಕಳೆದುಕೊಂಡವನು ; ದೇಹತ್ಯಾಗ ಮಾಡಿದವನು : ಉತ್ತಮತಪಂಗಳಿಂದತ್ಯುತ್ತಮದೇಹರ್ ವಿದೇಹರಪ್ಪುದಱಿಂ ಮೆಯ್ಯುತ್ಸರ್ಜನತೆಯಂ ತಾಳ್ದಿತ್ತು ವಿದೇಹಂ ವಿದೇಹಮೆಂಬೀ ಪೆಸರಂ (ಆದಿಪು. ೧-೩೩). ೫. ಬಿಹಾರದಲ್ಲಿರುವ ಒಂದು ನಾಡು; ಮಿಥಿಲೆ; IP ಈಗಿನ ದರ್ಭಂಗ : ಕಾಚೀರೀ ಕಪಿನೀ ಶ್ರೀನದೀ ಭಿರಲುಂಕೃತಸ್ಯ ವಿದೇಹ ಇವ ಬಭ್ರಾಜಮಾನಸ್ಯ ಅಧಿಪತಿಃ (ಎಕ. IV (R). ಎಳಂದೂ. ೧೬೬-೧೩ ; ಪು. 550) : ವರವಿದೇಹನೃಪಾಲನಾ ನಿಮಿಧರಣಿಪಂಗುದುಭವಿಸಿದ ವಿಸ್ತರಿಸಿವನು (ತೊರಾ. ೧-೧೬-೨೧). ೬. (ವಿಶೇಷವಾಗಿ ಜನಕರಾಜನು ಸೇರಿದಂತೆ) ವಿದೇಹದ ದೊರೆ,—ರಾಜ : ಆ ವಿದೇಹಪರಂಪರೆಯ ನೃಪರ ಚರಿತವನು ಕೊಂಡಾಡಿ ಜನಕನ ಧಾರ್ಮಿಕತನವನೊರೆದನು ಮುನಿ ವಸಿಷ್ಠಂಗೆ (ತೊರಾ. ೧-೧೬-೨೧). ೭. [ಜೈನ] ಜಂಬೂದ್ವೀಪದಲ್ಲಿರುವ ಏಳು ವಿಭಾಗಗಳಲ್ಲಿ ನಾಲ್ಕನೆಯದು ; IP ನಿಷಧ ಮತ್ತು ನೀಲಪರ್ವತಗಳ ಹಾಗೂ ಪೂರ್ವಪಶ್ಚಿಮಸಮುದ್ರಗಳ ನಡುವಿನ ಕ್ಷೇತ್ರ : ಆ ತಿರ್ಯಗ್‌ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತ್ಕೈರಾವತಂಗಳೆಂಬೆಲ್ಲುಂ ಜನಪದಂಗಳಿಂ . . . ಎಸೆದು (ಆದಿಪು. ೧-೪೮ ವ) ; ಇಂತಿದೆ ನೆಲೆಯೆನಗೆಂದು ಪದಾಂತರದಿಂದತನು ತನ್ನ ಪೆಸರನದರ್ಕಂ ಸಂತಸದಿನಿಟ್ಟನೆನೆ ಚೆಲ್ವಂ ತಳೆದ ವಿದೇಹನಾಮಮಾ ಮಹಿಗೆಸೆಗುಂ (ಚಂದ್ರಪ್ರ. ೧-೭೯). [ಸಂ.]

ವಿದೇಹಕೈವಲ್ಯ (ನಾ). ದೇಹತ್ಯಾಗದ ನಂತರ ಸಿಗುವ ಮೋಕ್ಷ ,—ಮುಕ್ತಿ : ಜಗವಿದಾನಂಬ ಮಾತಿನ ಬಗೆಯನುಳಿದ ವಿದೇಹಕೈವಲ್ಯವದು ಫಲಿಸುವುದ್ಯೆಸೆ (ಗಗತಾ. ೨೨-೧೦೨) ; ಆ ಬ್ರಹ್ಮನೂ ಆ ಬ್ರಹ್ಮಲೋಕಕ್ಕೆ ಹೋಗಿ ಸೇರಿರುವ ಇತರ ಜೀವಾತ್ಮರೂ ಬ್ರಹ್ಮಸಾಕ್ಷಾತ್ಕಾರದಿಂದ ವಿದೇಹಕೈವಲ್ಯವೆಂಬ ಪರಮಮೋಕ್ಷವನ್ನು ಹೊಂದುವರು (ಓಂದಸಾ. ೧೯೮). [ಸಂ.]

ವಿದೇಹಿ (ನಾ). ದೇಹವನ್ನು ಕಳೆದುಕೊಂಡವನು ; ದೇಹತ್ಯಾಗ ಮಾಡಿದವನು : ಧರ್ಮ, ಅರ್ಥ, ಕಾಮ, ಮೋಕ್ಷ ಎನ್ನುವ ಚತುರ್ವಿಧ ಪುರುಷಾರ್ಥಗಳಲ್ಲಿ ಮುಕ್ತನು ವಿದೇಹಿಯಾದಾಗ ಮುಕ್ತಿ ಪಡೆಯುತ್ತಾನೆ (ತತ್ತ್ವಪ್ರಾ. ೩೩೮). [ಸಂ. ವಿದೇಹಿನ್]

ವಿದ್ದಿ 'ಬಡ್ಡಿ$_2$' ನೋ.

ವಿದ್ದೆ 'ಬಿಜ್ಜೆ' ನೋ.

ವಿದ್ದೆಪಯ್ಯ (ನಾ). ಒಬ್ಬಾತನ ಹೆಸರು : ಶ್ರೀವಿದ್ದೆಪಯ್ಯ (ಎಕ. ೧೧, ೪೨; ಪು. 1000). [ವಿದ್ದೆಪ ? + ಅಯ್ಯ$_1$]

ವಿದ್ದೆರಾಶಿ (ನಾ). ಒಬ್ಬಾತನ ಹೆಸರು : ಅಕ್ಕರಿಗಂಗೆ ಬೇಡಿದ ನರಂಗೆ ತಪಸ್ವಿಗೆ ದೇಸಿಗಂಗೆ ಮೆಚ್ಚಿದೊಡೋತೊಡೆ ಕೂರ್ತೊಡೀಗಳುಮ್ಮಿಕ್ಕೆ[ಡರ್ಗಿ]ವೆನೆಂಬುದಿದು [ವೀ]ವ ಗುಣಂ ಸಲೆ ವಿದ್ದೆರಾಶಿಯ (ಪೌಶಾ. VIII. ೫೭ :-೬ ; ?). [?]

ವಿದ್ಧ (ಗು). ೧. ಚುಚ್ಚಿದ ; ತೂತುಕೊರೆದ ; ರಂಧ್ರಮಾಡಿದ : ಮುದ್ರಸಹ ಜಾತವಿದ್ಧಚ್ಛಿದ್ರಾನ್ವಿತ ಕರ್ಣಯುಗಳಪಾಳಿಗಳೊಳ್ ಸಂವಿದ್ಭ್ರುತರಜಂಗೆ ಹರಿ ವಿಲಸದ್ಭುಚಮದ್ವಜ್ರಕುಂಡಲಂಗಳನಿಟ್ಟಂ (ಶಾಂತಿಪು. ೧೦-೫೯). ೨. ಗಾಯಗೊಂಡ. ೩. ಹೊಡೆದ ; ಪ್ರಹರಿಸಿದ. ೪. ಎಸೆದ ; ಬೀರಿದ. ೫. ಎದುರಿಸಿದ ; ಅಡ್ಡಿಪಡಿಸಿದ. ೬. ಹೋಲುವ ; ಸಾದೃಶ್ಯವಿರುವ. ೭. ಪರಸ್ಪರ ಸೇರಿದ, —ಕೂಡಿದ. ೮. ತಿಳಿದ ; ಬಲ್ಲ ; ವಿದ್ವತ್ತಿನಿಂದ ಕೂಡಿದ. (ನಾ). ೯. ತೂತಾದುದು ; ರಂಧ್ರ ಕೊರೆದುದು : ವಜ್ರದಲ್ಗಟ್ಟುಂ ವಜ್ರದ ಸುತ್ತುಂ ವಜ್ರನಾರಾಚವಿದ್ಧಮುಮಪ್ಪಾದಿಮಪ್ಪ ವಜ್ರರ್ಷಭನಾರಾಚಸಂಹನನಮುಮಂ . . . ಮಾಡ್ಕುಂ (ತತ್ತ್ವಪ್ರ. ೨೯೭). ೧೦. ಹಾವಿನ ಕಡಿತದ ಒಂದು ರೀತಿ ; ಎರಡು ಹಲ್ಲನ್ನು ಊರಿ ರಂಧ್ರ ಕೊರೆದಂತೆ ಕಚ್ಚುವಿಕೆ : ಆ ಸರ್ಪದಂಶ ಅವಲುಪ್ತವೆಂದು ದಷ್ಟವೆಂದು ವಿದ್ಧವೆಂದು ಖಂಡಿತವೆಂದು ನಾಲ್ಕು ತೆಱ . . . ಎರಡು ಹಲ್ಲು ನಟ್ಟು ಗಾಯವಾದುದು ವಿದ್ಧ ಎನಿಸಿಕೊಂಬುದು (ಸ್ವಧರ್ಮಾ. II. ೧೪೫). 'ಅವಲುಪ್ತ' ಪರಾ. ೧೧. ಹೊಡೆತ ; ಏಟು ; ಪ್ರಹಾರ : ಸಂಚಳೋದಾರಹಾರಮಂ ತಳದೊಳೊತ್ತು ವೊಂದು ನವದಿಂದನಂಗಾಸ್ತ್ರವಿದ್ಧಮಂ ಪಡೆದು ಗೂಡುವಾಯ್ದೆರ್ದಯನೊತ್ತಿ ನಿಷ್ಕಂಪ

ವಕ್ಷಮಾಂತು ತರಳಾಕ್ಷಿ ವಿಸ್ಮಯದೆ ಚಕ್ರಿಯಂ ನೋಡಿದಳ್ (ಆದಿಪು. ೧೧-೨೦). ೧೨. ಗಾಯಗೊಂಡವನು ; ಹೊಡೆತವನ್ನು ತಿಂದವನು : ಬಾಣ ಬಿಟ್ಟನು ವ್ಯಾಧ ವೈರನಿಲಯನಿಷಾದ ಬಿಟ್ಟನೊ ವಿದ್ಧಕ್ರೌಂಚನಿಕೊ—ಬಿದ್ದ ಬಿದ್ದ (ಕ್ರಾಂಚಧ್ವ. ೬-೨೩). ೧೩. ಚಿತ್ರಿಸುವಿಕೆ ; ಚಿತ್ರಣ : 'ಪರವಿದ್ಧ', 'ವಿದ್ಧಪದ್ಧತಿ' ಪರಾ. ೧೪. ಸಾದೃಶ್ಯಮೂಲವಾದ ಚಿತ್ರ : ಇದು ದಲ್ ನೋಡ ಮನುಷ್ಯ ವಿದ್ಧಮಣಮಲ್ತೀ ಗಂಡರೂಪಾವುದಿಂತಿದಱೊಳ್ ತಳ್ತಿಸದಿರ್ದ ಪೆಣ್ ಸುರವಧೂಬಿಂಬಂ (ಆದಿಪು. ೩-೧೭); ಮನೋಜಾತನಸಂಗನಾಗಿ ಮನದಿಂದಂ ಮಾಡಿದಂ ಪೆಣ್ಣಂ ವಿದ್ಧ ಮನೆಂಬಂತುಟು ಗಾಡಿ ರೂಢಿಯ ಜಯಾಶ್ಯಾಮಾಮಹಾದೇವಿಯಾ (ಅನಂತ. ೨-೧೩). 'ವಿದ್ದಂಬರೆ' ಪರಾ. ೧೫. [ನಾಟ್ಯ] ನರ್ತನದ ಒಂದು ಭಂಗಿ; P "ಕಾಲುಗಳನ್ನು ಸ್ವಸ್ತಿಕದಂತಿರಿಸಿ ಒಂದು ಕಾಲನ್ನು ಕುಂಚಿತ ಮಾಡಿ ತೂಗಿಸಿ ಮುಂದಕ್ಕೆ ನೀಡುವುದು" (ಲಾಸ್ಯರಂ. ೬೫ ಗದ್ಯಾನುವಾದ) : ವಿದ್ಯುದ್ವ್ಯಾಪ್ತ . . . ವಿದ್ಧ ವ್ಯಾವೃತ್ತ ಉಲ್ಲೋಲ ಈ ಹತ್ತೊಂಬತ್ತು ದೇಶೀಯ ಸಂಬಂಧದ ಆಕಾಶಚಾರಿಗಳು (ಲಾಸ್ಯರಂ. ೬-೧೭ ವ). [ಸಂ.]

ವಿದ್ದಂಬರೆ (ಕ್ರಿ). ಚಿತ್ರವನ್ನು ಬರೆ; ಚಿತ್ರಿಸು : ಬೀಣೆ ವಾಜಿಪ ವಿದ್ದಂಬರೆವ ಪರಚಕ್ರಮಿಕ್ಕುವ ಪರಿಹಾಸದೊಳಿರ್ಪ ಬಿನದಮವರ್ಗಳ ಬಿನದಂ (ಅಜಿತ. ೩-೮).

[ವಿದ್ಧ + ಬರೆ]

ವಿದ್ಧಕ (ನಾ). [ಕಾಮಶಾ] ಆಲಿಂಗನದ ಪ್ರಕಾರಗಳಲ್ಲಿ ಒಂದು : ಸಂತಸದಿಂ ಕುಳ್ಳಿರ್ದುಮದೆಂತಾದೊಡಮಿರ್ಪ ಗಾಡಿಕಾಱನನೊಲವಿಂ ಪಿಂತವುರ್ದಪ್ಪಲ್ ಮಗುಳ್ವನಂತೊಡರ್ದೊಡನಪ್ಪಿದಪ್ಪು ವಿದ್ಧಕಮೆನಿಕುಂ (ಮನ್ಮಥ. ೧೧-೫). [ಸಂ.]

ವಿದ್ಧಕರ್ಣ (ಗು). ೧. ತೂತುಮಾಡಿದ ಕಿವಿಗಳುಳ್ಳ. (ನಾ). ೨. ಒಂದು ಬಗೆಯ ಸಸ್ಯ ; ಆಗುಳುಶುಂಠಿ: "ಪಾಠಾ, ಅಂಬಷ್ಠಾ, ವಿದ್ಧಕರ್ಣೀ . . . ವನತಿಕ್ತಕಾ - ೧೦ ಆಗರುಶೊಂಠಿ ಹೆಸರು" (ಸಿದ್ಧಾಂತಿ. ೧೩೧). [ಸಂ. ವಿದ್ಧಕರ್ಣೀ]

ವಿದ್ಧಕಾಮಾಲೆ (ನಾ). ಕಾಮಾಲೆರೋಗದಲ್ಲಿ ಒಂದು ಬಗೆ : ದ್ರಾಕ್ಷಿಹಣ್ಣು ಕೊತ್ತಂಬರಿ ಯಷ್ಟಿಮಧುಕ ಏಲಕ್ಕಿ ಶುಂಠಿ ಇವನ್ನು ಸಮಾನಂಗೊಂಡು ಚೂರ್ಣವಂ ಮಾಡಿ ಸಕ್ಕರೆ ಬೆರಸಿ ದಿನ ೧ ಕ್ಕೆ ೬ ತೂಕವ ತೆಗೆದುಕೊಳ್ಳಲು ವಿದ್ಧಕಾಮಾಲೆ ಮಾಣ್ಗುಂ (ವೈವಿ. ೧೩೦). [ವಿದ್ಧ? + ಕಾಮಾಲೆ]

ವಿದ್ಧಪದ್ಧತಿ (ನಾ). ಚಿತ್ರವನ್ನು ಬರೆಯುವ ರೀತಿ,—ಪ್ರಕಾರ : ಶ್ರುತಿವಿದ್ಧಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯುಮಂ . . . ಪರಿಭಾವಿಸಿ ನೋಡಿ (ಮಲ್ಲಿಷ. ೫-೪೨) ; ಶ್ರುತವಿದ್ಧಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯೊಳಂ . . . ಅಳವಡೆ (ಚಂದ್ರಪ್ರ. ೧೫-೭೦ ವ). [ಸಂ.]

ವಿದ್ಯ (ನಾ). ೧. ತಿಳಿವಳಿಕೆ ; ಪಾಂಡಿತ್ಯ ; ಪರಿಣತಿ : ಸರಿಯೇ ವಿದ್ಯಕೆ ಬಂಧುಮಾರನಿದಿರೊಳ್ ಬಿಲ್ಲಾಳ್ (ಸೋಮೇಶ. ೬); ಕಟ್ಟಾಳುತನವಾಭರಣವವನೀಪಾಲಸುತರಿಗೆ ವಿದ್ಯವೇ ವಿಪ್ರರಿಗಲಂಕಾರ (ಕುವಾದ್ಯೂ. ೫-೩೧). ೨. ಓದು ; ಶಿಕ್ಷಣ ; ಕಲಿಕೆ : ವಿದ್ಯವೇ ತಾಯ್ತಂದೆ ಬುದ್ಧಿಯೇ ಸೋದರನು (ಸರ್ವಜ್ಞ. ೧೩೨) ; ಇವನು ತನ್ನ ಮಗನಿಗೆ ವಿದ್ಯವನ್ನು ಕಲಿಸಿದನು (ನೀತಿಬೋ. IV. ೧೪). [ಸಂ.]

ವಿದ್ಯಗೂಡು (ನಾ). ವಿದ್ಯೆಯ ನೆಲೆ ; ಜ್ಞಾನದ ಆಶ್ರಯ : ಶಬ್ದಶಾಸ್ತ್ರತರ್ಕಾಗಮಂಗಳ ಹೇಳಿ ಕೇಳಿ ಕಲಿತುಲಿವವರೆಲ್ಲರು ವಿದ್ಯ[ಪಾಕಾಂ. ದೈ]ಗೂಡಾದರಲ್ಲದೆ ಲಿಂಗಗೂಡಾದುದಿಲ್ಲ ನೋಡಯ್ಯಾ (ಆದಾವ. ಮು. ೮೬-೧೪೧). [ವಿದ್ಯ + ಗೂಡು]

ವಿದ್ಯಮಾನ (ಗು). ೧. ಅಸ್ತಿತ್ವದಲ್ಲಿರುವ ; ವಾಸ್ತವವಾಗಿ ಇರುವ. ೨. ಸದ್ಯದ ; ಪ್ರಸ್ತುತ. ೩. ಯಥಾರ್ಥವಾದ ; ಸಹಜವಾದ ; ನೈಜ. ೪. ಒಬ್ಬನ ಸ್ವಾಧೀನದಲ್ಲಿರುವ ,—ವಶದಲ್ಲಿರುವ. (ನಾ). ೫. ವಸ್ತುಸ್ಥಿತಿ; ವಾಸ್ತವ ಸಂಗತಿ : ಅರಿಂದಮನು . . . ಅಲ್ಲಿನ ವಿದ್ಯಮಾನಗಳನ್ನು ಪರಿಕಿಸಲಾರಂಭಿಸಿದನು (ಪಶಾಪ. ೧೦೦); ರಾಜರಾಯರು . . . ಪ್ರತಿಕಾಲ್ಗೂಕಿಗೂ ಹೋಗಿ ಅಲ್ಲಿಯ ವಿದ್ಯಮಾನಗಳನ್ನೆಲ್ಲಾ ಸ್ವತಃ ತಿಳಿಯುವರು (ಇಮಡು. ೨೩). ೬. ವಿಷಯ ; ಸಂಗತಿ : ಲಿಂಗರಾಜೇಂದ್ರಒಡೆಯರ ದಿವಸ ಪರಿಯಂತ ಆದ ವಿದ್ಯಮಾನ ಬರೆದ ಸಾಧನಗಳು ಉಳಿದು ಇದ್ದದರಿಂದ . . . ಬರೆಸಿದ ಕ್ರಮವೆಂತೆಂದರೆ (ರಾಜೇಂದ್ರ. ೧) ; ರಾಮರಾಯನು . . . ಮೈಸೂರಿನ ವಿದ್ಯಮಾನಗಳನ್ನೆಲ್ಲಾ ಯಥೋಚಿತವಾಗಿ ಅರಿಕೆ ಮಾಡಿದನು (ಶ್ರೀರಾಯ. ೧೯೦). [ಸಂ.]

ವಿದ್ಯಾಇಲಾಖೆ (ನಾ). (ಒಂದು ನಾಡಿನ) ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳಲು ಸರ್ಕಾರದಿಂದ ನೇಮಕಗೊಂಡ ವಿಭಾಗ ; ಶಿಕ್ಷಣಶಾಖೆ : ಹಂಡತಿಗ ವಿದ್ಯಾಇಲಾಖೆಯಲ್ಲಿ ಉನ್ನತ ಅಧಿಕಾರವಿತ್ತು (ನಾಡಿಗೇ. ೨೯). [(ಸಂ. ವಿದ್ಯಾ)+ ಇಲಾಖೆ]

ವಿದ್ಯಾಕಾಂಕ್ಷೆ (ನಾ). ಪಾಂಡಿತ್ಯವನ್ನು ಪಡೆಯಬೇಕೆಂಬ ಉತ್ಕಟೇಚ್ಛೆ : ಆನತ್ತ . . . ಈ ಮುನೀಂದ್ರೋತ್ತಮಂ ತಾನೆತ್ತಿರ್ದಡವೇಳ್ಪುದೆತ್ತನಗೆ ವಿದ್ಯಾಕಾಂಕ್ಷೆಯಿತ್ತ (ಸುಕುಮಾ. ೩-೪೨). [ಸಂ. ವಿದ್ಯಾಕಾಂಕ್ಷಾ]

ವಿದ್ಯಾಕೇಂದ್ರ (ನಾ). ವಿದ್ಯೆಯನ್ನು ಕಲಿಸುವ (ಶಾಲೆ, ಕಾಲೇಜು ಮುಂತಾದ)ಸ್ಥಳ ; ವಿದ್ಯಾಸಂಸ್ಥೆ : ಈ ಶೈವಗುರುಗಳು ರಾಜಮಹಾರಾಜರಿಂದ ಪೂಜಿತರಾಗಿದ್ದರು. ಇವರ ಮಠಗಳು ದೇವಸ್ಥಾನಗಳೂ ಹೌದು ವಿದ್ಯಾಕೇಂದ್ರಗಳೂ ಹೌದು (ತೂನ್ಕು. ೧); ದೇವಸ್ಥಾನವು ವಿದ್ಯಾಕೇಂದ್ರವಾಗಿ ಪರಿಣಮಿಸಿದ್ದು ಬಹುಶಃ ಎಂಟು ಅಥವಾ ಒಂಬತ್ತನೇ ಶತಮಾನಗಳ ಬಳಿಕ (ಕಶಾಆ. ೨೧೭). [ಸಂ.]

ವಿದ್ಯಾಗಣಪತಿ (ನಾ). ವಿದ್ಯೆಯ ಅಭಿಮಾನಿದೇವತೆ ; ಗಣಪತಿ : ಆ ಯುವಕ ಸಂಘವು ವಿದ್ಯಾಗಣಪತಿಯ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು (ರೂಢಿ). [ಸಂ.]

ವಿದ್ಯಾಗರ್ವ (ನಾ). ವಿದ್ಯೆತ್ತಿನಿಂದ ಬಂದ ಸೊಕ್ಕು ,—ಅಹಂಕಾರ : ಮತಿಸಾಗರಮುನಿಪತಿಯೊಳ್ ಬಾದಗೆಯ್ಯಾತ್ಮೀಯವಿದ್ಯಾಗರ್ವವರ್ತವುವರ ವಚೋವಜ್ರನಿರ್ಘಾತದಿಂ ನುಚ್ಚುನುಜ್ಜಿಯಾಗಿ ಪೋದೊಡೆ (ಆದಿಪು. ೩-೭೫ ವ) ; ತನ್ನ ಮೈದುನನೈಶ್ವರ್ಯಗರ್ವದೊಳಂ ವಿದ್ಯಾಗರ್ವದೊಳಂ ನಿಮ್ಮ ಮಾವನಂ ನೀಂ ನಿರಾಕರಿಸಿ ನುಡಿದೊಡೆ (ಸುಕುಮಾ. ೫-೭ ವ). [ಸಂ.]

ವಿದ್ಯಾಗುರು (ನಾ). ವಿದ್ಯೆಯನ್ನು ಕಲಿಸುವವನು ; ಉಪಾಧ್ಯಾಯ : ಅವಗತ ತತ್ವಂಗೆ ಗುರುಗೆ ವಿದ್ಯಾಗುರು ಸಂಭವಿಸಂ ದೀಕ್ಷಾಗುರು ಸಂಭವಿಸನುಮೆನೆ ತನಗೆ ತಾನೆ ಗುರುವಾಗಿರ್ಪಂ (ಅಜಿತ. ೫-೬೯) ; ವಿದ್ಯಾಗುರುಗಳಿಗೆ ಭಾಗಣ್ಣನಲ್ಲಿ ವಿಶೇಷ ಪ್ರೀತಿಯುಂಟಾಯಿತು (ಕಭವ. ೪೨೬). [ಸಂ.]

ವಿದ್ಯಾಗೋಷ್ಠಿ (ನಾ). ಸಾಹಿತ್ಯ, ಸಂಗೀತ ಮುಂತಾದ ಕಲೆಗಳನ್ನು ಕುರಿತು ನಡೆಸುವ ಸಭೆ : ದೇವಗಣಿಕೆಯರು ಸಂಗೀತಸಾಹಿತ್ಯಾದಿ ವಿದ್ಯಾಗೋಷ್ಠಿಗಳಂ ಮಲ್ಲಮಹಿಮಹಿಷಾದಿಯುದ್ಧಂಗಳಂ . . . ವಿರಾಜಿಸುತ್ತಿರ್ಪುಂ (ವಿವೇಕ. ೧೭೦). [ಸಂ.]

ವಿದ್ಯಾಚಣ (ನಾ). ತನ್ನ ಪಾಂಡಿತ್ಯದಿಂದ ಪ್ರಸಿದ್ಧನಾದವನು : ನರಸಿಂಹಪ್ರಿಯ ಮನ್ತ್ರಿ ಮನ್ತ್ರವಿಲಸದ್ವಿದ್ಯಾಚಣಂ ಬೂಚಣಂ (ಎಕ.V. ಅರಸೀ. ೧೭೨-೩೧; 1163). 'ಅಕ್ಷರಚಣ' ಪರಾ. [ಸಂ.]

ವಿದ್ಯಾಚಾರ್ಯ (ನಾ). = ವಿದ್ಯಾಗುರು : ಚಂದ್ರಾಪೀಡಂ ಪ್ರತಿದಿನಂ ಪ್ರವೃದ್ಧಮಾನನಾಗೆ . . . ನಿಖಿಲವಿದ್ಯಾಚಾರ್ಯರುಮಂ ಮಹಾಪ್ರಯತ್ನದಿಂ ನಿಲಿಸಿ . . . ವಿದ್ಯಾಧಿಗಮನದೊಳ್ (ಕಾದಂಪು. ೪೩೩). [ಸಂ.]

ವಿದ್ಯಾಚ್ಛೇದ (ನಾ). ಅಲೌಕಿಕ ಶಕ್ತಿ ; ವಿಶೇಷವಾದ ಶಕ್ತಿ : 'ವಿದ್ಯಾಚ್ಛೇದಂ ಗೆಯ್' ಪರಾ. [ಸಂ.]

ವಿದ್ಯಾಚ್ಛೇದಂಗೆಯ್ (ಕ್ರಿ). ಅಲೌಕಿಕ ಶಕ್ತಿಯನ್ನು ನಾಶಮಾಡು : ರತ್ನಜಟ . . . ಮೂದಲಿಸಿ ಮುಟ್ಟಿನರ್ವುದುಮಾ ದಾನವನರ್ಕಜಟಯ ನಣ್ಪಿಂಗವನೊಳ್ಕಾದದೆ ಕರುಣಿಸಿ ವಿದ್ಯಾಚ್ಛೇದಂಗೆಯ್ದಂ ನಿರಂಕುಶಂ ದಶಕಂಠಂ (ಪಂಪಾಮಾ. ೯-೧೪೬).

[ವಿದ್ಯಾಚ್ಛೇದ + ಕೆಯ್]

ವಿದ್ಯಾಡಂಬರ (ನಾ). ವಿದ್ವತ್ತಿನ ಮೇಲ್ಮೆ ,—ಹೆಚ್ಚುಗಾರಿಕೆ : ವಿಜಯಜಿಹ್ವ ನೆಂಬೊಂ. . . ನಿಜವಿದ್ಯಾಡಂಬರಮಂ ಮಜ್ಜಯಲೆಂದರಮನೆಯ ಬಾಗಿಲೊಳ್ ನಿಂದು ಪತ್ರಾಲಂಬನಂ ಮಾಡಿರ್ಪುದಂ (ಸುಕುಮಾ. ೨-೧೪ ವ). [ಸಂ.]

ವಿದ್ಯಾತ್ರಯಾಧೀಶ (ನಾ). ಷಟ್ಖಂಡಾಗಮದ ಮೊದಲ ಮೂರು ಖಂಡಗಳನ್ನು ಅಧ್ಯಯನ ಮಾಡಿದವನು : ಶಾಬ್ದನೇತ್ಯತೆ . . . ಏಂ ಚೋದ್ಯಮೆ ವರ್ಧಮಾನಮುನಿಯೊಳ್ ವಿದ್ಯಾತ್ರಯಾಧೀಶನೊಳ್ (ಚಂದ್ರಪ್ರ. ೧-೩೧). [ಸಂ.]

ವಿದ್ಯಾದಯಿತ (ನಾ). ವಿದ್ಯೆಗೆ ಒಡೆಯನಾದವನು : ಮಹಾತೇಜನೂರ್ಜಿತ ವಿದ್ಯಾದಯಿತಂ ಸುರಂ ಸುರಂ (ಮಧ್ವ. ೧-೪೫) ; ನಯದಿಂದಮಿ ಸರೋರುಹನಯನೆಯ ನಳವಡಿಸಲಾರ್ತೆನಿಲ್ಲಳವಡಿಪೆಂ ಭಯದಿಂದಮೆಂದು ವಿದ್ಯಾದಯಿತಂ ಪಡೆದಂ ವಿಕುರ್ವಣಾವೈಭವಮಂ (ಪಂಪಾಮ. ೯-೧೯೬). [ಸಂ.]

ವಿದ್ಯಾದಾನ (ನಾ). ವಿದ್ಯೆಯನ್ನು ನೀಡುವಿಕೆ; ಬೋಧಿಸುವಿಕೆ : ದಾನಂಗಳೊಳಗೆ ವಿದ್ಯಾದಾನಮುಮಾಹಾರದಾನಮುಂ ಮೇಲೆಂದೀ ನ್ಯಾನಶಕ್ತಿಬ್ರತೀಂದ್ರಂ ತಾನೆಯ್ದೆ ನೆಗ[ಲ್ತ್]ವಡೆದನಿವಱಿಂದ ಜಗದೊಳ್ (ಶಾಸಾ. XX. ೫೭-೨೫; 1084); ಕನಕಾಚಲಭಟ್ಟನು ಮಾಡಿದ ವಿದ್ಯಾದಾನ ಮಹಿಮೆಯಿಂದಲೋ ಎಂಬಂತೆ ತಿಮ್ಮಣ್ಣಭಟ್ಟನೊ ದೊಡ್ಡಪಂಡಿತನಾದನು (ಕಭಎ. ೩೦೯). [ಸಂ.]

ವಿದ್ಯಾದೇವತೆ (ನಾ). ೧. ವಿದ್ಯೆಯ ಅಭಿಮಾನಿದೇವತೆ ; ಸರಸ್ವತಿ. ೨. [ಜೈನ] ಸಾಧಿತ, ಕುಲ ಮತ್ತು ವಿದ್ಯೆಗಳಿಗೆ ಸಂಬಂಧಿಸಿದ ದೇವತೆ : ಕುಬೇರಕಾಂತನುಂ ವಿದ್ಯಾದೇವತೆಯಂ ಬೆಸಗೊಂಡನ್ನ ಮುನ್ನಿನ ಭವದ ಪ್ರಾಣವಲ್ಲಭೆಯೆಲ್ಲಿರ್ದಳಿನೆ (ವಡ್ಡಾರಾ. ೩೯-೨೧) ; ತಾಂ ಮಹೀತಳಕ್ಕೆ ಬೀಟುತ್ತುಂ ನಮ್ಮ ನೋವಿಂಗಾಱದೆ ಪರ್ಣಲಘುವೆಂಬ ವಿದ್ಯೆಯಂ ಬೆಸಸುವುದುಮಾ ವಿದ್ಯಾದೇವತೆ . . . ಆ ಭೀಮಾಟವೀ ಸರಸ್ತೀರದೊಳಿರಿಸಿ ಪೋಪುದುಂ (ಶಾಂತಿಪು. ೪-೧೬ ವ). [ಸಂ. ವಿದ್ಯಾದೇವತಾ]

ವಿದ್ಯಾಧನ (ನಾ). ೧. ವಿದ್ಯೆಯ ರೂಪದಲ್ಲಿರುವ ಸಂಪತ್ತು,—ಐಶ್ವರ್ಯ : ಧನಮುಂ ನೆರಪದೆ ವಿದ್ಯಾಧನಮುಂ ಮಾಡದೆ ತಗುಳ್ದು ನೆಗಟದೆ ತಪದೊಳ್ ಮನುಜತ್ವಮಫಲಮಾಯ್ತು (ಕವಿಕಾ. ೩-೧೦೧) ; ಕೃತಘ್ನನೆ ನರಕಿ ವಿದ್ಯಾಧನ ಮದಾಂಧನೆ ಬಾಹಿರನು (ಕುವ್ಯಾಖ. ೨೩-೪೫). ೨. ಪಾಂಡಿತ್ಯದಿಂದ ಗಳಿಸಿದ ಹಣ,—ಐಶ್ವರ್ಯ. [ಸಂ.]

ವಿದ್ಯಾಧರ (ನಾ). ೧. ಯಾವುದೇ ವಿದ್ಯೆಯನ್ನು ಬಲ್ಲವನು,–ಹೊಂದಿದವನು. ೨. ಸ್ವರ್ಗದಲ್ಲಿ ವಾಸಿಸುವನೆಂದು ನಂಬಲಾದ, ಗಗನಗಮನಾದಿ ಅಲೌಕಿಕಶಕ್ತಿಯುಳ್ಳ ಜೀವಿ ; ದಿವಿಜ : ಸುರದನುಜಭುಜಗ ವಿದ್ಯಾಧರ ನರಸಂಕುಲದೊಳಾರನಾದೊಡಮೇನೊ ಗರ ಮುಟ್ಟೆ ಕೊಲ್ಲುಮಿದು ನಿಜವಿರೋಧಿಯಂ ಧುರದೊಳೆಂದು ಶಕ್ತಿಯನಿತ್ತಂ (ಪಂಪಭಾ. ೧-೧೦೩); ಸಿದ್ಧವಿದ್ಯಾಧರರು . . . ಅಖಿಳಾಪ್ಸರಯರೆಸೆದರು ರೋಮ ರೋಮದ ಕುಳಿಯ ಬೊಕದಲಿ (ಕುವ್ಯಾಖ. ೯-೫೯). ೩. [ಸಂಗೀತ] ತಾಳದ ಭೇದಗಳಲ್ಲಿ ಒಂದು : ಧ್ರುವಮಟಯ . . . ವಿಷಮ ವಿದ್ಯಾಧರ . . . ಮತಂಗ . . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳು (ವಿವಿಣ. ೧೯೨). ೪. [ಜೈನ]ಭೋಗಭೂಮಿಯಲ್ಲಿ ವಾಸಿಸುವ ಪ್ರಜ್ಞಪ್ತಿ ಮುಂತಾದ ಅನೇಕ ವಿದ್ಯೆಗಳನ್ನು ಬಲ್ಲ ಒಂದು ವರ್ಗದ ಜನ : ಚಿಂತಾಗತಿಯೆಂಬ ವಿದ್ಯಾಧರನಾಕೆಯ ರೂಪಲಾವಣ್ಯಸೌಭಾಗ್ಯ ಕಾಂತಿತ್ವಮಂ ಕಂಡೊಟಿ (ವಡ್ಡಾರಾ. ೧೫೭-೨೭) ; ಬಲವದ್‌ವಿದ್ವಿಷ್ಟವಿದ್ಯಾಧರಕರಟಿ ಶರಶ್ಯುಕ್ತಿಸಂಭೂತ ಮುಕ್ತಾವಲಿಯೊಳ್ ಕಣ್ಣಿಟ್ಟು (ಆದಿಪು. ೧-೭೫) ; ಅವುಗಳಿಗೆ ವಿಜಯಾರ್ಧಪರ್ವತಗಳೆಂದು ಹೆಸರು . . . ಅವುಗಳ ಮೇಲೆ ವಿದ್ಯಾಧರರು ವಾಸಿಸುತ್ತಾರೆ (ತ್ರಿಷ. ೪೫೦). [ಸಂ.]

ವಿದ್ಯಾಧರಕರಣ (ನಾ). ವಿದ್ಯಾಧರರು ಆಕಾಶಕ್ಕೆ ನೆಗೆಯಲು ಅವಲಂಬಿಸುತ್ತಿದ್ದ ಹಸ್ತಪಾದಗಳ ಒಂದು ಭಂಗಿ : ತೊನ್ನಂ ಪೋಪಾಗಳ್[ಳಿ]ಱುವಳ್ಳಮಂ ಕಂಡದಂ ವಿದ್ಯಾಧರಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಕಂಡು (ವಡ್ಡಾರಾ. ೧೨೪-೧) ; ಬ್ರಹ್ಮಭಟರಂ ವಿದ್ಯಾಧರಕರಣದಿನುಯ್ದೆಡೆಯೊಳ್ ಸುರೇಂದ್ರವಧು ಪೋಲ್ತಳಿಂದ್ರಜಾಲದ ಪಥಂವಂ (ಗದಾಯು. ೪-೨೧). [ಸಂ.]

ವಿದ್ಯಾಧರಚಕ್ರವರ್ತಿ (ನಾ). ೧. ದೇವತೆಗಳ ಒಬ್ಬ ಮುಖ್ಯಸ್ಥ : ಆವ ಜಗಮಂ ಸಾಧಿಸಲ್ಪೋದಯ್ ಪೇೞೆಲೆ ವಿದ್ಯಾಧರಚಕ್ರವರ್ತಿ (ಶಮದ. ೧೨೬ ಪ್ರಯೋ) ; ಈ ಸುಂದರನೇ ವಿದ್ಯಾಧರಚಕ್ರವರ್ತಿಯೆಂದು ತಿಳಿದು ಮಲಯವತಿ ನಾಚಿದಳು (ಕಪಪು. ೭-೧೦೩). ೨. [ಜೈನ] ವಿದ್ಯಾಧರರ ಚಕ್ರವರ್ತಿ ; ಖೇಚರೇಂದ್ರ : ವಿದ್ಯಾಧರಚಕ್ರವರ್ತಿ ಧರಣೀಕಂಪಂಗಂ ಪ್ರಭಾವತೀ(ಕರೀ)ದೇವಿಗಂ ಮಗಳಾಂ (ಚಾವುಂಪು. ೭೫). [ಸಂ. ವಿದ್ಯಾಧರಚಕ್ರವರ್ತಿನ್]

ವಿದ್ಯಾಧರಿ (ನಾ). ದೇವತಾಸ್ತ್ರೀ : ಆಕೆಯ ರೂಪಂ ನೋಡಿ ಮೆಚ್ಚಿ ವಿದ್ಯಾಧರಿಯ ದೇವಗಣಿಕೆಯ ರೂಪನೆ ಪೋಲ್ಪೆ ಎಂದು ಪೊಗಟ್ಟು (ವಡ್ಡಾರಾ. ೧೭-೧೪) ; ಬಾರದು ಬರೆಯಲ್ ರೂಪು ರೂಪವಿದ್ಯಾಧರಿಯ (ಶಾಸಾ. XX. ೪೫-೩೨; 1076). [ಸಂ. ವಿದ್ಯಾಧರೀ]

ವಿದ್ಯಾಧಿಕಾರಿ (ನಾ). ವಿದ್ಯಾಭ್ಯಾಸಕ್ರಮವನ್ನು ನೋಡಿಕೊಳ್ಳುವ ಅಧಿಕಾರಿ ; ವಿದ್ಯಾಸಂಸ್ಥೆಯ ಅಧಿಕಾರಿ : ಐದುಗಂಟೆಗೆ ಸರಿಯಾಗಿ ಮುಖ್ಯಅತಿಥಿಗಳಾದ ವಿದ್ಯಾಧಿಕಾರಿಗಳು ಬಂದರು (ಕಪಪು. ೩-೪೧). [ಸಂ. ವಿದ್ಯಾಧಿಕಾರಿನ್]

ವಿದ್ಯಾಧಿಗಮನ (ನಾ). ವಿದ್ಯೆಯನ್ನು ಕಲಿಯುವಿಕೆ ; ವಿದ್ಯಾಭ್ಯಾಸ : ಚಂದ್ರಾಪೀಡಂ ಪ್ರತಿದಿನಂ ಪ್ರವೃದ್ಧಮಾನನಾಗೆ . . . ವಿದ್ಯಾಧಿಗಮನದೊಳ್ ಸಮರ್ಪಿಸಿ (ಕಾದಂಪು. ೪೩೩). [ಸಂ.]

ವಿದ್ಯಾನಂದ (ನಾ). ೧. ವಿದ್ಯೆಯಿಂದ ದೊರಕುವ ಸಂತೋಷ : ವೇದಶಾಸ್ತ್ರಂಗಳಂ ನೋಡಿ ಅದರಲ್ಲಿರ್ದ ಅರ್ಥಸಾರಮಂ ಬಿಟ್ಟು ವಾದಭೇದಗಳಿಂದಹಂಕರಿಸುವದೆ ವಿದ್ಯಾನಂದವೆನಿಸುವದು (ನಾನಾಗು. ೩೬-೧). ೨. ಆನಂದದ ಎಂಟು ಬಗೆಗಳಲ್ಲಿ ಒಂದು; ಬ್ರಹ್ಮಜ್ಞಾನದಿಂದ ಉಂಟಾಗುವ ಸಂತೋಷ : ವಿಷಯಾನಂದ ಬ್ರಹ್ಮಾನಂದ ವಾಸನಾನಂದ ಮುಖ್ಯಾನಂದ ನಿಜಾನಂದ ಆತ್ಮಾನಂದ ಅದ್ವೈತಾನಂದ ವಿದ್ಯಾನಂದವೆಂಬವೇ ಆನಂದದವ್ಯಭೇದಂಗಳು (ವಿವಿಣ. ೨೪). [ಸಂ.]

ವಿದ್ಯಾನಿಕೇತನ (ನಾ). ವಿದ್ಯೆಯನ್ನು ಹೇಳಿಕೊಡುವ ಶಾಲೆ; ವಿಶ್ವವಿದ್ಯಾನಿಲಯ ಮುಂತಾದ ಸ್ಥಳ : ಬಹಿರ್ನಗರದೊಳಮರಮಂದಿರಾನುಕಾರಿಯಪ್ಪ ವಿದ್ಯಾನಿಕೇತನಮಂ ಮಾಡಿಸಿ ನಿಖಿಳವಿದ್ಯಾಚಾರ್ಯರುಮಂ ಮಹಾಪ್ರಯತ್ನದಿಂ ನಿಲಿಸಿ (ಕಾದಂಪು. ೪೩೩). [ಸಂ.]

ವಿದ್ಯಾನಿಧಾನ (ನಾ). ವಿದ್ವತ್ತೇ ನಿಧಿಯಾಗುಳ್ಳವನು : ವಿದ್ಯಾನಿಧಾನ ಮಲ್ಲ ಪಾರ್ಯ ತದನುಜಾತಾಭಿಜಾತ ಸಾರಸ್ವತ ಪುನ್ನಮಾರ್ಯಕಾರಿತಮುಮಪ್ಪ ಪುರಾಣಚೂಡಾಮಣಿಯೊಳ್ ಷಷ್ಠಾಶ್ವಾಸಂ (ಶಾಂತಿಪು. ೬-೧೨೬ ಗದ್ಯ). [ಸಂ.]

ವಿದ್ಯಾನಿಧಿ (ನಾ). ೧. = ವಿದ್ಯಾನಿಧಾನ : ಕಾನೂರ್ಗಣಾಮುನಿಪತಿ ವಿದ್ಯಾನಿಧಿ ಗುಣನಿಧಿ ದಯೈಕನಿಧಿ (ಶಾಂತಿಪು. ೧-೧೭) ; ಪ್ರಾಕ್ತನ ಜನ್ಮವಿದ್ಯೆಗಳ್ ಬಂದನಿತುಂ ನೆಲಸಿದವು ಸಕಲವಿದ್ಯಾನಿಧಿಯೊಳ್ (ಆದಿಪು.೫-೬೮). ೨. [ಜೈನ] ಒಂದು ವಿದ್ಯೆಯ ಹೆಸರು : ಇವರ್ದರುಂ ವಿದ್ಯಾಧರರಲ್ಲಿಗೆ ವಂದೊಡವರೊಳೊರ್ವಂ ವಿದ್ಯಾನಿಧಿ ಎಂಬ ವಿದ್ಯೆಯಿನಾ ವೈತಾಳಿಯಂ ಪ್ರಕಟಂಮಾಡ್ಪುದುಂ (ಚಾವುಂಪು. ೧೭೯). [ಸಂ.]

ವಿದ್ಯಾನಿಲಯ, ವಿದ್ಯಾನಿಳಯ (ನಾ). ೧. = ವಿದ್ಯಾನಿಕೇತನ : 'ವಿಶ್ವವಿದ್ಯಾನಿಲಯ' ಪರಾ. **ವಿದ್ಯಾನಿಳಯ** : ೨. ವಿದ್ಯೆಗೆ ನೆಲೆಯಾದವನು ; ವಿದ್ಯಾಪಾರಂಗತ : ನಳನ ನಹುಷನ ಶಾಲಿಹೋತ್ರನ ಬಲುಮಗಳು ಕಿಱಿದೆಂಬ ವಿದ್ಯಾನಿಳಯ ವರರೇವಂತನೇಱುವನು ನಸುನಗುತ . . . ಹಯಪ್ರೌಢಪ್ರತಾಪರು ಹೊಳಿವ ಮಕುಟದ ಸಾಲುಗಳಲೊಪ್ಪಿದರು (ಕುವ್ಯಾಖ. ೯-೪೧). [ಸಂ.]

ವಿದ್ಯಾನಿಳಯ 'ವಿದ್ಯಾನಿಲಯ' ನೋ.

ವಿದ್ಯಾಪಕ್ಷಪಾತಿ (ನಾ). ವಿದ್ಯೆಯ ಕಡೆಗೆ ಒಲವುಳ್ಳವನು : ಲಿಂಗರಾಜರು ವಿದ್ಯಾಪಕ್ಷಪಾತಿಗಳಾಗಿದ್ದರು (ಕಪಪು. ೬-೩೬). [ಸಂ. ವಿದ್ಯಾಪಕ್ಷಪಾತಿನ್]

ವಿದ್ಯಾಪತಿ (ನಾ). ವಿದ್ಯೆಯ ಒಡೆಯ : ಸಮಸ್ತವಿದ್ಯಾಪತಿ ನಾಭಿನಂದನನು ಪಾಶ್ರಿತಭವ್ಯಜನಾಭಿನಂದನಂ (ಆದಿಪು. ೧-೪೦). [ಸಂ.]

ವಿದ್ಯಾಪರಿಣತ (ನಾ). ವಿದ್ವಾಂಸ ; ಪಂಡಿತ : ವಿರಹಿಗಳ ಶೃಂಗಾರ ವಿದ್ಯಾಪರಿಣತರಲಂಕಾರ ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ (ಕುವ್ಯಾಖ. ೧-೧೯). [ಸಂ.]

ವಿದ್ಯಾಪಾರ (ನಾ). ವಿದ್ಯೆಯ ಕೊನೆ ; ವಿದ್ವತ್ತಿನ ಪರಾಕಾಷ್ಠೆ : ಪದ್ಯಂ ಸಮಸ್ತ ಜನತಾಹೃದ್ಯಂ ಪದವಿದಿತಪಾದನಿಯಮನಿವೇದ್ಯಂ ವಿದ್ಯಾಪಾರಪರಾಯಣಮಾದ್ಯಂ ಸದ್ವೃತ್ತಿವೃತ್ತಜಾತ್ಯಾಯತ್ತಂ (ಕವಿಕಾ. ೧-೩೦). [ಸಂ.]

ವಿದ್ಯಾಪಾರಗ (ನಾ). ವಿದ್ಯೆಯನ್ನು ಸಂಪೂರ್ಣವಾಗಿ ಕಲಿತವನು ; ಪಂಡಿತೋತ್ತಮ : ಆ ಮಹಾಬಳಂ ಬಾಲಕಾಲದಿಂ ತಗುಳ್ದಭ್ಯಸ್ತಸಮಸ್ತ ವಿದ್ಯಾಧರವಿದ್ಯಾಪಾರಗನುಂ . . . ಆಗಿ (ಆದಿಪು. ೧-೭೩ ವ). [ಸಂ.]

ವಿದ್ಯಾಪಾರಗೆ (ನಾ). [ಜೈನ] ವಿಶೇಷಶಕ್ತಿಯನ್ನು ಸಂಪೂರ್ಣವಾಗಿ

ಕಲಿತವಳು : ಆಂ ಪ್ರಭಾ(ಸುಖಾ)ವತಿಯೆನೆಂಬೆಂ ಜಾತಿಕುಲಸಾಧಿತವಿದ್ಯಾಪಾರಗೆಯಂ (ಚಾವುಂಪು. ೭೫). [ಸಂ. ವಿದ್ಯಾಪಾರಗಾ]

ವಿದ್ಯಾಪೀಠ (ನಾ). ಜ್ಞಾನವನ್ನು ಪ್ರಸಾರಮಾಡಲು ಸ್ಥಾಪಿತವಾದ ಸಂಸ್ಥೆ ; ವಿದ್ಯಾಲಯ : ಆ ಕಾಲದಲ್ಲಿ ಒಂದೊಂದು ಕ್ಷೇತ್ರವೂ, ಒಂದೊಂದು ವಿದ್ಯಾಪೀಠ ವಾಗಿತ್ತು (ಕಭಪ. ೬೦) ; ನಾಲ್ಕನೆಯ ಶತಮಾನದ ಪ್ರಸಿದ್ಧವಾದ ವಿದ್ಯಾಪೀಠಗಳಲ್ಲಿ ಪಲ್ಲವರ ರಾಜಧಾನಿಯಾಗಿದ್ದ ಕಂಚಿಯು ಒಂದಾಗಿತ್ತು (ಕರ್ನಾಅ.೫)., [ಸಂ.]

ವಿದ್ಯಾಪ್ರತ್ಯಯ (ನಾ). ತಾನು ಗಳಿಸಿದ ವಿದ್ಯೆಯ ಬಗೆಗೆ ಇರುವ ನಂಬುಗೆ ,-ವಿಶ್ವಾಸ : ಒರ್ವ ನಿರ್ಬುದ್ಧಿಗಾರುಡಿಗಂ ಗಾರುಡಮಂ ಕಲ್ತು ವಿದ್ಯಾಪ್ರತ್ಯಯಮಂ ನೋಡಲೆಂದು ಸರ್ಪದಷ್ಟನನಱಸುತ್ತುಂ ಬರ್ಪಾತಂ ಅಡವಿಯೊಳೊಂದು ಪೂದಱೊಳ್ ಪುಲಿಯಂ . . . ಕಂಡು (ಪಂಚತಂ.೨೫೨-೧೧). [ಸಂ.]

ವಿದ್ಯಾಪ್ರಭಾವ (ನಾ). ೧. ವಿದ್ಯೆಯ ಶಕ್ತಿ ,—ಸಾಮರ್ಥ್ಯ : ಯಾದವವಂಶಜರುಂ ನಾನಾದೇಶನರೇಂದ್ರರುಂ ಘಟೋದ್ಭವನ ಧನುರ್ವೇದಮನೆ ಕಲಲ್ ಬಂದಾಳಾದರ್ ವಿದ್ಯಾಪ್ರಭಾವಮಾ ದೊರೆತೆ ವಲಂ (ಪಂಪಭಾ. ೨-೫೬). ೨. [ಜೈನ] ವಿಶೇಷಶಕ್ತಿಯ ಪ್ರಭಾವ ,—ಮಹಿಮೆ : ವಿದ್ಯಾಪ್ರಭಾವದಿಂ ಮನೆಯೊಳ್ ನಾನದೆ ಬಂದೆನೆಂದು ನುಡಿಯೆ (ಶಾಂತಿಪು.೬-೬೫ವ). [ಸಂ.]

ವಿದ್ಯಾಪ್ರಸಾರ (ನಾ). ವಿದ್ಯೆಯನ್ನು ಹರಡುವಿಕೆ ; ಜ್ಞಾನವನ್ನು ಪ್ರಚಾರ ಮಾಡುವಿಕೆ : ಲಿಂಗರಾಜರು . . . ವಿದ್ಯಾಪ್ರಸಾರಕ್ಕಾಗಿ ಹಲವು ರೀತಿಯಿಂದ ಸಹಾಯ ಮಾಡಿದರು (ಕಪಪು. ೬-೩೬). [ಸಂ.]

ವಿದ್ಯಾಪ್ರಾಕಾರ (ನಾ). [ಜೈನ] ವಿಶೇಷಶಕ್ತಿಯಿಂದ ರಚಿಸಿದ ಪೌಳಿ ,—ಗೋಡೆ : ಅಂತು ನಿರ್ಮಿಸಿದ ವಿದ್ಯಾಪ್ರಾಕಾರಂಗಳ ಬಹಿರಂತಃಪ್ರದೇಶಗಳೊಳ್ ಪಲಬರ್ ವಿದ್ಯಾಧರರಂ ಕಾಪುವೇಟ್ಟುದುಂ (ಪಂಚಾಮೃ. ೧೪-೩೫ ವ). [ಸಂ.]

ವಿದ್ಯಾಭಿಮಾನಿ (ಗು). ೧. ವಿದ್ಯೆಗೆ ಅಧಿಷ್ಠಾನವಾದ : 'ವಿದ್ಯಾಭಿಮಾನಿದೇವತೆ' ಪರಾ. (ನಾ). ೨. ವಿದ್ಯೆಯ ಬಗೆಗೆ ಗೌರವವುಳ್ಳ ವ್ಯಕ್ತಿ ; ವಿದ್ಯಾಪಕ್ಷಪಾತಿ : ವಿದ್ಯಾಭಿಮಾನಿಗಳಾದ ಇವರಿಗೆ ವಿದ್ಯಾಇಲಾಖೆಯು ಯಾವಾಗಲೂ ಆಧಾರಿಯಾಗಿರುತ್ತದೆ (ರೂಢಿ). [ಸಂ. ವಿದ್ಯಾಭಿಮಾನಿನ್]

ವಿದ್ಯಾಭಿಮಾನಿದೇವತೆ (ನಾ). ವಿದ್ಯೆಯ ಅಭಿಮಾನಿದೇವತೆ ; ಗಣಪತಿ ಅಥವಾ ಸರಸ್ವತಿ : ವಿದ್ಯಾಭಿಮಾನಿದೇವತೆಯಾದ ಶಾರದೆಯ ಸಿದ್ಧಿ ಅಚಲವಾದದ್ದು (ಭಾರದ. ೫೮೦). [ಸಂ. ವಿದ್ಯಾಭಿಮಾನಿದೇವತಾ]

ವಿದ್ಯಾಭಿವೃದ್ಧಿ (ನಾ). ಶಿಕ್ಷಣದ ಏಳಿಗೆ ,—ಉನ್ನತಿ : ವಿದ್ಯಾಭಿವೃದ್ಧಿಯಿಲ್ಲದೆ ದೇಶ ಹಾಳಾಗಿರುವುದಕ್ಕೆ ಈ ಹಾಳು ಮೇಷ್ಟುಗಳೇ ಕಾರಣರು (ರಂಗಕ. ೧೬೦). [ಸಂ.]

ವಿದ್ಯಾಭ್ಯಾಸ (ನಾ). ವಿದ್ಯೆಯನ್ನು ಅಭ್ಯಸಿಸುವುದು ; ಓದು ; ಕಲಿಕೆ ; ಶಿಕ್ಷಣ : ಅಗ್ನಿಭೂತಿಯುಂ ವಾಯುಭೂತಿಯುಮೆಂಬವಶೇಷವಿದ್ಯಾಭ್ಯಾಸನಿಮಿತ್ತದಿಂ ಭವದಂಘ್ರಿಸ್ಮರಣಪರಿಣತಾಂತಃಕರಣರಾಗಿ ಬಂದೆವು (ಸುಕುಮಾ. ೨-೪೮ ವ) ; ಈನ್ನೀ ವಿದ್ಯಾಭ್ಯಾಸಂ ಸಾಕು (ಪುಣ್ಯಾಸ್ರ. ೧೨-೧೬ ವ). [ಸಂ.]

ವಿದ್ಯಾಭ್ಯಾಸಂಗೆಯ್ (ಕ್ರಿ). ಶಿಕ್ಷಣವನ್ನು ಪಡೆ ; ವಿದ್ಯೆಯನ್ನು ಕಲಿ : ನಿಮಗೆ ವಿದ್ಯಾಭ್ಯಾಸಂಗೆಯ್ವ ತಾತ್ಪರ್ಯಮುಳ್ಳೊಡೆ . . .ನಿಶ್ಚಯಮೋದುವೊಡಾವುಮಾ ಮಾರ್ಗದಿಂದೋದಿಸಿ ಪಂಡಿತರಾಗೆ ಮಾಟ್ಪೆಂ (ಸುಕುಮಾ. ೨-೫೫ ವ).

[ವಿದ್ಯಾಭ್ಯಾಸ + ಕೆಯ್$_1$]

ವಿದ್ಯಾಭ್ಯಾಸಂಗೆಯಿಸು 'ವಿದ್ಯಾಭ್ಯಾಸಂಗೆಯ್ಸು' ನೋ.

ವಿದ್ಯಾಭ್ಯಾಸಂಗೆಯ್ಸು , ವಿದ್ಯಾಭ್ಯಾಸಂಗೆಯಿಸು (ಕ್ರಿ). ವಿದ್ಯೆಯನ್ನು ಕಲಿಯುವಂತೆ ಮಾಡು ; ಶಿಕ್ಷಣವನ್ನು ಕೊಡಿಸು : ಆ ಕೃಪಾಚಾರ್ಯರ ಪಕ್ಕದೊಳ್ ಕೂಸುಗಳಂ ವಿದ್ಯಾಭ್ಯಾಸಂಗೆಯ್ಸೆ (ಪಂಪಭಾ. ೨-೩೩ವ) ; ಚಂದ್ರಾಪೀಡಂ ಪ್ರತಿದಿನಂ ಪ್ರವೃದ್ಧಮಾನನಾಗೆ . . . ಅಖಿಲವಿದ್ಯಾಭ್ಯಾಸಂಗೆಯ್ಸುತ್ತಮಿರೆ (ಕಾದಂಪು.೪೩೩); ವಿದ್ಯಾಭ್ಯಾಸಂಗೆಯಿಸು : ಈ ಕುಮಾರರಂ ಬಾಲಕಾಲದೊಳ್ ತೊಟ್ಟು ವಿದ್ಯಾಭ್ಯಾಸಂಗೆಯಿಸದೆ ಸ್ವೇಚ್ಛಾವಿಹಾರಿಗಳಂ ಮಾಡಿ ಕಿಡಿಸಿದೆಂ (ಪಂಚತಂ. ಅ. ೧೪-೧೫).

[ವಿದ್ಯಾಭ್ಯಾಸ + ಕೆಯ್ಸು]

ವಿದ್ಯಾಮಂತ್ರ (ನಾ). [ಜೈನ]ಯಾವುದಾದರೂ ವಿದ್ಯೆಗೆ ಸಂಬಂಧಿಸಿದ, ಪವಿತ್ರವಾದ ಹಾಗೂ ಅರ್ಥಸಹಿತವಾದ ವಾಕ್ಯ : ಆ ವಿದ್ಯಾಮಂತ್ರಂಗಳನೆನಗೆ ಪೇಳೆಂದಭಯಕುಮಾರಂ ಬೆಸಗೊಂಡು (ವಡ್ಡಾರಾ. ೧೫೮-೨೨). [ಸಂ.]

ವಿದ್ಯಾಮಂತ್ರಿ (ನಾ). ನಾಡಿನ ಶಿಕ್ಷಣವ್ಯವಸ್ಥೆಯನ್ನು ನೋಡಿಕೊಳ್ಳುವ ಸಚಿವ ; ಶಿಕ್ಷಣಸಚಿವ : ವಿದ್ಯಾಮಂತ್ರಿಯಾದವರು ಆ ಪದವಿಗೆ ತಕ್ಕಂತೆ ಸಾಹಿತ್ಯ ಹಾಗೂ ಸಂಸ್ಕೃತಿಯ ಮಹದಭಿಮಾನಿಗಳಾಗಿರಬೇಕು (ರೂಢಿ). [ಸಂ. ವಿದ್ಯಾಮಂತ್ರಿನ್]

ವಿದ್ಯಾಮದ (ನಾ). ಅಷ್ಟಮದಗಳಲ್ಲಿ ಒಂದು ; ವಿದ್ವತ್ತಿನಿಂದುಂಟಾಗುವ ಗರ್ವ : ವಿದ್ಯಾಮದಮುಳ್ಳಂ ಗೂಗೆಯಾಗಿಯುಂ ತಪೋಮದಮುಳ್ಳಂ ನಾಯಾಗಿಯುಂ . . . ಮಹಾದುಃಖಕ್ಕೆ ಭಾಜನರಪ್ಪರ್ (ಧರ್ಮಾಮೃ. ೬-೧೮೮); ನಾವು ಮಹಾವಿದ್ವಾಂಸರು ನಮ್ಮ ವಿದ್ವತ್ತಿಗೆ ಆರೂ ಸಮಾನಂಬರಲರಿಯರು ಎಂದು ಹೇಳಿಕೊಂಬುವುದೇ ವಿದ್ಯಾಮದವು (ವಚಶಾ. II. ೧೨೩). [ಸಂ.]

ವಿದ್ಯಾರತ (ನಾ). ವಿದ್ಯೆ ಕಲಿಯುವುದರಲ್ಲಿ ಮಗ್ನನಾದವನು : ಪಂಡಿತಪಾಣ್ಡ್ಯ ಭೂಪ[ನಿ]ನಿಸಿದಂ ಭೂಪಾಳ ವಿದ್ಯಾ[ರತಂ]ತದನುಜಾತಂ (ಸೊಊ. VI. ೫೨-೧೭; 1165). [ಸಂ.]

ವಿದ್ಯಾರಾಧನ (ನಾ). ವಿದ್ಯಾರ್ಜನೆಗಾಗಿ ಮಾಡುವ ಸೇವೆ ,—ಉಪಾಸನೆ : ಪ್ರಜ್ಞಪ್ತಿವಿದ್ಯಾಲಾಭಾಂತರಾಯಮಂ ಮಾಡಲೀತನೆತ್ತಿಕೊಂಡುಪಸರ್ಗಮಂ ಸಂಸಾರನಿಸರ್ಗಮೆಂದು ನಿಶ್ಚಳಿತೆ ಸೈರಿಸಿ ವಿದ್ಯಾರಾಧನದೊಳ್ ಚಿತ್ತಮಂ ನಿಱಿಸಿ (ಶಾಂತಿಪು. ೯-೫ ವ). [ಸಂ.]

ವಿದ್ಯಾರೇಖೆ (ನಾ). [ಸಾಮುದ್ರಿ] ಜಾತಕನ ವಿದ್ಯೆ, ಬುದ್ಧಿಗಳನ್ನು ಕುರಿತು ಸೂಚಿಸುವ, ಅಂಗೈಯಲ್ಲಿರುವ ಒಂದು ಗೆರೆ : ಅನಾಮಿಕದ ಬುಡದಲ್ಲಿ ವಿದ್ಯಾರೇಖೆಯಿರುವದು ಅದು ದೀರ್ಘವಾಗಲು ಪೂರ್ಣದಿವ್ಯವಹುದು ಸ್ವಲ್ಪವಾಗಿ ಇರಲು ಅಲ್ಪವಿದ್ಯಾಪ್ರದವು (ಸಾಮುಲ. ೬೧-೮). [ಸಂ. ವಿದ್ಯಾರೇಖಾ]

ವಿದ್ಯಾರ್ಜನೆ (ನಾ). ವಿದ್ಯೆಯನ್ನು ಗಳಿಸುವಿಕೆ ; ಜ್ಞಾನಸಂಪಾದನೆ : ವಿದ್ಯಾರ್ಜನೆಗಾಗಿ ತವಕಿಸುವ ಆ ವಾಮನಮೂರ್ತಿ ಅವರಿಗೊಂದು ವಿಭೂತಿಯಾಗಿ ಕಂಡಿದ್ದ (ಹೊಸಕೃ. ೬೫). [ಸಂ. ವಿದ್ಯಾರ್ಜನ]

ವಿದ್ಯಾರ್ಥಿ (ನಾ). ವಿದ್ಯೆಯನ್ನು ಕಲಿಯಲು ಬಯಸುವವನು ; ವಿದ್ಯೆಯನ್ನು ಕಲಿಯುವ ಅಪೇಕ್ಷೆಯುಳ್ಳವನು : ನೀಮಾರ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ಪೆಮೆಂಬಟ್ಟೆಯೊಳ್ ಬಂದಿರಪ್ಪೊಡೆ . . . ನಿಮ್ಮನೋದಿಸಲಕ್ಕುಂ (ವಡ್ಡಾರಾ. ೩-೨೦) ; ಇದರಲ್ಲಿ ವಿದ್ಯಾರ್ಥಿಗಳ, ಉಪಾಧ್ಯಾಯರ ಸಹಕಾರವಿದೆ (ಶಿಕ್ಷದ. ೨೯೮). [ಸಂ. ವಿದ್ಯಾರ್ಥಿನ್]

ವಿದ್ಯಾರ್ಥಿತಪೋಧನ (ನಾ). ಗುರುಕುಲದಲ್ಲಿದ್ದುಕೊಂಡು ವಿದ್ಯೆಯನ್ನು ಕಲಿಯುತ್ತಾ ಆಜೀವವೂ ಬ್ರಹ್ಮಚಾರಿಯಾಗಿ ಉಳಿಯುವವನು ; ನೈಷ್ಠಿಕಬ್ರಹ್ಮಚಾರಿ : ಮಠದಲೋದುವ ವಿದ್ಯಾರ್ಥಿತಪೋಧನರ್ಗ್ಗಂ ವಿದ್ಯಾರ್ಥಿಮಾಣಿಯರ್ಗ್ಗಂ ಬಿಟ್ಟು ಗೆಟ್ಟೆ (ಎಕ.XI. ಚಿತ್ರದು. ೭೭-೧೨; 940). [ಸಂ.]

ವಿದ್ಯಾರ್ಥಿದೆಶೆ (ನಾ). ವಿದ್ಯಾಭ್ಯಾಸ ಮಾಡುತ್ತಿರುವ ಕಾಲ ,—ಅವಧಿ : ಅದಕ್ಕೆ ಅವಶ್ಯಕವಾದ ಬುನಾದಿಯನ್ನು ವಿದ್ಯಾರ್ಥಿದೆಶೆಯಲ್ಲಿರುವಾಗಲೇ ಭದ್ರವಾಗಿ ಕಟ್ಟಬೇಕು (ಹಸುಹೂ. ೨೦೯). [ವಿದ್ಯಾರ್ಥಿ + ದೆಶೆ$_1$ (< ದಸೆ)]

ವಿದ್ಯಾರ್ಥಿನಿ (ನಾ). ವಿದ್ಯೆಯನ್ನು ಕಲಿಯುವವಳು : ನನ್ನ ಮಗಳೂ ಇತಿಹಾಸದ ವಿದ್ಯಾರ್ಥಿನಿ (ವಂಶವೃ. ೩೪); ಈ ಅಧ್ಯಾಪಕರು ತನ್ನ ಪುಟ್ಟ ವಿದ್ಯಾರ್ಥಿನಿಗೆ . . . ವ್ಯಾಕರಣವನ್ನಷ್ಟೆ ಕಲಿಸುತ್ತಿರಲಿಲ್ಲ (ಇಪುಸ. ೮೭). [ಸಂ. ವಿದ್ಯಾರ್ಥಿನೀ]

ವಿದ್ಯಾರ್ಥಿನಿಲಯ (ನಾ). ಓದುವವರ ಸಲುವಾಗಿ ಕಟ್ಟಿದ, ಊಟ ಮತ್ತು ವಸತಿಯ ಸೌಲಭ್ಯಗಳನ್ನೊಳಗೊಂಡಿರುವ ಮನೆ : ಅವರ ಮಗ ಬೆಂಗಳೂರಿನ ವಿದ್ಯಾರ್ಥಿನಿಲಯವೊಂದರಲ್ಲಿ ಇದ್ದಾನೆ (ರೂಢಿ). [ಸಂ.]

ವಿದ್ಯಾರ್ಥಿಮಾಣಿ (ನಾ). ವಿದ್ಯಾಭ್ಯಾಸ ಮಾಡುತ್ತಿರುವ ಹುಡುಗ ,—ಬಾಲಕ : ಮಠದಲೋದುವ ವಿದ್ಯಾರ್ಥಿತಪೋಧನರ್ಗ್ಗಂ ವಿದ್ಯಾರ್ಥಿಮಾಣಿಯರ್ಗ್ಗಂ ಬಿಟ್ಟು ಗೆಟ್ಟೆ (ಎಕ. XI. ಚಿತ್ರದು. ೭೭-೧೨; 940) ; ವಿದ್ಯಾರ್ಥಿಮಾಣಿಯರೆಂದರೆ ಬಹುಶಃ

ಆ ಮಠದಲ್ಲಿ ಓದಿ ಅಧ್ಯಯನ ಮುಗಿದ ನಂತರ ಗೃಹಸ್ಥರಾಗತಕ್ಕವರು (ಕಶಾಅ. ೨೧೮).

[ವಿದ್ಯಾರ್ಥಿ + ಮಾಣಿ]

ವಿದ್ಯಾರ್ಥಿವೇತನ (ನಾ). ವಿದ್ಯಾಭ್ಯಾಸಮಾಡಲು ಅನುಕೂಲವಾಗುವಂತೆ ಸರ್ಕಾರ ಅಥವಾ ಶಿಕ್ಷಣಸಂಸ್ಥೆಯು ಬುದ್ಧಿಶಾಲಿಯಾದ ವಿದ್ಯಾರ್ಥಿಗೆ ಕೊಡುವ ಸಹಾಯಧನ : ಒಂದು ದಿನ ನನಗೆ ಎರಡು ತಿಂಗಳ ವಿದ್ಯಾರ್ಥಿವೇತನವಾಗಿ ಎರಡು ರೂಪಾಯಿ ಬಂತು (ಬಂಕಮ. XIII. ಗ್ರಂಥಕರ್ತನ ವಿನ್ನಹ). [ಸಂ.]

ವಿದ್ಯಾಲಯ (ನಾ). = ವಿದ್ಯಾನಿಕೇತನ : ಗಣಪತಿ ಹದಿನಾಲ್ಕುವರ್ಷಗಳಲ್ಲಿ ಆ ವಿದ್ಯಾಲಯವನ್ನೇ ಅರಗಿಸಿಕೊಂಡಿದ್ದಾನೆ (ಹೂಸಕ್ಷ. ೩೭). [ಸಂ.]

ವಿದ್ಯಾವಂತ (ಗು). ೧. ತಿಳಿದ ; ಬಲ್ಲ ; ಪರಿಣತಿಯನ್ನು ಹೊಂದಿದ : ವೀರಗಂಗ ಹೋಸಳದೇವರ ವಿದ್ಯಾವಂತರೂವಾರಿ ಪುಲಿ ಮಚ್ಚರಿಪ ಕುಮಾರ ಮಾಚಾರಿ (ಎಕ.V. ಬೇಲೂರು. ೪೦-೨; ಸು. 1120). (ನಾ). ೨. ವಿದ್ಯೆಯನ್ನು ಕಲಿತವನು ; ಸುಶಿಕ್ಷಿತ : ಅವರು ವಿದ್ಯಾವಂತರೂ, ಧೈರ್ಯಶಾಲಿಗಳೂ ಆಗಿದ್ದರು (ಚಂಗಾಶ್ಲೋ. ೧).

[ಸಂ. ವಿದ್ಯಾವತ್]

ವಿದ್ಯಾವಂತೆ (ನಾ). ಕಲಿತ ಹೆಣ್ಣು ; ತಿಳಿದವಳು : ಅವಳು ವಿದ್ಯಾವಂತೆಯಾದುದರಿಂದ . . . ತನ್ನ ಜೊತೆಗಾತಿಯರಿಗಿಂತ ಮೇಲ್ಮಟ್ಟದಲ್ಲಿದ್ದಳು (ಪುಸರು. ೯೩).

[ವಿದ್ಯಾವಂತ + - ಎ]

ವಿದ್ಯಾವತಿ (ನಾ). = ವಿದ್ಯಾವಂತೆ : ವೇಶ್ಯೆಯು . . . ವಿದ್ಯಾವತಿಯೂ, ಸುಂದರಿಯೂ, ಪಾಂಡುರಂಗನ ಭಕ್ತಳೂ ಆಗಿದ್ದಳು (ಕಭವಿ. ೨೧೫). [ಸಂ. ವಿದ್ಯಾವತೀ]

ವಿದ್ಯಾವಿಡಂಬನ (ನಾ). ಮಾಯಾವೇಷ ; ಮಾಯಾರೂಪ : ಆ ಮಹಾಭಾಗನ ತೋಳ್ ತೊಡರಲೊಡಮವಳ ವಿದ್ಯಾವಿಡಂಬನಂ ಬಿಟ್ಟು ಪಾಱೆ ಪೋದತ್ತಾಗಳ್ (ಲೀಲಾವ. ೧೪-೯೪). [ಸಂ.]

ವಿದ್ಯಾವಿತ್ತಮ (ನಾ). ಪಂಡಿತರಲ್ಲಿ ಶ್ರೇಷ್ಠನಾದವನು ; ಮಹಾವಿದ್ವಾಂಸ : ಚಕ್ರಿಯೊಳ್ ಮಗನಂ ಬೇಡಿದನೊಲ್ದನಿಲ್ಲ ಗುರು ವಿದ್ಯಾವಿತ್ತಮಂ ವಿತ್ತಮಂ (ಜಗವಿ. ೭-೧೫). [ಸಂ.]

ವಿದ್ಯಾವಿದ (ನಾ). ವಿದ್ಯೆಯನ್ನು ಬಲ್ಲವನು ; ವಿದ್ವಾಂಸ : ಅವಿಲಶಾಸ್ತ್ರ ವಿದ್ಯಾವಿದರಂ ಬಲಯುತರನಿಪ್ಪ ಋಕ್ಷಜಕುಲವಧು ನಳ ನೀಳರೆಂಬ ಸುತರಂ ಪಡೆದಳ್ (ಪಂಡಾಮಾ. ೧೦-೧೭೬). [ಸಂ. ವಿದ್ಯಾವಿದ್]

ವಿದ್ಯಾವಿನೋದ (ನಾ). ಕೌಶಲದಿಂದ ಕೂಡಿದ ಕೇಳಿ,—ಕ್ರೀಡೆ : ಪೂಜಮಟ್ಟು ದಖಿಳಪುರಜನಂ . . . ತರತರದ ವಿದ್ಯಾವಿನೋದದಿಂ (ಜೈಮಿಭಾ. ೩೩-೧೯). [ಸಂ.]

ವಿದ್ಯಾವಿರೋಧ (ನಾ). [ಕಾವ್ಯಮೀ] ಹತ್ತುಬಗೆಯ ಅರ್ಥದೋಷಗಳಲ್ಲಿ ಒಂದು ; ಶಾಸ್ತ್ರಕ್ಕೆ ವಿರುದ್ಧವಾದುದು : ವಿದ್ಯಾವಿರೋಧ – ಶಾಸ್ತ್ರ ಮುಂತಾದವುಗಳಿಗೆ (ದೇಶ ಕಾಲಾದಿಗಳಿಗೂ) ವಿರುದ್ಧವಾಗಿರುವುದು (ಕೃಬಿ. ೨೨೯).

[ಸಂ.]

ವಿದ್ಯಾವಿಹೀನ (ನಾ). ವಿದ್ಯೆಯಿಲ್ಲದವನು ; ಅಜ್ಞ : ಆ ಕಾಲದ ಬ್ರಾಹ್ಮಣರಲ್ಲಿ . . . ಕೇವಲ ವಿದ್ಯಾವಿಹೀನನೆನಿಸಿದವನೂ ತನ್ನ ನಿತ್ಯನೈಮಿತ್ತಿಕಕರ್ಮಗಳಿಗಾಗುವಷ್ಟಾದರೂ ವೇದವನ್ನು ಕಲಿಯದಿರುತ್ತಿರಲಿಲ್ಲ (ಕಭವಿ. ೩೦೪). [ಸಂ.]

ವಿದ್ಯಾವ್ಯಸನ (ನಾ). ಹತ್ತು ಬಗೆಯ ವ್ಯಸನಗಳಲ್ಲಿ ಒಂದು ; ವಿದ್ಯೆಯನ್ನು ಕಲಿಯಬೇಕೆಂಬ ಗೀಳು,--ಹಂಬಲ : ತನುವ್ಯಸನ . . . ವಿದ್ಯಾವ್ಯಸನ . . . ಕಾಷ್ಠವ್ಯಸನಗಳೆಂಬ ದಶವ್ಯಸನಗಳಂ ಹಸಗೆಟ್ಟು (ವಿವೇ. ೨೪೬). [ಸಂ.]

ವಿದ್ಯಾಶಾಲೆ (ನಾ). ವಿದ್ಯೆಯನ್ನು ಹೇಳಿಕೊಡುವ ಸಂಸ್ಥೆ ; ಪಾಠಶಾಲೆ: ದೇವಾಲಯದಲ್ಲೇ ವಿದ್ಯಾಶಾಲೆಯಿದ್ದುದರಿಂದ ಅವನ ದೇವರ ಸೇವೆಗೆ ಮತ್ತಷ್ಟು ನಿರಾತಂಕವಾಗಿತ್ತು (ಕಭವಿ. ೨೩೯). [ಸಂ. ವಿದ್ಯಾಶಾಲಾ]

ವಿದ್ಯಾಶುಲ್ಕ (ನಾ). ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸಕ್ಕಾಗಿ ಗುರುವಿಗೆ ಅಥವಾ ವಿದ್ಯಾಸಂಸ್ಥೆಗೆ ಕೊಡಬೇಕಾದ ಹಣ : ಪ್ರಾಚೀನಕಾಲದಲ್ಲಿ . . . ವಿದ್ಯಾಶುಲ್ಕದ ಹೆಸರಿರಲಿಲ್ಲ (ಆರ್ಯಧ. ೮೩). [ಸಂ.]

ವಿದ್ಯಾಸತ್ರ (ನಾ). = ವಿದ್ಯಾಶಾಲೆ : ಉತ್ತರೇಶ್ವರದೇವರ ಮಠದಲೋದುವ ಕೇಳುವ ತಪೋಧನರ್ಗ್ಗ೦ . . . ವಿದ್ಯಾಸತ್ರಕ್ಕೆನ್ದು . . . ಕೊಟ್ಟ ೩೬ ಬಾಡದ ಬಳಿಯ ಮಾರಸಿಂಗನ ಪಳ್ಳಿ (ಪೌಶಾ. XX. ೪೦-೨೨; 1066). [ಸಂ.]

ವಿದ್ಯುಚ್ಚಿಕಿತ್ಸೆ (ನಾ). "ವಿದ್ಯುತ್ತಿನಿಂದ ರೋಗಗಳಿಗೆ ಚಿಕಿತ್ಸೆ ಮಾಡುವುದು" (Electropathy. ಇಂಡಿ) : ನರದೌರ್ಬಲ್ಯದಿಂದ ಬಳಲುತ್ತಿರುವ ಅವನಿಗೆ ವಿದ್ಯುಚ್ಚಿಕಿತ್ಸೆಯನ್ನು ನೀಡಿ ಗುಣವಡಿಸುತ್ತಿದ್ದಾರೆ (ರೂಢಿ). [ಸಂ. ವಿದ್ಯುಚ್ಚಿಕಿತ್ಸಾ]

ವಿದ್ಯುಚ್ಚಿತಾಗಾರ (ನಾ). ವಿದ್ಯುಚ್ಛಕ್ತಿಯಿಂದ ಹೆಣವನ್ನು ಸುಡುವ ಜಾಗ : ನಗರಮಧ್ಯದಲ್ಲಿರುವ ವಿದ್ಯುಚ್ಚಿತಾಗಾರವನ್ನು ಸ್ಥಳಾಂತರಿಸಬೇಕೆಂದು ಹಲವರು ಹೇಳುತ್ತಿದ್ದಾರೆ (ರೂಢಿ). [ಸಂ.]

ವಿದ್ಯುಚ್ಛಕ್ತಿ (ನಾ). ವಿದ್ಯುತ್ತಿನಿಂದ ಉಂಟಾಗುವ ಶಕ್ತಿ ; ಎಲೆಕ್ಟ್ರಿಸಿಟಿ : ಕರೋಬಾಮಣಿಗೆ ಗ್ರೀಕ್ ಭಾಷೆಯಲ್ಲಿ ಎಲೆಕ್ಟ್ರಾನ್ ಎಂದು ಹೆಸರು. ಅದನ್ನು ಉಜ್ಜಿದರೆ ಉಂಟಾಗುವ ಗುಣಕ್ಕೆ ಎಲೆಕ್ಟ್ರಿಸಿಟಿ (Electricity) ಎಂಬ ಹೆಸರನ್ನು ಯೂರೋಪಿನ ಪಂಡಿತರು ಕೊಟ್ಟರು . . . ಇದಕ್ಕೆ ನಮ್ಮಲ್ಲಿ ವಿದ್ಯುಚ್ಛಕ್ತಿ ಅಥವಾ ವಿದ್ಯುತ್ತು ಎಂಬ ಹೆಸರು ಬಳಕೆಗೆ ಬಂದಿದೆ (ಭಾತವಿ. ೩೫೩). [ಸಂ.]

ವಿದ್ಯುಜ್ಜನಕ (ಗು). ೧. ವಿದ್ಯುತ್ತನ್ನು ಉತ್ಪಾದಿಸುವ : ಮೇಲೆ ಹೇಳಿದ ಚಾಲಕಗಳಂತೆಯೇ ಕಾಣುವ ವಿದ್ಯುಜ್ಜನಕಯಂತ್ರಗಳನ್ನು(Dynamos) ಕಟ್ಟಿರುವರು (ಭಾತವಿ. ೩೩೮). (ನಾ). ೨. ವಿದ್ಯುತ್ತನ್ನು ಉತ್ಪಾದಿಸುವಂಥದು : ಎರಡು ಯಂತ್ರಗಳನ್ನು ಒಂದೇ ಅಕ್ಷದ ಮೇಲೆ ತಿರುಗುವಂತೆ ಜೋಡಿಸಿರುತ್ತಾರೆ. ಒಂದಕ್ಕೆ ಟರ್ಬೈನ್—ಎಂದು ಹೆಸರು . . . ಇನ್ನೊಂದು ವಿದ್ಯುಜ್ಜನಕ (Generator) (ಶಲ್ಯಸಾ. ೨೩೯). [ಸಂ.]

ವಿದ್ಯುತ್ಕಿರಣ (ನಾ). ಬೆಳಕಿನ ಕಿರಣ,—ಕದಿರು : ಸೂರ್ಯನ ಒಳಭಾಗದಲ್ಲಿ ಇರುವ ಧಾತುಗಳೆಲ್ಲಾ ಶಾಖ ಮತ್ತು ಬೆಳಕಾಗಿ ಪರಿಣಮಿಸುತ್ತವೆ. ಈ ಶಾಖ ಮತ್ತು ಬೆಳಕೇ ಕೋಟ್ಯನುಕೋಟ ವರ್ಷಗಳಿಂದ ವಿದ್ಯುತ್‌ಕಿರಣಗಳಾಗಿ ಪ್ರಸಾರವಾಗುತ್ತಿವೆ (ಆಕಾಶ. ೧೧). [ಸಂ.]

ವಿದ್ಯುತ್ಕೇಂದ್ರ (ನಾ). ವಿದ್ಯುತ್ತನ್ನು ಉತ್ಪಾದಿಸುವ ಮುಖ್ಯಸ್ಥಳ : ಇಬ್ಬರೂ ಜತೆ ಸೇರಿ ಶಿವಸಮುದ್ರದ ವಿದ್ಯುತ್‌ಕೇಂದ್ರಕ್ಕೆ ಹೋಗಿ ತಮ್ಮ ವ್ಯಾಸಂಗದ ಕೊನೆಯ ಹಂತವನ್ನು ಮುಗಿಸಲು ನಿರ್ಧರಿಸಿದ್ದಾರೆ (ಜಗಶ. ೧೩) ; ವಿದ್ಯುತ್ಕೇಂದ್ರದಲ್ಲಿ (Generating Station) ಎರಡು ಯಂತ್ರಗಳನ್ನು ಒಂದೇ ಅಕ್ಷದ ಮೇಲೆ ತಿರುಗುವಂತೆ ಜೋಡಿಸಿರುತ್ತಾರೆ (ಶಲ್ಯಸಾ. ೨೩೯). [ಸಂ.]

ವಿದ್ಯುತ್ಪಂತಿ (ನಾ). ವಿದ್ಯುಚ್ಛಕ್ತಿ ಪ್ರವಹಿಸುತ್ತಿರುವ ತಂತಿ : ನಾವೆಲ್ಲಾದರೂ, ತುಂಬಾ ಶಕ್ತಿ ಪ್ರವಹಿಸುತ್ತಿರುವ ವಿದ್ಯುತ್‌ತಂತಿಗಳನ್ನು ಹಿಡಿದರೆ ಮರಣವೇ ನಿಶ್ಚಯ (ಬಾಲಪ್ರ. III. ೧೨೩೬). [< ಸಂ. ವಿದ್ಯುತ್ಪಂತ್ರೀ]

ವಿದ್ಯುತ್ತು (ನಾ). ೧. ಮಿಂಚು : ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀನರ್ತನಂ (ಆದಿಪು. ೬-೭೨); ವಿದ್ಯುನ್ನಟೀಕರ್ಬುರಜವನಿಕೆಯೋ . . . ಮೇಣೆನೆ ನೆಗೆದುದಳಶ್ಯಾಮಳಂ ಮೇಘಜಾಳಂ (ಚಂದ್ರಪ್ರ. ೪-೩೧) ; ವಿದ್ಯುತ್ ಎಂದರೆ ಮಿಂಚು (ಮುಂಬಯಿ. ೫-೨೦೨). ೨. ಸಿಡಿಲು. ೩. = ವಿದ್ಯುಚ್ಛಕ್ತಿ : ಇದಕ್ಕೆ ನಮ್ಮಲ್ಲಿ ವಿದ್ಯುಚ್ಛಕ್ತಿ ಅಥವಾ ವಿದ್ಯುತ್ತು ಎಂಬ ಹೆಸರು ಬಳಕೆಗೆ ಬಂದಿದೆ (ಭಾತವಿ. ೩೫೩). ೪. ಒಬ್ಬ ರಾಕ್ಷಸನ ಹೆಸರು : ವಿದ್ಯುತ್ತು ದಿವಾಕರ . . . ಯಜ್ಞವೇತರಂಬ ದ್ಯಾದಶರಾಕ್ಷಸರೇ ಕ್ರಮದಿಂದವರವರ ಮೃಗಾವಲರು (ವವೇ. ೨೧೬). [ಸಂ. ವಿದ್ಯುತ್]

ವಿದ್ಯುತ್ಪ್ರವಾಹ (ನಾ). ೧. ವಿದ್ಯುಚ್ಛಕ್ತಿಯು ಪ್ರವಹಿಸುವುದು : ಗುಂಡಿಯನ್ನು ಒತ್ತಿದ ಕೂಡಲೆ ತಂತಿಗಳಲ್ಲಿ ವಿದ್ಯುತ್ಪ್ರವಾಹವು ಉಂಟಾಗುತ್ತದೆ (ರೂಢಿ). ೨. ಮಿಂಚಿನ ಹರಿವು ,—ಓಟ : ಆ ದಾವಾಗ್ನಿ ಘನನಿಬಿಡಘೋರಾಂಧಕಾರತೀರದ ಮಧ್ಯೆ ಪ್ರವಹಿಪಾ ವಿದ್ಯುತ್ಪ್ರವಾಹ ದೈತ್ಯಾಕೃತಿಯ ವೋಲ್ ಕೆದರಿದುದು ದಿಕ್ಕುದಿಕ್ಕಿಗೆ ತನ್ನ ಕೇಸುರಿಯ ಕೇಶಪಾಶದ ರಾಶಿರಾಶಿ ವಿನ್ಯಾಸಮಂ (ಶ್ರೀರಾಮಾ. ೧೨೩-೩೧೯). [ಸಂ.]

ವಿದ್ಯುತ್ಸಂಚಾರ (ನಾ). ವಿದ್ಯುತ್ತಿನ ಚಲನೆ ,—ಸಂಚಾರ : ಎರಡು ಬೇರೆ ಲೋಹಗಳಿಂದ ಮಾಡಿದ ವಿದ್ಯುನ್ಮಾರ್ಗದಲ್ಲಿ (Electric Circuit) ಒಂದು ಲೋಹವನ್ನು ಕಾಯಿಸಿದರೆ ವಿದ್ಯುನ್ಮಾರ್ಗದಲ್ಲಿ ವಿದ್ಯುತ್ಸಂಚಾರವಾಗುತ್ತದೆ (ಶಲ್ಯಸಾ. ೨೨೬). [ಸಂ.]

ವಿದ್ಯುದುಪಕರಣ (ನಾ). ವಿದ್ಯುಚ್ಛಕ್ತಿಯಿಂದ ಕಾರ್ಯಮಾಡುವ ಸಲಕರಣೆ : ವಿದ್ಯುದುಪಕರಣಗಳೊಂದಿಗೆ ಕೆಲಸ ಮಾಡುವಾಗ ಎಚ್ಚರಿಕೆಯಿಂದಿರಬೇಕು (ರೂಢಿ). [ಸಂ.]

ವಿದ್ಯುದ್ದೀಪ (ನಾ). ವಿದ್ಯುಚ್ಛಕ್ತಿಯಿಂದ ಬೆಳಗುವ ದೀಪ : ಆ ದಿನ ರಸ್ತೆಯಲ್ಲಿದ್ದ ವಿದ್ಯುದ್ದೀಪಗಳೆಲ್ಲ ಕೆಟ್ಟುಹೋಗಿದ್ದುವು (ಕವಪು. ೪-೭೭). [ಸಂ.]

ವಿದ್ಯುದ್ಭ್ರಾಂತ (ನಾ). ನೃತ್ಯದ ಒಂದು ಭಂಗಿ ; IP "ಕಾಲನ್ನು ಹಿಂದುಗಡೆ ತಲೆಗೆ ಮುಟ್ಟಿಸಿ ಎಲ್ಲ ಪಾರ್ಶ್ವಗಳಲ್ಲೂ ಸುತ್ತಿಸಿ ಮುಂದಕ್ಕೆ ನೀಡುವುದು" (ಲಾಸ್ಯರಂ. ೩೧೯ ಗದ್ಯಾನುವಾದ) : ತಲಪುಷ್ಪಪುಟ, ಲೀನ, ವಿವರ್ತಿತ, ಲಲಿತೋರು . . . ನಿಶುಂಭಿತ, ವಿದ್ಯುದ್ಭ್ರಾಂತ, ಗಂಗಾವತರಣ - ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ವ). [ಸಂ.]

ವಿದ್ಯುದ್ವಲಯ (ನಾ). ಮಿಂಚಿನ ವರ್ತುಲ,—ಪರಿಧಿ : ರೋದೋಂತಂ ಕೂಡೆ ರತ್ನಜ್ವಲಗಿರಿಕುಲದಿಂ ತೂಂತನಿಟ್ಟಂತೆ ನೀಲಾಂಭೋದಂಗಳ್ ಕೂಡೆ ವಿದ್ಯುದ್ವಲ[ಪಾಠಾಂ.ಳ]ಯಮನೊಳಕೊಂಡಂತೆ . . . ಅಗರ್ವಿಂದಾದಂ ಚೆಲ್ವಾಯ್ತು ಚಕ್ರದ್ವಿಪಘಟೆ ನಿಶಿತಾಸ್ತ್ರಾಂಶುಜಾಲಾವಲೀಢಂ (ಆದಿಪು. ೧೪-೯೭). [ಸಂ.]

ವಿದ್ಯುನ್ಮಾಲೆ (ನಾ). ೧. ಮಿಂಚಿನ ಹಾರ. ೨. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಎಂಟನೆಯದಾದ ಅನುಷ್ಟುಭ್ ಛಂದಸ್ಸಿನ ಒಂದು ವೃತ್ತ : ಪಿಂತುರ್ವೀಯುಗ್ಮಂಗಳ್ ಬರ್ಬಿಂ ಮುಂತೀಶಾನದ್ವಂದ್ವಂ ನಿಲ್ಪುಂ ಸಂತಂ ನೀ ಕೇಳಂಭೋಜಾಕ್ಷೀ ಕಾಂತಂ ವಿದ್ಯುನ್ಮಾಲಾವೃತ್ತಂ (ಛಂದೋಂಬು. ೨-೯೨). [ಸಂ. ವಿದ್ಯುನ್ಮಾಲಾ]

ವಿದ್ಯುಲ್ಲತೆ (ನಾ). ೧. ಮೋಡಗಳ ಘರ್ಷಣೆಯಿಂದ ಅಂಕುಡೊಂಕಾಗಿ ಹರಿಯುವ ಮಿಂಚು ; ಬಳ್ಳಿಮಿಂಚು : ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱೞೋಲ್ಕಂಜುವೋಲ್ಕೋಱಿ ಬೇಗಂ ಪಿರಿಗುಂ ಶ್ರೀರೂಪ ಲೀಲಾಧನ ವಿಭವಮಹಾರಾಶಿಗಳ್ ನಿಲ್ಲವಾರ್ಗ್ಗಳ್ (ಎಕ. II,೮೮-೧; ಸಿ. 700) ; ಹಾರಲತಾ ವಿದ್ಯುಲ್ಲತೆ ಚಾರುಪಯೋಧರಸಮೀಪದೊಳ್ ಪೊಳೆಯೆ (ಆಪಿಪು. ೨-೩೪). ೨. ವಿದ್ಯುಚ್ಛಕ್ತಿ ; ವಿದ್ಯುತ್ತು : ಹಡಗಗಳಲ್ಲಿಯೂ ಉಗಿಬಂಡಿಗಳಲ್ಲಿಯೂ ಬೆಂಕಿಗೆ ಬದಲಾಗಿ ವಿದ್ಯುಲ್ಲತೆಯನ್ನು ಪ್ರಯೋಗಿಸುವ ಕ್ರಮವು ಅಲ್ಪಸ್ವಲ್ಪವಾಗಿ ಸದ್ಯಕ್ಕೆ ಆರಂಭವಾಗಿರುತ್ತದೆ (ಮುಂಬಯಿ. ೫-೯೫) ; ದಿಕ್ಕಿನಿಂದ ದಿಕ್ಕಿಗೆ ಒಲಿದಾಡುವ ವಿದ್ಯುಲ್ಲತೆಯ ಬೀಸಣಿಕೆಯಂತೆ ತರುಣನು ಒಮ್ಮೆ ತಂಗಿಯ ಕಡೆಗೆ ಒಮ್ಮೆ ಪತ್ನಿಯ ಕಡೆಗೆ ಕರವಸ್ತ್ರವನ್ನು ಬೀಸುತ್ತಿದ್ದ (ಸಮಾಜೀ. ೫೫೭). [ಸಂ. ವಿದ್ಯುಲ್ಲತಾ]

ವಿದ್ಯುಲ್ಲೇಖೆ (ನಾ). ಮಿಂಚಿನ ಗೆರೆ,—ರೇಖೆ : ವನಚರಿ ಬರೆ ವಿದ್ಯುಲ್ಲೇಖೆ ಬರ್ಪಂತೆ ಬೆನ್ನಂ (ಆಪಿಪು. ೯-೩೨); ವಿದ್ಯುಲ್ಲೇಖಾನಿಕಾಯಂ ನವಘನಸಮಯಶ್ರೀಗೆ ಮಲ್ಲೀಚಯಂ ಚೈತ್ರೋದ್ಯಾನಶ್ರೀಗೆ ದೀಪ್ತಪ್ರತತಿ ಶಶಿಕಲಾಶ್ರೀಗೆ. . . ಒದವಿಸುವವೋಲ್ (ಲೀಲಾವ. ೧೧-೭೧). [ಸಂ. ವಿದ್ಯುಲ್ಲೇಖಾ]

ವಿದ್ಯೆ (ನಾ). ೧. ಅರಿವು ; ಜ್ಞಾನ ; ಅಭಿಜ್ಞತೆ : ಒಡೆಯಂ ಕೂಸಿಂಗದೊಂದೇ ಕುಲದ ಚಲದ ವೆಂಪೊಂದೆ ಚೆಲ್ವೊಂದೆ ಸಂದೊಳ್ನುಡಿಯೊಂದೇ ವಿದ್ಯೆಯೊಂದೇ (ಆಪಿಪು. ೪-೨೭) ; ಒಡಲೊಳಡಗಿದ ವಿದ್ಯೆ ಒಡಗೂಡಿ ಬರುತಿರಲು ಒಡಹುಟ್ಟಿದವರು ಕಳ್ಳರು ನೃಪರದನು ಪಡೆಯರೆಂತೆಂದ (ಸರ್ವಜ್ಞ. ೧೩೨೧). ೨. (ಯಾವುದಾದರೊಂದು ಶಾಸ್ತ್ರದ ಬಗೆಗಿರುವ)ಆಳವಾದ ಪಾಂಡಿತ್ಯ,—ವಿದ್ವತ್ತೆ : ಆ ಪ್ರತಿಭಾನಂ ಶಕ್ತಿಲೋಕಾಗಮ ಸಕಲಕಲಾವೇದನಂ ವಿದ್ಯೆ ಶಾಸ್ತ್ರಾನ್ವಿತನಪ್ಪಂ ವೃದ್ಧನಾಲಸ್ಯಮನುಟ್ಟೆದೆ ಸಪ್ಪುದ್ಯೋಗಮಭ್ಯಾಸಕರ್ಮಂ (ಕಾವ್ಯಾವ. ೪೨೪) ; ಇಂತು ವಿದ್ಯೆ ಗುಣಜ್ಞಾನ ಧರ್ಮ ಆಚಾರಶೀಲಂಗಳ ನಮ್ಮ ಕೂಡಲ ಸಂಗನ ಶರಣರು ಸಾಧಿಸಿದ ಸಾಧನೆಯನೇ ಸಾಧಿಸುವುದು (ಬಸವ. ೬೧೩). ೩. ಓದು ; ಕಲಿಕೆ ; ಶಿಕ್ಷಣ : ಮಕ್ಕಳಿಗೆ ಆರಂಭದಲ್ಲೇ ಸರಿಯಾದ ವಿದ್ಯೆಯನ್ನು ಕಲಿಸಬೇಕು (ರೂಢಿ). ೪. ಆಧ್ಯಾತ್ಮಿಕಜ್ಞಾನ; ಆತ್ಮವಿದ್ಯೆ : ಸರಿಯಾಗಿ ವಸ್ತುಸ್ವರೂಪವನ್ನು ನಿಶ್ಚಯಿಸುವ ತಿಳಿವಳಿಕೆಗೆ 'ವಿದ್ಯೆ' ಎಂದು ಹೆಸರು (ಬ್ರಹ್ಮಭಾ. ೨೨). ೫. ಕಣ್ಕಟ್ಟು ; ಯಕ್ಷಿಣಿ. ೬. ದುರ್ಗೆ. ೭. [ಜೈನ] ಅಲೌಕಿಕ ಶಕ್ತಿ ; ಅಸಾಧಾರಣವಾದ ಶಕ್ತಿ : ಆತನ ವಿದ್ಯೆಯೆಲ್ಲಮಂ ಕೊಟ್ಟೆಂಕಿ ಪನ್ನೆರಡುವರುಷಂಬರಂ ಭೂಮಿಗೋಚರನಾಗಿರೆಂದು ಶಾಪಂಗೊಟ್ಟೊಡೆ (ವಡ್ಡಾರಾ. ೧೫೮-೫). 'ವಿದ್ಯಾಚ್ಛೇದಂಗೆಯ್' ಪರಾ. ೮. [ವಿಶಿಷ್ಟಾ] ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರ ಮುಂತಾದುವುಗಳಿಗೆ ಸಾಧನವಾಗಿ ಸತ್ತ್ವಗುಣಪ್ರಧಾನವಾಗಿರುವ ಈಶ್ವರಶಕ್ತಿ : ಲೀಲೆಯಿಂ ಸರ್ವಜ್ಞತಾದಿಯಲೆಸೆವ ಪರಮಾತ್ಮ ಸತ್ವರಜತಮವೆಂಬ ಮಾಯಾಶಕ್ತಿಯ ಗುಣಂಗಳಲಿ . . . ವಿದ್ಯಾವಿದ್ಯೆಯೆಂದೆರಡಾಗಿ ತೋಱಿಹುದು (ಅಮೃತ. ೫-೫). ೯. ಜೀವನು ಊರ್ಧ್ವಲೋಕಸಾಧನೆಗಾಗಿ ಸಾಧಿಸಬೇಕಾದ ಗುಣಗಳಲ್ಲಿ ಒಂದು : ವಿರತಿ ವಿವೇಕ ವಿತರಣ ಬುದ್ಧಿ ಸಿದ್ಧಿ ವಿದ್ಯಾ ಶಮ . . . ನಿಶ್ಚಯ ಮುಂತಾದ ಸಾತ್ವಿಕಗುಣಂಗಳಿಂ ಸುವಿಮಹಿತೋರ್ಧ ಲೋಕಂಗಳಂ ಸಾರ್ದು (ವಿವೇಕ. ೨೪೭). ೧೦. ವ್ಯೂಹರೂಪನಾದ ನಾರಾಯಣನ ನಾಲ್ಕು ರೂಪಗಳಲ್ಲಿ ಒಂದು ; ಅನಿರುದ್ಧ : ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ನಾಲ್ಕು ರೂಪಗಳಿಂದ ಶ್ರೀಪರಮಾತ್ಮನು ವಿದ್ಯೆ, ಬುದ್ಧಿ, ಸಿದ್ಧಿ, ಪ್ರಸಿದ್ಧಿಯೆಂಬ ನಾಲ್ಕು ಹೆಸರುಗಳನ್ನು ಪಡೆಯುವವನಾದರೂ ಅನವದ್ಯನಾಗಿರುವನು (ಹಸಾರ. ೩-೬ ತಾತ್ಪರ್ಯ). ೧೧. ವೈದಿಕ ಉಪನಿಷತ್ತುಗಳಲ್ಲಿ ಉಪಾಸನಾಕಾಂಡ ಪ್ರಸಂಗದಲ್ಲಿ ನಿರೂಪಿಸಲಾಗಿರುವ ಸಾಧನಕ್ರಮ : ಈ ಉಪನಿಷತ್ತುಗಳಲ್ಲಿ ವಿಶ್ವದ ಸೃಷ್ಟಿ ಸ್ಥಿತಿ ಪ್ರಳಯಗಳ ವಿಷಯಗಳನ್ನು ವಿಮರ್ಶಿಸಿರುವುದಲ್ಲದೆ ಪರಮಾತ್ಮನನ್ನು ಉಪಾಸನೆ ಮಾಡುವ ಕ್ರಮಗಳನ್ನೂ ಪ್ರಧಾನವಾಗಿ ನಿರೂಪಿಸಿರುತ್ತಾರೆ. ಇವುಗಳನ್ನೇ ವಿದ್ಯೆಗಳೆಂದು ಕರೆಯುವುದು (ಭಾರತ. ೨೬೪). ೧೨. [ಶೈವ] ಅಶುದ್ಧಾಧ್ವದ ಸೃಷ್ಟಿಕ್ರಮದಲ್ಲಿರುವ ಮಾಯಾತತ್ತ್ವದ ಐದು ಪ್ರಕಾರಗಳಲ್ಲಿ ಒಂದು : ಅಶುದ್ಧ ಸೃಷ್ಟಿಯಲ್ಲಿ ಮಾಯಾತತ್ತ್ವವು ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಎಂದು ಪಂಚವಿಧವಾಗಿ ಪರಿಣಮಿಸುವುದು (ಹಿಂದಸಾ. ೨೯೬). 'ಚೌಷಟ್ಟಿಕಲೆ' ಪರಾ.

ವಿದ್ಯಾವಿರಿಂಚನ = ವಿದ್ವತ್ತಿನಲ್ಲಿ ಬ್ರಹ್ಮನಂತಿರುವವನು ; ಒಂದು ಬಿರುದು : ಸಮಸ್ತವಿದ್ಯಾವಿರಿಂಚ್ಯನಂ ಸುವರ್ಣ್ಣಗರುಡಧ್ವಜಂ (ಸೌಗಾ. XX, ೫೦-೫; 11ನೆಯ ಶತ). [ಸಂ. ವಿದ್ಯಾ]

ವಿದ್ಯೆವಾರಿಧಿ (ನಾ). ಸಾಗರದಷ್ಟು ಆಳವಾದ ವಿದ್ಯೆಯನ್ನು ಒಳಗೊಂಡವನು : ಗಜಮುಖನೆ . . . ರಜತಗಿರಿಗೊಡೆಯನ ಕುಮಾರನೆ ವಿದ್ಯೆವಾರಿಧಿಯೆ (ಕುಮಾಅ. ೧-೪). [< ಸಂ. ವಿದ್ಯಾವಾರಿಧಿ]

ವಿದ್ಯೋತ (ಗು). ೧. ಹೊಳೆಯುವ ; ಪ್ರಕಾಶಿಸುವ. (ನಾ). ೨. ಬೆಳಕು ; ಕಾಂತಿ ; ಪ್ರಕಾಶ : ಬಲಧೂಲೀವ್ರಾತಮೇಘಪ್ರಕರತಿಮಿರದೊಳ್ ಶಸ್ತ್ರಜಾಲಾಂಶು ವಿದ್ಯುತ್‌ಕುಲವಿದ್ಯೋತಂಗಳಿಂದಂ . . . ಉಭಯಬಲಂ ಕಂಡುವೊಂದೊಂದನಾಗಳ್ (ಆಪಿಪು. ೧೪-೯೬). ೩. ಶೋಭೆ ; ವಿಜೃಂಭಣೆ : ತನ್ನ ನಾಲ್ವರ್ ತಮ್ಮಂದಿರೊಡನೆ ಮಂಗಳವಸದನಂಗೊಡು ಮಂಗಳಪ್ರಧಾನೋಚಿತವಿಜಯಗಜಮನೇಱಿ ವಿದ್ಯೋತಮಾಗಿ ದಕ್ಷಿಣಾವರ್ತಮಪ್ಪ ಹೋಮಾಗ್ನಿಯಂ ಬಲಂಗೊಡು (ಪಂಪಭಾ. ೯-೧೫ ವ). ೪. ಪ್ರಸಿದ್ಧಿ ; ಖ್ಯಾತಿ : ನಿಜನಾಮಾಂಕ ವಿದ್ಯೋತಮಾಗಲ್ಕಿವು ನಾನಾಶಾಸನಂ ಸತ್ಯಕ್ತಿ ವನಿತೆಗಿವೌಚಿತ್ಯಮೆಂದಿತ್ತನತ್ಯುತ್ಸವದಿಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜ ಕ್ಷಿತೀಶಂ (ಕಾದಂಬಾ. ೮೨೩). [ಸಂ.]

ವಿದ್ಯೋದ್ಯೋಗ (ನಾ). ವಿದ್ಯಾಭ್ಯಾಸದಲ್ಲಿರುವ ಆಸಕ್ತಿ, — ಶ್ರದ್ಧೆ : ಶ್ರೀಗಧಿಪತಿ . . . ವಿಪ್ರತನಯರ ವಿದ್ಯೋದ್ಯೋಗಕ್ಕೆ ಮೆಚ್ಚಿ ತಲೆಯಂ ತೂಗಿದಂ (ಸುಕುಮಾ. ೩-೧). [ಸಂ.]

ವಿದ್ರ (ನಾ). (?) : ಬಲವದ್ಭದ್ರಾತಿ ವಿದ್ರಂ ಪ್ರಮಥಕರಣವೃಂದಂ ವೃಷೇಂದ್ರಂ ಗಣೇಂದ್ರಂ (ಹಮ್ಮೀರ. ೧-೫). [ಸಂ.?]

ವಿದ್ರಧಿ (ನಾ). ದೇಹದೊಳಗಡೆ ಕೀವು ತುಂಬಿ ಆದ ಕುರು,—ಗಡ್ಡೆ : ರವಿಚಂದ್ರರ್ ನೆಲಸಿರ್ದೊಡಸ್ತಗೃಹದೊಳ್ ಸೂರ್ಯಾತ್ಮಜಂ ನೋಡೆ . . . ಸಂಭವಿಕುಂ ವಿದ್ರಧಿ (ಜಾತಕ. ೨೧-೧೧ ಅಡಿಟ) ; ಚತುಷಷ್ಟಿ ಮರೀಚಾದಿಲೇಹ್ಯ . . . ಇದರಿಂ ಪಾಸ, ಶ್ವಾಸ . . . ವಿದ್ರಧಿ, ಪ್ಲೀಹ, ಹೊಟ್ಟೆಶೂಲೆ, ಮುಬರೋಗ, ಕ್ರಿಮಿರೋಗ ಸಹ ಪರಿಹಾರವಹುದು (ಸಕವೈ. ೨೧೮). [ಸಂ.]

ವಿದ್ರವ (ನಾ). ೧. ಓಡಿಹೋಗುವಿಕೆ ; ಪಲಾಯನ : "ಪ್ರದ್ರಾವಃ . . . ವಿದ್ರವಃ, ದ್ರವಃ, ಅಪಕ್ರಮಃ, ಅಪಯಾನಂ—ಆ ಪಲಾಯನವಾಗುವದಕ್ಕೆ ಹೆಸರು" (ಸಿದ್ಧಾಂತ. ೨೭೧). ೨. ಕ್ಷೋಭೆ ; ತಳಮಳ. ೩. ಸೋರುವಿಕೆ ; ಒಸರುವಿಕೆ. ೪. ಕರಗುವಿಕೆ ; ದ್ರವಿಸುವಿಕೆ. ೫. ನಿಂದ; ಬಯ್ಗುಳು. ೬. ಪ್ರಜ್ಞೆ ; ಬುದ್ಧಿಶಕ್ತಿ. ೭. ಅಳವು ; ವಿನಾಶ. ೮. [ಕಾವ್ಯಮಿಾ]ಸಂಸ್ಕೃತನಾಟಕದ ಸಂಧ್ಯಂಗಗಳಲ್ಲಿ ಒಂದು. [ಸಂ.]

ವಿದ್ರವಣ (ನಾ). ೧. ನಾಶ ; ಧ್ವಂಸ : ರುದ್ರರೂಪದ ದೈತ್ಯ ಬಂದನು ರಾಮನಿದ್ದೆಡೆಗೆ ನಿರ್ವಿತರನಾಲಿಸುತ ಮೆಲ್ಲನೆ ವಿದ್ರವಣವನು ಮಾಳ್ಪೆನೆನುತಾ ಕ್ಷುದ್ರರೂಪವ ತಾಳಬೇಕೆನುತಸುರನನುವಾದ (ಕಾಶಿಕಾ. ೩೯-೨೮). ೨. ಗದಾಯುದ್ಧದಲ್ಲಿ ಬಳಸುವ ಒಂದು ಬಗೆಯ ಪಟ್ಟು ,—ಪರಸೆ : 'ನವವಿದ್ರವಣ' ಪರಾ. [ಸಂ.]

ವಿದ್ರಾಧ್ಯ (ನಾ). (?): ಮದಪರಕರುಣಾಪಾಂಗತುಂಗಂ ಮೃಡಾಂಗಂ ವಿದ್ರಾಧ್ಯಂ ಜಾಡ್ಯದೂರಂ (ಹಮ್ಮೀರ. ೧-೯). [?]

ವಿದ್ರಾವ (ನಾ). ೧. ಓಟ ; ಪಲಾಯನ. ೨. ಕರಗುವಿಕೆ. [ಸಂ.]

ವಿದ್ರಾವಣ (ಗು). ೧. ಹೊಡೆದೋಡಿಸುವ ; ಅಟ್ಟುವ : ಮಹೀವಲ್ಲಭ ನೋಂತಳಿನಿಸಿದರಿನ್ಯಪಮದವಿದ್ರಾವಣವಿಜಯಭುಜಂ(ಮಲ್ಲಿಪ. ೩-೨);ಸುಕವಿನಿಕರ ದಾರಿದ್ರ್ಯವಿದ್ರಾವಣದ್ರಮಿಣಧಾರಧಾರಾಧರಕರಾಗ್ರಪರಿಹತಸುರಧರಾಯಹಪ್ರಭಾವನುಂ . . . ಎನಿಸಿ (ರಾಜಶೇ. ೫-೧೪). (ನಾ). ೨. ಓಡಿಸುವಿಕೆ ; ಅಟ್ಟುವಿಕೆ. ೩. ಲೋಹ ಮುಂತಾದುವನ್ನು ಕರಗಿಸುವಿಕೆ. ೪. ನಾಶ ; ಅಳವು. ೫. ನಾಶಗೊಳಿಸುವವನು ; ಧ್ವಂಸಮಾಡುವವನು : ತದುಪದ್ರವಪ್ರತೀಕಾರ ವಿಧಾನಸಮರ್ಥನವಿಳಕಾದ್ರವೇಯವಿದ್ರಾವಣಂ . . . ಮುಕುಂದನಂ ಕಂಡು (ಪಂಚಮಂ. ೧೬೧-೭) ; ದನುಜಕುಲವಿದ್ರಾವಣನು ನಸುನಗುತ ಬೋಳ್ಕಿಸಿದನು ತೇಜಿಗಳ (ಕುವಾದ್ರೋ. ೧೦-೨೬). [ಸಂ.]

ವಿದ್ರಾವಿತ (ಗು). ೧. ಓಡಿಸಿದ ; ಅಟ್ಟಿದ : ಸಲ್ಲಕ್ಷಣಗುಣನಿಧಿಗಳ್ ಪಲ್ಗಣಂಗಟ್ಟಿ ಬಂದಿರ್ದುವು ಹೇಷಾಘೋಷವಿದ್ರಾವಿತರಿಪುಮಹಿಭೃಚ್ಛಾತುರಂಗಂ ತುರಂಗಂ (ಪುಷ್ಪ. ೫-೧೦). ೨. ಲೋಹ ಮುಂತಾದುವನ್ನು ಕರಗಿಸಿದ. [ಸಂ.]

ವಿದ್ರುತ (ಗು). ೧. ಕಳೆದುಹೋದ ; ನೀಗಿಕೊಂಡ : ಅಪರಿಮಿತಸ್ತಂಭೀರ ಮಾನೀಕಶೀಕರನೀಹಾರವರ್ಷದಿಂದಮುಷ್ಣಾಂಶುಮಾಲಿಪ್ರತಾಪಮುರ್ಜಿತಾರಾತಿ ರಾಜಪ್ರತಾಪಮುಂ ವಿದ್ರುತೋ[ಪಾಕಾಂ. ಅವಿಧೃತೋ]ದ್ರೇಕಮಾಗೆಯುಂ (ಆದಿಪು. ೧೩-೭೭ ವ). ೨. ನಾನಾದಿಕ್ಕುಗಳಿಗೆ ಚೆದರಿದ ,— ಓಡಿದ : ವಿದ್ರುತಪಶುಪದ ಪತಿಪತಿತಾದ್ರಿಪ್ರಭಗೋಮಯೋಚ್ಚಯಂ ಸಮದವೃಷೋಪದ್ರವದರಿದ್ರ ಬಾಲಮಟ ದ್ರುಮಮೆಸೆದಿರ್ದುದದಱ ಬಾಹಿರದೇಶಂ (ಲೀಲಾವ. ೫-೯೭). ೩. ಕ್ಷೋಭೆಗೊಳಗಾದ ; ಕಲಕೆಲ್ಪಟ್ಟ. ೪. ಹೆದರಿದ; ಗಾಬರಿಗೊಂಡ. ೫. ಕರಗಿದ ; ನೀರಾದ. (ನಾ). ೬. ನೀರಾದ ಪದಾರ್ಥ; ದ್ರವ. [ಸಂ.]

ವಿದ್ರುಮ (ನಾ). ೧. ನವರತ್ನಗಳಲ್ಲಿ ಒಂದು ; ಹವಳ : ವಿದ್ರುಮದಶನಚ್ಛದೆ ಕೋಪೋದ್ರೇಕದಿನೆರ್ದು ಪೋಗೆ ತೆಗೆದಪ್ಪಿದೊಡುನ್ನಿದ್ರಾಂಭೋಜಾಸ್ಯೆಗೆ ಮದನದ್ರವಮುಂ ಕಣ್ಣಾ ನೀರುಮುಣ್ಮಿದುವಾಗಳ್ (ಆದಿಪು. ೧೨ ೪೪) ; ತನುಜನ ತೇಜಮನಪಹರಿ ಪನಿವನೆನುತ್ತಬ್ಧಿ ಮುಳಿದು ಸಂಧ್ಯಾರುಣಸೂರ್ಯನ ಕಿರಣಮನುಜೆ ಸೆಜೆವಿಡಿದನೆನೆ ವಿರಾಜಿಪುದು ವಿದ್ರುಮಂ ಸದ್ರುಚಿಯಿಂ (ರಾಜಶೇ. ೧-೯೨). ೨. ಕುಡಿ; ಚಿಗುರು : ಬಾಡದ ಕಲ್ಪವಲ್ಲಿ ಕಱೆಯಿಲ್ಲದ ಪೂರ್ಣಶಶಾಂಕಬಿಂಬವಿರ್ವೋಡದ ವಿದ್ರುಮಂ (ನಳಚಂ. ೧೩೨). ೩. ಅತಿಶಯವಾದ ಮರ ; ದೊಡ್ಡ ಮರ. ೧,೩ : ವನರಾಶಿಯೊಳಗೆ ಬೆಳೆದೆಸೆವನೇಕವಿದ್ರುಮದ ಲತೆಯ ಪೊಂಪುಬಿಯವೊಲಾ ವನರಾಶಿಯೊಳಗೆ ಬೆಳೆದೆಸೆವನೇಕವಿದ್ರುಮದ ಲತೆಯ ಪೊಂಪುಬಿ ರಯ್ಯಂ (ಪುಷ್ಪಸ. ೯-೨೧). [ಸಂ.]

ವಿದ್ರುಮದ್ರುಮ (ನಾ). ಹವಳದ ಮರ : ಲತಾಪ್ರತಾನಸಂವಳಯಿತ ವಿದ್ರುಮ ದ್ರುಮವಿಳಾಸವಿಶೇಷಿತಬಾಡವಾನಳಾವಿಳಜಳಮಂ ಮನಂ ಬಯಸಿ ನೋಡಿ ದನರ್ಣವಮಂ ಗುಣಾರ್ಣವಂ (ಪಂಪಭಾ.೪-೨೫). [ಸಂ.]

ವಿದ್ರುಮಲತೆ (ನಾ). ೧. ಹವಳದ ಬಳ್ಳಿ : ಉಜ್ಜಳಿಪ ವಿದ್ರುಮಲತಾಂಕುರದಂತೆ ಕೆಂದಳಿರ ತೊಂಗಲಂತೆ ಪಸರಿಸುವ ಪದ್ಮರಾಗಮುಕುಟಮುಂ . . . ಮೆಱೆಯೆ (ಪುಷ್ಪಸ. ೫-೧೩೮); ಉತ್ತಮರ್ಣದ ವಿದ್ರುಮಲತೆ ಸಮುದ್ರಮಧ್ಯದಿಂದ ಎದ್ದು ಬಂದು, ಶಾಂತಲೆಯ ಪಲ್ಲವಾಧರಗಳಿಗೆ ತನ್ನ ವರ್ಣವನ್ನು ಕೊಟ್ಟುಹೋಯಿತು (ಶಾಂತಲಾ. ೪೧). ೨. ಒಂದು ಬಗೆಯ ಸುಗಂಧದ್ರವ್ಯ : "ಸುಷಿರಾ, ವಿದ್ರುಮಲತಾ . . . ಅಂಜನಕೇಶೀ – ೭ ನಳಿ ಎಂಬುವ ಗ್ರಂಥದ್ರವ್ಯದ ಹೆಸರುಗಳು" (ಸಿದ್ಧಾಂತಿ.೧೩೨). [ಸಂ. ವಿದ್ರುಮಲತಾ]

ವಿದ್ರುಮವಲ್ಲರಿ (ನಾ). ೧. ಹವಳದ ಬಳ್ಳಿ. ೨. ದೊಡ್ಡಮರ ಮತ್ತು ಬಳ್ಳಿ. ೧,೨: ಆ ಮಹಾರ್ಣವಂ ಸಮುದ್ರಮೂಗಿಯುಂ ಅಪಾರವಿಸ್ತಾರಿಯುಂ . . . ಅರಣ್ಮದಂತಗಣ್ಮವಿದ್ರುಮವಲ್ಲರೀವೇಲ್ಲಿತಮುಂ . . . ಚತುರ್ಮುಖನಂತೆ ಸರಸ್ವತೀಪತಿಯುಮೆನಿಸಿದುದು (ಜಗ. ೧-೪೪ ವ).

[ಸಂ. ವಿದ್ರುಮವಲ್ಲರೀ (ವಿದ್ರುಮ + ವಲ್ಲರೀ ; ವಿ + ದ್ರುಮ + ವಲ್ಲರೀ)]

ವಿದ್ರುಮಾಧರ (ನಾ). ಹವಳದಂತೆ ಕೆಂಪಾಗಿರುವ ತುಟಿ ; ಚೆಂದುಟಿ: ವಿದ್ರುಮಾಧರ ಶಾನ್ತಿಸೇನ ಮುನೀಶನಾಕ್ಕಿಎ ವೆಳ್ಗೊಳಅದ್ರಿಮೇಲಶನಾದಿ ವಿಟ್ಟಪುನರ್ಭವಕ್ಕೆಱೆ ಆಗಿ (ಎಇ.II, ೩೧-೩; ಸಂ:೬೩೦); ಸುರುಚಿರವಿದ್ರುಮಾಧರದಿನು ತ್ತಮಮೌಕ್ತಿಕದಂತದಿಂ ಮನೋಹರಹರಿನೀಳಕುಂತಳದಿಂ . . . ಎಸೆದುದಂದಮರೀತತಿ (ಪುಷ್ಪನು. ೧೦-೩೭). [ಸಂ.]

ವಿದ್ರುಮಾಧರೆ (ನಾ). ಹವಳದಂತೆ ಕೆಂಪಾದ ತುಟಿಗಳುಳ್ಳವಳು :ಭದ್ರೇಭಗಮನೆ ಬಾಣಾವ್ಮಿನಂಗನೆ . . . ವಿದ್ರುಮಾಧರೆ ಶ್ವೇತಸರಸಿಜಪಯೋಧರೆ (ನಪಮೋ. ೩-೧೪).

[ಸಂ. ವಿದ್ರುಮಾಧರಾ]

ವಿದ್ರೂಪ (ನಾ). ೧. ವಿಕಾರಹೊಂದಿದ ರೂಪ ; ಕುರೂಪ : ಒಂದು ವೇಳೆ ಜನ್ಮಾಂತರ ಇದ್ದುದಾದರೆ, ನನ್ನ ಮುಖದಲ್ಲಿ ಸುರೂಪವೂ ಉಪಾಧ್ಯಾಯರ ಮುಖದಲ್ಲಿ ವಿದ್ರೂಪವೂ ಮತ್ತೆ ಇದೇ ಬಗೆಯಾಗಿ ಪ್ರಕಟಗೊಳ್ಳಲಿ (ಇಪ್ಪಸ.೪೫೬). ೨. ವಿಲಕ್ಷಣವಾದುದು; ಅಸಹಜತೆಯಿಂದ ಕೂಡಿದುದು : ಆಗ ಫಾಲ್ಗುನ ಮುಖದಲ್ಲಿ ಕಾಣುತ್ತಿದ್ದ ವಿದ್ರೂಪದ ಕಿರುನಗೆಯ ಕರೆಗೆ ಪಂತನ ದೃಷ್ಟಿಯು ಇರದಿದ್ದದ್ದೇ ವಿಹಿತವಾಯಿತು (ಅಂಬಿ. ೬೨). ೩. ಭೀಕರವಾದುದು; ಭಯಂಕರವಾದುದು : ಇತ್ತಲುಲ್ಕಾಪಾತವಿಸರ ವಿದ್ರೂಪಾಗಿ ತೋರಿದೌ ತಾರಾಧಿನಾಥರತಿ ತಲ್ಲಣಿಸಲು (ಲಕ್ಷ್ಮಿಶ. ೫೪-೩೧). [< ಸಂ. ವಿದೂಪ]

ವಿದ್ರೂಪಿ (ನಾ). ರೂಪವಿಲ್ಲದವನು ; ಕುರೂಪಿ ; ವಿಕಾರಿ : ವಿರಸಂ ವಿದ್ರೂಪಿ ಮೂರ್ಖಂ ವಿಷಯವಿಳಳನೇನಪ್ಪೆನೆಂತಿರ್ಪೆನಯ್ಯೋ (ರಕ್ಷಾಶ. ೨೮).

[ವಿದ್ರೂಪ + -ಇ]

ವಿದ್ರೋಹ (ನಾ). ೧. ಅತಿಯಾದ ವಿಶ್ವಾಸಘಾತ ,— ಕೇಡಿಗತನ : ಸಾರಿದಮ ಸೋದರದ್ರೋಹಿಯೆಂದನುಜನಂ ಹೊರಿಸಿದನು ರಾಜವಿದ್ರೋಪದಪರಾಧಮಂ (ಶ್ರೀರಾಮಾ. ೨೫೧-೧೦೬). ೨. ಹೆಚ್ಚಾದ ದ್ವೇಷ ,—ವೈರ : ಚಾರುಲತೆ ನಡುನಡುವೆ ಕೋಪವನ್ನೂ ವಿದ್ರೋಹವನ್ನೂ ವ್ಯಕ್ತಗೊಳಿಸುತ್ತಿದ್ದಳು (ಇಪ್ಪಸ. ೨೨೭). ೩. ದಂಗೆ; ಬಂಡಾಯ : ಫಕೀರರೇ ನಮಗೇಕೆ ಈ ವಿದ್ರೋಹದ ಚಿಂತೆ? (ಚಾಲಶ. ೨೧೯). [ಸಂ.]

ವಿದ್ರೋಹಿ (ಗು). ೧. ವಿರೋಧಿಸಿದ ; ಎದುರುಬಿದ್ದ : ವಿದ್ರೋಹಿ ಸಾಮಂತರನ್ನ ಡಗಿಸಿ . . . ದೇಶದ ಭದ್ರತೆಯನ್ನು ಬಲಪಡಿಸಿದ (ಕವಿಕೋ I, ೭೨೦). (ನಾ). ೨. ದಂಗೆಕೋರ ; ಬಂಡಾಯಗಾರ : ಸುಲ್ತಾನರ ಕಡೆಯವರು ಯಾರೆ ಆಗಲಿ . . . ಅವರ ತಲೆಯನ್ನು ವಿದ್ರೋಹಿಗಳು ಹಾರಿಸಿ ಬಿಡುತ್ತಾರೆ (ಚಾಲಶ.೨೧೯). [ಸಂ. ವಿದ್ರೋಹಿನ್]

ವಿದ್ವಜ್ಜನ (ನಾ).೧. ಪಂಡಿತ ; ವಿದ್ವಾಂಸ. ೨. ಪಂಡಿತರ ಗುಂಪು ; ವಿದ್ವಾಂಸರ ಸಮುದಾಯ : ವಿನಯಂ ಸಹಜಂ ಕೃತ್ರಿಮವೆನಿಸಿದುವವು ಬೇಱವೇಱೆ ವಿದ್ವಜ್ಜನಮಂ ಮನದೆಗೊಳಿಸುವುವಿವೆರಡುಂ ನಿನಗೊಳವಾರಾರ ಮನಮುಮಂ ರಂಜಿಸವೇ (ಆದಿಪು. ೧೪-೬೩); ನಿಖಿಲವಿದ್ವಜ್ಜನಂ ಮೆಚ್ಚೆ ರುದ್ರಾಂಕನೆ ಪೇೞ್ದಂ . . . ಸಕಲವಿಬುಧಹೃದ್ಯಂ ಸಮಂತೀ ಪ್ರಪದ್ಯಂ (ಜಗ.೧-೨೨).

ವಿದ್ವಜ್ಜನವನಜರಾಜಹಂಸ= ವಿದ್ವಾಂಸರ ಸಮೂಹದಲ್ಲಿ ರಾಜಹಂಸದಂತಿರುವವನು; ಒಂದು ಬಿರುದು : ಜಿನಪದಯುಗಳೋದಯಾಚಳಾರ್ಕ್ಕಂ

ವಿದ್ವಜ್ಜನವನಜ ರಾಜಹಂಸಂ ಜನಸಂಸ್ತುತನೆನಿಸಿ ದೇವರಾಜಂ ನೆಗಳ್ದಂ (ಎಕ. VII (R), ನಾಗಮಂ. ೬೪-೪೯ ; 1145). [ಸಂ.]

ವಿದ್ವತ್ತು (ನಾ). ಪಾಂಡಿತ್ಯ ; ಜ್ಞಾನ : ಅವನ ಕವಿತ್ವನಿವೇದನೆಯಾದ 'ಶ್ರದ್ಧಾಂಜಲಿ' ಅವನ ವಿದ್ವತ್ತಿಗೊಂದು ಪ್ರತೀಕ (ಹೊಸ್ಕ.೩೭). [< ಸಂ. ವಿದ್ವತ್ತಾ]

ವಿದ್ವತ್ತೆ (ನಾ). = ವಿದ್ವತ್ತು : ಸಂಶೋಧನವು ವಿದ್ವತ್ತೆಯ ಆರಾಧನವಾಗಿರುವುದರಿಂದ ಮೆಚ್ಚುಗೆಯನ್ನು ಗಳಿಸುವ ಕೆಲಸವೂ ಆಗಿದೆ (ಸಂಶೋಧ. ೧೯೭) ; ಅವರ ವಿದ್ವತ್ತೆಯನ್ನು ಪರೀಕ್ಷಿಸಲು ರಾಜನು ಹೊರಗಿನ ವಿದ್ವಾಂಸರನ್ನು ಆಮಂತ್ರಿಸುತ್ತಿದ್ದನು (ಕರ್ನಾಕ.೪೧). [ಸಂ. ವಿದ್ವತ್ತಾ]

ವಿದ್ವತ್ಪರೀಕ್ಷೆ (ನಾ). ೧. ಒಬ್ಬ ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸದಲ್ಲಿ ಸಂಪೂರ್ಣಪಾಂಡಿತ್ಯವನ್ನು ಪಡೆದಿದ್ದಾನೆಯೆ ಎಂಬುದನ್ನು ಪರೀಕ್ಷಿಸಲು ನಡೆಸುವ ಪರೀಕ್ಷೆ : ವಿದ್ವತ್ಪರೀಕ್ಷೆಯದಾದ ಕಾರಣ ಒಬ್ಬೊಬ್ಬರೂ ಪ್ರತ್ಯೇಕಸ್ಥಳಗಳಲ್ಲಿ ಕುಳಿಪು ಬರೆದು ಪ್ರತ್ಯೇಕವಾಗಿ ಹೇಳಬೇಕೆಂದು ನಿಬಂಧನೆಯಾಯಿತು (ಕಥಾ.೩೪೮). ೨. ಸಾಹಿತ್ಯ, ಸಂಗೀತ ಮುಂತಾದುವುಗಳನ್ನು ಕಲಿಯುವ ವಿದ್ಯಾರ್ಥಿಯು ತನ್ನ ಕಲಿಕೆಯ ಕೊನೆಯ ಘಟ್ಟದಲ್ಲಿ ಕೂಡಬೇಕಾದ ಪರೀಕ್ಷೆ : ಅವಳು ಸಂಗೀತದ ವಿದ್ವತ್ಪರೀಕ್ಷೆಯಲ್ಲಿ ಮೊದಲನೆಯವಳಾಗಿ ತೇರ್ಗಡೆಯಾದಳು (ರೂಢಿ). [ಸಂ. ವಿದ್ವತ್ಪರೀಕ್ಷಾ]

ವಿದ್ವತ್ಪೂರ್ಣ (ನಾ). ಪಾಂಡಿತ್ಯದಿಂದ ಕೂಡಿದುದು : ಶ್ರೀಗೋವಿಂದಪೈಗಳು 'ನಮ್ಮ ಹಿರಿಯರನ್ನು ಕುರಿತು' ಎಂಬ ವಿದ್ವತ್ಪೂರ್ಣವಾದ ಹಾಗೂ ವಿಮರ್ಶಾತ್ಮಕವಾದ ಲೇಖನದಲ್ಲಿ ಗೌಡಸಾರಸ್ವತರ ಮೂಲವಾಸಸ್ಥಾನವು ಸಾರಸ್ವತದೇಶವೆಂದೂ . . . ತಿಳಿಸುತ್ತಾರೆ (ತುಳುನಾ. ೧೦). [ಸಂ.]

ವಿದ್ವತ್ಸಂಭಾವನೆ (ನಾ). ವಿದ್ವಾಂಸರಿಗೆ ತೋರುವ ಆದರ ಮತ್ತು ಗೌರವ ಪೂರ್ವಕವಾಗಿ ಅವರಿಗೆ ಕೊಡುವ ಕಾಣಿಕೆ : ಅವರ ಮನೆಯ ಸಮಾರಂಭದಲ್ಲಿ ಪಂಡಿತರಿಗೆ ನೂರುರೂಪಾಯಿ ವಿದ್ವತ್ಸಂಭಾವನೆ ನೀಡಿದರು (ರೂಢಿ). [ಸಂ. ವಿದ್ವತ್ಸಂಭಾವನ]

ವಿದ್ವತ್ಸಭೆ (ನಾ). ವಿದ್ವಾಂಸರ ಕೂಟ ; ಪಂಡಿತರ ಗೋಷ್ಠಿ : ದೋಷಂಗಳಿಂತುಮಿಗೆ ಸಂಶ್ಲೇಷದೊಳಾದುದು ಸಕಲವಿದ್ವತ್ಸಭೆಯೊಳ್ಮೆಚ್ಚಿಸುಗುಂ ಕೃತಿವಧುವಂ (ಕವಿರಾ. ೧-೧೦೦) ; ರವಿಸಿದ್ಧಾಂತಪಾಠಕರಷ್ಟಭಾಷಾಕವಿಗಮಕಿಗಳು ತಾರ್ಕಿಕರು ವಿವಿಧವಿದ್ವತ್ಸಭೆ ನೆರೆದುದು (ಮೋಹನ. ೩-೪೦). [ಸಂ. ವಿದ್ವತ್ಸಭಾ]

ವಿದ್ವತ್ಸೇವೆ (ನಾ). ಕಾವ್ಯಜ್ಞರ ಮಾರ್ಗದರ್ಶನದಲ್ಲಿ ಮಾಡುವ ಕಾವ್ಯಾಭ್ಯಾಸ : ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ (ಶಮದ. ೧೪೪ ಪ್ರಯೋ). [ಸಂ. ವಿದ್ವತ್ಸೇವಾ]

ವಿದ್ವದರ್ಥಂ (ಅ). ವಿದ್ವತ್ತಿಗೋಸ್ಕರ; ಪಾಂಡಿತ್ಯದ ಪೋಷಣೆಗಾಗಿ: ಪರಮಾರ್ಥಂ ವಿದ್ವದರ್ಥಂ ತಪಸದನ ಧನಂ ವ್ಯರ್ಥಂ (ಎಕ. V, ಬೇಲೂರು. ೧೨೪-೪೪ ; 1133). [ಸಂ.]

ವಿದ್ವದಾಸ್ಥಾಯಿಕೆ (ನಾ). = ವಿದ್ವತ್ಸಭೆ : ಕಪಟವಟು[ಪಟು] ಮನೋಗರ್ವಪರ್ವತಂ ನುರ್ಗಿ ನುರ್ಚುನೂಱುದುದು ಭೂಮಿಪವಜ್ರಾಯುಧವಾಗ್ವಜ್ರಪಾತದಿಂ ನೆರೆದ ವಿದ್ವದಾಸ್ಥಾಯಿಕೆಯೊಳ್ (ಶಾಂತಿಪು. ೮-೧೪೮). [ಸಂ. ವಿದ್ವದಾಸ್ಥಾಯಿಕಾ]

ವಿದ್ವದ್ಗೋಷ್ಠಿ (ನಾ). = ವಿದ್ವತ್ಸಭೆ : ಕೃಷ್ಣರಾಜಪ್ರಭುಗಳು ವಿದ್ವದ್ಗೋಷ್ಠಿಯಲ್ಲಿ ಮಂಡಿಸಿದರೆಂದರೆ ಎಲ್ಲರೊಡನೆಯೂ ಬಲು ಧಾರಾಳವಾಗಿ ಮಾತನಾಡುತ್ತಿದ್ದರು (ಕಥಾ. ೩೬೬) ; ವಿದ್ವದ್ಗೋಷ್ಠಿಗಳಲ್ಲಿ ಇವನ ಕೀರ್ತಿ ಗಾನವಾಗುತ್ತವೆ (ಚಿತಾಂಬಾ. ೬೬). [ಸಂ.]

ವಿದ್ವಾಂಸ (ನಾ). ೧. ವಿಜ್ಞಾನ, ಸಂಗೀತ, ಶಾಸ್ತ್ರ ಮುಂತಾದ ಜ್ಞಾನಶಾಖೆಗಳಲ್ಲಿ ಪಾಂಡಿತ್ಯವನ್ನು ಹೊಂದಿರುವವನು ; ಜ್ಞಾನಿ : ಆ ವಾಗೀಶಂ . . . ಎಂತಪ್ಪ ವಿದ್ವಾಂಸರಂ ವಾದದಿಂ ಮಿಗುತೆ ಸವಣರಂ ಕೂಡಿಕೊಂಡತಿಸಂಭ್ರಮದೊಳೆರಲು (ವಾಗೀರ. ದೆ. ೨೫೪-೪) ; ಹಿರಿಯ ವಿದ್ವಾಂಸರ ಸಂಗೀತವನ್ನು ಕೇಳಿ ಕಲಿಯಬೇಕೆಂಬುದು ಶ್ರೀನಿವಾಸಯ್ಯಂಗಾರ್ಯರಿಗೆ ಮನವರಿಕೆಯಾಗಿಯೇ ಇತ್ತು (ಸಂಗೀತ. ೫೩). ೨. ಹಿಂದಿನ ಕಾಲದಲ್ಲಿ ರಾಜನ ಆಸ್ಥಾನದಲ್ಲಿ ಪಂಡಿತರಿಗೆ ಕೊಡುತ್ತಿದ್ದ ಒಂದು ಗೌರವಪೂರ್ಣವಾದ ಪದವಿ,-ಸ್ಥಾನ : ರಾಮನಾಡ್ ಸಂಸ್ಥಾನದ ವಿದ್ವಾಂಸರಾಗಿಯೂ ಅವರು ನೇಮಿತರಾದರು (ಸಂಗೀತ. ೫೩). [ಸಂ. ವಿದ್ವಸ್]

ವಿದ್ವಾನ್, ವಿದ್ವಾನು, ವಿದ್ವಾನ್ನು (ನಾ). ೧. = ವಿದ್ವಾಂಸ ೧. ೨. ವಿದ್ವತ್ತಿನ ಕುರುಹಾಗಿ ವಿದ್ವಾಂಸರ ಹೆಸರಿನ ಹಿಂದೆ ಸೇರುವ ಒಂದು ಪದ : ಆಚಾರ್ಯರ ಶಿಷ್ಯವರ್ಗಕ್ಕೆ . . . ಮದ್ರಾಸಿನ ಕಲಾಕ್ಷೇತ್ರದ ವಿದ್ವಾನ್‌ಪಶುಪತಿಯವರೂ ಸೇರಿದ್ದಾರೆ (ಸಂಗೀಚಂ. ೨೮೪). ವಿದ್ವಾನು : ೧. ತದ್ವೇದಮುಖಿದಿ ನಾ ಜನಿಸಿರುವ ಕಾರಣದಿ ವಿದ್ವಾನುಗಳು ವೇದವತಿಯೆಂಬರು (ರಾವಣೋ.೩೮). ವಿದ್ವಾನ್ನು: ೧. ಪುರೋಹಿತ ಸಂಗಮದೇವಗಳು ಅರಮನೆಯ ವಿದ್ವಾಂನುಗಳನು ಕೂಡಿಕೊಂಡು ಯಿತ್ತಂಡದ ಶಾಸನವನು ವೋದಿಸಿ ನೋಡಿ (ಸೌಂಗ. XX, ೨೩೨-೯; 1412). [< ಸಂ. ವಿದ್ವಸ್]

ವಿದ್ವಾನು 'ವಿದ್ವಾನ್' ನೋ.

ವಿದ್ವಾನ್ನು 'ವಿದ್ವಾನ್' ನೋ.

ವಿದ್ವಿಟ್ಪೇದ (ನಾ). ವೈರಿಗೆ ಒದಗುವ ದುಃಖ,—ಸಂಕಟ : ಷಟ್ಖಂಡಕ್ಷಿತಿನಾಥನ ಪ್ರಥಿಕಪುಣ್ಯಾಂ ತತ್ಪ್ರಭಾಸಾದಿವಿದ್ವಿಟ್ಪೇದೋದಯಹೇತುವಪ್ಪತುಳವಿಕ್ರಾಂತಂ (ಚಂದ್ರಪ್ರ. ೫-೩೫). [ಸಂ.]

ವಿದ್ವಿಟ್ಪತಿ (ನಾ). ವೈರಿಗಳ ಗುಂಪು,— ಸಮೂಹ : ಕಣ್ಗೆಡೆ ವಿದ್ವಿಟ್ಪತಿಯುರ್ಬಿ ಪರ್ಬಿ ವಿಪುಳ ಬ್ರಹ್ಮಾಂಡಮಂ ತುಂಬಿ ತಳ್ತೆಡೆಗೊಂಡತ್ತು ಧಳಂಧಳಂ ಧಳನದದ್ಗಂಭೀರ ಭೇರೀರವಂ (ರಾಜಶೇ. ೧೩-೬೫). [ಸಂ.]

ವಿದ್ವಿಟ್ತಮ (ನಾ). (ಬೆಳಕಿಗೆ) ಶತ್ರುವಾದ ಕತ್ತಲೆ : ನಿಜಪಾದಾಗ್ರವಿಭಿನ್ನದೈತ್ಯ ಕರಿಕುಂಭೋನ್ಮತ್ತ ಮುಕ್ತಾಮಣೀವ್ರಜಸಂಧ್ಯಾಭಗಣಂ ಸರಾಗನಿಜಧಾಮಧ್ವಸ್ತ ವಿದ್ವಿಟ್ತಮಂ (ವಿಷ್ಣುಪು ೧-೧-೬). [ಸಂ.]

ವಿದ್ವಿಟ್ಸ್ರಿಪತಿ (ನಾ). ವಿರೋಧಪಕ್ಷದ ದೊರೆ ; ಶತ್ರುರಾಜ : ಅನ್ನೆನಿಸಿದ ಜಯಲಕ್ಷ್ಮೀಕಾನ್ತಂ ದುಷ್ಟಾಶ್ವಚಯಕಿದಾನೆನ್ನನ ರೇವನ್ತಂ ವಿದ್ವಿಟ್‌ಸ್ರಿಪತಿ ಕ್ರಿತಾನ್ತಂ (ಸೌಂಗ. XX, ೪೭-೨೭; 1074). [(ಸಂ. ವಿದ್ವಿಷ್) + ಸ್ರಿಪತಿ]

ವಿದ್ವಿಟ್ಸ್ತ್ರೀ (ನಾ). ಶತ್ರುವಿನ ಹೆಂಡತಿ : ಶ್ರುತಿಕಷ್ಟಕ್ಕೆ — "ವಿದ್ವಿಟ್ಸ್ತ್ರೀಯರೆಂದು" ಮಾಡಲಾಗದು (ಶಮದ. ೬೩ ಪ್ರಯೋ). [ಸಂ.]

ವಿದ್ವಿಷ (ಗು). ೧. ವಿರೋಧಿಯಾದ ; ಪ್ರತಿಸ್ಪರ್ಧಿಯಾದ : ಅರುಹಮುನಿಗಳು ಮಂತ್ರತಂತ್ರಕುಯಂತ್ರವಿದ್ಯೆಗಳ ವಿರಚಿಸುತ್ತ ಮಹೇಂದ್ರಜಾಲಾಪರಿಮಿತಾದ್ವಯ ಶೂನ್ಯಮಾಯಾಕರಣ ವಿದ್ವಿಷಚ್ಛೇನವೃತ್ತಿಯೊಳಿಂತು ತರ್ಕಿಸಲು (ಬಸಪು. ೫೧-೧೧). (ನಾ). ೨. ಹಗೆತನ ; ಶತ್ರುತ್ವ. ೩. ಹಗೆ ; ವೈರಿ ; ವಿರೋಧಿ : ರಾಹು ತನ್ನ ಹರಿನೀಳವಿಮಾನಮನೇಱುವಂತಿರಾಗಡೆ ಕಡುಕ್ಕೆದು ಪುಷ್ಪಕವಿಮಾನಮನೇಱಿ ದನಿಂದ್ರವಿದ್ವಿಷಂ (ಪಂರಾಮಾ. ೯-೭೪). [ಸಂ.]

ವಿದ್ವಿಷನ್ಮಂಡಲ (ನಾ). ಶತ್ರುಗಳಿಗೆ ಸೇರಿದ ನಾಡು : ಮೆಯ್ತ ಬಾಹಾಬಲದಿಂ ಬೆಂಕೊಂಡಖಿಂದಪ್ರಭರನಹಿತರಂ ಸಾಧಿಪೆಂ ವಿದ್ವಿಷನ್ಮಂಡಲಮಂ (ಪಂರಾಮಾ. ೬-೧೪೯). [ಸಂ.]

ವಿದ್ವಿಷ್ಟ (ಗು). ೧. ಶತ್ರುವಾದ ; ವೈರಿಯಾದ : ಬಳವದ್ವಿದ್ವಿಷ್ಟವಿದ್ರಾಧರ ಕರಟಿತಿರಶ್ಮುಕ್ತಿಸಂಭೂತ ಮುಕ್ತಾವಳಿಯೊಳ್ಕಣ್ಣಿಟ್ಟು (ಆದಿಪು. ೧-೭೬); ವಿದ್ವಿಷ್ಟಸ್ಯೈನ್ಯಮಾರಣಮಂತ್ರಾಕ್ಷರಮಂ ಪೊನ್ನೊರೆಯಿಂದಂ ಬರೆದಂತಾ ನೃಪನ ತೋಳ ಬಾಳ್ಪೊಗರೆಸೆಗುಂ (ವಲ್ಲಿಪು. ೩-೧೫). (ನಾ). ೨. ಹಗೆ ; ಶತ್ರು ; ವೈರಿ : ಮಾಱುನ್ತ ವಿದ್ವಿಷ್ಟರನದಟಲೆಯಲ್ದಣ್ಡಿಸಲ್ಪಣ್ಡಿಸಲ್ಪ[ಕೃ]ನ ಚಕ್ರಂ ಸೊಕ್ಕೆ ಮಾರ್ಕ್ಕೊಣ್ಡು (ಸೌಂಗ. XX, ೩೧-೨೬; 1044); ಲಂಕೇಶ್ವರನನಮರವಿದ್ವಿಷ್ಟನಂ ಕೋಪದಿಂದೋವದೆ ಕೊಂದಾಂ ತಂದಪೆಂ ದೇವಿಯಂ (ಪಂರಾಮಾ. ೧೧-೪೪). [ಸಂ.]

ವಿದ್ವಿಷ್ಟಬಲ (ನಾ). ಶತ್ರುಸೈನ್ಯ ; ವೈರಿದಳ : ವೈರಿಗಜಘಟಾವಿಘಟನನುಂ ತನಗಿದಿರ ನದಿರದೊಡ್ಡಿದ ವಿದ್ವಿಷ್ಟಬಲಂ ನೋಡೆ ನೋಡೆ ಕರಗುವುದಱಿಂ (ಪಂಪಭಾ. ೧೪-೩೭ ವ). [ಸಂ.]

ವಿದ್ವಿಷ್ಟವಿದ್ರಾವಣ (ನಾ). ಶತ್ರುವನ್ನು ಓಡಿಸುವವನು : ಅಂತು ತೋಱಿಯುಮೆರ್ದೆಯ ಮುಳಿಸು ನಾಲಗೆಗೆ ವರೆ ಸೈರಿಸಲಾಱದೆ ವಿದ್ವಿಷ್ಟ

ವಿದ್ರಾವಣನಿಂತೆಂದಂ (ಪಂಪಭಾ. ೨-೭೯ ವ); ಭದ್ರಾಸನಮಂ ದುಷ್ಟ ವಿದ್ಯಿಷ್ಟ [ಪಾಠಾಂ. ಪ] ವಿದ್ರಾವಣನೆನಿಪ್ಪ ಶೈಲರಾಜನವಷ್ಟಂಭಿಸಲೊಡಂ (ಗಿರಿ. ೨-೧೦೫ ವ). [ಸಂ.]

ವಿದ್ವೇಷ (ನಾ). ೧. ಹಗೆತನ ; ವೈರ ; ಶತ್ರುತ್ವ : ಧರಣೀಚಕ್ರಮನೊಪ್ಪುಗೊಳ್ ಬಗೆಯದಿರ್ವಿದ್ವೇಷಮಂ (ಗದಾಯು. ೭-೪೪) ; ವಾಲಿ ಸುಗ್ರೀವರೆಂದಿರ್ವರೇಕೋದರರು ಮೇಲೆ ವಿದ್ವೇಷ ಸಂಭವಿಸಿತಿಬ್ಬರಿಗೊಂದುಕಾಲದೊಳು (ವಂಕಾರಾ. ೪-೨-೩೦). ೨. ಅಸಡ್ಡೆ ; ತಾತ್ಸಾರ : ವಿದ್ವೇಷವಿಲ್ಲದೆ ವಿಮರ್ಶಿಸುವ ಆಲೋಚನಾಶಕ್ತಿಯನ್ನು ಅವರಲ್ಲಿ ಬಿತ್ತಿ ಬೆಳೆಸಬೇಕು (ಶಿಕ್ಷಣ. ೧೯). [ಸಂ.]

ವಿದ್ವೇಷಕಾರಿ (ನಾ). ಶತ್ರುತ್ವವನ್ನು ಹುಟ್ಟಿಸುವಂಥದು; ವೈರವನ್ನುಂಟು ಮಾಡುವಂಥದು : ಕನಕಲತೆಯುಮಾಕೆಗಮರಸಂಗಂ ಕ್ಷಣಮಾತ್ರವಿದ್ವೇಷಕಾರಿಯಪ್ಪ ಪುಷ್ಪಮಾಲೆಯಂ ಮಂತ್ರವಿದರುಪದೇಶದಿಂ ಮದ್ಭರಸನಿವೇದನವ್ಯಾಜದಿಂ ಪರಿಚಾರಿಕೆಯರ ಕೈಯ್ಯೊಳಟ್ಟುವುದುಂ (ಶಾಂತಿಪು. ೯-೫೦ ವ). [ಸಂ. ವಿದ್ವೇಷಕಾರಿನ್]

ವಿದ್ವೇಷಣ (ನಾ). ೧. ಹಗೆತನ ; ಶತ್ರುತ್ವ : ಉದ್ವೇಗಭರಂ ಸಭೆಗೆ ಜಗದ್ವಲ್ಲಭನಭಿಮತಕ್ಕೆ ವಿಘ್ನಮಪಾಯಂ ವಿದ್ವಜ್ಜನಕ್ಕೆ ಪಸುಗೆಗೆ ವಿದ್ವೇಷಣಾವಿದ್ಯೆ ಬರ್ಪ ತೆಱದಿಂ ಬಂದಳ್ (ಪಂಡಾಮಾ. ೬-೯೪). ೨. ಹಗೆ ; ಶತ್ರು ; ವೈರಿ. ೩. ವಾಮಾಚಾರ ಕ್ರಿಯೆಗಳಲ್ಲಿ ಒಂದು : ಕೆಲರ್ ಮೋನದಿಂ ಸಾಧಿಸುವ ಬಗೆಯೊಳ್ದರ್ದರ್ ಕೆಲರ್ ವೈರಿಗುಚ್ಚಾಟನಂ ಮಾಡುತಿರ್ದರ್ ಕೆಲರ್ ಪೂಣ್ದು ವಿದ್ವೇಷಣಂ ಮಾಡುತಿರ್ದರ್ (ಪಿಪ್ಪಲಾಂ. ೪೧-೩೦ ರಗಳೆ). [ಸಂ.]

ವಿದ್ವೇಷಿ (ಗು). ೧. ಹಗೆತನವುಳ್ಳ ; ಶತ್ರುತ್ವದ. (ನಾ). ೨. ಹಗೆ ; ಶತ್ರು : ಆ ಚೈತ್ರವಾಹಿನಿ ಕಿರೀಟಿಯೆಡೆಗ್ಮೆದಿದಳ್ . . . ವಿದ್ವೇಷಿಯಂ ಸಂಹರಿಸೆ ವಿಜಯದೃಢನಿಶ್ಚಯದಿ ಬಿಂಕದಿಂ ಮುಂಬರಿವ ಕಲಿಯ ವಿಕ್ರಮಗಮನವಿನ್ಯಾಸಮಂ ಮೆರೆದು (ಚಾಣಾಂಗ. ೩೩-೬೧೫). [ಸಂ. ವಿದ್ವೇಷಿನ್]

ವಿಧ (ನಾ). ರೀತಿ ; ಬಗೆ ; ವಿಧಾನ ; ಕ್ರಮ : ಇಂತೀ ತ್ರಿವಿಧದಲ್ಲಿ ವಂಚಕನಾದರೆ ಈಸುವಿಧದೊಳಗೆ ಅಂಗವಿಲ್ಲ ಮೇಲೆ ಸತ್ಪುರುಷರ ಸಂಗವಿಲ್ಲ ಯುಕ್ತಿ ಇಲ್ಲಾ ಎನಗೆ ಭಕ್ತಿಯಂತಹುದಯ್ಯಾ (ಬಸವ. ೧೮೮); ಆವ ಪರಿಯ ದೇಸಿಯಾಣ್ಮಗೆ ಬಗೆವರ್ಪುದಾ ವಿಧಗಳನಾರೈದು ಧಾಮಿಸಿ ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ ಭಾವವ ಬಂದಿಗೊಳುವುದು (ಹದಿಬ. ೩-೧೭).

ವಿಧವಿಧ (ದ್ವಿರುಕ್ತಿ): ಕನ್ಯಾವಿವಾಹವು ವಿಧವಿಧವಾಗಿದೆ. ಅದರಲ್ಲಿ ರಾಜರು ಸ್ವಯಂವರವನ್ನು ಮೆಚ್ಚುತ್ತಾರೆ (ವಚಭಾ. ೫); ಉದಿತದಿನ! ಮುದಿತವನ ವಿಧವಿಧವಿಹಗಸ್ವನ (ಪಂಪಗೀ. ೭೬-೨). [ಸಂ.]

ವಿಧರ್ಮ (ನಾ). ೧. ಧರ್ಮಕ್ಕೆ ವಿರುದ್ಧವಾದುದು ,—ತರವಲ್ಲದುದು. ೨. ವಿರುದ್ಧಗುಣದಿಂದ ಕೂಡಿದುದು : ಸಧರ್ಮ ವಿಧರ್ಮಗಳಿಂದರೆ ಸಮಾನಗುಣದವು, ವಿರುದ್ಧಗುಣದವು ಎಂದರ್ಥವು (ಅರ್ಥಸಂ. ೧೨). ೩. ಪರಧರ್ಮ; ಅನ್ಯಧರ್ಮ. [ಸಂ.]

ವಿಧರ್ಮಿ (ನಾ). ಪರಮತಕ್ಕೆ ಸೇರಿದವನು ; ಬೇರೆ ಜಾತಿಯವನು : ವಿಮಲಿಯೂ ತಿಲೋತ್ತಮೆಯೂ ಕತಲೂಖಾನನ ಅಂತಃಪುರವಾಸಿಗಳಾಗಿದ್ದರೆಂದು ತಿಳಿದು . . . 'ಈ ವಿಧರ್ಮಿಯ ಉಪಪತ್ನಿಯನ್ನು ಮರೆತು ಬಿಡುತ್ತೇನೆ' ಎಂದು ನಿರ್ಧಾರ ಮಾಡಿದನು (ಬಂಕಿಮ. ೧೪೭). [ಸಂ. ವಿಧರ್ಮಿನ್]

ವಿಧರ್ಷಿಣಿ (ನಾ). ನೀತಿಗೆಟ್ಟವಳು ; ಜಾರೆ : "ಸ್ವೈರಿಣಿ ವಿಧರ್ಷಿಣಿ [ಪಾಠಾಂ. ದರ್ಶಿನಿ] ಯನೀತೆ . . . ಬಂಧಕಿಯೆನಲ್ಕೆ ಹಾದರದ ನಾರಿಯೆನಿಸಿಕ್ಕು" (ಮಂಗರಾ. ೯೦-೪). [ಸಂ. ವಿಧರ್ಷಿಣೀ]

ವಿಧವತೆ (ನಾ). ಗಂಡನನ್ನು ಕಳೆದುಕೊಂಡಿರುವ ಸ್ಥಿತಿ ; ವೈಧವ್ಯ : ರತಿವನಿತೆಗೆ ವಿಧವತೆಯಂ ಶ್ರುತದೇವಿಗೆ ಚತುರವೃತ್ತಿಯಂ ಮಾಳ್ಪ ತಪಶ್ರುತಮೆರಡು ನಿರುಪಮಮಾ ಕ್ಷಿತಿಯೊಳ್ ಶ್ರುತಕೀರ್ತಿದೇವಭಟ್ಟಾರಕರಾ (ಚಂದ್ರಪ್ರ. ೧-೬೫). [ಸಂ. ವಿಧವತಾ]

ವಿಧವಾಲಿಂಗಿ (ನಾ). ವಿಧವೆಯ ಲಾಂಛನವನ್ನುಳ್ಳವಳು : ವಿಧವಾಲಿಂಗಿ ದಾಸಿಯ ತನುವಿಕಾರಿಯನು . . . ರೋದಿನಿಯನುಪ್ಪವಡಿಸುವ ಸಮಯದೊಳಿಬರನು ಕಾಣ್ಬುದು ಮಹೀಶರಿಗಂಗವಲ್ಲ (ಕುವ್ಯಾಲಿ. ೩-೧೦೭). [ಸಂ. ವಿಧವಾಲಿಂಗಿನ್]

ವಿಧವಾವಿವಾಹ (ನಾ). ಗಂಡನನ್ನು ಕಳೆದುಕೊಂಡವಳು ಆಗುವ ಮರುಮದುವೆ ,—ಪುನರ್ವಿವಾಹ : ಒಂದಾನೊಂದು ಕಾಲದಲ್ಲಿ ವಿಧವಾವಿವಾಹವು ನಿಷಿದ್ಧವಾಗಿತ್ತು (ಭಾರದ. ೫೫); ವಿಧವಾವಿವಾಹಕ್ಕೆ ವೇದಗಳ ಒಪ್ಪಿಗೆಯುದೆ (ಕಾಸಾ. ೪೨೧ ಅಡಿಟಿ). [ಸಂ.]

ವಿಧವೆ (ನಾ). ಗಂಡನನ್ನು ಕಳೆದುಕೊಂಡವಳು ; ವಿತಂತು : "ವಿಶ್ವಸ್ತಾ, ವಿಧವಾ — ಈ ೨ ವಿಧವೆ" (ಪಠಾಯು. ೦೦-೩೩೩) ; ಸತ್ತರೆ ಇಬ್ಬರು ವಿಧವೆಯರಾಗುವಿರೆಂದು ನಿನಗೆ ತಿಳಿಯಲಿಲ್ಲವೇ? (ದಾನಚಿಂ. ೧೫೪); ಪುಟ್ಟ ವಿಧವೆಯು ಪುರಾಣಕ್ಕೆ ಬರಲು ಗುಡಿಯ ಮೂರ್ತಿಗೆ ಮಂಕುಹಿಡಿದು, ಆಚಾರ್ಯರಿಗು ಉರುಲಿಕ್ಕಿದಂತೆ ಬಿಗಿದಿತ್ತು ಕೊರಲು (ಸಪೀಗೀ. ೯೯-೧೪). [ಸಂ. ವಿಧವಾ]

ವಿಧಾಂತ (ನಾ). ೧. ವಿಧಾತ ; ಬ್ರಹ್ಮ (?): ಕಾಲಕ್ಕಂಜಿ ಕರ್ಮಕ್ಕಂಜಿ ವಿಧಿವಿಧಾಂತ ನಿನಗಂಜಿ ಹಿರಿಯರೆನಿಸಿಕೊಂಬ ಗ್ರಾಮವಾಸಿಗಳು ಕೇಳಿರಯ್ಯಾ (ಮೋಳಿಮಾ. ೧೦೩-೪೧೧). ೨. ಗಣಿಯ ಮೇಲೆ ಹತ್ತಿ ಆಡುವವನು; ಡೊಂಬ; ಕೊಲ್ಲುಟಿಗ (?): ಗಳಿಯನೇಱಿದ ವಿಧಾಂ[ಪಾಠಾಂ. ದಾ]ತ ಲಾಗು ಬಾರದೆ ಇಳಿದಡೆ ಅವಗದೇ ಭಂಗ (ಸಕವ. ೪. II, ೬೬-೯೦); ಕೈದುವ ಹಿಡಿದಾಡುವ ವಿಧಾಂ[ಪಾಠಾಂ. ದಾಂ]ತನ ಭಾವದಂತಿರಬೇಕು. . . ಕ್ರೀಜ್ಞಾನಸಂಬಂಧ (ಸಕವ. ೪. I, ೭೩-೯೮). 'ವಿಧಾತ' ಪರಾ. [< ಸಂ. ವಿಧಾತೃ ?]

ವಿಧಾತ (ನಾ). ತ್ರಿಮೂರ್ತಿಗಳಲ್ಲಿ ಒಬ್ಬ ; ಬ್ರಹ್ಮ : ಎಲೆ ವಿಧಾತನೆ ವೃಥಾ ಹೊಳೆಯ ನಡುಗಡಲೊಳಗೆ ನಾವೆಯಂ ಮುಳುಗಿಸಿದೆಲ್ಲೆ (ತುರಂಗ. ೨-೩೭). [ಸಂ. ವಿಧಾತೃ]

ವಿಧಾತಾರ (ನಾ). ಶಿವನ ಹೆಸರುಗಳಲ್ಲಿ ಒಂದು : ಭೂತಾಲಯನನಾ ವಿಧಾತಾರನಂ ದೇವೇಶನಂ . . . ಲಿಂಗಮಧ್ಯದೊಳಗಿರ್ಪನಂ ಕುಱಿತು ವಂದಿಪೆನು (ವಿಶ್ವಪ್ರ. ೬-೧-೩೪). [ಸಂ. ವಿಧಾತೃ]

ವಿಧಾತೃ (ನಾ). ೧. ಸೃಷ್ಟಿಮಾಡುವವನು ; ನಿರ್ಮಿಸುವವನು. ೨. ಬ್ರಹ್ಮ : 'ವಿಧಾತೃ' ಶಬ್ದದ ರಾಂತಕ್ಕೆ - ವಿಧಾತ್ರ (ಶಮದ. ೬೪ ಪ್ರಯೋ); ಪುರುಷನ ಧಾಗ್ಮದೇವತೆಯೊಲಿವ ಕಾಲವನು ವರುಷದುದಯವ ಬಿಜನ ಬರವನು ವಿರಚಿಸುವೊದೆ ವಿಧಾತೃಗಳವಲ್ಲರಸ ಕೇಳ್ ಮಾನವರಿಗಿದು ಗೋಚರಿಸಲರಿದು (ಕುವ್ಯಾಲಿ. ೩-೬೩). ೩. ಅದೃಷ್ಟ ; ವಿಧಿ ; ದೈವ. ೪. ಕಾಮ ; ಮನ್ಮಥ. ೫. ನೀಡುವವನು ; ಕೊಡುವವನು. ೬. ವಿಷ್ಣುವಿನ ಹೆಸರುಗಳಲ್ಲಿ ಒಂದು. ೭. ಶಿವನ ಹೆಸರುಗಳಲ್ಲಿ ಒಂದು. [ಸಂ.]

ವಿಧಾತೃಕಲ್ಪಿತ (ನಾ). ಬ್ರಹ್ಮನಿಂದ ಸೃಷ್ಟಿಯಾದುದು ; ದೈವನಿಯಮ : ವಿಧಾತೃಕಲ್ಪಿತವೆಂಬ ವಿಷದುಗ್ಗಡಕೆ ಗಾರುಡವೇನ ಮಾಡುವುದು (ಕುವ್ಯಾಸ. ೧೬-೨೬). [ಸಂ.]

ವಿಧಾತೃಯೋಗ (ನಾ). ದೈವಯೋಗ ; ವಿಧಿ : ವಿಧಾತೃಯೋಗದಿಂ ಕಣ್ಮುರುಡಾದೊಡೇನೊ ಕುರುಡಾಗಲೆವೇಳ್ಪುದೆ ನಿಮ್ಮ ಬುದ್ಧಿಯುಂ (ಪಂಪಭಾ. ೨-೯೧). [ಸಂ.]

ವಿಧಾತೃವಶ (ನಾ). ದೈವಯೋಗ ; ವಿಧಿ ; ಅದೃಷ್ಟ : ಭಂಡಣಧೊಳಲಿದು ಖಂಡಿರ್ಭಂಡಾರಂ ಪೋದಡದು ವಿಧಾತೃವಶಂ (ಆನಂಪು. ೧೧-೭೦). [ಸಂ.]

ವಿಧಾತ್ರ (ನಾ). ೧. ಬ್ರಹ್ಮ ; ಚತುರ್ಮುಖ : ಮುನ್ನಾ ವಿಧಾತ್ರಂ ಕುಡಲಿರ್ದಂ ಕನ್ನೆಯಂ ಪೇಳೆ ನಿನಗಮೆನಗಮೇಂ ದಂದುಗಂ (ಅದಿಪು. ೪-೨೭) ; ಅಬ್ಜನಾಗಿಯುಂ ಪೆಸರೆಸೆವಬ್ಜಮಂ ಬಲಿಪಂಗೆ ಸುಧಾಕರನಾಮಮಂ ವಿಚಾರಿಸದೆ ವಿಧಾತ್ರನಿಂತು ಕುಡಲಕ್ಕುಮೆ ರಾಜಸಗರ್ವದೇಟ್ಗೆಯಂ (ನಳಚಂ. ೨೦೫). ೨. ವಿಧಿ; ದೈವ ; ಅದೃಷ್ಟ : ಅಹೋ ವಿಧಾತ್ರಾ [ಪಾಠಾಂ. ಚಿತ್ರಂ] ಸಂಸಾರಮೆಂದಲಾಭಂ ಮಾಡಿ ಬಂದೆಂ (ವಡ್ಡಾರಾ. ೯-೨೭). [ಸಂ. ವಿಧಾತೃ]

ವಿಧಾತ್ರವಶ (ನಾ). = ವಿಧಾತೃವಶ : ಕರವಾಳ ಕಕ್ಕಡೆಯ ಕೊಂತದ ಧಾರೆಗಳುರ್ಚಿ ಸಂಯುಗಾವನಿತಳದೊಳ್ಸಿಧಾತ್ರವಶದಿಂ ನಿಮಗಂ ನಡೆವಂತುಟಾದುದೇ (ಗದಾಯು. ೪-೧೫). [ಸಂ. ವಿಧಾತೃವಶ]

ವಿಧಾತ್ರಾಧೀನ (ನಾ). ವಿಧಿಗೆ ಸೇರಿದುದು ; ಅದೃಷ್ಟದ ವಶದಲ್ಲಿರುವುದು: ಕೌರವಂಗಾಧೀನವೆನ್ನೆಯ ತನು ವಿಧಾತ್ರಾಧೀನವೆನ್ನೆಯ ಜೀವ (ಕುವ್ಯಾಭೀ. ೨-೨೦). [ಸಂ.]

ವಿಧಾನ (ನಾ). ೧. ವ್ಯವಸ್ಥೆಗೊಳಿಸುವುದು ; ಓರಣ ಮಾಡುವುದು. ೨. ವ್ಯವಸ್ಥೆ ; ಓರಣ. ೩. ರೀತಿ; ಬಗೆ; ಪ್ರಕಾರ: ಆ ಪುರಾಣಕ್ಕಂ ಲೋಕಾಕಾರ ಕಥನಮುಂ . . . ತಪೋದಾನವಿಧಾನವ್ಯಾವರ್ಣನಮುಂ ತತ್ಫಲಪ್ರಾಪ್ತಿಪ್ರಕಟನ ಮುಮೆಂದಿಂತವಯವಂಗಳೆಂಟಕ್ಕುಂ (ಆದಿಪು. ೧-೮೨ ಅ); ಧರ್ಮಮೆ ದೇಹಿಗ (ಮಿ)ಹಪರಶರ್ಮಕ್ಕೆ ನಿದಾನಮದನನೂನವಿಧಾನಂ (ಪುಷ್ಪಪು. ೩-೧೦೮). ೪. ನಿಯಮ; ಕಟ್ಟಳೆ: "ವಿಧಿ ವಿಧಾನಮಕ್ಕುಂ" (ವಸ್ತುಕೋ. ೧೨೦-೧೪); ಅರ್ಕಪುಷ್ಕರದಲ್ಲಿ ವಿಧಾನದಿಂದ ಮಾಡಿದ ಸ್ನಾನವು ಪುಣ್ಯಾತಿಶಯ (ಅರ್ಕಾಮೃ. ೩೫). ೫. ಮತಸಂಬಂಧವಾದ ಆಚರಣೆ, —ವಿಧಿ. ೬. ಸೃಷ್ಟಿ ; ರಚನೆ ; ನಿರ್ಮಾಣ. ೭. ನಿಯಮಿತವಾದ ವಿಧಿಗಳ ಅನುಷ್ಠಾನ. ೮. ಸಾಧನ; ಉಪಕರಣ. ೯. ಕಾನೂನು ; ಶಾಸನ. ೧೦. ತಂತ್ರ ; ಉಪಾಯ. ೧೧. ದೈವ; ಅದೃಷ್ಟ. ೧೨. [ವ್ಯಾಕ] ಒಂದು ಪದಕ್ಕೆ ಪೂರ್ವಪ್ರತ್ಯಯ ಅಥವಾ ಪರಪ್ರತ್ಯಯವು ಸೇರುವುದು : ಪದದಾದಿಯ ಋಶ್ವಕ್ಕಿತ್ವದೆಸ್ವದಸ್ವದ ವಿಧಾನಮುತ್ತಂ ಬಹುಳಂ (ಶಮದ. ೨೬೮). [ಸಂ.]

ವಿಧಾನಪರಿಷತ್ತು (ನಾ). ರಾಜ್ಯದ ಶಾಸನಮಂಡಲ ; ರಾಜ್ಯದ ಶಾಸನಾಧಿಕಾರವನ್ನು ಹೊಂದಿರುವ ಸಭೆ : ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು ಯಾವ ಸಂದರ್ಭದಲ್ಲಿಯೂ ನಲವತ್ತಕ್ಕಿಂತಲೂ ಕಡಮೆಯಾಗಿರತಕ್ಕುದಲ್ಲ (ಭಾಧಾಸ. ೧೧). [ಸಂ. ವಿಧಾನಪರಿಷದ್]

ವಿಧಾನಪೂರ್ವಕಂ (ಅ). ನಿಯಮಕ್ಕನುಸಾರವಾಗಿ ; ವಿಧ್ಯುಕ್ತವಾಗಿ : ಅಂತು ವಿಧಾನಪೂರ್ವಕಂ ಗತಜೀವೆಯಾಗಿ ಬಂದಿಲ್ಲಿ . . . ಪುಟ್ಟಿದ್ಳೆ (ಶಾಂತಿಪು. ೪-೬೯ ಪ). [ಸಂ.]

ವಿಧಾನಮಂಡಲ (ನಾ). = ವಿಧಾನಪರಿಷತ್ತು : ಪ್ರತಿಯೊಂದು ರಾಜ್ಯಕ್ಕಾಗಿಯೂ ಒಂದು ವಿಧಾನಮಂಡಲವಿರತಕ್ಕುದು (ಭಾಧಾಸ. ೮೯). [ಸಂ.]

ವಿಧಾನಸಭೆ (ನಾ). ರಾಜ್ಯದ ಚುನಾಯಿತ ಶಾಸಕರ ಸಭೆ : ಪ್ರತಿಯೊಂದು ರಾಜ್ಯದ ವಿಧಾನಸಭೆಯೂ ಪ್ರತ್ಯಕ್ಷ ನಿರ್ವಾಚನದ್ವಾರ ಆಯ್ಕೆಯಾದ ಈ ಸದಸ್ಯರಿಂದ ಕೂಡಿರಚಿತವಾಗಿರತಕ್ಕುದು (ಭಾಧಾಸ. ೯೦). [ಸಂ. ವಿಧಾನಸಭಾ]

ವಿಧಾನಸೌಧ (ನಾ). ವಿಧಾನಸಭೆಯು ಸೇರುವ ಸರ್ಕಾರದ ಕಾರ್ಯಾಲಯ, -ಭವನ: ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ವಿಧಾನಸೌಧವೂ ಒಂದು (ಯೂಫ). [ಸಂ.]

ವಿಧಾಯಕ (ಗು). ೧. ವ್ಯವಸ್ಥೆಗೊಳಿಸುವ ; ಅಣಮಾಡುವ. ೨. ನಿರ್ವಹಿಸುವ ; ನೆರವೇರಿಸುವ. ೩. ಒಪ್ಪಿಸುವ ; ವಹಿಸಿಕೊಡುವ. ೪. ವಿಧಿಸುವ ; ಆಜ್ಞೆ ಮಾಡುವ : ಆ ವರ್ಣನೆಯಲ್ಲಿ ಎರಡು ಅಂಶಗಳು ಬೆರತುಕೊಂಡಿರುತ್ತವೆ. ಒಂದು ವಿಧಾಯಕಭಾಗ, ಇನ್ನೊಂದು ವಿಧೇಯಭಾಗ (ರಾಜ್ಯಶಾ. ೪೪). ೫. ಸೃಷ್ಟಿಸುವ ; ರಚನಾತ್ಮಕವಾದ : ವಿಧಾಯಕಮನೋವೃತ್ತಿಗೆ ಸಾಕಷ್ಟು ಆಸ್ಪದ ಸಿಕ್ಕಿದ್ದರಿಂದ ಅವರ ಕರ್ತೃತ್ವಶಕ್ತಿಯು ವಿವಿಧರೂಪಗಳಲ್ಲಿ ದೃಗ್ಗೋಚರವಾಗತೊಡಗಿತು (ರಂಗರೂ. ೧೩೭); ಕ್ರೈಸ್ತಜನಾಂಗಗಳು ಅಥವಾ ಪಾಶ್ಚಾತ್ಯರು ಯಾವುದೇ ಕೆಲಸವನ್ನು ಕೈಕೊಂಡರೂ ಅದನ್ನು ವಿಧಾಯಕರೀತಿಯಲ್ಲಿ ನಡೆಸಿ ಪೂರ್ತಿಗೊಳಿಸುವುದೇ ಅವರ ವೈಶಿಷ್ಟ್ಯವಾಗಿದೆ (ಪಾಶ್ಚಾಬಿ. ೫೭). ೬. ನಿರ್ಧರಿಸುವ ; ನಿರ್ಣಾಯಕ : ಅತಿದೊಡ್ಡ ವಿಧಾಯಕ ವಿಮರ್ಶಕರೆಂದೂ ಶ್ರೀಅರವಿಂದರಿಗೆ ಸ್ಥಾನ ಉಂಟು (ಮಹಾಯೋ. ೧೪೦). (ನಾ). ೭. ಅಧಿಕಾರ ಪೂರ್ವಕವಾಗಿ ನೀಡಿದ ಆಜ್ಞೆ, —ಆದೇಶ. ೮. ವಿಧಿಸಲ್ಪಟ್ಟುದು ; ವಿಧ್ಯುಕ್ತವಾದುದು : ಆ ಸರ್ಕಾರದವರಿಂದ ವಿಧಾಯಕವಾಗಿರುವ ನಮೂನೆಯಲ್ಲಿ . . . ರಿಜಿಸ್ಟರು ಮಾಡಲ್ಪಟ್ಟಿರುವ ಸಂದರ್ಭದಲ್ಲಿ (ಭಾಧಾಸ. ೫). ೯. ಗೊತ್ತುಮಾಡಿರುವುದು ; ನಿಶ್ಚಯ : ರಾಗಗಳಿಗೆ ಒಂದೊಂದು ರಸನಿರೂಪಣೆಯು ವಿಧಾಯಕವಾಗಿರುವುದೆಂದು ಆಗಲೇ ಹೇಳಿದ್ದೇನೆ. ರಾಗವನ್ನು ಹಾಡಿದಲ್ಲಿ ವಿಧಾಯಕವಾಗಿರುವ ರಸವು ಹಾಡುವವರಲ್ಲಿಯೇ ಉದ್ಭವಿಸುವುದೇ? (ಭಾರದ. ೫೪೪). ೧೦. ನ್ಯಾಯಬದ್ಧವಾದುದು; ನಿಯಮಾನುಸಾರವಾದುದು : ನಮ್ಮ ಶಿಕ್ಷೆ ವಿಧಾಯಕವಾಗಿರಬೇಕೇ ವಿನಾ ವಿಧ್ವಂಸಕವಾಗಿರಬಾರದು (ರಂಗರೂ. ೫೬). ೧೧. ಜೂರ್ಜಿತವಾದುದು ; ಜಾರಿಗೆ ಬಂದುದು : ಮೊನ್ನೆ ತಾನೆ ಶಿಕ್ಷೆ ವಿಧಾಯಕವಾಯಿತು (ಪುನರಾ. ೧೮೭). ೧೨. ಮುನ್ನಡೆಸುವಂಥದು : ಸ್ವರವು ತನ್ನ ಕಾರಣವಸ್ತುಗಳಿಗೆ ವಿಧಾಯಕವಾಗುವುದಿಲ್ಲ, ವಿಧೇಯವಾಗುತ್ತದೆ (ಸೋತ್ರಮು. ೮೫). ೧೩. ಮುನ್ನಡೆಸುವವನು ; ಮುಂದಾಳು : ಈ ಕೋಟಲೆಗಳನ್ನೆಲ್ಲಾ ಒಟ್ಟಿಗೆ ಪೋಣಿಸಿ "ವಿಧಾಯಕ"ನೆಂಬ ಹೆಮ್ಮೆಯ ಹೆಸರನ್ನು ಕುಚ್ಚುಗಟ್ಟಿ, ಈ ಮುಳ್ಳಿನ ಮಾಲಿಕೆಯನ್ನು ಒಬ್ಬಾತನ ಕೊರಳಿಗೆ ಹಾಕಿಬಿಟ್ಟರು. ಈ ವಿಧಾಯಕನಿಗೆ ಸಂಘದ ಅಭಿವೃದ್ಧಿಯ ವಿಷಯದಲ್ಲಿ ಹೇರಳವಾದ ಆಸಕ್ತಿಯಿತ್ತು (ನಂಬಿ. ೨೭). [ಸಂ.]

ವಿಧಾರಣ (ನಾ). ೧. ಪ್ರತ್ಯೇಕಿಸುವಿಕೆ ; ವಿಭಾಗಿಸುವಿಕೆ. ೨. ತಡೆಹಿಡಿಯುವಿಕೆ ; ಅಡ್ಡಿಪಡಿಸುವಿಕೆ ; ನಿರೋಧಿಸುವಿಕೆ. ೩. ಸಹಿಸುವಿಕೆ ; ತಾಳುವಿಕೆ. ೪. ಆಧಾರ ; ಅವಲಂಬನೆ : ಈತನೇ ಸರ್ವೇಶ್ವರನು . . . ಈತನೇ ಈ ಲೋಕಗಳು ಸಂಭೇದವಾಗದಿರುವುದಕ್ಕೆ ಕಾರಣನಾದ ವಿಧಾರಣವಾದ ಸೇತು ಎಂದು ಹೇಳಿದೆ (ಬೃಹ್ಮಭಾ. ೪೧೮). [ಸಂ.]

ವಿಧಾವಂತ (ನಾ). ವೇತನಕ್ಕಾಗಿ ದುಡಿಯುವ ವ್ಯಕ್ತಿ ; ಕೂಲಿಗಾಗಿ ದುಡಿಯುವ ವ್ಯಕ್ತಿ : ಸಂಜೀವನವ ತಂದೆನೆಂದಡೆ ಅದು ಬಂದ ಠಾವಿಲ್ಲದೆ ಕಾಮಧೇನುವ ಕಟ್ಟಿದೆನೆಂದಡೆ ಅದು ಹುಟ್ಟಿದ ಠಾವಿಲ್ಲದೆ ಇಷ್ಟನಱಿಯದೆ ವಿರಕ್ತನಾದೆನೆಂಬ ವಿಧಾವಂತರ [ಪಾಠಾಂ. ವಿಧಾಂತರ] ಕತ್ತೆಗಾಹಿಯ ಮಾತು ಬೇಡ (ಕೋಲಶಾಂ. ೧೪-೪೩); ವಿಧಾವಂತನಲಿ ಮಂತ್ರಾಲೋಚನೆಯ ಸಂಜನಿಸಿ ಹರಹಿನೊಳಳಿಯೆಲೇ ಧೂಪಾಲ (ಕುಮಾಸ. ೧-೪೦). [ಸಂ. ವಿಧಾವತ್]

ವಿಧಿ (ನಾ). ೧. ಕಟ್ಟಳೆ ; ಆಜ್ಞೆ ; ಆದೇಶ : ಮಧುಮದ್ಯದ ಬಸನಿಗ ಕುಡಿ ಮಧುಮದ್ಯಮಾನೆಂದು ಸಪ್ತಧಾತುದ್ರವಮಂ ವಿಧಿಯಿಂ ತಂದೆಱೆವರ್ (ಸಿಬಮಾ. ೧೧-೪೫). ೨. ನಿಯಮ ; ನೀತಿ : ಮತ್ತೇಭವಧಪ್ರಚಂಡ ಯಮದಂಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ (ಜಗವಿ. ೨-೫೪). ೩. ಕಾಯದೆ ; ಕಾನೂನು ; ಶಾಸನ : ಬಾಂದುಹಾಕುವುದಕ್ಕೆ ಏನಾದರೂ ವಿಧಿಗಳುಂಟೆ ? (ಭೂಮಿಅ. ೫೩); ವಿದ್ಯಾರ್ಥಿಗಳಿಂದ ಸುಂಕ ತೆಗೆದುಕೊಳ್ಳಬೇಕೆನ್ನುವುದಕ್ಕೆ ವಿಧಿ ಎಲ್ಲಿದೆ? (ಹಸುಹೊ. ೧೪೯). ೪. ಧಾರ್ಮಿಕಪ್ರಕ್ರಿಯೆಗಳನ್ನು ತಿಳಿಸುವ ಗ್ರಂಥ ; ವೇದ : "ವಿಧಿ ವೇದಂ" (ವಸ್ತುಕೋ. ೧೨೦-೧೪). ೫. (ಹೀಗೆಯೇ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿರುವ) ಕರ್ಮ; ನೇಮ; ಸಂಪ್ರದಾಯ : ವಿಧಿ ನಿಷೇಧ ಜನನಿ ಜನಕ ಕುಲಗೋತ್ರ ಜಾತಿ ಭೇದಾಭೇದ ಸ್ವರ್ಗನರಕಾದಿ ಭಯವೇನೂ ಇಲ್ಲ (ಸಕವ.ಕ. II, ೨೬೬-೬೪); ವಿಧಿ ನಿಷೇಧಗಳೆರಡುಮರಿಯದೆ ಮಧುವಿರೋಧಿಯ ಪಾದಕರ್ಪಿಸು (ಹಸಾರ. ೧೮-೩೧). ೬. ಕ್ರಮ ; ರೀತಿ ; ಬಗೆ : ಉಪಚಿತವಿಧಿ ದಾತೃದ್ರವ್ಯಪಾತ್ರ ಫಲಭೇದದಿಂದಮಯ್ದು ತೆಱಂ ಭಾವಿಪೊಡನ್ನದಾನಮದಱೊಳ್ ಪ್ರಪಂಚಪೊಡೆ ವಿಧಿಯದೊಂದೆ ನವವಿಧಮಕ್ಕುಂ (ಚಂದ್ರಪ್ರ. ೩-೨೯); ಕಾಳಗದ ಕಥೆಯಲ್ಲ ವಿಷಯಗಳೇಳಿಗೆಯ ವಿಧಿಯಲ್ಲ (ಪ್ರಭುಲಿಂ. ೧-೧೨). ೭. ಸೃಷ್ಟಿಕರ್ತ ; ಬ್ರಹ್ಮ ; ಚತುರ್ಮುಖ : ದರ್ವೀಕರನ ದಾಡೆಯಂ ಕಿತ್ತವಧಿ ವಿಧಿಗಳೆರ್ವರ್ಗೆ ತೊಳ್ತುಗೆಲಸವನಿತ್ತು (ಪಡ್ಡರಾ. ೨-೧೭); ಇದು ವಿಧಿ ವಿಷ್ಣುಗಳ ವಾದಮಂ ಮಾಣಿಸಿದಗ್ಗದ ಪರಬೊಮ್ಮಂ (ರಾಜಶೇ. ೧೫-೪೯). ೮. ವಿಷ್ಣು: "ಸನಾತನಃ, ಅಜಿತಃ, (ಜಿನಃ), ಶಂಭುಃ, ವಿಧಿಃ . . . ಪುರುಷೋತ್ತಮಃ — ಈ ೧೧ ನಾರಾಯಣನ ಪೆಸರ್" (ಹಲಾಯು. ೬-೨೬). ೯. ಒಳ್ಳೆಯ ಮನುಷ್ಯ ; ಸಂಭಾವಿತ. ೧೦. ತಿಳಿದವನು ; ಬಲ್ಲವನು. ೧೧. ಕವಿ. ೧೨. ಗುಂಪು ; ಮೇಳ. ೧೩. ಹೊತ್ತು ; ವೇಳೆ ; ಕಾಲ : "ಕಾಲದೊಳು ಕೂಟದೊಳು ವಿಧಿಯೆಂದೆನಿಕ್ಕುಂ" (ಮಂಗರಾ. ೧೪೨-೧೯) ; ಕಾಲದೊಳಂಬುಜಾಸನನೊಳ್ ಉತ್ತಮನೊಳ್ ಕವಿಯೊಳ್ ವಿಧಾನದೊಳ್ ಮೇಳದೊಳುಂ ವಿಚಕ್ಷಣನೊಳ್ ಶ್ರುತಿಯೊಳ್ ವಿಧಿಶಬ್ದಮಕ್ಕುಂ" (ನಾನಾರ. ೨೨). ೧೪. ವೈದ್ಯ. ೧೪. ದೈವ ; ಹಣೆಬರಹ ; ಅದೃಷ್ಟ : ಆರುಂ ಕೊಲಲಾರ್ಪರೆ ಸಾಯದರಂ ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ (ಪಂರಾಮಾ. ೩-೩೧) ; ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ (ಮಂಜಕ. ೬೦೦). ೧೫. ಅನ್ಯಮಾರ್ಗ ; ಗತ್ಯಂತರ ; ನಿರ್ವಾಹ : ಮನೋವಿಜ್ಞಾನಕ್ಕೂ ಅಧ್ಯಾತ್ಮವಾದಕ್ಕೂ ಗೂಢ ಸಂಬಂಧವಿದೆ. ಇವೆರಡು ಅಧ್ಯಯನವನ್ನು ನಾವು ಪರಸ್ಪರ ಹೊಂದಿಸಿಕೊಂಡು

ಮಾಡಿದಲ್ಲದೆ ವಿಧಿಯಿಲ್ಲ (ಚಿಂಚಾ. ೪೬). ೧೬. ಗತಿ ; ಅವಸ್ಥೆ ; ಪರಿಸ್ಥಿತಿ : ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ ಮುನ್ನಂಜದ ರಾವಣನೇವಿಧಿಯಾದ (ಬಸವ. ೪೪೬). ೧೭. [ವ್ಯಾಕ] ಧಾತುವಿನ ವಿಧಿ, ನಿಷೇಧ ಮತ್ತು ಸಂಭಾವನೆ ಎಂಬ ಮೂರು ರೂಪಗಳಲ್ಲಿ ಒಂದು ; ಆಜ್ಞೆ, ಇಚ್ಛೆ ಮುಂತಾದ ಭಾವನೆಗಳನ್ನು ಸೂಚಿಸುವ ರೂಪ : ಪುಗೆ ದದಪವಕಾರಂ ವಿಧಿಯ ಗೆಕಾರಂ ವರ್ತಮಾನಕಾಲದ ಗುಂ ಧಾತುಗೆ ಬಳಕುಳ ರೇಫಾಂತಕ್ಕೊಗೆಗುಂ ಶಿಥಿಲತ್ವಮಗುರುಪೂರ್ವಸ್ಥಿತಿಯಂ (ಶಮದ. ೪೪) ; ಇಲ್ಲಿ 'ಹೊರಡು' ಎಂಬುದು ಕ್ರಿಯೆ ನಡೆಯಬೇಕೆಂದು ಅಪ್ಪಣೆಮಾಡುತ್ತದೆ (ವಿಧಿಸುತ್ತದೆ) . . . ವಿಧಿ, ನಿಷೇಧ, ಸಂಭಾವನೆ —ಇವು ಒಂದು ಕ್ರಿಯೆಯ ವಿಷಯದಲ್ಲಿ ಮಾತಾಡುವಾತನ ಅಭಿಪ್ರಾಯವೇನು ಎಂಬುದನ್ನು ತಿಳಿಸುತ್ತದೆ (ಮಧ್ಯಮ. ೭೩).

ವಿಧಿನಿಷೇಧ = ನಿಯಮ ಮತ್ತು ಅಡ್ಡಿ : ಮಡಿಯುಟ್ಟ ವಿಧಿನಿಷೇಧಾದಿಗಳ ದೋಷ ನೆರೆವ ಪೊರ್ದದೆ (ನವಮೋ. ೨-೩೭); ಅಲ್ಲಿಯ ಹೆಣ್ಣುಮಕ್ಕಳಂತೆಯೇ ಈ ಹರಟೆಗಾದರೂ ಮುನ್ನುಡಿಯ ಕುಂಕುಮದ ಸೌಭಾಗ್ಯದ ವಿಧಿನಿಷೇಧವೇಕೆ ? (ನಿರಾಭ. ೧೧೭). [ಸಂ.]

ವಿಧಿಕೃತ (ನಾ). ಹಣೆಬರಹ ; ದೈವಗತಿ : ಯುವತೀನಿರ್ಮಾಣಂ ಕರ್ಮದ ವಿಧಿಕೃತಮೇಂ ಬಾಟ್ತೆ ಲೋಕತ್ರಯಾಜಿಷ್ಣುವನೆನ್ನಂ ಭೂಪನಂದುಂ ತೃಣವೆನೆ ಲಘುವಂ ಮಾಡಿತು (ಪುಷ್ಪಸು. ೩-೨೩); ಅಹಂಕಾರಮುಂ ಪೋಯ್ತು ವಿಧಿಕೃತ ಮೀರದಾಯ್ತು (ಮೆಂಕಾರಾ. ೨-೯-೫). [ಸಂ.]

ವಿಧಿಕ್ರಿಯೆ (ನಾ). [ವ್ಯಾಕ] ವಿಧ್ಯರ್ಥಕಕ್ರಿಯಾಪದ : ವರ್ತಮಾನಕ್ರಿಯೆಯುಂ ವಿಧಿಕ್ರಿಯೆಯುಂ ಮಧ್ಯಮಪುರುಷಕ್ರಿಯೆಯುಂ ಉತ್ತಮಪುರುಷಕ್ರಿಯೆಯುಂ ಕೃಲ್ಲಿಂಗಮಾಗವು (ಶಮದ. ೭೩ ವೃತ್ತಿ). [ಸಂ. ವಿಧಿಕ್ರಿಯಾ]

ವಿಧಿಜ (ನಾ). ೧. ಸರಿಯಾದ ಕ್ರಮವನ್ನು ತಿಳಿದವನು. ೨. ಧಾರ್ಮಿಕ ಆಚರಣೆಗಳನ್ನು ಬಲ್ಲ ಬ್ರಾಹ್ಮಣ. ೩. ಅಡುಗೆಯವನು; ಬಾಣಸಿಗ : "ಆರಾಳಿಕಂ ಪಲ್ಲವಸೂದ ಸೂಪಕಾರಾಹ್ವಯಂ ಬಾಣಸಿಗಂ ವಿಧಿಜ್ಞಂ ಪೌರೋಗವಂ ಸೂಪಮಹಾನಸಾಧಿಕಾರಸ್ಥಿತಂ ಭಕ್ತಿಗುಣಾನುರಕ್ತಂ" (ಮ್ಯಾಕೋ. ೬೦-೫೨). [ಸಂ.]

ವಿಧಿದಪ್ಪು (ಕ್ರಿ). ನಿಯಮವನ್ನು ಮೀರು; ಕಟ್ಟಳೆಯನ್ನು ಉಲ್ಲಂಘಿಸು: ಸ್ಮೃಸರಸು . . . ವಿಧಿದಪ್ಪಿ ಆಳ್ವನಯ್ (ಬದ್ಧಪ್ರ. ೧೦-೧೫೯). [ವಿಧಿ + ತಪ್ಪು]

ವಿಧಿದಾನ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಮೂವತ್ತೈದನೆಯದು ; ತನ್ನನ್ನು ಪೂಜಿಸಿದ ದೇವತೆಗಳನ್ನು ಸತ್ಕರಿಸಿ, ವಿಧಿವತ್ತಾಗಿ ದಾನಮಾಡುವುದು : ಆದಾನ ಪ್ರೀತಿ ಸುಪ್ರೀತಿ . . . ವಿಧಿದಾನ ಸುಖೋದಯೆಂದ್ರ ತ್ಯಾಗಾವತಾರ . . . ವಿಹಾರಯೋಗ್ಯ ತ್ಯಾಗನಿರ್ವೃತಿಯೆಂಬಯ್ತು ಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫೭) ; ಇಂದ್ರಾಭಿಷೇಕವುಳ್ಳವನು ತನ್ನ ಸ್ಥಾನದಲ್ಲಿರುವ ಸಕಲದೇವತೆಗಳಿಗೂ ಅವರವರ ಪದವಿಗಳಂ ಕೊಟ್ಟು ಸುಖವಾಗಿ ತನ್ನನುಚ್ಛೆಯೊಳಿರಿಸಿಕ್ಕೊಂಡಿರುವದೇ ವಿಧಿದಾನವೆಂಬ ೩೫ನೇ ಕರ್ಮವು (ಪುರುಚ. ೨೧೨). [ಸಂ.]

ವಿಧಿಪೂರ್ವ (ಅ). ನಿಯಮಾನುಸಾರವಾಗಿ ; ವಿಧ್ಯುಕ್ತವಾಗಿ : ಕುಲವಿದ್ಯಾದಿ ನಿದಾನ್ವಯಪ್ರಕೃತಿಯೊಳ್ ತದ್ಜಾತಿವಿದ್ಯೋತ್ಕರಂ ಕುಲವೆಣ್ಣೊಳ್ ವಿಧಿಪೂರ್ವ ಸಾಧಿತ ಮಹಾಮಂತ್ರವ್ರಜಂ (ಶಾಂತಿಪು. ೫-೧೩). [ಸಂ.]

ವಿಧಿಪೂರ್ವಕ (ನಾ). ನಿಯಮಬದ್ಧವಾದುದು ; ವಿಧ್ಯುಕ್ತವಾದುದು : ವಿಧಿಪೂರ್ವಕದಿ ಸದಮಲ ಮೂಲಗುರುಗಳ ನಾಮದಿಂದಲಿ ವದಗಿ ನಮಸ್ಕರಿಸಿ (ಎಸಾಸು. ೧೦೮-೪); ಭೀಷ್ಮನು ತನ್ನ ಮೊಮ್ಮಕ್ಕಳನ್ನು ಅವನಲ್ಲಿ ವಿಧಿಪೂರ್ವಕವಾಗಿ ಶಿಷ್ಯವೃತ್ತಿ ಕೈಕೊಳ್ಳುವಂತೆ ನೇಮಿಸಿದನು (ವಚಭಾ. ೧೮). [ಸಂ.]

ವಿಧಿಪೂರ್ವಕಂ (ಅ). = ವಿಧಿಪೂರ್ವ : ವಿಧಿಪೂರ್ವಕಮಾತ್ಮಗದಾಯುಧಮಂ ದೈವಿಕಮನೆತ್ತಿ ಹನುಮಂ . . . ಪೊಯ್ದಂ (ಪಂರಾಮಾ. ೧೧-೬೯). [ಸಂ.]

ವಿಧಿಪ್ರೇರಿತ (ನಾ). ದೈವದಿಂದ ಪ್ರಚೋದನೆಗೊಂಡವನು ; ವಿಧಿಯಿಂದ ನಿಯಮಿತನಾದವನು : ಮಾದ್ರಿಯು ತಾನು ಎಷ್ಟು ತಡೆದರೂ ಪಾಂಡುವು ಸುಮ್ಮನಾಗಲಿಲ್ಲವೆಂದೂ ವಿಧಿಪ್ರೇರಿತನಾಗಿಯೇ ಹಾಗೆ ನಡೆದುಕೊಂಡನೆಂದೂ ಉತ್ತರಕೊಟ್ಟಳು (ವಚಭಾ. ೧೪). [ಸಂ.]

ವಿಧಿಯಿಸು 'ವಿಧಿಸು' ನೋ.

ವಿಧಿರೂಪ (ನಾ). = ವಿಧಿ ೧೭ : ವಿಚಾರ ಮಾಡಿದರೆ, ವಿಧಿರೂಪಗಳನ್ನು ಬಿಟ್ಟರೆ ಮಿಕ್ಕ ಪೂರ್ಣಕ್ರಿಯೆಗಳೆಲ್ಲಾ ನಾಮಪದಗಳೇ ಆಗಿವೆ (ಕೃಕಿ. ೩೫೧). [ಸಂ.]

ವಿಧಿಲಿಖಿತ (ನಾ). ಹಣೆಬರಹ ; ದೈವಲೀಲೆ : ವಿಧಿಲಿಖಿತಕ್ಕೆ ಅನುಸಾರವಾಗಿ ನಾವು ನಡೆಯಬೇಕಾಗುವದರಿಂದ . . . ತಪ್ಪುತಡೆಗಳಿಗೆ ಎಡೆಯುಂಟಾಗಿ, ಅವೂ ಮತ್ತು ಸಂಬಂಧಿಸಿದ ವ್ಯಕ್ತಿಯೂ ನಿಮಿತ್ತಮಾತ್ರವಾಗಿ ಉಳಿಯಬೇಕಾಗುತ್ತದೆ (ಹೇಮಾಂ. ೧೪೧) ; ವಿಭೀಷಣನು ವಿಷ್ಣೂವದನನಾಗಿ ಈ ವಿಧಿಲಿಖಿತವನ್ನು ತಪ್ಪಿಸುವ ಉಪಾಯವನ್ನು ಚಿಂತಿಸಿ ಕೊಲೆಗಡಕರನ್ನು ಕರೆಸಿ ಜನಕದಶರಥರೀರ್ವರನ್ನು ಕೊಂದುಬರುವಂತೆ ಆಜ್ಞಾಪಿಸುವನು (ಸಾಹಿಸ. ೮೬). [ಸಂ.]

ವಿಧಿಲಿಪಿ (ನಾ). = ವಿಧಿಲಿಖಿತ: ತಪ್ಪದೆ ರಣಮುಖದೊಳ್ಕುಂತಪ್ಪದಟರನಿಸೆ ಮಹಾರಥರ್ಜವನಾಳಂತಪ್ಪ ಕಣೆ ರೋಮರೋಮಂದಪ್ಪದೆ ನಾಂಟುದುವು ಸೀಂಟಿದುವು ವಿಧಿಲಿಪಿಯಂ (ಪಂರಾಮಾ. ೧೩-೭೧); ಆ ಕಾರ್ಯವು ನಿನ್ನ ಮುಖಾಂತರವಾಗಿಯೇ ಆಗಬೇಕೆಂದು ವಿಧಿಲಿಪಿಯಿದ್ದರೆ ಅದನ್ನಾರು ತಪ್ಪಿಸಬಲ್ಲರು ? (ಸಾವಿತ್ರಿ. ೨). [ಸಂ.]

ವಿಧಿಲೀಲೆ (ನಾ). ಅದೃಷ್ಟದ ಆಟ ; ದೈವಮಾಯೆ : ಕೊಳ್ಳಿದಂ . . . ಪಸುಗೆ ನೀಡಂಶಂಗಳಂ ಸತಿಯರ್ಗೆ ಗೆಲ್ದುದಾ ವಿಧಿಲೀಲೆಯುಂ (ಶ್ರೀರಾಮಾ. ೧೪-೩೫೯).

[ಸಂ. ವಿಧಿಲೀಲಾ]

ವಿಧಿವಂತ (ನಾ). ಕಟ್ಟಳೆಗಳನ್ನು ಅನುಸರಿಸುವವನು ; ಸಂಪ್ರದಾಯಗಳನ್ನು ಪಾಲಿಸುವವನು : ಉದುಭಟನೆನಿಪ್ಪ ಮಹಂತನಿಪ್ಪನು ಭೋಜರಾಜೋತ್ತಮನ ಗುರುವಾಗಿ ಶಾಂತದಿಂ ಶಿವದೀಕ್ಷೆಯಂ ವಿಧಿವಂತನಾಗಲು ಕೊಟ್ಟು (ಬಸಪು. ೫೭-೬).

[ಸಂ. ವಿಧಿವತ್]

ವಿಧಿವಡು (ಕ್ರಿ). ಹಣೆಬರಹದಲ್ಲಿರುವುದನ್ನು ಅನುಭವಿಸು ,—ಭೋಗಿಸು : ದೇವಗತಿಯಲ್ಲಿ ಪೆರೆರ್ವೆತ್ತೀ ವಿಧುಗಂ ಕಾಲವಶದೊಳಿಂತಾಯ್ತಾಮಿನ್ನೀ ವಿಷಮಭವದೊಳಾಗದದೇವಿಧಿವಟ್ಟಪೆವೊ (ಚಂದ್ರಪ್ರ. ೯-೮). [ವಿಧಿ + ಪಡು]

ವಿಧಿವತ್ತು (ನಾ). ನಿಯಮಬದ್ಧವಾದುದು ; ಕಟ್ಟಳೆಗೆ ಅನುಸಾರವಾದುದು : ವರ್ಣಗಳೂ ವರ್ಣಧರ್ಮಗಳೂ ವಿಧಿವತ್ತಾದುವುಗಳು (ಭಾರದ. ೧೧೭).

ವಿಧಿವತ್ತಾಗಿ = ೧. ನಿಯಮವನ್ನು ಅನುಸರಿಸಿ ; ನಿಯಮಾನುಸಾರವಾಗಿ : ಕನ್ನಡ ಅಧ್ಯಯನಸಂಸ್ಥೆಯ ಆಶ್ರಯದಲ್ಲಿ ವಿಶ್ವಕೋಶದ ಕೆಲಸ ವಿಧಿವತ್ತಾಗಿ ನಡೆಯತೊಡಗಿದ್ದು ಕಳೆದ ಆರುತಿಂಗಳಿಂದ (ಕವಿಕೋ. I, X, ಪೀಠಿಕೆ). ೨. ಶಾಸ್ತ್ರಗ್ರಂಥದಲ್ಲಿ ಹೇಳಿರುವಂತೆ ; ವಿಧ್ಯುಕ್ತವಾಗಿ : ಅವರ ವಿವಾಹವು ವಿಧಿವತ್ತಾಗಿ ಆಯಿತು (ರೂಢಿ). [ಸಂ. ವಿಧಿವತ್]

ವಿಧಿವಶ (ನಾ). ದೈವದ ಅಂಕೆ ; ವಿಧಿನಿಯಮ : ಫಣೀಂದ್ರಪತಾಕಾ ವಿಧಿವಶದೆ ನಿನಗಮಿಾ ಪರಿಯಾಯ್ತೆ (ಗದಾಯು. ೯-೨೨) ; ಎನ್ನ ಪಗೆಯಾದೊಡಂ, ವಿಧಿವಶದೆ ಕಾಲ್ ತೊಡರ್ದು ಬಿಟ್ಟಂಗೆ ಮಱುಗುವೆನ್ (ಅಶ್ವತ್ಥಾ. ೬-೧೦೯).

ವಿಧಿವಶವಾಗು = (ಆಲಂ) ಸಾಯು ; ಗತಿಸು : ಹತ್ತುದಿನಗಳ ಹಿಂದೆ ಶ್ರೀಯುತರು ವಿಧಿವಶವಾದರು (ರೂಢಿ). [ಸಂ.]

ವಿಧಿವಾಕ್ಯ (ನಾ). ಇಂತಿಂಥದನ್ನು ಮಾಡಬೇಕೆಂದು ಆದೇಶಿಸುವ ಮಾತು : ವೇದವಾಕ್ಯವಿಚಾರವೆಂತೆನಲಾದಿಯಲಿ ವಿಧಿವಾಕ್ಯವಾ ಬಳಿಕಾದುದೈಸೆ ನಿಷಿದ್ಧವಾಕ್ಯವದು (ಗಗಾ. ೨೨-೫); ತ್ರಿಗುಣಾತ್ಮಕವಾದ ಚತುರ್ವೇದಂಗಳಲ್ಲಿಯು ವಿಧಿವಾಕ್ಯ ನಿಷೇಧವಾಕ್ಯ ಸಿದ್ಧಾಂತವಾಕ್ಯಮಾಗಿರ್ಪವವರಲ್ಲಿ ಸಕಲಧರ್ಮಕರ್ಮಂಗಳ ನಿಯಮಿಸುವುದೇ ವಿಧಿವಾಕ್ಯವೆನಿಸುವದು (ನಾನಾಗು. ೨೯-೯). [ಸಂ.]

ವಿಧಿವಾದ (ನಾ). ೧. ಹೀಗೆಯೇ ಆಗುತ್ತದೆ ಎಂದು ಹೇಳುವ ವಾದ ; ನಿರ್ಣಯವಾದ : ಈ ವಿಧಿವಾದವೆಂಬುದೇನು ? ಪ್ರತಿಯೊಂದು ವಸ್ತುವೂ ಯಾವುದೋ ಒಂದು ವಿಧಿಯಿಂದ ಒಂದು ನಿಶ್ಚಿತವಾದ ಹಾದಿ ಹಿಡಿದು ಸಾಗುತ್ತಿದೆ ಎಂಬುದು (ಚಾಲಪ್ರ. III, ೧೩೬). ೨. ವೇದಗಳಲ್ಲಿಯ ಒಂದು ಭಾಗ ; ನೇಮಗಳನ್ನು ಪಾಲಿಸುವಂತೆ ಹೇಳುವ ವಾದ : ಆ ವೇದಂಗಳಾದೊಡೆ ವಿಧಿವಾದ ಅರ್ಥವಾದ ಮಂತ್ರವಾದ ನಾಮಧೇಯಂಗಳೆಂಬ ನಾಲ್ಕುಭೇದದಿಂ ಸಮಸ್ತಧರ್ಮಂಗಳಂ

ಬೋಧಿಸುತಿರ್ಪವವಱಲ್ಲಿ ರಾಜಾಜ್ಞೆಯಂತೆ ಪುರುಷರುಗಳಂ ನಿಷೇಧದತ್ತಣಿಂ ತಿರುಗಿಸಿ ಧರ್ಮವೇ ಮಾಡಲಕ್ಕುದೆಂಬುದೇ ವಿಧಿವಾದವೆನಿಸುವುದು (ವಿವೇಕ. ೪). [ಸಂ.]

ವಿಧಿವಾಹನ (ನಾ). ಬ್ರಹ್ಮನ ವಾಹನ ; ಹಂಸ : ಆ ವನಂ . . . ವಿರಹಿಯಂತೆ ವಿಧಿವಾಹನದಂತೆ ವಿಕಳಧ್ವನಿವಿಳಸಿತಮುಂ . . . ಎನಿಸಿದುದು (ರಾಜಶೇ. ೨-೭೮ ವ). [ಸಂ.]

ವಿಧಿವಿಪರ್ಯಾಸ (ನಾ). ದೈವದ ಪ್ರತಿಕೂಲಸ್ಥಿತಿ ; ಅದೃಷ್ಟದ ಏರುಪೇರು : ಉದಾರಮನಸ್ಕರೂ ದೈವಭಕ್ತರೂ ಆದ ನಮಗೆ ಎಂಥ ಕಷ್ಟ ಬಂತು! ಇದು ಏನು ವಿಧಿವಿಪರ್ಯಾಸ! (ವಚಭಾ. ೧೦೯). [ಸಂ.]

ವಿಧಿವಿಹಿತ (ಗು). ೧. ದೈವದಿಂದ ನಿಯಮಿಸಲ್ಪಟ್ಟ : ಕರ್ಮವಾವುದು ವಿಧಿವಿಹಿತ ದುಷ್ಕರ್ಮವಾವುದು (ಕುವ್ಯಾಲಾ. ೪-೮೪). (ನಾ). ೨. ದೈವದಿಂದ ನಿಯಮಿಸಲ್ಪಟ್ಟುದು ; ದೈವಾಧೀನವಾದುದು : ಜೀವಧಾರಣೆ ಪೋಷಣೆಗಳಿಗೊಸ್ಕರವೆ ಮಾಡಬೇಕಾದ ಹೋರಾಟ ಅನಿವಾರ್ಯ ; ವಿಧಿವಿಹಿತ (ಕುಸಾರ. ೧. ೭೬೫). [ಸಂ.]

ವಿಧಿವೃತ್ತ (ನಾ). [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹದಿನೈದನೆಯ ಅತಿಶಕ್ವರಿ ಎಂಬ ಛಂದಸ್ಸಿನ ಒಂದು ವೃತ್ತ : ಸಜಸಂಸಯ ನೆರೆದಿರಲ್ ವಿಧಿವೃತ್ತಮಕ್ಕುಂ (ಕೈಪಿಡಿ. ೧೩೬). [ಸಂ.]

ವಿಧಿಸು, ವಿಧಿಯಿಸು (ಕ್ರಿ). ೧. ಆಜ್ಞಾಪಿಸು ; ಆದೇಶಮಾಡು : ಆ ಸಭೆಯವರು ಸಾಕ್ರತಿಲಸನು ನಾಸ್ತಿಕನೆಂದು ನಿರ್ಣಯಿಸಿ ವಿಷಕುಡಿಸಿ ಅವನನ್ನು ಕೊಲ್ಲಬೇಕೆಂಬ ಶಿಕ್ಷೆಯನ್ನು ವಿಧಿಸಿದರು (ಮುಂಬಯಿ. ೪-೧೮೨). ೨. ನಿಯಮಿಸು ; ಅನುಸರಿಸುವಂತೆ ಮಾಡು : ತರುಣ ಕುರಂಗಧರಧರಭಕ್ತರಾಚಾರಂಗಳಿಂತಹವೆಂದು ತತ್ತಾಪಸರು ವಿಧಿಸಲ್ಕೆ (ಬಸವ. ೪೩-೮೨); ಒಂದು ನಿರ್ದಿಷ್ಟ ಭೂಭಾಗವನ್ನು ಗೋಗ್ರಾಸಕ್ಕೆ ಪ್ರತ್ಯೇಕವಾಗಿ ಇರಿಸಲೇಬೇಕೆಂದು ಮನುಮುನಿಯು ಶಾಸನವನ್ನೇ ವಿಧಿಸಿದ್ದನು (ಗೋಗ್ರಾಸ. ೧೦೩). ವಿಧಿಯಿಸು : ೨. ಗೊತ್ತುಮಾಡು : ಆವರಿಸೆ ಕೂಸುತನ ಮುಪ್ಪಾವಳಿಯುಂ ತನುಧನಗಳಿಂ[ಪಾಶಾ. ಜೌವನಮುಂ ಮುಪ್ಪುಮಂತಱಿಂ]ದಿನ್ನೆವರಂ ಮೂವಣ್ಣಂ ಬರೆ ರೂಪಪರಾವರ್ತನವಿಧಿಯಿನವರ್ಗೆ ವಿಧಿ ವಿಧಿಯಿಸುಗುಂ (ಅಜಿಪು. ೨-೯೨). [ವಿಧಿ + - ಇಸ್ಸು]

ವಿಧು (ನಾ). ೧. ತಿಂಗಳು ; ಚಂದ್ರ : ವಿಷಮಬಾಣನ ತೀವ್ರಶರಾನಳಾರ್ಚಿಗಳ್ ತಗುಳ್ದುವೆನಲ್ಕೆ ತೋರ್ಪುವು ತಮಸ್ವಿನಿಗಳ್ ವಿಧುವಿಪ್ರಲಂಭದಿಂ (ಕಾದಂಬಾ. ೩೦೨); ವಿಧು ವಿಂದಂ ವಿಬುಧೋತ್ಕರಪ್ರಿಯಕರಂ ತೀವ್ರಾಂಶುವಿಂದಂ ಪ್ರತಾಪಧನಂ (ಪುಷ್ಪಸು. ೩-೧೨೨). ೨. ವಿಷ್ಣು : ಅನಂತಾಶ್ರಯಂಗೆ ಜಗದ್ವಿಶ್ರುತಮಾಗದೇ ವಿಧುಸಮಾಖ್ಯಾನಂ (ರಾಜಶೇ. ೧೧-೭೪). ೩. ಬ್ರಹ್ಮ. ೨, ೩: ದ್ವಿಜಚಕ್ರಕ್ಕನಿಮಿತ್ತಮಾತ್ಮಕರದಿಂ ಸಂತಾಪಮಂ ಮಾಡಿಯುಂ ದ್ವಿಜರಾಜಂ ಕಮಲಾರಿಯಾಗಿ ವಿಧು ಹಂಸದ್ವೈಷಿ ಮೇಣಾಗಿಯುಂ ನಿಜದಿಂದಬ್ಜಂ (ರಾಜಶೇ. ೧೧-೭೩). ೪. ಕರ್ಪೂರ : ಅದು ಪರಿಶೋಭಿಸಿದತ್ತು ಮಧುವಿಂ ವಿಧುವಿಂ ವಧುವಿಂ (ರಾಜಶೇ. ೮-೬). ೫. ದೈತ್ಯ ; ರಾಕ್ಷಸ : "ವಿಧು ದನುಜಾರಾತಿ" (ಪಾಂಡೂಲೀ. ೧೨೦-೧೪). [ಸಂ.]

ವಿಧುಂತುದ (ನಾ). ಚಂದ್ರನನ್ನು ಪೀಡಿಸುವವನು ; ರಾಹು : ಬಲಮಿಲ್ಲ ನಿನಗೆ ಚಕ್ರದ ಬಲಮೆ ದಲದನೀಗಳೆನ್ನ ಬಾಣಂ ರವಿಮಂಡಲಮಂ ವಿಧುಂತುದಂ ಕೊಳ್ವ ಲೀಲೆಯಿಂ ಕೊಂಡು ಖಂಡಂ ಮಾಟ್ಟುಂ (ಶಾಂತಿಪು. ೪-೫೨) ; ಚಂದ್ರಮನಂ ವಿಧುಂತುದಂ ನೀಗುಗೆ (ನಳಚಂ. ೨೦೧). [ಸಂ.]

ವಿಧುಕಾಂತ (ನಾ). ಚಂದ್ರನ ಗೆಳೆಯ,—ಪ್ರಿಯ: ವಿಧುಕಾಂತಂ ಕಾಮದಂ ಪ್ರೋದ್ಧತಮಕರಪತಾಕಂ . . . ಮನ್ಮಥಂ ದಿವ್ಯರೂಪಂ (ಲೀಲಾವ. ೧-೨). [ಸಂ.]

ವಿಧುತ (ಗು). ೧. ಅಲುಗಾಡಿಸಿದ; ಕಲಕಿದ. ೨. ಬಿಟ್ಟ ; ತ್ಯಜಿಸಿದ ; ತೊರೆದ. ೩. ಕ್ಷೋಭೆಗೊಂಡ ; ಕ್ಷುಬ್ಧ. ೪. ಅಸ್ಥಿರವಾದ. (ನಾ). ೫. ಅಲುಗಾಡುವುದು ; ಅಲ್ಲಾಡುವುದು : "ವಿಧುತಂ ವಿಧೂತಂ" (ಪಾಂಡೂಲೀ. ೧೦೬-೫೧). ೬. ತೊರೆದುದು ; ಬಿಟ್ಟುದು : "ತ್ಯಕ್ತಂ, ಹೀನಂ, ವಿಧುತಂ . . . ಉತ್ಸೃಷ್ಟಂ -- ೬ ಬಿಡಲ್ಪಟ್ಟದ್ದು" (ಸಿದ್ಧಾಂತಿ. ೩೫೨). ೭. [ನಾಟ್ಯ] "ಭಯದಿಂದ ತಲೆಯನ್ನು ಬೇಗ ಎಡಕ್ಕೂ ಬಲಕ್ಕೂ ಅಡ್ಡಲಾಗಿ ಚಲಿಸುವುದು" (ಲಾಸ್ಯರಂ. ೨೨೦ ಗದ್ಯಾನುವಾದ): ಧುತಂ, ವಿಧುತಂ, ಆಭೂತಂ . . . ಸಮಂ, ಪಾರ್ಶ್ವಾಭಿಮುಖಂ — ಈ ಹತ್ತೊಂಬತ್ತುಂ ಶಿರೋಭೇದಂಗಳ್ (ಲಾಸ್ಯರಂ. ೧-೭೮ ಇ). [ಸಂ.]

ವಿಧುಧರ (ನಾ). ಚಂದ್ರನನ್ನು ಧರಿಸಿದವನು ; ಶಿವ : ವೈಜಯ್ಯ . . . ವಿಧುಧರಾಕೃತಿಯಂ ತಪೋಧನನಿಧಿಯನರ್ಚಿಸಿ (ಬಸವ. ೫೨-೫); ಭಿಕ್ಷೆಯನಲ್ಲಿ ಬೇಡುತಂ ವಿಧುಧರನೊರ್ಮೆ ತಾಳ್ದನಧಿಕೋತ್ಸುಕ ಭಿಕ್ಷುಕಲೀಲೆಯಂ (ರಾಜಶೇ. ೩-೯೧). [ಸಂ.]

ವಿಧುಬಿಂಬ (ನಾ). ಚಂದ್ರಮಂಡಲ; ಶಶಿಬಿಂಬ : ಅಲೆದಮೃತದೊಡನೆ ತಾರಾಲಲನೆಯರಡಿದಳಿರನೂಡಲೆಂದು ಪದಂಗೆಯ್ದಲತಗೆಯ ಪಡಲದಂತೆವೊಲೆದುದು ಪರಿಪಕ್ವಬಿಂಬಮಂ ವಿಧುಬಿಂಬಂ (ಲೀಲಾವ. ೨-೭) ; ವಿಧುಬಿಂಬಂ ರಾಹುವ ಪೋರ್ವಂತೆ ವಧುವದನಂ ಸಿರಿಮುಡಿಯೋರಂತೆ ಹುಡಿಯಾಗುತ್ತಿರೆ ಹೊರಳಿದಳಂದು ಕಡುಶೋಕಾನಲನಿಂ (ಹಚಕಾ. ೧೨-೩೦ ರಗಳೆ). [ಸಂ.]

ವಿಧುಮಂಡಲ (ನಾ). = ವಿಧುಬಿಂಬ : ಜನಿಸಿದುದು ವಿಧುಮಂಡಲಕೆ ಕೇಳ್ಕರೆಯು (ನಾಗಚ. ೨-೯೦) ; ನಿನ್ನೊಂದು ಸುಂದರವದನವ ತಾನಿಂದು ಈ ಇಂದು ಹೋಲದು ಎಂದು ಬೇರೊಂದನೆಸಗುವ ತೆರದೆ ಖಂಡಿಸಿದನು ವಿಧಿ ಮತ್ತೆ ವಿಧುಮಂಡಲವನು (ಗಾಥಾಸ. ೫೨-೭). [ಸಂ.]

ವಿಧುಮೌಲಿ, ವಿಧುಮೌಳಿ (ನಾ). = ವಿಧುಧರ : ವಿಧುಮೌಲಿನಿರ್ಮಾಲ್ಯಪ್ರಸವ ಶಿರಸೇ ಲಲಾಟಾಕ್ಷಪ್ರತಿಮ ಬಸವಾಯ ತೇ ಜಯತು (ಬಸವ. ೬೧-೯೯). ವಿಧುಮೌಳಿ : ವಿಧುಮೌಳಿಗೆ ಸುಧೆಯಂ ನೆಱೆ ವಿಧಿಯೆಱೆಯೆ ನಿಮಿರ್ದು ಸುರಿವ ಪಾಲ್ಬಳಿಯನೆ ತಾಂ ಬುಧತಾತನ ತಿಳಿದೊನ್ನಂ ವಿದಿತಾಶಾವಳಿವಿಕೀರ್ಣಪೂರ್ಣವಿಲಾಸಂ (ಕಮ್ಮಾರ. ೨-೬೩). [ಸಂ.]

ವಿಧುಮೌಳಿ 'ವಿಧುಮೌಲಿ' ನೋ.

ವಿಧುರ (ಗು). ೧. ಅತಿಸಂಕಟಕ್ಕೆ ಈಡಾದ ; ತೊಂದರೆಗೊಳಗಾದ. ೨. ಕ್ಷೋಭೆಗೊಳಗಾದ ; ಚಂಚಲವಾದ : 'ವಿಧುರಗತಿ' ಪರಾ. ೩. ವಿರಹವ್ಯಥೆಗೊಳಗಾದ ; ಅಗಲಿದ. ೪. ಇಲ್ಲದ ; ಶೂನ್ಯವಾದ. ೫. ಶತ್ರುತ್ವದ ; ಪ್ರತಿಪಕ್ಷದ. ೬. ಪ್ರತಿಕೂಲವಾದ ; ವಿರುದ್ಧವಾದ. ೭. ಆಚರಿಸಲು ಸಾಧ್ಯವಾಗದ ; ಅಶಕ್ಯವಾದ. (ನಾ). ೮. ವಿಯೋಗ ; ಅಗಲಿಕೆ : "ವಿಯೋಗ ವಿಧುರಾಖ್ಯಂ" (ಪಾಂಡೂಲೀ. ೧೧೪-೧೮). ೯. ಬರಿದು ; ಶೂನ್ಯ : ಶೂನ್ಯತೆ ಹಠತ್ತಾಗಿ ತುಂಬಿದುದು ಹೃದಯಮಂ . . . ಮಧುರನಿಶೆ, ವಿಧುರಮಾಗೆಸೆದತ್ತು (ಚಿತ್ರಾಂಗ. ೨೫-೬೮೬). ೧೦. ಆಪತ್ತು ; ಗಂಡಾಂತರ. ೧೧. ಅಂಜಿಕೆ ; ಭಯ. ೧೨. ಪ್ರತಿಕೂಲ ; ವಿರುದ್ಧವಾದುದು. ೧೩. ಪ್ರಿಯಳ ಅಗಲಿಕೆಯನ್ನು ಹೊಂದಿದವನು ; ವಿರಹಿ : ತನುಲತೆಯುಂ . . . ಘನಸ್ತನಯುಗ ಕೋಕಮುಂ ಬಗೆಗೆ ಮಾಡದೆ ಖೇದಮನೇಕೆ ಮಾಡುಗುಂ ಜನಕಸುತಾವಿಯೋಗವಿಧುರಂಗೆ ರಘುಪ್ರವರಂಗೆ ರಾಗಮಂ (ಪಂಪಾಮಾ. ೧೦-೪೧). ೧೪. ಹೆಂಡತಿಯನ್ನು ಕಳೆದುಕೊಂಡವನು : ಸೊಸೆ ನೀಲವ್ವ ಎಳವೆಯಲ್ಲಿಯೇ ವಿಧವೆಯಾಗಿದ್ದಾಳೆ. ತಿಮ್ಮಯ್ಯನವರೂ ಬಹಳ ಕಾಲದ ಹಿಂದೆಯೇ ವಿಧುರರಾಗಿದ್ದರು (ಕಾಗೆ. ೧೩ ಕಥಾಮುಖ). [ಸಂ.]

ವಿಧುರಗತಿ (ನಾ). ಚಂಚಲವಾದ ಗತಿ ,—ಚಲನೆ : ಬುಧಗುಣಗಣನಾತೀತಾಂತರಂ ಶಬ್ದತತ್ತ್ವಾಂಬುಧಿವಿವಿಧವಿಧಾನಾಲಂಕ್ರಿಯಾವೀ[ಚಿಮಾಲಾ] ವಿಧುರಗತಿವಿಲೋಡ್ಯಂ (ಕವಿರಾ. ೨-೧೫೪). [ಸಂ.]

ವಿಧುರತನ (ನಾ). ಹೆಂಡತಿಯನ್ನು ಕಳೆದುಕೊಂಡಿರುವ ಸ್ಥಿತಿ : ತಮ್ಮನ ವಿಧುರತನ ಮತ್ತು ಹಿನ್ನೆಲೆಗಿರುವ ತಮ್ಮನ ಹೆಂಡತಿಯ ಆತ್ಮಹತ್ಯೆಯ ನೆನಪು ಇವೆಲ್ಲ ಬಾಳಿನ ಒಳಬೇನೆಯನ್ನು ನಿರೂಪಿಸುತ್ತವೆ (ಹೊಸಕ್ಷಿ. ೨೯೩). [ವಿಧುರ + - ತನ]

ವಿಧುರವಿವಾಹ (ನಾ). ಹೆಂಡತಿಯನ್ನು ಕಳೆದುಕೊಂಡವನು ಆಗುವ ಮರುಮದುವೆ : ವಿವಾಹವಿಚ್ಛೇದ, ವಿಧವಾವಿವಾಹ, ವಿಧುರವಿವಾಹ, ಬಹುಪತ್ನೀತ್ವ ಮತ್ತು ಬಹುಪತಿತ್ವಗಳಲ್ಲಿ ಕೆಲವಕ್ಕಾದರೂ ಅವಕಾಶಕೊಡಬೇಕು (ನಿಶೆಗಳು. ೨೩೮). [ಸಂ.]

ವಿಧುರಿತ (ಗು). ಅಶಾಂತಿಯಿಂದ ಕೂಡಿದ ; ಪ್ರಕ್ಷುಬ್ಧವಾದ : ಆ ದರ್ಪಕಪ್ರದಾರಿತ ವಿಧುರಿತಸ್ವಾಂತೆ ನಿಜಾಂತರವೇದಿಸಖೀಜನಂಗಳೊಳೊರ್ವ ಚಾತುರ್ಯವತಿಯ ಮೊಗಮಂ ನೋಡಿ (ಜಗವಿ. ೧೧-೪೧ ವ). [ಸಂ.]

ವಿಧುರಿತೆ (ನಾ). ಕ್ಷೋಭೆಗೊಂಡವಳು : ವಿಧುವಿರಹಿಣಿ ನವಕುಮುದಿನಿ ಮಧುಮಿತ್ರ ನಿರೂಪಣಾತಿಭೀಕರ ವಿಚರನ್ಮಧುಕರಮರಾಳದರ್ಶನವಿಧುರಿತೆ ಸುಗಿದಂತೆ ಮುಗಿದುದಸಿತಾಂಭೋಜಂ (ರಾಜಶೇ. ೧೨-೧೬). [ಸಂ. ವಿಧುರಿತಾ]

ವಿಧುರೆ (ನಾ). ಕಷ್ಟಕ್ಕೆ ಗುರಿಯಾದವಳು ; ತೊಂದರೆಗೆ ಈಡಾದವಳು : ದೊರೆ ಕೊಳೆ ನೋಡಿದನಾಯತಕರುಣಾಪಾಂಗದೊಳೆ ಲೋಲಲೋಚನಯುಗೆಯಂ ಗುರುಜಘನ ಪಯೋಧರಯುಗಭರವಿಧುರೆಯನಾ ಧರಾಧಿಪತಿ ವಿಧುಮುಖಿಯಂ (ಕವಿರಾ. ೨-೫೮); ವಿರಹವಿಧುರೆಯಾಗಿಯುಂ ಲಾವಣ್ಯರಸತರಂಗಿಣೀತರಂಗಲೇಖೆಯನನುಕರಿಸಿ ತಳರ್ತ ಶೋಕತರುತಳಮನಲಂಕರಿಸಿ . . . ಸೀತೆ ನಾಡೆ ಪಾಡಬೊದಿರ್ದಳ್ (ಪಂಪಾಮಾ. ೧೧-೮೨ ವ). [ಸಂ. ವಿಧುರಾ]

ವಿಧುಲೇಖೋತ್ತಂಸ (ನಾ). ಚಂದ್ರಕಳೆಯನ್ನು ತಲೆಯಲ್ಲಿ ಧರಿಸಿದವನು ; ಶಿವ : ವಿಧುಲೇಖೋತ್ತಂಸನೆಂದಂತಕಮದಹರನೆಂದು . . . ಆಂ ಭವದುರು ಚರಣಾಂಭೋಜಮಂ ನಟ್ಟಿ ಸಾರ್ದೆಂ (ಉದ್ಯಟ. ೧೧-೬೫). [ಸಂ.]

ವಿಧುವಿರಹಿಣಿ (ನಾ). ಚಂದ್ರನಿಂದ ಅಗಲಿದವಳು ; ಚಂದ್ರನ ವಿಯೋಗ ದಲ್ಲಿರುವವಳು : ವಿಧುವಿರಹಿಣಿ ನವಕುಮುದಿನಿ ಮಧುಮಿತ್ರನಿರೂಪಣಾತಿಭೀಕರ ವಿಚರನ್ಮಧುಕರಮರಾಳದರ್ಶನವಿಧುರಿತೆ ಸುಗಿದಂತೆ ಮುಗಿದುದಸಿತಾಂಭೋಜಂ (ರಾಜಶೇ. ೧೨-೧೬). [ಸಂ. ವಿಧುವಿರಹಿಣೀ]

ವಿಧುಶಿಲೆ (ನಾ). ಚಂದ್ರನ ಪ್ರಕಾಶದಿಂದ ದ್ರವಿಸುವುದೆನ್ನಲಾದ ಒಂದು ಬಗೆಯ ಕಲ್ಲು ; ಚಂದ್ರಕಾಂತಶಿಲೆ : ಕಾಡ ಶಿಲೆಗಳ್ ಕರಗಿ ಪರಿದು ವಿಧುಶಿಲೆಯಂತೆ ಮೂಡಿರ್ದ ಸ್ವಯಂಭುಲಿಂಗಗಳ್ ಸ್ಥಾಪಿಸಿದ ನಾಡೆ ಶಿವಲಿಂಗ ಶಿವಪ್ರತುಮೆಗಳ್ ನಲಿದುವೋಲಾಡಿದವು (ಚಚಪು. ೧-೫-೧೬). [ಸಂ. ವಿಧುಶಿಲಾ]

ವಿಧುಸುತೆ (ನಾ). (ದಕ್ಷ)ಬ್ರಹ್ಮನ ಮಗಳು ; ರತಿ.

ವಿಧುಸುತಾವರ = (ದಕ್ಷ) ಬ್ರಹ್ಮನ ಮಗಳಾದ ರತಿಯ ಗಂಡ ; ಮನ್ಮಥ : ವಿಧುಸುತಾವರನು ತಾಂ ಮನದೊಪ್ಪಿನಿಂ ತನ್ನ ಸದನಕಿಟ್ಟಿಹ ಪೊಂಗಳಸಗಳೋ ಎಂಬಂತೆ ತುದಿ ಸಣ್ಣವಾಗಿ ತೋಯಜಕೋರಕದ ತೆಱದೊಳವಳ ಕುಚಯುಗಳಮೆಸೆಯೆ (ಪ್ರಾಧ್ಯರಾ. ೯-೭). [ಸಂ. ವಿಧುಸುತಾ]

ವಿಧುಸ್ಪರ್ಧಿ (ಗು). ಚಂದ್ರನೊಂದಿಗೆ ಪೈಪೋಟಿಮಾಡುವ ,—ಹುರುಡಿಸುವ : ಉದ್ಭಾಮಾಯುತ ಚಂದ್ರಶಾಲಮುಪಮಾತೀತಂ ವಿಧುಸ್ಪರ್ಧಿವಿದ್ಯುದ್ವಂಷ್ಟಾಸುರ ಯಾನಮಭ್ರಪಥದೊಳ್ ಪಾಱುತ್ತುಮಿರ್ದಲ್ಲಿ (ಶಾಂತಿಪು. ೮-೪೮). [ಸಂ. ವಿಧುಸ್ಪರ್ಧಿನ್]

ವಿಧುಹಾಸ (ನಾ). ೧. ಚಂದ್ರನನ್ನು ನೋಡಿ ನಗುವವನು. ೨. ವಿಷ್ಣುಭಕ್ತನಾದ ಕುಂತಳದೇಶದ ಒಬ್ಬ ದೊರೆ ; ಚಂದ್ರಹಾಸ : ವಿಧುಹಾಸನನುಪಮ ಧನುರ್ವಿದ್ಯೆಯಂ ಜಗದೊಳಧಿಕತರಮಾಗೆ ಸಾಧಿಸಿ ಪರಮಭಾಗವತಕಲೆಗಳಿಂದೆಸೆ ದಿರ್ದನು (ಕೃಷ್ಣಭಾ. ೨೯-೮) ; ವಿಧುಹಾಸನಿಗೆ ಜಯವಾಗಲಿ (ಚಂದ್ರಸ. ೪೭-೧೨). [ಸಂ.]

ವಿಧೂತ (ಗು). ೧. ಅಲುಗಾಡುವ ; ಅಲ್ಲಾಡುವ : ಅಮರೇಂದ್ರಪುತ್ರನಂ ಕರೆವವೊಲಾದುವಾ ಪುರದ ವಾತವಿಧೂತವಿನೂತಕೇತುಗಳ್ (ಪಂಪಭಾ. ೪-೩೪) ; ಶಿರದೊಳ್ ಕ್ರಮದಿಂ ಪೂಗಳನೆರೆವುದು ವಿಮಲಸಮೀರಣವಿಧೂತಶಾಖೆಗಳಿಂದ (ಕರ್ನಾಕ. ೩೨೧). ೨. ತೊರೆದ ; ಬಿಟ್ಟ ; ತ್ಯಜಿಸಿದ : ರಾಯ ಚಿತ್ತೈಸೆಂದು ವೈಶಂಪಾಯಮುನಿ ಹೇಳಿದನು ಕಮಲದಳಾಯತಾಕ್ಷನ ಬಾಲಕೇಳಿವಿಧೂತಕಿಲ್ಬಿಷವ (ಕುವ್ಯಾಅ. ೨-೧೫). ೩. ಅಸ್ಥಿರವಾದ ; ಚಂಚಲವಾದ. ೪. ಕೆದರಿಸಲ್ಪಟ್ಟ ; ಚೆದುರಿಸಿದ : ವಿಧೂತಧೂಮದಿ ಕಿಡಿಯ ಝಾಡಿಗಳೀತನನು ಮುಸುಕಿದವು ಚುಂಬಿಸಿತಂಬು ಪವನಜನ (ಕುವ್ಯಾದ್ರೋ. ೧೯-೪೪). (ನಾ). ೫. ಅಲುಗಾಡಿ ಸಲ್ಪಟ್ಟುದು : "ವಿಧುತಂ ವಿಧೂತಂ" (ಮಧ್ವಕೋ. ೧೦೬-೫೧). ೬. ಹೊಂದಿಕೆಯಿಲ್ಲ ದಿರುವುದು ; ಅಸಾಮಂಜಸ್ಯ ; ವಿರೋಧ. [ಸಂ.]

ವಿಧೂತಕಾಲ (ನಾ). ಯಮನನ್ನು ನಡುಗಿಸಿದವನು ,—ತಲ್ಲಣಗೊಳಿಸಿದವನು; ಶಿವ : ಸರಸಭಕ್ತಸಮೇತಸುವ್ರತಚರಿತಲೋಲ ವಿಧೂತಕಾಲ ಸ್ಥಿರದಿಗಂತ ಯಶೋವಿಶಾಲ ಪ್ರಹತಭವಮಾಲ (ಬಸಪು ೩೮-೬೭). [ಸಂ.]

ವಿಧೂತರಿಪು (ನಾ). ಶತ್ರುವನ್ನು ತಲ್ಲಣಗೊಳ್ಳುವಂತೆ ಮಾಡುವವನು ; ವೈರಿಯನ್ನು ಕಂಪನಗೊಳಿಸುವವನು : ವಿಧೂತರಿಪು ಕುರುರಾಯನೆಂಬೀ ಖ್ಯಾತಿಯಿಲ್ಲದೆ ಬೇಱೆ ರಾಜ್ಯವನೊಲ್ಲೆ ನಾನು (ಕುವ್ಯಾಗ. ೩-೩೩) ; ದೇವರ ನೇಮವೆನಿತನಿತ ಓತು ಶಿರದಲಿ ಧರಿಸಿ ನಡೆಸುವುದೇ ತನಗೆ ಕರ್ತವ್ಯವೆಂದು ವಿಧೂತರಿಪು ಬಿನ್ನೈಸಿದನು ಭಾಸ್ಕರಕುಲೇಂದ್ರಂಗೆ (ತೊರಾ. ೬-೪-೧೩). [ಸಂ.]

ವಿಧೂತಸಂತಾಪ (ನಾ). ಕಷ್ಟವನ್ನು ಕಳೆಯುವವನು ; ದುಃಖವನ್ನು ದೂರಮಾಡುವವನು : ಅಮಳೋದ್ದೀಪರೂಪ ಕಳಾಕಳಾಪ ವಿಧೂತಸಂತಾಪ (ಬಸಪು. ೧೦-೧೨). [ಸಂ.]

ವಿಧೂನನ (ನಾ). ಅಲುಗಾಡಿಸುವುದು ; ಕೊಡಹುವುದು : "ವಿಧೂನನಂ, ವಿಧುವನಂ —೨ ಕೊಡಹುವಿಕೆ" (ಸಿದ್ಧಾಂಶಿ. ೩೫೫). [ಸಂ.]

ವಿಧೃತ (ಗು). ೧. ಹಿಡಿದ ; ಗ್ರಹಿಸಿದ. ೨. ದೂರಮಾಡಿದ ; ಪ್ರತ್ಯೇಕಗೊಳಿಸಿದ ; ಬೇರೆ ಮಾಡಿದ. ೩. ಹೊಂದಿದ; ಪಡೆದ : ವಿಧೃತಭದ್ರಶಾಳವಿಶಾಳವಿಳಾಸಮನು ದ್ಯಾನಮಂ ಸಮೆಯಿಸಿ (ಶಾಂತಿಪು. ೭-೫೩ ವ) ; ವಿಧೃತಾಲಂಕಾರದಿಂದಂ ನವಯುವತಿಯ ವೋಲ್ . . . ಶೋಭಿಕುಂ ಸನ್ಮಧುರಂಬೆತ್ತಿರ್ಪ ಕಾವ್ಯಂ (ಉದ್ಯಟ. ೧-೩೧). [ಸಂ.]

ವಿಧೆ (ನಾ). ೧. ನಿಯಮ ; ಸೂತ್ರ ; ವಿಧಿ. ೨. ಬಗೆ ; ಪ್ರಕಾರ ; ವಿಧ. ೩. ಆಧಿಕ್ಯ ; ಹೆಚ್ಚಳ ; ವಿಪುಲತೆ : "ವಿಧಾ, ಸಮೃದ್ಧಿಃ - ೨ ಸಮೃದ್ಧಿ ಪೆಸರುಗಳು , ತುಂಬಿರುವ ಬಗೆ, ಸಾಕಾದಷ್ಟುಯಿರುವಿಕೆ" (ಸಿದ್ಧಾಂಶಿ. ೩೫೮). ೪. ಆನೆ, ಕುದುರೆ ಮುಂತಾದುವುಗಳಿಗೆ ಕೊಡುವ ಆಹಾರ : "ವಿಧಾ - ಮಾಡುವಿಕೆ, ಪ್ರಕಾರ, ಗಜಕಬಳ, ಕೂಲಿ, ಬಗೆ" (ಸಿದ್ಧಾಂಶಿ. ೩೯೯). ೫. ಸಂಬಳ ; ವೇತನ ; ಕೂಲಿ : "ಕರ್ಮಣ್ಯಾ, ವಿಧಾ . . . ಪಣಃ — ೧೧ ಕೂಲಿಯ ಪೆಸರುಗಳು, ಮಜೂರಿಯ ಕಿಮ್ಮತ್ತ" (ಸಿದ್ಧಾಂಶಿ. ೩೦೭). ೬. ಕಾರ್ಯ ; ಕೆಲಸ. [ಸಂ. ವಿಧಾ]

ವಿಧೇಯ (ಗು). ೧. ಏರ್ಪಡಿಸುವ ; ವ್ಯವಸ್ಥೆಗೊಳಿಸುವ ; ಅಣಿಮಾಡುವ : ಇಂದಿನ ವಾಸರಮೆ ಶೋಭನವಿಧೇಯವಾಸರಂ ಇಂದಿನ ದಿವಸಮೆ ಶುಭದಿವಸಾಗ್ರೇಸರಂ (ಆದಿಪು. ೪-೩೦ ವ). ೨. ಮಾಡಬೇಕಾದ ; ಮಾಡಲು ಯೋಗ್ಯವಾದ. ೩. ಆಜ್ಞೆಗೆ ಒಳಪಟ್ಟ ; ಅಧೀನವಾದ. ೪. ವಿನಯದಿಂದ ಕೂಡಿದ. (ನಾ). ೫. ಆಜ್ಞೆಗೆ ಒಳಪಡುವಂಥದು ; ಅನುಸರಿಸುವಂಥದು : ಸ್ವರವು ತನ್ನ ಕಾರಣವಸ್ತುಗಳಿಗೆ ವಿಧಾಯಕವಾಗುವುದಿಲ್ಲ , ವಿಧೇಯವಾಗುತ್ತದೆ (ಸೋಕ್ರಮ. ೮೫) ; ವಿಧೇಯವೆಂದರೆ ಅವನ ಇಚ್ಛಾನುಸಾರವಿರುವುದು, ಕೂಡಬೇಕೆಂದರೆ ಕೂಡುವುದು . . . ಕೈಕಾಲುಗಳನ್ನು ಅಲ್ಲಾಡಿಸುವುದು ಇತ್ಯಾದಿ ಶರೀರವ್ಯಾಪಾರಗಳೆಲ್ಲವೂ ಜೀವಾತ್ಮನ ಇಚ್ಛಾಧೀನವಾಗಿರುವುವು (ಹಿಂದುಸಾ. ೨೫೦). ೬. ಮಾಡಬೇಕಾದುದು ; ಮಾಡ ತಕ್ಕುದು : ಈಗಳಲ್ಲಿಗೇ ವಿಧೇಯಂ ಮಾಟ್ಟುದೆಂದು ಪೂರ್ವಪಕ್ಷದ ಪಕ್ಷಸಿದ್ಧಿಯ ವಿಸ್ತಾರಕೃವಕಾಶಮಪ್ಪಂತು ನುಡಿದು (ಶಾಂತಿಪು. ೨-೩೫ ವ). ೭. ಆಜ್ಞೆಯಂತೆ ನಡೆಯುವವನು ; ಅಪ್ಪಣೆಯನ್ನು ಪಾಲಿಸುವವನು ; ಹೇಳಿದಂತೆ ಕೇಳುವವನು : ಆನುಂ ವಿಧೇಯನಲ್ಲಂ ನೀನುಂ ಗುರುವಲ್ಲಮಿಂದಿ ನೊಂದೆವಸದೊಳು (ಗದಾಯು. ೬-೨೫) ; ಜನನಿಯುಪದೇಶದಾ ವಿನಯಕೆ ವಿಧೇಯನಾಗವಿವೇಕಿಯಾದೆನಾಂ! (ಚಿತ್ರಾಂಗ. ೭೯-೨೧೬೪). ೮. [ವ್ಯಾಕ] ಕರ್ತೃಪದದ ವಿಷಯದಲ್ಲಿ ಹೇಳಿದುದು ; ಆಖ್ಯಾತ ; ಹೇಳಿಕೆ : ವಿಧೇಯ: ಮಹೇಂದ್ರ ಮಹೈಶ್ವರ್ಯಂಗಳಿವೆಲ್ಲಮಧ್ರುವಂ . . . ಅಧ್ರುವಂಗಳ್ (ಕೃಷಿಪಿ. ೫೬). [ಸಂ.]

ವಿಧೇಯಕ (ನಾ). ಅಂಗೀಕಾರಕ್ಕಾಗಿ ಮಂಡಿಸುವ ಸೂಚನೆ ; ಠರಾವು ; ಮಸೂದೆ : ಯಾವುದೊಂದು ವಿಧೇಯಕವೂ ರಾಷ್ಟ್ರಪತಿಯವರ ಸಿಫಾರಸಿನ ಮೇಲಲ್ಲದೆ . . . ಮಂಡಿಸತಕ್ಕುದಲ್ಲ (ಭಾಧಾನ. ೩). [ಸಂ.]

ವಿಧೇಯತೆ (ನಾ). ೧. ಹೇಳಿದ ಮಾತಿನಂತೆ ನಡೆದುಕೊಳ್ಳುವಿಕೆ ; ವಿಧೇಯವಾಗಿರುವಿಕೆ : ಆಕೆಯ ಶಾಂತಸ್ವಭಾವವೂ ವಿನಯ ವಿಧೇಯತೆಗಳೂ ನನ್ನನ್ನು . . . ಸೆಳೆತಂದವು (ಕವಿಕ. ೪೫). ೨. ಅಧೀನದಲ್ಲಿರುವಿಕೆ ; ಅಧೀನತೆ : ವಾಕ್ರಂದ ಪಾರ್ಷ್ಣಿಗ್ರಾಹತಾತ್ಯಂತರ್ಧಿಗಳಂ ಷಾಡ್ಗುಣ್ಯದೊಳುಚಿತಗುಣಪ್ರಯೋಗದಿಂ ವಿಧೇಯತೆಯನ್ನೆದಿಸಿಯುಂ . . . ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದಂ (ಚಂದ್ರಪ್ರ. ೨-೬೦ ವ). [ಸಂ. ವಿಧೇಯತಾ]

ವಿಧೇಯತ್ವ (ನಾ). = ವಿಧೇಯತೆ ೨ : ಅಂತು ಕೈತವಮಿಲ್ಲದೆ ವಿಧೇಯತ್ವದ ತುದಿಯ ನೆಯ್ದೆ ಮಣಿಯೆಂಬ ಪಸುರ್ಮಣಿಯಂ . . . ಲಂಜಿಕೆಯೆಂಬ ಶಾಳಭಂಜಿಕೆಯುಮಂ ಉಟ್ಟಿಯದಂತಿರೆ ತಂದುರ್ವರಾಸ್ಯತಿಲಕನಪ್ಪ ದೇವಂ ದೇವಗವಟಯ್ಸಿ (ಶಾಂತಿಪು. ೧೧-೫೫ ವ). [ಸಂ.]

ವಿಧೇಯವಾಚಕ (ನಾ). = ವಿಧೇಯ ೮ : ಜಾತಿವಾಚಕ, ಸಂಖ್ಯೇಯವಾಚಕ, ವಿಧೇಯವಾಚಕಗಳ ಮೇಲೆ ಬಹುವಚನಕ್ಕೆ ಪ್ರತಿಯಾಗಿ ಏಕವಚನವು ವಿಕಲ್ಪದಿಂದ ಬರುವುದು (ಕೈಲಿಡಿ. ೫೭). [ಸಂ.]

ವಿಧ್ಯರ್ಥ (ನಾ). [ವ್ಯಾಕ] ಆಜ್ಞೆ, ಅಪ್ಪಣೆ, ಆರೈಕೆ, ಕಟ್ಟುಪಾಡು, ಆಶೀರ್ವಾದ ಮುಂತಾದುವುಗಳನ್ನು ತಿಳಿಸುವ, ಧಾತುವಿನ ರೂಪ : ಧಾತುಸ್ವರೂಪದಿಂ ಮಧ್ಯಮಪುರುಷದೇಕವಚನಂ ವಿಧ್ಯರ್ಥಮಾಗಿ ಪರಿಣಮಿಸುಗುಂ (ಶಮದ. ೨೩೦ ವೃತ್ತಿ) ; ಹೊರಡು, ಹೊರಡನು, ಹೊರಟಾನು ಎಂಬ ರೂಪಗಳು ಕ್ರಮವಾಗಿ ವಿಧ್ಯರ್ಥ ನಿಷೇಧಾರ್ಥ ಸಂಭಾವನಾರ್ಥಗಳಿಗೆ ಸೇರಿದುವು (ಮಧ್ಯಮ. ೫೩). [ಸಂ.]

ವಿಧ್ಯರ್ಥಕ (ನಾ). = ವಿಧ್ಯರ್ಥ : ಕ್ರಿಯಾಪದಗಳನ್ನು ಸಾಮಾನ್ಯಾರ್ಥಕ, ವಿಧ್ಯರ್ಥಕ, ನಿಷೇಧಾರ್ಥಕ ಎಂದು ಮೂರು ಪಂಗಡಗಳಾಗಿ ವಿಭಾಗಿಸಬಹುದು (ಕೈಲಿಡಿ. ೪೩). [ಸಂ.]

ವಿಧ್ಯಲಂಕಾರ (ನಾ). [ಕಾವ್ಯಮೀ] ಕಾವ್ಯಾಲಂಕಾರಗಳಲ್ಲಿ ಒಂದು ; "ಇದು ಈ ತೆರವೆಂದು ಸಿದ್ಧವಾದ ವಿಷಯವನ್ನು ತಿಳಿದು ಅದನ್ನು ಪುನಃ ಹೇಳಿದರೆ ವಿಧಿ" (ಕುವಲ. ೨೪೦ ಟಿಪ್ಪಣಿ) : ವಸ್ತುತಃ ಸಿದ್ಧವಾದರ್ಥವನು ವರ್ಣಸಲ್ಕೆ ತಕ್ಕದಲ್ಲವೆಂದು ಬಾಧ್ಯವಾಗಿರಲ್ಕೆ ಬಳಿಕರ್ಥಾಂತರದಿಂದ ಗರ್ಭೀಕರಿಸಿದುದರಿಂದ ಚಾರುತರವೆಂದು ವಿಧ್ಯಲಂಕಾರವೆನಿಪುದು (ಕುವಲ. ೧೭೮). [ಸಂ.]

ವಿಧ್ಯುಕ್ತ (ಗು). ೧. ವೇದ ಅಥವಾ ಶಾಸ್ತ್ರದಲ್ಲಿ ಸಮ್ಮತವಾದ ; ವಿಧಿಪೂರ್ವಕವಾದ : ಭರತನು ತ್ರಿವೇಣೀಸಂಗಮಕ್ಕೆ ಬಂದು ನಮಸ್ಕರಿಸಿ ಸಂಗಮದ ಶುಭ್ರಶ್ಯಾಮ ಜಲದಲ್ಲಿ ವಿಧ್ಯುಕ್ತ ಸ್ನಾನಮಾಡಿ ದಾನ ಕೊಟ್ಟು ಬ್ರಾಹ್ಮಣನನ್ನು ಸನ್ಮಾನಿಸಿದನು (ತುಳಸೀ. ೧೭೩). (ನಾ). ೨. ವೇದಶಾಸ್ತ್ರ ಸಮ್ಮತವಾದುದು ; ವಿಧಿಪೂರ್ವಕವಾದುದು : ಅವರು ವಿಧ್ಯುಕ್ತವಾಗಿ ಯಾಗವನ್ನು ನೆರವೇರಿಸಿದರು (ರೂಢಿ). [ಸಂ.]

ವಿಧ್ಯುಕ್ತಕರ್ಮ (ನಾ). ಶಾಸ್ತ್ರೋಕ್ತವಾದ ಕ್ರಿಯೆ ; ವಿಧಿವತ್ತಾದ ಕಾರ್ಯ : ಆಚಾರ : ಈ ಪದಕ್ಕೆ ನಡತೆ . . . ಸಂಪ್ರದಾಯ, ಪದ್ಧತಿ, ವಾಡಿಕೆ, ವಿಧ್ಯುಕ್ತಕರ್ಮ - ಈ ಅರ್ಥಗಳಿವೆ (ಕವಿಕೋ. I, ೭೦೫). [ಸಂ. ವಿಧ್ಯುಕ್ತಕರ್ಮನ್]

ವಿಧ್ವಂಸ (ನಾ). ೧. ನಾಶ ; ಹಾನಿ. ೨. ವಧೆ ; ಕೊಲೆ : ಸುತನ ವಿಧ್ವಂಸವಂ ಮಾಡಿಕ್ಕಿದಡೆಯಾ ಭೋಜನವೆ ಹಿತವು (ಬಸವ. ೨೪-೭) ; ಯಾರಿಂದ ಮನ್ಮಥನ ವಿಧ್ವಂಸವಾಯಿತೋ . . . ಆ ಅಂಧಕಾಸುರಸಂಹಾರಕನೂ ಪಾರ್ವತೀವಲ್ಲಭನೂ ಆದ ಭಗವಂತನು ನಿನ್ನನ್ನು ಸರ್ವದಾ ರಕ್ಷಿಸಲಿ (ಧ್ವನ್ಯಾಲೋ. ೮೮). ೩. ಮುಖಭಂಗ ; ಅವಮಾನ ; ತಿರಸ್ಕಾರ. [ಸಂ.]

ವಿಧ್ವಂಸಕ (ಗು). ೧. ಹಾಳುಮಾಡುವ ; ನಾಶಕಾರಕವಾದ : ಯಾರ ಹತೋಟಿಗೂ ಒಳಪಡದ ಗುಂಪು ವಿಧ್ವಂಸಕಕಾರ್ಯದಲ್ಲಿ ತೊಡಗಿತು (ರೂಢಿ). (ನಾ). ೨. ಹಾನಿಕಾರಕವಾದುದು ; ಕೆಡುಕನ್ನುಂಟುಮಾಡುವಂಥದು : ನಮ್ಮ ಶಿಕ್ಷೆ ವಿಧಾಯಕವಾಗಿರಬೇಕೇ ವಿನಾ ವಿಧ್ವಂಸಕವಾಗಿರಬಾರದು (ರಂಗಗೋ. ೫೬). ೩. ನಾಶಮಾಡುವವನು ; ಹಾಳುಮಾಡುವವನು : ಮಲ್ಲಿಕಾರ್ಜುನಜ್ಞೆಯುದ್ಧ ಪ್ರಬದ್ಧವೈರಿ xxx ನಳ್ಳಂ ನಹಿತವಿಧ್ವಂಸಕಂ (ಎಕ. IV(R), ಎಳಂದೂ. ೧೮೩-೯ ; 919). [ಸಂ.]

ವಿಧ್ವಂಸನ (ನಾ). ೧. ನಾಶ ; ಹಾನಿ : ಆತಂ ಸುಭಟಸಮರಸಂಘಟ್ಟ ದೋರ್ಗರ್ವವಿಧ್ವಂಸನಕೇಳೀದೋಹಳಂ (ಆದಿಪು. ೧೪-೧೯). ೨. ನಾಶಪಡಿಸುವವನು; ಇಲ್ಲದಂತೆ ಮಾಡುವವನು ; ನಿರ್ನಾಮ ಗೊಳಿಸುವವನು : ಸ್ವಸ್ತಿಸಮಸ್ತ ಭುವನಾಧೀಶ್ವರಂ . . . ಶೈವ ವೈಷ್ಣವದ ಭೇದವಿಧ್ವಂಸನಂ (ಎಕ. XI, ದಾವಣ. ೮೩-೩ ; 1562). [ಸಂ.]

ವಿಧ್ವಸ್ತ (ಗು). ೧. ಚೆದರಿದ ; ಹರಡಿದ. ೨. ನಾಶಗೊಂಡ ; ಧ್ವಂಸವಾದ : ನವಕಾಶ್ಮೀರಪರಾಗರಾಗರುಚಿರಂ ವಿಧ್ವಸ್ತ [ಪಾಂಡಾ. ಸ್ರಗ್ಧ] ನೀರೇಜಷಂಡವಿಳಾಸಂ (ಪಂಚತಂ. ೨೪೨-೨೧). (ನಾ). ೩. ನಾಶ ; ಹಾಳು : ಕ್ರಿ. ಶ. ೧೧೮೪ರಲ್ಲಿ . . . ಕಳಚುರ್ಯರ ಸಾಮ್ರಾಜ್ಯವು ವಿಧ್ವಸ್ತವಾಯಿತು (ಮೂಡಬಿ. ೭೧). ೪. ಕಳೆದುದು ; ನಿವಾರಿಸಲ್ಪಟ್ಟುದು (?) : "ನಿರಸ್ತಮಪವಿದ್ಧಮಪಹೃತಂ (ವಿ)ಧ್ವಸ್ತಂ" (ವಸ್ತುಕೋ. ೧೦೪-೩೯). [ಸಂ.]

ವಿನಂ (ಅ). ಇಲ್ಲಿಯವರೆಗೆ ; ಈವರೆಗೆ ; ಈ ತನಕ : ವನ್ನಂ, ವನ್ನೆಗಂ; ವಿನಂ, ವಿನೆಗಂ (ಶಬ್ದಾಸಾ. ೧೯ ಪ್ರಯೋ). 'ಇನ್ನಂ' ಪರಾ. IP ಭವಿಷ್ಯತ್ಕಾಲದ 'ವ' ಪ್ರತ್ಯಯದೊಂದಿಗೆ 'ಇನಂ', 'ಇನೆಗಂ' ಮೊದಲಾದ ಕಾಲಾರ್ಥಕವಾದ ಅವ್ಯಯಗಳನ್ನು ಸೇರಿಸಿ ಈ ರೂಪಗಳನ್ನು ಗುರುತಿಸಲಾಗಿದೆ. [?]

ವಿನಂತಿ (ನಾ). ಕೋರಿಕೆ ; ಪ್ರಾರ್ಥನೆ ; ಬೇಡಿಕೆ : ನಿನ್ನ ವಿನಂತಿಯ ಮೊತೆಗೆ ಕಾರಣಗಳನ್ನು ಕೆದರಿ ವಿವರಿಸಿ ಹೇಳುವುದು ಅವಳಿಗೆ ಸ್ವಲ್ಪ ನೋವನ್ನುಂಟುಮಾಡಿದಂತಾಗುವುದಿಲ್ಲವೇ? (ಹೇಮಾಂತ. ೩೭೦) ; ನನ್ನ ಈ ಅಪರಾಧಕ್ಕಾಗಿ ಖಾವಿಂದರವರು . . . ಕರಿನೀರಿನ ಶಿಕ್ಷೆಯನ್ನು ವಿಧಿಸಬೇಕು, ಇಷ್ಟೇ ನನ್ನ ವಿನಂತಿ (ಸ್ಕೂಲುಮಿ. ೨೧೩). [< ಸಂ. ವಿನತಿ]

ವಿನಂತಿಸು (ಕ್ರಿ). ಕೋರು ; ಪ್ರಾರ್ಥಿಸು : ಅವನು . . . ರಾಜಕುಮಾರರು ಈ ಬರಹವನ್ನು ಓದಬೇಕು ಎಂದು ವಿನಂತಿಸಿದ (ಹಾಹುತ್ರ. ೧೦೩) ; ಸಜ್ಜನರು ತಪ್ಪುಗಳನ್ನು ತಿದ್ದಿ ತನ್ನ ಕೃತಿಯನ್ನು ಮೆರೆಯಿಸಲಿ ಎಂದು ವಿನಂತಿಸಿಕೊಂಡಿದ್ದಾನೆ (ಹಕ್ಕಬ. ೩೧). [ವಿನಂತಿ + - ಇಸ್ಸು]

ವಿನಕ (ನಾ). ವಿನಾಯಕ ; ಗಣಪತಿ : ಭಟರಿಯ ದೇಗುಲ ವಿನಕನ ದೇಗುಲ . . . ಮಡಿಸಿದನ್ (ಸೌಇಸಾ. XI-i, ೩೫-೫ ; 933). 'ಬೆನಕ' ಪರಾ. [< ವಿನಾಯಕ]

ವಿನಕೆ 'ವಿನಿಕೆ' ನೋ.

ವಿನತ (ಗು). ೧. (ಫಲಭಾರದಿಂದ) ಬಗ್ಗಿದ ; ಬಾಗಿದ : ವಿನತನವಗಂಧ ಶಾಲಿಯ ತೆನೆಗಳನೊಳಕೊಂಡು ಮುಗಿದ ಕುಮುದಂಗಳ್ ನೋಡನುಕರಿಸಿದಪುವು ತೀವಿಪ ತನಿಗಂಪಂ ಪೀರ್ವ ತೆಜನನುನ್ನತನಿಳಯಾ (ಲೀಲಾವ. ೫-೪೯). ೨. ನಮಸ್ಕರಿಸಿದ : ವಿನತ ನಾಗೇಂದ್ರ ಹಸ್ತಾರುಣಾಬ್ಜಂ ಹೈಮಂ ಕರ್ಣಾವತಂಸಂ ತನಗೆನೆ ಕರಮೊಪ್ಪಿರ್ದಳ್ (ಅಜಿಪು. ೧-೧). ೩. ಕುಗ್ಗಿದ ; ಕುಸಿದ ; ಖಿನ್ನತೆಯಿಂದ ಕೂಡಿದ. (ನಾ). ೪. ನಮಸ್ಕಾರಮಾಡಿದವನು ; ನಮಸ್ಕರಿಸಿದವನು : ಅಪರಿಮಿತಭಕ್ತಿಯಿಂ ತನ್ನ ಪದಾಂಭೋಜಕ್ಕೆ ವಿನತರಾಗಲೊಡಂ ಕಾಶ್ಯಪಿ ಸಂತಸದಿಂ ತಟ್ಟೈಸಿ ಪರಸಿದಳ್ (ಸುಕುಮಾ. ೨-೭೩) ; ಶಿವಶರಣಂ ಕಂಡು ಕಂಡುಬ್ಬಿ ವಿನತನಾಗಿ ಪ್ರಣತಿಯಿಂ ಪುಗೆ ಮನಮೊಸೆದೊಸೆದು ಹಾಡಿ ಹಾಡಿ ಸವಿನಯದಿಂ (ಬಸವ. ೩೫-೩). [ಸಂ.]

ವಿನತಾನಂದನ (ನಾ). ೧. ನಮಸ್ಕರಿಸಿದವನಿಗೆ ಸಂತೋಷವನ್ನುಂಟುಮಾಡುವವನು ; ಆಶ್ರಿತರಿಗೆ ಸಂತೋಷವನ್ನು ನೀಡುವವನು. ೨. (ಕಶ್ಯಪ ಋಷಿಯ ಪತ್ನಿಯಾದ) ವಿನತೆಯ ಮಗ ; ಗರುಡ : ವಿನತಾನಂದನಂ . . . ಬಿನ್ನಪಂಗೆಯ್ದಂ (ಪಂಚತಂ. ಅ. ೧೨೧-೧೦) ; ವಿನತಾನಂದನನಿಂದಮಕ್ಕೆ ವಿನತಾನಂದಂ (ಜಗವಿ. ೧-೫೧). ೧, ೨ : ಆ ಮೂರ್ಧಾಭಿಷಿಕ್ತಮುಖ್ಯಂ . . . ವಿನೀತವಿನತಾನಂದನನಾಗಿಯುಂ ಅಪಕ್ಷಪಾತಪ್ರಚಾರನುಂ . . . ಎನಿಪಂ (ಚಂದ್ರಪ್ರ. ೨-೮) ; ಆ ನರೇಂದ್ರಂ . . . ಅಹೀನವೃತ್ತಿಪ್ರವರ್ತಕನಾಗಿಯುಂ ವಿನತಾನಂದನವಿದ್ವೇಷಿಯಲ್ಲದೆ ಭೋಗೀಶ್ವರನುಂ . . . ಎನಿಸಿ (ಪುಷ್ಪಪು. ೩-೨೧ ವ). [ಸಂ. (ವಿನತ + ಆನಂದನ) ; (ವಿನತಾ + ನಂದನ)]

ವಿನತಾಪುತ್ರ (ನಾ). = ವಿನತಾನಂದನ ೨ : ವಿನತಾಪುತ್ರನ ವಜ್ರತುಂಡಹತಿಗಂ ಮೆಯ್ಯಾಂತು ಕಂಡಂಗಳುಳ್ಳಿನಮಂಗಂಗಳನೊಡ್ಡಿಯೊಡ್ಡಿ . . . ನಾಗಾನಂದಮಂ ಮಾಡಿದಂ (ಪಂಪಭಾ. ೪-೨೬). [ಸಂ.]

ವಿನತಿ (ನಾ). ೧. ಬಾಗುವಿಕೆ ; ಬಗ್ಗುವಿಕೆ. ೨. ನಮಸ್ಕಾರ ; ಪ್ರಣಾಮ : ಸುರಮರ್ತ್ಯಭುಜಗರಾ ನವ್ಯದೀಕ್ಷಾಂಗಿಗಾದರದಿಂದ ವಿನತಿ ಮಾಡಿದರು (ಭರಚ. ೫೯-೫೧). ೩. ಸೌಜನ್ಯ ; ನಮ್ರತೆ : ವಿನತಿಯನೆನ್ನರೊಳಂ ನೆಱೆ ಜನಿಯಿಸುವುವು ನೋಡೆ ಪನ್ನೆರಱ್ಕಡಿಯುದಯಂ ಜಿನತನುಗೆನಲೆಸಕಂ ನಿಜಮೆನೆ

ಮಾನಸ್ತಂಭಮಿಂತು ನಾಲ್ಕುಮಮೆಸಗುಂ (ಶಾಂತೀಶ್ವ. ೧೬-೩೬). ೪. ಕೋರಿಕೆ ; ಬಿನ್ನಹ. [ಸಂ.]

ವಿನತೆ (ನಾ). ೧. ಕಶ್ಯಪಋಷಿಯ ಹೆಂಡತಿ ; ಗರುಡ ಮತ್ತು ಅರುಣರ ತಾಯಿ : ವಿನತೋದರದಿಂ ಗರುತ್ಮನುದಯಾಚಳದಿಂ ದಿನಪನೊಗೆವಂತೆ ಪುಟ್ಟಿದನನಿವಾರ್ಯಸುತೇಜನೆನಿಪನಿನಜನ ತನಯಂ (ಪಂಪಭಾ. ೧-೧೨೧) ; ವಿನತೆಯಾ ಕಂದನಧಟಿಗೆ ನಿಲ್ಲಲಾಜ್ಞಿತಂದವಳ ದೇಹದಲಿ ಪೊಂದಿ ದಿನವ ಹಿಂದುಗಳೆವುತ್ತಿರ್ಪ ದರ್ವೀಕರಂಗಳೋ . . . ಎನಲು ತೋಳ್ಗಳೊಪ್ಪೆ (ಪ್ರೌಢರಾ. ೯-೯). ೨. ಬಾಗಿದ ಕಾಲುಗಳು ಅಥವಾ ಬಾಗಿದ ಬೆನ್ನುಳ್ಳ ಹುಡುಗಿ. ೩. ಹೊಟ್ಟೆ ಅಥವಾ ಬೆನ್ನಿನ ಮೇಲೆ ಏಳುವ ಗಡ್ಡೆ. ೪. ಒಂದುಬಗೆಯ ಬುಟ್ಟಿ. ೫. ಬಾಗಿದವಳು ; ನಮಸ್ಕರಿಸಿದವಳು. [ಸಂ. ವಿನತಾ]

ವಿನತ್ಯನ್ವಿತ (ನಾ). ೧. ನಮಸ್ಕರಿಸಿಕೊಂಡವನು. ೨. (ಗರುಡ)ಪಕ್ಷಿಯ ನಮಸ್ಕಾರವನ್ನು ಹೊಂದುವವನು. ೧, ೨ : ಪಾಪದೈತ್ಯಗಣಧ್ವಂಸಿ ದಶಾವತಾರವಿದಿತಂ ನಿತ್ಯಂ ವಿನತ್ಯನ್ವಿತಂ ಜಗದೊಳ್ ಕೇಶವದೇವನೊಲ್ಲು ಕಳೆವಂ ಸ್ವಾತ್ಮಾನತಕ್ಲೇಶವಂ (ಎಕ. VI. ಕಡೂರು. ೬೬-೨೭ ; 1172).

[ಸಂ. (ವಿನತಿ + ಅನ್ವಿತ) ; (ವಿ + ನತಿ + ಅನ್ವಿತ)]

ವಿನಮನ (ನಾ). ತಲೆಬಾಗಿಸಿ ಮಾಡುವ ನಮಸ್ಕಾರ : 'ವಿನಮಿಸು' ಪರಾ. [ಸಂ.]

ವಿನಮನ್ಮಸ್ತಕ (ನಾ). ತಲೆಯನ್ನು ಬಾಗಿಸಿದವನು ; ನಮಸ್ಕರಿಸಿದವನು : ಕೃತಾಕೃತಿಮಿಸ್ತಾರರ್ ಘನರಥಂಗಳ್ ಪೊಡೆವಡೆ ವಿನ[ಮ]ನ್ಮಸ್ತಕರ ಚಂದ್ರತಿಲಕನಭಸ್ತಿಲಕರ ಮಕುಟಮೆರಡುಮೆಱಗಿದುವಾಗಳ್ (ಶಾಂತಿಪು. ೯-೫೬). [ಸಂ.]

ವಿನಮಿತ (ಗು). ೧. ಬಾಗಿಸಿದ ; ಬಗ್ಗಿಸಿದ : ಭಕ್ತಿಭರವಿನಮಿತೋತ್ತಮಾಂಗನಿಬಿಡ ನಿಬದ್ಧಾಂಜಳಿಗಾಗಿ . . . ಅನೇಕ ಸ್ತುತಿಗಳಿಂ ಜಗತ್ರಯಸ್ವಾಮಿಯಂ ಸ್ತುತಿಯಿಸಿ (ಸುಕುಮಾ. ೮-೬೬ ವ). ೨. ವಂದಿಸಿದ ; ನಮಸ್ಕರಿಸಿದ : ಸಮಸ್ತವಿನಯಜನವಿನಮಿತ ಶ್ರೀವರ್ಧಮಾನಮುನೀಂದ್ರವಂದ್ಯ ಪರಮಜಿನೇಂದ್ರ (ಸುಕುಮಾ. ೩-೪೮ ವ). ೩. (ಆಲಂ) ಹೊಂದಿಕೊಳ್ಳುವ : ವಿನಮಿತಲಲಿತಪದೋಕ್ತಿಗಳಿಂ ಜನಹಿತಮಿಂತಿದು ಮುನಿಮತಮೆಂಬುದು ನಿನಗಱಿಪಿದೆ ಕೆಳದೀ (ಛಂದೋಂಬು. ೨-೧೯೮). (ನಾ). ೪. ನಮಸ್ಕಾರ ಮಾಡಿದವನು ; ವಂದಿಸಿದವನು : ವಿನಮಿತನಾಗಿ ಮಹೀನಾಥನ ದೇವಿಯ ಪರಕೆವಡೆದು ಕುಳ್ಳಿರ್ದಂ (ಕುಸುಮಾ. ೮-೨೩) ; ಧರಣೀಪತಿ ಮುನಿಸಾರ್ವಭೌಮನ ಬರವ ಕಾಣುತ ದಿಮ್ಮನುರುವಿಷ್ಟರವನಿಳಿದಿರ್ದಂದು ವಿನಮಿತನಾಗಿ ಕೈಗೊಟ್ಟು . . . ಬೆಸಗೊಂಡ (ತೂರರಾ. ೧-೯-೨೦). [ಸಂ.]

ವಿನಮಿತೆ (ನಾ). ಬಾಗಿದವಳು ; ಬಗ್ಗಿದವಳು : ಧರೆಗತಿವಿದಿತಂ ಕವೀಂದ್ರಸಹಾಯ ನಿಂದೋದಲ್ ಚೆಲ್ವಂಬೆತ್ತೀ ವೃತ್ತಂ ಸ್ತನಭರವಿನಮಿತೆ ಪೆಸರಿಂ ಭುಜಂಗವಿಜೃಂಭಿತಂ (ಛಂದೋಂಬು. ೨-೧೯೭). [ಸಂ. ವಿನಮಿತಾ]

ವಿನಮಿಸು (ಕ್ರಿ). ೧. ನಮಸ್ಕರಿಸು ; ವಂದಿಸು : ದಾಸಿಯು ದುಗ್ಗಳೆಯು ಸಾಷ್ಟಾಂಗವೆಱಗಿ ವಿ[ಪಾಶಾಂ. ಯೆ]ನಮಿಸಿ ದಾಸಯ್ಯಂಗಳಡಿಗಳ ಮೇಲೆ ಇಬ್ಬರು ಕೆಡೆದು ಬಿಡದಿರಲು (ಬಸಪು. ೨೩-೩೫). ೨. ಬೇಡಿಕೊಳ್ಳು ; ಪ್ರಾರ್ಥಿಸು : ಸೋನಕ್ಕ ಕಂಬನಿ ಮಿಡಿದು ವಿನಮಿಸಿರಲಿಲ್ಲ (ದೀಪಹ. II. ೨೯೬). [ವಿನಮನ + - ಇಸ್ಸು]

ವಿನಮ್ರ (ಗು). ೧. ಬಾಗಿದ ; ಬಗ್ಗಿದ : ಯುವತಿಜಘನಕಾಂಚೀರತ್ನಂ ಸ್ತನಭರ ವಿನಮ್ರಗಣಿಕಾಸ್ತನತಟಹಾರಂ ಸರಸ್ವತೀಮಣಿಹಾರಂ (ಆದಿಪು. ೧-೩೧) ; ಸತತಂ ಲಜ್ಜಾವಿನಮ್ರಾನನಸರಸಿಜಸತೃರ್ಣಕಾಕಾರದಿಂ ಸಂಸ್ತುತಿವೆತ್ತಾಮೋದ ವಿಸ್ತಾರದಿನೆಸೆವ ಪುರಂಧ್ರೀಲಸನ್ನಾಸಿಕಂ (ನಳಚಂ. ೩೫೭). ೨. ವಂದಿಸಲ್ಪಡುವ ; ನಮಸ್ಕರಿಸಲ್ಪಡುವ : ಹತವೈರಿಕ್ಷತ್ರಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರಕ್ಷಿತಿಚಕ್ರಂ . . . ಇರ್ದತ್ತೊಳಪುಗದ ಪುರೋಪಾಂತದೊಳ್ ಚಕ್ರರತ್ನಂ (ಆದಿಪು. ೧೪-೩) ; ನಿಖಿಲದಿವಿಜದನುಜವಿನಮ್ರಕಮ್ರಶಿರೋಮಣಿದ್ವಿಗುಣ ಪಾಟಳಮಣಿ ಭೂಮಿಭಾಗಾ ಭೋಗಸಭಾಮಂಡಳನಂ . . . ಸ್ತುತಿಯಿಸಿ (ಶಾಂತಿಪು. ೧-೮೫ ವ). ೩. ವಿನಯ ಪೂರ್ವಕವಾದ ; ನಮ್ರವಾದ : ಅ ಮತ್ತು ಉ ಕಾರಗಳನ್ನು ಪುನರುಚ್ಚೀವಿಸುವ ವಿನಮ್ರಪ್ರಯತ್ನಗಳು . . . ಪಾಂಡಿತ್ಯಪ್ರಿಯಪಂಡಿತಮಂಡಳಿಯಿಂದ ನಡೆದಿರೆ (ದ್ರಾವಿವಿ. ೩೫೭). ೪. ಕುಗ್ಗಿದ ; ಕುಸಿದ. [ಸಂ.]

ವಿನಯ (ನಾ). ೧. ಒಳ್ಳೆಯತನ ; ನಮ್ರತೆ ; ಸೌಜನ್ಯ : ವಿನಯಂ ಸಹಜಂ ಕೃತ್ರಿಮವೆನಿಸಿದವು ಬೇಱೆವೇಱೆ ವಿದ್ವಜ್ಜನಮಂ ಮನದೊಳಿಸುವುವಿವರಡುಂ ನಿನಗೊಳವು (ಆದಿಪು. ೧೪-೬೩) ; ವಿನಯಮನೆ ಬಗೆದು ವಿಕ್ರಮಮನೆ ಬಗೆಯದೆ ನರನುಮಾನುಮೆನಗಂ ಸಮ್ಮೋಹನಮಾದುದಕ್ಕುಮಂದಣ್ಣನ ಸೂನೃತವಚನವೆಂಬ ಮಂತ್ರಾಕ್ಷರದಿಂ (ಗದಾಯು. ೧-೬೩). ೨. ಆದರ ; ವಿಶ್ವಾಸ : ವಿನಯದಿನಿತ್ತ ಬನ್ನಿಮಿರಿಮಂಬವೊಲಿಂಚರ ದಿಂದಮೊಯ್ಯನೊಯ್ಯನೆ ಮಱೆದುಂಬಿಗಳ್ ಮೊರೆವುವು (ಪಂಪಭಾ. ೧-೧೧೬) ; ವಿನಯಂ ನಿಮ್ಮೊಳ್ನಿಜಂ ಮದ್ವಚನಲವಮನುಲ್ಲಂಘನಂಗೆಯ್ದುದಿಲ್ಲಂದಿನಿತಂ ಬಲ್ಲಂ (ಶಾಂತೀಶ್ವ. ೧೩-೮೦). ೩. ಯೋಗ್ಯ ನಡವಳಿಕೆ ; ಮರ್ಯಾದೆ ; ಸಭ್ಯತೆ : ಧನಿಕ ದೀನನನೊಂದೆ ಸಮದಲಿ ವಿನಯಗೊಂಡಾರೈವ ಭೂಭುಜನನುವಿನನುಸರದಿಂದ ಪೊರೆವರು ಮಂತ್ರಿಗಳು ಜನರ (ಬಿಜ್ಜಪು. ೬೭-೧೬) ; ಕಲಿತರೈ ಬಿಲ್ಲಿಱ್ಪೆಯಂ, ವೇದಮಂ ನೀತಿನಯವಿನಯನಿಯತಿಯಂ (ಶ್ರೀರಾಮಾ. ೨೫-೬೭೧). ೪. ಸನ್ಮಾರ್ಗದಲ್ಲಿ ನಡೆಯುವಂತೆ ನೀಡುವ ತಿಳಿವಳಿಕೆ, —ಮಾರ್ಗದರ್ಶನ : ಜನನಿಯುಪದೇಶದಾ ವಿನಯಕೆ ವಿಧೇಯನಾಗವಿವೇಕಿಯಾದೆನಾಂ! (ಚಿತ್ರಾಂಗ. ೭೯-೨೧೬೫). ೫. ಅರಿಕೆ ; ಬಿನ್ನಪ ; ವಿಜ್ಞಾಪನೆ : 'ವಿನಯವತ್ತಳೆ' ಪರಾ. ೬. ಆದರದ ಮಾತು ; ಸ್ನೇಹದ ನುಡಿ : ವಿನಯಮನಾಡುವುದಾಳೋಚನೆಗೆಯ್ಯುದು . . . ಸಾಮದಿಂ ಮರಳ್ಚುವುದವನಂ (ಗಿರಿಕ. ೬-೧೭). ೭. ದಂಡ ; ಜುಲ್ಮಾನೆ : ವ್ಯವಹಾರಾಧಿಕೇಃಶಿಕಕರಣ ಸೇವಾಕಸ್ಯಾ ಮಧ್ಯಾಹ್ನದೂರ್ಧ್ವಂ ನಿರುಪಸ್ಥಿತಸ್ಯ ವಿನಯೋರೂಪಕಃ ಷಟ್ಪಾದಸ್ಯಹಧಾರ್ಮ್ಮಿಕೇಣ (ಎಇ. XXX. ೧೭೯-೧೩; 592). ೮. (ಲೋಹ ಮುಂತಾದುವು ಆಕರ್ಷಣೆಗೆ ಒಳಗಾಗಿ) ಬಾಗುವಿಕೆ : ದೃಷ್ಟವನಱಿವುದಕ್ಕೆ ಅಯಸ್ಕಾಂತದ ಶಿಲೆಯ ತೆಱನಂತೆ ಲೋಹದ ವಿನಯದಂತೆ ಅನಲನ ತೃಣದ ಸಂಗದಂತೆ . . . ನಿಃಕಳಂಕಮಲ್ಲಿಕಾರ್ಜುನನ ಕೂಟದ ಕುಟಿಲ (ಮೋಮಾ. ೧೦೮-೪೨೮). ೯. [ಜೈನ] ಪೂಜ್ಯಪುರುಷರನ್ನು ಆದರಿಸುವುದು : ಅಭ್ಯಂತರತಪಷಟ್ಕದೊಳಂ ಪ್ರಾಯಶ್ಚಿತ್ತವಿನಯವೈಯಾಪೃತ್ಯಸ್ವಾಧ್ಯಾಯಧ್ಯಾನವ್ಯುತ್ಸರ್ಗಂಗಳನೊಳಕೊಂಡು (ಆದಿಪು. ೬-೩೩ ವ) ; ಪ್ರಾಯಶ್ಚಿತ್ತಂ ವಿನಯಂ ವೈಯಾಪೃತ್ಯಂ ಜಿನಂಗೆ ಕೂಡದು ದೋಷಾಪಾಯತಿಯಿಂ ಧ್ಯಾನಂ ಸ್ವಾಧ್ಯಾಯವ್ಯುತ್ಸರ್ಗಮುಂಟು ಸಂದೆಯಮುಂಟೇ (ಆಪಿಪು. ೧೨-೩೧). [ಸಂ.]

ವಿನಯಂಗುಂದು (ಕ್ರಿ). ಸೌಜನ್ಯವು ಇಲ್ಲದಾಗು ; ಅವಿನಯದಿಂದ ಕೂಡಿರು : ವಿನಯಂಗುಂದಿದುದಿಲ್ಲ ಪೊಲ್ಲಮೆಯನೇಂತುಂ ಮಾಡಂ (ಕುಸುಮಾ. ೩-೩೮); ವಿನಯಂಗುಂದದ ಪಾದಪೀಠತಳದೊಳ್ ಕುಳ್ಳಿರ್ಪ ಲೋಕೈಕಮಿತ್ರನನೊತ್ತಂಬದಿನೆತ್ತಿ (ಪುಷ್ಪಪು. ೪-೭೨). [ವಿನಯ + ಕುಂದು]

ವಿನಯಂಗೆಡು (ಕ್ರಿ). ಸಭ್ಯತೆಯನ್ನು ಕಳೆದುಕೊಳ್ಳು ; ಶಿಷ್ಟಾಚಾರವನ್ನು ಮೀರು : ದುರ್ವಿನೀತೆ ವಿನಯಂಗೆಟ್ಟೆಯೆಂದಾಚಾರಮೆ ತನ್ನಂ ಜಡಿವಂತೆಯುಂ . . . ಅತಿಲಜ್ಜೆತೆಯಾಗಿ ತನ್ನೊಳಿಂತೆಂದಳ್ (ಕಾಪಂಬು. ೭೫). [ವಿನಯ + ಕೆಡು]

ವಿನಯಂಗೆಯ್ (ಕ್ರಿ). ೧. ಆದರವನ್ನು ತೋರಿಸು ; ಸ್ನೇಹದಿಂದಿರು : ವಿನಯಂಗೆಯ್ದುದು ನಂಟುಗೊಳ್ಳುದಹಿತಾಕ್ಷ್ಯಾಪಾಲರೊಳ್ ಸಾಮಂ (ಸೂಕ್ತಿಸು. ೧೬-೪). ೨. ಸೇವೆಮಾಡು ; ಉಪಚರಿಸು ; ಶುಶ್ರೂಷೆ ಮಾಡು : ಆಮುಂ ಪೋಗಲೊಲ್ಲೆವು ನಿಮ್ಮಡಿಗಳ್ಗೆ ವಿನಯಂಗೆಯ್ಯುತ್ತಮಿರ್ದಪ್ಪೆಮೆಂದು ಪಕ್ಕದಿರ್ದರ್ (ವಡ್ಡಾರಾ. ೮೮-೨೫); ಶ್ರೀ ಸಿಂಹನನ್ದಿತಮ್ಮಡಿಗಳ್ ಇಂಗಿನಿಮರ[ಣಂ] xxx ಒಂದು ತಿಂಗಳಂ ಸಾಧಿಸಿದೋರ ಶ್ರೀ ಸಿಂಹನನ್ದಿ ಅಣ್ಣನು[ಂ] . . . ಬ್ರಹ್ಮಚಾರಿ ಅಣ್ಣನುಂ ನಾಲ್ವರುಂ ವಿನಯಂ[ಗೆ]ಯ್ದೋರ್ (ಕಗಾಅ. ೭೨-೮-೩; ಸು 1008).

[ವಿನಯ + ಕೆಯ್]

ವಿನಯದೇವಸೇನ (ನಾ). ಒಬ್ಬಾತನ ಹೆಸರು : ತನಗೆ ಮೃತ್ಯುವರವಾನಱಿದೆನ್ನು ಸುಪಣ್ಡಿತನ್ ಅನೇಕಶೀಲಗುಣಮಾಲೆಗಳನ್ನಗಿದೊಪ್ಪಿದೊನ್ ವಿನಯದೇವಸೇನನಾಮ ಮಹಾಮುನಿ ನೋನ್ತು (ಎಕ. II (R). ೧೩೦-೩ ; 7 ನೆಯ ಶತ). [ಸಂ.]

ವಿನಯಪರ (ನಾ). ಸೌಜನ್ಯದಿಂದ ಕೂಡಿದವನು ; ನಮ್ರನಾದವನು : ಕೌರವನಲ್ಲಿ ಭೀಷ್ಮನ ಬೇಡಿಕೊಂಡನು ವಿನಯಪರನಾಗಿ (ಕುವ್ಯಾಭಾ. ೧-೪೨). [ಸಂ.]

ವಿನಯಪಿಟಕ (ನಾ). [ಬೌದ್ಧ] ಬೌದ್ಧರ ಸೂತ್ರಪಿಟಕ, ವಿನಯಪಿಟಕ ಮತ್ತು ಅಭಿಧರ್ಮಪಿಟಕಗಳೆಂಬ ಮೂರು ಪವಿತ್ರಗ್ರಂಥಗಳಲ್ಲಿ ಒಂದು : ಸೂತ್ರಪಿಟಕ ವಿನಯಪಿಟಕ ಅಭಿಧರ್ಮಪಿಟಕ ಎಂದು ಮೂರು ಪಿಟಕಗಳು . . . ಸೂತ್ರರೂಪವಾದ ಗ್ರಂಥಗಳೊಂದು ರಾಶಿ, ಶಿಕ್ಷಾರೂಪಗ್ರಂಥಗಳೊಂದು ರಾಶಿ, ತತ್ತ್ವವಿಚಾರಗ್ರಂಥಗಳು ಮತ್ತೊಂದು ರಾಶಿ—ಈ ಪ್ರಕಾರ ಮೂರು ರಾಶಿಗಳು (ಹಿಂದೂ. ೨೪). [ಸಂ.]

ವಿನಯಪೂರ್ವಕ (ನಾ). ನಮ್ರತೆಯಿಂದ ಕೂಡಿರುವುದು ; ಸೌಜನ್ಯಯುಕ್ತವಾದುದು : ತನುವು ಮೊದಲಾದಭಿಮತಂಗಳನನುದಿನಂ ಮಾಹೇಶ್ವರರಿಗತಿ ವಿನಯಪೂರ್ವಕಮಾಗಿ ಕೊಡುತಿರ್ಪಂ ಹಲಾಯುಧನು (ಬಸವಪು. ೨೫-೩೮). [ಸಂ.]

ವಿನಯಪ್ರಹೀಣ (ನಾ). ಸೌಜನ್ಯವಿಲ್ಲದವನು ; ಉದ್ಧಟ : ಸಗರಾಭ್ಯಂತರದೇವತಾಭವನದೊಳ್ . . . ವಿನಯಪ್ರಹೀಣರವಿನೀತರ್ ನೀತಿಗೆಟ್ಟಾಡುವರ್ (ಸುಕುಮಾ. ೨-೭). [ಸಂ.]

ವಿನಯವಂತ (ನಾ). ವಿನೀತನಾಗಿರುವವನು ; ನಮ್ರಸ್ವಭಾವದವನು : ಆ ಹುಡುಗ ವಿನಯವಂತನಾಗಿದ್ದಾನೆ (ರೂಢಿ). [ಸಂ. ವಿನಯವತ್]

ವಿನಯವತಿ (ನಾ). ೧. ಸೌಜನ್ಯಸ್ವಭಾವವನ್ನು ಹೊಂದಿರುವವಳು : ವಿನಯವ[ಪಾಠಾಂ. ಮ]ತಿ ನಾಗಿಯಬ್ಬೆಗಮನೂಸಗುಣನೆನಿಪ ನಾಗಮಯ್ಯಂಗಂ ನಂದನೆಯೆನಿಸಿ ದಪ್ಪಕಬ್ಬೆಯೆ ಜಿನಪಾದಪಯೋಜಭೃಂಗಿ ಕುಲವಧುವಾದಳ್ (ಅಜಿಪು. ೧-೩೮). ೨. ಒಬ್ಬಾಕೆಯ ಹೆಸರು ; IP ಚಾಳುಕ್ಯವಿಕ್ರಮಾದಿತ್ಯನ ಮಗಳು : ದೇವೀ ವಿನಯವತ್ಯಾಸೀತ್ ತಸ್ಯ ಯಸ್ಯಾಃ ಪಿತಾಭವತ್ ಚತುರ್ದ್ದಿಗಧಿಪಃ ಶ್ರೀಮಾನ್ ವಿಕ್ರಮಾದಿತ್ಯ ಭೂಪತಿಃ (ಎಇ. XXVII, ೧೫೧-೮೨ ; 771). [ಸಂ. ವಿನಯವತೀ]

ವಿನಯವತ್ತಳೆ (ನಾ). ವಿಜ್ಞಾಪನೆಯನ್ನು ಬರೆದಿರುವ ಪತ್ರ ; ಬಿನ್ನವತ್ತಳೆ : ಸುತ್ತಾಱಂ ಸುತ್ತಿಲ್ಲದೆ ಸುತ್ತಱಿದಿರ್ದೊಂದು ವಿನಯವತ್ತಳೆಯಂ ವಿಪ್ರೋತ್ತಮಂ . . . ತನ್ನೊಳನುವಾಚಿಸಿದಂ (ಸುಕುಮಾ. ೨-೪೯). [ವಿನಯ + ಪತ್ತಳೆ]

ವಿನಯವಿನಮಿತ (ನಾ). ನಮ್ರತೆಯಿಂದ ತಲೆಬಾಗಿದವನು : ದೇವಗುರು ಬೆಸಸೆ ಜನಕ ಭವಾವಳಿಯಂ ಕೇಳ್ದು ವಿನಯವಿನಮಿತನಾದೊಂ (ಶಾಂತಿಪು. ೭-೬೫). [ಸಂ.]

ವಿನಯಶೀಲ (ನಾ). ಸೌಜನ್ಯದ ಸ್ವಭಾವದವನು : ಆ ವಿದ್ಯಾರ್ಥಿ ಬಹಳ ವಿನಯಶೀಲನಾಗಿದ್ದಾನೆ (ರೂಢಿ). [ಸಂ.]

ವಿನಯಸಂಪನ್ನ (ನಾ). ಸೌಜನ್ಯವೇ ಸಂಪತ್ತಾಗುಳ್ಳವನು : ಆ ಮನುಷ್ಯ ಬಹಳ ವಿನಯಸಂಪನ್ನ (ರೂಢಿ). [ಸಂ.]

ವಿನಯಸಂಪನ್ನತೆ (ನಾ). ೧. ಸೌಜನ್ಯವೇ ಸಂಪತ್ತಾಗಿರುವುದು ; ಅತಿನಮ್ರತೆ : ಅವನು ತನ್ನ ವಿನಯಸಂಪನ್ನತೆಯಿಂದ ಹಿರಿಯರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ (ರೂಢಿ). ೨. [ಜೈನ] ತೀರ್ಥಂಕರನಾಗುವುದಕ್ಕೆ ಕಾರಣವಾದ ಹದಿನಾರು ಭಾವನೆಗಳಲ್ಲಿ ಒಂದು ; "ವಿನಯವನ್ನು ನೆಲೆಗೊಳಿಸುವ ಭಾವನೆ" (ಜೈನಕೋ. ೨೫೨) : ವಿನಯಸಂಪನ್ನತೆಯೆಂಬುದು ಮೋಕ್ಷಸಾಧನಮಪ್ಪ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳೊಳುಮವರ್ಕಾಧಾರಮಪ್ಪ ಗುರುಪ್ರಭೃತಿಗಳೊಳ್ ಯಥಾಯೋಗ್ಯ ಸಂಸ್ಕಾರಂಗಯ್ದುದು ವಿನಯಸಂಪನ್ನತೆ (ಚಾವುಂಪು. ೨೪೧). [ಸಂ. ವಿನಯಸಂಪನ್ನತಾ]

ವಿನಯಾದಿತ್ಯ (ನಾ). ೧. ಗಂಗರ ಮನೆತನದ ಒಬ್ಬ ದೊರೆಯ ಹೆಸರು : ಅತಿಸಯಗಙ್ಗಂ ವಿನಯಾದಿತ್ಯಂ ಶ್ರೀಮತ್ಕಙ್ಗರ ಭೀಮಂ ಕೂಡಲೂರ ಮಹಾಜನಕ್ಕೆ ಕೊಟ್ಟ ಸ್ತಿತಿ (ಎಕ. III, ಸಂಜನ. ೧೫೫-೫, ಸು. ೮೫೦ ?). ೨. ಚಾಳುಕ್ಯಮನೆತನದ ಒಬ್ಬ ದೊರೆಯ ಹೆಸರು. [ಸಂ.]

ವಿನಯಾರ್ಥ (ನಾ). ವಿನಂತಿ ; ಮನವಿ ; ಬಿನ್ನವತ್ತಳೆ : ಅವರಿಗೆ ಒಂದೆರಡು ಸಲ ಎರಡು ವಿನಯಾರ್ಥ ಬರೆದದ್ದು ಉಂಟು (ಚಿಕರಾ. ೨೫೭). [ಸಂ.]

ವಿನಯಾವತಿ (ನಾ). [ಸಂಗೀತ] ಆಲಾಪನೆಯ ಒಂದು ಪ್ರಕಾರ : ನಾದಾವತಿ ನಂದಾವತಿ ಭದ್ರಾವತಿ ವಿನಯಾವತಿ ಭೋಗಾವತಿ ಎಂಬೈದುತೆಱದಿಂದಾಳಾಪಿಸುವ ಪದಕ್ರಮದ . . . ಗಾಯಕರಿಂ (ವೇಕ. ೧೮೯). [ಸಂ.]

ವಿನಯಾವಲೋಕ (ನಾ). ಸೌಜನ್ಯದೃಷ್ಟಿಯುಳ್ಳವನು : ಅಹಿತಕುಳಕಮಳವನ ವೇದಂಡಂ ವಿನಯಾವಲೋಕಂ ಕೀರ್ತ್ತಿಪತಾಕಂ (ಎಕ. VII, ಶಿಕಾರಿ. ೧೩೫-೨೩ ; 1078). [ಸಂ.]

ವಿನಯಿತ (ನಾ). ಸೌಜನ್ಯಪರನಾದವನು ; ಸರಳವ್ಯಕ್ತಿ : ವಿನಯಿತನೆನ್ದು ಸತ್ಯಪರನೆನ್ದು . . . ಮೇದಿನಿಯಬಿವಣಿಕುಂ ನೆಗಳ್ದ ಹೆಗ್ಗೆಱೆಯಗ್ಗದ ಮೋಟಗೌಣ್ಡನಂ (ಎಕ. XII, ಚಿಕ್ಕನಾ. ೩೧-೭೩ ; 1233) ; ಎಡೆವರಿವ ವಿನಯಿತಂ ವೀತರಾಗನೆನಿಕ್ಕು (ಮಂಗರಾ. ೭೧-೨೦). [< ವಿನಯ]

ವಿನಯೋಕ್ತಿ (ನಾ). ಸೌಜನ್ಯದಿಂದ ಕೂಡಿದ ಮಾತು ; ಮೃದುವಚನ : ಈ ಮಲ್ಲಪಯ್ಯನೊಳೊಪ್ಪುಗುಂ ಪಿತೃಭಕ್ತಿಯುಂ ವಿನಯೋಕ್ತಿಯುಂ (ಶಾಂತಿಪು. ೧-೪೦); ದಿನಪಕುಲತಿಲಕನೇಕಾಂತದೊಳ್ಳಗರಶೋಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು ವಿನಯೋಕ್ತಿಯಿಂದೆ (ಚೈಮಿಭಾ. ೧೮-೪೧). [ಸಂ.]

ವಿನಯೋಪಚಾರ (ನಾ). ೧. ನಮ್ರತೆಯಿಂದ ಮಾಡುವ ಸೇವೆ, - ಉಪಚಾರ : ವಿನಯೋಪಚಾರವಚನಮುಮನುಕೂಲಾಚರಣಮುಂ ವಿಭಿನ್ನಾಸನಮುಂ ಮನದೊಳಗೆ ಪುದಿದು ಪೊಣ್ಮಿದ ಮುನಿಸಂ ಕನ್ನಡಿಪುವು (ಕಾವ್ಯಾವ. ೬೭೮). ೨. ವಿನೀತಭಾವದಿಂದ ಸೇವಿಸುವವನು : ಕುಲಜಾತಿದೇಶವಿಶದಂ ವಿನಯೋಪಚಾರಂ ನಿಲಯ್ಮೆಕವೃತ್ತಿ . . . ಮಲಿನಾವಬೋಧ ವಿದಿತಾಖಿಳಚೋದ್ಯ[ವೃಂದಂ] (ಕವಿರಾ. ೩-೨೨೭). [ಸಂ.]

ವಿನಶನ (ನಾ). ೧. ನಾಶವಾಗುವಿಕೆ ; ಹಾಳಾಗುವಿಕೆ. ೨. ನಾಶ ; ಹಾಳು. ೩. ಮಾಯವಾಗುವಿಕೆ ; ಮರೆಯಾಗುವಿಕೆ ; ಕಾಣದಾಗುವಿಕೆ. ೪. ಸರಸ್ವತೀ ನದಿಯು ಅಂತರ್ವಾಹಿನಿಯಾಗಿ ಪ್ರವಹಿಸುವ ಸ್ಥಳ ; ಕುರುಕ್ಷೇತ್ರ : ಮಧ್ಯಮಃ, ಮಧ್ಯದೇಶಃ - ವಿನಶನವೆಂಬ ಕ್ಷೇತ್ರಕ್ಕೆ ಮೂಡಲಾಗಿಯೂ . . . ಇರುವ . . . ಚಿತ್ರಕೂಟ ಮುಂತಾದ ಮಧ್ಯದೇಶಕ್ಕೆ ಹೆಸರು (ಸಿದ್ಧಾಂತಿ. ೯೪). [ಸಂ.]

ವಿನಷ್ಟ (ಗು). ೧. ನಾಶಹೊಂದಿದ ; ಹಾಳಾದ. ೨. ಕಾಣದಾದ ; ಮರೆಯಾದ. (ನಾ). ೩. ನಾಶ ; ಹಾನಿ : ಮನೋಮಯದಲ್ಲಿ ಪ್ರಾಣಮಯದ ಭಾವತ್ವ ವಿನಷ್ಟವಾಗುವುದಿಲ್ಲ. ಅದು ತನ್ನ ಅಲ್ಪತ್ವದಿಂದ ಪಾರಾಗಿ ವಿಸ್ತಾರವಾಗುತ್ತದೆ (ಸೌಂದಸ. ೧೯); ಆ ರಾಜ್ಯತ್ರಯದಲ್ಲಿ ವಿನಷ್ಟವಾದ ದೇವಸ್ವ ಬ್ರಹ್ಮದೇಯಗಳನ್ನು ಧರ್ಮಯಶೋಭಿವೃದ್ಧಿಗಾಗಿ ತನ್ನ ಮುಖದಿಂದಲೇ ಉದ್ಧಾರಮಾಡಿದನು (ಕರ್ಣಾಅ. ೭೨). [ಸಂ.]

ವಿನಷ್ಟೇಕ್ಷಣ (ನಾ). ಕಣ್ಣುಗಳನ್ನು ಕಳೆದುಕೊಂಡವನು ; ಕುರುಡ : ಉದಯಸ್ಥಂ ದಿನನಾಥನಾಗೆ ವಿಶಲಾಕ್ಷಂ . . . ವಣಿಜೋದಯಸ್ಥನೆನೆ ನಿರ್ದ್ರವ್ಯಂ ವಿನಷ್ಟೇಕ್ಷಣಂ (ಜಾತಕ. ೧೮-೧). [ಸಂ.]

ವಿನಹ, ವಿನಹಾ (ಅ). ಹೊರತು ; ಅಲ್ಲದೆ : ಶಂಕರಭಟ್ಟರ ಬಗೆ ಬಡಾಕರೆಯಲು ಮನೆಯ ವಿನಹ ಮು ೫ III (ಸೌಇಇ, IX-ii, ೬೭೩-೩೧ ; 1562) ; ಯೆಹೂದ್ಯರು, ಮುಸಲ್ಮಾನರು ಮತ್ತು ಕ್ರೈಸ್ತರು ಇವರ ವಿನಹ ಉಳಿದ ಎಲ್ಲಾ ಜನಾಂಗದವರಲ್ಲೂ ಈ ಸಿದ್ಧಾಂತ ಪ್ರಚಾರದಲ್ಲಿತ್ತು (ಜೀವಾತ್ಮ. ೧೮೪). ವಿನಹಾ : ವಟ್ಟ ಕೊಟ್ಟ ವಿನಹಾ ಸೆಟ್ಟ ಬಿಡ (ಗಾದೆ). [< ಸಂ. ವಿನಾ]

ವಿನಹಾ 'ವಿನಹ' ನೋ.

ವಿನಾ (ಅ). ಹೊರತು ; ಉಳಿದು ; ಬಿಟ್ಟು : ನರರನ್ನರಿಲ್ಲಾಯಿತ್ತು ಮಂಥರೆಯಲೋಕಕ್ಕೆ, ಕೈಕೆ ಭರತರ್ ವಿನಾ (ಶ್ರೀರಾಮಾ. ೨೭-೭೦೮). [ಸಂ.]

ವಿನಾಕರಿಸು (ಕ್ರಿ). ಹೊರತುಪಡಿಸು ; ಹೊರತುಗೊಳಿಸು : ಯಾವ ಶ್ರುತಿವಾಕ್ಯವೇ ಆಗಲಿ, ಅದನ್ನು ಅರ್ಥಮಾಡಿಕೊಳ್ಳುವುದೆಂದರೆ ಸರ್ವರೀತಿಯಿಂದಲೂ ಪರಬ್ರಹ್ಮನ ಅಹೇಯತ್ವವನ್ನು ರಕ್ಷಿಸಿಕೊಳ್ಳೋಣ . . . ಈ ಭಾವವನ್ನು ವಿನಾಕರಿಸಿ ಶ್ರುತಿಗೆ ಅರ್ಥಮಾಡಿಕೊಳ್ಳುವುದು ಅನುಚಿತ (ಭಾತತ್ತ್ವ. ೫೨೩). [ವಿನಾಕರಣ + - ಇಸು]

ವಿನಾಕಾರಣ (ಅ). ಕಾರಣವಿಲ್ಲದೆ ; ನಿಷ್ಕಾರಣವಾಗಿ : ನೀವು ಸುಮ್ಮನೆ . . . ವಿಚಾರಮಾಡದೆ ವಿನಾಕಾರಣ ದುಡುಕುತ್ತೀರಿ (ಪದ್ಮಸ. ೨೨೧). [ಸಂ.]

ವಿನಾಡಿ (ನಾ). ಇಪ್ಪತ್ತುನಾಲ್ಕು ಕ್ಷಣಗಳ ಅವಧಿ ; ಒಂದು ಗಂಟೆಯ ಅರುವತ್ತನೆಯ ಒಂದು ಭಾಗ : ಅನುರಾಧನಕ್ಷತ್ರದೊಡನೆ ಚಂದ್ರನ ಸಂಬಂಧ ೧೧ ನಾಡಿ ೪೧ ವಿನಾಡಿಗಳಲ್ಲಿ ಉದಯದಿಂದ ಮುಂದೆ ಚಂದ್ರನ ಚಲನೆ ಸಾಗಿ ಸಂಬಂಧ

ಜ್ಯೇಷ್ಠಾನಕ್ಷತ್ರ ರಾಶಿಯೊಡನೆ ಬೆಳೆಯುತ್ತದೆ (ಆಕಾಶ. ೮೮) ; ದೇವಿಯ ಕೌಶಲದಿಂದೊಂದು ವಿನಾಡಿಯಲ್ಲೇ ಐನೂರು ಮಂದಿ ಕುಂಪಣಿಯ ಸಿಪಾಯಿಗಳೂ ಪರಾಸ್ತರಾಗಿ ಹೋದರು! (ದೇವೀಚಾ. ೧೫೧). [ಸಂ.]

ವಿನಾಪೋಟಿ (ನಾ). ಒಬ್ಬಾಕೆಯ ಹೆಸರು : ವಿಜಯಾದಿತ್ಯ ಸತ್ಯಾಶ್ರಯ ಶ್ರೀಪೃಥಿವೀ ವಲ್ಲಭ ಮಹಾರಾಜಾಧಿರಾಜಪರಮೇಶ್ವರಭಟಾರರಾ ಪ್ರಾಣವಲ್ಲಭೆ ವಿನಾಪೋಟಿಗಲೆ ನ್ನೊರ್ ಸೂಳೆಯರ್ (ಇಆ.X, ೧೦೩-೩ ; ಸು. 696). [ವಿನ್ಯಾ + ಪೋಟ್ಟಿ (< ಪೊದ್ದಿ)]

ವಿನಾಯಕ (ನಾ). ೧. ಕಳೆಯುವಿಕೆ ; ತೆಗೆದುಹಾಕುವಿಕೆ. ೨. ಮುನ್ನಡೆಸುವವನು ; ಮುಂದಾಳು ; ಮಾರ್ಗದರ್ಶಕ. ೩. (ವಿಘ್ನಗಳನ್ನು) ನಿವಾರಿಸುವವನು. ೪. ಗಣೇಶನ ಹೆಸರುಗಳಲ್ಲಿ ಒಂದು : ಮಚ್ಚಿ ವಿನಾಯಕಂ ತಾನ್ನಿಮಿರ್ಚುಗೆ ಕಬ್ಬಮಂ ನಯದಿಂ ಗುಣಾರ್ಣವಭೂಪನಾ (ಪಂಪಭಾ. ೧-೭); ಅಂತು ವಿನಾಯಕಸ್ತೋತ್ರಮಂ ಮಾಡಿ . . . ನೈಷಧನೃಪಂ ಪೋಗುತ್ತಿರಲ್ (ನಳಚಂ. ೨೩೩ ಪ). ೫. ಹಕ್ಕಿಗಳ ನಾಯಕ ; ಗರುಡ. ೬. ಅಡ್ಡಿ ; ತಡೆ ; ಆತಂಕ. ೭. [ಬೌದ್ಧ] ಬುದ್ಧ : "ಸರ್ವಜ್ಞಸ್ಸುಗತಃ . . . ವಿನಾಯಕಃ . . . ಮುನಿಃ – ೧೮ ಬುದ್ಧದೇವರ ಹೆಸರುಗಳು" (ಸಿದ್ಧಾಂತಿ. ೧೭). [ಸಂ.]

ವಿನಾಯಕಚತುರ್ಥಿ (ನಾ). ಭಾದ್ರಪದಶುದ್ಧಚೌತಿ ಮತ್ತು ಅಂದು ಆಚರಿಸುವ ಗಣೇಶನ ಹಬ್ಬ : ವಿನಾಯಕಚತುರ್ಥಿ, ಗಣೇಶಚೌತಿ (ಭಾಹಬ್ಬ. ೧೬೦). [ಸಂ. ವಿನಾಯಕಚತುರ್ಥೀ]

ವಿನಾಯಕಚೌತಿ (ನಾ). = ವಿನಾಯಕಚತುರ್ಥಿ : ವಿನಾಯಕಚೌತಿಯಂದು ಚಂದ್ರನನ್ನು ನೋಡಿದರೆ ಅಪವಾದ ಬರುವುದೆಂಬ ನಂಬಿಕೆಯಿದೆ (ರೂಢಿ). [ವಿನಾಯಕ + ಚೌತಿ]

ವಿನಾಯತಿ 'ವಿನಾಯಿತಿ' ನೋ.

ವಿನಾಯಿತಿ ವಿನಾಯತಿ, ವಿನಾಯ್ತಿ (ನಾ). ೧. ಬಿಟ್ಟುಕೊಡುವುದು ; ರಿಯಾಯಿತಿ ; ಕಡಿತ : ಜೈಲುಸೂಪರಿಂಟೆಂಡರು . . . ಸರ್ಕಾರಕ್ಕೆ ಬರೆದು ಅವನಿಗೆ ಮೂರು ತಿಂಗಳ ವಿನಾಯಿತಿ ದೊರಕಿಸಿದರು (ತಾಯಿಶ. ೨೪೮); ವಿನಾಯಿತಿ ಕೇಳಿ ಬರೆದುಕೊಂಡಿದ್ದವರ ಬಗ್ಗೆ ಯುಕ್ತವಾದ ನಿರ್ಣಯ . . . ಇತ್ಯಾದಿ ಕಾರ್ಯಕ್ರಮ ಜರುಗಿತು (ಪುಸರು. ೩೪). **ವಿನಾಯತಿ** : ೨. ಹೊರತಾದುದು : ಹಿಂದಿನ ಸಂಪ್ರದಾಯಕ್ಕೆ ಬಾಗದ ಬೌದ್ಧ ಮತ್ತು ಜೈನಸಿದ್ಧಾಂತಗಳು ಕೂಡ ಇದಕ್ಕೆ ವಿನಾಯತಿ ಅಲ್ಲ (ತತ್ಪಪ್ರಾ. ೭೦೪); ಈ ದೇಶಕ್ಕೆ ಮಾರ್ಕ್ಸಿಸಂ ಕೂಡ ವಿನಾಯತಿ (ಹೂಸಕ್ಷಿ. ೨೪೧). **ವಿನಾಯ್ತಿ** : ೧. ಐನೂರು ರೂಪಾಯಿಗಳಿಗೂ ಮಿಗಿ ವ್ಯಾಪಾರ ಮಾಡಿದವರಿಗೆ ವಿನಾಯ್ತಿ ತೋರಿಸಲಾಗುವುದು (ರೂಢಿ). [< ವಿನಾ. / P 'ರಿಯಾಯಿತಿ' ಮುಂತಾದ ಶಬ್ದಗಳ ರೂಪಸಾಮ್ಯದಿಂದ ಬಳಕೆಯಾಗಿರುವ ಶಬ್ದವಿರಬಹುದು]

ವಿನಾಯಿಸು (ಕ್ರಿ). ೧. ಹೊರತುಪಡಿಸು ; ಪ್ರತ್ಯೇಕಗೊಳಿಸು : ಮದ್ಯಾಸನ್ನು ವಿನಾಯಿಸಿದರೆ ನೀಲಗಿರಿ ಬಹು ಚಿಕ್ಕದು (ಭೂಗೋಳ. ೮೦); ಈ ಎರಡರಲ್ಲಿ ಕಾವ್ಯವನ್ನು ವಿನಾಯಿಸಿದ ಸಾಹಿತ್ಯವನ್ನು ಕುರಿತು ಹೇಳಬೇಕಾದುದು ಹೆಚ್ಚೇನೂ ನನಗೆ ತೋರಿಲ್ಲ (ಜೀವಸಾ. ೧೯). ೨. ಹೊರತಾಗು ; ಅಪವಾದವಾಗು : ಅವನಿಗೆ ವಿದ್ಯೆ ವಿನಾಯಿಸಿ ಬೇರೆ ದ್ರವ್ಯವಿಲ್ಲ (ರೂಢಿ). [ವಿನಾ + - ಇಸ್ಯ್]

ವಿನಾಯ್ತಿ 'ವಿನಾಯಿತಿ' ನೋ.

ವಿನಾಶ (ನಾ). ೧. ಹಾಳು ; ಸರ್ವನಾಶ : ಕೀನಾಶದಂಡೋದ್ದಂಡಹತಿಗೆ ವಿನಾಶವೆಯ್ದುವವರ್ ಪ್ರತಿಯ ಕೀನಾಶನಾಶಂಗೆ (ಬಸಪು. ೫೪-೨೨); ಲೇಸುಲೇಸಿದು ತಮ್ಮನಾಡಿದ ಭಾಷೆ ಬಾಹಿರವಾಗಬೇಡ ವಿನಾಶಕಾನಂಜೆನು ಮುರಾಂತಕ ಬಿಡು ಧನಂಜಯನ (ಕುವಾಶ. ೧೭-೧೦). ೨. ಕಾಣಿಸದಾಗುವಿಕೆ ; ಮರೆಯಾಗುವುದು : "ವಿನಾಶಃ, ಆದರ್ಶನಂ – ೨ ಕಾಣಿಸದೆ ಹೋಗುವಿಕೆ ; ಗೋಚರವಾಗದೇ ಇರುವಿಕೆ" (ಸಿದ್ಧಾಂತಿ. ೩೭೩). [ಸಂ.]

ವಿನಾಶಕ (ಗು). ೧. ನಾಶಮಾಡುವ ; ಧ್ವಂಸಗೊಳಿಸುವ. (ನಾ). ೨. ನಾಶಮಾಡುವವನು ; ಧ್ವಂಸಗೊಳಿಸುವವನು. [ಸಂ.]

ವಿನಾಶಕರ (ಗು). ೧. ನಾಶವನ್ನುಂಟು ಮಾಡುವ ; ಧ್ವಂಸಗೊಳಿಸುವ. (ನಾ). ೨. ಹಾನಿ ; ಕೇಡು ; ಆಪತ್ತು : ಈಸುದಿನ ನಮ್ಮಗ್ನಿಹೋತ್ರಕೆ ಮಾಸಲಳಿಯದೆ ನಡೆದುದೀಗ ವಿನಾಶಕರವಾಯ್ತು (ತೊರರಾ. ೧-೯-೨೫). [ಸಂ.]

ವಿನಾಶಕಾರಿ (ಗು). ಧ್ವಂಸಗೊಳಿಸುವ ; ಹಾನಿಮಾಡುವ : ಪ್ರಜೆಗಳಿಗೆ ತನ್ನ ಅಧಿಕಾರ ವಹಿಸಿಕೊಡುವಂತೆ ವಿನಾಶಕಾರೀಕೃತ್ಯಗಳ ಮೂಲಕ ಸರ್ಕಾರದ ಮೇಲೆ ಒತ್ತಾಯ ಹಾಕುವುದೇ ಆ ಪಕ್ಷದ ಉದ್ದೇಶವಾಗಿತ್ತು (ಪುಸರು. ೫೦೬). [ಸಂ. ವಿನಾಶಕಾರೀ]

ವಿನಾಶಕಾಲ (ನಾ). ಹಾಳಾಗುವ ಸಮಯ ; ನಾಶವಾಗುವ ಕಾಲ : ಕಲಿಯುಗ ಬಂತು ; ವಿನಾಶಕಾಲ ಪ್ರಾಪ್ತವಾಯಿತು! (ವಚಭಾ. ೯೦). [ಸಂ.]

ವಿನಾಶನ (ಗು). ೧. ಹಾಳುಮಾಡುವ ; ಧ್ವಂಸಗೊಳಿಸುವ. (ನಾ). ೨. ಸಂಪೂರ್ಣ ನಾಶ ,—ಹಾಳು. [ಸಂ.]

ವಿನಾಶಮಾರ್ಗ (ನಾ). ಕೇಡಿನ ಮಾರ್ಗ ; ನಾಶದ ಹಾದಿ : ಯಾವ ದುಷ್ಟನು ನಿನಗೆ ಈ ವಿನಾಶಮಾರ್ಗವನ್ನು ಸೂಚಿಸಿದನು? (ವಚಭಾ. ೪೦೬). [ಸಂ.]

ವಿನಾಶಿತ (ಗು). ಸಂಪೂರ್ಣ ನಾಶಗೊಂಡ ; ಧ್ವಂಸವಾದ : [ಈ]ಶಂ ಮನಮೊಸೆದು ನೆಗಳ್ದ ದಿವ್ಯಾಸ್ತ್ರಮನಾ ಪಾಶುಪತಾಸ್ತ್ರಮನಿತ್ತು ವಿನಾಶಿತರಿಪುವಕ್ಕೆ ಹರಿಗನೆಂದಂ ದಯೆಯಿಂ (ಪಂಪಭಾ. ೮-೨೬). [ಸಂ.]

ವಿನಾಶೋನ್ಮುಖ (ಗು). ನಾಶಕ್ಕೆ ಸಿದ್ಧವಾದ ; ಹಾಳಾಗುವ ಸ್ಥಿತಿಗೆ ಬಂದ. [ಸಂ.]

ವಿನಿಕೆ, ವಿನಕೆ, ವಿನುಕೆ (ನಾ). ೧. ಕೇಳುವಿಕೆ ; ಶ್ರವಣ. ೨. ಸಂಗೀತಕಚೇರಿ : ಗಾಯಕವಾದಕರು ಗೋಷ್ಠಿ ಸೇರಿ . . . ಭಕ್ತವ್ಯಂದಶ್ರೋತೃಗಳಿಗೆ ಸಂಗೀತರಸದೌತಣ ಕೊಟ್ಟು, ಅವರನ್ನು ಸಂಗೀತಸಾಧನದ್ವಾರಾ ಭಗವಂತನ ಕಡೆಗೆ ತಿರುಗಿಸುವ ಸಮಾರಂಭಕ್ಕೆ ವಿನಿಕೆ ಅಥವಾ ಕಚೇರಿ ಎಂದು ಹೆಸರು (ಸಂಗೀಚಂ. ೯೬); ಅವರದೇ ಆಗಲಿ ಇವತ್ತು ಪಕ್ಕವಾದ್ಯ ವಿನಿಕೆ (ನಾಕಲಾ. ೨೫). **ವಿನಕೆ** : ೨. ಒಬ್ಬ ಪ್ರಸಿದ್ಧ ಗಾಯಕನ ಗೋಟುವಾದ್ಯದ ವಿನಕೆಯನ್ನು ಕೇಳುವುದಕ್ಕೆ ಬೆಂಗಳೂರಿನ ರಸಿಕರು ತಿರುಗಿ ನೆರೆದಿದ್ದಾರೆ (ರಾಮಾಸ. ೬೫). **ವಿನುಕೆ** : ೨. ವಿನುಕೆಯನ್ನು ಕೇಳಿ ಆ ಆನಂದದಲ್ಲಿ ಮೂರು ತಿಂಗಳು ಆಹಾರವೇ ಬೇಕಿಲ್ಲದೆ ಇದ್ದ ಕಾಂಪೂಷನ ಮನಸ್ಸು ಇನ್ನು ಎಷ್ಟು ಉದಾರವಾದ್ದೋ ! (ಕಾಂಪೂಚ. ೧೪). [< ತೆಲು. ವಿನಿಕಿ, ವಿನ್ನಿ = ಶಾಸ್ತ್ರಾದಿಗಳನ್ನು ಕೇಳುವಿಕೆ]

ವಿನಿದ್ರ (ಗು). ೧. ನಿದ್ರೆಯಿಲ್ಲದ ; ಎಚ್ಚರಗೊಂಡ. (ನಾ). ೨. (ಕಣ್ಣುಗಳಂತೆ) ಅರಳಿದುದು ; ತೆರೆಯಲ್ಪಟ್ಟುದು ; ಅಗಲವಾದುದು : "ವಿಕಸಿತ ಮುನ್ಮೀಲಿತಂ ವಿನಿದ್ರಮೆನಿಕ್ಕುಂ" (ವಸ್ತುಕೋ. ೩೧-೧೦). ೩. ಎಚ್ಚರಗೊಂಡುದು ; ನಿದ್ರೆ ತಿಳಿದುದು : ಭವದೀಯ ವನಾಯುಜಹಯನಿವಹಂ ಕೇಳ್ ಮೂರಿವಿಟ್ಟು ನಿಶ್ವಾಸಂ ಸ್ಕಂಧವಮಂ ಮಾಸಿಸೆ ಸೊಗಯಿಸಿತು ವಿನಿದ್ರಂ ದೇವ ದೀರ್ಘಪಟ ಮಂಡಪದೊಳ್ (ಶಾಂಶಪು. ೫-೯೨). [ಸಂ.]

ವಿನಿದ್ರಿತೆ (ನಾ). ನಿದ್ರೆ ತಿಳಿದವಳು ; ಎಚ್ಚರಗೊಂಡವಳು : ಪತಿಯಿಂ ಮುನ್ನಂ ನಿದ್ರಾಸ್ಥಿತೆಯಾಗಿರ್ದೋಪನೊಱಗಿದಿಂ ಬಳಿಕ ವಿನಿದ್ರಿತೆಯಾಗಿ. ವಿಹರಿಸುವೊಡಾ ಸತಿಗಲಸೇಂಗಿತಂ (ಮದಪ. ೧೧-೪೬). [ಸಂ. ವಿನಿದ್ರಿತಾ]

ವಿನಿಪತತ್ತು (ಗು). ಕೆಳಕ್ಕೆ ಬೀಳುತ್ತಿರುವ ; ಕುಸಿಯುತ್ತಿರುವ : ವಿಳಸಿತಕಂದಳಂ ವಿನಿಪತತ್ಕರಕಂ ಕ್ಷುಭಿತೋರುವಾಹನೀಕುಳನಿನದಂ (ಚಂದ್ರಪ್ರ. ೪-೪೪). [ಸಂ. ವಿನಿಪತತ್]

ವಿನಿಮಯ (ನಾ). ೧. (ವಿಚಾರ, ಪದಾರ್ಥ ಮುಂತಾದುವುಗಳ ವಿಷಯದಲ್ಲಿ) ಒಂದನ್ನು ಕೊಟ್ಟು ಅದರ ಬದಲಿಗೆ ಮತ್ತೊಂದನ್ನು ಪಡೆಯುವುದು ; ಅದಲುಬದಲು ಮಾಡಿಕೊಳ್ಳುವಿಕೆ : ಒಂದು ದೇಶದವರು ಬೇರೊಂದು ದೇಶದವರ ಸಂಗಡ ಮಾಡುವ ವಿನಿಮಯವು ವ್ಯಾಪಾರವೆನಿಸುವುದು (ಮುಂಬಯಿ. ೪-೧೫೫); ದೇಶದ ಕೈಗಾರಿಕೆ, ವ್ಯಾಪಾರ, ವಿನಿಮಯ, ದಾರಣೆವಾಸಿ —ಮುಂತಾದ ಕಾರ್ಯರಂಗಗಳ ವಿಚಾರವನ್ನು ಮಾಡಬೇಕಾಗುವುದು (ಹಣಶ್ರ. ೨). ೨. ಒತ್ತೆ ; ಅಡವು ; ಗಿರವಿ. [ಸಂ.]

ವಿನಿಮಯವಚನ (ನಾ). [ಕಾವ್ಯಮಿ] ಪರಿವೃತ್ತಿ ಅಲಂಕಾರದ ಒಂದು ಲಕ್ಷಣ ; ಒಂದು ವಸ್ತುವನ್ನು ಕೊಟ್ಟು ಮತ್ತೊಂದು ವಸ್ತುವನ್ನು ಪಡೆಯುವುದರ ವರ್ಣನೆ : ಪರಿವೃತ್ತಿಯೆಂಬುದಕ್ಕುಂ ನಿರುಪಮಮರ್ಥಸ್ವರೂಪವಿನಿಮಯವಚನಂ

ಪರಮಗುಣೋದಯಮದಱಾ ಸ್ವರೂಪಮಂ ಬಗೆದು ಕೊಳ್ಗೆ ಮತ್ತೀ ತೆಱದಿಂ (ಕವಿರಾ. ೩-೧೫೮). [ಸಂ.]

ವಿನಿಮಯವ್ಯಾಪಾರ (ನಾ). ಒಂದು ವಸ್ತುವನ್ನು ಕೊಟ್ಟು ಮತ್ತೊಂದನ್ನು ಪಡೆದುಕೊಳ್ಳುವ ವ್ಯವಹಾರ : ಕರೀಂಸಾಬಿ . . . ಕರಿಮಾನು ಹೊತ್ತುಕೊಂಡು ಮನೆಮನೆಗೂ ತಿರುಗಿ ಅಕ್ಕಿಗೋ ಬತ್ತಕ್ಕೋ ಅಡಕೆಗೋ ವಿನಿಮಯವ್ಯಾಪಾರ ಮಾಡುತ್ತಿದ್ದನು (ಮಲೆಮ. ೨೮). [ಸಂ.]

ವಿನಿಮಯಿಸು (ಕ್ರಿ). ಬದಲಾಯಿಸಿಕೊಳ್ಳು ; ಅದಲುಬದಲು ಮಾಡಿಕೊಳ್ಳು : ಈ ತಿಱಿಟನ್ನು ಒಂದು ರೈಲ್ವೆಪ್ರವಾಸದ ಉಪಯೋಗವನ್ನಾಗಿಯೋ ಗಾಯನ ನರ್ತನದ ಉಪಯೋಗವನ್ನಾಗಿಯೋ ವಿನಿಮಯಿಸಿ ವಿನಿಯೋಗಿಸಿಕೊಳ್ಳುತ್ತೇವೆ (ಮೂವಾದ. ೧೦೮); ಶರೀಫ, ನಾಗಲಿಂಗ, ಗರಗದ ಮಡಿವಾಳಪ್ಪ ಈ ತ್ರಿಮೂರ್ತಿಗಳು . . . ಸಾಧನಕ್ರಮಗಳ ಕುರಿತು ವಿನಿಮಯಿಸುತ್ತಿದ್ದರು (ಶರೀಫ. ೬೪ ಕವಿತಾವ್ಯಕ್ತಿಪರಿಚಯ). [ವಿನಿಮಯ + - ಇಸು]

ವಿನಿಮಾಲಿತ, ವಿನಿಮಾಳಿತ (ಗು). ಮುಚ್ಚಿರುವ ; ಅರಳದಿರುವ ; ವಿಕಸಿತವಾಗದ : ವಿನಿಮಾಲಿತನೀಲಾಂಬುಜವನಮುನ್ಮೀಲಿತನವೀನಕಮಲವನಂ (ಕಾವ್ಯಾವ. ೫೨೦). **ವಿನಿಮಾಳಿತ** : ವಿನಿಮಾಳಿತಕುಮುದವನಂ ಜನಿತೋನ್ಮೀಲಾರವಿಂದವನಲಕ್ಷ್ಮೀಶಂ ದಿನಕರನುದಯಂಗೆಯ್ದಂ ವಿಹತತಿಮಿರಂ ವಿಶ್ವಸಂಧ್ಯಾಶ್ಲೇಷಂ (ಕವಿರಾ. ೨-೭೪). [ಸಂ.]

ವಿನಿಮಾಳಿತ 'ವಿನಿಮಾಲಿತ' ನೋ.

ವಿನಿಮ್ನ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಏಳನೆಯದಾದ ಉಷ್ಣಿಕ್ಕು ಎಂಬ ಛಂದಸ್ಸಿನ ಒಂದು ವೃತ್ತ : ಶೀತಕರಾಗ್ನಿ ಚೇತೋಜಾತಹರರ್ಕಳಿರ್ದಂದೇ ತೊದಳೋಪಳೆ ನಾಮಾತಿಶಯಂ ವಿನಿಮ್ನಂ [ಪಾಶಾಂ. ವಿರಾಮಂ] (ಛಂದೋಂಬು. ೨-೬೪). [ಸಂ.]

ವಿನಿಯತ (ಗು). ಹತೋಟಿಯಲ್ಲಿರುವ ; ಅಂಕೆಯಲ್ಲಿರುವ : ಸರಸಿರುಹಸಂಭವ ಕೃತದುರಾಕ್ಷರವಿನಿಯತ ನಿರಾಸಕ ಮಹಾನಿರುಪಮಿತ ಮಹಿಮಾಢ್ಯನಂ . . . ಭವದೂರನಂ ಕೊಂಡಾಡಿ (ಬಸಪು. ೪೬-೭೧). [ಸಂ.]

ವಿನಿಯೋಗ (ನಾ). ೧. ಬಳಕೆ ; ಉಪಯೋಗ : ಹಲವು ವಿನಿಯೋಗದಲಿ ಸುದತಿಯರೊಲುಮೆಯಲಿ ಸಕಲಾಂಗದಲಿ . . . ಹಳವು ನಿನಗಾವಂಗದಲಿ ಬಳಿಸಲಿಸದಲೆ . . . ಭೂಪಾಲ ನಿನಗೆಂದ (ಕುವ್ಮಾಸ. ೧-೫೭); ಕಂಪೋಸ್ಸು ತಯಾರಿಸುವುದರಿಂದ ಮನೆಯಲ್ಲಾಗುವ ಕಸಕಡ್ಡಿ, ಕೊಳಚೆಗಳ ವಿನಿಯೋಗಕ್ಕೆ ಒಂದು ವ್ಯವಸ್ಥೆಯೂ ಆದಂತಾಗುವುದು (ಆಡುಸೌ. ೧೨೭) . ೨. ವಿತರಣೆ ; ಹಂಚುವಿಕೆ : ಬಸವೇಶ್ವರನು ಮಾಡಿದ ತನ್ನ ಭಂಡಾರದ ವಿನಿಯೋಗವನ್ನು ಬಿಜ್ಜಳನು ಮೆಚ್ಚಲಿಲ್ಲ (ಮೂರುಜ್ಯೋ. ೯೦). ೩. ಕೆಲಸ ; ಊಳಿಗ ; ಕೈಂಕರ್ಯ : ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ ಬಹಿರಂಗದಲ್ಲಿ ವರ್ತಿಸುವವರಿಗೆ ಎಲ್ಲಿಯದೊ (ಬಸವ. ೮೧೭); ಕೆಲಕೆಲದೊಳ್ಪಿಡಿದು ನಿಂದ ಯಂತ್ರಪುತ್ರಿಕೆಗಳ ಸಡಗರಿಪ ವಿನಿಯೋಗದ ಮಡದಿಯರ ಪಿರಿಯ ಸಿರಿ ಕಮನೀಯಮಾಗೆ (ರಾಜಶೇ. ೧೩-೪೫ ವ). ೪. ಬೇರ್ಪಡಿಸುವಿಕೆ ; ಪ್ರತ್ಯೇಕಿಸುವಿಕೆ. ೫. ತೊರೆಯುವಿಕೆ ; ಬಿಟ್ಟುಬಿಡುವಿಕೆ. ೬. ತೊಡಗುವಿಕೆ ; ಪ್ರಾರಂಭ.

ವಿನಿಯೋಗದರ್, ವಿನಿಯೋಗದವರು = (ಅರಮನೆಯ) ಊಳಿಗದವರು, — ಸೇವಕರು : ವಿನಿಯೋಗದರೆಮ್ಮ ಪುರಾತನರಿಂತಿಂತಮರ್ದು ಮೆಱೆಯೆ ನಿನ್ನರಸುತನಕ್ಕಿನಿತುಂಟೆ ಕೊಱತೆ (ವೃಷವಿ. ೬-೪೪); ಸುಕರಧಾನ್ಯದ ಕಣಜಗಳ್ ಸರ್ವವಿನಿಯೋಗದವರಿಪ್ಪ ಚಾವಡಿಗಳು . . . ತರತರದೊಳಿರಲ್ಕೆ (ಚಿಬಪು. ೫-೫೦); ಮುರಮ್ಮೆರಿ . . . ವಾಲಗದ ಭೂರಿ ವಿನಿಯೋಗದವರಿಗೆಯರುಹಿ (ನಮೋ. ೧೦-೨೩). [ಸಂ.]

ವಿನಿಯೋಗಸ್ಥ (ನಾ). ಊಳಿಗದಲ್ಲಿರುವವನು ; ಸೇವೆಯಲ್ಲಿರುವವನು : ನಿಯೋಗಿ ಸಮಸ್ತರನು ಬೀಳ್ಕೊಟ್ಟು ವಿನಿಯೋಗಸ್ಥರೋಲಗದಲ್ಲಿ ಎಸೆದನು ರಾಜಶೇಖರನು (ಬಿಜ್ಜಪು. ೭-೨೬). [ವಿನಿಯೋಗ + - ಸ್ಥ]

ವಿನಿಯೋಗಿ (ನಾ). (ಉನ್ನತವಾದ) ಊಳಿಗದಲ್ಲಿರುವವನು; ಉನ್ನತಾಧಿಕಾರಿ: ವ್ಯಾಕುಲಿತವಿಪ್ರರ . . . ದರ್ವೀಕರನ ವಿನಿಯೋಗಿಗಳ ಸರ್ವೈಕಮತ್ಸರದೊಳಗೆ ಬದುಕುವನಾವ ಪೇಳೆಂದ (ಕುವ್ಮಾಆ. ೮-೫೧). [ಸಂ. ವಿನಿಯೋಗಿನ್]

ವಿನಿಯೋಗಿಸು (ಕ್ರಿ). ೧. ಬಳಸು ; ಉಪಯೋಗಿಸು : ಒಂದು ಭಾಗ ವೃಕೋದರಂಗುಳಿದೊಂದು ಭಾಗವ ತಾನು ನಾಲ್ವರು ನಂದನರು ವಿನಿಯೋಗಿಸು ವರವನೀಶ ಕೇಳೆಂದ (ಕುವ್ಮಾಆ. ೧೦-೪); ಈ ವೀರಶ್ರೇಣಿಯ ಒಕ್ಕಣೆಗೆ ಒಂದು ವೃತ್ತವನ್ನು ಮಾತ್ರ ಪಂಪನು ವಿನಿಯೋಗಿಸಿದ್ದಾನೆ (ಸಮಾಲೋ. ೯೬). ೨. ಕಳುಹಿಸು ; ಸಾಗಿಸು : ಬೀಗಿದವು ಕಾಲಾಳ ಕಬಳಿಸಿ ತೇಗಿದವು ಚತುರಂಗವನು ವಿನಿಯೋಗಿಸಿದವಂತಕನ ಮನೆಗಂಬುಗಳು ಗುರುಸುತನ (ಕುವ್ಮಾಶ. ೩-೧೬). [ವಿನಿಯೋಗ + - ಇಸು]

ವಿನಿರ್ಗತ (ಗು). ಹೊರಬಿದ್ದ ; ಆಚೆಗೆ ಹೊರಟ : ವಾಮನ ಜಯಾದಿತ್ಯ ಪ್ರಮುಖಮುಖಕಮಳವಿನಿರ್ಗತಸೂಕ್ತಿಮುಕ್ತಾವಲೀಮಣಿಕುಂಡಲಮಂಡಿತಕರ್ಣನಂ . . . ಕಂಡು (ಪಂಚತಂ. ೧೯೪-೪); ತುರಗಖುರಾಗ್ರಘಾತಕೃತಭೂತಳರಂಧ್ರವಿನಿರ್ಗತಾಹಿರಾಜರುಚಿರಶೀರ್ಷರತ್ನದೃಢದೀಜಕರಾಂಕುರ ತತ್ಪ್ರತಾಪವಲ್ಲರಿ ರವಿರೋಚಿಯೆಂಬ ವಿಷದಿಂದಶದಿಕ್ಕಿನೆ ಪರ್ಬಿ ಪೆತ್ತುದೋ ಖರಕರಪುಷ್ಪಮಂ ಕನಕಭೂಧ್ರಬೃಹತ್ಕರಮಂ ಮಹೀಶನಾ (ರಾಜಶೇ. ೫-೫). [ಸಂ.]

ವಿನಿರ್ದರ (ನಾ). ದೇವತೆ ; ಅಮರ : ದೆಸೆಯೊಳ್ ದಿಗ್ಗಜಬೃಂಹಿತಂ ಗಗನದೊಳ್ ಸೂರ್ಯಾಶ್ವಹೇಷಾರವಂ ವಸುಧಾಭೃತ್ಕುಳದೊಳ್ ವಿನಿರ್ದರರವಂ . . . ಮೆಯ್ವೆರ್ಚಲ್ಕೆ (ಪುಪ್ರಪು. ೮-೨೫). [ಸಂ.]

ವಿನಿರ್ಜಿತ (ಗು). ಸಂಪೂರ್ಣವಾಗಿ ಗೆಲ್ಲಲ್ಪಟ್ಟ : ವಿನಿರ್ಜಿತನಿರವಶೇಷನಿಳಿಂಪನಾಥ ವಿಭವನುಂ . . . ಜಿತಾಖಿಂಡಭೂಮಂಡಲನುಮಪ್ಪ ಸ್ತಿಮಿತಸಾಗರಮಹೀವಲ್ಲಭಂಗೆ ಅರಸಿಯರಾದರ್ (ಶಾಂತಿಪು. ೧-೭೧ ವ) ; ಮುರಮಥನ ಕೆಲ್ಲೈಸಿ ನೋಡಿದನುರು ಭಯಂಕರಚಕ್ರವನು . . . ಸಂಗರವಿನಿರ್ಜಿತಚಕ್ರವನು (ಕುವ್ಮಾಭೀ. ೬-೩೧). [ಸಂ.]

ವಿನಿರ್ಮಲತೆ (ನಾ). ಅತ್ಯಧಿಕವಾದ ಶುಭ್ರತೆ, - ಹೊಳಪು : ಪಳಿಕಿನ ಪಾಸಱೆಯ ವಿನಿರ್ಮಲ[ಪಾಶಾಂ.ಳ]ತೆಯಿನಾ ಗಿರಿಯ ಖಚರತತಿ ಕಾಣ್ಗುಮಿಳಾತಳಮಂ ತಳೆದಹಿಪನ ಮಣಿವಿಳಸಿತರುಚಿಮಿಸುರತ್ನಧಾಮಂಡಳಮಂ (ಶಬುಶಂ. ೨-೩೨). [ಸಂ. ವಿನಿರ್ಮಲತಾ]

ವಿನಿರ್ಮಿತ (ಗು). ೧. ರಚಿಸಿದ ; ಕಟ್ಟಿದ ; ನಿರ್ಮಾಣಮಾಡಿದ : ಪ್ರತ್ಯಹಮೊಪ್ಪುಗುಂ ವಿವಿಧರತ್ನವಿನಿರ್ಮಿತಕೂಟಕೋಟಿಮಚ್ಚೈತ್ಯಗೃಹಾವಹಂ (ಚಂದ್ರಪ್ರ. ೬-೫). (ನಾ). ೨. ರಚಿಸಲ್ಪಟ್ಟುದು ; ರಚಿತವಾದುದು : ನವನಲಿನಂ ಕವಿರಾಜಹಂಸವಿನಿರ್ಮಿತಂ (ಛಂದೋಂಬು. ೨-೧೫೭); ಈ ಮಹೀಪಾಲಕರು ಬಂದರು . . . ಆ ಮನೋಹರ ವಿಶ್ವಕರ್ಮ ವಿನಿರ್ಮಿತದ ಪುರಕೆ (ಕುವ್ಮಾಆ. ೧೮-೯). [ಸಂ.]

ವಿನಿರ್ಮಿಸು (ಕ್ರಿ). ರಚಿಸು ; ನಿರ್ಮಾಣಮಾಡು : ನೀಳ್ದರೆ ಭೂಮಿಭಾಗಮಂ ಪಸರಿಸದೀ ಬಲಪ್ರಕರಮಂ ಭರತೇಶ್ವರನೇಕೆಯೋ ವಿನಿರ್ಮಿಸಿದಂ (ಆದಿಪು. ೧೧-೬೫); ಕಾಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾದೇಯಮೆನಿಕ್ಕುಮೇ (ಪಂಚಮಾ. ೧-೩೭). [(ಸಂ. ವಿನಿರ್ಮಾಣ) + - ಇಸು]

ವಿನಿವರ್ತನ (ನಾ). ಹಿಂತಿರುಗುವಿಕೆ ; ಹೊರಟು ಹೋಗುವುದು : ಮುನಿ ವೃಷಭಂ ಭೂಪನ ಮನದೊಳ್ ಮೂಡದೆ ಪೊದಳ್ದ ವೈರಾಗ್ಯದ ಪೆಂಪನೆ ಪರಿಕಿಸಲೆಂದಾಗ್ರಹವಿನಿವರ್ತನಸೂಚಕೋಕ್ತಿಗಳನಿಂತೆಂದಂ (ಚಂದ್ರಪ್ರ. ೯-೬೯). [ಸಂ.]

ವಿನಿವರ್ತಿತ (ಗು). ೧. ಹಿಂದಕ್ಕೆ ತಿರುಗಿಸಿದ ; ಹಿಮ್ಮುಖವಾಗಿ ತಿರುಗಿಸಿದ. (ನಾ). ೨. [ನಾಟ್ಯ] ಒಂದು ಬಗೆಯ ನಾಟ್ಯಭಂಗಿ ; IP "ಮೊಟ್ಟಿತ ಸ್ಥಾನಕದಲ್ಲಿ ನಿಂತುಕೊಂಡು ಮುಖವನ್ನು ಹಿಂದಕ್ಕೆ ತಿರುಗಿಸುವುದು" (ಅಸ್ಕರಂ. ೬೨ ಗದ್ಯಾನುವಾದ): ಆಯತಂ ಭಾಮಿಸುವವಹಿತ್ಥಾಖ್ಯಮೊಪ್ಪುವಶ್ವಕ್ರಾಂತಂ ಗತಾಗತಂ ವಲಿತಂ ಮೊಟ್ಟಿತ ವಿನಿವರ್ತಿತವೇಳೆ ಸ್ತ್ರೀ ತಾಣಂಗಳ್ (ಅಸ್ಕರಂ. ೭-೪). [ಸಂ.]

ವಿನಿವೃತ್ತ (ಗು). ೧. ಹಿಂದಿರುಗಿದ ; ಮರಳಿದ. (ನಾ). ೨. ತೊರೆದವನು ; ಬಿಟ್ಟವನು : ಧನಧಾನ್ಯಾದಿ ಪರಿಗ್ರಹಮನಾವಗಂ ತೊಱೆದು ನೆಗಳ್ದುಪಾಸಕನೊಂಬತ್ತನೆಯ ಪರಿಮಿತಪರಿಗ್ರಹವಿನಿವೃತ್ತನುದಾತ್ತಧರ್ಮನಿರ್ಮಲ ಚಿತ್ತಂ (ಸುಕುಮಾ. ೭-೩೪). ೩. [ನಾಟ್ಯ] ಒಂದು ಬಗೆಯ ನಾಟ್ಯಭಂಗಿ ;

"ಮುಖವನ್ನು ಹೆಚ್ಚಾಗಿ ತಿರುಗಿಸುವುದು" (ಲಾಸ್ಯರಂ. ೨೮೨ ಗದ್ಯಾನುವಾದ) : ವ್ಯಾಭುಗ್ನಂ ಭುಗ್ನಮು ಮತಿಶಯದುದ್ಯಾಹಿತಾಖ್ಯ ವಿಧುತಂ ವಿವೃತಂ ನುತ ವಿನಿವೃತ್ತಮಿವಾಱುಂ ಮತದಿಂ ರಂಜಿಸುಗುಮಾಸ್ಯಮತಿವಿಸ್ತರದಿಂ (ಲಾಸ್ಯರಂ. ೩-೧೦೪). ೪. "ಒಂದು ಕಾಲಿನಿಂದ ಸೂಚೀಪಾದವನ್ನು ಮಾಡಿ ಇನ್ನೊಂದು ಕಾಲಿನ ಹಿಮ್ಮಡಿಯಲ್ಲಿ ಸ್ವಸ್ತಿಕ ದಂತಿರಿಸಿ, ಸೊಂಟವನ್ನು ಎರಡು ಪಾರ್ಶ್ವಗಳಲ್ಲೂ ಚಕ್ರದಂತೆ ಜಾಗ್ರತೆ ಸುತ್ತಿಸಿ ಬದ್ಧಚಾರಿಯನ್ನು ಮಾಡಿ ಕೈಗಳನ್ನು ರೇಚಿತ ಮಾಡಿ ಪ್ರಸರಿಸುವುದು" (ಲಾಸ್ಯರಂ. ೨೯೮ ಗದ್ಯಾನುವಾದ): ಪದಮೊಂದಂ ಸೂಚಿಯಾಸ್ಯಂಬಡೆ ದಿತರಪದೋತ್ಕೃಷ್ಟಿಯೊಳ್ ಸ್ವಸ್ತಿಕಂಬೆತ್ತೊಡವಿರ್ದುಂ ಚಕ್ರದೊಲ್ ಬೇಗದೆ ಕಟಿಗಳನಿಮ್ಮೆಯ್ಯೊಳಂ ಸುತ್ತಿಸುತ್ತಂ . . . ಹಸ್ತಂಗಳಂ ಬೇಗದೆ ರೇಚ್ಯಾಖ್ಯಾನದಿಂದಂ ಪಸರಿಸೆ ವಿನಿವೃತ್ತಾಖ್ಯದಿಂ ರಂಜಿಸಿರ್ಕುಂ (ಲಾಸ್ಯರಂ. ೪-೧೧೮). [ಸಂ.]

ವಿನಿವೃತ್ತಿ (ನಾ). ೧. ನಿಲುಗಡೆ ; ಮುಕ್ತಾಯ ; ಕೊನೆ. ೨. ಸಾವು ; ಮರಣ : "ಮೃತ್ಯು ಮರಣಂ . . . ವಿನಿವೃತ್ತಿಯೆನೆ ಸಾವಕ್ಕುಂ" (ಮಂಗರಾ. ೧೧೬-೩). [ಸಂ.]

ವಿನಿಶ್ಚಲ, ವಿನಿಶ್ಚಳ (ಗು). ೧. ಸ್ವಲ್ಪವೂ ಚಲಿಸದೆ ಇರುವ ; ಸ್ಥಿರವಾದ ; ಅಚಲವಾದ : ನರರನಾರಂ ಮುಟ್ಟಲೀಯನು ಶರಣರುಗಳಂಬರನಿಚಯಮಂ ಶರಣರಿಗೆ ಕೊಡುವಂ ವಿನಿಶ್ಚಲಭಕ್ತಿಯುಕ್ತಿಯಲಿ (ಬಸಪು. ೨೧-೩೪). ವಿನಿಶ್ಚಳ : ೧. ಪಿಟ್ಟನ್ನೆಯ ವಿನಿಶ್ಚಳವಿನಯಭಕ್ತಿಗೆ ಕೂರ್ತಲಾ ನಾಂ ಬಿಟ್ಟಗೆಯ್ದೆನು (ಬಸಪು. ೨೬-೫೫). (ನಾ). ೨. ಸ್ಥಿರತೆಯಿಂದ ಕೂಡಿದವನು ; ದೃಢ ಮನಸ್ಸಿನವನು : ಮಂದರಂ ತಾನೆಂಬಂತೆ ವಿನಿಶ್ಚಳಂ ತನು ಶರಚ್ಚಂದ್ರಾಂಶುವೋಲ್ ನಿರ್ಮಳಧ್ಯಾನಂ (ಮಲ್ಲಿಪು. ೧೩-೧೯೩). [ಸಂ.]

ವಿನಿಶ್ಚಳ 'ವಿನಿಶ್ಚಲ' ನೋ.

ವಿನಿಶ್ಚಳಂ (ಅ). ಸ್ಥಿರವಾಗಿ ; ಅಲುಗಾಡದೆ : ಮಹಾಸತಿ ನೀರಂ ಪುಗುವಂತೆ ಕರ್ಚಂ ಪುಗುವುದಂ ಜಳದೇವತೆ ಕೋಡುವ ತಿಳಿಗೊಳದೊಳಗಿರ್ಪಂತೆ ಶೀಲವತಿ ಸೀತೆ ವಿನಿಶ್ಚಳಮಿರೆ ಮನದೊಳ್ ಜಿನಪತಿ ಚಳಣಂ ದಳ್ಳುರಿಯ ನಡುವೆ ಕೋಡುತ್ತಿರ್ದಳ್ (ಪಂರಾಮಾ. ೧೭-೨೮). [< ವಿನಿಶ್ಚಲ]

ವಿನಿಶ್ಚಿತ (ಗು). ೧. ನಿರ್ಣಯಿಸಿದ ; ಗೊತ್ತುಮಾಡಿದ ; ನಿರ್ಧಾರವಾದ : ಜಿನಚರಣನಖಾದರ್ಶಂ ವಿನತಾಮರರಾಜರಾಜವದನಪ್ರತಿಮಂ ಮನದೊಳ್ ಸಲೆ ನಿಲ್ಕೆಂಬುದು ವಿನಿಶ್ಚಿತವಿಶೇಷಣೋರುರೂಪಕಮಕ್ಕುಂ (ಕವಿರಾ. ೩-೧೮). (ನಾ). ೨. ನಿರ್ಧಾರವಾದುದು ; ನಿರ್ಣಯಿಸಿದುದು : ನಿತ್ಯ ತಾನೆಲ್ಲರು ಅನಿತ್ಯರು ಸತ್ಯವೀ ಜನವಱಿಯಲೆನುತಂ ನಿತ್ಯನೈರ್ಮಲ್ಯಸ್ವರೂಪವಿನಿಶ್ಚಿತಂ ದೃಷ್ಟಪ್ರತ್ಯಯವಲಾ (ಬಸಪು. ೫೪-೫೯). [ಸಂ.]

ವಿನಿಷ್ಕ್ರಾಮ (ಗು). ಹೊರಕ್ಕೆ ಬರುತ್ತಿರುವ ; ಹೊರಡುತ್ತಿರುವ : ಸಾಮಾನಿಕ ಜನತತಿ ಚೇತೋವಮಂ ಪ್ರಾಸಾದಿಕಾಂತಾರಾಕ್ಷೇಪಕ ವಿನಿಷ್ಕ್ರಾಮಪ್ರವೇಶ ಗಾನರಸಾಮೃತಮೆಸೆಗುಂ ಧ್ರುವಪ್ರಯೋಗಾನುಗತಂ (ಅಜಿಪು. ೫-೧೦). [ಸಂ.]

ವಿನಿಷ್ಠಿತ (ಗು). ೧. ಚೆನ್ನಾಗಿ ಹೊಂದಿಕೊಂಡಿರುವ, —ಸೇರಿಕೊಂಡಿರುವ. (ನಾ). ೨. ಚೆನ್ನಾಗಿ ಹೊಂದಿಕೊಂಡಿರುವಂಥದು ; ಖಚಿತವಾದುದು : ತಟದ್ವಲಯವಿಲಸಿತಂಗಳಾಗಿ ನಿಜಪ್ರಕೋಷ್ಠವಿನಿಷ್ಠಿತಂ[ಪಾಠಾಂ. ನಿಷ್ಠಿತಂ]ಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ (ಆದಿಪು. ಬ. ೧೫-೩ ವ). [ಸಂ.]

ವಿನಿಹತ (ಗು). ಕಳೆದ ; ನಿವಾರಿಸಿದ : ದಿನಕರನುದಯಂಗೆಯ್ದಂ ವಿನಿಹತತಿಮಿರಂ ವಿಶಿಷ್ಟ ಸಂಧ್ಯಾಶ್ಲೇಷಂ (ಕವಿರಾ. ೨-೭೪) ; ವಿನಿಹತಕಲ್ಮಷಂ ಜಿನನನಂತಚತುಷ್ಟಯಧಾಗಿ ಭವ್ಯನಂದನಂ (ಶಾಂತಿಪು. ೬-೪೦). [ಸಂ.]

ವಿನಿಹಿತ (ಗು). ಇಟ್ಟ ; ಇರಿಸಿದ : ವಾಸಿಸಲೆಂದು ಚಕೋರವಿಲಾಸಿನಿ ಶಶಿಚಷಕದೊಳೆ ನವೋತ್ಪಲದಳಮಂ ಸೂಸಿದಳೊ ವಿನಿಹಿತಜ್ಯೋತ್ಸ್ನಾಸವದೊಳೆನಿಪ್ಪ ಲಕ್ಷ್ಮಿವೆತ್ತುದು ಲಕ್ಷ್ಮಂ (ಚಂದ್ರಪು. ೮-೩೭) ; ದಿನಮಣಿಮಣಿಶಾಣೋಪಲವಿನಿಹಿತ ಘೃಷ್ಟಾರ್ಕ ಕಿರಣಖರಖಡ್ಗಲತಾಜನಿತಸ್ಫುಲಿಂಗಸಂಘಮಿದೆನೆ ತದ್ವಿಸ್ಫುರಿತವಹ್ನಿಕಣತತಿಯೆಸೆಗುಂ (ರಾಜಶೇ. ೫-೩೫). [ಸಂ.]

ವಿನೀತ (ಗು). ೧. ಒಯ್ಯಲ್ಪಟ್ಟ ; ತೆಗದುಕೊಂಡು ಹೋದ. ೨. ಮಾಡಿದ ; ಪೂರೈಸಿದ ; ನೆರವೇರಿಸಿದ. ೩. ಚೆನ್ನಾಗಿ ಪಳಗಿದ ; ಸುಶಿಕ್ಷಿತವಾದ. ೪. ನಮ್ರವಾದ ; ಸೌಜನ್ಯದಿಂದ ಕೂಡಿದ : ವಿನೀತಜನಾಕೀರ್ಣಮಪ್ಪುದಱಿಂ ವಿನೀತೆಯುಂ ಭವಿಷ್ಯತ್ಕೌಶಲವಿಷಯಸಹಚರ್ಯದಿಂ ಸುಕೌಶಲೆಯುಮೆಂಬ ಪೆಸರ್ಗಳ ನಿಟ್ಟು (ಆದಿಪು. ೬-೧೦೭ ವ). ೫. ಶಿಷ್ಟತೆಯಿಂದ ಕೂಡಿದ ; ಸಂಭಾವಿತ. ೬. ಆತ್ಮ ಸಂಯಮವುಳ್ಳ ; ಮನೋನಿಗ್ರಹವುಳ್ಳ. ೭. (ನಮ್ರತೆಯಿಂದ) ಬಾಗಿದ ; ಬಗ್ಗಿದ : ಆ ಕನ್ನೆ ತನ್ಮುನೀಂದ್ರಪಾದಾರವಿಂದದ್ವಂದ್ವದೊಳ್ ನಿರ್ದ್ವಂದ್ವಭಾವದಿಂ ವಿನೀತೋತ್ತಮಾಂಗೆ ಕೆಲದೊಳ್ ಕುಳ್ಳಿರ್ಪುದುಂ (ಸುಕುಮಾ. ೭-೩೯ ವ). ೮. (ಉಡುಗೆ, ತೊಡುಗೆ ಮುಂತಾದ ವಿಷಯಗಳಲ್ಲಿ) ನಿರಾಡಂಬರವಾದ ; ಸರಳತೆಯಿಂದ ಕೂಡಿದ. ೯. ಸುಂದರವಾದ ; ಚೆನ್ನಾದ. (ನಾ). ೧೦. ಸೌಜನ್ಯದಿಂದ ಕೂಡಿದ ವ್ಯಕ್ತಿ ; ನಮ್ರನಾಗಿರುವವನು : ವಿನೀತಂ ವಿರಚಿತಾಂಜಲಿಪುಟಘಟಿತ ಕರನಿಂತೆಂದು ಬಿನ್ನಪಂಗೈದು (ಶಾಂತಿಪು. ೨-೧೯) ; ಚಂದ್ರಾಪೀಡನು ವಿನೀತನಾಗಿ ಆ ಬಳಿಗೆ ಬಂದು (ವಚಕಾ. ೧೧). ೧೧. ಆಜ್ಞೆಯನ್ನು ಪಾಲಿಸುವವನು ; ವಿಧೇಯ : ಹಾ ಚಕ್ರಿಗೆ ಕರಮೆ ವಿನೀ[ಪಾಠಾಂ. ನೂ]ತರಿರಾ (ಜೀವಸಂ. ೨೪-೪೬ ರಗಳೆ) ; ಇದಱಿಲಿ ವರವಿನೀತರು ಕೆಲರು ಕೆಲಬರು ಧೂರ್ತರಾಗಿಹರು (ಕುವಾದ್ಯೋ. ೧೩-೯). ೧೨. ಶಿಕ್ಷೆಗೆ ಒಳಪಟ್ಟವನು ; ತಿದ್ದಲ್ಪಟ್ಟವನು : "ನಿಭೃತಃ, ವಿನೀತಃ, ಪ್ರಶ್ರಿತಃ - ೩ ಶಿಕ್ಷಿಸಲ್ಪಟ್ಟವನ ಹೆಸರು" (ಸಿದ್ಧಾಂಶಿ. ೩೨೯). ೧೩. ಚೆನ್ನಾಗಿ ಪಳಗಿ ಸಾಧುವಾದ ಕುದುರೆ : "ವಿನೀತಃ, ಸಾಧುವಾಹಿನಃ - ಎಳೆಯಲಾಪುವ ಕುದುರೆಗಳಿಗೂ ಚೆನ್ನಾಗಿ ಹೊರಲುಳ್ಳ ಕುದುರೆಗಳಿಗೂ ಹೆಸರುಗಳು" (ಸಿದ್ಧಾಂಶಿ. ೨೪೯). [ಸಂ.]

ವಿನೀತಗುಣ (ನಾ). ೧. ಬಾಗಿ ನಡೆಯುವ ನಡತೆ ; ಸೌಜನ್ಯ. ೨. ನಮ್ರನಾದವನು ; ಸೌಜನ್ಯಶೀಲ : ಸಾಮಿ ಬಂದೊಡೆ ವಿನೀತಗುಣರ್ ಬೆಸಕೆಯ್ದ ದಿರ್ಕುಮೇ (ಪುಷ್ಪಪು. ೧೪-೨೪). [ಸಂ.]

ವಿನೀತಿ (ನಾ). ೧. ಒಳ್ಳೆಯ ನಡತೆ ; ಸದ್ಗುಣ : ಮಾಚಯ್ಯಂ . . . ಆದ್ಯರ ಸುಚಾರಿತ್ರಂಗಳಂ ತಿಳುಹಿ ಮುಂದೆ ಬುದ್ಧಿಗಳಂ ವಿನೀತಿಗಳಂ ದಯಾನ್ವಿತ ಶುದ್ಧಬೋಧೆಯನಂದದಿಂದೊರೆದು (ಬಸಪು. ೨೭-೭೬). ೨. ಗೌರವ ; ಆದರ : ಮಾತೆಯಾಗಿಯೆ ಸಾಗಿಸುವುದು ವಿನೀತಿಯಲಿ ಗುರುಭಕ್ತಿ ನಿಚ್ಚಭ್ರಾತನಾಗಿ ಸಹಾಯವಪ್ಪುದು ಕೂರ್ತು ಗುರುಭಕ್ತಿ (ಬಸಪು. ೩೯-೨೩). [ಸಂ.]

ವಿನೀತೆ (ನಾ). ಸೌಜನ್ಯದಿಂದ ಕೂಡಿದವಳು ; ನಮ್ರಳಾದವಳು : ಆ ಹುಡುಗಿ ಬಹಳ ವಿನೀತೆ (ರೂಢಿ). [ಸಂ. ವಿನೀತಾ]

ವಿನೀಲ, ವಿನೀಳ (ನಾ). ೧. ದಟ್ಟವಾದ ನೀಲವರ್ಣ ; ಕಡುನೀಲಿಬಣ್ಣ : 'ವಿನೀಲಚ್ಛಾಯ' ಪರಾ. ವಿನೀಳ : ೧. ಆಗಸಮಳಿನೀಳನೀಳಗಳಕಂಠತಮಾಳ ವಿನೀಳ ನೀರದಪ್ರಸರವಿಭಾಸಿಯಾದುದು . . . ಮೇಘಕಾಲದೊಳ್ (ಪಂಪಭಾ. ೭-೨೨) ; ಸುರಭಿಸಮೀರಣಂಬೆರಸು ಬೇಗದೆ ಬಂದಲರ್ಗಣ್ಣ ಸನ್ನೆಯಿಂ ಕರೆಯೆ ವಸಂತದೂತಿ ಸಹಕಾರನ ಕೈವಿಡಿದಿರ್ದ ಮಲ್ಲಿಕಾಪರವಧುವಂ ವಿನೀಳಪರಿಧಾನಮನಾಕೆ ಮಧುಪ್ರಸಂಗಕಾತರೆ ಮುಸುಕಿಟ್ಟವೊಲ್ಮುಸುಱೆ ಪೀರ್ದುವು ಸೌರಭಮಂ ಮದಾಳಿಗಳ್ (ಮಲ್ಲಿಪು. ೬-೪೧). ೨. ಕಡುನೀಲಿಯಾದುದು ; ದಟ್ಟವಾದ ನೀಲಿಬಣ್ಣ ವುಳ್ಳುದು : ತಳಿರ್ಗಳವೊಲ್ಮೆಲ್ಲಿದುವೀ ತಳಂಗಳಳಿಕುಳದವೊಲ್ವಿನೀಳಂಗಳ್ನಿನ್ನಳ ಕಾಳಿಗಳ್ (ಕವಿರಾ. ೩-೬೧). [ಸಂ.]

ವಿನೀಲಚ್ಛಾಯ (ನಾ). = ವಿನೀಲ ೧ : ಧವಳಜಳಧರಕುಳಾಕುಳಮವಿಕಳ ಮಂಬರತಳಂ ವಿನೀಲ[ಪಾಠಾಂ. ಳ]ಚ್ಛಾಯಂ ಕುವಳಯಕೀರ್ತಿಗೆ ಶಾರದಮವ ಧೀರಿತಮಾಯ್ತು (ಕವಿರಾ. ೨-೬೩). [ಸಂ.]

ವಿನೀಲತೆ (ನಾ).= ವಿನೀಲ ೨ : ಮೇಘವಿತಾನದೊಳ್ ವಿನೀಲ [ಪಾಠಾಂ. ಳ] ತೆ ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕುಂ (ಕಾವ್ಯಾದ. ೯೯೪). [ಸಂ. ವಿನೀಲತಾ]

ವಿನೀಳ 'ವಿನೀಲ' ನೋ.

ವಿನೀಳಗಳ (ನಾ). ೧. ಕಡುನೀಲಿಬಣ್ಣದ ಕೊರಳು, —ಕುತ್ತಿಗೆ. ೨. ಕಡುನೀಲಿ ಬಣ್ಣದ ಕುತ್ತಿಗೆಯುಳ್ಳುದು ; ನವಿಲು : "ಕೇಕಿ ವಿನೀಳಗಳಂ ಪ್ರಚಲಾಕಿ ಮಯೂರಂ ಕಳಾಪಿ ಶಿಖಿ ನವಿಲಕ್ಕು" (ವಸ್ತುಕೋ. ೪೨-೧೨). [ಸಂ. ವಿನೀಲಗಲ]

ವಿನುಕೆ 'ವಿನಿಕೆ' ನೋ.

ವಿನುತ (ಗು). ೧. ಹೊಗಳಿಕೆಗೆ ಪಾತ್ರವಾದ ; ಸ್ತುತ್ಯವಾದ ; ಶ್ಲಾಘ್ಯವಾದ : ವಿನುತ ರುಚಕಾದ್ರಿಯುತ್ತರವನದೊಳ್ ಸೊಗಯಿಸುವ ಕುಂದಳಸ್ಫಟಿಕಾರ್ಕಾಂಜನ ಕಾಂಚನರುಚಿರಸುದರ್ಶನರಜತಾಂಕಿತ ವಿಚಿತ್ರಕೂಟಾವಳಿಯೊಳ್ (ಶಾಂತಿಪು. ೯-೧೬೯) ; ನೆನೆಯೆ ಜಿನರಾಜ ನಿನ್ನಯ ವಿನುತಪದಗಳನಖೋತ್ಕರಂ ಪಿಂಗುಗುಂ (ವರ್ಧಮಾ. ೬-೧೩). ೨. ಹೆಸರುವಾಸಿಯಾದ ; ಪ್ರಸಿದ್ಧವಾದ ; ಶ್ರೇಷ್ಠವಾದ : ಆರೂಢವತ್ಸರಾಜನುದಾರಗುಣಂ ವಿನುತ ಕಂದುಕಾದಿತ್ಯಂ ಶ್ರೀನಾರೀಕಾನ್ತಂ ನಿರ್ಜ್ಜಿತವೈರಿವ್ರಜನೆನಿಸಿ ಪಟ್ಟುಗಂ ಸಲೆ ನೆಗಟ್ಟಂ (ಪಾರ್ಶ್ವ. XX, ೧೮-೧೨; 980); ಧರ್ಮಕಥನದಿಂದಂ ವಿನುತಸ್ವಾಧ್ಯಾಯಮೆಂಬ ತಪಮಂ ತಳೆದಂ (ಸುಕುಮಾ. ೪-೧೮). ೩. ಚೆಲುವಾದ ; ರಮ್ಯವಾದ ; ಅಂದವಾದ : ವಿನುತಸಮಗ್ರಮಂಡಲದ ಚಂದ್ರನ ಚಂದ್ರಿಕೆಯೊಲ್ ನರೇಂದ್ರಚಂದ್ರನ ರುಚಿರೋತ್ಕರಗ್ರಹಣಶೋಭಿತೆಯಂ ಸೊಸೆಯಂ ನಿರೀಕ್ಷಿಸಲ್ ಮನವೊಸೆದಿರ್ದೊಡೆ (ಕಾದಂಬ. ೪೯೨). (ನಾ). ೪. ಶ್ರೇಷ್ಠವಾದುದು : ವಿನುತಂ ಚಿತ್ರಂ ಸರಶ್ಮೀಸುದತಿ ಬೆಸಲೆಯಾದಂಗನಾನೀಕಮೋ ತಾನೆನೆ ಲಾವಣ್ಯಾಮೃತಂ ಮಿಕ್ಕೊಸರ್ವ ತೆಱದೆ ವಸ್ತ್ರಾಂತದಿಂ ಬಿಂದುಗಳ್ ತಳ್ಪಿನಿತಾನುಂ ಬೀಟೆ (ಕುಸುಮಾ. ೫-೧೫೮). ೫. ಶ್ರೇಷ್ಠನಾದವನು ; ಪ್ರಸಿದ್ಧವ್ಯಕ್ತಿ : ವಿನುತಂ ದೃಢರಥ'ನೆಂಬಂ ಘನದೋರ್ಬಳದ್ಭವ್ಯಂ (ನೇಮಿಪು. ೬-೧೦೬). ೬. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಒಂಬತ್ತನೆಯದಾದ ಬೃಹತಿ ಎಂಬ ಛಂದಸ್ಸಿನ ಒಂದು ವೃತ್ತ : ನನಯುಗಮಿರೆ ಪಾದಪಾಶನನಿದಿರಿರೆ ಬಂದು ಕೋಕನದನಯನೇ ನಾಕಿಯಿಂ ವಿನುತಮಿದುವೆ ನಾಮದಿಂ (ಛಂದೋಂಬು. ೨-೧೦೨). [ಸಂ.]

ವಿನುತಂಬೆಱು (ಕ್ರಿ). ಹೆಸರುವಾಸಿಯಾಗು ; ಪ್ರಸಿದ್ಧಿಯನ್ನು ಹೊಂದು : ವಿನುತಂಬೆತ್ತುದು ದೇವ ನಮ್ಮ ಪುರದ್ಕಂದ್ರೀಭಾಗದಿಂದೀರೆಂಟುಯೋಜನ ಮಾತ್ರಾವನಿಯೊಳ್ ಶಿವಂಕರವನಂ (ಕುಸುಮಾ. ೪-೮೮); ವಿನುತಂಬೆತ್ತೀ ಗಂಗಾವನಿತೆಯ ಕವುನೀಯವುಪ್ಪ ಕಟಿಸೂತ್ರಂ ತಾನೆನೆ ಕಣ್ಗೊಳಿಸಿತು ವುಣಿವುಯ ಕನಕವನವೇದಿಕಾವಿಳಾಸಂ (ಶಾಂತೀಶ್ವ. ೧೫-೯೬). [ವಿನುತ + ಪೆಱು]

ವಿನುತಪ್ರಾಸ (ನಾ). [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು ; IP ಅದ್ವಿತ್ವವಾದ ಪ್ರಾಸಾಕ್ಷರವು ಯಾವುದೊಂದು ನಿರ್ದಿಷ್ಟಸ್ವರದಿಂದ ಕೂಡಿ ಆಗಲಿ ಅಥವಾ ಆ ಸ್ವರ ಮತ್ತು ಅದರ ಸವರ್ಣದಿಂದ ಕೂಡಿ ಆಗಲಿ ಇದ್ದರೆ ವಿನುತಪ್ರಾಸ : ವಿನುತಪ್ರಾಸಂ ಶಾಂತೋಪನತಂ ವರ್ಗೋದಿತಂ ಸಮೋಪಗತಂ ಮತ್ತನುಗತವಂತಗತಂ ಸಂಜನಿತವಿಭೇದೋಕ್ತಿಯಿಂದಮಿಂತಾಱು ತೆಱಂ (ಕವಿಪ್ರಾ. ೨-೩೧). [ಸಂ.]

ವಿನುತಿಸು (ಕ್ರಿ). ಕೊಂಡಾಡು ; ಹೊಗಳು ; ಸ್ತುತಿಸು : ಬಗೆಗಳೊಳು ಕುಕವಿಗಳನನು ದಿನವೆಣಿಸದತಿವಿಮಳಮತಿಯಲಿ ವಿನುತಿಸುವೆ ನಾನೀ ಕಥಾವೃತ್ತಾಂತವ (ಬಸಪು. ೧-೩೭) ; ತನ್ನ ಗುರುವಂ ಕಂಡು ವಿನುತಿಸುತೆ ಸಾಷ್ಟಾಂಗದಿಂ ನಮಿಸಿ (ಪದ್ಮರಾ. ೨-೩೦).

[ವಿನುತ + - ಇಸು]

ವಿನುತ್ಯ (ನಾ). ಹೊಗಳಿಕೆಗೆ ಪಾತ್ರವಾದುದು ; ಶ್ಲಾಘನೀಯವಾದುದು : ಭುವನವಿನುತ್ಯಮಾಗೆ ಕವಿಕರ್ಣರಸಾಯನಮೆಂಬ ಕಬ್ಬಮಂ ಪ್ರವಿತತಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಪಡಕ್ಷರಾಹ್ಯಯಂ (ಶಬಶಂ. ೫-೬೩). [ಸಂ.]

ವಿನೂತ (ಗು). ೧. ಸ್ತುತ್ಯವಾದ ; ಶ್ಲಾಘ್ಯ ; ಕೊಂಡಾಡತಕ್ಕ : ಮುಳಿಸು ಲಲಾಟನೇತ್ರಶಿಖಿ ಮೆಚ್ಚೆ ವಿನೂತರಸಪ್ರಸಾದಮುಜ್ಜಳಜಸಮಂಗಸಂಗತ ಲಸದ್ಯಸಿತಂ (ಪಂಚಭಾ. ೧-೨) ; ರೀತಿವಿನೂತ ವಸ್ತು ಕೃತಿಗೊಪ್ಪುವ ಮೆಯ್ ರಸಭಾವವ್ಯಕ್ತಿ ನಿರ್ಣೀತಿಯ ಜೀವಂ (ಕಾವ್ಯಾವ. ೭೦೦). (ನಾ). ೨. ಹೊಗಳಿಕೆಗೆ ಪಾತ್ರನಾದವನು ; ಸ್ತುತ್ಯನಾದವನು : ವಿನೂತಂ ವಿನೇಯಾನೀಕಪ್ರವಿರಾಜಿತಂ ತ್ರಿಭುವನಾಧೀಶಂ ದಿನೇಶಂ ಸಮಾಧಾನಪ್ರಾಪ್ತಿಯನೀಗೆ ಭವ್ಯನಿಕರಕ್ಕೌಚಿತ್ಯಮಂ ಸ್ತುತ್ಯಮಂ (ಜೀವಸಂ. ೧-೧).

[< ಸಂ. ವಿನುತ]

ವಿನೂತನ (ಗು). ೧. ಹೊಸದಾದ ; ನವೀನ : ಅವರಾರೂ ವರ್ಚರ ಈ ವಿನೂತನ ಯೋಚನೆಯನ್ನು ವಿರೋಧಿಸಲಿಲ್ಲ (ಶಕ್ಷದ. ೭೦೯). ೨. ಸುಲಭವಾಗಿ ಕಾಣಲಾಗದ ; ಅಪೂರ್ವವಾದ : ತಾವು ಬರುವ ಕುಟುಂಬಗಳ ವಿನೂತನಸಂದರ್ಭಗಳು ಅಂಥ ಸಮಸ್ಯೆಗೆ ಕಾರಣವೆನಿಸುತ್ತವೆ (ಶಕ್ಷದ. ೩೧೦). (ನಾ). ೩. ಹೊಸದಾದುದು ; ಹೊಸದು : ಬಹುದಿನದ ಬಯಕೆ ಸಂದು, ಗರ್ಭಧರಿಸಿದ ಆಕೆಗೆ, ದಿನದಿನಕ್ಕೆ ತನ್ನ ದೇಹವೇ ವಿನೂತನವಾಗಿ ಕಾಣುವುದಿರಲಿ . . . ವಾಜಶ್ರವಸನೂ ಈಗ ಹೊಸಬನಂತೆ ಕಾಣಿಸಿದ (ಬತಂಬಾ. ೫೮). [ಸಂ.]

ವಿನೂತ್ನ (ಗು). ಅತಿನವೀನವಾದ ; ಹೊಚ್ಚಹೊಸದಾದ : ವಿನೂತ್ನ ಶ್ರೀ ಹ್ರೀ ಧೃತಿ ಕೀರ್ತಿಬುದ್ಧಿಲಕ್ಷ್ಮೀಪ್ರತಿತರ್ ದೇವಿಯರನಜುವರಂ ಬೆಸವೇಟ್ಟಂ (ಶಾಂತಿಪು. ೯-೧೬೪) ; ಪೊನ್ನೇಂ ಪೊಂದೇಡವೇಂ ಕಾಣಬಾರದ ವಿನೂತ್ನ ವಸ್ತ್ರೋತ್ಕರಂಗಳೇಂ! (ರಾಮಾಶ್ವ. ೧೬೫-೧೬೮). [ಸಂ.]

ವಿನೆಗಂ (ಅ). ೧. ಇಂದಿನವರೆಗೆ ; ಈತನಕ ; ಈ ಪರ್ಯಂತ : ಯೋ ಭಾವೋ ಭಾವಾಂತರಸ್ಯ ಜ್ಞಾಪಕೋ ಭವತಿ ತತ್ರ ವರ್ತಮಾನಾದ್ಭಾತೋಃ ವುದುಂ . . . ವಿನಂ, ವಿನೆಗಂ (ಶಬ್ದಾನು. ೫೦೮ ವೃತ್ತಿ). ೨. ಇರಲಾಗಿ ; ಇರುತ್ತಿರಲು : ವನ್ನಂ, ವನ್ನೆಗಂ ; ವಿನಂ, ವಿನೆಗಂ (ಶಬ್ದಾನು. ೧೯ ಪ್ರಯೋ). IP ಭವಿಷ್ಯತ್ಕಾಲದ 'ವ' ಪ್ರತ್ಯಯದೊಂದಿಗೆ 'ಇನಂ' 'ಇನೆಗಂ', ಮೊದಲಾದ ಕಾಲಾರ್ಥಕವಾದ ಅವ್ಯಯಗಳನ್ನು ಸೇರಿಸಿ ಈ ರೂಪಗಳನ್ನು ಗುರುತಿಸಲಾಗಿದೆ. 'ಇನ್ನೆಗಂ ' ಪರಾ. [?]

ವಿನೇಯ (ಗು). ೧. ಸೌಜನ್ಯದಿಂದ ಕೂಡಿದ ; ವಿನಯವುಳ್ಳ : ಇತ್ತ ವಿನೇಯ ನಿಕಾಯಾಂಬುಜಭಾನುವಪ್ಪ ಮೇಘರಥನರಮನೆಯಂ ಪೊಕ್ಕಿರ್ದು (ಶಾಂತಿಪು. ೯-೬೭ ವ) ; ಮತ್ಸ್ಯಕ್ಕನ ಜನ್ಮಾವಳಿಯಂ . . . ಉಸಿರ್ವುದು ವಿನೇಯಕುಮುದಪ್ರಮೋದಕರ ತುಹಿನಕರಾ (ಚಂದ್ರಪ್ರ. ೩-೮). ೨. ಮಾರ್ಗದರ್ಶನ ಮಾಡಲ್ಪಟ್ಟ ; ಮುನ್ನಡೆಸಲ್ಪಟ್ಟ. (ನಾ). ೩. ಒಳ್ಳೆಯ ಮನುಷ್ಯ ; ಶಿಷ್ಟ ; ಸಜ್ಜನ : ಪ್ರಾಣಿಹಿತಮಂ ವಿನೇಯಪ್ರೀಣನಕರಮಂ . . . ನೆಗಟ್ಟುಂದಿಪುರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ (ಆದಿಪು. ೧-೪೨) ; ವಿನೇಯಂ ಕಲ್ಯಾಣಮಿತ್ರನೆಂಬಂ ಪರದಂ (ಯಶೋಚ. ೪-೪೪). ೪. ವಿದ್ಯಾರ್ಥಿ ; ಶಿಷ್ಯ. ೬. ಜೈನಧರ್ಮಾನುಯಾಯಿ : ದುರಿತಘನತಿಮಿರ ದಶಶತಕಿರಣಮತಿಪ್ರೀತಿಕರಣಮಖಿಳವಿನೇಯೋದ್ಧರಣಮಮಗಭವ ಭವಭಯಹರಣಂ ಭವದೀಯಸಮವಸರಣಂ ಶರಣಂ (ಆದಿಪು. ೧೪-೩೮). [ಸಂ.]

ವಿನೇಯಜನ (ನಾ). ಜೈನಧರ್ಮದಲ್ಲಿ ಶ್ರದ್ಧೆಯುಳ್ಳ ಜನ : ವಿನೇಯಜನ ಸಂಘಾತಕ್ಕೆ ಮಾಣಿಕ್ಯದೇವಪದಾಂಭೋಜವರಪ್ರಸಾದಮೆ ಜಯಂ ಭದ್ರಂ ಶುಭಂ ಮಂಗಳಂ (ಆದಿಪು. ೧೬-೭) ; ಮುನಿಸಮುದಾಯಸಮೇತಂ ವಿನೇಯಜನವನದಿವಾಕರ ನಂತಾ ಮುನಿಪನುಪವಾಸಮಂ ಪರ್ವನಿಮಿತ್ತಂ ಕಳೆದು (ಯಶೋಚ. ೧-೪೬). [ಸಂ.]

ವಿನೇಯಾರ್ಥಿ (ನಾ). ಜೈನಧರ್ಮಾನುರಾಗಿಯಾದವನು ; ಜೈನಧರ್ಮದಲ್ಲಿ ಶ್ರದ್ಧೆಯಿರುವವನು : ಪೇಳ್ದೊಂ ಜಿನಂ ಕೇಳ್ದೊರಖಿಳವಿನೇಯಾರ್ಥಿಗಳ್ ತತ್ಕಥಾಸಂತಾನಂ ಧರ್ಮಶ್ರವಃಸುಂದರಂ (ಶಾಂತಿಪು. ೬-೫೯). [ಸಂ. ವಿನೇಯಾರ್ಥಿನ್]

ವಿನೋಕ್ತ್ಯಲಂಕಾರ (ನಾ). [ಕಾವ್ಯಮೀ] ಒಂದು ಬಗೆಯ ಅಲಂಕಾರ : ಒಂದು ಪದಾರ್ಥವಿಲ್ಲದಿರುವುದರಿಂದ ವರ್ಣ್ಯವು ಹೀನವಾಗಿರುವಂತೆ ವರ್ಣಿತವಾದರೂ ಅಥವಾ ರಮ್ಯವಾಗಿರುವಂತೆ ವರ್ಣಿತವಾದರೂ ವಿನೋಕ್ತ್ಯಲಂಕಾರವಾಗುವುದು (ಕೃಪಿ. ೩೭೪). [ಸಂ.]

ವಿನೋದ (ನಾ). ೧. ದೂರ ಮಾಡುವಿಕೆ ; ಅಟ್ಟುವಿಕೆ. ೨. (ಮನೋರಂಜನೆ ಅಥವಾ ವಿಶ್ರಾಂತಿಗಾಗಿ ವಿರ್ಪಡಿಸುವ) ಕ್ರೀಡೆ ; ವಿಹಾರ : ಅನೇಕ ಪ್ರಕಾರದ ಕಟಕದ ನಾಗರಿಕ ನರನಾರೀಜನಂಗಳಂಗಜರಾಗರಂಜಿತವಿನೋದಂಗಳೊಳಿರೆ (ಆದಿಪು. ೧೨-೪೫ ವ) ; ಭರದಿಂದಂಬರವೀಥಿಯೊಳ್ ನಿಜವಿನೋದಾಪಾದನೋದ್ಯೋಗದಿಂ ಬರುತುಂ (ಚಂದ್ರಪ್ರ. ೫-೪). ೩. ಹಾಸ್ಯ ; ತಮಾಷೆ ; ಚೇಷ್ಟೆ : ಕರಿ ವಿನೋದದಿ ಕುಡಿದ ಜಲವನು ಕರಣಿಯಲಿ ತೆಗೆತೆಗೆದು ರಿಪುಮೋಹರಕೆ ಚೆಲ್ಲಿತು ಕಲ್ಪಮೇಘದ ಬಸುಱ ಬಗಿದಂತೆ (ಕುವ್ಯಾದ್ರೋ. ೩-೪೦) ; ಠೂಟ ಮಾಡುವಾಗ ನಾಲ್ಕು ವಿನೋದದ ಮಾತುಗಳು ಇಲ್ಲದಿದ್ದರೆ, ಸ್ವಾರಸ್ಯವೇ ಇಲ್ಲ (ಆರ್ಯಕ. ೫೬). ೪. ಸಂತೋಷ ; ಹಿಗ್ಗು : ದ್ರುಪದನ ಪೊಟಲೊಳ್ ಪಾಂಡವರ್ ಚಾಗಕ್ಕೆ ಬೂತುಂ ಭೋಗಕ್ಕೆ ಪೊಬ್ಬುಂ ನೆಲೆಯದೆನಿಸಿ

ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ಪನ್ನೆಗಂ (ಪಂಪಭಾ. ೪-೧ ವ) ; ಅದಂ ವಿನೋದವಿಕಸಿತವಿಳೋಚನಂ ನೋಡುತ್ತುಮಿರೆ (ಚಂದ್ರಪ್ರ. ೨-೨೭ ವ). ೪. ಅತಿಯಾದ ಆಸಕ್ತಿ ; ಕುತೂಹಲ : "ಕೌತೂಹಳಂ, ವಿನೋದಃ, ಕೌತುಕಂ, ಕುತೂಹಳಂ — ಈ ೪ ವಿನೋದಂ" (ಹಲಾಯು. ೧೧೯-೩೫). ೫. ಒಂದು ಬಗೆಯ ಭವನ. ೬. [ಸಂಗೀತ] ರಾಸಕಗೀತದ ನ್ಹಾಲ್ಕುಪ್ರಕಾರಗಳಲ್ಲಿ ಒಂದು : ಆಲಾಪದ ಕೊನೆಯಲ್ಲಿ ಧ್ರುವಪದದಿಂದ, ಕೌತುಕ(ಭಾವ)ದಲ್ಲಿ ವಿನೋದವು (ಹಾಡುವಂತಹುದೆಂದು) ಸ್ಮೃತವಾಗಿದೆ (ಚತುಪ್ರ. ೭೬). [ಸಂ.]

ವಿನೋದಂಬೆಱು (ಕ್ರಿ). ಸಂತೋಷಿಸು ; ಆನಂದವನ್ನು ಪಡೆ ; ಹಿಗ್ಗು : ವನೇಜಾತಿನಿಯಂ ವಿಡಂಬಿಸಿ ವಿನೋದಂಬೆತ್ತು ಬಂದತ್ತು, ಸಬ್ಬವಕಾಱಂಗೆಣೆಯಾಗಿ . . . ಮಾರುತಂ (ಜಗವಿ. ೧೭-೧೧೦). [ವಿನೋದ + ಪೆಱು,]

ವಿನೋದಕ್ರೀಡೆ (ನಾ). ತಮಾಷೆಗಾಗಿ ಆಡುವ ಆಟ ; ಹುಡುಗಾಟ : ನಿಷ್ಕಾರುಣ್ಯ ಭೂಯಂತ್ರದ ವಿನೋದಕ್ರೀಡೆ ಕೃಷ್ಣನದು (ಕುವಾದ್ರೋ. ೮-೬೨). [ಸಂ. ವಿನೋದಕ್ರೀಡಾ]

ವಿನೋದಗಾತಿ (ನಾ). ಬೆಲ್ಲಾಟವಾಡುವವಳು ; ಹಾಸ್ಯಗಾತಿ : "ಲಲನಾ — ವಿನೋದಗಾತಿ" (ಸಿದ್ಧಾಂತಿ. ೧೬೭). [ವಿನೋದ + - ಕಾತಿ]

ವಿನೋದಗಾರ (ನಾ). ತಮಾಷೆ ಮಾಡುವ ಸ್ವಭಾವದವನು; ಹಾಸ್ಯಗಾರ: (೬). [ವಿನೋದ + - ಗಾರ (< - ಕಾಱ)]

ವಿನೋದನಿದ್ರೆ (ನಾ). ತಮಾಷೆಗಾಗಿ ಮಾಡಿದ ನಿದ್ದೆ ; ತೋರಿಕೆಯ ನಿದ್ರೆ : ತಿಳಿಯೆ ವಿನೋದನಿದ್ರೆ ಹರಿ ಮೆಲ್ಲನೆ ಮೆಯ್ಮುರಿವಂತೆಗೆಯ್ಯೆ (ಜಗವಿ. ೩-೧೦೦). [ಸಂ. ವಿನೋದನಿದ್ರಾ]

ವಿನೋದವನ (ನಾ). ವಿಹಾರಕ್ಕಾಗಿ ಏರ್ಪಡಿಸಿದ ತೋಟ ; ಕೇಳೀವನ : ನಿನ್ನ ಕೆಂಡಿರಿನ್ನಾರ್ಮಧುಮಾಸದೊಳ್ ನಿಜವಿನೋದವನಂಗಳ ಪಾದಪಂಗಳೊಳ್ ಪೆರ್ಮೊಲೆಯೊತ್ತಿನಿಂ ಕುರವಕಕ್ಕೆ ವಿಕಾಸಮನುಂಟುಮಾಟ್ಪರ್ (ಪಂಪಾಮಾ. ೧೪-೧೯೫). [ಸಂ.]

ವಿನೋದವೇದಿಕೆ (ನಾ). ಮನೋರಂಜನೆಯ ವೇದಿಕೆ, — ಜಗಲಿ : ಸೌಧತಳಂಗಳ ವಿನೋದವೇದಿಕೆಯ ಮತ್ತವಾರಣದ ಮಲಂಗಂ ಮಲಂಗಿ ಚದುರ ಚಾಗದ ದಗುಂತಿಯಂ ಮೆಱೆವ ವಿವಿಧ ವಿಟರೊಳಂ (ಪುಷ್ಪಕ ೨-೭೭ ವ). [ಸಂ. ವಿನೋದವೇದಿಕಾ]

ವಿನೋದಶೀಲ (ನಾ). ಸಂತೋಷದ ಸ್ವಭಾವದವನು : ಪರಮಾನುಭಾವನಭಿಮಾನ ವಿನೋದಶೀಲಂ (ಕವಿಕಾ. ೩-೨೨೮) ; ವಿಳಸುರಸೂದನನ ತೆಗೆದಪ್ಪ ನಗುತ ವಿನೋದಶೀಲನು ಮಗನ ನೋಡಿದ ಹಲವು ಕಣು ದಣಿಯೆ (ಕೌಬಾ. ೩೭-೨). [ಸಂ.]

ವಿನೋದಿ (ನಾ). ಆನಂದಪಡುವವನು ; ಸಂತೋಷಿಸುವವನು : ಅಸಹಾಯ ಸಾಹಸವಿನೋದಿ ವಿವಿಕ್ತಚಿತ್ರಪ್ರಸಹಪ್ರಕಾಶಿತಮಹೋದಯತತ್ತ್ವಸತ್ತ್ವಂ (ಕವಿಕಾ. ೩-೨೨೯) ; ದೈತ್ಯಧ್ವಾಂತಮಂ ಗೆಲ್ದ ಭೂಭಾರಚ್ಛೇದವಿನೋದಿ ಕೃಷ್ಣನೆಮಗೀಗಾ ನಂದಸಂದೋಹಮಂ (ಜಗವಿ. ೧-೧). [ಸಂ. ವಿನೋದಿನ್]

ವಿನೋದಿಸು (ಕ್ರಿ). ಹಿಗ್ಗು ; ಸಂತೋಷಪಡು : ಶಿವರಹಸ್ಯಾಗಮನಿಗಮ ದನುಭವಿಗಳೆನಿಸಿ ವಿನೋದಿಸುವರುಂ ಶಿವಗಣಾವಳಿಯಿಂತು ಸುಖಗೋಷ್ಠಿಯೊಳಿರಲು (ಬಸಪು. ೪-೯) ; ಸಕಲತತ್ತ್ವಂಗಳ ಸಕಲಬ್ರಹ್ಮಾಂಡಗಳ ಹುಟ್ಟಿಸಿ ತಮ್ಮಲ್ಲಿಯೇ ವಿನೋದಿಸುವರು (ಜ್ಯೋತಿಶಾಂ. ೬). [ವಿನೋದ + - ಇಸು]

ವಿನೋದ್ಯಮಾನೆ (ನಾ). ಸಂತೋಷಗೊಳಿಸಲ್ಪಟ್ಟವಳು : ಕನ್ಯಾಪರಿವಾರವಿಲಾಸ ವಿಲಾಸಿನೀವಿನೋದ್ಯಮಾನೆಯನಾಭರಣಪ್ರಭಾಪರಿಭೂತಪ್ರಭೂತದ್ಯೋತಿಃಪ್ರಭೆಯಂ ಜ್ಯೋತಿಃಪ್ರಭೆಯಂ ಪ್ರತೀಹಾರಂ ಮಗಧಾಧಿರಾಜಾಭಮುಖಂ ವಾಡಿ (ಶಾಂತಿಪು. ೫-೧೦೫ ವ). [ಸಂ. ವಿನೋದ್ಯಮಾನಾ]

ವಿನ್ನ (ಗು). ೧. ಗ್ರಹಿಸಿದ ; ತಿಳಿದ. ೨. ಪಡೆದ ; ಹೊಂದಿದ. ೩. ವಿಚಾರಿಸಲ್ಪಟ್ಟ. ೪. ಇಟ್ಟ ; ನೆಲೆಗೊಳಿಸಿದ. ೫. ಮದುವೆಯಾದ. (ನಾ). ೬. ಪಡೆದುದು ; ಹೊಂದಿದುದು : "ಲಬ್ಧಂ, ಪ್ರಾಪ್ತಂ, ವಿನ್ನಂ . . . ಭೂತಂ — ೬ ಹೊಂದಲ್ಪಟ್ಟಿರುವದು, ಪಡೆಯಲ್ಪಟ್ಟಿರುವುದು, ಆಗಿ ಬಂದಿರುವುದು" (ಸಿದ್ಧಾಂತಿ. ೬೫೧). ೭. ವಿಚಾರಿಸಿಕೊಂಡುದು : "ವಿನ್ನಃ, ವಿತ್ತಃ, ವಿಚಾರಿತಃ - ೩ ವಿಚಾರಿಸಲ್ಪಟ್ಟದ್ದು, ಪ್ರಸಿದ್ಧವಾಗಿ ಕೇಳಿ ತಿಳಿಕೊಳಲ್ಪಟ್ಟದ್ದು" (ಸಿದ್ಧಾಂತಿ. ೬೫೧). [ಸಂ.]

ವಿನ್ನಪ 'ಬಿನ್ನಪ' ನೋ.

ವಿನ್ನಪಂಗೆಯ್ 'ಬಿನ್ನಪಂಗೆಯ್' ನೋ.

ವಿನ್ನಪ್ಪ 'ಬಿನ್ನಪ' ನೋ.

ವಿನ್ನಪ್ಪಂಗೆಯ್ 'ಬಿನ್ನಪಂಗೆಯ್' ನೋ.

ವಿನ್ನಪ್ಪಂಕೆಯ್ಯು (ಕ್ರಿ). ಅರಿಕೆ ಮಾಡಿಸು ; ವಿಜ್ಞಾಪಿಸುವಂತೆ ಮಾಡು : ಗೋವಿನ್ದ ಮಾಧವರಸರಯ್ದು x ರಭಸುರಕಣ್ಣಿರಾಯಕೊಜ್ಜೆ x ವಿನ್ನಪ್ಪಂಕೆಯ್ಸು ಪ್ರಸಾದ xxx (ಎಕ. X (S), ಮುಳಿದಾ. ೧೩೬-೩ ; ೨೧ನೆಯ ಶತ). [ವಿನ್ನಪ್ಪ (< ಬಿನ್ನಪ) + ಕೆಯ್ಸು]

ವಿನ್ನಪ್ಪಂಗೆಯ್ 'ಬಿನ್ನಪಂಗೆಯ್' ನೋ.

ವಿನ್ನವೀ ? (ಕ್ರಿ). (?) : ಕುದುರೆಗಾಳಿಗದ ಬಿಂನಣದೊಳು(೦)ನ್ನತಿಕೆವಡೆದ ಸುಭಟ ಸವಾರಿಚೂಡಾರತ್ನ ಸಬಳತ್ರಿನೇತ್ರ ಬಿರುದಿನಣಕಕ್ಕೆ ಸೆಣಸಿ ಮುಚ್ಚರಿಪಂಗೆ ತ(೦)ನ್ನ ವಾರುವಮಂ ವಿ(೦)ನ್ನವಿತ್ತು ಮು(೦)ನ್ನ ಪಾರ್ವಿಸಿ ಮುರಾರಿಯೊಳು ದೆಖ್ಖಾದಪ್ಪಿಯೊಳು ಕಾದಿ ತಳ್ಕಳಿದು ಗೆಲ್ದು (ಕೀರ್ತಿ. IX-i, ೬೪೩-೨೧ ; 1226). [?]

ವಿನ್ನಾಣ 'ಬಿನ್ನಾಣ' ನೋ.

ವಿನ್ನಾಣೆ 'ಬಿನ್ನಾಣ್ಮೆ' ನೋ.

ವಿನ್ನು 'ಬಿಟ್ಟು' ನೋ.

ವಿನ್ಯಸ್ತ (ಗು). ೧. ಇಟ್ಟ ; ಇರಿಸಿದ : ಸ್ವಸ್ತಿಸಮಸ್ತನರೇಶ್ವರ ಮಸ್ತಕವಿನ್ಯಸ್ತಶಾಸನಂ . . . ಆದಿದೇವನಗ್ರತನೂದಂ (ಆದಿಪು. ೧೩-೬೨) ; ಶಸ್ತ ಶಿವದೀಕ್ಷಾರ್ಥಿಜನ ತನ್ಮಸ್ತಕಾ ಭಯವರದ ಕರುಣಾಹಸ್ತವಿನ್ಯಸ್ತಪ್ರಭಾವ ಶ್ರೀಗುರುವೆ ಜಯತು (ಬಸಪು. ೭-೪೯). ೨. ಕೆತ್ತಿದ ; ಕೊರೆದ : ಸುಯೋಧನೋರುಮಕುಟೋದ್ಘಟ್ಟ ಪ್ರೌಢಜ್ಞಾಕ್ಷರಾವಳಿ ವಿನ್ಯಸ್ತ ವಿಶಾಲನಿಶ್ಚಳಶಿಲಾಸ್ತಂಭಂ (ಗದಾಯು. ೧-೫೫). ೩. ಕೊಟ್ಟ ; ನೀಡಿದ. ೪. ಉಂಟಾದ ; ಒದಗಿದ : ಯುಧಿಷ್ಠಿರನುಣಲಿ ಧರೆಯನು ಗೋತ್ರವಧವಿನ್ಯಸ್ತ ಕಿಲ್ಬಿಷವ (ಕುವಾಗ. ೩-೧೯). (ನಾ). ೫. ಇಡಲ್ಪಟ್ಟುದು ; ನೆಲೆಗೊಂಡುದು : ಅವನ ಪದಾರ್ಥಸಾಮಗ್ರಿಯು ಒಳಗೊಳಗೇ ಮೆಲ್ಲಮೆಲ್ಲನೆ ನಾನಾಪದರಗಳಲ್ಲಿ ವಿನ್ಯಸ್ತವಾಗಿ ಅವನನ್ನು ಸುತ್ತಿಕೊಂಡು . . . ಆನಂದಪಡೆಯುವುದನ್ನು ನೋಡುವೆವು (ನಿಬಂಧ. II, ೨೯೦). [ಸಂ.]

ವಿನ್ಯಾಸ (ನಾ). ೧. ಇಡುವಿಕೆ ; ಇರಿಸುವುದು : ಆ ಸುದತಿಯ ಮುದುಪದವಿನ್ಯಾಸ ಮುಮಂ ಶೇಷನಾನಲಾಱದೆ ಸುಯ್ದುಂ (ಪಂಪಭಾ. ೧-೧೩೬). ೨. (ವಸ್ತು, ಪದಾರ್ಥ, ಧನ ಮುಂತಾದುವನ್ನು) ನ್ಯಾಸವಾಗಿ ಇಡುವುದು, —ಇರಿಸುವುದು. ೩. ಇಡುಗಂಟು ; ನ್ಯಾಸ. ೪. ರಚನಾಕ್ರಮ ; ಜೋಡಣೆ ; ರಚನೆ : ಮದೀಯ ವಾಗ್ವಿಭವವಿನ್ಯಾಸಂ ಬಲಂಬೆತ್ತುದು (ಆದಿಪು. ೧-೨೫) ; 'ಚಾವುಂಡರಾಯಪುರಾಣ'ವು ವಿಷಯ ಹಾಗೂ ವಿನ್ಯಾಸಗಳಲ್ಲಿ ಅಸ್ವತಂತ್ರವಾದರೂ ಹಳಗನ್ನಡ ಗದ್ಯಶೈಲಿಯಲ್ಲಿ ತನ್ನದೇ ಒಂದು ಮಾದರಿಯಾಗಿ ಮೆರೆದಿದೆ (ಕಸಾಚ. ೧೧೪). ೫. (ಕಟ್ಟಿಡದ ಆಕಾರ, ಅಳತೆ ಮುಂತಾದುವನ್ನು ತೋರಿಸುವ) ರೇಖಾಚಿತ್ರ ; ನಕ್ಷೆ : ಮುಖ್ಯಸೂತ್ರಧಾರನು ದೇವಾಲಯದ ವಿನ್ಯಾಸವನ್ನು ಬರೆದು ಪ್ರತಿಯೊಂದು ಭಾಗದ ಅಳತೆಯನ್ನೂ ನಿರ್ಧರಿಸಿದ ಮೇಲೆ ತಮ್ಮ ಚಿಹ್ನೆಗಳನ್ನು ಹಾಕುತ್ತಿದ್ದರು (ಹೊಯ್ಸವಾ. ೧೪). ೬. ವ್ಯವಸ್ಥೆ ; ಏರ್ಪಾಟು : ವಿಧಿಯ ವಿನ್ಯಾಸಮಂ ನಿಂದಿಸಿದೊಡೇಂ ಫಳಂ (ಶ್ರೀರಾಮಾ. ೩೧೩-೩೨೬). ೭. ಆಂಗಿಕಚಲನೆ ; ಅಂಗಾಭಿನಯ : ಅನಿಮೇಷಾಧಿಪತಿ ಸಹಸ್ರನೇತ್ರನಾಗಳ್ ಸಹಸ್ರಕರನಾದಂ ನರ್ತನದೊಳ್ ಸಹಸ್ರಪದನಾದನೆನೆ ವಿರಾಜಿಸಿತು ಹಸ್ತಪದವಿನ್ಯಾಸಂ (ಅಜಪು. ೫-೧೯). ೮. ವಿಧಾನ ; ರೀತಿ ; ಬಗೆ : ಆ ಸೂಸೆಯ ಸಂಗಾತ ಕುಂತಿ ವಿಲಾಸದಲಿ ಕುಳ್ಳಿರ್ದಳಾ ವಿನ್ಯಾಸವನು ಜನ ನೋಡುತಿರ್ದುದು ಬಿಗಿದ ಬೆಡಗಿನಲಿ (ಕುವಾಅ. ೧೭-೨೯) ; ಹೀಗೆ ಮಾನವರ ಎದೆಗಳಲ್ಲಿ ಪ್ರೀತಿಯಾಗಿ ಮೈದೋರಿ ಬಾಳನ್ನು ಬೆಳಗುವ ಈ ಶಕ್ತಿ ಚಿರಂತನವಾದ ದೈವೀಪ್ರೇಮದ ಒಂದು ವಿನ್ಯಾಸ ಮಾತ್ರ (ಸೌಂದಸ. ೩೫೭). ೯. ಪ್ರದರ್ಶನ ; ತೋರಿಕೆ. ೧೦. ಗುಂಪು ; ರಾಶಿ ; ಸಮೂಹ. ೧೧. [ಸಂಗೀತ] ಸ್ವರಪ್ರಭೇದಗಳಲ್ಲಿ ಒಂದು ಬಗೆ : ಒಂದೊಂದು ರಾಗಕ್ಕೂ

ಹಾಡಲು ಪ್ರಾರಂಭಿಸಬೇಕಾದ ಸ್ವರ (ಗ್ರಹ) . . . ಅಲ್ಲಲ್ಲಿ ನಿಲ್ಲಲು ಉಪಯುಕ್ತಸ್ವರಗಳು (ನ್ಯಾಸ, ಅಪನ್ಯಾಸ, ವಿನ್ಯಾಸ) . . . ನಿಯಮ, ಕ್ರಮಗಳು ನಿಷ್ಕರ್ಷಿಸಲ್ಪಟ್ಟವು (ಭಾರದ. ೫೪೧). ೧೨. [ಕಾವ್ಯಮೀ] ಉಪರೂಪಕಗಳಲ್ಲಿ ಒಂದಾದ ಭಾಣಿಕೆ ಎಂಬುದರ ಏಳು ಬಗೆಯ ಅಂಗಗಳಲ್ಲಿ ಒಂದು : ಭಾಣಿಕಾ — ಇದರಲ್ಲಿಯೂ ಒಂದೇ ಅಂಕ ; ನೇಪಥ್ಯ ಸೂಕ್ಷ್ಮ . . . ಉಪನ್ಯಾಸ, ವಿನ್ಯಾಸ, ವಿಬೋಧ, ಸಾಧ್ವಸ, ಸಮರ್ಪಣ, ನಿವೃತ್ತಿ, ಸಂಹಾರ ಎಂಬ ಏಳು ಅಂಗಗಳು (ಸಂನಾಟ. ೩೬.) [ಸಂ.]

ವಿನ್ಯಾಸಿಸು (ಕ್ರಿ). ರಚಿಸು ; ಸೃಷ್ಟಿಸು : ಈ ಸರಣಿವಿಡಿದಜ್ಞಜನರಾಯಾಸಮಂ ಕಡೆಗೊಳಿಸುವಡೆ ವಿನ್ಯಾಸಿಸುವೆ ಕೇಳ್ಮನದೊಳಸರದೊರತೆ ಬರದಂತೆ (ಗಗಶಾ. ೧೩-೧೨).

[ವಿನ್ಯಾಸ + - ಇಸ್ತು]

ವಿಪ (ನಾ). ಹಕ್ಕಿಗಳ ಒಡೆಯ ; ಗರುಡ : ಅತ್ಯದ್ಭುತಮಹಿಮಾತಿಶಯನ ಕೃಷ್ಣ ಸತ್ಕೇಶ ಭವ ವಿಪಾಹಿಪರಿಂ ನುತನು (ಪ್ರಭಾ. ೩೭-೧೫). [ಸಂ.]

ವಿಪಂಚಿ (ನಾ). ೧. ಒಂದು ಬಗೆಯ ವೀಣೆ : ಭರತರಾಜಂ . . . ವಿಪಂಚೀಮಂದ್ರತಾರಮಧುರಮೂರ್ಛನಾಸನಾಥಪ್ರಯೋಗಂಗಳುಮಂ . . . ಆಲಿಸಿ (ಆದಿಪು. ೧೧-೭೨ ವ) ; ಇಂಚರದಿಂದ ವಿಪಂಚಿಯ ಗೆಲ್ವಳಾ ಪಂಚಶರನ ಪಟ್ಟದಾನೆ (ನಾಗಕು. ೨-೯೧). ೨. ಆಟ ; ವಿಹಾರ ; ಕ್ರೀಡೆ. ೩. ಮನೆಯ ಮುಂದಿರುವ ಕಟ್ಟೆ ; ಜಗುಲಿ : "ವಿಪಂಚೀ - ವೀಣೆಯುಂ, ಗೃಹಬಹಿರ್ವೇದಿಯುಂ" (ಕಾಶಕೃ. ೨೬೭). ೪. ಆವಾಸ ; ನೆಲೆ ; ಆಗರ : ಪುರುಡಿನ ಗರುಡಿ ಸೊರ್ಕಿನೆರ್ಕೆ ಮುಳಿಸಿನ ಬೆಳಸುವೆಜಗಿನ ವಿಪಂಚಿ ಪದಪಿನ ಪಂಜರಂ ಬಲ್‌ಚದುರ ಚಾವಡಿ . . . ಎನಿಪುದಂಗಜನ ಘಾರಾಘಾರಿ ರಾಜಿಸುವ ಸೂಳೆಗೇರಿ (ಪದ್ಮರಾ. ೮-೬೬). [ಸಂ. ವಿಪಂಚೀ]

ವಿಪಂಚಿಕೆ (ನಾ). ೧. = ವಿಪಂಚಿ ೧ : ವಿಪಂಚಿಕೆ ಚಿತ್ರಿಕೆ . . . ರುದ್ರವೀಣೆಯೆಂಬ ಇಪ್ಪತ್ತೆರಡು ತೆಱದ ತಂತ್ರೀವಾದ್ಯಕ್ರಮವೆಂಬುದು (ವಿವೇಕ. ೧೯೦). ೨. ಟೀಕೆ ; ವ್ಯಾಖ್ಯಾನ : ಆ ಮದನಂ ರತಿಶಾಸ್ತ್ರವಿಪಂಚಿಕೆಯಂ ಚದುರಿಂ ಬರೆದೋಲೆಯ ಚಂಡಳಿಕೆಯೊಂ ಎನೆ ಸಸಿ ಸೊಗಯಿಸಿತು (ಜಯಕಾ. ೧೪-೮). [ಸಂ. ವಿಪಂಚಿಕಾ]

ವಿಪಂಚೀಗುಣತತ್ತ್ವಜ್ಞ (ನಾ). ವೀಣಾವಾದನದಲ್ಲಿ ಪಾರಂಗತನಾದವನು : ವಿಪಂಚೀಗುಣತತ್ತ್ವಜ್ಞರುಂ ವಾದ್ಯವಿದ್ಯಾವಿಶಾರದರುಮಪ್ಪವನ ಶಿಷ್ಯರಾಗಳ್ ಸೂಟಱಿತು ಪಾಡಲ್ ತೊಡಂಗಿದರ್ (ಅದ್ಭುತ. ೧೯-೧೨). [ಸಂ.]

ವಿಪಕ್ವ (ಗು). ೧. ಹದವಾಗಿ ಬೇಯಿಸಿದ. ೨. ಚೆನ್ನಾಗಿ ಮಾಗಿದ : ಸುಕೃತಮಹೀರುಹವಿಪಕ್ವಫಲಭುಕ್ತಿಗಿಂತು ನೋಂತರುಮೊಳರೇ (ಶಾಂತಿಪು. ೪-೭೫). (ನಾ). ೩. ಹದವಾಗಿ ಬೇಯಿಸಿದುದು : "ಶೃತಂ ವಿಪಕ್ವಂ" (ವಸ್ತುಕೋ. ೯೨-೨). [ಸಂ.]

ವಿಪಕ್ಷ (ಗು). ೧. ಎದುರುಪಕ್ಷಕ್ಕೆ ಸೇರಿದ ; ವಿರೋಧಿಯಾದ : ಉದಾರವೀರ ಚರಿತನಿರತಕದನಕರ್ಕಶಕ್ಷತ್ರಿಯಂಗೆ ವಿಪಕ್ಷಕ್ಷತ್ರಿಯಪರಾಕ್ರಮಾಕರ್ಣನೋದೀರ್ಣ ಕ್ರೋಧದೊಳಳೀಕಭ್ರುಕುಟಿಯುಂ . . . ತಕ್ಕುದಲ್ತು (ಆದಿಪು. ೧೪-೮೧ ವ) ; ತನ್ನಂಬು ಸಂಹಾರಂ ಮಾಡೆ ವಿಪಕ್ಷಸೈನಿಕಮನಂಭೋಜಾಕ್ಷನೇಸಾದಿದಂ (ಪಂರಾಮಾ. ೯-೬೮). (ನಾ). ೨. ವಿರುದ್ಧವಾದ ಗುಣ : ಉಪಶಮಮುಂ ತೀವ್ರತೆಯುಂ ವಿಪಕ್ಷಮಿತರೇತರೋಕ್ತಿ ಯಿಂದವನಾ ಭೂಮಿಪನಾಂತು ಮಧ್ಯಮಂ ಲೋಕಪಾಲನಾದಂ ಗಡಂ ಮಹೀಮಂಡಳದೊಳ್ (ಶಾಂತಿಪು. ೮-೧೨೪). ೩. ವೈರ ; ಶತ್ರುತ್ವ : ಬನದ ಪಕ್ಷಿಗಳ ವಿಪಕ್ಷಂ ನನಯಲಾಗದು (ಬಸವಪು. ೪೫-೪೪). ೪. ವಿರೋಧಿ ; ಶತ್ರು : ನಿಮಿಷದಲಿ ಕಂದೆಱೆದನಂತಃಶ್ರಮದ ಝಳವಡಗಿತು ವಿಪಕ್ಷಭ್ರಮಣಚೇತೋಭಾವ ಭವನದ ಮುಖವಿಕಾಸದಲಿ (ಕುಮಾಗ. ೭-೧೪); ತರಕ್ಷುರಾಕ್ಷಸವಿಪಕ್ಷವಳಕ್ಷಸರಕ್ಷದೇಹ (ರಾಜಶೇ. ೧-೧೦). ೫. ಹಗೆಗಳ ಪಕ್ಷ ; ಎದುರುಪಕ್ಷ ; ಪ್ರತಿಪಕ್ಷ : ಕಡಿದು ವಿಪಕ್ಷಮನಿಂದ್ರಂ ಕಡಿವಂತೆ ಕುಲಾದ್ರಿಪಕ್ಷಮಂ ತೋಳ್ವಲಮಂ ಪಡೆದಂ ಪರಪ್ರತಾಪಂ (ಪಂರಾಮಾ. ೧-೧೩೮) ; ಪಕ್ಷ ವಿಪಕ್ಷವೆಂದು ಪರಿಭಾವಿಸದೇತೆಱದಿಂ ಪರೋಪಕಾರಕ್ಷಮರಾಗಿ ಪುಟ್ಟಿದವರುಳ್ಳೊಡೆ . . . ವಂದಿಸಿ ಬಣ್ಣಿಸುವೆಂ (ನಳಚಂ. ೫). ೬. ರೆಪ್ಪೆ ತೆರೆದಿರುವಿಕೆ. ೫,೬: ಜನಪ ಕೇಳುಪಲಾಲಿತಾಂಜನವೆನೆ ಜಿತಾಕ್ಷ ವಿಪಕ್ಷವಾದವು . . . ವರ ಪಾಂಚಾಲನಂದನೆಯ (ಕುಮಾಅ. ೧೩-೨೦). ೭. ಪ್ರತಿಪಕ್ಷಕ್ಕೆ ಸೇರಿದವನು ; ಪ್ರತಿವಾದಿ. ೮. ಪಕ್ಷಪಾತವಿಲ್ಲದಿರುವಿಕೆ ; ತಾಟಸ್ಥ್ಯ. ೯. ಚಾಂದ್ರಮಾನದ ತಿಂಗಳಿನಲ್ಲಿ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಬದಲಾದ ದಿನ.

[ಸಂ.]

ವಿಪಕ್ಷತ್ವ (ನಾ). ೧. ಎದುರು ಪಕ್ಷದಲ್ಲಿರುವಿಕೆ ; ಶತ್ರುತ್ವ. ೨. ರೆಕ್ಕೆಗಳಿಲ್ಲದಿರುವಿಕೆ. ೧,೨ : ನೆಗೞ್ದುದ್ದಂಡತೆ ಕಂಟಕಸ್ಥಿತಿಸರೋಜವ್ರಾತದೊಳ್ ರಾಜಲೀಲೆ ಗುರುಸ್ಫೂರ್ತಿ ನಭೋಗ್ರದೊಳ್ ಚಪಲತಾಸಂಗಂ ವಿಪಕ್ಷತ್ವ [ಪಾಶಾಂ. ವಿಪತ್ಪಕ್ಷ] ಮದ್ರಿಗಳೊಳ್ . . . ಒಪ್ಪುಗುಮರ್ವೀಶರೊಳೊಪ್ಪದೆಂದನಿಸಿದಂ ತನ್ನೇಟ್ಗೆಯಿಂ ಪದ್ಮಜಂ (ಪುಪ್ಪಪು. ೫-೫೬). [ಸಂ. (ವಿ + ಪಕ್ಷತ್ವ ; ವಿಪಕ್ಷ + ತ್ವ)]

ವಿಪಕ್ಷಪಾತ (ನಾ). ಶತ್ರುಗಳ ನಾಶ ; ವೈರಿಗಳ ಧ್ವಂಸ : ಆಳು ಹಿರಿದಿದ್ದೇನು ಫಲ ಹೀಹಾಳಿದ್ದೆವಕೆ ಬೇಱೆ ಪರಿಯ ವಿತಾಳವಿಲ್ಲ ವಿಪಕ್ಷಪಾತದೊಳೆಂದನಂಧನೃಪ (ಕುಮಾಕ. ೧೫-೭). [ಸಂ.]

ವಿಪಕ್ಷಿ (ನಾ). ೧. ಎದುರಾಳಿ ; ಹಗೆ ; ಶತ್ರು : ಅಕ್ಷದ್ಯೂತದಿನೆನ್ನ ವಿಪಕ್ಷಿಗೆ ಸೋಲ್ತಂ ಮದೀಯರಾಜ್ಯವಂ (ನಳಚಂ. ೭೫೩). ೨. ವಿಶೇಷ ಬಗೆಯ ಪಕ್ಷಿ, — ಹಕ್ಕಿ : ಹಂಸ ಚಕ್ರವಾಕ ಬಳಾಕ ವಿಪಕ್ಷಿಗಣಂಗಳ್ ನೀರೊಳಗಾಡುತ್ತುಂ ಮುಱುಗುತ್ತುಂ (ವಡ್ಡಾರಾ. ೫೪-೨೧). [ಸಂ. ವಿಪಕ್ಷಿನ್]

ವಿಪಣ (ನಾ). ೧. (ವಸ್ತುಗಳ) ಮಾರಾಟ ; ವಿಕ್ರಯ ; ಬಿಕರಿ : "ವಿಪಣಃ, ವಿಕ್ರಯಃ - ೨ ಮಾರುವವರ ಹೆಸರುಗಳು" (ಸಿದ್ಧಾಂತಿ. ೨೯೮). ೨. ಅಂಗಡಿ ಬೀದಿ ; ಮಾರುಕಟ್ಟೆ. [ಸಂ.]

ವಿಪಣಿ (ನಾ). ೧. ವಸ್ತುಗಳನ್ನು ಮಾರುವ ಸ್ಥಳ ; ಅಂಗಡಿ ; ಮಳಿಗೆ : ಪೂಜ್ಯವಣಿಗ್ವರರಿಂ ನಿರಂತರಂ ನಿಯತದೊಳೊಪ್ಪುಗುಂ ವಿಪಣಿವಿಶ್ರುತಸುಂದರ ವೀಥಿವೀಥಿಯೊಳ್ (ನಳಚಂ. ೬೩೫). ೨. ಅಂಗಡಿಗಳಿರುವ ಬೀದಿ ; ಮಾರುಕಟ್ಟೆ : ಪಣಗಣದಿನಣಿಯರಮವಂ ನಗುತೆ ಪರದರೊಪ್ಪಿದರಾ ವಿಪಣಿಯೊಳುದ್ಧತತೇಜದಿಂ (ಪದ್ಮರಾ. ೮-೭೭). ೩. ಮಾರಾಟ ಮಾಡುವ ಸರಕು, — ವಸ್ತು. ೪. ವ್ಯಾಪಾರ ; ವ್ಯವಹಾರ. [ಸಂ.]

ವಿಪಣಿಕ (ನಾ). ವ್ಯಾಪಾರ ಮಾಡುವವನು ; ವರ್ತಕ : "ಬಣಂಜಿಸುವವಂ ವಿಪಣಿಕಂ ನೈಗಮಂ ವಣಿಜನಕ್ಕು" (ಮಂಗರಾ. ೧೦೨-೧). [ಸಂ.]

ವಿಪಣಿಪದ (ನಾ). ಅಂಗಡಿಗಳಿರುವ ಬೀದಿ ; ಮಾರುಕಟ್ಟೆ ; ಪೇಟೆಬೀದಿ : ಜಳಧಿಯನಗಸ್ತ್ಯನೀಂಟಲ್ ತೊಳಗಿದಪುವು ತಳದೊಳಖಿಳನಾನಾರತ್ನಂಗಳೆನಲ್ಕೆ ಸಕಲರತ್ನಂಗಳ ಪಸರದಿನೆಸೆದುವಲ್ಲಿ ವಿಪಣಿಪದಂಗಳ್ (ಕಾದಂಪೂ. ೨೯೩).

[< ಸಂ. ವಿಪಣಿಪಥ]

ವಿಪಣಿಮಾರ್ಗ (ನಾ). = ವಿಪಣಿಪದ : ಆ ವಿಲಾಸಿನೀನಿವಾಸಕ್ಕೆ ಆಸನ್ನಮೆನಿಪ ವಿಪಣಿಮಾರ್ಗದೊಳ್ . . . ನನೆಯಂಬುಗಳ್ಗೆಬೆರಲೆತ್ತುವರಲ್ಲಿಯ ಮಾಲೆಗಾರ್ತಿಯರ್ (ಮಲ್ಲಿಪು. ೨-೫೮) ; ಪುರದ ಸಿರಿಯನವಲೋಕಿಸುತ್ತುಂ ವಿಪಣಿಮಾರ್ಗಂಬಿಡಿದು ನಡೆತಂದು . . . ಬಿಸರುಹಾಕ್ಷಂ ನವರತ್ನಖಚಿತಸಿಂಹಾಸನದೊಳ್ ಸುಖಾಸೀನನಾಗಿ (ಜಗಿವಿ. ೧೬-೮೮ ವ). [ಸಂ.]

ವಿಪತಾಕ (ನಾ). ೧. ಗರುಡಲಾಂಛನವುಳ್ಳ ಧ್ವಜ. ೨. ಗರುಡಲಾಂಛನವುಳ್ಳ ಧ್ವಜವನ್ನು ಹೊಂದಿರುವವನು ; ವಿಷ್ಣು : ಅಮದಂ ಪಿತಾಮಹಂ ವೀತಮಲಂ ಮದನಾರಿ ಮೂಕನಾ ವಿಪತಾಕಂ . . . ದಾಮನಂದಿ ಮುನಿಸನ್ನಿಧಿಯೊಳ್ (ಎಕ. VII(R), ನಾಗಮಂ. ೧೧೮-೪೮ ; 1177). [ಸಂ. ವಿಪತಾಕಾ]

ವಿಪತ್ಕಾಲ (ನಾ). ಕಷ್ಟದ ಸಮಯ ; ಆಪತ್ಕಾಲ : ವಿಪತ್ಕಾಲದಲ್ಲಿ ಆದವನೇ ನಂಟ (ರೂಢಿ). [ಸಂ.]

ವಿಪತ್ತಿ (ನಾ). ೧. ಕೇಡು ; ಕಷ್ಟ ; ಆಪತ್ತು : ಬಗೆಯದೊಳಕೆಯ್ದುದೆನ್ನಯ ಪಗೆಯಂ ಸಂಪತ್ತಿಯಂ ನಿರಂತರಮೆಂಬುಬ್ಬೆಗದಿಂ ವಿಪತ್ತಿ ನೋಡದು ನಗರ ವಣಿಗ್ವಾಟಕೋಟಿಯಂ ಮಱೆದೆಂದುಂ (ಚಂದ್ರಪು. ೧-೧೨೮) ; ಘನಪರಿಭವವಹುದು ತಪ್ಪದು ವಿಪತ್ತಿ (ತಿಮ್ಮಶಾಂ. ೪-೨೫). ೨. ಸಾವು; ಮರಣ : ಖರನ ವಿಪತ್ತಿಯೊಳ್ ವಿಕಲನಾದನೆ (ಪಂರಾಮಾ. ೯-೧೫೬). ೩. ನಿಲುಗಡೆ ; ಕೊನೆ ; ಮುಕ್ತಾಯ. ೪. ದುರ್ದೈವ ; ದುರಾದೃಷ್ಟ. [ಸಂ.]

ವಿಪತ್ತು (ನಾ). = ವಿಪತ್ತಿ ೧ : ಪಾಂಡುಸುತರಿಗೆ ಬಹ ವಿಪತ್ತುಗಳೊಳಗಿದೊಂದೇ ಕಳಶವಾದುದಲ (ಕುವ್ಯಾಕ. ೩-೨೭) ; ಜೀವನದಲ್ಲಿ ಈವೊಳಗಾಗಿ ಅನೇಕ ಸಂಕಟ ಮತ್ತು ವಿಪತ್ತುಗಳನ್ನು ಕಂಡುಕೊಂಡಿದ್ದೇನೆ (ಹೇಮಂತ. ೨೭೧) ; ವಿಪತ್ತು ಬಂದರೂ ಆಪತ್ತು ಬಿಡಲಿಲ್ಲ (ಗಾದೆ). [< ಸಂ. ವಿಪದ್]

ವಿಪಥ (ನಾ). ತಪ್ಪುಹಾದಿ ; ಅಡ್ಡದಾರಿ : "ವ್ಯಧ್ವಃ, ದುರಧ್ವಃ, ವಿಪಥಃ, ಕದಧ್ವಾನ್, ಕಾಪಥಃ — ೫ ಕೆಟ್ಟದಾರಿ, ಕೀಳುಹಾದಿ" (ಸಿದ್ಧಾಂತಶಿ. ೯೭). [ಸಂ.]

ವಿಪದಕಂಪಿತ (ಗು). ಕಷ್ಟಕ್ಕೆ ನಡುಗದ ; ಆಪತ್ತಿಗೆ ಕದಲದ ,—ಚಲಿಸದ : ವಿಪದಕಂಪಿತ ಪರಮವಿಜ್ಞಾನೈಕಬುದ್ಧಿಯಲಹವು ಸಿದ್ಧಿಗಳು (ತಿಮ್ಮಶಾಂ. ೬-೪). [ಸಂ.]

ವಿಪದೆ (ನಾ). ದುರ್ದೈವ ; ದುರಾದೃಷ್ಟ : ಸ್ವಪದದಲಿ ಮಗನನ್ನು ಸ್ಥಾಪಿಸಿ ವಿಪದೆಗಂಜದೆ ಮುನಿಗಳಂತೆಯೆ ಸಪದಿ ವನವಾಸಕ್ಕೆ ಹೊರಡಲು (ರಘುವಂ. ೭೮-೧೧). [ಸಂ. ವಿಪದಾ]

ವಿಪದ್ವಿದ್ರಾವಣ (ನಾ). ಕಷ್ಟಗಳನ್ನು ನಾಶಮಾಡುವವನು ; ತೊಂದರೆಗಳನ್ನು ನಿವಾರಿಸುವವನು : ಕರಂ ಪೆಂಪುವೆತ್ತನುದಾತ್ತಸ್ಥಿತಿಯಿಂ ಸುಹೃಜ್ಜನವಿಪದ್ವಿದ್ರಾವಣಂ ದೇವಣಂ (ಎಕ. VII(R), ನಾಗಮಂ. ೬೪-೫೯ ; 1145). [ಸಂ.]

ವಿಪನ್ನ (ಗು). ೧. ಅಡ್ಡಮಾರ್ಗ ಹಿಡಿದ ; ತಪ್ಪುದಾರಿಗೆ ಹೋದ. ೨. ಕಷ್ಟಕ್ಕೆ ಗುರಿಯಾದ ; ಆಪತ್ತಿಗೊಳಗಾದ ; ತೊಂದರೆಗೆ ಸಿಲುಕಿದ : ಅದ್ಭಢಾಗಾರ ವಿಪನ್ನಖಿನ್ನಗೃಹಿಣೀನಿಶ್ವಾಸದಿಂ ಕೂಡೆ ತೂಜಿದುವಾವಾಸಪರಿಕ್ರಿಯಾಕುಲವಧೂ ವಕ್ಷೋಜದೊಳ್ ಬಿಟ್ಟು ಸೇರಿದುವು . . . ವಾರ್ದಿಂದುಗಳ್ (ಚಂದ್ರಪ್ರ. ೪-೪೦). ೩. ದುರ್ಬಲಗೊಂಡ ; ಕುಗ್ಗಿದ ; ಸೋತ. ೪. ನಾಶವಾದ ; ಅಳಿದ. ೫. ಸತ್ತ ; ಗತಿಸಿದ : ಕೊಳುಗುಳವನ್ನೋಡಲ್ ಚಕ್ರಪಾಣಿಯುಂ ತನ್ನ ಸಹೋತ್ಪನ್ನರುಮೊಡವರೆ ಬಂದು ವಿಪನ್ನೋಗ್ರಾರಾತಿವರ್ಗವಾಹವಧರೆಯಂ ಎಯ್ದಿ (ಪಂಪಭಾ. ೧೪-೨). ೬. ಕೆಳಕ್ಕೆ ಬಿದ್ದ ; ಚ್ಯುತವಾದ. (ನಾ). ೭. ಹಾವು ; ಸರ್ಪ. ೮. ದುರ್ಗತಿಯಲ್ಲಿರುವವನು ; ದುರ್ದೆಸೆಯಲ್ಲಿರುವವನು : ಮುನ್ನ ನಾರಾಯಣಿಯೆನಿಪುದೀ ಕನ್ನಿಕೆಯ ಪೆಸರೊಬ್ಬ ಗುಣಸಂಪನ್ನ ಮುನಿಪನ ವಧು . . . ತನ್ನ ಪತಿ ಪರದೈವವೆಂದು ವಿಪನ್ನನನು ಕೊಂಡಾಡುತಿರ್ದಳು (ಕುವ್ಯಾಅ. ೧೬-೪೩). [ಸಂ.]

ವಿಪನ್ನತೆ (ನಾ). ೧. ಕಷ್ಟ ; ತೊಂದರೆ ; ತೊಡಕು : ರನ್ನದ ಮಟೆಯಿಂದಿಳೆಯ ವಿಪನ್ನತೆ ಗರ್ಭಾವತಾರದಿಂದಱುದಿಂಗಳ್ ಮುನ್ನಮೆನೆ ಪೋಯ್ತು (ಚಂದ್ರಪ್ರ. ೧೧-೧೨೦). ೨. ಇಲ್ಲದಿರುವ ಸ್ಥಿತಿ ; ಶೂನ್ಯತೆ : ಇನ್ನೆವರಂ ಸುತಜನ್ಮವಿಪನ್ನತೆ ಭವದೀಯ ಸತಿಯೊಳಾಯ್ತುದಯಿಸಿದಪ್ಪಂ ನಿಜಕುಲದೀಪಕಂ (ಚಂದ್ರಪ್ರ. ೩-೭೯). [ಸಂ. ವಿಪನ್ನತಾ]

ವಿಪನ್ನಿಪೀಡಿತೆ (ನಾ). ಆಪತ್ತಿನ ಹಿಡಿತಕ್ಕೆ ಒಳಗಾದವಳು ; ಕಷ್ಟಕ್ಕೆ ಗುರಿಯಾದವಳು : ಸಾಮ್ರಾಜ್ಯಲೀಲಾಸಮೇತೆಯಾಗಿಯುಂ ವಿಪನ್ನಿಪೀಡಿತೆಯಂತೆಯುಂ . . . ಇರ್ಪಿನೆಗಂ (ಚಂದ್ರಪ್ರ. ೩-೫೦ ವ). [ಸಂ. ವಿಪನ್ನಿಪೀಡಿತಾ]

ವಿಪರಿಪರಿಧಾನ (ಗು). ಸುತ್ತಲೂ ಆವರಿಸಿದ, — ಬಳಸಿದ : ಶಿವಶಿವಾ ಪವಡಿಸಿತೆ ಚತುರರ್ಣವವಿಪರಿಪರಿಧಾನ ಪೃಥ್ವೀಧವನ ಬಾಳಿಕೆ ನೀರೊಳು (ಕುವ್ಯಾಗ. ೪-೮). [ಸಂ.]

ವಿಪರೀತ (ಗು). ೧. ಅಡ್ಡದಾರಿಗೆ ತಿರುಗಿದ ; ತಪ್ಪುಹಾದಿಗೆ ಹೊರಳಿದ. ೨. ವಿರುದ್ಧವಾದ ; ವ್ಯತಿರಿಕ್ತವಾದ : ನಿಗಮಸಂಸ್ಥಿತವಾಸ್ತು ರಚನಾದಿಗಳ ನಾಯವ್ಯಯ ತಾರಾದಿಗಳ ರಾಶಿಗ್ರಹಬಲದ ವಿಪರೀತಯೋಗದಲಿ . . . ಕೇಡಿಗನು ಕೃತ್ರಿಮರಚನೆಯಲಿ ಮಾಡಿಸಿದನರಮನೆಯ (ಕುವ್ಯಾಅ. ೮-೬೮). ೩. ತಿರುವು ಮುರುವಾದ ; ಹಿಂದುಮುಂದಾದ. ೪. ಅತ್ಯಧಿಕವಾದ : ಬೀರಕ್ಕನು ದಂದರಹಾಳಿ. ವಿಪರೀತ ವೆಚ್ಚವನ್ನು ಮಾಡತಕ್ಕವಳು (ನೀತಿಶಾಂ. ix, ೩೨) ; ಬೆಸಾಯದ ಭೂಮಿಯ ಮೇಲೂ ನೀರು ನುಗ್ಗಿ ಪ್ರವಾಹದಿಂದ ವಿಪರೀತ ನಷ್ಟ ಸಂಭವಿಸುತ್ತದೆ (ಸನದಿ. ೨೪). ೫. ವಿಲಕ್ಷಣವಾದ ; ಅಸ್ವಾಭಾವಿಕವಾದ : ಭವಹರಂ ತಾಂ ತಮ್ಮಡಿಗೆ ತೋಱುವೆನೆನುತ ತತ್ಕ್ಷಣದೊಳಗೆ ನೋಡುವಡೆ ವಿಪರೀತ ತ್ರಿಣೇತ್ರಂ ಭರಿತವಾಗಿರ್ದ ಒಂದು ಮುಖಮಂ ಧರಿಸಿ (ಬಸಪು. ೧೮-೪೫). (ನಾ). ೬. ವಿರುದ್ಧವಾದುದು ; ವ್ಯತಿರಿಕ್ತವಾದುದು : ಪೃಥಕ್ಕನೆಂಬೊಂ ವಕ್ತ್ರರಾಗದ್ವೇಷ ವಶಗತನಾ ಧರ್ಮಾರ್ಥವ್ಯಾಖ್ಯಾನಮಂ ವಿಪರೀತಮಾಗಿ ಪೇಳೆಯುಮದಂ ಯಥಾವಸ್ಥಿತಧರ್ಮ ಸ್ವರೂಪಮಂ ಕೈಕೊಳ್ಳೊಂ (ಚಾವುಂಪು. ೭) ; ಚರದೊಳ್ ಕೂಡಿರೆ ಚಂದ್ರನರ್ಥಚಯಮಂ ಮಿತ್ರತ್ವಮುಂ ನಿಲ್ಲದಸ್ಥಿರನಕ್ಕುಂ . . . ತದ್ವಿಪರೀತಮಪ್ಪ ಗುಣಮಂ ಕೆಯ್ಕೊಳ್ಗುಂ (ಜಾತಕ. ೧೪-೮). ೭. ಹಿಂದುಮುಂದಾಗಿರುವ ಸ್ಥಿತಿ ; ತಿರುವು ಮುರುವು : "ವಿಪರೀತಂ, ಪರಾಚೀನಂ — ಈ ೨ ಹಿಂದುಮುಂದಾಗುಹ" (ಹಲಾಯು. ೧೨೫-೭೨). ೮. ವಿರೋಧಿ ; ವೈರಿ : ಕಲಿಗೆ ವಿಪರೀತಂಗಹಿತರ್ಕಳ್ ಕೆಟ್ಟರ್ ಮೇಣ್ ಸತ್ತರ ವಿಚಾರಂ (ಇಅ. X, ೬೧-೧೦ ; ಸು. 700). ೧೦. ಆಧಿಕ್ಯ ; ಹೆಚ್ಚು : ವಿಪರೀತಮಾದ ಮೃಗಕುಲದುಪದ್ರವಂ ನಿಮಗೆ ದಂಡಪಾಶಾದಿಗಳಿಂದಪಹರಿಸುಗುಂ (ಪಂರಾಮಾ. ೧-೭೨) ; ಈ ಪರತಂತ್ರಜೀವಿಗಳ ಹಾವಳಿ ಆಫ್ರಿಕಾಖಂಡದಲ್ಲಿ ವಿಪರೀತ (ಪರಜೀ. ೨೫). ೧೧. ಅಸಾಧಾರಣವಾದುದು : ವಿಪರೀತದ ಪುಣ್ಣಿನಿದಂ ಕೃಪೆಯಿಂ ಸಾರಿರ್ದ ವೈಶ್ಯವಂಶಲಲಾಮಂ ಸುಪರೀಕ್ಷೆಯುಳ್ಳ ವೈದ್ಯರಿನವಹರಿಸಿದಂ (ಧರ್ಮಾಮೃ. ೧೨-೫೬) ; ವಿಪರೀತಮವನ ಚರಿತಂ ತಪಮಧಿಕಂ (ಶಬಶಂ. ೨-೧೦೯). ೧೨. ಅಸ್ವಾಭಾವಿಕವಾದುದು ; ವಿಲಕ್ಷಣವಾದುದು : ಪುರದ ತಿರುವೀಧಿಯೊಳೇನಂ, ಬಿನ್ನವಿಪೆನ ದೊಂದಾಶ್ಚರ್ಯವದೊಂದು ಕೌತುಕವದೊಂದು ವಿಪರೀತಂ ಚಿತ್ತೈಸು (ನಂಬಿರ. ೨-೩೯) ; ಇಂತಹುದುಂಟೆ ವಿಪರೀತ ಎಂದುಮಱಿಯವು ಕೇಳ್ದು (ಬಸಪು. ೩೯-೪೦). ೧೩. ತಪ್ಪಾದುದು ; ತಪ್ಪು : ವಾಚಕನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು ಬಾಚಿಸಿದನ್ (ವಡ್ಡಾರಾ. ೭೫-೧೭). ೧೪. ಸುಳ್ಳು ; ಅಸತ್ಯ. ೧೫. ಪಕ್ಷಿಗಳಿಂದ ವ್ಯಾಪ್ತವಾದುದು. ೧೬. ವಿರುದ್ಧವಾದ ವರ್ತನೆ. ೧೫, ೧೬ : ವಿಪರೀತನಲ್ಲದ ಕುಜನ್ಮನಲ್ಲದ ಕಲ್ಪವೃಕ್ಷವೆಂಬುದು . . . ಧರೆ ದುಮ್ಮನ ನಾಗದೇವನಂ (ಎಕ. V, ಅರಸೀ. ೨೮-? ; 1171). ೧೭. [ಕಾವ್ಯಮೀ] ಅರ್ಥಾಂತರ ನ್ಯಾಸಾಲಂಕಾರದ ಎಂಟು ಭೇದಗಳಲ್ಲಿ ಒಂದು ; ಅಸಂಬದ್ಧ ಅಥವಾ ಅಸ್ವಾಭಾವಿಕ ಗುಣದ ಕಲ್ಪನೆ : ಪರಿತಾಪಮನೆನಗೆ ನಿಶಾಕರನಾಗಿಸುಗುಂ ವಸಂತಸಮಯಾನುಗತಂ ಸುರಭಿಸಮಯೋದಿತಹಿಮಕರನಬಲಂ ಪಡೆವನೆಂಬುದಿದು ವಿಪರೀತಂ (ಕವಿಗಾ. ೩-೩೬). [ಸಂ.]

ವಿಪರೀತಕ (ಗು). ೧. ವಿರುದ್ಧವಾದ ; ವ್ಯತಿರಿಕ್ತವಾದ. (ನಾ). ೨. ವಿರೋಧಿ ; ಎದುರಾಳಿ. ೩. ಹಕ್ಕಿಗಳಿಂದ ಸುತ್ತವರಿಯಲ್ಪಟ್ಟುದು. ೨, ೩ : ವಿಪುಳತರ ಕಟಕನುದ್ಯದ್ ದ್ವಿಪಹ[ರಿ]ಮಹಿಷೀನಿಷೇವ್ಯನುನ್ನತಪಾದಂ ವ್ಯಪನೀತಶ್ರೀಫಲದಂ ವಿಪರೀತಕನಪ್ಪನಂತು ಭೂಭೃನ್ನಾಥಂ (ಕವಿಗಾ. ೩-೧೧೦). [ಸಂ.]

ವಿಪರೀತಕಲ್ಪನ (ನಾ). [ಕಾವ್ಯಮೀ] ಅಸಂಬದ್ಧವಾದ ಕಲ್ಪನೆಯಿಂದ ಕೂಡಿದ ಪದದ ದೋಷ : ಅಸಮರ್ಥಮಪ್ರತೀತಂ ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀರಸಮೆಂದು ದೋಷಮಿವು ಸಮನಿಸುಗುಂ ಪದದೊಳ್ (ಕಾವ್ಯಾದ. ೪೩೫). [ಸಂ.]

ವಿಪರೀತಕಲ್ಪನೆ (ನಾ). = ವಿಪರೀತಕಲ್ಪನ : ಅಸದರ್ಥಂ ವಿಪರೀತಕಲ್ಪನೆ ಯಭವ್ಯಂ ದುಷ್ಕರಂ . . . ಅನೋಜೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಧಂದೋಂಬು. ಪರಿ. ೧೦೦-೧) [ಸಂ. ವಿಪರೀತಕೆಲ್ಪನ]

ವಿಪರೀತಗತಿ (ನಾ). ೧. ಕೆಟ್ಟಗತಿ ; ದುರ್ಗತಿ : ನಿನ್ನನೀ ರಥದಿಂದ ನಿಪತನಂಗೈಯ್ದೊಡೆ ತನಗೆ ಪರಲೋಕದೊಳ್ಪಿವರೀತಗತಿಯಾಗದಿರ್ಪುದೆ ಪೇಳ್ (ಕೃಷ್ಣಭಾ. ೧೪-೧೩). ೨. ವಿಚಿತ್ರವಾದ ಸ್ವಭಾವ ,—ವರ್ತನೆ : ಅಳುವವರ ನಗಿಸುವುದು ನಗುವರನಳಿಸುವುದು ಗೆಲಿದವರ ಸೋಲಿಸಿ ಗೆಲಿಸುವುದು ಸೋತವರನೀ ವಿಪರೀತಗತಿ ವಿಧಿಗೆ (ಕುವ್ಯಾಕ. ೧೨-೩). ೩. ಅಪಾಯಕಾರಿಯಾದ ರೀತಿ : ಎರಡು ಜಾತ್ಯಶ್ವದ ಮಱಿಗಳಂ ಕೊಂಡು ಒಂದಂ ರಾಜವಾಹನಮಾಗೆ ಸಮೆದುಮೊಂದಂ ವಿಪರೀತಗತಿಯೊಳ್ ಸಮೆದುಂ ವರಾಂಗನ ಪೆರ್ಗಡೆಯೊಳ್ ಸಮಕಟ್ಟಿದೊಡೆ (ಜೀವಸಂ. ೫೩-೮). [ಸಂ.]

ವಿಪರೀತಚರಿತ (ನಾ). ಅಸಾಧಾರಣವಾದ ಆಚಾರವುಳ್ಳವನು : ಅಘಟಿತಘಟಿತರು ವಿಪರೀತಚರಿತರು ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣರಣ್ಣಾ (ಬಸವ. ೧೮೭). [ಸಂ.]

ವಿಪರೀತಚಿತ್ತ (ನಾ). ವ್ಯತಿರಿಕ್ತವಾದ ಮನಸ್ಸುಳ್ಳವನು : ದಶಾನನುಮವರ

ಬವರಮಂ ನೋಡಲೆಂದು ಬರುತ್ತುಂ ನಿಮ್ಮಂ ಕಂಡು ವಿಪರೀತಚಿತ್ರನಾಗಿ ಕೈದುಗೆಯ್ಯದೆ ಕೃತವದಿಂ ರಘುವೀರನನಗಲ್ದಿ ನಿಮ್ಮನುಯ್ಯುದುಂ (ಪಂರಾಮಾ. ೧೧-೧೦೦ ಪ). [ಸಂ.]

ವಿಪರೀತತೆ (ನಾ). ೧. ವಿಲಕ್ಷಣತೆ : ಕತೆಯೊಳಗಲ್ತೆಯದೆ ವಿಪರೀತತೆಯಿಂದುಂ ಪೇಳ್ದ ಕೃತಿಗಳರ್ಕೆ ಪುರಾಣಸ್ಥಿತಿಯೊಳೆ ಕವಿರತ್ನನಿನನ್ನಿತಮಾದುದು ಸಗರಚಕ್ರವರ್ತಿಯ ಚರಿತಂ (ಆದಿಪು. ೧೨-೨೮). ೨. ವ್ಯತ್ಯಾಸ ; ಭಿನ್ನತೆ : ತನಗೆ ಮತ್ತು ತನ್ನಂಥ ಇತರರಿಗೆ ಅಂಥ ಪರಿಸ್ಥಿತಿವಿಪರೀತತೆ ಏಕೆ ಕಾಣಿಸಿಕೊಳ್ಳಲಿಲ್ಲ (ಪುನರು. ೨೬೪). ೩. ವಿರೋಧ ; ವೈರ ; ದ್ವೇಷ : ಅದಿಕವಿ ಪಂಪನೆಂದನುವಾದಿಸೆEಸಿತೆವಾದಿಸಿ ವಿರೋಧಿ ವಿಪರೀತತೆಯಿಂದೋದೆ ವಿಲೋಮದೆ ಪೆಸರಂ ಮೇದಿನಿಯೊಳವನ ಪೆಸರೆ ಪೆಸರ್ವಡೆ ದೆಸೆಗುಂ (ಧರ್ಮನಾ. ೧-೩೬). ೪. ಹಕ್ಕಿಗಳಿಂದ ಬಳಸಲ್ಪಡುವಿಕೆ ; ಪಕ್ಷಿಸಮೂಹದಿಂದ ಸುತ್ತುಗಟ್ಟಲ್ಪಡುವಿಕೆ. ೫,೪ : ವಿಪರೀತತೆ ವನದೊಳ್ ಪರಿಪೊಡಂ ತಾಂ ರಾಜಬಾಧೆ ತಾವರೆಗೊಳದೊಳ್ ಚಪಳತೆ ಲಲನಾ ನಯನಸಮುಪಚಯದೊಳ ಮಲ್ಲದಂತದಿಲ್ಲಾ ನಾಡೊಳ್ (ಚಾಧಪು. ೪-೨೨). [ಸಂ. ವಿಪರೀತತಾ]

ವಿಪರೀತಾರ್ಥ (ನಾ). ಬೇರೆಯಾದ ಅರ್ಥ ; ವಿರುದ್ಧವಾದ ಅರ್ಥ : ಶ್ರುತಿಗ ವ್ಯಾಖ್ಯಾನಮಂ ಮಾಲ್ಪಲ್ಲಿ ವಿಪರೀತಾರ್ಥಮನಾತನೊಲ್ದೆಸಗಲ್ (ದಿವ್ಯಚ. ೧೦-೧೦).

[ಸಂ.]

ವಿಪರ್ಯಯ (ಗು). ೧. ತಲೆಗೆಳಗಾದ ; ಬುಡಮೇಲಾದ. ೨. ವಿರುದ್ಧವಾದ ; ವ್ಯತಿರಿಕ್ತವಾದ. (ನಾ). ೩. ಅಡ್ಡಿ ; ವಿರೋಧ : "ವ್ಯತ್ಯಯಃ, ವಿಪರ್ಯಾಸಃ, ವೈಪರೀತ್ಯಂ, ವಿಪರ್ಯಯಃ - ಈ ೪ ವಿಪರೀತಂ ಮಾಡುಹ" (ಹಲಾಯು. ೧೨೦-೪೪). ೪. ಹಗೆತನ ; ವೈರ. ೫. ನಾಶ ; ಹಾಳು. ೬. ವಿಪತ್ತು ; ಕಷ್ಟಕಾಲ. ೭. ದುರ್ದೈವ ; ದುರಾದೃಷ್ಟ. ೮. ನಷ್ಟ ; ಹಾನಿ. ೯. ಇಲ್ಲದಿರುವಿಕೆ. ೧೦. ಬದಲಾವಣೆ ; ವ್ಯತ್ಯಾಸ : ನಿತ್ಯಪರೀಕ್ಷಣಸ್ಥಳವಿಪರ್ಯಯಪ್ರತಿಪತ್ತಿ ದಾನಂಗಳಿಂ ನಿಯೋಗಿಗಳಂ ಕಾಮದುಘರ್ ಮಾಡಿಯುಂ . . . ಸಾಮ್ರಾಜ್ಯಮಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತಮುಮೆನಿಸಿದಂ (ಚಂದ್ರಪ್ರ. ೨-೬೧) ; ರಾಜ್ಯಶಾಸ್ತ್ರ ಪದಗಳ ವಿವರಣೆ ವೈಜ್ಞಾನಿಕವಾಗಿಯೇ ಇದೆ. ಪೂರ್ವಪಕ್ಷ ಉತ್ತರಪಕ್ಷ, ಏಕಾಂತ ಪದನಿರ್ಧಾರದಲ್ಲಿ ವಿಪರ್ಯಯ . . . ಅನಾಗತವೀಕ್ಷಣ ಇವುಗಳ ಅರ್ಥಪ್ರಯೋಗಗಳು ಶಾಸ್ತ್ರಗ್ರಂಥಗಳಲ್ಲಿ ವಿಧವಿಧವಾಗಿವೆ (ಭಾರದ. ೩೭೯). ೧೧. ವಿನಿಮಯ ; ಪರಸ್ಪರ ಕೊಡುಕೊಳ್ಳುವಿಕೆ. ೧೨. ತಪ್ಪು; ಅಪರಾಧ. ೧೩. [ಕಾವ್ಯಮೀ] ಅರ್ಥಾಂತರನ್ಯಾಸಾಲಂಕಾರದ ಎಂಟು ಪ್ರಕಾರಗಳಲ್ಲಿ ಒಂದು ; ತನ್ನ ಸ್ವಭಾವಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನು ಉಂಟು ಮಾಡುವಿಕೆ : ಸಕಲವ್ಯಾಪಿವಿಶೇಷಪ್ರಕಾಶಕಂ ಯುಕ್ತಕಾರಿ ಯುಕ್ತಾಯುಕ್ತಂ ಪ್ರಕಟಶ್ಲೇಷ ವಿರುದ್ಧಾತ್ಮಕಂ ವಿರುದ್ಧಂ ವಿಪರ್ಯಯಂ ಯುಕ್ತಾರ್ಥ್ಂ (ಕವಿರಾ. ೩-೨೯). ೧೪. [ತತ್ತ್ವಶಾ] ಅಂತಃಕರಣವೃತ್ತಿಗಳಲ್ಲಿ ಒಂದು ; ಒಂದು ವಸ್ತುವನ್ನು ಮತ್ತೊಂದು ವಸ್ತುವಾಗಿ ಗ್ರಹಿಸುವಿಕೆ : ಒಂದು ವಸ್ತುವನ್ನು ಮತ್ತೊಂದು ವಸ್ತುವಾಗಿ ಗ್ರಹಿಸುವಂತಹ ಚಿತ್ತವೃತ್ತಿ ವಿಪರ್ಯಯ (ಹಿಂದಸಾ. ೧೦೩) ; ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರೆ, ಸ್ಮೃತಿ – ಈ ಐದೂ ಅಂತಃಕರಣವೃತ್ತಿಗಳು (ಭಾರದ. ೧೩೭). ೧೫. [ಜೈನ] ಮಿಥ್ಯಾಜ್ಞಾನ : ಸಂಶಯ ವಿಪರ್ಯಯ ಸಾವದ್ಯಾನವದ್ಯವಸಾಯಸ್ವಭಾವರಹಿತಮಾಗಿ ಜೀವಾದಿಪದಾರ್ಥ ಯಾಥಾತ್ಮ್ಯ ವಗಮಂ ಸಮ್ಯಗ್ಜ್ಞಾನಂ (ಆದಿಪು. ೧೦-೬೩ ವ). [ಸಂ.]

ವಿಪರ್ಯಯವೃತ್ತಿ (ನಾ). [ಕಾವ್ಯಮೀ] ವ್ಯತಿರಿಕ್ತವಾದ ಗುಣವುಳ್ಳ ಪ್ರಯೋಗ : ಅವಜ ವಿಪರ್ಯಯವೃತ್ತಿ ಪ್ರವಿಭಕ್ತವಿಕಲ್ಪಮಕ್ಕುಮುತ್ತರಮಾರ್ಗಂ (ಕವಿರಾ. ೨-೪೫). [ಸಂ.]

ವಿಪರ್ಯಯೋಕ್ತ (ನಾ). ವಿರುದ್ಧವಾಗಿ ಹೇಳಿದುದು : ನಿಗಲ್ದಲ್ಪಪ್ರಾಣಾಕ್ಷರ ನಿಗದಿತಮೇತದ್ವಿಪರ್ಯಯೋಕ್ತಂ ಶಿಥಿಲಂ (ಕವಿರಾ. ೨-೬೪). [ಸಂ.]

ವಿಪರ್ಯಯೋಪಮ (ನಾ). [ಕಾವ್ಯಮೀ] ಉಪಮಾಲಂಕಾರದಲ್ಲಿಯ ಒಂದು ಪ್ರಭೇದ ; ಉಪಮಾನವು ಉಪಮೇಯಗಳನ್ನು ತಿರುವು ಮುರುವು ಮಾಡುವ ಅಲಂಕಾರ : ನಿನ್ನ ಮುಖದಂತೆ ಕಮಲಮಿದುನ್ನಿದ್ರಂ ನಿನ್ನ ತಳದವೋಲಾರಕ್ತಂ [ನಿನ್ನಿಯನೀ] ಪಲ್ಲವಮನೆ ಸನ್ನುತರೂಪಂ ವಿಪರ್ಯಯೋಪಮಮಕ್ಕುಂ (ಕವಿರಾ. ೩-೬೨). [ಸಂ. ವಿಪರ್ಯಯೋಪಮಾ]

ವಿಪರ್ಯಸ್ತ (ಗು). ೧. ಬದಲಾವಣೆ ಹೊಂದಿದ ; ವ್ಯತ್ಯಾಸಗೊಂಡ. ೨. ತಲೆಕೆಳಗು ಮಾಡಿದ. ೩. ವಿರುದ್ಧವಾದ ; ವ್ಯತಿರಿಕ್ತವಾದ : ಈ ಮೂರು ಅಭಾವವಾದಿಗಳಲ್ಲಿ ಮೊದಲನೆಯವರು ವಿಪರ್ಯಸ್ತಬುದ್ಧಿಗಳು (ಧ್ವನ್ಯಾಲೋ. ೧೦ ಅಡಿಟಿ).

[ಸಂ.]

ವಿಪರ್ಯಸ್ತಿಕ (ನಾ). ಭುಜದ ಮೇಲೆ ಹೊದೆಯುವ ವಸ್ತ್ರ ; ಉತ್ತರೀಯ : "ವಿಪರ್ಯಸ್ತಿ[ಪಾಠಾಂ. ವಿಪರ್ಯಸ್ತ, ವಿಪರಿಸ್ತಿ]ಕಂ ಧೋತ್ರಮಕ್ಕುಂ" (ಮಂಗರಾ. ೭೬-೯).

[ಸಂ. ವಿಪರ್ಯಸ್ತಿಕಾ]

ವಿಪರ್ಯಾಸ (ನಾ). ೧. ಅಡ್ಡಿ ; ವಿರೋಧ ; ತಡೆ : "ವ್ಯತ್ಯಯಃ, ವಿಪರ್ಯಾಸಃ, ವೈಪರೀತ್ಯಂ, ವಿಪರ್ಯಯಃ — ಈ ೪ ವಿಪರೀತಂ ಮಾಡುಹ" (ಹಲಾಯು. ೧೨೦-೪೪). ೨. ವ್ಯತ್ಯಾಸ ; ಅದಲುಬದಲು : ಗಣನಿಯಮವಿಪರ್ಯಾಸದೊಳಿಕೆವಡೆದೊಳ್ಪಿಸೆಯೆ ಮಾತ್ರ ಸಮನಾಗಿ ಗುಣಾಗ್ರಣಿಯ ಮತದಿಂದೆ ತಾಳದ ಗಣನೆ ಗೊಡಂಬುಟ್ಟೊಡದುವೆ ರಘುಟಾಬಂಧಂ (ಛಂದೋಂಬು. ೩-೨೨೨). ೩. ತಪ್ಪು ; ಅಪರಾಧ. ೪. ಸಾವು ; ಮರಣ : ಪೂತನಾನಾಶಮನುಱೆ ಶಕಟೋದ್ಭೇದವರ್ಯಾಸಮಂ ಮತ್ತಿಳೆಯೊಳ್ ವಾತಾದಿದೋಷಂ ಬಳೆಯದೆ ತರುಗಳ್ ಬಿಳ್ದುದಂ ನೋಡಿಂ (ವಿಷ್ಣುಪು. ೫-೨-೩೨). [ಸಂ.]

ವಿಪರ್ಯಾಸೋಪಮೆ (ನಾ). [ಕಾವ್ಯಮೀ] ಉಪಮಾಲಂಕಾರದ ಒಂದು ಪ್ರಭೇದ : ಉಪಮಾನವೆಂದು ಪ್ರಸಿದ್ಧವಾಗಿರುವ ವಸ್ತುವನ್ನು ಉಪಮೇಯವಾಗಿ ಬಳಸುವ ಒಂದು ಪ್ರಕಾರ ; IP "ಉಪಮಾನವೆಂದು ಸುಪ್ರಸಿದ್ಧವಾಗಿರುವ ವಸ್ತುವನ್ನು ಉಪಮೇಯವಾಗಿ ಉಪಯೋಗಿಸುವುದು 'ಪ್ರತೀಪಾಲಂಕಾರ'. ಪ್ರತೀಪವೆಂದರೆ ಪ್ರತಿಕೂಲವಾಗಿರುವುದೆಂದು ಅರ್ಥ. ಉಪಮಾನವು ಉಪಮೇಯಕ್ಕಿಂತಲೂ ಅಧಿಕಗುಣಶಾಲಿಯಾಗಿರುವುದು, ಹೀಗೆ ಅಧಿಕಗುಣಶಾಲಿಯಾದ ಉಪಮಾನವು ಉಪಮೇಯವಾಗಿಯೂ ನ್ಯೂನಗುಣಶಾಲಿಯಾದ ಉಪಮೇಯವು ಉಪಮಾನವಾಗಿಯೂ ವರ್ಣಿತವಾದಲ್ಲಿ ಈ ವರ್ಣನೆ ಉಪಮಾನಕ್ಕೆ ಪ್ರತಿಕೂಲವಾದಂತಾಗುವುದು. ಇದನ್ನು ವಿಪರ್ಯಾಸೋಪಮೆಯೆಂಬುದಾಗಿ ಕಾವ್ಯಾವಲೋಕನಕಾರನು ಹೇಳಿರುವನು" (ಕ್ಷಓ. ೨೫೯) : ವಿಪರ್ಯಾಸೋಪಮೆಗ : ಮೊಗಮಂ ತಾವರೆ ಕಣ್ಣನುತ್ಪಲದಳಂ ಆರಾಧಿಸಿ ಪೋಲ್ತುವು (ಕಾವ್ಯಾವ. ೬೭). [ಸಂ. ವಿಪರ್ಯಾಸೋಪಮಾ]

ವಿಪಲ, ವಿಪಳ (ನಾ). (ಪಲದ ಆರನೆಯ ಒಂದು ಅಥವಾ ಅರುವತ್ತನೆಯ ಒಂದು ಭಾಗದಷ್ಟು) ಅತ್ಯಲ್ಪ ಕಾಲ. ವಿಪಳ : ಇಂಥಾದೊಂದು ಪತ್ರದ ಎರಡೂ ಮೈ ಛಾಪಿಸಲಿಕ್ಕೆ ಎರಡೂವರೆ ವಿಪಳ ಸಹ ಬೇಳಲಿಲ್ಲ (ಮುಂಬಯಿ. ೪-೫೯). [ಸಂ.]

ವಿಪಶ್ಚಿಜ್ಜನ (ನಾ). ವಿದ್ವಾಂಸಜನ ; ಪಂಡಿತಗೋಷ್ಠಿ : ವಿಪಶ್ಚಿಜ್ಜನಮೊಂದೆ ಕೊರಲೊಳ್ . . . ಪೊಗಟೆ (ಶಾಂತಿಪು. ೮-೧೫೧ ವ). [ಸಂ.]

ವಿಪಶ್ಚಿತ್ತು (ನಾ). ವಿದ್ವಾಂಸ ; ಪಂಡಿತ ; ಜ್ಞಾನಿ : "ವಿದ್ವಾನ್, ವಿಪಶ್ಚಿತ್ . . . ವಿಚಕ್ಷಣಃ — ೨೦ ವಿದ್ವಾಂಸನ ಹೆಸರುಗಳು" (ಪಿಡ್ಡಾಂತಿ. ೨೧೩).

ವಿಪಶ್ಚಿತ್ಪ್ರಸನ್ನ = ಪಂಡಿತಪ್ರಿಯನಾದವನು ; ಒಂದು ಬಿರುದು : ಧರೆ ತನ್ನಂ ಕೀರ್ತಿಪನ್ನಂ ವಿಬುಧತತಿಗೆ ಪೊನ್ನಂ ವಿಪಶ್ಚಿತ್ಪ್ರಸೆನ್ನಂ ಕರೆದೀವಂ ಬೊಪ್ಪದೇವಂ (ಎಕ್ರ. V. ಬೇಲೂರು. ೧೨೪-೪೫ ; 1133). [ಸಂ. ವಿಪಶ್ಚಿತ್]

ವಿಪಳ 'ವಿಪಲ' ನೋ.

ವಿಪಾಕ (ನಾ). ೧. ಚೆನ್ನಾಗಿ ಬೇಯಿಸುವಿಕೆ ; ಹದವಾಗಿ ಪಕ್ವಮಾಡುವಿಕೆ. ೨. ಮಾಗುವಿಕೆ ; ಕಳಿಯುವಿಕೆ ; ಹಣ್ಣಾಗುವಿಕೆ. ೩. ಹದ ; ಪಕ್ವತೆ. ೪. ಜೀರ್ಣವಾಗುವಿಕೆ ; ಪಚನವಾಗುವಿಕೆ. ೫. ಕೇಡು ; ವಿಪತ್ತು. ೬. ಪರಿಣಾಮ ; ಫಲಿತಾಂಶ : ದ್ಯೂತ . . . ದಂಡವಿಘಾತಿ ದೂಷಣ ವರ್ಧಸಂಗತಿಯು ಜಾತಸಪ್ತವ್ಯಸನವಿವು ಸಂಪ್ರೀತಿಕರ ಮೊದಲಲಿ ವಿಪಾಕದೊಳಾತು ಕೆಡಿಸುವ ಹದನನಲ್ದಿಹುದು (ಕುವ್ಯಾಸ. ೧೨-೮೯) ; ಮದಮುಖರು ಕೌರವರು

ನೀಚತ್ವದಲಿ ತಮ್ಮನು ತಾವೆ ಸಂಹರಿಸಿದುದು ವಿಧಿಯ ವಿಪಾಕವೆಂದಸವಳಿದು ಮಱುಗಿದರು (ತಿಮ್ಮಕ್ಕೋ. ೧-೫). ೭. ದೈವ ; ಅದೃಷ್ಟ : ''ಭಾಗದೇಯಂ,ಭಾಗ್ಯಂ, ವಿಪಾಕಃ, ಭವಿತವ್ಯತಾ – ಈ ೪ ಭಾಗ್ಯದ ಪೆಸರ್'' (ಪಲಾಯು. ೨೧-೧೨೬). ೮. [ಜೈನ] ಇಂದಿನ ಮತ್ತು ಹಿಂದಿನ ಜನ್ಮಗಳ ಪಾಪ ಮತ್ತು ಪುಣ್ಯಕೃತ್ಯಗಳ ಫಲ ; ಕರ್ಮಫಲ : ವಿಪಾಕ : – ದ್ರವ್ಯಕ್ಷೇತ್ರ ಕಾಲಭವಭಾವಲಕ್ಷಣ ನಿಮಿತ್ತಭೇದಜನಿತ ವಿವಿಧ ಜ್ಞಾನಾವರಣಾದಿ ಕರ್ಮೋದಯಂ (ತತ್ತ್ವಪ್ರ. ೩೧೩) ; ವಿಪಾಕವೆಂದರೆ ಸುಖದುಃಖರೂಪವಾದ ಕರ್ಮಫಲ (ಹಿಂದಸಾ. ೯೬). [ಸಂ.]

ವಿಪಾಕವಿಚಯ (ನಾ). [ಜೈನ] ನಾಲ್ಕು ಬಗೆಯ ಧರ್ಮಧ್ಯಾನಗಳಲ್ಲಿ ಒಂದು ; ಕರ್ಮಫಲಕ್ಕೆ ಸಂಬಂಧಿಸಿದ ಚಿಂತನೆ : ಭಟಾರರಾಜ್ಞಾವಿಚಯಮಪಾಕEಯತಿ ವಿಚಯ ವಿಪಾಕವಿಚಯ ಸಂಸ್ಥಾನವಿಚಯವೆಂಬೀ ನಾಲ್ಕು ಧರ್ಮಧ್ಯಾನಂಗಳಂ ಧ್ಯಾನಿಸುತ್ತಂ (ವಡ್ಡಾರಾ. ೧೫೪-೯) ; ಕರ್ಮಫಲಾನುಭವವನ್ನು . . . ಚಿಂತಿಸುವುದು ಮತ್ತು ಉದೀರಣದ ಚಿಂತನಮಾಡುವುದು ವಿಪಾಕವಿಚಯವು (ಜ್ಞಾನಧ. ೮೯). [ಸಂ.]

ವಿಪಾಕಸೂತ್ರ (ನಾ). [ಜೈನ] ಜೈನಶಾಸ್ತ್ರದ ಹನ್ನೆರಡು ಅಂಗಗಳಲ್ಲಿ ಒಂದು; IP ''ಶ್ರುತಾಂಗಗಳಲ್ಲಿ ಒಂದು ; ಪುಣ್ಯಪಾಪರೂಪವಾದ ಕರ್ಮಗಳ ಪರಿಪಾಕಸ್ವರೂಪದ ವಿವರಣೆ ; ಇದು ಒಂದು ಕೋಟಿ, ಎಂಬತ್ತನಾಲ್ಕು ಲಕ್ಷ ಪದಗಳುಳ್ಳ ಶಾಸ್ತ್ರ'' (ಜೈನಕೋ. ೨೩೨) : ಆಚಾರಮುಂ ಸೂತ್ರಕೃತಮುಂ . . . ವಿಪಾಕಸೂತ್ರಮುಂ ಪರಿಕರ್ಮಸೂತ್ರ ಪ್ರಥಮಾನುಯೋಗಪೂರ್ವಗತಚೂಲಿಕಾ ಭೇದೋಪೇತದೃಷ್ಟಿವಾದಮುಂ ಎಂದು ಅಂಗಪ್ರವಿಷ್ಟಭೇದದಿಂ ದ್ವಾದಶವಿಕಲ್ಪಮುಂ ಅಕ್ಕುಂ (ತತ್ತ್ವಪ್ರ. ೨೮೮). [ಸಂ.]

ವಿಪಾದಿಕೆ (ನಾ). (ವಾತ ಮತ್ತು ಶ್ಲೇಷ್ಮಗಳಿಂದ) ಕಾಲು ಒಡೆಯುವ ಅಥವಾ ಬಿರಿಯುವ ಒಂದು ಬಗೆಯ ರೋಗ. [ಸಂ. ವಿಪಾದಿಕಾ]

ವಿಪಿನ (ಗು). ೧. ದಟ್ಟವಾದ ; ಸಾಂದ್ರವಾದ ; ನಿಬಿಡವಾದ. (ನಾ). ೨. ಅಡವಿ ; ಕಾಡು : ಹೆಬ್ಬಂದಿ ವಿಪಿನದೊಳು ನಿಂದುದಾ ಶಬರರಿಗೆ ಮೃತ್ಯು ತಾನೆಂಬಂದದಿ (ಪಚಕಾ. ೬-೬) ; ಇವರು ವಿಪಿನಕೆ ಹೋಗ್ಗಲಾನೀ ಭವನದೊಳಗಿರೆ ದೈವ ಮಿಗೆ ಮೆಚ್ಚುವುದೆ (ತಿಮ್ಮಕ್ಕ. ೨-೪೯). ೩. ಗುಂಪು ; ನೆರವಿ. ೪. ಮರಗಳ ಗುಂಪು ; ತೋಪು. [ಸಂ.]

ವಿಪಿನಚರ (ನಾ). ೧. ಕಾಡಿನಲ್ಲಿ ಸಂಚರಿಸುವುದು. ೨. ಕಾಡಿನಲ್ಲಿ ಸಂಚರಿಸುವ ಪ್ರಾಣಿ : ಪುರಮಂತರ್ದ್ವೀಪಮಂಬಂತಿರೆ ವಿಪಿನಚರಾನೇಕಪಾನೀಕಮಂಭಃಕರಿಯೂಥ ತಾನಿದೆಂಬಂತಿರೆ . . . ಕಳೆದುದು ಬಹಳಾಸಾರಮಂ ನೀರದೌಘಂ (ಚಂದ್ರಪ್ರ. ೪-೪೧). ೩. ಬೇಡ ; ಶಬರ : ಭೂಸುರತಪಕೆ ಹರಿ ಸಂಪ್ರೀತನಾಗುತ ವಿಪಿನಚರವೇಷ ದೊಳಗಾತನ ಬಳಿಗೆ ಬಂದು (ತಿಮ್ಮಕ್ಕೋ. ೧-೨೩). [ಸಂ.]

ವಿಪಿನಭವ (ನಾ). ಕಾಡಿನಲ್ಲಿ ಹುಟ್ಟಿದುದು ; ಕಾಡುಮೃಗ : ಬಹಳ ರೋಮಂಥಫೇನಾವಳೀ ಪಾಂಡುರವಕ್ತ್ರಂ ವಮಾಹಿಷೀಸಂತತಿ ವಿಪಿನಭವಂ ಕಣ್ಗಗುರ್ವಾಯ್ತು ಕಾರೊಳ್ (ಚಂದ್ರಪ್ರ. ೪-೪೮). [ಸಂ.]

ವಿಪಿನಮಕ್ಷಿಕ (ನಾ). ೧. ಕಾಡುನೊಣ. ೨. ಒಂದು ಬಗೆಯ ಜೇನುನೊಣ : ''ಮಧುಭುಗ್ವಿಪಿನಮಕ್ಷಿಕಂ ಜೇನನೊಣನಕ್ಕು'' (ಮಂಗರಾ. ೨೨-೯). [ಸಂ.]

ವಿಪಿನಾಶ್ವ (ನಾ). ೧. ಕಾಡುಕುದುರೆ ; ಅಡವಿಯ ಅಶ್ವ. ೨. ಒಂದು ಬಗೆಯ ಜಿಂಕೆ ; ಕಡವೆ : ''ಆ ಕಡವು ವಿಪಿನಾಶ್ವಮಕ್ಕುಂ'' (ಮಂಗರಾ. ೪೮-೮). [ಸಂ.]

ವಿಪಿನೌಕಸ (ನಾ). ೧. ಅರಣ್ಯದಲ್ಲಿ ವಾಸಿಸುವವನು : ವಿಪಿನೌಕಸರ ಸಂಹಾರ ವಿದ್ಯಾವೃತ್ತಿ ನಿನ್ನದಲೆ (ಶುಭಾಅ. ೬-೩). ೨. ಕೋತಿ ; ಮಂಗ. [ಸಂ. ವಿಪಿನೌಕಸ್]

ವಿಪುಲ, ವಿಪುಳ (ಗು). ೧. ವಿಸ್ತಾರವಾದ ; ಅಗಲವಾದ ; ವಿಶಾಲವಾದ : ಮಹಾವ್ಯೂಢೋರಸ್ಕನುಂ ವಿಪುಲೋ[ಪಾಠಾಂ.ಳೋ]ಪಚಿತಾಂಸನುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ (ಆದಿಪು. ೧೨-೫೬ ವ); ಭೀಮಸೇನನ ವಿಪುಲವಕ್ಷದಲಿ ತನ್ನ ಮಜ್ಜಿದನು (ಶುಭಾದ್ರೌ. ೮-೩೦). ೨. ಅಧಿಕವಾದ ; ಹೆಚ್ಚಾದ ; ಬಹಳ : ಸಂದಣಿಸಿತಯ್ ನಗರದ ವಿಪುಲಜನಂ ದೊರೆಯರಮನೆಯ ಮುಂದೆ (ಶ್ರೀರಾಮಾ. ೭೮-೪) ; ಮಡಿದುದೌ ನಿನ್ನ ರಣಕಲಿ ಕುಮಾರನ ಕೈಲಿ ಕದನಮುಖದಲಿ ಫಲ್ಗುಣನ ಸೇನೆಯಲಿ ಜನಂ ವಿಪುಲಸಂಖ್ಯೆಯಲಿ (ಚಕ್ರಾಂಗ. ೮೩-೨೨೮೮). ೩. ಆಳವಾದ ; ಗಾಢವಾದ ; ಅಗಾಧವಾದ : ವಿಪುಲ ಜ್ಞಾನಮನಾಂತು ಸಲ್ಲಿಸಿದ ಮೇಧಾಶಕ್ತಿಗಂ . . . ನಿನ್ನಕ್ಕಮ ಸರ್ವಶಕ್ತಿಗೆ ಸದಾ ಭದ್ರಂ ಶುಭಂ ಮಂಗಳಂ (ಗಿಳಿಎಂ. ೫೩-೧೫). ೪. ಶ್ರೇಷ್ಠವಾದ ; ಅತಿಶಯವಾದ : ಜಿನಮತಪದಾರ್ಥ ಶಂಕಾಪನಯನಮುಂ . . . ವಿಪುಲ[ಪಾಠಾಂ. ಳ] ಗುಣವತ್ಸಲತ್ವಮುಮಪಗತಮಲ ಜೈನಶಾಸನೋದ್ಭಾಸನಮುಂ ಎಂದು ಪೇಳ್ದೀಯೆಂಟು ಗುಣಂಗಳುಂ ಸಮ್ಯಗ್ದರ್ಶನಾವ ಯವಂಗಳ್ (ಆದಿಪು. ೫-೫೮) ; ವಿಪುಲಕವಿತಾಗುಣಾಸ್ತ್ರಪುರಾಣಕವೀಂದ್ರನೆನಿಪ ಮಹಿಮೆಯಂ . . . ದಂಡಿಯೆ ನೋಂತಂ (ಪಂಚತಂ. ೪-೨೦). ೫. ದಟ್ಟವಾದ ; ಸಾಂದ್ರವಾದ. (ನಾ). ೬. ದೊಡ್ಡದು ; ವಿಶಾಲವಾದುದು : ''ವಿಶಂಕಟಂ . . . ಉರು, ವಿಪುಲಂ – ೯ ವಿಶಾಲವಾದದ್ದು, ಅಗಲವಾದದ್ದು, ದೊಡ್ಡದು'' (ಸಿದ್ಧಾಂತಿ. ೩೩೯). ೭. ಹೆಚ್ಚು ; ಬಹಳ ; ಜಾಸ್ತಿ : ತಾಮ್ರ ಕಬ್ಬಿಣ ಮುಂತಾದ ಧಾತುಗಳು . . . ವಿಪುಲವಾಗಿ ದೊರೆಯುವುದರಿಂದ ಅವುಗಳಿಗೆ ಕ್ರಯ ಕಡಿಮೆ (ಮುಂಬಯಿ. ೪-೯೧). ೮. ಗೌರವಕ್ಕೆ ಪಾತ್ರನಾದ ವ್ಯಕ್ತಿ. ೯. ಮೇರುಪರ್ವತ. **ವಿಪುಳ** : ೧. ವಿಪುಳತರಕಟಕನುದ್ಯ(ದ್)ದ್ವಿಪಹ(ರಿ)ಮಹಿಷೀನಿಷೇವ್ಯನುನ್ನತಪಾದಂ (ಕವಿಪಾ. ೩-೧೧೦) ; ಸುರಿದುವು ನಿರಂತರಂ ಬೆಳ್ಪರಿಗಳ್ ಸಂಗಳಿಸಿ ವಿಪುಳಯಶೋವಿತಾನ ಗುಣಮಿಲ್ಲದನಂ ಪ್ರಭುಮಾಡಿ ಪೂರ್ವಭೂಮಿಪರ ಪದಂಗಳಂ ಪುಗಿಸಿ (ಪಂಪಭಾ. ೧-೧೪). ೨. ಪಲವುಂ ಕೇಂದ್ರದೊಳಿರ್ದೊಡಲ್ಲಿ ಬಲಸಂಯುಕ್ತಗ್ರಹಂ . . . ವಿಪುಳಾಯುರ್ದಾಯಕಂ (ಜಾತಕ. ೯-೩) ; ವಿಕ್ರಮವಿದಿತವಿಪುಳಪದಸ್ಥಭೂಪರು ಹುದುಗಿತಲ್ಲಿಯದಲ್ಲಿ ಪಾರ್ಥನ ಸರಳ ಘಾತಿಯಲಿ (ಕುವ್ಯಾಗ. ೧-೧೩). ೪. ನೃಪಪರಂಪರೆಯಿಂದ ಬಂದೀ ವಿಪುಳವಂಶಕ್ಷಿತಿವಿಸರ್ಗವನಪಹರಿಸಿದನು ಹಿಂದೆ ವೇದವ್ಯಾಸಮುನಿ ಬಂದು (ಕುವ್ಯಾಆ. ೪-೮). ೫. ಆ ಪರ್ವತದ ವಿಪುಳವನೋಪಕಂಠಂಗಳೊಳ್ ತಾಪಸಕ[ನ್ಯೆ]ಯರ್ ನಡಸಿದೆಳಲತೆಗಳೊಳಿಜಗಿ ತುಱುಗಿ ಸಾಮವೇದಧ್ವನಿಯೊಳ್ ಮೊರವ ತುಂದಿಗಳುಮಂ . . . ನೋಡಿ (ಪಂಪಭಾ. ೬-೧೧೫ ವ). ೬. ''ಬೃಹತ್, ಉರು . . . ವಿಶಾಲಂ, ವ್ಯೂಢಂ, ವಿಪುಳಂ, ಭದ್ರಂ, ವರಿಷ್ಠಂ–ಈ ೧೨ ಹಿರಿದು'' (ಪಲಾಯು. ೧೬೬-೧೬೬). ೭. ''ಪ್ರಾಜ್ಯಂ . . . ವಿಪುಳಂ, ಪುಷ್ಕಳಂ, ಪುಷ್ಕಲಂ, ಅದಭ್ರಂ – ಈ ೧೪ ಮೊಕ್ಕಳಂ'' (ಪಲಾಯು. ೧೧೬-೧೪). [ಸಂ.]

ವಿಪುಲಮತಿ (ನಾ). ೧. [ಜೈನ] ಮನಃಪರ್ಯಯಜ್ಞಾನದ ಎರಡು ಭೇದಗಳಲ್ಲಿ ಒಂದು ; ಅನ್ಯರ ಮನಸ್ಸಿನ ಚಿಂತಿತ, ಅಚಿಂತಿತ, ಅರ್ಧಚಿಂತಿತ ಅಥವಾ ಚಿಂತಿತಪೂರ್ವವಿಷಯಗಳನ್ನು ಅರಿಯಲು ಸಮರ್ಥವಾದ ಜ್ಞಾನ : ವಿಪುಲಮತಿಯೆಂಬುದು ವಕ್ರಾವಕ್ರ ಪರಮನೋವಾಕ್ಕಾಯಗತಾರ್ಥಮಂ ಅಱಿಗುಂ (ತತ್ತ್ವಪ್ರ. ೬೯) ; ಕ್ರಮದಿಂ ಋಜುಮತಿಯುಂ ವಿಪುಲಮತಿಯುಮೆಂದದಱ ಭೇದಮಿರ್ತೆಱನಕ್ಕುಂ (ಚಂದ್ರಪ್ರ. ೧೪-೫೭). ೨. (ಅನ್ಯರ ಮನಸ್ಸಿನ ಭಾವನೆಗಳನ್ನು ಅರಿಯುವಂತಹ) ಅತಿಶಯವಾದ ಜ್ಞಾನವುಳ್ಳವನು : ವಿಪುಲ [ಪಾಠಾಂ. ಳ] ಮತಿ ಸಕಲವಿದ್ಯಾನಿಪುಣಂ ಗಣಧರನಿರೂಪಿತಕ್ರಮದಿಂ ದೈತ್ಯಪತಿಪ್ರಪಂಚಮಂ ಶ್ರವಣಪಥಾತಿಥಿ ಮಾಡಲಾತನುದ್ಭುತನಾದಂ (ಪಂಠಾಮಾ. ೧೦-೬೬). 'ಋಜುಮತಿ' ಪರಾ. [ಸಂ.]

ವಿಪುಲಾದ್ರಿ (ನಾ). [ಜೈನ] ಮಗಧದೇಶದ ರಾಜಧಾನಿಯಾದ ರಾಜಗೃಹದ ಬಳಿಯ ಪರ್ವತ ; ಮಹಾವೀರನು ಶ್ರೇಣಿಕಾದಿಗಳಿಗೆ ಉಪದೇಶಿಸಿದ ಸ್ಥಳ : ಶ್ರೀಮದಘಾರಿ ವೀರಜಿನಸನ್ನಿಧಿಯೊಳ್ ವಿಪುಲಾದ್ರಿಯೊಳ್ ಜಿನಸ್ವಾಮಿ ಮತೋಕ್ತಿಯಿಂ ಮಗಧನಾಯಕನಂ ತಿಳಿವಂತು . . . ತಿಳಿಯೆ ಪೇಳ್ದುದನೂರ್ಜಿತಮಾಗೆ ಪೇಳ್ದೆಂ (ಸುಕುಮಾ. ೧-೬೪). [ಸಂ.]

ವಿಪುಲಾಮಂಡಲ (ನಾ). ಭೂಮಂಡಲ ; ಪೃಥ್ವಿ : ನೃಪ ನೀಂ ರಕ್ಷಕನಾಗಿರೆ . . . ತಪನಂ ಪ್ರಜ್ವಲಿಸುತ್ತಿರೆ ವಿಪುಲಾಮಂಡಲದ ತಿಮಿರವೆಂತುದ್ಭವಿಕುಂ (ಶಾಕುಂತ. ೬೫-೧೧೪). [ಸಂ.]

ವಿಪುಲಾಸನ (ನಾ). ವಿಶಾಲವಾದ ಹೆಗಲುಗಳನ್ನುಳ್ಳುದು : ಪೀನಾಯತಾಮ್ರ ಪಲ್ಲವ ಕೋಶಸುಕೋಶಮೋಹನನುಂ ವಿಪುಲಾ[ಪಾಠಾಂ.ಳಾ]ಸನನುಂ . . .

ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ಪುದುಂ (ಆದಿಪು. ೧೨-೫೬ ವ).

[ಸಂ.]

ವಿಪುಲಾಸ್ಯ (ನಾ). ಅಗಲವಾದ ಮುಖವುಳ್ಳವನು : ಭೋಗಿ ವಿಪುಲಾಸ್ಯಂ ಗರ್ವಿತಂ . . . ಸಿಂಹೋದ್ಧವಂ (ಜಾತಕ. ೧೭-೫). [ಸಂ.]

ವಿಪುಲೆ, ವಿಪುಳೆ (ನಾ). ೧. ಭೂಮಿ ; ಪೃಥ್ವಿ : ನಳಿನಮುಖಿ ಮಾದೇವಿ ಜನಿಸಿದಳು ಜಲಧಿ ಪರಿವೇಷವಾಗಿಹುದು ವಿಪುಲೆಯಲಿ ವಿಪುಲೆಯು ನೆಲೆಗೊಂಡಿಹಳು ಫಣಿಸಹಸ್ರವನುಳ್ಳ ಭುಜಗೇಂದ್ರ ಮಸ್ತಕದಲಿ (ಕುವಲ. ೯೪). ೨. ಒಬ್ಬ ಋಷಿಪತ್ನಿಯ ಹೆಸರು. ೩. [ಸಂಗೀತ] ಒಂದು ಬಗೆಯ ತಾಳ : ಏಕತಾಲೀ (ಗೀತವು) ಏಕತಾಲೀ (ಎಂಬ ತಾಳ) ದಿಂದ ಆಗುತ್ತದೆ, ಅದು ರಮಾ, ಚಂದ್ರಿಕಾ ಹಾಗೇ ವಿಪುಲಾ ಎಂಬ ಮೂರು ವಿಧವೆಂದು ಸ್ಪುತವಾಗಿದೆ (ಚತುರ್ವ. ೭೬). **ವಿಪುಳೆ** : ೧. ವಿಪುಳಾಮಹಿಳಾಕಾಂತಂ . . . ಉಪಮಾತೀತಂ ಮಹೇಶ ಶಿವನಂ ಭಜಿಪಂ (ಹಮ್ಮೀರ. ೨-೫೦). ೨. "ಸತ್ಯವತಿಯರುಂಧತಿ ಮೈತ್ರಿ ವಿಪುಳೆ . . . ಅನಸೂಯೆಯರೆಯ್ದೆ ಋಷಿವಧುಗಳಕ್ಕುಂ" (ಮಂಗರಾ. ೭೬-೧೧). [ಸಂ. ವಿಪುಲಾ]

ವಿಪುಳ 'ವಿಪುಲ' ನೋ

ವಿಪುಳಗುಣಿ (ನಾ). ಅತಿಶಯವಾದ ಗುಣಗಳಿಂದ ಕೂಡಿದವನು : ನೃಪತೀ ಪರೋಪಕಾರೀ ವಿಪುಳಗುಣೀ . . . ದಯಾಲೂ ರಿಪುವರ್ಗಮನಲೆದು ಗೆಲ್ದೆ ಯಾಗಾಹವದೊಳ್ (ಕವಿರಾ. ೨-೨೪). [ಸಂ. ವಿಪುಲಗುಣಿನ್]

ವಿಪುಳಪ್ರಜ್ಞ (ನಾ). ಅಸಾಧಾರಣವಾದ ಪಾಂಡಿತ್ಯವುಳ್ಳವನು ; ಮಹಾವಿದ್ವಾಂಸ : ವಿಪುಳಪ್ರಜ್ಞನೆನಿಪ್ಪ ನಮ್ಮ ಸಚಿವಂ ಪ್ರಜ್ಞಾಬಳಂ ಮಾಬ್ಬ ಬಿನ್ನಪಮಂ ಚಿತ್ತದೊಳಪ್ಪುಕೆಯ್ದು (ಕುಸುಮಾ. ೩-೫೧). [ಸಂ. ವಿಪುಲಪ್ರಜ್ಞಾ]

ವಿಪುಳಭುಜ (ನಾ). ಬಲಿಷ್ಠವಾದ ತೋಳುಗಳುಳ್ಳವನು : ವಿಪುಳಭುಜರ್ . . . ಅಱುವರ್ ನೃಪತಿಗಳಾಱುಂ ಧವಳಾತಪತ್ರಮುಂ ತಳ್ತು ಕಂಸವೈರಿಗೆ ಪಿಡಿದರ್ (ಜಗಪಿ. ೯-೨). [ಸಂ. ವಿಪುಲಭುಜ]

ವಿಪುಳವದನ (ನಾ). ಅಗಲವಾದ ಮುಖವನ್ನುಳ್ಳುದು : ವಿಪುಳವದನಂ ಸೂಳಂ ದಂತಂ ಪೃಥೂದರಪೇಚಕಂ . . . ಆ [ದ್ವಿಪಮಿದರಿ]ದೇಂ ದೇವಪ್ರಖ್ಯಾತ ಜಾತಿಸಮುದ್ಭವಂ (ಬಂಹಾರಿ. ೨-೪೮). [ಸಂ. ವಿಪುಲವದನ]

ವಿಪುಳವರ್ಷಿ (ನಾ). ೧. ಹೆಚ್ಚಾಗಿ ಸುರಿಯುವಂಥದು ; ನಿರಂತರವಾಗಿ ವರ್ಷಿಸುವಂಥದು. ೨. ಅನೇಕ ವರ್ಷಗಳನ್ನು ಕಳೆದವನು ; ಮುದುಕ. ೧,೨ : ಉನ್ನತಶೀಲರು ಲೋಕಸನ್ಮಾನ್ಯರು ಮಹಿಮರು ವಿಪುಳವರ್ಷಿಗಳು ಭೂಮಿಯ ತಾಪವ ಕಳೆದರು ಭೂಪರು ಕಳೆವಂತೆ ಮಳೆಯ ಮೋಡಗಳು (ಇಂಚಾಪ. ೧೧೦-೩೯).

[ಸಂ. ವಿಪುಲವರ್ಷಿನ್]

ವಿಪುಳವೃತ್ತಿ (ನಾ). ವಿವರವಾದ ರೀತಿ : ಅಪರಿಮೇಯಮೆ ದೋಷಗುಣೌಘಮಿಂತು ಪಚಿತಕ್ರಮದಾರೆಯ ಕಾವ್ಯದೊಳ್ ವಿಪುಳವೃತ್ತಿಯೊಳೊಂದಿರೆ ಪೇಳ್ವೆನಭ್ಯುಪ [ಮಿತೋ]ಕ್ತಿಗುಣಾವಗುಣಗಳಂ (ಕವಿರಾ. ೧-೧೪೩). [ಸಂ. ವಿಪುಲವೃತ್ತಿ]

ವಿಪುಳಾಂತರ (ನಾ). ಭೂವಿಯ ಭಾಗ ; ಭೂಪ್ರದೇಶ : ಸುರಿದುವು ನಿರಂತರಂ ಬೆಳ್ಪರಿಗಳ್ ಸಂಗಳಿಸಿ ವಿಪುಳ ವಿಪುಳಾಂತರದೊಳ್ (ಕುಸುಮಾ. ೬-೫೨).

[ಸಂ. ವಿಪುಲಾಂತರ]

ವಿಪುಳಾಚಾರ (ನಾ). ಶ್ರೇಷ್ಠವಾದ ಆಚಾರವನ್ನುಳ್ಳವನು ; ಸದಾಚಾರದಿಂದ ಕೂಡಿರುವವನು : ವಿಪುಳಾಚಾರರಗಣ್ಣ(ಣ್ಣ)ಪುಣ್ಣ(ಣ್ಣ)ನಿಳೆ(ಳ)ಯರ್ (ಎಇ XVIII, ೧೯೨-೨೯ ; 1162). [ಸಂ. ವಿಪುಲಾಚಾರ]

ವಿಪುಳಾರ್ಯೆ (ನಾ). [ಛಂದ] ಒಂದು ಮಾತ್ರಾವೃತ್ತದ ಹೆಸರು ; ಆರ್ಯೆಯ ಪ್ರತಿಯರ್ಧದಲ್ಲಿಯೂ ೩ನೆಯ ಚತುರ್ಮಾತ್ರಾಗಣದ ಕೊನೆಗೆ ಪದ ಮುಗಿಯದೆ ಎಂದರೆ ಯತಿ ಪಾಲಿತವಾಗದೆ ಮುಂದಿನ ಗಣಕ್ಕೂ ಸಾಗುವುದು : ವಿಪುಳಾರ್ಯೆಯ ಪೂರ್ವಾರ್ಧ ದ್ವಿಪಾದದಂತಾಗಿ ಬರ್ಕು ಗೀತಿಕೆ ಕೇಳ್ನ ಪರಾರ್ಧಪಾದಯುಗಮುಮದುಪಮೆಯ ಬರೆದೋದು ಕಲ್ತು ತಿಳಿವವೊಲಿಳೆಯೊಳ್ (ಛಂದೋಂಬು. ೪-೨೩೩). [ಸಂ. ವಿಪುಲಾರ್ಯಾ]

ವಿಪುಳೆ 'ವಿಪುಲೆ' ನೋ.

ವಿಪುಳೋರಸ್ಕ (ನಾ). ವಿಶಾಲವಾದ ಎದೆಯುಳ್ಳವನು : ಶ್ರೀರಾಮಾಲಿಂಗಿತ ವಿಪುಳೋರಸ್ಕಂ ಭಾಸ್ಕರಪ್ರಕಾಶಂ . . . ಹರಿಗಂ (ಪಂಪಭಾ. ೧೪-೧). [ಸಂ. ವಿಪುಲೋರಸ್ಕ]

ವಿಪ್ಪನ್ನ (ನಾ). ೧. ಮಲಗುವಿಕೆ. ೨. ನಿದ್ರಿಸುವಿಕೆ : ವಿಪ್ಪನ್ನವಾಗಿರ್ದ ವರನ ಕಾಣುತ ನಮ್ಮಪ್ಪನವರು ಕಳುಹಿದರು ತಪ್ಪುಂಟು ಇದರೊಳು ಕೆಡುವುದು ಕಾರ್ಯ ಕೈತಪ್ಪೆಂದು ಮನದಲ್ಲಿ ತಿಳಿದು (ಚಂದ್ರಹಾ. ೩-೩೩). [?]

ವಿಪ್ರ (ನಾ). ೧. ವೇದಮಂತ್ರಗಳನ್ನು ಪಠಿಸುವವನು. ೨. ದ್ವಿಜ ; ಬ್ರಾಹ್ಮಣ : ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ (ಬಸವ. ೭೧೦) ; ವೇದವಿಧಾನವಿಲ್ಲದ ವಿಪ್ರ ಶರಸಂಧಾನವಿಲ್ಲದ ಸಮರ ಮೆಚ್ಚಯದು (ಕುಮಾಲಿ. ೩-೫೦). ೩. ವೇದೋಕ್ತವಿಧಿಗಳನ್ನು ಮಾಡಿಸುವವನು; ಪುರೋಹಿತ : ಪದೆಪಿನ ಪಲ್ಲವಂಗಳರುಣಾಂಶುಕಮುಳ್ಳಲರೋಳಿಯಕ್ಷತಂ . . . ಭೃಂಗರವಂ ಸುಮಂತ್ರಮಾಗೊದವಿರೆಯುಂ ವಿಯೋಗಿಜನಮಾರಣಯಜ್ಞಮನೊಲ್ದೊಡರ್ಚಿದಾ ಮದನನ ವಿಪ್ರನಂತೆಸೆದುದಿಂತು ಬಸಂತದ ಬಂದ ಮಾಮರಂ (ಕುಸುಮಾ. ೫-೩೭). ೪. ಕಿರಣ ; ರಶ್ಮಿ. ೫. ದರ್ಭೆ ; ಕುಶ : "ಮರೀಚಿ ಭೂಸುರ ಕುಶ ವಿಪ್ರಶಬ್ದ" (ನಾನಾರ. ೧೦೫). ೬. ಜ್ಞಾನಿ ; ವಿದ್ವಾಂಸ. ೭. ಮಾಸಗಳಲ್ಲಿ ಒಂದು ; ಭಾದ್ರಪದಮಾಸ. ೮. ಚಂದ್ರ. ೯. ಅಶ್ವತ್ಥ ಮರ.

ವಿಪ್ರದಿವಾಕರ = ಬ್ರಾಹ್ಮಣರಲ್ಲಿ ಸೂರ್ಯನಂತೆ ಪ್ರಕಾಶಿಸುವವನು ; ಒಂದು ಬಿರುದು : ಸತ್ಕರತ್ನಾಕರಂ ವಿಪ್ರದಿವಾಕರಂ ನೀತಿಪಾರಾಯಣಂ (ಸೌಇ. XX, ೪೬-೩೩ ; 1072). **ವಿಪ್ರವಿದ್ಯಾಧರ** = ಬ್ರಾಹ್ಮಣರಲ್ಲಿ ದೇವತೆಯಂತಿರುವವನು ; ಒಂದು ಬಿರುದು : ವಿಪ್ರವಿದ್ಯಾಧರನೆನಿಸುವ ಚಾವುಂಡರಾಯಂಗೆ ಸರ್ವೇಶ್ವರದೇವಂ . . . ರಕ್ಷಿಸುಗೆ (ಎಕ. VII, ಶಿಕಾರಿ. ೧೧೪-೧೯ ; 1096). [ಸಂ.]

ವಿಪ್ರಕರ್ಮ (ನಾ). ಬ್ರಾಹ್ಮಣನು ಅನುಸರಿಸಬೇಕಾದ ವಿಧಿ,—ಆಚಾರ : ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ (ಬಸವ. ೭೧೫). [ಸಂ. ವಿಪ್ರಕರ್ಮನ್]

ವಿಪ್ರಕರ್ಷ (ನಾ). ದೂರ ; ಅಂತರ : ಮದಕೋಳಾಹಳಮಯ್ದಿದತ್ತದುವೆ ತಾನುಲ್ಲಾಸಿ ದಿಗ್ದೇವತಾವದನೋತ್ಕರ್ಷಣವಿಪ್ರಕರ್ಷವಿರಳಂ ಪಂಕೇಜಿನೀಸೌರಭಂ (ಕಾದಂಪು. ೧೯೫).

[ಸಂ.]

ವಿಪ್ರಕಾರ (ನಾ). ೧. ಕೆಡುಕು ; ಹಾನಿ ; ಹಿಂಸೆ. ೨. ಕಡೆಗಣಿಸುವಿಕೆ ; ಅನಾದರ ; ತಿರಸ್ಕಾರ. ೩. ಬಯ್ಗಳು ; ನಿಂದೆ. ೪. ವಿರೋಧ ; ಪ್ರತೀಕಾರ. ೫. ನಾನಾಬಗೆ ; ಅನೇಕವಿಧ. [ಸಂ.]

ವಿಪ್ರಕಾರಣ (ನಾ). ೧. ಎದುರುಬೀಳುವಿಕೆ ; ವಿರೋಧ ; ಅಡ್ಡಿ. ೨. ಮೋಸ ; ವಂಚನೆ : "ವ್ಯಾಳಿಕಂ ವಂಚನಂ ವಿಪ್ರಕಾ[ಪಾಠಾಂ.ತಾ]ರಣಮೆನಲ್ಕಾಳಿಗೊಳುಹಂ" (ಮಂಗರಾ. ೧೩೦-೧೭). [ಸಂ.]

ವಿಪ್ರಕೀರ್ಣ (ಗು). ೧. ಚೆದರಿದ ; ಹರಡಿರುವ ; ಚೆಲ್ಲಾಪಿಲ್ಲಿಯಾಗಿರುವ. ೨. ಅಗಲವಾದ ; ವಿಸ್ತಾರವಾದ. ೩. ಕಳಚಿಕೊಂಡಿರುವ ; ಸಡಿಲಾದ. (ನಾ). ೪. [ನಾಟ್ಯ] ಹಸ್ತವಿನ್ಯಾಸಗಳಲ್ಲಿ ಒಂದು : ತವೆ ಹಂಸಪಕ್ಷಕರಮೆರಡವೆ ಮುಂಗೈ ಮೇಲನೊಂದೆ ಸ್ವಸ್ತಿಕಮೆನಿಕುಂ ಭಮಿಸಿದ ಸ್ವಸ್ತಿಕಮಂ ಭೇದವ ಮಾಡಲ್ ವಿಪ್ರಕೀರ್ಣಹಸ್ತಮೆನಿಕ್ಕುಂ (ಲಾಸ್ಯರಂ. ೨-೪೮) ; ಚತುರಸ್ರ, ಉದ್ವೃತ್ತ, ತಲಮುಖ, ಸ್ವಸ್ತಿಕ, ವಿಪ್ರಕೀರ್ಣ . . . ಲಲಿತ – ಈ ಮೂವತ್ತು ನೃತ್ತಹಸ್ತಂಗಳ್ (ಲಾಸ್ಯರಂ. ೨-೪೪ ವ). [ಸಂ.]

ವಿಪ್ರಕುಲ, ವಿಪ್ರಕುಳ (ನಾ). ಬ್ರಾಹ್ಮಣರ ಕುಲ ; ದ್ವಿಜವಂಶ : ವಿಪ್ರಕುಲೋತ್ತಮ ನಭ್ಯುದಿತಯಶಂ ಶ್ರೀಧರಂ (ಜಾತಕ. ೧-೪) ; ವಿಪ್ರಕುಲತಿಲಕನೆನಿಸುತ್ತಪ್ರತಿಮಗುಣಾಢ್ಯ ರುದ್ರಪಶುಪತಿಯೆಂಬಂ ಸುಪ್ರಿಯದಿಂದಿರ್ಪಂ (ಕ್ರಿಪುಪಿ. ೧೭-೩). **ವಿಪ್ರಕುಳ** : ವರವೇದಾಗಮಶಾಸ್ತ್ರದ ಪರಿಮತಿಯೊಳಜಂಗೆ ತಾಮೆ ದೊರೆ ಪದ್ಮಭ[ವಂ] ದೊರೆ ತಮಗೆ ಪೆಜರೊಳಾವನೊ ದೊರೆ ವಿಪ್ರಕುಳಪ್ರದೀಪರೊಳ್ಳಸುಮತಿಯೊಳ್ (ಸೌಇ. XX, ೫೭-೧೫ ; 1084). [ಸಂ.]

ವಿಪ್ರಕುಳ 'ವಿಪ್ರಕುಲ' ನೋ.

ವಿಪ್ರಕೃತ (ಗು). ೧. ಅಗೌರವಕ್ಕೆ ಗುರಿಯಾದ ; ನಿಂದಿಸಲ್ಪಟ್ಟ. ೨. ಗಾಯಗೊಂಡ ; ಗಾಸಿಗೊಂಡ. ೩. ಎದುರಿಸಲ್ಪಟ್ಟ. (ನಾ). ೪. ಗಾಸಿಗೊಂಡವನು ; ಹಿಂಸೆಗೆ ಗುರಿಯಾದವನು : "ನಿಕೃತಃ, ವಿಪ್ರಕೃತಃ — ೨ ಪೀಡಿಸಲ್ಪಟ್ಟವನ ಪೆಸರು" (ಸಿದ್ಧಾಂತಿ. ೩೩೪). [ಸಂ.]

ವಿಪ್ರಕೃಷ್ಟ (ಗು). ೧. ಎಳೆಯಲ್ಪಟ್ಟ ; ಒಯ್ಯಲ್ಪಟ್ಟ. ೨. ಹತ್ತಿರದಲ್ಲಿರದ ; ದೂರದ. (ನಾ). ೩. ದೂರ : ಸಂಯಮ್ಮಕಾಧಿಕರಣ ಪ್ರತ್ಯಾಸತ್ತಿಯಿಂ ಪ್ರತ್ಯಾಸನ್ನಮಪ್ಪುದಱಿಂ ತತ್ಸಮೀಪದೊಳ್ ಮನಃಪರ್ಯಾಯಗ್ರಹಣಂ ವಿಪ್ರಕೃಷ್ಟಾಂತರಮಪ್ಪುದಱಿಂ ಅಸಂಯತನಲ್ಲಿಯುಂ ಉಳ್ಳುದಱಿಂ ತತ್ಪೂರ್ವದೊಳ್ ಅವಧಿಗ್ರಹಣಂ (ತತ್ತ್ವಪ್ರ. ೫೨). [ಸಂ.]

ವಿಪ್ರತಿಪತ್ತಿ (ನಾ). ೧. (ಅಭಿಪ್ರಾಯ, ಸ್ವಭಾವ, ಆಸ್ಥೆ ಮುಂತಾದುವುಗಳಲ್ಲಿ ಕಂಡುಬರುವ) ಭೇದ ; ವ್ಯತ್ಯಾಸ ; ಭಿನ್ನತೆ : ಜನಪ್ರವಾದದೊಳಮಿವರ ವಿಪ್ರತಿಪತ್ತಿಯಂ ಕೇಳ್ದೆವು (ಪಂಚಾಮೃ. ೧೨-೭೯ ವ). ೨. ತಪ್ಪುಕಲ್ಪನೆ ; ಸರಿಯಲ್ಲದ ತಿಳಿವಳಿಕೆ. ೩. ತಪ್ಪು ; ಅಪರಾಧ. ೪. ಪರಸ್ಪರಸಂಬಂಧ. ೫. [ತರ್ಕಶಾ] ವಿರುದ್ಧವಾದ ಉತ್ತರ ,—ಹೇಳಿಕೆ ; ಆಕ್ಷೇಪಣೆ. [ಸಂ.]

ವಿಪ್ರತಿಷಿದ್ಧ (ಗು). ೧. ತಡೆದ ; ಅಡ್ಡಿಮಾಡಲ್ಪಟ್ಟ. ೨. ವ್ಯತಿರಿಕ್ತವಾದ ; ವಿರುದ್ಧವಾದ. (ನಾ). ೩. ವ್ಯತಿರಿಕ್ತವಾದುದು ; ವಿರುದ್ಧವಾದುದು : ಅತಿಬಹಲಸ್ಥಿತಿಯಿಂ ಸಂಗತಗುಣಮವಿಭೇದಿಯಾಗೆ ತದ್ಗುಣಮನಿಕುಂ ಕೃತಕಾರ್ಯ ಕಾರಣಂ ವಿಪ್ರತಿಷಿದ್ಧಮದೆನೆ ಪರಸ್ಪರಾಸಂಗತಿಕಂ (ಕಾವ್ಯಾವ. ೭೪೬). [ಸಂ.]

ವಿಪ್ರತಿಸಾರ (ನಾ). ಮಾಡಿದ ತಪ್ಪುಕೆಲಸಕ್ಕಾಗಿ ಮರುಗುವಿಕೆ ; ಪಶ್ಚಾತ್ತಾಪ : "ವಿಪ್ರತಿಸಾರಃ, ಅನುಶಯಃ, ಪಶ್ಚಾತ್ತಾಪಃ, ಅನುತಾಪಃ — ಈ ೪ ಅನುಶಯಂ ಬಡುವುದು" (ಹಲಾಯು. ೧೧೯-೩೧). [ಸಂ.]

ವಿಪ್ರತೀಸಾರ (ನಾ). = ವಿಪ್ರತಿಸಾರ : "ಅನುಶಯಮನುತಾಪಂ ವಿಪ್ರತೀಸಾರಮಕ್ಕುಂ" (ವಸ್ತುಕೋ. ೧೧೦-೧). [ಸಂ.]

ವಿಪ್ರಪ್ರವರ (ನಾ). ಬ್ರಾಹ್ಮಣರಲ್ಲಿ ಉತ್ತಮ ; ಬ್ರಾಹ್ಮಣೋತ್ತಮ : ಪದ್ಮಿನೀಪೇಟದ ವಿಪ್ರಪ್ರವರನಷ್ಟಾಂಗಮಹಾನಿಮಿತ್ತವಿಶಾರದಂ ವಿಶಾರದನೆಂಬೊಂ (ಶಾಂತಿಪು. ೬-೨೫ ವ). [ಸಂ.]

ವಿಪ್ರಬ್ರುವ (ನಾ). ಹೆಸರಿಗೆ ಮಾತ್ರ ಬ್ರಾಹ್ಮಣನಾದವನು : ಆದಿಯಲಿ ವಿಪ್ರಬ್ರುವನು ಧಾತ್ರಿಯೊಳೊಬ್ಬನುಂಟೆನ್ನವನು ಮಾಡುವ ದುರಿತ ಹೇಳಲು ಶಕ್ಯವಲ್ಲ (ತಿಮ್ಮಶಾಂ. ೪-೧೨೨) ; ಭುವನಪತಿನಿಂದೆಯನು ವಿಪ್ರಬ್ರುವನು ಮಾಡುತ್ತಿರಲು (ನಿಭಾಗ. ೪-೨-೨೬). [ಸಂ.]

ವಿಪ್ರಯುಕ್ತೆ (ನಾ). ಪ್ರಿಯನಿಂದ ದೂರವಾದವಳು ; ವಿರಹಿಣಿ : ರಥಾಂಗಕಾಂತೆ ಹೃದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟು ನೆಱಲ್ದುದು ಪದ್ಮಪತ್ರದೊಳ್ (ಚಂದ್ರಪ್ರ. ೮-೭). [ಸಂ. ವಿಪ್ರಯುಕ್ತಾ]

ವಿಪ್ರಯೋಗ (ನಾ). ೧. ಬೇರೆಯಾಗಿರುವಿಕೆ ; ಪ್ರತ್ಯೇಕತೆ. ೨. ಜಗಳ ; ವಿರೋಧ. ೩. (ಪ್ರಿಯ, ಪ್ರಿಯೆಯರ) ಅಗಲಿಕೆ ; ವಿಯೋಗ : ಧವವಿರಹದಿಂ ವಿಪ್ರಯೋಗದ ಯುವತಿಯರು ಪೊರಳಿದರು (ಶಂಕರಾ. ೨-೩೩) ; ವಿಪ್ರಯೋಗವು ಕೆಲವುಕಾಲಮಾತ್ರವಾದುದೂ ಆಗಬಹುದು, ಶಾಶ್ವತವಾದುದೂ ಆಗಬಹುದು (ಆರ್ಯಧ. ೧೪೭). ೪. [ಕಾವ್ಯಮೀ] ನಾಯಿಕೆ, ನಾಯಕರಲ್ಲಿ ಪ್ರೇಮವು ಬೆಳೆದು ಸಂಗಮವೇರ್ಪಡದಿರುವುದು ; ವಿಯೋಗ ; ಅಗಲಿಕೆ : "ವಿಪ್ರಲಂಭಃ, ವಿಪ್ರಯೋಗಃ — ೨ ವಟ್ಟರಿಗೊಬ್ಬರು ಅಗಲಿರುವ ಸ್ತ್ರೀಪುರುಷರು ಮಾಡಿಕ್ಕೊಂಡ ವಿಷಾದಕರವಾದ ಶೃಂಗಾರಾದ್ಯಲಂಕಾರದ ಹೆಸರು" (ಸಿದ್ಧಾಂತಿ. ೩೬೫). [ಸಂ.]

ವಿಪ್ರಲಂಭ (ನಾ). ೧. ಸುಳ್ಳುಮಾತಿನಿಂದ ಅಥವಾ ಕೊಟ್ಟ ಮಾತಿನಂತೆ ನಡೆಯದೆ ಮಾಡುವ ಮೋಸ ; ಕಪಟ ; ವಂಚನೆ : "ವಿಪ್ರಲಂಭಃ, ವಿಸಂವಾದಃ, ವಿಪ್ರಲಾಪಃ — ಈ ೩ ವಂಚಿಸುಹ" (ಹಲಾಯು. ೧೨೩-೬೩). ೨. ಕ್ರಮತಪ್ಪಿ ಮಾತನಾಡುವುದು : "ವಿಪ್ರಲಂಭಃ, ವಿಸಂವಾದಃ - ೨ ವಿಪರೀತವಾಗಿ ನುಡಿಯುವದು ಅಂದರೆ ಕ್ರಮತಪ್ಪಿ ಮಾತಾಡುವುದು" (ಸಿದ್ಧಾಂತಿ. ೬೯). ೩. ಒಮ್ಮತವಿಲ್ಲದಿರುವಿಕೆ ; ಜಗಳ. ೪. ಕಳಚಿಕೊಂಡಿರುವಿಕೆ ; ಪ್ರತ್ಯೇಕತೆ ; ಬೇರೆಯಾಗಿರುವಿಕೆ. ೫. (ಪ್ರಿಯ, ಪ್ರಿಯೆಯರ) ಅಗಲಿಕೆ ; ವಿಯೋಗ : ಇದೇನಂಬೆನೊ ಬಂದತ್ತೆತ್ತಣಿಂದೆಂದಱಿಯೆನೆನಗೆ ಮತ್ಪಾಪದಿಂ ವಿಪ್ರಲಂಭಂ (ಕಾದಂಬ. ೭೯) ; ಸ್ತ್ರೀಪುಂಸರತಿಸಮುತ್ಥವ್ಯಾಪಾರಂ ತಾನದಲ್ತೆ ಶೃಂಗಾರಂ ಮೇಳಾಪದಿನಗಲ್ಕೆಯಿಂ ಸುನಿರೂಪಿತಸಂಭೋಗವಿಪ್ರಲಂಭಸಮಾಖ್ಯಂ (ಕಾವ್ಯಾವ. ೭೯೯). ೬. [ಕಾವ್ಯಮೀ] ನಾಯಿಕೆ, ನಾಯಕರಲ್ಲಿ ಪ್ರೇಮವು ಬೆಳೆದು ಸಂಗಮವೇರ್ಪಡದಿರುವುದು ; ವಿಯೋಗ ; ಅಗಲಿಕೆ : "ವಿಪ್ರಲಂಭಃ, ವಿಪ್ರಯೋಗಃ -- ೨ ವಟ್ಟರಿಗೊಬ್ಬರು ಅಗಲಿರುವ ಸ್ತ್ರೀಪುರುಷರು ಮಾಡಿಕ್ಕೊಂಡ ವಿಷಾದಕರವಾದ ಶೃಂಗಾರಾದ್ಯಲಂಕಾರದ ಹೆಸರು" (ಸಿದ್ಧಾಂತಿ. ೩೬೫). [ಸಂ.]

ವಿಪ್ರಲಂಭಶೃಂಗಾರ (ನಾ). = ವಿಪ್ರಲಂಭ ೬ : ವಿಪ್ರಲಂಭಶೃಂಗಾರದ ಅತ್ಯುನ್ನತವಾದ ನಿದರ್ಶನಗಳನ್ನು ಕಾಣಲಿಚ್ಛಿಸುವ ವಿದ್ಯಾರ್ಥಿಯು ಆರಣ್ಯಕಾಂಡದ ಮತ್ತು ಕಿಷ್ಕಿಂಧಾಕಾಂಡದ ಕೆಲವು ಭಾಗಗಳನ್ನು ಓದುವುದು ಒಳ್ಳೆಯದು (ಸಾಹಿ. ೯೨) ; ಉದ್ದೀಪನವಿಭಾವದಿಂದ ವಿಪ್ರಲಂಭಶೃಂಗಾರವು ಉದ್ಬುದ್ಧವಾಗುತ್ತದೆ (ಕ್ರಿಸ್ತಾಯಣ ೫೫). [ಸಂ.]

ವಿಪ್ರಲಬ್ಧ (ಗು). ೧. ಮೋಸಗೊಂಡ ; ವಂಚಿಸಲ್ಪಟ್ಟ. ೨. ನಿರಾಶೆಗೊಂಡ. ೩. ನೊಂದ ; ಗಾಸಿಗೊಂಡ. (ನಾ). ೪. ಮೋಸಕ್ಕೆ ಒಳಗಾದವನು ; ವಂಚಿತನಾದವನು : "ವಿಪ್ರಲಬ್ಧಃ, ವಂಚಿತಃ — ೨ ವಂಚಿಸಿಕ್ಕೊಂಡವನ ಪೆಸರು" (ಸಿದ್ಧಾಂತಿ. ೩೩೪). ೫. ನಿರಾಶೆ ಹೊಂದಿದವನು ; ಹತಾಶನಾದವನು : "ವಿಕೃತಃ, ವಿಪ್ರಲಬ್ಧಃ - ಈ ೨ ದೈನ್ಯಂಬಟ್ಟವಂ" (ಹಲಾಯು. ೬೩-೨೨೮). [ಸಂ.]

ವಿಪ್ರಲಬ್ಧೆ (ನಾ). [ಕಾವ್ಯಮೀ] ಎಂಟು ಬಗೆಯ ನಾಯಿಕೆಯರಲ್ಲಿ ಒಬ್ಬಳು ; ಪ್ರಿಯಕರನು ನಿಶ್ಚಿತವೇಳೆಗೆ ಬಾರದೆ ವಚನಭಂಗ ಮಾಡಿದುದರಿಂದ ನಿರಾಶೆಗೊಂಡವಳು : ಸ್ವಾಧೀನಪತಿಕೆ ಖಂಡಿತೆ ವಿಪ್ರಲಬ್ಧೆ[ಜಾಂಶಾ. ಲಂಭೆ] . . . ಸಮುತ್ಕೆಯರೆಂಬೆಂಟು ತೆಱದವಸ್ಮಾಕಾಮಿನಿಯರಿಂ (ವಿವೇಕ. ೧೦೩). 'ನಾಯಿಕೆ' ಪರಾ. [ಸಂ. ವಿಪ್ರಲಬ್ಧಾ]

ವಿಪ್ರಲಾಪ, ವಿಪ್ರಳಾಪ (ನಾ). ೧. ಕೆಲಸಕ್ಕೆ ಬಾರದ ಮಾತು ; ಅಪ್ರಯೋಜಕವಾದ ಮಾತು ; ವ್ಯರ್ಥಾಲಾಪ : ಸ್ಮರದೀಪಂ ಪೆಣ್ಣ ರೂಪಂ ತಳೆದುದೆನಿಪ ವೇಷಂ ಪ್ರಭಾವೇಶರೂಪಂ ಪರಿತಾಪಂ ತೋಱಲಾ ಪೆಣ್ಣೊಲವತಿಲಲಿತಾಲಾಪವಾ ವಿಪ್ರಲಾಪಂ (ಜಗಂ. ೧೬-೧೩೦). ೨. ಗೋಳಾಟ ; ರೋದನ ; ಆಕ್ರಂದನ : ಇನ್ನು ಪಶ್ಚಾತ್ತಾಪಮುಂ ವಿಪ್ರಲಾಪಮುಂ ಪ್ರಯೋಜನಮಿಲ್ಲ (ಪಂಚತಂ. ೧೯೯-೫). ೩. ವಿರುದ್ಧವಾಗಿ ಮಾತನಾಡುವುದು : "ವಿಪ್ರಲಾಪಃ, ವಿರೋಧೋಕ್ತಿಃ- ವಿರೋಧವಾಗಿ ನುಡಿಯುವದಕ್ಕೆ ಹೆಸರು" (ಸಿದ್ಧಾಂತಿ. ೫೪). ೪. ಜಗಳ ; ಕದನ. ೫. ವಂಚನೆ ; ಮೋಸ : "ವಿಪ್ರಲಾಪಂ ಪ್ರಲಂಬಮೆನಲು ವಂಚನೆಯದಕ್ಕು" (ಮಂಗರಾ. ೧೩೨-೨೭). ೬. ಕೊಟ್ಟ ಮಾತಿಗೆ ತಪ್ಪುವುದು ; ವಚನಭಂಗ. ವಿಪ್ರಳಾಪ : ೫. "ವಿಪ್ರಲಂಭಃ, ವಿಸಂವಾದಃ, ವಿಪ್ರಳಾಪಃ — ಈ ೩ ವಂಚಿಸುಹ" (ಹಲಾಯು. ೧೨೩-೬೩). [ಸಂ.]

ವಿಪ್ರಲಾಪಂಗೆಯ್ (ಕ್ರಿ). (ಶೋಕದಿಂದ ಕೂಡಿ) ಅಸಂಬದ್ಧವಾಗಿ ಮಾತನಾಡು : ಪಡೆವುದು ಮೇಣ್ ನಂದನರಂ ನಡೆವುದು ಮೇಣ್ ತಪಕೆ ಸಗರವಲ್ಲಭ ಮತ್ತಂ ಪಡೆವುದೊ ತನಯರ್ಕಳ ಪಿಂಬಡಿನೊಳ್ ಪೇಟೆಮಗರಸ ಮಾನಸವಾಟೆ ಎಂದು ವಿಪ್ರಲಾಪಂಗೆಯ್ದೆ (ಅಜಿಪು. ೧೦-೪೨ ವ). [ವಿಪ್ರಲಾಪ + ಕೆಯ್]

ವಿಪ್ರವಿನೋದಿ (ನಾ). ಕಣ್ಕಟ್ಟು , ಮಾಯ , ಮಂತ್ರ ಮುಂತಾದುವುಗಳಲ್ಲಿ ನೈಪುಣ್ಯವನ್ನು ಹೊಂದಿದ ಒಂದು ಬ್ರಾಹ್ಮಣವರ್ಗ : ಹನುಮಂತದೇವರಿಗೆ ಕಾರ್ತಿಕದ ಪೂಜೆಗೆ ವಿಪ್ರವಿನೋದಿಗಳಿಗೆ ಮುಖ್ಯಸ್ವಾಮಿಗಳಾದ . . . ಅಯವರು ಮೊದಲಾದ ವಿಪ್ರವಿನೋದಿಗಳಿಗೆ ಪು(ಂ)ಣ್ಯವಾಗಲಿಯೆಂದು . . . ಮಕರಸಂಕ್ರಾಂತಿ ಪುಣ್ಯಕಾಲದಲ್ಲಿ ಧಾರೆಯನೆಱದು ಕೊಟ್ಟ ಧರ್ಮಶಶನ (ಸೌಇಇ. IX-ii, ೬೫೨-೯ ; 1554). [ಸಂ. ವಿಪ್ರವಿನೋದಿನ್]

ವಿಪ್ರಶ್ನಿಕೆ (ನಾ). ಕಣಿಹೇಳುವವಳು ; ಭವಿಷ್ಯವನ್ನು ನುಡಿಯುವವಳು ; ಕೊರವಂಜಿ : ''ವಿಪ್ರಶ್ನಿಕಾ, ಈಕ್ಷಣಿಕಾ, ದೈವಜ್ಞಾ – ೩ ಕಣಿ ಮುಂತಾದ ಶಕುನಗಳನ್ನು ಹೇಳುವವಳ ಪೆಸರುಗಳು'' (ಸದ್ಗಾಂತಿ. ೧೭೨). [ಸಂ. ವಿಪ್ರಶ್ನಿಕಾ]

ವಿಪ್ರಳಾಪ 'ವಿಪ್ರಲಾಪ' ನೋ.

ವಿಪ್ರಾವತಿ (ನಾ). ಬ್ರಾಹ್ಮಣರ ಬೀದಿ ; ಅಗ್ರಹಾರ : ಕೃತಿ ತಟಾಕಾರಾಮ ವಿಪ್ರಾವತಿ ಸುರಾಲಯ ಸುಜನಸ್ಥಾಪನೆ ಸುತರೆನಿಸುತಿಹ ಸಪ್ತಸಂತಾನಂಗಳೊಳಗೆ . . . ಉತ್ತಮಂ ಕೇಳ್ ಸುತ ಸುರಾಲಯ ಬ್ರಾಹ್ಮಣಾವತಿಯೆಂದನಗದೇಶ (ಶಂಕರಾ. ೧೭-೧೯).

[ಸಂ. ವಿಪ್ರಾವತೀ]

ವಿಪ್ರಾಳಿವಧೆ (ನಾ). ೧. ಬ್ರಾಹ್ಮಣರ ಹತ್ಯೆ , — ಕೊಲೆ ; IP ಇದು ಪಂಚಮಹಾಪಾತಕಗಳಲ್ಲಿ ಒಂದು. ೨. ಬ್ರಾಹ್ಮಣರ ಹತ್ಯೆಯಿಂದುಂಟಾಗುವ ದೋಷ ; ಬ್ರಹ್ಮಹತ್ಯಾದೋಷ : ಮೇಲನಜೆಯದೆ ಸತ್ಕದಲಿ ವಿಪ್ರಾಳಿವಧೆಯಾತಂಗೆ ಬಂದುದು (ಕುವ್ಯಾಕ. ೧೭-೧೬). [ಸಂ. ವಿಪ್ರಾಳಿವಧಾ]

ವಿಪ್ರಿಯ (ಗು). ೧. ಮನಸ್ಸಿಗೆ ಹಿತವಲ್ಲದ ; ಇಷ್ಟವಾಗದ. (ನಾ). ೨. ಪ್ರಿಯವಲ್ಲದುದು ; ಅಹಿತವಾದುದು : ಯಾರವನು ಪ್ರಿಯವೆಂದು ವಿಪ್ರಿಯವ ನುಡಿಯುವನು (ಭಾಸನಾ. ೫೮). ೩. ತಪ್ಪು ; ಅಪರಾಧ : ''ವ್ಯಳೀಕಂ, ಅಪರಾಧಃ, ಆಗಃ, ಮಂತುಃ, ವಿಪ್ರಿಯಃ - ಈ ೫ ಅಪರಾಧಂ'' (ಹಲಾಯು. ೧೨೩-೬೪). [ಸಂ.]

ವಿಪ್ಲವ (ನಾ). ೧. ನಾನಾದಿಕ್ಕುಗಳಿಗೆ ಹರಿಯುವುದು , — ಪ್ರವಹಿಸುವುದು. ೨. (ನಾಡಿನ ಶಾಂತಿಗೆ ಭಂಗವನ್ನುಂಟುಮಾಡುವ) ದಂಗೆ ; ಕ್ರಾಂತಿ ; ದೊಂಬಿ : ಮಂಗಳೂರಿನಲ್ಲಿ ವಿಪ್ಲವವು ಧಗಧಗನೆ ಉರಿಯುತ್ತಿದೆ (ಡಾಲ್ತ. ೨೨೦) ; ರಾಜ್ಯದಲ್ಲಿ ವಿಪ್ಲವವಾಗುವಂತಹ ಪರಿಸ್ಥಿತಿಯೊದಗಿ . . . ಶ್ರೀರಾಮನ ನಿಶ್ಚಯವಾದ ನಡತೆಯಿಂದ ಮಾರ್ಪಡುತ್ತದೆ (ಭಾರದ. ೮೮). ೩. ತುಮುಲ ; ಕ್ಷೋಭೆ. ೪. ಗೊಂದಲ ; ಗಜಿಬಿಜಿ. ೫. ನಾಶ ; ಹಾಳು ; ಧ್ವಂಸ. ೬. ತೊಂದರೆ ; ಉಪದ್ರವ : ''ಉಪಲಿಂಗಂ, ಅರಿಷ್ಟಂ, ಉಪಸರ್ಗಃ, ಉಪದ್ರವಃ . . . ಡಿಂಬಃ, ವಿಪ್ಲವಃ – ಈ ೧೦ ಉಪದ್ರವಂ'' (ಹಲಾಯು. ೨೧-೧೨). ೭. ವಿರೋಧ ; ಪ್ರತಿಭಟನೆ. ೮. ಸುಲಿಗೆ ; ಲೂಟಿ. ೯. ಮೀರಿ ನಡೆಯುವುದು ; ಅತಿಕ್ರಮ. ೧೦. ಪಾಪ; ದೋಷ. [ಸಂ.]

ವಿಪ್ಲವಕಾರ (ನಾ). ದಂಗೆಮಾಡುವವನು ; ಬಂಡಾಯಗಾರ ; ಕ್ರಾಂತಿಕಾರ : ಭಕ್ಷಿಯು ಈ ವಿಪ್ಲವಕಾರರೊಡನೆ ಸೇರಿರುವುದೇನೋ ನಿಜ ! (ಡಾಲ್ತ. ೨೨೦). [ಸಂ.]

ವಿಪ್ಲವಮೂರ್ತಿ (ನಾ). ನಾಶಮಾಡುವಂತಹ ವ್ಯಕ್ತಿ ; ಧ್ವಂಸಮಾಡುವ ಸ್ವರೂಪವುಳ್ಳವನು : ವಿಲಯದ ವಿಪ್ಲವಮೂರ್ತಿಯು ನಾನು . . . ರುದ್ರನು ನಾನು (ಪಾಂಚಜ. ೧೫-೬). [ಸಂ.]

ವಿಪ್ಲುತ (ಗು). ೧. (ಗಾಳಿಪ್ರವಾಹಗಳಿಂದ) ನೂಕಲ್ಪಟ್ಟ , – ಹೊಡೆದುಕೊಂಡು ಹೋದ, – ತೇಲಿಹೋದ. ೨. ಮುಳುಗಿದ. ೩. ಕ್ಷೋಭೆಗೊಂಡ ; ಕೆರಳಿಸಲ್ಪಟ್ಟ. ೪. ಕೆದರಿದ ; ಚೆದರಿದ. ೫. ಹಾಳಾದ ; ನಾಶಗೊಂಡ. ೬. ಕಾಣದಾದ ; ಮರೆಯಾದ. ೭. ಅಪಕೀರ್ತಿಗೆ ಗುರಿಯಾದ. (ನಾ). ೮. [ನಾಟ್ಯ] ದೃಷ್ಟಿಚಲನೆಗಳಲ್ಲಿ ಒಂದು ಬಗೆ ; IP ''ರೆಪ್ಪೆಗಳನ್ನು ಅದಿರಿಸುತ್ತ ಚಂಚಲದೃಷ್ಟಿಯಿಂದ ಅರೆಗಣ್ಣಲ್ಲಿ ನೋಡುವುದು. ಉನ್ಮಾದ, ಚಾಪಲ್ಯ, ದುಃಖ, ಕಷ್ಟ, ದೈನ್ಯತೆ ಇವುಗಳನ್ನು ಅಭಿನಯಿಸುವಾಗ'' (ಲಾಸ್ಯರಂ. ೨೭೧ ಗದ್ಯಾನುವಾದ) : ಅದಿರ್ವುದು ಚಂಚಲದಿಂದಂ ಪುದುಗೊಂಡರೆ ಪುಟಮದುಂತೆ ವಿಪ್ಲುತಮೆನಿಕುಂ (ಲಾಸ್ಯರಂ. ೩-೩೭). [ಸಂ.]

ವಿಫಲ (ಗು). ೧. ಫಲವಿಲ್ಲದ ; ವ್ಯರ್ಥವಾದ ; ನಿಷ್ಪ್ರಯೋಜಕವಾದ: 'ವಿಫಲೋಕ್ತಿ' ಪರಾ. (ನಾ). ೨. ಉಪಯೋಗವಿಲ್ಲದುದು ; ನಿರರ್ಥಕವಾದುದು : ಆ ಗುಣವತಿ ಫಲವತಿ ತಾನಾಗಯುಮಿದು ವಿಫಲಮೆಂದು ವತಿಗುತ್ಪವಮಂತಾಗದು ಸಂಸೃತಿ ಫಲವತಿಯಾಗಿರೆಯುಂ ಯೋಗಿಗುತ್ಪವಂ ಪುಟ್ಟದವೋಲ್ (ಜಗವಿ. ೨-೫೩).

ವಿಫಲನಾಗು = ಫಲವಿಲ್ಲದವನಾಗು ; ಸೋಲು : ಗಣಪತಿ ಲಾಟೀನನ್ನು ಮೇಲಕ್ಕೆತ್ತಿ ದೀಪದ ಬೆಳಕಿನಲ್ಲಿ ಬಂದವರ ಗುರುತುಹಿಡಿಯಲು ಯತ್ನಿಸಿ ವಿಫಲನಾಗ (ಪದ್ಮಸ. ೧೮೮). ವಿಫಲವಾಗು = ವ್ಯರ್ಥವಾಗು ; ಪ್ರಯೋಜನಕ್ಕೆ ಬಾರದಾಗು : ರಣಮುಖದೊಳೀಕಾದಶೋಕ್ಷೋಹಿಣಿಯ ಗೆಲಿದುದು ವಿಫಲವಾದುದು . . . ಎಂದನಾ ಭೀಮ (ಕುವ್ಯಾಗ. ೪-೫೦). [ಸಂ.]

ವಿಫಲತೆ (ನಾ). ಉಪಯೋಗವಿಲ್ಲದಿರುವಿಕೆ ; ನಿಷ್ಪ್ರಯೋಜಕತೆ : 'ವಿಫಲತೆವಡೆ' ಪರಾ. [ಸಂ. ವಿಫಲತಾ]

ವಿಫಲತೆವಡೆ (ಕ್ರಿ). ನಿಷ್ಪ್ರಯೋಜಕವಾಗು ; ವ್ಯರ್ಥವಾಗು : ವಿಫಲತೆವಡೆಯಿತು ದೃಷ್ಟಿಯುಮಿಂದಿರದೆ ಕುಜನರ ಸೇವೆಯ ತೆರದೆ (ಗಂಜೂಪ. ೧೩೬-೬೭).

[ವಿಫಲತೆ + ಪಡೆ]

ವಿಫಲೋಕ್ತಿ (ನಾ). ಉಪಯೋಗಕ್ಕೆ ಬರದ ಮಾತು ; ಕಾಡುಹರಟೆ : ಎಮ್ಮಯ ಜಂಗಮವನಾಸಕ್ತಿಯಲಿ ಮ್ಲುನ್ನಿಸದಿರಲು ವಿಫಲೋಕ್ತಿಯದು ಶಿವಪೂಜನಂ ಸ್ಥಾವರವು ನಿಷ್ಫಲವು (ಬಸವ. ೨೬-೪೮). [ಸಂ.]

ವಿಬುಧ (ನಾ). ೧. ಪಂಡಿತ ; ವಿದ್ವಾಂಸ : ತಳಿರ್ಗಳವೋಲ್ ಮೆಲ್ಲಿದುವೀ ತಳಂಗಳ್ . . . ಎಂಬುದನಾಕುಳವಿಲ್ಲದೆ ವಿಬುಧರಱಿಗೆ ಧ್ವರ್ಮೋಪಮೆಯಂ (ಕವಿರಾ. ೩-೭೧) ; ಅವಧರಿಪುದು ವಿಬುಧರ್ . . . ಮೆಚ್ಚಿ ಕೈಕೊಳ್ಳುದಿದಂ (ಶಮದ. ೪, ೬೧೫). ೨. ಸುರ ; ದೇವತೆ : ಆ ವಿಬುಧರ್ ಮುದದಿಂ . . . ಮೇರುಗಿರಿಗೇಟ್ರಂದರ್ (ಜಗವಿ. ೨-೧). ೧,೨: ಸುಕುಲೀನಂ ವಿಬುಧಾನ್ವಿತಂ . . . ಸುಧರ್ಮಧರನಾಗಿರ್ದುನ್ನತಂ ತಾನೆನಲ್ ಸಕಳಾಕ್ಷ್ಮಾಧರರಾಜನಂದೆಸದಂ ಭೂಮಧ್ಯದೊಳ್ ಲಕ್ಷ್ಮಣಂ (ಸೇಮಿವಿ. ೧-೩). ೩. ಚಂದ್ರ.

ವಿಬುಧಸಂತರ್ಪಣ = ಪಂಡಿತಜನರನ್ನು ತೃಪ್ತಿಗೊಳಿಸುವವನು ; ಒಂದು ಬಿರುದು : ಕೊಂಕಣದಲ್ಲಳಂ ಗಣ್ಡರ ಮೇರುಮಾಶ್ರಿತ xxx ತದು ವಿಬುಧಸನ್ತರ್ಪಣಂ ಮಂಡಳಿತಮುಖದರ್ಪಣಂ (ಕ್ಞ. IV, ೪೧-೬ ; 12 ನಹು ಶತ). [ಸಂ.]

ವಿಬುಧನುತ (ನಾ). ೧. ವಿದ್ವಾಂಸರಿಂದ ವಂದಿಸಿಕೊಳ್ಳುವವನು. ೨. ದೇವತೆಗಳಿಂದ ನಮಸ್ಕರಿಸಿಕೊಳ್ಳುವವನು. ೧,೨ : ಅರಿಕಾಮಧ್ವಂಸಿ ನಾಗವ್ರಜಮಯಕಟಕಂ. . . ವಿಬುಧನುತನುಮಾ ಕಾಮಿನೀಜೀವಿತೇಶಂ ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿನೇತ್ರಂ (ಜಗವಿ. ೧-೩).

[ಸಂ.]

ವಿಬುಧಪತಿ (ನಾ). ೧. ವಿದ್ವಾಂಸರಿಗೆ ಒಡೆಯನಾದವನು. ೨. ದೇವತೆಗಳಿಗೆ ಒಡೆಯನಾದವನು ; ದೇವೇಂದ್ರ ; ಇಂದ್ರ : ವಿಬುಧಪತಿಸಿವಹವಂದಿತ ನಿಬಿಡಪದಾಂಬುರುಹನಂ . . . ಜಿನನಂ . . . ವಂದಿಸಿದರ್ (ಸುಚಮಾ. ೪-೬೮) ; ಶ್ರೀರಮಣ ವಿಬುಧಪತಿ ವಾರಿಜಭವಾದಿವ್ಯಂದಾರಕ . . . ಪಾಲಿಪುದೆಸಗೆ ಚಾರುಮತಿಮುಂ (ಕಬ್ಬಕ್ಕೆ. ೧). ೧,೨ : ಆ ರಾಜೇಂದ್ರಂ ವಿಬುಧಪತಿಯಾಗಿಯುಂ ಗೋತ್ಪಾರಿಯಲ್ಲು (ನಾಗಕು. ೨-೪೬ ವ). [ಸಂ.]

ವಿಬುಧಭೂಜ (ನಾ). ೧. ದೇವಲೋಕದ ವೃಕ್ಷ ; ಕಲ್ಪತರು. ೨. ಕಲ್ಪತರುವಿನಂತಿರುವವನು ; ಕಲ್ಪವೃಕ್ಷಕ್ಕೆ ಸಮಾನನಾದವನು : ಪುಟ್ಟಿದಂ ಶ್ರೀಭಾಜಂ . . . ಭ್ರಾಜತ್ಕಾಂತಾಮನೋಜಂ ವಿಬುಧವಿಬುಧಭೂಜಂ ಯಶಶ್ಶ್ರೀಸಮಾಜಂ ನೈಜೋನ್ನಂತ್ಯಾಬ್ಧಿರಾಜಂ ಸುವಿಭವ ಸುಮನೋರಾಜಂ ರೇಚರಾಜಂ (ಎಂ. XIV, ೨೮೧-೩೫: 1181). [ಸಂ.]

ವಿಬುಧವರಾಶ್ವ (ನಾ). ದೇವತೆಗಳ ಶ್ರೇಷ್ಠವಾದ ಕುದುರೆ ; ಉಚ್ಚೈಶ್ರವಸ್ಸು : ದೇವಮಣಿಗೂಡಿ ಜಳಧಿಯೊಳಾ ವಿಬುಧವರಾಶ್ವವೊಗೆದಗಲ್ದಿರ್ಪುದವಾ ದೇವಮಣಿಗೂಡಿ ರಾಜಿಸುವೀ ವಿಪುಳತರಾಶ್ವಯುಗಕದೇಂ ಪಾಸಟಿಯೇ (ರಾಜಶೇ. ೧೨-೧೦೫). [ಸಂ.]

ವಿಬುಧಾಲಂಕೃತ (ನಾ). ೧. ಪಂಡಿತರಿಂದ ಭೂಷಿತವಾದುದು. ೨. ದೇವತೆಗಳಿಂದ ಭೂಷಿತವಾದುದು. ೧,೨ : ಸುರೇಂದ್ರಸಭೆಯಂತ ವಿಬುಧಾಲಂಕೃತಮುಂ . . . ಶಿವಸಭೆಯಂತೆ ಸದಾನಂದಿಬಂಧುರಮೆನಿಸಿ ನರೇಂದ್ರಸೂಡ್ಡೋಲಗಂ . . . ಪರಿರಂಜಿಸುತಿರ್ದುದು (ರಾಜಶೇ. ೫-೧೯ ವ). [ಸಂ.]

ವಿಬುಧಾಶ್ರಯ (ನಾ). ೧. ವಿದ್ವಾಂಸರಿಗೆ ಅವಲಂಬನವಾದುದು : ಎನ್ನ ದಾನಮಿದಾಗಳುಂ ಮಧುಪಾಶ್ರಯುಂ ಧರೆಗವ್ಯವಚ್ಛಿನ್ನದಾನಮಿದಾಗಳುಂ ವಿಬುಧಾಶ್ರಯಂ (ಪಂಪಭಾ. ೧-೭) ; ಪ್ರಿಯದಲುಂಬುದು ಮೇಣು ವಿಬುಧಾಶ್ರಯ ದಲುಂಬುದು ಮಾನವರಿಗಿದು ನಿಯತವಿಂತಲ್ಲದೊಡೆ ಕೇಳ್ ಕೌರವರ ರಾಯ ಪ್ರಿಯನು ನೀನಲ್ಲೆಮಗೆ ವಿಬುಧಾಶ್ರಯವು ತಾ ಮುನ್ನಿಲ್ಲ ನಿನ್ನಾಲಯವಲೆಮಗೆಂತೂಟ ಸಂಭವಿಸುವುದು (ಕುವಾ.ಬಿ. ೪-೬೯). ೨. ದೇವತೆಗಳಿಗೆ ಆಶ್ರಯಸ್ಥಾನವಾದುದು; ಸ್ವರ್ಗ. ೩. ಪಂಡಿತರಿಗೆ ಆಶ್ರಯವಿತ್ತಿರುವವನು. ೪. ದೇವತೆಗಳಿಗೆ ಆಸರೆ ನೀಡಿದವನು ; ಒಂದು ಬಿರುದು. ೩,೪ : ಮೇರುಗಿರೀಂದ್ರದನ್ತೆ ವಿಬುಧಾಶ್ರಯನೀಶ್ವ ರನನ್ತುಮೇಶಂ . . . ನಗರ್ದ್ಯಾಹವಮಲ್ಲವಲ್ಲಭ (ಎಕ. VII. ಶಿಕಾ. ೧೧೮ ಬಿ : 1054).

[ಸಂ.]

ವಿಬುಧೇಶ್ವರ (ನಾ). ದೇವತೆಗಳ ಒಡೆಯ ; ಇಂದ್ರ : ಅರಿಗೋತ್ರಭೀದಿ ವಿಬುಧೇಶ್ವ ರನಲ್ಲಂ ಧೃತಕಳಾಕಳಾಪಂ ದೋಷಾಕರನಲ್ಲಂ . . . ಭೂಪಾಳಂ (ಕವಿರಾ. ೩-೧೧೨).

[ಸಂ.]

ವಿಬೋಧ (ನಾ). ೧. (ನಿದ್ರೆಯಿಂದ) ಎಚ್ಚರಗೊಳ್ಳುವಿಕೆ. ೨. ಬುದ್ಧಿ ; ಜಾಣ್ಮೆ. ೩. ಅರಿವು ; ಜ್ಞಾನ ; ತಿಳಿವಳಿಕೆ. ೪. ಗಮನವಿಲ್ಲದಿರುವಿಕೆ ; ಲಕ್ಷವಿಲ್ಲ ದಿರುವುದು. ೫. [ಕಾವ್ಯಮೀ] ಮೂವತ್ತು ಮೂರು ಸಂಚಾರಿಭಾವಗಳಲ್ಲಿ ಒಂದು ; ನಿದ್ರೆಯಿಂದ ಏಳುವುದು, – ಎಚ್ಚರಗೊಳ್ಳುವುದು : ನಿದ್ರೆಯಿಂದ ಎಚ್ಚರಗೊಳ್ಳುವುದು ವಿಬೋಧ (ಭಾರಮೀ. ೩೪೭). ೬. ಭಾಣಿಕೆಯೆಂಬ ಉಪರೂಪಕದ ಏಳು ಅಂಗಗಳಲ್ಲಿ ಒಂದು : ಭಾಣಿಕಾ – ಇದರಲ್ಲಿಯೂ ಒಂದೇ ಅಂಕ . . . ಉಪನ್ಯಾಸ, ವಿನ್ಯಾಸ, ವಿಬೋಧ, ಸಾಧ್ಯಸ, ಸಮರ್ಪಣ, ನಿವೃತ್ತಿ, ಸಂಹಾರ ಎಂಬ ಏಳು ಅಂಗಗಳು (ಸಂನಾಬಿ. ೩೭).

[ಸಂ.]

ವಿಬೋಧಿತ (ಗು). ಜ್ಞಾನವನ್ನು ಹೊಂದಿದ , –ಪಡೆದ : ಭೂರಿಕಳಾವಿಬೋಧಿತ ಸುಧಾಕರರೂರ್ಜಿತ ಸಾಧುಸಂಘನಿಸ್ತಾರಕರಂಗಜಾತ ಮಹಿಜಾತವಿದಾರಕರೆಂದು ಬಣ್ಣಿಪುದು ವಾರಿಧಿವೇಷ್ಟಿತಭೂರಿಭೂತಳಂ (ಸುಕುಮಾ. ೧-೨೨).

[ಸಂ.]

ವಿಭಂಗ (ಗು). ೧. ಒಡೆದ ; ಮುರಿದ ; ಭಗ್ನಗೊಂಡ : ಆಗಸಮ ಮೇಲೆ ಕೆಡವಂತೆ ನೆಲಂ ಪೆಡಂಮಗುಲ್ಲು ಕವಿದಿಕ್ಕಿದಂತೆ ತೊಟ್ಟನೆ ಪುಟ್ಟಿದತಿಭಯದಿಂ ವಿಭಂಗಮನರಾಗಿ . . . ಮೂದಲಿಸುತ್ತುಂ (ಸುಕುಮಾ. ೧೧-೪೨ ವ). (ನಾ). ೨. ಒಡೆಯುವಿಕೆ ; ಮುರಿಯುವಿಕೆ. ೩. ತಡೆಯುವುದು ; ಅಡ್ಡಿ ; ಪ್ರತಿರೋಧ. ೪. ಮುರುಟಿಕೊಳ್ಳುವಿಕೆ ; ಸಂಕುಚಿತಗೊಳ್ಳುವಿಕೆ. ೫. ಮಡಿಕೆ ; ಸುಕ್ಕು. ೬. ಮೆಟ್ಟಿಲು ; ಸೋಪಾನ. ೭. ಭಾಗ ; ವಿಭಾಗ. ೮. ಭಂಗಗೊಳಿಸಿದವನು ; ನಾಶಪಡಿಸಿದವನು : ಮಂಗಳಾಂಗ ಪದಂಗಜಾಂಗವಿಭಂಗ ವಾಮಾರ್ಧಾಂಗ ಮಹಿಮೋತ್ತುಂಗ ಕೂಡಲಸಂಗಮೇಶ್ವರಲಿಂಗ ಪೂಂ ತ್ರಾಹಿ (ಬಸಪು. ೬೧-೪೯). ೯. [ಜೈನ] ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯಬಲ್ಲ ಜ್ಞಾನ ; ಮಿಥ್ಯಾಜ್ಞಾನ : ಕುಮತಿ ಕುಶ್ರುತ ವಿಭಂಗ ಮತಿ ಶ್ರುತ ಅವಧಿ ಮನಃಪರ್ಯಯ ಕೇವಲಜ್ಞಾನವಿಕಲ್ಪವಿಂ ಜ್ಞಾನಮಪ್ಪವಿಧಂ (ತತ್ತ್ವಪ್ರ. ೧೭) ; ಕುಮತಿ ಎಂಬುದು ಮತಿಜ್ಞಾನದ . . . ವಿಭಂಗ ಎಂಬುದು ಅವಧಿಜ್ಞಾನದ ಆಭಾಸಗಳು (ಜೈನಧ. IV. ಮುನ್ನುಡಿ).

[ಸಂ.]

ವಿಭಂಗಜ್ಞಾನ (ನಾ). = ವಿಭಂಗ ೯ : ವಜ್ರದಾಡಂ . . . ಆತನಂ ಕಂಡು ತನ್ನ ವಿಭಂಗಜ್ಞಾನದಿಂದೆನ್ನ ಪಗೆವನೀತನೆಂದಱಿದು . . . ಕಾಡಿ ಕೊಲೆ (ವಡ್ಡಾರಾ. ೧೪೫-೮) ; ಅರವಿಂದಂ ಕುರುವಿಂದನಂ ಕರೆದುತ್ತನ್ನ ವಿಭಂಗಜ್ಞಾನದಿಂ ಮೃಗಂಗಳರ್ದೆಡೆಯನಱಿದು . . . ಪೇಟ್ಟೊಡೆ (ಆದಿಪು ೧೨-೧೪ ವ).

[ಸಂ.]

ವಿಭಂಗಜ್ಞಾನಿ (ನಾ). [ಜೈನ] ವಿಭಂಗಜ್ಞಾನವನ್ನು ಹೊಂದಿದವನು : ವಿಭಂಗಜ್ಞಾನಿ ಮಿಥ್ಯಾದೃಷ್ಟಿಗಳಿಂ ಲೋಕಾಸಂಖ್ಯೇಯಭಾಗಮುಂ ದೇಶೋನಾಷ್ಟಚತು ರ್ದಶಭಾಗಮುಂ ಸರ್ವಲೋಕಮುಂ ಮೇಣ್ ತೀಡಪಟ್ಟುತ್ತು (ತತ್ತ್ವಪ್ರ. ೨೯).

[ಸಂ. ವಿಭಂಗಜ್ಞಾನಿನ್]

ವಿಭಂಗತಾಳ (ನಾ). [ಸಂಗೀತ] ಒಂದು ಬಗೆಯ ತಾಳ : ಭಂಗತಾಳ ಉಪಭಂಗತಾಳ ವಿಭಂಗತಾಳ ವಿತಾಳ ಶುದ್ಧತಾಳ ಅನುತಾಳವೆಂಬಾಱು ವರ್ಗ ಸಂಖ್ಯಾಭೇದವಾಗಿಹವೆಂದು ಪೇಳ್ದ ಭರತಶಾಸ್ತ್ರಪ್ರವೀಣರಪ್ಪ ತಾಳಧಾರಿಗಳಂ (ಎವೀಕ. ೨೩೮). [ಸಂ. ವಿಭಂಗತಾಲ]

ವಿಭಂಗಿತ (ಗು). ೧. ಒಡೆದುಹೋದ. ೨. ವಿಭಾಗಹೊಂದಿದ. ೩. ನಾಶವಾದ : ಮಂಗಳದ ಸರ್ವಾಂಗಲಿಂಗಿ ವಿಭಂಗಿತಾನಂಗಪ್ರಸಂಗಿ ಸುರಂಗಿ (ಬಸಪು. ೭-೩೭).

[ಸಂ.]

ವಿಭಂಗಿಸು (ಕ್ರಿ). ಕೆಡಿಸು ; ಭಗ್ನಗೊಳಿಸು ; ಹಾಳುಮಾಡು : ಭವಾನಿ ಭೋಂಕನೆ ತಪಮಿರ್ದಳುಗ್ರ ತಪಮಂ ತಪಮಂ ತಪಮಂ ವಿಭಂಗಿಸಲ್ (ಗಿಂಕ. ೯-೧೨) ; ಅಂಗುಟದಿಂ ರಸಾತಳಕೆ ಮೆಟ್ಟಿದನಾ ದಶಕಂಠನಂ ಮಹಾಸಂಗರದೊಳ್ ವಿಭಂಗಿಸಿದಾಂತಸುರರ್ಕಳಂ . . . ಗಿರಿಶಂ (ಶಬಶಂ. ೪-೧೨೯). [ವಿಭಂಗ + – ಇಸು]

ವಿಭಕ್ತ (ಗು). ೧. ಭಾಗವಾದ ; ಪಾಲಾದ. ೨. ಬೇರೆಮಾಡಿದ ; ಪ್ರತ್ಯೇಕಗೊಳಿಸಿದ. (ನಾ). ೩. ಭಾಗವಾದುದು ; ಪಾಲಾದುದು. ೪. ಪ್ರತ್ಯೇಕವಾದುದು ; ಭಿನ್ನವಾದುದು. ೫. ಭಾಗ ; ಪಾಲು ; ಅಂಶ. ೬. ಪ್ರತ್ಯೇಕಗೊಂಡ ವ್ಯಕ್ತಿ ; ಬೇರ್ಪಟ್ಟವನು : ಅಹಂಕಾರದೃಷ್ಟಿಯಿಂದ ಮಮಕಾರ ಭಾವದಿಂದ ಜೀವಿಯು ಶಿವನಿಂದ ವಿಭಿನ್ನಸಂಸಾರಿಯಾಗಿದ್ದಾನೆ ; ವಿಭಕ್ತವಾಗಿದ್ದಾನೆ (ಭಾರದ. ೧೧೮).

[ಸಂ.]

ವಿಭಕ್ತಿ (ನಾ). ೧. ಪ್ರತ್ಯೇಕವಾಗುವಿಕೆ ; ಭಾಗವಾಗುವಿಕೆ. ೨. ಪ್ರತ್ಯೇಕತೆ ; ಭಾಗ. ೩. ಆಸ್ತಿಯ ಒಂದು ಭಾಗ ; ಪಾಲು ; ಹಿಸ್ಸೆ. ೪. [ವ್ಯಾಕ] ನಾಮಪ್ರಕೃತಿಯ ಲಿಂಗ ವಚನ ಪ್ರತ್ಯಯಗಳ ಮೇಲೆ ವಾಕ್ಯದಲ್ಲಿ ಉಳಿದ ಪದಗಳೊಂದಿಗೆ ಸಂಬಂಧವನ್ನು ಕಲ್ಪಿಸಿ ಬೇರೆ ಬೇರೆ ಅರ್ಥಗಳನ್ನು ತಂದು ಕೊಡುವ ಪ್ರತ್ಯಯವು ಸೇರಿ ಸಿದ್ಧಿಸುವ ಅನ್ವಯ ; IP ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮಿ, ಷಷ್ಠೀ ಮತ್ತು ಸಪ್ತಮಿ ಎಂದು ಸಂಖ್ಯಾನುಕ್ರಮದಲ್ಲಿ ಏಳು ಮತ್ತು ಸಂಬೋಧನಾವಿಭಕ್ತಿಯೂ ಸೇರಿ ಎಂಟು ವಿಭಕ್ತಿಗಳಿವೆ : ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದ ನಿರ್ಧಾರದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞೆನಿಕ್ಕುಂ (ಕವಿರಾ. ೧-೧೧೪) ; ಪದದೊಳರ್ದರ್ಥಮಂ ತಂತಮ್ಮರ್ಥಾನುಗುಣವಾಗಿ ವಿಭಾಗಿಸಿ ಕುಡುವದಱಿಂ ವಿಭಕ್ತಿಯೆನಿಸುಗುಂ (ಶಮದ. ೬೫ ವ್ಯಕ್ತಿ) ; ಕೆಲವು ವಿಭಕ್ತಿಗಳಿಗೆ ಎರಡು ಮೂರು ಪ್ರತ್ಯಯಗಳಿರುವುದಷ್ಟೆ (ಕೃಪ್ರಾ. ೩೮). ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ಜಲಧಿ ಮಾತೃಕೆ ವಾರಕುಲಗಿರಿಗಳು ವಿಭಕ್ತಿ ದ್ವೀಪ ಸರ್ಪಾವಳಿ ಮುನೀಶ್ವರರುಗಳ ಧಾತುಗಡಣದ ವೇದಿಗಳ ತಿಳಿದು . . . ನಡವವರುಗಳು ನಿರ್ಮಳದರೆಡಹದೆ ಬೆರಸಿಕೊಂಬರು ಮುಕ್ತಿರಾಜ್ಯವನು (ಕುವಾ.ಬಿ. ೪-೩೪).

[ಸಂ.]

ವಿಭಕ್ತಿಗಣ (ನಾ). [ವ್ಯಾಕ] ಅನೇಕ ವಿಭಕ್ತಿಪ್ರತ್ಯಯಗಳ ಸಮೂಹ : ಸಂಗತಿಯಿಂದ ನಾಮಪದಂಗಳವೇಕಾರ್ಥಗತಿಯೊಳಾಗೆ ಸಮಾಸಂ ಸಂಗಳಿಸುಗುಂ ವಿಭಕ್ತಿಗಣಂ ಗಳ್ಗಂತರದೊಳಲ್ಲಿ ಲೋಪಮದಕ್ಕುಂ (ಕಾವ್ಯಾವ. ೧೯೯).

[ಸಂ.]

ವಿಭಕ್ತಿಪಲ್ಲಟ (ನಾ). [ವ್ಯಾಕ] "ಒಂದು ವಿಭಕ್ತಿಗೆ ಪ್ರತಿಯಾಗಿ ಮತ್ತೊಂದು ವಿಭಕ್ತಿ ಕೆಲವೆಡೆಗಳಲ್ಲಿ ವಿಕಲ್ಪದಿಂದ ಬರುವುದು" (ಕೃಪ್ರಾ. ೫೬) : ಕೈಯಲ್ಲಿ ಬರೆದೆನು . . . ಕೋಲೊಳ್ ಬಡಿದಂ ಎಂಬಲ್ಲೆಲ್ಲ ಸಪ್ತಮಿವಿಭಕ್ತಿಪ್ರತ್ಯಯಗಳು ಕರಣಾರ್ಥಕವಾಗಿ ತೃತೀಯೆಗಳೇ ಆಗಿರುವುದು ಸ್ಪಷ್ಟವಿದೆ. ಈ ಪರಿಪಾಠವನ್ನು ವ್ಯಾಕರಣಕಾರರು "ವಿಭಕ್ತಿಪಲ್ಲಟ" ಎಂದಿರುವರು (ಸಂಶೋಧ. ೫೯).

[ಸಂ.]

ವಿಭಕ್ತಿಪ್ರತ್ಯಯ (ನಾ). [ವ್ಯಾಕ] "ವಾಕ್ಯದಲ್ಲಿ ನಾಮಪ್ರಕೃತಿಗೆ ಇರುವ ಸಂಬಂಧವನ್ನು ತಿಳಿಸಲು ಸೇರಿಸುವ ಪ್ರತ್ಯಯಕ್ಕೆ ವಿಭಕ್ತಿಪ್ರತ್ಯಯವೆಂದು ಹೆಸರು" (ಮಧ್ಯಮ. ೫೩) : ವಿಭಕ್ತಿಪ್ರತ್ಯಯಗಳು ಏಕವಚನದಲ್ಲಿ ಪ್ರಕೃತಿಯ ಮುಂದೆಯೂ ಬಹುವಚನದಲ್ಲಿ ಬಹುವಚನಪ್ರತ್ಯಯದ ಮುಂದೆಯೂ ಸೇರುತ್ತವೆ (ಕೃಪ್ರಾ. ೩೭).

[ಸಂ.]

ವಿಭಕ್ತಿರೂಪಕ (ನಾ). [ಕಾವ್ಯಮೀ] ರೂಪಕಾಲಂಕಾರಗಳಲ್ಲಿ ಒಂದು ವಿಧ ; ರೂಪಕಗಳನ್ನು ಪ್ರತ್ಯೇಕಿಸಿ ಹೇಳುವ ಅಲಂಕಾರ : ವಿಭಕ್ತಿರೂಪಕಕ್ಕೆ –

ಅಂಬುಜಸೂತ್ರಮೆಂಬ ವೆಣೆದಾವಣೆಯಂ ವಜೆದಾವಲೆಂಬ ಬಾಳ್ಗಂಬಮನೊತ್ತಿ ಕಟ್ಟು ಲತೆಯೆಂಬ ತುರಂಗಮುಮಂ ಪೊರಳ್ಚಿ . . . ಮದಾಳಿಯೆಂಬ ಗುಂಡಂ ಬಲಿಯಟ್ಟ ಸೋವುದು ಸಮಿರಣವಾರಣಮಾ ಪ್ರದೇಶದೊಳ್ (ಕಾವ್ಯಾವ. ೬೯೯). IP ಇಲ್ಲಿ ''ಎಂಬ'' ಎನ್ನುವ ಪದದಿಂದ ಪ್ರತ್ಯೇಕಪ್ರತ್ಯೇಕವಾಗಿ ಸ್ಫುಟಗೊಳಿಸಿ ಹೇಳಿರುವುದೇ ವಿಭಕ್ತಿರೂಪಕ. [ಸಂ.]

ವಿಭಕ್ತಿಸ್ವರ (ನಾ). [ವ್ಯಾಕ] ವಿಭಕ್ತಿಪ್ರತ್ಯಯದ ಅಂತ್ಯಸ್ವರ : ಸ್ವರಮಿದಿರೊಳರೆ ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ (ಶಮದ. ೫೨). [ಸಂ.]

ವಿಭಗ್ನ (ಗು). ಮುರಿದ ; ಹಾಳಾದ : ವನಸೌರಭಭರವಿಭಗ್ನದಳವಿಳಸಿತ ಮಲ್ಲಿಕಾಮಾಲಾಲಿಸಕ್ತ ಕಾಂಚನಚಂಚರೀಕಾಯಮಾನಂಗಳಾದರಸನ ಕಣ್ಣಳಿದು ತನ್ನ ಮನೆಗೆ ಪೃಥ್ವೀಷೇಣೆ ಪೋದೊಡಂ (ಶಾಂತಿಪು. ೯-೫೧ ವ). [ಸಂ.]

ವಿಭಜನ (ನಾ). ೧. ಭಾಗವಾಗುವಿಕೆ ; ಪ್ರತ್ಯೇಕಗೊಳ್ಳುವಿಕೆ : ವಿಭಜನವು ಎಷ್ಟರ ಮಟ್ಟಿಗೆ ಆಗಿದೆಯೆಂಬುದನ್ನು ಕೆಂಪು ಮತ್ತು ಅಲ್ಟ್ರಾವಾರಶ್ಮಿಗಳಿರುವ ಕೋನದಿಂದ ಅಳೆಯಬಹುದು (ಭಾತಿವಿ. ೧೮೧). ೨. ಭಾಗಮಾಡುವಿಕೆ ; ವಿಭಾಗಿಸುವಿಕೆ. [ಸಂ.]

ವಿಭಜನೆ (ನಾ). = ವಿಭಜನ ೧ : ಕಾಯಿಸುವುದರಿಂದ ವಸ್ತುಗಳು ರಾಸಾಯನಿಕವಾಗಿ ವಿಭಜನೆಹೊಂದುತ್ತವೆ (ರೂಢಿ). [ಸಂ. ವಿಭಜನ]

ವಿಭಜಿಸು (ಕ್ರಿ). ಬೇರೆ ಬೇರೆ ಮಾಡು ; ವಿಭಾಗಿಸು ; ವಿಂಗಡಿಸು : ಬಿಟ್ಟದಂತೆ ರಾಶಿಬೀಳುತ್ತಿದ್ದ ಈ ಪ್ರಯೋಗಗಳನ್ನು ಓದಿ, ವಿಂಗಡಿಸಿ, ವಿಭಜಿಸಿ, ಕ್ರಮವಾಗಿ ಜೋಡಿಸಿ . . . ಶಬ್ದದ ಚರಿತ್ರೆಯನ್ನು ಕಡೆಯುವ ಕೆಲಸವು ನಿಘಂಟಿನ ಸಂಪಾದಕವರ್ಗಕ್ಕೂ ಅವರ ಸಹಕಾರಿಗಳಿಗೂ ಬಿದ್ದಿತು (ಸಮಾಲೋ. ೨೬೯). [ವಿಭಜನ + − ಇಸು]

ವಿಭವ (ನಾ). ೧. ಐಶ್ವರ್ಯ ; ಸಿರಿ ; ಸಂಪತ್ತು : ಮತ್ಮಾವ್ಯಮಂ ಮೆಚ್ಚ ಕೇಳ್ದ ಗುಣಂಗೊಳ್ವ ಜನಕ್ಕಮಕ್ಕೆ ವಿಭವಂ ಭದ್ರಂ ಶುಭಂ ಮಂಗಳಂ (ಅಜಪು. ೧೨-೨೭) ; ಆಶ್ರಿತಪರ್ವವಿಭವ ವೇಣುಗಳೊಳು ಸ್ವಸ್ಥತಾಗತಿಮುಕ್ತರಾದವರೊಳಲ್ಲದಾ ನಾಡೊಳಿಲ್ಲ (ಪಚಕಾ. ೨-೧೧). ೨. ಶಕ್ತಿ ; ಬಲ. ೩. ಹಿರಿಮೆ ; ಘನತೆ : 'ವಿಭವಂಬೆಱು' ಪರಾ. ೪. ತೋರಿಕೆ ; ಪ್ರದರ್ಶನ ; ಡೌಲು : ತತ್ಕಾಲ ಪ್ರೇಮವನಱ್ಯದೆ ವಿಭವಕ್ಕೆ ಮಾಡಿದವನ ಭಕ್ತಿ ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ (ಬಸವ. ೨೨೭). ೫. ಅಂದ ; ಸೊಗಸು : ''ಸೊಗಸುಮಲಂಪುಂ ವಿಭವಮದು'' (ಕವಿಕಂ. ೧೩೯). ೬. ಅರುವತ್ತುಸಂವತ್ಸರಗಳಲ್ಲಿ ಎರಡನೆಯದು : ಆ ವರುಷಮೇ ಪ್ರಭವ, ವಿಭವ . . . ಅಕ್ಷಯವೆಂದಱವತ್ತು ತೆಱನಾಗಿಹುದು (ವಿವಿಣ. ೬೨೧) ; ನಿನ್ನೆ ಹೆಸರೇಳು ನೀರಾದುದಾ ಪ್ರಭವಂ . . . ಇಂದೆನ್ನನೀಚಿಸುವ ವೀಚಿಯಾ ವಿಭವಂ (ಗಿಲಎಂ. ೫೭-೩). ೭. ವೈಭವಯುಕ್ತನಾದವನು : ಸುರರಾಜವಿಭವನಂ ಕಂಡಿರೆ . . . ಕಂಡಿರೆ ಗುಣಿಯಂ ಭವ್ಯಸೇನ್ಯಚಿಂತಾಮಣಿಯಂ (ಸುಬ್ರಮಾ. ೧೨-೨೨). ೮. [ವಿಶಿಷ್ಟಾ] ದೇವರು ಅವತರಿಸುವುದು ; ದೇವರ ಅವತಾರ : ದೇವಮಾನವಮೃಗನಗರೂಪದ ವಾಸುದೇವನ ವಿಭವಂಗಳನು ಆ ವಿಧದೊಡಲವೆತ್ತನುಸರಿಸುವ ಲಕ್ಷ್ಮೀವಧುವನು ವಂದಿಪೆನು (ಹವಿಪು. ೩-೨); ನಾರಾಯಣನು ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾವತಾರ ಎಂಬ ಐದು ಪ್ರಕಾರ ಉಳ್ಳವನು . . . ವಿಭವ ಎಂದರೆ ಸಜಾತೀಯವಾದ ರೂಪದಿಂದ ಆವಿರ್ಭವಿಸುವುದು. ಮತ್ಸ್ಯ ಮೊದಲಾದ ರೂಪಗಳೆಲ್ಲ ವಿಭವಗಳು (ಭಾತತ್ತ್ವ. ೭೬೯). [ಸಂ.]

ವಿಭವಂಬೆಱು(ಕ್ರಿ). ಹಿರಿಮೆಯನ್ನು ಪಡೆ ; ಘನತೆಯನ್ನು ಹೊಂದು : ಮತ್ತಮಲ್ಲಿ ಮನೋಜ್ಞತರವೆನಿಸಿ ನಿರುಪಮಾನವಿಭವಂಬೆತ್ತು . . . ಶೋಭಿಸೆಯುಂ (ಶಬಿಶಂ. ೧-೪೧ ವ). [ವಿಭವ + ಪೆಱು]

ವಿಭವೋದಯ (ನಾ). ೧. ವೈಭವಪ್ರಾಪ್ತಿಯ ಕಾಲ,—ಸಂದರ್ಭ ; ಉಚ್ಚ್ರಾಯಕಾಲ : ವಿಭವೋದಯದೊಳ್ ಕೆಲಬರ್ ಪ್ರಭುಗಳ್ ಕರಮೆಸದು ಕರ್ಮವಶರಲಿವಾಗಳ್ ಪ್ರಭುಗೆಟ್ಟ[ಡಗುವ ತೆಱದಿಂ ನಭದಿಂ ಗಮಿಸಿದನ]ಡಂಗಿದಂ ದಿವಸಕರಂ (ಬಂಹರಿ. ೨-೧೦). ೨. ಐಶ್ವರ್ಯವಂತನಾದವನು ; ಹಣವಂತ : ಸಕಲಜನವಿನುತನಂ ಶತಮಖಸದೃಶವಿಶಾಲವಿವಿಧವಿಭವೋದಯನಂ . . . ಕಂಡನಣುವನಾ ರಾಘವನಂ (ಕವಿಪಾ. ೨-೩೮). [ಸಂ.]

ವಿಭಾಕರ (ನಾ). ೧. ಸೂರ್ಯ ; ರವಿ : ವಿಭಾಕರನಸ್ತಮಿಸಿದನು ತಾವರೆಗಳ ವೊಗಂಗಳಾಗಳು ತಾವರೆಗಳಾಗೆ (ಬಸಪು. ೧೦-೪೪) ; ಶ್ರೀವಿಯತ್ಕಳವೆಂಬ ಸೀಮೆಗಿರುಳೊಳ್ ಪಗಲು ಬೇಮಸದೆ ಹಾಱಿ ವರ್ಷಾಂಬುಪೂರ್ಣತ್ವವೆತ್ತಾ ವಿಭಾಕರ ನೆಂಬ ಕರಗಮಂ ಪೊತ್ತುತ್ತರಾಸೆಯಂ ನಡೆಯಲೊಡೆದು ಶೀವಿದುದಕಂ ಸುರಿವೊಲು ಕಱೆಯೆ ಮಳೆ (ಭಾವಚಿಂ. ೬-೪). ೨. ಚಂದ್ರ. ೩. ಅಗ್ನಿ. ೪. ಎಕ್ಕದ ಗಿಡ ; ಅರ್ಕ. [ಸಂ.]

ವಿಭಾಗ (ನಾ). ೧. ಭಾಗಮಾಡುವಿಕೆ ; ವಿಂಗಡಣೆ ; ಹಂಚಿಕೆ : ಪದವರ್ಣ ವಿಭಕ್ತಿವಿಭಾಗದಿಂ . . . ಭಂಗಶ್ಲೇಷಮೆಂದು ಪೇಬಲ್ಪಡೆಗುಂ (ಕಾವ್ಯಾವ. ೭೭೮). ೨. ಪ್ರತ್ಯೇಕವಾಗುವಿಕೆ ; ಬೇರ್ಪಡುವಿಕೆ : ಉಪಾಧ್ಯಾಯನು ಭಾವನಾಪರವಶನಾಗಿ ''ಅವರು ಹೇಗೆ ವಿಭಾಗವಾಗಬೇಕು, ಯಾವ ಯಾವ ಕಡೆಯಿಂದ ಹೋಗಬೇಕು'' ಎಂಬುದನ್ನು ಅಪ್ಪಣೆ ಮಾಡಿದನು (ಮಠನಾ. ೨೦೪). ೩. ಭಾಗ ; ಅಂಶ. ೪. ಪಿತ್ರಾರ್ಜಿತಆಸ್ತಿಯ ಪಾಲು ; ಹಿಸ್ಸೆ : ಎಲ್ಲ ದಾನಮಿತ್ರನೆ . . . ವಿಭಾಗದ ಮೇರೆಗೆ ನನ್ನ ಭಾಗಕ್ಕೆ ಬಂದ ದ್ರವ್ಯವ ಕೊಡೂಯೆಂದರೆ ನೀನು ಕೊಡುವ ಬಗೆ ಹ್ಯಾಗೆ (ಅರ್ಥಮಾ. ೧೩). ೫. ದೇಶ ಅಥವಾ ರಾಜ್ಯದ ವಿಂಗಡಿಸಿದ ಭಾಗ ,— ವಲಯ: ನಮ್ಮ ರಾಜ್ಯ ದಕ್ಷಿಣರೈಲ್ವೆಯ ವಿಭಾಗಕ್ಕೆ ಸೇರುತ್ತದೆ (ರೂಢಿ). ೬. ಒಂದು ಮೂಲಸಂಸ್ಥೆ ಅಥವಾ ವ್ಯವಸ್ಥೆಯ ಪ್ರತ್ಯೇಕವಾದ ಭಾಗ, — ಶಾಖೆ, — ಇಲಾಖೆ : ನಮ್ಮ ಸಂಸ್ಥೆಯ ಮಾರಾಟವಿಭಾಗದಲ್ಲಿ ಅನೇಕ ರೀತಿಯ ಪುಸ್ತಕಗಳು ದೊರೆಯುತ್ತವೆ (ರೂಢಿ). ೭. [ನ್ಯಾಯ] ನಲವತ್ತುವಿಧವಾದ ಗುಣಗಳಲ್ಲಿ ಒಂದು : ರೂಪ, ರಸ, ಗಂಧ . . . ಸಂಯೋಗ, ವಿಭಾಗ . . . ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಪೊದಸಾ. ೨೭೫). [ಸಂ.]

ವಿಭಾಗಿಸು (ಕ್ರಿ). ೧. ಭಾಗಮಾಡು ; ವಿಂಗಡಿಸು ; ಬೇರ್ಪಡಿಸು : ಬಣ್ಣಿಸಲರಿದಾದೊಡಮೆಸೆವಾ ಋತುಸಂಧಿಯಂ ವಿಭಾಗಿಸಿ ಪೇೞ್ದಂ (ಗಿರಿ. ೭-೬೫) ; ಪದದರ್ಥಮಂ ವಿಭಾಗಿಸುವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂಬುದು (ಶಮದ. ೬೫) ; ದೇಹ ಬೇಱಾತ್ಮ ಬೇಱೆಂದು ವಿಭಾಗಿಸಿ ತನ್ನ ತಾ ನೆಮ್ಮಿ ಭೋಗಿಸಿದರೆ ಕರ್ಮಬಂಧವಿಲ್ಲಾಗಿಯಾ ಭೋಗಿ ತಾನೇ ಯೋಗಿಯಲ್ರೆ (ಭರಚ. ೨-೬೧). ೨. ಒಡೆ ; ಸೀಳು : ದನುಜ ಮನುಜಾಮರಕದಂಬನ ಮನಕೆ ತಾರದಜಾಂಡಮಂಡಲವನು ವಿಭಾಗಿಪ ವೀರವಾನರವರವರೂಥಿನಿಯ . . . ಭಟರು ತೋಱಿದರಾಜು ನಿರ್ಬುದವ (ತೊರಾ. ೧-೬-೧೪). [ವಿಭಾಗ + − ಇಸು]

ವಿಭಾಡ, ವಿಭಾಳ (ನಾ). ಬಡಿದುಹಾಕುವವನು ; ನಾಶಮಾಡುವವನು : ಅಸುರವಿಭಾಡ ನಸುನಗುತುಗ್ರ ವೈಷ್ಣವಬಾಣವನು ಬೆಸಸೆ . . . ಅಡಗಿಸಿತಾ ಶರತ್ರಯವ (ತೊರಾ. ೩-೬-೨೩); ದುರಿತದುರ್ಗವಿಭಾಡ . . . ವಿಮ್ಮ ಸಲಹೆಂದೆನುತ ನಾಮಗಳ ಸ್ಮರಣೆಯಂ ಮಾಡುತ್ತೆತಂದರು (ತುರಂಗ. ೯೫-೧೬). **ವಿಭಾಳ** : ಫಾಲಲೋಚನಚಾಪಗರ್ವವಿಭಾಳನಲ್ಲದೆಯಾ ಧರಿತ್ರಿಯನಾಳಲಾಪರೆ ಮಿಕ್ಕಿನವರು (ಅನಂಹಾ. ೨-೧-೫).

[<- ಮರಾ. ವಿಭಾಂಡಣೇ, ವಿಭಾಡನೇ = ಸೋಲಿಸು, ನಾಶಮಾಡು]

ವಿಭಾಡನ (ನಾ). = ವಿಭಾಡ : ಇವರಲಾ ಶಿವನ ನಿಜಸಂಪ್ರದಾಯದ ಗುರುಗಳು . . . ಭವಭಯವಿಭಾಡನರು ಸಕಲಾಗಮಸ್ತುತ್ಯರವಿರಳಜ್ಞಾನಿಗಳು (ಗುರುಚಾ. ೧-೭೫).

[< ವಿಭಾಡ]

ವಿಭಾಡಿಸು (ಕ್ರಿ). ೧. ಬಡಿದುಹಾಕು ; ನಾಶಮಾಡು : ಗರ್ವಿಸುವ ದಕ್ಷಿಣಪತಿಯ ಮದವಂ ವಿಭಾಡಿಸುವ ಸರ್ವಮಂಗಳೆಯಣುಗ ಬಾರಾ (ಬಸಪು. ೨೪-೩೭) ; ಕಿಮ್ಮಿರ ನೆಂಬವನನಿಮಿಷರಿಗುಬ್ಬಸದ ಖಳನಾತನ ವಿಭಾಡಿಸಿ ಹೊಕ್ಕರವರಾರಣ್ಯಮಂದಿರವ (ಕುವ್ಯಾಅ. ೧-೨೨) ; ಇದಿರಾದ ಖಳರ ವಿಭಾಡಿಸಿ ತಲೆಗಳ ಹೊಯ್ದು ಕೂಡೆ ಬೊಬ್ಬಿಲಿದಾಗ ಹೊಱಿಕಾಹಿನಧಟರು ಪಾಡುವಂಥಗಳ ಮೆಱೆದರು (ಕಂಸವ. ೧೪-೯೪). ೨. ಹೊಡೆ ; ಭೇದಿಸು : ಇದೆ ಮಹಾಧನು ಬಾಣಪಂಚಕವಿದೆ ನಭೋಗ್ರದ ಯಂತ್ರ ಹೊಳೆಯುತ್ತಿದೆ ವಿಭಾಡಿಸಿ ಮೆಱೆವನಾವನು ಬಾಹುವಿಕ್ರಮವ (ಸಂಭಾಪ. ೩೦-೨). ೩. ಹಿಮ್ಮೆಟ್ಟಿಸು ; ಪರಾಜಯಗೊಳಿಸು ; ಸೋಲಿಸು : ಭಾನುಮತಿ ಹೊಱವಂಟಳರಸನ ಮಾನಿನಿಯರು ಸಹಸ್ರಸಂಖ್ಯೆಯೊಳಾನನೇಂದುಪ್ರಭೆ ವಿಭಾಡಿಸೆ ಬಿಸಿಲ ಬೇಗೆಗಳ . . .

ರಥವೇಱಿದರು ದುಗುಡದಲಿ (ಕುವ್ಯಾಗ. ೪-೧೩). ೪. ತೆಗಳು ; ನಿಂದಿಸು ; ಹೀಯಾಳಿಸು : ಧನಮದದಿ ಕುಲಮದದಿ ವಿದ್ಯಾಘನದಿ ಯವ್ವನಮದದಿ ದ್ವಿಜಗುರುವನು ವಿಭಾಡಿಸಿ ನೀನು ತಾನೆಂದೆನುತ ಹೂಂಕರಿಸಿ (ಕುವ್ಯಾಉ. ೩-೪೧) ; ಪೆಣ್ಣಂ ಬಱಿದೆ ಬಯಸಿ ಮೊಗಮಂ ಬಾತಣ್ಣಗೆ ರಣಮಂಡಪದೊಳು ರಕುತದ ಬಣ್ಣದ ಬಾಸಿಗಗಟ್ಟಿಸಿ . . . ಭೂತಮುಮಂ ಬರ್ದುವೊಲೆಯ್ದಿಸುವೆಂ ಎಂದು ವಿಭಾಡಿಸಿ [ಪಾಠಾಂ. ವಿಡಂಬಿಸಿ] ತಗುಳಲ್ (ಜಯಕಾ. ೬-೧೦). ೫. ಕತ್ತರಿಸು ; ತುಂಡರಿಸು : ಕಲಹಕಿದು ಕಡೆಯೆಂದು ಸೀತೆಯನೆಳೆದು ತಂದನು ಸರಿಸಕಾಖಂಡಲವಿರೋಧಿ ವಿಭಾಡಿಸಿದ ನವನಿಜೆಯ ತನುಲತೆಯ (ತೊರರಾ. ೬-೪೧-೪೬).

ವಿಭಾಡಿಸಿಕೊಡು = ಬಲಿಕೊಡು; ಆಹುತಿಯಾಗಿ ನೀಡು: ಬಗೆಯದನ್ನೊಡ ಲಸುರಘಾತಿಗೆ ಮಿಗೆ ವಿಭಾಡಿಸಿ ಕೊಡುವೆನೆಂದೆನೆ ನಗುತೆ ಕುಂತೀದೇವಿ ನುಡಿದಳು ವಿಪ್ರ ಕೇಳೆಂದು (ಕುವ್ಯಾಉ. ೧೦-೧೩).[ವಿಭಾಡ + - ಇಸ್ತು./ಮರಾ. ವಿಭಾಡಣೇ, ವಿಭಾಂಡಣೇ]

ವಿಭಾತ (ನಾ). ೧. ಬೆಳಗಿನ ಹೊತ್ತು ; ಪ್ರಭಾತಸಮಯ ; ಪ್ರಾತಃಕಾಲ : ಆಗಳ್ ವಿಭಾತಸಮಯನಿಯೋಗಮನನವರತ ಪರಮಕಲ್ಯಾಣಶ್ರೀಭಾಗಿನಿ ತೀರ್ಚೆ ಮನಕ್ಕನುರಾಗಂ ಕೈಗಣ್ಮೆ ಸಂತಸಂಬೆರಸಿರ್ದಂ (ವರ್ಧಮಾ. ೧೧-೫೯) ; ಸುಳಿಯಲ್ ವಿಭಾತಪವಮಾನಂ ಪೊಕ್ಕನಕ್ರೂರಂ . . . ವತ್ಸಕುಲಹಂಭಾಘೋಷಮಂ ಘೋಷಮಂ (ಜಗಪಿ. ೫-೭೭). ೨. ಕಾಂತಿ ; ಪ್ರಕಾಶ. [ಸಂ.]

ವಿಭಾತಿ (ನಾ). ೧. ಬೆಳಗಿನ ಕಾಲ ; ಪ್ರಾತಃಕಾಲ. ೨. ಹೊಳಪು ; ಕಾಂತಿ ; ಪ್ರಕಾಶ : ಕರವೀರ ಜಾತಿ ವಕುಳ ಮುಕುಳಕೋಕಹಳವಿಭಾತಿಯಲಿ . . . ಪೂಜಾವಿರಚನಾಲಂಕಾರಮಾಗಿರಲು (ಬಸಪು. ೧೮-೩೯). [ಸಂ. ವಿಭಾತೀ]

ವಿಭಾತಿಕ (ಗು). ಬೆಳಗಿನ ; ಪ್ರಾತಃಕಾಲದ : ಸತಿ . . . ಸರೋಜಮಿತ್ರಮಂಡಲ ಮುದಯಾಚಲಕ್ಕೆ ಬರಲೆರ್ದು ವಿಭಾತಿ ಮುಖ್ಯಮಂಗಳಂಗಳನನುರಾಗದಿಂದೆಸಗಿ . . . ಕುಳ್ಳಿರ್ದು (ಮಹಾನೇ. ೭-೭೫). [ಸಂ.]

ವಿಭಾಮ (ನಾ). (?) : ಹೈದರಲ್ಲಿಖಾನ ಬಹದರವರು . . . ದಂಡಿನ ಮೇಲೆ ಷಬಕೂನು ಮಾಡಿ ಮರುದಿನ ವಿಭಾಮ ಕೊಡಲಾಗಿ ಅವರವರಿಗೆ ಲಡಾಯಿಹತ್ತಿ . . . ಬೆನ್ನುಅಟ್ಟಿ ಬರುವಲ್ಲಿ (ಹೈದರ. ೪೩). [?]

ವಿಭಾವ (ನಾ). ೧. ಭಾವವನ್ನು ಉದ್ದೀಪನಗೊಳಿಸುವ ವಸ್ತು ಅಥವಾ ಕಾರಣ : ನಡೆವುದು ನುಡಿವುದು ಅವಿಚಾರವೆಂದು ಭಾವವಿಭಾವವೆಂದು ಕಂಡೆನಾದರೆ ತಪ್ಪೆನ್ನದು (ಬಸವ. ೪೩೨) ; ಆವಗಂ ಕಟಕದೊಳು ಸೊಡ್ಡಳದೇವ ಬಾಚರಸಂ ಸುಭಕ್ತಿವಿಭಾವದಿಂ ಪರಸಮಯಕೋಳಾಹಳ ಮಹಿಮೆವೆತ್ತು (ಬಸಪು. ೫೩-೩೧). ೨. ನಿರ್ಣಯ ; ತೀರ್ಮಾನ. ೩. ಗೆಳೆಯ ; ಸ್ನೇಹಿತ. ೪. [ಕಾವ್ಯಮೀ] ಸ್ಥಾಯಿಭಾವಗಳನ್ನು ಉಂಟುಮಾಡುವ ಕಾರಣ, — ಹೇತು ; IP ಇದು ರಸೋತ್ಪತ್ತಿಯ ಕಾರಣಗಳಲ್ಲಿ ಒಂದು. ಇದರಲ್ಲಿ ಆಲಂಬನವಿಭಾವ ಮತ್ತು ಉದ್ದೀಪನವಿಭಾವ ಎಂದು ಎರಡು ಬಗೆ : ಭಾವದನುಭಾವದೆಸೆವ ವಿಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ ಭಾವಿಸುವೊಡಾದಿದೇವನ ದೇವೇಂದ್ರನ ಬಗೆಗಮಸದಳಂ ನರ್ತಕಿಯಾ (ಆದಿಪು. ೯-೨೭) ; ಭಾವಂ ವಿಭಾವಮೆಸೆವನುಭಾವಂ ಸಂಚಾರಿಭಾವಮೆಂದಿಂತಿವಱಿಂದಾವಿಷ್ಕೃತಮಕ್ಕುಂ ರಸಂ (ಕಾವ್ಯಾವ. ೭೯೮) ; "ಭಾವ"ದ ಕಾರಣಗಳನ್ನು "ವಿಭಾವ"ಗಳೆಂದೂ, ಕಾರ್ಯಗಳನ್ನು "ಅನುಭಾವ"ಗಳೆಂದೂ, ಕರೆಯುವುದೇ ಸಂಪ್ರದಾಯ (ಭಾರಮೀ. ೩೪೯). [ಸಂ.]

ವಿಭಾವತ್ವ (ನಾ). ವಿಭಾವದ ಸ್ಥಿತಿ ; ಭಾವವನ್ನು ಉದ್ದೀಪನಗೊಳಿಸಿರುವಿಕೆ : ವ್ಯಂಗ್ಯಾರ್ಥಪ್ರತೀತವಾಗುವ ಮೊದಲು ವಾಚ್ಯಾರ್ಥದಲ್ಲಿ ಶೃಂಗಾರರಸದ ವಿಭಾವತ್ವವಿಲ್ಲ ವ್ಯಂಗ್ಯಾರ್ಥದ ಸಂಸ್ಕಾರದಿಂದ ವಾಚ್ಯಾರ್ಥಕ್ಕೆ ವಿಭಾವತ್ವ ಬಂದರೂ ಅದು ರಸನಿಷ್ಪತ್ತಿಗೆ ಸಾಲದು (ಧ್ವನ್ಯಾಲೋ. ೨೯ ಅಡಿಟಿ). [ಸಂ.]

ವಿಭಾವನ (ನಾ). ೧. ಸ್ಪಷ್ಟವಾಗಿ ಗ್ರಹಿಸುವಿಕೆ ,—ತಿಳಿಯುವಿಕೆ. ೨. ಸೂಕ್ಷ್ಮವಾದ ಪರಿಶೀಲನೆ. ೩. ನಿರ್ಣಯ ; ತೀರ್ಮಾನ. ೪. ಊಹೆ ; ಕಲ್ಪನೆ ; ಭಾವನೆ. ೫. ತೋರ್ಪಡಿಸುವಿಕೆ ; ಪ್ರಕಟಪಡಿಸುವಿಕೆ. ೬. ವಿಶೇಷವಾದ ಕಾರ್ಯಕಾರಣಸಂಬಂಧ. [ಸಂ.]

ವಿಭಾವನತೆ (ನಾ). ಪ್ರಕಟವಾಗುವಿಕೆ ; ತೋರ್ಪಡುವಿಕೆ : ಥಳಥಳಿಪ ಬಹಳಜ್ವಳನವಾಕ್ಷಣಮಾಱೆ ಮುನ್ನಿನವೊಲು ಸಹಜಸಿದ್ಧಪ್ರಸಾದವಿಭಾವನತೆಯಿಂದ ಚೆಲುವು ವಿಗಲಾ ಬಿಬ್ಬಬಾಚಯ್ಯಗಳ ಕರಸ್ಥಲಯುಗಳದಲ್ಲಿಯೆ ನೆಲಸಿದುದು (ಬಸಪು. ೫೬-೪೭). [ಸಂ. ವಿಭಾವನತಾ]

ವಿಭಾವನಾಳಂಕಾರ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಕಾರಣವನ್ನು ಬಿಟ್ಟು ಅಥವಾ ಕಾರಣವಿಲ್ಲದೆ ಕಾರ್ಯವುಂಟಾದಂತೆ ವರ್ಣಿಸುವುದು ; ವಿಭಾವನೆ : ಕಾರಣಮನಜಂಪೆ ನಿಜಸಂಸ್ಕಾರಗುಣಾತಿಶಯದೊಳ್ ತಗುಳ್ಚುವುದಕ್ಕುಂ ಸಾರಂ ವಿಭಾವನಾಳಂಕಾರಂ (ಕವಿಪಾ. ೩-೧೬೮).

[ಸಂ. ವಿಭಾವನಾಲಂಕಾರ]

ವಿಭಾವನೆ (ನಾ). = ವಿಭಾವನಾಳಂಕಾರ : ನುತಪರಿವೃತ್ತಿ ವ್ಯಾಜಸ್ತುತಿ ಹೇತು ವಿಭಾವನಾಲವೋದಾತ್ತಾಪಹ್ನುತಿ ರಸವದೂರ್ಜಿತ ವ್ಯಾವೃತಿ ಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ (ಕವಿಪಾ. ೩-೪) ; ಕ್ರಿಯೆಯಂ ಪ್ರತಿಷೇಧಂಗೆಯ ನಿಯತಫಳವ್ಯಕ್ತಿಯದು ವಿಭಾವನೆ (ಕಾವ್ಯಾವ. ೭೩೬). [ಸಂ. ವಿಭಾವನಾ]

ವಿಭಾವರಿ (ನಾ). ೧. ಇರುಳು ; ನಿಶೆ ; ರಾತ್ರಿ : ಇಂದುವಮಂಡಳದಿಂದಮಾವಗಂ ಕಣ್ಮೊಳೆಪ ವಿಭಾವರಿಯನಿನಿಸನನುಕರಿಸಿರ್ದಳ್ (ಕಾದಂಪೂ. ೪೦) ; ರಘುಜರ್ ನದೀತಟದ ತೃಣಶಯ್ಯೆಯೊಳ್ ಮಲಗಿ . . . ನಕ್ಷತ್ರಮಯ ವಿಪುಲಗಗನದ ವಿಭಾವರಿಯ ಕಳೆದರಯ್ (ಶ್ರೀರಾಮಾ. ೩೧-೯೪). ೨. ಅರಿಸಿನ. ೩. ತಲೆಹಿಡುಕಿ. ೪. ಅತಿಯಾಗಿ ಮಾತನಾಡುವ ಹೆಂಗಸು. [ಸಂ. ವಿಭಾವರೀ]

ವಿಭಾವರೀಚರ (ನಾ). ರಾತ್ರಿಯಲ್ಲಿ ಸಂಚರಿಸುವವನು ; ನಿಶಾಚರ ; ರಾಕ್ಷಸ : ಭಾವ ಸಿಕ್ಕಿದನೆಂದು ಸಭೆಯ ವಿಭಾವರೀಚರರುಬ್ಬಿ ನಗೆಯಲಿ ಪಾವಮಾನಿಯ ಮುಕ್ಕುಱಿಕ್ಕಿದರಳ್ಗೆಗುಕ್ಕಿನಲಿ (ತೊರರಾ. ೫-೭-೪೬). [ಸಂ.]

ವಿಭಾವಸು (ನಾ). ೧. ಕಾಂತಿಯಿಂದ ಕೂಡಿದುದು. ೨. ರವಿ ; ಸೂರ್ಯ : "ನಿಶಿವೈರಿ ಮಿಹಿರಂ . . . ವಿಭಾವಸು ಸಪ್ತಸಪ್ತಿ ಸವಿತಾರಂ ಸಹಸ್ರಾಂಶು ಪೂಷ್ಣನೆನೆ ಸೂರ್ಯನಕ್ಕುಂ" (ಮಂಗರಾ. ೧೦-೨). ೩. ಬೆಂಕಿ ; ಅಗ್ನಿ : ವಸನವಿಹೀನಂ . . . ಚೋರ ವಿಭಾವಸುಗಳ ಭಯದಿಂದಾಕ್ರಂದಿಸುವಂ ಕಾನನದೊಳನಿಮಿಷಾಂತ್ಯತ್ಯಂಶಂ (ಪಾತಕಿ. ೧೯-೩೬). ೪. ಬೆಂಕಿಯ ಅಧಿದೇವತೆ ; ಅಷ್ಟದಿಕ್ಪಾಲಕರಲ್ಲಿ ಒಬ್ಬ : "ವಸುಸಿತೇತರಗತಿ ಸ್ವಾಹಾಪ್ರಿಯಂ . . . ವಿಭಾವಸು ಲೋಹಿತಾಶ್ವಂ . . . ವಿರೋಚನನೆನಿಕ್ಕುಂ" (ಮಂಗರಾ. ೧೪-೬). ೫. ಚಂದ್ರ. ೬. ಎಕ್ಕದ ಗಿಡ. [ಸಂ.]

ವಿಭಾವಿಸು (ಕ್ರಿ). ೧. ನಿರ್ಣಯಿಸು ; ನಿಶ್ಚಯಿಸು : ನಟ್ಟಪಾಂಗದ ಪಾಂಗಿಂದಮ ಕನ್ನೆ ಕನ್ನಡಿಸಿದಳ್ ತನ್ನೊಂದಭಿಪ್ರಾಯಮಂ ಎಂದರವಿಂದಲೋಚನಂ ಮನದೊಳ್ ವಿಭಾವಿಸುತ್ತಿರ್ಪನ್ನೆಗಂ (ಜಗವಿ. ೧೦-೮೧ ವ). ೨. ಯೋಚನೆ ಮಾಡು ; ವಿಚಾರ ಮಾಡು : ಬರೆದೀ ಚಿತ್ರದೆ ಬೆಮರಿದ ಬೆರಳಟ್ಟೆಡೆ ಮಲಿನಮಾಗಿ ಕಾಣ್ಬುದು ಕದಪಿಂದು ರುಳಿದ ಕಂಬನಿ ಬಣ್ಣಂ ಪರೆದಿಪ್ಪುದರಿಂ ವಿಭಾವಿಸಲ್ಕೆಡೆಯೆನಿಕುಂ (ಶಾಕುಂತ. ೬೯-೧೪೬).

[ವಿಭಾವನ + - ಇಸ್ತು]

ವಿಭಾವ್ಯ (ಗು). ೧. ಚೆನ್ನಾಗಿ ಗ್ರಹಿಸಬಹುದಾದ ; ಸ್ಪಷ್ಟವಾಗಿ ತಿಳಿಯಬಹುದಾದ. (ನಾ). ೨. [ಕಾವ್ಯಮೀ] ಭಾವವು ಉದ್ದೀಪನಗೊಳ್ಳುವುದು : ಇದೆ ದಲ್ ವಕ್ರೋಕ್ತಿಯೆನಿಪುದಿದರಿಂದೆ ವಿಭಾವ್ಯಮಪ್ಪುದರ್ಥಂ (ಧ್ವನ್ಯಾಲೋ. ೨೧೨).

[ಸಂ.]

ವಿಭಾಷೆ (ನಾ). ಆಯ್ಕೆ ; ಐಚ್ಛಿಕತೆ : ಸದೃಶಾಕ್ಷರವಿನ್ಯಾಸಂ ಪದದೊಳ್ ಪಾದಂಗಳೊಳ್ ಪೊದಳ್ದೆಸೆದಿರೆ ಪೇಳ್ಬುದನುಪ್ರಾಸಂ ನಿಯಮದಿನದನಾದ್ಯಂತಂ ವಿಭಾಷೆಯಿಂ ವಿರಚಿಸುವೆಂ (ಕಾವ್ಯಾವ. ೫೫೫). [ಸಂ. ವಿಭಾಷಾ]

ವಿಭಾಸ (ನಾ). ಹೊಳಪು ; ಕಾಂತಿ ; ಪ್ರಭೆ : ಇವು ದೃಷ್ಟಿವಿಷಾಹಿಯ ಗರಳವಹ್ನಿಜಿಹ್ವಾ ವಿಭಾಸಮೆನೆ ಕಣ್ಗಳ ಕೆಂಪವರೊರ್ವರೊರ್ವರಂ ಪ್ರಾಣವಾಯುವಂ ನುಂಗುವಂತೆ ನೋಡಿದರಾಗಳ್ (ಪಂಪಾಮಾ. ೧೪-೧೫) ; ಲೇಸೆನಿಪ ಕೈದೀವಿಗೆಗಳ ವಿಭಾ[ಪಾಠಾಂ. ಕಾ]ಸದಿಂ ಮಿಗೆ ಪಿಡಿದುಕೊಂಡುಲ್ಲಾಸವೆತ್ತಾಳ್ವರಿಯ ಮೇಲಿಂತಿರುಳು ತಿರುಗುತಿರೆ (ಬಸಪು. ೧೬-೨೩).

[ಸಂ. ವಿಭಾಸಾ]

ವಿಭಾಸಿ (ಗು). ಹೊಳೆಯುವ ; ಪ್ರಕಾಶಿಸುವ ; ಕಾಂತಿಯಿಂದೊಡಗೂಡಿದ : ಚಂದ್ರಿಕಾಚಯಮೆಳಸಿತ್ತು ವಾಸರಮುಮಂ ದರಹಾಸವಿಭಾಸಿವಕ್ತ್ರಶೋಭೆಯ ನೆವದಿಂದೆ ಚಂದ್ರವಳಯಂ ತಳೆದತ್ತನಿಶಂ ದ್ವಿರೂಪಮಂ (ಚಂದ್ರಪು. ೨-೧೫) ; ಸುದತಿಯು ಪಂಚಮುರ್ವಿಪ ಮುಖಂ ನಿಗಮಾಂಗವಿಭಾಸಿ ಮಾತೃಕಾಸ್ಪದಮಿದು ಮಂತ್ರಿಪುತ್ರವದನಂ ಮೆಱೆದಪ್ಪುದುದಾತ್ತವೃತ್ತಿಯಿಂ (ರಾಜಶೇ. ೧೪-೪೪). [ಸಂ. ವಿಭಾಸಿನ್]

ವಿಭಾಸ್ಕರ (ಗು). ೧. ಅತಿಶಯವಾಗಿ ಪ್ರಕಾಶಿಸುವ, — ಹೊಳೆಯುವ : ಮಾಹೇಶ್ವರಚರಣವಾರಿರುಹರೇಣುಪ್ರಕಲಿತವಿಭಾಸ್ಕರಲಲಾಟನನಭವಭಕ್ತಿಸ್ಥಳಕಿರೀಟನನು . . . ಸಾಷ್ಟಾಂಗದಲಿ ನಮಿಸಿ (ಬಸವಪು. ೪೬-೬೯). (ನಾ). ೨. ಸೂರ್ಯ ನಿಲ್ಲದಿರುವಿಕೆ. [ಸಂ.]

ವಿಭಾಳ 'ವಿಭಾಡ' ನೋ.

ವಿಭಿನ್ನ (ಗು). ೧. ಒಡೆದ ; ಛಿದ್ರಗೊಳಿಸಿದ : ಸಕ್ಕಿಯೆಗಳನು ವಿಸ್ತರಿಸಿದನು ದುಃಸ್ವಪ್ನಕುಂತವಿಭಿನ್ನಚೇತನನು (ಕುವ್ಯಾಸ. ೧೩-೧೭). ೨. ಬೇರೆಯಾದ ; ಪ್ರತ್ಯೇಕಗೊಂಡ. ೩. ಚೆದರಿ ಹೋದ ; ತೊಲಗಿದ ; ದೂರವಾದ : ತನ್ನ ತನುಧರ್ಮಗಳುಳಿದು ವಿಭಿ[ಪಾಠಾಂ. ಛಿ]ನ್ನಸ್ಮರಣೆಯಲಿ ಮಲುಹನನು ತನ್ನ ನಲ್ಲಳ ಸಲ್ಲಲಿತಭಾವಾತಿರೇಕವನು . . . ನೆನೆವ (ಬಸವಪು. ೪೨-೨೦). ೪. ದಾರಿತಪ್ಪಿದ ; ಕಂಗೆಟ್ಟ. ೫. ನಿರಾಶೆಗೊಂಡ ; ನಿರಾಶೆ ಹೊಂದಿದ. ೬. ನಾನಾಬಗೆಯ ; ವಿಧವಿಧವಾದ. ೭. ಬೇರೆಬೇರೆಯ ; ಭಿನ್ನವಾದ ; ವ್ಯತ್ಯಾಸವಾದ : ಅತಿಮೋಹನಿಗಳನಿಯಮಿತನುತರೊಡನೊಡನಪಿಲಸುಖಮನುಂಡರ್ ದ್ವಾವಿಂಶತಿ ಜಲಧಿವರೆಗಮಿಂದ್ರಪ್ರತೀಂದ್ರರಿಂದು ಕೆಳೆ ವಿಭಿನ್ನತರರುಚಿ ಕೆಳೆಯೇ (ಶಾಂತಿಪು. ೭-೧೧೧). ೮. ಬೆರೆತುಕೊಂಡ ; ಮಿಶ್ರವಾದ. [ಸಂ.]

ವಿಭಿನ್ನರೂಪಕ (ನಾ). [ಕಾವ್ಯಮಿ] ರೂಪಕಾಲಂಕಾರದ ಒಂದು ಪ್ರಭೇದ ; ಒಂದನ್ನೇ ಬೇರೆಬೇರೆ ಪ್ರಕಾರವಾಗಿ ನಿರೂಪಿಸುವ ರೂಪಕ : ಪರಿಚಿತ ಸನಾಭರಾಗಾಂಕುರಜಲಸೇಚಂ ವಿರೋಧಿತರುದವದಹನಂ ಪರಮೋದಯರವಿಗಗನಂ ಪರಾಕ್ರಮವದೆನೆ ವಿಭಿನ್ನರೂಪಕಮಕ್ಕುಂ (ಕವಿರಾ. ೩-೨೨). [ಸಂ.]

ವಿಭೀಕರ (ನಾ). ಅತಿಭಯಂಕರವಾದುದು : ವಿಜುಪ ದಾಡೆಗಳಂ ನಿಜವಕ್ತ್ರದೊಳ್ ವಿಭೀಕರಮೆನೆ ತೋಱುಗುಂ ಸಮರರಂಗದೊಳೀ ರಣರಂಗಭೈರವಂ (ಕಾಶಿ. XIX. ೬೭-೩೧ ; ೧೨ನಯ ಶತ). [ಸಂ.]

ವಿಭೀತ (ಗು). ೧. ಹೆದರಿದ ; ಭಯಗೊಂಡ. (ನಾ). ೨. ಭಯಪಟ್ಟವನು ; ಅಂಜಿದವನು : ಅಲಿಪಿದವರುಂ ವಿಭೀತರುಮಲ್ಲರು ಸಲೆ ವಿಯೋಗದಿಂ ನಿಜಜನದಿಂ ಕಪಿಯೆ ಪರಾರ್ಥಿಗಳುಂ ಬಾಯಲ್ದಿರ್ದಿಂತಿದನೆ ಯುಕ್ತಪುನರುಕ್ತಿಕಮಂ (ಕವಿರಾ. ೨-೨೫). ೩. ಒಂದುಬಗೆಯ ಸಸ್ಯ ; ತಾರೆಗಿಡ : "ಕಲಿಃ, ಅಕ್ಷಃ, ವಿಭೀತಃ — ಈ ೩ ತಾಱೆ" (ಪಲಾಯು. ೧೦೧-೪೬೪). [ಸಂ.]

ವಿಭೀತಕ (ನಾ). = ವಿಭೀತ ೩ : "ವಿಭೀತಕಮಕ್ಕುಂ ಕಲಿದ್ರುಮಂ" (ವಸ್ತುಕೋ. ೩೫-೧೨). [ಸಂ.]

ವಿಭೀತಿ (ನಾ). ಭಯ ; ಅಂಜಿಕೆ : "ಶಂಕೆ ಭಯಂ ಸಾಧ್ವಸಮಾಶಂಕಂ ತ್ರಾಸಂ ದರಂ ವಿಭೀತಿ ಸಮಾನಾರ್ಥಂ" (ವಸ್ತುಕೋ. ೧೧೧-೫). [ಸಂ.]

ವಿಭೀಷಣ (ಗು). ೧. ಅತಿಯಾದ ಭಯವನ್ನುಂಟುಮಾಡುವ ; ವಿಶೇಷವಾದ ಹೆದರಿಕೆಯನ್ನು ತರುವ ; ಭೀಷಣವಾದ. (ನಾ). ೨. ಹೆದರಿಕೆಯನ್ನು ತರುವಂಥದು ; ಭೀಷಣವಾದುದು ; ಉಗ್ರವಾದುದು : ಶಾತಶರಾಗ್ನಿ ಭಗ್ನಭಟಕೋಟಿವಿಭೀಷಣಂ . . . ಭೂತಸದನಂ ಕದನಂ ಕದನತ್ರಿನೇತ್ರನಾ (ಪಂಪಭಾ. ೧೪-೩). ೩. ರಾವಣನ ತಮ್ಮನ ಹೆಸರು : ವಿಭೀಷಣಂಬೆರಸು ಸುಗ್ರೀವಾದಿಗಳ್ ರಾಘವಂಗೆ ಸುಮಿತ್ರಾತನಯಂಗೆ ರಾಜ್ಯಸವನಪ್ರೋತ್ಸಾಹಮಂ ಮಾಡಿದರ್ (ಪಂಪಾಮಾ. ೧೫-೧೧) ; ರಾವಣನ ಪದಮಂ ವಿಭೀಷಣಂಗೊಲಿದಿತ್ತು ದೇವರ್ಕಳಂ ಪೊರೆದು . . . ಭೂವರಂ . . . ಸೌಮಿತ್ರಿದಶವದನನುಜಸುಗ್ರೀವಾದಿಗಳ ಗಡಣದಿಂದ ಯೋಧ್ಯಾಪುರಿಗೆ ದೂವಾಳಿಸಿದನು (ಚಿಮಭಾ. ೧೮-೮). [ಸಂ.]

ವಿಭು (ಗು). ೧. ಎಲ್ಲಾ ಕಡೆಯಲ್ಲಿಯೂ ಇರುವ ; ಸರ್ವವ್ಯಾಪಿಯಾದ. ೨. ಅತ್ಯುತ್ತಮವಾದ ; ಶ್ರೇಷ್ಠವಾದ ; ಮಹತ್ತಾದ. ೩. ಸರ್ವ ಸಮರ್ಥವಾದ : ಸರ್ವಶಕ್ತವಾದ (ನಾ). ೪. ಎಲ್ಲಾ ಕಡೆಯಲ್ಲೂ ಇರುವಂಥದು ; ಸರ್ವವ್ಯಾಪ್ತಿಯಾದುದು : ಅವಲೊಳ್ಳೋಕಮದೆಂತುಟೆಂದೊಡೆ ಸಮಂತಾವಂಗಮೆತ್ತತ್ತ ನೋಡುವೊಡಂ ನೋಡಲನಂತಮಪ್ಪ ವಿಭುವಪ್ಪಾಕಾಶಪದ್ಮಕ್ಕೆ ತಾನೆ ವಲಂ ಕರ್ಣಿಕೆಯಂದದಾಯ್ತು (ಆದಿಪು. ೧-೪೩). ೫. ಪರಿಪೂರ್ಣವಾದುದು ; ಅಖಂಡವಾದುದು : ಆತ್ಮನು . . . ಕರ್ತೃ, ಜ್ಞಾತೃ, ಭೋಕ್ತೃ ಎಂಬಿಷ್ಟು ವಿಷಯ ಈವರೆವಿಗೆ ಸಿದ್ಧವಾಗಿದೆ. ಜೀವನ ಈ ಗುಣಗಳು ಅಪರಿಮಿತವಲ್ಲ — ವಿಭುವಲ್ಲ (ಜೀವಾತ್ಮ. ೫೭). ೬. ಒಡೆಯ ; ಪತಿ ; ಸ್ವಾಮಿ. ೭. ರಾಜ ; ಪ್ರಭು : ಕೃಶರಾಗಂ ವಿಗತಮನಃಪ್ರಸರತೆಯಿಂ ಕಣ್ಣ ನೀರ್ಗಳಂ ತೀವಿ ನಿರಂಕುಶಶೋಕಪರವಶಂ ಚಿತ್ರಶೇಷ ನಿಜಜನಕನಿಳಯಮಂ ವಿಭು ಪೊಕ್ಕಂ (ಶಾಂತಿಪು. ೧-೯೪) ; ಇಱಿಯಲ್ಬಲ್ಲೊಡೆ ವೀರನಾಗು . . . ವಿಭುವಾಗಾರೆಂದೊಡಂ ಕೋಪಮಂ ತೊಱೆಯಲ್ಬಲ್ಲೊಡೆ (ಸೋಮೇಶ. ೭೭). ೮. ದೇವರು ; ಪರಮಾತ್ಮ : ಶ್ರೀಗಿರಿಯೊಳ್ಪಿರಾಜಿಪ ಸದಾಶಿವನೀ ವಿಭು ಮಲ್ಲಿಕಾರ್ಜುನಂ (ಸೌಕ್ಷಾ. XX. ೨೪೯-೨ ; 1228) ; ಕೊಡುವ ಪದ್ಮಕೆ ಸುಪ್ರಮೇಯದ ಗಡಣಕಬುಜಭವಾದಿ ವಿಭುಗಳು ಬಿಡಿಸಲರಿದೆನಿಪತುಳ ತಾರ್ಕಿಕಜನಗಳೊಪ್ಪಿದರು (ಕುವ್ಯಾಉ. ೮-೩೮). ೯. ಬ್ರಹ್ಮ. ೧೦. ವಿಷ್ಣು. ೧೧. ಶಿವ. [ಸಂ.]

ವಿಭಗುಣನುತಿ (ನಾ). [ಕಾವ್ಯಮಿ] ದಶವಿಧ ಕಾಮಾವಸ್ಥೆಗಳಲ್ಲಿ ಒಂದು ; ಒಡೆಯನ ಗುಣಸ್ಮರಣೆ ಮಾಡುವುದು : ಅಭಿಲಾಷೆ ಚಿಂತೆ ಸಂಸ್ಮೃತಿ ವಿಭುಗುಣನುತಿ . . . ಕ್ಷುಭಿತಾತ್ಮಾವಸ್ಥೆ ಮರಣಮಿವು ದಶಭೇದಂ (ಶೃಂಗಾರ. ೪-೬೯). [ಸಂ.]

ವಿಭುತ್ವ (ನಾ). ೧. ಸರ್ವವ್ಯಾಪ್ತಿಯಾಗಿರುವಿಕೆ. ೨. ಸರ್ವಸಮರ್ಥವಾಗಿರುವಿಕೆ. ೩. ಒಡೆತನ ; ಪ್ರಭುತ್ವ : ಸಿರಿಯೊಳ್ಪರಹಿತಮನಮತ್ಸರಮತಿಯಂ ವಿದ್ಯೆಯೊಳ್ಪಿಭುತ್ವದೊಳೆ ನಯಾಚರಣಮನತಿಶೌರ್ಯದೊಳೊಪ್ಪಿರೆ ವಿನಯಮನಾಳ್ದು ಬಾಳ್ದವಂಗಣೆಯುಂಟೇ (ರಾಜಶೇ. ೧೩-೧೦) ; ಮೋಕ್ಷದಲ್ಲಿ ಜೀವಾತ್ಮನು . . . ವಿಭುತ್ವ, ದ್ರವ್ಯತ್ವ, ನಿತ್ಯತ್ವ, ನಿರವಯವತ್ವ, ನಾನಾತ್ವ ಮೊದಲಾದ ಧರ್ಮಗಳೊಡನೆ ಯಾವತ್ಕಾಲ ನಿರ್ದುಃಖಿಯಾಗಿರುತ್ತಾನೆ (ಹಿಂದುಸಾ. ೧೨೪). [ಸಂ.]

ವಿಭೂತಿ (ನಾ). ೧. ಹಿರಿದಾದ ಶಕ್ತಿ, — ಸಾಮರ್ಥ್ಯ. ೨. (ಭಗವಂತನ) ವಿಶೇಷಪ್ರಕಾಶನ ; ಮಹಿಮೆ ; ಗರಿಮೆ : ಜ್ಯೋತಿಯಿರ್ವೆಡೆಯಲ್ಲಿ ಭಗವದ್ವಿಭೂತಿಯಂ ದರ್ಶಿಸುತೆ, ಮುಡಿಬಾಗಿ ಮಣಿದು ಕೈಜೋಡಿಸುವೆನಾಂ (ಶ್ರೀರಾಮಾ. ೬-೧೪೯). ೩. ಸಿರಿ ; ಐಶ್ವರ್ಯ ; ಸಂಪತ್ತು : ಲಕ್ಷದೀನಾರಂಗಳಂ ಕೊಟ್ಟು ರತ್ನಕಂಬಳಂಗಳಂ ಕೊಂಡು ಸೊಸೆವರ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕೆರ್ವುಗಳೊಳ್ ತಗುಳ್ದಿದರೆಂಬ ಮಾತನರಸಂ ಕೇಳ್ದು ಚೋದ್ಯಂಬಟ್ಟವರ ವಿಭೂತಿಯಂ ನೋಟ್ಪೆನೆಂದು ಮನೆಗೆ ವರ್ಪುದಂ (ವಡ್ಡಾರಾ. ೫೫-೨೯) ; ಶ್ರುತಕ್ಕೆವಲ್ಕವಿಭೂತಿಯಂ ತಳೆದು . . . ಭದ್ರಬಾಹುಮುನಿನಾಥರ್ ಖ್ಯಾತಿಯಂ ತಾಳ್ದಿದರ್ (ಸುಕುಮಾ. ೧-೧೧). ೪. ವಿಜೃಂಭಣೆ ; ವೈಭವ ; ಸಂಭ್ರಮ : ವಿಜಯಗಜಾರೂಢನಾದ ವಿಜಯನಂ ಮುಂದಿಟ್ಟು ಮಹಾವಿಭೂತಿಯಿಂದಯ್ತರುಂ ನಿಜಾನ್ವಯರಾಜದ್ರಾಜಧಾನಿಯಂ ಪುಗೆ (ಪಂಪಭಾ. ೧೪-೧೩ ವ) ; ಮಹಾವಿಭೂತಿಯಿಂ ಪುರಮಂ ಪೊಕ್ಕರ್ (ಪಂಪಾಮಾ. ೯-೧೪೦ ವ). ೫. ಕೀರ್ತಿ ; ಯಶಸ್ಸು : ಮಂತ್ರಿಯುಂ ನೃಪತಿಯುಂ ಬಗೆಗೊಂಡನುಕೂಲವೃತ್ತಿಯೊಳ್ ನೆರೆದಿರೆ ಕೂಡುಗುಂ ನಿಖಿಲರಾಜ್ಯ ವಿಭೂತಿಗಳಾವ ಕಾಲಮಂ (ಪಂಚತಂ. ೧೩-೨೨) ; ಅಧಿನುತಮಂ ಶ್ರೀಮಹತ್ತರ ವಿಭೂತಿಯಂ ತಳೆದ ಸೋಮಶರ್ಮಂಗಂ ಶ್ರೀನಿಭ ಕಾಶ್ಯಪಿಗಂ ಸುತರಗ್ನಿಭೂತಿಯುಂ ವಾಯುಭೂತಿಯುಂ ಪೆಸರಿಂದಂ (ಸುಕುಮಾ. ೨-೫). ೬. ಮಹಾಪುರುಷ ; ಮಹಿಮಾಶಾಲಿ : ವಿದ್ಯಾರ್ಜನೆಗಾಗಿ ತವಕಿಸುವ ಆ ವಾಮನಮೂರ್ತಿ ಅವರಿಗೊಂದು ವಿಭೂತಿಯಾಗಿ ಕಂಡಿದ್ದ (ಹೊಸಕ್ಕ. ೬೫) ; ಸ್ಥಿತಪ್ರಜ್ಞನಾದವನಲ್ಲಿ ಶಮೆ — ದಮೆ ಅವಶ್ಯ . . . ಆಗ ಅವನು ಚಿತ್ತಕ್ಲೇಶಮದದಿಂದ ದೂರವಾಗಿ "ವಿಭೂತಿ" ಆಗುವನು (ಜೀದಾಸ. ೧೧೨). 'ವಿಭೂತಿಪೂಜೆ' ಪರಾ. ೭. (ಹಸುವಿನ ಸಗಣಿಯ) ಬೂದಿ ; ಭಸ್ಮ : ವಿಭೂತಿಯನೆ ಹೂಸಿ

ರುದ್ರಾಕ್ಷಿಯನೆ ಕಟ್ಟಿ ಶಿವ ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ (ಬಸವ. ೨೬೯) ; ವಿಭೂತಿಯನ್ನು ಧರಿಸಿದಲ್ಲಿ . . . ಸಕಲರೋಗಂಗಳೂ ನಾಶವಾಗುವುವು (ಸಕ್ಯ. ೪೧). ೮. ಒಂದು ಬಗೆಯ ಸಸ್ಯ ; ಸಂಜೆಮಲ್ಲಿಗೆಗಿಡ : ವಿಭೂತಿ, ಭದ್ರಾಕ್ಷಿಹೂ. ನಾಲ್ಕುಘಂಟೆ ಹೂ, ಸಂಜೆಮಲ್ಲಿಗೆ (ಮೃಡಿಗಿ. ೫೪-೧೦೦೪). ೯. [ವೀಶೈ] ಅಷ್ಟಾವರಣಗಳಲ್ಲಿ ಒಂದು : ವಿಭೂತಿ : ಅದು ಮಹಾವಸ್ತುವಿನ ದಿವ್ಯತೇಜವು . . . ಶಿವಶರಣರು ಅದು ಪರಶಿವನ ಪರಮಚೈತನ್ಯವು, ಚಿತ್‌ಸ್ವರೂಪವು ಎಂದು ಭಾವಿಸಿ ಅದನ್ನು ಲೇಪಿಸಿಕೊಳ್ಳುತ್ತಾರೆ (ಶಿವಾಕೋ. ೧೨೯); ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮತ್ತು ಮಂತ್ರ — ಇವೇ ಅಷ್ಟಾವರಣಗಳು (ವಚಸಾ. ೧೧೯). [ಸಂ.]

ವಿಭೂತಿಕಲ್ಪ (ನಾ). [ವೀಶೈ] ವಿಭೂತಿ ಅಥವಾ ಭಸ್ಮವನ್ನು ಮಂತ್ರ ಪೂರ್ವಕವಾಗಿ ಧರಿಸುವ ಕ್ರಿಯೆ ,—ಆಚಾರ : ಗರಗಳಾದಿಯ ಪೊರ್ದದಂತೆ ಸಲಹುವುದ್ಕೆ ವಿಭೂತಿಕಲ್ಪಂ (ವೀಶೈಪು. ೭-೫-೨೦). [ಸಂ.]

ವಿಭೂತಿಗಾಣಿಕೆ (ನಾ). ದೇವರ ಪ್ರಸಾದವಾದ ಪವಿತ್ರಭಸ್ಮಕ್ಕೆಂದು ಕೊಡುವ ಕಾಣಿಕೆ : ಮುಳವಾಯರಾಜ್ಯದ ದೇವಸ್ಥಾನಗಳಿನ್ದ ಅರಮನೆಗೆ ಎತ್ತಿ ಬಹ XXX ವರಿ ವಿಭೂತಿಗಾಣಿಕೆ ಹೊನ್ನು ಕಡಾಯದ ಹುಟ್ಟುವಳಿಯನು . . . ಮಲ್ಲಿಕಾರ್ಜುನರಾಯ ಮಹಾರಾಯರಿಗೆ ಧರ್ಮ್ಮವಾಗಿ ಬಿಟು (ಎಕ. X, ಬೌರಿಂಗ್. ೧೮-೩ ; 1465).

[ವಿಭೂತಿ + ಕಾಣಿಕೆ (< ಕಾಣ್ಕೆ)]

ವಿಭೂತಿಧಾರಣ (ನಾ). ಭಸ್ಮ ಅಥವಾ ಭಸಿತವನ್ನು ಧರಿಸುವಿಕೆ : ಆಗಮೋಕ್ತಸ್ನಾನಂಗಳಲ್ಲಿ ತತ್ತನ್ಮಂತ್ರಗಳಿಂ ಶ್ರೀವಿಭೂತಿಧಾರಣಂಗೈಯುವುದೇ ವಿಭೂತಿಪಟ್ಟೆಯೆನಿಸುವುದು (ವಿವೇಕ. ೧೧೪); ವಿಭೂತಿಧಾರಣವು ಕಾಮಾದಿ ಅರಿಷಡ್ವರ್ಗವನ್ನು ದಹಿಸಿದುದಕ್ಕೆ ಗುರುತು (ವಚಸಾ. ೧೨೫). [ಸಂ.]

ವಿಭೂತಿಪಟ್ಟ (ನಾ). ೧. [ವೀಶೈ] ಮರಣದ ಮುನ್ನ ಅಥವಾ ದೀಕ್ಷಾಸಮಯದಲ್ಲಿ ಮಾಡಿಸಿಕೊಳ್ಳುವ ಒಂದು ಸಂಸ್ಕಾರ ; ವಿಭೂತಿಧಾರಣೆ : ವಿಭೂತಿವೀಳೆಯ, ವಿಭೂತಿಪಟ್ಟ (ವಿಭೂತಿವೀಳ್ಯ) ಶರಣರು ಮರಣದ ಮುನ್ನ ಮಾಡಿಸಿಕೊಳ್ಳುವ ಒಂದು ಸಂಸ್ಕಾರವಿಶೇಷ (ಶರಸಾ. ೨೪-೭). ೨. (?) : ಶೆಟ್ಟಿಯು ತನ್ನ ಮಗಳಾದ ಗಣಕುಮಾರಿ ಚೆಂದವ್ವೆಯನ್ನು ಏಕಮೇವವಿಶ್ವಸ್ತಳನ್ನಾಗಿ . . . ನಿಯಮಿಸಿದನು. ಮಹಾಗಣಂಗಳೂ ಸೇರಿ ಆಕೆಗೆ ವಿಭೂತಿಪಟ್ಟವನ್ನು ಕಟ್ಟಿದರು (ಕರ್ನಾಕ. ೨೮). [ಸಂ.]

ವಿಭೂತಿಪಟ್ಟೆ (ನಾ). ೧. ಹಣೆಯ ಮೇಲೆ ಧರಿಸುವ ಭಸ್ಮದ ಅಡ್ಡಗೆರೆ, — ರೇಖೆ : ವಿಭೂತಿಪಟ್ಟೆಯು ಅವರ ಮುಖಕ್ಕೆ ಚೆನ್ನಾಗಿ ಒಪ್ಪುತ್ತದೆ (ರೂಢಿ). ೨. = ವಿಭೂತಿಪಟ್ಟ ೧ : ಆಗಮೋಕ್ತಸ್ನಾನಂಗಳಲ್ಲಿ ತತ್ತನ್ಮಂತ್ರಗಳಿಂ ಶ್ರೀವಿಭೂತಿಧಾರಣಂಗೈಯುವುದೇ ವಿಭೂತಿಪಟ್ಟೆಯೆನಿಸುವುದು (ವಿವೇಕ. ೧೧೪).

[ವಿಭೂತಿ + ಪಟ್ಟೆ]

ವಿಭೂತಿಪುರುಷ (ನಾ). ಮಹಾಪುರುಷ ; ಮಹಿಮಾಶಾಲಿ : ಇವರು ಜೀವಂತರಾಗಿ ಕೈಲಾಸಕ್ಕೆ ಶಿಷ್ಯರೊಡನೆ ತೆರಳಿದ ವಿಭೂತಿಪುರುಷರೆಂದು ಕಾಶ್ಮೀರದಲ್ಲಿ ದಂತಕಥೆಗಳು ಹುಟ್ಟಿವೆ (ಧ್ವನ್ಯಾಲೋ. XXVIII, ಟೀಕೆ). [ಸಂ.]

ವಿಭೂತಿಪೂಜೆ (ನಾ). ಮಹಾಪುರುಷರನ್ನು ಪೂಜಿಸುವಿಕೆ,—ಗೌರವಿಸುವಿಕೆ : ವಿಭೂತಿಪೂಜೆಯು ನಮ್ಮ ಮಾನಸಿಕಸೂತ್ರಗಳಲ್ಲಿ ಒಳ್ಳೇ ಗಟ್ಟಿಯಾದ, ಗುರುತಮವಾದ ಎಳೆ (ಕಥಕ. ೩೬). [ಸಂ. ವಿಭೂತಿಪೂಜಾ]

ವಿಭೂತಿವೀಳೆಯ, ವಿಭೂತಿವೀಳ್ಯ (ನಾ). ೧. = ವಿಭೂತಿಪಟ್ಟ ೧ : ವಿಭೂತಿವೀಳೆಯ, ವಿಭೂತಿಪಟ್ಟ, (ವಿಭೂತಿವೀಳ್ಯ) ಶರಣರು ಮರಣದ ಮುನ್ನ ಮಾಡಿಸಿಕೊಳ್ಳುವ ಒಂದು ಸಂಸ್ಕಾರವಿಶೇಷ (ಶರಸಾ. ೨೪-೭). ೨. ಭಸ್ಮ ಮತ್ತು ತಾಂಬೂಲಗಳನ್ನು ಗೌರವಪೂರ್ವಕವಾಗಿ ಕೊಡುವುದರ ಮೂಲಕ ಆಹ್ವಾನಿಸುವುದು : ವಿಭೂತಿವೀಳೆಯಮಂ ಕೊಟ್ಟು ಕಂಗಳು ತುಂಬಿ ನಿರೀಕ್ಷಿಸಿ . . . ತನುಕರಗಿ ಮನಕರಗಿ ನೋಡಿ ಮಾಡುವುದು ಭಕ್ತಿಸ್ಥಲ (ಬಸವ. ೦೬೪) ; ಅಂತು ನುತಿಸಿ ವಿಭೂತಿವೀಳೆಯವಂ ತಂದು ಮುಂದಿರಿಸಿಯನೇಕ ಸಂಭ್ರಮದಿಂ ಕಲ್ಯಾಣಪಟ್ಟಣಕ್ಕೆ ಬಿಜಯಂಗೆಯ್ಸಿಕೊಂಡು ಬಪ್ಪಾಗಳು (ನನ್ನಚಾ. ೨-೫೩ ವ). **ವಿಭೂತಿವೀಳ್ಯ** : ೧. ವಿಭೂತಿವೀಳೆಯ, ವಿಭೂತಿಪಟ್ಟ (ವಿಭೂತಿವೀಳ್ಯ) ಶರಣರು ಮರಣದ ಮುನ್ನ ಮಾಡಿಸಿಕೊಳ್ಳುವ ಒಂದು ಸಂಸ್ಕಾರವಿಶೇಷ (ಶರಸಾ. ೨೪-೭).

[ವಿಭೂತಿ + ವೀಳೆಯ]

ವಿಭೂತಿವೀಳ್ಯ 'ವಿಭೂತಿವೀಳೆಯ' ನೋ.

ವಿಭೂಷಣ (ನಾ). ೧. ಒಡವೆ ; ಆಭರಣ : ಮಣಿಕನಕಂ ವಸ್ತುವಿಭೂಷಣಂಗಳಂ ಕೊಟ್ಟು ವೆಂಡಿರೊಲ್ವರೆ ಗಂಡರ್ ಗುಣಮನೆ ಮೆಚ್ಚುವುದು (ಗದಾಯು. ೨-೫) ; ಆ ಗೋಪಿಗೆ ಪಲ ಪರಲ ವಿಭೂಷಣಮಿತ್ತು ಮುರವೈರಿಯವರ ಕೆಲದೊಳಿರಲವನಾರ ವರಸುತನೆಂದು ಕೇಳಿದನು (ನೇಮಿಸಾ. ೧೬-೧೫). ೨. ಅಲಂಕಾರ ; ಶೃಂಗಾರ. [ಸಂ.]

ವಿಭೂಷಣಾಂಗ (ನಾ). [ಜೈನ] ದಶವಿಧ ಕಲ್ಪತರುಗಳಲ್ಲಿ ಒಂದು ; ಬಯಸಿದ ಆಭರಣಾದಿಗಳನ್ನು ನೀಡುವಂತಹ ಕಲ್ಪಕುಜ : ವಸನಾಂಗಾತೋದ್ಯಾಂಗ ಪ್ರಸವಾಂಗ ಜ್ಯೋತಿರಂಗ ದೀಪಾಂಗಾನ್ನಾಂಗ ಸುರಾಂಗ ಭಾಜನಾಂಗಾವಸಥಾಂಗ ವಿಭೂಷಣಾಂಗ ದಶಕಲ್ಪಕುಜಂ (ಚಂದ್ರಪ್ರ. ೩-೩೪) ; ಗೀರ್ವಾಣವ್ರಜಂ ತಂದು ನೀಡಿದ ವಸ್ತ್ರಾಂಗ ವಿಭೂಷಣಾಂಗ . . . ಪೂಮಾಲೆಯಿಂದಂಗರಾಗದಿನುದ್ಭ್ರಾಜಿಸುವಂತು ಪೂಜಿಸಿದನಿಂದ್ರಂ ತತ್ರಿತೃದ್ವಂದ್ವಮಂ (ಪಾಪ್ರ. ೧೨-೧೩). [ಸಂ.]

ವಿಭೂಷೆ (ನಾ). ೧. ಒಡವೆ ; ಆಭರಣ. ೨. ಅಲಂಕಾರ ; ಶೃಂಗಾರ. ೩. ಕಾಂತಿ ; ಪ್ರಕಾಶ. ೪. ಚೆಲುವು ; ಸೌಂದರ್ಯ : "ದಾ(ಧಾ)ರಾ, ಶೋಭಾ, ವಿಭೂಷಾ, ಅಭಿ(ಕ್ಷಾ)ಖ್ಯಾ, ಸುಷಮಾ - ಈ ೫ ಶೋಭೆ" (ಹಲಾಯು. ೯೩-೪೧೧).

[ಸಂ. ವಿಭೂಷಾ]

ವಿಭೆ (ನಾ). ೧. ಬೆಳಕು ; ಪ್ರಕಾಶ. ೨. ಕದಿರು ; ಕಿರಣ ; ರಶ್ಮಿ : "ರೋಚಿಃ, ಶೋಚಿಃ . . . ಭಾ, ವಿಭಾ, ಭಾಃ . . . ಗೋಃ - ಈ ೩೨ ರಶ್ಮಿಗಳ ಪೆಸರ್" (ಹಲಾಯು. ೭-೩೮). ೩. ಕಾಂತಿ ; ಶೋಭೆ. ೪. ಅಂದ ; ಸೌಂದರ್ಯ.

[ಸಂ. ವಿಭಾ]

ವಿಭೇದ (ನಾ). ೧. ಒಡೆಯುವಿಕೆ ; ಬೇರ್ಪಡಿಸುವಿಕೆ. ೨. ಭಾಗ ; ವಿಭಾಗ. ೩. ರೀತಿ ; ಬಗೆ ; ಪ್ರಕಾರ. ೪. ಅಂತರ ; ವ್ಯತ್ಯಾಸ ; ಭಿನ್ನತೆ : ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿನ್ನೀಗಳಾಳರಸೆಂದೊಂದು ವಿಭೇದಮಾದೊಡೆಱಕಂ ಚಿಃ ಕಷ್ಟಮಲ್ತೇ (ಆದಿಪು. ೧೪-೩೨) ; ಪಾರ್ಥನೆರಡಂಬು ಮುಱಿದುದಿನ್ನೊಂದರೊಳಿವನ ಶಿರವನು ರೂಢಿಯಿಂದರಿಯದೊಡೆ ಹರಿಹರವಿಭೇದಮಂ ಮಾಡಿ ನಿಂದಿಸಿದವನ ಗತಿಯಾಗಲೆನಗೆನುತೆ ಪೂಡಿದಂ ಮತ್ತೆ ಕೋದಂಡದೊಳ್ಬಾಣಮಂ (ಶೃಮಿಭಾ. ೧೩-೪೧). ೫. ವಿರೋಧ ; ಪ್ರತಿರೋಧ. ೬. ತೆನೆಯಿಂದ ಕಾಳುಗಳನ್ನು ಬೇರ್ಪಡಿಸುವಿಕೆ ; ಒಕ್ಕುವಿಕೆ : "ವಿಭೇದಮನೆಲೊಕ್ಕಿಲು" (ಮಂಗರಾ. ೧೦೯-೩).

[ಸಂ.]

ವಿಭೇದಿಸು (ಕ್ರಿ). ೧. ಭಾಗ ಮಾಡು ; ಬೇರ್ಪಡಿಸು ; ಪ್ರತ್ಯೇಕಿಸು : ಅರನೇಱಲ ಪೊಂಬಾಬೆಯ ಸುರಯಿಯ ಮಾಮರದ ಬಕ್ಕೆವಲಸಿನ ಪುದುವಿಂ ಪರೆದುರ್ದಿದ ಕಟ್ಟಲೆ ದಿನಕರಾಂಶುಗಳ್ಗಂ ವಿಭೇದಿಸಲ್ಕರಿದದಱೊಳ್ (ಕಾವ್ಯಾವ. ೨೪೮) ; ಪಿರಿದಾಯಾಸದೆ ಗುಣಮಂ ದೊರೆಕೊಳಿಸಿದೊಡಂ ಖಲಂಗೆ ಗುಣಮಂ ಪಶ್ಚಾತ್ಕರಿಸಿ ಗುಣಿಯಂ ವಿಭೇದಿಪ ಪರಿ ತೀಕ್ಷ್ಣಮುಖಂಗೆ ಸೂಚಿಯಂತಿರೆ ಸಹಜಂ (ಶಬಶಂ. ೧-೧೬). ೨. ವಿಶ್ಲೇಷಣೆ ಮಾಡು ; ವಿಶ್ಲೇಷಿಸು : ಆದಿಯೊಳಜ ಕೊಟ್ಟ ವರ ನಿನ್ನ ವಿದ್ಯೆಯ ಸಾಧಿಸಿದನ ಕೆಯ್ಯ ನೀನು ಭೇದಿಸಿಕೊಂಬ ಸಂಪ್ರಾಪ್ತಿಯುಂಟೆಲವೊ ವಿಭೇದಿಸಿ ನೋಡಿಕೊ ಮಗನೆ (ಮೋಹತ. ೧೨-೧೩). ೩. ವ್ಯತ್ಯಾಸಗೊಳ್ಳು ; ಬದಲಾವಣೆ ಹೊಂದು ; ಭಿನ್ನವಾಗು : (ಕ). [ವಿಭೇದ + — ಇಸ್ತು]

ವಿಭೇಷಜ (ನಾ). ಔಷಧ : ತರಣಿ ನವಾಂಶದೊಳ್ ತೃಣ ವಿಭೇಷಜ ಕಂಬಳ ಕಾಂಚನಾದಿಯಿಂ . . . ಜೀವನಂ ಕೂಡುಗುಂ (ಜಾತಕ. ೧೧-೪). [ಸಂ.]

ವಿಭೋಗ (ನಾ). ೧. ಹಿಗ್ಗು ; ಸಂತೋಷ ; ಆನಂದ : ಶೂಲದ ಮೇಲಣ ವಿಭೋಗವೇನಾದೊಡೇನೊ ನಾನಾವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ (ಬಸವ. ೧೨) ; ಯೋಗಲೀನ ಪ್ರಾಣಲಿಂಗ ವಿಭೋಗದೊಳು ಹೊಂದಿರೆ

ಸದಾನಂದಾಗಣಿತಸುಖದಿಂ ದಿವಾರಾತ್ರೌ ವರ್ಜಯೆನೆ (ಬಸವ. ೮-೫೮). ೨. ಒಬ್ಬಾತನ ಹೆಸರು : ಕಲ್ಲ ಬೆಸಗೆಯ್ದ ವಿಭೋಗಂಗಗ ಕೊಟ್ಟ ಪತ್ತುಕೊಳಗ ಮಣ್ಣಂ ನಡಯಿಸದೆ ಕಿಡಿಸಿದಾತ ಕವಿಲೆಯು ವಾರಣಾಸಿಯುಮನಬಿದೊಂ (ಎಕ. XV. ಅರಸೀ. ೨೩೭-೨೪ : 971). [ಸಂ.]

ವಿಭ್ರಂಶ (ನಾ). ನಾಶ ; ಅಳಿವು : "ವಿಭ್ರಮವತಿಯರ ಮಿಸುಗುವದಭ್ರವಿಳಾಸಂ . . . ವಿಭ್ರಂಶಮನೆಯ್ದದೇಂ ಕ್ಷಣಂ ನಿಂದಪುದೇ (ಪಾರ್ಶ್ವ. ೪-೬೯). [ಸಂ.]

ವಿಭ್ರಮ (ನಾ). ೧. ಸುತ್ತುವಿಕೆ ; ಅಲೆದಾಟ ; ಭ್ರಮಣ : ಬಳಿಯ ತಂಪಿನ ತಡಿಯ ತಾಣದೊಳು ಭೂಪಕುಲತಿಲಕನ ವಿನೋದವಿಭ್ರಮವಿಲಾಸಕ್ಕೆ ಮಂಗಳಮಯವೆನಲ್ ಸವೆದ ಶೈತ್ಯಶಾಲೆಗಳನದನಾವ ಕವಿ ಬಣ್ಣಿಸುವನು (ಹಜಕಾ. ೩-೪೪). ೨. ತಬ್ಬಿಬ್ಬು ; ಭ್ರಮೆ ; ಭ್ರಾಂತಿ : ಮನಮಱಿಗುಂ ನರೇಂದ್ರಸುತನೆಂದಿನಿಸಳ್ಕೆನೆ ಸುತ್ತಲುಂ ಸಖೀಜನಮಿರೆಯುಂ ವಿಚಾರಿಸೆನೆ . . . ಬೇಟಕಿಯರ್ ನೆರೆದಿರ್ದರೆಂಬದಂ ನೆನೆಯೆನೆ ಕೆಟ್ಟೆನೇನನಿರದಿಂತುಟು ವಿಭ್ರಮದಿಂದೊಡರ್ಚಿದೆಂ (ಕಾದಂಬ. ೭೭) ; ಉರ್ವಿಯ ಶಾಡ್ವಲಂಗಳಗ್ರಿಮದೊಳೆ ಮೆಯ್ಯನಿಕ್ಕಿದ ಸಮುಜ್ವಳ ತಾರಕ [ಸಂಳಿ] ಮಂಬ ವಿಭ್ರಮವನೆ ಬೀಱುತಿರ್ದುದೆನಸುಂ ಪನಿವುಲ್ಲ ಪಯಃಕಣಬ್ರಜಂ (ಶಾಂತೀಶ್ವ. ೧೧-೯೩). ೩. ವಿನೋದ ; ತಮಾಷೆ : ರಮಣೀಸ್ಮೇರವಕ್ತ್ರಾಂಬುರುಹವಿಸರದೊಳ್ ಕಾಮಿನೀದೋರ್ಲತಾವಿಭ್ರಮದೊಳ್ . . . ತಾನಿರ್ದನಾಸ್ಥಾನದೊಳತುಳವನಸ್ಪರ್ಧಿಯೊಳ್ಳುವಸಂತಂ (ರಾಜಶೇ. ೯-೭೭). ೪. ಲಾವಣ್ಯ ; ಅಂದ ; ಸೌಂದರ್ಯ : ಏನೆಂದಾಂ ಬಣ್ಣಿಸುವೆನ್ನೊ.ಸುರಸೌಂದರಿಯ ವಿಳಾಸವಿಭ್ರಮಭ್ರೂಲತೆಯಂ (ಆದಿಪು. ೯-೩೩) ; ಈ ಸತಿಯ ವಿಭ್ರಮವೈದಿತೆನ್ನಯ ಮನವನೆನುತಿರ್ದ (ಕುವ್ಯಾವಿ. ೨-೧೧). ೫. ಬೆಡಗು ; ಒಯ್ಯಾರ : ಆಕೆ ಬಳಿದತ್ಯಂತರೂಪಲಾವಣ್ಯಸೌಭಾಗ್ಯಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯೊಳ್ (ವಡ್ಡಾರಾ. ೩೩-೧) ; ತನ್ನ ಲೀಲೆಯಿಂ ಬಂದಳದೊಂದು ವಿಭ್ರಮಂ . . . ಪೊಸತಾಗಿರೆ ವಲ್ಲಭನಲ್ಲಿಗಟ್ಟುರಿಂ (ಜಗವಿ. ೨-೬೦) ; ಅಚ್ಚರಿಯು ರೊಳಗರಿಗಿಣಯರೊಳಚ್ಚಮುಗುಳ್ಚುವ ವಿಳಾಸಮುಂ ವಿಭ್ರಮಮುಂ ನಚ್ಚರದೆನೆ ನರನಾರಿಯ ನಚ್ಚಣಕೆಣೆವರ್ಪ ನಚ್ಚಣಂ ಪೆಱತುಂಟೇ (ರಾಜಶೇ. ೧೨-೯೭). ೬. ವಿಜೃಂಭಣೆ ; ವೈಭವ ; ಸಂಭ್ರಮ : ಅಭ್ರಮುವರಸಭ್ರಗಜಂ ವಿಭ್ರಮದಿಂದಂ ಸೆಜ್ಜರಕ್ಕೆ ಬಂದವೊಲೆಸೆಗುಂ (ಯಶೋಚ. ೨-೨೧) ; ವಿಭ್ರಮದಿಂ ಬಂದನದೊಂದು ನಂದನವನಂ ಬರ್ಪಂತೆ ಸಂಕ್ರಂದನಂ (ಪುಷ್ಪಪು. ೧೪-೪೫). ೭. ತಪ್ಪು ; ದೋಷ. ೮. [ಕಾವ್ಯಮೀ] ದಶವಿಧವಾದ ಕೇಲಿಭಾವ ಅಥವಾ ಸ್ತ್ರೀಯರ ಸ್ವಭಾವಜ ಅಲಂಕಾರಗಳಲ್ಲಿ ಒಂದು ; ಅನುರಕ್ತಸ್ತ್ರಿಯು ಸಂಭ್ರಮದಲ್ಲಿ ತನಗರಿವಾಗದಂತೆ ಮಾಡಿಕೊಳ್ಳುವ ತೊಡಿಗೆಯ ಪಲ್ಲಟ : "ವಿಭ್ರಮ – ಕಾಂತನ ಹತ್ತಿರ ಬಹ ಸಮಯದೊಳು ಸಂಭ್ರಮದಿಂ ಮಾಡುವ ತೊಡಿಗೆಯ ಪಲ್ಲಟ" (ನಾಚರಾ. ೫). [ಸಂ.]

ವಿಭ್ರಮವತಿ (ನಾ). ಚೆಲುವೆ ; ಸುಂದರಿ ; ಲಾವಣ್ಯವತಿ : ವಿಭ್ರಮವತಿಯರ ಮಿಸುಗುವದಭ್ರವಿಳಾಸಂ . . . ಶುಭ್ರಾಭ್ರವಿಭ್ರಮದವೊಲ್ ವಿಭ್ರಂಶಮನೆಯ್ದದೇಂ ಕ್ಷಣಂ ನಿಂದಪುದೇ (ಪಾರ್ಶ್ವ. ೪-೬೯). [ಸಂ. ವಿಭ್ರಮವತೀ]

ವಿಭ್ರಮಿಸು (ಕ್ರಿ). ತಪ್ಪುತಿಳಿದುಕೊಳ್ಳು ; ಭ್ರಾಂತಿಗೊಳ್ಳು ; ಭ್ರಮಿಸು : ಕುಮತಿಗಳು ನಾಯ್ವಾಲನುಂಡರೊ ತಮವಿಡಿದು ಮರಳ್ಗೊಂಡರೋ ವಿಭ್ರಮಿಸಿ ಮೆಲಿದರೊ ಮದ್ದಕುಣಿಕೆಯ ಕಾಯಿಗಳನು (ಬಸವ. ೫೪-೩೦). [ವಿಭ್ರಮ + – ಇಸು]

ವಿಭ್ರಾಂತ (ಗು). ೧. ಸುತ್ತಾಡಿದ ; ತಿರುಗಾಡಿದ. ೨. ಭ್ರಾಂತಿಗೊಳಗಾದ ; ತಬ್ಬಿಬ್ಬುಗೊಂಡ. (ನಾ). ೩. ಭ್ರಾಂತಿಗೊಳಗಾದವನು ; ತಬ್ಬಿಬ್ಬುಗೊಂಡವನು : ನೀಂ ಭವ್ಯನೈ ಮತ್ತಿನ ಮಿಥ್ಯಜ್ಞಾನಿ ವೋಲ್ ನೀಂ ತರಳತೆವೆರಸಿಂತೇಕೆ ವಿಭ್ರಾಂತನಪ್ಪೆ (ಆದಿಪು. ೩-೭); ಶಾಂತದೂರನನಲ್ಪಮತಿಯಂ ದಾಂತರಹಿತನನಶುಚಿಯಂ ವಿಭ್ರಾಂತನಂ . . . ಸಲಹು ಮದಗರ್ವಂ ಹರಿಸಿ (ಬಸವ. ೨೨-೫೦). ೪. [ನಾಟ್ಯ] ನೋಟದ ಒಂದು ಭಂಗಿ ; IP "ಕಣ್ಣುಗುಡ್ಡೆ ಅರಳಿಸಿ ಚಂಚಲದೃಷ್ಟಿಯಿಂದ ನೋಡುವುದು" (ಲಾಸ್ಯರಂ. ೨೭೧ ಗದ್ಯಾನುವಾದ) : ಗೆಲವಂದ ನೋಂಟ ಮೊರ್ಮೆಯುಮಲರ್ದುಂ ಚಲಿಸಲ್ಕೆ ತಾರೆ ವಿಭ್ರಾಂತಾಖ್ಯಂ (ಲಾಸ್ಯರಂ. ೨-೨೬). ೫. [ಜೈನ] ಒಂದು ನರಕದ ಹೆಸರು : ರತ್ನಪ್ರಭೆಯೊಳ್ ಸೀಮಂತಕ ನಿರಯ ರೌರವ . . . ವಿಭ್ರಾಂತ ತ್ರಸ್ತ ವಕ್ರಾಂತ . . . ಪ್ರಕೀರ್ಣಕ ವಿಕಲ್ಪದಿಂ ತ್ರಿಂಶಲ್ಲಕ್ಷ ಬಿಲಂಗಳಪ್ಪುವು (ತತ್ತ್ವಪ್ರ. ೧೭೦). [ಸಂ.]

ವಿಭ್ರಾಂತಚಿತ್ತ (ನಾ). ಭ್ರಾಂತಿಗೊಳಗಾದ ಮನಸ್ಸುಳ್ಳ ವ್ಯಕ್ತಿ ; ಭ್ರಮಾಧೀನನಾದವನು : ಸಾಕ್ಷಾತ್ ಸದಾಶಿವನಂತ ಮಱವಾ ಅಯ್ಯನಂ ವಿಭ್ರಾಂತಚಿತ್ತರು ಬಲ್ಲರೇ (ಬಸವ. ೨೯-೩೨). [ಸಂ.]

ವಿಭ್ರಾಂತಿ (ನಾ). ಭ್ರಾಂತಿ ; ಭ್ರಮೆ : ಕಾಶ್ಮಪಿ . . . ಗದ್ಗದಕಂಠಸ್ಥಿತೆಯಾಗಿ ತನ್ನ ಮನದೊಳ್ ವಿಭ್ರಾಂತಿಯಂ ತಾಳ್ದಿದಳ್ (ಸುಕುಮಾ. ೨-೩೧ ಪ) ; ವಿಳಸತ್ಸಂಧ್ಯಾರುಣ ಪ್ರದ್ಯುತಿಗೆ ರುಧಿರವಿಭ್ರಾಂತಿಯಿಂ ಬಗ್ಗಲಿಂಡವ್ಯಳಕುಂ (ರಾಜಶೇ. ೬-೨೦). [ಸಂ.]

ವಿಭ್ರಾಂತಿಗೊಳ್ (ಕ್ರಿ). ಗೊಂದಲಗೊಳ್ಳು ; ಕಂಗೆಡು ; ತಬ್ಬಿಬ್ಬಾಗು : ಲಿಂಗದ ಕಂಬನಿಗಳೊಗುವಂದಮಂ ಕಂಡಾಗ ಬೆಬ್ಬೆಱಗೊಂದಿ ಭಯ ವಿಭ್ರಾಂತಿಗೊಂಡು ಮನಂ ಕೆದಱೆ ಹೆದಱೆ (ಬಸವ. ೧೪-೪೬). [ವಿಭ್ರಾಂತಿ + ಕೊಳ್]

ವಿಭ್ರಾಂತೆ (ನಾ). ಗೊಂದಲಗೊಂಡವಳು ; ಕಂಗೆಟ್ಟವಳು ; ತಬ್ಬಿಬ್ಬಾದವಳು : ಬಾಷ್ಪಾಂಬುವುಂ ಗದ್ಗದಾರಾವಮುಂ ಪೊಣ್ಮೆ ಸಖೀಜನಕ್ಕೆ ನುಡಿದರ್ ವಿಭ್ರಾಂತೆಯರ್ ಕಾಂತೆಯರ್ (ಪುಷ್ಪಪು. ೧೩-೯೭) ; ಪುರುಷಾಂತರವನೇನುವನಱಿಯೆ ವಿಭ್ರಾಂತೆ ನೀನತಿ ದಿಟ್ಟತನದಿಂದೊಲ್ಲದಿಹುದೇನು (ಬಸವ. ೪೦-೩೭). [ವಿಭ್ರಾಂತ + – ಎ]

ವಿಭ್ರಾಜ (ನಾ). ಕಾಂತಿ ; ಹೊಳಪು ; ಪ್ರಕಾಶ : ಅನೂನ ಮರಕತರತ್ನಭಿತ್ತಿ ವಿಭ್ರಾಜದೊಳಾಲಂಬಮಾನ ಮುಕ್ತಾದಾಮಲಂಬೂಷಭೂಷಿತದೊಳ್ . . . ಪೊರೆದು (ಸುಕುಮಾ. ೯-೧೭ ವ). [ಸಂ. ವಿಭ್ರಾಜ್]

ವಿಭ್ರಾಜಿ (ನಾ). = ವಿಭ್ರಾಜ : ಶಶ್ವದ್ಭುಣಾಂಭೋರುಹವಿಲಸನವಿಭ್ರಾಜಿಯೊಳ್ . . . ಸೌಂದರ ಕೇಲೀಹಂಸನಾದಂ ಸುಕವಿಜನಮನೋಮಾನಸೋತ್ಸಂಸಹಂಸಂ (ಆದಿಪು. ೧೭-೭೫). [ಸಂ.]

ವಿಭ್ರಾಜಿತ (ಗು). ೧. ಹೊಳೆಯುವ ; ಪ್ರಕಾಶಿಸುವ ; ಉಜ್ವಲವಾದ : ರಾಜಾಧಿರಾಜಮಸ್ತಕಮಣಿಮಕುಟವಿಭ್ರಾಜಿತಸರೋಜ . . . ಅಷ್ಟಮದಾಂಧನಪ್ಪಾ ಜರಾಸಂಧನ ಮುಂದೆ . . . ಜೀವಂಜಸೆ ನೆಟ್ಟನೆ ನೆಲಕೆ ಬೀಳ್ದುರುಳೆ (ನೇಮಿಸಂ. ೧೭-೧೬); ರಾಜಮುಖಿ ನೋಡೀ ಸರೋವರದ ಪದ್ಮಿನಿಗೆ ರಾಜಹಂಸಕ್ರೀಡೆ ಪುನ್ನಾಗಕೇಳಿ ವಿಭ್ರಾಜಿತಮಧುಪಗೋಷ್ಠಿ ಸಂದವುದು (ಜೈಮಿಭಾ. ೭-೯). (ನಾ). ೨. ಹೊಳಪು ; ಕಾಂತಿ ; ಪ್ರಕಾಶ. ೩. ಹೊಳೆಯುತ್ತಿರುವಂಥದು ; ಕಾಂತಿಯುಳ್ಳುದು ; ಪ್ರಕಾಶಿತವಾದುದು : ಅಗಣ್ಯಪುಣ್ಯಾರಣ್ಯಶ್ರವಃಪುಣ್ಯಶೈಲ ಪುಣ್ಯಹ್ರದ ಸಮಾಜವಿಭ್ರಾಜಿತಮುಂ . . . ಎನಿಸಿದ ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು (ಜಗವಿ. ೨-೧ ವ) ; ಆ ಮಹಾವನಂ . . . ಗಗನಮಂಡಲದಂತೆ ಋಕ್ಷಾಕೀರ್ಣಮುಂ ಕುಟಜಕುಜವಿಭ್ರಾಜಿತಮುಂ (ಚಂದ್ರಪ್ರ. ೫-೩೨ ವ). ೪. ಕಾಂತಿಯಿಂದ ಕೂಡಿದ ವ್ಯಕ್ತಿ; ಶೋಭಿಸುವವನು : ಭರತಯತಿಪತಿ . . . ಅಮ್ಮತಕರಧವಲ್ಕಕಚ್ಛತ್ರಚಾಮರ ಚತುಷ್ಕಯವಿಭ್ರಾಜಿತನುಂ . . . ಆಗಿ (ಆದಿಪು. ೧೭-೭೪ ವ). [ಸಂ.]

ವಿಭ್ರಾಜಿಸು (ಕ್ರಿ). ಹೊಳೆ ; ಪ್ರಕಾಶಿಸು ; ರಾರಾಜಿಸು : ವಿಭ್ರಾಜಿಸುವ ಮಹಿಮೆಯುಳ್ಳಕ್ಷಯಕ್ರೀಯೊಳಾತಂ ನೆರೆದಂ (ಧಮಾಮೃ. ೬-೨೩) ; ಪಿರಿದುಂ ಸೊಗಯಿಪ ಬುದ್ಧುದದಿಂದಂಬುಧಿ ವಿಭ್ರಾಜಿಸಿತು (ಜಯಕಾ. ೧-೩೦). [ವಿಭ್ರಾಜ + – ಇಸು]

ವಿಮಂಡಿತ (ಗು). ಅತಿಶಯವಾಗಿ ಅಲಂಕರಿಸಲ್ಪಟ್ಟ ; ಚೆನ್ನಾಗಿ ಶೃಂಗರಿಸಿದ: ದಂಡಧರಂಬೊಲಿರ್ದಂ . . . ಪ್ರಭಾಮಂಡಲನತ್ತಿ ಚಂಡಭುಜದಂಡವಿಮಂಡಿತ ಮಂಡಲಾಗ್ರಮಂ (ಪಂಪಾಮಾ. ೧೪-೧೭೭). [ಸಂ.]

ವಿಮಗ್ನ (ಗು). ತಲ್ಲೀನನಾದ ; ಮಗ್ನನಾದ ; ತನ್ನಯಗೊಂಡ.

ವಿಮಗ್ನಗೋಷ್ಠಿ =ತಲ್ಲೀನರಾದವರ ಗೋಷ್ಠಿ ; ತನ್ಮಯತೆಯನ್ನು ಹೊಂದಿದವರ ಸಭೆ : ತನು ಮನಂ ಧನವೆಂಬವಂ ವಂಚನೆಗಳೆಲ್ಲದೆ ಕೊಟ್ಟು ರಸಿಕದಿ ಮನಸು ಕರಗಿಸಿ ಮೇಳರಾಗಿ ವಿಮಗ್ನಗೋಷ್ಠಿಯಲ್ಲಿ ಅನುನಯದೊಳೊಂದಿಪ್ಪ ಜಂಗಮದನುಭವಂಗಳೊಳಿಪ್ಪೆವಗಲದೆ (ಬಸವ. ೧೨-೩೦). [ಸಂ.]

ವಿಮತ (ಗು). ೧. ಅಭಿಪ್ರಾಯಭೇದದಿಂದ ಕೂಡಿದ ; ಭಿನ್ನಾಭಿಪ್ರಾಯದ. ೨. ಹೊಂದಿಕೆಯಿಲ್ಲದ ; ಸಾಮರಸ್ಯವಿಲ್ಲದ. ೩. ಕಡೆಗಣಿಸಿದ ; ಉಪೇಕ್ಷಿಸಲ್ಪಟ್ಟ. ೪. ಅಸ್ಪಷ್ಟವಾದ ; ಸಂದೇಹಾಸ್ಪದವಾದ. (ನಾ). ೫. ವಿರುದ್ಧವಾದ ಅಭಿಪ್ರಾಯವುಳ್ಳವನು. ೬. ವಿರೋಧಿ ; ಶತ್ರು. ೭. ಅನ್ಯಮತ ; ಬೇರೆಜಾತಿ. [ಸಂ.]

ವಿಮತಿ (ನಾ). ೧. ಭಿನ್ನಾಭಿಪ್ರಾಯ : ಮತಿವಂತರಿಗುಂ ತಾಂ ಸಂತತಮವಿದಿತ ತತ್ತ್ವಮಾಗಿ ವಿಮತಿಯನಾಂತಾ ನುತಕಾವ್ಯದ ಧವನಿಯೆಂಬೊಂದು ತೆರಂ ಸಲೆ ವಿವೃತಮಾಯ್ತುದಿಂತೀ ಪರಿಯಿಂ (ಧ್ವನ್ಯಾಲೋ. ೨೦೬). ೨. ದಡ್ಡತನ ; ಮೂರ್ಖತನ. ೩. ದಡ್ಡ ; ಮೂರ್ಖ. [ಸಂ.]

ವಿಮದ (ನಾ). ಅಹಂಕಾರವಿಲ್ಲದವನು ; ಮದರಹಿತನಾದವನು : ಕಾಂಚನಪೀಠಾಧಿಷ್ಠಿತ ನೀಂ ಚಿರ ವೇಲ್ಪಂತು ಸರ್ವವಿದನ್ಯೆ ವಿಮದಾ (ಜಿನಾಲ. ೧೪-೧೪). [ಸಂ.]

ವಿಮನ (ನಾ). ೧. ದುಃಖದಿಂದ ಕೂಡಿದವನು ; ಖಿನ್ನಮನಸ್ಕನಾದವನು. ೨. ದಿಗ್ಭ್ರಮೆಹೊಂದಿದವನು ; ಭ್ರಾಂತಿಗೊಂಡವನು. ೩. ಕೆಟ್ಟಮನಸ್ಸುಳ್ಳವನು ; ದುಷ್ಟ : ''ವಿಮನಂ ದುರ್ಮನ(ನಹೀನ)ಮನನುದ್ಯುಕ್ತಂ'' (ವಸ್ತುಕೋ. ೯೯-೮). [ಸಂ. ವಿಮನಸ್]

ವಿಮನಸ್ಕ (ನಾ). ೧. ದುಃಖಿತನಾದ ವ್ಯಕ್ತಿ ; ಖಿನ್ನಮನಸ್ಕನಾದ ವ್ಯಕ್ತಿ : ''ಸೋತ್ಕಂಠಂ ಕರಮುನ್ಮನನುತ್ಕಂ ವಿಮನಸ್ಕ ಮುತ್ತವಳನವನಕ್ಕುಂ'' (ವಸ್ತುಕೋ. ೧೫೪-೨೩). ೨. ಬೇರೆಯ ಕಡೆಗೆ ಮನಸ್ಸುಳ್ಳ ವ್ಯಕ್ತಿ ; ಅನ್ಯಮನಸ್ಕವ್ಯಕ್ತಿ : 'ಸ್ನೇಹಿತೆಯ ಮನೆಗೆ ಹೋಗಿದ್ದೆ ಅಂದರಾಯಿತು' ಎಂದು ಅವಳು ವಿಮನಸ್ಕಳಾಗಿ ಹೇಳಿದಳು (ರೂಪಕ. ೬೪). ೩. ದಿಗ್ಭ್ರಾಂತನಾದ ವ್ಯಕ್ತಿ. ೪. ಅಸಮಾಧಾನ ಹೊಂದಿದವನು. [ಸಂ.]

ವಿಮರ್ದ (ನಾ). ೧. ಜಜ್ಜುವಿಕೆ ; ಪುಡಿಮಾಡುವಿಕೆ. ೨. ಉಜ್ಜುವಿಕೆ ; ತಿಕ್ಕುವಿಕೆ; ತೀಡುವಿಕೆ. ೩. ಪರಿಮಳದ್ರವ್ಯಗಳನ್ನು ನುಣ್ಣಗೆ ಮಾಡುವುದು, —ಚೂರ್ಣಿಸುವುದು : ''ಪರಿಮಳಂ ವಿಮರ್ದಂ ಕ್ಷೋದಂ'' (ವಸ್ತುಕೋ. ೧೧೩-೧೭). ೪. ಸಂಪರ್ಕ ; ಸ್ಪರ್ಶ. ೫. ನಾಶಮಾಡುವುದು ; ಹಾಳುಮಾಡುವುದು. ೬. ಕದನ ; ಯುದ್ಧ. ೭. ಗ್ರಹಣ. [ಸಂ.]

ವಿಮರ್ದಿತಕರಣ (ನಾ). [ಕಾಮಶಾ] ಒಂದು ವಿಧವಾದ ರತಿಬಂಧ : ಸ್ತ್ರೀ ಕುಳ್ಳಿರ್ದಿರೆ ಪುರುಷನಿದಿರ್ಮೊಕಮಾಗಿ ಅವಳ ಬದಿಗಳ ಠಾವಂ ತಕ್ಕಿಸಿಕೊಂಡು ತನ್ನ ತಿಗಮಂ ಹಲವು ಬಾರಿ ತಿರುಪುತಲ್ಮಾಡುತ್ತ ಈ ಪರಿಯಲ್ಲಿ ಹಲವು ಬಾರಿ ಮಾಡಿದೊಡೆ ವಿಮರ್ದಿತಕರಣಂ (ಕಾಮಶಾ. ೨೩೬). [ಸಂ.]

ವಿಮರ್ದಿಸು (ಕ್ರಿ). ನಾಶಮಾಡು ; ಅಳಿಸು : ಪುದಿದಿರೆ ಕೆಂಪು ನಿನ್ನ ನಯನಂಗಳೊಳನ್ಯರ ರಕ್ತದಿಂದ ಮಿಯದೆ . . . ಉಗ್ಮ ಬೆಮರ್ ಕಪೋಳದೊಳ್ ಮದವದರಾತಿಕಾಂತೆಯರ ಲೋಚನವಾರಿಗಳಿಂ ಕಪೋಳಪತ್ರದ ಸಿರಿಯಂ ವಿಮರ್ದಿಸದೆ ಮಾಣ್ಬವನಲ್ತೆ ರಸಾಧಿನಾಯಕಾ (ಕಾರ್ಪ್ರಪು. ೨-೧೭). [ವಿಮರ್ದ + - ಇಸು]

ವಿಮರ್ಶ (ನಾ). ೧. ಗುಣದೋಷಗಳ ಪರಿಶೀಲನೆ, — ತುಲನೆ ; ವಿಮರ್ಶೆ. ೨. ಸಂಶಯ ; ಅನುಮಾನ ; ವಿತರ್ಕ. ೩. ವಿವೇಚನಾಶಕ್ತಿ ; ತಿಳಿವಳಿಕೆ. ೪. [ಶೈವ] ''ವಿಮರ್ಶವೆಂದರೆ ಭೇದಾಭೇದಗಳನ್ನು ತನ್ನಲ್ಲಿಯೇ ಸ್ಫುರಿಸಿಕೊಳ್ಳುವ ಶಕ್ತಿಯುಳ್ಳ ಸ್ವಸ್ವರೂಪಪರಾಮರ್ಶ'' (ಭಾರದ. ೨೧೧). ೫. ಶಿವಶಕ್ತಿಗಳ ಸ್ವಾಭಾವಿಕಕ್ರಿಯೆ : ಶಿವಶಕ್ತಿಗಳು ಪ್ರಪಂಚವನ್ನು ಸೃಷ್ಟಿಸುವುದರಲ್ಲಿ ಪ್ರಕಾಶ ಮತ್ತು ಸ್ವಾಭಾವಿಕಕ್ರಿಯೆಗಳ ರೂಪವಾಗಿ ಸೇರುವುವು. ಈ ಸ್ವಾಭಾವಿಕಕ್ರಿಯೆಗೆ ವಿಮರ್ಶ ಎಂದು ಹೆಸರು (ಧಾತತ್ತ್ವ. ೬೩೮). [ಸಂ.]

ವಿಮರ್ಶಕ (ನಾ). ೧. (ಸಾಹಿತ್ಯ, ಕಲೆ ಮುಂತಾದುವುಗಳ) ಗುಣದೋಷಗಳನ್ನು ಪರೀಶೀಲಿಸುವವನು, —ವಿವೇಚಿಸುವವನು : ಥೇಲಿಸ್ಸನ 'ಅಪ್' ತತ್ತ್ವವು ಜಡದ್ರವ್ಯವೆ, ಚೇತನಾತ್ಮಕವೆ ಎಂಬ ವಿಷಯದಲ್ಲಿ ವಿಮರ್ಶಕರಲ್ಲೇ ವಿಪ್ರತಿಪತ್ತಿ ಇದೆ (ಕುಸ್ಸಾರ. ೭ ಟೀಠಿಕೆ) ; ಕಲಾಕೃತಿಯ ಯೋಗ್ಯತೆಯನ್ನು ನಿರ್ವಿಕಾರನಾಗಿ ನಿರ್ಣಯಿಸಿ ವಿಮರ್ಶಕನು ಅದಕ್ಕೆ ಉಚಿತಸ್ಥಾನವನ್ನು ತೋರಿಸುತ್ತಾನೆ. ಉತ್ತಮವಿಮರ್ಶಕನಲ್ಲಿ ಈ ಶಾಸ್ತ್ರೀಯದೃಷ್ಟಿ ಬಹುಪ್ರಮುಖವಾಗಿ ಕಂಡುಬರುತ್ತದೆ (ನವ್ಯಕಾ. ೫). [ಸಂ.]

ವಿಮರ್ಶನ (ನಾ). ೧. ಗುಣದೋಷಗಳ ಪರಿಶೀಲನೆ ; ವಿಮರ್ಶೆ : ವಿಮರ್ಶನ ಎಂದರೆ ಪರೀಕ್ಷಾ (ಧಾತತ್ತ್ವ. ೬೩೬). ೨. ಜ್ಞಾನ ; ತಿಳಿವಳಿಕೆ. [ಸಂ.]

ವಿಮರ್ಶನಪ್ರಜ್ಞೆ (ನಾ). ಗುಣದೋಷಗಳನ್ನು ಪರಿಶೀಲಿಸುವ ಜ್ಞಾನ, -ತಿಳಿವಳಿಕೆ : ಮನುಷ್ಯನಲ್ಲಿ ವಿಮರ್ಶನಪ್ರಜ್ಞೆ ಬೆಳೆದಂತೆಲ್ಲ ಬದುಕು ಅರ್ಥಪೂರ್ಣವಾಗುತ್ತದೆ (ರೂಢಿ). [ಸಂ. ವಿಮರ್ಶನಪ್ರಜ್ಞಾ]

ವಿಮರ್ಶನಾಶಕ್ತಿ (ನಾ). ಗುಣದೋಷಪರಿಶೀಲನೆಯಲ್ಲಿ ಇರುವ ಆಸಕ್ತಿ ; ವಿಚಾರಪರತೆ : ಅಪರೋಕ್ಷವಾದ ಆತ್ಮಾನುಭೂತಿಯನ್ನು . . . ತಿಳಿದು ನೋಡುವ ವಿಶ್ಯಂಖಲಾವಿಮರ್ಶಾಶಕ್ತಿ ಮತ್ತು ವಿಮರ್ಶನಾಶಕ್ತಿ ಕ್ರಿ. ಪೂ. ಆರನೆಯ ಶತಮಾನದ ಸುಮಾರಿಗೆ ಆರಂಭವಾಗಿರಬೇಕು (ಭಾರದ. ೧೩೧). [ಸಂ.]

ವಿಮರ್ಶಶಕ್ತಿ (ನಾ). [ಶೈವ] ಪರಮಾತ್ಮನ ಸ್ವಾನಂದಾನುಭವ : ಪರಮಾತ್ಮನು ಪ್ರಳಯಕಾಲದಲ್ಲಿ ವಿಶ್ವವನ್ನು ತನ್ನೊಳಗೆ ಅಡಗಿಸಿಕೊಂಡು ಏಕಾಂತವಿಶ್ರಾಂತನಾಗಿ ಆತ್ಮಾರಾಮನಾಗಿರುವವನು . . . ಈ ಸ್ವಾನಂದಾನುಭವವನ್ನು ವಿಮರ್ಶಶಕ್ತಿಯೆಂದು ಅನುಭವಿಗಳು ಕರೆಯುತ್ತಾರೆ (ಶಕ್ತಿವಿ. ೨೪). [ಸಂ.]

ವಿಮರ್ಶಿಸು (ಕ್ರಿ). (ಸಾಹಿತ್ಯ, ಕಲೆ ಮುಂತಾದುವುಗಳ) ಗುಣದೋಷಗಳನ್ನು ಪರಿಶೀಲಿಸು, — ಚರ್ಚೆಮಾಡು, — ವಿಮರ್ಶೆಮಾಡು : ಆಗಿಂದಾಗ್ಗೆ ಪ್ರಕಟವಾಗುತ್ತ ಹೋಗುವ ಗ್ರಂಥಗಳನ್ನು ಮಾಸಿಕಗಳಲ್ಲಿ ವಿಮರ್ಶಿಸುವುದು ಸುಲಭ (ನವ್ಯಕಾ. ೯) ; ಅವರಿಬ್ಬರೂ ಆಗ ಖ್ಯಾತಿಪಡೆದಿದ್ದ ಪಂಡಿತೋತ್ತಮರ ಗುಣಾವಗುಣಗಳನ್ನು ವಿಮರ್ಶಿಸುತ್ತಾ ಸಂಭಾಷಣೆ ನಡೆಯಿಸಿದರು (ಚಿಂಗಾಳ್ಳ. ೬೦).

[ವಿಮರ್ಶನ + - ಇಸು]

ವಿಮರ್ಶೆ (ನಾ). ೧. ಗುಣದೋಶಪರಿಶೀಲನೆ ; ವಿವೇಚನಾಪರವಾದ ಟೀಕೆ: ವಾದ ವಿವಾದಗಳ ತಕ್ಕಡಿಯಲ್ಲಿ ತೂಗಾಡುವ ಈ ವಿಷಯದ ವಿಮರ್ಶೆ ಮುಂದೆ ಬರುತ್ತದೆ (ದ್ರಾವಿವಿ. ೪೫). ೨. ತಜ್ಞರು ಮಾಡುವ ಕಲೆ, ವಿಜ್ಞಾನ ಮೊದಲಾದ ಬೌದ್ಧಿಕಪ್ರಕಾರಗಳ ರಚನೆಗಳ ಗುಣದೋಷಪರಿಶೀಲನೆ. ೩. ಸಾಹಿತ್ಯ ಪ್ರಕಾರಗಳಲ್ಲಿ ಒಂದು ; ಕಾವ್ಯ, ಸಾಹಿತ್ಯಕೃತಿಗಳ ಗುಣದೋಷಪರಿಶೀಲನೆಯನ್ನೊಳಗೊಂಡ ಸಾಹಿತ್ಯ : ಸಾಹಿತ್ಯಸೃಷ್ಟಿಯು ಇಂದು ನಮ್ಮಲ್ಲಿ ವಿಪುಲ, ಆದರೆ ಅದರ ಜೊತೆಯಾಗಿ ವಿಮರ್ಶೆಯು ಬೆಳೆದುಬಂದಿಲ್ಲ (ನವ್ಯಕಾ. ೭). [ಸಂ. ವಿಮರ್ಶ]

ವಿಮಲ, ವಿಮಳ (ಗು). ೧. ನಿರ್ಮಲವಾದ ; ಶುಭ್ರವಾದ ; ಸ್ವಚ್ಛವಾದ : ವಿಮಲತರಸ್ಫಟಿಕಮರೀಚಿಮಯಂ . . . ಸಮಚತುರಸ್ರದ ಸಂಸ್ಥಾನ ಮನೋಹರಮೂರ್ತಿ ಸಹಜಮಣಿಗಣಭೂಷಂ (ಶಾಂತೀಶ್ವ. ೯-೫೩). ೨. ಸ್ಪಷ್ಟವಾದ ; ವಿಶದವಾದ. ೩. ಶುದ್ಧವಾದ ; ಅಪ್ಪಟ ; ಅಚ್ಚ : ವಿಮಲಸ್ವರ್ಣಮಯಂ ಕನನ್ಮಣಿಮಯಂ ಶೋಭಾಮಯಂ ತಾನೆನಲ್ಕೆ ಮಯಂ ವಿಸ್ಮಯಮಾಗೆ ಮಾಡಿದ ಸಭಾವಿಸ್ತಾರಮಂ (ಜಗ. ೧೭-೭). ೪. ನಿಷ್ಕಳಂಕವಾದ ; ಪವಿತ್ರವಾದ; ಶ್ರೇಷ್ಠವಾದ: ವಿಮಲಶ್ರೀಶ ಸರಸ್ವತೀನಿಳಯಂ ಕೀರ್ತಿಶ್ರೀವಧೂಕಾಂತ ಗೌತಮಗೋತ್ರಾಂಬುಜಮಿತ್ರ ನಿನ್ನನ್ನರಂ ಕಂಡಿನಿಲ್ಲ (ಪಂಚತಂ. ೩೧೧-೧೪) ; ವಿಮಲಯಶೋವಿಶುದ್ಧಮಣಿಯಂ ಪಡೆಯಲ್ಕೆ ಪಯೋಧಿವೇಲೆಯಂ ಕ್ರಮದೊಳೆ ದಾಂಟಿ ನಿರ್ಮಲದಯಾರಸಸಮುದ್ರಮನೀ ಕಥಾಸಮುದ್ರಮನೊಳಪೊಕ್ಕು ನಿರ್ವಹಿಸುವೆನ್ನ ಕವಿತ್ವಬಹಿತ್ರಯಾತ್ರೆಗೇನಮರ್ದುದೊ ರ್ಕರ್ಣಧಾರವಿಭವೋನ್ನತಿ ಭವ್ಯಜನಕ್ಕಿದೆಂತೆನಲ್ (ಮಲ್ಲಿಪು ೧-೩೦). ೫. ಬಿಳಿಯದಾದ; ಶ್ವೇತವರ್ಣದ. (ನಾ). ೬. ನಿರ್ಮಲವಾದುದು ; ಶುದ್ಧವಾದುದು : ''ಅನಾವಿಲಂ ವಿಶದಮುಜ್ವಲಮೆನಲು ವಿಮಲವಕ್ಕುಂ'' (ಮುಂಗರಾ. ೯-೨೯). ೭. ಪವಿತ್ರವಾದುದು ; ಶ್ರೇಷ್ಠವಾದುದು. ೮. ಚಿನ್ನದ ಮುಲಾಮು ಹಾಕಿದ ಬೆಳ್ಳಯ ರೇಕು,— ತಗಡು. ೯. [ಶೈವ] ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು : ಕಾಮಿಕ, ಯೋಗಜ,ಅಚಿಂತ್ಯ . . . ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ . . . ಕಿರಣ, ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨).

೧೦. [ದ್ವೈತ] ವೈಖಾನಸಾಗಮದ ನಾಲ್ಕು ಪ್ರಭೇದಗಳಲ್ಲಿ ಒಂದಾದ ಸಂಹಿತೆಯ ಎಂಟು ಆಗಮಗಳಲ್ಲಿ ಒಂದು : ಮರೀಚಿಮಹರ್ಷಿಪ್ರೋಕ್ತವಾದ ಜಯ (ಆದಿ), ಆನಂದ . . . ವಿಜಿತ, ವಿಮಲ, ಕಲ್ಪಗಳೆಂಬ ಎಂಟು ಆಗಮಗಳು ''ಸಂಹಿತೆ'' ಗಳೆಂದೂ . . . ಪ್ರಖ್ಯಾತವಾಗಿವೆ (ಭಾರದ. ೭೫). ೧೧. [ಜೈನ] ಇಪ್ಪತ್ನಾಲ್ಕು ಮಂದಿ ತೀರ್ಥಂಕರರಲ್ಲಿ ಹದಿಮೂರನೆಯ ತೀರ್ಥಂಕರ : ವೃಷಭ ಅಜಿತ ಸಂಭವ . . . ವಿಮಲ[ಪಾಠಾಂ. ಳ] ಅನಂತ ಧರ್ಮ ಶಾಂತಿ . . . ನಮಿ ನೇಮಿ ಪಾರ್ಶ್ವ ವರ್ಧಮಾನರೆಂಬಿಪ್ಪತ್ತುನಾಲ್ವರ್ ತೀರ್ಥಕರರ್ (ಚಾವುಪು. ೪೦೨). ೧೨. [ಬೌದ್ಧ] ಸಂನ್ಯಾಸಿ. **ವಿಮಳ** : ೧. ವಿಮಳತರ ಗಗನಮಂಡಳದ ಮಧ್ಯದೊಳ್ ನೆಗದು ಶಬಳಮೋಘೋತ್ಕರದೊಪ್ಪಮನಪ್ಪುಕೆಯ್ದುದಾ ಸ್ಫಟಿಕಮಯ ಪ್ರಾಕಾರದೊಳಗೆ ಮಣಿಗೃಹನಿವಹಂ (ಚಂದ್ರಪ್ರ. ೧೧-೬೭). ೪. ನಿನ್ನಾ ವಿಮಳ ಯಶೋವಿಧುವೆಂಬುದು ಕಮನೀಯಂ ಶ್ಲೇಷರೂಪಕಾಲಂಕಾರಂ (ಕವಿಕಾ. ೩-೨೧); ಸಂಗಿಯಲ್ಲದ ವಿಮಳಪರಮಾತ್ಮಂಗೆ ಲೀಲೆಯೊಳಾಯ್ತು ಮಾಯಾಸಂಗವು (ಕುವಾದೋ. ೩-೬೭). ೫. 'ವಿಮಳಾಬ್ಜ' ಪರಾ. ೬. ''ವಿಮಳಂ, ವಿಶದಂ, ವೀಧ್ರಂ, ಉಜ್ವಳಂ, ಅನಾವಿಲಂ - ಈ ೫ ನಿರ್ಮಳಮಪ್ಪ ವಸ್ತು'' (ಹಲಾಯು. ೨೨-೧೩೨). ೭. ವಿಮಳ ಮಿದನಿಸುವ ಜೈನಾಗಮಮಂ ನೀಮಱಿದುಮಱಿಯದೆಗ್ಗರ ತೆಱದಿಂ ರಮಣೀಯಮೆಂದು ರಾಜ್ಯಕ್ರಮಕ್ಕೆ ಬೆಚ್ಚಲ್ಲದೆಳಸಲಪ್ಪುದ ಮನದೊಳ್ (ಧರ್ಮಾಮೃ. ೧೦-೯೭). ೧೧. ಪದಿ ಮೂಱನೆಯ ಜಿನಂ ಸಮ್ಮದಮಂ ನಮಗೀಗೆ ವಿಮಳತೀರ್ಥಾಧೀಶಂ (ದಾಧಪು. ೧೩-೬೪೪). ೫, ೧೧ : ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂಪದಮೆಂದುಂ ವರ್ಧಮಾನಂ ಗುಣತತಿ ವಿಮಳಂ . . . ತಾನದಱಿಂ ಪ್ರತ್ಯಕ್ಷ ತೀರ್ಥೇಶ್ವರನೆನೆ ನೆಗಟ್ಟಂ ಪದ್ಮನಾಭಪ್ರಧಾನಂ (ಅರ್ಹನೇ. ೧-೪೩). ೧೩. [ಜೈನ] ಕುಲಪರ್ವತಗಳ ಕೂಟ ಅಥವಾ ಶಿಖರಗಳಲ್ಲಿ ಒಂದು : ತತ್ಕುಟ್ಟಿಲದ ಪ್ರಾಗ್ದಿಗ್ದೇಶದವೋಳ ಸುಪ್ರಬುದ್ಧರುಂದ್ರ ವಿಮಳ ರುಚಕ ರುಚಕೋತ್ತರ ಚಂದ್ರಸುಪ್ರತಿಷ್ಠಮೆಂಬ ಕೂಟಾಪ್ಯಕಂಗಳೊಳ್ ರಮಿಯಿಸುವ . . . ಎಣ್ಬರುಂ ದಿಗಂಗನೆಯರಂ (ಆದಿಪು. ೬-೩ ವ) ೧೪. ಅರುವತ್ತುಮೂರು ಇಂದ್ರಕಗಳಲ್ಲಿ ಒಂದು : ೧. ಋತು ೨. ವಿಮಳಂ . . . ೬೨. ಆದಿತ್ಯಂ ೬೩. ಸರ್ವಾರ್ಥಸಿದ್ಧಿ ಎಂದಿವು ಅನುಕ್ರಮದಿಂ ಅಱುವತ್ತುಮೂಱು ಇಂದ್ರಕಂಗಳ ಪೆಸರ್ಗಳ್ (ತತ್ತ್ವಪ್ರ. ೨೧೩).

[ಸಂ.]

ವಿಮಲಗುಣ, ವಿಮಳಗುಣ (ನಾ). ಪರಿಶುದ್ಧವಾದ ಗುಣ, — ಚಾರಿತ್ರ್ಯ : ವಿಮಲಗುಣಗಣಮನೊಕ್ಕುತ್ತಮಧರ್ಮಮನೊಲ್ಲದಧಿಕಪಾಪಂ ಶೂನ್ಯಾಗಮಮಂ ಪೊರ್ದಿದಂ (ಧರ್ಮಾಮೃ. ೧೧-೧೬೦). **ವಿಮಳಗುಣ** : ವಿಮಳಗುಣಪ್ರಕಟನದತ್ತಮನಸ್ಕಂ ಖಚರನಿಂದುದೆಂತಂತಿರೆ ರಾಗಮನಾಗಳೆ ನೂಂಕಿ ಸದ್ವೃತ್ತಮನುತ್ತಮನೊಲ್ದು ಮೆಱೆಯಲುದ್ಯತನಾದಂ (ಪಾರ್ಶ್ವಪು. ೬-೪೦). [ಸಂ.]

ವಿಮಲತೆ, ವಿಮಳತೆ (ನಾ). ನಿರ್ಮಲವಾಗಿರುವಿಕೆ ; ಪರಿಶುದ್ಧವಾಗಿರುವಿಕೆ: 'ವಿಮಲತೆವೆಱು' ಪರಾ. **ವಿಮಳತೆ** : 'ವಿಮಳತೆವೆಱು' ಪರಾ.

[ಸಂ. ವಿಮಲತಾ]

ವಿಮಲತೆವೆಱು, ವಿಮಳತೆವೆಱು (ಕ್ರಿ). ನಿರ್ಮಲತೆಯನ್ನು ಹೊಂದು ; ಪರಿಶುದ್ಧತೆಯನ್ನು ಪಡೆ : ವಿಮಲತೆವೆತ್ತು ಬಿತ್ತರಿಸುವುತ್ಕಳಿಕಾವಳಿಯಿಂ ಪೊದಳ್ದ ವಿದ್ರುಮಕಮನೀಯದಿಂ . . . ಶಿಖಿಸಮನ್ವಿತದಿಂ ನೆಗಟ್ಟಿಂತು ಸಂತತಂ ಪ್ರಮದವನಂ ಕರಂ ನೆನೆಯಿಸುತ್ತೆಸೆದತ್ತಮೃತಾಂಬುರಾಶಿಯಂ (ಶಾಂತೀಶ್ವ. ೧-೧೩೯). **ವಿಮಳತೆವೆಱು**: ವಿಮಳತೆವೆತ್ತ ಚಿತ್ರಮತಿಯಾಸ್ಮಯಯೂಖಮನುರ್ವಿ ತೋಱಿಸುತ್ತಮೆ ನಡೆನೋಡೆ ಕಲ್ಪಳವಿಳಶ್ರುತಿನಾದಮನಾದಮಾಲಿಸುತ್ತಮೆ .ೞ. ಕುಸುಮಾವಳಿದೇವಿ ವಿಶಾಲಲೀಲೆಯಿಂ (ಕುಸುಮಾ. ೧೨-೩೫); ವಿಮಳತೆವೆತ್ತ ನಿನ್ನಯ ವಚಸ್ಸುಧೆಯಂ ಸುಮನಶ್ಚಕೋರಚಕ್ರಮ ನೊಲವುಣ್ಮೆ ತುಷ್ಟಿವಡಿಸೆಂದು ಎನೇಯಜನಂಗಳಿಂತು ಸತ್ಯಮದದೆ ಪೇಟೆ (ಶಾಂತೀಶ್ವ. ೧-೬೪). [ವಿಮಲತೆ + ಪೆಱು]

ವಿಮಲಮತಿ (ನಾ). ೧. ಪರಿಶುದ್ಧವಾದ ಬುದ್ಧಿ ; ನಿರ್ಮಲವಾದ ಜ್ಞಾನ. ೨. ಪರಿಶುದ್ಧವಾದ ಮನಸ್ಸು ; ನಿರ್ಮಲವಾದ ಹೃದಯ. ೩. ಪರಿಶುದ್ಧವಾದ ಬುದ್ಧಿಯುಳ್ಳ ವ್ಯಕ್ತಿ. ೪. ಪರಿಶುದ್ಧವಾದ ಬುದ್ಧಿಯುಳ್ಳುದು : ಬಹುವ್ರೀಹಿಗೆ- ಅವರ್ ವಿಮಲಮತಿ, ಅವಳ್ ವಿಮಲಮತಿ, ಅದು ವಿಮಲಮತಿ (ಶಬ್ದ. ೪೯ ಪ್ರಯೋ). [ಸಂ.]

ವಿಮಲಸಹಣೆ (ನಾ). ಶ್ರೇಷ್ಠನಾದ ಕುದುರೆದಳದ ಮುಖಂಡ : ಧುರವನವ ಸಾಗಿಸದಿರೆ ತುರಗವಾವೆಡೆ ಪಟ್ಟಸಹಣದ ಹಿರಿಯ ಸಹಣದ ವಿಮಲಸಹಣೆ [ಪಾಠಾಂ. ಣ] ಗಳವರ ಕರೆಯೆನುತ ಧುರಧುರಂಧರರೊರಲಿದರು (ಕುವಾಧೀ. ೪-೪೭).

[ವಿಮಲ + ಸಹಣೆ (< ಸಾಹಣಿ)]

ವಿಮಲಸ್ವಾಂತ (ನಾ). ನಿರ್ಮಲವಾದ ಅಂತಃಕರಣವುಳ್ಳವನು : ಪುರಾಂತಕ ಧ್ಯಾನದಲಿ ವಿಮಲಸ್ವಾಂತನೇಕಾಗ್ರದಲಿ ಭಜಿಸಿದನಿಂದುಶೇಖರನ (ಕುವಾಅ. ೨೨-೪೩).

[ಸಂ.]

ವಿಮಲಿತ (ಗು). ಸ್ವಚ್ಛವಾದ ; ನಿರ್ಮಲವಾದ : ವಿಮಲಿ [ಪಾಠಾಂ. ಳ]ತ ಶ್ರೀಕಾರದಾಕಾರಮನೆಣಿಕೆಗೊಳ್ಳದೆ ಮಿಱುಗುವುವು ಕುಮುದದಳಲೋಚನೆಯ ಕರ್ಣಂಗಳು ಪೊಸತಿವೆನಿಸಿ (ಬಸವ. ೪-೨೭). [ಸಂ.]

ವಿಮಲೆ (ನಾ). ೧. ನಿಷ್ಕಳಂಕಳಾದ ಹೆಂಗಸು ; ಪರಿಶುದ್ಧಳಾದ ಸ್ತ್ರೀ. ೨. ಒಂದು ಬಗೆಯ ಸಸ್ಯ ; ಚರ್ಮಕಷೆ : ''ಸಪ್ತಲಾ, ವಿಮಲಾ, ಸಾತಲಾ, ಭೂರಿಫೇನಾ, ಚರ್ಮಕಷಾ — ೫ ಸಮ್ಮಗಾರಯೆಂಬುವದು, ಸಂಬರೇಣಿ'' (ಸಿದ್ಧಾಂತಿ. ೧೪೫). [ಸಂ. ವಿಮಲಾ]

ವಿಮಳ 'ವಿಮಲ' ನೋ.

ವಿಮಳಗುಣ 'ವಿಮಲಗುಣ' ನೋ.

ವಿಮಳತೆ 'ವಿಮಲತೆ' ನೋ.

ವಿಮಳತೆವೆಱು 'ವಿಮಲತೆವೆಱು' ನೋ.

ವಿಮಳಾಬ್ಜ (ನಾ). ೧. ಬಿಳಿಯತಾವರೆ. ೨. ನಿರ್ಮಲನಾದ ಚಂದ್ರ. ೧, ೨ : ವಿಮಳಾಬ್ಜವಿಭವಂ ನಭದೊಳಂ ನಳಿನಿಯೊಳಂ ಗೋಸಮೃದ್ಧಿ ಗೋಕುಲದೊಳಂ ಮಾರ್ತಂಡಮಂಡಳದೊಳಂ (ಜಗವಿ. ೪-೭೫ ವ). [ಸಂ. ವಿಮಲಾಬ್ಜ]

ವಿಮಳಿನ (ಗು). ೧. ನಿರ್ಮಲವಾದ ; ಸ್ವಚ್ಛವಾದ : ವಿಮಳಿನದುಗ್ಗಚ್ಛಟೆಯಾ ಕ್ರಮದಿಂದಂ ಸವನಸಮಯದೊಳ್ ಪುದಿದಪುದೆಂದಮರ್ದಿರೆ ಪೇೞ್ಗಂತೆ ಸನತ್ಕುಮಾರ ಮಾಹೇಂದ್ರರಿಕ್ಕಿದರ್ ಚಮರಜಮಂ (ಪಾರ್ಶ್ವಪು. ೧೪-೩೮); ವಿಮಳಿನಚಂದ್ರಕಾಂತಿ ತನು ತಂತುಗಳಂ ಮಿಗೆ ನುಂಗಿ ಟಿಂಗದಾಕ್ರಮಿಪ ಪತಂಗದಿಂದಗಿದು ಪೊಕ್ಕ ಸೆಲಂದಿವೊಲೊಪ್ಪಲಾಂಧನಂ (ರಾಜಶೇ. ೧೨-೪೦). ೨. ಪವಿತ್ರವಾದ ; ಶ್ರೇಷ್ಠವಾದ : ವಿಮಳಿನ ಶುದ್ಧಸಮ್ಯಕ್ತ್ವಮುಪಾದೇಯಂ ಸಮಂತು ಹೇಯಂ ಮಿಥ್ಯಾತ್ವಮುಪಾದೇಯಂ ಸಚ್ಚರಿತಮದನಸುಂ ಹೇಯಮಲ್ತೆ ವಿಷಯಕಷಾಯಂ (ಶಾಂತೀಶ್ವ. ೧೩-೬೩).

[ಸಂ. ವಿಮಲಿನ]

ವಿಮಾ 'ವಿಮೆ' ನೋ.

ವಿಮಾಂಸ (ಗು). ೧. ಮಾಂಸರಹಿತವಾದ ; ಮಾಸಂಲವಲ್ಲದ : ಸಿಂಧುರಾಜಂ . . . ಸಮದಂತಂ ಚಾರುವಕ್ತ್ರಂ ಕಿಱುಗಿವಿ . . . ವಿಮಾಂಸಾಂಘ್ರಿ ಗಂಭೀರಮಹಾನಾದಂ ಸುನಾಸಾಪುಟಮರ್ದ ತುರಂಗಂಗಳಂ ಕಾಣ್ಕೆಗೈದಂ (ರಾಜಶೇ. ೧೨-೧೦೧). (ನಾ). ೨. (ನಾಯಿಯ ಮಾಂಸದಂತೆ) ಅಶುದ್ಧವಾದ ಮಾಂಸ. [ಸಂ.]

ವಿಮಾದಾರ 'ವಿಮೆದಾರ' ನೋ.

ವಿಮಾನ (ನಾ). ೧. ಮಾನಹೋಗುವಿಕೆ ; ಅವಮಾನ ; ಅವಮರ್ಯಾದೆ : ಹರುಷ ದರ್ಪ ಕ್ರೋಧ ಲಜ್ಜಾತುರತೆ ಮಾನ ವಿಮಾನವಿವರಲಿ ನಿರುತಸಮನೆಂದನಿ . . . ಕಾರ್ಯವೆಸಗುವನವನೆ ಪಂಡಿತನು (ಕುವಾಅ. ೩-೪೪). ೨. ಮಾನವಿಲ್ಲದವನು ; ಭಂಡ : ಸತತಂ ನಿಂದಾಕರಂ . . . ಸ್ತುತಿಲೋಲಂ ರಾಗಶೀಲಂ ಸುಕೃತವಿಮುಖನಾನಂದಹೀನಂ ವಿಮಾನಂ ನತಕಲ್ಪೋರ್ವೀಜ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೪೯). ೩. ಒಂದು ಅಳತೆ. ೪. ಆಕಾಶದಲ್ಲಿ ಸಂಚರಿಸುವ ದೇವತೆಗಳ ವಾಹನ : ಕನ್ಯಾಚಕ್ರಾದ್ಯಭಿಧಾನ ಜೀವಾಜೀವ ರತ್ನಂಗಳಂ

ಕೊಂಡು ತಮ್ಮನಂ ಮುಂದಿಟ್ಟು ವಿಮಾನಾರೂಢಂ ಪ್ರಭಾಕರೀಪುರಾಭಿಮುಖನಾಗಿ ಸೌದಾಮಿನೀಪತಿಮಾರ್ಗಪ್ರಸ್ಥಾನದಿಂ ಪೋಗೆ (ಶಾಂತಿಪು. ೪-೫೯ ವ); ಕಟ್ಟಾಳುಗಳನಿಜಿದು ಬೀಳೆ ತುಜುಗಳು ಪೆಣನಂ ಮೆಟ್ಟಿ ಪರಿದವು ವಿಮಾನದೊಳಿಟ್ಟು ಸುರಾಂಗನೆಯರೆಮಗೆ ತಮಗೆನುತುಯ್ದರು (ಎಕ. VIII, ಸೊರಬ. ೪೫-೧೮; 1093); ಯಾನಶಾಲೆಗೆ ನಡೆದನೇರಿದನು ಧನದನಿಂ ಗೆಲ್ದು ತಂದಾ ಕಾಮಗಮನದ ವಿಮಾನಮಂ (ಶ್ರೀರಾಮಾ. ೨೧೬-೧೫೯). ೫. ವಾಯುಮಾರ್ಗದಲ್ಲಿ ಸಂಚರಿಸುವ ವಾಹನ ; ಏರೋಪ್ಲೇನು : ಬಹುಬೇಗ ನಡೆಸಬಲ್ಲ ರೈಲು, ಹಡಗು, ವಿಮಾನ ಮುಂತಾದ ವಾಹನಸೌಕರ್ಯ (ಶಿವ್ಷದ. ೮). ೬. ಅರಮನೆ ; ರಾಜಗೃಹ : 'ನಾಗವಿಮಾನ' ಪರಾ. ೭. ಹೆಣವನ್ನು ಸಾಗಿಸುವ ಚಟ್ಟ, — ಮಂಟಪ : ಆ ಕಾಡ ನಟ್ಟ ನಡುವಣ ದಡದ ತುತ್ತತುದಿಯೊಳು ವಿಮಾನದ ಮರಂಗಳಮ ಕಡೆ ಹೊತ್ತಿ ಉರಿಕರಿಯಾದ ಕರಿಕೊಳ್ಗಿಗಳನಱಸಿ . . . ಕಾಯುತಿರ್ದನಿರುಳು ಹಗಲೆನ್ನದೊಡೆಯಂ ಬೆಸಸಿದಂತೆ ವಸುಧಾಧೀಶನು (ಪಚಕಾ. ೧೧-೪೩); ಅಚ್ಚರಿಯೊಳಾ ವಿಮಾನದ ಪೆಣಕೆ ಪ್ರಾಣ ಬರಲರಸ ನಮಿಸಿದನು ಬಳಿಕಂ (ಪ್ರಭುಪು. ೭-೬೨). ೮. ಡೋಲಿ ; ಪಲ್ಲಕ್ಕಿ ; ಮೇನೆ. ೯. [ವಾಸ್ತು] ಗೋಪುರ ; ಶಿಖರ : ಆಶ್ರಯನಿರ್ಮಾಣತನಕಂ ತನ್ನ ಸಿತಾತಪತ್ರಮಂ ಮಹಾಲಿಂಗದ ಪಿಂದಣ್ಗೆ ನಟ್ಟು ಬಿಸಿಲಂ ನಿವಾರಿಸಿ ವಿಶ್ವಕರ್ಮನಂ ಬರಿಸಿ ವಿಚಿತ್ರತರ ವಿಮಾನಮಂ ಮಾಡಲ್ವೇಳ್ಕುಮೆನಲ್ (ಹಾಲಾಸ್ಯ. ೧-೨-೬೯ ವ); ದೇವಾಲಯದ ಎರಡು ಮುಖ್ಯಭಾಗಗಳು ವಿಮಾನ ಮತ್ತು ಮಂಡಪ (ಹೊಯ್ಸಾ. ೬). ೧೦. [ಜೈನ] ಊರ್ಧ್ವಲೋಕದ ಪುಣ್ಯಜೀವಿಗಳ ವಾಸಸ್ಥಾನ : ಮಂದರ ಮಹೀಧರದ ನಂದನಮೆಂಬ ಮೇಖಳೆಯಿಂ ಸಾಸಿರದ ನೂಱೆಪ್ಪತ್ತೊಂದು ಯೋಜನಮಗಲದಿಂ ತಾರಾಗಣವಿಮಾನಂಗಳಿರ್ಕುಂ (ಪುಣುಪಾ. ೧೧-೫೯ ವ); ಮೂನೂಱ್ಪತ್ತೆಸೆವ ವಿಮಾನಂಗಳ್ಗಮಲಮಣಿಮಯಂಗಳ್ಗೆ ಸಮಾಚೀನ ನವಚೀನರಚಿತವಿತಾನಂಗಳ್ಗೊಡೆಯನಾದನಾ ದಿವಿಜೇಂದ್ರಂ (ಚಂದ್ರಪ್ರ. ೯-೪೯). [ಸಂ.]

ವಿಮಾನನಿರ್ವಾಣ (ನಾ). ವಿಮಾನ ನಿಲ್ಲುವ ಸ್ಥಳ : ವಿಮಾನನಿರ್ವಾಣದ ಅಧಿಕಾರಿಗಳಿಂದ ಕಾಗದ ಬಂದಿದೆ (ಕಪಪು. ೩-೦೯). [ವಿಮಾನ + ನಿರ್ವಾಣ]

ವಿಮಾನವಾಸಿ (ನಾ). ವಿಮಾನವೆಂಬ ಊರ್ಧ್ವಸ್ಥಳದಲ್ಲಿ ವಾಸಿಸುವ ದೇವತೆ ; ವೈಮಾನಿಕ ದೇವತೆ : ವನಗ್ರೈವೇಯಕಮುಂ ನವಾದ್ಯಿಶಮುಂ ಪಂಚಾನುತ್ತರಮುಮೆಂಬೀ ವಿಮಾನವಾಸಿಗಳೊಳು . . . ಪುಟ್ಟುವರು (ಗೂಮ್ಮಸಾ. ೪-೫); ಮೂರ್ತಿಶಿಲ್ಪದ ದೃಷ್ಟಿಯಿಂದ ಜೈನದೇವತೆಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು – (೧) ಜ್ಯೋತಿಷೀ (೨) ವಿವಾನವಾಸೀ, (೩) ಭವನಪತಿ ಮತ್ತು (೪) ವ್ಯಂತರ (ಭಾರದ. ೫೧೪). [ಸಂ. ವಿಮಾನವಾಸಿನ್]

ವಿಮಾರ್ಗ (ನಾ). ೧. ಕೆಟ್ಟದಾರಿ, — ರಸ್ತೆ. ೨. ಕೆಟ್ಟನಡತೆ ; ದುರ್ಮಾರ್ಗ ; ದುರ್ನಡತೆ. ೩. ಕಸಗುಡಿಸುವ ಸಾಧನ ; ಪೊರಕೆ. ೪. ಕುದುರೆಸವಾರಿಯಲ್ಲಿ ಒಂದು ಬಗೆ : ಮುಷ್ಟಿಭಾಗಂ ವ್ಯೂಹಂ ನಿವರ್ತನೆ ಪದಂ ಯತಿ ಗಾತ್ರವೆ ವಿಮಾರ್ಗಂ . . . ಎಂಬ ಭೇದಂಗಳಿಂದಶ್ವಮನೇಱಲು ರೇಚಿಗನ್ಯಪತಿ ತಾನೆ ಬಲ್ಲಂ (ಮದಕ. ೧-೨೧).

[ಸಂ.]

ವಿಮಿಶ್ರ (ಗು). ಬೆರೆತಿರುವ ; ಮಿಶ್ರವಾದ : ನವವಿವರಾವೃತಪೂ[ತಿ]ದ್ರವತ್ಯಗಾವೃತ ವಿಮಿಶ್ರಮಾಂಸೋಪಚಿತಮಧ್ರುವಮಸುಚಿತ್ರಭೃಮಿ[ತಾ][ಸ್ಥಿ]ವಹಂ ಮೆಯ್ ಬಗೆವೊಡಿಂತು ಕಿಸುಗುಳಮಾದಂ (ಕವಿಪಾ. ೩-೧೯೫). [ಸಂ.]

ವಿಮಿಶ್ರಣ (ನಾ). ಕೂಡಿರುವಿಕೆ ; ಬೆರೆತಿರುವಿಕೆ ; ಮಿಶ್ರಣ : ಅದಱಂ ಜೀವಪದಾರ್ಥಮಿಲ್ಲದಿರದಾ ಜೀವಕ್ಕಮಿಾ ಜನ್ಮಮೆಂಬುದುಮಾ ಮತ್ತಿನ ಜನ್ಮ ಮೆಂಬುದುಮನೇಕಂ ಜೀವತತ್ವಕ್ಕೆ ಪಾಪದೊಳಂ ಪುಣ್ಯದೊಳಂ ವಿಮಿಶ್ರಣದೊಳಂ ಜನ್ಮಾಳಿ ಸಲ್ಗುಂ (ಶಾಂತಿಪು. ೮-೧೫೯). [ಸಂ.]

ವಿಮುಂಡನ (ನಾ). ಮುಂಡನ ; ಕ್ಷೌರ : "ಕ್ಷಾರಂ ವಿಮುಂಡನಂ ಭದ್ರಾಕರಣಮೆನಲು ವಪನಕ್ಕೆ ನಾಮಮಕ್ಕುಂ" (ಮಂಗರಾ. ೧೩೦-೧೬). [ಸಂ.]

ವಿಮುಕ್ತ (ಗು). ೧. ಬಿಟ್ಟ ; ತೊರೆದ ; ವರ್ಜಿಸಿದ : ಆ ಕುತ್ಕೀಲಂ ಸೊಗಯಿಪುದಾ ಕಾಳೋರಗವಿಮುಕ್ತನಿರ್ಮಳತರನಿರ್ಮೋಕಂ ತಾನೆನೆ ರಜತಾಳೋಕಸಹಸ್ರಾಂಶು ಧವಳಿತಾಶಾವಳಯಂ (ಚಂದ್ರಪ್ರ. ೬-೩). ೨. ಬಿಡುಗಡೆಯಾದ ; ಬಂಧನರಹಿತವಾದ : ಪಂಜರವಿಮುಕ್ತಕುಂಜರಾರಾತಿಯಂತೆ ನೃಪನಿವಾಸಕ್ಕೆ ಬಂದು (ಪುಷ್ಪಪು. ೪-೭೦ವ). ೩. ಪ್ರಯೋಗಿಸಿದ ; ಹೂಡಿಬಿಟ್ಟ : ಇನ್ನೆವರಂ ಗುಱಿಯಾದುದಿಲ್ಲ ಕಾಮಕರವಿಮುಕ್ತ ಬಾಣಹತಿಗೆ (ಶಮಪ್ರ. ೨೪೮ ಪ್ರಯೋ). (ನಾ). ೪. ದೇಹದಿಂದ ವಿಸರ್ಜಿತವಾದುದು; ಅಮೇಧ್ಯ ; ಮಲ : "ವರ್ಚಸದೊಳು ವಿಮುಕ್ತದೊಳು ಮಿಗ ವಿಸರ್ಗವೆನಿಕು" (ಮಂಗರಾ. ೧೪೩-೨೪). ೫. ಬಿಡುಗಡೆ ಹೊಂದಿದ ವ್ಯಕ್ತಿ ; ಬಂಧನರಹಿತನಾದವನು; ಮುಕ್ತ : ಇದಿಯವಂದನು ಧರ್ಮಸುತ ಪದಪಯೋದ ದಲೆಱಗಿದನು ನಿನಗಿದು ವಿನೋದವಲೇ ವಿಮುಕ್ತಗೆ (ಕುವ್ಯಾಸ. ೬-೫೧). ೬. ನಾಲ್ಕುಬಗೆಯ ಆಯುಧವರ್ಗಗಳಲ್ಲಿ ಒಂದು ; ಕೈಯಲ್ಲಿ ಹಿಡಿದೇ ಬಳಸಬೇಕಾದ ಕತ್ತಿ, ಬಾಕು ಮೊದಲಾದ ಆಯುಧ : ಸಲೇಹ ಬಲೇಹ ಕತ್ತಿ ಕಠಾರಿ ಬಾಕು ಕರಚೂರಿಯಾದಿಯಾದ . . . ವಿಮುಕ್ತವೆಂಬ ಪಲವು ತೆರದ ಕೈದುಗಳಂ (ಧರ್ಮವ್ಯಾ. ೧-೧೬). 'ಅಮುಕ್ತ' ಪರಾ. ೭. [ನಾಟ್ಯ] ಉಸಿರಾಟದ ಒಂದು ವಿಧ ; IP "ಬಹಳ ಹೊತ್ತು ಉಸುರನ್ನು ತಡೆದು ಬಿಡುವುದು. ಯೋಗ, ಧ್ಯಾನ, ಪ್ರಾಣಾಯಾಮ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೭೭ ಗದ್ಯಾನುವಾದ): ಪಿರಿದುಂ ಸ್ವಸ್ಥಂ . . . ಸ್ಥಿರದ ವಿಮುಕ್ತಂ ವಿವೃತಂ ತರುಣೀ ಪ್ರಸೃತಮುಮಿವಿಂತು ಕೋಹಳನ ಮತಂ (ಲಾಸ್ಯರಂ. ೩-೭೭). ೮. ಉಪವಿಷ್ಟ ಸ್ಥಾನಕಗಳಲ್ಲಿ ಒಂದು ; IP "ನೆಲದ ಮೇಲೆ ಬೀಳುವುದು" (ಲಾಸ್ಯರಂ. ೩೩೨ ಗದ್ಯಾನುವಾದ): ಸ್ವಸ್ಥ, ಮಂದಾಲಸ, ಕ್ರಾಂತ, ವಿಷ್ಕಂಭಿತ, ಉತ್ಕಟ, ತ್ರಸ್ತಾಲಸ, ಜಾನುಗತ, ಮುಕ್ತಜಾನು, ವಿಮುಕ್ತ ಈ ಒಂಬತ್ತು ಕುಳ್ಳಿರ್ದ ಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). [ಸಂ.]

ವಿಮುಕ್ತಕ (ನಾ). = ವಿಮುಕ್ತ ೮ : ಉರುಮುಕ್ತಜಾನುವೊಳ್ಪಂ ಪರಿದೆಸವ ವಿಮುಕ್ತಕಾಖ್ಯಮಿಂತೊಂಬತ್ತುಂ ತರುಣೀ ಕೇಳ್ ಕುಳ್ಳಿರುತಿರ್ಪೊರದೀ ಸ್ಥಾನಕಮುಮಾಗಿ ರಂಜಿಸಿ ತೋರ್ಕುಂ (ಲಾಸ್ಯರಂ. ೭-೧೦). [ಸಂ.]

ವಿಮುಕ್ತಾಹಾರ (ನಾ). ೧. ಆಹಾರವನ್ನು ತ್ಯಜಿಸಿದವನು ; ಉಪವಾಸವನ್ನು ಮಾಡುವವನು. ೨. ಮುತ್ತಿನ ಸರವನ್ನು ಹೊಂದದಿರುವುದು. ೧, ೨: ವೀರರ ವೀರ ವಿಮುಕ್ತಾಹಾರಂ ಭವದರಿವಧೂಸ್ತನದ್ವಿತಯಂ ಕಣ್ಣೀರಿಂ ಮಿಂದರ್ದಗಿರ್ಚಿಂದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ (ಕಾದಂಪ್ರಾ. ೬೧).

[ಸಂ. (ವಿಮುಕ್ತ + ಆಹಾರ; ವಿ + ಮುಕ್ತಾಹಾರ)]

ವಿಮುಕ್ತಿ (ನಾ). ೧. ಪಾರಾಗುವಿಕೆ ; ಬಿಡುಗಡೆ ; ವಿಮೋಚನೆ. ೨. ಪ್ರತ್ಯೇಕ ಗೊಳ್ಳುವಿಕೆ ; ಬೇರ್ಪಡುವಿಕೆ. ೩. ಮೋಕ್ಷ : ಕಳೆ ಸಿರಿ ಧರ್ಮಂ . . . ಸುಖಮುಜ್ವಳವಿದ್ಕೆ ವಿಮುಕ್ತಿಯೆಂಬವಂ ಪಡವಂ ಪ್ರವೋದದಿಂ ಕೇಳ್ದೊಡೆ ಕೇಳ್ನರನಾವನಾದೊಡಂ ಪೊಡವಿಯೊಳೀ ಮೃಡನ ಘನಪಂಚವಿಂಶತಿವಡದೀ ಲೀಲೆಗಳಂ (ರಾಜಶೇ. ೩-೧೧೧). [ಸಂ.]

ವಿಮುಕ್ತಿಗೊಳಿಸು (ಕ್ರಿ). ಬಂಧನದಿಂದ ಮುಕ್ತಿಗೊಳಿಸು ; ಬಿಡುಗಡೆ ಮಾಡು ; ವಿಮೋಚನೆಗೊಳಿಸು : ರಹಸ್ಯವನ್ನರಿತು ಮಾಡಿದ ಕರ್ಮವು ದಿವ್ಯತೆಯನ್ನುಂಟು ಮಾಡಿ, ಪಾಪದಿಂದ ವಿಮುಕ್ತಿಗೊಳಿಸುವುದು (ಧರ್ಮಸಾ. ೧೦೬).

[ವಿಮುಕ್ತಿ + ಕೊಳು (< ಕೊಳ್) + – ಇಸ್ಕು]

ವಿಮುಖ (ಗು). ೧. ಮುಖವನ್ನು ತಿರುಗಿಸಿದ, — ಬೇರೆಡೆಗೆ ಹೊರಳಿಸಿದ. ೨. ಮನಸ್ಸಿಲ್ಲದ ; ಇಷ್ಟವಿಲ್ಲದ ; ವಿರೋಧವಾಗಿರುವ. (ನಾ). ೩. ತಿರುಗಿಸಿರುವ ಮುಖ ; ಬೇರೆಡೆಗೆ ಹೊರಳಿರುವ ಮುಖ : ಬಸವಾ ಮುಖ ವಿಮುಖವಾಯಿತ್ತು (ನೀಲವ. ೪. ೨೩-೬೯). ೪. ಮುಖವನ್ನು ಹಿಂದಕ್ಕೆ ತಿರುಗಿಸಿದುದು ; ಹಿಮ್ಮೊಗವಾದುದು : ಪತಾಕೆಯೊಂದು ರಾಘವನೂಳೆಯಮಂ ಕಾಣೆನೆಂದು ವಿಮುಖಮಾದುದು (ರಾಮಾಶ್ವ. ೩೦-೭). ೫. ಮುಖವನ್ನು ಬೇರೆಡೆಗೆ ತಿರುಗಿಸಿದವನು. ೬. ಸೋತವನು ; ಹಿಮ್ಮೆಟ್ಟಿದವನು ; ಹಿಂಜರಿದವನು : ಚಕ್ರಿಗೆ ವಿಮುಖನಾಗಿ ಬಂದೆನಾದೊಡೆ ನಿನ್ನ ಗರ್ಭದಿಂದುದಯಿಸಿದ ನಂದನನೆ (ಜೈಮಿಭಾ. ೧೧-೫); ಪ್ರಮುಖನಾದವನು ವಿಮುಖನಾಗಬಾರದು (ಗಾದೆ).

೭. ಮನಸ್ಸಿಲ್ಲದವನು ; ಆಸಕ್ತಿಯಿಲ್ಲದವನು : ಚಿತ್ತಜಾರಿಗೆ ನೆಗೆವ ಕೈಗಳನೆತ್ತುವರೆ ನೇಣನ ಹೊಲೆಯರಿಗೆ ಉತ್ತಮದ ಲಿಂಗಪ್ರಸಾದಿಗೆ ಭಕ್ತಿವಿಮುಖರಹ (ಬಸಪು. ೬೦-೯); ಪಾಠದಲ್ಲಿ ವಿಮುಖರಾಗಿರುವ ಮಕ್ಕಳ ಅವಧಾನವನ್ನು ಪಾಠದ ಕಡೆಗೆ ಸೆಳೆಯಲು ನೆರವಾಗಬೇಕು (ಶಕ್ತಿದ. ೨೭೭). [ಸಂ.]

ವಿಮುಖಗೊಳಿಸು (ಕ್ರಿ). ಆಸಕ್ತಿಯನ್ನು ಕಳೆದುಕೊಳ್ಳುವಂತೆ ಮಾಡು : ಈ ಭಾವನೆ ಅವನನ್ನು ಅವಳಿಂದ ವಿಮುಖಗೊಳಿಸಲಿಲ್ಲವೆಂಬುದೇ ಆಶ್ಚರ್ಯ (ಪುನರು. ೧೯೫). [ವಿಮುಖ + ಕೊಳು (< ಕೊಳ್$_1$) + – ಇಸು$_3$]

ವಿಮುಖವೃತ್ತಿ (ನಾ). ಮನಸ್ಸಿಲ್ಲದಿರುವಿಕೆ ; ಉದಾಸೀನತೆ ; ವೈರಾಗ್ಯ : ಸ್ಮಿತ ಮಧುರಂ ಮುಖಂ ವಿಮುಖವೃತ್ತಿಯನಾರ್ಗೆ ಕಟಲ್ಪದು . . . ತದಂಗಜರಾಜ್ಯಲಕ್ಷ್ಮಿಯಾ (ಚಂದ್ರಪ್ರ. ೧೦-೯೩). [ಸಂ.]

ವಿಮುಗ್ಧ (ಗು). ೧. ಕಪಟವನ್ನರಿಯದ ; ಸರಳವಾದ ; ಮುಗ್ಧವಾದ : ಓರ್ವಳ್ ವಿದಗ್ಧೆ . . . ತನ್ನ ವಿಮುಗ್ಧಸ್ವಭಾವಮಂ ನಲ್ಮೆಯಿಪನಲಂಪಳಿಕೆಯುಮಂ ತೋಱೆ ನುಡಿವುದುಂ (ಸುಕುಮಾ. ೧೧-೧೯ ವ). ೨. ಮನೋಹರವಾದ ; ರಮ್ಯವಾದ : ಬೆಂಚೆಗಂಚೆಗಳ್ ಕಿನಿಸಿ ವಿಮುಗ್ಧಮಾನಸದೊಳೊಂದೆ ಚರತ್ಪಥಿಕರ್ಗೆ ಬೇವಸಂ ಜನಿಯಿಸೆ ಬಂದು ಮುಟ್ಟಿದುದಿದೇಂ ಘನಕಾಲಮೊ ಘರ್ಮಕಾಲಮೋ (ಪುಷ್ಪಪ್ರ. ೧೩-೧೮). [ಸಂ.]

ವಿಮುಗ್ಧೆ (ನಾ). ಕಪಟವನ್ನರಿಯದವಳು ; ಸರಳಸ್ವಭಾವದವಳು : ಮತ್ತಮೋರ್ವಳ್ ವಿಮುಗ್ಧೆ . . . ಮನಃಸಂಕಲ್ಪಸಂಪರ್ಕಸಂಭೋಗಸುಖಾಸಕ್ತೆಯಾಗಿರ್ಪುದುಂ (ಸುಕುಮಾ. ೧೧-೧೮ ವ). [ಸಂ. ವಿಮುಗ್ಧಾ]

ವಿಮೂಢ (ಗು). ೧. ಬಹಳ ದಡ್ಡತನದ, – ಮೂಢತನದ : ತಾವು ಬಯಸುವ ಜನ್ಮವನು ಪಡೆದೀ ವಿಮೂಢಮನುಷ್ಯರಾ ಹರಿಸೇವೆಯನು ಮಾಡರು (ನಿಭಾಗ. ೩-೪-೩೯). ೨. ದಿಗ್ಭ್ರಮೆಗೊಂಡ ; ತಬ್ಬಿಬ್ಬಾದ. (ನಾ). ೩. ದಡ್ಡ ; ಮೂಢ. [ಸಂ.]

ವಿಮೆ, ಬೀಮಾ, ವಿಮಾ (ನಾ). ಒಬ್ಬ ವ್ಯಕ್ತಿಯು, ತನ್ನ ಸ್ವತ್ತು, ಕಾರ್ಯಶಕ್ತಿ ಮುಂತಾದುವು ನಷ್ಟವಾಗಬಹುದೆಂಬ ಅಥವಾ ಪ್ರಾಣಹಾನಿಯಾಗಬಹುದೆಂಬ ನಿರೀಕ್ಷೆಯ ಮೇಲೆ, ಅಂತಹ ಸಂದರ್ಭದಲ್ಲಿ ಪರಿಹಾರವನ್ನು ಪಡೆಯುವ ಕರಾರಿನ ಮೇಲೆ, ಅದಕ್ಕೆಂದೇ ನಿಗದಿತವಾದ ನಿರ್ದಿಷ್ಟವಾದ ಸಂಸ್ಥೆಯಲ್ಲಿ ಒಂದು ಗೊತ್ತಾದ ಮೊಬಲಗನ್ನು ಒಂದು ಕಾಲಮಿತಿಯಲ್ಲಿ ಕಂತುಗಳ ಮೂಲಕ ಶೇಖರಿಸಿಡುವ ಒಂದು ಏರ್ಪಾಟು ಅಥವಾ ವ್ಯವಸ್ಥೆ ಮತ್ತು ಅಂತಹ ನಷ್ಟ ಒದಗಿದ ಪಕ್ಷದಲ್ಲಿ (ಪ್ರಾಣಹಾನಿಯ ಸಂದರ್ಭದಲ್ಲಿ) ನಿರ್ದಿಷ್ಟ ಸಂಸ್ಥೆಯು, ಕಂತುಕೊಡುತ್ತ ಬಂದ ವ್ಯಕ್ತಿಯ ವಾರಸುದಾರರಿಗೆ, ಹಿಂದೆಯೇ ಗೊತ್ತು ಮಾಡಿದ ಒಟ್ಟು ಮೊಬಲಗನ್ನು ಪರಿಹಾರವಾಗಿ ಕೊಡುವ ಅಥವಾ ಅಂತಹ ಸಂದರ್ಭ ಒದಗದ ಪಕ್ಷದಲ್ಲಿ ಪೂರ್ತಿ ಕಂತು ತೀರಿದ ಮೇಲೆ ಒಟ್ಟು ಹಣವನ್ನು ಲಾಭಾಂಶದೊಂದಿಗೆ ಚಂದಾದಾರನಿಗೆ ಪಾವತಿ ಮಾಡುವ ಕರಾರಿನ ಒಂದು ವ್ಯವಸ್ಥೆ : ವಿಮೆಯನ್ನು ತೆಗೆಯಲಿಚ್ಛಿಸುವವರು ನಮಗೆ ಪತ್ರದಿಂದ ಹಾಂಗೆ ತಿಳಿಸಬೇಕು (ಮುಂಬಪ್ರಾ. ೮೩). 'ಜೀವವಿಮೆ' ಪರಾ. ಬೀಮಾ : 'ಬೀಮಾದಸ್ತೈವಜು' ಪರಾ. ವಿಮಾ : ವಿಮಾಸಂಸ್ಥೆಯ ಪ್ರತಿನಿಧಿಯೊಡನೆ ಪರಿಚಯವೇ? (ರಂಗವ. ೧೦೬); ಮನುಷ್ಯರು ಕ್ಲುಪ್ತಕಾಲಕ್ಕೆ ಕ್ರಮ ಕ್ರಮವಾಗಿ ಹಣವನ್ನು ಕಟ್ಟುತ್ತಿದ್ದಾರೆ . . . ವಿಮಾಸಂಸ್ಥೆಗಳು ಇದಕ್ಕೆ ಪ್ರತಿಯಾಗಿ . . . ಹಣವನ್ನು ಬಡ್ಡಿಸಮೇತ ಕೊಡುತ್ತವೆ (ಗೃಹವಿ. ೨೦೧). 'ವಿಮಾದಾರ' ಪರಾ.

ವಿಮೆಮಾಡಿಸು = ೧. ಜೀವವಿಮೆಯನ್ನು ಮಾಡಿಸು ; ವಿಮೆ ಇಳಿಸುವಂತೆ ಮಾಡು : ನನ್ನ ಹೆಂಡರು ಮಕ್ಕಳ ಒಳಿತಕ್ಕಾಗಿ ನನ್ನನ್ನು ವಿಮೆ ಮಾಡಿಸಲು ಬಂದ ದೇವದೂತನಂತೆ (ಶುಟಾಮಾ. ೨೯). ೨. ವಿಮೆಮಾಡು : ಕೆಲವು ದಿನಗಳ ಹಿಂದೆ ಅವನು ಮನೆಯ ಮೇಲೆ ವಿಮೆ ಮಾಡಿಸಿದ್ದನಂತೆ (ಪುನರು. ೨೩೩). ವಿಮೆಮಾಡು = ಆಸ್ತಿ, ಜೀವ ಮೊದಲಾದುವು ನಷ್ಟವಾದರೆ ಪರಿಹಾರವನ್ನು ಪಡೆಯುವ ಕರಾರಿನ ಮೇಲೆ ಒಂದು ಗೊತ್ತಾದ ಸಂಸ್ಥೆಯಲ್ಲಿ ನಿರ್ದಿಷ್ಟವಾದ ಮೊತ್ತದ ಹಣವನ್ನು ಕಂತುಗಳಲ್ಲಿ ಕಟ್ಟುತ್ತ ಹೋಗು : ವಿಮೆ ಮಾಡುವವರು ಸಂಸ್ಥೆಯ ಕಾನೂನುಗಳನ್ನು ಪರಿಶೀಲಿಸಿ ಅದರಂತೆ ನಡೆದುಕೊಳ್ಳಬೇಕು (ಗೃಹವಿ. ೨೦೧).

[<– ಪಾರ. ಹಿಂ. ಬೀಮಾ; ಮರಾ. ವಿಮಾ; ಗುಜ. ವಿಮೊ]

ವಿಮೆದಾರ, ವಿಮಾದಾರ (ನಾ). ವಿಮೆಯನ್ನು ಮಾಡಿರುವವನು : ವಿಮೆಯ ಪತ್ರವನ್ನು ಯಾರ ಹೆಸರಿಗೆ ಕೊಟ್ಟಿದೆಯೊ ಅವನು ; ವಿಮೆದಾರ (Insurant. ಇಂಕಸಿ). ವಿಮಾದಾರ : ವಿಮಾದಾರನು ಮೃತನಾದರೆ ಆತನು ಸೂಚಿಸಿದ ಹಕ್ಕುದಾರನಿಗೆ, ವಿಮಾಪತ್ರದ ಬೆಲೆಯ ಹಣವು ಬಡ್ಡಿಯ ಸಮೇತ ದೊರೆಯುತ್ತದೆ (ಗೃಹವಿ. ೨೦೧).

[ವಿಮೆ + – ದಾರ$_4$]

ವಿಮೋಕ್ಷ (ನಾ). ೧. ಬಿಡುಗಡೆ ; ವಿಮೋಚನೆ. ೨. ಸಂಸಾರಬಂಧನದಿಂದ ಬಿಡುಗಡೆ ; ಮುಕ್ತಿ ; ಮೋಕ್ಷ : ನಾವು ಮೆಚ್ಚಲು ಬೇಡಿಕೊಳನೇ ಭೂವರಂ ತಚ್ಛೋಳನಂದು ಮಹಾವಿಮೋಕ್ಷವನು (ಬಸಪು. ೨೪-೮೫). ೩. ಒಂದು ಬಗೆಯ ಮರ : "ನಂದಿವಟ್ಟಂ ತಿಲಕವರ್ಜುನಂ ಪದ್ಮಮಾಸ್ಯಂದನಂ ಶಾಲಂ ವಿಮೋಕ್ಷಮೆಂಬಿವು ವೃಕ್ಷಮೆಂದನಿಸಿಕೊಂಬುವು" (ಮಂಗರಾ. ೧೪೧-೧೪). [ಸಂ.]

ವಿಮೋಚನ (ನಾ). ೧. ಬಿಡುಗಡೆ ; ಸ್ವಾತಂತ್ರ್ಯ. ೨. ಮುಗಿಯುವಿಕೆ ; ಮುಕ್ತಾಯ ; ಅಂತ್ಯ : ಪಾತಕಕ್ಷಯದಂತೆ ಮಾಗಿಯ ವಿಮೋಚನಂ ಕಾಣಸಲ್ಬುಣ್ಮವಾಸನೆಯಂತೆ ದಕ್ಷಿಣದ ವಾಯು ಸುಳಿಯೆ (ಜೈಮಿಭಾ. ೮-೬). ೩. ಮುಕ್ತಿ ; ಮೋಕ್ಷ. [ಸಂ.]

ವಿಮೋಚನೆ (ನಾ). ೧. ಬಿಡುಗಡೆ ; ವಿಮುಕ್ತಿ : ಆಲಿಕಾದರನು ತನ್ನ ಚಿಂತೆಗೆ ವಿಮೋಚನೆಯನ್ನೇ ಕಾಣದಾದನು (ಮಣಿಸ. ೨೬); ಅವಳು ಪ್ರಾಯಶ್ಚಿತ್ತರೂಪದ ವಿಮೋಚನೆಯ ಸಾರಸರ್ವಸ್ವವೆಂದು ಸಾರುವ ಕ್ರೈಸ್ತಪಂಥದ ಶ್ರದ್ಧಾನುಯಾಯಿ (ಪುನರು. ೩೨೯). ೨. ಮುಕ್ತಿ ; ಮೋಕ್ಷ. [ಸಂ.]

ವಿಮೋಚನೆಗೊಳಿಸು (ಕ್ರಿ). ಬಿಡುಗಡೆಮಾಡು ; ಮುಕ್ತಗೊಳಿಸು : ಹನನಾಪರಾಧದಿಂದ ಅವಳನ್ನು ವಿಮೋಚನೆಗೊಳಿಸಬೇಕೆಂಬುದೇ ಅವರ ಉದ್ದೇಶವಾಗಿದ್ದಂತೆ ಇದರಿಂದ ವ್ಯಕ್ತವಾಗುತ್ತದೆ (ಪುನರು. ೨೦೪).

[ವಿಮೋಚನೆ + ಕೊಳು (< ಕೊಳ್$_1$) + – ಇಸು$_3$]

ವಿಮೋಹ (ನಾ). ೧. ಮೋಹಪರವಶತೆ : ಪೋದುದು ಜೌವನಂ ಕ್ರಮದಿನಾದುದು ಮುಪ್ಪಿನಿಸಾದೊಡಂ ಸ್ಮರೋನ್ಮಾದದೊಳೀ ವಿಮೋಹದೊಳದೇಕೆ ಗಡಂ ಬಗೆಯಂ ತಗುಳ್ಳಿ ಬೆಳ್ಳಾದಪನಕ್ಕಟಾ (ಆದಿಪು. ೨-೩೫). ೨. ಭ್ರಮೆ ; ಭ್ರಾಂತಿ : ಇಂದ್ರಜಾಲದ ವಿಮೋಹಮೊ ಮೇಣದು ಮೂರ್ಛೆಯೊಂದು ಸಂಜನನಮೊ . . . ಎಂದು ತಜ್ಜನಮನಿತುಂ ಮನಂಬಸುತುಮಿರ್ದುದು ನಿಚ್ಚಸಲಾಱದೇನುಮಂ (ಚಂದ್ರಪ್ರ. ೫-೬).

[ಸಂ.]

ವಿಮೋಹನವಿದ್ಯ (ನಾ). ಮರುಳುಗೊಳಿಸುವ ವಿದ್ಯೆ ; ಸಂಮೋಹನವಿದ್ಯೆ : ಕುದುಕುಳಿದಾನವಂ ನಿಜವಿಮೋಹನವಿದ್ಯದಭೇದ್ಯಶಕ್ತಿಯಿಂದೊದವಿಸೆ ಮೋಹಮಂ ಹೃದಯದೊಳ್ ಸಭೆಗೆ (ಚಂದ್ರಪ್ರ. ೫-೫). [ಸಂ. ವಿಮೋಹನವಿದ್ಯಾ]

ವಿಮೋಹಿಸು (ಕ್ರಿ). ೧. ಭ್ರಮಿಸು ; ಭ್ರಾಂತಿ ಹೊಂದು : ಇವರಿನ್ನುಮಾಂತಿಱೆವರೆಂದು ವಿಮೋಹಿಸಿ ವೀರಪಟ್ಟಮಂ ಬಗೆಯದೆ ಕಟ್ಟಿದ್ದೆ (ಪಂಪಭಾ. ೧೦-೧೬). ೨. ವಿಶೇಷವಾಗಿ ಮೋಹಗೊಳ್ಳು : ದೆಸೆ ವಿಮೋಹಿಸಲೆಂದು ವರಪೋಡಶಸಹಸ್ರಾಂಗನೆಯರುನ್ನತವಸನ ಮಣಿಭೂಷಣಾಝಣತ್ಕಾರದಲಿ ರಂಜಿಸಲು (ನಿಭಾಗ. ೧೦-೧೦೨-೮). ೩. ಭ್ರಮೆಯನ್ನುಂಟುಮಾಡು ; ಭ್ರಾಂತಿಗೊಳಿಸು : ಪ್ರಮದದೊಳೆನ್ನ ಕಂಧರದೊಳಂದಿರುಳಿಕ್ಕಿದ ತೋರಹಾರಮುಂ . . . ನಿನ್ನಯ ಪೇಳ್ದ ಮಾತುಮಾ ರಮಣೆಯದೊಂದು ಭಾವಗತಮಂ ನೆಱೆ ಸೂಚಿಸೆ ಮತ್ತೆ ಸಂದೆಗಂ ಸಮನಿಸಿತೆಂದೊಡಿನ್ನೆನಗದೊಂದು ವಿಮೋಹಿಪ ಶಾಪಮಾಗದೇ (ಕಾದಂಬಾ. ೩೪೭). [ವಿಮೋಹ + – ಇಸು$_3$]

ವಿಯಚ್ಚಕ್ರ (ನಾ). ಗಗನಮಂಡಲ ; ಆಕಾಶ : ಬೆಸಕೆಯ್ದುತ್ತು ಸಮುದ್ರಮುದ್ರಿತ ಧರಾಚಕ್ರಂ . . . ಪೊದಟ್ಟೂಷ್ಣಿಗಂ ಪೆಸರ್ಗಂ ಮುನ್ನಮೆ ರೂಪುವೋದುದು ವಿಯಚ್ಚಕ್ರಂ ಸಮಂತೆಂಬಿನಂ ಜಸಮಾಪಾಂಡುರಮಾದುದಾ ನೃಪರೊಳಾರಾ ಪಾಂಡುರಾಜಂಬರಂ (ಪಂಪಭಾ. ೧-೧೧೦); ಅಂತು ಬೆಳ್ಮುಗಿಲ ತೆಳ್ಪಿನಿಂ ಪಳಚ್ಚನಾದ ವಿಯಚ್ಚಕ್ರಂ ಕೆಸರ್ಮಸುಳ್ದು (ಮಲ್ಲಿಪು. ೮-೧೩೦). [ಸಂ.]

ವಿಯಚ್ಚರ (ನಾ). ೧. ಆಕಾಶದಲ್ಲಿ ಸಂಚರಿಸುವಂಥದು ; ಪಕ್ಷಿ ; ಹಕ್ಕಿ. ೨. ಆಕಾಶದಲ್ಲಿ ಸಂಚರಿಸುವವನು ; ಖೇಚರ : ಕಂಡು ದಿವಿಚೇಶ್ವರಂ ಬಗೆಗೊಂಡಿರೆ ನುಡಿದಂ ವಿಯಚ್ಚರಂ ಮುಂ ನಿನ್ನಂ ಕಂಡಱಿಯದೆಯುಂ ಸ್ವಾಮಿ ಕಂಡಂತಾದಪುದಖಂಡಿತವ್ಯಾಮೋಹಂ (ಶಾಂತಿಪು. ೫-೮); ಪಾವನಿ ಚಾಂಬವಾಂಗದ ಸುಷೇಣ ವಿಭೀಷಣ ಚಂದ್ರರಶ್ಮಿ ಸುಗ್ರೀವ ವಿಯಚ್ಚರಪ್ರಮುಖರೇಱೆದ ರತ್ನವಿಮಾನ ಮಾಲೆ ಶೋಭಾವಹಮಾಗೆ ಸುತ್ತಿ ಬರೆ (ಪಂರಾಮಾ. ೧೨-೯೩). [ಸಂ.]

ವಿಯಚ್ಚರಿ (ನಾ). ಆಕಾಶದಲ್ಲಿ ಸಂಚರಿಸುವವಳು ; ಖೇಚರಿ : ಈ ವಿಯಚ್ಚರಿಯುಂ . . . ತಾನುಂ ಪ್ರಾಸಾದದುಪರಿಮಭೂಮಿಯೊಳ್ ಇರ್ದು ದಿಶಾವಲೋಕನಂಗೆಯ್ಯುತ್ತಿರೆ (ಶಾಂತಿಪು. ೯-೧೨ ವ). [ಸಂ. ವಿಯಚ್ಚರೀ]

ವಿಯಚ್ಚಾರಿ (ನಾ). ೧. ಗಾಳಿಪಟ. ೨. ಆಕಾಶದಲ್ಲಿ ಸಂಚರಿಸುವವನು ; ಗಗನಗಾಮಿ : ಬಹುಯೋಜನದ ಛಾಯೆ , ನೊರೆವ ನೀರಂ ಕರ್ಪುಗೆದು ಬರುತಿರ್ದುದಂ ಕಂಡಳದ್ಭುತನಿಶಾಚರಿ. ಕಂಡಳೊಡನೊಡನೆ ಕಣ್ಣಟ್ಟುತದರ ಮೂಲದ ವಿಯಚ್ಚಾರಿಯಂ (ಶ್ರೀರಾಮಾ. ೪೧೧-೨೨೬). [ಸಂ. ವಿಯಚ್ಚಾರಿನ್]

ವಿಯಣ್ಣ (ನಾ). ಒಬ್ಬಾತನ ಹೆಸರು : ವಿಯಣ್ಣ ತುಱುಗಳೊಳ್ತುಱುವಾನ್ನಿಕ್ಕಿಸಿ ಕಾದಿ ಸ್ವರ್ಗ್ಗಮಾಳ್ದಂ (ಎಕ. X, ಶಿಡ್ಲಘಟ್ಟ ೫೮-೨; ಸು. 900?). [? + ಅಣ್ಣ]

ವಿಯತ್ತಲ , ವಿಯತ್ತಳ (ನಾ). ೧. ಆಕಾಶಸ್ಥಲ ; ನಭೋಂಗಣ ; ಗಗನ ಮಂಡಲ : ಶರತ್ಸಮಯಸರಿತ್ಸಲಿಲ ವಿಮಲ ವಿಯತ್ತಲ ದಿಗಂತರಾಳಂಗಳುಂ (ರತ್ನಕ. ೧-೩೦ ವ). **ವಿಯತ್ತಳ** : ೧. ನವನಳಿನೀವನಂಗಳ ಪರಾಗರಜಂಗಳನುಂಡು ಮುನ್ನಮಂತವನೆ ವಿಯತ್ತಳಭ್ರಮಣವಿಹ್ವಲನಾಗಿ ಬಬಲ್ದು ಕಾಱುವಂತೆವೊಲಿರೆ . . . ರವಿ ಪೊರ್ದಿದನಸ್ತಶೈಲಮಂ (ಪಂಪಭಾ. ೪-೪೬); ವಿಯತ್ತಳವ ನಳ್ಳಿಱೆವ . . . ವೈರಿಸೇನೆಯ ಕುತ್ತಿ ತೇಗುವ ಮನದ ಮಾರುತಿ ಮೊಳಗಿದನು ಮುಂದೆ (ಕುವೈಕ. ೧೨-೨೦). ೨. [ಗಣಿತ] ಸೊನ್ನೆ ; ಶೂನ್ಯ : ಗಗನಂ ಶೂನ್ಯಾಂಬರ ಖರ ಮಿಗೆಯಾಕಾಶಂ ವಿಯತ್ತಳಂ ವ್ಯೋಮಾಂಬರ . . . ಬಿಂದುವಿನ ನಾಮನಾಸ್ತಿಸಮೇತಂ (ವೃವಹಾ. ೧೦-೧೦). [ಸಂ.]

ವಿಯತ್ತಳ 'ವಿಯತ್ತಲ' ನೋ.

ವಿಯತ್ಪಥ (ನಾ). ಆಕಾಶಮಾರ್ಗ ; ಗಗನಪಥ : ನೋಟಕ್ಕಿಂಬಾದುದು ಮೇಘರಥವಿಯತ್ಪಥಗಮನಂ (ಶಾಂತಿಪು. ೯-೭೩). [ಸಂ.]

ವಿಯತ್ಪುರುಷ (ನಾ). ಆಕಾಶಸ್ವರೂಪನಾದ ಪುರುಷ ; ಪರಮಾತ್ಮ : ಸಹಸ್ರಶೀರ್ಷನಾದಿಪುರುಷನು ವೇದಪುರುಷನೊಬ್ಬ ಪುರುಷನು . . . ವಿಯತ್ಪುರುಷನೊಬ್ಬ ಪುರುಷನು (ಬಸವ. ೯೫೫). 'ಜ್ಯೋತಿಪುರುಷ' ಪರಾ. [ಸಂ.]

ವಿಯತ್ಪುಷ್ಪ (ನಾ). ೧. ಆಕಾಶದ ಹೂವು ; ಗಗನಕುಸುಮ. ೨. (ಆಲಂ) ಅಸಂಭವವಾದುದು ; ಸುಳ್ಳು : ಮೊದಲಿಂದಂ ಕೂರ್ಮರೋಮಂಟಗೆಯ ಶಶವಿಷಾಣಂ ವಿಯತ್ಪುಷ್ಪದಂತಿಲ್ಲದುದೇ ಸತ್ಯಂ ಪ್ರಪಂಚಿಂದಱಿದು (ರತ್ನಾಕ. ೯೨). [ಸಂ.]

ವಿಯದ್ಗಾಮಿ (ನಾ). ೧. ಆಕಾಶದಲ್ಲಿ ಸಂಚರಿಸುವವನು ; ಖೇಚರ ; ವಿದ್ಯಾಧರ : ವಿಯದ್ಗಾಮಿ ಭೂಮಿಪನೊಳ್ ಕೊಟ್ಟುದನಿಂತುಟೆಂಬಿನಿತನಾರಯ್ದೆನ್ನ ಬರ್ಪನ್ನಮಾಜ್ಞೆ ಪುರಂ ಮಂಡಲಮೆಂಬಿವರ್ಕೆ ನಿಮುತ್ತಲೇ ಶಿಕ್ಷೆಯುಂ ರಕ್ಷೆಯುಂ (ಶಾಂತಿಪು. ೨-೬೬). ೨. ಆಕಾಶದಲ್ಲಿ ಚಲಿಸುವಂಥದು ; ಗಗನಚರ : ತ್ರಿದಶಂ ಮೇಣ್ಬಿಚರಂ ಮೇಣ್ಬುದುರೆಯ ರೂಪಿಂದಮರಸನಂ ಮುನ್ನಿನ ಜನ್ಮದ ಪಗೆವೊಯ್ದು ನಂತಲ್ಲದೊಡೆ ವಿಯದ್ಗಾಮಿಯಪ್ಪ ಕುದುರೆಗಳೊಳವೇ (ಪಂರಾಮಾ. ೪-೧೨೧). [ಸಂ. ವಿಯದ್ಗಾಮಿನ್]

ವಿಯನ್ನಂದನ (ನಾ). ಸ್ವರ್ಗದ ನಂದನವನ ; ಇಂದ್ರನ ವನ : ದುಂದುಭಿನಾದ ಮಾವರಿಸೆ ದಿಕ್ತಟಮಂ ಚಲಕೇತನಂ ವಿಯನ್ನಂದನಶಂಕೆಯಂ ಪಡೆಯೆ . . . ಕಣ್ಗೆವಂದದೇಂ ಬಂದುದೊ ರಾಮಕೇವಲಿಯ ಕೇವಲಪೂಜೆಗೆ ದೇವಸಂಕುಲಂ (ಪಂರಾಮಾ. ೧೬-೬೯). [ಸಂ.]

ವಿಯನ್ಮಹೀರುಹ (ನಾ). ಸ್ವರ್ಗದಲ್ಲಿರುವ ವೃಕ್ಷ ; ಕಲ್ಪವೃಕ್ಷ : ವಿಯನ್ಮಹೀರುಹದ ಪೂಗುಡಿಯೊಳ್ ಗುಡಿಗಳ್ ಪೊದಟ್ಟು ಚೆಲ್ವಾಗೆ (ಚಂದ್ರಪ್ರ. ೩-೯೬). [ಸಂ.]

ವಿಯಮ್ಮ (ನಾ). ಒಬ್ಬಾತನ ಹೆಸರು : ಕಿಱುರ ವಿಯಮ್ಮನ್ ಗಂಗರನಾನ್ತು ಬರೆ . . . ಬೆನವಯ ಸಗ್ಗಿಯಾದಮ್ (ಮೃಅರಿ. ೧೯೨೬, ೬೩-೨; ೫ನೆಯ ಶತ). [? + ಅಮ್ಮ]

ವಿಯಾತ (ಗು). ೧. ನಾಚಿಕೆಯಿಲ್ಲದ ; ಲಜ್ಜೆಗೆಟ್ಟ. ೨. ದಿಟ್ಟತನದಿಂದ ಕೂಡಿದ ; ದಿಟ್ಟನಾದ. (ನಾ). ೩. ದಿಟ್ಟತನವುಳ್ಳವನು : "ಪ್ರತಿಭಾನ್ವಿತರು ಪ್ರಗಲ್ಭಂ ಪಟು ಬಗೆಯೆ ಕರಂ (ಧೃಷ್ಟ)ನಾತಂ ವಿಯಾತಂ" (ಪಾರ್ಶ್ವಕೋ. ೧೯-೬). [ಸಂ.]

ವಿಯುಕ್ತ (ಗು). ೧. ಬೇರ್ಪಡಿಸಿದ ; ಪ್ರತ್ಯೇಕಗೊಳಿಸಿದ. ೨. ಅಗಲಿದ ; ವಿಯೋಗಹೊಂದಿದ. (ನಾ). ೩. ಅಗಲಿದವನು ; ವಿಯೋಗಿ : ಈ ಸಮಾವೇಶದಿಂದ ಚಿರಕಾಲ ವಿಯುಕ್ತರಾಗಿದ್ದು ಆಕಸ್ಮಿಕವಾಗಿ ಒಂದುಗೂಡಿದ ಈರ್ವರಿಗೂ ಉಂಟಾದ ಸಂತೋಷವನ್ನು ಅಷ್ಟಿಷ್ಟೆಂದು ಹೇಳಲಳವಲ್ಲ (ಕವಿಕ. ೧). ೪. [ನಾಟ್ಯ]ಕಾಲಿನ ಹಿಮ್ಮಡಿಯ ಲಕ್ಷಣಗಳಲ್ಲಿ ಒಂದು : ಪಿರಿದುತ್ಕ್ಷಿಪ್ತಂ . . . ವಿಯುಕ್ತಾಂಗುಲಿ ಸಂಗತಮಾಯೆಂಟುಂ ಸಮಂತು ಪಾರ್ಷ್ಣಿಯ ಭೇದಂ (ಲಾಸ್ಯರಂ. ೩-೧೧೦). [ಸಂ.]

ವಿಯುತ (ಗು). ೧. = ವಿಯುಕ್ತ ೧. ೨. = ವಿಯುಕ್ತ ೨. (ನಾ). ೩. ಕಾಲಿನ ಹರಡಿನ ಲಕ್ಷಣಗಳಲ್ಲಿ ಒಂದು : ನೆಗಳ್ದಂಗುಟಸಂಶ್ಲಿಷ್ಟಂ ಮಿಗೆಯಂತರ್ಯಾ[ತ] ಮೊಳ್ಪುವೆತ್ತ ಬಹಿರ್ಗತಮೊಗೆದ ಮಿಥೋಯುಕ್ತಂ . . . ವಿಯುತಮೈದು ಗುಲ್ಫದ ಭೇದಂ (ಲಾಸ್ಯರಂ. ೩-೧೧೧). ೪. ಕೈಬೆರಳಿನ ಲಕ್ಷಣಗಳಲ್ಲಿ ಒಂದು : ಸಲೆ ಸಂಯುತ ವಿಯುತಂಗಳ್ ಸುಲಲಿತ ವಕ್ರಾಖ್ಯ ವಲಿತ ಪತಿತಾಖ್ಯಂಗಳ್ ಲಲನೇ ಕುಂಚನ್ಮೂಲಂ ಗೆಲವಂದ ಪ್ರಸೃತಮೆಂದು ಭರತದೊಳೆಸೆಗುಂ ಇಂತೆಸೆವೇಳುಂ ಪೆಸರುಂ ಸಂತತ ಹಸ್ತಾಂಗುಲಿ[ಯ]ವಿಭೇದಮೆನಿಕ್ಕುಂ (ಲಾಸ್ಯರಂ. ೩-೧೧೨). [ಸಂ.]

ವಿಯೋಗ (ನಾ). ೧. ಬೇರ್ಪಡುವಿಕೆ ; ಪ್ರತ್ಯೇಕವಾಗುವಿಕೆ : ಕಣಾದನ ವೈಶೇಷಿಕ ದರ್ಶನ ಅಣುಗಳ ಸಂಯೋಗವಿಯೋಗವಿಶೇಷವೇ ದೃಗ್ಗೋಚರವಾಗುತ್ತಿರುವ ಜಗತ್ತೆಂದಿತು (ಭಾರದ. ೧೨೨). ೨. (ಪ್ರಿಯರ) ಅಗಲಿಕೆ ; ವಿರಹ : ದಿನದೊಳ್ ಸಜಳತೆಯುಂ ಮತ್ಸ್ಯನಳಿನಮಂ ಮತ್ತಮಿರುಳೊಳುನ್ನಿದ್ರತೆಯಿಂದೆನಸುಂ ಚಕೋರಕುಮುದಮನನುಕರಿಸಿದುದಾ ವಿಯೋಗವಿಧುರೆಯ ಕಣ್ಗಳ್ (ಚಂದ್ರಪ್ರ. ೫-೧೨೫); ಪ್ರಿಯವಿಯೋಗದ ನೋವಿಗೆಣೆಯುಂಟೆ? (ಶ್ರೀರಾಮಾ. ೧೬೩-೩೧೬). ೩. ಸಾವು ; ಮರಣ : ಬಂಧುವಿನ ವಿಯೋಗವನ್ನು ಯಾರು ತಾನೆ ಮೌನವಾಗಿ ಸಹಿಸಿಯಾರು ಹೇಳಿ? (ವೀರಯೋ. ೨೬). [ಸಂ.]

ವಿಯೋಗಿ (ನಾ). ಅಗಲಿಕೆಯನ್ನು ಹೊಂದಿದ ವ್ಯಕ್ತಿ ; ವಿರಹಿ : ಒಗುಮಿಗೆ ಬೆಳಗಿದುದು ವಿಯೋಗಿಗಳ ಮೊಗಂ ಬೆಳ್ಳನಾಗೆ . . . ಬೆಳ್ದಿಂಗಳ್ (ಮಲ್ಲಿಪು. ೭-೪೩); ಶಶಿಗೆ ಕಳೆಯೇಱೆ . . . ವಿರಹಿಗಳು ಬಾಯಾಱೆ ಮಾಮಸಕದಿಂ ಬಂದುದು ವಸಂತಂ ವಿಯೋಗಿಹೃತ್ಕುಂತಂ ಸುಖಾಶ್ರಾಂತವು (ಷಟಕಾ. ೩-೧೫). [ಸಂ. ವಿಯೋಗಿನ್]

ವಿಯೋಗಿನಿ (ನಾ). ೧. (ಗಂಡ ಅಥವಾ ಪ್ರಿಯಕರನಿಂದ) ಅಗಲಿಕೆಯನ್ನು ಹೊಂದಿದವಳು ; ವಿರಹಿಣಿ : ಉತ್ಕಂಠವಿಯೋಗಿನೀಜನತೃಷಾತ್ಕುಷ್ಣಾಂಗ ಸಂಸಂಗ ದಾಱೆದುವಾದಂ ನವನೀಲನೀರಧರಮುಕ್ತವ್ಯಕ್ತವಾರ್ಬಿಂದುಗಳ್ (ಚಂದ್ರಪ್ರ. ೪-೪೦); ಕಮಳಿನಿಯಂ ವಿಯೋಗಿನಿಯನೀಕ್ಷಿಸಿ ಮತ್ತೆ ಬೃಹದ್ವಿಯೋಗವೇಗಮ ನೊಳಕೊಳ್ಗುಮಾಗಳೆ ಮದಾಗಮನೋತ್ಸವಮಂ ನಿವೇದಿಸೆಂದಮೃತಮರೀಚ ಪೇಳ್ದು (ಪುಷ್ಪಪ್ರ. ೮-೯೮). ೨. [ಛಂದ] ಅರ್ಧಸಮವೃತ್ತಗಳಲ್ಲಿ ಒಂದು : ವಿಯೋಗಿನಿ :— ಇದರ ವಿಷಮಪಾದಗಳಲ್ಲಿ ಸ ಸ ಜ ಗಣಗಳೂ ಒಂದು ಗುರುವೂ , ಸಮಪಾದಗಳಲ್ಲಿ ಸ ಭ ರ ಗಣಗಳೂ ಒಂದು ಲಘುವೂ ಒಂದು ಗುರುವೂ ಇರುವುವು (ಕೈಪಿಡಿ. ೮೯). [ಸಂ. ವಿಯೋಗಿನೀ]

ವಿರಂಚಿ (ನಾ). ಬ್ರಹ್ಮ ; ಚತುರ್ಮುಖ : ಹರಿ ವಿರಂಚಿಗಳಿಂದ ಮುನ್ನ ಉಮೆಯ ಕಲ್ಯಾಣದಿಂದ ಮುನ್ನ . . . ಅಂದಿಂಗಳೆಯ ನೀನು ಹಳೆಯ ನಾನು (ಬಸವ. ೨). [ಸಂ.]

ವಿರಕ್ತ (ಗು). ೧. ಬಣ್ಣವನ್ನು ಕಳೆದುಕೊಂಡ ; ಬಣ್ಣಹೋದ ; ವರ್ಣಗೆಟ್ಟ. ೨. ಉದಾಸೀನ ಮನೋಭಾವವನ್ನು ಹೊಂದಿರುವ ; ತಾಟಸ್ಥ್ಯದಿಂದ ಕೂಡಿದ. ೩. ಪ್ರಪಂಚದ ವ್ಯಾಮೋಹಗಳಿಗೆ ಒಳಗಾಗದ ; ವಿರಾಗಿಯಾದ;

ವೈರಾಗ್ಯದಿಂದ ಕೂಡಿದ. ೪. ಬಹಳ ಕೆಂಪಾದ. (ನಾ). ೫. ಉದಾಸೀನ ಮನೋಭಾವವನ್ನು ಹೊಂದಿದವನು ; ತಟಸ್ಥನಾದವನು : ಸಮತೆಯಾಯಿತು ತವಕಿಗಳಿಗುದ್ರ ಮಿಗಳಿಗೆ ತಿಳಿವಾಯ್ತು ವಾಸಿಯ ಮಮತೆಯವರು ವಿರಕ್ತರಾದರು (ಕುವ್ಯಾಕ. ೫-೧೫). ೬. ಪ್ರಪಂಚದ ಯಾವ ಬಗೆಯ ವ್ಯಾಮೋಹಗಳಿಗೂ ಒಳಗಾಗದವನು ; ವಿರಾಗಿಯಾದವನು : ಹೊನ್ನು ಹೆಣ್ಣು ಮಣ್ಣು ಬಿಟ್ಟಾತನೇ ವಿರಕ್ತನೆಂದು ವಿರಕ್ತದೇವರೆಂದು ಬಣ್ಣವಿಟ್ಟು ನುಣ್ಣಿಸಿ ಕರೆವರಯ್ಯ (ಕಿನವ. ೩೨-೧೯); ಯೋಗಶಾಸ್ತ್ರದಲ್ಲಿ ಹೇಳುವಂತೆ ಸಮಾಧಿವಿಶೇಷದಿಂದ ಸಿದ್ಧರಾಗಿ ಸರ್ವಜ್ಞರಾಗಿ . . . ಕೆಲವು ಕಾಲವಿದ್ದರೂ ವಿರಕ್ತರಾಗಿ ಮುಕ್ತರಾಗುವರು, ಕೇವಲರಾಗುವರು (ಹಿಂದಸಾ. ೬೮). ೭. [ವೀಶೈ] ವಿರಾಗಿಯಾದ ಶಿವಭಕ್ತ : ಭಕ್ತ ವಿರಕ್ತರ ಆಚರಣೆಯೆಲ್ಲಾ ಒಂದೇ . . . ಭಕ್ತಂಗೆ ಬಹಿರಂಗದ ದಾಸೋಹ ವಿರಕ್ತರಿಗೆ ಅಂತರಂಗದ ದಾಸೋಹ (ಕಿನವ. ೫೯-೨೩). [ಸಂ.]

ವಿರಕ್ತಗೊಡಗೆ (ನಾ). ವೀರಶೈವ ವಿರಾಗಿಗಳಿಗೆ ಕೊಡುತ್ತಿದ್ದ ಕೊಡುಗೆ : ವಿರಕ್ತಗೊಡಗೆ ಕಪ್ಪರಗೊಡಗೆ ಆಗಿ ಕೊಟ್ಟೆವಾಗಿ (ಮೈಅರಿ. ೧೯೩೫, ೧೬-೮; 1663).

[ವಿರಕ್ತ + ಕೊಡಗೆ (< ಕೊಡಂಗೆಯ್)]

ವಿರಕ್ತಮಠ (ನಾ). [ವೀಶೈ] ವಿರಾಗಿಗಳಾದ ಶಿವಭಕ್ತರ ಮಠ ; ವಿರಕ್ತರ ಮಠ : ತೊಟ್ಟವಾಡಿ ಗ್ರಾಮವನು ಶ್ರೀ ಮಾದಪಟ್ಟಣದ ವಿರಕ್ತಮಠಕ್ಕೆ ಸಿವಾರ್ಪಿತಕ್ಕೆ ಕೊಟ್ಟೆವು (ಎಕ. V (R), ತಿರುಮ. ೨೫೫-೮; 1621); ಮಲ್ಲನ ಮೂಲೆಯಲ್ಲು ನೂತನಪ್ರತಿಷ್ಠೆಯಾಗಿ ವಿರಕ್ತಮಠವ ಕಟ್ಟಿಸಿ ಪ್ರಣಮಪ್ಪ ಚಂನವೀರದೆವರಯವಡೇರಂಬ ವಿರಕ್ತಸ್ವಾಮಿಯವರಿಗೆ ಕೊಟ್ಟು . . . ಶಿಲಾಶಾಸನ (ಎಕ. III (R), ಗುಂಡ್ಲುಪೇ. ೫೫-೧೩; 1665). [ಸಂ.]

ವಿರಕ್ತಿ (ನಾ). ಲೌಕಿಕವಿಚಾರಗಳಲ್ಲಿ ಆಸಕ್ತಿಯಿಲ್ಲದಿರುವಿಕೆ ; ವೈರಾಗ್ಯ : ಜಿನೇಶ್ವರಂ ಬಿಸಿಸೆ ಕೇಳ್ದಜಿತಂಜಯಭೂಮಿಪಾಲಕಂ ಸಂದು ವಿರಕ್ತಿಗಾಗಳೆ ತದೀಯ ಸಮಕ್ಷದೆ ದೀಕ್ಷೆಗಂ ಮನಂದಂದಂ (ಚಂದ್ರಪು. ೭-೨೭); ಯೌವನಾಶ್ವಂ . . . ಮೂಡಿದ ವಿರಕ್ತಿಯಿಂ ನಾಚಿ . . . ಕಾರುಣ್ಯಕೇಡಾದ ಬಳಿಕದೇತಕೆ ಸಮರವೆನುತವಂ ಕರ್ಣಜಂಗಿಂತೆಂದನು (ಜೈಮಿಭಾ. ೪-೫೦). [ಸಂ.]

ವಿರಚನ (ನಾ). ೧. ನಿರ್ಮಾಣ ; ರಚನೆ : ಪೊಬಲ ಪೂರ್ವದಿಗ್ಭಾಗಂಗಳೊಳ್ ಶಿಬಿರನಿವೇಶೋಪಕಾರ್ಯವಿರಚನಪರರಾಗಿ (ಶಾಂತಿಪು. ೧೦-೧೫೩ ವ). ೨. ಏರ್ಪಾಡು ; ವ್ಯವಸ್ಥೆ. ೩. ಸೃಷ್ಟಿಸುವುದು ; ಉತ್ಪತ್ತಿ ಮಾಡುವುದು. ೪. (ಸಾಹಿತ್ಯಕೃತಿ ಮುಂತಾದುವುಗಳ) ಬರವಣಿಗೆ ; ರಚನೆ ; ಸೃಷ್ಟಿ. [ಸಂ.]

ವಿರಚನೆ (ನಾ). ೧. = ವಿರಚನ ೧ : ಆ ಖಗೇಶ್ವರಂ . . . ನಿರತಿಶಯಸುರುಚಿರವಸ್ತು ಶೋಭಾವಿರಚEವಿರಚನೆತೆಯೊಳಂ ಮಧ್ಯಪ್ರದೇಶಪರಿಕಲ್ಪಿತವೇದೀವಿನ್ಯಾಸದೊಳಮೆಸೆದು ಪೊಸಯಿಸುವಂತಳಂಕರಿಸಿದಾಗಳ್ (ಪರ್ಧಮಾ. ೩-೮೨ವ). ೨. = ವಿರಚನ ೪ : ಚಿತ್ರಪಟದಂತೆ ಅಪೂರ್ವವಾದ ಒಂದು ಪುರಾಣಕಥಾವಿರಚನೆಯನ್ನೇ ಅದು ಅವರ ಕಣ್ಮೆದುರು ಕಟ್ಟಿದಂತೆ ಮಾಡುತ್ತದೆ (ದ್ಯಾವಾಪೃ. ii. ಮುನ್ನುಡಿ). [ಸಂ. ವಿರಚನ]

ವಿರಚನೆಗೆಯ್ (ಕ್ರಿ). ರಚಿಸು ; ನಿರ್ಮಿಸು : ಜಿನಸೇನಾರ್ಯಂ ಮುದದಿಂ ವಿರಚನೆಗೆಯ್ದ ಲಸತ್ಕೃತಿಯಿದನಾಂ . . . ಪುಣ್ಯನಿಮಿತ್ತಂ ಹರಿದುಂ ಹರಿಸದೊಳುಸಿರಿದನು (ಜಯಕಾ. ೧-೨೬). [ವಿರಚನೆ + ಕೆಯ್]

ವಿರಚಿತ (ಗು). ೧. ಕಟ್ಟಿದ ; ನಿರ್ಮಿಸಿದ : ವಿರಚಿತತೋರಣಮಾಳಾಕರಮುತ್ತುಂಭಿತ ಜಯಧ್ವಜೋತ್ಕರಮೆನಿವಾ ಪುರಮಂ ತರುಣೇಕೇಕರಮರೀಚಿನೀರಾಜಿತಾಕ್ಷತಾಂಗಂ ಪೊಕ್ಕಂ (ಚಂದ್ರಪು. ೬-೪೨); ಎಲ್ಲಿಯುಂ ವಿರಚಿತಭವನದಿಂದೆ ಜನದಿಂದೆಯಾ ನಾಡಸಿರಿ ಮೆಱೆದುದು (ಜೈಮಿಭಾ. ೩-೨). ೨. ಏರ್ಪಡಿಸಿದ ; ಸಿದ್ಧಪಡಿಸಿದ. ೩. (ಸಾಹಿತ್ಯಕೃತಿ ಮುಂತಾದುವನ್ನು) ಬರೆದ ; ರಚಿಸಿದ. [ಸಂ.]

ವಿರಚಿಸು (ಕ್ರಿ). ೧. ಕಟ್ಟು ; ನಿರ್ಮಾಣಮಾಡು ; ನಿರ್ಮಿಸು : ನಿಜರಾಜಧಾನಿಯೊಳೊಸಗೆಯಂ ಮಾಡಿ ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸೆಂದು ಬೆಸಸಿದಾಗಳ್ (ಆದಿಪು. ೪-೩೦ ವ); ಒಂದಭಿನವಾಲಯವ ವಿರಚಿಸಲು ಶುಭದಿನ ಮುಹೂರ್ತಂಬೆರಸಿ ಆ ಪೊಳಲೊಳು ಪ್ರತಿಷ್ಠಿಸಿ (ಬಸವ. ೫೩-೩೨). ೨. (ಸಾಹಿತ್ಯಕೃತಿ ಮುಂತಾದುವನ್ನು) ಬರೆ ; ರಚಿಸು : ಪ್ರತಿಭಾವಿಶೇಷದಿಂ ಸನ್ಮತಿಯಿಂ ವಿರಚಿಸಿ ಕವೀಂದ್ರಸಮಿತಿಗೆ ಕವಿತಾಚತುರತೆಯಂ ಮೆಱೆದು ಜಗನ್ನುತರೆನಿಸಿದರಲ್ತೆ ಸಿದ್ಧಸೇನಾಚಾರ್ಯರ್ (ಜಾವುಂಪು. ೧); ಕೃತಿ ನೆಗಟ್ಟ ಗದಾಯುದ್ಧಂ . . . ಕೃತಿಯಂ ವಿರಚಿಸಿದನಲಂಕೃತಿಯಂ ಕವಿರತ್ನನೆಂದೊಡೇವಣ್ಣೆಪುದೂ (ಗದಾಯು. ೧-೩೨). ೩. (ಚಿತ್ರ ಮುಂತಾದುವನ್ನು) ಬಿಡಿಸು ; ರಚನೆಮಾಡು : ಚಿತ್ರಲೇಪಯಂ ಮಣಿಸ್ತಂಭಸಾಲಭಂಜಿಕಾಸ್ತಂಭಂಗಳೊಳ್ ಕುಂಕುಮರಸವಪತ್ರರೇಖೆಗಳಂ ವಿರಚಿಸಲುಂ . . . ಪೇಟ್ಟುಗಳ್ (ಆದಿಪು. ೭-೨೧ ವ). ೪. (ವಿಧಿಗಳನ್ನು) ಮಾಡು ; ಆಚರಿಸು ; ನೆರವೇರಿಸು : ಚರಣಸರೋರುಹಕ್ಕೆ ಮಕುಟದ್ಯುತಿವಾರಿಗಳಿಂದ ಪಾದ್ಯಮಂ ವಿರಚಿಸಿದಾತ್ಮಜಂಗೆ ಬಿಡುಮುತ್ತಿನ ಸೇಸೆಯನಿಕ್ಕುವಂದದಿಂ ಸುರಿದು ಮುದಶ್ರುಬಿಂದುಚಯಮಂ (ಚಂದ್ರಪು. ೬-೯೦); ಪರಿಪರಿಯ ಯಜ್ಞವನು ವಿರಚಿಸಿ ಸುರಪತಿಯ ಸಂತುಷ್ಟಪಡಿಸಲು ಸುರಿವನವ ಸಂಪೂರ್ಣವಾಗಿ ಸುವೃಷ್ಟಿಯನು ಜಗಕೆ (ಕುವ್ಯಾಉ. ೪-೭೦). ೫. (ವಿಧಿಗಳನ್ನು) ಮಾಡಿಸು ; ಆಚರಿಸುವಂತೆ ಮಾಡು : ತಿಳುಹಿ ಬಳಿಕನಬರನು ಸಲಿಲಾಂಜಲಿಮೃತಸ್ನಾನಾದಿ ಕರ್ಮಾವಳಿಯ ವಿರಚಿಸಿ [ಪಾಕಾಂ. ಮಾಡಿಸಿ] ಮುನಿಪನುಪಚರಿಸಿದನು ರಘುಪತಿಯ (ತೊರರಾ. ೨-೬-೨೬). ೬. ಅಲಂಕಾರ ಮಾಡು ; ಸಿಂಗರಿಸು : ವಿರಚಿಸಿದರುದ್ಯಾಹಶೋಭಾಕರದಲಂಕಾರದಲಿ ಮಿಥಿಳಾಪುರ ವನವಿಳವಿಚಿತ್ರವಿಭವದ ವಿವಿಧರಚನೆಯಲಿ (ತೊರರಾ. ೧-೧೩ ಸೂಚನೆ). ೭. ನೆರವೇರು; ನಡೆ ; ಜರುಗು : ವಿರಚಿಸಿತು ಪಟ್ಟಾಭಿಷೇಕೋತ್ಸರುಷ ಮಂತ್ರಾಕ್ಷತೆಯ ಮಳೆಗಳ ಕಱೆದರವನೀಸುರರು (ಕುವ್ಯಾಕ. ೧-೨೯). ೮. ಸಿದ್ಧಗೊಳಿಸು ; ಸಜ್ಜುಮಾಡು ; ತಯಾರುಮಾಡು : ತರಳಿಕೆ . . . ಸಂಗಡಿಸಿಂಧನಂಗಳಂ ವಿರಚಿಸು ಬೇಗಮಿಂ ಚಿತಿಯನೇಂ ತಡವೀಕ್ಷಣಮೆನ್ನ ಜೀವಿತೇಶ್ವರನೊಡವೋಗವೇಳ್ಕುಮೆನಗೆಂಬುದುಂ (ಕಾದಂಪೂ. ೧೩೬); ವಿರಚಿಸಿದಂ ವಿಚಿತ್ರತರಮಪ್ಪಲರ್ವಚ್ಚಮಂ (ಜಗವಿ. ೬-೧೫೫); ವೇದಿಸಲು ಬ್ರಹ್ಮಾಂಡಖಾಂಡನಿಷಾದ ಭಾಂಡಾವಳಿಗಳಂ ಸಮ್ಮೋದದಿಂದಂ ವಿರಚಿಸುವ ಕುಂಬಾಜನುಂ ತಾನೆ (ಬಸವ. ೨೧-೨೬). ೯. ಹೆಣೆ : ವಿರಚಿಸಿದರ್ ಜಡಿಗಳನಾದರದಿಂ ದರಹಸಿತ ಬಿಸರುಹಾನನೆಯರ್ ಶಂಕರನರಸಿಗೆ ಗಿರಿಜಾತೆಗೆ (ಗಿರಿಕ. ೯-೩). ೧೦. ನೇಯು : ಮೆಱೆವ ಚಿತ್ರಿಗ ನಾನಾ ಬಗೆ ದುಗುಲವ ವಿರಚಿಸುತಿಹ ಸೇಲಿಗರ . . . ಚಿಪ್ಪಿಗಗೇರಿಯಿಹುವು (ಕಂನವಿ. ೬-೨೫). ೧೧. ರೂಪುಗೊಳ್ಳು ; ವ್ಯಕ್ತವಾಗು ; ಪ್ರಕಟವಾಗು : ಕೊರಲ ಕಱೆ ಶರದ ಪೆಱೆ ನೊಸಲುರಿಗಣ್ ಧೃತಚಾಪಹಸ್ತ ಶಾರ್ದೂರಚಿಹ್ನಂ ವಿರಚಿಸೆ ಕೃಪಕೃತವರ್ಮರ್ಬೆರಸಾಗಳ್ ಮುಳಿದು ಬಂದನಶ್ವತ್ಥಾಮಂ (ಗದಾಯು. ೯-೨). ೧೨. ವರ್ಣಿಸು ; ವಿವರಿಸು ; ವಿಶದಪಡಿಸು : ಈರೂರೊಳಿತಿ ಶುಭಕರಮೆನಲು ಸಿರಿಯಾಳಚರಿತೆಯನೊರೆದೊರೆದು ವಿರಚಿಪರು ಭಕ್ತಸಭಾಂತರಂಗಳೊಳು (ಬಸವ. ೨೫-೨೦); ಈ ಭೂಮಿಯನು ಕೊಂಡಾಗಲಾ ಸುತ್ರಾಮಗೊಡರಿಸಿದಂದವನು ವಿರಚಿಸಿದನಾ ಮುನಿಪೆ (ತೊರರಾ. ೧-೧೧-೪). [ವಿರಚನ + − ಇಸ್ಯ್]

ವಿರಜ (ಗು). ೧. ಧೂಳಿಲ್ಲದ ; ಸ್ವಚ್ಛವಾದ. ೨. ದೋಷವಿಲ್ಲದ ; ಶುದ್ಧವಾದ. ೩. ರಜೋಗುಣವಿಲ್ಲದ. ೪. ಮುಟ್ಟು ನಿಂತುಹೋದ. (ನಾ). ೫. ರಜೋರಹಿತವಾದದು ; ಪರಿಶುದ್ಧವಾದುದು : ಪ್ರಣಮ್ಯಯೆನೆ ಹೃತ್ಪುಂಡರೀಕಂ ವಿರಜಮೆನೆ ವಿಶುದ್ಧಂ (ಪದ್ಮರಾ. ೧೧-೨೮). ೬. ರಜೋಗುಣರಹಿತನಾದವನು ; ಪರಿಶುದ್ಧನಾದವನು : ಅಪಹತಪಾಪ್ಮಾ, ವಿರಜಃ . . . ಸತ್ಯಸಂಕಲ್ಪಃ ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಸ್ವಾಭಾವಿಕಗುಣಾಷ್ಟಕಗಳು ಆವಿರ್ಭವಿಸುವುವು (ಹಿಂದಸಾ. ೨೬೪). ೭. ಒಂದು ಬಗೆಯ ವಾದ್ಯ : ಹಲೆಗಳಗಣತಭೇರಿ . . . ವಿರಜ ಬೊಬ್ಬುಳಿ ಘಂಟೆ ರಣವಜೆಪೊಜಲುತಿರಲಂದು (ಕಾಶಿರಾ. ೪೧-೧೩). [ಸಂ. ವಿರಜಸ್]

ವಿರಜಾಜಿ (ನಾ). ಎರಡು ಸುತ್ತು ದಳಗಳಿರುವ ಒಂದು ಬಗೆಯ ಜಾಜಿಮಲ್ಲಿಗೆ; ಇರವಂತಿಗೆ ; ಹೆಜ್ಜಾಜಿ : ಅವರು ಹೆಚ್ಚು ಪ್ರೀತಿಯಿಂದ ಬೆಳಸುತ್ತಿದ್ದ ಹೂಗಳೆಂದರೆ ಪಾದರಿ, ಜಾಜಿ, ವಿರಜಾಜಿ, ಮರಳಿ, ಮಲ್ಲಿಗೆ, ಸಂಪಗೆ, ಕೇತಕಿ ಮುಂತಾದವು (ಸಾಹಿಪೇ. ೫೩).

[< ಇರ್$_2$ (< ಎರಡು) + ಜಾಜಿ$_1$ (< ಜಾದಿ)./ ತೆಲು. ವಿರಜಾಜಿ, ವಿರಜಾದಿ]

ವಿರಡ (ಗು). ೧. ಹಿರಿದಾದ ; ಅಸಾಧಾರಣವಾದ. (ನಾ). ೨. ಹಿರಿದಾದುದು; ಅಸಾಧಾರಣವಾದುದು: ಹರಿಯ ಬಸುಱೊಳಗಪಿಳಲೋಕದ ವಿರಡವಡಗಿಹವೋಲು

ಭಾರತಶರಧಿಯೊಳಗಡಗಿಹವನೇಕ ಪುರಾಣಶಾಸ್ತ್ರಗಳು (ಕುವ್ಯಾಖ. ೧-೧೮).

[< ಸಂ. ವಿರಾಟ್]

ವಿರತ (ಗು). ೧. ನಿಲ್ಲಿಸಿದ ; ತಡೆಹಿಡಿದ. ೨. ವಿರಮಿಸಿದ ; ವಿಶ್ರಮಿಸಿದ. ೩. ಕೊನೆಗೊಂಡ ; ಕಡೆಮುಟ್ಟಿದ. ೪. ವಿರಕ್ತಿಹೊಂದಿದ. (ನಾ). ೫. ನಿಷ್ಕ್ರಿಯವಾದುದು : ಕಂಗಳು ವಿರತನಾದವಾತೆದರು ಮೋಹದೊಳಗಾತುರನು ಧೃತರಾಷ್ಟ್ರನಿಗೆ ಸಲುವುದು ಕೇಳು ರತಿಸುಖವು (ಜನಭಾ. ೬-೧೦). ೬. [ವೀಶೈ] ಲೌಕಿಕವಿಚಾರಗಳಲ್ಲಿ ನಿರಾಸಕ್ತಿಯನ್ನು ಹೊಂದಿದವನು ; ವಿರಕ್ತ ; ವಿರಾಗಿ : ಪಕ್ಷವುಳಿದರಿರಾಜಕುಲಮಂ ಶಿಕ್ಷಿಸಲು ರಣದಲ್ಲಿ ತನ್ನತಿರೂಕ್ಷಕೋಪದಿ ವಿರತನಾಗುತ್ತೋದಿ ಬೇಸತ್ತು (ಬಸಪು. ೨೭-೭೩); ತೋಂಟದ ಯತೀಶ್ವರನಮಲ ವಿರತರುಗಳಂ ವ್ಯಾಪಿಸಿದ ಹರಿಸದಿಂ ದಿಟ್ಟಿಸುತ್ತೆ (ಸಿದ್ಧೇಪು. ೧೫-೭೦). ೭. [ಜೈನ] ಸಂನ್ಯಾಸಿ ; ಕ್ಷಪಣಕ ; ಸವಣ : ''ಮುನಿಃ, ತಪೋಧನಃ, ವಿರತಃ . . . ಸಂಯತಃ — ಈ ೯ ಸವಣರ ಪೆಸರ್'' (ಹಲಾಯು. ೫೭-೧೯೦). [ಸಂ.]

ವಿರತಿ (ನಾ). ೧. ಅಂತ್ಯ ; ಕೊನೆ ; ಮುಕ್ತಾಯ : ಜ್ವಳನಜಟ ನಿಜಪುರೋಪವನಳೀಳೆ ಮಧುಮಾಸವಿರತಿಯೊಳ್ ಮಸುಳ್ದಿರೆ ಕಂಟಳಿಸಿದ ಮೆಯ್ಯೆರಸಿನಿಸಾಕುಳನಾದೊಂ (ಶಾಂತಿಪು. ೫-೬೫). ೨. ವಿರಾಮ ; ನಿಲುಗಡೆ. ೩. ಲೌಕಿಕವಿಚಾರಗಳಲ್ಲಿ ನಿರಾಸಕ್ತಿಯನ್ನು ಹೊಂದಿರುವಿಕೆ ; ವೈರಾಗ್ಯ ; ವಿರಕ್ತಿ : ವಿರತಿ ವಿರತಿಯೆಂದು ವಿರತಿಯ ಹೊಲಬನಱಿಯದೆ ಹಂಬಲಿಸಿ ಹಲುಬುತಿಪ್ಪರಣ್ಣ ಕರಿಣಪದಾರ್ಥವ ಸವಿದೊಡೆ ವಿರತಿಯೆ . . . ಬಣ್ಣವಿಟ್ಟು ನುಡಿದರೆ ವಿರತಿಯೆ ಇಂತಿವೆಲ್ಲವು ವಿರತಿಯ ನೆಲೆಯನಱಿಯದೆ ತಲೆಬಾಲಗೆಟ್ಟು ಹೋದವು (ಘನವ. ೨೪-೩೦); ನರರಂತೆ ಕಾಮವೈಕಾರದುನ್ಮತ್ತದಿಂ ಪರಸತಿಯರನು ಕಂಡು ತರ್ಕಿಸಲೊಲ್ಲದತಿವಿರತಿಯಿಂದವಧಾನಭಕ್ತಿಯಳವಡಲು ಶೇಷಂಗೆ ಲಿಂಗಾಚಾರವು (ಮೃಲಾಶ. ೫-೬). ೪. [ಛಂದ] ಪದ್ಯವನ್ನು ಹೇಳುವಾಗ ಅರ್ಥಸ್ಫೂರ್ತಿ ಕೆಡದಂತೆ ನಿಲ್ಲುವ ಸ್ಥಾನ ; ಉಸಿರ್ದಾಣ ; ಯತಿ : ಅಂಬುಜರಿಪುದ್ಯುಮಣಿ ಮಾರುತ ಬಲಾರಿ ತ್ರ್ಯಂಬಕಯುಗಂ ವಿರತಿ ಪಂಚಕದೊಳಿರ್ದಂದಂಬುರುಹ ಲೋಲನಯನೇ . . . ಕುಟ್ಮಲಮಯೂರಂ (ಛಂದೋಂಬು. ೨-೧೫೨). [ಸಂ.]

ವಿರತೆ (ನಾ). ವೈರಾಗ್ಯದ ಮನೋಭಾವದಿಂದ ಕೂಡಿದವಳು ; ವಿರಕ್ತೆ : ಆ ನಾಗಲಾಂಬಿಕೆಯ ಗರ್ಭಸೌಂದರ್ಯಮಂ ತಾನಱಿದು ತತ್ಸುತಿಯ ಪೆಸರ್ವಡಿವುತುಂ ವಿರತೆ ನೀನಾರದೇಂ ಕಾರಣಂ ವೃಥಾಗರ್ಭಮಾಯ್ತೆನಲು (ಚೆಬಪು. ೪-೨೧). [ವಿರತ+ -ಎ]

ವಿರಥ (ನಾ). ರಥವಿಲ್ಲದವನು; ರಥಹೀನನಾದವನು : ವಿರಥಂ ಪಾಂಡ್ಯಂ ಕೋಪಸ್ಫುರಿತಾಧರನುಡಿದು ಕೆಡೆಯೆ ಪಲಯಿಗೆ[ಯುಂ] ಬಿಬ್ಬರಬರಿಯೆ ಗುರುತನೂಭವನುರಮಂ ಬರಿಯೆಚ್ಚು ಬೆಂಗವಂದಂ ಗಡದಾ (ಪಂಪಭಾ. ೧೨-೮೩); ವಿರಥನಾದನು ಕರ್ಣನಂಬಿಗೆ ತಿರುಹಿ ಬಿಲ್ಲನು ತೊಟ್ಟನಾ ಗುರು (ಕುವಾದ್ರೋ. ೬-೨೧).

[ಸಂ.]

ವಿರಮಣ (ನಾ). ೧. ಅಂತ್ಯ ; ಕೊನೆ ; ನಿಲುಗಡೆ : ಜಿನಚಂದ್ರಮುನೀಂದ್ರನೆ ಶಾಂತಿನಾಥನೀ ಶಾಂತಿನಾಥನಾ ಜಿನಚಂದ್ರಂ ಜಿನಚಂದ್ರಮುನೀಂದ್ರನೆ ಶಾಂತಿನಾಥನಾದೊಂ ಭವಾವಳೀವಿರಮಣದೊಳ್ (ಶಾಂತಿಪು. ೧೨-೬೦). ೨. ವಿರಾಮ. [ಸಂ.]

ವಿರಮಿಸು (ಕ್ರಿ). ವಿಶ್ರಾಂತಿಯನ್ನು ಪಡೆ ; ವಿರಾಮವನ್ನು ಹೊಂದು ; ವಿಶ್ರಮಿಸು : ಮರುತನುರುಬನು ತಾಳತೇಳುತೋಲಾಡುತ್ತ ವಿರಮಿಸಾ ಲೀಲೆಯಲಿ (ಮಂಕುಕ. ೯೧೪); ಊಟವಾದ ಮೇಲೆ ಒಂದರ್ಧಗಂಟೆ ಸ್ವಾಮಿದಾಸರು ವಿರಮಿಸುತ್ತಿದ್ದರು (ಸಮಜೀ. ೯೩೩). [ವಿರಮಣ + - ಇಸು]

ವಿರಲ, ವಿರಳ (ಗು). ೧. ಬಿಡಿಬಿಡಿಯಾದ. ೨. ನಯವಾದ ; ನಾಜೂಕಾದ. ೩. ಅಗಲವಾದ. ೪. ಅಪರೂಪವಾದ ; ದುರ್ಲಭವಾದ : ವಿರಲಫಲಂಗಳಾದುವಪಿಲೌಷಧಿಗಳ್ (ಆದಿಪು. ೮-೬೨). ೫. ಕೊಂಚ ; ಅಲ್ಪ . (ನಾ). ೬. ಮೊಸರು. **ವಿರಳ** : ೫. ವಿರಳಪರಿವಾರಪರಿವೃತನರಸಂ ಮಾದೇವಿವೆರಸು ನಿಚ್ಚಂ ಬಂದಾದರದಿಂದೆ ನೋಡಿ ಪೋಪಂ . . . ನಿಜನಂದನನಂ (ಕಾದಂಪು. ೪೩೭). ೬. ಬಿಡಿಬಿಡಿಯಾದುದು ; ಒತ್ತಾಗಿಲ್ಲದುದು ; ದಟ್ಟವಾಗಿಲ್ಲದುದು : ಬಿಂದು ಎಂಬ ಕೇಂದ್ರದಲ್ಲಿ ವಿರಳವಾಗಿರುವ ನಾದ ಬೆಳಕುಗಳ ಘನೀಭಾವ ಇದರ ಮುಂದಿನ ಹೆಜ್ಜೆ (ತತ್ಪ್ರಾ. ೪೪೭); ವಿಜಾತೀಯ ಸಂಯುಕ್ತವ್ಯಂಜನಾಕ್ಷರಗಳು ವಿರಳವಾಗುವುವು . . . ವಿರಳವಾಗುವುದೆಂದರೆ ಎಗಡು ವ್ಯಂಜನಗಳ ನಡುವೆ ಒಂದು ಸ್ವರ ಬರುವುದು (ಕ್ಸಪಿಡಿ. ೨೯). ೮. ಕೋಮಲವಾದುದು ; ಮೃದುವಾದುದು : ''ವಿರಳಂ ತನು ಪೇಲವಮದು'' (ವಸ್ತುಕೋ. ೧೦೪-೩೯). ೯. ಅಗಲ ; ವಿಸ್ತಾರ : ಇದರಿಂದ ಕಂಪಾಸಿನ ರುಂಡಿಯು ಮೊದಲಿಗಿಂತಲೂ ತ್ರಿಗುಣ ವಿರಳವಾಯಿತು (ಭೂಮಿಆ. ೪೭). ೧೦. ವೆಜ್ಜ ; ತೂತು ; ರಂಧ್ರ : ಪ್ರಾಣಕ್ಕೂ ಲಿಂಗಕ್ಕೂ ಅನುಸಂಧಾನವ ಮಾಡಬೇಕೆಂಬಲ್ಲಿ ಮಣಿಯ ವಿರಳದಲ್ಲಿ ವಿರುವ ನೂಲೇ (ಸರ್ವಮ. ೭೮-೪೫೫). ೧೧. ಅಪರೂಪ ; ದುರ್ಲಭ : ಅವರು ಹೊಂದಿಕೊಂಡು ಹೋಗುವುದು ಬಹಳೇ ವಿರಳ (ಕನ್ನಜಾ. ೧೦೪). [ಸಂ.]

ವಿರಲತೆ, ವಿರಳತೆ (ನಾ). ೧. ಸಾಂದ್ರತೆಯಿಲ್ಲದಿರುವಿಕೆ. ೨. ಅಪರೂಪವಾಗಿರುವಿಕೆ ; ಅಪೂರ್ವತೆ. **ವಿರಳತೆ** : ೧. ದೂರಕೊಳ್ಳುದತ್ವವಿಧಿಯಂತರಾಳದೊಳ್ ಬಹುಳಮಾಗಿ ಮಧ್ಯಪದಕ್ಕಂ ದೂರಕೊಳ್ಳುದದರ್ಶನವಿಧಿ ವಿರಳತೆಯಿಂ ಕರ್ಮಧಾರಯಕ್ಕಜೀವವರಿಂ (ತಮದ. ೧೭೮). [ಸಂ. ವಿರಲತಾ]

ವಿರಸ (ಗು). ೧. ರಸಹೀನವಾದ ; ನಿರ್ದ್ರವವಾದ. ೨. ಸಾರವಿಲ್ಲದ. ೩. ರುಚಿಯಿಲ್ಲದ ; ಅರುಚಿಯಿಂದ ಕೂಡಿದ. ೪. ಕ್ರೂರವಾದ; ನಿರ್ದಯವಾದ : 'ವಿರಸಕೃತಿ' ಪರಾ. (ನಾ). ೫. ನಿರರ್ಥಕವಾದುದು : ಉಪಯೋಗವಿಲ್ಲದುದು : ಭಾನುಬಿಂಬವ ತಗವ ತಮದ ವಿತಾನದಂತಿರ ವಿರಸವಾಯ್ತು ಶರಾನುಗತಶರಜಾಲ (ಕುವ್ಯಾಗ. ೧-೪೮). ೬. ವಿರೋಧ ; ವೈಮನಸ್ಯ : ಕೂಡಲಸಂಗನ ಶರಣರೊಡನೆ ಸರಸವಾಡಿದರೆ ಆದು ವಿರಸ ಕಾಣಿರಯ್ಯಾ (ಬಸವ. ೬೭೧ ೪); ಎಲವೊ ದಾನವಮಲ್ಲ ವೀರರ ಕುಲಶಿರೋಮಣಿ ನೀನು ನಾವೀ ಹುಲುಕಪಿಗಳೆಮ್ಮೊಡನೆ ಕಾದಲು ಸರಸ ವಿರಸವಲ (ತೊಶಾ. ೩೪-೨೦); ಅಂದಿನ ವಿರಸವು ಬೇಗನೆ ಮಾಯವಾಗಲಿಲ್ಲ (ಹಸಮಂತ. ೨೧೫). ೭. ಹೊಂದಾಣಿಕೆ ಇಲ್ಲದಿರುವಿಕೆ; ಸಾಮರಸ್ಯವಿಲ್ಲದಿರುವಿಕೆ: ರಸವೆ ಜನನ ವಿರಸ ಮರಣ ಸಮರಸವೇ ಜೀವನ (ಗಂ. ೧೧೪-೫). ೮. ಇಚ್ಛೆಗೆ ವಿರುದ್ಧವಾದುದು ; ಇಷ್ಟವಾಗದೆ ಇರುವಂಥದು : ವಿರಸವೆನಗಿದು ಮುಂಜಿಯೆಂಬುದನೊರೆಯದಿರು ಪರಿಹರಿಸಿ ಕಳೆ ಶಂಕರನನರ್ಚಿಸುತಕಟ ನೀ ಮರುಳಾಗಿ ಹೋದೆಯಲಾ (ಬಸಪು. ೩-೪೬); ಸರಸಭಾವದೊಳೆ ಭಾವಿಸೆ ಭಾವನವರಿಗಿದು ವಿರಸವಾಗದ ಮಾಣದು (ಚೆಮಿಭಾ. ೨೨-೧೭). ೯. ವೈಮನಸ್ಸುಳ್ಳವನು ; ವಿರೋಧಿ : ಸರಸರಿಗೆ ಸರಸಂ ವಿರಸರಿಗೆ ವಿರಸನಿತರರ ಬೆರಸಿದವರಂ ಬೆರಸನೀಶ್ವರವಿರಹಿತರ ವಿರಹಿತನತುಳ ಸುಮತಿ (ಬಸಪು. ೧೯-೧). ೧೦. [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; ರಸವಿಹೀನವಾದುದು ; ಅಹಿತಕರವಾದುದು ; ದೋಷಯುಕ್ತವಾದುದು : ತಱಿಸಂದಾ ಸಕ್ಕದಮುಮನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ ಕುಱಿತು ಬೆರಸಿದೊಡೆ ವಿರಸಂ ಮಱುಗುವ ಪಾಲ್ಗಳೆಯ ಪವಿಗಳಂ ಬೆರಸಿದವೋಲ್ (ಕವಿರಾ. ೧-೫೮). ೧೧. ನೀರಸವಾಗಿ ಹಾಡುವವನು ; ರಸಪೂರಕವಾಗಿ ಹಾಡದಿರುವ ಗಾಯಕ : ವಿರಸ-ರಸಹೀನವಾಗಿ ಹಾಡುವವನು (ಸಂಗೀಚಂ. ೧೦೩).

[ಸಂ.]

ವಿರಸಕರ (ನಾ). ಅಹಿತಕರವಾದುದು : ಸಂಬೋಧನ ದೀರ್ಘೋಕ್ತಿಯೊಳಿಂಬಾಗಿರೆ ಬರ್ಕುಮದನೆ ಪಲವೆಡೆಗಳೊಳಿಂದುಂ ಬಲ್ಲವರಿಡದಿರ್ಕಾದಂ ಬಾಯಲಿದೂಳ್ಪವೋಲ್ ಕರಂ ವಿರಸಕ[ಪಾಠಾಂ. ತ]ರಂ (ಕವಿರಾ. ೨-೨೩). [ಸಂ.]

ವಿರಸಕೃತಿ (ನಾ). ಕ್ರೂರವಾದ ಕೆಲಸ ; ನಿರ್ದಯವಾದ ಕಾರ್ಯ: ಹರನ ಖತಿಯೋ ಲಯಕೃತಾಂತನ ವಿರಸಕೃತಿಯೋ ಸರ್ವದಳಸಂಹರಣಕೇನು ನಿಮಿತ್ತವೆಂದುದು ಭೂಸುರವ್ರಾತ (ಕುವ್ಯಾಗ. ೯-೪೦). [ಸಂ.]

ವಿರಸಗಾಣ್ (ಕ್ರಿ). ಅಹಿತಕರವೆಂದು ತಿಳಿ ; ತಿರಸ್ಕರಣೀಯವೆಂದು ಪರಿಗಣಿಸು : ಭರತಚಕ್ರಿಯದೊಂದು ಸೇವೆ ಸಿಕ್ಕಿದರದು ಸಿರಿಯೆಂದು ಬೆರೆದಿಹರೆಂಟು ಧರೆಯೊಳಾತನ ಸುತರಾಗಿ ಸಂಪದವನು ವಿರಸಗಂಡುಮ ಚಿತ್ರವಲ್ತೆ (ಭರಚ. ೭೦-೧೧೫). [ವಿರಸ + ಕಾಣ್]

ವಿರಸೆ (ನಾ). ೧. ಹೊಂದಾಣಿಕೆ ಇಲ್ಲದವಳು : ವಿರಸೆಯರು ವಿಶ್ವಾಸಘಾತಕಿಯರು . . . ವಾರಪುರಂಧ್ರಿಯರು (ಬಸಪು. ೪೦-೨೩). ೨. ದಯೆಯಿಲ್ಲದವಳು ; ನಿಷ್ಕರುಣೆಯಿಂದ ಕೂಡಿದ ಹೆಂಗಸು ; ಕ್ರೂರಿ : ಚಪಲೆ ಚಂಚಲೆ ಚಾಟುವತಿ

ಚಂಡಿ . . . ವಿರಸೆ [ಶಾಕಾಂ. ಪರುಷ]ಪರವಶೆ ಪಾದರಿ . . .ತಾಮಸಿಯೆನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚಸಿದೊಡೆ ಬಳಿಕ ಬಾರದೆ (ಜೈಮಿಭಾ. ೫-೭೧). [ವಿರಸ + - ಎ೨]

ವಿರಸೇಂಗಿತ (ನಾ). ಅಹಿತಕರವಾದ ಚೇಷ್ಟೆ, — ವರ್ತನೆ : ತಜಪಂ ಕಿಸುಗುಳತನಮಂ ಪಜನಿರ್ದುದನೆಗ್ಗತನಮನಾಡಿಗತನಮಂ ನಜೆಯೆ ವಿರಸೇಂಗಿತಂಗಳನಜಿವುಳ್ಕಂ ಕಾಣಲೀಯಲಾಗದು ವಧುವಂ (ಮಧಪು. ೧೦-೪೯). [ಸಂ.]

ವಿರಹ (ನಾ). ೧. ಬೇರೆಯಾಗಿರುವುದು ; ಅಗಲಿಕೆ : ನಿಜವಾದ ತಂದೆಯರಿಗೆ ಮಗಳ ಮೊದಲ ವಿರಹವು ಅದೆಷ್ಟು ದುಃಖಕರವಾದ್ದಿರಬೇಕು! (ಧರ್ಮಾ.೭೦). ೨. ಪ್ರಿಯರು ಪರಸ್ಪರ ದೂರವಿರುವುದು ; ಪ್ರಿಯರ ಅಗಲಿಕೆ, - ವಿಯೋಗ: ವಿರಹದೆ ರಾವುಬಾಣದಾಟಜಾಂಗಣ ರವ್ಯುಶಿಲಾತಲಂಗಳೊಳ್ ಬರೆಯೆ ವಿಚಿತ್ರವಮಾಗೆಸವ ಸೀತೆಯ ಚಿತ್ರವುಂ (ಕಾದಂಪೂ. ೧೦೪); ವಿರಹದೊಳಾದ ವೇದನೆಯನಾಱಿಸಲಾ ಮರನೊಳ್ಳಿತೆಂದು ಮಾಮರದ ನೆಲಲ್ಲಿ ಪೋಪ ಗಡ (ಕಾವ್ಯಾವ. ೩೬೭); ವಿರಹವ ಬೀಳುಕೊಟ್ಟವು ಜಕ್ಕವಕ್ಕಿಗಳು (ಕುವಾಧೀ. ೧-೩೮). ೩. ಬಿಟ್ಟುಹೋಗುವುದು ; ತೊರೆಯುವುದು ; ಪರಿತ್ಯಾಗ . ೪. ಏಕಾಂಗಿಯಾಗಿರುವುದು; ಒಂಟಿಯಾಗಿರುವುದು. ೫. ಅಗಲಿಕೆಯ ಸಮಯದಲ್ಲಿರುವ ಪ್ರೀತಿಯ ಭ್ · [ಸಂ.]

ವಿರಹಜ್ವರ (ನಾ). ಪ್ರಿಯರ ಅಗಲಿಕೆಯಿಂದುಂಟಾಗುವ ತೀವ್ರವಾದ ತಾಪ : ವಿರಹಜ್ವರದಿಂ ಪುಳಕೋತ್ಕರವೊಗೆದುವು ರೋಮಕೂಪಮನಿತನಿತಱೊಳಂ (ಕಾದಂಪೂ. ೮೩೪); ಪರಿಹರಿಸಲೆಂದು ವಿರಹಜ್ವರಮಂ ಶಶಿರೋಪಚಾರಮಿಸಗಿದೊಡದು ತಾಂ ಬಿಗಿದಾದುದು (ರಾಜಶೇ. ೭-೭೫). [ಸಂ.]

ವಿರಹತಾಪ (ನಾ).= ವಿರಹಜ್ವರ : ಸ್ವಯಂಪ್ರಭೆಯ ವಿರಹತಾಪವನ್ನು ಪಂಪಕವಿ ಬಣ್ಣಿಸಿದಾಗ ಶ್ರಾವಕರೆಲ್ಲ ಅತ್ತುಬಿಟ್ಟರು (ಪಾನಜಿಂ. ೧೫). [ಸಂ.]

ವಿರಹವಿಧುರ (ಗು). ಅಗಲಿಕೆಯಿಂದುಂಟಾದ ದುಃಖಿದ ; ವಿಯೋಗದಿಂದಾದ ನೋವಿನ : ಪಲತೆಱದಿಂ ಪಲುಂಬುವ ನಿತಂಬಿನಿಯರ ವಿರಹವಿಧುರನಾದಮ ಸೌಭಾಗ್ಯಯಶಃಪಟಹನಾದಮಾಗೆಯುಂ (ಮಲ್ಲಿಪು. ೩-೪೨ ವ). [ಸಂ.]

ವಿರಹವಿಧುರೆ (ನಾ). ವಿಯೋಗದಿಂದ ದುಃಖಿತೆಯಾದವಳು : ಪಲರುಮಂಬರ ಚರನಿತಂಬಿನಿಯರ್ ಬಳಸಿ ದಿನಲಕ್ಷ್ಮಿಯಂ ಬಳಸಿದ ದೀಪಮಾಲೆಯಂತೆ ಕಾಂತಿಗಟ್ಟಿರ ವಿರಹವಿಧುರೆಯಾಗಿಯುಂ (ಪಂರಾಮಾ. ೧೫-೮೨ ವ). [ಸಂ. ವಿರಹವಿಧುರಾ]

ವಿರಹವಿಹ್ವಲೆ (ನಾ). = ವಿರಹವಿಧುರೆ : ಕಾಮಂ ಬರದ ನೃಪಸುತನ ಸೊಬಗಿನ ನರಶಾಸನದಂತೆ ವಿರಹವಿಹ್ವಲೆಯಿರ್ಪಳ್ (ಚಂದ್ರಪ್ರ. ೫-೧೩೬). [ಸಂ. ವಿರಹವಿಹ್ವಲಾ]

ವಿರಹಾಗ್ನಿ (ನಾ). ವಿರಹದ ಬೇಗೆ, — ತಾಪ : ಪರಿಪಿಡಿದಗ್ನಿಗಮಾಕೆಯ ವಿರಹಾಗ್ನಿಗಮಿಲ್ಲ ಭೇದಂ (ಚಂದ್ರಪ್ರ. ೫-೧೫೯); ಕೈರವಕೆ ಹಾಸ್ಯ ವಿರಹಾಗ್ನಿಗತಿರೌದ್ರಂ . . . ಎನಿಸಿದ ಹಿಮಕರನೆಸೆದಿರುತಿರ್ದನು (ಹಚಚಾ. ೩-೮೫). [ಸಂ.]

ವಿರಹಾನಲ (ನಾ). = ವಿರಹಾಗ್ನಿ : ಒಡೆದುಗುವ ಬಾಷ್ಪವಾರಿಯಿನೆಱಂಗೆಗಳ್ ನಾಂದು ಮಗುಳೆ ವಿರಹಾನಲ [ಶಾಕಾಂ. ೪]ನಿಂ ನೆಲೆ' ಬಜಿವಾಗಿರೆ ಪಡುನೇಸಜೊಳಿರ್ದುವಗಲ್ದು ಚಕ್ರವಾಕದ್ವಂದ್ವಂ (ಚಂದ್ರಪ್ರ. ೮-೬). [ಸಂ.]

ವಿರಹಾವಸ್ಥೆ (ನಾ). ಪ್ರಿಯರ ಅಗಲಿಕೆಯ ಸ್ಥಿತಿ ; ವಿಯೋಗಸ್ಥಿತಿ : ವಿರಹಾವಸ್ಥೆಯನಪ್ಪುಕೆಯ್ದು ಪಿರಿದುಂ ಸುಯ್ಯೆಂಕೆಯುಂ ಪಂಕಜೋತ್ಕರಮಂ ಕಂದಿಸುತುಂ . . . ವಿಹ್ವಲಿಸುತ್ತುಮಿರ್ದುದತಿವೀನಾಲೋಕಕೋಕವ್ರಜಂ (ಜಸಾಮಾ. ೧೦-೪).

[ಸಂ. ವಿರಹಾವಸ್ಥಾ]

ವಿರಹಿ (ಗು). ೧. ಪ್ರಿಯವ್ಯಕ್ತಿಯನ್ನು ಅಗಲಿದ; ವಿಯೋಗ ಹೊಂದಿದ : 'ವಿರಹಿಜನ' ಪರಾ. ೨. ಒಂಟಿಯಾಗಿರುವ ; ಏಕಾಂಗಿಯಾಗಿರುವ. (ನಾ). ೩. ಪ್ರಿಯ ಅಥವಾ ಪ್ರಿಯೆಯನ್ನು ಅಗಲಿದ ವ್ಯಕ್ತಿ; ವಿಯೋಗಿ: ವಿರಹಿಗಳ ಸುಯ್ಯ ಬೆಂಕೆಯೊಳೆರ ಪೊಣಗಿದುವಕ್ಕುಮಿಗಳಿನಲುರಿವುರಿಯಿಂ ಕರಿಮುರಿಕನಾದುವುನ್ಮದಪರಭೃತ ಷಟ್ಚರಣರಾಜಕೀರಕುಲಂಗಳ್ (ಪಂಪಭಾ. ೫-೯೦); ಅರಸುಗಳಿಗಿದು ವೀರ . . .ವಿರಹಿಗಳ ಶೃಂಗಾರ ವಿದ್ಯಾಪರಿಣತರಲಂಕಾರ ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ (ಕುವಾಳ. ೧-೧೯). [ಸಂ. ವಿರಹಿನ್]

ವಿರಹಿಜನ (ನಾ). ಪ್ರಿಯರ ವಿಯೋಗವನ್ನು ಹೊಂದಿದ ಜನ, – ಅಗಲಿಕೆಯನ್ನು ಹೊಂದಿದ ಜನ : ವಿರಹಿಜನ ತರುಣಹರಿಣೋತ್ಕರನಿರ್ದಾರಣ ಸಮುತ್ಕರಕ್ಕಾತ್ರ ಪರಿಸ್ಫುರದತನು ಚಮೂರು ನಖಾಂಕುರಂಗಳಿನಿಸಿದುವು ಮಿಸುಪ ಮುತ್ತದ ಮುಗುಳ್ಗಳ್ (ಚಂದ್ರಪ್ರ. ೭-೫೮); ವಿರಹಿಜನಕ್ಕೆ ತೀವ್ರಪರಿತಾಪಮನಾಗಿಸುತಿರ್ಪ ಕಾರಣಂ ನೆರಪಿದ ಪಾಪಪಿಂಡಮದು ತಾಂ ಪಿಡಿವಂತಿರೆ ರಾಹು ಚಂದ್ರನಂ ತ್ವರಿತದೊಳೆಯ್ದೆ ಬಂದು ಪಿಡಿಯಲ್ಕೆ (ಚಾಧಪ್ರ. ೫-೧೪). [ಸಂ.]

ವಿರಹಿಣಿ (ನಾ). ೧. ಪ್ರಿಯಕರನನ್ನು ಅಗಲಿದವಳು ; ಪ್ರಿಯನ ವಿಯೋಗವನ್ನು ಹೊಂದಿದವಳು : ಕೋಯಜನಾಭನನಂತಸಹಾಯಂ ನಲಿದಿಂತು ವತ್ಸಕುಲಮಂ ಕಾದಂ ಕಾಯೆ ವಿರಹಿಣಿಗನಂಗಂ (ಜಗವಿ. ೩-೭೮); ವಿರಹಿಣಿಯಂತೆ ತದ್ಗಿರಿಯ ತಂಗೊಳದೊಳ್ ನೆಲಸಿರ್ಪ ಪದ್ಮಿನೀತರುಣಿಯ ಚಾರುಕೋರಕಕುಚಂಗಳನುತ್ಕರದಿಂದಿನಂ ಸಮಂತಿರದವರ್ದಂಟೆ (ರಾಜಶೇ. ೧-೧೧೬). ೨. ಒಂಟಿಯಾಗಿರುವವಳು ; ಏಕಾಂಗಿಯಾಗಿರುವವಳು. [ಸಂ. ವಿರಹಿಣೀ]

ವಿರಹಿತ, (ಗು). ೧. ತ್ಯಜಿಸಲ್ಪಟ್ಟ ; ತೊರೆಯಲ್ಪಟ್ಟ . ೨. ಒಂಟಿಯಾಗಿರುವ; ಏಕಾಂಗಿಯಾಗಿರುವ. (ನಾ). ೩. ಬಿಟ್ಟವನು ; ತೊರೆದವನು ; ದೂರವಾದವನು : ಸರಸರಿಗೆ ಸರಸಂ. . . ಈಶ್ವರ ವಿರಹಿತರ ವಿರಹಿತನತುಳಸುಮತಿ (ಬಸಪು. ೧೯-೧); ಪೆಣ್ಗಂಡುಗಳೊಳೊರ್ವರುಂ ನಿಜಾಚಾರವಿರಹಿತರಾಗಿ ನಡವರಿಲ್ಲ (ಜೈಮಿಭಾ. ೧೮-೧೩). ೪. ಪ್ರಿಯರನ್ನು ಅಗಲಿದವನು ; ವಿಯೋಗಿ. [ಸಂ.]

ವಿರಹಿತ್ವ (ಅ). ಏನೂ ಇಲ್ಲದೆ ; ಸುಮ್ಮನೆ : ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು (ಬಸಪು. ೧೯೬). [< ವಿರಹಿತ,]

ವಿರಹಿಸು (ಕ್ರಿ). ಪ್ರಿಯರ ಅಗಲಿಕೆಯನ್ನು ಅನುಭವಿಸು ; ವಿರಹಾನುಭವವನ್ನು ಹೊಂದು : ಕೊಡೆಯೆಲೆಗಳ ತಿಂತಿಣಿಯಿಟ್ಟೆಡೆಗಳ ಕಲ್ಬಲೆಯನಿರುಳೆಗೆತ್ತಾತ್ಮೇಶಂ ತಡದೊಡೆ ನರೇಂದ್ರ ನೋಡೀ ನಡುವಗಲೊಳ್ ಚಕ್ರವಾಕವಧು ವಿರಹಿಸುವಳ್ (ಆದಿಪು. ೧೧-೬೧). [ವಿರಹ + - ಇಸ್ಕು]

ವಿರಹೋತ್ಕಂಠಿತೆ (ನಾ). ೧. ವಿಯೋಗದಿಂದ ಉತ್ಕಂಠಿತೆಯಾದವಳು, – ದುಃಖಿತೆಯಾದವಳು. ೨. [ಕಾವ್ಯಮಿ] ನಾಯಿಕಾಭೇದಗಳಲ್ಲಿ ಒಂದು ; ವಿರಹದಿಂದ ದುಃಖಕ್ಕೊಳಗಾದವಳು : ಸ್ವಾಧೀನಭರ್ತೃಕೆ . . .ವಿರಹೋತ್ಕಂಠಿತೆ . . . ಕಲಹಾಂತರಿತೆಯರೆಂಬ ಯೆಂಟುತೆಱದವಸ್ಥಾನಿಬದ್ಧರಾದ ಕಾಮಿನಿಯರಿಂ (ಏವೇಶ. ೨೭೮); ನಾಯಕನ ಅನುನಯವೊಂದಕ್ಕೂ ಒಲಿಯದೆ ಕಡೆಗೆ ತಾನೇ ವಶ್ಯಾತ್ಕಾಪದಿಂದ ಕೊರಗುವ 'ವಿರಹೋತ್ಕಂಠಿತೆ'ನಾಯಿಕೆಯಾದಾಗ 'ವಿರಹವಿಪ್ರಲಂಭ' (ಧ್ವನ್ಯಾಲೋ. ೨೫ ಅಡಿಟಿ). [ಸಂ. ವಿರಹೋತ್ಕಂಠಿತಾ]

ವಿರಳ 'ವಿರಲ' ನೋ.

ವಿರಳತೆ 'ವಿರಲತೆ' ನೋ.

ವಿರಳದಂತೆ (ನಾ). ವಿರಳವಾದ ಹಲ್ಲುಗಳನ್ನುಳ್ಳವಳು ; ಹಲ್ಲುಗಳ ನಡುವೆ ಸಂದುಗಳನ್ನು ಉಳ್ಳವಳು : ಆತನ ದಾದಿ ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆ ಆದಮಾನಂ ವಿರೂಪೆ ವೇಸೆಪಡುವಳ್ (ವಡ್ಡಾರಾ. ೧೦೬-೨೨). [ಸಂ.ವಿರಲದಂತಾ]

ವಿರಳದುಟಿ (ನಾ). ಅಗಲವಾಗಿ ತೆರೆದುಕೊಂಡಿರುವ ತುಟಿ ; ತೆರೆದ ಬಾಯಿ : ಉಜುಗಿ ಬಾಗಿದ ಶರದ ಸಡಿಲಿದ ತುಜುಬಿನುಚ್ಚಿದ ವಿರಳದುಟಿಗಳ ಬೆಳೆತ ಮೋಜೆಯ ಕೆದಱುಮಿಸೆಯ ಬಿಗಿದ ಹುಬ್ಬುಗಳ (ಬಸಪು. ೪೬-೫೭). [ವಿರಳ (= ವಿರಲ) + ತುಟಿ]

ವಿರಳವೇಗಿ (ನಾ). [ಜೈನ] ಒಂದು ಬಗೆಯ ವಿದ್ಯೆ : ವಿರಳವೇಗಿ ರೋಹಿಣಿ ಮನೋವೇಗಿ . . .ಎಂಬವು ಮೊದಲಾಗ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನವಾಗಿರ್ದು (ಚಾವುಂಪು. ೧೯). [ಸಂ. ವಿರಲವೇಗಿನ್]

ವಿರಳಾಕ್ಷರ (ನಾ). ೧. ಬಿಡಿಬಿಡಿಯಾದ ಅಕ್ಷರ. ೨. ಅಸ್ಪಷ್ಟವಾದ ಮಾತು, – ನುಡಿ ; ತಡತಡೆದು ಆಡುವ ಮಾತು : ಉಸಿರ್ದಂ ಲಜ್ಜೆಯನೆಂತಾನುಂ ಶೀರ್ಯಮಾಣ ವಿರಳಾಕ್ಷರದಿಂ (ಕಾದಂಪೂ. ೮೪೪); ವಿರಳಾಕ್ಷರದಿ ತಡತಡದು ನುಡಿದನಿಂತು . . . ಕೊರಳ್ ಗದ್ಗದಿಸೆ ನುಡಿದು, ಹಿಂತಿರುಗಿದನು ಲಂಕೇಶ್ವರಂ, ಬಂದ ಬಟ್ಟೆಯೊಳೆ (ಶ್ರೀರಾಮಾ. ೪೯೫-೫೪೪). [ಸಂ. ವಿರಲಾಕ್ಷರ]

ವಿರಳಿಸು (ಕ್ರಿ). ೧. ವಿರಳವಾಗಿ ಮಾಡು ; ಬಿಡಿಬಿಡಿಯಾಗಿ ಮಾಡು. ೨. ಚ್ಯುತಿಗೊಳಿಸು : ಧಕ್ಕೆತರು : ಅಖಣ್ಡಿತಬ್ರಹ್ಮರಾಜ್ಯಸ್ಥಾನವಿದು ವಿರಳಿಸಿ ದೊನನೂರುವರಸು[illegible] ಪೂಜಿಮಡಿಸಿ ಕಳೆವುದು (ಪಾಂಡ. IX-i, ೬೭-೩೪; 984). ೩. ಕಳೆ ; ನೀಗು : ದೇಶಘಾತ್ಯನುಭಾಗಸ್ಪರ್ಧಕ ನಾನಾಗುಣಹಾನಿ ಶಲಾಕೆಗಳಂ ವಿರಳಿಸುತ್ತುಂ (ತತ್ತ್ವಪ್ರ. ೩೧೮); ಆ ವರ್ಗಶಲಾಕೆಯ ಹೀನರೂಪುಗಳ್ಗಸಂಖ್ಯಾತಂಗಳಂ ವಿರಳಿಸಿ (ಗೊಮ್ಮಸಾ. ೫೧-೮). [ವಿರಳ (= ವಿರಲ) + - ಇಸ್ಸು]

ವಿರಳೀಕರಿಸು (ಕ್ರಿ). ವಿರಳವಾಗಿ ಮಾಡು ; ಕಡಮೆಮಾಡು ; ತಗ್ಗಿಸು : ಶಿವಕಾರುಣ್ಯಪ್ರಾರ್ಥನಾಸ್ಥಲಕ್ಕೆ ಸೇರಿದ ವಚನಂಗಳ ಸಂಪುಟ ೨೬ಕ್ಕೆ ವಿರಳೀಕರಿಸಿದ ಪದಂಗಳು ನೂಱಕ್ಕೆ ಪ್ರಥಮಮಂಜರಿಯು ಪರಿಸಮಾಪ್ತವಾದುದು (ಕ್ಷೇತ್ರ. ೧-೨೬-೩ ವ). [ವಿರಳೀಕರಣ + - ಇಸ್ಸು]

ವಿರಾಗ (ನಾ). ೧. ಬಣ್ಣದ ಬದಲಾವಣೆ. ೨. ಒಲವಿಲ್ಲದಿರುವಿಕೆ ; ಮನಸ್ಸಿಲ್ಲದಿರುವಿಕೆ. ೩. ಪ್ರಾಪಂಚಿಕ ವಿಷಯಗಳಲ್ಲಿರುವ ಅನಾಸಕ್ತಿ ; ವಿರಕ್ತಿ ; ವೈರಾಗ್ಯ : ಆ ಕಾಂತೆಯ ಮೃದುತಳಪದ ಕೋಕನದಂ ತನ್ನ ರುಚಿಯನೊದವಿಸಿ ರಾಗೋದ್ರೇಕಮನದೆಂತು ರಕ್ತಾಶೋಕದ ತಳಿರೊಳ್ವಿರಾಗಮಂ ಪುಟ್ಟಿಸುಗುಂ (ಮಲ್ಲಿಪು. ೩-೫೭); ಪಗೆಯಂ ಮಱೆತು ಸಂತಂ ಪುದುವಾಱ್ಪುದೆಂದು ಬುದ್ಧಿವೇಟಲೊಡಮದುವೆ ವಿರಾಗಮಂ ಪುಟ್ಟಿಸೆ (ರಾಮಾಶ್ವ. ೪೨-೧೪). ೪. [ವೀಶೈ] ಈಶ್ವರನ ಹತ್ತು ಕಲ್ಯಾಣಗುಣಗಳಲ್ಲಿ ಒಂದು : ಶ್ರೀ ರುದ್ರನು ಧೃತಿ...ವಿರಾಗ ಮತಿ ಈಶ್ವರತ್ವವೆಂಬ ದಶಕಲ್ಯಾಣಗುಣಯುಕ್ತನಾಗಿ (ವಿವೇಕ. ೨೯೦). [ಸಂ.]

ವಿರಾಗಾರ್ಹ (ಗು). ೧. ವಿರಕ್ತಿಗೆ ಅರ್ಹವಾದ ; ವೈರಾಗ್ಯಕ್ಕೆ ಯೋಗ್ಯವಾದ. (ನಾ). ೨. ವಿರಕ್ತ ; ವಿರಾಗಿ : "ವೈರಂಗಿಕಃ, ವಿರಾಗಾರ್ಹಃ- ಈ ೨ ವಿರಕ್ತಂ" (ಹಲಾಯು. ೬೧-೨೧೪). [ಸಂ.]

ವಿರಾಗಿ (ಗು). ೧. ಆಸಕ್ತಿಯಿಲ್ಲದ ; ಒಲವಿಲ್ಲದ. (ನಾ). ೨. ಲೌಕಿಕ ವಿಷಯಗಳಲ್ಲಿ ಆಸಕ್ತಿಯಿಲ್ಲದವನು ; ವಿರಕ್ತ : ವಿರಾಗಿಯರ್ಜುನನೆದೆಯ ಕೋಂಟೆಯಂ ಹುಡಿಗೈವ ಶೃಂಗಾರವೈತರಲಿ (ಚತ್ರಾಗ. ೨೯-೭೯೨). [ಸಂ. ವಿರಾಗಿನ್]

ವಿರಾಜ (ನಾ). ೧. ಕಾಂತಿ ; ಪ್ರಕಾಶ; ಹೊಳಪು : "ಆಹ್ಲಾದವಿರಾಜಯುಕ್ತಿ ನುಡಿದಿಗ್ವಿವರಂಗಳೊಳುತ್ತರಾಹ್ವಯಂ" (ನಾನಾರ. ೭೮). ೨. ತೇಜಸ್ಸು. [ಸಂ.]

ವಿರಾಜಪುರುಷ (ನಾ). ಅಧಿಕವಾದ ತೇಜಸ್ಸಿನಿಂದ ಕೂಡಿದವನು ; ಪರಮಾತ್ಮ : ವಿರಾಜ [ಪಾಠಾಂ. ವಿರಾಟ್]ಪುರುಷನೊಬ್ಬ ಪುರುಷನು ಆದಿಪುರುಷನೊಬ್ಬ ಪುರುಷನು (ಬಸವ. ೯೫೫). [ಸಂ.]

ವಿರಾಜಿ (ನಾ). ೧. ಪ್ರಕಾಶಮಾನವಾದುದು ; ಕಾಂತಿದಾಯಕವಾದುದು : ತುಂಗಕನಕ ಭೃಂಗಾರವಿರಾಜಿ ರಾಜನ್ಮರಕತಮಯಶುಕವಿರಾಜಿ (ಆದಿಪು ೪-೩೦ ರಗಳೆ). ೨. ತೇಜಸ್ಸಿನಿಂದ ಕೂಡಿದವನು ; ತೇಜಸ್ವಿ. [ಸಂ. ವಿರಾಜಿನ್]

ವಿರಾಜಿತ (ಗು). ೧. ಹೊಳೆಯುವ ; ಪ್ರಕಾಶಿಸುವ ; ಶೋಭಿಸುವ. (ನಾ). ೨. ಪ್ರಕಾಶಿಸುವಂಥದು ; ಕಾಂತಿಯುತವಾದುದು : ಮುತ್ತಿನ ತೋರಣಂ ಕನಕವೇದಿಕೆ ಪಚ್ಚೆಯ ಕುಟ್ಟಿಮಸ್ಥಳಂ...ವಿರಾಜಿತಮಾಯ್ತು ವಿವಾಹಗೇಹದೊಳ್ (ರಾಜಶೇ. ೮-೨). ೩. ಕಾಂತಿಯುಕ್ತನಾದವನು ; ತೇಜಸ್ವಿ : ಧೀರತೆಗಿಡದ... ತವೋವೈರಿವಿಜಯಕ್ಕೆ ಮಸೆದಸಿಧಾರೆವೊಲಪರಾಜಿತಂ ವಿರಾಜಿತನಾದಂ (ಶಾಂತಿಪು. ೪-೧೦೯). [ಸಂ.]

ವಿರಾಜಿಸು (ಕ್ರಿ). ಪ್ರಕಾಶಿಸು ; ಹೊಳೆ; ಶೋಭಿಸು : ಎತ್ತಲುಂ ಮಿಳಿರ್ದ್ದ ಕೇತನರಾಜಿ ಕರಂ ವಿರಾಜಿಸಲ್ (ಎಇ. XIII, ೩೩೧-೪೦; 929); ವಿರಾಜಿಸುತಿರ್ದುದು ತತ್ಪುರಾಂತರಂ (ಜಗವಿ. ೯-೯೭); ವಿನುತ ಮಖಮಂಟಪ ವಿರಾಜಿಸಿತು (ತೊರರಾ. ೧-೧೨-೨೬).

[ವಿರಾಜ + - ಇಸ್ಸು]

ವಿರಾಟರೂಪ (ನಾ). ಸಕಲವನ್ನೂ ತನ್ನಲ್ಲಿ ಅಡಗಿಸಿಕೊಂಡಿರುವ ದೈವದ ಭವ್ಯರೂಪ,— ಅಸಾಧಾರಣವಾದ ರೂಪ ; ವಿಶ್ವರೂಪ : ಕಮಲೋದರನು ಕೈಕೊಂಡನು... ಸಕಲಲೋಕದ ಬೀದಿ ವಿಸಟಂಬರಿವ ವಿಮಲ ವಿರಾಟರೂಪವನು (ಕುಮಾಧೀ. ೩-೭೪). [< ಸಂ. ವಿರಾಡ್ರೂಪ]

ವಿರಾಟ್ಪುರುಷ (ನಾ). ಅಸಾಧಾರಣನಾದ ಪುರುಷ ; ಪರಮಾತ್ಮ : ಇಲ್ಲೂ ವನವೃಕ್ಷನ್ಯಾಯದಿಂದ ಸಮಸ್ಥೂಲಶರೀರಸಮಷ್ಟಿಯೆ ವಿರಾಟ್ಪುರುಷನು (ಓಂದಸಾ. ೧೯೬). [ಸಂ.]

ವಿರಾಡ 'ಬೀಡಾರ' ನೋ.

ವಿರಾಡಿಸು 'ಬಿರಾಡಿಸು' ನೋ.

ವಿರಾಡ್ಗೇಹ (ನಾ). ೧. ಭವ್ಯವಾದ ಮನೆ. ೨. ಸರ್ವಾಂತರ್ಯಾಮಿಯಾದವನು ; ಪರಮಾತ್ಮ : ಕಾಲಭೈರವಂ... ಸ್ವತಂತ್ರದಿವ್ಯಾವಯವ ವಿರಾಡ್ಗೇಹ... ರುದ್ರನು (ವೀಶೈಪ್ರ. ೨-೩-೪). [ಸಂ.]

ವಿರಾಡ್ಮನ (ನಾ). ೧. ಅಸಾಧಾರಣವಾದ ಮನಸ್ಸು. ೨. ವಿಶ್ವಚೇತನ : ನೆಯ್ದಾಳುತಿದೆ ಜಗವನೊಂದತಿ ವಿರಾಡ್ಮನಂ (ಶ್ರೀರಾಮಾ. ೫೮-೧೩೧).

[< ಸಂ. ವಿರಾಣ್ಮನಸ್]

ವಿರಾಡ್ರೂಪ (ನಾ). ೧. = ವಿರಾಟರೂಪ : ಹರಿಯುದಂಕನ ಮಾತ ಮನ್ನಿಸಿ ಕರುಣದಲಿ ತೋಱಿದನು ಮೊದಲಾ ನರಗೆ ತೋಱಿಸಿದಾ ವಿರಾಡ್ರೂಪವನುದಂಕನಿಗೆ (ತಿಮ್ಮಅ. ೩-೪೦); ವಿಭುತ್ವದ ಪ್ರತೀಕವಾದ ವಿರಾಡ್ರೂಪವನ್ನೂ ತೋರಿಸಿದ ವೈರಾಗ್ಯಮೂರ್ತಿ ಶ್ರೀಕೃಷ್ಣ (ಭಾರದ. ೭೯). ೨. ಪರಮಾತ್ಮ ; ಪರಬ್ರಹ್ಮ : ಶ್ರೀ ವಿರಾಡ್ರೂಪಂ ಹಿರಣ್ಯಗರ್ಭಂ ಸಕಲಜೀವರಂ ರಕ್ಷಿಸುವ ಮೂರ್ತಿಯಂ ನವ್ಯ ಶೋಭಾವಹದೊಳಂ ಕೂರ್ತ ಬಿತ್ತರಿಸಿದಂ ಕರುಣದಿಂದ ಹಲಗೆಯ ದೇಶಿಕಂ (ವೀಶೈಪ್ರ. ೭-೧ ಸೂಚನೆ); ವಿರಾಡ್ರೂಪನಾದ ಸೃಷ್ಟಿಕರ್ತನ ವಿಶ್ವರೂಪದರ್ಶನಕ್ಕೆ ವೈಜ್ಞಾನಿಕದರ್ಶನ ಮತ್ತು ತತ್ವಾನ್ವೇಷಕನ ತತ್ವದರ್ಶನ ಇವುಗಳ ಸಮನ್ವಯ ಅತ್ಯವಶ್ಯ (ಋಗ್ವಾರ. ೪ ಪೀಠಿಕೆ). ೩. ದೊಡ್ಡ ಆಕಾರ,— ಆಕೃತಿ ; ಬೃಹದಾಕಾರ : ಭಿನ್ನತಯ ಅಂಧಶ್ರದ್ಧೆ ವಿರಾಡ್ರೂಪವನ್ನು ತಾಳಿ (ಶಿಕ್ಷದ. ೨೪). [ಸಂ.]

ವಿರಾಡ್ರೂಪು (ನಾ). = ವಿರಾಟರೂಪ : ಸಕಲವಿಶ್ವವನಾ ವಿರಾಡ್ರೂಪಂದು ಧ್ಯಾನಂಗೈಯುವದೆ ನಿಶ್ಚಯದ ಮೆರೆ ಸಮಾಹಿತಿಯು (ಗಗಾ. ೧೩-೪೩). [< ವಿರಾಡ್ರೂಪ]

ವಿರಾಧ (ನಾ). ೧. ಅಡ್ಡಿ ; ವಿರೋಧ ; ಪ್ರತಿಬಂಧ. ೨. ಕಾಟ ; ತೊಂದರೆ ; ಉಪದ್ರವ. ೩. ರಾಮನಿಂದ ಹತನಾದ ಒಬ್ಬ ರಾಕ್ಷಸನ ಹೆಸರು : ತರಣಿವಂಶಜರತ್ರಿಮುನಿಯುಪಚರಣೆಯನು ಕೈಕೊಂಡು ರಜನೀಚರ ವಿರಾಧನ ಮುಱಿದು ಸಾರ್ದರು ಪಂಚವಟಿವನವ (ತೊರರಾ. ೩-೧ ಸೂಚನೆ); ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ (ಕೃಷ್ಣಿಭಾ. ೧೯-೨೦). [ಸಂ.]

ವಿರಾಧಿಸು (ಕ್ರಿ). ಅಡ್ಡಿಮಾಡು ; ವಿರೋಧಿಸು : ಪ್ರಮತ್ತಸಂಯುತನಾಗಿ ನವಪ್ರಕೃತಿಸ್ಥಾನಮಂ ಕಟ್ಟುತಿರ್ಮ ಪ್ರಥಮೋಪಶಮಸಮ್ಯಕ್ತ್ವಮಂ ವಿರಾಧಿಸಿ ಅನಂತಾನುಬಂಧಿ ಕರ್ಮೋದಯದಿಂದಂ (ಗೊಮ್ಮಸಾ. ೧೧೮-೩). [ವಿರಾಧ + - ಇಸ್ಸು]

ವಿರಾಮ (ನಾ). ೧. ನಿಂತುಹೋಗುವುದು ; ನಿಲ್ಲುವುದು ; ನಿಲುಗಡೆ. ೨. ಕೊನೆಗಾಣುವುದು ; ಅಂತ್ಯ ; ಸಮಾಪ್ತಿ. ೩. ಕೆಲಸ ಮುಂತಾದುವುಗಳ ಮಧ್ಯದ ಅವಕಾಶ ; ಬಿಡುವು ; ವಿಶ್ರಾಂತಿ : ನನಗೆ ವಿರಾಮವೇ ಇಲ್ಲದಂತಾಗಿದೆ (ರಾಯಕ. ೮೦); ಕಚೇರಿಯಲ್ಲೋ ಒಂದು ಕ್ಷಣ ವಿರಾಮವಿಲ್ಲ (ರಂಗಕ. ೩.). ೪. [ಛಂದ] ಪದ್ಯಗಳನ್ನು ಹೇಳುವಾಗ ಅರ್ಥಸ್ಫೂರ್ತಿ ಕೆಡದಂತೆ ನಿಲ್ಲಿಸಬೇಕಾದ ಸ್ಥಾನ ; ಯತಿ : ಸುರಪುರೇಂದು ದಿವಸಾಧಿಪಾಗ್ನಿಗಳ್ ಬರೆ ದಿಶಾಗಜದೊಳಾ ವಿರಾಮಮಾಗಿರೆ ಪೆಸರ್ನೆಗಟ್ಟ ನಾಕಿಯಂತೆವೊಲ್ ನಿರುಪಮಂ ಕೆಳದಿ ಮತ್ತಕೋಕಿಲಂ (ಛಂದೋಂಬು. ೨-೧೩೧); ನಿಯತಸ್ಥಾನಂ ಪದವಿಸ್ಮೃತಿಯೊಳಾದ ವಿರಾಮಮಱಿಗೆ ಯತಿಯಕ್ಕುಂ (ಕಾವ್ಯಾವ. ೪೭೯). ೫. ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಏಳನೆಯದಾದ ಉಷ್ಣಿಕ್ಕು ಎಂಬ ಛಂದಸ್ಸಿನ ವೃತ್ತ : ಶೀತಕರಾಗ್ನಿ ಚೇತೋಜಾತಹರರ್ಕಳರ್ದಿಂದೇ ತೊದಳೋಪಳೆ ನಾಮಾತಿಶಯಂ ವಿರಾಮಂ [ಪಾಠಾಂ. ವಿನಿಮ್ಮಂ] (ಛಂದೋಂಬು. ೨-೮೪). ೬. [ಸಂಗೀತ] ಹಾಡುವಾಗ ಮಧ್ಯದಲ್ಲಿ ನಿಲ್ಲಿಸಬೇಕಾದ ಸ್ಥಾನ ; ಉಸಿರ್ದಾಣ : ಕುಂತವು ಅದ್ಭುತರಸದಲ್ಲಿ ಮಧ್ಯದಲ್ಲಿ ವಿರಾಮವಿರುವ ಮೂರು ಲಘುಗಳೊಡನೆ (ಹಾಡುವಂತಹುದು) ಎಂದು ಸ್ಮೃತವಾಗಿದೆ (ಚತುಪ್ರ. ೭೪). [ಸಂ.]

ವಿರಾಮಚಿಹ್ನ (ನಾ). ಬರವಣಿಗೆಯಲ್ಲಿ ಅರ್ಥವಿಶದತೆಯನ್ನುಂಟುಮಾಡಲು ಮತ್ತು ಓದುವಾಗ ಉಸಿರನ್ನು ನಿಲ್ಲಿಸಲು ಪದಗಳ, ವಾಕ್ಯಭಾಗಗಳ ಮತ್ತು ವಾಕ್ಯಗಳ ನಡುನಡುವೆ ಅರ್ಥಾನುಸಾರಿಯಾಗಿ, ಉಚಿತವಾದ ಎಡೆಗಳಲ್ಲಿ ವಿರಾಮಸ್ಥಾನಗಳನ್ನು ಸೂಚಿಸಲು ಬಳಸುವ ಚುಕ್ಕೆ, ಗೆರೆ, ಕೊಕ್ಕೆ ಮುಂತಾದ ಲಿಖಿತಸಂಕೇತ, -ಗುರುತು : ವಿರಾಮಚಿಹ್ನಗಳಿದ್ದಲ್ಲಿ ನಿಲ್ಲಬೇಕು (ಮುಂಬಯಿ. ೨-೮).

[ಸಂ.]

ವಿರಾಮಚಿಹ್ನೆ (ನಾ). = ವಿರಾಮಚಿಹ್ನ : ಮುದ್ರಣಕ್ಕೆ ಸಂಬಧಪಟ್ಟ ದೋಷಗಳಲ್ಲಿ ಹೇರಳವಾಗಿರುವುವು ಯಾವುವೆಂದರೆ . . . ಅಸಮಯೋಚಿತವಿರಾಮಚಿಹ್ನೆಗಳ ಉಪಯೋಗ, ವ್ಯಾಕರಣದೋಷಗಳು . . . ಇತ್ಯಾದಿ (ಮುದ್ರಣ. ೩೦).

[ಸಂ. ವಿರಾಮಚಿಹ್ನ]

ವಿರಾಮಜ್ವರ (ನಾ). ನಿಂತು ನಿಂತು ಬರುವ ಒಂದು ಬಗೆಯ ಜ್ವರ : ಹಸಿವು, ಬಾಯಾರಿಕೆ ಶರೀರಲಾಘವ ಅಲ್ಪಜ್ವರ ಮುಲದಲ್ಲಿ ಪಿತ್ತಶ್ಲೇಷ್ಮಗಳ ಪ್ರವೃತ್ತಿ ಮುನೋತ್ಸಾಹವಿಲ್ಲದಿರುವುದು ಇವುಗಳೆಲ್ಲಾ ವಿರಾಮಜ್ವರಲಕ್ಷಣಗಳು (ಸಚ್ಕ್ರಿ೭೭). [ಸಂ.]

ವಿರಾಮಾಯಣ (ನಾ). ಬಿಡುವು ಮಾಡಿಕೊಂಡು ಕೇಳುವಂಥ ಕಥೆ ; ದೀರ್ಘಕಾಲದ ವಿರಾಮದಲ್ಲಿ ಕೇಳುವಂಥ ಕಥೆ : ಮತ್ತೊಮ್ಮೆ ಬರುವೆ. ದಿನವೆಲ್ಲಮುಂ ಕೇಳ್ವನೋದುವೆಯಂತೆ ; ರಾಮಾಯಣಂ ಅದು ವಿರಾಮಾಯಣಂ ಕಣಾ! (ಶ್ರೀರಾಮಾ. iii -೯). ಈ ಇದು ಶಬ್ದಚಮತ್ಕಾರವಾಗಿ ಸೃಷ್ಟಿಸಿರುವ ಕವಿಕಲ್ಪಿತ ನಿಷ್ಪತ್ತಿಯ ರೂಪ. [ವಿರಾಮ + < ಅಯನ]

ವಿರಾವ (ನಾ). ಧ್ವನಿ ; ಶಬ್ದ : "ಶಬ್ದಃ, ನಿನಾದಃ, ನಿನದಃ . . . ಸಂರಾವಃ, ವಿರಾವಃ- ೧೭ ಧ್ವನಿಯ ಹೆಸರುಗಳು" (ಪಿಡ್ಗಾಂಡಿ. ೫೬). [ಸಂ.]

ವಿರಾಳ (ನಾ). ಆಕರ್ಷಣೆ ; ಮೋಹ : ನಿರಾಳದಲ್ಲಿ ನಿಂದ ಸುಖಿಗೆ ವಿರಾಳದಲ್ಲಿ ಸುತ್ತು ತಿರುಗುತ್ತಿಹಲೇಕೆ (ಮೋಮಾ. ೧೦೫-೪೧೯); "ಅಶಾಂತತೆ, ದುಃಖ, ಸಂಸಾರ" (ಮೋಮಾ. ಕೋಶ). [<— ತೆಲು. ವಿರಾಲ, ವಿರಾಳ]

ವಿರಿಂಚ (ನಾ). ಬ್ರಹ್ಮ ; ಅಜ : ವಿರಿಂಚಖ್ಯಾತಿ ಲೋಕಂಗಳೊಳ್ಪರಿದಾಯಸದೆ ನಿಂದುದೊ (ಕಾದಂಪು. ೬೬೬); ಅರರೆ ನೂತನಸೃಷ್ಟಿಯಾಯ್ತು ವಿರಿಂಚಿಸೃಷ್ಟಿಯಲಿ (ಕುವ್ಯಾಭೀ.೧-೪೯).

[ಸಂ.]

ವಿರಿಂಚನ (ನಾ). = ವಿರಿಂಚ : "ಸರಸಿರುಹಭವಂ . . .ವಿರಿಂಚನಂ ವಿಧಿ ಪಿತಾಮಹಂ ಚತುರಾಸ್ಯಂ" (ವಪ್ಪಕೋ. ೩-೧೧). [ಸಂ.]

ವಿರಿಂಚಿ (ನಾ). ೧. ಬ್ರಹ್ಮ : ಹರಿ ವಿರಿಂಚಿಗೆ ನುಡಿದಂ (ಜಗವಿ. ೧-೬೬); ಸಕಲಪ್ರಮಥರಂ ಹರಿವಿರಿಂಚಿ ವಾಸವಮುಖ್ಯಸುರನಿಕರಮನುಮುನಿಗಳನು. . . ಪಂಪಾ ವಿರೂಪಾಕ್ಷಲಿಂಗಪ್ರಭು ವಿಲಾಸದಿಂ ಕಳುಹಿ ತಾಂ ನಡೆಗೊಂಡನಂದು ಕೈಲಾಸಗಿರಿಗೆ (ಹಚಕಾ. ೧೪-೨೨). ೨. ಶಿವ : ಚಕ್ರಧರತ್ವಮಂದು ಸಫಲಂ. . .ಶಕ್ರವಿರಿಂಚಿಮುಖ್ಯಸುರ ರಕ್ಷಣಮಂದು ಕೃತಾರ್ಥಮೆನ್ನೊಳಾ ವಿಕ್ರಮಸಾಲ್ವನಂ ತವಿಸಿದಂದಿದನೆಯ್ದೆಂ ಪಿತಾಮಹಾ (ಜಗವಿ. ೧-೭೩). ೩. ವಿಷ್ಣು : ಸಲಿಲಮಯವಾದವಿಳಭುವನಾವಳಿಗಳೊಳಗೆ ವಿರಿಂಚಿಯಾಳುತ ಮುಳುಗುತ್ತೆತಂದಾಲದಲೆಮಂಚದಲಿ ಪವಡಿಸಿದ (ಕುವ್ಯಾಉ. ೯-೫೫).

[ಸಂ.]

ವಿರಿಂಚಿಪ್ರಭವ (ನಾ). ಬ್ರಹ್ಮನನ್ನು ಪಡೆದವನು ; ವಿಷ್ಣು : ಸಭೆಯೊಳೋಲಗದೊಳು ವಿರಿಂಚಿಪ್ರಭವನನುಮತದಿಂದ ಧರಣೀವಿಭು ಮಹಾಕ್ರತುರಾಜಸೂಯವನೊಲಿದು ಕೈಕೊಂಡ (ಕುವ್ಯಾಸ. ೧ ಸೂಚನ). [ಸಂ.]

ವಿರಿಂಚಿಸಭೆ (ನಾ). ಬ್ರಹ್ಮನ ಸಭೆ : ನಿರ್ವಿಣ್ಣೆಯಾಗಿ ಭೂವಧು ಗೀರ್ವಾಣಾವೃತ ವಿರಿಂಚಿಸಭೆಯಂ ಪೊಕ್ಕಳ್ (ಜಗವಿ. ೧-೨೭). [ಸಂ. ವಿರಿಂಚಿಸಭಾ]

ವಿರಿವಿರಿ (ನಾ). ಒಂದು ಅನುಕರಣ ಶಬ್ದ : ಪುಣ್ಣಾ ಬಾಯಿಂ ಪುಲು ವಿರಿವಿರಿಯೆಂದುರ್ಕೆ (ಶೃಂಗಾರ. ೧-೮೮). 'ವಿಲಿವಿಲಿ' ಪರಾ.

ವಿರುತ (ನಾ). (ಪಕ್ಷಿಗಳ)ಕೂಗು ; ಕುಕಿಲು ; ಚಿಲಿಪಿಲಿ ಶಬ್ದ : "ಉಡ್ಡೀನಂ ಪ್ರಡೀನಂ ಪಕ್ಷಿಗಳ ಗತಿಯಕ್ಕು ವಿರುತಮೆನೆ ನುಡಿಯಕ್ಕು" (ಮಂಗರಾ. ೫೮-೨). [ಸಂ.]

ವಿರುತಿ (ನಾ). ೧. ಶಬ್ದ ; ಧ್ವನಿ : ನೆರೆದ ಸಮಸ್ತದೇವನಿಕುರುಂಬದ ಯಾನವಿಮಾನಕಿಂಕಿಣೀವಿರುತಿಯ ದುಂದುಭಿಧ್ವನಿಯ ಮಂಗಳಗೇಯದ ನಾದಮಂ ತರಂತರದೊಳೆ ಪೊತ್ತು (ಆದಿಪು. ೩-೨೨); ಕಳಕಾಂಚಿಕಾವಿರುತಿ ಕರ್ಣದೊಳಂಚೆಯ ತುಪ್ಪಬಂಚೆಯಂ ಪೊಸೆಯ ನಿರೀಕ್ಷಣವ್ಯಸನದಿಂ ನಡೆತಂದುದು ಸೌಂದರೀಜನಂ (ಚಂದ್ರಪ್ರ. ೬-೯೫). ೨. = ವಿರುತ : ಸುರಭಿಸಮಯದೊಳೆ ಕೋಕಿಳವಿರುತಿನಿಬಂಧನಮನಬ್ಜ ಕಾಲದೊಳೆ ಮದೋದ್ಧುರಕೇಕಿ ಮಧುರಕೇಕಾವಿರುತಿಯನಭಿಯುಕ್ತರಜಿದು ಪೇಟ್ಪುದು ಕೃತಿಯೊಳ್ (ಕಾವ್ಯಾವ. ೮೯೧). [ಸಂ.]

ವಿರುದ್ಧ (ಗು). ೧. ತಡೆಗಟ್ಟಿದ ; ಅಡ್ಡಿಪಡಿಸಿದ. ೨. ವ್ಯತಿರಿಕ್ತವಾದ ; ಪ್ರತಿಕೂಲವಾದ. ೩.ಒಪ್ಪಿಗೆಯಾಗದ ; ಅಪ್ರಿಯವಾದ. ೪. ನಿಷಿದ್ಧವಾದ ; ನಿಷೇಧಿಸಿದ. (ನಾ). ೫. ವ್ಯತಿರಿಕ್ತ ; ಪ್ರತಿಕೂಲ : ಕೃಷ್ಣನ ಸ್ವಭಾವವು ಇದಕ್ಕೆ ತೀರ ವಿರುದ್ಧವಾದುದು (ಪಾರಾಕ್ಷ. ೫೮). ೬ ಅಡ್ಡಿ ; ವಿರೋಧ : ಸಿಂಗಿತಲೆ ಪಣ್ಣಾರನ್ಗೆ ಕಾಸಂಪಳ್ಳಿಯಾ ಸಮಭಾಗಮಾನ್ ಚನ್ದ್ರಸೂರ್ಯ್ಯರುಳ್ಳಿನಂ ಸರ್ವ್ವವಿರುದ್ಧ ರಹಿತಂ ಗೋಪಾಲದೇವ[ರ್] ಕೊಟ್ಟರ್ (ಎಇ. XXI. ೧೭೮-೯; ೫೫ಯ ಶತ). ೭. ಹಗೆತನ ; ವೈರ : ತಾವು . . . ನಮಗೂ ಟೀಪುಸುಲ್ತಾನರಿಗೂ ಇರುವಂಥಾ ವಿರುದ್ಧವನ್ನು ಬೆಳಸಿ ತಮ್ಮ ವಿಲಾಯಿತಿಗಳಿಗೆ ಹೋಗುತ್ತೀರಿ (ರಾಜೇಂದ್ರ. ೧೩). ೮. [ಕಾವ್ಯಮೀ] ವಿರೋಧಕರವಾದ ಶಬ್ದಾರ್ಥಗಳು ಸೇರಿ ಆಗುವ ಒಂದು ಅಲಂಕಾರ : ಧರೆಗೆ ವಿರೋಧಮನಿಶ್ಪರ ವಿರುದ್ಧ ಶಬ್ದಾರ್ಥಘಟನೆಯಾಗೆ ವಿರುದ್ಧಂ (ಉದಯಾ. ೫೭). ೯. [ನ್ಯಾಯ] ಅಸಿದ್ಧ, ವಿರುದ್ಧ, ಅನೈಕಾಂತಿಕ ಮತ್ತು ಅಕಿಂಚಿತ್ಕರ ಎಂಬ ನಾಲ್ಕು ಬಗೆಯ ಹೇತ್ವಾಭಾಸದೋಷಗಳಲ್ಲಿ ಒಂದು : ನಿಗಮನಾದ್ಯಂಗಳುಂ ಸಮ್ಯಭಿಚಾರ ವಿರುದ್ಧ ಸತ್ ಪ್ರತಿಪಕ್ಷ ಅಸಿದ್ಧಿಬಾಧೆಗಳೆಂಬ ಹೇತ್ವಾಭಾಸದೋಷಂಗಳು (ವಿವೇಕ. ೧೮); ಹೇತುವು ಸಾಧ್ಯದ ಅಭಾವವನ್ನು ಸಾಧಿಸುವುದಾದರೆ ಅದು ವಿರುದ್ಧವೆನಿಸುವುದು (ಭಾತತ್ತ್ವ. ೨೪೦). [ಸಂ.]

ವಿರುದ್ಧಮತಿಕೃತ್ತು (ನಾ). [ಕಾವ್ಯಮೀ] ಪದದೋಷಗಳಲ್ಲಿ ಒಂದು ; ಹೇಳಲೇಬೇಕಾದ ಅರ್ಥವು ತಪ್ಪಿ ವಿರುದ್ಧಾರ್ಥವಾಗುವಂಥದು : ವಿರುದ್ಧಮತಿಕೃತ್- ಹೇಳಬೇಕೆಂದಿದ್ದ ಅರ್ಥಕ್ಕೆ ಕೇವಲ ವಿರುದ್ಧವಾದ ಅರ್ಥವೂ ಆಗುವಂತಿರುವುದು (ಕೃಪಿಪಿ. ೨೨೮). [ಸಂ. ವಿರುದ್ಧಮತಿಕೃತ್]

ವಿರುದ್ಧರೂಪಕ (ನಾ). [ಕಾವ್ಯಮೀ] ರೂಪಕಾಲಂಕಾರಗಳಲ್ಲಿ ಒಂದು ; ಒಂದು ವಸ್ತುವು ಮತ್ತೊಂದು ವಸ್ತುವಿನ ಹಾಗೆ ಇದ್ದೂ ಅದರ ಕಾರ್ಯವನ್ನು ಮಾಡದಿರುವುದು ; ಈ ಉದಾಹರಣೆಗೆ : ಮುಖವು ಚಂದ್ರಬಿಂಬದ ಹಾಗಿದ್ದರೂ ಚಂದ್ರನ ಕಾರ್ಯವನ್ನು ಮಾಡದಿರುವುದು : ಕಮಲಾಕರದೊಳ್ ಸಂಕೋಚಮನಟಲಂ ಚಕ್ರವಾಕದೊಳ್ ಮಾಡದು ನಿನ್ನ ಮುಖೇಂದುಬಿಂಬಮಿಂದುಗೆ ಸಮನೆಂಬುದು ಮಿಗೆ ವಿರುದ್ಧರೂಪಕಮಕ್ಕುಂ (ಕವಿರಾ. ೩-೧೯). [ಸಂ.]

ವಿರುದ್ಧವೃತ್ತ (ನಾ). ವ್ಯತಿರಿಕ್ತವಾದ ನಡವಳಿಕೆಯುಳ್ಳವನು, -ಚರ್ಯೆಯುಳ್ಳವನು : ಬಗೆ ತತ್ಕಾರ್ಥವಿನಿಶ್ಚಯಂಬಡೆಯೆ ನೈರ್ಗ್ರಂಥ್ಯಂ ಪೊದಟ್ಟತ್ತು . . .ಅಪ್ರಮತ್ತತೆಯೊಳನ್ಯಪ್ರೀತಿಶೀಲಕ್ಕೆ ಕೇಡೊಗೆದತ್ತೆಂಬ ವಿರುದ್ಧವೃತ್ತರೆಮಗೊಳ್ಪಂ ಮಾಟ್ಕೆ ಸಾಧೂತ್ತಮರ್ (ಪುಪ್ರಸ್ತಾ. ೧-೫). [ಸಂ.]

ವಿರುದ್ಧಸಮಾಸ (ನಾ). [ವ್ಯಾಕ] ಕನ್ನಡ ಮತ್ತು ಸಂಸ್ಕೃತಪದಗಳು ಸೇರಿ ಆಗುವ ಸಮಾಸ ; ಅರಿಸಮಾಸ : ಪದವಿಧಿ ಕನ್ನಡಕಂ ಸಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಲ್ಲಿದಿರ್ಪುದು ಬಿರುದಾವಳಿಯೊಳ್ ಪೇಟ್ಪುದು ವೆಱವಱೊಳಾಗದಿದು ವಿರುದ್ಧಸಮಾಸಂ (ಶಮದ. ೧೭೪). [ಸಂ.]

ವಿರುದ್ಧಾತ್ಮಕ (ಗು).೧. ವಿರೋಧದಿಂದ ಕೂಡಿದ ; ಪ್ರತಿಕೂಲವಾದ. (ನಾ). ೨. ಅರ್ಥಾಂತರನ್ಯಾಸದ ಎಂಟುಭೇದಗಳಲ್ಲಿ ಒಂದು : ಸಕಲವ್ಯಾಪಿವಿಶೇಷ ಪ್ರಕಾಶಕಂ ಯುಕ್ತಕಾರಿ ಯುಕ್ತಾಯುಕ್ತಂ ಪ್ರಕಟಶ್ಲೇಷವಿರುದ್ಧಾತ್ಮಕಂ ವಿರುದ್ಧಂ ವಿಪರ್ಯಯಂ ಯುಕ್ತಾರ್ಥಂ (ಕವಿರಾ. ೩-೨೯). [ಸಂ.]

ವಿರುದ್ಧಾಭಾಸ (ನಾ). [ಕಾವ್ಯಮೀ] ಶ್ಲೇಷಾಲಂಕಾರದ ಒಂದು ಪ್ರಭೇದ; ವಿರೋಧವನ್ನು ಸೂಚಿಸುವ ಅಥವಾ ವಿರುದ್ಧಾರ್ಥಗಳಂತೆ ಕಂಡುಬರುವ ಪದಗಳ ಸಮೂಹ : ಅವಯವಮುಖದಿಂ ಸಮುದಾಯವಿಶೇಷಣಮನ್ಯವಸ್ತುಗಮಕಮದಾ

ದಂದವಯವಮವಿರುದ್ಧಂ ನೋಡೆ ವಿರುದ್ಧಸ್ಥಿತಿಯೊಳಿರೆ ವಿರುದ್ಧಾಭಾಸಂ (ಕಾವ್ಯಾವ. ೭೫೯). 'ವಿರೋಧಾಭಾಸ' ಪರಾ. [ಸಂ.]

ವಿರುದ್ಧಾರ್ಥ (ನಾ). ೧. ವಿರೋಧವನ್ನು ಸೂಚಿಸುವ ಅರ್ಥ ; ವಿಪರೀತಾರ್ಥ. ೨. [ಕಾವ್ಯಮೀ] ಕಾವ್ಯದ ದೋಷಗಳಲ್ಲಿ ಒಂದು ; ಒಂದು ವಾಕ್ಯದಲ್ಲಿ ಉಕ್ತವಾದ ಪೂರ್ವಾರ್ಧದ ಅರ್ಥಕ್ಕೂ ಉತ್ತರಾರ್ಧದ ಅರ್ಥಕ್ಕೂ ಕಂಡುಬರುವ ವಿರೋಧ : ಪರಿಗೀತಾರ್ಥಂ ಪೂರ್ವಾಪರದೊಳ್ ಬಗೆವಾಗಳೆಂದುಮೊಂದೆಡೆಯೊಳೊಂದುಂ ದೊರೆಕೊಂಡೊಂದದೊಡದು ದುಷ್ಕರಮೆ ವಿರುದ್ಧಾರ್ಥಮೆಂಬುದಾದಂ ದೋಷಂ (ಕವಿಕಾ. ೧-೬೧); ದುಸ್ಸಂಧಿಯನಿಬದ್ಧಂ ವಿರುದ್ಧಾರ್ಥ ನೀರಸಂ ಶೈಥಿಲ್ಯವರ್ಣಂ ಕಾರಕವಿರಹಿತಂ ಕ್ರಿಯಾಳಂಕಾರಹೀನವೆನಿಪ್ಪ ಪೊಳ್ಪಂ ತೂಜಿ ಕಳೆದು (ಬಸವ. ೧-೧೮). [ಸಂ.]

ವಿರುದ್ಧಾರ್ಥಕ (ನಾ). ಪ್ರತಿಕೂಲಕರವಾದ ಪ್ರತಿಕ್ರಿಯೆಗಳನ್ನು ಉಂಟುಮಾಡುವಂಥದು : ಕಳಶಜನುದಯದೊಳೊದವಿದ ಜಳಾಶಯಂ ತಿಳಿದುವೊಡನೆ ಕದಡಿದುವವನೀತಳಪತಿಯ ಪಡೆಯೊಳಿರ್ಪನೃಪಜಳಾಶಯಂ ಶರದಮೇಂ ವಿರುದ್ಧಾರ್ಥಕಮೋ (ಶಾಂತಿಪು. ೧೦-೧೩೯). [ಸಂ.]

ವಿರುಪ (ನಾ). ಶಿವ ; ವಿರೂಪಾಕ್ಷ : ಹಂಪೆಯ ವಿರುಪಂ ತಾನೊಪ್ಪಿರ್ದಂ (ತಿರುನಾ. ದೇ. ೨೬೧-೨). [P ಇದು 'ವಿರೂಪಾಕ್ಷ'ವೆಂಬುದರ ಸಂಕ್ಷಿಪ್ತರೂಪ]

ವಿರುಪಲಸು (ನಾ). ಒಂದು ಬಗೆಯ ಹಲಸು : "ಝಿಂಡಕಃ- ಹೆಮ್ಮರ, ವಿರುಪಲಸು" (ಓಷಧಿ. ೬೪). [? + ಪಲಸು]

ವಿರುಪಾಕ್ಷ (ನಾ). ಶಿವ ; ವಿರೂಪಾಕ್ಷ : ಶ್ರೀ ವಿರುಪಾಕ್ಷ (ಎಕ. III (R). ನಂಜನ. ೧೧೦-೪೪;1490). [< ಸಂ. ವಿರೂಪಾಕ್ಷ]

ವಿರುವತ್ತು (ಗು). ಶಬ್ದಮಾಡುವ ; ಕೂಗುವ : ವಿರುವದ್ಭೃಂಗಸಂಗೀತ ಚೆಲ್ವಂ ನೀಡಿತ್ತು (ಆದಿಪು. ೬-೨೫); ವಿರುವತ್ಪಾರಸರಾಜಹಂಸರವದಿಂದೇವಂದಿರೇ ಬನ್ನಿಮಿಂತಿರಿಮೆಂದಾದರಿಪಂತುಟಾಯ್ತು ಪವನೋದ್ಧೂತೋತ್ತರಂಗಾಂಬುವಿಂ (ಗದಾಯು. ೬-೪೦). [ಸಂ. ವಿರುವತ್]

ವಿರೂಕ್ಷ (ಗು). ಅಸಹ್ಯಕರವಾದ ; ಇಷ್ಟವಾಗದ : ಮತ್ತಮಾ ನಾರಕರೆಲ್ಲಂ ಹುಂಡವುಂಡಸಂಸ್ಥಾನರುಮತಿವಿರೂಕ್ಷಕೃಷ್ಣವರ್ಣರುಮತಿದುರ್ಗಂಧರುಂ (ಸುಕುಮಾ. ೧೧-೪೮ ವ). [ಸಂ.]

ವಿರೂಕ್ಷಣ (ಗು). ೧. ಉಗ್ರವಾದ ; ಭೀಷಣವಾದ : ವಿತತಸಮರಭುಜ ಪ್ರತಾಪೋನ್ನತ ಸದಾಗತಿಸವಿನ ಝಳವಡಗಿತೆ ವಿರೂಕ್ಷಣತೀಕ್ಷ್ಣತೇಜಸ್ಫೂರ್ತಿ ಮುದ್ರಿಸಿತೆ (ತೊರವಿ.೬-೫೧-೭೯). (ನಾ). ೨. ಕಠಿಣಗೊಳಿಸುವಿಕೆ; ಕರ್ಕಶವಾಗುವಂತೆ ಮಾಡುವಿಕೆ. ೩. ದೂರು ; ನಿಂದೆ ; ಶಾಪ ; ಬಯ್ಗುಳು : "ಶಾಪಮಾಕ್ರೋಶಂ ವಿರೂಕ್ಷಣಂ ಕ್ಷಾರಣಾಕ್ಷೇಪಮನೆ ಬೈಗುಳೆನಿಸಿಕ್ಕುಂ" (ಮಂಗರಾ. ೨೬-೫). [ಸಂ.]

ವಿರೂಕ್ಷಿಸು (ಕ್ರಿ). ತಿರಸ್ಕಾರಭಾವವನ್ನು ತಾಳು ; ಹೇವರಿಸು : ಬಗೆ ಮೃಗರಾಜ ಶಬ್ದನಿತರ್ಕೆ ವಿರೂಕ್ಷಿಸಿದಂದಮೋ . . . ಪೇಟಿಮೆಂಬ ಶಂಕೆಗೆ ನೆಲೆಯಾದುದಂಬರ ಚರೇಶ್ವರನಿರ್ದ ಮೃಗೇಂದ್ರವಿಷ್ಟರಂ (ಶಾಂತಿಪು. ೬-೪೧) : ಪುರಮಂ ಪುರಗೋಪುರಮಂ ಬಹಿಃಪುರೋದ್ಯಾನಮನೀಕ್ಷಿಸಲ್ ಬಗೆ ವಿರೂಕ್ಷಿಸೆ ಕನ್ನಡಿಸಲ್ಕೆ ಸಾಲ್ದಳಬ್ಜಾನನೆ ದುಃಖಿತೇ ಮನಸಿ ಸರ್ವಮಸಹ್ಯಮೆನಿಪ್ಪ ವಾಕ್ಯಮಂ (ಪಂಡಾಮಾ. ೯-೧೯೪).

[ವಿರೂಕ್ಷಣ + – ಇಸು]

ವಿರೂಪ (ಗು). ೧. ಕೆಟ್ಟ ಆಕಾರವುಳ್ಳ ; ವಿಕಾರರೂಪವುಳ್ಳ. ೨. ಸ್ವಾಭಾವಿಕವಲ್ಲದ ; ಅಸ್ವಾಭಾವಿಕವಾದ ; ಅಸಂಗತವಾದ : ಹಲವರಲ್ಲಿ ಕಂಡುಬರುವ ವಿರೂಪವರ್ತನೆಗೆ ಅವರನ್ನು ಅವಿಧೇಯರೆಂದು ಶಿಕ್ಷಿಸಲು ಯತ್ನಿಸುವುದು ವಿವೇಕವಲ್ಲ (ಶಿಕ್ಷಣ. ೧೭೦). (ನಾ). ೩. ಕೆಟ್ಟಆಕಾರ ; ಕುರೂಪ ; ವಿಕಾರವಾದ ರೂಪ. ೪. ವಿವಿಧರೂಪಗಳನ್ನು ಹೊಂದಿರುವಿಕೆ ; ಬಹುರೂಪತೆ. [ಸಂ.]

ವಿರೂಪತೆ (ನಾ). ಆಕಾರವಿಲ್ಲದಿರುವುದು ; ರೂಪರಾಹಿತ್ಯ : ಶ್ಯಾಮತೆಯಿಂ ವಿರೂಪತೆಯಿನಾರಯೆ ನಿನ್ನ ಸಖಂ ಮನೋಜನಂತಾ ಮದನಂಗಮಾದುದು ವಸಂತನ ಪೊರ್ದುಗೆಯಿಂದಮುತ್ಸವೋದ್ಗಾಮತೆ (ಚಂದ್ರಪು. ೬-೭೮). [ಸಂ. ವಿರೂಪತಾ]

ವಿರೂಪಸಂಧಿ (ನಾ). [ವ್ಯಾಕ] ಸಂಧಿದೋಷಗಳಲ್ಲಿ ಒಂದು ; ಅಶ್ಲೀಲತೆಗೆ ಎಡೆಮಾಡುವಂತೆ ಶಬ್ದಗಳು ಸಂಧಿಯಾಗುವಿಕೆ : ವಿರೂಪಸಂಧಿಗೆ : ಪಸುರಂ ಬಿಡದೆಸಪ ಮಳೀಮಸರ್ಗೆಂದುದಿತೋಡುರಾಜನಂ ನಯದಿಂ ಕಲ್ಪಿಸಿ ಜಲಧಿ ನುಡಿವ ಮಾಬ್ಕೆಯಿನಸೆದತ್ತುಲ್ಲೋಲಬಹುಲಕಲ್ಲೋಲರವಂ (ಕಾವ್ಯಾವ. ೪೪೧). [ಸಂ.]

ವಿರೂಪಾಕ್ಷ (ನಾ). ವಿಷಮವಾದ ಕಣ್ಣುಗಳುಳ್ಳವನು ; ಮೂರುಕಣ್ಣುಗಳುಳ್ಳವನು ; ಶಿವ : ನಡೆತಂದೆನ್ನಯ ಕಣ್ಗಳಲ್ಲಿರು ವಿರೂಪಾಕ್ಷಾ ವಿರೂಪಾಕ್ಷ (ಪಂಪಾಶ. ೭) ; ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ (ಕಣ್ಣರ. ದೇ. ೧೫೧-೪). [ಸಂ.]

ವಿರೂಪೆ (ನಾ). ಕೆಟ್ಟರೂಪವುಳ್ಳವಳು ; ಕುರೂಪಿ : ಆತನ ದಾದಿ ವಿನಯಮತಿಯೆಂಬೊಳ್ ಗುಜ್ಜೆ ವಿರಳದಂತೆ ಆದಮಾನುಂ ವಿರೂಪೆ (ವಡ್ಡಾರಾ. ೧೦೬-೨೨).

[ಸಂ. ವಿರೂಪಾ]

ವಿರೇಕ (ನಾ). ೧. ಭೇದಿ ; ವಿರೇಚನ : ತಿಗಡ ಶುಂಠಿ ಶಿವೆ ಬೆಲ್ಲಮೆಂಬ ಮರ್ದುಗಳನಕ್ಕೆ ಪುಂದಿರ್ದ ಕಟ್ಟುವತ್ತಿಗೆಯ ಬಿತ್ತುಗಳನಕ್ಕೆ ತಿಂಗೆ ಮಾಡುಗುಮದಾರ್ಗಮುಧಿಕಂ ವಿರೇಕಮಂ (ಶೋಕೋಪ. ೯-೩೫) ; ಕಕ್ಕೆ : — ಈ ಕುಡಿಯಂ ನಿಂಬೇಹುಳಿಯಲ್ಲಿ ಅರೆದು ಮೂರುಗುಳಿಗೆ ಗಜ್ಜುಗದ ಗಾತ್ರ ಮಾಡಿ ತೆಗೆದುಕೊಳ್ಳಿ ವಿರೇಕಮಕ್ಕುಂ (ವೈದ್ಯವಿ. ೬). ೨. ಭೇದಿಯಾಗುವಂತೆ ಮಾಡುವ ಔಷಧ ; ವಿರೇಚಕ. [ಸಂ.]

ವಿರೇಕಿಸು (ಕ್ರಿ). ಭೇದಿಯಾಗು ; ವಿರೇಚನವಾಗು : ಬರಿಸಾದ ಕೋಷ್ಠಕ್ಕೆರಡು ಗುಳಿಗೆಯ ತುಪ್ಪವೆರಸೀಯಲು . . . ವಿರೇಕಿಪುದು (ಸಾಳ್ವಸಾಂ. ೫).

[ವಿರೇಕ + – ಇಸು]

ವಿರೇಚಕ (ಗು) ೧. ಭೇದಿಯಾಗುವಂತೆ ಮಾಡುವ ; ಭೇದಿ ಮಾಡಿಸುವ : ಏರಂಡಕ್ಕೆ ವಿರೇಚಕಗುಣವಿದೆ (ಶಾಸಗಿ. ೨೧). (ನಾ). ೨. ವಿರೇಕ ; ಭೇದಿ : ಭಗವಂತನಿಗೆ ವಿರೇಚಕವಾಗುವಂಥ ಔಷಧವನ್ನು ಕೊಡಬೇಕೆಂದು ಜೀವಕನು ಕಂಡನು (ಪತ್ತುಮ. ೧೧೮). ೩. ಭೇದಿಯಾಗುವಂತೆ ಮಾಡುವ ಔಷಧ : ಚಿಗುರು ವಿರೇಚಕ. ತೊಗಟೆ ಬಾಯಿಹುಣ್ಣು, ಅಮಶಂಕೆ, ಮೇಹರೋಗಗಳಿಗೆ ಔಷಧ (ಕವಿಕೋ. I. ೪೬೬) ; ಜಾಪಾಳ . . . ಅತಿಶಕ್ತಿಯುತವಾದ ವಿರೇಚಕ (ಹಸುಚಿ. ೬೫೨). ೪. (ಆಲಂ) ಅಂತರಂಗದ ಕೊಳೆಯನ್ನು ಹೊರದೂಡುವ ಔಷಧ, — ಮದ್ದು : ಚಿಂತೆ ಸಂತಾಪಗಳು ಮನಸಿಗೆ ವಿರೇಚಕವೂ ಸಂತಸೋತ್ಸಾಹಗಳೆ ಪಥ್ಯದುಪಚಾರ ಇಂತುಮಿಂತುಂ ನಡೆಯುತಿರುವುದಾತ್ಮಚಿಕಿತ್ಸೆ (ಮಂಜುಳ. ೬೪೫). [ಸಂ.]

ವಿರೇಚನ (ನಾ). ೧. ಭೇದಿ ; ವಿರೇಕ : ವಿರೇಚನಕ್ಕೆ ಯೋಗ್ಯರು . . . ಇವಿಷ್ಟರಲ್ಲಿ ವಿರೇಚನ ಮಾಡಿಸಬಹುದು (ಸಚಿತ್ರ. ೨೫). ೨. ಭೇದಿಯಾಗುವಂತೆ ಮಾಡುವ ಔಷಧ : ಆ ಸಮಯದಲ್ಲಿ ಭಿಕ್ಷುವೊಬ್ಬನು ವಿರೇಚನ ಕುಡಿದಿದ್ದನು (ಬುದ್ಧಪ. ೧೪೬). [ಸಂ.]

ವಿರೇಚನೆ (ನಾ). ೧. = ವಿರೇಚನ ೧ : ಒಂದು ಗುಳಿಗೆಯ ಕೈಎಣ್ಣೆಯಲ್ಲಿ ಮರ್ದಿಸಿ ಕೊಡಲು ವಿರೇಚನೆಯಾಗುವುದು (ವೈದ್ಯವಿ. ೬೪). ೨. [ಕಾವ್ಯಮೀ] ನಾಟಕದರ್ಶನದಿಂದಾಗುವ ಭಾವೋದ್ರೇಕವನ್ನು ಹೊರಹಾಕುವುದು, -ಬಹಿರಂಗಪಡಿಸುವುದು : ಮೊದಲು ಭಯ ಕರುಣೆಗಳ ಪ್ರಚೋದನೆ, ಅನಂತರ ಅವುಗಳ ವಿರೇಚನೆ ಮತ್ತು ಪರಿಶುದ್ಧಿ ಮತ್ತು ಕೊನೆಯಲ್ಲಿ ತತ್ಫಲವಾಗಿ ಜನಿಸುವ ಶಾಂತಿಯೇ ರುದ್ರನಾಟಕದ ಪ್ರಭಾವವೆಂಬುದು ಅರಿಸ್ಟಾಟಲನ ಅಭಿಪ್ರಾಯವೆಂದು ವಿದ್ವಾಂಸರು ತೀರ್ಮಾನಕ್ಕೆ ಬಂದಿದ್ದಾರೆ (ಅಂಕಾ. ೬೮). [ಸಂ. ವಿರೇಚನ]

ವಿರೋಕ (ನಾ) . ೧. ಕಾಂತಿ ; ಹೊಳಪು . ೨. ಕಿರಣ ; ರಶ್ಮಿ : "ಉಸ್ರಃ . . . ವಿರೋಕಃ, ಗೌಃ — ಈ ೩೨ ರಶ್ಮಿಗಳ ಪೆಸರ್" (ಹಲಾಯು. ೮-೩೯). [ಸಂ.]

ವಿರೋಚನ (ನಾ). ೧. ಹೊಳೆಯುವಿಕೆ ; ಪ್ರಕಾಶಿಸುವಿಕೆ. ೨. ಬೆಳಕು ; ಕಾಂತಿ . ೩. ಸೂರ್ಯ ; ರವಿ : ಬಾಚರಸರಂ ಕರೆಸಿ ಬರೆದಿರ್ದ ಲೆಕ್ಕವ ವಿರೋಚನಂ ಪಶ್ಚಿಮಾಂಬುಧಿಯೊಳಿವನಿತಕ್ಕೆ ನೀಂ ಚಮತ್ಕಾರದಿಂ ಕೊಡಿಸುವುದೆನಲ್ಕೆ (ಪ್ರೌಢರಾ. ೧೭ -೬). ೪. ಇಂದು ; ಚಂದ್ರ. ೩, ೪ : ತನ್ನ ಕಂಡ ಶುಭಸ್ವಪ್ನಂಗಳನಱಪೆ ತನ್ಮಹೀವಲ್ಲಭನಿಂತೆಂದಂ ಸಾಮಜದಿಂದಂ ದಾನಿಯನಾ . . . ಮಹಿತವಿರೋಚನರ್ಕಳಿಂ ನುತಸುತನಂ ಎನೆ (ನೇಮಿಪು. ೧-೧೩೪). ೫. ಬೆಂಕಿ ; ಅಗ್ನಿ : " ವಹ್ನಿ ಶಿಖಿ ವಿಭಾವಸು . . . ಅನಲಂ ಧೂಮಕೇತನಂ ಶುಚಿ ವಿರೋಚನನೆನಿಕ್ಕುಂ" (ಮಂಗರಾ. ೧೪-೬).

೬. ಪ್ರಹ್ಲಾದನ ಮಗ ; ಬಲಿಯೆಂಬ ರಾಕ್ಷಸಚಕ್ರವರ್ತಿಯ ತಂದೆ. ೭. ಒಂದು ಬಗೆಯ ಮರ : "ಕುಟನ್ನಟಂ — ವಿರೋಚನ, ಹೆಮ್ಮರ" (ಓಷಧಿ. ೩೭). [ಸಂ.]

ವಿರೋಚನಲೋಚನ (ನಾ). ಅಗ್ನಿಯನ್ನು ಕಣ್ಣಾಗಿ ಉಳ್ಳವನು ; ಶಿವ : ರಜತಾದ್ರಿಮಂದಿರ ವಿರೋಚನಲೋಚನ . . . ಪಿನಾಕಸುಪಾಣಿ ಮಹೇಶ ಪಾಲಿಸಾ (ಹಮ್ಮೀರ. ೧-೨). [ಸಂ.]

ವಿರೋಚನಸುತ (ನಾ). ೧. ಸೂರ್ಯನ ಮಗ ; ಯಮ : ವಿರೋಚನಸುತಹರ . . . ವಿಷಧರ ಪಾಹಿಮಾಂ (ಪ್ರೌಢರಾ. ೨೧-೪೧). ೨. ವಿರೋಚನನೆಂಬ ರಾಕ್ಷಸನ ಮಗ ; ಬಲಿಚಕ್ರವರ್ತಿ. [ಸಂ.]

ವಿರೋಧ (ನಾ). ೧. ತಡೆ ; ಅಡ್ಡಿ ; ನಿರ್ಬಂಧ : ತಾನೆಸವ ವೈಕುಂಠಮಂ ಜಲಂಧರನಿಱಿವುತೀ ನಾಗಪಾಶದಿಂ ಬಿಗಿದೆನ್ನನಿಡಲಾಗಿ ನಾನಾವಿರೋಧದಿಂದಂಬರ ದೊಳಿರ್ದೀಗ ಬರ್ದೆನವಧರಿಸಂದನು (ಏಕಾಶ್ವ. ೨-೧೩-೪). ೨. ಪ್ರತಿಯಾದುದು ; ವಿರುದ್ಧವಾದುದು. ೩. ಹಗೆತನ ; ವೈರ ; ವೈಮನಸ್ಯ : ಮಹಾವಿಷ್ಣುವಿನಲ್ಲಿ ವಿರೋಧ ಮಾಡಿಕೊಂಡರೆ ನಾವು ನಾಶವಾಗುತ್ತೇವೆ (ನೀತಿಚಂ. I, ೭). ೧, ೩ : ವಿರೋಧಂ ಪಂಜರದೊಳ್ ಗಳಿತದಾನತ ಕುಂಜರದೊಳ್ . . . ಅಲ್ಲದಿಲ್ಲವೆಲ್ಲಿಯುಂ (ಚಂದ್ರಪ್ರ. ೩-೯ ವ). ೪. [ಕಾವ್ಯಮೀ] ಅತಿಶಯಾಲಂಕಾರದ ಒಂದು ಪ್ರಭೇದ ; ಒಂದರಲ್ಲಿ ಒಂದು ಹೊಂದದ ವಿರುದ್ಧಪದಾರ್ಥಗಳನ್ನು ಒಂದುಗೂಡಿಸುವ ಮೂಲಕ ಅವುಗಳ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ತಿಳಿಸುವ ಒಂದು ಅಲಂಕಾರ : ಒಂದೊಂದಱೊಳೊಂದದುವಂ ತಂದೊರ್ಬುಳಿಮಾಡಿ ತದ್ವಿಶೇಷಾಂತರಮಂ ಸಂದೇಹಮಿಲ್ಲದಱಿಪುವುದೊಂದ ವಿರೋಧಾಭಿಧಾನಮದುಮಿಂತಕ್ಕುಂ (ಕವಿರಾ. ೩-೧೩೪) ; ಅನ್ಯೋನ್ಯ ವಿರುದ್ಧಪದಾರ್ಥನ್ಯಾಸಮೆ ತಾಂವಿರೋಧಂ (ಕಾವ್ಯಾವ. ೭೨೭). [ಸಂ.]

ವಿರೋಧನ (ನಾ). ೧. ತಡೆಯನ್ನೊಡ್ಡುವಿಕೆ ; ಪ್ರತಿಬಂಧಿಸುವಿಕೆ. ೨. ಅಡ್ಡಿ ; ಪ್ರತಿಭಟನೆ ; ತಡೆ. ೩. ವೈರ ; ಹಗೆತನ. [ಸಂ.]

ವಿರೋಧಪಕ್ಷ (ನಾ). ೧. ಶತ್ರುಪಕ್ಷ ; ವೈರಿವರ್ಗ. ೨. ವಿಧಾನಸಭೆ, ಚುನಾವಣೆ, ಚರ್ಚಾಕೂಟ ಮೊದಲಾದುವುಗಳಲ್ಲಿ ಇರುವ ಪ್ರತಿಪಕ್ಷ ; ಒಂದು ಪಕ್ಷದವರು ಹೇಳಿದ ಅಭಿಪ್ರಾಯವನ್ನು ಖಂಡಿಸುವ ಮತ್ತೊಂದು ಪಕ್ಷ : ವಿರೋಧಪಕ್ಷದವರು ಬಹಳ ಬಿರುಸಾಗಿ ಚರ್ಚಿಸಿದರು (ರೂಢಿ). [ಸಂ.]

ವಿರೋಧಸ್ಖಲಿತ (ನಾ). ದ್ವೇಷದಲ್ಲಿ ಸಿಲುಕಿದವನು : ಎಲೆ ಸುನೀತ ವೃಥಾ ವಿರೋಧಸ್ಖಲಿತನಾದೆ ಮುರಾರಿ ಮಾನ್ಯರ ತಿಲಕನೀತನ ಪೂಚೆ ಯಾಗಕೆ ಕಳಸವಾಯ್ತೆಂದ (ಕುವ್ಯಾಸ. ೮-೪೦). [ಸಂ.]

ವಿರೋಧಾಭಾಸ (ನಾ). = ವಿರುದ್ಧಾಭಾಸ : ವಿರೋಧಾಭಾಸ. ವಿರೋಧವು ವಸ್ತುತಃ ಇಲ್ಲದೆ, ಇರುವಂತೆ ಮಾತ್ರ ತೋರಿದರೆ, ವಿರೋಧಾಭಾಸಾಲಂಕಾರವಾಗುವುದು . . . ಲಕ್ಷ್ಯ : ಕನಕನಗೇಂದ್ರಧರ್ಮಕರನಾಗಿಯುಮುನ್ನತಧರ್ಮಹಂತೃಸಂಜನಿತಪರಾರ್ಥನಾಗಿಯುಮುದಗ್ರಪರಾರ್ಥಹರಂ ಪ್ರದತ್ತಕಾಮನುಮೆನಿಸಿರ್ದು ಕಾಮಮಥನಂ ಪರಮೋಕ್ಷದನಾಗಿಯುಂ ಸನಾತನಪರಮೋಕ್ಷಲುಬ್ಧನೆನಿಸಿರ್ದನಹೀಂದ್ರಭೂಷಣಂ (ಕೃಷ್ಣದಿ. ೨೮೧) ; ಅಲ್ಲಿ ತೋರುವ ವಿರೋಧಾಭಾಸವನ್ನು ಸಮನ್ವಯವಾಗುವಂತೆ ಬಿಡಿಸಿ ಹೇಳಬೇಕಾಗುತ್ತದೆ (ಕರ್ಣಾಅ. ೧೧೯). [ಸಂ.]

ವಿರೋಧಿ (ಗು). ೧. ಪ್ರತಿಭಟಿಸುವ : ವಿನುತವಿರೋಧಿಮಂಡಳಿಕಮೌಳಿವಿಘಟ್ಟಿತ ಪಾದಪೀಠಕಾಂಚನಕಮಳಾಯಮಾನಮಿವು ನಿಮ್ಮಯ ಮೆಲ್ಲಡಿ (ಗದಾಯು. ೪-೧೮). (ನಾ). ೨. ಶತ್ರು ; ಹಗೆ ; ವೈರಿ : ತಾಱವಱುಗೆ ಜಯಂ ಜೊಮ್ಮೆಱುವ ಟೆಂಟಣಿಸುವರಸನರಸನೆ ವಿರಸಂಬೇಱ್ ನಯಮಿರೆ ವಿರೋಧಿಗೆ ಮಾಱುಂಪೊಂ ತನ್ನ ಮೇಲೆ ತಾಂ ಮರಗಡಿವೊಂ (ಶಾಂತಿಪು. ೨೪೧). ೩. ಅರುವತ್ತು ಸಂವತ್ಸರಗಳಲ್ಲಿ ಇಪ್ಪತ್ತಮೂರನೆಯದು : ಮತ್ತಮಾ ವರ್ಷವೇ ಪ್ರಭವ ವಿಭವ . . . ವಿರೋಧಿ ವಿಕೃತಿ ಖರ ನಂದನ . . . ಕ್ರೋಧನ ಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩). [ಸಂ. ವಿರೋಧಿನ್]

ವಿರೋಧಿಕೃತು (ನಾ). ಅರುವತ್ತು ಸಂವತ್ಸರಗಳಲ್ಲಿ ನಲವತ್ತೈದನೆಯದು : ಮತ್ತಮಾ ವರ್ಷವೇ ಪ್ರಭವ ವಿಭವ . . . ಸಾಧಾರಣ ವಿರೋಧಿಕೃತು . . . ಕ್ರೋಧನ ಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩). [ಸಂ. ವಿರೋಧಿಕೃತ್]

ವಿರೋಧಿಷಡ್ವರ್ಗ (ನಾ). ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಅಂತರಂಗದ ಆರು ಶತ್ರುವರ್ಗ ; ಅರಿಷಡ್ವರ್ಗ : ವಿರೋಧಿಷಡ್ವರ್ಗದ ವಿಕಾರವ್ಯಾಧಿಯಲಿ ಬೆಂಡಾಗಿ ಭವಪಾಶದಲಿ ಬಿಗಿವಡೆದು ಪಾದರಚನೆಯ ಬಲೆಗೆ ಸಿಲುಕಿ ವಿರೋಧಗೊಂಬೀ ಮೋಹವಿದ್ಯಾಸಾಧಕರು ನೀವ್ ಪಶುಗಳು (ಕುವ್ಯಾಕ. ೬-೨೯). [ಸಂ.]

ವಿರೋಧಿಸು (ಕ್ರಿ). ೧. ಅಡ್ಡಿಮಾಡು ; ಪ್ರತಿಭಟಿಸು ; ತಡೆಗಟ್ಟು : ಆಕೆಯ ಇಷ್ಟವನ್ನು ವಿರೋಧಿಸುವುದು ಶ್ರೀಧರನಿಗೆ ಆಗದ ಮಾತು (ವಾಸ್ತವ್ಯ. ೩೦); ಅವರ ಈ ವರ್ತನೆಯನ್ನು ಅಪ್ಪಾಜಿಯವರು ವಿರೋಧಿಸಿದ್ದರು (ಚಂಗಾಳ್ವ. ೨೮). ೨. ದ್ವೇಷಿಸು ; ವೈರಭಾವವನ್ನು ತಾಳು ; ಹಗೆತನವನ್ನು ಮಾಡು : ಆರಾಧನೆಯ ಮಾಡಿದಡೆ ಅಮೃತದ ಬೆಳಸು ವಿರೋಧಿಸಿದಡೆ ವಿಷದ ಬೆಳಸು (ಬಸವ. ೪೨೧); ಕಾಲಗೆ ಕರುಣವಿಲ್ಲ ವೃಥಾ ವಿರೋಧಿಸಿ ಸಾಯಬೇಡೆಂದ (ತೊರಾ. ೩-೬-೫೨) ; ನಿಮ್ಮೈವರೊಳ್ ತಾ ತಳ್ತಿರದೆ ವಿರೋಧಿಸಿದನೆಮ್ಮಯ್ಯನಂ ತಾತನಪರಾಧಮಂ ಪರಿಹರಿಸದಿರ್ದೊಡಾನಿರ್ದು ಫಲವೇನು (ಚೈಮುಪಾ. ೨-೫೯). [ವಿರೋಧ + – ಇಸ್ಸು$_3$]

ವಿರೋಧೋಪಮಿತ (ನಾ). [ಕಾವ್ಯಮೀ] ಉಪಮಾಲಂಕಾರದ ಒಂದು ಪ್ರಭೇದ ; ಪರಸ್ಪರವಿರೋಧಗುಣಗಳನ್ನುಳ್ಳವನ್ನು ಹೋಲಿಸುವುದು ; ವಿರುದ್ಧಕರವಾದ ಹೋಲಿಕೆ : ಶರದುದಿತ ಶಶಿಕರನುಂ ಸರಸಿರುಹಮುಮಿತ್ತದೀಯವದನಮುಮಿನಿತುಂ ದೊರಕೊಳಿಸುವೊಡೆ ಪರಸ್ಪರವಿರೋಧಿಗಳ್ ನಿರುತಮೆನೆ ವಿರೋಧೋಪಮಿತಂ (ಕವಿರಾ. ೩-೭೫). [ಸಂ.]

ವಿರ್ತಿ 'ವ್ರಿತ್ತಿ' ನೋ.

ವಿಲ್ 'ಬಿಲ್$_2$' ನೋ.

ವಿಲಂಘನ (ನಾ). ಹಾರುವಿಕೆ ; ನೆಗೆತ ; ಜಿಗಿತ : ಬವರಿ ಮತ್ಸ್ಯೋದ್ಗತಿವಿಲಂಘನ ವಿವಳಿತಾಂಗವರಾಹಮತಸಂಪ್ಲವನಪಾರಿಷ್ಯವಗದಾಪರಿರಂಭವಿಕ್ಷೇಪ . . . ಎಂದೀ ವಿವರದಲಿ ಕಾದಿದರು ಕೌತುಕವೆನಲು ಸುರನಿಕರ (ಕುವ್ಯಾಗ. ೬-೨೫). [ಸಂ.]

ವಿಲಂಘಿಸು (ಕ್ರಿ). ೧. ಹಾರು ; ನೆಗೆ ; ಜಿಗಿ : ಪಡಿನೆಳಲಂ ಮೃಗೇಂದ್ರನುಱ್ ಚಂದ್ರಶಿಲಾತಳದಲ್ಲಿ ಕಂಡು . . . ವಿಲಂಘಿಸಿ ಪಾಯ್ದು ಪೊಯ್ದು ತಾಂ ಮಡಿದುದು (ರಾಜಶೇ. ೫-೭೭). ೨. ಮೀರು ; ಉಲ್ಲಂಘಿಸು ; ಅತಿಕ್ರಮಿಸು : ಜಿನಾಧಿಪನಾಜ್ಞೆಯಂ ವಿಲಂಘಿಸಿ[ಪಾಠಾಂ. ಜಿನೇಶ್ವರನಾಜ್ಞೆ ಮೀಱಿ ಲಂಘಿಸಿ]ದೊಡಮೀಗಳುಂ ಜಗಮೆ ದಂಡಿಸುತಿರ್ದಪುದೆಂದೊಡೆ (ಸಮಯ. ೧-೮೩); ಎನ್ನಾಜ್ಞೆಯಂ ವಿಲಂಘಿಸಿ ನಡೆದು ತಿರುವತ್ತಿಯೂರಿನೊಳು ತಲೆವಾಗಿ ಬಂದನು (ಸೊಂದಪು. ೧೫೯-೧೬). [ವಿಲಂಘನ + – ಇಸ್ಸು$_3$]

ವಿಲಂಬ, ವಿಳಂಬ (ನಾ). ೧. ಜೋಲುವುದು ; ನೇತಾಡುವುದು . ೨. ತಡ ; ಸಾವಕಾಶ ; ನಿಧಾನ : 'ವಿಲಂಬಿಸು' ಪರಾ. ೩. [ಸಂಗೀತ] ದ್ರುತ, ಮಧ್ಯ ಮತ್ತು ವಿಲಂಬ ಎಂಬ ಮೂರುವಿಧವಾದ ಲಯಭೇದಗಳಲ್ಲಿ ಒಂದು ; ಸಾವಕಾಶಗತಿಯಿಂದ ಕೂಡಿದ ಲಯ : ಬುದ್ಧಿವಂತರಾದ ಕೆಲವರು ಗೀತವನ್ನು ವಿಲಂಬವೂ ದ್ರುತವೂ ಅಲ್ಲದ ಮಧ್ಯಕಾಲದಲ್ಲಿ ನಡೆಯಿಸಬೇಕೆನ್ನುವರು (ಗಾನಶ. ೭೬). ವಿಳಂಬ : ೨. ಪತಿಸೇವೆಯೊಳಂತು ಪಸಿದ ಪಾರ್ವನ ಮಱೆದತಿವಿಳಂಬವನಾಚರಿಸೆ . . . ಖತಿಗೊಂಡು ಮುನಿ ಗಳಪಿದನು (ಹರಿಪು. ೨-೩೯). ೩. ಲಯದಲ್ಲಿ ದ್ರುತ (ಹೆಚ್ಚಿನ ವೇಗ) ಮಧ್ಯ (ಹೆಚ್ಚೂ ಅಲ್ಲದ, ನಿಧಾನವೂ ಅಲ್ಲದ) ಮತ್ತು ವಿಳಂಬ (ನಿಧಾನ) ಎಂದು ಮೂರು ವಿಧ (ಸಂಗೀಚಂ. ೫೭). ೪. ಆಶ್ರಯ ; ಅವಲಂಬನ : ಧವಳಚ್ಛತ್ರದ ತಣ್ಪು ಭೂಮಿಗಮರ್ದ್ದಿರ್ಪ್ಪನ್ತಿರ್ಬಿನಂ ಕ್ಷತ್ರಧರ್ಮ್ಮವಿಳಂಬಂ ಪೊಗಳ್ವಂಗಳುಂಬಮೆನಿಸಿತ್ತಾ ವಿಷ್ಣುಭೂಪಾಳನೊಳ್ (ಎಕ. VI (R), ಹಾಸನ. ೧೬೭-೧೮ ; 1122). [ಸಂ.]

ವಿಲಂಬನ (ನಾ). ಹೊಯ್ದಾಟ : ಈ ಕುಲವೃದ್ಧಮಂತ್ರಿಯ ಮತಂ ನೃಪನೀತಿಯೊಳೊಂದಿ ನಿಂದುದವ್ಯಾಕುಲಮಾ ಕುಮಾರನ ಮತಂ ಚಲಮಂ ಪುದಿದಿರ್ದುದಿಂತಿವೇಕ್ಕಕವಿರುದ್ಧಮೆಂದುಭಯಪಕ್ಷವಿಲಂಬನದಿಂ ವಿಲೋಲಡೋಲಾಕುಲವೃತ್ತಿಯಾದುದಪರಾಜಿತ ರಾಜವಿರಾಜಮಾನಸಂ (ಶಾಂತಿಪು. ೨-೬೩). [ಸಂ.]

ವಿಲಂಬಿ, ವಿಳಂಬಿ (ಗು). ೧. ನೇತಾಡುವ ; ಜೋತುಬಿದ್ದಿರುವ. (ನಾ). ೨. ಅರುವತ್ತು ಸಂವತ್ಸರಗಳಲ್ಲಿ ಮೂವತ್ತೆರಡನೆಯದು. ವಿಳಂಬಿ :

೨. ಮತ್ತಮಾ ವರ್ಷವೇ ಪ್ರಭವ ವಿಭವ . . . ಹೇವಿಳಂಬಿ ವಿಳಂಬಿ ವಿಕಾರಿ . . . ಕ್ರೋಧನ ಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬). [ಸಂ. ವಿಲಂಬಿನ್]

ವಿಲಂಬಿತ, ವಿಳಂಬಿತ (ಗು). ೧. ನೇತುಬಿದ್ದ ; ಜೋಲಾಡುವ. ೨. ಮಂದವಾದ ; ನಿಧಾನಗತಿಯ ; ಸಾವಕಾಶವಾದ : 'ದ್ರುತವಿಲಂಬಿತ' ಪರಾ. ೩. ಅವಲಂಬಿತವಾದ ; ಆಶ್ರಿತವಾದ. (ನಾ). ೪. ಸಾವಕಾಶ ; ತಡ ; ನಿಧಾನ : ವರ್ಣಗಳ ಉಚ್ಚಾರಣೆಯಲ್ಲಿ ಬರಬಹುದಾದ ದ್ರುತ, ವಿಲಂಬಿತ ಮುಂತಾದ ವಕ್ತೃವ್ಯಾಪಾರವನ್ನು "ಧ್ವನಿ"ಯೆನ್ನಲಾಗಿದೆ (ಧ್ವನ್ಯಾಲೋ. ೬೯ ಅಡಿಟಿ). ೫. ಸಾವಕಾಶ ಗತಿ ; ಮಂದಗಮನ : ರಾಜಮಾರ್ಗದೊಳ್ ನಡೆಯೆ ಹಯಂ ವಿಲಂ[ಪಾಠಾಂ. ೪೦] ಬಿತದೆ (ಪಂಡಾಮಾ. ೪-೯). **ವಿಳಂಬಿತ** : ೪. ಸಮನಿಸ ವಿಳಂಬಿತಂ ಮಾರ್ಗಮನುಪ ಜವದಿಂ ಮಹೀಭುಜಂ ತೋಟ ತುರಂಗಮತಿಳಕಂ ನೋಟ್ಪರ ಹೃದಯಮನೊಳಪೊಕ್ಕತ್ತು ನಯನಮಾರ್ಗದಿನಾಗಳ್ (ಮಲ್ಲಿಪು. ೯-೩೭). ೬. ಗದಾಯುದ್ಧದ ಒಂದು ಪಟ್ಟು, ವರಸೆ : ವಿಳಂಬಿತವಾಕುಂಚಿತವಾಸ್ಫೋಟಿತವಾಕ್ಷಿಪ್ತವುದ್ಧಾವಿತಂ ದಿಗ್ಭ್ರಾಮಿತಮುಚಿತವಿರುದ್ಧಮಚಿಂತ್ಯಮುಮೆಂಬೆಂಟುಂ ತೆಱದ ಪ್ರಹರಣಂಗಳೊಳಂ (ಗದಾಯು. ೮-೧ ವ). [ಸಂ.]

ವಿಲಂಬಿತಕಾಲ (ನಾ). = ವಿಲಂಬ ೩ : ಕೃಷ್ಣಯ್ಯರ್ ಅವರು . . . ಸ್ವಕಾಭ್ಯಾಸವನ್ನು ನಾಲ್ಕು ಸ್ಥಾಯಿಗಳಲ್ಲಿಯೂ ದ್ರುತಕಾಲದಲ್ಲಿಯೂ ವಿಲಂಬಿತಕಾಲದಲ್ಲಿಯೂ (ಮಂದ ಮತ್ತು ತೀವ್ರಗತಿಗಳಲ್ಲಿ) ನಡೆಸುತ್ತಿದ್ದರು (ಸಂಗೀತ. ೯೬). [ಸಂ.]

ವಿಲಂಬಿಸು, ವಿಳಂಬಿಸು (ಕ್ರಿ). ೧. ತಡಮಾಡು ; ಸಾವಕಾಶ ಮಾಡು : ಪಲುಂಬಿ ಮಜವೊಕ್ಕೆನಾಂ ನಿನಗಧೀನಮಿ ಜೀವಿತಂ ವಿಲಂಬಿಸದೆ ರಕ್ಷಿಸೆನ್ನಂ (ಕಾದಂಬಾ. ೫೬೮). ೨. ಇಳಿ ; ಜಾರು ; ಸರಿ : ಆನಂತರಂ ರವಿಬಿಂಬಮಪರಾಂಭೋಧಿಗೆ ವಿಲಂಬಿಸುವುದುಂ (ಕಾದಂಪೂ. ೧೬೭). **ವಿಳಂಬಿಸು** : ೧. ಎನ್ನ ತೋಳ ತೀನಂ ಕಳಿವಂ ವಿಳಂಬಿಪೊಡನ್ನ ನೆಗಟ್ಟಿಗೆ ಬನ್ನಮಾಗದೇ (ಪಂಡಾಮಾ. ೧೦-೬೩). ೩. ತಡವಾಗು ; ಸಾವಕಾಶವಾಗು : ಎನ್ನಯ ಸಮಾಹಿತಮಿಂತು ವಿಳಂಬಿಸಿರ್ಕುಮೆ (ಕಾದಂಬಾ. ೫೬೩). ೪. ವಿಸ್ತಾರಗೊಳಿಸು ; ಅಗಲಗೊಳಿಸು ; ವಿಸ್ತರಿಸು : ಅವುಗಳನ್ನು ಜ್ಯೋತಿಷವಿಧಾನಸಂಗ್ರಹವಾದೀ ಆಧ್ಯಾಯದಲ್ಲಿ ವಿಳಂಬಿಸಲಾಗುವುದಿಲ್ಲ (ಜ್ಯೋಕಿರ್ವಿ. ೨೭೦).

[ವಿಲಂಬ + – ಇಸು]

ವಿಲಂಭ (ನಾ). ೧. ಕೊಡುವಿಕೆ ; ದಾನಮಾಡುವುದು. ೨. ಉದಾರತೆ ; ಔದಾರ್ಯ. [ಸಂ.]

ವಿಲಕ್ಷ (ಗು). ೧. ನಿಶ್ಚಿತವಾದ ಗುರಿ ಅಥವಾ ಉದ್ದೇಶವಿಲ್ಲದಿರುವ. ೨. ಅಸಾಧಾರಣವಾದ ; ವಿಶೇಷವಾದ. ೩. ಆಶ್ಚರ್ಯಗೊಂಡ ; ಅಚ್ಚರಿಗೊಂಡ. ೪. ಲಜ್ಜೆಗೊಂಡ ; ನಾಚಿಕೊಂಡ. (ನಾ). ೫. ಗುರಿಯಿಲ್ಲದಿರುವಿಕೆ ; ಅನಿಶ್ಚಿತತೆ : ಲಕ್ಷಭೇದವನಱಿದು ನಡೆದು ವಿಲಕ್ಷವನು ಮುರಿದಾತ್ಮರಕ್ಷೆಯನೀಕ್ಷಿಸುವುದನುನಯವಲ್ಕೆ (ಕುವಾಭಾ. ೩-೩೧). ೬. ಅಸಾಧಾರಣವಾದುದು ; ವೈಶಿಷ್ಟ್ಯಪೂರ್ಣವಾದುದು : ಲಕ್ಷವ ಬಿಟ್ಟು ನಿರ್ಲಕ್ಷವ ಕಂಡು ನಿಶ್ಚಯವಾಯತ್ತೆಂಬುದಕ್ಕೆ ಸೂಚನೆ ನೀಕಳಂಕ ಮಲ್ಲಿಕಾರ್ಜುನಲಿಂಗವು ನಿರ್ಲಕ್ಷಿತನಾದ ವಿಲಕ್ಷ (ಮೋಮಾ. ೧೪೯-೭೧೧). [ಸಂ.]

ವಿಲಕ್ಷಣ (ಗು). ೧. ನಿಶ್ಚಿತವಾದ ಗುರುತು ಅಥವಾ ಲಕ್ಷಣವಿಲ್ಲದ. ೨. ಬೇರೆಯ ; ಅನ್ಯ. ೩. ಅಸಾಧಾರಣವಾದ ; ವಿಶಿಷ್ಟವಾದ ; ಅಸಾಮಾನ್ಯವಾದ : ಚೇತನಾಚೇತನವಿಲಕ್ಷಣನೂತನಪದಾರ್ಥಗಳೊಳಗೆ ಬಲುನೂತನನತಿಸುಂದರಕೆ ಸುಂದರ ರಸಕೆ ರಸರೂಪ (ಹಸಾರ. ೨-೨೩) ; ಅವರಲ್ಲಿ ವಿಲಕ್ಷಣ ಪ್ರಗತಿಯಾಗಿತ್ತು (ಸಮಚೇ. ೯೭). (ನಾ). ೪. ಕಾರಣವನ್ನು ಹೊಂದಿರದ ಸ್ಥಿತಿ. ೫. ವಿಭಿನ್ನವಾದುದು ; ಬೇರೆಯ ತೆರನಾದುದು : ಅವಳ ನೋಟವೂ ಸ್ವಲ್ಪ ವಿಲಕ್ಷಣವಾಗಿಯೇ ಕಂಡಿತು (ಪಂಮಂತ. ೬೫೩). ೬. ಅಸಾಧಾರಣವಾದುದು ; ವಿಶಿಷ್ಟವಾದುದು : ಪರಮಾತ್ಮನ ಸಂಕಲ್ಪ ಅತ್ಯದ್ಭುತವೂ ವಿಲಕ್ಷಣವೂ ಹಾಗೆಯೇ ಅನಂತವೂ ಅಪಾರವೂ ಆದುದು (ಶಕ್ತಿವಿ. ೫೨); ಭಾರತದಲ್ಲಿ ಹಿಂದೆಂದೂ ತಲೆದೋರದ ವಿಲಕ್ಷಣವಾದ ರಾಷ್ಟ್ರೀಯಪ್ರಜ್ಞೆಯು ಒಮ್ಮೆಲೆ ಪ್ರಕಟವಾಯಿತು (ಪ್ರಬುಂಧ. ೫೬). [ಸಂ.]

ವಿಲಕ್ಷಿತ (ಗು). ಜ್ಞಾತವಾದ ; ತಿಳಿದ : ಸಮಾಧಿಗುಪ್ತಮುನೀಂದ್ರಪಾದಪದ್ಮೋಪಕಂಠದೊಳ್ ಪರಮದೀಕ್ಷಾವಿಲಕ್ಷಿತಾಕ್ಷೂಣಪ್ರಮೋದನಾಗಿ (ಶಾಂತಿಪು. ೯-೮೩ ವ). [ಸಂ.]

ವಿಲಕ್ಷ್ಯ (ಗು). ೧. ಅರಿತ ; ಗ್ರಹಿಸಿದ. (ನಾ). ೨. ಅಚ್ಚರಿ ; ಸೋಜಿಗ : ಬಳ್ಕಿಮುಂಚಿನಸಂ ನಿಶ್ಚಲಮಾಗಿ ನಿಲ್ಲುಮೆ ವಿಲಕ್ಷ್ಯಂ ತಾನಿದೆಂಬನ್ನ ಮೋಹನಮಂ ಪುಟ್ಟಿಸಿ ತನ್ನ ದಿಟ್ಟವಳಗಿಂ ನುಣ್ಪಿಟ್ಟು ಕೊಟ್ಟಳ್ . . . ಹಾರಮಂ (ಮಲ್ಲಿಪು. ೮-೧೧೮). ೩. ಅಚ್ಚರಿಗೊಂಡವನು : ಶಿಕ್ಷೆ ರಕ್ಷೆಗೆ ಬಾಣವೊಂದೇ ಲಕ್ಷ್ಯವಿದು ನೀನಱಿಯದುದಕೆ ವಿಲಕ್ಷ್ಯನಾದನು ನಾನೆನುತ ಮುನಿ ನುಡಿದನರ್ಜುನಗೆ (ಕುವಾಭಾ. ೧೩-೧೦). [ಸಂ.]

ವಿಲಗ (ನಾ). ೧. ತಾಪತ್ರಯ ; ಜಂಜಾಟ ; ಕೋಟಲೆ : ಹುಟ್ಟುಸಾವಿನ ವಿಲಗದಲಿ ಕಂಗಟ್ಟು ನಾನಾಯೋನಿಯಲಿ ತಟಗುಟ್ಟಿ ಬಳಲುವುದುಚಿತವೇ (ಕುವಾಭಾ. ೪-೧೨); ಗೆಲಿದನೆಂದನಲರಿದು ಮಾಯೆಯ ವಿಲಗವನು (ನಿಭಾಗ. ೧೦-೫೨-೩೭). ೨. ವಿರೋಧ ; ವೈರ ; ದ್ವೇಷ : ಹರಶರಣರೊಳಗೆ ವಿಲಗಂ ಸಲ್ಲದು (ಸೌಂದಪು. ೪-೭೮). ೩. ಪ್ರತಿರೋಧ ; ತಡೆ : ಎಲೆ ಮರುಳೆ ಮುಂದಿದ್ದ ನಮ್ಮಯ ವಿಲಗವನು ಪರಿಹರಿಸಿ ಸ್ಕಂದವನಳವುಪಾಯವ ಮಾಡು (ಕುವಾದ್ರೋ. ೯-೪೫). ೪. ಆಟೋಪ : ಮುನ್ನ ಹೀನತಾರಕನಣುಗರುಂ ತ್ರಿಪುರನಾಯಕರು ವಿಲಗದೊಳು ತ್ರೈಲೋಕ್ಯಮಂ ದಾಳಿಯಾಡಲು (ಪ್ರಭುಪ್ರ. ೬-೩೮). ೫. ಅಪವಾದ ; ದೂರು ; ನಿಂದೆ : ನಿಂದಗೊಳಗಾಗಿ ಬದುಕುವನಲ್ಲ ತಿದ್ದಿ ತೀರದ ವಿಲಗಕಂಜುವಂ ಸೀತೆಯಂ ಬಿಟ್ಟಲ್ಲದಿರೆನೆಂದನು (ಜೈಮಿಭಾ. ೧೮-೪೯) ; ಪಾವನೆಯೆಂದೇ ಒಪ್ಪುಗೊಂಡನಡಱೀನೀ ವಿಲಗವೊಂದಕ್ಕೆ ತಲೆಮಟ್ಟೆಂ (ರಾಮಾಪ್ರ. ೨೪-೨೮). ೬. ಸಂರಕ್ಷಣೆ ; ಆಶ್ರಯ : 'ವಿಲಗಿಗ' ಪರಾ. ೭. ಹೊಂದಿಕೆಯಾಗದಿರುವಿಕೆ ; ವೈಪರೀತ್ಯ ; ವಿಸಂಗತಿ : (೬).

[← ಮರಾ. ವಿಲಗ]

ವಿಲಗಂಡಯ್ಯ (ನಾ). ಒಬ್ಬಾತನ ಹೆಸರು : ಮರಂಗಳ್ ಒಡೆಯ ಕಣ್ಣಮ್ಮಯ್ಯನಾ ಮಗನ್ ವಿಲಗಣ್ಣಯ್ಯ (ಎಕ್ಷ. X. ಚಾಂಂಗ್. ೬೪-೬; ಸು. ೩೦೦). [? + ಅಯ್ಯ]

ವಿಲಗಿಗ (ನಾ). ಆಶ್ರಯದಾತ ; ಸಂರಕ್ಷಕ : ಬಗೆಯಲ್ಕೆವರ ಜೀವನದ ವಿಲಗಿಗನು ನೀನೆಂದರಸ ಕರುಣಾಳುಗಳ ದೇವನ ಬೇಡಿಕೊಂಡನು (ಕುವಾದ್ರೋ. ೯-೩೨).

[ವಿಲಗ + – ಇಗ]

ವಿಲಗ್ನ (ಗು). ೧. ಕಟ್ಟಿದ ; ಬಿಗಿದ. ೨. ಸೇರಿಕೊಂಡ ; ಕೂಡಿದ ; ಅಳವಟ್ಟ : ಅಗ್ನಿಯಂ [illegible] ನೋಡುವೆನೆಂದು ನಿಜಕರವಿಲಗ್ನಚಾಪವನಿಳುಹಿ (ಜೈಮಿಭಾ. ೮-೪೧). (ನಾ). ೩. ಟೊಂಕ ; ಸೊಂಟ. [ಸಂ.]

ವಿಲಜ್ಜ (ನಾ). ಲಜ್ಜೆಯಿಲ್ಲದವನು ; ನಾಚಿಕೆಗೇಡಿ : ವನಿತಾಪುತ್ರರತಂ ವಿಲಜ್ಜನಲಸಂ ಧರ್ಮಧ್ವಜಂ . . . ಮೃಗಪ್ರೋದ್ಧವಂ (ಜಾತಕ. ೧೭-೧೧). [ಸಂ.]

ವಿಲಜ್ಜಿತ (ನಾ). = ವಿಲಜ್ಜ : "ಕ್ಷೀಣಂ ಜೀನಂ ಜೀರ್ಣಾಂ . . . ಹ್ರೀತಂ ವಿಲಜ್ಜಿತಂ ತಾನಕ್ಕುಂ" (ಪಪ್ರಕೋ. ೧೦೫-೪೩). [ಸಂ.]

ವಿಲಪನ (ನಾ). ೧. ಮಾತನಾಡುವುದು. ೨. ವ್ಯರ್ಥವಾದ ಮಾತು ; ಹರಟೆ. ೩. ದುಃಖ ; ರೋದನ ; ಪ್ರಲಾಪ. ೪. [ಜೈನ] ಆರ್ತಧ್ಯಾನದ ಒಂದು ಭೇದ : ಅವಜೋಳ್ ಆರ್ತಧ್ಯಾನಂ ಬಾಹ್ಯಾಧ್ಯಾತ್ಮಿಕಭೇದದಿಂ ದ್ವಿಪ್ರಕಾರಮಕ್ಕುಂ ಅಲ್ಲಿ ಪರಾನುಮೇಯಮಪ್ಪ ಬಾಹ್ಯವಿಲಪನ ಪರಿದೇವನ ತಾ[illegible]ಭವ ವಿಸ್ಮಯ ವಿಷಯಸಂಗಾವಿ ಚಿಹ್ನಮಕ್ಕುಂ (ಅಜಿಪು. ೮-೨೮ ವ). [ಸಂ.]

ವಿಲಪಿಸು (ಕ್ರಿ). ದುಃಖಿಸು ; ಪ್ರಲಾಪಿಸು : ಹಿತರು ಪರಿಚಿತರನುಜರಗ್ರಜರತುಳ ರಣರಂಗದಲಿ ಮಡಿದರೆನುತ್ತ . . . ವಿಧಿಯ ಬೈಯುತ ವಿಲಪಿಸಿದರಂದು (ಕಿಷ್ಕಿ. ೨ - ೧೯) ; ಸೂರ್ಯನು ನಮ್ಮ ಘನತೆಯನ್ನು ಲೂಟಿ ಮಾಡಿದ ಎಂದು ವಿಲಪಿಸುವಂತೆ ಮರಬಳ್ಳಿಗಳು ಜೋಲುಮುಖ ಹಾಕಿದ್ದುವು (ಮಸಕೂ. ೨೨).

[ವಿಲಪನ + – ಇಸು]

ವಿಲಯ, ವಿಳಯ (ನಾ). ೧. (ಪ್ರಪಂಚದ) ಕೊನೆ ; ನಾಶ ; ಲಯ ; ಪ್ರಳಯ : "ವಿಲಯಂ ನಾಶ ಯುಗಾಂತದೊಳ್" (ಪಪ್ರಕೋ. ೧೨೩-೩೪) ; ಘುಡುಘುಡಿಸಿ ಸತ್ಯೇಂದ್ರ ಚೋಳನ ಮಹಾಬಲಂ ಕಡೆಯ ಕಾಲದ ಕಿಚ್ಚಿನಂತೆ . . . ವಿಲಯದೊಳು ಧರೆಯ ಮೊಗೆದ ಕಡಲಂತೆ . . . ದಿಗ್ಬಲಿಯ ಕೊಡುತಿರ್ದುದರಿಸೇನೆಯ (ಭಾವಚಂ. ೫-೨೦).

೨. ಲೀನಗೊಳಿಸುವುದು ; ವಿಲೀನತೆ : ಪತ್ನಿಯು ತನ್ನ ವ್ಯಕ್ತಿತ್ವವನ್ನು ಪತಿಯ ವ್ಯಕ್ತಿತ್ವದಲ್ಲಿ ವಿಲಯ ಮಾಡಿದರೆ ಪತಿಯು ವಿಲಾಸಿಯೂ ಸುಖಲೋಲುಪನೂ ಆಗುವನು (ಪ್ರಬುದ್ಧ. ೧೯೫). ವಿಳಯ : ೧. ಅನಿತುಮನೊರ್ಮೊದಲೆ ವಿಳಯದೊಳ್ ನೆರವಿಸುಗುಂ (ಯಶೋಚ. ೧-೩೫). [ಸಂ.]

ವಿಲಯಕಾಲ, ವಿಳಯಕಾಲ, ವಿಳಯಕಾಳ (ನಾ). ವಿನಾಶದ ಸಮಯ ; ಪ್ರಳಯಕಾಲ : ವಿಲಯಕಾಲದ ಗಾಳಿಯಿಂದಲು ಸ್ವಲ್ಪವಾದರು ಸಗ್ಗದ . . . ಬೇರೆ ರೂಪದ ರವಿಯ ದೀವಿಗೆಯೆಮಗೆ ಸುಖವನು ತೋರಲಿ (ಧ್ವನ್ಯಾಲೋ. ೪೫). ವಿಳಯಕಾಲ : ಮಿಕ್ಕಂ ವಿಷವಹ್ನಿಯಿಂ ವಿಳಯಕಾಲಜ್ವಾಲೆಯಂ ಭೋಗರತ್ನದ ಚೆಲ್ವಿಂ ದ್ಯುತಿಮಾಲಿಯಂ (ಜಗವಿ. ೩-೮೪). ವಿಳಯಕಾಳ : ಶರಣಾಗತಜಳನಿಧಿಯಂ ಪರಸೇನೆಗೆ ವಿಳಯಕಾಳಜಳನಿಧಿಯಂ . . . ನವನಿಧಿಯ ಕರೆದಂ (ಸೌಂದ. XX. ೪೯-೫೪ ; 1076 ?). [ಸಂ.]

ವಿಲಯಕೃತಾಂತ (ನಾ). ಪ್ರಳಯಕಾಲದ ಯಮ : ಎಲೆಲೆ ವಿಲಯಕೃತಾಂತನೋ ನಮ್ಮಳವು ಕೊಳ್ಳದು ಬೆಂಗೊಡಲಿ ಮುಂಕೊಳಿಸದಿರಿ (ಕುವ್ಯಾಭೀ. ೫-೧೦). [ಸಂ.]

ವಿಲಯಪವನ (ನಾ). ಪ್ರಳಯಕಾಲದ ಗಾಳಿ : ಹರಿಯ ಚಕ್ರ ವರೂಥಚಕ್ರ ದೊಳುರವಣಿಪ ತೇಜಿಗಳ ಕಡುಹಿನ ಖುರದ ಹೊಯ್ಲಲಿ ವಿಲಯಪವನನ ಗರಿಯಗಾಳಿಯಲಿ . . . ಪಲ್ಲಟಿಸೆ ಸಂಗರದೊಳಗೆ ಸೈವರಿದು ಸದೆದನು ಸಕಲಸೈನಿಕರ (ಕುವ್ಯಾದ್ರೋ. ೫-೨). [ಸಂ.]

ವಿಲಯರುದ್ರ (ನಾ). ಪ್ರಳಯಕಾಲದ ಶಿವ : ವೈಂಭಟಕುಲವಿಲಯರುದ್ರ ನುದಾರತೇಜೋಭದ್ರನಾ ಭಾಗೀರಥೀಸುತ ಧರಿಸಿದನು ಕುರುಸೇನೆಯೊಡೆತನವ (ಕುವ್ಯಾಭೀ. ೧ ಸೂಚನ) ; ವಿಲಯರುದ್ರನ ಪಣೆಯ ಕಣ್ಗೆಚ್ಚದೋ ಭಾವಿಸುವೊಡರಿ ದೆಂದೊಲಾದುದು ಧನಂಜಯನ ಪಾವಕಾಸ್ತ್ರಂ (ಜೈಮಿಭಾ. ೧೩-೧೧೧). [ಸಂ.]

ವಿಲಯಾಂಬುದ (ನಾ). ಪ್ರಳಯಕಾಲದ ಮೋಡ,– ಮೇಘ : ವಿಲಯಾಂಬುದದಿಂ ಪೊಱಮಟ್ಟು ಸಿಡಿಲ ಮಸಕಮನುಱೆ ಸೆಱೆವಿಡಿದತ್ತು ಚಂದ್ರಹಾಸಕ್ಕಪಾಣಂ (ಪಂರಾಮಾ. ೧೨-೭೨). [ಸಂ.]

ವಿಲಯಾಗ್ನಿ (ನಾ). ಪ್ರಳಯಕಾಲದ ಬೆಂಕಿ ; ಪ್ರಳಯಾಗ್ನಿ : ಬಂದುದ್ದಂಡ ಪ್ರಚಂಡಕಂಠೀರವಂ ಗೆಂಟನೊಳ್ಕಿಲಯಾಗ್ನಿ ಮೈವೆತ್ತುದೆಂಬಗುರ್ವನೊಳಕೊಂಡು (ರಾಜಶೇ. ೫-೧೧೫ ವ). [ಸಂ.]

ವಿಲಯಾನಲ, ವಿಳಯಾನಳ (ನಾ). = ವಿಲಯಾಗ್ನಿ : ಬಲದೇವನಖಿಳರಿಪುಕುಲ ವಿಲಯಾನಲನಾತ್ಮಕುಲಸಮುಜ್ವಲ ಗಗನಸ್ಥಲ ಏರಕರಂ . . . ಎನಿಸಿ ನೆಗಟ್ಟಿನಖಿಲಾವನಿಯೊಳ್ (ಶಾಂತಿಪು. ೨-೧೦) ; ಲಯಸಮಯಂ ಜಗಕ್ಕೆ ಪೆಜತಾವುದೊ ರಾವಣನುಗ್ರಕೋಪ ವಹ್ನಿಯೆ ವಿಲಯಾನಲಂ (ಪಂರಾಮಾ. ೧೪-೧೬೦). ವಿಳಯಾನಳ : ವಿಳಯಾನಳವಿಳಸನ ವಿಸ್ಫುಲಿಂಗಸಂಘಾತದಿಂ ತಗುಳ್ದಡೆ (ಪಂಪಭಾ. ೧೨-೪೫). [ಸಂ.]

ವಿಲಯಾನಿಲ, ವಿಳಯಾನಿಳ (ನಾ). ಪ್ರಳಯಕಾಲದ ಗಾಳಿ : ಪರಿಪರಿಯ ಪಕ್ಷಿಪಕ್ಷಂಗಳಿಂದುಚ್ಚಳಿಸುತಿರದೆ ವಿಲಯಾನಿಲನಯಮ್ಮಡಿಗೆ ಪೆರ್ಚಿ ಮೊರೆದದ್ದು ಸುತ್ತಿ ವಿಯತ್ತಳವ ತಿಗುರಿದಿರುಗಿಸುತೆ (ನವಮೋ. ೬-೩). ವಿಳಯಾನಿಳ : ದಮಿತಾಂ ಕೈವೀಸೆ ವಿಳಯಾನಿಳಂ ಬೀಸೆ (ಶಾಂತಿಪು. ೪-೭ ವ) ; ಮರನಂ ಮರದಿಂ ಮೋದುವ . . . ಕಡಲಂ ಕಡಲೊಳ್ ಬೆರಸುವ ವಿಳಯಾನಿಳನೆನೆ ಭರದಿಂ ಕಡುಗಾಳಿ ಬೀಸಿದುದು ಗೋಕುಲದೊಳ್ (ಜಗವಿ. ೪-೮೬). [ಸಂ.]

ವಿಲವಿಲ (ನಾ). ಒಂದು ಅನುಕರಣಶಬ್ದ : ದೀಪಕ್ಕೆ ಬಿದ್ದ ಕ್ಷಣದಲ್ಲಿ ವಿಲವಿಲ ಎಂದು ಒದ್ದಾಡಿ ಹುಳು ರೆಕ್ಕೆ ಸುಟ್ಟುಕೊಂಡಿತು (ರೂಢಿ).

ವಿಲವಿಲನೆ (ಅ). ಒಂದು ಅನುಕರಣಾವ್ಯಯ : ಹಸು ನೋವಿನಿಂದ ವಿಲವಿಲನೆ ಒದ್ದಾಡುತ್ತಿತ್ತು (ರೂಢಿ). [ವಿಲವಿಲ + – ಅನ್ನೆ]

ವಿಲಸ, ವಿಳಸ (ನಾ). ೧. ಚೆಲುವು ; ಸೊಬಗು ; ವಿಲಾಸ : ವಿಲಾಸ – ವಿಲಸ, ಶಲಾಕಾ –ಸಲಗ (ಶಮದ. ೨೭೩ ಪ್ರಯೋ). ೨. ಅಲಂಕೃತನಾದವನು : ವರಭಸಿತಮಂ ಪೂಸಿ ಮೈಯಲಿ ಶರದೊಳೀಶಾರ್ಪಿತಕುಸುಮಮಂ ಧರಿಸಿ ರುದ್ರಾಕ್ಷಾಭರಣಭೂಷಿತ ವಿಲ[ಪಾಠಾಂ. ಳ]ಸನಾಗಿ (ಬಸಪು. ೪-೧೦). ವಿಳಸ : ೧. ಲಲಿತಫೋಷದ ಲಾಜೆ ದಧಿ ದೂರ್ವಾಕ್ಷತಾದಿಗಳ ವಿಳ[ಪಾಠಾಂ. ಲ] ಸದಭಿನವರವದ ಕಂಚುಕಿಗಳ ಘಡಾವಣೆಗಳಲಿ ರಾಜಾವಳಿಶಿರೋಮಣಿ ಹೊಕ್ಕನನುಪಮರಾಜಮಂದಿರವ (ತೂರರಾ. ೧-೭-೬೨) ; ಕವಿತೆಯ ಬರ್ದು ಮೆಯ್ಸುರಿ ಬೆಡಂಗು . . . ದೇಸಿ ವಿಳಸಂ ಕಳೆ ಶಕ್ತಿ ಪುರುಳ್ (ಸಂಸಪ. ೬-೧೦). [< ಸಂ. ವಿಲಾಸ]

ವಿಲಸತ್ತು, ವಿಳಸತ್ತು (ಗು). ೧. ಪ್ರಕಾಶಿಸುವ ; ಹೊಳೆಯುವ : ಮುದ್ರಸಹಜಾತ ವಿದ್ವಚ್ಛಿದ್ರಾನ್ವಿತಕರ್ಣಯುಗಳಪಾಳಿಗಳೊಳ್‌ಸಂವಿದ್ರುತರಜಂಗೆ ಹರಿ ವಿಲಸದ್ರುಚಿ ಮದ್ರಪ್ರಕುಂಡಲಂಗಳನಿಟ್ಟಂ (ಶಾಂತಿಪು.೧೦-೫೯) ; ತಾರಾಭ್ರಮಂಡಲಮಂ ಮೂವಳಸಾಗೆ ಗುತ್ತ ವಿಲಸದ್ಭೂಷಾಪ್ರಭಾಮಂಡಲಂ (ಪಂರಾಮಾ. ೧೩-೬೨). ೨. ಉತ್ತಮವಾದ ; ಶ್ರೇಷ್ಠವಾದ : ವಿಲಸದ್ಗುಣಾಗಗುಣವಿವರ್ತಿ ಗುರೂಪದೇಶಾಮಲಿನಾವಬೋಧ ವಿದಿತಾಖಿಳಚೋದ್ಯ[ವೃಂದಾ] (ಕವಿಪಾ. ೩-೨೩೬) ; ಅಖಿಲಶ್ರುತಿಸ್ಮೃತಿಗಳು ಪಂತಿವಿಡಿದುಸುರ್ವುದನಜಿದು ವಿಲಸದಷ್ಟವಿಧದಿಂ ತವೆ ಭಜಿಸಿ ಮೋಕ್ಷಮಂ ಪಡೆದರ್ (ವ್ಯಾಧಕಾ. ೮-೪). ೩. ಸೊಬಗಿನಿಂದ ಕೂಡಿದ ; ವಿಲಾಸದ : ಮಿಗಿಲನಿಸಿ ನಡೆದಳು ದೇವನರ್ಧಾಂಗಿ ನಿರುಪಮ ಚಿದಂಬುಜಪತಂಗಿ ದಿವ್ಯಾಂಗಿ ಶಂಕರವಿಲಸದಂತರಂಗಿ (ವೀಶ್ವಪು. ೩-೪-೨೬). ವಿಳಸತ್ತು : ೧. ವಿಳಸದ್ರತ್ನಪ್ರತಾನಂ . . . ಅಂಭೋನಿಧಾನಂ (ಜಗವಿ. ೧-೨೩). [ಸಂ. ವಿಲಸತ್]

ವಿಲಸನ, ವಿಳಸನ (ನಾ). ೧. ಹೊಳೆಯುವಿಕೆ ; ಪ್ರಕಾಶಿಸುವಿಕೆ. ೨. ವಿಲಾಸ ; ವಿನೋದ : 'ವಿಲಸಿಸು' ಪರಾ. ವಿಳಸನ : ೧. ವಿಳಯಾನಳವಿಳಸನವಿಸ್ಫುಳಿಂಗ ಸಂಘಾತದಿಂ (ಪಂಪಭಾ. ೧೨-೪೫) ; ಆತನಗ್ರಮಹಿಷಿ ಜಯಶ್ರೀಯಾಳ್ ತನ್ನಸಮಂ ಕಣ್ಗೊಳ್ಳ ನಿಜಾಕಾರಸಾರವಿಳಸನದಿಂದಂ (ಚಂದ್ರಪ್ರ. ೫-೮೫). [ಸಂ.]

ವಿಲಸಿತ, ವಿಳಸಿತ (ಗು). ೧. ಪ್ರಕಾಶಿಸುವ ; ಹೊಳೆಯುವ : ವಿಲಸಿತಪುಂಡರೀಕ ಚರಣಂ ಕುಮುದೇಕ್ಷಣಕಾಂತಮಂಜನಾಕುಲಿತವಿಲೋಚನಂ . . . ಎಸೆದತ್ತು ದಿಗ್ವಲಯದಂತೆ ನಿಶಾಂತದೊಳಂಗನಾಜನಂ (ಅಜಪು. ೬-೬೪) ; ವಿಲಸಿತದುಕೂಲವಸ್ತ್ರಂಗಳನಲ್ಲದೆ ಪೆಜವು ಸೀರೆಗಳನುಟ್ಟುಡಿಯಂ (ಸುಕುಮಾ. ೧೦-೧೦೪). (ನಾ). ೨. ಲೀಲೆ ; ವಿಲಾಸ : ಕಾಲ ದಿಕ್ಕುಗಳ ಚಲನೆಯಲಿ ವಿಶ್ವಸಮ್ಮೋಹನಗಳೆಲ್ಲವಾ ವಿಲಸಿತವು ಬೊಮ್ಮನದು (ಮಂಜಿಪ. ೪೭). ೩. ಸೊಬಗಿನಿಂದ ಕೂಡಿದುದು ; ಶೋಭಾಯಮಾನವಾದುದು : ತಟದ್ವಳಯವಿಲಸಿತಂಗಳಾಗಿ ನಿಜಪ್ರಕೋಷ್ಠನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ (ಆದಿಪು. ೧೫-೩ ವ) ; ವಿಲಸಿತಮಪ್ಪಲಂಕರಣಶಾಸ್ತ್ರದ ವೋಲ್ ದೆಸೆಗಳ್ ಪ್ರಸನ್ನಮಂ ತಳೆದು ಪೊದಟ್ಟುವು (ಕುಸುಮಾ. ೬-೪೪). ವಿಳಸಿತ : ೧. ವಿಳಸಿತ ಮದಿರಾರುಣೇಕ್ಷಣಂ ಸ್ಫುರಿತೋಷ್ಠಂ ಕೆಳದೀ ನಿನ್ನ ಮುಖಂ ತಳಮಳಗೊಳಿಸುಗುಂ (ಕವಿಪಾ. ೩-೧೫೨) ; ವಿಳಸಿತಕರಣಕಳಾವಳಿಗಳ . . . ಉಜ್ವಳಗುಣನಂ ಧರ್ಮನಾಥನಂ ಪೂಜಿಸುವೆಂ (ಬಾಧಪು. ೮-೧೪೫) ; ಥಳಥಳಿಪ ಪಟಕದ ಶಿಲೆಯೊಳಿಹ ವಿಳಸಿತ ಪ್ರತಿಬಿಂಬದಂತೆಯಚಳ ಕುಲದೊಳಿಹ ತತ್ಪ್ರತಿಧ್ವನಿಗಳವೊಲಖಿಳದೊಳು . . . ತಾನೆಯಾಗಿದ್ದಹನಲಾ ವಿಶ್ವ (ಬಸಪು.೫೧-೩೩). ೩. ಉದಯರುಚಿರಸಿತಭಾನುರಂಜಿತಮಹೋತ್ಪಳಮಿತ್ರವಿಳಸಿತಮುಂ (ರಾಜಶೇ. ೧೪-೧೫೪ ವ). [ಸಂ.]

ವಿಲಸಿತೆ (ನಾ). ಸೊಬಗಿನಿಂದ ಕೂಡಿದವಳು ; ಸುಂದರಿ : ಸುರುಚಿರಮಣಿಗಣ ನಿಕರವಿಲಸಿತೇ[ಪಾಠಾಂ.ವಿರಚಿತೇ] ವಿರಚಿತಮಿದನಜಿ ಮಣಿಗಣನಿಕರಂ (ಭಂಡೋಂಬು. ೨-೧೫೪). [ಸಂ. ವಿಲಸಿತಾ]

ವಿಲಸಿಸು (ಕ್ರಿ). ಉಲ್ಲಾಸದಿಂದಿರು ; ಸುಖಿಸು : ತರುಣಿ ತನ್ನೊಡವೆಗಳ ತಳೆಯುತ್ತ ತೆಗೆಯುತ್ತ . . . ವಿಲಸಿಪಂತೆ ತಾಂ ವಿಶ್ವದಲಿ ಮೆರೆಯುವನು ಪರಬೊಮ್ಮ (ಮಂಜಿಪ. ೭೮). [ವಿಲಸನ + – ಇಸ್ಯು]

ವಿಲಾಪ, ವಿಳಾಪ (ನಾ). ಅಳುವಿಕೆ ; ರೋದನ : ರತಿಯ ವಿಲಾಪವೇ ವಿಲಾಪ! (ಕನ್ನಚಾ. ೧೭೫) ; ಕೇವಲ ವಿಲಾಪದಲ್ಲಿ ಮುಕ್ತಾಯವಾಗದ ಆಶೆಯಲ್ಲಿ, ದರ್ಶನದಲ್ಲಿ ಕವನ ಸಮಾಪ್ತಿಯನ್ನು ಪಡೆದಿರುವುದು (ಭಾವಗೀ. ೭೮). ವಿಳಾಪ : 'ವಿಳಾಪಿಸು' ಪರಾ. [ಸಂ.]

ವಿಲಾಪಗೀತ (ನಾ). ಶೋಕಗೀತೆ : ಇದು ವಿಲಾಪಗೀತವು. ಈ ವಿಧದ ಕವನಗಳಿಗೆ ಆಂಗ್ಲಭಾಷೆಯಲ್ಲಿ (Elegy) ಎಂದರೆ ವಿಲಾಪಿಕೆ ಎನ್ನುವರು (ಚಿತ್ರಸ್ಯ. ೪೧). [ಸಂ.]

ವಿಲಾಪಿಸು, ವಿಳಾಪಿಸು (ಕ್ರಿ). ಅಳು ; ಪ್ರಲಾಪ ಮಾಡು ; ಗೋಳಾಡು : ವಿಲಾಪಿಪ ಭಗ್ನಾಂಗನ ಕುಷ್ಠಿಯಂ ವಿಧವೆಯಂ ಕೊಂದಾಟಮಂ ಧೂಮಮಂ ನಿಪುಣರ್ ಕಂಡರೆ ಪೋಗರ್ಕೆ (ಸೋಮೇಶ. ೬೮) ; ಅದರ ಮತ್ತೊಂದು ಸಾಮಾನ್ಯಲಕ್ಷಣವೇನೆಂದರೆ ಕವಿ ತಾನು ಕುರುಬನೆಂದು ಆರೋಪಿಸಿಕೊಂಡು ತನ್ನ ಗತಿಸಿದ ಕುರುಬಮಿತ್ರನಿಗಾಗಿ ವಿಲಾಪಿಸುವಂತೆ ಹಾಡುವುದು (ಭಾವಗೀ. ೬೯). **ವಿಳಾಪಿಸು** : ಈ ಪರಿಯೊಳತಿಶೋಕಿಸುತ ವಿ[ಪಾಠಾಂ. ಪ್ರ]ಳಾಪಿಸುವ ನಳನೃಪತಿ ಹೆಚ್ಚಿದ ತಾಪದಲಿ ಕಡುನೊಂದು ಬಳಲುತ (ನಳಚ. ೬-೫). [ವಿಲಾಪ + -ಇಸ್ $_3$]

ವಿಲಾಯತಿ, ವಿಲಾಯಿತಿ (ಗು). ೧. ವಿದೇಶಕ್ಕೆ ಸಂಬಂಧಿಸಿದ ; ಪರದೇಶದ. (ನಾ). ೨. ಮುಖ್ಯವಾಗಿ ಇಂಗ್ಲೆಂಡ್, ಯೂರೋಪು ಮುಂತಾದ ವಿದೇಶ, ಅನ್ಯದೇಶ : ವಿಲಾಯತಿಯಂಥ ಮಧ್ಯಮಶೀತವುಳ್ಳ ದೇಶಗಳಲ್ಲಿ ಬರ್ಫವು ಬಹುದಿವಸ ನಿಲ್ಲುವುದಿಲ್ಲ (ಮುಂಬಯಿ. ೪-೧೮೦) ; ನೀವೇಕೆ ವಿಲಾಯತಿಗೆ ಹೋಗುವದಿಲ್ಲ (ಸಮಜೀ. ೫೫೪). **ವಿಲಾಯಿತಿ** : ೧. ಕೆಲವು ವಿಲಾಯಿತಿ ವಿದ್ವಾಂಸರು ಬಹುಶ್ರುತರಾದರೂ ಅವರಿಗೆ ಭಾರತೀಯ ಲಲಿತಕಲೆಗಳ ಪೂರ್ಣರೂಪ ಕಂಡುಬಂದಿಲ್ಲ (ಭಾರತ. ೫೭೬). ೨. ಅಷ್ಟು ಹೊತ್ತಿಗೆ ಅವಳನ್ನು ಒಲಿದವನೂ ವಿಲಾಯಿತಿಯಿಂದ ವಿಜಯಿಯಾಗಿ ಹಿಂದಿರುಗಿದನು (ಸುಂದರಿ. ೬೩); ಇದು ವಿಲಾಯಿತಿಯ ಮಾಲು. ಇದರಲ್ಲಿ ಬಂಗಾರದ ಅಂಶ ಬಹಳ ಕಡಿಮೆ (ಇಪ್ಪಕ. ೪೫೩).

[<— ಅರ. ಹಿಂ. ಮರಾ. ವಿಲಾಯತೀ, ವಿಲಾಯತ್]

ವಿಲಾಯಿತಿ 'ವಿಲಾಯತಿ' ನೋ.

ವಿಲಾಸ$_1$, ವಿಳಾಸ$_1$ (ನಾ). ೧. ಲೀಲೆ ; ಕ್ರೀಡೆ. ೨. ಭೋಗಸೌಖ್ಯ ; ಕಾಮಕೇಳಿ : ವಿಧಿವತ್ತಾದ ವಿವಾಹಕ್ಕೆ ಮುನ್ನವೇ ವಿಲಾಸಕ್ಕೆ ಅಪೇಕ್ಷಿಸಿದೆ (ಪೂಸಕ್ಷ. ೧೩). ೩. ಅಂದ ; ಸೊಬಗು : ಕತ್ತರಿಸಿ ಚಂದ್ರಕಳೆಯಂ ಪತ್ತಿಸಿದಂತೆಸವ ಸತಿಯ ಸುಲಿಪಲ್ಮೊಳಪಿಂ ಮುತ್ತಿನ ವಿಲಾಸಮಂ ಪರಿಮುತ್ತುಗೊಳಲ್ಸಾ[ಪಾಠಾಂ. ಗಳೊಳ್ಸಾ]ಲ್ದುದೆಂಬು ದೊಂದಚ್ಚರಿಯೇ (ಮಲ್ಲಿಪು. ೩-೭೫) ; ನಡೆಯೊಳು ನುಡಿಯೊಳು ತೋರ್ಪ ವಿಲಾಸವು ರತಿಗಿಂತ ನೂರ್ಮಡಿ ಮಿಗಿಲು (ಇಂಚಾಪ. ೨೨೬-೨೩). ೪. ಉಲ್ಲಾಸ ; ಸಂಭ್ರಮ : ಕಣ್ಮಲರೊಳಾನಂದಾಶ್ರು . . . ಮುಖದೊಳ್ ವಿಲಾಸಮೆಸೆಯುತ್ತಿರ್ಪನ್ನಮಿಂತೆಂದರ್ (ಜಗವಿ. ೩-೫) ; ಸಂತೋಷದಿಂ ಮುಂದೆ ಸಿಂಹಾಸನವನಿಕ್ಕಲು ವಿಲಾಸದಿಂದೆಸೆಯೆ ಕುಳ್ಳಿರ್ದನಾ ಸುಕುಮಾರಸೌಂದರಂ (ನಂಬರ. ೫-೯೬). ೫. [ಕಾವ್ಯಮೀ] ಸ್ತ್ರೀಯ ದಶವಿಧವಾದ ಶೃಂಗಾರಭಾವಗಳಲ್ಲಿ ಒಂದು ; ಬೆಡಗು ; ಒನಪು ; ಒಯ್ಯಾರ : ಅತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವಭಾವ ವಿಲಾಸ ವಿಭ್ರಮಂಗಳನೊಡೆಯೊಳಂ . . . ಅಳಿಪದೆ ಪೋಗವೇಟ್ಟ ಧನದತ್ತನೊಳ್ಪಿದನೆಂದಂ (ವಡ್ಡಾರಾ. ೧೭-೧೨) ; ಕಾಂತನಲ್ಲಿಗೊಲ್ದಂಗನೆ ಬಂದಳಂಗಜನ ಮಂಗಳಲಕ್ಷ್ಮಿಯೆನಲ್ ವಿಲಾಸದಿಂ (ಪುಷ್ಪಪು. ೩-೧೩೧). **ವಿಳಾಸ$_1$** : ೩. ಅಮರ ನದೀಹಂಸಕುಳಂ ಕಮಳಜ ಹಂಸೇಂದ್ರ ಸೇವೆಗೇಟ್ಟರ್ಪ ವಿಳಾಸಮದೆನಿಸಿ ದೇಸೆವತ್ತುವು . . . ಚಮರರುಹಂಗಳ್ (ಜಗವಿ. ೧-೩೮) ; ಠಕ್ಕೆಯದ ಪಲ್ಲವವಗಿಯೆ ಮೆಱೆದುದು ಬಿಗಿದ ಮೊಗರಂಬದ ವಿಳಾಸದಲಿ (ಕುವ್ಯಾದ್ರೋ. ೩-೪). ೪. ಕುಲಂ ಮಲಿನವೆನಿಸೆ ಬೆಡಂಗಡಂಗೆ ಮೆಯ್ಯ ಮಾಸಾಱದ ಕೂಸಂ ತಲೆಕೆಳಗಾಗೆ ಪಿಡಿದುಕೊಂಡು ನಡೆವನ್ನಂ (ಜಗವಿ. ೨-೫೩ ವ); ಘಾಸಿಯಾದರು ಘಾಯವಡೆದು ವಿಲಾಸವಳಿದುದು ರಿಪುಭಟನ ಗೆಲುವಾಸೆ ಬೀತುದು ಧಾತುಗೆಟ್ಟುದು ಸರಳ ಸಾರದಲಿ (ಕುವ್ಯಾದ್ರೋ. ೬-೨೦). ೫. ಅಮರೀಮಧುರ ಗೀತನಿನಾದಕ್ಕಾದಮೊಱಲ್ದಿರ್ದ ಶಿರಃಕಂಪದೊಳಿನಿಸಾನುಮೆಱಗಿದ ಕರ್ಣಪೂರಪಾರಿಜಾತ ಸ್ತಬಕಮನೋಸರಿಸುವ ವಿಳಾಸಮುಮಂ (ಆದಿಪು. ೪-೯ ವ); ಬಂದಳದೊಂದು ವಿಭ್ರಮಮದೊಂದು ವಿಳಾಸಮದೊಂದು ಚೆಲ್ವದೊಂದಂದಮದೊಂದು ದೇಸೆ ಪೊಸತಾಗಿರೆ ವಲ್ಲಭನಲ್ಲಿಗಟ್ಟಱಿಂ (ಜಗವಿ. ೨-೮೦).

ವಿಳಾಸವಲ್ಲಭ = ವಿಲಾಸಿಗಳ ಒಡೆಯ ; ಒಂದು ಬಿರುದು : ಅರಸಂ ಕರಗಸಂ ಬಿರುದರಂಕುಸಂ ಮೂರ್ತಿನಾರಾಯಣಂ ವಿಳಾಸವಲ್ಲಭಂ (ಕಾ.IV,೪೩-೩;1264). [ಸಂ.]

ವಿಲಾಸ$_2$, ವಿಳಾಸ$_2$ (ನಾ). ೧. ಪತ್ತೆ ; ಅಡ್ರೆಸ್ಸು : ವಿಲಾಸ ಬರೆದು ಟಪಾಲು ಮೇಲೆ ಹಾಕಿಬಿಟ್ಟಳು (ಕಥಾಮಂ. IV. ೮೩). ೨. ಅಂಕಿತ ; ಗುರುತು ; ಚಿಹ್ನೆ : ನೀನು ವಿಲಾಸವಿಲ್ಲದವನಾದರೆ ಸತ್ಯವಾದ ಜಗತ್ತೆಲ್ಲವೂ ಸುಳ್ಳಾಗುವದು (ಅರ್ಕಮಾ. ೧-೪೫) ; ಬಸವನ ಆಭರಣ . . . ೧. ವಿಲಾಸ ಕೆತ್ತಿದ ಅರಳೆಲೆ (ಎಕ. XIV, ನಂಜನ. ೨೮೯-೭ನೇ ಕಲಂ ; 1847). **ವಿಳಾಸ$_2$** : ೧. ಲಲಿತೆ ಕೃಷ್ಣನಿಗೆ ಕಾಸರಗೋಡಿನ ವಿಳಾಸಕ್ಕೆ ಬರೆದ ಕಾಗದವೂ ವಿಳಾಸದಾರರಿಲ್ಲದೆ ಹಿಂದಿರುಗಿತು (ಮಗಹಂ. ೫೫).

[?/. ತಮಿ. ವಿಲಾಚಮ್; ತುಳು . ವಿಲಾಸ್; ತೆಲು. ವಿಲಾಸ]

ವಿಲಾಸಂದಾಳ್ (ಕ್ರಿ). ಸೊಬಗನ್ನು ತಾಳು ; ಚೆಲುವನ್ನು ಹೊಂದು : ತರುಣ ಸುಲೋಚನೆಯಂ ಬಸಮಾಡಲ್ ಗರಗರನಾದ ವಿಲಾಸಂದಾಳ್ದಿದ ಗರಿಮರ್ಬನ್ನಿಮೆನು ತ್ರೈವತ್ತಾಱಱಿಕೆಯ ಜನಪದದ ಅರಮಕ್ಕಳ ಬಳಿಗಮ್ಮರಸಂ ದೂತರನಟ್ಟಿದನು (ಜಯಕಾ. ೩-೭೩). [ವಿಲಾಸ$_1$ + ತಾಳ್$_1$]

ವಿಲಾಸಂದೋಱು (ಕ್ರಿ). ಬೆಡಗನ್ನು ತೋರಿಸು ; ಒಯ್ಯಾರಮಾಡು : ಪೂದೊಡವನೋರಂತಿಟ್ಟು ನಾನಾವಿಲಾ[ಪಾಠಾಂ. ಳಾ]ಸಂದೋಱುತ್ತಿನಿರ್ಗರ್ ರಂಜಿಪುದಜಸ್ರಂ ಖೇಚರೀಸಂಚಯಂ (ಶಬಶಾ. ೨-೩೯). [ವಿಲಾಸ$_1$ + ತೋಱು]

ವಿಲಾಸಂಬೆಱು (ಕ್ರಿ). ಶೋಭಿಸು ; ಕಂಗೊಳಿಸು : ಗಂಧರ್ವಕುಲದ ನಡುವೆ ವಿಲಾ [ಪಾಠಾಂ. ಳಾ]ಸಂಬೆತ್ತತಿಸಂಭ್ರಮದಿಂದೆ ಬರುತ್ತಿರ್ಪಂ ಹಂಸವಾಹನಂ ಚತುರಾಸ್ಯಂ (ಗಿರಿಕ. ೬-೬೬). [ವಿಲಾಸ$_1$ + ಪೆಱು$_1$]

ವಿಲಾಸತೆ, ವಿಳಾಸತೆ (ನಾ). ೧. ಕ್ರೀಡೆ ; ಲೀಲೆ : ಘನಮಾಯಾವಿಲಾಸತೆಯಿಂದ ಕೌಶಿಕ ಹೊಕ್ಕನಾ ನೃಪನ (ತೊರರಾ. ೩-೨-೨೬). ೨. ಚೆಲುವು ; ಸೊಬಗು : ಕ್ಷಿತಿಪಶ್ರೀವಿಭವವಿಲಾಸತೆಯಂ ಪೇಱುರಮೆ ಪೇಱ್ಗುಂ (ಶಾಂತಿಪು. ೩-೪೨). **ವಿಳಾಸತೆ**: ೨. ಭಾಸುರವೆ ಸಾಕಾರವಾದ ವಿಳಾಸತೆಯಲಿಪ್ಪಾದಿರುದ್ರಗೆ ವಾಸವಾದುದು ತನಗೆ ತಾನೆ ಮಹಾಮಹತ್ವದಲಿ (ಪ್ರಭುಲಿಂ. ೨-೪). [ಸಂ. ವಿಲಾಸತಾ]

ವಿಲಾಸವಾಸ (ನಾ). (ಬೇಸಗೆಯಲ್ಲಿ ಉಪಯೋಗಿಸುವ) ವಿಶ್ರಾಂತಿಗೃಹ ; ವಿಹಾರಸ್ಥಳ : ಅಸುಗೆಯ ಮಿಸುಪ ಪೊಸದಳಿರಿಂದೆಸೆಯೆ ಪೊದೆಯಿಸಿ ವಾಸಂತಿಯ ಮುಗುಳ ಸೂಸಕದಿಂ ದೇಸೆವಡೆದ ವಿಲಾ[ಪಾಠಾಂ. ಳಾ]ಸವಾಸಲಕ್ಷ್ಮಿಯ ಚುಂಚಿನಂತೆ ಚಂಚುರಮಾದ ಚಂಚುಲೋವೆಗಳೊಳಂ (ಚಂದ್ರಪ್ರ. ೭-೯೫ ವ). [ಸಂ.]

ವಿಲಾಸಾವಾಸ (ನಾ). ೧. = ವಿಲಾಸವಾಸ : ಭವನಾಂಗಂ ಕಲ್ಪಭೂಜಂ ಸಮದ ಬಹುವಿಧೋತ್ತುಂಗಹರ್ಮ್ಯಾವಳೀಗರ್ಭವಿಲಾಸಾವಾಸದೊಳ್ . . . ಉತ್ಸವಮಂ ತಾಳ್ದು (ಚಂದ್ರಪ್ರ. ೩-೩೭). ೨. ಸೊಬಗಿನ ನೆಲೆ : ಅದು ಪರಮಾಸ್ಪದಮದು ಪುಣ್ಯಸಂಪದಮದು ಮಹಾಭ್ಯುದಯವಿಲಾಸಾವಾಸಂ (ಸುಕುಮಾ. ೧೨-೫೧). [ಸಂ.]

ವಿಲಾಸಿ, ವಿಳಾಸಿ (ಗು). ೧. ಹುಡುಗಾಟಿಕೆಯ ; ವಿನೋದದಿಂದ ಕೂಡಿದ. ೨. ಬೆಡಗಿನಿಂದ ಕೂಡಿದ ; ಒಯ್ಯಾರದ. (ನಾ). ೩. ಹಾಸ್ಯಗಾರ ; ಚೇಷ್ಟೆಗಾರ. ೪. ವಿಷಯಲೋಲುಪನಾದವನು ; ವಿಷಯಲಂಪಟ. **ವಿಳಾಸಿ** : ೫. ಸೊಬಗ ; ಸೊಗಸುಗಾರ : ಪುಷ್ಪಸಂಕುಳದೊಳ್ ನೀನೆ ವಿಳಾ[ಪಾಠಾಂ. ಲಾ]ಸಿಯೈ (ಆದಿಪು. ೧೧-೯೬). [ಸಂ. ವಿಲಾಸಿನ್]

ವಿಲಾಸಿಕೆ (ನಾ). [ಕಾವ್ಯಮೀ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು ; ಇ "ಇದರಲ್ಲಿ ಒಂದೇ ಅಂಕ ; ಶೃಂಗಾರ ಹೆಚ್ಚು ; ಹತ್ತು ಲಾಸ್ಯಾಂಗಗಳು,ವಿದೂಷಕ ವಿಟ ಪೀಠಮರ್ದರು ಇರುತ್ತಾರೆ ; ಗರ್ಭ ವಿಮರ್ಶಸಂಧಿಗಳಿಲ್ಲ ; ನೀಚನಾಯಕ ; ಕಥಾವಸ್ತು ಸ್ವಲ್ಪ ; ನೇಪಥ್ಯ (ವೇಷ ಭೂಷಾದಿ) ರಚನೆ ಚೆನ್ನಾಗಿರುತ್ತದೆ" (ಸಂನಾಟ. ೩೫) : ೧. ನಾಟಿಕಾ. ೨. ತ್ರೋಟಕ . . . ೧೪. ವಿಲಾಸಿಕಾ . . . ೧೮. ಭಾಣಿಕಾ — ಎಂದು ಉಪರೂಪಕಗಳು ಹದಿನೆಂಟು ವಿಧ (ಸಂನಾಟ. ೩೨). [ಸಂ. ವಿಲಾಸಿಕಾ]

ವಿಲಾಸಿತ (ಗು). ೧. ಉಲ್ಲಾಸಗೊಳಿಸುವ ; ಆಹ್ಲಾದಕರವಾದ : ವಾಸವಾಧಿಕ ಗಾನಸೌಖ್ಯವಿಲಾಸಿತತ್ತ್ವಿ ಸೋಮಪಾನವನಾಸೆಯಿಂ ಸೇವಿಸುವ ಕಷ್ಟ ಮಹೇಸುರರ ಕೂಡೆ (ಬಸಪು. ೫೭-೭೮). (ನಾ). ೨. ಲೀಲೆ ; ವಿನೋದ ; ಕ್ರೀಡೆ : ತನು ಹೇಳಿಗೆ ಮನ ಸರ್ಪನಾಗಿ ತನ್ನಯ ವಿಲಾಸಿತದಿಂದ ಹೆಡೆಯೆತ್ತಿ ಆಡುತ್ತಿರಲಾಗಿ (ಸಕಪ. ಕ. II, ೬೩೬-೧೮೦೮) ; ಘಟದಿಂದ ಚಂದವಲ್ಲದೆ ಆತ್ಮಂಗೆ ಒಂದೇ ವಿಲಾಸಿತ (ಮೋಳಿಮಾ. ೮೩-೩೩೦). [ಸಂ.]

ವಿಲಾಸಿನಿ, ವಿಳಾಸಿನಿ (ನಾ). ೧. ಬೆಡಗಿ ; ಒಯ್ಯಾರಿ : ನಿರತಿಶಯಮಕ್ಕುಮದು . . . ಗುರುಜಘನಸ್ತನಭರಮಂಥರಲೀಲಾಲಸವಿಲಾ [ಪಾಠಾಂ. ಳಾ]ಸಿನೀಚಲಿತಂಬೋಲ್ (ಕವಿರಾ. ೧-೭೬) ; ಕುಟಿಲಚಂಚಲಕಠಿನಕೃಶಮಾಂದ್ಯಮೆಂಬಿವುತ್ಕಟಯೌವನಶ್ರೀ ವಿಲಾಸಿನಿಯರಳಕಾಳಿ ಚಟುಲಸುಕಟಾಕ್ಷ ವಕ್ಷೋಜಾತ ಮಧ್ಯಗತಿಗಳ ವಿಲಾಸದೊಳಿಲ್ಲದೆ ಘಟಿಸದು (ಕೃಮಿಭಾ. ೩-೭). ೨. ಹೆಂಗಸು ; ಸ್ತ್ರೀ. ೩. ಸೂಳೆ ; ವೇಶ್ಯೆ : ಅರಸರಿಗೆ ತಂದೆಯೆದು ಮೊದಲಲಿ ಅರಿಯರಿಗಜೆದಾ ವಿಲಾ[ಪಾಠಾಂ. ಳಾ]ಸಿನಿಯರಿಗೆಜೆದು ದಾದಿಯರಿಗೆಜೆದು (ಬಸವ. ೫೯-೨೬) ; ಅವರು ಅಪ್ಸರೆಯರು — ಪಟ್ಟಣದ ಚದುರೆಯರು- ಅರಮನೆಯ ವಿಲಾಸಿನಿಯರು (ಧರ್ಮಾ. ೬೭). ೪. ಸಖಿ ; ದಾಸಿ : ಈತನೇ ಧೃತರಾಷ್ಟ್ರನೆರಡನೆಯಾತ ಪಾಂಡು ವಿಲಾಸಿನೀಸಂಭೂತನೀತನು ವಿದುರನೆಂದಾಯ್ತವರಿಗ ಭಿಧಾನ (ಕುವಾಲ. ೩-೧೦). **ವಿಳಾಸಿನಿ**: ೨. ಸೊಗಯಿಸುವ ಪೊಜವೊಲ ವಿಲಾಸಮಂ ನೋಲ್ಪವನ ವಿಳಾಸಿನಿಯರ ಸಿರಿಯ ನಗೆಗಣ್ಗಳಿನಿಪ ಕಮಲಕುವಲಯವನಂಗಳಿಂ ಮನಂಗೊಳಿಸಿ (ಮಲ್ಲಿಪು. ೨-೪೯). ೩. ಕನಕಗೋಪುರಂಗಳೊಳಗಣೆರಡು ದೆಸೆಯ ಗುಣಣೆಯಿಂ ವಿಳಾಸಿನಿಯರ ಗಡಣೆಯಿಂ . . . ಕನಕಶೈಲಮೆನಿಸಿ ನೆಗಟ್ಟ ಭೂಮಿಪಾಲಭವನದಿಂ (ಪಂಪಭಾ. ೧-೫೮) ; ಲಜ್ಜೆಯಂ ಕುಲಮಂ ದಾಂಟಿ ಕೆಲರ್ವಿಳಾಸಿನಿಯರಾದರ್ವಿಶ್ವಭೂಭಾಗದೊಳ್ (ಮದಕ. ೧೦-೧). ೪. ದೇವಿ ಸ್ನಾನವ ಮಾಡಿ ಬಟ್ಟೆಯಂ ತರವೇಳಲು ತಡೆಯದೆ ವಿಳಾಸಿನಿಯು ಬಂದು ಪೆಟ್ಟಿಗದಿಗೆಯೆ ಉಡುವ ವಸ್ತುಗಳೆಲ್ಲ ಛಿದ್ರವಾಗಿರೆ ಹೆದರಿ (ಪ್ರಥರಾ. ೬-೫೧). [ಸಂ. ವಿಲಾಸಿನೀ]

ವಿಲಿಖಿತ, ವಿಳಿಖಿತ (ಗು). ೧. ಬರೆದ ; ಚಿತ್ರಿಸಿದ : ಮೃಗಮದವಿಲಿಖಿತವಿಚಿತ್ರಪತ್ರ ಭಂಗಭಾಸುರಭುಜಶಿಖಿರನುಂ (ಆದಿಪು. ೩-೯೦ ವ) ; ಆ ಶೃಂಗಾರರಸತರಂಗಿಣಿಯ ತುಂಗಸ್ತನಕಪೋಲಕವಿಲಿಖಿತಮೃಗಮದಪತ್ರಭಂಗಂಗಳಿಂ ಚಿತ್ರಕಳಾಕೌಶಲಮಂ ಪ್ರಕಾಶಿಸಿಯುಂ (ಚಂದ್ರಪ್ರ. ೨-೧೬ ವ). **ವಿಳಿಖಿತ** : ೨. ಕೊರೆದ; ಕೆತ್ತಿದ : ಬಳಸುವ ಚಂದ್ರಭಾನುಭಗಣ ಪ್ರತಿಬಿಂಬಕದಂಬವೆತ್ತಲುಂ ವಿಳಿಖಿತಸೋಮಸೂರ್ಯ ನಿಬಿಡಾಕ್ಷರಮಾಳಿಕೆಯಂದದಿಂ ಮನಂಗೊಳಿಸೆ (ಚಂದ್ರಪು. ೧-೭೪). [ಸಂ.]

ವಿಲಿಪ್ತ (ಗು). ಬಳಿದ ; ಸವರಿದ ; ಲೇಪಿಸಿದ : ದ್ರೌಪದೀಕುಚಕುಂಭಾರ್ಪಿತ ಕುಂಕುಮದ್ರವವಿಲಿಪ್ತೋರಸ್ಥಳಂ ದಾಂಟಿ ಕೀರ್ತಿ ಚತುರ್ವಾರ್ಧಿಯನಿರ್ದನಂದು ಸುಖದಿಂ ವಿದ್ವಿಷ್ಟವಿದ್ರಾವಣಂ (ಪಂಪಭಾ. ೩-೪೫) ; ಪಾರ್ವತೀಪಯೋಧರ ಲೇಪಿತಮೃಗಮದವಿಲಿಪ್ತವಕ್ಷಸ್ಥಳಂ (ರಾಜಶೇ. ೨-೧). [ಸಂ.]

ವಿಲಿವಿಲಿ (ನಾ). ಒಂದು ಅನುಕರಣಶಬ್ದ : ಹಳದಾಗಿ ನಾರುತ್ತ ಹುಳಿತು ವಿಲಿವಿಲಿಯೆಂಬುದಂ (ವೀಶಪು. ೩-೧೦-೩೭) ; ರಾಘಪ್ಪನ ವಾದದಲ್ಲಿ ಸಿಲುಕಿ ದೇಸಾಯರು ವಿಲಿವಿಲಿ ಒದ್ದಾಡಿದರು (ಗಂಮಾಯಿ. ೧೦೭).

ವಿಲಿವಿಲಿಸು (ಕ್ರಿ). ವಿಲಿವಿಲಿ ಎಂದು ಒದ್ದಾಡು, — ನರಳು : ಪಾಪದ ಬೀಜ ಒರ್ಬುಳಿಸಿದಂತೆ ದೋಷದ ಹುತ್ತ ನೆಗೆದಂತೆ ಪುಳುವಿನ ರಾಶಿ ವಿಲಿವಿಲಿಸುತ್ತಿರೆ (ಜೊಮ್ಮರ. ಹ. ೩೩೯-೧೪) ; ಹೊಲಸಿನ ನೆಲೆ ರುಧಿರದ ಕುಳಿ ವಿಲಿವಿಲಿಸುವ ಪುಳುಗಳೊಗೆವ ಪುತ್ತು (ವೃಷಪ. ೨೮-೭೦). [ವಿಲಿವಿಲಿ + – ಇಸ್ಕು]

ವಿಲೀನ (ಗು). ೧. ಆಸಕ್ತವಾದ ; ಮಗ್ನವಾದ. ೨. ಐಕ್ಯವಾದ ; ಲೀನವಾದ : ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಯವಿಲೀನವಿಶದವಿಷಯವಿಶೇಷಂ (ಕವಿರಾ. ೧-೩೬) ; ರಣಾಂಗಣದಂತೆ ಚಮೂರಚಿತಪ್ರಹರಣ ವಿಶೀರ್ಣರೂಪಮುಂ ದಂತಿದಾನವವಿಲೀನಶಿಲೀಮುಖಮುಂ (ಚಂದ್ರಪ್ರ. ೫-೫೭ ವ). ೩. ಕರಗಿದ. ೪. ಕಣ್ಮರೆಯಾದ ; ಕಾಣದಂತೆ ಆದ. (ನಾ). ೫. ಕರಗಿಸಿದ ತುಪ್ಪ : "ವಿಲೀನಂ, ದ್ರುತಂ – ಈ ೨ ಕರಗಿಸಿದ ತುಪ್ಪ" (ಹಲಾಯು. ೪೭-೧೨೧). ೬. ಐಕ್ಯನಾದವನು ; ಲೀನನಾದವನು : ಅಕ್ಕಱಿಂ ಬಾಲೇಂದುಧರನೊಳು ಪೊಕ್ಕು ಪೊಕ್ಕಲರ್ದಲರ್ದು ಕೂಡುತ ಸೊಕ್ಕಿ ತಲ್ಲಿಂಗದೊಳಗಿಂತು ವಿಲೀನನಾಗಿರ್ದು (ಬಸವ. ೩೫-೪). ೭. [ನಾಟ್ಯ] ಉಸಿರಾಟದ ಒಂದು ಭಂಗಿ ; IP "ಮೂರ್ಛೆ ಹೋದವನಂತೆ ಉಸಿರಾಡುವುದು" (ಲಾಸ್ಯರಂ. ೨೭೮ ಗದ್ಯಾನುವಾದ) : ಸಮ, ಭ್ರಾಂತ, ವಿಲೀನ, ಆಂದೋಳಿತ, ಕಂಪಿತ, ಸ್ತಂಭಿತ . . . ಸೀತ್ಕೃತ – ಈ ಹತ್ತು ಮೊದಲ ಒಂಬತ್ತುಗೂಡಿ ಒಟ್ಟು ಹತ್ತೊಂಬತ್ತು ಭೇದಂಗಳ್ (ಲಾಸ್ಯರಂ. ೩-೭೮ ವ). [ಸಂ.]

ವಿಲೀನಗೊಳ್ಳು (ಕ್ರಿ). ಸೇರಿಹೋಗು ; ಸೇರಿಕೊಳ್ಳು ; ಐಕ್ಯವಾಗು : ಈ ಪ್ರದೇಶದ ಬಹುಭಾಗವು ಮೌರ್ಯಸಾಮ್ರಾಜ್ಯದೊಂದಿಗೆ ವಿಲೀನಗೊಂಡಿದ್ದುದನ್ನು ಕಾಣುತ್ತೇವೆ (ನೊಳಂಬ. ೬೯). [ವಿಲೀನ + ಕೊಳ್ಳು, (< ಕೊಳ್,)]

ವಿಲೀನಿತ (ಗು). ೧. ಮಗ್ನನಾದ ; ಆಸಕ್ತನಾದ. (ನಾ). ೨. ಮಗ್ನನಾದವನು ; ಆಸಕ್ತನಾದವನು : ಅಮಳಲಿಂಗದೊಳತಿವಿಲೀನಿತನಾಗಿ ತಾನಿರ್ದಹನೂ ಬಸವೇಶ (ಬಸಪು. ೩೫-೪೦). [ಸಂ.]

ವಿಲೀನೆ (ನಾ). ಐಕ್ಯಳಾದವಳು ; ಲೀನವಾದವಳು : ನುತಿಪಂ ಸೇವಿತಶಕ್ತಿವಿತಾನೆಯ . . . ಶಂಕರನಂಕವಿಲೀನೆಯನು (ಅಧ್ಯಪೋ. ೩-೪). [ವಿಲೀನ + – ಎ್]

ವಿಲುಠ್ಯ (ಗು). ಸೆಳೆದುಕೊಳ್ಳಲ್ಪಟ್ಟ ; ಸುಲಿಗೆಯಾದ : ಪೂರ್ಣಪಾತ್ರಹರಣ ವಿಲುಠ್ಯಮಾನವಸನಭೂಷಣಮುಂ (ಕಾದಂಪು. ೪೧೦). [ಸಂ.]

ವಿಲುಪ್ತ (ಗು). ೧. ನಾಶಹೊಂದಿದ ; ಧ್ವಂಸವಾದ : ಚಪಳಕಪಿಬಳವಿಲುಪ್ತ ವಿಗಳಿತಲತಾಭವನಮುಂ (ಪಂಪಭಾ. ೪-೧೫ ವ). (ನಾ). ೨. ಲೋಪ ; ಚ್ಯುತಿ ; ನಾಶ : ಅಭಿನವಗುಪ್ತನ ವಿಮರ್ಶನಶಕ್ತಿ ವಿಲುಪ್ತವಾಯಿತೇ ಎಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲ (ಭಾರಮಿ. ೭೪). [ಸಂ.]

ವಿಲುಪ್ತಿ (ನಾ). ಲಯ ; ನಾಶ : ಇಂಥ ವಿಲುಪ್ತಿಯ ಪರಿಚಯವನ್ನು ನಾವು ಬೇರೆ ಕಡೆ ನೋಡಿದ್ದೇವೆ (ನಬಂಧ. II. ೩೦೭) ; ಪ್ರಾಪ್ತಿಯು ಜಿಗಿವುದು ಚರವಿಲುಪ್ತಿಯಲಿ (ಕಠಶ್ರಾ. ೯೭-೨೦). [ಸಂ.]

ವಿಲುಲಿತ, ವಿಲುಳಿತ (ಗು). ೧. ಉರುಳಿ ಬಿದ್ದ ; ಉರುಳಿದ : ಹರ್ಷಪುಳಕಿತ ಸರ್ವಾಂಗನಾನಂದಬಾಷ್ಪಸಲಿಲವಿಲುಲಿತವಿಲೋಚನಂ (ಪಂಠಾಮಾ. ೧೨-೧೦ ವ) ; ವಿಲುಲಿತ ಘರ್ಮವಾರಿಕಣದಿಂ ಕೆಸಱೇಳ್ವಿಳಿತಪರ್ ಗಂಡಮಂಡಲಕೃತಪತ್ರಭಂಗವೈಖರಿ ನಾಧಿಜಮಂ ಬಳಿದಿಟ್ಟು (ರಾಜಶೇ. ೧೨-೭). **ವಿಲುಳಿತ** : ೧. ಆನಂದಾಶ್ರು ವಿಲುಳಿತ ಕಮಲವಿಲೋಚನೆ. . . ಇಂತಾತುರದೊಳಿರ್ದಳ್ (ರಾವಣಾಶ್ವ. ೨೮-೩). ೨. ತಿರುಗಿಕೊಂಡಿರುವ ; ತಿರುಗಿರುವ : ಸಂಗ್ರಾಮಭೂಮಿಯ ನಡುವೆ ಧೃಷ್ಟದ್ಯುಮ್ನಕಚಗ್ರಹವಿಲುಳಿತಮೌಳಿಯುಂ ತದೀಯ ಕೌಕ್ಷೇಯಕಧಾರಾವಿದಾರಿತ ಶರೀರನುಮಾಗಿ ಬಿಟ್ಟಿರ್ದ ಶರಾಚಾರ್ಯರಂ ಕಂಡು (ಪಂಪಭಾ. ೧೩-೫೫ ವ) ; ನಿಸರ್ಗದುಷ್ಟಧೃಷ್ಟದ್ಯುಮ್ನನ ಕಚನಿಗ್ರಹಕರವಿಲುಳಿತಮೌಳಿಯಾಗಿರ್ದ ಭಾರದ್ವಾಜನಿರವಂ ರಾಜರಾಜಂ ನೋಡಿ (ಗದಾಯು. ೪-೪೮ ವ). ೩. ಚಂಚಲ ; ಅಲ್ಲಾಡುತ್ತಿರುವ : ಮುಗಿಲೊಡ್ಡೆಂತಂತೆ ವಾತಾಹತವಿಲುಳಿತ ದೀಪಾರ್ಚಿಯೆಂತಂತೆ ನೋಡಲ್ ಸೊಗಯಿಪ್ಪೈಶ್ವರ್ಯಮುಂ ಯವ್ವನವಿಳಸನಮುಂ (ವರ್ಧಮಾ. ೭-೩೭). [ಸಂ.]

ವಿಲುಳಿತ 'ವಿಲುಲಿತ' ನೋ.

ವಿಲೂನ (ಗು). ಕತ್ತರಿಸಿದ ; ತುಂಡರಿಸಿದ ; ಛೇದಿಸಿದ : ಅವನೀನೂತಯಶಂ ಯಶೋಧವಳಿತಾಶಾಮಂಡಳಂ ಮಂಡಳಾಗ್ರವಿಲೂನಾರಿಬಲಂ (ಎಪಿ. VI. ಚಿಕ್ಕಮ. ೧೬೧-೭೭; 1137) ; ಅನ್ಯದೈವಮತಂಗಮದಹರಿ ಅನ್ಯದೈವ ಕುರಂಗ ಮೃಗರಿಪು ಅನ್ಯದೈವಲತಾ ವಿತಾನವಿಲೂನಸಿತಗಾತ್ರ (ಬಸಪು. ೫೩-೪). [ಸಂ.]

ವಿಲೂನನಾಸೆ (ನಾ). ಒಂದು ಬಗೆಯ ಮರ ; ಮೂಕೊರತಿ : ವಿಲೂನನಾ [ಪಾಠಾಂ. ವಾ]ಸೆಯ ಸುರೂಪೆಯ . . . ಕೆಂಡದಬ್ಜನೀವರನಭಿಧಾನಮು ತಳೆದ ಭೂರುಹಮೊಪ್ಪುಗುಮಾ ವನಾಂತದೊಳ್ (ರಾಜಶೇ. ೫-೫೭).

[IP ಇದು 'ಮೂಕೊರತಿ' ಎಂಬ ಶಬ್ದದ ಸಂಸ್ಕೃತೀಕರಣ]

ವಿಲೆ (ನಾ). ೧. ವರ್ಗ ; ಶ್ರೇಣಿ ; ಗುಂಪು : (೬). ೨. ವ್ಯವಸ್ಥೆ ; ಏರ್ಪಾಡು : (೬). ೩. ಮಾರಾಟ ; ವಿಕ್ರಯ : ಒಂದು ಹಸುವನ್ನೋ ಎತ್ತನ್ನೋ ಒಂದು ಪದಾರ್ಥವನ್ನೋ ಮಾರುವಂತೆ ತೂರನನ್ನು ಅವನ ಚಿಕ್ಕಪ್ಪ ವಿಲೆ ಮಾಡುತ್ತಿದ್ದನು (ಬಸ್ಕಥ. ೩೫) ; ಆ ಜಮೀನನ್ನು ಬಹಿರಂಗ ಹರಾಜಿನಲ್ಲಿ ವಿಲೆ ಪಡಿಸಬೇಕೆಂದು ಮತ್ತೆ ಅಧ್ಯೆಯಿತ್ತರು (ಅಧಿಕಾ. ೫೭) ; ಸ್ವತ್ತನ್ನು ಆರ್ಜಿಸುವುದಕ್ಕೆ ಇಟ್ಟುಕೊಳ್ಳುವುದಕ್ಕೆ ಮತ್ತು ವಿಲೆ ಮಾಡುವುದಕ್ಕೆ . . . ಅಧಿಕಾರವಿರತಕ್ಕುದು (ಭಾಧಾನ. ೧೦). ೪. ಹಂಚಿಕೆ : (೬). ೫. ತೀರ್ಮಾನ : (೬).

ವಿಲೇಬೀಳು = ನಿರ್ಣಯವಾಗು; ಮುಕ್ತಾಯಕ್ಕೆಬರು; ತಿರ್ಮಾನವಾಗು:

ಅಲ್ಲಿಗೆ ದಾಖಲಾದವನಿಗೆ ವಿಲೇಬಿದ್ದ ಕಾಗದದ ಹಾಗೆ ಭವಿಷ್ಯವೇ ಇಲ್ಲ (ಕಲನ. ೨೫೫).

[← ಆರ. ವಿಲ್ಹಾ ; ಮರಾ. ವಿಲೇ, ವಿಲ್ಹಾ, ವಿಲ್ಹೆ./ ತೆಲು. ವಿಲಿಯ]

ವಿಲೆವಾರಿ 'ವಿಲೇವಾರಿ' ನೋ.

ವಿಲೇಖನ (ನಾ). ೧. ಬರೆಯುವಿಕೆ. ೨. ಗೀಚುವಿಕೆ ; ಗೀರುವುದು. ೩. ನೇಗಿಲಿನಿಂದ ಭೂಮಿಯನ್ನು ಉಳುವಿಕೆ, – ಸಾಲುಮಾಡುವಿಕೆ. ೪. ಒಂದು ಬಗೆಯ ನರಕಶಿಕ್ಷೆ : ವಿಲೇಖನ . . . ದುರ್ಭೋಗ್ಯ ನಾನಾವಿಧಾಸಂಖ್ಯಾತ ತೀವ್ರವೇದನಾರೂಪಂಗಳಾಗಿ ಶವದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾವಿಶೇಷಮಂದನಿಸಿ (ವಿವೇಕ. ೧೫೧). [ಸಂ.]

ವಿಲೇಪನ (ನಾ). ೧. (ಸುಗಂಧದ್ರವ್ಯಗಳನ್ನು ಮೈಗೆ) ಬಳಿಯುವಿಕೆ ; ತೊಡೆಯುವಿಕೆ : ಗುರೂಪರೋಧವಶದಿಂ ಸ್ನಾನಾನ್ನಪಾನಂ ವಿಲೇಪನ ಮಾಲ್ಯಾದಿಗೆ ತಾನೊದಂ ಬಡುವನೇಂ ದೇವಂ ನಿರಾಪೇಕ್ಷನೋ (ಅಜಿಪು. ೫-೮೭). ೨. ದೇಹವನ್ನು ಸುಗಂಧಗೊಳಿಸಲು ತೊಡೆಯುವ (ಗಂಧ ಇತ್ಯಾದಿ) ಸುಗಂಧದ್ರವ್ಯ. [ಸಂ.]

ವಿಲೇಪಿ (ನಾ). ಅನ್ನದ ಗಂಜಿ : "ಗಂಜಿ ಯವಾಗೂಷ್ಟಿಕಾ ವಿಲೇಪೀನಾಮಂ" (ವಸ್ತುಕೋ. ೯೨-೪). [ಸಂ. ವಿಲೇಪೀ]

ವಿಲೇಪಿಕೆ (ನಾ). = ವಿಲೇಪಿ : "ಯವಾಗೂಃ, ಉಷ್ಣಿಕಾ, ಶ್ಯಾಣಾ (ಶ್ಯೂಣ), ತರಳಾ, ವಿಲೇಪಿಕಾ – ಈ ೫ ಗಂಜಿ" (ಹಲಾಯು. ೫೩-೧೬೫). [ಸಂ. ವಿಲೇಪಿಕಾ]

ವಿಲೇಪಿತ, ವಿಳೇಪಿತ (ಗು). ಬಳಿದ ; ಸವರಿದ. **ವಿಳೇಪಿತ** : ಅತಿಶಯಮೆಸೆದಿರೆ ಮೃದುಪಾದತಳಂಗಳನೂಡಿ ಯಾವಕದ್ರವದಿಂದಂ ಪ್ರತಿದಿನಮಾ ದೇವಿ ವಿಳೇಪಿತ ಕರ್ಮಮನೊರ್ವಳಮರವಧು ಕೆಯ್ಯೊಂಡಳ್ (ಶಾಂತಿಪು. ೯-೧೬೪). [ಸಂ.]

ವಿಲೇಪಿಸು (ಕ್ರಿ). ಬಳಿ ; ತೊಡೆ : (೫). [ವಿಲೇಪನ + – ಇಸು]

ವಿಲೇವಾಟ (ನಾ). ಮಾರಾಟ ; ವಿಕ್ರಯ : ಲಕ್ಷ್ಮಿಬಾಯಿಗೆ ಆಸ್ತಿ ವಿಲೇವಾಟ ಮಾಡಲಿಕ್ಕೆ ಅಧಿಕಾರಾನ ಇಲ್ಲ (ಗ್ರಾಮಾಯ. ೩೧೪) ; ನನ್ನ ಸ್ವಾರ್ಜಿತಆಸ್ತಿಯ ವಿಲೇವಾಟದ ಅಧಿಕಾರ ಕೇವಲ ನನಗೇ ಇರುವುದರಿಂದ ಅದರಲ್ಲಿ ಯಾರದೂ ಹಸ್ತಕ್ಷೇಪ ನಡೆಯಲಾರದು (ದೀಪಹ. II, ೧೦೪). [← ಮರಾ. ವಿಲ್ಹೇವಾಟ್ = ವ್ಯವಸ್ಥೆ]

ವಿಲೇವಾರಿ, ವಿಲೆವಾರಿ (ನಾ). ೧. ವಿತರಿಸುವುದು ; ಬಟವಾಡೆ ; ಹಂಚಿಕೆ : ಸಾಯುವ ಮೊದಲು ತನ್ನ ಆಸ್ತಿಯನ್ನೆಲ್ಲ ಮರಣಶಾಸನದ ಮೂಲಕ ವಿಲೇವಾರಿ ಮಾಡಿದ್ದ (ಗಂಗಾಕ. ೪೭) ; ನೀವು ದಣಿಗಳು. ಮನಸ್ಸು ಬಂದ ಹಾಗೆ ನೀವದನ್ನು ವಿಲೇವಾರಿ ಮಾಡಬಹುದು (ಪುಸರು. ೩೦೫). ೨. ವರ್ಗೀಕರಣ ; ವಿಂಗಡಣೆ : ಹಳೆಯ ಕಾಗದಗಳ ವಿಲೇವಾರಿ ಮಾಡಿಬಿಡೋಣ ಎಂದು ಕುಳಿತೆ (ಮನೋನಂ. ೨೨) ; ಈ ವಿಲೇವಾರಿಗಳ ಪೈಕಿ ಯಾವುದರಿಂದ ಗೋವಿಂದನಿಗೆ ಹೆಚ್ಚು ತೃಪ್ತಿಯಾಗುತ್ತದೆಯೋ ಸಾಧ್ಯವಿದ್ದರೆ ಅದನ್ನು ಮಾಡುತ್ತಾನೆ (ಧಾರಾ. ೬). ೩. ಮಾರಾಟ ; ವಿಕ್ರಯ : ಕೆರೆ ಕಟ್ಟಿಸಿದರೆ ತನ್ನ ಜಮೀನೆಲ್ಲ ಮುಳುಗಡೆಯಾಗುತ್ತದೆ ಎಂದು ಭಾವಿಸಿ ತನ್ನ ಆಸ್ತಿ ಪಾಸ್ತಿಯನ್ನೆಲ್ಲ ವಿಲೇವಾರಿ ಮಾಡಲಾರಂಭಿಸಿದ (ನಸ್ನೂರು. ೫). **ವಿಲೆವಾರಿ** : ೨. ಎರಡನೇ ವಿಲೆವಾರಿಯ ಯಾದಿಯಲ್ಲಿ ಯಾವ ಜೀನಸಿನ ತೂಕ ಎಷ್ಟು ಇರುತ್ತದೆ (ಮುಂಬ್ಯಾ. ೯ ಪ್ರಸ್ತಾವನೆ). ೪. ವ್ಯವಸ್ಥೆ ; ವಿಪರ್ಾಡು : ಅಜ್ಜ ತೀರಿಕೊಂಡ ಮೇಲೆ ಆಗಬೇಕಲ್ಲ ವಿನಾದರೊಂದು ವಿಲೆವಾರಿ (ಕುಡಿಕೂ. ೧೩೩).

[← ಮರಾ. ವಿಲ್ಹೇವಾರೀ, ವಿಲ್ಹೇವಾರ್./ ತೆಲು. ವಿಲೇವಾರಿ]

ವಿಲೋಕ (ನಾ). ನೋಡುವಿಕೆ ; ಅವಲೋಕನ : ಲೋಕಾಲೋಕಾವಿತತವಿಲೋಕಂ ಜ್ಞಾನಂ ಸಮೂರ್ಜಿತಾವದ್ಯವಿದಶ್ರೀಕಂ ಚರಿತ್ರಮಜಿ ಪರಲೋಕಮುಮಿಾ ಲೋಕಮುಂ ತದಾಯತ್ತಂಗಳ್ (ಶಾಂತಿಪು. ೬-೪೭). [ಸಂ.]

ವಿಲೋಕನ, ವಿಳೋಕನ (ನಾ). ೧. ನೋಡುವಿಕೆ ; ಅವಲೋಕನ. ೨. ನೋಟ ; ದೃಷ್ಟಿ : ಮದೀಯಮನೋಗತಕಾಮರಾಗಸಾಗರದೊದವಿಂಗೆ ನಲ್ಲಳ ವಿಲೋಕನ ಚಂದ್ರಿಕೆಯೊಂದೆ ಸಾಲದೇ (ಪಂಪಭಾ. ೫-೧೧) ; ಮನಸಿಜನ ವಿಲೋಕನಾಕರ್ಷಣಸ್ಥಾನದಂತೆ ಪಂಚಾಂಡಕಪರಿಣತಿಯಂ . . . ಅತಿಶಯಮಾದ ಚಿತ್ರಶಾಲೆಯಿಂ ಮನಂಗೊಳಿಸಿ (ಮಲ್ಲಿಪು. ೨-೭೪). **ವಿಳೋಕನ** : ೨. ಲಳಿತಮಧುರಂ ಲಜ್ಜಾಳೋಳಂ ಸ್ಮರಾಕುಳಿತಂ ಮನಂದಳಿತಮಪಸನ್ಮುಗ್ಧಂ ಸ್ನಿಗ್ಧಂ ವಿಳೋಕನಮೋಪಳಾ (ಪಂಪಭಾ. ೪-೭೭) ; ಅನಿಮಿತ್ತದರಸ್ಮಿತದಿಂದನಕ್ಷರಾಳಾಪದಿಂದಸಂಕೇತವಿಳೋಕನದಿಂದಕಾರಣಾಸಂದನದಿಂದುತ್ತಾನ ಶಯನದಿಂ ಹರಿಯೆಸೆದಂ (ಜಗವಿ. ೩-೨೯). [ಸಂ.]

ವಿಲೋಕನಂಗೆಯ್ (ಕ್ರಿ). ನೋಡು ; ಅವಲೋಕಿಸು : ತನ್ನ ಮನೆಗೆ ವಂದು ನಿಜಾಂಗನಾಮುಖವಿಲೋಕನಂಗೆಯ್ದು (ಸುಕುಮಾ. ೩-೧೫ ವ) ; ಕೈಕೆಯ ಮುಖಕಮಲ ವಿಲೋಕನಂಗೆಯ್ದು . . . ವಿಕಸಿತಹೃದಯಕಮಲನುಮಾಗಿ (ಪಂರಾಮಾ. ೬-೧೧೩ ವ).

[ವಿಲೋಕನ + ಕೆಯ್]

ವಿಲೋಕಿತ (ಗು). ೧. ನೋಡಲಾದ ; ಅವಲೋಕಿತವಾದ. (ನಾ). ೨. ನೋಟ ; ದೃಷ್ಟಿ. ೩. [ನಾಟ್ಯ] ನೋಟದ ಒಂದು ಭಂಗಿ ; ಕಣ್ಣಿನ ಆಲಿಯ ಎಂಟು ಬಗೆಯ ಚಲನೆಗಳಲ್ಲಿ ಒಂದು ; IP "ಹಿಂದಕ್ಕೆ ತಿರುಗಿ ನೋಡುವುದು" (ಲಾಸ್ಯರಂ. ೨೮೫ ಗದ್ಯಾನುವಾದ) : ಸಮ, ಸಾಚಿ, ಅನುವೃತ್ತ, ಅವಲೋಕಿತ, ವಿಲೋಕಿತ, ಉಲ್ಲೋಕಿತ, ಆಲೋಕಿತ, ಪ್ರವಿಲೋಕಿತ — ಈ ಎಂಟು ವಿಷಯಾಭಿಮುಖ ಆಲಿಯ ಭೇದಂಗಳ್ (ಲಾಸ್ಯರಂ. ೩-೬೩ ವ) ; ಕಣ್ಣು ಆಲಿಗಳ ೮ ಚಲನೆಗಳಿವೆ. ಅವು ಯಾವುವೆಂದರೆ ೧. ಸಮ. ೨. ಸಾಚಿ . . . ೫. ವಿಲೋಕಿತ . . . ೮. ಅವಲೋಕಿತ (ಅಭಾನ್ಯ. ೪೭). [ಸಂ.]

ವಿಲೋಚನ, ವಿಳೋಚನ (ನಾ). ಕಣ್ಣು ; ನೇತ್ರ : "ಈಕ್ಷಣ ನಯನ ವಿಲೋಚನ ಚಕ್ಷುರ್ನೇತ್ರಾಂಬಕಾಕ್ಷಿಗಳ್ ದೃಙ್ನಾಮಂ" (ವಸ್ತುಕೋ. ೭೦-೧೬) ; ಕಾಳಿಗದ ಕರ್ಣಾಮೃತದ ಮಳೆಗಾಲ ಮಾದು ವಿಲೋಚನದ ಮಳೆಗಾಲವಾಯ್ತೆಂದ (ಕುವ್ಯಾಕ. ೨೬-೧). **ವಿಳೋಚನ** : ಜಳಧಿಜೆಯ ರಾಗರಂಜಿತವಿಳೋಚನಂ ವರದ ಕರದ ವ್ಯೂಗರೇಜೊಸುಗುಂ (ವಸ್ತ್ರವಂ. ೨-೧೪). [ಸಂ.]

ವಿಲೋಚನದ್ವಯ (ನಾ). ಎರಡು ಕಣ್ಣುಗಳು : ಭೂಧವನ ವಿಲೋಚನದ್ವಯಮದೇಂ ಮುದವಾಂತುದೊ ರಾಗರಂಜಿತಂ (ರಾಜಶೇ. ೪-೪೬). [ಸಂ.]

ವಿಲೋಚನವಾರಿ (ನಾ). ಕಣ್ಣೀರು ; ಕಂಬನಿ : ನನೆದುದಂತಃಕರಣ ಮಧುಸೂದನನ ಸೂಕ್ತಿಸುಧಾರಸದಿ ನೆಜ್ ನೆನೆದುದಾತನ ಮೈ ವಿಲೋಚನವಾರಿಪೂರದಲಿ (ಕುವ್ಯಾಕ. ೧೭-೨೩). [ಸಂ.]

ವಿಲೋಚನಾಂಬು (ನಾ). = ವಿಲೋಚನವಾರಿ : ಮಲಯಾನಿಳನಿಸಕದಿನುದಿರ್ವ ಲರ್ಗಳ ಮಕರಂದಮಾಲೆಗಳ್ಪರಿದತ್ತಂ ನೆಲದೊಳ್ಪಿಟ್ಟುಂ ಪಡೆದುವು ವಿಲೋಚನಾಂಬು ಗಳನಗ್ಗಳಂ ವಿರಹಿಗಳಾ (ಕವಿಕಾ. ೩-೧೩೭) ; ಮುಂದುವರಿವ ವಿಲೋಚನಾಂಬುಗಳಿಂದ ಸೈರಣೆ ಮಿಗದು ಸಂಜಯನಂದು ದೊಪ್ಪನೆ ಕೆಡೆದು ಹೊರಳಿದನರಸನಂಘ್ರಿಯಲಿ (ಕುವ್ಯಾಗ. ೩-೧೭).

ವಿಲೋಪ (ನಾ). ೧. ನಾಶ ; ಹಾಳು. ೨. [ಜೈನ] ಅಸ್ತೇಯವ್ರತಕ್ಕೆ ವಿರೋಧಕರವಾದ ಕೃತಿ ; ಅನ್ಯರ ಸಂಪತ್ತನ್ನು ಹಾಳುಮಾಡುವುದು : ಹೀನಾಧಿಕವಿನಿಮಾನ ಸ್ತೇನಾ[ಹೃತ]ದಾನ ಸದೃಶಮಿಶ್ರವಿಲೋಪಸ್ತೇನಪ್ರಯೋಗ ಮೆಂದಿವು ತಾನಸ್ತೇಯವ್ರತಕ್ಕತಿಕ್ರಮಮಕ್ಕುಂ (ಸುಕುಮಾ. ೬-೧೫೫). [ಸಂ.]

ವಿಲೋಪನ (ನಾ). ೧. ಬಿಡುವುದು ; ಕಳೆದುಕೊಳ್ಳುವುದು ; ತ್ಯಜಿಸುವುದು : ಭರತೇಶ್ವರನಾಮಪ್ಪೊಡೆ ಚರಮಾಂಗರುಮಖಿಲಮಲವಿಲೋ[ಪಾಕಾಂ. ಲೇ]ಪನದಿಂದಂ ಪುರುಪರಮೇಶ್ವರನೆನ್ದಿದ ಪರಮಪದಂ ನಮಗಮದುವೆ ನೆಲೆ ಪೆಱತುಂಟೇ (ಆದಿಪು. ೧೭-೫೭). ೨. [ಜೈನ] ನೀಚಗೋತ್ರ ಆಸ್ರವಕಾರಣಗಳಲ್ಲಿ ಒಂದು : ಯಶೋವಿಲೋಪನಾತ್ಮಕೀರ್ತ್ಯುತ್ಪಾದನ ಗುರುಪರಿಭವಕಾರಣದುದ್ಭಟನದೋಷಾಪನ . . . ತೀರ್ಥಕರಾದಿಕ್ಲೇಪಾದಿತತ್ಪಪಂಚಂಗಳ್ ನೀಚೈರ್ಗೋತ್ರಾಸ್ರವಕಾರಣಮೆಂಬುದು ಸೂತ್ರಾರ್ಥ೦ (ತತ್ತ್ವಪ್ರ. ೨೬೭). [ಸಂ.]

ವಿಲೋಭನ (ನಾ). ಮೋಹಗೊಳಿಸುವಿಕೆ ; ಆಕರ್ಷಿಸುವಿಕೆ. [ಸಂ.]

ವಿಲೋಮ (ಗು). ೧. ತಿರುಗುಮುರುಗಾದ ; ವಿಪರ್ಯಯವಾದ : ಅಮರಸರೋರುಹ ಮಿತ್ರಗಣಂ . . . ಪಾವಕಂ ಮರುತಂ ಕ್ರಮದೊಳ್ ಬಂದನುಲೋಮ ವಿಲೋಮ ಪದದ್ವಯದಿಂ ನಿಯಮಂ [ಪಾಕಾಂ. ಬಂದನುಲೋಮದೊಳೊಂದಿ ಪದದ್ವಯಂ ನಿಯತಂ] (ಛಂದೋಂಬು. ೩-೨೦೯). ೨. ಪ್ರತಿಕೂಲವಾದ ; ವಿರುದ್ಧವಾದ ; ವಿಪರೀತವಾದ. ೩. ಕೂದಲಿಲ್ಲದ. (ನಾ). ೪. ವ್ಯತ್ಯಾಸ ; ತಿರುಗುಮುರುಗು ; ವಿಪರ್ಯಯ : "ವಿಪರೀತಂ ವ್ಯತ್ಯಾಸಂ ವಿಪರ್ಯಯಂ ವ್ಯತ್ಯ[ಯಂ]

ವಿಲೋಮಮದಕ್ಕುಂ'' (ವಸ್ತುಕೋ. ೧೧೨-೬) ; ಆದಿಕವಿ ಪಂಪನೆಂದನುವಾದಿಸೆ ವಾದಿಸಿ ವಿರೋಧಿ ವಿಪರೀತತೆಯಿಂದೋದೆ ವಿಲೋಮದೆ ಪೆಸರಂ ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ (ಧರ್ಮನಾ. ೧-೩೬). ೫. ನಾಯಿ. ೬. ಹಾವು. ೭. ಬಾವಿಯಿಂದ ನೀರು ಎತ್ತಲು ಹಾಕಿರುವ ಚಕ್ರ ; ಏತ. ೮. [ಸಂಗೀತ] ಹಾಡುವಿಕೆಯ ಒಂದು ಕಾಲಪ್ರಮಾಣ : ಪಲ್ಲವಿಯ ಸಹಜಕಾಲಪ್ರಮಾಣ ಸ್ಥಿರವಾಗಿಟ್ಟು ಆ ಕಾಲದ ಓಟಕ್ಕೆ ಸಾಹಿತ್ಯ ವಿಳಂಬಿಸಿ, ಎರಡು ತಗ್ಗಿನ ವಿಳಂಬಪ್ರಮಾಣದಲ್ಲಿ ಹಾಡುವುದು ವಿಲೋಮ ಎನಿಸಿಕೊಳ್ಳುತ್ತದೆ (ಸಂಗೀಚಂ. ೯೩). 'ಅನುಲೋಮ' ಪರಾ. [ಸಂ.]

ವಿಲೋಮಕ್ರಮ (ನಾ). ೧. ವಿರುದ್ಧವಾದ ಕ್ರಮ ; ವ್ಯತ್ಯಸ್ತವಾದ ರೀತಿ : ಒಬ್ಬ ವ್ಯಕ್ತಿಯಲ್ಲಿ ಕ್ರೂರತನಕ್ಕಿಂತ ಹೆಚ್ಚು ದಯಾಬುದ್ಧಿಯೂ . . . ಸೋಮಾರಿತನಕ್ಕಿಂತ ಹೆಚ್ಚು ಉತ್ಸಾಹವೂ ಅಥವಾ ಆ ಗುಣಗಳೀ ವಿಲೋಮಕ್ರಮದಲ್ಲಿ ಸಾಕಷ್ಟು ಪ್ರಮಾಣದಲ್ಲಿರುತ್ತವೆಂದು ಹೇಳಬಹುದು (ಪುನರು. ೨೫೩). ೨. [ಸಂಗೀತ] ತಗ್ಗಿನ ವಿಳಂಬ ಪ್ರಮಾಣದಲ್ಲಿ ಹಾಡುವ ಒಂದು ಕ್ರಮ : ಪಲ್ಲವಿಯನ್ನು ಅನುಲೋಮವುತ್ತು ವಿಲೋಮಕ್ರಮದಲ್ಲಿ ಹಾಡುವುದು ಸಂಪ್ರದಾಯ (ಸಂಗೀಚಂ. ೯೩). [ಸಂ.]

ವಿಲೋಮಕ್ರಿಯೆ (ನಾ). ವಿರುದ್ಧವಾದ ಕ್ರಿಯೆ ; ನಿಷೇಧದ ಕ್ರಿಯೆ : ಪ್ರಕೃತಿಯ ಪೂರ್ವದಿಕಾರದೊಳುಕಾರದೊಳ್ ಹ್ರಸ್ವದೀತ್ವಮೋತ್ವಂ ಬಹುಳಂ ಪ್ರಕಟಂ ತರ್ಬರ್ಗಳ ಮೊದಲಕಾರದೊಳ್ ದೀರ್ಘವಿಧಿ ವಿಲೋಮಕ್ರಿಯೆಯೊಳ್ (ಶಮದ. ೨೩೮).

[ಸಂ. ವಿಲೋಮಕ್ರಿಯಾ]

ವಿಲೋಲ, ವಿಳೋಳ (ಗು). ೧. ಹೊಯ್ದಾಡುವ ; ಚಂಚಲವಾದ : ಚಾರುವಿಲೋಲಕಟಾಕ್ಷಪಾತಸೌಂದರಪರಿವಾರದೇವಿಯರಿರಾ (ಆದಿಪು. ೩-೪) ; ಸಾಲಿಡೆ ಕಟಾಕ್ಷಮಾಲೆ ವಿಲೋಲತರಭ್ರಮರಮಾಲೆಯೇಟಿಸೆ . . . ಮಾಲಿಗಾರ್ತಿಯರೆಸವರ್ (ಜಗವಿ. ೨-೨೬). ೨. ಹೊರಳುವ ; ಉರುಳುವ. (ನಾ). ೩. ಹೊಯ್ದಾಟ ; ನಡುಕ : ''ವಿಲೋಲಮೆ[ಪಾಠಾಂ. ಲೋಲಮೆ] ನಡುಕಂ'' (ಚಕುನಿ . II. ೩೯). ೪. ತಲ್ಲೀನನಾದವನು ; ಲೋಲುಪ : ಭಕ್ತಿವಿಲೋಲ ದೀಪದ ಕಲಿಯನಾರು ವಿಶಾಲಘನಪುಷ್ಪಕವಿಮಾನಂ ಮುಂದೆ ಬಂದಿರಲು ಆ ವಿಮಾನವನೇಱಿ (ಬಸಪು. ೧೬- ೨೯). ವಿಳೋಳ : ೧. ವಿಳೋಳನೀಳಾಳಕೆ ಚಂದ್ರಾನನೆ ಜಾಕವ್ವೆ ದಲಾ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ (ಪಂಪಭಾ. ೧-೩೯). [ಸಂ.]

ವಿಲೋಲತೆ (ನಾ). ೧. ಅಸ್ಥಿರತೆ ; ಹೊಯ್ದಾಟ. ೨. ಅತ್ಯಾಸಕ್ತಿ ; ಲೋಲುಪತೆ : ಗಂಗಾಮೌಲಿ . . . ಬೋಳವಿಸುತಂ ನಂದಿಯಂ ಕರುಣಾಲಸದಮೃತ ರಸದೊಳದ್ದಿ ವಿಲೋಲತಾಲೋಕನದಿನೀಕ್ಷಿಸುವಾಗಳ್ (ಬಸಪು. ೨-೩೩) ; ಪುಣ್ಯಗಣ್ಯ ಮಂದಾಕಿನಿಯ ವಾಹಿನಿಯ ಕಂದರಕ್ರೀಡಾವಿಲೋಲತೆಯ ನೀಲಲೀಲಾಶೀಲಸಲಿಲ ಕಲ್ಲೋಲದಿಂ . . . ಮೆರೆಯುವಾ ಚಿತ್ರಕೂಟಾದ್ರಿಯದೊ ಕಣ್ಗೊಳಿಸುತಿಹುದಿಲ್ಲಿ (ಶ್ರೀರಾಮಾ. ೧೨೬-೩೪). [ಸಂ. ವಿಲೋಲತಾ]

ವಿಲೋಲುಪ (ಗು). ೧. ಅತಿಶಯವಾಗಿ ಇಚ್ಛಿಸುವ ; ಅತ್ಯಾಸಕ್ತಿಯಿಂದ ಕೂಡಿದ. (ನಾ). ೨. ಅತ್ಯಾಸಕ್ತನಾದವನು ; ತಲ್ಲೀನನಾದವನು : ಬಾಲೆ ನಯವಿನಯೋಕ್ತಿಯಲಿ ತನ್ನಾಲಯಕೆ ಕೊಂಡೊಯ್ದು ಭಕ್ತಿವಿಲೋಲುಪನನಭ್ಯಂಗನಾದಿ ಕ್ರಿಯೆಗಳಿಂ ತಣಿಸಿ (ಬಸಪು. ೨೭-೫೯). [ಸಂ.]

ವಿಲೋಹಿತ (ನಾ). ಕೆಂಪುಬಣ್ಣ ; ರಕ್ತವರ್ಣ : ಕಣ್ಗೊನೆ ಜೋಡಾಡೆ ವಿಲೋಹಿತಂ ವಿರಹಿರಕ್ತಾಕ್ತಾಂಗಜಾಸ್ತ್ರಂಗಳಂ ವನಿತಾನೀಕಮದಿಂಬುವೆತ್ತು ಪೊಱಮಟ್ಟೆಯ್ದಿತ್ತು ಕಾಸಾರಮಂ (ರಾಜಶೇ. ೧೦-೯೯). [ಸಂ.]

ವಿಲ್ಮನ (ನಾ). (?) : ಫಣಿಮಣಿ ಅನ್ತು ಭೋಗಿಫಣದುಳ್ಮಣಿ ವಿಲ್ಮನದೊನ್ ರಣಮುಖದುಳ್ಳೆ ಕೋಲನೆರಿಯರ್ಕ್ಕುಂ (ಎಕ. XI. ಚಿತ್ರದು. ೪೩-೧ ; ಸು. 500 ?). [?]

ವಿಲ್ಲು, ವೀಲು (ನಾ). ಉಯಿಲು ; ಮೃತ್ಯುಪತ್ರ : ನಮ್ಮ ತಂದೆ ತಮ್ಮ ಸ್ವಯಾರ್ಜಿತಆಸ್ತಿಯನ್ನು ನನ್ನ ಹೆಸರಿಗೆ ವಿಲ್ಲು ಮಾಡಿದ್ದಾರೆ (ರೂಢಿ). ವೀಲು : ಅವರು ಗೋಪ್ಯವಾಗಿ ವಕೀಲರನ್ನು ಕರೆಯಿಸಿ . . . ಮಾಲಿನಿಯ ಹೆಸರಿನಲ್ಲಿ ವೀಲು ಬರೆದಿಟ್ಟರು (ಏಧಿಷ್ಠ. ೧೮೦) ; ಮನುಷ್ಯನು ವೀಲುಮಾಡದೆ ಫಕ್ಕನೆ ಬಿದ್ದು ಹೋದರೆ ಅವನ ಆತ್ಮೀಯವಾದ ನೆಂಟರಿಷ್ಟರು . . . ಹಣ ದುರ್ವ್ಯಯ ಮಾಡುತ್ತಾರೆ (ನಿಷ್ಕಾಮ. ೩). [<— ಇಂ. Will]

ವಿವಂಚನೆ (ನಾ). ೧. ವಿಚಾರ ; ಚಿಂತೆ ; ಆಲೋಚನೆ : ವಿವಂಚನೆಗೊಳಗಾದ ಭಗ್ನಹೃದಯಕ್ಕೆ ರಾಜಣ್ಣನ ಪತ್ರ ಶಾಂತಿಯ ಅಮೃತಸೇಚನೆ ಮಾಡಿತ್ತು (ಮರಳಿ. ೧೪೯). ೨. ಮೋಸ ; ವಂಚನೆ : ಸ್ನೇಹಿತರಿಗೆ ಮಿತ್ರದ್ರೋಹ ಮಾಡಿದ! ನಮ್ಮಂಥಾ ಹಿತಚಿಂತಕರಿಗೆ ವಿವಂಚನಾ ಮಾಡಿದ (ಸಮಾಜೀ. ೭೨೭). [ಸಂ. ವಿವಂಚನಾ]

ವಿವಂಚಿತ (ಗು). ವಂಚಿತವಾದ ; ತಪ್ಪಿಹೋದ : ಕಕ್ಕಿಯ ನಿರ್ದೇಶನದಿಂದ ವಿವಂಚಿತಳಾದ ಅನಾಥೆಗೆ, ಈಗ ತಿಳಿದಿದ್ದುದು ತನ್ನ ಜೀವನದ ವ್ಯಾವಹಾರಿಕ ನಡವಳಿಕೆಯಲ್ಲಿ ದೊಡ್ಡಪ್ಪನ ನಿರ್ದೇಶನವನ್ನು ಪಾಲಿಸದೆ ಬೇರೆ ದಾರಿಯೇ ಇಲ್ಲವೆಂಬ ಸತ್ಯ (ವಾತ್ಸಲ್ಯ. ೧೪೫). [ಸಂ.]

ವಿವಂದ (ನಾ). ೧. ಅತಿಯಾದ ಬಂಧನ : ವಿಬಂಧ — ವಿವಂದ (ಶಮದ. ೨೫೮ ಪ್ರಯೋ). ೨. ಒಬ್ಬ ಮನುಷ್ಯನು ತಲೆಯ ಮೇಲೆ ಹೊರಬಹುದಾದಷ್ಟು ಹೊರೆ , — ಭಾರ : ''ವಿವಧಂ ವಿವಂದವೆನೆ ತಲೆವೊಱೆಯೆನಿಕ್ಕು'' (ಮಂಗರಾ. ೬೩-೨೬). 'ವಿವಧ' ಹೋ. [< ಸಂ. ವಿಬಂಧ]

ವಿವಕ್ಷಿತ (ಗು). ೧. ಹೇಳಲು ಬಯಸಿದ ; ಹೇಳಲು ಉದ್ದೇಶಿಸಿದ : ಕುಱಿತಂತೆ ಪೇಳ್ದ ಪದದೊಳ್ ಮೆಱೆಯದೊಡೆಲ್ಲಂ ವಿವಕ್ಷಿತಾರ್ಥಮಶೇಷಂ ಪೆಱತೊಂದಲ್ಲಿಲ್ಲದುಮುಮನಱಿವವರಿಟ್ಟಱಿಯೆ ಪೇಳ್ದೊಡದು ನೇಯಾರ್ಥಂ (ಕವಿರಾ. ೧-೧೦೧). ೨. ಬಯಸಿದ ; ಅಪೇಕ್ಷೆಪಟ್ಟ. ೩. ಉದ್ದೇಶಿಸಿದ ; ಉದ್ದೇಶದಿಂದ ಕೂಡಿದ. ೪. ಮನೋಹರವಾದ ; ಸುಂದರವಾದ : (ಕ). (ನಾ). ೫. ಚೆಲುವಾದುದು ; ಮನೋಹರವಾದುದು : ಕಲ್ಯಾಣಾರ್ಥಿಯಪ್ಪಾತಂ ವಿವಕ್ಷಿತಮಪ್ಪ ವಸ್ತುವಂ ಪೇಳ್ವವರ್ಗಳು ಮುನ್ನಮಾಪ್ತಾಗಮವಕ್ತೃಕಥೆ ಶ್ರೋತೃವೆಂಬಿವಂ ಪೇಳ್ವುದು (ಚಾವುಂಪು. ೫). ೬. ಪ್ರಮುಖವಾದುದು ; ಮುಖ್ಯವಾದುದು : ಕಡೆಯ ಎರಡರ್ಥಗಳೂ ಗ್ರಂಥಕಾರನಿಗೆ ಇಲ್ಲಿ ವಿವಕ್ಷಿತ (ಧ್ವನ್ಯಾಲೋ. ೨೫). ೭. ಒಳ್ಳೆಯದಾದುದು ; ಶ್ರೇಷ್ಠವಾದುದು : ''ಒಳ್ಳಿತ್ತಱಲ್ಲಿಯುಂ ವಿವಕ್ಷಿತಮೆಂಬುದು'' (ಹಲಾಯು. ೧೩೩-೧೬). ೮. ಗುರಿ ; ಉದ್ದೇಶ. ೯. ಅರ್ಥ ; ಭಾವ. [ಸಂ.]

ವಿವಕ್ಷಿಸು (ಕ್ರಿ). ೧. ಬಯಸು ; ನಿರೀಕ್ಷಿಸು : ಸ್ತ್ರೀಪುತ್ರದಾಯಾದ್ಯರತ್ನಗಂದಾತ್ಮ ರಕ್ಷಣೆಯಂ ವಿವಕ್ಷಿಸಿಯುಂ (ಚಂದ್ರಪ್ರ. ೨-೬೦ ವ). ೨. ವಿವರಿಸು ; ಸ್ಪಷ್ಟಗೊಳಿಸು : ಸ್ಥಾವರವಿಷಹರಣಮಂ ವಿವಕ್ಷಿಸಿ ಪೇಳ್ದೆಂ (ಖಮದ. ೨-೧). ೩. ಪರ್ಯಾಲೋಚಿಸು ; ವಿಚಾರಮಾಡು : ಮೋಕ್ಷವಿವರಿಗಾವ ಗಹನವಂದೊಲ್ದು ವಿವಕ್ಷಿಸುತಿರ್ದರಲ್ಲಲ್ಲಿ (ಭರಚ. ೭೦-೧೧೬). [ವಿವಕ್ಷೆ + – ಇಸ್ಸು]

ವಿವಕ್ಷೆ (ನಾ). ೧. ವಕ್ತೃವಿನ ಇಚ್ಛೆ , — ಆಸೆ : ಅಲ್ಲಿ ವರ್ತಿಸುವುತ್ಸರ್ಪಣಾವಸರ್ಪಣಯುಗಸ್ವರೂಪನಿರೂಪಣವಿವಕ್ಷೆಯಿಂ ಮುಖ್ಯವ್ಯವಹಾರನಯದೊಳುಭಯಾತ್ಮಕಮೆನಿಪ್ಪ ಕಾಲಸ್ವರೂಪಮೆಂತೆನೆ (ಪಂರಾಮಾ. ೧-೪೫ ವ) ; ಮೋಕ್ಷಶಾಸ್ತ್ರವನಾತ್ಮತತ್ವವಿವಕ್ಷೆಯಲಿ ವಿವರಿಪೆನು (ನಿಭಾಗ. ೩-೧೨-೬). ೨. ವಿವರಣೆ ; ಸ್ಪಷ್ಟೀಕರಣ : ಪರ್ಯಾಯಗಳ ವಿವಕ್ಷೆಯಿಲ್ಲದೆ ಸಂಕ್ಷೇಪದಿಂದ ಬರಿಯ ವಸ್ತುವನ್ನು ಹೇಳುವುದಕ್ಕಿಚ್ಛಿಸಿದರೆ ಆಗ ವಸ್ತುವು ಬರಿಯ ದ್ರವ್ಯರೂಪವಾಗಿ ತೋರುತ್ತದೆ (ಭಾರದ. ೧೮೦). 'ದ್ರವ್ಯವಿವಕ್ಷೆ' ಪರಾ. ೩. ವಿಂಗಡಣೆ ; ವಿಭಜನೆ : ಈ ಬಂಧೋದಯಪ್ರಕೃತಿಗಳ್ಗೆ ಭೇದಾಭೇದವಿವಕ್ಷೆಯಿಂದಂ ಸಂಖ್ಯೆಯಂ ಪೇಳ್ದಪರು (ಗೊಮ್ಮಸಾ. ೬-೫) ; ದ್ರಾವಿಡಭಾಷೆಗಳಲ್ಲಿ ಲಿಂಗವಿವಕ್ಷೆಯು ಉಳಿದ ಆರ್ಯಭಾಷೆಗಳಂತೆ ಅಸ್ಪಷ್ಟವಾಗಿರದೆ ಕ್ರಮಬದ್ಧವಾಗಿದೆ (ಭಾಷಾಶಾ. ೩೯). ೪. ಅರ್ಥ ; ಭಾವ : ಸರ್ವದಾ ರಸಪರವಾದ ವಿವಕ್ಷೆಯೇ ಹೊರತು, ತಾನೇ ಪ್ರಧಾನವೆಂಬ ಭಾವನೆಯು ಸರ್ವಥಾ ಇಲ್ಲದಿರುವುದು (ಧ್ವನ್ಯಾಲೋ. ೮೧). [ಸಂ. ವಿವಕ್ಷಾ]

ವಿವಕ್ಷೆಗೆಯ್ (ಕ್ರಿ). ಪರ್ಯಾಲೋಚಿಸು ; ಭಾವಿಸು : ಮುನಿಯದ ಕೂರದ ಮುನಿಸದ ಮುನಿಪತಿ ಭಾವಿಪೊಡೆ ತಾನೆ ಜಿನಪತಿಯಲ್ತೆ ಎಂದು ವಿಶುದ್ಧಾಂತರಂಗದಿಂ ವಿವಕ್ಷೆಗೆಯ್ಯುತ್ತುಂ (ಸುಕುಮಾ. ೪-೩೭ ವ). [ವಿವಕ್ಷೆ + ಕೆಯ್]

ವಿವದಿ (ನಾ). ವಿವಾದ ಮಾಡುವವನು : ನ್ಯಾಯಾಧಿಪತಿ ತನ್ನ ಮತಿ ಮನಸುಗಳನೆಲ್ಲ ಸ್ವೀಯಲಾಭಸ್ಮರಣೆಯುಳಿದು ವಿವದಿಗಳಾದಾಯನಿರ್ಣಯಕೆ ಯೋಚಿಸುವಂತೆ (ಮಂಕುಕ. ೮೧೪). [< ಸಂ. ವಿವಾದಿನ್]

ವಿವಧ (ನಾ). ೧. (ಒಬ್ಬ ಮನುಷ್ಯನು ತಲೆಯ ಮೇಲೆ ಹೊರಬಹುದಾದಷ್ಟು) ಭಾರ,— ಹೊರೆ ; ತಲೆಹೊರೆ : "ವಿವಧಂ ವಿವಂದಮೆನೆ ತಲೆವೊಱೆಯೆನಿಕ್ಕು" (ಮಂಗರಾ. ೭೩-೨೬). ೨. ದಾರಿ ; ಮಾರ್ಗ. ೩. ಸಾಮಾನುಗಳನ್ನು ಹೊರಲು ಹೆಗಲ ಮೇಲೆ ಇಟ್ಟುಕೊಳ್ಳುವ ಅಡ್ಡೆ ; ಕಾವಡಿ: "ವಿವಧಃ, ವೀವಧಃ — ೨ ಹೊರಗಿನಿಂದ ಊರೊಳಕ್ಕೆ ಧಾನ್ಯಾದಿಗಳು ಬರುವಿಕೆ. ಪ್ರರೋಕ್ತಿಗೆ ಬಂದಿರುವ ಅನಾಡು ಕಾವಡಿ, ದಾರಿ" (ಸಿದ್ಧಾಂತಿ. ೬೯೭). [ಸಂ.]

ವಿವರ (ನಾ). ೧. ತೂತು ; ರಂಧ್ರ : ವಿವರ [ಪಾಠಾಂ. ವಿರಳ]ವಿಲ್ಲದ ಮಣಿಗೆ ದಾರದ ಹಂಗೇಕೆ (ಮೋಳಮಾ. ೧೦೫-೪೯). ೨. ಕಂಡಿ ; ಸಂದು : ವಿವರಂಗಳಿಂದಮೊಗೆ ವಗುರುವ ಪೊಗೆ ನಾರಚಿಕೆ ಮೇಲೆ ಮುಸುಱಿದ ಭೃಂಗೀನಿವಹದ ಗಱಿ ಗಱಿಗೆಣೆಯೆನೆ ಗವಾಕ್ಷಮಂಗಜನ ದೊಣೆಗೆ ತೊಣೆಯೆನಿಸಿರ್ಕುಂ (ವರ್ಧಪು. ೧-೬೨). ೩. ಬಿಲ ; ಕುಳಿ : ಮಹಾಹತಕೆಯೆನಿಪ ಮಂದಭಾಗ್ಯೆಯಂ ಭೋಂಕನೆ ಕಂಡು ಮೂರ್ಛೆವೋಗಿ ಬಿೞ್ದು ಪಾತಾಳತಲವಿವರಮಂ ಪೊಕ್ಕಂತೆ ಮಹಾಂಧಕಾರಂ ಕವಿಯೆ (ಕಾದಂಪೂ. ೯೧೯) ; ಎಲ್ಲೆ ವಾನರನೇ ಈ ವಿವರವನ್ನು ಮಯನೆಂಬ ಹೆಸರಿನ ದೈತ್ಯನು ನಿರ್ಮಿಸಿರುವನು (ತುಳಸೀ. ೨೫೯). ೪. ವಿಸ್ತಾರ ; ಹರಹು : ಮಾಯಾವಿ ತಾಂ ಮೆಯ್ಗರದನೊಯ್ಯನೆಯೆನುರ್ಗಿ ತೃಣಸಂಛನ್ನಧರಣಿಯ ಮಹಾಗುಹಾವಿವರಮಂ (ಶ್ರೀರಾಮಾ. ೨೭೯-೪೨). ೫. ಕುಂದು ; ದೋಷ. ೬. ವ್ಯತ್ಯಾಸ ; ವಿಭಿನ್ನತೆ. ೭. ವಿಸ್ತೃತವಾದ ಹೇಳಿಕೆ ; ಕೂಲಂಕಷವಾದ ವಿವರಣೆ : ಇನ್ನು ಆಚಾರಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದೊಡೆ (ಆದಪ್ರ. ೫-೧೨) ; ಶ್ರೀರಂಗಪಟ್ಟಣದಲ್ಲಿ ದವಲತ್ತು ಮಾಡಿದ ನವಾಬಹೈದರಲ್ಲಿ ಖಾನಬಹದರವರ ದರಬಾರಿನ ವರ್ತಮಾನದ ವಿವರ (ಹೃದ. ೨೧). ೮. ಸರಿಯಾದ ಕ್ರಮ ; ಯೋಗ್ಯವಾದ ರೀತಿ ; ಔಚಿತ್ಯ : ಅವನ ಸೀಮೆಯೊಳು ನಾವಿದ್ದಿಂತು ನುಡಿವುದು ವಿವರವೆಯೆಂದರಾಪ್ತಿಗರು (ಭರಚ. ೩೭-೩೬). [ಸಂ.]

ವಿವರಗೇಡಿ (ನಾ). ಸರಿಯಾದ ಹೇಳಿಕೆಯನ್ನು ಕೊಡದವನು ; ತಪ್ಪು ವಿವರಗಳನ್ನು ನೀಡುವವನು : ಶಿವನ ನೆನೆದಡೆ ಭವ ಹಱಿವುದೆಂಬ ವಿವರಗೇಡಿಗಳ ಮಾತು ಕೇಳಲಾಗದು (ಮಚಿ. ೮೪-೩೫೭) ; ಇಂದೀ ವಿವರಗೇಡಿಯ ಭಂಗಪಡಿಸುವೆನೆನುತ ತೆಗೆದಚ್ಚ (ಕಾಶಿಖಂ. ೧೭-೩೧). [ವಿವರ + ಕೇಡಿ]

ವಿವರಣ (ನಾ). ೧. ತೆರೆಯುವಿಕೆ ; ಬಿಚ್ಚುವಿಕೆ. ೨. ಹರಡುವುದು ; ಹರಹುವುದು. ೩. ಬೇರೆ ಮಾಡುವುದು ; ಹಿಂಜುವುದು : 'ಕಾರ್ಪಾಸವಿವರಣ' ಪರಾ. ೪. ವಿಸ್ತಾರವಾಗಿ ಹೇಳುವುದು ; ಕೂಲಂಕಷವಾಗಿ ತಿಳಿಸುವುದು ; ವರ್ಣನೆ : "ವ್ಯಾಖ್ಯಾ, ವಿವರಣಂ — ಈ ೨ ವಖ್ಯಾಣಂ" (ಹಲಾಯು. ೬೬-೨೪೬). ೫. ಪ್ರಕಟಗೊಳಿಸುವುದು; ವ್ಯಕ್ತಪಡಿಸುವುದು. ೬. [ಗಣಿತ]ಕಳೆಯುವುದು ; ವ್ಯವಕಲನ : "ತ್ಯಜಂ, ನುನ್ನಂ, ವಿವರಣಂ... ಕಳೆ ಇಂತಿನಿತುಂ ಕಳೆವುದಕ್ಕೆ ಪೆಸರು" (ವ್ಯವಹಾ. ೧೧-೧೨ ವ). [ಸಂ.]

ವಿವರಣೆ (ನಾ). ೧. ವಿಸ್ತಾರವಾದ ಹೇಳಿಕೆ ; ವರ್ಣನೆ ; ವ್ಯಾಖ್ಯಾನ : ಅನ್ನೆಗ ಮವ್ಯಕ್ತಕಾಲದೊಳೋದಿ ಮಱಿದ ವಿಷಮಶಾಸ್ತ್ರದ ಮೂಲಗ್ರಂಥಕ್ಕೆ ವಿವರಣೆ ಬರ್ಪವೊಲಿರದವಧಿವಿಬೋಧದೆ ಬರೆ ಮನಕ್ಕೆ ಬಗೆಯೊಳ್ ಕಂಡಂ (ಶಾಂತಿಪು. ೭-೧೯) ; ಅವರ ವಿಸ್ತಾರವಾದ ವಿವರಣೆಯ ಒಟ್ಟು ಸಾರವನ್ನು ಸಂಗ್ರಹಿಸಿ ಇಲ್ಲಿ ಅಳವಡಿಸಲೆತ್ನಿಸಿದೆ (ದ್ರಾವಿ. ೨೯). ೨. ವಿಶದಪಡಿಸುವುದು ; ಸ್ಪಷ್ಟೀಕರಣ ; ಸಮಜಾಯಿಷಿ : ಅವರು ಯಾವುದೋ ಕಾರಣಗಳಿಂದ ನಿಮ್ಮಲ್ಲಿ ಹೀಗೆಲ್ಲಾ ಹೇಳಿರಬೇಕು. ದಯವಿಟ್ಟು ಇದರ ವಿವರಣೆಯಾಗಲಿ (ಕಾವೇಂ. ೯೫). [ಸಂ. ವಿವರಣ]

ವಿವರಿಸು (ಕ್ರಿ). ೧. ವಿಸ್ತಾರವಾಗಿ ಹೇಳು ; ವಿವರವಾಗಿ ತಿಳಿಸು ; ವರ್ಣಿಸು : ಮಿಕ್ಕಭಿಮಾನದ ಮಾತು ಕೀರ್ತಿಯಂ ವಿವರಿಸೆ ಸಂದನೇಂ ಕಲಿಯೊ ಸತ್ಯವಿಯೋ ಕವಿತಾಗುಣಾರ್ಣವಂ (ಪಂಪಭಾ. ೧೪-೫೦) ; ಬಲಸಂಹಾರವನು ವಿವರಿಸುವನಾವನು ಭೂರಿಭಟರಂಘವಣೆ ಬೀತುದು (ಕುವಾರ್ಜೂ. ೧೫-೩೧). ೨. ಕಾಣಿಸಿಕೊಳ್ಳು; ತೋರು ; ಪ್ರಕಟವಾಗು : ದಿವಿಜಪಡಂಬುಜಮಿತ್ರ ಗಣಪ್ರಕರಂ ಲಗಮುಂ ಕ್ರಮದಿಂ ಪದದೊಳ್ ವಿವರಿಸೆ ಬಂದು ವಿರಾಜಿಸೆ . . . ಹಂಸಗತೀ (ಛಂದೋಂಬು. ೨-೧೪೭). ೩. ಪ್ರತ್ಯೇಕಿಸು ; ವಿಂಗಡಿಸು : ಪ್ರಣವಸ್ವರೂಪನು ಪಾಪಕರ್ಮಗಳಂ ವಿವರಿಸಿ ಕಳೆದನು ಬೀಜದೊಳಡಗಿದ ವೃಕ್ಷದಂತೆ (ಶಿವಗೀ. ೫೨-೨೫೧) ; ಶಾಕಂಗಳೊಳಗಱಿಸುತ್ತೊಂದನೆಂದಂ ವಿವರಿಸುತ್ತಾವಂದದಿಂ ಕಾಣದೆ ಶಿರೋಮಾಂಸವನು ತಾಪಸನು ಬಳಿಕವರಿಗಿಂತೆಂದು ನುಡಿದನು (ಬಸಪು. ೨೪-೨೩). ೪. ಅಗಲಗೊಳಿಸು ; ಹರಡು ; ಬಿಡಿಸು : ತೊಳಗುವ ಬಹುಚಿತ್ರದ ಪಟಮಂ ಕಱ್ಗೊಳಿಪಂದದಿ ವಿವರಿಸಿ ತೋಱುತ್ತುಂ (ಜಯಕಾ. ೩-೨). [ವಿವರ + − ಇಸು]

ವಿವರ್ಜಿತ (ಗು). ೧. ಬಿಟ್ಟ ; ತ್ಯಜಿಸಿದ : ಸಂಸಾರವ್ಯರಾಗ್ಯಪ್ರಪಂಚವಿವರ್ಜಿತಾತ್ಮಕನು (ಬಸಪು. ೮-೨). (ನಾ). ೨. ವಿಮುಕ್ತವಾದುದು ; ದೂರವಾದುದು : ಶ್ರುತಿಸುಂದರಮೆನೆ . . . ದೋಷವಿವರ್ಜಿತಮೆನೆ ವಿರಚಿಸಿ ಮೆಱೆವುದು ಕೃತಿಯಂ (ಜಾತಕ. ೧-೧೧). [ಸಂ.]

ವಿವರ್ಣ (ಗು). ೧. ಬಣ್ಣವಿಲ್ಲದ ; ವರ್ಣರಹಿತವಾದ. ೨. ಕಳೆಯಿಲ್ಲದ ; ಕಳಾಹೀನವಾದ. ೩. ಕೆಳಮಟ್ಟದ ; ತುಚ್ಛವಾದ. ೪. ಏನೂ ಅರಿಯದ ; ದಡ್ಡನಾದ. ೫. ಕೆಟ್ಟಬಣ್ಣದಿಂದ ಕೂಡಿದ. (ನಾ). ೬. ಬಣ್ಣಗೆಡುವುದು ; ಕಳಾಹೀನವಾಗುವುದು : ಕಾವಲುಗಾರರ ಮುಖಗಳು ಆಯಾಸದಿಂದ ಭಯದಿಂದ ವಿವರ್ಣವಾಗಿದ್ದುವು (ಶಾಂತಲಾ. ೨೬೦). ೭. ಅಲ್ಪ ; ಕ್ಷುದ್ರ : "ವಿವರ್ಣಃ, ಪಾಮರಃ, ನೀಚಃ . . . ಇತರಃ - ೧೦ ನೀಚನ ಪೆಸರು" (ಸಿದ್ಧಾಂತಿ. ೩೧೨). ೮. ಏನನ್ನೂ ಅರಿಯದವನು ; ದಡ್ಡ : "ವೈದೇಯಃ, ಬಾಲಿಶಃ . . . ವಿವರ್ಣಃ, ಮೂರ್ಖಃ. ಮಾತೃಶಾಸಿತಃ — ಈ ೧೧ ಅಱಿಯದವಂ" (ಹಲಾಯು. ೫೬-೧೪೧). ೯. [ಕಾವ್ಯಮಿಮಾ] ಎಂಟು ವಿಧವಾದ ಸಾತ್ವಿಕಭಾವಗಳಲ್ಲಿ ಒಂದು ; ಬಣ್ಣ ಬಿಳಿಚಿಕೊಳ್ಳುವುದು : ಸ್ತಂಭ ಸ್ವೇದ . . . ವಿವರ್ಣ ಅಶ್ರು ಪ್ರಳಯಮೆಂಬಷ್ಟಸಾತ್ವಿಕಗಳಂ (ವಿವೇ. ೧೪೧). 'ವೈವರ್ಣ್ಯ' ಪರಾ. [ಸಂ.]

ವಿವರ್ಣತೆ (ನಾ). ಮಸುಕುತನ ; ವರ್ಣಹೀನತೆ : ಕಲಾವಿದರೆಲ್ಲರ ಕೃತಿಗಳಲ್ಲೂ ಒಂದು ಬಗೆಯ ಕಾಂತಿಹೀನತೆ, ವಿವರ್ಣತೆ ಕಂಡುಬರುವುವು (ಭಾರದ. ೫೩೩). [ಸಂ. ವಿವರ್ಣತಾ]

ವಿವರ್ಣಿಸು$_1$ (ಕ್ರಿ). ವರ್ಣಹೀನವಾಗು ; ಬಿಳಿಚಿಕೊಳ್ಳು : ಮುಖಂ ವಿವರ್ಣಿಸಿದುವೊಳ್ಕುಡಿ ಬಿಚ್ಚಿದುವು (ಚಿಬಪು. ೩೭-೭೭). [ವಿವರ್ಣ + − ಇಸು]

ವಿವರ್ಣಿಸು$_2$ (ಕ್ರಿ). ವಿಶೇಷವಾಗಿ ವರ್ಣಿಸು, — ವಿವರಿಸು : ಅನುಗತಮಪ್ಪಂತಿರೆ ಚೇತನಧರ್ಮಗಳನಚೇತನಾರ್ಥಂಗಳೊಳಂ ಸ್ವನ ನಯನಾದಿಯೊಳಂ ದ್ವಿತ್ವನಿಷ್ಠಮಂ ವಿವರ್ಣಿಪರರೆಬರ್ (ಕಾವ್ಯಾವ. ೯೩). [ಸಂ. (ವಿವರ್ಣನ) + − ಇಸು]

ವಿವರ್ತ (ನಾ). ೧. ಸುತ್ತುವರಿಯುವಿಕೆ ; ಭ್ರಮಣ. ೨. ಸಮುದಾಯ ; ಸಮೂಹ. ೩. [ಅದ್ವೈತ] ಕಾರ್ಯ, ಕಾರಣಗಳಲ್ಲಿ ಕಾರಣವು ಮಾತ್ರ ಸತ್ಯವೆಂದು ಪ್ರತಿಪಾದಿಸುವ ಸಿದ್ಧಾಂತ, — ದರ್ಶನ ; ತಾತ್ತ್ವಿಕವಲ್ಲದ ಅನ್ಯಥಾಭಾವ ; ಅವಿದ್ಯೆಯಿಂದ ತೋರುವ ರೂಪಾಂತರ : ಈ ಸಿದ್ಧಾಂತದಲ್ಲಿ ಈ ಪ್ರಪಂಚ ಬ್ರಹ್ಮದ ವಿವರ್ತವೆಂದು ಅಭಿಪ್ರಾಯ. ವಿವರ್ತವೆಂದರೆ ಒಂದು ವಸ್ತು ತನ್ನ ಸ್ವರೂಪಕ್ಕೆ ಹಾನಿಯಿಲ್ಲದೆ ಮತ್ತೊಂದು ವಸ್ತುವಾಗಿ ಆಗುವುದು, ಹಾಗೆ ಕಾಣುವುದು (ಒಂದಾ. ೨೦೭) ; 'ವಿವರ್ತ' ಎಂದರೆ ತನ್ನ ಕಾರಣದ ಇರುವಿಕೆಯಿಂದ ಭಿನ್ನವಾದ ಇರುವಿಕೆಯುಳ್ಳದು ಎಂದು ಅರ್ಥ (ಭಾತತ್ತ್ವ. ೫೯೦). ೪. [ನಾಟ್ಯ] ಕಣ್ಣಿನ ಆಲಿಯ ಚಲನೆಯ ಭೇದಗಳಲ್ಲಿ ಒಂದು; IP "ಕಡೆಗಣ್ಣಿನಲ್ಲಿ ಆಲಿಯನ್ನು ತಿರುಗಿಸುವುದು" (ಅಸ್ಮರಂ. ೨೭೪ ಗದ್ಯಾನುವಾದ) : ಭ್ರಮಣ, ವಲನ, ಪಾತ, ಚಲನ, ಪ್ರವೇಶ, ವಿವರ್ತ, ಸಮುದ್ವೃತ್ತ, ನಿಷ್ಕ್ರಾಮ, ಪ್ರಾಕೃತ — ಈ ಒಂಬತ್ತು [ಸ್ವನಿಷ್ಠ]ಆಲಿಯ ಭೇದಂಗಳ್ (ಅಸ್ಮರಂ. ೩-೫೪). ೫. ನೂರೆಂಟು ಕರಣಗಳಲ್ಲಿ ಒಂದು ; IP "ತುದಿಗಾಲನ್ನು ಮೇಲಕ್ಕೆತ್ತಿ ನೆಲದ ಮೇಲಿರಿಸುವ ಕಾಲದಲ್ಲೇ ಆ ಪಾರ್ಶ್ವದ ಕೈಯನ್ನೂ ಹಾಗೆಯೇ ಮಾಡಿ, ಇನ್ನೊಂದು ಕೈಯಿಂದ ರೇಚಿತ ಮಾಡುತ್ತ ಒಂದಾವರ್ತಿ ಸುತ್ತುವುದು" (ಅಸ್ಮರಂ. ೨೯೯ ಗದ್ಯಾನುವಾದ) : ತಲಪುಷ್ಪಪುಟ, ಲೀನ . . . ವಿವರ್ತ, ಗಜಕ್ರೀಡಿತ . . . ಗಂಗಾವತರಣ — ಈ ನೂಱೆಂಟು ಕರಣಂಗಳ್ (ಅಸ್ಮರಂ. ೪-೪೨ ವ). ೬. ನಿಲ್ಲುವ ಭಂಗಿಗಳಲ್ಲಿ ಒಂದು ವಿಧ ; ಸ್ಥಾನಕಗಳಲ್ಲಿ ಒಂದು ಬಗೆ : ಸಮಮಾಕುಂಚಿತಮೊಪ್ಪುವ ಕ್ರಮಪ್ರಸಾರಿತಮುಮೆಸವುತಿರ್ಪ ವಿವರ್ತಂ

ರಮಣೇ ಕೇಳುದ್ಯಾಹಿತಮುಮಂ ನತಮಿಂತಿವಾಜು ಸುಪ್ರಸ್ಥಾನಂ (ಲಾಸ್ಯರಂ. ೭-೧೧).

[ಸಂ.]

ವಿವರ್ತನ (ನಾ). ೧. ತಿರುಗುವಿಕೆ ; ಭ್ರಮಣ. ೨. = ವಿವರ್ತ ೩ : ಈ ಏಕಮುಖಸಂಬಂಧವು ಅನಂತರದ ಅದ್ವೈತದಲ್ಲಿ ಪರಿಣಾಮಕ್ಕಿಂತ ಭಿನ್ನವಾದ 'ವಿವರ್ತನ' ಎಂಬುದಾಗಿ ಕರೆಯಲ್ಪಟ್ಟಿದೆ (ತತ್ತ್ವಪ್ರಾ. ೨೯೪). [ಸಂ.]

ವಿವರ್ತವಾದ (ನಾ). = ವಿವರ್ತ ೩ : ಅಂತಿಸ್ತಿನಲ್ಲಿ ಪ್ರಪಂಚವನ್ನು ನಿರೂಪಿಸಿ ಸ್ವಾಪ್ನಪ್ರಪಂಚವನ್ನು ದೃಷ್ಟಾಂತವಾಗಿಟ್ಟು ಪ್ರಬೋಧದಶೆಯಲ್ಲಿ ನಿಶ್ಶೇಷವಿನಾಶವನ್ನು ಉಪದೇಶಿಸುವ ಮಾರ್ಗವಿದು. ಇದಕ್ಕೆ ವಿವರ್ತವಾದವೆಂದು ತಾತ್ಪರ್ಯ (ಹಿಂದುಸಾ. ೧೯೧). [ಸಂ.]

ವಿವರ್ತಿತ (ಗು). ೧. ಹೊರಳಿದ ; ತಿರುಗಿದ. (ನಾ). ೨. [ನಾಟ್ಯ]ಪಕ್ಕಕ್ಕೆ ತಿರುಗುವ ಒಂದು ಭಂಗಿ ; IP "ಪೃಷ್ಠ ಮತ್ತು ಪಕ್ಕೆ ಇವೆರಡನ್ನೂ ತಿರುಗಿಸುವುದು. ಪಕ್ಕಕ್ಕೆ ತಿರುಗುವಾಗ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೫೬ ಗದ್ಯಾನುವಾದ): ವಿವರ್ತಿತ, ಅಪಸೃತ, ಪ್ರಸಾರಿತ, ನತ, ಉನ್ನತ — ಈ ಐದೂ ಬರಿಯ ಭೇದಂಗಳ್ (ಲಾಸ್ಯರಂ. ೨-೯೦ ವ) ; ಪೊಱವಾ[ಱ್] ತಿರುಗಲ್ಕೊಡನೇ ನೆಱ್ ತಿರುಗಿದ ಬಂ [ವಿ]ವರ್ತಿತಾಖ್ಯಮನಾಳ್ದಂ (ಲಾಸ್ಯರಂ. ೨-೯೧). ೩. ಎವೆಗಳ ಚಲನೆಯ ಭೇದಗಳಲ್ಲಿ ಒಂದು ; IP "ರೆಪ್ಪೆಗಳನ್ನು ತಿರುಗಿಸುವುದು" (ಲಾಸ್ಯರಂ. ೨೭೩ ಗದ್ಯಾನುವಾದ) : ಪ್ರಸೃತ . . . ವಿವರ್ತಿತ, ಸ್ಫುಂತ, ಪಿಹಿತ, ವಿತಾಡಿತ, ಸಯ — ಈ ಒಂಬತ್ತು ಎವೆಯ ಭೇದಂಗಳ್ (ಲಾಸ್ಯರಂ. ೩-೪೯ ವ). ೪. ನೂರೆಂಟು ಬಗೆಯ ಕರಣಗಳಲ್ಲಿ ಒಂದು ; IP "ಅಂಗೈಗಳನ್ನು ಎದುರಾಗಿ ಮಾಡಿ ಮುಂಗೈಗಳನ್ನು ಸ್ವಸ್ತಿಕದಂತೆ ಕೂಡಿಸಿ ಎದೆಯ ಹತ್ತಿರ ಸ್ವಲ್ಪ ಹೊತ್ತು ನಿಲ್ಲಿಸಿ ವ್ಯಾವರ್ತ ಮತ್ತು ಪರಿವರ್ತಗಳನ್ನು ಮಾಡಿ ಕೈಗಳನ್ನು ಮೇಲ್ಮುಖ ಮಾಡಿ ಹಿಡಿಯಬೇಕು" (ಲಾಸ್ಯರಂ. ೨೮೭ ಗದ್ಯಾನುವಾದ) : ತಲಪುಷ್ಪಪುಟ, ಲೀನ, ವಿವರ್ತಿತ . . . ಗಂಗಾವತರಣ — ಈ ನೂಱ್ಂಟು ಕರಣಂಗಳ್ (ಲಾಸ್ಯರಂ. ೪-೪೨ ವ).

[ಸಂ.]

ವಿವರ್ಧನ (ನಾ). ೧. ಬೆಳೆಯುವಿಕೆ ; ವೃದ್ಧಿ : ಅಭವಭಕ್ತಿಸಮಯವಾರ್ಧಿ ವಿವರ್ಧನೋದ್ಯಲ ಹಿಮಗು (ಬಸಪು. ೧-೧೭). ೨. ಒಂದು ಬಗೆಯ ದಂತರೋಗ : ವಿವರ್ಧನ ಎಂಬ ದಂತಮೂಲರೋಗ ವಾತಾಧಿಕ್ಯದಿಂದ ಉಂಟಾಗುವದು (ವೃದ್ಧಸಾ. II, ೧೨೪). [ಸಂ.]

ವಿವರ್ಧಿಸು (ಕ್ರಿ). ೧. ಬೆಳೆ ; ವರ್ಧಿಸು : ಬಸವರಾಜನು ಜಂಗಮಪ್ರಾಣಸಹನಾಗಿ ವಿವರ್ಧಿಸುತ್ತಾ ಬಸವನುಂ ಉರವಣಿಸಿ ಬಂದಿತು (ಬಸಪು. ೩೫-೫೭). ೨. ಹೆಚ್ಚಾಗುವಂತೆ ಮಾಡು ; ಬೆಳೆಸು : ಮಲಿನತೆಯಂ ವಿವರ್ಧಿಸಿ ತೊಳೆಲ್ಪಂ ಸಲಹಯ್ಯಾ (ಅಮಾತ. ೩೩).

[ವಿವರ್ಧನ + – ಇಸ್ಕು]

ವಿವಶ (ಗು). ೧. ವಶವಾಗದ ; ಹತೋಟಿಗೆ ಸಿಗದ. ೨. ಸ್ವತಂತ್ರವಾದ. ೩. ಸಾವಿನ ಹೆದರಿಕೆಯ ; ಮರಣಭೀತಿಯ. (ನಾ). ೪. ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳಲಾರದವನು ; ಅಸಹಾಯನಾದವನು : ವಿಶೇಷವಾಗಿ ರಾವಣನು ಸೀತೆಯ ವ್ಯಾಮೋಹದಿಂದ ವಿವಶನಾಗಿ . . . ಪ್ರೇಮೋನ್ಮಾದದ ಆವೇಶದಲ್ಲಿದ್ದಾಗ (ಶಸಾಚ. ೧೨೯). [ಸಂ.]

ವಿವಶಿಸು (ಕ್ರಿ). ಸ್ವಾಧೀನ ಪಡಿಸಿಕೊಳ್ಳು ; ವಶಪಡಿಸಿಕೊಳ್ಳು : ಕವಿವರಮೆಯ್ದೆ ನೀಳ್ದ ಕಡೆಗಣ್ ಕರಮಕ್ಕಲಿನೀಯೆ ರಾಗಮಂ ವಿವಶಿಸೆ ಪುರ್ವಿನುರ್ವ ಸುಲಿಪಲ್ ಮನಮಂ ಸಜೆಗೆಯ್ಯ (ಧರ್ಮಾಮೃ. ೫-೪೭). [ವಿವಶ + – ಇಸ್ಕು]

ವಿವಸ್ತ್ರೆ (ನಾ). ಬಟ್ಟೆಯನ್ನು ಧರಿಸದೆ ಇರುವವಳು ; ದಿಗಂಬರೆ : ಮೂಲೋಕ ಜನನಿಯ ವಿವಸ್ತ್ರೆಯಾಗಿರ್ದಮ್ಮನಂ ನಾನು ಮನವಳ್ಕದಂತು ನೋಡುವೆನಯ್ಯ (ವೀಶಪು. ೩-೧೯-೨೫) ; ವಿವಸ್ತ್ರೆಯರಾದವರ ಕೂಟದಲ್ಲಿಯುಂ ರೌದ್ರರಸಂ . . . ಪುಟ್ಟುವದು (ಕಾಮಶಾ. ೨೩೧). [ಸಂ. ವಿವಸ್ತ್ರಾ]

ವಿವಸ್ವಂತ (ನಾ). ೧. ನೇಸರು ; ಸೂರ್ಯ : "ರವಿ ಮಾರ್ತಂಡಂ . . . ಸಹಸ್ರಾಂಶು ವಿವಸ್ವಂತಂ" (ಮಸ್ಯಕೂ. ೧೧-೭೪) ; ಯಾವ ಲೋಕದಲ್ಲಿ ವಿವಸ್ವಂತನ ಪುತ್ರನು ಪ್ರಭುವಾಗಿದ್ದಾನೆಯೊ . . . ಅಂಥ ಲೋಕದಲ್ಲಿ ನನ್ನನ್ನು . . . ಸ್ಥಾಪಿಸು (ಋಸ್ಥಾ. ೫೭). ೨. ದೇವತೆ ; ಸುರ. [< ಸಂ. ವಿವಸ್ವತ್]

ವಿವಸ್ವತ್ತು (ನಾ). ೧. ನೇಸರು ; ಸೂರ್ಯ. ೨. ದೇವತೆ ; ಸುರ.

[ಸಂ. ವಿವಸ್ವತ್]

ವಿವಹ (ನಾ). ೧. ಹೊತ್ತುಕೊಂಡು ಹೋಗುವಿಕೆ ; ಸಾಗಿಸುವುದು. ೨. ಮದುವೆ ; ಲಗ್ನ : ವಿವಹಸಂಭ್ರಮವನನುಗ್ಗೆದು ಲಗ್ನವ ಮೂಱುದಿವಸಕ್ಕೆ ಮಾಳ್ಪನಿತಱೊಳು (ಪ್ರಾಥರಾ. ೫೧-೨೧) ; ವಿವಹಕನುವಾಗಿ ಬಹರನುವ ಚರರಿಂದ ಭೂಧವನರಿದು (ಜಸಮು. ೩-೨೮). ೩. ಸಪ್ತವಾಯುಗಳಲ್ಲಿ ಒಂದು. [ಸಂ.]

ವಿವಹನ (ನಾ). = ವಿವಹ ೨ : ಪಿತ್ಸುಕ್ಕಾಕ್ರಾಂತನಟ್ಟದೊನಾತ್ಮಪುತ್ರಕವಿವಹನಪ್ರೀತಂ ರೋಮಾಂಚಕಂಚುಕಿತಾಂಗಕಂ (ಶಾಂತಿಪು. ೫-೩೭) ; ವಿವಹನದುತ್ಸವಕ್ಕೆ ನೆಲೆಯಾದುದಿದು (ಚಂದ್ರಪ್ರ. ೭-೪೯). [ಸಂ.]

ವಿವಳಿತ (ಗು). ಸುತ್ತುವ ; ಹೊರಳುವ : ಬವರಿ ಮತ್ತೊಂದ್ಗತಿವಿಲಂಘನ ವಿವಳಿತಾಂಗವರಾಹಮತ . . . ಎಂಬೀ ವಿವರದಲಿ ಕಾದಿದರು (ಋವ್ಯಾಗ. ೭-೨೫).

[ಸಂ. ವಿವಲಿತ]

ವಿವಾಕ (ನಾ). ತೀರ್ಮಾನ ನೀಡುವವನು ; ನ್ಯಾಯಾಧೀಶ. [ಸಂ.]

ವಿವಾದ (ನಾ). ೧. ಚರ್ಚೆ ; ತರ್ಕ ; ವಾಗ್ವಾದ : ಗೊಂಚಲು ಯಾರಿಗೆ ಸೇರತಕ್ಕದ್ದು ಎಂಬುದು ವಿವಾದದ ಕಾರಣ (ಪಸುಪೂ. ೪೭) ; ಪಕ್ಷಪಾತವಿಲ್ಲದೆ ವಿಚಾರ ಮಾಡುವವರು ತಮ್ಮ ಇರವಿನ ಅನುಭವವನ್ನು ಪಡೆಯುವುದೇ ನಿಜವಾದರೆ ಅಂತಹರೊಂದಿಗೆ ನನ್ನ ವಿವಾದವಿಲ್ಲ (ಜೀವಾತ್ಮ. ೪೮). ೨. ಜಗಳ ; ಕಲಹ. ೩. ದಾವೆ ; ಮೊಕದ್ದಮೆ .

[ಸಂ.]

ವಿವಾದಿ (ನಾ). ೧. ವಾದಮಾಡುವವನು ; ಚರ್ಚಿಸುವವನು : ಈ ವಿಷಯವಾಗಿ ಸಂವಾದಿಯೇ ಆಗಲಿ ವಿವಾದಿಯೇ ಆಗಲಿ ಯಾವ ವಿಚಾರಸರಣಿಯೇ ಆದರೂ ನನ್ನ ವಿಚಾರಸಂಗತಿಗೆ ಉಪಯುಕ್ತವೇ ಆದೀತು (ಪ್ರಬುಧ್ದ. ೬೫). ೨. ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಿರುವ ವಾದಿ ; ಕಕ್ಷಿಗಾರ. ೩. [ಸಂಗೀತ] ವಾದಿ, ಸಂವಾದಿ, ವಿವಾದಿ ಮತ್ತು ಅನುವಾದಿಗಳೆಂಬ ನಾಲ್ಕು ಬಗೆಯ ಸ್ವರಗಳಲ್ಲಿ ಒಂದು : ಒಂದು ರಾಗದಲ್ಲಿ ಎರಡು ಸ್ವರಗಳ ನಡುವೆ ಎರಡು ಶ್ರುತಿಗಳ ಅಂತರವಿದ್ದರೆ ಅವು ಪರಸ್ಪರ ವಿವಾದಿ ಅಥವಾ 'ಶತ್ರು'ಸ್ವರಗಳಾಗುತ್ತವೆ (ಸಂಗೀಚಂ. ೨೦). [ಸಂ. ವಿವಾದಿನ್]

ವಿವಾದಿಸು (ಕ್ರಿ). ಹೋರಾಡು : ಕೀಟಗಳು ಮಾನವನಿಗೆ ಬೇಕಾದ ಎಲ್ಲ ವಸ್ತುಗಳಿಗೂ ವಿವಾದಿಸಿ, ಅವನ ಕಷ್ಟಾರ್ಜನೆಯ ಬಹುಭಾಗವನ್ನು ದೊರಕಿಸಿಕೊಳ್ಳುತ್ತವೆ (ಕೀಟಜೆ. ೧). [ವಿವಾದ + – ಇಸ್ಕು]

ವಿವಾರಿಕ (ನಾ). ಕೆಸರಿನಿಂದ ಕೂಡಿದ ನೀರು ; ಕೆಸರುನೀರು : "ವಿವಾರಿಕಂ ಪಿಚ್ಛಿಲಮನಲ್ಮೆಸಟ ನೀರೆಂದೆನಿಕ್ಕುಂ" (ಮಂಗರಾ. ೧೨೪-೧೫೫). [?]

ವಿವಾಹ (ನಾ). ೧. ಹೊತ್ತುಕೊಂಡು ಹೋಗುವಿಕೆ ; ಒಯ್ಯುವಿಕೆ ; ಸಾಗಿಸುವಿಕೆ . ೨. ವಾಹನ. ೩. ಹದಿನಾರು ಸಂಸ್ಕಾರಗಳಲ್ಲಿ ಒಂದು ; ಮದುವೆ ; ಲಗ್ನ : ಎಡೆಯಾಡುವೆಯ್ದೆಯರ ಪಾವನಮಂಗಳದೊಪ್ಪುಗೂಡಿ ನೇರ್ವಟ್ಟುದು ನೋಟಕರ್ಗೊಸಗೆಯುಬ್ಬಣಮಪ್ಪಿನಮಾ ವಿವಾಹದೊಳ್ (ಸೂಕ್ತಿಸು. ೬-೨೨). ೪. [ಜೈನ] ಐವತ್ತು ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು ; ಮದುವೆ ; ಲಗ್ನ : ದಾನ ಪ್ರೀತಿ ಸುಪ್ರೀತಿ . . . ವಿವಾಹ ವರ್ಣಲಾಭ . . . ತ್ಯಾಗ ನಿರ್ವೃತಿಯೆಂಬಯ್ತತ್ತು ಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ). [ಸಂ.]

ವಿವಾಹಕ್ರಿಯೆ (ನಾ). = ವಿವಾಹ ೪ : ಸಂತಾನಾರ್ಥದಿಂ ಕಾಮಸೇವನೆಗೆಯ್ವುದು ವಿವಾಹಕ್ರಿಯೆ (ಚಾವುಂಪು. ೨೧೬). [ಸಂ. ವಿವಾಹಕ್ರಿಯಾ]

ವಿವಾಹಗೃಹ (ನಾ). ಮದುವೆಯ ಮನೆ : ನೆಯ್ದಿಲ ಮಜ್ಜೊಲ್ ಸುಧಾರಸದ ಸೋನೆ . . . ಪರ್ವಿ ಕೊರ್ವಿದುದು ಕೂಡೆ ವಿವಾಹಗೃಹಾಂತರಾಳದೊಳ್ (ಜಗವಿ. ೧೦-೧೩.೨). [ಸಂ.]

ವಿವಾಹಗೇಹ (ನಾ). = ವಿವಾಹಗೃಹ : ರಾಜಭವನದಂತೆ ಕೃತರಕ್ಷಾವಿಧಿಯಂ

ವಿವಾಹಗೇಹದಂತೆ ಸಂಗತಮಂಗಳಪರಿಕರಮುಂ . . . ಅಪ್ಪ ತಮಿಸ್ರಗುಹೆಯ ನೆಯ್ದಿದಾಗಳ್ (ಆದಿಪು. ೧೩-೪೬ ವ). [ಸಂ.]

ವಿವಾಹಪ್ರಾಪ್ತೆ (ನಾ). ಮದುವೆಯ ವಯಸ್ಸಾದವಳು ; ವಿವಾಹಕ್ಕೆ ಪ್ರಾಪ್ತವಯಸ್ಕಳಾದವಳು : ಇತ್ತಲಾ ಮದಾಳಿಯುಂ ವಿವಾಹಪ್ರಾಪ್ತೆಯಾಗಿ ಬಳೆಯೆವಳೆಯೆ (ಸುಕುಮಾ. ೭-೩೦ ವ). [ಸಂ. ವಿವಾಹಪ್ರಾಪ್ತಾ]

ವಿವಾಹವಿಚ್ಛೇದ (ನಾ). ಮದುವೆಯ ಬಂಧನವನ್ನು ಕಾನೂನಿಗನುಸಾರವಾಗಿ ರದ್ದುಮಾಡುವಿಕೆ ; ದಾಂಪತ್ಯವಿಚ್ಛೇದನ : ವಿವಾಹವಿಚ್ಛೇದಕ್ಕೆ ಅನುಮತಿ ಕೊಡುವ ನಿಯಮಾವಳಿಯ ಪ್ರಕಾರ ಮಾಡಿಕೊಂಡ ಮದುವೆಯ ಸಂಬಂಧದ ಒಳ್ಳೆಯತನದ ಅಂಶ ಬಹಳ ಕಡಿಮೆ (ನಿಜಗು. ೨೩೮). [ಸಂ.]

ವಿವಾಹವಿಚ್ಛೇದನ (ನಾ). = ವಿವಾಹವಿಚ್ಛೇದ : ನಮ್ಮ ದೇಶದಲ್ಲಿ ವಿವಾಹ ವಿಚ್ಛೇದನಗಳು ಕಡಿಮೆ (ರೂಢಿ). [ಸಂ.]

ವಿವಾಹವೇದಿ (ನಾ). ಮದುವೆಯ ವಿಧಿಯನ್ನು ಜರುಗಿಸಲು ಸಿದ್ಧಮಾಡುವ ಎತ್ತರವಾದ ಸ್ಥಳ, — ವೇದಿಕೆ : ಕಡೆಯಿಕ್ಕಿದ ಬಿಡುಮುತ್ತಿನ ಪೊಡರ್ದುಣ್ಮುವ ಬೆಳಗು . . . ಪೆಱತಲ್ತಿದೆ ಪಾಲ್ಗಡಲೆನಿಸಿದುದಾ ವಿವಾಹವೇದಿವಿಳಾಸಂ (ಆದಿಪು. ೮-೧೬). [ಸಂ.]

ವಿವಾಹಿತ (ಗು). ೧. ಮದುವೆಯಾದ ; ಲಗ್ನವಾಗಿರುವ : ಒಬ್ಬ ವಿವಾಹಿತವನಿತೆಯಲ್ಲಿ ಅವನು ಮನಸ್ಸಿಡುವನೇ? (ಇಷ್ಟಸಿ. ೨೭೪). (ನಾ). ೨. ಮದುವೆಯಾಗಿರುವ ವ್ಯಕ್ತಿ ; ಲಗ್ನವಾಗಿರುವ ವ್ಯಕ್ತಿ : ಪೂರ್ವಾಶ್ರಮದೊಳ್ ವಿವಾಹಿತಳಾಗಿರ್ದ ಪತ್ನಿಯನ್ನೇ ವಿಧಿಪೂರ್ವಕ ಮಂತ್ರವತ್ತಾಗಿ ಪುನರ್ವಿವಾಹ ಮಾಡಿಕೊಳ್ಳುವುದೇ ವಿವಾಹವೆಂಬ ಗಹನೇ ಕರ್ಮವು (ಪುರುಷ. ೨೧೭). [ಸಂ.]

ವಿವಾಹಿತೆ (ನಾ). ಮದುವೆಯಾದ ಸ್ತ್ರೀ ; ಲಗ್ನವಾಗಿರುವ ಹೆಣ್ಣು : ಜಗನ್ಮಾತೆಯೂ ಶಿವನಿಗೆ ವಿವಾಹಿತೆ (ಕಪಾಹಿಂ. ೩೧). [ಸಂ. ವಿವಾಹಿತಾ]

ವಿವಿಕ್ತ (ಗು). ೧. ಪ್ರತ್ಯೇಕಿಸಿದ ; ಬೇರ್ಪಡಿಸಿದ. ೨. ಜನಸಂಚಾರವಿಲ್ಲದ ; ನಿರ್ಜನವಾದ : ಸದ್ಬ್ರಾಹ್ಮಣನು ಮುನ್ನೊಬ್ಬನು ವಿವಿಕ್ತಸ್ಥಳದೊಳಿರೆ (ತಿಮ್ಮಕ. ೨-೩೦). ೩. ಒಂಟಿಯಾದ ; ಏಕಾಂಗಿಯಾದ. ೪. ಭಿನ್ನವಾದ ; ವಿಶಿಷ್ಟವಾದ. ೫. ಪರಿಶುದ್ಧವಾದ : ಅವಿವೇಕಿಗಳ ಮನಂಗಳನವಿರಳಬಹಳ . . . ವಿವಿಕ್ತವಿಶದಮನದಂತುಮಾಱದ ಪೊರ್ದಲ್ (ಅಜಪು. ೧೦-೫೦). (ನಾ). ೬. ಜನರಹಿತವಾದುದು ; ನಿರ್ಜನವಾದುದು : ಆತಂ ಅವರಂ ಅಱಸುತ್ತಂ ಬಂದು ವಿವಿಕ್ತಮುಂ ಪರಮರಮ್ಯಮುಂ . . . ಅಪ್ಪುದೊಂದಾನುಮೊಂದು ಆಶ್ರಮ ಸ್ಥಾನದೊಳ್ . . . ಜೈನಾಚಾರ್ಯನಂ ಕಂಡು (ಶಾ.ಪ್ರ. ೨); ವಿವಿಕ್ತಮಿದು ರಮಣೀಯ ಮಪ್ಪೊಡಂ ಸಾಕೇತಕಪಿಸಮಾಪಾಶ್ರಮಂ (ಶ್ರೀರಾಮಾ. ೧೩೭-೩೪೮). ೭. ಒಂಟಿ ; ಏಕಾಂಗಿ : ಎಂಥ ವಿಚಿತ್ರಮನಸ್ಸು ನನ್ನದು? ಊರಿಗೆ ಊರೇ ಉತ್ಸವಗೊಂಡಿರುವಾಗ ವಿವಿಕ್ತವಾಗಿರಬೇಕೆನ್ನುತ್ತದೆ ಅದು ; ವಿವಿಕ್ತವಾಗಿರುವಾಗ ಹಬ್ಬದ ಸಂಭ್ರಮದಲ್ಲಿ ಬೆರೆಯುವುದಕ್ಕೆ ಕಾತರಿಸುತ್ತದೆ (ಹಂಸದ. ೧೨೬). [ಸಂ.]

ವಿವಿಕ್ತವಾಸ (ನಾ). [ಜೈನ] ಮುನಿಯು ಪಾಲಿಸಬೇಕಾದ ಒಂದು ಬಗೆಯ ನಿಯಮ ; ಸ್ತ್ರೀ, ಪಶು, ನಪುಂಸಕರಾದಿಯಾಗಿ ಯಾರೂ ಇಲ್ಲದ ಏಕಾಂತಸ್ಥಳಗಳಲ್ಲಿ ಮಾಡುವ ವಾಸ: ಸ್ತ್ರೀಪುನ್ನಪುಂಸಕಮೃಗಪಶುಪರಿವರ್ಜಿತ ವಿವಿಕ್ತಸ್ಥಾನಂಗಳೊಳ್ ನೆಲೆಸುವ ವಿವಿಕ್ತ [ಪ್ರಾಕಾ. ಕ್ರ]ವಾಸಮೆಂಬಯ್ದನೆಯ ತಪದೊಳಂ ನಿಲ್ದು (ಆದಿಪು. ೬-೩೦ ವ) ; ಉಜ್ಜುಗದಯ್ದನೆಯ ತಪಂ ಸಾಧುಗುಣಾಗ್ರಣಿಗೆಸೆದುದಾ ವಿವಿಕ್ತಾವಾಸಂ (ಚಂದ್ರಪು. ೧೧-೧೨). [ಸಂ.]

ವಿವಿಕ್ತಿಗೆಯ್ (ಕ್ರಿ). ವಿಶ್ಲೇಷಣೆ ಮಾಡು ; ವಿಶ್ಲೇಷಿಸು : ಕೇಳ್ದು ಪುರಾಣದರ್ಥಮನಿತಂ ಬಗೆಯೊಳ್ ಬರೆದೊಂದು ಚೆಂದದಿಂ ತಾಳ್ದಿ ವಿವಿಕ್ತಿಗಯ್ದು ಚತುರನ್ನಿತವಿಂಶತಿತತ್ತ್ವ ಭೇದಮಂ (ಚಿಕವಿ. ೪-೧೦೫). [(ಸಂ. ವಿವಿಕ್ತಿ) + ಕೆಯ್[1]]

ವಿವಿದಿಷೆ (ನಾ). [ತತ್ತ್ವಶಾ] ಏಳು ಬಗೆಯ ಜ್ಞಾನಭೂಮಿಕೆಗಳಲ್ಲಿ ಒಂದು; ಅರಿವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆ ; ತಿಳಿದುಕೊಳ್ಳುವ ಅಪೇಕ್ಷೆ : ಇಲ್ಲಿಂದ ಮುಂದೆ ಅನುಭವದಿಂದ ತಿಳಿಯತಕ್ಕ ಭೂಮಿಕೆಗಳು ಜ್ಞಾನಭೂಮಿಕೆಗಳು. ಅವುಗಳು "ವಿವಿದಿಷಾ" "ವಿಚಾರಣಾ" "ತನುಮಾನಸಾ" "ಸತ್ವಾಪತ್ತಿ" "ಅಸಂಸಕ್ತಿ" "ಪದಾರ್ಥಭಾವಿನೀ" "ತುರ್ಯಗಾ" ಎಂದೇಳು (ಭಾರದ. ೨೨೭). [ಸಂ. ವಿವಿದಿಷಾ]

ವಿವಿಧ (ಗು). ಅನೇಕ ರೀತಿಯ ; ನಾನಾ ಪ್ರಕಾರದ : ಪರಮಾಲಂಕಾರವಿಭಾಗಂ ವಿವಿಧಾಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ (ಕವಿಗಾ. ೧-೨) ; ವಿವಿಧಾರ್ಚನೆಗಳಿನರ್ಚಿಸಿ ವಿವಿಧಸ್ತುತಿಶತಸಹಸ್ರದಿಂ ಸ್ತುತಿಯಿಸಿ (ಆದಿಪು. ೫-೨೭). [ಸಂ.]

ವಿವೃತ (ಗು). ೧. ಪ್ರಕಟಗೊಳಿಸಿದ ; ವ್ಯಕ್ತವಾದ. ೨. ಮುಚ್ಚಿರದ ; ತೆರೆದ. ೩. ವಿವರಿಸಿದ ; ವಿಸ್ತಾರವಾಗಿ ಹೇಳಿದ. ೪. ವಿಸ್ತಾರವಾದ ; ಅಗಲವಾದ. (ನಾ). ೫. [ವ್ಯಾಕ] ಬಾಯಿ ತೆರೆದು ಉಚ್ಚರಿಸುವ ಶಬ್ದ : ವಿವೃತದಿಂದ ಸ್ವರಗಳೂ ಸ್ಪೃಷ್ಟದಿಂದ ವ್ಯಂಜನಗಳೂ ಹುಟ್ಟುತ್ತವೆ (ಸಂಜೋಧ. ೧೬) ; ಮತಿವಂತರಿಗುಂ ತಾಂ ಸಂತತಮವಿದಿತತತ್ತ್ವಮಾಗಿ ವಿಮತಿಯನಾಂತಾ ನುತಕಾವ್ಯದ ಧ್ವನಿಯೆಂಬೊಂದು ತರಂ ಸಲೆ ವಿವೃತಮಾಯ್ತುದಿಂತೀ ಪರಿಯಿಂ (ಧ್ವನ್ಯಾಲೋ. ೨೦೮). ೬. [ನಾಟ್ಯ] ಮೊಣಕಾಲನ್ನು ಚಲಿಸುವ ಭಂಗಿಗಳಲ್ಲಿ ಒಂದು ; IP "ಮೊಳಕಾಲುಗಳನ್ನು ಹೊರಮುಖವಾಗಿ ಪ್ರಸರಿಸುವುದು. ವಿ — ಗಜಾರೋಹಣವನ್ನು ತೋರಿಸುವಾಗ" (ಲಾಸ್ಯರಂ. ೨೬೫ ಗದ್ಯಾನುವಾದ) : ಸಂಹತ, ಕುಂಚಿತ, ಅರ್ಧಕುಂಚಿತ, ನತ, ಉನ್ನತ, ವಿವೃತ, ಸಮ — ಈ ಏಳು ಮೊಳಕಾಲ ಭೇದಂಗಳ್ (ಲಾಸ್ಯರಂ. ೨-೧೫೫ ವ). ೭. ಮುಖದ ಅಭಿನಯ ಭೇದಗಳಲ್ಲಿ ಒಂದು ; IP "ತುಟಿಗಳನ್ನು ಬಿಡಿಸುವುದು. ಹಾಸ್ಯ ಶೋಕ ಭಯ ಇವುಗಳನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೬೦ ಗದ್ಯಾನುವಾದ) : ವ್ಯಾಭುಗ್ನ, ಭುಗ್ನ, ಉದ್ಭಾಹಿತ, ವಿಧುತ, ವಿವೃತ, ವಿನಿವೃತ್ತ- ಈ ಆಱು ವದನಭೇದಂಗಳ್ (ಲಾಸ್ಯರಂ. ೩-೧೦೪ ವ). [ಸಂ.]

ವಿವೃತಿ (ನಾ). ವಿವರ ; ವಿವರಣೆ ; ವ್ಯಾಖ್ಯಾನ : ಈ ಜನಪದಸಾಹಿತ್ಯದ ಉಗಮಸ್ಥಾನವು ಸರಿಯಾಗಿ ಹೊಳೆಯದಿದ್ದರೂ ಅದು ಈಗಿನ ಮಾರ್ಗಸಾಹಿತ್ಯದ ಉದ್ಗಮಸ್ಥಾನಕ್ಕಿಂತಲೂ ಹಿಂದಿನದೆಂಬುದು ನನ್ನ ವಿವೃತ್ತಿಯಲ್ಲಿ ವ್ಯಕ್ತವಾಗುವುದು (ಪಾರ್ಶ್ವ. ೪. ಮುನ್ನುಡಿ). [ಸಂ.]

ವಿವೃತೋಕ್ತಿ (ನಾ). [ಕಾವ್ಯಮೀ] ಒಂದು ಅಲಂಕಾರದ ಹೆಸರು ; ಗೂಢವಾದ ಅರ್ಥವು ಕವಿಯ ಪ್ರೌಢರೀತಿಯ ವಿವರಣೆಯಿಂದ ಸೂಚಿತವಾಗುವುದು : ಗೂಢವಾದರ್ಥವು ಕವಿಯ ಪ್ರೌಢವಚನರೀತಿಯಿಂದ ಕಂಠತಃ ಸೂಚಿಸಲ್ಕೆ ವಿವೃತೋಕ್ತಿಯೆನಿಸುವುದು (ಕವಲ. ೧೫೯-೬). [ಸಂ.]

ವಿವೃತ್ತ (ಗು). ೧. ತಿರುಗಿದ ; ಹೊರಳಿದ. ೨. ಉರುಳುವ ; ಸುತ್ತುವ. (ನಾ). ೩. [ನಾಟ್ಯ] ಸೊಂಟವನ್ನು ತಿರುಗಿಸುವ ಒಂದು ಭಂಗಿ ; IP "ಮುಖವನ್ನು ಹಿಂದಕ್ಕೆ ತಿರುಗಿಸಿ ಕೂಡಲೇ ಮುಂದಕ್ಕೆ ತಿರುಗಿಸುವುದು. [ಹಿಂದೆ ನೋಡಿ ಕೂಡಲೇ ಮುಂದೆ ನೋಡುವುದು]" (ಲಾಸ್ಯರಂ. ೨೫೭ ಗದ್ಯಾನುವಾದ) : ಕಂಪಿತ, ಉದ್ಭಾಹಿತ, ಛಿನ್ನ, ವಿವೃತ್ತ, ರೇಚಿತ — ಇವೈದೂ ಕಟಿಯ ಭೇದಂಗಳ್ (ಲಾಸ್ಯರಂ. ೨-೯೫ ವ). [ಸಂ.]

ವಿವೃತ್ತಿ (ನಾ). ಮನಸ್ಸಿಗೆ ಬಂದಂತೆ ನಡೆಯುವುದು ; ಸ್ವತಂತ್ರಮನೋವೃತ್ತಿ : "ಸ್ವತಂತ್ರ ವ್ಯುತ್ಥಾನಂ ವಿವೃತ್ತಿಯೆನಲೊಲಿದಂತೆ ನಡಪಮಕ್ಕುಂ" (ಮಂಗರಾ. ೧೩೬-೩೦). [ಸಂ.]

ವಿವೇಕ (ನಾ). ೧. ಯುಕ್ತಾಯುಕ್ತವಿಚಾರ ; ವಿವೇಚನೆ : ಅವನನುಜಂ ವಿವೇಕನಿಧಿ ಸಾಹಸದೊಳ್ಸರರಾಜನನ್ನ[ನಂ] (ಸೌಗಾ. XX, ೩೧-೨೧ ; 1044) ; ನಿನಗೆ ವಿವೇಕವೆಳ್ಳನಿತಿಲ್ಲ (ಕುವಾಸ. ೬-೧೦) ; ಬಲಕ್ಕಿಂತಲೂ ಹೆಚ್ಚಾಗಿ ವಿವೇಕವನ್ನು ಉಪಯೋಗಿಸಬೇಕು (ಪಾಪಹೊ. ೬೨೮). ೨. ಗುಣದೋಷಪರಿಶೀಲನೆ ; ವಿಮರ್ಶೆ. ೩. ಜ್ಞಾನ ; ತಿಳಿವಳಿಕೆ ; ಅರಿವು: ಸಕಳಲೌಕಿಕಸಾಮಯಿಕೋರುವೈದಿಕ ವಿಶೇಷ ವಿವೇಕಪರಾಯಣಂ (ಕವಿಗಾ. ೩-೨೧೮) ; ವಿರತಿ ವಿವೇಕ ವಿತರಣ . . . ನಿರ್ಧಾರಗುಣಾದಿ ಸಾತ್ವಿಕಗುಣದಿಂದೂರ್ಧ್ವಲೋಕಮಂ ಸಾರ್ದು (ವಿವೇಕ. ೧೯೮). ೪. [ವೇದಾಂತ] ದೃಶ್ಯವಾಗಿರುವ ಪ್ರಪಂಚ ಮತ್ತು ಅದೃಶ್ಯವಾಗಿರುವ ಬ್ರಹ್ಮವನ್ನು ವಿಂಗಡಿಸಿ ತಿಳಿಯುವ ಶಕ್ತಿ : ವಿವೇಕ — ಪರಮಾತ್ಮನೊಬ್ಬನೇ ಯಾವಾಗಲೂ ನಿಜವಾಗಿ ಇರತಕ್ಕವನೆಂದೂ, ಉಳಿದವುಗಳೆಲ್ಲಾ ಬರೀ ತೋರಿಕೆಯವುಗಳಾಗಿದ್ದು

ನಾಶವಾಗತಕ್ಕವುಗಳೆಂದೂ ಬಿಡಿಸಿ ತಿಳಿಯುವುದು (ಅಮೃತ. ೧-೩೦ ಟೀಕೆ).

ವಿವೇಕಬೃಹಸ್ಪತಿ = ಜ್ಞಾನದಲ್ಲಿ ಬೃಹಸ್ಪತಿಗೆ ಸಮಾನನಾದವನು ; ಬಹಳ ಬುದ್ಧಿವಂತ ; ಒಂದು ಬಿರುದು : ಸನ್ಮಾನದಾನ ವಿವೇಕಬೃಹಸ್ಪತಿ ಭಯಲೋಭವರ್ಜ್ಜಿತ ಸಕಳಗುಣಸಂಪೂರ್ಣ೦ (ಸೌಂಗ. XI-i. ೪೭-೩೦ ; 994).

ವಿವೇಕವಿರಿಂಚನ = ವಿವೇಚನಾಶಕ್ತಿಯಲ್ಲಿ ಬ್ರಹ್ಮನಿಗೆ ಸಮಾನನಾದವನು ; ಒಂದು ಬಿರುದು : ರಟ್ಟಕುಳಭೂಷಣಂ . . . ವಿವೇಕವಿರಿಂಚನಂ ಸುವರ್ಣ್ಣಗರುಡಧ್ವಜಂ (ಸೌಂಗ. XX. ೬೨-೫; 1098 ?). [ಸಂ.]

ವಿವೇಕಂಬಡೆ (ಕ್ರಿ). ಜ್ಞಾನವನ್ನು ಹೊಂದು ; ತಿಳುವಳಿಕೆಯನ್ನು ಪಡೆ : ಇಚ್ಛೆಯೊಳ್ ಕೆಚ್ಚುಗಟ್ಟಿ ಸಿಂಗರದೊಳ್ ಸೊಬಗುವೆತ್ತು ವಿಳಾಸದೊಳ್ ವಿವೇಕಂಬಡೆದು (ಗಿರಿಕ. ೨-೧೦೫ ವ). [ವಿವೇಕ + ಪಡೆ]

ವಿವೇಕಜ್ಞ (ನಾ). ಯುಕ್ತಾಯುಕ್ತ ವಿಚಾರವನ್ನು ತಿಳಿಯುವವನು ; ವಿವೇಕಿ : ಸೊಕ್ಕಿರ್ದಾನೆ ಮೇಗಿಲ್ಲದೆ ಪರಿತಂದು ಮಸಗಿ ಕೊಲ್ಲುದಂ ಕಂಡೋಟಂಗೊಳ್ಳದೊಡಂ ವಿವೇಕಜ್ಞನುಂ ಕೃತಜ್ಞನುಂ ಅಲ್ಲದೆ ಕರುಣಮಿಲ್ಲದ ಜವಂ ಕೊಲ್ಲುದಂ ಕಂಡು (ಜೀವಸಂ. ೧೦-೧೩ ವ). [ಸಂ.]

ವಿವೇಕವಿಕಲ, ವಿವೇಕವಿಕಳ (ನಾ). ವಿವೇಚನೆಯಿಲ್ಲದ ವ್ಯಕ್ತಿ ; ಅವಿವೇಕಿ : ಪೆತಿಯುವಂ ಪುರೋಹಿತನುಮನಾ ಪಾತಕಿ ವಿಷದಿಂ ಕೊಂದಳ್ ಕೌತುಕಮ ವಿವೇಕವಿಕಲರೇನಂ ಮಾಡರ್ (ಪಂಂಪಾ. ೧೫-೩೭). **ವಿವೇಕವಿಕಳ** : ಪರಮಜ್ಞಾನಿಯ ವಿವೇಕವಿಕಳರವೋಲ್ ಬಾಲರ ತಲೆಯನರಿದು ತಂದೆಯೊ (ಗದಾಯು. ೯-೩೪). [ಸಂ.]

ವಿವೇಕವಿಕಳ 'ವಿವೇಕವಿಕಲ' ನೋ.

ವಿವೇಕಶಾಲಿ (ನಾ). = ವಿವೇಕಜ್ಞ : ವಿವೇಕಶಾಲಿಯಾದ ಉದ್ಧನೆಯ ಮನುಷ್ಯ ತನ್ನದೊಂದು ಸಲಹೆ ಮಂಡಿಸಿದನು (ಪುನು. ೩೦೪). [ಸಂ. ವಿವೇಕಶಾಲಿನ್]

ವಿವೇಕಶೂನ್ಯ (ಗು). ೧. ವಿವೇಚನಾರಹಿತವಾದ ; ವಿಚಾರಹೀನವಾದ. (ನಾ). ೨. ವಿವೇಚನಾರಹಿತವಾದುದು ; ವಿಚಾರಹೀನವಾದುದು : ಹಳ್ಳಿಯ ದುಃಖದಾರಿದ್ರ್ಯಗಳಿಗೂ . . . ತಾನು ಮಾಡುತ್ತಿದ್ದ ವಿವೇಕಶೂನ್ಯವಾದ ದುಂದುಗಾರಿಕೆಗೂ ಅಪಾರವೈದೃಶ್ಯ ಎದ್ದು ಕಾಣುತ್ತಿತ್ತು (ಪುನು. ೩೦೮). ೩. ವಿವೇಚನೆಯಿಲ್ಲದವನು ; ಅವಿವೇಕಿ : ದವಸದೊಳ್ ತರುಗಳುಂ ಮಾರ್ದವಮುಂ ಕೆಯ್ಗೊಳ್ಳುವುಲ್ಲ ದಂದೊಣಗುಗುಮಿ ಭವವಾರ್ಧಿಯೊಳ್ ಮುಟ್ಟುಗಿದ ವಿವೇಕಶೂನ್ಯಂಗಸಾರಮಿಂತಿದೆ ಸಾರಂ (ಶಾಂತಿಪು. ೫-೬೬) ; ಫಣೆರಾಜಪತಾಕಂ ವಿಕಳಿತವಿವೇಕಶೂನ್ಯಂ ಬಾಷ್ಪೋದ್ರೇಕಂ . . . ಮೂರ್ಛೆಗೆ ಸಂದಂ (ಗದಾಯು. ೩-೭೭). [ಸಂ.]

ವಿವೇಕಿ (ನಾ). ಯುಕ್ತಾಯುಕ್ತಪರಿಜ್ಞಾನವುಳ್ಳವನು ; ವಿವೇಚನಾಪರ : ಲೋಕವಿರುದ್ಧಂ ತದ್ವ್ಯತಿರೇಕೋಕ್ತಿ ವಿವೇಕಿಲೋಕಗರ್ಹಿತಮಾರ್ಗಂ (ಕವಿಕಾ. ೧-೧೦೯); ಪರಮದೀಕ್ಷೆಗುಪೇಕ್ಷಿಸಿದಂ ವಿವೇಕಿಯೇ (ಪಾಪು. ೧೩-೩೪). [ಸಂ. ವಿವೇಕಿನ್]

ವಿವೇಕಿಸು (ಕ್ರಿ). ೧. ವಿಚಾರ ಮಾಡು ; ವಿವೇಚಿಸು : ಪುಂಸ್ತ್ರ ಜಡಭಾವವುರುಷಪ್ರಕೃತಿಗಳ ವಿವೇಕಿಸಿಯಜಿಯೆ ಮೋಕ್ಷವೆಂಬ ಸಾಂಖ್ಯ ಉಡುಗು (ಪದ್ಮಕಾ. ೧೧-೧೯೧) ; ನ್ಯಾಯನಿಷ್ಠುರಹಿತವಚನರಚನೆ ಆ ಕವಿಗಳಿಗೆ ಕಠಿಣವಾಗಿ ವಿವೇಕಿಪಡೆ ಸೊಗಸಾಗಿ ಮುಂತೆಯನೇಕ ಸತ್ಕಲಸಿದ್ಧಿಯಹುದು (ಬಸವ. ೩೭-೪೫). ೨. ನಿರ್ಧಾರಮಾಡು ; ನಿಶ್ಚಯಿಸು : ಆ ಕುಮಾರರಿಗಾಗಳಾ ವಾಲ್ಮೀಕಿ . . . ಲೋಕವಿಭುಕುಶನೆಂದು ಮೊದಲು ವಿವೇಕಿಸಿದನೆರಡನೆಯ ಶಿಶು ಶೋಭಾಕಲಿತ ಲವನೆಂದು ಕರೆದನು (ತೊರಕಾ. ೧-೩-೯). [ವಿವೇಕ + ಇಸು]

ವಿವೇಚನೆ (ನಾ). ೧. ಯುಕ್ತಾಯುಕ್ತತೆಗಳನ್ನು ಅರಿಯುವಿಕೆ ; ವಿವೇಕ : ಈ ಬಗ್ಗೆ 'ಬಂಕಿಂಚಂದ್ರ'ರ . . . ವಿಮರ್ಶೆ ವಿವೇಚನೆಯಿಂದ ಕೂಡಿದೆ (ಧರ್ಮಸಾ. ೭೮) ; ನಿಮಗೆ ಹೊತ್ತಿನ ವಿವೇಚನೆಯೇ ಇಲ್ಲ (ಹಸುಹೂ. ೯). ೨. ತೀರ್ಮಾನ ; ನಿರ್ಣಯ : ಅವುಗಳ ವಿಚಾರದಲ್ಲಿ ಯಾವುದೇ ನಿಶ್ಚಿತ ವಿವೇಚನೆ ಮಾಡುವುದು ಸಾಧ್ಯವಿಲ್ಲ (ಪ್ರಾವಿವಿ. ೧೬). ೩. ಗುಣದೋಷ ಪರಿಶೀಲನೆ ; ವಿಮರ್ಶೆ : ಈ ಕಾವ್ಯದ ವಿವಿಧಾಂಗಗಳನ್ನು ಕುರಿತು ವಿವೇಚನೆ ಮಾಡಲು ಪ್ರಯತ್ನಿಸುವೆವು (ಸಾಹಿಸ. ೧೧೪). [ಸಂ. ವಿವೇಚನಾ]

ವಿವೇಚಿಸು (ಕ್ರಿ). ಪರಿಶೀಲನೆ ಮಾಡು ; ವಿಚಾರಮಾಡು ; ವಿಮರ್ಶಿಸು : ಪ್ರಾಚೀನಕಾಲದ ಸೂಪಶಾಸ್ತ್ರಗ್ರಂಥಗಳನ್ನು ಶಾಸನಾಧಾರದ ಬದಿಯಲ್ಲಿಟ್ಟುಕೊಂಡು ವಿವೇಚಿಸಬೇಕಾಗಿದೆ (ಶಾಸಗಿ. ೫೯). [(ಸಂ. ವಿವೇಚನ) + ಇಸು]

ವಿಶ (ನಾ). ೧. ಬೇಸಾಯಗಾರ ; ರೈತ. ೨. ಚತುರ್ವರ್ಣಗಳಲ್ಲಿ ಮೂರನೆಯ ವರ್ಣಕ್ಕೆ ಸೇರಿದ ವ್ಯಕ್ತಿ ; ವೈಶ್ಯ : "ವಿಶನೂರುಭವತ್ರಿತಯಜಾತನಾರ್ಯಂ ಮಹೀಸ್ಪ್ರಶನೆನಲು ವೈಶ್ಯನಕ್ಕು" (ಮಂಗರಾ. ೧೦೨-೧). ೩. ಮನುಷ್ಯ ; ವ್ಯಕ್ತಿ. [ಸಂ.]

ವಿಶಂಕಟ (ಗು). ೧. ದೊಡ್ಡದಾದ ; ಬೃಹತ್ತಾದ. ೨. ಅಗಲವಾದ ; ವಿಶಾಲವಾದ : ವಜ್ರಾಕರ್ಷಣರೇಖಾವಿಶಂ[ಪಾಠಾಂ. ಸಂ]ಕಟವ್ಯೂಢವಕ್ಷಸ್ಥಲರ್ (ಜಗವಿ. ೨-೬೯ ವ). ೩. ಬಲವಾದ ; ಸಾಮರ್ಥ್ಯವುಳ್ಳ. (ನಾ). ೪. ಅಗಲವಾದುದು ; ವಿಶಾಲವಾದುದು : "ವಿಶಂಕಟಂ, ವಿಶಾಳಂ(ಲಂ) — ಈ ೨ ಅಗಲಿತ್ತು" (ಪಶಾಯು. ೧೨೪-೬೮). [ಸಂ.]

ವಿಶಂಕೆ (ನಾ). ೧. ಅನುಮಾನ ; ಸಂಶಯ : ನಯನಿಯೋಗವಿಕಲ್ಪನೆಯೊಳ್ಳಿಶಂಕೆಯ ವಿಶೇಷಗುಣಕ್ಕುಪಲಕ್ಷಣಂ (ಕವಿಕಾ. ೧-೧೩೮). ೨. ಭಯ ; ಹೆದರಿಕೆ. [ಸಂ. ವಿಶಂಕಾ]

ವಿಶದ (ಗು). ೧. ಶುಭ್ರವಾದ ; ಸ್ವಚ್ಛವಾದ. ೨. ಬಿಳುಪಾದ ; ಧವಳ : ಪರಾಕ್ರಮಧವಳಂಗೆ ಶಶಾಂಕವಿಶದಯಶಮ ತೆರಳ್ದುರುಳಿಗೊಂಡಂತಿರ್ದ ಶಂಖಮಂ ಬಾಸಣಗೆಗಳೆದು . . . ವಿಕ್ರಮಾರ್ಜುನಂಗೆ ಕೊಟ್ಟು (ಪಂಪಭಾ. ೬-೩ ವ) ; ಆ ವಂಶಜರ ಗುಣಂಗಳನಾವಗಮೊಳಕೊಂಡು ತನ್ನ ವಿಶದಯಶೋಮುಕ್ತಾವಳಿಯಂ ಧರಿಗಿತ್ತು . . . ಪೆಸರ್ವಡೆದಂ (ವಂಂರಾ. ೩-೩). ೩. ಸ್ಪಷ್ಟವಾದ ; ಸ್ಫುಟವಾದ : ಕಾವೇರಿಯಿಂದಮಾಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯವಿಲೀನವಿಶದವಿಷಯವಿಶೇಷಂ (ಕವಿಕಾ. ೧-೩೬) ; ಅಶಿಥಿಲಪದಚಯ ರಚನಾತಿಶಯಂ ಸಂಶ್ಲಿಷ್ಟಮೆಂಬುದಕ್ಕುಮನೇಯಂ ವಿಶದಾರ್ಥಂ ಶಬ್ದಾನ್ಯಯ ವಶಮರ್ಥವ್ಯಕ್ತಿ (ಕಾವ್ಯಾವ. ೫೦೫). ೪. ಚೆಲುವಾದ ; ಮನೋಹರವಾದ. (ನಾ). ೫. ನಿರ್ಮಲವಾದ ವಸ್ತು ; ಸ್ವಚ್ಛವಾದ ವಸ್ತು : "ಎಮಳಂ, ವಿಶದಂ . . . ಅನಾವಿಲಂ — ಈ ೫ ನಿರ್ಮಳಮಪ್ಪ ವಸ್ತು" (ಹಲಾಯು. ೨೨-೧೩೨). ೬. ಸ್ಪಷ್ಟವಾದುದು ; ನಿಚ್ಚಳವಾದುದು : ವಿಶದಮಾದೊಂದು ಜೀವನಧರ್ಮದರ್ಶನವನುಸುರಿ ಕೊಳೆ ತನ್ನ ಮನಸಿಗೆ ತಾನೆ ಬಗೆದು (ಮುಂಕುಶ. ೧೩೬). [ಸಂ.]

ವಿಶದಿಮ (ಗು). ಬಿಳಿಯ ; ಧವಳ : ಧರ್ಮಾಚರಣೆಯಿಂದ ಚಾತುರ್ವರ್ಣ್ಯಮಂ ಪೊರೆದು . . . ಕೀರ್ತಿಯಂ ಜಲಧಿಮೇಖಲೆಗೆ ವಿಶದಿಮವಸ್ತ್ರಮಂಗೈದು (ವಂಂರಾ. ೨-೩೩-೨೭). [ಸಂ.]

ವಿಶದೀಕರಣ (ನಾ). ಸ್ಪಷ್ಟಪಡಿಸುವಿಕೆ ; ಅರ್ಥವಾಗುವಂತೆ ವಿವರನೀಡುವಿಕೆ : ಈ ಸಮಸ್ಯೆ ಜಟಿಲವಾದ್ದರಿಂದ ವಿಶದೀಕರಣ ಅಗತ್ಯ (ರೂಢಿ). [ಸಂ.]

ವಿಶದೀಕರಿಸು (ಕ್ರಿ). ಸ್ಪಷ್ಟಪಡಿಸು ; ವಿವರಿಸು : ಶಕ್ಷಣಮನೋವಿಜ್ಞಾನ . . . ಶಕ್ಷಣವನ್ನು ಹೇಗೆ ಕೊಡಬೇಕೆಂಬುದನ್ನು ವಿಶದೀಕರಿಸುತ್ತದೆ (ಶಕ್ಷದ. ೪೦೭) ; ಅವನ್ನು ವಿಂಗಡಿಸಿ ವಿಶದೀಕರಿಸಿ ವಿಸ್ತರಿಸಿದ್ದಾನೆ (ಇಷ್ಟಾಂಸಂ. ೨೭೫). [ವಿಶದೀಕರಣ + ಇಸು]

ವಿಶದೋದಕ (ನಾ). ತಿಳಿಯಾದ ನೀರು ; ಸ್ವಚ್ಛವಾದ ನೀರು : ಭರದಿಂ ನೀರಂ ಮೊಗದುಂ ಪರಿತಂದರ್ ಕನಕಕಳಶವಿಶದೋದಕಮುಂ (ಶಾಂತಿಪು. ೧೦-೬೯). [ಸಂ.]

ವಿಶರ (ನಾ). ಕೊಲ್ಲುವಿಕೆ ; ಕೊಲೆ. [ಸಂ.]

ವಿಶರಣ (ಗು). ೧. ನಾಶಹೊಂದುವ ; ನಶ್ವರವಾದ : ವ್ಯಸನಕಾರಣಮುಂ ವಿಶರಣಸ್ವಭಾವಮುಂ ಅಪ್ಪ ಶರೀರಂ ಇವರಿಂ ಬಾಧಿಸೆ ಪಟ್ಟುದು (ತತ್ತ್ವಪ್ರ. ೩೩೫). (ನಾ). ೨. ಕೊಲ್ಲುವುದು ; ಸಂಹಾರ. [ಸಂ.]

ವಿಶರಾರು (ಗು). ೧. ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ. (ನಾ). ೨. ನಾಶ ಹೊಂದುವಂತಹುದು ; ನಶ್ವರವಾದುದು : ನಿರನ್ವಯಪ್ರತಿಕ್ಷಣ ವಿಶರಾರುಗಳ್ ನಿರಂಶಂಗಳಾಗಿಯುಂ . . . ಆತ್ಮಾಭಿಧಾನಮಂ ಪುಟ್ಟಿಸುಗುಂ (ಆದಿಪು. ೨-೯ ವ) ; ಪ್ರತಿಕ್ಷಣಂ ವಿಶರಾರುಗಳ್ ಚಿತ್ತಕ್ಷಣಂಗಳ್ . . . ಪ್ರವರ್ತಿಸುವುವು (ಶಾಂತಿಪು. ೮-೧೪೨ ವ). [ಸಂ.]

ವಿಶಲ್ಯ (ಗು). ೧. ಮುಳ್ಳಿಲ್ಲದ ; ಕಂಟಕರಹಿತವಾದ. ೨. ನೋವುಂಟಾಲ್ಲದ. [ಸಂ.]

ವಿಶಲ್ಯಕರಣಿ (ನಾ). (ದೇಹದಲ್ಲಿರುವ ಸಮಸ್ತ ನೋವು ಮತ್ತು ವ್ಯಾಧಿಗಳನ್ನು ಪರಿಹರಿಸುವುದೆಂದು ಹೇಳಲಾಗುವ) ಒಂದು ಬಗೆಯ ಔಷಧೀಮೂಲಿಕೆ : ಕೇಳದಾದನು ಜಾಂಬವರ ಜೀವಾಳದಮಳೌಷಧಿಯ ನಾಲ್ಕಱ ಮೂಲಿಕೆಯ ಸಂಧಾನ ಶಲ್ಯ ವಿಶಲ್ಯಕರಣಿಗಳ (ತೊರವಿ. ೬-೩೭-೫೬). [ಸಂ. ವಿಶಲ್ಯಕರಣೀ]

ವಿಶಲ್ಯೆ (ನಾ). ೧. ಒಂದು ಬಗೆಯ ಸಸ್ಯ ; ಅಮೃತಬಳ್ಳಿ : "ವತ್ಸಾದನೀ . . . ವಿಶಲ್ಯಾ, ಮಧುಪರ್ಣೀ — ೯ ಅಮೃತಬಳ್ಳೀ ಹೆಸರು" (ಸಿದ್ಧಾಂತಿ. ೧೩೧). ೨. ಒಂದು ಬಗೆಯ ಸಸ್ಯ ; ಬೆಣ್ಣೆಬಿದುರು. ೩. ಜಾಪಾಳದ ಗಿಡ. ೪. ಅಜವಾನ. ೫. ಸಣ್ಣ ಯಾಲಕ್ಕಿ. [ಸಂ. ವಿಶಲ್ಯಾ]

ವಿಶಸನ (ನಾ). ೧. ಕೊಲ್ಲುವಿಕೆ ; ಕೊಲೆ : ಭೇದನಭೇದನ ವಿಶಸನಾದಿಕ್ರಿಯಾಪರತ್ವಮುಂ (ಶಕ್ತ್ಯಪ್ರ. ೨೫೭) ; ವಿಶಸನಭೀತಿಯಿನೋಡುವ ವಸುಧೇಶರಂ . . . ನಗುತಿರ್ಪಂತೆಸೆದುವು ಬೆನ್ನಟ್ಟುತಿರ್ದ ಕೃಷ್ಣಶರಂಗಳ್ (ಜಗವಿ. ೭-೧೦೪). ೨. ಯುದ್ಧ ; ಕಾಳಗ : 'ವಿಶಸನರಂಗ' ಪರಾ. ೩. ಖಡ್ಗ ; ಕತ್ತಿ. [ಸಂ.]

ವಿಶಸನರಂಗ (ನಾ). ಕಾಳಗದ ಕಣ ; ಯುದ್ಧಭೂಮಿ : ಎನ್ನ ತೊಟ್ಟುವೆಸನನೀ ವಿಶಸನರಂಗದೊಳ್ ತೋರ್ಪೆಂ (ಪಂಪಭಾ. ೧೨-೬ ವ). [ಸಂ.]

ವಿಶಾಖ$_1$ (ಗು). ೧. ಕೊಂಬೆಗಳಿಲ್ಲದ ; ಶಾಖೆಗಳಿಲ್ಲದ. (ನಾ). ೨. ಷಣ್ಮುಖ ; ಕಾರ್ತಿಕೇಯ : "ಗೌರೀಪುತ್ರಃ . . . ವಿಶಾಖಃ . . . ಶರಜನ್ಮಾ — ಈ ೨೦ ಕಾರ್ತಿಕೇಯನ ಪೆಸರ್ " (ಹಲಾಯು. ೫-೨೦). ೩. ಬಿಲ್ಲುಗಾರನು ಬಾಣ ಹೊಡೆಯುವಾಗ ಕಾಲನ್ನು ವಿಂಗಡಿಸಿಕೊಂಡು ನಿಲ್ಲುವ ಒಂದು ಭಂಗಿ. ೪. ಯಾಚಕ ; ಭಿಕ್ಷುಕ. [ಸಂ.]

ವಿಶಾಖ$_2$ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಹದಿನಾರನೆಯ ನಕ್ಷತ್ರ ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ : ವಿಶಾಖ, ಶೂಪ, ಇಂದ್ರಾಗ್ನಿ, ದ್ವಿದೈವತ್ಯಂ, ವಿಶಾಟಕಂ -- ಈ ೫ ವಿಶಾಖನಕ್ಷತ್ರಕೆ ಪೆಸರು (ಧಾಸ್ಕರ. ೬೨-೮) ; ವಿಶಾಖಿ ಹಿಡಿದರೆ ಪಶಾಚಿ ಹಿಡಿದಂತೆ (ಗಾದ). [ಸಂ. ವಿಶಾಖಾ]

ವಿಶಾಖಜನಕ (ನಾ). ಷಣ್ಮುಖನ ತಂದೆ ; ಶಿವ : ವಿಶಾಖಜನಕ ವಿಷಧರ ಧರಾಧಿಪತಿ ವಿಷಧರಕಿರಣಮೌಳಿ ವಿಷಯವಿಹ್ವಲದೂರ . . . ಕರುಣಿಸುವುದು (ಸಿದ್ಧರಾ. ೬-೪೦). [ಸಂ.]

ವಿಶಾಖಾಕರ (ನಾ). ೧. ಕೊಂಬೆಗಳಿಲ್ಲದ ಪ್ರದೇಶ. ೨. ಷಣ್ಮುಖ ; ಕಾರ್ತಿಕೇಯ. ೧, ೨ : ಮತ್ತಮಾ ಮಹಾವನಂ . . . ಮಯೂರಾಧಿರೂಢಮಾಗಿಯುಂ ವಿಶಾಖಾಕರಮಲ್ತು (ಚಂದ್ರಪ್ರ. ೫-೫೨ ವ). [ಸಂ.]

ವಿಶಾಖೆ (ನಾ). ೧. = ವಿಶಾಖ$_2$: ವಿಶಾಖೆ ಕುಂಬಾರಚಕ್ರದ ಹಾಗೆ (ಧಾಸ್ಕರ. ೬೦-೫) ; ಅಶ್ವಿನಿ ಭರಣಿ . . . ವಿಶಾಖೆ . . . ರೇವತಿಯೆಂಬಿಪ್ಪತ್ತೇಳು ನಕ್ಷತ್ರಗಳುಂ ತಮ್ಮ ತಮ್ಮ ಅಧಿಕಾರಮಂ ಮಾಡುತ್ತಿರ್ಪವು (ಏವಸ. ೨೧೦). ೨. ಹಾಗಲಗಿಡ.

[ಸಂ. ವಿಶಾಖಾ]

ವಿಶಾಪ (ನಾ). ಶಾಪದ ನಿವಾರಣೆ, — ಪರಿಹಾರ ; ಶಾಪವಿಮೋಚನೆ : ತಂದೆ ಕರುಣಿಸು ವಿಶಾಪವನೆಂದು ಬಾಯ್ಬಿಡುವ ಮಂದಮತಿಗಳಿಗೆ ದೊರಕುವ ಲೇಸನೀಯ ಬೇಕೆಂದು ಮನದೊಳು ನೆನೆದನು (ಸಿದ್ಧರಾ. ೧-೨೫) ; ನಲವೇರಿ ಚಂಡಿಯ ವಿಶಾಪದಿಂದೆ ಸೇನೆ ವಿಸ್ಮಯದೊಡನೆ ಹಯದೊಡನೆ ಮುಂದೆ ಸುಮ್ಮಾನದಿಂ ನಡೆಯಲ್ಕೆ (ಜೈಮಿಭಾ. ೩೩-೮). [ಸಂ.]

ವಿಶಾಯ (ನಾ). ೧. (ಪಹರೆಯವನಂತೆ) ಸ್ವಲ್ಪಕಾಲ ಮಲಗುವುದು ಮತ್ತು ಸ್ವಲ್ಪಹೊತ್ತು ಎಚ್ಚರವಾಗಿರುವುದು : "ಉಪಶಾಯಃ, ವಿಶಾಯಃ . . . ಪಹರೇ ತಿರುಗುವ ಕಾವಲುಗಾರರು ಸರದೀ ಮೇಲೆ . . . ಮಲಗುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೩೭೭). ೨. ಪರಿವಿಡಿ ; ಅನುಕ್ರಮ : "ಪರಿಪಾಟೀ . . . ಪರ್ಯಾಯಃ, ವಿಶಾಯಃ — ಈ ೭ ಪರಿವಿಡಿ" (ಹಲಾಯು. ೧೨೨-೨೫). [ಸಂ.]

ವಿಶಾರದ (ಗು). ೧. ಕೌಶಲ್ಯವುಳ್ಳ ; ನಿಪುಣತನದ. ೨. ದಿಟ್ಟತನದ ; ಕೆಚ್ಚುಳ್ಳ. ೩. ಜ್ಞಾನಿಯಾದ ; ವಿದ್ವಾಂಸನಾದ. ೪. ಹೆಸರುವಾಸಿಯಾದ ; ಪ್ರಖ್ಯಾತಿ ಹೊಂದಿದ. (ನಾ). ೫. ವಿದ್ವಾಂಸ. ೬. ನಿಪುಣ ; ಕುಶಲನಾದವನು : ನವವಯಸನಾಗಿಯುಂ ವ್ಯಸನವಿಹೀನಂ ಶೂರನಾಗಿಯುಂ ತನುರಕ್ಷೈಕವಿಶಾರದಂ (ಶಾಂತಿಪು. ೨-೪೩) ; ರಾಜ್ಯದ ವ್ಯವಹಾರದಲ್ಲಿ ವಿಶಾರದರನ್ನಾಗಿ ಮಾಡು (ರಾಮರಾ. ೫೫). ೭. ಬಕುಳವೃಕ್ಷ. [ಸಂ.]

ವಿಶಾಲ$_1$ (ನಾ). ಒಂದು ಬಗೆಯ ಸಸ್ಯ ; ಹಾವುಮೆಕ್ಕೆ ಗಿಡ : "ಬೆಳ್ಪಡಕಿಲು ವಿಶಾಲಂ ಕಠಿಲ್ಲಕಮನಿಕ್ಕು" (ಮಂಗರಾ. ೪೦-೩೧). [ಸಂ. ವಿಶಾಲಾ]

ವಿಶಾಲ$_2$ (ಗು). ೧. ದೊಡ್ಡದಾದ ; ಬೃಹತ್ತಾದ : ಇದು ವಿಶಾಲಭಾರತದ ಮತ್ತು ಭಾರತಸಂಸ್ಕೃತಿಯ ವ್ಯಾಪ್ತಿಯ ಸೂಕ್ಷ್ಮಪರಿಚಯ (ಭಾರದ. ೩೪೯). ೨. ಅಗಲವಾದ ; ವಿಸ್ತಾರವಾದ : ಸಾಲಪ್ರಾಂಶುವಿಶಾಲಲೋಲನಯನಂ ಜಯಶ್ರೀಲೋಲಂ ಜಮದಗ್ನಿರಾಮಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ (ಪಂಪಭಾ. ೧-೭೮). (ನಾ). ೩. ದೊಡ್ಡದು ; ಹಿರಿದು : "ಬೃಹತ್ . . . ವಿಶಾಲಂ . . . ವರಿಷ್ಠಂ — ಈ ೧೨ ಹಿರಿದು" (ಹಲಾಯು. ೧೧೭-೨೪). ೪. ಅಗಲವಾದುದು ; ವಿಸ್ತಾರವಾದುದು : "ವಿಶಾಲಂ ವಿಶಂಕಟಮುಮತಿಯಗಲಮಕ್ಕುಂ" (ಮಂಗರಾ. ೧೩೩-೨೮) ; ಒಂದು ಲಕ್ಷಯೋಜನ ವಿಶಾಲಮಾಗಿ ಮನೋಹರಮಾಗಿರ್ಪುದೇ ಜಂಬೂದ್ವೀಪಮಕ್ಕುಂ (ಏವಸ. ೨೦೧) [ಸಂ.]

ವಿಶಾಲತೆ (ನಾ). ವಿಸ್ತಾರ ; ವೈಶಾಲ್ಯ : ಹರಹು : "ಪರಿಣಾಹಃ, ವಿಶಾಲತಾ — ಈ ೨ ಸುತ್ತು" (ಹಲಾಯು. ೧೩೦-೧೧೧). [ಸಂ. ವಿಶಾಲತಾ]

ವಿಶಾಲಮತಿ (ನಾ). ಬಹಳ ಬುದ್ಧಿಶಾಲಿ ; ಉನ್ನತಜ್ಞಾನಿ : ಮನಗೆ ಬಂದು ವಿಶಾಲಮತಿ ಚಿಂತಿಸಿದನಾ ಸಿರಿಲೋಲ (ಕುವ್ಯಾಗ. ೧೦-೨೫). [ಸಂ.]

ವಿಶಾಲಾಕ್ಷ (ಗು). ೧. ಅಗಲವಾದ ಕಣ್ಣುಗಳುಳ್ಳ. (ನಾ). ೨. ವಿಷ್ಣು. ೩. ಶಿವ. [ಸಂ.]

ವಿಶಾಲಾಕ್ಷಿ (ನಾ). ೧. ಅಗಲವಾದ ಕಣ್ಣುಗಳುಳ್ಳವಳು ; ಸುಂದರಿ. ೨. ಪಾರ್ವತಿಯ ಒಂದು ಹೆಸರು. [ಸಂ. ವಿಶಾಲಾಕ್ಷೀ]

ವಿಶಾಲಿತ, ವಿಶಾಳಿತ (ಗು). ವಿಸ್ತಾರವಾದ ; ಹರವಾದ. **ವಿಶಾಳಿತ:** ಸೊಗಯಿಸುಗುಮಿಂದ್ರನೀಲಮಣಿ ಸನ್ನಿಭದೊಳ್ . . . ಅತಿಧವಳಮೂರ್ತಿಗೆ ಘನವಳಯಸದಗ್ಗಗಗನದೊಳುಬ್ಬಿದುಬ್ಬಿದು ವಿಶಾಳಿತಾಶಾವಳಯಂ (ಕವಿಕಾ. ೨-೧೪೯).

[ಸಂ.]

ವಿಶಾಲೆ (ನಾ). ಒಂದುಬಗೆಯ ಸಸ್ಯ ; ಹಾವುಮೆಕ್ಕೆಗಿಡ : "ವಿಶಾಲಾ, ಇಂದ್ರವಾರುಣೀ — ೨ ಹಾವುಮೆಕ್ಕೇಗಿಡದ ಹೆಸರು" (ಸಿದ್ಧಾಂತಿ. ೧೪೮). [ಸಂ. ವಿಶಾಲಾ]

ವಿಶಾಳಿತ 'ವಿಶಾಲಿತ' ನೋ.

ವಿಶಿಖ (ಗು). ೧. ಜುಟ್ಟಿಲ್ಲದ ; ಶಿಖೆಯಿಲ್ಲದ. ೨. ತುದಿಯಿಲ್ಲದ ; ಮೊನೆಯಿಲ್ಲದ. (ನಾ). ೩. ಬಾಣ ; ಅಂಬು : ದುರ್ಯೋಧನನನೊಂದೆ ನಿಶಿತವಿಶಿಖ ಹತಿಯಿಂ ಸುರುಳ್ದುರುಳ್ವಿನಮೆಚ್ಚು ಮೂರ್ಛಾಗತನಂ ಮಾಡಿ (ಪಂಪಭಾ. ೧೧-೧೪೨ ವ) ; ಪಂಚಾಯುಧನ ಪೊಸಮಸೆಯ ವಿಶಿಖಂಗಳ್ (ರಾಮಾಶ್ವ. ೫೮-೩೯). [ಸಂ.]

ವಿಶಿಖಾಸನ (ನಾ). ಬಿಲ್ಲು ; ಧನುಸ್ಸು : 'ಇಕ್ಷ್ವಿಶಿಖಾಸನ', 'ಗೋತ್ರವಿಶಿಖಾಸನ' ಪರಾ. [ಸಂ.]

ವಿಶಿಖೆ (ನಾ). ೧. ಗುದ್ದಲಿ ; ಸನಿಕೆ. ೨. ನೂಲನ್ನು ಸುತ್ತುವ ಸಾಧನ ; ಕದಿರು. ೩. ರಾಜಮಾರ್ಗ ; ದೊಡ್ಡ ಬೀದಿ : "ಪ್ರತೋಳೀ, ವಿಶಿಖಾ, ರಥ್ಯಾ — ಈ ೩ ಬೀದಿ" (ಹಲಾಯು. ೪೮-೧೩೪). ೪. ಕ್ಷೌರಿಕನ ಹೆಂಡತಿ. [ಸಂ. ವಿಶಿಖಾ]

ವಿಶಿಷ್ಟ (ಗು). ೧. ಬೇರೆಯಾದ ; ಪ್ರತ್ಯೇಕವಾದ : ಟಕಾರ . . . ಇಂದಿಗೂ ಒಂದೆರಡು ಭಾಷೆಗಳಲ್ಲಿ ಉಳಿದಿರುವ, ದ್ರಾವಿಡಪರಿವಾರದ ಒಂದು ವಿಶಿಷ್ಟಧ್ವನಿ (ದ್ರಾವಿ. ೩೩೨). ೨. ಅಸಾಧಾರಣವಾದ ; ವಿಶೇಷವಾದ : ಇಲ್ಲಿಯ ಸ್ತ್ರೀ ಪಾತ್ರವರ್ಗದಲ್ಲಿಯೂ ಕೆಲವೊಂದು ವಿಶಿಷ್ಟಭೇದಗಳಿವೆ (ಸಮಜೀ. ೧೩ ಟೀ೧೪). ೩. ಶ್ರೇಷ್ಠವಾದ ; ಉತ್ತಮವಾದ : ವಿನಯಾಳಂಕರಣಂ ವಿಶಿಷ್ಟಕರಣಂ ಕುಂದೇಂದುನೀಹಾರನಿಭಾನೂನಯಶಂ (ಸುಕುಮಾ. ೨-೫೨). ೪. ಸಂಪೂರ್ಣವಾದ ; ಸಮಗ್ರವಾದ : ಚಂಡಪರಾಕ್ರಮಾಢ್ಯ ಬಲಸಂಹರ ಭೀಕರಧೀರರಿಂ ದಳಂ ಮಂಡಿತ ಮಂಡಲಾಧಿಪವಿಶಿಷ್ಟನಿಸೊಪ್ಪಿತು ರಾಜರಾಜನಾ (ಹಮ್ಮೀರ. ೩-೧೧) ; ಅವನ ಸಂಸಾರದ

ವಿಶಿಷ್ಟಪದಾರ್ಥಗಳಿ . . . ಅವಳ ಮೇಲ್ವಿಚಾರಣೆಯಿಂದಲೇ ಪೋಷಿತವಾಗುತ್ತಿವೆ (ಮಲ್ಲಿ. ೨೨). (ನಾ). ೫. ಗಣ್ಯ ; ಪ್ರಮುಖ : ಸಿದ್ಧಿಗೆಸಟ್ಟಿಯರ ವಿಶಿಷ್ಟರಪ್ಪ ಅಂಕಮಯ್ಯನಾಯಕರುಂ (ಎಕ. VII, ೨೮ಮೊ. ೯೯-೨೨ ; 1127). [ಸಂ.]

ವಿಶಿಷ್ಟಾದ್ವೈತ (ನಾ). [ವೇದಾಂತ] ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಗಳೆಂಬ ಮೂರು ಬಗೆಯ ವೇದಾಂತದರ್ಶನಗಳಲ್ಲಿ ಒಂದು ಭೇದ ; ಜೀವಾತ್ಮ — ಪರಮಾತ್ಮರಿಗಿರುವ ಭೇದ ಮತ್ತು ಚಿದಚಿದ್ವಿಶಿಷ್ಟನಾದ ಪರಮಾತ್ಮ ಎಂಬ ಒಂದೇ ತತ್ವ — ಇವುಗಳನ್ನು ಪ್ರತಿಪಾದಿಸುವ ಒಂದು ದರ್ಶನ : ವಿಶಿಷ್ಟಾದ್ವೈತಸಿದ್ಧಾಂತವೆಂಬುದು ಶ್ರೀಮದ್ರಾಮಾನುಜಾಚಾರ್ಯರಿಂದ ಪ್ರಚಾರಕ್ಕೆ ಬಂದಿರುವುದು (ಹಿಂದುಸಾ. ೨೩೦) ; ವಿಶಿಷ್ಟಾದ್ವೈತವೆಂದರೆ ಅನೇಕಧರ್ಮಗಳಿಂದ ವಿಶಿಷ್ಟಗಳಾದ ಎರಡು ತತ್ತ್ವಗಳು ಒಂದಾಗಿದೆಯೆಂದರ್ಥ (ಭಾರದ. ೨೬೬). [ಸಂ.]

ವಿಶಿಷ್ಟಾದ್ವೈತಿ (ನಾ). [ವಿಶಿಷ್ಟಾ] ವಿಶಿಷ್ಟಾದ್ವೈತಮತದ ಅನುಯಾಯಿ : ಸಪ್ರಪಂಚ ಸಗುಣ ಬ್ರಹ್ಮವಾದಿಗಳಾಗಿ ಈಶ್ವರನು ಗುಣರೂಪವಿಶಿಷ್ಟನೆಂದರು ವಿಶಿಷ್ಟಾದ್ವೈತಿಗಳು (ಭಾರದ. ೧೩೧) ; ವಿಶಿಷ್ಟಾದ್ವೈತಿಯ ಸಾಯುಜ್ಯಮುಕ್ತಿ ದ್ವೈತವೇದಾಂತ ದಲ್ಲಿ ಹೊಂದುವುದಿಲ್ಲ (ಶಕ್ತಿವಿ. ೧೮). [ಸಂ. ವಿಶಿಷ್ಟಾದ್ವೈತಿನ್]

ವಿಶಿಷ್ಟೀಕರಣ (ನಾ). ಪ್ರಾಮುಖ್ಯತೆಯನ್ನುಂಟುಮಾಡುವಿಕೆ ; ಪ್ರಾಧಾನ್ಯತೆ ಯನ್ನುಂಟುಮಾಡುವಿಕೆ : ಸಕಲಮಾನವವ್ಯಾಪಾರಗಳನ್ನು . . . ಭಾವಗೀತೆ ವಿವೇಚಿಸುತ್ತಿದೆಯಾಗಿ ಅದರ ವಿಶಿಷ್ಟೀಕರಣದ ಕ್ಷೇತ್ರದಲ್ಲಿ ನಾವು ಮೊದಲು ಕಾಣುವುದು ಅದರ ವಿಶ್ವಸಾಮಾನ್ಯತೆಯ ಅಂಶ (ಭಾವಗೀ. ೧೧). 'ವಿಶಿಷ್ಟೀಕರಿಸು' ಪರಾ. [ಸಂ.]

ವಿಶಿಷ್ಟೀಕರಿಸು (ಕ್ರಿ). ಪ್ರಮುಖವನ್ನಾಗಿ ಮಾಡು ; ಪ್ರಾಧಾನ್ಯತೆಯನ್ನುಂಟು ಮಾಡು : ಈ ಪ್ರತಿಭಾನವೇ ಅಭಿವ್ಯಕ್ತಿ. ಅದು ಸಾಧಾರಣವನ್ನು ವಿಶಿಷ್ಟೀಕರಿಸುವ ಒಂದು ಶಕ್ತಿ (ಸೌಂದಸ. ೮೭). [ವಿಶಿಷ್ಟೀಕರಣ + – ಇಸ್ತು]

ವಿಶೀರ್ಣ (ಗು). ಒಡೆದ ; ಚೂರಾದ : ಗುಹಾಗಹನಗಹ್ವರೋದರವಿಶೀರ್ಣಮಾದಂ ದದೇಂ ಮುಹುಃಪ್ರಕಟಮಾದುದಾ ರವಿತನೂಭವಜ್ಯಾರವಂ (ಪಂಪಭಾ. ೧೨-೧೩೬) ; ಖರೋಚ್ಛಳದುರುರೇಣುದೂಸರಿತನಗ್ರವಿಶೀರ್ಣವಿಷಾಣಾತ್ತಮಾಂಸಳತನು ಬಂದು ದಂದು ಮುಹುರುತ್ಥಬೃಹದ್ರವನೊಂದು ಪುಂಗವಂ (ಚಂದ್ರಪ್ರ. ೨-೨೮). [ಸಂ.]

ವಿಶುದ್ಧ (ಗು). ೧. ತಿಳಿಯಾದ ; ಸ್ವಚ್ಛವಾದ ; ನಿರ್ಮಲವಾದ. ೨. ಸರಿಯಾದ ; ಯಥಾರ್ಥವಾದ ; ತಪ್ಪಿಲ್ಲದ : ಸರಸ್ವತಿ ಮನ್ಮುಖಪದ್ಮ ರಂಗದೇಲ್ಗೆಯನೆಡಗೊಂಡು ಕೊಂಡು ಕೊನೆದೀಗರಿಗಂಗೆ ವಿಶುದ್ಧಬುದ್ಧಿಯಂ (ಪಂಪಭಾ. ೧-೫). ೩. ಪವಿತ್ರವಾದ ; ದೋಷವಿಲ್ಲದ ; ಕಳಂಕರಹಿತವಾದ : ನಿನ್ನೀ ಸಮಯಮೆ ಸಮಯಂ ವಿಶುದ್ಧಕೇವಲಬೋಧಾ (ಜಿನಾಲ. ೧೯) ; ಸಮಸ್ತಾನ್ತಃಪುರ ಜಗದಳಪವಿತ್ರೀಕೃತವಿಶುದ್ಧಕುಳೆ ರಾಯನಾರಾಯಣ ಹೃ[ದಯಾ]ನಂದಪ್ರದಾಯಕಿ (ಎಇ. XXVIII, ೩೫-೪೧; 1082). (ನಾ). ೪. ಪರಿಶುದ್ಧವಾದುದು : ಮಕ್ಕಳುಳ್ಳ ಸಂಸಾರಿಗಳ ಪ್ರೇಮ, ವಿಶುದ್ಧವಾದ ಹಸುವಿನ ಹಾಲಿನಂಥ ಮಧುರಪ್ರೇಮ (ಬಂಕಿಮ. ೬೨). ೫. ಪವಿತ್ರನಾದ ವ್ಯಕ್ತಿ ; ಪರಿಶುದ್ಧನಾದವನು : ಸಿದ್ಧರ ಸತತವಿಶುದ್ಧರ ಬೋಧಸಮೃದ್ಧರ . . . ನೆನೆದು ಆತ್ಮಸಿದ್ಧಿಯ ಪಡೆವೆನು (ಧರಚ. ೧-೨). ೬. [ಯೋಗ] ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ ಎಂಬ ಷಟ್ಚಕ್ರಗಳಲ್ಲಿ ಒಂದು; ಕಂಠದಲ್ಲಿರುವ ಹದಿನಾರುಸ್ವರಗಳಿಂದ ಕೂಡಿದ ಹದಿನಾರುದಳದ ಪದ್ಮ : ಪ್ರಾಣಾಯಾಮವಿಧಿಗೆ . . . ವಿಶುದ್ಧ . . . . ಸಹಸ್ರಾರಸಮ್ಮಿತವಾಗಿಪ್ಪ ಪಿಂಡಾಂಡದೊಳು (ವೆಕ. ೧೫೧). [ಸಂ.]

ವಿಶುದ್ಧತೆ (ನಾ). ಅತ್ಯಂತ ನೈರ್ಮಲ್ಯ. 'ದರ್ಶನವಿಶುದ್ಧತೆ' ಪರಾ.
[ಸಂ. ವಿಶುದ್ಧತಾ]

ವಿಶುದ್ಧಿ (ನಾ). ೧. ಸಂಪೂರ್ಣ ಶುದ್ಧತೆ ; ಪರಿಶುದ್ಧತೆ. ೨. = ವಿಶುದ್ಧ ೬ : ವಿಶುದ್ಧಿಯಲ್ಲಿ ಪ್ರಸಾದಲಿಂಗವೆನಿಸಿರ್ಪರಯ್ಯ (ಸಿದ್ಧೇವ. ೬೪-೧೮೮). ೩. [ಜೈನ] ಅಜ್ಞಾನವು ನಾಶವಾದಾಗ ಜೀವಿಯು ಪಡೆಯುವ ಪರಿಶುದ್ಧಸ್ಥಿತಿ : ಸ್ವಾವರಣಕ್ಷಯೋಪಶಮಜನಿತಾತ್ಮಪ್ರಸಾದಂ ವಿಶುದ್ಧಿಯೆಂಬುದಕ್ಕುಂ (ತತ್ತ್ವಪ್ರ. ೭೦). ೪. [ಬೌದ್ಧ] ಮುಕ್ತಿ ; ನಿರ್ವಾಣ : 'ವಿಶುದ್ಧಿ' ಎಂಬುದು ತೃಷ್ಣೆಯ ನಾಶದಿಂದ ಬರುವ ಚಿತ್ತದ ವಿಮುಕ್ತಿ ; ಇದೇ ನಿರ್ವಾಣ (ಭಾರದ. ೧೯೯) : ಬುದ್ಧನು ಹೇಳುವಂತೆ ದೃಷ್ಟಿಯಿಂದ ವಿಶುದ್ಧಿ ಸಿಕ್ಕುವುದಿಲ್ಲ. ಕರ್ಮದಿಂದ ಕ್ರಿಯೆಯಿಂದ ಮಾತ್ರ ವಿಶುದ್ಧಿಪ್ರಾಪ್ತಿ (ತೀರ್ಥಕ. ೭೬). [ಸಂ.]

ವಿಶುದ್ಧಿಚಕ್ರ (ನಾ). = ವಿಶುದ್ಧ ೬ : ಎನ್ನ ವಿಶುದ್ಧಿಚಕ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ (ಮಡಿಮಾ. ೩೭-೫೩) ; ವಿಶುದ್ಧಿಚಕ್ರದಲ್ಲಿ ಯಕಾರ ಸ್ವಾಯತ (ಸಿದ್ಧೇವ. ೭೧-೧೦೨). [ಸಂ.]

ವಿಶುದ್ಧಿಲಬ್ಧಿ (ನಾ). [ಜೈನ] ಕ್ಷಯೋಪಶಮ, ವಿಶುದ್ಧಿ, ದೇಶನೆ, ಪ್ರಾಯೋಗ್ಯತೆ ಮತ್ತು ಕರಣ ಎಂಬ, ಸಮ್ಯಕ್ತ್ವಕ್ಕೆ ಕಾರಣವಾದ ಐದು ಬಗೆಯ ಲಬ್ಧಿಗಳಲ್ಲಿ ಒಂದು ; ಅಶುಭವನ್ನುಳಿದು ಶುಭದ ಕಡೆ ಚಲಿಸುವಿಕೆ : ಸಾತಾದಿ ಪ್ರಶಸ್ತ ಪ್ರಕೃತಿಬಂಧಯೋಗ್ಯ ಪರಿಣಾಮಂ ವಿಶುದ್ಧಿಲಬ್ಧಿಯಕ್ಕುಂ (ತತ್ತ್ವಪ್ರ. ೮೦). 'ಪಂಚಲಬ್ಧಿ' ಪರಾ. [ಸಂ.]

ವಿಶೇಷ (ಗು). ೧. ಅಸಾಮಾನ್ಯವಾದ ; ವಿಶಿಷ್ಟವಾದ ; ಉತ್ಕೃಷ್ಟವಾದ : ಕಾಲ್ದವೆಲ್ಲನ ವಿಶೇಷ ವ್ಯಾಸಂಗದ ಫಲ ವ್ಯರ್ಥವಲ್ಲ (ದ್ರಾವಿವಿ. ೪೪). ೨. ಅಧಿಕವಾದ ; ಹೆಚ್ಚಾದ : ಅನಿರೀಕ್ಷಿತತೆ ಆನಂದಕ್ಕೆ ವಿಶೇಷರುಚಿಯನ್ನು ಕೊಡುತ್ತದೆ (ಚಿತಂಬಾ. ೨). (ನಾ). ೩. ಪ್ರತ್ಯೇಕವಾದುದು ; ನಿರ್ದಿಷ್ಟವಾದುದು : ಆ ಮಂಗಳ ತ್ರಯೋದಶಿ ನಡೆವುದೆಂದು ವಿಶೇಷವಾಗಿ ಯಿರಿಸಿದ ಅಕ್ಕಿಮೂಡೆ ೨ (ಎಇ. XX, ೮-೫೨ ; 1556). ೪. ವೈಶಿಷ್ಟ್ಯ ; ಅತಿಶಯತೆ : ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯವಿಲೀನವಿಶದವಿಷಯವಿಶೇಷಂ (ಕವಿರಾ. ೧-೩೬) ; ಈ ದಿನ ಏನೋ ವಿಶೇಷವಿರುವಂತಿದೆ (ಚಿತಂಬಾ. ೨). ೫. [ವ್ಯಾಕ] ಒಂದು ಕ್ರಿಯಾಪದ ಅಥವಾ ನಾಮಪದದ ಗುಣ, ರೀತಿ ಮೊದಲಾದುವನ್ನು ಹೇಳುವ ಪದ ; ಗುಣವಾಚಕ ; ವಿಶೇಷಣ. ೬. [ಕಾವ್ಯಮೀ] ಅರ್ಥಾಲಂಕಾರದ ಒಂದು ಭೇದ ; ವಸ್ತುವಿನ ಗುಣ, ಜಾತಿ ಮುಂತಾದುವುಗಳಲ್ಲಿ ಗುಣಪೂರ್ಣತೆಯನ್ನು ಹೇಳದೆ, ಅವುಗಳ ಕೊರತೆಯನ್ನೇ ಹೇಳಿ (ಆದರೂ ಕಾರ್ಯಸಿದ್ಧಿಯಾಗುವುದೆಂದು) ವಸ್ತುವಿನ ವೈಶಿಷ್ಟ್ಯವನ್ನು ನಿರ್ದೇಶಿಸುವಿಕೆ : ಗುಣಜಾತ್ಯಾದಿಗಳೊಳಗನುಗುಣಮಾಗಿರ ಪೇಳದವಱ ವಿಕಳತೆಯಂ ಸಯ್ತಣಿಸಿ ವಿಶೇಷಮನೆಂಬುವ ಗಣನೆ ವಿಶೇಷಾನುಭಾವಸದ ಳಂಕಾರಂ (ಕವಿರಾ. ೩-೧೨೦) ; ಗುಣಜಾತ್ಯಾದಿಗಳಿಂದೊಂದಣಯರಮಾಗಿರ ವಿಶೇಷಮದುವೆ ವಿಶೇಷಂ (ಉದಯಾ. ೫೫). ೭. [ವೀಶೈ] ವೀರಶೈವಸಿದ್ಧಾಂತದಲ್ಲಿ ಒಂದು ಬಗೆ : ಶುದ್ಧ ವಿಶೇಷ ನಿರ್ವಾಣ ಎಂದು ವೀರಶೈವವು ಮೂರು ತೆಱನಾಗಿರ್ಪುದು (ಸಿದ್ಧೇವ. ೪-೯) ; ವೀರಶೈವನೆ ಕ್ರಿಯಾಭೇದದಿಂ ಸಾಮಾನ್ಯವೀರಶೈವ ವಿಶೇಷವೀರಶೈವ ನಿರಾಭಾರಿವೀರಶೈವನೆಂದು ತ್ರಿವಿಧಂ (ವೆಕ. ೯೮). [ಸಂ.]

ವಿಶೇಷಕ (ಗು). ೧. ಪ್ರತ್ಯೇಕವಾದ ; ವಿಶಿಷ್ಟವಾದ. (ನಾ). ೨. ಪ್ರಮುಖವ್ಯಕ್ತಿ ; ಮುಖ್ಯಸ್ಥ : ಆರೂಢಮದಗಜರುಮುಪಾರೂಢವಿಶೇಷಕರುಮಾಗಿ . . . ಸಂಗ್ರಾಮರಂಗಕ್ಕವತರಿಸೆ (ಪಂಪಭಾ. ೧೩-೩೩ ವ). ೩. (ಗಂಧ ಇತ್ಯಾದಿಗಳಿಂದ) ಹಣೆಯ ಮೇಲೆ ಇಡುವ ತಿಲಕ ; ಬೊಟ್ಟು : ಕವಿದ ಮುಂಗುರುಳ ಕಣ್ ಚೆಂದುಟಿ ತಮಾಲಪತ್ರವಿಶೇಷಕಾಂಕಿತಂ ಮೊಗಮದವಳದು (ಸೌಂದ. ೪-೧೨). ೪. [ಕಾವ್ಯಮೀ] ಕಾವ್ಯಪ್ರಭೇದಗಳಲ್ಲಿ ಒಂದು ; ಏಕಾನ್ವಯವುಳ್ಳ ಮೂರುಶ್ಲೋಕಗಳ ಸಮುದಾಯ : ಕಾವ್ಯದಲ್ಲಿ ಅನೇಕ ಪ್ರಭೇದಗಳುಂಟು : — ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶಭಾಷೆಗಳಲ್ಲಿ ರಚಿತವಾದ 'ಮುಕ್ತಕ', 'ಸಂದಾನಿತಕ', 'ವಿಶೇಷಕ', 'ಕಲಾಪಕ' . . . 'ಕಥಾ' ಇತ್ಯಾದಿಗಳು (ಧ್ವನ್ಯಾಲೋ. ೧೪೧). [ಸಂ.]

ವಿಶೇಷಗುಣ (ನಾ). ವಿಶಿಷ್ಟವಾದ ಸ್ವಭಾವಧರ್ಮ, — ಗುಣ : ಈ ಔಷಧಿಯಲ್ಲಿ ಕೆಲವು ವಿಶೇಷಗುಣಗಳಿವೆ (ರೂಢಿ). [ಸಂ.]

ವಿಶೇಷಜ್ಞ (ನಾ). ವಿಶಿಷ್ಟವಾದ ಪಾಂಡಿತ್ಯವಿರುವವನು : ಭಾಷಾವಿದರ್ಕವಿತ್ವ ವಿಶೇಷಜ್ಞರ್ನಿಕಪರಪ್ಪೊಡಪ್ಪುದು ಸಭೆಯೊಳ್ (ಆದಿಪು. ೧-೨೧). [ಸಂ.]

ವಿಶೇಷಣ (ನಾ). ೧. ವಿಭಿನ್ನತೆ ; ವೈಶಿಷ್ಟ್ಯ. ೨. = ವಿಶೇಷ ೫ :

ವಾಚ್ಯವಾಚಕ ವಿಶೇಷ್ಯ ವಿಶೇಷಣ ಲಕ್ಷ್ಯಲಕ್ಷಣಪ್ರಚುರತೆ ಕಾಳಿದಾಸನುಮನೇಳಿಸಿತು (ಭಂದೋಅ. ೧-೭); ನೆಲಸಿರ್ದ ವಿಶೇಷಣದಿಷ್ಟಲಿಂಗಮೆನಿಪುದು ವಿಶೇಷ್ಯಮದಱಿಷ್ಟ ದಿನಗ್ಗಲಿಕುಂ ವಿಶೇಷಣದ ಲಿಂಗಲಕ್ಷಣಂ ದೋಷರಹಿತಮಿದು ರೂಪಕದೊಳ್ (ಶಮದ. ನ. ೧೬೭) ; ಯಾವುದಾದರೂ ಒಂದರ ಗುಣ, ರೀತಿ ಮೊದಲಾದ ವಿಶೇಷವನ್ನು ತಿಳಿಸುವ ಪದಕ್ಕೆ (ಅಥವಾ ಪದಗಳ ಗುಂಪಿಗೆ) ವಿಶೇಷಣವೆಂದೂ . . . ಹೆಸರು (ಮಧ್ಯಮ. ೧೦). [ಸಂ.]

ವಿಶೇಷಣರೂಪ (ನಾ). [ವ್ಯಾಕ] ಗುಣವಾಚಕದ ಕೆಲಸ ಮಾಡುವ ಶಬ್ದಸ್ವರೂಪ ; ಕಾರಕಕ್ಕಿಂತ ಭಿನ್ನವಾದ ರೂಪ : 'ಚಕ್ಕ'ಎಂಬುದು ವಾಕ್ಯದಲ್ಲಿ ಸ್ವತಂತ್ರವಾಗಿ ಬರುವುದಿಲ್ಲ. ಅದು ಯಾವುದಾದರೂ ಒಂದು ನಾಮಪದಕ್ಕೆ ವಿಶೇಷಣವಾಗಿ ಬರಬೇಕು. ಆದ ಕಾರಣ ಇದಕ್ಕೆ ವಿಶೇಷಣರೂಪವೆಂದು ಹೆಸರು (ಮಧ್ಯಮ. ೪೧). [ಸಂ.]

ವಿಶೇಷತ್ವ (ನಾ). ವೈಶಿಷ್ಟ್ಯ ; ಹೆಚ್ಚಳ : ಗುರುಮುನೀಶ್ವರಾದಿ ವಿಶೇಷತ್ವದೊಳಂ ಅಸಹ್ಯವೃತ್ತಿಯೊಳಂ ವಿಕವಚನಕ್ಕೆ ಬಹುವಚನಮಪ್ಪುದು (ಶಮದ. ೧೦೨ ವೃತ್ತಿ). [ಸಂ.]

ವಿಶೇಷಧೂಪ (ನಾ). ಒಂದು ಬಗೆಯ ಮರ : ಗುಗ್ಗುಳಮರ, ಗುಗ್ಗಳ, ಚಟಿ, ಚಟ್ಟುಂಬೆ, ಸಾಂಬ್ರಾಣಿಮರ, ವಿಶೇಷಧೂಪ (ಸಸ್ಯಸಿ. ೨೧). [?]

ವಿಶೇಷಭಾಷಿತ (ನಾ). ವಿಶಿಷ್ಟವಾದ ನುಡಿ ; ಉಕ್ತಿವೈಶಿಷ್ಟ್ಯ : ಮನೋನಯನ ವಲ್ಲಭನೊಳ್ಮನದೊಂದಲಂಪಿನಂ ನೆರೆವೆನಮೋಘಮೆಂಬುದಿದು ದಕ್ಷಿಣಮಾರ್ಗ ವಿಶೇಷ ಭಾಷಿತಂ (ಕವಿರಾ. ೨-೧೦೪). [ಸಂ.]

ವಿಶೇಷಾಧಿಕಾರ (ನಾ). ವಿಶಿಷ್ಟವಾದ ಅಧಿಕಾರ : ಅವರಿಗೆ ಕೆಲವು ವಿಶೇಷಾಧಿಕಾರಗಳನ್ನು ನೀಡಲಾಗಿತ್ತು (ರೂಢಿ). [ಸಂ.]

ವಿಶೇಷಾರ್ಥ (ನಾ). ೧. ವಿಶಿಷ್ಟವಾದ ಅರ್ಥ; ಅಸಾಧಾರಣವಾದ ಅರ್ಥ. ೨. ಅತಿಶಯವಾದ ಧನ ; ಹೇರಳವಾದ ಐಶ್ವರ್ಯ. ೧, ೨ : ಸುಲಕ್ಷಣದ ಲಾಲಿತಶ್ರುತಿರಂಜನದ ವಿಶೇಷಾರ್ಥಸಂಚಿತದ ವಿಸ್ತಾರದಿಂ ಪೊಸತನಿಸುವ ನುತಸತ್ಕವಿ ಪ್ರೌಢತರಸುಪ್ರಬಂಧದಂತತಿಮನೋಹರಮೆನಿಪ ವಾಜಿಯಂ ಕಂಡು (ಚಿಮಭಾ. ೪-೮).

[ಸಂ.]

ವಿಶೇಷಾಲಂಕಾರ (ನಾ). ೧. ಹೆಚ್ಚಿನ ಅಲಂಕಾರ ; ವಿಶಿಷ್ಟವಾದ ಶೃಂಗಾರ : ಈ ದಿನ ದೇವಸ್ಥಾನದಲ್ಲಿ ದೇವರಿಗೆ ವಿಶೇಷಾಲಂಕಾರವಿದೆ (ರೂಢಿ). ೨. = ವಿಶೇಷ ೬ : ಸಾಮಾನ್ಯಾಲಂಕಾರರೀತಿಯಿಂದ ಪೇಳಲ್ಕದಱೊಳು ಭೇದವ್ಯಪಿಷ್ಟ್ಯವಿಶೇಷವು ತೋರ್ದಡೆ ವಿಶೇಷಾಲಂಕಾರವೆನಿಪುದು (ಅವಲ. ೧೪೮-೧೭). [ಸಂ.]

ವಿಶೇಷಿಸು (ಕ್ರಿ). ೧. ಅತಿಶಯವಾಗಿ ಹೇಳು ; ವಿಶಿಷ್ಟವಾಗಿ ನಿರೂಪಿಸು : ಮಿಗೆ ಮನದ ಪೆಂಪುಮಂ ಕೈಮಿಗೆ ವಿಭವದ ಪೆಂಪುಮಂ ವಿಶೇಷಿಸಿ ಪೇಬಲ್ ಬಗೆವುದುದಾತ್ತಾಲಂಕಾರಗುಣೋದಯಂ (ಕವಿರಾ. ೩-೧೭೩) ; ಬುದ್ಧನು ಸ್ತ್ರೀಯರನ್ನು, 'ಮನಾಪಾ' ಎಂದು ವಿಶೇಷಿಸಿದ್ದಾನೆ (ರಾಮರಾ. ೧೬). ೨. ಅತಿಶಯವಾಗು ; ವಿಶೇಷವಾಗು : ವಿಶೇಷಿಸಿ ಕರ್ಮಪೀಡನಂ ತಾಗುವ ವೇಳೆಯೊಳ್ಪಗದು ತಪ್ಪಿಸಿ ತನ್ನಿಮಿತ್ತಂ ಸಮುದ್ಭವಿಪ್ಪಾ ಗುಣಮಿಲ್ಲದಿರ್ದೊಡೆ ಭವಿತ್ಯಕೆ ಭಾಕ್ತಿಕಕೇನು ಭೇದಂ (ಶತಕ. ೧೫೬-೧೯).

[ವಿಶೇಷ + – ಇಸು]

ವಿಶೇಷೋಕ್ತಿ (ನಾ). [ಕಾವ್ಯಮಿ] ಒಂದು ಬಗೆಯ ಅಲಂಕಾರ ; ಒಂದು ವಸ್ತುವಿನ ಗುಣ, ಜಾತಿ, ಕ್ರಿಯೆ ಮುಂತಾದುವುಗಳ ಗುಣಪೂರ್ಣತೆಯನ್ನು ಹೇಳದೆ, ಅವುಗಳಲ್ಲಿ ದೋಷವನ್ನೇ ಹೇಳಿ ವಸ್ತುವಿನ ವೈಶಿಷ್ಟ್ಯವನ್ನು ಸೂಚಿಸುವುದು : ಒದವಿದ ಸಾಮಗ್ರಿಯೊಳೇಕದೇಶವ್ಯಕಲ್ಯಮಾಗೆಯುಂ ಮತ್ತಂ ತತ್ಸದೃಶಫಲಸಿದ್ಧಿಯಂ ತೋರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ (ಕಾವ್ಯಾವ. ೬೫೦) ; ವಿಶೇಷೋಕ್ತಿ ಕಾರಣವು ಸಮಗ್ರವಾಗಿದ್ದರೂ ಕಾರ್ಯವು ಉಂಟಾಗದಿದ್ದಲ್ಲಿ ವಿಶೇಷೋಕ್ತ್ಯಲಂಕಾರ (ಕೃವಿ. ೨೭೮). [ಸಂ.]

ವಿಶೇಷ್ಯ (ಗು). ೧. ಮುಖ್ಯವಾದ ; ವಿಶಿಷ್ಟವಾದ. (ನಾ). ೨. [ವ್ಯಾಕ] ವಿಶೇಷಣದಿಂದ ವಿವರಿಸಲ್ಪಡುವ ಪದ ; ನಾಮಪದ : ಇಂತು ವಿಶೇಷ್ಯಂ ಕ್ರಿಯೆಯಂ ಸಂತಂ ನೋಡ್ಪುದಱಿನಕ್ಕುಮದು ಸಾಪೇಕ್ಷಂ (ಕವಿರಾ. ೨-೯೪) ; ವಿಶೇಷಣಮಾಗಿ ಕಾರಕಮೇಕವಚನದೊಳಿರ್ದೊಡಂ . . . ವಿಶೇಷ್ಯಮಪ್ಪ ಜಾತಿಗೇಕತ್ವಮಲ್ಲದೆ ಬಹುತ್ವಮಿಲ್ಲ (ಶಮದ. ೧೩೮ ವೃತ್ತಿ) ; ಒಂದು ವಿಶೇಷ್ಯಕ್ಕೆ ಅನೇಕ ಕಾರಕ ಕೃದಂತಗಳು ವಿಶೇಷಣಗಳಾಗಿ ಪ್ರಕೃತಿರೂಪದಿಂದ ಇರುವುದುಂಟು (ಕೃವಿ. ೫೮). [ಸಂ.]

ವಿಶೇಷ್ಯಾಧೀನಲಿಂಗ (ನಾ). [ವ್ಯಾಕ] ಒಂಬತ್ತು ಬಗೆಯ ಲಿಂಗಗಳಲ್ಲಿ ಒಂದು ; ವಿಶೇಷ್ಯದ ಲಿಂಗಕ್ಕೆ ಅನುಸಾರವಾಗಿರುವ ಲಿಂಗ ; ವಾಚ್ಯಲಿಂಗ : ಕನ್ನಡದೊಳ್ ಪರಿದುಂ ಸ್ತ್ರೀಲಿಂಗಮೆಂದುಂ . . . ತ್ರಿವಿಧಲಿಂಗಮೆಂದುಂ, ವಿಶೇಷ್ಯಾಧೀನಲಿಂಗಮೆಂದುಂ, ಅವ್ಯಯಲಿಂಗಮೆಂದುಂ — ಲಿಂಗಮೊಂಬತ್ತು ತೆಱಂ (ಶಮದ. ೮೮ ವೃತ್ತಿ).

[ಸಂ.]

ವಿಶೋಕ (ಗು). ೧. ಚಿಂತೆಯಿಂದ ದೂರವಾದ ; ದುಃಖವಿಲ್ಲದ. (ನಾ). ೨. ದುಃಖವಿಲ್ಲದಿರುವಿಕೆ ; ಸಂತೋಷ : ಆ ಕ್ಷಣದಲ್ಲಿ "ಅಪಹತಪಾಪ್ಮಾ ವಿರಜಾ ವಿಮೃತ್ಯುಃ ವಿಶೋಕಃ . . . ಸತ್ಯಸಂಕಲ್ಪಃ" ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಸ್ವಾಭಾವಿಕ ಗುಣಾಷ್ಟಕಗಳು ಆವಿರ್ಭವಿಸುವುವು (ಜಂದಾ. ೩೭). ೩. ಚಿಂತೆಯಿಂದ ದೂರವಾದವನು ; ಸುಖಿ : ನೂಕಿ ಮುಂದಲವಿಡಿದು ತೂತ್ತಿರೊಳಾಕೆಯನು ಕುಳ್ಳಿರಿಸಿದಂದು ವಿಶೋಕನಹೆನು (ಕುವಾ.ಸ. ೧೨-೬೬). [ಸಂ.]

ವಿಶೋಧಿ (ನಾ). ಶುಚಿತ್ವ ; ಶೌಚಗುಣ : ಈ ಕಜೆ ಕರ್ಚೆ ಪೋಗದೀ ಕೆಯ್ನಾರೊಳ್ ತೊಳೆವೊಡದಂ ಜಿನಪತಿಮತಸಳಿಯಂ ತೊಳಗುಂ ವಿಶೋಧಿ ತೊಳಗುಂ (ಶಾಂತಿಪು. ೪-೭೯) ; ನಿರಂತರವಿಶೋಧಿ ಕೂಡಿರೆ ಚತುರ್ವಿಧಾರಾಧನಾಪುರಸ್ಸರತೆಯಿಂ ಸಮಾಧಿವಿಧಿಗೇಂ ಮನಂದಂದಳೋ (ಪುಚಿಮಾ. ೯-೧೫). [ಸಂ. ವಿಶೋಧಿನ್]

ವಿಶೋಧ್ಯ (ಗು). ೧. ಶುದ್ಧಗೊಳಿಸತಕ್ಕ ; ನಿರ್ಮಲಗೊಳಿಸುವ. (ನಾ). ೨. ಸಾಲ ; ಋಣ. ೩. [ಗಣಿತ] ಕಳೆಯುವುದು ; ವ್ಯವಕಲನ : ರಜತಂ . . . ವಿಶೋಧ್ಯಂ, ತ್ಯಜಿಸು , ಕಳೆ — ಇಂತಿನಿತುಂ ಕಳೆವುದಕ್ಕೆ ಪೆಸರು (ವ್ಯವಹಾ. ೧೧-೨೧).

[ಸಂ.]

ವಿಶ್ರಂಭ (ನಾ). ೧. ನಂಬಿಕೆ ; ವಿಶ್ವಾಸ : "ವಿಶ್ರಂಭಮನಲು ವಿಶ್ವಾಸಮಕ್ಕುಂ" (ಮಂಗರಾ. ೧೩೫-೩೮). ೨. ಸಲುಗೆ ; ಸದರ. ೩. ಕುಶಲಪ್ರಶ್ನೆ ; ಯೋಗಕ್ಷೇಮ ವಿಚಾರಣೆ. [ಸಂ.]

ವಿಶ್ರಬ್ಧ (ಗು). ೧. ನಂಬಿಕೆಯುಳ್ಳ ; ವಿಶ್ವಾಸಯೋಗ್ಯವಾದ. ೨. ನೆಮ್ಮದಿಯಿಂದ ಕೂಡಿರುವ. ೩. ಪ್ರೀತಿಯುಳ್ಳ. ೪. ಹೆದರಿಕೆಯಿಲ್ಲದ ; ನಿರ್ಭೀತ. [ಸಂ.]

ವಿಶ್ರಮ (ನಾ). ೧. ಶ್ರಮಪರಿಹಾರ. ೨. ವಿರಾಮ; ವಿಶ್ರಾಂತಿ. ೩. ನೆಲೆ ; ಸ್ಥಾನ : ಶ್ರೀತರಿಟ್ಟುದಾಯ ಸನ್ಮಾನದ ವಿಶ್ರಮಂ ದಯೆಯ ಕಾಳ್ಪುರಮದು (ಎಕ. VII (S), ಶಿಕಾ. ೬೪೨-೬೯ ; ಸು. 1050) ; ಚರಿತಚತುರಾಶ್ರಮತಪೋನಿಷ್ಠರಿಗೆ ವಿಶ್ರಮವೈಭವಾದ್ಯಶದರುಶನವು ನಮಗೆಂದು ನುಡಿದರು ರೋಮಹರ್ಷಣಯ (ಕುಮಾಅ.೨-೨). ೪. [ಛಂದ] ಪದ್ಯವನ್ನು ಓದುವಾಗ ಉಸಿರನ್ನು ನಿಲ್ಲಿಸಬಹುದಾದ ಎಡೆ ; ಉಸಿರ್ದಾಣ : ಕ್ಷೋಣೀವಾಯುದಿನೇಶನೀಶ್ವರಂ ಬಾಣಸ್ಥಾನದೊಳಾಗೆ ವಿಶ್ರಮಂ (ಭಂದೋಅ. ೨-೧೧೨). [ಸಂ.]

ವಿಶ್ರಮಂದಳಿ (ಕ್ರಿ). ವಿಶ್ರಾಂತಿಯಿಂದಿರು ; ಬಿಡುವನ್ನು ಹೊಂದು : ನಮ್ಮವಿವತ್ತು ವಿಶ್ರಮಂದಳಿಗ ಮವೀಯ ಚಾಪಂ (ಶಾಕುಂತ. ೩೩-೪೧). [ವಿಶ್ರಮ + ತಳಿ]

ವಿಶ್ರಮಣ (ನಾ). ೧. = ವಿಶ್ರಮ ೧ : ವಿಪುಲಪುಲಿನತಲಂಗಳೇ ವಿಶ್ರಮಣ ಭೂಮಿಗಳಾಗೆಯುಂ (ಆದಿಪು. ೪-೫೨ ವ). ೨. = ವಿಶ್ರಮ ೩ : ಮಾರುತಭಾಸುಯುಗ್ಮ ಗಣಂಗಳಿಂ ಪರದೊಳೊಪ್ಪೆ ಹಿಮಾಂಶುಶೇಖರನಿರ್ದು ವಿಶ್ರಮಣಂ ದಿಶಾಕರಿಯೊಳಾಗಿರೆ (ಭಂದೋಅ. ೨-೧೭೧). [ಸಂ.]

ವಿಶ್ರಮವನ (ನಾ). ವಿಶ್ರಾಂತಿಗಾಗಿ ಇರುವ ಉದ್ಯಾನ : ಸದ್ಮನಜವನಮಮಗ ವಿಶ್ರಮವನಮಕ್ಕೆ (ಆದಿಪು. ೧-೧೦). [ಸಂ.]

ವಿಶ್ರಮಿಸು (ಕ್ರಿ). ೧. ವಿಶ್ರಾಂತಿಯನ್ನು ಪಡೆ ; ವಿರಾಮವನ್ನು ಹೊಂದು : ಭರತೇಶ್ವರಂ . . . ಕುಸುಮದೆಸಟ ಮಿಸುಗುವ ಪೊಸದಳಿಂಬದ ಮೇಗೆ ಕಿಬ್ಬಿದು ಬೇಗಂ ವಿಶ್ರಮಿಸಿ (ಆದಿಪು. ೧೮-೭೩ ವ); ಇಳೆಯ ಚಿಂತೆಯೊಳಾಡಿದವನೀಶ ತನ್ನಾತ್ಮನೊಳು ನಿಂದು ವಿಶ್ರಮಿಸಿದನು (ಭರಚ. ೭೭-೩೫) ; ಅನುಕೂಲವಿದ್ದವರು ತಮ್ಮ ತಮ್ಮ ಮನೆಗಳಲ್ಲಿ ವಿಶ್ರಮಿಸುತ್ತಿದ್ದರು (ಕೊತಕಾ. ೧). ೨. ನೆಲೆಗೊಳ್ಳು ; ನೆಲಸು :

ಕುಮುದರಜಂಗಳೊಳ್ಪೊರೆದು ವಾಃಕಣಜಾಲಮನಾಂತು ಕೂಡೆ ವಿಶ್ರಮಿಸಿ . . . ಮಾರುತನೊಯ್ಯನೊಯ್ಯನೆ ಬಂದು ತೀಡಿದತ್ತು (ಕಾದಂಪು. ೬೩೩) ; ಸುತ್ತಿ ಸುಳಿದಾಡಿ ಬಳಲ್ದು ಸರಿತ್ಸುಧಾಂಶುಗಳ್ ಪುದಿದ ತದೀಯ ಮೌಳಿಯೊಳೆ ವಿಶ್ರಮಿಸಿರ್ದುದು ದೃಷ್ಟಿ ಪಾರ್ಥನಾ (ಶಬಶಂ. ೫-೧೫). ೩. ಅಲುಗಾಡದೆ ಇರು ; ಸ್ತಬ್ಧವಾಗಿರು : ನಿಮಿರ್ದ ಕೊರಲ್ ಮರಲ್ದು ಮಡಿದೂಳಿದ ಮುಂದಣ ಕಾಲ್ಗಳ್ . . . ಅಲಿಸುತ್ತೆ ವಿಶ್ರಮಿಸುವ ಕರ್ಣಮುಳ್ಳಗುಳ್ದ ಕಣ್ (ಲೀಲಾವ. ೬-೪೭) : ಮುಂಜಾವಿನ ಈ ತಂಗಾಳಿಯಿಂದ ಕಣ್ಣುಗಳು ತಾವಾಗಿಯೇ ವಿಶ್ರಮಿಸಹತ್ತಿವೆ (ಅಡವ. ೩೨). [ವಿಶ್ರಮ + – ಇಸು]

ವಿಶ್ರಾಂತ (ಗು). ೧. ವಿಶ್ರಾಂತಿಯನ್ನು ಹೊಂದಿದ : ವಿರಮಿಸಿದ : ಸೀಮಂತ ಸಿಂದೂರದ ವಿರಚನೆಯಂ ಕೂಡೆ ಮಾಡುತ್ತುಮಿರ್ದಂ ಭರತೇಶಂ ತತ್ಕಟೀನಂದನ ವಿಟಪಿತಟಚ್ಛಾಯೆ ವಿಶ್ರಾಂತಸ್ಮೇನ್ಯಂ (ಆದಿಪು . ೧೧ ೧೫೧) ; ಅಂತತಿ ಮನೋಹರಮಾದ ವಾಹಿನೀನಿಕಟದೊಳ್ ವಿಶ್ರಾಂತಕಟಕನಾಗಿರ್ಪುದುಂ (ಚಂದ್ರಪ್ರ. ೧೦-೫೪ ವ) ೨. ನಿರ್ದಿಷ್ಟ ಕಾಲದ ನೌಕರಿ ಅಥವಾ ಸೇವೆಯಿಂದ ಮುಕ್ತಗೊಂಡ, — ನಿವೃತ್ತಿಯಾದ : ಭಾರತ ಸೈನ್ಯದ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿದ ಶ್ರೀಯುತರು ಈಗ ವಿಶ್ರಾಂತಜೀವನ ನಡಸುತ್ತಿದ್ದಾರೆ (ರೂಢಿ) ೩. ವಿಸ್ತರಿಸಿದ : ಚಾಚಿಕೊಂಡಿರುವ : ಹರಿಗಂ ಕರ್ಣಾಂತ ವಿಶ್ರಾಂತಲೋಚನನಾ ಲೋಚನಗೋಚರಂಬರೆಗವೊಲ್ಕಾ ಕನ್ನೆಯಂ ನೋಡಿದಂ (ಪಂಪಭಾ. ೪-೪೨). (ನಾ). ೪. = ವಿಶ್ರಮ ೩ : ೮ ವಿಶ್ರಾಂತಂ ನಿಲ್ಕುಂ ದಶಮದೆಡೆಯೊಳ್ (ಛಂದೋಂಬು. ೨ ೧೬೩). [ಸಂ.]

ವಿಶ್ರಾಂತಿ (ನಾ). ೧. ಶ್ರಮಪರಿಹಾರ : ಕಂಡರ್ . . . ಸ್ವಾಂತಸುಖಮಂ ಪಡೆವ ಪೌರನಾರಿಯರ ವಿಶ್ರಾಂತಿಗಮರಿದ ರನ್ನವಾಸಜೆಗಳಿಂದ . . . ಮನೋಹರಮಾದ ಗಿರಿಯೊಂದನು (ಚಿಸುಛಾ. ೩-೧೩) . ೨. ವಿರಾಮ ; ಬಿಡುವು : ಇಡೀ ವಿಶ್ವವೇ ಕಾರ್ಯನಿಮಗ್ನವಾಗಿದೆ. ಅರೆಕ್ಷಣವೂ ವಿಶ್ರಾಂತಿಯೆನ್ನುವದಿಲ್ಲ (ಧರ್ಮಶಾ. ೧೩೧). ೩. ನೆಲೆ : ಗುರುದಯಾಸಂಪದದಿ ವರ್ಧಿಸಿ ಗುರುಜಠರ ವಿಶ್ರಾಂತಿಯಲಿ ತದ್ಗುರುವೆ ತಾನಾಗಿ ಬೆರಸಿದನು ಶಿವಲಿಂಗತತ್ಪದೊಳು (ಬಸಪು ೬೧-೬೭) ; ನಾನಾರೂಪಿನ ಪ್ರಜ್ವಲಾಕಾರ ಏನೇನೂ ಇಲ್ಲದ ಠಾವಿನಲ್ಲಿ ವಿಶ್ರಾಂತಿಯನೆಯ್ದಿರೆ ನಾನು ಸ್ವಯಂಭುವಾದೆನು ಕಾಣಾ (ಷಡ್ಪದ. ೧೪೮-೪೪೦) ೪. ಉದ್ಯೋಗದಿಂದ ಹೊಂದುವ ನಿವೃತ್ತಿ : ನಮಗೆ ಸಂಗೀತ ಕಲಿಸುತ್ತಿದ್ದ ಉಪಾಧ್ಯಾಯರು ಈಗ ವಿಶ್ರಾಂತಿ ಹೊಂದಿದ್ದಾರೆ (ರೂಢಿ). ೫. = ವಿಶ್ರಮ ೪ : ವನಂ ಧಾತ್ರೀಚಕ್ರಂ ಸುರಪಪವನಂ ಶೀತಕರನಬ್ಜನಾಭಂ ಭೂತೇಶಂ ನೆಲಸಿ ನಿಲೆ ವಿಶ್ರಾಂತಿಯವಜೊಳ್ ಮನಂಗೊಂಡಾಜೆಂಬೀಯೆಡೆಯೊಳಿಗೆ ಕರ್ಣಾಮೃತರಸಂ (ಛಂದೋಂಬು. ೨-೧೬೬). [ಸಂ.]

ವಿಶ್ರಾಂತಿಗೃಹ (ನಾ). ಪ್ರಯಾಣಿಕರು ದಣಿವ್ಹಾರಿಸಿಕೊಳ್ಳುವುದಕ್ಕಾಗಿ ಕಟ್ಟಿರುವ ಮನೆ ; ತಂಗುಮನೆ : ಏವರ್‌ಗ್ರೀನ್ ಹೋಟೆಲು ಜನಸಾಮಾನ್ಯರ ವಿಶ್ರಾಂತಿಗೃಹವಲ್ಲ (ಒಡಪ. ೧) : ಅನ್ನಸತ್ರವನ್ನೋ ವಿಶ್ರಾಂತಿಗೃಹವನ್ನೋ ನಿರ್ಮಿಸುವುದಕ್ಕಾಗಲಿ ಏನಾದರೂ ಸಹಾಯ ಬೇಡಬಂದರೆ, ಅವರಿಗೂ ಇದೇ ಉತ್ತರ ಸಿದ್ಧವಾಗಿರುತ್ತಿತ್ತು (ಪೀಪಾಳ ೧೩) [ಸಂ.]

ವಿಶ್ರಾಂತಿಪದ (ನಾ). ನೆಲಸುವ ಸ್ಥಳ ; ನೆಲೆ : ಸಮಸ್ತಸಾಮಂತಕಿರೀಟಕೋಟಿಗಳೊಳಾತಪವಾರಣಶೂನ್ಯದೆನ್ನವಿಶ್ರಾಂತಿಪದಂಗಳೊಳ್ ನೆಲಸಿ ಸೈನ್ಯರಜೋರುಣಕಾಂತಿ ರಾಜಿಗಳ್ (ಶಾಂತಿಪು. ೧೯-೪೧) [ಸಂ.]

ವಿಶ್ರಾಣನ (ನಾ) ೧. ನೀಡುವಿಕೆ : ದಾನ : 'ವಿಶ್ರಾಣನವಿನೋದ' ಪರಾ. ೨. ದಾನ ಮಾಡುವವನು ; ದಾನಿ : ಎದ್ವಷ್ಟಿನಂ ಬಂಪುರೆ ಬಾಪೆಂದೆತ್ತಿಕೊಂಡಾಡುವ ವಿವಿಧಕಳಾಪ್ರೌಢಿ|ವಂದಿಬ್ರಜಂ ಕಂಡಿರದಿಷ್ಟಾರ್ಥಂಗಳಂ ಕೊಡ|ಡ|ರೆ ಪೊಗಳ್ವ ವಿಶ್ರಾಣನಂ ವಿಶ್ವ|ವಂದ್ಯಂ|ಚರಿತಂ ತಾನಾಗಲೇನುಂತಿವಡೆದನೊ ಲಕ್ಷ್ಮೀಧರಾಮಾತ್ಯ ವರ್ಯ್ಯಂ (ಪ್ರಾಶಾ. IV. ೩೭೭-೪೪ : 1410) [ಸಂ.]

ವಿಶ್ರಾಣನವಿನೋದ (ನಾ). ದಾನಮಾಡುವ ವಿಲಾಸ, — ವಿನೋದ : ಅಂತು ಸಕಲಜನಪ್ರೀಣನಪ್ರದಮಂ ವಿಶ್ರಾಣನವಿನೋದಮಂ ತೀರ್ದು . . . ಪುರಮಂ ಪೊಗುವಲ್ಲಿ (ಚಂದ್ರಪ್ರ. ೭-೧೫೩ ವ). [ಸಂ.]

ವಿಶ್ರಾಮ (ನಾ). ೧. = ವಿಶ್ರಮ ೧. ೨. = ವಿಶ್ರಮ ೩ : ಭೂಮಿವ್ಯೋಮದ್ವಯಂದ್ವಯರುದ್ರ ದ್ವಯಂಗಳ್ ತಾಮೆತ್ತಂ ಚೆಲ್ವಾಗೆ ಶೈಲಂಗಳೊಳ್ ವಿಶ್ರಾಮಂ ನಿಲ್ತಂದಕ್ಕುಮಾ ನಾಕಿಯಿಂದಂ . . . ಶಾಲಿನೀನಾಮವೃತ್ತಂ (ಛಂದೋಂಬು. ೨-೧೨೧). [ಸಂ.]

ವಿಶ್ರಾಮದೇಶ (ನಾ). ವಿರಮಿಸುವ ಸ್ಥಳ : ವಾಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರವಿಶ್ರಾಮದೇಶಂ (ಗಿರಿ. ೧-೧೬). [ಸಂ.]

ವಿಶ್ರಾವ (ಗು). ೧. ಹರಿಯುವ ; ಪ್ರವಹಿಸುವ. (ನಾ). ೨. ಹೆಸರುವಾಸಿ ; ಪ್ರಖ್ಯಾತಿ : "ವಿಶ್ರಾವಃ, ಪ್ರತಿಖ್ಯಾತಿಃ – ೨ ಅಧಿಕವಾದ ಪ್ರಸಿದ್ಧಿ, ಹೆಚ್ಚಾದ ಹೆಸರುವಾಸಿ" (ಸಿದ್ಧಾಂತಿ. ೩೭೫). [ಸಂ.]

ವಿಶ್ರುತ (ಗು). ೧. ಪ್ರಖ್ಯಾತಿ ಹೊಂದಿದ ; ಪ್ರಸಿದ್ಧವಾದ : ಅದೂರ್ಮೆ ವರವೀರವಿಶ್ರುತ ಕಥಾವುರಾಣಂಗಳಿಂ . . . ಕಳೆವನಿಂತು ಪೋಪ್ಪಂ ನೃಪಂ (ಕಾದಂಪು. ೨೨) : ವಿಶ್ರುತವರಗುಣಗಣಧಾಮಂ (ಪಮ್ಮೂರ. ೨-೧೦). (ನಾ). ೨. ಪ್ರಸಿದ್ಧನಾದವನು ; ಕೀರ್ತಿವಂತ : ಮಂತ್ರಿಸಂದೋಹವಿಶ್ರುತನುಮಪ್ಪ ಬಹುಶ್ರುತನೆಂಬ ಮಂತ್ರಿಯಂತೆಂದಂ (ಶಾಂತಿಪು. ೨-೭೬ ವ) ; ಶ್ರೀವರನಿಂದ್ರಾದಿಮುನಿಗಳಿಂ ವಿಶ್ರುತನ್ಕೆ (ಜಗವ. ೧೭-೨೬). [ಸಂ.]

ವಿಶ್ಲಥ (ಗು). ಸಡಿಲಗೊಂಡ ; ಅಳ್ಳಕವಾದ : ಜವಮುಬ್ಬಿದೊಂದು ಸೋಗೆನವಿಲೊಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಮಿದೆನ್ನ ನಲ್ಲಳ ರತಿಶ್ರಮವಿಶ್ಲಥಕೇಶಪಾಶದೊಳ್ ಸವಸವನಾಗಿ ತೋಱಿದಪುದೆಂಬುದೆ ಕಾರಣದಿಂದದಂ ಗುಣಾರ್ಣವನಿಡಲೊಲ್ಪನಿಲ್ಲ (ಪಂಪಭಾ. ೫-೫೧) ; ಐರಾವತಗಜಕುಂಭಸ್ಥಾರಣ ವಿಶ್ಲಥವಿಕಾಸಿಕೇಯೂರಂ ಕೇಯೂರ ದೊಳೊರಸೆ (ಶಾಂತಿಪು. ೫-೧೫೩) ; ಆಸಾರಲಕ್ಷ್ಮೀಪ್ರಕಟಾಂಭೋದಾವಳೀವಿಶ್ಲಥಕಬರಿ ಭರಸಂಸಿದಾಮಂ . . . ತಟಿನ್ಮಾಲೆ ಚೆಲ್ವಾದುದು (ಚಂದ್ರಪ್ರ. ೪-೬೬). [ಸಂ.]

ವಿಶ್ಲಿಷ್ಟ (ನಾ). [ನಾಟ್ಯ] ದೇಶೀಯ ಭೌಮಚಾರಿಗಳಲ್ಲಿ ಒಂದು; IP "ಪಾರ್ಷ್ಣಿವಿದ್ಧಸ್ಥಾನಕದಲ್ಲಿ . . . ನಿಂತುಕೊಂಡು ಕಾಲನ್ನು ಬಿಡಿಸಿ ಮುಂದಕ್ಕೆ ನಡೆದು ಅಡಿಗಳು ಅದೇ ಮುಖವಾಗಿರುವಂತೆಯೇ ಹಿಂದಕ್ಕೆ ನಡೆಯುವುದು" (ಶಾಸ್ಮರಂ. ೬೫೧ ಗದ್ಯಾನುವಾದ) : ರಥಚಕ್ರ . . . ವಿಶ್ಲಿಷ್ಟ . . . ಸಮಸ್ಖಲಿತ – ಈ ಮೂವತ್ತೈದು ದೇಶೀಯಸಂಬಂಧದ ಭೌಮಚಾರಿಗಳು (ಶಾಸ್ಮರಂ. ೬-೧೭ ವ). [ಸಂ.]

ವಿಶ್ಲೇಷ (ನಾ). ೧. ಬೇರೆಯಾದುದು ; ಪ್ರತ್ಯೇಕಗೊಂಡುದು ; ವಿಭಜಿಸಲ್ಪಟ್ಟುದು : ಉ ಅ ಗಳು ಬಿಡಿಯಾಗಿದ್ದಾಗ ಳ – ರ ಗಳಾಗಿ ಪರಿಣಮಿಸಿದವು ; ಒತ್ತಿನಲ್ಲಿದ್ದಾಗ ವಿಶ್ಲೇಷವಾದುವು ; ಇಲ್ಲಿ ಮುಂದಿನ ವ್ಯಂಜನರೂಪಕ್ಕೆ ತಿರುಗಿದವು (ನ್ಯಾವಿ. ೬೬೦). ೨. ಅಗಲಿಕೆ ; ವಿಯೋಗ : ಪ್ರಣಯಿನೀವಿಯೋಗಪರಿಭವಾನಲದಹ್ಯ ಮಾನಮಾನಸನಪ್ಪ ಶ್ರೀವಿಜಯನುಮಂ ಭಂಗಿಸಿ ವಿಶ್ಲೇಷೋಪತಾಪಾಂತಸ್ಪಮಾನ ಹೃದಯನಪ್ಪಕಲಂಕಾಚಾರಸಾರನುಮಂ ಲೋಕಜ್ಞತಾದಿ ಮೃದುವಚನರಚನೆಗಳಿಂದಮಾಜ್ ನುಡಿದು (ಶಾಂತಿಪು. ೬-೩೬ ವ). ೩. [ಕಾವ್ಯಮೀ] ಕಾವ್ಯದ ಹದಿನೆಂಟು ದೋಷಗಳಲ್ಲಿ ಒಂದು ; ಕೂಡಿರಬೇಕಾದ ಪದಗಳನ್ನು ಬಿಡಿಸಿ ಬರೆದಿರುವುದು ; ವಿಸಂಧಿ : ಅಸದರ್ಥಂ . . . ದುಸ್ಸಂಧಿ ವಿಶ್ಲೇಷ ನಪ್ಪಸಮಾಸಂ ನಯನಾಶ ರೀತಿವಿಫಲಂ . . . ಇನಿತುಂ ದೋಷಂಗಳಪ್ಪಾದಶಂ (ಛಂದೋಂಬು. ೧-೪೬ ಅಡಿಪದ್ಯ). ೪. [ನಾಟ್ಯ] ಕರನ್ಯಾಸಗಳಲ್ಲಿ ಒಂದು : ಮಾನಿತ ವಿಶ್ಲೇಷಂ . . . ತರ್ಜನ್ಯಾಖ್ಯಂಗಳಿಂದೆ ತೋಱುವ ಭೇದಂ . . . ಇವ್ವತ್ತೈಂಬ ಭಾವದಿಂ ರಂಜಿಸುಗುಂ (ಶಾಸ್ಮರಂ. ೪-೧೧). [ಸಂ.]

ವಿಶ್ಲೇಷಣ (ನಾ). ವಿಂಗಡಿಸುವಿಕೆ ; ವಿಭಜನೆ ; ಪೃಥಕ್ಕರಣ : ಭೂತಕನ್ನಡಿಯಲ್ಲಿ ಸೂರ್ಯಕಿರಣಗಳ ವಿಶ್ಲೇಷಣ(Decomposition)ವಾಗುವುದರಿಂದ ವರ್ಣಾಂತರ ಗಳಾಗುವುದನ್ನು ತಪ್ಪಿಸಲು ಏನು ಮಾಡಬೇಕೆಂದು ಅವನು ಚಿಂತಿಸತೊಡಗಿದನು (ಎಚ್ಚಾಕ. ೪೮). [ಸಂ.]

ವಿಶ್ಲೇಷಣೆ (ನಾ). ೧. = ವಿಶ್ಲೇಷಣ. ೨. ಸಾರವನ್ನು ಗ್ರಹಿಸಿ ಮಾಡುವ ವಿವರಣೆ : ಈ ಕಥೆಗಳ ವಿಶ್ಲೇಷಣೆ ಸುಲಭವಾಗಿ ಹಿಡಿತಕ್ಕೆ ಸಿಗುವಂಥದಲ್ಲ (ಹೊಸಕ್ಕ. ೨೯೩). [ಸಂ. ವಿಶ್ಲೇಷಣ]

ವಿಶ್ಲೇಷಿಸು (ಕ್ರಿ). ವಿಂಗಡಿಸು ; ವಿಭಜಿಸು ; ಪೃಥಕ್ಕರಿಸು : ರಸಾಯನಶಾಸ್ತ್ರಜ್ಞರು ಈ ಎಸ್ಟೆಯಿಂದ ಯತ್ಕೆಲ್‌ಎಸ್ಟರ್‌ಗಳಿಂಬ ಕೆಲವು ಸತ್ವಗಳನ್ನು ವಿಶ್ಲೇಷಿಸಿ ಬೇರೆ ಯಾಗಿಸಿದ್ದಾರೆ (ಪಪಹೊ. ೫೩). [ವಿಶ್ಲೇಷಣ + – ಇಸು]

ವಿಶ್ವ (ಗು). ೧. ಸಕಲ ; ಸಮಸ್ತ ; ಎಲ್ಲ : ವಿಶ್ವದಿ[ಗ್ವ್ಯಾಪ್ತ] ಯಶೋವಿಳಾಸಿನಿಗೆ ವಲ್ಲಭನಾಗು (ಪಂಪಭಾ. ೧-೧೪೯). (ನಾ). ೨. ಜಗತ್ತು ; ಲೋಕ ; ಪ್ರಪಂಚ : ವಿಶ್ವವಿನುತಂ ಪಾದಂ . . . ಆಗಿರೆ ಪೆಂಪಚ್ಚರಿಯಾದ ದೇವಗಣಪಂ ರಕ್ಷಿಕೆ ಭೂಚಕ್ರಮಂ (ಜಗವಿ. ೧-೫) ; ವಿಶ್ವಭೂತಪ್ರಕರ ದಣಿದುದು ಧರ್ಮಪುತ್ರನ ರಾಜಸೂಯದಲಿ (ಕುಮಾಸ. ೭ ಸೂಚನೆ) ; ವಿಶ್ವದ ಸಮಸ್ತ ಬೌದ್ಧಿಕವ್ಯಾಪಾರಗಳಿಗೆಲ್ಲ ಮನುಷ್ಯನೇ ಕೇಂದ್ರ ಬಿಂದು (ಗ್ರಂಥಾಲ. ೧). ೩. ವಿಷ್ಣು : ಎಡವಿದಡೆ ಹರಿ ವಿಶ್ವನೆಂದುಗ್ಗಡಿಪನಲ್ಲದೆ ವಿಶ್ವವಲ್ಲಭನುಡುಪಖಂಡಶಿಖಂಡನೊರ್ಬನೆಯೆಂದುಸುರಲೊಲ್ಲ (ಬಸಪು. ೫೭-೨೬) ; ವಿಶ್ವ ನಿನ್ನಯ ಮಾಯೆ ನಿರ್ಮಲ (ಕುಮಾಭೀ. ೩-೮೬). ೪. ದೇವತೆಗಳಲ್ಲಿ ಒಂದು ಪಂಗಡ ; ಧರ್ಮನೆಂಬ ತಪಸ್ವಿಗೂ ದಕ್ಷಪುತ್ರಿಯಾದ ವಿಶ್ವಾ ಎಂಬುವಳಿಗೂ ಜನಿಸಿದ ಕ್ರತು, ದಕ್ಷ, ವಸು, ಸತ್ಯ, ಕಾಲ, ಕಾವ್ಯ, ಶುಚಿ, ರುಚಿ, ಪುರೂರವ ಮತ್ತು ಆರ್ದ್ರವ ಎಂಬ ಈ ಹತ್ತು ಮಂದಿ ದೇವತೆಗಳನ್ನು ಶ್ರಾದ್ಧ ಮತ್ತು ವೈಶ್ವದೇವವಿಧಿಗಳಲ್ಲಿ ಪೂಜಿಸುತ್ತಾರೆ. ೫. ಒಣಶುಂಠಿ : ಅಲ್ಲ. ೬. ದೇವಾಲಯದ ಶಿಖರ ಅಥವಾ ಅಲಂಕಾರದ ರಚನೆಯುಳ್ಳ ಬಾಗಿಲು : "ಲೋಕದಿ ಗೋಪುರ ಶುಂಠಿ ಸಮಸ್ತದಿ ನಾಲ್ಕುಂ ವಿಶ್ವಶಬ್ದಮೆನಿಕ್ಕುಂ ಜಗದೊಳ್" (ನಾನಾಕಂ. ೧೨೨) ; "ಜಗಮುಂ ಶುಂಠಿಯದಭ್ರ ಗೋಪುರಮಿವುಂ ವಿಶ್ವಾಖ್ಯಂ" (ನಾನಾರ. ೯೬). ೭. ಪ್ರಾಣವಾಯುಗಳಲ್ಲಿ ಒಂದು ; ಕೈ ಕಾಲುಗಳ ಚಲನೆಗೆ ಕಾರಣವಾದ ಒಂದು ವಾಯು : "ಕೈಕಾಲ ಗತಿಯಲ್ಲಿಹುದು ವಿಶ್ವವಕ್ಕು" (ಮಂಗರಾ. ೧೬-೧೩). ೮. ವಿಶ್ವ, ತೈಜಸ ಮತ್ತು ಪ್ರಾಜ್ಞವೆಂಬ ತ್ರಿವಿಧಜೀವಗಳಲ್ಲಿ ಒಂದು ; "ಸ್ಥೂಲಶರೀರದಲ್ಲಿರುವ ಜೀವನಿಗೆ ವಿಶ್ವನೆಂದೂ, ಜೀವಾತ್ಮನೆಂದೂ ಹೇಳುವರು" (ಶಿವಾಸೂ. ೪೯): ವಿಶ್ವ ತೈಜಸ ಪ್ರಾಜ್ಞವೆಂಬ ಜೀವತ್ರಯವಿಡಿದ ಸ್ಥೂಲ ಸೂಕ್ಷ್ಮ ಕಾರಣತನುವಿನ ಸುಬುದ್ಧಿ ಸುಮನ ಸದ್ಭಾವವೆಂಬ ಹಸ್ತದಿಂ . . . ಭಾವಾರ್ಪಣದಿಂದರ್ಚಿಸಿಕೊಂಬ (ಆದಪು. ಮು. ೧೨೬-೨೨೦) ; ಈ ವಿಧದವಸ್ಥೆಯಲಿ ಹೊಳೆಯುವ ಜೀವನೆನಿಸುವ ವಿಶ್ವತೈಜಸನೋವಿ ಪ್ರಾಜ್ಞನೆನಿಪ್ಪ ಪೆಸರನು ತಳೆದು ತೋಱುವನು (ಅಮೃತ. ೯-೧೨). ೯. [ಗಣಿತ] ಹದಿಮೂರು ಎಂಬ ಸಂಖ್ಯೆಯ ಸಂಕೇತ : "ವಿಶ್ವಮೆನೆ ಪದಿಮೂಱೆನಿಕ್ಕುಂ" (ಮಂಗರಾ. ೧೦೪-೬).

[ಸಂ.]

ವಿಶ್ವಂಭರ (ಗು). ೧. ಎಲ್ಲವನ್ನೂ ಹೊರುವ. (ನಾ). ೨. ಜಗತ್ತನ್ನು ಧರಿಸಿರುವವನು; ಪರಮಾತ್ಮ : ಸಲಹುವ ದೈವವೇ ಕೆಡಹುವೊಡೆ ಭುವನದಲಾವ ತಡೆವನು ನೋಡೆ ವಿಶ್ವಂಭರನ ನಾಟಕವು (ಕಾಶಿಖಾ. ೨೩-೧೫). ೩. ವಿಷ್ಣು ; ನಾರಾಯಣ : ವರಕೇಸರಿಯ ರೂಪಿನೊಳಾದಿ ವಿಶ್ವಂಭರನು ಗಲಿದನು ಮಾಯೆಯನು (ಕುಮಾಗ. ೫-೭). ೪. ಅಗ್ನಿ. ೫. ಇಂದ್ರ. [ಸಂ.]

ವಿಶ್ವಂಭರಾಪುತ್ರ (ನಾ). [ಜ್ಯೋತಿ] ಭೂಮಿಯ ಮಗ ; ಮಂಗಳ ; ಕುಜ : ಅ ನರಂಗೆ . . . ಆಮಯಂ ಸಮನಿಕುಂ . . . ತಾನವರೋಹಿಯಪ್ಪ ದಶೆಯೊಳ್ ವಿಶ್ವಂಭರಾಪುತ್ರನಾ (ಜಾತಕ. ೯-೨೨). [ಸಂ.]

ವಿಶ್ವಂಭರಾವಲ್ಲಭ (ನಾ). ಭೂಮಿಯ ಒಡೆಯ; ದೊರೆ; ರಾಜ : ಪತನಂತೆ ಪೂರ್ಣವಿಭವಂ ವಿಶ್ವಂಭರಾವಲ್ಲಭಂ (ರಾಜಶೇ. ೪-೧೨೫). [ಸಂ.]

ವಿಶ್ವಂಭರೆ (ನಾ). ಎಲ್ಲವನ್ನೂ ಧರಿಸಿರುವುದು; ಭೂಮಿ : ಸೀತೋದೆಯ ಪೋಲ್ವೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ (ಆದಿಪು. ೧-೫೧) ; ಎರಡುಭಾಗವ ಮಾಡಿ ವಿಶ್ವಂಭರೆಯ ರಾಜ್ಯವನುಭಯರಾಯರು ಹೊಱ ಹೊಗದೆ ಪಾಲಿಸಲಿ ಪಂಥದೊಳು (ಕುಮಾಅ. ೧೮-೨). [ಸಂ. ವಿಶ್ವಂಭರಾ]

ವಿಶ್ವಕದ್ರು (ನಾ). ಬೇಟೆಗಾಗಿ ಪಳಗಿಸಿದ ನಾಯಿ ; ಬೇಟೆನಾಯಿ : ತಗುಳ್ದಟ್ಟುವ ವಿಶ್ವಕದ್ರುವನಭೀಕ್ಷಿಸಿ ಸಿಂಹಕಿಶೋರಮೆಂದು ಬೆಂಗೊಟ್ಟುವಿಭಂಗಳ್ (ಪುಷ್ಪಸು. ೫-೧೦೦).

[ಸಂ.]

ವಿಶ್ವಕರ್ತ (ನಾ). ಸೃಷ್ಟಿಕರ್ತ ; ಭಗವಂತ : ವಿಶ್ವಕರ್ತನು ರಾಮನಾಥನು ವಿಶ್ವಭರ್ತನು ರಾಮನಾಥನು ವಿಶ್ವಹರ್ತನು ರಾಮನಾಥನು (ಬಸಪು. ೫೧-೧೩).

[ಸಂ. ವಿಶ್ವಕರ್ತೃ]

ವಿಶ್ವಕರ್ತೃ (ನಾ). ಪ್ರಪಂಚವನ್ನು ಸೃಷ್ಟಿಸಿದವನು : ಸುಡುವುದಗ್ನಿಗೆ ಕಟ್ಟು ; ವಿಶ್ವಕರ್ತೃವಿನಾಜ್ಞೆ (ಚಿತ್ರಾಂಗ. ೩೮-೪೫). [ಸಂ.]

ವಿಶ್ವಕರ್ಮ (ನಾ) ೧. = ವಿಶ್ವಕರ್ತ : ಸಕಲಜಗತ್ಕರ್ತನಾಗಿರುವುದರಿಂದ ವಿಶ್ವಕರ್ಮನೆಂದು ಹೆಸರು (ಭಾರತಾಂ. ೪೫). ೨. ದೇವಲೋಕದ ಶಿಲ್ಪಿ ; ದೇವಶಿಲ್ಪಿ : "ವಿಶ್ವಕೃತ್, ವಿಶ್ವಕರ್ಮಾ, ತ್ವಷ್ಟಾ, ದೇವವರ್ಧಕಿಃ - ಈ ೪ ದೇವರ ಬಡಗಿಯ ಪೆಸರ್" (ಹಲಾಯು. ೧೫-೯೮) ; ವಿಶ್ವಕರ್ಮನಳವಲ್ಲಿಂದುನ್ನಮುದ್ಯಾನಮಾಳಿಗೆಯಾಗಿ ರಸಚಿತ್ರ ಮಾಗಿ ಬರೆವಂ (ಮಲ್ಲಿಪು. ೫-೪೪) ; ನಿಚಿತಹರುಷರು ವಿಶ್ವಕರ್ಮಂಗಱುಹಿವರು ಹದನ (ಕುಮಾಕ. ೭-೧) ೩. ಬ್ರಹ್ಮ. ೪. ಶಿವ. ೫. ಮಂತ್ರಿ ; ಸಚಿವ. ೬. ಸೂರ್ಯ. ೭. ಯಮ. ೮. ಪ್ರಾಣ, ಅಪಾನ, ಸಮಾನವೆಂಬ ಮೂರು ಪ್ರಾಣ ವಾಯುಗಳು. ೯. ನಕ್ಷತ್ರಸಮೂಹ : ಭಗಣ. "ಮಂತ್ರಿ ಸೂರ್ಯಾಂಬುಜಭವ ಶಿವ ವಾಯುತ್ರಯಂ ವಿಶ್ವಕರ್ಮಂ ಭಗಣಂಗಳ್ ವಿಶ್ವಕರ್ಮಾಹ್ವಯಂ" (ನಾನಾರ. ೪೧). ೧೦. ಅಕ್ಕಸಾಲೆ ಜನಾಂಗಕ್ಕೆ ಸೇರಿದವನು. [ಸಂ. ವಿಶ್ವಕರ್ಮನ್]

ವಿಶ್ವಕರ್ಮರತ್ನ (ನಾ). [ಜೈನ] ಚಕ್ರವರ್ತಿಯಾದವನಿಗೆ ತಾನಾಗಿ ಬಂದೊದಗುವ ಏಳು ಜೀವರತ್ನಗಳಲ್ಲಿ ಒಂದು; ಅತ್ಯಂತ ಸಮರ್ಥನಾದ ಶಿಲ್ಪಿ : ಬಗೆದಾಗಳ ಪಡಗೆಲ್ಲಂ ಮಾ(ಟ)ಡಕೂಟಪ್ರಾಸಾದಂಗಳಂ ಸಮೆದು ತ(ದಿ)ರ್ಪ ವಿಶ್ವಕರ್ಮರತ್ನಮುಂ . . . ಸ್ತ್ರೀರತ್ನಮುಂ ಎಂಬೀಯೇಱುಂ ಜೀವರತ್ನಂಗಳ್ (ಜೀವಸಂ. ೧೮-೨). [ಸಂ.]

ವಿಶ್ವಕುಟುಂಬಿ (ನಾ). ಲೋಕವನ್ನೇ ತನ್ನ ಸಂಸಾರವೆಂದು ಭಾವಿಸುವ ವ್ಯಕ್ತಿ ; ವಿಶ್ವಸಂಸಾರಿ : ದೈವೀಯತೆಯ ಅಂತರಂಗಕ್ಕೆ ಬಹಿರಂಗವಾಗಿ ಅನುಕಂಪಿಸಿದರೆ, ಆತ ವಿಶ್ವಕುಟುಂಬಿಯಾಗುತ್ತಾನೆ (ಮನೋನಂ. ೨೩೦). [ಸಂ. ವಿಶ್ವಕುಟುಂಬಿನ್]

ವಿಶ್ವಕೃತ್ತು (ನಾ). ದೇವಲೋಕದ ಶಿಲ್ಪಿ ; ವಿಶ್ವಕರ್ಮ : "ವಿಶ್ವಕೃತ್, ವಿಶ್ವಕರ್ಮಾ, ತ್ವಷ್ಟಾ, ದೇವವರ್ಧಕಿಃ – ಈ ೪ ದೇವರ ಬಡಗಿಯ ಪೆಸರ್" (ಹಲಾಯು. ೧೫-೯೪).

[ಸಂ. ವಿಶ್ವಕೃತ್]

ವಿಶ್ವಕೋಶ (ನಾ). ಲೋಕಜ್ಞಾನದ ಎಲ್ಲ ವಿಷಯಗಳನ್ನೂ ವ್ಯವಸ್ಥಿತವಾಗಿ ನಿರೂಪಿಸುವ ಗ್ರಂಥ : ಆಧುನಿಕಯುಗದ ನಾಗರಿಕಮಾನವ ಹೊಂದಿರಬೇಕಾದ ಮೂಲಭೂತ ಅಗತ್ಯಗಳಲ್ಲಿ ವಿಶ್ವಕೋಶವೂ ಒಂದು (ಕವಿಕೋ. I, VII ಟೀಠಿ). [ಸಂ.]

ವಿಶ್ವಗೋದ (ನಾ). ಬಡಗಿ : ಆಱು ದರ್ಶನವೆಲ್ಲಾ ಎನ್ನ ಬಾಚಿಯ ಕಲೆ ಮಿಕ್ಕಾದ ಮೀಱಿದ ಅವಧೂತರುಗಳೆಲ್ಲಾ ಎನ್ನ ಉಳಿಯೊಳಗಣ ಒಡಪು . . . ಇಂತೀ ವಿಶ್ವಗೋದ [ಪಾಠಾಂ. ಧಾ]ರೆಲ್ಲರೂ ಕರ್ತಾರನ ಕರ್ಮಟದ ನಕ್ಕು ಬಚ್ಚನೆಯ ಚಿಕ್ಕಮಕ್ಕಳು (ಸಕವ.ಕ. III, ೧೬೨-೩೧೨). 'ವಿಶ್ವಕರ್ಮ' ಪರಾ. [?]

ವಿಶ್ವಚಿಹ್ನ (ನಾ). ಪರಮಾತ್ಮ ; ಭಗವಂತ : ಚೇತನಂ ವಿಶ್ವಚಿಹ್ನಂ ವಿಶ್ವಸಂಹೃತಂ ಖ್ಯಾತಸಾಕ್ಷಾದ್ವಸ್ತುಶಿವನಾದಿಯಪ್ಪ ನಗಜಾತೆ (ವೀಶೈಪು. ೭-೧-೨೪). [ಸಂ.]

ವಿಶ್ವಚೇಷ್ಟಕ (ನಾ). ಜಗತ್ತಿಗೆ ಚಾಲಕಶಕ್ತಿಯನ್ನು ನೀಡುವವನು : ವಿಶ್ವಪಾಲನೆ ವಿಶ್ವಚೇಷ್ಟಕ . . . ಸಲಹಬೇಕು (ಕುಮಾಭೀ. ೩-೮೬). [ಸಂ.]

ವಿಶ್ವಚೈತನ್ಯ (ನಾ). ಲೋಕವನ್ನೆಲ್ಲಾ ವ್ಯಾಪಿಸಿರುವ ಪರಮಾತ್ಮನ ಚೇತನ : ಚಿತ್ತದ ಕಳೆಯಲ್ಲಿ ಸದ್ವಿವೇಕವೆಂಬ ಲಿಂಗಕಳೆ ಉದಯಿಸಿ . . . ವಿಶ್ವಚೈತನ್ಯನಾಗಿಪ್ಪುದು ನೋಡಾ (ಸಿದ್ಧೇಶ. ೧೨೧-೩೭೫) ; ಆನಂದದ ಪರಮಾವಧಿಯನ್ನು ಮುಟ್ಟಿ ಅವರ ಆತ್ಮ ವಿಶ್ವಚೈತನ್ಯದಲ್ಲಿ ಲೀನವಾಗುತ್ತದೆ (ಸಮಬೇ. ೧೯ ಟೀಠಿ). [ಸಂ.]

ವಿಶ್ವದಾತ (ನಾ). ಸಕಲವನ್ನೂ ನೀಡುವ ದಾನಿ : ವಿಶ್ವಮಯನು ರಾಮನಾಥನು ವಿಶ್ವದಾ[ಪಾಠಾಂ. ಧಾ] ತಂ ರಾಮನಾಥನು (ಬಸಪು. ೫೧-೧೩). [ಸಂ. ವಿಶ್ವದಾತೃ]

ವಿಶ್ವದೃಷ್ಟಿ (ನಾ). ಸರ್ವವ್ಯಾಪಿಯಾದ ನೋಟ ; ವಿಶಾಲದೃಷ್ಟಿ : ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಹುಟ್ಟಿಯೂ ಸಾಹಿತಿಯು ವಿಶ್ವದೃಷ್ಟಿಯನ್ನು ಪಡೆಯಬಲ್ಲ (ನವ್ಯಕಾ. ೫).

[ಸಂ.]

ವಿಶ್ವೆದೇವತೆ (ನಾ). ಧರ್ಮನೆಂಬ ಮುನಿಗೂ ದಕ್ಷಪುತ್ರಿಯಾದ ವಿಶ್ವೆ ಎಂಬುವಳಿಗೂ ಹುಟ್ಟಿದ ಕ್ರತು, ದಕ್ಷ, ವಸು, ಸತ್ಯ, ಕಾಲ, ಕಾವ್ಯ, ಶುಚಿ, ರುಚಿ, ಪುರೂರವ ಮತ್ತು ಆರ್ದ್ರವ — ಎಂಬ ಹತ್ತು ಮಂದಿ ದೇವತೆಗಳ

ಒಂದು ವರ್ಗ ಮತ್ತು ಆ ವರ್ಗಕ್ಕೆ ಸೇರಿದ ಒಬ್ಬ ದೇವತೆ : ಚಿರಲೋಕವಾಸಿಗಳಾದ ಕ್ರತು . . . ಆರ್ದ್ರವರಂಬ ವಿಶ್ವದೇವತೆಗಳೊಡನೆಯುಂ . . . ಕೂಡಿರ್ಪ ಚಂದ್ರನಾದೊಡೆ (ಏವೇಕ. ೨೧೮). [< ಸಂ. ವಿಶ್ವೇದೇವತಾ]

ವಿಶ್ವಧಾರಿಣಿ (ನಾ). ವಿಶ್ವವನ್ನು ಹೊತ್ತಿರುವವಳು ; ಭೂಮಿ ; ಧರೆ : ಗುಣನಿಧೀ ನಂದಿವರ್ಧನನನಾಡುವನಾಳ್ವಸಕೆಯ್ಸಿ ವಿಶ್ವಧಾರಿಣಿಯನವಧ್ಯಗೆಯ್ದೆನಗಂ ಬೆಸಕೆಯ್ದೊಡೆ (ಶಾಂತಿಪು. ೯-೧೦೪). [ಸಂ. ವಿಶ್ವಧಾರಿಣೀ]

ವಿಶ್ವನಾಥ (ನಾ). ೧. ಜಗತ್ತಿನ ಒಡೆಯ : ಅನತಿಶಯಕೇವಲಜ್ಞಾನನಿರೀಕ್ಷಿತ ವಿಶ್ವನಾಥನಾದಿಜಿನಂ . . . ಅನಂತಸುಖನಿಳಯಂ (ಆದಿಪು. ೧೦-೧೫). ೨. ಶಿವ ; ಈಶ್ವರ : ಶಶಿಮೌಳಿ ಶ್ರೀ ವಿಶ್ವನಾಥ ಭೂಪಂಗೆ ಕರುಣಿಸಿ ಸಕಲಸಾಮ್ರಾಜ್ಯವಿತ್ತು (ಹಚಕಾ. ೧-೧೭) ; ಶ್ರೀ ವಿಶ್ವನಾಥನು ಗಿರಿಜಾಸಹಾಯನು ನಮ್ಮನು ಸಲಹಲಿ ಶಿವನು (ಇಂಚಾಪ. ೮೩-೧). ೩. ವಾರಾಣಸಿಯಲ್ಲಿ ನೆಲೆಗೊಂಡಿರುವ ಶಿವನ ಮೂರ್ತಿ; ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು : ಗಂಗಾಸ್ನಾನಾನಂತರ ಕಾಶೀ ವಿಶ್ವನಾಥನ ದರ್ಶನ ಮಾಡಿದರೆ ಪುಣ್ಯಪ್ರಾಪ್ತಿ ಎಂದು ಹೇಳುತ್ತಾರೆ (ರೂಢಿ). [ಸಂ.]

ವಿಶ್ವಪ್ರಯತ್ನ (ನಾ). ಎಲ್ಲ ಬಗೆಯ ಯತ್ನ ; ಸಕಲರೀತಿಯ ಪರಿಶ್ರಮ : ರಘುವೀರಸಿಂಹನನ್ನು ಹೇಗಾದರೂ ಕೈಸೆರೆಹಿಡಿಯಬೇಕೆಂದು ಅಕ್ಬರ್‌ಬಾದಷಹನು ವಿಶ್ವಪ್ರಯತ್ನ ಮಾಡುತ್ತಿರುವನು (ಹಿಂಕಿರು. ೧೦೨). [ಸಂ.]

ವಿಶ್ವಪ್ರವೇಶಿನಿ (ನಾ). [ಜೈನ] ಒಂದು ಬಗೆಯ ವಿದ್ಯೆ : ಪ್ರಜ್ಞಪ್ತಿ . . . ಉದಕ ಸ್ತಂಭಿನಿ ವಿಶ್ವಪ್ರವೇಶಿನಿ . . . ಆಭೋಗಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಚಾವುಂಪು. ೧೯೬). [ಸಂ. ವಿಶ್ವಪ್ರವೇಶಿನೀ]

ವಿಶ್ವಭರ್ತ (ನಾ). ಜಗತ್ತನ್ನು ಪೋಷಿಸುವವನು ; ಪರಮಾತ್ಮ : ವಿಶ್ವಕರ್ತನು ರಾಮನಾಥನು ವಿಶ್ವಭರ್ತನು ರಾಮನಾಥನು (ಬಸಪು. ೫೦-೧೩). [ಸಂ. ವಿಶ್ವಭರ್ತೃ]

ವಿಶ್ವಭೇಷಜ (ನಾ). ಒಣಶುಂಠಿ ; ಅಲ್ಲ : "ಶುಂಠೀ, ನಾಗರಂ, ಮಹೌಷಧಂ, ವಿಶ್ವಭೇಷಜಂ, ವಿಶ್ವಾ- ಈ ೫ ಶುಂಠಿ" (ಪಲಾಯು. ೧೦೧-೪೬೧). [ಸಂ.]

ವಿಶ್ವಮಾನವ (ನಾ). ಸರ್ವಮಾನವಮಾನ್ಯವಾದ ಮೌಲ್ಯಪ್ರಜ್ಞೆಯುಳ್ಳ ವ್ಯಕ್ತಿ : ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಂಡು ಸಹ ವಿಶ್ವಮಾನವನಾಗುತ್ತಾನೆ (ಸಮ್ಯಾ. ೧೫). [ಸಂ.]

ವಿಶ್ವರೂಪ (ನಾ). ೧. ಸರ್ವವ್ಯಾಪಿಯಾದವನು ; ವಿಷ್ಣು; ನಾರಾಯಣ : ವಿಶ್ವರೂಪಂ ಕರ್ತವ್ಯಮನಱಿಪಿ ತನ್ನ ದಿವ್ಯರೂಪವನಡಂಗಿಸಿ . . . ಸಾಮಾನ್ಯ ಶಿಶುರೂಪಮಂ ಕೈಕೊಂಡು ನಿಲ್ಲುದುಂ (ಜಗವಿ. ೩-೬ವ) ; ವಿಶ್ವರೂಪನೇ ! ನಿನ್ನ ಶರೀರದಲ್ಲಿ . . . ಅನಂತರೂಪವನ್ನು ನೋಡುತ್ತೇನೆ (ಭಾತತ್ತ್ವ. ೧೨೬). ೨. ಎಲ್ಲ ಕಡೆಗಳಲ್ಲಿಯೂ ತುಂಬಿರುವಂತಹ (ಕೃಷ್ಣನ) ರೂಪ ; (ಕೃಷ್ಣನ) ವಿರಾಟ್‌ಸ್ವರೂಪ : ಮಿಂಚಿನ ಹೊದಱು ಹುರಿಗೊಂಡಂತೆ . . . ಹರಿ ತೋಱಿದನು ನಿರುಪಮ ವಿಶ್ವರೂಪವನಾ ಮಹಾಸಭೆಗೆ (ಕುಮ್ಯಾಉ. ೯-೫೭); ಸಾಸಿರಭುಜದ ಬಹುಳತೆಯವಗಡಿಸಿ ವೈಕುಂಠನೆಸದನು ವಿಶ್ವರೂಪದಲಿ (ಕುಮ್ಯಾಉ. ೯-೬೧). ೩. ಶಿವ ; ಈಶ್ವರ : ವಿಶ್ವರೂಪನು ನೀನೆ ದೇವ (ಅಏಂಡೇ. ೧೯೭-೧೯). ೪. ಐದು ಬಗೆಯ ಮಾಯಾಮಂತ್ರಗಳಲ್ಲಿ ಒಂದು : ಕಾಮರೂಪ ಘೋರದರ್ಶನ ಸಂಮೋಹನ ವಿಶ್ವರೂಪ ಗುಲ್ಮಸೃಷ್ಟಿಗಳೆಂಬ ಪಂಚಮಾಯಾಮಂತ್ರಂಗಳಂ (ಏವೇಕ. ೮೧). [ಸಂ.]

ವಿಶ್ವರೂಪದರ್ಶನ (ನಾ). (ಕೃಷ್ಣನ) ವಿರಾಟ್‌ಸ್ವರೂಪದ ಪ್ರಕಟಣೆ : ಶ್ರೀಕೃಷ್ಣನು ಅರ್ಜುನನಿಗೆ ತೋರಿಸಿದ ' ವಿಶ್ವರೂಪದರ್ಶನ' (ಪ್ರಬುಧ. ii ಮುನ್ನುಡಿ). [ಸಂ.]

ವಿಶ್ವಲೋಚನ (ನಾ). ಲೋಕಕ್ಕೇ ಕಣ್ಣಾದವನು ; ಸೂರ್ಯ : ಸೌಮಿತ್ರಿ . . . ವಿಶ್ವಲೋಚನಂಗೆ ಎಲೈ ಆರ್ಯಸೂರ್ಯನಾರಾಯಣ . . . ನೀಂ ಜಗಚ್ಚಕ್ಷುವಾಗೆ ಕುಂದುಕೊಱತೆಯಂ ಕಡೆಗೊತ್ತುತೆನ್ನನುದ್ಧರಿಸೈ, ಎಂದು ಕೈಮುಗಿದು ನಡೆದಂ (ರಾಮಾಶ್ವ. ೨೭-೬). [ಸಂ.]

ವಿಶ್ವವಸುಂಧರೆ (ನಾ). ಭೂಮಂಡಲ ; ಪ್ರಪಂಚ : ಮನೋಜರಾಜವಿಕ್ರಾಂತ ವನಾಸಿತಾರ್ತಿಯೆನೆ ವಿಶ್ವವಸುಂಧರೆ ಮಾಘಣಂದಿಸೈದ್ಧಾಂತಿಕಚಕ್ರವರ್ತಿ ನೆಗೞ್ದಂ (ಚಂದ್ರಪು. ೧-೨೨). [ಸಂ. ವಿಶ್ವವಸುಂಧರಾ]

ವಿಶ್ವವಿಕರ್ಣ (ನಾ). ಲೋಕಪ್ರಸಿದ್ಧನಾದವನು ; ವಿಶ್ವವಿಖ್ಯಾತ (?) : ನೀನು ಕುರುಬಲಕರ್ಣಧಾರನು ನೀನು ವಿಶ್ವವಿಕರ್ಣ ನೀನೇ ರಕ್ಷಿಸು (ಕುಮ್ಯಾದ್ರೋ. ೧-೧೭). [ಸಂ.]

ವಿಶ್ವವಿದ್ಯಾನಿಲಯ (ನಾ). ನಾನಾಶಾಸ್ತ್ರಗಳಲ್ಲಿ ಪಾಠಪ್ರವಚನಗಳನ್ನು ಮಾಡಿ, ಪರೀಕ್ಷಾದಿಗಳನ್ನು ನಡೆಸಿ, ಪದವಿಗಳನ್ನು ನೀಡುವ ವಿದ್ಯಾಸಂಸ್ಥೆ; ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ನೀಡುವ ಸ್ಥಳ ; ಯೂನಿವರ್ಸಿಟಿ : ವಿಶ್ವವಿದ್ಯಾನಿಲಯಗಳಿಗೆ ಸೂಕ್ತನಿರ್ದೇಶನವನ್ನೂ ನೀಡುತ್ತದೆ (ಶಿಕ್ಷಣ vii. ಮುನ್ನುಡಿ). [ಸಂ.]

ವಿಶ್ವವಿದ್ಯಾಲಯ (ನಾ). = ವಿಶ್ವವಿದ್ಯಾನಿಲಯ : ಬಲ್ಲವಿಕೆಯನು ತನ್ನ ದೇಶದೊಳೆಲ್ಲರುಂ ಸಂಗ್ರಹಿಸಲೆಂದಧಿಕೋಲ್ಲಸದೆ ವರವಿಶ್ವವಿದ್ಯಾಲಯವನೇರ್ಪಡಿಸಿ (ರಾಮಾಸಂ. ೧-೧-೧೨). [ಸಂ.]

ವಿಶ್ವವಿದ್ಯಾವಿದ (ನಾ). ಸಕಲವಿದ್ಯೆಗಳಲ್ಲೂ ಪಾರಂಗತನಾದವನು: ದಾನಗುಣದುನ್ನತಿಯಂ ನೆಱೆ ತಾಳ್ದಿ ವಿಶ್ವವಿದ್ಯಾವಿದರ್ಗತಿಯಿಂ ಪಿರಿದನೀವ ನೆಗೞ್ದೆ (ಎಕ. VII, ಶಿಕಾರಿ. ೧೫೧-೨೪ ; 1047) ; ವಿಶ್ವವಿದ್ಯಾವಿದನೆನ್ದು ಬಣ್ಣಿಪು [ದು] ನನ್ನನೃಪಾಳನನೀ ಧರಾತಳಂ (ಸೌಕಾ. XX, ೨೪೭-೫ ; 1087). [ಸಂ. ವಿಶ್ವವಿದ್ಯಾವಿದ್]

ವಿಶ್ವವಿದ್ಯೇಶ್ವರ (ನಾ). ಸಕಲವಿದ್ಯೆಗಳಿಗೂ ಅಧಿಪತಿಯಾದವನು ; ಸಕಲ ಶಾಸ್ತ್ರವಿಶಾರದ : ಮಹೋತ್ಸನ್ನಮತಿ ಶ್ರುತಾವಧಿಬೋಧನಪ್ರದಱಿಂ ವಿಶ್ವ ವಿದ್ಯೇಶ್ವರನುಂ (ಆದಿಪು. ೮-೬ ವ). [ಸಂ.]

ವಿಶ್ವವಿನುತ (ನಾ). ಸಕಲರಿಂದಲೂ ಸ್ತುತಿಸಲ್ಪಡುವಂತಹುದು : ಸಾಕ್ಷರಸೇವ್ಯಂ ನಿಜವಿದ್ಯೆ ವಿಶ್ವವಿನುತಂ ಪಾದಂ (ಜಗವಿ. ೧-೫). [ಸಂ.]

ವಿಶ್ವವ್ಯಸನ (ನಾ). ಏಳು ಬಗೆಯ ಚಿಂತೆಗಳಲ್ಲಿ ಒಂದು : ತನುವ್ಯಸನ . . . ವಿಶ್ವ ವ್ಯಸನ ಉತ್ಸಾಹವ್ಯಸನ ಸೇವಕ(ಸೇವಕಾ) ವ್ಯಸನ ಎಂಬ ಸಪ್ತವ್ಯಸನಂಗಳ ಸಂಹಾರವ ಮಾಡಿದ ನಿರ್ವ್ಯಸನಿಯ ನೋಡಾ (ಸಿದ್ಧೇಪ. ೧೫೮-೪೭೬); ತನುವ್ಯಸನ . . . ವಿಶ್ವವ್ಯಸನ ಉತ್ಸಾಹವ್ಯಸನ ಸೇವಕವ್ಯಸನವೆಂಬ ಸಪ್ತವ್ಯಸನದಿಂ ಹಸಂಗೆಟ್ಟು (ಏವೇಕ. ೧೯೭). [ಸಂ.]

ವಿಶ್ವವ್ಯಾಪಕ (ನಾ). ೧. ಜಗತ್ತನ್ನೆಲ್ಲಾ ತುಂಬಿರುವುದು ; ವಿಶ್ವವ್ಯಾಪಿ ಯಾದುದು: ಭಾರತಮಹಿಳಾಗಣದ ಕೀರ್ತಿಯು ವಿಶ್ವವ್ಯಾಪಕವಾಗಿ ಆಶ್ಚರ್ಯ ವನ್ನುಂಟುಮಾಡುವುದಾಗಿದೆ (ಭಾರಪ. ೪೧). ೨. ವಿಶ್ವವನ್ನೆಲ್ಲಾ ವ್ಯಾಪಿಸಿರುವವನು ; ಪರಮಾತ್ಮ : ವಿಶ್ವವ್ಯಾಪಕ ವಿಶ್ವಸೂತ್ರಧರ ನೀನೆ ವಿಶ್ವನಾಟಕ ಶ್ರೀ ವಿಷ್ಣುವೇ ನಮೋ ನಮೋ (ಪುರಂದ. ೨-೩-೧). [ಸಂ.]

ವಿಶ್ವಸಂಗ್ರಾಮ (ನಾ). ಜಗತ್ತಿನ ಅನೇಕ ರಾಷ್ಟ್ರಗಳು ಕೂಡಿ ನಡೆಸುವ ಕಾಳಗ ; ಮಹಾಯುದ್ಧ : ಅಟ್ಟ . . . ಮೊದಲ ವಿಶ್ವಸಂಗ್ರಾಮದಲ್ಲಿ ಒಂದು ವರ್ಷ ಸೇನಾಸೇವೆ ಸಲ್ಲಿಸಿ ೧೯೨೨ರ ತನಕ ದೀನದಲಿತರ ಉದ್ಧಾರದಲ್ಲಿ ತೊಡಗಿದರು (ಕವಿಕೋ. I, ೨೧೧). [ಸಂ.]

ವಿಶ್ವಸಂದಳೆ (ಕ್ರಿ). ವಿಶ್ವಾಸವನ್ನು ತಾಳು ; ನಂಬಿಕೆಯಿಡು : ವಿಶ್ವಮೇ ವಿಶ್ವೇಶನದರೊಳ್ ವಿಶ್ವಸಂದಳೆದಾಚರಿಪುದು (ಗಗಾ. ೧೪-೨೧). [ವಿಶ್ವಸ್ಯ + ತಳೆ]

ವಿಶ್ವಸಂಹೃತ (ನಾ). ಪ್ರಪಂಚವನ್ನು ಲಯಗೊಳಿಸುವವನು ; ಶಿವ : ಚೇತಸಂ ವಿಶ್ವಚಿಹ್ನಂ ವಿಶ್ವಸಂಹೃತಂ ಖ್ಯಾತಸಾಕ್ಷಾದ್ರಸ್ತು ಶಿವನಾದಿಯಪ್ಪ ನಗಜಾತೆ (ವೀಶೈಪು. ೭-೧-೨೪). [ಸಂ.]

ವಿಶ್ವಸನೀಯ (ಗು). ೧. ನಂಬಿಕೆಗೆ ಪಾತ್ರವಾದ ; ವಿಶ್ವಾಸಾರ್ಹವಾದ. (ನಾ). ೨. ನಂಬಿಕೆಗೆ ಅರ್ಹವಾದುದು ; ವಿಶ್ವಾಸಕ್ಕೆ ಪಾತ್ರವಾದುದು : ರಾಘವಾಂಕನು ವೀರೇಶಚರಿತೆ ಹೊರತಾದ ಇತರ ಕಾವ್ಯಗಳನ್ನು ೧೨೦೦ ಈಚೆಗೆ ರಚಿಸಿರಬೇಕೆಂಬ ಪಕ್ಷ ವಿಶ್ವಸನೀಯವೆಂದು ಹೇಳಬಹುದು (ಸಾಹಿಸ. ೧೫೩). [ಸಂ.]

ವಿಶ್ವಸಾಹಿತ್ಯ (ನಾ). ಜಗತ್ತಿನಲ್ಲಿರುವವರೆಲ್ಲರಿಗೂ ಬೇಕಾಗುವ ಮೌಲ್ಯಗಳನ್ನು ಹೊಂದಿದ ಸಾಹಿತ್ಯ : ಲೋಕಮಾನ್ಯಟಿಳಕರು 'ಗೀತಾರಹಸ್ಯ' ವೆಂಬ ಅದ್ಭುತಗ್ರಂಥವನ್ನು ವಿಶ್ವಸಾಹಿತ್ಯಕ್ಕೆ ನೀಡಿದ್ದಾರೆ (ಧರ್ಮಸಾ. ೧೨೮). [ಸಂ.]

ವಿಶ್ವಸಿಸು (ಕ್ರಿ). ಸ್ನೇಹ ತೋರು ; ಪ್ರೀತಿಸು : ಆಕೆಯ ರತಿದೇವಿಯೆಂಬರಾಕೆಯನು ಅತಿವಿಶ್ವಸಿಸುವ ಕೆಳದಿಯರಿಂ ಕೇಳ್ದ ಪತಿಕರಿಸೆಂದ ತೋಂಟಿಗನು (ಮೋಹತ. ೧೦-೩).

[ವಿಶ್ವಸನ್ + - ಇಸು]

ವಿಶ್ವಸೃಕ್ಕು (ನಾ). ಸೃಷ್ಟಿಕರ್ತ ; ಬ್ರಹ್ಮ : ಈ ಜಗವ ಸೃಜಿಸುವ ವಿಶ್ವಸೃಕ್ಕುಗಳಂತ ಭೂತಲವ ಬಗೆವಡಾವೇವೊಡೆಯರು (ನಿಜಾಗ. ೬-೧೫-೧೧). [ಸಂ. ವಿಶ್ವಸೃಜ್]

ವಿಶ್ವಸ್ತ (ಗು). ೧. ನಂಬಿಕೆಯ ; ವಿಶ್ವಾಸದ. ೨. ನಿರ್ಭಯವಾದ ; ದಿಟ್ಟ. (ನಾ). ೩. ನಂಬಿಕೆಗೆ ಪಾತ್ರನಾದವನು ; ವಿಶ್ವಾಸಾರ್ಹ : ನೋಡಿರಿ ನೀವು ನನಗೆ ವಿಶ್ವಸ್ತರಾದಿರಿ (ಕೊತಕಾ. ೧೪). [ಸಂ.]

ವಿಶ್ವಸ್ತಮಂಡಲ (ನಾ). ಧರ್ಮದರ್ಶಿಗಳ ಮಂಡಲಿ ; ಟ್ರಸ್ಟು : ತಮ್ಮ ತರುವಾಯ ಇಲಾಖೆಯನ್ನು ವಿಶ್ವಸ್ತಮಂಡಲದ ನೇತೃತ್ವದಲ್ಲಿ ಧರ್ಮಾರ್ಪಣ ಮಾಡಬೇಕೆಂದು ಯಜಮಾನರು ಅಂತ್ಯಕಾಲದಲ್ಲಿ ಹೇಳಿದ್ದರು (ಪ್ರಮಾಶ್ರ. ೧೨೨). [ಸಂ.]

ವಿಶ್ವಸ್ತವ್ರತ (ನಾ). ವಿಧವೆಯಂತೆ ಜೀವನ ಸಾಗಿಸುವ ಒಂದು ಬಗೆಯ ಧಾರ್ಮಿಕ ನಿಯಮ : ಯುದ್ಧರಂಗದಲ್ಲಿ ಕಲಿಪ್ರಗ್ಗೆಯರು ವೀರಸ್ವರ್ಗವನ್ನೇರಿದರು. ಈ ವಾರ್ತೆಯನ್ನು ಕೇಳಿ ತಿಲಕವತಿ . . . ವಿವಾಹವನ್ನು ಮಾಡಿಕೊಳ್ಳದೇ ವಿಶ್ವಸ್ತ ವ್ರತದಿಂದೊಡಗೂಡಿದ್ದಳು (ಪುರಾವ. ೧೦೨). [< ಸಂ. ವಿಶ್ವಸ್ತಾವ್ರತ]

ವಿಶ್ವಸ್ತಿಕೆ (ನಾ). ನಂಬಿಕೆ ; ಶ್ರದ್ಧೆ ; ವಿಶ್ವಾಸ : ನೂರಾರು ಶರಣರ, ಲಕ್ಷಾವಧಿ ಭಕ್ತರ ಆರಾಧ್ಯಮೂರ್ತಿಯಾಗಿದ್ದ ಅಣ್ಣನವರ ಹೃದಯಸಂಪತ್ತಿನ ಧರ್ಮದರ್ಶಿತ್ವ, ವಿಶ್ವಸ್ತಿಕೆ ಸಾಮಾನ್ಯಕೆಲಸವೆ ? (ಶರಚ. ೪೬೬). [ವಿಶ್ವಸ್ತ + - ಇಕೆ]

ವಿಶ್ವಸ್ತ್ರೆ (ನಾ). ಗಂಡನಿಲ್ಲದವಳು ; ವಿಧವೆ : "ವಿಶ್ವಸ್ತ್ರಾ, ವಿಧವಾ – ಈ ೨ ವಿಧವೆ" (ಪಠಾಯು. ೮೦-೩೩೩). [ಸಂ. ವಿಶ್ವಸ್ತ್ರಾ]

ವಿಶ್ವಹರ್ತ (ನಾ). = ವಿಶ್ವಸಂಹೃತ : ವಿಶ್ವಕರ್ತನು ರಾಮನಾಥನು . . . ವಿಶ್ವಹರ್ತನು ರಾಮನಾಥನು (ಬಪಪು. ೫೧-೧೩). [ಸಂ.]

ವಿಶ್ವಾತ್ಮ (ನಾ). ೧. ಜಗತ್ತನ್ನೆಲ್ಲಾ ಆವರಿಸಿರುವ ಆತ್ಮ ; ಪರಮಾತ್ಮ : ಪರಂಜ್ಯೋತಿ ವಿಶ್ವಾತ್ಮ ನಿಶ್ಚಿಸಿ ಲೋಕತ್ರಯದೊಳೋತು ಚರಿಸಲು ತೊಡಗಿದಂ (ವೀಶ್ರಪು. ೨-೩-೫) ; ಅಖಿಲಜಗದಂತರ್ಯಾಮಿಯಾಗಿಪ್ಪುದರಿಂದ ವಿಶ್ವಾತ್ಮನೆಂದುಂ ಹೆಸರು (ಧಾರಶಾಂ.೪೩). ೨. ಬ್ರಹ್ಮ. [ಸಂ. ವಿಶ್ವಾತ್ಮನ್]

ವಿಶ್ವಾಧಾರ (ನಾ). ೧. ಜಗತ್ತಿಗೆ ಆಧಾರನಾಗಿರುವವನು ; ಪರಮಾತ್ಮ. ೨. ಭೂಮಿಗೆ ಆಧಾರವಾಗಿರುವವನು ; ಚಕ್ರವರ್ತಿ : ಸಹಾಯರುಚಿ ವಿಶ್ವಾಧಾರನುತ್ತುಂಗ ಭೂಧ್ರದಪಾರಾಂಬುಧಿ ವಸ್ತುಗಳ್ ಬಗೆವೊಡೀ ಲೋಕ ಕೃಸಾಧಾರಣಂ (ಶಾಂತಿಪು. ೨-೭೮). [ಸಂ.]

ವಿಶ್ವಾಮಿತ್ರ (ನಾ). ಒಬ್ಬ ಋಷಿಯ ಹೆಸರು : ಎಮ್ಮೊಡಲೊಳಿಲ್ಲಿಪ್ಪುವುತಿಪ್ಪಳಲ ಬೇಗೆಯ ಬೆಂಕಿಯುರಿ ನಿನ್ನನಿಱಿಯದೇ ಹೇಳು ವಿಶ್ವಾಮ್ಯತ್ಕುವಾದೆ ವಿಶ್ವಾಮಿತ್ರ ಎನುತಿರ್ದರು (ಪಚಕಾ. ೯-೭). [ಸಂ.]

ವಿಶ್ವಾಮಿತ್ರದರ್ಭೆ (ನಾ).. ಒಂದು ಬಗೆಯ ಹುಲ್ಲು : "ಕುಶಂ . . . ಪವಿತ್ರಂ – ೪ ದರ್ಭೆಹುಲ್ಲಿನ ಹೆಸರುಗಳು. ವಿಶ್ವಾಮಿತ್ರದರ್ಭೆ, ಬ್ರಹ್ಮದರ್ಭೆ, ವಸಿಷ್ಠದರ್ಭೆ, ತೃಣದರ್ಭೆ" (ಸಿದ್ಧಾಂತಿ. ೧೫೧). [ಸಂ. ವಿಶ್ವಾಮಿತ್ರದರ್ಭ]

ವಿಶ್ವಾಮಿತ್ರಸೃಷ್ಟಿ (ನಾ). ೧. ವಿಶ್ವಾಮಿತ್ರನೆಂಬ ಋಷಿಯು ತನ್ನ ತಪೋಬಲದಿಂದ ನಿರ್ಮಿಸಿದ ಬೇರೊಂದು ಲೋಕ ; ಪ್ರತಿಸೃಷ್ಟಿ. ೨. (ಆಲಂ) ಅದ್ಭುತಸೃಷ್ಟಿ : ಜನಸಾಮಾನ್ಯರ ಬುದ್ಧಿಗೆ ಎಟುಕದ ಈಗಿನ ಅದ್ಭುತ ಕಲಾಕೃತಿಗಳನ್ನು ನೋಡಿ ಅವನ್ನು ವಿಶ್ವಾಮಿತ್ರಸೃಷ್ಟಿಯೆಂದು ಕರೆಯುವ ರೂಢಿ ಈಗಲೂ ಇದೆ (ಜೀವಾತ್ಮ. ೨೨) ; ದೈವಸೃಷ್ಟಿ ಒಂದಾದರೆ ಮಾನವ ಮತ್ತೊಂದು ವಿಶ್ವಾಮಿತ್ರಸೃಷ್ಟಿಗೆ ಕೈಹಾಕುವುದು ಬೇಡ (ಹಮಕೂ. ೯೭). [ಸಂ.]

ವಿಶ್ವಾಯುಧ (ನಾ). ಸಮಸ್ತ ಆಯುಧ : ಅದು ವಿಶ್ವಾಯುಧದಕ್ಷದಕ್ಷಿಣಭುಜ ಕ್ಕಾಸನ್ನಧಾರಾಗ್ರಮಪ್ಪುದುಂ (ಶಾಂತಿಪು. ೪-೫೩). [ಸಂ.]

ವಿಶ್ವಾವಸು (ನಾ). ೧. ಮದುವೆಯ ಸಮಯದಲ್ಲಿ ಪೂಜಿಸಲ್ಪಡುವ ಒಬ್ಬ ದೇವತೆ. ೨. ಅರುವತ್ತು ಸಂವತ್ಸರಗಳಲ್ಲಿ ಮೂವತ್ತೊಂಬತ್ತನೆಯದು : ಪ್ರಭವ ವಿಭವ . . . ವಿಶ್ವಾವಸು . . . ಕ್ಷಯವೆಂದಱುವತ್ತು ತೆಱನಾಗಿಹುದು (ಎವೇಕ. ೨೬೩) ; ವಿಶ್ವಾವಸುಸಂವತ್ಸರದ ವೈಶಾಖಶುದ್ಧ ೫ ಪಂಚಮಿಯೂ ಸೋಮವಾರ . . . ರಾಜ್ಯಂಗೈವಲ್ಲಿ (ಎಸ್. III (R). ಗುಂಡ್ಲಪೇ. ೨೫-೭ ; 1665). [ಸಂ.]

ವಿಶ್ವಾಸ (ನಾ). ೧. ನಂಬಿಕೆ ; ಭರವಸೆ : ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ (ಸೋಮೇಶ. ೭೯) ; ಅವರ ಕೀರ್ತಿಗೆ ತಕ್ಕಂತೆ ದುಡಿಯಬಲ್ಲೆವು ಎಂಬ ವಿಶ್ವಾಸ ಉಂಟಾಯಿತು (ಆತ್ಮಾರ್ಪ. ೧೩೭). ೨. ಪ್ರೀತಿ ; ಸ್ನೇಹ. ೩. ಭಕ್ತಿ ; ಶ್ರದ್ಧೆ : ಇದುಕಾರಣ ವಿಶ್ವಾಸದಿಂದ ಗುರು ವಿಶ್ವಾಸದಿಂದ ಲಿಂಗ ವಿಶ್ವಾಸದಿಂದ ಜಂಗಮ (ಸಿಪ್ರೇವ. ೭೯-೨೩೩). ೪. ಗುಟ್ಟು ; ರಹಸ್ಯ. ೫. ಪಕ್ಷಿಗಳ ಉಲಿ.

ವಿಶ್ವಾಸಪಡು = ನಂಬಿಕೆಯಿಡು ; ಭರವಸೆಯನ್ನು ಹೊಂದು : ಎಲ್ಲವೂ ಸಮಾನಗಂಧವಸ್ತುವಿನಲ್ಲಿ ವಿಶ್ವಾಸಪಡುವುದು (ಶಾಕುಂತ. ೭೯-೨೩). ವಿಶ್ವಾಸವಿಡು = ವಿಶ್ವಾಸಪಡು : ನಿನ್ನಲ್ಲಿ ವಿಶ್ವಾಸವಿಟ್ಟು ಈ ಕೆಲಸವನ್ನು ಒಪ್ಪಿಸಿದ್ದೀನಿ (ರೂಢಿ). [ಸಂ.]

ವಿಶ್ವಾಸಂಗೆಯ್ (ಕ್ರಿ). ನಂಬು ; ಭರವಸೆ ಇಡು : ಅಹಿತರುಮನವಿನೀತರುಮಂ ವಿಶ್ವಾಸಂಗೆಯ್ದು ಪ್ರಧಾನರಂ ಮಾಡಿ ನಡಪಿದ ಮೂಢಸಿಂಹಕ್ಕೆ ಏಗೆಯ್ದುಂ ಕಾರ್ಯಹಾನಿಯಾಗದೆ ಪೋಗದು (ಪಂಚತಂ. ಅ. ೨೩-೨೩). [ವಿಶ್ವಾಸ + ಕೆಯ್]

ವಿಶ್ವಾಸಘಾತ (ನಾ). ೧. ನಂಬಿಸಿ ಮೋಸಮಾಡುವುದು ; ನಂಬಿಕೆದ್ರೋಹ : ಅದು ಒಂದು ರೀತಿಯಿಂದ ವಿಶ್ವಾಸಘಾತ ಮಾಡಿದಂತೆ ಆಗುವುದು (ಮುಂಬಹು. ೪-೩೪) ; ಯಾರಿಗೂ ವಿಶ್ವಾಸಘಾತ ಮಾಡಬಾರದು (ಭಾರಪ. ೧೦೩). ೨. ಹಕ್ಕಿಗಳ ಉಲಿಯ ಹೊಡೆತ. ೧, ೨ : ವಿಶ್ವಾಸಘಾತಂ ವನದ್ರುಮನೀಡದೊಳ್ . . . ಅಕ್ಕುಮಲ್ಲದ ಜನಪದಜನಂಗಳೊಳಿಲ್ಲ (ಜಗಮ. ೨-೧ ವ).

[ಸಂ. (ವಿಶ್ವಾಸ + ಘಾತ) ; (ವಿ + ಶ್ವಾಸ + ಘಾತ)]

ವಿಶ್ವಾಸಘಾತಕ (ನಾ). ೧. ನಂಬಿಸಿ ಮೋಸಮಾಡುವುದು, – ದ್ರೋಹ ಬಗೆಯುವುದು. ೨. ನಂಬಿಸಿ ದ್ರೋಹ ಬಗೆಯುವವನು ; ನಯವಂಚಕ : ಅವನೊಬ್ಬ ವಿಶ್ವಾಸಘಾತಕನೆಂದು ತಿಳಿಯುವಷ್ಟರಲ್ಲಿ ಕಾಲ ಮಿಂಚಿತ್ತು (ರೂಢಿ). [ಸಂ.]

ವಿಶ್ವಾಸಘಾತಕಿ (ನಾ). ನಂಬಿಸಿ ಮೋಸಮಾಡುವವಳು : ವಿರಸೆಯರು ವಿಶ್ವಾಸಘಾತಕಿಯರು ವಿಕಾರಿಯರು (ಬಪಪು. ೪೦-೫೩). [ಸಂ. ವಿಶ್ವಾಸಘಾತಕೀ]

ವಿಶ್ವಾಸಘಾತಿ (ನಾ). = ವಿಶ್ವಾಸಘಾತಕ ೨ : ಹಿರಿಯರಂತೆ ಕಿರಿಯರು ವಿಶ್ವಾಸಘಾತಿಗಳಲ್ಲ (ಮೀದಿಮ. ೧೭). [ಸಂ. ವಿಶ್ವಾಸಘಾತಿನ್]

ವಿಶ್ವಾಸತನ (ನಾ). ನಂಬಿಕೆ ಇಡುವುದು ; ವಿಶ್ವಾಸವಿಡುವಿಕೆ : ನಿಜವಿಶ್ವಾಸ ತನವಿಂದು ಅಱಿದೆವಲ್ಲಾ (ಬಪಪು. ೩೧-೧೪). [ವಿಶ್ವಾಸ + - ತನ]

ವಿಶ್ವಾಸಪಾತ್ರ (ನಾ). ನಂಬಿಕೆಗೆ ಅರ್ಹವಾದ ವ್ಯಕ್ತಿ ; ವಿಶ್ವಾಸಾರ್ಹ : ಆತನು ಎಲ್ಲವನ್ನೂ ಸರಿಯಾಗಿ ತಿಳಿಯಲು ವಿಶ್ವಾಸಪಾತ್ರಳಾದ ತಂಗಿಯ ಹಾಸಿನ ಬಳಿ ಹೋಗಿ . . . ಕಂಡನು (ಕಾಲೂರ. ೧೨ ಕಥಾಸಾರ). [ಸಂ.]

ವಿಶ್ವಾಸಭೂಮಿ (ನಾ). (ಆಲಂ) ನಂಬಿಕೆಗೆ ಯೋಗ್ಯವಾದ ವ್ಯಕ್ತಿ ; ವಿಶ್ವಾಸ ಪಾತ್ರನಾದವನು : ಆತ್ಮೀಯ ಪರಮವಿಶ್ವಾಸಭೂಮಿಗಳಪ್ಪ ನಾಲ್ವರ್ ಮಂತ್ರಿಗಳ್ವೆರಸು (ಸುಚಮಾ. ೩-೨ ವ). [ಸಂ.]

ವಿಶ್ವಾಸಸೂಚಕ (ನಾ). ನಂಬಿಕಸ್ತನಾದವನು ; ವಿಶ್ವಾಸಾರ್ಹ : ಕೌರವಜನಪ ತನ್ನರಮನೆಯ ಸಚಿವರೊಳನುಪಮಿತವಿಶ್ವಾಸಸೂಚಕನನು ಪುರೋಚನನ ನೆನೆದ (ಕುವ್ಯಾಖ. ೮-೬೬). [ಸಂ.]

ವಿಶ್ವಾಸಿ (ಗು). ೧. ನಂಬಿಕೆಗೆ ಪಾತ್ರವಾದ ; ಪ್ರಾಮಾಣಿಕವಾದ : ಸ್ಕಂದಂ ಯುವರಾಜಂ ಗಣವೃಂದಂ ವಿಶ್ವಾಸಿವಿತತಿಯಹಿಕಂಕಣನಾ (ವೀರವಿ. ೨-೪೫). (ನಾ) ೨. ನಂಬಿಕೆಗೆ ಪಾತ್ರವಾದುದು, — ಯೋಗ್ಯವಾದುದು : ಪಾಲನೂ ಫಣಿಯಂ ಸಾಕಲ್ಕೆ ವಿಶ್ವಾಸಿಯೇ (ಸೋಮೇಶ. ೪೧). ೩. ನಂಬಿಕೆಗೆ ಪಾತ್ರನಾದವನು ; ವಿಶ್ವಾಸಕ್ಕೆ ಯೋಗ್ಯನಾದವನು : "ಶ್ರಂಭಕಃ. . . ಶುದ್ಧವಾನ್ – ಈ ೪ ವಿಶ್ವಾಸಿ" (ಕಾಶಕ್ಕ. ೧೩೭). ೪. ಪ್ರೀತಿಸುವವನು ; ಪ್ರಿಯಕರ : (೫). [ಸಂ. ವಿಶ್ವಾಸಿನ್]

ವಿಶ್ವಾಸಿಗ (ನಾ). ನಂಬಿಕೆಗೆ ಪಾತ್ರನಾದವನು : ಸುಬ್ಬಣ್ಣ ನೀನು ಅವಳ ವಿಶ್ವಾಸಿಗನಲ್ಲವೆ? (ದೇಶಧು. ೫). [ವಿಶ್ವಾಸ + - ಇಗ]

ವಿಶ್ವಾಸಿಸು (ಕ್ರಿ). ೧. ನಂಬು ; ಭರವಸೆಯಿಡು : ಇವಳೀಗಳ್ ಪೇಳ್ದ ಮಾತಾ ಕನಸನವಿತಥಂ ಮಾಟ್ಟ ಮಾತಪ್ಪುದಾಗಿರ್ದುವನಂ ವಿಶ್ವಾಸಿಸಲ್ಬಂದಪುದೆ (ಕಾದಂಪು. ೩೮೯) ; ವಿಷಯಾತುರರೊಳು ವಿಶ್ವಾಸಿಸದೆ ನೀ ವಸುಧೆಯ ಸಲಹೆಲೆ ಕಂದ (ಜೀವಂಸಾಂ. ೨೦-೩೦). ೨. ಪ್ರೀತಿಸು ; ಅನುರಾಗ ತೋರು : (ಕ).

[ವಿಶ್ವಾಸ + - ಇಸು]

ವಿಶ್ವೆ (ನಾ). ೧. ಒಂದು ಬಗೆಯ ಔಷಧೀಸಸ್ಯ ; ಅತಿಬಜೆ : "ವಿಶ್ವಾ, ವಿಷಾ . . . ಅತಿಬಜೆ ಹೆಸರು" (ಸಿದ್ಧಾಂತಿ. ೧೩೪). ೨. ಒಣಶುಂಠಿ ; ಅಲ್ಲ : "ಶುಂಠೀ, ನಾಗರಂ, ಮಹೌಷಧಂ,ವಿಶ್ವಭೇಷಜಂ, ವಿಶ್ವಾ — ಈ ೫ ಶುಂಠಿ" (ಹಲಾಯು. ೧೦೧-೪೬೧). [ಸಂ. ವಿಶ್ವಾ]

ವಿಶ್ವೇಕ್ಷಣ (ನಾ). ಎಲ್ಲವನ್ನೂ ಗಮನಿಸುವಂಥವನು : ವಿಶ್ವೇಕ್ಷಣಂ ವೃದ್ಧಗೋಚರ ಸೇವಾನುತ ದೂರತತ್ವವಿನಯಂ ಶಾಂತೀಶ್ವರಂ (ಶಾಂತಿಪು. ೧೦-೧೦೯). [ಸಂ.]

ವಿಶ್ವೇದೇವ (ನಾ). = ವಿಶ್ವದೇವತೆ. [ಸಂ.]

ವಿಶ್ವೇದೇವತೆ (ನಾ). = ವಿಶ್ವದೇವತೆ : ಅವನ . . . ತೋಳುಗಳಲ್ಲಿ ಆದಿತ್ಯರೂ . . . ವಿಶ್ವೇದೇವತೆಗಳೂ ಯಕ್ಷ ಗಂಧರ್ವ ರಾಕ್ಷಸರೂ ಕಂಡರು (ವಚಭಾ. ೨೫).

[ಸಂ. ವಿಶ್ವೇದೇವತಾ]

ವಿಶ್ವೇಶ (ನಾ). ೧. ಪ್ರಪಂಚದ ಒಡೆಯ ; ಶಿವ : ಅಚ್ಯುತನೆನಿಪನಂ ಕೊಂಡೊಯ್ದು ವಿಶ್ವೇಶನ ಹೊಡವಡಿಸಿದಪೆಂ (ಬಸವಪು. ೫೩-೬೨). ೨. = ವಿಶ್ವನಾಥ ೩ : ಕಾಶಿಗೈತಂದು ವಿಶ್ವೇಶಂಗೆ ಪೊಡಮಟ್ಟನು (ಚೈಮಿಭಾ. ೫-೩೦). ೩. ವಿಷ್ಣು ; ನಾರಾಯಣ : ವಿಶ್ವೇಶ ನಿನ್ನ ಶಾಶ್ವತಮೂರ್ತಿಯಂ ತಳೆವ ವಿಶ್ವಾಸದಿಂದೆ ನಿನಗೊಪ್ಪಿಸಿದೆನೀಗಳೀ ನಶ್ವರಶರೀರಮಂ (ಚೈಮಿಭಾ. ೨೬-೭೪). ೪. ಬ್ರಹ್ಮ. [ಸಂ.]

ವಿಶ್ವೇಶ್ವರ (ನಾ). ೧. = ವಿಶ್ವನಾಥ ೩ : ತ್ರಿವಿಕ್ರಮನ ಹಿಂದಣೆಲುವಂ ಮುಱಿದು ಪಿಡಿದನು ಸ್ಕಂದಪಿತನೆಂದೋದಲೊಲ್ಲನು ಬಂದು ವಾರಾಣಸಿಯೊಳಂ ವಿಶ್ವೇಶ್ವರನ ಮುಂದೆ (ಬಸವಪು. ೫೭-೨೩). ೨. [ಜೈನ] ಆದಿತೀರ್ಥಂಕರ : ಆ ವಿಶ್ವೇಶ್ವರನ ಮನೋ ಮಧುಕರಮಂ ತಮ್ಮ ಮುಖಾರವಿಂದದೊಳ್ ನಲಿಯಿಸಿಯುಂ (ಆದಿಪು. ೮-೨೪ ವ).

[ಸಂ.]

ವಿಶ್ವೋಜ್ಜನನ (ನಾ). ಜಗತ್ತಿನ ಸೃಷ್ಟಿ ; ಲೋಕದ ಉತ್ಪತ್ತಿ : ಶ್ರೀಧರಂ ಯೋಗನಿದ್ರೋದ್ಯಮದಿಂದೆರ್ದು ವಿಶ್ವೋಜ್ಜನನವಿಧಿಗೆ ಚಿತ್ತಂದರಲ್ (ಎಕ. VII, ೨೬೧೦. ೧೫೬-೪ ; 1158). [ಸಂ.]

ವಿಶ್ವೋದರ (ನಾ). ಜಗತ್ತನ್ನೇ ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡವನು ; ಪರಮಾತ್ಮ : ವಿಶ್ವೋದರನು ವಿಶ್ವೇಶಾ ವಿಶ್ವಮಯ ತಾನು (ಗಗಾ. ೧೭-೧೯). [ಸಂ.]

ವಿಶ್ವೋದ್ಧತಿ (ನಾ). ಹದಿನಾಲ್ಕು ಬಗೆಯ ನಾಡಿಗಳಲ್ಲಿ ಒಂದು : ಪಾವಕನಧಿದೇವತೆಯಾದ ವಿಶ್ವೋದ್ಧತಿಯೇ ಜಠರಾಂತಮಾಗಿಹುದು (ಏವೇಕ. ೧೫೧).

[ಸಂ.]

ವಿಷ (ನಾ). ೧. ಸಾಮಾನ್ಯವಾಗಿ ಹಾವು ಮತ್ತಿತರ ಕೆಲವು ಪ್ರಾಣಿಗಳ ಅಂಗಾಂಗಗಳಲ್ಲಿ ಹಾಗೂ ಕೆಲವು ಸಸ್ಯಗಳಲ್ಲಿ ಸಂಗ್ರಹವಾಗಿರುವ ದ್ರವರೂಪದ ನಂಜು, — ಗರಳ : ನೀರಡಸಿ ವಿಷವನೀಂಟಬಹುದೆ (ಬಸವ. ೧೨೦) ; ವಿಷದಿಂ ಕೊಲ್ವಹಿಯುಂ ನಿಟ್ಟುಸಿರಿಂ ಕೊಲ್ವಹಿಯುಂ . . . ಪೆಸರ್ಗೊಳೆ ಕೊಲಲಾರ್ಪ ಖಳನೊಳೆಣೆವಂದಪುವೇ (ಪುಷ್ಪಪು. ೧-೫೩) ; ನಾಗ, ಕಳಿಂಗದಂಥ ಹಾವುಗಳು ತಮ್ಮ ವಿಷದ ಹಲ್ಲುಗಳಿಂದ ಕಡಿಯುವುವು (ಬಾಲಪ್ರ. III, ೧೩೨೫). ೨. ಪ್ರಾಣಕ್ಕೆ ಹಾನಿಕಾರಕವಾದ ಒಂದು ಬಗೆಯ ಪದಾರ್ಥ ; ಪಾಷಾಣ : ಅಮೃತಮಯ ಕಿರಣನೆಂಬುದುಮಮರದು . . . ಶಶಿಗೆಂದುಂ ಸಮನಿಸಿ ವಿಷಕಿರಣನುಮನಲ ಮರೀಚಿಯುಮೆಂದೆನಲ್ಕೆ ಮೋಹಾಪೋಹಂ (ಕವಿರಾ. ೩-೧೮೩) ; ವಿಷದ ಲಡ್ಡುಗೆಯನಿಕ್ಕಿಯು ಮೆನಿತಾನುಮುಪದ್ರವಂಗಳೊಳ್ ತೊಡರಿಕ್ಕಿಯುಂ ಗೆಲಲಾಱದೆ (ಪಂಚಥಾ. ೨-೩೨ ವ). ೩. ಸಾಂಕ್ರಾಮಿಕರೋಗಗಳನ್ನು ಹರಡಬಲ್ಲ ರಸಿಕೆ, ಸೋಂಕು ಮುಂತಾದುವು : 'ವಿಷಕ್ರಿಮಿ', 'ವಿಷಗಾಳಿ' ಪರಾ. ೪. ಉಗ್ರತರವಾದ ನಂಜುಳ್ಳ ಒಂದು ಬಗೆಯ ಔಷಧೀಸಸ್ಯ ; ವತ್ಸನಾಭಿ : "ವಿಷಂ — ನೀರು, ಬೋಟ, ವತ್ಸನಾಭಿ, ಇಲಿಪಾಷಾಣ" (ಓಷಧಿ. ೧೫೨). ೫. ಕಹಿ ; ತಿಕ್ತ : ಸೌತೆಕಾಯಿ ಹೆಚ್ಚುವಾಗ, ಮೊದಲು ಅದರ ಎರಡುತುದಿಗಳಲ್ಲೂ ಇರುವ ವಿಷವನ್ನು ತೆಗೆದು ಹೆಚ್ಚಬೇಕು (ರೂಢಿ). ೬. ನೀರು ; ಜಲ : ತಿಳಿಗೊಳದೊಳ್ ಕುಳಿರ್ವ ವಿಷಮೆಯ್ದೆ ವಿಷಂ . . . ಎಂದು ಸಂಚಲಿಸಿ ಕರಂ ಕರಂ ಭ್ರಮಿಸುವಂ ಸ್ಫುರತಾಪದಿನಾ ನೃಪಾಲಕಂ (ನಳಚಂ. ೧೭೦) ; ನೀರಡಿಸಿ ನದಿಯಂ ಪೊಕ್ಕು ವಿಷವ ನೀಂಟುತ್ತಿರಲು ಮಕರಂ ಪದವ ಪಿಡಿದು ಮಿಸುಕಲೀಯದೆ ತಡೆಯೆ (ಪ್ರೌಢರಾ. ೮-೮). ೭. ಕಠೋರತೆ ; ನಿಷ್ಠುರತೆ. ೮. ಮದ ; ಉನ್ಮತ್ತತೆ : "ಮದ ನಂಜು ಜಲ ಕಠೋರಗಳಿದು ನಾಲ್ಕುಂ ವಿಷಗಳ್ಕುಮ್" (ನಾನಾರ್ಥ. ೨೦). ೯. (ಆಲಂ) ಹೊಟ್ಟೆಯುರಿ ; ಅಸೂಯೆ : ಮನಸ್ಸಿನ ವಿಷವೆಲ್ಲಾ ನಾಲಿಗೆಗೆ ಇಳಿದು, ರುಚಿ ಕೆಟ್ಟುಹೋಗುತ್ತದೆ (ಮನೋನಂ. ೨೪೦). ೧೦. ದ್ವೇಷ ; ವೈಮನಸ್ಯ : ಸ್ನೇಹವಾಗಿದ್ದ ಅವರಿಬ್ಬರ ಮಧ್ಯದಲ್ಲಿ ಈ ಹೊಸಬಳು ವಿಷ ಬಿತ್ತಿ ಹೋದಳು (ರೂಢಿ). [ಸಂ.]

ವಿಷಉಮ್ಮತ್ತಿ (ನಾ). ಒಂದು ಬಗೆಯ ಸಸ್ಯ : (ಮೃಡಿಗಿ. ೨೯-೫೫೬).

[ವಿಷ + ಉಮ್ಮತ್ತಿ]

ವಿಷಕಂಠ (ನಾ). ವಿಷವನ್ನು ಕಂಠದಲ್ಲಿ ಧರಿಸಿದವನು ; ಶಿವ : ವಿಷಕಂಠ ವಿಷಮಾಕ್ಷ ವಿಷಮಾಸ್ತ್ರಹರ (ಸಿದ್ಧರಾ. ೬-೪೦) ; ಏನು ಬಂದರೂ ನುಂಗುವ ವಿಷಕಂಠನ ಮನೋಭಾವ ಹೊತ್ತೇ ಅವರು . . . ಬಂದದ್ದಲ್ಲವೇ? (ಹೂಸಕ್ತಿ. ೪೪). [ಸಂ.]

ವಿಷಕಂಧರ (ನಾ). = ವಿಷಕಂಠ : ವಿಷಕಂಧರನ ಬಿರುದಿನ ವಾಹನವ ತನ್ನಿ (ಬಸವಪು. ೫೯-೩೬). [ಸಂ.]

ವಿಷಕಣಗಲೆ (ನಾ). ಒಂದು ಬಗೆಯ ಸಸ್ಯ : (ಮೃಡಿಗಿ. ೭೮-೧೫೯೩).

[ವಿಷ + ಕಣಗಲೆ (< ಕಣಗಿಲೆ)]

ವಿಷಕನ್ನಿಕೆ (ನಾ). ೧. ಶರೀರದಲ್ಲೆಲ್ಲಾ ವಿಷವು ತುಂಬಿರುವ ಹೆಣ್ಣು : ಹಿಂದಿನ ಕಾಲದಲ್ಲಿ ರಾಜರು, ಕೆಲವು ರೂಪವತಿಯರಾದ ಹೆಣ್ಣುಗಳಿಗೆ ಚಿಕ್ಕಂದಿನಿಂದಲೇ ಸ್ವಲ್ಪಸ್ವಲ್ಪವಾಗಿ ವಿಷ ಕೊಟ್ಟು ಆಕೆಯ ಮೈಯೆಲ್ಲಾ ವಿಷಪೂರ್ಣವಾದರೂ ಅದರ ಸೋಂಕು ಆಕೆಗೆ ಮಾತ್ರ ತಗಲದಂತೆ ಸಾಕಿ ಶತ್ರುವಿನ ನಾಶಕ್ಕಾಗಿ ಕಳಿಸುತ್ತಿದ್ದುದಾಗಿ ತಿಳಿದುಬಂದಿದೆ. ಆಕೆಯನ್ನು ಕೂಡಿದವನು ಸತ್ತು ಹೋಗುತ್ತಿದ್ದನು : ವಿಷಕನ್ನಿಕೆಯರಿವರ್ . . . ಬೆರಸಿದೊಡೆ ಪುರುಷವಾಯುಷವನಪಹರಿಪರು (ಚೈಮಿಭಾ. ೧೫-೫೦) ; ಈ ಸ್ತ್ರೀಯು ವಿಷಕನ್ನಿಕೆಯು! ಚಂದ್ರಗುಪ್ತನ ನಾಶಾರ್ಥವಾಗಿ ರಾಕ್ಷಸನು . . . ಕಳುಹಿಸಿದನು (ಮುದ್ರಾಮಂ. ೨೧೮). ೨. (ಆಲಂ) ತ್ಯಜಿಸಬೇಕಾದ ಹೆಣ್ಣು : ಅಕಟ ಪಾಂಡುಮಹೀಶ ವಿಷಕನ್ನಿಕೆಯನೆನ್ನನು ಮುಟ್ಟಿದೈ (ಕುಮಾಭ. ೫-೧೭). [< ಸಂ. ವಿಷಕನ್ಯಕಾ]

ವಿಷಕನ್ಯೆ (ನಾ). = ವಿಷಕನ್ನಿಕೆ ೧ : ಅಂಗಸಂಗಸುಖದಿಂ ಸ್ವಸ್ಥನಾಗಿದ್ದವನು ಶಯನಗೃಹದಿಂ ಮರಳಿ ಬಾರನು . . . ಅದರಿಂದ ಇವಳು ವಿಷಕನ್ಯೆ ಎಂದು ತಿಳಿಯಬೇಕು (ಮುದ್ರಾಮಂ. ೨೨೬). [ಸಂ. ವಿಷಕನ್ಯಾ]

ವಿಷಕಪರ್ದ (ನಾ). ವಿಷವನ್ನು ಪಾನಮಾಡಿದ ಶಿವ : ವಿಷಧರನ ಕಿಂಕರನನಾ ವಿಷವೇನ ಮಾಡುವುದು . . . ವಿಷಕಪರ್ದನ ಭಕ್ತನಂ ವಿಷವೇನ ಮಾಡುವುದು (ಬಸವಪು. ೪೯-೩೯). [ಸಂ.]

ವಿಷಕಲ್ಲು (ನಾ). ಸಸ್ಯಗಳನ್ನು ಹಾಳುಮಾಡುವ ಒಂದು ಬಗೆಯ ಕಲ್ಲು : ಉಪವನ ನಿರ್ಮಾಣಕ್ಕೆ ಯೋಗ್ಯಗಳಾದ ಭೂಮಿಗಳಂ ಪೇಳುವೆನು ವಿಷಕಲ್ಲು ಹುತ್ತ ಬಿಲಂಗಳಿಂದಲೂ ಬೆಣಚುಕಲ್ಲುಗಳಿಂದಲೂ ಯುಕ್ತವಾದ ಭೂಮಿಯು ಆಳವಾಗಿ ತೋಡಿದರೆ ನೀರು ಬರುವ ಭೂಮಿಯು ಮರಗಳಿಗೆ ವೃದ್ಧಿಯಂ ಕೊಡುವುದಿಲ್ಲ (ಸೌಗಂಧಿ. ೪೨೪-೮). [ವಿಷ + ಕಲ್ಲು (< ಕಲ್ಲ್)]

ವಿಷಕುಂಬಳ (ನಾ). ಕಹಿರುಚಿಯ ಒಂದು ಬಗೆಯ ಕುಂಬಳ ; "ಕಹಿಸೋರೆ" : (ಗಂಗಾಮ. ೬). [ವಿಷ + ಕುಂಬಳ]

ವಿಷಕ್ರಿಮಿ (ನಾ). (ಸೋಂಕುರೋಗಗಳನ್ನು ಹರಡುವಂಥ) ವಿಷದಿಂದ ಕೂಡಿರುವ ಹುಳು, — ಜಂತು : ವಿಷಕ್ರಿಮಿಗಳನ್ನು ಸಾಕಿ ಕಾಜಿನ ಗೋಲಕಗಳಲ್ಲಿ ತುಂಬಿಸಿ ಸಿಡಿಗುಂಡುಗಳಂತೆ ವೈರಿರಾಜ್ಯದಲ್ಲಿ ಎಸೆಯಲು ಬರುವುದು (ಬಾಲಪ್ರ. I. ೫೯೫) ;

ಇವುಗಳಿಗೆ ಇತರ ವಿಷಕ್ರಿಮಿಗಳ ಸಂಪರ್ಕವಾದರೆ ಎಲ್ಲವೂ ನಾಶವಾದಂತೆಯೇ (ಹೊಸಕ್ಷ. ೯). [ಸಂ.]

ವಿಷಖಿದ್ದಿ (ನಾ). ಒಂದು ಬಗೆಯ ಔಷಧೀಸಸ್ಯ : ಬೂರಗದ ಅಂಟು ವಿಷಖಿದ್ದಿ ಬಿಲ್ವದ ಹಣ್ಣು . . . ಇವನ್ನೆಲ್ಲಾ ಚೂರ್ಣಮಾಡಿ (ಸಕವೃ. ಪರಿ. ೪೮೧) [ವಿಷ + ಖಿದ್ದಿ?]

ವಿಷಗಳ (ನಾ). = ವಿಷಕಂಠ : ವಿಷಧರಸಹಿತ ಗುರವನ್ನೆಸಂದು . . ಕೆಟ್ಟೆವೆಂದು ಪುರಹರಗೆ ಬಿನ್ನೈಸ ವಿಷಗಳನಾರ ಸಂತೈಸುತ (ಪ್ರಭುಲಿಂ. ೪ ೨೬) [ಸಂ ವಿಷಗಲ]

ವಿಷಗಳಿಗೆ, ವಿಷಘಳಿಗೆ (ನಾ). ೧. ಕೆಟ್ಟ ಮುಹೂರ್ತ ; ಅಶುಭಸಮಯ : ಯಾವ ವಿಷಗಳಿಗೆಯಲ್ಲಿ ಈ ಕೆಲಸ ಪ್ರಾರಂಭವಾಯಿತೋ ದೇವರಿಗೇ ಗೊತ್ತು (ರೂಢಿ). ೨. ದುರದೃಷ್ಟದ ಸಮಯ ; ಕಷ್ಟಕಾಲ : ಎಂತಹ ಪಾಷಾಣಹೃದಯವಾದರೂ ಈ ವಿಷಗಳಿಗೆಯಲ್ಲಿ ಕರಗಿ ನೀರಾಗಬೇಕು (ಕಾವೇರಿ. ೨೧೭). ವಿಷಘಳಿಗೆ : ೧. ಇದು ವಿಷಘಳಿಗೆ ಇರಬಹುದು (ಹೊಸಕ್ಷ. ೨೨೦). [ವಿಷ + ಗಳಿಗೆ$_1$ (< ಗಟಿಗೆ)]

ವಿಷಗಾಳಿ (ನಾ). (ಸೋಂಕುರೋಗಗಳನ್ನು ಹರಡಬಲ್ಲ) ನಂಜು ಬೆರೆತಿರುವ ಗಾಳಿ ; ವಿಷಪೂರಿತವಾದ ವಾಯು : ವಿಷಗಾಳಿಗಳನ್ನೂ ವಿಷಕ್ರಿಮಿಗಳನ್ನೂ ಇನ್ನು ಮುಂದೆ ಸಮರದಲ್ಲಿ ಉಪಯೋಗಿಸಬಾರದು (ಬಾಲಪ್ರ. I. ೫೯೩). [ವಿಷ + ಗಾಳಿ$_1$]

ವಿಷಗುಳಿಗೆ (ನಾ). ಕ್ರಿಮಿಕೀಟಗಳನ್ನು ಕೊಲ್ಲಲು ಬಳಸುವ, ನಂಜು ಬೆರಸಿದ ಮಾತ್ರೆ : ಸಾವಿರಾರು ಇಲಿಯ ಬಲೆಗಳ ಸಂಗ್ರಹವಿದ್ದಿತು. ವಿಷಗುಳಿಗೆಯ ಚೀಲಗಳೂ ತುಂಬಿದ್ದವು (ಜಯಂತ. ೪೨೭). [ವಿಷ + ಗುಳಿಗೆ$_1$]

ವಿಷಗೊಳಿಸು (ಕ್ರಿ). ನಂಜೇರುವಂತೆ ಮಾಡು ; ಸೋಂಕುಂಟಾಗುವಂತೆ ಮಾಡು : ಕ್ರಿಮಿನಾಶಕಗಳು ಸಸ್ಯ ಪ್ರಾಣಿಗಳ ಅಂಗಾಂಶಗಳೆಲ್ಲವನ್ನೂ ವಿಷಗೊಳಿಸುವುದರಿಂದ ಚುಚ್ಚಿ ಹೀರುವ ಕೀಟಗಳು ಆಹಾರವನ್ನು ಹೀರುವಾಗ ಕ್ರಿಮಿನಾಶಕವನ್ನು ಹೀರಿಕೊಳ್ಳುತ್ತವೆ (ಕೀಟಬಿ. ೭೮). [ವಿಷ + ಕೊಳ್$_1$ + - ಇಸು$_3$]

ವಿಷಗ್ರಂಥಿ (ನಾ). ಕೆಲವು ಪ್ರಾಣಿಗಳ ಶರೀರದಲ್ಲಿರುವ ನಂಜನ್ನು ಹೊಂದಿರುವ ಗಡ್ಡೆ : ವಿಷಗ್ರಂಥಿಗಳು (Poison glands) (ಕೀಟಬಿ. ೪೪). [ಸಂ.]

ವಿಷಗ್ರೀವ (ನಾ). = ವಿಷಕಂಠ : ವಾಕ್ಪತಿಶಪತಿಯಾವಾಪ ಸಂಸ್ತೋತ್ರಸೇವಾನುಸುಖ ವಿಷಗ್ರೀವಾಢ್ಯ ಶಾಂತಮಲ್ಲ (ವೀಶೃಪು. ೪-೩-೧). [ಸಂ.]

ವಿಷಘಳಿಗೆ 'ವಿಷಗಳಿಗೆ' ನೋ.

ವಿಷಚಕ್ರ (ನಾ). ಒಂದು ಕ್ರಿಯೆ ಮತ್ತೊಂದು ಕ್ರಿಯೆಗೆ ದಾರಿಮಾಡಿಕೊಡುವುದು ; ಒಂದನ್ನೊಂದು ತೀವ್ರಗೊಳಿಸುವ ಕ್ರಿಯೆ ಪ್ರತಿಕ್ರಿಯೆಗಳ ಸರಣಿ : ಕರ್ನಾಟಕದಲ್ಲಿ 'ಓದುವವರಿಗೆ ಪುಸ್ತಕಗಳಿಲ್ಲ ; ಪ್ರಕಟವಾದ ಪುಸ್ತಕಗಳನ್ನು ಓದುವವರಿಲ್ಲ' ಎಂಬ ವಿಷಚಕ್ರವು ಎಂದಿನಿಂದಲೂ ರೂಢಿಯಲ್ಲಿದೆ (ಸಾಸಮಾ. ೪೮) ; ಕಡೇಆಟದ ವಿಷಚಕ್ರದಲ್ಲಿ ನಾನೂ ಸಿಕ್ಕಿದ್ದೆ (ನಾಡಿಗೇ. ೧೨). IP ಇದು ಇಂಗ್ಲಿಷಿನ 'Vicious circle' ಎಂಬುದರ ಭಾಷಾಂತರ. [ಸಂ.]

ವಿಷಚಿಕಿತ್ಸೆ (ನಾ). ದೇಹಕ್ಕೆ ಸೇರಿದ ವಿಷವನ್ನು ಹೋಗಲಾಡಿಸಲು ಮಾಡುವ ಚಿಕಿತ್ಸೆ : ಇಟ್ಟಿಮರ . . . ಆಯುರ್ವೇದದ ವಿಷಚಿಕಿತ್ಸಾಪ್ರಯೋಗದ ಪ್ರಕಾರ ಬೀಜಗಳನ್ನು . . . ಉಪಯೋಗಿಸಬಹುದೆಂದು ಹೇಳಲಾಗಿದೆ (ಹಸುಹೊ. ೫೭). [ಸಂ. ವಿಷಚಿಕಿತ್ಸಾ]

ವಿಷಜಂತು (ನಾ). ವಿಷಯುಕ್ತವಾದ ಪ್ರಾಣಿ : ವಿಷಜಂತುಗಳ ಕಡಿತಕ್ಕೆ ಔಷಧ ಕೊಡುವುದರಲ್ಲಿ ಅವರು ಗಟ್ಟಿಗರು (ರೂಢಿ). [ಸಂ.]

ವಿಷಜಿತ (ನಾ). ಹಾವಿನ ವಿಷವನ್ನು ಗೆಲ್ಲುವಂತಹುದು ; ಮುಂಗುಸಿ : "ವಿಷಜಿತಂ [ಪಾಠಾಂ. ಜಡಂ] ಬಭ್ರು ನಕುಲಂ ಮುಂಗುರಿಯೆನಿಕ್ಕುಂ" (ಮಂಗರಾ. ೪೯-೧೪). [ಸಂ.]

ವಿಷಜ್ವರ (ನಾ). ನಂಜಿನಿಂದ ಉಂಟಾಗುವ ಒಂದು ಬಗೆಯ ಜ್ವರ : ಕಷಾಯಂ ಕಾಯಿಸಿ ಕೊಡಲು ಶೀತಜ್ವರ, ವಿಷಜ್ವರ . . . ಅರೋಚಕ ಸಹ ಮಾಣ್ಪುಂ (ಸಕವೃ. ೬೬). [ಸಂ.]

ವಿಷಣ್ಣ (ಗು). ೧. ಖಿನ್ನವಾದ ; ದುಃಖಿತ : 'ವಿಷಣ್ಣಮನ' ಪರಾ. ೨. ನಿರುತ್ಸಾಹದಿಂದ ಕೂಡಿದ ; ಕುಗ್ಗಿದ : ಮೇಜಿನ ಮುಂದೆ ವಿಷಣ್ಣದೃಷ್ಟಿಯ ಹಲವು ಮಂದಿ ಅವನ ಕಣ್ಣಿಗೆ ಬಿದ್ದರು (ಪುನರು. ೨೦೦). (ನಾ). ೩. ಉತ್ಸಾಹವಿಲ್ಲದುದು ; ಕುಗ್ಗಿದುದು ; ಬಾಡಿದುದು : ಅವನ ಮುಖವು ವಿಷಣ್ಣವಾಯಿತು (ಪ್ರಣಸ. ೨೭). ೪. ದುಃಖಗೊಂಡಿರುವವನು ; ವ್ಯಥಿತ : ನರೆಯುಮಂ ತೊಟ್ಟನೆ ಕಂಡು ನಾಣ್ಚಿ ವಿಷಣ್ಣನಾಗಿರ್ಪನ್ನೆಗಂ (ಚಾವುಂಪು. ೭೪) ; ಜಾನಕಿಯ ದೂಸಱಂ ಲಂಕಾನಾಥಂ ದಾಶರಥಿಯ ಕೈಯೊಳ್ ಮಡಿಗುಂ ಎನೆ ವಿಭೀಷಣಂ ವಿಷಣ್ಣನಾಗಿ (ಪಂಪಾಮಾ. ೩-೨೩ ವ). ೫. ಕುಗ್ಗಿದ ಉತ್ಸಾಹವುಳ್ಳವನು ; ನಿರುತ್ಸಾಹಿ : ಅರ್ಜುನ ದುಃಖಿತನಾಗಿದ್ದಾನೆ. ವಿಷಣ್ಣನಾಗಿದ್ದಾನೆ (ಧರ್ಮಾಗಾ. ೧೧೯). ೬. [ನಾಟ್ಯ] ಮೂವತ್ತಾರು ಬಗೆಯ ದೃಷ್ಟಿಚಲನೆಗಳಲ್ಲಿ ಒಂದು ; ವಿಷಾದವನ್ನು ಸೂಚಿಸುವ ದೃಷ್ಟಿ : ನಿಲ್ದೆವೆಯಿಕ್ಕುತರಲ್ಕುಂ ನಲ್ಲಳೆ ಕೇಳ್ ಸ್ತಬ್ಧತಾರೆಯಾಗೆ ವಿಷಣ್ಣಂ (ಲಾಸ್ಯರಂ. ೩-೩೩). [ಸಂ.]

ವಿಷಣ್ಣತೆ (ನಾ). ೧. ದುಃಖ ; ವ್ಯಥೆ. ೨. ನಿರುತ್ಸಾಹ ; ನಿರಾಸಕ್ತಿ : ಏನೋ ಒಂದು ವಿಷಣ್ಣತೆ ವನ್ನ ಮನದಲ್ಲಿ ಮೂಡಿತು (ರಾಮಾನಿ. ೧೧೭). [ಸಂ. ವಿಷಣ್ಣತಾ]

ವಿಷಣ್ಣಮನ (ನಾ). ೧. ಖಿನ್ನತೆಯಿಂದ ಕೂಡಿದ ಮನಸ್ಸು. ೨. ದುಃಖದಿಂದಿರುವವನು ; ಖಿನ್ನ : ವಿದ್ಯಾವಚನದಿನಾತನಾಸನ್ನಮೃತ್ಯುವನಱಿದು ವಿಷಣ್ಣಮನನುದಾಸೀನನಾಗಿರ್ದಂ (ಆದಿಪು. ೨-೧೪ ವ). [ಸಂ. ವಿಷಣ್ಣಮನಸ್]

ವಿಷಣ್ಣವದನ (ನಾ). ೧. ಬಾಡಿದ ಮುಖ ; ಉತ್ಸಾಹವನ್ನು ಕಳೆದುಕೊಂಡ ಮುಖ : ಅವಳ ವಿಷಣ್ಣವದನವೇ ಈ ನಗು ಕೃತಕ ಎಂದು ಸಾರಿ ಹೇಳುತ್ತಿತ್ತು (ವಾತ್ಸಲ್ಯ. ೨೧೯). ೨. ಚಿಂತಾಕ್ರಾಂತನಾದವನು ; ದುಃಖಿತ : ಶಿಲಾತಲದೊಳ್ ಕುಳ್ಳಿರ್ದು ಬಾಷ್ಪವಿಷಣ್ಣವದನನಾಗಿ ತರಳಕೆಯನಿದೇನೆಂದು ಬೆಸಗೊಳ್ಳುದುಂ (ಕಾದಂಉ. ೫೪೪) ; ವಿಭೀಷಣನು ವಿಷಣ್ಣವದನನಾಗಿ ಈ ವಿಧಿಲಿಖಿತವನ್ನು ತಪ್ಪಿಸುವ ಉಪಾಯವನ್ನು ಚಿಂತಿಸಿ . . . ಕೊಂದು ಬರುವಂತೆ ಆಜ್ಞಾಪಿಸುವನು (ಸಾಹಿಸ. ೮೬). [ಸಂ.]

ವಿಷಣ್ಣಹೃದಯ (ನಾ). ೧. ದುಃಖದಿಂದ ಕೂಡಿದ ಹೃದಯ. ೨. ದುಃಖಿತನಾದವನು ; ಖಿನ್ನಮನಸ್ಕ : ಲಕ್ಷ್ಮಣಂ ವಿಷಣ್ಣಹೃದಯನುದ್ದೀಪಿತಕೋಪಶಿಖಿಶಿಖಾಕಲಾಪನಿಂತೆಂದಂ (ಪಂಪಾಮಾ. ೯-೧೩೨ ವ). [ಸಂ.]

ವಿಷಣ್ಣಾನನೆ (ನಾ). ದುಃಖದಿಂದ ಕೂಡಿದ ಮುಖವುಳ್ಳವಳು : ವಿಷಣ್ಣಾನನೆಯಂ . . . ಕಂಡಿಂತೆಂದಳ್ (ಯಶೋಚ. ೨-೩೫). [ಸಂ. ವಿಷಣ್ಣಾನನಾ (ವಿಷಣ್ಣ + ಆನನ + -)]

ವಿಷತೀಟೆ (ನಾ). ಒಂದು ಬಗೆಯ ಔಷಧೀಸಸ್ಯ : (ಮೃಚಿಗಿ. ೨೪-೪೪೬). [ವಿಷ + ತೀಟೆ$_7$]

ವಿಷತೊಗರಿ (ನಾ). ಒಂದು ಬಗೆಯ ತೊಗರಿ : ಚಕ್ಕತೊಗರಿ, ವಿಷತೊಗರಿ, ಕೇಸರಿಬೇಳೆ (ಮೃಚಿಗಿ. ೪೯-೯೦೧). [ವಿಷ + ತೊಗರಿ$_1$ (< ತೊವರಿ)]

ವಿಷತ್ರಯ (ನಾ). ಸ್ಥಾವರ, ಜಂಗಮ ಮತ್ತು ಕೃತ್ರಿಮ ಎಂಬ ಮೂರು ಬಗೆಯ ವಿಷಗಳು : ವಿಷಮವಿಷತ್ರಯಮಟ್ಟಿಗುಂ ನಿನ್ನ ಪದದ್ವಯಮಂ ಚಿಂತಿಸುವೊಡೆ (ಜಿನಲಿ. ೧೯). [ಸಂ.]

ವಿಷದಿವ್ಯ (ನಾ). ಅಪರಾಧಿಯ ಅಪರಾಧವನ್ನು ನಿರ್ಣಯಿಸುವ ಪ್ರಾಚೀನವಿಧಾನವೆನಿಸಿದ ದಿವ್ಯಗಳಲ್ಲಿ ಒಂದು ; ಅಪರಾಧಿಗೆ ವಿಷವನ್ನು ಕುಡಿಸಿ, ಅದು ಯಾವ ಪರಿಣಾಮವನ್ನೂ ಉಂಟುಮಾಡದಿದ್ದರೆ ಅವನು ನಿರಪರಾಧಿ ಎಂದು ಪರೀಕ್ಷಿಸುವ ದಿವ್ಯ : ಸಿದ್ಧರಾಮಚಾರಿತ್ರದಲ್ಲಿ ವಿಷದಿವ್ಯ ಮತ್ತು ಅಗ್ನಿದಿವ್ಯಗಳು ನಡೆದ ಎರಡು ಘಟನೆಗಳು ಬರುತ್ತವೆ (ಕಶಾಅ. ೧೯೭). [ಸಂ.]

ವಿಷದೃಷ್ಟಿ (ನಾ). ವಿಷವನ್ನು ಹೊಮ್ಮಿಸುವ ನೋಟ ; ವಿಷಪೂರಿತವಾದ ದೃಷ್ಟಿ : ವಿಷದೃಷ್ಟಿವಿಷೋರಗಸ್ವರೂಪದಿಂ ಸಗರನೆಱುವತ್ತುಸಾಸಿರ್ವರ್ ಮಕ್ಕಳುಮನೊಡನೆ ಕೃತಕದಿಂ ಭಸ್ಮಾವಲೇಪನಮಾಗಿ ಮಾಡಿ (ಅಜಿಪು. ೧೦-೧೦ ವ). [ಸಂ.]

ವಿಷದೇಹಿ (ನಾ). ೧. ವಿಷಜಂತುಗಳಮ್ಮ ಒಡಲಲ್ಲಿ ಉಳ್ಳವಳು. ೨. ನೀರನ್ನೇ ತನ್ನ ದೇಹವಾಗಿ ಉಳ್ಳವಳು. ೧, ೨: ಪ್ರತಿಕೂಲೆಯೆಂದೆನಿಸಿಯು ಸವಿದರ್ಗೆ ಪುಣ್ಯಾನುಕೂಲೆಯಪ್ಪಳು ಘನೋದ್ಭವದ ವಿಷದೇಹಿಯಾಗಿಯು ಜನಕ್ಕಮೃತದೇಹವ ನೀವಳಾಹಾ ವಿರುದ್ಧಸ್ವಭಾವೆ ಗಂಗಾನದಿ ಧರಾತಲದೊಳು (ಹಚಶಾ. ೧೦-೩೧). [< ಸಂ. ವಿಷದೇಹಿನೀ]

ವಿಷದ್ರುಮ (ನಾ). ವಿಷದಿಂದ ಕೂಡಿರುವ ಮರ : ಧರ್ಮದ್ರುಮಚ್ಛೇದ ಪರಶುಧಾರೆಯುಂ ವಿಷಯವಿಷದ್ರುಮಕಂದಳಿಯುಂ . . . ಅಪ್ಪ ಪಾತಕಿಯೊಳ್ . . . ಲಕ್ಷ್ಮಿಯೊಳ್ . . . ನೆರೆಯಲ್ಕಿಂತೀತನೆ ಬಗೆಗೆ (ಆದಿಪು. ೧೪-೧೨೨ ವ) ; ರಾಜೇಂದ್ರ ನೀ ದಿತ್ತಿದ ವಿಷದ್ರುಮ ಫಲಿತವಾಯಿತು (ಕರ್ಣಾಶ. ೧-೪). [ಸಂ.]

ವಿಷಧರ (ನಾ). ೧. ವಿಷದಿಂದ ಕೂಡಿರುವಂಥದು ; ನಂಜುಳ್ಳುದು : ವಿಷಯಾಮಿಷಲಂಪಟತೆಯೆ ವಿಷಧರನೆನಿಸಿದುದು ನಿನ್ನನೆಲೆ ವಿಷಧರ (ಆದಿಪು. ೨-೧೭). ೨. ಸರ್ಪ ; ಹಾವು : ಗಂಗಾದೇವಿಯ ವರಪ್ರಸಾದದೊಳ್ ವಿಷಮವಿಷಧರಂಗಳ್ ಪರಿಯೆ (ಪಂಚಭಾ. ೨-೩೨ ವ) ; ಬಗೆಯಂ ವಿಷಧರವಲ್ಲ ಭೂಭೂಷಣ ವೃಷಭಸುಮಂ ದೇವ ನಿಮ್ಮನೇಂ ಬಗೆದಪನೇ (ಪಂಚಾಂ.೯೬-೧೫). ೩. ನೀರನ್ನು ಧರಿಸಿರುವಂಥದು ; ಮೋಡ : ಪರಿಯಿಕ್ಕಿ ಪೋದುವಚಿರಾಂಶುರಸನಘನಕಾಲವಿಷಧರಂಗಳ್ . . . ಎನಲ್ ತರತರದಿಂ ಪಸರಿಸಿದುವಂದು ಬಿಳಿಯ ಮುಗಿಲ್ಗಳ್ (ಪಂರಾಮಾ. ೭-೧೭೪) ; ನೀಲಕಂಠನಾದೆನೆನುತ್ತಂ ಕುಣಿವಂತೆ ವಿಷಧರದ ಮುಂದಣಯರದಿಂ ಕೇಗಿ ಕುಣಿವ ನವಿಲೆಸೆದಿರ್ದುಂ (ರಾಜಶೇ. ೪-೧೨೦). ೨, ೩ : ಆ ಮಹಾರ್ಣವಂ . . . ರಸಾತಳದಂತೆ ವಿಷಧರನಿಷೇವ್ಯಮುಂ . . . ಎನಿಸಿದುದು (ಜಗವಿ. ೧-೪೪ ವ). ೪. ಶಿವ ; ಈಶ್ವರ : ವಿಷಧರನ ಕಿಂಕರನನಾ ವಿಷವೇನ ಮಾಡುವುದು (ಬಸಪು. ೪೯-೩೯). [ಸಂ.]

ವಿಷಧರಾಭರಣ (ನಾ). ಸರ್ಪಗಳನ್ನು ಭೂಷಣವನ್ನಾಗುಳ್ಳವನು ; ಶಿವ : ವಿಷಧರಾಭರಣ ವಿಷಚಾಸನ ಕಪಾಲಧರ (ಷಡ್ಪದಿ. ೬-೪೦) ; ವಿಷಚಾತಜಾತನುತ ವಿಷಧರಾಭರಣ ವಿಷಧರ ಪಾಹಿಮಾಂ (ಪ್ರಾಪ್ತಿರಾ. ೨೧-೪೧). [ಸಂ.]

ವಿಷಧರಾಹಿತ (ನಾ). ೧. ಸರ್ಪಕ್ಕೆ ಶತ್ರುವಾದುದು. ೨. ಗರುಡ : ವಿಷಧರಾಹಿತಗಮನಬಂಧುವೆ . . . ನಮೋ (ಬಸಪು. ೨೦-೧). ೩. ನವಿಲು : ವಿಷಧರಾಹಿತಗಮನಗುರುವೇ . . . ನಮೋ (ಬಸಪು. ೨೦-೧). ೪. ಹಾವೆಂದು ಪರಿಗಣಿಸಲಾಗಿರುವ ರಾಹುವಿನ ಶತ್ರು ; ಚಂದ್ರ : ವಿಷಧರಾಹಿತಮಿತ್ರ ಮರುತಾವೇಕ್ಷಣಾಯ ನಮೋ (ಬಸಪು. ೨೦-೧). [ಸಂ.]

ವಿಷಧಿ (ನಾ). ಕಡಲು ; ಸಮುದ್ರ : ವಿಷಧಿಗಳೊಳಗೂಯ್ದರ್ದುವ ವಿಷಮರಣಾಂಗಣಮನಿರದೆ ಪುಗಿಸುವ . . . ವಿಷಯಸುಖಂಗಳೊಳೆ ತೊಡರ್ದು ಬರ್ದಪುದು ಜಗಂ (ಆದಿಪು. ೧೪-೧೨೪). [ಸಂ.]

ವಿಷನಾಗ (ನಾ). ಒಂದು ಬಗೆಯ ಸಸ್ಯ : "ವಿಷೆ, ಅತಿವಿಷೆ, ವತ್ಸನಾಭ, ವಿಷನಾಗ" (ಪಥ್ಯನಿ. ೫). [ಸಂ.]

ವಿಷನಾಶಕ (ನಾ). ವಿಷವನ್ನು ಹೋಗಲಾಡಿಸುವ ಮದ್ದು : (Anti-dote. ಪಾರಿನಿ. ೫). [ಸಂ.]

ವಿಷನಿಧಿ (ನಾ). ೧. = ವಿಷಧಿ. ೨. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : ವಿಷನಿಧಿ . . . ಜಳರಾಶಿ ಎಂದು ನಾಲ್ಕಱ ನಾಮಂ (ವ್ಯವಹಾ. ೯-೧). [ಸಂ.]

ವಿಷನಿಮಿಷ (ನಾ). ಕೆಟ್ಟಮುಹೂರ್ತ ; ಅಶುಭಕಾಲ : "ಮಗುವಿನ ಕರ" ಕೇಳದಂತಾಗಿ ವಿಷನಿಮಿಷವು ರಸನಿಮಿಷವಾದ ರಸಮಯಸನ್ನಿವೇಶ (ನಿರಾಭ. ೨೦ ಮುನ್ನುಡಿ). [ಸಂ.]

ವಿಷನೇತ್ರ (ನಾ). ೧. ಕೆಟ್ಟದೃಷ್ಟಿಯುಳ್ಳವನು ; ಕೆಟ್ಟಕಣ್ಣಿನವನು. ೨. ಹಾವು ; ಸರ್ಪ. ೧, ೨ : ಕುಟಿಲಮಾರ್ಗಿಗಳಂ ವಿಷನೇತ್ರರಂ ರೌದ್ರತರಾಸ್ಯರಂ ಬೆರಸುವಾತ ನನೀತಿಯ ಸೇತುವಲ್ಲವೇ (ನಳಚಂ. ೬೦೧). [ಸಂ.]

ವಿಷಪಕ್ಷಿ (ನಾ). ಒಂದು ಬಗೆಯ ಪಕ್ಷಿ : "ದಾತ್ಯೂಹಃ, ಕಾಲಕಂಠಕಃ — ಈ ೨ ವಿಷಪಕ್ಷಿ" (ನಾಚರಾ. ೧೧೪). [ಸಂ. ವಿಷಪಕ್ಷಿನ್]

ವಿಷಪರಿಹಾರಿ (ನಾ). ಒಂದು ಬಗೆಯ ಸಸ್ಯ : "ದುರ್ಗಂಧ – ಗರಿಗಂಟಿ, ವಿಷಪರಿಹಾರಿ" (ಓಷಧಿ. ೭೮). [ಸಂ. ವಿಷಪರಿಹಾರಿನ್]

ವಿಷಪರೀಕ್ಷೆ (ನಾ). ೧. = ವಿಷದಿವ್ಯ. ೨. (ಆಲಂ) ಸತ್ವಪರೀಕ್ಷೆ : ಈ ತೊಡಕಿನ ವಿಷಪರೀಕ್ಷೆಗ ಚಿಂದವ್ಯ — ಆಕೆಯನ್ನು ಬಲಿದತ್ತು ಕೊಂದು ತೀರಿಸಿ ಬಿಡುವೆಯೇನು? (ಬಟ್ಟಿಪ್ರ. ೧೧೯-೭) ; ಶಾಪವು ಕವಿ ಮನಸ್ಸುಗಳಲ್ಲಿ ಧ್ವನಿಸುತ್ತಿದ್ದರೂ ವಿಷಪರೀಕ್ಷೆಯಾಗಿ ಕಾಮವು ಈ ದಂಪತಿಗಳ ಜೀವನವನ್ನು ಕಬಳಿಸಿತು (ಭಾರದ. ೪೮೪). [ಸಂ. ವಿಷಪರೀಕ್ಷಾ]

ವಿಷಪುಚ್ಛ (ನಾ). ಬಾಲದಲ್ಲಿ ವಿಷವನ್ನುಳ್ಳುದು ; ಚೇಳು : ಕರಕಂಠ ವಿಷಪುಚ್ಛ ಮೂಷಕಂಗಳನೇರಿ ಕುವರರ್ಕೆತರಲು (ನವಮೋ. ೩೦-೩೭). [< ಸಂ. ವಿಷಪುಚ್ಛ]

ವಿಷಪುಚ್ಛ (ನಾ). = ವಿಷಪುಚ್ಛ. [ಸಂ.]

ವಿಷಪ್ರಯೋಗ (ನಾ). ವಿಷವನ್ನು ಹಾಕುವುದು ; ನಂಜೂಡುವುದು : ಯಾವನೋ ಒಬ್ಬ ಚೋಳಿಯು ವ್ಯಾಸರಾಯರ ಪ್ರಾಬಲ್ಯವನ್ನು ನೋಡಿ ಸಹಿಸಲಾರದೆ ವಿಷಪ್ರಯೋಗ ಮಾಡಿಸಿದನು (ಕಭಾ. ೬೪) ; ಚಂದ್ರವರ್ಮನಿಗೆ ವಿಷಪ್ರಯೋಗ ಮಾಡಿ ಕೊಲ್ಲಬೇಕೆಂದು ಆಜ್ಞಾಪಿಸಿದನು (ಕವಿ. ೩). [ಸಂ.]

ವಿಷಪ್ರಹರಣ (ನಾ). ನಂಜನ್ನು ಹೋಗಲಾಡಿಸುವಂಥದು : ವಿಷಪ್ರಹರಣಮಪ್ಪ ವೈದ್ಯಮಂ ಪ್ರಕಟಿಸುವೆಂ (ಖಮದ. ೧೫-೨). [ಸಂ.]

ವಿಷಪ್ರಾಶನ (ನಾ). ೧. = ವಿಷಪ್ರಯೋಗ. ೨. ನಂಜನ್ನು ಸೇವಿಸುವುದು ; ವಿಷಸೇವನೆ : ಕೃಷ್ಣಾಕುಮಾರಿ ಹೆಣ್ಣಾಗಿ ಹುಟ್ಟಿದ ತಪ್ಪಿಗೆ ವಿಷಪ್ರಾಶನ ಮಾಡಿ ವಂಶಗೌರವವನ್ನು ರಕ್ಷಿಸಬೇಕಾಯಿತು (ಭಾರದ. ೪೮೯) ; ಎಲ್ಲಾ ತರದ ವಿಷಪ್ರಾಶನಕಾಲದಲ್ಲೂ ಹಾಲು ಬಹಳ ಉಪಯೋಗಕಾರಿ (ಬಾಲಪ್ರ. I. ೫೪೦). [ಸಂ.]

ವಿಷಫಲ (ನಾ). ೧. ಒಂದು ಬಗೆಯ ಸಸ್ಯ : (ಮೃಚಿ. ೨-೩೩). ೨. (ಆಲಂ) ಕೆಟ್ಟ ಪರಿಣಾಮ ; ದುಷ್ಪರಿಣಾಮ : ದುಷ್ಕಾರ್ಯದ ವಿಷಫಲವನ್ನು ಎಂದಿದ್ದರೂ ಭೋಗಿಸಲೇಬೇಕು (ರೂಢಿ). [ಸಂ.]

ವಿಷಬಿದುರು (ನಾ). ಒಂದು ಬಗೆಯ ಸಸ್ಯ : ವಿಷಮೂಂಗಿಲಿ, ವಿಷಬಿದುರು (ಮೃಚಿ. ೨೫-೪೬೮). [ವಿಷ + ಬಿದುರು.]

ವಿಷಬೊದ್ದಿ (ನಾ). ಒಂದು ಬಗೆಯ ಔಷಧೀಸಸ್ಯ : ಕಕ್ಕೆಬೇರು, ವಿಷಬೊದ್ದಿ . . . ಕಷಾಯ ಮಾಡಿ ಸೇವಿಸಲು ಪುರಾಣಜ್ವರ ಚಾತುರ್ಥಿಕಾದಿ ಸರ್ವಾಹಿಕಜ್ವರಗಳು ನಿಲ್ಲುವುವು (ಸಚಿವ್ಯ. ಪರಿ. ೪೦೫). [ವಿಷ + ಬೊದ್ದಿ.]

ವಿಷಭಿಷಕ್ಕು (ನಾ). ೧. ಹಾವು ಮುಂತಾದುವುಗಳ ವಿಷವನ್ನು ನಿವಾರಿಸುವವನು ; ವಿಷವೈದ್ಯ. ೨. ಗಾರುಡಿಗ : "ಜಾಂಗುಳಿಕಃ, ವಿಷಭಿಷಕ್ — ಈ ೨ ಗಾರುಡಿಗಂ" (ಪಲಾಮು. ೧೦೦-೪೫೯). [ಸಂ. ವಿಷಭಿಷಜ್]

ವಿಷಭೇದ (ನಾ). ಒಂದು ಬಗೆಯ ಔಷಧೀಸಸ್ಯ : "ಮಹಾಕರಂಭಃ— ವಿಷಭೇದ" (ಓಷಧಿ. ೧೨೨). [ಸಂ.]

ವಿಷಭೋಜಕ (ನಾ). ವಿಷವನ್ನು ಸೇವಿಸಿದವನು ; ನಂಜುಂಡ ; ಶಿವ : ಪಶುಪತಿಯೆನಿಸಿದ ವಿಷಭೋಜಕನೆ (ಜೋಗಿಪ. ೧೭೦). [ಸಂ.]

ವಿಷಮ (ಗು). ೧. ಸಮವಲ್ಲದ ; ಒರಟಾದ. ೨. ಕ್ರಮವಿಲ್ಲದ ; ಅವ್ಯವಸ್ಥಿತವಾದ. ೩. ಅಸಾಧಾರಣವಾದ ; ಅಸಾಮಾನ್ಯವಾದ : ಅನ್ನೆಗಮವ್ಯಕ್ತಕಾಲದೊಳೋದಿ ಮಱೆದ ವಿಷಮಶಾಸ್ತ್ರದ ಮೂಲಗ್ರಂಥಕ್ಕೆ ವಿವರಣೆ ಬರ್ಪವೊಲಿರದವಧಿ ವಿಬೋಧದೆ ಬರೆ ಮನಕ್ಕೆ (ಶಾಂತಿಪು. ೭-೧೪ ವ) ; ಕಾಲನ ಲೀಲೆಯಾದುದು ವಿಷಮ ಸಮರಂಗ (ಕರ್ಣಾಪ್ರೋ. ೫-೪). ೪. ಭಯಂಕರವಾದ ; ಉಗ್ರವಾದ : ಗಂಗಾದೇವಿಯ ವರಪ್ರಸಾದದೊಳ್ ವಿಷಮವಿಷಧರಂಗಳ್ ಪರಿಯೆ (ಪಂಚಭಾ. ೨-೩೨ ವ) ; ವಿಷಮತಪವನೆಗಳ್ದನೀಶ್ವರಂ (ಪಮ್ಮರ. ೨-೬ ವ). ೫. ಕೆಟ್ಟ ; ದುಷ್ಟ : ವಿಷಮವಿಶ್ವಾಮಿತ್ರಮುನಿ ಮುನಿದು ತಪ್ಪ ಸಾಧಿಸಿದಪ್ಪಂ (ಪಚಿಕಾ. ೫-೭೨). ೬. ಸಂತೋಷವಿಲ್ಲದ ; ನೋವಿನ ; ದುಃಖದಿಂದ ಕೂಡಿದ. ೭. ಆಪತ್ತಿನಿಂದ ಕೂಡಿದ ; ಕಷ್ಟಕರವಾದ. ೮. ತಿಳಿಯಲು ಅಸಾಧ್ಯವಾದ ; ಗೂಢವಾದ. ೯. ಸಮವಾಗಿ ಭಾಗಮಾಡಲಾಗದ ; ಬೆಸಸಂಖ್ಯೆಯ : 'ವಿಷಮಪಾದ' ಪರಾ. ೧೦. ಹೊಂದಾಣಿಕೆಯಿಲ್ಲದ ; ಏರುಪೇರಾದ. ೧೧. ಅನಿಯತವಾದ ; ಬಿಟ್ಟು ಬಿಟ್ಟು ಬರುವ : 'ವಿಷಮಜ್ವರ' ಪರಾ. (ನಾ). ೧೨. ಸಮವಾಗಿಲ್ಲದಿರುವುದು ; ಒರಟಾದುದು. ೧೩. ಕಷ್ಟಕರವಾದುದು ; ತ್ರಾಸದಾಯಕವಾದುದು : ಕಾಲ ವಿಷಮವು ಕೌರವಕ್ಷಿತಿಪಾಲ ಪಾಂಡುಕುಮಾರರಲಿ ಕೈ ಮೇಳವಿಸುವುದು (ಕರ್ಣಾಶ. ೫-೩೧) . ೧೪. ಗ್ರಹಿಸಲು ಕಷ್ಟವಾದುದು : ಅದೇಂ ಸುರಲಂಜಿಕೆಯರ್ ವಿಷಮಮಂ ಸಮಂ ಮಾಡಿದರೊ (ಶಾಂತಿಪು. ೭-೭೩). ೧೫. ಕಷ್ಟಪರಿಸ್ಥಿತಿ ; ಆಪತ್ತು ; ಇಕ್ಕಟ್ಟು : ವಿಷ ತಿಂದರೆ ಬದುಕಬಹುದು,

ವಿಷಮದಲ್ಲಿ ಬದುಕಕೂಡದು (ಗಾದೆ). ೧೬. ಪ್ರತಿಕೂಲ ; ಏರುಪೇರು : ದೇಸಾಯರದ ಜೊತೆಗೆ ದಾಂಪತ್ಯ ವಿಷಮವಾಗಿ ಪರಿಣಮಿಸಿ ಕೊನೆಗೆ ಅವರನ್ನು ಪರಿತ್ಯಕ್ತರನ್ನಾಗಿ ಮಾಡಿತ್ತು (ಸಮಜೀ. ೭೭೫). ೧೭. ಸಮವಲ್ಲದ ಸಂಖ್ಯೆ ; ಬೆಸ. ೧೮. ಒಂದು ಬಗೆಯ ಜಠರಾಗ್ನಿ : 'ವಿಷಮಾಗ್ನಿ' ಹೋ. ೧೯. ಅಸಾಧಾರಣವಾದ ವ್ಯಕ್ತಿ : ಮುಸುಡ ಹೊಗರಿನ ಕಣ್ಣ ಕೆಂಪಿನ ವಿಷಮರಗ್ಗದ ಕರ್ಣತನುಜರು . . . ಮಸಗಿ ಮುಂಚುವ ಮೋಹರವನಡಹಾಯ್ದು ತಱುಬಿದರು (ಕುವ್ಯಾಕ. ೧೦-೩೨). ೨೦. [ನಾಟ್ಯ] ವಿಷಮ, ವಿಕಟ, ಲಘುವೆಂಬ ಮೂರು ಬಗೆಯ ನೃತ್ಯಗಳಲ್ಲಿ ಒಂದು : ಹೆಚ್ಚು ತಿವಡಿ ವಿಷಮಗಳೆಂಬ ಚೌಕಳಿಂ ಸಚ್ಚಿತಾ ಭೃಂಗಿನಾಟ್ಯಗಳು (ದೇವಾಂಪು. ೫-೧೭೯) ; ಒದವಿದ ನೃತ್ತಂ ತ್ರಿವಿಧಾಖ್ಯದೆ ರಂಜಿಪುದೆಯ್ದೆ ವಿಷಮ ವಿಕಟಂ ಲಘುವೆಂದು (ಲಾಸ್ಯರಂ. ೧-೬೭). ೨೧. [ಸಂಗೀತ] ನೂರೆಂಟು ತಾಳಗಳಲ್ಲಿ ಒಂದು : ಕಡೆಮುಟ್ಟೆ ನೇತ್ರವಟ್ಟೆಯ ಕಡೆಯಂ ಸೀಳ್ದಂತೆ ವಿಷಮತಾಳದೊಳ್ . . . ಬಾಜಿಸಿದಂ (ಮಲ್ಲಿಪು. ೮-೩೦) ; ಧ್ರುವ . . . ವಿಷಮ . . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳಾದೊಡೆ (ವಿವೇಕ. ೧೯೨). ೨೨. [ಕಾವ್ಯಮೀ] ಒಂದು ಅರ್ಥಾಲಂಕಾರದ ಹೆಸರು ; ಪರಸ್ಪರ ಅನುಗುಣವಲ್ಲದ ವಸ್ತುಗಳನ್ನು ಒಟ್ಟಿಗೆ ಸೇರಿಸಿ ವರ್ಣಿಸುವುದು : ಸಮಾಸೋಕ್ತಿ . . . ವಿಷಮ . . . ಉದಾತ್ತವೆಂಬ ಅಱವತ್ತೈದಲಂಕಾರಗಳಿಂದೊಡಗೂಡಿ (ವಿವೇಕ. ೧೭೯) ; ತಾಪಕ್ಕೆ ತಕ್ಕುದಾಗಿಲ್ಲದಂತಹ ಕೋಮಲಾಂಗಿಯಲ್ಲಿ ತಾಪವಿಹುದೆಂದು ವರ್ಣಿಸಲ್ಕೆ ವಿಷಮವು (ಕುವಲ. ೭೮). ೨೩. ಹದಿನೆಂಟು ಬಗೆಯ ಕಾವ್ಯದೋಷಗಳಲ್ಲಿ ಒಂದು : ಅಸದರ್ಥಂ . . . ದುರ್ಲಕ್ಷಣಂ ಹಾಸ್ಯವಾಗ್ವಿಷಮಾ'ಸೌಮ್ಯಮನೋಜ್ಞೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಆಡಿಪದ್ಯ). ೨೪. [ಛಂದ] ಸಮ, ಅರ್ಧಸಮ ಮತ್ತು ವಿಷಮವೆಂಬ ಮೂರು ತರದ ವೃತ್ತಗಳಲ್ಲಿ ಒಂದು ; ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣಗಳಿಂದ ಕೂಡಿರುವ ವೃತ್ತ : ವಿಪರೀತಗಣಾಕ್ಷರಮಾಗ ಪದಂಗಳ್ ನಾಲ್ಕು ಪಿಂದು ಮುಂದುಗಳಕ್ಕುಂ ಚಪಲಾಕ್ಷಿ ವಿಷಮವೃತ್ತಮನುಪದೇಶಿಪೆಂ (ಛಂದೋಂಬು. ೩-೨೧೧) ; ವರ್ಣವೃತ್ತವು ಸಮ, ಅರ್ಧಸಮ, ವಿಷಮ ಎಂದು ಸಾಮಾನ್ಯವಾಗಿ ಮೂರು ವಿಧವು (ಕೃಪಿಡಿ. ೭೮). [ಸಂ.]

ವಿಷಮಕಾಲ (ನಾ). ಕೆಟ್ಟಕಾಲ ; ದುಷ್ಕಾಲ : ಆ ವಿಷಮಕಾಲದಲ್ಲಂತೂ ಹಿಂದೂ ಸಂಸ್ಕೃತಿಯ ಪುನರುದ್ಧರಣ ಸಾಧ್ಯವೇ ಇಲ್ಲ ಎಂಬ ಭೀತಿಯುಂಟಾಗಿದ್ದರೆ ಆಶ್ಚರ್ಯವಿಲ್ಲ (ಶುಕ್ಲಾರ. ೧೦೯ ಟೀಕೆ). [ಸಂ.]

ವಿಷಮಕುಲ (ನಾ). ಅಸಮವಾದ ಕುಲ ; ಮೇಲು ಅಥವಾ ಕೀಳುಜಾತಿ : ವಿಷಮಕುಲದಲಿ ಕಾಯದಾಸೆಗೆ ಕೊಳುಕೊಡೆಯ ಕಳವಳಿಸಿ ಮಾಡಿದೊಡೆ ನಾಯಕದ ನರಕಗಳು ತಪ್ಪವು (ಪ್ರಭುಲಿಂ. ೧೦-೮). [ಸಂ.]

ವಿಷಮಗೋ (ನಾ). ಅಸಮಸಂಖ್ಯೆಯ ಕಣ್ಣುಗಳುಳ್ಳವನು ; ವಿರೂಪಾಕ್ಷ ; ಶಿವ : ಗೋಪತಿ ವಿಷಮಗೋಪರಂ ವಿಧುಗೋಪದಂ (ಬಸವು. ೧-೬). [ಸಂ.]

ವಿಷಮಚಕ್ರ (ನಾ). ೧. = ವಿಷಚಕ್ರ : "ಅನ್ಯೋನ್ಯಾಶ್ರಯದೋಷ ; ವಿಷಮಚಕ್ರ" (Vicious Circle. ಇಂಇಸಾ). ೨. [ಕಾವ್ಯಮೀ] ಒಂದು ಬಗೆಯ ಕಾವ್ಯಬಂಧ ; ಒಂದು ಪದವನ್ನು ಆಶ್ರಯಿಸಿ ಇನ್ನೊಂದು ಪದವಿಡುವ ಒಂದು ಬಂಧ : ಅರ್ಧಪಾದಗತ ಪ್ರತ್ಯಾಗತ ವಿಷಮಚಕ್ರಶ್ಲೋಕ (ಮದಕಿ. ೧-೪೨). [ಸಂ.]

ವಿಷಮಚ್ಛದ (ನಾ). ಒಂದು ಬಗೆಯ ಸಸ್ಯ ; ಏಳೆಲೆಬಾಳೆ : "ಸಪ್ತಪರ್ಣಃ . . . ವಿಷಮಚ್ಛದಃ- ೪ ಏಳೆಲೆಬಾಳೆಗಿಡ" (ಸಿದ್ಧಾಂತಿ. ೧೧೭). [ಸಂ.]

ವಿಷಮಜ್ವರ (ನಾ). ದಿನ ಬಿಟ್ಟು ದಿನ ಬರುವ ಜ್ವರ ; ವಿಷಮದಿನಗಳಲ್ಲಿ ಕಾಣಿಸಿಕೊಳ್ಳುವ ಜ್ವರ ; ಟೈಫಾಯ್ಡ್ : ದಿನ ಬಿಟ್ಟು ದಿನ ಜ್ವರ ಬರುವುದು, ಎರಡು ದಿನಕ್ಕೊಮ್ಮೆ ಜ್ವರ ಬರುವುದು ಇವುಗಳೆಲ್ಲಾ ವಿಷಮಜ್ವರಲಕ್ಷಣಗಳು (ಸಕವೃ. ೯೮) ; ಇಲಿ, ಜಿರಳೆ, ನೊಣ ಮೊದಲಾದವುಗಳು . . . ವಿಷಮಜ್ವರ, ಆಮಶಂಕೆ ಇತ್ಯಾದಿ ರೋಗಗಳನ್ನು ಹರಡುತ್ತವೆ (ಅಡುಸಾ. ೪೮). [ಸಂ.]

ವಿಷಮತೆ (ನಾ). ೧. ದುಷ್ಟತನ ; ಕ್ರೌರ್ಯ : ವೃಷಭನ ಅನಿಮಿತ್ತರೋಷಾವೇಶವಿಷಮತೆಗಂ . . . ವಿಸ್ಮಯಂಬಟ್ಟು (ಚಂದ್ರಪ್ರ. ೨-೩೦) ; ಗ್ರಾಹಮಹಾಮೀನ ಕುಳೀರಾಹಿಗಳಂದೇನುಂ ಪೊಸೆಯಿಸಿದುವಿಲ್ಲ ನಿಜವಿಷಮತೆಯಂ (ಚಂದ್ರಪ್ರ. ೫-೪೫). ೨. ಏರುಪೇರು ; ಅಸಮಾನತೆ : ವಿಷಮತೆಗಳನ್ನು ನಿವಾರಿಸುವ ಅವಶ್ಯಕತೆ ಇರುವಾಗ ಪೇಟೆಯ ಕೈ ಬಿಗಿಹಿಡಿಯತಕ್ಕದ್ದು (ಹಣಪ್ರ. ೧೯೦). ೩. ಸೋರಂಕು ; ನಂದು : ಕಂಠನಾಳದ ಮೂಲರೋಗದಲ್ಲಿ ವಿಷಮತೆ (Toxity) ಹೆಚ್ಚಾಗಿ ಕಾಣಿಸುವುದಿಲ್ಲ (ಕಲರೋ. ೧೯). [ಸಂ. ವಿಷಮತಾ]

ವಿಷಮತ್ರೀಡನ (ನಾ). ವಿಷವನ್ನುಳ್ಳ ಹಾವನ್ನು ಪೀಡಿಸುವಂಥದು ; ಗಿಡುಗ : "ಪ್ರಾಚಿಕೆ ವಿಷಮತ್ರೀಡನಂ ಶ್ಯೇನಮೆನೆ ಗಿಡುಗನಕ್ಕುಂ" (ಮಂಗರಾ. ೫೨-೮). [ಸಂ.]

ವಿಷಮತ್ವ (ನಾ). ವ್ಯತ್ಯಾಸ : ಬಂಗಾರದಿಂದ ಉಂಗುರ ಉಡಿದಾರಗಳಾಗುತ್ತವೆ . . . ಬಂಗಾರವು ಅವುಗಳ ಸಾಮಾನ್ಯಾವಸ್ಥೆಯಾಗಿತ್ತು. ವಿಕಾರವಾಗುತ್ತಲೆ ವಿಷಮತ್ವಕ್ಕೆ ಆರಂಭವಾಗುತ್ತದೆ (ಜೀವಾತ್ಮ. ೧೫೫). [ಸಂ.]

ವಿಷಮದಾಂಪತ್ಯ (ನಾ). ಹೊಂದಿಕೆಯಾಗದ ಪತಿಪತ್ನೀಸಂಬಂಧ ; ಸಮರಸವಿಲ್ಲದ ದಾಂಪತ್ಯ : ಈ ಕಾದಂಬರಿಯಲ್ಲಿ ವಿಷಮದಾಂಪತ್ಯಗಳ ಸಂತೆ ನೆರೆದಿದೆ (ಸಮಜೀ. ೪೩ ಟೀಕೆ) : ಮೇಳದವರು ಈ ತೆರನ ವಿಷಮದಾಂಪತ್ಯದ ವಿಧಿವಿಲಾಸವನ್ನು ಕಂಡು ಕಳವಳಿಸಿದರು (ಬದ್ರಪ್ರ. XX. ಟೀಕೆ). [ಸಂ.]

ವಿಷಮದಾರಿ (ನಾ). ಒಂದು ಬಗೆಯ ಸಸ್ಯ : "ಇಬ್ಬನೆ . . . ವಿಷಮದಾರಿ, ಪರಲೆ, ಯಿಸಗ, ಮದರಾಸ್‌ಮಲ್ಲಿಗೆ" (ಸಸ್ಯನಿ. ೩೭). [?]

ವಿಷಮನಯನ (ನಾ). = ವಿಷಮಗೋ : ಬಸವನಸದೃಶಕೀರ್ತಿ ಪರ್ಬಿತು ದೆಸೆದೆಸೆಯೊಳಾ ವಿಷಮನಯನನ ಲಸಿತಸಿತಭಸಿತಾಂಗರಾಗಪ್ರಭೆ ಮುಸುಕಿತನಲು (ಬಸವು. ೧೨-೩೭). [ಸಂ.]

ವಿಷಮಪರೀಷಹ (ನಾ). [ಜೈನ] ಸಾಧನೆಯ ಹಾದಿಯಲ್ಲಿ ಉಂಟಾಗುವ ತೀವ್ರವಾದ ಅಡ್ಡಿ : [ದಮ]ಂ ಶಮದಿಂ ತತ್ಕ್ಷುಧಾಟಪಾಸಾದಿ ದ್ವಾವಿಂಶತಿ ವಿಷಮಪರೀಷಹವಂಶಮನಶ್ರಮದಿನಾ ಮುನೀಂದ್ರಂ ಗೆಲ್ದಂ (ಶಾಂತಿಪು. ೯-೧೦೯). [ಸಂ.]

ವಿಷಮಪಾದ (ನಾ). [ಛಂದ] ಅಸಮಸಂಖ್ಯೆಯ ಪಂಕ್ತಿ ; ಬೆಸಸಂಖ್ಯೆಯ ಸಾಲು : ವಿಷಮಪಾದಗಳಲ್ಲಿ ನಾಲ್ಕನೆಯಕ್ಷರದ ಮುಂದೆ ಯಗಣವು ಬರಬೇಕು (ಕೃಪಿಡಿ. ೧೦೩). [ಸಂ.]

ವಿಷಮಪ್ರದೇಶ (ನಾ). ಕಷ್ಟಕರವಾದ ಸ್ಥಳ : ಮಹೇಂದ್ರಸಿಂಹನೊರ್ವನೆ ನಾನಾವಿಧ ಗಿರಿಗಹನವಿಷಯವಿಷಮಪ್ರದೇಶಂಗ[ಳುಮಂ] . . . ಕಟೆದು ಪೋಗಿ (ಪಡ್ಡಾರಾ. ೫೪-೮). [ಸಂ.]

ವಿಷಮಬಂಧ (ನಾ). [ಕಾವ್ಯಮೀ] ಕಾವ್ಯಬಂಧಗಳಲ್ಲಿ ಒಂದು ; ಮೃದು ಮತ್ತು ಸ್ಫುಟ ವರ್ಣಗಳಿಲ್ಲದ, ಕೇಳುವುದಕ್ಕೆ ಅಹಿತಕರವಾದ ಒಂದು ಬಗೆಯ ಕಾವ್ಯರಚನೆ : ಇಂತಿದು ಸಮಬಂಧ ದ್ವಿತಯಾಂತರಮಾ ವಿಷಮಬಂಧ ಮಿನ್ನಿಂತಕ್ಕುಂ ಚಿಂತ್ಯಕಸುಖಾಕ್ರಾಂತರ್ ಸಂತುಷ್ಟೈಕಾಗ್ರಚಿತ್ತರಾದರ್ ತಮ್ಮೊಳ್ (ಕವಿರಾ. ೨-೫೯). [ಸಂ.]

ವಿಷಮಬಂಧನ (ನಾ). = ವಿಷಮಬಂಧ : ಸತತಂ ಭಯಾನಕೋದ್ಗತ್ಸುರಸಂ ಕರಂ ವಿಷಮಬಂಧನದಿಂ (ಕವಿರಾ. ೨-೧೦೦). [ಸಂ.]

ವಿಷಮಬಾಣ (ನಾ). ಬೆಸಸಂಖ್ಯೆಯ ಬಾಣಗಳುಳ್ಳವನು ; ಪಂಚಬಾಣ ; ಮನ್ಮಥ : ಧೃತವಿಷಮಬಾಣನಂ ಜಿನಪತಿ ಗೆಲ್ದವೊಲಾತನಂ . . . ಗೆಲ್ದು (ಶಾಂತಿಪು. ೫-೫೭). [ಸಂ.]

ವಿಷಮಭಾಗಾರ (ನಾ). [ಗಣಿತ] ಬೆಸಸಂಖ್ಯೆಯ ಭಾಗಾಹಾರ : ಆಳು ಭಾಗಾರ ವಿಷಮಭಾಗಾರ . . . ಇವು ಮೊದಲಾದ ಲೆಕ್ಕಾಚಾರಗಳು ಗುಣಿಸಿ ಭಾಗಿಸುವ ವಿವರಾ (ಭಾಸ್ಕರ. ೧-೩). [ವಿಷಮ + ಭಾಗಾರ (< ಭಾಗಾಹಾರ)]

ವಿಷಮಭುಜಂಗಿ (ನಾ). ಭಯಂಕರವಾದ ಹೆಣ್ಣುಹಾವು ; ಉಗ್ರವಾದ ನಾಗಿಣಿ : ನಿಮ್ಮ ಮಗಳನೀತಂ ವಿಷಮಭುಜಂಗಿಯೆಂದನೆನೆ ಮುಳಿದು (ಚಾಪುಂಪು. ೭೪). [ಸಂ. ವಿಷಮಭುಜಂಗೀ]

ವಿಷಮಮತಿ (ನಾ). ನೀಚಬುದ್ಧಿ : ಮಾತ್ಸರ್ಯಮಹಾವಿಷಮಮತಿಯಿಂದೆ ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್ (ಆದಿಪು. ೧-೨೨). [ಸಂ.]

ವಿಷಮಯತಿ (ವಾ). [ಸಂಗೀತ] ಆರುವಿಧವಾದ ಯತಿಗಳಲ್ಲಿ ಒಂದು : ಯತಿಯಲ್ಲಿ ಆರು ವಿಧ. ಕ್ರಮವಾಗಿ ಅವು — (೧)ಸಮಯತಿ . . . (೫) ಮೃದಂಗಯತಿ ಮತ್ತು (೬) ವಿಷಮಯತಿ . . . ವಿಷಮಯತಿ – ಯಾವ ಕ್ರಮವನ್ನೂ ಅನುಸರಿಸದೆ ಅಂಗಗಳು ಬರುವುದು (ಸಂಗೀಚಂ. ೫೮). [ಸಂ.]

ವಿಷಮರಣ (ನಾ). ಉಗ್ರ ಯುದ್ಧ, — ಕಾದಾಟ : ಧಣು ಧಣು ವಿಷಮರಣ ನರಸಿಂಹ ಜಾಗೆಂದುದು ಭಟಸ್ತೋಮ (ಕುವ್ಯಾಕ. ೨೪-೮). [ಸಂ.]

ವಿಷಮರತಿ (ನಾ). ಸಮವಲ್ಲದ ರತಿ ; ವಿಕೃತಕಾಮ : ಆ ಮಲ್ಲಣಿಯ ಮಂದಿರದ ಮುಂದೆ ನಿಂದಿರಲವಳಾತ್ಮೆಯರು ನಿರ್ಬಂಧದಿಂದಿರ್ದು ವಿಷಮರತಿಯೊಳ್ ನೃಪನೊಳು ಪೊರಮಟ್ಟು (ಕುಮಾಪು. ೩-೧೧೫). [ಸಂ.]

ವಿಷಮರ್ತು (ನಾ). ಪ್ರತಿಕೂಲವಾದ ಋತು, — ಕಾಲ : ಓಮಮುಂ ಗ್ರೀಷ್ಮಮು ಮೆಂಬಿವಾ ನಿತುಗಳುಂ ಶೀತಕ್ಕಮುಷ್ಣಕ್ಕಮಗ್ರಿಮಧಾಮಂಗಳಸೌಖ್ಯದಂಗಳದಱಿಂದಂ . . . ನಿಂದಂತೆ ಕಾರುಂ ಬಸಂತಮ ನಾಡೊಳ್ ವಿಷಮರ್ತುಗಳ್ ಪುಗುಗುಮೇ ಪುಣ್ಯ ಪ್ರಜಾವಾಸದೊಳ್ (ಶಾಂತಿಪು. ೯-೧೬೫). [ಸಂ.]

ವಿಷಮವಿಕ್ರಮ (ನಾ). ಅಸಾಮಾನ್ಯನಾದ ಪರಾಕ್ರಮಿ ; ವಿಷ್ಣು : ಹೆಸರುಗೊಂಬರು ವೀರರಾವನ ವಿಷಮವಿಕ್ರಮನೆಂದು ನಿನ್ನೀ ಗಸಣಿಯನು ಳಿಗೆಗೆ ಗತಾಯುವ ಮಾಡನೇ (ನಿಭಾಗ. ೩-೭-೨೭). [ಸಂ.]

ವಿಷಮವಿಗ್ರಹ (ನಾ). = ವಿಷಮಮರಣ : ಈಗಳೊಬ್ಬನೆ ವಿಷಮವಿಗ್ರಹಯಾಗದಲಿ . . . ತೋಱುವೆನು ಸೈರಿಸಿಯೆ (ಕುವ್ಯಾಕ. ೧೫-೧೨). [ಸಂ.]

ವಿಷಮವಿವಾಹ (ನಾ). ಏರುಪೇರಾದ ಲಗ್ನ ; ಹೊಂದಾಣಿಕೆಯಿಲ್ಲದ ಮದುವೆ : ಆ ಸಂಬಂಧ ವಿಷಮವಿವಾಹಕ್ಕೆ ದಾರಿಯಾಗಬಹುದೆಂದು ಅವಳು ಭಾವಿಸಿದ್ದಳು (ಪುಸಂ. ೪೧೭). [ಸಂ.]

ವಿಷಮವಿಷಧರ (ನಾ). ೧. ಭಯಂಕರವಾದ ವಿಷವನ್ನು ಹೊಂದಿದುದು ; ಸರ್ಪ : ಅಜಗರವೃತ್ತಾಂತಮಂ ಬೆಸಗೊಂಡು ವಿಷಮವಿಷಧರನಾತ್ಮೀಯಜನಕನೆಂದ ಱಿದು ತತ್ ಸಮೀಪಕ್ಕೆ ವಂದು (ಆದಿಪು. ೨-೧೫೪). ೨. (ಸಮುದ್ರಮಥನಕಾಲದಲ್ಲಿ ಉತ್ಪನ್ನವಾದ) ವಿಷವನ್ನು ಕುಡಿದು ಕುತ್ತಿಗೆಯಲ್ಲಿ ಧರಿಸಿದವನು ; ವಿಷಕಂಠ ; ಶಿವ : ಬಂದಂ . . . ಅಮೃತಮಥನೋದ್ಭೂತವಿಷಮವಿಷಧರನೆಂಬ ಅಮಮ ಬಂದಂ ಜನನಮರಣವರ್ಜಿತನೆಂಬ (ಸಂಬಿರ. ೭-೧೧೫). [ಸಂ.]

ವಿಷಮವೃತ್ತ (ನಾ). [ಛಂದ] ಅಕ್ಷರವೃತ್ತದ ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣಗಳಿಂದ ಕೂಡಿರುವುದು ; ಸಮವಲ್ಲದ ಸಾಲುಗಳನ್ನು ಅಥವಾ ಗಣವಿನ್ಯಾಸವನ್ನು ಹೊಂದಿರುವ ಪದ್ಯ : ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣದಿಂದ ಕೂಡಿರುವುದು ವಿಷಮವೃತ್ತವು ; ಇದು ಕನ್ನಡದಲ್ಲಿ ಬಳಕೆಯಲ್ಲಿಲ್ಲ (ಕೃಛಂ. ೭೮). [ಸಂ.]

ವಿಷಮಶೀತಜ್ವರ (ನಾ). = ವಿಷಮಜ್ವರ : ನೆಲ್ಲಿಕಾಯಿ, ತಾರೇಕಾಯಿ . . . ಕಷಾಯವಂ ಮಾಡಿ ಕೊಡಲು ವಿಷಮಶೀತಜ್ವರ ಮಾಣುವುದು (ವಿಷ್ಣು. ೧೭೬) ; ಕುಮುದ ಒಂದು ಘೋರ ವಿಷಮಶೀತಜ್ವರದಿಂದ ಸತ್ತಳು (ಪೂರ್ಣ. ೧೪೪). [ಸಂ.]

ವಿಷಮಶೀಲ (ಗು). ೧. ಕೆಟ್ಟತನದಿಂದ ಕೂಡಿದ ; ದುಷ್ಟತನದ. (ನಾ). ೨. ಕೆಟ್ಟನಡತೆಯುಳ್ಳವನು ; ದುರಾಚಾರಿ : ನೀನಪ್ಪೊಡೆ ವಿಷಮಶೀಲಂ (ಕಂಚಿಪು. ೦೩೬-೧೨). [ಸಂ.]

ವಿಷಮಸಂಖ್ಯೆ (ನಾ). ಅಸಮಸಂಖ್ಯೆ ; ಬೆಸಸಂಖ್ಯೆ. [ಸಂ. ವಿಷಮಸಂಖ್ಯಾ]

ವಿಷಮಸಂಧಿ (ನಾ). ಇಕ್ಕಟ್ಟಿನ ಪ್ರಸಂಗ ; ಬಿಕ್ಕಟ್ಟು : ಅದು ಕಾರಣ ಇಂಥ ವಿಷಮಸಂಧಿಯಲ್ಲಿ ಕುಮಾರನಾದ ರಾಮಭದ್ರನು ಏನು ಮಾಡಿಯಾನು? (ಕಗವ. ೧೧೨ ಉತ್ತರರಾಮಚರಿತ್ರ ಕಥೆ) ; ಇದು ವಿಷಮಸಂಧಿ ವ್ಯಾಳೆ (ಹೃದಶ. ೩೮). [ಸಂ.]

ವಿಷಮಸನ್ನಿ (ನಾ). ಜ್ವರವು ತೀವ್ರವಾದ ಅವಸ್ಥೆಯನ್ನು ಮುಟ್ಟಿದಾಗ ಉಂಟಾಗುವ ಉನ್ಮಾದ : ಕಡುಜ್ವರವು, ಸಂತಾಪವು . . . ಮೂರ್ಛೆಯು ಇವು ಮುಂತಾದ ಲಕ್ಷಣಗಳೊಡನೆ ಯುಕ್ತವಾಗಿರ್ಪುದೆ ವಿಷಮಸನ್ನಿಯ ದೋಷವೆಂದರಿವುದು (ಸಕಸ. ೧೭೦). [ವಿಷಮ + ಸನ್ನಿ]

ವಿಷಮಸನ್ನಿವೇಶ (ನಾ). = ವಿಷಮಸಂಧಿ : ಇಂಥ ವಿಷಮಸನ್ನಿವೇಶದಲ್ಲೂ ಸಹ . . . ಸನ್ಮಾರ್ಗಪ್ರವರ್ತಕರ ನಾಯಕತ್ವ ಆರ್ಯಸಂಸ್ಕೃತಿಯ ರಕ್ಷಕವಾಯಿತು (ಋಕ್ಸಾರ. ೧೧೦ ಪೀಠಿಕೆ). [ಸಂ.]

ವಿಷಮಸೂಚಿ (ನಾ). [ನಾಟ್ಯ] ಇಪ್ಪತ್ತುಮೂರು ಬಗೆಯ ದೇಶೀಯ ಸ್ಥಾನಕಗಳಲ್ಲಿ ಒಂದು : ಸ್ವಸ್ತಿಕ . . . ವಿಷಮಸೂಚೀ . . . ವೃಷಭಾಸನ – ಈ ಇಪ್ಪತ್ತುಮೂರು ದೇಶೀಯಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). [ಸಂ.]

ವಿಷಮಾಕ್ಷ (ನಾ). = ವಿಷಮಗೋ : ಹಸಿವಿನಲ್ಲಿ ವಿಷಯದಲ್ಲಿ ಭವಿಯ ಬೆರಸಿದ ನಾದರೆ ಅವ ವಿಷಮಾಕ್ಷ ನಿಮಗೆ ದೂರ (ಡೀದಾಮ. ೫೩-೧೦೭) ; ಕಾಮಾರಿಗೆ ಶೂಲಿಗೆ ವಿಷಮಾಕ್ಷಿಗೆ . . . ನುಡಿದಂ (ಉದ್ಭಡೀ. ೭-೫೭). [ಸಂ.]

ವಿಷಮಾಗ್ನಿ (ನಾ). ನಾಲ್ಕುಬಗೆಯ ಜಠರಾಗ್ನಿಗಳಲ್ಲಿ ಒಂದು : ದೇಹದಲ್ಲಿ ಜಠರಾಗ್ನಿಯು ನಾಲ್ಕು ತೆರನಾಗಿರುವುದೆಂತೆಂದೊಡೆ — ಮಂದಾಗ್ನಿ, ತೀಕ್ಷ್ಣಾಗ್ನಿ, ವಿಷಮಾಗ್ನಿ, ಸಮಾಗ್ನಿಯೆಂಬ ನಾಲ್ಕು ವಿಧವಾದ ಅಗ್ನಿಗಳಲ್ಲಿ . . . ವಾತಾಧಿಕ್ಯದಿಂದ ವಿಷಮಾಗ್ನಿಯೂ . . . ಉಂಟಾಗಿರುವುದು (ಸಕವೈ. ೧೫೫). [ಸಂ.]

ವಿಷಮಾಟವಿ (ನಾ). ಭಯಂಕರವಾದ ಕಾಡು ; ಘೋರಾರಣ್ಯ ; ಕಗ್ಗಾಡು : ತಱಿದು ಪಡಲ್ವಡಿಸೆನೆ ಖಚರಸ್ಯೆನ್ಯವಿಷಮಾಟವಿಯಂ (ಶಾಂತಿಪು. ೫-೪೮) ; ಆ ವಿದ್ಯೆ ಗಗನತಳದಿಂದಾ ವಧುವಂ ಮೆಲ್ಲನುಯ್ದು . . . ಮಹಾವಿಷಮಾಟವಿಯೊಳಿರಿಸಿ ಪೋದತ್ಕಾಗಳ್ (ಪಂರಾಮಾ. ೧೪-೫೩). [ಸಂ.]

ವಿಷಮಾಧ್ವ (ನಾ). ದುರ್ಗಮವಾದ ದಾರಿ : "ವಿಷಮಾಧ್ವಮುಂ ವಿಪಿನಮುಂ ಕಾಂತಾರಮಕ್ಕುಂ" (ನಾಸಾರ. ೧೦೭). [ಸಂ. ವಿಷಮಾಧ್ವನ್]

ವಿಷಮಾಯುಧ (ನಾ). = ವಿಷಮಬಾಣ : "ಪ್ರದ್ಯುಮ್ನಃ . . . ವಿಷಮಾಯುಧಃ . . . ಮನೋಭವಃ — ಈ ೨೮ ಕಾಮ(ದೇವ)ನ ಪೆಸರ್" (ಹರಾಯು. ೭-೩೪) ; ಕೋಮಲಾಂಗುಳಿಗಳದೇಂ ಬಗೆಯಂ ಬೆದಱಿಪುವೊ ಪೂಣಂಬುಗಳೆಂಬಂತಿಂಬುವೆತ್ತು ವಿಷಮಾಯುಧನಾ (ಪುಷ್ಪಸ. ೩-೨೭). [ಸಂ.]

ವಿಷಮಾಲಂಕಾರ (ನಾ). "ಪರಸ್ಪರ ಅನುಗುಣವಲ್ಲದ ಪದಾರ್ಥಗಳು ಒಟ್ಟಿಗೆ ಸೇರಿವೆ ಎಂದು ವರ್ಣಿಸಿದರೆ ವಿಷಮಾಲಂಕಾರವಾಗುವುದು" (ಕೃಛಂ. ೩೭೯) : ಆವ ವಸ್ತುವಿಗೆ ತನ್ನ ರೂಪಕ್ಕೆ ತಕ್ಕುದಾಗಿಲ್ಲದಂತಹದರಲ್ಲಿ ತಾನಿರಲ್ಕೆ ಈ ಎರಡರ ಸಂಬಂಧವು ವರ್ಣಿಸ ವಿಷಮಾಲಂಕಾರವೆನಿಸುವದು (ಕುವಲ. ೭೮-೧೬). [ಸಂ.]

ವಿಷಮಾವಗ್ರಹ (ನಾ). ತೀಕ್ಷ್ಣವಾದ ಮಾತು ; ಕ್ರೂರಶಾಪ : ಶಿವ ಶಿವ ವಿಗ್ರಹಪ್ರತಿಮುಖದ ವಿಷಮಾವಗ್ರಹದಲಿದು ಬೆಂದು ಹೋಗದೆ ಭರತಸಂತಾನ (ಕುವ್ಯಾಸ. ೧೬-೫೨). [ಸಂ.]

ವಿಷಮಾವಸರ (ನಾ). ಬಹಳ ಜರೂರಾದುದು ; ಅತ್ಯಂತ ತುರ್ತಾದುದು : ಇದು ಮಹಾಸ್ವಾಮಿಯವರ ಹೆಸರಲ್ಲಿ ಮುದ್ರೆಯಲ್ಲಿ ಬಂದಿರುವ ವಿಷಮಾವಸರದ ನಿರೂಪ (ಚಟ್ಟುಅ. ೭೭-೭೬). [ಸಂ.]

ವಿಷಮಾವಸ್ಥೆ (ನಾ). ವಿಕೋಪದ ಸ್ಥಿತಿ : ಹದಗೆಟ್ಟ ಪರಿಸ್ಥಿತಿ : ಪ್ರಕೃತಿಯು ಚಿರಕಾಲ ಸಾಮ್ಯಾವಸ್ಥೆಯಲ್ಲಿದ್ದು ಆಕಸ್ಮಿಕವಾಗಿ ವಿಷಮಾವಸ್ಥೆಯನ್ನು ಹೊಂದಲಾರದು (ಭಾರದ. ೨೩೦). [ಸಂ. ವಿಷಮಾವಸ್ಥಾ]

ವಿಷಮಾಸ್ತ್ರ (ನಾ). = ವಿಷಮಬಾಣ : ಅಂತು ದುರ್ಯಶಃಪದಮುಂ . . . ದುರ್ಘಟ ಮುಮನಿಪೆಡೆಯೊಳೆರ್ದೆಗಟ್ಟದೊಂದವಜ್ಞೆಯಿಂದೆಸಗಿದಪಂ ವಿಷಮಾಸ್ತ್ರಂ (ಕಾದಂಪು. ೮೫೭) ; ಬನದೊಳಗೆ ಬಸುಟ್ಟು ಪೋದ ವಿಷಮಾಸ್ತ್ರನ ನಚ್ಚಿನ ಬಾಣಾವಳಿಯೆನಿಸಿದುವನೂನ ಕುಸುಮಾವಕೀರ್ಣಬಾಣಾವಳಿಗಳ್ (ಚಂದ್ರಪು. ೨-೯೮). [ಸಂ.]

ವಿಷಮಾಹಿ (ನಾ). ಭಯಂಕರವಾದ ಹಾವು ; ಕ್ರೂರಸರ್ಪ : ಆ ವಿಷಮಾಹಿಯ ವಿಷಮುಖ ಪಾವಕನಿಂ ಪಾಯುತಿರ್ಪ ಖಗಕುಳಮುಂ . . . ಬೇವುದು ಯೋಜನಪರಿ ಪ್ರಮಾಣಾಂತರದೊಳ್ (ಜಗವಿ. ೩-೮೧). [ಸಂ.]

ವಿಷಮಿತ (ಗು). ಏರುಪೇರಾದ ; ಅಸಮವಾದ : ವದನಾಂಬುಜಮಾಯತೋನ್ನತ ಭ್ರೂಚಾಪಂ ಮುದಮಂ ಪಡೆದತ್ತೆನಗೆಂಬುದು ವಿಷಮಿತರೂಪ ವಿಷಮರೂಪಕ ಮಕ್ಕುಂ (ಕವಿರಾ. ೩-೧೭). [ಸಂ.]

ವಿಷಮಿಸು (ಕ್ರಿ). ೧. ನಂಜಾಗು ; ಸೋಂಕು ತಗಲು : ರಂಗಪ್ಪನ ಚಿಕ್ಕಪ್ಪನಿಗೆ ಆಪರೇಷನ್ ಆಗಿ ಅದೇನೋ ವಿಷಮಿಸಿಕೊಂಡು ಸತ್ತುಹೋಗಿದ್ದನು (ಘಾಟಮು. ೮೯). ೨. ಹದಗೆಡು ; ವಿಕೋಪಕ್ಕೆ ಹೋಗು ; ಉಲ್ಬಣವಾಗು : ಹೀಗೆ ಎಲ್ಲವೂ ವಿಷಮಿಸಿಕೊಂಡಿರುವಾಗ ಒಬ್ಬ ಭಿಕ್ಷುವು ಅವರ ಮನೆಗೆ ಬಂದನು (ದೇಶಾಂಕ. ೧೦೩) ; ವ್ಯಾಧಿಯು ಎಲ್ಲಿ ವಿಷಮಿಸಿಬಿಡುವುದೋ ಎಂಬ ಶಂಕೆ ನನಗೆ (ಚಂಗಾಳ್ವ. ೧೫೭). [ವಿಷಮ + - ಇಸು]

ವಿಷಮುಂಗುಲಿ, ವಿಷಮೂಂಗಿಲಿ (ನಾ). ಒಂದು ಬಗೆಯ ಸಸ್ಯ : ವಿಷಮೆಕ್ಕೆಗೆ ಗಿನಿಮೂಗಂ ವಿಷಮುಂಗುಲಿ[ಪಾಠಾಂ. ರಿ]ಗಂತೆ ಪಾಲು . . . ಉಪವಿಷಮಕ್ಕುಂ (ಖಮದ. ೨-೧೧೯). **ವಿಷಮೂಂಗಿಲಿ** : ವಿಷಮೂಂಗಿಲಿ, ವಿಷಬಿದಿರು (ಪಜ್ಞಾ. ೪೧). 'ಮುಂಗುರಿ' ಪರಾ. [ದೇ. ॥ ತುಳು. ವಿಷಮುಂಗುಲಿ]

ವಿಷಮುಷ್ಟಿ (ನಾ). ಒಂದು ಬಗೆಯ ಔಷಧೀಸಸ್ಯ : ನೇತ್ರಪುಷ್ಪಃ — ವಿಷಮುಷ್ಟಿ'' (ಓಷಧಿ. ೮೯) ; ವಿಷಮುಷ್ಟಿ ನಾಂಗುಲಿಕ ಶಶನಯನ ಪತ್ರವರರಸವು ತಾಂಬೂಲದೊಡಗೂಡೆ ಸ್ತ್ರೀವಶವು (ಸರ್ವಜ್ಞ. ೧೯೭). [ಸಂ.]

ವಿಷಮೂಂಗಿಲಿ 'ವಿಷಮುಂಗುಲಿ' ನೋ.

ವಿಷಮೂಲಿಕೆ (ನಾ). ಒಂದು ಬಗೆಯ ಸಸ್ಯ : ವಿಷಮೂಲಿಕೆ. ಕರ್ನಾಟಶೃಂಗಿ (ಮೈಡಿಗಿ. ೬೬-೧೩೫೦) ; ವಿಷಮೂಲಿಕೆಯ ಗೆಣಸು . . . ಮೆಣಸಿಗೆಯ ಬೇರು ಇವ್ಕನ್ನೂ ಚೆನ್ನಾಗಿ ಜಜ್ಜಿ . . . ಮೆಲ್ಲುವುದು (ವೈವೈ. ೧೫೫). [ಸಂ. ವಿಷಮೂಲಿಕಾ]

ವಿಷಮೆ (ನಾ). ಮೋಸಗಾತಿ ; ವಂಚಕಿ : ವಿಷ್ಕರೆ ವಿಷಮೆ ವಿರಹಿ . . . ತಾಮಸಿಯೆನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ಬಾರದೆ (ಭೃಮಿಭಾ. ೫-೬೧). [ಸಂ. ವಿಷಮಾ]

ವಿಷಮೆಕ್ಕೆ (ನಾ). ಒಂದು ಬಗೆಯ ಬಳ್ಳಿ ; ಹಾವುಮೆಕ್ಕೆ : ವಿಷಮೆಕ್ಕೆಗೆ ಗಿನಿಮೂಗಂ . . . ಹಿಂಗು ತಗಚೆಗುಪವಿಷಮಕ್ಕುಂ'' (ಖಮದ. ೨-೧೧೯). [ವಿಷ + ಮೆಕ್ಕೆ]

ವಿಷಮೇಷು (ನಾ). = ವಿಷಮಬಾಣ : ಇತ್ತಲ್ ವಿಷಮೇಷು ಕೊಂದಪಂ (ಕಾದಂಪೂ. ೮೭೦) ; ವಿಷಮೇಷು ಖಿನ್ನೆಯರ ಚಿನ್ನೆಯರ ರಕ್ಷಣೆಗೆ ನೀನೊಬ್ಬನೇ ಗತಿಯಲ್ಲವೆ? (ಧ್ವನ್ಯಾಲೋ. ೯೨). [ಸಂ.]

ವಿಷಮೋರಗ (ನಾ). ೧. ಭಯಂಕರವಾದ ಹಾವು ; ಘಟಸರ್ಪ : ಆಶೀವಿಷವಿಷ ಮೋರಗರಾಶಿಯನೊಳಕೆಯ್ದು ವಿಪುಳಪಾತಾಳನಿವಾಸಾಶಂಕೆಯನೀವುದು . . . ಜಯನಶಾಲಿಕೆ (ಚಂದ್ರಪ್ರ. ೧-೧೪೯). ೨. ಆದಿಶೇಷ : ವಿಷಮೋರಗನಂತೀ ಜಗತೀತಳಮನಾಂತನವನೀಕಾಂತಂ (ಮಲ್ಲಿಪ್ರ. ೩-೭). [ಸಂ.]

ವಿಷಯ (ನಾ). ೧. ಇಂದ್ರಿಯಗೋಚರವಾಗುವ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಜ್ಞಾನೇಂದ್ರಿಯಗಳು : ವಿಷಯಂಗಳಿದಱ ಕೈವಶವಾದುವು (ಮನೋವಿ. ೧-೧೪). ೨. ಕಿವಿ, ನಾಲಗೆ, ಕಣ್ಣು, ಮೂಗು ಮತ್ತು ಚರ್ಮವೆಂಬ ಐದು ಕರ್ಮೇಂದ್ರಿಯಗಳು : ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯವಿಷಯ ವೆಂಬ ವಿಷದಿಂದ ಆನು ಮುಂದುಗೆಟ್ಟೆನಯ್ಯಾ (ಬಸವ. ೨೦). ೩. ಇಂದ್ರಿಯಾನುಭವ ; ಇಂದ್ರಿಯಾರ್ಥ : ಅನಿತಿಂದ್ರಿಯಮುಂ ವಿಷಯಮನನಾಕುಳಂ ಬಿಟ್ಟು ದರ್ಶನೇಂದ್ರಿಯ ಮೊಂದಕ್ಕನುವಶಮಾದವು (ಪಂಡಾಮಾ. ೫-೬೬). ೪. ಬಯಕೆಯ ವಸ್ತು ; ಇಚ್ಛಿಸುವ ಪದಾರ್ಥ : ಇಂತೀ ಪ್ರಾಣಿಗಳು ಒಂದೊಂದು ವಿಷಯದಿಂದೆ ಬಂಧನಕ್ಕೊಳಗಾದುವು (ಅಪಂಡೀ. ೭ ೪) : ವಿಷಯಗಳ ಚಿಂತನದಿಂದ ಮನುಷ್ಯನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ (ಪರ್ಮಾಕಾ. ೧೩೨). ೫. ಭೋಗಾಭಿಲಾಷೆ ; ಇಂದ್ರಿಯಚಾಪಲ್ಯ ; ಕಾಮಾಸಕ್ತಿ : ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ (ಬಸವ. ೫೧) ; ವಿಷಯಂಗಳುಳ್ಳ ಮನುಜಂಗೆ ಗುರುಕರುಣ ವಶವರ್ತಿಯಹುದೆ (ಸರ್ವಜ್ಞ. ೧೩). ೬. ಕಾವ್ಯ, ಕಥೆ ಮುಂತಾದುವುಗಳ ವಸ್ತು : ವರಗೀತ ಗದ್ಯೋದಯೈಕಾಂತ[ಕಾಂತ]ವಿಷಯಾಶಯರಾಗಿ ನಿರಾಕುಳಂ ಸಂತತಂ ನುಡಿಗ ಳೊಳ್ ಬಗೆ ಬೆರ್ಚರಿ ಪೇಳ್ದವರ್ ಸಂತಸಂಬಡಿಸುವರ್ (ಕವಿರಾ. ೩-೨೨೪). ೭. ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಯು ಆಯ್ಕೆಮಾಡಿಕೊಳ್ಳುವ ಭಾಗ : ನಾವು ಕಾಲೇಜಿಗೆ ಸೇರುವಾಗ ಯಾವಯಾವ ವಿಷಯ (Subject) ತೆಗೆದುಕೊಳ್ಳಬೇಕೆಂದು ಚರ್ಚೆ ನಡೆಸುತ್ತಿದ್ದವು (ಅಲಹೂ. ೯೧). ೮. ವಿಚಾರ : ಸಂಗತಿ : ವಿತರ ವಿಷಯವಾಗಿ ವಿಚಾರವು ನಡೆದಿದೆ (ಬ್ರಹ್ಮಭಾ. ೨-೩೭). 'ವಿಷಯಾಂತರ' ಪರಾ. ೯. ಗುರಿ ; ಧ್ಯೇಯ. ೧೦. ದೇಶ ; ನಾಡು : ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಳಿತ; ವಿಲೀನವಿಶದ ವಿಷಯವಿಶೇಷಂ (ಕವಿರಾ. ೧-೩೭) ; ಆ ಕುರುಜಾಂಗಣವಿಷಯದೊಳ್ ಜಲಜಲಮೊ[ಮ್ಮು]ತಿರ್ಪ ಪರಿಕಾಲ್ . . . ಒಪ್ಪಿ ತೋಜುಗುಂ (ಪಂಪಭಾ. ೧-೫೧ ವ) ; ಯಜ್ಞೀಯಾಶ್ವಂ ನಾನಾ ವಿಷಯಂಗಳೊಳಂ ಮನೋರಥದ ವಾಜಿಯ ಪಾಂಗಿನಿಂ ತೊಬತೊಬಲ್ದು ಬರೆವರೆ (ರಾಮಾಶ್ವ. ೫೧-೧೨). ೧೧. ಆಶ್ರಯ ; ನೆಲೆ : ಅಂತತಿಶಯ ಶೋಭಾವಿಷಯಮಾದ ವಿಷಯಾಂತರಾಳದೊಳ್ . . . ಎಸದಿರ್ಪುದಲ್ತೆ ಮಧುರಾಪುರಂ (ಜಗವಿ. ೨-೧೧ ವ). ೧೨. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ಮದನನ ತಂದೆಯ ಗಣಮವು ವಿಷಯದೊಳಿರೆ ಗುರು ಮುಂದೊದವಿರೆ (ಧಂದೋಂಬು. ೫-೨೫೫) ; ಶರ ಬಾಣ ವಿಷಯ ಪಾಂಡವ ಪುರ ವೈರಿಮುಖಿಂಗಳ್ಕೆದಱ ನಾಮಂ (ವ್ಯವಹಾ. ೯-೫). [ಸಂ.]

ವಿಷಯಕ (ಗು). ೧. ಯಾವುದಾದರೂ ವ್ಯಕ್ತಿ ಅಥವಾ ವಸ್ತುವಿಗೆ ಸಂಬಂಧಿಸಿದ : ಯಾವುದೊಂದು ಕಾರ್ಯದಲ್ಲಿ ಪ್ರವೃತ್ತಿಯುಂಟಾಗಬೇಕಾದರೆ ಮೊದಲು ಅದರ ವಿಷಯಕ ಜ್ಞಾನ, ನಂತರ ಇಚ್ಛೆ, ಅನಂತರ ಪ್ರವೃತ್ತಿ (ಮೂವಾದ. V, ಎರಡು ಮಾತುಗಳು) (ನಾ). ೨. ಯಾವುದಾದರೂ ವ್ಯಕ್ತಿ ಅಥವಾ ವಸ್ತುವಿಗೆ ಸಂಬಂಧಿಸಿದುದು : ಪಂಪನ ಪ್ರೇರಣೆಯಿಂದ ಮತ್ತು ಅವನ ವಿಷಯಕವಾದ ಹೆಮ್ಮೆಯಿಂದ ಅಭಿನವಪಂಪ ನಾದಂತೆ . . . ಕುಮಾರವಾಲ್ಮೀಕಿ ತಲೆದೋರಿದನು (ಕಾಸಾ. ೨೬೪). [ಸಂ.]

ವಿಷಯಕಾಂಕ್ಷೆ (ನಾ). ೧. ವಸ್ತುವಿನ ಬಯಕೆ, — ಆಸೆ : ಪ್ರಿಯವಿಷಯಕಾಂಕ್ಷೆ ಯಿಂದಿಂದ್ರಿಯಂಗಳೆಂತೆಯ್ದೆ ಮನಮನಾಶ್ರಯಿಸುಗುಮಂತಯನಯಪರರಯ್ದುರುಮಾಶ್ರ ಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ (ಪಂಪಭಾ. ೯-೧೩). ೨. ರಾಜ್ಯ ಪಡೆಯಬೇಕೆನ್ನುವ ಬಯಕೆ ; ರಾಜ್ಯಾಭಿಲಾಷೆ : ಅಯನಯಪರರಯ್ದು ರುಮಾಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ (ಪಂಪಭಾ. ೯-೧೩). ೩. ಭೋಗಾಭಿಲಾಷೆ ; ಇಂದ್ರಿಯಲೋಲುಪತೆ : ನಾಗಸೂರಂ . . . ವಿಷಯ ಕಾಂಕ್ಷೆಯಿಂ ಮದಾಳಿಗೆ ಬಸಮಾಗಿ (ಸುಜಮಾ. ೭-೩೨ ವ). [ಸಂ. ವಿಷಯಕಾಂಕ್ಷಾ]

ವಿಷಯಗ್ರಹಣ (ನಾ). ಗ್ರಂಥ, ಕಾವ್ಯ ಮುಂತಾದುವುಗಳ ವಸ್ತುವನ್ನು ಆರಿತು ಕೊಳ್ಳುವುದು : ವಿಷಯಗ್ರಹಣವೋ ವಿಚಾರಮಂಥನವೊ ಅವೆಲ್ಲ ವ್ಯಕ್ತಿತ್ವಕ್ಕೆ ಹೊಸ ಪುಷ್ಟಿಯನ್ನು ನೀಡತಕ್ಕ ಅಂಶಗಳು (ಶಿಪ್ರದ. ೧೬೯). [ಸಂ.]

ವಿಷಯರತಿ (ನಾ). ಕಾಮಾಸಕ್ತಿ : ವಿಷಯರತಿಯುಳ್ಳವಂಗೆ ಈಶ್ವರನ ರತಿಯು ಇನ್ನೆಲ್ಲಿಯದೋ (ಪದ್ಮೇವ. ೪೩-೧೦೯). [ಸಂ.]

ವಿಷಯರಹಿತ (ನಾ). ಇಂದ್ರಿಯಲಾಲಸೆಯಿಲ್ಲದಿರುವವನು ; ಜಿತೇಂದ್ರಿಯ : ವಿಷಯರಹಿತನ ಮಾಡಿ . . . ಸಲಹಯ್ಯಾ (ಬಸವ. ೫೦). [ಸಂ.]

ವಿಷಯಲಂಪಟ (ನಾ). ಇಂದ್ರಿಯಭೋಗದಲ್ಲಿ ಅತ್ಯಾಸಯುಳ್ಳವನು ; ವಿಷಯಾಸಕ್ತ ; ಅತಿಕಾಮುಕ : ವಿಷಯಲಂಪಟರಕ್ಷಲೀಲಾವ್ಯಸನಕೋಸುಗ ವೊತ್ತಯಿಟ್ಟರು ವಸುಮತಿಯನು (ಕುವ್ಯಾಳ. ೧೭-೧೧) ; ತಾನೊಬ್ಬ ವಿಷಯ ಲಂಪಟನೆಂದೂ . . . ವ್ಯರ್ಥವಾಗಿ ಅವಳನ್ನು ಕೆರಳಿಸಿದೆನೆಂದೂ ಸ್ಪಷ್ಟಪಡಿಸುತ್ತೇನೆ (ಪುನರು. ೧೩೪). [ಸಂ.]

ವಿಷಯಲಂಪಟತನ (ನಾ). ಇಂದ್ರಿಯಲಾಲಸೆ ; ವಿಷಯಾಸಕ್ತಿ : ವಿಷಯಲಂಪಟ ತನದಲಾವ್ ನರ್ಮಿಸಿದವಶ್ಯತ್ವಾಮನನು ನಮ್ಮಿಸವ ಮೋಹದ ಕಂದನ್ಯೆಯೆಲೆ ಪಾರ್ಥ ನೀನೆಮಗೆ (ಕುವ್ಯಾವಿ. ೮-೩೪) ; ಇನ್ನು ಜನರಲ್ಲಿ ಕೇವಲ ಸುಳ್ಳು . . . ವಿಷಯಲಂಪಟತನಾದಿ ಗಳೇ ಹೆಚ್ಚಾಗುವುವು (ಕಂಬಮು. ೮೬). [ವಿಷಯಲಂಪಟ + - ತನ]

ವಿಷಯಲಿಪ್ಸೆ (ನಾ). = ವಿಷಯರತಿ : ವಿಷಯಲಿಪ್ಸೆಯೇ . . . ನನ್ನನ್ನು ನೀನು ಈ ಘಾತಕಕೊಳ್ಳದಲ್ಲಿ ಕೆಡವಿದೆ (ಪ್ರೇಮಾಶ್ವ. ೨೬೨). [ಸಂ. ವಿಷಯಲಿಪ್ಸಾ]

ವಿಷಯಲೋಭ (ನಾ). ಇಂದ್ರಿಯಾಪೇಕ್ಷೆ ; ವಿಷಯಾಸಕ್ತಿ : ವಿಷಯಲೋಭ ವಿನೇನಸ್ಸಂತಾನಮೆನ್ನನೇನಟಲಿಸದೇ (ಪಂಪಾಮಾ. ೨-೧೮). [ಸಂ.]

ವಿಷಯಲೋಲುಪ (ನಾ). = ವಿಷಯಲಂಪಟ : ಅಚ್ಯುತರಾಯ . . . ವಿಷಯಲೋಲುಪನಾಗಿ ಆಡಳಿತಕ್ಕೆ ಗಮನ ಕೊಡಲಿಲ್ಲ (ಕವಿಚೋ. ೧.೧೯೬). [ಸಂ.]

ವಿಷಯವಾಸನೆ (ನಾ). ಇಂದ್ರಿಯಭೋಗದಲ್ಲಿರುವ ಬಯಕೆ ; ಕಾಮವಾಸನೆ : ಅದಕ್ಕೆ ವಿಷಯವಾಸನೆ ಅಂಟಿಕೊಂಡಿರುವುದಿಲ್ಲ (ಪುಸಾ. ೭೩).

[ಸಂ. ವಿಷಯವಾಸನಾ]

ವಿಷಯವಿರತಿ (ನಾ). ಇಂದ್ರಿಯಭೋಗದಿಂದ ದೂರವಿರುವುದು ; ಕಾಮವಾಸನೆಯಿಂದ ಮುಕ್ತವಾಗಿರುವುದು : ಪ್ರತಿಭೆಗ ಫಲಮಱಿವಿನ ಗತಿ ಗತಿಗೆ ಫಲಂ ವಿಷಯವಿರತಿ ವಿರತಿಗ ಫಲಮಾರ್ಹತ ಪರಮವೀಕ್ಷೆ (ಪುಪ್ರಪ್ರ. ೧೩-೪೪). [ಸಂ.]

ವಿಷಯಸಂಧಿ (ನಾ). ನಾಡಿನ ಎಲ್ಲೆ ; ದೇಶದ ಗಡಿ : ಪಾಂಡ್ಯವಿಷಯದ ವಿಷಯಸಂಧಿಯೊಳ್ ಬೀಡುವಿಟ್ಟು (ಶಾಂತಿಪು. ೧೧-೪ ವ). [ಸಂ.]

ವಿಷಯಸುಖ (ನಾ). ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಐದು ವಿಷಯಗಳಿಂದ ಉಂಟಾಗುವ ಆನಂದ ; ಇಂದ್ರಿಯಸುಖ : ಅರಿಗೆ . . . ಸುರಾಂಗನಾಸುರತ ವಿಷಯಸುಖಮಂ ಕೊಟ್ಟುಂ (ಕವಿಕಾ. ೩-೧೫೯) ; ಶ್ರೀ ಪ್ರಭಾದೇವ್ಯಾದಿಕಂ . . . ವಿಷಯಸುಖಾಸ್ವಾದನರಸಾಮೃತತತ್ಪರನಾಗಿರೆ (ಶಾಂತಿಪು. ೭-೩೭ ವ). [ಸಂ.]

ವಿಷಯಸೂಚಿ (ನಾ). ಒಂದು ಗ್ರಂಥದಲ್ಲಿ ಅಡಕವಾಗಿರುವ ವಿಚಾರಗಳನ್ನು ತಿಳಿಸುವ ಪಟ್ಟಿ ; ಪರಿವಿಡಿ ; ಅನುಕ್ರಮಣಿಕೆ : ಈ ಗ್ರಂಥದ ವಿಷಯಸೂಚಿಯ ಭಾಗ ಮುದ್ರಣವಾಗದೆ ಬಿಟ್ಟುಹೋಗಿದೆ (ರೂಢಿ). [ಸಂ.]

ವಿಷಯಾಂತರ (ನಾ). ೧. ವಿಚಾರಸರಣಿಯ ಬದಲಾವಣೆ : ಅವರು ಬರುತ್ತಿದ್ದಂತೆ ಇವರಿಬ್ಬರೂ ಆಡುತ್ತಿದ್ದ ಮಾತನ್ನು ನಿಲ್ಲಿಸಿ ವಿಷಯಾಂತರ ಮಾಡಿದರು (ರೂಢಿ). ೨. ನಾಡಿನ ನಡುವಣ ಪ್ರದೇಶ, — ಹರಹು : ಕೆಯ್ಯೊಲಗಳೆನೊಪ್ಪಿ ತೋ[ಱಿ] ಸಿರಿ ನೋಡುಗುಮಾ ವಿಷಯಾಂತರಾಳದೊಳ್ (ಕಂಪಭಾ. ೧-೫೨).

ವಿಷಯಾತುರ (ನಾ). ೧. ಇಂದ್ರಿಯಭೋಗಾಭಿಲಾಷೆ ; ವಿಷಯಾಸಕ್ತಿ. ೨. ವಿಷಯಾಸಕ್ತಿಯುಳ್ಳ ವ್ಯಕ್ತಿ : ಗಾತ್ರದೊಳು ವಿಷಯಾತುರಂಗಳಪಾತ್ರ ಪಾತ್ರಂಗಳು (ಬಾಹು. ೪೦-೬೩) ; ಅಸಿಯ ಜವ್ವನೆಯರ ಕಂಡು ವಿಷಯಾತುರರಾಗಿ ಕುಸಿವುತ್ತಿಪ್ಪರು ನೋಡಾ ಹಿರಿಯರು (ಸದ್ಧಮ. ೪೧-೧೧೧). [ಸಂ.]

ವಿಷಯಾನಂದ (ನಾ). ಇಂದ್ರಿಯಗಳಿಂದ ಉಂಟಾಗುವ ಸಂತೋಷ : ಸತಿ ಸುತಾದಿಗಳ ಮಧ್ಯದಲ್ಲಿರ್ದು ಅವರ ರೂಪುಲಾವಣ್ಯವಯೋವಿಶೇಷಮಂ ನೋಡಿ . . . ಆನಂದಿಸುವದೇ ವಿಷಯಾನಂದವೆನಿಸುವದು (ನಾನಾಗು. ೨೫-೧೮). [ಸಂ.]

ವಿಷಯಾಭಿಲಾಷೆ (ನಾ). ಭೋಗಾಭಿಲಾಷೆ ; ಕಾಮಾಸಕ್ತಿ : ನಿನ್ನಂಥವನ ಮನಸ್ಸು ವಿಷಯಾಭಿಲಾಷೆಯಿಂದ ಕದಡಿತು (ವಚಕಾ. ೨೧). [ಸಂ. ವಿಷಯಾಭಿಲಾಷ]

ವಿಷಯಾಭ್ಯಾಸಿ (ನಾ). = ವಿಷಯಲಂಪಟ : ನಿಲುವನು ಮುಕ್ತಿರಾಜ್ಯದಲಿ . . . ವಿಷಯಾಭ್ಯಾಸಿಗೊಮ್ಮೆ ವಿರಕ್ತಿ ದೆಸೆಯಹುದ್ಯಸಲೇ (ಕುವ್ಯಾಅ. ೨೧-೪೧).

[ಸಂ. ವಿಷಯಾಭ್ಯಾಸಿನ್]

ವಿಷಯಾಮಿಷ (ನಾ). = ವಿಷಯಾಭಿಲಾಷೆ : ನೀಂ ವಿಷಧರವಾಗದೆ ಬೇಗಂ ವಿಷಯಾಮಿಷವಿಷಮನುಗುಱುವು ನಿರ್ವಿಷನಾಗಾ (ಆದಿಪು. ೨-೧೭) ; ವಿಷಮವಿಷಸದೃಶ ವಿಷಯಾಮಿಷಕಾಂಕ್ಷೆಯೆ ತಿಣ್ಣಮಾಗೆ ಮತಿಗೆಟ್ಟು ಮಳೀಮಸನಾದೆಂ (ಸಾಹಮಾ. ೮-೩೭). [ಸಂ.]

ವಿಷಯಾರ್ಥಿ (ನಾ). = ವಿಷಯಲಂಪಟ : ದೂರಂ ಯುಕ್ತಾಯುಕ್ತವಿಚಾರಂ ವಿಷಯಾರ್ಥಿಗೆ (ಆದಿಪು. ೯-೧೦೨). [ಸಂ. ವಿಷಯಾರ್ಥಿನ್]

ವಿಷಯಾಸಕ್ತ (ನಾ). = ವಿಷಯಲಂಪಟ : ಆ ಬಾಲಕರ್ . . . ಸಾರ್ವಭೌಮೋಪ ಜೀವಿಗಳಂತೆ ವಿಷಯಾಸಕ್ತರುಮೆನಿಸಿ (ಸುಕುಮಾ. ೨-೫ ವ). [ಸಂ.]

ವಿಷಯಾಸಕ್ತತೆ (ನಾ). = ವಿಷಯಲಂಪಟತನ : ಅತಿಶಯದಿಂ ವಿಷಯಾಸಕ್ತತೆ ನಿನ್ನನ್ನರುಮನಿಂತು ಮಾಡಿತ್ತು (ಕಾದಂಪೂ. ೭೭೭). [ಸಂ. ವಿಷಯಾಸಕ್ತತಾ]

ವಿಷಯಾಸಕ್ತಿ (ನಾ). ಭೋಗಾಭಿಲಾಷೆ ; ಇಂದ್ರಿಯಲೋಲುಪತೆ : ವಿಷಯಾಸಕ್ತಿಯೊಳಾಯಾಸ್ಯಕನಿರತರಾಗಿರ್ಪ ಪ್ರಾಕೃತಜನಂಗಳ ಗಮನಮೇ ಸಮಸ್ತವೇದಿಗೆ ಹೃದಯಂಗಮಮಾಗದು (ಶಾಂತಿಪು. ೪-೧೦೨ ವ). [ಸಂ.]

ವಿಷಯಿ (ಗು). ೧. ವಿಷಯಕ್ಕೆ ಸಂಬಂಧಿಸಿದ. (ನಾ). ೨. ವಿಷಯವನ್ನು ತಿಳಿಯುವ ಸಾಧನ ; ಇಂದ್ರಿಯ : ವಿಷಯಿ ಎಂದರೆ ಎಲ್ಲವನ್ನೂ ಅರಿಯುವ ನಮ್ಮ ಆತ್ಮನು. ವಿಷಯವೆಂದರೆ ಆತ್ಮನ ಅರಿವಿಗೆ ಗೋಚರವಾಗುವ ಮನಸ್ಸು, ಇಂದ್ರಿಯ, ಶರೀರ, ಹೊರಗಿನ ವಿಷಯಗಳು — ಇವು (ಬ್ರಹ್ಮಭಾ. ೧ ಅಡಿಟಿ). ೩. ವಿಷಯಲಂಪಟ ; ಕಾಮುಕ : ವಿಷಯಿ ತನ್ನ ಕೇಡಂ ನೋಡಂ (ಪಂಚಾಮೃ. ೯-೮೭) ; ಬಾರದು ಬಾರದು ವಿಷಯಿಗೆ ಪಶುಪತಿಯ ವ್ರತವು (ಬಸವ. ೭೭೦). [ಸಂ. ವಿಷಯಿನ್]

ವಿಷಯೀಕರಣ (ನಾ). ವಸ್ತುವನ್ನು ಗ್ರಹಿಸುವಿಕೆ : ಸುಖಬದ್ಧನಿಗೆ ಆ ಸುಖದ ವಿಷಯೀಕರಣ ಸುಲಭವಲ್ಲ (ಕಾವ್ಯಕು. ೨೫). [ಸಂ.]

ವಿಷಯೀಕರಿಸು (ಕ್ರಿ). ವಸ್ತುವನ್ನಾಗಿ ಮಾಡು ; ವಿಷಯವನ್ನಾಗಿಸು : ವರಋಷಿ ಗಳಾಜ್ಞೆಯಲಿ ವಿಶ್ವಂಭರನ ವಿಷಯೀಕರಿಸಿ ರಾಜಾಧ್ವರಸಮರ್ಥನ . . . ಅಜೀವ ತೆಱದಿಂದೆನ್ನ ಮತಿ ಗೋಚರಿಸಿದುದ ಹೇಳುವೆನು (ಕುವ್ಯಾಸ. ೯-೨) ; ಪ್ರತ್ಯಕ್ಷವು . . . ರೂಪ ರಸ ಗಂಧ ಸ್ಪರ್ಶ ಶಬ್ದ ಅಥವಾ ಅವುಗಳಿಗಾಶ್ರಯವಾದ ಸ್ಥೂಲವನ್ನು ವಿಷಯೀಕರಿಸುತ್ತದೆ (ಭಾಂದ. ೨೨೯). [ವಿಷಯೀಕರಣ + - ಇಸು]

ವಿಷಯೇಂದ್ರಿಯ (ನಾ). ವಿಷಯವನ್ನು ಗ್ರಹಿಸುವ ಅವಯವ ; ಜ್ಞಾನೇಂದ್ರಿಯ.

[ಸಂ.]

ವಿಷರೋಗ (ನಾ). ನಂಜಿನಿಂದ ಉಂಟಾಗುವ ರೋಗ : (ನೊರೆಹಾಲು) . . . ಸೇವಿಸಲು . . . ನೇತ್ರರೋಗ, ವಿಷರೋಗ ಸಹ ಗುಣಮಕ್ಕುಂ (ಸಹ್ಯ. ೨೮). [ಸಂ.]

ವಿಷಲ (ನಾ). ಕೆಡುಕ ; ದುಷ್ಟ : ವ್ಯಭಿಚಾರಿಯಾದ ಸ್ತ್ರೀಯನೂ ಅಂಗೀಕರಿಸಿಕೊಂಡು ಇದ್ದವನೂ ಮಾಹಿಷಿಕನೂ ತನ್ನ ಜಾತ್ಯಾಚಾರಮಂ ಬಿಟ್ಟು ಪರರ ಜಾತ್ಯಾಚಾರದಿಂ ನಡವಂತಾವನು ವಿಷಲನು (ಕಾಶೀಮ. ೨೧೩-೫). [< ಸಂ. ವ್ಯಷಲ]

ವಿಷಲತೆ (ನಾ). ಒಂದು ಬಗೆಯ ಬಳ್ಳಿ ; ಹಾವು ಮೆಕ್ಕೆ : ತದೀಯ ಕರ್ಣಾಭ್ಯರ್ಣಮಂ ಪೊರ್ದಿ . . . ಅತಿ ದುಸ್ಸಹವಾರ್ತಾವಿಷಲತೆಯಂ ನಾಂಟಿಸಲ್ (ಜಗವಿ. ೨-೮೩).

[ಸಂ. ವಿಷಲತಾ]

ವಿಷವಕ್ತ್ರ (ನಾ). ವಿಷಪೂರ್ಣವಾದ ಮುಖವುಳ್ಳದು ; ಸರ್ಪ : ಆ ಕಮಠಂ ವಿಷವಕ್ತ್ರನಾಗಿ ನಾಲಗೆಯೆರಡಾದ ವಾಸುಗಿ ಕರಂ ತಲೆವಾಗಿಯುಂ (ಪುಪ್ರಪ್ರ. ೩-೪).

[ಸಂ.]

ವಿಷವರ್ತುಲ, ವಿಷವರ್ತುಳ (ನಾ). ೧. ಒಂದನ್ನೊಂದು ತೀವ್ರಗೊಳಿಸುವ ಕ್ರಿಯೆ, ಪ್ರತಿಕ್ರಿಯೆಗಳ ವ್ಯೂಹ ; ವಿಷಚಕ್ರ : ನಾನು ಆ ವಿಷವರ್ತುಲದಲ್ಲಿ ಸಿಕ್ಕಿಕೊಂಡು ಹೊರಬರಲಾರದೆ ಒದ್ದಾಡುತ್ತಿದ್ದೇನೆ (ರೂಢಿ). **ವಿಷವರ್ತುಳ** : ೨. ಒಂದು ನರಕದ ಹೆಸರು : ಐದು ನುಂತ್ರಿನರಕಂಗಳಿಂದೊಪ್ಪಿ ವಿಷವರ್ತುಳ ವೆಂಬರಸುನರಕವಿಹುದು (ವಿಜೀಪ. ೧೪೧). [ಸಂ.]

ವಿಷವರ್ತುಳ 'ವಿಷವರ್ತುಲ' ನೋ.

ವಿಷವಲ್ಲಿ (ನಾ). ವಿಷಯುಕ್ತವಾದ ಬಳ್ಳಿ : ಕಂಟಕಗುಲ್ಮ ವಿಷವಲ್ಲೀ ಸಂಘಾತಭೀಷಣಂ ಗಳುಂ . . . ಆಗಿ ದುರ್ಗಮಂಗಳಪ್ಪ ದುರ್ಗಂಗಳೊಳ್ (ಆದಿಪು. ೧೩-೫೭ ವ); ಪುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆಮ್ಮಗೆ ಸುಖಮೆಂದಸದ್ವಿಷಯ ಸೌಖ್ಯದೊಳಿಂತೆಱಗಲ್ಕೆ ತಕ್ಕುದೇ (ಕಾದಂಪೂ. ೮೪೭). [ಸಂ. ವಿಷವಲ್ಲೀ]

ವಿಷವಹ್ನಿ (ನಾ). ವಿಷದ ಜ್ವಾಲೆ : ಮಿಕ್ಕಂ ವಿಷವಹ್ನಿಯಿಂ ವಿಳಯಕಾಲಜ್ವಾಲೆಯಂ ಭೋಗರತ್ನದ ಚೆಲ್ಮಿಂ ದ್ಯುತಿಮಾಲಿಯಂ ಮಸಕದಿಂ ದಂಭೋಳಿಯಂ ಕಾಳಿಯಂ (ಜಗವಿ. ೩-೮೪). [ಸಂ.]

ವಿಷವಾಕ್ಯ (ನಾ). ಕೊಂಕುಮಾತು ; ಕಹಿನುಡಿ : ವಿಷವರ್ಜಿತವಾಹನ ಕೃಷ್ಣಂಗೆನ್ನಯ ವಿಷವಾಕ್ಯ ತಾಗಲೇನಹುದು (ಮೋಪತ. ೧-೨೭). [ಸಂ. ವಿಷವಾಚ್]

ವಿಷವಿಕ್ಕು (ಕ್ರಿ). ನಂಜನ್ನು ಉಣಿಸು ; ವಿಷಹಾಕು : ವಿಷವಿಕ್ಕಿದವಗೆ ಷಡ್ರಸವನುಣಿಸಲು ಬೇಕು (ಪುರಂದ. ೨-೭೫-೧). [ವಿಷ + ಇಕ್ಕು]

ವಿಷವಿಷಮ (ನಾ). ನಂಜಿನಿಂದ ಭಯಂಕರವಾದುದು : ನಂಜನೊಳೂಡಿದ ಕಂಜಮನೆಂಜಲಿಸಿದ ಮಧುಪನಂತೆ ವಿಷವಿಷಮಕನತ್ಯಂಜಲ್ಯಮನುತ್ಪಲಮೊಂದಂ ಜನಪತಿ ಕಂಪುಗೊಂಡು ತೂಂಕಂಗೊಂಡಂ (ಶಾಂತಿಪು. ೭-೯೨). [ಸಂ.]

ವಿಷವೂಡು (ಕ್ರಿ). = ವಿಷವಿಕ್ಕು : ಅಪರಾಧವನ್ನು ಮುಚ್ಚುವ ಸಲುವಾಗಿ ವರ್ತಕನನ್ನು ಬಡದಿಗೆ ಮತ್ತೆ ಕರೆತಂದು ವಿಷವೂಡಿದಳು (ಪುಸಾಮ. ೯೪). [ವಿಷ + ಊಡು,]

ವಿಷವೃಕ್ಷ (ನಾ). ೧. ವಿಷದಿಂದ ತುಂಬಿರುವ ಮರ : ಸಂಸಾರವೆನ್ನುವ ವಿಷವೃಕ್ಷದೊಳು ನೋಡು ಅಮೃತದ ಫಲವಿಹವರಡು (ಇಂಚಾಪ. ೧೨೨ ೪೮). ೨. ಒಂದು ಬಗೆಯ ಮರ : ಅಜ್ಜನ ಪಟ್ಟೆ, ಆರಂಜೆ, ಬೈರಿ, ಜಾಗುರಿ, ವಿಷವೃಕ್ಷ (ಮೃಪ್ರಿ. ೭-೧೫೫). [ಸಂ.]

ವಿಷವೈದ್ಯ (ನಾ). ಹಾವು ಮುಂತಾದ ವಿಷಜಂತುಗಳ ಕಡಿತದಿಂದಾದ ವಿಷವನ್ನು ನಿವಾರಿಸಬಲ್ಲವನು : "ವಿಷವೈದ್ಯಃ, ಜಾಂಗಲಿಕಃ — ೨ ವಿಷವನ್ನು ಇಳಿಸುವ ವೈದ್ಯನ ಹೆಸರು" (ಸಿದ್ಧಾಂಶಿ. ೭೪). [ಸಂ.]

ವಿಷಸರ್ಪ (ನಾ). ನಾಗರ, ಕನ್ನಡಿ ಮುಂತಾದ ನಂಜುಳ್ಳ ಹಾವು : ಕುಲಶೇಖರಾಳ್ವಾರ್ ಎಂಬುವರು . . . ಕಳ್ಳತನದ ಆಪಾದನೆಯನ್ನು ನಿವಾರಿಸಲು ವಿಷಸರ್ಪವಿದ್ದ ಮಡಕೆಯೊಳಕ್ಕೆ ಕೈಹಾಕಿ ಗೆದ್ದಂತೆ ತಿಳಿಮಬರುತ್ತದೆ (ಕಶಾಚ. ೧೯೭ ಅಡಿಟಿ). [ಸಂ.]

ವಿಷಸೇವನೆ (ನಾ). = ವಿಷಪ್ರಾಶನ ೨ : ಇಂಥ ವಿಷಸೇವನೆ ಮಾಡಿದಾಗ ಬಾಯಿಗೆ ರಬ್ಬರುನಳಿಗೆಯನ್ನು ಇಳಿಸಿ ಹೊಟ್ಟೆಯನ್ನು ಬರಿದುಮಾಡಬೇಕು (ಬಾಲಪ್ರ. I. ೫೪೦). [ಸಂ. ವಿಷಸೇವನಾ]

ವಿಷಹರ (ನಾ). ನಂಜನ್ನು ಹೋಗಲಾಡಿಸುವಂಥದು : ಮಯ್ಯೊಳ್ ವಿಷಮಂ ಪರಿಯಲ್ಕೀಯದೆ ತದ್ವಿಷ(ಹ)ರಮಂ ಕಟ್ಟಿಸುವುದು (ಅಶ್ವಶಾ. ೧೬-೩). [ಸಂ.]

ವಿಷಹರಮೃಗ (ನಾ). ಒಂದು ಬಗೆಯ ಜಿಂಕೆ : "ರಾಮಃ — ಹಿರಿಯದುಪ್ಪಿ, ವಿಷಹರಮೃಗವು. ಇದನ್ನು ಹಿರಿಯಹ ಮರೇಮೃಗವನ್ನುವರು" (ಸಿದ್ಧಾಂಶಿ. ೧೫೬). [ವಿಷಹರ, + ಮೃಗ]

ವಿಷಹಾರಿ (ನಾ). ಒಂದು ಬಗೆಯ ಸಸ್ಯ : "ವಿಷಹಾರಿ ಕಂದೆಯನೆ ಮಡುವಾಗಲಕ್ಕು" (ಮಂಗರಾ. ೪೫-೪೭). [ಸಂ. ವಿಷಹಾರಿನ್]

ವಿಷಹೀರೆ (ನಾ). ಒಂದು ಬಗೆಯ ಸಸ್ಯ ; ಕಹಿಹೀರೆ : (ಮೃಪ್ರಿ. ೫೧-೧೦೩೭). [ವಿಷ + ಹೀರೆ, (< ಪೀರೆ)]

ವಿಷಳ (ನಾ). ನಂಜು ; ವಿಷ : ವಿಷರುಹಾಂಬಕನಯನಪಾದ ವಿಷಳವ್ಯಾಪ್ತನುತ ತರವಿಷಾಖಜನಕ (ಸಿದ್ಧರಾ. ೬-೪೦). [ಸಂ. ವಿಷಲ]

ವಿಷಾಂಗನೆ (ನಾ). = ವಿಷಕನ್ನಿಕೆ ೧ : ಅರುಣಾಧರದ ಚುಂಬನವನಿತ್ತು . . . ಸೊಗಸಂ ಬಲಿದು ಹರಣಮಳಿವಲ್ಲಿ ಪರಿಯಂತರಂ ಬಿಡರವನನಲ್ಲಿಯ ವಿಷಾಂಗನೆಯರು (ಜೈಮಿಭಾ. ೧೫-೪೮). [ಸಂ. ವಿಷಾಂಗನಾ]

ವಿಷಾಣ (ನಾ). ೧. ಪ್ರಾಣಿಗಳ ಕೋಡು, — ಕೊಂಬು : ಸ್ಫುರದಕ್ಷೂಣವಿಷಾಣಕೋಟಿ ದಳಿತಪ್ರೋತ್ತುಂಗವಲ್ಮೀಕಂ . . . ಸಂಚರಿಸುತ್ತಿರ್ದುದನೂನಬೀನಕಕುದಂ ತನ್ನಿಚ್ಛೆಯಿಂ ನಿಚ್ಚಲುಂ (ಪಂಚತಂ. ೭೪-೧೬) ; ರೇಣುಧೂಸರಿತನಗ್ರವಿಶೀರ್ಣವಿಷಾಣನಾತ್ತಮಾಂಸಳತನು ಬಂದುದಂದು . . . ಪುಂಗವಂ (ಚಂದ್ರಪ್ರ. ೨-೨೮). ೨. ಆನೆ, ಹಂದಿ ಮೊದಲಾದುವುಗಳ ದಂತ ; ಕೋರೆಹಲ್ಲು : ಉದ್ಯತ್ತ ವಾರಣೇಂದ್ರ ವಿಷಾಣಕುಲಿಶದಂಡಪತಿಯಿಂ ವನದುರ್ಗಭಂಗಮುಂ ವಿಪಕ್ಷಪಾರ್ಥಿವಭಂಗವುಂ ಮನೋರಥಸಿದ್ಧಮಾಗೆಯುಂ (ಆದಿಪು. ೧೩-೭೭ ವ) ; ಅರಿನರಪಾಲಕೋಗ್ರಮದಕುಮ್ಮಿ ವಿಷಾಣಮನೊತ್ತಿ ಕಿತ್ತು (ಎಕ. V. ಅರಸೀ. ೧೧೭-೨೪ : 1161). [ಸಂ.]

ವಿಷಾಣಿ (ನಾ). ೧. ಕೊಂಬುಗಳಿರುವ ಹಸು, ಎಮ್ಮೆ ಮುಂತಾದ ಪ್ರಾಣಿ. ೨. ದಂತವುಳ್ಳದು ; ಆನೆ. ೩. ಕೊಂಬುಗಳುಳ್ಳವನು : ಅಲ್ಲಿ ದಿಕ್ಕತುಷ್ಪಯಗತ ದ್ವೀಪನಿವಾಸಿಮನುಷ್ಯರೇಕಪಾದರುಂ ಲಾಂಗುಲಿಕರುಂ ವಿಷಾಣಿಗಳುಂ ಅಭಾಷಕರುಂ ಅಪ್ಪರ್ (ತತ್ತ್ವಪ್ರ. ೧೪೮). ೪. ಒಂದು ಬಗೆಯ ಸಸ್ಯ ; ಅಜಶೃಂಗಿ : "ವಿಷಾಣೀ - ಔಷಧಿ, ಚೇಳುವಾಲಿ, ನೆಲಮೂಗಿ" (ಓಷಧಿ. ೧೫೫). [ಸಂ. ವಿಷಾಣಿನ್]

ವಿಷಾಣು (ನಾ). ಒಂದು ಗೊತ್ತಾದ ರೋಗವನ್ನುಂಟುಮಾಡುವ ನಂಜು : ಅತ್ಯಂತ ಸೂಕ್ಷ್ಮತಮವಾದ ವಿಷಾಣುಗಳನ್ನು ವಿಶೇಷರೀತಿಯಲ್ಲಿ ಪರೀಕ್ಷಿಸಿದರು (ಜೀವಾತ್ಮ. ೧೨೪). [ಸಂ.]

ವಿಷಾದ$_1$ (ನಾ). ೧. ಉತ್ಸಾಹಹೀನತೆ ; ನಿರುತ್ಸಾಹ : ಭಗವದ್ಗೀತೆಯೆಂದರೆ . . . ವಿಷಾದದ ಕಗ್ಗತ್ತಲೆಯನ್ನು ಕಿತ್ತೊಡಿಸಲು . . . ಬಂದ ಸಹಸ್ರಕಿರಣನಾದ ಜ್ಞಾನರವಿ (ಧರ್ಮಸಾ. ೧೦೪). ೨. ದುಃಖ ; ವ್ಯಥೆ ; ಚಿಂತೆ : ಉಭಯಬಲದಗ್ಗಳದ ಹರುಷವಿಷಾದವಾರಿಧಿ ಕಾಲುಹೊಳೆಯಾಯ್ತು (ಜಿವ್ಯಾದ್ರೋ. ೧೬-೫೧) ; ಉಳಿ ಮಗಳ ವಿಷಾದವನುಸಿರ ವೇಗವನಂತೆ (ಧ್ವನ್ಯಾಲೋ. ೯೯). ೩. [ಕಾವ್ಯಮೀ] ಸಂಚಾರಿ ಭಾವಗಳಲ್ಲಿ ಒಂದು; ಕಾರ್ಯಭಂಗ, ದೈವದ ವಿಮುಖತೆ ಮೊದಲಾದವುಗಳಿಂದ ಉಂಟಾಗುವ "ಮನಃಪೀಡೆಯೆ ವಿಷಾದಂ" (ಭಾರೂಪ್ರ. ೩೪೭) : ಮತಿ ನಿರ್ವೇದ . . . ವಿಷಾದಸ್ಮೃತಿ ಚಿತ್ತಭ್ರಂಶ ಮೋಹಾಮಯ ಮೃತಿಗಳಿವಿಂತೆಯ್ದೆ ಸಂಚಾರಿ ಭಾವಂ (ಕಾವ್ಯಾವ. ೭೯) ; ವಿಷಾದ . . . ಅಪಸ್ಮಾರಗಳೆಂಬ ಮೂವತ್ತುಮೂರು ಸಂಚಾರೀ ಭಾವಂಗಳಿಂ ಪರಿವರ್ಧಿಸಿ (ವಿವೇ. ೨೨೬). ೪. ಒಂದು ಕಾವ್ಯಾಲಂಕಾರದ ಹೆಸರು : ಇಚ್ಛೆ ಮಾಡಿದಂಥ ವಸ್ತು ವಿರುದ್ಧವಾಗೆ ಸ್ವಚ್ಛದಿಂದಿದು ವಿಷಾದವೆನಿಸೆ ಹಚ್ಚಿದಂ ದೀಪೋದ್ದೀಪನ ಮಾಡಲು ಹೆಚ್ಚಿತು ತಾಂ ವಡಬಾಗ್ನಿಯಾಗಿ (ಜಿವಲ. ೧೩೭-೧). ೫. ವಾಕ್ಯಾರ್ಥದೋಷಗಳಲ್ಲಿ ಒಂದು : ಅವಧಾರಿಸದುಕ್ತಾರ್ಥಮನವಿಶೇಷದ ಮಗುಟ್ಟು ನುಡಿದೊಡೇಕಾರ್ಥಂ ಕ್ರೋಧವಿಷಾ[ಪಾಕಾಂ. ರೋ]ದ ಖೇದ ಭಯ ಹರ್ಷ ವಿಸ್ಮಯಾದಿಗಳೊಳಿನ್ನವಿಷ್ಟಮದುಷ್ಟಂ (ಕಾವ್ಯಾವ. ೪೫೯). [ಸಂ.]

ವಿಷಾದ$_2$ (ನಾ). ನಂಜನ್ನು ಉಂಡವನು ; ಶಿವ : ವೃಷೇಂದ್ರಧ್ವಜನಜಿನವಸಾನಂ ವಿಷಾದಂ ವಿಪದ್ಬೀಕರನಂಗಾರಾಗನಂಗೋದ್ಭವಹರನಸುರಧ್ವಂಸಕಂ ವೀರಭದ್ರಂ (ರಾಜಶೇ. ೧೪-೧೫೬). [ಸಂ. (ವಿಷ + ಅದ = ತಿನ್ನುವಿಕೆ)]

ವಿಷಾದಗರ್ಭ (ನಾ). ದುಃಖಕರವಾದುದು ; ಚಿಂತಾಕುಲವಾದುದು : ಆವ ಜನ್ಮದೊಳಂ ಮತ್ತನಗೆ ನವವಯಸದೊಳ್ ತಾಂ ಜನಿಯಿಸದರ್ಕುಮ ವಿಷಾದಗರ್ಭಂ ಗರ್ಭಂ (ಚಂದ್ರಪ್ರ. ೩-೭೭). [ಸಂ.]

ವಿಷಾದಚಿತ್ತ (ನಾ). ಖಿನ್ನವಾದ ಮನಸ್ಸು : ಉಂಗುರದ ಕೇಡಿನೊಳಾದಬಲಚ್ಚೆ ವಿದ್ಯೆಯಂ ನೋಡುವೆನೀತನೊಳ್ನುಡಿವೆನೆಂದಿರದಾದ ವಿಷಾದಚಿತ್ತದಿಂ ಪೋಗಿ (ಸುಕುಮಾ. ೩-೧೬). [ಸಂ.]

ವಿಷಾದಯೋಗ (ನಾ). ಚಿಂತೆಯ ಪ್ರಸಂಗ ; ದುಃಖದ ಸಂದರ್ಭ : ಹಿಂದಿನ ಕುರುಕ್ಷೇತ್ರಸಂದರ್ಭದಲ್ಲಿ ಅರ್ಜುನನಿಗೆ ಒದಗಿದ ವಿಷಾದಯೋಗ, ಇಲ್ಲಿ ಈಗ ಧರ್ಮರಾಯನಿಗೆ ಒದಗಿರುವುದು ಸ್ವಾರಸ್ಯವಾಗಿದೆ (ಪಠಾಶೀ. ೧೨೧). [ಸಂ.]

ವಿಷಾದವಿಧುರ (ನಾ). ವ್ಯಥೆಯಿಂದ ಕಳವಳಕ್ಕೀಡಾದವನು ; ದುಃಖದಿಂದ ಚಿಂತಿತನಾದವನು : ಸುಟ್ಟ ಮನಃಕ್ಷತಂಬಟ್ಟು ವಿಷಾದವಿಧುರಂ ಮಧುರಗಭಿಮುಃ ನಾಗಿ ಪಯಣಂಬೋದಂ (ಪಂಚತಂ. ೨೪-೪). [ಸಂ.]

ವಿಷಾದಾಂತ (ಗು). ಶೋಕದಿಂದ ಕೊನೆಗೊಳ್ಳುವ ; ದುಃಖಾಂತ : ಮುಗಿವು. ಮರಣದೊಳಿಲ್ಲ ವಿಷಾದಾಂತನಾಟಕಕೃತಿಗಳು ಕಡೆಗೆ (ಇಂಚಾಪ. ೧೭೬-೧೮೮). [ಸಂ.]

ವಿಷಾದಿಸು (ಕ್ರಿ). ದುಃಖಿಸು ; ವ್ಯಥೆ ಪಡು : ನಿನ್ನ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲಾರನೆಂದು ಹೇಳಲು ವಿಷಾದಿಸುತ್ತೇನೆ (ಜಮಿನ್ನಾ. ೧೬೦). [ವಿಷಾದ, + - ಇಸು]

ವಿಷಾನಲ (ನಾ). ವಿಷದ ಜ್ವಾಲೆ, — ಬೆಂಕಿ : ಅಟ್ಟ ಸುಡುತಿಹ ವಿಷಾನಲದಿಂದವಂದಿರ್ಗಳುಟ್ಟು ಹೊದದಂಬರಗಳು ಬಳಿಕ್ಕಂತವರು ತೊಟ್ಟ ಕಂಚುಕಿ . . . ಇರದೆ ಬೆಂದು (ವೀಶೃಪ್ರ. ೩-೧೩-೨೬). [ಸಂ.]

ವಿಷಾನಿಲ (ನಾ). ನಂಜು ಬೆರೆತಿರುವ ಗಾಳಿ ; ವಿಷಪೂರಿತವಾದ ವಾಯು : ಕರಾಟಗಳಲ್ಲಿನ ಇದ್ದಲೂ, ಸೋಡಾಲ್ಕೆಯೂ ಎಂತಹ ವಿಷಾನಿಲಗಳನ್ನೂ ಹೀರಿಕೊಂಡು ಸಯ್ಯೊಳಿಸುತ್ತಿದ್ದುವು (ಕವಿಲೋ. I. ೩೦೨). [ಸಂ.]

ವಿಷಾಪಹಾರ (ಗು). ೧. ನಂಜನ್ನು ನಿವಾರಿಸುವ ; ವಿಷವನ್ನು ಹೋಗಲಾಡಿಸುವ : ಜಳಮೃಣಾಳಮಂ ಜಳವ್ಯಾಳಮೆಂದು ಕೆಲದ ಬಲದಿಂ ಪಿಡಿಯಲೆಂದು ಧೀಂಕಿಡುವ ವಿಷಾಪಹಾರ ಶಾಲೂರಚಾಲಂಗಳೊಳಂ... ಭೀಷಣರಮೇಯಮೆನಿಪ್ಪು (ಚಂದ್ರಪ್ರ. ೫-೪೦ ವ). (ನಾ). ೨. ನಂಜಿನ ನಿವಾರಣೆ ; ವಿಷನಿರ್ಮೂಲನ : ನಾಳೆ ನೇಸರ್ಮೂಡದ ಮುನ್ನಮ ವಿಷಾಪಹಾರಂ ಮಾಡಿದಪ್ಪೆಂ (ಸುಕುಮಾ. ೭-೪ ವ);

ಸೀತಾಹರಣಮಿದರ್ಕೆ ಮರಣನಿಮಿತ್ತಮಾದುದೆಂದುಬ್ಬೆಗಂಬಟ್ಟು ಸಂಸಾರವಿಷಮ ವಿಷಾಪಹಾರಮಂ ಪಂಚನಮಸ್ಕಾರಮನದರ್ಕೆ ಬೇಟ್ಟು (ಪಂರಾಮಾ. ೯-೧೧೭ ವ). [ಸಂ.]

ವಿಷಾಪಹಾರಿ (ಗು). ನಂಜನ್ನು ತೆಗೆಯುವ ; ವಿಷವನ್ನು ನಿವಾರಿಸುವ : ಯಾವುದಾದರೂ ವಿಷಾಪಹಾರಿ (disinfectant) ದ್ರವ್ಯವನ್ನು ನೀರಿಗೆ ಬೆರೆಸಿ . . .ನೆಲದ ಮೇಲೆ ತಂಗುವ ಜೀವಿಗಳನ್ನು ನಾಶಮಾಡಲು ಸಾಧ್ಯವಾಗುತ್ತದೆ (ಗೃಹವಿ. ೧೦೩).

[ಸಂ. ವಿಷಾಪಹಾರಿನ್]

ವಿಷಾರ್ಥಾಜೀವನ (ನಾ). ವಿಷಪ್ರಯೋಗದಿಂದ ಹಣ ಸಂಪಾದಿಸಿ ಜೀವಿಸುವವನು : ದಿವಸೇಂದ್ರಂ . . . ವೃಶ್ಚಿಕಕ್ಷೇತ್ರದೊಳ್ ಕೂಡೆ ವಿಷಾರ್ಥಾಜೀವನಂ ಸಾಹಸಿಗನಖಿಳಶಾಸ್ತ್ರಜ್ಞನತ್ಯುಗ್ರನಕ್ಕುಂ (ಜಾತಕ. ೧೩-೧೭). [ಸಂ.]

ವಿಷಾವಿಲದಂಷ್ಟ್ರ (ನಾ). ವಿಷಯುಕ್ತವಾದ ಹಲ್ಲುಳ್ಳುದು ; ಸರ್ಪ : ದಂಡಕನೃಪಂ ಲೋಭಾಭಿಭೂತಂ ವಿಷಾವಿಲದಂಷ್ಟ್ರಂ ಶ್ವಯುವಾಗಿ ಪುಟ್ಟಿ ಸುಟಿಗುಂ ಮುಂ ಬಯ್ತು ಭಂಡಾರದೊಳ್ (ಆದಿಪು. ೨-೧೫). [ಸಂ. ವಿಷಾವಿಲದಂಷ್ಟ್ರಾ]

ವಿಷಾಹ್ವಯ (ನಾ). ಒಂದು ಬಗೆಯ ಸಸ್ಯ : "ವಿಷಾಹ್ವಯಃ – ವಿಷಾಣಿಕ, ಬಾಟೆ, ಕರ್ಕಾಟಕಶೃಂಗಿ, ಸಾತಲೆ?" (ಓಷಧಿ. ೧೫೫). [ಸಂ.]

ವಿಷು (ನಾ). ೧. ಹೆಚ್ಚುಕಡಮೆಯಿಲ್ಲದಿರುವುದು ; ಸಮವಾದುದು. ೨. ಅರುವತ್ತುಸಂವತ್ಸರಗಳಲ್ಲಿ ಹದಿನೈದನೆಯದು : ಆ ವರ್ಷವೇ ಪ್ರಭವ . . . ವಿಷು . . . ಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩). [ಸಂ.]

ವಿಷುವ (ನಾ). ೧. ಸೂರ್ಯನು ಭೂಮಧ್ಯರೇಖೆಯನ್ನು ಹಾಯುವ ಕಾಲ ; ಹಗಲು, ಇರುಳು ಒಂದೇ ಪ್ರಮಾಣದಲ್ಲಿರುವ ಕಾಲ. ೨. ಸೂರ್ಯನು ಮೇಷ ಅಥವಾ ತುಲಾ ಸಂಕ್ರಾಂತಿಯ ದಿನದಂದು ಮೇಷ ಅಥವಾ ತುಲಾರಾಶಿಯನ್ನು ಪ್ರವೇಶಿಸುವ ಪ್ರಾರಂಭದ ಬಿಂದು.

[ಸಂ.]

ವಿಷುವತ್ತು (ನಾ). ಸಮವಾದ ಹಗಲು ಮತ್ತು ರಾತ್ರಿಗಳುಳ್ಳ ಕಾಲ : ವೇದಗಳ ಕಾಲದ ಭಾರತೀಯರು ವಿಷುವತ್ತಿನ ಮತ್ತು ಅಯನಸಂಕ್ರಾಂತಿಯ ಬಿಂದುಗಳನ್ನು ಗೊತ್ತುಮಾಡಿ ಅವುಗಳನ್ನು ಅಗ್ನಿ ಮತ್ತು ಇಂದ್ರ ಮತ್ತು ಮಿತ್ರ ಮತ್ತು ವರುಣಗಳೆಂದರು (ಶತಪ್ರಾ. ೪೮೨). [ಸಂ. ವಿಷುವತ್]

ವಿಷುವದ್ಬಿಂದು (ನಾ). ವಿಷುವದ್ರೇಖೆಯನ್ನು ಸೂರ್ಯನು ಹಾದುಹೋಗುವ ಎರಡು ಬಿಂದು ; ಸಂಕ್ರಾಂತಿಬಿಂದು : ವಿಷುವದ್ಬಿಂದುವು ಕೃತ್ತಿಕೆಯಿಂದ ಉತ್ತರಾಭಾದ್ರದವರೆಗೆ ಸರಿದು ಬಂದಿರುವುದಕ್ಕೆ ಲಿಖಿತಸಾಕ್ಷಿ ಇದೆ (ನಕ್ಷತ್ರ. ೨೪). [ಸಂ.]

ವಿಷುವದ್ರೇಖೆ (ನಾ). ಭೂಗೋಳವನ್ನು ಪೂರ್ವಪಶ್ಚಿಮವಾಗಿ ಎರಡು ಸಮಭಾಗಗಳಾಗಿ ವಿಭಜಿಸುವಂತೆ ಮಧ್ಯದಲ್ಲಿ ಕಲ್ಪಿಸಿರುವ ರೇಖೆ ; ಸಮಭಾಜಕವೃತ್ತ : ಉಭಯಧ್ರುವಗಳಿಗೂ ಮಧ್ಯೆ (ಸಮದೂರದಲ್ಲಿ) ಭೂಗೋಳದ ಸುತ್ತಲೂ ಬರೆಯಲ್ಪಟ್ಟದೆಯೆಂದು ಭಾವಿಸಲ್ಪಡುವ (ಕಲ್ಪಿತವಾದ) ರೇಖೆಗೆ ವಿಷುವದ್ರೇಖೆ . . . ಎಂದು ಹೆಸರು (ಭೂಗೋಳ. ೫). [ಸಂ. ವಿಷುವದ್ರೇಖಾ]

ವಿಷುವದ್ವೃತ್ತ (ನಾ). = ವಿಷುವದ್ರೇಖೆ : ಭೂಗೋಳವನ್ನು ಎರಡು ಅರ್ಧಗಳಾಗಿ ವಿಭಾಗಿಸುವ ಬೃಹದ್ವೃತ್ತಕ್ಕೆ ವಿಷುವದ್ವೃತ್ತವೆಂದು ಹೆಸರು (ಜ್ಯೋತಿರ್ವಿ. ೨೦೫). [ಸಂ.]

ವಿಷೂಚಿ (ನಾ). ಒಂದು ಬಗೆಯ ರೋಗ ; ವಾಂತಿ ಭೇದಿ : ದಾಳಿಂಬಾದಿ ಚೂರ್ಣ . . . ಸೇವಿಸಲು ವಿಷೂಚಿ ಗುಣವಾಗುವುದು (ಸಕವೈ. ಪರಿ. ೪೮೮) ; ಬಾಹಟವೆಂಬ ವೈದ್ಯ ಗ್ರಂಥಗಳಲ್ಲಿ ವಿಷೂಚಿಜಾಡ್ಯವೆನ್ನಿಸಿಕೊಂಡಿರುವ ಈ ರೋಗಕ್ಕೆ ಚಿಕಿತ್ಸೆಯನ್ನು ಹೇಳಿದ್ದಾರೆ (ಮಾಮರಾ. ೪೭). [ಸಂ. ವಿಷೂಚೀ]

ವಿಷೂಚಿಕ (ನಾ). = ವಿಷೂಚಿ : ಇದರಲ್ಲಿ ವಿಷೂಚಿಕವೆಂದು ಅಲಸಿಕವೆಂದು ಅಜೀರ್ಣಕವೆಂದು ವಿಳಂಬಿಕವೆಂದು ಸಶೇಷವೆಂದು ವಿಷೂಚಿಕಾರೋಗಮೈದು ತೆರನಾಗಿರ್ಪುದು (ಸಕವೈ. ೩೫೭). [ಸಂ. ವಿಷೂಚಿಕಾ]

ವಿಷೂಚಿಕೆ (ನಾ). = ವಿಷೂಚಿ : ಉಗ್ರಂಗಳಾ ಜ್ವರಂ ವಿಷೂಚಿಕೆ ಎಂಬಿವಾಗಳೆ ಪೊರ್ದುಗುಂ (ಲೋಕೋಪ. ೪-೮೨) ; ವಿಷೂಚಿಕೆಯಲ್ಲಿಯೂ ತಾಮ್ರದ ಉಪಯೋಗವಾಗುವುದು (ಔಷಧೀ. ೪೭). [ಸಂ. ವಿಷೂಚಿಕಾ]

ವಿಷೆ (ನಾ). ಒಂದು ಬಗೆಯ ಗ್ರಂದಿಗೆಪದಾರ್ಥ ; ಅತಿಬಜೆ . [ಸಂ. ವಿಷಾ]

ವಿಷೋತ್ಪಳ (ನಾ). ವಿಷಪೂರಿತವಾದ ನೈದಿಲೆ : ಅಸಿತವಿಷೋತ್ಪಳಪರಿಮಳದುಸಿರೊಳ್ ಮಡಿದಂದಿನೆಗ್ಗು ನೀಗೆ ಜಿನಾಂಘ್ರಿಶ್ರಸದಮೃತಾಬ್ಧಮನಾಘ್ರಾಯಿಸಿದಂ (ಶಾಂತಿಪು. ೭-೪೧). [ಸಂ. ವಿಷೋತ್ಪಲ]

ವಿಷೋದಕ (ನಾ). ನಂಜಿನಿಂದ ಕೂಡಿದ ನೀರು ; ವಿಷಜಲ : ಕುಡಿವೆನು ಮುನ್ನ ಜಲವನು . . . ಎನುತ ಮೊಗೆದನು ವಿಷೋದಕವೆ (ಕುಮಾಭ. ೨೩-೨೮). [ಸಂ.]

ವಿಷೋದ್ಗಾರಿ (ನಾ). ೧. ವಿಷವನ್ನು ಉಗುಳುವಂಥದು. ೨. ನೀರನ್ನು ಹೊರಸೂಸುವಂಥದು. ೧, ೨ : ಅಹಿಯಂತೆ ವಿಷೋದ್ಗಾರಿಗಳಹರ್ನಿಶಪ್ರಹರದಂತೆ ಘಟಕಾತ್ಮಂಗಳ್ ರಹಟಘಟೀಯಂತ್ರಂಗಳ್ ಬಹುವಿಧವಿಭ್ರಮದಿನೆಸೆವುವುಪಶಲ್ಯಕದೊಳ್ (ಪುಪ್ರಸು. ೨-೫೧). [ಸಂ. ವಿಷೋದ್ಗಾರಿನ್]

ವಿಷೋದ್ಯಾನ (ನಾ). ವಿಷಪೂರಿತವಾದ ವನ, — ತೋಟ : ವಿದ್ಯಾಗರ್ವಗ್ರಹಪೀಡಿತಂ ಸ್ವಪರಬಾಧಾಹೇತುವಂ ದುಸ್ತರೋದ್ಯೋಗಕ್ಲೇಶಿತರಾಗಿ ಬಿತ್ತಿ ಬೆಳವಂತಕ್ಕುಂ ವಿಷೋದ್ಯಾನಮಂ (ಪಂರಾಮಾ. ೧-೩೪) ; ಅದು ತನ್ನ ಮತ್ತು ಪರರ ವಿನಾಶಕ್ಕೆ ಕಾರಣವಾದ ವಿಷೋದ್ಯಾನವಾಗಿ ಪರಿಣಮಿಸುತ್ತದೆ (ಸುವರ್ಣ. ೨೦೯). [ಸಂ.]

ವಿಷೋನ್ನತಿ (ನಾ). ೧. ನಂಜಿನ ಏರಿಕೆ ; ವಿಷದ ಹೆಚ್ಚಳ. ೨. ನೀರಿನ ಆಧಿಕ್ಯ. ೧, ೨ : ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ತುಱುಗಿರವಿಂದೆ ಪೋಲ್ದುದು ಮಹಾನದಿ ರುಂದ್ರಫಣೀಂದ್ರರಾಜನಂ (ಕಾಮಸಾ. ೭೪೭ ಶೂದ್ರಕ). [ಸಂ.]

ವಿಷೋರಗ (ನಾ). ನಂಜುಳ್ಳ ಹಾವು ; ವಿಷಸರ್ಪ : ಅಡಿವಿಡಿದಿಟ್ಟ ಪುತ್ತುಗಳ ನೆತ್ತಗಳಂ ನಿಮಿರ್ದಿರ್ದ ಬಳ್ಳಿಗಳ್ವಡಿದು ವಿಷೋರಗಪ್ರತತಿ ನೋಟ್ಟೊಡಗುರ್ವಿಸೆ ಸುಯ್ಯ ಸುಯ್ಗಳಿಂ ಕಿಡಿ ಪೊಱಪೊಣ್ಮೆ (ಆದಿಪು. ೧೪-೧೪೦). [ಸಂ.]

ವಿಷೋರಗಧಾರಿ (ನಾ). ೧. ವಿಷಸರ್ಪವನ್ನು ಧರಿಸಿದವನು ; ಶಿವ. ೨. ವಿಷಸರ್ಪಗಳನ್ನುಳ್ಳುದು ; ಸಾಗರ. ೧, ೨ : ಆ ಮಹಾರ್ಣವಂ . . . ತ್ರಿಪುರಾರಿಯಂತೆ ವಿಷೋರಗಧಾರಿಯುಂ . . . ಎನಿಸಿದುದು (ಜಗವಿ. ೧-೪೪ ವ).

[ಸಂ. ವಿಷೋರಗಧಾರಿನ್]

ವಿಷ್ಕಂಭ (ನಾ). ೧. ಆಧಾರ ; ಊರೆ. ೨. ಅಡ್ಡಿ ; ವಿಘ್ನ : "ಪ್ರತಿಬಂಧಮೆನಲು ವಿಷ್ಕಂ[ಜಾರಾಂ. ಷ್ಕಂ]ಭಮೆನೆ ತಗಹಕ್ಕು" (ಮಂಗರಾ. ೧೩೩-೩೨). ೩. ವಿಸ್ತಾರ ; ಹರಹು : ಯೋಜನಶತಸಹಸ್ರ ವಿಷ್ಕಂಭಂ ವಿಶ್ರುತಜಂಬೂವೃಕ್ಷ ಮಹಾಪ್ರತೀತಿಯಿಂ ನೆಗಟ್ಟುದಿಳೆಗೆ ಜಂಬೂದ್ವೀಪಂ (ಆದಿಪು. ೧-೪೯) ; ಏಕಲಕ್ಷಪ್ರಮಿತಪ್ರಮಾಣಯೋಜನಾ ವಿಷ್ಕಂಭಮುಂ . . . ಆಗಿ (ವರ್ಧಮಾ. ೧-೩೭ ವ). ೪. ಬಾಗಿಲಿನ ಅಗುಳಿ ; ಲಾಳ ಎಂಡಿಗೆ. ೫. ವಿಷೂಚಿರೋಗದಲ್ಲಿ ಒಂದು ಬಗೆ ; ಅಜೀರ್ಣದಿಂದ ಹೊಟ್ಟೆ ಉಬ್ಬುವ ಕಾಯಿಲೆ : ಅಜೀರ್ಣವೆಂಬ ವಿಷೂಚಿಯು ಆಮವೆಂದು, ವಿದಗ್ಧವೆಂದು, ವಿಷ್ಕಂಭವೆಂದು ಮೂರು ವಿಧವಾಗಿರ್ಪುದು . . . ಹೊಟ್ಟೆಯುಬ್ಬರಿಸುವುದೇ ವಿಷ್ಕಂಭವೆನಿಸಿಕೊಳ್ಳುವುದು (ಗಕವೈ. ೩೫೮). ೬. [ಕಾವ್ಯಮೀ] ನಾಟಕ ಅಥವಾ ದೃಶ್ಯಕಾವ್ಯಗಳಲ್ಲಿ ಹಿಂದೆ ನಡೆದುಹೋದ ಮತ್ತು ಮುಂದೆ ನಡೆಯುವ ಕಥಾಂಶವನ್ನು ಸಂಕ್ಷೇಪವಾಗಿ ತಿಳಿಸುವ ದೃಶ್ಯ : ವಿಷ್ಕಂಭಃ ನಡೆದುಹೋದ ಕಥಾಂಶವನ್ನು ಸಂಕ್ಷೇಪವಾಗಿ ಸೂಚಿಸುವುದು (ಸಂನಾಟ. ೧೪) ; ವಿಷ್ಕಂಭ — ನಡೆದುಹೋದ ಮತ್ತು ಮುಂದೆ ನಡೆಯುವ ಕಥಾಂಶಗಳನ್ನು ಮಧ್ಯಮಪಾತ್ರಗಳ ಮೂಲಕ ಸಂಕ್ಷೇಪವಾಗಿ ಸೂಚಿಸುವುದು (ಕೈಸಿಡಿ. ೨೦೬) ೭. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಮೊದಲನೆಯದು : ಅಶ್ವಿನಿ ಮೊದಲಾದಿಪ್ಪತ್ತೇಳು ನಕ್ಷತ್ರಗಳುಂ ವಿಷ್ಕಂಭ . . . ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೨೬೨) ; ಪ್ರತಿದಿನದಿ ಸಂಚರಿಪ ಯೋಗಗಳತಿಶಯವನರಿಯೈ ಬೇಳುವೆ ವ್ಯತಿಯು ಧೃತಿ ವಿಷ್ಕಂಭ ಶೂಲವು (ಗಗಶಾ. ೪-೫೯). ೮. [ನಾಟ್ಯ] ಮೂವತ್ತೆರಡು ಬಗೆಯ ಅಂಗಹಾರಗಳಲ್ಲಿ ಒಂದು : ಸ್ಥಿರಹಸ್ತ . . . ವಿಷ್ಕಂಭ . . . ಸ್ವಸ್ತಿಕರೇಚಿತ -- ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಲಾಸ್ಯರಂ. ೫-೭ ವ). [ಸಂ.]

ವಿಷ್ಕಂಭಕ (ನಾ). = ವಿಷ್ಕಂಭ ೭ : ವಿಷ್ಕಂಭಕ ಯೋಗ ೩೧ ಗಳಿಗೆ ಮೇಲೆ ತ್ಯಾಜ್ಯಾ (ಭಾಸ್ಪರ. ೭೦ ೪). [ಸಂ.]

ವಿಷ್ಕಂಭಿತ (ಗು). ೧. ತಡೆದ ; ಅಡ್ಡಿಮಾಡಿದ. (ನಾ). ೨. [ನಾಟ್ಯ] ಕುಳಿತುಕೊಳ್ಳುವ ಒಂದು ಭಂಗಿ : ಸ್ವಸ್ಥಂ . . . ವಿಷ್ಕಂಭಿತ . . . ವಿಮುಕ್ತ ಈ ಒಂಭತ್ತು ಕುಳ್ಳಿರ್ದ ಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). [ಸಂ.]

ವಿಷ್ಕರ (ನಾ). ಎಕ್ಕದ ಗಿಡ : "ವಿಷ್ಕ[ಪಾಕಾಂ. ಷ್ಕ]ರಮರ್ಕಮೆಂದನಲ್ಕೆಕ್ಕೆಯಕ್ಕುಂ" (ಮಂಗರಾ. ೫೯-೨೬). [ಸಂ. ?]

ವಿಷ್ಕಿರ (ನಾ). ಪಕ್ಷಿ ; ಹಕ್ಕಿ : ವಿಷ್ಕಿರಕೆ ಪಾಶುಪತಾಸ್ತ್ರಮದೇಕೆ (ವೃಷಪ. ೧೨-೭೩). [ಸಂ.]

ವಿಷ್ಕುಂಭ (ನಾ). ೧. ಅಡ್ಡಿ ; ತಡೆ : "ವಿಷ್ಕುಂಭಃ, ಪ್ರತಿಬಂಧಃ – ಈ ೨ ತಗವುದು" (ಹಲಾಯು. ೧೨೭-೮೪). ೨. ಆಧಾರ ; ಊರೆ. ೩. ಗಟ್ಟಿಯಾಗಿ ಊರುವಿಕೆ ; ದೃಢವಾಗಿ ನೆಡುವಿಕೆ. ೪. ಮಲ ಅಥವಾ ಮೂತ್ರಕಟ್ಟುವಿಕೆ. ೫. ಪಾರ್ಶ್ವವಾಯು ; ಲಕ್ವ. [ಸಂ.]

ವಿಷ್ಕುಂಭಿಸು (ಕ್ರಿ). ತಡೆಯಾಗು ; ಪ್ರತಿಬಂಧಿಸಲ್ಪಡು : ವಿಷ್ಕುಂಭಿಸಿರ್ದ ಮಲದಿಂ ಕೋಷ್ಠಾಭ್ಯಂತರದೊಳುಗ್ರವೇದನೆಯಕ್ಕುಂ (ಅಶ್ವಶಾ. ೧೧-೧೪). [ವಿಷ್ಕುಂಭ + – ಇಸ್ಕು]

ವಿಷ್ಕಂದ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಗೆಡ್ಡೆ : "ಬಹು ಸಂಘಟ್ಟಃ – ವಿಷ್ಕಂದ" (ಓಷಧಿ. ೧೦೭). [? + ಕಂದ್ಯ]

ವಿಷ್ಟಪ (ನಾ). ಜಗತ್ತು ; ವಿಶ್ವ ; ಲೋಕ : ಶಂಖಭೇರೀಕಂಠೀರವಘಂಟಾಧ್ವನಿಗಳ್ ನೆಗಟ್ಟುವು ಭೋಂಕೆನೆ ಸಕಲವಿಷ್ಟಪಾಶ್ಚರ್ಯಂಗಳ್ (ಆದಿಪು. ೭-೪೦) ; ವಿಷ್ಟಪ ಮೊರ್ಮೆಯುಂ ತಮಗೆ ಹಸ್ತತಲಾಮಲಕಂಬೊಲೆಯ್ದೆ ವಿಸ್ಪಷ್ಟಮೆನಿಪ್ಪ ಬೋಧ ಯುತರಿಂ ತಿಳಿದಿಲ್ಲಿಗೆ ತಕ್ಕುದೇನುಮುಂ ಚೇಷ್ಟಿಪಂ (ಚಂದ್ರಪ್ರ. ೩-೭೮). [ಸಂ.]

ವಿಷ್ಟಪಜನ (ನಾ). ಲೋಕದ ಜನ ; ಜಗತ್ತಿನ ಮಾನವರುಲ : ವನಬರ್ಹಿಗಳಂ ಮೇಘಧ್ವನಿ ತಣಿಪುವ ತೆಱದೆ ದೇವ ನಿನ್ನಯ ದಿವ್ಯಧ್ವನಿ ತಣಿಪಿದಪುದು ವಿಷ್ಟಪಜನಮಂ (ಅಜಿಪು. ೮-೧೧). [ಸಂ.]

ವಿಷ್ಟಬ್ಧಾಜೀರ್ಣ (ನಾ). ಒಂದು ಬಗೆಯ ಅಜೀರ್ಣರೋಗ : ಸ್ಕಂಧವಚೂರ್ಣಂ ಬಿಸಿನೀರಿಂ ಕುಡಿಯೆ ವಿಷ್ಟಬ್ಧಾಜೀರ್ಣ ಗುಣಮಕ್ಕುಂ (ಸಶ್ರ. ೬೬೫). [ಸಂ.]

ವಿಷ್ಟರ (ನಾ). ೧. ಕುಳಿತುಕೊಳ್ಳುವ ಆಸನ, — ಪೀಠ : ಮಣಿಮಯನಿಜೋಪವಿಷ್ಟ ವಿಷ್ಟರಾಗ್ರದಿಂದೆ ಇಬ್ಬಿದು (ಚಂದ್ರಪ್ರ. ೨-೧೦ ವ) ; ಸೌಧರ್ಮೇಂದ್ರಂ . . . ತಡೆದಿರದೆಬ್ಬು ವಿಷ್ಟರದಿನಾನತಮಸ್ತಕನಾಗಿ (ಪುಷ್ಪಪ್ರ. ೧೦-೫). ೨. ಪದರ ; ಸ್ತರ. ೩. ಮರ ; ವೃಕ್ಷ : "ವೃಕ್ಷಂ . . . ವಿಷ್ಟರಃ, ನಗಃ,ದ್ರುಮಃ, ಪಾದಪಃ – ಈ ೧೯ ತುರಂ" (ಹಲಾಯು. ೨೯-೨೩). ೪. ಒಂದು ಹಿಡಿ ತುಂಬುವಷ್ಟು ದರ್ಭೆ. [ಸಂ.]

ವಿಷ್ಟರಶ್ರವ (ನಾ). ವಿಷ್ಣುವಿನ ಹೆಸರುಗಳಲ್ಲಿ ಒಂದು : "ವಿಷ್ಣುಃ . . . ವಿಷ್ಟರಶ್ರವಾಃ, ನಾರಾಯಣಃ . . . ಗದಾಧರಃ – ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೫). [ಸಂ. ವಿಷ್ಟರಶ್ರವಸ್]

ವಿಷ್ಟವ (ನಾ). ಕಿರುಕುಳ ; ತೊಂದರೆ : "ವಿಷ್ಟವವನಲ್ಲುಪದ್ರವಮಕ್ಕುಂ" (ಮಂಗರಾ. ೮-೨೭). [?]

ವಿಷ್ಟಿ (ನಾ). ೧. ಸಂಬಳವಿಲ್ಲದೆ ಮಾಡುವ ಕೆಲಸ ; ಬಿಟ್ಟಿ . ೨. ನರಕಕ್ಕೆ ಕಳಿಸುವುದು ; ಅಧೋಲೋಕಕ್ಕೆ ಅಟ್ಟುವುದು. ೩. [ಜ್ಯೋತಿ] ಹನ್ನೊಂದು ಕರಣಗಳಲ್ಲಿ ಏಳನೆಯದು : ಕರಣಂ ಪನ್ನೊಂದು ಚರಸ್ಥಿರಸ್ವರೂಪಂಗಳಲ್ಲಿ ವಿಷ್ಟಿಯದೊಂದುಂ ಪರಿಹಾರ್ಯಮುಬ್ಬಿದ ಪತ್ತುಂ ಕರಣಂ ಶುಭಕರಣಮಕ್ಕುಂ (ಲೋಕೋಪ. ೧-೨೫) ; ಶನಿಯಂಗಾರಕರೊಳ್ಪಿದರೆನಿಸರ್ ಮತ್ತಲ್ಲಿ ವಿಷ್ಟಿಗಿತ್ತಂ ಕುಳಿಕಂ ಜನಿಯಿಸುಗುತ್ಪಾತಂಗಳುಮೆನಿಪುದಱಿಂದಾಗ ಬಿತ್ತಣಕ್ಕಾ ದೆವಸಂ (ಅಬ್ಬುಮ. ೯-೧೩). 'ಬಿಟ್ಟಿ' ಪರಾ. [ಸಂ.]

ವಿಷ್ಟಿಸು (ಕ್ರಿ). ೧. ಮಲ, ಮೂತ್ರಗಳನ್ನು ವಿಸರ್ಜಿಸು : ಶುನಕಶಕುನಮಂ ಪೇೞ್ವಂ . . . ಪದದೊಳೆ ಭೂಮಿಯಂ ಕರೆದು ವಿಷ್ಟಿಸೆ ಮಾಣ್ಬುದು ತದ್ವಿವಾಹಮಂ (ಲೋಕೋಪ. ೧೨-೨೫) ; ಕಾಗೆ ವಿಷ್ಟಿಸುವ ಹೊನ್ನ ಕಳಸವಹುದಱಿಂದ ಒಡೆಯರು ಜೋಗ್ಯೆಸುವ ಚಮ್ಮಾವುಗೆಯ ಮಾಡಯ್ಯಾ (ಬಸವ. ೩೭೧) ; ಸೂಕರಗಳು ಜೋಳವನ್ನು ತಿಂದು ಮನೆಯೊಳಗೆಲ್ಲ ವಿಷ್ಟಿಸಿದವು (ಬಚ್ಚರು. ೩). ೨. ಅಶುಭವನ್ನುಂಟುಮಾಡು ; ಅಮಂಗಳವನ್ನು ಸೂಚಿಸು : ಜನವು ಬೆಕ್ಕಸಬಟ್ಟು ಬೆದಱಿದುದನಿತಱೊಳು ವಿಷ್ಟಿಸಿಯೆ ಬಲಭದ್ರನನು ತದ್ರೂಪನು ಕಳೆದು ಮಾತೆಯ ಬಳಿಗೆ ಬಂದ (ಸಾಳ್ವಭಾ. ೩೦-೫೪). [ವಿಷ್ಟಿ + – ಇಸ್ಕು]

ವಿಷ್ಟೆ, ವಿಟ್ಟೆ (ನಾ). ೧. ಮಲ ; ಅಮೇಧ್ಯ : ಗೂಗೆಯ ಎಡಪಕ್ಕದ ಗರಿ . . . ಅರಿದಳ, ಕಾಗೆಯ ವಿಷ್ಟೆ, ಇವಂ ಸಮಾನವಾಗಿ ಚೂರ್ಣವಂ ಮಾಡಿ ಆಡಿನ ಮೂತ್ರದಿಂದರೆದು ಅಂಜನವಿಡಲು ಚಾತುರ್ಥಿಕಜ್ವರಂ ಮಾಣ್ಗುಂ (ಸಕ್ಕ. ೧೧೯). ೨. ಅಶುಭ ; ಅಮಂಗಳ : 'ವಿಷ್ಟಿಸು' ಪರಾ. ೩. ಪಾಪ ; ದೋಷ : "ಅಶುಭಂ ಪಾಪೌಘ ವಿಷ್ಟಾಹ್ವಯಂ" (ನಾಸಾರ. ೧೦೪). ವಿಟ್ಟೆ : ೧. "ವಿಟ್ಟೆ (ವಿಟ್ಟ) ವಿಷ್ಠಾ – ಹಿಕ್ಕೆ, ಮಲ" (ತದ್ಭವ. ೪೦). [< ಸಂ. ವಿಷ್ಠಾ]

ವಿಷ್ಠಾಕೂಪ (ನಾ). ಒಂದು ನರಕದ ಹೆಸರು : ಪರ್ವತ . . . ವಿಷ್ಠಾಕೂಪವೆಂಬೈದು ಮಂತ್ರಿನರಕಂಗಳಾಧಿಪತ್ಯದಿಂ ಸುದೀರ್ಘವೆಂಬರಸುನರಕವಿಹುದು (ವಿವೇ. ೧೫೩). [ಸಂ.]

ವಿಷ್ಠೆ (ನಾ). (?) : ಮುತ್ತಿಂಗೆ ಪೇಳ್ವೆ ಗುಳ್ಳದ ಬೇರಿನಲಿ ಕೊಳವಿ ಮತ್ತದಕೆ ಮಾದಳದ ರಸವ ತುಂಬಿಯೆ ಶಂಖಿದತ್ಯಧಿಕರಾಜಾನವಿಷ್ಠೆಯಲಿ ಕಲಸ್ಯೆದುದಿನಮಿರ್ದು ಬಿಸಿ ಮಾಳ್ಪುದು (ರತ್ನಶಾ. ೨೩-೩). [?]

ವಿಷ್ಠೆ (ನಾ). = ವಿಷ್ಟೆ ೧ : ಕುದುರೆಯ ಪಂದಿಯು ವಿಷ್ಠೆಯೊಳೊದವಿದ ಕಿರ್ಬಿಂದ ಸೂಜಿಯಂ ಕಾಸಿ (ಲೋಕೋಪ. ೭-೨೮) ; ತನ್ನ ದಾನವನಪಹರಿಸಿಕೊಂಡನ್ಯರಿತ್ತುದಕಡ್ಡ ಬೀಳುವ ಧನ್ಯರುಗಳಱವತ್ತುಸಾವಿರವರುಷಪರಿಯಂತ ಖಿನ್ನವಹ ವಿಷ್ಠೆಯೊಳು ಕ್ರಿಮಿಗಳ ಜನ್ಮದಲ್ಲಿಹರು (ಅಪ್ಪಾಉ. ೪-೧೩). [ಸಂ. ವಿಷ್ಠಾ]

ವಿಷ್ಣು (ನಾ). ೧. ತ್ರಿಮೂರ್ತಿಗಳಲ್ಲಿ ಒಬ್ಬ ; ನಾರಾಯಣ : ದೇವಕಿ ವಿಷ್ಣುವಂ ಬಸಿಱೊಳಾಂತಿರೆ ವೈಷ್ಣವಮಾಯೆಯಂ ಯಶೋದಾವಧು . . . ಗರ್ಭದೊಳಾಂತಳ್ (ಜಗವಿ. ೨-೮೭) ; ನಿಖಿಲಜಗದ್ವ್ಯಾಪಕನಾಗಿರುವುದರಿಂದ ವಿಷ್ಣುವೆಂದು ಹೆಸರು (ಧಾರಶಾಂ. ೪೩). ೨. ಹನ್ನೆರಡು ಮಂದಿ ಆದಿತ್ಯರಲ್ಲಿ ಒಬ್ಬ : ದಾತ ಅರಿಯಮ . . . ವಿಷ್ಣುಗಳೆಂಬವರೇ ಕ್ರಮದಿಂ ದ್ವಾದಶಾದಿತ್ಯರು (ವಿವೇ. ೨೧೪). ೩. ವಿಷ್ಣುವು ಧ್ಯಾನದೇವತೆಯಾದ ಒಂದು ಮಂತ್ರ : ಗಾಯತ್ರಿ ಮೃತ್ಯುಂಜಯ . . . ಬ್ರಹ್ಮ ವಿಷ್ಣು . . . ಭೈರವಾದಿ ಮಹಾಮಂತ್ರಂಗಳಂ (ವಿವೇ. ೭೫). ೪. ವಿಷ್ಣುವು ಅಧಿದೇವತೆಯಾಗಿರುವ ಶ್ರವಣನಕ್ಷತ್ರ. ೫. ಅಗ್ನಿ. ೬. [ಛಂದ] ಅಂಶಗಣ ಗಳಲ್ಲಿ ಒಂದು ; ಮೂರಂಶದ ಒಂದು ಗಣ : ಎರಡುಂ ಮೂಱುಂ ನಾಲ್ಕುಂ ಗುರುವಿಂ . . . ಸರಸಿಜಭವ ವಿಷ್ಣುರುದ್ರಸಂಜ್ಞೆಗಳಕ್ಕುಂ (ಛಂದೋಂಬು. ೫-೨೪೦); ಕನ್ನಡ ಛಂದದಲ್ಲಿ ವಿಷ್ಣುವೇ ಪ್ರಧಾನಗಣ (ಛಂದೋವಿ. ೬೬). [ಸಂ.]

ವಿಷ್ಣುಕಂದ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಗೆಡ್ಡೆ : "ಬೃಹತ್ಕಂದಃ – ವಿಷ್ಣುಕಂದ" (ಓಷಧಿ. ೧೦೯). [ಸಂ.]

ವಿಷ್ಣುಕಾಂತ (ನಾ). [ವಾಸ್ತು] ಸ್ತಂಭಗಳಲ್ಲಿ ಒಂದು ಬಗೆ : ಶಿಲ್ಪಶಾಸ್ತ್ರಗಳಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ, ರುದ್ರಕಾಂತ ಇತ್ಯಾದಿ ಸ್ತಂಭಪ್ರಭೇದಗಳು ಉಕ್ತವಾಗಿವೆ (ಹೊಯ್ಸವಾ. ೨೬). [ಸಂ.]

ವಿಷ್ಣುಕ್ರಾಂತ (ನಾ). ೧. ಒಂದು ಬಗೆಯ ಔಷಧೀಸಸ್ಯ : "ಅಸ್ಫೋಟಾ, ಗಿರಿಕರ್ಣೀ, ವಿಷ್ಣುಕ್ರಾಂತಃ, ಅಪರಾಜಿತಾ – ೪ ವಿಷ್ಣುಕ್ರಾಂತದ ಹೆಸರುಗಳು" (ಓಷ್ಠಾಂತ. ೧೬೫). ೨. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : ಉರುಕುಂಚಿತ ಪಾದಂ ನೀಡಿರೆ . . . ಪಿರಿದುಂ ರೇಚಿತಮಾಗಲ್ ತರುಣೇ ಕೇಳ್ ಕರಣಮಿದುವೆ ವಿಷ್ಣುಕ್ರಾಂತಂ (ಲಾಸ್ಯರಂ. ೪-೧೬೧). [ಸಂ. ವಿಷ್ಣುಕ್ರಾಂತಾ]

ವಿಷ್ಣುಕ್ರಾಂತಿ (ನಾ). ಒಂದು ಬಗೆಯ ಔಷಧೀಸಸ್ಯ : ವಿಷ್ಣುಕ್ರಾಂತಿ ಸಹದೇವಿಯ ಬೇರು ಇವಂ . . . ಆಮಂತ್ರಿಸಿ ಮುಖಮಂ ಪೂಸೆ ಲೋಕವಶ್ಯ (ವಿಷ್ಣಪ. ೨). [ಸಂ.]

ವಿಷ್ಣುಗಂಟಿ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು : ರುದ್ರಗಂಟಿ ಮೂಸಿ ವಿಷ್ಣುಗಂಟಿ ಹಾಸಿ (ಗರ. ೯೭-೪). [ವಿಷ್ಣು + ಕಂಟಿ]

ವಿಷ್ಣುಗಣ (ನಾ). = ವಿಷ್ಣು ೬ : ವಿಷ್ಣುಗಣಮೆಂತೆಂದೊಡೆ ಗೋವಿಂದಂ ಜಲಜಾಕ್ಷಂ . . . ಮುರರಿಪು (ಛಂದೋಂಬು. ೫-೨೪೦ ವ) ; ವಿಷ್ಣುಗಣ ೪ ರಿಂದ ೬ ರವರೆಗೆ ಮಾತ್ರೆಗಳನ್ನು ಸಮಾವೇಶಮಾಡಿಕೊಳ್ಳುತ್ತದೆ (ಛಂದೋವಿ. ೫೩). [ಸಂ.]

ವಿಷ್ಣುಗೃಹ (ನಾ). ವಿಷ್ಣುವಿನ ದೇವಸ್ಥಾನ : ನೆಗಟ್ಟುತ್ತುಂಗಶಿವಾಲಯ ಪ್ರತಿತಿಯಾದಿತ್ಯಾಲಯಂ ಸಾಲೆ ವಿಷ್ಣುಗೃಹಂ . . . ಎನೆ ನಾನಾಧರ್ಮಮಂ ಮಾಡಿಸಿ (ಸೌಗಾ. XX. ೪೯-೬೯ ; 1076?). [ಸಂ.]

ವಿಷ್ಣುಚಕ್ರ (ನಾ). ೧. ವಿಷ್ಣುವಿನ ಆಯುಧ : ವಿಷ್ಣುಚಕ್ರವು ಬಂದು ಸುತ್ತಿ ಮೂಜು ಸೃಷ್ಟಿಯನೆಲ್ಲವ ತಿರುಗಿ ಬೆನ್ನಟ್ಟಿ ಕೃಷ್ಣ ಸಲಹೆಂದು ಮೊಱೆಯಿಟ್ಟ ಮುನಿಶ್ರೇಷ್ಠಗಿಷ್ಟರ ಮೇಲೆ ಅಭಯವ ಕೊಟ್ಟೆ (ಪುರಂದ. ಧಾ. ೩-೬೩-೫). ೨. ಒಂದು ಬಗೆಯ ಸುಡುಮದ್ದು : ದೀಪಾವಳಿಹಬ್ಬದಲ್ಲಿ ಪಟಾಕಿ, ವಿಷ್ಣುಚಕ್ರ ಮುಂತಾದುವನ್ನು ಹಚ್ಚಿಸಿ ಮಕ್ಕಳು ಸಂತೋಷ ಪಡುತ್ತಾರೆ (ಟೂಪ್ರ). ೩. [ಸಾಮುಲ] ಕೈಯಲ್ಲಿರುವ ರೇಖಾರೂಪವಾದ ಚಕ್ರ. [ಸಂ.]

ವಿಷ್ಣುತುಳಸಿ (ನಾ). ಒಂದು ಬಗೆಯ ತುಳಸಿ : ವಿಷ್ಣುತುಳಸಿ, ಕರೀತುಳಸಿ, ಶ್ರೀತುಳಸಿ (ಮೃಚಿಗಿ. ೫೭-೧೧೪೯). 'ಶ್ರೀತುಲಸಿ' ಪರಾ. [ಸಂ. ವಿಷ್ಣುತುಲಸೀ]

ವಿಷ್ಣುತ್ವ (ನಾ). ವಿಷ್ಣುವಿನ ಪದವಿ : ಆ ಮಾಧವ . . . ಶಿವರಾತ್ರಿಯಂ ನೆಲೆ ಮಾಡಲ್ಕೆಸಲೇ ವಿಷ್ಣುತ್ವಮಂ ಪಡೆದನೆಂದು ಬಿತ್ತರಿಸಿದಂ ಸರ್ವೇಶನು (ವೀಶ್ರಪು. ೨-೮-೫೦). [ಸಂ.]

ವಿಷ್ಣುನಕ್ಷತ್ರ (ನಾ). ಒಂದು ನಕ್ಷತ್ರದ ಹೆಸರು ; ಶ್ರವಣ : ವರವಿಷ್ಣುನಕ್ಷತ್ರ ದಂತದೊಳ್ಪೈದೇಹಂಗಾಯ್ತು ಗರ್ಭಾಧಾನಂ (ಕೃಮುಭಾ. ೧೮-೩೩). [ಸಂ.]

ವಿಷ್ಣುಪದ (ನಾ). ೧. ವಿಷ್ಣುವಿನ ಪಾದ : ಇದು ಪೂರ್ವದಿಶಾವಧುವೆತ್ತಿದ ಶಶಿಮಣಿಮುಕುರಮಮೃತಕರಮಂಡಳಮಲ್ತಿದು ಚಿಹ್ನಮಲ್ತು ಮಧ್ಯದೊಳೊದವಿದ ಮಾರ್ಪೊಳಪು ವಿಷ್ಣುಪದ ವಿಷ್ಣುವಿನಾ (ರಾಜಶೇ. ೧೧-೬೧). ೨. ಆಕಾಶ ; ಗಗನ. ೩. ಮುಕ್ತಿ ; ಮೋಕ್ಷ : ವರಭಾಗವತನಂತಿರೆ ವಿಷ್ಣುಪದಸಂಸಕ್ತತನುವಾಯ್ತು (ಕುವ್ಯಾಭೀ. ೮-೧೨). [ಸಂ.]

ವಿಷ್ಣುಪದಿ (ನಾ). ವಿಷ್ಣುವಿನ ಪಾದದಿಂದ ಹುಟ್ಟಿದುದು ; ಗಂಗೆ : "ಭಾಗೀರಥೀ, ಸುರಸರಿತ್, ವಿಷ್ಣುಪದೀ, ಜಾಹ್ನವೀ, ಗಂಗಾ — ಈ ೫ ಗಂಗೆ" (ಹಲಾಯು. ೧೧೧-೫೧). [ಸಂ. ವಿಷ್ಣುಪದೀ]

ವಿಷ್ಣುಪಾದ (ನಾ). ವಿಷ್ಣುವಿನ ಪಾದದ ಗುರುತಿರುವ ಸ್ಥಳ ; IP ಗಯೆಯಲ್ಲಿರುವ ಇದು ಹಿಂದೂಗಳ ಅತ್ಯಂತ ಪವಿತ್ರಸ್ಥಳವಾಗಿದೆ. [ಸಂ.]

ವಿಷ್ಣುಪುರಾಣ (ನಾ). ಹದಿನೆಂಟು ಪುರಾಣಗಳಲ್ಲಿ ಒಂದು; ವಿಷ್ಣುವಿನ ಕಥೆಯನ್ನೂ ಅವನ ಮಹಿಮೆಯನ್ನೂ ಕುರಿತು ಹೇಳುವ ಪುರಾಣ : ಕತ ವಿಷ್ಣುಪುರಾಣಂ ಸತ್ಕೃತಿವೇಟ್ಟಂ ಸುಕವಿರುದ್ರಂ (ಜಗವಿ. ೧-೨೧) ; ನಾರದೀಯ ಭಾಗವತ ಗಾರುಡ ವೈಷ್ಣವ ಎಂಬ ನಾಲ್ಕೆ ವಿಷ್ಣುಪುರಾಣಂಗಳು (ವಿವೇ. ೯). [ಸಂ.]

ವಿಷ್ಣುಮಾಯೆ (ನಾ). ೧. ಸೃಷ್ಟಿಯ ಕಾಲದಲ್ಲಿ ವಿಷ್ಣುವಿನ ಶಕ್ತಿಯಿಂದ ನಿರ್ಮಿತವಾದ ಒಂದು ಬಗೆಯ ಮೋಹ : ಬ್ರಹ್ಮಪಾಶ ವಿಷ್ಣುಮಾಯೆಯೆಂಬ ಬಲೆಯ ಬೀಸಿ ಹೊನ್ನು ಹೆಣ್ಣು ಮಣ್ಣ ತೋಱಿ ಮುಕ್ಕಣ್ಣನಾಡಿದ ಬೇಂಟೆಯ (ಅವಚಂ. ೬-೨೧) ; ವಿಶ್ವರೂಪಂ ಕರ್ತವ್ಯಮನಱಪ ತನ್ನ ದಿವ್ಯರೂಪವನಡಂಗಿಸಿ ವಿಷ್ಣು ಮಾಯೆಯಂ ಪಸರಿಸಿ (ಜಗವಿ. ೩-೬ ವ). ೨. ದುರ್ಗೆ. [ಸಂ. ವಿಷ್ಣುಮಾಯಾ]

ವಿಷ್ಣುರಥ (ನಾ). ವಿಷ್ಣುವಿನ ವಾಹನ ; ಗರುಡ. [ಸಂ.]

ವಿಷ್ಣುವಾಹನ (ನಾ). = ವಿಷ್ಣುರಥ : "ಗರುಡಃ = ವಿಷ್ಣುವಾಹನಂ" (ಅಶಕ್ಯ. ೭೪). [ಸಂ.]

ವಿಷ್ಣುಸಾವರ್ಣಿಕ (ನಾ). ಹದಿನಾಲ್ಕು ಮನುಗಳಲ್ಲಿ ಒಬ್ಬ : ಪೂರ್ವದಲ್ಲಿ ಸ್ವಯಂಭು . . . ವಿಷ್ಣುಸಾವರ್ಣಿಕ ರುದ್ರಸಾವರ್ಣಿಕ . . . ಬ್ರಹ್ಮಸಾವರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ (ವಿವೇ. ೧೬೩). [ಸಂ.]

ವಿಷ್ಣುಸ್ಮೃತಿ (ನಾ). ೧. ವಿಷ್ಣುಪರವಾದ ಸ್ತೋತ್ರ. ೨. ಹತ್ತೊಂಬತ್ತು ಸ್ಮೃತಿಗಳಲ್ಲಿ ಒಂದು : ಮನುಸ್ಮೃತಿ ಅತ್ರಿಸ್ಮೃತಿ ಹಾರೀತಸ್ಮೃತಿ ವಿಷ್ಣುಸ್ಮೃತಿ . . . ವಶಿಷ್ಠಸ್ಮೃತಿಗಳೆಂಬವೇ ಆಯಾಯ ನಾಮಧೇಯಮುಳ್ಳವರಿಂದುಕ್ತಮಾದ ಹತ್ತೊಂಬತ್ತು ಧರ್ಮಶಾಸ್ತ್ರಂಗಳ್ (ವಿವೇ. ೫). [ಸಂ.]

ವಿಷ್ಣುಹಣ (ನಾ). (?) : ಇದು ಮಧ್ಯರಾಸಿಯಲಿ ಹಣತೋರಿದ ಕಾಯಿ ವಿಷ್ಣುಹಣವಾದ ಕಾರಣ ಗ ೧೯ ಹಣ ೧೦ ರಿಂದ ಭಾಗಿಸಲು ಗ ೧೩ ॥ ೦ (ಭಾಸ್ಕರ. ೨೫-೨). [ವಿಷ್ಣು? + ಹಣ?]

ವಿಷ್ಕಾರ (ನಾ). ೧. ಬಿಲ್ಲಿನ ದನಿ ; ಠೇಂಕಾರ : "ಬಿಲ್ಲ ದನಿಯಂ ವಿಷ್ಕಾರವೆಂಬುದು" (ಹರಿಹಾಯು. ೨೪-೧೫೦). ೨. ಕಂಪನ ; ನಡುಕ. [< ಸಂ. ವಿಸ್ಕಾರ]

ವಿಷ್ಟಕ್ಸೇನ (ನಾ). ೧. ವಿಷ್ಣು ; ನಾರಾಯಣ : ಆ ಬಳ ವಿಷ್ವಕ್ಸೇನರ್ ಗೋಪಬಂಧು ಗೆತ್ತರ್ ಖಳನಂ (ಜಗವಿ. ೪-೫೦) ; ತ್ರಿವಿಕ್ರಮನ ಬೆನ್ನೆಲು ಕರದಿ ಝಗರ್ಝಗಿಪ ಶೂಲದೊಳಗೆಸೆಯೆ ವಿಷ್ವಕ್ಸೇನನಗಜೇಶ ಧರಿಸಲ್ (ಗುಯಚಾ. ೪-೨೨). ೨. ವಿಷ್ಣುವಿನ ಮುಖ್ಯ ಪರಿಚಾರಕ : ವಿಷ್ವಕ್ಸೇನನೆಂಬವನ ನಿಶಿತ ಶೂಲಾಯುಧದಿನಿಱಿದಾ ಬಿಸರುಹಾಕ್ಷನ ಹರನಿಱಿದನೆಂದುಸುರಲೊಲ್ಲನು (ಬಸಪು. ೫೭-೨೨). [ಸಂ.]

ವಿಷ್ವಕ್ಸೇನಪ್ರಿಯೆ (ನಾ). ೧. ವಿಷ್ಣುವಿನ ಪತ್ನಿ ; ಲಕ್ಷ್ಮಿ. ೨. ಒಂದು ಬಗೆಯ ಸಸ್ಯ ಮತ್ತು ಅದರ ಗೆಡ್ಡೆ ; ವಾರಾಹಿ ; ಹಂದಿಗೆಡ್ಡೆ. [ಸಂ. ವಿಷ್ವಕ್ಸೇನಪ್ರಿಯಾ]

ವಿಷ್ವಕ್ಸೇನೆ (ನಾ). ಒಂದು ಬಗೆಯ ಸಸ್ಯ ; ಪ್ರಿಯಂಗು : "ಶ್ಯಾಮಾ . . . ವಿಷ್ವಕ್ಸೇನಾ, ಗಂಧಫಲೀ, ಕಾರಂಭಾ, ಪ್ರಿಯಕಃ — ೧೨ ಪ್ರೇಂಕಣಗಿಡದ ಹೆಸರು" (ಸಿದ್ಧಾಂಜಿ. ೧೨೪). [ಸಂ. ವಿಷ್ವಕ್ಸೇನಾ]

ವಿಸ $_1$ 'ಬಿಸ $_1$' ನೋ.

ವಿಸ $_2$ (ನಾ). "ಕೊಳಲು" (ವರ್ಧಪು. ಅನುವಾದ) : ಮುಹರಿಯ ಮಧುರತೆಯುಂ ಬೀಸೆಯ ಬಹುಲಿಕೆಯುಂ ಎಸೆಯೆ ವಿಸದ ಕುಸರಿಯಂ ಕಳಿಗೆ ಕೆಳಿಗೊಳಿಸಿ ಠವಣಿಗಿಡದೆ (ವರ್ಧಪು. ೯-೪೪ ವ). [< ಸಂ. ವಂಶ]

ವಿಸ್ತ (ನಾ). ೧. ತಾವರೆಯ ದಂಟು ; ಮೃಣಾಳ. ೨. ತಾವರೆಯ ದಂಟಿನೊಳಗಿನ ನಾರು ; ಬಿಸಜತಂತು. [ಸಂ.]

ವಿಸಂಕಟ (ಗು). ೧. ಭಯಂಕರವಾದ ; ಘೋರವಾದ. (ನಾ). ೨. ಒಂದು ನರಕದ ಹೆಸರು : ಸಂಕಟ ವಿಸಂಕಟ ಸವಿಶಾಲ ಕಟ ವಿಕಟವೆಂಬೈದು ಮಂತ್ರಿನರಕಂಗಳಿಂ ಮೋಹಿಸಿ ವಿಕರಾಳವೆಂಬರಸುನರಕವಿಹುದು (ವಿವೇ. ೧೫೩). [ಸಂ.]

ವಿಸಂಗತ (ಗು). ೧. ಹೊಂದಾಣಿಕೆಯಿಲ್ಲದ ; ಅಸಂಬದ್ಧವಾದ : ಏನು ವಿಸಂಗತ ಮಾತುಗಳವು (ಕಬ್ಬಾ. ೬೯). (ನಾ). ೨. ಅಸಂಬದ್ಧವಾದುದು ; ವಿಚಿತ್ರವಾದುದು : ಪ್ರತಿಯೊಂದು ಕಥೆಯೂ ಸಂದೇಶವಾಹಕವೇ ಎನ್ನುವುದು ತುಸು ವಿಸಂಗತವಾಗಿ ತೋರಬಹುದು (ಕಥಕ. ೬೮). [ಸಂ.]

ವಿಸಂಗತಿ (ನಾ). ಹೊಂದಾಣಿಕೆ ಇಲ್ಲದಿರುವಿಕೆ ; ಅಸಾಂಗತ್ಯ : ವಿನೋದದ ಕಥೆಗಳು . . . ವಿಸಂಗತಿ ವೈಚಿತ್ರ್ಯಗಳೇ ಈ ಬಗೆಯ ಕಥೆಗಳ ಜೀವಾಳ (ಕಥಕ. ೨೪) ; ಮಡಿವಂತಿಕೆಯ ಅಧಿಕಾರದರ್ಪ ಹೇಗಿತ್ತೆಂಬುದನ್ನು ವರ್ಣಿಸಿ ಆ ವಿಸಂಗತಿಗೆ ತಾವೂ ನಗುತ್ತಾರೆ (ಸ್ಮತಿಚ. ೪). [ಸಂ.]

ವಿಸಂಚೆ 'ವಿಸಂಚು' ನೋ.

ವಿಸಂಚಿಸು (ಕ್ರಿ). ೧. ಚೂರುಚೂರಾಗು ; ಪುಡಿಪುಡಿಯಾಗು : ಸಾರಥಿ ನೊಂದನಾ ಧ್ವಜದಂಡವುಡಿದುದು ರಥ ವಿಸಂಚಿಸಿತು (ಕುವ್ಯಾವಿ. ೮-೫೮). ೨. ತಪ್ಪಿಹೋಗು ; ಮುರಿದುಬೀಳು : ಸಂಧಿ ವಿಸಂಚಿಸಲಾಗಳಾ ಅವನ ಕಪಟವೃತ್ತಿಯಂ ಗುರುವಪಮಂತ್ರಿಯರಿದು (ಕೆಳನ್ಯ. ೧೦-೩೮). ೩. (ಆಲಂ) ಸಾಮರ್ಥ್ಯವನ್ನು ಕಳೆದುಕೊಳ್ಳು ; ಶಕ್ತಿಗುಂದು : ಕನಸು ಮೇಣೆಚ್ಚಱು ಸುಮಪ್ರಿಗಳಿನಿಪವಸ್ಥಾತ್ರಿತಯದಲಿ ಜೀವನು ವಿಸಂಚಿಸಿ ಬೀಳ್ವನಲ್ಲದೆ ಶರಕೆ ಸಿಲುಕುವನೆ (ಕುವ್ಯಾವಿ. ೮-೮೮). [ವಿಸಂಚ ? + - ಇಸ್ಕು]

ವಿಸಂಚು , ವಿಸಂಚ (ನಾ). ವಿಶೇಷವಾದ ಕುತಂತ್ರ, — ಪಿತೂರಿ : ಕುದುರೆಯ ರಾಯರಾವುತರಿರ್ದಿ ಕುರುಳ್ದಿ ತೆರಳ್ದಿ ಕೋಪದಿಂದೊಡಗಿಱಿದಿಕ್ಕಿಯುಕ್ಕಿ ಪಟುವಾಗಿ ಪಳಂಚಿ ವಿಸಂಚಿನೋಳ್ಕ ಹಾಮದಕರಿಪುಷ್ಕರಂಗಳನತಿಕ್ರಮಿಸಿ (ಹಮ್ಮಿರ. ೬-೪೨). ವಿಸಂಚೆ : ಮನದೊಳೋವರಿಯಿಲ್ಲ ಬುದ್ಧಿಯೊಳು ವಿಸಂಚವಿ[ಪಾಕಾಂ. ಟಿಯ]ಲ್ಲ (ಬಸಪು. ೮-೫೧) ; ನಿನ್ನನು ತಾ ಕಾಣಲೋಸುಗ ಕಾಂತೆ ಸರಸದ ವಾಣಿಯನು ವಿರಚಿಸಲು ನೇಹಕ್ಕೂಣೆಯವೆ ವಸುದೇವನಾಣೆ ವಿಸಂಚವಿಲ್ಲ (ನಿಧಾಗ. ೧೦-೬೭-೨೩). [ವಿ - + ಸಂಚು]

ವಿಸಂಧಿ (ನಾ). ೧. ಹೊಂದಿಕೆಯಾಗದಿರುವಿಕೆ ; ಅಸಂಬದ್ಧತೆ : ಕೋಲಾಹಲದಿಂದ ಸಂಧಿಗಿಂತ ವಿಸಂಧಿಯೇ, ಸಂಘಟನೆಗಿಂತ ಸಂಘರ್ಷಣೆಯೇ ಹೆಚ್ಚು ಸಂಭಾವ್ಯ (ಸಾಹಿತ್ಯ. iii. ಪ್ರಸ್ತಾವನೆ). ೨. ಒಪ್ಪಂದ ಮುರಿಯುವಿಕೆ ; ಕರಾರು ಮುರಿಯುವಿಕೆ : ಈತನ ಭಾವ ಬೆಚ್ಚಿತು ತೆಜಹುಗೊಡನಿಂದೀ ವಿಸಂಧಿಯೊಳಱಿಯೆನವನಿಪನಾಗು ಹೋಗುಗಳ (ಕುವ್ಯಾಕ. ೧೪-೧೬). ೩. [ವ್ಯಾಕ] ಸಂಧಿಯಾಗದಿರುವುದು : ವಿಸಂಧಿಗೆ — ಕರೆ + ಅಲ್ = ಕರೆ ಅಲ್ (ತಮಿದ. ೬೧ ಪ್ರಯೋ). ೪. [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; "ಅಶ್ಲೀಲವು ತೋರುವ ಹಾಗೆ ಸಂಧಿ ಮಾಡಿರುವದು" (ಕೃವಿ. ೩೨೮) : ಛಂದಕ್ಕೆ ಬಾರದೆಂದಱಿದೊಂದೊಂದಱೊಳೊಂದಿ ಬಂದು ನಿಂದಕ್ಕರಮಂ ಸಂಧಿಸದೆ ಪೇಳ್ದೊಡದು ಕೃತಿ ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ (ಕವಿತಾ. ೧-೯೫). [ಸಂ.]

ವಿಸಂಧಿಕ (ನಾ). = ವಿಸಂಧಿ ೪ : ಚ್ಯುತಯಾಥಾಸಂಖ್ಯಂ ವ್ಯವಹಿತಮಚ್ಛಂದಂ ವಿಸಂಧಿಕಂ ನೇಯಾರ್ಥಂ (ಕವಿತಾ. ೧-೬೯). [ಸಂ.]

ವಿಸಂಯೋಜಿಸು (ಕ್ರಿ). ಬಿಡು ; ತೊರೆ ; ತ್ಯಜಿಸು : ಅನಂತಾನುಬಂಧಿ ಕ್ರೋಧಮಾನ ಮಾಯಾಲೋಭಂಗಳಂ ವಿಸಂಯೋಜಿಸಿ (ಆದಿಪು. ೧೦-೧೪ ವ).

[(ಸಂ. ವಿಸಂಯೋಜನ) + - ಇಸ್ಕು]

ವಿಸಂವಾದ (ನಾ). ೧. ವಿರುದ್ಧವಾಗಿ ಆಡುವ ಮಾತು ; ಎದುರುಮಾತು. ೨. ವಾದ ; ಚರ್ಚೆ : ಯಜ್ಞಾದಿ ಕಾರಣದೊಳ್ ಪರ್ವತ ನಾರದ ವಿಸಂವಾದದೊಳ್ ನೆಗಳ್ದುದನಱಿಪಿ (ಚಾವುಂಪು. ೨೯೬). ೩. ಅಸಂಗತವಾದ ಮಾತು ; ಅಸಂಬದ್ಧವಾದ ನುಡಿ : ಅವನಲ್ಲಿ ತನ್ನೊಡನೆ ಎಳ್ಳುಕಾಳಿನಷ್ಟು ವಿರೋಧ ವಿಸಂವಾದಗಳಿಲ್ಲ (ನಿಬಂಧ. II. ೪೧೨). ೪. ಪಕ್ಷಿಗಳ ಧ್ವನಿ. ೩, ೪ : ನೆರೆದ ವಿಸಂವಾದಂ ಪಂಜರಶುಕತತಿಯೊಳ್ . . . ನೆಗಟ್ಟುಂ (ಕವಿತಾ. ೬-೧೧೨). ೫. ಮೋಸ ; ವಂಚನೆ : "ವಿಪ್ರಲಂಭಃ, ವಿಸಂವಾದಃ, ವಿಪ್ರಲಾಪಃ — ಈ ೩ ವಂಚಿಸುಹ" (ಹಲಾಯು. ೧೨೭-೭೩).

[ಸಂ.]

ವಿಸಂವಾದಂಗೆಯ್ (ಕ್ರಿ). ವಾದಿಸು ; ತರ್ಕಿಸು : ನಂದಿವರ್ಧನಗುರುಗಳ್ ಸದ್ಧರ್ಮವಮಂ ಪೇಟೆ ಕೇಳ್ದಗ್ನಿಭೂತಿಯುಂ ವಾಯುಭೂತಿಯುಂ ಸೈರಿಸದೆ ವಿಸಂವಾದಂಗೆಯ್ಯಲ್ (ಚಾವುಂಪು. ೩೫೬). [ವಿಸಂವಾದ + ಕೆಯ್]

ವಿಸಕಂಠಿಕೆ (ನಾ). ಒಂದು ಬಗೆಯ ಸಣ್ಣ ಕೊಕ್ಕರೆ : "ಬಲಾಕಾ, ವಿ[ಪಾಠಾಂ. ಬಿ] ಸಕಂಠಿಕಾ — ಈ ೨ ಬೆಳ್ಕಕ್ಕಿ" (ಹಲಾಯು. ೪೨-೯೭). [ಸಂ. ವಿಸಕಂಠಿಕಾ]

ವಿಸಟ (ನಾ). ಮನಸ್ಸಿಗೆ ಬಂದಂತೆ ಇರುವುದು ; ಸ್ವೇಚ್ಛೆ : 'ವಿಸಟಂಬರ್', 'ವಿಸಟಂಬರಿ' ಪರಾ. [< ಪ್ರಾ. ವಿಸಟ್ಟ]

ವಿಸಟಂಬಯ್ (ಕ್ರಿ). ತೋಚಿದ ಕಡೆ ಅಡಗು ; ಮನಬಂದ ಕಡೆ ಮರೆಯಾಗು : ಚಪಲವಾಗುತ್ತಿರ್ದ ಚಿತ್ತು ತನ್ನಾ ಧ್ಯೇಯಸುಪವಿತ್ರವಸ್ತುವಂ ಬಿಟ್ಟತ್ತಲೆತ್ತಾನು ನೆಪದೆ ವಿಸಟಂಬಯಿತ್ತು (ವೀಶಪು. ೫-೧೮-೧೯). [ವಿಸಟ + ಬಯ್]

ವಿಸಟಂಬರ್, ವಿಸಟಂಬರು (ಕ್ರಿ). ಮನಸ್ಸಿಗೆ ತೋಚಿದಂತೆ ಬರು ; ಸ್ವೇಚ್ಛೆಯಾಗಿ ಬರು : ಗಜಪುರದೊಳೊಂದು ಮದಗಜಂ ಇರುಳ್ ವಿಸಟಂಬರ್ಪುದಂ ಕಂಡು ಮೂವತ್ತೆರಡುಂ ಕ್ರೀಡೆಗಳೊಳಗಡಿಸಿ ವಶಂ ಮಾಡೆ (ಚಾವುಂಪು. ೭೭). **ವಿಸಟಂಬರು** : ಅಡ್ಡಂ ತಿಗಟಂ ವಿಸಟಂಬರುತಂ ಗುದ್ದಿಸಿ ಮುಗಿಲುದ್ದಕೆ ನೆಗೆವುತ್ತುಂ (ಭೂಗೋ. ಹ. ೪೭೩-೮). [ವಿಸಟ + ಬರ್ (< ವರ್)]

ವಿಸಟಂಬರ್$_{೨}$, **ಬಿಸಟಂಬರಿ** (ಕ್ರಿ). ೧. ಮನಸ್ಸಿಗೆ ಬಂದಂತೆ ಹೋಗು ; ಸ್ವೇಚ್ಛೆಯಾಗಿ ಗಮಿಸು : "ವಿಸಟಂಬರಿದುದೆನಲ್ ಸ್ವೈರಗಮನಮಕ್ಕುಂ" (ಕವಿಕಂ. ೨೪೮) ; ಆ ಪುರದುಪವನದೊಳ್ . . . ಕಂತುದಂತಿ ವಿಸಟಂಬರಿಯದೇಲಾವನವೀಧಿಗಳಲ್ಲಿ (ಪಂರಾಮಾ. ೧-೧೦೭ ವ) ; ವದನ ಮುಖಿಮಂಡಲದ ಕಾಂತಿಯನೊದೆದು ಕಂಗಳ ಬೆಳಗು ವಿಸಟಂಬರಿದುದೇನೆಂಬೆನು ನಿತಂಬಿನಿಯ (ಕುವ್ಯಾಪ. ೧೩-೨೪). ೨. ಮನ ಬಂದಂತೆ ಹರಿ, — ಪ್ರವಹಿಸು : ಕಾನನಂಗಳೊಳ್ ನೆಜ ವಿಸಟಂಬರಿದುವು ಹೊಳೆ (ಗಿರಿಕ. ೯-೫೬) ; ರುಧಿರದ ಪ್ರವಾಹ ದೆಸೆಗೆ ವಿಸಟಂಬರಿಯೆ (ಸೌಂದಪು. ೧೬-೧೯). **ಬಿಸಟಂಬರಿ** : ೧. ಮಾಮಸಕಂ ಮಸಗಿ ಬಿಸಟಂಬರಿವ ಮದಕರಿಯಂ ಕುಮಾರಂ ಕಂಪಡೆ (ಕರ್ಣನೇ. ೫-೧೧೩ ವ) ; ಬಟ್ಟೆಯೊಳ್ ಬಿದ್ದಂಬರಿದುಮಡವಿಯೊಳ್ ಬಿಸಟಂಬರಿದುಂ . . . ತತ್ತಮೋಬಳಂ . . . ಸಕಳಜಗಮನಂಡಲೆದು ನೆಲಸೆ (ವರ್ಧಪು. ೬-೬೨ ವ) ; ಬಿಸಟಂಬರಿವುತಲದೆ ಪೊಳಲೊಳು ಗಜ ವಸುಧಾಧಿಪತಿ ಚಿತ್ತೈಸು (ನಾಗಕು. ೭-೨೮).

[ವಿಸಟ + ಪರ್]

ವಿಸಟಂಬರಿ$_{೨}$ (ನಾ). ಮನಬಂದತ್ತ ಚಲಿಸುವಿಕೆ ; ಸ್ವೇಚ್ಛಾಗಮನ : ಗಿರಿಯ ವಿಸಟಂಬರಿಯನಮರೇಶ್ವರನು ತಡವಮೋಲಳ್ಳಿಱಿವ ದಿಕ್ಕರಿಯನಡಗಟ್ಟಿದನು (ಕುವ್ಯಾಡ್ರೋ. ೩-೪೮). [ವಿಸಟ + ಪರ್]

ವಿಸಟಂಬರಿಯಿಸು (ಕ್ರಿ). ಮನಬಂದತ್ತ ಓಡುವಂತೆ ಮಾಡು ; ಸ್ವೇಚ್ಛೆಯಾಗಿ ಹರಿಬಿಡು : ವಿಸಟಂಬರಿಯಿಸಿದೊಡದೆಣ್ಕೆಸೆಗಂ ತನ್ಮಯದ ಪರಿದು ಕಲ್ಪಕ್ಷಯದೊಳ್ ಮಸಗಿದ ದೆಸೆಯಾನೆಯಿದೆಂಬೆಸಕದೆ ತೋಱಿತ್ತು (ಚಂದ್ರಪು. ೧೦-೯೫) ; ಪಿಂಡಾನೆಗಳೊಂದುಗೂಡಿ ಶಿಕ್ಷೋಪಕರಣಂಬೆರಸು ಸುಳಿದೇಱುವ ಸುತ್ತಂ ಮೆಚ್ಚಸುವ ವಿಸಟಂಬರಿಯಿಸುವಡ್ಡ[ಪಾಠಾಂ. ಬರಿವಡ್ಡ]ತರದೊಳಿಕ್ಕುವ . . . ಗಜಾರೋಹಣಧುರೀಣರಾದಾ ಧೋರಣಿರ್ನರೆನೆರೆದು (ರಾಜಶೇ. ೬-೧೧ ವ). [ವಿಸಟಂಬರಿ + - ಇಸ್ಕು]

ವಿಸಟಂಬರು 'ವಿಸಟಂಬರ್' ನೋ.

ವಿಸಟಂಬಾಯ್ (ಕ್ರಿ). = ವಿಸಟಂಬರಿ$_{೧}$ ೧ : ಜಯಕೇಶಕ್ಷಿತಿಪಾಲನಾನೆ ವಿಸಟಂಬಾಯ್ವಂದು (ಆನಂಪು. ೧-೨೧). [ವಿಸಟ + ಪಾಯ್]

ವಿಸಟಂಬೊಂದಿಸು (ಕ್ರಿ). ಭಂಗಿಸು ; ಭಗ್ನಗೊಳಿಸು : ತತ್ಕುಜಮನೀಗಳ್ತರ್ಪ ನೆಂದಿಂದ್ರನಂ ವಿಸಟಂಬೊಂದಿಸಿ ತಂದೆ ಕೃಷ್ಣನೆಸರಿಂ (ಚಂದ್ರಪ್ರ. ೩-೫೯).

[ವಿಸಟ + ಪೊಂದು$_{೧}$(< ಪೊರ್ದು) + - ಇಸ್ಕು]

ವಿಸದ (ನಾ). ನಿರ್ಮಲವಾದುದು ; ಶುದ್ಧವಾದುದು : ವಿಸದಂ ತಾರಾಗ್ರಹಾನೀಕದ ವಿಕೃತಿ ವಲಂ ದಿವ್ಯಮಕ್ಕುಂ (ಲೋಕೋಪ. ೪-೩).

ವಿಸದಮನ್ನೆಯ = ಕಳಂಕರಹಿತನಾದವನು ; ಒಂದು ಬಿರುದು : ವೈರಿ ಮನ್ನೆಯಂ ಪಾಷ[ಣ್ಣ] ವೀರಮುರಾರಿ ವಿಸದಮನ್ನೆಯ . . . [ನಾ]ಮಾದಿ ಸಮಸ್ತ ಪ್ರಸಸ್ತಿಸಹಿತಂ (ಸೌಂದ. XX. ೩೮-೩ ; 1058). [< ಸಂ. ವಿಶದ]

ವಿಸದಿ (ನಾ). ಒಂದು ಅಳತೆ ; ವೀಸ : ಪೂಣೆ ಇಱುವ ಮಾಲ(ಲಾ)ಕಾರರ್ಗ್ಗೆ ಅದ್ಧ ವಿಸದಿ ಇತ್ತೊದಾನಟಿವೊನ್ (ಇಆ. X, ೬೦-೩ ; 678). [< ಸಂ. ವಿಂಶತಿ]

ವಿಸದೃಶ (ಗು). ಸಮಾನವಲ್ಲದ ; ಹೊಂದಿಕೆಯಾಗದ : ಈ ವಿಧ ವಿಸದೃಶ ಜೋಡು ಮೆಟ್ಟಿ ಕಾರೇಜಿಗೆ ಹೋಗುವುದು ಅಸಂಭವ (ಇಪ್ಪಕ. ೩೭೯). [ಸಂ.]

ವಿಸಮ 'ಬಿಸಮ$_{೧}$' ನೋ.

ವಿಸಯ 'ಬಿಸಯ' ನೋ.

ವಿಸರ (ನಾ). ೧. ವಿಸ್ತಾರ ; ವ್ಯಾಪ್ತಿ : ಅಸುರನೆಚ್ಚ ಶರಾಳಿ ದಿಕ್ಕಿನ ವಿಸರ ತುಂಬಿತು (ಕಾಶಾ. ೩೫-೨೨) ; ವಿಸರಸತ್ತ್ವಮದೊಂದದೆತ್ತಣಿನೊ ಬಂದು ನಮ್ಮ ಸುಗಳೊಳವೊಗು ತಿಹುದು (ಮಂಜಿಕ. ೧೫೫). ೨. ಸಮೂಹ ; ಗುಂಪು : ಮುನಿಜನದೇವತಾರ್ಚನೋಪಯುಕ್ತಮಾದ ಕುಸುಮವಿಸರದಿಂ . . . ಮನಗೊಳಿಸುವ ವನರಾಜಿಗಳಿಂಗಂ ರಂಜಿಸುವುದು (ಕಾದಂಪು. ೧೧೭) ; ಮುಸುಕಿ ಹೋಯಿತು ಲಂಕೆ ಕಪಿಗಳ ವಿಸರದಿಂ (ಕೌಶಾ. ೨೦-೪). ೩. ಹಿಂಡು ; ಮಂದೆ. [ಸಂ.]

ವಿಸರಣ (ನಾ). ಹರಡುವುದು ; ವ್ಯಾಪ್ತವಾಗುವುದು : ಈ ವಿಸರಣಗಳನ್ನೆಲ್ಲ ನಮ್ಮ ಇಂದ್ರಿಯಗಳು ಗ್ರಹಿಸಲಾರವು (ತಿಲ್ಲಸಾ. ೧೯೦) ; ಈ "ವಿಸರಣ"ದ ವಿಚಾರವಾಗಿ ಸಾಕಷ್ಟು ವಿಜ್ಞಾನಸಿದ್ಧಾಂತಗಳು ಉಂಟಾಗಿವೆ (ಬಾಲಪ್ರ. III. ೧೩೭೭). [ಸಂ.]

ವಿಸರತ್ತು (ನಾ). ಹರಡುವುದು ; ವ್ಯಾಪ್ತಿ ಹೊಂದುವುದು : ಸಂತತದರದಳಿತ ಪರಿಮಳಭರಿತ ಕುಸುಮವಿಸರವಿಸರದಮಂದಮರಂದರಸ ಕದಂಬಕರ್ದಮಿತವಿಧು ರವಿವೀಥಿಸನಾಥಮುಂ (ರಾಜಶೇ. ೧೪-೧೦೭ ವ). [ಸಂ. ವಿಸರತ್]

ವಿಸರಿಸು (ಕ್ರಿ). ವಿಸ್ತರಿಸು ; ಹರಡು : ವಿಸರಿಪ ಟಂಕಣವೋಲೆಯ ಮಸಿಯೆಂಬವನೊರಸಿ ಮಾತುಲುಂಗದ ಪಣ್ಣಂ ಬಿಸಿಲೊಳ್ ಪಸರಿಸೆ ತದ್ರ್ರವಮೊಸರ್ಗುಮಶೇಷಂ (ಲೋಕೋಪ. ೮-೩೪) ; ನಮ್ಮ ವಿಶ್ವವು ಈಗ ದಿನೇ ದಿನೇ ತನ್ನ ಶಕ್ತಿಯನ್ನು ವಿಸರಿಸುತ್ತಿದೆ (ಬಾಲಪ್ರ. III. ೧೩೭೮). [ವಿಸರಣ + - ಇಸ್ಕು]

ವಿಸರುಹ (ನಾ). ನಾಳದಿಂದ ಹುಟ್ಟಿದುದು ; ತಾವರೆ ; ಕಮಲ : ಭೃಂಗಪ್ರಸರಂ ಪಸರಿಸುವುವೆಸವ ವಿಸರುಹವನದೊಳ್ (ಸುಕುಮಾ. ೧೦-೫೭) ; ವಿಸರುಹದಂತೆ ಕೇಸರಮನಾಂತುದು . . . ಪುಂಜನಗ್ಗದ ಸುವಸ್ತುವಿನಂತಿರೆ ತಟ್ಟು ಹೇಂಟೆಯೊಳ್ (ಯಶೋಧ. ೩-೭೮). [ಸಂ.]

ವಿಸರ್ಗ (ನಾ). ೧. ಬಿಡುವಿಕೆ ; ತ್ಯಜಿಸುವುದು ; ತ್ಯಾಗ. ೨. ಮುಕ್ತಿ ; ಮೋಕ್ಷ : "ವರ್ಚಸದೊಳು ವಿಮುಕ್ತದೊಳು ಮಿಗೆ ವಿಸರ್ಗವೆನಿಕು " (ಮಂಗರಾ. ೧೪೩-೨೪). ೩. ನಾಶ ; ಹಾನಿ ; ಚ್ಯುತಿ : ನೃಪಪರಂಪರೆಯಿಂದ ಬಂದೀ ವಿಪುಳವಂಶಸ್ಥಿತಿವಿಸರ್ಗ ವನಪಹರಿಸಿದನು ಹಿಂದೆ ವೇದವ್ಯಾಸಮುನಿ ಬಂದು (ಕುವಾಳ. ೪-೮). ೪. (ಮಹಾ ಪುರಾಣಲಕ್ಷಣಗಳಲ್ಲಿ ಒಂದಾದ) ಜಗತ್ತಿನ ಲಯ, — ಪ್ರಳಯ. ೫. [ವ್ಯಾಕ] (ಯೋಗವಾಹಗಳಲ್ಲಿ ಒಂದಾದ) ಎರಡು ಬಿಂದುಗಳ ಚಿಹ್ನೆಯಿಂದ ಗುರುತಿಸುವ ವರ್ಣಸಂಜ್ಞೆ (:) : ಸೊನ್ನೆ ಮುತ್ತುವೋಲ್ ವೃತ್ತತೆಯಿಂದ ಸಂದಿರ್ಪುದಂತದಡಕಿಲ್ಮೊಂದಿರೆ ಮಣಗೊಪ್ಪುವೋಲ್ ವಿಸರ್ಗಮೆನಿಕ್ಕುಂ (ಶಮದ ೧೧) ; ಉಕಾರಕ್ಕೂ ಖಕಾರಕ್ಕೂ ನಡುವೆ ಇರುವ ವರ್ಣಕ್ಕೆ (:) ವಿಸರ್ಗ ಎಂದೂ ಹೆಸರು (ಮಧ್ವಮು. ೧೨). 'ಅನುಸ್ವಾರ' ಪರಾ. [ಸಂ.]

ವಿಸರ್ಜನ (ನಾ). ೧. ಬಿಡುವುದು ; ತೊರೆಯುವುದು. ೨. ಕೊಟ್ಟುದು ; ಕೊಡುಗೆ ; ದಾನ. ೩. (ಪ್ರತಿಮೆಯಲ್ಲಿ) ಆವಾಹನೆ ಮಾಡಿದ ದೇವತೆಯನ್ನು ಕಳುಹಿಸಿಕೊಡುವುದು : ಒಂದು ಆಹ್ವಾನ ಒಂದು ವಿಸರ್ಜನ ಒಂದು ವ್ಯಾಕುಳ ಒಂದು ನಿರಾಕುಳ (ಅವಚಂ. ೮೦-೬೫೯) ; ಅನಂತಚತುರ್ದಶಿಯ ದಿವಸವೇ ಗಣಪತಿ ವಿಸರ್ಜನವೂ ನಡೆಯುವುದು (ಭಾಹಬ್ಬ. ೧೨೮). 'ಆವಾಹನೆ' ಪರಾ. ೪. (ದೇಹದಿಂದ ಮಲ ಮೂತ್ರಾದಿಗಳನ್ನು) ಹೊರಹಾಕುವಿಕೆ : ಅದು ವಿಸರ್ಜನಕಾರ್ಯಕ್ಕೆ ಸಕಾಲವಾದುದರಿಂದ ವೇಗವು, ತಾನಾಗಿ ಪ್ರಾಪ್ತವಾಗುವುದು (ಆರ್ಯಧ. ೪೩). 'ವಿಸರ್ಜನಾಂಗ' ಪರಾ. ೫. [ನಾಟ್ಯ] ನೃತ್ಯದ ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು : ಅತಿಶಯ ವಿಸರ್ಜನಾಹ್ವಾನ . . . ಕರಕರ್ಮಂಗಳ್ . . . ಸತತಿಪ್ಪತ್ತು (ಲಾಸ್ಯರಂ. ೪-೧೩). [ಸಂ.]

ವಿಸರ್ಜನಾಂಗ (ನಾ). (ಶರೀರಕ್ಕೆ ಬೇಡವಾದುದನ್ನು) ಶರೀರದಿಂದ ಹೊರಹಾಕುವ ಅಂಗ, — ಅವಯವ ; ಶುದ್ಧೀಕರಣಾಂಗ : ವಿಸರ್ಜನಾಂಗಗಳಲ್ಲದ . . . ಕೀಟಗಳಲ್ಲಿ ಕೊಬ್ಬು ವಿಸರ್ಜನಾವಸ್ತುಗಳನ್ನು ಶೇಖರಿಸುತ್ತದೆ (ಕೀಬು. ೩೪). [ಸಂ.]

ವಿಸರ್ಜನೀಯ (ಗು). ೧. ಹೊರದೂಡುವ ; ಹೊರಕ್ಕೆಬಿಡುವ. (ನಾ). ೨. = ವಿಸರ್ಗ ೫ : ವಿಸರ್ಜನೀಯಮೆಂದುಂ ವಿಸರ್ಗಕ್ಕೆ ಪೆಸರ್ (ಶಮದ. ೧೧ ವೃತ್ತಿ). [ಸಂ.]

ವಿಸರ್ಜನೆ (ನಾ). ೧. ಬಿಡುವುದು ; ತ್ಯಜಿಸುವುದು : ಮೊನೆಗಾರನು ರಣಧೀರನಾಗಿ ಅಂದಿನಿಂದ ಹಳೆಯ ಪಯ್ಕದವರ ಸಭೆಯನ್ನು ವಿಸರ್ಜನೆ ಮಾಡಿಬಿಡುತ್ತಾನೆ (ಸಂಸಕ. ೧೧೨). ೨. ನಿವಾರಣೆ : ಇಲ್ಲಿ ಆ ದೋಷ ವಿಸರ್ಜನೆಯಾಗಬೇಕಾಗಿದೆ (ಚಿತಂಬಾ. ೧೭೭). ೩. ಕೊಟ್ಟುದು ; ಕೊಡುಗೆ ; ದಾನ. ೪. (ಪ್ರತಿಮೆಯಲ್ಲಿ) ಆವಾಹಿಸಿದ ದೇವತೆಯನ್ನು ಕಳುಹಿಸಿಕೊಡುವುದು : ಭಾದ್ರಪದಚತುರ್ಥಿಯಿಂದ ನಾಲ್ಕು ದಿವಸ ಅಥವಾ ಹತ್ತುದಿವಸ ಗಣಪತಿಯನ್ನು ಪೂಜಿಸಿ ನಂತರ ಜಲಾಶಯದಲ್ಲಿ ವಿಸರ್ಜನೆ ಮಾಡುತ್ತಾರೆ (ರೂಢಿ). 'ಆವಾಹನೆ' ಪರಾ. ೫. (ದೇಹದಿಂದ ಮಲಮೂತ್ರಾದಿಗಳನ್ನು) ಹೊರಹಾಕುವಿಕೆ : ವಿಸರ್ಜನೆಯು ಮುಗಿದ ಕೂಡಲೇ . . . ಮೃತ್ತಿಕೆಯಿಂದಲೂ ಉದ್ವ್ಯತವಾದ ಜಲದಿಂದಲೂ . . . ಶೌಚವನ್ನು ಮಾಡಿಕೊಳ್ಳಬೇಕು (ಆರ್ಯಧ. ೪೪) ; ದಿನಾಲು . . . ಎರಡು ವೇಳೆ ನಿಯಮದಿಂದ ಮಲಮೂತ್ರ ವಿಸರ್ಜನೆ ಮಾಡುವುದರಿಂದ ಶರೀರವು ಬಹು ನಿರೋಗಿಯೂ ಮತ್ತು ಶಾಂತವೂ ಆಗುವುದು (ಬ್ರಹ್ಮಜ್ಞ. ೧೪೩). [ಸಂ. ವಿಸರ್ಜನ]

ವಿಸರ್ಜಿಸು (ಕ್ರಿ). ೧. ತ್ಯಜಿಸು ; ಬಿಡು : ಪೊಡವಿಯೊಳು ಭವಿಯಂ ವಿಸ [ಪಾಠಾಂ. ವ]ರ್ಜಿಸಿ ಪೊಡವಡುತ ಭಕ್ತರ್ಗೆ ನಿಚ್ಚಂ ಕೊಡುವುದುತ್ತಮವೀನುತವೀ ಪರಿಯೊಳ್ ಪ್ರವರ್ತಿಸಲು (ಬಸಪು. ೬೦-೧೫). ೨. ಕಳುಹಿಸಿಕೊಡು ; ಬೀಳ್ಕೊಡು : ಬಂದ ಪಂಡಿತರ್ಕಳುಮನುಚಿತ ಪ್ರತಿಪತ್ತಿಗಳಿಂ ವಿಸರ್ಜಿಸಿ (ಪಂಪಭಾ. ೪-೬೯ ವ) ; ಸುರ ಲೋಕಮಂ ಸಾಧಿಸುವೆನೆಂದು ಅಶ್ವತ್ಥಾಮಾದಿಗಳಂ ವಿಸರ್ಜಿಸಿ (ಗದಾಯು. ೯-೩೪ ವ) ; ಸುರಪತಿ ಮೊದಲಾದರನೆಲ್ಲರನಾಹ್ವಾನಿಸುತಾದರಿಸಿ ವಿಸರ್ಜಿಸುವ . . . ಜತಿರಾಯನೆಸೆದನಲ್ಲಿ (ಜಯಾಕಾ. ೨-೨೬). ೩. (ಪ್ರತಿಮೆಯಲ್ಲಿ) ಆವಾಹಿಸಿದ ದೇವತೆಯನ್ನು ಕಳುಹಿಸಿಕೊಡು, — ಬೀಳ್ಕೊಡು : ಈಶ್ವರಾರ್ಚನೆಯ ಪುನರಪಿ ಮಹಾತುರದೊಳಂ ಮಾಡಲೆಂದು ನಿರ್ಮಲ್ಯಮಾಘ್ರಾಣಿಸಿ ವಿಸರ್ಜಿಸಿದನು (ನಂದಿಮಾ. ೧೮-೫) ; ಪ್ರತಿಮೆಗಳನ್ನು ಮಣ್ಣಿನಲ್ಲಿ ಮಾಡಿ ಪೂಜಾನಂತರ ಅವುಗಳನ್ನು ನದಿಯ ನೀರಿನಲ್ಲಿ ವಿಸರ್ಜಿಸುವುದೂ ಉಂಟು (ಧಾರವ. ೫೧೮). ೪. (ಸಭೆ, ಓಲಗ ಮುಂತಾದುವನ್ನು) ಮುಕ್ತಾಯಗೊಳಿಸು ; ಬರಖಾಸ್ತುಮಾಡು : ನೃಪಾಲನೋಲಗವನು ವಿಸರ್ಜಿಸಿ ಕಾಲಭೈರವನಂತೆ ಗರ್ಜಿಸಿ (ಜೀವಂಚ. ೬-೭) ; ಈಶ್ವರನಂದು ತನ್ನ ಕಣ್ಮೊನೆಯೊಳೋಲಗಮಂ ವಿಸರ್ಜಿಸುತ್ತಾಕ್ಷಣಂ ನೆನೆದು . . . ನಾಗಲಾಂಬಿಕೆಯ ಗೃಹಮಂ ಸಾರ್ದನು (ಚಿಬಪು. ೩-೩೪). ೫. (ದೇಹದಿಂದ ಮಲಮೂತ್ರಾದಿಗಳನ್ನು) ಹೊರಹಾಕು ; ಆಚೆಗೆ ನೂಕು : ಗೋಣಿ, ಅತ್ತಿ, ಅಶ್ವತ್ಥ ಮೊದಲಾದ ಮರಗಳ ಹಣ್ಣುಗಳನ್ನು ತಿಂದ ಹಕ್ಕಿಗಳು ತಾಳಿಮರದ ಮೇಲೆ ಬೀಜಗಳನ್ನು ವಿಸರ್ಜಿಸಿದಾಗ, ಬೀಜ ಮೊಳೆತು ಅಲ್ಲಿಯೇ ಮರವಾಗಿ ಬೆಳೆಯುತ್ತದೆ (ಹಸುಹೂ. ೩೩೮). [ವಿಸರ್ಜನ + - ಇಸು]

ವಿಸರ್ಪ (ನಾ). ೧. ಹರಡುವಿಕೆ ; ವ್ಯಾಪಿಸುವಿಕೆ. ೨. ಮೈಯೆಲ್ಲಾ ಹರಡುವ, ನವೆ, ಉರಿ, ನೋವುಗಳಿಂದ ಕೂಡಿದ ಒಂದು ಬಗೆಯ ಚರ್ಮರೋಗ : ತ್ರಿಫಲೆ, ಪದ್ಮಕ . . . ತುರುಚನ ಬೇರು ಸಹವಾಗಿಯಾದರೂ ಲೇಪನಂಗ್ಗೆಯಲು ಶ್ಲೇಷ್ಮದಿಂದುಂಟಾದ ವಿಸರ್ಪ ಹರವಹುದು (ವೈದ್ಯಸಾ. I, ೬೬೬). ೩. ಮನುಷ್ಯನ ಕಾಲು ಆನೆಯ ಕಾಲಿನಂತೆ ದಪ್ಪವಾಗುವ ಒಂದು ಬಗೆಯ ರೋಗ ; ಆನೆಕಾಲುರೋಗ : "ಶ್ಲೀಪದಂ ವಿಸರ್ಪಮೆನೆ ವಿಷಧಮಕ್ಕುಂ" (ಮಂಗರಾ. ೧೧೩-೨). [ಸಂ.]

ವಿಸರ್ಪಕ (ನಾ). = ವಿಸರ್ಪ ೨ : ವಿಸರ್ಪಕಮಂ, ಮದಮೂರ್ಛೆಯಂ, ನೆತ್ತರಿಂದಾದ ತೊನ್ನಂ, ಪಂಚಗುಲ್ಮಂಗಳಂ ಕೆಡಿಸುಗುಂ. ಇದು ಅಮೃತಾದಿ ಎಂಬ ಆದಿಯೋಗ (ವೈವಿ. ೧೧). [ಸಂ.]

ವಿಸರ್ಪಣ (ನಾ). ೧. ವಿಸ್ತಾರ ಹೊಂದುವಿಕೆ ; ವಿಕಾಸವಾಗುವಿಕೆ ; ಹರಡುವಿಕೆ : ಸಂಹರಣ ವಿಸರ್ಪಣಾಸ್ಯರೂಪನುಂ . . . ಅಪ್ಪ ಜೀವನುಂಟೆಂದು (ಆದಿಪು. ೨-೧೦ ವ) ; ಸಂಹರಣ ವಿಸರ್ಪಣ ಸ್ವಭಾವ ಸಮನ್ವಿತಜೀವಕ್ಕೆ (ತತ್ತ್ವಪ್ರ. ೩೩೮). ೨. = ವಿಸರ್ಪ ೨ : "ವಿಸರ್ಪಣ-ಪ್ರಸರ, ಚಿಬ್ಬು, ತುಜೆ ಹಿಂಡಿವುದು" (ನಾಚರಾ. ೫). [ಸಂ.]

ವಿಸರ್ಪರೋಗ (ನಾ). = ವಿಸರ್ಪ ೨ : ಮಂದಾಗ್ನಿಯವರು . . . ವಿಸರ್ಪರೋಗದವರು, ವಿಷೂಚಿರೋಗದವರು, ವಿಷದ ರೋಗದವರು ಇವರಿಷ್ಟೂ ವಮನಯೋಗ್ಯರೆಂದರಿವುದು (ಸಕವೈ. ೨೫). [ಸಂ.]

ವಿಸರ್ಪಿ (ನಾ). = ವಿಸರ್ಪ ೨ : ವಿಸರ್ಪಿ, ಸರ್ಪಿ (= Herpes) ಎಂಬ ರೋಗ ಒಂದುಂಟು (ಗ್ರಂಥಸಂ. ೧೬೯) ; ಈ ವರ್ಣವು ಕೈಕಾಲು ತಣ್ಣಗಾಗುವ ವಿಸರ್ಪಿ, ಮೈನವೆ, ಸೊನೆ ಹುಣ್ಣು, ತಲೆಯ ಕೂದಲು ಉದುರುವುದು ಮೊದಲಾದ ಸಮಸ್ತ ಚರ್ಮರೋಗಗಳು . . . ಇಂಥವುಗಳಲ್ಲಿ ತುಂಬ ಪ್ರಯೋಜನ (ಬಚಿಕಿ. ೪). [ಸಂ. ವಿಸರ್ಪಿನ್]

ವಿಸವಂತ (ನಾ). ವಿಷವನ್ನು ಹೊಂದಿರುವವನು ; ಆದಿಶೇಷ : ವಿಸವಂತಂ ಸೇಸಂ, ಱೆಕ್ಕೆವಂತಂ ಗರುಡಂ (ಶಬ್ದಾಮ. ೪೦೬ ಪ್ರಯೋ). [< ಸಂ. ವಿಷವತ್]

ವಿಸಸನ, ಬಿಸಸನ (ನಾ). ೧. ಕೊಲೆ ; ಸಂಹಾರ : ಕಾಳಗದ ವಿಸಸನದೊಳು . . . ನಾನಾಖಡ್ಗಂಗಳಿಂದೊರ್ವರಂ ತಾಗಿ (ಶ್ರಾವಕಾ. ೧೯-೩) ; ಪರರಾಳ್ಗೆಗೆ ಸಂದಿಹ ಸ್ವರ್ಣಭೂಮಿಯಂ ವಿಸಸನಕೊಡ್ಡದೊಡ್ಡಳಿಸಿ (ಅಮಶಂ. ೭೬-೬). ೨. ನಾಶ ; ಹಾಳು. ೩. ಯುದ್ಧ : ಸಂಗ್ರಾಮ ; ಕಾಳೆಗ : ವಿಸಸನದೊಳ್ ನಿರೋಧಿನ್ಯಪರಂ ತಜ್ಜೊಟ್ಟಲುಂ . . . ಕರಂ ನೆಜೆವ ಮಕ್ಕಳನೀಯದೆ ನೋಡೆ ನಾಡೆ ನೋಯಿಸಿದಪುದಿಕ್ಕು ಪುಷ್ಪದವೊಲೆನ್ನಯ ನಿಷ್ಫಲಪುಷ್ಪದರ್ಶನಂ (ಪಂಪಭಾ. ೧-೧೧೭) ; ಅಂತಾ ಖಗೇಂದ್ರಕೇತನ ನಭಷೇಣಂಗೆಯ್ದು ವಿಸಸನಕ್ಕಾಗಿ ಮೊಗಸಿ ತಳರ್ದಾಗಳ್ (ವರ್ಧಮಾ. ೪-೩೭ ವ) ;

ಇಂದಿನೀ ವಿಸಸನದೊಳಾಟಿಯ ಜತ್ತುಕದ ನಿಶಾಟನುಬ್ಬಿನ ಬಲಮಂ ಗೋಣ್ಮುಱಿದು ಗುಟ್ಟಿಗಟ್ಟುವೊಡಾನೆ ಸಾಲ್ವೆಂ (ರಾಮಾಶ್ವ. ೧೧೧-೧೨). ೪. ಕತ್ತರಿಸುವುದು ; ಬೇರ್ಪಡಿಸುವುದು. ಬಿಸಸನ : ೩. ಬಿಸಸನದೊಳ್ ದಶಮುಖನಂ ದೆಸವಲಿಗುಡಲೆಂದು ಭರತಶತ್ರುಘ್ನರ್ . . . ಸನ್ನಾಹಭೇರಿಯಂ ಪೊಯಿಸುವುದುಂ (ಪಂರಾಮಾ. ೧೪-೬೨) ; ಬಿಸಸನದೊಳಿರ್ವಲಂ ಕದನಮಂ ಮಸೆಯೆ (ಸಾಳ್ವಭಾ. ೨೫-೯). ೫. ನೋವು ; ಬಾಧೆ : (ಕಿ). [< ಸಂ. ವಿಶಸನ]

ವಿಸಸನಗಲಿ (ನಾ). ಕಾಳೆಗದ ಕಲಿ ; ಸಮರಶೂರ : ವಾಗ್ವವಧು ಬರೆದಳು ವಿಸಸನಗಲಿ ಬರ್ಮ್ಮನೆಂಬಿವೆಂಟಕ್ಕರಮಂ (ಕಇ. IV. ೧೦-೨೮ ; 1121).

[ವಿಸಸನ + ಕಲಿ$_2$]

ವಿಸಸನಗೆಯ್, ವಿಸಸನಗೈ (ಕ್ರಿ). ಹೊಡೆ ; ಘಾತಿಸು : ನೆಱೆ ವಿಸಸನಗೆಯ್ದು ಪೊಯ್ದನೆನೆ ಘಾತಿಸಿದಂ (ಕವಿಕಂ. ೧೨೪). ವಿಸಸನಗೈ : ವಿಸಸನಗೈದು ತನ್ನಣುಗರ ಮೊಗವ ನಿಟ್ಟಿಸದೆ ಸತ್ತನು ಧರೆಯರಿಯೆ (ಇಚಿಸಾಂ. ೭-೧೧). [ವಿಸಸನ + ಕೆಯ್$_1$]

ವಿಸಸನಗೈ 'ವಿಸಸನಗೆಯ್' ನೋ.

ವಿಸಸನಭೂಮಿ (ನಾ). ಕಾಳೆಗದ ಕಣ ; ಯುದ್ಧದ ಭೂಮಿ : ವಿಸಸನಭೂಮಿ ಕೋಟ್ಮಿದುಳ ನೆತ್ತರ ಕಾಳ್ಗೆಸಱಿಂ ತಗುಳ್ದು (ಎಕ. VII, ಶಿಕಾರಿ. ೨೪೨-೨೨ ; 1163).

[ವಿಸಸನ + ಭೂಮಿ]

ವಿಸಸನರಂಗ (ನಾ). = ವಿಸಸನಭೂಮಿ : ವಿಸಸನರಂಗಕ್ಕಾನಿರ ಬೆಸಗೊಳ್ಳುದೆ ಪೆಱರನೆಂದು ಜಯಪಟಹಂಗಳ್ ದೆಸದೆಸೆಗೆಸವಿನೆಗಂ ಕಟ್ಟಿಸಿಕೊಂಡಂ ಬೀರವಟ್ಟಮಂ ಕಳಶಭವಂ (ಪಂಪಭಾ. ೧೧-೫೪). [ವಿಸಸನ + ರಂಗ]

ವಿಸಾಕೆ (ನಾ). ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು ; ವಿಶಾಖೆ : ಶ್ರೀಮುಖಸಂವತ್ಸರದ ಬಹುಳ ಬಿದಿಗೆ ಬುಧವಾರ ಸಿದ್ಧಯೋಗದಂದು ವಿಸಾಕೆ ನಕ್ಷತ್ರ ಚಂದ್ರತೊಲೆ (ಸೌಇಇ. XX. ೨೮೪-೫ ; 1033). [< ಸಂ. ವಿಶಾಖಾ]

ವಿಸಾರ (ನಾ). ೧. ವಿಸ್ತಾರ ಹೊಂದುವಿಕೆ ; ವೈಶಾಲ್ಯ : ದಕ್ಷಿಣಾವೃತ್ತ ವೃತ್ತ ತ್ರಿತಯಾಂತರ್ವರ್ತಿ ತಾನೆಂಬಿನಮನುಗತತತ್ಪೌಘದೊಳ್ ತತ್ತ್ವದಿಂದನ್ವಿತಮಂ ವಿಸಾರಮತ್ಯಪ್ರಕಟಿತಮನದಿಂ ಮೆಚ್ಚಿದಂ ದೇವರಾಜಂ (ಅಜಿಪು. ೫-೧೨). ೨. ಪ್ರವಹಿಸುವಿಕೆ ; ಹರಿಯುವಿಕೆ. ೩. ಮೀನು ; ಮತ್ಸ್ಯ : "ವೈಸಾರಿಣಃ, ವಿಸಾರಃ . . .ಪಾಠೀನಃ — ಈ ೧೩ ಮೀನ್" (ಹಲಾಯು. ೧೦೮-೩೫). [ಸಂ.]

ವಿಸಾರಿ (ನಾ). ಪ್ರವಾಹ ; ಹರಿವು : ಆ ರಮಣಿಯ ದೇಹಚ್ಯುತಿವಾರಿಯಿನವಿರಳ ವಿಸಾರಿಯಿಂ ತೊಳೆದಂತಾಚಾರಮೆನಿತ್ತನಿತುಂ ವಿಸ್ತಾರಿಸಿದುದು (ಚಂದ್ರಪು. ೨-೧೪).

[ಸಂ. ವಿಸಾರಿನ್]

ವಿಸಿಖ (ನಾ). ಬಾಣ ; ಅಂಬು ; ಸರಳು : ನೋಟಕರ ಮಸೆಗಾಣಿಸಲು ಪೊಸಕುಸುಮಾಸ್ತ್ರದಿಂದಲಿದ್ದೆಸೆಯಲ್ಲಿ ನಿಡಿಯಲರ್ಗಣ್ಣ ವಿಸಿಖದಿಂ ದೆಸೆ ಬಿದ್ದರಸುವ ತುಳಿವೊಲು ಸಂತಸದೊಳುಯ್ಯಲನೊರ್ವವನಿತೆ . . . ಆಡುತಿರಲು (ಭೃರಸೂ. I, ೩೦೭).

[< ಸಂ. ವಿಶಿಖ]

ವಿಸಿಖಾಸನ (ನಾ). = ವಿಶಿಖಾಸನ : ನಿನ್ನಳವ ನೋಡುವೆನೆನುತ ವಸುಮಯದ ವಿಸಿಖಾಸನವನ್ನು ಪಿಡಿದು (ನವಮೋ. ೧೨-೫೬). [< ಸಂ. ವಿಶಿಖಾಸನ]

ವಿಸಿನಿ (ನಾ). ೧. ಕಮಲದ ಗಿಡ. ೨. ಕಮಲಗಳ ಸಮೂಹ. ೩. ಕಮಲದ ನಾಳ ; ತಾವರೆಯ ದಂಟು. 'ಬಿಸಿನಿ' ಪರಾ. [ಸಂ. ವಿಸಿನೀ]

ವಿಸಿಷ್ಟ 'ಬಿಸಿಷ್ಟ' ನೋ.

ವಿಸುದ್ಧ (ಗು). ಶುದ್ಧವಾದ ; ಪವಿತ್ರವಾದ : ಸ್ತ್ರೀ ವೀರಬಳಂಜದ ಧರ್ಮ ಪ್ರತಿಪಾಳನವಿಸುದ್ಧಗುಡ್ಡಧ್ವಜವಿರಾಜಿತಮಪ್ಪ ಲಕ್ಷ್ಮೀವಕ್ಷಸ್ಥಳಂ (ಕಇ. II, ೫೫-೫ ; 1000?) ; ವೀರಬಣಂಜುಧರ್ಮಪ್ರತಿಪಾಳನ ವಿಸುದ್ಧ ಗುಡ್ಡಧ್ವಜ ವಿರಾಜಮಾನ . . . ಭುವನ ಪರಾಕ್ರಮೋಂನತರುಂ (ಸೌಇಇ. XX. ೬೩-೩ ; 1098). [< ಸಂ. ವಿಶುದ್ಧ]

ವಿಸುಮಯ (ನಾ). ಅದ್ಭುತ ; ಆಶ್ಚರ್ಯ : ಕೋಟಾನುಕೋಟಿ ಸೊಡರ್ಗಳಲಿ ಶಿವನ ಹೊಸ ಕೊಳನ ಸಲಿಲವನೆಱೆದು ಹೊತ್ತಿಸಿದಪಂ ಗಡ ಧರೆಯೊಳಿಂತಾ ವಿಸು [ಪಾಠಾಂ. ಷ,ಸ] ಮಯಂ ಪುಟ್ಟುವುದೆ (ಬಸಪು. ೫೦-೫೯). [< ಸಂ. ವಿಸ್ಮಯ]

ವಿಸುಮಯಂಗೊಳ್ (ಕ್ರಿ). ಆಶ್ಚರ್ಯಗೊಳ್ಳು ; ಬೆರಗಾಗು : ಕುಸುರಿಗೆಲಸಂಗಳೊಪ್ಪುವ ಪೊಸವೆಳಗು ಕಣ್ಗೆ ಹೊಂಬಿಸಿಲಿಂದ ವೆಗ್ಗಳಿಸೆ ವಿಸುಮಯಂಗೊಂಡು ಗುರುಪದವ ನೆನೆದು (ಮನೋವಿ. ೧-೨೪). [ವಿಸುಮಯ + ಕೊಳ್$_1$]

ವಿಸೃತ (ಗು). ೧. ಹರಡಿದ ; ವ್ಯಾಪಿಸಿದ ; ಹಬ್ಬಿದ. ೨. (ಬಿಲ್ಲಿನ ಹೆದೆಯಂತೆ) ಎಳೆದ ; ಜಗ್ಗಿದ. (ನಾ). ೩. ವ್ಯಾಪಿಸಿರುವಂಥದು : "ವಿಸೃತಂ, ವಿಸ್ತೃತಂ, ತತಂ — ೩. ವ್ಯಾಪಿಸಿ ಇರುವುದರ ಹೆಸರುಗಳು" (ಸಿದ್ಧಾಂತ. ೩೪೫). [ಸಂ.]

ವಿಸೃಷ್ಟ (ಗು). ೧. ಹೊರದೂಡಿದ ; ಹೊರಗೆ ಹಾಕಿದ. ೨. ಹುಟ್ಟಿಸಿದ ; ಸೃಷ್ಟಿಸಿದ ; ಸೃಜಿಸಿದ. (ನಾ). ೩. [ನಾಟ್ಯ] ನರ್ತನದಲ್ಲಿ ತುಟಿಯ ಚಲನೆಯ ಒಂದು ಭೇದ ; ತುಟಿಯನ್ನು ಮುಂದಕ್ಕೆ ಚಾಚುವ ಒಂದು ಭಂಗಿ ; ℙ "ಅರಗಿನ ರಸವನ್ನು ಹಚ್ಚುವಾಗ ಮಾಡುವಂತೆ ತುಟಿಯನ್ನು ಮುಂದಕ್ಕೆ ನೀಡುವುದು. ಹೆಂಗಸರ ವಿಲಾಸ ಮತ್ತು ಬಿಬ್ಬೋಕ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಲಾಸ್ಯರಂ. ೨೬೮ ಗದ್ಯಾನುವಾದ) : ಅಲತಗೆಯ ರಚಿಪ ಭಾವಂ ನೆಲೆಗೊಳೆ ತೋರ್ಪಧರಮದು ವಿಸೃಷ್ಟಮೆನಿಕ್ಕುಂ (ಲಾಸ್ಯರಂ. ೩-೮೩). [ಸಂ.]

ವಿಸೃಷ್ಟಾರ್ಥ (ನಾ). ಸೃಜಿಸಿ ಆಡುವ ಮಾತು ; ಹುಟ್ಟಿಸಿಕೊಂಡು ಆಡುವ ನುಡಿ : ದಕ್ಷಿಣನವಳ ದೂತೀಜಲ್ಪಂ ವಿಸೃಷ್ಟಾರ್ಥಮಾದುದೆಂದುಮಲ್ಲಿಂ ತಳರ್ದು ರಾಜ ಭವನಾಭಿಮುಖನಾಗಿ (ಚಂದ್ರಪು. ೮-೯೧ ವ). [ಸಂ.]

ವಿಸ್ಕಂದ (ನಾ). ಚಂಚಲಗೊಂಡುದು ; ವಿಚಲಿತವಾದುದು : ಮನ ವಿಸ್ಕಂ [ಪಾಠಾಂ. ಚೃಂ]ದವಾಗದೊಂದೆಯಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊದ್ದಿಪ್ಪುದು ಹೇಳಾ (ಸಿದ್ಧವ. ಕ. ೩೧-೯೩). [ಸಂ.]

ವಿಸ್ತರ (ನಾ). ೧. ಹಬ್ಬುಗೆ ; ವಿಸ್ತಾರ ; ವ್ಯಾಪ್ತಿ : ಶ್ರೀ ಚೋಳದೇಶವೊಪ್ಪಿಪ್ಪುದು ಧರಾತಳಕೆ ವಾಚಾಮಗೋಚರಮದಱ ವಿಸ್ತರಂ ಜಗಕೆ (ತಿರುರ. ದೇ. ೧-೬). ೨. ವಿವರಣೆ ; ವ್ಯಾಖ್ಯಾನ. ೩. ಹಾಸಿದುದು ; ಹಾಸಿಗೆ, ಚಾಪೆ ಮುಂತಾದುವು. ೪. ಆಸನ ; ಪೀಠ ; ಗದ್ದುಗೆ. ೫. ಒಳ್ಳೆಯ ಸ್ವಭಾವ ; ಸದ್ಗುಣ. ೬. ಕಲ್ಲು : "ವಿಸ್ತೀರ್ಣ ಸದ್ಗುಣವು ದೃಷದಿನಿತುಂ ವಿಸ್ತರಾ ನಾಮಮಕ್ಕುಂ" (ನಾನಾರಾ. ೧೪೧). ೭. (ಆಲಂ) ಚೆನ್ನಾದುದು : ಅಬಲೆಯರಂಭ್ರಿಗಳವಿಸ್ತರದೊಳೊತ್ತಲು ಅಂಚೆವಾಸಿನ ಮೇಲೆ ಪವಡಿಸುವ ಪುರುಷ ನೀನೆಣ ನೆತ್ತರೊಳು ಭೂತರುಣಿಯನು . . . ಅಪ್ಪಿದೆಯೆಂದು ಮನದೊಳು ಮಱುಗಿದಳು ರಮಣಿ (ಜೀವಂಚ. ೫-೨೭). ೮. ಮಹಿಮೆ ; ಔನ್ನತ್ಯ : ಗುರುವಿನ ವಿಸ್ತರದ ಪರಿಯ ನಾನೇನೆಂಬೆ ಮೆಱೆವ ಬ್ರಹ್ಮಾಂಡದೊಳಹೊಱಗನವ ಬೆಳಗಿ ಪರಿಪೂರ್ಣನಿಪ್ಪ (ಸರ್ವಜ್ಞ. ೩೦). [ಸಂ.]

ವಿಸ್ತರಣ (ನಾ). ೧. ವಿಸ್ತರಿಸಿದುದು ; ಹಬ್ಬಿದುದು : ಗುರು ನಿರಂತರ ಪರಿಚರಣ ವಿಸ್ತರಣ ಸದ್ಭಾವಾನುರಕ್ತ (ಬಸಪು. ೩೯-೬೮) ; 'ಛಂದಸ್ಸು ಮತ್ತು ಗುರುಲಘುಗಳ ರಹಸ್ಯ' ವು ಉಲ್ಲೇಖನೀಯವಾದ ಮಾರ್ಪಾಡಿಲ್ಲದೆ ಇಲ್ಲಿ ಬಂದಿದೆ, ಉಳಿದವು ಯಥಾನುಸಾರ ಸಂಕ್ಷೇಪಣ, ವಿಸ್ತರಣ ಪರಿವರ್ತನಗಳನ್ನು ಎತ್ತಿವೆ (ಸಂಶೋಧ. iii, ಅರಿಕೆ). ೨. ನಗರದ ವಿಸ್ತರಿಸಿದ ಭಾಗ ; ಬಡಾವಣೆ : ಶ್ರೀಕಂಠೇಶ್ವರವಿಸ್ತರಣದ ಲಾಯರ್ ವೆಂಕಟರಾಯರ ಮಗ ಚಕ್ರಪಾಣಿ ಈಗ ಅವನ ಸಹಪಾಠಿಯಾಗಿದ್ದ (ವಂಶವೃ. ೪೦೦). [ಸಂ.]

ವಿಸ್ತರಣೆ (ನಾ). ವಿಸ್ತರಿಸೂವಿಕೆ : ತಾಂತ್ರಿಕಸಹಾಯವಿಸ್ತರಣೆ ಕಾರ್ಯಕ್ರಮವೊಂದು . . . ವಿಶ್ವಸಂಸ್ಥೆಯ ಕಾರ್ಯಾಚರಣೆಯ ಭಾಗವಾಗಿದೆ (ಅಂತಸಂ. ೨೫೯).

[ಸಂ. ವಿಸ್ತರಣ]

ವಿಸ್ತರಿಗೆ (ನಾ). ಹಾಸಿದುದು ; ಹಾಸಿಗೆ, ಚಾಪೆ, ಮುಂತಾದುವು : ಮಣಿಮಯಸಿಂಹಾಸನದ ಮೇಲೆ ವಿಸ್ತರಿಸಿದ ದೇವಾಂಗ ವಿಸ್ತರಿಗೆವೋಲ್ ಮಹಾವಿಸ್ತರ ದಿನಿರಿಸಿ (ಸುಕುಮಾ. ೧೦-೧೨೨ ವ) ; ಕಂಸಂ ವಸುದೇವನ ಮನೆಗೆ ಭೋಂಕೆನೆ ಬಂದು ವಿನತನಾಗಿ ಪ್ರಶಸ್ತಮಪ್ಪ ವಿಸ್ತರಿಗೆಯೊಳ್ ಕುಳ್ಳಿರ್ದು (ನೇಮಿಪು. ೬-೧೧ ವ).

[< ಸಂ. ವಿಸ್ತರಿಕಾ]

ವಿಸ್ತರಿತ (ಗು). ಹರಡಿದ ; ವಿಶಾಲವಾದ : ದಿವಾಕರನಂತೆ ನಿರ್ದೋಷನಿಂದ್ರನಂತೆ

ಪರಿಚಿತಸುರಭಿರಮ್ಯನವಮೃತಾರ್ಚಿಯಂತೆ ವಿಸ್ತರಿತಕುವಲಯನೆಂದು ಧರ್ಮಜನ ಧರೆ ಪೊಗುಳುತಿರೆ (ಧ್ವಮಭಾ. ೨-೧೩). [ಸಂ.]

ವಿಸ್ತರಿಸು (ಕ್ರಿ). ೧. ಹಬ್ಬು ; ಹರಡು ; ವಿಸ್ತಾರವಾಗು : ಹನ್ನೆರಡುಯೋಜನವರೆಯ ಭೋಜನಶಾಲೆಗಳು ವಿಸ್ತರಿಸಿದವು (ತೂರಾ. ೧-೭-೭). ೨. ಬೆಳೆ ; ವೃದ್ಧಿಹೊಂದು : ಸುರರ ದೈತ್ಯರ ಸಮರಸಿರಿ ವಿಸ್ತರಿಸಿತಿತ್ತಲು (ಕುವಾದ್ರೋ. ೧೦-೭೧). ೩. ದೊಡ್ಡ ದಾಗಿಸು ; ವಿಸ್ತಾರವಾಗಿಸು : ಅರಗು ಮೊದಲಾಗೆ ಘೃತ ಸಜ್ಜರಸಂ ಬೆಲ್ಲಂ ಸಣಂಬವೆಂಬವಱಂ ವಿಸ್ತರಿಸಿ ಸಮದಿಂದ್ರಭವನಮೆ ಧರೆಗವತರಿಸಿರ್ದುದೆನಿಸುವರಿಗಿನ ಮನೆಯಂ (ಪಾಂಚಭಾ. ೩-೩) ; ವಿಸ್ತರಿಸಿ ಕಟ್ಟಿದರಗಲದಲಿ ವೈವಾಹಮಂಟಪವ (ನಳಚ. ೩. . . ೪. (ಚಾಪೆ ಮೊದಲಾದುವನ್ನು) ಹಾಸು ; ಅಳವಡಿಸು : ಸಿಂಹಾಸನದ ಮೇಲೆ ವಿಸ್ತರಿಸಿದ ದೇವಾಂಗವಿಸ್ತರಿಗೆವೋಲ್ ಮಹಾವಿಸ್ತರದಿನಿರಿಸಿ (ಸುಕುಮಾ. ೧೦-೧೨೨ ವ). ೫. ಪಸರಿಸಿ ಇಡು ; ವಿಸ್ತಾರವಾಗಿರಿಸು : ಕಾಣ್ಕೆಯಾಗಿ ತಂದು ವಿಸ್ತರಿಸಿದ ಸಮಸ್ತ ವಸ್ತುಗಳನವಲೋಕಿಸುತ್ತುಂ (ಉದ್ಭಟ. ೭-೧೩೨ ವ). ೬. ಬೆಳೆಸು ; ಹೆಚ್ಚಿಸು : ಕರಜಳಧರ ಕಳಧೌತೋತ್ಕರ ವರ್ಮದೆ ವಂದಿ[ನಿ]ಂದನಾವಳಿಗಳ ವಿಸ್ತರಿಪುವೆನೆ ದಾನಮಖಿಳೋರ್ವ್ಯರೆಗೆ ವಿಚಿತ್ರೋಕ್ತಿ ರೂಪವಿದ್ಯಾಧರಿಯ (ಪಾರ್ಶ್ವ. XX. ೪೯-೬೭ ; 1076) ; ದೊರೆಗಳಿಬ್ಬರ ಸೋಲವನು ವಿಸ್ತರಿಸಿ ಹೊಕ್ಕರು ಮತ್ರ ಮಾದ್ರೇಶ್ವರ . . . ದುಶ್ಶಾಸನಾದಿಗಳು (ಕುವ್ಯಾಕ. ೩-೨೯). ೭. ವಿವರಿಸು ; ಬಣ್ಣಿಸು ; ವರ್ಣಿಸು : ಎಲ್ಲವನೂನವಿಲ್ಲದೆ ಹೇಳಿದಳು ಮದಮಾನಿ ವಿಸ್ತರಿಸಿ (ಪ್ರಭುಲಿ. ೫-೪೧) ; ಈ ಮಹಾಲೀಲೆಗಳನೆನಗೆ ವಿಸ್ತರಿಸು (ಚಿಪು. ೧೩-೯). ೮. ಅಣಿಮಾಡು ; ಸಜ್ಜುಗೊಳಿಸು : ಗಿರಿರಾಜಂ ಮಹೋತ್ಸಾಹದಿಂ ಮಹಾವಿವಾಹಮಂಟಪಾದಿ ಸಮಸ್ತ ವಸ್ತುಗಳಂ ವಿಸ್ತರಿಸುತಿರ್ದಂ (ಗಿರಿಜ. ೧೦-೨೬ ವ). ೯. ನೆರವೇರಿಸು ; ಸಾಂಗ ಗೊಳಿಸು : ಶತರುದ್ರೀಯವನು ವಿಸ್ತರಿಸಿ ಬಿಜಯಂಗ್ಗೆದನಾ ಮುನಿಪತಿ ನಿಜಾಶ್ರಮಕೆ (ಕುವಾದ್ರೋ. ೧೯-೫೪). ೧೦. (ಹೆಸರನ್ನು) ಇಡು : ನಿಮ್ಮ ವನಿಡಾರಮಣಂಗೆ ರಾಮಾಖ್ಯವನು ವಿಸ್ತರಿಸಿದರು ವೈದಿಕವಿದಿತಕರ್ಮದಲಿ (ತೂರಾ. ೧-೪-೧೦). [ವಿಸ್ತರ + - ಇಸ್ಕು]

ವಿಸ್ತಾರ [illegible] ಹರಹು ; ವ್ಯಾಪ್ತಿ : ಗಗನಮಂ ಪೃಥ್ವಿಯಂ ವಾರ್ಧಿಯಂ ಪರ್ವತಾರಣ್ಯವಿಸ್ತಾರಧೀರೋದಾತ್ತಗಾಂಭೀರ್ಯಮಂ . . . ಕಾಮಿಸಿದನಾ ಭೂಮಿಪಂ ತದ್ಗುಪ್ರಗುಣಹೃದಯರಂ (ಶ್ರೀಧಾಪು. ೧೨-೩೦೪). ೨. ಅಡ್ಡಗಲ ; ವಿಸ್ತೀರ್ಣ : ದಶಯೋಜನೋಪರಿಮತಲಸಮಾನವಿಸ್ತಾರದೊಳಂ . . . ನೆಲೆದು (ಆದಿಪು. ೧-೬೨ ವ) ; ಬನ್ನಿನಿಂದ ಪಾರ್ಶ್ವಸಹಿತವಾಗಿ ಹೊಟ್ಟೆಯನ್ನಳದರೆ ಅದು ವಿಸ್ತಾರವನಿಸಿಕೊಳ್ಳುವುದು (ಸಾಗಂಧಿ. ೨೬೭-೧೦). ೩. ವಿವರವಾದುದು ; ವಿಶದವಾದುದು. ೪. (ಹೊಸಬಿಗುರುಗಳಿಂದ ಕೂಡಿದ) ಮರದ ಕೊಂಬೆ : "ವಿಸ್ತಾರಃ, ವಿಟಪಃ — ಈ ೨ ಮರದ ಕೊಂಬು" (ಹಲಾಯು. ೭೦-೨೭). 'ವಿಸ್ತಾರಫಳ' ಪರಾ. ೫. [ಕಾವ್ಯವಿಮಾ] ಕಾವ್ಯಾರ್ಥವನ್ನು ಗ್ರಹಿಸಿ ಅನುಭವಿಸುವ ನಾಲ್ಕುವಿಧವಾದ ಆನಂದಗಳಲ್ಲಿ ಒಂದು : ಕಾವ್ಯಾರ್ಥವನ್ನು ಗ್ರಹಿಸುವುದರಿಂದ ಆಗುವ ಆನಂದವು (ಚಿತ್ರ) ವಿಕಾಸ, ವಿಸ್ತಾರ, ಕ್ಷೋಭ, ವಿಕ್ಷೇಪ ಎಂದು ನಾಲ್ಕು ವಿಧ . . . ವಿಸ್ತಾರ — ಕಾದ ತುಪ್ಪದಲ್ಲಿ ಹಾಕಿದ ಹಪ್ಪಳ ಹಿಗ್ಗುವಂತೆ (ಕೃಓಪ. ೨೦೦). [ಸಂ.]

ವಿಸ್ತಾರಕ (ನಾ). ೧. ವಿಸ್ತರಿಸುವಂಥದು ; ಅಗಲ ಮಾಡುವಂಥದು. ೨. ಬೆಳೆಸುವವನು ; ವೃದ್ಧಿಮಾಡುವವನು : ಸಕಲಜಗದ್ವಿಸ್ತಾರಿತಯಶನನ್ಯಯ ವಿಸ್ತಾರಕನಾದಿದೇವನಗ್ರತನೂಜಂ (ಆದಿಪು. ೧೩-೭೨) ; ನರನಾಗಾಮರಲೋಕಶೋಕಸರಣೇ ವಿಸ್ತಾರಕಂ ತಾರಕಂ (ಗಿರಿಜ. ೬-೪). [ಸಂ.]

ವಿಸ್ತಾರಣ (ನಾ). ವ್ಯಾಪ್ತಿ ; ಹರಹು : ರಣವದನೇನೆಂಬೆನ್ನೆ ಧಾರುಣಿ ಪತಿಯೆ ವಿಗ್ರಹದ ವಿಸ್ತಾರಣ ವಿಗರ್ವಣೆ ವಿಗಡಿಸಿತು ವಿಬುಧರ ವಿಡಾಯಗಳ (ಕುವ್ಯಾಅ. ೧೨-೨೩). [ಸಂ.]

ವಿಸ್ತಾರಣೆ (ನಾ). ೧. ವ್ಯಾಪ್ತಿ ; ಹರಹು ; ವಿಸ್ತೀರ್ಣ. ೨. ವಿವರ : ಪ್ರಾಯಮುಮಂ ಶಾಸ್ತ್ರಾಭಿಪ್ರಾಯಮುಮನಾರಯ್ದು ಪೇೞ್ದು ವಿಸ್ತಾರಣೆಯಿಂದಾಯತ ಮಕ್ಕುಂ (ಅಶ್ವಶಾ. ೫-೨೧). [ಸಂ. ವಿಸ್ತಾರಣ]

ವಿಸ್ತಾರಪಣ (ನಾ). ವಿಶಾಲವಾಗಿರುವಿಕೆ ; ವೈಶಾಲ್ಯ : ವೀರಪಣ, ಜಾಣಪಣ, ವಿಸ್ತಾರಪಣ ಈ ಭಾವನಾಮಗಳಲ್ಲಿಯ 'ಪಣ' ಉಪಪದವೂ ಮರಾಠಿಯ ಕಂಡಿತವಾದ ಪ್ರಭಾವವನ್ನು ತೋರುತ್ತವೆ (ಕಸಾಚ. ೨೬೧). [ವಿಸ್ತಾರ + - ಪಣ್]

ವಿಸ್ತಾರಫಳ (ನಾ). ಕೊಂಬೆಯ ಹಣ್ಣು : ಕೊಳಕ್ಕೆ ಹಂಸ ವಿಸ್ತಾರಫಳಕ್ಕೆ ರಾಜಶುಕ ನೀಶ್ವರಭಕ್ತಿಗೆ ಭಕ್ತನಾಸೆ ಮಾಳ್ಪೋರಗೆಯಾಗಿ ಸಂಕಲಿಯೊಳಂ ನೆರವಾಸೆಯೊಳಿರ್ದ ಸೌಂದರಂ (ನಂಬಿರ. ೧೪ ಸೂಚನಾಪದ್ಯ). [ಸಂ. ವಿಸ್ತಾರಫಲ]

ವಿಸ್ತಾರಿತ (ಗು). ಹರಡಿದ ; ಹಬ್ಬಿದ : ಸಕಲಜಗದ್ವಿಸ್ತಾರಿತಯಶನನ್ಯಯ ವಿಸ್ತಾರಕನಾದಿದೇವನಗ್ರತನೂಜಂ (ಆದಿಪು. ೧೩-೭೨) ; ಸಖಿಯರ್ ತಾರಾಚಲನಾಥ ನರಸಿಗನುನಯದಿಂದಂ ಸಾರ ಮೃದುತರ ವಿಮಳ ವಿಸ್ತಾರಿತವಲ್ಕಲಮನೊಪ್ಪಲುಡಿಸುತ್ತಿರ್ದರ್ (ಗಿರಿಜ. ೯-೫). [ಸಂ.]

ವಿಸ್ತಾರಿಸು (ಕ್ರಿ). ೧. ಹರಡುವಂತೆ ಮಾಡು ; ಹಬ್ಬಿಸು ; ವ್ಯಾಪ್ತಗೊಳಿಸು : ಆ ರಟ್ಟರಾಜ್ಯಮಂ ವಿಸ್ತಾರಿಸಿ ನಲವಿಂದೆ ರಟ್ಟರಾಜ್ಯಸ್ಥಿರವಿಸ್ತಾರಕನೆನಿಪಂ . . . ಮುನಿಚಂದ್ರಂ (ಪಾರ್ಶ್ವ. XX. ೨೪೮-೬ ; 1228). ೨. ಬೆಳೆಸು ; ಹೆಚ್ಚಿಸು ; ವೃದ್ಧಿಗೊಳಿಸು : ವೃತ್ತಿಯೊಳ್ ರಸಮಂ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬಿಡಂಗು ಬೇಜ್ ನೀಲಾಂಜನೆಯಾ (ಆದಿಪು. ೯-೨೬). ೩. ವಿವರಿಸು ; ಬಣ್ಣಿಸು : ಪ್ರಸ್ತುತಮಲ್ಲದುದನೆ ಮಿಗೆ ವಿಸ್ತಾರಿಸಿ ನೆಗಟ್ ಪೇಳ್ದೊಡಕ್ಕುಂ ಮತ್ರಪ್ರಸ್ತುತ ಮೆಂಬುದಳಂಕೃತಿ (ಕವಿರಾ. ೬-೧೬೮) ; ಶಿವಪಾದಭಕ್ತಂಗಾರೆನಿಸಲೆಣೆಯೆಂದು ಸಭೆ ವಿಸ್ತಾರಿಸಲು ಬಸವಂಗರಸನುದಲಿತ್ತು ಕೈಮುಗಿದು (ಬಸಪು. ೧೦-೫೫). ೪. ಮಾಡು; ಆಚರಿಸು : ದುಷ್ಕೃತಿಯಂ ವಿಸ್ತಾರಿಸಿ ಸಲೆ ಸುಜನ ಶಿರಸ್ತೋದಮನೇಕೆ ಮಸಗಿ ಮಾಬ್ಬರೊ ಕೆಲಬರ್ (ವೀಶಾವ. ೧-೨೨). ೫. ನೆರವೇರಿಸು ; ಸಾಂಗಗೊಳಿಸು : ವೈರಿವೀರಪ್ರತತಿಗಮಂದಾನಾರಿಯರಿಗೆ ವಿವಾಹವನು ವಿಸ್ತಾರಿಸುವ ಸಮಯದೊಳಗೆ (ಕುವಾದ್ರೋ. ೬-೪೩). [ವಿಸ್ತಾರ + -ಇಸ್ಕು]

ವಿಸ್ತೀರ್ಣ (ಗು). ೧. ಅಗಲವಾದ ; ದೊಡ್ಡದಾದ : ಓರೋರ್ವರಂ ತೆಗೆದಪ್ಪಿ ನಿಬಿಡಾಲಿಂಗನಂಗೆಯ್ದಾನಂದಜಳಪರಿಪೂರ್ಣವಿಸ್ತೀರ್ಣವಿಲೋಚನಂಗಳಿಂದಂ ಮುಹುರ್ಮುಹುರಾಲೋಕನಂಗೆಯ್ಯುತ್ತುಂ (ಪಂಚಭಾ. ೪-೬೬ ವ). (ನಾ). ೨. ಅಗಲ ; ವಿಸ್ತಾರ : ಪಂಚಾಶತ್ಕೋಟಿ ವಿಸ್ತೀರ್ಣ ಭೂಮಂಡಲಕೆ ಸುತ್ತ ಹರಿದವು ಸಪ್ತ ಸಾಗರಂಗಳು (ಆದಿಪು. ೬-೮) ; ವನರುಹಭವಾಂಡದೊಳಗ್ಗೆವತ್ತುಕೋಟಿಯೋಜನದ ವಿಸ್ತೀರ್ಣದಿಳೆಯಂ ಸಪ್ತ ಶರನಿಧಿಗಳನು ವೇಷ್ಟಿಸಿರಲು (ಕೃಮಿಭಾ. ೨-೧). ೩. ದೊಡ್ಡದು; ಬೃಹತ್ತಾದುದು : "ಬೃಹತ್ ಉರು ಗುರು ವಿಸ್ತೀರ್ಣಂ . . . ವರಿಷ್ಠಂ – ಈ ೧೨ ಹಿರಿದು" (ಹಲಾಯು. ೧೧೬-೧೪). [ಸಂ.]

ವಿಸ್ತೃತ (ಗು). ೧. ಅಗಲವಾದ ; ವಿಸ್ತಾರವಾದ : ವಿಸ್ತೃತ ವಕ್ಷೋದರಭಾಗ ಭೂರಿಕಮಠ ಪ್ರಕ್ಷುಬ್ಧ ಕಲ್ಲೋಲ ಕಲ್ಪಿತ ಕೋಲಾಹಲಕಲ್ಪಕಾಲರಭಸಪ್ರಸ್ಪರ್ಧಿಯಂ ವಾರ್ಧಿಯಂ (ಕಾವ್ಯಸಾ. ೭೫) ; ನರನ ನಾಗರಿಕತೆಯ ತೀರ್ಥಯಾತ್ರೆಯ ಮಹಾವಿಸ್ತೃತ ಸಲಿಲಪಥವೆ, ಮೊರೆದುರುಳು, ರತ್ನಧಿಯೆ (ಚಿತ್ರಾಂಗ. ೭೫-೧೬೭೩). (ನಾ). ೨. ಅಗಲವಾದುದು ; ವಿಸ್ತಾರವಾದುದು : ದ್ಯಾವಾಪೃಥಿವಿಗಳೆರಡೂ, ತಮ್ಮ ಪುತ್ರನಾದ ಅಗ್ನಿಗಾಗಿಯೇ ವಿಸ್ತೃತಗಳಾದಂತೆ ಕಂಡುಬಂದುವು (ಋಕ್ಸಾರ. ೪). [ಸಂ.]

ವಿಸ್ತೃತಪಾಠ (ನಾ). [ಗ್ರಂಥಸಂ] ವಿವರವಾದ ಪಠ್ಯವಿರುವ ಆಕರ, — ಗ್ರಂಥ, — ಕೃತಿ : ಅಧಿಕಪದ್ಯಗಳೂ ವಿಸ್ತೃತಪಾಠಗಳೂ ಯಾವ ಪ್ರತಿಗಳಲ್ಲಾದರೂ ಇದ್ದರೆ ಅವುಗಳನ್ನು ಆ ಹಾಳೆಯ ಹಿಂದುಗಡೆ ಬರೆಯುವುದಾಗುತ್ತದೆ (ಕ್ಷನಸಂ. ೭೪). [ಸಂ.]

ವಿಸ್ತೃತಿ (ನಾ). ವ್ಯಾಪ್ತಿ ; ಹರಹು : ವಾಕ್ಕು . . . ಅಂತರಿಕ್ಷದಲ್ಲಿ ಅಪರಿಮಿತವಾದ ವಿಸ್ತೃತಿಯನ್ನೂ ಹೊಂದಿದ್ದಾಳೆ (ಋಕ್ಸಾರ. ೨೮೪). [ಸಂ.]

ವಿಸ್ಪಷ್ಟ (ಗು). ೧. ವಿಶೇಶವಾಗಿ ಸ್ಫುಟವಾದ ; ಹೆಚ್ಚು ಸ್ಪಷ್ಟವಾದ : ವಿಹೀನಕಟ ವಿಸ್ಪಷ್ಟೇಂದ್ರಿಯಂ . . . ಮೃಗಪ್ರೋದ್ಭವಂ (ಜಾತಕ. ೧೭-೧೦). (ನಾ). ೨. ಹೆಚ್ಚು ಸ್ಫುಟವಾದುದು ; ಸುಸ್ಪಷ್ಟವಾದುದು : ವಿಷ್ಣುಪಮೊರ್ಮೆಯುಂ ತಮಗೆ ಹಸ್ತತಲಾಮಲಕಂಬೊಲೆಯ್ದೆ ವಿಸ್ಪಷ್ಟಮೆನಿಪ್ಪ ಬೋಧಯುತರಿಂ ತಿಳಿದಿಲ್ಲಿಗ

ತಕ್ಕುದೇನುಮಂ ಚೇಷ್ಟಿಪಮನ್ನೆಗಂ ಮನದೊಳುಮ್ಮಟಿಸಲ್ಕಣಮಾಗದು (ಚಂದ್ರಪು. ೩-೬೮). [ಸಂ.]

ವಿಸ್ಫಾರ (ಗು). ೧. ಅತಿಶಯವಾದ : ಸಮಗ್ರೋದಗ್ರವಿಗ್ರಹವಿಜಿತ ವಿಗ್ರಹ ವೀರ ವೀರಪ್ರಮಥವಾರದಿಂ ವಿಸ್ಫಾ[ಪಾಠಾಂ. ಸ್ಫೂ]ರ ವೀರರಸಮುಮಂ (ರಾಜಶೇ. ೧೪-೧೦೬ ವ). ೨. ಹೊಳೆಯುವ ; ಪ್ರಕಾಶಿಸುವ : ವಿಸ್ಫಾರ ವಿದ್ಯುತ್ಸಂಭಿನ್ನಾಂಭೋಭೃದುದ್ಯತ್ತಟಚಟುಳಚಳನ್ಮೀನಘೇನಪ್ರತಾನಂ . . . ಸಮುದ್ರಂ (ರಾಜಶೇ. ೧-೯೦). (ನಾ). ೩. ಅಲುಗಾಡುವಿಕೆ ; ನಡುಗುವಿಕೆ. ೪. ಬಿಲ್ಲಿನ ಹೆದೆಯ ಧ್ವನಿ; ಧನುಷ್ಟಂಕಾರ : "ಬಿಲ್ಲ ಜೇವೊಡೆಯ ಧ್ವನಿ – ವಿಸ್ಫಾರ" (ನಾಚಿರಾ. ೬). ೫. ಹೊಳಪು ; ಪ್ರಕಾಶ. [ಸಂ.]

ವಿಸ್ಫಾರಿತ (ಗು). ಅಗಲವಾದ ; ಅರಳಿದ : ಆಕೆಯ ಮುಖಾರವಿಂದಮನಾನಂದ ವಿಸ್ಫಾರಿತವಿಲೋಚನನಾಗಿ ನೋಡಿ (ಪಂರಾಮಾ. ೩-೬೫ ವ). [ಸಂ.]

ವಿಸ್ಫಾರಿಸು (ಕ್ರಿ). ದೊಡ್ಡದಾಗು ; ಅಗಲವಾಗು : ಸುಯ್ ಸುಯ್ಯೆಳೆದಯ ತಿದಿಯೊತ್ತಿ ಮೂಗಿನ ಸೊಳ್ಳೆ ವಿಸ್ಫಾರಿಸಲ್ (ಶ್ರೀರಾಮಾ. ೭೩-೫೧೬).

[ವಿಸ್ಫಾರ + -ಇಸ್ಕು]

ವಿಸ್ಫಾಲ (ನಾ). ಅಲುಗಾಟ ; ಕಂಪನ : ನಿಶ್ಶಬ್ದತೆಯ ಪಕ್ಷವಿಸ್ಫಾಲಮಂಬಿನಂ ಕಡಲತೀರದ ತೆಂಗುಮರಗಳೊಳ್ ನರ್ತಿಸಿರೆ ಗರಿ ಮರ್ಮರಂ (ಶ್ರೀರಾಮಾ. ೩೩೪-೧೦೩).

[ಸಂ.]

ವಿಸ್ಫಾಲನೆ (ನಾ). = ವಿಸ್ಫಾಲ : ಕೋಸಲಾಕಾಶವಿಸ್ತಾರಮಿಾ ರಾಮನಾತ್ಮದ ವಿರಾಟ್ ಪಕ್ಷವಿಸ್ಫಾಲನೆಗೆ ಸಾಲದಲ್ಪಂ (ಶ್ರೀರಾಮಾ. ೧೭೨-೫೪೮). [ಸಂ. ವಿಸ್ಫಾಲನ]

ವಿಸ್ಫಾಳನ (ನಾ). = ವಿಸ್ಫಾಲ : ಕೇರಳಭೂಪಭುಜಾವಲೇಪವಿಸ್ಫಾಳನ (ಎಕ. V. ದೇಲೂರು. ೧೨೪-೨೨ ; 1133). [ಸಂ. ವಿಸ್ಫಾಲನ]

ವಿಸ್ಫುಟ (ನಾ). ಚೆನ್ನಾದುದು ; ಸ್ಪಷ್ಟವಾದುದು : ಇಂದ್ರಿಯಶಕ್ತಿಯಂ ಜರೆ ಭರಂಗಯ್ಯೆಯ್ದೆ ಬೆನ್ನಟ್ಟಿ ವಿಸ್ಫುಟಮಿಲ್ಲಿಚ್ಚೆಯ ಮಚ್ಚು (ಕಾಂತಿಪು. ೭-೬೭) ; ನಾವುಚ್ಚುಟೆಯ ತವಸಿಗಳೆಂಬುದಿದು ವಿಸ್ಫುಟವಲೇ ತಪ್ಪೇನು (ಕುಮಾಅ. ೬-೫). [ಸಂ.]

ವಿಸ್ಫುರಣ (ನಾ). ೧. ಅಲುಗಾಟ; ಕಂಪನ . ೨. ಹೊಳಪು; ಕಾಂತಿ : ವಾಲ್ಮೀಕೇಶ್ವರನ ಚರಣಾರವಿಂದಾಮಂದ ಸುರುಚಿರವಿಸ್ಫುರಣಮೊಪ್ಪಿ (ಬಸವಪು. ೨೬-೧೦). [ಸಂ.]

ವಿಸ್ಫುರಣೆ (ನಾ). = ವಿಸ್ಫುರಣ ೨ : ಚಲನೆ ವಿಶ್ವಾಸ್ತರಣೆಯದುವೆ ಮಾಯಾಭ್ರಮಣೆ ಸಲೆ ಬಗೆಯಲದು ಪರಬ್ರಹ್ಮವಿಸ್ಫುರಣೆ (ಮಂಕುಕ. ೮೮). [ಸಂ. ವಿಸ್ಫುರಣ]

ವಿಸ್ಫುರತ್ತು (ಗು). ೧. ಹೊಳೆಯುವ ; ಪ್ರಕಾಶಿಸುವ : ವಿಸ್ಫುರದ್ದಿನಕರನಂ ಚಿತ್ರಾಂಗದಾವನೀಶಂ ಕಂಡಂ (ಆದಿಪು. ೧೬-೪೮) ; ಲಲಿತ ಚಿದ್ವಿಸ್ಫುರದಮೃತಕರಕುಲಜನಿತ ಪಂಚಾಮೃತವನೆಱೆದು (ಬಸವಪು. ೩೫-೧೨). ೨. ಬೆಳೆಯುವ ; ವೃದ್ಧಿಯಾಗುವ : ತವದ ಪುರಾತನ ಭವಬಂಧ ವಿಸ್ಫುರತ್ಪ್ರೇಮಮಂತೆ ಬಂದವರ್ಗೆ ಪುನರ್ನವಮಾದುದು (ಶಾಂತಿಪು. ೬-೧೨೫). [ಸಂ. ವಿಸ್ಫುರತ್]

ವಿಸ್ಫುರಿತ (ಗು). ೧. ಅಲುಗಾಡುವ ; ಕಂಪಿಸುವ ; ನಡುಗುವ. ೨. ಹೆಚ್ಚಾದ ; ವೃದ್ಧಿಯಾದ. (ನಾ). ೩. ಹೆಚ್ಚಾದುದು ; ವೃದ್ಧಿಗೊಂಡುದು : ಪೋಕುಂ . . . ಆನವರಿದಿರಿದಿರೊಳ್ ಕಾದಿ ಸತ್ತಂದು ಮೇಣ್ ವಿಸ್ಫುರಿತಂ ಮತ್ಕೋಪಮುಂ (ಪಂಪಭಾ. ೧೩-೨೦). [ಸಂ.]

ವಿಸ್ಫುರಿಸು (ಕ್ರಿ). ಹೊಳೆ ; ಬೆಳಗು ; ಪ್ರಕಾಶಿಸು : ದಶರಥಚಕ್ರವರ್ತಿಯ ಧರೆಯ ಪರಿವೃತ ಕೀರ್ತಿಲತೆ ವಿಸ್ಫುರಿಸುತಿರ್ದುದು ಸಕಲಜನಪದಜನದ ಕಣ್ಮನಕೆ (ತೊರರಾ. ೧-೩-೩೧). [ವಿಸ್ಫುರಣ + - ಇಸ್ಕು]

ವಿಸ್ಫುಲಿಂಗ (ನಾ). ೧. ಬೆಂಕಿಯ ಕಿಡಿ : ಅನೇಕರಾಜನ್ಯಕಮಕುಟಸಂಘಟ್ಟೋಚ್ಚಲನ್ಮಣಿ ಮರೀಚಿಗಳ್ ವಿಳಯಾನಳ ವಿಸ್ಫುಲಿಂಗಂಗಳಂತೆ ದೆಸೆದೆಸೆಗೆ ಕೆದಱೆ (ಆದಿಪು. ೧೪-೮೨ ವ); ಚಟುಳಕೋಪಾಗ್ನಿಯಲಿ ನಾಸಾಪುಟದ ಸುಯ್ಯಲಿ ವಿಸ್ಫುಲಿಂಗೋತ್ಕಟ ಸಮಾಧಿಗಳಿದ್ದಿಲಲಿ . . . ಬಾಹುಪ್ರತಾಪದ ಪುಟವನೆತ್ತದೆ ಮಾಣನು (ಕುಮಾರ್ಯೂ. ೧೯-೧೧). ೨. ಒಂದು ಬಗೆಯ ವಿಷ : "ಶೃಂಗಿಕಃ . . . ವಿಸ್ಫುಲಿಂಗಃ – ಈ ೬ ವಿಷಭೇದಂಗಳ್" (ಹಲಾಯು. ೧೦೬-೨೫). [ಸಂ.]

ವಿಸ್ಫುಲಿಂಗಿತ (ನಾ). (ಆಲಂ) ಬೆಂಕಿಯ ಕಿಡಿಯಂತೆ ಕೆರಳಿದವನು : ಕೆಂಪನಂಬುಜಾಂಬಕಯುಗಳನೊಲೆದೊಲೆದು ರೋಷಪ್ರಕಟಪಾವಕವಿಸ್ಫುಲಿಂಗಿತ ನಾದನಡಿಗಡಿಗೆ (ಕುಮಾಭಾ. ೬-೨೮). [ಸಂ.]

ವಿಸ್ಫುಲಿಂಗಿಸು (ಕ್ರಿ). ಕಿಡಿಗೊಳ್ಳು ; ಹತ್ತಿಕೊಳ್ಳು : ಧಾಯಾರಟಿತರಾತ್ರಿ ತಾನಾಯ್ತೊ ಚಂದ್ರೋದಯೋಜ್ವಲಿತಮೆಂಬವೋಲ್ ಭೋಂಕನೆಯ ವಿಸ್ಫುಲಿಂಗಿಸಿದುದು ವನಧರಿತ್ರಿ (ಶ್ರೀರಾಮಾ. ೨೩೦-೭೫). [ವಿಸ್ಫುಲಿಂಗ + - ಇಸ್ಕು]

ವಿಸ್ಫೂರ್ಜಿತ (ಗು). ಕಾಂತಿಯುತನಾದ ; ತೇಜಸ್ವಿಯಾದ : ಪಿರಿದುತ್ಸಾಹದ ನೋಡಿಯುಂ ಗಿರಿಶನಂ . . . ಪೂರ್ಣೋತ್ಸವಮೈದಿಯುಂ ತಡೆದುದಿಲ್ಲೇನೆಂಬೆನುದ್ಯತ್ಕಳೇವರ ವಿಸ್ಫೂರ್ಜಿತಸಾತ್ವಿಕಂ ಗುಣನಿಧಿ ಚೋಳಭೂಪಾಲಕಂ (ರಾಜಶೇ. ೧೪-೯೭). [ಸಂ.]

ವಿಸ್ಫೂರ್ತಿ (ನಾ). ಪ್ರಕಾಶಿಸುವವನು ; ತೇಜಸ್ವಿ : ಅವಿರಳಿತತೇಜಃಪ್ರಪೂರ್ತಿ ಸಮಸ್ತವಿಸ್ಫೂರ್ತಿ (ಬಸಪು. ೪೬-೪೦). [ಸಂ.]

ವಿಸ್ಫೋಟ (ನಾ). ೧. ಮೈಮೇಲೆ ಏಳುವ ಗುಳ್ಳೆ, — ಬೊಬ್ಬೆ : "ವಿಸ್ಫೋಟಃ, ಪಿಟಿಕಃ – ೨ ಹೊಕ್ಕು, ಹುಣ್ಣಿನ ಹೊಕ್ಕು, ಬೊಬ್ಬೆ" (ಸಿದ್ಧಾಂತಿ. ೧೦೩). ೨. ಒಡೆಯುವಿಕೆ ; ಬಿರಿಯುವುದು. [ಸಂ.]

ವಿಸ್ಫೋಟಿಸು (ಕ್ರಿ). ಉರಿ ; ಜ್ವಲಿಸು : ಹುರಿದು ಮುಕ್ಕುವಂತಹ ಹವೆಯು ವಿಸ್ಫೋಟಿಸುತ್ತಿದ್ದಿತು (ಝಾರಾಣಿ. ೩೮೯). [ವಿಸ್ಫೋಟ + - ಇಸ್ಕು]

ವಿಸ್ಮಯ (ನಾ). ೧. ಆಶ್ಚರ್ಯ ; ಅಚ್ಚರಿ ; ಬೆರಗು : ಶ್ರೀಗಧಿಪತಿ ವಿಸ್ಮಯಮನ ನಾಗಿ ಬೆರಲ್ಮಿಡಿದು ವಿಪ್ರತನಯರ ವಿದ್ಯೋದ್ಯೋಗಕ್ಕೆ ಮೆಚ್ಚಿ ತಲೆಯಂ ತೂಗಿದಂ (ಸುಕುಮಾ. ೩-೧) ; ಈ ಕಾಂತಿಯಾ ತನುಚ್ಛಾಯೆಯಾ ವಿಸ್ಮಯಂ . . . ಈ ಯೌವನೋದಯಂ ಮಾನವರ್ಗಿಲ್ಲ (ನಂಬರಿ. ೩-೨೧). ೨. ಗರ್ವ ; ಅಹಂಕಾರ ; ದರ್ಪ. ೩. [ಕಾವ್ಯಮಿಾ] ಲೋಕೋತ್ತರವಾದ ವಸ್ತುಗಳ ದರ್ಶನದಿಂದ ಹೃದಯದಲ್ಲಿ ಉಂಟಾಗುವ ವಿಕಾಸದ ಅನುಭವ ; ಅದ್ಭುತರಸದ ಸ್ಥಾಯಿಭಾವ : ರತಿ ಪರಿಹಾಸಂ . . . ವಿಸ್ಮಯಾಶಯತ್ವಪ್ರತಿನಿಯತ ಸ್ಥಾಯಿಭಾವಮಿವು ತಾಮಕ್ಕುಂ (ಕಾವ್ಯಾವ. ೭೯೪). [ಸಂ.]

ವಿಸ್ಮಯಂಗೊಳ್, ವಿಸ್ಮಯಗೊಳ್ (ಕ್ರಿ). ಆಶ್ಚರ್ಯಗೊಳ್ಳು ; ಅಚ್ಚರಿಪಡು ; ಬೆರಗಾಗು : ಕ್ಷಣದೊಳಾ ಲಿಪಿಯಂ ಸಭೆ ಕೇಳ್ದು ವಿಸ್ಮಯಂಗೊಳೆ (ವೃಷವಿ. ೫-೨. . ಊರ್ಧ್ವಲೋಕವ ಪತ್ತಿಸುವ ಶೀಳ್ದಾರಿಗೆರಗದೆ ವಿಸ್ಮಯಂಗೊಳದೆ (ಗಗತಾ. ೧೬-೧೮). **ವಿಸ್ಮಯಗೊಳ್** : ಮದನನೊ ನಳನೊ ನಳಕೂಬರ ಜಯಂತನೊ ಎನುತ ವಿಸ್ಮಯಗೊಂಡಳಾ ತರುಣಿ (ನಳಚ. ೩-೩೪). [ವಿಸ್ಮಯ + ಕೊಳ್$_1$]

ವಿಸ್ಮಯಂಬಡು, ವಿಸ್ಮಯಪಡು, ವಿಸ್ಮಯಬಡು (ಕ್ರಿ). = ವಿಸ್ಮಯಂಗೊಳ್ : ಈ ನೆರೆದ ನೆರವಿ ವಿಸ್ಮಯಂಬಟ್ಟದೇನಂ ನೋಡಿದಪ್ಪುದು (ಆದಿಪು. ೪-೩ ವ) ; ಸೂರ್ಯಮಿತ್ರಂ ತನ್ನೊಳ್ ವಿಸ್ಮಯಂಬಟ್ಟು (ಸುಕುಮಾ. ೨-೪೮ ವ). **ವಿಸ್ಮಯಪಡು** : ಆ ದೃಶ್ಯವನ್ನು ಕಂಡು ಜನರೆಲ್ಲ ವಿಸ್ಮಯಪಟ್ಟರು (ರೂಢಿ). **ವಿಸ್ಮಯಬಡು** : ವಿಸ್ಮಯಬಟ್ಟುದೀ ಮೂಲೋಕವದುಭುತಶಿಶುಪರಾಕ್ರಮಕೆ (ನಿಭಾಗ. ೩-೨-೨೦).

[ವಿಸ್ಮಯ + ಪಡು$_1$]

ವಿಸ್ಮಯಂಬಡೆ (ಕ್ರಿ). = ವಿಸ್ಮಯಂಗೊಳ್ : ಎನ್ನ ಭುಜಾಗ್ರವಿಕ್ರಮಕೆ ಮೆಚ್ಚಿದೆ ನೀಂ ಭವದೀಯ ಸಾಹಸಕ್ಕಾನ್ನೆಜೆ ವಿಸ್ಮಯಂಬಡೆದೆಂ (ಶಬಶಂ. ೪-೮೬).

[ವಿಸ್ಮಯ + ಪಡೆ$_1$]

ವಿಸ್ಮಯಕಾರಿ (ನಾ). ಅಚ್ಚರಿಯನ್ನುಂಟು ಮಾಡುವಂಥದು ; ಆಶ್ಚರ್ಯದಾಯಕವಾದುದು : ಇದು ಅವನಿಗೆ ವಿಸ್ಮಯಕಾರಿಯಾಗಿ ಕಂಡಿತು (ಪುನರು. ೧೯೭).

[ಸಂ. ವಿಸ್ಮಯಕಾರಿನ್]

ವಿಸ್ಮಯಗೊಳ್ 'ವಿಸ್ಮಯಂಗೊಳ್' ನೋ.

ವಿಸ್ಮಯಪಡು 'ವಿಸ್ಮಯಂಬಡು' ನೋ.

ವಿಸ್ಮಯಪದ (ನಾ). ಆಶ್ಚರ್ಯವನ್ನುಂಟುಮಾಡುವ ವಿಷಯ : ಮೋಹನಮಂ ಪುಟ್ಟಿಸಿ ತನ್ನ ದಿಟ್ಟಿವೆಳಗಿಂ ನುಣ್ಪೆಟ್ಟು ಕೊಟ್ಟಳ್ ಘನಸ್ತನಭಾರಾವನತಾಂಗಿ ವಿಸ್ಮಯಪದವ್ಯಾಹಾರಮಂ ಹಾರಮಂ (ಮಲ್ಲಿಪು. ೮-೧೧೮). [ಸಂ.]

ವಿಸ್ಮಯಬಡು 'ವಿಸ್ಮಯಂಬಡು' ನೋ.

ವಿಸ್ಮಯಭರಿತ (ಗು). ೧. ಆಶ್ಚರ್ಯದಿಂದ ಕೂಡಿದ ; ಬೆರಗಿನಿಂದ ಕೂಡಿದ. (ನಾ). ೨. ಆಶ್ಚರ್ಯದಿಂದ ಕೂಡಿದವನು ; ಬೆರಗಾದವನು : ಚೌಡಪ್ಪ ವಿಸ್ಮಯಭರಿತರಾದರು (ಹಳ್ಳಿಹಾ. ೧೨೧). [ಸಂ.]

ವಿಸ್ಮಯವೊಂದು (ಕ್ರಿ). = ವಿಸ್ಮಯಂಗೊಳ್ : ಚೀಲಾಳನ ನುಡಿಗಳಿಗವುಂದ ದೃಢಚಿತ್ತಕ್ಕೆ ವಿಸ್ಮಯವೊಂದಿ ನುತಿಸುವ ತಪಸಿಯೆಯ್ದಿದನು (ಬಸವ. ೨೪-೧೫).

[ವಿಸ್ಮಯ + ಪೊಂದು, (< ಪೊರ್ದು)]

ವಿಸ್ಮಯಾಕ್ರಾಂತ (ನಾ). ಸೋಜಿಗಗೊಂಡವನು ; ಆಶ್ಚರ್ಯಭರಿತನಾದವನು : ಪಂಚಾಶ್ಚರ್ಯಮೆತ್ತಂ ನೆಗಟ್ ಶಿಬಿರದೊಳ್ ವಿಸ್ಮಯಾಕ್ರಾಂತನಿರ್ದಂ . . . ಸುಕವಿಜನ ಮನೋಮಾನಸೋತ್ತಂಸಹಂಸಂ (ಆದಿಪು. ೪-೯೮). [ಸಂ.]

ವಿಸ್ಮಯಾವೃತ (ಗು). ಆಶ್ಚರ್ಯದಿಂದ ಕೂಡಿದ ; ಬೆರಗು ಆವರಿಸಿದ : ಸಂಭ್ರಮ ವಿಸ್ಮಯಾ(ವೃ)ತದಿಗಂತವಿಲೋಕವಿಕಾರವರ್ಜಿತಗತಿಕ್ರಮಮೊಪ್ಪೆ ವನಾಂತದಿಂ ವ್ರತಿ ಬರುತ್ತಿರೆ ಕಂಡು (ಪುಷ್ಪಸ. ೧೩-೧೧೭). [ಸಂ.]

ವಿಸ್ಮರಣ.(ನಾ). ನೆನಪಿಲ್ಲದಿರುವಿಕೆ ; ಮರವೆ ; ವಿಸ್ಮೃತಿ : ಅತಿಶಯತರಮೆನಿಪ ಗುಣವ್ರತದೊಳ್ ದಿಗ್ವಿರತಿಗಕ್ಕುಂ . . . ತಿರ್ಯಗ್ವ್ಯತಿಕ್ರಮಕ್ಷೇತ್ರವೃದ್ಧಿವಿಸ್ಮರಣಂಗಳ್ (ಸುಕುಮಾ. ೬- ೧೮). [ಸಂ.]

ವಿಸ್ಮರಣೆ (ನಾ). = ವಿಸ್ಮರಣ : ಉಪನಿಷತ್ತುಗಳ ಪ್ರಕಾರ ಆತ್ಮಸ್ವರೂಪದ ವಿಸ್ಮರಣೆಯೇ ಬಂಧನಕ್ಕೆ ಆಧಾರವಾಗಿರುತ್ತದೆ (ತತ್ತ್ವಶಾ. ೬೪) ; ಅವನಿಗೆ ಸ್ಮರಣೆಯೆ ಮರಣವಾಗಿತ್ತು, ವಿಸ್ಮರಣೆಯೆ ಹರಣವಾಗಿತ್ತು (ಪುನರು. ೪೦). [ಸಂ. ವಿಸ್ಮರಣ]

ವಿಸ್ಮಿತ (ಗು). ೧. ಆಶ್ಚರ್ಯಗೊಂಡ ; ಸೋಜಿಗಪಟ್ಟ ; ಬೆರಗಾದ : ಆಗಳತ್ಯಂತ ವಿಸ್ಮಿತಸ್ವಾಂತನಾಗಿ ಕಂಸಂ ನಿಜಾಂತಿಕದೊಳಿರ್ದ ಮಂತ್ರಿಗಳ್ಗಾವೃತ್ತಾಂತಮಂ ಪೇಳ್ವುದುಂ (ಜಗ. ೨-೪೪ ವ) ; ಶಿವಧರ್ಮಧರ್ಮೋತ್ತರಪ್ರಸಂಗಂಗಳಂ . . . ತೋಜೆ ವಿಸ್ಮಿತನಾಗಿ ನಡೆತರುತಿರಲು (ಸಂಬಂ. ೯ - ೧೦೬). (ನಾ). ೨. ಗಾಬರಿ ; ದಿಗ್ಭ್ರಮೆ : ಸ್ಮಿತವೆ ವಿಸ್ಮಿತವಾಯ್ತು ಅಸ್ಪರ್ಶಸ್ಪರ್ಶದಲಿ (ಅರಿಂ. ೪೪೫-೧೧). ೩. ಸೋಜಿಗಗೊಂಡ ವ್ಯಕ್ತಿ : ಆಚಾರಿಯನ್ನು ನೋಡಿ ಬಸವಂತಿ ಒಂದಿಮ್ಮು ವಿಸ್ಮಿತಳೇ ಆದಳು (ದೀಪಹ. II.೧೬೮). ೪. [ನಾಟ್ಯ] ನೃತ್ಯದಲ್ಲಿ ನೋಟದ ಒಂದು ಭಂಗಿ ; IP "ಪ್ರೀತಿಯಿಂದ ಕೂಡಿ ಕಣ್ಣನ್ನು ತೆರೆದು ರೆಪ್ಪೆ ಬಡಿಯದೆ ಮೇಲ್ನೋಟದಿಂದ ದೃಷ್ಟಿಸಿ ನೋಡುವುದು" (ಶಾಸ್ಮರಂ. ೨೬೪ ಗದ್ಯಾನುವಾದ) : ಮಿಱುಗುವ ಕಣ್ಣಿಂ ನಿಟ್ಟಿಸುವೆಱೆಯದುಂ ತಾನೆ ವಿಸ್ಮಿತಾಖ್ಯಮೆನಿಕ್ಕುಂ (ಶಾಸ್ಮರಂ. ೩-೨೫). ೫. ನರ್ತನಮಾಡುವಲ್ಲಿ ಉಸಿರು ಬಿಡುವ ಒಂದು ಕ್ರಮ; IP "ಯತ್ನಪೂರ್ವಕ ಅನ್ಯಮನಸ್ಕನಾಗಿದ್ದು ಉಸಿರು ಬಿಡುವುದು" (ಶಾಸ್ಮರಂ. ೨೭೭ ಗದ್ಯಾನುವಾದ): "ಸ್ಪಷ್ಟ . . . ಉಲ್ಲಾಸಿತ, ವಿಮುಕ್ತ, ವಿಸ್ಮಿತ, ಸ್ಖಲಿತ, ಪ್ರಸೃತ — ಈ ಒಂಬತ್ತೂ ಕೋಹಳನ ಮತದಂತೆ ಗಾಳಿಯ ಭೇದಂಗಳ್" (ಶಾಸ್ಮರಂ. ೩- ೭೮ ವ). [ಸಂ.]

ವಿಸ್ಮೃತ (ಗು). ಮರೆತ ; ನೆನಪಿಲ್ಲದ : ವಿಸ್ಮೃ[ಪಾಣಿ. ಸ್ಮೃ]ತಪಕ್ಷ್ಮಪಾತನಮಪೂರ್ವಾ ಲೋಕನಾಕೌತುಕಾಕುಳಿತಾಂತಃಕರಣಂ ಸ್ವಕೀಯಭವನವ್ಯಾಪಾರಚಿಂತಾಂತರಂಗಳನೆಲ್ಲಂ ಮಱೆದಿಂತು ಕೂಡಿ ನೆರೆದತ್ತೈತ್ತಂ ಪುರಸ್ತ್ರೀಜನಂ (ಆದಿಪು. ೪-೬೦). [ಸಂ.]

ವಿಸ್ಮೃತಿ (ನಾ). = ವಿಸ್ಮರಣ : ವಿಸ್ಮೃತಿ ಜನಿಸುವುದು ಮೇಣವರಿಗೀ ಸಂಸಾರ ಧರ್ಮದಲಿ (ನಿಧಾಗ. ೩-೧೩-೧೩) ; ಹೆಸರಾಗದಿಹ ಜೀವಿ ಬಸವಳಿಸದಿರು ಮನದಿ ವಿಸ್ಮೃತಿಯನಪ್ಪದೆ ಹೆಸರು ಕೊನೆಗೆ? (ಕಲ್ಕೋಲ. ೩೩-೮). [ಸಂ.]

ವಿಸ್ಮೇರ (ಗು). ಆಶ್ಚರ್ಯಗೊಂಡ ; ಸೋಜಿಗಗೊಂಡ : ಧರಾಭಾರಾವಹಂ ಬಾಹುದಿವ್ಯಕರಿ ಶ್ರೀಕರಮಂ ಕರಂ ಜಱಿಯೆ ಚಂಚದ್ರಶ್ಮಿವಿಸ್ಮೇರದೃಷ್ಟಿಕಲಾಪೇಕ್ಷಣ ಮಬ್ಜಮಂ ಪಳಿಯೆ (ರಾಜಶೇ. ೩-೩). [ಸಂ.]

ವಿಸ್ರ (ನಾ). ಕೊಳೆತು ಕೆಟ್ಟವಾಸನೆ ಬರುವ ಮಾಂಸ : "ನಾಱುವ ಮಾಂಸಂ ವಿಸ್ರಂಯೆಂಬುದು" (ಹಲಾಯು. ೧೦೪-೯). [ಸಂ.]

ವಿಸ್ರಂಭ (ನಾ). ನಂಬುಗೆ ; ವಿಶ್ವಾಸ : ಉಚಿತಸೇವಾಜಾತಚಾತುರ್ಯದಿಂದೆ ಕರಂ ಚಿತ್ತಮನಪ್ಪಗೆಯ್ದಖಿಳವಿಸ್ರಂಭಕ್ಕಮಾವಾಸಮಾಗಿ ಕುಮಾರಂಗೆ ಮಹಾಪ್ರಧಾನತನಯಂ ಮಿತ್ರತ್ವಮಂ ತಾಳ್ದಿದಂ (ಕಾದಂಪೂ. ೪೪೦). [ಸಂ.]

ವಿಸ್ರಂಭದೋಷ (ನಾ). ವಿಶ್ವಾಸಘಾತ : ಅಪನಂಬಿಕೆ : ವಿಶ್ವಾಸದ್ರೋಹ : ವಿಟದನಚಿತುಷ್ಪಸದೊಳ್ ಪಾಲುಂ ನೀರುಂ[ಂ] ಬೆಗಸಿಬಂತಪ್ಪ ಕೆಳೆಯರಿರ್ದು ವಿಸ್ರಂಭ ದೋಷಪ್ರಸಕ್ತರಾದೆಡೆಯೊಳೊರ್ವನೊರ್ವಂಗೆ ಕೋಳ್ಗಗ್ಗಳಮಾದ ಮನೆಗಂ ತೋಳ್ಗಗ್ಗಳನುಂ ಬಿದ್ದೆಗಂ ಬೇಸತ್ತು (ಶಾಂತಿಪು. ೮-೭೮ ವ). [ಸಂ.]

ವಿಸ್ರಬ್ಧ (ನಾ). ತಾಳ್ಮೆಯುಳ್ಳವನು : "ವಿಸ್ರಬ್ಧಃ, ಸ್ಥಿರಃ — ಈ ೨ ಹದುಳಿ(ಗ)ದಂ" (ಹಲಾಯು. ೬೧-೨೧೫). [ಸಂ.]

ವಿಸ್ರಸೆ (ನಾ). ೧. (ಮುಪ್ಪಿನಿಂದುಂಟಾಗುವ) ದುರ್ಬಲತೆ ; ಅಶಕ್ತತೆ ; ದೌರ್ಬಲ್ಯ : ರೂಪ ಸೌನ್ದರ್ಯ ಯವ್ವನ ಶೃಂಗಾರ ಕಲೆಗಳೆಂಬ ಪಂಚಾಸವಗಳನ್ನು ನಿಮ್ಮ ವಿಸ್ರಸಾವೇಶದ ಅಂಗಜಾಗ್ನಿಯಿಂದ ಹದಗಾಸಿ (ಮುಂತ್ರಶ. ೨೯-೧೭). ೨. ಮುಪ್ಪು ; ಮುದಿತನ : "ಜರಾ, ವಿಸ್ರಸಾ — ಈ ೨ ಮುಪ್ಪು" (ಹಲಾಯು. ೮೩-೬೪೯).

[ಸಂ. ವಿಸ್ರಸಾ]

ವಿಸ್ರಸ್ತ (ಗು). ೧. ಕೆಳಗೆ ಬಿದ್ದ ; ಉದುರಿದ. ೨. ಅಶಕ್ತವಾದ ; ದುರ್ಬಲವಾದ : ವಿಸ್ರಸ್ತ, ಬಹಳದೋಷತಮಿಸ್ರರಂ . . . ಮುನಿಪತಿಗಳಂ ಮನಂಬಿಡೆ ಕಂಡೆಂ (ಆದಿಪು.೩-೬೬). [ಸಂ.]

ವಿಸ್ರಾವ (ಗು). ೧. ಹರಿಯುವ ; ಪ್ರವಹಿಸುವ. ೨. ಹನಿಯುವ ; ಒಸರುವ. [ಸಂ.]

ವಿಸ್ವರ (ಗು). ೧. ಹೊಂದಿಕೆಯಿಲ್ಲದ ; ಸಾಮರಸ್ಯವಿಲ್ಲದ. (ನಾ). ೨. [ವ್ಯಾಕ] ಸ್ವರಾಕ್ಷರವಿಲ್ಲದುದು : ಧಾತುವಿನಂತ್ಯಾಕ್ಷರಲೋಪಂ ಚರಮಂ ವಿಸ್ವರಮಾದ್ಯಂ ಹ್ರಸ್ವಮಕ್ಕುಮಾಗಂಬುದಲ್ಲೊಳ್ (ಶಮದ. ೨೪೩). [ಸಂ.]

ವಿಹಂಗ (ನಾ). ೧. ಪಕ್ಷಿ ; ಹಕ್ಕಿ : ಆ ಮಾತಂಗಂ ವಿಹಂಗಸಂಗತಪಂಜರಮಂ ಪಿಡಿದು ನರೇಂದ್ರನಂ ದೇವ ಬನ್ನಪಮೆಂದಿಂತೆಂದಂ (ಕಾದಂಪೂ. ೫೩) ; ಬಂಧದಲ್ಲಿ ಬಿದ್ದ ವಿಹಂಗನಂತೆ ಇದಱ ದಂದುಗವ ನೋಡಲಾಜೆ (ಮೋಹಮಾ. ೧೫೭-೫೦೭). ೨. ಮೋಡ ; ಮೇಘ : 'ವಿಹಂಗಧ್ವಾನ' ಪರಾ. [ಸಂ.]

ವಿಹಂಗಗಮನ (ನಾ). (ಗರುಡ)ಪಕ್ಷಿಯನ್ನು ವಾಹನವಾಗಿ ಉಳ್ಳವನು ; ಪಕ್ಷಿವಾಹನ ; ವಿಷ್ಣು : ಮಂಗಳಾಂಗ ಮಾತಂಗವರದ ವಿಹಂಗಗಮನ . . . ನಿನ್ನಯ . . . ಚರಣಂಗಳ್ಬಗೆ ಭೃಂಗನಪ್ಪೆನೆಂತೊ (ವಿದಾಸ್ಮ. ೪೭-೧). [ಸಂ.]

ವಿಹಂಗಧ್ವಾನ (ನಾ). ಮೇಘಧ್ವನಿ ; ಗುಡುಗು : ಆನಕಧ್ವನಿ ವಿಹಂಗಧ್ವಾನಮಂ ಪೋಲ್ ವಿಭ್ರಮದಿಂ ಬಂದನದೊಂದು ನಂದನವನಂ ಬರ್ಪಂತೆ ಸಂಕ್ರಂದನಂ (ಪುಷ್ಪಸ. ೧೪-೪೫). [ಸಂ.]

ವಿಹಂಗನಾಡಿ (ನಾ). ಶರೀರದ ಒಂದು ನಾಡಿಯ ಹೆಸರು : ಮಯೂರನಾಡಿ . . . ವಿಹಂಗನಾಡಿ . . . ಸಂತೋಷನಾಡಿ — ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋರುವ ನಾಡಿ ಜೀರ್ಣಪರ್ಣದಂತೆ (ಶರಚ. ೪೬೦). [ಸಂ.]

ವಿಹಂಗಪ (ನಾ). ಪಕ್ಷಿಗಳ ಒಡೆಯ ; ಗರುಡ : ತವೆ ಹರ್ಯಜೇಂದ್ರ ಸುರದನುಜನರಫಣಿಮನು ಮುನಿ ವಿಹಂಗಪಾದ್ಮಖಿಲರೀಶಕಾರುಣ್ಯದಿಂದವೆ ಬಾಳ್ದರಿದು ಶಾಸ್ತ್ರಸಿದ್ಧಂ (ಪದ್ಮರಾ. ೧೧-೧೫೯). [ಸಂ.]

ವಿಹಂಗಮ (ನಾ). ೧. = ವಿಹಂಗ ೧ : ನಿನ್ನಯ ದೇಶಮೆತ್ತಣದು . . . ಮಱಸಲೆಂದು ವಿಹಂಗಮವೇಷಿಯಾದೆಯೋ (ಕಾದಂಪೂ. ೯೦) ; ವಿಹಂಗಮಗಳಂಚರಂ ತಂಗದಿರ ಬೆಂಗದಿರ ನುದಯಾಸ್ತ್ರಗಳ ಪೆಂಪು ಸರ್ವಮಂ ನಿನ್ನ ಅಂಗೋಪಾಂಗಮಂ ಸುತ್ತಿ ಮುತ್ತಿ ನೆಯ್ಮಲಿ (ಚಿತ್ರಾಂಗ. ೨೯-೮೦೬). ೨. ಸೂರ್ಯ ; ನೇಸರು : 'ವಿಹಂಗಮಕುಲ' ಪರಾ. [ಸಂ.]

ವಿಹಂಗಮಕುಲ (ನಾ). ಸೂರ್ಯವಂಶದವನು ; ರಾಮ : ನೆಗೆದನಂತುಟಿ ತಾನುಮಾ ವಿಹಂಗಮಕುಲಂ! (ಶ್ರೀರಾಮಾ. ೨೩೭-೨೦೯). [ಸಂ.]

ವಿಹಂಗಮದೃಷ್ಟಿ (ನಾ). ೧. ಪಕ್ಷಿಯು ಹಾರುವ ಎತ್ತರದಿಂದ ಕಾಣುವ ಭೂದೃಶ್ಯ, — ನೋಟ. ೨. ಯಾವುದಾದರೊಂದು ವಿಷಯದ ಸ್ಥೂಲವಾದ ಹಾಗೂ ವಿಶಾಲದೃಷ್ಟಿಯ ಪರಿವೀಕ್ಷಣೆ : ಅವರ ಉಪನ್ಯಾಸವು ಕಾವ್ಯದ ವಸ್ತುವನ್ನು ಕುರಿತ ವಿಹಂಗಮದೃಷ್ಟಿಯಾಗಿತ್ತು (ರೂಢಿ). [ಸಂ.]

ವಿಹಂಗಮನೋಟ (ನಾ). = ವಿಹಂಗಮದೃಷ್ಟಿ ೨ : ಭಾರತೀಯಸಂಸ್ಕೃತಿಯ ಬಹುಮುಖಗಳನ್ನು ವಿಹಂಗಮನೋಟದಲ್ಲಿಯಾದರೂ ತೋರಿಸಿರುವ ಗ್ರಂಥ ಕನ್ನಡದಲ್ಲಿ ಇದೊಂದೇ . . . ನಿಂದರೆ ಅತಿಶಯೋಕ್ತಿಯಲ್ಲ (ಭಾರದ. ೧ ಮುನ್ನುಡಿ).

[ವಿಹಂಗಮ + ನೋಟ]

ವಿಹಂಗರಾಜ (ನಾ). = ವಿಹಂಗಪ : ಪೃಥ್ವಿಯಾಕಾಶದ ಮಧ್ಯದಲ್ಲಿ ಬೇಚರ ಮಂಡಲ ಆ ಮಂಡಲದರಸು ವಿಹಂಗರಾಜ (ಕಲ್ಕಾಶಾ. ೧೦೭-೧೦) [ಸಂ.]

ವಿಹಂಗವಾಹನ (ನಾ). = ವಿಹಂಗಗಮನ : ಮಂಗಳಾಂಗ ವಿಹಂಗನಾಹನ ರಂಗರಾಯನ ಸಖನ ಹೊಳೆವ ಹಯಂಗಳೆನೆ ರಂಗೇರಿದಾಲಿಗಳಿಂದ ದಿಟ್ಟಿಸಿದ (ಸುದಾಮ. ೫-೧೭). [ಸಂ.]

ವಿಹಂಗಾಧಿಪ (ನಾ). = ವಿಹಂಗಪ : ವಿಶ್ವಜಗತ್‌ಕ್ಷೋಭಕರ ಸ್ವಭಾವಗತಿಯಿಂ ಬಂದಂ ವಿಹಂಗಾಧಿಪಂ (ಜಗವಿ. ೧೩-೩೭). [ಸಂ.]

ವಿಹಂಗಿಕೆ (ನಾ). ಭಾರವನ್ನು ಹೊರುವ ಅಡ್ಡೆಕೋಲು ; ಕಾವಡಿಕೋಲು : "ಭಾರಯಷ್ಟಿಃ, ವಿಹಂಗಿಕಾ — ಈ ೨ ಕಾ(ಚಿ)ಸಿನ ಕಂಬಿ" (ಹಲಾಯು. ೧೨೫-೭೬).

[ಸಂ. ವಿಹಂಗಿಕಾ]

ವಿಹಗ (ನಾ). = ವಿಹಂಗ ೧ : ಶುಕ ಶಾರಿಕಾದಿ ವಿಹಗಪ್ರಕರಂ ಮುಂ ಕೇಳ್ದ ವಚನಮಂ ನುಡಿವುದು (ಕಾದಂಬ. ೬೪) ; ಗಗನಗಮನದ ನಿಖಿಳವಿಹಗಾಳಿಗಳು ಬೆಂದವು (ಕುಮಾಕ. ೨೫-೪). [ಸಂ.]

ವಿಹಗಪ (ನಾ). = ವಿಹಂಗಪ : ಕವಚಧರಂ ಶೂರಂ . . . ವಿಹಗಪಾಸ್ಯಂ ನೃಯುಗ್ಮ ಮಧ್ಯತ್ರ್ಯಂಶಂ (ಜಾತಕ. ೧೯-೮). [ಸಂ.]

ವಿಹಗಯೋಗ (ನಾ). [ಜ್ಯೋತಿ] ಮೂವತ್ತೆರಡು ಯೋಗಗಳಲ್ಲಿ ಒಂದು ; ೫ ಏಳುಗ್ರಹಗಳೂ ದಶಮ ಚತುರ್ಥ ಕೇಂದ್ರಗಳಲ್ಲಿದ್ದರೆ ವಿಹಗಯೋಗವೆನಿಸುತ್ತದೆ : ಗ್ರಹಮೇಳುಂ ನಿಂದೊಡೆ ದಶಮ ಹಿಬುಕದೊಳ್ ವಿಹಗಯೋಗಮೆನಿಕುಂ (ಜಾತಕ. ೧೩-೩). [ಸಂ.]

ವಿಹಗಸ್ವನ (ನಾ). ಪಕ್ಷಿಯ ಧ್ವನಿ, — ಕೂಗು : ವಿಧವಿಧ ವಿಹಗಸ್ವನ . . . ಪವನದಂತೆ ಪಾವನ (ಸಂಗೀ. ೭೬-೨). [ಸಂ.]

ವಿಹಗೇಂದ್ರ (ನಾ). = ವಿಹಂಗಪ : ಸಾವಿರೊಳ್ಳೆಗೆ ಮಣಿವನೇ ವಿಹಗೇಂದ್ರನು (ಕುಮಾಸ. ೧೦-೫೪). [ಸಂ.]

ವಿಹಗೇಂದ್ರವಾಹನ (ನಾ). = ವಿಹಂಗಗಮನ : ವಿಹಗೇಂದ್ರವಾಹನಂ ಮಾಡವೇಳ್ಕೆಂದನುಗ್ರಹಿಸಿದಂ ಮಖಮಂ (ಕೃಷ್ಣಾಧಾ. ೯-೪೪). [ಸಂ.]

ವಿಹಟಕ್ಕಿರೀಟ (ನಾ). ಪ್ರಕಾಶಮಾನವಾದ ಮಕುಟ : ವಿಭುಲೋಕಂ ವಿಹಟಕ್ಕಿರೀಟ ಹತಿಯಿಂದತ್ತತ್ತ . . . ಎಂದಿನಂ ರಂಜಿಪಾರಭಟೀವೃತ್ತಿಯೊಳುದ್ಧತಾಭಿನಯದಿಂ ಕಣ್ಮೊಂಡನಾಖಂಡಳಂ (ಪುಷ್ಪಸು. ೧೨-೩೭). [ಸಂ.]

ವಿಹರಣ (ನಾ). ೧. (ಸಂತೋಷವಾಗಿ ಕಾಲಕಳೆಯುತ್ತ) ಸುತ್ತಾಡುವುದು ; ತಿರುಗಾಡುವುದು : ಕುಸುಮಾಪಚಯವಿಹರಣಪರಿಶ್ರಾಂತಿವಿಪ್ಲವಪ್ಲವನಕೇಳೀ ದೋಹಳ ಸುರಕುಮಾರ ಪ್ರಕಾರಾನುಲಿಪ್ಯಮಾನ ಸರ್ವಾಂಗೀಣ ಚಂದನದ್ರವನಿವೇಶದಿಂ ಗಂಗಾಸಂಗಮಮಾದಂತೆಯುಂ ಎಸೆವುದು (ಚಂದ್ರಪ್ರ. ೧-೮೫) ; ಲಹರಿ ಮಸಗಿದುದು . . . ಅಟ್ಟಹಾಸದ ರಹಣಿಗಳ ರಭಸದ ವಿಡಂಬದ ವಿಹರಣದಚಲದೃಷ್ಟಿಗಳ ಮಱೊಮಿನ ಹೊಳಹುಗಳ (ಕುಮಾಆ. ೧೫-೧೯). ೨. [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು ; ಧರ್ಮೋಪದೇಶನಿಮಿತ್ತವಾಗಿ, ಧರ್ಮಚಕ್ರವನ್ನು ಮುಂದಿಟ್ಟುಕೊಂಡು ಭೂಮಂಡಲದಲ್ಲಿ ವಿಹರಿಸುವುದು : ಜಿನೇಂದ್ರನ ವಿಹರಣಪೂರ್ವರಂಗಮೇನೊಪ್ಪಿದುದೋ (ಶಾಂತಿಪು. ೧೨-೧೭) ; ಸಮ್ಮೇದಗಿರಿಯೊಳೊಂದು ತಿಂಗಳ್ವಿಹರಣಮುಳಿದು ಸಹಸ್ರಮುನಿಸಹಿತಂ . . . ಮುನಿ ಸುವ್ರತಭಟ್ಟಾರಕರ್ ಮುಕ್ತಿಗೆ ಸಂದರ್ (ಚಾವುಂಪು. ೨೬೮). [ಸಂ.]

ವಿಹರಣಕಾಲ (ನಾ). [ಜೈನ] ಧರ್ಮೋಪದೇಶನಿಮಿತ್ತವಾಗಿ ವಿಹಾರಕ್ರಿಯೆಯನ್ನು ಕೈಗೊಳ್ಳುವ ಸಮಯ : ವಿಹರಣಕಾಲಮಿನ್ನೆನಗೆ ಬಂದುದಿದೆಂದು ಜಿನಂ ಜನಸ್ತುತಂ ವಿಹರಿಸಲುದ್ಯಮಂಗೆಯಲೊಡಂ (ಶಾಂತಿಪು. ೧೨-೧೩). [ಸಂ.]

ವಿಹರಣಕ್ರಮ (ನಾ). [ಜೈನ] ಧರ್ಮೋಪದೇಶನಿಮಿತ್ತವಾಗಿ ಕೈಗೊಳ್ಳುವ ವಿಹಾರಕ್ರಿಯೆಯ ರೀತಿ, — ನಿಯಮ : ಗ್ರಾಮ ನಗರ . . . ಸಂವಾಹಗಳೊಳ್ ವಿಹರಿಸುತ್ತುಂ ವಿಹರಣಕ್ರಮದಿಂ ವತ್ಸವಿಷಯದ ಕೌಶಂಬೀನಗರಕ್ಕೆ ವಂದು (ಸುಕುಮಾ. ೯-೫೦ ವ). [ಸಂ.]

ವಿಹರಣವಿಧಿ (ನಾ). = ವಿಹರಣಕ್ರಮ : ಒಂದು ತಿಂಗಳ ವಿಹರಣವಿಧಿಯಂ ಮಾಣ್ದು ಸಾರ್ವರ್ಮ್ಮನಿನವರೊಡನೆ ಸಮ್ಮೇದಪರ್ವತಮೊಳ್ . . . ಮೋಕ್ಷಲಕ್ಷ್ಮೀರಂಶಂಭವನಾಧಂ ಕೈಕೊಂಡಂ (ಚಾವುಂಪು. ೯೯) ; ಕೃತಸಕಳಮೇದಿನೀವಿಹರಣಮೊಂದು ತಿಂಗಳ್ ವಿಹರಣವಿಧಿಯಂ ಮಾಣ್ದು ಬಂದು (ಅಜಿಪು. ೮-೨೮ ವ). [ಸಂ.]

ವಿಹರಿಸು (ಕ್ರಿ). ೧. (ಸಂತೋಷವಾಗಿ ಕಾಲ ಕಳೆಯುತ್ತ) ಸುತ್ತಾಡು ; ತಿರುಗಾಡು : ದಕ್ಷಿಣಸಮುದ್ರದ ತಡಿವಿಡಿದು ಬಂದು ರಾಮಚಂದ್ರಂ ವಿಹರಿಸಿದೆಡೆಗಳಂ ನೋಡಿ (ಪುಂಪಭಾ. ೪-೧೮ ವ) ; ಲೀಲಾವನದೊಳ್ ವಿಹರಿಪ . . . ಲೀಲಾಂದೋಳಮನೇಱುವ ಲೀಲಾಕೇಳಿಗಳ್ ವಿಲಾಸಕೇಳಿಗಳ್ ನೃಪಸತಿಯಾ (ಅಜಿಪು. ೩-೯) ; ವಿವಿಧಚಿತ್ರಕಲಾವಕೇಳೀಭವನವೀಥಿಗಳೊಳಗೆ ವಿಹರಿಸಿದನು ವಿನೋದದಲಿ (ತೊರರಾ. ೨-೭-೨). ೨. [ಜೈನ] ಧರ್ಮೋಪದೇಶನಿಮಿತ್ತವಾಗಿ ವಿಹಾರಕ್ರಿಯೆಯನ್ನು ಕೈಗೊಳ್ಳು : ಭಟ್ಟಾರಕರ್ . . . ಚತುರ್ವಿಧದೇವನಿಕಾಯಮುಂ ಪಕ್ಷಿ ಚತುಃಪದ ಸರೀಸೃಪಾದಿ ತಿರ್ಯಗ್ಜಾತಿಗಳುಂಬೆರಸು ಧರ್ಮಕ್ಷೇತ್ರದೊಳು ವಿಹರಿಸಿ (ಚಾವುಂಪು. ೮೨).

[ವಿಹರಣ + -ಇಸ್ಸು]

ವಿಹಸಿತ (ನಾ). ಮುಗುಳ್ನಗೆ : ಮಧ್ಯಮಪ್ರಕೃತಿಯವರಲ್ಲಿ ವಿಹಸಿತ ಉಪಹಸಿತಗಳೂ . . . ಗೋಚರಿಸುತ್ತವೆ (ಭಾರಮಿ. ೪೦೩). [ಸಂ.]

ವಿಹಸ್ತ (ಗು). ೧. ಕೈಯಿಲ್ಲದ. ೨. ದಿಗ್ಭ್ರಮೆಗೊಂಡ ; ಗಾಬರಿಗೊಂಡ. (ನಾ). ೩. ವ್ಯಾಕುಲಗೊಂಡವನು ; ಕಳವಳಪಡುತ್ತಿರುವವನು : "ವಿಹಸ್ತಂ ವ್ಯಾಕುಳಂ ಕಳವಳಿಗನೆನಿಕ್ಕು" (ಮಂಗರಾ. ೭೧-೧೮) ; [ಸಂ.]

ವಿಹಾಪಿತ (ಗು). ೧. ಬಿಟ್ಟುಕೊಟ್ಟ ; ತ್ಯಜಿಸಿದ. ೨. ದಾನಮಾಡಿದ ; ಕೊಟ್ಟ. (ನಾ). ೩. ದಾನ ; ಕೊಡುಗೆ. [ಸಂ.]

ವಿಹಾಯ (ನಾ). ೧. ಆಕಾಶ ; ಗಗನ : "ವಿಹಾಯಃ . . . ವಿಹಾಯಸಃ, ಗಗನಂ, ದ್ಯುಃ — ಈ ೧೫ ಆಕಾಶಂ" (ಹಲಾಯು. ೨೨-೧೩೬). ೨. ಪಕ್ಷಿ ; ಹಕ್ಕಿ : "ಪತತ್, ಪತಂಗಃ . . . ವಿಹಾಯಃ, ವಿಹಗಃ . . . ದ್ವಿಜಃ — ಈ ೨೬ ಹಕ್ಕಿ" (ಹಲಾಯು. ೪೦-೮೪).

[ಸಂ. ವಿಹಾಯಸ್]

ವಿಹಾಯನ (ನಾ). ಕೊಡುವುದು ; ನೀಡುವುದು : "ವಿಶ್ರಾಣನಂ, ವಿಹಾಯನಂ . . . ದಾನಂ — ಈ ೧೦ ಕುಡುವುದು" (ಹಲಾಯು. ೬೯-೨೬೫). [ಸಂ.]

ವಿಹಾಯಸ (ನಾ). ೧. = ವಿಹಾಯ ೧ : ವಿಹಾಯ ಕಾಕೋಕಗಳು ನಿಲದೆ ವಿಹಾಯಸದಿ ತಿರುಗುವುದು (ಕರ್ಣಾಕ್ಷ. ೮-೫೩). ೨. = ವಿಹಾಯ ೨ : "ಶಕುನಿ ವಿಹಗಂ . . . ವಿಹಾಯಸಂ . . . ಶಕುಂತಿಯೆನೆ ಪಕ್ಷಿ" (ಮಂಗರಾ. ೫೦-೧). [ಸಂ.]

ವಿಹಾಯೋಗತಿ (ನಾ). [ಜೈನ] ನಾಮಕರ್ಮಗಳಲ್ಲಿ ಒಂದು ; "ಆಕಾಶದಲ್ಲಿ ಗಮನಮಾಡುವ ಶಕ್ತಿ" (ಜೈನಕೋ. ೨೩೫) : ಆಗುರು ಲಘುಚತುಷ್ಕ ವಿಹಾಯೋಗತಿ ದ್ವಿಕಸ್ಥಿರಾಸ್ಥಿರ . . . ನೀಚೈರ್ಗೋತ್ರಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ ವ). [ಸಂ.]

ವಿಹಾರ (ನಾ). ೧. (ಸಂತೋಷವಾಗಿ ಕಾಲ ಕಳೆಯುತ್ತಾ) ಸುತ್ತಾಡುವುದು ; ತಿರುಗಾಡುವುದು : ವಿಹಾರಾನುಕೂಲಗಳು ಈ ಯೋಜನೆಯಲ್ಲಿ ಸೇರಿವೆ (ಶಿಪ್ರಾ. ೪೦೧). ೨. ಬೌದ್ಧ ಅಥವಾ ಜೈನ ಭಿಕ್ಷುಗಳ ವಾಸಸ್ಥಾನ ; ಚೈತ್ಯಾಲಯ : ವಿಶಾಖಾ ಸುಪ್ರಿಯೆ ಎಂಬುವಳೊಡನೆ ವಿಹಾರದ ಒಳಗಡೆ ತಿರುಗಾಡಿದಳು (ಹಕ್ಕುಮ. ೪೮) ; ವಿಹಾರಗಳು ಭಿಕ್ಷುಗಳು ವಾಸಮಾಡುವ ಸ್ಥಳಗಳು (ಮೃವಾಸ್ತು. ೨೪). ೩. ರಾಜನು ವಾಸಿಸುವ ಮನೆ ; ಅರಮನೆ : ಮಹಾರಾಜ ಎರೆಯಂಗರ ಕಾಲದಲ್ಲಿ ಮಹಾದೇವಿ ಅಕ್ಕನವರಿಗಾಗಿಯೇ ಕಟ್ಟಿಸಿದ ಭವ್ಯವಿಹಾರವದು (ಶಾಂತಲಾ. ೫೮). ೪. [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಧರ್ಮೋಪದೇಶನಿಮಿತ್ತವಾಗಿ ಧರ್ಮಚಕ್ರವನ್ನು ಮುಂದಿಟ್ಟುಕೊಂಡು

ಭೂಮಂಡಲದಲ್ಲಿ ಸಂಚರಿಸುವುದು : ದಾನ ಪ್ರೀತಿ . . . ವಿಹಾರ ಯೋಗ ತ್ಯಾಗ ನಿರ್ವೃತಿಯೆಂಬಯ್ತತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ) ; ಯೋಗಸನ್ನಹಮುಂ ಅರ್ಹತ್ವಮುಂ ತದ್ವಿಹಾರಮುಂ, . . ಅಪ್ಪಯ್ತತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). 'ದೀಕ್ಷೆ' ಪರಾ. [ಸಂ.]

ವಿಹಾರವನ (ನಾ). (ಸಂತೋಷವಾಗಿ ಕಾಲ ಕಳೆಯುತ್ತ) ಸುತ್ತಾಡುವ ಸ್ಥಳ ; ತಿರುಗಾಡುವ ಜಾಗ : ಖೂಳರಿಗೆ ತಾ ಜನ್ಮಭೂಮಿ . . . ವಿಕಾರಿಗಳಿಗೆ ವಿಹಾರವನ . . . ಠಕ್ಕಿನ ಠೌಳಿಕಾಱರು ಮಾದ್ರದವರು (ಕುಮಾಕ. ೯-೨೦) ; ವಿಹಾರವನವೊಂದರಲ್ಲಿ ಒಬ್ಬ ಸೈನಿಕ, ಒಬ್ಬ ವರ್ತಕ, ಒಬ್ಬ ಕವಿ ಕುಳಿತಿರುವಾಗ (ಶಿಕ್ಷದ. ೪೮೦). [ಸಂ.]

ವಿಹಾರಿ (ನಾ). ವಿನೋದದಿಂದ ಸಂಚರಿಸುವವನು, — ವಿಹಾರ ಮಾಡುವವನು : ಲಲಿತಕಾಂತಿಯೊಳಖಿಳತಾರಾವಳಿಗಳಮಲಗ್ರಹವಿರಲ್ ತೊಳತೊಳಗಿ ಮೆಱೆದನು ವಿಶ್ವರೂಪವಿಹಾರಿ ಮುರವೈರಿ (ಕುಮಾಸಂ. ೯ ; ಶೈಲಕಾನನ ಮನೋಹರತೆಯಂ ಸವಿಯುತಲೆವ ವಿಟನವಿಹಾರಿ (ಶ್ರೀರಾಮಾ. ೧೧೮-೧೭೩).

[ಸಂ. ವಿಹಾರಿನ್]

ವಿಹಾರಿಣಿ (ನಾ). ೧. ವಿಹಾರ ಮಾಡುವವಳು. ೨. ಸ್ವೇಚ್ಛಾಚಾರಿಣಿ ; ಸ್ವೈರಿಣಿ : "ವಿಹಾರಿಣಿ — ಪಾಣ್ಪೆ" (ಕಾಶಕ್ಯ. ೧೫೬). [ಸಂ. ವಿಹಾರಿಣೀ]

ವಿಹಾರಿಸು (ಕ್ರಿ). ೧. = ವಿಹರಿಸು ೧ : ದೇವಕೀನಂದನಂ ಮಾಲೆಗಾಱಗೇರಿಯೊಳ್ ವಿಹಾರಿಸುತ್ತುಂ ಬರ್ಪಲ್ಲಿ (ಜಗವಿ. ೬-೧೧ ವ). ೨. = ವಿಹರಿಸು ೨ : ಭದ್ರಬಾಹು ಭಟ್ಟಾರರ್ . . . ಗ್ರಾಮನಗರಖೇಡಖರ್ವಡಮಡಂಬಪಟ್ಟಣದ್ರೋಣಾಮುಖಂಗಳಂ ವಿಹಾರಿಸುತ್ತಿರ್ಪನ್ನೆಗಂ (ವಡ್ಡಾರಾ. ೭೫-೪) ; ಇತ್ತ ವೃಷಭನಾಥನುಂ ಆರ್ಯಕ್ಷೇತ್ರಂಗಳಂ ವಿಹಾರಿಸಿ . . . ಕೈಳಾಸಕ್ಕೆ ವಂದು ಸಿದ್ಧಶಿಖರತಳದೊಳು ಪೌಷ್ಯಮಾಸದ ಪುಣ್ಯಮಿಯೊಳು ಅಪಗತವಿಹಾರಣನಾಗಿರ್ದಂ (ಚಾವುಂಪು. ೮೩). [ವಿಹಾರ + - ಇಸು]

ವಿಹಿತ (ಗು). ೧. ಇಟ್ಟ ; ಇರಿಸಿದ. ೨. ಯೋಗ್ಯವಾದ ; ಸೂಕ್ತವಾದ : ಕುಲವಿಹಿತ ಚೌಲೋಪನಯನವನಿಬ್ಬರಿಗೆ ರಚಿಸಿ ಸೋಮವಂಶದ ಬೆಳವಿಗೆಯನೇ ಮಾಡಿ ಕೊಂಡಾಡಿದನು ಕಲಿಭೀಷ್ಮ (ಕುಮಾಅ. ೩-೧೧). ೩. ಕೂಡಿಸಿದ ; ಹೊಂದಿಸಿದ : ಪಿರಿದುಂ ಚತುರ್ಥ ಸಂಸ್ಕೃತ ಪುರುಷಸ್ತ್ರೀವಿಷಯವಿಹಿತಬಹುವಚನದೊಳೊಂದಿರೆ ಶಿಥಿಲವೃತ್ತಿ ತಾನುಚ್ಚರಿಪರ್ಗೆ ಯಥೇಷ್ಟಂ (ಶಮದ. ೧೧೫). (ನಾ). ೪. ಯೋಗ್ಯವಾದುದು ; ಔಚಿತ್ಯಪೂರ್ಣವಾದುದು : ಸಹನೆ ಸಮರಸಭಾವವಂತಃಪರೀಕ್ಷೆಗಳು ವಿಹಿತವಾತ್ಮದ ಹಿತಕೆ (ಮಂಜಿಕ. ೭೪೨) ; ಪೂರ್ವಸಿದ್ಧತೆ ಇಲ್ಲದೆ ತರಗತಿಗೆ ಬರುವುದು ಯಾರಿಗೂ ಎಂದಿಗೂ ವಿಹಿತವಲ್ಲ (ಶಿಕ್ಷದ. ೨೬೨). [ಸಂ.]

ವಿಹಿತಕರ್ಮ (ನಾ). ಯೋಗ್ಯವಾದ ಕಾರ್ಯ ; ಸೂಕ್ತಕೆಲಸ : ಲೋಕನಮ್ಮನುದಾಹರಿಸುವುದು ಕಾಕನೇ ಬಳಸುವುದು ದುರ್ಯಶವೇಕೆ ನಿಮಗಿದು ವಿಹಿತಕರ್ಮ ಶ್ರುತಿಪರಿತ್ಯಾಗ (ಕುಮಾದ್ರೂ. ೧೮-೫೬) ; ಕರ್ಮವನ್ನು ಮಾಡುವುದು ಅನಿವಾರ್ಯವೇ ಆದುದರಿಂದ ವಿಹಿತಕರ್ಮವನ್ನೇ ಮಾಡುವುದು ಯುಕ್ತವು (ಅರ್ಥಧ. ೪೧).

[ಸಂ. ವಿಹಿತಕರ್ಮನ್]

ವಿಹಿತಗುರು (ನಾ). ಯೋಗ್ಯನಾದ ಗುರು : ನಿಜಕೈವಲ್ಯಪದವೀವನೆ ವಿಹಿತಗುರು ವಹನು (ಕೈವಲ್ಯ. ೧-೩) ; ದೋಧಕಗುರು ವೇದಕಗುರು ನಿಷಿದ್ಧಗುರು ಕಾಮ್ಯಗುರು ಸೂಚಕಗುರು ವಾಚಕಗುರು ಕಾರಕಗುರು ವಿಹಿತಗುರುವೆಂದೆಂಟು ತೆಱನಾಗಿರ್ಪರವರಲ್ಲಿ . . . ಸಂಶಯನಿರಸನದ್ವಾರದಿಂ ನಿತ್ಯಮುಕ್ತಿಪ್ರದನೇ ವಿಹಿತಗುರುವಕ್ಕುಂ (ವಿವೇಕ.೧೭). [ಸಂ.]

ವಿಹಿತಾಂಗುಲಿ (ನಾ). ಕೂಡಿಸಿದ ಬೆರಳು : ಅಹಿತಶಿರವಿದಲಾಯೆನುತ ಗೃಹಮಹಿಳೆಯರು ವಿಹಿತಾಂಗುಲಿಯ ಸಂಪ್ರಹರಣದಿ ಪರಿಭವಿಸಿದರು ಘೊಳ್ಳೆನಲು ನಿಖಿಳಜನ (ಕುಮಾಅ. ೨೨-೪೧). [ಸಂ.]

ವಿಹೀನ (ಗು). ೧. ತೊರೆದ ; ಬಿಟ್ಟ ; ತ್ಯಜಿಸಿದ : ನಿಜವಾಹನವಿಹೀನವಿಸ್ಮಯ ಸ್ಮೇರವದನ ಸರಸಿರುಹ ದ್ವಾತ್ರಿಂಶನ್ನಾಕಾನೀಕಮುಂ ಕರಮೊಪ್ಪೆ (ಶಾಂತಿಪು. ೧೨-೧೯ ವ). ೨. ಇಲ್ಲದ : ಸುಡು ತಾಂಬೂಲವಿಹೀನವಕ್ತ್ರವ (ಸೋಮೇಶ. ೨೧). [ಸಂ.]

ವಿಹೀನಕಟಿ (ನಾ). (ಆಲಂ) ಕೃಶವಾದ ನಡುವುಳ್ಳವನು : ವನಿತಾಪುತ್ರರತಂ . . . ವಿಹೀನಕಟಿ . . . ಮೃಗಪ್ರೋದ್ಭವಂ (ಜಾತಕ. ೧೭-೧೦). [ಸಂ.]

ವಿಹೃತ (ಗು). ೧. ಕಳೆದ ; ಇಲ್ಲವಾದ. ೨. ನಾಶಗೊಳಿಸಿದ ; ನಿವಾರಿಸಿದ : ಚಂದ್ರಿಕೋಪಮಕೃಪಾಸಾಂದ್ರೇಕ್ಷಣೇ ವಿಹೃತತಂದ್ರ ರಕ್ಷಿಸು (ಉಭಯದೇ. ೫-೪). (ನಾ). ೩. [ನಾಟ್ಯ] ಹತ್ತು ಬಗೆಯ ಮಂಡಲಾಕೃತಿಯ ಭಂಗಿಗಳಲ್ಲಿ ಒಂದು : ಸಲೆ ಲಲಿತಸಂಚರಂ . . . ವಿಲಸದ್ವಿಹೃತಮಲಾತಂ ಲಲಿತಮಿವಾಕಾಶಮಂಡಲಂ ಪತ್ತೆನಿಕುಂ (ಲಾಸ್ಯರಂ. ೮-೪). ೪. [ಕಾವ್ಯಮೀ] ಸ್ತ್ರೀಯ ಸ್ವಭಾವಸಿದ್ಧವಾದ ಹತ್ತು ವಿಧವಾದ ಹಾವಭಾವಗಳಲ್ಲಿ ಒಂದು, — ದಶವಿಧ ಕೇಳೀಭಾವಗಳಲ್ಲಿ ಒಂದು : ಸತಿಗಾತ್ಮಕೇಳಿ ಮೊಟ್ಟಾಯಿತ ಬಿಬ್ಬೋಕಾಖ್ಯಲಲಿತಲೀಲಾಕಿಲಕಿಂಚಿತ ವಿಚ್ಛಿತ್ತಿವಿಳಾಸವಿಹೃತವಿಭ್ರಮಕುಟ್ಟಮಿತಮೆನಲ್ಪತ್ತು ತೆಱಂ (ಶೃಂಗಾರ. ೨-೫೩) ; ಪರಮಪ್ರಿಯ ವಸ್ತುಗಳಂ ಪರಮಪ್ರಯುತಂಗಳಂ ಸಮಂತು ನಿಜಾಂತಃಕರಣದೊಳಣಮಲ್ಲೆಂಬಂತಿರುತಿರ್ಪ ಗಭೀರವೃತ್ತಿ ವಿಹೃತಮೆನಿಕ್ಕುಂ (ಶೃಂಗಾರ. ೨-೬೮). [ಸಂ.]

ವಿಹೃತದೋಷ (ನಾ). ದೋಷರಹಿತನಾದವನು : ಬಹುಕರರಂಜಿತಂ ವಿಹೃತದೋಷ ನನಾರತಮೆನ್ನ ಹೃತ್ಸರೋರುಹಕುಱೆ ತಾರಕಾರಿ ಮಿಗೆ ಮಾಡುಗೆ ಭವ್ಯತರ ಪ್ರಮೋದಮಂ (ರಾಜಶೇ. ೧-೮). [ಸಂ.]

ವಿಹೃತಮದನ (ನಾ). ಕಾಮನನ್ನು ನಾಶಗೊಳಿಸಿದವನು ; ಮದನಹರ ; ಶಿವ : ವದನಪಂಚಕ ವಿಹೃತಮದನ . . . ಜಯತು ಶಾಂತಮಲ್ಲ (ವೀರಶೈವ. ೪-೧-೧). [ಸಂ.]

ವಿಹೃತಿ (ನಾ). ಆಟ ; ವಿನೋದ ; ಕೇಳಿ : ಲಹರಿ ಮಸಗಿದುದತ್ತ ಕಾಂತಾಬಹಳ ಪಾರಾವಾರ ಹುಬ್ಬಿನ ವಿಹೃತಿಗಳ ತೆರಮಾಲೆಗಳ ಬೆಳುನಗೆಯ ಬುದುಬುದದ (ಕುಮಾಅ. ೧೫-೧೯). [ಸಂ.]

ವಿಹೇಟನ (ನಾ). ತೊಂದರೆಪಡಿಸುವಿಕೆ ; ಗಾಸಿಗೊಳಿಸುವಿಕೆ : ತದುದ್ಭುಟನ ದೋಷಖ್ಯಾಪನ ವಿಹೇ[ಪಾಠಾಂ. ನಿಹೇ, ನಿಹೇ]ಟನ (?)ಸ್ಥಾನಾವಮಾನ ಭರ್ತ್ಸನ . . . ತೀರ್ಥಕರಾದಿಕ್ಷೇಪಾದಿ ತತ್ತ್ವಪಂಚಂಗಳ್ ನೀಚ್ಚೆರ್ಗೋತ್ರಾಸ್ರವಕಾರಣಂ (ತತ್ತ್ವಪ್ರ. ೨೬೭).

[< ಸಂ. ವಿಹೇಠನ]

ವಿಹ್ವಲ, ವಿಹ್ವಳ (ಗು). ೧. ವ್ಯಾಕುಲಗೊಂಡ ; ದುಃಖಿತ. ೨. ಗೊಂದಲದಲ್ಲಿ ಬಿದ್ದ ; ಗಾಬರಿಗೊಂಡ. (ನಾ). ೩. ಗೊಂದಲ ; ಗಾಬರಿ ; ದಿಗ್ಭ್ರಮೆ : ಬೆರಗು, ವಿಹ್ವಲ, ಉದ್ವೇಗಗಳು ತುಂಬಿದ ಮಾತುಗಳಿದ್ದವು! (ಸ್ವಪ್ನಹೂ. ೨೬೬). ೪. ಗಾಬರಿಗೊಂಡ ವ್ಯಕ್ತಿ ; ದಿಗ್ಭ್ರಮೆಗೊಂಡ ವ್ಯಕ್ತಿ : ಭೀತಪರಿಗ್ರಹಂ ಕೃಪಣನಾತ್ಮಬಲವ್ಯಸನಾತಿವಿಹ್ವಲಂ[ಪಾಠಾಂ. ವಿಗ್ರಹಂ] (ಪಂಚತಂ. ೨೨೧-೧೦) ; ಕೆಲಬರ್ ವಿಪರೀತತೆಯಿಂದಿಂತಜ್ಞಾನತ್ರಿತಯತಮೋವಿಕೃತಿಯಿಂದೆ ವಿಹ್ವಲರಪ್ಪರ್ (ಚಂದ್ರಪ್ರ. ೨-೩೫). ವಿಹ್ವಳ : ೧. ಜನಕನತಿವಿಹ್ವಳಚಿತ್ತಂ ಶೋಕರಸಮನೊಳಕೊಂಡರ್ದಂ (ಪಂರಾಮಾ. ೪-೨೪). ೨. ವಿಪ್ರವಂಶ ಶ್ರೀಗರ್ಭೋತ್ಸನ್ನೆಯಂ ವಿಹ್ವಳವಿಷಯಲತಾಚ್ಛಿನ್ನೆಯಂ ಬೇಗಮೆಂದರ್ . . . ವರ್ಣನಾಥರ್ (ಸುಕುಮಾ. ೭-೪೮). ೩. "ವಿಕ್ಲಬಃ, ವಿಹ್ವಳಃ — ಈ ೨ ವ್ಯಾಕುಳಂ" (ಹಲಾಯು. ೭೪-೨೬೨). ೪. ಬಹ್ವಾರಂಭ ಪರಿಗ್ರಹ ವಿಹ್ವಳ [ಪಾಠಾಂ. ಲ]ನಿಂದ್ರಿಯಸುಖಾರ್ಥಿ . . . ಮಱುಗದೇಂ ಸುಖಂಬಡೆದಪನೇ (ಆದಿಪು. ೩- ೬೮) ; ಸಂಜನಿತಭವಬದ್ಧರೋಷಂ ತನಯನನೆಱೆದುಯ್ದನೆಂದು ವಿಹ್ವಳನಾದಂ (ಚಂದ್ರಪ್ರ. ೫-೮). [ಸಂ.]

ವಿಹ್ವಲಿತ, ವಿಹ್ವಳಿತ (ಗು). ೧. ವ್ಯಾಕುಲಗೊಂಡ ; ದುಃಖಿತನಾದ : ಬಹಳ ನಿದ್ರಾವ್ಯಸನ ವಿಹ್ವಲಿತಾಂತರಂಗರು ಮೆಯ್ಯನೊಲೆದೊಲೆದು ಉಸುರ ಸಂಪದನಾಡಿಯವ ಗಾಹಿಸಲು ಕೊಱೆದರು ಗುಱುಕಿಡುತ ತಲೆಮುಸುಕಿನಲಿ (ಕುಮಾವಿ. ೮-೮೨). (ನಾ). ೨. ದುಃಖಿಗೊಂಡವ್ಯಕ್ತಿ ; ಚಿಂತಾಕ್ರಾಂತ : ವೈಶಂಪಾಯನ ವಿಯೋಗದಿಂ ವಿಹ್ವಲಿತ [ಪಾಠಾಂ. ಲಿತೆಯ] ರಾದ ಮನೋರಮೆಯುಮಂ ಶುಕನಾಸನುಮಂ ನಾವೀಗಳಾವ ತೆಱದಿಂ ಸಂತೈಸಲ್ವೇಟ್ಟುದು (ಕಾದಂಉ. ೬೭೬). ವಿಹ್ವಳಿತ : ೧. ಅಲಘುತರ ಪರಿವೇದನಾ ವಿಹ್ವಳಿತ ಕಂಠಗತಾತ್ಮನೂರ್ಧ್ವಸ್ಖಲಿತ ದೀರ್ಘಶ್ವಾಸನಿಕನು ಕೌರವರ ರಾಯ (ಕುಮಾಗ. ೧೦-೨). [ಸಂ.]

ವಿಹ್ವಲಿಸು (ಕ್ರಿ). ೧. ದುಃಖಿಸು ; ವ್ಯಾಕುಲಪಡು : ನಾನಾ ದುರಂತಮಂ

ನೆನೆನೆನೆದು ವಿಹ್ವಲಿಸಿದುದು ಮನಂ (ಶ್ರೀರಾಮಾ. ೨೩೮-೨೭೧). ೨. ನೋಯಿಸು ; ಸಂಕಟಗೊಳಿಸು : ವಿಷಯೇಂದ್ರಿಯಂ ವಿಹ್ವಲಿಸಲಿಂ ಮನಂಗೊಳಿಸುಗುಮೆ ಕಡಲಡವಿ ಬಾನ್ ಬಯಲ್ ನಿರತೆ? (ಶ್ರೀರಾಮಾ. ೨೧೮-೧೯೯).

[ವಿಹ್ವಲ + -ಇಸ್ಕು]

ವಿಹ್ವಲೆ, ವಿಹ್ವಳೆ (ನಾ). ವ್ಯಾಕುಲಗೊಂಡವಳು ; ದುಃಖಿತೆ : ಪರಮಪಾಲಕ ನೀನೆ ಗತ್ಯಂತರದ ವಿಹ್ವಲೆ ತಾನಲಾ . . . ಎಂದೊಬಲಿದಳು ತರಳಾಕ್ಷಿ (ಕುಮಾಸ. ೧೪-೧೨೫) ; ಕದುಡುಷ್ಟೆ ಕಲಹಾರ್ಥಿ ವಿರಸೆ ಪರವಶೆ ಪಾದರಿ ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ . . . ಎನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ಬಾರದೆ (ಜೈಮಿಭಾ. ೫-೬೧). **ವಿಹ್ವಳೆ** : ಋತುಸಮಯಮೆನಗಿದಸ್ಪೃಶ್ಯತೆಯ ಸಮನಿಸಲೆ ಹೇತುವಾದತ್ತಾದಂ ಸುತ್ಕಹೇತುವಾದುದಿಲ್ಲೆಂದು ತನೂದರಿ ನೆನೆದು ನೆನೆದು ವಿಹ್ವಳೆಯಾದಳ್ (ಮಲ್ಲಿಪು. ೩-೧೦೯) ; ಅಳಲ್ದರ್ ಕಲ್ದರ್ ಪುರುಡಿಂ . . . ನೃಪಶುದ್ಧಾಂತಕಾಂತಾ ಜನಂಗಳ್ ಅಂತು ವಿಹ್ವಳೆಯರಾಗಿ (ಪುಪ್ಪಪು. ೧೩-೯೨ ವ).

[ಸಂ. ವಿಹ್ವಲಾ]

ವಿಹ್ವಳ 'ವಿಹ್ವಲ' ನೋ.

ವಿಹ್ವಳತೆ 'ವಿಹ್ವಲತೆ' ನೋ.

ವಿಹ್ವಳಿತ 'ವಿಹ್ವಲಿತ' ನೋ.

ವಿಹ್ವಳೆ 'ವಿಹ್ವಲೆ' ನೋ.

ವಿಳಂಗ (ನಾ). ಒಂದು ಕ್ರಿಮಿನಾಶಕವಾದ ಔಷಧೀಸಸ್ಯ ; ವಿಡಂಗ : ಬೃಹತೀತ(ಫ)ಳ ಕ್ಷಾರವಾರಿಯೊಳ್ ಪುದಿದುಕೊಂಡು ಧೂಪಿಸಿ ವಿಳಂಗದಿಂ . . . ಶುಭಲಗ್ನಮೊಂದಿ ಬರೆ ಕುಲಿಯೊಳ್ ಬಿತ್ತುವುದು (ಲೋಕೋಪ. ೬-೬).

ವಿಳಂಗಾದಿ ಘೃತ = ವಿಳಂಗ ಮೊದಲಾದ ಔಷಧದ್ರವ್ಯಗಳನ್ನು ಸೇರಿಸಿ ಮಾಡಿದ ಲೇಹ್ಯ : ವಿಳಂಗಾದಿ ಘೃತ – ವಾಯುವಿಳಂಗ, ಸುವರ್ಚಲವಣ . . . ಪ್ರಾತಃಕಾಲದಲ್ಲಿ ಸೇವಿಸೆ ಹಳೆಯ ಜ್ವರ, ಶ್ಲೇಷ್ಮಜ್ವರ, ಜೀರ್ಣಜ್ವರ ಸಹ ಮಾಣ್ಗುಂ (ಸಕ್ಕ. ೧೨೫). [< ಸಂ. ವಿಡಂಗ]

ವಿಳಂದ (ನಾ). ಒಂದು ಸ್ಥಳದ ಹೆಸರು : ಪಲ್ಲವೇನ್ದ್ರನ್ನರಪತಿಮಜಯದ್ಯೋ ವಿಳನ್ನಾಭಿಧಾನೇ ರಾಜಾ(:)ಶ್ರೀವಲ್ಲಭಾಕ್ಯಸ್ಸಮರಶತಜಯಾವಾಪ್ತ ಲಕ್ಷ್ಮೀವಿಲಾಸಃ (ಮೈಅಶಿ. ೧೪೪೨, ೭೫-೨೮ ; 819). [?]

ವಿಳಂಬ 'ವಿಲಂಬ' ನೋ.

ವಿಳಂಬಿ 'ವಿಲಂಬಿ' ನೋ.

ವಿಳಂಬಿಕ (ನಾ). (ಅಜೀರ್ಣತೆಯಿಂದ ಉಂಟಾಗುವ) ಮಲಬದ್ಧತೆ : ಇದರಲ್ಲಿ ವಿಷೂಚಿಕವೆಂದು ಆಲಸಿಕವೆಂದು ಅಜೀರ್ಣಕವೆಂದು ವಿಳಂಬಿಕವೆಂದು ಸಶೇಷವೆಂದು ವಿಷೂಚಿಕಾರೋಗಮೈದು ತೆರನಾಗಿರ್ಪುದು (ಸಕ್ಕ. ೩೫೭). [ಸಂ. ವಿಲಂಬಿಕಾ]

ವಿಳಂಬಿತ 'ವಿಲಂಬಿತ' ನೋ.

ವಿಳಂಬಿಸು 'ವಿಲಂಬಿಸು' ನೋ.

ವಿಳಗಿ (ನಾ). ತರಕಾರಿಯನ್ನು ಕತ್ತರಿಸುವ ಸಾಧನ ; ಮೆಟ್ಟುಗತ್ತಿ : ೬ಳ. ವಿಲಾಯಿತಿ ತರದ ಸರಪಳಿ, ೬೫. ವಿಳಗಿಗಳು (ಮುಂಬವ್ಯಾ. ೧೦೨). 'ಈಳಿಗೆ' ಪರಾ. [← ಮರಾ. ವಿಳಾ, ವಿಳೀ]

ವಿಳಯ 'ವಿಲಯ' ನೋ.

ವಿಳಯಕಾಲ 'ವಿಲಯಕಾಲ' ನೋ.

ವಿಳಯಕಾಳ 'ವಿಲಯಕಾಲ' ನೋ.

ವಿಳಯಜಳಧಿ (ನಾ). ಪ್ರಳಯಕಾಲದ ಸಮುದ್ರ ; ಅಲ್ಲೋಲಕಲ್ಲೋಲವಾದ ಸಾಗರ : ರಣಪಟಹಪಟುನಿನದಮೊದವೆ ವಿಳಯಜಳಧಿಯಂತೆ ನೆಲೆಯಿಂ ತಳರ್ದ ರಾಜಕುಲಮಂ ಕಂಡು (ಪಂಪಾಮಾ. ೬-೪೮ ವ). [ಸಂ. ವಿಲಯಜಲಧಿ]

ವಿಳಯಜ್ವಾಲೆ (ನಾ). ಪ್ರಳಯಕಾಲದ ಅಗ್ನಿ ; ಪ್ರಳಯಾಗ್ನಿ : ಕುರುಕುಲ ವಿಳಯಜ್ವಾಲೆ ಸುಯೋಧನಪ್ರಳಯಕಾಲೆ ಪಾಂಚಾಲಿಯ ವದನಮಂ ನೋಡಿ (ಗದಾಯು. ೧-೬೨ ವ). [ಸಂ. ವಿಲಯಜ್ವಾಲಾ]

ವಿಳಯಾನಳ 'ವಿಲಯಾನಲ' ನೋ.

ವಿಳಯಾನಿಳ 'ವಿಲಯಾನಿಲ' ನೋ.

ವಿಳಸ 'ವಿಲಸ' ನೋ.

ವಿಳಸತ್ತು 'ವಿಲಸತ್ತು' ನೋ.

ವಿಳಸನ 'ವಿಲಸನ' ನೋ.

ವಿಳಸಿತ 'ವಿಲಸಿತ' ನೋ.

ವಿಳಾಪ 'ವಿಲಾಪ' ನೋ.

ವಿಳಾಪಿಸು 'ವಿಲಾಪಿಸು' ನೋ.

ವಿಳಾಸ$_1$ 'ವಿಲಾಸ$_1$' ನೋ.

ವಿಳಾಸ$_2$ 'ವಿಲಾಸ$_2$' ನೋ.

ವಿಳಾಸಂಗೆಡು (ಕ್ರಿ). ಉತ್ಸಾಹಗುಂದು ; ಸಂತೋಷವಿಲ್ಲವಾಗು : ವಲ್ಲಭೆಯರ್ ಪೊಲ್ಲಗೆಯ್ದರಂತುಸಿರದೆ ಕುಳ್ಳಿರೆ ವಿಳಾಸಿನಿಯರ್ ವಿಳಾಸಂಗೆಟ್ಟುರಂತೆ ಕುಂದೆ . . . ಪ್ರಭಾವತೀಮಹಾದೇವಿ ತನ್ನೊಳಿಂತೆಂದಳ್ (ಧರ್ಮಾಮೃ. ೪-೧೫೯).

[ವಿಳಾಸ$_1$ (= ವಿಲಾಸ$_1$) + ಕೆಡು$_1$]

ವಿಳಾಸಕೇಳಿ (ನಾ). ವಿನೋದದ ಆಟ ; ಸಂತೋಷದ ಕ್ರೀಡೆ : ಅಂತು ಸೊಗಯಿಸುವ ಚಕ್ರಧರ ಕುಸುಮಾಯುಧಂಗೆ ವಿಳಾಸಕೇಳೀಸಹಾಯಂ ಬರ್ಪಂತೆ (ಚಂದ್ರಪ್ರ. ೭-೩೬ ವ). [ಸಂ. ವಿಲಾಸಕೇಲಿ]

ವಿಳಾಸತೆ 'ವಿಲಾಸತೆ' ನೋ.

ವಿಳಾಸದಾರ (ನಾ). (ಕಾಗದದ ಮೇಲೆ ತನ್ನ) ವಿಳಾಸವುಳ್ಳವನು : ಕಾಗದವು ಕೈಗೆ ಬಂದ ಕೂಡಲೆ ನೆಕ್ಕುದೋವ್ ಆ ವಿಳಾಸದಾರರ ಅನ್ವೇಷಣೆಗಾಗಿ ಹೊರಟನು (ಪುನರು. ೩೩೫). [ವಿಳಾಸ$_3$ (= ವಿಲಾಸ$_2$) + -ದಾರ್$_4$]

ವಿಳಾಸಯಾನ (ನಾ). ಬೆಡಗಿನ ನಡಗೆ ; ಒಯ್ಯಾರದ ನಡೆ : ಈಗಳಿದಮ್ಮ ಪಾಂಗು ಗೆಂಟನಿತಡೆಯಂ ತಗುಳ್ದು ಬರಲಾರ್ಪಿರೆ ನಿಮ್ಮ ವಿಳಾಸಯಾನದಿಂ (ಆದಿಪು. ೧೧-೧೩೪).

[ಸಂ. ವಿಲಾಸಯಾನ]

ವಿಳಾಸವನ (ನಾ). ಸಂತೋಷವಾಗಿ ವಿಹರಿಸುವ ಉದ್ಯಾನ ; ಕ್ರೀಡಾವನ : ವನದೇವತೆಗಳ್ ನಂದನವನಮಂ ಪುಗುವಂತೆ . . . ವನಜಾನನೆಯರ್ ವಿಳಾಸವನಮಂ ಪೊಕ್ಕರ್ (ಆದಿಪು. ೧೧-೬೯). [ಸಂ. ವಿಲಾಸವನ]

ವಿಳಾಸಾವನಿ (ನಾ). ವಿಲಾಸದ ಭೂಮಿ ; ವಿಹಾರದ ಪ್ರದೇಶ : ಮನಸಿಜಸಾಧಕನೆಯಗುಳ್ದ ನೆಗಪಿದ ಕುಳಿಯಂದೆನೆ ಸುಳಿನಾಭಿ ವಿಳಾಸಾವನಿ ವನಿತಾಮಣಿಯ ತೆಳ್ಪಸಿಱೊಳಿಸೆದಿರ್ದುಂ (ರಾಜಶೇ. ೭-೩೩). [ಸಂ. ವಿಲಾಸಾವನಿ]

ವಿಳಾಸಿ 'ವಿಲಾಸಿ' ನೋ.

ವಿಳಾಸಿನಿ 'ವಿಲಾಸಿನಿ' ನೋ.

ವಿಳಾಸಿನೀವಾಟ (ನಾ). ಪಣ್ಯಾಂಗನೆಯರು ವಾಸಿಸುವ ಸ್ಥಳ ; ಸೂಳೆಗೇರಿ : ವಜ್ರಾಯುಧಂ ನಾಗರಕಾದಿಗಳ್ಪೆರಸು ಪೆಬತೊಂದು ವಿಳಾಸಿನೀವಾಟದೊಳಗನೆ ಬರೆವರೆ (ಶಾಂತಿಪು. ೮-೯೯ ವ). [ಸಂ. ವಿಲಾಸಿನೀವಾಟ]

ವಿಳಾಸೋಲ್ಲಾಸಿ (ನಾ). ವಿನೋದಶೀಲ ; ಕ್ರೀಡಾಸಕ್ತ : ನಾನಾಮಂತ್ರದೂತ ಪ್ರಯಾಣಾಕ್ಷಯಸಮಯ ವಿಳಾಸೋಲ್ಲಾಸಿ ಸಂಗ್ರಾಮಿತಾಂಗಂ (ಕವಿಕಾ. ೩-೨೧೩).

[ಸಂ. ವಿಲಾಸೋಲ್ಲಾಸಿನ್]

ವಿಳಿಕ್ಕರ (ನಾ). ಒಂದು ಮನೆತನದ ಹೆಸರು : ಶ್ರೀಮತ್ ವಿಳಿಕ್ಕರ ನಾಗಿಯಮ್ಮಗಾಮುಣ್ಡಂ ಚನ್ಪಾದಿತ್ಯಕ[ಕ್ಕ]ಳುಳ್ಳಿನಂ ಶ್ರೀವಾಯಿ[ಲ]ನ್ನಿಜಿಸಿದಾನ್ (ಎಇ. XIII, ೧೦೩-೮ ; 869). [?]

ವಿಳಿಖಿತ 'ವಿಲಿಖಿತ' ನೋ.

ವಿಳುಕಾಡು 'ವಿಳ್ಕಾಡು' ನೋ.

ವಿಳೇಪಿತ 'ವಿಲೇಪಿತ' ನೋ.

ವಿಳೋಕನ 'ವಿಲೋಕನ' ನೋ.

ವಿಳೋಚನ 'ವಿಲೋಚನ' ನೋ.

ವಿಳೋಳ 'ವಿಲೋಲ' ನೋ.

ವಿಳ್ಯಾಡು, ವಿಳುಕಾಡು (ನಾ). ಭಾಗ; ಪಾಲು; ಹಿಸ್ಸೆ : ಹರಿವಾಣದ ಪ್ರಸಾದದ ಹರಿವಾಣಗಳವೊಳಗೆ ವಿಟ್ಟವನ ವಿಳ್ಯಾಡಿಗೆ ಹರಿವಾಣ ಆರೂವರೆ ಅಪ್ಪ ಪ್ರಸಾದ ಹದಿಮೂರೂ . . . ಶ್ರೀವಯಿಷ್ಣವರಿಗೆ ಯಿಕ್ಕುವ ಹಾಗೆ ಕಟ್ಟಳೆಯ ಮಾಡಿದೆವಾಗಿ (ಸೌಇ. IX-ii, ೪೭೨-೩ : 1467). ವಿಳುಕಾಡು : ನಂಬಿಗಳಿಗೆ ಒಂದು ಹರಿವಾಣೂ ಸೂರ್ಯದಲೂ ಆರೋಗಣೆಯ ಮಾಡುವ ಪಡಿಕಟಳೆಯ ಆರೋಗಣೆಯ ಹರಿವಾಣದಲೂ ಕೊಟ್ಟು ಮಿಕ್ಕ ಹರಿವಾಣಗಳನೂ ತಿರುಮಲೆಯ ಸಂಧಿಯ ಅಡಪಿನ ವಿಳುಕಾಡಿನಲೂ ಹಂಚಿಕೊಂಬುದು (ಸೌಇ. IX-ii, ೪೭೨-೨ ; 1467). [ದೇ. ॥ ತಮಿ. ವಿಟಕ್ಕಾಟು]

ವಿಳ್ಳೆ 'ವೀಳೆಯ' ನೋ.

ವಿಳ್ಳೇದೆಲೆ 'ವೀಳೆಯ' ಪರಾ.

ವೀಕಾಶ (ನಾ). ೧. ಸ್ಪಷ್ಟವಾಗಿ ತೋರುವಿಕೆ, — ಕಾಣುವಿಕೆ. ೨. ಸ್ಪಷ್ಟವಾದುದು ; ಸ್ಫುಟವಾದುದು. ೩. ತೋರ್ಪಡಿಸಿಕೊಳ್ಳದಿರುವಿಕೆ ; ಏಕಾಂತತೆ ; ಒಂಟಿತನ. ೪. ಏಕಾಂತಸ್ಥಳ ; ಯಾರಿಗೂ ಕಾಣದಂತೆ ಇರುವ ಪ್ರದೇಶ : "ವೀಕಾಶಃ — ೧ ಏಕಾಂತಸ್ಥಳ, ಸ್ಫುಟವಾದ್ದು, ೨" (ಸಿದ್ಧಾಂತಿ. ೪೨೩). [ಸಂ.]

ವೀಕ್ಷಕ (ನಾ). ನೋಡುವವನು ; ವೀಕ್ಷಿಸುವವನು ; ಪ್ರೇಕ್ಷಕ : ಸಭಾಂಗಣದ ತುಂಬ ವೀಕ್ಷಕರು ಕಿಕ್ಕಿರಿದು ಸೇರಿದ್ದರು (ರೂಢಿ). [ಸಂ.]

ವೀಕ್ಷಕವಿವರಣೆ (ನಾ). ಯಾವುದೇ ಒಂದು ಕಾರ್ಯಕ್ರಮವು ನಡೆಯುವುದನ್ನು ನೋಡುತ್ತಿರುವಂತೆಯೇ ಅದರ ವಿವರಗಳನ್ನು (ನಿಸ್ತಂತುವಿನ ಮೂಲಕ)ಪ್ರಸಾರ ಮಾಡುವ ಜೊತೆಗೆ ನೀಡುವ ವಿವರಣೆ : ರೇಡಿಯೋದಲ್ಲಿ ಇಂದು ಕ್ರಿಕೆಟ್ ಆಟದ ವೀಕ್ಷಕವಿವರಣೆಯನ್ನು ಕೇಳಿದೆವು (ರೂಢಿ).

[ಸಂ. ವೀಕ್ಷಕವಿವರಣ]

ವೀಕ್ಷಣ (ನಾ). ೧. ನೋಡುವಿಕೆ ; ದೃಷ್ಟಿಯನ್ನು ಚೆಲ್ಲುವಿಕೆ. ೨. ದೃಷ್ಟಿ ; ನೋಟ : ಘನದೈನ್ಯಂಬಡುವರ್ ಗುರುತ್ವಗೆಡುವರ್ ಗ್ರಾಸಕ್ಕೆ ಕುಗ್ರಾಮವಾಗನು ಗೊಟ್ಟರ್ಪರು ವೀಕ್ಷಣಕ್ಕೆ ಮುನಿವರ್ ಮಾತಾಡಲುಂ ಬೀಗಿ ಬಿರ್ರನೆ ಬಾಗರ್ . . . ಮನುಜರ್ಗೆತ್ತಣ ನೀತಿಯ್ಯೆ (ಸೋಮೇಶ. ೪೮) ; ತತ್ಸುರಕುಲಕೃಪಾವೀಕ್ಷಣದ ವಿಶ್ವತಶ್ಚಕ್ಷುವೆನಿಪ . . . ವಿಷ್ಣುಗುಪರಿಪದದಿಂ ವಿಶ್ವಪತಿಯೆನಿಪನಾವನಾತಂಗೆಱಗುವೆಂ (ಪದ್ಮರಾ. ೧-೨). ೩. ಗಮನವಿಟ್ಟು ನೋಡುವುದು ; ಅವಲೋಕನ ; ಪರಿಶೀಲನೆ ; ಸಮೀಕ್ಷೆ : ಪ್ರಕೃತಿಯಲ್ಲಿ ತಾನಾಗಿ ನಡೆಯುವ ಸಂಗತಿಯನ್ನು ಹೀಗೆ ಅನುಭವಮೂಲಕ ತಿಳಿಯುವುದಕ್ಕೆ ವೀಕ್ಷಣವೆಂದು (Observation)ಹೆಸರು ಕೊಡಬಹುದು (ಭೌತವಿ. ೮). ೪. ಕಣ್ಣು ; ನೇತ್ರ. [ಸಂ.]

ವೀಕ್ಷಣೆ (ನಾ). ೧. = ವೀಕ್ಷಣ ೧. ೨. = ವೀಕ್ಷಣ ೨ : ಹಣಬಲ ಸಾಕೇ ಸಾಲದೇ ಎಂಬ ಬಗ್ಗೆ ಮೊದಲ ೫ ವರ್ಷಗಳೊಳಗೆ ಒಂದು ವೀಕ್ಷಣೆ ನಡೆಸಿ, ಸೂಕ್ತಕ್ರಮಗಳನ್ನು ಕೈಗೊಳ್ಳಬೇಕೆಂದು . . . ಒಪ್ಪಂದದಲ್ಲಿ ಸೂಚಿಸಲಾಗಿದೆ (ಅಂತಸಂ. ೧೨೯). [ಸಂ. ವೀಕ್ಷಣ]

ವೀಕ್ಷಿಸು (ಕ್ರಿ). ೧. ನೋಡು ; ಅವಲೋಕಿಸು : ಓವ ತೋಱುವ . . . ತಾವು ತಮ್ಮಕ್ಷಿಗಳೆ ತಮ್ಮೊಳು ತಾವೆ ವೀ[ಪಾಶಾ. ಈ]ಕ್ಷಿಸುವ ಭಾವವಾಯ್ತುಭವಂಗೆ (ಬಸಪು. ೧೮-೧೭) ; ಸತ್ಕೋಮಲಾಂಗಿಯ ಪೇರುರದಿ ಹೇಮಾಬ್ಜಮುಕುಳಸ್ತನ ಬಿಗಿವಡೆದಿರೆ ಭ್ರಾಮಕಗೊಂಡು ವೀಕ್ಷಿಸಿದ (ಮೋಹಶ. ೧೭-೫೭) ; ಜಲಧಿತೀರದಿ ನಿಂತು ವೀಕ್ಷಿಸಿಕೈಲಗಳಲಿ ಚಲವೊಂದಚಲವೊಂದು ಸಮವದಸಮವಿದು ಕಲೆತಿರ್ಪುವಂತು ಮೇಯಾಮೇಯಗಳು ಜಗದಿ ಮಿಲಿತತೆಯಿನೇ ರುಚಿಯೊ (ಮಂಕುಕ. ೯೯). ೨. ಗಮನಿಸು ; ಪರಿಶೀಲಿಸು : ಅಜಯ . . . ಕಾಂಗ್ರೆಸ್‌ಅಧಿವೇಶನದ ಕಾರ್ಯಗಳನ್ನು ವೀಕ್ಷಿಸಿ, ನಾಯಕರ ದರ್ಶನ ಪಡೆದು, ತನ್ನ ಹೃದಯದಲ್ಲಿ ದೇಶಪ್ರೇಮ ತುಂಬಿಕೊಳ್ಳುತ್ತಿದ್ದ (ಆತ್ಮಾರ್ಪ. ೧೩೨). ೩. ಎದುರು ನೋಡು ; ನಿರೀಕ್ಷಿಸು ; ಕಾಯು : ಅಸಿತಪಯೋಜನೇತ್ರೆಯರತಿಪ್ರಿಯ ಕಾಂತೆಯರಾಸೆವಟ್ಟು ವೀಕ್ಷಿಸುವರಧೀಶ್ವರಾಗಮನಕಾಲಮನಿರ್ದು ದಿಗಂತರಂಗಳೊಳ್ (ಶಾಂತಿಪು. ೨-೪೮) ; ಅಲ್ಲಿನ ಪ್ರಯೋಗ ಫಲಿತಾಂಶಗಳನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದೆ (ಶಕ್ತದ. ೧೯೦). [ವೀಕ್ಷಣ + -ಇಸ್ಸು]

ವೀಕ್ಷೆ (ನಾ). ೧. ನೋಡುವಿಕೆ ; ಅವಲೋಕಿಸುವಿಕೆ : ಪರಿಪೂರ್ಣ ಸುಖವನೆಳಸುವನು ತನ್ನೊಳಗಡೆಗೆ ತಿರುಗಿಸಲಿ ತನ್ನ ದೃಷ್ಟಿಯನು ನಿರ್ಮಲದಿಂ ನಿರತಿಶಯ ಸುಖವಲ್ಲಿ, ವಿಶ್ವಾತ್ಮವೀಕ್ಷೆಯಲಿ ಪರಸತ್ತ್ವಶಾಂತಿಯಲಿ (ಮಂಕುಕ. ೦೮೭). ೨. ನೋಟ ; ದೃಶ್ಯ. [ಸಂ. ವೀಕ್ಷಾ]

ವೀಚಿ (ನಾ). (ನೀರಿನ) ಸಣ್ಣ ಅಲೆ ; ತೆರೆ ; ತರಂಗ : "ಭಂಗಂ ಲಹರಿಕೆ ವೀಚಿ ತರಂಗಂ ಲಳಿಯೆಂಬಿವೂರ್ಮಿಪರ್ಯಾಯಂಗಳ್" (ವಸ್ತುಕೋಶ. ೨೨-೩) ; ಸ್ಥಗಿತಮಮಿತ ನಾನಾಶಬ್ದವೀಚಿಪ್ರ[ವಂ]ಚಂ ನಿಗದಿತಗುಣರತ್ನೈಕಾಕ[ರಂ] ಸಾಗರಂಬೋಲ್ ಸೊಗಯಿಸಿ ಧರಣೀ [ಚಕ್ರಾಂಬ]ರಾಕ್ರಾಂತಮಕ್ಕುಂ (ಕವಿರಾ. ೩-೨೧೬) ; ನೀಲಿಯ ಮಳಲೊಟ್ಟಿದ ವೊಲು ಮುಗಿಲಿಗೆ ಮೊಗ ಚಾಚಿ ಶಿಖರಂಗಳು ಸ್ಪರ್ಧಿಸುತ್ತಿವೆ ವೀಚಿಯ ಮೇಲೆ ವೀಚಿ (ಪಕ್ಷಿಕಾ. ೮೦-೧೬). [ಸಂ.]

ವೀಚೀಚಯ (ನಾ). ಅಲೆಗಳ ಸಮೂಹ ; ತರಂಗಮಾಲೆ : ಭವ್ಯ ಶ್ರೇಣಿಗವ್ಯಾಜದಿಂದಱಿಯಲ್ ನಾಲ್ಕನುಯೋಗಮಾದುದದಱೊಳ್ ಪೂರ್ವಾನುಯೋಗಾಬ್ಧಿಯಿಂ ಪೊಱಪೊಣ್ಮೆತ್ತದು ವೇಳೆಯಂತೆ ಕಥೆ ಲಂಬೋದ್ಧಾಮವೀಚೀಚಯಂ (ಆದಿಪು. ೧-೩೯). [ಸಂ.]

ವೀಚೀಮಾಲೆ (ನಾ). = ವೀಚೀಚಯ : ಆಚಾರಂ ಗುಣಮಾಲೆ ತಮ್ಮೊಳಮೃತಾಂಭೋರಾಶಿ ರತ್ನಂಗಳಿಂ ವೀಚೀಮಾಲೆಯನಪ್ಪುಕೆಯ್ಯ, ತೆಱದಿಂ ಚೆಲ್ವಪ್ಪಿನಂ ಶಿಷ್ಯ ಶಿಕ್ಷಾಚಾತುರ್ಯಮನಪ್ಪುಕೆಯ್ದು (ಮಲ್ಲಿಪು. ೧-೩). [ಸಂ. ವೀಚೀಮಾಲಾ]

ವೀಚು$_1$ (ಕ್ರಿ). ಇಲ್ಲವಾಗು ; ನಾಶವಾಗು ; ಹಾಳಾಗು : ಶಿವನ ಶರ ನಿನಗಾಯ್ತು ನಿರ್ಜರನಿವಹವಿದೆ ನಾಕದಲಿ ಬಲುದಾನವರ ವಿಲಗದಿ ವೀಚಿಹೋ[ಪಾಶಾಂ. ಬೆಚ್ಚುವೋ]ದುದು ಸಗ್ಗಸೌಖ್ಯಫಲ (ಕುಮಾಭ. ೧೨-೩). [?]

ವೀಚು$_2$ (ನಾ). ಇಲ್ಲದಂತಾಗುವಿಕೆ ; ನಾಶಹೊಂದುವುದು : 'ವೀಚುಗೆಡು' ಪರಾ. [< ವೀಚು$_1$]

ವೀಚುಗೆಡು (ಕ್ರಿ). ಇಲ್ಲವಾಗು ; ನಾಶವಾಗು : ಪ್ರಕಟಮಾಯಾಗುಪ್ತ ಪರಮಾತ್ಮಕಮಹಾನಿಧಿ ಸಭೆಯೊಳಿರುತಿರೆ ವಿಕಳಮತಿಗಳು ವೀಚು[ಪಾಶಾಂ. ತಱಿಚು]ಗೆಡುವರು ಶಿವಶಿವಾಯೆಂದ (ಕುಮಾಸ. ೯-೩೪). [ವೀಚು$_2$ + ಕೆಡು$_1$]

ವೀಚುವೋಗು (ಕ್ರಿ). = ವೀಚುಗೆಡು : ನೆನಹು ನೆಮ್ಮಿತು ಶಿವನನಿತರದ ನನೆಕೊನೆಯ ತೆರಳಿಕೆಯ ತೊಡಚೆಯ ಮನದ ಸಂಚಲ ವೀಚುವೋದುದು ಕಲಿ ಧನಂಜಯನ (ಕುಮಾಭ. ೪-೪೨). [ವೀಚು$_2$ + ಪೋಗು$_1$ (< ಪೋ$_1$)]

ವೀಜನ (ನಾ). ೧. ಗಾಳಿಯನ್ನು ಬೀಸುವಿಕೆ ; ಗಾಳಿಯನ್ನು ಹಾಕುವಿಕೆ. ೨. ಗಾಳಿಯನ್ನು ಬೀಸುವ ಸಾಧನ ; ಬೀಸಣಿಗೆ ; ಆಲವಟ್ಟ : ವನಕೇಳೀಗಮನಕ್ಕೆ ದೀಪಕಲಿಕಾದೀಪ್ತಿಪ್ರತಾನಕ್ಕೆ ವೀಜನವಾತಕ್ಕೆ ಬಟಲ್ಪ ಸೀತೆ ಗಮನಾಯಾಸಕ್ಕೆ . . . ಬೇವಸಂಬಟ್ಟಳಿಲ್ಲಿನಿಯಂ ತನ್ನೊಡನುಯ್ದಪಂ ರಘುಜನೆಂಬೀ ರಾಗದುದ್ರೇಕದಿಂ (ಪಂರಾಮಾ. ೭-೨೬) ; ಚಾರುವೀಜನಚಾಮರಂ ಕುಡಿನೀರ ಸಗ್ಗಳೆ ಹಡಪ . . . ವಸ್ತ್ರಾಭರಣ ಲೇಪನದ ಧಾರಣದಿ ಕಂಗೆಸೆಯುತಿಹ ಪರಿಚಾರಕರು (ಶಂಕರಾ. ೧೦-೪).

[ಸಂ.]

ವೀಟಿ (ನಾ). ೧. ವೀಳೆಯದ ಬಳ್ಳಿ ಮತ್ತು ಅದರ ಎಲೆ ; ನಾಗವಲ್ಲಿ. ೨. ವೀಳೆಯದೆಲೆಯೊಂದಿಗೆ ಅಡಕೆ, ಸುಣ್ಣ ಮುಂತಾದುವನ್ನು ಹಾಕಿ ಸಿದ್ಧಪಡಿಸಿದ ತಾಂಬೂಲ ; ವೀಳೆಯ : ಕುಗ್ಗಲಿಗಳೆನಿಪ ಸದ್‌ಭಕ್ತರಾ ಲಿಂಗಕ್ಕೆ ಹಿಗ್ಗಿ ಹೊರೆಯೇಱಿ ನೈವೇದ್ಯಮಂ ಮಾಡಿ ಬಳಿಕಗ್ಗಳದ ವೀಟಯಂ ಲಿಂಗದೇವಂಗೀವ ಪರಿಯ ಕೇಳಿಂದನಾರ್ಯಂ (ಗುರುಚಾ. ೬-೬೬) ; ಶಿವಗೆ ಕರ್ಪೂರವೀಳೆಯವ ಕೊಡುವ ನೇಮಮಂ ತವೆ ತನಗೆಯಿರಲೊಮ್ಮೆ ದೊರೆಯದಿರಲಸುಗಳೆದ ಶಿವಭಕ್ತ ರೇಚಯ್ಯಗಳ ಪಾದಮಂ ನೆನವುತೀಶಗಿತ್ತರು ವೇಟಿಯ (ರಾಘಚಿ. ೨-೧೩).

ವೀಟಿತಾಂಬೂಲ = ವೀಳೆಯದೆಲೆ, ಅಡಕೆ, ಸುಣ್ಣಗಳನ್ನು ಹಾಕಿ ಸಿದ್ಧಪಡಿಸಿದ ತಾಂಬೂಲ : ವೀಟಿತಾಂಬೂಲ ಸವುದವರೇ (ಕಜಕಾ. ೨೬೬). [ಸಂ.]

ವೀಟಿಕೆ (ನಾ). ೧. = ವೀಟಿ ೧ : ಸ್ಫುಟಕಂ ಪೇಟಿಕೆ ವೀಟಿಕೆ ಘುಟಿಕೆ ವರಾಟಂ ಪೊದಟ್ಟ ರಘಟೆ ಕುಳಂ ತಾಂ ಸ್ಫುಟಸಹಿತಂ (ಶಮದ. ೨೨). ೨. = ವೀಟಿ ೨ : ಧನಕನಕ ದೇವಾಂಬರಾದಿ ಮುಕ್ತಾಭರಣ ಕರ್ಪೂರವೀಟಿಕಾದಿಗಳನಿತ್ತು ಓವಿ ಸಿಂಹಳಮುಖ್ಯರಂ

ತಮ್ಮ ತಮ್ಮ ದೇಶಾವಳಿಗೆ ಬೀಳ್ಕೊಡಲು (ಭಾವಚಂ. ೫-೩೧) ; ಭೂತಳೇಶ್ವರ ಬಾಣಲಿಂಗಾರ್ಚನೆಯ ತೀರ್ಚ ವೋತು ಭೋಜನಗೈದು ವೀಟಿಕೆಯನೊಲಿದುಯಾ ಶ್ವೇತಾಂಬುಜಾಯತೇಕ್ಷಣೆಯು ಭದ್ರಾವತೀ ಮಡಿಮಡಿಸಿ ಯಾವುತಿರಲು . . . ಸವಿಲಾಸದಿಂ ತಾಂಬೂಲ ಸವಿವುತಿರೆ (ಸಮರ. ೨೨-೫೭). [ಸಂ. ವೀಟಿಕಾ]

ವೀಟಿಕೆಯಿಾ (ಕ್ರಿ). ವೀಳೆಯವನ್ನು ಕೊಡು ; ತಾಂಬೂಲವನ್ನು ನೀಡು : ಮೊಲ್ಲೆ ಮಲ್ಲಿಗೆ ಜಾಜಿ ಹಾರಂಗಳಮರ್ಚುತ್ತೆ ಸಲ್ಲೀಲೆಯಿಂದ ತಾಂ ತರುಬಿ ವೀಟಿಕೆಯಿತ್ತು ಪುಲ್ಲಂಬನಾಹವಕೆಯನುವಾದಳು (ಚೋರಬ. ೨-೨೦). [ವೀಟಿಕೆ + ಈ$_2$]

ವೀಟೋ (ನಾ). (ಶಾಸನಸಭೆಯು ಮಾಡಿದ ನಿರ್ಣಯವನ್ನು ಅಥವಾ ಶಾಸನವನ್ನು) ನಿರಾಕರಿಸುವ ಅಧಿಕಾರ ; ನಿರಾಕರಣೆಯ ಅಧಿಕಾರ : "ನಿಷೇಧ ; ನಿರೋಧ ; ವೀಟೋ. (ಪಾರಿ) ನಿಷೇಧಾಧಿಕಾರ" (Veto ಪತ್ರಿ. ೮೬).

[← ಇಂ. Veto]

ವೀಡು 'ಬೀಡು$_2$' ನೋ.

ವೀಣಾಕರ್ಕಟ (ನಾ). ಒಂದು ಬಗೆಯ ಸಸ್ಯ : "ಕುಲಕರ್ಕಟೀ — ವೀಣಾಕರ್ಕಟ" (ಓಷಧಿ. ೩೭). [ಸಂ.]

ವೀಣಾಕ್ವಣ (ನಾ). ವೀಣೆಯ ಧ್ವನಿ, -- ನಾದ : ಆಲಿಸದೊ! ಪೊಣ್ಮುತಿಹುದಲ್ಲಿ ವೀಣಾಕ್ವಣಂ (ಅಗ್ನಿಹಂ. ೫೯). [ಸಂ.]

ವೀಣಾಗಾನ (ನಾ). ವೀಣೆಯಲ್ಲಿ ನುಡಿಸುವ ಸಂಗೀತ : ಮನವ ದೇಹವನಲೆವ ಬಿಮ್ಮುಗೆಗಳೊಂದಾಗಿ ಘನಸಹಜದಂಗನೆಯ ಕೆರಳಿಸಿದುವು : — ಸವಿಯ ವೀಣಾಗಾನ, ಕನಿಕರದ ಪ್ರೇಮಕಥೆ, ಕವಿದ ಕಂಟಿನ ಸಿರಿಯ ಹೊಳೆವ ಸಂಜೆ (ಇಂಗೀತ. ೪೬-೨೬); ಇವರ ವೀಣಾಗಾನಪಾಂಡಿತ್ಯಕ್ಕೆ ಮೆಚ್ಚಿ . . . ನಾಲ್ವಡಿ ಕೃಷ್ಣರಾಜಒಡೆಯರು ಸುಬ್ಬಣ್ಣನವರಿಗೆ ' ವೈಣಿಕಪ್ರವೀಣ' ಎಂಬ ಪ್ರಶಸ್ತಿ ದಯಪಾಲಿಸಿದರು (ಸಂಗೀಚಂ. ೨೭೩). [ಸಂ.]

ವೀಣಾದಂಡ (ನಾ). ವೀಣೆಯ ಸೋರೆಬುರುಡೆಯ ಮೇಲೆ ಉದ್ದಕ್ಕೆ ಇರುವ ದಂಡ ; ವೀಣೆಯ ದಂಡಿಗೆ : ತೋಡಿರಾಗವನ್ನು ಸರಿಯಾಗಿ ಆಲಾಪನೆ ಮಾಡಲಿಲ್ಲವೆಂದು ನಾನಾಕೆಯನ್ನು ತಿದ್ದಲು ಅವಳು ಕೋಪಿಸಿಕೊಂಡು ನನ್ನನ್ನು ವೀಣಾದಂಡದಿಂದಲೇ ಪ್ರಹರಿಸಿದಳು (ಕವಿ. ೪೬). [ಸಂ.]

ವೀಣಾಧ್ವನಿ (ನಾ). = ವೀಣಾಕ್ವಣ : "ಕೃತಂ ವೀಣಾಧ್ವನಿ ಭೂಷಣರಣಿತಂ" (ವಸ್ತುಕೋ. ೮೧-೩೭). [ಸಂ.]

ವೀಣಾನಾದ (ನಾ). = ವೀಣಾಕ್ವಣ : ವೀಣಾಧರಶಿವನ ಮುಖ ತುಸು ಬಾಗಿದ್ದು ವೀಣಾನಾದಕ್ಕೆ ಸರಿಯಾಗಿ ತಲೆದೂಗುವಂತಿದೆ (ನೂಳಂಬ. ೯೭). [ಸಂ.]

ವೀಣಾನುಗಂತ (ನಾ). [ಸಂಗೀತ] ಒಂದು ಬಗೆಯ ತಂತೀವಾದ್ಯ : ದುಕ್ಕಡಿ ಗೀತಾನುಗಂತ ಶ್ರುತಾನುಗಂತ ಉಭಯಾನುಗಂತ ವೀಣಾನುಗಂತಮೆಂಬೈದು ತೆಱನಾಗಿ ಹುದು (ವಿವೇ. ೧೯೦). 'ಗೀತಾನುಗಂತ' ಪರಾ. [< ಸಂ. ವೀಣಾನುಗಂತ್ಯ]

ವೀಣಾಪಾಣಿ (ನಾ). ೧. ವೀಣೆಯನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿ : ಆ ಮಂಟಪದ ಮಧ್ಯದಲ್ಲಿ ಓರ್ವ ಸುಂದರಿ ವೀಣಾಪಾಣಿಯಾಗಿದ್ದಾಳೆ (ಕುಂಕುಮ. ೪೧). ೨. ಸರಸ್ವತಿ : ಭುವನಮೋಹನ ಮಧುರದಿವ್ಯ ವೀಣಾಪಾಣಿ, ವಾಗ್ದೇವಿ (ಚಿತ್ರಾಂಗ. ೧-೪). [ಸಂ.]

ವೀಣಾವಾದಕ (ನಾ). ವೀಣೆಯನ್ನು ನುಡಿಸುವವನು : ಇತಿಹಾಸ ಪುರಾಣಗಳು . . . ನಾರದಮಹರ್ಷಿ 'ಮಹತೀ' ವೀಣಾವಾದಕನೆಂದೂ ತಿಳಿಸುತ್ತವೆ (ಸಂಗೀಚಂ. ೧೦೮).

[ಸಂ.]

ವೀಣಾವಾದನ (ನಾ). ವೀಣೆಯನ್ನು ನುಡಿಸುವಿಕೆ : ಶೇಷಣ್ಣನವರು ತಮ್ಮದೇ ಆದ ವೀಣಾವಾದನ ಶೈಲಿ ನಿರ್ಮಿಸಿಕೊಂಡರು (ಸಂಗೀಚಂ. ೨೬೮). [ಸಂ.]

ವೀಣಾವಾದ್ಯ (ನಾ). ಒಂದು ಬಗೆಯ ತಂತೀವಾದ್ಯ ; ವೀಣೆ : ವೀಣಾವಾದ್ಯದ ಬಲ್ಮೆ ಬಲ್ಮೆಯಳವಂ ಗೆಲ್ದೊಪ್ಪೆ . . . [ಸೋಲ್ವಂತಮಾ ವೀಣಾಳಾಪಿನಿ] ಮಾಣ್ಬುದಾವುದೆನಗೀ ಜನ್ಮಾಂತರಕ್ಕೆಂತುಟುಂ ಪ್ರಾಣಾಧೀಶ್ವರನೀತನೆಂದು ಕೊರಲೊಳ್ ತಂದಿಕ್ಕಿದಳ್ ಮಾಲೆಯಂ (ಬಂಹರಿ. ೫-೩) ; ಈಗಿರುವ ಸರ್ವರಾಗ ಮೇಳ ವೀಣಾವಾದ್ಯದ ರಚನಾ ಶಿಲ್ಪಿಯೂ ವೆಂಕಟಮಖಿ (ಸಂಗೀಚಂ. ೩೨೫). [ಸಂ.]

ವೀಣಾಸೂತ್ರವಿಧಿ (ನಾ). ವೀಣೆಯ ತಂತಿಗೆ ಒದಗುವ ಸ್ಥಿತಿ, — ಪಾಡು (?) : ಶ್ರೋತ್ರಸುಖವನು ಕೇಳಿ ನಿಲ್ಲದೆ ನೇತ್ರಸುಖವನು ಕಂಡು ಬಳಿಕಲಿ ಪಾತ್ರದಿಂ ಸ್ಫುರಿಶನವ ಮಾಡುವೆನೆಂದು ತವಕಿಸುತ ಮೂತ್ರನಾಳಕೆ ಮುಂದುಗಟ್ಟಿಣು ಮಾತ್ರ ಬಿಂದುವ ಕೆಡಹಿ ವೀಣಾಸೂತ್ರವಿಧಿಯಂತಾಗಬೇಡೆಂದೊರೆದ ದೇಶಿಕನು (ಸದ್ಗುರು. ೨-೧೬). [ಸಂ.]

ವೀಣೆ$_1$ (ನಾ). ೧. ಕರಡಿಗೆ ; ಭರಣಿ : ಪನಿನೀರ ಕುಪ್ಪಿಗೆ ಕರ್ಪೂರದಂಡೆ ಪೂವಿನ ಪೊಟ್ಟಣ ಮೃಗಮದದ ತನಿಗಂಪಿನ ವೀಣೆ ಸಾದಿನ ಭರಣಿಗಳನಲ ಕೊಂಡಕೆ ಹಾಕಿದರು (ಕುರಾಪಾಂ. ೩೬-೧೫೩). ೨. ಸುಗಂಧದ್ರವ್ಯ (?) : ಕತ್ತುರಿಯ ವೀಣೆ ಬಾವನ್ನ ಕುಂಕುಮವನೊಡಗಲಿಸಿಯನುಲೇಪಲಲಾಮಂಗಳ ಜಾನಂದೊಡರ್ಚಿ (ರಂಪಾಣ.೬-೧೪). [ದೇ. ‖ ತೆಲು. ವೀಣೆಯ, ವೀಣೆ, ವೀಣೆಯ = ಕಸ್ತೂರಿಮೃಗದ, ಹೊಟ್ಟೆಯ ಚರ್ಮದೊಳಗೆ ಇರುವ ಕಸ್ತೂರಿಯನ್ನು ಒಸರುವ ಗ್ರಂಥಿ]

ವೀಣೆ$_2$ (ನಾ). (ಸಾಮಾನ್ಯವಾಗಿ, ಏಳು ತಂತಿಗಳು ಮತ್ತು ಮೆಟ್ಟಿಲುಗಳನ್ನು ಹೊಂದಿದ್ದು, ಬಲಗೈ ಬೆರಳುಗಳಿಂದ ಮೀಟಿ, ಎಡಗೈ ಬೆರಳುಗಳಿಂದ ನುಡಿಸುವ) ಒಂದು ಬಗೆಯ ತಂತೀವಾದ್ಯ : ಪೋಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯನಾ ಸುರತಪ್ರವೀಣೆಯಂ (ಅಂಪು. ೨-೬೭) ; ವೀಣೆಯೊಳಗಿವಳಮಮ ಪ್ರತಿವಾಣಿ ಸುಂದರದೇಳ್ಗೆಗಂಬುಜಬಾಣನರಸಿಯುಮಿವಳೆ ವರನಹ ನೃಪನದಾರೆನುತ ಜಾಣಸಚಿವನ ಮುಖವ ನೋಡಲು (ಪಾಗಚ. ೧೨-೧೦) ; ನಾನೇ ವೀಣೆ, ನೀನೆ ತಂತಿ, ಅವನೆ ವೈಣಿಕ (ಪ್ರಮಕಾ. ೩೧-೧) ; ಏಳು ವೀಣೆಯೆ, ಏಳು! ಹೇಳು ಮುಂದಿನ ಕಥೆಯ (ಚಿತ್ರಾಂಗ. ೨-೯).

ವೀಣೆ ನುಡಿಸು = ವೀಣೆಯನ್ನು ಬಾರಿಸು; ವೀಣಾವಾದನ ಮಾಡು : ಶೇಷಣ್ಣನವರಿಗೆ ಬಾಲ್ಯದಿಂದಲೂ ವೀಣೆ ನುಡಿಸುವುದರಲ್ಲಿ ಅಸಾಧಾರಣ ಕೈಚಳಕ (ಸಂಗೀಚಂ. ೨೬೮). **ವೀಣೆ ಬಾರಿಸು** = ವೀಣೆನುಡಿಸು : ವೀಣೆ ಬಾರಿಸುವುದರಲ್ಲಿ ಅವಳದು ಎತ್ತಿದ ಕೈ (ಡೂಂ). **ವೀಣೆಯ ಹೆರಳು** = ವೀಣೆಯ ಬುರುಡೆ : "ಕಕುಭಃ, ಪ್ರಸೇವಕಃ — ೨ ವೀಣೆಯ ಹೆರಳಿನ ಹೆಸರುಗಳು" (ಪಾಕ್ಷಾಂ. ೫೯). **ವೀಣೆಯೆಳೆ** = ವೀಣೆಯ ತಂತಿ : ವೀಣೆಯೆಳೆ ಹರಿಯುತ್ತಲೇ ಮಾಣುವುವು ನೆನಪಿಂದ ಗಾನದುಲುಹು (ಇಂಗೀತ. ೫೮-೫). [ಸಂ. ವೀಣಾ]

ವೀಣೆಗಾರ್ತಿ (ನಾ). ವೀಣೆಯನ್ನು ನುಡಿಸುವವಳು ; ವೀಣಾವಾದಕಿ : ತರಳಾಕ್ಷಿ ತನ್ನೊಳು ಪಾಡುವರಿಲ್ಲೆಂದು ಕೊರಲೊಳಿಟ್ಟಳು ಕಂಠಸರವ ಪೆಜಳೊರ್ವೆ ವೀಣೆಗಾರ್ತಿಯರಿಲ್ಲೆನುತವೆ ಬೆರಲೊಳಿಟ್ಟಳು ಮುದ್ರಿಕೆಯ (ಮೋಹ. ೧೮-೪೩).

[ವೀಣೆಗಾಱ + -ತಿ$_1$(< ಇತ್ತಿ)]

ವೀಣೆಗಾಱ (ನಾ). ವೀಣೆಯನ್ನು ನುಡಿಸುವವನು ; ವ್ಯತ್ಯೆಕ : 'ವೀಣೆಗಾರ್ತಿ' ಪರಾ. [ವೀಣೆ$_2$ + - ಕಾಱ]

ವೀಣೆಯ (ನಾ). ಮರಗಳ ಸಮೂಹ ; ತೋಪು (?) : ಇಂತತಿಮನೋಹರಮಾದ ವಸಂತಸಮಯದೊಳ್ ಪುದಿಯೆ ಕವಿಲ್ದ ಕೇಸರದ ದೂಸಮಶೋಕೆಯ ವೀಣೆಯಂ ಪ್ರಿಯಾಳದ ಗುಡಿ ನಾಗಪಂಚಕದ ಚಂಪೆಯಮಾಮ್ರದ ಕೊಂಚೆಯಂ ತಮಾಳದ ಪರಿವೆತ್ತ ಚೋಳಪರಿ ತಳ್ತವಿರ್ಮುತ್ತೆಯ ಕುಪ್ಪವೊಪ್ಪ ತೋಜಿಪುದುವು ಮನೋಜರಾಜ ಶಿಬಿರಂಗಳವೆಂಬನೆಗಂ ವನಾಳಿಗಳ್ (ಚಂದ್ರಪ್ರ. ೭-೬೨). [?]

ವೀತ (ಗು). ೧. ಹೊರಟ ; ಹೋದ ; ಕಾಣೆಯಾದ. ೨. ಬಿಟ್ಟುಹೋದ ; ಬೇರೆಯಾದ. ೩. ಬಿಟ್ಟುಬಿಟ್ಟ ; ಬಿಡುಗಡೆ ಮಾಡಿದ ; ಮುಕ್ತಗೊಳಿಸಿದ. ೪. ಬಿಡುಗಡೆ ಹೊಂದಿದ ; ವಿಮುಕ್ತಗೊಂಡ. ೫. ಹತ್ತಿರಕ್ಕೆ ಹೋದ ; ಸಮೀಪಿಸಿದ. ೬. ಅಂಗೀಕೃತವಾದ ; ಒಪ್ಪಿತವಾದ ; ಸ್ವೀಕೃತವಾದ. ೭. ಬಯಸಿದ ; ಅಪೇಕ್ಷಿಸಿದ. ೮. ಸಾಧುವಾದ ; ಸೌಮ್ಯವಾದ. ೯. (ವಸ್ತುವನ್ನು) ಧರಿಸಿದ ; ತೊಟ್ಟ. (ನಾ). ೧೦. ಯುದ್ಧಕ್ಕೆ ಯೋಗ್ಯವಲ್ಲದ ಅಥವಾ ತರಬೇತಿ ಪಡೆಯದ ಆನೆ ಅಥವಾ ಕುದುರೆ : "ವೀತಂ — ಅಸಾರಂ — ಹಸ್ತ್ಯಶ್ವಂ ಬಲವಿಲ್ಲದ ಬೆಂಡಾದ ಆನೆಗೂ ಕುದುರೆಗೂ ಹೆಸರುಗಳು" (ಪಾಕ್ಷಾಂ. ೧೪೯). ೧೧. ಕಾಲಿಗೆ ಅಳವಡಿಸಿಕೊಂಡ ಚುಚ್ಚುವ

ಸಾಧನ ಅಥವಾ ಮೊನೆಗೋಲು, ಅಂಕುಶ ಮೊದಲಾದುವುಗಳಿಂದ ಆನೆಯನ್ನು ತಿವಿದು ಓಡಿಸುವಿಕೆ, — ನಡೆಸುವಿಕೆ, — ಚೋದಿಸುವಿಕೆ : ''ಯತವಂಛ್ರುಕರ್ಮವಂಕುಶಗತ(ಚಾ)ವಾರಣ ಯಾತವೆಂಬುದದು ವೀತಂ ತದ್ವ್ಯುತಯಕ್ಕಂ ವೆಸರಕ್ಕುಂ'' (ಮ್ಯಾಕೋ. ೮೮-೩೭). [ಸಂ.]

ವೀತಂಸ (ನಾ). ಪ್ರಾಣಿ ಅಥವಾ ಪಕ್ಷಿಗಳನ್ನು ಬಂಧಿಸಲು ಬಳಸುವ ಬೋನು, ಪಂಜರ, ಬಲೆ,ಸರಪಳಿ ಮುಂತಾದ ಸಾಧನ. [ಸಂ.]

ವೀತಕೇತಕ (ನಾ). ಕೇದಗೆಯನ್ನು ಬಿಟ್ಟಿರುವುದು : ಮತ್ತಮದು ಸಮುಚಿತ ನೀಲಕಂಠವಿಳಾಸಮಾಗಿಯುಂ ವೀತಕೇತಕಮಲ್ತು (ಚಂದ್ರಪ್ರ. ೪-೪೨ ವ). [ಸಂ.]

ವೀತಭಯ (ನಾ). ೧. ನಿರ್ಭಯತೆ ; ನಿರ್ಭೀತಿ : ಖ್ಯಾತವಾದಾ ಹ್ರದನ ತಟದಲಿ ವೀತಭಯದಲಿ ಪದ್ಮನಾಭಸಮೇತನೊಬ್ಬನು ಪನ್ನಗೋತ್ತಮನಿಹನು (ತಿಮ್ಮ.ಶಾಂ. ೧೦- ೩೮). ೨. ಭಯವನ್ನು ಬಿಟ್ಟವನು ; ನಿರ್ಭೀತನಾದವನು : ವೀತಭಯನಭಮನ್ಯುವನೆ ರಿಪುಜಾತ ನಡುಗಿತು ಲೋಕ ಮೂಜಿಜೊಳೀತನುದಯದ ಕೀರ್ತಿ ಪಸರಿಸಿತು (ಕುವ್ಮಾಕ. ೨೦-೩). [ಸಂ.]

ವೀತಮಲ (ನಾ). ದೋಷದೂರನಾದ ವ್ಯಕ್ತಿ ; ಶುದ್ಧನಾದವನು : ಇಂತಹ ಪರಮಶಿವನ ಉಪಾಸನೆಯಿಂದ ವೀತಮಲರಾದ ಪುರುಷರು ಪರಮಶಿವನ ಪರಮ ಸಾಮ್ಯವೆಂಬ ಮುಕ್ತಿಯನ್ನು ಹೊಂದಿ ಶಾಶ್ವತಶಿವರಾಗಿರುವರು (ಹಿಂದಸಾ. ೩೦೧). [ಸಂ.]

ವೀತರಾಗ (ಗು). ೧. ಆಸೆ, ಬಯಕೆ, ಕಾಮ, ಪ್ರೇಮ, ದೋಷ ಮೊದಲಾದ ಮನೋವಿಕಾರಗಳನ್ನು ಬಿಟ್ಟಿರುವ ; ರಾಗರಹಿತವಾದ. ೨. ನಿರುದ್ವೇಗದಿಂದಿರುವ; ಪ್ರಶಾಂತವಾಗಿರುವ. ೩. ಬಣ್ಣವಿಲ್ಲದಿರುವ ; ವರ್ಣರಹಿತವಾದ. (ನಾ). ೪. ಆಸೆ, ಕಾಮ, ರೋಷ ಮೊದಲಾದ ಮನೋವಿಕಾರಗಳಿಂದ ದೂರನಾದವನು; ರಾಗರಹಿತನಾದವನು ; ವಿರಾಗಿ ; ಜಿತೇಂದ್ರಿಯ : ಮುನಿ ವೀತರಾಗನೆಂದುಂ ಬನಮಂ ಸಾರ್ತಕ್ಕುಂ (ಕವಿಕಾ. ೧-೭೯) ; ಸ್ಮರರಾಗೋದ್ರೇಕಂ ವೀತರಾಗನಿರ್ದೆಡೆಯೊಳೇಕೆ ಪುಟ್ಟುಗುಮನೆ ತತ್ಪರತೆಯಿನಂತರ್ವತ್ನಿಯೊಳರಸನಪೇಕ್ಷಿಸನೆ ರತಿರಹಸ್ಯೋತ್ಸವಮಂ (ಪುಷ್ಪಪ್ರ. ೯-೧೧೮). ೫. (ಬೌದ್ಧ ಅಥವಾ ಜೈನ) ಸಂನ್ಯಾಸಿ ; ಭಿಕ್ಷು. ೬. ರಾಗದ್ವೇಷಾದಿಗಳಿಲ್ಲದವನು ; ಅರ್ಹಂತ ; ಜಿನ : ಕರಿ ಮಹಿಷ ಮೇಷ ಮಲ್ಲಸ್ವರೂಪದಿಂ ತಮಗೆ ತಾಮೆ ಪೋರೆ ಸುರರ್ಕಳ್ ಪರಮನ ಮನಕ್ಕಳ್ವೊಂದುಂ ಬರಲಾಜವೆ ವೀತರಾಗನಪ್ಪುದಱಿಂದಂ (ಅಜಿಪು. ೫-೮೧). ೭. ಅತಿವಿನಯವಂತ ; ಅತ್ಯಂತ ವಿನಯಶೀಲನಾದವನು : ''ಎಡವರಿವ ವಿನಯಿತಂ ವೀತರಾಗನನಿಕ್ಕು'' (ಮಂಗರಾ. ೭೧-೨೦). [ಸಂ.]

ವೀತರಾಗದ್ವೇಷಿ (ನಾ). ಮುನಿಯ ನಡವಳಿಕೆಗೆ ವಿರುದ್ಧವಾದ ನಡವಳಿಕೆಯುಳ್ಳವನು : ಈತನೆಮ್ಮಯ ಪಾಶುಪತ ವಿಖ್ಯಾತ ಬಾಣವ ಬೇಡಿ ತಪದಲಿ ವೀತರಾಗದ್ವೇಷಿಯಾದನು (ಕುವ್ಮಾಕ. ೬-೨೬). [ಸಂ. ವೀತರಾಗದ್ವೇಷಿನ್]

ವೀತರಾಗಿ (ನಾ). ಮೋಹಾದಿ ರಾಗಗಳನ್ನು ಗೆದ್ದವನು : ರಣರಹಸ್ಯಜ್ಞಾನಿಗಳು ಮಿಗೆ ಮಣಿದರಿಂದ್ರಿಯವಶಕೆ ರಿಪುಭಟಗಣವಿದಾರಣತರ್ಕವಿದ್ಯಾವೀತರಾಗಿಗಳು (ಕುವ್ಮಾಭ. ೭-೧೦). [ಸಂ. ವೀತರಾಗಿನ್]

ವೀತರಾಶಿ (ನಾ). ಒಬ್ಬಾತನ ಹೆಸರು : ವೀತರಾಶಿ (ಎಕ, II, ೩೮ ; ಸಾ, 750). [?]

ವೀತಾಂಕುಶ (ನಾ). ಅಡ್ಡಿ, ತಡೆಗಳಿಲ್ಲದವನು ; ನಿರಂಕುಶನಾದವನು : ವೀತಾಂಕುಶನಪ್ಪ ರಾವಣನೊಳಂ ನೆರೆದೀ ನುಡಿಗೇಳ್ದು ನಾಡೆಯುಂ ಶಂಕೆಯೊಳೊಂದಿ ಬರಿದೆನಲಿಪಲ್ಪೆಜತೇಂ ನಿಮಗಾ ಪ್ರಪಂಚಮಂ (ಪಂರಾಮಾ. ೩-೨೨). [ಸಂ.]

ವೀತಾಸು (ನಾ). ಜೀವಹೋದ ದೇಹ ; ಹೆಣ ; ಶವ : ''ವೀತಾಸು ಶವಂ ಕುಣಪಂ'' (ಮ್ಯಾಕೋ. ೫೯-೪೫). [ಸಂ.]

ವೀತಿ (ನಾ). ೧. ಚಲಿಸುವಿಕೆ ; ಗತಿ ; ಗಮನ. ೨. ಬೆಳಕು ; ಕಾಂತಿ. ೩. ಕುದುರೆ ; ಅಶ್ವ : ''ಘೋಟಕಃ, ವೀತಿಃ . . . ಸ್ಕಂಧವಃ, ಸಪ್ತಿಃ — ೧೩ ಕುದುರೆಯ ಹೆಸರುಗಳು'' (ಸಿಕ್ಕಾಂಶಿ. ೨೪೯). [ಸಂ.]

ವೀತಿಹೋತ್ರ (ನಾ). ೧. ಅಗ್ನಿ ; ಬೆಂಕಿ : ಭಕ್ತಜನವಿಪದಿಂಧನ ಪ್ರಬಲ ವೀತಿಹೋತ್ರನ ಜಗದ್ಧಿತಗಾತ್ರನ . . . ಭಕ್ತವತ್ಸಲನ ಪದ್ಮರಸನೀ ಕೃತಿಗೆ ಮೊದಲಾವುದೆನೆ ಮುಂದೆ ಪೇಳ್ದಂ (ಪದ್ಮರಾ. ೧-೫೧) ; ಜಾತರೂಪದಲೇಸು ಹೊಲ್ಲೆಹ ವೀತಿಹೋತ್ರನ ದೇಹ ಕಾರಣಭೂತವಾಗಿಹುದವಗೆ (ಕುವ್ಮಾಉ. ೩-೧೨೪). ೨. ಸೂರ್ಯ ; ರವಿ. ೧, ೨ : ಮತ್ತಮಾ ನೃಪೇಂದ್ರನುಪೇಂದ್ರನಂತೆ ಸದಾನಂದಕರಾಜಿತನುಂ . . . ವೀತಿಹೋತ್ರನಂತೆ ವಿತತಕಾಂತಾರತಮೋಹನುಂ . . . ಅತನುವಿಭೂತಿವಿಳಸಿತನಾಗಿಯುಮಶೇಷಾ ಭರಣಕರನೆನಿಸಿರ್ದಂ (ರಾಜಶೇ. ೩-೯ ವ). [ಸಂ.]

ವೀತಿಹೋತ್ರಜ (ನಾ). ಸೂರ್ಯನ ಮಗ ; ಸುಗ್ರೀವ : ಆತು ನಿಂದ ಸುಷೇಣ ಜಾಂಬವ ವೀತಿಹೋತ್ರಜ ಬಲಮಹಾಬ್ಧಿಗೆ ಸೇತುವನು ಕಟ್ಟಿದನು ಬಾಣಶಿಲಾ ಪ್ರಕೀರ್ಣದಲಿ (ತೂರರಾ. ೭-೧೮-೩೦). [ಸಂ.]

ವೀತಿಹೋತ್ರಾಂಬಕ (ನಾ). ಉರಿಗಣ್ಣುಳ್ಳವನು ; ಅಗ್ನಿನೇತ್ರ ; ಶಿವ : ಶ್ರೀಮದ್ದುರ್ಗ ನಿರರ್ಗಳಸೋಮ ಜಗನ್ನೇತ್ರ ವೀತಿಹೋತ್ರಾಂಬಕ ನಿಃಕಾಮಿಸ್ವಾಮಿ ನಿರಾಕುಳ ರಾಮಗ್ರೀವಾಘದೂರ ಪಾಲಿಪುದೆನ್ನಂ (ಹಮ್ಮೀರ. ೭-೧). [ಸಂ.]

ವೀಥಿ (ನಾ). ೧. ಸಾಲು ; ಓಳಿ ; ಪಂಕ್ತಿ : ''ಅಳೀ(ಃ), ಶ್ರೇಣೀ(ಃ), ಆವಳಿಃ, ಪಂಕ್ತಿಃ, ವೀಥೀ, ರಾಜೀ(ಃ)- ಈ ೬ ಪಂತಿ'' (ಹಲಾಯು. ೧೧೯-೩೬) ; ಸೋನಕ್ಕನ ಹಿಂಬಾಲಿಗೆ ನಡೆಯುವ ಮೃತ್ಯುಕಾಮಿ ಜೀವಗಳ ವೀಥಿಯೇ ಇತ್ತು (ದೀಪಹ. ೧೧, ೩೮೧). ೨. ಬೀದಿ ; ದಾರಿ ; ಮಾರ್ಗ : ಪೃಥ್ವಿ ಅಪ್ಪು ತೇಜವಾಯ್ಯಾಕಾಶದ ಕೊನೆಯ ಮೊನೆಯ ಮೇಲೆ . . . ಚಪ್ಪನ್ನ ವೀಥಿಗಳ ದಾಂಟಿ ಛತ್ರೀಸಪುರದ ರಚನೆಯ ನೋಡಿ ಬಲ್ಲೆವೆಂಬರು (ಅವಚಿ. ೭೧-೩೭) ; ಚಂದ್ರೋದಯದಲಿ ನಗರದ ವೀಥಿಗಳಂದವ ನಲಿದು ನಿಟ್ಟಿಸುತ ಕಂದರ್ಪರೂಪ ಜೀವಂಧರನತಿಲೀಲೆಯಿಂದ ನಡೆದು ಬರುತಿರ್ದ (ಜೀವಂಸಾಂ. ೧೯-೩೭). ೩. ಗುಂಪು ; ಸಮೂಹ : ಪಾಱುವ ಸೋಗೆ ಸೀಗುರಿ ಚಲಚ್ಚಮರೀಮೃಗವೀಥಿ ಚಾಮರಂ . . . ಸಿಂಹವಿಷ್ಟರಂ ತೋಱುವ ಚಂದ್ರಕಾಂತಶಿಲೆಯಾಗೆ . . . ಪೂರ್ವ ಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ (ಗಿರಿ. ೧-೫೦). ೪. [ನಾಟ್ಯ] ಹತ್ತು ಬಗೆಯ ರೂಪಕಗಳಲ್ಲಿ ಒಂದು; ಒಂದೇ ಅಂಕವುಳ್ಳ ಒಂದು ಬಗೆಯ ದೃಶ್ಯಕಾವ್ಯ : ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ — ಎಂದು ರೂಪಕಗಳು ಹತ್ತು ವಿಧ (ಸಂನಾಟ. ೨೯) ; ಅಭಿನಯಿಸಿ ತೋರುವ ನಾಟಕಗಳಿಗೆ ರೂಪಕವೆಂದು ಅನ್ನುವರು. ಇದರಲ್ಲಿ ನಾಟಕ, ಪ್ರಕರಣ . . . ವೀಥಿ, ಅಂಕ, ಈಹಾಮೃಗ — ಎಂಬ ಹತ್ತು ವಿಧಗಳಿವೆ (ಜಾಲಪ್ರ. I, ೬೨೮). [ಸಂ.]

ವೀಥಿಗೊಳ್ (ಕ್ರಿ). ಸಾಲಾಗು ; ಶ್ರೇಣಿಗೊಳ್ಳು : ಕೆಲಬಲದೊಳ್ ಶುಕಾವಳೀ ತುರಂಗಸಂಘಂ ಸಂದಣಿಸೆ ರಥಾಂಗಘನರಥಂ ವೇಳಯ್ಪೆ ಚೂತಗಜಂ ವೀಥಿ [ಪಾಶಾಂ. ೧೫]ಗೊಳೆ . . . ಕಾಮದೇವಂ ಹೇಮಕೂಟಾಭಮುಖನಾಗಿ ನಡತರ್ಪಾಗಳ್ (ಗಿರಿ. ೭-೭೨ ವ). [ವೀಥಿ + ಕೊಳ್]

ವೀಥಿಮಾರ್ಗ (ನಾ). ಬೀದಿಯ ಸಾಲು : ರವಚಿತ ಯಾಮತೂರ್ಯರವಮಿಶನ ನಬ್ಧಿಯೆ ನಿದ್ರೆಯತ್ತಲುಪ್ಪವಡಿಸುವಂತು ಮಾಳ್ಪುದು ಗವಾಕ್ಷನಿರೀಕ್ಷಿತವೀಥಿಮಾರ್ಗದೊಳ್ ನವಯುವನೀತನೊಳ್ ನೆರೆದುವಂದುಪವಾಂತ ಲವಂಗಪುಷ್ಪವತ್ಸವನವಿದಾರ್ಯ ಘರ್ಮಲವೆಯಾಗಿ ವಿಹಾರಿಸು ವಾರ್ಧಿತೀರದೊಳ್ (ಶಾಂತಿಪು. ೫-೧೩೫). [ಸಂ.]

ವೀಧಿ (ನಾ). ೧. ಹಾದಿ ; ಮಾರ್ಗ ; ದಾರಿ ; ರಸ್ತೆ : ತಮಾಲವನದೊಳ್ ಘನಚಂದನ ವೀಧಿಯೊಳ್ . . . ತೊಟಲ್ದಜಿಸಿ ನೋಡಿದೆಂ (ಕಾದಂಪೂ. ೮೨೭) ; ವಾರನಾರಿಯರು ಸಂಚರಿಸುತಿರ್ದರು ಕೇಳು ದ್ವಾರಾವತಿಯ ವೀಧಿಯಲಿ (ಮೋಹತ. ೩-೭೮). ೨. ವಿಸ್ತಾರ ; ಹರಹು ; ಬಯಲು : ಪಕ್ಷಿಸುಸ್ವನಮಯ ಪುರೋದ್ಯಾನ ವೀಧಿಯೊಳ್ ಪಾಳೆಯಂದಿಟ್ಟು ದರ್ಜುನನ ಸೇನೆ ! (ಚಿತ್ರಾಭಾ. ೭೨ ೧೯೭೪). ೩. ಗುಂಪು ; ಸಮೂಹ . 'ದೇವವೀಧಿ', 'ಯೂಥ' ಪರಾ.

ವೀಧಿವೀಧಿ (ದ್ವಿರುಕ್ತಿ) : ವೀಧಿವೀಧಿಯೊಳು ಕಂಗೊಳಿಸುವ ಸೋಪಸ್ಕರ ವ್ಯವಹಾರದಂಗಡಿ ಮೆಱೆದುವಿಕ್ಕೆಲದಿ (ಮೋಹತ. ೩೬-೭೧). [< ವೀಥಿ./ P ಸಂಸ್ಕೃತ ಕೋಶಗಳಲ್ಲಿ ಈ ರೂಪ ಸಿಗುವುದಿಲ್ಲ. 'ವೀಥಿ'ಗೆ ಅನುರೂಪವಾಗಿ ಇದು ಬಳಕೆಯಾಗಿದೆ]

ವೀದ್ಧ (ಗು). ೧. ಶುದ್ಧವಾದ ; ನಿರ್ಮಲವಾದ. (ನಾ). ೨. ನಿರ್ಮಲವಾದುದು ; ಸ್ವಚ್ಛವಾದುದು : ''[ಮಲ] ವಿದೂಷಿತಂ ಶುದ್ಧಮದುಜ್ಜ್ವಲಮತಿಮೇಧ್ಯಂ ವೀದ್ಧಂ

ಮಲರಹಿತಂ ಶುಚಿತಮಂ ಪವಿತ್ರಂ ಪೂತಂ'' (ವಸ್ತುಕೋ. ೧೦೮-೭೧). ೩. ಆಕಾಶ. ೪. ಗಾಳಿ ; ವಾಯು. ೫. ಅಗ್ನಿ ; ಬೆಂಕಿ. [ಸಂ.]

ವೀಪ್ಸೆ (ನಾ). ೧. ಅನುಕ್ರಮವಾಗಿ ಒಂದಾದ ಮೇಲೆ ಒಂದರಂತೆ ಅನುಸ್ಯೂತವಾಗಿ ಪದಗಳನ್ನು ಆವರ್ತಿಸುವ ಕ್ರಮ. ೨. ಹೇಳಿದ್ದನ್ನೇ ಮತ್ತೆ ಹೇಳುವಿಕೆ ; ನಿರಂತರವಾಧ ಕ್ರಿಯೆಯನ್ನು ಸೂಚಿಸಲು ಬಳಸುವ ಶಬ್ದಗಳ ಪುನರುಕ್ತಿ, — ಯುಗಳೋಚ್ಚಾರಣೆ : ಚಾಪಲ್ಯವೀಪ್ಸಾಭೀಕ್ಷ್ಣ್ಯ ಸಮಿಪಾನುಕೃತಿ ಕ್ರಿಯಾಸಮಭಹಾರಾದಿ ಖ್ಯಾಪನೆಯೊಳ್ ಪದಕಕ್ಕುಂ ರೂಪದ್ವಿತ್ವಂ ಯಥಾ ಪ್ರಯೋಗಾನ್ತುಗತಂ (ಕಾವ್ಯಾವ. ೨೮೭). ೩. ಹಬ್ಬುವಿಕೆ ; ವ್ಯಾಪನೆ. [ಸಂ. ವೀಪ್ಸಾ]

ವೀರ (ಗು). ೧. ಶೌರ್ಯದಿಂದ ಕೂಡಿದ ; ಪೌರುಷದ : ಗಗನಮಂ ಪೃಥ್ವಿಯಂ . . . ಭದ್ರವೀರ ಸೌಂದರ್ಯಮಂ, ಧ್ಯಾನಿಸುತೆ ಭಾವಿಸುತೆ ರೂಪಿಸುತೆ ಕಾಮಿಸಿದನಾ ಭೂಮಿಪಂ ತದ್ಗುಪಗುಣಹೃದಯರಂ (ಶ್ರೀರಾಮಾ. ೧೨-೭೦). ೨. ಶೂರನಾದ ; ಪರಾಕ್ರಮಿಯಾದ : 'ವೀರಭಟ' ಪರಾ. ೩. ಬಲಿಷ್ಠವಾದ ; ಬಲವಾದ ; ಶಕ್ತಿಯುತವಾದ. ೪. ಶ್ರೇಷ್ಠವಾದ ; ಉತ್ತಮವಾದ. ೫. ಭೀಕರವಾದ ; ಭಯಂಕರವಾದ : 'ವೀರಕ್ಷಾಮ' ಪರಾ. (ನಾ). ೬. ಕಲಿ ; ಶೂರ ; ಪರಾಕ್ರಮಿ : ವೀರರ ವೀರ ವಿಮುಕ್ತಾಹಾರಂ ಭವದರಿವಧೂಸ್ತನದ್ವಿತಯಂ ಕಣ್ಣೀರಿಂ ಮಿಂದದೆಗಿರ್ಚಿಂದೋರಂತಿರೆ ಬಿಂದು ಚರಿಸುತಿರ್ಪುದು ತಪಮಂ (ಕಾದಂಪು. ೬೧) ; ವೀರನಾದರೆ ಮೈರಿಗಳು ಮೆಚ್ಚಬೇಕು ವ್ರತಿಯಾದರೆ ಅಂಗನೆಯರು ಮೆಚ್ಚಬೇಕು ಭಕ್ತನಾದರೆ ಜಂಗಮ ಮೆಚ್ಚಬೇಕು (ಬಸವ. ೬೭೧). ೭. ಶೌರ್ಯ ; ಪರಾಕ್ರಮ ; ಕಲಿತನ : ತಕ್ಕಿನೆನ್ನದಟುವನೆನ್ನ ವೀರವುವನಾಜಿಯೊಳನ್ನರಸಂಗೆ ತೋಱುವಂ (ಪಂಚಭಾ. ೧೦- ೪೧) ; ಮರುಳು ಮರ್ಕಟನೂರ ಸುಟ್ಟರೆ ಹಿರಿದು ವೀರವೆಯೆನಲು (ಕಾತಿಕಾ. ೧೪-೨೦). ೮. ನಟ ; ಪಾತ್ರಧಾರಿ. ೯. ಬೆಂಕಿ ; ಅಗ್ನಿ. ೧೦. ಯಜ್ಞಯಾಗಗಳಲ್ಲಿ ಬಳಸುವ ಅಗ್ನಿ. ೧೧. ಮಗ ; ಪುತ್ರ. ೧೨. ಗಂಡ ; ಪತಿ. ೧೩. ಅರ್ಜುನ ವೃಕ್ಷ. ೧೪. ಕರವೀರವೃಕ್ಷ. ೧೫. ಜಿನ. ೧೬. ವಿಷ್ಣು. ೧೭. ವೀರಭದ್ರ : '' ವೀರಂ ಭಯಂಕರಂ ದಕ್ಷಾರಿ ಶರಭನನೆ ವೀರಭದ್ರನೆನಿಕ್ಕು'' (ಮಂಗರಾ. ೫-೧೫). ೧೮. ಪೂರ್ವಜರನ್ನು ಯುದ್ಧದಲ್ಲಿ ಕಳೆದುಕೊಂಡಿದ್ದು, ಫಾಲ್ಗುಣ ಶುದ್ಧ ಪ್ರತಿಪದೆಯಂದು ಯುದ್ಧಯೋಗ್ಯವಾದ ವೈಭವ, ಆಡಂಬರಗಳೊಂದಿಗೆ ದೇವರ ದರ್ಶನಕ್ಕೆ ಹೋಗುವ ಪುರುಷ, — ಶೂರ : (೬). ೧೯. ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು : ಕಾಮಿಕ, ಯೋಗಜ, ಅಚಿಂತ್ಯ . . . ಅನಲ, ವೀರ, ರೌರವ, ಮಕುಟ . . . ಕಿರಣ, ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು . . . ಸಿದ್ಧಾಂತಗಳೆಂಬ ಸಂಜ್ಞೆಯನ್ನು ಪಡೆದಿವೆ (ಭಾರದ. ೭೨). ೨೧. [ಕಾವ್ಯಮೀ] ಕಾವ್ಯ, ನಾಟ್ಯಗಳಲ್ಲಿ ಬಳಕೆಯಾಗುವ ನವರಸಗಳಲ್ಲಿ ಒಂದು ; ವೀರರಸ : ವೀರಾದ್ಭುತ ಕರುಣಾ ಶೃಂಗಾರ ಭಯಾನಕ ರೌದ್ರ ಬೀಭತ್ಸ ಮಹಾಸಾರತರ ಹಾಸ್ಯ ಶಾಂತಾಧಾರಂ ನವವಿಧವಿಕಲ್ಪಮಾ ರಸಮಾರ್ಗಂ (ಕವಿರಾ. ೩- ೧೫೮) ; ವೀರಂ ಗೌರಂ ರೌದ್ರಮದಾರಕ್ತಂ ಪೀತಮದ್ಭುತಂ ಶ್ಯಾಮಂ ಶೃಂಗಾರಂ ಶ್ವೇತಂ ಹಾಸ್ಯಂ ಕಾರುಣ್ಯಂ ಧೂಮ್ರಮಸಿತಮುಲಿದುವವೆರಡುಂ (ಕಾವ್ಯಾವ. ೬೩೭). ೨೨. [ನಾಟ್ಯ] ಎಂಟು ಬಗೆಯ ರಸಯುಕ್ತವಾದ ನೋಟಗಳಲ್ಲಿ ಒಂದು ; ಒಂದು ಬಗೆಯ ರಸದೃಷ್ಟಿ ; IP ''ಪ್ರಜ್ವಲಿಸುವ ಕಡೆಗಣ್ಣಾ ನಟ್ಟ ಸಮಾರ್ಧ ದೃಷ್ಟಿಯಲ್ಲಿ ಗಾಂಭೀರ್ಯದಿಂದ ನೋಡುವುದು'' (ಲಾಸ್ಯರ. ೭೭೭ ಗದ್ಯಾನುವಾದ) : ಕಾಂತಂ ಹಾಸ್ಯಂ ಕರುಣಂ ಸಂತತ ರೌದ್ರಾದ್ಭುತಂ ಭಯಂ ವೀರವು . . . ತ್ಯಂತದ ಬೀಭತ್ಸಂ ಕೇಳ್ ಕಾಂತೇ ರಸಯುಕ್ತಮಾದ ನೋಟಮಿವೆಂಟುಂ (ಲಾಸ್ಯರಂ. ೩-೪).

ವೀರಚೂಡಾಮಣಿ = ವೀರರಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ಸುಭಟಶಿರಶ್ಶೇಖರಂ ಸಮರೈಕವೀರಂ ವೀರಚೂಡಾಮಣಿಯೇಕವಾಕ್ಯಂ . . . ಶ್ರೀಮದ್ಭಾಸರಸರ್ (ಸೌಗಾ. XX. ೨೦-೪೫ ; 1019). **ವೀರಝಳಪ್ಪ** = ವೀರರನ್ನು ಸೋಲಿಸುವವನು ; ಒಂದು ಬಿರುದು : ತ್ರಿಭುವನಮಲ್ಲಂ ರಿಪುರಾಯಭಯಂಕರಂ . . . ಆನವರತದಾನಿ ವೀರರಝಳಪ್ಪ (ಎಇ. XV, ೬೫೧-೧೫ ; 1098). **ವೀರಬಿರುದಾಳ** = ವೀರನೆಂಬ ಬಿರುದನ್ನು ಹೊಂದಿದವನು ; ಒಂದು ಬಿರುದು : ಶ್ರೀಮನು ಮಹಾಮಂಡಳೇಸ್ವರಂ . . . ನರಪತಿ ಜಗದಾಳ ವೀರಬಿರುದಾಳ ದೇವರಸರು (ಪಟ್ಟವ. ೧೯೬೧,೭೧-೬ ; 1297). **ವೀರಮಹೇಶ್ವರ** = ೧. ವೀರರಲ್ಲಿ ಮಹೇಶ್ವರನಂತಿರುವವನು ; ಒಂದುಬಿರುದು : ಶ್ರೀ ಮಹೀವಲ್ಲಭ ಯುವರಾಜರಾಜಪರಮೇಶ್ವರ ವೀರಮಹೇಶ್ವರ ವಿಕ್ರಮಾಭರಣ . . . ಶ್ರೀಮತ್ಪೃಥ್ವೀಕ್ಕಮಲ್ಲು ವೀರನೊಳಂಬಪಲ್ಲವಪೆರ್ಮ್ಮನಡಿ ಜಯಸಿಂಹದೇವರ್ (ಸೌಗಾ. XX. ೫೫-೧೩ ; 1082). ೨. ಶ್ರೇಷ್ಠನಾದ ಶಿವಭಕ್ತ : ವೀರಮಹೇಶ್ವರ ರಾರಾಧಕನಾದ ಶೀಲವಂತ ದಳವಾಯಿ (ಎಕ. XVI, ಚಿಕ್ಕನಾ. ೧-೧೧ ; 1623). **ವೀರಮಾಹೇಶ್ವರ** = ವೀರಮಹೇಶ್ವರ ೧ : ಮರುಳುವಿಟ್ಟನ ವಂಶಜಂ . . . ವೀರಮಾಹೇಶ್ವರಂ ನಾಲ್ವಡಿ ಚಲದಂಕರಾಮಂ (ಸೌಗಾ. XX, ೭೧-೩೭; 1109). ೨. = ವೀರಮಹೇಶ್ವರ ೨ : ವೀರಮಾಹೇಶ್ವರರೆ ಗತಿಯನಗಿದುವ ನಿಶ್ಚಯವು (ಬಸವ. ೩-೮೩). **ವೀರಮುರಾರಿ** = ಶೌರ್ಯದಲ್ಲಿ ಕೃಷ್ಣನಿಗೆ ಸಮನಾದವನು ; ಒಂದು ಬಿರುದು : ಮಣಲೆರಭೀಮಂ ವೈರಿಮನ್ನೆಯರ ಪಾಷ[ಣ್ಣ] ವೀರಮುರಾರಿ [ವಿಸದ] ಮನ್ನೆಯ . . . [ನಾ]ಮಾದಿ ಸಮಸ್ತಪ್ರಶಸ್ತಿಸಹಿತಂ (ಸೌಗಾ. XX, ೩೮-೭ 1058). **ವೀರವಿದ್ಯಾಧರ** = ವೀರಚೂಡಾಮಣಿ : ಸಂಗ್ರಾಮರಾಮನಭಮಾನಮೇರು ಜಗದೇಕವೀರಂ ವೀರವಿದ್ಯಾಧರಂ . . . ಶ್ರೀಮನ್ಮಹಾಮಂಡಳೇಶ್ವರಂ ಕುಂದಮರಸರು (ಎಕ. VII, ಶಿಕಾ. ೧೫೫-೨೨ ; 1019). **ವೀರವೃಕೋದರ** = ಪರಾಕ್ರಮದಲ್ಲಿ ಭೀಮನಂತಿರುವವನು ; ಒಂದು ಬಿರುದು : ಪರನಾರೀಸಹೋದರಂ ವೀರವೃಕೋದರಂ . . . ಶ್ರೀಮನ್ಮಹಾಮಣ್ಡಳೇಶ್ವರಂ ಲಕ್ಷ್ಮರಸರ್ ಪುಗೆಜೆಮೂನೂಱುಂ . . . ಸುವಿದಿನಾಳುತ್ತಿರೆ (ಸೌಗಾ. XX, ೪೭-೯ ; 1074). **ವೀರಸಿಂಹಾಸನಿಗ** = ತನ್ನ ಶೌರ್ಯದಿಂದ ರಾಜಪದವಿಯನ್ನು ಹೊಂದಿದವನು ; ಒಂದು ಬಿರುದು : ಬಿಕ್ಕಳ್ಳಿ ವಿಗ್ರಹದಂಡಿ ವೀರಸಿಂಹಾಸನಿಗ ಪಡಿಮಲ್ಲಂ ನೋಡಿ . . . ಪೊಯಿಸಿ ಇಱಿದೊಡೆ (ಎಕ. XI, ಚಿಕ್ಕಳ. ೯-೩ ; ಸು. 810). **ವೀರಾವಧೀರ** = ವೀರಚೂಡಾಮಣಿ : ಏಕಾಂಗವೀರ ವೀರಾವಧೀರ ನುಡಿದನ್ತೆ ಗಣ್ಡಂ (ಎಕ. XI, ಚತ್ರದು. ೪೭-೧೪; 1067). [ಸಂ.]

ವೀರಂಬೆಱು (ಕ್ರಿ). ೧. ಶೌರ್ಯವನ್ನು ಹೊಂದು ; ಪರಾಕ್ರಮವನ್ನು ತಾಳು : ಅತ್ತಲರಮನೆಯಿಂದ ಪೂಜಮಟ್ಟಿತ್ತ ತನ್ನರಮನೆಗೆ ವೀರಂಬೆತ್ತು ಮೊಲ್ಲೆಯ ಬೊಮ್ಮಯಂಗಳು ತಾನುವೆಯತಂದು (ಬಸವ. ೬೧-೩೪). [ವೀರ + ಪೆಱು]

ವೀರಕ (ನಾ). ೧. ಶೂರ ; ವೀರ. ೨. ಪ್ರಮಥರಲ್ಲಿ ಒಬ್ಬನ ಹೆಸರು : ವೀರ ವೀರಕ ನಂದಿರೇಣುಕ ದಾರುಕರುಮುಪಮನ್ನು ಭೃಂಗಿಯು ವೀರಭದ್ರಾದಿ ಪ್ರಮಥರೋಲ್ಕೆಪ ಸಮಯದೊಳು (ಬಸವ. ೧-೫೨) ; ವೀರಕ ವೀರಭದ್ರಕಮುಖಪ್ರಮಥಪ್ರಕರಾನ್ವಿತಂ ಮನೋಜಾರಿ ನಗೇಂದ್ರಪುತ್ರಿಯೊಡನಂಬರದೊಳ್ಪಗೆಗೊಂಡು . . . ನೆಲಸಿರ್ದು (ವೃಷಾ. ೪೦-೫೧). [ಸಂ.]

ವೀರಕಂಕಣ (ನಾ). ವೀರರು (ಯುದ್ಧಕ್ಕೆ ಹೋಗುವಾಗ) ಕೈಗೆ ಕಟ್ಟಿಕೊಳ್ಳುವ ಕಂಕಣ, - ಆಭರಣ : ರಾವುತರೊಳಗ್ಗಳೆಯರನು ದಶಸಾವಿರವ ಜೋಡಿಸಿದರಿನಿಬರು ಸಾವನೇ ನಿಶ್ಚೈಸಿ ಬಿಗಿದರು ವೀರಕಂಕಣವ (ಕವ್ಯಾಕ. ೧೯-೩) ; ವೀರಕಂಕಣಗಳ ಮುಚ್ಚಿದು ಶೃಂಗಾರದ ಹಾರಗಳನು ತೆಗೆದಿಟ್ಟು . . . ತಾಜುತಟ್ಟಾಗಿಯೋಡಿದರು (ಕಂಪಿ. ೧೫-೯೫). [ಸಂ.]

ವೀರಕಚ್ಚೆ 'ವೀರಗಚ್ಚೆ' ನೋ.

ವೀರಕಾರ್ಯ (ನಾ). ಸಾಹಸದ ಕೆಲಸ ; ಪೌರುಷದಿಂದ ಮಾಡುವ ಕಾರ್ಯ : ನನಗೆ ವೀರಕಾರ್ಯದಲ್ಲಿ ಇಷ್ಟ (ವಚಭಾ. ೭೭). [ಸಂ.]

ವೀರಕಾವ್ಯ (ನಾ). ಶೌರ್ಯ, ಸಾಹಸಗಳನ್ನು ವರ್ಣಿಸುವ, ವೀರರಸಪ್ರಧಾನವಾದ ಕೃತಿ : ಭಾರತಕ್ಕೆ ಮುಸಲ್ಮಾನರ ಆಗಮನ ವೀರಕಾವ್ಯಗಳ ಅಂತ್ಯವನ್ನು ತಂದಿತು (ಭಾರದ. ೪೫೭). [ಸಂ.]

ವೀರಕಾಶೆ 'ವೀರಗಾಸೆ' ನೋ.

ವೀರಕುಲ (ನಾ). ಪರಾಕ್ರಮಿಗಳ, ಸಾಹಸಿಗರ ವಂಶ, — ಸಂತತಿ : ನಮ್ಮದು ವೀರಕುಲ (ವಚಭಾ. ೭೭). [ಸಂ.]

ವೀರಕೇಳಿ (ನಾ). ಪೌರುಷದ ಆಟ ; ಸಾಹಸದ ಕ್ರೀಡೆ : ವೀರಕೇಳೀಶ್ರಮವಡಗೆ ಕರ್ಪೂರ ವೀಳೆಯಗೊಂಡು ಮತ್ತೆ ಮಹಾರುಭಟೆಯಲಿ ಸುಭಟರೆದ್ದರು ತೂಗಿ ನಿಜಗದೆಯ (ಕುಮಾಗ. ೬-೩೩). [ಸಂ. ವೀರಕೇಲಿ]

ವೀರಕ್ಷಾಮ (ನಾ). ಭೀಕರವಾದ ಕ್ಷಾಮ ; ಭಯಂಕರವಾದ ಬರಗಾಲ, – ದುರ್ಭಿಕ್ಷ : ಭರಮಪ್ಪನಾಯಕನ ಆಳಿಕೆಯಲ್ಲಿ ವೀರಕ್ಷಾಮ ಪ್ರಾಪ್ತವಾಯಿತು (ಚಿತ್ರಪಾ. ೭ ಉಪೋದ್ಘಾತ) ; ೧೮೮೦ನೆಯ ಇಸವಿಯಲ್ಲಿ ಬಂಗಾಳದಲ್ಲಿ ವೀರಕ್ಷಾಮವು ಪ್ರಾಪ್ತವಾಗಿ ಜನರಲ್ಲಿ ಹಾಹಾಕಾರ ಉಂಟಾಯಿತು (ಜಗಚಿಂ. ೭). [ಸಂ.]

ವೀರಕ್ಷೇತ್ರ (ನಾ). ಶೂರರಾದ ಕ್ಷತ್ರಿಯರು ಹೋರಾಡುವ ಸ್ಥಳ ; ಸಾಹಸಕೃತ್ಯಗಳು ನಡೆಯುವ ಸ್ಥಳ : ವೀರಕ್ಷೇತ್ರಮಗುರ್ವಿಗಂಕದ ಕುರುಕ್ಷೇತ್ರಂ . . . ವೈರಿಸಂಹಾರಂ ಮಾಡದೆ ಮಾಣೆನೆಂದು ಹರಿಗಂ ಕೆಯ್ಯೊಂಡನುತ್ಸಾಹಮಂ (ಪಂಪಭಾ. ೯-೧೦೫). [ಸಂ.]

ವೀರಗಚ್ಚೆ, ವೀರಕಚ್ಚೆ (ನಾ). ಶೂರರು ಯುದ್ಧದ ಸಮಯದಲ್ಲಿ ಹಾಕಿಕೊಳ್ಳುವ ಕಚ್ಚೆ ; ಹೋರಾಡಲು ಅನುಕೂಲವಾಗುವಂತೆ ಧೋತ್ರ ಅಥವಾ ಸೀರೆಯನ್ನು ಉಟ್ಟುಕೊಳ್ಳುವ ಒಂದು ರೀತಿ : ವೀರಗಚ್ಚೆಯ ಏಳರು ಹೊಱವಡೆ ತೇರು ಕರಿ ಘಟೆ ಕುಣವ ಕುದುರೆಯ ವೀರಕತ್ತಿಕೆಯ ತೊಡರುಪೆಂಡೆಯರಸುರ್ಪಡೆ ಕವಿಯೆ (ಕೌಶಿಕಾ. ೨೦-೧೧). **ವೀರಕಚ್ಚೆ** : ಬಂದವನು ದೀರ್ಘಕಾಯನು . . . ವೀರಕಚ್ಚೆಹಾಕಿ (ನಿಷ್ಕಾಮ. ೪೦) ; ಹುಡುಗಿಯು ವೀರಕಚ್ಚೆಯನ್ನು ಕಟ್ಟಿ ಹೆಗಲು ಮೇಲಿನಿಂದ ಸೆರಗನ್ನು ಬಿಗಿದು ಸೊಂಟಕ್ಕೆ ಸುತ್ತಿದ್ದಳು (ಶ್ರೀಕಾಯ. ೨). [ವೀರ + ಕಚ್ಚೆ]

ವೀರಗಣ (ನಾ). ೧. ಶೂರರ ಸಮೂಹ ; ಪರಾಕ್ರಮಿಗಳ ಗುಂಪು : (೬). ೨. [ವೀಶೈ] ವೀರಭದ್ರ : ನರಹರಿಯನಾ ವೀರಗಣನಂಬರಕೆ ಹಾಯ್ಕುವ ತೆಱದೆ ಹಾಯ್ಕುತ . . . ಹರನಿಭದ್ಧೆತ್ಯನಂ ಸಂಹರಿಸಿ ಸೀಳುವ ಮಾರ್ಗದಿಂದೊಡೆಸೀಳ್ದನುರ್ಬಿನಲಿ (ಬಸವ. ೨೧-೪೩). [ಸಂ.]

ವೀರಗಲ್ಲು (ನಾ). ಯುದ್ಧದಲ್ಲಿ ಸತ್ತ ವೀರನ ಸ್ಮರಣಾರ್ಥವಾಗಿ ನಿಲ್ಲಿಸಿದ (ವೀರನ ಸಾಹಸಗಳನ್ನು ವರ್ಣಿಸುವ ಬರವಣಿಗೆ ಅಥವಾ ಚಿತ್ರವನ್ನುಳ್ಳ) ಕಲ್ಲು : ಮಾರತಮ್ಮನು . . . ಕಾಳಗದಲ್ಲು ಕಾದಿ ಬಿದ್ದನು ಆ ಮಾರತಮ್ಮನ ದೇವಲೋಕಕ್ಕೆ ಸಲಬೇಕೆನ್ನು ಆತನ ತಮ್ಮ ಮಲಿಯನಾಯಕ ಆ ಮಾರತಮ್ಮನ ಮಕ್ಕಳು ಸೋಮಣ್ಣ xxx ವೀರಗಲ್ಲು ಶ್ರೀ ಶ್ರೀ ಶ್ರೀ (ಎಕ್ಷಿ. I. ೮೭-೪ ; 1285) ; ವೀರಗಲ್ಲುಗಳು ದೇಶದ ಎಲ್ಲ ಭಾಗಗಳಲ್ಲಿಯೂ ಕಂಡುಬರುತ್ತವೆ (ಮೈವಾಸ್ಫು. ೫೭). [ವೀರ + ಕಲ್ಲು (< ಕಲ್ಲ್)]

ವೀರಗಾಣಿಕೆ (ನಾ). ಶೂರರಿಗೆ ಅರ್ಪಿಸುವ ಕಾಣಿಕೆ : ಹುಡುಗನು xxx ವೀರಗಾಣಿಕೆಯನು ದೇವರಿಗೆ ನೈವೇದ್ಯಕಾಲxxಂದು ದಿಪದ ಫಲ ತಂಬಿದೆಂದು ದೇವಾಪ್ಪೂಥ್ಪಿಯ ಮಹಾಮಹತ್ತಿನೊಳಗಾದ ಸುತ್ತುರ ಸಿಂಹಾಸನ ವಟ್ಟಿಕೆಯಗಿ ಮಾಡಿದ ಧರ್ಮ್ಮಕ್ಕೆ (ಎಕ್ಷಿ. V (R). ತಿಪಮ. ೮೩ : ೪ ; ಸು. ;7 ೫೬ನೆ ಶತ).

[ವೀರ + ಕಾಣಿಕೆ (< ಕಾಣ್ಕೆ)]

ವೀರಗಾಥೆ (ನಾ). ವೀರರ ಸಾಹಸದ ಕಥೆಗಳನ್ನು ವರ್ಣಿಸುವ ಹಾಡಿನ ರೂಪದ ಕೃತಿ : ಯಾರಿಂದ ಭಾರತವು "ವೀರಗಾಥಾ" ಎಂದು ಹೆಸರುವಾಸಿಯಾಯಿತೋ ಅವರನ್ನು ಸ್ಮರಿಸುವಾಗ ವೀರಶಕ್ತಿಸ್ವರೂಪಿಣಿಯಾದ ಅಬಲೆಯೊಬ್ಬಳು ರೋಷದುಃಖಸಂತಪ್ತವದನೆಯಾಗಿ ಮುಂದೆ ಬರುತ್ತಾಳೆ (ಭಾರದ. ೪೮೫) ; ಮಹಾಕವಿಯಾಗಿದ್ದ ಮೊಗಲ ಸಾಮ್ರಾಟ ಬಹದ್ದೂರಶಹನು ತನ್ನದೊಂದು ವೀರಗಾಥೆಯಲ್ಲಿ ಅಂದಿನ ಭಾರತದ ಅಂತಃಸತ್ವವನ್ನು ಮಾರ್ಮಿಕವಾಗಿ ಚಿತ್ರಿಸಿರುವನು (ಪ್ರಬುದ್ಧ. ೫೪).

[ಸಂ. ವೀರಗಾಥ]

ವೀರಗಾಲು (ನಾ). ಯುದ್ಧಮಾಡುವಾಗ ವೀರರು ಮಂಡಿಯೂರಿ ಕುಳಿತುಕೊಳ್ಳುವ ಒಂದು ಭಂಗಿ ; ವೀರಮಂಡಿ : ಸ್ವಲ್ಪವಾದ ವಾತಾವರಣದಲ್ಲಿ ರಾಚಮಲ್ಲನು ಮಾತ್ರಗಳನ್ನೆಸಿಕೊಂಡು, ಮೈತುಂಬಿದವನಂತೆ ವೀರಗಾಲು ಹೊಡೆದು, ಮುಕ್ತಾಯವನ್ನಿತ್ತ ಕೂಡಲೇ, ಜನಸಂದಣಿಯೆಲ್ಲ 'ಹಾ! ಹಾ! ಭಲೆ! ಭಲೆ!!' ಎಂದು ಕೂಗಿದರು (ಚಿಬ್ಬಸೂ. ೧೩). [ವೀರ + ಕಾಲು (< ಕಾಲ್)]

ವೀರಗಾಸೆ, ವೀರಕಾಶೆ (ನಾ). ೧. = ವೀರಗಚ್ಚೆ : ವೀರಗಾಸೆಯನುಟ್ಟು ಸುರನರರಾರತಿಗೆ ಕೈಗೊಟ್ಟು, ಸಾಕ್ಷಾತ್ಕಾರವಾಗಿಹ ಕೃಷ್ಣದೇವನ ದೂರದಲಿ ಕಂಡು (ಕೃಷ್ಣಾಕಾ. ೧೭-೪೭). ೨. ಒಂದು ಬಗೆಯ ಕುಣಿತ ; ವೀರಗಚ್ಚೆ ಹಾಕಿಕೊಂಡು ವೀರಭದ್ರನಂತೆ ನರ್ತಿಸುವುದು : ವೀರಭದ್ರನು ತೋರಿದ ಪ್ರತಾಪದ ಪ್ರತೀಕವೇ 'ವೀರಗಾಸೆ' (ಕಜಕ. ೧೬೦). ೩. ವೀರಗಚ್ಚೆ ಹಾಕಿಕೊಂಡು ಕುಣಿಯುವವನು : ಶಸ್ತ್ರಪವಾಡ ನಡೆಸುವುದು ವೀರಗಾಸೆಯವರ ಮತ್ತೊಂದು ವಿಶೇಷ (ಕಜಕ. ೧೬೦). **ವೀರಕಾಶೆ** : ೧. ಈ ದೇಶದ ಮರಾಟೆಯವರಾದ ನಮ್ಮಲ್ಲಿ ಯುದ್ಧದ ಪ್ರಮೇಯ ಬಂದಾಗೆಲ್ಲಾ ನಮ್ಮ ಸ್ತ್ರೀಜನರು ವೀರಕಾಶೆಯನ್ನು ಕಟ್ಟಿ ಕದನಕ್ಕೆ ಸಿದ್ಧರಾಗುತ್ತಾರೆ (ಮುಸುಗ. ೩೦).

ವೀರಗಾಸೆಕುಣಿತ = (ವೀರಗಚ್ಚೆಯನ್ನು ಕಟ್ಟಿಕೊಂಡು ಕುಣಿಯುವ) ಒಂದು ಬಗೆಯ ಕುಣಿತ, — ನೃತ್ಯ : 'ವೀರಗಾಸೆ' ಕುಣಿತದ ಹಿನ್ನೆಲೆ ಬಗ್ಗೆ ಪ್ರಚಲಿತವಿರುವ ಒಂದು ಪೌರಾಣಿಕಪ್ರಸಂಗ ಹೀಗಿದೆ (ಕಜಕ. ೧೫೮). [ವೀರ + ಕಾಸ್ಕೆ]

ವೀರಗುಣ (ನಾ). ಶೂರಸ್ವಭಾವ ; ಶೌರ್ಯ ; ಪರಾಕ್ರಮ : ವಸುಮತಿ ಸಾಕ್ಷಿ ಧೀರತೆಗೆ . . . ಸಾಹಸಕೆ ನಿಜಾಸಿ ಸಾಕ್ಷಿಗಳ ವೀರಗುಣಕ್ಕೆನೆ ಮತ್ತ ಪೆಂಟಗೆನ್ನೆಸ ಕಮೆನೆಯ್ದೆ ಬಿತ್ತರಿಪರಾರ್ಗ್ಗಳ ಭಾಸ್ಕರದನ್ಣನಾಥನಂ (ಪೌರಾ. XX. ೪೬-೬೨ ; 1072). [ಸಂ.]

ವೀರಗೆಲಸ (ನಾ). ಶೌರ್ಯದಿಂದ ಕೂಡಿದ ಕೆಲಸ ; ಸಾಹಸದ ಕಾರ್ಯ : ವೀರಗೆಲಸದ ಮೋಡಶರಿಗೆಯು ತೇರಸಗಣಂಗಳಿಗೆ ನಮಿಸಿಯಪಾರಪರಿಯಲಿ ಹರಸಿಕೊಂಡಹವೆನ್ನದೆ (ಬಸವ. ೪೮-೧೪). [ವೀರ + ಕೆಲಸ]

ವೀರಗೋಷ್ಠಿ (ನಾ). ಪರಾಕ್ರಮಿಗಳ ಸಭೆ ; ವೀರರ ಕೂಟ : ಬಾಹುಬಲಿಕುಮಾರನ ವಿಜಯಸ್ಯನ್ನದೊಳ್ ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಂ . . . ಎಸೆವುಗ್ರರಣಾನಕ ರೌದ್ರಘೋಷಮೇರ್ವ್ಯಸನಮನುಂಟುಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್ (ಆದಿಪು. ೧೪-೯೦). [ಸಂ.]

ವೀರಚಕ್ರ (ನಾ). ವೀರರ ಸಮೂಹವನ್ನುಳ್ಳವನು : ಆಂತು ನಿಖಿಲ ಜಗದಾಶ್ಚರ್ಯಶೌರ್ಯರಸ ಬಹುಲಬಾಲಕ್ರೀಡಾಚಮತ್ಕಾರಿತವೀರಚಕ್ರನುಂ ನಿಜೋದಯಾನಂದಿತ ಜಗಚ್ಚಕ್ರನುಮಾಗಿ ಯೌವನಪ್ರಾಪ್ತನಾಗೆ (ಆದಿಪು. ೮-೪೨ ವ). [ಸಂ.]

ವೀರಚರಿತ (ನಾ). ವೀರೋಚಿತವಾದ ನಡವಳಿಕೆ ; ಶೌರ್ಯಸ್ವಭಾವ : ಉದಾರವೀರಚರಿತನಿರತಕದನಕರ್ಕಶಕ್ಷತ್ರಿಯಂಗೆ ವಿಪಕ್ಷ ಕ್ಷತ್ರಿಯ ಪರಾಕ್ರಮಾಕರ್ಣನೋದೀರ್ಣ ಕ್ರೋಧದೊಳಳೀಕಭ್ರುಕುಟಿಯುಂ . . . ನಿಷ್ಕಾರಣಕಾಯಕಂಪನಮುಂ ನಿರಾಲಂಬನ ವಾಗಾಡಂಬರಮುಂ ತಕ್ಕುದಲ್ತು (ಆದಿಪು. ೧೪-೮೧ ವ). [ಸಂ.]

ವೀರಚಿಮ್ಮರಿ (ನಾ). ವೀರರು ಧರಿಸುವ ರುಮಾಲು, — ಶಿರಸ್ತ್ರಾಣ : ಸುತ್ತಿದ ವೀರಚಿಮ್ಮರಿಯ ವಜ್ರಾಂಗಿಯನೆತ್ತಿದ ಬ್ರಹ್ಮರಂಧ್ರದಲಿ ಕೆತ್ತಿದುವಸುರೇಶನ ಮಾರ್ಗಣ ನೆಗ್ಗೊತ್ತಿದುವಧಟಯಾದವರ (ಮೋಹಸ. ೪೦-೪೯) ; ಪೂವಿಲ್ಲ ತಾ ಪತಿಯ ಚಲ್ಲಣಮಂ ತೊಟ್ಟು, ತೀವಿ ಕಾಸೆಯ ಬಿಗಿದು ವೀರಚಿಮ್ಮರಿ ಸುತ್ತಿವೋವಿ ಕತ್ತುರಿ ತಿಲಕವಿಟ್ಟು, ಪೂಸರ ಮುಡಿದು ಗೀರುಗಂಧವನು ಧರಿಸಿ (ನವಮೋ. ೧೨-೩೨).

[ವೀರ + ಚಿಮ್ಮರಿ]

ವೀರಚೌಪದಿ (ನಾ). [ಛಂದ] ನಾಲ್ಕುಪಾದಗಳುಳ್ಳ ಒಂದುಬಗೆಯ ಚೌಪದಿ, — ಸೀಸಪದ್ಯ : ಕನ್ನಡದ ಕಿರಿಸೀಸ . . . ಈ ಬಗೆಯ ಸೀಸದ ಛಂದೋಬಂಧವನ್ನು 'ವೀರಚೌಪದಿ' ಎಂದು ಕರೆಯುವುದುಂಟು (ಛಂದೋವಿ. ೨೧೧) ; ಕೆಳಗಿನದು ಪ್ರಾಸಬದ್ಧವಾಗಿರುವ ವೀರಚೌಪದಿ (ಸಂಕೋದ. ೧೩೪) ; ಇದರಲ್ಲಿಯ ಪದ್ಯಗಳು ದ್ವಿಪದಿಗಳು, ಇಲ್ಲವೆ ಚೌಪದಿಗಳು, ಇಲ್ಲವೆ ವೀರಚೌಪದಿಗಳೆಂಬ ಕುಸುಮಷಟ್ಪದಿಯ ಭೇದಗಳು (ಕವಪ್ರ. ೬೧೫೫). [ವೀರ + ಚೌಪದಿ]

ವೀರಜನನಿ (ನಾ). ವೀರನನ್ನು ಹೆತ್ತ ತಾಯಿ : ವೀರಮಾತೆ : ನಿನ್ನಂ ಪೆತ್ತಳ್ ಮೊಲೆವೆತ್ತಳೆ ವೀರಜನನಿವೆಸರಂ ಪೆತ್ತಳ್ (ಗದಾಯು. ೪-೫೫). [ಸಂ. ವೀರಜನನೀ]

ವೀರಡೌಡೆ (ನಾ). ಯುದ್ಧಸಮಯದಲ್ಲಿ, ಯುದ್ಧೋತ್ಸಾಹ,

ವೀರಾವೇಶಗಳನ್ನುಂಟುಮಾಡಲು ಬಾರಿಸುವ ಒಂದುಬಗೆಯ ಚರ್ಮವಾದ್ಯ ; ರಣಭೇರಿ : ಎತ್ತ ನೋಡಿದರತ್ತ ಬೊಂಬಾಳ ಕೈವೀಪ ಸುತ್ತ ಭೇರಿಯು ವೀರಡೌಡೆ (ದೇವಾಂಪು. ೩-೧೬೨). [ವೀರ + ಡೌಡೆ (< ಡವುಡೆ$_1$)]

ವೀರಣ$_1$, ಬೀರಣ (ನಾ). (ಮದುವೆ ಮುಂತಾದ ಶುಭಸಮಯಗಳಲ್ಲಿ ಬಳಸುವ) ಒಂದು ಬಗೆಯ ದೊಡ್ಡಹರೆ, — ಚರ್ಮವಾದ್ಯ : ವೀ[ಪಾಠಾ. ಬೀ]ರಣ ತಂಬಟ ಹಱೆ . . . ನಿಸ್ಸಾಳ ಬೊಬ್ಬೆಯ ದನಿ ತುಂಬಿದು ದಂದೆಣ್ಡೆಸೆಯನು (ಸೂಬಸೋ. ೫-೪೩) ; ತಱೆದರು ಹೋರಿ ಕುಱೆ ಕೋಣಗಳ ಬೊಬ್ಬೆಯ ವೀರಣದ ಬೊಗ್ಗುಗಳ ಲಗ್ಗೆಯಲುಭಯಪಾರ್ಶ್ವದಲಿ (ತೊರಾ. ೬-೨೦-೨೮) ; ತಿತ್ತಿರಿ ಕಾಳೆ ವೀರಣ . . . ವೀರವೃಂದದ ನಾದ ತುಂಬಿತೀರ್ಯೆದು ದಿಕ್ಕಿನೊಳು (ಭರಚಿ. ೩೧-೫೯). **ಬೀರಣ$_1$** : ಬೀರಣ ಡೌಡೆ . . . ಕಹಳೆಗಳು ಸಡಗರಂಬೆತ್ತು ನಾನಾವಾದ್ಯದಬ್ಬರ ವಿರಾಜಿಸಲು (ರಾಭಿಚ. ೧೯-೫೮). [ದೇ. ॥ತಮಿ. ವೀರಾಣ ; ತೆಲು. ವೀರಣ, ವೀರಾಣ]

ವೀರಣ$_2$ (ನಾ). ಒಂದು ಬಗೆಯ ಸುಗಂಧಯುಕ್ತವಾದ ಹುಲ್ಲು ; ಲಾಮಂಚ : "ವೀರಣಂ. ವೀರತರಂ — ೨ ಮರಕಬ್ಬಿನ ಪೆಸರುಗಳು, ಕೆಲವರು ಲಾಳೀಕಡ್ಡಿಯನ್ನುವರು, ಕೆಲವರು ಹುಲ್ಲಾಳೀ ಕಡ್ಡಿಯನ್ನುವರು" (ಸಿದ್ಧಾಂತಿ. ೧೫೦). [ಸಂ.]

ವೀರತನ (ನಾ). ಶೂರತನ ; ಪೌರುಷ : ಜನನಾಥಂ ಬಿದ್ದರಸಂಗನುನಯದಿಂ ಲಂಕವಳಿಯೊಳು ವೀರತನಂ ತನಗೆನಿಸಿ ಬೀ[ರ]ಡೊಂಗಿನ ಬಸವಂ ಕೊಟ್ಟು ಪಡೆದ[ಂ] ಸಗ್ಗದ ಸುಖವನು (ಮೃಅರಿ. ೧೯೪, ೩೩-೫ ; ಸು. 1217) ; ಪುರುಷನ ಭಾವಂ, ಪುರುಷತನಂ, ಏವಂ ವೀರತನಂ, ಶೂರತನಂ, ಬಲ್ಲತನಂ (ಶಬ್ದಾನು. ೪೩೦ ಪ್ರಯೋ). [ವೀರ + - ತನ]

ವೀರತರ (ನಾ). ೧. ಶ್ರೇಷ್ಠನಾದ ವೀರ; ಅತಿಶಯಶೂರ. ೨. = ವೀರಣ$_2$: "ವೀರಣಂ, ವೀರತರಂ — ೨ ಮರಕಬ್ಬಿನ ಪೆಸರುಗಳು, ಕೆಲವರು ಲಾಳೀಕಡ್ಡಿಯನ್ನುವರು, ಕೆಲವರು ಹುಲ್ಲಾಳೀಕಡ್ಡಿಯನ್ನುವರು" (ಸಿದ್ಧಾಂತಿ. ೧೫೦). [ಸಂ.]

ವೀರತರು (ನಾ). ೧. ಒಂದು ಬಗೆಯ ಮರ ; ಅರ್ಜುನವೃಕ್ಷ ; ಕೆಂಪು ಮತ್ತಿಮರ : "ನದೀಸರ್ಜಃ, ವೀರತರುಃ, ಇಂದ್ರದ್ರುಃ, ಕಕುಭಃ, ಅರ್ಜುನಃ — ೫ ತೋರಮತ್ತೀಗಿಡ, ಕೆಂಪುಮತ್ತೀಗಿಡ, ರಕ್ತಾರ್ಜುನವೃಕ್ಷ" (ಸಿದ್ಧಾಂತಿ. ೧೨೨). ೨. ಬಿಲ್ವಪತ್ರಮರ ; ಬಿಲ್ವವೃಕ್ಷ. [ಸಂ.]

ವೀರತಾಂಬೂಲ (ನಾ). ಯುದ್ಧಕ್ಕೆ ಹೊರಟುನಿಂತ ವೀರರಿಗೆ ಶುಭ ಹಾರೈಸಿ ಕೊಡುವ ತಾಂಬೂಲ,— ವೀಳೆಯ : ಅರಸನು ತನ್ನ ಹಸ್ತದಿಂದಲೇ ವೀರ ತಾಂಬೂಲವನ್ನು ಕೊಟ್ಟು ಸಂಭಾವಿಸಿ ಕಳುಹಿಸಿಕೊಟ್ಟನು (ಸಡದಾ. II.೧೪೭೧). [ಸಂ.]

ವೀರತಿಕೆ (ನಾ). = ವೀರತನ : ಅಂದೆ ರಾವಣ ಕೊಲಲು ನೇಮಿಸೆಯೆಂದ ವಿಭಿಷಣರಾಯ ಕೇಳಾ ಮುಂದೆ ಕಾಡುವ ವೀರತಿಕೆಯಿದಱಿಂದ ಲಘುವಹುದೇ (ಕಾಶಿರಾ. ೧೧-೫೩). [ವೀರತೆ + - ಇಕೆ]

ವೀರತೆ (ನಾ). = ವೀರತನ : ಧರಣಿಯೊಳು ಷೋಡಶಗಣಂಗಳ ನಿರತ ವೀರತೆಗೊಲಿದು ಬ್ರಹ್ಮೇಶ್ವರನು ನೆಲೆಗೊಂಡಿದ್ದನಲ್ಲಾ ಪೀಠಮಧ್ಯದಲಿ (ಬಸಪು. ೫೪-೭೬) ; ವರಶುಚಿ ವೀರರಾಮನ ಚರಿತವನಿದನೊರೆವೆನೊಲಿದು ಸತ್ಪುರುಷರು ಇರದಾದರಿಪುದು ಶುಚಿತೆ ವೀರತೆ ಬಂದು ದೊರೆಕೊಂಬುದು (ಕುರಾಸಾ. ೧-೮೫).

[ಸಂ. ವೀರತಾ]

ವೀರತ್ವ (ನಾ). = ವೀರತನ : ಚಿತ್ತದೊಳಗೆ ಕ್ಲೇಶದಿಂದುದ್ಯತ್ ತಪೋವೀರತ್ವದಿಂದಂ ತತ್ವಮವನೇ ಧೂಪನಂ ಮಾಡಿದನಲಾ ಕೂರ್ಮ (ಬಸಪು. ೪೪-೪೯). [ಸಂ.]

ವೀರದಂಬುಲ (ನಾ). = ವೀರತಾಂಬೂಲ : ಕೈಯಂ ನೀಡಿ ಬೆಸನಕ್ಕಾಱೆನ್ನದೆ ವೀರದಂಬುಲವಂ ಕೊಳುತಲಾಗ (ಬಸಪು ೬೦-೬೧). [< ಸಂ. ವೀರತಾಂಬೂಲ]

ವೀರದಾಸತ್ವ (ನಾ). ಸಜ್ಜನತ್ವದ ಆರುವಿಧಗಳಲ್ಲಿ ಒಂದು : ದಾಸತ್ವ ವೀರದಾಸತ್ವ ಭೃತ್ಯತ್ವ ವೀರಭೃತ್ಯತ್ವ ಸಮಯಾಚಾರತ್ವ ಸಕಲಾವಸ್ಥಾತ್ವಂಗಳೆಂಬ ಷಡ್ವಿಧ ಸಜ್ಜನತ್ವ ಯುಕ್ತನಾಗಿ (ವಿವೇಕ. ೯೭). [ಸಂ.]

ವೀರಧರ್ಮ (ನಾ). ವೀರರಿಗೆ ಉಚಿತವಾದ ಧರ್ಮ ; ಶೌರ್ಯೋಚಿತವಾದ ನಡವಳಿಕೆ : ಇವರೆಲ್ಲ ಮಹಾತ್ಯಾಗಜೀವಿಗಳು, ವೀರಧರ್ಮವನ್ನು ಪಾಲಿಸಿದವರು (ಭಾರದ. ೪೮೯). [ಸಂ.]

ವೀರನೂಪುರ (ನಾ). ಶೂರರಾದವರು ಕಾಲಿಗೆ ಧರಿಸುವ ಒಂದು ಬಗೆಯ ಕಡಗದಂತಹ ಆಭರಣ ; ಪೆಂಡೆಯ : ಸಂದಣಿಯ ಸುಕರದ ಕೈದುಗಳ ವರ ವೀರನೂಪುರದ ಕುಣಿವ ಸುರಗಿಯ ಪಳಹರದ ಡೊಂಕಣಿಯ ಭೇದಿಪ ಖಡ್ಗ ಬಿಲು ಬಲುಗಣಿಯ ಸಂಖ್ಯೆಯ ಕೈದುಗಳ ಕಾಲಾಳ ನೋಡಿದರು (ಕುವ್ಯಾಉ. ೧೧-೧೬). [ಸಂ.]

ವೀರನೇವುರ (ನಾ). = ವೀರನೂಪುರ : ಹಾರ ಹಱೆದುದು ಕರ್ಣಪೂರದ ಚಾರುಮಣಿಗಳು ಸಡಲಿದುವು ಪದವೀರನೇವುರ ನೆಗ್ಗಿದವು ಕುಗ್ಗಿದವು ನೆನಹುಗಳು (ಕುವ್ಯಾಉ. ೧೪-೬). [ವೀರ + ನೇವುರ]

ವೀರಪಟಹ (ನಾ). ಪರಾಕ್ರಮಸೂಚಕವಾದ ತಮಟೆವಾದ್ಯ : ವೀರಪಟಹದ ದುಂದುಭಿಯ ಡಂಬರದ ರವವಳ್ಳಿಱೆದುದಂಬರವ (ಕುವ್ಯಾಉ. ೧೩-೨೮). [ಸಂ.]

ವೀರಪಟ್ಟ (ನಾ). ಸೇನಾಧಿಪತಿಯ ಅಧಿಕಾರ, ಪದವಿ ಮತ್ತು ಆ ಅಧಿಕಾರದ ಸೂಚಕವಾಗಿ ಹಣೆಗೆ ಕಟ್ಟುವ ಪಟ್ಟ,— ಫಲಕ : ಸುಲಿಪಲ್ ತಟ್ಟಲ ತಾರಕಾವಯವಮಂ ಪೀನಂ ಲಲಾಟಾಗ್ರದೊಳ್ ನೆಲೆಗೊಂಡೊಪ್ಪುವ ವೀರಪಟ್ಟ ಮುದಯಂಗೆಯ್ಯಿಂದುವಂ . . . ವಕ್ತ್ರಾರುಣಂ ಸಂಜೆಯಂ ಗೆಲೆ ಪೋಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ (ಕಾವ್ಯಸಾ. ೫೨೫ ಶೂದ್ರಕ) ; ಇವರಿನ್ನುಮಾಂತಿಱೆವರೆಂದು ವಿಮೋಹಿಸಿ ವೀರಪಟ್ಟಮಂ ಬಗೆಯದೆ ಕಟ್ಟಿದ್ಯೆ (ಪಂಪಭಾ. ೧೦-೧೬) ; ವೀರಪಟ್ಟವನತುಳ ಬಲಭೀಷ್ಮಂಗೆ ಕಟ್ಟುವೆನೆನುತ ಕುರುರಾಯ ಮತದ ನಿಶ್ಚಯದಿಂದ ಗುರು ಗುರುಸುತನ ಕಳುಹಿದನು (ಕುವ್ಯಾಭೀ. ೧-೧೫). [ಸಂ.]

ವೀರಪಟ್ಟೆ (ನಾ). = ವೀರಪಟ್ಟ : ಪ್ರತಿಗರುಡಿಕಾಱ ಬಿರುದ ಪಾಡಿಂಗೆ ಒದಗಲು ವೀರಪಟ್ಟೆಯ ಕಟ್ಟಿ ತಿಗುರನೇಱಿಸಿಕೊಂಬೆ (ಬಸವ. ೭೦೧). [< ವೀರಪಟ್ಟ]

ವೀರಪಣ (ನಾ). = ವೀರತನ : ಒಡ್ಡವಣ, ಚಡ್ಡಣ . . . ಪಾರುಪಾಣ ಎಂಬ ಶಬ್ದಗಳೂ ಅವುಗಳ 'ಣ' ಅಂತ್ಯವೂ ವೀರಪಣ, ಜಾಣಪಣ, ವಿಸ್ತಾರಪಣ ಈ ಭಾವನಾಮಗಳಲ್ಲಿಯ 'ಪಣ' ಉಪಪದವೂ ಮರಾಠಿಯ ಕಂಡಿತವಾದ ಪ್ರಭಾವವನ್ನು ತೋರಿಸುತ್ತವೆ (ಕಸಾಚ. ೨೬೧). [ವೀರ + - ಪಣ$_5$]

ವೀರಪತ್ನಿ (ನಾ). ಶೂರನ ಹೆಂಡತಿ ; ಪರಾಕ್ರಮಿಯ ಸತಿ : ವೀರಪತ್ನೀನಿವಹಕ್ಕಾನಂದ ಬಾಷ್ಪಾವಳಿಯನೆ ಕುಚದೊಳ್ ಹಾರಮಂ ಮಾಡುತುಂ ಭೂಭುವನಾಂತರ್ಭಾಗಮಂ ಪರ್ವಿದುದು ಸಮರಸನ್ನಾಹಭೇರೀನೀನಾದಂ (ಆದಿಪು. ೧೪-೮೬) ; ಸತೀಸಂಯುಕ್ತೆ ಪೃಥ್ವೀರಾಜನ ವೀರಪತ್ನಿ (ಭಾರದ. ೪೮೯). [ಸಂ. ವೀರಪತ್ನೀ]

ವೀರಪದಕ (ನಾ). ವೀರತ್ವವನ್ನು ಸೂಚಿಸುವ ಪದಕ : ರಾಗ ಮಿಗೆ ಮೈಯ್ಯೊಳಂ ಗೀರು ಗಂಧಮ ಧರಿಸುತಾಗ ವುರಸ್ಥಳದಿ ವೀರಪದಕಂ ಮೆರೆಯೆ ಸಾಗಿ ಮರಬಿಲ್ಲು . . . ಜಾಯಿಲಗಳಂ ಪಿಡಿದಡಿಯೊಳು ಬಿಗಿದು (ನವಮೋ. ೧೬-೧೨). [ಸಂ.]

ವೀರಪಲಗೆ (ನಾ). = ವೀರಡೌಡೆ : ವೀರಪಲಗೆಗಳಂ ಆ ವಿಗಡರಡಿಗಡಿಗೆ ತಾಟಪರಾವ ರಭಸದ ಬೊಬ್ಬೆಗಳಿಗೆ ದಿಶಾವರರು ನಡುನಡುಗೆ (ಬಸಪು. ೫-೪೦).

[ವೀರ + ಪಲಗೆ]

ವೀರಪವಾಡ (ನಾ). ಧರ್ಮಾಂಧತೆಯಿಂದ ಕೂಡಿದ, ಕ್ರೂರವಾದ ಮತ್ತು ಉಗ್ರವಾದ ಕ್ರಿಯೆ; ವಿಷ್ಣು, ರುದ್ರ ಮುಂತಾದ ದೇವರ ಹೆಸರಿನಲ್ಲಿ ಹೊಟ್ಟೆಯನ್ನು ಸೀಳಿಕೊಳ್ಳುವುದು, ಕುತ್ತಿಗೆಯನ್ನು ಕತ್ತರಿಸಿಕೊಳ್ಳುವುದು ಮುಂತಾದ ಆಚರಣೆಗಳ ಭೀಕರಕ್ರಿಯೆ : (ಕ). [ವೀರ + ಪವಾಡ$_1$]

ವೀರಪಳಿ (ನಾ). ವೀರರು ಉಡುವ ವಸ್ತ್ರ ; ಶೂರರ ಉಡುಗೆ ; ವೀರಗಚ್ಚೆ : ಮುಂಜೆಱಗನಳವಡಿಸಿ ವೀರಪಳಿಯಂ ಬಿಗಿದು . . . ತೇರಂ ಜಯನಿನಾದದಿಂದೇಱಿದಂ ಸಮರಕೆ ಧನಂಜಯಂ (ಚೈಮಿಭಾ. ೧೨-೫೧). [ವೀರ + ಪಳ್ಳಿ (< ಪಟ್ಟಿ$_5$)]

ವೀರಪಾಂಚಾಳ (ನಾ). ಪಾಂಚಾಳರಲ್ಲಿ ಒಂದು ಪಂಗಡದ ಹೆಸರು : ಸಮಸ್ತ ವೀರಪಾಂಚಾಳ XXX ರು ಕೂಡಿ . . . ಕೊಟ್ಟ ಸಿಲಾಸಾಸನದ ಕ್ರಮವೆಂತೆಂದಡೆ (ಎಕ. IX. ಪಾಗಡಿ ೧೫-೨೭ : 1315). [ಸಂ. ವೀರಪಾಂಚಾಲ]

ವೀರಪಾಠಕ (ನಾ) ವೀರರನ್ನು ಹೊಗಳುವವನು ; ಸ್ತುತಿಪಾಠಕ : ಹಾರುವರ ಹರಕೆಗಳನಾನುತ ವೀರಪಾಠಕರೊಲವ ಸಲಿಸುತ ನಾರಿಯರು ನಲವಿಂದ ಮುತ್ತಿನ ಸೇಸೆಗಳ ತಳಿಯೆ (ಕಾಶಿರಾ. ೩೩-೪೪). [ಸಂ.]

ವೀರಪಾಣ (ನಾ). ಯೋಧರು ಯುದ್ಧಮಾಡುವ ಮೊದಲು ಅಥವಾ ನಂತರ ತೆಗೆದುಕೊಳ್ಳುವ ಉತ್ತೇಜಕವಾದ ಮಾದಕಪಾನೀಯ : ''ವೀರಪಾಣಂ – ೧ . . . ಕಾಳಗ ನಡೆಯುತ್ತಿರುವಾಗಲೂ ಮುಂದೆ ನಡೆಯ ಬೇಕಾಗಿರುವಾಗಲೂ ವೀರಭಟರು ಆಯಾಸವಿಲ್ಲದೆ ಸ್ಥಿರವಾಗಿರುವದಕ್ಕೆ ಮಾಡುವ ಮದ್ಯಪಾನದ ಹೆಸರು'' (ಸಿದ್ಧಾಂತಿ. ೨೬೯). [ಸಂ.]

ವೀರಪುಂಗವ (ನಾ). ವೀರರಲ್ಲಿ ಶ್ರೇಷ್ಠನಾದವನು ; ಮಹಾಪರಾಕ್ರಮಿ : ಕೊಡು ಕೊಡು ರಾಯನಪ್ಪಣೆಯನೆಂದುಜೆ ಬೇಡಿದರಂದು . . . ಬಿಂಕದ ಭೀಕರ ವೀರಪುಂಗವರ್ (ಹಮ್ಮೀರ. ೩-೩೬) ; ವೀರಪುಂಗವನು ಭೂಪುಂಗವನ ಬಳಿಗೆ ಬಂದಿದ್ದಾನೆ (ಮಹಾಭಾ. ೧೭). [ಸಂ.]

ವೀರಪುರುಷ (ನಾ). ಶೂರನಾದವನು ; ಪರಾಕ್ರಮಿ : ''ಶೂರಂ ವಿಕ್ರಾಂತಂ ಕಲಿ ಚಾರಭಟಂ ವೀರಪುರುಷನಾತಂಗೆ ಪೆಸರ್'' (ಪ್ರಾಕೃ. ೧೮೦-೧೨). [ಸಂ.]

ವೀರಪೂಜೆ (ನಾ). ವೀರರಾದವರ ಬಗ್ಗೆ ಇರುವ ಪೂಜ್ಯಭಾವನೆ : ಹುಟ್ಟಿದ ಒಡನೆ ಮಕ್ಕಳಲ್ಲಿ ಬೆಳೆದು ಬರುವ ವೀರಪೂಜೆಯ ಈ ಒಲವು ತಮತಮಗೆ ಇಷ್ಟವಾದ ಮಹಾಪುರುಷರನ್ನು ಅರಸುವಂತೆ ಆಯ್ದುಕೊಳ್ಳುವಂತೆ ಅವರನ್ನು ಬಲವತ್ತರವಾಗಿ ಪ್ರೇರಿಸುವುದು (ಕಥಕ. ೬೬). [ಸಂ. ವೀರಪೂಜಾ]

ವೀರಪೆಂಡೆಯ (ನಾ). = ವೀರನೂಪುರ : ಬಲಗಾಲಿನ ವೀರಪೆಂಡೆಯ ಅವನ ಉನ್ನತಪದವಿಯನ್ನು ಸೂಚಿಸುತ್ತಿದ್ದವು (ರೂಢಬಾ. ೫). [ವೀರ + ಪೆಂಡೆಯ]

ವೀರಬಣಂಜ 'ವೀರಬಣಜ' ನೋ.

ವೀರಬಣಂಜಧರ್ಮ, ವೀರಬಳಂಜಧರ್ಮ (ನಾ). ವರ್ತಕರ ಧರ್ಮ : ಸತ್ಯಸೌಚಾಚಾರ ಚಾರಿತ್ರ ನಯವಿನಯವಿಜ್ಞಾನ ವೀರಬಣಂಜಧರ್ಮಪ್ರತಿಪಾಳಕ . . . ಭುವನಪರಾಕ್ರಮೋನ್ನತರುಂ (ಪೌರಾ. XV, ೧೦೬-೫ ; 1166) ; ಸತ್ಯ ಸೌಚ ಚಾರು ಚಾರಿತ್ರ ನಯವಿನಯವಿಭೂನವೀರಬಣಂಜಧರ್ಮ್ಮ ಪ್ರತಿಪಾಳಕರು (ಕಾಅ. ೧೨೩-೩೨-೬ ; 1182). **ವೀರಬಳಂಜಧರ್ಮ** : ವೀರಬಳಂಜಧರ್ಮ್ಮಪ್ರತಿಪಾಳನವಿಶುದ್ಧಗುಡ್ಡಧ್ವಜ ವಿರಾಜಿತಂ (ಎಕ. VII, ೫ಕಾಂ. ೯೪-೮; 1094); ಸತ್ಯ ಸೌಚಾಚಾರ [ಚಾರು] ಚಾರಿತ್ರ ನಯವಿನಯ ವಿಜ್ಞಾನ ವೀರಬಳಂಜಧರ್ಮ್ಮ ಪ್ರತಿಪಾಳಕರುಂ (ಕಾಅ. ೪೪-೭೩-೧೧; 1229).

[ವೀರಬಣಂಜ (< ವೀರಬಣಜ) + ಧರ್ಮ]

ವೀರಬಣಂಜು, ವೀರಬಳಂಜು, ವೀರಬಟಂಜು (ನಾ). ಕರ್ನಾಟಕದಲ್ಲಿದ್ದ ಪ್ರಾಚೀನವಾದ ವ್ಯಾಪಾರಿಸಂಸ್ಥೆ ಮತ್ತು ಅದಕ್ಕೆ ಸೇರಿದ ವ್ಯಕ್ತಿ : ಸತ್ಯ ಶೌಚಾಚಾರ ಚಾರುಚಾರಿತ್ರನಯವಿನಯ ವಿಜ್ಞಾನವೀರಾವತಾರ ವೀರ ಬ[ಣಂ]ಜುಗ[ಸ]ಮಯಧರ್ಮ್ಮಪ್ರತಿಪಾಳನವಿಶುದ್ಧಗುಡ್ಡೆಧ್ವಜವಿರಾಜಿತಾನೂನ ಸಾಹಸೋತ್ತುಂಗರುಂ ಪುಣ್ಯಪ್ರಸಂಗರುಂ (ಎಇ. XIX, ೨೫-೫೬ ; 1245) ; ಈ ವೀರಬಣಂಜುಗಳು ಪ್ರಾಚೀನಕರ್ನಾಟಕದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದ ವ್ಯಕ್ತಿಗಳಾಗಿದ್ದರು (ಕಶಾಅ. ೬೮೧). **ವೀರಬಳಂಜು** : ಉಳಿದ ಶಾಸನಗಳಲ್ಲಿ ವೀರ ಬಳಂಜು, ವೀರಬಟಂಜು ಎಂಬ ರೂಪಗಳೂ ದೊರಕುತ್ತವೆ (ಕಶಾಅ. ೬೮೦ ಅಡಿಟಿ). Δ **ವೀರಬಟಂಜು** : ಸತ್ಯಶೌಚ ಚಾರುಚರಿತ್ರ ನಯವಿನಯವಿಜ್ಞಾನ ವೀರಬಟಂಜು XXX ಧರ್ಮಪ್ರತಿಪಾಳನ . . . ಪರಾಕ್ರಮೋನ್ನತ ವಾಸುದೇವ ಖಣ್ಡಳೀಮೂಳ ಭದ್ರೋ[ದ್ರ]ವರ್ (ಪೌರಾ. XV, ೧೨೪-೨೪ ; 1174). [ವೀರ + ಬಣಂಜು (< ಬಣಜು)]

ವೀರಬಣಂಜುಧರ್ಮ, ವೀರಬಳಂಜುಧರ್ಮ (ನಾ). = ವೀರಬಣಂಜಧರ್ಮ್ಮ : ಸತ್ಯಶೌಚಾಚಾರ ಚಾರುಚರಿತ್ರ ನಯವಿನಯ ವಿಜ್ಞಾನ ವೀರಬಣಂಜುಧರ್ಮ ಪ್ರತಿಪಾಳ ವಿಶುದ್ಧಗುಡ್ಡಧ್ವಜವಿರಾಜಮಾನ . . . ಭುವನಪರಾಕ್ರಮೋನಂತರುಂ (ಎಕ. VII, ೫ಕಾಂ. ೧೧೪-೨೭ ; 1054) ; ನಯವಿನಯ ವೀರಬಣಂಜುಧರ್ಮ್ಮಪ್ರತಿಪಾಳನ . . . ಭುವನಪರಾಕ್ರಮೋನಂತರುಂ (ಪೌರಾ. XX, ೭೩-೩ ; 1098) ; ವರ್ತಕರು ತಮ್ಮ ಜಾತಿಯನ್ನು 'ವೀರಬಣಂಜುಧರ್ಮ' ಎಂದು ಕರೆದುಕೊಳ್ಳುವುದುಂಟು (ಕಶಾಅ. ೬೮೦). **ವೀರಬಳಂಜುಧರ್ಮ** : ಸತ್ಯಸೌಚಾಚಾರಚಾರುಚಾರಿತ್ರಾನೇಕಗುಣ XXX ನೂನ ವೀರಬಳಂಜುಧರ್ಮ್ಮ ವಿಸುದ್ಧ ಗುಡ್ಡಧ್ವಜವಿರಾಜಮಾನ . . . ಭುವನ ಪರಾಕ್ರಮೋನ್ನತರುಂ (ಪೌರಾ. XX, ೧೧೨-೨೪; 1144 ?). [ವೀರಬಣಂಜು + ಧರ್ಮ]

ವೀರಬಣಜ, ವೀರಬಣಂಜ, ವೀರಬಳಂಜ (ನಾ). = ವೀರಬಣಂಜು : ಶಿಲಾಶಾಸನಗಳಿಂದ ಸ್ಥಳೀಯಶಾಖೆಗಳು ಕನ್ನಡದಲ್ಲಿ 'ವೀರಬಣಜ' ತಮಿಳಿನಲ್ಲಿ 'ವೀರವಳಂಜಿಯಾರ್' ಎಂದು ಕರೆಯಲ್ಪಡುತ್ತಿದ್ದಂತೆ ಕಂಡುಬರುತ್ತದೆ (ದಫಾ. ೧೧೧). **ವೀರಬಣಂಜ** : 'ವೀರಬಣಂಜಧರ್ಮ' ಪರಾ. **ವೀರಬಳಂಜ** : 'ವೀರಬಳಂಜಧರ್ಮ' ಪರಾ. [ವೀರ + ಬಣಜ]

ವೀರಬಲ (ನಾ). ಶೂರರ ಸೈನ್ಯ ; ಪರಾಕ್ರಮಿಗಳ ದಂಡು : ''ವೀರಬಲಮಂ ಸರ್ವಸನ್ನಾಹಮೆಂಬುದು'' (ಮಂಗರಾ. ೧೪೦-೮). [ಸಂ.]

ವೀರಬಳಂಜ 'ವೀರಬಣಜ' ನೋ.

ವೀರಬಳಂಜು 'ವೀರಬಣಜು' ನೋ.

ವೀರಬಳಂಜುಧರ್ಮ 'ವೀರಬಣಂಜುಧರ್ಮ' ನೋ.

Δ **ವೀರಬಟಂಜು** 'ವೀರಬಣಂಜು' ನೋ.

ವೀರಬ್ರತ (ನಾ). ಕಠಿಣವಾದ ವ್ರತ, – ನೋಂಪಿ : ಗುಜ್ಜಿಗನೂರ ಪ್ರಭುಗಾವುಣ್ಡುಗಳು ಕುವ್ಮಾರ ಬಮ್ಮನ ತಲೆ ಪೂಸದನ್ನವುಣದ ವೀರಬ್ರತವು ಕಯ್ಕೊಣ್ಡು ಪ್ರತಿಷ್ಠೆಯಂ ಮಾಡಿಸಿದ ಕುಮ್ಬೇಸ್ವರ ದೇವರಂಗಭೋಗಕ್ಕೆ . . . ಬಟ್ಟು ಗರ್ದೆ ಕಮ್ಮವಿನ್ನೂರು ೨೦೦ (ಎಕ. XI, ಹೂಳಲ್ಕಿ. ೬೮-೨೪ ; 1126). [< ಸಂ. ವೀರವ್ರತ]

ವೀರಭಕ್ತ (ನಾ). ಭಕ್ತಿಯಲ್ಲಿ ವೀರಭಾವವನ್ನು ಉಳ್ಳವನು : ವೀರಭಕ್ತ ಸಮುಚಿತ ಪರತಂತ್ರೋರುಪೂಜೆಯೊಳೊಲಿದೊಲಿದು ಮಾರಾರಿಗಣನಿತ್ಯಪ್ರಸಾದಾನುಭವ ಸೌಖ್ಯವನೆ ಹಾರಿ ಹಾರಿ (ಬಸವ. ೬-೨೬). [ಸಂ.]

ವೀರಭಕ್ತಿ (ನಾ). ಆವೇಶಕರವಾದ ಭಕ್ತಿ : ಶ್ರೀ ಮಹಿತ ಕಲ್ಯಾಣದಲ್ಲಿಯ ಆ ಮಹಾತ್ಮನು ವೀರಭಕ್ತಿಯೊಳೊಪ್ಪಿ ವರ್ತಿಸಲು (ಬಸವ. ೬೨-೧೧) ; ಈರರು ತಲೆಯ ಮೇಲೆ ಈರ್ಕೆಕಾಯಿ ಹೊಡೆದುಕೊಂಡು ತಮ್ಮ ವೀರಭಕ್ತಿಯನ್ನು ತೋರಿಸುವರು (ಟೋರೆದೇ. ೪೭). [ಸಂ.]

ವೀರಭಟ (ನಾ). ಶೂರನಾದ ಸೈನಿಕ, — ಯೋಧ : ವೀರಭಟರುದ್ಭಟಾರಭಟೀ ರಸರಿವರವರದನ್ನರುಂ ಸೆಣಸುವೊಡೇಕಾರಣವೊ ಚಕ್ರವೇವುದೊ ವಾರಣಘಟೆ ದಂಡರತ್ನಮೇಗೆಯ್ದುಪುದೋ (ಆದಿಪು. ೧೪-೨೬) ; ವೀರಭಟವಿತತಿಯೊಳ್ಪೀರಭಟವಿತತಿ ಮುದವಾರಣಪ್ರತತಿಯೊಳ್ಪಾರಣಪ್ರತತಿ . . . ಆರಭಟೆಯಿಂದ ಕಾದುತ್ತಿರ್ದುದಾಯರ್ವರವನಿಪಾಲಕರ ಸೇನೆ (ಸಮ್ಮಕಾ. ೮-೪೮). [ಸಂ.]

ವೀರಭದ್ರ (ನಾ). ೧. ಶಿವನ ಮಗ ; ಒಂದು ಅವತಾರ ; ಶರಭ : ವಿಷವಟ್ಟಿ ಸುಡುವಲ್ಲಿ ವೀರಭದ್ರ ಕೊಲುವಲ್ಲಿ ಕೂಡಲಸಂಗಯ್ಯಂಗೆ ಶರಣೆಂದು ಮೊಣಕಾಲ್ಮಟ್ಟಿರೆಲ್ಲರೂ (ಬಸವ. ೫೫೦); ವೀರಭದ್ರನ ಕೆಣಕಿ ಹೊಗುವರೆ ಮಾರಿಕವ್ವೆಯ ಮಜ್ಜೆಯನೆಲೆ ಖಳ ಮಾರಮಥನನ ನೆರೆಯ ಹೊಕ್ಕರು ಬಿಡುವನೇ ನಿನ್ನ (ಕಾಶಿಖಂ. ೬೬-೭೧). ೨. ಒಂದು ಮಹಾಮಂತ್ರದ ಹೆಸರು : ಗಾಯತ್ರಿ ಮೃತ್ಯುಂಜಯ ದಕ್ಷಿಣಾಮೂರ್ತಿ ನೀಲಕಂಠ ಶರಭ ವೀರಭದ್ರ [ವಾಕಾಂ. ವೀರ] ವಿಘ್ನೇಶ್ವರ . . . ಸೂರ್ಯ ಭೈರವಾದಿ ಮಹಾಮಂತ್ರಂಗಳಂ . . . ಬೇಱೆ ಬೇಱೆ ವಿವೇಕಿಸಿ ನೋಡಿ (ವೀಸಂ. ೭೫).

. **ವೀರಭದ್ರರಸ** = ಒಂದು ಬಗೆಯ ಔಷಧ : ವೀರಭದ್ರರಸಂ : — ನಾಭಿಯನ್ನು ಎಕ್ಕೆಯ ಹಾಲಿನಲ್ಲಿ ಇಪ್ಪತ್ತೊಂದು ದಿನ ಭಾವನೆಯ ಕೊಟ್ಟು . . . ಎಕ್ಕೆಯ ಬೇರಿನ ಕಷಾಯದಲ್ಲಿ ಮರ್ದಿಸಿ ಗುಂಜಿಪ್ರಮಾಣ ಗುಳಿಗೆಯಂ ಮಾಡಿ, ಲೊಕ್ಕಿಯ ರಸ, ಅಲ್ಲದ ರಸ, ಬೆಳ್ಳುಳ್ಳಿಯ ರಸ, ಒಂದು ಗುಳಿಗೆಯಂ ಈ ರಸಗಳಲ್ಲಿ ಅರೆದು ಕೊಟ್ಟರೆ ಸನ್ನಿಪಾತಂಗಳು ಮಾಣುವುವು. ಇದು ವೀರಭದ್ರರಸ (ವೈವಿ. ೪೯). [ಸಂ.]

ವೀರಭೃತ್ಯತ್ವ (ನಾ). ಸಜ್ಜನತ್ವದ ಆರುವಿಧಗಳಲ್ಲಿ ಒಂದು : ದಾಸತ್ವ ವೀರದಾಸತ್ವ ಭೃತ್ಯತ್ವ ವೀರಭೃತ್ಯತ್ವ ಸಮಯಾಚಾರತ್ವ ಸಕಲಾವಸ್ಥಾತ್ವಂಗಳೆಂಬ ಷಡ್ವಿಧ ಸಜ್ಜನತ್ವಯುಕ್ತನಾಗಿ (ವೀಸಂ. ೯೭). [ಸಂ.]

ವೀರಭೋಜ್ಯ (ನಾ). ಶೂರರು ಭೋಗಿಸಲು ಯೋಗ್ಯವಾದುದು : ಅರಿಯುವತಿ ಬಾಷ್ಪಬಿಂದೂತ್ಕರಂಗಳಪಸೂತ್ರಹಾರಮಂ ಸ್ತನದೊಳ್ ಪೋಲ್ತಿರೆ ತವಿಸಿ ಪಗೆವರಂ ಸಕಳರಾಜ್ಯಮಂ ವೀರಭೋಜ್ಯಮೆನಿಸಿದನೀತಂ (ಶಾಂಪು. ೫-೧೧೪). [ಸಂ.]

ವೀರಮಂಟಿಗೆ (ನಾ). ಶೂರರು ಕಾಲುಬೆರಳಿನಲ್ಲಿ ಧರಿಸುವ ಒಂದು ಬಗೆಯ ಅಂದುಗೆಯಂತಹ ಆಭರಣ : ಪುಷ್ಕಳೆ ತಾಂ ತಂದ ಧನಮಂ . . . ಪಸ್ರುವರಳೋಲೆ ಪುಸ್ತಿ ಪಟ್ಟಿ ವೀರಮಂಟಿಗೆ ಕೆಯ್ಯೂರ ಮುದ್ರಿಕೆಯುಂಗುರಂಗಳು . . . ನವರತ್ನಂಗಳ್ ತೀವಿದ ಪೆಂಡೆಯಂ ಮೊದಲಾದ ಸಕಲಾಭರಣಂಗಳನಾ ಶೌಂಡಿಕಂಗೆ ತೋಱಲು (ನನ್ನಚಾ. ೩-೧೧೧ ವ). [ವೀರ + ಮಂಟಿಗೆ(< ಮೆಂಟಿಕೆ)]

ವೀರಮಂಡಿ (ನಾ). = ವೀರಗಾಲು : ವೀರಮಂಡಿಯ ಬಲಿದು ಕಿವಿವರೆಗೇರಿಸಿದ ಬಲ್ಲಿನೊಳೆ ಬೊಬ್ಬಿಡುತೇರಿ ಖಡುಗವ ಜಡಿದು ಹೂಂಕರಿಸುತ್ತಲಧಟಿಂದ (ಕಾವೇಮ. ೯-೮೨) ; ಪ್ರಭುಗಳನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ವೀರಮಂಡಿಯನ್ನೂರಿ ನಮಸ್ಕಾರಮಾಡಿ ಎದ್ದ (ಶಾಂತಲಾ. ೧೬೯). [ವೀರ + ಮಂಡಿ$_1$]

ವೀರಮರಣ (ನಾ). ಯುದ್ಧದಲ್ಲಿ ದಿಟ್ಟತನದಿಂದ ಹೋರಾಡಿ ಯುದ್ಧ ರಂಗದಲ್ಲಿಯೇ ಮರಣ ಹೊಂದುವುದು ; ಶೂರರಿಗೆ ಉಚಿತವಾದ ಮರಣ : ತ್ರೈಲೋಕ್ಯಮಲ್ಲ ನನ್ನಿನೊಳಂಬನು ತನ್ನ ಅಧಿಪತಿ ಸೋಮೇಶ್ವರನ ಏಳಿಗೆಗಾಗಿ ವೀರಮರಣವನ್ನಪ್ಪಿದನು (ನೊಳಂಬ. ೫೮). [ಸಂ.]

ವೀರಮಾತೆ (ನಾ). = ವೀರಜನನಿ : ಸರ್ಕಾರದಿಂದ ಎಂದಾದರೂ ಆ ವೀರಮಾತೆಗೆ ಅವಶ್ಯಕವಾಗಿ ಸಲ್ಲಬೇಕಾದ ಮನ್ನಣೆ, ಗೌರವ ಸಲ್ಲುತ್ತೋ, ಇಲ್ಲವೋ, ನಾನು ಹೇಳಲಾರೆ (ವೀರಯೋ. ೧೦೧). [ಸಂ. ವೀರಮಾತಾ]

ವೀರಮುದ್ರಿಕೆ (ನಾ). ವೀರತ್ವಸೂಚಕವಾದ ಒಂದು ಆಭರಣ : ತುಱುಬಿನ ಮಣಿ ತುಱುಗಿದ ಮುತ್ತಿನ ಸರ ಮಿಱುಪ ಮುದ್ರಿಕೆ ತೋರಹಾರ ನಿಱಿಯುಡಿದಾರ ನೇವುರ ವೀರಮುದ್ರಿಕೆ ಮೆಱೆಯೆ ನಡೆದಳೊಲವಿಂದ (ಕುರಾಸಾಂ. ೨೧-೩೬).

[ಸಂ. ವೀರಮುದ್ರಿಕಾ]

ವೀರಮುದ್ರೆ (ನಾ). = ವೀರಮುದ್ರಿಕೆ : ಉಂಗುರ ಪಿಲ್ಲಿ ಪದಾಂಗುಲಕಿಕ್ಕಿದ ಹೊಂಗಳಸದ ವೀರಮುದ್ರೆ ಝೇಂಗಿಡೆ ಝಣರೆಂಬ ನೇವುರ ಪಾಯಿವಟ್ಟಂಗಳು ತರುಣಿಗೊಪ್ಪಿದವು (ನಿಜಸಾಂ. ೨-೧೨೩). [ಸಂ. ವೀರಮುದ್ರಾ]

ವೀರಯುಗ (ನಾ). ೧. ಶೌರ್ಯ, ಪರಾಕ್ರಮಗಳು ಮನುಷ್ಯನ ಸಾಮಾಜಿಕಬದುಕಿನಲ್ಲಿ ಪ್ರಧಾನಪಾತ್ರವನ್ನು ವಹಿಸಿದ ಕಾಲ. ೨. "(ಟ್ರಾಯ್ ಪಟ್ಟಣದಿಂದ ಗ್ರೀಕರು ಹಿಂದಿರುಗುವುದಕ್ಕೆ ಮೊದಲಿನ) ಗ್ರೀಸಿನ ವೀರಯುಗ" (The heroic age. ಇಂಕಾ) : ವೀರಯುಗ(Heroic age)ದ ಜೀವನಸಂಸ್ಕೃತಿಗಳನ್ನು ಇಲಿಯಡ್ ವರ್ಣಿಸಿದರೆ, ಆ ಯುಗದ ಊಳಿಗಮಾನ್ಯಸಮಾಜದ ಆಂತರಿಕಘರ್ಷಣೆಗಳ ಚಿತ್ರಣವು ಒಡಿಸ್ಸಿಯಲ್ಲಿದೆ (ಅರಿಕಾ. ೨೦೬). [ಸಂ.]

ವೀರಯೋಧ (ನಾ). ಶೂರನಾದ ಸೈನಿಕ : ಕನ್ಯೆಯೊಬ್ಬಳನ್ನು ಕೂಡಬಯಸಿದ ವೀರಯೋಧ — ಅವಳಿಗಾಗಿ ನಡೆಸುವ ಯುದ್ಧ ಈ ಮುಕ್ತಕಗಳ ಮುಖ್ಯವಸ್ತು (ಭಾರದ. ೪೫೭). [ಸಂ.]

ವೀರರಸ (ನಾ). ೧. ಶೌರ್ಯದ ಭಾವನೆ ; ಶೌರ್ಯಭಾವ : ವೀರರಸದ ತೊಱೆಯುಂ ನೆತ್ತರ ತೊಱೆಯುಮೊಡನೊಡನೆ ಬೆಳ್ಳಂಗೆಡೆದು ಪರಿಯೆ ಚತುರ್ಬಲಂಗಳ್ ಕಾದಿ ಬಸವಱಿದು ಪೆಱಪಿಂಗಿ ನಿಂದಾಗಳ್ (ಪಂಪಭಾ. ೧೨-೧೭ ವ) ; ಭುಜಶೌರ್ಯಶಕ್ತಿ ಗೆಂಟಾದುದೆ ಸಾರವೀರರಸಮೇಂ ಬಿಸಿಗುಂದಿದುದೇ . . . ಕಾದಲೆ ನೋಳ್ಪುದೀತನ ಸಮಗ್ರಪರಾಕ್ರಮಮುರ್ವಿ ಪೆರ್ಚುಗುಂ (ಶಬಶಂ. ೪-೬೭). ೨. [ಕಾವ್ಯಮೀ] ನವರಸಗಳಲ್ಲಿ ಒಂದು; ಉತ್ಸಾಹವು ಸ್ಥಾಯಿಯಾಗಿ ಹುಟ್ಟುವ ಒಂದು ಭಾವಪರಿಪಾಕ ; ಶೌರ್ಯಭಾವ : ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂಚ್ಚಾರಣೆಯಿಂದಂ . . . ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತ[ದ]ಂ (ಕವಿರಾ. ೨-೯೯). [ಸಂ.]

ವೀರವಂದ (ನಾ). ಒಂದು ಬಗೆಯ ವಾದ್ಯ : ಡೋಳು ಡಮರು ಗಿಡುಬಿಡಿ ವೀರವಂದ ನಿಸ್ಸಾಳ . . . ಮೊಳಗಲು (ರಾಮವಿ. ೮-೭೨). [?]

ವೀರವಂದನ (ನಾ). ವೀರೋಚಿತವಾದ ನಮಸ್ಕಾರ ; ಶೂರರು, ಶೂರರಿಗೆ ವೀರಮಂಡಿಯನ್ನು ಹೂಡಿ ಮಾಡುವ ನಮಸ್ಕಾರ : ಚಿಕ್ಕಚಾಮಪ್ಪ, ಆತನವರು (ಆಗತನಿಗೆ ವೀರವನ್ದನ ಮಾಡುವರು) (ಚಟ್ಟಅ. ೧೮-೩). [ಸಂ.]

ವೀರವಟ್ಟ (ನಾ). = ವೀರಪಟ್ಟ : ತಾಂ ತನ್ನ ಕೆಯ್ಯೊಳೆ ಕಟ್ಟಿದಂ ಕುರುಪರಿವೃಢಂ ಕರ್ಣಂಗಾ ವೀರವಟ್ಟದ ಪಟ್ಟಮಂ (ಪಂಪಭಾ. ೧೨-೫೨). [ವೀರ + ಪಟ್ಟ$_3$]

ವೀರವಸಂತ (ನಾ). [ಸಂಗೀತ] ಒಂದು ಮೇಳಕರ್ತರಾಗದ ಹೆಸರು: ವೀರವಸಂತವೆಂಬ ರಾಗವು . . . ಸದಾಕಾಲದಲ್ಲಿಯೂ ಹಾಡುವಂತಹದು (ಚತುಪ್ರ. ೧೬೯). [ಸಂ.]

ವೀರವಱೆ (ನಾ). ಯುದ್ಧದ ಸಮಯಗಳಲ್ಲಿ ಸೈನ್ಯಕ್ಕೆ ಉತ್ಸಾಹ ತುಂಬಿಸಲು ಬಾರಿಸುವ ಒಂದು ಬಗೆಯ ತಮಟೆಯಂತಹ ಚರ್ಮವಾದ್ಯ; ರಣವಾದ್ಯ : ಈ ಭವಸಂಗರಂಗಳಂ ಗೆಲ್ದು ಹರ್ಷಂ ಮೂಡಿ ಹುಸಿಯೆಂಬ ವೀರವಱೆಯಿಂ . . . ಮಿಗೆ ನೋಯಿಪಾಸೆಯೆಂಬಲಗಿನತಿಝಳಪದಿಂ ಮೆಱೆವ ಮನವೆಂದೆಂಬ ಮಾಸಾಳನಿಱಿದು (ಮೊನೆರ. ೧೪೦-೧೯) ; ಭೇರಿ ಪಟಹ ಮೃದಂಗ ತಂಬಟ ವೀರಣಾನಕ ಮುಖ್ಯ ನಾನಾ ವೀರವಱೆಗಳ ರಭಸದಲಿ ರಂಜಿಸಿದುದಾ ದುರ್ಗ (ತೊರರಾ. ೬-೭-೧೫) ; ಸುರರು ಪೂಮಳೆಗಱೆದರು ದಿಕ್ಪಾಲರು ಕರಗಳ ಮುಗಿದು ಖೇಚರರು ಸ್ಮರಿಸೆ ಸ್ವರ್ಗದಿ ಯೊರೆದವು ವೀರವಱೆಗಳು (ಅಬ್ಬಲೂ. ೪-೮೫). [ವೀರ + ಪಱೆ$_1$]

ವೀರವಾಕ್ಯ (ನಾ). ವೀರೋಚಿತವಾದ ಮಾತು,— ನುಡಿ : ಅವರೂಳ್ ಪರೀಕ್ಷಾಕ್ಷಮೋದಾರ ವೀರವಾಕ್ಯಂಗಳಂ ನುಡಿಯುತ್ತುಂ ರಥಮಂ ಮಗುಟಲ್ವೇಟ್ಟು (ಶಾಂತಿಪು. ೪-೧೦೨ ವ). [ಸಂ.]

ವೀರವಾಣಿ (ನಾ). = ವೀರವಾಕ್ಯ : ಚಣಚಣಕೆ ವೈರಿಯ ದಳಂ ಬಲಗುಂದುತಳಿದುಳಿದು ಹಿಂಜರಿಯುತೋಡುತಿದೆ ಲೆಕ್ಕಿಸದೆ ವೀರಪಾರ್ಥನ ವೀರವಾಣಿಯಂ (ಚಿತ್ರಾಂಗ. ೧೩-೨೨೯೦). [ಸಂ.]

ವೀರವಿಲಸಿತ (ನಾ). ೧. ವೀರಶ್ರೀ ; ಶೌರ್ಯಸಂಪತ್ತು. ೨. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹತ್ತನೆಯದಾದ ಪಂಕ್ತಿಛಂದಸ್ಸಿನ ಒಂದು ವೃತ್ತ : "ವೀರವಿಲಸಿತಂ ಭಸಾ ಜಗೌ" ಎಂದು ವೃತ್ತಲಕ್ಷಣಂ (ಅಪ್ರತಿ. ೧೧೭-೧೯);೧೦ನೆಯ ಪಂಕ್ತಿಯಲ್ಲಿ :— ವೀರವಿಲಸಿತಂ ಭಸಂ ಜಗಂ (ಕೈಪಿಡಿ. ೭೯). ೧,೨ : ಶ್ರೀರಮಣನ ದಿವ್ಯಲೀಲೆವೊಲ್ ಭೂರಿಭುವನಪೋಷಕಂ ಮಹೋದಾರನ ಚಿಕದೇವರಾಯನಾ ವೀರವಿಲಸಿತಂ ವಿರಾಜಿಕುಂ ಇದಱೊಳ್ ವೀರವಿಲಸಿತಮೆಂಬ ಪದದ ವೃತ್ತದ ಪೆಸರ್ ಪಂಕ್ತಿಚ್ಛಂದಸ್ಸಿನೊಳ್ತೋರ್ಪುದ ಱಿಂದಿದು ಮುದ್ರಾಲಂಕಾರಂ (ಅಪ್ರತಿ. ೧೧೭-೧೬). [ಸಂ.]

ವೀರವೂರ್ (ನಾ). ಒಂದು ಊರಿನ ಹೆಸರು : ನೀರ್ಗ್ಗುನ್ದನಾಡು ಮೂನೂಱುಮನ್ನೀರ್ಗ್ಗುನ್ದದರ್ಸರಾ ಆಳೆ ಅವರಾಳು ವೀರಮೂರ ಮಾಳ್ಪೊಪೊಟ್ಟೆಯರಾ ಕುಡಿಮುದ್ದನ್ ಮೇಲೆಯುಳ್ಳಿಱಿದು ವಿಟ್ಟನ್ (ಎಕ. V, ಚೆನ್ನರಾ. ೨೦೮-೪ ; ಸು. 770). [ವೀರ + ಊರ್]

ವೀರವೃತ್ತ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹನ್ನೊಂದನೆಯದಾದ ತ್ರಿಷ್ಟುಪ್ ಎಂಬ ಛಂದಸ್ಸಿನ ಒಂದು ವೃತ್ತ : ೧೧ ನೆಯ ತ್ರಿಷ್ಟುಪ್ಪಿನಲ್ಲಿ . . . ವೀರವೃತ್ತಮಿರಲ್ ರಸಸಂಲಗಂ (ಕೈಪಿಡಿ. ೮೦). [ಸಂ.]

ವೀರವೃತ್ತಿ (ನಾ). ಶೌರ್ಯದಿಂದ ಕೂಡಿದ ನಡವಳಿಕೆ : ವೀರವೃತ್ತಿ ಈ ನನ್ನ ತೋಳುಗಳನ್ನವಲಂಬಿಸಿದೆ (ಭಾಮಣಿ. ೬೦). [ಸಂ.]

ವೀರವೈಷ್ಣವ (ನಾ). ನಿಷ್ಠೆಯುಳ್ಳ ವಿಷ್ಣುಭಕ್ತ ; ರಾಮಾನುಜಪಂಥದವನು ; ಶ್ರೀವೈಷ್ಣವ : ಇಂತು ನುತಿಸಿಯೆ ಬೇಡಲಾಯಾ ಚಿಂತನೆಯ ಫಲವೀವ ಕೇಶವ ನಿಂತುದುವೆ ನಿಜವೀರವೈಷ್ಣವರಾಂತ ಪದ್ಧತಿಯು (ಗಗತಾ. ೫-೨೮). [ಸಂ.]

ವೀರವ್ರತ (ನಾ). ಕಠಿಣವಾದ ವ್ರತ,— ನಿಯಮ : ವೀರವ್ರತನಿಧಿ ವಿತತ ಯಶೋರಂಜಿತನಂಬುರಾಶಿಗಾಂಭೀರ್ಯಗುಣಾಧಾರಂ . . . ಎಂಬ ನೆಗಳ್ತೆಯನಾಳ್ದಳಿಕಾಂಬಕನಂ ಪೂಜೆಗೆಯ್ಯುತುಂ (ವೃಷವಿ. ೨೮-೬). [ಸಂ.]

ವೀರವ್ರತಿ (ನಾ). ನಿಷ್ಠೆಯಿಂದ ವ್ರತಗಳನ್ನು ಆಚರಿಸುವವನು ; ಕಠೋರವಾದ ನಿಯಮಗಳನ್ನನುಸರಿಸುವವನು : ಬೆಳಗುಸಿದ ಪಿರಿಜಯಾಮಿರಗಸ್ತ್ಯ ಗುರವರ್ಭುವನಿಯೊಳ್ವೀರವ್ರತಿ ನೂಱೊನ್ದುದಿವಸಂ ವಾಸುನ್ಧಿಯ ಜೆಲ್ಲಧರ್ಮ[ದೆ]

ಮಾಡಿ (ಕಇಅ. ೩೯-೫೫-೨; ಸು. 10ನೆಯ ಶತ) ; ವೀರವ್ರತಿ ಭಕ್ತನೆಂದು ಹೊಗಳಿಕೊಂಬರಿ ಕೇಳಿರಯ್ಯಾ ವೀರನಾದರೆ ವೈರಿಗಳು ಮೆಚ್ಚಬೇಕು ವ್ರತಿಯಾದರೆ ಅಂಗನೆಯರು ಮೆಚ್ಚಬೇಕು ಭಕ್ತನಾದರೆ ಜಂಗಮ ಮೆಚ್ಚಬೇಕು (ಬಸವ. ೬೭೧). [ಸಂ. ವೀರವ್ರತಿನ್]

ವೀರಶಯನ (ನಾ). ರಣರಂಗದಲ್ಲಿ ಯುದ್ಧಮಾಡುತ್ತಾ ಮಡಿದ ಅಥವಾ ಗಾಯಗೊಂಡ ವೀರರು ಒರಗುವ ಹಾಸು : ದುರ್ಯೋಧನ, ವೀರಶಯನವು ಇಷ್ಟವಾಗಿದ್ದರೆ ಅದನ್ನು ಪಡೆಯುತ್ತೀಯೆ ; ಸ್ವಲ್ಪ ತಡೆದುಕೋ (ವಚಭಾ. ೨೫೫). [ಸಂ.]

ವೀರಶಯ್ಯೆ (ನಾ). ೧. = ವೀರಶಯನ : ಆದರೆ ಭೀಷ್ಮನಿಗೆ ಅವು ಬೇಕಾಗಿರಲಿಲ್ಲ. ಅವನು ಮಂದಹಾಸದಿಂದ "ವೀರಶಯ್ಯೆಗೆ ಈ ದಿಂಬುಗಳು ತಕ್ಕವಲ್ಲ!" ಎಂದು ಅರ್ಜುನನನ್ನು ನೋಡಿ "ತಕ್ಕಂಥ ದಿಂಬು ನಿನಗೆ ಗೊತ್ತಿದ್ದರೆ ಕೊಡುತ್ತೀಯಾ?" ಎಂದು ಕೇಳಿದನು (ವಚಭಾ. ೨೭೬). ೨. [ಜೈನ] ಸಲ್ಲೇಖನವ್ರತವನ್ನು ಕೈಕೊಂಡವರು ದೇಹತ್ಯಾಗಮಾಡುವ ವರೆಗೂ ಮಲಗಿಕೊಳ್ಳುವ ಶಯ್ಯೆ : ಬಲ್ಲಿಡಿವಿಡಿದು ಶರುಣ್ಬುಗು ಜಿನೇಂದ್ರಪದಸರಸಿಜಮಂ ಎಂದಾ ಮಹಾನುಭಾವನ ಪೇಟ್ಟ ಮಾಳ್ಕೆಯೊಳಿರ್ಪತ್ತರಡು ದಿವಸಂಬರಂ ವೀರಶಯ್ಯಾತಳಗತನಾಗಿರೆ (ಆದಿಪು. ೨-೫೮ ವ).

[ಸಂ. ವೀರಶಯ್ಯಾ]

ವೀರಶುಲ್ಕೆ (ನಾ). ಹಿಂದೆ ಶೂರರ ಪರಾಕ್ರಮಕ್ಕೆ ಪ್ರತಿಫಲವಾಗಿ ಕೊಡುತ್ತಿದ್ದ ಸ್ತ್ರೀರೂಪದ ಶುಲ್ಕ : ಬಂದರಸರ್ಗೆ ದೇವವಾಣಿಯನರುಹಿ ವೀರಶುಲ್ಕೆಯನಾಗಿ ಸಾರಿದೆನಯೋನಿಜಾಕನ್ಯೆಯಂ (ಶ್ರೀರಾಮಾ. ೪೨-೩೭೯). [ಸಂ. ವೀರಶುಲ್ಕಾ]

ವೀರಶೈವ (ನಾ). ೧. ಶೈವಮತದ ಒಂದು ಪ್ರಭೇದ ; ಲಿಂಗಾಯತಮತ: ಶುದ್ಧಶೈವವ ಹೊದ್ದದೆ ಪೂರ್ವಶೈವವನಾಚರಿಸದೆ ಮಾರ್ಗಶೈವವ ಮನ್ನಣೆಯ ಮಾಡದೆ ವೀರಶೈವವನಾಧರಿಸದೆ ಆದಿಶೈವವನನುಕರಿಸದೆ . . . ಬಯಕೆ ಅಱತು ಭವ ಹಿಂಗಿ ತಾನೆನ್ನದೆ ಇದಿರೆನ್ನದೆ ಏನುವೆನ್ನದ ಲಿಂಗೈಕ್ಯಂಗೆ ಸ್ವಾನುಭಾವದಿಂದ ನಮೋ ನಮೋ ಎಂಬೆ (ಮೋಳಿಮಾ. ೧೨೬-೪೧೧) ; ಶೈವಂಗಳಲ್ಲಿ ಮುಖ್ಯಮಾದ ಸಾಮಾನ್ಯಶೈವ ಮಿಶ್ರಶೈವ ಶುದ್ಧಶೈವ ವೀರಶೈವವೆಂದು ಚತುರ್ವಿಧಶೈವಂಗಳು (ವೀಕಶ. ೬೮); ವೀರಶೈವ ಮಹಾಮತಾಶ್ರಿತ ಭಕ್ತನಿರ್ಜರವಲ್ಲರೀ . . . ವಾರಣಾನನಮಾತೆ ರಕ್ಷಿಪುದೆನ್ನನದ್ರಿಜೆ ಶಾಂಕರೀ (ವೃಷವಿ. ೩೨-೬೬). ೨. ಶೈವಾಚಾರದಲ್ಲಿ ನಿಷ್ಠೆಯುಳ್ಳವನು; ಲಿಂಗಾಯತ ; ಲಿಂಗವಂತ : ವೀರಶೈವ ಗುರುವಾಗಿ ಶುದ್ಧಶೈವಕ್ಕೆ ಹೊಱಗಾಗಬೇಕು ಶುದ್ಧಶೈವ ಗುರುವಾಗಿ ಮಾರ್ಗಶೈವಕ್ಕೆ ಹೊಱಗಾಗಬೇಕು (ಸಕಪ. ಕ. I. ೧೧೭-೪೪೫) ; ವೀರಶೈವರ ಮೆಚ್ಚೆ ತನ್ನ ಕುಮಾರನಾದಡೆ ಜಂಗಮವಲಾ ಕ್ರೂರಚಿತ್ತನು ಕೊಂದನಾ ಪಾಪಕ್ಕೆ ಶಂಕಿಸದೆ (ಬಸಪು. ೨೫-೨೬). [ಸಂ.]

ವೀರಶೈವಾಗಮ (ನಾ). ಶೈವಾಗಮದಲ್ಲಿಯ ಒಂದು ಪ್ರಭೇದ : ಶೈವಾಗಮದಲ್ಲಿ ಅನುಷ್ಠಾನಭೇದದಿಂದ (ಉಪಾಸನಾಭೇದದಿಂದ)'ಶೈವಾಗಮ' 'ದೇವ್ಯಾಗಮ ಅಥವಾ ಶಾಕ್ತಾಗಮ, ವಾತುಳಾಗಮ ಅಥವಾ ತಾಂತ್ರಿಕಾಗಮ' ಮತ್ತು 'ವೀರಶೈವಾಗಮ' ಎಂದು ನಾಲ್ಕು ಒಳಭೇದಗಳಿವೆ (ಭಾರದ. ೭೪). [ಸಂ.]

ವೀರಶೈವಾಚಾರ (ನಾ). ೧. ಲಿಂಗವಂತರ ಆಚಾರ, — ನಡವಳಿಕೆ : ನೀರ ನೇಣಿನ ಬಾಧೆಯಿಲ್ಲದ ವೀರಶೈವಾಚಾರ ದೀಕ್ಷಾಧಾರಕನನತಿ ನಿರ್ಮಿತೋಭಯ ಕರ್ಮನಿರ್ಮಲನ ಘೋರಕರ್ಮಾಶ್ರಯದ ಪಾರಾವಾರದೊಳು ಮುಳುಗಿಸುವೆನೆಂಬ ವಿಚಾರವಿಂತಿದು ನಿನಗೆ ಧರ್ಮವೆ (ಬಸಪು. ೩-೪೯). ೨. ಶಿವಾಚಾರ ಸಂಪನ್ನನಾದವನು; ಉತ್ತಮನಾದ ವೀರಶೈವ, — ಲಿಂಗವಂತ : ಚಾರುಚರಿತಂ ಮತ್ತೆಯುಂ ಬಾಹೂರಬೊಮ್ಮಯನೆಂಬ ಭಕ್ತನುದಾರಕೀರ್ತಿನಿರೂಢಗಾಢ ಮಹತ್ವತತ್ವಾರ್ಥಿ ವೀರಶೈವಾಚಾರ ಸುವ್ರತಕಾರಿ (ಬಸಪು. ೨೨-೨೩). [ಸಂ.]

ವೀರಶ್ಮಶ್ರು (ನಾ). ವೀರರಿಗೆ ಶೋಭಿಸುವಂತಹ ಮೀಸೆ : ಸೋನ್ನತದೇಹ . . . ಹೆಚ್ಚಲ್ಲದ ಕಡಮೆಯಲ್ಲದ ವೀರಶ್ಮಶ್ರು, ವಿಶಾಲಲಲಾಟ . . . 'ಇಂತಹ ಅಂಗಸೌಷ್ಠವಕ್ಕೆ ಅಲಂಕಾರಗಳೇಕೆ?' ಎನ್ನಿಸಿತು ನೋಡಿದವರಿಗೆ (ಶಾಂತಲಾ. ೧೦೭). [ಸಂ.]

ವೀರಸಂಕಲ್ಪ (ನಾ). ಕಠೋರವಾದ ನಿರ್ಧಾರ ; ದಿಟ್ಟತನದ ತೀರ್ಮಾನ : ಆಗ ವೀರರಾಜನು ವೀರಸಂಕಲ್ಪವನ್ನು ಮಾಡಿ . . . ಕೋಟೆಯ ಹೊರವಳಯದಲ್ಲಿ ನುಗ್ಗಿ ಕಾದಾಡುತ್ತ ಮಡಿದನು (ಒಪಕ. ೪೨). [ಸಂ.]

ವೀರಸಂಸ್ತರಾರೂಢ (ನಾ). [ಜೈನ] ಸಲ್ಲೇಖನವ್ರತವನ್ನು ಕೈಕೊಂಡು, ಮರಣವನ್ನು ಸಾಧಿಸಲು ವೀರಶಯ್ಯೆಯನ್ನೇರಿದವನು : ಜಿನೇಂದ್ರಾರ್ಚನಾ ಪುರಸ್ಸರಂ ವಚನಾಗ್ರಹಣಸಮೇತಮಾರಾಧನೆಯಿನರ್ಚಿಸಿ ವೀರಸಂಸ್ತರಾರೂಢನಾದನಾಗಳ್(ಆದಿಪು. ೨-೫೦ ವ). [ಸಂ.]

ವೀರಸಂಸ್ಥಾನಾರೂಢ (ನಾ). = ವೀರಸಂಸ್ತರಾರೂಢ : ಆಗಳಾ ಸ್ವಯಂಬುದ್ಧಂ . . . ವೀರಸಂಸ್ಥಾನಾರೂಢನಂ ಮಹಾಬಲನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರಶರೀರಪ್ರತ್ಯಾಖ್ಯಾನಮಂ ಕೊಟ್ಟು (ಆದಿಪು. ೨-೫೧ ವ). [ಸಂ.]

ವೀರಸರ್ಗ (ನಾ). ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿ ಮಡಿದ ವೀರರು ಪಡೆಯುವರೆನ್ನಲಾದ ಸ್ವರ್ಗ : ವೀರಸರ್ಗಕೆ ಪೋಪಡಾರ್ಯಮಂಡಲದೊಂದು ದಾರಿಗೆ ನಸುನುಸುಳ್ದಂತೆ ವೀರನ ಶಿರ ಚಕ್ರದಗ್ರದಿ ಮೆಱೆದುದು ವೀರಕೆ ಕಲಶವಿಟ್ಟಂತೆ (ಪರ್ಧಚಿ. ೭-೩೭). [< ಸಂ. ವೀರಸ್ವರ್ಗ]

ವೀರಸರ್ಗತ (ನಾ). ವೀರಮರಣವನ್ನು ಹೊಂದಿದವನು ; ವೀರಸ್ವರ್ಗವನ್ನು ಪಡೆದವನು : ಚೌಂಡಂ ವೀರಸರ್ಗ್ಗತನಾದ (ಎಕ. III (R), ಹಗ್ಗಡ. ೫೫-೮; 12ನೆಯ ಶತ).

[IP ಇದು 'ವೀರಸ್ವರ್ಗಸ್ಥ' ಎಂಬುದರ ಅಪಲಿಖಿತವಿರಬಹುದು]

ವೀರಸಾಸನ (ನಾ). (ಯುದ್ಧ ಮೊದಲಾದ ಸಂದರ್ಭಗಳಲ್ಲಿ ಸತ್ತ)ವೀರನಿಗೆ ಸಂಬಂಧಿಸಿದ ಶಾಸನ : ಅನೇಕ ನಾಮಾವಳೀಮುಖ್ಯನಪ್ಪ ದುದ್ಧರಸಂ . . . ಶಿವಲೋಕಪ್ರಾಪ್ತನಾಗಲ್ ಸಹೋದರಂ ಜೂಜರಸಂ ಸ್ನೇಹದಿಂ ಪರೋಕ್ಷ ವಿನೆಯಂಗೆಯ್ದು ವೀರಸಾಸನಮಂ ಬರೆಯಿಸಿದಂ (ಎಕ. I. ೬೨-೫೧ ; 1095) ; ಸೊಲ್ಲಗೆ ಮಾರೆಯ ತುಱುಹರಿಯಲು ಮಗುಳ್ಚಿ ಸುರಲೋಕ ಪ್ರಾಪ್ತನಾದ ವೀರಸಾಸನಂ ಅಡಿಯರ ಕುಲತಿಳಕಂಗೆ ನಿಲಿಸಿದ ಕಲ್ಲು (ಎಕ. XII, ಗುಬ್ಬಿ. ೧-೧೯ ; ಸು. 1125).

[< ಸಂ. ವೀರಶಾಸನ]

ವೀರಸಾಳ (ನಾ). = ವೀರಸಾಸನ (?): ತೊಣವತ್ತಿಯ ಮೆಱೆಗಾಱಬಾಚೆಯ ನಾಯಕ ಕಾದಿ ಸರ್ಗ್ಗಸ್ಥನಾದಲ್ಲಿ ಅಳಿಯ ಮದುಕೆಯಬಾಚೆಯ ಕಂಲ್ಲನಿರಿಸಿ ವೀರಸಾಳನೆತ್ತಿಸಿದ (ಎಕ. VII. ಶಿಕಾರಿ. ೧೫೯-೫ ; 1160).

[IP ಇದು 'ವೀರಸಾಸನ' ಎಂಬುದರ ಅಪಲಿಖಿತವಿರಬಹುದು]

ವೀರಸುತಜನನಿ (ನಾ). ಶೂರನಾದ ಮಗನನ್ನು ಪಡೆದವಳು ; ವೀರಮಾತೆ : ವೀರಸುತಜನನಿಗೀ ಗಾಂಧಾರಿಗೆ ದುಃಖಶತಜನನಿವೆಸರಾಯ್ತಾಗಳ್ ಕೌರವಪತಿ ದುಃಖ ಮಹಾಭಾರಮನಾಂತಾಯಸಕ್ಕೆ ಗುಱಿಯಾದುದಱಿಂ (ಗದಾಯು. ೪-೫).

[ಸಂ. ವೀರಸುತಜನನೀ]

ವೀರಸೂ (ನಾ). = ವೀರಸುತಜನನಿ : "ವೀರಮಾತಾ, ವೀರಸೂಃ — ೨ ವೀರನನ್ನು ಪೆತ್ತ ತಾಯಿಯ ಹೆಸರುಗಳು" (ಸಿದ್ಧಾಂತಿ. ೧೭೧). [ಸಂ.]

ವೀರಸೇತು (ನಾ). ಹಿಂದಿನ ಕಾಲದಲ್ಲಿ ಯುದ್ಧದ ಸಮಯದಲ್ಲಿ ಕೋಟೆಯ ಸುತ್ತಲಿರುವ ಅಗಳನ್ನು ದಾಟಲು ಬಳಸುತ್ತಿದ್ದ ಒಂದು ಬಗೆಯ ಸೇತುವೆಯಂತಹ ಸಾಧನ : ದುರ್ಗಕ್ಕೆ ನಿಚ್ಚಣಿ ಸಾರ್ಚುಂದೊಲ್ ವೀರ ಸೇತು ನಡೆಸಾರಂ ಬದ್ದರಂ ಗೆಗ್ಗೆ ಡಂಕಣಿ ಗುಮ್ಮಂ ಪಡಿಗೋಂಟೆಯೆಂಬ ಬಹು ಕೋಟಾಯಂತ್ರಸಾಮಗ್ರಿ ತಿಂತಿಣಿಗೊಂಡಾಂತಿರೆ ಲಗ್ಗೆಗಾರ್ದು ವಸುಷೇಣಂ ಸಾರ್ದು ಸೂಳ್ಕೆಸಿದಂ (ಅನಂಪು. ೧೧-೮೩). [ಸಂ.]

ವೀರಸೇನತೆ (ನಾ). ೧. ಶೂರರಿಂದ ಕೂಡಿದ ಸೈನ್ಯವನ್ನು ಹೊಂದಿರುವಿಕೆ ; ಬಲಯುತವಾದ ಸೈನ್ಯದಿಂದ ಕೂಡಿರುವಿಕೆ. ೨. ವಿದ್ವಾಂಸರ ಪ್ರಶಸ್ತಿಗೆ ಪಾತ್ರವಾಗುವ ಪಾಂಡಿತ್ಯ. ೩. ವೀರಸೇನಮುನಿಗಳ ವಿದ್ವತ್ತು, — ಪಾಂಡಿತ್ಯ. ೨, ೩ : ಕ್ಷಿತಿನಾಥವ್ರಜಪೂಜ್ಯಪಾದತೆ . . . ವಿದ್ವನ್ನುತ ವೀರಸೇನತೆ . . . ಆಹಾರಾಧ್ಯಾಂತತತ್ತ್ವಪ್ರಮಾತೃತೆಯೇಂ ಚೋದ್ಯಮೆ ವರ್ಧಮಾನಮುನಿಯೊಳ್ (ಚಂದ್ರಪು. ೧-೩೧). [ಸಂ. ವೀರಸೇನತಾ]

ವೀರಸೇಸೆ$_1$ (ನಾ). ಶೂರರನ್ನು ಸ್ವಾಗತಿಸುವಾಗ ಅಥವಾ ಬೀಳ್ಕೊಡುವಾಗ ತಳಿಯುವ ಮಂಗಳಾಕ್ಷತೆ ; ವೀರೋಚಿತವಾದ ಅಕ್ಷತೆ : ವಸಂತಂ ಪೂಸಮಲ್ಲಿಗೆಯ ನುಣ್ಣನಪ್ಪ ಸಣ್ಣನೆಯ ವೀರಸೇಸೆಯಂ ಸೂಸೆ ವನಲಕ್ಷ್ಮಿ ಪಳಿಕಿನ

ಪರಿಯಾಣದೊಳ್ ಬಂದುಗೆಯ ಕುಸುಮದ ವಿಜಯಾರತಿಯನೆತ್ತ (ಗಿಂಕ. ೭-೭ ವ) ; ಬೊಪ್ಪಗೌಡಿಯ ಮಲ್ಲೆಯ ಮುಳ್ಳೂರ ಕೋಟೆಯ ಕಾದು ಅಟಹೊಯಿದು ವಂಕಧಾರದೊಳಗ ಬಿದ್ದನು ಬಿದ್ದಲ್ಲಿಗೆಯಾತಂಗೆ ವೀರಸೇಸೆಯಾಗಿ ಮಾಸಾವಿ ಮುಖ್ಯವಾಗಿ ಊರ ಮುನೂರಾಳು ನೆರಪರ್ಮ (ಎಕ. I, ೮೦-೮ : 1296).

[ವೀರ + ಸೇಸೆ₁]

ವೀರಸೇಸೆ₂ (ನಾ). ಒಂದು ಬಗೆಯ ಸುಂಕ ; ವೀರರ ಮೇಲೆ ಹಾಕುತ್ತಿದ್ದ ತೆರಿಗೆ (?) : ಆ ಶಾಂತಿಗ್ರಾಮದ ವರದನರಸಿಂಹದೇವರ್ಗ್ಗೆ ವೀರಬಲ್ಲಾಳದೇವರು . . . ಅಡಕೆಯ ಸುಂಕ ಹಣವೊಂದಱ ಸೇಸೆ ವೀರಸೇಸೆ ತೊಡರು . . . ಧಾರಾಪೂರ್ವ್ವಕಂ ಮಾಡಿ ತಾಂಪ್ರಶಾಸನಮಂ ಕೊಟ್ಟರು (ಮೈಅರಿ. ೧೯೪೦. ೩-೫೫ ; 1216); ಕಟ್ಟುಗೂಳು ಕಟಕಸೇಸೆ ವೀರಸೇಸೆ ಆನೆಯ ಸೇಸೆ . . . ಪೂರ್ವ್ವಾಯ ಅಪೂರ್ವ್ವಾಯಂಗಳನು ಕಾರುಣ್ಯಂ ಮಾಡಿ ಬಿಟ್ಟು (ಎಕ. XVI, ಚಿಕ್ಕನಾ. ೭೧-೨೭;?). [ವೀರ + ಸೇಸೆ₂]

ವೀರಸ್ಕಂಧ (ನಾ). ೧. ಬಲಯುತವಾದ ಹೆಗಲುಗಳುಳ್ಳವನು ; ಶಕ್ತಿಯುತವಾದ ಭುಜಾಗ್ರಗಳುಳ್ಳವನು : ವಿಶಾಲವಕ್ಷನೂ ಮಹಾಬಾಹುವೂ ವೀರಸ್ಕಂಧನೂ ಆದ ಆ ಪುರುಷನು ಪ್ರದ್ಯುಮ್ನನಂತೆ ಸುಂದರನಾಗಿಯೂ ಕಂಡುಬಂದನು (ಶಾಂತಲಾ. ೪೨). ೨. ಎಮ್ಮೆ ; ಮಹಿಷ. [ಸಂ.]

ವೀರಸ್ವರ್ಗ (ನಾ). ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿ ಮಡಿದ ವೀರರು ಪಡೆಯುವರೆನ್ನಲಾದ ಸ್ವರ್ಗ : ಕೊಳುಗುಳದೊಳು . . . ಅಳಿದನಾದೊಡೆ ದೇವಲೋಕದ ಲಲನೆಯರು ತೊತ್ತಿರು ಸುರೇಂದ್ರನು ನೆಲನನುಗ್ಗಡಿಸುವವನು ವೀರಸ್ವರ್ಗವಹುದೆಂದ (ಕುವ್ಯಾವಿ. ೬-೨೨) ; ಸಲಹಿದಾತಂಗಾಗಿ ಗೋದ್ವಿಜರಳಿವ ತೆಱ ಸಲೆ ಕಾವಿ ಮಡಿದೊಡೆ ಉಳಿವುದುತ್ತಮಕೀರ್ತಿ ವೀರಸ್ವರ್ಗಪದವಹುದು (ಕೌಶಿರಾ. ೩೮-೧೫).

[ಸಂ.]

ವೀರಸ್ವಾಮಿ (ನಾ). [ಜೈನ] ಜಿನ ; ಅರ್ಹಂತ : ವೀರಸ್ವಾಮಿಯ ಪಾದಪಯೋರುಹಮಂ ಬಂದಿವಿಡಿದು ಬಂಟಂ ಸಱೆಯಂ ಧೀರತೆಯಿಂ ಪಿಡಿವಂತೆ ಕುಮಾರಕನುಂ ಪಿಡಿದನೇಕಚಿತ್ತದಿನಾಗಳ್ (ಧರ್ಮಾಮೃ. ೭-೧೦೧). [ಸಂ. ವೀರಸ್ವಾಮಿನ್]

ವೀರಹ (ನಾ). ೧. ಪ್ರಮಾದವಶದಿಂದ ಅಥವಾ ಉಪೇಕ್ಷೆಯಿಂದ ಗಾರ್ಹಪತ್ಯಾಗ್ನಿಯನ್ನು ಕಳೆದುಕೊಂಡ ಬ್ರಾಹ್ಮಣ : ಶ್ರುತಿಯನುಷ್ಠಾನರಹಿತಂ . . . ದುಶ್ಶೀಲನೇ ಸಿತಾಖ್ಯಂ ತ್ಯಕ್ತಘಾತಕಂ ವೀರಹಾಖ್ಯಂ (ವೀಶೈವೃ. ೭-೨-೨೨). ೨. ಶತ್ರುಗಳನ್ನು ಸಂಹರಿಸುವಿಕೆ. ೩. ವಿಷ್ಣು. [ಸಂ. ವೀರಹನ್]

ವೀರಾಂಗದ (ನಾ). ೧. ಪರಾಕ್ರಮಿಗಳು ಧರಿಸುವ ತೋಳಿನ ಬಳೆ. ೨. [ಜೈನ] ಭರತಚಕ್ರವರ್ತಿಯ ಕಡಗ, — ಕಂಕಣ : ತಟಿದ್ವಲಯವಿಲಸಿತಂಗಳಾಗಿ ನಿಜಪ್ರಕೋಷ್ಠ ನಿಷ್ಠಿತಂಗಳಪ್ಪ ವೀರಾಂಗದಂಗಳೆಂಬ ಕಟಕಂಗಳುಂ (ಆದಿಪು. ೧೫-೩ ವ). [ಸಂ.]

ವೀರಾಗ್ರಗಣ್ಯ (ಗು). ೧. ವೀರರಲ್ಲಿ ಶ್ರೇಷ್ಠನಾದ, — ಅಗ್ರಗಣ್ಯನಾದ : ಆಗಳ್ ಜಯನ ಭುಜವಿಜಯಸೂಚಕಮಾಗಿ ಮೇಘನಾದಸಮಾನಮಾದ ಸಿಂಹನಾದಕ್ಕೆ ಚಕ್ರವರ್ತಿ ಮಚ್ಚಿ ಮೇಘಸ್ವರನಾಮಮಂ ವೀರಾಗ್ರಗಣ್ಯಪದವಿಯಂ ದಯೆಗೆಯ್ದು (ಆದಿಪು. ೧೩-೬೭ವ). (ನಾ). ೨. ವೀರರಲ್ಲಿ ಶ್ರೇಷ್ಠನಾದವನು ; ವೀರಶ್ರೇಷ್ಠ ; ವೀರಾಗ್ರಣಿ. [ಸಂ.]

ವೀರಾಗ್ರಣಿ (ನಾ). = ವೀರಾಗ್ರಗಣ್ಯ ೨ : ವೀರಾವತಾರನೆನಿಸಿದ ವೀರಂ ಮಲ್ಲಪನ ತಮ್ಮನುಂ ನಂದನರುಂ ವೀರನಳಿಯಂ ನೆಗೞ್ತೆಯ ವೀರಾಗ್ರಣಿ ನಾಗದೇವನೊಱತರ ಮಲ್ಲಂ (ಅಜಿಪು. ೧೪೦). [ಸಂ.]

ವೀರಾಚಾರ (ನಾ). [ವೀಶೈ] ವೀರಶೈವರ ಆಚಾರ, — ನಡವಳಿಕೆ : ವೀರಾಚಾರ [ಪಾಠಾ.ರ್ಯ]ವಿಹಾರನಾರ್ಯನನಘಂ ಪ್ರಧ್ವಸ್ತಪಾಶಂ . . . ಶ್ರೀಗುರುಲಿಂಗ ಜಂಗಮಪದಾಂಭೋಜಾತಪೂಜೋತ್ಸವಂ ಎನಿಸಿ ಪೆಂಪುವೆತ್ತಾ ಬಾಹೂರ ಬೊಮ್ಮಿದೇವಂ (ಪ್ರಭಲಿ. ೧೨-೬೩). [ಸಂ.]

ವೀರಾಧಿವೀರ (ನಾ). = ವೀರಾಗ್ರಗಣ್ಯ ೨ : ಅವನು ವೀರಾಧಿವೀರಯೋಧನಂತೆ ಪ್ರಾಣತ್ಯಾಗಮಾಡಿದ್ದನ್ನ ಕಣ್ಣಾರೆ ಕಂಡ ಒಬ್ಬ ಹತಭಾಗ್ಯನು . . . ಅರ್ಪಿಸಿದ ಕಾಣಿಕೆ ಇದು (ವೀರಯೋ. ೧೦೧). [ಸಂ.]

ವೀರಾಯತ (ನಾ). ಸಾಹಸದ ಕೆಲಸ ; ವೀರಕೃತ್ಯ : ವೀರಪುರುಷರ ವೀರಾಯತಂಗಳಂ ಬಿತ್ತರಿಸಿ ನುಡಿವರ್ (ಚಿಕಸಿ. ೧೮). [ಸಂ.]

ವೀರಾವತಾರ (ನಾ). ೧. ಶಿವನ ಒಂದು ಅವತಾರ ; ವೀರಭದ್ರ. ೨. (ಆಲಂ) ಶೌರ್ಯವೇ ಅವತಾರವೆತ್ತಿದಂತಿರುವವನು ; ಮಹಾಪರಾಕ್ರಮಿ : ವೀರಾವತಾರನೆನಿಸಿದ ವೀರಮಲ್ಲಪನ ತಮ್ಮಂ (ಅಜಿಪು. ೧-೪೦); ವೀರಾವತಾರನಸುರನ ಬಾರಿಗೆ ಗುಱಿಯಾದುದೆನ್ನ ನಾಯ್ದಂ ನೀರೊಳ್ ನೀರಿಟಿವನಲ್ಲ ಪಂದಿಯ ಬಾರಂ ಕೊಱೆದದಱ ನೆತ್ತರೊಳ್ ನೀರಿಟಿವೆಂ (ಯಶಸ್ತಿ. ೩-೨೨೬). [ಸಂ.]

ವೀರಾವೇಶ (ನಾ). ಪರಾಕ್ರಮದಿಂದ ಉಂಟಾಗುವ ಆವೇಶ, — ಉದ್ರೇಕ ; ಶೌರ್ಯೋದ್ರೇಕ : ಕರ ನಡುಗೆ ಮೈಬಲಿಯೆ ಹುಬ್ಬುಗಳುಱ ಬಿಗಿಯೆ ಕಂಗಳಲಿ ಕೆಂಗಿಡಿ ಸುರಿಯೆ ವೀರಾವೇಶದಲಿ ಮಸಗಿದನು ಕಲಿಭೀಮ (ಕುಮಾಕ. ೧೨-೧೦); ಬಿಱುಗಾಳಿಯಂತ್ತದೆ ನುಗ್ಗಿದರ್ನುಚ್ಚುನುಱಿಯಾಗೆ ಬಱಸಿಡಿಲಂತೆ ಹಿಗ್ಗಿದರ್ಪೆಚ್ಚಿ ವೀರಾವೇಶದಿಂದ ಪಟುಭಟರಾಗಳಾಹವದೊಳು (ಜೈಮಿಭಾ. ೮-೩೨). [ಸಂ.]

ವೀರಾಸನ (ನಾ). ೧. ಬಾಣಪ್ರಯೋಗ ಮೊದಲಾದ ಸಂದರ್ಭಗಳಲ್ಲಿ ಒಂದು ಮಂಡಿಯನ್ನು ಊರಿ ಕುಳಿತುಕೊಳ್ಳುವ ಒಂದು ಭಂಗಿ ; ವೀರಮಂಡಿ. ೨. ವೀರರು ನಿಲ್ಲುವ ಸ್ಥಳ ; ಯುದ್ಧಭೂಮಿ ; ರಣರಂಗ : "ಸುಭಟಪ್ರಮೋದಕರ ಯುದ್ಧಭೂಮಿ ವೀರಾಸನಂ ಮಹಾಪ್ರತಿಭಯದಂ" (ಪಸ್ತಕೋ. ೮೨-೨). ೩. [ಯೋಗ] ಎಂಭತ್ತುನಾಲ್ಕು ಯೋಗಾಸನಗಳಲ್ಲಿ ಒಂದು ; ಯೋಗಿಗಳು ಧ್ಯಾನದ ಸಮಯದಲ್ಲಿ ಕೂರುವ ಆಸನ : ಮನವೊಲಿದವ ಸಂನ್ಯಸನದಳೆದು ವೀರಾಸನದಿ ಕುಳಿತು ನಾಸಿಕದಿ ಅನುಮಿಷದೃಷ್ಟಿಯ ನಿಲಿಸಿಯಾನಂದದಿ ಚಿನುಮಯನನು ಚಾನಿಸಿದ (ಜೀವಂಸಾಂ. ೫-೭೧) ; ಬಳಿಕೈಂಬತ್ತುನಾಲ್ಕು ಆಸನಂಗಳೊಳಗೆ ಸಿದ್ಧಾಸನ ಪದ್ಮಾಸನ ಸ್ವಸ್ತಿಕಾಸನ ವೀರಾಸನ ಗೋಮುಖಾಸನ ಸುಖಾಸನಂಗಳೇ ಜಪಕರ್ಮಕ್ಕೆ ಯೋಗ್ಯಮಾದಾಸನಗಳೆಂದು ಸುಸ್ಥಿರಾಸನನಾಗಿ (ವಿವೇಕ. ೮೮). [ಸಂ.]

ವೀರಾಳಾಪ (ನಾ). ವೀರರ ಮಾತುಕತೆ ; ಶೂರರ ಸಂಭಾಷಣೆ : ಸುಭಟಕಟಕ ವೀರಾಳಾಪಗೋಷ್ಠಿಯೊಳಂ ಅಪ್ರತಿಮಲ್ಲ ಮಲ್ಲಯುದ್ಧಾಲೋಕನದೊಳಂ . . . ದಿವಸಕ್ಷಣಂಗಳೇಕಮಾಗಿಯುಮೇಕಕ್ಷಣದಂತೆ ತನಗೆ ನಿರಂತರೋತ್ಸವಮೆನೊದವಿಸುತ್ತುಮಿರ (ಮಲ್ಲಿಪು. ೩-೨೬); ಬಿಂಕದ ಬಿರುದಂಕದ ವಿಡಾಯದ ದಡಾಳಿಯ ವೀರಾಳಾಪದ ವಿಪುಳಪ್ರತಾಪದ . . . ಹರಿಗೆಕಾಱರ ಮೊತ್ತದೊತ್ತಿನುಭಯಪಾರ್ಶ್ವದೊಳ್ (ಹಮ್ಮೀರ. ೩-೩೩ ವ). [ಸಂ. ವೀರಾಲಾಪ]

ವೀರುತ್ತು (ನಾ). ಹಬ್ಬಿರುವ ಬಳ್ಳಿ ; ಹರಡಿರುವ ಲತೆ : ಕುಸುಮಿಸಿದುವು ಮಿಕ್ಕೆಸೆವಾ ಕ್ಷುಪಕುಜಾತ ವೀರುತ್ತುಗಳುಂ (ಕಾವ್ಯಾವ. ೧೯೫) ; ಸಮುತ್ಕಂಟಕ ವಿಟಪಿಲತಾವೀರುದತ್ಯಂತ ವೃತ್ಯುತ್ಕರದುರ್ವ್ವೇಶಂ ಮನಕ್ಕದ್ಭುತರಸದೊದವಂ ತಂದುದಂದೊಂದಗೇಂದ್ರಂ (ಚಂದ್ರಪ್ರ. ೫-೬೬). [ಸಂ. ವೀರುಧ್]

ವೀರುಧ (ನಾ). = ವೀರುತ್ತು : "ವಲ್ಲಿ ವೀರುಧಾಖ್ಯಂಗಳೆಲ್ಲಮವೆ ಗುಲ್ಮಂಗಳ್" (ಪಸ್ತಕೋ. ೩೦-೩) ; ಪುಲಿಕರಡಿಸಿಂಹಶಾರ್ದೂಲಂಗಳೆಲ್ಲದಿಹ ಪೂಲಬ ಮೃಗ ಪಕ್ಷಿ ತರುಗುಲ್ಮವೀರುಧಂಗಳಿಂ ಕಲಿತಮಾಗದ ಭೂಮಿಯಂ ಕಂಡು ಪ್ಲವಗರತ್ಯಾಶ್ಚರ್ಯಗೊಳುತ (ಪಂಕಾರಾ. ೪-೧೭-೩೪) ; ಚರಕ, ಸುಶ್ರುತಗಳಲ್ಲಿ ಸಸ್ಯವರ್ಗವನ್ನು ಹೀಗೆ ವಿಭಾಗಿಸಿದ್ದಾರೆ (i) ಹೂವಿಲ್ಲದೆ ಹಣ್ಣು ಬಿಡುವ ಗಿಡಗಳು ಅಥವಾ ವನಸ್ಪತಿಗಳು . . . (iv) ಹರಡುವ ಕಾಂಡಗಳುಳ್ಳ ಇತರ ಮೂಲಿಕೆಗಳು ಅಥವಾ ವೀರುಧಗಳು (ತತ್ವಪ್ರಾ. ೫೦೭). [ಸಂ. ವೀರುಧ್]

ವೀರೇಶ್ವರ (ನಾ). ೧. ಶ್ರೇಷ್ಠನಾದ ಪರಾಕ್ರಮಿ. ೨. ಈಶ್ವರ ; ಶಿವ : ತನಯನಸುವಂ ಕೊಟ್ಟಡಿಂದರ್ಚನೆಯ ಮಾಡುವೆನಭವಗೆನ್ನದೆ ನಿನಗೆ ವೀರೇಶ್ವರ ಸುತನನೀ ಬಾರಿ ಕಾಯಿದಡೆ ಮನವೊಲಿದು ಪರ್ಬಂಗಳಂ ದಿನದಿನಕೆ ಮಾಡಿಹನೆನ್ನದೇ ನಂದನನ ಜೀವವನೆತ್ತಿ ಗುರುವೇಯೆನ್ನದರ್ಥಿಸದೆ (ಬಸಪು. ೪೮-೧೬). ೩. ವೀರಭದ್ರ : ಕಡೆಗಾಲದೊಳು ಜಗವ ಮೊಗೆದು ದಹಿಸುವ ಮೃಡನ ನಡುಗಣ್ಣ ಬೆಂಕಿಯಿಂದೊಗೆದು ನೆಗೆದೆಯ್ದೆ ಘುಡುಘುಡಿಸಿ ವೀರೇಶ್ವರಂ ನೆರೆದ ದೇವರ ಹಿಂಡನಂಡಲೆದು . . . ದಕ್ಷಂ ಪ್ರತಿಷ್ಠಿಸಿದ ದಕ್ಷೇಶ್ವರನನೀಕ್ಷಿಸಿದನು (ಹಚಕಾ. ೧೦-೪೪). [ಸಂ.]

ವೀರೋಚಿತ (ಗು). ೧. ವೀರನಿಗೆ ಉಚಿತವಾದ ; ಪರಾಕ್ರಮಿಗೆ ತಕ್ಕುದಾದ. (ನಾ). ೨. ವೀರನಿಗೆ ಉಚಿತವಾದುದು ; ಪರಾಕ್ರಮಿಗೆ ತಕ್ಕುದಾದುದು : ಸ್ವಂತ ಶಕ್ತಿಸಾಮರ್ಥ್ಯಗಳಿಂದಲೇ ಅವನು ಸೆನೆಟರ್ ಪದವಿ ಗಳಿಸಿದ್ದನು . . . ವೀರೋಚಿತವಾದ ಗೌರವ ಸನ್ಮಾನಗಳಿಗೂ ಯೋಗ್ಯನೆಂದೂ ತಿಳಿದುಕೊಂಡಿದ್ದನು (ಪುನರು. ೩೪೦). [ಸಂ.]

ವೀರ್ಜಡೆ (ನಾ). ಒಂದು ಬಗೆಯ ರಣವಾದ್ಯ (?) : ಸಿಂಹನಿಂದುಲಿವ ಸುಡೆಕೆ ವೀರ್ಜಡೆಯು ಶಂಖ ಸುಚಕ್ರವು ರಾಜರಾಜನಿಂದಲಿ ಪಡೆದಾತ ಘಂಟೆಯ ನರೇಶ್ವರ ಭೀಕರ ಶತ್ರುಸಂಹರಾ (ಬೀಳವಂ. ೧-೧೫೬). [?]

ವೀರ್ತಂದಕೊಲ್ಲಿ (ನಾ). ಒಂದು ಪ್ರದೇಶದ ಹೆಸರು (?) : ತಸ್ಯ ಸೀಮಾನ್ತರಾಣಿ ಪೂರ್ವ್ವಸ್ಯಾನ್ದಿಸಿ (ಶ) ಕಮ್ಮಾಕ್ಷಿವಾಯ ಅಲ್ಲಂ ವೀರ್ತ್ತಂದಕೊಲ್ಲಿಯ ಪಳಂಪೆಯಾಲೆ ತುಟಿಲ್ಲಾಲಾ ಮೂಟಾಯೊಟ್ಟೆ (ಇಅ. XVIII. ೩೬೬-೨೧ ; ೫ನೆಯ ಶತ). [? + ಕೊಲ್ಲಿ]

ವೀರ್ಯ (ನಾ). ೧. ಕಲಿತನ ; ಶೌರ್ಯ ; ಪರಾಕ್ರಮ : ಭಯವಿರಹಿತ ವೀರ್ಯೋದಾರ್ಯಗಂಭೀರಕಾರ್ಯಾಶ್ರಯವಿಶದಗುಣ ಶ್ರೀನಾಯಕೋತ್ಕರ್ಷವೇದ್ಯಂ (ಕವಿರಾ. ೩-೨೧೩) ; ದೇಹದಲಿ ಮನದಲಿ ಜ್ಞಾನದಲಿ ಗುಣದಲಿ ವೀರ್ಯದಲಿ ಸಹ್ಯಾದ್ರಿಶೃಂಗಸಂಕುಲದಂತೆ ನಿಮಿರೆಳ್ದು ಮೈತ್ರಿಯಿಂ ಸ್ಪರ್ಧಿಸಿದರೊಬ್ಬರೊಬ್ಬರ ಕೂಡೆ ನಾಲ್ವರುಂ (ಶ್ರೀರಾಮಾ. ೨೫-೬೭೯). ೨. ಬಲ ; ಸಾಮರ್ಥ್ಯ : ವೀರ್ಯಮನಂತ ವೀರ್ಯಮಱಿವಪ್ರತಿಮಂ ಸುಖಮಾತ್ಮಭಾವಿ ಗಾಂಭೀರ್ಯಮಮಾನುಷಂ ನಿನಗೆ ದೇವರ ದೇವ (ಶಾಂತಿಪು. ೧೦-೧೦೦) ; ಒಂದಿದ ಧೈರ್ಯವೊಂದಿದಳವೊಂದಿದ ನಿರ್ಮಳಧರ್ಮಭಾವಮೊಳ್ಪೊಂದಿದ ವೀರ್ಯಮೊಂದಿದಱಿತಂ ನೆಱೆ ತನ್ನೊಡಮೊಂದಿ ನಿಲ್ವುದುಂ (ಸುಕುಮಾ. ೧೨-೪೧). ೩. ಕೆಚ್ಚು ; ಧೈರ್ಯ. ೪. ಪುರುಷತ್ವ ; ಪುಂಸತ್ವ. ೫. ಶುಕ್ರ ; ರೇತಸ್ಸು : ಮಧುಕ ಒಪ್ಪಲ ಕಾಳಿಅವಿನ ಹಾಲಲ್ಲಿ ಅರೆದು ಕುಡಿಯ ವೀರ್ಯವಕ್ಕುಂ (ವಿವೃವಿ. ೯೧). ೬. ಕಾಂತಿ ; ತೇಜಸ್ಸು. ೭. (ಔಷಧಿಗಳ) ಗುಣ ; ಪ್ರಭಾವ ; ಪರಿಣಾಮ. ೮. ಸಸ್ಯಗಳ ಬೀಜ, — ಕಾಳು. ೯. ವಿಷ ; ಗರಳ. ೧೦. ಚಿನ್ನ ; ಹಿರಣ್ಯ. ೧೧. ಘನತೆ ; ಗೌರವ ; ಗಣ್ಯತೆ. ೧೨. [ವಿಶಿಷ್ಟಾ] ಭಗವಂತನ ಆರುಗುಣಗಳಲ್ಲಿ ಒಂದು : ಶುದ್ಧಸತ್ವವೆಂಬುದು . . . ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸೆಂಬ ಭಗವಂತನ ಆರು ಗುಣಗಳಿಗೂ ಪ್ರಕಾಶವಾಗಿರುವುದರಿಂದ ಷಾಡ್ಗುಣ್ಯಮಯವು (ಹಿಂದಶಾ. ೨೩೮). ೧೩. [ಜೈನ] "ಆಸ್ರವ ವಿಶೇಷದ್ರವ್ಯಗಳ ಸ್ವಶಕ್ತಿವಿಶೇಷ" (ಜೈನಕೋ. ೨೩೬) : ಬಟಿಯಂ ಕ್ಷಾಯಿಕ ಸಮ್ಯಕ್ತ್ವಾನಂತಜ್ಞಾನ ದರ್ಶನವೀರ್ಯ ಸೂಕ್ಷ್ಮವಗಾಹಾಗುರು ಲಘುತಾವ್ಯಾಬಾಧಂಗಳೆಂಬ ಗುಣಮೆಂಟುಂ ಬಂದು ತನ್ನೊಳ್ ಪಣಿದಿರ (ಆದಿಪು. ೧೬-೪೯ ವ). [ಸಂ.]

ವೀರ್ಯಪ್ರವೃತ್ತಿ (ನಾ). ಪರಾಕ್ರಮದಿಂದ ಕೂಡಿದ ನಡವಳಿಕೆ ; ಧೀರ ಸ್ವಭಾವ : ಸಾಂಪರಾಯಕಾಯಮುಂ ವೀರ್ಯಪ್ರವೃತ್ತಿಯುಮಿಂದ್ರಿಯಕಷಾಯ ಯೋಗ[ಮು] ಮಿಲ್ಲದುದು ಪುಣ್ಯಾಸ್ರವಮಕ್ಕುಂ (ಶಾಂತಿಪು. ೧೨-೫ ವ). [ಸಂ.]

ವೀರ್ಯವತಿ (ನಾ). ೧. ಸಂತಾನೋತ್ಪತ್ತಿಯ ಶಕ್ತಿಯುಳ್ಳವಳು. ೨. ಒಂದು ಬಗೆಯ ಸಸ್ಯ : "ವೀರ್ಯವತಿ ಚುಂಚೆನಿಕ್ಕುಂ" (ಮಂಗರಾ. ೪೪-೪೭).

[ಸಂ. ವೀರ್ಯವತೀ]

ವೀರ್ಯವತ್ತು (ನಾ). ಕಸುವುಳ್ಳುದು ; ಸತ್ತ್ವಯುತವಾದುದು : ಶರೀರಶೋಧನೆಗಾಗಿ ಉಪಯೋಗವಾಗುವ ವಮನ ಮತ್ತು ವಿರೇಚನದ್ರವ್ಯಗಳನ್ನು ವಸಂತಋತುವಿನ ಕೊನೆಯಲ್ಲಿ ಕೂಡಿಟ್ಟುಕೊಳ್ಳಬೇಕು. ಈ ಕಾಲಗಳಲ್ಲಿ ಅವು ಪೂರ್ಣವೀರ್ಯವತ್ತಾಗಿರುವುವು (ಸಕ್ಷ. xii. ಪ್ರಸ್ತಾವನೆ). [ಸಂ. ವೀರ್ಯವತ್]

ವೀರ್ಯವರ್ಧನ (ನಾ). ಪುಂಸತ್ವದ ವೃದ್ಧಿ ; ಇಂದ್ರಿಯಬಲದ ಬೆಳವಣಿಗೆ : ಜವ ಕಳಮಂ ಮಾಷಂ ಗೋದುವೆ ಪಿಪ್ಪಲಿಯೆಂಬಿವಿನಿತುಮಂ ಗೋಘೃತದಿಂದ ಪುಗಡಿಸಿ ತಿಂದು ಸಿತದುಗ್ಧವನಿರುಳೊಳ್ ಕುಡಿಯೆ ವೀರ್ಯವರ್ಧನಮಕ್ಕುಂ (ಲೋಕೋಪ. ೯-೪೭) ; ಈಶ್ವರಿ . . . ಅದರ ಎಲೆಯಂ ಒಣಗಲಿಕ್ಕಿ ಬೇವಹರಂ ಮಾಡಿ ಲಾಭ XXX ಹಸಿಯ ಹಾಲೊಪ್ಪು ಕುಡಿಯೆ ವೀರ್ಯವರ್ಧನಮಕ್ಕುಂ (ಎವೃವಿ. ೨). [ಸಂ.]

ವೀರ್ಯವೃದ್ಧಿ (ನಾ). = ವೀರ್ಯವರ್ಧನ : ನವಣೆಯ ಪಿಟ್ಟಂ ನೆಲದಾಱುವ ನೊಡವೊಯ್ದಟ್ಟು ಘೃತಸಮೇತಂ ಮೇಣ್ ದುಗ್ಧವಿಮಿಶ್ರಂ ಸೇವಿಸೆ ವೀರ್ಯವೃದ್ಧಿಯುಂ ಮೆಯ್ಯ ಪುಷ್ಟಿಯುಂ ಸವನಿಸುಗುಂ (ಲೋಕೋಪ. ೯-೪೫) ; ನಸುಗುನ್ನಿ ಬಿತ್ತುಗಳಿಗೆಸವ ಸಮಮುದ್ದನಿಟ್ಟೆಸವ ತೆಂಗಾಯ ನೀರಿಂ ಚಾರಿಸಿ . . . ಮೆಲೆ ವೀರ್ಯವೃದ್ಧಿ (ಜಪವ. ೧೩-೪೫). [ಸಂ.]

ವೀರ್ಯಸ್ಖಲನ (ನಾ). ಪುರುಷನಿಗೆ ಸಂಭೋಗಕಾಲವನ್ನುಳಿದು ಬೇರೆ ಸಮಯದಲ್ಲಿ ರೇತಸ್ಸು ವಿಸರ್ಜನೆಯಾಗುವಿಕೆ ; ವೀರ್ಯಸ್ರಾವ : ವೀರ್ಯಸ್ಖಲನದ ವೇಳೆಯಲ್ಲಿ ಎದೆಯೂ ಮತ್ತು ನಾಡಿಗಳೂ ಸಾಮಾನ್ಯಸ್ಥಿತಿಗಿಂತ ಹೆಚ್ಚು ಒತ್ತರದಿಂದ ಹಾರುವುದು (ಬ್ರಹ್ಮಜೀ. ೨೩). [ಸಂ.]

ವೀರ್ಯಸ್ತಂಭನ (ನಾ). ಪುರುಷನಿಗೆ ಸಂಭೋಗಕಾಲದಲ್ಲಿ ಹೆಚ್ಚು ಹೊತ್ತು ರೇತಸ್ಸು ವಿಸರ್ಜನೆಯಾಗದಿರುವಿಕೆ, — ವೀರ್ಯವುಸ್ಖಲನವಾಗದಿರುವಿಕೆ : ವೀರ್ಯಸ್ತಂಭನಕ್ಕೆ:- ಆದಿತ್ಯವಾರ ಹೊಸ ಹಂಚಿಕೆ ಹೂವಿನ ಗುಂಡಿಗೆಯ ರಕ್ತವ ಬಿಟ್ಟು ಪಚ್ಚಕರ್ಪೂರರಸ ಮಲ್ಲಿಗೆಸೊಪ್ಪಿನ ರಸ . . . ಗುಟಿಕೆ ಮಾಡಿ ಒಂದಿಷ್ಟು ಹಾಲಲ್ಲಿ ಸೇವಿಸುವುದು (ವಿವೃವಿ. ೨೧೧). [ಸಂ.]

ವೀರ್ಯಾಂತರಾಯ (ನಾ). [ಜೈನ] ಐದು ಬಗೆಯ ಅಂತರಾಯಕರ್ಮ ಪ್ರಕೃತಿಗಳಲ್ಲಿ ಒಂದು ; ಮುಮುಕ್ಷುವಿಗೆ ಬರುವ ಒಂದು ಬಗೆಯ ವಿಘ್ನ ; ಇಚ್ಛೆಯಿದ್ದರೂ ಆತ್ಮಶಕ್ತಿಯ ಪ್ರಕಟಣೆಗೆ ಎಡೆಗೊಡದ ಕರ್ಮ : ಚಕ್ಷುರಚಕ್ಷುರವಧಿ ಕೇವಲದರ್ಶನಾವರಣ ಚತುಷ್ಕಮುಮಂ ದಾನಲಾಭ ಭೋಗೋಪ ಭೋಗವೀರ್ಯಾಂತರಾಯಪಂಚಕಮುಮನೊರ್ಮೊದಲೆ ಕಿಡಿಸಿ (ಆದಿಪು. ೧೦-೧೪ ವ).

[ಸಂ.]

ವೀಲು 'ವಿಲ್ಲು' ನೋ.

ವೀವಧ (ನಾ). ೧. ಭಾರವನ್ನು ಹೊರಲು ಉಪಯೋಗಿಸುವ ನೊಗ, ಅಡ್ಡೆ,ಕಂಬಿ, ಕಾವಡಿ ಮುಂತಾದುವು : "ವಿವಧಂ ವೀವಧಮನಿಕುಂ" (ಮಹಾಕೋ. ೫೧-೩೪). ೨. ಹೊರೆ ; ಭಾರ : "ವಿವಧಃ, ವೀವಧಃ, ಭಾರಃ, ಪರ್ಯಾಹಾರಃ — ಈ ೪ ತಲೆಹೊಱೆ" (ಹಲಾಯು. ೧೨೫-೭೩). ೩. ಹೊರಗಿನಿಂದ ಊರೊಳಕ್ಕೆ ಧಾನ್ಯ ಮುಂತಾದುವು ಬರುವಿಕೆ. ೪. ದಾರಿ ; ಮಾರ್ಗ : "ವಿವಧಃ, ವೀವಧಃ — ೨ ಹೊರಗಿನಿಂದ ಊರೊಳಕ್ಕೆ ಧಾನ್ಯಾದಿಗಳು ಬರುವಿಕೆ, ಪುರೋಕ್ತಿಗೆ ಬಂದಿರುವ ಅನಾಜು, ಕಾವಡಿ, ದಾರಿ" (ಸಿದ್ಧಾಂಶಿ. ೩೯೭). ೫. ಧಾನ್ಯಗಳ ಸಂಗ್ರಹ. [ಸಂ.]

ವೀಸ, ವೀಸೆ (ನಾ). ೧. ಒಂದು ಹಣದ ಇಪ್ಪತ್ತನೆಯ ಒಂದು ($\frac{1}{20}$) ಭಾಗದ ಬೆಲೆಯ ಒಂದು ನಾಣ್ಯ : ತಿಂಗಳಿಂಗೆ ಪತ್ತುವೀಸಮಂ ಕುಡುತುಂ ಬರಿಸಕ್ಕೆಯ್ದುಸುತ್ತುಂ ಬರ್ಪರು (ಸೌಇ. XI-ii, ೧೮೧-೧೦ ; 1094) ; ವಾಸಮದ್ಯೆದನೆ ಹಾಗಂ ವೀಸಮದಿಪ್ಪತ್ತಱಿಂದೆ ಪಣಮನಿಸಿರ್ಕುಂ (ವೃಪಹಾ. ೫-೩೦). ೨. ಒಂದು ಹಣದ ಹದಿನಾರನೆಯ ಒಂದು ($\frac{1}{16}$) ಭಾಗದ ಬೆಲೆಯ ಒಂದು ನಾಣ್ಯ ; ನಾಲ್ಕು ಕಾಣಿ : ಒಂದು ವೀಸವನ [ಜಾಕಾಂ. ವೀಸನ]ಪ್ಪೊಡಮಾರ್ಗಮಿತ್ತಱಿಯದೆ ಚಾಗಕ್ಕೆ ಮುಯ್ಯಾಂತು[ಂ] ತಮ್ಮ ನಗುವರನಱಿಯದೆಣ್ಬರೇಱಿದ ಕಟ್ಟೆಯಂತೆ ದೆಸೆದೆಸೆಗೆ ಬೆಸೆವ ಪಚ್ಚಪಸಿಯೆಗ್ಗರುಮಂ ಕಂಡು (ಪಂಪಭಾ. ೪-೯೪ ವ); ಕಾಸಿಗೆ ವೀಸವ ಬಡ್ಡಿ ಗಳಿಸಿಕೊಂಡು ಶೇಷಗಿರಿಯ ಮೇಲೆ ವಾಸವಾಗಿದ್ದನೆ (ಪುರಂದ. ೨-೩೨-೧); ಆಸೆಯನು ಅಱಿದಿತ್ತ ವೀಸವದು ಸವಲಕ್ಷ ಆಸೆ ತಾ ತೀರ್ದ ಬಳಿಕಿತ್ತ ಲಕ್ಷವದು ವೀಸದಿಂ ಕಷ್ಟ (ಸರ್ವಜ್ಞ. ೬೪೧). ೩. ಯಾವುದೇ ದ್ರವ್ಯದ ಹದಿನಾರನೆಯ ಒಂದು ($\frac{1}{16}$)ಭಾಗ : (ರೃಸ್ಗೆ. II. ೫೬೪). ೪. ತೂಕದ ಒಂದು ಅಳತೆ ; ಮಣದ ಎಂಟನೆಯ ಒಂದು ($\frac{1}{8}$) ಭಾಗ ; ಐದುಸೇರು ; ಪಂಚೇರು : ಮುವತ್ತಮೂವೀಸಯುಮನ್ ವಿಟ್ಟು ಸರ್ವ್ವಪರಿಹಾರಂ ಕೊಟಾರ್ (ಎಕ. VI. ಕೊಪ್ಪ. ೪೧-೧೪;ಸು. 1090) ; ದೇವಗಾಣದೊಕ್ಕಲಲ್ಲಿ ದೇವಸವಳವೆಂಕೆ ಸೊಳಸವೊಂದು ಚೈತ್ರಪವಿತ್ರಂಗಳೊಳು ಗಾಣದಲ್ಲಿ ವೀಸವೈದು . . . ನಡವ ಮನುಷ್ಯರಾಹಾರ ದಾನಕ್ಕೆ ತಿಂಗಳಿಂಗೊಕ್ಕಲ್ಗಳೊಳ್ ಜೋಳ ಕೊಳಗ ಒಂದು (ಎಇ. XX. ೧೧೭-೫೦; 1167). ೫. ಒಂದು ಅಳತೆಯ ಪ್ರಮಾಣ ;

ಪಡಿಯ ಹದಿನಾರನೆಯ ಒಂದು ($\frac{1}{16}$) ಭಾಗದ ಅಳತೆ : ೧೬ ವೀಸಕ್ಕೆ — ೧ ಪಡಿ (ಭೂಮಿಅ. ೧). ೬. ಪಾಲು ; ಭಾಗ ; ಅಂಶ : ನೀನು ಇನ್ನೂ ಜೀವನಪಥದಲ್ಲಿ ಕಾಲಿಡುತ್ತಿ! ನಾನು ಮುಕ್ಕಾಲು ಮೂರು ವೀಸ ದಾರಿಯನ್ನು ಸಾಗಿಸಿದಂತಿದೆ! (ನಿಷ್ಕಾಮ. ೨೪). ೭. (ಆಲಂ) ಅತ್ಯಲ್ಪ ಹಣ ; ಕನಿಷ್ಠಬೆಲೆಯ ಕಾಸು : ಕೂಸಿಂಗೆ ಕುತ್ತವಾದೊಡೆ ದೇಶದ ಬಳರಿಯರ್ಗೆ ಕುಡುವರೊಳ್ಳರ್ಚನೆಯಂ ಶಾಸನದೇವತೆಗೆಂದೊಡೆ ವೀಸದ ಪುಷ್ಪಮುಮನೀಯ ರಜಗುಲಿಪೆಂಡಿರ್ (ಸಮಪ. ೫-೧೦೦); ದಾಸಿಯನು ಹೋಗುವಗೆ ವೀಸ ಹತ್ತದು ಕೈಗೆ ಹೇಸಿ ತೊಲಗುವಳು ಜಯಲಕ್ಷ್ಮಿ ಆಯುಷ್ಯ ನಾಶವಾಗುವುದು (ಸರ್ವಜ್ಞ. ೧೮೧೬). ೮. ವೀಸದಷ್ಟು ; ಸ್ವಲ್ಪಪ್ರಮಾಣ ; ಅಲ್ಪಪ್ರಮಾಣ : ವೀಸಂ ದೋಸಮಿಲ್ಲಂ, ಮಾರ್ನುಡಿಯದಿರ್, ಪೋಪೋಗೆಂದುಸಿರ್ದಂ (ರಾಮಾಶ್ವ. ೨೬-೧೫). ೯. ಒಂದುಬಗೆಯ ತೆರಿಗೆ (?) : 'ಮೂಲೆವೀಸ' ಪರಾ. ವೀಸೆ : ೨. ಪೊಂಗೇಟ್ಟುಂಡುಗಮಾಗ ಮನಂಗೊಳೆ ಹಣವಡ್ಡ ವೀಸ ಕಾಣಿಗಮೇನುಂಬಂಗೆ ತಿಳಿವಂತೆ ಪೇಟ್ಟಂ ಪಿಂಗದೆ ಗಣಕಪ್ರಧಾನನೆನಿಪುದು ಪಿರಿದೇ (ವ್ಯವಹಾ. ೧೫-೨೩). ೪. ಈ ಕಾಲದಲ್ಲಿ ಚವನಪ್ರಾಶ ಎಂಬ ಔಷಧಿ ಕೆಮ್ಮಲು ಮುಂತಾದ ವ್ಯಾಧಿಗಳನ್ನು ಗುಣಪಡಿಸುವುದೇ ಹೊರತು, ಅದನ್ನು ವೀಸೆವೀಸೆಯಾಗಿ ನುಂಗಿದವರಿಗೂ ಸಹ ವಯಸ್ಸನ್ನು ಕಡಿಮೆಮಾಡಿ ಯವ್ವನವನ್ನು ಕೊಟ್ಟಿತೆಂಬುದನ್ನು ಕಂಡುದೂ ಇಲ್ಲ, ಕೇಳಿದುದೂ ಇಲ್ಲ (ಕೂನಪ್ಪ. ೧೬೦). ೧೦. ತೂಕದ ಒಂದು ಪ್ರಮಾಣ (?): ಹಾಗವ ಹಾಗದಿ ಗುಣಿಸಲು ಬೇಗಂ ವೀಸೆಗಳವಕ್ಕು ವೀಸವೀಸಮನಂತಾ ವೀಸದಿ ಗುಣಿಸಲು ಗಿಡ್ಡಗಾಣೆಯು (ಕ್ಷೇತ್ರಗ. ೨೯-೨). [< ಪ್ರಾ. ವೀಸ./ ಸಂ. ವಿಂಶತಿ./ ತಮಿ. ವೀಚಮ್; ಮಲ. ವೀಶಮ್ ; ತುಳು. ವೀಸ, ವೀಸು ; ತೆಲು. ವೀಸಮು]

ವೀಸಕಂಭ (ನಾ). ತೂಕ ಅಥವಾ ಅಳತೆಯ ಪ್ರಮಾಣ : ಅರೆಯಿಂದ ಬೇಳೆಯ ಗುಣಿಸಲು ಅದು ವೀಸಕಂಭವಕ್ಕುಂ (ಕ್ಷೇತ್ರಗ. ೬-೪). [ವೀಸ + ಕಂಭ]

ವೀಸಪಾಲು (ನಾ). ೧. ಯಾವುದೇ ದ್ರವ್ಯ ಅಥವಾ ಸಂಖ್ಯೆಯ ಹದಿನಾರನೆಯ ಒಂದು($\frac{1}{16}$) ಅಂಶ,— ಭಾಗ : "ಕಲಾಷೋಡಶೋಭಾಗಃ— ಹದಿನಾರನೇ ಅಂಶ, ಅಂದರೆ ಚಂದ್ರನಲ್ಲಿ ವೀಸಪಾಲು" (ಸಿದ್ಧಾಂತಿ. ೨೯). ೨. (ಆಲಂ) ಸ್ವಲ್ಪಭಾಗ ; ಅತ್ಯಲ್ಪಅಂಶ : ಕ್ರೂರಕರ್ಮನಾದಾ ದುಷ್ಟಬುದ್ಧಿಗೆ ಆ ಮಾತುಗಳನ್ನು ಕೇಳಿ ವೀಸ ಪಾಲಾದರೂ ದಯೆಯುಂಟಾಗಲಿಲ್ಲ (ಕವಿ. ೧೫). [ವೀಸ + ಪಾಲ್ಲು$_2$ (< ಪಾಲ್$_2$)]

ವೀಸಬಡ್ಡಿ (ನಾ). ೧. ಹದಿನಾರನೆಯ ಒಂದು ($\frac{1}{16}$) ಭಾಗದಷ್ಟು ಬಡ್ಡಿ : ಕುಮಾರಸ್ವಾಮಿಗಳ ಕೈಯಲು ಹೊಂಗೆ ತಿಂಗಳಿಂಗೆ ಹಾಗಂ ವೀಸಬಡ್ಡಿಯಲ್ ವರ್ಷಂಪ್ರತಿಯ ಸಿದ್ಧಾಯವಿಳಿದುಬಹಂತಾಗಿ (ಎಕ. VI. ಕಡೂರು. ೧೨-೫೯ : 1253). ೨. (ಆಲಂ) ಅಲಕ್ಷಿಸಬಹುದಾದಷ್ಟು ಪ್ರಮಾಣ ; ತೀರ ಅಲ್ಪ ; ಅತಿಸ್ವಲ್ಪ : ಗಾಸಿವಡೆಯದೆ ಕಡಲನಿಂಗಿಸಿ ಭೂಸಮವಗೈದಸುರಪುರವನು ವೀಸಬಡ್ಡಿಯೊಳೀಗಳಸುವನು ಕೊಳ್ಳೆನಾ ಖಳರ (ರಾಮಾಸಂ. ೬-೧-೮).

ವೀಸಬಡ್ಡಿಯಲಸುವ ಕೊಳ್ = (ಆಲಂ) ಅಲ್ಪಶ್ರಮದಿಂದ ಜೀವವನ್ನು ತೆಗೆ ; ಸುಲಭವಾಗಿ ಕೊಲ್ಲು : ಸಿಂಹದ ಕೂಸ ನರಿ ಕೆಣಕುವವೊಲೀ ಕುರುಕೀಚ ಕಾದಿಗಳು ಗಾಸಿಯಾದರು ಕೆಣಕಿ ನಾಯ್ಗಳ ವೀಸಬಡ್ಡಿಯಲಸುವ ಕೊಂಬೆನು (ಕುವ್ವಾವಿ. ೩-೭೦). [ವೀಸ + ಬಡ್ಡಿ$_2$]

ವೀಸವ (ನಾ). = ವೀಸ ೧ : ಅಗ್ರಹಾರಂ ನಿಡುಗುಂದಿಯ ಮಹಾಜನಂ ನಾಲ್ಕೂವ್ವರುಂ ಪೂರ್ವ್ವಸ್ಥಿತಿಯಿಂ ನಡೆವ ಪಾರಿಖಾಯದ ಹೊಂಗೆ ಮೂಱುವರೆ ವೀಸವಮಂ ಪರಸ್ಥಾನದ ಮಹಾಜನದಭ್ಯಾಗತಪೂಜೆಗೆ ಬಿಟ್ಟರು (ಸೌಇ. XI-i, ೧೧೭-೫ ; 1076). [< ವೀಸ]

ವೀಸಾ (ನಾ). "ರಹದಾರಿ ಮೊದಲಾದುವುಗಳನ್ನು ಪರೀಕ್ಷಿಸಿ ಅವುಗಳ ಮೇಲೆ 'ಸರಿಯಾಗಿದೆ' ಎಂದು ಬರೆದ ಷರಾ" (Visa. ಇಂಕಿ): ಪಾಸ್‌ಪೋರ್ಟಿನ ಮೇಲೆ ವೀಸಾ ಬರೆಸಿಕೊಳ್ಳುವ ಕೆಲಸ (ಅಪೂಪ. ೮). [← ಇಂ. Visa]

ವೀಸೆ 'ವೀಸ' ನೋ.

ವೀಸೋತ್ತರ (ನಾ). ಒಬ್ಬಾತನ ಹೆಸರು : ಗಜೇಂದ್ರಂ ತುರಂಗಂ ನಡೆಮಾಡಂ ದಣ್ಣನಾಥೋ[ತ್ರ]ಮ ಪದವಿ ಮಹಾತೂರ್ಯ್ಯಮೆಂಬಂತಿವಂತುಂ ಪಡೆದಂ ಚೆಲ್ವಿಂದೆ ವೀಸೋತ್ತರ ವಿದಿತ ಧರಾದೇವನಿಷ್ಟಪ್ರಭಾವ (ಎಇ. XIII, ೩೩೦-೧೪ ; 929). [?]

ವೀಸೋತ್ತರದೀಕ್ಷಿತ (ನಾ). ಒಬ್ಬಾತನ ಹೆಸರು : ಶತಪತ್ರಭವಾನ್ವಯ ಭೂನುತರೆನಿಸಿದ ರೇವದಾಸ ವೀಸೋತ್ತರದೀಕ್ಷಿತರ ಗುಣಂಗಳನೆಣಿಸುವ ಮತಿಮನ್ತರನಾನದೆಲ್ಲಿಯುಂ [ಕಣ್ಣ]ಜಿಯೆ (ಎಇ. XIII, ೩೩೦-೧೨ ; 929).

[ವೀಸೋತ್ತರ + ದೀಕ್ಷಿತ]

ವೀಸೋತ್ತರಭಟ್ಟ (ನಾ). ಒಬ್ಬಾತನ ಹೆಸರು : ಧರಣೀನಾಥಪ್ರಸಾದಂ ಸಮನಿಸಿರೆ ಮಹಾಯಜ್ಞಮಂ ಮಾಡಿ . . . ವೀಸೋತ್ತರಭಟ್ಟಂ ವಿಪ್ರವಂಶಪ್ರಬಳರುಚಿಮಯಾನರ್ಗ್ಘ್ಯ ಮಾಣಿಕ್ಯಪಟ್ಟಂ (ಎಇ. XIII, ೩೩೦-೧೮; 929). [ವೀಸೋತ್ತರ + ಭಟ್ಟ]

ವೀಸೋತ್ತರಸೋಮಯಾಜಿ (ನಾ). ಒಬ್ಬಾತನ ಹೆಸರು : ರೇವದಾಸ ವೀಸೋತ್ತರ ಸೋಮಯಾಜಿಗಳಿನೂರ್ಜ್ಜಿತಮಾಯ್ತು ಧರಾಮರಾನ್ವಯಂ (ಎಇ. XIII, ೩೩೦-೧೬ ; 929).

[ವೀಸೋತ್ತರ + ಸೋಮಯಾಜಿ]

ವೀಳ್ 'ಬೀಟ್$_1$' ನೋ.

ವೀಳಯ 'ವೀಳೆಯ' ನೋ.

ವೀಳಯದೆಲೆ 'ವೀಳೆಯ' ಪರಾ.

ವೀಳಿಗೆ (ನಾ). ೧. ವೀಳೆಯದೆಲೆ ಮತ್ತು ಅದರ ಬಳ್ಳಿ ; ನಾಗವಲ್ಲಿ : ಪಳಿಕಂ ವೇಳಿಗೆ, ವೀಳಿಗೆ, ಗುಳಿಗೆ, ವರಾಳಂ, ರಗಳೆ, ಪುಳಂ — ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುಳಂಗಳಾದುವು (ಶಮರ. ೨೨ ವೃತ್ತಿ). ೨. ಸಿದ್ಧಪಡಿಸಿದ ವೀಳೆಯ ; ತಾಂಬೂಲ : ಪೆಗಲಂ ತಟ್ಟೈಸಿ ತೋಳಿಂ ತೊಡೆಗೆ ಗುರುನಿತಂಬಾಗ್ರಮಂ ಸಾರ್ಚಿ ಮುಂ ವೀಳಿಗೆಯಂ ಬಾಯ್ಗೊತ್ತು (ಲೀಲಾವ. ೧೩-೩೨). [< ಸಂ. ವೀಟಿಕಾ]

ವೀಳಿಗೆಗೊಡು (ಕ್ರಿ). ಸಿದ್ಧಪಡಿಸಿದ ಎಲೆಯಡಿಕೆಯನ್ನು ಕೊಡು,— ತಾಂಬೂಲವನ್ನು ನೀಡು : ಒರ್ಬಳಿನ್ನಂ ತನ್ನ ಗೃಹಕೆ ಕೊಂಡೊಯ್ದು . . . ದಿವ್ಯಾನ್ನಪಾನಂಗಳಿಂ ತಣಿಯಿಸಿ ಸರ್ಬಸಂತಸದೆ ವೀಳಿಗೆಗೊಟ್ಟು ಬಳಿಕೊಲ್ದು ಕರ್ಬುವಿಲ್ಲನ ಕೇಳಿಯಿಂದೆಯನುರಾಗಮಂ ಪರ್ಬಿಸೆ . . . ಸುಖದಿನಿರ್ದಂ (ಪಾಸೋವು. ೫-೬೫). [ವೀಳಿಗೆ + ಕೊಡು$_1$]

ವೀಳೆದೆಲೆ 'ವೀಳೆಯ' ಪರಾ.

ವೀಳೆಯ, ಬಿಳೆಯ, ವಿಳ್ಳೆ, ವೀಳಯ, ವೀಳ್ಯ (ನಾ). ೧. (ನಮ್ಮ ದೇಶದಲ್ಲಿ ಜನರು ವಿಶೇಷವಾಗಿ ಅಡಕೆ, ಸುಣ್ಣಗಳೊಂದಿಗೆ — ಸಾಮಾನ್ಯವಾಗಿ ಊಟವಾದನಂತರ ಸೇವಿಸುವ) ಒಂದು ಬಗೆಯ ಎಲೆಯನ್ನು ಬಿಡುವ ಬಳ್ಳಿ ಮತ್ತು ಅದರ ಎಲೆ ; ನಾಗವಲ್ಲಿ : "ವೀಟಿಕೆಯ ವೀಳೆಯಂ" (ಚಕುಸಿ. ೧೩) ; ಘಟಿಕಾ, ಗಟಿಗೆ ; ವೀಟಿಕಾ, ವೀಳೆಯ ; ಘಟಿಕಾ, ಗುಳಿಗೆ (ಶಬ್ದಾನು. ೧೬೦ ಪ್ರಯೋ) ; ಪಡಿಯಲೆಯ ವೀಳೆಯಕ್ಕ ಬಿಲ್ಮುಮ್ಬಳಿಯ ತೋಟದಲು ಎಲೆಯಗುಳಿ ಇನೂಱು ಗುಳಿಯಂ . . . ಕೊಟ್ಟರು (ಎಕ. XIV, ಶ್ರೀರಂಗ. ೬೧-೬; ?). ೨. ಸಾಮಾನ್ಯವಾಗಿ ಶುಭಮುಹೂರ್ತಾದಿ ಕಾಲಗಳಲ್ಲಿ ಕೊಡುವ ಎಲೆಯಡಿಕೆ; (ಅಡಕೆ, ಸುಣ್ಣ ಇತ್ಯಾದಿಗಳೊಂದಿಗೆ ಸೇವಿಸಲು ಸಿದ್ಧಪಡಿಸಿದ) ತಾಂಬೂಲ : "ವೀಳೆಯಂ ತಾಂಬೂಲಮಕ್ಕು" (ಮಂಗರಾ. ೯೯-೨೩); ವೀಳೆಯ ಮನುಗುಟಿ ಮುಡಿಯೊಳ್ ತಾಳಿದ ಕಮ್ಮಲರ ಸೂಸಿ (ಮಲ್ಲಕಾ. ೭-೭೨) ; ಪ್ರಥಮದಿನದ ವೀಳೆಯ ನಾನೆಣಿಸಿದಷ್ಟು ಅಗ್ಗವಾಗಿರಲಿಲ್ಲ (ದಾಣಿಜ. ೨೫೪). ೩. ದೇವರಿಗೆ ನೈವೇದ್ಯದ ಸಂದರ್ಭದಲ್ಲಿಯೂ ಗುರುಹಿರಿಯರು, ಗಣ್ಯರು ಮುಂತಾದವರಿಗೆ ಗೌರವಪೂರ್ವಕವಾದ, ಮನ್ನಣೆಮರ್ಯಾದೆಗಳನ್ನು ಸೂಚಿಸುವಾಗಲೂ ಅರ್ಪಿಸುವ ತಾಂಬೂಲ : ತರಿಸಿ ಸಾದು ಜವಾದಿಯನು ಕರ್ಪೂರದ ವೀಳೆಯ ವುಡುಗೊಟ್ಟೆಗಳಲಿ ಹಿರಿದು ಪತಿಕರಿಸಿದನು ಪರಿವಾರವನು ಕಲಿದ್ರೋಣ (ಕುವ್ವಾದ್ರೋ. ೧೫-೨೦). ೪. ಯುದ್ಧ ಅಥವಾ ಯಾವುದೇ ಕೆಲಸದ ಜವಾಬ್ದಾರಿಯನ್ನು ಒಪ್ಪಿಸುವಾಗ ಸಮ್ಮತಿಸೂಚಕವಾಗಿ ಕೊಡುವ ಅಥವಾ ಪಡೆಯುವ ತಾಂಬೂಲ : ಹೊಳಲ ಹೊಱಶೂಲದಲಿ ರಿಪುಗಳ ಸೆಳಸುವೆನು ತಾ ವೀಳೆಯವನೆಂದಲಘುಭುಜಬಲ ಕರ್ಣ ನುಡಿದನು ಕೌರವೇಂದ್ರಂಗೆ (ಕುವ್ವಾಧೀ. ೧-೭) ; ವೀಳೆಯವನೀವುದೆನಗೀ ಕಾಳಗಕೆ (ಚಕವಿ. ೫-೬೮) ; ತೆಗದಿತ್ತನೈ ಕಾಳಗಕೆ ವೀಳೆಯವ (ದೇವೀಮ. ೩-೨). ಬಿಳೆಯ : ೩. ಅಯಿನೂರ್ಬರಿಗೆ ವಿಸ್ತರದಿಂ

ಬಿಳೆಯಮನಿತ್ತು (ಸೌಂದ. XI-i. ೬೯-೨೪ ; 1033). ವಿಳ್ಳೆ : ೧. ಶುಂಠಿ ಕಬ್ಬು ವಿಳ್ಳೆ [ಶಾಸಾಂ. ಲ್ಲ]ಗಳನುಬೆ ಮಾಱುವರು ಬರುತಿರ್ದರು (ಚಿಬಿಪು. ೪೭-೪೨). ವೀಳೆಯ : ೪. ಬಹಳ ಬಲನೇ ಮಾಗಧನು ನಿನಗಹಿತನೇ ತಾ ವೀಳ[ಶಾಸಾಂ. ಳೆ]ಯವ ಸುರಮಹಿಳೆಯರ ತೋಳಿನಲಿ ತೋಱುವೆನೆಂದನಾ ಭೀಮ (ಕುವ್ಯಾಸ. ೨-೨೬); ಜೀಯ ಕೊಡು ವೀಳ [ಶಾಸಾಂ. ಳೆ]ಯವನು (ತೂರರಾ. ೫-೫ ೧೦). ವೀಳ್ಯ : ೨. ಸುಣ್ಣವಿಲ್ಲ ಭಾಗವತರೆ ನುಣ್ಣನ ಗೂಡೆಯ ನಿನ್ನ ತೊಡದುಬಿಟ್ಟೆ ವೀಳ್ಯ ಹಾಕುವನಲ್ಲ ವ್ಯಾಧಿಸ್ಥ ಗಂಡನು ಬಾಳು ಸಟೆ ಎನ್ನ ಬಾಯಿ ನೋಡಿ (ಪುರಂದ. ೩-೪೪-೧) ; ಕುಡಿನೀರು ವೀಳ್ಯ ಕಾಳಾಂಜಿಗೆ ಚಮರ ಕನ್ನಡಿ ಮುಖವಸ್ತ್ರ ಬಿಜ್ಜಣವ ಪಿಡಿದಡಬಲದ ನಿಂದಿರೆ ಮಿಂಡಿವಂಗಳು (ಮೋಪತ. ೨೭-೯). ೩. ಕಲಿತ ಬುದ್ಧಿಯನಿನ್ನು ತೆಗದುದಕಲಸದಂತಿಹುದೆಂದು ಸರ್ವರಿಗುಲಿದು ಬೀಳ್ಕೊಟ್ಟಿತ್ತು ವೀಳ್ಯವ ಮಂತ್ರಿಮುಖ್ಯರನು ನಿಲಯಕ್ಕೆದೆಂದದ್ದನು . . . ಅರಸು (ಬಜ್ಜಪ್ಪ. ೭೫-೫೫). ೪. ನನಗೆ ಯುದ್ಧದ ವೀಳ್ಯವನ್ನು ಕೊಡಿರಿ. ನಾನು ಯುದ್ಧಕ್ಕೆ ಹೊರಡುತ್ತೇನೆ ಎಂದು ಹೇಳಿದನು (ತ್ರೀರಂಗ. ೧೯೮) ; ಆಗ ಅಲ್ಲಿಯ ಇದ್ದ ಯಪ್ಪತ್ತುರಾಯನು ತನಗೆ ವೀಳ್ಯ ಕೊಡಬೇಕೆಂದು ಬೇಡಿದನು (ಕುಮಾಪಾಂ. ೧೩೮).

ವೀಳೆಯ ಎತ್ತು, ವೀಳೆ ಎತ್ತು = ೧. ಮದುವೆ, ಮುಂಜಿ ಮುಂತಾದ ಶುಭಸಮಾರಂಭಗಳಲ್ಲಿ ಎಲ್ಲರಿಗೂ (ಅವರವರ ಸ್ಥಾನಮಾನಗಳನ್ನರಿತು) ಸರದಿಯ ಪ್ರಕಾರ ತಾಂಬೂಲವನ್ನು ಹಂಚು : ಯಾವ ಮದುವೆಯಲ್ಲಾದರೂ ವೀಳೆಯ ಎತ್ತುವವನು ಅವನ (ಚಿಬಿಮು. ೧೦೬). ೨. ಯಾವುದಾದರೂ ನಿಶ್ಚಿತ ಕಾರ್ಯವನ್ನು ವಹಿಸಿಕೊಂಡು ಹೊರಡು : ಗುಡ್ಡಗಾಡ ತಿರುಗಿ ಅಡ್ಡದಾರಿಲಿ ಹೋಗಿ ಗೌಡರ ಕಂದನ ತರುವೆವು ಎಂದರು ಗುಡ್ಡರು ವೀಳೆ ಎತ್ತಿದರು (ಸಿದ್ರಪ್ಪ. ೪-೭೧).

ವೀಳೆಯದ ಲತಾಂಗಿ = ರಾಜ, ರಾಣಿಯರಿಗೆ ಬೇಕಾದಾಗ ತಾಂಬೂಲವನ್ನು ಸಿದ್ಧಪಡಿಸಿ ಕೊಡುವವಳು; ಸಂಚಿಯವಳು : ತಂಬುಲದಲೆಯಂ ತೆಗೆದಡ ದಂಗ್ಳೆಯೊಳಗಿರಿಸುವ ವೀಳೆಯದ ಲತಾಂಗಿಯ ದಕ್ಷಿಣಹಸ್ತಂ ಧರಿಸಿತು ಪಿರಿದುಂ ಚೆಲ್ವಿಕೆಯಾ (ಜಯಕಾ. ೨-೧೪).ವೀಳೆಯದೆಲೆ , ವಿಳ್ಳೇದೆಲೆ, ವೀಳೆಯದೆಲೆ, ವೀಳೆದೆಲೆ, ವೀಳ್ಯದೆಲೆ,ವೀಳ್ಯದೆಲೆ = ವೀಳೆಯ ೧ : ಎಲೆ ಮಿಡುಕದಾಸ್ಥಾನ ವೀಳೆಯದಲೆಯ ಮಡಿಸುವ ರಭಸವಿಲ್ಲ . . . ಮಾನಭಂಗದ ಕಳವಳದ ಕನಸುಗಳಲಿದ್ದುದು ರಾಯನಾಸ್ಥಾನ (ಕುವ್ಯಾಕ. ೧-೨೦) ; ನಮ್ಮ ದೇಶದಲ್ಲಿ ವಿಳ್ಳೇದಲೆಯನ್ನು ವಿಶೇಷವಾಗಿ ಬೆಳೆಯುತ್ತಾರೆ (ರೂಢಿ) ; ''ಫಣೆಲತಾ – ವೀಳಯದೆಲೆ'' (ಓಷಧಿ. ೧೦೪) ; ಸುಣ್ಣವೂ ಅಡಕೆಯೂ ವೀಳೆದಲೆಯೂ ಸಮಾನವಾಗಿ ವೀಳ್ಯವನ್ನು ಮಾಡಿದರೆ ಬಾಯಿ ಕಂಪಾಗಿ ಸುಗಂಧವಾಗಿರುವುದು (ಸಣ್ಣ. ೫೨) ; ''ಒಳ್ಳೆಯದಾಯಿತು'' ಎಂದು ನುಡಿಯುತ್ತಾ ಲಿಂಗಯ್ಯ ವೀಳ್ಯದೆಲೆಗೆ ಸುಣ್ಣ ಹಚ್ಚಿದ (ಪಾಪುತ್ರ. ೬೯) ; ಬೆತ್ತದ ತಟ್ಟೆಯಲ್ಲಿ ಒಂದೆರಡು ಕಟ್ಟು ವೀಳ್ಯೆದೆಲೆ, ಅಡಿಕೆ ಎಲ್ಲವೂ ಅಣಿಯಾಗಿ ಇಡಲ್ಪಟ್ಟಿತ್ತು (ರಾಯಿಕ. ೧೦೪). ವೀಳೆಯಶಾಸ್ತ್ರ, ವೀಳ್ಯದ ಶಾಸ್ತ್ರ = ೧. ಮದುವೆಯ ನಿಶ್ಚಿತಾರ್ಥದ ಸಂದರ್ಭದಲ್ಲಿ ಎಲ್ಲರಿಗೂ ತಾಂಬೂಲವನ್ನು ಹಂಚುವುದು : ಲಗ್ನ ನಿಶ್ಚಯವಾಯಿತು . . . 'ವೀಳೆಯಶಾಸ್ತ್ರ' ನಡೆದಿತ್ತು (ಚಿಬಿಮು. ೧೦೭) . ೨. ಮದುವೆಗೆ ಹೆಣ್ಣನ್ನು ಕೇಳಲು ಹೋದ ಸಂದರ್ಭದಲ್ಲಿ ಎರಡೂ ಕಡೆಯ ಹಿರಿಯರು ಪರಸ್ಪರ ತಾಂಬೂಲವನ್ನು ಕೊಡುವುದು, –ಬದಲಾಯಿಸಿಕೊಳ್ಳುವುದು : (ಎಸಮ್ಯ. ೮). ವೀಳ್ಯಕಟ್ಟು = ಎಲೆಯಡಿಕೆಯನ್ನು ಸಿದ್ಧಪಡಿಸು ; ತಾಂಬೂಲವನ್ನು ಸಿದ್ಧಪಡಿಸು ; ಬೀಡಾಕಟ್ಟು : ನಿರ್ನಿಮೇಷನಯನಗಳಿಂದ ನಿಪುಣಿಕೆಯನ್ನು ನೋಡುತ್ತಿದ್ದೆ. ಅವಳು ವೀಳ್ಯಕಟ್ಟುತ್ತಿದ್ದಳು (ಬಾಣಚ. ೨೯). [< ಸಂ. ವೀಟಿಕಾ]

ವೀಳೆಯಂಗೊಡು, ವೀಳೆಯಕೊಡು, ವೀಳೆಯಗೊಡು (ಕ್ರಿ). ೧. ತಾಂಬೂಲವನ್ನು ಕೊಡು ; ಎಲೆಯಡಿಕೆಯನ್ನು ಕೊಡು : ಅರಿಮಥನ ಮಹಾರಾಜಂ ಕಿಲ್ಬಿಯರ್ಬಿರಿಯರೆನ್ನದ ಮನ್ನಣೆಯಿಂ ಕರ್ಪುರಸಹಿತಂ ವೀಳೆಯಂಗೊಟ್ಟು ಪೋಗಲ್ಪೇೞ್ದು (ಧರ್ಮಾಮೃ. ೨-೭೪). ೨. ಯುದ್ಧ ಅಥವಾ ಯಾವುದೇ ಕೆಲಸವನ್ನು ವಹಿಸಿ ಸಮ್ಮತಿಸೂಚಕವಾಗಿ ತಾಂಬೂಲವನ್ನು ಕೊಡು : ಈ ರಾಜದುರುಳನಂ ವಧಿಸಲ್ಕೆ ಮುಂ ಪೇೞ್ದ ಕಾಲಮದು ಪರಿತಂದುದೆನುತ ಜಗದೇವಗಂ ತಿಳಿಪುತವಗಂ ವೀಳೆಯಂಗೊಡುತ್ತಂ (ಮಹಾಪು. ೧೩-೨೨). ವೀಳೆಯಕೊಡು : ೩. ''ಆಮಂತ್ರಿಸು'' (ಜಾನಪೋ. ೪೫). ವೀಳೆಯಗೊಡು : ೧. ಕಡಗ ಕಂಠಮಾಲೆ ಪದಕ ಕುಂಡಲವಿತ್ತನೊಡನೆ ಕುಲ್ಲಾಯಿ ಕಬಾಯ್ತಿ ನಿಡುಬೊಂಬೆ ಪಟ್ಟೆ ಪಚ್ಚಡವಿತ್ತು ವೀಳೆಯಗೊಡುತ ಜಾಳಿಗ ನೂಜಗೊಟ್ಟ (ಭರಚ. ೨-೯೯). [ವೀಳೆಯ + ಕೊಡು]

ವೀಳೆಯಕೊಡು 'ವೀಳೆಯಂಗೊಡು' ನೋ.

ವೀಳೆಯಗೊಡು 'ವೀಳೆಯಂಗೊಡು' ನೋ.

ವೀಳೆಯಗೊಳ್ (ಕ್ರಿ). ಯುದ್ಧ ಅಥವಾ ಯಾವುದೇ ಮುಖ್ಯಕೆಲಸಕ್ಕೆ ಹೊರಡುವಾಗ (ಶುಭಹಾರೈಕೆಗಳೊಂದಿಗೆ ಒಡೆಯನಿಂದ) ತಾಂಬೂಲವನ್ನು ಸ್ವೀಕರಿಸು : ಒಱಗಿದೆಡಬಲದವರನೆಬ್ಬಿಸಿ ಜಱದು ವೀಳೆಯಗೊಂಡು ಕೈದುವ ತಿರುಹುತಾಯತವಾಯ್ತು ಪಡೆಯರಡರಲಿ ಪಾಯದಳ (ಕುವ್ಯಾದ್ರೋ. ೧೭-೧೯); ಪನ್ನೀರ ಮಿಂದು ದಿವ್ಯಾಂಬರವನುಟ್ಟು, . . . ರನ್ನದೊಡವುಗಳನಳವಡಿಸಿ ವೀಳೆಯಗೊಂಡು . . . ಮಜ್ಜದಂ ಸುಧನ್ವನಂದು (ಜೈಮಿಪಾ. ೧೧-೪೧). [ವೀಳೆಯ + ಕೊಳ್]

ವೀಳೆಯದೆಲೆ 'ವೀಳೆಯ' ಪರಾ.

ವೀಳ್ಯ 'ವೀಳೆಯ' ನೋ.

ವೀಳ್ಯದೆಲೆ 'ವೀಳೆಯ' ಪರಾ.

ವೀಳ್ಳೆದೆಲೆ 'ವೀಳೆಯ' ಪರಾ.

ವೀಟು 'ಬೀಟು' ನೋ.

–ವು (ಪ್ರ). ಸಾಮಾನ್ಯವಾಗಿ ಕೆಲವು ಧಾತುಗಳ ಮೇಲೆ ಸೇರಿ ಭಾವಾರ್ಥವನ್ನು ಕೊಡುವ ಒಂದು ಕೃತ್ಪ್ರತ್ಯಯ : ಕ್ರಿಯಾರ್ಥವಾದ ಪ್ರಕೃತಿಗಳಿಗೆ (ಇವಕ್ಕೆ 'ಧಾತು' ಎಂಬ ಹೆಸರಿಂದ) ಇಸು, ಚು, ವು ಮೊದಲಾದುವು ಸೇರಿ ಮಾಡಿಸು, ನೆಗಟ್ಟು, ತಿಳಿವು ಮೊದಲಾದ ರೂಪಗಳು ಬರುತ್ತವೆ (ಕೃಪಿ. ೧೫). 'ಅಱಿವು', 'ಅಲಿವು' ಪರಾ.

ವುಳುವಟ್ಟು (ನಾ). ಒಂದು ಊರಿನ ಹೆಸರು : ಚಿರುಪಿಯು ಚನ್ರಕುಣ್ಕೆಯು ಚಱಿಯವೊಬಲು ವುಳುವಟ್ಟು ನಾಲ್ಕೂರುಂ . . . ಸಲಲೀಯದವರು ವಾರನಾಸಿಯುಂ ಕವಿಲೆಯುಮನಲಿದೊ (ಸೌಂದ. IX-i. ೨೬-೧೧ ; 950). [?]

ವೃಂತ (ನಾ). ೧. ಎಲೆ, ಹೂವು, ಹಣ್ಣು ಮೊದಲಾದುವುಗಳ ತೊಟ್ಟು , — ಕಾವು : ''ವೃಂತಂ, ಪ್ರಸವಬಂಧನಂ — ಈ ೨ ಹೂವಿನ ತೊಡಂಬೆ'' (ಪಲಾಯು. ೩೧-೩೧). ೨. ಮೊಲೆತೊಟ್ಟು ; ಚೂಚುಕ : ''ಕುಚಮುಖಂ, ಚೂಚಕಂ, ವೃಂತಂ, ಶಿಖಾ — ಈ ೪ ಮೊಲೆಯ ಕೊ(ತೊ)ಟ್ಟು'' (ಪಲಾಯು. ೮೭-೩೨). [ಸಂ.]

ವೃಂತಫಲ (ನಾ). ಒಂದು ಬಗೆಯ ಬದನೆಕಾಯಿ ; ಮುಳ್ಳುಗಾಯಿ : ಎಲ್ಲರ್ಗ ಬಸವನಗ್ರವನೆಗಳಂ ತಾನೀವ ಸಮಯದೊಳಗಲ್ಲಿ ಕೆಲಬರ್ ಡಂಬಕರ್ ಬಂದು . . . ವೃಂತಫಲಮಂ ಸಮಂತಂದು ಕಕ್ಷದೊಳಿರಿಸಿ (ಬಸಪು. ೯-೪೫) ; ತವೆ ಬಾಣಲಿಂಗವಾದವು ವೃಂತಫಲಗಳಾಗವರಿರ್ದರತಿ ಬಕುತಿಯಲಿ (ಭೈರವೇ. ೨-೧೬೬). [ಸಂ.]

ವೃಂತಾಕ (ನಾ). = ವೃಂತಫಲ : ''ಬದಣೆಯದು ವೃಂತಾಕಮಕ್ಕುಂ'' (ಮಂಗರಾ. ೭೯-೫) : ವೃಂತಾಕವನ್ನು ಬೆಳೆಸಿ ತರಿಸಿ ನನಗೆ ಸಮರ್ಪಿಸು (ಕಭಪ. ೧೫೦). [ಸಂ.]

ವೃಂತಾಕಪಾಕ (ನಾ). ೧. ಬದನೆಕಾಯಿಯಿಂದ ತಯಾರಿಸಿದ ಖಾದ್ಯ , — ಅಡುಗೆ : ಬದನಗಾಯ್ಗಳಂ . . . ಕೊಣಬಿನೊಳಿಕ್ಕಿ ಒಗ್ಗರಿಸೆ ಮಧುರವೃಂತಾಕಪಾಕ (ಸೂಪಶಾ. ೪-೧೪). ೨. [ಕಾವ್ಯಮಿಮಾ] ಕೇವಲ ಶಾಸ್ತ್ರಜ್ಞಾನದಿಂದ ಬರೆದ ನೀರಸವಾದ ಕಾವ್ಯ : ಒಳಗೆ ರಸವಿಲ್ಲದೆ ಬರಿಯ ಶಾಸ್ತ್ರವ್ಯುತ್ಪತ್ತಿಯಿಂದ ಬರೆದ ಕಾವ್ಯದಲ್ಲಿ 'ವೃಂತಾಕಪಾಕ' ವೆಂದು ಕೆಲವರು ಹೇಳಿದ್ದಾರೆ! (ಕೃಪಿ. ೨೫೫). [ಸಂ.]

ವೃಂತಾಕಫಲ (ನಾ). = ವೃಂತಫಲ : ''ವೃಂತಾಕಫಲ ಲಿಂಗವಾದುದು'' ಎಂಬುದಕ್ಕೆ ಉಪಕಥೆ (ಭೈರೂ. I. ೩೩೨). [ಸಂ.]

ವೃಂತಾಕಿ (ನಾ). ಬದನೆಗಿಡ : ''ವೃಂತಾಕೀ – ಬದಣೆ'' (ಓಷಧಿ. ೧೫೭).

[ಸಂ. ವೃಂತಾಕೀ]

ವೃಂದ (ನಾ). ಗುಂಪು ; ಸಮೂಹ : ಉಱದುದ್ಯತ್ತರ ಮೊತ್ತಮಂ ತಲೆದು ಗೆಲ್ದಂ ಗೊಂಡು ವೃಂದಂಗಳಂ ಸೆಱಗೊಂಡು . . . ಆಯ್ಕುಳಿಗೊಂಡನುದ್ಭಯಶಮಂ ವಿಶ್ರಾಂತ ಕಾಳಾನಳಂ (ಪುಷ್ಪಪು. ೫-೫೧); ಮಂದರಾದ್ರಿಗೆ ಮಿಗಿಲೆನಿಸುವ ಮಹೇಂದ್ರ ಪರ್ವತಕಾಗಿ ಕಂಡುದು ವೃಂದವೃಂದಾರಕವಧೂಜನವನಿಲನಂದನನ (ತೂರರಾ. ೪-೧೨-೨೦). [ಸಂ.]

ವೃಂದಗಾನ (ನಾ). ಒಟ್ಟಾಗಿ ಹಾಡುವಿಕೆ ; ಸಮೂಹಗಾಯನ ; ಮೇಳಗೀತೆ : ಆ ಶಾಲೆಯ ಮಕ್ಕಳ ವೃಂದಗಾನವು ತುಂಬ ಸೊಗಸಾಗಿತ್ತು (ರೂಢಿ). [ಸಂ.]

ವೃಂದಾರಕ (ಗು). ೧. ದೊಡ್ಡದಾದ ; ಹಿರಿದಾದ. ೨. ಉತ್ತಮವಾದ ; ಶ್ರೇಷ್ಠವಾದ. ೩. ಸುಂದರವಾದ ; ಮನೋಹರವಾದ : 'ವೃಂದಾರಕದಾರಕ' ಪರಾ. ೪. ಗೌರವಾನ್ವಿತವಾದ ; ಮಾನ್ಯವಾದ. (ನಾ). ೫. ದೇವತೆ ; ಸುರ : ದಾರಕರೂಪದ ಜಿನವೃಂದಾರಕನೊಡನೂಡನೆ ಭಾಲಕೇಳಿಗಳಂ ವೃಂದಾರಕರ ಮಾಡಿ ದುರಿತ ವಿದಾರಕನ ಮನಕ್ಕೆ ಮಾಡಿದರ್ ಸಂತಸಮಂ (ಅಜಿಪು. ೫-೭೨); ಸಕಲದನುಜ ಭುಜಂಗ ವೃಂದಾರಕ ಮಹಾಭೂತಾದಿ ಲೋಕಪ್ರಕರವೆರಡೊಡ್ಡಾಯ್ತು ಕರ್ಣಾರ್ಜುನರ ಕದನದಲಿ (ಕುವ್ಯಾ. ೨೨ ಸೂಚನೆ). ೬. ಮರ ; ವೃಕ್ಷ : ಸುರಸಭೆಯಂತೆ ಮದದಂತಿಯಂತೆ ಮೇಘಾವಳಿಗಳಂತೆ ವೃಂದಾರಕೋನ್ನತವಾಗಿ ಭಾವಿಸುವೊಡರಿದನಿಸಿತತಿ ಭೀಕರಾಕಾರದಿಂದ ಘೋರಾರಣ್ಯವು (ಹಚಿಕಾ. ೫-೧೯). ೭. ಮೋಡ ; ಮೇಘ. ೮. ಆನೆ ; ಗಜ. "ನಾಕಾವಾಸರಿಭಂ ಬಲಾಹಕ ಕುಜಂ ವೃಂದಾರಕಾಖ್ಯಂ" (ನಾನಾರ. ೧೫೪). [ಸಂ.]

ವೃಂದಾರಕತ್ವ (ನಾ). ೧. ಸೌಂದರ್ಯ ; ಮನೋಹರತೆ : ಇದು ಧಾತ್ರೀಪಾರಿಜಾತಂ . . . ವನಶ್ರೀಸುದತೀಪ್ರೇಮಾತ್ಮಜಾತಂ ಫಲ ತರುವರ ವೃಂದಾರಕತ್ವಾಭ್ಯುಪೇತಂ ಮದ ಭೃಂಗೀಗೀತಗೀತಂ ಕೃತವಿರಹಿವಿಘಾತಂ ದಲೀ ಬಾಲಚೂತಂ (ಚಂದ್ರಪ್ರ. ೭-೯೧). ೨. ದೇವತ್ವ ; ಅಮರತ್ವ. [ಸಂ.]

ವೃಂದಾರಕದಾರಕ (ನಾ). ಸುಂದರನಾದ ಬಾಲಕ ; ಮನೋಹರವಾದ ರೂಪುಳ್ಳ ಬಾಲಕ : ಓರಗೆಗಳಪ್ಪ ಬಹುವೃಂದಾರಕದಾರಕರನಂದು ಸಹಪಾಂಸುಕ್ರೀಡಾರಸದೊಳ್ ಸಮುಚಿತಸೇವಾರತಿಯೊಳ್ ನೆಱೆದು ನೆಗೞೆ ನಿರವಿಸಿ (ಪುಷ್ಪಪ್ರ. ೧೨-೫೫). [ಸಂ.]

ವೃಂದಾರಕಪಥ (ನಾ). ದೇವತೆಗಳ ಮಾರ್ಗ ; ಆಕಾಶ ; ಅಂತರಿಕ್ಷ : "ತಾರಾಪಥಂ ವ್ಯೋಮಮಂತರಿಕ್ಷಂ ನಭಂ ವಾರಿದಪಥಂ ವಿಯತ್ಪುಷ್ಕರಂ ಖಂ ದ್ಯು ವೃಂದಾರಕಪಥಂ ವಿಹಾಯಸಮಂಬರಂ ವಿಷ್ಣುಪದಮೆನಲು ಗಗನಮಕ್ಕುಂ" (ಮಂಗರಾ. ೧-೩೧). [ಸಂ.]

ವೃಂದಾರಕವಧು (ನಾ). ದೇವತಾಸ್ತ್ರೀ ; ಸುರವಧು : ಅಕಟ ರಾಯನ ಹರಿಬದಲಿ ಸೇವಕರಿಗಾದುದು ಸೂಱ್ ವೃಂದಾರಕವಧೂವರ್ಗದಲಿ ಚಾಳಿಸಬೇಡ ವಿಗ್ರಹಕೆ ವಿಕಳಬಲನಿವನೇನು ಭಾಳಾಂಬಕನೊ ಬಲಿಬಂಧಕನೊ ಸುರಪಾಲಕನೊ ಫಡಫಡ ಎನುತ ಕವಿದುದು ಕರ್ಣನಿದಿರಿನಲಿ (ಕುವ್ಯಾ. ೧೨-೫). [ಸಂ. ವೃಂದಾರಕವಧೂ]

ವೃಂದಾರಕಾಚಲ (ನಾ). ದೇವತೆಗಳ ಪರ್ವತ ; ಮೇರುಪರ್ವತ : ಸಾರ ಕಟ್ಟಿತು ಸಾಗರಕೆ ವೃಂದಾರಕಾಚಲವಿಡಿದು ಗಿರಿಗಳ ಭಾರಕಿಳಿ ಕಡು ತಗ್ಗುತಿರ್ದುದು ನಿಮುಷ ನಿಮುಷದಲಿ (ತೊರರಾ. ೬-೫-೧೪). [ಸಂ.]

ವೃಂದಾವನ (ನಾ). ೧. ದ್ವಾಪರಯುಗದಲ್ಲಿ ಗೋಕುಲದ ಸಮೀಪದಲ್ಲಿದ್ದು ಕೃಷ್ಣನು ವಿಹರಿಸುತ್ತಿದ್ದನೆನ್ನಲಾದ ಒಂದು ವನ ; ಈಗಿನ ಉತ್ತರ ಪ್ರದೇಶದ ಮಥುರೆಯ ಹತ್ತಿರವಿದ್ದಿತೆನ್ನಲಾದ ಬೃಂದಾವನ : ಸುಸ್ಥಳವತೀವಾ ಸೇವ್ಯಂ . . . ಕೇಳಿಸುಖಪ್ರದೇಶಮೆಸೆಗುಂ ವೃಂದಾವನಂ (ಜಗವಿ. ೩-೬೬); ವೃಂದಾವನ ದೊಳಾಡುವನ್ನಾರೆ ಗೋಪಿ ಚಂದಿರವದನ ನೋಡುವ ಬಾರೆ (ಪುರಂದ. ೨-೧೩೩ ಪಲ್ಲವಿ). ೨. ಪೂಜಿಸುವುದಕ್ಕಾಗಿ, ತುಳಸಿಯನ್ನು ಬೆಳೆಸಿ ಸಾಮಾನ್ಯವಾಗಿ ಮನೆಯ ಮುಂಭಾಗದ ಅಂಗಳದಲ್ಲಿ ಕಟ್ಟುವ ಚಿಕ್ಕ ಕಟ್ಟೆ ; ತುಳಸೀಕಟ್ಟೆ : ವೃಂದಾವನವೇ ಮಂದಿರವಾಗಿಹ ಇಂದಿರ ಶ್ರೀತುಲಸಿ (ಪುರಂದ. ೩-೪೪ ಪಲ್ಲವಿ); ವಿರೋಧಿಕೃತುಸಂವತ್ಸರದ ಶ್ರಾವಣ ಶು ೧೨ ವೃಂದಾವನಪ್ರತಿಷ್ಠೆ (ಎಕ. IV (R). ಚಾಮರಾ. ೧೬೬-೨ ; ಸು. 16ನೆಯ ಶತ) : ಆ ಬಯಲಿನ ಮಧ್ಯ ಒಂದು ವೃಂದಾವನ (ಕಳಹು. ೫೭). ೩. ವೈಷ್ಣವಸಂನ್ಯಾಸಿಗಳ ಸಮಾಧಿ : 'ವೃಂದಾವನಸ್ಥ' ಪರಾ. ೪. ಮಂತ್ರಾಲಯದಲ್ಲಿರುವ ರಾಘವೇಂದ್ರಸ್ವಾಮಿಗಳ ಸಮಾಧಿ. [ಸಂ.]

ವೃಂದಾವನಸ್ಥ (ನಾ). ಸಮಾಧಿಯನ್ನು ಸೇರಿದ ವೈಷ್ಣವಸಂನ್ಯಾಸಿ : ಶ್ರೀ ರಾಘವೇಂದ್ರರು ಮಂತ್ರಾಲಯ(ಮಂಚಾಲೆ)ವನ್ನು ಸೇರಿದೊಡನೆಯೇ . . . ತಾವು ಅಲ್ಲೇ ವೃಂದಾವನಸ್ಥರಾಗಿರಬೇಕೆಂಬ ಅಭಿಲಾಷೆಯನ್ನು ದೇವಿಗೆ ವಿಜ್ಞಾಪಿಸಿದರು (ಕಭಪ. ೩೫೮). [ಸಂ.]

ವೃಕ (ನಾ). ೧. ಒಂದು ಬಗೆಯ ಕಾಡುಪ್ರಾಣಿ ; ತೋಳ : ವೃಕಶಾರ್ದೂಲವರಾಹಮುಖ್ಯರ ಮನಂಗೊಂಡಂ (ಪಂಚತಂ. ೯೭-೭); ವಿಪಿನಂ ಕ್ರೂರವ್ಯಾಳ ವೃಕಸೂಕರಚಮೂರ ಕಂಠೀರವನಿಷೇವಿತಮಲ್ಲಾ! (ರಾಮಾಶ್ವ. ೨೮-೧೩). ೨. ನರಿ ; ಜಂಬುಕ. ೩. ಕಾಗೆ. ೪. ಗೂಗೆ ; ಘೂಕ. ೫. [ಖಗೋಳ] ಒಂದು ನಕ್ಷತ್ರಪುಂಜದ ಹೆಸರು : ವೃತ್ತಿನಿಯ ಉತ್ತರಕ್ಕೆ ಅಂದರೆ ಕಿನ್ನರನ ಎಡಕ್ಕೆ (ಪೂರ್ವಕ್ಕೆ) ಇರುವ ರಾಶಿ ವೃಕ. ವೃಕದ ಗ್ರೀಕ್ ಹೆಸರು ಲ್ಯೂಪಸ್ ತೋಳ ಎಂದು (ನಕ್ಷತ್ರ. ೭೩). [ಸಂ.]

ವೃಕತಿಕ್ತ (ನಾ). ಒಂದು ಬಗೆಯ ಸಸ್ಯ ; ಅಗುಳುಶುಂಠಿ : "ವೃಕತಿಕ್ತ, ವೃಕಪತ್ರೀ - ಈಯೆರಡುಂ ಅಗುಳುಶುಂಠಿ" (ಓಷಧಿ. ೧೫೭). [ಸಂ.]

ವೃಕಧೂಪ (ನಾ). ೧. ಒಂದು ಬಗೆಯ ಸುಗಂಧದ್ರವ್ಯಗಳ ಮಿಶ್ರಣ : "ವೃಕಧೂಪಃ, ಕೃತ್ರಿಮಧೂಪಕಃ — ೨ ಅನೇಕ ಪರಿಮಳವಸ್ತುಗಳನ್ನು ಸೇರಿಸಿ ಮಾಡಿದ ಧೂಪಕ್ಕೆ ಹೆಸರುಗಳು" (ಸಿದ್ಧಾಂತಿ. ೨೦೭). ೨. ಒಂದು ಬಗೆಯ ಸಸ್ಯ : "ವೃಕಧೂಪಃ- ಕುಂದುರಕ, ನೆಲಾವರ" (ಓಷಧಿ. ೧೫೭). ೩. ಬಣ್ಣಗಳ ಮಿಶ್ರಣ, ಔಷಧ ಮೊದಲಾದುವಕ್ಕೆ ಬಳಸುವ, ಒಂದು ಬಗೆಯ ಮರದಿಂದ ಸ್ರವಿಸುವ ತೈಲರೂಪದ ರಾಳ ; ಟರ್ಪೆಂಟೈನ್. [ಸಂ.]

ವೃಕಪತ್ರಿ (ನಾ). = ವೃಕತಿಕ್ತ : "ವೃಕತಿಕ್ತ, ವೃಕಪತ್ರೀ — ಈ ಯೆರಡುಂ ಅಗುಳುಶುಂಠಿ" (ಓಷಧಿ. ೧೫೭). [ಸಂ. ವೃಕಪತ್ರೀ]

ವೃಕಶಾಖ (ನಾ). ತೋಳದ ಮರಿ ; ಎಳೆಯ ಈಹಾಮೃಗ : ವೃಕಶಾಖಂ ಮತ್ತಮಾತಂಗದ ಬಿದುವನವಷ್ಟಂಭದಿಂದೇಱಿ ಶೌರ್ಯಾಧಿಕನಪ್ಪಂ ಧಾತ್ರಿಗಂದೋ ವದ ಬಯಸುವವೋಲ್ (ದಶಕು. ೭-೭೬). [ಸಂ.]

ವೃಕಾನನ (ನಾ). ೧. ತೋಳದಂತೆ ಮುಖವುಳ್ಳವನು : ಕರಿವದನರತಿಶಯ ವೃಕಾನನರು ಲಸದುಷ್ಟ್ರತುಂಡವೆನಿಸುವರು (ವೀಶೃಪ್ರ. ೩-೧೯-೬) ; ಮಹಿಷಾಸ್ಯರುಂ ವೃಕಾನನರೆನಿಪ ಪರಿಪರಿಯ ಬಹುಮುಖರ್ ಗಿರಿಜಾವಸಥನ ಪೇರೋಲಗದಿ ಜಸವೆತ್ತರು (ಏಕೋಪ್ರ. ೨-೪೪). ೨. ಕೃಷ್ಣನ ಒಬ್ಬ ಮಗನ ಹೆಸರು. [ಸಂ.]

ವೃಕಿ (ನಾ). ಒಂದು ಬಗೆಯ ಔಷಧೀಸಸ್ಯ : "ವೃಕಿ - ಅಗುಳುಶುಂಠಿ" (ಓಷಧಿ. ೧೫೮). [ಸಂ. ವೃಕೀ]

ವೃಕೋದರ (ನಾ). ೧. ತೋಳದಂತೆ ಹೊಟ್ಟೆಯುಳ್ಳವನು ; ತೀಕ್ಷ್ಣವಾದ ಜಠರಾಗ್ನಿಯುಳ್ಳವನು. ೨. ಭೀಮ : ನಾರಾಯಣನುಂ ಧರ್ಮಪುತ್ರನುಂ ವೃಕೋದರನ ಮನಮನಾಱ ನುಡಿದು ಮತ್ತಂ ನಾರಾಯಣಂಗೆ ಯುಧಿಷ್ಠಿರಂ ನಿಷ್ಠಿತಕಾರ್ಯಮನನುಷ್ಠಿಸಲೆಂದಿತೆಂದಂ (ಪಂಪಭಾ. ೯-೨೫ ಪ) ; ಎಲೆ ವೃಕೋದರ ನಕುಳ ಸಾತ್ಯಕಿ ನಿಲಿಸಿರ್ಕೆ ತಂಗಿಯನು ತನ್ನಯ ಕೊಲೆಗೆ ಮಗನಳಿವೊಂದು ಸಾಲದೆ ತನ್ನ ನುಡಿಯೇಕೆ (ಕುವ್ಯಾದ್ರೋ. ೭-೧೯). ೩. ತೋಳಗಳನ್ನು ಹೊಂದಿರುವುದು ; ಕಾಡು. ೨, ೩ : ಆ ವನಂ ಘನಾಗಮದಂತೆ ಘನಕದಂಬಮುಕ್ತಕವಿಲಸಿತಮುಂ . . . ಯುಧಿಷ್ಠಿರಸದೃಶಂತೆ ವೃಕೋದರವಿಲಸದರ್ಜುನನಕುಲಾಧಿಷ್ಠಿತಮುಂ . . . ಎನಿಸಿರ್ದುದು (ರಾಜಶೇ. ೫-೭೪ ಪ). ೪. ಬ್ರಹ್ಮ. [ಸಂ.]

ವೃಕ್ಕೆ (ನಾ). ೧. ಮಾಂಸ ; ಬಾಡು : "ವೃಕ್ಕಾ ಎಂಬುದು ಬಿಕ್ಕು" (ಹಲಾಯು. ೧೦೫-೧೪). ೨. ಹೃದಯ. ೩. ಮೂತ್ರಕೋಶ. [ಸಂ. ವೃಕ್ಕಾ]

ವೃಕ್ಷ (ನಾ). ಮರ ; ತರು ; ಭೂರುಹ : ತಾಳತರುಷಂಡಸಮೀಪದೊಳ್ . . . ಜರಠಮಹಾಶಾಲ್ಮಲೀವೃಕ್ಷಮಿರ್ಕುಂ (ಕಾದಂಪೂ. ೧೨೦); ಅಗ್ನಿಯಾಧಾರದಲ್ಲಿ ಕಬ್ಬಿನ ನೀರುಂಬುದಯ್ಯಾ ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ (ಬಸವ. ೧೯೭) ; ವೃಕ್ಷದ ಮೂಲಮಂ ಸಲಹುತಿರ್ದಡೆಯಾ ತರು ಶಾಖೆಗೂಡಿ ಸಂರಕ್ಷಣಮಾಗಿ ಪೆರ್ಚುತಿಹವು (ನನ್ನಚಾ. ೬-೩೭೦). [ಸಂ.]

ವೃಕ್ಷಧೂಪ (ನಾ). ಮರದಿಂದ ಸಂಗ್ರಹಿಸುವ ಒಂದು ಬಗೆಯ ಸುಗಂಧ ದ್ರವ್ಯ ; ರಾಳ : "ಪಾಯಸಃ, ಶ್ರೀವಾಸಃ, ವೃಕ್ಷಧೂಪಃ . . . ವೃಕ್ಷದ ಬೊಂಕೆ, ರ್‍ಯಾಳದ ಬೊಂಕೆ" (ಸಿದ್ಧಾಂತಿ. ೨೦೮). [ಸಂ.]

ವೃಕ್ಷಭಂಜನ (ನಾ). ಮರವನ್ನು ಮುರಿಯುವಿಕೆ, — ನಾಶಮಾಡುವಿಕೆ : ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹಪರಿತಪ್ತಮನದಿಂದಂ ಸಲ್ಬುದಂ

ನವಯೌವನಮನೆಯ್ದಿ ಆತ್ಮಬಲಮನದಱಿ ಬಲದೊಳ್ ವೃಕ್ಷಭಂಜನಸಾಮರ್ಥ್ಯದಿಂ ಪರೀಕ್ಷಿಸಿ (ವಡ್ಡಾರಾ. ೩೭-೧೮). [ಸಂ.]

ವೃಕ್ಷಭೇದಿ (ನಾ). ೧. ಮರವನ್ನು ಕಡಿಯುವವನು,— ಕತ್ತರಿಸುವವನು. ೨. ಹಗುರವಾದ ಸಣ್ಣಕೊಡಲಿ ; ಕೈಗೊಡಲಿ. ೩. ಮರವನ್ನು ಕೆತ್ತುವ ಉಳಿ ; ಬಡಗಿಯ ಚಾಣ. [ಸಂ. ವೃಕ್ಷಭೇದಿನ್]

ವೃಕ್ಷಮೂಲ (ನಾ). ೧. ಮರದ ಬೇರು. ೨. ಮರದ ಪ್ರಾರಂಭದ ಭಾಗ,— ಬುಡ : ಕಲ್ಪಸ್ಥಾಯಿಯಾಗಿರ್ದುದು ಗಿರಿಕಟಕಸ್ಫೂಲಮೂ ವೃಕ್ಷಮೂಲಂ (ಕಾದಂಬ. ೧೨೨). ಇಳಿಯಂ ಸಲಹಲ್ ಮುಂ ಮಂಜುಳಸೌಧಾವಾಸಕೆಳಸುವಾ ಪುರುಕುಲಜರ್ ಬಳಿಕಂ ವಾನಪ್ರಸ್ಥಕ್ಕಳವಡೆ ತಾಂ ವೃಕ್ಷಮೂಲಮಂ ಮನೆಗೈವರ್ (ಶಾಕುಂತ. ೧೦೬-೧೬೩). [ಸಂ.]

ವೃಕ್ಷರುಹ (ನಾ). ೧. ಪರೋಪಜೀವಿಸಸ್ಯ ; ಬದನಿಕೆ. ೨. ಕಟ್ಟಿರುವೆ : "ವೃಕ್ಷರುಹಃ — ಬಂದನಿಕೆ, ಕಟ್ಟಿರುಹೆ" (ಓಷಧಿ. ೧೫೭). [ಸಂ. ವೃಕ್ಷರುಹಾ]

ವೃಕ್ಷರುಹೆ (ನಾ). ೧. = ವೃಕ್ಷರುಹ ೧ : "ವಂದಾ, ವೃಕ್ಷಾದನೀ, ವೃಕ್ಷರುಹಾ, ಜೀವಂತಿಕಾ — ೪ ಬದನಿಕೇ ಹೆಸರುಗಳು" (ಸಿದ್ಧಾಂತಿ. ೧೩೧). ೨. ಒಂದು ಬಗೆಯ ಸುಗಂಧದ್ರವ್ಯ. ೩. ಒಂದು ಬಗೆಯ ಮರ : "ವೃಕ್ಷರುಹಾ — ಜತುಕೆ, ಮುಷ್ಕಿ" (ಓಷಧಿ. ೧೫೭). [ಸಂ. ವೃಕ್ಷರುಹಾ]

ವೃಕ್ಷವಾಟಿಕೆ (ನಾ). ಉಪವನ ; ತೋಟ : "ವೃಕ್ಷವಾಟಿಕಾ... ಮನೆಗಳಲ್ಲಿ ಕ್ರೀಡಾರ್ಥವಾಗಿ ಹಾಕಲ್ಪಟ್ಟಿರುವ ಶೃಂಗಾರ ವೃಕ್ಷವಾಟ" (ಸಿದ್ಧಾಂತಿ.೧೧೦). [ಸಂ. ವೃಕ್ಷವಾಟಿಕಾ]

ವೃಕ್ಷವೀರ್ಯ (ನಾ). ಮರಗಿಡಗಳ ರಸ, — ಸತ್ತ್ವ : ವೃಕ್ಷವೀರ್ಯಶರೀರೋತ್ಸೇಧಾಯುರಾದಿ ಹಾನಿಯೊಳು ಸುಷಮದುಷ್ಷಮಮೆಂಬ ಕಾಲಂ ದ್ವಿಸಾಗರೋಪಮ ಕೋಟಾಕೋಟಿಸ್ಥಿತಿಯಿಂ ಪ್ರವರ್ತಿಸುವಂದು (ಜಾವುಂಪು. ೯). [ಸಂ.]

ವೃಕ್ಷಶೋಷಣ (ನಾ). ೧. ಮರಗಿಡಗಳನ್ನು ಒಣಗಿಸುವಿಕೆ, — ಹಾಳುಮಾಡುವಿಕೆ. ೨. ಒಂದು ಬಗೆಯ ಕೀಳುಮಟ್ಟದ ಸಿದ್ಧಿ,— ಕುತ್ಸಿತಸಿದ್ಧಿ : ಪಾಷಂಡಿಸಹವಾಸ ಪಾಷಾಣಪಾಟನ ಪ್ರತಿಮಾಭಾಷಣ ವೃಕ್ಷಶೋಷಣ ಮೊದಲಾದ ಕಪಟಕುತ್ಸಿತಸಿದ್ಧಿಗಳಿಂದ ಸಾಧುಜನವಂಚನೆ ಮೊದಲಾದವುಗಳು . . . ವಿವರಿಸಲ್ಪಟ್ಟಿರುವುದು (ಹಂಪಸಾ. ೧೫೨). [ಸಂ.]

ವೃಕ್ಷಾದನ (ನಾ). ೧. ಮರವನ್ನು ಕೆತ್ತುವ ಉಳಿ ; ಬಡಗಿಯ ಚಾಣ. ೨. ಸಣ್ಣಬಾಚಿ ; ಕೈಬಾಚಿ. ೩. ಸಣ್ಣಕೊಡಲಿ ; ಕೈಗೊಡಲಿ. [ಸಂ.]

ವೃಕ್ಷಾದನಿ (ನಾ). = ವೃಕ್ಷರುಹ ೧ : "ವಂದಾ, ವೃಕ್ಷಾದನೀ, ವೃಕ್ಷರುಹಾ, ಜೀವಂತಿಕಾ — ೪ ಬದನಿಕೇ ಹೆಸರುಗಳು" (ಸಿದ್ಧಾಂತಿ. ೧೩೧). [ಸಂ. ವೃಕ್ಷಾದನೀ]

ವೃಕ್ಷಾಧಿರೋಹಣ (ನಾ). [ಕಾಮಶಾ] ಹನ್ನೆರಡು ಬಗೆಯ ಆಲಿಂಗನಗಳಲ್ಲಿ ಒಂದು ಬಗೆ : ಎಡದ ಕಾಲೊಳುಂಗುಟಮನೆ ಬಿಡದೆ ಮಟ್ಟ ಬಲದ ತೊಡೆಯನುಡಯೊಳಿಟ್ಟು ನುಡಿಸಿ ಬಾಯ್ಸ ಬಾಯನೊಂದಿಸಿ ಮುಡುಹುವಿಡಿದು ಗಳರವಂಗಳೊಡನ ಲಲ್ಲಗಱೆದು ತಕ್ಕೈಯೊಡೆಯದವಳ ತಱನದು ವೃಕ್ಷಾಧಿರೋಹಣಂ [ಪಾಠಾಂ. ವೃಕ್ಷರೋಹಣಂಗನೆ] (ಜಸವ. ೭-೭). [ಸಂ.]

ವೃಕ್ಷಾಮ್ಲ (ನಾ). ೧. ಹುಳಿಹಣ್ಣು ; ಹುಣಿಸೆ : "ತಿಂತ್ರಿಣೀಕಂ, ಚುಕ್ರಂ, ವೃಕ್ಷಾಮ್ಲಂ - ೩ ಮರಹುಣಿಸೇಹಣ್ಣು, ಹುಳಿಹಣ್ಣು" (ಸಿದ್ಧಾಂತಿ. ೨೪೪). ೨. ಆಮಟೆಕಾಯಿ; "ಆಮ್ರಾತಕ" (ಪಂಡಿತ. ೨೬೯). [ಸಂ.]

ವೃಕ್ಷಾರೋಹಣ (ನಾ). ೧. ಮರವನ್ನು ಹತ್ತುವುದು,— ಏರುವುದು. ೨. = ವೃಕ್ಷಾಧಿರೋಹಣ. ೧, ೨ : ಪರಿಣಿಸೆ ವೃಕ್ಷಾರೋಹಣ ಪರಾಹಚರ್ವಿತಕ ವೇಣುದಾರಿತಕಂಗಳ್ ಕರಮಸೆಯೆ ಕಾಮಶಾಸ್ತ್ರದ ದೊರೆಯಾದುದು ಶಬರಶಿಶುಗಳುಜ್ಜುಗಮದಱೊಳ್ (ಚಂದ್ರಪ್ರ. ೫-೨೫). [ಸಂ.]

ವೃಕ್ಷಾಸನ (ನಾ).[ಯೋಗ] ಒಂದು ಬಗೆಯ ಆಸನ : ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೨೩. ದೂರ್ವಾಸಾಸನ, ೨೪. ವೃಕ್ಷಾಸನ, ೨೫. ಸಿದ್ಧಾಸನ . . . ೭೯. ಭೈರವಾಸನ ಇತ್ಯಾದಿಗಳನೇಕವಿವೆ (ಭಾರದ. ೧೭೭). [ಸಂ.]

ವೃಕ್ಷೋತ್ಪಲ, ವೃಕ್ಷೋತ್ಪಳ (ನಾ). ಒಂದು ಬಗೆಯ ಸಸ್ಯ ; ಬೆಟ್ಟದಾವರೆ ; ಕರ್ಣಿಕಾರ : "ವೃಕ್ಷೋತ್ಪಲಂ ಕರ್ಣಿಕಾರಮೆನೆ ಕೊಸಗೆನಿಕ್ಕುಂ" (ಮಂಗರಾ. ೩೫-೧೨). ವೃಕ್ಷೋತ್ಪಳ : "ಕೊಸಗು ವೃಕ್ಷೋತ್ಪಳಂ ಕರ್ಣಿಕಾರಂ" (ಪಪ್ಪಕೋ. ೩೩-೧). [ಸಂ.]

ವೃಕ್ಷೋತ್ಪಳ 'ವೃಕ್ಷೋತ್ಪಲ' ನೋ.

ವೃಜಿನ (ಗು). ೧. ಬಾಗಿದ ; ಡೊಂಕಾದ ; ಕೊಂಕಿದ. ೨. ಪಾಪದಿಂದಕೂಡಿದ ; ದುಷ್ಕರ್ಮದಿಂದ ಕೂಡಿದ : ಅಂತು ಸಂಸಾರಶರೀರಭೋಗ ನಿರ್ವೇಗಪರತಂತ್ರ ಸಾತ್ಮತಂತ್ರಮುಂ ವಿಷತಂತ್ರಮೆಂದುಂ . . . ದುರ್ಗಮುಂ ವೃಜಿನ ದುರ್ಗಮೆಂದುಮಿಂತು ಸಪ್ತಾಂಗಮುಮಂ ದೀರ್ಘಸಪ್ತಾಂಗಮಾಗೆ ಬಗೆದಿಟ್ಟಿಕೆಯ್ದು (ಚಂದ್ರಪ್ರ. ೧೦-೧೨೫ ಪ); ಅಜನಜಗರಗರದಿಂದಭ್ರಜಶಿಪಿರವದಿಂದೆ ವುಲಿಯ ಕಾಯ್ದುಂ ನಿಸದಂ ವೃಜಿನ ಘಸಕುಜನಜನಮಂ ಸೃಜಿಸಿದಸಲ್ಲದೊಡವಂಗೆ ಜಗಮಂಜುವುದೇ (ರಾಜಶೇ. ೧-೩೮). (ನಾ). ೩. ಬಾಗಿದುದು ; ಡೊಂಕಾದುದು ; ಕೊಂಕಿದುದು : "ವಕ್ರಂ, ವೃಜಿನಂ, ಭಂಗುರಂ, ಅವಿದ್ಧಂ . . . ಕುಟಿಳಂ, ವ್ಯಾಕುಂಚಿತಂ, ಊರ್ಮಿಮತ್ - ಈ ೧೨ ಕೊಂಕಿದುದು" (ಪಜಾಮು. ೧೧೬-೧೧). ೪. ಪಾಪ ; ದೋಷ : ಕಾಲಾಂತದೊಳಾ ಜನಂ ವೃಜಿನವಂ ತವಿಸುತ್ತೆ ನಿರಾಸ್ರವಂ ತ್ರಿಲೋಕಾಂತವಮನೆಯ್ದಿ ತಾಮುಮಿರದಯ್ದಿದರಾತ್ಮನಿಕೇತನಂಗಳಂ (ಶಾಂಪು ೧೨-೯೬) ; ನಿಜಪುರಾಕೃತಜನ್ಮಕರ್ಮದ ವೃಜಿನಪರಿಹಾರಾರ್ಥದಲಿ ನೆಱೆ ಭಜಿಸಲದುವೇ ಸಾತ್ವಿಕಧರ್ಮಭಕ್ತಿ ಭಾವಿಸಲು (ನಭಾಗ. ೬-೧೩-೨೩). ೫. (ಸುರುಳಿ ಸುತ್ತಿಕೊಂಡ) ಕೂದಲು; (ಗುಂಗುರು) ಕೂದಲು : "ವೃಜಿನಂ ಕೇಶಮೆನಿಕ್ಕುಂ" (ವಪ್ಪಕೋ. ೧೩೧-೮೧). ೬. ದುರುಳ ; ದುಷ್ಟ. ೭. ಕ್ಲೇಶ ; ಸಂಕಟ ; ನೋವು : "ವೃಜಿನಂ ಕ್ಲೇಶಾಘವ[ಕ್ರ] ವಾಚಿಯುಮಕ್ಕುಂ" (ವಪ್ಪಕೋ. ೧೩೧-೮೧). ೮. ರೋಗ ; ರುಜೆ. ೯. ಕೆಂಪುಚರ್ಮ. ೧೦. ಕಠಿಣತೆ ; ತೀವ್ರತೆ . "ಶರೋಜಂ ರುಜೆ ವಕ್ರಂ ತೀವ್ರಂ ಪಾಪಂ ವೃಜಿನಮನಿಕ್ಕು" (ನಾನಾರ್ಥ. ೬೫). [ಸಂ.]

ವೃಜಿನಬಂಧ (ನಾ). ಪಾಪದ ಕಟ್ಟು ; ದುಷ್ಕರ್ಮದ ಪಾಶ : ಇಂತಿದೇಂ ವೃಜಿನಬಂಧಮೋ ಕುಸೃತಿಬಂಧಸಂಬಂಧಮೆಂದದೇಂ ತಳೆದನೋ ಮುನಿಪ್ರವರನಾಗಳುದ್ವೇಗಮಂ (ಸುಕುಮಾ. ೪-೬೧). [ಸಂ.]

ವೃಜಿನಾರಿ (ನಾ). ಪಾಪರಹಿತನಾದವನು ; ದುಷ್ಕರ್ಮಗಳಿಲ್ಲದವನು : ಆ ರಾಜಕುಳದೊಳಖಿಳ ಜನಾರಾಧ್ಯಂ ಸುಖದಿನಿರ್ಪನುನ್ಮಥಿತ ಸಮಸ್ತಾರಿ ಮಹಾಸೇನಂ ವೃಜಿನಾರಿ ಮಹಾಸೇನನೆಂಬನವನೀನಾಥಂ (ಚಂದ್ರಪ್ರ. ೧೧-೮೧). [ಸಂ.]

ವೃಣೀತ (ನಾ). ಆಯ್ಕೆಯಾದವನು ; ಚುನಾಯಿತನಾದವನು : ಯಾರು ವರಣವನ್ನು ಪಡೆಯುತ್ತಾನೋ ಎಂದರೆ ವರಣಸ್ಪರ್ಧೆಯಲ್ಲಿ ಜಯಶಾಲಿಯಾಗುತ್ತಾನೋ — ಅವನು ವೃಣೀತ, ಚುನಾಯಿತ, ಎಲೆಕ್ಟೆಡ್ (ರಾಜ್ಯಶಾ. ೨೮೬). [ಸಂ.]

ವೃತ (ಗು). ೧. ಮರೆಮಾಡಲ್ಪಟ್ಟ ; ಆವರಿಸಲ್ಪಟ್ಟ ; ಮುಚ್ಚಿದ : ಕೋರಕಾಗ್ರಸನೋತ್ಕಂಠಾನ್ಮಪುಷ್ಪೋತ್ಕರವೃತವಿಟಪಂ ಚೂತಂ . . . ಜನಪದದುದ್ಯಾನದೊಳ್ ಕುಂದಮಂದಂ (ಚಂದ್ರಪ್ರ. ೧೧-೪೩). ೨. ಸುತ್ತುವರಿದ ; ಬಳಸಿದ : ವರ್ಣಂಗಳ ಪಾತಕ್ರಮಮರ್ಣವವೃತಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ ವರ್ಣಂಗಳಕಾರಾದ್ಯಾಪೂರ್ಣತೆಯಂ ಪಡವುವಾಳಕಾರಂಬರೆಗಂ (ಶಮದ. ೪). ೩. ತಡೆಗಟ್ಟಿದ ; ಅಡ್ಡಿಪಡಿಸಿದ. ೪. ಚುನಾಯಿಸಿದ ; ಆಯ್ಕೆಮಾಡಿದ. ೫. ಒಪ್ಪಿದ ; ಅಂಗೀಕರಿಸಿದ. ೬. ಪ್ರೀತಿಸಿದ ; ಆರಾಧಿಸಿದ. ೭. ಅಪೇಕ್ಷಿಸಿದ ; ಕೋರಿದ. (ನಾ). ೮. ಅಂಗೀಕರಿಸಲ್ಪಟ್ಟವನು ; ಸಮ್ಮತಿಸಲ್ಪಟ್ಟವನು : "ವೃತಃ, ವೃತ್ತಃ, ವಾವೃತ್ತಃ – ಅಂಗೀಕರಿಸಲ್ಪಟ್ಟವನು, ನನಗೆ ಇವನಾಗಬೇಕೆಂದು ವರಿಸಲ್ಪಟ್ಟವನು" (ಸಿದ್ಧಾಂತಿ. ೩೪೭). [ಸಂ.]

ವೃತಗೋಮ (ನಾ). ೧. ಕಿರಣಗಳಿಂದ ಆವೃತನಾದವನು ; ಚಂದ್ರ. ೨. ಸಂಪತ್ತಿನಿಂದ ಕೂಡಿದವನು ; ರಾಜ. ೧, ೨ : ವೃತಗೋಮಂ ಸಕಳಕಳಾನ್ವಿತನಮೃತಮಯಂ ವಿಶುದ್ಧವೃದ್ಧಂ ಪರಿವೇಷ್ಟಿತಸನ್ನಿವಹಂ ಕುವಳಯಹಿತನೆನೆ ಸಂಪೂರ್ಣಚಂದ್ರನೊಳ್ಳಿರೆ ಚಂದ್ರಂ (ಮದಪ. ೧-೪೬). [< ಸಂ. ವೃತಗೋಮತ್]

ವೃತರೇಫ (ನಾ). [ವ್ಯಾಕ] ರಕಾರದ ಒತ್ತಿನಿಂದ ಕೂಡಿದುದು ; ಸುತ್ತಿದ ರೇಫ : ನೆಗಟ್ಟುಂ ದ್ವಿತ್ವಾಗ್ರದ ರೇಫೆಗೆ ಲೋಪಂ ವರ್ಣಮಿಶ್ರ ರೇಫಕ್ಕಂ ತಾಂ ನೆಗಟ್ಟುಂ

ಲೋಪಂ ಬಹುಳದೆ ನೆಗಟ್ಟುಂ ವೃತರೇಫವುಡಿಯೊಳಾ ವರ್ಣದ ವೋಲ್ (ಶಮದ. ೨೭). [ಸಂ.]

ವೃತಿ (ನಾ). ೧. ಆರಿಸುವಿಕೆ ; ಆಯ್ಕೆಮಾಡುವಿಕೆ : ''ವರಃ, ವೃತಿಃ – ೨ ವರಿಸುವಿಕೆ, ನನಗೆಯಿದು ಸಾರಲಿಯೆಂದು ಒಪ್ಪಿ ಅಂಗೀಕರಿಸುವಿಕೆ'' (ಸಿದ್ಧಾಂತ. ೩೫). ೨. ಮುಚ್ಚುವಿಕೆ ; ಆಚ್ಛಾದಿಸುವಿಕೆ. ೩. ಕೇಳುವಿಕೆ ; ಕೋರುವಿಕೆ. ೪. ಸುತ್ತುವರಿಯುವಿಕೆ ; ಆವರಿಸುವಿಕೆ. ೫. ಸುತ್ತುವರಿದಿರುವುದು ; ಬೇಲಿ; ಆವರಣ : ದಯೆ ವೃಕ್ಷಮೂಲಮೆನಿಕುಂ ನಿಯಮಂ ವೃತಿ ಶೀಲಮಾಳವಾಳಮೆನಲ್ಕೇಟ್ಟಯನಾಳ್ದು ಸುಖದ ಫಲಪ್ರಾಪ್ತಿಯನಾಗಿಪ ಕಲ್ಪವೃಕ್ಷಮಲ್ಲದೆ ಧರ್ಮಂ (ಪುಷ್ಪಪು. ೧೩-೫೫). ೬. ಆಯ್ಕೆ ; ವರಣ. [ಸಂ.]

ವೃತ್ತ (ಗು). ೧. ಬಳಸಿದ ; ಸುತ್ತುವರಿದ. ೨. ಗುಂಡಾದ ; ವರ್ತುಲಾಕಾರದ. ೩. ಉಂಟಾದ ; ಸಂಭವಿಸಿದ. ೪. ಮುಗಿದ ; ಪೂರ್ಣಗೊಂಡ. ೫. ಆಗಿಹೋದ ; ನಡೆದುಹೋದ ; ಕಳೆದ. ೬. ನಡೆಸಿದ ; ಆಚರಿಸಿದ. ೭. ಆವರಿಸಲ್ಪಟ್ಟ. ೮. ಗತಿಸಿದ ; ಮರಣಹೊಂದಿದ. ೯. ಓದಿದ ; ಅಭ್ಯಾಸಮಾಡಿದ. ೧೦. ದೃಢವಾದ ; ಬಲವಾದ. (ನಾ). ೧೧. ಸುತ್ತಿದುದು ; ಬಳಸಿದುದು : ''ವೃತ್ತ, ವ್ಯಾವೃತ್ತ --- ಮರಳಿದುದು'' (ನಾಚರಾ. ೬). ೧೨. ದುಂಡಾಗಿರುವುದು ; ವರ್ತುಲಾಕಾರವಾದುದು : ''ನಿಸ್ತಲಂ, ವರ್ತುಳಂ, ವೃತ್ತಂ - ಈ ೩ ಬಟ್ಟತ್ತು'' (ಪಲಾಯು. ೧೫೪-೬೭). ೧೩. ಉಂಟಾದುದು ; ಸಂಭವಿಸಿದುದು. ೧೪. ಮುಗಿದುಹೋದುದು ; ನಡೆದುಹೋದುದು : ''ವೃತ್ತಂ ಭೂತಂ ಕ್ರಿಯೆಗುಪಪತ್ತಿಯೊಳೊಡೆಸಲ್ಕುದು'' (ವಸ್ತುಕೋ. ೧೮-೧೮). ೧೫. ನಡೆಸಿದುದು ; ಆಚರಿಸಿದುದು. ೧೬. ಸತ್ತುದು ; ಮರಣಹೊಂದಿದುದು. ೧೭. ದೃಢವಾದುದು ; ಬಲವಾದುದು. ೧೮. ಪ್ರಸಿದ್ಧವಾದುದು ; ಹೆಸರುವಾಸಿಯಾದುದು. ೧೯. ಸುದ್ದಿ; ಸಮಾಚಾರ ; ವೃತ್ತಾಂತ : ಅತ್ತ ಮಾವನು ಮೊದಲಾದ ಪೂಜ್ಯರೊಳನುವೃತ್ತಿಗ್ಗೆದಾತ್ಮವಲ್ಲಭನ ಚಿತ್ತವಱಿತು ಸೇವೆಯಸಗುವ ಸತಿಯರ ವೃತ್ತವ ಬಿತ್ತರಿಸುವೆನು (ಹರಿಪು. ೪-೩) ; ಕೇಳ್ದಳಿತ್ತನಸೂಯೆ ಮಧುರಭಾಷಿಣಿ ಜನಕಜಾತೆಯ ವದನದಿಂ ಸ್ವಯಂವರದ ವೃತ್ತಮಂ (ಶ್ರೀರಾಮಾ. ೧೭೮-೭೩). ೨೦. ನಡವಳಿಕೆ ; ವರ್ತನೆ : ವೃತ್ತಮುಮಖಿಳಕಳಾಸಂಪತ್ತಿಯುಮತಿವಿಶದಮೆನಿಕುಂ (ಪಾರ್ಶ್ವಪು. ೧೦-೨೪) ; ಎತ್ತನೇಱುವನಾಜ್ಞೆಯನು ಸುರಲೋಕಪಾಲಕರು ಹೊತ್ತು ನಡೆಸುವರವರಿಗಿಷ್ಟವನಿತ್ತು ನಡೆಸುವನಾವನಾತನ ವೃತ್ತವನು ವಿಧಿಗಱಿಯಲರಿದೆಂದಳು ಸರೋಜಮುಖಿ (ನಳಾಗ. ೪-೫-೫೧). ೨೧. ಚರಿತ್ರೆ ; ಇತಿಹಾಸ. ೨೨. ಉದ್ಯೋಗ ; ವೃತ್ತಿ. ೨೩. ನಿಯಮ, ಸಂಪ್ರದಾಯಗಳ ಆಚರಣೆ, – ಅನುಷ್ಠಾನ. ೨೪. ಅವೃತ ; ಸುಧೆ. ೨೫. ಶತ್ರು ; ಹಗೆ. ೨೬. ಕತ್ತಲೆ ; ತಿಮಿರ : ''ವ್ಯೂಗಳಮೃತಂ ಕತ್ತಲೆ ಚಾರಿತ್ರಂ ವಸ್ತುಕಂಗಳಸುರಂ ದೃಢಮುಂ ಸೇರಿದ ಬಟುವೆಂಟಕ್ಕಂ ತೋರಿದ ಸಲೆ ವೃತ್ತಶಬ್ದಮೆನಿಕುಂ ಜಗದೊಳ್'' (ನಾನಾಕಂ. ೧೩೬). ೨೭. ಅಂಗೀಕರಿಸಲ್ಪಟ್ಟವನು ; ವರಿಸಲ್ಪಟ್ಟವನು. ೨೮. ಆಳವಾದುದು ; ಗಂಭೀರವಾದುದು. ೨೯. [ಗಣಿತ] ಸೊನ್ನೆ ; ಶೂನ್ಯ : ದಿವಿ . . . ವೃತ್ತಂ ಆಗಸ ಜಲಧರಪಥ ಇಂತಿನಿತುಂ ಸೊನ್ನೆ(ಂ)ಗೆ ಹೆಸರು (ವ್ಯವಹಾ. ೧೧-೬). ೩೦. [ರೇಖಾಗ] ದುಂಡಾಗಿರುವ ವರ್ತುಲ : ಒಂದು ರೇಖೆಯಿಂದ ಸುತ್ತಲ್ಪಟ್ಟುಯಿರುವ ಪ್ರದೇಶವನ್ನು ವ ಕ್ಷೇತ್ರವನ್ನು ವರ್ತುಳ, ಪರಿಧಿ -ವ-ವೃತ್ತವೆಂದು ಹೇಳುವುದು (ಭೂಮಿಅ. ೯); ಹಿಪ್ಪಾಕ್ರೆಟೀಸನು ವೃತ್ತಗಳ ಮೇಲೆ ಅನೇಕ ವಿಷಯಗಳನ್ನು ಕಂಡುಹಿಡಿದನು (ಗಣಿಚ. ೨೭). ೩೧. ದೊಡ್ಡ ವರ್ತುಲದ ಪರಿಧಿಯ ಮೇಲೆ ಕೇಂದ್ರವುಳ್ಳ ಸಣ್ಣ ವರ್ತುಲ, — ಉಪರಿವರ್ತುಲ. ೩೨. [ಛಂದ] ಅಕ್ಷರಗಣ, ಮಾತ್ರಾಗಣ ಅಥವಾ ಅಂಶಗಣಗಳಿಂದ ಕೂಡಿದ ಛಂದೋಬಂಧ : ಅಲ್ಲಿ ಸಮಂ ಅರ್ಧಸಮಂ ವಿಷಮಮೆಂದು ವೃತ್ತಂ ಮೂಱುತೆಱನಕ್ಕುಂ (ಛಂದೋಬು. ೧-೪೬ ವ); ವೃತ್ತಮನೇಕಮಿಲ್ಲಿ ರಸಭಾವಸಮೇತದಿ ಪುಟ್ಟಿ ಕಾಮಿನೀ ವೃತ್ತಕುಚಂಗಳಂತೆ ಜನಮಂ ಮಿಗೆ ಮೋಹಿಸುತಿರ್ಪಿನಂ . . . ಕೇಳ್ದು ಸದ್ವೃತ್ತಸಭಾಜನಂ ಪೊಗಳೆ ಪೇಳಲೊಡರ್ಚಿದೆನೀ ಪ್ರಬಂಧಮಂ (ತ್ರಿಪು. ೧-೪೦). ೨, ೩೨ : ಕುಂದದ ಕೋಮಲಾಂಗರುಚಿಯಿಂ ಚೆಲುವಿಂಗೆಡೆಯಾಗಿ ವೃತ್ತದೊಂದಂದದೊಳಿರ್ದ ಪೆರ್ಮೊಲೆಯಿನಂತೆಸೆದೊಪ್ಪುವನೇಕ ಛಂದದೊಂದಂದದ ಯಾನದೊಂದು ರಮಣೀಯತೆಯಿಂ ಕಡುಗಾಡಿವೆತ್ತ ವಾಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರ ಮುಖಾಬ್ಜಷಂಡದೊಳ್ (ಧರ್ಮಾಮೃ. ೧-೮). 'ಮಾತ್ರಾವೃತ್ತ', 'ವರ್ಣವೃತ್ತ' ಪದಾ.

ವೃತ್ತಜಾತಿ = ಬೇರೆಬೇರೆ ರೀತಿಯ ಛಂದಸ್ಸು, — ಪದ್ಯಜಾತಿ : ಯತಿಯೆಂಬುದುಸಿರ್ವ ತಾಣಂ ಕೃತಾಸ್ಪದಂ ವೃತ್ತಜಾತಿ ಪದಪದ್ಧತಿಯೊಳ್ (ಕವಿರಾ. ೧-೭೧). [ಸಂ.]

ವೃತ್ತಕ (ನಾ). ೧. ಸಮಾಚಾರ ; ಸುದ್ದಿ : ಕರೆದಾಗಳ್ ನಿಜಮಂತ್ರಿಮಂಡಲಮಹಾಸಾಮಂತ ಶುದ್ಧಾಂತಮುಖ್ಯರನಾ ವೃತ್ತಕಮೆಲ್ಲಮಂ ತಿಳಿಯೆ ಪೇಟ್ದು (ಆದಿಪು. ೧-೮೦); ನಿಮ್ಮ ಸಱಿಯಂ ಬಿಡಿಸಲ್ ಬಂದೆನಿದು ಮದೀಯ ವೃತ್ತಕಮೆನೆ ಸೀತೆ ಸಂತೋಷಂಬಟ್ಟು . . . ಬೆಸಗೊಂಡಳ್ (ಪಂಡಾಮಾ. ೧೧-೧೦೧ ವ). ೨. ಕಸುಬು ; ಉದ್ಯೋಗ : ಆ ಮಹೇಶ್ವರಂ . . . ಎತ್ತ ವನಮೆತ್ತ ಮೃಗಯಾವೃತ್ತಕಮಿಂತಪಸಿಯತ್ತ ಮೃಗಮೆಂದಂ[ತಾ]ನತ್ಯಚ್ಛನಾತ್ಮಕರ್ಮಾಯತ್ತಂ ಪಱಿತಲ್ತಿದಲ್ಲಮಘಟಿತ ಘಟಿತಂ ಎಂದು ಚಿಂತಿಸುತ್ತುಂ (ಪಂಪಭಾ. ೧-೧೦೩). ೩. ಒಂದು ಬಗೆಯ ಗದ್ಯರಚನೆ. ೪. ಒಂದು ಬಗೆಯ ಲೋಹ ; ಕಬ್ಬಿಣ (?) : ''ಖಾತಂ ತಾಂ ವೃತ್ತಿಲೋಹಮೆನೆ ವೃತ್ತಕಮುಂ'' (ಪಸ್ತ್ರಕೋ. ೨೯-೮). [ಸಂ.]

ವೃತ್ತಕಟಿ (ನಾ). ದುಂಡಾದ ನಡು, — ಸೊಂಟ : ನಡು ಬಳ್ಕೆ ವೃತ್ತಕಟಿ ಕೆತ್ತ . . . ನಿಕಾಮಕೋಮಳೆ ಪರಿತಂದುದಂಗದೊಳೆ ನಿಂದು ಕುಮಾರನನಂದು ನೋಡಿದಳ್ (ಸುಕುಮಾ. ೧೧-೧೧). [ಸಂ.]

ವೃತ್ತಕುಚ (ನಾ). ಬಟ್ಟಮೊಲೆ ; ದುಂಡಾಗಿರುವ ಸ್ತನ : ವೃತ್ತಕುಚಂಗಳಂದುದಿರ್ದ ಚಂದನದೊಳ್ ತಳಿರ್ವಾಸು ಬೆಳ್ಪನಾಳ್ದತ್ತು (ಪಂಪಭಾ. ೫-೧೭). [ಸಂ.]

ವೃತ್ತಕುಚೆ (ನಾ). ಬಟ್ಟಮೊಲೆಗಳನ್ನುಳ್ಳವಳು ; ದುಂಡಾದ ಸ್ತನಗಳನ್ನುಳ್ಳವಳು : ವೃತ್ತಕುಚೆ ಮೆಱದು ನುಡಿದೊಡಿದೆತ್ತಣ ಮಾತೆನ್ನದಿಕ್ಕೆ (ಮುದಿ. ೧೦-೭೮) ; ವೃತ್ತಕುಚೆಯರ್ಗೆ ಬೆಮರಿಂದೊತ್ತರಿಸಿತ್ತಂಗದಲ್ಲಿ ಕತ್ತುರಿಯೆ ಪದಂಬೆತ್ತಂತೆಲರೊಳ್ ನೀರ್ದಳಿದತ್ತೆನೆ ದೊರೆವೆತ್ತು ಸುರಭಿಪರಿಮಳಮಾಗಳ್ (ಪಾರ್ಶ್ವಪು. ೯-೨೫).

[ಸಂ. ವೃತ್ತಕುಚಾ (ವೃತ್ತ + ಕುಚ + -)]

ವೃತ್ತಗಂಧಿ (ನಾ). [ಕಾವ್ಯಮೀ] ''ಗದ್ಯರೂಪವಾಗಿ ಹೊರಟು ಮಧ್ಯೆ ಛಂದೋರೂಪಕ್ಕೆ ತಿರುಗಿ ವೃತ್ತಪಾದಗಳೂ ಪಾದಭಾಗಗಳೂ ಆಗಿ ಪ್ರವಹಿಸುವ ಗದ್ಯಶೈಲಿಗೆ 'ವೃತ್ತಗಂಧಿ' ಎಂದು ಹೆಸರು'' (ಕೃಪಿ. ೧೭೯) : ಗದ್ಯವೆನ್ನುವುದು ಛಂದಸ್ಸಿಲ್ಲದ ಪದಸಮೂಹವೆಂದು ಸ್ಮೃತವಾಗಿದೆ. ಅದಾದರೂ ಉತ್ಕಲಿಕಾ, ಚೂರ್ಣಿಕಾ ಹಾಗೆಯೇ ಲಲಿತ, ವೃತ್ತಗಂಧಿ, ಖಂಡ,ಚಿತ್ರ ಎಂದು ಆರು ವಿಧ (ಚಮತ್ಕೃ. ೯೮). [ಸಂ.]

ವೃತ್ತತಂಡುಲ (ನಾ). ಒಂದು ಬಗೆಯ ಹುಲ್ಲು : ''ವೃತ್ತತಂಡುಲಃ – ಬೋಟು, ಹಾರಕ'' (ಓಷಧಿ. ೧೫೮). [ಸಂ.]

ವೃತ್ತತರ (ಗು). ೧. ದುಂಡಾಗಿರುವ ; ದುಂಡಾದ : 'ವೃತ್ತತರೋರು' ಪರಾ.(ನಾ). ೨. ದುಂಡಾಗಿರುವುದು ; ಗುಂಡಾಗಿರುವುದು : ಅತಿದೀರ್ಘ ಮಾಂಸಳಂ ವೃತ್ತತರಂ ಧೃತ ವಿಜಯಲಕ್ಷ್ಮಿ ಮಾಡಿದುದ್ದೈರಾವತ ಪುಂಡರೀಕ ಕರಯುಗ ವಿತರ್ಕಮಂ ಭುಜಯುಗಂ ನಭಶ್ಚರಪತಿಯಾ (ಶಾಂಪು. ೩-೪೪). [ಸಂ.]

ವೃತ್ತತರೋರು (ನಾ). ದುಂಡಾಗಿರುವ ತೊಡೆ : ಪಿತೃ ಗುರು ವಿಪ್ರಯೋಗ ವಿಯುತ ಸ್ಥಿತಿ . . . ವೃತ್ತತರೋರುಜಂಘನುಗ್ರತಮನಿಳಾಧಿಪಪ್ರಣುತನೆಂಬುದು ವೃಶ್ಚಿಕ ಗೇಹಜಾತಕಂ (ಜಾತಕ. ೧೭-೮). [ಸಂ.]

ವೃತ್ತತೆ (ನಾ). ದುಂಡಾಗಿರುವಿಕೆ; ಗುಂಡಾಗಿರುವಿಕೆ; ಬಟ್ಟುವು : ಬಂದುವನುಸ್ಸಾರಂ ತಾನೆಂದಕ್ಕುಂ ಸೊನ್ನೆ ಮುತ್ತುವೋಲ್ ವೃತ್ತತೆಯಿಂ ಸಂದಿರ್ಪುದು (ಶಮದ. ೧೮). [ಸಂ. ವೃತ್ತತಾ]

ವೃತ್ತನಾಮ (ನಾ). ಛಂದೋಬಂಧಕ್ಕೆ ಒಳಪಟ್ಟ ಕೀರ್ತನೆ, — ಹಾಡು : ವಿಜಯದಾಸರ ಸುಳಾದಿಯಲ್ಲಿ ಪುರಂದರದಾಸರು ತಮ್ಮ ಭೂಪ್ರದಕ್ಷಿಣೆಯಲ್ಲಿ . . .

೪೦,೦೦೦ ಕಲ್ಯಾಣ ಶತಚರಿತೆಗಳನ್ನು ರಚಿಸಿದರೆಂದೂ, ೩೭,೦೦೦ ವೃತ್ತನಾಮಗಳನ್ನು ಹಾಡಿದರೆಂದೂ ಉಲ್ಲೇಖವಿದೆ (ಕಭಪ. IV ಮುನ್ನುಡಿ). [ಸಂ.]

ವೃತ್ತಪತ್ರ (ನಾ). ಸುದ್ದಿ , ಜಾಹೀರಾತು, ಸಾಹಿತ್ಯವಿಷಯಗಳನ್ನೊಳಗೊಂಡು ಪ್ರತಿದಿನವೂ ಪ್ರಕಟವಾಗುವ ಸಮಾಚಾರಪತ್ರ ; ವೃತ್ತಪತ್ರಿಕೆ : ವೃತ್ತಪತ್ರ ದೂತನ ಪಡಸಾಲೆಯ ಮಗ್ಗುಲದ ಕೋಣೆಯಲ್ಲಿ ಹೋಗಿ ಕುಳಿತಳು (ಗಂಮಾಯಿ. ೧೨೬). [ಸಂ.]

ವೃತ್ತಪತ್ರಿಕೆ (ನಾ). ೧. = ವೃತ್ತಪತ್ರ : ವೃತ್ತಪತ್ರಿಕಾಕಾಗದ . . . ವೃತ್ತಪತ್ರಿಕೆಗಳು, ಪ್ರಕಟನೆಗಳು . . . ಮುಂತಾದವುಗಳ ಮುದ್ರಣಕ್ಕೆ ಉಪಯೋಗವಾಗುತ್ತದೆ (ಮುದ್ರಣ. ೮೪). ೨. ಒಂದು ಬಗೆಯ ಸಸ್ಯ ; ಅಗುಳುಶುಂಠಿ : "ವೃತ್ತಪತ್ರಿಕಾ - ಅಗುಳುಶುಂಠಿ, ಚವ್ಯ" (ಓಷಧಿ. ೧೫೮) [ಸಂ. ವೃತ್ತಪತ್ರಿಕಾ]

ವೃತ್ತಪಯೋಧರೆ (ನಾ). = ವೃತ್ತಕುಚೆ : ಮತ್ತೀ ಕುರುಭೂಪಾಲನನಿಜಸತಿಯುತ್ತಮ ಜಲಧಿಯೆಂಬೋರ್ವ ವೃತ್ತಪಯೋಧರೆಗುದಧಿಯೆಂಬವಳುತ್ಪತ್ತಿಯಾಗಿ ನೆಜ್ ಬೆಳೆಯೆ (ನೇಮಿಜಿ. ೧೯-೧೧೭): [ಸಂ. ವೃತ್ತಪಯೋಧರಾ (ವೃತ್ತ + ಪಯೋಧರ + -)]

ವೃತ್ತಪರಿಧಿ (ನಾ). [ರೇಖಾಗ] ವರ್ತುಲದ ಸುತ್ತುಗೆರೆ; ವೃತ್ತದ ಅಂಚಿನ ರೇಖೆ : π , ಅಥವಾ ವೃತ್ತಪರಿಧಿ ÷ ವ್ಯಾಸ, ಎಂಬ ಸಂಖ್ಯೆಗೆ . . . ೩.೧೬ ಎಂಬ ಬೆಲೆಯು ಕೊಡಲ್ಪಟ್ಟಿದೆ (ಗಣಿ. ೧೦). [ಸಂ.]

ವೃತ್ತಪಾಠಕ (ನಾ). ಮಂಗಳಶ್ಲೋಕಗಳನ್ನು ಹಾಡುವವನು ; ಮಂಗಳ ಪಾಠಕ : ಸಕಲಮಧುವ್ರತಪ್ರಚಯಮಂಬ ಪಿಕಾವಳಿಯೆಂಬ ಸದ್ಯಚಃಶುಕಕುಳಮೆಂಬ ಮೆಚ್ಚಿಸಿದ ಗಾಯಕ ಸತ್ಪ್ರತಿಹಾರ ವೃತ್ತಪಾಠಕತತಿಗಿತ್ತನಗ್ಗಳದ ಮಾವಿನ ಪೂವಿನ ಮಾವಿನಂಕುರಪ್ರಕರದ ಮಾವಿನೊಳ್ಮಿಡಿಯ ಜೇತಮಂ ಮದನಂ ಬಸಂತದೊಳ್ (ಶಾಂತಿಪು. ೭-೧೨೯). [ಸಂ.]

ವೃತ್ತಫಲ (ನಾ). ೧. ಬದರಿಗಿಡ ಮತ್ತು ಅದರ ಹಣ್ಣು ; ಎಲಚಿ. ೨. ದಾಳಿಂಬೆ ಗಿಡ ಮತ್ತು ಅದರ ಹಣ್ಣು. ೩. ಬೇಲದಮರ ಮತ್ತು ಅದರ ಹಣ್ಣು : "ವೃತ್ತಫಲಃ — ಬೇಳ, ದಾಳಂಬ, ಎಲಚಿ " (ಓಷಧಿ. ೧೫೮). ೪. ಮೆಣಸು. [ಸಂ.]

ವೃತ್ತರೇಖೆ (ನಾ). [ರೇಖಾಗ] ವರ್ತುಲದ ಸುತ್ತುಗೆರೆ, — ಅಂಚಿನ ರೇಖೆ ; ವೃತ್ತದ ಪರಿಧಿ : ಹಿಗ್ಗಲಿಸಲಾಗುವಂತೆ ಒಂದು ಕೊನೆಯಲ್ಲಿ ಕೀಲಿಸಿರುವ ಎರಡು ಬಾಹುಗಳುಳ್ಳ , ವೃತ್ತರೇಖೆಯನ್ನೆಳೆಯುವ, ಸಲಕರಣೆ: ವೃತ್ತರೇಖಕ; ಕೈವಾರ (Compass. ಇಂಡಾ). [ಸಂ. ವೃತ್ತರೇಖಾ]

ವೃತ್ತವಿಹಂಗ (ನಾ). ಚಕ್ರವಾಕಪಕ್ಷಿ : ಇತ್ತರದಲಿ ತಳರ್ವಡೆದಿರ್ದ ಮಾಮರ ಮತ್ತೇಭ ಗಿಳಿ ತೇಜಿವಿಂಡು ವೃತ್ತವಿಹಂಗ ಚಕೋರಕಾಲಾಳ್ಗಳ ಮೊತ್ತದಿ ನಡದನಳ್ತಿಯಲಿ (ಮೋಹ. ೬-೧೯). [ಸಂ.]

ವೃತ್ತವೆಳು (ಕ್ರಿ). ದುಂಡಾಗು ; ವರ್ತುಲಾಕೃತಿಯನ್ನು ಹೊಂದು : ಪೊಂಗುಳಿಗೆಗಳ ಪರಿಯೊಳಂಗುಷ್ಮಂಗಳೊಪ್ಪುಗು . . . ಗುಲ್ಮಂಗಳೆಸವವು ವೃತ್ತವೃತ್ತತಿನವಕದಲಿ ಸತಿಯ (ಬಸವ. ೪-೧೭). [ವೃತ್ತ + ವೆಳು]

ವೃತ್ತಸಂಪನ್ನ (ನಾ). ಒಳ್ಳೆಯ ನಡವಳಿಕೆಯುಳ್ಳವನು ; ಸಚ್ಚಾರಿತ್ರ್ಯವಂತ : ಇತರ ರಾಷ್ಟ್ರಾಧಿಪತಿಗಳೂ ಕೂಡ . . . ಈಗ ಆ ಧಾರ್ಮಿಕರೂ ವೃತ್ತಸಂಪನ್ನರೂ ಆದ ಯುಧಿಷ್ಠಿರಾದಿಗಳು ಸತ್ತು ಹುಟ್ಟಿದಂತಾಯಿತೆಂದು ಅಷ್ಟು ಸಂತೋಷ ಪಟ್ಟು, ಧೃತರಾಷ್ಟ್ರಾದಿಗಳನ್ನು ಧಿಕ್ಕರಿಸಿದರು (ಭೀಷ್ಮ. ೧೫೫). [ಸಂ.]

ವೃತ್ತಸ್ತನ (ನಾ). = ವೃತ್ತಕುಚ : ವೃತ್ತಸ್ತನದೊಡನೊಡನತ್ತಿತ್ತಸುವರೆಯಾಗೆ ನೃಸುರನೇತ್ರಾಳಿ ಪರಾವೃತ್ತಾರೋಚಿತಕಂಪನವೃತ್ತೋನ್ನತಘನನಿತಂಬಮೆಸೆದುದು ನಟಿಯಾ (ಲೀಲಾವ. ೪-೧೨೯) ; ಹರುಷದಲುಬ್ಬಿ ಕೀಚಕನನಿಲಜನ ಮೈದಡವಿ ವೃತ್ತಸ್ತನವ ಕಾಣದ ಹದಲಿ ಬಳಿಕಂತಂದನವ ಸಗುತ (ಕುಮಾವಿ. ೩-೮೬). [ಸಂ.]

ವೃತ್ತಸ್ತನೆ (ನಾ). = ವೃತ್ತಕುಚೆ : ವೃತ್ತಸ್ತನೆಯರ ಕುಚತಟಕೊತ್ತ ನೃಪಂ ಮೃಗಮದಾಂಬುವಂ ಬಗೆಗೊಳಿಕುಂ ಚಿತ್ರಜಗಜಕುಂಭತಟಾಯತ್ತಾಯತ ದಾನವಾರಿ ವಾರಿಯ ತೆಱದಿಂ (ಪಾರ್ಶ್ವಭ್ಯು-೧೨೬). [ಸಂ. ವೃತ್ತಸ್ತನಾ (ವೃತ್ತ + ಸ್ತನ + -)]

ವೃತ್ತಹಸ್ತ (ನಾ). ೧. ದುಂಡಾಗಿರುವ ಕೈ ; ಗುಂಡಾಗಿರುವ ಹಸ್ತ. ೨. ದುಂಡಾದ ಕೈಗಳುಳ್ಳವನು : ದಕ್ಷಿಣಕರಾಲಂಬಿತನಿಬಿಡನಿವೇಷ್ಟಿತಾಂಶುಕ ವಿಶಾಲಸ್ಥೂಲ ವೃತ್ತ ಹಸ್ತನುಂ . . . ಅಂತಃಪುರಪ್ರಮದವನಪ್ರವಿಷ್ಟನಾಗಿ (ಆದಿಪು. ೮-೪೧ ವ). [ಸಂ.]

ವೃತ್ತಾಂತ (ನಾ). ೧. ಕಾರ್ಯಾಚರಣೆಯ ಅಂತ್ಯ, — ಪರಿಣಾಮ. ೨. ಘಟನೆ ; ಸಂಗತಿ ; ಪ್ರಸಂಗ : ಪ್ರವರ ನೃಪ ಕುಮಾರಾತ್ಮೋದಯಾ(ದಿ) ಪ್ರಮೋದಾಸವ ಸಮುದಿತ ಸೇವಾರಾತಿ ವೃತ್ತಾಂತವೃತ್ತಂ (ಕವಿರಾ. ೩-೨೧೬); ಬಳಿಕ ತೋರಿಹದೊಂದು ಕುಲೀಯಂ ಬಲಿತುಕೊಂಡೋಪಳ ಮನೆಗೆ ಹೋಗಲವನಿಂದಾದನಿತು ವೃತ್ತಾಂತವನಱಿದು ಸೂಳೆ ಮುಳಿವುತಂ (ಬಸವ. ೨೮-೧೮). ೩. ಸುದ್ದಿ ; ಸಮಾಚಾರ : ಅನಂತರಮಾ ವೃತ್ತಾಂತಮುಂ ತಿಳಿದು . . . ಅಂತು ಬಂದು ತಂದೆಯ ಪದಾರವಿಂದಕ್ಕೆಱಗಿ (ಪಂಡಾಮಾ. ೪-೪೩ ವ) ; ಇನಿತು ವೃತ್ತಾಂತಂಗಳಂ ಕೇಳ್ದನಿತಱೊಳು ನಡನಡುಗಿ ಬಸವಂ ಮನಗದಡಿ ಎಡೆಯೆಡಗಿಳಿಯೊಳಪ್ಪಾಂಗವೆಱಗುತ್ತ (ಬಸವ. ೨೨-೪೦). ೪. ಕಥೆ ; ಚರಿತ್ರೆ ; ಪ್ರಕರಣ : ಬಸವಣ್ಣ ನೆಱೆಯಲೀ ವೃತ್ತಾಂತವಂ ತಾನಱಿದು ಬಾಚಯ್ಮಂಗಳಂ ಮನವೆಱಗಿ ಬಿನ್ನಹವಾಗಿ ಬರವೇಳ್ದಟ್ಟಿದಡೆ (ಬಸವ. ೨೩-೭೪): ಹರಿರಾಮಾದಿಯದುನೃಪಜಾಲವೃತ್ತಾಂತವನು ತನಗಂದಾದ ಪರಿಭವವ . . . ವಿಸ್ತರಿಸಿ ನರನಱುಹಿದನು ಧರ್ಮಜಗ (ಕಿಷ್ಕಿಪ. ೧-೧). ೫. ವಿಷಯ ; ವಿಚಾರ ; ವಸ್ತು. ೬. ತರಹ ; ವಿಧ ; ಬಗೆ. ೭. ರೀತಿ ; ವಿಧಾನ ; ಕ್ರಮ. ೮. ಸ್ಥಿತಿ ; ಇರವು ; ಅವಸ್ಥೆ. ೯. ಪೂರ್ಣತೆ; ಸಂಪೂರ್ಣತೆ. ೧೦. ವಿಶ್ರಾಂತಿ; ವಿರಾಮ. ೧೧. ಒಂಟಿತನ ; ವಿಕಾಂತತೆ. ೧೨. (ವಸ್ತುವಿನ) ಸಹಜಗುಣ,— ಗುಣಧರ್ಮ ; ಸ್ವಭಾವ. ೧೩. ನಡವಳಿಕೆ ; ನಡತೆ ; ಕಾರ್ಯ : ಮತ್ತಗಜವಿಂತಭವನಂ ಭಜಿಸುತ್ತಮಿರೆ ಮೂಱುವಸರದೊಳುಂ ಮತ್ತೆ ಜೀಡಂ ಬಂದದಱ ವೃತ್ತಾಂತವಂ ನೋಡಿ ಚಿತ್ತದೊಳು ಕೋಪಿಸುತ (ಬಸವ. ೧೮-೪೨). [ಸಂ.]

ವೃತ್ತಾಕಾರ (ನಾ). ದುಂಡಾಗಿರುವ ಆಕೃತಿ ; ವರ್ತುಲಾಕಾರ : ಕೊರಳ ಒಳಗೂ ಹೊಱಗೂ ಮೇಲೆಯೂ ವೃತ್ತಾಕಾರವಾಗಿ ಬಾತುಕೊಂಡು ಗಾತ್ರವಾಗಿ ಹಲ್ಲುನೋವ ಉಂಟುಮಾಡುವದು (ವೈದ್ಯಸಾ. II. ೧೧೮). [ಸಂ.]

ವೃತ್ತಾಕಾರವಿಡಿ (ಕ್ರಿ), ವರ್ತುಲಾಕೃತಿಯನ್ನು ಹೊಂದು ; ಮಂಡಲಾಕಾರವಾಗಿರು ; ದುಂಡಾಗಿರು : ಬಿಡದೆ ವೃತ್ತಾಕಾರವಿಡಿದ ಸಾಕೆಯೊಳೊರ್ವ ಮಡದಿ ಗಂಧವ ತೇವ ಭರಕೆ ಒಡನಲುಗುವ ಮೊಲೆಗಳು ಚಂದ್ರಮನ ಕಂಡು ನಡುಗುವ ಕೋಕದಂತಿಹುವು (ಕಜಸಾ. ೨-೪೬). [ವೃತ್ತಾಕಾರ + ಪಿಡಿ]

ವೃತ್ತಾಖ್ಯ (ನಾ). ೧. ದುಂಡಾಗಿರುವ ಆಕೃತಿ ; ವೃತ್ತ ; ವರ್ತುಲ. ೨. ಒಂದು ಬಗೆಯ ಕುತ್ತಿಗೆಯ ಖಾಯಿಲೆ,- ಕಂಠರೋಗ : ಕೊರಳ ಒಳಗೂ ಹೊಱಗೂ ಮೇಲೆಯೂ ವೃತ್ತಾಕಾರವಾಗಿ ಬಾತುಕೊಂಡು ಗಾತ್ರವಾಗಿ ಹಲ್ಲುನೋವು ಉಂಟುಮಾಡುವುದು. ಅದು ಅತ್ಯಂತ ಉನ್ನತವಾದ ಗ್ರಂಥಿಯಹುದು. ಹೀಗಿದ್ದುದು ವೃತ್ತಾಖ್ಯ ಎಂಬ ಕಂಠರೋಗ (ವೈದ್ಯಸಾ. II. ೧೧೮). [ಸಂ.]

ವೃತ್ತಾಧ್ಯಯನ (ನಾ). ಒಳ್ಳೆಯ ಚಾರಿತ್ರ್ಯ, ನಡವಳಿಕೆಗಳಿಂದ ಕೂಡಿದ ಅಧ್ಯಯನ ; ಸಚ್ಚಾರಿತ್ರ್ಯದಿಂದ ಕೂಡಿದ ಅಭ್ಯಾಸ : ವೃತ್ತಾಧ್ಯಯನಂಗಳ ಸಂಪತ್ತಿಬಲಂ ಬ್ರಹ್ಮವರ್ಚಸಂ ತಾನಕ್ಕುಂ (ಪಸ್ತುಕೋ . ೨೮-೩೮). [ಸಂ.]

ವೃತ್ತಿ (ನಾ). ೧. ವರ್ತುಲಾಕಾರವಾಗಿ ಸುತ್ತುವಿಕೆ ; ಚಕ್ರಗತಿಯಲ್ಲಿ ತಿರುಗುವಿಕೆ. ೨. ವೃತ್ತ ಅಥವಾ ಚಕ್ರದ ಪರಿಧಿ ; ವರ್ತುಲದ ಹೊರವಲಯ. ೩. ಇರುವಿಕೆ ; ಅಸ್ತಿತ್ವ. ೪. ಸ್ಥಿತಿ ; ದೆಸೆ ; ಅವಸ್ಥೆ. ೫. ನಡವಳಿಕೆ ; ವರ್ತನೆ ; ಚರ್ಯೆ : ಸೂತ್ರಿಸಿದ ಸೂತ್ರ[ದ] ವೃತ್ತಿ ನಿಜಾತ್ಮವೃತ್ತಿವೋಲ್ ಪರಿಣಮಿಸಿತ್ತು (ಪಂಪಭಾ. ೨-೩೪) ; ಧಾತ್ರೀರಮಣಂ ದಿನಂಗಳಿನಿತಂ ಕಳೆವಂ ನಿಜಧೈರ್ಯವೃತ್ತಿಯಿಂ (ನಳಚಂ. ೬೨). ೬. ರೀತಿ ; ಕ್ರಮ ; ಪದ್ಧತಿ. ೭. ಜೀವನೋಪಾಯ ; ಕಸುಬು ; ಉದ್ಯೋಗ : ಯಥೋಚಿತವೃತ್ತಿಗಳನಱಿಪಲಂದು . . . ಅಜಂ ಬೇಜ್ತೋಱೆದೊಡೆ (ಆದಿಪು. ೮-೨೨ವ): ಇಲ್ಲಿ ನಿಮ್ಮಯ ವೃತ್ತಿ ಯಾವುದೆನೆ (ಸಂಜಿರ. ೭-೪೬) ; ವಿವಿಧವರ್ಣಗಳವರು ಮಾಡತಕ್ಕ ವೃತ್ತಿಗಳನ್ನು ಕುರಿತು ಸ್ಮೃತಿಗಳು ಪ್ರಸ್ತಾಪಿಸಿವೆ (ಧಾನಪ. ೫೫). ೮. ಕ್ರಿಯೆ ; ಚಲನೆ ; ಚಟುವಟಿಕೆ. ೯. ಪ್ರತಿಫಲದ ಹಣ ; ಭತ್ಯ ; ವೇತನ. ೧೦. ಆಸೆ ; ಬಯಕೆ ; ಅಪೇಕ್ಷೆ :

ಇನಶಶಾಂಕಾದಿಗಳೇ ಲಕ್ಷ್ಮೀವನಿತೆಯರಸನ ದ್ವಾರಪಾಲಕರನಿಸುತಿಹರು ಮನದ ವೃತ್ತಿಗಳ ಪದಾತಿಗಳು (ಪಸಾರ. ೩-೨೧) ; ಆಶೆಯು ಹುಟ್ಟಿ ದೇಹೇಂದ್ರಿಯಗಳಲ್ಲಿ ವ್ಯಾಪಾರಮಾಡಿಸುತ್ತಲೇ ಇರುವುದು. ಇದೇ ವೃತ್ತಿ . . . ಆ ವೃತ್ತಿಯೆಲ್ಲವೂ ನಿನ್ನ ಸಂಕಲ್ಪಾನುಸಾರವಾಗಿ ತಿರುಗುವಂತೆ ಮಾಡಿ . . . ಆತ್ಮವಶವಾಗಿ ಹುಟ್ಟುವ ವೃತ್ತಿಯನ್ನು ಹಿಡಿದು ವ್ಯಾಪಾರಮಾಡುವವನು ಮನುಷ್ಯನು (ಮಹಾಗ. ೬೬). ೧೧. ದೇವಸ್ಥಾನ, ಉದ್ಯೋಗ ಮೊದಲಾದುವುಗಳಿಗಾಗಿ ಬಿಟ್ಟ ಭೂಮಿ ; ಇನಾಂ ; ಜಹಗೀರು : ಸೇನಾನಾಯಕಾದ್ಯನೇಕರ ವೃತ್ತಿ ಪ್ರಪತ್ತಿಗಳಂ ಕಳೆದುಕೊಂಡು (ಪಂಚತಂ. ೨೮-೪) ; ಬ್ರಹ್ಮಪುರೀ ಕೇಶವಪುರದಲ್ಲಿ ಶ್ರೀಜಗದೇಕಮಲ್ಲೇಶ್ವರ ದೇವರಿಗೆ ವೃತ್ತಿಯೆರಡು ಪಂಚಲಿಂಗದೇವರಿಗೆ ವೃತ್ತಿಯೆರಡು . . . ಮಾಲಗಾಱವೃತ್ತಿ ಒಂದು ಅನ್ತು ವೃತ್ತಿ ನಾಲ್ವತ್ತಾಱಕ್ಕಂ ಸರ್ವ್ವನವಮಸ್ಯ್ಯದ ಹಳ್ಳಿ ಬೆಟ್ಟುವಣೆಯನು . . . ಧಾರೆ ಎಱದು ಬಿಟ್ಟ ತ್ರಿಭೋಗಾಭ್ಯನ್ತರಸಿದ್ಧಿಯಪ್ಪುದು (ಎಕ. VII. ಶಿಕಾರು. ೧೨೩-೭೨ : 1159). ೧೨. ಬಳಕೆ ; ಉಪಯೋಗ. ೧೩. ಆಗುವಿಕೆ ; ಘಟನೆ ; ಸಂಭವಿಸುವಿಕೆ. ೧೪. ಬದುಕಿನ ರೀತಿ ; ಜೀವನದ ಧೋರಣೆ. ೧೫. ಜೀವನ ; ಬದುಕು : ಜನನಿಯ ಜಠರದೊಳಗಿರುವ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು (ಹರಿಹಾ. ೫೬). ೧೬. ಕಾರ್ಯಾಚರಣೆಯ ಕಾರಣ, — ಹೇತು. ೧೭. ಗೌರವಾನ್ವಿತವಾದ ನಡವಳಿಕೆ, — ವರ್ತನೆ ; ಮರ್ಯಾದೆಯಿಂದ ಕೂಡಿದ ವ್ಯವಹಾರ. ೧೮. [ಕಾವ್ಯಮೀ] ನಾಯಕನ ಕಾರ್ಯಾದಿ ಘಟನೆಗಳ ಸ್ವಭಾವ, — ವ್ಯಾಪಾರ ; ಇ ಇದರಲ್ಲಿ ರಸಕ್ಕನುಗುಣವಾಗಿ ಕೈಶಿಕೆ, ಸಾತ್ವತಿ, ಆರಭಟಿ ಮತ್ತು ಭಾರತಿ ಎಂದು ನಾಲ್ಕು ವಿಧಗಳಿವೆ : ಭಾರತಿ ಸಾತ್ವತಿ ಕೈಶಿಕೆಯಾರಭಟಿಯು ಮೆಂಬ ವೃತ್ತಿಯೊಳ್ ರಸಮಂ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು ಬೇಱೆ ನೀಲಾಂಜನೆಯಾ (ಆದಿಪು. ೯-೨೬) ; ಭಾರತಿ ಸಾತ್ವತಿ ಕೈಶಿಕೆಯಾರಭಟಿಯೆನಿಪ್ಪ ವೃತ್ತಿಗಳ್ ನಾಲ್ಕಕ್ಕುಂ (ಕಾವ್ಯಾವ. ೮೩೭) : ನಾಯಕಕಾರ್ಯಾದಿ ಘಟನೆಗಳ ಸ್ವಭಾವಕ್ಕೆ 'ವೃತ್ತಿ' (ವ್ಯಾಪಾರ — ಕೆಲಸ) ಎಂದು ಹೆಸರು. ಇದು ಕೈಶಿಕೀ, ಸಾತ್ವತೀ, ಆರಭಟೀ, ಭಾರತೀ ಎಂದು ನಾಲ್ಕು ವಿಧ (ಕೈಪಿಡಿ. ೨೧೧). ೧೯. ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯಾರ್ಥಗಳನ್ನು ಕೊಡುವ ಶಬ್ದದ ಸಾಮರ್ಥ್ಯ. — ಶಬ್ದಶಕ್ತಿ : ಶಬ್ದಕ್ಕೆ ಅರ್ಥ ಕೊಡುವ ಸಾಮರ್ಥ್ಯವಿದೆ. ಈ ಸಾಮರ್ಥ್ಯಕ್ಕೆ 'ವೃತ್ತಿ' ಯೆಂದು ಹೆಸರು (ಕೈಪಿಡಿ. ೧೮೬). ೨೦. ಸೂತ್ರರೂಪದಲ್ಲಿರುವುದರ ಒಂದು ಬಗೆಯ ವಿವರಣೆ : ಸೂತ್ರಿಸಿದ ಸೂತ್ರ[ದ] ವೃತ್ತಿ ನಿಜಾತ್ಮವೃತ್ತಿವೋಲ್ ಪರಿಣಮಿಸಿತ್ತು (ಪಂಪಭಾ. ೨-೩೪) ; ಸೂತ್ರಕ್ಕೆ ತಾತ್ಪರ್ಯಾರ್ಥಂ ಪ್ರವರ್ತಿಸುತ್ತಮಿರ ವೃತ್ತಿಯಂ ಬರೆದಂ (ಶಮದ. ೬ ಪೀಠಿಕೆ. ಪೃ.). [ಸಂ.]

ವೃತ್ತಿಕಾರ (ನಾ). ಸೂತ್ರರೂಪದಲ್ಲಿರುವ ಮೂಲಗ್ರಂಥಕ್ಕೆ ಭಾಷ್ಯವನ್ನು ಬರೆದವನು ; ಟೀಕಾಕಾರ ; ವ್ಯಾಖ್ಯಾನಕಾರ : ಈ ವೃತ್ತಿಕಾರಂ ಪೂರ್ವಾಚಾರ್ಯರ ಆಚಾರಾನುಸರಣಂ ರತ್ನತ್ರಯಕಾರಣಮೆಂದು ಮಂಗಳಾದಿಗಳಂ ಪೇಳ್ವಲ್ಲಿ (ತತ್ತ್ವಪ್ರ. ೩) ; ಕಾರಿಕಾಕಾರನೇ ಬೇರೆ ವೃತ್ತಿಕಾರನೇ ಬೇರೆ ಎಂಬ ಅಭಿಪ್ರಾಯ ಬರುವಂತೆ ಅಭಿನವಗುಪ್ತನು ತನ್ನ ವ್ಯಾಖ್ಯಾನದಲ್ಲಿ ಕೆಲವು ಕಡೆ ಬರೆದಿದ್ದಾನೆ (ಧ್ವನ್ಯಾ. ೫೯)

[ಸಂ.]

ವೃತ್ತಿಕಾಱ (ನಾ). ಕಸುಬುದಾರ ; ಉದ್ಯೋಗಸ್ಥ ; ಕೆಲಸಗಾರ : ಇಲ್ಲಿಯ ವೃತ್ತಿಕಾಱರ್ ಕುಳಕರಣಿ ಸೋವಯ್ಯನುಂ ಉತ್ತವಯ್ಯನುಂ (ಸೌಇಶಾ. XX. ೧೯-೭೨ ; 1015).

[ವೃತ್ತಿ + - ಕಾಱ]

ವೃತ್ತಿಕೆ (ನಾ). ೧. ಬಳೆ ; ಕಂಕಣ ; ವಲಯ : "ವೃತ್ತಿಕೆಯೆನಲು ಬಳೆಯೆನಿಕ್ಕುಂ" (ಮಂಗರಾ. ೮೪-೨೪). ೨. ಒಂದು ಬಗೆಯ ಸಸ್ಯ ; ಶಂಖಪುಷ್ಪೀಗಿಡ : "ವೃತ್ತಿಕೆಯೆನಲ್ ಕಟ್ಟವತ್ತಿ" (ಮಂಗರಾ. ೪೩-೪೩). [ಸಂ. ವೃತ್ತಿಕ]

ವೃತ್ತಿಕ್ಷೇತ್ರ (ನಾ). ಉದ್ಯೋಗದ ಸ್ಥಳ ; ಜೀವನೋಪಾಯದ ಭೂಮಿ : ಆ ರುಣದವರ್ಗ ವೃತ್ತಿಕ್ಷೇತ್ರಮಂ ತನ್ನ ನಾರಿಯ ಕೊರಲ್ಮಾಲೆಯೆಲ್ಲವಂ ಮಾಱಲು (ವೀರಶೈವ. ೩-೧೫-೧೯). [ಸಂ.]

ವೃತ್ತಿಗ (ನಾ). = ವೃತ್ತಿಕಾಱ : ಮತ್ತಾನುಂ ಬ್ರತಮೆಱೆಸಿ ವೃತ್ತಿಗರಂ ಕಿಡಿಸಲಾಗದು (ಸೌಇಶಾ. IX-i. ೧೧೭-೩೯ ; 1055). [ವೃತ್ತಿ + - ಗ]

ವೃತ್ತಿಗ್ರಂಥ (ನಾ). ಸೂತ್ರರೂಪವಾದ ಮೂಲಗ್ರಂಥಕ್ಕೆ ವ್ಯಾಖ್ಯಾನವನ್ನುಳ್ಳ ಗ್ರಂಥ ; ಭಾಷ್ಯ ; ವಿವರಣಗ್ರಂಥ : ಅಲ್ಪಾಕ್ಷರಮುಂ ಅಸಂದೇಹಮುಂ ಸಾರಮುಳ್ಳುದುಂ . . . ಅರ್ಥೋತ್ಪತ್ತಿನಿಮಿತ್ತಮುಂ ಅಪ್ಪುದು ಸೂತ್ರಮೆಂಬುದು ಅದಂ ವಿವರಿಸುವುದು ವೃತ್ತಿಗ್ರಂಥಂ (ತತ್ತ್ವಪ್ರ. ೩) ; ಉಪವರ್ಷಾಚಾರ್ಯರು ಪೂರ್ವಮೀಮಾಂಸಾಸೂತ್ರಕ್ಕೂ ಉತ್ತರಮೀಮಾಂಸಾಸೂತ್ರಕ್ಕೂ ವಿಪುಲವಾದ ವೃತ್ತಿಯೆಂಬ ವ್ಯಾಖ್ಯಾನವನ್ನು ಬರೆದಿರುವರು. ಇವರನ್ನೇ ವೃತ್ತಿಕಾರರೆಂದು ಕರೆದು ಈ ವೃತ್ತಿಗ್ರಂಥದ ವಾಕ್ಯಗಳನ್ನು . . . ಉದಾಹರಿಸಿರುವರು (ಹಿಂದೂ. ೧೮೬). [ಸಂ.]

ವೃತ್ತಿಜೀವನ (ನಾ). ಜೀವನೋಪಾಯಕ್ಕಾಗಿ ಮಾಡುವ ಉದ್ಯೋಗ, — ಕಸುಬು : ಇಲ್ಲಿ ಕೂಡಿಸಿರುವ ಘಟನಾವಳಿಗಳೂ ದಂತಕತೆಗಳೂ ಈ ಸಂಗೀತರತ್ನಗಳ ಹಿರಿಮೆ, ವ್ಯಕ್ತಿತ್ವ, ಗುರಿಯ ಸಾಧನೆ ಮತ್ತು ವೃತ್ತಿಜೀವನ ಇವುಗಳ ಬಗ್ಗೆ ಬೆಳಕು ಚೆಲ್ಲುತ್ತವೆ (ಸಂಗೀತ. Vi ಪೀಠಿಕೆ). [ಸಂ.]

ವೃತ್ತಿಜ್ಞಾನ (ನಾ). ೧. ಉದ್ಯೋಗದ ಬಗೆಗಿನ ತಿಳಿವಳಿಕೆ : ಕಸುಬಿನ ಅರಿವು. ೨. [ವೀಶೈ] ಭೂತ, ಭವಿಷ್ಯತ್ ಮತ್ತು ವರ್ತಮಾನದ ಜ್ಞಾನಗಳು : ಜ್ಞಾನ ಸುಜ್ಞಾನ ಮಹಾಜ್ಞಾನ ಎಂಬ ವೃತ್ತಿಜ್ಞಾನಂಗಳು ಇಲ್ಲದಂದು ಅಖಂಡ ಪರಿಪೂರ್ಣ ಅದ್ವಯ ನಿಷ್ಕಲ ನಿಜಜ್ಞಾನಮೂರ್ತಿ ನೀನೆಯಯ್ಯಾ (ಸಿದ್ಧರಾ. ೮-೨೬) ; ವೃತ್ತಿಜ್ಞಾನವಳಿದು ಚಿತ್ತದ ಕೊನೆಯ ಮೊನೆಯಲ್ಲಿ ನಿತ್ಯಲಿಂಗದ ನೆನಹು ತುಂಬಿ ಸುಳಿಯಬಲ್ಲರೆ ಅಚ್ಚ ಶರಣನೆಂಬೆನಯ್ಯ (ಅಖಂಡೇ. ೧೩೨-೧೦೪). [ಸಂ.]

ವೃತ್ತಿತಂತ್ರ (ನಾ). "ವೃತ್ತಿತಂತ್ರ ; ವ್ಯಾಪಾರದ ಉಪಾಯ" (Trick of the trade. ಪತ್ರಿನಿ. ೮೪). [ಸಂ.]

ವೃತ್ತಿತ್ವ (ನಾ). ಇರುವಿಕೆ ; ಅಸ್ತಿತ್ವ : ಪ್ರಕಾಶಿತವೃತ್ತಿತ್ವಂ ಉದ್ಭಾವನಂ ಎಂಬುದಿಲ್ಲಿಯುಂ ಯಥಾಕ್ರಮದಿಂ ಸದ್ಭೂತೋಚ್ಛಾದನಂ ಅಸದ್ಭೂತೋದ್ಭಾವನಂ ಸಂಬಂಧಿಸೆ ಪಡುಗುಂ (ತತ್ತ್ವಪ್ರ. ೨೬೭). [ಸಂ.]

ವೃತ್ತಿದಾರ (ನಾ). ಇನಾಂಭೂಮಿಯನ್ನು ಪಡೆದವನು ; ಇನಾಂದಾರ ; ಜಹಗೀರುದಾರ : ಇವುಗಳಲ್ಲಿ ಕೆಲವು ಬಡಾಯಿ — ಅಂದರೆ ವೃತ್ತಿದಾರರಾದ ಇನಾಂದಾರರ ಸ್ವಂತ ಅನುಭವ ಅಥವಾ ವಹಿವಾಟಿನಲ್ಲಿದ್ದವು (ಕೆಲನ. ೨೫೪).

[ವೃತ್ತಿ + - ದಾರ]

ವೃತ್ತಿಪರಿಕಲ್ಪನೆ (ನಾ). ದಾನವನ್ನು ಕೊಡುವಿಕೆ ; ದಾನಮಾಡುವಿಕೆ : ವೃತ್ತಿಪರಿಕಲ್ಪನೆಯಂ ಮಾಳ್ಪ ಸಂಕಲ್ಪದಿಂ . . . ಶ್ರೀಮತ್ಕಳಚುರಿ ಚಕ್ರವರ್ತಿ ನಿಃಶಂಕಮಲ್ಲ ಸಂಕಮದೇವರಸರ್ಗ್ಗೆ ಬಿನ್ನಪಂಗೆಯ್ದು (ಶಾಸಪ. ೫೩-೯೧ : 1179).

[ಸಂ. ವೃತ್ತಿಪರಿಕಲ್ಪನಾ]

ವೃತ್ತಿಪರಿಸಂಖ್ಯಾನ (ನಾ). [ಜೈನ] ಬಾಹ್ಯತಪಸ್ಸಿನ ಆರುಪ್ರಕಾರಗಳಲ್ಲಿ ಒಂದು ; ಆಹಾರಕ್ಕೆ ಸಂಬಂಧಿಸಿದ ಮುನಿನಿಯಮಗಳಲ್ಲೊಂದು ; ಇ ಕೆಲವು ನಿರ್ದಿಷ್ಟ ಮನೆ ಅಥವಾ ಬೀದಿಯಲ್ಲಿ ಆಹಾರ ದೊರೆತರೆ ಮಾತ್ರ ಸ್ವೀಕರಿಸುತ್ತೇನೆಂದು ನಿಯಮಮಾಡಿಕೊಂಡು ಹಾಗೆ ಸಿಕ್ಕಿದರೆ ಮಾತ್ರ ಸ್ವೀಕರಿಸುವುದು, ಇಲ್ಲದಿದ್ದರೆ ಉಪವಾಸ ಇರುವುದು : ಇಂತಪ್ಪೆಡೆಯೊಳಿಂತೆಂಬವರ್ ನಿರಿಸಿದೊಡಲ್ಲದೆ ನಿಲ್ಲೆನೆಂಬ ನಿಯಮಂ ಮೊದಲಾಗೆ ವೃತ್ತಿಪರಿಸಂಖ್ಯಾನನಾಮದ ಮೂಱನೆಯ ತಪದೊಳಂ . . . ನೆರೆದು (ಆದಿಪು. ೭-೩೦ ಪ) ; ಆನಿನಿತು ಭೋಜ್ಯದಿಂ ಪೆಱತೇನುಮನುಣಾವೊಲ್ಲೆನೆಂದೆನೆಂದುಣ್ಣೆಡೆಯೊಳ್ ತಾನಱಿದು ವೃತ್ತಿಪರಿಸಂಖ್ಯಾನ ತಪೋಯುಕ್ತನಾಗಿ ಸಂಯಮಿ ನೆಗೞ್ದಂ (ಸುಕುಮಾ. ೪-೬). [ಸಂ.]

ವೃತ್ತಿರಹಸ್ಯ (ನಾ). "ವ್ಯಾಪಾರದ ಗುಟ್ಟು, ವೃತ್ತಿರಹಸ್ಯ" (Trade Secret. ಪತ್ರಿನಿ ೮೫). [ಸಂ.]

ವೃತ್ತಿಲಾಭ (ನಾ). ೧. ಉದ್ಯೋಗವು ದೊರಕುವುದು. ೨. [ಜೈನ] ಎಂಟು ಬಗೆಯ ಕ್ರಿಯೆಗಳಲ್ಲಿ ಒಂದು ; ಇ "ಮೊದಲನೆ ದಿನ ಉಪವಾಸವಿದ್ದು ಎರಡನೆಯ ದಿನ ಜಿನೇಶ್ವರನ ಸನ್ನಿಧಿಯಲ್ಲಿ ಪೂಜಾನಂತರ ಗುರುವು ಜಿನದೀಕ್ಷೆ ಕೊಟ್ಟ ಮೇಲೆ ಮನೆಗೆ ಹೋಗಿ ಮಾಡುವ ಪಾರಣೆ" (ಜೈನಕೋ. ೨೩೭) : ಮತ್ತಮವತಾರ ವೃತ್ತಿಲಾಭ [ಪಾಠಾಂ. ಲೋಭ] ಸ್ಥಾನಲಾಭ ಗಣಗ್ರಹಣ

ಪೂಜಾರಾಧ್ಯಪುಣ್ಯಯಜ್ಞದೃಢಚರ್ಯೋಪಯೋಗತ್ವಮೆಂಬೆಂಟುಂಬೆರಸು . . . ಅಲಿಪಿ (ಆದಿಪು. ೧೫-೧೬ ವ). [ಸಂ.]

ವೃತ್ತಿಲೋಪ (ನಾ). ಉದ್ಯೋಗದಲ್ಲಿಯ ಕೊರತೆ ; ಕಾರ್ಯದಲ್ಲಿಯ ಅರೆಕೊರೆ : ಅಡಗಿನ ಬಸನಿಗರ್ಗ್ಗಂ ಕಳ್ಗುಡಿವವರ್ಗ್ಗಂ ವೃತ್ತಿಲೋಪಮೆಂಬೀ ನುಡಿಯಂ ಕಡಗಣ್ ಗಣಿಸದೆ ಮೊದಲಿಂದಂ ಕಡಿಪುದದಂ ಸ್ಥಾನಗುರುಗಳುಂ ಪೂರ್ಬ್ಬಿಗರುಂ (ಸಾಂಗಾ. IX-i. ೧೧೬-೩೮ ; 1055). [ಸಂ.]

ವೃತ್ತಿಲೋಹ (ನಾ). ಒಂದು ಬಗೆಯ ಲೋಹ; ಕಬ್ಬಿಣ (?): "ಖ್ಯಾತಂ ತಾಂ ವೃತ್ತಿಲೋಹಮೆನೆ ವೃತ್ತಕಮುಂ" (ವಸ್ತುಕೋ. ೨೯-೮). [ಸಂ.]

ವೃತ್ತಿವಂತ (ನಾ). ೧. ಉದ್ಯೋಗವನ್ನು ಹೊಂದಿದವನು ; ಕಸುಬುದಾರ. ೨. ದಾನವಾಗಿ ಭೂಮಿಯನ್ನು ಪಡೆದವನು ; ಇನಾಂದಾರ; ಜಹಗೀರುದಾರ: ಹನ್ನೆರಡು ಗ್ರಾಮಗಳ ವೃತ್ತಿವಂತರಿಗ ಸಹನೆಯಾಗಲಿಲ್ಲ . . . ಹೇಗಾದರೂ ದಾಸರ ಮೇಲೆ ನಾಯಕನಿಗ ಕೋಪ ಬರುವಂತೆ ಮಾಡಬೇಕೆಂದು ವೃತ್ತಿವಂತರು ಹಂಚಿಕೆ ಮಾಡಿದರು (ಕಭವಿ. ೮). [ಸಂ. ವೃತ್ತಿವತ್]

ವೃತ್ತಿವಿಳಾಸತೆ (ನಾ). [ಕಾವ್ಯಮಿ] ಕೈಶಿಕಿ ಮುಂತಾದ, ಕಾವ್ಯನಾಟಕಗಳಲ್ಲಿಯ ವೃತ್ತಿಯ ಸೊಬಗು : ಜತಿವತ್ತೊಪ್ಪುವ ಮೃದುಪದಗತಿಯುಂ ರಸಮೊಸರ್ವ ಭಾವಮುಂ ವೃತ್ತಿವಿಳಾಸತೆಯುಂ ತಳ್ತಿರ ವಿಳಸತ್ಕೃತಿಯಂ ಪೋಲ್ತಬಳೆ ರಸಿಕರಂ ಮಚ್ಚಿಸಿದಳ್ (ರಾಜಶೇ. ೧೨-೯೬). [ಸಂ. ವೃತ್ತಿವಿಲಾಸತಾ]

ವೃತ್ತಿವ್ಯಾಸ (ನಾ). ವೃತ್ತಿಯ ವಿಸ್ತಾರ ; ವಿವರಣೆಯ ಹರಿಹು : ಪ್ರಾಸಚ್ಛಂದೋನ್ಯಯವಿನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿವ್ಯಾಸಂ ತದ್ಯಾಕುಲಮೆಂದಾ ಸೂತ್ರಕೃರ್ಥವೃತ್ತಿ ವರ್ತಿಸೆ ಪೇಳ್ದಂ (ಶಮದ. ೬ ಪೀಠಿಕೆ). [ಸಂ.]

ವೃತ್ತಿಶಿಕ್ಷಣ (ನಾ). ಉದ್ಯೋಗವನ್ನು ಕಲಿಸುವ ಶಿಕ್ಷಣ ; ಒಂದು ನಿರ್ದಿಷ್ಟ ಕಸುಬನ್ನು ಮಾಡಲು ತರಬೇತು ನೀಡುವ ವಿದ್ಯಾಭ್ಯಾಸ : ಇಂಗ್ಲೆಂಡು ಅನೇಕ ಶತಮಾನಗಳಿಂದಲೂ ಔದ್ಯೋಗಿಕರಾಷ್ಟ್ರವಾಗಿದ್ದರೂ ಅಲ್ಲಿನ ಶಾಲೆಗಳಲ್ಲಿ ವೃತ್ತಿಶಿಕ್ಷಣ ವಿರಲಿಲ್ಲ (ಶಿಕ್ಷದ. ೧೯೪). [ಸಂ.]

ವೃತ್ತಿಶಿಕ್ಷಣಶಾಲೆ (ನಾ). ಒಂದು ನಿರ್ದಿಷ್ಟ ಕಸುಬನ್ನು ಕಲಿಸುವ ಶಾಲೆ; ಒಂದು ನಿರ್ದಿಷ್ಟ ಉದ್ಯೋಗವನ್ನು ಮಾಡಲು ತರಬೇತು ನೀಡುವ ವಿದ್ಯಾಕೇಂದ್ರ : ಭಾರತದಲ್ಲಿ ಇಂಗ್ಲೆಂಡು ತನ್ನ ಶಿಕ್ಷಣಪದ್ಧತಿಯನ್ನು ನಾಟಿಹಾಕಿದಾಗ ವೃತ್ತಿಶಿಕ್ಷಣಶಾಲೆಗಳು ಅಲ್ಲೊಂದು ಇಲ್ಲೊಂದು ಹೆಸರಿಗೆ ಆರಂಭವಾದುವು (ಶಿಕ್ಷದ. ೧೯೪). [ಸಂ. ವೃತ್ತಿಶಿಕ್ಷಣಶಾಲಾ]

ವೃತ್ತ್ಯನುಪ್ರಾಸ (ನಾ). [ಛಂದ] ಅನುಪ್ರಾಸದಲ್ಲಿಯ ಒಂದು ಭೇದ; ಪದ್ಯದಲ್ಲಿ ಬಿಡಿವ್ಯಂಜನಗಳು ಹಲವು ಸಲ ಆವೃತ್ತಿಗೊಳ್ಳುವುದು : ಒಂದಕ್ಕರ ಮಾದೊಡಮರಡಕ್ಕರಮಾದೊಡಂ ಪಲವುಂ ವೇಳೆಯೊಳ್ ಬಳಸಿ ಬರುತ್ತಿರೆಯದು ವೃತ್ತ್ಯನುಪ್ರಾಸಮೆನಿಪುದು (ಅಪ್ರತಿ. ೬೦-೮) ; ಅನುಪ್ರಾಸದಲ್ಲಿ ಒಂದೋ ಎರಡೋ ಮೂರೋ ಅಕ್ಷರಗಳು ಮತ್ತ ಮತ್ತ ಬಂದರೆ 'ವೃತ್ತ್ಯನುಪ್ರಾಸ'ವೆಂದೂ . . . ಹೆಸರು (ಕೃಪಿ. ೨೫೩). [ಸಂ.]

ವೃತ್ರ (ನಾ). ೧. ಕತ್ತಲೆ ; ತಿಮಿರ. ೨. ಶತ್ರು ; ಅರಿ ; ಹಗೆ. ೩. ಮೋಡ ; ಮೇಘ. ೪. ಇಂದ್ರನಿಂದ ಹತನಾದ ಒಬ್ಬ ರಾಕ್ಷಸನ ಹೆಸರು : "ವೃತ್ರಂ ದಾನವನುಂ ರಿಪುವುಂ" (ವಸ್ತುಕೋ. ೧೧೪-೫) ; ವೃತ್ರನ ಹತ್ಯೆಗೆ ಪೇಳ್ದಂ ಗೋತ್ರಾರಿ ನಿವೃತ್ತಿಯಧಿಕ ಕೈಲಾಸಾದಿಕ್ಷೇತ್ರ ಸುತೀರ್ಥಚಯಂಗಳ ಯಾತ್ರೆಯನೆಸಗ್ಗೆ ಮಹೇಂದ್ರ ಪೋಪುದು ಪಾಪಂ (ಹಾಲಾಸ್ಯ. ೧-೨-೬೧) ; ಎಲ್ಲರೂ ಸೇರಿ ಅವನಿಗೆ 'ವೃತ್ರ' ಎಂದು ಹೆಸರಿಟ್ಟರು (ಸಡದಾ. II, ೧೪೦೫). ೫. ಶಬ್ದ. ೬. ಚಕ್ರ. ೭. ಒಂದು ಪರ್ವತದ ಹೆಸರು. ೮. ಚರ್ಮ ; ತೊಗಲು. [ಸಂ.]

ವೃತ್ರವೈರಿ (ನಾ). ವೃತ್ರನೆಂಬ ರಾಕ್ಷಸನ ಶತ್ರು ; ಇಂದ್ರ : ಅತ್ರಿಮಹಋಷಿ ಕಂಡನದನಾ ವೃತ್ರವೈರಿ ಕುಚೇಷ್ಟೆಯನು (ನಹಾಗ. ೪-೧೩-೪). [ಸಂ. ವೃತ್ರವೈರಿನ್]

ವೃತ್ರಹ (ನಾ). ವೃತ್ರಾಸುರನನ್ನು ಕೊಂದವನು ; ಇಂದ್ರ : ಅಂತು ನಿಜೆಯ ಜನ್ಮಾಭಿಷೇಕಮಂ ವೃತ್ರಹಂ ನಿರ್ವರ್ತಿಸಿ (ಶಾಂತಿಪು. ೧೦-೫೪೨). [ಸಂ. ವೃತ್ರಹನ್]

ವೃತ್ರಹಮಂತ್ರಿ (ನಾ). ಇಂದ್ರನ ಮಂತ್ರಿ ; ಬೃಹಸ್ಪತಿ : ಶೂರ್ಪಕವೈರಿ ಕಾಲುಗುರ್ಗ ವರ್ಪನೊ ವೃತ್ರಹಮಂತ್ರಿ ಜಾಣ್ಗೆ ಮೇಣ್ ವರ್ಪನೊ ವೇಲ್ಪಿಂ (ಶಾಂತಿಪು. ೭-೧೧೮). [ಸಂ. ವೃತ್ರಹಮಂತ್ರಿನ್]

ವೃಥ (ನಾ). ಉಪಯೋಗವಿಲ್ಲದುದು ; ವ್ಯರ್ಥವಾದುದು ; ನಿಷ್ಫಲವಾದುದು : ಅತಿಥಿಯನು ಪೂಜಿಸದಡಿನಿತೂ ವೃಥವದಹುದೆಲೆ ಮಗನೆ ಶಕ್ತಿಯಲತಿ ಗಮಿಸದರ್ಚಿಸುವುದುಳ್ಳಂದದಲಿ ಬಂದವರ (ನಿಭಾಗ. ೯-೧೮-೫೮).

[ಸಂ. ವೃಥಾ ./ IP ಸಂಸ್ಕೃತದಲ್ಲಿ ಇದೊಂದು ಅವ್ಯಯ]

ವೃಥಾ (ಅ). ೧. ವ್ಯರ್ಥವಾಗಿ ; ನಿಷ್ಫಲವಾಗಿ ; ಉಪಯೋಗವಿಲ್ಲದೆ : ಬಲಿಯ ಭೂಮಿ ಕರ್ಣನ ಕವಚ ಖಚರನ ಆಸ್ತಿ ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ. . . ಕೂಡಲಸಂಗನ ಶರಣರನಲ್ಲಿಯದೆ ಕೀರ್ತಿ ವಾರ್ತೆಗ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ (ಬಸವ. ೨೨೪) ; ಇನಿತು ದಿವಸಂ ವೃಥಾ ಸವೆದನೆಲೆ ಶಿವ (ಸಂಬರ. ೬-೧೩೧). ೨. ತಪ್ಪಾಗಿ ; ಅನ್ಯಾಯವಾಗಿ. [ಸಂ.]

ವೃಥಾಕೃತ (ನಾ). ನಿರರ್ಥಕವಾದುದು ; ನಿಷ್ಫಲವಾದುದು : ಈ ವೃಷಧ್ವಜನಿಂದು ಸಮರದೊಳ್ಮಾಯದೂಡೆ ಹಾ ವೃಥಾಕೃತಮಾಗಿ ಪೋಗುತಿರ್ದುದು ಜನ್ಮಂ (ಜೈಮಿಭಾ. ೪-೬೩). [ಸಂ.]

ವೃಥಾಭಿಯೋಗ (ನಾ). ವ್ಯರ್ಥವಾದ ಅಪವಾದ ; ನಿರರ್ಥಕವಾದ ನಿಂದೆ : ಧಿಮ್ಮನೆ ನಿಂದು ಭುಗಿಲೆಂದನು ಕಿರೀಟಿ ವೃಥಾಭಿಯೋಗದ ಮನಕತಕೆ ಮಾರಾಂಕವಾಯ್ತೇ (ಕುವ್ಯಾಸ. ೬-೯). [ಸಂ.]

ವೃಥಾಯ (ಅ). = ವೃಥಾ ೧ : ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ವೃಥಾಯ ಬಜುರೊಳ್‌ಹೋಹ ಕೆಡುಕಹಾರುವ ನಾನಲ್ಲ (ಬಸವ. ೭೧೫).

[< ಸಂ. ವೃಥಾ]

ವೃಥಾಲಾಪ (ನಾ). ವ್ಯರ್ಥವಾದ ಮಾತು ; ಉಪಯೋಗವಿಲ್ಲದ ಹರಟೆ: ವೃಥಾಲಾಪದಿಂದ ನಿಂದೆ (ಸಚಿವ. ಕ. III. ೮೬-೧೬೯). [ಸಂ. ವೃಥಾಲಾಪ]

ವೃಥೆ (ಗು). ೧. ವ್ಯರ್ಥವಾದ; ನಿಷ್ಪ್ರಯೋಜಕವಾದ ; ಏನೂ ಉಪಯೋಗವಿಲ್ಲದ. ೨. ತಪ್ಪಾದ ; ಸುಳ್ಳಾದ ; ಸರಿಯಲ್ಲದ. (ನಾ). ೩. ವ್ಯರ್ಥವಾದುದು ; ಫಲವಿಲ್ಲದುದು ; ನಿಷ್ಪ್ರಯೋಜಕವಾದುದು : "ವೃಥೆ ಮೋಘಂ ವಂಧ್ಯಂ ಮುಧೆ" (ವಸ್ತುಕೋ. ೧೧೨-೧೧).

ವೃಥೆಯಾಗು = ವ್ಯರ್ಥವಾಗು ; ನಿರರ್ಥಕವಾಗು ; ದಂಡವಾಗು : ಸಕಲಸಂಸಾರಸುಖಸರ್ವಸ್ವಮಂ ವೃಥೆಯಾಗದಂತನುಭವಿಸುತ್ತುರ್ದರ್ (ಸುಕುಮಾ. ೩-೨ ವ) ; ಅವಿಚಾರತೆಯಿಂ ನೀನಿಂತವಿವೇಕಂಗಿತ್ತೆಯೆನ್ನನದಱಿಂ ಪೇಟ್ ಸಂಭವಿಸುಗುಮೆ ಸೌಖ್ಯವೆನಗೀ ಭವಮುಂ ವೃಥೆಯಾದುದೆನ್ನ ಕರ್ಮದ ಫಲದಿಂ (ನೇಮಿಪು. ೪-೪೧). [ಸಂ. ವೃಥಾ]

ವೃಥೆಗಳೆ (ಕ್ರಿ). ವ್ಯರ್ಥವಾಗಿಸು ; ನಿಷ್ಪ್ರಯೋಜಕಗೊಳಿಸು ; ಉಪಯೋಗವಿಲ್ಲದಂತೆ ಮಾಡು : ರೂಹಿಲ್ಲದೊಡಂ ಕೆಲಬರ ಸಹಾಯದಿಂ ಬಱಿದೆ ತೊನೆದ ವಿಟಸಂದೋಹಮನೊಲಿಸುವರೆಂದೊಡೆ ರೂಹಂ ಪಡೆದೇಕೆ ಮರುಳೆ ನೀಂ ವೃಥೆಗಳೆವೈ (ಧರ್ಮಾಮೃ. ೩-೧೩೦). [ವೃಥೆ + ಕಳೆ]

ವೃಥೋಕ್ತಿ (ನಾ). = ವೃಥಾಲಾಪ : ಮಗನಗರಾಜಧೈರ್ಯನಿಭರಾಜ ಮನಂ ಮೃಗರಾಜಸತ್ವನರ್ಥಿಗೆ ಭಯಮಿಲ್ಲ ಬಾಟ್ಗೆ ವೃಥೋಕ್ತಿಗಳಿಲ್ಲ ನೆಗಟ್ಗೆಗಂ ಪೊಗಟ್ಗೆಗಮೆಣೆಯಿಲ್ಲ (ಶಾಂತಿಪು. ೮-೧೧೬). [ಸಂ.]

ವೃಥೋತ್ಸಾಹಿ (ನಾ). ವ್ಯರ್ಥವಾಗಿ ಉತ್ಸಾಹಗೊಂಡವನು ; ಕಾರಣವಿಲ್ಲದೆ ಉತ್ಸುಕನಾದವನು : ನಾರಣಕ್ರಮಿತಂ . . . ದಾಮೋದರಭಟ್ಟಂ ಮೊದಲಾದ ಭಾಂದಸರು ವೇದಜಡರು ಮಟ್ಟಿಯ ಮರುಳ್ಗಳು ವೃಥೋ[ಪಾಪಾಂ. ತ್ರೋ]ತ್ಸಾಹಿಗಳು . . . ನೆರೆದರಮನೆಗೆ ಬಂದು (ಬಸರ. ೧೦-೨೬). [ಸಂ. ವೃಥೋತ್ಸಾಹಿನ್]

ವೃದ್ಧ (ಗು). ೧. ಹೆಚ್ಚಾದ ; ವೃದ್ಧಿಯಾದ ; ವರ್ಧಿಸಿದ. ೨. ಪೂರ್ಣವಾಗಿ ಬೆಳೆದ ; ಪ್ರೌಢವಾದ. ೩. ವಯಸ್ಸಾದ ; ಮುಪ್ಪಾದ ; ಹಿರಿಯ. ೪. ಹಳೆಯದಾದ ; ಹಿಂದಿನ ; ಪ್ರಾಚೀನವಾದ. ೫. ಮುಂದುವರಿದ ;

ಏಳಿಗಹೊಂದಿದ ; ಅಭಿವೃದ್ಧಿಯನ್ನು ಪಡೆದ. ೬. ರಾಶಿಯಾದ ; ಗುಡ್ಡೆಯಾದ. ೭. ಪಾಂಡಿತ್ಯವನ್ನು ಪಡೆದ ; ಪ್ರಾಜ್ಞನಾದ. (ನಾ). ೮. ವಯಸ್ಸಾದ ವ್ಯಕ್ತಿ ; ಮುದುಕ : ಈಗಳಿಂತು ಪೊಜಗಿರಿಸಲಾಗಳಂತೆ ಬಂದು ಮುಂದಿರ್ದಪನೀ ವೃದ್ಧಂ ಕಿಱುಕುಳನಲ್ಲ ಕಾರಣಿಕನಾಗಲೆವೆಳ್ಕುಮೆಂದು ನೋಡುತ್ತಿರೆ (ನಂಬರ. ೬-೬೦) ; ಸೀತಾರಾಮಲಕ್ಷ್ಮಣರ್ ವೃದ್ಧನಂ ಪರ್ಯಂಕಕೆತ್ತಿ ಸಂತೈಸುತಿರೆ (ಶ್ರೀರಾಮಾ. ೯೧-೩೫೬). ೯. ಪೂಜ್ಯನಾದವನು ; ಗೌರವಾರ್ಹನಾದವನು. ೧೦. ವಿದ್ವಾಂಸ ; ಪಂಡಿತ : ಪೇಟ್ಟೊಡಂತಾ ಪ್ರತಿಭಾನಂ ಶಕ್ತಿಲೋಕಾಗಮ ಸಕಲಕಲಾವೇದನಂ ವಿದ್ಯೆ ಶಾಸ್ತ್ರಾನ್ವಿತನಪ್ಪಂ ವೃದ್ಧನಾಲಸ್ಯಮನುಬಿದೆಸಪುದ್ಯೋಗಮಭ್ಯಾಸಕರ್ಮಂ (ಕಾವ್ಯಾಲಂ ೪೨೪). ೧೧. ಯೋಗಿ; ತಪಸ್ವಿ. ೧೨. ವಂಶಕ್ರಮದಲ್ಲಿ ಅನುಗತವಾಗಿ ಬಂದವನು ; ಸಂತತಿಯವನು. ೧೩. ಒಂದು ಬಗೆಯ ಸುವಾಸನಾಧೂಪ ; ಸಾಂಬ್ರಾಣಿ ; ಶಿಲಾಪುಷ್ಪ : "ಕಾಲಾನುಸಾರ್ಯಂ, ವೃದ್ಧಂ, ಅಶ್ಮಪುಷ್ಪಂ. ಶೀತಶಿವಂ, ಶೃಲೇಯಂ - ೫ ಕಲ್ಲುಹುವ್ವಿನ ಪೆಸರು, ಶಿಲಾಪುಷ್ಪ" (ಸಿದ್ಧಾಂತಿ. ೧೪೦). [ಸಂ.]

ವೃದ್ಧಕಂಚುಕಿ (ನಾ). ಮುದುಕನಾದ ಅಂತಃಪುರದ ರಕ್ಷಕ : ಮಹೀಪತಿನಿವೇದನ ಸಂಭ್ರಮಗಮನಸ್ಖಲಿತವೃದ್ಧಕಂಚುಕಿನಿಕರಮುಂ (ಆದಿಪು. ೮-೩೫ ವ) ; ಉಪಾತ್ತೋದಾತ್ತ ವಿಸ್ತಾರಕೀಚಕವೇತ್ರಂ ಭರತಾವನೀಪತಿಮಹೀಸ್ತ್ರೀರಕ್ಷಕಂ ವೃದ್ಧಕಂಚುಕಿ ಮರ್ಯಾದೆಯೊಳರ್ದನೆಂದು ಮಹಿಪಂ ಹೃಮಾದ್ರಿಯಂ ನೋಡಿದಂ (ಶಾಂತಿಪು. ೧೧-೬೦).

[ಸಂ. ವೃದ್ಧಕಂಚುಕಿನ್]

ವೃದ್ಧಕದಂಬ (ನಾ). ಹಿರಿಯರ ಸಮೂಹ ; ಮುದುಕರ ಗುಂಪು : ಹೃದಯ ಪ್ರಮೋದಮದಿರಾಮದದಿಂ ಮೆಯ್ಮಱೆದು ಮೇಲುದಂ ಮಱೆದಿರ್ದಾಡಿದುದು ಪಱ ಮಾಣ್ಡೊಡಂ ಮಾಣದೆ ಮೆಚ್ಚದ ತೆಱದಿನಾಪ್ತವೃದ್ಧಕದಂಬಂ (ಪುಪ್ಪಪು. ೪-೩೬). [ಸಂ.]

ವೃದ್ಧಕ್ಷತ್ರ (ನಾ). ೧. ಮುದುಕನಾದ ಅರಸುಕುಲದವನು ; ಹಿರಿಯನಾದ ಕ್ಷತ್ರಿಯ. ೨. ಮಹಾಭಾರತದ ಜಯದ್ರಥನ ತಂದೆ ; ಸಿಂಧುದೇಶದ ರಾಜ : ತುಡುಕಿ ಖಂಡವ ಕಚ್ಚಿ ನಭದಲಿ ಗಿಡಿಗ ಹಾಯ್ಕಂದದಲಿ ತಲೆಯನು ಹಿಡಿದು ಹಾಯ್ದುದು ಬಾಣ ವೃದ್ಧಕ್ಷತ್ರಸಿದ್ಧೆಡೆಗೆ (ಕುಮಾರವ್ಯಾ. ೧೪-೪೩). [ಸಂ.]

ವೃದ್ಧತೆ (ನಾ). ವಯಸ್ಸಾದ ಸ್ಥಿತಿ ; ಮುಪ್ಪು ; ಮುದಿತನ : ಪದ್ಮತಿಯೆಂದು ಕಯ್ಯೊಳಗಾಂತ ಬೆತ್ತ ವೃದ್ಧತೆಯೊಳಗೆ ತಪ್ಪಿಸಿತು ವಿಪತ್ತ (ಶಾಕುಂತ. ೬೧ ಅಡಿಟಿ).

[ಸಂ. ವೃದ್ಧತಾ]

ವೃದ್ಧತ್ವ (ನಾ). = ವೃದ್ಧತೆ : "ಸ್ಥಾವಿರಂ, ವೃದ್ಧತ್ವಂ – ೨ ಐವತ್ತು ವರುಷಗಳಿಗೆ ಮಿಂಚಿದ ವಯಸ್ಸು, ಮುದಿತನ, ಮುಪ್ಪು" (ಸಿದ್ಧಾಂತಿ. ೧೭೯). [ಸಂ.]

ವೃದ್ಧಧ್ವನಿ (ನಾ). ಮುದುಕನ (ನಡುಗುವ) ಧ್ವನಿ : ಕೋಲನೂಱುತೆ ಕೆಮ್ಮಿ ಕುಮ್ಮುತ್ತೆ ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃಶಿವಾಯ ಯೆಂಬ ವೃದ್ಧಧ್ವನಿ ಪುಟ್ಟೆ (ನಂಬರ. ೬-೪೧). [ಸಂ.]

ವೃದ್ಧರಾಜ್ಯ (ನಾ). ಅಭಿವೃದ್ಧಿಯನ್ನು ಹೊಂದಿದ ದೇಶ ; ಸಮೃದ್ಧಿಯನ್ನು ಪಡೆದ ನಾಡು : ಪೊಡರದೆ ಕಪ್ಪಮಿಾವ ಪರಮಂಡಳಿಕರ್ . . . ಚಾಗಮಡಱೋಡು ವಿನಂ ಪೊರಡೊಳ್ಳೆಗಟ್ಟೆಯೊಳ್ ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ (ಆದಿಪು. ೨-೨೪). [ಸಂ.]

ವೃದ್ಧಶ್ರವ (ನಾ). ಸ್ವರ್ಗಾಧಿಪತಿ ; ದೇವೇಂದ್ರ ; ಇಂದ್ರ : "ಪುರುಹೂತಂ ಮಘವಂ ದಿವಸ್ಪತಿ . . . ಜಷ್ಣು ವೃದ್ಧಶ್ರವಂ ಹರಿವಾಹಂ . . . ಪಾಕನಮುಚಿ ಜಂಭದ್ವಿಷ್ಟಂ" (ಪಪ್ಪುಕೋ. ೬-೩೩) ; ಸಲೆ ನಿರ್ಜರಾಧೀಶ ವೃದ್ಧಶ್ರವಂಗಯೊಪ್ಪಲು ಜೀವನಾಗಿ ಚಿತ್ರಶಿಖಂಡಿಜಂ ಮಂತ್ರಿತಿಲಕಂ ಗಡಾ . . . ಅರಸಂಗೆ ಪತಿಮೋಹಿಯೆನಿಪ ಮಂತ್ರೀಶನೆಸೆದಂ (ಭಾವಚಿಂ. ೨-೧೯). [ಸಂ. ವೃದ್ಧಶ್ರವಸ್]

ವೃದ್ಧಸೇವಿತ್ವ (ನಾ). ೧. ಮುದುಕರನ್ನು ಸೇವಿಸುವಿಕೆ ; ಹಿರಿಯರನ್ನು ಉಪಚರಿಸುವಿಕೆ. ೨. ವಿದ್ವಾಂಸರನ್ನು ಗೌರವಿಸುವಿಕೆ ; ಪಂಡಿತರಿಗೆ ಮನ್ನಣೆ ನೀಡುವಿಕೆ : ಸಕಲಮಹೀಚರಖೇಚರನಿಕಾಯಸೇವ್ಯತೆಗೆ ವೃದ್ಧಸೇವಿತ್ವಮೆ ಯೋಜಕ ಮಾದುದನಿತು ವಿದ್ಯಾಪ್ರಕಾಶನಕ್ಕಾತನಂತು ನೋಂತರುಮೊಳರೇ (ಶಾಂತಿಪು. ೨-೩೯).

[ಸಂ.]

ವೃದ್ಧಸೇವೆ (ನಾ). ೧. ಹಿರಿಯರ ಸೇವೆ. ೨. ವಿದ್ವಾಂಸರಿಗೆ ತೋರಿಸುವ ಗೌರವ ; ಪಂಡಿತರಿಗೆ ತೋರಿಸುವ ಮನ್ನಣೆ, — ಮರ್ಯಾದೆ : ಪರಮಾಗಮ ಭಾವನೆ ವೃದ್ಧಸೇವೆ . . . ಎಂಬಿವನಾಗಳುಮೊಂದೆ ಕೀಲೆ ದಲ್ ಜಂತ್ರದ ಪಾಪೆಯಂತೊಡ ನೊಡರ್ಚುವನಿಂದ್ರನುಮಾ ಪ್ರತೀಂದ್ರನುಂ (ಶಾಂತಿಪು. ೭-೧೧೦). [ಸಂ. ವೃದ್ಧಸೇವಾ]

ವೃದ್ಧಾಚಾರ (ನಾ). ಹಿಂದಿನಿಂದ ನಡೆದುಬಂದ ಆಚಾರ, — ನಡವಳಿಕೆ ; ಪೂರ್ವದ ಸಂಪ್ರದಾಯ : ಬ್ರಹ್ಮಚಾರಿಯ ಸೂತಕಾದಿ ಹೊಲೆಗಳಿಲ್ಲ ವೆಂಬುದು ಮೊದಲಾದಾಚಾರಭೇದಮಿರ್ಪುದಱಂ ದೇಶಾಚಾರ . . . ವೃದ್ಧಾಚಾರ ಗಣಾಚಾರ ಸಂಪ್ರದಾಯವೆಂಬುದು ಮೊದಲಾದವುಗಳಂ ತಿಳಿದು (ವಿವೇಕ. ೧೮೬). [ಸಂ.]

ವೃದ್ಧಾನುಕ್ರಮ (ನಾ). ಹಿಂದಿನ ನಡವಳಿಕೆ ; ಪೂರ್ವದ ಸಂಪ್ರದಾಯ: ತದಾಶ್ರಮದ ಗುರುಗಳ ಸಮೀಪಕ್ಕೆ ಬಂದವರ್ಗ ವೃದ್ಧಾನುಕ್ರಮದಿಂ ಪೊಡೆವಟ್ಟು . . . ಬೆಸಸಿಮೆನೆ (ಪಂಚತಂ. ೧೨೦-೧೨). [ಸಂ.]

ವೃದ್ಧಾಪ್ಯ (ನಾ). ವಯಸ್ಸಾದ ಸ್ಥಿತಿ ; ಮುದಿತನ ; ಮುಪ್ಪು : ಪಿತನಿಂದ ಬಾಲ್ಯದೊಳ್ತಿಯಿಂದ ಪ್ರಾಯದೊಳ್ಪತನಿಂದ ವೃದ್ಧಾಪ್ಯದೊಳ್ಮಲಸ್ತ್ರೀ ಸುರಕ್ಷಿತೆಯಾಗದಿರ್ದೊಡವಳಿಂದೆ ನಿಜವಂಶಕುಪಹತಿ ಬಂದೊಡಲ್ಲದಿರದು (ಕೃಷ್ಣಭಿಾ. ೫-೫೨).

[< ಸಂ. ವೃದ್ಧ./ ಮರಾ. ವೃದ್ಧಾಪ್ಯ]

ವೃದ್ಧಾಶ್ರಮ (ನಾ). ೧. ಮನುಷ್ಯನ ಕಡೆಯ ಅವಸ್ಥೆ . ೨. (ಪೋಷಕರಿಲ್ಲದ) ಮುದುಕರಿಗೆ ಆಶ್ರಯ ನೀಡುವ ಸ್ಥಳ ; ವೃದ್ಧರನ್ನು ಪೋಷಿಸುವ ಸಂಸ್ಥೆ : ವಾರಸುದಾರರಿಲ್ಲದ ಆ ಮುದುಕರನ್ನು ಯಾರೋ ವೃದ್ಧಾಶ್ರಮಕ್ಕೆ ಸೇರಿಸಿದ್ದಾರೆ (ರೂಢಿ).

[ಸಂ.]

ವೃದ್ಧಿ (ನಾ). ೧. ಬೆಳೆಯುವುದು ; ವರ್ಧನ ; ವಿಕಾಸ : ಆಕೆಗಳ ಪೀವರತುಂಗ ನಿತಂಬಬಿಂಬದೊಂದಗಲದ ವೃದ್ಧಿ ಪರ್ಚೆ ನೆಲೆವರ್ಚಿದುದೀ ಕೊಳಂ (ಶಾಂತಿಪು. ೮-೨೮). ೨. (ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೆ) ಚಂದ್ರನು ವರ್ಧಿಸುವಿಕೆ, - ಕಳೆಯೇರುವಿಕೆ : ವೃದ್ಧಿಕ್ಷಯಂಗಳು ಚಂದ್ರಮಗಾದತ್ತು ಆದತ್ತೆ ಬಡತಾರೆಗಳಿಗೆ (ಇಂಚಾಪ. ೬೯-೩೪). ೩. ಹೆಚ್ಚುವುದು ; ಆಧಿಕ್ಯ. ೪. ಧನದ ಹೆಚ್ಚಳ ; ಐಶ್ವರ್ಯದ ಆಧಿಕ್ಯ ; ಸಂಪತ್ಸಮೃದ್ಧಿ. ೫. ಉನ್ನತಿ ; ಏಳಿಗೆ ; ಅಭಿವೃದ್ಧಿ : ಎನ್ನ ವಾಮಕ್ಷೇಮ ನಿಮ್ಮದಯ್ಯಾ ಎನ್ನ ಹಾನಿವೃದ್ಧಿ ನಿಮ್ಮದಯ್ಯಾ ಎನ್ನ ಮಾನಾಪಮಾನ ನಿಮ್ಮದಯ್ಯಾ (ಬಸವ. ೬೦) ; ಸಮಸಮಾನ ಭಾವ ಬುದ್ಧಿ ಸಮಸಮಾನ ಶುದ್ಧಿಯು ಇದೇ ಶುದ್ಧಿ ಇದೇ ವೃದ್ಧಿ ಇದೇ ಸ್ವತಂತ್ರಸಿದ್ಧಿಯು (ಅರಳು. ೨೯೯-೪). ೬. ಧನ ; ಸಂಪತ್ತು ; ಐಶ್ವರ್ಯ. ೭. ಗುಂಪು ; ಸಮೂಹ ; ನೆರವಿ. ೮. ಸಾಲವಾಗಿ ಪಡೆದ ಅಥವಾ ಕೊಟ್ಟ ಹಣಕ್ಕೆ ಪ್ರತಿಫಲವಾಗಿ ಕೊಡುವ ಅಥವಾ ಪಡೆಯುವ ಹಣ ; ಬಡ್ಡಿ : ದೇವರ ನಂದಾದೀಪಿಗೆಗೆ ಮಾಕಯ್ಯಂ ಕೊಟ್ಟ ಗದ್ಯಾಣ ೧೫ . . . ಅನ್ತು ೩೦ ಗದ್ಯಾಣ ಮುಂ ಇರ್ಪ್ಪಣ ವೃದ್ಧಿಯನು ಕೊಡುವರ್ (ಮೈಸೂರು. ೧೯೨೯,೫೫-೪೩ ; 1067) ; ಗಗ್ಗರ ಬರ್ಮ್ಮಣ್ಣಂ ಪುಲ್ಕಕ್ಕೆ ಕೊಟ್ಟ ಗದ್ಯಾಣ ೧ ಈ ಪೊನ್ನ ವೃದ್ಧಿಯೊಳಂ ಕೆಯ್ಯ ಗುತ್ತಗೆಯೊಳಂ ಗಂಧಧೂಪ ನಿವೇದ್ಯ ನಂದದೀಪಿಗಂ ಅಟ್ಟಿಸುವ ಮಾಣಯ ಜೀವಿತಕ್ಕಂ ಕುಡುವುದು (ಕಾ. II.೯-೨೭; 1075) ; ಶ್ರೀಮಾರ್ಕಣ್ಡೇಶ್ವರದೇವರ ಶ್ರೀಪಾದಸನ್ನಿಧಾನದಲು ಶಿವಾನನ್ದ ಯೋಗಿ ನಿವೇದ್ಯಶಾಲೆಯಂ ಮಾಡಿ . . . ಬಿದಿರ ಗದ್ದೆಯ ಮೇಲಿಕ್ಕಿದ ಪಾಣ್ಯ ಗದ್ಯಾಣಂ ಮುವತ್ತುಮನಾ ಪೊನ್ನ ವೃದ್ಧಿಯುಮಂ ಅಗ್ರಕ್ಕೆನ್ದು ಶಾಸನಮಾಗಮಾಡಿಸಿದ ಧರ್ಮ (ಸೌಇಇ. VIII. ೩೮-೧೭ ; 1140). ೯. ಲಾಭ ; ಗಳಿಕೆ. ೧೦. ಮಗುವಿನ ಜನನದಿಂದ ಮನೆಯವರಿಗೆ ಮತ್ತು ದಾಯಾದಿಗಳಿಗೆ ಉಂಟಾಗುವ ಅಶುದ್ಧಿ, — ಪುರುಡು ; ಜಾತಸೂತಕ : ಗೋಭಿಲಸ್ಮೃತಿ . . . ಉಪವೀತಪ್ರಕರಣ, ವೃದ್ಧಿ, ಶ್ರಾದ್ಧ, ಉಪಾಕರ್ಮ ಮುಂತಾದ ವಿಚಾರಗಳಿವೆ (ಭಾರದ.೬೬). ೧೧. ಒಂದು ಬಗೆಯ ಔಷಧೀಸಸ್ಯ : "ಜನೇಷ್ಟಃ — ಬಚೆ, ವೃದ್ಧಿ, ಜತುಕೆ" (ಔಷಧಿ. ೬೦). ೧೨. ಒಂದು ಬಗೆಯ ಗಂಧದ್ರವ್ಯ. ೧೩. [ಜ್ಯೋತಿ] ಪಂಚಾಂಗಗಳಲ್ಲಿ ಒಂದಾದ ಯೋಗದ ಇಪ್ಪತ್ತೇಳು ಬಗೆಗಳಲ್ಲಿ ಒಂದು : ವಿಷ್ಕಂಭ ಪ್ರೀತಿ ಆಯುಷ್ಮಾನ್ . . . ಗಂಡ.ವೃದ್ಧಿ ಧ್ರುವ . . . ಐಂದ್ರ ವೈಧೃತಿಗಳೆಂಬ ಇಪ್ಪತ್ತೇಳುಯೋಗಂಗಳುಂ (ವಿವೇಕ. ೨೬೨). ೧೪. [ವ್ಯಾಕ] = ವೃದ್ಧಿಸಂಧಿ. ೧, ೧೪ : ಅವರ್ಣವಾದಕ್ಕೆಡೆಯಾಗದೊಳ್ಪಿಂದವರ್ಣಕಾಮರ್

ಗುಣವೃದ್ಧಿಧಾಮರ್ ದಿವಾಕರರ್ ವ್ಯಾಕೃತಿನಾಮಿಗಳ್ ವೋಲ್ ದಿವಕ್ಕೆ ಪನ್ನಿರ್ವರೆ ಮುಖ್ಯ ರಾದರ್ (ಶಮದ. ೯ ವೃತ್ತಿ). [ಸಂ.]

ವೃದ್ಧಿಂಗತ (ನಾ). ೧. ಅಭಿವೃದ್ಧಿ ; ಏಳಿಗೆ : ಭಾರತೀಯನಾರಿಯರು . . . ಆತ್ಮ ಗೌರವದ ವ್ಯಕ್ತಿತ್ವವನ್ನು ವೃದ್ಧಿಂಗತಗೊಳಿಸುತ್ತ ವಿಹರಿಸಲೆಂದೂ ನಾವು ಸದೈವ ಹಾರೈಸುವೆವು (ಪ್ರಬುಂಧ. ೯೩). ೨. ಹೆಚ್ಚಳ ; ಆಧಿಕ್ಯ.

ವೃದ್ಧಿಂಗತವಾಗು = ೧. ವೃದ್ಧಿಯಾಗು ; ಹಬ್ಬು ; ಹರಡು : ಆ ಜಗದೀಶನ ಕೃಪೆಯಿಂದ ನಮ್ಮ ಪಂತರ ಆಯುರಾರೋಗ್ಯಗಳೂ, ಸುಕೀರ್ತಿಯೂ ವೃದ್ಧಿಂಗತವಾಗಲಿ ಎಂದು ನುಡಿದನು (ಅಂಬಿಕ. ೧೮೭). ೨. ಅಭಿವೃದ್ಧಿಯನ್ನು ಹೊಂದು ; ಏಳಿಗೆ ಯನ್ನು ಪಡೆ ; ಪ್ರವರ್ಧಮಾನಕ್ಕೆ ಬರು : ಈ ನೆರನಾಡುಗಳೊಳಗಿನ ನವೀನಸ್ನೇಹದ ಅಧ್ಯಾಯವು ವೃದ್ಧಿಂಗತವಾಗುತ್ತಿರಬೇಕು ಎಂಬ ಸದಪೇಕ್ಷೆಯಿಂದ ನಾನು ಈ ಆಮಂತ್ರಣ ವನ್ನು ಸ್ವೀಕರಿಸಿರುವೆನು (ಪ್ರಬುಂಧ. ೭). [< ಸಂ. ವೃದ್ಧಿ]

ವೃದ್ಧಿಜೀವನ (ನಾ). ೧. ಹಣವನ್ನು ಸಾಲ ಕೊಟ್ಟು ಬಂದ ಬಡ್ಡಿಯಿಂದ ಉಪಜೀವನ ನಡೆಸುವ ವೃತ್ತಿ ; ಬಡ್ಡಿವ್ಯವಹಾರದಿಂದ ಜೀವನ ನಡೆಸುವಿಕೆ : ಗೋರಕ್ಷಣವು , ಕೃಷಿಯು, ವೃದ್ಧಿಜೀವನವು ಮೊದಲಾದ ಸದ್ಧರ್ಮವನ್ನು ತಪ್ಪದೆ ಆಚರಿ ಸುವ ವೈಶ್ಯನು (ಕೃಷಾಸ. ೨೧). ೨. ಬಡ್ಡಿವ್ಯವಹಾರದಿಂದ ಜೀವನ ನಡೆಸುವವನು ; ಕುಸೀದಕ : "ಕುಸೀದಃ, ವೃದ್ಧಿಜೀವನಂ — ಈ ೨ ಬಡ್ಡಿಯಿಂದ ಬಾಟ್ಟವಂ" (ಹಲಾಯು. ೯೪-೪೧೮). [ಸಂ.]

ವೃದ್ಧಿಜೀವಿಕೆ (ನಾ). ೧. = ವೃದ್ಧಿಜೀವನ ೧. ೨. ಸಾಲವಾಗಿ ಕೊಟ್ಟ ಹಣದ ಮೇಲಿನ ಬಡ್ಡಿ : "ಅರ್ಥಪ್ರಯೋಗಃ, ಕುಸೀದಂ, ವೃದ್ಧಿಜೀವಿಕಾ — ೩ ಬಡ್ಡಿಯ ಹೆಸರುಗಳು, ಹಣದ ಬಡ್ಡಿ, ತಲವಾಸಿ" (ಸಿದ್ಧಾಂತಿ. ೨೭೪). [ಸಂ. ವೃದ್ಧಿಜೀವಿಕಾ]

ವೃದ್ಧಿಪಡಿಸು (ಕ್ರಿ). ಹೆಚ್ಚಿಸು ; ಬೆಳೆಸು ; ಅಧಿಕಗೊಳಿಸು : ಸಂಪತ್ತು ಹೆಚ್ಚಿದಂತೆ ಅದನ್ನು ವೃದ್ಧಿಪಡಿಸುವ ಆಶೆ ಮತ್ತೆ ಇನ್ನಷ್ಟು ಹೆಚ್ಚುವುದು (ರಾಜವ. ೫).

[ವೃದ್ಧಿ + ಪಡಿಸು]

ವೃದ್ಧಿಸಂಧಿ (ನಾ). [ವ್ಯಾಕ] ನಾಲ್ಕು ಬಗೆಯ ಸಂಸ್ಕೃತ ಸ್ವರಸಂಧಿಗಳಲ್ಲಿ ಒಂದು : ಅ ಆಕಾರಗಳಲ್ಲಿ ಒಂದರ ಮುಂದೆ, ಏಕಾರವಾಗಲಿ ಐಕಾರವಾಗಲಿ ಬಂದರೆ ಐಕಾರವೂ, ಓಕಾರವಾಗಲಿ ಔಕಾರವಾಗಲಿ ಬಂದರೆ ಔಕಾರವೂ ಎರಡಕ್ಕೂ ಆದೇಶವಾಗಿ ಬರುತ್ತವೆ. ಇದಕ್ಕೆ ವೃದ್ಧಿಸಂಧಿಯೆಂದು ಹೆಸರು (ಮಧ್ಯಮ. ೧೭೧). [ಸಂ.]

ವೃದ್ಧಿಸು (ಕ್ರಿ). ೧. ಬೆಳೆ ; ಹೆಚ್ಚಾಗು ; ಅಧಿಕಗೊಳ್ಳು : ಅವನ ಪರಿಶ್ರಮದಿಂದ ಅವನ ಸಂಪತ್ತು ವೃದ್ಧಿಸಿತು (ರೂಢಿ). ೨. ಬೆಳೆಯುವಂತೆ ಮಾಡು ; ಹೆಚ್ಚಿಸು ; ಅಧಿಕಗೊಳಿಸು : ಈ ಪ್ರಸಂಗ ಅವಳ ಕೋಪವನ್ನು ಇಳಿಸುವುದಿರಲಿ, ವೃದ್ಧಿಸಿತು (ಕುಸುಸು. ೧೭). [ವೃದ್ಧಿ + - ಇಸ್ತು]

ವೃದ್ಧೆ (ನಾ). ವಯಸ್ಸಾದವಳು ; ಮುದುಕಿ : ಕ್ರಮದಿಂ ಪನ್ನೆರಡಾಗೆ ಬಾಲಿಕೆ . . . ವೃದ್ಧೆಯಾಕ್ರಮಿಸಲ್ ಪಂಚದಶಾಬ್ದಸಂಖ್ಯೆ (ಮನ್ಮಥ. ೭-೨) : ನೋಡುತಿರೆ ನೆರೆದ ಜನರಾ ವಿರೂಪದ ವೃದ್ಧೆ . . . ಮಡಿಲಿಂದೊಂದು ಮುಕುರಮಂ ಪೊರದೆಗೆದು ನೀಡಿದಳ್ (ಶ್ರೀರಾಮಾ. ೨೧-೫೫೬). [ಸಂ. ವೃದ್ಧಾ]

ವೃದ್ಧೋಕ್ಷ (ನಾ). ಮುದಿಯಾದ ಎತ್ತು ; ವಯಸ್ಸಾದ ವೃಷಭ : ಮುಂದೆ ನಿಂದ ಚತುರಂಗಬಲಂಬೆರಸಬಲಾಬಾಲವೃದ್ಧವೃದ್ಧೋಕ್ಷಶಕಟ ಸಂಕಟಮಪ್ಪ ಕಟಕಮಂ ಮೆಲ್ಲ ಮೆಲ್ಲನೊಡಗೊಂಡು ಬರ್ಪಂತು . . . ಅಪ್ಪಯಿಸಿ (ಆದಿಪು. ೪-೯೧ ವ). [ಸಂ.]

ವೃದ್ಧ್ಯಂಬು (ನಾ). ಸಮುದ್ರದ ದಡದಲ್ಲಿರುವ ನೀರು, — ದಂಡೆಯಲ್ಲಿರುವ ಜಲ : "ತಟದಲ್ಲಿರ್ಪ ನೀರು ವೃದ್ಧ್ಯಂಬು ವೇಳೆಯೆನಿಕ್ಕು" (ಮಂಗರಾ. ೧೨೦-೩).

[ಸಂ.]

ವೃದ್ಧ್ಯಾಜೀವ (ನಾ). = ವೃದ್ಧಿಜೀವನ ೨ : "ದ್ವ್ಯಗುಣಿಕಃ, ವಾರ್ಧುಷಿಕಃ, ವೃದ್ಧ್ಯಾಜೀವಃ, ಕುಸೀದಕಃ — ಈ ೪ ಬಡ್ಡಿಗುಡುವವಂ" (ಹಲಾಯು. ೯೩-೪೧೭). [ಸಂ.]

ವೃದ್ಧ್ಯಾಜೀವಿ (ನಾ). = ವೃದ್ಧಿಜೀವನ ೨ : "ಕುಸೀದಕನು ವಾರ್ಧುಷಿಕನಾ ದ್ವ್ಯಗುಣಿಕನೆನಲು ವೃಧ್ಧಾ Eದ್ಧ್ಯಾ ತ್ರಿಜೀವಿಯೆನೆ [ಜಾಠಾ. ವನೆನೆ] ಬಡ್ಡಿ ಗೊಡುವನಕ್ಕುಂ" (ಮಂಗರಾ. ೧೦೨-೧). [ಸಂ. ವೃದ್ಧ್ಯಾಜೀವಿನ್]

ವೃಶ (ನಾ). ೧. ಹಸಿಯ ಶುಂಠಿ ; ಅಲ್ಲ : "ವೃಶ ಶಾಕಪ್ರಭವಂ ಶಾಕಶಾಕಟಂ ಶಾಕಶಾಕಿನಂ ತಾನೆನಿಕುಂ" (ಪಪ್ರಕೋ. ೨೭-೭). ೨. ಮೂಲಂಗಿ. ೩. ಇಲಿ; ಮೂಷಕ. [ಸಂ.]

ವೃಶ್ಚಿಕ (ನಾ). ೧. ಬಾಲದಲ್ಲಿ ವಿಷವುಳ್ಳ ಒಂದು ಬಗೆಯ ಕೀಟ ; ಚೇಳು: ವೃಶ್ಚಿಕ ಬಾಲದಲ್ಲಿ ಸರ್ಪ ಬಾಯಲ್ಲಿ ಕಂಠೀರವ ದಂತದಲ್ಲಿ ಇಂತಿವಱ ಸಂಚವನಱಿದಲ್ಲಿ ಸಂಕಲ್ಪವಿಲ್ಲ (ಸಕಲ. ಕ. I,೨೮೭-೧೦೫೭) ; ಕುಡಿಯಳ್ಳೆಯಂ ವೃಶ್ಚಿಕಂ ಮಿಡಿಯೆ ಮಿಡುಮಿಡನೆ ಮಿಡುಕುವ . . . ಹೆದಱಿ ಹಾ ಎಂದೊಱಲುವಂಗನೆಯ . . . ಭೂತ ಭೇತಾಳವಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝಂಕಿಸಿದುವಾ ಕೌಶಿಕನ ಪ್ರೇರಣೆಯೊಳು (ಪಚಕಾ. ೯-೪೩). ೨. ಏಡಿ; ನಳ್ಳಿ. ೩. ಸಾವಿರ ಕಾಲುಳ್ಳ ಚೇಳು ; ಲಕ್ಷ್ಮಿ ಚೇಳು ; ಜರಿ. ೪. ಕಂಬಳಿ ಹುಳು. ೫. ಕಣಜದ ಹುಳು ; ಕಡಜ : "ವೃಶ್ಚಿಕಃ, ಶೂಕಕೀಟಃ — ೨ ಕೊಂಡೀವಿಷದ ಚೇಳು, ಕರೀಚೇಳು, ಖಣಜದ ಹುಳುವಿಗೂ ಹೆಸರು" (ಸಿದ್ಧಾಂತಿ. ೧೫೭). ೬. ಒಂದು ಬಗೆಯ ಸಸ್ಯ ; ಕೊಂಡೀಗಿಡ : "ವೃಶ್ಚಿಕಃ — ೧ ಮುಳ್ಳುಹುಳ, ಚೇಳು, ಚಕಾರದಿಂದ ಕಣಜದ ಹುಳು, ವೃಶ್ಚಿಕರಾಶಿ, ಕೊಂಡೀಗಿಡ, ೫" (ಸಿದ್ಧಾಂತಿ. ೩೭೩). ೭. (ಆಲಂ) ಕೆಟ್ಟಸ್ವಭಾವದ ವ್ಯಕ್ತಿ ; ಕೆಡುಕ ; ದುಷ್ಟ. ೮. [ಜ್ಯೋತಿ] ಸೂರ್ಯ ಮೊದಲಾದ ಗ್ರಹಗಳು ಸಂಚರಿಸುವ ಹನ್ನೆರಡು ರಾಶಿಗಳಲ್ಲಿ ಎಂಟನೆಯದು : ಮೃಗ ಕರ್ಕಟಕ ಶಾಕ್ಕರ ವೃಶ್ಚಿಕ ಝಷಮಿವಬಲೆಗಳ್ ಸೌಮ್ಯಂಗಳ್ (ಜಾತಕ. ೧-೨೨) : ಹನ್ನೆರಡು ರಾಶಿಗಳಲ್ಲಿ ವೃಶ್ಚಿಕ ಒಂದಕ್ಕೇ ಅದರ ಹೆಸರಿಗೆ ತಕ್ಕಂತೆ ಚೇಳಿನ ಆಕಾರವಿರುವುದು (ನಕ್ಷತ್ರ. ೯೬). ೯. ಹನ್ನೆರಡು ಸೌರಮಾನ ತಿಂಗಳುಗಳಲ್ಲಿ ಒಂದು ; ಸೂರ್ಯನು ವೃಶ್ಚಿಕರಾಶಿಯಲ್ಲಿರುವ ತಿಂಗಳು ; ವೃಶ್ಚಿಕಮಾಸ. ೧೦. [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು ; "ಎರಡು ಕೈಗಳಿಂದಲೂ ಕರಿಹಸ್ತವನ್ನು ಮಾಡಿ ಬೆನ್ನನ್ನು ಬಗ್ಗಿಸಿ ಒಂದು ಕಾಲನ್ನು ಚೇಳಿನ ಬಾಲದಂತೆ ಹಿಂದಕ್ಕೆತ್ತುವುದು" (ಲಾಸ್ಯರಂ. ೨೯೬ ಗದ್ಯಾನುವಾದ); ಈದು ಖೇಚರರು ಆಕಾಶದಲ್ಲಿ ಸಂಚರಿಸುವುದನ್ನು ಅಭಿನಯಿಸುವಾಗ ತೋರುವ ಭಂಗಿ : ಕರಿಕರದಿನೊಪ್ಪ ಕೈಗಳ್ ಚರಣಂ ತೇಳ್ಪಾಲದಂತೆ ಪಿಂತಣ್ಗಂ ನೀಡಿರೆ ಬೆನ್ ಬಾಗಲ್ಕಡು ತಾಂ ತರುಣೇ ಕೇಳ್ ವೃಶ್ಚಿಕಾಖ್ಯಕರಣಮನಿಕ್ಕುಂ (ಲಾಸ್ಯರಂ. ೪-೧೦೨). [ಸಂ.]

ವೃಶ್ಚಿಕಕೇತನ (ನಾ). ಚೇಳಿನ ಗುರುತುಳ್ಳ ಧ್ವಜವುಳ್ಳವನು ; ವೃಶ್ಚಿಕಲಾಂಛನದ ಪತಾಕೆಯುಳ್ಳವನು : ಮೇಷಾಸ್ಯನೃತವೃಷಭಮೋಹಿ ಗೌರೀಮಿಥುನ ದೋಷಾದಿನಾಶ ಕರ್ಕಾಟಕೋಟಾದಿಗಳೊಳೀಶಾಗ್ರ ನರಸಿಂಹವೈರಿ ಕನ್ಯಾಕ್ಷೀರಪಾಯಿ ತುಲೆಯಮರನೀತೀ ಪ್ರೇಷ ವೃಶ್ಚಿಕಕೇತನಸ್ತುತ್ಯ ಮೇರುಧನುದೋಷಿಹಿಮಕರರಕ್ಷಕುಂಭಜಗೆ ಹರಿಮತ್ಸ್ಯ ವೇಷಿಯಂ ಸಲಹುವಗ್ಗಳವಿತ್ತ ಶಾಂತಮಲ್ಲೇಶ ಕಾರುಣ್ಯರಾಸೀ (ವೀಶೈಪು. ೮-೫೫-೧). 'ವೃಶ್ಚಿಕಗಮನ' ಪರಾ. [ಸಂ.]

ವೃಶ್ಚಿಕಗಮನ (ನಾ). ಚೇಳನ್ನು ವಾಹನವಾಗಿ ಉಳ್ಳವನು : ಅಕಲಂಕಗಿರಿಜಾಮಿಥುನ ದೇಹ ವೃಷಗ ವೃಶ್ಚಿಕಗಮನದೌವಾರಿಕಂ ಗಿರಿಜಾವರ (ವೀಕೋಪು. ೨-೨). 'ವೃಶ್ಚಿಕ ಕೇತನ' ಪರಾ. [ಸಂ.]

ವೃಶ್ಚಿಕನಿಕುಟ್ಟಕ (ನಾ). [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು; "ಒಂದು ಕಾಲನ್ನು ಚೇಳಿನ ಬಾಲದಂತೆ ಹಿಂದಕ್ಕೆತ್ತಿ, ಕೈಗಳನ್ನು ಅಲಪದ್ಮ ಹಸ್ತದಿಂದ ಭುಜಶಿರಸ್ಸಿನಲ್ಲಿಡುವುದು" (ಲಾಸ್ಯರಂ. ೨೯೬ ಗದ್ಯಾನುವಾದ) : ತಲಪುಷ್ಪಪುಟ, ಲೀನ . . . ವೃಶ್ಚಿಕ, ವೃಶ್ಚಿಕನಿಕುಟ್ಟಕ, ವೃಶ್ಚಿಕರೇಚಿತ . . . ಗಂಗಾವತರಣ — ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ವ). [ಸಂ.]

ವೃಶ್ಚಿಕಮಾಸ (ನಾ). [ಜ್ಯೋತಿ] ಸೌರಮಾನದ ಹನ್ನೆರಡುತಿಂಗಳುಗಳಲ್ಲಿ ಎಂಟ ನೆಯ ತಿಂಗಳು ; ಸೂರ್ಯನು ವೃಶ್ಚಿಕರಾಶಿಯಲ್ಲಿರುವ ತಿಂಗಳು. [ಸಂ.]

ವೃಶ್ಚಿಕರಾಶಿ (ನಾ). [ಜ್ಯೋತಿ] ಸೂರ್ಯ ಮೊದಲಾದ ಗ್ರಹಗಳು ಸಂಚರಿಸುವ ಹನ್ನೆರಡು ರಾಶಿಗಳಲ್ಲಿ ಒಂದು, — ಎಂಟನೆಯ ರಾಶಿ : (ವೃಶ್ಚಿಕರಾಶಿಸ್ಥಿತ ಚಂದ್ರಫಲ) (ಜಾತಕ. ೧೭-೮) ; ವೃಶ್ಚಿಕರಾಶಿಯಲ್ಲಿ ಹುಟ್ಟಿದವನು ತಂದೆ ಗುರು ವಿಪ್ರರನ್ನು ಬಿಟ್ಟರುತ್ತಾನೆ (ಜಾತಕ. ೧೭-೮ ಟೀಕೆ). [ಸಂ.]

ವೃಶ್ಚಿಕರೇಚಿತ (ನಾ). [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು ;

''ಒಂದು ಕಾಲನ್ನು ಚೇಳಿನ ಬಾಲದಂತೆ ಹಿಂದಕ್ಕೆತ್ತಿ, ಕೈಗಳನ್ನು ಸ್ವಸ್ತಿಕದಂತೆ ಹಿಡಿದು, ಸ್ವಸ್ತಿಕವನ್ನು ಬಿಡಿಸುತ್ತ ರೇಚಿತ ಮಾಡುವುದು'' (ಲಾಸ್ಯರಂ. ೨೯೬ ಗದ್ಯಾನುವಾದ) : ಪ್ರಕಟಿತ ವೃಶ್ಚಿಕಮುಂ ವೃಶ್ಚಿಕದ ನಿಕುಟ್ಟಾಖ್ಯಮೆಸವ ವೃಶ್ಚಿಕರೇಚಿತಮಕಳಂಕಮಾದ ಲತಾವೃಶ್ಚಿಕಮಾಕ್ಷಿಪ್ತಾರ್ಗಲಾಖ್ಯಮಿಂ ಕರಣಂಗಳ್ (ಲಾಸ್ಯರಂ. ೪-೩೨). [ಸಂ.]

ವೃಶ್ಚಿಕಾಪಸೃತ (ನಾ). [ನಾಟ್ಯ] ಮೂವತ್ತೆರಡು ಬಗೆಯ ಅಂಗಹಾರಗಳಲ್ಲಿ ಒಂದು ; ಲತಾವೃಶ್ಚಿಕ, ನಿಕುಂಚಿತ, ಮತ್ತಲ್ಲಿ, ನಿತಂಬ, ಕರಿಹಸ್ತ ಮತ್ತು ಕಟೀಛಿನ್ನವೆಂಬ ಆರು ಕರಣಗಳನ್ನೂ ಕ್ರಮವಾಗಿ ಮಾಡುವುದು : ಸ್ಥಿರಹಸ್ತ, ಪರ್ಯಸ್ತ, ಸೂಚೀವಿದ್ಧ . . . ಅರ್ಧನಿಕುಟ್ಟ, ವೃಶ್ಚಿಕಾಪಸೃತ, ಅಲಾತಕ . . . ಸ್ವಸ್ತಿಕರೇಚಿತ – ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಲಾಸ್ಯರಂ. ೫-೭ ವ). [ಸಂ.]

ವೃಶ್ಚಿಕಾಸನ (ನಾ). [ಯೋಗ] ಒಂದು ಬಗೆಯ ಆಸನ : ಮುಖ್ಯವಾದ ಕೆಲವು ಆಸನಗಳು . . . ೫೮. ಉತ್ತಾನಕೂರ್ಮಾಸನ ೫೯. ವೃಶ್ಚಿಕಾಸನ . . . ೬೯. ಭೈರವಾಸನ ಇತ್ಯಾದಿಗಳನೇಕವಿವೆ (ಭಾರದ. ೧೬೭). [ಸಂ.]

ವೃಶ್ಚಿಕಾಳಿ (ನಾ). ಒಂದು ಬಗೆಯ ಸಸ್ಯ : ''ಕಾಳಾಂಜನಿ — ಕರಿಯಜೀರಗ, ನಿರಸಂ, ವೃಶ್ಚಿಕಾಳಿ, ಕರಿಯತಿಗಡೆ'' (ಓಷಧಿ. ೨೮). [ಸಂ. ವೃಶ್ಚಿಕಾಲೀ]

ವೃಷ (ನಾ). ೧. ಎತ್ತು ; ಹೋರಿ ; ವೃಷಭ : ಶೃಂಗಾರದಿಂ ಭಂಗಿವಡೆದು ವೃಷ ಬಲೀವರ್ದಧ್ವಾನಮುಂ ಗೋವತ್ಸಕದಂಬಹಂಭಾರವಮುಂ ವಿಜೃಂಭಿಸೆ (ಜಗವಿ. ೪-೮೦ ವ). ೨. ಶಿವನ ವಾಹನವಾದ ವೃಷಭ ; ನಂದಿ ; ಬಸವ : ತರುಣೋತ್ತುಂಗಶಶಾಂಕಖಂಡಮೆ ಸುಧಾಬೀಜಂ . . . ವೃಷಂ ಪುಷ್ಕಮಿಶ್ವರಶೃಲಂ ಪಲಮಾಗೆ ಕೋಮಲಮುಖೀ ಗೌರೀಲತಾಶ್ಲಿಷ್ಟ ಶಂಕರಕಲ್ಪದ್ರು ಮನೀಗಭೀಷ್ಟಫಲಮಂ ಚಾಳುಕ್ಯನಾರಾಯಣಂ (ಗದಾಯು. ೧-೨). ೩. (ಯಾವುದೇ ವರ್ಗದಲ್ಲಿ) ಶ್ರೇಷ್ಠವಾದುದು ; ಉತ್ತಮವಾದುದು ; ಉತ್ಕೃಷ್ಟವಾದುದು : ''ಮೂಷಕ ಧರ್ಮ ಶ್ರೇಷ್ಠಾರ್ಥಪ್ರಕಾಶಕಂ ಕವಿವಚೋಕ್ತ(ಯಿಂ) ವೃಷಶಬ್ದಂ''(ವಸ್ತುಕೋ. ೧೩೨-೮೪). ೪. ಪ್ರೀತಿಯ ಅಧಿದೇವತೆ ; ಕಾಮ ; ಮನ್ಮಥ. ೫. ಬಲಿಷ್ಠನಾದವನು ; ಬಲಶಾಲಿ ; ಮಲ್ಲ. ೬. ಪುರುಷ ಅಥವಾ ಗಂಡುಪ್ರಾಣಿ ; ಪುರುಷಜಾತಿ. ೭. ಶತ್ರು ; ವೈರಿ ; ಹಗೆ. ೮. ಇಲಿ ; ಮೂಷಿಕ : ''ಆಖುಃ, ವೃಷಃ, ಮೂಷಕಃ – – ಈ ೩ ಇಲಿ'' (ಹಲಾಯು. ೩೯-೮೨). ೯. ಇಂದ್ರ : ವೃಷಕೃತ ಜಿನೇಂದ್ರಜನ್ಮಾಭಿಷವಂ ನಂದೀಶ್ವರತ್ರಯಂಗಳೊಳಮಮಾನುಷವಾಗಿರೆ ಮಾಪ್ಪ ಮಹಾಭಿಷೇಕದಂತಾಯ್ತು ದಾನಚಿಂತಾಮಣಿಯಾ (ಅಜಪು. ೪-೭೬) ; ಹರನೇತ್ರವಹ್ನಿಯುಂ ಸಂಹರಣಾಗ್ನಿಯುಮಿದಱ ಕಾಯ್ಪುನೊಳ್ ದೊರೆಯಕ್ಕುಂ ದೊರೆಯಲ್ತು ಗರ್ಜನಾಡಂಬರದೊಳಿದರ್ಕೆನಿಪ ವಜ್ರದಿಂ ವೃಷನಿಟ್ಟುಂ (ಜಗವಿ. ೧೩-೧೦೬). ೧೦. ಕರ್ಣ. ೧೧. ವಿಷ್ಣು. ೧೨. ನೀರು ; ಉದಕ. ೧೩. ಒಂದು ಬಗೆಯ ಔಷಧಿ. ೧೪. ಒಂದು ಬಗೆಯ ಸಸ್ಯ ; ಆಡುಸೋಗೆ ; ಆಡುಮುಟ್ಟದ ಗಿಡ : ''ವೃದ್ಧಮಾತಾ, ಸಿಂಹೀ, ವಾಶಕಾ . . . ವೃಷಃ, ಉಟರೂಷಃ . . . ವಾಜಿದಂತಕಃ – ೮ ಆಡ್ಡಸರದ ಗಿಡ, ಆಡುಸೋಗೆಗಿಡದ ಹೆಸರು, ಆಡುಮುಟ್ಟದ ಗಿಡ, ಮೇಕೆವಲ್ಲದ ಗಿಡ'' (ಸಿದ್ಧಾಂತಿ. ೧೩೫). ೧೫. ಒಂದು ಬಗೆಯ ಮೂಲಿಕೆ : ''ಶೃಂಗೀ, ವೃಷಭಃ . . . ವೃಷಃ – ೩ ಹೆರಿಗೆ ಹಾಲಯ ಹೆಸರು, ವೃಷಭವೆಂಬುವ ಮೂಲಿಕೆ'' (ಸಿದ್ಧಾಂತಿ. ೧೩೮). ೧೬. ನೀತಿ ; ಧರ್ಮ : ಅಂತು ಪುರಂದರನಾನಂದನೃತ್ಯಾವಸಾನದೋಳೀ ಪರಮೇಶ್ವರಂ ಧರ್ಮಾಮೃತವರ್ಷದಿಂ ಭವ್ಯಸಸ್ಯಸಮೃದ್ಧಿಯಂ ಮಾಡುವುದಱಿಂ ವೃಷಮೆಂಬುದು ಧರ್ಮಮದಱಿಂ ದೊಪ್ಪುವುದಱಿಂದಂ . . . ವೃಷಭಸ್ವಾಮಿಯೆಂದು ಪೆಸರನಿಟ್ಟು (ಆದಿಪು. ೭-೧೨೭ ವ) ; ಮೂವತ್ತಾಱುಂ ಗುಣದಿಂ ಭಾವಜನಂ ಕಟ್ಟಿ ಪೆಟ್ಟವೆಬ್'ದರ್ ವೃಷದಿಂ ಭಾವಿಪೊಡೆ ಮೇಘಚಂದ್ರಶ್ರೇವಿದ್ಯರದೆಂತು ಶಾಂತರಸಮಂ ತಳೆದರ್ (ಪಂಡಾವಾ. ೧-೧೯). ೧೭. ಪುಣ್ಯ ; ಸುಕೃತ : ಭುವನದ ಪಾಪತಾಪಮಗಿಯಲ್ ಮುಗಿಯಲ್ ಕರಕಂಜ ಪುಂಜಮೊಪ್ಪುವ ವೃಷವಾರ್ಧಿ ವೃದ್ಧಿವಡೆಯಲ್ ಸಡೆಯಲ್ . . . ಎಳದಿಂಗಳಂತೆ ಬಳೆದಂ ತಳೆದೊಂದೊದವಂ ಜಿನಾರ್ಭಕಂ (ಪುಪ್ರಸ. ೧೨-೫೮). ೧೮. ಬಯಸಿದುದನ್ನು ಉಂಟುಮಾಡುವ ಕಾರ್ಯ ; ಇಷ್ಟಾರ್ಥಪ್ರದವಾದ ಕಾರ್ಯ : ವೃಷವೆಂದರೆ ಇಷ್ಟಾರ್ಥಪ್ರದವಾದ ಕಾರ್ಯವು (ಆರ್ಯಧ. ೯). ೧೯. ಧರ್ಮಸ್ವರೂಪಿಯಾದವನು ; ಧರ್ಮವೇ ಮೂರ್ತಿವತ್ತಾದವನು : ಸಕಲಧರ್ಮಸ್ವರೂಪಿಯಾಗಿರ್ಪುದರಿಂದ ವೃಷನೆಂದು ಪೆಸರು (ಭಾರಶಾ. ೪೩). ೨೦. ಒಳ್ಳೆಯತನ ; ಸದ್ಗುಣ ; ಸೌಶೀಲ್ಯ : ''ಶರೀರಭೇದಮೊಳ್ಪು ಜನ ವೃಷಂ ಸುಧರ್ಮ ವೃಷವಾಚಕಂ'' (ಪಾಸಾರ. ೧೭). ೨೧. [ಕಾಮಶಾ] ಮೂರುವರ್ಗದ ಪುರುಷರಲ್ಲಿ ಒಂದು ವರ್ಗಕ್ಕೆ ಸೇರಿದವನು ; ಅತಿಕಾಮಿಯಾದವನು : ಎಸಗುಂ ಶಶವೃಷ ಹಯ[ರ್ಗು]ಲ್ಲಸಿತಧ್ವಜಮುಂ ಕುರಂಗಿ ಹಯಹಸ್ತಿಹಯರ್ಗಸಮಾಸ್ತ್ರಗೆ ಹಯಮುಂ ಲಕ್ಕಿಸಲಾಜೊಂಬತ್ತು ಪನ್ನೆರಬ್ಬೆರಲುದ್ದಂ (ಮಾಸ್ಮ.ವಿ ೯-೨); ಮುನಿವರ ವಾತ್ಸ್ಯಾಯನ ಮತದೊಳು ನೆಟ್ಟನೆ ಶಶವೃಷಹಯರೆಂದನಿಪ ಮನುಜರ ಮೂದೆಜನೆನಿಸುವರ್ (ಜನವ.೪-೧). ೨೨. [ಜೈನ] ಮೊದಲನೆಯ ತೀರ್ಥಂಕರ ; ವೃಷಭನಾಥ : ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ . . . ಸಮಸ್ತವಿದ್ಯಾಪತಿ ನಾಭಿನಂದನನುಪಾಶ್ರಿತ ಭವ್ಯಜನಾಭಿನಂದನಂ (ಆದಿಪು. ೧-೪೦). ೨೩. [ವಾಸ್ತು]ಮನೆ, ದೇವಾಲಯ ಮೊದಲಾದುವನ್ನು ಕಟ್ಟುವ ಎಂಟು ಆಯಗಳಲ್ಲಿ ಒಂದು ; ವೃಷಭಾಯ : ವಿವಿಧವಾದ ಪ್ರಾಸಾದಾದಿಗಳು ಎಂಟುವಿಧವಾದ ಗಜ, ಉಷ್ಟ್ರ (ಒಂಟೆ), ಖರ, ಸಿಂಹ, ವೃಷ, ಧ್ವಜ, ಧೂಮ, ಶ್ವಾನ ಎಂಬ ಆಯಗಳನ್ನರಿತು ನಿರ್ಮಾಣವಾಗತಕ್ಕದೆಂದೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವ (ಭಾಸಾದ. ೪೦). 'ಧೂಮಾಯ' ಪರಾ. ೨೪. ದೇವಾಲಯದ ಒಂದು ನಿರ್ದಿಷ್ಟರೀತಿ, – ಮಾದರಿ. ೨೫. [ಜ್ಯೋತಿ] ಜ್ಯೋತಿಶ್ಚಕ್ರದ ಹನ್ನೆರಡು ರಾಶಿಗಳಲ್ಲಿ ಒಂದು ; ವೃಷಭರಾಶಿ. [ಸಂ.]

ವೃಷಕೇತು (ನಾ). ಕರ್ಣನ ಮಗನಾದ ವೃಷಧ್ವಜ : ಈ ಘಟೋತ್ಕಚನ ತನುಸಂಭವಂ ಬಡವನೇ ಮೇಘನಾದಂ ಕರ್ಣಸೂನು ವೃಷಕೇತು ತಾಂ ಮೋಘ ವಿಕ್ರಮನೆ (ಜೈಮಿಭಾ. ೨-೩೫). [ಸಂ.]

ವೃಷಕೋಷ್ಠ (ನಾ). [ಜೈನ] ಲೋಕಾಂತಿಕದೇವನಿಕಾಯದಲ್ಲಿ ಒಂದು ವರ್ಗ : ಅರುಣ ಗರ್ದತೋಯಮಧ್ಯದೊಳ್ ವೃಷಕೋಷ್ಠ ಕಾಮಧರರುಂ ಗರ್ದತೋಯ ತುಷಿತಾಂತರದೊಳ್ ನಿರ್ಮಾಣ ರಜೋದಿಗಂತರಕ್ಷಿತರುಂ . . . ಇರ್ಪರ್ (ತತ್ತ್ವಸ್ತ್ರ. ೨೨೨). [ಸಂ.]

ವೃಷಗ (ನಾ). ನಂದಿಯ ಮೇಲೆ ಸಂಚರಿಸುವವನು ; ನಂದಿವಾಹನ ; ಶಿವ : ಅಕಲಂಕಗಿರಿಜಾಮಿಥುನದೇಹ ವೃಷಗ ವೃಶ್ಚಿಕಗಮನದೌವಾರಿಕಂ . . . ಗಿರಿಜಾವರ (ವಿಕ್ರಮ. ೨-೨). [ಸಂ.]

ವೃಷಗಂತಿ (ನಾ). ಒಂದು ಬಗೆಯ ಸಸ್ಯ ; ಗಿರಿಕರ್ಣಿಕೆ : ''ವೃಷಗಂತಿಃ, ವೃಷಪಾದೀ – ಈಯರಡುಂ ಗಿರಿಕರ್ಣಿಕೆ'' (ಓಷಧಿ. ೧೫೭). [ಸಂ.]

ವೃಷಣ (ಗು). ೧. ಮಳೆ ಸುರಿಯುವ ; ವರ್ಷಿಸುವ. ೨. ಸಿಂಪಡಿಸುವ. ೩. ಫಲವತ್ತುಗೊಳಿಸುವ. (ನಾ). ೪. ತರಡು ; ಬೀಜ : ''ಮುಷ್ಕಂ, ಅಂಡಃ; ವೃಷಣಃ, ಕೋಶಃ, ಸಂಗ್ರಾಹಃ, ಮುಷ್ಕಃ — ಈ ೬ ಅಂಡಂ'' (ಹಲಾಯು. ೮೭-೩೬೯). ೫. ಬೀಜಕೋಶ ; ಅಂಡಕೋಶ. [ಸಂ.]

ವೃಷದಂಶ (ನಾ). ಇಲಿಯನ್ನು ತಿನ್ನುವಂತಹುದು ; ಬೆಕ್ಕು ; ಮಾರ್ಜಾಲ : ''ಮಾರ್ಜಾಲಂ ಬಿಡಾಲಮಾಖುದ್ವಿಷಂ ವೃಷದಂಶವೋತುವೆನೆ ಬೆಕ್ಕೆನಿಕ್ಕುಂ'' (ಮಂಗರಾ. ೪೯-೧೧). [ಸಂ.]

ವೃಷದ್ವಿಪ (ನಾ). ಇಂದ್ರನ ಆನೆ ; ಐರಾವತ : ಕೂಡೆ ಸಮಸ್ತವಸ್ತುಶತಸಾರ ಸಮೃದ್ಧಿಯನೊಪ್ಪುತಿರ್ಪುದಾ ನಾಡು ದಿವಕ್ಕೆ ತೋಡು ಕುಸುಮೇಷುಗೆ ಬೀಡು ವೃಷದ್ವಿಪಕ್ಕೆ ತಾಯ್ನಾಡು . . . ನಯನಕ್ಕೆಳದಿಂಗಳ ಕಾಡಿದೆಂಬಿನಂ (ಪುಷ್ಪಪು. ೯-೧೮). [ಸಂ.]

ವೃಷಧ್ವಜ (ನಾ). ೧. ನಂದಿಯ ಲಾಂಛನವನ್ನುಳ್ಳವನು ; ಶಿವ : ಯುದ್ಧದೊಳ್ ವೃಷಧ್ವಜನುಮನಿಕ್ಕಿ ಗೆಲ್ದರಿಗನೊಳ್ ತಲೆವಟ್ಟಿದಿರಾಗಿ ನಿಂದು ಸೂತಜನಿಜೆಂ ಗಡಂ (ಪಂಪಭಾ. ೧೨-೪೦) ; ಅಸುರಪತಿ ಕೇಳಿವನ ಬಿಡು ಕಲಿವೃಷಭನೆಂಬ ಕಪೀಶ್ವರನ ನೀಕ್ಷಿಸು ವೃಷಧ್ವಜನಂದದಲಿ ತೋರ್ಪವನ (ತೂರರಾ. ೬-೮-೧೨). ೨. ಇಲಿಯ

ಲಾಂಛನವನ್ನುಳ್ಳವನು ; ಗಣಪತಿ. ೩. ಕರ್ಣನ ಮಗನಾದ ವೃಷಕೇತು : ಆಹವಕಭಿಜ್ಞನೆನಿಸುವ ಕರ್ಣಸುತ ವೃಷಧ್ವಜನೆಂದ್ದು ನಗುತೆ ಕೈಮುಗಿದು ನಿಂದು ವಿಜ್ಞಾಪನಂಗ್ಗೆದನು (ಕ್ಷಮಿಭಾ. ೨-೩೭). ೪. [ಜೈನ] ಆದಿತೀರ್ಥಂಕರವಾದ ವೃಷಭನಾಥ : ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ . . . ಸಮಸ್ತವಿದ್ಯಾಪತಿ ನಾಭಿನಂದನನುಪಾಶ್ರಿತಭವ್ಯಜನಾಭಿನಂದನಂ (ಆದಿಪು. ೧-೪೦). [ಸಂ.]

ವೃಷನಾಥ (ನಾ). [ಜೈನ] ಆದಿತೀರ್ಥಂಕರನಾದ ವೃಷಭನಾಥ : ಹಿಮ ಶಿಖರಿಶಿಖರಿರಸಮವಿಗ್ರಹಸನಾಥನಂ ಕುಮುದದಲಧವಲರುಚಿರುಚಿರವೃಷನಾಥನಂ (ಆದಿಪು. ೭-೨೭ ಗದ್ಯ). [ಸಂ.]

ವೃಷಪಾದಿ (ನಾ). ಒಂದು ಬಗೆಯ ಸಸ್ಯ ; ಗಿರಿಕರ್ಣಿಕೆ : ''ವೃಷಗಂತಿಃ, ವೃಷಪಾದೀ - ಈಯೆರಡುಂ ಗಿರಿಕರ್ಣಿಕೆ'' (ಓಷಧಿ. ೧೫೭). [ಸಂ. ವೃಷಪಾದೀ]

ವೃಷಪಾಳಿ (ನಾ). = ವೃಷಧ್ವಜ ೧ : ಅರಶರೀರದಿಂ ನೆರೆ ವಿರಾಜಿಪ ಮಕುಟಮೌಳಿ ವೃಷಪಾಳಿ ಕೃಪಾಳಿ ರಾಮೇಶ ಸಲಹಾಹಿ (ನವಮೋ. ೭-೧). [ಸಂ. ವೃಷಪಾಲಿ]

ವೃಷಭ (ನಾ). ೧. ಎತ್ತು ; ಗೂಳಿ ; ಹೋರಿ : ''ವೃಷ ಸೌರಭೇಯ ಗೋಪತಿ ಋಷಭ ಬಲೀವರ್ದ ಶಾಕ್ಯರೋಕ್ಷಕಕುದ್ಮದ್ಯೃಷಭಾಖ್ಯಮನಡ್ವಾಹಂ'' (ವಸ್ತುಕೋ. ೮೯-೧) ; ಮಳೆಗೆ ತೆರಳದೆ ಕೋಡ ಬಾಗಿಸಿ ಕಲಿವೃಷಭ ಹೊಗುವಂತೆ ದ್ರೋಣನ ಬಲುಸರಳ ಸರಿವಳಿಗೆ ದಂಡೆಯನೊಡ್ಡಿ . . . ಕಟ್ಟಳವಿಯಲಿ ಹೊಕ್ಕನು ಭೀಮ ಬೊಬ್ಬಿಟ್ಟಿದು (ಕುವಾದ್ರೋ. ೧೩-೧೨) ; ನಿಂದಿರ್ಪನೊರ್ವ ಹರ್ಯಕ್ಷವಕ್ಷಾನ್ವಿತಂ ವೃಷಭಸನ್ನಿಭಗಮನನಿಭಸಮದ್ಯಡಶರೀರಿ ! (ಶ್ರೀರಾಮಾ. ೨೭೮-೫). ೨. ಈಶ್ವರನ ವಾಹನವಾದ ನಂದಿ ; ಬಸವ : ಆಜನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮಗೇಅಲು ವಾಹನವಾಗಲೆಂದಿರಿಸಿ ಕೊಂಡಿರ್ದಿರಯ್ಯಾ (ಬಸವ. ೪) ; ವರಶಿಂಶುಮಾರಮರ್ದನ ಶರಣಾಗತ ವೃಷಭಮಹಿಮ ಸುರಸಂಕುಳಮಂ ನೊರಚಿನೆ ಮಿಗೆ ಮೂಗಿನ ಘನತರ ನಿಸ್ಸಾಸೋಚ್ಛ್ವಾಸದೊಳಾಡಿಸಿದಭವಾ (ಪಂಪಾ.ರಾ. ೫-೫). ೩. ಯಾವುದೇ ಗಂಡುಪ್ರಾಣಿ ; ಪುರುಷಜಾತಿ. ೪. (ಯಾವುದೇ ವರ್ಗದಲ್ಲಿ) ಒಳ್ಳೆಯದು ; ಉತ್ತಮವಾದುದು ; ಶ್ರೇಷ್ಠವಾದುದು : ''ಒಳ್ಳಿತಜಲ್ಲಿಯುಂ ವೃಷಭಮಂಬುದು'' (ಹಲಾಯು. ೧೩೪-೨೧). ೫. ಒಂದು ಬಗೆಯ ಔಷಧೀಸಸ್ಯ : ''ಶೃಂಗೀ, ವೃಷಭಃ, ವೃಷಃ – ೩ ಹೆರೆಗಹಾಲೆಯ ಹೆಸರು, ವೃಷಭವೆಂಬುವ ಮೂಲಿಕೆ'' (ಸದ್ಗಾಖ್ಯ. ೧೩೮). ೬. ಒಂದು ಬಗೆಯ ಗಂಧದ್ರವ್ಯ : ''ಶೃಂಗೀ, ವೃಷಭಃ, ವೃಷಃ– ಈ ೩ ವೃಷಭವೆಂಬ ಗಂಧದ್ರವ್ಯ'' (ನಾಚಿರಾ. ೧೧೦). ೭. ಆನೆಯ ಕಿವಿ ; ಗಜಕರ್ಣ. ೮. ಕಿವಿಯ ರಂಧ್ರ,– ತೂತು. ೯. ನೀತಿ ; ಧರ್ಮ ; ನ್ಯಾಯ. ೧೦. ಒಂದು ಪರ್ವತದ ಹೆಸರು : ಶಂಖಕೂಟ ವೃಷಭ ಹಂಸ ಕಾಳಾಂಜನ ಶಿಖರಿಯೆಂಬೈದು ಕುಧರಂಗಳೀ ಉತ್ತರದ ಸುಪಾರ್ಶ್ವದ ಮೂಡಣ ಮಂದರದ ನಡುವಿಹವು (ವಿವೇಕ. ೧೭೧). ೧೧. [ಜ್ಯೋತಿ] ಜ್ಯೋತಿಶ್ಚಕ್ರದ ಹನ್ನೆರಡುರಾಶಿಗಳಲ್ಲಿ ಎರಡನೆಯದು : ಅಮರಾಸೆಯನಜ ಹರಿ ಧನು ಯಮಾಸೆಯಂ ವೃಷಭ ಕನ್ಯಕಾ ಮಕರಂ ಪಶ್ಚಿಮಮಂ ಮಿಥುನತುಳಾಕುಂಭಮಾಳ್ಗುಮುದಗಾಸೆಯಂ ಕುಳೀರಾಳಿ ಋಷಂ (ಜಾತಕ. ೧-೨೪) ; ದಿನನಾಥಂ ಮೇಷದೊಳ್ ಶೀತರುಚಿ ವೃಷಭದೊಳ್ ಭಾರ್ಗವಂ ಮಿಾನದೊಳ್ . . . ಸಂತಮಿಂತಿರ್ಪಿನಮತ್ತುತ್ಸಾಹದಿಂದಂ ಗುರುವಿನುದಯದೊಳ್ ಪುತ್ರನಂ ಪೆತ್ತಳಾಗಳ್ (ಸುಕುಮಾ. ೧೦-೨೬). ೧೨. [ಜೈನ] ಬಿಳಿಯ ಎತ್ತು : ಉರಗೇಂದ್ರ ಕ್ಷೀರನೀರಾಕರ ರಜತಗಿರಿ ಶ್ರೀಸಿತಚ್ಛತ್ರ ಗಂಗಾಹರಹಾಸ್ಯರಾವತೇಭಸ್ಫಟಿಕ ವೃಷಭ ಶುಭ್ರಾಭ್ರನೀಹಾರಹಾರಾಮರ ರಾಜಶ್ವೇತ ಪರಕೇರುಹ ಹಳಧರ ವಾಕ್ಯಂಖ ಹಂಸೇನ್ದು ಕುನ್ದೋತ್ಕರ ಚಂಚತ್ಕೀರ್ತಿ ಕಾನ್ತಂ ಧರೆಯೊಳೆಸದನೀ ಭಾನುಕೀರ್ತಿವ್ರತೀಂದ್ರಂ (ಎಕ. II(R). ೭೬-೧೦೨ ; 1176). ೧೩. ಆದಿತೀರ್ಥಂಕರ ; ವೃಷಭನಾಥ : ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ . . . ಸಮಸ್ತ ವಿದ್ಯಾಪತಿ ನಾಭಿನಂದನನುಪಾಶ್ರಿತ ಭವ್ಯಜನಾಭಿನಂದನಂ (ಆದಿಪು. ೧-೪೦) ; ವೃಷಭ ಅಜಿತ ಸಂಭವ ಅಭಿನಂದನ . . . ನೇಮಿ ಪಾರ್ಶ್ವ ವರ್ಧಮಾನರೆಂಬಿಪ್ಪತ್ತುನಾಲ್ವರ್ ತೀರ್ಥಕರರ್ (ಚಾವುಂಪು. ೪೦೨). ೧೪. [ಛಂದ] ಸಿಂಹ, ಗಜ, ವೃಷಭ, ಅಜ, ಶರಭ ಮತ್ತು ಹಯ ಎಂಬ ಆರುಬಗೆಯ ಪ್ರಾಸಗಳಲ್ಲಿ ಒಂದು : ಹರಿ ಕರಿ ವೃಷಭ ತುರಂಗಂ ಶರಭಮಜಂಗಳು ಮೆನಿಪ್ಪ ಷಟ್ಪ್ರಾಸಕ್ಕುಂ . . . ಗಜದೀರ್ಘಂ ಬಿಂದು ವೃಷಭ ಬೆಂಜನ ಶರಭಂ ಅಜನು ವಿಸರ್ಗಂ ಹಯಮಂಬುಜಮುಖಿ ದಡ್ಡಕ್ಕರಂಗಳವು ಷಟ್ಪ್ರಾಸಂ (ಛಂದೋಂಬು. ೧-೪೬ ಅಡಿ ೩) ; ವೃಷಭ : — ಒಂದು ವ್ಯಂಜನಕ್ಕೆ : ಕಂಸವಧಂಗೆಯ್ದ ಮುರಧ್ವಂಸಿಗೆ . . . ವಜ್ರಿ ನುಡಿವುದುಮಾಗಳ್ (ಕೃಪಾ. ೭೨). ೧೫. [ಸಂಗೀತ] ಸಪ್ತಸ್ವರಗಳಲ್ಲಿ ಎರಡನೆಯದು ; ಋಷಭ ; 'ರಿ' ಎಂಬ ಸ್ವರ : ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಂಗಳೆಂಬ ಸಪ್ತಸ್ವರಮುಮುಂ . . . ದಶರೂಪಲಕ್ಷಣ ಮುಮಂ ಪಾತ್ರಸಂಕ್ರಮಣದೊಳ್ ನೆಲೆಯೆ ತೋರಿ (ಅಜಿಪು. ೫-೩೦ ವ) ; ಸಪ್ತಸ್ವರಂಗಳುತ್ಪತ್ತಿಕ್ರಮದಲ್ಲಿ ಪರಶಿವನ ಈಶ್ವರ ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ ನಿರಂಗಮೆಂಬೇಳು ಮುಖಕ್ರಮವಿಡಿದು ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಮೆಂಬ ಸಪ್ತಸ್ವರಂಗಳಾದವು (ವಿವೇಕ. ೧೦೫). ೧೬. = ವೃಷ ೨೩ : 'ವೃಷಭಾಯ' ಪರಾ. ೧೭. [ನಾಟ್ಯ] ೫ಪ್ಪತ್ತುಮೂರು ದೇಶೀಯ ಸ್ಥಾನಕಗಳಲ್ಲಿ ಒಂದು : ಒದವಿರ್ದ ಸ್ವಸ್ತಿಕಮಗ್ಗದಿನೊಪ್ಪುವ ವರ್ಧಮಾನ ನಂದ್ಯಾವರ್ತಂ . . . ಸಲೆ ಬ್ರಾಹ್ಮಂ ವೈಷ್ಣವಮುಂ ಲಲನೇ ಕೇಳ್ ಶೈವಮಸೆವ ಗರುಡಂ ಕೂರ್ಮಂಗಳೆ ನಾಗಬಂಧ ವೃಷಭಂ ಸುಲಲಿತಮಿಪ್ಪತ್ತ್ರಮೂಱು ದೇಶೀಸ್ಥಾನಂ (ಲಾಸ್ಯರಂ. ೭-೮). [ಸಂ.]

ವೃಷಭಕ (ನಾ). ಒಂದು ಬಗೆಯ ಔಷಧೀಸಸ್ಯ : ''ಧುತ್ತೂರಃ — ವೃಷಭಕ ; ಉಮ್ಮತ್ತ'' (ಓಷಧಿ. ೮೨) ; ನೆಲಗುಳ್ಳ ಆಡುಸೋಗೆ . . . ಜೀವಕ ವೃಷಭಕಃ . . . ಒರಿಮದ್ದಿನ ಬೇರು ಸಹ ಪ್ರತ್ಯೇಕ ಗ ಳ ತೂಕದಲ್ಲಿ ಚೂರ್ಣಂಗ್ಗೆದು (ಸಹ್ಯ. ೧೨೯). [ಸಂ.]

ವೃಷಭಕ್ರೀಡಿತ (ನಾ). [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು : ಚರಣವಲಾತಚಾರಿಯನೊ[ರ]ಯಲ್ ಕರಮೆರಡು ರೇಚಿತದಿನೊಪ್ಪುತ್ತಂ ಪಿರಿದುಂ ವ್ಯಾವೃತದಿಂ ಬಾಗಿರೆಯಲಪದ್ಮಗಳಿಂದೆ ಮುಡುಹಿಂಗೆಯ್ದಲ್ ಕ್ಷಿತಿಯೊಳ್ ಕೇಳ್ ವೃಷಭಕ್ರೀಡಿತಮೆಂಬೀ ಪೆಸರನಾಂತು ಮೆಱೆವುದು ಕರಣಂ (ಲಾಸ್ಯರಂ. ೪-೧೭೩). [ಸಂ.]

ವೃಷಭಗಮನ (ನಾ). ಎತ್ತಿನ ಮೇಲೆ ಸಂಚರಿಸುವವನು ; ನಂದಿವಾಹನ ; ಶಿವ : ವನಜಲೋಚನಯುಗಳೆ ಬಂದಳು . . . ಪಾವನಚರಿತೆ ಬಂದಳು ವೃಷಭಗಮನನ ಕೆಲದೊಳೆರ್ದು (ಬಸವ. ೫೦-೧೦). [ಸಂ.]

ವೃಷಭತಾಣ (ನಾ). = ವೃಷಭ ೧೭ : ಒಂದಿರಲಗಲ್ದಿರಲೆರಡುಂ ಸಂದಿಸಿ ಮೊಳಕಾಲ್ಗಳವನಿಯಂ ಪತ್ತಿರೆ ಕೇಳ್ ಸೌಂದರಮುಖಿ ಸೌಷ್ಠವದಿಂದೊಂದಿರೆ ತನು ವೃಷಭತಾಣಮೆನಿಕುಂ ಧರೆಯೊಳ್ (ಲಾಸ್ಯರಂ. ೭-೫೧). [ವೃಷಭ + ತಾಣ]

ವೃಷಭಧ್ವಜ (ನಾ). ೧. ನಂದಿಯ ಲಾಂಛನವುಳ್ಳ ಧ್ವಜ : ನಲಿನಲಿಗಳೊಳು ನೆಗಳ್ದ ವೃಷಭಧ್ವಜಂಗಳಂ ನಲಿನಲಿದು ಕುಣಿವ ಕೇತನದಂಡತತಿಗಳಂ . . . ತೋಱುತುಂ ಪೇಳುತುಂ ಬಾಳುತುಂ ಬರುತಿರಲು (ನಂಜರಾ. ೯-೯೩). ೨. ನಂದಿಯ ಲಾಂಛನವುಳ್ಳವನು ; ಶಿವ : ಶ್ರೀವಚ್ಛಂ ಸಿರಿಯಂ ಸಮೃದ್ಧನೆಸೆವಾ ನಾಗಾಂಬಿಕಾಸೂನು . . . ವೃಷಭಧ್ವಜಪ್ರಿಯತಮಂ ನಾರಾಯಣಾತ್ಮೋದ್ಭವಂ ಭಾವಂಬೆತ್ತಿರೆ ಚೆಲ್ವನೆಂದ ನಿಸಿದಂ ಶ್ರೀರೇಚದಣ್ಣಾಧಿಪಂ (ಎಕ. VII. ಶಕಾಂ. ೧೯೭-೩೭ ; 1181); ವೃಷಭಧ್ವಜ ಸಾಂಸಾರಿಕವಿಷಯಂಗಳೊಳಾಶೆಯಿಲ್ಲ ಮತ್ತೇನೆನಲಾಂ ವಿಷಧರಮರ್ದನವಾಹನ ಹೃಷಿಕಪತಿಪದಮನೊಂದನೆ ನಿಶ್ಚೈಸಿದಪೆಂ (ಪೂಜಚಂ. ೧೪-೫೬). ೩. [ಜೈನ] ಆದಿತೀರ್ಥಂಕರ ; ವೃಷಭನಾಥ : ವೃಷಭಧ್ವಜ ವೃಷಭನಾಥ (ಜನಾಶ. ೧೦-೧೦). [ಸಂ.]

ವೃಷಭಧ್ವಾಂಕ್ಷಿ (ನಾ). ಒಂದು ಬಗೆಯ ಸಸ್ಯ ; ನಾಗರಮುಸ್ತೆ : ''ವೃಷಭಧ್ವಾಂಕ್ಷಿ - ನಾಗರಮುಸ್ತೆ'' (ಓಷಧಿ. ೧೫೮). [ಸಂ. ವೃಷಭಧ್ವಾಂಕ್ಷೀ]

ವೃಷಭನಾಥ (ನಾ).[ಜೈನ] ಆದಿತೀರ್ಥಂಕರ ; ವೃಷಭಸ್ವಾಮಿ : ಮನೋಹರ ವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸೌಂದರತರವರ್ಣನೀ ವೃಷಭನಾಥಕಥಾರಚನೋಕ್ತಿಯಲ್ಲಿ ಮಾಲ್ಕೆರದೆಮಗಾಗಳುಂ ವೃಷಭಯಕ್ಷನವಿಘ್ನ ಮನಃಪ್ರವೃತ್ತಿಯಂ (ಆದಿಪು. ೧-೮) ; ವೃಷಭಧ್ವಜ ವೃಷಭನಾಥ (ಜನಾಶ. ೧೦-೧೦). [ಸಂ.]

ವೃಷಭಪತಿ (ನಾ). ನಂದಿಯ ಒಡೆಯ ; ಪಶುಪತಿ ; ಶಿವ : ಹಂಸಪತಿ ಗರುಡಪತಿ ವೃಷಭಪತಿ ಮೊದಲಾದ ಸರ್ವಜೀವಾಧಿಪತಿ ದೇವರಾಯಮಹಾರಾಯನ ಅರಸುತನ ಹೊಸತು (ಸಮ. ಕ. III. ೨-೪). [ಸಂ.]

ವೃಷಭಪಾಳಿ (ನಾ). ನಂದಿಧ್ವಜವುಳ್ಳವನು ; ಶಿವ : ಪದ್ಮರಿಪುಖಂಡಮಂಡಲ ಮಂಡಿತಸುಮೌಳಿಧೃತಶೂಲಿ ವೃಷಭಪಾಳೀ . . . ಪಾಲಿಸುಗೆ ರಾಮೇಶ್ವರಾ (ನವಮೋ. ೪-೧). [ಸಂ. ವೃಷಭಪಾಲಿ]

ವೃಷಭಪುರುಷ (ನಾ). [ಕಾಮಶಾ] ಶಶ, ವೃಷ ಮತ್ತು ಹಯ ಎಂಬ ಮೂರುವರ್ಗದ ಪುರುಷರಲ್ಲಿ ಎರಡನೆಯ ವರ್ಗಕ್ಕೆ ಸೇರಿದವನು : ಅಗಲವಾಗಿ ಉನ್ನತವಾದ ತಲೆ ದೊಡ್ಡದಾದ ಮುಖ . . . ಶ್ಲೇಷ್ಮ ಪ್ರಕೃತಿ ನಡುಪಗಲೊಳು ಸುಖಿಪಂ . . . ಈ ಲಕ್ಷಣಂಗಳುಳ್ಳವಂ ವೃಷಭಪುರುಷಂ (ಕಾಮಶಾ. ೨೧೩). [ಸಂ.]

ವೃಷಭಪ್ರಾಸ (ನಾ). [ಛಂದ] "ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಒಂದು ವ್ಯಂಜನಕ್ಕಾಗಲಿ, ಅನೇಕ ವ್ಯಂಜನಗಳಿಗಾಗಲಿ ಹಿಂದೆ ಅನುಸ್ವಾರವಿರಲು ವೃಷಭಪ್ರಾಸ" (ಕೃಪಿಡಿ. ೭೨). [ಸಂ.]

ವೃಷಭಮಾಸ (ನಾ). [ಜ್ಯೋತಿ] ಹನ್ನೆರಡು ಸೌರಮಾಸಗಳಲ್ಲಿ ಎರಡನೆಯದು ; ಸೂರ್ಯನು ವೃಷಭರಾಶಿಯಲ್ಲಿರುವ ತಿಂಗಳು : ಸೂರ್ಯನು ರೇವತೀತಾರೆಯನ್ನು ಸೇರಿದ ಕ್ಷಣವೇ ಮೇಷಸಂಕ್ರಮಣ. ಆ ಕಾಲದಿಂದ ಸೂರ್ಯನು . . . ರೇವತೀತಾರೆಯಿಂದ ಕ್ರಾಂತಿವೃತ್ತದ ೩೦ ಡಿಗ್ರಿಗಳ ದೂರವನ್ನು ಸೇರುವವರೆಗೂ ಆಗುವ ಕಾಲಾಂತರವು ಮೇಷಮಾಸ. ಅಲ್ಲಿಂದ ಮುಂದಿನ ೩೦ ಡಿಗ್ರಿಗಳನ್ನು ದಾಟಲು ಸೂರ್ಯನು ತೆಗೆದುಕೊಳ್ಳುವ ಕಾಲವು ವೃಷಭಮಾಸ (ನಕ್ಷತ್ರ. ೪೮). [ಸಂ.]

ವೃಷಭರಾಶಿ (ನಾ). [ಜ್ಯೋತಿ] ಜ್ಯೋತಿಶ್ಚಕ್ರದ ಹನ್ನೆರಡುರಾಶಿಗಳಲ್ಲಿ ಎರಡನೆಯದು : ವೃಷಭರಾಶಿಯಲ್ಲಿ ಹುಟ್ಟಿದವನು ಸುಂದರ ಸಮರ್ಥ ಒಯ್ಯಾರದಿಂದ ನಡೆಯುತ್ತಾನೆ, ಅದೃಷ್ಟಶಾಲಿ (ಜಾತಕ. ೧೭-೨ ಟೀಕೆ). [ಸಂ.]

ವೃಷಭಲಕ್ಷ್ಮ (ನಾ). ಅಂಶಗಣಗಳಲ್ಲಿ ಒಂದಾದ ರುದ್ರಗಣದ ಹದಿನಾರು ಪ್ರಭೇದಗಳಲ್ಲಿ ಒಂದು ; ಮೊದಲು ಮೂರು ಲಘು, ಅನಂತರ ಎರಡು ಗುರು ಬರುವಂತೆ ರಚನೆಯಿರುವ ರುದ್ರಗಣ (UUU--) : ರುದ್ರಗಣಮೆಂತೆಂದೊಡೆ : ೧. ಗಂಗಾಧೀಶಂ ೨. ಗಿರಿಜಾಕಾಂತಂ ೩. ನೀಲಕಂಠಂ ೪. ವೃಷಭಲಕ್ಷ್ಮಂ [ಪಾಠಾಂ. ಕ್ಷ್ಮಂ] ೫. ಕಾಮಾಂತಕಂ . . . ೧೬. ಮದನರಿಪು (ಛಂದೋಂಬು. ೫-೨೪೦ ವ). [ಸಂ.]

ವೃಷಭಲಾಂಛನ (ನಾ). ೧. ವೃಷಭಧ್ವಜ ; ಶಿವ. ೨. ವೃಷಭಲಾಂಛನವುಳ್ಳ ಒಬ್ಬ ರಾಜ : ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮಂತ xxx ವಾನರಧ್ವಜ ವೃಷಭಲಾಂಛನ [ಶೋ]ಣಿತಪುರಾಧೀಶ್ವರ ಪತಿಗೊಡ್ಡಿಕೊಲ್ವ (ಎಕ. IV (R), ಚಾಮರಾ. ೧೧೪-೨ ; ಸು. 10 ನೆಯ ಶತ). [ಸಂ.]

ವೃಷಭವಾಹನ (ನಾ). ನಂದಿವಾಹನ ; ಶಿವ : ಬೆಟ್ಟದಪುರದ ಮೇಗಳ ಮನೆ ಲಿಂಗಣ್ಣನ ಮಗ ನಗಶಟಯು ಮಾಡಿ ವಪಿಶಿದ ಹಿತ್ತಾಳೆವೃಷಭವಾಹನ ಶೇವಾರ್ಥ (ಎಕ. IV (R), ಪಿರಿಯಾ. ೬೩-೬; 1867). [ಸಂ.]

ವೃಷಭವಾಹಿನಿ (ನಾ). ಹಸು ; ಆಕಳು ; ಗೋವು : "ರೋಹಿಣಿಯನಡ್ವಿಯರ್ಜುನಿ ವೃಷೆ ಗೋ ವೃಷಭವಾಹಿನಿಯೆನೆ ಹಸು" (ಮಂಗರಾ. ೫೩-೩). [ಸಂ. ವೃಷಭವಾಹಿನೀ]

ವೃಷಭಾಕ್ಷಿ (ನಾ). ಒಂದು ಬಗೆಯ ಸಸ್ಯ : "ವೃಷಭಾಕ್ಷೀ — ಬಿಳಿಯಗಿರಿಕರ್ಣಿಕೆ" (ಓಷಧಿ. ೧೫೭). [ಸಂ. ವೃಷಭಾಕ್ಷೀ]

ವೃಷಭಾಚಲ, ವೃಷಭಾಚಳ (ನಾ). [ಜೈನ] ವೃಷಭಾದ್ರಿ : ಇತ್ತುತ್ತರಭರತ ಮನಾಳುತ್ತಿರ್ದರನೇಕಚಕ್ರವರ್ತಿಗಳ ಪೆಸರ್ ಸುತ್ತಿ ಬರೆದಿರೆ ನಿಬಂಧದ ಹೊತ್ತಗೆಯೆಂಬಂತಿರಿರ್ದ ವೃಷಭಾಚಲಮಂ ಕಂಡು (ಶಾಂತಿಪು. ೧೧-೬೧). ವೃಷಭಾಚಳ: ಭರತೇಶ್ವರನುಂ ತೆಂಕಮೊಗದೆ ಬಂದುತ್ತರಭರತದ ಮಧ್ಯಮಖಂಡದ ನಡುವೆ ವೃಷಭಾಚಳಮಂ ಕಂಡು ವಿಜಯಪ್ರಶಸ್ತಿಯಂ ಅಲ್ಲಿ ಬರೆಯಿಸುವೆನೆಂದು ಪೋಗಿ (ಚಾವುಂಪು. ೪೨). [ಸಂ.]

ವೃಷಭಾಚಳ 'ವೃಷಭಾಚಲ' ನೋ.

ವೃಷಭಾದ್ರಿ (ನಾ). [ಜೈನ] "ಉತ್ತರಭಾರತದಲ್ಲಿ ಹಿಮವತ್‌ಪರ್ವತದ ಮಧ್ಯಮಕೂಟಕ್ಕೆ ನೇರವಾಗಿ ದಕ್ಷಿಣದಲ್ಲಿರುವ ಪರ್ವತ. ಚಕ್ರವರ್ತಿಗಳು ತಮ್ಮ ಷಟ್ಖಂಡವಿಜಯಪ್ರಶಸ್ತಿಯನ್ನು ಶಾಸನವನ್ನಾಗಿ ಕೆತ್ತಿಸುವ ಪರ್ವತ" (ಜೈನಕೋ. ೨೩೭) : ಆ ವೃಷಭಾದ್ರಿಯ ಮೇಖಲಾಭಿತ್ತಿಯೊಳಾತ್ಮೀಯ ವಿಶ್ವವಿಶ್ವಂಭರಾ ವಿಜಯಪ್ರಶಸ್ತಿಯನಟ್ಟಿಯೊಳ್‌ಬರೆಯಿಸುವೆಂ (ಆದಿಪು. ೧೩-೭೦ ವ) : ವೃಷಭಾದ್ರಿಯಲ್ಲಿ ತನ್ನಯ ಪೆಸರಂ ಬರಸಿಟ್ಟು ವಜ್ರನಾಭಿಮಹೀಶಂ . . . ಕ್ಷೇಮಂಕರಮುನಿಗಳ ಸಮಕ್ಷದೊಳ್ಪೀಕ್ಷೆಗೊಂಡಿರುತ್ತಿರಲ್ (ಪುಣ್ಯಾಸ್ರ. ೪-೪೭). [ಸಂ.]

ವೃಷಭಾಧರ (ನಾ). ನಂದಿಯ ಲಾಂಛನವನ್ನುಳ್ಳವನು ; ಶಿವ : ಹರನು ಗೌರೀನಾಥ ವೃಷಭಾಧರನು ಕೈಲಾಸೇಂದ್ರ ಢಮರುಗಧರ ತ್ರಿಶೂಲಿಯು (ಬಿಜ್ಜಪು. ೭೩-೪೭).

[< ಸಂ. ವೃಷಭಧರ./ IP ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ]

ವೃಷಭಾಯ (ನಾ). [ವಾಸ್ತು] ಮನೆ, ದೇವಾಲಯ ಮೊದಲಾದುವನ್ನು ಕಟ್ಟುವ ಎಂಟು ಆಯಗಳಲ್ಲಿ ಒಂದು : ಧ್ವಜಾಯಂ, ಧೂಮಾಯಂ, ಸಿಂಹಾಯಂ, ಶುನಕಾಯಂ, ವೃಷಭಾಯಂ, ಖರಾಯಂ, ಗಜಾಯಂ, ವಾಯಸಾಯಂ – ಈ ಎಂಟು ಆಯಂಗಳುಂ ಮೂಡಲ್ ಮೊದಲಾಗಿ ಸವ್ಯದಿಂದ ಎಂಟುದಿಕ್ಕಿನಲ್ಲಿಯುಮಿರ್ಪುವು (ಲೋಕೋಪ. ೩-೧೯ ಟೀಕೆ): ವಿಸ್ತಾರವಾಗಿ ಉದ್ದ ಅಗಲವನು ಅಳದು ಒಟ್ಟುಗೂಡಿಕೊಂಡ ಕೋಲು ಯೆಷ್ಟೋ ಅದನು ೩ ಹೆಚ್ಚಿ . . . ಅದಂ ೮ ರಿಂ ಭಾಗಿಸಿ ಉಳಿದವು ಆಯಂಗಳೂ . . . ೫ ವುಳಿದರೆ ವೃಷಭಾಯ (ಆಯಟೀ. ೧-೬). 'ಧೂಮಾಯ' ಪರಾ. [ಸಂ.]

ವೃಷಭಾಯತ (ನಾ). ಎತ್ತಿನ ಗಂಭೀರತೆ ; ವೃಷಭದ ಗಾಂಭೀರ್ಯ : ವೃಷಭಾಯತದೊಳಾಂತ ಭಟರೊಳ್ಪಳಂಚುವ ಪರುಷಭಾಷಿತವನಬಲೆ ನಿನ್ನೊಳಾಡುವುದು ಪೌರುಷಭಾವಮಲ್ಲ (ಜೈಮಿಭಾ. ೧೬-೧೨). [ಸಂ.]

ವೃಷಭಾಸನ (ನಾ). ಇಪ್ಪತ್ತುಮೂರು ಬಗೆಯ ದೇಶೀಯಸ್ಥಾನಕಗಳಲ್ಲಿ ಒಂದು : ಸ್ವಸ್ತಿಕ, ವರ್ಧಮಾನ, ನಂದ್ಯಾವರ್ತ, ಸಂಹತ, ಸಮಪಾದ . . . ನಾಗಬಂಧ, ವೃಷಭಾಸನ – ಈ ಇಪ್ಪತ್ತಮೂಱು ದೇಶೀಯಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). [ಸಂ.]

ವೃಷಭೇಂದ್ರ (ನಾ). ೧. ಶ್ರೇಷ್ಠವಾದ ಎತ್ತು ; ಉತ್ತಮವಾದ ಗೂಳಿ : ವೃಷಭೇಂದ್ರನಂದಮಿಾಗಳ್ ವಿಷಮತರಂ ಮುನ್ನಿನಂದಮಲ್ಲಂ . . . ದೇವ ನಿಮ್ಮನೇಂ ಬಗೆದಪನೇ (ಪಂಚಶಂ. ೯೬-೧೫೮) ; ಮಕರ ತರಕ್ಷು . . . ವೃಷಭೇಂದ್ರ ತಾರ್ಕ್ಷ್ಯ ಶಶಿ ಭಾನು ನಿಶಾಚರಖಡ್ಗಚಿಹ್ನಕೌತುಕವೆಸೆಯಲ್ (ನಳಚಂ. ೨೪೫). ೨. ಶಿವನ ವಾಹನವಾದ ನಂದಿ ; ಬಸವ : ದೇವಲಋಷಿ ನೆಲಸಿರ್ದತಿಪಾವನ ರುಕ್ಮಾಂಗಪರ್ವತದ ಮಧ್ಯದೊಳಂ ದೇವರ್ಕಳಱಸುತಿರಲೊಡನಾ ವಿಭು ವೃಷಭೇಂದ್ರನಿರ್ದ ಪರಿಯಂತಿರ್ಕುಂ (ಹಮ್ಮೀರ. ೫-೨); ಪ್ರಮಥಾಮರರೊಂದುಗೂಡಿ ದಿವ್ಯಾನಕರಾವಮುಣ್ಮೆ ವೃಷಭೇಂದ್ರನನೇಱಿ ನಿಜಾಂಗಕಾಂತಿಯಿಂ ಭಾನುಕರೋತ್ಕರಂ ಮಸುಳೆ ಬಾನ್ಗಡರ್ದೆಯ್ದಿದನಿತ್ತಲೀಶ್ವರಂ (ಶಬಶಂ. ೫-೫೬). ೩. [ಜೈನ] ಬಿಳಿಯ ಎತ್ತು : ರಜತಗಿರಿರುಂದ್ರನಂ ಜಿತಶರಚ್ಚಂದ್ರನಂ ನಿಜವದನವನಜಮಂ ಪುಗುವ ವೃಷಭೇಂದ್ರನಂ ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ (ಆದಿಪು. ೭-೨೭ ರಗಳೆ). [ಸಂ.]

ವೃಷಭೇಂದ್ರಗಮನ (ನಾ). ನಂದಿಯ ಮೇಲೆ ಸಂಚರಿಸುವವನು ; ಶಿವ : ಘೋರಕಾಲಭುಜಂಗವಿಷಸಂಹಾರನಂ ವೃಷಭೇಂದ್ರಗಮನಾಕಾರನಂ ಭವದೂರನಂ ಕೊಂಡಾಡಿ ಮುಂಡಾಡಿ (ಬಸಪು. ೪೬-೭೪). [ಸಂ.]

ವೃಷಭೇಶ್ವರ (ನಾ). ೧. ಶ್ರೇಷ್ಠವಾದ ಎತ್ತು ; ಉತ್ತಮವಾದ ಋಷಭ. ೨. ಶಿವನ ವಾಹನವಾದ ನಂದಿ ; ಬಸವ : ಪುಣ್ಯದ ಪುಂಜದಂತೆ ಶಿವನ ಸದ್ಗುಣರಾಶಿಯಂತೆ ಭಕ್ತರ ಬೆಳ್ಳಸದಂತೆಸೆವ . . . ಅಖಂಡಚಿತ್ಪಿಂಡ ವೃಷಭೇಶ್ವರನಂ ಕಂಡು ದೂರದಿಂ ವಂದಿಸುತ್ತಿರ್ದನಂ (ಹಮ್ಮೀರ. ೫-೪ ವ). ೩. [ಜೈನ] ಆದಿತೀರ್ಥಂಕರ ; ವೃಷಭನಾಥ : ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾ ಮಹಾತ್ಮಂಗೆ ತಂಗೆಯಾದ ಸುಂದರಿಯೆ ಕತಿಪಯಭವಪರಿಭ್ರಮಣದಿಂ ಬಂದು . . . ಸುನಂದೆಗಂದು ನಂದನೆಯಾದಳ್ (ಆದಿಪು. ೮-೫೩ ವ). [ಸಂ.]

ವೃಷಭೋಪಗತೆ (ನಾ). ಗರ್ಭಕಟ್ಟಿದ ಹಸು ; ಗರ್ಭನಿಂತ ಆಕಳು : "ವೇಹತ್, ವೃಷಭೋಪಗತಾ — ಈ ೨ ಕಟ್ಟಿದಾವು" (ಹಲಾಯು. ೪೫-೧೧೪).

[ಸಂ. ವೃಷಭೋಪಗತಾ]

ವೃಷಮಾರ್ಗ (ನಾ). ಧರ್ಮಮಾರ್ಗ ; ಸತ್ಪಥ; ಪುಣ್ಯದ ದಾರಿ : ಶ್ರೀದೇವೇಂದ್ರ

ಮುನೀಂದ್ರವಂದಿತಗುಣವ್ರಾತಂ . . . ದುರ್ವಾರಸಂಸಾರವಿಚ್ಛೇದೋಪಾಯನಿಯುಕ್ತ ಸೂಕ್ತಿವೃಷಮಾರ್ಗಾಗ್ರೇಸರಂ ಪಾಪಹೃತ್‌ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿ ಶ್ರೀಸುಖಾವಾಪ್ತಿಯಂ (ಆದಿಪು. ೧-೧). [ಸಂ.]

ವೃಷಮುಖ (ನಾ). ೧. ಎತ್ತಿನ ಮುಖ. ೨. [ಜೈನ] ಎತ್ತಿನಂತೆ ಮುಖವುಳ್ಳ ಒಬ್ಬ ಯಕ್ಷ : ಮನೋಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದ ಸೌಂದರತರವರ್ಣನೀ ವೃಷಭನಾಥಕಥಾರಚನೋಕ್ತಿಯಲ್ಲಿ ಮಾಟ್ಕಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ (ಆದಿಪು. ೧-೮). [ಸಂ.]

ವೃಷರಥ (ನಾ). ೧. ನಂದಿವಾಹನ ; ಶಿವ. ೨. ಮೂಷಿಕವಾಹನ ; ಗಣಪತಿ : ಪರಶುಧರ ಗಣಪತಿ ವಿನಾಯಕ ಗಜಾಸ್ಯ ಜಯ ಪುರಹರತನೂಜ ವೃಷರಥ ಲೋಕವಶ್ಯ ಜಯ (ನಳಚಂ. ೨೩೨). [ಸಂ.]

ವೃಷರಾಜ (ನಾ). ೧. = ವೃಷಭೇಶ್ವರ ೧. ೨. = ವೃಷಭೇಶ್ವರ ೨ : ಚಂಡ ಸುರಥನ ಶಿರವನಸುರಹರನಾಜ್ಞೆಯಿಂ ಕೊಂಡು ಗರುಡಂ ಪ್ರಯಾಗವ ನೈದಲೀಶ್ವರಂ ಕಂಡು ವೃಷರಾಜನಂ ಕಳುಹಿ ತರಿಸಿದನದಂ ರುಂಡಮಾಲೆಯ ತೊಡವಿಗೆ (ಜೈಮಿಭಾ. ೧೪ ಸೂಚನೆ). [ಸಂ.]

ವೃಷರಾಶಿ (ನಾ). = ವೃಷಭರಾಶಿ : ಇನಜಂ ಮೇಷದೊಳೊಂದಿದಂದು ಕಪಟಂ . . . ವೃಷರಾಶಿಯೊಳ್ ನೆಲಸೆ ವರ್ಜ್ಯಂ ಸ್ವಲ್ಪವಿತ್ತಂ ವಧೂಜನಮಿತ್ರಂ ಬಹುಭಾರ್ಯಂ (ಜಾತಕ. ೧೭-೩೨). [ಸಂ.]

ವೃಷಲ, ವೃಷಳ (ನಾ). ೧. ಕೀಳುಜಾತಿಯಲ್ಲಿ ಹುಟ್ಟಿದವನು; ಶೂದ್ರ ; ಅಂತ್ಯಜ: "ತುರ್ಯಜಾತಿ ತಾಂ ವೃಷ[ಲನಂತ್ಯ]ವರ್ಣಂ ಶೂದ್ರಂ" (ವಸ್ತುಕೋ. ೬೩-೭೧). ೨. ಕುದುರೆ ; ಅಶ್ವ. ೩. ಬೆಳ್ಳುಳ್ಳಿ. ೪. ಅಧಾರ್ಮಿಕನಾದವನು ; ಪಾಪಾತ್ಮ. ೫. ನೃತ್ಯಗಾರ. ೬. ಎತ್ತು ; ವೃಷಭ. ೭. ಬಹಿಷ್ಕರಿಸಲ್ಪಟ್ಟವನು ; ಹೊರಹಾಕಲ್ಪಟ್ಟವನು. ೮. ಮೇಲ್ಜಾತಿಯಲ್ಲಿ ಹುಟ್ಟಿ, ತನ್ನ ಮತಧರ್ಮವನ್ನು ಪಾಲಿಸದೆ ಜಾತಿಭ್ರಷ್ಟನಾದವನು. ೯. ಚಾಣಕ್ಯನಿಂದ ಪೋಷಿತನಾಗಿ ಪ್ರಸಿದ್ಧ ರಾಜನಾದ ಚಂದ್ರಗುಪ್ತನ ಹೆಸರು ; P ಇವನು ನಂದರಾಜನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿ, ಚಾಣಕ್ಯನಿಂದ ಮಾತ್ರ ಹೀಗೆ ಕರೆಯಲ್ಪಡುತ್ತಿದ್ದವನು : ಎಲೈ ವೃಷಲನೇ, ಅಕಾರಣವಾದ ಇಂಥ ಪೋಲುವೆಚ್ಚಮಂ ಮಾಡಕೂಡದು (ಮುದ್ರಾಮಂ. ೩೨೫). ವೃಷಳ : ೯. ಎಲೈ ವೃಷಳನೇ ದೈವವೇ ಪ್ರಮಾಣವೆಂದು ಪೌರುಷಹೀನರಾದವರು ಹೇಳುವರು (ಮುದ್ರಾಮಂ. ೩೩೧). [ಸಂ.]

ವೃಷಲಾಂಛನ (ನಾ). ೧. = ವೃಷಭಲಾಂಚನ ೩. ೨. [ಜೈನ] ವೃಷಭದ ಚಿಹ್ನೆಯುಳ್ಳ ಒಬ್ಬ ಯಕ್ಷ : ಮನೋಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸೌಂದರತರವರ್ಣನೀ ವೃಷಭನಾಥ ಕಥಾರಚನೋಕ್ತಿಯಲ್ಲಿ ಮಾಟ್ಕಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ (ಆದಿಪು. ೧-೮). [ಸಂ.]

ವೃಷಲಿ (ನಾ). ೧. ಮದುವೆಯಾಗುವ ಮುನ್ನ ಋತುಮತಿಯಾಗಿ ತಂದೆಯ ಮನೆಯಲ್ಲಿರುವ ಕನ್ಯೆ: ತನ್ನ ತಂದೆಯಾಲಯದೊಳಂ ಮದುವೆಯಾಗದಾ ಮೈನೆರದೊಡಾ ಕನ್ನೆ ವೃಷಲಿಯೆನಿಪ್ಪಳು (ವೀಶೃಪು. ೭-೨-೨೩). ೨. ಮುಟ್ಟಾದ ಹೆಂಗಸು. ೩. ಮಕ್ಕಳಿಲ್ಲದ ಸ್ತ್ರೀ; ಬಂಜೆ. ೪. ಹುಟ್ಟುವಾಗಲೇ ಸತ್ತ ಮಗುವನ್ನು ಹಡೆದವಳು. ೫. ಕೀಳುಜಾತಿಯವಳು ; ಶೂದ್ರಸ್ತ್ರೀ. ೬. ತನ್ನ ಗಂಡನನ್ನು ಬಿಟ್ಟು ಪರಪುರುಷನನ್ನು ಸೇರಿದವಳು. [ಸಂ. ವೃಷಲೀ]

ವೃಷಲೀಪತಿ, ವೃಷಳೀಪತಿ (ನಾ). ಶೂದ್ರಸ್ತ್ರೀಯನ್ನು ಮದುವೆಯಾದ ಅಥವಾ ಅಂತಹ ಸ್ತ್ರೀಯನ್ನು ತನ್ನ ಉಪಪತ್ನಿಯಾಗಿ ಪರಿಗ್ರಹಿಸಿದ ಬ್ರಾಹ್ಮಣ. ವೃಷಳೀಪತಿ: ಅಶ್ರೋತ್ರಿಯನಾ ವೃಳಿEವೃಷಳೀ∃ಪತಿಯಯಂಧನ ಕುರುಡನ ಕೃಶನ ದೀನನ ಸದಾಕೇಶಧಾರಿಯ ದುರಾತ್ಮನ ವಾಚಾಟನಯಿರುವ ಮೊದಲಾದವರ ಶ್ರಾದ್ಧಕ್ಕೆ ಹೇಳಬಾರದು (ಶೇಷಧ. ೨೦-೧೬). [ಸಂ.]

ವೃಷಲೀವಲ್ಲಭ (ನಾ). = ವೃಷಲೀಪತಿ : ಮೊದಲಲಾ ಮಾಹಿಷಿಕನನು ಮಧ್ಯದಲಿ ವೃಷಲೀವಲ್ಲಭನನಂತ್ಯದಲಿ ವಾಗ್ದೋಷಕನ ಕಂಡವರುಗಳ ಭಾಗ್ಯನಿಧಿ ಕದಡಿ ಹರಿವುದು (ಕುವ್ಯಾಉ. ೪-೪೮). [ಸಂ.]

ವೃಷವಾಹನ (ನಾ). ೧. ನಂದಿಯನ್ನು ವಾಹನವಾಗಿ ಉಳ್ಳವನು ; ಶಿವ. ೨. [ಜೈನ] ವೃಷಭವಾಹನವನ್ನುಳ್ಳ ಒಬ್ಬ ಯಕ್ಷ : ಮನೋಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸೌಂದರತರವರ್ಣನೀ ವೃಷಭನಾಥ ಕಥಾರಚನೋಕ್ತಿಯಲ್ಲಿ ಮಾಟ್ಕಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ (ಆದಿಪು. ೧-೮). [ಸಂ.]

ವೃಷಸತ್ವ (ನಾ). [ಕಾಮಶಾ] ಶಶ, ವೃಷ ಮತ್ತು ಹಯ ಎಂಬ ಮೂರು ವರ್ಗದ ಪುರುಷರಲ್ಲಿ ಎರಡನೆಯ ವರ್ಗಕ್ಕೆ ಸೇರಿದವನು : ವಿವಿಧಗುಣಂ ನಾಗರಿಕ ವಿಟ ವಿದೂಷಕ ಪೀಠವರ್ಧನಂ ಪರಿವೃ[ವ್ರಟ್] ತ್ಯಾಗಿ ವಿವೇಕಿ ಭೋಗಿ ಚೆಲ್ವಂ ನವಯೌವನನರುಜನರ್ಥಪರಿ(ತಿ?) ವೃಷಸತ್ವಂ (ಮದತಿ. ೧೦-೧೩). [ಸಂ.]

ವೃಷಸ್ಕಂಧ (ನಾ). ಎತ್ತಿನ ಹೆಗಲಿನಂತೆ ವಿಶಾಲವಾದ ಮತ್ತು ದೃಢವಾದ ಹೆಗಲುಳ್ಳವನು : ಆ ಪೀನ ವೃಷಸ್ಕಂಧನುಮಾ ಪದ್ಮಾಸ್ಯೆಯರ ಮನಮನಿರ್ಕುಳಿಗೊಂಡಂ (ಆದಿಪು. ೮-೨೫). [ಸಂ.]

ವೃಷಸ್ಯಂತಿ (ನಾ). ೧. ಬೆದೆಯೇರಿದ ಹಸು ; ಉದ್ರೇಕಗೊಂಡ ಆಕಳು. ೨. ಕಾಮಾತುರೆಯಾದವಳು : "ವೃಷಸ್ಯಂತೀ, ರತಾರ್ಥಿನೀ ..... ಈ ೨ ಸುರತದಱಕೆಯವಳ್" (ಹಲಾಯು. ೮೦-೩೩೧). [ಸಂ. ವೃಷಸ್ಯಂತೀ]

ವೃಷಳ 'ವೃಷಲ' ನೋ.

ವೃಷಳೀಪತಿ 'ವೃಷಲೀಪತಿ' ನೋ.

ವೃಷಳೆ (ನಾ). = ವೃಷಲಿ ೧ : ಧರೆಯೊಳಂಜನೆ ಕುಂಜರಾಖ್ಯಂಗುದಿಸಿ ಬೆಳವುತಿರೆ . . . ಬಹುಕಾಲ ವೃಷಳೆಯದೆನಿಪ ತತ್ಸುತೆಗುಚಿತವರನನು ವನದೊಳಱಸಿದನು (ಕೌಶಿರಾ. ೭-೧೨). [< ಸಂ. ವೃಷಲೀ]

ವೃಷಾಂಕ (ನಾ). ೧. ನಂದಿಯ ಲಾಂಛನವುಳ್ಳವನು ; ಶಿವ : ಒಯ್ಯಗೆ ಪಾರ್ದೆಚ್ಚ ವೃಷಾಂಕನಂಬು ತನುವಂ ಪಚ್ಚಂತೆ ಕೊಂಡತ್ತು ತೊಟ್ಟಗೆ ವೈಮಾನಿಕಕೋಟಿಗಂದು ಪಿರಿದೊಂದುತ್ಸಾಹಮಪ್ಪನ್ನೆಗಂ (ಪಂಪಭಾ. ೮-೧೬). ೨. ಇಲಿಯ ಲಾಂಛನವನ್ನುಳ್ಳವನು ; ಗಣಪತಿ. ೩. ಧಾರ್ಮಿಕ ನಡವಳಿಕೆಯ ವ್ಯಕ್ತಿ ; ಸಾತ್ವಿಕಸ್ವಭಾವದ ಮನುಷ್ಯ. ೧, ೩ : ಅರಿಕಾಮಧ್ವಂಸಿ . . . ವೃಷಾಂಕಂ ವಿಬುಧನುತನುಮಾ ಕಾಮಿನೀಜೀವಿತೇಶಂ ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ (ಜಗವಿ. ೧-೩). ೪. ನಪುಂಸಕ ; ಷಂಡ. ೫. ಒಂದು ಬಗೆಯ ಸಸ್ಯ. [ಸಂ.]

ವೃಷಾಕಪಿ (ನಾ). ೧. ವಿಷ್ಣು : "ವಿಷ್ಣುಃ, ಕೃಷ್ಣಃ, ಕೇಶವಃ . . . ವೃಷಾಕಪಿಃ . . . ವನಮಾಲೀ, ಗದಾಧರಃ – ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೩). ೨. ಈಶ್ವರ ; ಶಿವ : ಕಪಿರಥಕುಶಲವನು ಕಂಡಾ ವೃಷಾಕಪಿ [ಪಾಲಾ. ವೃಷಧ್ವಜ] ವೃಷಭನಾನನವನು ನಿರೀಕ್ಷಿಸಿ ತೂಗಿದನು ಶಿರವ (ತೂರರಾ. ೬-೨೫-೫). ೩. ಬೆಂಕಿ ; ಅಗ್ನಿ. ೪. ಇಂದ್ರ. ೫. ಸೂರ್ಯ. ೬. ಮರದ ಕೊಂಬ,– ರೆಂಬೆ. ೭. ಒಂದು ಬಗೆಯ ಪ್ರಾಣಿ. ೮. ಕತ್ತಿ ; ಖಡ್ಗ. "ಶಿಪಿವಿಷ್ಟಾಗ್ನಿ ಮುಕುಂದ ಶಾಖ ಮೃಗಭೇದಂ ಖಡ್ಗಮಿಂತುಂ ವೃಷಾಕಪಿಶಬ್ದಂ" (ನಾನಾರ. ೫೯). [ಸಂ.]

ವೃಷಾಧಿಪ (ನಾ). = ವೃಷಭೇಶ್ವರ ೨ : ನಿಶಿತವಿಶಾಣದಿಂ ಮೃಡವೃಷಾಧಿಪ ನೀಡಿಱಿದೆತ್ತ ತತ್‌ಕ್ಷತ ಪ್ರಸರಮ ತಪ್ಪಲಲ್ಲಿ ಲಿಪಿಯಂತಿರ ಎಶ್ವಕಧೀಶನೂರ್ವನೆನಿಸಿದಂ (ಶಬಶಂ. ೧-೩೬). [ಸಂ.]

ವೃಷಾವಾಸ (ನಾ). ಒಂದು ಬಗೆಯ ಸಸ್ಯ ; ಆಡುಸೋಗೆ ; ಆಡುಮುಟ್ಟದ ಗಿಡ : "ವೃಷಾವಾಸಃ, ಆಟರೂಷಕಃ --- ಈ ೨ ಆಡುಸೋಗೆ" (ಹಲಾಯು. ೩೩-೪೫). [ಸಂ.]

ವೃಷಾಹವ (ನಾ). ಗೂಳಿಗಳ ಕಾಳಗ ; ಹೋರಿಗಳ ಸಣಸಾಟ : ಕಪಿವಿಲಂಘನ ಕೀಟನಿಯುದ್ಧ ದ್ವಿಪರಣಪ್ರಕರಣ ವೃಷಾಹವ[ಪಾಲಾ. ವಹ] ಶಫರಿಸಂಚರ ಸರ್ಪಗತಿ ಸವ್ಯಾಪಸವ್ಯಗಳ ಚಪಲತರ ಪಯಪಾಡುಗಳ ಕಡುಕುಪಿತ ಕರ್ಕಶಮಾನಸದ ರಣನಿಪುಣ ನಿಕಷಾಸೂನುಗಳು ಕಾದಿದರು ಕಡುಹಿನಲ (ತೂರರಾ. ೬-೧೪-೧೭). [ಸಂ.]

ವೃಷಿ (ನಾ). ೧. ವೇದಾಧ್ಯಯನ ಮಾಡುವ ವಿದ್ಯಾರ್ಥಿಯ ಆಸನ ; ದರ್ಭಾಸನ ; ಕುಶಾಸನ. ೨. ನಾಲ್ಕುವೇದಗಳನ್ನೂ ಪಠಿಸುವವನು ;

ಚತುರ್ವೇದಪಂಡಿತ : ವೇದಶಾಸ್ತ್ರದ ನಿಷ್ಣನೇ ಭಟ್ಟನ್ನೆ ನಾಲ್ಮುವೇದಪಾಠಕನೆ ವೃಷಿಯೇಕಶಾಖೆಯ ಮಾತ್ರ ವೇದವೋದುವನೆ ಸುಶ್ರೋತ್ರಿಯಂ ಸಷಡಂಗವೇದಿಯೆಯನೂಚಾನನು (ವೀಶಿಪು ೭-೨-೧೮). [ಸಂ. ವೃಷೀ]

ವೃಷೆ (ನಾ). ೧. ಹಸು ; ಎಕಳು ; ಗೋವು : "ರೋಹಿಣಿಯನಡ್ರಿಯರ್ಜುನಿ ವೃಷೆ ಗೋ ವೃಷಭವಾಹಿನಿಯೆನ ಹಸು" (ಮಂಗರಾ. ೫೩-೩). ೨. ಒಂದು ಬಗೆಯ ಮರ : "ಚಿತ್ರಾ, ಉಪಚಿತ್ರಾ, ನ್ಯಗ್ರೋಧೀ . . . ವೃಷಾ . . . ರಂಡಾ, ಮೂಷಕಪರ್ಣೀ - ೧೦ ನಲಿಯಾಲದ ಘರಕ್ಕೆ ಹೆಸರು, ಇಲೀಕಿಮಿಗಿಡ" (ಸಿದ್ಧಾಂಜ. ೧೩೨). ೩. ಒಂದು ಬಗೆಯ ಸಸ್ಯ. [ಸಂ. ವೃಷಾ]

ವೃಷೇಂದ್ರಧ್ವಜ (ನಾ). ೧. ನಂದಿಯ ಚಿಹ್ನೆಯುಳ್ಳ ಬಾವುಟ, — ಪತಾಕೆ. ೨. ನಂದಿಯ ಧ್ವಜವುಳ್ಳವನು ; ವೃಷಭಲಾಂಛನವುಳ್ಳವನು ; ಶಿವ : ರುರು ಘಂಟಾಕರ್ಣಂ . . . ಶಂಕರನೋಂಕಾರಂ ವೃಷೇಂದ್ರಧ್ವಜಂ . . . ವೀರಭದ್ರಂ (ರಾಜಶೇ. ೧೪-೧೫೩). [ಸಂ.]

ವೃಷ್ಟಿ (ನಾ). ೧. ಮೋಡ ಕರಗಿ ಸುರಿಯುವಿಕೆ, — ವರ್ಷಿಸುವಿಕೆ ; ಮಳೆ : ಕಱಲಭೂಮಿಯಲ್ಲಿ ಕಱೆದ ವೃಷ್ಟಿಯ ತಱನಂತ ಅವರೆತ್ತ ಬಲ್ಲರು ಎನ್ನ ಸುಖದುಃಖವ (ಬಸವ. ೪೫೫) ; ಅರಸ ಕೇಳ್ಕ ವೃಷ್ಟಿಗಳನಾ ಸುರಪ ಸುರಿಯದೆ ನಿಂದನಳಿದವು ಧರೆಯೊಳೋಷಧಿಗಳು ಮಹಾದ್ಭುತವಾಯ್ತು ಲೋಕದಲಿ (ತಿಮ್ಮಕ್ಕ. ೯-೫೨). ೨. ಸುರಿಯುವಿಕೆ ; ವರ್ಷಿಸುವಿಕೆ ; ಧಾರಾಕಾರವಾಗಿ ಬೀಳುವಿಕೆ : ಕವಿತಾವಲ್ಲೀಸುಧಾವೃಷ್ಟಿ ಸರ್ವರಸೋತ್ಪಾದನವೀನಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗ ಸುಂದರಿ ವಿದ್ಯಾನಟಿ ನಾಟಕಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್ (ಪಂಠಾಮಾ. ೧-೬); ಅಂತರ್ಮುಹೂರ್ತಕಾಲಂ ಉತ್ಪಪ್ಪದಿಂ ದೇಶೋನಪೂರ್ವ ಕೋಟಿಕಾಲಂ ಭೇದಾಭೇದ ರತ್ನತ್ರಯಾತ್ಮಕಧರ್ಮಾಮೃತವೃಷ್ಟಿಯಿಂ ಅಸನ್ನಭವ್ಯಸಸ್ಯಸಮೃದ್ಧಿಯಂ ಮಾಡುತ್ತುಂ (ತತ್ತ್ವಪ್ರ. ೬೬೮). [ಸಂ.]

ವೃಷ್ಟಿಕಾರಕ (ಗು). ೧. ಮಳೆಯನ್ನು ಸುರಿಸುವ. (ನಾ). ೨. ಮಳೆ ಸುರಿಯುವಂತೆ ಮಾಡುವವನು : ವೃಷ್ಟಿಕಾರಕನಾದ ವೃಶ್ಚಾನರಾಗ್ನಿಯ ಪ್ರಶಂಸೆಯನ್ನು ನಾನೂ ಪರಿಸುತ್ತೇನೆ (ಋಷ್ಯಾಶೃ. ೬). [ಸಂ.]

ವೃಷ್ಟಿಕೆ (ನಾ). ಮಣ್ಣಿನ ಪಾತ್ರೆ ; ಮಡಕೆ : "ಮಣ್ಣಾ ಮಡಕೆ ವೃಷ್ಟಿಕೆಯೆನಿಪ್ಪುದು" (ಪಂಗರಾ. ೧೩೮-೨). [ಸಂ. ವೃಷ್ಟಿಕಾ?]

ವೃಷ್ಣಿ (ನಾ). ೧. ಮೋಡ ; ಮೇಘ. ೨. ಆಡು ; ಮೇಷ : "ಅವಿಮೇಷವುರಭ್ರಂ ಮೇಂಡವದೇಳಕವೃಷ್ಣ್ಯೂರಣ(ಕ)ಮೇಕಾರ್ಥಂ" (ಪಸ್ತುಕೋ. ೯೦-೧೧). ೩. ಬೆಳಕಿನ ಕಿರಣ,— ರೇಖೆ. ೪. ಕೃಷ್ಣನ ಒಬ್ಬ ಪೂರ್ವಜ. ೫. ಯದುವಂಶದ ಒಬ್ಬ ರಾಜ : ರಾಜೀವನೇತ್ರನಿಂತೆನುತುಮಂಧಕವೃಷ್ಣಿಭೋಜರರಿಪಪಿಳಿಯಾದವಕುಲದ ಪಟುಭಟಸಮಾಜಮಂ ಪ್ರದ್ಯುಮ್ನನೊಡನೆ ಸುರಥನ ರಥಕ್ಕೆಣೆಯೊಡ್ಡಿ (ಹರಿಭಾ. ೧೪ -೩). ೬. ಕೃಷ್ಣ. ೭. ಇಂದ್ರ. ೮. ಬೆಂಕಿ ; ಅಗ್ನಿ. ೯. ವಾಯು ; ಗಾಳಿ. ೧೦. ಸಂಪ್ರದಾಯಬಾಹಿರನಾದವನು ; ಪಾಖಂಡಿ. [ಸಂ.]

ವೃಷ್ಣಿಕುಲ (ನಾ). ಯಾದವಕುಲ ; ಯದುವಂಶ : ಸಾಕಿನ್ನು ಜಿಷ್ಣುವಂ ಕರಸು ತೊಲಗಸುತೊಂದು ಸರಳಿಂದೆ ವೃಷ್ಣಿಕುಲತಿಲಕನ ಕುಮಾರಕನ ಧನುವನೇಳ್ತುಂಡಾಗಿ ಖಂಡಿಸಿದನು (ಹರಿಭಾ. ೧೨-೩೨) ; ಭಾಗವತಸಂಪ್ರದಾಯದವರ. ಆಧಾರಗಳನ್ನು ಪರಿಶೀಲಿಸಿ ನೋಡಿದರೆ ಈ ವಾಸುದೇವ ವೃಷ್ಣಿಕುಲಕ್ಕೆ ಸೇರಿದವನೆಂಬುದು ಪ್ರಕ್ತವಾಗುತ್ತದೆ (ಭಾರದ. ೨೮೩). [ಸಂ.]

ವೃಷ್ಯ (ಗು). ೧. ಕಾಮಪ್ರಚೋದಕವಾದ ; ಕಾಮೋತ್ತೇಜಕವಾದ ; ಲೈಂಗಿಕ ಭಾವನೆಗಳನ್ನು ಉದ್ದೀಪನಗೊಳಿಸುವ : ಪರಿಹರಿಸಿದೆ ನಾಂ ವೃಷ್ಯೇಷ್ಟ ರಸಂಗಳನೆಂದು ನಿರ್ಮಳಾಚಾರಪುರಸ್ಸರಮಾ ಮುನೀಂದ್ರನಾರ್ತಸಗಿ ರಸಪರಿತ್ಯಾಗಮೆಂಬ ತಪಮಂ ತಳೆದಂ (ಸುಕುಮಾ. ೪-೭). (ನಾ). ೨. ಕಾಮಪ್ರಚೋದಕವಾದುದು ; ಕಾಮೋತ್ತೇಜಕವಾದ ದ್ರವ್ಯ : ಅಭಿಷವಾಹಾರ — ಧಾನ್ಯಾಮ್ಲಾದಿ ದ್ರವದ್ರವ್ಯಮುಂ ವೃಷ್ಯಮುಂ ಅಪ್ಪ ಅಭಿಷವಾಹಾರಮುಂ (ತತ್ತ್ವಪ್ರ. ೨೮೪). ೩. ಸತ್ತ್ವಯುಕ್ತವಾದುದು ; ವೀರ್ಯವೃದ್ಧಿಯನ್ನುಂಟುಮಾಡುವಂತಹುದು : ಕೂಷ್ಮಾಂಡರಸಾಯನ . . . ಸೇವಿಸಿದರೆ . . . ಶರೀರವು ಪುಷ್ಟವೂ ವೃಷ್ಯವೂ ಬುದ್ಧಿ ಮತ್ತು ಬಲಪ್ರದವೆಂದು ಧನ್ವಂತರಿಯು ಹೇಳಿರುತ್ತಾನೆ (ಸಕ್ಕ. ೪೩೨ ಪಠ). [ಸಂ.]

ವೃಷ್ಯಗಂಧ (ನಾ). ಒಂದು ಬಗೆಯ ಸಸ್ಯ : "ವೃಷ್ಯಗಂಧ – ನೆಲಗುಂಬಳ" (ಓಷಧಿ. ೧೩೭). [ಸಂ.]

ವೃಷ್ಯರಸ (ನಾ). ಕಾಮೋತ್ತೇಜಕವಾದ ರಸ ; ಕಾಮೋದ್ದೀಪನಗೊಳಿಸುವ ದ್ರವ : ಯುವತಿಕಥಾಲೋಕನಭೂತವಿಭವಚಿಂತಾಂಗಸಂಸ್ಕೃತಂ ವೃಷ್ಯರಸಾಭ್ಯವಹಾರತ್ಯಜನಂ ಪಂಚವಿಧಂ ಬ್ರಹ್ಮವ್ರತಂ ಜಿನೇಶ್ವರಮತದೊಳ್ (ಶಾಂತಿಪು ೬-೫೪). [ಸಂ.]

- ವೆ (ಪ್ರ). ಧಾತುಗಳ ಮೇಲೆ ಹತ್ತಿ ಭಾವನಾಮದ ಅರ್ಥವನ್ನು ಕೊಡುವ ಒಂದು ಕೃತ್ಪ್ರತ್ಯಯ : 'ತೆಱವೆ', 'ಪೋಲ್ತೆ', 'ಮಱವೆ' ಪರಾ.

ವೆಂಕಟ (ನಾ). (ಮೂಲತಃ ತಿರುಪತಿಯ ಬೆಟ್ಟದ ಮೇಲೆ ಪ್ರತಿಷ್ಠಿತಗೊಂಡು ಪ್ರಸಿದ್ಧವಾಗಿರುವ) ವಿಷ್ಣುವಿನ ವಿಗ್ರಹ ; ಶ್ರೀನಿವಾಸ ; ವೆಂಕಟೇಶ : 'ವೆಂಕಟರಮಣ' ಪರಾ. [< ಸಂ. ವೇಂಕಟ./ IP ಕಟಿಲ್ ಅವರ ಕೋಶದಲ್ಲಿ ಈ ಶಬ್ದವನ್ನು ದೇಶ್ಯವೆಂದು ಪರಿಗಣಿಸಿದೆ]

ವೆಂಕಟಗಿರಿ (ನಾ). ೧. ಪ್ರಸಿದ್ಧವಾದ ವಿಷ್ಣುವಿನ ವಿಗ್ರಹವು ಪ್ರತಿಷ್ಠೆಗೊಂಡಿರುವ ಬೆಟ್ಟ ; ತಿರುಪತಿಬೆಟ್ಟ ; ತಿರುಮಲೆ : ತಿರುಪತಿ ಬೆಟ್ಟವನ್ನು ವೆಂಕಟಗಿರಿ ಎಂದೂ ಕರೆಯುತ್ತಾರೆ (ರೂಢಿ). ೨. ತಿರುಮಲೆಯಲ್ಲಿರುವ ಕೋಟೆ, — ದುರ್ಗ : (ಪ). [< ಸಂ. ವೇಂಕಟಗಿರಿ]

ವೆಂಕಟಪತಿ (ನಾ). ೧. ತಿರುಮಲೆಯ ಅಧಿದೇವತೆ ; ವೆಂಕಟೇಶ : ಅವರು ಆರ್ತರಾಗಿ ವೆಂಕಟಪತಿ ನೀನೇ ಗತಿ ಎಂದು ಮೊರೆಯಿಟ್ಟರು (ರೂಢಿ). ೨. ಒಂದು ಬಗೆಯ ನಾಣ್ಯ : ಬ್ರಿಟಿಶಸರಕಾರದ ಅಮಲಿನ ಆರಂಭದಲ್ಲಿ . . . ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ — ೧ ಗಜಪತಿ . . . ೧೪ ವೆಂಕಟಪತಿ; ಇವೆಲ್ಲ ಕಿಮ್ಮತ್ತು ೩ ರೂ ೪ ೮ (ಹೂಗ. ೨೮೦). [< ಸಂ. ವೇಂಕಟಪತಿ]

ವೆಂಕಟರಮಣ (ನಾ). ೧. = ವೆಂಕಟಪತಿ ೧ : ತಿರುಪತಿ ವೆಂ[ಪಾಠಾಂ. ವೇಂ]ಕಟರಮಣ ನಿನಗೇತಕೆ ಬಾರದು ಕರುಣ (ಪುರಂದ. ೧-೬೭ ಪಲ್ಲವಿ) ; ಸಂಕಟ ಬಂದಾಗ ವೆಂಕಟರಮಣ (ಗಾದೆ). [< ಸಂ. ವೇಂಕಟರಮಣ]

ವೆಂಕಟಾಚಲ (ನಾ). = ವೆಂಕಟಗಿರಿ ೧ : ವೆಂಕಟಾಚಲನಿಲಯಂ ವೈಕುಂಠಪುರವಾಸಂ ಪಂಕಜನೇತ್ರಂ ಪರಮಪವಿತ್ರಂ (ಪುರಂದ. ಧಾ. ೧-೧೦೦ ಪಲ್ಲವಿ). [< ಸಂ. ವೇಂಕಟಾಚಲ]

ವೆಂಕಟಾದ್ರಿ (ನಾ). = ವೆಂಕಟಗಿರಿ ೧ : ಆದಿನಾರಾಯಣನೆಂಬ ಪರ್ವತವನು ಭೇದಿಸಿ ನಿಂತವನ ಸಾಧಿಸಿ ಮುಂದಣ ವೆಂಕಟಾದ್ರಿಯ ಮೇಲೆ ಪಾದವನೂಂದಿನ . . . ಪಾದವ ತೋಱೆನಗೆ (ಪುರಂದ. ಧಾ. ೩-೮೫-೬). [< ಸಂ. ವೇಂಕಟಾದ್ರಿ]

ವೆಂಕಟೇಶ (ನಾ). = ವೆಂಕಟಪತಿ ೧ : ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೋ (ಪುರಂದ. ಧಾ. ೧-೯೯ ಪಲ್ಲವಿ). [< ಸಂ. ವೇಂಕಟೇಶ]

ವೆಂಗದ (ನಾ). ಒಂದು ವಂಶದ ಹೆಸರು : ಗಂಗರ ನೊಟಮ್ಮುರಾ ಒಕ್ಕಲಾಚನ್ನಪ್ಪಾರ ಕಮ್ ಅರ್ಸುಗೆಯ್ಯನ್ನೆಗಮಿ ದತ್ತಿಯಮ್ಮೊಮ್ಮಲ್ಲ ವೆಂಗದರ ಒಕ್ಕಲ್ಗೆ ಸಲಿಪೋ ಸತ್ಯಮನ್ತ (ಎಕ. X. ಕೋಲಾರ. ೭೯-೧೫ ; ಸು.890). [?]

ವೆಂಗ್ಮಿ, **ಬೆಂಗಿ** (ನಾ). (ಈಗಿನ ಆಂಧ್ರಪ್ರದೇಶದ ಕರಾವಳಿಯಲ್ಲಿರುವ) ಒಂದು ಪ್ರದೇಶದ ಹೆಸರು ಮತ್ತು ಆ ಪ್ರದೇಶಕ್ಕೆ ಸೇರಿದ ವ್ಯಕ್ತಿ ; IP ಇದು ಕನ್ನಡದ ಆದಿಕವಿ ಪಂಪನು ಇದ್ದ ಪ್ರದೇಶ : ನಿರುಪಮದೇವನ ರಾಜ್ಯದೊಳರಿಕೇಸರಿ ವೆಂಗಿವಿಷಯಮಂ ತ್ರಿ[ಕಳಿಂಗಂ] ಬೆರಸೊತ್ತಿಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್ (ಪಂಪಭಾ. ೧-೨೦) ; ವೆಂಗೀವಿಷಯಂ ತ್ರೈಭುವನಂಗಳೊಳಗ್ಗದ ವಿಷಯಂ (ಶಾಂತಿಪು. ೧-೪೨). ಬೆಂಗಿ : ಪೊಣರ್ದಿರಿದಾಗಿ ತಾಗಿದೊರನಾನೆಯೊಳೊಕ್ಕುವನೆಂದು ಬೆರ್ಚ್ಚಿ ಕೊಂಕಣಮೆಲ್ದಿಯಕ್ಕೆ ಬೆಂಗಿ ಬೆಱಗಾಗೆ (ಸೌಗಾ. XI-i. ೩೨-೯ ; 1007). [?]

ವೆಂಗ್ಮಿ೨ (ನಾ). ದಡ್ಡ ; ಮೂರ್ಖ (?) : ಸಾಕ್ಷಾತ್ ಲಿಂಗವಲ್ಲದೆ ಬಳ್ಳವೇ ಅದು ವೆಂ[ಪಾಠಾಂ. ಲಿಂ]ಗಿಗಳಿರಾ ಕಂಡುಕಂಡಿನ್ನೇಕೆ ಗಳಹುವಿರಿ (ಬಸವ. ೯-೨೦). 'ಪೆಂಗ' ಪರಾ. [?]

ವೆಂಗಿಪಟು (ನಾ). (ಈಗಿನ ಆಂಧ್ರಪ್ರದೇಶದ ಕರಾವಳಿಯಲ್ಲಿರುವ) ಒಂದು ಊರಿನ ಹೆಸರು : ಆ ಮಳಯಾಚಳ ಹಿಮಗಿರಿ ಸೀಮಾವನಿತಳ[ಕೆ] ಬೆಂಗಿಮಂಡಳದೊಳ್ ಚೆಲ್ಲಾವಗಮೆ ತನಗದೊಂದೂರ್ ನಾಮದೊಳಂ ವೆಂಗಿಪಟು ಕರಂ ಸೊಗಯಿಸುಗುಂ (ಪಂಪಭಾ. ೧೪-೪೦); ಜಗದೊಳಗಿದೊಂದು ಮಿಗಿಲೆನೆ ನೆಗಟ್ಟಪುದು ವೆಂಗಿವಿಷಯಮಾ ವಿಷಯದೊಳೊಳ್ಪಗಣತಮನೆ ಸಪ್ತಗ್ರಾಮಗಳೊಳಮಾ ವೆಂಗಿಪಟು ಕರಂ ಸೊಗಯಿಸುಗುಂ (ಧಂದೂಆಖ್ಯಾ. ೧-೧೨). [ವೆಂಗಿ + ಪಟು (< ಪಟುವ)]

ವೆಂಟಣಿಸು, ವೆಂಠಣಿಸು (ಕ್ರಿ). ೧. ಮುತ್ತು ; ಸುತ್ತುಗಟ್ಟು ; ಆಕ್ರಮಿಸು : ಗಂಟರಲಿ ನಮ್ಮೊಡ್ಡ ಸುತ್ತಲು ವೆಂಟಣಿಸಿ ರಿಪುಸೇನೆಯದೆ ಏನುಂಟು ಮಾಡುವುಪಾಯವೆಂದನು ನಗುತ ಮುರವೈರಿ (ಕುವ್ಯಾಮೂ. ೧೦-೨೬); ಪ್ರಳಯದ ಮುಗಿಲ ಮೋಹರದಂತೆ ವೆಂಟಣಿಸಿದರು ರಿಪುಭಟನ (ನಿಭಾಗ. ೪-೯-೧೫೫) ; ಏಗಾಲಮಿಂತು ವೆಂಟಣಿಸಿ ನೀ ಮುದಿಯ ಮರಿಯಂತೆ ಕಾವೆ ಪಳನನಸಿನೀ ನಿಧಿಯ? (ಗಿಳಿವಿಂ.೨೭-೯). ೨. ವ್ಯಾಪಿಸು ; ಆವರಿಸು : ಎಂಟುಂ ದಿಸೆಗಳ ನಾದಂ ವೆಂಟಣಿಸೆ ನಿನಾದಮೊಳ್ನಸೆಗುವ ಮಾಲಾಘಂಟೆಯುಮಂ ಸೊಗಸಾಸುವ್ಯೆ ಗಂಟೆಯುಮಂ ಚಂದ್ರನಾಥಗೃಹಕರ್ಪಿಸಿದಂ (ಕಾ. I. ೬೫-೪ ; 1484) ; ಉರಿ ಧಡಾಳಿಸಿ ವೆಂಟಣಿಸಿದುದು ತಿರುಗಿ ಬರೆ ಬಳಿಕಮಮ ಲಂಕಾಪುರವನುಪ್ಪರಿಸಿದುದು ಗಾವಳಿ ಗಗನದಳತೆಯಲಿ (ತೂಠಾ. ೫-೮-೭೯) ; ಪಗಲ ದೆಸಗಳುಕಿ ಪರದಿರ್ದ ಬೆಳ್ದಿಂಗಳೇ ನಗರಮಂ ಪೊಕ್ಕು ವೆಂಟಣಿಸಿ ಮಾರ್ಮಲೆತಿರಲ್ (ಜೈಮಿಭಾ. ೧೭-೭). ೩. ಗುಂಡಾಗಿ ಸುತ್ತುವರಿ ; ವರ್ತುಲಾಕಾರವಾಗಿರು : ಜ್ಞಾನವೃಕ್ಷದ ಬಳಿಯೆ ವೆಂಟಣಿಸಿ ಕುಳಿತದರ ಫಲವ ಮೆಲಲಾರದದನಕ್ಕಜದೊಳೀಕ್ಷಿಸುವ ಹಳೆಯ ಹಾವನೆ, ಹೊನ್ನಗದ್ದುಗೆಯನೇರಿ ಕುಳಿತಲ್ಲಿ ತನ್ನೆದುರಲ್ಲಿ ನಿಂದ ಯೇಸುವ ನಿಟ್ಟಿಸಿದನಾ ಪಿಲಾತಂ (ಗೂಠ್ಯೂಠಾ. ೧-೨೨). ೪. ಸೀಳು ; ಒಡೆ ; ಭೇದಿಸು : ತಂದೆ ನಿನ್ನಯ ಗಂಟಲನು ಮುಱಿವಂದು ಕಂಭವ ವೆಂಟಣಿಸಿ ಬಿಗಿದೊಗದನಲ್ಲಿ ನೃಹರಿ ಜಗವಱಿಯೆ (ನಿಭಾಗ. ೭-೧೩-೧೧). ೫. ಉಡು ; ಧರಿಸು : ಖಿಲ್ಲರೂಡನೆಯ ಪೇಳವೇಳಕೆ ಚಲ್ಲಣವ ವೆಂಟಣಿಸಲಾ ಜನವೆಲ್ಲ ವಜಿಗಿತು ಧರ್ಮಜನ ಮಱುಜೂಜಿನುಬ್ಬಟೆಗೆ (ಕುವ್ಯಾಸ. ೧೭-೪೬). ೬. ಒಟ್ಟಾಗು ; ಗುಂಪುಗೂಡು : ತುರಗಚಯ ವೆಂ[ಪಾಠಾಂ.ಟಿಂ]ಟಣಿಸಿ ಹೂಡಿದ ವರರಥಕೆ ಬಲವಂದು ಕೈದುವ ಧರಿಸಿಯೇಱಿದನರಸ ಮಂಗಳವಾದ್ಯರಭಸದಲಿ (ನಳಚ. ೯-೧೮) ; ಲಕ್ಷಮೊರ್ವನ ಬಳಿಯೊಳು ಗಣಿತಕಿಹುದಿನಿತು ಬಲಮಿನಿತು ಬಲದಿಂದ ವೆಂಟಣಿಸಿರ್ಪ ದಳಪತಿ ಗಳಪ್ಪತ್ತು ಮಂದಿ ಸಂದಣಿಸಿ ಬರುತಿಹುದು ಹಂಸಧ್ವಜನೃಪಾಲಕಂ ಪೂಜಮಟ್ಟು ನಡವಡೆಯೊಳು (ಜೈಮಿಭಾ. ೧೦-೪೩). ೭. (ಕೋಪ, ಉದ್ವೇಗ, ಭಯ ಮುಂತಾದುವುಗಳಿಂದ) ಕಂಪಿಸು ; ನಡುಗು ; ಅದುರು : ಕೋಪದಲಿ ವೆಂ [ಪಾಠಾಂ. ಕಂ, ಟಿಂ]ಟಣಿಸುತರಿಭಟನ ತೆಗೆವನು ಸುಂಟಗೆಯನೆಂದೆನುತ ದಾನವಕಂಟಕನು ತೆಗೆದೆಚ್ಚನಾ. ಬ್ರಹ್ಮಾಸ್ತ್ರದಲಿ ನೃಪನ (ನಿಭಾಗ. ೧೦-೫೭-೫೩). ೮. ಅಂದಗೊಳ್ಳು ; ಶೋಭಿಸು : ಬೇಱೊಂದು ವರ್ನವೆಯ್ದಿ ವೆಂಟಣಿಪ ನುಣ್ಮೊಗಂ ಮೊಳೆವ ಕಂಜನವಿನಿತು ವೆಂಟಣಿಸೆ ಪರವ ಬಿಗಿಯಪ. ಮೆಱೆದಲ್ಲೀಲಕಂಠನಪರಾವತಾರನ ಸೌಂದರಾಧಿಪನ ಅಂಗಲತೆ ಪೂರೆಯೇಱಲು (ಸಂಂದಪು. ೯-೧೧). ೯. ಸಂಪಾದಿಸು ; ಹೊಂದು ; ಪಡೆ : ಕೃಷ್ಣನ ಮುಂದೆ ಭಾಷೆಯಂ ಪೂರ್ಕೆಸಿ ವೆಂಟಣಿಸದೊಡಲಂ ತೊಱೆದು ಮುಕ್ತಿರಾಜ್ಯಮಂ ವೆಂಟಣಿಸಿಕೊಂಡಂ ಸುಧನ್ವಂ (ಜೈಮಿಭಾ. ೧೩-೬೨). ೧೦. (ನಾದವು) ಉಂಟಾಗು ; ಹೊರಹೊಮ್ಮು : ತುಂಟರಕ್ಕಸರ ಹಾಹೆಗಳ ಪದ್ಮದ ಹೊನ್ನಗಂಟೆಯ ನಾದವಂಭ್ರಿಯೊಳು ವೆಂಟಣಿಸಲು ಕೃಷ್ಣನಂದು ಕ್ರೀಡಾಕುಲಮಂಟಪವನು ಸಾರ್ದನೊಲಿದು (ಮೋಹತ. ೧೪-೨೭). ೧೧. ನಮಸ್ಕರಿಸು ; ವಂದಿಸು : ನಸುನಗೆ ಕುನಿಯೆ ಮುಖದಲಿ ಮುನಿನಿಗೆ ವೆಂಟಣಿಸಿ ಲಜ್ಜಾಭರದಿ ನುಡಿದನು ದೂತನೀ ಮಾತ (ಕುವ್ಯಾಳ. ೭-೧೦೦). ೧೨. ಅನುವುಗೊಳಿಸು ; ಸಿದ್ಧಪಡಿಸು ; ಸಜ್ಜುಮಾಡು : ಬಂದನು ಭೂಪ ಬೀಯಗರೂಡನೆ ಹಂತಿಯ ವೆಂಟಣಿಸಿದರು ರತುನಗದ್ದುಗೆಯ (ಕಾಶಿರಾ. ೨-೬೧). ೧೩. ಆತಂಕಪಡು ; ತಳಮಳಗೊಳ್ಳು : ಬೇಂಟೆಗಂ ಭೀಮಸೇನಂ ಪೋಗಿ ಹೇಗಿಹನೊ ಉತ್ಪಾತದಪಶಕುನವು ಉಂಟಾಗಿ ತೋರುತಿದೆ ನೋಡಬೇಕೆಂದನುತ ವೆಂಟಣಿಸಿ ತಮ್ಮಂದಿರಂ ಕೂಡಿಕೊಂಡು ಪಥ ಕಂಟಕದಿ ತೊಳಲಿ ಬರೆ ಕಂಡರಾ ಭೀಮನಂ ಗಂಟಿಕ್ಕಿದಾ ಸರ್ಪನ (ತುರಂಗ. ೩೧-೩೨). ೧೪. ಸೇರು ; ಕೂಡು : ಅಣುವಿನಲಿ ಲಘುವಿನಲಿ ಗುರುವಿನಯೆಣಿಕೆಯಲಿ ಮಹಿಮೆಯಲಿ ಪ್ರಾಪ್ತಿಯ ಭಣತೆಯಲಿ ಶೀಲತ್ವದಲಿ... ವೆಂಟಣಿಸಿ ರೇಚಕ ಪೂರಕದ ರಿಂಗಣವನಱಿವುದು ಯೋಗಸಿದ್ಧಿಗೆ ಲಕ್ಷಣವನು (ಕುವ್ಯಾಖ. ೪-೯). ೧೫. ಲಭಿಸು; ಪ್ರಾಪ್ತವಾಗು : ತೃಣದ ಕೊನೆಯ ಜಲಕಣವೆನಿಪುದು ವೆಂಟ[ಪಾಠಾಂ. ಠ]ಣಿಸಿದ ಜವ್ವನಮಿದಱೊಳಗೆ ಎನಿಸದೆ ಕಮ್ಮಂಗಣೆ ಕುಣಿಸಿದವೊಲ್ ಕುಣಿಯದವನೆ ಕುಱಿಯನಿಸುವನು (ಜನವ. ೨-೪). ೧೬. (?) : ವೆಂಟಣಿಸುತ ಬಹುರೋಷದುಬ್ಬಿನ ಗಂಟಿನಲಿ ಸೊಕ್ಕಿರ್ದರು (ಆಭಾ. ೩೪). **ವೆಂಠಣಿಸು:** ೧. ಅವನಿಯದಿರಿತು ಗಗನ ತಾರಾನಿವಹವನು ಬಿದಿರಿತ್ತು ವರಪಾಂಡವರು ಕಣನೊಳು ವೆಂಠಣಿಸಿದರು ಕಮಠ ಟೆಂಠಣಿಸೆ (ಕುವ್ಯಾಖ. ೧೧ ಸೂಚನ) ; ತುಂಟಗಂಡಿಗಳಿಣಿಸಲವು ನೂಱೆಂಟು ಹುಲಿಮುಖಿನಂಕದರಿಗಳು ವೆಂಠಣಿಸಲವು ಏಳುಸುತ್ತಿನ ಕೋಟಿಗೀ ಕ್ರಮದಿ (ಆಶ್ವಕ. ೫-೩೭). ೨. ಚಾತುರಂಗದ ದಳದ ತೆರಳಿಕೆ ತಕ್ಕೈಮಿಗೆ ಕುರುಸೇನೆ ನಡತಂದು ಕಳನ ವೆಂಠಣಿಸಿದವು (ಕುವ್ಯಾಮೂ. ೪-೧೪) ; ಘನಮಹಿಮನದಟನ ತಲೆಗೆ ಕೊಟ್ಟನು ವರಸುದರ್ಶನವ ಗಹಗಹಿಪ ಘನತೇಜದಲಿ ಶತಮಿಹಿರರಡಗಲು ಕಮಲಜಾಂಡದ ಕುಹರವನು ವೆಂಠಣಿಸಿ ನಡದುದು ಭಟನ ಸಮ್ಮುಖಿಕೆ (ನಿಭಾಗ. ೧೦-೮೨-೫೨). ೩. ತೆಗೆದು ತಲೆಮಾಲೆಯನು ಹಸುರಂಗಿಗಳ ತೊಟ್ಟನು ಸುತ್ತುಬರೆ ಹೀಲಿಗಳ ಹರಹಿನ ಪಾರಿವದ ಚಲ್ಲಣವ ವೆಂಠಣಿಸಿ[ಪಾಠಾಂ. ಅಳವಡಿಸಿ] . . . ಕಿರಾತವೇಷದ ವಿಗಡದೇವರ ದೇವ ಕೊಂಡನು ಚಾಪ ಮಾರ್ಗಣವ (ಕುವ್ಯಾಳ. ೫-೨೮). ೧೭. ಹೆಚ್ಚಾಗು ; ಅಧಿಕಗೊಳ್ಳು : ಸುತಶೋಕ ಸೂಚನೆ ನರನ ಚಿತ್ತದೊಳಾಯ್ತು ವೆಂಠಣಿಸಿತ್ತು ಪರಿತಾಪ . . . ಕಡುಶೋಕ ಜಠರದಲುರವಣಿಸಲಾಕಸ್ಮಿಕದ ಭಯವಾಯ್ತು ಪಾರ್ಥಂಗೆ (ಕುವ್ಯಾಮೂ. ೪-೭) ; ವೆಂಠಣಿಸಿದ ವಿಷ್ಣುಭಕ್ತಿ ನಂದನ ಕಲಕಂಠ ನಿನ್ನಯ ಸವಿವಾತು ಉಂಟಾದುದೆನ್ನಯ ಕರ್ಣಕ್ಕೆ ಪರಲೋಕನಂಟರು ಕೇಳುವಂತುಸಿರು (ಮೋಪತ. ೨-೨). ೧೮. ಏರು ; ಹತ್ತು : ಬಿದ್ದುದಗಣಿತ ಸೇನೆ ಪಡುವಲು ಹೂದ್ದಿದನು ರವಿ ಮತ್ತ ಮೂಡಣ ಗದ್ದುಗೆಯ ವೆಂಠಣಿಸಿದನು ಕುಮುದಾಳಿ ಕಂಠಣಿಸೆ (ಕುವ್ಯಾಭೀ. ೭-೪). ೧೯. ಮೆತ್ತಿಕೊಳ್ಳು ; ಅಂಟಿಕೊಳ್ಳು ; ಹತ್ತಿಕೊಳ್ಳು : ಹಾಜಿತೊಂದೆಸಗಾಗಿ ಗದ ಮೈಹೇಜಿತುರುಘಾಯವನು ಮೊಳಕಾಲೂಜಿ ಬಿದ್ದನು ವದನದಲಿ ವೆಂಠಣಿಸೆ ರಣಧೂಳಿ (ಕುವ್ಯಾಗ. ೭-೨೪). [ವೆಂಟಣೆ + - ಇಸ್ಸು]

ವೆಂಟಣೆ (ನಾ). ಎಲ್ಲಾಕಡೆ ವ್ಯಾಪಿಸಿರುವುದು ; ಸರ್ವದಿಕ್ಕುಗಳಲ್ಲೂ ಹಬ್ಬಿರುವುದು : ವೆಂಟಣೆಯನಣುಗನಹ ಚಿನ್ನಬಸವಗೆ ಬಸವ ಪಾಂಟದಿಂ ಗುರುವಾಗಿ ಸುಜ್ಞಾನಬೋಧೆಯಂ ಉಂಟುಮಾಡೆನಲು (ಪ್ರಭುಪು. ೭-೩೫). 'ವೆಂಟಣಿಸು' ಪರಾ.

[<— ಮರಾ. ವೇಟಣೆ, ವೇಟಾಳಣೆ, ವೇಥಣೆ = ವ್ಯಾಪಿಸು, ಸುತ್ತುವರಿ./ ಸಂ. ವೇಷ್ಟನ]

ವೆಂಟಿ, ವಂಟಿ, ವಂಟೆ (ನಾ). ಕಿವಿಯಲ್ಲಿ ಧರಿಸುವ ಒಂದು ಬಗೆಯ ಆಭರಣ : ವಾಸಂತೀವಿಚಕಿಲಂಗಳ ವೆಂ[ಪಾಠಾಂ. ಮಂ]ಟಿಗಳುಮಂ . . . ಮಿಸುಪಸುಕೆಯ ಪಲ್ಲವದ ಮುಡಿಗಟ್ಟಿನ ಪಲ್ಲವಂಗಳುಮಂ ವಿಚಿತ್ರಶೋಭೆವಡೆಯೆ ವಿರಚಿಸಿ (ಶಾಂತೀಶ್ವ. ೧೦-೧೪೬ ವ). **ವಂಟಿ :** ಕಂಠಮಾಲೆ ವಂಟಿ ನಿಂಬಳ ಚವುಕುಳಿ . . . ಪೆಂಡೆಯಂ ಮೊದಲಾದ ಸಕಲಾಭರಣಂಗಳನಾ ಶೌಂಡಿಕಂಗೆ ತೋಱಲ್ (ನನ್ನಚಾ. ೩-೧೧೧ ವ) ; ಕಿವಿಯೊಳು ಶೋಭಿಪ ಮಕರದ ವಂಟಿ (ಕಪವ. ೬೬೩). **ವೆಂಟೆ :** ತೋರುಮುತ್ತಿನ ಹಾರ ವೆಂಟಿ ಕಡುರಮ್ಯವಾದ ತಾಟಂಕ (ರುಕ್ಮಾಂಗ. ೧೫-೨೧). [< ಒಂಟ್ಟಿ]

ವೆಂಟಿಸು, ವೆಟ್ಟಿಸು (ಕ್ರಿ). ೧. ಕೂಡಿಸು ; ಸೇರಿಸು : ಘನಘಂಟೆಗಳ ಪಲತೆಱದ ಪಾದಾಂದುಕಂಗಳ ಪ್ರಭಾಪಟಲಂ ಪವನಪಥಪ್ರಸನ್ನಾದರ್ಶದೊಳ್ ಪ್ರತಿಬಿಂಬಿಸಲಂಭ್ರಿಗಳಗ್ರಾವನಿಯೊಳ್ ವೆಂಟಿಸಿದ ಪೊಂಗಿಱುಗೆಜ್ಜೆಯ ಭಂಗಿವೆತ್ತ ಚಲ್ಲಣಂಗಳ ಕಟ್ಟಿದ . . . ನಿಷಾದಿಗಳ್ ಮೊಗವಡಂಗಳನುಗಿಯೆ (ಮಹಾಸ್ತ. ೧೨-೪೬ ವ). **ವೆಟ್ಟಿಸು :** ೨. ಸುರುಳಿಯಾಗು ; ಸುತ್ತಿಕೊಳ್ಳು : ಶರದಲ್ಲಿ ಗುಂಡುಗಳ ತಂದಿಡಲು ಭುಜಗತತಿ ವೆಟ್ಟಿಸಲು (ಜ್ಞಾನಚಂ. ೧-೮೦). [< ವೆಂಟಣಿಸು ?]

ವೆಂಟೆ 'ವೆಂಟಿ' ನೋ.

ವೆಂಟೆಯ 'ಪೆಂಡೆಯ' ನೋ.

ವೆಂಠಣಿಸು 'ವೆಂಟಣಿಸು' ನೋ.

ವೆಂಡಿಕೆವಣ (ನಾ). ಒಂದು ಬಗೆಯ ತೆರಿಗೆ, — ಸುಂಕ : ಇಜೀವ ಗೊರವಂಗೀ ಸ್ಥಾನಮುಮ್ ಅನ್ನಗೆಡಯೊಳ್ ಪಿರಿಯ ಗಳೆಯಿ ೨೩ ಮತ್ತರ್ಗ್ಗದ್ದೆಯ ತಮ್ಮ ಭುಕ್ತಿಯೊಳೆಲ್ಲಂ ವೆಂಡಿಕೆವಣಮುಮಂ ಕೊಟ್ಟಂ (ಎಕ. VIII. ಸೊರಬ. ೧೮೪-೩೦ ; 1033 ?).

[ವೆಂಡಿಕೆ + ಪಣ್ಯ]

ವೆಂತರ 'ಬೆಂತರ' ನೋ.

ವೆಂತೆ (ನಾ). ಕ್ಷುದ್ರ (?) : ಸಂತತ ಈರ್ಯಾಪಥ ಮನದೊಳಗಿಲ್ಲ ವೆಂತೆಯ ಗುರುವಿಗೆರಗಲೇಕೆ (ಬಸ್ಮರಾ. ೪-೬೨). 'ವೆಂತರ' ಪರಾ. [?]

ವೆಕ್ಕಸ, ವೆಖ್ಖಿಸ (ನಾ). ೧. ಒರಟು ; ನಯವಿಲ್ಲದಿರುವಿಕೆ. ೨. ಕಠಿಣತೆ ; ನಿರ್ದಯತೆ ; ನಿಷ್ಕರುಣೆ : ರಕ್ಕಸರನಿಬರೆಲ್ಲರುಂ ದೀರ್ಘದೇಹಿಗಳ್ಕೈಕ್ಕಸದ ಕೋಟಿಗಳ್ಕೈಲೆ ಪುರುಷಾದಕರ್ಕಕ್ಕಸದ ಮುಸುಡವರ್ಬಹಳ ಮಾಯಾವಿಗಳ್ (ಜೈಮಿಭಾ. ೧೭-೨೨) ; ಕರ್ಕಶನು ನರಹೊರಗೆ ಸರ್ವರ ಸೊಕ್ಕಿ ವೆಕ್ಕಸವಾಗಿ ಗರ್ವದಿ ಧಿಕ್ಕರಿಸಿ ನುಡಿವ (ಅಷ್ಟಮ. ೨-೫೨). ೩. ಗರ್ವ ; ಅಹಂಕಾರ : ರಕ್ಕಸನು ರಜತಾದ್ರಿ ವೆಕ್ಕಸದಿ ಎತ್ತಿ ಕೈ ಸಿಕ್ಕಿ ಬದ್ದಂತೆಯವ ಕಕ್ಕಸಂಗೊಂಡ (ಶಂಲೀ. ೪೩೭-೭). ೪. ಬೆರಗು ; ವೆಕ್ಕಸ ; ಆಶ್ಚರ್ಯ : ಇದು ಚಿತ್ರಕ್ಕಂ ಕಕ್ಕಸಮಂ ಕಳವಳಮುಂ ವೆಕ್ಕಸಮುಂ ಬಲ್ಲಿಕೆ ಬಳೆದು ಕಿಕ್ಕಿಱಿದಿರ್ಕುಂ (ಚಿಕಪ. ೩-೩೮). ೫. ಬಹಳ ; ಹೆಚ್ಚು ; ಅತಿಶಯ : ಉಜೆ ಬೆಳದ ಕಕ್ಕಸದ ಬಟ್ಟ ಬಲ್ಮೊಲೆಗಳೋಪನ ಕೈಗ ವಕ್ಕಸಂ ನೋಳ್ಪರ್ಗ ಕಣ್ಗೆಸುರ್ (ಜೈಮಿಭಾ. ೨೬-೧೧); ಕಕ್ಕಸದ ಕಾಳಗಕೆ ತೆರಳಲು ವೆಕ್ಕಸದ ಬಲಗೊಂಡು ದನುಜೆಯ ಕಕ್ಕುಲಿತೆಯಂ ಬಿಡಿಸಲ್ಕಿದಿನಧಿಕರೋಷದಲಿ (ಆನಂದಾ. ೧-೧೪-೭). ೬. ಗಾಬರಿ ; ಗೊಂದಲ : 'ವೆಕ್ಕಸಗೆಯ್' ಪರಾ. ೭. ಕಷ್ಟಕರವಾದುದು ; ಅಸಾಧ್ಯವಾದುದು ; ಶಕ್ಯವಲ್ಲದುದು : ಹೊಕ್ಕವನಾರಂಬುದ ಕೇಳು ಪೇಳುವೆ ರಕ್ಕಸವ್ರಿಯ ಮೊಮ್ಮ ಕಕ್ಕಸ ನಿನಗಿದು ಹವಣಲ್ಲ ಛೇದಿಸೆ ವೆಕ್ಕಸವಹುದೆಂದ ನಗುತೆ (ಮೋಹತ. ೩೩-೨೧). 'ಎಕ್ಕಸ', 'ಬೆಕ್ಕಸ' ಪರಾ. **ವೆಖ್ಖಿಸ** : ೬. ನಿರುತಾದಲ್ಲಿ ವೃಶ್ಚಾನರಗೆ ವಖ್ಖಿಸವಾಗೆ ಪರಿಹಾರಾ ಕಾಣಾದೆ ಭರದಿಂದಲಿ ಅಗ್ನಿ ಹರಿಯಾ ಮೊರಯೋಗೆ (ತೀರ್ಥಮ. ೭೫-೮).

[ದೇ. ॥ ತೆಲು. ವೆಕ್ಕಸಮು]

ವೆಕ್ಕಸಂ (ಅ). ಹೆಚ್ಚಾಗಿ ; ಅಧಿಕವಾಗಿ ; ಅತಿಶಯವಾಗಿ : ಬಕ್ಕೆವಲಸುಗಳ ಪಣ್ಣೊನೆಗಳಂ ಬತ್ತುಗಳ ವೆಕ್ಕಸಂ ಬರಿದ ದಾಳಂಬವಣ್ಣೊನೆಗಳಂ ಮುಕ್ಕಣ್ಣನೆಡಗ ವನಪಾಲಕಂ ಪೊಜಿಸಿಕೊಂಡ್ಕೆತಂದನಾ ಕ್ಷಣದೊಳು (ಚಿಪು. ೪೫-೨೯). [< ವೆಕ್ಕಸ]

ವೆಕ್ಕಸಗೆಯ್ (ಕ್ರಿ). ಗಾಬರಿಪಡು; ತಬ್ಬಿಬ್ಬಾಗು : ಒಕ್ಕಯ್ಯ ವಾಘೆಯದೊಳು ನಿಲ್ಲಲೊಲ್ಲದ ವೆಕ್ಕಸಗಯ್ವುದ ಕಂಡು ಬೆಕ್ಕಸಬೆಱಗಾಗಿ ಬಲರಾಮದೇವರು ನಕ್ಕರು ರಣರಂಗದೊಳಗೆ (ಮೋಹತ. ೩೮-೪೭). [ವೆಕ್ಕಸ + ಕೆಯ್,]

ವೆಖ್ಖಿರಣೆ (ನಾ). ಮದ್ದಳೆಯನ್ನು ಬಾರಿಸುವ ಒಂದು ಕ್ರಮ (?) : ಮದ್ದಳೆಯಂ . . . ಜಾತಿ ಜೋಕು ತುಡುಕು ವಹಣಿ ರಿಗ್ಗವಣೆ ಮಲೆವು ವೆ[ಖಾಕಾಂ. ವ]ಖ್ಖಿರಣೆ ಕೌತುಕಳಿಕೋತ್ರರಂಗಳಿಂ ಕೌತುಕದ ಬಾಜನೆಯೊಳಿಸಗಿದುವನಿಸಿ ಬಾಜಿಸುತ್ತಿರೆಯುಂ (ಶಾಂತೀಶ್ವ. ೭-೯೩ ವ). [?]

ವೆಖ್ಖಿಸ 'ವೆಕ್ಕಸ' ನೋ.

ವೆಗಟಿಸು (ಕ್ರಿ). ೧. (ಅತಿಯಾದ ಸೇವನೆಯಿಂದ) ಬೇಸರ ತರಿಸು ; ಅಸಹ್ಯವಾಗುವಂತೆ ಮಾಡು ; ರುಚಿಗೆಡಿಸು. ೨. (ಅತಿಯಾದ ಸೇವನೆಯಿಂದ) ತೃಪ್ತಿಗೊಳಿಸು ; ತಣಿಸು : "ತೃಪ್ತಿಗೊಳಿಸು ; ಸಂತೃಪ್ತಮಾಡು, ತಣಿಸು ; ಕಟ್ಟರಹಿಡಿಸು ; ವೆಗಟಿಸು, ಕಟ್ಟಡಚು" (Satc . ಇಂಕಾ). [ವೆಗಟು + - ಇಸ್ಸು]

ವೆಗಟು (ಗು). ೧. (ವಿಪರೀತ ಸೇವನೆಯಿಂದ) ರುಚಿಗೆಟ್ಟ; ಅಸಹ್ಯವಾದ ; ಎಗಟಾದ. (ನಾ). ೨. (ಹೆಚ್ಚು ಸೇವನೆಯಿಂದ) ಬೇಸರ ತರುವಂತ ಹುದು ; ಅಸಹ್ಯವಾದುದು ; ರುಚಿಗೆಟ್ಟಿರುವುದು ; ಎಗಟು : ಕುದಿ ಹೆಚ್ಚಿ ವೆಗಟಹುದು ಕಡಮೆಯಿರೆ ಹಸಿನಾತ ಕದಡಲೊಡವುದು ಹಾಲು ಸೂಕ್ಷ್ಮವದರ ಹದ (ಮಂಜುಕ. ೩೭೮); ಸಂತೋಷ ತರುವ ವಸ್ತುವನ್ನೇ ನಿರಂತರವಾಗಿ ಬಳಸಿದರೆ ಅದು ಅಸಹ್ಯವಾಗುತ್ತದೆ. ದಿನವೂ ಅದನ್ನೇ ಸೇವಿಸುತ್ತಿದ್ದರೆ ರುಚಿಕರವಾದ ಆಹಾರವೂ ವೆಗಟಾಗದೆ ಇರುವುದು ಸಾಧ್ಯವಲ್ಲ (ತತ್ಪಪ್ರಾ. ೧೩೮). ೩. (ಹೆಚ್ಚು ಸೇವಿಸುವುದರಿಂದಾಗುವ) ಕಟ್ಟರೆ ; ತಣಿವು ; ತೃಪ್ತಿ : "ಹೊಟ್ಟೆ ಬರಿಯ ತೃಪ್ತಿ, ಕಟ್ಟರೆ, ವೆಗಟು" (Satcly. ಇಂಕಾ). ೪. (ಸುಖ, ದುಃಖ, ಆಹಾರ, ಪಾನೀಯ ಮುಂತಾದುವುಗಳ ಅತಿರೇಕದಿಂದುಂಟಾಗುವ) ಬೇಸರ ; ಜುಗುಪ್ಸೆ ; ಅಸಹ್ಯ : ಅವರಿಗ ಬೇಕಾಗಿದ್ದದ್ದು ಶುಚಿಯಾದ ಸೊಗಸು, — ಯಾರ ಮನಸ್ಸಿಗೂ ಯಾವ ಬಗೆಯಲ್ಲಿಯೂ ಎಷ್ಟುಮಾತ್ರವೂ ವೆಗಟನ್ನೂ ಅಸಹ್ಯವನ್ನೂ ಉಂಟುಮಾಡಲಾರದ ಚಿತ್ತೋತ್ಕರ್ಷಕವಾದ ಸೊಗಸು (ಮಹಾಗ. iii, ಸ್ನಹದ ಮಾತು). 'ಎಗಟು' ಪರಾ. [<— ತೆಲು. ವೆಗಟು]

ವೆಗ್ಗಳ, ವೆಗ್ಗಳೆ (ನಾ). ೧. ಹಿರಿಮೆ ; ಅಗ್ಗಳಿಕೆ ; ಶ್ರೇಷ್ಠತೆ : "ವಗ್ಗಳ ಲಂಘನಂಗಳೊಳು ಲಾಗು" (ಶಬ್ದಮಂ. ೮೩) ; ಹೋಮ ನೇಮ ಜಪತಪದಿಂದ ವೆಗ್ಗಳ ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವವಂಗೆ (ಬಸವ. ೬೧೧) ; ಕೆಲಬಲದ ವೇಲಾಯತರ ವೆಗ್ಗಳದ ರಾವ್ತರ ಗಡಣ ನಾಲಗೆದಳೆದುದೆನೆ ಹೊಳಿಹೊಳಿವಡಾಯುಧ ಭಟರು ನೂಕಿದರು (ಕುವಾರ್ಜೂ. ೫-೭೧) ; ದೇವತಾಸ್ತುತಿಯಲ್ಲ ಕೇಳ್ವೊಡೆ ನರಸ್ತುತಿ ಯಾವ ವೆಗ್ಗಳವನಬೇಡ (ಕಂಪಾ. ೧-೧೭). ೨. ಹೆಚ್ಚಾದುದು ; ಹೇರಳ ; ಸಮೃದ್ಧಿ : ಕಲಿವ ಪಶುವಿಂಗೆ ತೃಣ ದವಸ ಎಯ್ದಾದಲ್ಲಿ ಹಾಲ ವೆಗ್ಗಳವ ಕಾಬಂತೆ ಕ್ರೀಶುದ್ಧತೆಯಾಗಿ ಮನವಚನಕಾಯ ತ್ರಿಕರಣಶುದ್ಧವಾಗಿ ಇದ್ದಲ್ಲಿಯ ವಸ್ತುವಿನ ಹೆಚ್ಚುಗೆಯ ಒದಗು (ಸಕವ. ಕ. I, ೧೫೦-೫೭೩); ವೆಗ್ಗಳ ಹಾಲು ತುಂಬಿದ ತನೆಹೊತ್ತು ಬಾಗಿ ನಿಂತಿಹವು ಪೈರುಗಳು (ಸಿದ್ಧಪು. ೧-೫೫) ; ಬಿಲ್ವ, ಮಲ್ಲಿಗೆ, ಗುಲಾಬಿ, ಗಂಧರಾಜ, ಕರಬ ಮತ್ತು ರಜನಿಗಂಧಾ ಇವುಗಳೇ ವೆಗ್ಗಳವಾಗಿದ್ದುವು (ಇಪ್ರಕ. ೧೧೬). ೩. (ವಸ್ತು ಮುಂತಾದುವುಗಳ ಪ್ರಮಾಣವನ್ನು ಸೂಚಿಸುವಾಗ) ಹೆಚ್ಚು ; ಜಾಸ್ತಿ ; ಅಧಿಕ : ಲಕ್ಕದಲ್ಲಿ ನೀ ಮೊದಲು ಮಾಡಿದ್ದಲ್ಲದೆ ಒಮ್ಮಾನಕ್ಕಿ ವೆಗ್ಗಳವಾಗಿ ಕೊಡುವರುಂಟೆ (ಪುರಂದ. ೧-೧೭೪-೩) ; ಕಿಲ್ಬಿಷಿಯು ಹಲ್ಲ ಸುಲಿಯದವನು ವೆಗ್ಗಳವನುಂಬವನುಂ ನಿಷ್ಠುರವಾಕ್ಯವನುಳ್ಳವನು (ಸಾಮುಲ. ೬-೧೭) ; ವೆಗ್ಗಳವಾಗಿ ಕಾಂಚನ ಕೊಡಿಸಿ . . . ಅನೇಕರ ಕೈಗಳನ್ನೂ ಒಳಿತಾಗಿ ಬಿಸಿಮಾಡಿದರು (ಕಸಕ. ೪೨). ೪. (ಹೋಲಿಸಿ ಹೇಳುವಾಗ) ಮಿಗಿಲು ; ಉತ್ತಮ ; ಶ್ರೇಷ್ಠ : ಇಂದೀವರಾಕ್ಷನಿಂ ವೆಗ್ಗಳವಹ ಶೌರ್ಯ ಹೊಂದಿತು ಮೈಸೂರ ನೃಪಗೆ (ಕಂಸವಿ. ೧೩-೬೭). ೫. ಶ್ರೇಷ್ಠವ್ಯಕ್ತಿ ; ಮೇಲಾದ ವ್ಯಕ್ತಿ : ಗರತಿಯೇ ಸ್ತ್ರೀಜಾತಿಯೊಳ್ ವೆಗ್ಗಳಂ (ಸೋಮೇಶ. ೪) ; ಕುಲದಲ ಧಿಕರು ರಾಜ್ಯದಲಿ ವೆಗ್ಗಳರು . . . ಇವರ ಭಂಗಿಸಿ ನಿನಗೆ ಮನ್ನಣೆಯೆ (ಕುವ್ಯಾಸ.೮-೩೫) ಅವನೀಸುರರಿಂದಗ್ಗಳರು ಶೌರ್ಯದಲವನಿಪರು ವೆಗ್ಗಳರು ವಿಪ್ರರು ವಿಧಿವಿಹಿತಕರ್ಮದಲಿ ನಮಗಿಂದ (ತೊರಾ. ೧-೧೭-೭). ೬. ಬಲಶಾಲಿ ; ಶಕ್ತಿ ಶಾಲಿ : ಪಂದಿಯಿದಂದಿನಗ್ಗದ ಗಜಾಸುರನಿಂ . . . ಇರ್ಮಡಿ ವೆಗ್ಗಳವಪ್ಪುದಿಂದಿದಂ ಕೊಂದಪೆನಾನೆ (ಶಬಶಂ. ೪-೨೦) ; ಭುವನೇಶನನಿಗ ವೆಗ್ಗಳವಾದನಿವನಾವ ನೆವದಿಂದ ಕೊಲುವನೆಂತೆಂದು (ಧಸ್ಯಚ. ೨೯೩). ೭. ತೀವ್ರ ; ಬಿರುಸು ; ಜೋರು : ಬವರ ವೆಗ್ಗಳವಾಯಿತನೆ ಕೌರವನು ಕರ್ಣನ ಮುಖವ ನೋಡಿದಡಿವನ ಪೌರುಷವಳಿಯಲೀಯದು ಮರಳಲಿಲ್ಲೆನುತ ಅವನಿಪತಿ ಸನ್ನೆಯನು ಮಾಡಲು . . . ರವಿಸುತನು ಬಲುಬಿಲ್ಲ ಸೆಳೆದನು ತಿರುವನೇಱಿಸಿದ (ಕುವಾಡ್ರೋ. ೬೧೧. ೬-೩೧ ಆದಿಪದ್ಯ); ಭಗದತ್ತನ ಆನೆಯು ವೆಗ್ಗಳವಾಗಿ ಆರ್ತಧ್ವನಿಯನ್ನು ಮಾಡುತಲಿದೆ (ಕೃವಾಭೀ. ೧೦೩). ೮. ಹೆಚ್ಚಿನದು ; ವಿಶೇಷವಾದುದು ; ಅತಿಶಯವಾದುದು : ಭಕ್ತರ ಮನೆಗೆ ಸತ್ಯಶರಣರು ಬಂದಲ್ಲಿಯೆ ಮದುವೆಯ ಉತ್ಸಾಹಕ್ಕಿಂದ ವೆಗ್ಗಳವೆಂದು ಕಂಡ (ಎಱೇಶ್ವ. ೭೮) ; ತಣಿವಿಲ್ಲದ ತವಕಂ ಪೊಣ್ಮೆ ಸತ್ತ್ವಗುಣಂ ಮತ್ತಂ ವೆಗ್ಗಳಮಾಗೆ ಮಿಕ್ಕು ಮಾಲೆ (ಬಸಪು. ೮-೧೦). ೯. ಅತಿಯಾದುದು ; ವಿಪರೀತವಾದುದು ; ಮೇರೆ ಮೀರಿದುದು : ವಿರಸಂ ಬರ್ಪುದು ಬೇಡನಲ್ ದೃಪದೆಯಂ ಭೀಮಾರಿ ತಾಂ ನೋಯನೇ ಸರಸಂ ವೆಗ್ಗಳಮಾಗದ್ದೆ (ಸೋಮೇಶ. ೮೯); ಮೂಜಗಂ ವೆಗ್ಗಳದ ಭಯರಸದೊಳೋಲಾಡುತಿರ್ದುದು (ಚಿಪು. ೨೮-೧೦). ೧೦. ಅಸಾಧ್ಯವಾದುದು ; ಕಷ್ಟಕರವಾದುದು : ಅಂತರಂಗದೊಳಾತ್ಮರೂಪನೊಳ್ಕಾಗರುಹಂತ ತಾನಲ್ಲಿರ್ಪನೆನಲು ವ್ಯಂತರವಶ್ಯ ವಿದ್ಯಾವಶ್ಯ ಕೈವಲ್ಯಕಾತಾವಶ್ಯ ವೆಗ್ಗಳವೆ (ಭರಚ. ೨-೬೮); ಇವನ ಸಾಸಿರ ಕವಚದೊಳಗೊಂದುವನು ನಿಲಿಸಿಯೆ ಮಿಕ್ಕ ಕವಚವನ ವನಿಗೊಱಗಿಸಿದಧಿಕದೇವರದೇವ ನಿನಗಿದು ಸವಱುವುದು ವೆಗ್ಗಳವೆ (ಕೋಗಯ. ೧೦-೯೩). ೧೧. ಏರುಪೇರು ; ಅದಲುಬದಲು ; ವ್ಯತ್ಯಾಸ : ಕೀಳುಮೇಲು ಮೇಲುಕೀಳಾಗಿ

ನಡೆದುದು ಕಾಲ ವೆಗ್ಗಳವಾಯಿತು (ಪುರಂದ. ೧-೧೭೧-೩). (ಗು). ೧೨. ಶ್ರೇಷ್ಠವಾದ ; ಹಿರಿಮೆಯ ; ಅಗ್ಗಳಿಕೆಯ : ಪತಿತರಂ ನುಡಿಸಿದಿರೂ ವೆಗ್ಗಳ ವ್ರತಿಗಳಂ ತಪ್ಪಿಂದಿರೋ (ಶಂಕರಾ. ೭-೫). ೧೩. ಹೆಚ್ಚಿನ ; ಹೇರಳವಾದ ; ಅಧಿಕವಾದ : ಆಣಿಮುತ್ತಿಗ ವೆಗ್ಗಳ ಬೆಲಗಟ್ಟುವ ವಾಣಿಜರಿರ್ದರಿಕ್ಕೆಲದಿ (ಮೋಹಕ. ೩-೨೬); ಕಣ್ಗೊಲೆಯಲಿ ಬಾಗೂರ ಹೊಗುವೆನೆಂದು ವೆಗ್ಗಳಬಲದೆ ವೇದೋಜಿ ಬೊಗ್ಗನ್ಮತಂದು ಧಂಗಕೆ ಬಂದು ಮನನೊಂದು ಸಿಗ್ಗಾಗ ತೆರಳಿದನಾಗ (ಕಂಸವಿ. ೧೬-೬೮). 'ಎಗ್ಗಳೆ', 'ಪೆಕ್ಕಳ್' ಪರಾ. **ವೆಗ್ಗಳೆ** : 'ವೆಗ್ಗಳೆಯ' ಪರಾ. [ದೇ. ॥ ತೆಲು. ಪಗ್ಗಲ]

ವೆಗ್ಗಳವಂತ (ನಾ). ಉತ್ತಮಸ್ಥಿತಿಯಲ್ಲಿರುವವನು ; ಹಣವಂತ ; ಧನಿಕ : ಒಂದಾನೊಂದು ಕಾಲಕ್ಕೆ ಈ ಗ್ರಾಮದಲ್ಲಿ ನಾವು ಎಲ್ಲರಿಗಿಂತ ವೆಗ್ಗಳವಂತರಾಗಿಯೇ ಇದ್ದೆವು (ಇಪ್ಪಕ. ೩೩೩). [ವೆಗ್ಗಳ + - ವಂತ]

ವೆಗ್ಗಳಿಕೆ (ನಾ). ಹೆಚ್ಚಳ ; ಆಧಿಕ್ಯ : ಎಳಲತೆಯ ನುಣ್ಪುಗಳ ನವಪರಿಮಳದ ಪವನನ ಸೊಂಪುಗಳ ವೆಗ್ಗಳಿಕೆ ರಘುಳಪಿಸಿ ಹೊಯ್ದು ಸಳೆದುದು ಜನದ ಕಣ್ಮನವ (ಕುವ್ಯಾಖ. ೫-೮). [ವೆಗ್ಗಳ + - ಇಕೆ]

ವೆಗ್ಗಳಿಸು (ಕ್ರಿ). ೧. ಅಧಿಕವಾಗು ; ಹೆಚ್ಚಾಗು ; ಅತಿಶಯಿಸು : ವೆಗ್ಗಳಿಸಿತು ಹಲವು ಮಾತು ಹಿಗ್ಗಿಹೋದುದಾತ್ಮನಲಿ'ವು (ಶಿವಗೀ. ೧೫೭-೭೪) ; ಕಲಿತನದ ಮೃಗವೇಂಟೆಕಾಱರು ಅಲಘುಕೇಸರಿಯಂ ತೊಡರ್ವತಿಛಲದ ಸತ್ವದ ಜಾಯಿಲಂಗಳು ತವಕ ವೆಗ್ಗಳಿಸೆ ಬಳಸಿ ತನ್ನುವನೆಯ್ದಿ ಬರುತಿರೆ (ಬಿಷ್ಪು. ೩೪-೨೩) ; ಪ್ರಳಯರುದ್ರನ ಕೋಪಶಿಖಿ ವೆಗ್ಗಳಿಸಿತೆನೆ ಕಂಗಳಲಿ ಕಿಡಿಗಳು ತುಳುಕಿದವು (ಕುವ್ಯಾಖ. ೮-೩೩). ೨. ಅತಿಯಾಗು ; ಮಿತಿಮೀರು : ಆಳಿಯರೊಳಿಂತು ಚಂಪಕಮಾಲಿನಿಗ ಸರಸಕೇಳಿ ವೆಗ್ಗಳಿಸಿರ್ದ ಸಮಯದೊಳಲರ್ಗೊಯ್ಯ ಬೇಳಂಬದಿಂದೆ ಕೆಲಸಿಡಿದು ಬಂದಾ ವಿಷಯೆ . . . ಚಂದ್ರಹಾಸನಂ ಕಂಡು ಸ್ಮೆವೆಱಗಾದಳು (ಜೈಮಿಭಾ. ೩೦-೧೯). ೩. ಮೀರು ; ಅತಿಶಯಿಸು : ತಿಲಕುಸುಮದಾಕಾರವಂ ವೆಗ್ಗಳಿಸಿ ಚಂಪಕಪುಷ್ಪದಿರವಂ ಪಳಿದು . . . ಕಿಱುವೆಸಳ ನೆಯ್ದಿಲುಗಳೀ ಮಡದಿಯ ಕುಡಿತೆಗಂಗಳಿಗೆ ಪಡಿಯಲ್ಲ (ಬಿಷ್ಪು. ೪-೨೫). ೪. ಹೆಚ್ಚಿಸು ; ಅಧಿಕಗೊಳಿಸು : ಸಂಸ್ಕೃತ ದ್ರಾವಿಡಭಾಷೆಗಳ ನಯನುಣುಪುಗಳನ್ನು ವೆಗ್ಗಳಿಸಿರಬಹುದು (ದ್ರಾಎವಿ. ೧೫ ಓನ್ನಲಿ). ೫. ಉದ್ವೇಗಗೊಳ್ಳು ; ಭಾವೋದ್ರೇಕ ಹೊಂದು : ನೋಟ ವೆಗ್ಗಳಿಸಿ ಕೆಲಸೂಸಿ ಪರಿವುತ್ತಮಿದೆ ಕೂಟದನುವಿಂಗೆ ತನು ವೆಗ್ಗಳಿಸಿ ಕೆತ್ತುತಿದೆ (ಸಂಬರ. ೩-೮೩) ; ಸಲಿಸಿ ಕಾಮಕ್ರೀಡೆಯಂ ವೆಗ್ಗಳಿಸಿ ಸರಸದೊಳದ್ದಿ ಸಿಕ್ಕಿಸಿ ಲಲನೆಯಂ ಮೇಣಲಸಿದೆಡೆಯ ಶ್ರಮಮನಾಱಿಸುತ ತಿಳುಹಿ (ಬಿಷ್ಪು. ೪೨-೧೬) ; ಅಳುವವರ ನಗಿಸುವುದು ನಗುವರನಳಿಸುವುದು . . . ವಿಪರೀತಗತಿ ವಿಧಿಗೆ ಅಳಲದಿರು ಸುಮ್ಮಾನದಲಿ ವೆಗ್ಗಳಿಸದಿರು ನಿನ್ನವರು ನಿಮಿಷದೊಳಳಲುದೊಱೆಯಲಿ ಮುಳುಗುವಂದವನಿನ್ನು ಕೇಳ್ (ಕುವ್ಯಾಕ. ೧೨-೩). ೬. ಉಬ್ಬು ; ಗರ್ವಹೊಂದು ; ಅಹಂಕಾರಪಡು : ಕಳತನದ ನಂಟು ವಿಷಯದ ಬಂಧುವಾತುಗಳ ಬಲದೊಳಾಂ ಕವಿಯೆಂದು ಕವಿರಾಯನೆಂದು ವೆಗ್ಗಳಿಸಿ ಕಾಳ್ಗೆಡದಡದ ಸ್ಮರಿಸುವೆನಲ್ಲದಾ ನಂಟನೀಡಾಡಿ ಮಲೆತು . . . ವೆಗ್ಗಳಿಸಿದನಿಗ್ಮೆವ ದುಷ್ಕವಿಯ ಗರ್ವದ ಮೂಗನಿಳುಹದಿರನುಭಯಕವಿಶರಭಭೇರುಂಡ (ಪಚಾ. ೧-೩೧). ೭. ಚಿಮ್ಮು ; ಹೊರಸೂಸು : ಮಧುರ ರಸಂ ವೆಗ್ಗಳಿಸೆ ಲವಲವಿ ಸುತುಂ ಪಣ್ಗಳೊಳಳ್ದುದೊಂದು ರಾಜಶುಕನತಿಭರದಿಂ (ಗಿರಿ. ೨-೪೦). ೮. ಮುನ್ನುಗ್ಗು ; ಮುಂದುವರಿ : ಯಮನಂದನನ ಕೈ ವೆಗ್ಗಳಿಸಿ ತಾಗಿತು ನಿನ್ನ ತನುಜನ ಬಿಲುಸರಳು ರಥ ಸೂತ ವಾಜಿಗಳೊಱಗಿದವು ಧರಗೆ (ಕುವ್ಯಾಕ. ೪-೩೫). ೯. ವಿವರಿಸು ; ವಿಸ್ತರಿಸು : ಮುನಿಗಳಿವರುಪಟಳವನರಸಂಗಱುಹಿದರು ವೆಗ್ಗಳಿಸಿ ಭೀಮಂಗೆಂದರರ್ಜುನ ಯಮಳರಿದಿರಿನಲಿ (ಕುವ್ಯಾಖ. ೧೮-೧೪). ೧೦. ಚುರುಕಾಗು ; ಚಟುವಟಿಕೆಯನ್ನು ಹೊಂದು : ಗರವಾವುದೋ ವೆಗ್ಗಳಿಸಿತಿದಕೌಷಧವ ಬಲ್ಲನು ತೋಱಿಸುವೆನು (ನಿಘಾಗ. ೫-೭-೧೨). ೧೧. ತಿರಸ್ಕರಿಸು ; ಅವಹೇಳನ ಮಾಡು : ಎಲೆಲೆ ದುರ್ಮತಿಯುತ ವ್ಯಾಸ . . . ಶಿವನಂ ನಿಂದೆಗೆಯ್ದನ್ನನೇ ಸಲೆ ವೆಗ್ಗಳಿಸಿ ನುಡಿವರೇ ಮೂಢ (ಪದ್ಮರಾ. ೧೦-೧೩). ೧೨. ಅವಸರಪಡಿಸು ; ತ್ವರೆಗೊಳಿಸು : ಜಳಕ ದೇವಾರ್ಚನಕ್ಕೇಳೆಂದು ಸುದತಿ ವೆಗ್ಗಳಿಸುತಿರೆ ಸೋಮನಾಥನ ಮೂರ್ತಿಯಂ ಕಂಡೊಡಲ್ಲದಾನೊಲ್ದೆನೆನಲು . . . ದಿನಂ ಕಡೆಗಂಡುದು (ಸೋಮೇಶ. ೪-೩೫). ೧೩. ಮುತ್ತು ; ಆವರಿಸು ; ಆಕ್ರಮಿಸು : ಎಡಬಲ ಬಳಸಿದವು ಮೆಲುವಾಯಿದವು ವೆಗ್ಗಳಿಸಿದವು ಕುಸುಬಿದವು ಕುನ್ನಿಗಳಖಿಳ ವ್ಯಗಕುಲವ (ಕುವ್ಯಾಖ. ೧೩-೨೭). ೧೪. ಮುನ್ನುಗ್ಗಿ ಕಾದು ; ಮೇಲೆಬಿದ್ದು ಯುದ್ಧಮಾಡು ; ಆಕ್ರಮಣ ನಡೆಸು : ಅಖಿಳ ದಿವ್ಯಾಸ್ತ್ರದಿಂದ ವೃಷಕೇತು ವೆಗ್ಗಳಿಸೆ ವಾಡಬವೈಷ್ಣವಂಗಳಿಂ ಪರಿಹರಿಸಿಕೊಳುತರ್ಜುನಾತ್ಮಜಂ ಕೆರಳ್ದಿವನನೆಚ್ಚೊಡುಚ್ಚಳಿಸಿತಚ್ಚೋಣಿತವನು ತೊಳೆಯಲಿಳಿದುವು ಭೋಗವತಿಯ ಜಲಕೆ (ಜೈಮಿಭಾ. ೨೩-೧೬) [ವೆಗ್ಗಳ + ಇಸು]

ವೆಗ್ಗಳೆ 'ವೆಗ್ಗಳ' ನೋ.

ವೆಗ್ಗಳೆಯ (ನಾ). ೧. ಉತ್ತಮವಾದುದು ; ಶ್ರೇಷ್ಠವಾದುದು : ವೆಗ್ಗಳೆಯ ಕರಿಗಳ ಬೃಂಹಿತವ ಗೂಂಡಳದ ಕಳಗರ್ಜಾಯ್ತು ಕೌರವಸೈನ್ಯಶರಧಿಯಲಿ (ಕುವ್ಯಾದ್ರೋ. ೯-೩೭). ೨. ಅಧಿಕವಾದುದು ; ಹೆಚ್ಚಾದುದು : ಕಲಿಯ ರಾಜ್ಯದಲೊಂದು ಪಾದದ ಸಲುಗೆ ಧರ್ಮಕ್ಕಹುದು ಗಡ ವೆಗ್ಗಳೆಯವದಱೊಳಸತ್ಯ ಧರ್ಮದ್ರೋಹ ಮಾತ್ಸರ್ಯ (ಕುವ್ಯಾಖ. ೧೪-೩೮). ೩. ಬಲವಾದುದು ; ಶಕ್ತಿಯುತವಾದುದು : ತುಳದುದರಿ ಸುಭಟರನು ಸಾವಿರತಲೆಯ ಸೆಳೆದುದು ಸೊಂಡಿಲಲಿ ವೆಗ್ಗಳೆಯ ಮದಕರಿ ಕೇಣಗೊಂಡುದು ವೈಂಮೋಹರವ (ಕುವ್ಯಾದ್ರೋ. ೩-೧೪). ೪. ಉತ್ತಮನಾದವನು ; ಶ್ರೇಷ್ಠನಾದವನು : ಕಳಕಳವ ಕಣ್ಣಜಿವಗಳ ಮನಗಲಿತನದ ಮುಳುಮಟ್ಟುಗಳ ವೆಗ್ಗಳೆಯರುದ್ದುದು ಭೀಮ ಸಾತ್ಯಕಿ ಸೃಂಜಯಾದಿಗಳು (ಕುವ್ಯಾಕ. ೨೧-೧೪). ೫. ಕಲಿ ; ಶೂರ ; ಸಮರ್ಥ : ಬಳಿಯ ನೆಲನುಗ್ಗಡಣಗಳ ವೆಗ್ಗಳೆಯ ಸುಭಟರ ಮೇಳದಲಿ ಬಂದಿಳಿದು ದಂಡಿಗೆಯಿಂದ ನಸುನಗುತೇಱಿದನು ರಥವ (ಕುವ್ಯಾಕ. ೮-೨೩). [ವೆಗ್ಗಳೆ (< ವೆಗ್ಗಳ) + - ಅ]

ವೆಗ್ಗಳೆಯತನ (ನಾ). ಆಧಿಕ್ಯ ; ಹೆಚ್ಚಳ ; ಶ್ರೇಷ್ಠತೆ : ಲಲಿತಚಿತ್ರದ ಚದುರ ಭಟರವ್ವಳಿಸಿ ಹೊಯ್ದಾಡಿದರು ನೋಟಕರುಲಿದುದಿಬ್ಬರ ಶ್ರಮದ ಶೌರ್ಯದ ವೆಗ್ಗಳೆಯತನಕೆ (ಕುವ್ಯಾದ್ರೋ. ೧೪-೮). [ವೆಗ್ಗಳೆಯ + - ತನ]

ವೆಗ್ಗಳೆಯವೆಸರು (ನಾ). ಕೀರ್ತಿಶಾಲಿಯೆಂಬ ಹೆಸರು : ಉಳಿದ ಭೂರಿಯ ಬಣಗುಗಳು ವೆಗ್ಗಳೆಯವೆಸರಿಗೆ ನೋಂತರೇ ಕುರುಬಲದೊಳರಿಬಲದೊಳಗ ಸರಿಯಿನ್ನಿವರಿಗಿಲ್ಲೆಂದ (ಕುವ್ಯಾದ್ರೋ. ೧೬-೩೮). [ವೆಗ್ಗಳೆಯ + ಹೆಸರು (< ಪೆಸರ್)]

ವೆಗ್ಗುಗೆಯ್ (ಕ್ರಿ). (?) : ಬಹು ಪದ್ಮಾವೃತರೋಚಿಯಿಂ . . . ಬಹು ಭುಜಂಗವ್ರಾತದಿಂದಾ ಪಯೋರುಹಪತ್ರಾನನೆ ವೆಗ್ಗುಗೆಯ್ಯಳಿ [ಪರಿಶ್ಲೇಳಿರ್ಪುದುದ್ಭತ್ಸಭಾ] ? ವಹಮಪ್ಪಂಬುರುಹಾಕರಪ್ರಕರಮೊಪ್ಪಿರ್ಕುಂ ವನೋಪಾಂತದೊಳ್ (ಕುಮಾ. ೧-೧೯).

[ವಗ್ಗು? + ಕೆಯ್]

ವೆಚ್ಚ (ನಾ). ೧. ಖರ್ಚು ; ವ್ಯಯ : ಒಡೆಯರ ಬರವಿಂಗೆ ಕುನ್ನಿ ಬಾಲ ಬಡಿದರೆ ವೆಚ್ಚವೇನು ಹತ್ತುವದು (ಬಿಷವ. ೨೧೭) ; ಸಿರಿಬಾಗಿದವರಿಗೆ ಸಿರಿಗೊಡಬಹುದು . . . ಧರೆಗಲ್ಲ ವೆಚ್ಚವನಿಕ್ಕಿ ಬಹರೆ ಹುಚ್ಚು ದೊರೆಯೆ (ಭರಚ. ೨೩-೪೦) ; ಆಗತ್ಯವಾದ ಉಡುಪುಗಳು, ಪಯಣದ ವೆಚ್ಚಕ್ಕಿರುವ ಹಣ, ಇವುಗಳನ್ನು ಮಾತ್ರ ಅವರು ತೆಗದುಕೊಂಡಿದ್ದರು (ಪಾಪುಕ್ರ. ೯೯). ೨. ಲೆಕ್ಕಾಚಾರ : ಮನವ ಶೋಧಿಸಬೇಕೋ ನಿಚ್ಚಾ ದಿನದಿನ ಮಾಡುವ ಪಾಪ ಪುಣ್ಯಾದ ವೆಚ್ಚ (ಪುರಂದ. ೧-೪೭ ಪಲ್ಲವಿ).

ವೆಚ್ಚಸಚ್ಚ (ದ್ವಿರುಕ್ತಿ) : ಈ ಭರಾಶೀಸರ ದ್ವೀಪದಲ್ಲಿ ಇರುವ ಪರಿಯಂತ್ರ ಅವರ ಸರಕಾರದವರು ವೆಚ್ಚಸಚ್ಚಕ್ಕೆ ಕೊಟ್ಟು ಇರಿಸಿಕೊಂಡು ಇದ್ದರು (ರಾಜೇಂದ್ರ. ೪೬). **ವೆಚ್ಚಮಾಡು, ವೆಚ್ಚವಮಾಡು = ೧. ಖರ್ಚುಮಾಡು** : ಕೊಳ್ಳುವುದು ಕೊಡುವುದು, ವೆಚ್ಚಮಾಡುವುದು . . . ಎಲ್ಲವೂ ಹಣದ ಮೂಲಕವೇ (ಹಣಪ್ರ. ೨). ೨. (ಆಲಂ) ನಾಶಮಾಡು : ಕಪಿಬಲದ ಸುಭಟರ ವೆಚ್ಚಮಾಡಿದನೇನ ಹೇಳುವೆ ದೈತ್ಯನುಬ್ಬಟೆಯ (ಕೌಶಾ. ೨೦-೩೭). ೩. ನೀಗು ; ಕಳೆ : ಮೂಲೋಕಮಂ ಕ್ಷಣದೊಳ್ ವೆಚ್ಚವ ಮಾಡಿ ಬೇಡ ಬಲಿ ಸಾಲಕ್ಕಂಜಿ ಬಿಟ್ಟೋಡಿದಂ ರುಣಭಾರಕ್ಕೆಣೆ ಯಾವುದೈ (ಸೋಮೇಶ. ೧೯).

[< ಪ್ರಾ. ವಿಚ್ಚ, ವೆಚ್ಚ = ಖರ್ಚುಮಾಡು./ ಸಂ. ವ್ಯಯ]

ವೆಚ್ಚಬಿರಾಡ (ನಾ). ಒಂದು ಬಗೆಯ ಸುಂಕ, - ತೆರಿಗೆ : ಕುಳಬಿರಾಡದಿಂದ ಗ ೩ ॥ ೦ ಸುಂಕ ಕೊಡವೀಸ ೧೦೩ ವೆಚ್ಚಬಿರಾಡದಿಂದ ಗ ॥ ೦ (ಎಕ. VIII (S), ಕುಂಸಿ. ೧-೧೯; 1721). [ವೆಚ್ಚ + ಬಿರಾಡ (< ಬೀಡಾರ)]

ವೆಚ್ಚಿಸು (ಕ್ರಿ). ೧. ಖರ್ಚುಮಾಡು ; ವ್ಯಯಿಸು : ತಮ್ಮ ದಾನಧರ್ಮದೊಳು

ಪಯೋಗಮಾಗದುಪಭೋಗಿಸದರ್ಥಮನಾದಮಾನಗಂ ಕುದುರೆಗಮಾರ್ತು ವೆಚ್ಚಿಸದೆ ಪೂಜಿಸಿ (ಆಜಿಪು. ೧೨-೧೯); ಬಂಡಾರದಬಿಳವಸ್ತುವನೊಂದು ತೃಣಮಾಗೆ ಕಂಡು ವೆಚ್ಚಿಸಿ ಚಂದ್ರಹಾಸನ ವಿವಾಹಮಂ ಕೊಂಡಸಗುತಿರ್ದನೊಲವಿಂ ಮದನಂ (ಜೈಮಿಭಾ. ೩೧-೨೬), ಉಣದುಡದೊಡಲ ದಂಡಿಸುವಾಯಸವಿಲ್ಲ ಪಣವ ವೆಚ್ಚಿಸುವ ಪಾಡಿಲ್ಲ (ಹದಿಬ. ೨-೨೨) ೨. ಹಂಚು ; ವಿತರಣೆಮಾಡು : ಭಕ್ತರಲ್ಲದವರ್ಗ ಏನುವಂ ವೆಚ್ಚಸಂ ಶರಣರೆಯ್ತರೆ ತನ್ನ ಹರಣವೆಯ್ತುಂದಂತೆ . . . ನಿತ್ಯಾನಂದದಿಂದಿವ (ಕೂಗುರಿ. ದೇ. ೧೫೨-೧೬) ; ವೆಚ್ಚಿಸಿದನು ವಸ್ತ್ರಾಭರಣಂಗಳನಚ್ಚರಿವಡೆ ಬಂಧುಗಳಿಗೆ (ಕಾಮವಿ. ೮-೪೧) ; ಪಾಯದಳದೊಳು ತೇಜಾಢ್ಯರಿಗೆ ಹೊಳೆವ ಸುವರ್ಣಕಾರಂತದ ಕಡುಶೃತ್ಯದಳೆದ ಕಪ್ಪುರವ ವೆಚ್ಚಿಸಿದ (ಮೋಹಶ. ೧೯ -೫೦). ೩. ಕಳೆ ; ನೀಗು : ನಿನ್ನಸುವಂ ಪತಿಕಾರ್ಯದ ವೆಚ್ಚಿಸಿದಯ್ ನಿನ್ನನ್ನನಾವನಂಗಾಧಿಪತೀ (ಗದಾಯು. ೫-೨೨). ೪. (ಪ್ರಾಣವನ್ನು) ಕೊಡು; ನೀಡು ; ಅರ್ಪಿಸು : ಮೆಚ್ಚದಿರ್ದೊಡೆ ಮೇಜೆಯೊಳಿಹರಲ್ಲದೆ ಮೆಚ್ಚಿದ ಬಳಿಕ ವಿಟರಿಗೆ ವೆಚ್ಚಿಸುವರು ಹರಣವ (ಕುರುಕಾಂ. ೨೭-೫) ; ನೆಜ್ ನಮ್ಮ ಕಾರ್ಯವ ಕುಱಿತು ತಾಂ ಹರಣವನಿರದೆ ವೆಚ್ಚಿಸಿದನೀ ಶೂರ (ಕಂಸವಿ. ೧೯ ೧೧) ; ಪ್ರಾಣವ ವೆಚ್ಚಸೇಳನಲಾರ್ಭಟಿಸಿ ಕಂಭವ ನಿರೀಕ್ಷಿಸಿದ (ಪ್ರಜ್ಞಾಚ. ೧೩-೮೮). [ವೆಚ್ಚ + - ಇಸ್ಸು]

ವೆಜ್ಜ , ಹೆಜ್ಜ (ನಾ). ೧. ತೂತು ; ರಂಧ್ರ : ಕಣಿಯೊಳಪೊಕ್ಕು ತಾರದೆ . . . ವೆಜ್ಜಮಂ ಕಳೆದು ಕೋಯದೆ ತಾಂ ಮಱುಮೆಯ್ಗೆ ವರ್ಷ ಸದ್ಗುಣಮಣಿಯೆಂಬ ಭೂಷಣದಿನಾವನಲಂಕೃತನಾ ಮಹಾತ್ಮನಂ . . . ಆರ್ಗಳ ಕೀರ್ತಿಸರೀಧರಿತ್ರಿಯೊಳ್ (ಲೀಲಾವ. ೧-೬೦) ; ವಜ್ರದುಂಬಿಗಳು ಹೆಬ್ಬಿದಿರನು ಕೊಱೆಪೊಡೆಯುಜ್ಜುಗವತ್ತ ರೀತಿಯಲಿ ನಿರ್ಜರವೈರಿಯ ನಿಡಿದೋಳ ಶಿಳೀಮುಖ ವೆಜ್ಜವ ಮಾಡಿ ತೋಱಿದುದು (ಮೋಹಶ. ೩೫ - ೪೦). ೨. ಕೊರತೆ ; ಊನ ; ನ್ಯೂನತೆ : ಸಚ್ಚೆಯ ಮನೆ ಮಜ್ಜನದ ನಿಶಾಂತವು ಖಜ್ಜಾಯದ ಮಂದಿರವು ಗುಜ್ಜರಬೀಡು ಸಜ್ಜನ ಗೊಲ್ಲರಾವಾಸ ವೆಜ್ಜವಿಲ್ಲದೆಯಿರುತಿಹವು (ಅಂಜಚ. ೩-೩೩) ; ಊರ್ಜಿತಾಮಳ ಭಕತಿಯಿಲ್ಲದ ಭಕ್ತರಿಗೆ ತನ್ನ ನಿರ್ಜರಾರ್ಜಿತ ಪಾದ ಕೊಡುವನು ವೆಜ್ಜವಿಲ್ಲದ ಮಾತಿದಂದಾ ಸಜ್ಜನಾಗ್ರಣಿ ಮೈಥಿಲಗೆ ಪೇಳಿದನು (ನಿಭಾಗ. ೧೧-೫-೧೩) ; ವೆಜ್ಜವಿಲ್ಲದ ಚಿತ್ತದಿಂದೆಯ್ದುತಿರ್ದನು ಗುಜ್ಜುಮೆಟ್ಟಿಂದ ಮುಂಗಡೆಗೆ (ಭರಚ. ೧೬-೨೦). **ಹೆಜ್ಜ:** ೧. ಸೂಜಿಯ ಹೆಜ್ಜದಲ್ಲಿ ಆನೆಯನ್ನು ಪವಣಿಸಿದಂತಾಯ್ತು (ಕರ್ನಾಕ. ೫೪). [< ಪ್ರಾ. ವಿಜ್ಜ./ಸಂ. ವಿದ್ಧ]

ವೆಜ್ಜಗೊಡು (ಕ್ರಿ). (ಆಲಂ) ಅವಕಾಶವನ್ನುಂಟುಮಾಡು ; ಆಸ್ಪದವನ್ನು ನೀಡು : ಕಜ್ಜುರ ಕಕ್ಕೆ ಸಸಿ ನೇಸಱವಳಗಿಗೆ ವೆಜ್ಜಗೊಡದೆ ಬೆಳೆದಿರಲಾ ಬಿಂಜಂ ಭೀಕರತರಮಾಯ್ತು (ಜಯಾಕಾ. ೧೫-೨೪). [ವೆಜ್ಜ + - ಕೊಡು]

ವೆಟ್ಟ 'ಬೆಟ್ಟ' ನೋ.

ವೆಟ್ಟನ (ನಾ). ದುಂಡಾದ ಒಂದು ಬಗೆಯ ಆಭರಣ : ಮತ್ತೊಮ್ಮೆ ಮಣಲ ವೆಟ್ಟನ[ಪಾಠಾಂ. ವೇಷ್ಟನ]ಮಂ ಬೇಡಿಯಟ್ಟೆ ಅಭಯಕುಮಾರನ ನಿರೂಪದೊಳ್ ಸಣ್ಣ ಮಣಲಂ ಕೊಂಡು ಅರಸನ ಸಮೀಪಕ್ಕೆ ಪೋಗಿ . . . ತೋಱಿದೊಡೆ (ಪ್ರಣ್ಯಾಸ್ರ. ೩-೩೧ ವ). [< ಸಂ. ವೇಷ್ಟನ]

ವೆಟ್ಟಿ (ನಾ). ಗ್ರಾಮದ ಕಾವಲುಗಾರ ; ಗ್ರಾಮಸೇವಕ : ಗ್ರಾಮಾಧಿಕಾರಿಗಳು ಮತ್ತು ಗ್ರಾಮನೌಕರರು ೮ ವಿಧಗಳಾಗಿ ವಿಂಗಡಿಸಲ್ಪಟ್ಟಿರುವರು . . . ೪ ತೋಟ ತಳವಾರ, ವೆಟ್ಟಿ ಬಾರೀಕಿ ಅಥವಾ ಕೋಲುಕಾರನೆಂದು ಹೆಸರುಂಟು (ಗ್ರಾಮಾಕ.೧).

[ದೇ. ॥ ತಮಿ. ವೆಟ್ಟಿಯಾನ್ = ಕೀಳುಕೆಲಸದ ಆಳು]

ವೆಟ್ಟಿವರಿ (ನಾ). ಗ್ರಾಮನೌಕರರ ನಿರ್ವಹಣೆಗಾಗಿ ವಿಧಿಸುವ ಸುಂಕ, — ತೆರಿಗೆ (?): ಗಾವುಣ್ಣಾನಾಣಿಯಮ್ಮಂ ಮಱುವದಿಂಬರ್ಗ್ಗೆ ಕೊಟ್ಟ ವ್ಯವಸ್ಥೆ ಯಾವುದನ್ನೊಡುಟ್ಟಗರಡುವರಿಸಂ ವೆಟ್ಟಿವರಿಯರಪತ್ತುಪರಿಸಂಬರಂ ಮಿಂತರ್ವ್ವಣದುಟ್ಟ ಗೂರ್ವ್ವಱ್ನು ಮಾಣಲಾಗಂ ತಮ್ಮ ಸ್ವೇಚ್ಛೆಯೊಳ್ ನೆಗಟ್ಟುದು (ಕಾ. V.೪-೧೮ ; 970).

[ವೆಟ್ಟಿ + ವರಿ]

ವೆಟ್ಟಿವೇರು (ನಾ). ಒಂದು ಬಗೆಯ ಸಸ್ಯ : ಲಾಮಂಚ, ವೆಟ್ಟಿವೇರು, ಕಾಡು ಕರೇದಪ್ಪ, ಸಚ್ಚೆಹುಲ್ಲು (ಪುಷ್ಪಿಗಿ. ೭೭-೧೫೮).

[ದೇ. ॥ ತಮಿ. ವೆಟ್ಟಿವೇರ್; ಮಲ. ತೆಲು. ವೆಟ್ಟಿವೇರು]

ವೆಟ್ಟಿಸು 'ವೆಂಟಿಸು' ನೋ.

ವೆಟ್ಟೆ$_1$ (ನಾ). ಕಾವು ; ಉಷ್ಣ ; ಬಿಸಿ : (ಕ).

[ದೇ. ॥ ತಮಿ. ವೆಟ್ಟೈ; ಮಲ. ತೆಲು. ವೆಟ್ಟ]

ವೆಟ್ಟೆ$_2$ (ನಾ). ೧. ಒರಟಾದುದು ; ಬಿರುಸಾದುದು ; ಗಟ್ಟಿಯಾದುದು. 'ಎಟ್ಟೆ'$_3$ ಪರಾ. (ಗು). ೨. ಬಿರುಸಾದ ; ಗಟ್ಟಿಯಾದ.

ವೆಟ್ಟೆತಟ್ಟೆ = (ಆಲಂ) ಒರಟಾದ ವರ್ತನೆ. — ನಡವಳಿಕೆ : ಕೊಟ್ಟೊಡವೆಯ ನಾವು ತೆಗೆದುಕೊಂಬವರಲ್ಲ ಮುಟ್ಟದಿರೌ ನಿನಗಿರಲಿ ವೆಟ್ಟೆತಟ್ಟೆಯೊಳೆಮ್ಮ ನೀನೆಂದುದಕೆ ತಕ್ಕ ತಿಟ್ಟವ ಮಾಳ್ಪೆ ನಾನು (ಭರಚ. ೯-೧೨೫). [?/ ತಮಿ. ವೆಟ್ಟೈ]

ವೆಟ್ಟೆಡೆಗುರವಡಿ (ನಾ). ಒಬ್ಬಾತನ ಹೆಸರು : ಶ್ರೀ ವೆಟ್ಟೆಡೆಗುರವಡಿಗಳ್ಮಾಣಾಕ್ಕ ಸ್ಸ್ಗಿಂಗಣನ್ದಿಗುರವಡಿಗಳ್ಮೋನ್ತು ಕಾಲಂ ಕೆಯ್ದಾರ್ (ಎಕ. II. ೩೨-೧; ಸು. 700).

[ವೆಟ್ಟೆಡೆ ? + ಗುರವಡಿ]

ವೆಡಣಗೆ (ನಾ). ಒಂದು ಬಗೆಯ ಖಾದ್ಯ, — ವಡೆ (?) : ಅರದ ಉದ್ದು ಒಂದು ಭಾಗ ಅರದ ಹೆಸರು ಒಂದು ಭಾಗ ಇವ ಕೂಡಿ ತಕ್ಕಷ್ಟು ಉಪ್ಪನಿಕ್ಕಿ ಮೆಣಸು ಏಲಕ್ಕಿಯ ಚೂರ್ಣ ಅಲ್ಲಂ ಉಳ್ಳಿಯ ಮಿಗಿಲಾಗಿ ಕಾಯಿದಿಕ್ಕಿ ಇಂಗನರೆದು ಚೆನ್ನಾಗಿ ಕಲಸಿ ಕೆಂಡಧೂಪವ ಕೊಟ್ಟು ಕಲಸಿ ಒಂದು ಉಂಡೆಯ ಮಾಡಿ ಚೆನ್ನಾಗಿ ಕುಟ್ಟಿದ ಕಣಿಕದಿಂದ ಚೆನ್ನಾಗಿ ಮುಚ್ಚಿ ಒಂದು ಪಾ(ವ)ವಾಡೆಯಲ್ಲಿ ತಟ್ಟಿ ವಡೆಯಾಗಿ ಪೊತ್ತಿ ಕಾದ ಕಾವಲಿಯ ಮೇಲೆ ಹಾಕಿ . . . ಬೇಯಿಸುವುದು. ಇದೊಂದು ವೆಡಣಗೆಯೆಂಬ ಪೊಡೆ (ಭೀಮಸೂ. ೧೯). 'ದಿಡ್ಡಣಗೆವಡೆ' ಪರಾ. [?]

ವೆಡಿರೂನ್ (ನಾ). ಒಬ್ಬಾತನ ಹೆಸರು : ಶ್ರೀಮತ್ ಶಿವಮಾರಂ ಪ್ರಿಥುವೀರಾಜ್ಯಂ ಕೆಯೆ ವೆಡಿರೂನ್ ಸ್ವರ್ಗತ್ರಿಜೆಯ ಮರಿಯಾದಿ ಕೊಟ್ಟಾನ್ (ಎಕ. III (R), ಹೆಗ್ಗಡ. ೧೫೬-೨ ; ಸು. 780 ?). [?]

ವೆಡೆವಳ್ಳಿ (ನಾ). ಒಂದು ಊರಿನ ಹೆಸರು : ವಳ್ಳಿಗ್ಗಾಮೆಯರ ದಾಸಡಿಯುಂ ಅಮಲಿಯರ ದೇವದಿಯುಂ ವಡೆವಳ್ಳಿಯರಾ ದೇವದಿಯುಂ ಅಲವಳ್ಳಿಯರಾ ರವಿಚನ್ದ್ರನುಮ್ . . . ರಾಜಶ್ರಾವಿತಮಾಗೆ ಪ್ರಸಾದಂ ಕೆಯ್ದಾರ್ (ಇಆ. XIX, ೧೪೪-೭; 680).

[ವೆಡೆ ? + ಪಳ್ಳಿ]

ವೆಡ್ಡಯ್ಸು 'ವೇಡಯಿಸು' ನೋ.

ವೆಡ್ಡೈಸು 'ವೇಡಯಿಸು' ನೋ.

ವೆತಿರೇಕ 'ಬೆತಿರೇಕ' ನೋ.

ವೆತೆ 'ಬೆತೆ' ನೋ.

ವೆತ್ತನೆ (ನಾ). ಒಂದು ಬಗೆಯ ಸುಂಕ, — ತೆರಿಗೆ : ಮಗ್ಗ ಸುಂಕ ಮಾದಾಱಿಕೆ ಸಲಿಯೂರ ವತ್ತನೆ ಮುಂತಾದ ಸರ್ವ ತಱಿಗೆ ಕಾಲುವಳ್ಳಿಯ ಗ್ರಾಮಗಳು ಸಹ (ಎಕ. IV. ಗುಂಡ್ಲುಪೇ. ೧-೧೯ ; 1522). [?]

ವೆದಿರಕೆಱೆ (ನಾ). ಒಂದು ಕೆರೆಯ ಹೆಸರು : ಕಿಱುಮಾಮಿ ಪಂಳಮೆ ವೆದಿರಕೆಱೆ ಎ ಸಾಲತ್ತ ಕಾಡೇಱಿನ ಪೇರೊಟ್ಟೈಎ (ಎಕ. IV. ಎಡತೊ. ೬೦-೭೪ ; ಸು. 890).

[ವೆದಿರ? + ಕೆಱೆ]

ವೆಯ 'ಬಿಯ' ನೋ.

ವೆರಂ 'ವೆಱಂ' ನೋ.

ವೆರತ (ನಾ). ಹಾಳಾದುದು ; ಪ್ರಯೋಜನವಿಲ್ಲದುದು ; ವ್ಯರ್ಥ : ನಾ ಬದುಕಿ ಬಹುದಿನವೂ ವೆರತವೇ ಸರಿಯೆನ್ನ ಕಲಹದೊಳಿರದೆ ಸಾಗೈ ಕಂದ (ಜನಭಾ. ೭೦-೨೯).

[< ಸಂ. ವ್ಯರ್ಥ]

ವೆರ್ಗಡೆ 'ಪೆರ್ಗಡೆ$_1$' ನೋ.

ವೆರ್ಥಾಯ (ನಾ). ಪ್ರಯೋಜನವಿಲ್ಲದುದು: ಹಾರುವರು ಉಪಾಯದೊಳ್ ಕಾಲಮಂ ಕಳೆವವರು ಬರಿದೆ ವೆರ್ಥಾಯದಿಂ ಹಾರುವರ ನೆಚ್ಚದಿರು (ತುರಂಗ. ೫೧-೨೪).

[< ಸಂ. ವೃಥಾ]

ವೆರ್ಮಾಡಿ (ನಾ). ಹಿಂದಿನ ಕಾಲದಲ್ಲಿ ಹಿರಿತನದ ಅಥವಾ ಅಧಿಕಾರದ ಸೂಚಕವಾಗಿ ವ್ಯಕ್ತಿಗಳ ಹೆಸರಿನೊಂದಿಗೆ ಸೇರುತ್ತಿದ್ದ ಶಬ್ದ (?) :

ರಾಚಮಲ್ಲವರ್ಮ್ಮಾಡಿಗಳ್ಗಂ (ಎಇ. X, ೬೫-೧೬ ; 892) ; ತತ್ಪುತ್ರಂ ಭೂತುಗವರ್ಮಾಡಿ (ಎಕ. VII, ಶಿಕಾರಿ. ೫೭-೧೪ ; 1115). [< ಪೆರ್ಮಾನಡಿ]

ವೆಲೆ 'ಬೆಲೆ$_1$' ನೋ.

ವೆಲೆಕೊಳ್ 'ಬೆಲೆಗೊಳ್' ನೋ.

ವೆಲ್ಲವಾಲೆ (ನಾ). ಒಂದು ಬಗೆಯ ಔಷಧೀಸಸ್ಯ : ಪಯಸ್ಯಾ— ನೆಲದಾವರೆ, ವೆಲ್ಲವಾಲೆ, ನಾಗಾರ್ಜುನಿ (ಓಷಧಿ. ೯೧). [?]

ವೆಲ್ಲಿಸು (ಕ್ರಿ). (ನೆಲದ ಮೇಲೆ) ದಿಂಡುರುಳು ; ಉರುಳಾಡು : "ನೆಲದಲ್ಲಿ ಅಡಿಗಡಿಗೆ ವೆಲ್ಲಿಸುವಲ್ಲಿ ಉಪಾವೃತ್ತ, ಲುಠಿತ ಎನಿಸುಗು, ಇದು ಹೊರಳುವುದು" (ನಾಚಿರಾ. ೧೩೪). [< ಸಂ. ವೇಲ್ಲನ + - ಇಸ್ಸು]

ವೆವಹರ 'ಬೆವಹಾರ' ನೋ.

ವೆವಹರಿಸು 'ಬೇಹರಿಸು' ನೋ.

ವೆವಹಾರ 'ಬೆವಹಾರ' ನೋ.

ವೆಸ 'ಬೆಸ$_1$' ನೋ.

ವೆಸನ 'ಬೆಸನ$_2$' ನೋ.

ವೆಸಸು 'ಬೆಸಸು$_2$' ನೋ.

ವೆಳಂಗ (ನಾ). ಒಬ್ಬಾತನ ಹೆಸರು (?): ಅಜ್ಜುನರಾಹ ನಾಟಕೆಯೊಳೆ ವೆಳಂಗ ಕೊವರ ಚಬ್ಬಿಸೆಟ್ಟಿಯ ತಮ್ಮ ಮಣಿಯಮಸೆಟ್ಟಿ ತುಱುಗೊಳೆ ತುಱುವನಿಕ್ಕಿಸಿ ಸತ್ತು ಸಗ್ಗಕ್ಕೆ ಸನ್ನನ್ (ಎಕ. IX, ದೊಡ್ಡಬ. ೧೦-೨ ; ಸು. 920). [?]

ವೆಳಸು 'ಮೆಟಿಸು' ನೋ.

ವೆಳಿಯಂಬು (ನಾ). ಒಂದು ಬಗೆಯ ಬಾಣ (?) : ಅಟುಗಿ ವೆಳಿಯಂಬಿ ನೆಱಗಿ ಕಳ್ಳಡೆ ತಳ್ತು ಮಱುವಕ್ಕಮಾದ ನೃಪರ್ಕ್ಕಳಾನ್ ಅಂಗರನೆಱಿವೆನಾರದ . . . ಪೂಲಿಯರ್ ಮಾಡಿದ ಸಿಲಾಕರ್ಮ್ಮ (ಎಕ. VIII, ಸೊರಬ. ೨೨-೯ ; ಸು. 800?).

[? + ಅಂಬು$_2$]

ವೆಳಿಯವೂರ್ (ನಾ). ಒಂದು ಊರಿನ ಹೆಸರು : ತಾಗರತ್ತೆ ಆ ಮಹಾಜನಕ್ಕೆ ಸಾಲೆ ಆಚನ್ದ್ರತಾರಕಂ ವೆಳಿಯವೂರಾ ಮಹಾಜನಕ್ಕೆ ಆಚನ್ದ್ರತಾರಕಂ ಎರಡುಸಾಲೆ . . . ಸ್ವಸ್ತಿಶ್ರೀ ದಿಗಟರ ಬೆಸುಗಿ ಕೊಟ್ಟದು (ಎಕ. VII, ಶಿಕಾರಿ. ೪೫-೧೬ ; ಸು. 890 ?).

[ವೆಳಿಯ್ಯ + ಊರ್]

ವೆಳ್ಗೊಳ 'ಬೆಳ್ಗೊಳ' ನೋ.

ವೆಳ್ಪ (ನಾ). ದೂರವನ್ನು ಅಳೆಯುವ ಒಂದು ಪ್ರಮಾಣ ; ಇಪ್ಪತ್ತು ಯೋಜನದ ಅಳತೆ : "ಕ್ರೋಶಂ . . . ನಾಲ್ಕುವರಲು ಯೋಜನಮಕ್ಕುಮಿಪ್ಪತ್ತು ವೆಳ್ಪಮಕ್ಕಿವು ಹತ್ತು ವರ್ತನಾಖ್ಯಂ" (ಮಂಗರಾ. ೯೬-೧೧). [?]

ವೆಳ್ಮಟ್ಟಕವಾಡ (ನಾ). ಒಂದು ಊರಿನ ಹೆಸರು : ಮೂಲ (ಲ?)ವಳ್ಳಿ ವೆಳ್ಮಟ್ಟಕವಾಡ ಪಚ್ಚ(ವ್ವ)ನೂರ್ . . . ಇತಿ ಅಸ್ಯ ಭುಕ್ತಿ(ಕ್ತಿಃ) (ಇಆ. VIII, ೨೪೩-೧೮ ; 634) ; (ಎಇ. V, ೭-೧೮ ; 634 ನೋ). [ವೆಳ್ಮಟ್ಟಕ್ಕ + ಬಾಡ$_1$]

ವೆಳ್ಮಾದ (ನಾ). ಒಂದು ಊರಿನ ಹೆಸರು (?) : ಶ್ರೀಕಿತ್ತೂರಾ ವೆಳ್ಮಾದದಾ ಧರ್ಮ್ಮಸೇನಗುರವಡಿಗಳಾ ಶಿಷ್ಯರ್ ಬಾಲದೇವಗುರವಡಿಗಳ್ ಸನ್ಯಾಸನಮ್ ನೋನ್ತು ಮುಡಿಪ್ಪಿದಾರ್ (ಎಕ. II, ೨೪-೧ ; ಸು. 700). [?]

ವೆಱಂ, ವೆರಂ (ಅ). ನಿಶ್ಚಿತವಾದ ಅರ್ಥವನ್ನು ಸೂಚಿಸುವ ಒಂದು ಅವ್ಯಯ ; ಖಂಡಿತವಾಗಿ ; ದಿಟವಾಗಿ ; ನಿಶ್ಚಯವಾಗಿ : ಇನ್ನಂತೆ ಮತ್ತೆ ಬಱಿ ಮಿಗೆ ಮುಂ ನಿಲೆ ತಾಂ ಮೇಣ್ ವೆಱಂ ಗಡಂ ಗಳಮಾದಂ ಕೆನ್ನಂ ನಿಲ್ಲೆಂದಿವನೆಂದುಂ ನಿಱಿಸಲ್ಕಲ್ಲದೆಡೆ ಗಳೊಳ್ ಕಲ್ಲದಿರಿಂ (ಕವಿರಾ. ೨-೧೩) ; ಕೀಱಿ ಪೌರುಷಮನಾತ್ಮಪುಣ್ಯದಿಂ ಬೇಱ್ ಮಾಡದೆಸಪೊಂ ವಿರೋಧಿಯಂ ಮಿಱುಗುಂ ವೆಱಮೆಱಂಕೆಯೊಂದಱಿಂ ಪಾಱ ಲಾರ್ಕುಮೆ ಪತತ್ರಿರಾಜನುಂ (ಕಾವ್ಯಾವ. ೪೯೨); ಏಗಂ ವಲಂ ವೆಱಂ ದಲ್ ತಾಗು ಗುಮತಿನಿಶ್ಚಯಾರ್ಥಮಂ (ಶಮದ. ೩೦೬). ವೆರಂ : ಸೆರೆಯಂ ಸವರಲೆಂದೆ ವೆರಮಿಾ ಬವರ ದಬ್ಬಾಳಿಕೆಯ ಮೆಟ್ಟಡಿಯ ತಬ್ಬಬೇಕೆ ? (ಗಿಳಿವಿಂ. ೭೧-೨೫) ; ಬೇಳ್ದಳಿಪುವೊಡಮಾಯ್ತು ತಗುವ ಚಿತವೆರಮೆಂದು ಬೀಗಿದೆನದಂ ಪುಗುವೆನೀಗಳೆ ವಿಧಾತ್ರನಂ (ಸಂಸಪ. ೨೫-೩). [?]

ವೆಱಿ (ನಾ). ಹುಚ್ಚು ; ಮರುಳುತನ ; ಬುದ್ಧಿಭ್ರಮೆ : ವನ್ರಿ[ಱಿ]ಯಾಗಿರ್ದವಂ, ಭೀತನಾಗಿ ಇಹಾತಂ, ಕ್ಲೇಶವಹ ನುಡಿಗಳನುಳ್ಳಾತಂ . . . ಈ ಪೇಱ್ದಿಂತಪ್ಪ ದೂತಂ ಬಂದು ಪಾವ್ ಕಚ್ಚಿತೆಂದು ಪೇಟಲ್, ಗಾರುಡಮಸಾಧ್ಯಂ (ಲೋಕೋಪ. ೧೦-೫ ಟೀಕೆ).

[ದೇ. ॥ ತಮಿ. ಮಲ ವೆಱಿ ; ತೆಲು. ವೆಱ್ಱಿ / ಮಧಾ. ವೇಡ]

ವೇಗ (ನಾ). ೧. ಜೋರು ; ಶೀಘ್ರತೆ ; ತೀವ್ರತೆ : ಲಕ್ಷ್ಮಣದೇವನೆಸೆದನಯ್ ರಾಗಾನುರಾಗದಲಿ, ವೇಗದಲಿ, ರಭಸದಲಿ (ಶ್ರೀರಾಮಾ. ೨೬-೬೮೬) ; ದೃಶ್ಯದ ಮಿಲಿಯಗಟ್ಟಳೆ ಸೂಕ್ಷ್ಮಭಾಗಗಳು ಒಂದರ ಮೇಲೊಂದಾಗಿ ಅತ್ಯಂತ ವೇಗದಿಂದ ಪರದೆಯ ಮೇಲೆ ಮೂಡುವಾಗ . . . ಇಡಿ ಚಿತ್ರದ ಭಾವನೆಯೇ ನಮ್ಮಲ್ಲುಂಟಾಗುವುದು (ವಿಜ್ಞಾವಿ. ೯೮). ೨. ಚುರುಕು; ಚಟುವಟಿಕೆ : ಬಾಗಿಲಿನೊಳವೊಕ್ಕು ಬಂದನೆಂಬುದು ಮತಿವೇಗದೊಳಿದಿರುಗೊಳುವುದು (ಹದಿಬ. ೩-೧೪). ೩. ಪ್ರವಾಹ ; ಹರಿವು : "ವೇಗಃ, ಸ್ಥೂಳೋಚ್ಚಯಃ — ಈ ೨ ಹರಿವುದಕ್ಕೆ ಪೆಸರ್" (ಹಲಾಯು. ೩೭-೬೯) . ೪. ಒತ್ತಡ ; ರಭಸ : ಮಲಮೂತ್ರಾದಿಗಳ ವೇಗವ ತಡೆಯುವುದರಿಂದಲೂ . . . ಬಹುಮೂತ್ರರೋಗಮುಂಟಾಗುತ್ತಿಹುದು (ಸಕವೈ. ೩೬೯). ೫. ರಭಸದಿಂದಾಗುವ ಮಲಮೂತ್ರಾದಿಗಳ ವಿಸರ್ಜನೆ : ಒಳ್ಳೆ ವಿಭೂತಿ ಮತ್ತು ಸಕ್ಕರೆ ಇವನ್ನು ನಿಂಬೆಹುಳಿಯಲ್ಲಿ ಕಲಸಿ ಉಂಡೆ ಮಾಡಿ ಅಡಿಕೆ ಗಾತ್ರದಷ್ಟನ್ನು ಕೊಟ್ಟರೆ ಬಹುಶಃ ವೇಗಗಳು ಹೋಗುವುದು ನಿಲ್ಲುವುದು (ಸಕವೈ. ಪರಿ. ೪೭೭). ೬. ಬಲ ; ಶಕ್ತಿ. ೭. ಹಗೆ ; ಶತ್ರು. ೮. ಬೇಲಿ ; ಪರಿಧಿ. ೯. ಒಂದು ಬಗೆಯ ವಿಷ ; ಕಿಂಪಾಕ : "ಮಹಾಜವ ಕಿಂಪಾಕಮರಾತಿಯುಂ ಪರಿಧಿಯಿಂತೀ ನಾಲ್ಕು ವೇಗಾಹ್ವಯಂ" (ನಾನಾರ. ೯೮) ; ಸರ್ಪ ಕಚ್ಚಿದರೆ ವೇಗ ಉಂಟು (ವಿಷಟ. ೯-೨). ೧೦. ಕುದುರೆಯ ಒಂದು ಬಗೆಯ ನಡಗೆ : "ರಂಹಃ, ತರಃ, ಸ್ಯದಃ, ಪ್ರಸರಃ, ವೇಗಃ, ರಯಃ, ಜವಃ, ವಾಜಃ — ಈ ೮ ಕುದಿರೆಯ ವೇಗಂ" (ಹಲಾಯು. ೭೩-೨೮೯). [ಸಂ.]

ವೇಗಗತಿ (ನಾ). ತ್ವರಿತದಿಂದ ಕೂಡಿದ ಚಲನೆ ; ಶೀಘ್ರಗತಿ : ಗುಳಿ ತೆವರನೀಕ್ಷಿಸುತ ಬಟ್ಟೆಯ ಮೆಳೆ ಮರಂಗಳ ಹೊಯ್ಲ ತಪ್ಪಿಸಿ ನೆಳಲನಱಸುತ ವೇಗಗತಿ ಸಾಮಾನ್ಯ ಗತಿಗಳಲಿ ಬಳಿವಿಡಿದು . . . ಡಗೆಯ ಸೈರಿಸಿ ಬಳಸುವವನೇ ಛತ್ರಧಾರಕನು (ಕುವ್ಯಾಲು. ೩-೯೯). [ಸಂ.]

ವೇಗಗಾಮಿ (ಗು). ರಭಸದಿಂದ ಚಲಿಸುವ ; ಶೀಘ್ರಗತಿಯ : ಅತ್ಯುತ್ತಮ ಜಾತಿಯ ವೇಗಗಾಮಿ ತೇಜಿಗಳ ಏರಾಟ ತನಗೆ ಅತ್ಯವಶ್ಯವೆಂದು ಅವನು ನಂಬಿಕೊಂಡಿದ್ದನು (ಪುನರು. ೩೩೨). [ಸಂ. ವೇಗಗಾಮಿನ್]

ವೇಗಗೂಡು (ಕ್ರಿ). ರಭಸಹೊಂದು ; ಜೋರಾಗು : ನಾಡಿಯು . . . ಹುಳಿಗೂಡಿದ ಆಹಾರವನ್ನು ಹೆಚ್ಚಾಗಿ ತೆಗೆದುಕೊಂಡಿದ್ದರೆ ಎಣ್ಣೆಯ ತೊಡೆದ ಹಾಗೂ ನೀರ ಕಾಗೆಯ ಹಾಗೂ ವೇಗಗೂಡಿ ನಡೆವುದು (ಸಕವೈ. ೧೨). [ವೇಗ + ಕೂಡು$_1$]

ವೇಗದೂರ (ನಾ). ವೇಗರಹಿತವಾದುದು ; ನಿಧಾನಗತಿಯುಳ್ಳುದು : ಚೂತವಲ್ಲೀವನಿತೆಗೆ ಪಡೆವುತ್ತಂಕುರವ್ಯಾಜದಿಂ ನೆಟ್ಟಗೆ ರೋಮಾಂಚಂಗಳಂ ಸದ್ವಿಟನೆನೆ ಸುಳಿದಂ ವೇಗದೂರಂ ಸಮೀರಂ (ರಾಜಶೇ. ೯-೪೬). [ಸಂ.]

ವೇಗವರ್ಧಕ (ಗು). ೧. ವೇಗವನ್ನು ಹೆಚ್ಚಿಸುವ; ಗತಿಯನ್ನು ತೀವ್ರಗೊಳಿಸುವ; "ವೇಗವರ್ಧಕ" (Accelerating. ಇಂಕನಿ). (ನಾ). ೨. (ಯಾವುದೇ ಜೀವಿ, ವಸ್ತು ಇವುಗಳ) ವೇಗವನ್ನು ಹೆಚ್ಚಿಸುವಂತಹುದು : ವೇಗವರ್ಧಕ (ಮನುಷ್ಯ ಅಥವಾ ವಸ್ತು) (Accelerator. ಇಂಕನಿ). ೩. [ವಿಜ್ಞಾ]ರಾಸಾಯನಿಕಕ್ರಿಯೆಯನ್ನು ಶೀಘ್ರಗೊಳಿಸುವ ವಸ್ತು,— ಅಧಿಕಮಾಡುವ ಸಾಧನ : ಕೆಲವು ರಸಾಯನಿಕ ಕ್ರಿಯೆಗಳು ಬಹಳ ನಿಧಾನವಾಗಿ ನಡೆಯುತ್ತಿರುವುವು. ಇವುಗಳ ವೇಗವನ್ನು ಇತರ ವಸ್ತುಗಳ ಸಹಾಯದಿಂದ ಅಧಿಕಗೊಳಿಸಬಹುದು. ಹೀಗೆ ಒಂದು ರಸಾಯನಿಕಕ್ರಿಯೆಯನ್ನು ಅಧಿಕಮಾಡುವ ವಸ್ತುಗಳಿಗೆ ವೇಗವರ್ಧಕಗಳೆಂದು ಹೆಸರು (ರಸಾಯ. ೩೬). [ಸಂ.]

ವೇಗಾಯಿಲ, ವೇಗಾಯ್ಲ (ಗು). ೧. ತ್ವರಿತವಾಗಿ ಚಲಿಸುವ ; ಅತಿವೇಗದ. (ನಾ). ೨. ಶೀಘ್ರವಾಗಿ ಹೋಗಿ ಸುದ್ದಿಯನ್ನು ಮುಟ್ಟಿಸುವವನು ; ಹರಿಕಾರ : "ವೇಗಾಯಿಲನೆಂದು ಹರಿಕಾಱಂ" (ಕಶಸಾ. ೫೬-೨೩೦) ; ವೇಗಾಯಿಲಮಿತ್ರನೇ, ನೀನು ತೊಟ್ಟಿರುವ ಕುಡುತೆಯು ಸೇನಾನಿಯಮನಿರ್ಪನ್ನಗಳ ಬಿಗಿಗಟ್ಟಿನೊಳಗೆ ಸಂಬದ್ಧವಾಗಿರುವ

ವೀರಚಾರವನ್ನು ನಿರ್ದೇಶಿಸುತ್ತಿದೆ (ಚಿಬ್ಬಲಿ. ೭೭-೯). **ವೇಗಾಯ್ಲು** : ೧. ಹರುಷದಲಿ ಬಿನ್ನಹದ ವೋಲೆಯ ಬರೆಸಿದನು ವೇಗಾಯ್ಲು ದೂತರನಟ್ಟಿದನು ಭೂಪ (ಕುವ್ಯಾಎ. ೧೦-೨೯). ೨. "ವೇಗಾಯ್ಲು ಶೀಘ್ರಗಾಮಿಕನಕ್ಕುಂ" (ಕವಿಕಂ.೧೧೨). ೩. ಶೀಘ್ರಗತಿಯ ವ್ಯಕ್ತಿ ; ವೇಗಶಾಲಿಯಾದವನು : ಆಟಲಿಗರುಂ ವೇಗಾಯ್ಲರುಮಪ್ರನ್ನಯಾಗತ ನಭೋಗತಿಗಳ್ ಬಿಲ್ಲಂ ಸರಳ್ಗಮಣ್ಮುಗೆಟ್ಟುಮಿಟ್ಟಿಡೆಯುಮಾಗಿ ತೊಟ್ಟನೆ ನೆರೆದುರುಳಿ ನೂಂಕುವುದುಂ (ಶಾಂತಿಪು. ೪-೩೩ ವ) ; ಹೊಯ್ಲ ಹೂಗಗಳ ಹೋರಟೆಯ ವೇಗಾಯ್ಲ ವುಷ್ಟಾವುಷ್ಟಿಗತಿಯ ದೃಢಾಯ್ಲರಪ್ಪಳಿಸಿದರು ಪದಘಟ್ಟಣೆಗೆ ನೆಲಕುಸಿಯೆ (ಕುವ್ಯಾಸ. ೨-೧೦೮). [ವೇಗ + - ಆಯಿಲ್ಲ]

ವೇಗಾಯ್ಲ 'ವೇಗಾಯಿಲ' ನೋ.

ವೇಗಾಯ್ಲತನ (ನಾ). ವೇಗವನ್ನು ಹೊಂದಿರುವಿಕೆ ; ಶೀಘ್ರಗಾಮಿತ್ವ : ಆವ ಜವವೇನೆಂಬ ಗತಿ ಮೇಣಾವ ದೃಢ ವೇಗಾಯ್ಲತನ ತಾನಾವ ಸೂಟಿಯದಾರು ಬಲ್ಲರು ವಹಿಲ ವಿವರಣವ (ಕುವ್ಯಾಆ. ೭-೧೯). [ವೇಗಾಯ್ಲ (< ವೇಗಾಯಿಲ) + - ತನ]

ವೇಗಿ (ಗು). ೧. = ವೇಗಾಯಿಲ ೧. (ನಾ). ೨. = ವೇಗಾಯಿಲ ೨ : "ಜಂಘಾಳಃ, ಜವನಃ, ವೇಗೀ — ಈ ೩ ಹರಿಕಾಱಂ" (ಹಲಾಯು. ೪೯-೨೦೩). ೩. ಒಂದು ಬಗೆಯ ಪಕ್ಷಿ ; ಗಿಡುಗ. ೪. ಒಂದು ಬಗೆಯ ಬಿಕ್ಕುಳುರೋಗ : ಆ ಹಿಡ್ಮನಂಬ ಬಿಕ್ಕುಳು ಅನ್ನಚೆ, ಕ್ಷುದ್ರ. ಯಮಳೆ. ಮಹತಿ. ವೇಗಿ — ಇಂತ್ತೆದು ತೆರನಾಗಿ . . . ವೇಗಿ ಎಂಬ ಬಿಕ್ಕುಳೊಂದೇ ಸರ್ವಥಾ ಅಸಾಧ್ಯವೆನಿಸಿಕೊಳ್ಳುವುದು (ಸಕಪ. ೨೪೦). [ಸಂ. ವೇಗಿನ್]

ವೇಗಿಸು (ಕ್ರಿ). ಭರದಿಂದ ಹೆಚ್ಚಿಸು ; ಬೇಗ ವೃದ್ಧಿಸು ; ಜಾಸ್ತಿಮಾಡು : ಯೋಗತತಿಗಳನಪಹರಿಸಿ ನಿಜಯೋಗಸಾಮರ್ಥ್ಯದಲಿ ಭಂಗವ ಸಾಗರದಲದ್ದಿದನು ತಮ್ಮೈಶ್ವರ್ಯಸಿದ್ಧಿಗಳ ವೇಗಿಸಿದನೀ ದುಷ್ಟನೀತನ ನೀಗಿದ್ಕೆ ನಿಜಶರಣರಕ್ಷಾ (ನಿಭಾಗ. ೭-೪-೨೧). [ವೇಗ + - ಇಸ್ಸು]

ವೇಗೂರ್ (ನಾ). ಒಂದು ಊರಿನ ಹೆಸರು : ವೇಗೂರಾ ಪರಮಪ್ರಭಾವ ರಿಷಿಯಸ್ಸರ್ವ್ವಜ್ಞಭಟ್ಟಾರಕರ್ . . . ಸ್ಯಗ್ರಾಗ್ರಮಾನೇಱಿದಾರ್ (ಎಕ. II. ೧೩-೨ ; ಸಂ. 700) ; ಸ್ವಸ್ತಿ ಗುವಳಾಲಂಗೊಂಗುಂ ವಾಣರಸ ಆಳಿ ವೇಗೂರಂ ಪೊಂಪುಲಂ ಆಳಿ (ಎಕ. X. ಮುಳಬಾ. ೨೬೫-೧ ; ಸಂ. 880). [? + ಊರ್]

ವೇಟಿಸು (ಕ್ರಿ). ಆವರಿಸು ; ವೇಷ್ಟಿಸು (?) : ಕಳವುಮಾರ್ಗಮದೇಕೆ ಬಯಸುವ ಬಳಿಕ ವೇ[ಪಾಠಾಂ. ಮೇ]ಟಿಸು ತೋರ್ಪ ಪರಗತಿ ನೆಲೆ ಸುಮಾರ್ಗವನೆಂದು ದಿವಿಜಾಧೀಶ ತೆಗೆದಚ್ಚ (ಅಂಬಿಕಾ. ೧೪-೧೪). [< ಸಂ. ವೇಷ್ಟನ + - ಇಸ್ಸು]

ವೇಟು (ನಾ). (?) : ನಿಷ್ಠುರದೊಳತಿಯುಬ್ಬುಗೊಬ್ಬಿನೊಳ್ ಧೈರ್ಯದೊಳ್ ಶೌರ್ಯಂಗಳಾ ಆಂಕೆಯುರು ವೇಟಿನೊಳ್ ನೀಟಿನೊಳ್ ಮೇಣವರಿಗುಂ ಕಡಯೊಳಿಲ್ಲಿಯುಂ ಲೋಕದೊಳ್ ಪರಿಕಿಸಲ್ ಮುಂ ಕಾಣೆ ಸರಿಯಪ್ಪ ಸುಭಟರ್ಕಳ (ಪರಶು. ೩೧-೨೦). [?]

ವೇಡಯಿಸು, ವೆಡ್ಡಯ್ಸು, ವೆಡ್ಡೈಸು, ವೇಡಯ್ಸು, ವೇಡಿಸು, ವೇಡ್ಕೆಸು, ವೇಢಯ್ಸು, ವೇಢ್ಕೆಸು (ಕ್ರಿ). ಸುತ್ತುವರಿ; ಆವರಿಸು; ಬಳಸು : ಕದನಕರ್ಕಶದ ಮೆಯ್ಸಿನಿಯ ರಾವುತರ್ ಮಾವುತರ್ ಬಳಸಿ ವೇಡಯಿಸಿ [ಪಾಠಾಂ.ವೇಡಯ್ಸು]ಬರಲಂ ದಂಧಕಾಸುರಂ ಪೊಱಮಟ್ಟು ಪೊಱಬೀಡನುಱ್ ಬಿಟ್ಟನು(ಚಟುಪು. ೪೭-೩೨). **ವೆಡ್ಡಯ್ಸು** : ಸಾರಿದರೆ ಮಱ್ದಿಂಬಿಗಳ ಸುಖಪಾರಣೆಯ ವಿಸಗೊಳುತ ನಗುತ ವಿಕಾರಿಗಳು ವೆಡ್ಡಯ್ಸು [ಪಾಠಾಂ. ವೇಡ್ಕೆಸಿ]ದರು ನೃಪಮುನಿನಿಜಾಶ್ರಮವ (ಕುವ್ಯಾಆ. ೧೮-೫) ; ತಿವಳಿದರೆರಗಳ ನಡುವೆ ರಂಜಿಸುವ ಶೈವಾಲದಂತೆ ಜಘನಾದ್ರಿಯಂ ವೆಡ್ಡಯ್ಸಿ[ಪಾಠಾಂ. ವೆಡ್ಡೈಸಿ]ದವಲ ಕಾಂಚೀದಾಮದ ದಾವಶಿಖಿಯಿಂದೆ ನಭಕೇಳ್ವ ಕರ್ಬೊಗೆಯಂತೆ . . . ತಸುಮಧ್ಯದೊಳ್ಬಾಸೆ ಕಂಗೊಳಿಸಿರ್ದುದು (ಚೈಭಾ. ೩೧-೧೧). **ವೆಡ್ಡೈಸು** : ಕೇಸುರಿಯ ಕಬ್ಬೊಗೆಯ ಶಿಖಿ ವೆಡ್ಡೈಸಿತಬುಧಿಯ ಮದದ ಘಾಡಿಕೆ ಘಾಸಿಯಾದುದು (ತೂರಾ. ೭-೪-೩೬) ; ಮತ್ತ ದಂತಿಗಳು ವೆಡ್ಡೈಸಲು ಕಾಣುತ ಕಿತ್ತೊಂದು ಕೈರದ ವಾರನ . . . ಪೊಯ್ದ (ನಾಗಕು. ೧೦-೧೨೦) . **ವೇಡಯ್ಸು** : ಐದಿತೀ ರಘುಪತಿಯನಾ ಕ್ರಮ್ಯಾದಬಲ ವೇಡಯ್ಸು [ಪಾಠಾಂ. ವೆಡ್ಡೈಸಿ, ವೇಡ್ಕೆಸಿ]ಕೊಂಡುದು ಕೊಯ್ದ ಮೂಗಿನ ಖಿಳಸತಿಯ ಕೈಸನ್ನೆಗಾಶ್ರಮವ (ತೂರಾ. ೩-೭-೧೧). **ವೇಡಿಸು** : ಶಶಾಂಕನಲಿ ಕಣ್ಣಾಡಿದವು ರೋಹಿಣಿಗೆ ವಾಣಿಗೆ ವೇಡಿಸಿತು ಕಂದರ್ಪಶರ ಸರ್ವಾಂಗದಲಿ ಮನವ (ನಿಭಾಗ. ೧೦-೨೮-೪) ; ಈ ಮಹಾಕೃತಿಯಿಂದೊಲವು ಮಿಗೆ ವ್ಯೋಮದಲಿ ವಿಧು ವೇಡಿಸಿದ ಪರಿವೇಷದಿಂದೆರೆವ ಕೌಮುದಿಯೊಲೀ ಕನ್ನಡದೊಳಾಸೀಮಮನೆ ನೆಲಸಿಹುದು (ಗಿಆಎಂ. ೯೬-೧). **ವೇಡ್ಕೆಸು** : ಲಿಂಗಂಗಳು ತರಿಸಿ ಬಂಡಿಗಳ ಮೇಲಳವಡಿಸಿ ಮುಂಕೊಂಡು ನಡತಂದೂರ ಮೇಲುದ್ದಂಡದಿಂ ವೇಡ್ಕೆಸಿ [ಪಾಠಾಂ. ಡಯ್ಸಿ] ಬಿಟ್ಟನು ನಾಚದೇವಯ್ಯ (ಬಸಪು. ೫೧-೬೯) ; ಬೇಸರದೆ ಕಾಳೋರಗನನಡ್ಡೈಸಿ ಕಟ್ಟಿರುವಗಳು ಮಿಗೆ ವೇಡ್ಕೆಸಿ ಕಡಿದರೆಯಟ್ಟುವಂದದಲಹಿತಬಲದೊಳಗೆ ಓಸರಿಸದೊಳ ಹೊಕ್ಕು (ಕುವ್ಯಾಸ. ೧-೭೫) ; ರೂಢನಾಗಿರರೊಲ್ಲದಾರ್ಜಿಸಿದ ವಿತ್ತಮಂ ವೇಡ್ಕೆಸಿದಖಿಳ ಜನಕಿತ್ತ ವನವಾಸವೇ ಗತಿ ನಿನಗೆ (ಜೈಮಿಭಾ. ೩೧-೩೩). **ವೇಢಯ್ಸು** : ಮಹೀಶೂರ ಕೋಟೆಯನ್ನೇ ವೇಢಯ್ಸಿ ಆಕ್ರಮಿಸಿಕೊಳ್ಳಲು ದುರಾಳೋಚನೆಯ . . . ಗುಪ್ತವಾರ್ತೆಯು ಪರಾಂಬರಿಕೆಯಾಯ್ತು (ಚಿಬ್ಬಲಿ. ೭೯-೩). **ವೇಢ್ಕೆಸು** : ವಹಿಲವನು ವೇಢ್ಕೆಸುವಡ ನರರಹಿಪತಿಗಳೇ (ಕುವ್ಯಾಕ. ೨೩-೭) ; ಮಲೆನಾಡವರ್ ಮಲೆತು ನಿಲ್ಲಿನಂ ಅವರ್ ವೇಢ್ಕೆಸಿ ಬಿಗಿದಿತ್ತತ್ತಲಿನಿಸುಂ ಮಿಸುಕಲೀಯದೆ (ಚಕವಂ. ೪೧-೨೦) ; ರಾಜಧಾನಿಯೊಳಿರ್ದ ಸೇನೆಯುಮೊಂದುಗೂಡಿ ಬಂದು ವೇಢ್ಕೆಸಲೊಡಂ (ಮರಾಚ. ೨-೭೪).

[< ವೇಡ + - ಇಸ್ಸು]

ವೇಡಯ್ಸು 'ವೇಡಯಿಸು' ನೋ.

ವೇಡಾಂಕ (ನಾ). ಒಂದು ಬಗೆಯ ನೃತ್ಯ (?) : ಹಾಡುತಿಹ ಗುರುನಿರೂಪಿತದ ವಚನಂಗಳಿಂದಾಡುತಿಹ ಪೇರಣೆಯ ವೇಡಾಂಕ [ಪಾಠಾಂ. ವೆಡ್ಡಾಂಗ, ವೇಡಾಂಗ] ಕೇಳಿಕೆಯ ನೋಡುತಿಹ ಪೃಥ್ವಿಯ ಮಹಾಭಕ್ತಜನದ ಸಮ್ಮರ್ದನವ ಕೆಲವಿಂಗಿಸಿ (ಸಿದ್ರಾ. ೮-೭೯). [?]

ವೇಡಿಕೆ (ನಾ). ವಿನೋದ ; ತಮಾಷೆ ; ಹಾಸ್ಯ : ಪೊಱಮಡುವವಸರದೊಳ್ — ಪರರಾಯರಂ ಕಾಣ್ಕೆಡಗುಂ, ಸ್ವಯಂವರದೆಡಗುಂ, ವೇಡಿಕೆಯ ಕಾಣ್ಕೆಡಗುಂ, ರಣದೆಡಗುಂ ತಾನೊರ್ವನೆ ಪೋವುದರಸಂಗೆ ತಕ್ಕುದಲ್ತು (ಆದ್ಯುಕ. ೪೩-೧೩).

[ದೇ. ॥ ತಮಿ. ವೇಟಕ್ಕೈ; ತೆಲು. ವೇಡುಕ]

ವೇಡಿಸು 'ವೇಡಯಿಸು' ನೋ.

ವೇಡೆ, ವೇಢೆ (ನಾ). ೧. ಸುತ್ತುವರಿಯುವಿಕೆ ; ಮುತ್ತಿಗೆ ; ಆಕ್ರಮಣ : ಇವನ ಹೊಯ್ ಕಟವಾಯ ಕೊಯ್ ತಪ್ಪುವನೆ ಸುರಪತಿ ಶಿವಶಿವಾ ಸುರರವಗಡಿಸುವರೆ ವೇಡಗಡ ಹೈರಣ್ಯನಗರಿಯಲಿ (ಕುವ್ಯಾಆ. ೧೨-೧೭); ಕೂಡೆ ನಗರದ ನಿಖಿಳಜನ ತೆಗದೋಡಿತಲ್ಲಿಯದಲ್ಲಿ ದಳ್ಳುರಿವೇಡೆಯಲಿ ಸಿಲುಕಿದ ನಿಶಾಚರರಾ ಪುರಾಂತರದ ಬೇಡಕುಣಿ ಹೊಕ್ಕರಣಿಗಳಲಕ್ಕಾಡಿದರು (ತೂರಾ. ೫-೮-೭೯) ; ಕಾಳುಗಿಚ್ಚಿನ ವೇಡೆಯಲಿ ವನಜಾಲ ಬೇವುತ್ತಿರಲು (ನಿಭಾಗ. ೨-೩-೨೨). ೨. ಸುತ್ತುಗಟ್ಟಿರುವುದು ; ಆವರಣ; ಬೇಲಿ : ಜೋಡಿಸಿದನಮರೇಂದ್ರನಮರರ ವೇಡೆಯಾಯ್ತು ಹಿರಣ್ಯನಗರಿಗೆ (ಕುವ್ಯಾಆ. ೧೨-೧೭). ೩. ಹಿಡಿತ ; ಬಂಧನ ; ಸೆರೆ : ಸುರೇಂದ್ರನ ಕಟಕ ವಿಕ್ಕಿದ ವೇಡೆಯಲಿ ಲಟಕಟಿಸುತ್ತಿದೆ ದಾನವರು ಮಾನಚ್ಯುತಿಯ ಮನ್ನಿಸದೆ (ಕುವ್ಯಾಆ. ೧೨-೨೮) ; ತರ್ಕಶಾಸ್ತ್ರದ ವೇಡಗಾನೊಳಗಾಗೆನೆಲೆ ಅಕ್ರೂರ (ಅಕ್ರೂಚ. ೩-೨೫). ೪. ಬಲೆ ; ಜಾಲ : ಹೊಕ್ಕನು ಕಾನನವನಿನಲಜನು ಶಬರವಿತಾನವಿಕ್ಕಿದ ವೇಡೆಗಳ ಬೆಳ್ಳಾರಸುತ್ತುಗಳ . . . ದೀರ್ಘದ್ರೋಣಗಳಲಜಸಿದರು ವ್ಯಗಕುಲವ (ಕುವ್ಯಾಆ. ೧೩-೨೪). ೫. ಮಂಡಲಾಕೃತಿಯಲ್ಲಿ ಓಡುವ, ಕುದುರೆಯ ಒಂದು ಬಗೆಯ ಓಟ : ಮನದಂಕೆಯಂ ತಿಳಿದು ಶಿಕ್ಷಾಪ್ರೌಢಿಯೊಳ್ ನಾಡೆ ನೇರ್ಪಡೆಯುಂ ವೇಡೆಯ ವೇಗದಿಂ ಬಹುಗತಿವ್ಯಾಪ್ತತ್ವದಿಂ ತೋರ್ಕೆಯೊಳ್ ತೊದರ್ದಯ್ದುಂ ತಜನಪ್ಪ ಧಾರೆಗಳನಾಗಳ್ ನೋಡೆ (ಕುಸುಮಾ. ೮-೭೩) ; ಪೊಳಪುಗತಿ ವೇಡೆ ಜೋಡಶಿಚಳಕಂ ದೂವಾಳಿಬಡಿಪುದಾಳಿಯರ ಮನಂಗೊಳಿಸಿರೆ ತುರಂಗಗಳ ವಾಹಳಿ ವಾಹಕರಿಂದೆ ಮಱೆದುದಾ ಪೊಱವೊಳಲೊಳ್ (ತ್ರಿಪುವಿ. ೧೭-೧೬). **ವೇಢೆ**: ೩. ಇತ್ತಲಿತ್ತಲು ಭೀಮನೆಂದುಱೆ ಮುತ್ತಿ ಮುಸುಕಿತು ಸೇನೆ ಚಿಮ್ಮಿದನತ್ತಲಾಚೆಯಲಲ್ಲಿ ದಳ ಘಾಡಿಸಿತು ವೇಢೆಯಲಿ (ಕುವ್ಯಾಕ. ೧೫-೩೫) ; ಸಿಕ್ಕಿದುದು ನೃಪಕಟಕ ಯಾದವರಿಕ್ಕಿದಾಳ್ಗಳ ವೇಢೆ[ಪಾಠಾಂ. ಡೆ]ಯಲಿ ದಾವಾಗ್ನಿಮಧ್ಯದಲಿ (ನಿಭಾಗ. ೧೦-೪೮-೨೦) ; ತಾಪಸರಂತೆ

ಭೋಗದ ವೇಧೆಗೊಳಗಾಗಿಪ್ಪ ಹರಿ ನಲಿದಾಡುತುವೆ ಬಂದಡರಿದನು ಮಣಿಖಚಿತವಿಷ್ಟರವ (ಅಕ್ಕೂಚ. ೮-೫೬).

ನೇಡೆಯವರು = ಬಲೆಗಾರರು : ವ್ಯಾಧರು : ಬೊಪ್ಪೆಗಳ ಪಟಹದ ಮೃದಂಗವ ಸರ್ಬಲಗ್ಗೆಯ ಸೋಹಿನಲಿ ಸುಳಿವಬ್ಬರಕೆ ಹಿಂಡೊಡೆದು ಹಾಯ್ದವು ಸೂಸಿದವು ದೆಸೆಗೆ ತೆದ್ದಿದವು ಬೆಳ್ಳಾರವಲೆ ಹರಿದುಬ್ಬಿ ಹಾಯ್ದೊಡೆ ವೇಡೆಯವರಿಗೆ ಹಬ್ಬವಾಯ್ತು (ಕುವ್ಯಾಅ. ೧೩-೨೫).

[< ಸಂ. ವೇಷ್ಕ/ ತೆಲು. ವೇಡಮು, ವೇಡೆಮು./ ಪ್ರಾ- ವೇಢ./ ಮರಾ. ವೇಢಾ]

ವೇಡೆಗೆದಱು (ಕ್ರಿ). ಮುತ್ತಿಗೆಯು ಬೆದುರು ; ಒಗ್ಗೊಡೆ : ಸೋತಲಾ ಕೌಂತೇಯ ನಿಮಿಷಕೆ ಬೀತುದೇ ನಿನ್ನಪಿಳಿಸಿರಿ ವಿಖ್ಯಾತಿ ಬಜಿತುದ ವೇಡೆಗೆದಱಿತೆ ಮನದ ವಾಸಿಗಳ (ಕುವ್ಯಾಸ. ೧೪-೧೧). [ವೇಡೆ + ಕೆದಱು (< ಕೆದಱ್)]

ವೇಡೆಗೊಳ್ (ಕ್ರಿ). ಸಿಕ್ಕಿಹಾಕಿಕೊಳ್ಳು ; ಸೆರೆಯಾಗು ; ಬಂಧನಕ್ಕೆ ಸಿಕ್ಕು : ಕಾಯಸೌಖ್ಯಕೆ ಕಾಮಸುಖದ ವಿಡಾಯತತುವಕೆ ವೇಡೆಗೊಂಡು ನವಾಯಯಲಿ ದುರ್ಗತಿಗೆ ದುವ್ಯಾಳಿಸುವನಲ್ಲ (ಕುವ್ಯಾಅ. ೮-೩೧). [ವೇಡೆ + ಕೊಳ್]

ವೇಡೆಯ, ವೇಢಯ, ವೇಢೆಯ (ನಾ). ೧. ಸುತ್ತುವರಿಯುವಿಕೆ ; ಆವರಿಸುವಿಕೆ : ಎಡ್ಡವೆನಲಿಂಡಗಟ್ಟುವ ಗಡ್ಡುಗಗುಡುವೆಡಗ ನೀರನಡಕುವ ಫಲಮಂ ಬಡ್ಡಿಸಿ ನೀಡುವ ವೇಡೆಯ [ಪಾಶಾಂ. ನಿವೇದ್ಯಮಿವೀ, ನೀಡುವ ವೇಢಯ] ಗೊಡ್ಡಾಟದ ಮುಸುಗಳಿಸದುವಾ ಮುನಿಗ್ರಹದೊಳ್ (ಕಾವ್ಯಸಾ. ೧೧೧೯); (ಜಗವಿ. ೧೬-೫೬ ನೋ). ೨. ಸುತ್ತುಗಟ್ಟಿರುವುದು ; ಆವರಣ ; ಬೇಲಿ : ಹರಗಣಾವಳಿ ಹರುಷಪುಳಕಾಂಕುರಿತಮಾನಸರಾಗ ಜೈನರನುರವಣಿಸಿ ಹಳಚಿದರು ಸುತ್ತುಂ ವೇಡೆಯವನಿಕ್ಕಿ (ಬಾಪು. ೫೧-೭೦) ; ಹರನ ಕೈಲಾಸಮಂ ಪೊಕ್ಕಲ್ಲಿ ಮೆಱೆವ ಶಂಕರನ ಬಲಗೊಂಬಂತ ವಾಜಿಗಳು ತಿಱ್ಱಂದು ತಿರುಗುವೇಡೆಯವನಿಕ್ಕೆ[ಪಾಶಾಂ. ವೆಡೆಯವನಿಕ್ಕುತ]ಸೆದಿರ್ದರಾ ಕುಮಾರರು ಲೋಕಕತಿಧೀರರು (ಭಾವಚಂ. ೮-೧೧). ೩. ಸೆರೆ ; ಬಂಧನ : ಶಿವಭಕ್ತಿ ಪ್ರಯುಕ್ತನು . . . ಘನಭುಜಾಯತನಾಗುತವರಂ ವೇಡೆಯವನಿಕ್ಕಿ ಕನಲಿ ಶೂಲಂಗಳಲಿ ತೆಗಸುತ್ತ (ಬಾಪು ೫೦-೫೨). ೪. ಕುದುರೆಗಳ ಸಮೂಹ ; ಅಶ್ವದಳ ; ಹಯಮಂಡಲ : ''ವೇಡೆಯಮನೆ ಹಯಮಂಡಲ'' (ಭಾರಸಿ. ೪೮). ೫. ಕುದುರೆಯ ಓಟದಲ್ಲಿ ಒಂದು ಬಗೆ ; ವೃತ್ತಾಕಾರವಾದ ಚಲನೆ : ಕಡುಪಿನಿಂ ವೇಡೆಯದೆ ಬೀದಿಯಂ ತೀವ್ರದುಗ್ಗಡದ ಬಹುಗಮನದಿಂ ಲಂಘಿಸುತೆ ಬಳಸುತ್ತ . . . ತುರಂಗಮಂ ಪೊದವಿಪಾಲಕರಣುಗರೇಱುತ್ತ ವೈಹಾಳಿಯುತ್ಸಾಹಮಂ ತಳೆದರಾಗ (ಭಾವಚಂ. ೮-೧೩); ಪರಿಮಂಡಲಾಕೃತಿವಡೆದ ಬೆರಲ ರೇಖೆಯೊಳು ಮೆಱೆದುದಾ ತುರಗವಾ ವೇಡೆಯದೊಳಗೆ (ಕುರಾಸಾಂ. ೯-೬೫). **ವೇಢೆಯ** : ೨. ಝಾಡಿ ಹೊರಳಿಯ ಹೊಗೆಯ ಜೋಡಿಯ ನೀಡುನಾಲಗೆ ಪುರದ ಸುತ್ತಲು ಕೂಡ ವೇಢೆಯವಾಯ್ತು ಹರಹಿನ ಕಿಡಿಯ ಗಡಣದಲಿ (ಕುವ್ಯಾಕ. ೭-೪೦). **ವೇಢೆಯ** : ೧. ಒಪ್ಪುವ ಕನ್ನಡದೊಳ್ ಸ್ವಭಾವದಿಂ ಕೆಲವು ಮಹಾಪ್ರಾಣಂಗಳೊಳವು ; ಅವಾವುವೆಂದೊಡೆ . . . ವೇಢೆಯಂ, ಢಂಕೆ, ಢೊಕ್ಕರಂ (ಶಮಪ. ೧೫ ಪೃಷ್ಠ) ; ಕೃತವರ್ಮ ಗೌತಮರು ಸಾಯಕದ ಮಳೆಗಱೆದು ಕೌರವರಾಯನನು ಹಿಂದಿಕ್ಕಿ ವೇಢೆಯ ವಾಯುಜನ ವಂಗಡವ ಮುಱಿದರು ತಱಿದರರಿಬಲವ (ಕುವ್ಯಾಕ. ೩-೭). ೨. ನಲವಿಂದ ಮಾರ್ಬಲಗಳನಿಬ್ಬಗೆಯೊಳು ನಲಿಸಲುತ್ತಮವಾಜಿಯನು ತೊಲಗು ವೇಢೆಯ ರವೆಗಾಲು ಬಂಬೀರಿಯೊಳ್ನಲಿದೇಱಿ ಮೆಱೆಯುತರ್ತಿಯಲಿ (ಕಂಸವ. ೨೨-೯೪). 'ವೇಡೆ' ಪರಾ.

[< ಸಂ. ವೇಷ್ಟನ./ ಪ್ರಾ- ವೇಢಣ]

ವೇಡ್ಕೆಸು 'ವೇಡಯಿಸು' ನೋ.

ವೇಢಯ 'ವೇಡೆಯ' ನೋ.

ವೇಢಯ್ಸು 'ವೇಡಯಿಸು' ನೋ.

ವೇಢಿಮ (ನಾ). ಹೂವುಕಟ್ಟುವುದರಲ್ಲಿ ಒಂದು ಬಗೆ ; ದಂಡೆಕಟ್ಟುವಿಕೆ (?) : ಪೂಗಟ್ಟುವರಂ ಕಂಡು ತಾನುಮವರ ಕೆಲದೊಳ್ ಕುಳ್ಳಿರ್ದು ನೂಲಿನಗ್ರ ಗ್ರಂಥಿಮ [ವೇಢಿಮ] [ಪಾಶಾಂ. ಮವೇಯಿಮ] ವೇಢಿಮ ಸಂಪೂರಿ[ಮ ಸಂಘಾಯಮ]ಮಂಬಯ್ದುಂ ತೆಱದ ಪುಷ್ಪಮಾಲೆಗಳಂ ಸಮೆದಾಗಳ್ (ಬಂಹರಿ. ೨-೨೯ ವ). 'ವೇಢಿಮ' ಪರಾ. [? / ಪ್ರಾ- ವೇಢಿಮ]

ವೇಢೆ 'ವೇಡೆ' ನೋ.

ವೇಢೆಯ 'ವೇಡೆಯ' ನೋ.

ವೇಢೆಯವಡೆ (ಕ್ರಿ). ಸುತ್ತುವರಿ ; ಬಳಸಿರು ; ವರ್ತುಲಾಕಾರವನ್ನು ಹೊಂದು : ವೇಢೆಯವಡೆದು ನಿಂದುದು ಪೆಣ್ಣು ಹರಿ ಜಲಕ್ರೀಡೆಯನಾಡಿದ ಬಳಿಕ ಕೂಡಿಸದ್ದಸ್ತ್ರಭೂಷಣ ಗಂಧಮಾಲ್ಯವ ಜೋಡಣೆಗೆಯ್ದ ಶ್ರೀಧರನು (ಪೋಹತ. ೧೪-೯೨).

[ವೇಢೆಯ (< ವೇಡೆಯ) + ಪಡ]

ವೇಢ್ಕೆಸು 'ವೇಡಯಿಸು' ನೋ.

ವೇಣ್ (ನಾ). ೧. ನೇಯುವಿಕೆ ; ಹೆಣೆಯುವಿಕೆ. ೨. ಹೆಣೆದಿರುವ ಕೂದಲು ; ಜಡೆ ; ತುರುಬು : ಶಿತಿಕಂಠಬರ್ಹಶೀರ್ಷರ್ ನುತವೇಣ ಲಸ್ಪುರಿತ ಚೂಡರಸಕೃತ್ಕ್ರೀಡರ್ (ಜಗವಿ. ೩-೭೭) ; ಮನಸಿಜರಾಣೆಯ ಮಧುಕರವೇಣೆಯ ವಿನುತ ಸದ್ಗುಣಶ್ರೇಣಿಯನು ಘನತರಶ್ರೋಣಿಯ ವರಶುಕನಾಣಿಯ ವನಿತೆಯ ಪೊಗಳಲೆನ್ನಳವೆ (ಜೀವಂಸಾಂ. ೧೦-೨೯). ೩. ಕೇಶಸಂಸ್ಕಾರವಿಲ್ಲದೆ ಇಳಿಬಿಟ್ಟ ಕೂದಲು : 'ವೇಣೇಸಂಹಾರ' ಪರಾ. ೪. ಹೆರಳನ್ನು ಉಳ್ಳವಳು ; ಸ್ತ್ರೀ; ಹೆಂಗಸು : ಮೂವರಪ್ರತಿರೂಪಾನ್ವಿತೆಯರ್ ಸಿತಾಂಶುಕೆಯರಿರ್ದರ್ಕನ್ನೆಯರ್ಕಳ್ ಮಧುವ್ರತಮಾಲಾಯತವೇಣಿಗಳ್ ಜಪಿಯಿಸುತ್ತುಂ ದಿವ್ಯಮಂತ್ರಂಗಳಂ (ಪಂರಾಮಾ. ೧೧-೫೮) ; ಬಾಳು, ವೀಣಾಪಾಣಿ ; ಬಾಳು, ಬ್ರಹ್ಮನ ರಾಣಿ; ಗಾನಗೆಯ್, ಹೇಳು, ಓ ಭಾವಗಂಗಾವೇಣಿ (ಶ್ರೀರಾಮಾ. ೫-೧೨೨). ೫. ನೆರೆ ; ಪ್ರವಾಹ ; ಹರಿವು : '' ಓಘಃ, ಪ್ರವಾಹಃ, ವೇಣೀ, ಧಾರಾ, ಸ್ರೋತಃ, ರಯಃ– ಈ ೬ ತೊಱೆಯ ಹರಿಹಂ'' (ಪಲಾಯು. ೧೧೦-೪೭); ಕರ್ನಾಟಕದ ಜನದ ಕರ್ಣವೀಣಾತುಂಬಿ ನಿನ್ನ ವಾಣಿಗೆ ವಿಕಂಪಿಸಿ, ಜೇಂಕೃತಿಯ ಬೀರಿ, ರಸದ ನವನೀತಮಂ ಹೃದಯವಿ ಮಥಿಸುವಂತೆ ಗಾಸಗೆಯ್, ಹೇಳು, ಓ ಭಾವಗಂಗಾವೇಣಿ (ಶ್ರೀರಾಮಾ. ೫-೧೨೭). ೬. ಎರಡು ಅಥವಾ ಹೆಚ್ಚು ನದಿಗಳು ಸೇರುವಿಕೆ ಮತ್ತು ಹಾಗೆ ಬಂದು ಸೇರುವ ಸ್ಥಳ ; ಸಂಗಮ : 'ತ್ರಿವೇಣಿ' ಪರಾ. ೭. ಕೃಷ್ಣಾನದಿಯ ಹೆಸರು : 'ಕೃಷ್ಣವೇಣಿ' ಪರಾ. ೮. ಒಂದು ಬಗೆಯ ಹುಲ್ಲಿನ ಹೆಸರು ; ದಾಗಡಿ. ೯. ಒಂದು ಬಗೆಯ ಮರ ; ದೇವದಾರುವೃಕ್ಷ : ''ವೇಣೀ, ಗರಾಗರೀ, ದೇವತಾಳಃ, ಜೀಮೂತಃ — ೪ ದೇವತಾಳೇವೃಕ್ಷದ ಹೆಸರುಗಳು'' (ಸಿದ್ಧಾಂತ. ೧೨೭). ೧೦. ಗೆರೆ ; ರೇಖೆ ; ಸಾಲು : ವಿಜಯಶರಾಸಘಗುಣಘಾತಜಾತ ಕಾಳಿಕೆಯನೆತ್ತಮಗ್ಗಳಿಸಿದುದಾ ಭುಜಬಲಿಯ ಭುಜದ್ವಯದೊಳ್ ಭುಜಂಗನಿಶ್ವಾಸ ಧೂಮವೇಣೀನಿಕರಂ (ಆದಿಪು. ೧೪-೧೪೧) ; ದೆಸೆದೆಸೆಗೆರಡುಸಾಸಿರವೇಣಿಗಳನಾಗ ಮಸಗಿ ಖಾನನ ಬಲುಭಟರು ಮುಸುಕಿ ಚೌದಿಕ್ಕಿನ ಕೋಟೆಯ ತೆನೆಗೆ ಸಂದಿಸಿ ಬೊಬ್ಬಿಱಿದರು (ಕಂಸವ. ೧೪-೧೨). ೧೧. ಒತ್ತಾಗಿ ಹೆಣೆದ ಹೂವಿನ ದಂಡೆ : ಅವರು ಮಾರ್ಕ್ಕಟನಿಂದ ನಾಲ್ಕು ಕನಕಾಂಬರಹೂವಿನ ವೇಣಿಗಳನ್ನು ತಂದರು (ಜೂಪ). [ಸಂ.]

ವೇಣ್ (ನಾ). ಸುಗಂಧದ್ರವ್ಯ ಮುಂತಾದುವನ್ನು ತೂಗುವ ಒಂದು ಪ್ರಮಾಣ : ಹವಳಕ್ಕೆ ಕಣಜುಗಟ್ಟಳಿ ಭುವನದೊಳಂಚೆವು ಅಡಹು ಮುತ್ತಿನ ಮಣಿಗಂ ಧ್ರುವದಿಂ ಮಂ(ಜ)ಡಿ ವಜ್ರಕೆ ಜವದಿಂ ಕತ್ತುರಿಗೆ ವೇಣ ತಪ್ಪದು ಗಣಕಾ (ವ್ಯವಹಾ. ಅನುಬಂಧ. ೧-೩-೧೫೩). [?]

ವೇಣೇಬಂಧ (ನಾ). ಹೆಣೆದ ಕೂದಲು ; ಜಡೆ ; ತುರುಬು : ಉಗುಳುತ್ತುಂ ಸಿಡಿಲಂಬ ತೋರಕಿಡಿಯಂ ಕಾಲೂಱಿ ಭೂಭಾಗದೊಳ್ ಗಗನಾಭೋಗಮನೆಯ್ದೆ ನೀಳ್ದು ಘನವೇಣೀಬಂಧಮಂ ಬಿರ್ಚಿ . . . ಒಗೆದಂ ಕಾರೆಂಬ ಕಾಳಾಸುರಂ (ಮಲ್ಲಿಪು. ೮-೯೪) ; ತಿವಿದವೆಳಮುತ್ತುಗಳ ಚಂದ್ರಿಕೆ ಜವಳಿಸಿದವೊಂದೊಂದನೌಕಿದವ ವಿರಳಿತಮಣಿಕಿರಣ ವೇಣೀಬಂಧಬಂಧುರದಿ (ಕುವ್ಯಾಸ. ೧೩-೨೬). [ಸಂ.]

ವೇಣೀಬಂಧಕ (ನಾ). = ವೇಣೀಬಂಧ : ದೈವದ ಪರುಷವಣೆ ದುಶ್ಶಾಸನನ ನೆತ್ತರಿನ ವೇಣೀಬಂಧಕಘಟಿತವಾಯ್ತು ಸಂಬಂಧ (ಕುವ್ಯಾಕ. ೧೭-೪೬). [ಸಂ.]

ವೇಣೇಸಂಹಾರ (ನಾ). ೧. ಬಿಚ್ಚಿದ್ದ ಕೂದಲನ್ನು ಸೇರಿಸಿ ಹೆಣೆಯುವಿಕೆ; ಹೆರಳು ಹಾಕುವಿಕೆ : ಊರುಗಳನುಡಿವೆನೊದೆವೆಂ ಕೌರವಪರಿಬೃಢನ ಮಕುಟಮಂ ವೇಣೀಸಂಹಾರಂ ಮಾಡುವೆಂ (ಗದಾಯು. ೧-೭೦); ಕೌರವಶ್ರೇಷ್ಠನ ತೊಡೆಗಳನ್ನು ಮುರಿಯುತ್ತೇನೆ . . . ಬಳಿಕ ವೇಣೀಸಂಹಾರ ಮಾಡುತ್ತೇನೆ (ಭಾಮಣ. ೬೯).

೨. ಭಟ್ಟನಾರಾಯಣನೆಂಬ ಕವಿಯು ಸಂಸ್ಕೃತದಲ್ಲಿ ರಚಿಸಿದ ಒಂದು ಪ್ರಸಿದ್ಧವಾದ ನಾಟಕದ ಹೆಸರು : ಅವನ 'ವೇಣೀಸಂಹಾರ' ವು ಬಹುವಿನಂದಿಂದ ಲಾಕ್ಷಣಿಕರಿಗೂ ಪಂಡಿತರಿಗೂ ಪ್ರಿಯವಾದದ್ದಾಗಿದೆ (ಸಂನಾಟ. ೨೩೭). [ಸಂ.]

ವೇಣು (ನಾ). ೧. ಬಿದಿರು; ಬೊಂಬು : ಬೀಡಿಂಗಳ ಬೀಡುವಿಡಲ್ ನೆಲನುಮೊಲೆಗಲ್ಗಳ್ಳಿ ಬೆಟ್ಟುಗಳುಂ ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ ದಂಡಿಗೆಗ ವೇಣುವನಂಗಳು ಮಾನೆಗಂಬಕ್ಕೆ ಪೆರ್ಮರಂಗಳುಮಾ ಪಡೆಗೆ ನೆಲೆಯವೆನಿಸಿ (ಪಂಪಭಾ. ೯-೧೦೪ ವ); ವಿತತಧರ್ಮಶ್ರವಣವಂತ್ಕಾಲದೊಳಗಾಶ್ರಿತಪರ್ವವಿಭವ ವೇಣುಗಳೊಳು ಸ್ವಸ್ಥತಾ ಗತಿ ಮುಕ್ತರಾದವರೊಳಲ್ಲದಾ ನಾಡೊಳಲ್ಲ (ಪಚಕಾ. ೨-೧೧). ೨. ಬಿದಿರಿನಿಂದ ಮಾಡಿದ ಒಂದು ವಾದ್ಯ; ಪಿಳ್ಳಂಗೋವಿ; ಕೊಳಲು : ಮಹಾಶ್ವೇತೆಯ ಕಣ್ಣಂಬಿದು ವೇಣುರವಂಗಳುಮಂ ವೀಣಾನಾದಂಗಳುಮುಂ . . . ಪ್ರತೀಹಾರಿಯರ್ ನಿವಾರಿಸುತ್ತಮಿರ್ದರ್ (ಕಾದಂಪು. ೪೬); ವೇಣು ವೀಣೆಗಳಿಂಪುದನಿ ಕರ್ಣಕಮೃತಮಂ ಸೂಸುತಿರ (ಶ್ರೀರಾಮಾ. ೭೭-೬೫೦). [ಸಂ.]

ವೇಣುಕಾಂಡ (ನಾ). ಬಿದಿರು ಮೆಳೆ : ತದ್ವ್ಯಜದೀರ್ಘದಂಡಾಕಾರಮಂ ತಳದು ಬಾಂದಳಮಂ ಮುಟ್ಟ ನಿಮಿರ್ದು ನಿಂದ ವೇಣುಕಾಂಡದಿಂ . . . ಮಹಾಗಹನವೊಪ್ಪಿರ್ದುದಲ್ಲಿ (ಶಬಶಂ. ೩-೩೫ ವ). [ಸಂ.]

ವೇಣುಗಾನ (ನಾ). ಕೊಳಲನ್ನು ನುಡಿಸುವಿಕೆ ; ಕೊಳಲುವಾದನ : ಸಾಕ್ಷಾತ್ ಶ್ರೀಕೃಷ್ಣ ವೇಣುಗಾನಚತುರನೂ ಈಶ್ವರ ಡಮರುಗವಾದಕನೂ ಚತುರ್ಮುಖಬ್ರಹ್ಮ ಮತ್ತು ನಂದಿ ಮದ್ದಳೆವಾದಕರೂ ಆಗಿದ್ದಾರೆ (ಸಂಗೀಚಂ. ೧೦೮). [ಸಂ.]

ವೇಣುಗೀತ (ನಾ). ೧. ಕೊಳಲಿನ ಮೂಲಕ ನುಡಿಸುವ ಹಾಡು ; ವೇಣುಗಾನ : 'ವೇತ್ರಗೀತ' ಪರಾ. ೨. ಕೃಷ್ಣನ ಕೊಳಲಿನ ಮಾಧುರ್ಯವನ್ನು ವರ್ಣಿಸಿ ಶ್ರೀಪಾದರಾಜರು ರಚಿಸಿರುವ ಗೀತಸಾಹಿತ್ಯ : ಶ್ರೀ ಶ್ರೀಪಾದರಾಜರು ರಚಿಸಿರುವ ಭ್ರಮರಗೀತ, ವೇಣುಗೀತ ಮತ್ತು ಗೋಪೀಗೀತಗಳು ತಿಳಗನ್ನಡಮಾತುಗಳ ಸುಂದರ ಸಾಹಿತ್ಯ (ಜಗದಾ. ೪೧). [ಸಂ.]

ವೇಣುಗೋಪಾಲ (ನಾ). ಕೊಳಲೂದುವ ಗೋಪಾಲ ; ಮುರಳೀಧರ ; ಕೃಷ್ಣ : ಧ್ಯಾನಮೂಳ್ಪ ಸಜ್ಜನರ ಮಾನದಿಂ ಪರಿಪಾಲಿಸುವ ವೇಣುಗೋಪಾಲಾ ಗೋವಿಂದಾ ವೇದ ವೇದ್ಯ ನಿತ್ಯಾನಂದಾ (ಪುರಂದ. ಧಾ. ೯-೯೯; ಅನುಪಲ್ಲವಿ) ; ಸಿಕ್ಕಿದನಲೆ ಜಾಣೆ ಶ್ರೀ ವೇಣುಗೋಪಾಲ ಭಕ್ತವತ್ಸಲದೇವನು (ಪುರಂದ. ಧಾ. ೪-೫೯ ಪಲ್ಲವಿ.). [ಸಂ.]

ವೇಣುಚಕ್ರವಾದ್ಯ (ನಾ). ಒಂದು ಬಗೆಯ ವಾದ್ಯ : ಮುಖವೀಣೆಯ ಮೋಹಗಳಿಂದಂ ರಾವಣವೀಣೆಯ ರಂಜಕರಿಂ ವೇಣುಚಕ್ರವಾದ್ಯದ ಚಾಣರಿಂದಂ . . . ಒಪ್ಪಿದತ್ತಾ ಮಹಾಲಿಂಗದಾಸ್ಥಾನಂ (ಪಮ್ಮಾರ. ೪-೪೧ ವ). [ಸಂ.]

ವೇಣುದಂಡ (ನಾ). ಬಿದಿರಿನ ಕೋಲು, -- ಬೆತ್ತ : ಶಿಖಾ ಯಜ್ಞೋಪವೀತ ವೇಣುದಂಡ ಕಮಂಡಲ . . . ಉಳ್ಳಾತನಾಗಿ (ವಿವೇಕ. ೧೧೮) ; ಸಾತಿಶಯ ವೇಣುದಂಡಂ ವಿಚಾರದ ಖರ್ಪರಾ ತಾಮ್ರಮುದ್ರೆಯು ಶಿಲಾಭಸಿತಲೇಪನಂ ನೂತನದ ಕಾಷಾಯದಂಬರಂ ಪ್ರಾಣಲಿಂಗಂ ಚೆನ್ನಮಲ್ಲೇಶ್ವರಂ (ಗುಚು. ೧-೭೨). [ಸಂ.]

ವೇಣುದಾರಿತ (ನಾ). [ಕಾಮಶಾ] ಒಂದು ಬಗೆಯ ರತಿಬಂಧ : ಪದ್ಮಿನಿ ಪದ್ಮಾಸನದಿಂ ನಾಗರಕಬಂಧದಿಂ ಚಿತ್ತಿನಿ ಶಂಖಿನಿ ವೇಣುದಾರಿತದೆ ಹಸ್ತಿನಿ ತಣಿಕುಂ ಸ್ಕಂಧಪಾದದಿಂ ಕೂಡುವಿನಂ (ಮನ್ಮಥ. ೨-೮). [ಸಂ.]

ವೇಣುದಾರಿತಕ (ನಾ). ೧. ಬಿದಿರು ಸೀಳುವಿಕೆ, — ಭಾಗವಾಗುವಿಕೆ. ೨. = ವೇಣುದಾರಿತ. ೧,೨ : ಪರಿಕಿಸೆ ವೃಕ್ಷಾರೋಹಣ ವರಾಹಚರ್ವಿತಕ ವೇಣು ದಾರಿತಕಂಗಳ್ ಕರವಸೆಯೆ ಕಾಮಶಾಸ್ತ್ರದ ದೊರೆಯಾದುದು ಶಬರಶಿಶು ಗಳುಜ್ಜುಗಮದಱೊಳ್ (ಚಂದ್ರಪ್ರ. ೫-೫೫). [ಸಂ.]

ವೇಣುನಾದ (ನಾ). ೧. ಕೊಳಲಿನ ಧ್ವನಿ : ವೇಣುನಾದಮನೊಸೆದಾಲಿಸಲ್ ಕವಿಗಳೀಕೆಯೊ ಸಾಸಿರವಾದುವಿಲ್ಲೆನುತ್ತಮವರವರಂ ಮನಂಗೊಳೆ ನೆಗಟ್ಟುದು ಕೃಷ್ಣನ ವೇಣುನಿಸ್ವನಂ (ಜಗಪ. ೫-೫). ೨. ಕೊಳಲನ್ನೂದುವವನು : ಕೃಷ್ಣ : ವೇಣುನಾದ ಬಾರೊ ವಂಕಟರಮಣನೆ ಬಾರೊ (ಪುರಂದ. ಧಾ. ೪-೮೨ ಪಲ್ಲವಿ.). [ಸಂ.]

ವೇಣುಪತ್ರ (ನಾ). ೧. ಬಿದಿರಿನ ಎಲೆ : ಚೂತಪಲ್ಲವೋದಾರರಸಂಗಳಂ ಸವಿವ ಕೋಗಿಲೆ ಮಲ್ಲುದ ವೇಣುಪತ್ರಮಂ (ವೃಷವಿ. ೮-೧೧) ; ಒಣಗಿದ ವೇಣುಪತ್ರಗಳಿಂದ ಹರವಿಹೋದ ಹಳ್ಳಿಯ ಅಂಗಳಗಳ ಬದಿಯಿಂದ ನಡೆದು . . . ಹೊರಟದ್ದಾರೆ (ಇಪ್ರಕ. ೩೫೨). ೨. ಒಂದು ಬಗೆಯ ಔಷಧೀಸಸ್ಯ : "ಕಟ್ಟಂತಸಾಲಿಕಾ – ವೇಣುಪತ್ರ" (ಓಷಧಿ. ೨೭). [ಸಂ.]

ವೇಣುಪತ್ರಿ (ನಾ). ಒಂದು ಬಗೆಯ ಔಷಧೀಸಸ್ಯ : "ಇಂದೀವರಾ — ವೇಣುಪತ್ರಿ" (ಓಷಧಿ. ೧೪). [?]

ವೇಣುಬೀಜ (ನಾ). ಬಿದಿರಿನ ಅಕ್ಕಿ ; ಬಿದಿರಿನ ಬೀಜ : ವೇಣುಬೀಜಮಂ ವನಚರಿ ಕುಟ್ಟುತುಂ ಪದದು ಪಾಡಿದಳ್ (ಪುಷ್ಪಪು. ೫-೯೩). [ಸಂ.]

ವೇಣುವಾದನ (ನಾ). ಕೊಳಲನ್ನು ಊದುವಿಕೆ : ಮಧುರಸ್ವನಪತ್ರವಾದ್ಯನಿರತರ್ ಮನೋಜ್ಞಗೋಪಾಲವೇಣುವಾದನಸುಭಗರ್ (ಜಗವಿ. ೩-೭೭). [ಸಂ.]

ವೇತಂಡ (ನಾ). ಆನೆ ; ಗಜ : ಇತ್ತಲೀ ಕುವಲಯಾಪೀಡವೇತಂಡಮುಮನೊಡನೊಡನೆ ಕಂಡು (ಜಗವಿ. ೭-೪೮ ವ) ; ಗಜನ್ಮಗೇಂದ್ರದಂಷ್ಟ್ರಮಂ ಕಂಡ ವೇತಂಡದಂತೆ . . . ಭಯಂಗೊಂಡು (ಪುಷ್ಪಪು. ೧೩-೨೬ ವ). [ಸಂ.]

ವೇತಂಡಯಾನ (ನಾ). ಆನೆಯ ನಡಗೆಯಂತಹ ನಿಧಾನವಾದ ನಡಗೆ ; ಗಜಗಮನ : ತೊಂಡವಾಯ್ದಱೆಯ ಶಶಿಮಂಡಲಾನನದ ವೇತಂಡಯಾನದ . . . ಅಬಲೆ ನೇಪಾಳದವಳು (ಜನವ. ೭-೧೯). [ಸಂ.]

ವೇತನ (ನಾ). ೧. ಕೆಲಸ ಮಾಡಿದ್ದಕ್ಕೆ ಕೊಡುವ ಪ್ರತಿಫಲ ; ಸಂಬಳ : ಬಗ ದನೆವಂತೆಂದಂದುಂ ಜಗ ಮೆಚ್ಚುವ ತೆರದ ಬೀಱ್ ವೇತನಮನಿತೋ (ಮೃಷಮ. ೫-೮೮); ಪ್ರತಿಯೊಬ್ಬ ಕೆಲಸಗಾರನಿಗೂ ವೇತನವೂ ಗೌರವವೂ ಸಲ್ಲಬೇಕು (ಕ್ರಯಾಶಿ. ೧೨). ೨. (ಉನ್ನತವ್ಯಾಸಂಗಕ್ಕಾಗಿ ಕೊಡುವ) ಸಹಾಯಧನ, — ಪ್ರೋತ್ಸಾಹ ಧನ: ಸೊಸೈಟಿಯವರು ಇವರ ಸಾಮರ್ಥ್ಯವನ್ನು ಮನಗಂಡು ಇಂಗ್ಲೀಷ್ ಭಾಷಾಸಾಹಿತ್ಯಗಳ ವಿಶೇಷವ್ಯಾಸಂಗಕ್ಕಾಗಿ ವೇತನ ಕೊಟ್ಟು ಇವರನ್ನು ಆಕ್ಸ್‌ಫರ್ಡಿಗೆ ಕಳುಹಿಸಿದರು (ಸಮಾರೋ. ೬೫). ೩. ಬೆಲೆ ; ಮೌಲ್ಯ : "ಭೃತಿಃ, ಭೃತ್ಯಾ . . . ವೇತನಂ — ಈ ೬ ಬೆಲೆ" (ಪಲಾಷಾ. ೧೨೦-೪೬). [ಸಂ.]

ವೇತಸ (ನಾ). ೧. ಒಂದು ಬಗೆಯ ಬಿದಿರು ; ಹಬ್ಬೆ : ವೇತಸ ಕದಂಬ ಪ್ರಿಯಂಗು ಶಿರೀಷ ಪಲಾಶ ರಾಜವೃಕ್ಷಾಭಿದಾನ ತರುಗಳ್ ಪತಾಕಾಚಿಹ್ನಂಗಳುಂ (ತತ್ಪ್ರಪ್ರ. ೧೮೬). 'ಅಂಬುವೇತಸ' ಪರಾ. ೨. ಜೊಂಡುಹುಲ್ಲು : ಹರಿವ ಬಹುವಾರಿಪ್ರವಾಹಕೆ ತರು ಮಲತು ಬೀಳುವುದು ತಲೆವಾಗಿರುತ ವೇತಸಕುಂಜವಳಿದಿಹವು (ತಿಮ್ಮಶಾ. ೩-೪೧). [ಸಂ.]

ವೇತಸೇಯ (ನಾ). ಒಂದು ಬಗೆಯ ಔಷಧೀಸಸ್ಯ : "ಕುಂಭೀರಃ – ವೇತಸೇಯ ಭೇದ, ಗುಳ್ಳೆ," (ಓಷಧಿ. ೩೫). [?]

ವೇತಾಲ, ವೇತಾಳ (ನಾ). ೧. ಒಂದು ಬಗೆಯ ಭೂತ ; ದೆವ್ವ : ಬಿಜುದನಿಯ ಭೂತವೇತಾಲ[ಪಾಠಾಂ. ಳ]ಸಂಕುಲದಡಗಿನಱಕೆಗಳ ಸುಡುಗಾಡೊಳಾ ವಂತ್ರಿ ಚಂಡಿಕಾಲಯದೆಡೆಗ ನಡತಂದನು (ಜೈಮಿಭಾ. ೩೧-೫೫). ೨. ಬಾಗಿಲು ಕಾಯುವವನು ; ವೈತಾಲಿಕ ; ದ್ವಾರಪಾಲಕ. ೩. ಉಪಾಧ್ಯಾಯ ; ಗುರು : "ವೇತಾಲ [ಪಾಠಾಂ. ಳ]ನಾಚಾರ್ಯನಕ್ಕುಂ" (ಪಂಗರಾ. ೪೮-೩೮). **ವೇತಾಳ** : ೧. ಭೂತದ ಕೈಯಲೊಂದಱುವ ಅದು ವೇತಾಳನುದ್ದಕ್ಕೆ ನಿಂದಿತು ಭೂತ ಸತ್ತಿತು (ಅವಚಂ. ೫೯-೧೩೧); ಅಣುಗನಂ ವೇತಾಳನಿಹ ವೇದಿಕೆಯ ಮುಂದೆ . . . ಕುಳ್ಳಿರಿಸಿ (ನವಮೋ. ೧೨-೨೩). [ಸಂ.]

ವೇತಾಲಪಂಚವಿಂಶತಿ (ನಾ). ಬೇತಾಳವು ವಿಕ್ರಮಾದಿತ್ಯನಿಗೆ ಹೇಳಿದ ಇಪ್ಪತ್ತೈದು ಕಥೆಗಳ ಸಂಗ್ರಹದ ಹೆಸರು : (೬). [ಸಂ.]

ವೇತಾಳ 'ವೇತಾಲ' ನೋ.

ವೇತಾಳಕ (ನಾ). ಮೆಟ್ಟಿಕೊಂಡಿರುವ ಭೂತಪ್ರೇತಗಳನ್ನು ಬಿಡಿಸುವವನು; ಮಂತ್ರವಾದಿ : ಹಳೆಯ ವೇತಾಳಕರು ಹೆಬ್ಬುಲಿ ಹಲವುಜುಟ್ಟುಗ ಮಾಣಿಭದ್ರರು ಬಲು ಭುಜಂಗಳ ತೂಡಿಗಯೊಪ್ಪುವ ರೌದ್ರಮುಖರಿರಲು (ಕಾಶಿರಾ. ೧೯-೬೫). [< ಸಂ. ವೈತಾಲಿಕ]

ವೇತಾಳವಡೆ (ನಾ). ದೆವ್ವಗಳ ಸಮೂಹ; ಪಿಶಾಚಿಗಳ ಗುಂಪು: ಅಂತುತ್ಪಾತ ವೇತಾಳವಡೆಯಂತೆ ಭಯಂಕರಾಕಾರಮಾದ ಬೇಡವಡೆಯ ನಡುವೆ . . . ಬಂದಂ ಪುಳಿಂದ ಪ್ರಕರ ಬಹುಳಸೇನಾಪರೀತಂ ಕಿರಾತಂ (ಕಾದಂಪು. ೧೬೬). [ವೇತಾಳ (= ವೇತಾಲ) + ಪಡೆ]

ವೇತ್ರ 'ವೇತ್ತಾರ' ನೋ.

ವೇತ್ತಾರ, ವೇತ್ರ (ನಾ). ತಿಳಿದವನು ; ಜ್ಞಾನಿ : ಲಿಂಗದ ಅನುಭವದಿಂದ . . . ಮಾನವಜೀವನದ ಮಹಾಸಮಸ್ಯೆ ಬಗೆಹರಿದಂತಾಯ್ತೆ? ಬಗೆಹರಿಯಿತೆಂದು ತಿಳಿದುಕೊಂಡ ವೇತ್ತಾರರಿದ್ದಾರೆ (ವಚಸಂ. XV. ಪೀಠಿಕೆ). **ವೇತ್ತ** : ಪೌಷ್ಣಾಶ್ಮನು ಪಾಶದಳನಕಳಾವಿದಂ ದಿವ್ಯಾಗಮಪುರಾಣಾವಿರಳಪರಮಾರ್ಥವೇತ್ತನು (ಬಸಪು. ೪೬-೧). [< ಸಂ. ವೇತ್ತೃ]

ವೇತ್ತಿ (ನಾ). ಲೋಹಗಳನ್ನು ಪರೀಕ್ಷಿಸುವ ಸಾಧನ ; ಒರೆಗಲ್ಲು : "ಪರೀಕ್ಷಿತಂ ವೇತ್ತಿಯನಲೊರೆಗಲ್ಲು" (ಮಂಗರಾ. ೧೦೫-೧೪). [?]

ವೇತ್ತೃ (ನಾ). ೧. = ವೇತ್ತಾರ. ೨. ಋಷಿ ; ಮುನಿ. ೩. ಹೊಂದುವವನು; ಪಡೆಯುವವನು. [ಸಂ.]

ವೇತ್ತೃತೆ (ನಾ). ತಿಳಿವಳಿಕೆ ; ಜ್ಞಾನ : ಶಾಬ್ದವೇ [ಪಾಠಾಂ. ನೇ]ತ್ತೃತೆ ಷಟ್ತರ್ಕವಿತರ್ಕ ಭೇತ್ತೃತೆ . . . ಏಂ ಚೋದ್ಯಮ ವರ್ಧಮಾನಮುನಿಯೊಳ್ (ಚಂದ್ರಪ್ರ. ೧-೩೧).

[ಸಂ. ವೇತ್ತೃತಾ]

ವೇತ್ರ (ನಾ). ೧. ಒಂದು ಜಾತಿಯ ಬಿದಿರು ; ಬೆತ್ತ : ಅನೇಕರುಚಿವಿಚಿತ್ರ ವೇತ್ರವಿಶಿಖಾತಿರುಚಿರಪ್ರಾಂತಕುಂತಮನುತ್ತರೀಯಕಂಟಕಮತಿಸುಭಟಮದೋತ್ಕಂಟ ಮಿದು ಕರ್ಣಾಟಬಲಂ (ಆದಿಪು. ೧೩-೪೫ ವ). ೨. (ದ್ವಾರಪಾಲಕನು ಹಿಡಿದು ಕೊಳ್ಳುವ) ಕೋಲು ; ದಂಡ : ಪ್ರಾಂಚತ್ಕಾಂಚನವೇತ್ರಮಂಜುಳಕರಂ ಕೂರ್ಪಾಸವಿಭ್ರಾಜಿತಂ . . . ಬಂದಂ ಪ್ರತೀಹಾರಕಂ (ರಾಜಶೇ. ೫-೨೩). ೩. ಕೊಳಲು; ವೇಣು : 'ವೇತ್ರಗೀತ' ಪರಾ. [ಸಂ.]

ವೇತ್ರಕೀಯ (ಗು.) ೧. ಬಿದಿರಿನ ; ಬೆತ್ತದಿಂದ ಕೂಡಿದ : 'ವೇತ್ರಕೀಯಗೃಹ' ಪರಾ. (ನಾ). ೨. ಬೆತ್ತದ ಗಿಡಗಳು ಗುಂಪುಗುಂಪಾಗಿ ಬೆಳೆಯುವ ಪ್ರದೇಶ. [ಸಂ.]

ವೇತ್ರಕೀಯಗೃಹ (ನಾ). ಬಿದಿರಿನಿಂದ ನಿರ್ಮಿಸಿದ ಮನೆ, — ಕುಟೀರ : ನಮ್ಮ ದೊರ ವೇತ್ರಕೀಯಗೃಹದಲ್ಲಿದ್ದಾನೆ (ವಚಭಾ. ೪೫). [ಸಂ.]

ವೇತ್ರಖೇಟಕ (ನಾ). ಬೆತ್ತದಿಂದ ಮಾಡಿದ ಗುರಾಣಿ ; ಬಿದಿರಿನ ಹರಿಗೆ : ಮತ್ತೀ ಭಾಗದೊಳಭಿನವಪ್ರಿಯಂಗುಶ್ಯಾಮಾಂಗವರ್ಧಚಂದ್ರಬುದ್ಬುದವ್ಯಾಕೀರ್ಣ ತ್ರಿಶೂಲಕರಾಲವಿಶಾಲವೇತ್ರ[ಪಾಠಾಂ. ಮಿತ್ರ]ಖೇಟಕಂ . . . ಇದು ವರಾಟಸುಭಟಬಲಂ (ಆದಿಪು. ೧೩-೪೫ ವ). [ಸಂ.]

ವೇತ್ರಗೀತ (ನಾ). ೧. ಕೊಳಲಿನ ಗಾನ. ೨. ಕೊಳಲನ್ನು ಊದುವವನು : ಮಂತ್ರಿ ಸೇನಾಧವರು ನಾಟಕ ವೇತ್ರಗೀತರು ಹಾಸ್ಯ ಮೊದಲಾಗಿ ತವದ ಅಷ್ಟಾದಶವು . . . ಒಪ್ಪಿಹುದು (ಬಜ್ಜಪು. ೨೩-೩೪). [ಸಂ.]

ವೇತ್ರದಂಡ (ನಾ). ದ್ವಾರಪಾಲಕನು ಹಿಡಿಯುವ ಬೆತ್ತದ ಕೋಲು : ವೇತ್ರದಂಡಮಂ ಪಿಡಿದು ನಿಂದಿರ್ದ ಪಡಿಯಱತಿಯರಿಂ ರಮ್ಯಂಬಡದು ಅನಂಗನಾಜ್ಞಾ ಸೀಮೆಯಂ ಪಡೆದಂತಿರ್ದ ಪಚ್ಚೆಯ ತೆರೆಯ ಕಂಡು (ನಂದಿ. ೧೨-೪೧). [ಸಂ.]

ವೇತ್ರದಂಡಧರ (ನಾ). ಬೆತ್ತದ ಕೋಲನ್ನು ಹಿಡಿದಿರುವ ದ್ವಾರಪಾಲಕ ; ಕಟ್ಟಿಗೆಕಾರ : ನೃಪತಿ ನುಡಿಯೆ ನುಡಿಯಿಂ ನೀಮಿರ್ಪೆಡೆಯೊಳಿರಿಂ ನೀಮಱಿವಿರ್ ಮಿಡುಕಿದೊಡೆನೆ ಚತ್ರವೇತ್ರದಂಡಧರರ್ಕಳ್ (ಆದಿಪು. ೯-೬) ; (ಪಂಪಭಾ. ೧೪-೨೨ ನೋ.).

[ಸಂ.]

ವೇತ್ರಧರ (ನಾ). = ವೇತ್ರದಂಡಧರ : ಪೆಡಂಮೆಟ್ಟುವ ರಾಜಹಂಸಸಮಾಜ ಮನೋಜೆಯಿಂ ಕರೆದುಚಿತಸ್ಥಾನದೊಳ್ ನಿಲಿಪ ವೇತ್ರಧ[ಪಾಠಾಂ. ಧಾ]ರರಿಂ (ರಾಜಶೇ. ೫-೧೯ ವ) ; ಅನೇಕ ಪರಿಯಲಿ ಪೊಗಳ್ವ ವಂದಿಜನಂಗಳಿಂ ಓದುವ ಪಾಠಕರಿಂ ಉಗ್ರಡಿಸುವ ವೇತ್ರಧರರಿಂ (ಸನ್ನಚಾ. ೫-೧೧೮ ವ). [ಸಂ.]

ವೇತ್ರಧಾರಕ (ನಾ). = ವೇತ್ರದಂಡಧರ : ಪರಿಹಾಸ ಮಾಡುತೆಲ್ಲರ ಕುಣಿಸಾಡುತ್ತಿರೆ ಕಂಡು ವೇತ್ರಧಾರಕರು ಪೊಯ್ಕಲವರ ಕೆಟ್ಟು ಬಯ್ಕೆ (ಧರವೇ. ೧-೧೬.೨). [ಸಂ.]

ವೇತ್ರನಾಳಿ (ನಾ). ಬಿದಿರಿನ ಕೊಳವೆ, — ನಳಿಕೆ : ಚತುರಂಗುಲಪ್ರಮಾಣೋಚ್ಛ್ರಿತ ಮಪ್ಪುದು ವೇ [ಪಾಠಾಂ. ನೇ]ತ್ರನಾಳಿ ತತ್ಸುಷಿರಂ ಪ್ರಸ್ತುತಮಂಗುಲಪ್ರಮಾಣಾಕೃತಿಯಾಗಿ ನಿರೂಹಕರ್ಮಣಕ್ಕುಪಯೋಗ್ಯಂ (ಅಶ್ವಶಾ. ೧೦-೧೯). [ಸಂ. ವೇತ್ರನಾಲಿ]

ವೇತ್ರಲತೆ (ನಾ). ಎಳಸಾದ ಬೆತ್ತ, — ಬಿದಿರು : ಅವನಿಪತಿಗೃಹದ್ವಾರದಂತ ವೇತ್ರ ಲತಾಶತದುಷ್ಪ್ರವೇಶಮುಂ ವಿರಾಟನಗರಿಯಂತೆ ಕೀಚಕಾವೃತಮುಂ . . . ಸಪ್ತವರ್ಣೋಪಶೋಭಿತಮುಂ ಕ್ರೂರಸತ್ವಮಾಗಿಯುಂ ಮುನಿಜನಸೇವಿತಮುಮೆನಿಪ್ಪುದುಂ (ಕುಪಂಪು. ೧೦೦). [ಸಂ. ವೇತ್ರಲತಾ]

ವೇತ್ರವತಿ (ನಾ). ೧. ದಂಡವನ್ನು ಹಿಡಿದುಕೊಂಡಿರುವ ದ್ವಾರಪಾಲಕಿ ; ಕಟ್ಟಿಗೆಕಾರ್ತಿ : ವೇತ್ರವತಿ, ಹೋಮಶಾಲೆಯ ಮಾರ್ಗವನ್ನು ತೋರಿಸು (ಶಾಕುಂತ. ೬೨-೧೯). ೨. ಒಂದು ನದಿಯ ಹೆಸರು : "ಶರಾವತೀ, ವೇತ್ರವತೀ, ಚಂದ್ರಭಾಗಾ, ಸರಸ್ವತೀ, ಕಾವೇರೀ — ೫ . . . ನದೀವಿಶೇಷಗಳು" (ಓದ್ಗಾಂತ. ೮೮).

[ಸಂ. ವೇತ್ರವತೀ]

ವೇತ್ರವಿಷ್ಟರ (ನಾ). ಬೆತ್ತದಿಂದ ಮಾಡಿದ ಪೀಠ ; ಬಿದಿರಿನ ಪೀಠ, — ಆಸನ : ಸಂಹರಿಪ ದಂದುಗಮಂ ಪೊಜಗಿಕ್ಕಿತೆಂಬ ಮಯ್ಸಿರಿ ಸಹಜಾತಮಾಗ ತಳದಿರ್ಪುದನುಕ್ರಮದಿಂದೆ ವೇತ್ರವಿಷ್ಟರನಿಭ ರುಲ್ಲರೀನಿಭವ್ಯಗನಿಭಾಕೃತಿಯಿಂ ಜಗತ್ರಯಂ (ಪುಪ್ಪಪು. ೧-೮೯). [ಸಂ.]

ವೇತ್ರಹಸ್ತ (ನಾ). = ವೇತ್ರದಂಡಧರ : ಮಕುಟವರ್ಧನರಂ ಕಟ್ಟಗೆಯೆತ್ತಿ ಮಟ್ಟಮಿರಿಸುವ ವೇತ್ರಹಸ್ತರಾಕ್ರಮಣಯ ನಡುವೆ ದಂಡನಾಥತ್ರಿಣೇತ್ರಸೆನಿಪ ಬಸವ ರಾಜಂ . . . ಸುಖದೊಳಿಪ್ಪಲ್ಲಿ (ಭೂಪ. ೬-೩೦) ; ಆ ಪ್ರಸ್ತಾವದೊಳ್ ವಿಚಿತ್ರ ವೇತ್ರಹಸ್ತನುಮಾರ್ಯವೇಷಪ್ರಶಸ್ತನುಮಪ್ಪ ಪ್ರತೀಹಾರನೊರ್ವನುರ್ವೀಶ್ವರಂಗೆ ಪೊಡವಟ್ಟು (ಪುಪ್ಪಪು. ೬-೩೬ ವ). [ಸಂ.]

ವೇತ್ರಾಸನ (ನಾ). ಬೆತ್ತದ ಅಥವಾ ಬಿದಿರಿನಿಂದ ಹೆಣೆದ ಆಸನ : ನದೀತನೂಜಂ ಭಾರದ್ವಾಜಂಗೆ ಬಲಿಯನಟ್ಟಿ ಬರಿಸಿ ಪೂರ್ವಸಂಭಾಷಣಾರ್ಘ್ಯಮೆತ್ತಿ ಮಧುಪರ್ಕ ವೇತ್ರಾಸನ ತಾಂಬೂಲ ದಾನಾದಿಗಳಿಂ ಸಂತಸಂಬಡಿಸಿ (ಪಂಪಭಾ. ೨-೫೮ ವ) ; ಮೊದಲೊಳ್ ವೇತ್ರಾಸನದೊಂದಿದಂದಮಂ ನಡುವೆ ರುಲ್ಲರೀವಿಭ್ರಮಮಂ . . . ಪೋಲ್ತುದು ಲೋಕಮಿದಲ್ತೆ ಲೋಕದೊಂದಾಕಾರಂ (ಆಜಿಪು. ೧೧-೪). [ಸಂ.]

ವೇತ್ರಿ (ನಾ). = ವೇತ್ರದಂಡಧರ : ನೃಪವಧೂವರ್ಗಂ ತದಾಳೀಜನಂ ನಿರುತಂ ಮುಂತಿರೆ ವೇತ್ರಿ ಖಡ್ಗಧರರುಂ ಪರ್ಯಂತದಲ್ಲೊಪ್ಪುಗುಂ (ಲಾಸ್ಯರಂ. ೧-೩೫).

[ಸಂ. ವೇತ್ರಿನ್]

ವೇತ್ರಿಗ (ನಾ). ೧. = ವೇತ್ರದಂಡಧರ : ದೇವೇಂದ್ರ ವಂದಿಸು ಕೆಲಕಾಗಿರ್ಕೆ ದಿಕ್ಪಾಲರೆಲ್ಲ ಯೋಗಿಗಳ್ಕುರಿರೆಂಬ ವೇತ್ರಿಗರ ಶಬ್ದಾಗಮ ಕೇಳುತೆಯ್ದಿದನು (ಭರಚ. ೪೪-೭೧). ೨. ಅಧಿಕಾರಸೂಚಕವಾದ ದಂಡವನ್ನು ಧರಿಸಿದವನು ; ಅಧಿಕಾರಿ : ವೇತ್ರಿಗರು ಚಂದದಿಂ ಕರವತ್ತಿ ಅವಧರಿಸೆಂದು ಹೊಗಳಿದರ್ (ಬಜ್ಜಪು. ೮೧-೨೩). [ವೇತ್ರ + - ಇಗ]

ವೇದ (ನಾ). ೧. ಅರಿವು ; ತಿಳಿವಳಿಕೆ ; ಜ್ಞಾನ : 'ವೇದ' ಎಂಬ ಮಾತಿಗೆ 'ಜ್ಞಾನ' ಎಂದು ಅರ್ಥ (ಭಾರದ. ೧೯). 'ವೇದನಿಧಿ' ಪರಾ. ೨. ಶ್ರುತಿ, ಧರ್ಮ ಮತ್ತು ಬ್ರಹ್ಮಜ್ಞಾನಬೋಧಕವಾದ ಅಪೌರುಷೇಯ ವಾಕ್ಯರಾಶಿ ; IP ಋಗ್ವೇದ, ಯಜುರ್ವೇದ ಮತ್ತು ಸಾಮವೇದವೆಂಬ ಮೂರು ವೇದಗಳು ಮೂಲವೆಂದೂ ನಂತರ ಅಥರ್ವಣ ವೇದವು ಸೇರಿತೆಂದೂ ಪ್ರತೀತಿಯಿದೆ : ಪದಿನೆಂಟು ಧರ್ಮಶಾಸ್ತ್ರಂಗಳೊಳಂ ನಾಲ್ಕುವೇದದೊಳಂ . . . ಆರೂಢಸರ್ವಜ್ಞ ಮಹೇಂದ್ರಜಾಣ (?)[ನು]ಮಾಗಿ (ಪಂಪಭಾ. ೨-೩೪ ವ) ; ವೇದಶ್ರುತಿಗಳ ತಿಳಿಯಲಱಿಯದೆ ವಾದವ ಮಾಡುವರೆಲ್ಲಾ (ಬಸವ. ೫೪೫) ; ಅರಸುಗಳಿಗಿದು ವೀರ ದ್ವಿಜರಿಗೆ ಪರಮ ವೇದದ ಸಾರ (ಕುವ್ಯಾಳ. ೧-೧೯) ; ವೇದ ಸುಳ್ಳಾದರೂ ಗಾದೆ ಸುಳ್ಳಾಗದು (ಗಾದೆ). 'ಚತುರ್ವೇದ', 'ತ್ರಯಿ' ಪರಾ. ೩. ವಿದ್ಯೆ ; ಶಾಸ್ತ್ರ. ೪. ಬ್ರಹ್ಮ. ೫. ವಿಷ್ಣು. ೬. [ಜೈನ] ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ ಮೊದಲಾದ ದ್ವಾದಶಾಂಗಗಳುಳ್ಳ ಶಾಸ್ತ್ರ : ಎರಡ(ಎಂಟ)ನೆಯ ದೀಕ್ಷಾನ್ವಯಕ್ರಿಯೆಯೊಳ್ ಅವತಾರಮೆಂಬುದು ತನ್ನನಾಶ್ರಯಿಸಿದ ಭವ್ಯಜನಕ್ಕೆ ವೇದಮುಂ . . . ಎಂಬ ದಶವಿಧಗಳಲ್ಲಿ ಮೊದಲ ವೇದವೆಂಬುದು ಸಪ್ತಪರಮಸ್ಥಾನವಮನೀವ ದ್ವಾದಶಾಂಗವುಳಿದ ವೇದಂ ಪಾಪಸೂತ್ರಮೆಂದಱಿಗೆ (ಚಾವುಂಪು. ೨೨೧). 'ದ್ವಾದಶಾಂಗವೇದ' ಪರಾ.

೭. [ಬೌದ್ಧ] ''ಬುದ್ಧನು ವೇದಯಿಸಿ ತಿಳಿದ ಜ್ಞಾನ'' (ಬುದ್ಧಪ. ಎಲಿಂದ. ಕೋಶ. ೧೩೬); ನಾಗಸೇನನು . . . ಸಾಗಲ ನಗರದ ಬಳಿ ಸಾರಿದ್ದನು. ಆತನು ಸಂಘದ ಮುಖ್ಯಸ್ಥನು, ಗಣದ ಮುಖಂಡನು . . . ವೇದಗಳನ್ನು ತಿಳಿದವನು (ಬುದ್ಧಪ. ಎಲಿಂದ. ೨೭).

೮. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : ಗತಿ ವೇದ . . . ಸತತಂ ಜಳರಾಶಿ ಎಂದು ನಾಲ್ಕಱ ನಾಮಂ (ವ್ಯವಹಾ. ೯-೪) ; ಹರನಯನ ವೇದ ಶಶಿ ಗಿರಿಯಿಂದಂ ಗುಣಿಸಲ್ (ಭಾಸ್ಕರ. ೪೨-೬).

ವೇದಶಾಸ್ತ್ರ = ಚತುರ್ವೇದಗಳು ಮತ್ತು ಶಾಸ್ತ್ರಸಿದ್ಧಾಂತ : ವೇದಶಾಸ್ತ್ರದವರ ಹಿರಿಯರೆನ್ನೆ ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ (ಬಸವ. ೬೧೩): ವೇದ ಶಾಸ್ತ್ರಾರ್ಥ ತತ್ವದ ವಿಚಾರವ ಮಾಡು (ಪುರಂದ. ೨-೫೯-೨). [ಸಂ.]

ವೇದಂಡ (ನಾ). = ವೇತಂಡ : ಈಪದ ಕರಿಗಳ ಸರಃಸ್ಯಚ್ಛೋದಕಮಂ ನೆತ್ತಿಗಡರ್ದ ಪನಿಗಳ ಮುಸು ಮುತ್ತಾದುವಲ್ಲದೊಡತವಿಯ ವೇದಂಡದ ನೆತ್ತಿಯಲ್ಲಿ ಮುತ್ತುಗಳೊಳವೇ (ಅರ್ಜುನ. ೩-೧೧೦) ; ಗಂಡಮೃಗ ಮೃಗರಾಜ ಹರಿ ವೇದಂಡ ಸೂಕರ . . . ಚಮರೀಮೃಗ ೨೭೭೦ಗಳ ತಂಡವಿಂತನ್ಯೋನ್ಯಮೈರವನುಳಿದು ಚರಿಸುತಿಹ ಘನದ ಬಲ್ಮಾವನದ ಮಹಿಮೆಯ ವಿನುತಿಸುತ ನೋಡುತ್ತ (ಬುಷ್ಪ. ೧೯-೭೪). [ಸಂ.]

ವೇದಕ (ಗು). ೧. ಜ್ಞಾನವನ್ನು ನೀಡುವ, — ಬೋಧಿಸುವ : ತತ್ಪದರ್ಶಕನೇ ವೇದಕಗುರು (ಎಪಿಕ. ೧೯). (ನಾ). ೨. [ಜೈನ] ಸಮ್ಯಕ್ತ್ವಭೇದಗಳಲ್ಲಿ ಒಂದು : ಸಮ್ಯಕ್ತ್ವಮೊಂದಱುದಯದಿಂದುಲ್ದವಱುಪಶಮದಿಂ ಪುಟ್ಟಿದುದು ವೇದಕಮೆಂಬುದು (ವರ್ಧಮಾ. ೬-೨೮ ವ). [ಸಂ.]

ವೇದಗರ್ಭ (ನಾ). ೧. ವೇದಗಳನ್ನು ಗರ್ಭದಲ್ಲಿಟ್ಟುಕೊಂಡು ಸಂರಕ್ಷಿಸುವವನು ; ಬ್ರಹ್ಮ : ವೇದಗರ್ಭವರಪ್ರಸಾದಾಹ್ವಾದಕವಿ ರಘುವರಕಥಾವಿಮರ್ಶೋದಯದಿಂದು ಮಹಾಮುನಿಪ್ರಾಚೇತಸಂ ವಂದೆ (ತೊರಾ. ೧-೧-೮). ೨. ವಿಷ್ಣು. [ಸಂ.]

ವೇದಗೋಚರ (ನಾ). ವೇದಗಳಿಗೆ ಗೋಚರಿಸುವವನು ; ಪರಮಾತ್ಮ : ವೇದಗೋಚರ ಬಾರೋ ಆದಿಕಚ್ಛಪ ಬಾರೋ (ಪುರಂದ. ಧಾ. ೧-೬೫-೧). 'ನಿಗಮಗೋಚರ' ಹೋ. [ಸಂ.]

ವೇದಘೋಟಕ (ನಾ). (ತ್ರಿಪುರಸಂಹಾರದ ಕಾಲದಲ್ಲಿ) ನಾಲ್ಕುವೇದಗಳನ್ನು ತನ್ನ ರಥಕ್ಕೆ ಕುದುರೆಗಳನ್ನಾಗಿ ಮಾಡಿಕೊಂಡವನು ; ಶಿವ : ವೇದಘೋಟಕ ಭಕ್ತರಾಲಯದಿ ಭಾಂಡದ ಪ್ರಸಾದವನು ತಂದು ಶುನಿಯಾದ ಶಿಷ್ಯಗೆ ಕೊಟ್ಟು ಪೋದಪೆ ನೆನುತ್ತ (ಪ್ರಾಥರಾ. ೧೯-೨೧). [ಸಂ.]

ವೇದಘೋಷ (ನಾ). ೧. ವೇದಗಳನ್ನು ಗಟ್ಟಿಯಾಗಿ ಹೇಳುವಿಕೆ : ಮನೆಮನೆಗಳೊಳ್ ನೆಗಳ್ದ ವೇದಘೋಷಂಗಳಂ . . . ಶಿವಕೀರ್ತನಾವಳಿಗಳಂ ತೋಱುತುಂ (ಸಂಜೀರ. ೯-೧೦೬) ; ದೇವಿಗೆ ಆರತಿ ಬೆಳಗುತ್ತಿರುವಾಗ, ಒಳಗಡೆ ಸುಸ್ವರದಲ್ಲಿ ವೇದಘೋಷ ಕೇಳಬಂತು (ಶಾಂತಲಾ. ೧೦೬). ೨. ವೇದಗಳನ್ನು ಗಟ್ಟಿಯಾಗಿ ಹೇಳುವವನು ; ಬ್ರಾಹ್ಮಣ : ವೇದಘೋಷರೂ ಶಾಸ್ತ್ರಿಗರೂ ಯೇನಾದ ವರ್ತನೆ ನಿಮದು ಯೆನಲು (ಬಿಜ್ಜಳ. ೩೧-೧೮). [ಸಂ.]

ವೇದನ (ನಾ). ೧. ತಿಳಿವಳಿಕೆ ; ಅರಿತುಕೊಳ್ಳುವುದು : ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ (ಕಾವ್ಯಾವ. ೪೨೪) ; (ಧ್ಯಾನ, ಅರ್ಚನೆ, ಪ್ರಣಾಮ ಮೊದಲಾದುವು) ಉಪನಿಷತ್ತುಗಳಲ್ಲಿ ವೇದನ, ಉಪಾಸನ, ಬ್ರಹ್ಮವಿದ್ಯಾ ಮೊದಲಾದ ಶಬ್ದಗಳಿಂದ ಹೇಳಲ್ಪಡುವುವು (ಹಿಂದೂ. ೨೫೬). 'ವೇದಿಸು' ಪರಾ. ೨. ದೇಹದ ಮತ್ತು ಇಂದ್ರಿಯಾನುಭವಗಳ ಅರಿವು. ೩. ನೋವು ; ಬಾಧೆ : 'ವೇದನಂಗೊಳ್' ಪರಾ. ೪. ಆಸ್ತಿ ; ಸಂಪತ್ತು. ೫. ವಿವಾಹ. [ಸಂ.]

ವೇದನಂಗೊಳ್ (ಕ್ರಿ). ಬಾಧೆಗೊಳಗಾಗು ; ಸಂಕಟಕ್ಕೆ ಸಿಲುಕು : ಗುರುಪಾದುಕಂಗಳ ಮುಂದೆ ತನ್ನಯ ಪಾದಯುಗಳಂ ಸೋಂಕಿದಡೆ ಗುರುಭಕ್ತನಾತ್ಮದೊಳು ವೇದನಂಗೊಳುತ (ಬುಷ್ಪ. ೩೯-೩೧). [ವೇದನ + ಕೊಳ್¹]

ವೇದನಿಂದಾಪರ (ಗು). ೧. ವೇದವನ್ನು ನಿಂದಿಸುವ, — ಹೀಯಾಳಿಸುವ. (ನಾ). ೨. ವೇದಗಳನ್ನು ನಿಂದಿಸುವವನು ; ನಾಸ್ತಿಕ : ಗುರುವಿಘಾತಿಯ ವೇದನಿಂದಾಪರನ . . . ನರಕವಾಗಲಿ ಕೊಲ್ಲದಿದ್ದರೆ ನಾಳೆ ಸ್ಕಂಧವನ (ಕುವಾಡ್ರೂ. ೮-೩೭). [ಸಂ.]

ವೇದನಿಧಿ (ನಾ). ಜ್ಞಾನದ ಭಂಡಾರ ; ತಿಳಿವಳಿಕೆಯ ಆಗರ : ಹಿಮಗಿರಿಯೊಳ ವಿತಿಹುದು ಚೈತನ್ಯದಗ್ನಿಕಣ ಸ್ಮಿತದಿಂ ನಿಂತಿರ್ಪುದದು ಧರೆಯ ಹಿತಕೆ ಶಮದ ಸುಂದರದ ಸಾತ್ತ್ವಿಕದ ಗಾಂಭೀರ್ಯವದು ನಮಗೊಂದು ವೇದನಿಧಿ (ಮಂಜುಶ್ರೀ. ೧೧೨). [ಸಂ.]

ವೇದನೀಯ (ಗು). ೧. ತಿಳಿಯಲು ಅರ್ಹವಾದ. (ನಾ). ೨. [ಜೈನ] ಜೀವಕ್ಕೆ ಸುಖ ಅಥವಾ ದುಃಖರೂಪವಾದ ವೇದನೆಯನ್ನು ಉತ್ಪನ್ನಮಾಡುವ ಕರ್ಮ : ನಿಜದ್ವಿಚರಮಸಮಯದೊಳ್ ಅನ್ಯತರವೇದನೀಯ ದೇವಗತಿ . . . ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ ವ) ; ಸಾತಾಸಾತಸಂವಿಭಾಗದಿನಿರ್ದೆಱನಪ್ಪ ವೇದನೀಯಮುಮಂ (ಸುಜಿಪೂ. ೩-೩೯ ವ). [ಸಂ.]

ವೇದನೆ (ನಾ). ೧. ಜ್ಞಾನ ; ತಿಳಿವಳಿಕೆ : ಬಲ್ಲಂದಱ್ಪು ಅದೆಲ್ಲಿದ್ದರು ತನ್ನ ವೇದನೆಯ ಬಿಡದು (ವೀಳಿಮಾ. ೫೫-೨೨೭) ; ಪ್ರತಿಭಾಶ್ರವಣ ಮೀಣತಿಶಯದ ವಾರ್ತಾದರುಶನಗಳತುಳವಪ್ಪಾಸ್ಥಾದನವು ವೇದನೆಯುಮೆಂಬಾಱು . . . ಬ್ರಹ್ಮಾಭ್ಯಾಸಕಾಲದಲಂತರಾಯಗಳು (ಅಮೃತ. ೬-೮೯). ೨. ಸಂವೇದನೆ ; ಅನುಭವದ ಅರಿವು : ಈ ಲೋಕವ್ಯಾಪಾರಗಳಿಗೆ ಪಡಿಮಿಡಿಯುವ ಕ್ರಿಯೆಗೆ . . . ವೇದನೆ (Sensation) ಎನ್ನಬಹುದು (ಸೌಂದ. ೫) ; ಸ್ಪರ್ಶದಿಂದ ಆಗುವ ಅನುಭವವೇ 'ವೇದನೆ' (ಭಾರದ. ೧೯೫). ೩. ನೋವು ; ತಾಪ ; ಯಾತನೆ : ಸ್ಮರವೇದನೆಯಿಂ ಮಹಿಷಾಸುರನೇಳ್ವರ (ಕಾರಂಪೂ. ೪೪) ; ಭೃಷಜ್ಯಜ್ಞಾನವೆಂ ಮಾಡುಗುವೆಂ ವೇದನಾನಿಗ್ರಹವಂ (ಚಂದ್ರಪು. ೭-೨೬) ; ಎಲೆ ತಂದೆ ಎನ್ನವನೆ ಕಣ್ಣ ವೇದನೆ ಘನವಲ್ಕೆ ತಂದೆ (ತಣ್ಣಿರ. ದೇ. ೧೪೭-೨೪). [ಸಂ. ವೇದನಾ]

ವೇದನೆಗೊಳ್ (ಕ್ರಿ). ನೋವನ್ನು ಹೊಂದು ; ಬಾಧೆಗೊಳಗಾಗು : ಬೀಡಿದೊಂದು ಪುರುಳಂ ಮಾರ್ಕೊಂಡನೇ ಬೇಡಿ ವೇದನೆ[ಪಾಠಾಂ. ಡನೆ]ಗೊಂಡಾನೆಱೆದಟ್ಟಯುಂ ಬಗೆಯನೇಂ ಗಂಡಂ ಮನಂಗೊಂ[ಪಾಠಾಂ. ಗಂ]ಡನೋ (ಆದಿಪು. ೧೨-೩೬). [ವೇದನೆ + ಕೊಳ್¹]

ವೇದಪಾರಾಯಣ (ನಾ). ವೇದಗಳನ್ನು ಓದುವಿಕೆ, — ಪಠಿಸುವಿಕೆ : ವೇದಪಾರಾಯಣದ ಫಲ ಗಂಗಾದಿತೀರ್ಥಸ್ನಾನಫಲ . . . ಕನ್ಯಾದಾನಫಲವಹುದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ (ಕುವಾಆ. ೧-೩೦). [ಸಂ.]

ವೇದಪುರುಷ (ನಾ). ವೇದವನ್ನು ಪ್ರತಿಪಾದಿಸಿದವನು ; ಪರಮಾತ್ಮ : ಸಹಸಶೀರ್ಷನಾದಿಪುರುಷನು ವೇದಪುರುಷನೊಬ್ಬ ಪುರುಷನು (ಬುಷ್ಪ. ೯೫೫); ವೇದಪುರುಷನ ಸುತನ ಸುತನ ಸಹೋದರನ . . . ನಾದಿನಿಯ ಜಠರದಲಿ ಜನಿಸಿದನಾದಿ ಮೂರುತಿ ಸಲಹೊ (ಕುವಾಆ. ೧-೨೩). [ಸಂ.]

ವೇದಪ್ರಾಮಾಣ್ಯ (ನಾ). ವೇದದಲ್ಲಿ ಹೇಳಿರುವುದು ಸರಿಯೆಂದು ತಿಳಿಸುವಿಕೆ; ವೇದದ ಪ್ರಮಾಣತ್ವ : ಯುಕ್ತಿವಾದದ ಬಲದಿಂದಲೇ ವೇದಪ್ರಾಮಾಣ್ಯವನ್ನು ಆಸ್ತಿಕರು ನಿರೂಪಿಸತೊಡಗಿದರು (ಭಾರದ. ೧೨೦). [ಸಂ.]

ವೇದಪ್ರಿಯ (ನಾ). ವೇದದಲ್ಲಿ ಪ್ರೀತಿಯುಳ್ಳವನು ; ವೇದಗಳನ್ನು ಪ್ರೀತಿಸುವವನು : ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲವಯ್ಯಾ (ಬುಷ್ಪ. ೧೮೧) ; ವೇದಪ್ರಿಯನಲ್ಲ ಎನ ದೇವ (ಸಿದ್ಧಪು. ೨೩-೬೨). [ಸಂ.]

ವೇದಬಾಹಿರ (ನಾ). ೧. ವೇದದಿಂದ ಹೊರತಾದುದು ; ವೇದದಲ್ಲಿ ಪ್ರತಿಪಾದಿತವಲ್ಲದುದು : ಆದಡಂಜದಿರಂಜದಿರು ವರ ವೇದಬಾಹಿರವಲ್ಲ ಸತಿಯರೊಳಾದಿಪಾತಿವ್ರತ್ಯ ನಿನಗೆಂದನು ಮಖಧ್ವಂಸಿ (ಕುವಾಆ. ೧೬-೫೦). ೨. ವೇದವನ್ನು ತಿಳಿಯಲು ಅನರ್ಹನಾದವನು ; ವೇದದಿಂದ ಹೊರತಾದವನು : ವಂಚಕರ ನಿಜವೇದಬಾಹಿರ ಹಂಚುಗಳ ಸನ್ಮಾರ್ಗವಿಲ್ಲದ ಪಂಚಮಹಾಪಾತಕರ ಜೈನರ ಹಿಂಡು ನೆರೆದಾಗ (ಬುಷ್ಪ. ೫೧ -೫೪) ; ಶೈವರು ಚಾರ್ವಾಕರಂತೆ ವೇದದೂಷಕರಲ್ಲ ; ಬೌದ್ಧರಂತೆ ವೇದಬಾಹಿರರಲ್ಲ (ಭಾರದ. ೨೦೯). [ಸಂ.]

ವೇದಬಾಹ್ಯ (ನಾ). = ವೇದಬಾಹಿರ ೨ : ಹರನ ಭಕ್ತಿಗೆ ಕೆಚ್ಚು ಮಿಗೆ ಉಬ್ಬರಿಸಿ ತನುವೇಕಾಂತರಾಮಯನರರೆ ತಾನಿಂತೆಂದು ನುಡಿದನು ವೇದಬಾಹ್ಯಂಗೆ (ಬುಷ್ಪ. ೪೯-೧೪) ; ಎತ್ತಲೆಂದಲೆಯದೆ ಜಗಕೆ ಜಡಾತ್ಮರಾಗಿಹ ವೇದಬಾಹ್ಯರ ಮೃತ್ಯುದೇವತೆ ಮುಱಿದು ಮೋದದೆ ಬಿಡುವಳೇಯೆಂದ (ಕುವಾಆ. ೪-೧೦೧). [ಸಂ.]

ವೇದಭಾಷ್ಯ (ನಾ). ವೇದಗಳಿಗೆ ಬರೆದಿರುವ ಟೀಕೆ ; ವೇದಗಳ ಅರ್ಥ ವಿವರಿಸುವ ಗ್ರಂಥ : ಸಾಯಣರ ವೇದಭಾಷ್ಯ, ಮಾಧವರ ಪರಾಶರಮಾಧವೀಯ ಇವರಡೂ ಭಾರತೀಯ ಸಂಸ್ಕೃತಿಯ ಪ್ರಗತಿಗೆ ವಿಜಯನಗರದ ಸಾಮ್ರಾಜ್ಯದ ಮುಖ್ಯ ಕಾಣಿಕೆಗಳು (ಐಕ್ಷಾರ. ೧೧೧ ಟೀ೮೬). [ಸಂ.]

ವೇದಮಂತ್ರ (ನಾ). ವೇದಗಳಲ್ಲಿ ಹೇಳಿರುವ ಮಂತ್ರ , — ಸೂಕ್ತಿ : ದಹನ ವಿಸರ್ಜನಗಳೆರಡೂ ವೇದಮಂತ್ರಗಳಲ್ಲಿಯೇ ಉಕ್ತವಾಗಿವೆ (ಭಾರದ. ೧೭); ತನಗೆ ವೇದಮಂತ್ರಗಳು ಬಾರದ ಇರುವುದರಿಂದ ಬ್ರಾಹ್ಮಣರಿಗೆ ತನ್ನಲ್ಲಿ ಅಸಮಾಧಾನವೆಂದು ಅವನು ತಿಳಿದ (ಗಡುದಾ. ೧೩೧). [ಸಂ.]

ವೇದಮಾತೆ (ನಾ). ೧. ವೇದದ ಅಧಿದೇವತೆ ; ಗಾಯತ್ರಿ : ಕರದಲ್ಲಿ ಕನಕದ ಚಾಮರವಂಬಿಡಿದು ಭಾಸುರವೇದಮಾತೆ ಗಾಯತ್ರಿ ಡಾಳಿಸೆ (ಕುಮಾಪ್ರ. ೧-೭೦) ; ವೇದಪುರುಷನ ಸ್ವೀರೂಪವಿದು. ಈಕೆಯೇ ವೇದಮಾತೆಯು (ಪುಹಾಗ. ೨೮೫). ೨. ದುರ್ಗಾದೇವಿ. [ಸಂ. ವೇದಮಾತಾ]

ವೇದಮೂರ್ತಿ (ನಾ). ೧. ವೇದವೇ ಮೂರ್ತಿವೆತ್ತಂಥವನು ; ಬ್ರಾಹ್ಮಣ. ೨. ವೇದಾಧ್ಯಯನ ಮಾಡಿರುವ ಬ್ರಾಹ್ಮಣವಿದ್ವಾಂಸರ ಹೆಸರಿನ ಹಿಂದೆ ಕೆಲವುಸಲ ಸೇರಿಸುವ ಗೌರವಸೂಚಕವಾದ ಶಬ್ದ : ಕನ್ನಡದಲ್ಲಿ . . . ವೇದಮೂರ್ತಿ . . . ಮೊದಲಾದ ಶಬ್ದಗಳನ್ನೂ . . . ಪತ್ರ ಸ್ವೀಕರಿಸತಕ್ಕವರ ಹೆಸರಿನ ಹಿಂದ ಜೋಡಿಸಿ ಬರೆಯುವ ಸಂಪ್ರದಾಯ ಉಂಟು (ಮುಜುಯು. ೪-೬೪). [ಸಂ.]

ವೇದವಾಕ್ಯ (ನಾ). ೧. ವೇದಗಳಲ್ಲಿರುವ ಉಕ್ತಿ , — ಸೂಕ್ತಿ : ಮುಂದ ಅಜನಾಗಿ ಪವಮಾನ ಕೃತಯುಗದಲ್ಲಿ ಬಂದು ಸ್ವೇಚ್ಛೆಯಲಿ ಸೃಜಿಸುವನು ಸಚರಾಚರವ ಸಂದೇಹವಿಲ್ಲ ತಪ್ಪದು ವೇದವಾಕ್ಯವಿದು (ತುಗಂದ. ೧-೩೧೭-೭) ; ಬ್ರಾಹ್ಮಣದಲ್ಲಿನ ವೇದವಾಕ್ಯಗಳಿಗೂ ಆಗಮವಾಕ್ಯಗಳಿಗೂ ವಿಕವಾಕ್ಯತೆಯಿರುವ ನಿದರ್ಶನ ಬೇಕಾದಷ್ಟಿದೆ (ಭಾರದ. ೭೧). ೨. (ಆಲಂ) ಪ್ರಮಾಣವಾದ ಮಾತು : ಬಂದೂಕುಧಾರಿಗಳಿಗೆ ಅವನ ಮೇಲೆ ಬಹಳ ಮಮತೆ. ಅವನ ಆಜ್ಞೆ ಅವರಿಗೆ ವೇದವಾಕ್ಯ (ಜೋಧರು. ೧೭) ; ಅವರಂದುದು ಅವರಾಣತಿಯಿತ್ತುದು ವೇದವಾಕ್ಯ ಎಂದು ಚುಟುಕಿನಲ್ಲಿ ಹೇಳಿ ಮುಗಿಸಬಹುದು (ಕುರುಕಾ. ೧೯). [ಸಂ.]

ವೇದವಾದಿ (ನಾ). ವೇದವನ್ನು ಆಧರಿಸಿ ವಾದಮಾಡುವವನು : ವೇದವಾದಿಯ ಶಾಸ್ತ್ರಸಾರನುವಾದ ಭೂಸುರರೊಕ್ಕ ವಾರ್ಧಿವರಾದರೆಲ್ಲೊಡಬಟ್ಟು (ಜಜ್ಞಪು. ೭೧-೩೭); ಈ ಪರೀಕ್ಷೆಯನ್ನು ಲೋಕದಲ್ಲಿ ತತ್ತ್ವೋಪದೇಶ ಮಾಡಿದವರ ವಚನಕ್ಕೆ ಹೊಂದಿಸಿದರೆ ಹೊಂದಿಸಿದವರು ವೇದವಾದಿಗಳೇ ಆಗುವರು (ಭಾತತ್ತ್ವ. ೪೭೬).

[ಸಂ. ವೇದವಾದಿನ್]

ವೇದವಿತ್ತು (ನಾ). ವೇದವನ್ನು ಚೆನ್ನಾಗಿ ಬಲ್ಲವನು ; ವೇದಜ್ಞ ; ವೇದ ಸಂಪನ್ನ : ಶ್ರೀರುದ್ರಂ ಮೊದಲಾಗಿ ವೇದವಿತ್ತಪ್ಪ ತ್ರಿಸನ್ನೆಯೊಳಂ ಪೂಜಿಸುವ ಆಚಾರ್ಯ್ಯವಿತ್ತಿ ಗದ್ಯಾಣ ಆಱು (ಕಾಅ. ೭೯-೧೩-೩೮ ; 1089) ; ಜೋಯಿಸರೊಪ್ಪುವ ಪೌರಾಣಿಕರಾ ಶಕುನವ ಪೇಳುವ ವೇದವಿತ್ತುಗಳ್ ರಂಜಿಸಿದರ್ (ದಶಾವ. ೫-೫೬).

[ಸಂ. ವೇದವಿತ್]

ವೇದವಿದ (ನಾ). = ವೇದವಿತ್ತು : ಇಂತಿದು ಸಕಲಾಂಗವೇದವಿದನಿಂತಿದು ಕಾವ್ಯಕಲಾಪ್ರಗಲ್ಭಂ . . . ಶುಕನುದ್ಗತಾಂಶುಕಂ (ಕಾದಂಪೂ. ೫೪) ; ವೇದವಿದಂ ಸಕಳಕಳಾವೇದಿ ಸಮಸ್ತಾಧಿಕಾರಪರಿಚಿತನಾಶೀರ್ವಾದಪ್ರಿಯಂ ಪರಿಮತನಾದನ ವಿಶ್ರುತಬಹುಶ್ರುತೋದಾತ್ತಯಶಂ (ಸಜಪ್ರಮಾ. ೨-೧೨). [ಸಂ. ವೇದವಿತ್]

ವೇದವೇತ್ತ (ನಾ). = ವೇದವಿತ್ತು : ಉತ್ತಮಕುಲೀನನನತ್ಯಧಿಕವಿಪ್ರಂ ವೇದವೇತ್ತ[ಪಾಠಾಂ.ವಿತ್ತು] ಸರ್ವಾಗಮಜ್ಞಂ (ಪಚಕಾ. ೧೦-೧೭); ದೀನರಾರ್ಯರು ವೇದ ವೇ[ಪಾಠಾಂ.ವಿ]ತ್ತರನೂನತತ್ತ್ವಜ್ಞರು ಸಕಳವಿದ್ಯಾನಿಪುಣರುಂ (ಬಸಪು. ೬-೧೭).

[< ಸಂ.ವೇದವಿತ್]

ವೇದವೇದ್ಯ (ನಾ). ೧. ವೇದಗಳಿಂದ ತಿಳಿಯಲ್ಪಡುವವನು ; ಪರಮಾತ್ಮ : ಶ್ರೀಮದ್ದೇವಾದಿದೇವಂ ತ್ರಿಭುವನಜನಕಂ ಸರ್ವ್ವಗಂ ವೇದವೇದ್ಯಂ ಸೋಮಂ (ಸಶಾಗ. IX-i , ೧೧೪-೧ , 1057) ; ವೇದವೇದ್ಯನನೀಗ ರಣದಲಿ ಕಾದಿ ಕೈವಲ್ಯವನು ಕೊಡುವೆನಾದಿವರ್ಮ್ಯಿಯನೆನುತ ನಗುತತಿಕಾಯನನುವಾದ (ಕಾಶಿಕಾ. ೨೭-೧). ೨. ಬ್ರಹ್ಮ- ೩. ವಿಷ್ಣು : ವೈದ್ಯ ಬಂದನು ವೇದವೇದ್ಯ ನೋಡೀಗಲೆ ಶ್ರೀದೇವೀ ರಮಣನು ಶ್ರೀನಿವಾಸನೆಂಬ (ಪುರಂದ. ೩-೧೪೨ ಅನುಪಲ್ಲವ). ೪. ಶಿವ. [ಸಂ.]

ವೇದವ್ಯಾಸ (ನಾ). ಅಖಂಡವೇದರಾಶಿಯನ್ನು ಬೇರೆ ಬೇರೆ ಶಾಖೆಗಳಾಗಿ ವಿಂಗಡಿಸಿದವನು ; ಸತ್ಯವತಿ ಮತ್ತು ಪರಾಶರಮುನಿಯ ಪುತ್ರ ; ಕೃಷ್ಣ ದ್ವೈಪಾಯನ ಮುನಿ : ಕೇಶವನಲ್ಲದ ಅತಃಪರದ್ಯವಿಲ್ಲೆಂದು ವೇದವ್ಯಾಸಮುನಿ ಭಂಗವಾದುದನಱಿಯಿರೆ (ಬಸವ. ೫೪೯) ; ವೇದಗಳನ್ನು ವಿಭಾಗ ಮಾಡಿ ವಿಸ್ತರಿಸಿದುದರಿಂದ ವ್ಯಾಸ ಅಥವಾ ವೇದವ್ಯಾಸರೆಂದೂ . . . ಪುರಾಣಪಂಕ್ತಿಗಳು ತಿಳಿಸುತ್ತವೆ (ಭಾರದ. ೨೭೯).

[ಸಂ.]

ವೇದಸಿದ್ಧ (ನಾ). ವೇದದಲ್ಲಿ ಹೇಳಿದ ಹಾಗೆ ಇರುವುದು ; ಸತ್ಯವಾದುದು ; ವೇದವಾಕ್ಯ : ಕಾವಡೆನ್ನಳವಲ್ಲ ಮೇಣ್ ಗಾಂಡೀವಿ ಕೊಲುವವನಲ್ಲ ಕೃಷ್ಣನು ಕಾವರಯು ಕೊಲುವರ ಸಮರ್ಥನು ವೇದಸಿದ್ಧವಿದು (ಕುವ್ಯಾಮ್ಯೋ. ೮-೬೧). [ಸಂ.]

ವೇದಸೂಕ್ತ (ನಾ). ವೇದದಲ್ಲಿರುವ ಸ್ತೋತ್ರಭಾಗ, — ಸೂಕ್ತಿ : ಹಾನಿವೃದ್ಧಿವಿನಾಶವಭ್ಯುದಯಪ್ರಪಂಚದಲಿ ಮಾನಸನಿಧಿಯೇ ವೇಬಸೂಕ್ತ ವಿಧಾನದಲಿ ಪರಿಹಾರ ವಿಶ್ಯಕ್ಷೇನಮಯವೀ ಲೋಕಯಾತ್ರಗಳಂದನಾ ಮುನಿಪ (ಕುವ್ಯಾಸ. ೧೨-೭೪) ; ವೇದಸೂಕ್ತಗಳಿಗೆ ಅರ್ಥಮಾಡುವ ರೀತಿಯು ಜೈಮಿನೀಯ ಮೀಮಾಂಸಾಸೂತ್ರಗಳಲ್ಲಿ ನಿರೂಪಿತವಾಗಿದ (ಭಾರದ. ೧೨೪). [ಸಂ.]

ವೇದಹಸಸು (ನಾ). = ವೇದಮಂತ್ರ : ಅಲ್ಲಿಪ್ಪ ವೈದಿಕರು ವೇದಹಸಸುಗಳನ್ನು ಹೇಳಿ ಆಶೀರ್ವಾದವನ್ನು ಮಾಡಿ ಫಲಮಂತ್ರಾಕ್ಷತೆಯನ್ನು ಒಪ್ಪಿಸಿದರು (ಪಾಮರಾ. ೬೭).

[ವೇದ + ಹಸಸ್ಸು]

ವೇದಹೀನ (ನಾ). = ವೇದಬಾಹಿರ ೨ : ವೇದಹೀನರಿಗಿತ್ತ ಫಲವಾ ಶ್ರಾದ್ಧಕರ್ಮದಲಿ ಐದಿಹ ದಕ್ಷಿಣೆಗಳೆಂಬವು ಬೂದಿಯಲಿ ಬೇಳಿದ ಹವಿಸ್ಸಿನ ಹಾದಿಯಲ್ಲದ ಫಲವನೀಯವು (ಕುವ್ಯಾಉ. ೪-೮೯). [ಸಂ.]

ವೇದಾಂಗ (ನಾ). ಶಿಕ್ಷೆ, ಛಂದಸ್ಸು, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂಬ ವೇದದ ಆರು ಅಂಗಗಳು, — ಶಾಸ್ತ್ರಭಾಗಗಳು : ವೇದಾಂಗಂ ಸ್ಮೃತಿವೇದಮಂದಿನಿತುಮಂ ಪೂರ್ಣೋವಿದಂ (ಪಕುಮಾ. ೩-೪೩) ; ಶಿಕ್ಷಾ, ಛಂದಸ್ಸು ವೈದಿಕಪದಗಳ ನಿರುಕ್ತಿ, ವ್ಯಾಕರಣ . . . ಇವೇ ಮುಂದಿನ ಶತಮಾನಗಳಲ್ಲಿ ಬೆಳೆದು ವೇದಾಂಗಗಳೆಂದು ಕರೆಯುವ ಶಾಸ್ತ್ರಗಳಾಗಿ ಪರಿಣಮಿಸಿದುವು (ಭಾರದ. ೩೨). [ಸಂ.]

ವೇದಾಂತ (ನಾ). ೧. ವೇದದ ಕಡೆಯ ಭಾಗ ; ಉಪನಿಷತ್ತು ; ಷಡ್ದರ್ಶನಗಳಲ್ಲಿ ಕಡೆಯದು : ವೇದ ವೇದಾಂತವನೋದಿದೊಡೇನು . . . ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ (ಬಸವ. ೧೭೮) ; ಸಂತತವು ಭಕ್ತಸಂಸಾರವನು ಪೊರೆವ ವೇದಾಂತನುತ ಕಾಗಿನೆಲೆಯಾದಿಕೇಶವರಾಯ (ಕಸಕ. ೭೯-೫). ೨. ಆಧ್ಯಾತ್ಮ ; ತತ್ತ್ವಶಾಸ್ತ್ರ ; ತತ್ತ್ವಜಿಜ್ಞಾಸೆ : ಮಕ್ಕಳನ್ನು ಪ್ರೀತಿಸುವುದರಲ್ಲಿ ರಾಯರಿಗೆ ಯಾವ ವೇದಾಂತವೂ . . . ಆಧಾರವಾಗಿರಲಿಲ್ಲ (ಕಂಬಹು. ೧೨೧). ೩. ತತ್ತ್ವ ; ಸಿದ್ಧಾಂತ : ಅನುಭವವೇದಾಂತವನ್ನು ಲೋಕಕ್ಕೆ ನೀಡಿ . . . ಗಾಯತ್ರಿಯ ಕರ್ತೃವಿನ ಕಥೆಯನ್ನು ಗೌರವಿಸುವರು (ಮಹಾಗ. ೭). [ಸಂ.]

ವೇದಾಂತದೆರೆ (ನಾ). ವೇದಾಂತದ ಅಧ್ಯಯನಕ್ಕೆ ಸಲ್ಲುವ ತೆರಿಗೆಯ ಆದಾಯ : ವೇದಾನ್ತದೆರೆ ಮತ್ತ ೧೫ ಹರಳ್ಮತ್ತರು ೧೦ xx ರುಗ್ವೇದದೆರೆ ಮತ್ತ ೧೫ (ಪೌಗಾ. XX. ೩೦೦-೧೫ ; ಸು. 12ನೆಯ ಶತ). [ವೇದಾಂತ + ತೆರೆ (< ತೆಱೆ)]

ವೇದಾಂತವಾದ (ನಾ). ವೇದಾಂತವನ್ನು ಕುರಿತು ಮಾಡುವ ಚರ್ಚೆ : ಗಾದೆ ಓದುಗಳೇಕೆ ವೇದ ಆಗಮವೇಕೆ ವೇದಾಂತವಾದ ತನಗೇಕೆ ಶರಣರ ಹಾದಿ ಹಿಡಿದವಗೆ (ಸರ್ವಜ್ಞ. ೨೮೪). [ಸಂ.]

ವೇದಾಂತವೇದಿ (ನಾ). = ವೇದವಿತ್ತು : ಸದಾಗ್ನಿಹೋತ್ರಾಚರಿತನಹ ವೇದಾಂತವೇದಿಯನು . . . ಅಭವಂದಿಸುವರ್ಕೆ ಮೂಱುಮೂರ್ತಿಗಳು (ಕುವ್ಯಾಉ. ೩-೪೫).

[ಸಂ. ವೇದಾಂತವೇದಿನ್]

ವೇದಾಂತವೇದ್ಯ (ನಾ). ೧. ಉಪನಿಷತ್ತುಗಳಿಂದ ತಿಳಿಯಲ್ಪಡುವವನು ;

ಪರಮಾತ್ಮ : ಕಂಡ ನಾ ಗೋವಿಂದನ . . . ಯಾದವಕುಲವಂದ್ಯನ ವೇದಾಂತವೇದ್ಯನ ಇಂದಿರಾರಮಣನ (ಪುರಂದ. ೧-೯೦-೨). ೨. ಶಿವ : ಕಂಠುಹರನನು ವಿಮಳನನು ವೇದಾಂತವೇದ್ಯನನು . . . ಉದ್ದಂಡದೈವವ ಕಂಡನಬುಜಭವ (ಕುವ್ಯಾಕ. ೬-೧೮). [ಸಂ.]

ವೇದಾಂತಿ (ನಾ). ೧. ವೇದಾಂತವನ್ನು ಅನುಸರಿಸುವವನು ; ಬ್ರಹ್ಮಜ್ಞಾನಿ : ಬ್ರಹ್ಮಕ್ಕೆ ಹಮ್ಮು ಹೋಹ ಬಹ ಭೇದವ ತಿಳಿದು . . . ಭೀತಿ ನಿರ್ಭೀತಿಯಿಲ್ಲದೆ ನಿರಂಗಸ್ವರೂಪನಾದಡೆ ವೇದಾಂತಿಯೆಂಬೆ (ಪಚಸಂ. ೫೪೧-೨೪) ; ನಿತ್ಯಾನಿತ್ಯವಿವೇಕ . . . ಬ್ರಹ್ಮಜ್ಞಾನ ಬ್ರಹ್ಮಾನಂದಂಗಳೆಂಟುಂ ಬುದ್ಧಿಗಳವು ವೇದಾಂತಿಗಳ ಗುಣಂಗಳಕ್ಕುಂ (ವಿವೇಕ. ೨೬೭). ೨. ತತ್ತ್ವಜ್ಞಾನಿ. [ಸಂ. ವೇದಾಂತಿನ್]

ವೇದಾಢ್ಯ (ನಾ). ವೇದವಿದ್ಯೆಯಲ್ಲಿ ಪಾರಂಗತನಾದವನು : ಯಿದಂ ಕಾಯದ ಕಾಯ್ವ(ವಂ) ಪಾಪಿಗೆ . . . ಕವಿಲೆಯಂ ವೇದಾಢ್ಯರಂ ಕೊಂದೊಂದುಯ[ಗೆ] ಶಂ XX ಮಿಡದೆ ಸಾಜಿದಪವೀ ಶೈಳಾಕ್ಷರಭ್ರಾಜಿಗಳ್ (ಸೌಇ.VIII, ೩೬೯-೧೮ ; 1074); ನಾದರಸ ಸಮಸ್ತಶ್ರುತಿಮಂತ್ರಗತತತ್ತ್ವಯೋಗವಿದನೇ ವೇದಾಢ್ಯನು (ಎಕೃಪು. ೭-೨-೧೮). [ಸಂ.]

ವೇದಾತೀತ (ನಾ). ವೇದಕ್ಕೆ ನಿಲುಕದವನು ; ವೇದಗಳಿಂದ ತಿಳಿಯಲಾಗದವನು ; ಪರಮಾತ್ಮ : ವೇದಾತೀತ ಪಡುವರ್ಣರಹಿತ ಅಷ್ಟತ್ರಿಂಶತ್‌ಕಳಾತೀತ ವ್ಯೋಮಾತೀತ ಕೂಡಲಸಂಗಮದೇವ (ಬಸವ. ೯೫೩). [ಸಂ.]

ವೇದಾಧ್ಯಯನ (ನಾ). ವೇದಗಳನ್ನು ಅಭ್ಯಸಿಸುವುದು, — ಕಲಿಯುವುದು : ಮಾಡುತಿಹ ಯಜ್ಞವನು ಪರರಿಗೆ ಮಾಡಿಸುವ ವೇದಾಧ್ಯಯನವನು ಮಾಡುತಿಹ ತದ್ವಿಷಯದಲಿ ಯೋಗ್ಯರನು ಮಾಡಿಸುವ . . . ಗುಣವನು ಕೂಡಿಕೊಂಡಿಹನೇ ಸಮರ್ಥನು ವಿಪ್ರರೊಳಗೆಂದ (ಕುವ್ಯಾಉ. ೪-೬೩) ; ವೇದಗಳು, ವೇದಾಂಗಗಳು, ವೇದದ ಉಪಾಂಗಗಳು ಇಷ್ಟನ್ನು ವೇದಾಧ್ಯಯನವು ಒಳಕೊಂಡಿತ್ತು (ಕಶಾಅ. ೨೩೦). [ಸಂ.]

ವೇದಾಧ್ಯಾಯಿ (ನಾ). ವೇದಗಳನ್ನು ಅಧ್ಯಯನ ಮಾಡುವವನು, — ಅಭ್ಯಾಸ ಮಾಡುವವನು : ಶಾಲೆಯಲೋದುವ ವೇದಾಧ್ಯಾಯಿಗಳನ್ನೂರ್ವರ್ಗ್ಗಳ್ . . . ಸರ್ವ್ವ ನಮಸ್ಯಮಾಗಿ ಕೊಟ ಕೆಯ್ (ಕಇಅ. ೬-೨-೧೯೧ ; 1058). [ಸಂ. ವೇದಾಧ್ಯಾಯಿನ್]

ವೇದಾಭ್ಯಾಸ (ನಾ). = ವೇದಾಧ್ಯಯನ : ದ್ವಾದಶವರ್ಷಗಳ ಕಾಲದ ವೇದಾಭ್ಯಾಸ ಮಾಡುತ್ತಾ ಬ್ರಹ್ಮಚಾರಿಯಾಗಿರು (ಚಿತಂಬಾ. ೧೦೭). [ಸಂ.]

ವೇದಾಭ್ಯಾಸಜಡ (ನಾ). ಬರಿಯ ವೇದಾಭ್ಯಾಸ ಮಾತ್ರ ಮಾಡಿರುವವನು ; ಲೋಕಜ್ಞಾನಶೂನ್ಯನಾದವನು ; ಲೌಕಿಕವ್ಯವಹಾರಶೂನ್ಯನಾದವನು : ವೇದಗಳ ಕಾಲದ ಜನರು ಬರೀ ವೇದಾಭ್ಯಾಸಜಡರಾಗಿದ್ದಿರಲಿಲ್ಲ (ಭಾರದ. ೫೬೭) ; ಶಾಸ್ತ್ರಿಗಳೇನು ಅಷ್ಟೊಂದು ವೇದಾಭ್ಯಾಸಜಡರೇ ? (ಹೊಸಕ್ತಿ. ೨೪). [ಸಂ.]

ವೇದಿ$_1$ (ನಾ). ಪಂಡಿತ; ಜ್ಞಾನಿ ; ವಿದ್ವಾಂಸ: ವೇದಾನುವಾದದಿಂ ಸ್ತ್ರೀಪುಂನಪುಂಸಕವೇದಿಗಳ್ಗಂ ಅವೇದಿಗಳ್ಗಂ ಸಾಮಾನ್ಯೋಕ್ತಭಾವಂ (ತತ್ತ್ವಪ್ರ. ೪೭) ; ಜಲಧಿ . . . ಮುನೀಶ್ವರರುಗಳ ಧಾತುಗಡಣದ ವೇದಿಗಳ ತಿಳಿದು ಕಾಲದ ಗತಿಯ ಗಮಕಂಗಳನಱಿದು ನಡವವರುಗಳು ನಿರ್ಮಳದಲೆಡಹದೆ ಬೆರೆಸಿಕೊಂಬರು ಮುಕ್ತಿ ರಾಜ್ಯವನು (ಕುವ್ಯಾಉ. ೪-೩೪). 'ಚತುರ್ವೇದಿ', 'ತ್ರಿವೇದಿ' ಪರಾ. [ಸಂ. ವೇದಿನ್]

ವೇದಿ$_2$ (ನಾ). ೧. ಯಾಗಕ್ಕಾಗಿ ಪರಿಷ್ಕರಿಸಿ ಸಿದ್ಧಪಡಿಸಿದ ಭೂಮಿ ; ಯಾಗಭೂಮಿ; ಯಜ್ಞವನ್ನು ಮಾಡುವ ಸ್ಥಳ : ವೇದಿಯ ಸುತ್ತಲ್ ನೆಲೆಗೊಂಡಾದಂಸಮಿಧೆಗಳನಾಂತು ಪೊಣ್ಮುವ . . . ವೈತಾನವಹ್ನಿ ಸಲಹುಗೆ (ಶಾಕುಂತ. ೫೨-೮೬) ; ಯಾಗಶಾಲೆಯಂ ನೇರ್ಪಡಿಸಿ . . . ವೇದಿಯಂ ಸಮಕಟ್ಟಿ . . . ಯಾಗಂಗಳಂ ನೆರೆಯಿಸುತಿರ್ದರ್ (ರಾಮಾಶ್ವ. ೧೬-೫). ೨. ಎತ್ತರವಾದ ಜಗುಲಿ ; ವೇದಿಕೆ : ವೇದಿಯ ನಾತ್ಮಗೃಹಾಂಗಣ ವೇದಿಯೊಳಿಣೆಯಾಗೆ ಬಗೆದು (ಆದಿಪು . ೧೨-೭೫); ದಿಶಾಲೋಕ ನಿಮಿತ್ತವೇಱುವೆಡೆಗೆನ್ನಿಕ್ಕಿರ್ದ್ದ ವೇದೀವಿಳಾಸದ ವಿಸ್ತಾರಮೊ ಪೇಳನಲ್ಕೆ ಮೆಱೆಗುಂ ಶ್ರೀಕುಞ್ಜನಾಥಾಶ್ರಯಂ (ಎಕ. V, ಅರಸೀ. ೧೦೮-೪೯ ; 1255). ೩. ಮುದ್ರೆಯುಂಗುರ.

[ಸಂ. ವೇದಿ, ವೇದೀ]

ವೇದಿಕಾವಳಯ (ನಾ). ಸುತ್ತಲೂ ಇರುವ ವೇದಿಕೆ : ವೇದಿಕಾವಳಯಂ ಪೂವಲಿ . . . ಲತಾಮಂಟಪವಂಬಿವಿಲ್ಲದ ಜಿನಾವಾಸಂಗಳೆಲ್ಲೆಲ್ಲಿಯುಂ (ಪುಷ್ಪಪು. ೨-೭೩).

[ಸಂ. ವೇದಿಕಾವಲಯ]

ವೇದಿಕೆ (ನಾ). ೧. ಯಜ್ಞಮಾಡುವ ಸ್ಥಳ. ೨. ಕಟ್ಟೆ ; ಜಗುಲಿ : ಮಂದರಪ್ರಾಸಾದದ ಕೆಳಗಣ ಸೌಧತಳವೇದಿಕೆಯೊಳ್ ಮಹಾಶ್ವೇತವರಸಿರ್ದಪಳ್ (ಕಾದಂಉ. ೧೬೭) ; ಸಲ್ಲೀಲೆಯಿಂ ವಿವಾಹದ ವೇದಿಕೆಯನಿಕ್ಕಿ (ಸಂಬಿರ. ೫-೨೬). ೩. ನಾಟಕ, ಭಾಷಣ ಮೊದಲಾದುವನ್ನು ಮಾಡಲು (ಹಲಗೆ ಮುಂತಾದುವುಗಳಿಂದ) ಎತ್ತರವಾಗಿ ಕಟ್ಟಿದ ಸ್ಥಳ ; ರಂಗಸ್ಥಳ : ಗಮಕಿವರ್ಯನ ವೇಣುವಾಣಿಗೆ ಕಲಾರಮಣಿ ವರ್ಣಲಯ ರಾಗಮಯ ನವರಸಾವೇಶದಿಂ ಮಮಕಾವ್ಯವೇದಿಕೆಯನೇರಿ ನರ್ತಿಸುವಂತೆ ನಲಿದುದಾ ಪೊನ್ನಿಗಂ (ಶ್ರೀರಾಮಾ. ೨೩೨-೧೨೭) ; ವೇದಿಕೆಯನ್ನೇರಿ ಮಹಾಸಭೆಯನ್ನು ಎದುರಿಸಿ ನಿಂತ (ಸಂಬರು. ೩೯). ೪. ಪೀಠ ; ಆಸನ. ೫. ದಿಬ್ಬ ; ದಿಣ್ಣೆ. ೬. (ಕುಂದುಕೊರತೆ, ಭಾವನೆ ಮುಂತಾದುವನ್ನು ವ್ಯಕ್ತಪಡಿಸಲು) ಅವಕಾಶವಿರುವ ಸ್ಥಾನ, — ನೆಲೆ ; ಉದಾ. 'ಗ್ರಾಹಕರ ವೇದಿಕೆ', 'ವಿಚಾರ ವೇದಿಕೆ' ಇತ್ಯಾದಿ. ೭. ಮುದ್ರೆಯುಂಗುರ ; ಗುರುತಿನ ಉಂಗುರ : "ವೇದಿಕೆ ಮುದ್ರೆಯುಂಗುರಗಳಂಬಿವು ವೇದಿಕೆಯಕ್ಕು" (ನಾನಾರ. ೧೪೯). [ಸಂ.ವೇದಿಕಾ]

ವೇದಿತ (ಗು). ತಿಳಿಯಲ್ಪಟ್ಟ ; ತಿಳಿದ : ಶಿವನ ಬೆಸನದಿ ವೇದಿತಾಮಳ ಭಕ್ತಿವರ್ಧನ ಕಾರಣದಿ ಬಂದು ಮೇದಿನಿಯೊಳೊಗೆದಂ (ಬಸಪು. ೩-೨೦). [ಸಂ.]

ವೇದಿತಜ್ಞ (ನಾ). ಶ್ರೇಷ್ಠವಿದ್ವಾಂಸ : ನೀವಪ್ಪೊಡೆ ವಿದಿತ ವೇದಿತಜ್ಞರುಂ ಭಾವಿತಾತ್ಮರುಮಾಗಿರ್ದ ಜ್ಞಾನಿಗಳ್ (ಗದಾಯು. ೫-೪೪ ವ). [ಸಂ.]

ವೇದಿನಿ (ನಾ). ವಿದ್ವಾವಂತ ; ಪಂಡಿತೆ : ಸಂತಸ ಮಿಗೆ ಸರ್ವಸರಸವಿದ್ಯಾಸಿದ್ಧಾಂತ ವೇದಿನಿಯರೊಪ್ಪಿಹರು (ಹದಿಬ. ೧-೧೮) ; ಆದಿದರುಶನ ವೇದಿನಿ ಬಾಧಿಸುವ ಮೋಹಿನಿಯು (ಪಜ್ಜಪು. ೧೫-೫೮). [ಸಂ. ವೇದಿನೀ]

ವೇದಿಸು (ಕ್ರಿ). ೧. ತಿಳಿಯುವಂತೆ ಮಾಡು ; ನಿರೂಪಿಸು : ವೇದ್ಯನಿಂತಹನಂದಱಿದು ವೇದಿಸಿದರು ನಮ್ಮ ಪುರಾತನರು (ಉಂಪ. ೧೩೮-೧೩೧) ; ಬತ್ತಿಸಾದಿರಾಗಂಗಳಿಗನಿತು ದಂಡಿಗೆಗಳಂ ರಚಿಸಿ ವೇದಿಸಲು (ಬಸಪು. ೧೯-೬) ; ಭೂವಿನುತ ಜೀವಂಧರನ ಚರಿತವನು ವೇದಿಸುವೆನು ಭಾಮಿನಿಯ ಷಟ್ಪಾದದಿಂ (ಜೀವಂಚ. ೧-೩೫). ೨. ಅರಿವಾಗು ; ಅರಿವಿಗೆ ಬರು : ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ ನಿಶ್ಶಬ್ದ ವೇದಿಸದಿದ್ದರ ಗುಹೇಶ್ವರ ನೋಡಿ ನೋಡಿ ನುಡಿದು ನಗುತ್ತಿಪ್ಪ ನೋಡಾ (ಅವಚಂ. ೧೦೬-೪೩೬) ; ಆದುದು ನವಮಾಸಂ ಪುಣ್ಯೋದರದೊಳ್ ಪಕ್ವಸಮಯಮಲರ್ದುದು ಸುಪಥಂ ವೇದಿಸಿದುದು ಸುಮುಹೂರ್ತಂ ಕಾದಿರ್ದುವು (ಗಿರಿಕ. ೩-೪೧) ; ವಾದವೇತಕೆ ನಿನ್ನ ಮನಸಿಗೆ ವೇದಿಸುವದಿಟವಲ್ಲ ಮನೆಯವನಾದನಾದೊಡೆ ಬಳಿಕ ನೋಡುವನೆಂದಳಾ ಮಾಯೆ (ಪ್ರಭುಲಿಂ. ೭-೨೧). ೩. ಆಚರಿಸು ; ಜರುಗಿಸು : ನೀವು ನಾಲ್ವರು ವೇದಿಸುವುದೌ ತಪವ ಮುಖ್ಯಪ್ರಾಣಸಂಗನೆಗೆ (ಸಂಭಪ. ೩೩-೯). ೪. ಅರಿತುಕೊಳ್ಳು ; ಗ್ರಹಿಸು : ವೇದ ವೇದಿ [ಪಾಠಾಂ. ಧಿ]ಸಲಱಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು (ಬಸವ. ೯೫೨) ; ವೇದವಿದರುದ್ಯೋಗಪರ್ವಂ ವೇದಿಸುವರಿಗೆ ಶಾಂತಿಪರ್ವಂ ಮೇದಿನಿಯೊಳಖಿಳಾಗಮಜ್ಞರ ಕರ್ಣಪರ್ವವಿದು (ಬಸಪು. ೫-೨) ; ನಾದುನಿಯನು ತಾನು ತಕ್ಕಿಸಿಕೊಬರ್ತಿಯಾದುದು ತನ್ನೊತ್ತಿಗವಳು ವೇದಿಸಿ ಬಾರಳದಕೆ (ಭರತ. ೯-೫೧). ೫. ಸೋಕು ; ತಾಗು : ಪರುಷ ವೇದಿಸಲು ಲೋಹ ಹೊನ್ನಾದ ತೆಱ ಲಿಂಗಸಂಗಿಗಳಲಿಹನು (ಶಪಗೀ. ೩೪-೧೫೭) ; ಘನಮನ ವೇದಿಸಿ ಅನುಪಮ ತಾನಾಗಿ ಘನಲಿಂಗದಲ್ಲಿ ಮನ ತಲ್ಲೀಯವಾದನು (ಶಪಗೀ. ೧೧೧-೫೪೬). ೬. ಇಡು ; ಇರಿಸು: ಓದಿ ಬರುದಾವಳಿಯ ನೊಸಲೊಳು ವೇದಿಸಿದ ಕರದಿಂದಲಾ ಸುರವೀದಿಯಲಿ ಮೆರಸಿದನು ಸಿಂದುರದಗ್ರಪಿಷ್ಟಣನ (ಪಜ್ಜಪು. ೯೫-೨೦).

[ವೇದನ + - ಇಸ್ಮು$_3$]

ವೇದೀಸ್ಥಳ (ನಾ). ಎತ್ತರವಾದ ಜಗಲಿಯ ಪ್ರದೇಶ : ಆ ವೇದೀಸ್ಥಳದೊಳ್ ಹರಿದ್ವಸುವ ಪಾತ್ರಂಗಳ್ ಲಸದ್ಪೂರ್ವೆಯಿಂ ತೀವಿರ್ದುಂ ನವಚಂದ್ರಕಾಂತ ಚಪಕಂಗಳ್ ಚಂದನಕ್ಕೋದದಿಂ ತೀವಿರ್ದುಂ . . . ಬಱಿದಿರ್ದ ವೋಲೆಸೆದುವಾದಂ ವರ್ಣಸಾಮಾನ್ಯದಿಂ (ಚಂದ್ರಪ್ರ. ೬-೫೪). [ಸಂ. ವೇದೀಸ್ಥಲ]

ವೇದೆ (ನಾ). (?) : ಶ್ರೀಪರ್ಗ್ಗೆಡೆ ರೇತಯ್ಯನ ವೇದ ಸಂಕಯ್ಯ (ಎಕ.II.೪೬೭-೨;ಸು.1000).

[?]

ವೇದೋಕ್ತ (ಗು). ವೇದದಲ್ಲಿ ಹೇಳಿರುವ ; ವೇದದಲ್ಲಿ ತಿಳಿಸಿರುವ :

ಭುವಿಯೊಳದುಕಾರಣಂ ವೇದೋಕ್ತಮಾರ್ಗವಿಪ್ರವರೇಣ್ಯನಾಗಿ ಪಠಣಾವರಣೆ ಜಪತಪಸ್ಸಾದಿಯಿಂ ನಡೆವುದುಚಿತಂ (ವೀಶ್ವ. ೭-೨-೨೬) ; ವೇದೋಕ್ತಪೂಜೆಯಲಿ ತೃಪ್ತಪಡಿಸದಿರೆ ಆದುದೇನು (ಕನಕ. ೧೬-೬). [ಸಂ.]

ವೇದೋದ್ಧಾರ (ನಾ). ವೇದರಾಶಿಯನ್ನು ಉದ್ಧಾರಮಾಡಿದವನು, –ಕಾಪಾಡಿದವನು : ವೇದೋದ್ಧಾರ ಶ್ರೀವೇಂಕಟನಾಯಕ ಪುರಂದರವಿಟ್ಠಲ ನಮೋ ನಮೋ (ಪುರಂದ. ೩-೪೧-೩). [ಸಂ.]

ವೇದ್ಯ (ನಾ). ೧. ತಿಳಿಯಲು ಸಾಧ್ಯವಾದುದು ; ತಿಳಿಯಬೇಕಾದುದು : ಆದ್ಯರಿಗಲ್ಲದ ವೇದ್ಯವಾಗದು (ಬಸವ. ೬೦೩) ; ವೇದ್ಯವಾವುದು ಎಂಬುದನಱಿತು ನಿಂದಾತನೇ ಕೃತಾರ್ಥನು (ಉಪಮ. ೧೩೮-೧೩೧). ೨. ತಿಳಿದುದು ; ವಿದಿತವಾದುದು : ಚಿದಂಶವೇದ್ಯಂ ನಿರ್ವಿಕಲ್ಪಂ . . . ಗುಣಾತೀತಮವ್ಯಕ್ತಂ (ಶಿವಗೀ. ೭೦-೩೪೦) ; ನಿನ್ನ ನಿಜ ಉಂಡ ನಿಲವೆನ್ನ ಮತಿಗೆ ವೇದ್ಯವು (ಸಿದ್ಧಪ್ಪ. ೨೬-೫). ೩. ತಿಳಿದವನು ; ಅರಿತವನು ; ಜ್ಞಾನಿ : ಆದ್ಯರ ವಚನ ಆದ್ಯರಿಗಾಯಿತ್ತು ವೇದ್ಯರಿಗಲ್ಲದ ಸಾಧ್ಯವಾಗದು (ಬಸವ. ೮೪೨) ; ಆದ್ಯರಲ್ಲ ವೇದ್ಯರಲ್ಲ ಸಾಧ್ಯರಲ್ಲದ ಹಿರಿಯರ ನೋಡಾ (ಅಪಟಂ. ೩೧-೧೨೯). [ಸಂ.]

ವೇಧ (ನಾ). ೧. ತೂತುಕೊರೆಯುವಿಕೆ ; ರಂಧ್ರಮಾಡುವಿಕೆ : ''ವ್ಯಧಃ, ವೇಧಃ– ೨ ಬೆಜ್ಜ ಮಾಡೋಣವು, ತೂತು ಕೊರೆಯುವಿಕೆ, ಚುಚ್ಚುವಿಕೆ'' (ಸಿದ್ಧಾಂತಿ. ೩೪೭). ೨. ತೂತು ; ರಂಧ್ರ. ೩. ಅಡಚಣೆ ; ಅಡ್ಡಿ ; ಉಪಟಳ : ಯಾರಿಗೂ ಯಾವುದೇ ಬಗೆಯ ಕೆಲಸದ ಒತ್ತಡ ವೇಧ ಇರಲಿಲ್ಲ (ಇಪ್ರಳ. ೧೬೯). ೪. [ಜ್ಯೋತಿ] ಒಂದು ನಿರ್ದಿಷ್ಟವಾದ ಕಾಲಪರಿಮಾಣ. [ಸಂ.]

ವೇಧನ (ನಾ). ತೂತುಮಾಡುವಿಕೆ ; ರಂಧ್ರಮಾಡುವುದು : 'ವೇಧಿಸು' ಪರಾ. [ಸಂ.]

ವೇಧನಿಕೆ (ನಾ). ಮುತ್ತು, ರತ್ನಗಳನ್ನು ಕೊರೆದು ರಂಧ್ರಮಾಡುವ ಸಾಧನ. [ಸಂ. ವೇಧನಿಕಾ]

ವೇಧಮುಖ್ಯಕ (ನಾ). ಒಂದು ಬಗೆಯ ಔಷಧೀಸಸ್ಯ ; ಕಚೋರ : ''ಕಚೋರ . . . ಶಟೀ, ವೇಧಮುಖ್ಯಕ'' (ಸಸ್ಯನಿ. ೪೩). [ಸಂ.]

ವೇಧಸ (ನಾ). ೧. ಸೃಷ್ಟಿಕರ್ತ ; ಬ್ರಹ್ಮ . ೨. ವಿಷ್ಣು. [ಸಂ. ವೇಧಸ್]

ವೇಧಸ್ಸಂಕಲ್ಪ (ನಾ). ಬ್ರಹ್ಮಸಂಕಲ್ಪ ; ವಿಧಿನಿಯಮ : ವೇಧಸ್ಸಂಕಲ್ಪಂ ದುರ್ಬೋಧಮಿವಂ ನಿಟ್ಟೆಯಿಂ ನಿರೋಧಿಸಿ ತನುವಂ ಸಾಧಿಸಿದೊಡೀ ಕೃಪಾಣಮೆ ಬಾಧಾಕರಮಾಯ್ತಜಾಕೃಪಾಣೀಯದವೋಲ್ (ಪಂಡಾಮಾ. ೯-೨೫). [ಸಂ.]

ವೇಧಾದೀಕ್ಷೆ (ನಾ). [ವೀಶೈ] ''ಗುರುಲಿಂಗವು ಶಿವಲಿಂಗದಲ್ಲಿ ಬೆಳೆಯಲು ಆತ್ಮನ ವರ್ತನೆಯು ನಷ್ಟವಾಗುವುದು. ಇದು ಗುರುವಿನ ಹಸ್ತಮಸ್ತಕ ಸಂಯೋಗದಿಂದ ಉಂಟಾಗುತ್ತದೆ. ಆಗ ಭಾವಲಿಂಗದ ಕಳೆಯು ಮನುಷ್ಯನಲ್ಲಿ ಪ್ರಾದುರ್ಭವಿಸುವುದು. ಇದೇ ವೇಧಾದೀಕ್ಷೆಯನ್ನು ಉಂಟುಮಾಡುವಂತಹುದು'' (ಶಿವಾಕೋ. ೧೩) : ಆ ದುಃಖಜೀವಿಯಾಗಿದ್ದ ಪ್ರಾಜ್ಞನ ವೇಧಾದೀಕ್ಷೆಯಿಂದ ಭಿನ್ನಜ್ಞಾನವ ನಿವೃತ್ತಿಮಾಡಿ ಪರಿಪೂರ್ಣಜ್ಞಾನಚಿತ್ತ ಪ್ರಭಾವಿಸಿ ಕೊಟ್ಟು ಅಲ್ಲಿ ಭಾವಲಿಂಗ ಸಾಹಿತ್ಯವ ಮಾಡಿದನು (ಮೋಳಿಮಾ. ೨೨೮-೭೮೦ ಟೀಕೆ) ; ಆಣವಮಲ ಮಾಯಾಮಲ ಕಾರ್ಮಿಕಮಲಗಳೆಂಬ ಮಲತ್ರಯಂಗಳಂ ಕಳೆದಿದ್ದೇ ವೇಧಾದೀಕ್ಷೆ ಎನಿಸುವುದು (ಕೃಷಿಪ್ರ. ೩೩೩). [ಸಂ. ವೇಧಾದೀಕ್ಷಾ]

ವೇಧಿತ (ಗು). ತೂತುಮಾಡಿದ ; ರಂಧ್ರಮಾಡಿದ : ''ವೇಧಿತಃ, ಛಿದ್ರಿತಃ, ವಿದ್ಧಃ — ೩ ತೊಲಿಯಿಡಲ್ಪಟ್ಟದ್ದು, ತೂತುಕೊರೆಯಲ್ಪಟ್ಟದ್ದು'' (ಸಿದ್ಧಾಂತಿ. ೩೫೦). [ಸಂ.]

ವೇಧಿಮ (ನಾ). ಹೂವು ಕಟ್ಟುವ ಒಂದು ಬಗೆಯ ಬಂಧ : ಪೂಗಟ್ಟುವರಂ ಕಂಡು ತಾನುಮವರ ಕೆಲದೊಳ್ ಕುಳ್ಳಿರ್ದು ನೂಲಿನಗ್ರಗ್ರಂಥಿಮ [ವೇಧಿಮ] ವೇಧಿಮ ಸಂಪೂರಿ [ಮ ಸಂಘಾಯಮ]ಮೆಂಬಯ್ದುಂ ತೆಱದ ಪುಷ್ಪಮಾಲೆಗಳಂ ಸವೆದಾಗಳ್ (ಬಂಹರಿ. ೨-೫೯ ವ). [?]

ವೇಧಿಸು (ಕ್ರಿ). ೧. ಚುಚ್ಚು ; ನಾಟು ; ನೆಡು : ಘನತರದ ಸೂಜಿಕಲ್ಲಂ ಕಾಣೆ ಸೂಜಿ ವೇಧಿಸುವವೊಲು ಮನ ನಟ್ಟರೆ (ಪ್ರಭುಪು. ೮-೧೩೨). ೨. ಆಳವಾಗಿ ಒಳಹೊಗು, –ಪ್ರವೇಶಿಸು : ನಡೆ ನುಡಿ ಚೈತನ್ಯ ಒಡಲನೊಂದುಮಾಡಿ ಬಡದೆ ವೇಧಿಸುವ ಬೆಡಗ ಕಂಡೆನಯ್ಯ (ಅವಚಂ. ೨೫೧– ೧೧೪೫) ; ಲಿಂಗ ಲಿಂಗವ ವೇಧಿಸಿ ಅಂಗ ಲಿಂಗದೊಳಗಾಯಿತ್ತು ಮನ ಲಿಂಗವ ವೇಧಿಸಿ ಮನ ಲಿಂಗದೊಳಗಾಯಿತ್ತು (ಮಹಾದೇ. ಬ. ೨೬–೫೦) ; ನಾಯೆ ಬಗುಳದೆ ಕೆಲಕೆ ಸಾರ್ ಸುರೆ ಕಾಯವನು ವೇಧಿ[ಪಾಶಾಂ. ದಿ]ಸಿತೆ (ತೊರರಾ. ೫–೫–೬). ೩. ಕಾಣಿಸಿಕೊಳ್ಳು ; ತೋರು : ಗುರುವಚನದಿಂದಲ್ಲದೆ ಲಿಂಗಕ್ಕೆ ಕಳೆ ವೇಧಿಸದು (ಅವಿಂಡೇ. ೧೮-೩). ೪. ಹೊರಳಿಸು ; ತಿರುಗಿಸು : ಬೊಟ್ಟುಮಾಡಿ ತೋರಿಸುತ್ತ ಆ ಅಪರಿಚಿತನ ಲಕ್ಷ್ಯವನ್ನು ಅತ್ತ ಕಡೆಗೆ ವೇಧಿಸಿದನು (ಅಂಜಿಕೆ. ೫೫). ೫. ಪುಡಿಮಾಡು : ಸಿತಮಂ ಘೃತಮಂ ಬೆರಸಿಟ್ಟು ಮತ್ತದಂ ಪೆಜವಲ್ಲಿಳೀಂ ತ್ರಿಜಾತಕದೊಳೊಂದಿರೆ ವೇಧಿಸಿ ಕಮ್ಮಿತಾಗೆ . . . ಮಾಡ್ಪುದು ಕ್ಷೀರದುಂಡೆಯಂ (ಲೋಕೋಪ. ೮-೧೦೦).

[ವೇಧನ + – ಇಸ್ಕು]

ವೇಧೆ (ನಾ). ೧. ಉಪಟಳ ; ಕಾಟ : ಅವರು ಜಮಿನ್‌ದಾರರ ವೇಧೆಯಿಂದ ತಿನ್ನುವುದಕ್ಕನ್ನವಿಲ್ಲದೆಯೂ ಹೊದೆಯುವುದಕ್ಕೆ ಬಟ್ಟೆಯಿಲ್ಲದೆಯೂ ಶ್ರಮ ಪಡುತ್ತಲಿರುವರು (ಛತ್ರಶಿ. ೬೨). ೨. ನೋವು ; ಬಾಧೆ : ವೇದ ಘನವೆಂಬೆನ ಪ್ರಾಣವೇಧೆಯ ಹೇಳುತ್ತಿದ (ಬಸವ. ೨೦೦) ; ನಿನ್ನೆರ್ದೆವೂವಿನಾ ವೇಧೆ ಜಗುಳ್ದುದಿಲ್ಲವ ತುಳ್ಳಿ ನೇತ್ರಶತಪತ್ರದಿಂ? (ಶ್ರೀರಾಮಾ. ೯೯–೫೬೬). ೩. [ವೀಶೈ] ಇಷ್ಟಲಿಂಗಧ್ಯಾನದಲ್ಲಿ ಸುಜ್ಞಾನಭಕ್ತಿಯೊಡನೆ ಮಗ್ನವಾಗುವಿಕೆ : ಅನವರತ ಅನುಭವಮುಖದಿಂದ ತತ್ಪವನೆಲೆಯಿತ್ತಿಪ್ಪ ವೇಧೆಯುಂಟಾದೆನು (ಪ್ರಭುವ. ೩೭೮–೨೬೨ ಟೀಕೆ) ; ಸದ್ಗುರು ಶಿಷ್ಯಮಸ್ತಕದೊಳಿಡೆ ಕರವನಂದು ವೇಧೆಯದಾಯ್ತು (ಲಿಚಂ. ೫೨-೯). ೪. ಒಂದು ನಿರ್ದಿಷ್ಟವಾದ ಕಾಲಪರಿಮಾಣ. [ಸಂ. ವೇಧ]

ವೇಪ (ನಾ). ನಡುಕ ; ಕಂಪನ : ಏಱಿಸಿದಂ ಮುರಾರಿ . . . ಚಂಡರೂಪಮನಸ್ತಾಮರವೇಪಮಂ ವಿಜಯವೃಕ್ಷಾವಾಸಮಂ ಚಾಪಮಂ (ಜಗವಿ. ೧೨-೭). [ಸಂ.]

ವೇಪಥು (ನಾ). ನಡುಕ ; ಕಂಪನ : ''ವೇಪಥುಃ, ಕಂಪಃ — ಈ ೨ ನಡುಕಂ'' (ಪಲಾಯು. ೯೮-೪೪೭) ; ವೇಪಥು, ಅಶ್ರು (ಕಣ್ಣೀರು), ವೈಸ್ವರ್ಯ (ಧ್ವನಿ ಬದಲಾಗುವುದು) — ಇವು 'ಸಾತ್ತ್ವಿಕ' ಭಾವಗಳು (ಸಂಶಾಬಿ. ೧೨). [ಸಂ.]

ವೇಪನ (ನಾ). = ವೇಪಥು : ''ಕ್ಷವಥು ವದವಸಾದಂ ಕ್ಷಮಥು ವೇಪನಂ ತಾನದಱಿಗೆ ವೇಪಥುವೆನಿಕುಂ'' (ಮಪ್ಪುಕೋ. ೭೩-೩೪). 'ವೇಪಿಸು' ಪರಾ. [ಸಂ.]

ವೇಪಮಾನ (ಗು). ನಡುಗುವ; ಕಂಪಿಸುವ: ಪಾಂಡುರ ಜರಾ ಮೂರ್ದಜೆಯ ವೇಪಮಾನಮಾ ವ್ರತಗೇಹಮಂ ದೇಹಮಂ ಪಿಡಿದನೊಯ್ಯನೆಯೆ ರಾಮಚಂದ್ರಂ (ಶ್ರೀರಾಮಾ. ೧೭೬-೨೦). [ಸಂ.]

ವೇಪಿಸು (ಕ್ರಿ). ೧. ನಡುಗು ; ಕಂಪಿಸು : ಕೇಗಿತಾ ನೆರವಿ, ಮಳೆಮೋಡಮಂ ಕಾಣುವ ನವಿಲ್‌ಗಳೋಲ್, ವೇಪಿಸೆ ಸಭಾಸ್ಥಾನಮಂಟಪಂ (ಶ್ರೀರಾವಾ. ೫೮-೧೦೬). ೨. ತಲ್ಲಣಗೊಳಿಸು : ಪಾಪಿಯಂ ಪ್ರೋತ್ಸಹಿಸಿ ಸುಕೃತಿಯ ಪರೀಕ್ಷಿಸುತ ವೇಪಿಪ ವಿಧಿ ನಮ್ಮ (ಮಂಜುಕ. ೧೫೯). [ವೇಪನ + – ಇಸ್ಕು]

ವೇಬಿಲ (ನಾ). ಒಬ್ಬಾತನ ಹೆಸರು : ವಾರಬದಿಗದಾಲನುಂ ತೆಳ್ಳನುಂ ತಾಳಲಿಯನುಂ ವೇಬಿಲನುಂ ಕಾಟೆರನುಂ ದತ್ತಿಕ್ಕೆ (ಎಕ. III, ನಂಜನ. ೧೬೯–೭ ; 915 ?). [?]

ವೇಮ (ನಾ). ನೂಲಿಂದ ಬಟ್ಟೆಯನ್ನು ನೇಯಲು ಬಳಸುವ ಉಪಕರಣ; ಮಗ್ಗ. [ಸಂ.]

ವೇಮದಂಡ (ನಾ). = ವೇಮ : ''ನೆಯ್ಗೆಕಾಜನ ನಾಳಿ — ವೇಮ, ವೇಮದಂಡ'' (ನಾಚರಾ. ೬). [ಸಂ.]

ವೇಮಾಡು (ಕ್ರಿ). ಅಜಾಗರೂಕನಾಗು ; ಮೋಸಹೋಗು : ಮನದೊಳ್ ಕೂರದ ಪಾಂಡುರಾಜಸುತರುಂ ಲಾಕ್ಷಾಗೃಹೋಗ್ರಾಗ್ನಿ[ಯಾ]ನನದೊಳ್ ಮಬ್ಬಿದರೆನ್ನ ಪುಣ್ಯಮರಿಯರ್ ವೇಮಾಡ(?)ರಿನ್ನಾರೊ ಬೇರನೆ ಕಿಬ್ಬಿಕ್ಕಿದೆಂ (ಪಂಪಭಾ. ೩-೩೨). IP 'ಏಮಾರು' ಎಂಬ ಶಬ್ದಕ್ಕೆ ಇದು ಪೂರ್ವರೂಪವಿರಬಹುದೆ?.

[?/ ತೆಲು. ವೇಮಾಡು, ವೇಮಾರು, ವೇಮಱು, ವೇಮರು = ಮತ್ತೆ ಮತ್ತೆ, ಪುನಃ ಪುನಃ]

ವೇರ್ 'ಬೇರ್' ನೋ.

ವೇರ (ನಾ). ೧. ದೇಹ ; ಶರೀರ. ೨. ಬದನೆಗಿಡ. ೩. ಕೇಶರ ; ಕುಂಕುಮಕೇಸರಿ. [ಸಂ.]

ವೇರಡಗಿತ್ತಿ, ವೇರಡಿಗಿತಿ (ನಾ). ಹೀನಕುಲದವಳು ; ಅಕುಲೀನೆ : ಮಾಲೆಗಾರ್ತಿ ಮುದಿಗುಂಟಣಿ ವೇರಡ [ಪಾಠಾಂ. ವೇಡರ]ಗಿತ್ತಿಯೆಂಬ ಪೆಂತಿರ ನೆರೆಗೊಂಡೊಡಂದಱಿಗೆ ಸಜ್ಜನವೆಂಡಿತಿ ಕೆಟ್ಪಳೆಂಬುದಂ (ಸೂಕ್ತಿಸು. ೮೧೦೭). **ವೇರಡಿಗಿತಿ** : ವೇರಡಿ [ಪಾಠಾಂ. ಣಿ]ಗಿತಿ, ಕುಡುಂಬಿತಿ, ತೆಲುಂಗಿತಿ (ಶಮದ. ೨೦೮ ಪ್ರಯೋ).

[ವೇರಡ್ಡ (P < ಸಂ. ವೇರಟ = ಹೀನಕುಲದವನು) + - ಗಿತ್ತಿ]

ವೇರಡಿಗ (ನಾ). ಕೇರಳಪ್ರದೇಶದವನು (?) : "ಕೇರಳನೆನಲ್ ವೇರಡಿಗನಕ್ಕು" (ಮಂಗರಾ. ೧೧೨-೭). [?]

ವೇರಡಿಗಿತಿ 'ವೇರಡಗಿತ್ತಿ' ನೋ.

ವೇಲಾಯೋಗ (ನಾ). [ಜ್ಯೋತಿ] ಲಗ್ನದಿಂದ ಮೊದಲು ಮಾಡಿ ಏಳು ರಾಶಿಗಳಲ್ಲಿ ಗ್ರಹವಿರುವ ಒಂದು ಬಗೆಯ ಯೋಗ ; ನೌಯೋಗ : ಉದಯಾದ್ಯಸ್ತಗೃಹಂಬರಂ ನೆಲಸೆ ವೇಲಾಯೋಗಮಕ್ಕುಂ . . . ಉದ್ಯೋಗಗೇಹದಿನಾತುರ್ಯಗೃಹಂಬರಂ ನೆಲಸೆ ಚಾಪಯೋಗಮಕ್ಕುಂ ಗ್ರಹಂ (ಜಾತಕ. ೧೩-೮). P 'ನೌ' ಎಂಬ ಶಬ್ದಕ್ಕೆ 'ಭೇಲ' ಎಂಬ ಪರ್ಯಾಯಪದವಿರುವುದರಿಂದ ಇಲ್ಲಿ 'ವೇಲಾ' ಎಂಬುದು 'ಭೇಲ' ಎಂಬುದಕ್ಕೆ ಪರ್ಯಾಯವಾಗಿ ಪ್ರಯೋಗವಾಗಿರಬಹುದು. [ಸಂ.]

ವೇಲಾವನ, ವೇಳಾವನ (ನಾ). ಸಮುದ್ರದ ತಡಿಯಲ್ಲಿರುವ ವನ ; ಸಮುದ್ರತೀರದ ಕಾಡು : ವಿಲಾಲವಂಗಲವಲೀವೇಲಾವನಭೂಮಿಯೊಳ್ ನಿಧೀಶ್ವರ ಸೈನ್ಯವ್ಯಾಲಗಜಂಗಳ್ . . . ಕಣ್ಗೆವಂದುವು (ಆದಿಪು. ೧೩-೨) ; ವೇಲಾಂಧನಗನಿತಂಬದ ವೇಲಾಂಧಪುರೋಪಕಂಠಮಂ ಸಾರ್ದುದು ಭೂಪಾಲಸ್ಕಂಧಾವಾರಂ ವೇಲಾವನ ವೀಧಿಯಲ್ಲದಂಭೋನಿಧಿವೋಲ್ (ಪಂಡಾಮಾ. ೧೨-೩೬). **ವೇಳಾವನ** : ಕೆಂದಳಿರಂ ತದ್ಯಾರ್ಧಿ ವೇಳಾವನಸಮಿತಿದವಜ್ಯಾಳಿಯಂ ನೀಲಶೈಲಾವಳಿ ಕೈಕೊಂಡಭ್ರಮಂ ತಳ್ತಡರ್ವವೊಲಡರ್ದತ್ತತ್ತಲುಂ ಬಳ್ಳಿಮಿಂಚಂ ತಳೆದಾಶಾಮಂಡಲಂ ಕಟ್ಟುನೆ ಕುನಿಯೆ ಜಳಶ್ಮೀತಜೀಮೂತಜಾತಂ (ಜಗವಿ. ೪-೧೪). [ಸಂ.]

ವೇಲಿ 'ಬೇಲಿ' ನೋ.

ವೇಲು (ನಾ). ಒಂದು ಬಗೆಯ ಬಟ್ಟೆ : ಜಂಗವೇಲುರೆ ವೆಂಜವೇಲು ಸುರಳಿದೊಪ್ಪು ಕಂಗೊಳಿಸಿದ ಸುರಳಿಗಳು (ದೇವಪು. ೪-೧೮೦) ; ಹಸಿ ಹೊಂಬಣ್ಣದ ವೇಲು ಮುಡಿವೇಲುಗಳಲ್ಲಿ ಹಸಿರತ್ನವೇಲು ಕಾವೇಲು (ದೇವಾಪು. ೪-೧೭೦). [?]

ವೇಲೆ, ವೇಳ್ $_2$ (ನಾ). ೧. ಸಮುದ್ರದ ತೀರ : ಸುಭದ್ರವಿಜಯಂಗಂ ಶೃಂಗಾರಸಮುದ್ರ ವೇಲಾಲೀಲೆಯೆನಿಸಿದ ಸುವೇಲಾದೇವಿಗಂ . . . ಸಗರನೆಂಬೊಂ ತನಯನಾಗಿ (ಆದಿಪು. ೯-೬ ವ) ; ಪತಿಚರಿತಾನುಕೂಲೆ ಘನರಾಗರಸಾರ್ಣವವೇಲೆ . . . ಗುಣಮಾಲೆಯೆನಲ್ ವನಮಾಲೆ ರಂಜಿಪಳ್ (ಪುಷ್ಪಪು. ೩-೭೦). ೨. ಸಮುದ್ರದ ಅಲೆ, – ತೆರೆ : ಉದಯಿಸುವುದುಮಪ್ಯತಾಂಶುವಿನುದಯದೂಳಂಭೋಧಿವೇಲೆ [ಪಾಠಾಂ. ವೆರ್ಚಿ] ಭೋರ್ಗರೆವವೊಲ್ (ಪಂಪಭಾ. ೧-೧೪೬) ; ಸಾಗರವೇಲೆ ಚಂದ್ರಮನ ಕೋಗಿಲೆ ಸುಗ್ಗಿಯ ಕೂರ್ಪಂತೆ ಸತಿಯನುರಾಗದಿನಿಯನ ಜಾನಿಪಳು (ಪಜಿಪು. ೨೫೪). ೩. ಸಮುದ್ರದ ಉಬ್ಬರ, – ಭರತ ; ಸಮುದ್ರವು ಉಕ್ಕಿ ಹರಿಯುವಿಕೆ. ೪. ಮೇರೆ ; ಸೀಮೆ; ಎಲ್ಲೆ : ಚತುರುದಧಿವಲಯವೇಲಾಲಂಕೃತವಸುಂಧರಾಸುಂದರೀ ಜೀವಿತೇಶ್ವರನಂ . . . ಕಂಡು (ಪಂಚಕಂ. ೧೯-೬) ; ತೆರೆಪರಂಪರೆ . . . ಅವ್ಯಳಿಸಿದುದು ನಿರಂತರಂ ತಟಗತ ಅಶೋಕವನ ವಂಕಿಯ ಶಿಲಾವೇಲೆಯಂ (ಶ್ರೀರಾಮಾ. ೩೩೧-೫). ೫. ಕಾಲ ; ಸಮಯ. ೬. ಅವಕಾಶ ; ಆಸ್ಪದ. ೭. ವಿರಾಮ ; ಪುರಸತ್ತು. ೮. ಮರಣದ ಸಮಯ, – ಕಾಲ. ೯. ಸುಖವಾದ ಮರಣ ; ಸುಲಭವಾದ ಸಾವು. **ವೇಳೆ** $_2$: ೧. ಗಾಳಿ ವಿಸರ್ಜಿಸೆ ಬಟಿಕಾಂ ವೇಳೆಯೊಳಾಂ ಬಿರ್ದು ಮೆಲ್ಲನೀಕ್ಷಿಸೆ (ಉದ್ಭಟ. ೭-೮೪) ; ನ್ರಿಪಕಂನರಂ ಸಮಸ್ತೋದಧಿವೇಳೆಯಿಂ ಪೊಜಗೆ ಬೆಳ್ಗೊಡೆಯೊಳ್ಳೆಳಲಂ ನಿಮಿರ್ಚಿದಂ (ಎಇ. XXI. ೧೨-೧೪; 1260). ೨. ಆಗಳಿರಡುಂ ಪಡೆಗಳಪಹಾರತೂರ್ಯಂಗಳಂ ಬಾಜಿಸಿ ಮುನ್ನೊತ್ತಿದ ವೇ [ಪಾಠಾಂ. ಪೊ]ಳೆಗಳ್ ಸಮುದ್ರಂಗಳಂ ಪುಗುವಂತೆ ತಂತಮ್ಮ ಬೀಡುಗಳಂ ಪೊಕ್ಕರ್ (ಪಂಪಭಾ. ೧೧ ೨೪ ವ) ; ಜಳನಿಧಿವೇಳಾತರಂಗೋಚ್ಚಳದ್ರತ್ನ ವಿನಿದ್ರಪ್ರಾಂತದೇಶಂ ಸೊಗಯಿಪುದನಸುಂ ನೀಳ್ದ ವಿಂಧ್ಯಾಚಲೇಂದ್ರಂ (ಕಾದಂಪೂ.೧೩). ೩. ಪೂರ್ವಾನುಯೋಗಾಬ್ಧಿಯಿಂ ಪೊಱಪೊಣ್ಮಿತ್ತದು ವೇಳೆಯಂತೆ ಕಥೆ ಲಂಬೋದ್ಧಾಮ ವೀಚೀಚಯಂ (ಆದಿಪು. ೧ ೨೯) ೫. ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲಾ (ಬಸವ. ೩೧೩) ; ಅವಸರದ ವೇಳೆಯೊಳಿತಿ ಸುಖೋತ್ಸವವವಲರಿ ಶಿವಯೋಗ ನಿದ್ರೆಯೊಳವಿರತಂ ಸಿಕ್ಕಿರಲು (ಬಸಪು. ೩೫-೪೭). [ಸಂ. ವೇಲಾ]

ವೇಲೆಯಮ್ಮ (ನಾ). ಒಬ್ಬಾತನ ಹೆಸರು : ಆತನ ತಮ್ಮಂ ಪೆರ್ಗ್ಗಡೆ ವೇಲೆಯಮ್ಮಂ ಬಾವಿಯಂ ಕಟ್ಟಿಸಿ ಮಟವಂ ಮಾಡಿಸಿದಂ (ಎಕ. VIII. ಸೊರಬ. ೭೨-೧೪ : 938).

[ವೇಲೆ, + ಅಮ್ಮ (< ಅಮ್ಮ $_1$)]

ವೇಲ್ಲ (ಗು). ೧. ಹೋಗುವ ; ಚಲಿಸುವ. ೨. ನಡುಗುವ ; ಕಂಪಿಸುವ. ೩. ಉರುಳಾಡುವ ; ಹೊರಳಾಡುವ. (ನಾ). ೪. ಒಂದು ಬಗೆಯ ಔಷಧೀಸಸ್ಯ ; ವಿಡಂಗ : "ವೇಲ್ಲಂ . . . ವಿಡಂಗಂ — ೬ ವಾಯುವಿಳಂಗದ ಹೆಸರುಗಳು" (ಸಿದ್ಧಾಂತಿ. ೧೩೬). [ಸಂ.]

ವೇಲ್ಲಜ (ನಾ). ಕರಿಮೆಣಸು : "ವೇಲ್ಲಜಂ, ಮರೀಚಂ . . . ಧಾರ್ಮವತ್ಸನಂ — ೬ ಮೆಣಸುಕಾಳಿನ ಹೆಸರುಗಳು" (ಸಿದ್ಧಾಂತಿ. ೨೮೪). [ಸಂ.]

ವೇಲ್ಲನ (ಗು). ಅಲುಗಾಡುವ; ಕಂಪಿಸುವ : ಮಾಲತೀವ್ರತತಿವಿತಾನ ಚೂತವಲ್ಲೀ ವೇಲ್ಲನನಿಸರ್ಗಸೌಂದರಕ್ರೀಡಾಚಲಕೇಲೀಸಮಭಿರಾಮಮುಮಾಗಿ . . . ನಿಜವಿಳಾಸದಿಂ ನಗುವವಲ್ಲಿ ವಲ್ಲೀವನಂ (ಆದಿಪು. ೧೦-೩೬ ವ). [ಸಂ.]

ವೇಲ್ಲಿತ (ಗು). ೧. ಕಂಪಿಸುವ ; ಅಲ್ಲಾಡುವ. ೨. ಸುತ್ತಿಕೊಂಡ ; ಬಳಸಿದ : ಸುರಶರಾಸನೋಪಮಾನನಾನಾನೂನಕಲ್ಪವಲ್ಲೀವೇಲ್ಲಿತ . . . ನೀಳಾಭ್ರವಿಭ್ರಮ ಕುಟ್ಟಿಮದೊಳಂ (ಪಾಪಪು. ೧೨-೪೨ ವ). (ನಾ). ೩. ನಡುಗಿದುದು ; ಅಲ್ಲಾಡಿದುದು: "ವೇಲ್ಲಿತಃ, ಪ್ರೇಂಖಿತಃ, ಅವಧೂತಃ, ಚಲಿತಃ, ಅಕಂಪಿತಃ, ಧುತಃ— ೬ ಕದಲಿಸಲ್ಪಟ್ಟ ಥಾಂದ್ದು, ಅಳ್ಳಾಡಿಸಲ್ಪಟ್ಟದ್ದು" (ಸಿದ್ಧಾಂತಿ. ೬೪೬). ೪. ಕೊಂಕಿದುದು ; ಬಗ್ಗಿದುದು : "ವಕ್ರಂ, ವೃಜಿನಂ, ಭಂಗುರಂ, ಆವಿದ್ಧಂ, ವೇಲ್ಲಿತಂ . . . ಊರ್ಮಿಮತ್ — ಈ ೧೨ ಕೊಂಕಿದುದು" (ಹಲಾಯು. ೧೧೬-೧೧). ೫. ಸುತ್ತುವರಿದುದು ; ಬಳಸಿದುದು : ಆ ಮಹಾರಣ್ಯವಂ . . . ಅರಣ್ಯದಂತಗಣ್ಯವಿದ್ರುಮವಲ್ಲರೀವೇಲ್ಲಿತಮುಂ . . . ಚತುರ್ಮುಖನಂತೆ ಸರಸ್ವತೀಪತಿಯುಮೆನಿಸಿದುದು (ಜಗವಿ. ೧-೪೪ ವ). [ಸಂ.]

ವೇಶ (ನಾ). ೧. ಒಳಗೆ ಹೋಗುವ ದಾರಿ ; ಪ್ರವೇಶದ್ವಾರ. ೨. ಮನೆ ; ವಸತಿ ; ಬೀಡು : ಗುಡಿಗುಳಗಳಿಗೆ ಗೂಡಾರಂ . . . ಎಂಬವಲ್ಲಿಂದೆಡೆಗಿಲ್ದಿರಿದು ನಾಡೆಯುಂ ಕಣ್ಗೆಡಲ್ದಿರಿದುದಾ ನೃಪನ ವಿಜಯಶಿಬಿರಂ ವೇಶಂ (ವರ್ಧಮಾ. ೮-೫೭). ೩. ವೇಶ್ಯೆಯರ ನಿವಾಸ ; ಸೂಳೆಗೇರಿ. ೪. ಉಡಿಗೆ ತೊಡಿಗೆ ; ವೇಷಭೂಷಣ. ೫. ವೇಷ ; ಸೋಗು : ಬೀಸುವ ನೆವದಿಂದ ವೇಶವನು ತಾಳುವಳು (ಸರ್ವಜ್ಞ. ೧೮೬೯). [ಸಂ.]

ವೇಶಿ, ವೇಸಿ (ನಾ). ಗಣಿಕೆ ; ಸೂಳೆ : ವೇಶಿಯ ಬಾಯಂಜಲ ತಿಂಬ ದಾಸಿಯ ಸಂಸಾರದಂತೆ (ಬಸವ. ೭೭೫) ; ಮಲುಹಣನು ವಿಟಪುಂಗವಂ ಗುಣನಿಳಯಮಾನಸನೊರ್ಬ ವೇಶಿಯು ತಾನು ಒಲವುಣ್ಮೆ . . . ವರ್ತಿಸುವ ಸಮಯದಲಿ (ಬಸಪು. ೪೨-೧) ; ಈಶಭಕ್ತನು ಆಗಿ ವೇಶಿಯನು ಸಾರಿಹರೆ ಮಾಸಲಾಗಿರ್ದ ಬೋನವನು ಹಂದಿಯು ಮೂಸಿ ಹೋದಂತೆ (ಸರ್ವಜ್ಞ. ೨೭೫). **ವೇಸಿ** : ವೇಸಿಯನುಳಿದು ಪರಮಾನಂದದಲಿ ಮುಸುಕಿಟ್ಟು ಮಲಗಿರಲು (ಜೀಪಂಚ. ೩-೨೨) ; ವೇಸಿಯಹ ಪರಿಯಂಕದಲಿ ನಿಜದಾಸಿಯಹ ಶಿಶ್ರೂಷೆಯಲಿ . . . ಏಸುಕಾರ್ಯಕೆ ಮಂತ್ರಿಯೆನಿಸುವ ಮೈಸಿರಿಯನುಳ್ಳವಳು ರಾಣೀವಾಸವೆಂದನಿಸುವಳು (ಹಾವ್ಯಾಲಿ. ೩-೮೦). [< ಸಂ. ವೇಶ್ಯಾ]

ವೇಶ್ಮ (ನಾ). ಮನೆ ; ಗೃಹ : ಮರಕತವೇಶ್ಮರಶ್ಮಿಯರುಣಾಶ್ಮಗೃಹದ್ಯುತಿಯಿಂದ್ರನೀಳಮಂದಿರರುಚಿ ಹೇಮದಾಮಘೃಣಿ ಮೌಕ್ತಿಕಮಂಡಪಕಾಂತಿಯೆತ್ತಲುಂ ಪರಿಕಲಿಪನ್ನೆಗಂ (ಚಂದ್ರಪ್ರ. ೧೧-೭೮). [ಸಂ. ವೇಶ್ಮನ್]

ವೇಶ್ಯಾಂಗನೆ (ನಾ). ಸೂಳೆ ; ವೇಶ್ಯೆ : ವೇಶ್ಯಾಂಗನೆಯರು ಚಿತ್ರಕಲಾಕುಶಲಿಗಳೂ ಆಗಿರುತ್ತಿದ್ದರು (ಭಾರದ. ೩೨೪). [ಸಂ. ವೇಶ್ಯಾಂಗನಾ]

ವೇಶ್ಯಾವಾಟ (ನಾ). ವೇಶ್ಯೆಯರು ವಾಸಿಸುವ ಬೀದಿ ; ಸೂಳೆಗೇರಿ : ಗುಡಿ ತುಡುಗಿ ಲತೆಯ ಪೊಸದಾಂಗುಡಿಯನಿಸಿದುದು . . . ವೇಶ್ಯಾವಾಟದೊಳಡಗಿಲಿದ ವಿಶಿಷ್ಟಸೌಧಭವನಾವಳಿಯೊಳ್ (ಶಾಂತಿಪು. ೧೦-೬೯) ; ಮಕರಂದನುಂಬೆರಸರಮನೆಯಂ ಪೊಱಮಟ್ಟು ವೇಶ್ಯಾವಾಟಮಂ ಮುಟ್ಟಿವರೆ (ಲೀಲಾವ. ೨-೨೪ ವ). [ಸಂ.]

ವೇಶ್ಯಾವಾಟಿ (ನಾ). = ವೇಶ್ಯಾವಾಟ : ನಗರದತುಲಸರ್ವಸ್ವಮೆಂಬಂತೆ ವೇಶ್ಯಾವಾಟಿ ಕಂಗಳೆದುದನಿಲಭವಗೆ (ವಂಶಾಭ್ಯು. ೫-೬-೨೬) ; ಪರಿಪರಿಯ ನಾಟ್ಯಗಳ ನಟ್ಟುವರಿರದೆ ಪೊಸತರುಣಿಯರ ತಿದ್ದುವ ಸ್ವರ ಮೊರವು ತೀವಿರುವ ವೇಶ್ಯಾವಾಟಿ ರಾಜಿಸಿತು (ನಾಗಪ ೨-೬೬). [ಸಂ. ವೇಶ್ಯಾವಾಟೀ]

ವೇಶ್ಯಾವೃತ್ತಿ (ನಾ). ಸೂಳೆಗಾರಿಕೆ; ವೇಶ್ಯೆಯ ಕಸುಬು, –ದಂಧೆ : ದೇವರ ಕಲ್ಲನ್ನು ಎತ್ತಿಸಿನೋಡಿದಾಗ ಮೊಮ್ಮಗಳನ್ನು ವೇಶ್ಯಾವೃತ್ತಿಗೆ ಹಚ್ಚಬೇಕೆಂದು ಉತ್ತರ ಬಂದುದನ್ನು . . . ನಂಬಲಿಲ್ಲ (ಗಂಗಾಸಾ. ೧೫). [ಸಂ.]

ವೇಶ್ಯಾಸ್ತ್ರೀ (ನಾ). ಸೂಳೆ ; ಗಣಿಕೆ : ವೇಶ್ಯಾಸ್ತ್ರೀಯರ ಹಾಗೆ ತಲೆಗೂದಲನ್ನು ಅಲ್ಲಿ ಇಲ್ಲಿ ಸುತ್ತಿ . . . ಮುಖದ ಮೇಲೆಲ್ಲ ಪೌಡರ್ ಸವರಿಕೊಂಡಿದ್ದಳು (ಚ್ಯಾಲಾಮು. ೨೫೬).

[ಸಂ.]

ವೇಶ್ಯೆ (ನಾ). = ವೇಶ್ಯಾಸ್ತ್ರೀ : ಪಲರ್ಗಂ ಕಾಮಸುಖಾರ್ಥಮಿತ್ತಿನನೊಳರ್ವಂತುಂ ಸಮಂತಾರೊಳಂ ಚಲಮುಂ ಕೋಪಯುಮಾಗದಂತೆ ಪಡದಂ ಪೆದ್ಮಾಸನಂ ವೇಶ್ಯಯಂ (ಪುರಿಕಿ. ೧೨-೧) ; ವೇಶ್ಯೆಯ ನೆಚ್ಚಿ ತನ್ನ ನಾರಿಯ ಬಿಡುವಂಥ ಪುರುಷನೇಕೆ (ಪುರಂದ. ೪-೧೪೭-೨). [ಸಂ. ವೇಶ್ಯಾ]

ವೇಷ (ನಾ). ೧. ಅಲಂಕಾರ ಮಾಡುವುದು ; ಸಿಂಗರಿಸುವುದು : ''ಆಕಲ್ಪಃ, ಮುಂಡನಂ, ವೇಷಃ, ಪ್ರತಿಕರ್ಮ, ಪ್ರಸಾದನಂ — ಈ ೫ ಶೃಂಗಾರಂಗಳ್ಗೆಯ್ದುದು'' (ಹಲಾಯು. ೪೯-೩೮೫). ೨. ಉಡುಗೆತೊಡುಗೆ ; ಪ್ರಸಾಧನ : ಧರ್ಮಪುತ್ರಂ ಧರಾಮರವೇಷದೊಳ್ ವಿರಾಟನಂ ಕಂಡು (ಪಂಪಭಾ. ೮-೪೨ ವ) ; ಅಡ್ಡತ್ರಿಪುಂಡ್ರದ ಮಣಮುಕುಟದ ವೇಷದ ಶರಣರ ಕಂಡರೆ ನುಂಬುವುದೆನ್ನ ಮನವು (ಬಸವ. ೮೮). ೩. ತೋರಿಕೆಯ ರೂಪ ; ಸೋಗು : ಸರಿಮದು ಪುಸಿವೇಷದ ತೆಱೆ ಸುರಿದುದು ಕೆಯ್ನಾರ ತೆಱದ ಪೂವಳೆ (ನಿರ್ಜ. ೯-೧೨೦) ; ಶಿವಂ ಸತ್ಯದುರವಣೆಯ ನೇಹಕ್ಕಂಜಿ ಕಡುಪೂಸತನುತ್ತ ವೇಷವ ಬಿಟ್ಟನಂದಂಜಿ (ರುದ್ರರ. ದೀ. ೨೧೧-೨೦). ೪. (ನಾಟಕ, ಯಕ್ಷಗಾನ ಮುಂತಾದುವುಗಳ) ಪಾತ್ರ : ಇವರ ವೇಷಗಳಲ್ಲಿ ಅತ್ಯಂತ ಸುಂದರವಾದುದು ''ಅರ್ಧನಾರೀಶ್ವರನ ಪಾತ್ರ'' (ನಡದಾ. III. ೨೨೬೯).

ವೇಷಭೂಷಣ = ಉಡುಗೆತೊಡುಗೆ ; ಒಡವೆ, ವಸ್ತ್ರ : ಕುಶಲವಿರಚಿತಾನು ರೂಪವೇಷಭೂಷಣನಾಗಿ ರಾಜಸವಾಜವಿರಾಜಮಾನನಮಂ ಸ್ವಯಂವರಪ್ರದೇಶ ಮನೆಯ್ದಿವಂದು (ಶಾಂತಿಪು. ೫-೯೨ ವ); ಯಕ್ಷಗಾನದಲ್ಲಿ ಬಹುಮೆಚ್ಚಿನ ಸೌಂದರ್ಯಸಿದ್ಧಿಯನ್ನು ಹೊಂದಿದ ಭಾಗವಂದರೆ ಅದರ ವೇಷಭೂಷಣಗಳು (ಯಕ್ಷಪು. ೧೫೭). ವೇಷಭೂಷೆ = ವೇಷಭೂಷಣ : ಅವನ ವೇಷಭೂಷೆಗಳಲ್ಲಿ ಪೂರ್ತಿಯಾಗಿ ಬದಲಾವಣೆಯಾಗಿತ್ತು (ನೀನಮು. ೧೫೬) ; ಅವುಗಳ ಹಿಂದೆ ವೇಷಭೂಷೆಯ ಸಂಚಾರಿಪ್ರದರ್ಶನದಂತಿದ್ದ ಸ್ತ್ರೀ ಪುರುಷರ ಮೇಳ (ಅನ್ನ. ೨೪೬). ವೇಷಹಾಕು = ೧. ಅಲಂಕಾರಮಾಡು ; ವೇಷ ತೊಡಿಸು : ಅಸ್ತಿಕ ದೈವಕ್ಕೆ ಇಲ್ಲದ ಸಲ್ಲದ ವೇಷಹಾಕಿ ಮಂಗನಂತೆ ಮೆರಸುತ್ತಾನೆ (ನಟಸಾ. ೪೨೨). ೨. ಪಾತ್ರವಹಿಸು ; ಅಭಿನಯಿಸು : ಅಶ್ವಘೋಷನು . . . ವೇಷ ಹಾಕಿಕೊಂಡು ಅದನ್ನು ಪಾಟಲಿಪುತ್ರದಲ್ಲಿ ಅಭಿನಯಿಸಲು ಅದನ್ನು ನೋಡಿದ ೫೦೦ ಕ್ಷತ್ರಿಯಕುಮಾರರು ವೈರಾಗ್ಯ ತಾಳಿ ಬೌದ್ಧಮತವನ್ನು ಕೈಕೊಂಡರೆಂದೂ . . . ತಿಳಿದು ಬರುತ್ತದೆ (ಸಂನಾಟ. ೬೮). [ಸಂ.]

ವೇಷಕಟ್ಟು (ಕ್ರಿ). ೧. ನಟನೆ ಮಾಡು ; ಸೋಗುಹಾಕು : ನನಗಿಚ್ಛೆಯಿಲ್ಲದಿದ್ದರೂ ಅವನ ಗಳಿಯರ ಕೃಪಾಪ್ರವಾಹದಲ್ಲಿ ಸಮರಸನಾಗಬೇಕೆಂದು ಇಷ್ಟು ವೇಷಕಟ್ಟಿರುವನು (ಜಯಂತ. ೧೧೨) ; ನೀವು ವೇಷಕಟ್ಟೋದರಲ್ಲಿ ತುಂಬ ಬಲ್ಲಿದರು (ಹಾಡುಪು. ೧೮). ೨. (ನಾಟಕ ಮುಂತಾದುವುಗಳಲ್ಲಿ) ಪಾತ್ರಮಾಡು ; ಅಭಿನಯಿಸು : ಈ ಪ್ರದೇಶದಲ್ಲಿ ಮಳೆಗಾಲದಲ್ಲಿ ವೇಷಕಟ್ಟಿ ಆರುತಿಂಗಳ ಕಾಲ ಕುಣಿಯುವುದಕ್ಕೆ ಮಳೆರಾಯ ಬಿಡನು (ಯಕ್ಷಪು. ೫೬). [ವೇಷ + ಕಟ್ಟು]

ವೇಷಡಂಭಕ (ನಾ). ತೋರಿಕೆಯ ನಡೆನುಡಿಯವನು ; ಬೂಟಾಟಿಕೆಗಾರ : ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯಾ (ಬಸವ. ೬೬೬).

[ವೇಷ + ಡಂಭಕ (< ಡಂಬಕ)]

ವೇಷಧಾರಿ (ನಾ). ೧. ವಸ್ತ್ರಭೂಷಣ, ಆಕಾರ ಇತ್ಯಾದಿಗಳನ್ನು ಬದಲಾಯಿಸಿಕೊಂಡವನು ; ವೇಷಾಂತರ ಮಾಡಿಕೊಂಡವನು : ಪಾರ್ವತಿಯೂ ಶಿವನ ವೇಷಕ್ಕೆ ತಕ್ಕಂತೆ ಕಿರಾತೆಯ ಉಡುಪನ್ನು ಧರಿಸಿ . . . ಹೊರಡಲು, ಅವರ ಹಿಂದೆ ನಾನಾವೇಷಧಾರಿಗಳಾದ ಭೂತಗಳೂ ಹೊರಟವು (ವಚಭಾ. ೧೨೫). ೨. ಸೋಗುಗಾರ ; ನಟನೆ ಮಾಡುವವನು ; ಬೂಟಾಟಿಕೆಯವನು : ವೇಷಧಾರಿಯಾನು ಉದರಪೋಷಕ ನಾನಯ್ಯಾ (ಬಸವ. ೮೫) ; ಹೇಸಿ ವಿಷಯ ಬಯಸುವಂಥ ವೇಷಧಾರಿಗಳಿಗೆ ಕಾಶೀಯಾತ್ರೆ ಫಲ ಬಾಹೋದೆ (ಪುರಂದ. ೧-೧೪೦-೩). ೩. (ನಾಟಕ ಮುಂತಾದುವುಗಳಲ್ಲಿ) ಪಾತ್ರ ಮಾಡುವವನು ; ವೇಷಧರಿಸುವವನು : ನಮ್ಮಲ್ಲೇ ಹಲವು ವೇಷಧಾರಿಗಳಿಗೆ, ಇಷ್ಟೆಲ್ಲ ಕಷ್ಟಪಟ್ಟು ಬಣ್ಣಹಾಕಿ ರಂಗಸ್ಥಳಕ್ಕೆ ಬರುವುದೆಂಬುದು ಅರ್ಥಶೂನ್ಯವೆಂದು ತೋರುತ್ತಿದೆ (ಯಕ್ಷಪು. ೧೬೨) ; ವೇಷಧಾರಿಗಳಿಗೆ ಬಗೆಬಗೆ ತೊಡವನು ಮಾಡಿಕೊಟ್ಟರು ನಮ್ಮ ತಂದೆ (ಇಂಚಾಪ. ೧೧-೪೩). [ಸಂ. ವೇಷಧಾರಿನ್]

ವೇಷಾಂತರ (ನಾ). ಉಡುಗೆ ತೊಡುಗೆಗಳನ್ನು ಮಾರ್ಪಡಿಸಿಕೊಳ್ಳುವುದು ; ಮಾರುವೇಷ ಹಾಕುವುದು : ಅವರಿಬ್ಬರನ್ನು ವೇಷಾಂತರದಿಂದ ದೇಶಾಂತರಕ್ಕೆ ಕಳುಹಿಸಿ ಲಿಪ್ಪದ ಪ್ರತಿಮಗಳನ್ನು ಮಾಡಿಸಿ ಇಟ್ಟರು (ಸಾಹಿಪ. ೮೬) ; ವೇಷಾಂತರವನಾಂತು ಧರಗಿಳಿದ ಭೈರವನೋ (ಕೊಲಲು. ೩೮-೧೭). [ಸಂ.]

ವೇಷಾಡಂಭು (ನಾ). ತೋರಿಕೆ; ಬೂಟಾಟಿಕೆ : ವೇಷಾಡಂಭನ ಮಾತಿನ ಬಿನ್ನಾಣಗಳಿಗೆ ಗ್ರಾಸ ಉಂಟಲ್ಲದೆ ನೀವಿಲ್ಲ (ಮೋಮಾ. ೧೭೬-೬೧೯).

[< ವೇಷ + ಡಂಭು (< ದಂಬ)]

ವೇಷಿ (ನಾ). ವೇಷವನ್ನು ಧರಿಸಿದವನು ; ವೇಷಧಾರಿ : ಮಹೇಶನು ವರ ತಪೋಧನವೇಷಿಯಾಗೆಯ್ತರಲು ಕಂಡೆದ್ದು . . . ಸಾಷ್ಟಾಂಗವೆಱಗಿ (ಬಸಪು. ೫೨-೩).

[ಸಂ. ವೇಷಿನ್]

ವೇಷ್ಟ (ಗು). ೧. ಸುತ್ತುವರಿದಿರುವ ; ಆವರಿಸಿರುವ. (ನಾ). ೨. ಬೇಲಿ ; ಆವರಣ. ೩. ತಲೆಗೆ ಸುತ್ತುವ ವಸ್ತ್ರ ; ರುಮಾಲು, ಪೇಟ ಇತ್ಯಾದಿ. ೪. ಮರದ ರಸ, — ಅಂಟುದ್ರವ. ೫. ಹಲ್ಲಿನ ಕುಳಿ ; ಹಲ್ಲಿಗೆ ಉಂಟಾಗುವ ಒಂದು ಬಗೆಯ ರೋಗ : 'ದಂತವೇಷ್ಟ' ಪರಾ. [ಸಂ.]

ವೇಷ್ಟನ (ನಾ). ೧. ಸುತ್ತುವರಿಯುವುದು : 'ವೇಷ್ಟಿಸು' ಪರಾ. ೨. ಬೇಲಿ : ಮತ್ತಮಲ್ಲಿ ಕಂಟಕವೇಷ್ಟನಂ ತೋಂಟಂಗಳೊಳ್ ಬಹುವಿರೋಧಾಮಳಂ ಪೆರ್ಗಱೆಗಳೊಳ್ . . . ಅಲ್ಲದೆ ಪಱವೆಡೆಯೊಳಿಲ್ಲ (ವರ್ಧಮಾ. ೧-೪೫ ವ). ೩. ತಲೆಗೆ ಸುತ್ತುವ ಬಟ್ಟೆ ; ರುಮಾಲು, ಪೇಟ ಇತ್ಯಾದಿ : ನಾನು ಪರಿಷೆಗೆ ಬಂದು ತಲೆಯ ವೇಷ್ಟನವನ್ನು ತೆಗದರೆ ಅದನ್ನು ನಾನು ಶಿರಸಾ ಮಾಡಿದ ಅಭಿವಾದನವೆಂದು ಸ್ವೀಕರಿಸಬೇಕು (ಬುದ್ಧಚ. ೧೨೯). ೪. ಕಿರೀಟ ; ಮುಕುಟ. ೫. [ನಾಟ್ಯ] ಹತ್ತೊಂಬತ್ತು ಬಗೆಯ ದೇಶೀಯ ಆಕಾಶಚಾರಿಗಳಲ್ಲಿ ಒಂದು ; IP ''ಒಂದು ಕಾಲನ್ನು ಸಮನಾಗಿರಿಸಿ ಇನ್ನೊಂದು ಕಾಲಿಂದ ಅದನ್ನು ಸುತ್ತುವುದು'' (ಅಸ್ಮರಂ. ೩೨೪ ಗದ್ಯಾನುವಾದ) : ನಿಂದ ಪದಮೊಂದನುಱೆ ಮತ್ತೊಂದು ಪದಂ ಸುತ್ತಿ ತೋಱೆ ವೇಷ್ಟನಮೆನಿಕುಂ (ಅಸ್ಮರಂ. ೬-೭೮). [ಸಂ.]

ವೇಷ್ಟಿ (ನಾ). ಸೊಂಟಕ್ಕೆ ಸುತ್ತುವ ವಸ್ತ್ರ ; ಧೋತ್ರ ; ದಟ್ಟಿ : ಪುಲಿದೊವಲ್ ಗಜಚರ್ಮ ಉಟ್ಟು ಹೊದೆದ ವೇಷ್ಟಿಗಳಾಗೆ (ನಂಬರ. ೬-೧೯) ; ಕುಪ್ಪಸದ ಕಣ ಸಹಿತ ಒಂದು ಶೀರೆ, ಒಂದು ಜೋಡಿ ವೇಷ್ಟಿ, ನಗದಿಯಿಂದ ನಾಲ್ಕು ರೂಪಾಯಿ ಕೈಗೆ ಹಾಕಿದಳು (ವಾಗ್ದೇವಿ. ೧೫೭).

[< ಸಂ. ವೇಷ್ಟ./ ತಮಿ. ತುಳು. ವೇಷ್ಟಿ ; ತೆಲು. ವೇಷ್ಮುವ./ ಮರಾ. ವೇಷ್ಟೀ]

ವೇಷ್ಟಿತ (ಕ್ರಿ). ೧. ಸುತ್ತುವರಿದ ; ಆವರಿಸಿದ : ಜಲಧಿವೇಷ್ಟಿತಸಕಲವಸುಧಾವಲಯವನು ಬಹುಪುಣ್ಯಫಲತೆಯಲಲಘುಮಹಿಮೆಯಲಾಳಿ ಭುವನಖ್ಯಾತನೆನಿಸಿದನು (ತಿಮ್ಮಅ. ೧-೧೨೦). ೨. ಉಡಿಸಿದ ; ತೊಡಿಸಿದ. ೩. ಪ್ರತಿಬಂಧಿಸಿದ ; ತಡೆಗಟ್ಟಿದ.

(ನಾ). ೪. ಸುತ್ತುವರಿದುದು : "ನಿವೃತಂ, ವೇಷ್ಟಿತಂ, ಪರಿವಿಷ್ಟಂ, ವಳಯಿತಂ, ಪರಿಕ್ಷಿಪ್ತಂ – ಈ ೫ ಸುತ್ತಲ್ಪಟ್ಟುದು" (ಹಲಾಯು. ೧೧೮-೨೭). ೫. [ಕಾಮಶಾ] ಒಂದು ಬಗೆಯ ರತಿಕ್ರೀಡೆ : ಸ್ತ್ರೀ ಮೆಲ್ಲನೆ . . . ಹಿಂದಣ ಕರಣಮನೆ ಒಂದೊಂದು ತೂಡಗಳನೊಂದೊಂದು ಕೈಗಳಿಂ ಪಲ್ಲಟದಿಂದೊತ್ತಿ ರಮಿಸಲ್ಕೆ ವೇಷ್ಟಿತಮಂಬ ಕರಣಂ (ಕಾಮಶಾ. ೨೩೫). [ಸಂ.]

ವೇಷ್ಟಿಮ (ನಾ). [ನಾಟ್ಯ] ರಂಗಸ್ಥಳದಲ್ಲಿ ಬಳಸಲಾಗುವ ವಾಹನ, ಧ್ವಜ, ಕವಚ ಇತ್ಯಾದಿ ಪರಿಕರ : ಸಂಧಿಮ, ವ್ಯಾಜಿಮ, ವೇಷ್ಟಿಮ ಎಂದು ವರ್ಣಿತನಾಗಿರುವ . . . ಕೃತಕವಾದ ರಂಗವಸ್ತುಗಳಿದ್ದರೂ (ಸಂನಾಟ. ೨೬). [ಸಂ.]

ವೇಷ್ಟಿಸು (ಕ್ರಿ). ೧. ಸುತ್ತುವರಿ ; ಬಳಸು ; ಸುತ್ತುಗಟ್ಟು : ಹುತವಹತತಿಯಿಂ ವೇಷ್ಟಿಸಿರ್ದಧ್ವರಂ . . . ಎಂಬಂದದಿಂ ಕಣ್ಗೊಳಿಸುತ್ತಂ ಯೋಗಿವೃಂದಾರಕರ ನಡುವೆ ಜಾಬಾಲಿಯೋಗೀಂದ್ರನಿರ್ದಂ (ಕಾದಂಪೂ. ೨೩೧) ; ಅಂಬುಜನಾಭ ನಮ್ಮವಯವಂಗಳ ನೂರ್ಮೆಯ ನಿನ್ನ . . . ಕೌಸ್ತುಭವಿಭೂಷಣದೀಧಿತಿ ವೇಷ್ಟಿಸಿತ್ತೊ ಪೀತಾಂಬರಕಾಂತಿ ಸುತ್ತಿದುದೊ (ಜಗವಿ. ೧೮-೪) ; ಶ್ರೀಕರದಿ ಸಪ್ತಾಬ್ಧಿ ವೇಷ್ಟಿಸಿರೆ ಲವಣರತ್ನಾಕರಂ ಮೊದಲ ಜಂಬುದ್ವೀಪಮಂ ಬಳಸಿ ರಾಮಣೀಯಕಮಾದುದು (ಚಿಬಪು. ೨-೨). ೨. ಅಳವಡಿಸು ; ಹೊಂದಿಸು : ಮನೋಜಗಜಕುಂಭದೊಳ್ ನಕ್ಷತ್ರಮಾಲೆಯಂ ಸುತ್ತುವಂತೆ ರತ್ನರಶನಾ ಸೂತ್ರಮಂ ವೃತ್ತಕಟಿಯೊಳ್ ವೇಷ್ಟಿಸಿಯುಂ (ಚಂದ್ರಪು. ೬-೬೩ ವ). [ವೇಷ್ಟನ + - ಇಸ್ಸು]

ವೇಸ (ನಾ). ವೇಷ;ಸೋಗು : ವೇಷ-ವೇಸ, ಶೇಷ - ಸೇಸ (ಶಮದ. ೨೫೩ ಪ್ರಯೋ); ವೇಷ- ವೇಸ, ದೋಷ – ದೋಸ (ಶಬ್ದಾನು. ೧೩೮ ಪ್ರಯೋ). [< ಸಂ. ವೇಷ]

ವೇಸನೆ (ನಾ). (?) : ತಮಸಿ ಮೂಱೆ ದಿವಸಂ ವೇಸನೆ ಈ xxx ರೆ ಉಟ್ಟುದು . . . ಪೋಪ್ಪನ್ನು (ಎಕ. III, ಮೈಸೂರು. ೫೫-೧೧ ; ೫ನೆಯ ಶತ). [?]

ವೇಸರ$_1$ (ನಾ). [ವಾಸ್ತು] ಭಾರತೀಯ ವಾಸ್ತುಶಿಲ್ಪದ ನಾಗರ, ದ್ರಾವಿಡ ಮತ್ತು ವೇಸರಗಳೆಂಬ ಮೂರುಪ್ರಭೇದಗಳಲ್ಲಿ ಒಂದು : ಚಾಲುಕ್ಯರ ವಾಸ್ತುಶಿಲ್ಪದಲ್ಲಿ ನಾಗರ ಮತ್ತು ದ್ರಾವಿಡಸಂಪ್ರದಾಯಗಳೆರಡನ್ನೂ ಸೇರಿಸಿಕೊಂಡಿರುವುದರಿಂದ ಇದನ್ನೇ ವೇಸರವೆಂದು ಹೇಳಬಹುದು (ಭಾರದ. ೫೦೨) ; ದೇವಾಲಯವು ವೃತ್ತಾಕಾರವಾದುದು "ವೇಸರ"ವೆಂದೂ ಶಾಸ್ತ್ರಗಳಲ್ಲಿ ಹೇಳಿದೆ (ಮೈವಾಸ್ತು. ೨೯); ಶಿಲ್ಪಶಾಸ್ತ್ರಗಳಲ್ಲಿ ಭಾರತೀಯಶಿಲ್ಪವನ್ನು ನಾಗರ, ದ್ರಾವಿಡ, ವೇಸರ ಎಂಬುದಾಗಿ ವಿಭಜಿಸಿ . . . ಕಾವೇರಿಗೆ ದಕ್ಷಿಣದಲ್ಲಿ ದ್ರಾವಿಡ, ಮಧ್ಯದಲ್ಲಿ ವೇಸರರೀತಿಗಳಿವೆಯೆಂದು ಹೇಳಿದೆ (ಹೊಯ್ಸಾ. ೧). [ದೇ. ॥ ತಮಿ. ವೇಚರಮ್]

ವೇಸರ$_2$ (ನಾ). ಕತ್ತೆ ಮತ್ತು ಕುದುರೆಗಳ ಕೂಟದಿಂದ ಹುಟ್ಟುವ ಒಂದು ಬಗೆಯ ಪ್ರಾಣಿ ಹೇಸರಗತ್ತೆ : ಕರ್ತಾರನ ಪೂಜಿಸಿ ಕು [ಚ್ಚಿ]ತ ದೈವಕ್ಕೆಱಗುವರು ಕತ್ತೆ ಕುದುರೆಗ ಹುಟ್ಟಿದ ವೇ[ಪಾಠಾಂ. ಹೇ]ಸರನಂತೆ (ಬಸವ. ೬೧೬) ; ಆಸೋದಿಗಳು ನವರತ್ನಸುವರ್ಣವ ವೇಸರದಂತೆ ಹೊತ್ತಿಹರು (ಮೋಹತ. ೫-೫೭). [ಸಂ.]

ವೇಸರಗತ್ತೆ 'ವೇಸರಗಟ್ಟೆ' ನೋ.

ವೇಸರಗಟ್ಟೆ, ವೇಸರಗತ್ತೆ (ನಾ). ಹೇಸರಗತ್ತೆ : ಕನಕಂ ವೇಸರಗಟ್ಟೆ ಭೂಮಿ ಸುಭಗತ್ವಂ ಯುಕ್ತಿ ಮಂತ್ರಜ್ಞಮೆಂಬಿನಿತಕ್ಕುಂ . . . ದಶೋಕ್ತಾರೋಹಗೇಹಂಗಳೊಳ್ (ಜಾತತಿ. ೯-೨೩). **ವೇಸರಗತ್ತೆ** : "ಚಕ್ರಿಪತಿ ವಾಜಿತರಮೆನಲು ವೇ[ಪಾಠಾಂ. ಹೇ]ಸರಗತ್ತೆಯಕ್ಕು" (ಮಂಗರಾ. ೫೫-೯). [ವೇಸರ$_2$ + ಕಟ್ಟೆ]

ವೇಸರಮಾರ್ಗ (ನಾ). [ವಾಸ್ತು] ವಾಸ್ತುಶಿಲ್ಪದ ಮೂರುರೀತಿಗಳಲ್ಲಿ ಒಂದಾದ ವೇಸರಶೈಲಿ : ಪುರಿಯಲ್ಲಿ ಪ್ರಸಿದ್ಧ ಜಗನ್ನಾಥದೇವಾಲಯವು ಉತ್ತರಹಿಂದೂಸ್ಥಾನದಲ್ಲಿ ಪ್ರಚಾರದಲ್ಲಿರುವ 'ವೇಸರ' ಮಾರ್ಗವನ್ನು ತೋರಿಸುವುದು (ಬಾಲಪ್ರ. III, ೧೭೨೦). [ವೇಸರ$_1$ + ಮಾರ್ಗ]

ವೇಸರಶಿಲ್ಪ (ನಾ). [ವಾಸ್ತು] ವೇಸರಮಾರ್ಗದ ಶಿಲ್ಪಶೈಲಿ : ಬಂಗಾಳವು ತನ್ನದೊಂದು ವಿಜಾತೀಯವಾದ ಶಿಲ್ಪಶೈಲಿಯನ್ನು ರಚಿಸಿಕೊಂಡಿತು . . . ಇದೇ ವೇಸರಶಿಲ್ಪ ಎನಿಸುವುದು (ಬಾಲಪ್ರ. III, ೧೭೨೪). [ವೇಸರ$_1$ + ಶಿಲ್ಪ]

ವೇಸರಿ (ನಾ). ಹೆಣ್ಣು ಹೇಸರಗತ್ತೆ : ವೇಸರಿಯ ನೆರೆವಿಯೊಳ್ ಬರ್ಪ ದೇಶಿ ಕುತಪವಿತತಿಯುಂ (ಚಂದ್ರಪು. ೭-೮೦ ವ). [ಸಂ. ವೇಸರೀ]

ವೇಸರಿಗಟ್ಟೆ (ನಾ). = ವೇಸರಿ : ವೇಸರಿಗಟ್ಟೆ [ಪಾಠಾಂ. ನಡೆಗತ್ತೆ, ನಡೆಯ ಕಳ್ತೆ, ನಿಡಿಯಕಳ್ತೆ]ಗಳುಂ ಪಿಡಿಗಳುಂ ಸಿಬಿಗೆಗಳುಮನೇಱೆ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ . . . ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು (ವಡ್ಡಾರಾ. ೮೦-೧೧). [ವೇಸರಿ + ಕಟ್ಟೆ]

ವೇಸವಾರ (ನಾ). (ಧನಿಯಾ, ಮೆಣಸು, ಶುಂಠಿ ಮುಂತಾದ ಮಸಾಲೆಪದಾರ್ಥಗಳಿಂದ ತಯಾರಿಸುವ) ಒಂದು ಬಗೆಯ ವ್ಯಂಜನಪದಾರ್ಥ — ಮೇಲೋಗರ : "ವೇಸ[ಪಾಠಾಂ. ಶ]ವಾರು, ಉಪಸ್ಕರಂ–ಈ ೨ ಊಟದ ಪರಿಕಾರಂ" (ಹಲಾಯು. ೫೩-೧೬೬); ವೇಸವಾರ (ಇಂಗು, ಶುಂಠಿ . . . ಮೊದಲಾದವುಗಳಿಂದ ಸಂಸ್ಕೃತವಾದ ಜಜ್ಜಿದ ಮಾಂಸ)ವು ಜಡ (ಅಪ್ಪಾಂಗ. ೧೨೭-೩೯ ಟೀಕೆ). [ಸಂ.]

ವೇಸಿ 'ವೇಶಿ' ನೋ.

ವೇಹತ್ತು (ನಾ). ೧. ಗರ್ಭಧಾರಣೆ ಮಾಡಿದ ಹಸು ; ಗಬ್ಬದ ಹಸು : "ವೇಹತ್, ವೃಷಭೋಪಗತಾ — ಈ ೨ ಕಟ್ಟಿದಾವು" (ಹಲಾಯು. ೪೫-೧೧೪). ೨. ಸತ್ತ ಕರುವನ್ನು ಹಾಕಿದ ಹಸು : "ವೇಹತ್ – ಗರ್ಭೋವಘಾತಿನೀ — ೨ ಸತ್ತಕರುವನ್ನು ಈತ ಆಕಳು" (ಸಿದ್ಧಾಂತಿ. ೨೯೫). ೩. ಗೊಡ್ಡುಹಸು ; ಬಂಜೆಹಸು : "ತನೆ ಮಗುಟ್ಟುದು ವೇಹತ್ತೆಳತೆನ್ನೆ ತಾಂ ಪ್ರಷ್ಠೌಹಿ ಬಂಜೆ ವಶೆಯೆನೆ ಪಡೆಗುಂ" (ವಸ್ತುಕೋ. ೯೦-೮). [ಸಂ. ವೇಹತ್]

ವೇಹಿ (ನಾ). ಬೆದೆಗೆ ಬಂದ ಆಕಳು : "ವೇ [ಪಾಠಾಂ. ನೇ]ಹಿಯೆನೆ ಸಂಭೋಗದಾವು" (ಮಂಗರಾ. ೫೪-೩). [< ಸಂ. ವೇಹತ್]

ವೇಳ (ನಾ). ಒಂದು ಪಂಗಡ ಮತ್ತು ಆ ಪಂಗಡಕ್ಕೆ ಸೇರಿದ ವ್ಯಕ್ತಿ : ತಂಕಣ ಐಯಾವಳೆಯಾದ ಆಲೂರ ವೇಳರು ಕೋವರು ಕುಣಿಂದರು ನಲ್ಲೊಡೆಯರು . . . ಬಸದಿಯ ಜೀರ್ನ್ನೋದ್ಧರಣವಂ ಮಾಡಿಸಿ (ಎಕ. IV (R), ಚಾಮರಾ ೧೯೫-೯ ; 1278). 'ವೇಳಕಾಱ' ಪರಾ. [ದೇ. ॥ ತಮಿ. ವೇಳನ್, ವೇಳಾನ್]

ವೇಳಕಾಱ, ವೇಳೆಕಾಱ (ನಾ). = ವೇಳ : ಗಾತ್ರಿಗರುಂ ವೇಳಕಾಱರುಂ . . . ಗಾವುಂಡಸ್ವಾಮಿಗಳುಮಯ್ಯಾವೊಳೆಪುರಪರಮೇಶ್ವರರುಮಪ್ಪ ಶ್ರೀಮದಯ್ನೂರ್ವ್ವರ ವಿಖ್ಯಾತಿಯೆನ್ತೆಂದಡೆ (ಸೌಇಇ. IX-i, ೧೧೮-೫೫ ; 1057). **ವೇಳೆಕಾಱ** : ಇವರಲ್ಲಿ ಮುಮ್ಮುರಿದಂಡ . . . ವೇಳೆಕಾಱ ಮುಂತಾದ ಪಂಗಡಗಳಿದ್ದುವು . . . ವೇಳೆಕಾಱ ಎಂಬುದು ಸಮುದ್ರವ್ಯಾಪಾರದೊಡನೆ ಸಂಬಂಧವಿರಿಸಿಕೊಂಡವನನ್ನು ಸೂಚಿಸುವುದೆ? (ವೇಲಾ = ಸಮುದ್ರದ ಅಂಚು) (ಕಶಾಅ. ೩೮೦). [ವೇಳ + - ಕಾಱ]

ವೇಳಾಚರ (ನಾ). ಸಮಯವನ್ನು ತಿಳಿಸುವ ದೂತ : ಸಮೀರಂ ಸುಳಿದುದು ಬೆಳಗಪ್ಪುದನೊಲ್ದಿಳೆಯರಸಂಗೈದಿ ಪೇಳ್ವ ವೇಳಾಚರನಂತೆ (ರಾಜಶೇ. ೧೧-೧೯೨). [ಸಂ. ವೇಲಾಚರ]

ವೇಳಾಪಟ್ಟಿ (ನಾ). (ತರಗತಿ, ವಾಹನನಿಲ್ದಾಣ ಇತ್ಯಾದಿ ಸ್ಥಳಗಳಲ್ಲಿ) ಕೆಲಸದ ನಿರ್ದಿಷ್ಟಸಮಯವನ್ನು ಸೂಚಿಸುವ ಪಟ್ಟಿ, — ಯಾದಿ : ತರಗತಿಯಲ್ಲಿ ವೇಳಾಪಟ್ಟಿಯಿಲ್ಲ (ಕಾವೇರಿ. ೧೧೩). [(ಸಂ. ವೇಲಾ) + ಪಟ್ಟಿ$_2$]

ವೇಳಾಪತ್ರಿಕೆ (ನಾ). = ವೇಳಾಪಟ್ಟಿ : ಶಾಲೆಗಳಲ್ಲಿ ವೇಳಾಪತ್ರಿಕೆಯನ್ನು ಎಚ್ಚರಿಕೆಯಿಂದ ಏರ್ಪಡಿಸಬೇಕು (ಶಿಕ್ಷದ. ೯೮); ವಸಂತ ಹತ್ತಿರದ ಗೋಡೆಯ ಮೇಲೆ ಅಂಟಿಸಿದ ವೇಳಾಪತ್ರಿಕೆಯನ್ನು ನೋಡಿಕೊಂಡು ಬಂದ (ಕಮನೆ. ೧). [ಸಂ. ವೇಲಾಪತ್ರಿಕಾ]

ವೇಳಾಯಿತ (ನಾ). ಸಂಕಟದ ಸಮಯಕ್ಕೆ ಒದಗುವವನು : ನಿಮಗಿನ್ನರಸ ವೇಳಾಯಿತರು ವೆಗ್ಗಳ ದೈತ್ಯಭಟರೆಲ್ಲ (ಕುವ್ಯಾಅ. ೨೧-೬೭). [<— ಮರಾ. ವೇಳಾಯಿತ, ವೇಳಾಈತ]

ವೇಳಾವನ 'ವೇಲಾವನ' ನೋ.

ವೇಳಾವಳಿ (ನಾ). [ಸಂಗೀತ] ಒಂದು ರಾಗದ ಹೆಸರು : ವೇ[ಪಾಠಾಂ.ಪಾ]ಳಾವಳಿಯನೊಲವಿಂ ಪ್ರೌಢೆ ಪಾಡುತ್ತಮಿರ್ದಳ್ (ಲೀಲಾವ. ೨-೩೦); ಕೌಶಿಕೆ ವೇಳಾವಳಿ ಶುದ್ಧಾವಳಿ . . . ಸಯಸೋಧರೆಯೆಂಬ ಮೂವತ್ತುನಾಲ್ಕು ಭಾಷಾಂಗದಿಂದಾದ ರಾಗಂಗಳು (ಏವೇಕ. ೧೮೮). [ಸಂ. ವೇಲಾವಲೀ]

ವೇಳಾವುಳ (ಗು). ಸಮುದ್ರದ ದಂಡೆಯಲ್ಲಿರುವ ; ಸಮುದ್ರತೀರದ:

ಭಗವತೀವರಪ್ರಸಾದಂ ದ್ವಾತ್ರಿಂಸ ವೇಳಾವುಳ ಅಷ್ಟಾದಸಪಟ್ಟಣಂ ಚೌಸಷ್ಟಿಯೋಗಪೀಠಂ ಅಱುವತ್ತನಾಲ್ಕು ಘಟಿಕಸ್ಥಾನಂ (ಕಾ. IV. ೫೫-೭ ; 1000 ?). [← ಮರಾ. ವೇಲಾಉಳ]

ವೇಳಾಳು 'ವೇಳೆಯಾಳು' ನೋ.

ವೇಳುವಾಯ್ (ನಾ). ಒಂದು ಊರಿನ ಹೆಸರು : ಸಾಜಿದ ಮಹಾಜನಕ್ಕೆ ಎರಡು ಸಾಲೆ . . . ವೇಳುವಾಯಾ ಮಹಾಜನಕ್ಕೆ ಎರಡು ಸಾಲೆ ಆಚನ್ಪ್ರತಾರಕಂ ಪೆತ್ತಿಳದಾ ಮಹಾಜನಕ್ಕೆ ಸಾಲೆ (ಎಕ. VII, ಶಿಕಾರಿ. ೪೫-೧೭ ; ಸು. 890). [?]

ವೇಳೆ$_1$ (ನಾ). ೧. ಒಡೆಯನು ಮರಣಹೊಂದಿದರೆ ಅವನ ಆಶ್ರಿತ ಅಥವಾ ಸೇವಕನು ತಾನೂ ಸಾಯುವುದಾಗಿ ಮಾಡುವ ಪ್ರತಿಜ್ಞೆ ; ವೇಳೆವಾಳಿತನ : ವೇಳೆಗೊಂಡಾತಂ ಸಾವಿಗಂಜುವೊಡಂ ತಪಂಗೊಂಡಾತನನುಷ್ಠಾನಕ್ಕಂಜುವೊಡಂ ಅದೆಲ್ಲಿಯ ವೇಳೆ ಅದೆಲ್ಲಿಯ ತಪಂ (ಜೀವಸಂ. ೧೬೦-೨೧); ತೊಱ್‌ದಾಳ್ದನೊಡನೆ ಸಾಯದೆ ಪೆಱಗುಟಿದಂ ತೊಱ್‌ದು ಸತ್ತವನ ವೇಳೆ ದಲಾವಱಿಪೆವದನೆಂಬ ಗಂಡರ್ ತೊಱ್‌ದರ್ ಕಲಿಕುವರಲಕ್ಕನೊಡನತಿಸುಭಟರ್ (ಎಕ. V, ಬೇಲೂರು. ೧೧೨-೯೬ ; 1220 ?). ೨. ಒಡೆಯನು ಸತ್ತರೆ ತಾನೂ ಸಾಯುವೆನೆಂದು ಪ್ರತಿಜ್ಞೆ ಮಾಡಿರುವ ವ್ಯಕ್ತಿ : ಜಂಗಮದ ವೇಳೆ[ಪಾಠಾಂ. ಆಳು] ಜಂಗಮದ ಕಿಂಕರನೆಂಬ ಜಂಗಮಪ್ರಾಣ ಜಂಗಮದ ಸಂಪದನೆಂಬ ಬಿರುದೆತ್ತಿ ಕಹಳೆಗಳು ದೆಸದೆಸಗೆ ಕರವುತಿರೆ (ಬಸಪು. ೧೧ ೧೩೯) ; ಬಂದೆಲ್ಲರಲ್ಲಿ ಇಱಿಭಕ್ತರ್ಗೆ ಸುತರಾಗೆ ಇಂದುಶೇಖರನ ಭಕ್ತರ್ಗೆ ವೇಳೆಗಳಾಗೆ (ಇಱಿರ.ದೇ. ೧೧೦-೮). P ಇದು 'ವೇಳೆವಾಟಿ' ಎಂಬುದರ ಸಂಕ್ಷಿಪ್ತರೂಪ.

[ದೇ. ॥ ತಮಿ. ವೇಲ್ಕೆ = ಕೆಲಸ ; ತೆಲು. ವೇಲ = ದಾಸ್ಯ]

ವೇಳೆ$_2$ 'ವೇಲೆ' ನೋ.

ವೇಳೆಕಳೆ 'ವೇಳೆಗಳೆ' ನೋ.

ವೇಳೆಕಾಱ 'ವೇಳಕಾಱ' ನೋ.

ವೇಳೆಗಳೆ, ವೇಳೆಕಳೆ (ಕ್ರಿ). (ವ್ಯರ್ಥವಾಗಿ) ಸಮಯವನ್ನು ಕಳೆ; ಕಾಲಹರಣ ಮಾಡು : ನೀನು ಕುಡಿದು ಕೊಡು, ವೇಳೆಗಳೆಯಬೇಡ (ಜಯಂತ. ೨೩೫). **ವೇಳೆಕಳೆ** : ಕಂಡವರ ಬೆನ್ನುಹತ್ತಿ ಹತ್ತುಗಳಿಗೆ ಮೋಜಿನಲ್ಲಿ ವೇಳೆಕಳೆಯುವುದೇ ನನ್ನ ಧ್ಯೇಯವಾಗಿಲ್ಲ (ಕಮನ. ೬ [ವೇಳೆ$_2$ (= ವೇಲೆ) + ಕಳೆ$_1$]

ವೇಳೆಗಾಣ್ (ಕ್ರಿ). ಸಮುದ್ರದ ತೀರವನ್ನು ಸೇರು, — ಆಶ್ರಯಿಸು : ಅಹಿತರೋಡಿ ಸಮುದ್ರದ ವೇಳೆಗಂಡು ತಾವನುಮಿಸಿ ವೇಳೆಗೊಣ್ಡು ಸುಖಮಿರ್ಪ್ಪರಿಂದೇನದಟಂಗೆ ನೋಂತನೊ (ಎಕ. VII, ಶಿಕಾರಿ. ೧೯೭-೪೬ ; 1182 ?). [ವೇಳೆ$_2$ (= ವೇಲೆ) + ಕಾಣ್]

ವೇಳೆಗಾಯ್ (ಕ್ರಿ). ಸಮಯವನ್ನು ಕಾಯು, — ನಿರೀಕ್ಷಿಸು : ನಿನಗೆಂದುಂ ತಲೆವಾಗದ ನಿನಗೆಳ್ಕದ ನಿನ್ನ ವೇಳೆಗಾಯದ ಪಿರಿದುಂ ನಿನಗೆ ಬೆಸಕೆಯ್ದು ಬಾಟದ ನಿನಗೋಡದ ಪಗೆವರೆಂಬರಿಲ್ಲಿಂದುವರಂ (ಕಬ್ಬಿಗ. ೧೪೪).

[ವೇಳೆ$_2$ (= ವೇಲೆ) + ಕಾಯ್$_1$]

ವೇಳೆಗೊಡು (ಕ್ರಿ). (?) : ಉಪಾಯದಿಂದ ದಳವಾಯ್ತನದ ಉಪಧಾಶುದ್ಧತೆಯನ್ನು ಹಳೆಯಪಯ್ಕದವರ ಮಹಾಸಭೆಯು ಒರೆಗಲ್ಲ ವೇಳೆಗೊಟ್ಟರಬಾರದೆಂದೇನು (ಮಂತ್ರಶ. ೮೭-೨). [ವೇಳೆ$_2$ + ಕೊಡು$_1$]

ವೇಳೆಗೊಳ್$_1$, **ವೇಳೆಗೊಳ್ಳು** (ಕ್ರಿ). (ಸೇವಕ ಅಥವಾ ಆಶ್ರಿತನು) ಒಡೆಯನು ಮಡಿದರೆ ತಾನೂ ಮಡಿಯುವುದಾಗಿ ಪ್ರತಿಜ್ಞೆಯನ್ನು ಕೈಗೊಳ್ಳು ; ವೇಳೆವಾಳಿಯಾಗು : ನಾಗತ್ತರನ ಮಗಳ್ ತೊಣ್ಡಬ್ಬೆಯು ಕತ್ತವ್ಯ ವೇಳೆಗೊಣ್ಡು ಸತ್ತಂ (ಎಕ. IX, ಬೆಂಗಳೂ. ೮೮-೫ ; ಸು. 900) ; ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ ನಲ್ಲರಂ ನೆನೆದು ನಲ್ಲರ ಮಲ್ಲೆರ್ದೆಗಳ್ ನಿರಂತರಂ ಬಿರಿವುವದೆಂತೊ ಮಲ್ಲಿಗೆಗೆ ನಲ್ಲರ ಮಲ್ಲೆರ್ದೆ ವೇಳೆ[ಪಾಠಾಂ. ಮೇಳೆ]ಗೊಂಡುದೋ (ಆದಿಪು. ೧೧-೧೦೬) ; (ಪಂಪಭಾ. ೫-೬೩ ನೋ) ; ಅನುಜರ್ ನಾಲ್ವರುಮಂ ಧರ್ಮನಂದನಂ ವೇಳೆಗೊಂಡು ಕಾವಂ (ಪಂಪಭಾ. ೧೩-೧೫) ; "ಸಮಯ ಪ್ರತಿಜ್ಞೆಯನ್ನು ಮಾಡಿ" (ಪಂಪದಿ. ೫೧೫) ; ಮಲಪರ್ಸ್ಸದ್ಧೀಕ್ಷಿತಿಯಿಂ ಕಣ್ವವಯದೊಳು X ಣ್ಣರ್ತ್ತಿಯಿಂ ವೇಳೆಗೊಣ್ಡರ್ (ಪೌಇಇ. XX, ೪೯-೨೪ ; 1076 ?) ; ವೇಳೆಗೊಂಡಾತಂ ಸಾವಿಗಂಜುವೊಡಂ ತಪಂಗೊಂಡಾತನನುಷ್ಠಾನಕ್ಕಂಜುವೊಡಂ ಅದೆಲ್ಲಿಯ ವೇಳೆ ಅದೆಲ್ಲಿಯ ತಪಂ (ಜೀವಸಂ. ೧೬೦-೨೦ ವ). **ವೇಳೆಗೊಳ್ಳು** : ಜಲಕ್ಕನೀಗಳರಿದೆಂ ಕವಿಯೆಲ್ಲಿಯೊ ಪಾಡುತಿರ್ಪ ಪಾಡಿನ ಪದೆಪಿಂತಿದ್ದೆ; ಕವಿಗೆ ಧನ್ಯನೆ ನಾನುಮೆ ವೇಳೆಗೊಳ್ಳೆನೇ (ಸಂಸಪ. ೨೦-೬).

[ವೇಳೆ$_1$ + ಕೊಳ್$_1$]

ವೇಳೆಗೊಳ್$_2$ (ಕ್ರಿ). ಸಮುದ್ರತೀರದಲ್ಲಿ ಆಶ್ರಯವನ್ನು ಹೊಂದು ; ಸಮುದ್ರತೀರವನ್ನು ಸೇರು : ತುಳುವನಳವುಗೆಟ್ಟೋಡಿದಂ . . . ಜಳಧಿನಿಕಟಮಂ ಚೋಳಿಕಂ ವೇಳೆಗೊಂಡಂ (ಎಕ. V, ಅರಸೀ. ೬೨-೩೦; 1177).

[ವೇಳೆ$_2$ (= ವೇಲೆ) + ಕೊಳ್$_1$]

ವೇಳೆಗೊಳ್ಳು 'ವೇಳೆಗೊಳ್'$_2$ ನೋ.

ವೇಳೆತನ (ನಾ). ಆಳುತನ ; ಸೇವಾವೃತ್ತಿ : ತಾಂ ಕೊಲಲಾಱದೆಯುಂ ಮುಳಿಸಿಂ ಕೌರವಬಲಮನಂದು ವೇ[ಪಾಠಾಂ. ವೆ]ಳೆತನಂಗೊಂಡುಂ ಕೌಂತೇಯರಿನಾ ಬಲಮಂ ಕೊಲಿಸಿದನಾಪ್ತನಪ್ಪನೆನಲಾಗಱಿವಂ (ಸಮಪ. ೮-೧೪೨); ಆ ವಸತಿಯ ಸಿರಿಯಂ ಜಿನದೇವಂಗಾಳಾಗಿ ವೇಳೆತನಮಂ ತೋಱಲ್ ಕಾವನೆ ಋತುತತಿಸಹಿತಂ ಕಾವಂ ಕೆಯ್ಯಂದ ಮಿಱಿಪನಂಬಂ ಬಿಲ್ಲಂ (ಲೀಲಾವ. ೯-೭೯) ; ರಮಣೀಯ ಮುಖಕ್ಕೆ ವೇಳೆತನಮನಾಂತ ಸರೋಜದಂತೆ ತತ್ತಾಂಬೂಳಕ್ಕಮರವಧುವಾಂಪ ಕಾಂಚನಕಮಳಾಕೃತಿಯೆನಿಪ ಡವಕೆ ಪಡೆದುದು ಚೆಲ್ವಂ (ಚಂದ್ರಪ್ರ. ೧೧-೧೨೮). [ವೇಳೆ$_1$ + - ತನ]

ವೇಳೆಯಾಳು, ವೇಳಾಳು (ನಾ). = ವೇಳೆ$_1$ ೨ : ಅನ್ಯದೈವದ ಮನೆಗದೇತಕೆ ಬಾರರವರೆಂದನಲಹುದೆ ಪತಿ ಚೋಳವಾಳಿಗೆ ವೇಳೆಯಾಳಿಗಿದು[ಪಾಠಾಂ. ಮೇಳವಾಗಿರ್ದು, ವೇಳೆಯೊಳಿನಿತು, ವೇಳವಾಗಿನಿತು] ಕನಲಲಹುದೇ (ಬಸಪು. ೫೩-೩೫). **ವೇಳಾಳು** : ಉಳಿದ ಕ್ಷಾತ್ರಪಾಳರೆಲ್ಲಾಗಳುಂ ವೇಳಾಳಾಗಿಹರೆಂದಡೇಂ ಪೊಗಳ್ವೆನಾ ಭೂಪ ಪ್ರತಾಪೋಗ್ರಮಂ (ಎಕ. XI, ದಾವಣ. ೫೯-೨೮ ; 1280). [ವೇಳೆ$_1$ + ಆಳ್ವು$_3$ (< ಆಳ್$_3$)]

ವೇಳೆವಡಿಚ, ಬೆಳವಡಿಚ, ಬೆಳಾವಡಿಚ (ನಾ). = ವೇಳೆ$_1$ ೨ : ಮುನ್ನೆಗಟ್ಟ ವೇಳೆವಡಿಚರುಂ . . . ನಿನ್ನನ್ನರೆ ನಿನಗೆ ನೀನೆ ದೊರೆಯ್ಯೆ (ಇಅ. XX, ೭೦-೧೧ ; ಸು. ೯ನೆಯ ಶತ); ಉರಿವ ಕೊ(ಕೆ)ಂಡಕ್ಕೆ ವಂದ ವೇಳೆವಡಿಚಂಗಂ [ಪಾಠಾಂ. ವೇಳವಡಿ, ವೇಳವಡಿವಂ, ವೇಳೆವಡಚಗಂ, ವೇಳೆವಡಚಂ] ಮನುಷ್ಯಭವಕ್ಕೆ ಬಂದ ಜೀವಕ್ಕಂ ಗತಿಯಂ ಬಗೆಯಲಲ್ಲದೆ ಪೆಱತು ಮೋಹದೊಳ್ ನೆಗೆಬಲೆಡೆಯಿಲ್ಲಂ (ಜೀವಸಂ. ೧೦ -೨೦); ವೇಳೆವಡಿಚ ಎನ್ನುವುದರಲ್ಲಿನ 'ಡ' ಕಾರವು ತೆಲುಗಿನ 'ಪಾಡಿ'ಯಿಂದ ಬಂದಿರಬೇಕು (ಕಶಾಅ. ೩೧೨). **ಬೆಳವಡಿಚ** : ಆತನ ಬೆಳವಡಿಚ ಅಲ್ಲಿಗಂ ಕೀಱ್ಗುಣ್ಕೆಯಾಗಿ (ಎಕ. XI, ದಾವಣ. ೧೧೯-೬ ; 930). **ಬೆಳಾವಡಿಚ** : ರಟ್ಟಿಯ [ಣ್ಣ] XXX [ಸಂ] ಬೆಳಾ [ವ]ಡಿಚ ಮೇಱ್‌ಮಡುವಿ XX ಱ್ಟು (ಪೌಇಇ. XI-i, ೧೧-೧೫ ; 865). P "ವೇಳೆವಾಟಿ < ವೇಳೆವಾಡಿ, ವೇಳೆವಡಿ ಎಂಬುದಕ್ಕೆ ಸಮಯಪಾಲನಮಾಡುವ ಕ್ರಮ ಅಥವಾ ಧರ್ಮ ಎಂದು ಅರ್ಥವಾಗುತ್ತದೆ. ಅದರಲ್ಲಿ ವ್ಯವಹರಿಸುವವನು 'ವೇಳೆವಡಿಚ' ನೆಂದಾಗುತ್ತದೆ. ಆದ್ದರಿಂದ ಇಲ್ಲಿನ — ಇಚ ಪ್ರತ್ಯಯವನ್ನು ಅಥವಾ —ಚ ಪ್ರತ್ಯಯವನ್ನು —ಇಗ ದ ಅರ್ಥದಲ್ಲಿ ಬಳಸಿರುವುದೆಂದು ಹೇಳಬಹುದು" (ಪೀಠಿಕೆಗಳು, ಲೇಖನಗಳು. ೮೦೨). [ವೇಳೆವಡ್ಡಿ + - ಇಚ]

ವೇಳೆವಡಿಯ (ನಾ). = ವೇಳೆ$_1$ ೨ : ಸ್ವಸ್ತಿ ರಕ್ಕಸನೊಟಮ್ಮಂ ಪಲ್ಲವಾಭರಣಂ ಶ್ರೀಮತ್ ಪಾಳಿಗಱ್ಗೆ ಪೂಣ್ದು ನೆಱೆ ಸತ್ತಂ ವೇಳೆವಡಿಯ ಅರಸಿಗನ ಮಯ್ದುನ (ಮೃಅರಿ. ೧೯೫೯, ೪೮-೬ ; 11ನೆಯ ಶತ). [ವೇಳೆವಡ್ಡಿ + - ಅ$_7$]

ವೇಳೆವಾಳಿ 'ವೇಳೆವಾಟಿ' ನೋ.

ವೇಳೆವಾಟಿ, ವೇಳೆವಾಳಿ (ನಾ). ೧. ಒಡೆಯನು ಮರಣಹೊಂದಿದಾಗ ತಾನೂ ಸಾಯುವೆನೆಂದು ಅವನ ಆಶ್ರಿತನು ಅಥವಾ ಸೇವಕನು ಕೈಗೊಳ್ಳುವ ಪ್ರತಿಜ್ಞೆ, — ಸ್ವೀಕರಿಸುವ ನಿಯಮ : ಪಾರ್ದು ನೆರವಂ ಸಂಗ್ರಾಮದೊಳ್ ಚೋಳವಾಟಿಗೆ ಕೆಯ್ಯಾಂಪಳೆ ವೇಳೆ[ಪಾಠಾಂ. ವೇರೆ]ಪಾಳೆ Eವಾಟಿ3 ವೆನಸುಂ ಮುಯ್ಯಾಂಪ ಸಾಮಂತರಂ ನಗುವಂತಿರ್ದುದು ಸಿಂಹಚೂಡನ ಶಿರೋಬ್ಜಂ (ಅನಂಪು. ೧೧-೭೬). **ವೇಳೆವಾಳಿ** : ೧. ರಾಹುತಗೌಡ ವೇಳೆವಾಳಿಯಿಂ ತಲೆಗೊಟ್ಟಲ್ಲಿ (ಮೃಅರಿ. ೧೯೩೨, ೩೧-೮ ; 1124) ; ಚೋಳವಾಳಿಯಾನಲ್ಲ ವೇಳೆವಾಳಿಯವ ನಾನಯ್ಯ (ಬಸವ. ೬೯೮) ; ವೇಳೆವಾಳಿಪದ್ಧತಿಯು ಕರ್ಣಾಟಕದಲ್ಲಲ್ಲದೆ ತಮಿಳುನಾಡಲ್ಲಿಯೂ . . . ಪ್ರಚಾರದಲ್ಲಿದ್ದಿತು (ಕಶಾಅ. ೩೧೦).

೨. ಒಡೆಯನು ಸತ್ತರೆ ತಾನೂ ಸಾಯುವೆನೆಂದು ಪ್ರತಿಜ್ಞೆ ಮಾಡಿರುವ ವ್ಯಕ್ತಿ : ಸಾಮಾನ್ಯವಾಗಿ ವೇಳವಾಳಿಗಳು ಕಿಚ್ಚನ್ನು ಪ್ರವೇಶಿಸಿಯೋ, ಕತ್ತಿಯಿಂದ ಇರಿದುಕೊಂಡೋ ಮಡಿದ ವಿಷಯವನ್ನು ಮೇಲೆ ನೋಡಿದೆವು (ಕಶಾಅ. ೩೦೯). 'ಜೋಳವಾಟಿ' ಹೋ.

[ವೇಳ್ $_1$ + ಪಾಟ್ $_2$./ ತೆಲು. ವೇಳವಾಳಿ]

ವೇಱುಪಾವಡೆ (ನಾ). ಹೊಸಬಟ್ಟೆ ; ನೂತನವಸ್ತ್ರ : ಹೊಳೆವ ಮುತ್ತಿನ ಸತ್ತಿಗೆ ಸಾಲುಗೊಂಡಿಹ ತಳತಳಿಪಾಲವಟ್ಟಿಗಳ ನೆಳಲೊಳು ವೇಱುಪಾವಡೆಯ ಸಂಭ್ರಮದಿಂದಲಿಳೆಯಾಣ್ಮ ನಗುತ್ತೆತಂದ (ಕಂನವಿ. ೧೨-೨೯).

[ವೇಱು (IP ← ತಮಿ. ವೇಱು = ಹೊಸದು) + ಪಾವಡೆ (< ಪಾವುಡ $_1$)]

ವೈಕಂಕತ (ನಾ). ೧. ಒಂದು ಬಗೆಯ ಸಸ್ಯ ; ಹುಳಿಬೇಲ. ೨. ಹುಳಿಬೇಲದ ಮರದಿಂದ ಮಾಡಿದ ಯಾಗದ ಪಾತ್ರೆ : ಶತಜುಹುಗಳಿಂ ವೈಕಂಕತದ ಷಷ್ಟಿಸ್ರುಕ್ಸ್ರುವನಿವಹದಿಂದೆ . . . ಮಖಶಾಲೆ ಕಣ್ಗೆಸೆದುದು (ಚೈಮಿಭಾ. ೩೩-೬೮). [ಸಂ.]

ವೈಕಕ್ಷ (ನಾ). ೧. (ಯಜ್ಞೋಪವೀತದಂತೆ) ಅಡ್ಡಲಾಗಿ ಧರಿಸುವ (ಹೂವಿನ) ಹಾರ : ಆ ಕುರುತಿಲಕನ ಮೆಯ್ಯೊಳನೇಕಪಯಃಕಣಗಣಂ ಪೊದಳ್ದುವು ಮುಕ್ತಿಶ್ರೀ ಕಾಂತೆಯಿತ್ತ ಮುತ್ತಿನ ವೈಕಕ್ಷದ ತೆಱದಿನಭಿಷವೋತ್ಸವವಿಧಿಯೊಳ್ (ಶಾಂತಿಪು. ೧೦-೪೭). ೨. ಹೊದೆಯುವ ವಸ್ತ್ರ ; ಉತ್ತರೀಯ ; ಮೇಲುಹೊದಿಕೆ : "ವೈಕಕ್ಷಂ [ಪಾಶಾಂ. ಕಕ್ಷ್ಯಂ], ಉತ್ತರಾಸಂಗಃ, ಬೃಹತಿಕಾ – (ಈ ೩) ಉತ್ತರಾಸಂಗಂ" (ಪಲಾಯು. ೬೮-೨೫೬). [ಸಂ.]

ವೈಕಕ್ಷಕ (ನಾ). = ವೈಕಕ್ಷ ೧ : "ಜನ್ನವಿರದಂತಿಕ್ಕಿದ ಹೂವಿನ ಮಾಲೆ ವೈಕಕ್ಷಕಮೆಂಬುದು" (ಪಲಾಯು. ೯೧-೩೯೯). [ಸಂ.]

ವೈಕಟಿಕ (ನಾ). ರತ್ನಪಡಿವ್ಯಾಪಾರಿ : "ವೈಕಟಿಕಂ ಮಣಿಕಾರಂ" (ವಸ್ತುಕೋ. ೬೫-೭೯). [ಸಂ.]

ವೈಕರ್ತನ (ಗು). ೧. ಸೂರ್ಯನಿಗೆ ಸಂಬಂಧಿಸಿದ. (ನಾ). ೨. ಸೂರ್ಯನ ಮಗ ; ಕರ್ಣ : ಕೂರಿ[ಸೆ] ಗುರುಶುಶ್ರೂಷೆಯೊಳಾ ರಾಮನನುಗ್ರಪರಶುಪಾಟತರಿಪು ವಂಶಾರಾಮನನಿಷುವಿದ್ಯಾಪಾರಗನೆನಿಸಿದುದು ಬಲ್ಮೆ ವೈಕರ್ತನನಾ (ಪಂಪಭಾ. ೧-೧೦೪); P "ತನ್ನ ಕರ್ಣಕುಂಡಲಗಳನ್ನೂ ಕವಚವನ್ನೂ ಕತ್ತರಿಸಿ ಕೊಟ್ಟಿದ್ದರಿಂದ ಕರ್ಣನಿಗೆ ವೈಕರ್ತನ ಎಂಬ ಹೆಸರು" (ಪಂಪದೀ. ೩೮). [ಸಂ.]

ವೈಕಲ್ಪಿಕ (ಗು). ೧. ಸಂದೇಹಾಸ್ಪದವಾದ ; ನಿಶ್ಚಿತವಲ್ಲದ. ೨. ಐಚ್ಛಿಕವಾದ : ಪದದಾದಿಯು ವರ್ಣಕ್ಕೌತ್ವದತ್ವದೆಡೆಗೊತ್ವಮುಂ ಪೊದಳ್ದೋತ್ವಮುಮಪ್ಪುದು ವೈಕಲ್ಪಿಕದಿಂ ಶಬ್ದದಾದಿದೀರ್ಘಕ್ಕೆ ಪರಿದುಮಕ್ಕುಂ ಹ್ರಸ್ವಂ (ಶಮಾದ. ೨೭೦). [ಸಂ.]

ವೈಕಲ್ಪಿತ (ಗು). = ವೈಕಲ್ಪಿಕ ೨ : ಕೇಶಿರಾಜನು ಕೈ, ಕೌಂಗುಗಳನ್ನು ಕೆಯ್, ಕವುಂಗು — ಎಂದು ಬರೆಯಬಹುದೆಂದು ಹೇಳಿದ್ದರೂ, ಇವರೆಡರಲ್ಲೂ ಮುಖ್ಯ ಮತ್ತು ವೈಕಲ್ಪಿತಪ್ರಯೋಗಗಳಾವುವು ಎಂಬುದನ್ನು ಗಮನಿಸಬೇಕು (ಭಾಷಾಶಾ. ೧೧೧). [ಸಂ.]

ವೈಕಲ್ಯ (ನಾ). ೧. ವಿಕಲತೆ ; ನ್ಯೂನತೆ : ಮತಿಯ ಮಗ್ಗಿಸಿದವಗೆ ಮಿಗೆ ವೈಕಲ್ಯಮೆತ್ತಣದು (ಗಗಶಾ. ೧೬-೫೦) ; ಅಂಗವೈಕಲ್ಯವನ್ನು ನೋಡಿ ನಗಬಾರದು (ಮುಂಬಯಿ. ೪-೩೪). ೨. ಕ್ಷೋಭೆ ; ಕಳವಳ : ಜಾನಕೀಹರಣಂ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ (ಪಂರಾಮಾ. ೯-೯೮). ೩. ದೋಷ ; ಕಳಂಕ. ೪. ಅಸಾಮರ್ಥ್ಯ ; ಅಶಕ್ತತೆ. ೫. ಅಂಗಹೀನನಾಗಿರುವಿಕೆ. [ಸಂ.]

ವೈಕಾಂಡ (ನಾ). ಒಂದು ಬಗೆಯ ಬಾಣ : ನನಗೆ ತಗಲಿದ ಈ ಬಾಣವು ಖುರಪ್ಪವೆ, ವೈಕಾಂಡವೆ, ನಾರಾಚವೆ . . . ಕರವೀರಪತ್ರವೆ? (ಬುದ್ಧಪ. ೮೦). [?]

ವೈಕಾರ (ನಾ). ವಿಕಾರ ; ವಿಕೃತಿ : ಏನೇನೋ ವೈಕಾರಗಳು ದಾನವವಾಯುವಿನ ಧರ್ಮ (ಗಗಶಾ. ೯-೬೮). [ಸಂ.]

ವೈಕಾರಕ (ನಾ). ೧. ಬದಲಾವಣೆ ಮಾಡುವವನು ; ಮಾರ್ಪಾಟುಗೊಳಿಸುವವನು : (ಕ). ೨. ಕಮ್ಮಾರ ; ಕಬ್ಬಿಣದ ಕೆಲಸಮಾಡುವವನು : "ವೈಕಾರಕಂ [ಪಾಶಾಂ. ದೈತಾರಕಂ] ಕಮ್ಮಱಂ" (ಮಂಗಶಾ. ೧೧೧-೧). [< ಸಂ. ವೈಕಾರಿಕ]

ವೈಕಾರಿಕ (ಗು). ೧. ವಿಕಾರ ಹೊಂದುವ ; ಬದಲಾಗುವ. (ನಾ). ೨. [ತತ್ತ್ವಶಾ] ಮೂರುಬಗೆಯ ಅಹಂಕಾರತತ್ತ್ವಗಳಲ್ಲಿ ಒಂದು ; ಸಾತ್ವಿಕಭಾವ : ಜನಿತ ವೈಕಾರಿಕವೆ ಮನವೆಂದೆನಿಪ ಕರಣವು ತೈಜಸವೆ ಕೇಳನಘ ತನ್ಮಾತ್ರೆಗಳು (ಅಮೃತ. ೪-೧೨); ಮಹತ್ತತ್ವದ ದೆಶೆಯಿಂದ ವೈಕಾರಿಕ, ತೈಜಸ, ತಾಮಸ ವೆಂಬ ಮೂರುವಿಧವಾದ ಅಹಂಕಾರತತ್ತ್ವವು ಹುಟ್ಟಿತು (ಪಸಾರ. ೩-೧ ಟೀಕು). [ಸಂ.]

ವೈಕುಂಠ (ನಾ). ೧. ವಿಷ್ಣುವಿನ ಒಂದು ಹೆಸರು : ವೈಕುಂಠನ ಕಿವಿಯ ಕೊಗ್ಗಿಯಿಂದಂದೊಗೆತಂದಾ ಕೈಟಭನಿವನೆನೆ ನೀರಾಕರದೊಳ್ ನೆಗೆಟ್ಟನತಿಬಳಂ ಪಂಚಜನಂ (ಜಗವಿ. ೭-೧೯) ; ವೈಕುಂಠನಿದಿರಿನೊಳಾರು ದೇವತೆಯ್ಯೆ (ಕುವ್ಯಾದ್ರೂ. ೧-೩೫). –೨. ಇಂದ್ರ ; ದೇವೇಂದ್ರ. ೩. ವಿಷ್ಣುಲೋಕ ; ಪರಂಧಾಮ : ಶ್ರೀರಂಗಪಟ್ಟಣದ ರಂಗನಾಥಸಾಮಿಯಱಿಕೆಯಾಗಿ ಕೈಲಾಸ ವೈಕುಂಠವಱಿಕೆಯಾಗಿ . . . ಶಿಲಾಶಾಸನವನು ನೆಟುಕೊಟೆವು (ಎಕ. IV (R), ಪಿರಿಯಾ. ೫೯-೧೭ ; 1529) ; ಇಷ್ಟುದಿನ ಈ ವೈಕುಂಠ ಎಷ್ಟು ದೂರವೊ ಎನ್ನುತಲಿದ್ದೆ (ಕನಕ. ೨೮ ಪಲ್ಲವಿ). ೪. [ಛಂದ] ಲಘುವಿನ ಚಿಹ್ನೆ, — ಸಂಕೇತ : ಮುನ್ನಂ ಭೂಮಿ ದ್ವಂದ್ವಾಕಾಶಂ ಸುರಪುರ ಗಣತತಿಯಿನಿರೆ ಬಟಿಕ್ಕೆನ್ನುತ್ತುಂ ವೈಕುಂಠೇಶಾನರ್ಕರಿಯೊಳೆ ನಿಲೆಯತಿತತಿ [ಪಾಶಾಂ. ಚಕ್ರಧರಂ ಶರ್ವಂ ವಸುವಿ ರಚಿತಮಹಯತಿ] ಲಲಿತಪದೋತ್ಸನ್ನಂ ವೃತ್ತಂ ಭಿನ್ನಾಬ್ಜಾಕ್ಷೀ (ಛಂದೋಲಿ. ೨-೧೮೮). [ಸಂ.]

ವೈಕುಂಠಪತಿ (ನಾ). ವೈಕುಂಠದ ಒಡೆಯ ; ವಿಷ್ಣು : ಓಡಿ ಬಾರೈ ವೈಕುಂಠಪತಿ ನಿನ್ನ ನೋಡುವೆ ಮನದಣಿಯೆ (ಪುರಂದ. ೧-೮೪ ಪಲ್ಲವಿ) ; ವಾಣಿಯರಸನ ಪೆತ್ತ ವೈಕುಂಠಪತಿ ನೀನು (ಕನಕ. ೬೩-೨). [ಸಂ.]

ವೈಕುಂಠಪದ (ನಾ). ಪರಂಧಾಮ; ಮೋಕ್ಷ; ಮುಕ್ತಿ : ಆವಾವ ಪರಿಯಲ್ಲಿ ಸೇವೆಯ ಮಾಡಲು ಪಾವನ ವೈಕುಂಠಪದವೀವಳೆ (ಪುರಂದ. ೨-೧೬೧-೫). [ಸಂ.]

ವೈಕುಂಠಯಾತ್ರೆ (ನಾ). (ಆಲಂ) ಸಾವು ; ಮರಣ : ತಕ್ಕ ಗಿಡದಿಂದ ರುಚಿ ಫಕ್ಕನೆ ಅಡಗಿಹುದು ತಕ್ಕಾದ ಗಿಡನ ಕೊಡಲಱಿಯದನ ಮಾತ್ರ ವೈಕುಂಠಯಾತ್ರೆ (ಸರ್ವಜ್ಞ. ೨೦೨೫). [ಸಂ. ವೈಕುಂಠಯಾತ್ರಾ]

ವೈಕುಂಠಸಮಾರಾಧನೆ (ನಾ). ಸತ್ತವ್ಯಕ್ತಿಯ ಆತ್ಮಶಾಂತಿಗಾಗಿ ಹದಿಮೂರನೆಯ ದಿನದಂದು ನಡೆಸುವ ಕಾರ್ಯ : ವೈಕುಂಠಸಮಾರಾಧನೆಯನ್ನು ನಡೆಸೋಕ್ಕೆ ಸಿದ್ಧರಿದ್ದೇವೆ (ಸಂಸ್ಕಾರ. ೨೨). [ಸಂ. ವೈಕುಂಠಸಮಾರಾಧನಾ]

ವೈಕುಂಠಿ (ನಾ). ವಿಷ್ಣುಭಕ್ತ ; ವೈಷ್ಣವ : ರಂಗನ ಸಮಯದ ಗುರುವರ ಶೃಂಗಿಗಳೆಸೆದರ್ದರಲ್ಲಿ ಶಿಖಿಯಿಂ ಬೋಳಿಂದಂಗಯಿಸಿ ಐಚ್ಛೆಯ ವಾದಂಗಳನೆಸಗಲ್ಕೆ ವೀರವೈಕುಂಠಿಗಳುಂ (ಹಮ್ಮೀರ. ೭-೨೦). [ಸಂ. ವೈಕುಂಠಿನ್]

ವೈಕುಂಠಿಕೆ (ನಾ). ಒಂದು ಬಗೆಯ ಔಷಧೀಸಸ್ಯ : ಔಡಲದ ಎಲೆ . . . ವೈಕುಂಠಿಕೆಯ ಸೊಪ್ಪು . . . ಸೋರೆಸೊಪ್ಪು, ಈ ಸೊಪ್ಪುಗಳೆಲ್ಲವನ್ನೂ ಒರಳಲ್ಲಿ ತುಳಿದು ಭಾಂಡದಲ್ಲಿ ತುಂಬಿ (ವೃಧಸಾ. I. ೪೨೮). [ಸಂ. ವೈಕುಂಠಿಕಾ]

ವೈಕುರ್ವಣ (ಗು). ೧. ಬದಲಾಗುವ ; ಮಾರ್ಪಾಡಾಗುವ. ೨. ಸಂತೋಷಪಡುವ; ಸಡಗರಪಡುವ : ತ್ರಿದಶರ್ನೀಡುವ ಶಾತಕುಂಭಕಳಶವ್ರಾತಂಗಳಂ ಪರ್ವಿ ಕೊರ್ವಿದ ವೈಕುರ್ವಣಹಸ್ತದೊಳ್ತಳೆದು (ಮಲ್ಲಿಪು. ೧೨-೧೪೭). (ನಾ). ೩. [ಜೈನ] ರೂಪವನ್ನು ಮಾರ್ಪಾಡುಗೊಳಿಸುವ ವಿದ್ಯೆ ; ರೂಪಪರಾವರ್ತನ ವಿದ್ಯೆ ; ರೂಪಾಂತರಗೊಳಿಸುವ ಮಾಯಾಶಕ್ತಿ : ಆಕಾರಮಲ್ತು ವಜ್ರಪ್ರಾಕಾರಮಿದೆನಿಸಿ ಲಕ್ಷ್ಮಣಂ ಬರೆ ಚಾಪಂ ವೈಕುರ್ವಣವಿಷಮಫಣೀಂದ್ರಾಕೃತಿಯಂ ಬಿಟ್ಟು ಮಟ್ಟಮಿರ್ದತ್ತಾಗಳ್ (ಪಂರಾಮಾ. ೫-೯೮); ವಿಕ್ರಿಯೋಪಕ್ರಮಿತ ವೈಕುರ್ವಣದಿನಗುರ್ಬುವೆತ್ತ್ರೈರಾವತಂ ಮೊದಲಾದನೇಕ ದೇವವಾಹನಂಗಳ್ಗೆ . . . ಇಂದ್ರನೀಳಮಯವೀಧಿಯಂ ನಿರ್ಮಿಸಿದಾಗಳ್ (ಚಂದ್ರಪ್ರ. ೧೨-೭೦ ವ). [< ಸಂ. ವಿಕುರ್ವಾಣ]

ವೈಕೃತ (ಗು). ೧. ಬದಲಾದ ; ಮಾರ್ಪಾಟು ಹೊಂದಿದ : ಪ್ರಕೃತಿಪ್ರಾಣವಾಯುವನು ಸೋಹಂಭಾವದಿಂದೆ ವೈಕೃತಪ್ರಾಣನಂ ಮಾಡಿ . . . ಮನೋಮಾರುತಂಗಳೊಳಗೂಡಿ ಲಯಿಸುವುದೆ ಲಯಯೋಗ ನೋಡಾ (ಅಖಂಡೇ. ೨೧೩-೫೩). ೨. ವಿಕಾರವಾದ : ಭಾವಿಸಲ್ ಬಗೆದವಂ ಮಿಗೆ ಜಾಣನಶೇಷಭಾಷಾ ವಿಶೇಷವಿಷಯಾತಿಶಯಾಮಳಕೌಶಳಂ ದೇವತಾಗುರು ಗುಣೋದಯವೃದ್ಧಜನೋಪ ಸಂಸೇವನಾಪರನ ಪಾಕೃತ ವೈಕೃತಚಾಪಳಂ (ಕವಿಪಾ. ೩-೨೨೦). ೩. ಊನವಾದ ; ಅಂಗಹೀನವಾದ. ೪. ಅಸಹಜವಾದ. ೫. ಸಾತ್ತ್ವಿಕವಾದ. (ನಾ). ೬. ಬದಲಾವಣೆ ;

ಮಾರ್ಪಾಡು. ೭. ಅಂಗಹೀನತೆ ; ಅಂಗವಿಕಾರ. ೮. ಜುಗುಪ್ಸೆ ; ಹೇವರಿಕೆ. ೯. [ತತ್ತ್ವಶಾ] ಅಹಂಕಾರತತ್ತ್ವದಲ್ಲಿನ ಒಂದು ಪ್ರಭೇದ ; ರಾಜಸಗುಣ ಪ್ರಧಾನವಾದ ಅಹಂಕಾರ : ಅಹಂಕಾರದಲ್ಲಿ ತೈಜಸ ಮತ್ತು ವೈಕೃತ ಎಂದು ಮತ್ತೆ ಎರಡು ವಿಧ. ತೈಜಸದಲ್ಲಿ ಸತ್ವಗುಣವು ಪ್ರಧಾನವಾಗಿಯೂ ವೈಕೃತ ದಲ್ಲಿ ರಾಜಸಗುಣವು ಪ್ರಧಾನವಾಗಿಯೂ ಇರುವುವು (ಭಾತತ್ತ್ವ. ೬೭೪). ೧೦. ಕ್ಷುದ್ರಮಂತ್ರಗಳಲ್ಲಿ ಒಂದು : ದ್ರಾವಿಡ ವೈಕೃತ ಪ್ರಾಕೃತ ಶವನಾದಿ ಕ್ಷುದ್ರಮಂತ್ರಂಗಳಂ . . . ವಿವೇಕಿಸಿ ತಿಳಿವಿರಲಕ್ಕುಂ (ವಿವೇಕ. ೮೧). ೧೧. [ಯೋಗ] ಪ್ರಾಣಾಯಾಮದ ಮೂರುಪ್ರಕಾರಗಳಲ್ಲಿ ಒಂದು : ಪ್ರಾಕೃತ ವೈಕೃತಮಾದ ದ್ವಿವಿಧ ರೇಚಕ ಪೂರಕ . . . ಉತ್ಕ್ರಾಂತಿ ಎಂಬ ಸಪ್ತಪ್ರಾಣಾಯಾಮಲಕ್ಷಣಂಗಳುಂ (ವಿವೇ. ೧೩೩). [ಸಂ.]

ವೈಕೃತಿ (ನಾ). ೧. ತಿರಸ್ಕಾರ ; ಅವಮಾನ : ಗುರುವಿನಿಂದ ವೈಕೃತಿಯನು ಪಡೆದು ಸಕಲವನು ಬಿಟ್ಟಾತನು ದಿಗಂಬರನಾಗಿ ವೈರಾಗ್ಯದಲ್ಲಿ ಚರಿಸುವನು (ತಿಮ್ಮಅ. ೧-೫೦). ೨. ವೈಪರೀತ್ಯ ; ಪ್ರತಿಕೂಲತೆ : ಸೂಕುಸೂಕಾಡುವ ವಿಪತ್ತಿನ ವೈಕೃತಿಗೆ ನಾನೊಬ್ಬನೇ ವಿಟವಾಕೆವಾಳನೆ ತಿವಶಿವಾ (ಕುವಾಅ. ೨೨-೪೭). [ಸಂ. ವೈಕೃತೀ]

ವೈಕೊಂತವಾಸಿ (ನಾ). ವೈಕುಂಠದಲ್ಲಿ ನೆಲಸುವಂಥವನು ; ಮೋಕ್ಷಪ್ರಾಪ್ತಿ ಹೊಂದುವವನು : ಇದಕೆ ವಕ್ರವಪ್ಪುನ್ಪಾಮಹಾಪಾತಕನಕ್ಕು ರಕ್ಷಪ್ಪೊನ್ ವೈಕೊನ್ತವಾಸಿ ಅಕ್ಕುಂ (ಎಕ. XVI, ಪಾವ್ಯಗ. ೧೧-೫ : 754). [< ಸಂ. ವೈಕುಂಠವಾಸಿನ್]

ವೈಕ್ರಾಂತ (ನಾ). ವಜ್ರಕ್ಕಿಂತಲೂ ಕಡಮೆದರ್ಜೆಯ ಒಂದುಬಗೆಯ ಹರಳು : ''ಚೂರ್ಣವಜ್ರಂ -- ವೈಕ್ರಾಂತ'' (ಓಷಧಿ. ೫೮). [ಸಂ.]

ವೈಕ್ರಾಂತಪಾಷಾಣ (ನಾ). = ವೈಕ್ರಾಂತ : ''ವೈಕ್ರಾಂತ – ವೈಕ್ರಾಂತಪಾಷಾಣ'' (ಓಷಧಿ. ೧೫೭). [ಸಂ.]

ವೈಕ್ರಿಯಕ (ನಾ). [ಜೈನ] ಜೀವರುಗಳ ಐದುಬಗೆಯ ಶರೀರಭೇದಗಳಲ್ಲಿ ಎರಡನೆಯದು ; ಸ್ಥೂಲಶರೀರದಲ್ಲಿ ಬದಲಾವಣೆಯನ್ನುಂಟುಮಾಡುವಂಥ ಸೂಕ್ಷ್ಮಶರೀರ : ತದ್ಭೋಗಾವನೀಭಾಗದೊಳ್ ತನುಗಳ್ ವೈಕ್ರಿಯಕಂಗಳಂತೆ ಕರಗುತ್ತಿರ್ಪನ್ನೆಗಂ ಪುಣ್ಯಸಂಜನಿತೈಶ್ವರ್ಯದಿನಂತೆ ಬಂದು ನೆಲಸಿತ್ತೀಶಾನಕಲ್ಪಾಗ್ರ ದೊಳ್ (ಆದಿಪು. ೫-೭೦) ; ಔದಾರಿಕ, ವೈಕ್ರಿಯಕ, ಆಹಾರಕ, ತೈಜಸ, ಕಾರ್ಮಣ ಎಂಬ ಐದು ತರದ ಶರೀರಗಳುಂಟು . . . ಸ್ಥೂಲ ಸೂಕ್ಷ್ಮ ಗುರು ಲಘು ಮೊದಲಾದ ವಿಕಾರಗಳನ್ನು ಹೊಂದುವ ಯೋಗ್ಯತೆಯುಳ್ಳ ಶರೀರವು ವೈಕ್ರಿಯಕವು (ಚಿಸದ. ೩೨). [ಸಂ.]

ವೈಕ್ರಿಯಕಶರೀರ (ನಾ). ೧. = ವೈಕ್ರಿಯಕ : ಮುನ್ನ ತಮ್ಮನಿರಪಿದಾಯುಷ್ಕಾಂತಂಬರಂ ಸನ್ಗೆಗಯೊಳ್ ಸನ್ನಮಾಗರದು ಸನ್ಗೆಸಿದೊಡವುವಂದಿರ ವೈಕ್ರಿಯಕಶರೀರಂಗಳ್ ಪಾದರಸದ ಮಾರ್ಗದಿಂ ಪತ್ತುತ್ತುಮಿರ್ಕುಂ (ಸುಕುಮಾ. ೧೧-೪೭ ವ). ೨. ಐದು ಬಗೆಯ ಶರೀರಭೇದಗಳಲ್ಲಿ ಒಂದಾದ ವೈಕ್ರಿಯಕಶರೀರವುಳ್ಳವನು : ವಿಕರತ್ನಿ ಪ್ರಮಾಣೋತ್ಸೇಧರುಂ ವೈಕ್ರಿಯಕಶರೀರರುಂ ಪರಮಶುಕ್ಲಲೇಶ್ಯಾಪರಿಣಾಮರುಂ ಸಾರ್ಧ ಷೋಡಶಮಾಸಕೃತನಿಶ್ವಾಸರುಂ . . . ಆಗಿ ಸುಖಮಿರ್ಪಿನಂ (ಚಾವುಂವ. ೩೧). [ಸಂ.]

ವೈಕ್ರಿಯಿಕ (ನಾ). ೧. = ವೈಕ್ರಿಯಕ : ಔದಾರಿಕ — ಔದಾರಿಕಮುಂ, ವೈಕ್ರಿಯಿಕ — ವೈಕ್ರಿಯಿಕಮುಂ . . . ಶರೀರಾಣಿ — ಶರೀರಂಗಳಯ್ದುತೆಱಂ (ತತ್ತ್ವಪ್ರ. ೧೭೪). ೨. ಮನೋವಾಕ್ಕಾಯಯೋಗದ ಮೂರುಭೇದಗಳಲ್ಲಿ ಒಂದು : ಔದಾರಿಕ ಔದಾರಿಕಮಿಶ್ರ ವೈಕ್ರಿಯಿಕ ವೈಕ್ರಿಯಿಕಮಿಶ್ರ ಆಹಾರಕ ಆಹಾರಕಮಿಶ್ರ ಕಾರ್ಮಣಕಾಯ ಯೋಗಭೇದಜಾತಸಪ್ತವಿಧ ಕಾಯಯೋಗಮುಂ ಕೂಡಿ ಯೋಗಂ ಪಂಚದಶವಿಕಲ್ಪಂ (ತತ್ತ್ವಪ್ರ. ೧೭). [ಸಂ.]

ವೈಕ್ರೀಯಕ (ನಾ). = ವೈಕ್ರಿಯಕ : ಔದಾರಿಕ ವೈಕ್ರೀಯಕ[ಮಾ]ಹಾರಕ ತೈಜಸಕಾರ್ಮಣಂಗಳಿವು ತನುವೆನಿಕುಂ (ಸುಕುಮಾ. ೮-೧೦). [< ಸಂ. ವೈಕ್ರಿಯಿಕ]

ವೈಕ್ಲವ್ಯ (ನಾ). ೧. ಗಾಬರಿ ; ಗಡಿಬಿಡಿ ; ಗೊಂದಲ. ೨. ನೋವು ; ಅಳಲು ; ವೇದನೆ : ದುಃಖ - ಪೀಡಾಲಕ್ಷಣಪರಿಣಾಪರೂಪದುಃಖಮುಂ ಶೋಕ — ಅನುಗ್ರಾಹಕ ಸಂಬಂಧವಿಚ್ಛೇದಜನಿತ ವೈಕ್ಲವ್ಯವಿಶೇಷರೂಪಶೋಕಮುಂ . . . ಅಪ್ಪುದಱಿಂ (ತತ್ತ್ವಪ್ರ. ೩೭೦). [ಸಂ.]

ವೈಖರಿ (ನಾ). ೧. ಮಾತು ; ನುಡಿ. ೨. ಸ್ಪಷ್ಟವಾದ ಮಾತು ; ಬಿಚ್ಚುನುಡಿ : ವೈಖರಿಯ ನಾರದಂ ಪೇಳ್ದ ಗಡ (ಪರಶು. ೭-೨೮). ೩. ಚೆನ್ನಾಗಿ ಮಾತನಾಡುವ ಕಲೆ ; ವಾಕ್ಚಾತುರ್ಯ. ೪. ಶೈಲಿ ; ಧಾಟಿ : ಕಾವ್ಯವಿಮರ್ಶಗೆ ಹೊರಡತಕ್ಕವರಿಗೆ ಮೊದಲು ಸೌಂದರ್ಯಾನುಭವದ ಅಭಿವ್ಯಕ್ತಿಯ ವೈಖರಿ . . . ಅತ್ಯಂತ ಅಗತ್ಯ (ಸೌಜಸ.೧. ಮೊದಲಮಾತು) ; ಅವನು ವಿಶೇಷ ವೈಖರಿಯಿಂದ ಕಾಗದವನ್ನು ಮುಕ್ತಾಯ ಗೊಳಿಸಿದನು (ಪೂಸಂ. ೨೨೫). ೫. ರೀತಿ ; ಪ್ರಕಾರ : ಭಾಸ್ಕರಂ . . . ಬೈತಲೆಯ ಮಾಣಿಕ್ಯದ ವೈಖರಿಯ ತೊಡವಿನೊಲು ಝಗಝಗಿಸುತುದಯಿಸಲ್ (ವರಹ. ೫-೧) ; ಈಗಿನ ಸ್ಥಿತಿಯಲ್ಲಿಯೇ ಅದರ ವಿನ್ಯಾಸರಚನೆ, ಅಲಂಕಾರವೈಖರಿ . . . ಇವುಗಳಲ್ಲಿ ಇದನ್ನು ಮಿರಿಸಬಲ್ಲ ಕಟ್ಟಡವು ಮತ್ತೊಂದಿಲ್ಲ (ಮೃವಾಪ್ರ. ೧೦೫). ೬. ವಿವಿಧತೆ ; ವೈವಿಧ್ಯ : ಹಲಸು ತಿನಿಸಿನ ವೈಖರಿಯನ್ನು ಪಶ್ಚಿಮಘಟ್ಟಗಳ ಜನಜೀವನದಲ್ಲಿ ಇಂದಿಗೂ ನೋಡಬಹುದು (ಹಸುಹೂ. ೫೦). ೭. ರೀವಿ ; ದರ್ಪ : ಕಲ್ಪದ್ರುಮದ ಗಾತ್ರಮಂ ತನ್ನ ನೀಳ್ದೀರ್ಮೆದು ಸೊಂಡಿಲ್ಲಳಿಂ ಸುತ್ತಿ, ಕ್ಷೀರಫೇನಶ್ವೇತಗೀರ್ವಾಣವಾರಣಂ ಮತ್ತ ವೈಖರಿಯಿಂದೆ ಜರ್ಗಿ ಸೆಳವುದು, ಮರಂ ಬಳ್ಳಿಯಾಗುತೆ ಬಳ್ಳುವಂತೆ (ಶ್ರೀರಾಮಾ. ೪೯-೫೭೫) ; ಭಟ್ಟರು ಯೋಗ್ಯ ಜನ. ಅವರದೆ ಒಂದು ಗತ್ತು, ವೈಖರಿ (ಪೂಸಕ್ರಿ. ೫೯). ೮. ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂಬ ನಾಲ್ಕು ಪ್ರಕಾರದ ವಾಙ್ಮಯರೂಪಗಳಲ್ಲಿ ಒಂದು : ಸಕಲಸಂಸಾರವ್ಯವಹಾರಕಾರಣಮಪ್ಪುದಱಿಂ ಮುಖ್ಯಬಂಧರೂಪಮಾದ ವಾಣಿಯೇ ವೈಖರಿಯೆನಿಸಿ ಸಕಲಗೋಚರಮಾಗಿರ್ಕುಂ (ವಿವೇಕ. ೧೪೨). [ಸಂ. ವೈಖರೀ]

ವೈಖಾನಸ (ಗು). ೧. ಸಂನ್ಯಾಸಿಗೆ ಸಂಬಂಧಿಸಿದ. (ನಾ). ೨. ವಾನಪ್ರಸ್ಥಾಶ್ರಮದಲ್ಲಿರುವ ಬ್ರಾಹ್ಮಣ : ''ವಾನಪ್ರಸ್ಥನಂ ವೈಖಾನಸನೆಂಬುದು'' (ಪಶಾಯು. ೬೫-೨೪೦). ೩. ಋಷಿ ; ಮುನಿ : ಕಾನನದಾಶ್ರಮದೊಳ್ ವೈಖಾನಸಕುಲಪತಿ ಮಹಾ ಜಟಂ ತಂದೆ ಜಯಾಮಾನಿನಿ ತಾಯ್ ತನ್ನಿಳಾನದ ಸೂನುತೆಗೆ ವಿಶಾಖನಂದಿ ಭಾಜನ ನಾದೊಂ (ಶಾಂಪು. ೭-೬೩) ; ಸೀತೆಗೆ ವೈಖಾನಸರ ಮುತ್ತೈದೆಯರನೇವೊಲ್ತ್ರಿಂಗ ಕಾಣ್ಪೆನೋ ಎಂಬೊಂದು ತವಕದಿಂ ನಡೆ ಮುಂಚಿದುದು (ರಾಮಾಶ್ವ. ೬೨-೨೫). ೪. ವೈಷ್ಣವರ ಒಂದು ಪಂಗಡದ ಹೆಸರು ; ವೈಖಾನಸಾಗಮದ ರೀತಿ ದೇವಾಲಯಗಳಲ್ಲಿ ಪೂಜೆಮಾಡುವ ಆರ್ಚಕವರ್ಗ ಮತ್ತು ಆ ವರ್ಗಕ್ಕೆ ಸೇರಿದವನು : ಬಂದ ವೈಷ್ಣವಮತನಿವಾರಣ ಬಂದ ವೈಖಾನಸಭಯಂಕರ (ಶಂಕರಾ. ೯-೧೬) ; ಅಪ್ಪಾಜಿಯವರು ಸ್ನಾನಮುಗಿಸಿ ಮಡಿಯುಟ್ಟು, ವೈಖಾನಸರ, ಸಿದ್ಧಾಂತಿಗಳ, ಪುರೋಹಿತರ ಒಡಗೂಡಿ . . . ಬಂದರು (ಶಾಂತಲಾ. ೨೫೭). ೫. ವೈಷ್ಣವಾಗಮಗಳಲ್ಲಿ ಒಂದು ; ವಿಷ್ಣುಪರವಾದ ಆಗಮಗಳಲ್ಲಿ ಒಂದು : ಆಗಮಗಳು — ಶೈವ, ವೈಖಾನಸ, ಪಾಂಚರಾತ್ರಾಗಮಗಳೆಂದು ಪ್ರಧಾನವಾಗಿ ಮೂರಾಗಿವೆ (ಭಾರಪ. ೭೨) ; ವೈಷ್ಣವ ದೇವಾಲಯಗಳಿಗೆ ವೈಖಾನಸ ಅಥವಾ ಪಾಂಚರಾತ್ರ ಆಗಮಗಳು ಆಧಾರಗಳೆಂದು ಹೇಳಲು ಸಾಧ್ಯವಿಲ್ಲ (ಹೂಯ್ಕಾ. ೧೩). [ಸಂ.]

ವೈಖಾನಸಾಗಮ (ನಾ). ವಿಖನಸ ಎಂಬ ಋಷಿಗೆ ವಿಷ್ಣುವಿನಿಂದ ಉಂಟಾದ ತತ್ತ್ವಬೋಧನೆ : ವ್ಯಾಸರಾಯರು . . . ವೈಖಾನಸಾಗಮಪದ್ಧತಿಯನ್ನು ತಪ್ಪಿಸಿ, ತಂತ್ರಸಾರೋಕ್ತಮಾರ್ಗದಿಂದ ಆರಾಧನೆಗಳನ್ನೇರ್ಪಡಿಸಿದರು (ಕಭಎ. ೭೪) ; ಭಗವದಂಶ ಸಂಭೂತರಾದ ವಿಖನಸಮಹರ್ಷಿಗಳಿಗೆ ಭಗವಂತನಿಂದ ಉಪದಿಷ್ಟವಾದ ವೈಷ್ಣವಾಗಮವು ವೈಖಾನಸಾಗಮವೆಂದು ಪ್ರಖ್ಯಾತವಾಯಿತು (ಭಾರಪ. ೭೫). [ಸಂ.]

ವೈಚಾರಿಕ (ಗು). ೧. ವಿಚಾರಪೂರ್ಣವಾದ : ನಾಡವರ ಪರವಾದ ವೈಚಾರಿಕ ವಿಮರ್ಶೆಯು ಈ ಕೆಳಗಿನ ಪ್ರಶ್ನೆಗಳಿಗುತ್ತರವನ್ನು ಕೊಡುವುದವಶ್ಯ (ಕುಸುನಾ. ೫೭) ; ನನ್ನ ಮತ್ತು ಇಂದುಮತಿಯ ಸಂಬಂಧದಲ್ಲಿಯೂ ನರಕ – ಸ್ವರ್ಗಗಳ ಅಂತರವಿದೆ . . . ಅದು ಒಂದು ಭೌತಿಕಕ್ರಿಯೆಯಲ್ಲ. ಆದರೆ ಅದೊಂದು ವೈಚಾರಿಕಭಾವನೆ (ಅಪನಾ. ೨೪೪). (ನಾ). ೨. ವಿಚಾರ ಮಾಡುವವನು ; ವಿಚಾರವಂತ : ಸಾಹಿತಿಯಾಗಿ ಮತ್ತು ವೈಚಾರಿಕನಾಗಿ ವಿಜೃಂಭಿಸಿರುವ ಕವಿಯ ಜೀವನವನ್ನು ಮಹಾಮಾತೆಯ ಅಚ್ಚೇ ಉಜ್ವಲವಾದ ಜೀವನದೊಡನೆ ನೋಡಿ ತಿಳಿಯಬೇಕಾಗುತ್ತದೆ (ಕವಿಕೋ. I, ೪೭೪). [ಸಂ.]

ವೈಚಾರಿಕತೆ (ನಾ). ಆಲೋಚನೆ ; ವಿಚಾರದೃಷ್ಟಿ : ಮನುಷ್ಯ ಕೇವಲ ಇಂದ್ರಿಯಗಳ ಮೂಲಕವಷ್ಟೇ ಅಲ್ಲದೆ, ತನ್ನ ವೈಚಾರಿಕತೆ . . . ಇರುವಿಕೆಯ ರೀತಿ ಇವುಗಳ ಮೂಲಕವಾಗಿ ಅನುಭವವನ್ನು ಸ್ವೀಕರಿಸುತ್ತಾನೆ (ಪೂಸಕೃ. ೨೭೮). [ಸಂ. ವೈಚಾರಿಕತಾ]

ವೈಚಾರಿಕಸುಧನ (ನಾ). ವಿಚಾರಪೂರ್ಣವಾದ ಚಿಂತನೆ : ಈ ವೈಚಾರಿಕ ಮಥನ ತನ್ನ ಅನುಭವರಾಹಿತ್ಯತೆಯನ್ನು ಪ್ರದರ್ಶನಕ್ಕಿಡುತ್ತಿದ್ದುದರಿಂದ, ಯಶೋದೆ ತನ್ನ ಭವಿಷ್ಯದ ಬಗೆಗೆ ಯೋಚಿಸತೊಡಗಿದಳು (ಪಾತ್ಪಲ್ಲ. ೧೩೬). [ಸಂ.]

ವೈಚಿತ್ರ (ಗು). ೧. ವಿಧವಿಧವಾದ ; ಹಲವು ಬಗೆಯ : ಇನ್ನು ಪುರೂರಾವೆಚೆಯೂ ವೇದಿಸಿಹ ವೈಚಿತ್ರಕೇತನವಾದವಿನ್ನೆನಿತೆನಿತೊ (ಜಿಜ್ಞಾಪ್ರ. ೨೪-೩೭). ೨. ವಿಚಿತ್ರವಾದ; ವಿಲಕ್ಷಣವಾದ : ವಾರುವನ ವೈಚಿತ್ರಗತಿಯ ನಿಹಾರದಲಿ ಸಾರಥಿ ನರೇಂದ್ರನ ತೇರ ತಿರುಗಿಸಿದನು (ತುಪ್ಪಾಶ. ೩-೫೬). [ಸಂ.]

ವೈಚಿತ್ರ್ಯ (ನಾ). ೧. ವಿವಿಧತೆ ; ವೈವಿಧ್ಯ : ಆಗಳದಲಿ ಬಾಷಚ್ಛದಚ್ಛಾಯಾನುಕಾರಿಯಪ್ಪ ವಾಸ್ಯಣವರ್ಣಪ್ರಸರವೇಳಾಪವೈಚಿತ್ರ್ಯವುಂ ಚಿತ್ರಕಳಾವಿಶಾರದಂ ಪರಿಭಾವಿಸುತ್ತುಮಿರ್ಪನ್ನಗಂ (ಚಂದ್ರಪ್ರ. ೪-೫೦ ವ) ; ಅನೇಕ ಉಪಕಥೆಗಳು . . . ಎಷ್ಟು ವೈಚಿತ್ರ್ಯವಿಂದ ತುಂಬಿಕೊಂಡಿರುವುವೋ, ಅಷ್ಟೇ ಸೊಗಸಾಗಿರುವುವು (ಕಾಒಸ. ೯೦). ೨. ಸೋಜಿಗ ; ಆಶ್ಚರ್ಯ. ೩. ವಿಚಿತ್ರವಾದ ರೀತಿ, — ನಡೆ : ಬಡವ ಬಲ್ಲಿದರನು ವಿಧಿ ಕಟಕಿಯಾಡುವನವನ ವೈಚಿತ್ರ್ಯವನಂತ (ಇಂಚಾಪ. ೧೪೩-೫). [ಸಂ.]

ವೈಜನನ (ಗು). ೧. ಹೆರಿಗೆಯ; ಹೆರಿಗೆಗ ಸಂಬಂಧಿಸಿದ : ಸತಿ ವೈಜನನಮಾಸದೊಳಂದು ಪಡೆದಳು ತನುಜನನು (ಉತ್ತರಾ. ೨-೩೦). (ನಾ). ೨. ಬಸಿರಿನ ಕಡೆಯ ತಿಂಗಳು ; ಹೆರಿಗೆಯ ತಿಂಗಳು ; ನವದಿವಸದಂತೆ ನವಮಾಸಮಂ ನೆಱೆಯೆ ವೈಜನನ [ಪಾಠಾಂ. ನೈಜನವ]ಮೆಂಬ ಪಸರಿಂ ಮಿಸುಪ ಮಾಸದೊಳ್ . . . ಕಾಂತೆ ಪಡೆದಳ್ ಲೀಲಾವತೀದೇವಿಯಂ (ಲೀಲಾವ. ೭-೬೫ ವ). [ಸಂ.]

ವೈಜನಾಥ (ನಾ). ಶಿವನ ಒಂದು ಹೆಸರು : ಧರೆಯೊಳು ವಿದಿತಮಾಗಲು ವೈಜನಾಥನನಲು ವಿರಾಜಿಸಿದ (ಬಸಪು ೫೮-೨೯). [< ಸಂ. ವೈದ್ಯನಾಥ]

ವೈಜಬ್ಬೆ (ನಾ). ಒಬ್ಬಾಕೆಯ ಹೆಸರು : ಶ್ರೀಮತ್ ಬಿಟ್ಟದೇವೋ XX ನ ಮಗಳ್ ವೈಜಬ್ಬೆ XX ಬ್ಬಪ್ಪುತೀಬ್ಬದೊಳವೂ ನೋನ್ತು ಸನ್ನ್ಯಸನಂ XX (ಎಕ. II, ೬೮-೨ ; ಸಂ. ೪೮೦).

[ವೈದ್ಯ + ಅಬ್ಬೆ]

ವೈಜಯಂತ (ನಾ). ೧. ಧ್ವಜ ; ಬಾವುಟ. ೨. ಇಂದ್ರನ ಧ್ವಜ, — ಬಾವುಟ. ೩. ಮನೆ. ೪. ಇಂದ್ರನ ಅರಮನೆ : "ವೈಜಯಂತಃ, ಪ್ರಾಸಾದಃ — ಆತನ ಉಪ್ಪರಿಗ ಹೆಸರು" (ಸಿದ್ಧಾಂತಿ. ೨೧). ೫. [ಜೈನ] ದೇವತೆಗಳ ಒಂದು ವರ್ಗ: 'ವೈಜಯಂತವಿಮಾನ' ಪರಾ. [ಸಂ.]

ವೈಜಯಂತವಿಮಾನ (ನಾ). [ಜೈನ] ಲೋಕಾಕಾಶದ ತುದಿಯ ನೆಲೆಯಲ್ಲಿರುವ ಪುಣ್ಯವಂತರ ವಾಸಸ್ಥಾನ : ಇತ್ತಂ ಪದ್ಮನಾಭನುಂ . . . ವೈಜಯಂತವಿಮಾನದೊಳ್ ಮೂವತ್ತುಮೂಱುಸಾಗರೋಪಮಾಯುಷ್ಯಮನೊಡೆಯಂ ಅಹಮಿಂದ್ರನುಮಾಗಿ ಸುಖಮಿರ್ಪಿನಂ (ಚಾವುಪು. ೧೨೧). [ಸಂ.]

ವೈಜಯಂತಿ (ನಾ). ೧. ಧ್ವಜ ; ಬಾವುಟ : ಕರ್ಬಿನ ಬಿಲ್ಲು ಕೊಂಕಿನಂತೆ ಕೊಂಕಿಯುಂ ಪರವನಿತೆಯರರ್ದಗೆ ಕೊಂಕಿಲ್ಲದೆಯುಂ ಸೂಗಯಿಸುವ ಸುರತಮಕರಧ್ವಜನ ಪುರ್ವುಗಳ್ ಕಾಮದೇವನ ವಿಜಯವೈಜಯಂತಿಗಳಂತಾದುವು (ಪಂಪಭಾ. ೨-೬೯ ವ) ; ರಚಿಸಿದ ಪ್ರಾಚುರದ ವೈಜಯಂತಿಗಳು ಕರಮಸೆದವು (ಗುಜಚಾ. ೧-೨೯). ೨. ವಿಷ್ಣುವಿನ ಕೊರಳಲ್ಲಿರುವ ಹಾರ, — ಮಾಲೆ : ದಣಿಯ ನೋಡಿದನೋ ವೇಂಕಟನ . . . ಕೊರಳೊಳು ವೈಜಯಂತಿ ಇಹನ (ಪುರಂದ. ೨-೧೨೭-೨). ೩. ವಿಜಯದ ಮುನ್ಸೂಚನೆಯಾಗಿ ಧರಿಸುವ ಹಾರ, — ಮಾಲೆ. ೪. ಒಂದು ನಿಘಂಟಿನ ಹೆಸರು ಮತ್ತು ಆ ನಿಘಂಟನ್ನು ಬರೆದವನು : "ವರ ವೈಜಯಂತಿಯ ನಯಂ ಹಲಾಯುಧನ ವಿಸ್ತರದ ವಚನೋಕ್ತಿಯಂಬಿಂತಿವೆಲ್ಲವನು ಸಂವರಿಸಿಯಭಿನವ ಮಂಗನುಸುರಿದಂ" (ಮಂಗರಾ. ೨-೪). ೫. ಒಂದು ಸ್ಥಳದ ಹೆಸರು ; ℙ ಈಗಿನ ಬನವಾಸಿಯ ಹಿಂದಿನ ಹೆಸರು : ವೈಜಯಂತಿಯ (ಬನವಾಸಿ) ಒಬ್ಬ ಶ್ರೇಷ್ಠಿಯು ಕಾರ್ಲೆ(ಮುಂಬೈ ಹತ್ತಿರ) ಗುಡ್ಡದಲ್ಲಿ ಚೈತ್ಯಾಲಯ ಮಾಡಿಸಿದ್ದುಂಟು (ಕರ್ನಾಟ. ೧೩೯). ೬. [ಜೈನ] ಭರತಚಕ್ರವರ್ತಿಯ ಅರಮನೆ : ಸರ್ವತೋಭದ್ರಮೆಂಬ ಗೋಪುರದೊಳಂ ಕೂಡಿದ ವೈಜಯಂತಿಯೆಂಬ ದಿವ್ಯಪ್ರಾಸಾದಮುಂ (ಆದಿಪು. ೧೫-೩ ವ). ೭. ವಿಜಯಾರ್ಧ ಪರ್ವತದ ದಕ್ಷಿಣದಿಕ್ಕಿನಲ್ಲಿರುವ ನಗರ : 'ವೈಜಯಂತೀದ್ವಾರ' ಪರಾ.

[ಸಂ. ವೈಜಯಂತೀ]

ವೈಜಯಂತಿಕೆ (ನಾ). ೧. = ವೈಜಯಂತಿ ೧ : ಸಂಚಲಚ್ಚಾಮರಮರುತ್ಪ್ರೇಂಖೋಲಿ ತಾಭರಣವಿಚಿತ್ರನೇತ್ರವೈಜಯಂತಿಕಾಂಚಲನುಂ . . . ಪರಚಕ್ರನುಮಾಗಿ ನಡಯೆ (ಆದಿಪು. ೧೨-೮೫ ವ) ೨. ಒಂದು ಬಗೆಯ ಮುತ್ತಿನ ಹಾರ. ೩. ಒಂದು ಬಗೆಯ ಸಸ್ಯ ; ತಕ್ಕಿಲೆ : "ಜಯಾ . . . ವೈಜಯಂತಿಕಾ — ೫ ತಕ್ಕಿಲೇಗಿಡ" (ಸಿದ್ಧಾಂತಿ. ೧೨೬).

[ಸಂ. ವೈಜಯಂತಿಕಾ]

ವೈಜಯಂತಿಮಾಲೆ (ನಾ). = ವೈಜಯಂತಿ ೨ : ವರುಣನು ಬೇಗ ವೈಜಯಂತಿಮಾಲೆ ಕೊಟ್ಟು ಶರಣೆಂದು ಪೇಳುತಲಿರಲು (ಸಮುಮ. ೨೦). [ಸಂ. ವೈಜಯಂತೀಮಾಲಾ]

ವೈಜಯಂತೀದ್ವಾರ (ನಾ). [ಜೈನ] ವಿಜಯಾರ್ಧಪರ್ವತದ ದಕ್ಷಿಣದಿಕ್ಕಿನಲ್ಲಿರುವ ನಗರದ ಬಾಗಿಲು : ಅಂತು ಭರತೇಶ್ವರಚಕ್ರವರ್ತಿ ದಕ್ಷಿಣದಿಗಂಗನಾಳಂಕಾರನಾಗಿ ನಡೆದು ದಕ್ಷಿಣಾಂಬುರಾಶಿಯನೆಯ್ದಿ ವೈಜಯಂತೀದ್ವಾರದೊಳ್ ಬೀಡಂ ಬಿಟ್ಟಾಗಳ್ (ಆದಿಪು. ೧೩-೧ ವ) ; ಮುಂಗುಡಿಯ ಬಂದ ಚಕ್ರವರ್ತಿ ವೈಜಯಂತೀದ್ವಾರಾಭಿಮುಖನಾಗಿ ಬೀಡಂ ಬಿಟ್ಟೋಲಂಗಗೊಟ್ಟರೆ (ಶಾಂತಿಪು. ೧೧-೬ ವ). [ಸಂ.]

ವೈಜಯಂತೀವಿಮಾನ (ನಾ). = ವೈಜಯಂತವಿಮಾನ : ಷೋಡಶಭವವಿಷ್ಯತ್ತೀರ್ಥಕರನಾಮಕರ್ಮಮಂ ಕಟ್ಟಿ ವೈಜಯಂತೀವಿಮಾನದೊಳ್ ಪುಟ್ಟಿ (ಪಂಪಾಮಾ. ೧೭-೭೩ ವ).

[ಸಂ.]

ವೈಜಯ್ಯ (ನಾ). ಒಬ್ಬಾತನ ಹೆಸರು : ಶ್ರೀ ವೈಜಯ್ಯಾ (ಎಕ. II, ೪೧೯ ; ಸು. 1000).

[ವೈದ್ಯ + ಅಯ್ಯ]

ವೈಜ್ಞಾನಿಕ (ಗು). ೧. ನುರಿತ ; ಪ್ರಾವೀಣ್ಯತೆಯನ್ನು ಹೊಂದಿದ. ೨. ವಿಜ್ಞಾನಕ್ಕೆ ಸಂಬಂಧಿಸಿದ : ವೈಜ್ಞಾನಿಕವಿಷಯಗಳ ಬಗೆಗೆ ಸಾಮಾನ್ಯ ಓದುಗರು ಹೆಚ್ಚು ಆಸ್ಥವಹಿಸುವಂತಾಗಬೇಕಾದರೆ ಅದು ವಿಜ್ಞಾನಿಗಳ ಜೀವನಚರಿತ್ರಗಳ ಮುಖಾಂತರವೇ ಸಾಧ್ಯವೆಂಬುದು ನನ್ನ ಮತ (ಸಸ್ಮಕ. III ಮುನ್ನುಡಿ) , ಇದು ವೈಜ್ಞಾನಿಕವಿಧಾನದಲ್ಲಿ ರಚಿಸಲ್ಪಟ್ಟಿರುವುದರಿಂದ ಬಂಕಿಯು ಸಹಜವಾಗಿ ಉರಿಯುವ ಹಾಗಿದೆ (ಅಮಸೌ. ೨೯). (ನಾ). ೩. ವಿಶೇಷವಾದ ಜ್ಞಾನವುಳ್ಳವನು ; ನಿಪುಣ. ೪. ಯಾವುದಾದರೊಂದು ವಿಷಯವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ ನಂಬುವವನು; ವಿಜ್ಞಾನಿ : ಆಧುನಿಕವೈಜ್ಞಾನಿಕರು ಹೇಳುತ್ತಾರೆ : ವಿಶ್ವವು ಕೂಡ ಅಪರಿಮಿತವಲ್ಲವೆಂದು (ಸಮಾಠೋ. ೩೬) ; ವೈಜ್ಞಾನಿಕರೆದುರಿಗೆ ಅವರ ಪ್ರಯೋಗಪ್ರದರ್ಶನ ನಡೆಯಿತು (ಸಸ್ಮಕ. ೧೦೫). [ಸಂ.]

ವೈಜ್ಞಾನಿಕದೃಷ್ಟಿ (ನಾ). ನಿಷ್ಕೃಷ್ಟವಾದ ಆಲೋಚನೆಯ ರೀತಿ ; ಶಾಸ್ತ್ರೀಯವಾದ ವಿಚಾರಧಾರೆ : ಅವರ ವೈಜ್ಞಾನಿಕದೃಷ್ಟಿ ಕ್ರಮೇಣ ವಿಚಾರಶೂನ್ಯವಾದ ಶ್ರದ್ಧೆಗ ವಿರುದ್ಧವಾದ ಪ್ರವೃತ್ತಿಯನ್ನು ಬೆಳೆಸಿತು (ಋಜ್ಞಾರ. ೧೧ ಬೀಠಿಕೆ) ; ಈ ಎರಡೂ ಭಾವನೆಗಳೂ ವೈಜ್ಞಾನಿಕದೃಷ್ಟಿಗ ವಿರುದ್ಧವಾದುವು (ಭೌತವಿ. ೧೭). [ಸಂ.]

ವೈಜ್ಞಾನಿಕಪ್ರಜ್ಞೆ (ನಾ). ನಿಷ್ಕೃಷ್ಟವಾದ ಅರಿವು, — ಜ್ಞಾನ : ಜನಪದ ಸಾಹಿತ್ಯದ ವೈಜ್ಞಾನಿಕಪ್ರಜ್ಞೆಯೇ ಇಲ್ಲದ ಕಾಲದಲ್ಲಿ ಯಾರೋ ಹೀಗೆಂದು ಕರೆದರು (ಕಜಕಾ. ೩೭ ಪ್ರಸ್ತಾವನೆ). [ಸಂ. ವೈಜ್ಞಾನಿಕಪ್ರಜ್ಞಾ]

ವೈಡೂರಿಯ (ನಾ). ನವರತ್ನಗಳಲ್ಲಿ ಒಂದು : ಮರಕತದ ಮಧುಪಾತ್ರೆ ನೀಲದ ಕರಗ ವೈಡೂರಿಯದ ಪಡಿಗವ ಚರರು ತಂದೊಟ್ಟಿದರು (ಕುವ್ಯಾಗ. ೪-೧೫) ; ಪೊಳವ ನೀಲದ ಭಿತ್ತಿ ಬಜ್ಜರದ ಕಂಭಮುಲ್ ತೊಳಪ ವೈಡೂರಿಯದ ಮದನಕ್ಕೆ (ಚೆಮುಭಾ. ೧೭-೨೩). [< ಸಂ. ವೈಡೂರ್ಯ]

ವೈಡೂರ್ಯ (ನಾ). ೧. = ವೈಡೂರಿಯ : ಸರ್ವರತ್ನಜಾಂಬೂನದ ವೈಡೂರ್ಯಮಯಮುಂ . . . ಆಗಿ (ಆದಿಪು. ೧-೪೯ ವ) ; ಸುತ್ತುವಳಯದ ಪದ್ಮರಾಗದ ಭಿತ್ತಿಗಳ ವೈಡೂರ್ಯಶಿಲೆಗಳ ಮತ್ತವಾರಣವರವಿಧಾನದಲೆಸೆದುದಾಸ್ಥಾನ (ಕುವ್ಯಾಸ. ೧-೧೪) ;ಅದೋ ಅಲ್ಲಿ ವೈಡೂರ್ಯಗಳ ರಾಸಿಗೊಂಡಂತೆ, ದಡಂ ಮುಚ್ಚಿ ಪಸುರ್ಮುಡಿದು ಸಾಲ್ಗೊಂಡಿಹವು

ಹೊಂಗೆ (ಶ್ರೀರಾಮಾ. ೧೧-೩೧). ೨. [ಜೈನ] ಒಂದು ಪರ್ವತದ ಹೆಸರು : ತದವನೀಧರ ವಿದಿಪ್ಸಿಲಯಂಗಳಪ್ಪ ವೈಡೂರ್ಯರುಚಕ ಮಣಿಪ್ರಭ ರುಚಕೋತ್ತರಂಗಳೆಂಬ ವಿಕಟಕೂಟಾಧೀಶಯರೆ . . . ಮಹತ್ತರಿಯರಾಗಲುಂ (ಆದಿಪು. ೭-೬ ವ). [ಸಂ.]

ವೈಡೂರ್ಯದಂಡ (ನಾ). ವೈಡೂರ್ಯಮಣಿಯನ್ನು ಹುದುಗಿಸಿದ ದಂಡ, -ಕೋಲು : ವೈಡೂರ್ಯದಂಡಮುಕ್ತಾಮಣಿಜಾಲಾಲಂಕೃತರತ್ನಶಲಾಕಾಶತ ಕಾಂಚನಕುಂಭಪಿಂಬ ರಜತಚ್ಛದಚ್ಛತ್ರಪವಿತ್ರಜಿನೇಂದ್ರಪ್ರತಿಕೃತಿಪ್ರಕೀರ್ಣಮುಂ . . . ಆಗಿ (ಆದಿಪು. ೧೦-೪೯ ವ). [ಸಂ.]

ವೈಣ (ನಾ). ೧. ಬಿದಿರಿನ ಬುಟ್ಟಿ, ಮುಂತಾದುವನ್ನು ಹೆಣೆಯುವವನು; ಮೇದರ. ೨. ವೀಣೆ : ಒಪ್ಪುವ ವಾಂಶ ವೈಣ ಗೇಯಾದಿಗಳಿಂಪು ಪೊಂಪುಲಿ ಸುರೇಶ್ವರಗಾಯಕವಾದನೋದಿತಂ (ಶಾಂತಪು. ೧೨-೨೨). [ಸಂ.]

ವೈಣಕ (ನಾ). = ವೈಣ ೧ : ಕ್ರೂರಮಾದ ಕರ್ಮಗಳಿಂದ ರಜಕರಾಗಿ . . . ವೈಣಕರಾಗಿ ಆಭಿಲರಾಗಿ ಮ್ಲೇಂಛರಾಗಿ . . . ಜನಿಸುವರು (ಶೇಷಧ. ೧೮-೨೩). [ಸಂ.]

ವೈಣವ (ಗು). ೧. ಬಿದಿರಿನಿಂದ ಮಾಡಿದ : ವರವೃದ್ಧವಿಪ್ರವೇಷವನ್ನು ಧರಿಸುತ್ತ ಕರದಿ ವೈಣವದಂಡವಿರದ ಪಿಡಿಯುತ್ತ (ಜಗಿಕ. ೧೮). (ನಾ). ೨. ಬಿದಿರಿನ ಕೋಲು; ಬೆತ್ತ. ೩. ಬಿದಿರಿನ ಕಾಳು ; ''ಬಿದಿರಕ್ಕಿ'' : (ಸಾಚರಾ. ೬). ೪. ಬಿದಿರಿನ ಕೆಲಸ ಮಾಡುವವನು ; ಮೇದರ. ೫. ಕೊಳಲು. ೬. ಒಂದು ಬಗೆಯ ಮರ ಮತ್ತು ಅದರ ಹಣ್ಣು : ''ಅಶ್ವತ್ಥಂ, ವೈಣವಂ . . . ಬಾರ್ಹತಂ – ಈ ೬ ಕ್ರಮವಾಗಿ ಅಶ್ವತ್ಥಾದಿ ವೃಕ್ಷಗಳ ಫಲಗಳಿಗೆ ಹೆಸರು'' (ಸಿದ್ಧಾಂತ. ೧೧೫). [ಸಂ.]

ವೈಣವಿಕ (ನಾ). ಕೊಳಲನ್ನು ನುಡಿಸುವವನು ; ವೇಣುವಾದಕ : ಕೊಳಲು . . . ಶ್ವಾಸನಿಯಮವನ್ನು ಸಾಧಿಸಿದ ವೈಣವಿಕನ ಕೈಯಲ್ಲಿ ಇದು ಬಹಳ ಮೃದುಮಧುರ ಗಂಭೀರವಾಗಬಲ್ಲದು (ಗಾಸಕ. ೯೮). [ಸಂ.]

ವೈಣಿಕ (ನಾ). ವೀಣೆಯನ್ನು ನುಡಿಸುವವನು ; ವೀಣಾವಾದಕ : ರಾಮಸ್ವಾಮಿದೀಕ್ಷಿತರು ಉದ್ದಾಮಗಾಯಕರು ಹಾಗೂ ವೈಣಿಕರು (ಸಂಗೀಚಂ. ೨೪೧) ; ನಾನೆ ವೀಣೆ, ನೀನೆ ತಂತಿ, ಅವನೆ ವೈಣಿಕ (ಪ್ರೇಮಕಾ. ೩೧-೨).

ವೈಣಿಕಶಿಖಾಮಣಿ = ವೀಣೆಯನ್ನು ನುಡಿಸುವವರಲ್ಲಿ ಅತ್ಯಂತ ಶ್ರೇಷ್ಠನಾದವನು ; ಒಂದು ಬಿರುದು : ನಾಲ್ವಡಿಕೃಷ್ಣರಾಜಒಡೆಯರು, ಶೇಷಣ್ಣನವರಿಗೆ 'ವೈಣಿಕಶಿಖಾಮಣಿ' ಎಂದು ಬಿರುದುಕೊಟ್ಟು, ಪಲ್ಲಕ್ಕಿಯಲ್ಲಿ ಅವರನ್ನು ಕೂರಿಸಿ . . . ಮೆರವಣಿಗೆಯಾಗಬೇಕೆಂದು ಅಪ್ಪಣೆಮಾಡಿದರು (ಸಂಗೀಚಂ. ೨೭೦). [ಸಂ.]

ವೈಣಿಕೆ (ನಾ). ವೀಣೆಯನ್ನು ನುಡಿಸುವವಳು : ಸಭೆಯ ನಡುವ ಎತ್ತರವಾಗಿ ನಿರ್ಮಿಸಿದ್ದ ವೇದಿಕೆಯ ಮೇಲೆ, ವೈಣಿಕೆಯರಿಬ್ಬರಿಗೆ ಸ್ಥಳವೇರ್ಪಡಿಸಲಾಗಿತ್ತು (ಶಾಂತಲಾ. ೫೮). [ಸಂ. ವೈಣಿಕಾ]

ವೈಣುಕ (ನಾ). ೧. = ವೈಣವಿಕ. ೨. ಆನೆಯನ್ನು ನಡೆಸುವಾಗ ಅದನ್ನು ಅಂಕೆಯಲ್ಲಿಡಲು ಉಪಯೋಗಿಸುವ, ಕಬ್ಬಿಣದ ಮೊನಚಾದ ತುದಿಯುಳ್ಳ ಬಿದಿರಿನ ಕೋಲು : ''ತೋತ್ರಂ ವೈಣುಕಮಙ್ಕಿಗೆ'' (ವಸ್ತುಕೋ. ೮೮-೩೫). [ಸಂ.]

ವೈತಂಡವಾದ (ನಾ). ನಿಷ್ಪ್ರಯೋಜಕವಾದ ವಾದ ; ಹುರುಳಿಲ್ಲದ ಮಾತು : ವೈತಂಡವಾದಿಗಳ ತಾಂಡವವು ನಡೆದಿಹುದು ತಂಡತಂಡಗಳಲ್ಲ ಇತ್ತಂಡವೇ (ಮುಕ್ತಕಂ. ೪೬-೧). [ಸಂ.]

ವೈತಂಡಿಕ (ನಾ). ೧. ಕಣ್ಕಟ್ಟುವಿದ್ಯೆಯನ್ನು ಬಲ್ಲವನು. ೨. ಜಗಳಗಂಟಿ ಮನುಷ್ಯ ; ವ್ಯಾಜ್ಯಮಾಡುವ ವ್ಯಕ್ತಿ : ''ವೈತಂಡಿಕನಱಿ ಕುಹಕತೆಯಂ ಕೊಂಡಾಡುವನಿಂದ್ರಜಾಲಿಕಂ ತಾನಕ್ಕುಂ'' (ವಸ್ತುಕೋ. ೬೬-೮೬). [ಸಂ.]

ವೈತಂಸಿಕ (ನಾ). ಪಶುಪಕ್ಷಿಗಳ ಮಾಂಸವನ್ನು ಮಾರಾಟಮಾಡುವವನು; ಕಸಾಯಿಗಾರ : ''ವೈತಂಸಿಕಃ, ಸೌನಿಕಃ, ಕೌಟಿಕಃ, ಮಾಂಸವಿಕ್ರಯಾ – ಈ ೪ ಸೂನೆಗಾಱಂ'' (ಹಲಾಯು. ೯೭-೪೪೯). [ಸಂ.]

ವೈತನಿಕ (ಗು). ೧. ವೇತನಕ್ಕೆ ಸಂಬಂಧಿಸಿದ ; ಸಂಬಳದಿಂದ ಕೂಡಿರುವ : 'ವೈತನಿಕನೌಕರಿ' ಪರಾ. (ನಾ). ೨. ಸಂಬಳದ ಆಧಾರದ ಮೇಲೆ ಜೀವಿಸುವವನು : ''ಭೃತಕಂ ವೈತನಿಕನಱಿಗೆ'' (ವಸ್ತುಕೋ. ೬೪-೭೨). [ಸಂ.]

ವೈತನಿಕನೌಕರಿ (ನಾ). ವೇತನ ಪಡೆದು ಮಾಡುವ ಕೆಲಸ ; ಸಂಬಳ ತೆಗೆದುಕೊಂಡು ಮಾಡುವ ಉದ್ಯೋಗ : ಅವರ ಪದಕ್ಕೆ ಸಂಬಂಧಪಟ್ಟ, ಕರ್ತವ್ಯಗಳಿಂದ ಹೊರಗಾದ ಯಾವುದಾದರೂ ವೈತನಿಕನೌಕರಿಯನ್ನು ಮಾಡುತ್ತಿದ್ದರೆ (ಭಾವಾಸ. ೧೮೩). [ವೈತನಿಕ + ನೌಕರಿ]

ವೈತರಣಿ (ನಾ). ೧. ಓಡ್ರ ದೇಶದಲ್ಲಿ ಹರಿಯುವ ಒಂದು ನದಿಯ ಹೆಸರು. ೨. ನರಕದಲ್ಲಿರುವುದೆಂದು ನಂಬಲಾದ ಒಂದು ನದಿ : ಪ್ರವಾಹಾತ್ಯುಷ್ಣತಾಪ ಹಸಿತಪ್ರಲಯಕಾಲಪ್ರೌಢತರತರಣಿಯಂ ವೈತರಣಿಯಂ ಪೊಕ್ಕಾಗಳ್ (ಆದಿಪು. ೫-೧೭) ; ಶರಣರ ಸಂಬಂಧವನಜೆದ ಬಳಿಕ ಮರಳಿ ಭವಿಯ ಬೆರಸಬಾರದು ಬ್ರಹ್ಮಹತ್ಯ ಭ್ರೂಣಹತ್ಯ ವೈತರಣಿ ದುರ್ಗತಿ ಪಂಚಮಹಾಪಾತಕದಿಂದಧಿಕ ನೋಡಾ (ಬಸವ. ೬೭೦).

[ಸಂ. ವೈತರಣೀ]

ವೈತಸವೃತ್ತಿ (ನಾ). ಅಧಿಕಾರಿ, ವೈರಿ ಮುಂತಾದವರ ಎದುರು (ಬೆತ್ತದಂತೆ ಬಾಗಿ) ನಮ್ರವಾಗಿ ವರ್ತಿಸುವುದು : ಭೂಜಾಂಗವೃತ್ತಿಗೊಂದಿ ಪರಾಜಿತಮಂ ಕಾಣಲಾಗ ವೈತಸವೃತ್ತಿ ವ್ಯಾಜಮನಿತಲ್ಲದಾರ್ಗಪರಾಜಿತ ದಮಿತಾರಿಯೊಳ್ ಮಹೀಮಂಡಳದೊಳ್ (ಶಾಂತಪು. ೨-೫೧). [ಸಂ.]

ವೈತಸಾವಳಿ (ನಾ). ಬೆತ್ತದ ಗಿಡಗಳ ಗುಂಪು : ಭೂಜಾಂಗವೃತ್ತಿಯಂ ಬಿಸುಟಾ ಜಗದಧಿಪಂಗೆ ವೈತಸಾವಳಿ ಪರಿವಂದಾ ಜಳಕೆಱಗುವವೋಲ್ ನಯಭಾಜನರೆಱಗಿದ ರಜಂಹರನಿಸಿದ ಸುಹ್ಮರ್ (ಶಾಂತಪು. ೧೦-೧೫೯). [ಸಂ. ವೈತಸಾವಲಿ]

ವೈತಾನ (ಗು). ೧. ಯಜ್ಞಕ್ಕೆ ಸಂಬಂಧಿಸಿದ ; ಯಾಗಕ್ಕೆ ಸಂಬಂಧಪಟ್ಟ : ನವರತುನಮಯ ವರ್ಣವೇದಿಕೆ ದುಕೂಲದುರುನವಕವೈತಾನಭೃಂಗಾರಕಲಶಾಳಿಗಳ ವಿವಿಧಪೂತಾಂಬುಪೂರಿತಕುಂಭಗಳ ಮಣಿದೀಪಂಗಳೊಲವಿನಿಂದ . . . ಉದ್ಯಾಹ ಮಂಟಪ ತೋರ್ದುದು (ವಂಣಾರಾ. ೧-೨೧-೨೨). 'ವೈತಾನವಹ್ನಿ' ಪರಾ. (ನಾ). ೨. ಯಾಗ ; ಯಜ್ಞ. ೩. ಹವಿಸ್ಸು. [ಸಂ.]

ವೈತಾನವಹ್ನಿ (ನಾ). ಯಜ್ಞಕಾರ್ಯಕ್ಕಾಗಿ ಪ್ರತಿಷ್ಠಾಪಿಸಿದ ಅಗ್ನಿ ; ಹೋಮಾಗ್ನಿ : ವೇದಿಯ ಸುತ್ತಲ್ ನೆಲೆಗೊಂಡಾದಂ ಸಮಿಧೆಗಳನಾಂತು . . . ಅಘಪರಿಹಾರಕಮಾದೀ ವೈತಾನವಹ್ನಿ ಸಲಹುಗೆ ನಿನ್ನಂ (ಶಾಕುಂತ. ೫೩-೮೬). [ಸಂ.]

ವೈತಾಲಿ, ವೈತಾಳಿ (ಗು). ೧. ಬೇತಾಳಕ್ಕೆ ಸಂಬಂಧಿಸಿದ. ೨. (ಆಲಂ) ಜೋರಾದ ; ಬಿರುಸಾದ : ಮುಗಿದ ಮೊಗ್ಗೆಯ ಬಾಯ ಮುತ್ತಿಟ್ಟು ತೆರೆಯಿಸುವ; ನೀ ಮೋಡಿಗಾಳಿ ವೈತಾಳಿ ಗಾಳಿ (ಕಾಶ್ರಾ. ೬೩-೧೨). (ನಾ). ೩. ಬೇತಾಳ. ೪. [ಛಂದ] ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ಹದಿನಾಲ್ಕು ಮಾತ್ರೆಗಳೂ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಹದಿನಾರು ಮಾತ್ರೆಗಳೂ ಬರುವ ಒಂದು ಮಾತ್ರಾವೃತ್ತ ; ಮಾತ್ರಾಛಂದಸ್ಸಿನ ವರ್ಗಕ್ಕೆ ಸೇರಿದ ಮಿಶ್ರಜಾತಿಯ ಅರ್ಧಸಮವೃತ್ತ. ವೈತಾಳಿ : ೪. ಆಱುಮಾತ್ರೆಗಳಕ್ಕುಂ ಮೋಜೆಯೊಳ್ ಕರಿ ಸಂಖ್ಯಾತದ ಮಾತ್ರೆ ಯುಗ್ಮದೊಳ್ ಮರುದಿಷ್ವಲಗಂ ತದಂತದೊಳ್ ಬರೆ ವೈತಾಳಿ (ಛಂದೋಂಬು. ೩-೨೧೯). ೫. ಮಾಯಾವಿದ್ಯೆ ; ಮಾಂತ್ರಿಕವಿದ್ಯೆ : ಈಗಳಿನ ಮಾಯಾಸ್ತ್ರೀಯುಂ ವೈತಾಳಿಯೆಂಬುದಾತನ ವಿದ್ಯೆಯೆಂಬುದುಂ (ಚಾವುಂಪು. ೧೮೯). ೬. ಮಾಯಾವಿದ್ಯೆಯ ಅಧಿದೇವತೆ : ಅವರೊಳೊರ್ವಂ ವಿದ್ಯಾನಿಧಿ ಎಂಬ ವಿದ್ಯೆಯನಾ ವೈತಾಳಿಯಂ ಪ್ರಕಟಂ ಮಾಟ್ಟುದುಂ (ಚಾವುಂಪು. ೧೮೯) ; ಆಗಳೆ ಹರ್ಷೋತ್ಕರ್ಷದಿನಾ ಗಗನಚರಂ ಕರಾಳಿ ವೈತಾಳಿಯನಾ ಭೋಗಿ ಬರಿಸಲ್ಕೆ ಬಂದಿರ್ದೀಗಳೆಯ್ದುದೆನಲ್ಕೆ ವಿದ್ಯೆಗೆಂದನನಿಂದ್ಯಂ (ನೇಮಿಪು. ೫-೩೭). ೭. (ಆಲಂ) ಬಿರುಸಾದ ಗಾಳಿ ; ಬಿರುಗಾಳಿ : ಕುಂಭಮಾಸದೀ ಗಾಳಿ ತಾನೆ ವೈತಾಳಿಯಾಗಿ ಬಂದು (ಸೂರ್ಯಪಾ. ೧೫-೧).

[ಸಂ. ವೈತಾಲೀ]

ವೈತಾಲಿಕ, ವೈತಾಳಿಕ (ನಾ). ೧. ಪ್ರಾತಃಕಾಲದಲ್ಲಿ ರಾಜನನ್ನು ನಿದ್ರೆಯಿಂದ ಎಚ್ಚರಿಸುವವನು ; ಮಂಗಳಪಾಠಕ : ಗಾಯಕ ವಾದಕ ನರ್ತಕ ಕಥಕ ಪುಣ್ಯ ಪಾಠಕ ವೈತಾಲಿ[ಪಾಠಾಂ.ಳಿ]ಕನಿಕರಮುಮಂ ಕೊಟ್ಟು (ಆದಿಪು. ೪-೫೪ ವ). ೨. ಮಂತ್ರವಿದ್ಯೆಯನ್ನು ಬಲ್ಲವನು ; ಮಾಂತ್ರಿಕ. ೩. ಬೇತಾಳನ ಅನುಚರ. ವೈತಾಳಿಕ : ೧. ನೋಟ ಮನಭಿನಯಿಸಿಯಾಡಿ ತೋರ್ಪ ವೈತಾಳಿಕರಿಂ ಬೀಭತ್ಸರಸಮುಂ . . . ನೆಗಟುತ್ತಮಿರೆ

(ಜಗ. ೨-೬೯ ವ) ; ನವವಿಧದ ವೈತಾಳಿಕರ ವರಯುವತಿಯರ ಭಾರಣೆಯ ಭೂಷಣರವದ ಮೇಳವು ಮುತ್ತಿ ಮುಸುಕಿತು ಚಾರುಚಪ್ಪರವ (ಕುಪ್ಪಾಳ. ೧೨-೧೯). [ಸಂ.]

ವೈತಾಲಿಕೆ, ವೈತಾಳಿಕೆ (ನಾ). = ವೈತಾಲಿ ೪. **ವೈತಾಳಿಕೆ** : ಮೊದಲೊಳ್ ಪದಿನಾಲ್ಕೆ ರದನಯದಱೊಳ್ ಪದಿನಾಱು ಮೂಱಱೊಳ್ ಪದಿನಾಲ್ಕಗ್ರದ ಪಾದದೆ ಪದಿನಾಱೆಂತು ದಯಿಪುದಱುವತ್ತು ಮಾತ್ರೆ ವೈತಾಳಿಕೆಗಂ (ಛಂದೋಂಬು. ೩-೨೧೯ ಅಡಿಪದ್ಯ).

[ಸಂ. ವೈತಾಲಿಕ]

ವೈತಾಳ (ಗು). ೧. ಬೇತಾಳಕ್ಕೆ ಸಂಬಂಧಿಸಿದ. ೨. ಮಾಯಾವಿದ್ಯೆಗೆ ಸಂಬಂಧಿಸಿದ: 'ವೈತಾಳವಿದ್ಯೆ' ಪರಾ . (ನಾ). ೩. ಬೇತಾಳ ; ಪಿಶಾಚಿ : ಮದಮತ್ಸರವೈತಾಳ ಸಂಪಾದನವಲ್ಲದೆ ಅನುಭಾವವೆಲ್ಲಿಯದೊ (ಬಸಪ. ೪೩-೧೦೭).

[ಸಂ. ವೈತಾಲ]

ವೈತಾಳವಿದ್ಯೆ (ನಾ). ಮಾಯಾವಿದ್ಯೆ : ಅಶನಿಘೋಷಂ . . . ವೈತಾಳವಿದ್ಯೆಯಂ ಸುತಾರೆಯ ರೂಪಿನೊಳ್ಪಿರಿಸಿ ಪೋದಂ ಇತ್ತಂ ಮಾಯಾಸುತಾರೆಯಂ ಕುಕ್ಕುಟಸರ್ಪಂ ಕೊಂದುದು (ಚಾವುಂಪು. ೧೪೬). [ಸಂ. ವೈತಾಲವಿದ್ಯಾ]

ವೈತಾಳ 'ವೈತಾಲಿ' ನೋ.

ವೈತಾಳಿಕ 'ವೈತಾಲಿಕ' ನೋ.

ವೈತಾಳಿಕೆ 'ವೈತಾಲಿಕೆ' ನೋ.

ವೈದಂಡಿಕ (ನಾ). [ಕಾವ್ಯಮಿ] ಕಂದಗಳೂ ವೃತ್ತಗಳೂ ಇರುವ ಒಂದು ಬಗೆಯ ಪ್ರಾಚೀನ ಕಾವ್ಯಪ್ರಕಾರ ; ಬೆದಂಡೆ : ''ವೈದಂಡಿಕಂ ನೋಡಲ್ ಬೆದಂಡೆಯೆಂದಕ್ಕುಂ'' (ಕಬ್ಬಿಕ್ಕಿ. ೮೦) ; ಪರಮೇಶ್ವರನ ಮಹಿಮಾತಿಶಯಮಂಗಳಂಗಳೊಳಂ ಮುಕ್ತಕಂ ಕುಲಕಂ ಕೋಶಂ ಸಂಘಾತಮೆಂಬ ರಚನಾವೈಚಿತ್ರ್ಯಚಿತ್ರಾಯತನ ವೈದಂಡಿಕ ಪ್ರಬಂಧ ಬಂಧುರಪದ್ಯಬಂಧದೊಳಂ . . . ಲೀಲೆಯಂ ತಳೆದು (ಆನಂಪು. ೧೦-೨೮ ವ) ; ಬೆದಂಡೆ –ವೈದಂಡಿಕಂ (ಶಮಪ. ಪಂ. ೨). 'ಬೆದಂಡೆ ' ಪರಾ. [ಸಂ. ವೈದಂಡಿಕಾ]

ವೈದಗ್ಧ್ಯ (ನಾ). ೧. ಪಾಂಡಿತ್ಯ. ೨. ಜಾಣತನ. ೩. ಶಕ್ತಿ ; ಸಾಮರ್ಥ್ಯ. ೪. ರಚನಾಕೌಶಲ. ೫. ಮೋಸ ; ಕಪಟ. [ಸಂ.]

ವೈದಗ್ಧ್ಯಜ್ಞ (ನಾ). ವಿದ್ವಜ್ಜನ : ದರ್ಶನಪ್ರಸ್ತಾವಘಟನಾವಸರಪ್ರಾಪ್ತವೈದಗ್ಧ್ಯಜನ ಸಂಭಾಷಣಗೋಷ್ಠೀನಿರ್ದೇಶ . . . ಸಮಾನೋದಿತಕಾಲದೊಳ್ (ಶಾಂತಿಪು. ೯-೧೯೨ ನ).

[ಸಂ.]

ವೈದರ್ಭ (ಗು). ೧. ವಿದರ್ಭದೇಶಕ್ಕೆ ಸೇರಿದ, –ಸಂಬಂಧಿಸಿದ. (ನಾ). ೨. ವಿದರ್ಭದೇಶದ ರಾಜ. ೩. ದಮಯಂತಿಯ ತಂದೆ ; ಭೀಮರಾಜ : ಅಟ್ಟಿದಂ ಧರಣೀಶರ್ಗಸವೋಲೆಯಂ ಚರರುಮಂ ವೈದರ್ಭಭೂಪಾಲಕಂ (ನಳಚಂ. ೨೨೨). ೪. ರುಕ್ಮಿಣಿಯ ತಂದೆ ; ಭೀಷ್ಮಕ. ೫. ಭೋಜರಾಜ. ೬. ಒಸಡಿನ ಮೇಲೆ ಏಳುವ ಒಂದು ಬಗೆಯ ಕುರು : ವೈದರ್ಭ ಎಂಬ ದಂತಮೂಲರೋಗ ರಕ್ತವಾತಗಳಿಂದ ಹುಟ್ಟುವುದು (ವೈದ್ಯಸಾ. II, ೧೨೪). ೭. [ಕಾವ್ಯಮಿ] ಮೂರು ಬಗೆಯ ಕಾವ್ಯಮಾರ್ಗಗಳಲ್ಲಿ ಒಂದು : ವೈದರ್ಭಗೌಡಮಾರ್ಗವಿಭೇದಂ ಬಗೆವೊಡ ಗತಾನುಗತಿಕಂ (ಕಾವ್ಯಾವ. ೫೨೨) ; ಪರಿಚ್ಛೇದದ ಬಹುಭಾಗವು ವೈದರ್ಭ, ಗೌಡ ಎಂಬ ಎರಡು ಕಾವ್ಯಮಾರ್ಗಗಳ ವಿಭೇದವನ್ನು ಪ್ರತಿಪಾದಿಸುವುದಕ್ಕೇ ಮೀಸಲಾಗಿದೆ (ಭಾರಮಿ. ೨೯). [ಸಂ.]

ವೈದರ್ಭಮಾರ್ಗ (ನಾ). [ಕಾವ್ಯಮಿ] ಕಾವ್ಯಬಂಧದಲ್ಲಿರುವ ಒಂದು ನಿರ್ದಿಷ್ಟವಾದ ಶೈಲಿ : ಶ್ಲೇಷ, ಪ್ರಸಾದ, ಸಮತೆ . . . ಸಮಾಧಿ — ಈ ಹತ್ತು ಗುಣಗಳೇ ವೈದರ್ಭಮಾರ್ಗದ ''ಪ್ರಾಣ'' (ಭಾರಮಿ. ೨೯). [ಸಂ.]

ವೈದರ್ಭರೀತಿ (ನಾ). = ವೈದರ್ಭ ೭ : ಗೌಡರೀತಿ ವೈದರ್ಭರೀತಿ ಪಾಂಚಾಲರೀತಿ ತ್ರಯಸಮೇತಮಾಗಿ (ಎವೇಕ. ೧೭೯). [ಸಂ.]

ವೈದರ್ಭಿ (ನಾ). ೧. ವಿದರ್ಭದೇಶದ ರಾಜಕುಮಾರಿ ; ಭೀಮರಾಜನ ಮಗಳು ; ದಮಯಂತಿ : ತನು ರೋಮಾಂಚನವಪ್ಪುಕೆಯ್ಯಲ್ಧರಂ ಬೆಳ್ಪಾಗಲ್ . . . ಚಿತ್ತ ಕಾಂತನ ಸಂಗಂಬಡೆದಂತೆ ಮೈಮವಡೆದಳ್ ವೈದರ್ಭಿ ವಿಶ್ರಾಂತಿಯಿಂ (ನಳಚಂ. ೧೪೧). ೨. ಭೀಷ್ಮಕರಾಜನ ಮಗಳು ; ರುಕ್ಮಿಣಿ. ೩. = ವೈದರ್ಭ ೭ : ಗೌಡಿ ವೈದರ್ಭಿ ಪಾಂಚಾಲಿ ಎಂಬ ರೀತಿತ್ರಯಂಗೂಡಿ . . . ಪಾಡಿ ಮೋಹಿಸುವ ಗಾಯಕರಿಂ (ಎವೇಕ. ೧೪೯). [ಸಂ. ವೈದರ್ಭೀ]

ವೈದರ್ಭೀರೀತಿ (ನಾ). = ವೈದರ್ಭ ೭ : ಶ್ಲೇಷ ಪ್ರಸಾದಾದಿ ಹತ್ತು ಗುಣಗಳೂ ಇರುವುದು ವೈದರ್ಭೀರೀತಿಯೆಂದೂ ಗೌಡೀರೀತಿ ಪ್ರಾಯಃ ಇದಕ್ಕೆ ವಿರುದ್ಧವಾಗಿರುವುದೆಂದೂ ದಂಡಿಯು ಹೇಳಿದ್ದಾನೆ (ಕೃವಿಡಿ. ೨೨೧). [ಸಂ.]

ವೈದಿಕ (ಗು). ೧. ವೇದಕ್ಕೆ ಅನುಸಾರವಾದ ; ವೇದದಲ್ಲಿ ಹೇಳಿರುವ ; ವೇದೋಕ್ತ : ಸಕಳಲೌಕಿಕಸಾಮಯಿಕೋರುವೈದಿಕವಿಶೇಷವಿವೇಕಪರಾಯಣಂ ಪ್ರಕಟತೋಕ್ತಿವಿವಿಕ್ತಕಳಾಕಳಾಪಕ[ನು]ಪಾಹಿತಸಾಹಿತ್ಯವಿದ್ಯೆಯೊಳ್ (ಕವಿರಾ. ೩-೨೧೮) ; ಶ್ರೀಕಾಂತಾಪತಿ . . . ಲೌಕಿಕವೈದಿಕಶಾಸ್ತ್ರವಿವೇಕಲಾಭಿಜ್ಞನೆನಿಸಿ ನೆಗಟ್ಟಂ ಧರೆಯೊಳ್ (ಛಂದೋಂಬು. ೧-೩೦). ೨. ವೇದಾಧ್ಯಯನ ಮಾಡಿದ ; ವೇದಪಾರಂಗತನಾದ ; ಶಾಸ್ತ್ರವನ್ನು ಅನುಸರಿಸುವಂಥ : ಆ ಗುಡಿಸಲುಗಳಲ್ಲಿ ವೈದಿಕಬ್ರಾಹ್ಮಣರು, ಶಿವಭಕ್ತರಾದ ತಮ್ಮಡಿಗಳು . . . ಜಂಗಮರುಗಳು ಇದ್ದರು (ಶ್ರೀರಾಪು. ೮). ೩. ಪವಿತ್ರವಾದ ; ಪರಿಶುದ್ಧವಾದ : ಲಲಿತ ವೈದಿಕಧರ್ಮ ಮಾರ್ಗವನಳಿದು ಹೆಚ್ಚಿದ ಕಾಲನೇಮಿಯ ತಲೆಯ ಕೊಂಡನು ಚಕ್ರದಲಿ ದೈತ್ಯಾರಿ ಪೂರ್ವದಲಿ (ಕುವಾಗ. ೫-೮). ೪. ಗೊಡ್ಡು ಸಂಪ್ರದಾಯದ ; ಕಂದಾಚಾರವುಳ್ಳ : ಒಲ್ಲೆನ ವೈದಿಕ ಗಂಡನ ನಾನಲ್ಲಾದರು ನೀರ ದುಮುಕುವೆನಮ್ಮ (ವುರಂದ. ೨-೧೦೫೫ ಪಲ್ಲವಿ).

(ನಾ). ೫. ವೇದ : ತಾಂತ್ರಿಕ ವೈದಿಕವೆಂಬೆರಡು ಪೂಜಾಭೇದಗಳಂ . . . ಪಂಚಶುದ್ಧಿಗಳಂ ವಿಸ್ತರಿಸುವದಱಲ್ಲಿ . . . ಧ್ಯಾನಾದಿ ರಚನಂಗೈವುದೇ ಆತ್ಮಶುದ್ಧಿಯೆನಿಸುವುದು (ಎವೇಕ. ೯೨) ; ಭಾರತೀಯ ದಾರ್ಶನಿಕಪದ್ಧತಿಯ ಬೆಳವಣಿಗೆಯಲ್ಲಿ ವೈದಿಕ ಮತ್ತು ಅವೈದಿಕಗಳೆಂಬ ಮುಖ್ಯ ವಿಚಾರಧಾರೆಗಳು ಪ್ರವಹಿಸಿವೆ (ತತ್ಪ್ರಾ. ೧೯). ೬.ವೇದೋಕ್ತವಾದ ಕ್ರಮ, –ವಿಧಿ : ವಿಪ್ರರ ಕರಸಿ ವೈದಿಕವಿಂದ ರಚಿಸಿದರಗ್ನಿಯನು ಮಾಡಿದರು ಭಾಷೆಗಳ (ಕುವ್ಯಾದೋ. ೨-೬) ; ವೈದಿಕ ತಿಳಿಯದಿದ್ದರೂ ಬಯ್ದಾಡಲಿಕ್ಕೆ ಬಲ್ಲ (ಗಾಡ). ೭. ವೇದಪಾರಂಗತನಾದ ಬ್ರಾಹ್ಮಣ ; ವೇದಾಧ್ಯಯನ ಮಾಡಿದ ಬ್ರಾಹ್ಮಣ : ಜನದ ಕವಿತೆಗೆ ಶಿಲ್ಪುವವ ಬಳಿಕ್ಕಾಫ್ಯಾಯ ಎನುತಲಾಫ್ಯಾಯವಿಂದಂತಿ ವೇದಾಶ್ವಾನವೆನಲಾ ಸ್ವಯಂಭುನಿತ್ಯಂ ಶಂಭುವುಳಿದರಲ್ಲಂಬರ್ಕೆ ವೈದಿಕರಲ್ಕೆ (ವೀಶಪು. ೪-೪-೫೬) ; ಹದಿಬದೆಯರ ಪೆಸರ್ಗೊಂಡು ಪೊಗಳ್ದುದು ವಿದಿತಮೆಸಲೆ ವೈದಿಕರಿಗೆ (ಪದಿಬ. ೨-೧೫). ೮. ಆಚಾರಗಳನ್ನು ಶ್ರದ್ಧೆಯಿಂದ ಪಾಲಿಸುವವನು; ಸಂಪ್ರದಾಯನಿಷ್ಠ. ೯. ಕಾಲಕ್ಕೆ ತಕ್ಕ ನಾಗರಿಕತೆಯಿಲ್ಲದ ಮನುಷ್ಯ ; ಪುಳಿಚಾರು : 'ವೈದಿಕಗೊಡ್ಡು' ಪರಾ. ೧೦. ಪಿತೃಕಾರ್ಯ ; ಶ್ರಾದ್ಧ : ನಾಳೆ ನಮ್ಮ ತಾತನವರ ವೈದಿಕ (ರೂಢಿ). [ಸಂ.]

ವೈದಿಕಕ್ರಿಯೆ (ನಾ). ವೇದೋಕ್ತವಾದ ಆಚರಣೆ ; ಶಾಸ್ತ್ರದಲ್ಲಿ ಹೇಳಿರುವ ವಿಧಿ : ತಾನು ಮಾಡಿದ ಕರ್ಮಗಳ ದುಷ್ಫಲಗಳನ್ನು ಸರಿಪಡಿಸಲು ಬೇರೆಯವರಿಗೆ ಸಾಧ್ಯವಿದೆ ಎಂಬುದು ಶ್ರಾದ್ಧ ಹಾಗೂ ಇತರ ವೈದಿಕಕ್ರಿಯೆಗಳು ತೋರಿಸುತ್ತವೆ (ತತ್ಪ್ರಾ. ೨೭). [ಸಂ. ವೈದಿಕಕ್ರಿಯಾ]

ವೈದಿಕಗಾನ (ನಾ). ವೇದಗಳಲ್ಲಿ ಕಂಡುಬರುವ ಸಂಗೀತ ; ವೇದಗಾನ : ವೇದಯುಗದಲ್ಲಿ ಈ ಬಗೆಯ ವೈದಿಕಗಾನವಿದ್ದರೂ ಲೌಕಿಕವಾದ ಸಂಗೀತವೂ ಸಮಪ್ರಮಾಣದಲ್ಲಿದ್ದಿರಬೇಕು (ಭಾರದ. ೫೩೭) ; ಭಾರತೀಯಸಂಗೀತ, ಸ್ಥೂಲವಾಗಿ ಎರಡು ರೀತಿಯಲ್ಲಿದೆ –೧. ವೈದಿಕಗಾನ ಅಥವಾ ಪವಿತ್ರಗಾನ (ಸಂಗೀಚಂ. ೬೫).

[ಸಂ.]

ವೈದಿಕಗೊಡ್ಡು (ನಾ). ಮಂತ್ರಾರ್ಥವನ್ನರಿಯದೆ ಕೇವಲ ಆಚಾರಗಳನ್ನು ಮಾತ್ರ ಅನುಸರಿಸುವವನು ; ಕಂದಾಚಾರದವನು : ಮೊನ್ನೆ ನನ್ನ ಗೆಳೆಯರು ಬಂದಾಗ ಕುಡಿಯುವುದಿಲ್ಲವೆಂದು ಹಟಹಿಡಿದೆ. ಆಗ ಅವರೆಲ್ಲರು ನಿನಗೆ ಏನೆಂದರೆಂಬುದನ್ನು ಬಲ್ಲೆಯಾ? . . . ವೈದಿಕಗೊಡ್ಡೆಂದು ನಾಮಕರಣ ಮಾಡಿ ನಕ್ಕರು (ಜಯಂತ. ೧೦೪). [ವೈದಿಕ + ಗೊಡ್ಡು]

ವೈದಿಕಛಂದಸ್ಸು (ನಾ). ವೇದಗಳಲ್ಲಿ ಕಂಡುಬರುವ ಛಂದಸ್ಸು ; ಅಕ್ಷರ ನಿಯಮಕ್ಕೊಳಪಟ್ಟ ಛಂದಸ್ಸು : ಸಂಸ್ಕೃತದಲ್ಲಿ ವೈದಿಕಛಂದಸ್ಸೆಂದೂ ಲೌಕಿಕ

ಛಂದಸ್ಸೆಂದೂ ಎರಡು ವಿಧ. ವೈದಿಕಛಂದಸ್ಸು ವೇದಗಳಲ್ಲಿ ಕಾಣುವುದು (ಕೃವಿ. ೧೦೫) ; ಅಕ್ಷರ ನಿಯಮಕ್ಕೊಳಗಾದ ವೈದಿಕಛಂದಸ್ಸಿನಲ್ಲಿ ಪ್ರತಿಕ್ಕೆ ಮೂರುಮಾತ್ರೆಯ ಲಕ್ಕಾಚಾರವಿದೆ (ಸಂಶೋಧ. ೧೦೩). [ಸಂ. ವೈದಿಕಛಂದಸ್]

ವೈದಿಕತೇಜಸ್ಸು (ನಾ). ಬ್ರಹ್ಮಜ್ಞಾನದ ವರ್ಚಸ್ಸು : ಒಂದೇ ಜಿಗಿತಕ್ಕೆ ಅವನು ಕರ್ಮಠತನದತ್ತ ಜಿಗಿದನು . . . ಮುಖವು ವೈದಿಕತೇಜಸ್ಸಿನಿಂದ ಕಂಗೊಳಿಸತೊಡಗಿತು (ಗಂಮಾಯಿ. ೨೯೩). [ಸಂ. ವೈದಿಕತೇಜಸ್]

ವೈದಿಕದರ್ಶನ (ನಾ). ವೇದದ ಸಾರವನ್ನು ಹೇಳುವ ಶಾಸ್ತ್ರ : ಭರತಖಂಡದಲ್ಲಿ ಆರು ವೈದಿಕದರ್ಶನಗಳು ಪ್ರಸಿದ್ಧವಾಗಿವೆ (ಭಾರದ. ೧೫೦). [ಸಂ.]

ವೈದಿಕಪದ್ಧತಿ (ನಾ). ವೇದಗಳಲ್ಲಿ ಪ್ರತಿಪಾದಿತವಾಗಿರುವ ಧರ್ಮ,-ಮಾರ್ಗ : ವೈದಿಕಪದ್ಧತಿಗಿಂತಲೂ ಪ್ರಾಚೀನವಾದ ಪದ್ಧತಿ ಯಾವುದೂ ಕಂಡು ಬರುವುದಿಲ್ಲ (ಹಿಂದಸಾ. ೧೫೨). [ಸಂ.]

ವೈದಿಕಮತ (ನಾ). ವೇದದಲ್ಲಿ ಹೇಳಿರುವ ಮತ ; ವೇದೋಕ್ತಪಂಥ : ಪೂರ್ವಕಾಲದಲ್ಲಿ ವೈದಿಕಮತವೂ ಔಪನಿಷದಮತವೂ ಸ್ವತಂತ್ರಗಳಾಗಿ ಶುದ್ಧವಾಗಿ ಮಿಶ್ರವಿಲ್ಲದ ಇದ್ದುವು (ಹಿಂದಸಾ. ೧೭೩) ; ವೈದಿಕಮತವು ಭೂತಪೂಜೆಯಿಂದ ಆರಂಭವಾಯಿತೋ ಅಥವಾ ದೇವತಾಪೂಜೆಯಿಂದ ಆರಂಭವಾಯಿತೋ ಹೇಳಲು ಸಾಧ್ಯವಾಗಲಿಲ್ಲ (ಭಾತತ್ತ್ವ. ೩೫). [ಸಂ.]

ವೈದಿಕವಾಙ್ಮಯ (ನಾ). ವೇದದಲ್ಲಿರುವ ಸಾಹಿತ್ಯ ; ವೇದ : ವೈದಿಕವಾಙ್ಮಯದಲ್ಲಿ ಉಪನಿಷತ್ತುಗಳು ಬಹಳ ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ (ಭಾರದ. ೩೫). [ಸಂ.]

ವೈದಿಕವಿದ್ಯೆ (ನಾ). ಪೌರೋಹಿತ್ಯ ಮುಂತಾದ ವೇದಸಂಬಂಧವಾದ ವಿದ್ಯೆ : 'ಈ ವೈದಿಕವಿದ್ಯೆಯಲ್ಲೇನಿದ ಮಣ್ಣು? ನನ್ನ ಮಗ ದೊಡ್ಡ ಸಾಹೇಬನಾಗಬೇಕು' ಎಂಬ ಹಂಬಲ ಶಾಲಭ್ಪೆಯದು (ಹೊಸಕ್ಕಿ. ೧೭) ; ರಾಮಭಟ್ಟರು ಎಂತು ವೈದಿಕವಿದ್ಯೆಗೆ ಶಾಸ್ತ್ರಿಗಳಂತು ಲೌಕಿಕಕೆ (ಇಂಚಾಪ. ೧೭-೭೪). [ಸಂ. ವೈದಿಕವಿದ್ಯಾ]

ವೈದಿಕವೃತ್ತಿ (ನಾ). ಪೌರೋಹಿತ್ಯ ಮುಂತಾದ ವೈದಿಕಮಾರ್ಗದ ವಿಧಿಗಳನ್ನು ಮಾಡಿಸುವ ಕೆಲಸ : ವೈದಿಕವೃತ್ತಿಯನೆ ಎತ್ತಿ ಅವ ಓದನಕೆ ಮನೆಮನೆಯ ಸುತ್ತಿ (ಪುರಂದ. ೫-೯೩-೫) ; ಅಪ್ಪನದು ಹೀಗೆ ವೈದಿಕವೃತ್ತಿಯಾದರೆ ಶ್ಯಾಮಕಕ್ಕನದು ಸಂಪೂರ್ಣಲೌಕಿಕ (ಹೊಸಕ್ಕಿ. ೨೪೯). [ಸಂ.]

ವೈದಿಕಸಂಪ್ರದಾಯ (ನಾ). ವೇದೋಕ್ತವಾದ ರೀತಿ , — ಪದ್ಧತಿ : ವೈದಿಕ ಸಂಪ್ರದಾಯದ ಬೆಳವಣಿಗೆಗೆ ಆಗಾಗ ಅಡ್ಡಿ ಆತಂಕಗಳು ಒದಗಿವೆ (ಭಾರದ. ೨೮) ; ಪ್ರಾಚೀನಕಾಲದಿಂದಲೂ ವೈದಿಕಸಂಪ್ರದಾಯಕ್ಕೆ ಸೇರಿದ ಶೈವವಲ್ಲದ ಸಿದ್ಧಾಂತಗಳಿಗೆ ವಿರುದ್ಧವಾಗಿ ಶೈವಸಂಪ್ರದಾಯಗಳು ಅನುಸರಿಸಿಕೊಂಡು ಬರುತ್ತಿವೆ (ಭಾತತ್ತ್ವ. ೬೧೮). [ಸಂ.]

ವೈದಿಕಸಂಸ್ಕೃತಿ (ನಾ). ವೇದಗಳಿಗೆ ಸಂಬಂಧಿಸಿದ ಸಂಸ್ಕೃತಿ: ಭಾರತೀಯ ಸಂಸ್ಕೃತಿಯನ್ನು ವೈದಿಕಸಂಸ್ಕೃತಿ ಎಂದು ಹೇಳುವುದರಲ್ಲಿ ಔಚಿತ್ಯವಿದೆ (ಋಕ್ಸಾರ. ೯೬ ಟೀಠಿಕೆ). [ಸಂ.]

ವೈದಿಕಸಿದ್ಧಾಂತ (ನಾ). ವೇದಗಳಲ್ಲಿ ಹೇಳಿರುವ ತತ್ತ್ವ : ಬೌದ್ಧತತ್ತ್ವ ಜೈನಸಿದ್ಧಾಂತಗಳ ಪ್ರವಾಹದ ಎದುರಿಗೆ ವೈದಿಕಸಿದ್ಧಾಂತವನ್ನು ನಿಲ್ಲಿಸಲು ಯತ್ನಿಸಿದ ಶಂಕರಾಚಾರ್ಯರ ಅದ್ವೈತಮತ . . . ಬೌದ್ಧತತ್ತ್ವಕ್ಕೆ ಸಮೀಪ ಎಂಬ ಭಾವನೆ ಬೆಳೆಯಿತು (ಭಾರದ. ೨೪೬). [ಸಂ.]

ವೈದಿಕಾಗಮ (ನಾ). ವೇದೋಕ್ತತತ್ತ್ವಗಳಿಗೆ ಅನುಸಾರವಾಗಿರುವ ಆಗಮ ; ವೈಷ್ಣವ ಆಗಮಗಳಾದ ವೈಖಾನಸ ಮತ್ತು ಪಾಂಚರಾತ್ರ ಆಗಮಗಳಲ್ಲಿ ಒಂದು : ವಿಶ್ವದ ವಿಶಿಷ್ಟಕಲೆಗಳ ಮಾತೃಕೆಯಾಗಿರುವ ವೈಖಾನಸಾಗಮವು ವೈದಿಕಾಗಮವೆಂದೇ . . . ಪರಿಗಣಿತವಾಗಿದೆ (ಭಾರದ. ೧೭೬). [ಸಂ.]

ವೈದಿಕೋಕ್ತಿ (ನಾ). ವೇದದಲ್ಲಿ ಹೇಳಿರುವ ಮಾತು : ವೈದಿಕೋಕ್ತಿಗಳಲಿ ಹರಿಶ್ಚಂದ್ರಾದಿ ರಾಯರು ರಾಜಸೂಯದೊಳಾದರನಿಬರೊಳಗ್ಗಳೆಯರು (ಕುವ್ಯಾಸ. ೧-೮೭). [ಸಂ.]

ವೈದೀಕ (ಗು). ೧. ಪೌರೋಹಿತ್ಯ ಮುಂತಾದ ವೈದಿಕಸಂಪ್ರದಾಯವನ್ನು ಅನುಸರಿಸುವ : ಹತ್ತು ಮನೆಯ ಪುರೋಹಿತನಾಗಿ ಕೋಟೇಶ್ವರದಲ್ಲಿ ವೈದೀಕ ಬ್ರಾಹ್ಮಣನಾಗಿ ಬಾಳಿದ (ದೇವಪಂ. ೩೧). (ನಾ) ೨. = ವೈದಿಕ ೭ : ವೈದೀಕರಾದ ನಮ್ಮ ತಂದೆಯವರು ಬೆಂಗಳೂರಿಗೆ ಬರುವರೆಂದು ವದಂತಿ (ಗಆದಾ. ೧೪). ೩. ಶ್ರಾದ್ಧ ; ತಿಥಿ : ಶಾಸ್ತ್ರಿಗಳವರು ವೈದೀಕಕ್ಕೆ ಬರಲು ಒಪ್ಪಿಕೊಂಡರು (ರೂಢಿ). [< ಸಂ. ವೈದಿಕ]

ವೈದುಷ್ಯ (ನಾ). ಪಾಂಡಿತ್ಯ ; ವಿದ್ವತ್ತು : ವೈದುಷ್ಯದಿಂ ಪೂಜ್ಯನಾಗದ ವಿಪ್ರನಂತೆ . . . ಅಖಿಳಬಾಂಧವರೊಡನೆ ಬದುಕದ ಮನುಷ್ಯಸಂಸಾರದಿಂದೇನು (ಪ್ರೇಮಾಭಾ. ೨-೧೮) ; ಷಡಕ್ಷರಿಯ ಕೃತಿಗಳಲ್ಲಿ ಆಶ್ಚರ್ಯಕಾರಕವಾದ ಪ್ರತಿಭೆ ಆಳವಾದ ಜೀವನವನ್ನು ಸ್ಪರ್ಶಿಸದೆ ವೈದುಷ್ಯದ ಇಲ್ಲವೆ ಚಮತ್ಕೃತಿಯ ರೂಪ ತಾಳಿರುವುದು ಹೆಚ್ಚು (ಕಸಾಚ. ೬೫೪). [ಸಂ.]

ವೈದೂರ್ಯ (ನಾ). ನವರತ್ನಗಳಲ್ಲಿ ಒಂದು : ಬೆಳಗುತಿಹ ಗೋಮೇಧಿಕದ ಕವಾಟಗಳೆಸದು ಪೊಳೆವುತಿಹ ಮಾಣಿಕ್ಯಕಲಶಗಳ ವೈದೂರ್ಯಲೋವಗಳ ಗಾಡಿಯಿಂದ . . . ಕೌತುಕಂಬಡದಿರ್ದುದು (ವಂಕಾರಾ. ೧-೨೧-೧೧). [ಸಂ.]

ವೈದೃಶ್ಯ (ನಾ). ಪ್ರತ್ಯೇಕತೆ ; ವಿಭಿನ್ನತೆ : ಈ ಮಹಾವಜ್ರದ ಕಾಂತಿಯು ವೈದೃಶ್ಯದಿಂದ ನಮ್ಮ ಗಮನವನ್ನು ಸೆಳೆಯಲೆಂಬಂತೆ . . . ಮಿನುಗುತ್ತಿದೆ (ಸಕ್ಕತ್ರ. ೧೦). [ಸಂ.]

ವೈದೇಶಿಗ (ನಾ). ಹೊರನಾಡಿನವನು ; ಪರದೇಶಿ : ನರರು ವೈದೇಶಿಗರು ಕಾರ್ಯಾತುರರು ನಾವು (ಕುವ್ಯಾಳ. ೧೧-೩೭). [< ಸಂ. ವೈದೇಶಿಕ]

ವೈದೇಹ (ನಾ). ೧. ವಿದೇಹರಾಜ್ಯಕ್ಕೆ ಸಂಬಂಧಿಸಿದುದು. ೨. ಒಂದು ದೇಶದ ಹೆಸರು : ಸಮಸ್ತಾವನಿಯ ನೃಪರೊಗ್ಗಾಯ್ದು ವರವೈದೇಹನಗರದಲಿ (ತೂರರಾ. ೧-೧೨-೨೬). ೩. ವಿದೇಹದೇಶದ ರಾಜ ; ಸೀತೆಯ ತಂದೆ ; ಜನಕ ರಾಜ : ವೈದೇಹನಾಗಾ ನೃಪತಿ [ಪಾಠಾಂ. ಬಳಿಕಾ ವಿದೇಹನೃಪಾಲ] ದಶರಥನ . . . ಅವಿರಳೋತ್ಸವದಿಂದಿದಿರ್ಗೊಂಡೊಯ್ದನೊಲವಿನಲಿ (ತೂರರಾ. ೧-೧೭-೧೫). ೪. ವಿದೇಹ ದೇಶದ ಪ್ರಜೆ ; ವಿದೇಹದೇಶದಲ್ಲಿ ವಾಸಿಸುವವನು. ೫. ವ್ಯಾಪಾರಿ ; ವರ್ತಕ : "ವಣಜಂ ವೈದೇಹಂ" (ವಪ್ರಕೋ. ೬೨-೬೩). [ಸಂ.]

ವೈದೇಹಕ (ನಾ). ೧. ವ್ಯಾಪಾರಿ ; ವರ್ತಕ : ಗ್ರಾಮಭೃತಕ (ಕೂಲಿ ಕೆಲಸಗಾರ)ರಿಗಾಗಲಿ ವೈದೇಹಕ(ವ್ಯಾಪಾರಿ)ರಿಗಾಗಲಿ ಆರಂಭಕ್ಕೆ ಕೊಟ್ಟು ಅವರಿಂದ ಹೆಚ್ಚು ಬೆಳೆಯನ್ನು ಎತ್ತಿಸಿ ತಾನು ಅಧಿಕಲಾಭವನ್ನು ಪಡೆಯಬಹುದು (ಭಾರದ. ೬೬೨). ೨. ಬ್ರಾಹ್ಮಣಸ್ತ್ರೀಗೂ ವೈಶ್ಯನಿಗೂ ಹುಟ್ಟಿದವನು : "ವೈದೇಹಕಂ, ತಸ್ಮಾಂ, ಆ ಬ್ರಾಹ್ಮಣಸ್ತ್ರೀಯಲ್ಲಿ, ವಿಶಃ - ವೈಶ್ಯನ ದೆಸೆಯಿಂದ ಹುಟ್ಟಿದವನ ಹೆಸರು" (ಸಿದ್ಧಾಂತಿ. ೩೦೯). [ಸಂ.]

ವೈದೇಹಿ (ನಾ). ೧. ವಿದೇಹರಾಜನ ಮಗಳು; ಸೀತೆ : ಕುಲಭೂಭೃದ್ಭವೆ ಲಕ್ಷ್ಮಣಾಭನುತೆ ರಾಮೋತ್ಕಂಠೆ ವೈದೇಹಿ ಮಂಜುಲವೇಣೀರಮಣೀಯೆ(ಪುಷ್ಪಸ. ೨-೮) ; ಹೊಯ್ಸಿದನು ಡಂಗುರವ . . . ವೈದೇಹಿಯನು ವರಿಸುವಡೆ ಈಶದತ್ತಮಹೋಗ್ರತರ ಬಾಣಾಸನವ ತೆಗೆದೇಱಿಸುವ ಬಲುಸಾಸಿಗರು ಬಹುದೆಂದು (ತೂರರಾ. ೧-೧೩-೧೨). ೨. ವರ್ತಕನ ಹೆಂಡತಿ. ೩. ಒಂದು ಬಗೆಯ ಸಸ್ಯ ; ಹಿಪ್ಪಲಿ : "ಕೃಷ್ಣಾ, ಉಪಕುಲ್ಯಾ, ವೈದೇಹೀ, ಮಾಗಧೀ, ಪಿಪ್ಪಲೀ, ಕಣಾ — ಈ ೬ ಹಿಪ್ಪಲಿ" (ಪಲಾಯು. ೧೦೦-೪೬೦). ೪. ಗೋರೋಚನ. ೫. ಅರಿಶಿನ. ೬. (ವಿದೇಹ ದೇಶದ) ಹಸು. [ಸಂ. ವೈದೇಹೀ]

ವೈದ್ಯ (ಗು). ೧. ವೇದಕ್ಕೆ ಸಂಬಂಧಿಸಿದ. ೨. ರೋಗಚಿಕಿತ್ಸೆಗೆ ಸಂಬಂಧಪಟ್ಟ; ಔಷಧೋಪಚಾರಕ್ಕೆ ಸಂಬಂಧಿಸಿದ. (ನಾ). ೩. ಪಂಡಿತ ; ವಿದ್ವಾಂಸ. ೪. ವೇದವನ್ನು ಬಲ್ಲವನು; ವೇದವಿದ. ೫. ರೋಗಚಿಕಿತ್ಸೆ ; ಔಷಧೋಪಚಾರ : ಜ್ಯೋತಿಷ್ಯ . . . ವೈದ್ಯ ಗಾರುಡ ಸಂಗೀತ ನಾಟ್ಯ ಸಾಮುದ್ರಿಕ ಭೂತಾದ್ಯಲ್ಪವಿದ್ಯೆಯನೋತು ಕಲ್ತರೆ (ಕೃಕಪ. ೪-೪-೨) ; ಪುರ ನಗರ ಮೊದಲಾದವುಗಳ ರಚನೆ . . . ನೃತ್ಯ, ವೈದ್ಯ ಮೊದಲಾದ ಅರವತ್ತು ನಾಲ್ಕು ಕಲೆಗಳಿಗೂ ಆಗಮಶಾಸ್ತ್ರವು ಆಶ್ರಯವಾಗಿದೆ (ಭಾರದ. ೭೦). ೬. ರೋಗಗಳಿಗೆ ಚಿಕಿತ್ಸೆ ಮಾಡುವವನು; ಡಾಕ್ಟರು : ಭವರೋಗವೈದ್ಯ ನೀನು ಭವವಿರಹಿತ ನಾನು (ಬಸವ. ೬೮) ; ಗುಣವಾಯಿತೆನ್ನ ಭವರೋಗ ಕೃಷ್ಣನೆಂಬ ವೈದ್ಯನು ದೊರಕಿದನು (ಪುರಂದ. ೨-೧೫೩ ಪಲ್ಲವಿ) ; ರೋಗಿ ಬಯಸಿದ್ದೂ ಹಾಲುಅನ್ನ ವೈದ್ಯ ಹೇಳಿದ್ದೂ ಹಾಲುಅನ್ನ (ಗಾದೆ). ೭. ವಿಷ್ಣು. ೮. (ಕರಾ) ಒಂದು

ಮನೆತನದ ಹೆಸರು : ನಾಗನ ವಿಶಿಷ್ಟಪೂಜೆಯಾದ ನಾಗಮಂಡಲವನ್ನು ಕಾಣುವ ಭಾಗ್ಯವಿದ್ದವರಿಗೆ ಈ ನೃತ್ಯವು ಎಂಥದೆಂದು ತಿಳಿದೀತು. ಅದನ್ನು ಕುಣಿಯಬಲ್ಲ ಆರೆಂಟು ಮನೆತನಗಳು ಮಾತ್ರ ಇಂದು ಉಳಿದಿವೆ. ಅಂಥ ಮನೆತನದವರಿಗೆ ವೈದ್ಯರೆನ್ನುತ್ತಾರೆ (ಯಕ್ಷಪ್ರ.೧೬೬). [ಸಂ.]

ವೈದ್ಯಕಾಣೆ (ನಾ). ವೈದ್ಯನಿಗೆ ದಾನವಾಗಿ ಕೊಟ್ಟ ಆಸ್ತಿ ಅಥವಾ ಭೂಮಿ : ವೈದ್ಯರಿಗಾಗಿ . . . ದಾನಮಾಡಿದ ನೆಲಕ್ಕೆ 'ವೈದ್ಯಕಾಣಿ' ಎಂಬ ವಿಶೇಷವಾದ ಹೆಸರಿತ್ತು (ಶಾಸಗಿ. ೬೦). [ವೈದ್ಯ + ಕಾಣಿ]

ವೈದ್ಯಕಾರ (ನಾ). ರೋಗವನ್ನು ಗುಣಪಡಿಸುವವನು ; ಚಿಕಿತ್ಸಕ : ಮದ್ದ ತಿನಬೇಕಾದರೆ ವೈದ್ಯಕಾರನಿದ್ದಡೆಗೆ ಹೋಗಿ ರೊಕ್ಕಮಂ ಕೊಟ್ಟು . . . ಬೇಡಿಯಾಸಿ ಕೊಂಡು ತಿಂಬರು (ಪದಗೋ. ೧೮-೨೫೪). [ಸಂ.]

ವೈದ್ಯಕೀಯ (ಗು). ರೋಗಚಿಕಿತ್ಸೆಗೆ ಸಂಬಂಧಪಟ್ಟ : ಮದುವೆಯ ಸುಖವನನುಭವಿಸಿ ದಾಂಪತ್ಯಜೀವನಕ್ಕೆ ತಿಲಾಂಜಲಿಯನ್ನು ಕೊಟ್ಟು ಅನೇಕ ಕಷ್ಟಗಳನ್ನನುಭವಿಸಿ ವೈದ್ಯಕೀಯವಿದ್ಯಾಭ್ಯಾಸ ಮಾಡಿದೆ (ಕುಂಹಾ. ೮೯) ; ಪ್ರಾಚೀನಕಾಲದಲ್ಲಿ ವೈದ್ಯಕೀಯ ಅಧ್ಯಯನಕ್ಕೆ ವಿಶೇಷಪ್ರೋತ್ಸಾಹವಿತ್ತು (ಶಾಸಗಿ. ೬೦). [ಸಂ.]

ವೈದ್ಯಗಾರ (ನಾ). = ವೈದ್ಯಕಾರ : ಸ್ವರಗಾರ ಹಾಡಿದ್ದೇ ರಾಗ ವೈದ್ಯಗಾರ ಹೇಳಿದ್ದೇ ರೋಗ (ಗಾಡಿ). [ವೈದ್ಯ + ಗಾರ (< ಕಾಱ)]

ವೈದ್ಯನಾಥ (ನಾ). ೧. ಶಿವ ; ಈಶ್ವರ. ೨. ವೈದ್ಯಶಾಸ್ತ್ರದಲ್ಲಿ ಪ್ರವೀಣನಾದವನು. [ಸಂ.]

ವೈದ್ಯಪರೀಕ್ಷೆ (ನಾ). ೧. ರೋಗನಿದಾನವನ್ನು ಕಂಡುಹಿಡಿಯುವಿಕೆ ; ಕಾಯಿಲೆಯ ಕಾರಣವನ್ನು ತಿಳಿಯುವಿಕೆ : ವೈದ್ಯಪರೀಕ್ಷೆಗಳನ್ನು ನಡಸಲು ಸರ್ಕಾರ ಅದಕ್ಕೆ ಪ್ರತ್ಯೇಕವಾದ ವೈದ್ಯಶಾಲಾಖೆಯನ್ನು ಇಟ್ಟಿರುವಾಗ ನಿಮಗೇಕ್ರಿ ಅವರ ಇವರ ಕೆಲಸ! (ಪಸುಪೂ. ೧೧೭). ೨. ವೈದ್ಯಪದವಿಯನ್ನು ಗಳಿಸಲು ಮಾಡಬೇಕಾಗುವ ಪರೀಕ್ಷೆ ; ವೈದ್ಯಕೀಯ ಪರೀಕ್ಷೆ : ಮೈಸೂರು ಹುಡುಗ ವೈದ್ಯಪರೀಕ್ಷೆಗೆ ಓದುತ್ತಿದ್ದ (ಪೂಕೃ. ೧). [ಸಂ. ವೈದ್ಯಪರೀಕ್ಷಾ]

ವೈದ್ಯಭಾಗ (ನಾ). ೧. ರೋಗವನ್ನು ಪರೀಕ್ಷಿಸಿದುದಕ್ಕೆ ವೈದ್ಯನಿಗೆ ಸಲ್ಲಿಸಬೇಕಾಗುವ ಹಣ ಅಥವಾ ಪರಿಹಾರ. ೨. ವೈದ್ಯಕೀಯವಿಷಯದ ಭಾಗ ; ವೈದ್ಯಕ್ಕೆ ಸಂಬಂಧಪಟ್ಟ ಭಾಗ : (೬). ೩. (?) : ಗಜ್ಜುಗ ಪ್ರಮಾಣ ಲೇಹ್ಯವಂ ದುಡ್ಡುತೂಕ ತುಪ್ಪವಂ ಯಜ್ಞೇಶ್ವರಗಾಹುತಿಯಂ ಕೊಟ್ಟು ವೈದ್ಯಭಾಗಮಂ ಕೊಟ್ಟು . . . ತೆಗದುಕೊಳ್ಳುವುದು (ಸಙ್ಗ. ೩೯೩). [ಸಂ.]

ವೈದ್ಯಮಾತೆ (ನಾ). ಒಂದು ಬಗೆಯ ಔಷಧೀಸಸ್ಯ ; ಆಡುಸೋಗೆ : "ವೈದ್ಯಮಾತಾ, ಸಿಂಹೀ . . . ವಾಜಿದಂತಕಃ — ೮ ಅಡ್ಡಸರದ ಗಿಡ, ಆಡುಸೋಗೇಗೀಡದ ಹೆಸರು" (ಸಿದ್ಧಾಂತಿ. ೧೩೫). [ಸಂ. ವೈದ್ಯಮಾತಾ]

ವೈದ್ಯರಾಜ (ನಾ). ೧. ವೈದ್ಯರಲ್ಲಿ ಶ್ರೇಷ್ಠನಾದವನು : ಅಶ್ವಿನೀಕುಮಾರರಂತೆ ಆಯುರ್ವೇದವನ್ನು ಕಲಿತು, ಧನ್ವಂತರಿಯಂತೆ ಎಲ್ಲಾ ರೋಗಗಳನ್ನೂ ನಿರ್ಮೂಲ ಮಾಡಿ, ವೈದ್ಯರಾಜನೆನಿಸಿಕೊಳ್ಳಬೇಕೆಂದಿರುವೆನು (ಮೀಚಿಸ. ೩). ೨. ಧನ್ವಂತರಿ. [ಸಂ. ವೈದ್ಯರಾಜನ್]

ವೈದ್ಯವಿದ (ನಾ). ರೋಗಚಿಕಿತ್ಸೆಯಲ್ಲಿ ನಿಪುಣನಾದವನು : ರವಿಚಾಪಕ್ಷೇತ್ರದೊಳ್ ನಿಂದೊಡ ಧನಪತಿ ಸತ್ಪೂಜಿತಂ ದಾರುಣಂ ವೈದ್ಯವಿದಂ ತಕ್ಕೋಪಜೀವ್ಯಂ (ಜಾತಕ. ೧೭-೧೭). [ಸಂ. ವೈದ್ಯವಿದ್]

ವೈದ್ಯಶಾಲೆ (ನಾ). ಚಿಕಿತ್ಸೆ ಮಾಡುವ ಸ್ಥಳ ; ಆಸ್ಪತ್ರೆ ; ದವಾಖಾನೆ : ಹುಚ್ಚರ ವೈದ್ಯಶಾಲೆಯನ್ನು ರಾಜಕಾರ್ಯಕ್ಕಾಗಿ ನಾನು ಪರೀಕ್ಷಿಸಿ ನೋಡಬೇಕಾಗಿರುವುದು (ಚನ್ನಬೀ. ೧೪೭). [ಸಂ. ವೈದ್ಯಶಾಲಾ]

ವೈದ್ಯಶಾಸ್ತ್ರ (ನಾ). ೧. ರೋಗ, ರೋಗನಿದಾನ ಮುಂತಾದುವನ್ನು ವಿವರಿಸುವ ಶಾಸ್ತ್ರ : ಅಷ್ಟಾಂಗಯುಕ್ತವಾದ ಈ ಆಯುರ್ವೇದವೇ ವೈದ್ಯಶಾಸ್ತ್ರವೆನಿಸಿಕೊಂಬುದು (ವೈದ್ಯಸಾ. I, X, ಮುನ್ನುಡಿ) ; ವೈದ್ಯಶಾಸ್ತ್ರಕ್ಕೊಂದು ಸಾರ್ವಜನಿಕಪನ್ನಣೆಯನ್ನು ಕೊಟ್ಟು . . . ಬೆಳೆಸಿದ ಕೀರ್ತಿ ಚೋಳರಸರಿಗೆ ಸೇರಿದಂತೆ ಕಾಣುತ್ತದೆ (ಶಾಸಗಿ. ೬೦) : ನಾನು ವೈದ್ಯಶಾಸ್ತ್ರಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕೆಂಬ ಆಶಯದಿಂದಲೇ ಓದಿದೆ (ಪೂಕೃ. ೮). ೨. ರೋಗ, ರೋಗನಿದಾನ ಮುಂತಾದುವನ್ನು ವಿವರಿಸುವ ಗ್ರಂಥ, — ಪುಸ್ತಕ : ಆ ವೈದ್ಯಶಾಸ್ತ್ರಕ್ಕೆ ಟೀಕಂ ಬರದಂ ವೈದ್ಯಪ್ರವೀಣರ್ ಪೊಗಳುತಿರೆ (ಸಙ್ಗ. ೪). [ಸಂ.]

ವೈದ್ಯಾಲಯ (ನಾ). = ವೈದ್ಯಶಾಲೆ : ಕಾವಲುಗಾರ ಎಂಟುಗಂಟೆಗೇ ಬಂದು ವೈದ್ಯಾಲಯದ ಬಾಗಿಲು ತೆರೆದ (ಪಸುಪೂ. ೧೪). [ಸಂ.]

ವೈದ್ಯುತ (ಗು). ೧. ಮಿಂಚಿಗೆ ಸಂಬಂಧಿಸಿದ. ೨. ವಿದ್ಯುತ್ತಿಗೆ ಸಂಬಂಧಿಸಿದ ; ವಿದ್ಯುಚ್ಛಕ್ತಿಯ. (ನಾ). ೩. ವಿದ್ಯುಚ್ಛಕ್ತಿ ; ವಿದ್ಯುತ್ತು. ೪. ಸ್ವರ್ಗದ ಪಟ್ಟಣಗಳಲ್ಲಿ ಒಂದು. [ಸಂ.]

ವೈದ್ಯುತಾಗ್ನಿ (ನಾ). ಪಂಚಾಗ್ನಿಗಳಲ್ಲಿ ಒಂದು : ದೇಹದೊಳಗೆ ಮೂಲಾಧಾರಾದಿ ಸ್ಥಾನಂಗಳಲ್ಲಿರ್ಪ ಕಾಲಾಗ್ನಿ ಬಾಡಬಾಗ್ನಿ ಪಾಪಾಣಾಗ್ನಿ ವೈದ್ಯುತಾಗ್ನಿ ಸೂರ್ಯಾಗ್ನಿ ಎಂಬ ಸೂಕ್ಷ್ಮಬಿಂದುರೂಪ ಪಂಚಾಗ್ನಿಧ್ಯಾನಯುಕ್ತನಾಗಿ (ವಿವೇಚ. ೧೨೬). [ಸಂ.]

ವೈದ್ಯುತೆ (ನಾ). ದೇಹದಲ್ಲಿರುವ ಒಂದು ನಾಡಿಯ ಹೆಸರು : ಸುಷುಮ್ನಾ ನಾಡಿಯ ಹಿಂಭಾಗಕ್ಕೆ 'ವಜ್ರಿಕೆ' ಬಲಭಾಗಕ್ಕೆ 'ವೈದ್ಯುತಾ' ಎಂದು ಹೆಸರುಗಳು (ಪಸಾರ. ೮-೩. ಕಾತ್ಯರ್ಜ). [ಸಂ. ವೈದ್ಯುತ]

ವೈದ್ಯೋಕ್ತ (ನಾ). (ಔಷಧ ಮುಂತಾದುವುಗಳ ವಿಷಯದಲ್ಲಿ) ವೈದ್ಯರು ಹೇಳಿದಂತೆ ಕೇಳುವವನು : ಉದರಸಮಾಗ್ನಿಯ ಚಿಹ್ನದ ಪದದೊಳ್ ವೈದ್ಯೋಕ್ತನಪ್ಪ ಬಾಣಸಿಗನವೊಲ್ ತ್ರಿದಶಾಮೃತಾನ್ನಮಂ ಕುಡುವುದವರ್ಗ ಭೋಜ್ಯಾಂಗ ತುಂಗಕಲ್ಪಮೋಜಂ (ಶಾಂತಿಪ್ರ. ೬-೧೧೫). [ಸಂ.]

ವೈಧರ್ಮ್ಯ (ನಾ). ೧. ಸಾದೃಶ್ಯವಿಲ್ಲದಿರುವಿಕೆ ; ವ್ಯತ್ಯಾಸ : ಆ ಧರ್ಮವತಿಯ ಪುರದ ಮಹಾಧರ್ಮಯುತರ್ಗ ಸುರರ್ಗ ಮೃವೆತ್ತುದು ತಾಂ ಸಾಧರ್ಮ್ಯಮೆಂದು ಬಿದಿ ಮಿಗೆ ವೈಧರ್ಮ್ಯ [ಪಾಕಾಂ. ರ್ಮ] ಮನನಿಮಿಷತೆಯನವರೊಳ್ನಿಗಳ್ದು (ರಾಜಶೇ. ೨-೯೨) ; ಜ್ಞಾನ ಕರ್ಮಗಳಿಗೆ ಸಹಜವಾದ ವೈಧರ್ಮ್ಯವಿಲ್ಲ (ಭಾರದ. ೧೧೫). ೨. ನ್ಯಾಯವಿರುದ್ಧ ವಾದುದು. [ಸಂ.]

ವೈಧವ್ಯ (ನಾ). ಗಂಡನನ್ನು ಕಳೆದುಕೊಂಡಿರುವ ಹೆಣ್ಣಿನ ಸ್ಥಿತಿ : ಆ ಪ್ರಿಯ ತನೂಜೆಯರ ನವ್ಯವೈಧವ್ಯಮಂ ಕಂಡು . . . ಜರಾಸಂಧನತಿಕ್ರೋಧಮಂ ಕೈಕೊಂಡು (ಜಗವಿ. ೭-೩೪ ವ) ; ವೈಧವ್ಯದ ಭಯಕ್ಕೋಸ್ಕರ ಭಯಪಡಬೇಕು (ಕಪಾಕು. ೭೬). [ಸಂ.]

ವೈಧವ್ಯದೀಕ್ಷೆ (ನಾ). ವಿಧವೆಯ ಪಟ್ಟ : ಆತನಂ ಮುನಿದು ನೀಂ ಕೊಂದು ನಿಜಾನುಚಿಗೆ ವೈಧವ್ಯದೀಕ್ಷೆಯಂ ಕುಡುವುದು ಚಿದುರಲ್ಲ (ಪಂರಾಮಾ. ೧೦-೧೭೮ ವ) ; ಪಾರ್ಥನ ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಲಹುದೆ (ಕುಪಾಕ. ೨೫-೧೩). [ಸಂ. ವೈಧವ್ಯದೀಕ್ಷಾ]

ವೈಧಾತ್ರ (ನಾ). ವಿಧಾತೃವಿನ ಮಗ ; ಸನತ್ಕುಮಾರ : "ಸನತ್ಕುಮಾರಃ, ವೈಧಾತ್ರಃ- ೨ ಬ್ರಹ್ಮಪುತ್ರನಾದ ಸನತ್ಕುಮಾರನ ಹೆಸರುಗಳು" (ಸಿದ್ಧಾಂತಿ. ೨೨). [ಸಂ.]

ವೈಧೃತಿ (ನಾ). ೧. [ಜ್ಯೋತಿ] ಇಪ್ಪತ್ತೇಳು ಬಗೆಯ ಯೋಗಗಳಲ್ಲಿ ಒಂದು; ಅತ್ಯಂತ ಅಮಂಗಳವೂ ಅನಿಷ್ಟಕಾರಕವೂ ಎಂದು ಭಾವಿಸಲಾದ, ಚಂದ್ರ ಮತ್ತು ಸೂರ್ಯರು ಒಂದು ನಿರ್ದಿಷ್ಟ ಸ್ಥಾನ : ವಿಷ್ಕಂಭ ಪ್ರೀತಿ . . . ಬ್ರಹ್ಮ ಐಂದ್ರ ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇಚ ೨೬.೨) ; ಯೋಗಗಳತಿಶಯವನರಿಯೆ ಪೇಳುವೆ . . . ವೈಧೃತಿಯು ವ್ಯಾಘಾತಧ್ರುವಪರಿಘವೇಕಾದಶದ ಯೋಗಗಳಶುಭ ಮಿಕ್ಕುಳಿದವೇ ಶುಭಗಳಹವು (ಗಗಕಾ. ೪-೬೯). ೨. (ಆಲಂ) ಕೆಟ್ಟುದು ; ಅಶುಭಕರ ವಾದುದು : ನಾಳೆಯೆಲ್ಲಾ ಸಮಸ್ತಕಾರ್ಯಕ್ಕೂ ವೈಧೃತಿಯಾಗಿರುವಂಥಾದ್ದು, ಇವತ್ತು ನಾಳೆ ಸಮಸ್ತಕಾರ್ಯಕ್ಕೂ ಅನುಕೂಲವಾಗಿರುವಂಥಾದ್ದು (ಮೂಮಶಾ. ೧). [ಸಂ.]

ವೈಧೇಯ (ನಾ). ಏನೂ ತಿಳಿಯದವನು ; ದಡ್ಡ ; ಮೂರ್ಖ : "ವೈಧೇಯಃ . . . ಮೂರ್ಖಃ, ಮಾತೃಶಾಸಿತಃ — ಈ ೧೧ ಅಱಿಯದವಂ" (ಪಲಾಯು. ೪೯-೧೫೧). [ಸಂ.]

ವೈನ 'ವಯಿನ' ನೋ.

ವೈನಕಾಳು (ನಾ). ತಾಂಬೂಲದ ಜೊತೆಯಲ್ಲಿ ಮಿಶ್ರಮಾಡುವ, ಜೀರಿಗೆಯಂಥ ಒಂದು ಬಗೆಯ ಕಾಳು ; ಸೋಂಪು : ಎಲೆ, ಅಡಕೆ, ಹೊಗೆಕಡ್ಡಿ, ಕಾಚು, ಕಾಯಿ,

ಬಚೆ, ಲವಂಗ, ಪತ್ರೆ, ಏಲಕ್ಕಿ ಕಸದ ಬೀಜ, ವೈನಕಾಳು — ಇತ್ಯಾದಿ ತುಂಬಿದ ತಾಂಬೂಲದ ಚಂಚಿಯನ್ನು ಅವರ ಕೈಗೆ ಕೊಟ್ಟು . . . ಕುಳಿತಳು (ಚಿಉಮ. ೩೨).

[ವೈನ? (P ⟵ ಮರಾ. ವರ್ಯಾಳೀ) + ಕಾಳ್ಳು (< ಕಾಟ್ಟ್)]

ವೈನತೇಯ (ನಾ). ೧. ಕಶ್ಯಪಮುನಿ ಮತ್ತು ವಿನತಾದೇವಿಯ ಮಗ ; ಗರುತ್ಮಂತ : "ವಿಹಂಗರಾಜಃ, ಗರುಡಃ . . . ವೈನತೇಯಃ . . . ಕಶ್ಯಪ ನಂದನಃ - - ಈ ೧೦ ಗರುಡನ ಪೆಸರ್" (ಹಲ್ಲಾಯು. ೬-೩೧) ; ಜಯರಾಮನೋ ದುಂದುಮಾರನೋ . . . ಪಂನಗ ವೈನತೇಯನೋ (ಎಕ. VII (R). ನಾಗಮಂ. ೧೬೯-೨೫ ; 1142) ; ಬಂದಂ . . . ಸಕಲಖಗಕುಲಜ್ಯಾಯನಾ ವೈನತೇಯಂ (ಜಗವಿ. ೧೧ ೯೦) ; ಶರನಿಕರದಲಿ . . . ಕಲಿ ವೈನತೇಯನೂ ಕರ್ಣನೋ ಸಾವಜಿಯೆವು (ಕುಮಾಕ. ೧೨-೨೫). ೨. ಹದ್ದಿನ ಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ ; ಗರುಡ : ಗರ್ಭೇಶ್ವರಿಯಲ್ಲಿಗೆ ದೂತನನಟ್ಟಿ ಪಸರಂಬಡೆಯದೆ ವೈನತೇಯನ ಚಿತ್ತವೃತ್ತಿಯಂತೆ ಭುಜಗದ್ವೇಷಿಯಾಗಿರ್ದು(ದ)ನಱಿದು (ಶಾಂಪು. ೮-೮೩ ವ). ೩. ಅರುಣ. [ಸಂ.]

ವೈನಯಿಕ (ಗು). ೧. ವಿನಯದಿಂದ ಕೂಡಿದ ; ಸೌಜನ್ಯದ. (ನಾ). ೨. ಯುದ್ಧರಥ. ೩. [ಜೈನ] ವಿನಯಕ್ಕೆ ಸಂಬಂಧಿಸಿದ ಅಂಗಬಾಹ್ಯ : ವೈನಯಿಕಮೆಂಬುದು ಸಮ್ಯಗ್ದರ್ಶನ ಜ್ಞಾನಚಾರಿತ್ರ ತಪೋವಿನಯಮುಂ ಔಪಚಾರಕ ವಿನಯಮುಮಂ ವ್ಯಾವರ್ಣಿಸುಗುಂ (ತತ್ತ್ವಪ್ರ. ೬೫). [ಸಂ.]

ವೈನಾಯಕಾಸ್ತ್ರ (ನಾ). ವಿನಾಯಕನ ಮಂತ್ರವನ್ನು ಅಭಿಮಂತ್ರಿಸಿ ಬಿಡುವ ಬಾಣ : ಸಾಯಕವನಭಿಮಂತ್ರಿಸುತ ವೈನಾಯಕಾಸ್ತ್ರವ ಹೂಡಿದನು ಬಲ ಬಾಯ ಬಿಡೆ ಚಿಗಿದಂಬು ಕಡಿದುದು ಕರ್ಣನಂದನನ (ಕುಮಾಕ. ೨೦-೩೫). [ಸಂ.]

ವೈನಾಶಿಕ (ಗು). ೧. ನಾಶವಾಗುವ ; ಕ್ಷಣಿಕ. (ನಾ). ೨. [ಬೌದ್ಧ] ಬೌದ್ಧಮತದ ಒಂದು ತತ್ತ್ವ ; ಕ್ಷಣಿಕವಾದ. ೩. ಬೌದ್ಧತತ್ವದ ಅನುಯಾಯಿ : ವೈನಾಶಿಕರೆಂದರೆ ಪ್ರತಿಯೊಂದು ವಸ್ತುವೂ ಪ್ರತಿಕ್ಷಣದಲ್ಲಿಯೂ ಹುಟ್ಟಿ ಉತ್ತರಕ್ಷಣದಲ್ಲಿಯೇ ನಾಶವಾಗುವುದು ಎಂದು ವಾದಿಸುವ ಕ್ಷಣಿಕವಾದಿಗಳು (ಹಿಂದಸಾ. ೧೨೮). [ಸಂ.]

ವೈನಿ 'ವಹಿನಿ' ನೋ.

ವೈನೋದಿಕ (ನಾ). ೧. ಹಾಸ್ಯ ; ವಿನೋದ : ರೊಮ್ಯಾಂಟಿಕ್ ನಾಟಕಕಾರರ ಯೋಜನೆಯ ಪ್ರಕಾರ, ಉತ್ಕೃಷ್ಟಿತ ಭಾವಗಳನ್ನೂ ವೈನೋದಿಕವನ್ನೂ ಸರಿದೂಗಿಸುವುದು ಡಿಕನ್ಸನ ಸ್ವಭಾವಪೂರ್ವಕ ವಿಧಾನವಾಗಿತ್ತು (ಸಾಹಿಪ್ರ. ೧೩೫). ೨. ವಿನೋದವನ್ನುಂಟು ಮಾಡುವ ನಾಟಕ ; ನಗೆನಾಟಕ : ನಾಟಕದಲ್ಲಿ ಎರಡು ಮುಖ್ಯವರ್ಗಗಳನ್ನು ಕಲ್ಪಿಸುವುದು ರೂಢಿ : ಸುಖಾಂತನಾಟಕ ಅಥವಾ ವೈನೋದಿಕ ಮತ್ತು ದುರಂತನಾಟಕ ಅಥವಾ ರುದ್ರನಾಟಕ (ಸಾಹಿಪ್ರ. ೨೦೬). ೩. ವಿನೋದವನ್ನು ಮಾಡುವವನು; ಹಾಸ್ಯಗಾರ : ವೈನೋದಿಕರು ಕೋಮೋ ಅಥವಾ ಕ್ರೀಡೆಗಳಿಂದ ತಮ್ಮ ಹೆಸರನ್ನು ಪಡೆಯಲಿಲ್ಲ (ಅಂಕಾ. ೬೬). [ಸಂ.]

ವೈನ್ಸ (ನಾ). ಗಂಡನ ಒಡಹುಟ್ಟಿದವಳು ; ಗಂಡನ ಸೋದರಿ : ವೈನ್ಸ. ನಾನು ನಿಮಗೇನು ಮಾಡಿದರೂ ಅದರಿಂದ ದೇವರು ನನಗೆ ಆಶೀರ್ವಾದ ಮಾಡುತ್ತಾನೆ (ಸ್ಪೃಚಿಚಿ. ೨೧೬). [⟵ ಮರಾ. ವನಸೇ, ವನ್ಸೇ, ವಹಿನ್ಸ, ವೈನಸೇ]

ವೈಪಥ (ನಾ). ಸುಗಮವಲ್ಲದ ದಾರಿ ; ಕೆಟ್ಟಮಾರ್ಗ : ವಿವಿಧವೈಪಥಪಾಂಸುಗಳಿಂದ ನಾಡೆ ಸೀಱಿದ ತಲೆಯುಂ ಕರಂ ಮಲಿನಮಾದ ಪಟಚ್ಛರಮುಂ ನೆಗಳ್ಚಲಂದಿದಿರೊಳ್ ಲೇಖವಾಹನಿವಹಂ ಬರೆ ಕಂಡನಿಳಾಧಿನಾಯಕಂ (ಕಾದಂಬ. ೬೩೬). [ಸಂ.]

ವೈಪರೀತ್ಯ (ನಾ). ೧. ವಿರೋಧ ; ಪ್ರತಿಕೂಲತೆ : ಹಾರಮಿದನ್ಯಭವಾಲಂಕಾರ ಮನನುಕರಿಸಿ ಮದ್ವಿತೀಯನ ಗತಿ ಸಂಸ್ಕಾರಮನಱಿಪಿದೊಡೆನ್ನ ಶರೀರಕ್ಕಿನಿತಾಯ್ತು ವೈಪರೀತ್ಯಂ ಸಭೆಯೊಳ್ (ಶಾಂಪು. ೨-೨೬) ; ಚಾಪವೀತನ ಕೈಯಲಿರಲಿನ್ನಾ ಪಿನಾಕಿಗೆ ಗೆಲವು ಘಟಿಸದು ವೈಪರೀತ್ಯಕೆ ಬೆದಱಲಾಗದು ಸ್ವಾಮಿಕಾರ್ಯವಿದು (ಕುಮಾದ್ರೋ. ೬-೨೯); ನನ್ನ ದೃಷ್ಟಿಯಲ್ಲೇ ಒಂದು ವೈಪರೀತ್ಯ ಉಂಟಾಗಿತ್ತು (ಶಾಂತಲಾ. ೨೫೦). ೨. ಹೊಂದಾಣಿಕೆಯಿಲ್ಲದುದು ; ಅಸಾಮಂಜಸ್ಯ. [ಸಂ.]

ವೈಪು (ನಾ). ೧. ನಿಧಿ ; ನಿಕ್ಷೇಪ ; ಭಂಡಾರ : ಕಱುಬು ಕುಹಕದ ಕಣಜ ಈಡುಪಾಡಿನ ಪಸರ ಕರೆವ ಕೊಸರುವ ವೈಪು ಸೈಪುದೋಱುವ ಸೂಳೆಗೇರಿ ಸೊಗಸಾದುದಲ್ಲಿ (ನಂದಿಮಾ. ೨೩-೧೭). ೨. ಯುಕ್ತಿ ; ಚಾತುರ್ಯ; ತಂತ್ರ : ಆ ಪುರಾರಿಯ ಶರಣರಿಗೆ ವಿತ್ತಮನಿತ್ತು ವೈಪಿನಿಂದೆಸೆವ ಗಜತುರಗ ವಾಹನವಿತ್ತು (ಲಿಂಗಪು. ೨೧-೪೬); ವೈಪು ಉಳ್ಳವ ಕೈಪು ಕಟ್ಟಾನೇ? (ಗಾರ). [ದೇ. ॥ ತಮಿ. ವೈಪ್ಪು ; ತೆಲು. ವಯಿಪು, ವೈಪು]

ವೈಪುಲ್ಯ (ನಾ). ೧. ಯಥೇಷ್ಟವಾದುದು ; ಹೇರಳವಾದುದು : ಸಂಖ್ಯಾವೈಪುಲ್ಯ ವಾಚಿಯಪ್ಪ ಬಹುಶಬ್ದಕ್ಕೆ ವಿಶೇಷಾಭಾವದಿಂ ಗ್ರಹಣಮಕ್ಕುಂ (ತತ್ತ್ವಪ್ರ. ೫೬); ಇಲ್ಲಿಯವರೆಗೆ ಉಪಲಬ್ಧವಾಗಿರುವ ಗ್ರಂಥ ಮತ್ತು ಲೇಖನಸಂಪತ್ತನ್ನು ಸೂರೆಗೊಂಡಿರುವ ವಿಷಯವೈಪುಲ್ಯ ಈ ಗ್ರಂಥದ ಮೇಲ್ಮೆಗೆ ಕಾರಣವಾಗಿದೆ (ವ್ಯಾವಿ. V, ಮುನ್ನುಡಿ). ೨. ವಿಶಾಲವಾದುದು. [ಸಂ.]

ವೈಫಲ್ಯ (ನಾ). ಪ್ರಯೋಜನಕ್ಕೆ ಬಾರದುದು ; ನಿಷ್ಫಲವಾದುದು : ಯಥಾರ್ಥತೆ ಇಲ್ಲದೆ ಅಯಥಾರ್ಥತೆಯ ನಿರ್ಣಯಕ್ಕೆ ಒರೆಗಲ್ಲೆಂದರೆ ಆಯಾ ಜ್ಞಾನಮೂಲಕವಾದ ನಮ್ಮ ವ್ಯಾವಹಾರಿಕಪ್ರವೃತ್ತಿಗಳ ಸಾಫಲ್ಯ ಇಲ್ಲದೆ ವೈಫಲ್ಯ (ತತ್ತ್ವಪ್ರ. ೨೩೦). [ಸಂ.]

ವೈಬಾಧ (ನಾ). ಒಂದು ಬಗೆಯ ಮರ ; ಅಶ್ವತ್ಥ : ಈ ವಿನಾಶಕತ್ವದ ಕುರುಹಾಗಿ ಅಶ್ವತ್ಥವನ್ನು ವೈಬಾಧ ಎಂದೂ ಕರೆದರು (ಪಸುಹೂ. ೩೭೫). [ಸಂ.]

ವೈಭವ (ನಾ). ೧. ಶಕ್ತಿ ; ಸಾಮರ್ಥ್ಯ : ಘಟದಲ್ಲಿ ವೈಭವ ಆತ್ಮನಲ್ಲಿ ನಿರೋಧ ಆಚಾರದಲ್ಲಿ ಕರ್ಕಶ ಇಂತೀ ನಿಹಿತಾಚಾರಂಗಳಲ್ಲಿ ನಿರತನಾಗಿ ಕಾಯದ ಕರ್ಮ ಜೀವದ ಭಾವ ಜ್ಞಾನದ ಒಳಗನಱಿಯಬೇಕು (ಮೋಕಿಮಾ. ೧೦-೩೭). ೨. ಶ್ರೇಷ್ಠತೆ ; ಮೇಲ್ಮೆ : ಶಿವಭಕ್ತರುಗಳಭಿವೃದ್ಧಿಕರಮಂ ಭಕ್ತಚಾರಿತ್ರಪ್ರಭಾವೈಭವಸಮುನ್ನತಿಯ ವ್ಯಕ್ತಮಾಗಲು ಕಂಡವರ್ಗಳು (ಬಸಪು. ೫೮-೧೪) ; ಶ್ರೀ ಭೂಮಿ ನೀಳಾನಾಥನಿಗನುಪಮ ವೈಭವ ವೈಕುಂಠಪತಿಗೆ (ಪದಿಬ. ೩-೧). ೩. ಐಶ್ವರ್ಯ; ಸಿರಿ; ಸಂಪತ್ತು : ಸಕಲವೈಭವದಿಂದೆಸೆದಿರ್ಪುದಾ ಪುರಂ (ಜಗವಿ. ೨-೩೪) ; ಬೊಪ್ಪ ಬಿನ್ನಹವವರ ಜನಕನು ತಪ್ಪಿ ನಡೆಯನು ನಿಮಗೆ ನೀವಿನ್ನೊಪ್ಪಿಸುವುದಾ ಪಾಂಡುಸುತರಿಗೆ ರಾಜ್ಯವೈಭವವ (ಕುಮಾಅ. ೮-೫೯). ೪. ಆಡಂಬರ ; ವಿಜೃಂಭಣೆ : ಆದುದವರಿಗೆ ಬಳಿಕ ಲೌಕಿಕ ವೈದಿಕದ ವೈಭವಗಳಲಿ ಭದ್ರೋದಯದ ಭವಕರ್ಮವು (ತೊರರಾ. ೧-೮-೯) ; ಶಕ್ರನಾಸ್ಥಾನಮಂ ವಿವಿಧವೈಭವದಿಂ ದತಿಕ್ರಮಿಸುವರಸನೋಲಗಮಂ ನಿರೀಕ್ಷಿಸುತುಪಕ್ರಮಿಸುವೆಳನಗೆಯೊಳಸುರಾರಿ ನುಡಿದಂ (ಚೈಮಿಭಾ. ೨-೫೨). [ಸಂ.]

ವೈಭವಂಬಡೆ (ಕ್ರಿ). ಐಶ್ವರ್ಯವನ್ನು ಹೊಂದು ; ಶ್ರೀಮಂತನಾಗು : ಜನಂಗಳಂ ಪೊರೆವ ಕಾರ್ಯದೊಳಗ್ಗಳನಪ್ಪ ವೈಭವಂಬಡೆದಿರೆ ಬಂದು ಸಂದಣಿಪ ಬಂಧುಗಳಿರ್ಕೆ (ಶಾಕುಂತ. ೬೩-೧೦೮). [ವೈಭವ + ಪಡೆ]

ವೈಭಾಗ (ನಾ). ವಂಶಪಾರಂಪರ್ಯವಾಗಿ ಬಂದ ಆಸ್ತಿಯ ಪಾಲು ; ದಾಯಭಾಗ : "ದ್ರವಿಣ ದಾನೋತ್ಕೃಷ್ಟ ವೈಭಾಗ ಕಾನನ ಮಾಟಂಗಳು ದಾಯಶಬ್ದ" (ನಾನಾರ. ೧೪೩). [< ಸಂ. ವಿಭಾಗ]

ವೈಭಾತಿಕ (ಗು). ೧. ಬೆಳಗಿನ ಜಾವದ ; ಪ್ರಾತಃಕಾಲದ : ಲತಿಕಾ ಲಾಸ್ಯೋಪದೇಶವ್ಯಸನಿ ವನಲತಾಂದೋಳಿತಾಮೋದ . . . ಮೃಗಸಂದೋಹ ರೋಮಂಥ ಫೇನೋದ್ಗತಬಿಂದುಸ್ಯಂದಿ ತೀಡಿತ್ತೆಸಗಿ ಸುರಭಿ ವೈಭಾತಿಕಂ ಮಾತರಿಶ್ವಂ (ಕಾದಂಪೂ. ೧೪೬); ತೆರವೊಯ್ಯಂದೆಟ್ಟೆ ಕಾಸಾರದ ಪರಿಸರದೊಳ್ . . . ಸುಱಿದುದು ವೈಭಾತಿಕಂ ಮಾತರಿಶ್ವಂ (ಜಗವಿ. ೧೬-೧೩೬). (ನಾ). ೨. ಮುಂಜಾನೆ ; ಪ್ರಾತಃಕಾಲ: ಎಸಗಿ ವೈಭಾತಿಕದ ಕ್ರಿಯೆಗಳ . . . ಚೈತ್ಯಾಲಯಕೆ ಭವ್ಯಪ್ರಸರ ಸಹ ತೆರಳಿದನು (ನಾಗಚ. ೩೨-೨೧). [ಸಂ.]

ವೈಭಾತಿಕಕ್ರಿಯೆ (ನಾ). ಪ್ರಾತಃಕಾಲದಲ್ಲಿ ಮಾಡಬೇಕಾದ ದೇಹಶೌಚ, ಸಂಧ್ಯಾವಂದನಾದಿ ಕಾರ್ಯ ; ಪ್ರಾತರ್ವಿಧಿ : ಎಸಗಿ ವೈಭಾತಿಕಕ್ರಿಯೆಗಳ ಮೆಲ್ಲನೆ . . . ವಸುಧಾಧಿಪತಿ ನಡೆತಂದ (ನಾಗಕು. ೩-೧೦೬). [ಸಂ. ವೈಭಾತಿಕಕ್ರಿಯಾ]

ವೈಭಾತಿಕಸಮೀರ (ನಾ). ಬೆಳಗಿನ ಗಾಳಿ ; ತಂಗಾಳಿ : ಭ್ರಮರಹಿತಂ ವೈಭಾತಿಕ ಸಮೀರನೆಸಗಿದುದು ಪೋಲ್ತು ಸುವಿಧಿಯ ಬಗೆಯಂ (ಪುಷ್ಪಸು. ೧೩-೫೮). [ಸಂ.]

ವೈಭಾಷಿಕ (ನಾ). ೧. [ಬೌದ್ಧ] ಬೌದ್ಧರ ಒಂದು ಒಳಪಂಗಡ ಮತ್ತು ಆ ಪಂಗಡಕ್ಕೆ ಸೇರಿದವನು : ಸೌತ್ರಾಂತಿಕ ವೈಭಾಷಿಕ ಮಹಾಯಾನಕ ಸೌಶ್ರುತವೆಂದು ನಾಲ್ಕು ತೆಱನಾಗಿರ್ಕುಂ (ವಿವೇಕ. ೧೦) ; ಬೌದ್ಧರಲ್ಲಿ ವೈಭಾಷಿಕರೇ ಮೊದಲಾದ ನಾಲ್ಕು

ಪಂಗಡಗಳಿರುವುವು (ಭಾರದ. ೨೦೪). ೨. ನಾಸ್ತಿಕ ದರ್ಶನಗಳಲ್ಲಿ ಒಂದು : ಈ ಮೂಲತತ್ವಾನ್ವೇಷಣರೂಪದಲ್ಲಿ ಚಾರ್ವಾಕ, ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕ, ಜೈನದರ್ಶನಗಳೆಂಬ ಆರು ನಾಸ್ತಿಕ ದರ್ಶನಗಳೂ . . . ಆವಿರ್ಭವಿಸಿರುತ್ತವೆ (ಭಾರದ. ೨೨೯). [ಸಂ.]

ವೈಭೋಗ (ನಾ). ಆಡಂಬರ ; ಡೌಲು ; ವಿಜೃಂಭಣೆ : ಶೂಲದ ಮೇಲಣ ತಲೆಯ ವೈಭೋಗವನಾರು ಬಯಸಿದಡೆಲ್ಲಿಯದು (ಅಪಚಂ. ೧೫೪-೭೦೮) ; ದೇವರ ಅಮೃತಪಡಿ ಅಂಗರಂಗ ವೈಭೋಗ ಮಾಸೋಚ್ಛಾಹ ಮುಂತಾದ ದೇವರ ಸೇವೆಗೆ ಹಿರಿಯ ಸಿಂದೊಗಿಯ ಗ್ರಾಮವನು ಸಮರ್ಪಿಸಿದೆವಗಿ (ಕಾಅ. ೭೨-೯-೧೧ ; 1521) ; ಈ ಪಾಪಿಜೀವನಕ್ಕೆ ವೈಭೋಗ ಯಾಕೆ ಕರ್ಮಕ್ಕೆ? (ಮೂಮಗು. ೧೮). 'ಐಭೋಗ' ಪರಾ.

[< ಸಂ. ವೈಭವ./ ತಮಿ. ವೈಪೋಕ]

ವೈಭ್ರಾಜ (ನಾ). ದೇವತೆಗಳ ಉದ್ಯಾನವನ: ನಂದನವು ಬಡಗಣದು ಪಡುವಣ ಚಂದವಹ ವೈಭ್ರಾಜ ತೆಂಕಲು ಗಂಧಮಾದನ ಚೈತ್ರರಥ ಮೂಡಣದು (ಕುಮಾಅ. ೬-೩೮). [ಸಂ.]

ವೈಮತ್ಯ (ನಾ). ೧. ಅಭಿಪ್ರಾಯಭೇದ : ನಮ್ಮದೀ ವೈಮತ್ಯವನ್ನವನಿಗೊಂದಾಗಿ ಒಪ್ಪಿಸುವ! ಅವನೆ ತೀರ್ಚುಗೆ! (ಹಚ್ಚಿರ. ೪೩-೫). ೨. ಜುಗುಪ್ಸೆ ; ಹೇವರಿಕೆ. [ಸಂ.]

ವೈಮನಸ್ಯ (ನಾ). ೧. ಅತೀವವಾದ ದುಃಖ; ಅಧಿಕವಾದ ಸಂಕಟ: ಸುಯೋಧನನು . . . ಐತಂದು ಗಜಪುರಸೀಮೆಯಲಿ ಪಾಳಯವ ಬಿಡಿಸಿದ ವೈಮನಸ್ಯದಲಿರುಳು ಹೊಕ್ಕನು ಹಸ್ತಿನಾಪುರವ (ಕುಮಾಸ. ೧೧-೩೬) ; ಬಳಲ್ದ ರಿಪು ಚೇತರಿಸಿಕೊಳ್ಳದಿರಲು ವೈಮನಸ್ಯದೊಳಕಟ ತಪ್ಪಿತ ರಣಾಟೋಪವೈಮೊಗಂ ಬಲ್ಲನೆನುತವನೆಡೆಗೆ ಬಂದು (ಚೈಮಿಭಾ. ೪-೪೭). ೨. ಹಗೆತನ ; ವೈರ ; ದ್ವೇಷ : ಮೈಮಱೆದನಗೆಗಳಿಗೆ ಮಾತ್ರಕೆ ವೈಮನಸ್ಯದ ಜಾಡ್ಯರೇಖೆಯ ಸುಯ್ ಮಹಾದ್ಭುತವಾಯ್ತು ಪರಿಣತ ಪಾರವಶ್ಯದಲಿ (ಕುಮಾಗ. ೭-೨೬) ; ಬೇಟದ ಕಟಕಿಗಳಿಂದ ಐಮೊಗನ ರಾಣಿಯಂ ನುಡಿಸಿದೊಡೆ ಭೂಪ ಕೇಳ್ಕೆ ಮುಳಿದು ನೋಡಿದಳ್ಬುವನಮಾತೆಯ ಖತಿಯ ವೈಮನಸ್ಯದೊಳುಳಿವರಾರ ಸುರನುರಿದು ಪೋದಂ ಕೂಡೆ ಬೂದಿಯಾಗಿ (ಚೈಮಿಭಾ. ೧೫-೨೬). [ಸಂ.]

ವೈಮನಸ್ಸು (ನಾ). = ವೈಮನಸ್ಯ ೨ : ಊರಿನಲ್ಲಿ ಹಲವಾರು ಕಾರಣಗಳಿಂದ ಪಟೇಲ ತಿಮ್ಮೇಗೌಡ ನುತ್ತು ಶ್ಯಾನುಭೋಗ ನರಸಿಂಹಮೂರ್ತಿಗಳಿಗೆ ವೈಮನಸ್ಸು ಇತ್ತು (ಊರುಕ. ೧೦) ; ಅವಳಿಗೆ . . . ನಾಗಲಕ್ಷ್ಮಿಯೊಡನೆ ಎಂದೂ ವೈಮನಸ್ಸು ಬೆಳೆದಿರಲಿಲ್ಲ (ವಂಶವೃ. ೨೮೭). [< ಸಂ. ವೈಮನಸ್ಯ]

ವೈಮಾನಿಕ (ನಾ). ೧. ಒಂದು ನಿರ್ದಿಷ್ಟವರ್ಗಕ್ಕೆ ಸೇರಿದ ದೇವತೆ : ವೃಷಾಂಕನಂಬು ತನುವಂ ಪಚ್ಚಂತೆ ಕೊಂಡತ್ತು ತೊಟ್ಟಗೆ ವೈಮಾನಿಕಕೋಟಿಗಂದು ಪಿರಿದೊಂದುತ್ಸಾಹಮಪ್ಪನ್ನೆಗಂ (ಪಂಪಭಾ. ೮-೧೬) ; ಏನ ಹೇಳುವೆನವನಿಪತಿ ವೈಮಾನಿಕರ ಹಂತಿಗಳ ಹರ ಚತುರಾನನರ ಪೊಡ್ಡೋಲಗವ ವಾಗ್ಜನಿತವಿಗ್ರಹವ (ಕುಮಾಕ. ೨೨-೩). ೨. ವಿಮಾನದಲ್ಲಿ ಪ್ರಯಾಣಮಾಡುವವನು ; ವಿಮಾನಸಂಚಾರಿ. ೩. ವಿಮಾನವನ್ನು ನಡೆಸುವವನು ; ಪೈಲಟ್ : ಮೊನ್ನೆ ಸಂಭವಿಸಿದ ವಿಮಾನಾಪಘಾತದಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ವೈಮಾನಿಕನೂ ಸೇರಿದಂತೆ ಪ್ರಯಾಣಿಕರೆಲ್ಲರೂ ಪಾರಾದರು (ಲೂಧಿ). ೪. ಗಾಳಿಯಲ್ಲಿ ತೇಲುವ ವಸ್ತು ; ಆಕಾಶಬುಟ್ಟಿ. ೫. [ಜೈನ] ವಿಮಾನದಲ್ಲಿ ನೆಲಸಿರುವವನು ; ಪುಣ್ಯವಂತರ ವಾಸಸ್ಥಳದಲ್ಲಿರುವವನು: ಯಥಾಕ್ರಮದಿಂ ಮೂವತ್ತೆರಡು ಲಕ್ಕೆಯುಮಿರ್ಪತ್ತೆಂಟು ಲಕ್ಕೆಯುಂ ವಿಮಾನಂಗಳಕ್ಕುಮಲ್ಲಿಯ ವೈಮಾನಿಕರೆಲ್ಲಂ ಸಪ್ತಹಸ್ತೋತ್ಸೇಧಶರೀರರ್ (ಸುಕುಮಾ. ೧೧-೬೧ ವ). [ಸಂ.]

ವೈಮಾಳಿಗೆ (ನಾ). ಒಂದು ಬಗೆಯ ಉತ್ಸವ : ಶ್ರೀರಂಗಪಟ್ಟಣದಲ್ಲಿ ವೈಮಾಳಿಗೆಯ ಉತ್ಸವವು ಆರಂಭವಾಗಿದ್ದಿತು (ಶ್ರೀರಾಯ. ೨೯೩). [?]

ವೈಮೇಯ (ನಾ). ಒಂದು ವಸ್ತುವನ್ನು ಕೊಟ್ಟು ಮತ್ತೊಂದನ್ನು ಪಡೆಯುವಿಕೆ ; ವಿನಿಮಯ : "ಪರಿವೃತ್ತಿಃ, ವಿನಿಮಯಃ, ವೈಮೇಯಃ — ಈ ೩ ಗೂಱುಡುಹಂ" (ಹಲಾಯು. ೯೪-೪೧೯). [ಸಂ.]

ವೈಯಕ್ತಿಕ (ಗು). ಒಂದು ವಸ್ತುವಿಗೆ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದ : ವೈಯಕ್ತಿಕ, ಸಾಂಸಾರಿಕ, ಸಾಮಾಜಿಕ ಮತ್ತು ರಾಜಕೀಯ ಜೀವನಗಳಲ್ಲೆಲ್ಲ ಧರ್ಮಾಚರಣೆಯ ಪ್ರಾಧಾನ್ಯವನ್ನುಪದೇಶಿಸಿದರು (ಋಸ್ಪಾರ. ೧೦೩ ಪೀಠಿಕೆ) ; ಒಂದಾನೊಂದು ಆತ್ಮವು ತನ್ನ ವೈಯಕ್ತಿಕ ವೈಶಿಷ್ಟ್ಯಗಳಿಂದ ಕೂಡಿ ಮಾತಾಪಿತೃಗಳ ಶರೀರವನ್ನು ಪ್ರವೇಶಿಸದಿದ್ದರೆ . . . ಜೀವೋತ್ಪತ್ತಿಯಾಗಲಾರದು (ಜೀವಾತ್ಮ. ೧೬೩). [ಸಂ.]

ವೈಯಕ್ತಿಕವಿಷಯ (ನಾ). ಸ್ವಂತವಿಷಯ ; ಖಾಸಗಿವಿಚಾರ : ಅವನ ವೈಯಕ್ತಿಕ ವಿಷಯದಲ್ಲಾಗಲೀ ಆಡಳಿತ ಕ್ಷೇತ್ರದಲ್ಲಾಗಲೀ ಯಾವೊಂದು ನಿರ್ದಿಷ್ಟವಾದ ಸೂತ್ರವನ್ನವಲಂಬಿಸಿರಲಿಲ್ಲ (ಪುನರು. ೩೩೩). [ಸಂ.]

ವೈಯರ್ಥ್ಯ (ನಾ). ವ್ಯರ್ಥತೆ ; ನಿಷ್ಪ್ರಯೋಜಕತೆ : "ಮೋಘತೆ ತಾಂ ವೈಯರ್ಥ್ಯಂ" (ವಸ್ತುಕೋ. ೧೧೫-೨೯) ; ಅವುಗಳ ಉಪಯೋಗವಿಲ್ಲ ಎಂದು ನಾನು ಹೇಳುವುದಿಲ್ಲ. ಅದರೊಳಗಿನ ರಾಗದ್ವೇಷಗಳ ವೈಯರ್ಥ್ಯವನ್ನು ಕುರಿತು ನಾನು ಹೇಳಿದೆನು (ಸಾಪಿವಿ. ೨೯). [ಸಂ.]

ವೈಯಾಕರಣ (ಗು). ೧. ವ್ಯಾಕರಣಕ್ಕೆ ಸಂಬಂಧಿಸಿದ. (ನಾ). ೨. ವ್ಯಾಕರಣ ಶಾಸ್ತ್ರವನ್ನು ಅಭ್ಯಾಸಮಾಡಿದವನು ; ವ್ಯಾಕರಣಪಂಡಿತ : ಇರು ಮರುಳ ಶುಷ್ಕವೈಯಾಕರಣಂಗಂ ಶುಷ್ಕತಾರ್ಕಿಗಂಗಂ . . . ವಿಷಯಮ ಕಾವ್ಯರತ್ನಮತಿ ಚತುರಕವಿಕದಂಬಕವಿಷಯಂ (ಆದಿಪು. ೧-೨೪) ; ವೈಯಾಕರಣನಂತೆ ಶಬ್ದಮನಾಲಿಸಿಯುಂ ಬೇಂಟೆಕಾಱನಂತೆ ಅಡಿವಜ್ಜೆಯನಱಸಿಯುಂ (ಗದಾಯು. ೬-೨೮ ವ); ದೊರೆಕೊಳ್ಳುದಱಿಳ ವೈಯಾಕರಣರಿನೊಂದೆಂಬುದರ್ಕೊರಂಬಾದೇಶಂ . . . ದೊರೆಕೊಳ್ಳುಮದಲ್ಲದಂದು ಕಾರಾಭಾವಂ (ಶಮದ. ೧೮೭). [ಸಂ.]

ವೈಯಾಕರಣೆ (ನಾ). = ವೈಯಾಕರಣ ೨ : ಬಳಿಕ ಕವಿಯೆಂದು ವೈಯಾಕರಣೆಯೆಂದು ವೆಗ್ಗಳಿಸಿ ದನಿಗೈವ ದುಷ್ಕವಿಯ ಗರ್ವದ ಮೂಗನಿಳುಹದಿರನು . . . ಹಂಪೆಯ ರಾಘವಂ (ಪಚಕಾ. ೧-೩೧) ; ಪ್ರಾಕೃತವೈಯಾಕರಣಿಗಳು ಕೂಡ, ದಾಕ್ಷಿಣಾತ್ಯಭಾಷೆಗಳ ಈ 'ಟಕಾರ'ಬಾಹುಲ್ಯವನ್ನೇ ಘೋಷಿಸುತ್ತಿದ್ದಾರೆ (ಭಾಷಾಶಾ. ೪೨). [< ಸಂ. ವೈಯಾಕರಣ]

ವೈಯಾಘ್ರ (ಗು). ೧. ಹುಲಿಗೆ ಸಂಬಂಧಪಟ್ಟ. ೨. ಹುಲಿಯ ಚರ್ಮವನ್ನು ಹೊದಿಸಿದ. (ನಾ). ೩. ಹುಲಿಯ ಚರ್ಮ. ೪. ಹುಲಿಯ ಚರ್ಮವನ್ನು ಹೊದಿಸಿದ ರಥ : "ದ್ವೈಪಃ, ವೈಯಾಘ್ರಃ - ೨ . . . ಹುಲಿಯ ತೊಗಲು ಹೊದಿಕೆಯುಳ್ಳ ರಥದ ಹೆಸರು" (ಸಿದ್ಧಾಂತಿ. ೨೫೨). [ಸಂ.]

ವೈಯಾಪೃತ್ಯ (ನಾ). ೧. (ಮಧ್ಯೆ ಪ್ರವೇಶಿಸದೆ) ಯಾರಿಗಾದರೂ ವಹಿಸಿಕೊಟ್ಟ ಕೆಲಸ , — ಕಾರ್ಯ. ೨. [ಜೈನ] ಅಂತರಂಗದಲ್ಲಿ ಆಚರಿಸುವ ಆರು ಬಗೆಯ ತಪಸ್ಸುಗಳಲ್ಲಿ ಒಂದು : ಅಭ್ಯಂತರತಪಷ್ಟಟ್ಕದೊಳಂ ಪ್ರಾಯಶ್ಚಿತ್ತ ವಿನಯವೈಯಾಪೃತ್ಯಸ್ವಾಧ್ಯಾಯಧ್ಯಾನವ್ಯುತ್ಸರ್ಗಂಗಳನೊಳಕೊಂಡು (ಆದಿಪು. ೬-೩೩ ವ); ಪ್ರಾಯಶ್ಚಿತ್ತ ವಿನಯವೈಯಾಪೃತ್ಯ ಸ್ವಾಧ್ಯಾಯ್ಯವ್ಯುತ್ಸರ್ಗಧ್ಯಾನಂಗಳೆಂಬ ಷಡ್ವಿಧಾಭ್ಯಂತರತಪದೊಳಂ ನೆಱೆದು (ಆಪುಪು. ೭-೮ ವ). [ಸಂ.]

ವೈಯಾಪೃತ್ಯಂಗೆಯ್ (ಕ್ರಿ). ಸೇವೆಯನ್ನು ಮಾಡು ; ಉಪಚರಿಸು : ವ್ಯಾಧಿಯ ಪ್ರಬಲತ್ವಮಂ ಕಂಡು ವೈಯಾಪೃತ್ಯಂಗೆಯ್ದುದರ್ಕಾದಮಾನುಪ[ಟ್ಟಿ]ಯೊಡೆಯನಾಗಿ ಪೂಡೆವಟ್ಟು (ವಡ್ಡಾರಾ. ೧೭೧-೧೭). [ವೈಯಾಪೃತ್ಯ + ಕೆಯ್.]

ವೈಯಾರ, ವಯ್ಯಾರ (ನಾ). ೧. ಬೆಡಗು ; ಬಿನ್ನಾಣ ; ಒನಪು : ನಗೆ ಮುಸುಕಿದ ವದನ ವೈಯಾರ ಮುಸುಕಿದ ವಲಪು . . . ಪ್ರೌಢಿ ಮುಸುಕಿದ ಕೂಟದಂಗನೆಯರೆಸೆದರ್ದರಾ ಪಣ್ಯವಾಟಿಯೊಳ್ (ಸಂದಿಮಾ. ೨೩-೪೧) ; ಆ ಚೈತ್ರವಾಹಿನಿ ಕಿರೀಟಿಯೆಡೆಗೈದಿದಳ್, ವರನೆಡೆಗೆ ವೈಯಾರದಿಂದೈದುವಂಗನೆಯ ಪಾಂಗಿನಿಂದಲ್ತು (ಚತ್ರಾಂಗ. ೨೩-೬೧೪). ೨. ಆಸೆ; ಪ್ರೀತಿ: ಭಕ್ತರು ಕ್ರೀವಿಡಿದು ಪದಾರ್ಥವ ಪರಿಯಾಣದಲ್ಲಿ ತಂದರೆ ಭಯಭಕ್ತಿಯಿಂದ ವೈಯಾರದಲಿ ಪ್ರಸಾದವ ಸಲಿಸುವುದೇ ಎನ್ನ ಕ್ರೀಗೆ ಸಂದಿತು (ಘನವ. ೧೮-೧೬). ವಯ್ಯಾರ: ೧. ಅವಳ ವಯ್ಯಾರಕ್ಕೆ ಬಲಿಬೀಳದವರು ಅಪರೂಪ (ಮಗ್ಗೆಮ. ೧೩); ತವಡು ತಿಂಬವಗೆ ವಯ್ಯಾರ ಯಾಕೆ ? (ಗಾದೆ). ೩. ಅಂದ; ಸೊಗಸು: ಅವಳ ಮುಂದೆ ತನ್ನ ಗಂಟಲ ಗೀತದ ವಯ್ಯಾರವನ್ನೂ . . . ತೋರಿಸಿದ್ದುಂಟು (ಸ್ವಪ್ನಹೂ. ೪). [< ಒಯ್ಯಾರ]

ವೈಯಾರಿ, ವಯ್ಯಾರಿ (ನಾ). ಬೆಡಗಿ ; ಬಿನ್ನಾಣಗಿತ್ತಿ : ನಿನಗೇನು ತಿಳಿಯುತ್ತದೆಯೇ ವೈಯಾರಿ! (ವಾಕ್ಸಲ್ಯ. ೩೦೯). ವಯ್ಯಾರಿ : ಎಂಟುಗಂಟೆಗೇ ಊಟಮಾಡಿ ಹೋಗಿದ್ದಳಲ್ಲ ನಿನ್ನ ಆ ವಯ್ಯಾರಿ (ಮೂಡುದಾ. ೩೪.). [< ಒಯ್ಯಾರಿ]

ವೈಯಾಳಿ 'ವೈಹಾಳಿ' ನೋ.

ವೈಯಾಳಿಗೈ (ಕ್ರಿ). ಕುದುರೆಸವಾರಿ ಮಾಡು : ಅತ್ತ ಫಣಿಸುತ ಸರಿವರೆಯ ನೃಪಮೊತ್ತಸಹ ವೈಯಾಳಿಗೈಯಲು ಉತ್ತಮಾಶ್ವವ ತನ್ನಿಮನ್ನುತ ಕಳುಹೆ ಸೇವಕರ (ನಾಗಪ. ೯-೩೦). [ವೈಯಾಳಿ (< ವೈಹಾಳಿ) + ಕೈ$_1$ (< ಕೆಯ್$_1$)]

ವೈರ (ನಾ). ೧. ಹಗೆತನ; ದ್ವೇಷ; ಶತ್ರುತ್ವ : ಆ ಮುನೀಂದ್ರನ ತಪಃಪ್ರಭಾವದೊಳನ್ಯೋನ್ಯ ವೈರಂಗಳಂ [ಪಾಠಾಂ. ವೈರ ವೈರಸ್ಯಂಗಳಂ, ವೈರಸ್ಯಂಗಳಂ] ಮಱೆದು ಕರಿಗಳಾ ಕೇಸರಿಗಳ್ಗೆ ಪುಷ್ಕರಧೃತಸ್ವಚ್ಛಾಂಬುವಂ ನೀಡೆ (ಆದಿಪು. ೯-೯೬ ವ) ; ಹರಿಯ ಹಿಸುಣಿಕೆಯವರ ಚಿತ್ತವ ಬೆರಸಿ ವೈರವ ಬೆಳಸಿ ಬಂದರು (ಕುವ್ಯಾಭೀ. ೧-೧೯) ; ಮಚ್ಚರಿಸುವ ಸವತಿಯರಿರ್ವರುಮೀ ಕೃತಿಗೇಳ್ ಬೇರ್ವರಿದಿರ್ಪ ವೈರದ ಬೇರ ಪರಿದಿಟ್ಟಿರ್ವರೊಂದನಿಸಿಯೊಪ್ಪುವರು (ಪರಿಪು ೧-೫೯). ೨. ಸೇಡು ; ಪ್ರತೀಕಾರ. ೩. ಹಗೆ; ವೈರಿ; ಶತ್ರು. ೪. ಶೌರ್ಯ; ಸಾಹಸ. [ಸಂ.]

ವೈರಂಗಿಕ (ಗು). ೧. ಅನಾದರಕ್ಕೆ ಪಾತ್ರವಾದ. ೨. ಪ್ರಾಪಂಚಿಕ ಸುಖಗಳಿಂದ ದೂರವಾದ. (ನಾ). ೩. ವಿರಾಗಿ ; ವಿರಕ್ತ : "ವೈರಂಗಿಕಃ, ವಿರಾಗರ್ಹಃ – ಈ ೨ ವಿರಕ್ತಂ" (ಹಲಾಯು. ೬೧-೨೧೪). [ಸಂ.]

ವೈರಂಭ (ನಾ). ನಾಲ್ಕು ಬಗೆಯ ಜೀವಸಂಬಂಧವಾಯುಗಳಲ್ಲಿ ಒಂದು : ವೈರಂಭ ಮುಖ್ಯ ಪ್ರಭಂಜನ ಅಂತರ್ಯಾಮಿ ಸೌಜ್ಞಯುಳ್ಳ ನಾಲ್ಕು ಜೀವಸಂಬಂಧಮಾದ ವಾಯುಗಳೇ ಮಾನಸಾದ್ಯಂತಃಕರಣಚೇಷ್ಟಾಕಾರಣಂಗಳಾಗಿರ್ಕುಂ(ವಿವೇಕ. ೩೪) ; ವೈರಂಭಾದಿ ವಾಯುವಿನ ವರ್ತನದಿಂದಲಹವಿದು ನಿಜವಕ್ಕು (ಪರಬೋ. ೨-೮-೩). [ಸಂ.]

ವೈರಂಭಣ (ನಾ). = ವೈರಂಭ : "ಮೇಲಕ್ಕೆ ಚಿಗಿವುದು ಪ್ರಭಂಜನಂ ತಿರಿಗಿಸುವ ಗಾಳಿ ವೈರಂಭಣಂ" (ಮಂಗರಾ. ೧೬-೧೩) ; ವೈಲ ವೈರಂಭಣ ಮುಖಪ್ರಭಂಜನ ಅಂತರ್ವಹವಾಯು ಭಾವದ ಚರಿತ್ರ (ಚನ್ನವ. ಕ. ೫೮೭-೧೩೧೪). [ಸಂ.]

ವೈರತ್ವ (ನಾ). ಹಗೆತನ ; ದ್ವೇಷ : ಇಷ್ಟು ವೈರತ್ವವುಳ್ಳ ನಮ್ಮ ಮಿತ್ರನದಾವನಿರಬೇಕು? (ಅಂಬಿಕೆ. ೨೫). [ಸಂ.]

ವೈರಬಂಧ (ನಾ). ಹಗೆ ; ಸೇಡು : ಸೈರಿಸುವುದೀ ಬಾಲಭಾವಗೆ ವೈರಬಂಧವ ಬಿಡುವದನುತಾಚಾರಿಯನ ರಥಹಯವ ಹೊದಿಸಿದನಸ್ತ್ರನಿಕರದಲಿ (ಕುವ್ಯಾಭೀ. ೮-೩೫). [ಸಂ.]

ವೈರಭಾವ (ನಾ). = ವೈರತ್ವ : ದಿನದಿನಂಪ್ರತಿ ವೈರಭಾವವನೆನಗೆ ಹುಟ್ಟಿಸಿ ಸಂಹರಿಸುವನು ಮುನಿಹೃದಾಂಬುಜವಾಸಗಿದು ನಿಜಲೀಲೆ (ಕೌಶಿಕಾ. ೨೩-೧೬). [ಸಂ.]

ವೈರಮುಡಿ 'ವಯಿರಮುಡಿ' ನೋ.

ವೈರವಡೆ (ಕ್ರಿ). ಹಗೆತನದಿಂದ ಕೂಡಿರು ; ದ್ವೇಷವನ್ನು ತಾಳು : ಒರೂರ್ವರ ಮುಡಿಗೋರೊರ್ವರ ಮುಡಿಯೋರೊರ್ವರ ತೊಡೆಗೋರೊರ್ವರ ತೊಡೆ ವೈರವಡೆದ ವಸ್ತುವಿನಿರವಂ ನೆಚ್ಚೆ ಪೋಲ್ತು ಸೂಗಯಿಸಿದುವು (ಜಯಿಕಾ. ೨-೪). [ವೈರ + ಪಡೆ$_1$]

ವೈರಶುದ್ಧಿ (ನಾ). ೧. ದ್ವೇಷವನ್ನು ನಿರ್ಮೂಲಮಾಡುವಿಕೆ ; ಹಗೆತನವನ್ನು ತೊರೆಯುವಿಕೆ. ೨. ಸಿಟ್ಟನ್ನು ತೀರಿಸಿಕೊಳ್ಳುವಿಕೆ ; ಸೇಡು ; ಪ್ರತೀಕಾರ: "ವೈರಶುದ್ಧಿಃ, ಪ್ರತೀಕಾರಃ, ವೈರನಿರ್ಯಾತನಂ – ೩ ಹಗೆ ತೀರಿಸಿಕೊಳ್ಳುವುದರ ಹೆಸರು" (ಸಿದ್ಧಾಂತಿ. ೨೭೧) ; ಈ ಹುಡುಗಿಗೆ ನೆಗಡಿ ತಪ್ಪದಂತೆ ಮಾಡಿ ಆಕೆ "ಅಯ್ಯೊ ನನ್ನ ಮೂಗೇ" ಎಂದು ಗೋಳಾಡುತ್ತಿದ್ದರೆ, ಅದು ನಿಜವಾದ ವೈರಶುದ್ಧಿಯಾದೀತೆಂದು ಇನ್ನೊಂದು ತಲೆ ಸೂಚಿಸಿತು (ವೇಕಸ್ಥ. ೧೮). [ಸಂ.]

ವೈರಸ್ಯ (ನಾ). ೧. ರಸವಿಲ್ಲದುದು ; ನಿಸ್ಸಾರವಾದುದು. ೨. ಸಮರಸವಿಲ್ಲದಿರುವಿಕೆ ; ವಿರಸ : ಆ ಮುನೀಂದ್ರನ ತಪಃಪ್ರಭಾವದೊಳನ್ಯೋನ್ಯ ವೈರಸ್ಯಂಗಳಂ [ಪಾಠಾಂ ವೈರಂಗಳಂ, ವೈರವೈರಸ್ಯಂಗಳಂ] ಮಱೆದು (ಆದಿಪು. ೯-೯೬ ವ) : ಈ ಪ್ರಕಾರ ಮದನಸಿಂಗನಿಗೂ ಕುಸುಮಾಕ್ಷಿಗೂ ವೈರಸ್ಯ ಹುಟ್ಟಿ ವೃದ್ಧಿಯಾಗುವ ಹಾಗಾಯಿತು (ಅದೃಷ್ಟ ೧೫೫). ೩. ನೋವು ; ವೇದನೆ : ನಿರ್ಭರ ಪ್ರಥಮಗರ್ಭಭಾರಪರಿಕ್ಲೇಶಾಯಾಸಿತ ಸ್ವಾಂತೆಯುಮಂಗವೈರಸ್ಯಾಕ್ರಾಂತೆಯುಮಾಗಿರ್ದ ವೈಶ್ಯಕಾಂತೆಯನೊರ್ವಳಂ ಕಂಡು (ಚಂದ್ರಪ್ರ. ೩-೭೬ ವ). [ಸಂ.]

ವೈರಾಂಗ (ನಾ). ಖಡ್ಗಯುದ್ಧದಲ್ಲಿಯ ಒಂದು ಪಟ್ಟು ; ಒಂದು ಬಗೆಯ ಕತ್ತಿವರಸೆ : ಹನ್ನೆರಡು ಪಟ್ಟಿನ ಮಧ್ಯದಲ್ಲಿ ಆವದಾನೊಂದು ಪಟ್ಟಿನಿಂದ ಅಂಗೈ ಶರೀರದಲ್ಲಿ ಘಾಯವನು ಹುಟ್ಟಿಸಿ ಆ ವೈರಿಯಿಂದ ಘಾಯವಿಲ್ಲದ ದೇಹವುಳ್ಳವನಾಗಿ ಆವವನ್ನು ಯತ್ನದಿಂದ ಆವಬಾನೊಂದು ಸಾಧನೆಯನು ಮಾಡುವನು ಅವನ ಸಾಧನೆಯು ವೈರಾಂಗವು ಎಂದು ತಿಳಿಯಲ್ಪಟ್ಟಿತು (ಖಡ್ಗಲಕ್ಷ. ೫-೭೪). [ಸಂ. ?]

ವೈರಾಗಿ (ನಾ). (ಸಾಮಾನ್ಯವಾಗಿ ವೈಷ್ಣವ) ಸಂನ್ಯಾಸಿ : "ವೈರಾಗಿಯೆಂದನೆ ವಿರಕ್ತನಕ್ಕು" (ಮಂಗರಾ. ೨೦-೧೫). [ಸಂ. ವೈರಾಗಿನ್]

ವೈರಾಗ್ಯ (ನಾ). ೧. ಪ್ರಪಂಚದ ಎಲ್ಲ ಬಗೆಯ ಆಸೆಗಳನ್ನೂ ತ್ಯಜಿಸುವಿಕೆ ; ಸರ್ವಸಂಗಪರಿತ್ಯಾಗ : ತತ್ವಂ ಮತಿಗೆ ವಿಮಲಮೇಕಾಂತವೈರಾಗ್ಯಮಸ್ಮತ್ಪ್ರಭು ಕೂಸಿಂದಿರ್ದನಿಲ್ಲ (ಶಾಂತಿಪು. ೧೦-೬೨) ; ಒಲ್ಲೆನೆಂಬುದು ವೈರಾಗ್ಯ ಒಲಿವೆನೆಂಬುದು ಕಾಯಗುಣ (ಬಸವ. ೭೭೪) ; ಭೀಷ್ಮನ ಹೃದಯದಲಿ ವೈರಾಗ್ಯ ಮನೆಗಟ್ಟಿತ್ತು ನಿಮಿಷದಲಿ (ಕುವ್ಯಾಭೀ. ೧೦-೨) ; ಹಸಿವು ತೃಷೆಯ ಸಹಿಸದವಗೆ ಹುಸಿಯಾದ ವೈರಾಗ್ಯವೇಕೆ (ಪುರಂದ. ೧-೩೧-೩). ೨. ಅತೃಪ್ತಿ ; ಅಸಮಾಧಾನ. ೩. ಹೇವರಿಕೆ ; ಜುಗುಪ್ಸೆ. ೪. ದುಃಖ. ೫. ಬಣ್ಣಗೆಡುವಿಕೆ. [ಸಂ.]

ವೈರಾಳ್ (ನಾ). ವೈರಿ ; ಶತ್ರು ; ಹಗೆ : ಬಾಗೆಯೂರ ಬಲ್ಲಹನೇಱಿನೊಳ್ಗಿಯಾನ್ ವೈರಾಳ್ ಸಮಪದರುಳ್ ಕೊಪ್ಪಳವೂರ ಬಾಳಿಯೊಳ್ಪೊನ್ನೆದಿಕ್ಕಿಜ್ಜಿಯ ತಮ್ಮುಳ್ ಪಡೆಯುಳೆಱಿದು ಸತ್ತನ್ (ಎಕ. XVI. ತುಮಕೂ. ೧೨೯೯ ; 9ನೆಯ ಶತ ?). [ವೈರ + ಆಳ್$_3$]

ವೈರಿ (ಗು). ೧. ಹಗೆತನವುಳ್ಳ ; ದ್ವೇಷದಿಂದ ಕೂಡಿದ. (ನಾ). ೨. ಹಗೆ ; ಶತ್ರು: ವೀರನಾದರ ವೈರಿಗಳು ಮೆಚ್ಚಬೇಕು ವ್ರತಿಯಾದರೆ ಅಂಗನೆಯರು ಮೆಚ್ಚಬೇಕು (ಬಸವ. ೬೭೧) ; ನಾವು ವೈರಿಗಳೆಂದು ಕೋಪಿಸುವ ಈ ಮರುಳುತನವೆತ್ತಲೀ ರಣತಾಮಸಿಕೆ ತಾವೆತ್ತಣದು (ಕುವ್ಯಾಭೀ. ೬-೪೦) ; ಚಣಚಣಕೆ ವೈರಿಯಂ ದಳಂ ಬಲಗುಂದು ತಳದುಳಿದು ಹಿಂಜರಿಯುತೋಡುತಿದೆ (ಚಿತ್ರಾಗ. ೮೩-೨೨೮೮).

ವೈರಿಕುಳಯಮದಂಡ = ಶತ್ರುಪಕ್ಷದವರಿಗೆ ಯಮನ ಗದೆಯಂತಿರುವವನು ; ಒಂದು ಬಿರುದು: ಶ್ರೀವಾವಣನೃಪತಿ ವೈರಿಕುಳಯಮದಣ್ಡಂ (ಸೌಣ್ಣ. XX, ೫೫-೨೩; 1082). **ವೈರಿನಿಃಕಂಟ** = ಶತ್ರುಗಳ ಉಪಟಳವನ್ನು ನಾಶಗೊಳಿಸುವವನು ; ಒಂದು ಬಿರುದು : ಸಮರಜಯಘಂಟಾರವಂ ಕಾದಂಬಕಣ್ಠೇರವ(ಂ)ಮಣ್ಣನ ಬಂಟಂ ವೈರಿನಿಃಕಂಟಂ ತೈಲನ ಸಿಂಘಂ (ಸೌಣ್ಣ. XX, ೪೦-೧೧; 1068). **ವೈರಿಬಂಗಾಱ, ವೈರಿಭಂಗಾಱ** = ಶತ್ರುಗಳಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ರೂಪಮನೋಜಂ ಪರಬಳಸೂಱೆಕಾಱಂ ವೈರಿಬಂಗಾಱಂ ನರಸಂಕಭೀಮಂ ಚಲದಂಕರಾಮಂ (ಸೌಣ್ಣ. XX, ೧೮-೯ ; 980) ; ರಾಯರಾಯ ಪುರಸೂಱೆಕಾಱ ವೈರಿಭಂಗಾಱ ವೀರನಾರಾಯಣ (ಎಕ. II. ೧೪೩-೪೧ ; 1131). **ವೈರಿಬಳಮಲ್ಲ** = ಶತ್ರುಪಡೆಗೆ ಮಲ್ಲನಂತಿರುವವನು ; ಮಹಾಶೂರ ; ಒಂದು ಬಿರುದು : ವೈರಿಬಳಮಲ್ಲಂ ಗಡಿಯಜ್ಜಮಲ್ಲಂ ಮಾರಸಿಙ್ಗನ ನನ್ದನಂ (ಎಕ. III (R). ಹಗ್ಗಡೆ. ೧೧೪-೫ ; 1087). **ವೈರಿಭಯದಾಯಕ** = ಶತ್ರುಗಳಿಗೆ ಭಯವನ್ನುಂಟುಮಾಡುವವನು ; ಒಂದು ಬಿರುದು : ಮಹಾಸಂಧಿವಿಗ್ರಹಾಧಿಪತಿ ಮಹಾಪ್ರಚಣ್ಡದಣ್ಡನಾಯಕಂ ವೈರಿಭಯದಾಯಕಂ ಸಾಹಿತ್ಯವಿದ್ಯಾವಿತರ್ಕಂ (ಕಾಅ. ೧-೧-೧ ; 1092). **ವೈರಿಭೇರುಂಡ** = ಶತ್ರುಗಳಿಗೆ ಭೇರುಂಡಪಕ್ಷಿಯಂತಿರುವವನು ; ಒಂದು ಬಿರುದು : ಗಣ್ಡರ ಗಣ್ಡಂ ವೈರಿಭೇರುಣ್ಡಂ ಪ್ರತಿಪನ್ನಮಂದರಂ ಶರಣಾಗತವಜ್ರಪಂಜರಂ ಶ್ರೀಮತ್ ಶಾನ್ತಿವರ್ಮ್ಮರಸರ ವಂಶಾವತಾರಮೆಂತೆಂದೊಡೆ (ಸೌಣ್ಣ. XX, ೧೮-೯; 980). **ವೈರಿಮದಭಂಜನ** = ಶತ್ರುಗಳ ಸೊಕ್ಕನ್ನು ಅಡಗಿಸುವವನು ; ಒಂದು ಬಿರುದು : ಸರಣಾಗತ ವಜ್ರಪಂಜರಂ ವೈರಿಮದಭಂಜನಂ ಬಿರುದಗುರ್ವ್ವನುಂ . . . ಶ್ರೀಮನ್ಮಹಾಮಣ್ಡಲೇಶ್ವರಂ ಕೀರ್ತ್ತಿವರ್ಮದೇವರ್ (ಸೌಣ್ಣ. XX, ೪೦-೧೨; 1068). **ವೈರಿಮನ್ನೆಯ** = ಶತ್ರುಗಳಿಂದ ಮನ್ನಣೆಯನ್ನು ಪಡೆದವನು ; ಒಂದು ಬಿರುದು : ಕಾಮಿನೀಕಾಮಂ ಮಣಲೆರ ಭೀಮಂ ವೈರಿಮನ್ನೆಯರ ಪಾಷ[ಣ್ಡ] ವೀರ ಮುರಾರಿ (ಸೌಣ್ಣ. XX, ೩೮ ೭ ; 1058). **ವೈರಿಸಂತಾಪ** = ಶತ್ರುಗಳಲ್ಲಿ ತಾಪವನ್ನುಂಟು ಮಾಡುವವನು ; ಒಂದು ಬಿರುದು : ಉಭಯಬಳಸುಭಟ ಕೀರ್ತ್ತಿತಪ್ರತಾಪಂ ವೈರಿಸಂತಾಪಂ (ಸೌಣ್ಣ. XX, ೪೬ ೫೯ ; 1072). **ವೈರಿಭಕಂಠೀರವ** = ಶತ್ರುವೆಂಬ ಆನೆಗೆ ಸಿಂಹದಂತಿರುವವನು ; ಒಂದು ಬಿರುದು:

ವೈರೀಭಕಣ್ಠೀರವ(ಮ) ಮಕರ ರಾಜ್ಯ ನಿರ್ಮೂಲಕ . . . ಶ್ರೀವಿಷ್ಣುವರ್ಧನಹೊಯ್ಸಳ (ಎಕ. III (R). ನಂಜನ. ೩೨೧-೭ ; 1022). [ಸಂ. ವೈರಿನ್]

ವೈರಿಂಚಾಸ್ತ್ರ (ನಾ). ಬ್ರಹ್ಮನು ಅಧಿದೇವತೆಯಾಗಿರುವ ಮಂತ್ರಾಸ್ತ್ರ; ಬ್ರಹ್ಮಾಸ್ತ್ರ : ಆಯುವಂತನೆ ಕೇಳು ಮಿಕ್ಕಿನ ಸಾಯಕದಲಿವನೆಳಯ ದೈತ್ಯನಿಕಾಯಕ ವಚವಿಭೇದಿ ವೈರಿಂಚಾಸ್ತ್ರ ಹೂಡು (ಕಾಶಿರಾ. ೨೭-೫೦). [ಸಂ.]

ವೈರಿಕ್ಷೋಣಿಪ (ನಾ). ಪ್ರತಿಪಕ್ಷದ ದೊರೆ ; ಶತ್ರುರಾಜ : ಹೂಣ ಹೊಕ್ಕನು ಹಿಡಿದು ವೈರಿಕ್ಷೋಣಿಪನ ತಲುಬಿದನು ನಾವಕ್ಷೀಣದುರಿತರು ಹಲುಬಿ ಮಾಡುವು ದಾವುದು (ಕುವಾದ್ರೋ. ೪-೬). [ಸಂ.]

ವೈರಿಣಿ (ನಾ). ಹಗೆತನವುಳ್ಳವಳು ; ಶತ್ರುತ್ವವಿರುವವಳು : ಕ್ಷುದ್ರಬುದ್ಧಿಯ ಕೈಕೇಯಿಯು ತನ್ನ ವೈರಿಣಿಯನ್ನು ಹಿತಕರ್ತವ್ಯವಾಗಿ ಭಾವಿಸಿದಳು (ತುಳಿಭಾ. ೧೦೮). [ಸಂ. ವೈರಿನೀ]

ವೈರಿದೂತ (ನಾ). ಶತ್ರುಪಕ್ಷದ ದೂತ ; ವೈರಿಯ ಕಡೆಯಿಂದ ಬಂದ ಆಳು: ವೈರಿದೂತನ ಕಳುಹಿದನು ಕೈವಾರಿಗಳು ಜಯಜಯಯೆನಲು ಹೊಂದೇರ ತರಿಸಿದನಬುಜ ನಾಭನ ಪದಯುಗಕೆ ನಮಿಸಿ (ಕುವಾಭೀ. ೧-೬೨). [ಸಂ.]

ವೈರಿನಾಯಕವಾಡಿ (ನಾ). ವೈರಿಗಳ ದಳಪತಿ ; ಶತ್ರುಸೇನಾಪತಿ : ಬೇಡ ಮಗನೇ ವೈರಿನಾಯಕವಾಡಿಗಳು ವೆಗ್ಗಳರು . . . ನಿನಗೆಯಸದಳವು (ಕುವಾದ್ರೋ. ೦೫೩ ಪರಿ. ೨೭೭). [ವೈರಿ + ನಾಯಕವಾಡಿ]

ವೈರಿಪದ (ನಾ). ಅರಿಸಮಾಸ ; ವಿರುದ್ಧಸಮಾಸ : ವೈರಿಪದವಪಶಬ್ದವ ಚಮತ್ಕಾರವಧಮೋಪಮೆ ನಿಯತಿಪದಪೂರಕಂ . . . ಕ್ರಿಯಾಳಂಕಾರಹೀನವೆನಿಪ್ಪ ಪೊಳ್ಕಂ ತೂಜಿ ಕಳೆದು . . . ರಚಿಸುವೆಂ ಕೃತಿಯ (ಬಾಪು. ೧-೧೪). [ಸಂ.]

ವೈರಿಬಲ (ನಾ). ಹಗೆಗಳ ಪಡೆ ; ಶತ್ರುಸೈನ್ಯ : ದೆಸೆದೆಸೆಗೋಡಿದನ್ಯಕರಿ ದಿಕ್ಕರಿಯಾದುದರಾತಿಭೂಭುಜಪ್ರಸರಮ ದಿಕ್ಪತಿಪ್ರಸರಮಾದುದು ವೈರಿಬಲಂ (ಗದಾಯು. ೧-೫೩); ಓಸರಣಗೊಡದತಿಬಳರು ದಿವದಾಸೆಗಾಱರು ವೈರಿಬಲವನು ಘಾಸಿಮಾಡಿದ ರೊಗ್ಗಿನಲಿ ಹಮ್ಮಿರರಾವುತರು (ಕುವಾಭೀ. ೪-೬೨). [ಸಂ.]

ವೈರೂಪ್ಯ (ನಾ). ವಿರೂಪ ; ವಿಕಾರ : ಅನಿಬರುಂ ವೈರೂಪ್ಯಮಂ ಕಂಡು, ಕಿನಿಸಿ, ಮುನಿದಕ್ಷಿಯಿಂ ಪಳಿದು ಮುನ್ ನಡೆಯೆ, ಮಂಥರೆ ಸಾರ್ದಳೊಯ್ಯನೆಯ ಸಂಭ್ರಮಂ ತುಳುಕಿರ್ದ ಕಲ್ಯಾಣಮಂಟಪಕೆ (ಶ್ರೀರಾಮಾ. ೭೦-೧೬೬) ; ಅವಳ ದೃಷ್ಟಿಯಲ್ಲಿ ಮಗಳಿಗೆ ಮಾತು ಬಾರದಿದ್ದದ್ದು ಒಂದು ವೈರೂಪ್ಯ, ಅಪರಾಧ (ವಿಳಜೀ. ೩೯). [ಸಂ.]

ವೈರೋಚನ (ಗು). ೧. ಸೂರ್ಯನಿಗೆ ಸಂಬಂಧಪಟ್ಟ. (ನಾ). ೨. ಸೂರ್ಯನ ಮಗ. ೩. ವಿರೋಚನನ ಮಗ ; ಬಲಿ. ೪. ಅಗ್ನಿಯ ಮಗ. ೫. ಒಬ್ಬ ಮುನಿಯ ಹೆಸರು. ೬. [ಜೈನ] ಭವನವಾಸಿ ದೇವತೆಗಳಲ್ಲಿ ಒಬ್ಬ : ಚಮರ ವೈರೋಚನಪ್ರಮುಖರಪ್ಪ ಭವನಾಮರರುಮಂ . . . ನಿರವಿಸಿ (ಚಂದ್ರಪ್ರ. ೧೨-೧೧೩ ವ); ಓರೊಂದು ಕುಲದೊಳಿರ್ವರಿರ್ವರ್ಚಮರ ವೈರೋಚನಾದಿಗಳಿಂದ್ರರಪ್ಪರ್ (ರತ್ನಕ. ೨-೯ ವ). ೭. [ಬೌದ್ಧ] ಒಬ್ಬ ದೇವತೆ : ವೈರೋಚನ, ರತ್ನಸಂಭವ, ಅಮಿತಾಭ, ಅಮೋಘಸಿದ್ಧಿ, ಅಕ್ಷೋಭ್ಯ -ಈ ಐವರಿಗೂ ಕ್ರಮವಾಗಿ ವಜ್ರಧಾತೇಶ್ವರಿ . . . ತಾರಾ ಎಂಬ ಐವರು ಶಕ್ತಿದೇವತೆಗಳುಂಟು (ಕಾಶಿ. ೧೨೦). [ಸಂ.]

ವೈರೋಚನಿ (ನಾ). ೧. ಸೂರ್ಯನ ಮಗ. ೨. ವಿರೋಚನನ ಮಗ ; ಬಲಿ: ತನಗಹಂಕೃತಿಯಿಲ್ಲ ವೈರೋಚನಿಯ ಪಡಿಹಾಱಿಕೆ ಕಿರೀಟಿಯ ಮನೆಯ ಬಂಡಿಯ ಬೋವನಾದನು ವೀರನಾರಯಣ (ಕುವಾಭಾ. ೧-೪೫) ; ಸಮಯವರಿತು ವೈರೋಚನಿಯು ಧಾಳಿಟ್ಟಮರಪುರವನೊಳಗೈದನು (ಸಮುದ್ರ. ೪-೫). ೩. ಬುದ್ಧ. [ಸಂ.]

ವೈರ್ಮುಡಿ 'ವಯಿರಮುಡಿ' ನೋ.

ವೈಲ್$_1$ 'ವಹಿಲ' ನೋ.

ವೈಲ್$_2$ (ನಾ). ಒಂದು ಬಗೆಯ ವಾಯು : ಗಮನದ ಭಾವದಜೀವ ತ್ರಿವಿಧ ವೈಲ ವೈರಂಭಣ ಮುಖಪ್ರಭಂಜನ ಅಂತರ್ವಹವಾಯುಭಾವದ ಚರಿತ್ರ (ಚನ್ನವ. ೪. ೫೮೭-೧೩೧೪). [?]

ವೈಲಕ್ಷಣ (ನಾ). ಹೊಸತನ ; ನವೀನತೆ : ಕೂರ್ಮಯಿಡು ವೈಲಕ್ಷಣದ ಪರಿಯಂ ಮನದಲಿ (ಗುಗಾ. ೧೩-೩೨) ; ಬಾಳು ಬಯಲಂತಿರಲು ಮನೆಯಚ್ಚುಕಟ್ಟಿಂಬು ವೈಲಕ್ಷಣದೆ ಚೆಂದ (ಮಂಜುಕ. ೪೫೧). [ಸಂ.]

ವೈಲಕ್ಷಣ್ಯ (ನಾ). ೧. ವಿಲಕ್ಷಣತೆ ; ವಿಚಿತ್ರತೆ. ೨. ವ್ಯತ್ಯಾಸ ; ಭಿನ್ನತೆ : ಚಿನ್ನದಲ್ಲಿ ಕಡಗವು ಅನಭವ್ಯಕ್ತರೂಪದಲ್ಲಿರುವಾಗ ಯಾವ ತೂಕವೋ ಅದೇ ತೂಕವು ಅಭವ್ಯಕ್ತವಾದಾಗಲೂ ಇರುವದು. ಹೊಸದಾಗಿ ಕಡಗವು ಹುಟ್ಟದರೆ ಇಮ್ಮಡಿಯಾದ ತೂಕವಾಗಲೀ ಎಂದು ದೂಷಿಸಬಹುದು. ಕಡಗವಾದಾಗ ಅಭವ್ಯಕ್ತಿ, ಹಿಂದೆ ಅನಭವ್ಯಕ್ತಿ (ಮರೆಯಾಗಿರುವಿಕೆ), ಇಷ್ಟೇ ವೈಲಕ್ಷಣ್ಯ (ಭಾರದ. ೨೩೧) ; ಎಲ್ಲ ಪ್ರಾಂತದವರಿಗೂ ಸಾಮಾನ್ಯವಾದ ಗ್ರಂಥರಾಶಿಯೂ ಇಲ್ಲದೆ ಹೋದ ಪಕ್ಷದಲ್ಲಿ ಪ್ರಾಂತವೈಲಕ್ಷಣ್ಯಗಳು ಬೆಳೆದು ಒಂದು ಪ್ರಾಂತದ ಜನರ ಭಾಷೆ ಕೆಲವು ಕಾಲಾನಂತರ ಮತ್ತೊಂದು ಪ್ರಾಂತದವರಿಗೆ ಅರ್ಥವಾಗದಂತಾಗಬಹುದು (ಕೃಪಡಿ. ೩೦೨). ೩. ಹೊಸತನ ; ನವೀನತೆ : ಒಂದು ಕೃತಿ ಕಲಾಕೃತಿ ಎನಿಸಿಕೊಳ್ಳಬೇಕಾದರೆ ಅದಕ್ಕೆ ಅನಿವಾರ್ಯವಾದ ಒಂದು ವಿಶೇಷತೆಯಿರಬೇಕು. ಯಾವ ಅಂತಹ ಒಂದು ವೈಲಕ್ಷಣ್ಯವಿರದಿದ್ದರೆ ಅದು ಕಲಾಕೃತಿ ಎನಿಸಿಕೊಳ್ಳಲಾರದು (ಸೌಂದ. ೭೫). ೪. ವಿಶೇಷವಾದ ಲಕ್ಷಣ : ಸಂಸ್ಕೃತ ನಾಟಕಗಳಲ್ಲಿ ಸಂಸ್ಕೃತಭಾಷೆಯ ಜೊತೆಗೆ ಹಲವು ವಿಧವಾದ ಪ್ರಾಕೃತಭಾಷೆಗಳೂ ಬರುತ್ತವೆ. ಈ ಅಂಶವು ಸಂಸ್ಕೃತನಾಟಕದ ಒಂದು ವೈಲಕ್ಷಣ್ಯ (ಸಂನಾಟ. ೨೧). [ಸಂ.]

ವೈವಟ್ಟು 'ವಹಿವಾಟು' ನೋ.

ವೈವಧಿಕ (ನಾ). ೧. ಹೊರೆಯನ್ನು ಹೊತ್ತು, ತಿರುಗಿ ಮಾರಾಟಮಾಡುವವನು ; ಕೋರಿಶೆಟ್ಟಿ. ೨. ಕಾವಡಿಯಲ್ಲಿ ಭಾರ ಹೊರುವವನು : ಸಿವಿಗೆಯಂ ಭುವನತ್ರಯನಾಥನೇಱಿದಂ . . . ಉರಗವ್ಯಂದಾರಕರುಂ ಸುರವ್ಯಂದಾರಕರುಂ ತರತರದಿಂ ವೈವಧಿಕರುಯ್ಯ ತೆಱದಿಂದುಯ್ದರ್ (ಮಲ್ಲಿಪು. ೧೩-೧೭೩). [ಸಂ.]

ವೈವರ್ಣ್ಯ (ನಾ). ೧. ಬಣ್ಣ ಬದಲಾಗುವುದು : ಸ್ವೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಮಶ್ರೂದ್ಭೇದಂ ಸ್ತಂಭಂ ಲಯಮೆಂದಾದುವಿವೆಂಟು ರಸಕ್ಕೆ ಸಾತ್ವಿಕಭಾವಂ (ಕಾವ್ಯಾವ. ೭೯). ೨. ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಬದಲಾಗುವಿಕೆ. ೩. ವ್ಯತ್ಯಾಸ ; ಭಿನ್ನತೆ. ೪. ಭಿನ್ನಭಿನ್ನ ಅಂಶಗಳಿಂದ ಕೂಡಿರುವಿಕೆ ; ವಿವಿಧತೆ. [ಸಂ.]

ವೈವರ್ತ (ನಾ). ರೂಪಪರಿವರ್ತನೆ : ಅಬಲಬ್ರಹ್ಮದಲ್ಲಿ ಸಬಲಬ್ರಹ್ಮ ನೆರೆ ಬೆರೆತು ಒಂದುಗೂಡಿ ಪರಮಾತ್ಮನಲ್ಲಿ ವೈವರ್ತವಾಗಿ ಪರಿಣಮಿಸಿ ವಿಶ್ವಮೋಡಿ (ಅರಳು. ೧೦೪-೧೪). [ಸಂ.]

ವೈವಸ್ವತ (ನಾ). ೧. ಸೂರ್ಯನ ಮಗ. ೨. ಯಮ : ಸಮದಾರಾತಿಮರಾಳ ನೀರದರವಂ ಸಂಕ್ರುದ್ಧವೈವಸ್ವತೋಪಮವಿದ್ಧಿಷ್ಣಭೀಂದ್ರಚಂದ್ರಕಿರವಂ . . . ತಾನೆಂಬಿನಂ ವ್ಯೋಮಭಾಗಮನೆಯ್ದಿರ್ದುದು ಚಕ್ರವರ್ತಿವಿಜಯಪ್ರಸ್ಥಾನಭೇರೀರವಂ (ಆದಿಪು. ೧೧-೧೦) ; ಗತಿಗೆಡಿಸಿಕೊಂಡೊಯ್ದು ವೈವಸ್ವತನು ನಾಯಕನರಕದೊಳಗದ್ದುತ ಬಹನು ಕುಲಕೋಟಿಸಹಿತ (ಕುವಾಳಾ. ೪-೭೬). ೩. ಸದ್ಯದಲ್ಲಿ ನಡೆಯುತ್ತಿರುವ ಏಳನೆಯ ಮನ್ವಂತರ. ೪. ಸದ್ಯದ ಯುಗಪುರುಷನಾದ ಏಳನೆಯ ಮನು : ಪೂರ್ವದಲ್ಲಿ ಸ್ವಯಂಭು . . . ವೈವಸ್ವತ . . . ಬ್ರಹ್ಮಸಾವರ್ಣಿತರೆಂಬ ಹದಿನಾಲ್ಕು ಮನುಗಳೊಳಗೆ (ಎವಜೀ. ೧೭೩). ೫. ನವಗ್ರಹಗಳಲ್ಲಿ ಒಂದು ; ಶನಿ. ೬. ಅಗ್ನಿಯ ಹೆಸರುಗಳಲ್ಲಿ ಒಂದು. ೭. ಏಕಾದಶರುದ್ರರಲ್ಲಿ ಒಬ್ಬ. [ಸಂ.]

ವೈವಸ್ವತಾನ್ವಯ (ನಾ). ಮನುವಂಶಕ್ಕೆ ಸೇರಿದವನು ; ರಾಮ : ಕಾಣಿಕೆಯ ಕೈಕೊಂಡು ಶಬರಶ್ರೇಣಿಯನು ವಿನ್ನಿಸಿದನುಚಿತದ ವಾಣಿಯಲಿ ವೈವಸ್ವತಾ [ಪಾಠಾಂ. ಹರಿದಶ್ವನ]ನ್ವಯನಾ ಪುಳಿಂದಕರ (ತೊರಾ. ೩-೩-೫). [ಸಂ.]

ವೈವಾಟ 'ವಹಿವಾಟು' ನೋ.

ವೈವಾಟಿ 'ವಹಿವಾಟು' ನೋ.

ವೈವಾಟು 'ವಹಿವಾಟು' ನೋ.

ವೈವಾದ (ನಾ). ಭಿನ್ನತೆ ; ವ್ಯತ್ಯಾಸ : "ವೈವಾದಮೆ ಭಿನ್ನ" (ಭಾರಾ. ೧೦). [ಸಂ.]

ವೈವಾಹ (ಗು). ೧. ವಿವಾಹಕ್ಕೆ ಸಂಬಂಧಿಸಿದ ; ಮದುವೆಗೆ ಸಂಬಂಧಪಟ್ಟ. (ನಾ). ೨. ಮದುವೆ ; ಲಗ್ನ : ವೈವಾಹಮಂಗಳಮಂ ಮಾಡಿದನಬ್ಜಜಿಂದವರ್ಗೆ

ಸತ್ರಾಜನ್ಮಹೀಪಾಲಕಂ (ಜಗವಿ. ೧೧-೫೩) ; ಚೋಳಭೂಪಾಲಕನು ಹರುಸದಿಂದಪ್ಪಿ ಪಟ್ಟದ ಭದ್ರಗಜದೆ ಮೇಲಿರಿಸಿ ಸೌಂದರನ ತುಂಬುರು ಮಂತ್ರಿಸಹಿತ ವೈವಾಹಕ್ಕೆ ತೆರಳಿಸಿದನು (ಸೌಂದಪು. ೪-೨೫). [ಸಂ.]

ವೈವಾಹಗ್ಯೆ (ಕ್ರಿ). ಮದುವೆ ಮಾಡು ; ಲಗ್ನ ಮಾಡು : ಮಕ್ಕುತೆಯ ಭವದೀಯ ತನುಜಗಂ ಮುದದಿಂದ ವೈವಾಹಗ್ಯೆದೀವೆ ಹರನೆಡೆಯಲಿದು ಸಿದ್ದ (ವಂಕಾರಾ. ೧-೨೦-೧೧). [ವೈವಾಹ + ಕ್ಯೆ$_1$ (< ಕೆಯ್$_1$)]

ವೈವಾಹಮಂಟಪ (ನಾ). ವಿವಾಹಕ್ಕೆಂದು ಸಿದ್ಧಪಡಿಸಿದ ವೇದಿಕೆ; ಲಗ್ನಮಂಟಪ : ಜನಕನೃಪ ಪರಿಪರಿಯಲಂಕಾರಗ್ಯೆಸಿದಂ ವೈವಾಹಮಂಟಪವನತಿ ವಿಭವದಿ (ವಂಕಾರಾ. ೮-೨೧ ಸೂಚನೆ); ವೈವಾಹಮಂಟಪಸ್ಮರಣೆಯಂ ಬಗೆಗೊಳಿಸುವೀ ಮನೋಹರ ಚಿತ್ರದೃಶ್ಯವುಂ ನೋಳ್ಪನಗೆ ಬಾಳನುರಿ ನೂರ್ಮಡಿಸುತಿದೆ (ಶ್ರೀರಾಮಾ. ೨೪೬-೩೬). [ವೈವಾಹ + ಮಂಟಪ]

ವೈವಾಹವೇದಿಕೆ (ನಾ). = ವೈವಾಹಮಂಟಪ : ಅಲ್ಲಿ ಊರಗಲದೊಳು ಮಂಟಪವನೊಲಿದಿಕ್ಕಿ ಸಲ್ಲೀಲೆಯಿಂದ ವೈವಾಹವೇದಿಕೆಯಂ[ಪಾಕಾಂ. ವಿವಾಹದ ವೈದಿಕೆಯನಿ]ಕ್ಕಿ (ಸಂಬರ. ೫-೨೬) ;ಯುವತಿಯರಲಂಕಾರಗ್ಯೆದರಾ ವೈವಾಹವೇದಿಕಾಂತರವ ಪ್ರಿಯದಿ (ವಂಕಾರಾ. ೧-೨೧-೨೦). [ಸಂ. ವೈವಾಹವೇದಿಕಾ]

ವೈವಾಹಿಕ (ಗು). ೧. ಲಗ್ನಕ್ಕೆ ಸಂಬಂಧಿಸಿದ ; ಮದುವೆಗೆ ಸಂಬಂಧಪಟ್ಟ. (ನಾ). ೨. ಮದುವೆ ; ಲಗ್ನ : ಚಕ್ರಿ ತಕ್ಕೆಡೆಗಳೊಳ್ ವೈವಾಹಿಕಂ ಕೂಡಿ ಬರ್ಪುದನಾವೇಕ್ಷಿಸುತುಂ (ಶಾಂತಿಪು. ೨-೭೮) ; ಗೌರಿಯರು ಗಿರಿರಾಜನರಸಿಯ ಚಾರುಗರ್ಭದೊಳವತರಿಸಿ ಮದನಾರಿಯನು ಸಾರಿದಳು ವೈವಾಹಿಕಮಹೋತ್ಸವದೀ (ಯಗಿಕ. ೧೯). ೩. ವಿವಾಹಕಾರ್ಯಕ್ಕೆ ಉಪಯೋಗಿಸುವ ವಸ್ತು. ೪. ಮದುವೆಯ ಸಿದ್ಧತೆ. [ಸಂ.]

ವೈವಾಹಿಕಜೀವನ (ನಾ). ಮದುವೆಯಾದ ನಂತರದ ಜೀವನ ; ದಾಂಪತ್ಯ : ಆನಂದ ಮೋಹಿನಿಯರ ವೈವಾಹಿಕಜೀವನದ ಬಗೆಯಲ್ಲಿ ಎಷ್ಟೋ ಹಾರುಮಾತುಗಳನ್ನು ವಸಂತ ಕೇಳಿದ್ದ (ಕಮನ. ೪) ;ವೈವಾಹಿಕಜೀವನದ ಸಮರಸತೆ ಹಾಗು ಸಮನ್ವಯಗಳಿಗೆ . . . ಪರಿಶುದ್ಧಕಾಮನು ಬೇಕೇ ಬೇಕು (ಸಾಪಿಸ. ೧೪೩). [ಸಂ.]

ವೈವಾಹಿಕಸಂಬಂಧ (ನಾ). ಮದುವೆಯಿಂದಾದ ಪರಸ್ಪರ ನಂಟು, –ಬಾಂಧವ್ಯ : ನಿಮಗಂ ಅವಗಂ ವೈವಾಹಿಕಸಂಬಂಧಂ ಪರಂಪರೆಯಿಂ ಬಂದುದು (ಚಾವುಂಪು. ೧೫೩). [ಸಂ.]

ವೈವಿಧ್ಯ (ನಾ). ೧. ವಿವಿಧತೆ ; ನಾನಾಪ್ರಕಾರ : ಹೆಂಗಸರ ಕೇಶವಿಧಾನಗಳಲ್ಲಿ ಬಹಳ ವೈವಿಧ್ಯವಿದೆ (ಭಾರಪ್ರ. ೧೩). ೨. ವ್ಯತ್ಯಾಸ :ಭಾರತದಲ್ಲಿ ಶಿಕ್ಷಣ ರಾಜ್ಯಸರ್ಕಾರಗಳ ಹೊಣೆಗಾರಿಕೆ. ಆದ್ದರಿಂದ ಶಿಕ್ಷಣದಲ್ಲಿ ವೈವಿಧ್ಯಕ್ಕೆ ಅವಕಾಶವಿದೆ (ಶಿಕ್ಷಪ್ರ. ೭೭೩). [ಸಂ.]

ವೈವಿಧ್ಯತೆ (ನಾ). ೧. = ವೈವಿಧ್ಯ ೧ : ದಿವ್ಯರೂಪಗಳ ಸಾಕಾರಸ್ವರೂಪವು ಪ್ರಬಲವಾದುದರಿಂದಲೂ ಮತ್ತು ದೇವತೆಗಳ ಕಾರ್ಯಭಾರದ ವೈವಿಧ್ಯತೆಯು ಹೆಚ್ಚಿದುದರಿಂದಲೂ, ದೇವತ್ವದಲ್ಲಿ ಹೆಚ್ಚು ಸ್ಪಷ್ಟತೆಯಿದೆ (ತತ್ಪಶ್ರಾ. ೨೪) ;ವೈವಿಧ್ಯತೆಯ ದೃಷ್ಟಿಯಿಂದ ವಿಚಾರ ಮಾಡಿದರೆ . . . "ರಾಮಚಂದ್ರಚರಿತಪುರಾಣವು ಸಾವಿರಕಂಬದ ಬಸದಿಯನ್ನು ಕಟ್ಟಿದಂತೆ" (ಸಾಪಿಸ. ೯೦). ೨. ವಿಶೇಷತೆಯಿಂದ ಕೂಡಿದುದು : ಜೋಡಿಸಿದ ಮೊಳೆಗಳಲ್ಲಿ ಬರುವ ದೋಷಗಳನ್ನು ನಿವಾರಿಸುವುದು ಒಂದು ವೈವಿಧ್ಯತೆಯ ಕೆಲಸ (ಮುದ್ರಕ. ೩೧). [ಸಂ. ವೈವಿಧ್ಯತಾ]

ವೈಶಂಪಾಯನ (ನಾ). ೧. ವೇದವ್ಯಾಸಋಷಿಯ ಶಿಷ್ಯರಲ್ಲಿ ಪ್ರಸಿದ್ಧನಾದವನೂ ಮಹಾಭಾರತವನ್ನು ಜನಮೇಜಯರಾಯನಿಗೆ ಹೇಳಿದವನೂ ಆದ ಒಬ್ಬ ಪ್ರಸಿದ್ಧ ಋಷಿ : ರಾಯಜನಮೇಜಯಗೆ ವೈಶಂಪಾಯನನು ಹೇಳಿದನು ಮುನಿದ್ವೈಪಾಯನಭವರ್ನಿಸಿದ ಭಾರತವರಕಥಾಮೃತವ (ಕುವ್ಯಾಆ. ೨ ಸೂಚನೆ) ; ಶ್ರೀ ವ್ಯಾಸಮಹರ್ಷಿಗಳು ತಮ್ಮ ಶಿಷ್ಯನಾದ ವೈಶಂಪಾಯನನಿಗೆ ಹೇಳಿದ ಮಹಾಭಾರತ ಕಥೆಯನ್ನು, ವೈಶಂಪಾಯನನು ಜನಮೇಜಯರಾಯನಿಗೆ . . . ಹೇಳಿದನು (ವಚಭಾ. ೧). ೨. ದುರ್ಯೋಧನನು ಪಾಂಡವರಿಗೆ ಹೆದರಿ ಅಡಗಿ ಕುಳಿತಿದ್ದನೆಂದು ಹೇಳಲಾಗುವ ಒಂದು ಸರೋವರದ ಹೆಸರು : ವಿಂಧ್ಯಕ ಜಾಲಕರಂಬ ಕಿರಾತದೂತರ್ . . . ತೃಷ್ಣಾಭಿಭೂತರಾಗಿ ಸಕಲಜಗತ್ಪಾವನಾಪ್ಯಾಯನಕಾರಿಯಪ್ಪ ವೈಶಂಪಾಯನಸರೋವರಕ್ಕೆ ನೀರ್ಗುಡಿಯೆ ಪೋಗಿ (ಗದಾಯು. ೬-೩೭ ವ) ; ವೈಶಂಪಾಯನ ಸರಸಿಯ ತೀರದಿ ತೋರುವರಾರಲ್ಲಿ? (ಪಾಂಚಜ. ೧೩-೨೨). ೩. ವ್ಯಾಸಮಹರ್ಷಿ ; ವೇದವ್ಯಾಸ : "ವೈಶಂಪಾಯನಂ ಸತ್ಯವಾದಿ ಪರಾಶರಂ ವ್ಯಾಸನಕ್ಕು" (ಮಂಗರಾ. ೭೬-೧೦). ೪. ನ್ಯಾಯಶಾಸ್ತ್ರವನ್ನು ಬರೆದ ಒಬ್ಬಾತನ ಹೆಸರು : (೫). [ಸಂ.]

ವೈಶದ್ಯ (ಗು). ೧. ಶುಭ್ರವಾದ : ಶ್ರೀಶೈಲಾದಿಪ್ರಸಿದ್ಧಂ . . . ಧರಾಧಾರ ಧರ್ಮಂ ವೈಶದ್ಯದ್ಯೋತಿಚಂದ್ರೋಪಲಸಿತಭಸಿತಾನಂತಕಾಂತೋತ್ತಮಾಂಗಂ ಶ್ರೀಶೈವಶ್ರೇಯಮಂ ಮಾಳ್ಕೆಮಗನವರತಂ ನಂದಿಕೇಶಂ ಮಹೇಶಂ (ರಾಜಶೇ. ೧-೧). (ನಾ). ೨. ಸ್ಪಷ್ಟತೆ ; ವಿಶದತೆ : ಎಲ್ಲಿ ಮಾತ್ರ ವೈಶದ್ಯಕ್ಕಾಗಿ ಒಂದೆರಡು ಮಾತುಗಳನ್ನು ಹೇಳಬಹುದೋ ಅಂತಹ ಎಡೆಗಳಲ್ಲಿ ಹಲಕೆಲವು ಟಿಪ್ಪಣಿಗಳನ್ನು ಬರೆದಿದೆ (ಭಾಗಪ್ರ. ೧೦). [ಸಂ.]

ವೈಶಾಖ (ನಾ). ೧. ಚಾಂದ್ರಮಾನವರ್ಷದ ಎರಡನೆಯ ತಿಂಗಳು ; ಬೇಸಗೆ ; ವಸಂತಮಾಸ : ವೈಶಾಖದೊಳಾ ಯೋಗೀಶ್ವರಂ ಕಲ್ಲಲೆ ನೆಲಸಿ ಹಿಮಾದ್ರೀಂದ್ರಮಿರ್ಪಂತಿರಿರ್ದಂ (ಸುಚರಿ. ೪-೧೩); ಆ ಮಾಸವೇ ಚೈತ್ರ ವೈಶಾಖ . . . ಫಾಲ್ಗುಣಮೆಂದು ಹನ್ನೆರಡು ತೆಱನಾಗಿಹುದು (ವಿವೇಕ. ೨೬೩) ; ವೈಶಾಖಮಾಸ ಬಂದರೂ ವೈಶ್ಯರ ಉಪದ್ರ ಬಿಡಲಿಲ್ಲ (ಗಾದ). ೨. ಮೊಸರು ಕಡೆಯುವ ಕೋಲು ;ಮರತು : ಅನಿಮಿಷಾಲಯದಂತೆ ರವಿಯಂತೆ . . . ಗೋಮಯಪಲ್ಲವಾಸ್ಪದಂ ವೈಶಾಖಶಬ್ದದೊಳ್ ವ್ರಜಮೆಸದುದು (ಚಿಬಪು. ೧೧-೧೪). ೩. ಯುದ್ಧದಲ್ಲಿ ಎದುರಾಳಿಯ ಮೇಲೆ ಬಾಣಹೂಡುವಾಗ ಒಂದುಅಡಿ ಅಂತರದಲ್ಲಿ ಪಾದಗಳನ್ನಿಟ್ಟು ನಿಲ್ಲುವ ಒಂದು ಬಗೆಯ ಭಂಗಿ: ರಣಾಂಗಣಮನಣಯರದಿಂ ಮುಂಗೊಂಡು ನಿಂದ ಭೇದವಂತೆಂದೊಡೆ . . . ಸೋಮಪಾದ ಪ್ರತ್ಯಾಲೀಢಾಲೀಢ ವೈಶಾಖ ಮಂಡಲದಿಂದೆಸೆವ ಶಪಥದ ಸನ್ನಾಹದ ಪನ್ನತಿಕೆಯ . . . ಬಿಲ್ಲಾಳ್ಗಳ (ಹಮ್ಮೀಕ. ೩-೩೩ ವ). 'ವೈಶಾಖಸ್ಥಾನ' ಪರಾ. ೪. [ನಾಟ್ಯ] ಆರು ವಿಧವಾದ ಪುರುಷಸ್ಥಾನಕಗಳಲ್ಲಿ ಒಂದು; IP 'ನೆಲಕ್ಕೆ ೩½ ಗೇಣು ಮೇಲೆ ತೊಡೆಗಳನ್ನು ನಿಲ್ಲಿಸಿ ಕಾಲುಗಳಿಗೂ ಅಷ್ಟೆ ಅಂತರವಿರುವಂತೆ ತ್ರಸ್ತದಿಂದ ನಿಂತುಕೊಳ್ಳುವುದು" (ಶಾಸ್ಕರಂ. ೩೨೭ ಗದ್ಯಾನುವಾದ) : ವೈಷ್ಣವ, ಸಮಪಾದ, ವೈಶಾಖ, ಮಂಡಲ, ಆಲೀಢ, ಪ್ರತ್ಯಾಲೀಢ - ಈ ಆಱು ಪುರುಷಸ್ಥಾನಕಂಗಳ್ (ಶಾಸ್ಕರಂ. ೭-೧೨ ವ). [ಸಂ.]

ವೈಶಾಖರೇಚಿತ (ನಾ). ೧. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; ನಿಂತುಕೊಳ್ಳುವ ಭಂಗಿಗಳಲ್ಲಿ ಒಂದು : ತಲಪುಷ್ಪಪುಟ . . . ವೈಶಾಖರೇಚಿತ . . . ನಾಗಾಪಸರ್ಪಿತ, ಗಂಗಾವತರಣ - ಈ ನೂಱೆಂಟು ಕರಣಂಗಳ್ (ಶಾಸ್ಕರಂ. ೪-೪೨ ವ). ೨. ಅಂಗಹಾರಗಳಲ್ಲಿ ಒಂದು : ಸ್ಫಿರಹಸ್ತ, ಪರ್ಯಸ್ತ, ಸೂಚೀವಿದ್ಧ, ಅಪರಾಜಿತ, ವೈಶಾಖರೇಚಿತ . . . ಸಂಭ್ರಾಂತ, ಸ್ವಸ್ತಿಕರೇಚಿತ - ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಶಾಸ್ಕರಂ. ೫-೭ ವ). [ಸಂ.]

ವೈಶಾಖವೃತ್ತಿ (ನಾ). ೧. ವೈಶಾಖಮಾಸ. ೨. = ವೈಶಾಖ ೩. ೧, ೨ : ಅತಿಕ್ರಾಂತ ವೈಶಾಖವೃತ್ತಿಯಾಗಿಯುಂ ಅಬರ್ಹಲೀಲಾರ್ಹಮಲ್ತು (ಚಂದ್ರಪು. ೪-೪೨ ವ). [ಸಂ.]

ವೈಶಾಖಸ್ಥಾನ (ನಾ). ೧. = ವೈಶಾಖ ೩ : ಆಲೀಢಪ್ರತ್ಯಾಲೀಢಸಮಪಾದವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧಸ್ಥಾನಕೃತ್ಯಂಗಳೊಳಂ . . . ಎಂಟುಂ ತೆಱದ ಪ್ರಹರಣಂಗಳೊಳಂ ಅತಿಪರಿಚಿತರಾಗಿ ವೈಶಾಖಸ್ಥಾನದೊಳ್ ನಿಂದು . . . ದೃಷ್ಟಿಯುದ್ಧಂಗೆಯ್ದರ್ (ಗದಾಯು. ೮-೧ ವ) ;ಚಿನ್ನಬೆಳ್ಳಿಗಳಿಂದ ವಿಚಿತ್ರಾಲಂಕಾರ ಮಾಡಿದ ಗದೆಗಳನ್ನು ಇಬ್ಬರೂ ಹಿಡಿದುಕೊಂಡು ವೈಶಾಖಸ್ಥಾನದಲ್ಲಿ ನಿಂತು ಒಬ್ಬರನ್ನೊಬ್ಬರು ನೋಡತೊಡಗಿದರು (ಭಾಮಣಿ. ೭೫). ೨. = ವೈಶಾಖ ೪ : ಲೋಕಾಕಾರಮನಭಿನಯಿಪಾಕಾರಂ ನೆಗಟ್ ನಿಂದು ವೈಶಾಖಸ್ಥಾನಾಕಾರದೊಳ್ ಮರುದ್ಭ್ರುತನಾ ಕುಲಿಶಾಯುಧನದೊಂದು ಚೆಲ್ವಂ ಪಡೆದಂ (ಆದಿಪು. ೭-೧೧೬) ; ಪುಷ್ಪಾಂಜಲಿ

ಎಕ್ಕೇಪಂಗೆಯ್ದಿ ಅಗಿ ಪೊಡವಟ್ಟು ಸರಸಾಗಮಪ್ರಾರಂಭನಿರತನನು ವೈಶಾಖಿಸ್ಥಾನಸ್ಥಿತನಾಗಿ (ಶಾಂತಿಪು. ೧೦-೬೧ ವ). [ಸಂ.]

ವೈಶಾಲ್ಯ (ನಾ). ಹರಹು; ವಿಸ್ತಾರ : ಆ ಮಂಕಾದ ಬಿಳಿಯ ಆಕಾಶದ ವೈಶಾಲ್ಯದಲ್ಲಿ ಬೆಟ್ಟಗಳು ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದುವು (ಮಲಸಾ. ೨೪) ; ಕಾಲಿದಾಸಾದಿ ಮಹಾಕವಿಗಳೂ ಪೂರ್ವಪರಿಚಿತವಾಗಿದ್ದ ಕಥಗಳನ್ನೇ ಮಾರ್ಪಡಿಸಿಕೊಂಡು ತಮ್ಮ ಪ್ರತಿಭೆಯ ನವ ನವೋನ್ಮೇಷಶಾಲಿತ್ವವನ್ನೂ ವೈಶಾಲ್ಯವನ್ನೂ ತೋರ್ಪಡಿಸಿಲ್ಲವೇ? (ಸಾಹಿ. ೯೧). [ಸಂ.]

ವೈಶಿಕ (ಗು). ೧. ವೇಶ್ಯೆಯು ಪ್ರಯೋಗಿಸುವ, – ಬಳಸುವ. (ನಾ). ೨. (ಗೀತ, ನೃತ್ಯ, ಚಾತುರ್ಯ, ತಂತ್ರ ಮುಂತಾದ) ವೇಶ್ಯೆಯ ವಿದ್ಯೆ, -ಕಲೆ : ಎಟರ ತವಕ ತಕ್ಕೆಗೂಟವ ಮೋಹಿಪ ದಿಟವ ಸೋಲವ ವೈಶಿಕವ ಸಟೆಯ ಸವಡುನುಡಿಗಳೊಳು ಮಗಳೆ ನೀ ಪಟುವಾಗು (ರಾಮವಿ. ೧೦-೪೦) ; ಒದವಿಸಿ ನಡೆನುಡಿನೋಟದ ಪದದಿಂ ಪೆಣ್ಗಳ್ಗೆ ಕಲಿಸುವರ್ ವೈಶಿಕಮಂ ಮುದುಪ ದಲೀ ಕುಂಟಣಿ ಮೆಯ್ದುಳದ ಗೆಯ್ಮೆಯೊಳಮಿಂತು ಪೆತ್ತಿಪಳ್ (ಚಿಕವಿ. ೬-೦೬). ೩. ಬೆಡಗು ; ಬಿನ್ನಾಣ : ಕರವಲಯ ಕಟಿಸೂತ್ರ ಪದನೂಪುರ ನಿನಾದದ ಬೇವಸಲೆಗಳ ಸರಸ ಹಾಸ್ಯದ ಹಾಸಕದ ವಹಣಿಗಳ ವೈಶಿ[ಪಾಠಾಂ.ಸಿ]ಕದ ಸರಳಿಸುವ ಕುಕ್ಕುರಕದಂಬದ ವಿರಚಿತಾಡಂಬರದ ನವಶಾಬರಿಯಲ್ಕೆದಿದರ್ (ತೊರಾ. ೧-೫-೪೦). ೪. ಮೋಸ ; ಠಕ್ಕು ; ಕಪಟ : ಸಟೆಯಿಲ್ಲದಂತೆ ಪ್ರಪಂಚುವಿಲ್ಲದಂತೆ ವೈಶಿಕವಿಲ್ಲದಂತೆ ನಡಸಯ್ಯಾ ಲಿಂಗತಂದೆ (ಬಸವ. ೬೧) ; ಸ್ವಯಂಪ್ರಯೋಜನಮಾಗಿ ತಾಮಸಗುವ ಕರ್ಮಜ್ಞಾನ ಭಕ್ತ್ಯಾದಿಗಳೊಳ್ ಸಾಧನಬುದ್ಧಿಗೆಯ್ಯುದು ವೈಶಿಕಮಪ್ಪುದು (ಚಿಕವಂ. ೧೦೭-೧೦). ೫. ಶೃಂಗಾರನಾಯಕರಲ್ಲಿ ಒಬ್ಬ ; ಅನೇಕ ವೇಶ್ಯೆಯರೊಂದಿಗೆ ಇರುವವನು : ಕಾಮನ ಕೊಂದು ಪಟ್ಟಕ್ಕೆ ನಿಂದ ಕಾಮರಾಜರಾಜನು ರಾಜಾಧಿರಾಜ ಗಂಡರನೆಲ್ಲರ ಹೆಂಡಿರ ಮಾಡಿ ನೆರೆವ ವೈಶಿ[ಪಾಠಾಂ. ಸಿ]ಕ ಕಾಮ ನೀ ಕೇಳಾ (ಅಂಬಿ. ೪. ೪೧೪-೮). [ಸಂ.]

ವೈಶಿಕತಂತ್ರ (ನಾ). ಆಕರ್ಷಿಸುವ ಉಪಾಯ ; ಮೋಹಿಸುವ ವಿಧಾನ: ಗಾರುಡಕನ್ಯವಾದಾ ದರುಶನವನು ಮಾರಣ ವೈಶಿಕ [ಪಾಠಾಂ. ವಶಿಕರ]ತಂತ್ರ ವಾರುವ ಗಜನರಪಶುಪರೀಕ್ಷೆಯ ಬಲ್ಲ ಭಾರಿ ಶಾಸ್ತ್ರಜ್ಞರಲ್ಲೆಸೆಯೆ (ಅಬ್ಬಲೂ. ೩-೭೮). [ಸಂ.]

ವೈಶಿಷ್ಟಿಕ (ಗು). ೧. ವಿಶೇಷವಾದ ; ಮಹತ್ತರವಾದ. (ನಾ). ೨. ಹೆಚ್ಚುಗಾರಿಕೆ ; ವಿಶೇಷತೆ : ಹೊಸ 'ಜಾತಿಕಟ್ಟು'ಗಳೂ ಸಗೋತ್ರವಿವಾಹವನ್ನು ನಿರಾಕರಿಸಿವೆ ; ತಮ್ಮ ವೈಶಿಷ್ಟಿಕವಾದ ಆಚಾರ ವ್ಯವಹಾರಗಳನ್ನು ಕಾಪಾಡಿಕೊಂಡು ಬರುತ್ತಿವೆ (ಶಾಸಗಿ. ೩ ಮುನ್ನುಡಿ). [ಸಂ.]

ವೈಶಿಷ್ಟ್ಯ (ನಾ). ವಿಶೇಷವಾದ ಗುಣ ; ಹೆಚ್ಚುಗಾರಿಕೆ ; ಮೇಲ್ಮೆ : ತಂತ್ರದ ದೃಷ್ಟಿಯಿಂದ ಕೆಲವೊಂದು ವೈಶಿಷ್ಟ್ಯಗಳನ್ನು ಇಲ್ಲಿ ಕಾಣಬಹುದು (ಸಮಜೀ. ೨೫ ಟೀಕೆ); ಹೊಯ್ಸಳದೇವಾಲಯಗಳನ್ನು ವಿವಿಧ ಭಾಗಗಳಾಗಿ ವಿಂಗಡಿಸಿ ವೈಶಿಷ್ಟ್ಯವನ್ನು ತಿಳಿಯಬಹುದು (ಹೊಯ್ಸವಾ. ೧೪). [ಸಂ.]

ವೈಶೇಷಿಕ (ಗು). ೧. ವಿಶೇಷವಾದ ; ಅಸಾಧಾರಣವಾದ ; ವಿಶಿಷ್ಟಗುಣವುಳ್ಳ. (ನಾ). ೨. ವಿಶಿಷ್ಟವಾದುದು ; ವಿಶೇಷ ಲಕ್ಷಣದಿಂದ ಕೂಡಿದುದು : ವೈಶೇಷಿಕ ಶಬ್ದ ವಿಶೇಷವೆಂಬ ಶಬ್ದದಿಂದ ಸಿದ್ಧಿಸಿದೆ (ಭಾರದ. ೧೨೬) ; 'ವೈಶೇಷಿಕ' ಪದವು ವಿಶೇಷವೆಂಬ ಒಂದು ವಸ್ತುವನ್ನು ಅಂಗೀಕರಿಸಿರುವುದರಿಂದ ಬಂದಿರುವುದೆಂದು ಪ್ರಾಯಶಃ ತಿಳಿಯುವರು (ಹಿಂದುಸಾ. ೧೧೧). ೩. ಷಡ್ದರ್ಶನಗಳಲ್ಲಿ ಒಂದು ; ವಿಶೇಷಗುಣವನ್ನು ಪ್ರತಿಪಾದಿಸಿದ ತತ್ವಶಾಸ್ತ್ರಜ್ಞನಾದ ಕಣಾದನ ದರ್ಶನ : ವೈಶೇಷಿಕ ಎಂಬ ಇಟ್ಟಗೆಯಲೊರಸಿ ಕೂಡಲಸಂಗಯ್ಯನೆಂಬ ಕನ್ನಡಿಯ ತೋಜುವೆನು (ಬಸವ. ೭೪೭) ; ಈ ಮೂಲತತ್ವಾನ್ವೇಷಣರೂಪದಲ್ಲಿ . . . ವೈಶೇಷಿಕ, ನೈಯಾಯಿಕ, ಸಾಂಖ್ಯಯೋಗ, ಜೈಮಿನೀಯ, ಔಪನಿಷದಗಳೆಂಬುವ ಆರು ಆಸ್ತಿಕದರ್ಶನಗಳೂ ಆವಿರ್ಭವಿಸಿರುತ್ತವೆ (ಭಾರದ. ೨೨೯). ೪. ವೈಶೇಷಿಕತತ್ತ್ವವನ್ನು ಅನುಸರಿಸುವವನು, – ಪಾಲಿಸುವವನು : ಗೋಪಣಂದಿಮುನಿಪುಂಗವನೆಂಬ ಮದಾಂಧಸಿಂಧುರಂ ತಗಯಲ್ ಜೈಮಿನಿ ಶಿಷ್ಯಿಕೊಣ್ಮು ಪರಿಯಲ್ ವೈಶೇಷಿಕಂ ಪೋಗದುಣ್ಗೆಗೆಯೊತ್ತಲ್ (ಎಪಿ. II, ೬೯-೪೩ ; 1100); ವೈಶೇಷಿಕರು ಪ್ರತ್ಯಕ್ಷ, ಅನುಮಾನಗಳನ್ನು ಮಾತ್ರ ಸ್ವತಂತ್ರ ಪ್ರಮಾಣಗಳೆನ್ನುತ್ತಾರೆ (ತತ್ವಪ್ರಾ. ೨೩೦). ೫. (ವೈಶೇಷಿಕರ ಪ್ರಕಾರವಿರುವ) ಆತ್ಮನ ಗುಣಗಳಲ್ಲಿ ಒಂದು : ಬುದ್ಧಿಸುಖದುಃಖೇಚ್ಛಾದ್ವೇಷಪ್ರಯತ್ನಧರ್ಮಾಧರ್ಮ ಸಂಸ್ಕಾರರೂಪನವವಿಧ ವೈಶೇಷಿಕಗುಣೋಚ್ಛೇದಂ (ತತ್ವಪ್ರ. ೫). [ಸಂ.]

ವೈಶೇಷಿಕದರ್ಶನ (ನಾ). = ವೈಶೇಷಿಕ ೩ : ಗೌತಮನ ನ್ಯಾಯದರ್ಶನ, ಕಣಾದನ ವೈಶೇಷಿಕದರ್ಶನ, ಕಪಿಲನ ಸಾಂಖ್ಯದರ್ಶನ . . . ಬಾದರಾಯಣನ ಉತ್ತರಮೀಮಾಂಸಾ ದರ್ಶನ — ಇವೇ ಷಡ್ದರ್ಶನಗಳು (ಭಾರದ. ೧೨೧) ; ವೈಶೇಷಿಕದರ್ಶನದಲ್ಲಿ ಸಾಮಾನ್ಯವಾಗಿ ಪ್ರಪಂಚವನ್ನು ದ್ರವ್ಯ . . . ಅಭಾವವೆಂದು ಏಳು ಪದಾರ್ಥಗಳಾಗಿ ವಿಭಾಗಮಾಡಿರುವರು (ಹಿಂದುಸಾ. ೧೧೨). [ಸಂ.]

ವೈಶ್ಯ (ಗು). ೧. ವ್ಯಾಪಾರಿಗೆ ಸಂಬಂಧಿಸಿದ. (ನಾ). ೨. ಚತುರ್ವರ್ಣಗಳಲ್ಲಿ ಮೂರನೆಯ ವರ್ಗ : "ಬ್ರಾಹ್ಮಣಃ, ಕ್ಷತ್ರಿಯಃ, ವೈಶ್ಯಃ — ಈ ಮೂರು ವರ್ಣಮಂ ದ್ವಿಜರೆಂಬುದು" (ಹಲಾಯು. ೬೫-೩೬೮) ; ವೈಶ್ಯವೆಂಬುದು ಜಾತಿಯಲ್ಲ ವರ್ಣ (ತುಳುಸಾ. ೧೭೬). ೩. ಚತುರ್ವರ್ಣಗಳಲ್ಲಿ ಮೂರನೆಯ ವರ್ಗಕ್ಕೆ ಸೇರಿದವನು ; ವ್ಯಾಪಾರ ಅಥವಾ ಒಕ್ಕಲುತನ ಮಾಡುವವನು : ತನತನಗೆ ಕಂಡರು ಮಹೇಸುರ ಜನಪ ವೈಶ್ಯ . . . ಹರ ಚತುರ್ಮುಖರ (ಕುವಾಸ. ೧೪-೬೬) ; ಭಗವದ್ಗೀತೆಯಲ್ಲಿ ವೈಶ್ಯನಿಗೆ ಕೃಷಿ, ಗೋರಕ್ಷೆ, ವಾಣಿಜ್ಯಗಳು . . . ಮತ್ತೆ ಕೆಲವನ್ನು ಸೇರಿಸಿದ್ದಾನೆ (ಭಾರದ. ೪೫); ವೈಶಾಖಮಾಸ ಬಂದರೂ ವೈಶ್ಯರ ಉಪದ್ರ ಬಿಡಲಿಲ್ಲ (ಗಾದ). ೪. ರತ್ನಗಳಲ್ಲಿ ಒಂದು ಬಗೆ : ಅರಿಸಿನದ ಬಣ್ಣವನಾಂತು ಮಿಸುನಿಯೊಲು ತೊಳಪುದು ವೈಶ್ಯಜಾತಿಯು (ರತ್ನಶಾ. ೩-೯) ; ಬ್ರಾಹ್ಮಣನೀ ಮಣಿ ಚತ್ರಂಬುಗೆ ಜಾತರಂಗಮೆನಿಪುದು . . . ವೈಶ್ಯಂ ಸಮಂತು ಸೌಗಂಧಿಕಮ್ಮೆ (ಹಾಲಾಸ್ಯ. ೨-೧-೭೦). [ಸಂ.]

ವೈಶ್ಯಕಾಂತೆ (ನಾ). ವೈಶ್ಯಜಾತಿಯ ಹೆಣ್ಣು : ವೈಶ್ಯಕಾಂತೆಯನೊರ್ವಳಂ ಕಂಡು (ಆಂದ್ರಪು. ೩-೭೬ ವ). [ಸಂ. ವೈಶ್ಯಕಾಂತಾ]

ವೈಶ್ಯಜ (ನಾ). ವಣಿಜರ ವಂಶದವನು ; ವ್ಯಾಪಾರಿ. 'ಪಟವೈಶ್ಯಜ' ಪರಾ. [ಸಂ.]

ವೈಶ್ಯದತ್ತಿ (ನಾ). ವ್ಯಾಪಾರಿಗೆ ಕೊಟ್ಟ ದಾನ : ಪುಲಿನಾಡ ಕೊಳತೂರಂ ಪಲ್ಲವಾದಿತ್ಯಪುರವಾಗೆ ನಕರಂ ಮಾಡಿ ವೈಶ್ಯದತ್ತಿಯಾಗೆ ಮಾಡಿ ನೊಬಂಬಸೆಟ್ಟಿಗೆ ಕೊಡಂಗೆಯಾಗೆ ಕೊಟ್ಟಂ (ಸಿಇಇ. IX-i, ೪೧-೧೬ ; ಸು. 10ನಯ ಶತ). [ಸಂ.]

ವೈಶ್ಯೆ (ನಾ). ವೈಶ್ಯಜಾತಿಯ ಹೆಣ್ಣು. [ಸಂ. ವೈಶ್ಯಾ]

ವೈಶ್ರವಣ (ನಾ). ೧. ವಿಶ್ರವಸ್ಸಿನ ಮಗ ; ಕುಬೇರ : ವಿವಿಧವಿನೋದಸುಖಂ ವೈಶ್ರವಣಂ ಧನದಾದ್ರಿಯೊಳ್ ಸುಖಂ ವಸಿಯಿಸುವಂತವನಿಪನಾ ಮಾಡದೊಳುದ್ಯ ವಾಂಬುನಿಧಿ ವಿಶ್ವಸೇನನನುದಿನಮಿರ್ಕುಂ (ಶಾಂತಿಪು. ೯-೧೪೯) ; ದಿವಿಜೇಂದ್ರಂಗೆತ್ತಲುಂ ವೈಭವದೊಳ್ . . . ವೈಶ್ರವಣಂಗೆತ್ತೆತ್ತಲುಂ ವಿತ್ತದೊಳಧಿಕನೆನುತ್ತಿರ್ಪಿನಂ ಸಂದ ನಿಂತೀ ಲವಣಾಂಭೋರಾಶಿವೇಳಾವಲಯಿತಧರಣೀಚಕ್ರದೊಳ್ ತತ್ಕುಮಾರಂ (ಸುಕುಮಾ. ೧೧-೬೭) ; ಇವನು ಸುರಪತಿ ವರುಣ ಯಮ ವೈಶ್ರವಣರೆಂಬರ ಗೆಲಿದ ಪೂರ್ವದಿ ಇವನ ಗೆಲಿದವರಿಲ್ಲ (ಕಾಶಿಕಾ. ೨೭-೧೩). ೨. ರಾವಣ. [ಸಂ.]

ವೈಶ್ವಂಭರ (ಗು). ೧. ವಿಷ್ಣುವಿಗೆ ಸಂಬಂಧಿಸಿದ. (ನಾ). ೨. ಒಂದು ಮತದ ಹೆಸರು; ವೈಷ್ಣವಮತ : ವಿತಂಡಮುನಿಯು . . . ವೈಶ್ವಂಭರವೆಂಬ ಮತವನ್ನು ಕಲ್ಪನೆಮಾಡಿ, ಆ ಪಂಡಿತನು ಅನಂತರ ವಿಷ್ಣುನಾಮಾಂಕಿತವಾದ ಅಷ್ಟಾಕ್ಷರಿಯನ್ನು ಅವರಿಗೆ ಉಪದೇಶ ಮಾಡಿದನು (ತುಳುಸಾ. ೧೦೬). [ಸಂ.]

ವೈಶ್ವದೇವ (ಗು). ೧. ವಿಶ್ವದೇವತೆಗಳಿಗೆ ಸಂಬಂಧಪಟ್ಟ. (ನಾ). ೨. ಗೃಹಸ್ಥನು ಎಲ್ಲ ದೇವತೆಗಳಿಗೆ ದಿನವೂ ಊಟಕ್ಕೆ ಮುಂಚೆ ಅರ್ಪಿಸುವ ಭೂತಯಜ್ಞ : ಮಧ್ವರಾಯರ ನೆನೆದು ಪರಿಶುದ್ಧರಾಗಿರೊ . . . ಕಾಮವಿಲ್ಲದ ಹರಿಪೂಜೆ ವೈಶ್ವದೇವವಿದುವಾಗ (ಪುರಂದ. ೧-೨೦೯) ; ದೈವಯಜ್ಞವು ಎಲ್ಲಾ ದೇವತೆಗಳನ್ನು ಉದ್ದೇಶಿಸಿ ಮಾಡುವುದು, ಆದ್ದರಿಂದ ಇದನ್ನು ವೈಶ್ವದೇವವೆನ್ನುತ್ತಾರೆ (ಆರ್ಯಧ. ೧೮೯). ೩. ಋಕ್ಪಾದಿ ದೇವತೆಗಳಲ್ಲಿ ಒಬ್ಬ : "ಸೂರತ್ಯಾಖ್ಯಾ ನಿಲೇಂದ್ರಾನಲಂ ಮಿತ್ರೇಂದು ನೈರುತಿ ಜಲಂ ವೈಶ್ವ[ಪಾಠಾಂ. ಸ್ವ]ದೇವ . . . ಋಕ್ಪಾದಿದ್ಯೆವಮಕ್ಕುಂ" (ಮಂಗರಾ. ೧೯-೩). [ಸಂ.]

ವೈಶ್ವದೇವಿ (ನಾ). ೧. ಮಾಘಮಾಸದ ಕೃಷ್ಣಪಕ್ಷದ ಅಷ್ಟಮಿ. ೨. [ಛಂದ]

ಹನ್ನೆರಡುಮಾತ್ರೆಗಳ ಜಗತೀಛಂದಸ್ಸಿನ ಒಂದು ಪ್ರಭೇದ : ಭೂಮಿದ್ವಂದ್ವ ಕೃತ್ತಲ್ ಜಲದ್ವಂದ್ವಮಿತ್ತಂ ತಾಮಪ್ಪಂತಿಂಬಾಗಿಲ್ಲಿ ಬಂದೊಪ್ಪೆ ಕೇಳ್ ವಿಶ್ರಾಮಂ ಕಾಮಾಸ್ತ್ರಸ್ಥಾನದೊಳ್ ನಿಂದೊಡಕ್ಕುಂ ಕಾಮಪ್ರಾಕಾರೇ ವೈಶ್ವದೇವಿ ಪ್ರಸಿದ್ಧಂ (ಛಂದೋಂಬು. ೨-೫೬ ಅಡಿಟಿ). [ಸಂ. ವೈಶ್ವದೇವೀ]

ವೈಶ್ವರೀಯ (ನಾ). "ಎಲ್ಲ ದೇವತೆಗಳಿಗೆ ತರ್ಪಣ ಕೊಡುವುದು" (ಶಂಕದಾ. ಕೋಶ); ಆ ನವೀನಾತಿಥ್ಯಮಿಲ್ಲದೆ ವೈಶ್ವರೀಯವನು ಮಾಡಲೊಲ್ಲರು ವ್ರತವ (ಶಂಕದಾ. ೧-೫೪). [?]

ವೈಶ್ವಾನರ (ಗು). ೧. ಮಾನವಜನಾಂಗಕ್ಕೆ ಸಂಬಂಧಿಸಿದ. (ನಾ). ೨. ಬೆಂಕಿ ; ಅಗ್ನಿ : ಇಭವಿದ್ವೈಷಿಗೆ ವಿಕ್ರಮಂ . . . ಹಿಮಾಂಶುಗೆ ಹಿಮಂ ವೈಶ್ವಾನರಂಗುಷ್ಣ[ವ]ತ್ಪ್ರಭೆ . . . ಸಾಜಂ (ಶಾಂತಿಪು. ೧೧-೯೪) ; ಆಳಾಪಿಸುವ ವಿದಗ್ಧ ವಿಪ್ರಲಂಭ ವೈಶ್ವಾನರದಗ್ಧಯೆಂಬುದನೀ ರಾಗಪ್ರಯೋಗಮಂ ಪೇಳ್ಬಪ್ಪುದು (ಲೀಲಾವ. ೨-೩೦ ವ). ೩. ಜಠರಾಗ್ನಿ. ೪. ಅಗ್ನಿಯ ಅಧಿದೇವತೆ : ಪಿರಿದೆನಿಸುತಿಹ ದೇವತಾತ್ರಯವಧಿಕವೆಲ್ಲರಿಗೆ ವರವೆನಿಪುದಾಮ್ನಾಯ ವೈಶ್ವಾನರನಧಿಕವಿದಱಿಂದ (ತಿಮ್ಮಶಾಂ. ೩-೧೨) ; ವೈಶ್ವಾನರಂ ಈ ಮರ್ಬಿನೊಂದು ಜಂಕಣಗೆ ಬೆದಱಿ . . . ಪತಿಪರಾಯಣೆಯಂ ತೋಱಿಸಲೊಡಂ (ರಾಮಾಶ್ವ. ೭೪-೨೩). ೫. ಚಿತ್ರಮೂಲದ ಗಿಡ. ೬. [ವೇದಾಂತ] ಸಮಷ್ಟಿಶರೀರದಲ್ಲಿ ಚೈತನ್ಯರೂಪಿಯಾಗಿರುವವನು : ಈ ಸಮಷ್ಟಿಶರೀರದ ಕೂಡೆ ಕೂಡಿದ ಚೈತನ್ಯವು ಸಮಸ್ತಮನುಷ್ಯರುಗಳಲ್ಲಿ ಅಭಿಮಾನವ ಮಾಡಿತಾಗಿ ವೈಶ್ವಾನರನುಯಂತಾ ಹೇಳಲ್ಪಡುವುದು (ಈಶ್ವಸ್ವ. ೧೮-೨) ; ಜಾಗ್ರತಾವಸ್ಥೆಯನ್ನು ಮಾಂಡೂಕ್ಯಉಪನಿಷತ್ತು ಈ ರೀತಿಯಾಗಿ ವರ್ಣಿಸಿದೆ . . . ವೈಶ್ವಾನರ — ಸಕಲಪ್ರಾಣಿಗಳಿಗೂ ಸಂಬಂಧಿಸಿಕೊಂಡಿರುವವನು (ಜೀವಾತ್ಮ. ೧೨೭). ೭. [ಛಂದ] ಒಂದು ಗುರು, ಒಂದು ಲಘು ಪುನಃ ಒಂದು ಗುರು ಇರುವ ಒಂದು ಗಣ ; ರಗಣ (-U-) : ಕುಲಿಶಧರವಾತೋರ್ವೀ ವೈಶ್ವಾನರಾ ನಿಲರಂತ್ಯದೊಳ್ ನೆಲಸೆ ಹರಿಯುಂ (ಛಂದೋಂಬು. ೨-೧೬೭).

ವೈಶ್ವಾನರಚೂರ್ಣ = ಹೊಟ್ಟೆಶೂಲೆ, ಅಗ್ನಿಮಾಂದ್ಯ ಮುಂತಾದುವುಗಳಿಗೆ ಉಪಯೋಗಿಸುವ, ಚಿತ್ರಮೂಲ ಮುಂತಾದುವುಗಳಿಂದ ಮಾಡಿದ ಒಂದು ಬಗೆಯ ಚೂರ್ಣ : ವೈಶ್ವಾನರಚೂರ್ಣ — ಶುಂಠಿ, ಹಿಪ್ಪಲಿ . . . ಚಿತ್ರಮೂಲ, ಗಜಹಿಪ್ಪಲಿ . . . ಬಿಳಿಸಾಸುವೆ ಇವಂ ಸಮಾಂಶವಾಗಿ ದಿನಂಪ್ರತಿಯೂ ೪ ವರಹ ತೂಕ ತುಪ್ಪದಿಂ ಸೇವಿಸೆ ಗ್ರಹಣಿ, ಅಗ್ನಿಮಾಂದ್ಯ, ಹೊಟ್ಟೆಶೂಲೆ ಸಹ ಪರಿಹರಮಕ್ಕುಂ (ಸಕ್ಷೆ. ೩೩೨). [ಸಂ.]

ವೈಷಮ್ಯ (ನಾ). ೧. ಏರುಪೇರು ; ವ್ಯತ್ಯಾಸ : ಅಂತುಭಯನದಿಯ ವೈಷಮ್ಯ ಮುಮನಾಶ್ಚರ್ಯಂಬಟ್ಟು ನೋಡಿ (ಆದಿಪು. ೧೫-೫೦ ವ) ; ಅವಱೊಳ್ ಶಾರೀರ ಮೆಂಬುದು ವಾತಪಿತ್ತಶ್ಲೇಷ ವಿಶೇಷವೈಷಮ್ಯಸಮುದ್ಭವಮಪ್ಪ ಶರೀರಾಕ್ಷಿಕುಕ್ಷಿದಂತ ಶೂಲಾದಿ ಜನಿತಮಕ್ಕುಂ (ಅಜಿಪು. ೮-೨೮ ವ). ೨. ವಿಪತ್ತು ; ತೊಂದರೆ : "ವಿಷಮಂ ವೈಷಮ್ಯಂ" (ಚತುನಿ. ೧೨೦). ೩. ದ್ವೇಷ ; ಹಗೆತನ : ನೊಳಂಬರ ರಾಜ್ಯವು ಬಹಳಮಟ್ಟಿಗೆ ವಿಸ್ತಾರಗೊಂಡಿತಲ್ಲದೆ ನೊಳಂಬರ ಮತ್ತು ಬಾಣರ ನಡುವೆ ನಿರಂತರವೈಷಮ್ಯಕ್ಕೆ ದಾರಿಮಾಡಿಕೊಟ್ಟಿತು (ನೊಳಂಬ. ೨೮). [ಸಂ.]

ವೈಷಯ (ಗು). ೧. ವಿಷಯಕ್ಕೆ ಸಂಬಂಧಪಟ್ಟ. (ನಾ). ೨. ವಿಷಯ ; ವಸ್ತು : "ವಿಷಯಂ ವೈಷಯಮೆನಿಪ್ಪುದು" (ಚತುನಿ. ೧೨೦). [ಸಂ.]

ವೈಷಯಿಕ (ಗು). ೧. ವಸ್ತುವಿಗೆ ಸಂಬಂಧಿಸಿದ. ೨. ವಿಷಯಸುಖಕ್ಕೆ ಸಂಬಂಧಪಟ್ಟ ; ಇಂದ್ರಿಯಸುಖಕ್ಕೆ ಸಂಬಂಧಿಸಿದ : ರಾವಣಂಗೊಲವು ಪದಿರ್ಮಡಿಸಿತ್ತಪ್ರಾಪ್ತಿರಸಂಬಡೆಗುಂ ವೈಷಯಿಕಸುಖದೊಳಿದು ವಿಸ್ಮಯಮೇ (ಪಂಪಾಮಾ. ೯-೨೮೬) : ತಾವು ವೈಷಯಿಕ ವಾಸನೆಗಿಂತಲೂ ಮೇಲಿನ ಒಂದು ಉಪಅನುಭವವನ್ನು ಪಡೆದವರೆಂಬುದನ್ನು ನಾನು ತಿಳಿದುಕೊಂಡೆ (ಪ್ರಾಜಲ. ೧೭೫). (ನಾ). ೩. ಇಂದ್ರಿಯಗಳಿಂದ ತಿಳಿಯಲ್ಪಡುವ ವಸ್ತು, — ವಿಷಯ : ನಿರ್ವರ್ತ್ಯವಿಕಾರ್ಯಂ ಪ್ರಾಪ್ಯಮೆತ್ತಲುಂ ವೈಷಯಿಕಂ (ಶಮಪ್ರ. ೧೨೭). ೪. ಭೋಗಗಳಲ್ಲಿ ಆಸಕ್ತಿಯುಳ್ಳವನು ; ವಿಷಯಲೋಲುಪ. [ಸಂ.]

ವೈಷ್ಣವ (ಗು). ೧. ವಿಷ್ಣುವಿಗೆ ಸಂಬಂಧಿಸಿದ ; ವಿಷ್ಣುವಿನ : ಆ ಸೋಮನಾಥಪುರದ ಆಱು ತತ್ತಿನ ಒಳಗಣ ಬಂಡೂರತತ್ತಿನ ಒಳಗೆ ಆ ವೈಷ್ಣವಬಾಗೆಯ ವ್ರತ್ತಿ ಹದಿನಾಲ್ಕಱ ಪ್ರಾಪ್ತಿಗಳನೂ . . . ಅನುಭವಿಸಿಕೊಂಡು (ಎಕ. V(R), ತಿರುಮ. ೯೧-೧೨ ; 1281). ೨. ವಿಷ್ಣುವನ್ನು ಆರಾಧಿಸುವ. (ನಾ). ೩. ಹಿಂದೂಮತದ ಮೂರು ಪ್ರಮುಖಪಂಥಗಳಾದ ವೈಷ್ಣವ, ಶೈವ ಮತ್ತು ಶಾಕ್ತ ಎಂಬುವುಗಳಲ್ಲಿ ಒಂದು ; ಹರಿಸರ್ವೋತ್ತಮತ್ವವನ್ನು ಸಾರುವ ಪಂಥ : ಭರತಖಂಡದಲ್ಲಿ ಶೈವ ಮತ್ತು ವೈಷ್ಣವ ಎಂಬುದಾಗಿ ಎರಡು ಸಂಪ್ರದಾಯಗಳು . . . ನಾನಾ ಮತಾಚಾರಗಳಿಗೆ ಕಾರಣವಾದುವು (ಭಾತತ್ತ್ವ. ೬೧೯). ೪. ವೈಷ್ಣವ ಮತಾವಲಂಬಿ : ಬಿಜ್ಜಳನ ಗುರುವಪ್ಪ ನಾರಣಕ್ರಮಿತಂ ಸೌರಿಭಟ್ಟಂ ವಿಷ್ಣುಪೆದ್ದಿಗಳು ಮೊದಲಾದ ವೈಷ್ಣವರೆಲ್ಲಂ ಕಂಡುಕಂಡು ಅಸೂಯೆಯೊಳು ನಡೆದು (ಬಸರ. ೮-೭೫); ಷಟ್ಕರ್ಮ ಮಾಡಬೇಕು ವೈಷ್ಣವನೆನಿಸಬೇಕು ವಿಷ್ಣುದಾಸರ ದಾಸನಾಗಬೇಕು (ಪುರಂದ. ೩-೭೦-೪); ವಿಷ್ಣುವನ್ನೇ ಪರಬ್ರಹ್ಮಸ್ವರೂಪವೆಂದು ತಿಳಿದು ಆರಾಧಿಸುವವರು ವೈಷ್ಣವರು (ಭಾರದ. ೨೦) ; ಸ್ಮಾರ್ತರಿಗೆ ಸ್ವಾರ್ಥ ಹೆಚ್ಚು, ವೈಷ್ಣವರಿಗೆ ಉಷ್ಣ ಹೆಚ್ಚು (ಗಾದೆ). ೫. ವಿಷ್ಣುವನ್ನು ಅಭಿಮಂತ್ರಿಸಿ ಬಿಡುವ ಅಸ್ತ್ರ ; ನಾರಾಯಣಾಸ್ತ್ರ : ಲೋಕಮಂ ಬಸಿಱೊಳಗಿಟ್ಟು ಕಾದಳವ ನಾರಳವೊಡ್ಡಿಸೆ ಕಾದನಾಗಳರ್ವಿಸೆ ತೆಗೆದೆಚ್ಚ ವೈಷ್ಣವಮನೊಡ್ಡಿಸಿ ವೈಷ್ಣವದಿಂ ಮುರಾಂತಕಂ (ಪಂಪಭಾ. ೧೨-೩೨). ೬. ಯುದ್ಧಮಾಡುವಾಗ ನಿಲ್ಲುವ ಒಂದು ಭಂಗಿ : ಆಲೀಢ ಪ್ರತ್ಯಾಲೀಢ ಸಮಪಾದ ವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧಸ್ಥಾನಕೃತಂಗಳೊಳಂ . . . ನಿಂದು . . . ದೃಷ್ಟಿಯುದ್ಧಂಗೆಯ್ದರ್ (ಗದಾಯು. ೮-೧ ವ). ೭. [ನಾಟ್ಯ] ಆರು ಬಗೆಯ ಪುರುಷಸ್ಥಾನಕಗಳಲ್ಲಿ ಒಂದು ; ಪ "ಪಾದಗಳಿಗೆ ೨ $\frac{೧}{೨}$ ಗೇಣು ಅಂತರವಿರುವಂತೆ ಒಂದು ಕಾಲನ್ನು ಸಮನಾಗಿರಿಸಿ ಇನ್ನೊಂದು ಕಾಲಿನ ಬೆರಳುಗಳನ್ನು ಪಕ್ಕಕ್ಕೆ ಮಾಡಿ ಪಾರ್ಶ್ವದಲ್ಲಿ ತ್ರ್ಯಸ್ರದಂತಿರಿಸಿ ಮೊಳಕಾಲನ್ನು ಬಗ್ಗಿಸಿ ಸೌಷ್ಠವದಿಂದ ನಿಂತುಕೊಳ್ಳುವುದು" (ಲಾಸ್ಯರಂ. ೩೨೬ ಗದ್ಯಾನುವಾದ) : ವೈಷ್ಣವ . . . ಪ್ರತ್ಯಾಲೀಢ — ಈ ಆಱು ಪುರುಷಸ್ಥಾನಕಂಗಳ್" (ಲಾಸ್ಯರಂ. ೭-೧೨ ವ).

ವೈಷ್ಣವಗೀತಿಮನೋಹರ = ವಿಷ್ಣುಪರವಾದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವವನು ; ಒಂದು ಬಿರುದು : ಗ್ರಾಮನಾಮೋತ್ತಮರ್ವೈಷ್ಣವಗೀತಿ ಮನೋಹರರ್ (ಕಾ. II, ೧೦-೯ ; 1080). [ಸಂ.]

ವೈಷ್ಣವದೀಕ್ಷೆ (ನಾ). ವೈಷ್ಣವಮತದ ವ್ರತಗಳನ್ನು ವಿಧಿವತ್ತಾದ ರೀತಿಯಲ್ಲಿ ಕೈಗೊಳ್ಳುವ ಸಂಸ್ಕಾರ : ನೀನು ನನ್ನೊಡನೆ ಬಾ ವೈಷ್ಣವದೀಕ್ಷೆಯನ್ನು ಕೊಡುತ್ತೇನೆ (ಶ್ರೀರಾಯ. ೩೮೧). 'ಶೈವದೀಕ್ಷೆ' ಪರಾ. [ಸಂ. ವೈಷ್ಣವದೀಕ್ಷಾ]

ವೈಷ್ಣವಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು; ವಿಷ್ಣುವನ್ನು ಕುರಿತ ಪುರಾಣ : ಬ್ರಹ್ಮಪುರಾಣ ಪದ್ಮಪುರಾಣ ವೈಷ್ಣವಪುರಾಣ . . . ಬ್ರಹ್ಮಾಂಡಪುರಾಣವೆಂಬವೆ . . . ಹದಿನೆಂಟು ಮೂಲಪುರಾಣಂಗಳು (ವಿವೇಕ. ೭); ಇವುಗಳಲ್ಲಿ ನಾಲ್ಕು ವೈಷ್ಣವಪುರಾಣಗಳು ಶಿವ ವಿಷ್ಣುಗಳ ಸಾಮ್ಯವನ್ನು ಪ್ರತಿಪಾದಿಸುತ್ತವೆ (ಭಾರದ. ೧೩೬). 'ಶೈವಪುರಾಣ' ಪರಾ. [ಸಂ.]

ವೈಷ್ಣವಮತ (ನಾ). ೧. ವಿಷ್ಣುವನ್ನು ಪೂಜಿಸುವವರ ಮತ, — ಕುಲ: 'ವೈಷ್ಣವಮತ' ಎಂಬ ಹೆಸರು ಸೂಚಿಸುವಂತೆಯೇ ವಿಷಯ ವಿಷ್ಣುವಿನ ಆರಾಧನೆಯ, ಪೂಜೆಯ ಪರಂಪರೆಗೆ ಅಥವಾ ಸಂಪ್ರದಾಯಕ್ಕೆ ಸೇರಿದ್ದು (ಭಾರದ. ೨೮೨). ೨. ವಿಷ್ಣುಭಕ್ತಿಯನ್ನು ಪ್ರತಿಪಾದಿಸುವ, ಮಧ್ವಾಚಾರ್ಯರಿಂದ ಸ್ಥಾಪಿತವಾದ ಮತ ; ದ್ವೈತಪಂಥ ; ದ್ವೈತಮತ : ಮಧ್ವರಾಯರ ನೆನೆದು ಪರಿಶುದ್ಧರಾಗಿರೊ ಪೊದ್ದಿ ವೈಷ್ಣವಮತವ ಭವಾಬ್ಧಿಯನು ದಾಟಿರೊ (ಪುರಂದ. ೧-೨೦೯ ಅನುಪಲ್ಲವಿ). 'ಶೈವಮತ' ಪರಾ. [ಸಂ.]

ವೈಷ್ಣವವೇದ (ನಾ). ವಿಷ್ಣುಭಕ್ತಿಯನ್ನು ಕುರಿತ ಗೀತಗ್ರಂಥ ; ಪುರಾತನಕಾಲದ ಆಳ್ವಾರರು ರಚಿಸಿದ ವಿಷ್ಣುಸ್ತೋತ್ರ : ಆಳ್ವಾರರು . . . ಸುಮಾರು ೪೦೦೦ ಪದ್ಯಗಳನ್ನು ಹಾಡಿದ್ದಾರೆ. ಈ ಪದ್ಯಗಳಿಗೆ ನಾಲಾಯರ ದಿವ್ಯಪ್ರಬಂಧಂ ಎಂದು ಹೆಸರು. ವೈಷ್ಣವವೇದ ಎಂಬ ಹೆಸರೂ ಇದೆ (ಭಾರದ. ೩೦೯). [ಸಂ.]

ವೈಷ್ಣವಸಿದ್ಧಾಂತ (ನಾ). ವಿಷ್ಣುಭಕ್ತಿಯನ್ನು ಪ್ರತಿಪಾದಿಸುವ ತತ್ತ್ವ,—ದರ್ಶನ : ಜಗತ್ಕಾರಣತ್ವ ಮೊದಲಾದ ಸರ್ವಕೃತ್ಯಗಳನ್ನೂ ವಿಷ್ಣುವಿಗೇ ಸಮರ್ಥಿಸಿ ವಿಷ್ಣುಭಕ್ತಿಯನ್ನೇ ಮುಖ್ಯವಾಗಿ ಕರ್ತವ್ಯವೆಂದು ನಿರ್ಣಯಿಸಿರುವುದರಿಂದ ಈ ದರ್ಶನಕ್ಕೆ ವೈಷ್ಣವಸಿದ್ಧಾಂತವೆಂದು ಪ್ರಸಿದ್ಧಿ (ಹಿಂದುಸಾ. ೨೬೬) ; ವೈಷ್ಣವಾಗಮಗಳ ಬೆಳಕಿನಲ್ಲಿ ವೇದವ್ಯಾಖ್ಯಾನ ಮಾಡುವ ಪ್ರಯತ್ನದಲ್ಲಿ ವೈಷ್ಣವಸಿದ್ಧಾಂತಗಳೂ ಪ್ರವೃತ್ತವಾದುವು (ಭಾತತ್ತ್ವ. ೬೧೭). 'ಶೈವಸಿದ್ಧಾಂತ' ಪರಾ. [ಸಂ.]

ವೈಷ್ಣವಾಗಮ (ನಾ). ವಿಷ್ಣುದೇವಾಲಯಗಳ ನಿರ್ಮಾಣ, ವಿಷ್ಣುವಿಗ್ರಹದ ಪ್ರತಿಷ್ಠೆ, ಪೂಜೆ ಮೊದಲಾದ ವಿಷಯಗಳನ್ನು ತಿಳಿಸುವ ಶಾಸ್ತ್ರ ; ವೈಖಾನ ಸಾಗಮ : ವಿಖನಸಮಹರ್ಷಿಗಳಿಗೆ ಭಗವಂತನಿಂದ ಉಪದಿಷ್ಟವಾದ ವೈಷ್ಣವಾಗಮವು ವೈಖಾನಸಾಗಮವೆಂದು ಪ್ರಖ್ಯಾತವಾಯಿತು (ಭಾರದ. ೭೫). 'ಶೈವಾಗಮ' ಪರಾ. [ಸಂ.]

ವೈಷ್ಣವಾಸ್ತ್ರ (ನಾ). ವಿಷ್ಣುಮಂತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸುವ ಅಸ್ತ್ರ ; ನಾರಾಯಣನು ಅಧಿದೇವತೆಯಾಗಿರುವ ಅಸ್ತ್ರ ; ನಾರಾಯಣಾಸ್ತ್ರ : ಅಂತು ವೈಷ್ಣವಾಸ್ತ್ರಮತಿನಿರ್ಭರದಿಂ ಚತುರ್ವಲದೊಳ್ ಕಾದುತ್ತುಮಿರ (ಜಗವಿ. ೧೨-೩೪ ವ) ; ಇದು ವರಾಹನ ದಾಡೆಯಿದನಾ ತ್ರಿದಶವೈರಿಗೆ ಕೊಟ್ಟೆನವನಿಂದಿದುವೆ ಭಗದತ್ತಂಗೆ ಬಂದುದು ವೈಷ್ಣವಾಸ್ತ್ರವಿದು ಇದು ಹರಬ್ರಹ್ಮಾದಿಗಳ ಗೆಲುವುದು ಕಣಾ ನಿಮಿಷದಲಿ (ಕುಮಾದ್ರೋ. ೩ ೭೨). [ಸಂ.]

ವೈಷ್ಣವಿ (ನಾ). ೧. ವಿಷ್ಣುವಿನ ಶಕ್ತಿ ; ವಿಷ್ಣುಮಾಯೆ. ೨. (ದೇವ, ದಾನವರು ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಮಥನ ಮಾಡಿದಾಗ) ಕ್ಷೀರಸಮುದ್ರದಲ್ಲಿ ಜನಿಸಿದವಳು ; ಲಕ್ಷ್ಮಿ : ಬಾಲಭಾಸ್ಕರನು ಪೂರ್ವಾದ್ರಿಯ ಶಿಖರದ ಮೇಲೆ ಮೈದೋರುವಂತೆ ಪಾಲಾಬ್ಧಿಯಲಿ ಜಗತ್ಪಾಲೆ ಕಣ್ಗೆಸೆದಳು ಶೀಲೆ ವೈಷ್ಣವಿಯೂ ಮುಂತೆ (ಸಮುಮ. ೧೯-೧೨). ೩. ಸಪ್ತಮಾತೃಕೆಯರಲ್ಲಿ ಒಬ್ಬಳು : "ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಮಾಹೇಂದ್ರೀ, ಚಾಮುಂಡಾ—ಈ ೭ ಸಪ್ತಮಾತೃಕೆಯರ ಪೆಸರ್" (ಪಲಾಯು. ೪-೧೭). ೪. ದುರ್ಗಾದೇವಿ ; ದುರ್ಗೆ : ಹರಿಯಚೇಂದ್ರಾದಿಗಳು ಮುರಿದು ಮರೆಯಾಗೆ ಕಾಯ್ದುಯಿರದೆ ವೈಷ್ಣವಿಯಾಗಿ . . . ಶುಂಭಾಸುರನ ಸಿರವ ನಿಮುಷದೊಳರಿದು ಚರಣದಿ ಮೆಟ್ಟಿಯಮರರನುಳುಹಿದಗಜೆ ಸಲಹಾ (ನವಮೊ. ೯-೨). ೫. ವಿಷ್ಣುವಿನ ಭಕ್ತೆ ; ವೈಷ್ಣವಭಕ್ತೆ : ಭಗವಂತನನ್ನು ನಂಬಿಕೊಂಡು ಅವನ ಆರಾಧನೆಯಲ್ಲಿ ವೈಷ್ಣವಿಯರಂತೆ ಕಾಲಕಳೆಯಬೇಕೆಂದು ನಿರ್ಧರಿಸುವ ನನಗೆ ಬೇರಾವ ಬಾಳಿನಲ್ಲಿಯೂ ಆಸೆಯಿಲ್ಲ (ಹಂಮಂಶ. ೩೪೦). ೬. ವೈಷ್ಣವಮತವನ್ನು ಅನುಸರಿಸುವವಳು ; ವೈಷ್ಣವಜಾತಿಯ ಹೆಂಗಸು : ಹಸಿರು ಹಣೆಯಿಂದ ಕುಳಿತ ಎಕ್ಕೋರಿಯಾರಾಣಿಗೂ ಚಾಂದಬೀಬಿಗೂ ಒಂದು ಬೊಟ್ಟು ಉದ್ದ ಕುಂಕುಮವಿಟ್ಟು ವೈಷ್ಣವೀ ಮುತ್ತೆದೆಯರ ಸಾಲಿಗೆ ಸೇರಿಸಿದೆವು (ಗಾಳಿಪ. ೭೦). ೭. ಹಿಂದಿನ ಕಾಲದ ರಾಜರ ಕಾಲದಲ್ಲಿ ಎಲ್ಲೆಂದರಲ್ಲಿ ಸಂಚರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದ, ವಿಷ್ಣುವಿನ ಉಪಾಸಕಿ ; ವಿರಾಗಿಣಿಯರ ಒಂದು ವರ್ಗಕ್ಕೆ ಸೇರಿದವಳು : ವೈಷ್ಣವಿಯು ಆ ದ್ವಾರಪಾಲಕನನ್ನು ಹಿಂಬಾಲಿಸಿ ಅರಮನೆಯೊಳಗೆ ಪ್ರವೇಶ ಮಾಡಿದಳು (ಶ್ರೀಕಾಯು. ೬೩). ೮. [ಸಂಗೀತ] ಸಪ್ತಸ್ವರಗಳಲ್ಲಿ ಒಂದಾದ ಮಧ್ಯಮಸ್ವರದ ಅಧಿದೇವತೆ : ಬ್ರಾಹ್ಮಿ ಮಾಹೇಶ್ವರಿ ಕೌಮಾರಿ ವೈಷ್ಣವಿ ವಾರಾಹಿ ಮಾಹೇಂದ್ರಿ ಚಾಮುಂಡಿಯೆಂಬವರೇ ಕ್ರಮದಿಂದಾ ಷಡ್ಜಾದಿಸ್ವರಾಧಿದೇವತೆಗಳು (ಎವೇಕ. ೧೮೬). 'ಕೌಮಾರಿ' ಪರಾ. [ಸಂ. ವೈಷ್ಣವೀ]

ವೈಸಣಿಗೆ 'ಬಯಿಸಣಿಗೆ' ನೋ.

ವೈಸರಾಯ 'ವೈಸರಾಯಿ' ನೋ.

ವೈಸರಾಯಿ, ವೈಸರಾಯ (ನಾ). ರಾಜ್ಯಾಧಿಕಾರವನ್ನು ನಿರ್ವಹಿಸುವ ಆಡಳಿತಗಾರ ; ರಾಜನ ಪ್ರತಿನಿಧಿ : ವೈಸರಾಯಿ ಎಂಬ ಪದಕ್ಕೆ 'ರಾಜನ ಪ್ರತಿನಿಧಿ' ಎಂದರ್ಥವಾಗುವುದು (ಬಾಲಪ್ರ. III. ೧೩೦೬). ವೈಸರಾಯ : ದಡುಗನನ್ನು ಸ್ಥಾನಿಕನಾಗಿ ವಿಜಯನಗರದ ವೈಸರಾಯನಾದ ಅಣ್ಣದಾನ ಒಡೆಯನ ಅನುಮತಿ ಮೇರೆಗೆ ನೇಮಿಸಲಾಗಿತ್ತು (ತುಳುನಾ. ೧೩೪). [← ಇಂ. Viceroy]

ವೈಸಾರಿಣ (ನಾ). ಮೀನು ; ಮತ್ಸ್ಯ : "ಮೀನಂ ಝಷಂ . . . ವೈಸಾರಿಣಂ ಮತ್ಸ್ಯಮೆನೆ ಮೀನ್ನ ನಾಮಂ" (ಮಂಗಾ. ೧೨೦-೬). [ಸಂ.]

ವೈಸಿಕ (ನಾ). ೧. ವೇಶ್ಯೆಯರು ವಿಟರನ್ನು ಮನಸೆಳೆಯಲು ಬಳಸುವ ಗೀತ, ನೃತ್ಯ, ಚಾತುರ್ಯ, ತಂತ್ರ ಮುಂತಾದ ವಿದ್ಯೆ,—ಕಲೆ : ನೆರೆವಳ್ ತಂಗಿಯನಟ್ಟಿ ತಾನೆ ಬರಲೊಲ್ಲಂ ಲಜ್ಜೆಯಿಂದಾತನಂ ಕರೆಯಲ್ ವೈಸಿ [ಪಾಂಶಾ. ೫]ಕವೆಂದಪಂ ಸಖಿ ಸರಣ್ಣೊಕ್ಕಿಂ ಗಡಾ ನಲ್ಲನಂ ಬರಿಸನ್ನಲ್ಲಿಗೆ (ಲೀಲಾವ. ೨-೫೫) ; ಪುರುಡಿನೆಡೆಯುಪಚಾರದಿಕ್ಕೆ ವೈಸಿಕದ ಹರವರಿ ಹುಸಿಯ ಹಸರ . . . ಎಂದೆನಿಪ ಸೂಳೆಗೇರಿಯ ಹೊಕ್ಕಸವನೀಶನು (ಹಚಕಾ. ೪-೪) ; ಅತಿಕುಟಿಲಮಾದ ಡಂಬಕದ ವೈಸಿಕದೆ ಸಂತತಮೆಸೆವ ವಾರಸತಿಯರ್ ಚಪಳೆಯರ್ ನಾಡೆ ಸಿತಗೆಯರ್ (ಆರಾಚ. ೨-೫-೩೮). ೨. ಠಕ್ಕು ; ವಂಚನೆ : ಆಸುರದ ವ್ಯಾಮೋಹವಿದು ಡೊಳ್ಳಾಸವೋ ಕೌರವರ ಘಟ್ಟಿಸ ವೈಸಿಕವೊ ನಿಮ್ಮಡಿಯ ಮಾಯಾ ಮಯದ ಮಾಲೆಗಳೊ (ಕುಮಾಕ. ೨೬-೨೫) ; ಇಂತು ವೈಸಿಕಮೆಸಗಿದ ತಚ್ಛೋರಭಟರಂ ಘಾತಿಸಿ (ಮರಾಚ. ೨-೪೩). ೩. ನಿರರ್ಥಕವಾದುದು ; ಕೆಲಸಕ್ಕೆ ಬಾರದುದು : ಸಾಕೆದೇತಕೆ ಬಜೆದೆ ವೈಸಿಕದ ಬಾಣಪ್ರಯೋಗಂಗಳ್ (ಚೈಮಿಪಾ. ೨೫-೩೪) ; ವೈಸಿಕದ ಕಿರುವಳ್ಳಿಯಂ ಕೈಲಾಸಗಿರಿಗೆ ಸಮನೆನಿಸಿ ತೋರಿದ . . . ಶಿವಸಿದ್ಧಪತಿ ನಿನ್ನ ಸಮ್ಮುಖಕೆ ಬರಲೆನಗೆ ಸನ್ಮಾರ್ಗಮಂ ತೋರಿ ನೀನುಪಕರಿಸು (ಕರಿಚೆಂ. ೮-೭೦). [< ಸಂ. ವೈಶಿಕ]

ವೈಸ್ರಸಿಕ (ನಾ). [ಜೈನ] ಶಬ್ದಭೇದದಲ್ಲಿ ಒಂದು ಬಗೆ ; "ಅಭಾಷಾತ್ಮಕ ಶಬ್ದಭೇದ-ಸ್ವಭಾವಜನ್ಯವಾದ ಮೇಘಧ್ವನಿ ಮೊದಲಾದುವು" (ಜೈನಕೋ. ೨೫೯) ; ಅಭಾಷಾತ್ಮಕಮುಂ ಪ್ರಾಯೋಗಿಕ ವೈಸ್ರಸಿಕಭೇದದಿಂ ದ್ವಿವಿಧಂ ಅಲ್ಲಿ ಬಲಾಹಕಾದಿಪ್ರಭವಂ ವೈಸ್ರಸಿಕಂ ಅಕ್ಕುಂ (ತತ್ತ್ವಪ್ರ. ೨೪೨) ; ಶಬ್ದವು ಪ್ರಾಯೋಗಿಕ, ವೈಸ್ರಸಿಕ (ಸ್ವಾಭಾವಿಕ) ಎಂದು ಎರಡು ವಿಧವಾಗಿದೆ . . . ಮೇಘಾದಿಗಳಿಂದ ಉಂಟಾಗುವುದು ವೈಸ್ರಸಿಕವು (ಜೈನಧ. ೫೬). [ಸಂ.]

ವೈಸ್ವರ್ಯ (ನಾ). ಧ್ವನಿ ಬದಲಾಗುವಿಕೆ : ಸ್ತಂಭ (ಸ್ತಬ್ಧತೆ) . . . ವೇಪಥು, ಅಶ್ರು (ಕಣ್ಣೀರು), ವೈಸ್ವರ್ಯ (ಧ್ವನಿ ಬದಲಾಗುವುದು) -- ಇವು ಸಾತ್ವಿಕಭಾವಗಳು (ಸಂಗಾಚ. ೧೨) [ಸಂ.]

ವೈಹಳಿ 'ವೈಹಾಳಿ' ನೋ.

ವೈಹಾಯಸ (ಗು). ೧. ಆಕಾಶದಲ್ಲಿರುವ ; ಗಗನದಲ್ಲಿರುವ. (ನಾ). ೨. ಬಾನು ; ಆಕಾಶ : ವೈಹಾಯಸಯುದ್ಧಸನ್ನದ್ಧರನಪರಾಜಿತಾನಂತವೀರ್ಯರಂ ಕಂಡು ಪೊಡವಟ್ಟು (ಶಾಂತಿಪು. ೩-೭೫ ವ) ; ತರಣಿ ವೈಹಾಯಸವನೇಱಿದ ಕರವ ಬೀಸಿದ ವಿಷ್ಣುಚರಣದ ಸರಣಿಯಲಿ ಸರದೆಗೆವ ಗಂಧರ್ವರನು ಖಿತಿಗೊಳಿಸಿ (ಕೌಶಾ. ೪೧-೧) [ಸಂ.]

ವೈಹಾಸಿಕ (ನಾ). ಹಾಸ್ಯಮಾಡುವವನು ; ಹಾಸ್ಯಗಾರ ; ವಿದೂಷಕ : "ಸುಪರಿಹಾಸಂ ಧ್ರುವಂ ವೈಹಾಸಿಕನೆನಲ್ಕೆ ನೃಪರ ನಗಿಸುವನಕ್ಕುಂ" (ಮಂಗಾ. ೮೦-೯). [ಸಂ.]

ವೈಹಾಳಿ, ಒಯ್ಯಾಳಿ, ವೈಯಾಳಿ, ವೈಹಳಿ (ನಾ). ೧. ಕುದುರೆ, ಆನೆ, ಟಗರು ಮೊದಲಾದುವುಗಳ ಮೇಲೆ ಕುಳಿತು ಮಾಡುವ ಸವಾರಿ : ಗೋಳಿಟ್ಟು ಸತಿಯರಂ ವೈಹಾಳಿಯನೇಱಿದನವಳ್ದಿರ ದಾವಣಿಯಂ ಲೀಲೆಯೊಳೆ ಕಟ್ಟಿದಂ ಗುಣಬಳಂ ವಿಟಚಕ್ರವರ್ತ್ತಿ ವಿಭುದೇಮರಸ (ಸೌಇಇ. IX-i, ೧೧೮-೪೩ ; 1057) ; ರಂಜಿಸುವ ಮಹಿಷಯುದ್ಧಂಗಳಂ ಕಾಣುತುಂ ಕರಿತುರಗವೈಹಾಳಿಯೊಳ್ ಬೆರಸಿ ಬಳೆವುತುಂ (ನಂದಿರ. ೩-೫೯) ; ಎಳಗನ ವೈಹಾಳಿಯ ಮಾಡೇಳ್ಕೆ ಕೆಳೆಯರ ಮೇಳಕೆ ಮನಗುಡಲೇಳ್ಕೆ (ಹಚಕಾ. ೧೨-೩೦ ರಗಳೆ). ೨. ಸಂಚಾರ ; ವಿಹಾರ ; ಗಮನ : ಮೇಲುರತದಲಿ ಪರಿಮಳದ ವೈಹಾಳಿಯಲಿ ಸಲೆ ಬೀದಿವರಿದು ಚಡಾಳಿಸುವ ಸೊಗಸಿನಲಿ ಸೊಂಪಾದಳು ಸರೋಜಮುಖಿ (ಕುಮಾಅ. ೧೦-೪) ; ವಾಯುವಿನ ವೈಹಾಳಿಗೆಡೆಗುಡು ನಿನ್ನ ವಚನವನು (ತೂರರಾ. ೬-೨೩-೨೫). ೩. ಕುದುರೆಸವಾರಿಯನ್ನು ಪ್ರದರ್ಶಿಸುವ ಸ್ಥಳ ; ಕುದುರೆಸವಾರಿಯ ಮೈದಾನ : ಬನವೆತ್ತಂ ಧವಳಾರ ವಂಕದ ಕಳಂ ವೈಹಾಳಿ ಪೂದೋಂಟದಿಂಬನೆ ತಳ್ತಂಗದಿ ಸೂಳೆಗೇರಿ ಕೆಱೆಗಳ್ ಕಣ್ಗೊಪ್ಪಮಂ ಮಾಡೆ (ಎಇ. XIII, ೩೦೨-೧೦ ; 1125). ಒಯ್ಯಾಳಿ : ೧. ಕಾನನದೊಯ್ಯಾಳಿಯಿಂದಲಿ ಬರುತಿರ್ದು ತಾನು ಕಂಡನೋ ಮಾರಿದತ್ತ (ಜಿನರಾ. ೫-೨೧) ; ಪುರುಷಪ್ರದ್ಯುಮ್ನ ರತಿದೇವಿಯರ ಸತ್ಪುತ್ರ

. . . ತುರಗ ರಥ ಗಜಗಳೊಯ್ಯಾಳಿಕೇಳಿಯನರಿದು (ನವಮೋ. ೧೬-೩). **ವೈಯಾಳಿ** : ೧. ತುರಗ ವೈಯಾಳಿಯನು ಮಾಡುವೆ ತ್ವರಿತದಿಂದಪ್ಪಣೆಯ ಪಾಲಿಸು (ನಾಗಚ. ೯-೩೪). **ವೈಹಳಿ** : ೩. ಪೊಳಲ ಪೊಱಗಣ ನಾಲ್ಕುಂದೆಸೆಗಳೊಳಾನೆಗಳ ಕುದುರೆಗಳ ವಾಹಕರ ಕಳಕಳರವದಿಂದ ಕಣ್ಗೆಸೆದವು ವೈಹಳಿಯ ಕಳಗಳೇನನೆಂಬೆ (ಕುರಾಸಾಂ. ೪-೬೮) ; P ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ. 'ಬಾಹ್ಯಾಳಿ' ಪರಾ.

[< ಸಂ. ವಾಹ್ಯಾಲೀ]

ವೈಹಾಳಿಗ (ನಾ). ವಿಹಾರಕ್ಕಾಗಿ ಕುದುರೆಸವಾರಿ ಮಾಡುವವನು : ಕೆಲತರದ ಇರಳುಹಕ್ಕಿಗಳು ಈ ವೈಹಾಳಿಗರನ್ನು ಕಂಡೋ ಏನೋ ಕಿರಿಚು – ಕೀಚಲುಗುಟ್ಟುತ್ತಿದ್ದವು (ಎರಬಾ. ೨೧). [ವೈಹಾಳಿ + – ಇಗ]

ವೈಹಾಳಿಯಂಕಣ (ನಾ). ಕುದುರೆ ಅಥವಾ ಆನೆಯ ಸವಾರಿಯನ್ನು ಪ್ರದರ್ಶಿಸುವ ಸ್ಥಳ, – ಮೈದಾನ : ಸೊಕ್ಕಾನೆ ಕುದುರೆಯ ವೈಹಾಳಿಯಂಕಣದಿಕ್ಕೆ ಕಣ್ಮನಕೆ ರಂಜಿಸಿತು (ಮೋಹತ. ೨-೫೫). [ವೈಹಾಳಿ + ಅಂಕಣ]

ವೊಕ್ಕುಳಾರಿ (ನಾ). ಬೇಸಾಯ ಮಾಡುವವನು; ರೈತ(?) : ಹಿನ್ದಕೆ ದೇವಸ್ಥಾನದ ಸೀಮೆಯವರನೂ ವೊಕ್ಕುಳಾರಿ ಹಿಡಿದುಕೊಂಡು ಹೋಗಿ ತೊಂಡನೂರ ಗದ್ದೆನೂವುಳಿಸುವ ಸಂಮಂಧ ಅದನ ನಾವು ಕುಳವ ಕಡಿದು ಬಿಟ್ಟೆವು (ಎಕ. XIV. ಶ್ರೀರಂಗ. ೨೬೩-೮ ; 1527).

[< ಒಕ್ಕಲ್ + ?]

ವೊಡೆತಿರ್ (ಕ್ರಿ). ಕೂಡಿಕೊಂಡಿರು ; ಸೇರಿರು : ಶ್ರೀಮದಱಿಬಲ್ಲಹಾ[ಗ್ರ]ನುಂ ಕುಱುಂಗೋಡ ಮೂನೂರ್ವ್ವರ್ಮ್ಮಹಾಜನರು ವೊಡೆತಿಟ್ಟು ದೇಗುಲಕೆ ಕುಱುಂಗೋಡ ಪೊಲದೊಳ್ . . . ಕೊಟ್ಟು (ಸೌಇ. IX-i, ೬೫-೭ ; 947). 'ಉಡಿತಿಟ್ಟು' ಪರಾ.

[< ಒಡೆತು + ಇರ್]

ವೊಡ್ಡವಾರ 'ವಡ್ಡವಾರ' ನೋ.

– ವೊಲ್ '– ವೋಲ್' ನೋ.

– ವೊಲು '– ವೋಲ್' ನೋ.

ವೋರ (ನಾ). ಒಬ್ಬಾತನ ಹೆಸರು : ಪನ್ನಿರ್ಮ್ಮತ್ತರ್ಕೆಯ್ಯಂ ಮಾನ್ಯಂಗುಡುಗೆನ್ನು ಪೇಳೆ ವೋ(?) ಬೆಸದೊಳ್ . . . ಕೊಟ್ಟು (ಇಅ. XII. ೨೨೩-೫ ; 930). [?]

ವೋರ್ಬಣ್ಣಗೆ (ನಾ). ಒಂದೇ ಆಕಾರ, – ಸ್ವರೂಪ : ಯಾಸ್ವರನುರ್ವ್ವೀ ಪರ್ವ್ವಿಯಡಂಗಿಕೊಂಡಿಪ್ಪನು ವೋರ್ಬ್ಬಂಣ್ಣೆಗೆಯಾಗಿ ಯೋಗಿಗಳ ಮನದ ಕೊನೆಯ ಜೋತಿಸ್ವರನು ವೃಷಭನ ರೂಪಾಗಿ (ಎಇ XXIII. ೩೦-೫ ; 1285). 'ಒಬ್ಬಣ್ಣಿಗೆ' ಪರಾ.

[P ಇದು 'ಒರ್ಬಣ್ಣಿಗೆ' ಎಂಬುದರ ಅಪಲಿಖಿತವಿರಬಹುದು]

– ವೋಲ್, – ಒಲ್$_2$, – ಒಲ್ಲು$_2$, – ಓಲ್, – ವೊಲ್, – ವೊಲು, – ವೋಲು (ಪ್ರ). ಎಂಬಂತೆ, ಹಾಗೆ, ಆ ರೀತಿಯಲ್ಲಿ ಎಂಬರ್ಥದಲ್ಲಿ ಬಳಕೆಯಾಗುವ ಒಂದು ಪ್ರತ್ಯಯ : "ವೋಲೋಲ್ ಪಾಂಗಂತೆವೊಲೆಂಬೀ ಲಲಿತಾಭಿಪ್ಪೈ ಸಾಮ್ಯಮೆಂಬರ್ಥಂ" (ಚಸಾ. ೩೨) ; ಬಾಳಾ ಮೇಲ್ಗಿಖಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ಳಲ್ವವೋಲ್ (ಎಕ. II, ೨೨-೧ ; ಸು. 700) ; ಹೃದಯದೊಳ್ ತಾಳ್ದ ಮಣಿಹಾರಂ ಬೋ[ಪಾಲಾಂ. ಬೊ]ಲ್ ಸೊಗಯಿಸುವ ವಚನವಿರಚನೆ ನೆಗಟ್ಟುಂ (ಕವಿರಾ. ೧-೧೩) ; ಪರಮಶ್ರೀನಿಳಯಂ ಶಶಧರಕಾಂತಿವಿರೋಧಿರೋಚಿವದನಂ ನಿನ್ನಾ ಸರಸಿರುಹದ ವೋಲ್ (ಕವಿರಾ. ೩-೭೨) ; ತನ್ನೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು (ಪಂಪಭಾ. ೧-೭೦) ; ವೋಲೆಂಬುದುಂ ಅಂತೆ ಎಂಬುದುಂ ಉಪಮೆಯೊಳ್ ಪ್ರತ್ಯೇಕಂ ಪತ್ತುಗುಂ . . . ವೋಲೆಂಬುದು ವಿಕಲ್ಪದಿಂ ಹ್ರಸ್ವಮುಮಕ್ಕುಂ (ಶಮದ. ೨೧೪ ವೃತ್ತಿ). IP ಅಕಾರಾಂತ ಶಬ್ದಗಳಲ್ಲಿ 'ವೋಲ್' ಪ್ರತ್ಯಯವು ಬಕಾರ ರೂಪದಲ್ಲಿ ಪ್ರಯೋಗವಾಗುತ್ತದೆ. ಉದಾಹರಣೆಗೆ ಮೇಲೆ ಕೊಟ್ಟಿರುವ (ಕವಿರಾ. ೧-೧೩) ; (ಪಂಪಭಾ. ೧-೭೦)ರ ಪ್ರಯೋಗಗಳನ್ನು ನೋಡಬಹುದು. – ಒಲ್$_2$: ಪುರಲಕ್ಷ್ಮಿಯ ತಲೆದುಡುಗೆಯೊಲಿರು[ತಿಹ] ಪುರುಷಾರ್ತ್ಥತೀರ್ತ್ಥನಾ . . . ಮಹಿಮಾಮನೋಹರಿಪ್ರಿಯ ನಾದಂ (ಕೊಲ್ಹಾಶಾ. ೨೩-೪೦ ; 1209); ಹೃತ್ಕಮಲಕರ್ಣಿಕಾಮಧ್ಯದಲ್ಲಿ ಎಡೆವಿಡದೊಲಾ ವಾಗಮಿರ್ಪ ಪಂಪಾಕ್ಷೇತ್ರದೊಡೆಯಂ ವಿರೂಪಾಕ್ಷನೇ ಪೇಳಿಸಿದೊಡೆ . . . ಪೇಳ್ದಂ (ಚಿಬಪು. ೧-೩೦) ; ನಿಜಪುರಕೆ ಮೃಗಧರನೊಲೆಸೆವ ಶಿಶುವಂ ಕೊಂಡು ಪರಿಜನದೊಡನೆ ಬಂದನುತ್ಸವದೊಳು (ಚೈಮಿಭಾ. ೨೮-೫೯). – ಒಲ್ಲು$_2$: ಸೂಳೆಗವಳ ದೂತಿಕೆ ನುಡಿದಳವನಂ ಜಱೆದು ಪೊಗಳ್ವೊಲು (ಚೈಮಿಭಾ. ೬-೩೫). – ಓಲ್ : ಸುರಪತಿಯೊಡ್ಡೋಲಗಕ್ಕಮಿದು ಮಿಗಿಲೆಂಬೋಲ್ ಕರಮೊಪ್ಪಿರ್ದುದು ಸಭೆಯಾ ತರಳಾಕ್ಷಿಯರಿಂ ಪೊದಟ್ಟು ನೂರ್ಮಡಿ ಚೆಲ್ವಂ (ಧರ್ಮಾಮೃ. ೪-೧೪೬) ; ಗೋಪಿತಾರ್ಥವ ಕೊಟ್ಟು ಜನ ಸವ್ಯಾಪರಾ ಹೋಲ್ ರಚಿಸುವದಕುಪಮಾಪದವ ಕೊಡು ಚಂದ್ರನಾಥನೆ ಕೋಮಲಾಕೃತಿಯಾ (ಬಿಷ್ಣುಪು. ೪-೧೫). – ವೊಲ್ : "ವೊಲೆಂದೊಡೆ ಹೋಲಿಪರ್ಥಮಕ್ಕುಂ" (ಶಬ್ದಮಂ. ೫೬) ; ಕಟ್ಟಿದ ಸಿಂಘಮನೈಟ್ಟೊಡೇನೆಮಗೆನ್ನು ಬಿಟ್ಟ ವೊಲ್ (ಇಅ. X, ೬೧-೯; 700); ವಿಪರೀತಂ ತರುತತಿಯವೊಲಪರಾಗಂ ಶುದ್ಧ ಭೂಮಿವೋಲ್ಪದ್ಮಿನಿವೋಲುಪಗತವಿಭ್ರಮರಹಿತಂ ಕುಪಿತಾಕೃತಿಯೆಂಬುದುಪಮೆ ಸಂಧಾನಾಂಕಂ (ಕವಿರಾ. ೩-೮೩). – ವೊಲು : ಜಲದ ನಿನದಕೆ ಕುಣಿವ ನವಿಲ್ಗಳವೊಲು . . . ಸೂರ್ಯೋದಯಕೆ ಮನವಲರ್ವ ಚಕ್ರಂಗಳ ವೊಲಾಗಳಖಿಳಶಿವೈಕ್ಯರು ನಿನ್ನ ಬರವಂ ಬಯಸುವರು (ಬಸಪು. ೩೭-೫೪) ; ಬೆತ್ತ ಬೆಳೆದದ್ರಿಯವೊಲಿದ್ದುದು ಮತ್ತಗಜನೊಂದಱಿಯದನಿಬರ ಬಾಣಹತಿಗಳಲಿ (ಕುಮ್ರಾಪ್ರ. ೩-೩೯) ; ಅಂಗಜಾಂತಕನಾಲಯದವೊಲು . . . ಎಸೆದುದಗ್ಗದ ರಾಷ್ಟ್ರಕೋಸಲದ (ತೊರಾ. ೧-೯-೭). – ವೋಲು : ಹೊರೆದೆನಕಟಾ ತನುವನಿದ ಸೂಕರನ ಶುನಕನ ವೋಲು (ತೊರಾ. ೧-೪-೧೦) ; ಪುರಲಕ್ಷಿ ಕೈಗಳೆತ್ತಿದವೋಲು ಡೆಂಕಣೆ ಮೆಱೆದುವೆಣ್ಣಸೆಯೊಳು (ಕಂನವಿ. ೨-೬೫).

– ವೋಲು '– ವೋಲ್' ನೋ.

ವ್ಯಂಗ (ನಾ). ೧. ಅಂಗಹೀನ ; ಹೆಳವ. ೨. ದೋಷ ; ಕುಂದು : ಹಲವು ಜೀನಸುಗಳು ಹುಳುತಿರುವವು . . . ಹೊಲಸ ನಾರುವ ಜೀನಸುಗಳು – ಹೀಂಗೆ ಬಗೆಬಗೆಯ ವ್ಯಂಗಗಳಿರುವವು (ಮುಂಬಾ. ೭೩). [ಸಂ.]

ವ್ಯಂಗ್ಯ (ಗು). ೧. ಕೊಂಕಾಗಿ ಸೂಚಿಸಿದ ; ಅಣಕದ : 'ವ್ಯಂಗ್ಯಚಿತ್ರ', 'ವ್ಯಂಗ್ಯನುಡಿ' ಪರಾ. (ನಾ). ೨. ಕೊಂಕು ; ಅಣಕ : ಇಂಗಿತಗಳನಿದಿರಿಡಲೆಳಸುವ ನೋಟ . . . ವ್ಯಂಗ್ಯವ ಕಲಿವ ಒಳ್ನುಡಿ ಬಗೆಗೊಳೆ ಕೋಮಲಾಂಗಿಯ ಕೂರ್ತಱಗಿಪುದು (ಹದಿಬ. ೬-೨೨) ; ವೇಂಬುಲಿಗೆ ವ್ಯಂಗ್ಯ ಅರ್ಥವಾಗಲಿಲ್ಲ (ಪಸುಹೊ. ೪೯). ೩. ಅಣಕದ ಮಾತು ; ಕೊಂಕುನುಡಿ : ಶರಣನಾಡಿದ ವ್ಯಂಗ್ಯಗಳನಾದರಿಸಿ ಮನದೊಳು ನಾಚಿ (ಶಂಕರಾ. ೭-೨) ; ನೀವೇನು ಧರ್ಮರಾಜರೋ . . . ಭೀಷ್ಮಾಚಾರ್ಯ್ರೊ? ಎಂದು ಜಾನಕಿಬಾಯರು ವ್ಯಂಗ್ಯವಾಡಿದರು (ಸಮಜೀ. ೩೨೩). ೪. [ಕಾವ್ಯಮೀ] ಕಾವ್ಯಗಳಲ್ಲಿ ಬಳಕೆಯಾಗುವ ವಾಚ್ಯ ಲಕ್ಷ್ಯ ಮತ್ತು ವ್ಯಂಗ್ಯವೆಂಬ ಮೂರು ಬಗೆಯ ಅರ್ಥಗಳಲ್ಲಿ ಒಂದು ; ವ್ಯಂಜನಾವೃತ್ತಿಯಿಂದ ಬೋಧ್ಯವಾಗುವ ಅರ್ಥ, – ಧ್ವನಿತವಾಗುವ ಅರ್ಥ : ವ್ಯಂಗ್ಯಮಾಗಿ ತೋರ್ಪರ್ಥ ವ್ಯಕ್ತಮಾಗಿ ಮನೋಹರ ಮಾಗಿರೆ (ಅಪ್ರಿ. ೧-೧೮ ವ) ; ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರು ವಿಧ (ಕೃಸಿ. ೧೭೭). [ಸಂ.]

ವ್ಯಂಗ್ಯಚಿತ್ರ (ನಾ). ಅಣಕದ ಚಿತ್ರ ; ನಗೆ ತರಿಸುವ ಚಿತ್ರ : ಮಾನವಾಕೃತಿಗಳು ಕೂಡಾ ಏನೋ ಸಂಪ್ರದಾಯಕ್ಕೆ ಗೀಚಿದಂತಿವೆ ; ವ್ಯಂಗ್ಯಚಿತ್ರಗಳಂತಿವೆ (ಭಾರದ. ೫೩೧).

[ಸಂ.]

ವ್ಯಂಗ್ಯನುಡಿ (ನಾ). ಕೊಂಕನ್ನು ವ್ಯಕ್ತಪಡಿಸುವ ಮಾತು ; ಅಣಕದ ನುಡಿ : ಕೈಯೊಡ್ಡಿ ಕಾಸು ಕೇಳಿದೆವು. ಆಗ ನಮಗೆ ದೊರೆತದ್ದು ವ್ಯಂಗ್ಯನುಡಿ (ಜೀವನ. ೨ ಅರಿಕೆ).

[ವ್ಯಂಗ್ಯ + ನುಡಿ$_2$]

ವ್ಯಂಗ್ಯಾರ್ಥ (ನಾ). = ವ್ಯಂಗ್ಯ ೪ : ಆವ ಕಾವ್ಯದೊಳು ವಾಚ್ಯಾರ್ಥಕೃತಿಶಯವಾದ ವ್ಯಂಗ್ಯಾರ್ಥವು ತೋರದಿರಲೆ ಚಿತ್ರವೆನಿಸುವುದು (ಕುವಲ. ೬) ; ಅನುಕ್ತವಾದರೂ ಅರಿವಿಗೆ ವಿಷಯವಾಗುವ ವ್ಯಂಗ್ಯಾರ್ಥವೇ ಕಾವ್ಯದ ಸಾರ (ಭಾರಮೀ. ೫೧) ; ಪ್ರಾಚೀನರ ಮತಾನುಸಾರವಾಗಿ ಕಾವ್ಯದಲ್ಲಿ ವಾಚ್ಯಾರ್ಥಕ್ಕೇ ಪ್ರಾಧಾನ್ಯ ; ವ್ಯಂಗ್ಯಾರ್ಥವಿದ್ದರೆ, ವಾಚ್ಯಾರ್ಥವನ್ನು ಪುಷ್ಟಿಗೊಳಿಸುವುದರ ಮೂಲಕ ಅದಕ್ಕೆ ಪ್ರಾಶಸ್ತ್ಯ (ಕೃಸಿ. ೧೬೫).

[ಸಂ.]

ವ್ಯಂಗ್ಯೋಕ್ತಿ (ನಾ). ೧. = ವ್ಯಂಗ್ಯನುಡಿ : ವ್ಯಂಗ್ಯೋಕ್ತಿಯು ಅಲ್ಲಲ್ಲಿ ಮೂಡಿ ವಿರಸದ ತೀಕ್ಷ್ಣತೆಯನ್ನು ಹೆಚ್ಚಿಸುತ್ತದೆ (ಸಮಜೀ. ೩೭ ಸೀರಿಕೆ) ; ಅಯ್ಯೋ ಪಾಪ, ಯಾರಾದರೂ

ಅಪ್ಪಾಜಿಯವರಿಗೆ ಹೇಳಬೇಕು ಎಂಬ ವ್ಯಂಗ್ಯೋಕ್ತಿಯಿಂದ ಅವನನ್ನು ಕಳಿಸಿಬಿಡುತ್ತಿದ್ದರು (ಶಾಂತಲಾ. ೧೯೨). ೨. [ಕಾವ್ಯಮೀ] ಕಾವ್ಯಗಳಲ್ಲಿ ವ್ಯಂಜನಾವೃತ್ತಿಯಿಂದ ಬೋಧ್ಯವಾಗುವ ಅರ್ಥವನ್ನು ಒಳಗೊಂಡ ಮಾತು, — ನುಡಿ : ಮಂಗಳ ಮಹಿಮನ ಪುರುಷವಿರಹದೊಂದು ಸಾಂಗತ್ಯದಾ ಸಂಗತಿಯೊಳು ವ್ಯಂಗ್ಯೋಕ್ತಿಯಿಂ ಚಿಕುಪಾದ್ಯಕೃತಮಿದಕ್ಕೆ ಮಂಗಳಮಹಶ್ರೀ ಶ್ರೀ [illegible] ೩೮-೧೦೧) ; ಕಾವ್ಯದ ರೀತಿ ಅನಿವಾರ್ಯವಾಗಿ ಅಲಂಕಾರಾತ್ಮಕವೂ ವ್ಯಂಗ್ಯಪೂರ್ಣ ಆಗಿರುವುದರಿಂದ, ಅದರ ರಚನೆಯ . . . ವ್ಯಂಗ್ಯೋಕ್ತಿ, ವಕ್ರೋಕ್ತಿಗಳನ್ನು . . . ರಸಾನುಭವಮೌಲ್ಯದ ದೃಷ್ಟಿಯಿಂದ ಪರಿಗಣಿಸಬೇಕು (ಸಾಹಿತ್ಯ. ೧೧೫). [ಸಂ.]

ವ್ಯಂಜಕ (ಗು). ೧. ಸ್ಪಷ್ಟಗೊಳಿಸುವ ; ವ್ಯಕ್ತಗೊಳಿಸುವ : ಬೇಱೊಂದರ್ಥಮಂ ಸೂಚಿಪ ಶಬ್ದಾದಿಕವೇ ವ್ಯಂಜಕಶಬ್ದಮಕ್ಕುಂ (ಎವೀಕ. ೧೪೩) ; ವ್ಯಂಜಕಶಬ್ದ, ವ್ಯಂಜಕ ಅರ್ಥ, ವ್ಯಂಜನಾವ್ಯಾಪಾರ ಇವುಗಳೆಲ್ಲವುಗಳ ಸಮುದಾಯರೂಪವಾದ ಕಾವ್ಯವನ್ನೇ ಮುಖ್ಯವಾಗಿ ಧ್ವನಿಯೆನ್ನಲಾಗಿದೆ (ಧ್ವನ್ಯಾಲೋ. ೨೬ ಅಡಿಟಿ). (ನಾ). ೨. [ಕಾವ್ಯಮೀ] ವ್ಯಂಗ್ಯಾರ್ಥವನ್ನು ಕೊಡುವ ಪದ ಅಥವಾ ಅರ್ಥ : ವ್ಯಂಜನಾವ್ಯಾಪಾರವನ್ನುಳ್ಳದ್ದಕ್ಕೆಲ್ಲ — ಅದು ಶಬ್ದವಾಗಲಿ, ಅರ್ಥವಾಗಲಿ — ವ್ಯಂಜಕವೆಂದು ಹೆಸರು (ಭಾರಮೀ. ೨೬೫) ; ಅರ್ಥವು ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರುವಿಧ. ಈ ಅರ್ಥಗಳನ್ನು ಕೊಡುವ ಶಬ್ದಗಳಿಗೆ (ಕ್ರಮವಾಗಿ) ವಾಚಕ, ಲಕ್ಷಕ, ವ್ಯಂಜಕಗಳೆಂದೂ . . . ಹೆಸರು (ಕೃವಿ. ೧೭೭). ೩. [ನಾಟ್ಯ] ಹಸ್ತವಿನ್ಯಾಸಗಳಿಂದ ಭಾವವನ್ನು ವ್ಯಕ್ತಪಡಿಸುವುದು : ''ವ್ಯಂಜಕಃ, ಅಭಿನಯಃ— ೨ ಹಸ್ತವಿನ್ಯಾಸಗಳಿಂದ ಭಾವಾರ್ಥವನ್ನು ತಿಳಿಯಪಡಿಸುವುದಕ್ಕೆ ಹೆಸರುಗಳು'' (ಸಿದ್ಧಾಂತಿ. ೬೨). [ಸಂ.]

ವ್ಯಂಜನ (ನಾ). ೧. ಸ್ಪಷ್ಟಗೊಳಿಸುವಿಕೆ ; ಅಭಿವ್ಯಕ್ತಿ. ೨. ಸಂಸ್ಕೃತದಲ್ಲಿ ಕಕಾರದಿಂದ ಹಕಾರದವರೆಗೂ ಕನ್ನಡದಲ್ಲಿ ಕಕಾರದಿಂದ ಳಕಾರದವರೆಗೂ ಇರುವ ಅಕ್ಷರಗಳ ಸಮೂಹ : ಅಂತಕಾರಾದಿ ಹಕಾರಾಂತ ಸ್ವರ ವ್ಯಂಜನ ಭೇದ ಭಿನ್ನ ಶುದ್ಧಾಕ್ಷರಂಗಳುಮಂ (ಆದಿಪು. ೮-೫೯ ವ) ; ಪ್ರಕಟಿತರ ವ್ಯಂಜನ ಸಂಜ್ಞೆ ಕಕಾರದಿನಾ ಳಕಾರ ಪರ್ಯಂತಂ ಪಂಚಕ ಪಂಚಕಂಗಳಿಂ ಪಂಚಕಮಕ್ಕುಂ (ಶಮದ. ೧೩) ; ಸ್ವರದ ಸಹಾಯವಿಲ್ಲದೆ ಉಚ್ಚರಿಸಲಾಗದ ವರ್ಣಕ್ಕೆ ವ್ಯಂಜನ ಎಂದು ಹೆಸರು (ಮಧ್ವಮ. ೧೧). ೩. ಚಿಹ್ನೆ ; ಗುರುತು. ೪. ಸ್ತ್ರೀ ಅಥವಾ ಪುರುಷರಿಗೆ ಯೌವನಾವಸ್ಥೆಯಲ್ಲಿ ದೇಹದಲ್ಲಿ ತೋರುವ ಚಿಹ್ನೆ, — ಗುರುತು. ೫. ಊಟದಲ್ಲಿ ಬಾಡಿಸಿಕೊಳ್ಳುವ ಅಥವಾ ನಂಜಿಕೊಳ್ಳುವ ಪದಾರ್ಥ ; ನಂಜಿಕೆ : ''ನಿಷ್ಠಾನಂ, ವ್ಯಂಜನಂ — ಈ ೨ ವ್ಯಂಜನಂ'' (ಹಲಾಯು. ೫೩-೧೬೬) ; ವಿವಿಧ ಭಾಜನಂಗಳೊಳಡುವ ಘೃತ ಲವಣ ತೈಲಕ್ಷೀರದಧಿವ್ಯಂಜನಂಗಳೊಳ್ ಸಂಸ್ಕಾರಂ ಮಾಡುವ . . . ತೆಱನುಮಱಿಯೆ ಪೇಟ್ದು (ಆದಿಪು. ೬-೨೭ ವ) ; ಮೊಸರನ್ನದ ಜತೆಗೆ ಈ ವ್ಯಂಜನವಿಲ್ಲದ ತುತ್ತು ಗಂಟಲಿನಲ್ಲಿ ಇಳಿಯುವುದೇ ಇಲ್ಲ (ಹಸುಹೂ. ೭೦೯). ೬. ಸ್ತ್ರೀ ಮತ್ತು ಪುರುಷರ ಮರ್ಮಾಂಗ: ''ವ್ಯಂಜನಂ – ಗುರ್ತು, ಗಡ್ಡಮಿಸೆ, ಮಜ್ಜಗೆಪಳೆದ್ದ, ಸ್ತ್ರೀಪುರುಷರ ಗುಹ್ಯಾವಯವ, ಆಕ್ಷರ'' (ಸಿದ್ಧಾಂತಿ. ೪೦೨). ೭. ಜೊತೆಯ ವಸ್ತು ; ಪರಿಕರ : ನೇಗಿಲುಗಳೂ . . . ಸುವರ್ಣಮಾಲಿಕೆಗಳೂ ತುಮುರು ತುಮುರಾದ ವಿಚಿತ್ರವ್ಯಂಜನಗಳೂ (ಕೃವಾ. ೧೦೧). ೮. [ಕಾವ್ಯಮೀ] ಅಭಿಧಾ, ಲಕ್ಷಣ, ವ್ಯಂಜನವೆಂಬ ಮೂರು ಶಬ್ದಶಕ್ತಿಗಳಲ್ಲಿ ಒಂದು ; ಧ್ವನಿಶಕ್ತಿ : ಅಭಿಧ, ಲಕ್ಷಣ, ವ್ಯಂಜನವೇ ಮೊದಲಾದ ಶಬ್ದಶಕ್ತಿಯನ್ನು ಈ ಕಾಲದ ಯಾವ ಕವಿಯೂ ಕಣ್ಣೆತ್ತಿ ನೋಡಲಿಲ್ಲ (ಭಾರದ. ೪೬೩). ೯. [ಜೈನ] ''ಕ್ಷುಲ್ಲಕ ಲಕ್ಷಣ'' (ಜೈನಕೋ. ೨೫೯): ಚತುರ್ವಿಧಶುಕ್ಲಧ್ಯಾನದೊಳ್ ಪೂರ್ವಾಪರ ವಿಷಯ ವಿವಿಕ್ತಾರ್ಥವ್ಯಂಜನ ಯೋಗಸಂಕ್ರಮಣಲಕ್ಷಣಮಪ್ಪ . . . ಉಪಶಾಂತ ಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದು (ಆದಿಪು. ೬-೩೪ ವ) ; ಅಂತು ಜಿನಾರ್ಭಕಂ ನೋಡಿ ತದೀಯಾಂಗ ಸಂಗತಲಕ್ಷಣವ್ಯಂಜನಂಗಳಂ ನೋಡಲಱಿಯದೆಯುಂ (ಶಾಂತಿಪು. ೧೦-೭ ವ). ೧೦. ಆಹಾರವನ್ನು ಅಗಿಯುವುದು : ಚತುರಾಬ್ದಂ(ಬರಲ್) ಬೀಱ್ಗುಮಯ್ದಾದಂತೆಲ್ಲಂ ಬರ್ಕುವಲ್ಲಿಂ ಬಟಾಯುವುನಿತುಮುಂ ವ್ಯಂಜನ ಕ್ಯಾಶ್ರಯಂಗಳ್ (ಅಜಿತೋಪ. ೧೧-೭೯). [ಸಂ.]

ವ್ಯಂಜನನಿಮಿತ್ತ (ನಾ). [ಜೈನ] ದೇಹದ ಮೇಲಿನ ಸುಳಿ, ಕಪ್ಪುಚುಕ್ಕಿ, ಕಾರೆಳ್ಳು ಮೊದಲಾದವುಗಳನ್ನು ನೋಡಿ ಸ್ಥಾನಮಾನ, ಪ್ರಭುತ್ವ, ಲಾಭನಷ್ಟ ಮೊದಲಾದ ಫಲಾಫಲಗಳನ್ನು ಹೇಳುವುದು : ಸ್ವರಮುಂ ಕೇಳ್ದುದು ಸ್ವರನಿಮಿತ್ತಮೆಯ ಕಾರೆಳ್ಳು ಮೊದಲಾದುವಂ ನೋಡಿ ಫಲಮುಂ ಪೇಳ್ದುದು ವ್ಯಂಜನನಿಮಿತ್ತಮೆಂಬುದು (ಶ್ರಾವಕಾ. ೧೩-೨). [ಸಂ.]

ವ್ಯಂಜನಪದಾರ್ಥ (ನಾ). ಊಟದಲ್ಲಿ ಬಾಡಿಸಿಕೊಳ್ಳುವ ಪದಾರ್ಥ ; ನಂಜಿಕೆ : ಅನ್ನ, ವ್ಯಂಜನಪದಾರ್ಥಗಳು . . . ಮೊದಲಾದ ಭೌತಿಕಸಾಮಗ್ರಿಗಳಿಂದ ಹೊಟ್ಟೆಯನ್ನು ತುಂಬಿಸುವುದು ಆಧಿಭೌತಿಕಪೂರ್ತಿ (ಕಮಕ. ೫೧). [ಸಂ.]

ವ್ಯಂಜನಸಂಧಿ (ನಾ). [ವ್ಯಾಕ] ಎರಡು ವ್ಯಂಜನಗಳು ಸೇರಿ ಆಗುವ ಸಂಧಿ : ವ್ಯಂಜನಸಂಧಿ — ಆದೇಶ . . . ಕೆಲವೆಡೆಗಳಲ್ಲಿ ಈ ಆದೇಶವಿಲ್ಲ (ಕ್ರಿವಿ. ೧೦). [ಸಂ.]

ವ್ಯಂಜನಾಂಗ (ನಾ). [ವ್ಯಾಕ] ವ್ಯಂಜನಾಕ್ಷರದಿಂದ ಕೂಡಿದುದು : ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ ಪರಿಕಿಸೆ ಬಿಂದು ವಿಸರ್ಗಂ ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್ (ಶಮದ. ೧೨). [ಸಂ.]

ವ್ಯಂಜನಾಂತ (ನಾ). [ವ್ಯಾಕ] ವ್ಯಂಜನದಿಂದ ಕೊನೆಯಾಗುವ ಶಬ್ದ : ಸ್ವರಾಂತವಾಗಿರುವ ಅನೇಕ ಶಬ್ದಗಳು ಹಳಗನ್ನಡದಲ್ಲಿ ವ್ಯಂಜನಾಂತವಾಗಿದ್ದು ವೆಂಬುದನ್ನು ಗಮನಿಸಬೇಕು (ಕ್ರಿವಿ. ೬) ; ವ್ಯಂಜನಾಂತಗಳಾದ ಅರಲ್, ಪುರುಳ್ — ಎಂಬಂಥವು . . . ಸ್ವರಾಂತಗಳಾಗಿ ಪ್ರಥಮಾವಿಭಕ್ತಿರೂಪಗಳೇ ಆಗುತ್ತವೆ (ಸಂಶೋಧ. ೫೪). [ಸಂ.]

ವ್ಯಂಜನಾವೃತ್ತಿ (ನಾ). [ಕಾವ್ಯಮೀ] ಶಬ್ದಾರ್ಥಗಳ ಸಂಬಂಧದಲ್ಲಿ ಹೇಳಿರುವ ಮೂರುವೃತ್ತಿಗಳಲ್ಲಿ ಒಂದು ; ವ್ಯಂಗ್ಯಾರ್ಥವನ್ನು ತಿಳಿಸುವ ಶಕ್ತಿ : ಅರ್ಥವು ಮುಖ್ಯವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಮೂರು ವಿಧ . . . ಅವುಗಳಲ್ಲಿರುವ ಸಾಮರ್ಥ್ಯಕ್ಕೆ (ಅಥವಾ ವೃತ್ತಿಗೆ – ಕ್ರಮವಾಗಿ) ಅಭಿಧಾವೃತ್ತಿ, ಲಕ್ಷಣಾವೃತ್ತಿ, ವ್ಯಂಜನಾವೃತ್ತಿ ಎಂದು ಹೆಸರು (ಕೃವಿ. ೧೭೭); ಅರ್ಥವಿಶೇಷವನ್ನು ಬಾಯಿಬಿಟ್ಟು ಹೇಳದಿದ್ದರೂ ಸನ್ನಿವೇಶಮಹಿಮೆಯಿಂದ ವ್ಯಂಜನಾವೃತ್ತಿಯೆಂಬ ಬೇರೊಂದು ವೃತ್ತಿಯ ಮೂಲಕ ಸೂಚಿಸಬಲ್ಲುದು (ಭಾರಮೀ. ೪೯). [ಸಂ.]

ವ್ಯಂಜಿತ (ನಾ). ವ್ಯಕ್ತವಾದುದು ; ಸ್ಫುಟಗೊಂಡುದು : ಇಲ್ಲಿ ವ್ಯಂಜಿತವಾಗಿರುವ ಭಾವಗಳು . . . ನನ್ನ ಮನಸ್ಸಿನ ನಿವೇದನ (ಮೀಗೀ. VI, ೬೦೫). [ಸಂ.]

ವ್ಯಂಜಿಸು (ಕ್ರ). ಅಭಿವ್ಯಕ್ತವಾಗು ; ಪ್ರಕಟವಾಗು : ಮಾಯೆಯ ಪಂಜರದ ಪರಮಾತ್ಮನೋ ಹರಹರಮಹಾದೇವ ವ್ಯಂಜಿಸುವ ಸರ್ವಾಂಗಲಕ್ಷ್ಮಿಯ ಕಂಜನಯನನ ಕೋಮಲಾಕೃತಿ ರಂಜಿಸಿತು (ನಭಾಗ. ೫-೪-೩೪). [ವ್ಯಂಜನ + - ಇಸು]

ವ್ಯಂತರ (ನಾ). ೧. ಭೂತ ; ಪಿಶಾಚಿ. ೨. [ಜೈನ] ಜ್ಯೋತಿಷೀ, ವಿಮಾನವಾಸೀ, ಭವನಪತಿ ಮತ್ತು ವ್ಯಂತರವೆಂಬ ನಾಲ್ಕುಬಗೆಯ ದೇವತೆಗಳಲ್ಲಿ ಒಂದು ಗುಂಪು ; P ''ಮಹಾಮೇರುಪರ್ವತದ ತುದಿಯಿಂದ ಭವನಲೋಕದವರೆಗೆ ಇರುವ ದೇವತೆಗಳು'' (ಜೈಸಿಕೋ. ೨೩೯) : ಮರ್ತ್ಯ ವಿದ್ಯಾಧರರಾಜವ್ಯಂತರಾಧೀಶ್ವರಕರಸರಸೀಜಂಗಳಂ . . . ಮುಗಿಯಿಸೆ (ಆದಿಪು. ೬-೪೬) ; ಸತ್ತ ಮನುಷ್ಯರುಂ ವ್ಯಂತರರಾಗಿ ಪುಟ್ಟಿ ಪದ್ಮಾದಿ ಸರೋವರಂಗಳೊಳಂ . . . ಕ್ರೀಡಿಸುತ್ತಿರ್ಪರ್ (ಸುಕುಮಾ. ೧೧-೫೪ ವ) ; ದಾನವಾಮರ ಮಾನುಷ ಜ್ಯೋತಿಷ್ಕರು ಭೂನುತವಾದ ವ್ಯಂತರರು (ತ್ರಿಪುದಾಂ. ೧೩-೧೪೭). [ಸಂ.]

ವ್ಯಂತರಿಗ (ನಾ). = ವ್ಯಂತರ ೧ : ಕಿನ್ನರ ಕಿಂಪುರುಷ ಮಹೋರಗ ಗಂಧರ್ವ ಯಕ್ಷ ರಾಕ್ಷಸ ಭೂತ ಪಿಶಾಚ ಈ ಎಣ್ಬರು ವ್ಯಂತರಿಗರುಂ (ಪ್ರಶಿಷ್ಟಾ. ೬-೪).

[ವ್ಯಂತರ + - ಇಗ]

ವ್ಯಂಶಿತ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; P ''ಒಂದು ಕೈಯನ್ನು ಎದೆಯ ಹತ್ತಿರ ಕೆಳಮುಖವಾಗಿಯೂ, ಇನ್ನೊಂದನ್ನು ಮೇಲ್ಮುಖವಾಗಿ ಕೆಳಗಡೆಯೂ [ಪಕ್ಕೆಯಲ್ಲಿ] ಹಿಡಿದು ಪರ್ಯಾಯವಾಗಿ ಉದ್ವೇಷ್ಟಮಾಡುತ್ತ ಕೆಳಕ್ಕೂ ಪರಿವರ್ತಮಾಡುತ್ತ ಎದೆಗೂ ಕೈಗಳನ್ನು ತಂದು, ಒಂದು ಕೈಯನ್ನು ಮೇಲ್ಮುಖವಾಗಿಯೂ, ಇನ್ನೊಂದು ಕೈಯನ್ನು ಕೆಳಮುಖವಾಗಿಯೂ ರೇಚಿತಮಾಡಿ ಆಲೀಢಸ್ಥಾನಕದಿಂದ

ನಿಂತುಕೊಳ್ಳುವುದು. ವಿ — ಆಂಜನೇಯಾದಿ ಮಹಾಕಪಿಗಳ ಪರಿಕ್ರಮವನ್ನು ಅಭಿನಯಿಸುವಾಗ'' (ಲಾಸ್ಮರಂ. ೨೯೫ ಗದ್ಯಾನುವಾದ) : ಭುಜಂಗಾಂಚಿತಕಂ ಮಿಗೆ ದಂತರೇಚಿತಂ ಚತುರಂ ನಿಶ್ಚಿತ ಕಟಿಭ್ರಾಂತಮುಂ ವ್ಯಂಶಿತಮ್ಮೆಶಾಖಾಖ್ಯರೇಚಿತಂಗಳಿವಿನಿತುಂ (ಲಾಸ್ಮರಂ. ೪-೩೧) : ತಲಪುಷ್ಪಪುಟ . . . ಕಟಿಭ್ರಾಂತ, ವ್ಯಂಶಿತ . . . ಗಂಗಾವತರಣ — ಈ ನೂರೆಂಟು ಕರಣಂಗಳ್ (ಲಾಸ್ಮರಂ. ೪-೪೨ ವ). [ಸಂ.]

ವ್ಯಕ್ತ (ಗು). ೧. ಪ್ರಕಟವಾದ ; ಕಾಣಿಸಿಕೊಂಡ. ೨. ಸ್ಪಷ್ಟವಾದ. ೩. ಸ್ಪಷ್ಟವಾಗಿ ತಿಳಿಸಿದ ; ನಿರ್ದಿಷ್ಟವಾಗಿರುವ. (ನಾ). ೪. ಸ್ಪಷ್ಟವಾದುದು ; ಚೆನ್ನಾಗಿ ಕಾಣುವಂತಹುದು : ಮುನ್ನಾರು [೦] ಜಾತಕಮಂ ಕನ್ನಡದಿಂ ವ್ಯಕ್ತಮಾಗಿ ಪೇೞ್ದನ್ವಿತರಿಲ್ಲ (ಜಾತಕ. ೧-೧೭) : ವ್ಯಕ್ತಂ ಸಾಮಮಯಮಮಾತ್ಮೋಕ್ತಿ ಸಮುಚ್ಚಂಡದಂಡ ಮಯಮಿತ್ರಲಪತ್ಮೋಕ್ತಿಯವೆರಡುಮನನುಸರಿಪುಕ್ತಿಯೆ ವಕ್ತವ್ಯಮೆನಗೆ ಸುಘಟಿತ ಭಾವ್ಯಂ (ಚಂದ್ರಪ್ರ. ೯-೧೨ವ) ; ನಮ್ಮನ್ನು ವ್ಯಕ್ತದ ಅಂಚಿಗೆ ಎಳೆದೊಯ್ದು ಅವ್ಯಕ್ತದ ಗಭೀರತೆಯನ್ನು ವೀಕ್ಷಿಸುವಂತೆ ಮಾಡುತ್ತದೆ (ಭಾವಗೀ. ೩೧). ೫. ಪಂಡಿತ. ೬. ವಿಷ್ಣು : ಲಕುಮಿ ನಾರಸಿಂಹನ ರೂಪಗುಣಗಳು . . . ಕಾರಣಂಶಾವೇಶ ವ್ಯಾಪ್ತವತಾರ ಕಾರ್ಯಾವ್ಯಕ್ತವುವಾರು ನಾಲ್ಕು ವಿಭೂತಿಯಂತರ್ಯಾಮಿರೂಪಗಳು (ಹಸಾರ. ೭-೨೬).

ವ್ಯಕ್ತವಾಗು = ಸ್ಪಷ್ಟವಾಗು ; ತಿಳಿ : ಆತನಲ್ಲಿ ಉಳಕೊಳ್ಳಲೊಲ್ಲನೆಂದೂ . . . ವ್ಯಕ್ತವಾಗುತ್ತದೆ (ಮೂರುಖ. ೯೦). [ಸಂ.]

ವ್ಯಕ್ತಂ (ಅ). ನಿರ್ದಿಷ್ಟವಾಗಿ ; ಸ್ಪಷ್ಟವಾಗಿ ; ಖಚಿತವಾಗಿ : ಉಕ್ತವಿಚಾರಂ ನ್ಯಾಯನಿಯುಕ್ತಂ ಕ್ರಮಮಿನ್ನದಕ್ಕೆ ಬಾರದುವೆಲ್ಲಂ ವ್ಯಕ್ತಂ ನ್ಯಾಯವಿರುದ್ಧಂ ಪ್ರೋಕ್ತ ಮಹಾದೋಷಂ (ಕವಿರಾ. ೧-೧೦೬). [ಸಂ.]

ವ್ಯಕ್ತಪಡಿಸು (ಕ್ರಿ). ಸ್ಪಷ್ಟಪಡಿಸು ; ಪ್ರಕಟಿಸು : ಕೆಲವರು ಪ್ರಾಚ್ಯದೇಶದ ಸಹನೆ, ಧಾರ್ಮಿಕ ಸಹಿಷ್ಣುತೆಯ ವಿಷಯವಾಗಿ ಗೌರವವನ್ನು ವ್ಯಕ್ತಪಡಿಸಿದರು (ಧರ್ಮಸಾ. ೫೦) ; ನಲಿನಿಯನ್ನು ಅರಳಿಸದ ಚಂದ್ರನ ಉದಯವೂ ನಿರರ್ಥಕವೆಂದು ಬಿಲ್ಹಣನು ತನ್ನ ನಿರಾಶೆಯನ್ನು ವ್ಯಕ್ತಪಡಿಸಿದನು (ಸಂಚಿ. ೭). [ವ್ಯಕ್ತಪಡು + –ಇಸ್ಸು]

ವ್ಯಕ್ತಪಡು (ಕ್ರಿ). ಪ್ರಕಟವಾಗು ; ತಿಳಿದು ಬರು ; ಸ್ಪಷ್ಟವಾಗು : ಅಶಿಸ್ತಿಗೆ ಕೆಲವು ಪ್ರಮುಖ ಕಾರಣಗಳು ವ್ಯಕ್ತಪಟ್ಟಿವೆ (ಶಕ್ನಪ. ೩೨೦). [ವ್ಯಕ್ತ + ಪಡು.]

ವ್ಯಕ್ತಿ (ನಾ). ೧. ಸ್ಪಷ್ಟವಾಗಿ ತೋರಿಬರುವಿಕೆ ; ನಿಚ್ಚಳವಾಗಿ ಕಾಣಿಸಿಕೊಳ್ಳುವಿಕೆ : ಕ್ರಿಯೆಯಂ ಪ್ರತಿಷೇಧಂಗೆಯೆ ನಿಯತಫಳ ವ್ಯಕ್ತಿಯದು (ಕಾವ್ಯಾವ. ೭೩೭) ; ವ್ಯಕ್ತಿಗಾತ್ಮನ ತಂದರೆಲ್ಲರು ಮುಕ್ತರು ವ್ಯಕ್ತಿಗ ತಾರದಿದ್ದವರು ಯುಕ್ತಸಂಸಾರಿ ಗಳಹುದು (ಧರಚ. ೬೮-೭೨). ೨. ಮನುಷ್ಯ ; ಮಾನವ : ಶರೀರ, ಇಂದ್ರಿಯ, ಮನಸ್ಸು, ಪ್ರಾಣ, ಜ್ಞಾನ, ಜೀವಾತ್ಮ ಎಂಬ ಆರುಭೇದಗಳುಳ್ಳ ಸಂಪುಟವೇ ವ್ಯಕ್ತಿ (ಭಾರದ. ೨೬೧) ; ಸಮಾಜದ ಕೈವಾಡ ವ್ಯಕ್ತಿಯ ಮೇಲೆ ಪರಿಣಾಮಗೊಳಿಸುವುದು (ಶಕ್ನಪ. ೨). [ಸಂ.]

ವ್ಯಕ್ತಿಗತ (ನಾ). ವ್ಯಕ್ತಿಗೆ ಸಂಬಂಧಿಸಿದುದು ; ವೈಯಕ್ತಿಕವಾದುದು : ಸ್ವಾನುಭವಜನ್ಯ ತಿಳಿವಳಿಕೆಯು ವ್ಯಕ್ತಿಗತವಾದುದು (ಗ್ರಂಥಾಲ. ೧). [ಸಂ.]

ವ್ಯಕ್ತಿಗೌರವ (ನಾ). ಪ್ರತಿಯೊಬ್ಬ ವ್ಯಕ್ತಿಗೂ ಸಲ್ಲುವ ಮರ್ಯಾದೆ : ವ್ಯಕ್ತಿಗೌರವ ವನ್ನೂ ರಾಷ್ಟ್ರದ ಏಕತೆಯನ್ನೂ ಸುನಿಶ್ಚಿತವಾಗಿ ನೆಲೆಗೊಳಿಸುವಂಥ ಬಂಧುಭಾವನೆ (ಭಾಧಾನ. ೧ ಪ್ರಸ್ತಾವನೆ). [ಸಂ.]

ವ್ಯಕ್ತಿತೆ (ನಾ). ತನ್ನತನ ; ವ್ಯಕ್ತಿತ್ವ : ಭವ್ಯವಾದುದರ ಮುಂದೆ ನಮ್ಮ ವ್ಯಕ್ತಿತೆ ತತ್ತರಿಸುತ್ತದೆ (ಸೌಂದಸ. ೩೮೮). [ಸಂ. ವ್ಯಕ್ತಿತಾ]

ವ್ಯಕ್ತಿತ್ವ (ನಾ). ತನ್ನದೇ ಆದ ವಿಶಿಷ್ಟಗುಣ ; ತನ್ನತನ : ಅಲ್ಲಮನ ವ್ಯಕ್ತಿತ್ವ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ (ಪೂನ್ಯಕು. ೧೩೭) ; ಮಕ್ಕಳು ಉಪಾಧ್ಯಾಯರ ವ್ಯಕ್ತಿತ್ವವನ್ನೇ ಸಾಧಿಸಬೇಕೆಂದು ವಾದಿಸುವರು (ಶಕ್ನಪ. ೨೦೮). [ಸಂ.]

ವ್ಯಕ್ತಿನಿಷ್ಠ (ಗು). ೧. [ಕಾವ್ಯಮೀ] ಯಾರಾದರೂ ಒಬ್ಬ ವ್ಯಕ್ತಿಯನ್ನು ಕುರಿತ : ಕನಕದಾಸರು ದಾಸಪರಂಪರೆಯೊಳಗೆ ನಿಂತು ಅದಕ್ಕೆ ವ್ಯಕ್ತಿನಿಷ್ಠ ಕೀರ್ತನೆಗಳ ಮೂಲಕ ಗೌರವವನ್ನು ಸಲ್ಲಿಸಿದ್ದು (ಪರಿಶೀ. ೧೦೧). (ನಾ). ೨. ಒಬ್ಬವ್ಯಕ್ತಿಯನ್ನು ಕುರಿತುದು : ವ್ಯಕ್ತಿನಿಷ್ಠಾನುಭವವನ್ನೇ ಪ್ರಧಾನವಾಗಿರಿಸಿಕೊಳ್ಳುವುದರ ಮೂಲಕ ಸೌಂದರ್ಯ ವ್ಯಕ್ತಿನಿಷ್ಠವೆನ್ನುವ ವಾದವನ್ನು ಪ್ರತಿಪಾದಿಸುತ್ತದೆ (ಸೌಂದಸ. ೬೭). 'ವಸ್ತುನಿಷ್ಠ' ಪರಾ. [ಸಂ.]

ವ್ಯಕ್ತಿಪೂಜೆ (ನಾ). ಯಾರಾದರೂ ಒಬ್ಬನೇ ವ್ಯಕ್ತಿಯ ಬಗ್ಗೆ ಅತಿಯಾಗಿ ತೋರಿಸುವ ಬೆಂಬಲ, —ನಿಷ್ಠೆ : ಸಮಾಜದಲ್ಲಿ ವ್ಯಕ್ತಿಪೂಜೆ ಒಳ್ಳೆಯದಲ್ಲ (ರೂಢಿ). [ಸಂ. ವ್ಯಕ್ತಿಪೂಜಾ]

ವ್ಯಕ್ತಿವಾದ (ನಾ). ವ್ಯಕ್ತಿಸ್ವಾತಂತ್ರ್ಯಪರವಾದ ವಾದ, — ತತ್ತ್ವ : ''ವ್ಯಕ್ತಿಭಾವ, ಅಹಂಭಾವ . . . ವ್ಯಕ್ತಿವಾದ'' (Individualism . ಇಂಜಿ). [ಸಂ.]

ವ್ಯಕ್ತಿವೈಶಿಷ್ಟ್ಯ (ನಾ). ವೈಯಕ್ತಿಕ ಸಾಮರ್ಥ್ಯ ; ತನ್ನತನದ ವಿಶೇಷಲಕ್ಷಣ : ವಿಜ್ಞಾನಿಗಳು ಅನುಭವದಿಂದ ತಮಗಿರುವ ವ್ಯಕ್ತಿವೈಶಿಷ್ಟ್ಯವನ್ನು (Individuality) ಅರಿತುಕೊಳ್ಳುವವರೆಗೆ ಅವರಿಂದ ಮಹತ್ಕಾರ್ಯವಾಗುವುದಿಲ್ಲ (ವಿಜ್ಞಾಕ. ೧೦). [ಸಂ.]

ವ್ಯಕ್ತಿಸ್ವಾತಂತ್ರ್ಯ (ನಾ). ಮನುಷ್ಯನಿಗೆ ಸ್ವಾಭಾವಿಕವಾಗಿ ಇರುವ ಸ್ವಾತಂತ್ರ್ಯ : ವ್ಯಕ್ತಿತ್ವವಿಕಾಸ ಹಾಗೂ ವ್ಯಕ್ತಿಸ್ವಾತಂತ್ರ್ಯವೇ ಅದರ ಹೆಗ್ಗುರಿ (ನವ್ಯಕಾ. ೧೭) ; ನಮ್ಮಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಬೆಲೆಯಿದೆ (ಭಾರತಿ. ೪೯). [ಸಂ.]

ವ್ಯಕ್ತೀಕರಣ (ನಾ). ವ್ಯಕ್ತಪಡಿಸುವುದು ; ವಿಶದಗೊಳಿಸುವುದು : ವ್ಯಕ್ತೀಕರಣಕಲೆಯಲ್ಲಿ ವ್ಯಕ್ತಿಯ ಮನೋರಾಜ್ಯದ ಅನೇಕ ಅಂಶಗಳು ನುಸುಳಿಕೊಂಡು ಬಂದು ಕಾಣಿಸಿಕೊಳ್ಳುತ್ತವೆ (ಶಕ್ನಪ. ೬೪೦) ; ಬುದ್ಧಿಯ ವ್ಯಕ್ತೀಕರಣಕ್ಕೆ ಆತ್ಮಸಾಧನವಿದ್ದಂತೆ ದೇಹ ಮರಣಾನಂತರ ಅಳಿದುಹೋಗುತ್ತದೆ (ಇಷ್ಟಾಸಂ. ೨೧೫). [ಸಂ.]

ವ್ಯಕ್ತೀಕರಿಸು (ಕ್ರಿ). ವ್ಯಕ್ತಪಡಿಸು ; ವ್ಯಕ್ತಗೊಳಿಸು ; ವಿಶದಪಡಿಸು : ಯುಕ್ತಿಗೆ ಯುಕ್ತಮನಿಸುವಾಗಮಮಂ ವ್ಯಕ್ತೀಕರಿಸುವುಪಾಧ್ಯಾಯರನಾಂ ಭಕ್ತಿಯಿನಭವಂದಿಸುವೆಂ (ಜಯಾಕಾ. ೧-೪) ; ಉಪಾಧ್ಯಾಯರಲ್ಲಿರಬೇಕಾದ ಲಕ್ಷಣಗಳು . . . ಭಾವಗಳನ್ನು ನಿರ್ವಿಕಾರವಾಗಿ ವ್ಯಕ್ತೀಕರಿಸುವ ಶಕ್ತಿ (ಶಕ್ನಪ. ೬೭೧). [ವ್ಯಕ್ತೀಕರಣ + – ಇಸ್ಸು]

ವ್ಯಗ್ರ (ಗು). ೧. ಗಾಬರಿಯಾದ ; ಕಳವಳಗೊಂಡ : ಕುತೂಹಲಂಬೆರಸು ಮುನ್ನಿನೆಡೆಗೆ ಬಂದು ನೋಡಿ ಕಾಣದೆ ವ್ಯಗ್ರಮನನಾಗಿ (ಕಾದಂಪೂ. ೮೨೨) ; ಎದೆಯ ಚಾಂಚಲ್ಯಮಂ ನಿಗ್ರಹಿಸಿ ವ್ಯಗ್ರಮನದಿಂದೆ (ಚಕ್ರಾಂಗ. ೫೧-೧೩೮೮). ೨. ಆಸಕ್ತವಾದ ; ಮಗ್ನವಾದ : ಕಿಱಿದಾನುಂಬೇಗಮಿರ್ದಲ್ಲಿ ಕಾರ್ಯವ್ಯಗ್ರ ಪಾಪಿಪಾಶಾಶ್ರಿತರಲ್ಲರುಂ ಕೇಳಲೆಂದು ಮಹೀಭುಜನಿಂತೆಂದಂ (ಪಂಪಭಾ. ೧೩-೮ ವ). (ನಾ). ೩. ಕಳವಳ ; ಉದ್ವೇಗ ; ಆತುರ : ಶಿವ ಶರಣನುತ್ತಿರಲು ಕೇಳ್ದು ಸ್ಮೆರಿಸಲಾಜದಹಿಕಟಕನು ವ್ಯಗ್ರದಿಂ ನಿಜವೆರಸಿ ಬಂದು (ಸಿದ್ಧರಾ. ೭-೪೦) ; ಉಗ್ರಕರ್ಮವ ನೆನೆಯಬೇಡ ವ್ಯಗ್ರದಲಿ ಸಾಧಿಸಿದೆವವಧಿಸಮಗ್ರವನು (ಕುವ್ಯಾಂ. ೪-೫೭). ೪. ಕಳವಳಗೊಂಡವನು ; ಗಾಬರಿಯಾದವನು : ನೆರಹಿತ್ತು ತೆಱಹಿಲ್ಲೆನಿಸಿ ಪುರದೊಳಗೆ ಉಗ್ರರುಂ ಶಾಂತರುಂ ಮೃದುಗಳುಂ ಮಧುರರುಂ ವ್ಯಗ್ರರುಂ (ಅನೀಶ. ದೇ. ೮೪-೧೦). ೫. ತ್ವರೆಪಡುವವನು ; ಆತುರಪಡುವವನು : ''ವ್ಯಗ್ರಃ, ೧. ಆಸಕ್ತನು, ತ್ವರೆಪಡುವವನು ೨ '' (ಸಿದ್ಧಾಖಿ. ೪೧೭). [ಸಂ.]

ವ್ಯಗ್ರಚಿತ್ತ (ನಾ). ಉದ್ವೇಗಗೊಂಡ ಮನಸ್ಸುಳ್ಳವನು : ದ್ರುಪದಂ ರಾಜ್ಯ ಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮಾಗಿ (ಪಂಪಭಾ. ೨-೪೬ ವ). [ಸಂ.]

ವ್ಯಗ್ರತೆ (ನಾ). ವಿಷಾದ ; ಖೇದ ; ಕಳವಳ : ಭೀತಿಯಂ ಪೇೞ್ವನೆಂಬೀ ಮನಮುಂ ನೀಂ ಮಾಡದಿರ್ವ್ಯಗ್ರತೆಯನುಳಿದು (ರಾಜಶೇ. ೧೩-೪) ; ಚಾರುನ ಈ ತವಕಕ್ಕೆ, ಈ ಅತಿರೇಕದ ವ್ಯಗ್ರತೆಗೆ ಭೂಪತಿಯು ಹಿಗ್ಗಿ ಹತ್ತಾಗಿ (ಇಪ್ರಕ. ೨೮೮). [ಸಂ. ವ್ಯಗ್ರತಾ]

ವ್ಯಗ್ರಿಸು (ಕ್ರಿ). ೧. ಆತುರಪಡು ; ಉದ್ವೇಗಗೊಳ್ಳು : ಒತ್ತರಿಸಿ ತವಕ ತನುವತ್ತಂದದಿಂ ವ್ಯಗ್ರಿಸುತ್ತಂದು ನಂದಿ ನಡತಂದು ವಂದಿಸಿ ನಿಂದು (ಸಿದ್ಧರಾ. ೫-೧). ೨. ವಿಕಾರಹೊಂದು; ವಿಕೃತಗೊಳ್ಳು : ನಾಲ್ದೆಸೆಯಿಂದ ಬಂದ ಲೋಕವಾರ್ತೆಗಳಿಂ ವ್ಯಗ್ರಿಸದೆ ನಿಜತತ್ತ್ವಮಂ ಭಾವಿಸುವನ ಭವಭೂಜದೀಜಮಾಗದೆ ಭಸ್ಮಂ (ಅಜಾಸಾ. ೧೬೨). [ವ್ಯಗ್ರ + – ಇಸ್ಸು]

ವ್ಯಜನ (ನಾ). ಗಾಳಿಯನ್ನು ಬೀಸುವ ಸಾಧನ ; ಬೀಸಣಿಗೆ : ಸಾಮ್ರಾಜ್ಯವಿಭವದಂತೆ ಚಮರೀವಾಲವ್ಯಜನೋಪೇತಶೋಭತಮುಂ (ಕಾದಂಪೂ. ೧೦೦) ; ಹೊಂಬಳಿಯ ತೆರೆಸೀರೆಗಳ ಛತ್ರ ವ್ಯಜನ ಸೀಗುರಿಯ . . . ದಿಂಡುಗಳೊಟ್ಟಿದವು (ಕುವ್ಯಾಗ. ೪-೧೪). [ಸಂ.]

ವ್ಯತಿಕರ (ನಾ). ೧. ಪರಸ್ಪರ ಕೂಡಿಕೊಳ್ಳುವುದು, — ಸೇರಿಕೊಳ್ಳುವುದು. ೨. ಸೇರುವೆ ; ಸಂಬಂಧ : ಜೋಡಣೆ : ನೇಱಿಲ ಪಣ್ಗಳನಾ ಕೂಸಿನ ಪಕ್ಕಕ್ಕಾಗಿ

ಸಾರ್ಚ ಕೊಟ್ಟು ತದನಂತರದಾ ವ್ಯತಿಕರದಿನಂತರಾಯಮಾಗಿ ಮಗುಟ್ಟು ಬಂದು (ಸುಕುಮಾ. ೪-೬೩ ವ). ೩. ಘಟನೆ ; ಪ್ರಸಂಗ ; ಸಂದರ್ಭ : ರಾಜಸೂಯವ್ಯತಿಕರದೊಳ್ ದಿಗ್ವಿಜಯಂಗೆಯ್ದು ಲಂಕೆಯ ವಿಭೀಷಣನನೊಂದೆ ದಿವ್ಯಾಸ್ತ್ರದೊಳಿಚ್ಚು ಕಪ್ಪಂಗೊಂಡ ವಿಕ್ರಮಾರ್ಜುನನ ವಿಕ್ರಮಮುಂ (ಪಂಪಭಾ. ೯-೫೨ ಪ) , ನಲ್ಮಿಗ ದಿವ್ಯಂಬಿದಲೊ ಪೇಬೆಮೆನಿಪಳಾ ವ್ಯತಿಕರದೊಳ್ (ಚಂದ್ರಪ್ರ. ೫-೧೩೧). ೪. ಆಪತ್ತು ; ವಿನಾಶ ; ಕೇಡು : ಆ ಪ್ರಸ್ತಾವದೊಳಾದಿಭಟ್ಟಾರಕವ್ಯತಿಕರ [ಪಾಠಾಂ. ರವ್ಯವ]ಸ್ಥಿತಿಯನಾನಂವ ನಂಬುಂ ಧರ್ಮಕಾರ್ಯನಿಮಿತ್ತಂ ಬಂದಟ್ಟಿಪಿದೊಡೆ (ಆದಿಪು. ೧೭-೪೯ ವ) ; ಪತಿಯ ಸಹಸಂಭವನ ಮರಣವ್ಯತಿಕರವ ನೋಡಿದಡೆ (ಕುವ್ಯಾಕ. ೧೯-೬೧). ೫. ತಡೆ ; ಅಡ್ಡಿ : ಎನಗಿಂ ಸ್ವೇಚ್ಛಾವಿಹಾರವ್ಯತಿಕರಮೊಗದತ್ತೇಕೆ (ಎಕ. VII. ಶಕಾಂ. ೧೩೭-೫೯ ; 1114). ೬. ತೊಂದರೆ ; ಉಪದ್ರವ : ಅನ್ನೆಗಮಿತ್ತ ಸುಗ್ರೀವಂ ಮಾಯಾಸುಗ್ರೀವನ ವ್ಯತಿಕರದೊಳ್ ಶರಣಾಗತಶರಣ್ಯನಪ್ಪ ರಾಮನಂ ಕಂಡು ತನ್ನ ವೃತ್ತಾಂತಮಂ ಬಿನ್ನವಿಸೆ (ಪಂಪಾಮಾ. ೧೧-೧೦೦ ವ) ; ಕ್ಷಿತಿಯ ಪಾಲಿಸುವುದು ವಿರೋಧಿವ್ಯತಿಕರವ ಬಿಡಿಸುವುದು (ಕುವ್ಯಾಉ. ೬-೨೧). ೭. ಹರಡುವಿಕೆ ; ಚೆದರುವಿಕೆ. [ಸಂ.]

ವ್ಯತಿಕರಣ (ನಾ). ೧. ಸಂಧಿಕಾಲ ; ಕೂಡುವ ವೇಳೆ : ಆತನ ಕಡೆಯೊಳುಚಿತಮನ್ವಂತರ ವ್ಯತಿಕರಣ [ಪಾಠಾಂ. ವ್ಯತಿಕ್ರಮ]ದೊಳ್ . . . ಪದಿಮೂಱನೆಯ ಕುಲಧರಂ ಪುಟ್ಟ (ಆದಿಪು. ೬-೬೩ ವ). ೨. ಬೆರಕೆ ; ಮಿಶ್ರಣ : ಎರಡುಂ ವಿರುದ್ಧರಸಮೊಡವೆರಸಿರೆ ತರವಾಂತರಸ್ಥಮೊಂದನ್ಯರಸಂ ಪರಿಪುಷ್ಟಮಾಗಯುಂ ವ್ಯತಿಕರಣಂ ಮೀಣ್ ತಾಮವಾಗಯುಂ ನಿರ್ದೋಷಂ (ಕಾವ್ಯಾವ. ೮೩೩). [ಸಂ.]

ವ್ಯತಿಕೀರ್ಣ (ಗು). ೧. ಕೆದರಿದ ; ಚೆದರಿದ : ವ್ಯತಿಕೀರ್ಣ ಪದಕ್ರಮಮನುಚಿತಾನ್ವಯಂ ವ್ಯವಹಿತಾನ್ವಯಂ ತಾನದು ದಲ್ ಮತಿಸಮ್ಮೋಹಮನಿರದವರ್ಗೆ ತೊಡರ್ಚಲ್ವೇ ಟ್ಟೊಡಲ್ಲಿಗಲ್ಲದು ದೋಷಂ (ಕಾವ್ಯಾವ. ೪೫೬). ೨. ಕೂಡಿದ ; ಮಿಶ್ರಣಗೊಂಡ. [ಸಂ.]

ವ್ಯತಿಕ್ರಮ (ನಾ). ೧. ಮೀರುವುದು ; ದಾಟುವುದು ; ಉಲ್ಲಂಘನೆ : ದುರ್ಗತಿಹೇತು ಪೂಜ್ಯಪೂಜಾವ್ಯತಿಕ್ರಮಂ ಕಿಱಿದು ದುಃಖಮಂ ಮಾಡುಗುಮೇ (ಆದಿಪು. ೩-೩೯) ; ಗುಣವ್ರತದೊಳ್ ದಿಗ್ವಿರತಿಗಕ್ಕುಮತಿಚಾರಮನಾರತಮೂರ್ಧ್ವಾದಃ ಸ್ತಿರ್ಯಗ್ವ್ಯತಿಕ್ರಮ ಕ್ಷೇತ್ರವೃದ್ಧಿವಿಸ್ಮರಣಂಗಳ್ (ಸುಕುಮಾ. ೬-೧೮೮). ೨. ವ್ಯತ್ಯಾಸ ; ಅದಲುಬದಲು. ೩. ಪಾಪ ; ಅಪರಾಧ. ೪. ಆಪತ್ತು ; ತೊಂದರೆ ; ಕ್ಲೇಶ. ೫. [ಜೈನ] ವಿರುದ್ಧವಾದ ನಡವಳಿಕೆ ; ಅತಿಚಾರ ; ☞ "ಅವಶ್ಯಕಕ್ರಿಯೆಗಳನ್ನು ಸಮಯಕ್ಕಿಂತ ಮೊದಲು ಮಾಡುವುದು" (ಜೈನಕೋ. ೨೪೦) : ಭಯಮಬಿಲಕಾಂಕ್ಷೆ ವಿಚಿಕಿತ್ಸೆ ಯನ್ಯದೃಷ್ಟಿ ಪ್ರಶಂಸೆ ಸಂಸ್ತವನಮಂಬೀ ಕ್ರಿಯೆ ಸಮ್ಯಗ್ದೃಷ್ಟಿಗ ನೋಡ ಯಥಾಕ್ರಮದಿಂ ವ್ಯತಿಕ್ರಮಂ ತಾನಕ್ಕುಂ (ಸುಕುಮಾ. ೬-೪೫). [ಸಂ.]

ವ್ಯತಿಕ್ರಮಣ (ನಾ). ಅತಿಕ್ರಮಣ ; ಉಲ್ಲಂಘನೆ : ಮರಣದ ಜನ್ಮದ ನಿಗಳಂ ನಿರಾಕುಳಂ ಪತ್ತುವಿಡುವಿನಂ ಜಿನ ನಿನ್ನಂ ಸ್ಮರಿಯಿಪುದನಣೋರಣ್ಯಾಂತರ ವ್ಯತಿಕ್ರಮಣ ಮಾತ್ರಮಂ ಮೞೆದಪನೇ (ಆದಿಪು. ೧೦-೫೯). [ಸಂ.]

ವ್ಯತಿಪಾತ (ನಾ). [ಜ್ಯೋತಿ] ಇಪ್ಪತ್ತೇೞು ಬಗೆಯ ಜ್ಯೋತಿಷಯೋಗಗಳಲ್ಲಿ ಹದಿನೇಳನೆಯ ಯೋಗ : ವ್ಯತಿಪಾತಯೋಗಕ್ಕೆ ಸಾಯಾ ೧೭ ಗಳಿಗ ಮೇಲೆ ತ್ಯಾಜ್ಯಾ (ಭಾಸ್ಕರ. ೭೦-೫) ; ಆ ಹುಡುಗಿ ಹುಟ್ಟಿದಾಗ ಖಗ್ರಾಸಗ್ರಹಣ, ವೈಧೃತಿ, ವ್ಯತಿಪಾತ ಎಲ್ಲಾ ಇದ್ದವು (ಭಾಗ್ಯಶ್ರೀ. ೩). [ಸಂ.]

ವ್ಯತಿರಿಕ್ತ (ಗು). ೧. ಭಿನ್ನವಾದ ; ವಿರೋಧವಾದ. ೨. ತಡೆಹಿಡಿದ ; ಅಡ್ಡಿಪಡಿಸಿದ. (ನಾ). ೩. ಹೊರತಾದುದು ; ಬೇರೆಯಾದುದು : ಒಂದಂಶ ಮತ್ತೊಂದನ್ನು ವ್ಯತಿರಿಕ್ತವೆನಿಸುವಂತಿರಬಾರದು (ಶಕ್ತಿದ. ೨೬೮). [ಸಂ.]

ವ್ಯತಿರಿಕ್ತತೆ (ನಾ). ಅಗಲಿಕೆ ; ವಿಯೋಗ : ಸುತ ನಿನ್ನ ಚಂದ್ರವದನವ್ಯತಿರಿಕ್ತತೆಯಿಂ ಸಭಾನಭೋವಳಯಂ ಸಂವೃತವಾಯ್ತು ತಮದಿಂ (ಚಂದ್ರಪ್ರ. ೫-೧೩). [ಸಂ. ವ್ಯತಿರಿಕ್ತತಾ]

ವ್ಯತಿರೇಕ (ನಾ). ೧. ಹೆಚ್ಚುಗಾರಿಕೆ ; ಶ್ರೇಷ್ಠತೆ. ೨. ಅಗಲಿಕೆ ; ವಿಯೋಗ. ೩. ವ್ಯತ್ಯಸ್ತ ಸ್ಥಿತಿ : ಆ ವ್ಯತಿರೇಕದೊಳೆನ್ನ ಧೃತ್ರಧಾರಿಣಿ ನೋಡಿ (ಕಾದಂಪು. ೭೭೨). ೪. ಅದಲುಬದಲು ; ವ್ಯತ್ಯಾಸ : ಖಳಂ ಸ್ತ್ರೀರತ್ನದಿಂ ವೀರರತ್ನಮನರ್ಘ್ಯಂ ಪಿಡಿದುಯ್ಯೆನೀತನನೆನುತಂ ಕನ್ನೆಯಂ ಬಿಟ್ಟು . . . ಎತ್ತಿಕೊಂಡು ನೆಗೆದಂ ವ್ಯೋಮಕ್ಕೆ ಗಾಂಡೀವಿಯಂ ಆ ವ್ಯತಿರೇಕದೊಳತಿಕುಪಿತನಾಗಿ ಶಂಬರಸೂದನಂ ಬೆರಸು ನಡತಂದು (ಜಗವಿ. ೧೫-೪ ವ). ೫. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಉಪಮಾನ ಮತ್ತು ಉಪಮೇಯಗಳಲ್ಲಿ ಬರುವ ವೈಲಕ್ಷಣ್ಯವರ್ಣನೆ : ಆದಿಪ್ರತೀತಿಯಿಂ ಶಬ್ದಾದರದಿಂ ಸದೃಶಮಾದ ವಸ್ತುದ್ವಯದೊಳ್ಭೇದಮನಜಿಪುವುದು . . . ವ್ಯತಿರೇಕಂ (ಕವಿಾ. ೬-೩೯) ; ವ್ಯತಿರೇಕಮುಭಯಸಾಮ್ಯಪ್ರತೀತಿಯಿಂ ತೋಱೆ ಭೇದಮಂ ಮಾಟ್ಟುದು (ಕಾವ್ಯಾವ. ೬೪೨) ; ವರ್ಣನಾಕಾಲದಲ್ಲಿ ಶ್ಲೇಷ, ರೂಪಕ, ವ್ಯತಿರೇಕ ಇತ್ಯಾದಿ ಅಲಂಕಾರಗಳು ಪ್ರಯತ್ನವಿಲ್ಲದೆಯೇ ಮೂಡಿಬರುತ್ತವೆ (ಧ್ವನ್ಯಾಲೋ. ೬೮). ೬. [ತರ್ಕಶಾ] ಇಲ್ಲದಿರುವಿಕೆ ; ಅಭಾವ, ಸಾಧ್ಯಾಭಾವ ಮತ್ತು ಹೇತ್ವಭಾವಗಳ ವ್ಯಾಪ್ತಿ , — ಸಾಹಚರ್ಯ : ವ್ಯಾಪ್ತಿಯು ಅನ್ವಯ ಮತ್ತು ವ್ಯತಿರೇಕ ಎಂದು ಎರಡು ವಿಧ (ಭಾಷ್ಯ. ೨೭). [ಸಂ.]

ವ್ಯತಿಹಾರ (ನಾ). ಅದಲುಬದಲು ; ವಿನಿಮಯ : ಶ್ರೀಮತಿ ವಜ್ರಜಂಘರ ಜನ್ಮಾಂತರಸ್ನೇಹರಸಾಮೃತಪಾತ್ರಚಿತ್ರಪಟವ್ಯತಿಹಾರಮಂ ವಜ್ರಜಂಘಾನುಚರರಿಂದ ಮಱೆದು (ಆದಿಪು. ೪-೨೩ ವ). [ಸಂ.]

ವ್ಯತೀತ (ಗು). ಕಳೆದುಹೋದ ; ಮುಗಿದುಹೋದ : ಆ ನಗದೊಳ್ ವ್ಯತೀತ ಬಹುಚಕ್ರಗುಣಾನ್ವಯತತ್ಕೃತಾಪಸಂತಾನಲಿಪಿಪ್ರಪಂಚವಚನಾಳಿಯನೋಳಿಯೆ ಕೇಳ್ದು ಕೇಳ್ದು . . . ಲಜ್ಜಾನತಮಾದುದುನ್ನತಶಿರೋಮಣಿ ಪಂಚಮಚಕ್ರವರ್ತಿಯಾ (ಶಾಂತಿಪು. ೧೧-೬೨). [ಸಂ.]

ವ್ಯತೀಪಾತ (ನಾ). ೧. ಸಂಪೂರ್ಣವಾಗಿ ಬಿಟ್ಟುಹೋಗುವುದು. ೨. ಅನರ್ಥ ಸೂಚಕವಾಗಿ ಮುಂದೊದಗುವ ದೊಡ್ಡ ಉತ್ಪಾತ, — ಕೇಡು. ೩. [ಜ್ಯೋತಿ] ಇಪ್ಪತ್ತೇೞು ಬಗೆಯ ಜ್ಯೋತಿಷಯೋಗಗಳಲ್ಲಿ ಹದಿನೇಳನೆಯ ಯೋಗ : ಆದಿತ್ಯವಾರಮುಂ ಸಂಕ್ರಾನ್ತಿಯುಂ ವ್ಯತೀಪಾತಮುಂ ಕೂಡಿದ ಪುಣ್ಯದಿನದನ್ನು (ಸೌಗಾ. XX. ೩೪-೧೭ : 1053) ; ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ ವಿಕಾದಶಿ ವ್ಯತೀಪಾತದಿಂದ ವೆಗ್ಗಳ . . . ನಿಮ್ಮ ಮಾಣದೆ ನೆನೆವವಂಗೆ (ಬಾಹು. ೬೧೧) ; ವ್ಯತೀಪಾತ ವೈಧೃತಿಗಳೆಂಬಪ್ಪತ್ತೇೞು ಯೋಗಂಗಳುಂ (ವಿವೇಕ. ೬೨೦). ೪. ಶ್ರಾದ್ಧಕರ್ಮಗಳಲ್ಲಿ ಒಂದು : ಒಂದು ವರ್ಷದಲ್ಲಿ ೯೬ ಶ್ರಾದ್ಧಗಳು ಬರುವವು. ಅವು ಯಾವುವೆಂದರೆ- ಮನ್ವಾದಿಗಳು ೧೪ . . . ವ್ಯತೀಪಾತಗಳು ೧೩ (ಹರಾಶ. ೨೪-೨ ಟೀಕು). [ಸಂ.]

ವ್ಯತ್ಯಯ (ನಾ). ೧. ಗಮನಿಸದಿರುವುದು ; ಲಕ್ಷಿಸದಿರುವುದು. ೨. ವಿರೋಧ : ನನ್ನ ಧ್ಯೇಯಾರ್ಥಕ್ಕೆ ಸ್ವಲ್ಪ ಸಹ ವ್ಯತ್ಯಯ ಬಾರದಂತೆ ಈ ಎಚ್ಚರಿಕೆಯನ್ನು ವಹಿಸದ ಹೋದೆನಾದರೆ (ಮಹಾಯೋ. ೨೪೧). ೩. ಅಡ್ಡಿ ; ತಡೆ ; ಧಕ್ಕೆ : ಸಾಲೆಯ ಕೆಲಸಕ್ಕೆ ವ್ಯತ್ಯಯವಾಗಹತ್ತಿತು (ಅಪವಾ. ೬೧) ; ಬಾಗಿಲನಿಕ್ಕಿಕೊಳ್ಳುವಾಗ ಆಕೆಗೆ ಅವನಿಂದ ಸ್ವಲ್ಪವೂ ವ್ಯತ್ಯಯವುಂಟಾಗಲಿಲ್ಲ (ಅಂಬಿ. ೬೩). ೪. ಬದಲಾವಣೆ ; ಪರಿವರ್ತನೆ : ಪುರುಷತ್ರಯಂ ಕ್ರಮದಿನಿರ್ದೊಡಂ ವ್ಯತ್ಯಯಮಾಗಿರ್ದೊಡಂ ಕೂಡಿ ನುಡಿವೆಡೆಯೊಳ್ ಉತ್ತಮಪುರುಷಕ್ಕೆ ಮುಖ್ಯತ್ವಂ (ಶಮುದ. ೨೫೩ ವೃತ್ತಿ). ೫. ವಿಪರೀತತೆ ; ವಿಪರ್ಯಯ : "ವ್ಯತ್ಯಯಂ ವಿಪರ್ಯಾಸಮೆನೆ ವಿಪರೀತಮಕ್ಕುಂ" (ಮಂಗರಾ. ೧೩೦-೧೯). ೬. ದುರ್ಗತಿ : ಅತಿರಾಗತೆಯಿಂ ಸ್ತ್ರೀಪದಹತಿಗಂ ದಳವೇಱಿಯಲರ್ದಶೋಕಂ ಫಳಹೀನತೆಗೆಡೆಯಾದುದು ಕಡೆಯೊಳ್ ಮತಿಗೆಟ್ಟಂಗೀಗುಮತ್ಯಯಂ ವ್ಯತ್ಯಯಮಂ (ಚಂದ್ರಪ್ರ. ೭-೯೫). [ಸಂ.]

ವ್ಯತ್ಯಸ್ತ (ಗು). ೧. ಬದಲಾದ ; ಪಲ್ಲಟಗೊಂಡ ; ಬುಡಮೇಲಾದ : ಸ್ವಸ್ತಿಕಂ ಲೋಚನೋಷ್ಣದ್ಯುತಯವ್ಯತ್ಯಸ್ತವರ್ಣಸ್ಥಿತಿ . . . ಕಣ್ಗೆವಂದಿರ್ದುದು (ಚಂದ್ರಪ್ರ. ೭ -೧೪೯). (ನಾ). ೨. ವ್ಯತ್ಯಾಸ ; ಬದಲು : ಮನುಷ್ಯನು ಕಾಲಸ್ಥಿತಿಗನುಸರಿಸಿ ತನ್ನ ಉಡುಪಿನಲ್ಲಿ ಎಷ್ಟೋ ವ್ಯತ್ಯಸ್ತ ಮಾಡಿಕೊಂಡಿರಲಿ (ಕಗದ್ಯ. ೧೦೬) ; ಊರು ಹೆಸರು ಮುಂತಾದ್ದನ್ನು ವ್ಯತ್ಯಸ್ತ ಮಾಡಿ ತಾರುಮಾರಾಗಿ ಬರೆದರು (ಪುರಾವಿ. ೨ ಉಪೋದ್ಘಾತ). [ಸಂ.]

ವ್ಯತ್ಯಾಸ (ನಾ). ೧. ಅದಲು ಬದಲು ; ಮಾರ್ಪಾಡು ; ವಿಪರ್ಯಯ : ನಮ್ಮ ಅಂತರಂಗಜೀವನದ ಮತಗಳನ್ನೂ ಸಮಾಜಸಂಪ್ರದಾಯಗಳನ್ನೂ ಸಹ

ವ್ಯತ್ಯಾಸಗೊಳಿಸುತ್ತದೆ (ಸಾಹಿಶ. ೮೨). ೨. ವಿರೋಧ ; ವ್ಯತ್ಯಯ : ಈ ಭಾಷೆಗಳ ನಡುವೆ ಹಲಕೆಲವು ವ್ಯತ್ಯಾಸಗಳೂ ಇವೆ (ದ್ರಾವಿವಿ. ೫, ಹಿನ್ನೆಲೆ). ೩. ಅಂತರ ; ಹೆಚ್ಚುಕಡಿಮೆ : ಭರತಖಂಡದ ಬದುಕಿನಲ್ಲಿ ಮೂಲಭೂತವಾದ ವ್ಯತ್ಯಾಸಗಳಾಗಿವೆ (ಹಣಪ್ರ. iii, ಮುನ್ನುಡಿ) ; ನದಿಯಿಂದ ಅರ್ಧಮೈಲಿ ದೂರದಲ್ಲಿ ಒಂದಕ್ಕೊಂದಕ್ಕೆ ಐದು ಆರು ಮೈಲಿ ವ್ಯತ್ಯಾಸದಲ್ಲಿ ಕಾಸಕ್‌ಹಳ್ಳಿಗಳಿವೆ (ಮಲೆನಾ. ೧೯). [ಸಂ.]

ವ್ಯಥಕ (ಗು). ೧. (ಮನಸ್ಸಿಗೆ) ನೋವುಂಟುಮಾಡುವ ; ದುಃಖದಾಯಕವಾದ, (ನಾ). ೨. ನೋಯಿಸುವವನು : "ಅರುಂತುದಃ, ವ್ಯಥಕಃ — ಈ ೨ ನೋಯಿಸುವವಂ" (ಹಲಾಯು. ೬೧-೨೧೬), ೩. ಅಂಜುಬುರುಕ : "ವ್ಯಥಕಃ, ವ್ಯಥಮಾನಃ— ಈ ೨ ನೋವುಗನುಂ, ಅಂಜುಬುರುಕನುಂ" (ಕಾಶಕ್ಯ. ೧೩೫). [ಸಂ.]

ವ್ಯಥನ (ನಾ). ೧. ನೋವು ; ಯಾತನೆ. ೨. ಅಂಜುಬುರುಕುತನ. ೩. ನಾಶ ; ನಷ್ಟ : ಮಥನವೋ ಸಾಗರದ ಕೌತುಕಕಥನವೋ ಕೇಳುವರ ದುರಿತವ್ಯಥನವೋ ಬೆಸಲಾದುದಿಷ್ಟಾರ್ಥ (ನಿಭಾಗ. ೮-೭ ಸೂಚನೆ). [ಸಂ.]

ವ್ಯಥಿತ (ಗು). ೧. ಗಾಬರಿಗೊಂಡ ; ಅಂಜಿದ. ೨. ನೊಂದ ; ಕ್ಲೇಶಗೊಂಡ ; ದುಃಖಿತ. (ನಾ). ೩. ನೊಂದುದು ; ಕ್ಲೇಶಗೊಂಡುದು : ವ್ಯಥಿತವಾಯಿತು ವೈರಿಬಲ ಸಂಪ್ರಥಿತಸಾಹಸನಾದೆ ನೀನೆನೆ ಶಿಥಿಲಸಂಶಯಸಂಗಚಿತ್ತವನಿತ್ತನಾತಂಗೆ (ಕುವ್ಯಾಉ. ೨-೩). ೪. ನೊಂದಿರುವ ವ್ಯಕ್ತಿ : ಅವರು ಮೊದಲೇ ವ್ಯಥಿತರಾಗಿರುವರು (ಅಪವಾ. ೮೯). [ಸಂ.]

ವ್ಯಥಿಸು (ಕ್ರಿ). ೧. ನೋಯು ; ಬೇನೆಪಡು : ಎದೆಯ ಮೇಲೆ ಕೋಲ್ಕೀಲಿಸಲ್ ವ್ಯಥಿಸಿ ಮೈಮಱೆದನು (ಚೈಮಿಭಾ. ೭-೩೯). ೨. ನೋಯುವಂತೆ ಮಾಡು : ಕೊಳಲ ಬಾರಿಸುತಿರುಳ ಮೌನವನು ವ್ಯಥಿಪನಿಂತೆ (ಗೋಕುನಿ. ೬೨-೧೦). [ವ್ಯಥನ + - ಇಸ್ಸು]

ವ್ಯಥೆ (ನಾ). ೧. ನೋವು ; ಬಾಧೆ ; ಯಾತನೆ : ಅಪಚಾರಕುಪಿತೆಗೆನಗಿನ್ನುಪಚಾರಂ ವ್ಯಥೆಯನೀಗುಮೀಗುಮೆ ಸುಖಮಂ (ಜಗವಿ. ೧೨-೯೫) ; ರಥದ ಮೇಲಂಬುಗಳು ರಿಪುಸಾರಥಿಯ ಮೈಯಲಿ ಘಾಯ ತುರಗವ್ಯಥೆಯನೇವೇಳುವೆನು. . . ಪೃಥುಳಬಲನೈ ಭೀಮನೆಚ್ಚನು ಗುರುತನೂಭವನ (ಕುವ್ಯಾಕ. ೩-೨೩) ; ಹುಡುಗಿಯನ್ನು ನಟರಾಜ ಹಾಗೆ ಹೊಡೆದು ಬೈದು ಹಿಂಸಿಸುತ್ತಿದ್ದುದು ಪಾರ್ವತಮ್ಮನಿಗೆ ಅತ್ಯಂತ ವ್ಯಥೆಯನ್ನುಂಟು ಮಾಡಿತು (ಸರ್ವಮಂ. ೨೨೪). ೨. ಅಂಜಿಕೆ ; ಗಾಬರಿ. [ಸಂ. ವ್ಯಥಾ]

ವ್ಯದ್ವಿತೆ (ನಾ). ಶೂನ್ಯ ; ಸೊನ್ನೆ : "ಶೂನ್ಯ . . . ವ್ಯದ್ವಿತ — ಇಂತಿನಿತುಂ ಸೊನ್ನೆಗೆ ಹೆಸರು" (ವ್ಯವಹಾ. ೧೧-೬). [?]

ವ್ಯಧಿಕರಣ (ನಾ). ೧. ವಿರುದ್ಧವಾದ ಮಾತು : ಎನ್ನ ಮೇಲೆ ವ್ಯಧಿಕರಣ ನುಡಿದಳೀ ದೂತಿ ಪನ್ನಗಶಯನ ನೀ ಕಿವಿಕೊಟ್ಟು ಕೇಳಿದ್ಯೋ (ಶ್ರೀಕೃಪಾ. ೨೧). ೨. ಬೇರೆ ಬೇರೆಯ ಅಧಿಕರಣ ; ವಿಭಿನ್ನವಾದ ಆಶ್ರಯ, — ಸ್ಥಾನ. [ಸಂ.]

ವ್ಯಪಗತ (ಗು). ೧. ಬೇರೆಯಾದ ; ದೂರವಾದ : ನೃಪತೀ ಪರೋಪಕಾರೀ ವಿಪುಳಗುಣೀ . . . ವ್ಯಪಗತಭಯಾ ದಯಾಲೂ ರಿಪುವರ್ಗಮನಲೆದು ಗೆಲ್ವೆ ಯಾಗಾಹವದೊಳ್ (ಕವಿರಾ. ೨-೨೪) ; ದ್ರುಪದನಾಗಲಿಯೆಂದು . . . ಕೆಲಬರು ಭೀಮಸುತನೆಂದು ಅಪರಿಮಿತಮತವಾಗೆ ಸಮರವ್ಯಪಗತಾರಿ ಸುರೇಂದ್ರಸುತನೀ ದ್ರುಪದಸುತ ಸೇನಾಧಿಪತಿಯಹುದೆಮ್ಮ ಮತ (ಕುವ್ಯಾಉ. ೧೧-೩೧). (ನಾ). ೨. ನಿಂತುಹೋಗುವಿಕೆ ; ತಪ್ಪಿಹೋಗುವುದು : ಈ ಸಂವಿಧಾನವು ಆಚರಣೆಗೆ ಬರದೆ ಇದ್ದಿದ್ದ ಪಕ್ಷದಲ್ಲಿ, ರಾಜಗಾಮಿಯಾಗುವುದರಿಂದ ಅಥವಾ ವ್ಯಪಗತವಾಗುವುದರಿಂದ . . . ಸಂಘದ ವಶದಲ್ಲಿ ನೆಲಸತಕ್ಕುದು (ಭಾಧಾನ. ೧೭೦). [ಸಂ.]

ವ್ಯಪದೇಶ (ನಾ). ೧. ತಿಳಿವಳಿಕೆ ; ಸೂಚನೆ. ೨. ಹೆಸರು ; ಅಭಿಧಾನ : ಅಮೃತಾರ್ಣವೋದ್ಧೃತ ಘಟಾಮೃತಕ್ಕೆ ತಚ್ಛಕ್ತಿಯೋಗದಿಂ ಅಮೃತವ್ಯಪದೇಶಂ (ತತ್ತ್ವಪ್ರ. ೩) ; ಚೇತನವು ಇಚ್ಛೆಯಿಂದ ಅಭಿಮಾನಿಸಿ ಅನೇಕ ವ್ಯಪದೇಶಗಳನ್ನು ಹೊಂದಿದರೂ ಅದರ ಸ್ವರೂಪಕ್ಕೆ ಯಾವ ಹಾನಿಯೂ ಸಂಘಟಿಸುವುದಿಲ್ಲ (ಶಕ್ತಿವಿ. ೪೮). ೩. ನೆವ ; ನಿಮಿತ್ತ : ಆ ಮಾಯಾವಿಯಂ ಧನುರ್ಮಹೋತ್ಸವಾಮಂತ್ರಣವ್ಯಪದೇಶದಿಂ ವಿನಾಶಮನೆಯ್ದಿಸುವೆಂ (ಜಗವಿ. ೫-೯೧ ವ). ೪. ಉಪಾಯ ; ಹಂಚಿಕೆ. ೫. ಕಪಟ ; ಮೋಸ. ೬. [ಕಾವ್ಯಮೀ] ಉಪಮಾಲಂಕಾರದಲ್ಲಿ ಒಂದು ಬಗೆ ; ಉಪಮಾನವು ಉಪಮೇಯಕ್ಕೆ ಹೀನವಾದಾಗ ಅಥವಾ ಅಧೀನವಾದಾಗ ಆಗುವ ಅಲಂಕಾರ ; P ನವೀನಾಲಂಕಾರಿಕರು ಇದನ್ನು 'ಕೈತವಾಪಹ್ನುತಿ ಅಲಂಕಾರ' ಎಂದು ಕರೆಯುವರು : ಉಪಮೇಯನ್ಯಗ್ಭಾವೋಪ ಪನ್ನ ಮುಪಮಾನಮಾಗೆ ಮುಖ್ಯಮದಕ್ಕುಂ ವ್ಯಪದೇಶಂ ಮುಂ ಪೋದುದನಪೂರ್ವಮಂ ಕಂಡು ನೆನೆವುದದು ತಾಂ ಸ್ಮರಣಂ (ಕಾವ್ಯಾವ. ೭೧೩). [ಸಂ.]

ವ್ಯಪನೀತ (ನಾ). ಹೋಗಲಾಡಿಸುವಂಥದು; ನೀಗುವಂಥದು : ಚಾರುಘನಮ್ಯತಿ ವಿಳಸದ್ದ್ವಾರಂ ವ್ಯಪನೀತನೂಷ್ಮತಾಪಪ್ರಸರಂ ಕಾರಂತಿರೆ ವಿಜಯಾರ್ಧಕುಮಾರಂ ಬಂದೆಱಗಿದಂ ಮಹೀಭೃತ್ಪದದೊಳ್ (ವರ್ಧಮಾ. ೯-೩೦). [ಸಂ.]

ವ್ಯಪಸರ್ಗ (ನಾ). ಬಿಟ್ಟುಬಿಡುವುದು ; ತ್ಯಾಗ : ವ್ಯ[ಪಾಠಾಂ. ವ್ಯು]ಪಸರ್ಗ ವಿಷಯರೂಪಪ್ರಪಂಚಿತಮನೇಕಭೇದಮದು ತಾನಕ್ಕುಂ (ಕಾವ್ಯಾವ. ೬೬೬). [ಸಂ.]

ವ್ಯಪಾಕೃತ (ಗು). ಬಿಡುಗಡೆ ಹೊಂದಿದ ; ಮುಕ್ತ : ಸರ್ವಾಂಗಮಲಧರಂ ಪರಿ ನಿರ್ವೃತಿ ಸೌಖ್ಯೋನ್ಮುಖಂ ವ್ಯಪಾಕೃತಮೋದಂ . . . ಒರ್ವಂ ಋಷಿಯಿರ್ದಂ (ಚಂದ್ರಪು. ೯-೨೦). [ಸಂ.]

ವ್ಯಪಾಯ (ನಾ). ೧. ಇಲ್ಲವಾಗುವಿಕೆ ; ಅದೃಶ್ಯವಾಗುವಿಕೆ ; ನಿರ್ಗಮನ : ಚ್ಯುತಿಯಾಗೆ ಭೋಗಭೂಮಿಸ್ಥಿತಿ ಕಲ್ಪಮಹೀರುಹವ್ಯಪಾಯದೊಳೆಂತುಂ ಕ್ಷಿತಿಪತಿ ಕಲ್ಪಮಹೀಜಸ್ಥಿತಿಯಿಂ ತಾನಿಂತು ಜನಮನೇಂ ನಿಱಿಸಿದನೋ (ಆದಿಪು. ೬-೭೮). ೨. ಅಡೆತಡೆ ; ವಿಘ್ನ : "ಅಂತರಾಯಂ ವ್ಯಪಾಯಂ ವಿಘ್ನವೆನಿಸಿಕ್ಕು" (ಮಂಗರಾ. ೭೫-೫). ೩. (ಆಲಂ) ಸಾವು; ಮರಣ : ಲಕ್ಷ್ಮೀಮತಿಮಹಾದೇವಿಯು ಮನುಂದರಿವೆರಸು ಚಕ್ರವಲ್ಲಭ ವ್ಯಪಾಯ [ಪಾಠಾಂ. ವಿಯೋಗ]ದೊಳ್ ಪುಂಡರೀಕನಂ ಕೈಕೊಂಡಿರೆ (ಆದಿಪು. ೪-೮೧ ವ). [ಸಂ.]

ವ್ಯಪಾಯಿ (ನಾ). = ವ್ಯಪಾಯ ೧ : ಅದಱಿಂ ವಿಜ್ಞಾನಾಶ್ರಿತಂಗಳಪ್ಪ ಶರೀರೇಂದ್ರಿಯ ಬುದ್ಧಿಗಳೇಕಕ್ಷಣಾಂತರಾಳವರ್ತಿಗಳುತ್ತರಕ್ಷಣವ್ಯಪಾಯಿಗಳದರ್ಕೇಕಾತ್ಮಜಂ ಜೀವ ಮೆಂಬುದಾದುದು (ಶಾಂತಿಪು. ೮-೧೪೨ ವ). [< ವ್ಯಪಾಯ]

ವ್ಯಪೇಕ್ಷೆ (ನಾ). ೧. ನಿರೀಕ್ಷೆ. ೨. ಪರಸ್ಪರ ಸಂಬಂಧ : ವಿಶೇಷಣವಿಶೇಷ್ಯ ಸಂಬಂಧಮುಳ್ಳೊಡಂ ಶಬ್ದಶಕ್ತಿವ್ಯಪೇಕ್ಷೆಯಿಂ ಉಪಾತ್ತಲಿಂಗಸಂಖ್ಯಾವ್ಯತಿಕ್ರಮಮಾಗದು (ತತ್ತ್ವಪ್ರ. ೯). [ಸಂ. ವ್ಯಪೇಕ್ಷಾ]

ವ್ಯಪೇಕ್ಷೆಗೆಯ್ (ಕ್ರಿ). ಬಯಸು ; ನಿರೀಕ್ಷಿಸು : ಸ್ವಪೂರ್ವವಾಸನೆಯ ಬಲದಿನಂತಾತಂ ವೇದಪುರಾಣವೇದಿಯಾದಂ ವ್ಯಪೇಕ್ಷೆಗೆಯ್ಗುಮೆ ವಿಶುದ್ಧಮಣಿ ಸಂಸ್ಕೃತಿಯಂ (ವರ್ಧಮಾ. ೬-೧೮). [ವ್ಯಪೇಕ್ಷೆ + ಕೆಯ್ಗ್]

ವ್ಯಪೇತ (ಗು). ೧. ಬೇರೆಯಾದ ; ಅಗಲಿದ. ೨. ವಿರುದ್ಧವಾದ ; ವಿರೋಧವಾದ. (ನಾ). ೩. ದೂರೀಕರಿಸಿದವನು ; ತೊರೆದವನು : ಸಪ್ತರ್ಧಿಸಂಪನ್ನನುಂ ಅಷ್ಟ ಮಲವ್ಯಪೇತನುಂ . . . ಪಂಚದಶಪ್ರಮಾದಪರಿವರ್ಜಿತನುಮಾಗಿ (ಅಜಿಪು. ೩-೧ ವ) ; ಸಹಜಸುರಭಿಗಂಧಿಯುತಂ ದೋಷದಾಹಮಳವಿಹೀನನುಂ ನಖ[ತ] ನೂರುಹಶ್ಮಶ್ರುಕೇಶ ರೋಮವ್ಯಪೇತನುಂ . . . ಎನಿಸಿ (ವರ್ಧಮಾ. ೬-೪೬ ವ). [ಸಂ.]

ವ್ಯಪೇತತೆ (ನಾ). ಇಲ್ಲದಿರುವಿಕೆ ; ಅಭಾವ : ಮಗಳೇಱುಂಜವ್ವನಮುಮಂ . . . ವಿಲಾಸಸಮೇತತೆಯುಮಂ ಮಿಥುನಲೀಲಾವ್ಯಪೇತತೆಯುಮಂ . . . ಮಂತ್ರಿವರ್ಗ ದೊಳಾಲೋಚಿಸಿ (ಶಾಂತಿಪು. ೫-೧೯ ವ). [ಸಂ. ವ್ಯಪೇತತಾ]

ವ್ಯಪೇತಾವ್ಯಪೇತ (ನಾ). [ಕಾವ್ಯಮೀ] ಒಂದು ಬಗೆಯ ಶಬ್ದಾಲಂಕಾರ, — ಯಮಕ : ವ್ಯಪೇತಾವ್ಯಪೇತಕ್ಕೆ - ಸಬಳಿಕೆಯಿಂ ಪಾಟಿಯನೊಕ್ಕು ಬೇರನಂತಾ ಕುಬೇರನಾಯಕನತಿವಿಕ್ಲಬಚಿತ್ತಂ ತೊಟ್ಟಗೆ ತಾಗಿ ಬಾಗಿದಂ ತಾಗಿ ಬಾಗಿದಂ ನರನಡಿಯೊಳ್ (ಕಾವ್ಯಾವ. ೫೪೪). [ಸಂ.]

ವ್ಯಭಿಚರಿಸು (ಕ್ರಿ). ೧. ಒಳ್ಳೆಯ ಮಾರ್ಗವನ್ನು ಬಿಡು ; ಅಡ್ಡದಾರಿಗೆ ಬೀಳು : ಪ್ರತ್ಯಕ್ಷಪರಿಚ್ಛೇದ್ಯಂ ವಸ್ತುತತ್ವಮನುಮಾನದಿಂ ವ್ಯಭಿಚರಿಸುಗುಂ ಎಂದು ನುಡಿದು (ಶಾಂತಿಪು. ೮-೧೨೮ ವ). ೨. ಹಾದರ ಮಾಡು : "ರಂಕತೀತಿ - ವ್ಯಭಿಚರಿಸಿದ ಪಳೆಂಬುದು" (ಕಾಶಕ್ಯ. ೨೫). [(ಸಂ. ವ್ಯಭಿಚರ) + - ಇಸ್ಸು]

ವ್ಯಭಿಚಾರ (ನಾ). ೧. ದಾರಿಬಿಟ್ಟು ಹೋಗುವಿಕೆ. ೨. ವಿಷಯಲಂಪಟತೆ ;

ಹಾದರ : ಕ್ಷಿತಿಜಾರ್ಕಜಮಧ್ಯದೊಳುಡುಪತಿ ನಿಲೆ . . . ಆ ದಂಪತಿಗಳ್ ವ್ಯಭಿಚಾರಶೀಲರಿರ್ವರುಮಪ್ಪರ್ (ಜಾತಕ. ೨೧-೭). ೩. [ತರ್ಕಶಾ] ಹೇತ್ವಾಭಾಸಗಳಲ್ಲಿ ಒಂದು : ವ್ಯಭಿಚಾರವೆಂದರೆ ಹೇತುವಿರತಕ್ಕ ಸ್ಥಲದಲ್ಲಿ ಸಾಧ್ಯವಿಲ್ಲದೇ ಇರುವುದು (ಒಂದಸಾ. ೧೪೧). [ಸಂ.]

ವ್ಯಭಿಚಾರಿ (ಗು). ೧. ದಾರಿಬಿಟ್ಟು ಸಾಗುವ ; ಹಾದಿತಪ್ಪಿ ನಡೆಯುವ. ೨. ನೀತಿಗೆಟ್ಟ ; ನಿಯಮಬಾಹಿರವಾದ : ಹಗಲು ನನ್ನವರು ಮಾಂಸದೃಷ್ಟಿಯ ಮುಂದೆ, ರಾತ್ರಿ ಸ್ವಪ್ನದಲ್ಲಿ ಜಯಂತನು ದೃಷ್ಟಿಜ್ಞಾನದ ಮುಂದೆ. ಈ ವ್ಯಭಿಚಾರಿ ಸಂಗಮವನ್ನು ಹೇಗೆ ನಿವಾರಿಸಬೇಕೆಂಬುದೇ ತಿಳಿಯದು (ಜಯಂತ. ೪೧೪). (ನಾ). ೩. ಹಾದರ ಮಾಡುವ ವ್ಯಕ್ತಿ ; ಹಾದರಿಗ : ಆ ನೀಚ ವ್ಯಭಿಚಾರಿಯ ಹಿಡಿತದಿಂದ ಪಾರಾಗಿ ಹೋಗಬೇಕೆಂಬುದೊಂದೇ ಆಕೆಯ ಯೋಚನೆಯಾಗಿತ್ತು (ಚ್ಯಾಲಾಮು. ೩೩೬). ೪. [ಕಾವ್ಯಮೀ] ನಿಯತವಾಗಿ ಇರದ, ದೊಡ್ಡ ಭಾವಗಳ ಜೊತೆಗೆ ಬಂದು ಹೋಗುತ್ತಿರುವ ಭಾವ ; ಸಂಚಾರಿಭಾವ : ವೀರರಸವೂ ವ್ಯಭಿಚಾರಿಯಾಗಿ ವರ್ಣಿತವಾಗಿದೆ (ಕರ್ಣಾಜು. ೭೭). 'ವ್ಯಭಿಚಾರಿಭಾವ' ಪರಾ. [ಸಂ. ವ್ಯಭಿಚಾರಿನ್]

ವ್ಯಭಿಚಾರಿಣಿ (ನಾ). ನೀತಿಗೆಟ್ಟವಳು ; ಹಾದರಗಿತ್ತಿ : ಆಕೆ ವ್ಯಭಿಚಾರಿಣಿ ಎಂದು ಸುಳ್ಳು ಹೇಳಿದವರು ಕೂಡಾ ವೇದಪಾರಾಯಣಪ್ರವೀಣರೆ (ರಾಮಪಂ. ೮೭) ; ಹುಟ್ಟಿದ ವಂಶಕ್ಕೆ ಅಗೌರವ ತಂದ ವ್ಯಭಿಚಾರಿಣಿ ಪುನಃ ತವರಿಗೆ ಹೋಗುವುದು ಸರಿಯಲ್ಲ (ಸೋತುಗ. ೧೩೯). [ಸಂ. ವ್ಯಭಿಚಾರಿಣೀ]

ವ್ಯಭಿಚಾರಿಭಾವ (ನಾ). = ವ್ಯಭಿಚಾರಿ ೪ : ಇವು ನಿಯತವಾಗಿ ಒಂದು ಕಡೆ ಇರದಿಯೂ ದೊಡ್ಡ ಭಾವಗಳ ಜೊತೆಯಲ್ಲಿ ಬರುತ್ತ ಹೋಗುತ್ತಲೂ ಇರುವುದರಿಂದ ಇವುಗಳನ್ನು 'ವ್ಯಭಿಚಾರಿ'ಭಾವ ಅಥವಾ 'ಸಂಚಾರಿ' ಭಾವಗಳೆಂದೂ . . . ಕರೆಯುತ್ತಾರೆ (ಕೈಪಿ. ೧೪೭). 'ಸ್ಥಾಯಿಭಾವ' ಪರಾ. [ಸಂ.]

ವ್ಯಯ (ನಾ). ೧. ನಷ್ಟ ; ನಾಶ ; ಕಡಮೆಯಾಗುವಿಕೆ : ಆತ್ಮೋಪಾತ್ತಶರೀರ ಪ್ರಮಾಣನುಂ ಉತ್ಪಾದವ್ಯಯದ್ರವ್ಯಾತ್ಮಕನುಂ . . . ಅಪ್ಪ ಜೀವನುಂಟೆಂದು (ಆದಿಪು ೨-೧೦ ವ) ; ವಸ್ತುಸ್ವರೂಪವು ಉತ್ಪಾದ, ವ್ಯಯ, ದ್ರೌವ್ಯ (ಸ್ಥಿರ) ಎಂಬ ಮೂರು ರೂಪವಾಗಿದೆ (ಭಾರದ. ೧೪೦). ೨. ಸಂಪಾದನೆಯ ದ್ರವ್ಯದ ಬಳಕೆ ; ವೆಚ್ಚ ; ಖರ್ಚು : ರಾಮಣೀಯಕವಸ್ತುದಾನವ್ಯಯದ ವೈಭವಕೆ . . . ದ್ವಿಜವರರನರ್ಚಿಸಿದ (ಕುವಾಗ. ೬-೧೦) ; ನಮ್ಮ ಅವಶ್ಯಕತೆಗಳನ್ನು ಪೂರೈಸಲು, ನಮ್ಮ ಆದಾಯವನ್ನು ಉಪಯೋಗಿಸಿದರೆ, ಅದಕ್ಕೆ ವ್ಯಯವೆಂದು ಹೇಳಲಾಗುತ್ತದೆ (ಗೃಹವಿ. ೧೯೪). ೧, ೨ : ವ್ಯಯಮಪ್ಪ ಧನಮನೇ ಸದ್ವ್ಯಯಮಂ ಸತ್ಪಾತ್ರದಾನದಿಂದೊಳ್ತಿದಲ್ ವ್ಯಯಸುಖಿಮಂ ಪಡೆಯದವಂ ವ್ಯಯಮಂ ತಾನೆಯ್ದಿ ಪೋಪುದೇನಚ್ಚರಿಯೆ (ಶಾಂತೀಶ್ವ. ೬-೧೧೯). ೩. ಅರುವತ್ತು ಸಂವತ್ಸರಗಳಲ್ಲಿ ೞಪ್ಪತ್ತನೆಯದು : ಆ ವರ್ಷವೆ ಪ್ರಭವ . . . ವ್ಯಯ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩). ೪. ಲಗ್ನದಿಂದ ಹನ್ನೆರಡನೆಯ ಸ್ಥಾನ : ಸಹಜಾಯವ್ಯಯಧನ ದಶಸುಹೃದಗ್ರ್ಯಹಸ್ಥಾಯಿಯಾಗೆ ತತ್ಕಾಲದೊಳಾ ಗ್ರಹಮಂತದು ತಾತ್ಕಾಲಿಕ ಸುಹೃದ್ಗ್ರಹಂ ಪರಯುತಂ ದ್ವಿಷದ್ಗ್ರಹಮೆನಿಕುಂ (ಜಾತಕ. ೨-೧೭). [ಸಂ.]

ವ್ಯಯಗೃಹ (ನಾ). [ಜ್ಯೋತಿ] ಲಗ್ನದಿಂದ ಹನ್ನೆರಡನೆಯ ಸ್ಥಾನ : ಜಲಜಪ್ರಿಯ ರವಿಜಕುಜೋತ್ಪಲಪ್ರಿಯರ್ ನಿಧನಧನರಿಪುವ್ಯಯಗೃಹದೊಳ್ ನೆಲಸಿರೆ . . . ಕನ್ನೆಡುಗುಂ (ಜಾತಕ. ೨೧-೧೭). [ಸಂ.]

ವ್ಯಯಿಸು (ಕ್ರಿ). ಖರ್ಚುಮಾಡು ; ವೆಚ್ಚಮಾಡು : ಚುನಾವಣೆಗಾಗಿ ಸಾವಿರಗಟ್ಟಲೆ ವ್ಯಯಿಸುವ ಹಣವನ್ನು ಬಡವರ ಕಲ್ಯಾಣಕ್ಕಾಗಿ ವ್ಯಯಿಸಬಾರದೇಕೆ (ರೀಶಧ. ೬೩) ; ಆವಶ್ಯಕವಿದ್ದಷ್ಟನ್ನೇ ವ್ಯಯಿಸಿ ನಮಗೆ ಬೇಕಾದ ಸುಖ ಸಂಪತ್ತನ್ನು ಪಡೆಯುವುದೇ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದು (ಭಾಷಾಶಾ. ೨೬೨). [ವ್ಯಯ + -ಇಸು]

ವ್ಯರ್ಥ (ಗು). ೧. ನಿರುಪಯುಕ್ತವಾದ ; ಅಪ್ರಯೋಜಕವಾದ : ವಿಪ್ರರೊಳಗೆ ಸಮರ್ಥರಾರು ಸುಧಾತ್ರಿಯೊಳಗೆಯು ವ್ಯರ್ಥಜೀವಿಗಳಾರು ಚಿತ್ರ್ಯಸು (ಕುವಾಉ. ೪-೫೪) ; ವಿವಿಧ ಪಯೋಜದಿ ವ್ಯರ್ಥಾಯಾಸದಿ ತೊಳಲಿದೆ ತೃಪ್ತಿಯ ಚಿರನಿಧಿಗೆ (ಅಗ್ನಿಹಂ. ೩-೫). (ನಾ). ೨. ನಿರುಪಯುಕ್ತತೆ ; ನಿಷ್ಪ್ರಯೋಜಕತೆ : ಮಱುಭವಂ ನಾಡೆಯುಂ ವ್ಯರ್ಥಮಲ್ತೇ (ಚಂದ್ರಪ್ರ. ೪-೧೪). ೩. [ಕಾವ್ಯಮೀ] ವಾಕ್ಯದೋಷಗಳಲ್ಲಿ ಒಂದು : ವ್ಯವಹಿತಮೇಕಾರ್ಥಂ ವ್ಯರ್ಥವಪಕ್ರಮಂ . . . ಇಂತು ವಾಕ್ಯದೋಷಮಿವಕ್ಕುಂ (ಕಾವ್ಯಾವ. ೪೫೫).

ವ್ಯರ್ಥಮಾಡು, ವ್ಯರ್ಥಮಾಡು = ನಿರರ್ಥಕಗೊಳಿಸು ; ನಿಷ್ಪ್ರಯೋಜಕವನ್ನಾಗಿ ಮಾಡು : ಕಾಲಲಬ್ಧವಶದಿಂ ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂಮಾಡದೆ . . . ಒಡಂಬಡುವುದೆ ನಿನಗೆ ಏನಯಂ (ಚಂದ್ರಪ್ರ. ೪-೧೪ ವ) ; ಇದಕ್ಕಂತ ಹೆಚ್ಚು ಹಣವನ್ನು ವ್ಯರ್ಥಮಾಡುತ್ತಾರಲ್ಲವೆ (ನಂಬಿಯ. ೧೯). **ವ್ಯರ್ಥವಾಗು** = ನಿಷ್ಪ್ರಯೋಜಕವಾಗು ; ಉಪಯೋಗವಿಲ್ಲವಾಗು : ವ್ಯರ್ಥವಾಯ್ತಕಟಕಟ ಜನ್ಮ ನಿರರ್ಥವಾಯ್ತು (ತೊರಹಾ. ೧-೪-೨) ; ಮಕ್ಕಳಿಗೆ . . . ಒಳ್ಳೇ ನಡತೆಯನ್ನಷ್ಟು ಕಲಿಸದ ಬಟ್ಟರೆ ಅದೆಲ್ಲಾ ವ್ಯರ್ಥವಾಗುವುದು (ಮುಂಬಾಮು. ೪-೩೩). [ಸಂ.]

ವ್ಯರ್ಥತೆ (ನಾ). ನಿಷ್ಫಲತೆ ; ನಿರರ್ಥಕತೆ : ನಿನ್ನೊಳ್ತಾಂ ವ್ಯರ್ಥತೆಯಂ ಪಡಗುಂ ಪರಮಾರ್ಥವಚೇತನತೆಯಿಂದೆ ಕಲ್ಪಕುಜಾತಂ (ಕವಿಕಾ. ೩-೪೪). [ಸಂ. ವ್ಯರ್ಥತಾ]

ವ್ಯರ್ಥಾಯ (ಅ). ವೃಥಾ ; ವ್ಯರ್ಥವಾಗಿ : ವ್ಯರ್ಥಾಯ ನೊಂದು ೞತ್ಯರ್ಥವ ಕಾಣದ . . . ನರಕಗರ್ತದೊಳಿಳಿವೆನು ಕೀರ್ತಿ ಮರೆದು (ಮೋಕ್ಷದೀ. ೧೫೧-೧೧).

[< ವ್ಯರ್ಥ]

ವ್ಯರ್ಥಾಲಾಪ, ವ್ಯರ್ಥಾಳಾಪ (ನಾ). ನಿಷ್ಪ್ರಯೋಜಕವಾದ ಮಾತು ; ನಿರರ್ಥಕವಾದ ನುಡಿ : "ಜಱುಚೆಂದು ವ್ಯರ್ಥಾಲಾಪಂ" (ಕಶಸಾ. ೬೬-೪೮೯). **ವ್ಯರ್ಥಾಳಾಪ** : ವ್ಯರ್ಥಾಳಾಪದೊಳೇಂ ಧನಮರ್ಥಂ ಪ್ರಾಣಂ ನಿಜಕ್ಕೆ ನಿನ್ನದು (ದಶಕು. ೮-೧೩೬). [ಸಂ.]

ವ್ಯರ್ಥಾಳಾಪ 'ವ್ಯರ್ಥಾಲಾಪ' ನೋ.

ವ್ಯಲೀಕ, ವ್ಯಳೀಕ (ನಾ). ೧. ಸೇರಿಕೆಯಾಗದುದು ; ಅಸಹ್ಯವಾದುದು. ೨. ಅಯೋಗ್ಯವಾದ ಕೆಲಸ ; ತಪ್ಪು ; ಅಪರಾಧ. ೩. ದುಃಖ ; ನೋವು. ೪. ವಂಚನೆ ; ಮೋಸ ; ಕಪಟ. ೫. ಅನೃತ ; ಸುಳ್ಳು. **ವ್ಯಳೀಕ** : ೨. "ವ್ಯಳೀಕಂ, ಅಪರಾಧಃ, ಆಗಃ, ಮಂತುಃ, ವಿಪ್ರಿಯಃ — ಈ ೫ ಅಪರಾಧಂ" (ಹಲಾಯು. ೧೨೩-೬೪). ೪. "ವಂಚನಂ, ಅತಿಸಂಧಾನಂ, ವ್ಯಳೀಕಂ, ಪ್ರತಾರಣಂ — ಈ ೪ ಆಟಿಗೊಳ್ಳುದು" (ಹಲಾಯು. ೧೨೩-೬೩). [ಸಂ.]

ವ್ಯವಕಲನ (ನಾ). ೧. ಬೇರೆಮಾಡುವಿಕೆ ; ಪ್ರತ್ಯೇಕಿಸುವುದು. ೨. [ಗಣಿತ] ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಕಳೆಯುವುದು : ವ್ಯವಕಲನಕ್ರಿಯೆಯನ್ನು ತೋರಿಸುವುದಕ್ಕೂ ಸಮತ್ವವನ್ನು ತಿಳಿಸುವುದಕ್ಕೂ ಚಿಹ್ನೆಗಳನ್ನು ಕೊಟ್ಟನು (ಗಣಿತ. ೪೮). 'ಸಂಕಲನ' ಪರಾ. [ಸಂ.]

ವ್ಯವಚ್ಛೇದ (ನಾ). ೧. ಕತ್ತರಿಸುವಿಕೆ ; ತುಂಡಾಗಿಸುವಿಕೆ. ೨. ಬೇರ್ಪಡಿಸುವಿಕೆ : ದ್ರವ್ಯತ್ವವಿಧಾನಪ್ರಕರಣಮಪ್ಪುದಱಿಂ ಉಕ್ತ ಜೀವಂಗಳ್ಗಂ ಅದ್ರವ್ಯತ್ವವ್ಯವಚ್ಛೇದಾರ್ಥಂ ಉತ್ತರಸೂತ್ರಾವತಾರಂ (ತತ್ತ್ವಪ್ರ. ೨೬೧). ೩. ಬಾಣಬಿಡುವಿಕೆ : "ಬಿಲ್ಲ ತಿರುವಿಂದ ಹಿಳಿಕು ಬಳಿಚುವುದು ವ್ಯವಚ್ಛೇದಮಕ್ಕುಂ" (ಮಂಗರಾ. ೪೮-೩೬). [ಸಂ.]

ವ್ಯವಧಾನ (ನಾ). ೧. ಬಿಡುವು ; ಸಾವಕಾಶ : ಅವಧಿಯಳಿಯಿತ್ತು ವ್ಯವಧಾನ ಉಳಿಯಿತ್ತು ನಿಜವೆ ನಿಜವನೊಡಗೂಡಿತ್ತು ಕೇಳಾ (ಅವಬಾ.೨೫೫-೧೧೬೫) ; ಸಾಹೇಬರಿಗೆ ವ್ಯವಧಾನವಿರಲಿಲ್ಲ (ರಂಗರೋ. ೧೩೩). ೨. ಅಡೆತಡೆ ; ವಿರೋಧ ; ಭಂಗ : ಸವಿಶೇಷಾಲಂಕಾರೋದ್ಭವಮಾಗಿಯುಮೊಂದುವರ್ಥದೊಳ್ಸಂಬಂಧವ್ಯವಧಾನಮಾದೊಡಕ್ಕುಂ ವ್ಯವಹಿತದೋಷಂ (ಕವಿಕಾ. ೧-೯೦) ; ಆನಂದಾಶ್ರುಜಲವ್ಯವಧಾನಕ್ಕುಮ್ಮಳಿಸಿದಂತವೋಲ್ ಕಣ್ಣಾಲರಿಂದಾ ನೃಪನಂ ನೋಡದೆ ಕಮಲಾನನೆ ನೆನಪಿನೊಳ್ ಪದೆದು ಸೋಡುತಿರ್ದಳ್ (ಕಾದಂಉ. ೬೪). ೩. ತಾಳ್ಮೆ ; ಸಹನೆ : ನಿಜಸ್ಥಿತಿಯನ್ನು ಪರಿಭಾವಿಸುವ ಅಪೇಕ್ಷೆಯಾಗಲಿ, ವ್ಯವಧಾನವಾಗಲಿ ಅವನಿಗೆ ಇರುವುದಿಲ್ಲ (ಭಾರಮಾ. ೧೬೬) ; ಅವುಗಳನ್ನು ನೀರಿಗೆ ಚೆಲ್ಲುವಷ್ಟು ವ್ಯವಧಾನ ನನಗೆ ಇಲ್ಲದೇ ಹೋಯಿತಲ್ಲಾ (ಸಂಸ್ಕಾರ. ೯೫). ೪. ನೆವ; ನೆಪ : "ತಿರೋಧಾನಮನೆ ನೆವನಕ್ಕು" (ಮಂಗರಾ.೧೨೯-೧೩). ೫. ಕೊನೆ ; ಸಮಾಪ್ತಿ : ನೀವರಗುಮನೆಯಲಿ ಹೊತ್ತಿಸಿದ ಫಲ ಬಂದುದೇ ವ್ಯವಧಾನವಾದುದಲೆ (ಕುವಾಗ.೮-೧೦). ೬. ಕಾಣದಂತಾಗುವುದು ; ಅದೃಶ್ಯವಾಗುವುದು. [ಸಂ.]

ವ್ಯವಸಾಯ (ನಾ). ೧. ಪರಿಶ್ರಮ ; ಪ್ರಯತ್ನ : "ಉತ್ಸಾಹಃ, ವ್ಯವಸಾಯಃ, — ೨ ಮಹಾಕಾರ್ಯ ವಿಷಯವಾಗಿ ಮಾಡಲ್ಪಡುವ ಪ್ರಯತ್ನಕ್ಕೆ ಹೆಸರು" (ಸಿದ್ಧಾಂತ. ೬೭). ೨. ಕಾರ್ಯನಿರ್ವಾಹ ; ಕಾರ್ಯಾಚರಣೆ : ಚಿತ್ರಸಂಭವನಂ ಸಂಹರಿಸಲ್ ಕಷಾಯಭಟರಂ ಬೆನ್ನಟ್ಟಲೊಪ್ಪೀ ಮಹಾವ್ಯವಸಾಯಂ ತಮಗಾಗ (ಅಜಿಪು. ೧-೫); ಅರಸನೀತನ ಭಕ್ತಿಗಂ ವ್ಯವಸಾಯಕ್ಕಂ ಮೆಚ್ಚಿ ತನ್ನ ತಂದೆರ್ಮಗಳೊಳೊಂದುಮಂ ಕೊಳ್ಳದೆ ನೀನೇ ಕೊಳ್ಳೆಂದು ಕೊಟ್ಟೊಡೆ (ಸುಕುಮಾ. ೭-೩೫ ವ) ; ನನ್ನ ವ್ಯವಸಾಯ ಪೂರ್ಣವಾಯಿತು (ಹೂಸಕ್ತಿ. ೧೪). ೩. ಕಸುಬು ; ಉದ್ಯೋಗ : ವ್ಯವಸಾಯಕ್ಕೆ ಒಪ್ಪುವ ವೇಷ, ತಾನು ಕೈಕೊಂಡ ಕೆಲಸದ ಎಲ್ಲ ಮಾಹಿತಿ, ಇವೆರಡ ಪ್ರಚಾರಕನ ಕೈಪಾಡಿನಲ್ಲಿದ್ದರ ತೀರದು (ತಕ್ಷಡಿ. ೧೦೦). ೪. ಸಾಗುವಳಿ ; ಬೇಸಾಯ ; ಒಕ್ಕಲುತನ : ನಮ್ಮ ತಂದೆಯವರು ನೇಗಿಲು ಮೇಲೆ ಎಂದೂ ಕೈಯಿಟ್ಟವರಲ್ಲ ಪಾದರೂ ವ್ಯವಸಾಯದಲ್ಲಿ ನಿಪುಣರು (ಚಂಗಾಳ್ಳ. ೧). [ಸಂ.]

ವ್ಯವಸಾಯಗಾರ (ನಾ). ಬೇಸಾಯಗಾರ ; ಒಕ್ಕಲುತನ ಮಾಡುವವನು ; ರೈತ : ವ್ಯವಸಾಯಗಾರನೇ ದೇಶದ ಭಾಗ್ಯ (ಚಂಗಾಳ್ಳ. ೧) ; ವ್ಯವಸಾಯಗಾರರ ಮತ್ತು ನಡುವರ್ಗಗಳವರ ಉತ್ಪನ್ನಕ್ಕೆ ಲಾಭಕರವಾದ ಪೇಟೆ ದೊರೆಯುವಂತೆ ಸೌಕರ್ಯ ಕಲ್ಪಿಸಲಿದೆ (ಹಣಪ್ರ. ೬೯). {ವ್ಯವಸಾಯ + — ಗಾರ(< — ಕಾಱ)}

ವ್ಯವಸಾಯಿ (ನಾ). ೧. ಉತ್ಸಾಹದಿಂದ ಕೆಲಸಮಾಡುವವನು ; ಕಷ್ಟಪಟ್ಟು ದುಡಿಯುವವನು : ಭುವನೈಕಮಲ್ಲದೇವನ ಭವನದೊಳಂ ತಾನೆ ಮಾನಸಂ ತಾನೆ ಮಹಾವ್ಯವಸಾಯಿ (ಸುಕುಮಾ. ೨೬೦ ಪಂಕ್ತಿ). ೨. ಕಸುಬುದಾರ : ಮೂಲದಲ್ಲಿ ರೈತನೂ ಕೈಕಸಬಿನ ಚಿಕ್ಕ ವ್ಯವಸಾಯಿಯೂ ತನ್ನ ದುಡಿಮೆಯಿಂದ ದುಡ್ಡು ಗಳಿಸಿ . . . ತನ್ನ ಧನೋತ್ಪಾದನೆಯ ಸಾಧನಗಳ ಮೇಲೆ ತನ್ನದೇ ಒಡೆತನವುಳ್ಳವ ನಾಗಿರುತ್ತಾನೆ (ಮೂವಾದ. ೧೨೯). [ಸಂ. ವ್ಯವಸಾಯಿನ್]

ವ್ಯವಸ್ಥಾಪಕ (ಗು). ೧. ಏರ್ಪಾಡುಮಾಡುವ ; ನಿರ್ವಹಿಸುವ : ಜೀವ ಪರಮಾಣುಗಳ ವಿಕಸನಗುಣದಿಂದ ವ್ಯವಸ್ಥಾಪಕಶಕ್ತಿ (Organising force) ಯೊಂದುಂಟಾಗುತ್ತದೆ (ನಿಶಬು. ೫೩೩). (ನಾ). ೨. ಏರ್ಪಾಡು ಮಾಡುವವನು ; ಮೇಲ್ವಿಚಾರಕ : ದೇಶದ ಹಣದ ವ್ಯವಸ್ಥಾಪಕರು ಧೈರ್ಯದಿಂದ, ನಿಷ್ಪಕ್ಷಪಾತದಿಂದ, ಸಮದರ್ಶಿತೆಯಿಂದ, ದೇಶದ ಪ್ರಯೋಜನದೃಷ್ಟಿಯಿಂದ ವ್ಯಾಪಾರದ ಬೆನ್ನ ಹಿಂದೆ ನಿಲ್ಲಬೇಕು (ಹಣಪ್ರ. ೫೬). [ಸಂ.]

ವ್ಯವಸ್ಥಿತ (ಗು). ಸಜ್ಜುಗೊಳಿಸಿದ ; ಕ್ರಮಪಡಿಸಿದ : ದಿಕ್‌ಚತುಷ್ಟಯವ್ಯವಸ್ಥಿತದೇವ ಮಾನವತಿರ್ಯಗ್ವಿನೇಯಜನಸುಖಾರೋಹಣಹೇತು (ಆದಿಪು. ೧೦-೨೨ ವ) ; ಮಕ್ಕಳ ಬೆಳವಣಿಗೆಯ ವ್ಯವಸ್ಥಿತಜ್ಞಾನವೇ ಮನೋವಿಜ್ಞಾನ (ಶಿಕ್ಷಿಪ್ರ. ೪೦೮). [ಸಂ.]

ವ್ಯವಸ್ಥೆ (ನಾ). ೧. ಏರ್ಪಾಡು ; ಸಜ್ಜು : ಶ್ರೀಧರಭಟ್ಟರ್ . . . ತವಗಂ ಮಹಾಜನಕ್ಕಂ ಪ್ರಜೆಗಂ ಮಾಡಿದ ವ್ಯವಸ್ಥೆಯುಂ (ಏಗ. XX. ೬೭-೧೫ ; 1012) ; ದೇವರಿಗೆ ನಮ್ಮ ಹಳ್ಳಿಗರು ಸಕಲ ವ್ಯವಸ್ಥೆಗಳನ್ನೂ ಪೂರೈಸಿದ್ದಾರೆ (ಮೋಡಿ. ೭). ೨. ಕಟ್ಟಳೆ ; ನಿಯಮ ; ಕ್ರಮ : ಗಾವುಣ್ಡ ನಾ[ಗಿ]ಯಮ್ಮಗಮಱುವದಿಂಬರ್ಗ್ಗಂ ಕೊಟ್ಟ ವ್ಯವಸ್ಥೆ ಯಾವುದೆನ್ದೊಡೆ (ಶಾಸಾ. Xi-i. ೪೩-೧೭ ; 970) ; ಅದರ್ಕೆ ಲಿಂಗವಚನ ವ್ಯವಸ್ಥೆಯಿಲ್ಲ (ಶಮದ. ೪೭ ವೃತ್ತಿ). ೩. ಇರವು ; ಸ್ಥಿತಿ : "ತನ್ನಿರವಿನಲಿ ವ್ಯವಸ್ಥೆಯಲಿ ಸ್ಥಿತಿಯೆನಿಕು" (ಮಂಗರಾ. ೧೪೩-೨೨). ೪. ರಚನೆ ; ವಿನ್ಯಾಸ : ಕಾವ್ಯದ ವ್ಯವಸ್ಥೆ ಹೇಗಂದು ಕೇಳಬಹುದು (ಧ್ವನ್ಯಾಲೋ. ೨೫೨). [ಸಂ. ವ್ಯವಸ್ಥಾ]

ವ್ಯವಹರಣ (ನಾ). ರೂಢಿ ; ಬಳಕೆ : ವ್ಯವಹರಣತದಾಚರಣಪ್ರವಣನೊಳಕ್ಕುಂ ಸಮಂತು ಗ ಪ್ರತ್ಯಯಂ (ಶಮದ. ೨೦೪). [ಸಂ.]

ವ್ಯವಹರಣೆ (ನಾ). ೧. ನಡತೆ ; ಆಚರಣೆ ; ವರ್ತನೆ : ಸುಳಿವ ಸುತ್ತುವ ವ್ಯವಹರಣೆಯುಳ್ಳಕ್ಕರ ಅಜಿಯೆನಜಿಯೆ ನೆಜೆ ಶಿವಪಥವ (ಆಯಚಂ. ೬೭-೨೯). ೨. ವಹಿವಾಟು : ಇವರದಾವನ ಪಕ್ಷಪಾತವ್ಯವಹರಣೆಯವರಲ್ಲ ಕೇಳು (ಕುವ್ಯಾಲಿ. ೯-೧೪) ; ಯುಕ್ತವಾದ ವ್ಯವಹರಣೆಯ ಮೂಲಕ . . . ಆಶ್ವಾಸನ ಕೊಡಲಾಗಿದೆ (ಭಾಷಾನು. ೧೯). [ಸಂ. ವ್ಯವಹರಣ]

ವ್ಯವಹರಿಸು (ಕ್ರಿ). ೧. ಉದ್ಯೋಗಿಸು ; ತೊಡಗು : "ಪಣತೀತಿ ವ್ಯವಹರಿಸಿದಪು ದೆಂಬುದು" (ಕಾಶಕ್ರ. ೩೪). ೨. ವ್ಯವಹಾರ ಮಾಡು ; ವಹಿವಾಟು ನಡೆಸು : ವ್ಯಾಪಾರಿಸುವುದಕ್ಕೆ ಯೋಗ್ಯವಲ್ಲದಂತಪ್ಪ ಠಾವಿನೊಳ್ ಅವನೊರ್ವಂ ವ್ಯವಹರಿಸಲಿಚ್ಛಿಸಿಹಂ . . . ಕೇಡನ್ಮೆದುವಂ (ಪಂಚತಂ. ೫-೧೧) ; ಮಕ್ಕಳು ಆಗುವ . . . ವ್ಯವಹರಿಸುವ ಎಲ್ಲ ಸನ್ನಿವೇಶಗಳೂ ಅವರ ಜೀವನದಲ್ಲಿ ಪರಿಣಾಮ ಹುಟ್ಟಿಸುತ್ತಲೇ ಇವೆ (ಶಿಕ್ಷಿಪ್ರ. ೫೩). ೩. ಉಂಟಾಗು ; ಪ್ರಾಪ್ತವಾಗು : ಸಂಧ್ಯಕ್ಷರಮನ ಯಥಾರ್ಥದಿಂ ವ್ಯವಹರಿಸುಗುಮೇಕಾರಮಾದಿಯಾಗಿರೆ (ಕಾವ್ಯಾವ. ೧೨) ; ಅವಿಕೃತಿಗಳಿವರ್ಣ ಮೊವರ್ಣವಂತ್ಯವೆನಿಸಿದ ನಿಪಾತಮವಧಾರಣೆ ತಳ್ತ ವಿಶಂಕೆಗಳಿಂಬವೊಳ್ ವ್ಯವಹರಿಸದು ಸಂಧಿಯಾ ಪ್ಪ್ಲುತ್ಕಮಭಾವಂ (ಶಮದ ೫೭) ; ವ್ಯವಹರಿಸೀ ಕುಹಕಮತಿ ನಿಮ್ಮವನಿಪಾಲನಮತುಲ (ತೊರಾ. ೨-೧-೩೩). ೪. ರೂಢಿಗೆ ಅಥವಾ ವಾಡಿಕೆಗೆ ತರು ; ಬಳಸು : ನಮ್ಮ ಕಾಲವನ್ನು ವಿಜ್ಞಾನದ ಯುಗವೆಂದು ವ್ಯವಹರಿಸುವುದು ಎಲ್ಲರಿಗೂ ತಿಳಿದಿರುವ ಸಂಗತಿ (ಸಾಪ್ರಿಶ. ೭೦). [ವ್ಯವಹರಣ + - ಇಸ್ಯು]

ವ್ಯವಹಾರ (ನಾ). ೧. ಕೆಲಸ ; ಉದ್ಯೋಗ : ವ್ಯವಹಾರಕ್ಕೂ ಆಹಾರಕ್ಕೂ ದಾಕ್ಷಿಣ್ಯ ಮಾಡಬಾರದು (ಗಾದೆ). ೨. ಕಾರ್ಯಭಾರ ; ವಹಿವಾಟು : ಭಾರತದ ವಾಣಿಜ್ಯ ವ್ಯವಹಾರಗಳನ್ನು ಹೆಚ್ಚಿಸುವುದು ಹೇಗೆ (ಶಿಕ್ಷಿಪ್ರ. ೫೩೯) ; ಲಿಪಿರಹಿತಭಾಷೆಯನ್ನು ಆಡುವವರ ವ್ಯವಹಾರವಲ್ಲಾ ಹೆಚ್ಚಾಗಿ ಸಂಭಾಷಣೆಯಲ್ಲೇ ನಡೆಯುತ್ತವೆ (ದ್ರಾವಿ. ೪೫). ೩. ನಡತೆ ; ಆಚರಣೆ ; ವರ್ತನೆ : ವ್ಯಂಗ್ಯವಾದ ನಾಯಿಕಾ ನಾಯಕರ ವ್ಯವಹಾರವು (Behaviour) ಪ್ರಸ್ತುತಕ್ಕೆ (= ವ್ಯಾಚ್ಯಾರ್ಥಕ್ಕೆ) ಪೋಷಕ (ಧ್ವನ್ಯಾಲೋ. ೨೯ ಅಡಿಟಿ). ೪. ದಿನನಿತ್ಯ ಮಾಡುವ ಕೆಲಸ ; ದೈನಂದಿನಕಾರ್ಯ : ವ್ಯವಹಾರ ಮಂಗಳಾಚಾರವೆಲ್ಲವಂ ತೀರ್ಚಿ ಮುಖ್ಯಮಾಂಗಲ್ಯಮನಾ ಯುವತಿ ಜನಪೂಜೆಯಂ ಮಾಡಿ ವಿಚಿತ್ರಮನಿಪ್ಪ ಚಿತ್ರಶಾಲೆಗೆ ಬಂದಳ್ (ಪಂಠಾಮಾ. ೩-೮೩). ೫. ಸಂಬಂಧ ; ಬಳಕೆ : ಯುವತಿಯರ ವ್ಯವಹಾರವೆಂಬ ವಿಕಳತೆ ಹತ್ತಿ ಯೋಗದ ಸಮತೆ ಸಡಿಲಿತ್ತು ನೋಡಾ (ಸಿದ್ಧೇಶ್ವ. ೧೫೦). ೬. ರೂಢಿ ; ವಾಡಿಕೆ. ೭. ವ್ಯಾಜ್ಯ ; ದಾವೆ : ಯಾವುದಾದರೂ ಉಚ್ಚನ್ಯಾಯಾಲಯವು ವ್ಯವಹಾರದ ಬಾಬಿನ ವ್ಯವಹರಣೆಯಲ್ಲಾಗಲಿ . . . ಕೊಟ್ಟ ನಿರ್ಣಯದ ಮೇಲೆ . . . ಉಚ್ಚತಮ ನ್ಯಾಯಾಲಯಕ್ಕೆ ಅಪೀಲು ಮಾಡಲು ಅವಕಾಶವಿರತಕ್ಕದು (ಭಾಧಾನ. ೭೧).

ವ್ಯವಹಾರಹೂಡು = ೧. ವ್ಯಾಪಾರ ಆರಂಭಿಸು ; ಉದ್ಯೋಗವನ್ನು ಪ್ರಾರಂಭಿಸು : ನಾನು ಫಲಿಡಲ್ಫಿಯಾದಲ್ಲಿ ವ್ಯವಹಾರಮಾಡುವುದನ್ನು ಬಲವಾಗಿ ಶಿಫಾರಸು ಮಾಡಿ ಅದರಿಂದ ನನ್ನ ಅಭಿವೃದ್ಧಿಯಾಗುವುದೆಂದು ಬರೆದಿದ್ದನು (ಬೆಂಜಸ್. ೪೮). ೨. ಮೊಕದ್ದಮೆ ಹೂಡು ; ದಾವೆ ಮಾಡು : ಒಬ್ಬನ ಮೇಲೆ ನ್ಯಾಯಾಸ್ಥಾನದಲ್ಲಿ ವ್ಯವಹಾರಹೂಡು, ಕ್ರಮ ನಡಸು, ದಾವಾ ಹಾಕು, ವ್ಯಾಜ್ಯ ಹೂಡು (Proceed Against. ಇಂಪಾ). . [ಸಂ.]

ವ್ಯವಹಾರಕಾಲ (ನಾ). ೧. ಕೆಲಸದ ವೇಳೆ ; ವಹಿವಾಟಿನ ಸಮಯ. ೨. [ಜೈನ] ಸಮಯ, ಆವಲಿ, ಲವ, ಘಟಿಕೆ ಮೊದಲಾದ ಸಮಯರೂಪ ಕಾಲ : ವ್ಯವಹಾರಕಾಲಮೆಂಬುದು ಮುಖ್ಯಕಾಲನಿರ್ವರ್ತಿತ ಕ್ರಿಯಾರೂಪಂ (ಆದಿಪು ೬-೪೮ ವ) ; ಕಾಲಮಿತ್ತೆಜನಕ್ಕು ಪರಮಾರ್ಥಕಾಲಮೆಂದುಂ ವ್ಯವಹಾರಕಾಲಮೆಂದು (ಶ್ರಾವಕಾ. ೪-೧೦). [ಸಂ.]

ವ್ಯವಹಾರಕುಶಲ (ನಾ). ಲೌಕಿಕವಹಿವಾಟಿನಲ್ಲಿ ಜಾಣನಾಗಿರುವವನು ; ದೈನಂದಿನಕಾರ್ಯಗಳಲ್ಲಿ ಕೌಶಲ್ಯವುಳ್ಳವನು : ವ್ಯವಹಾರಕುಶಲವ್ಯದಿಕರಾದ ಸುಬ್ಬಣ್ಣಾಚಾರ್ಯರಲ್ಲಿ ಕ್ರಮೇಣ ಒಂದು ದುಷ್ಕತನವು ತಲೆಯೆತ್ತುತ್ತದೆ (ಸಮಜೀ. ೨೯ ಪೀಠಿಕೆ). [ಸಂ.]

ವ್ಯವಹಾರಚತುರ (ನಾ). = ವ್ಯವಹಾರಕುಶಲ : ವ್ಯವಹಾರಚತುರನಾದ . . . ಅವನನ್ನು ಕರೆದು ಬರಮಾಡಿಕೊಂಡಿದ್ದನು (ಇಪ್ರಕ. ೧೬೩). [ಸಂ.]

ವ್ಯವಹಾರಚತುಷ್ಟಯ (ನಾ). ಒತ್ತೆ, ವಿಕ್ರಯ, ದಾನ ಮತ್ತು ವಿನಿಮಯಗಳೆಂಬ ನಾಲ್ಕು ಬಗೆಯ ವಹಿವಾಟುಗಳು : ಇಲ್ಲಿಂದಾ ಮುಂದೆ ನೀವು ಮಾಡುವ ದಾನ ಅಧಿಕ್ರಯ ಪರಿವರ್ತನೆಗಳೆಂಬ ವ್ಯವಹಾರಚತುಷ್ಟಯಕ್ಕು ಯೋಗ್ಯವಾಗಿ (ಎಕ. XVI. ಚಿಕ್ಕನಾ. ೫೩-೨೬ ; 1623). [ಸಂ.]

ವ್ಯವಹಾರಚಾತುರ್ಯ (ನಾ). ಲೌಕಿಕವಹಿವಾಟಿನಲ್ಲಿ ಇರುವ ಚತುರತೆ : ವ್ಯವಹಾರಚಾತುರ್ಯವಿಲ್ಲದಿದ್ದರೆ ಇಂದು ಬಾಳುವುದೇ ಅಸಾಧ್ಯ (ಇಶಾ. ೧೧೯) ; ಅದರಲ್ಲಿ ಭೀಮನ ಕಾರ್ಯಕುಶಲತೆಯೂ ಮೇನಕೆಯ ವ್ಯವಹಾರಚಾತುರ್ಯವೂ ಮುಖ್ಯವಿರುವುದು ಎಲ್ಲರಿಗೂ ಗೊತ್ತಿದ್ದಂತೆ ತೋರಿತು (ಸಮಜೀ. ೭೭). [ಸಂ.]

ವ್ಯವಹಾರಜ್ಞಾನ (ನಾ). ಲೌಕಿಕವಹಿವಾಟುಗಳಲ್ಲಿ ಇರುವ ತಿಳಿವಳಿಕೆ, — ಅರಿವು : ಅದರ ಉದ್ದೇಶವೂ ಕೂಡ . . . ವ್ಯವಹಾರಜ್ಞಾನವನ್ನು ಜನರಿಗೆ ಒದಗಿಸುವುದೇ ಆಗಿದೆ (ಜೈನಪ. ೮೩೭). [ಸಂ.]

ವ್ಯವಹಾರನಯ (ನಾ). [ಜೈನ] ''ಗುಣಧರ್ಮಕೃತ,ವ್ಯಕ್ತಿತ್ವಕೃತಭೇದಗಳ ಮೇಲೆ ದೃಷ್ಟಿಯನ್ನು ಬೀರಿ ವಿಶ್ವದ ನಿರೀಕ್ಷಣ ಮಾಡುವುದು; ಸಂಗ್ರಹ ನಯಕ್ಕೆ ವಿರುದ್ಧವಾದುದು; ವಸ್ತುವಿನ ಸಾಮಾನ್ಯ ಭಾವವನ್ನನುಲಕ್ಷಿಸಿ ವೈಶಿಷ್ಟ್ಯವನ್ನು ಅನುಲಕ್ಷಿಸುವುದು'' (ಜೈನಕೋ. ೨೪೦) : ವ್ಯವಹಾರನಯಾಶ್ರಿತ ಶುದ್ಧವಿನಿಶ್ಚಯವಿಶಿಷ್ಟ ರತ್ನತ್ರಯಮೆಂಬವು ಮುಕ್ತಿಗೆ ಕಾರಣವಪ್ಪುವು ವಿಮಳ ಧ್ಯಾನಮಂತರಕ್ಕೆ ನಿಮಿತ್ತಂ (ಪಾರ್ಶ್ವಪು. ೧೭-೧೨೨). [ಸಂ.]

ವ್ಯವಹಾರಪಲ್ಯ (ನಾ). [ಜೈನ] ಒಂದು ಕಾಲದ ಅವಧಿ : ಉತ್ತರಪಲ್ಯವ್ಯವಹಾರ ಬೀಜತ್ವದಿಂ ಆದ್ಯಂ ವ್ಯವಹಾರಪಲ್ಯಮೆಂಬುದು (ತತ್ತ್ವಪ್ರ. ೧೭೫) ; ಮಱಿಗುಡಿಯ ರೋಮಂಗಳಂ ಕೊಂಡು . . . ವರ್ಷಕ್ಕೊಂದಂ ಪೊಱಗಿಕ್ಕಲು ವಂದಿಂಗಂ ತಿರ್ಗುಮಯದು ವ್ಯವಹಾರಪಲ್ಯಮಕ್ಕುಂ (ಶ್ರಾವಕಾ. ೫-೧೫). [ಸಂ.]

ವ್ಯವಹಾರಶೂನ್ಯ (ನಾ). ಲೌಕಿಕಜ್ಞಾನವಿಲ್ಲದವನು ; ಪ್ರಾಪಂಚಿಕ ರೀತಿ ನೀತಿಯನ್ನು ಅರಿಯದವನು : ನನ್ನ ಪರಮ್ಮಕಾಂತವೇ ನನ್ನನ್ನು ಸುಖಸ್ವಪ್ನದಲ್ಲಿ ಸೆರಹಿಡಿದು ವ್ಯವಹಾರಶೂನ್ಯನನ್ನಾಗಿ ಮಾಡಿದೆ (ಜಯಂತ. ೧೦೦). [ಸಂ.]

ವ್ಯವಹಾರಿ (ಗು). ೧. ರೂಢಿಯ ; ವಾಡಿಕೆಯ ; ಸಾಂಪ್ರದಾಯಿಕ. ೨. ಕಾಯದೆಯ ಕಾರ್ಯಾಚರಣೆಗೆ ಸಂಬಂಧಿಸಿದ ; ಕಾನೂನುಬದ್ಧವಾದ. (ನಾ). ೩. ವ್ಯಾಪಾರ ಮಾಡುವವನು ; ವ್ಯಾಪಾರಿ : ಜಂಬೂದ್ವೀಪದ ವ್ಯವಹಾರಿ ಖಂಡಭಂಡವ ತುಂಬಿ ಕುಂಭಿನಿಯುದರದ ಮೇಲೆ ಪಸರವನಿಕ್ಕಿದ (ಅಪಚಂ. ೧೮). ೪. ದಾವಾಹೂಡಿದವನು ; ವ್ಯಾಜ್ಯಮಾಡುವವನು. [ಸಂ. ವ್ಯವಹಾರಿನ್]

ವ್ಯವಹಾರಿಕ (ಗು). ೧. ವ್ಯಾಪಾರಕ್ಕೆ ಸಂಬಂಧಿಸಿದ ; ಉದ್ಯೋಗಕ್ಕೆ ಸಂಬಂಧಿಸಿದ. ೨. ರೂಢಿಯ ; ವಾಡಿಕೆಯ. ೩. [ವೇದಾಂತ] ಲೌಕಿಕ; ಪ್ರಾಪಂಚಿಕ : ಶ್ರೀ ಶಂಕರರು . . . ಉಪಾಸನೆಯು ವ್ಯವಹಾರಿಕಸ್ಥಿತಿಯಲ್ಲಿ ಮಾಡಬೇಕಾಗಿದೆಯಲ್ಲದ ಪಾರಮಾರ್ಥಿಕಸ್ಥಿತಿಯಲ್ಲಿ ಅಲ್ಲವೆಂದು ಹೇಳಿರುತ್ತಾರೆ (ಜೀವಾತ್ಮ. ೩೧೧). (ನಾ). ೪. = ವ್ಯವಹಾರಿ ೩. ೫ = ವ್ಯವಹಾರಿ ೪. [ಸಂ.]

ವ್ಯವಹಿತ (ಗು). ೧. ಪ್ರತ್ಯೇಕವಾಗಿಟ್ಟ ; ಬೇರೆ ಇರಿಸಿದ. ೨. ಮುಚ್ಚಿಟ್ಟ; ಮರೆಮಾಡಿದ : ಆಕಾಶಸ್ಫಟಿಕಾಂತರಿತ ದಹನಾರ್ಚಿಯಂತಾನುಮಚ್ಛಸಲಿಲವ್ಯವಹಿತ ಪದ್ಮರಾಗಮಣಿಯಂತೆ . . . ಜಿನಾರ್ಭಕಂ ಬಳೆಯೆ (ಶಾಂತಿಪು. ೯-೨೧೪ ವ); ನಭೋವಿಭಾಗಮಾಚ್ಛಾದಿತದಿಙ್ಮುಖಂ ವ್ಯವಹಿತಾಖಿಲದೃಷ್ಟಿಪಥಂ (ಪಂಚತಂ. ೧೭೫-೬). ೩. ನಿರಂತರವಾಗಿರದ ; ಒಂದನ್ನು ಬಿಟ್ಟು ಒಂದು ಇರುವ; ಅನುಕ್ರಮವಿಲ್ಲದ. ೪. ವಿರೋಧವಾದ ; ಅಡ್ಡಿಯಾದ. ೫. ಕೈಬಿಟ್ಟ; ಲೋಪವಾದ. ೬. ಮಿಂಚಿದ ; ದಾಟಿದ. ೭. ನಾಚಿಕೆಗೀಡಾದ; ಅವಮಾನಕ್ಕೀಡಾದ. ೮. ನೆರವೇರಿಸಿದ ; ಆಗುಮಾಡಿದ. (ನಾ). ೯. ಬಹಳ ಅಂತರ ; ದೂರ. ೧೦. [ಕಾವ್ಯಮಿ] ವಾಕ್ಯದೋಷಗಳಲ್ಲಿ ಒಂದು : ಚ್ಯುತಯಾಥಾಸಂಖ್ಯಂ ವ್ಯವಹಿತಮಚ್ಛಂದಂ ವಿಸಂಧಿಕಂ ನೇಯಾರ್ಥಂ (ಕವಿರಾ. ೧-೬೯); ವ್ಯವಹಿತಮೇಕಾರ್ಥಂ . . . ಭಿನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ (ಕಾವ್ಯಾವ. ೪೫೬) ; ಶಬ್ದಪುನರುಕ್ತಿ ಅರ್ಥಪುನರುಕ್ತಿ . . . ವ್ಯವಹಿತ ವಿಸಂಧಿ ನೇಯಾರ್ಥವಂಬಂಟು ಶಬ್ದದೋಷಂಗಳಲ್ಲದೆ (ವಿವೇಕ. ೨೨೬). ೧೧. ಯಮಕದ ಒಂದು ಭೇದ : ವ್ಯವಹಿತಕ್ಕೆ: ಮಾಣಿಕದಂತೊಪ್ಪುದನೀ ಮಾಣಿ ಕರಂ ಕಟಿಯೆ ಚೆಲ್ವುವಡೆದೆಂಬಿನೆಗಂ ಕ್ಷೋಣಿಯನಳೆಯಲ್ ಮುನ್ನಂ ಕ್ಷೋಣಿಮನಂ ವಿಷ್ಣು ತಾನೆ ವಾಮನನಾದಂ (ಕಾವ್ಯಾವ. ೫೨೬). [ಸಂ.]

ವ್ಯವಹೃತಿ (ನಾ). ಬಳಕೆ ; ವ್ಯವಹಾರ : ಕೃತಕೃಷಿಕರ್ಮವ್ಯವಹೃತಿಯಿಂ ಕೃತಯುಗಮಂಬ ವಿಕಲ್ಪವನಾದಿಕಾಲದೊಳ್ ಪುಟ್ಟಿಸಿದಂ (ಪಂರಾಮಾ. ೧-೬೩) ; ಕರಣೇಂದ್ರಿಯ ವ್ಯವಹೃತಿಗಳೆಲ್ಲವುಂ ಲಿಂಗಕರಣೇಂದ್ರಿಯವ್ಯವಹೃತಿಗಳಾಗಿ (ಪದ್ಮರಾ. ೧-೧೨). [ಸಂ.]

ವ್ಯವಾಯ (ನಾ). ೧. ಭಿನ್ನವಾಗುವಿಕೆ; ಬೇರ್ಪಡುವಿಕೆ. ೨. ಕಾಣೆಯಾಗುವಿಕೆ ; ಮರೆಯಾಗುವಿಕೆ ; ಅದೃಶ್ಯ. ೩. ಹೀನಸ್ವಭಾವ ; ಚಂಚಲಗುಣ. ೪. ಅಡೆತಡೆ ; ವಿಘ್ನ ; ತೊಂದರೆ. ೫. ಸುರತಸುಖ ; ಸಂಭೋಗ : ''ಸುರತದಲ್ಲಿಯುಂ ವ್ಯವಾಯಮೆಂಬುದು'' (ಹಲಾಯು. ೧೩೬-೨೯). ೬. ದುಃಖ ; ವ್ಯಥೆ ; ಉದ್ವೇಗ : ''ಉದ್ವೇಗ ಚಂಚಲಮೇಕಾಂತಮಿವು ವ್ಯವಾಯಮನಿಕುಂ'' (ನಾನಾರ್ಥ. ೧೫೩). [ಸಂ.]

ವ್ಯಷ್ಟಿ (ನಾ). ೧. ಒಬ್ಬ ವ್ಯಕ್ತಿಗೆ ಸಂಬಂಧಿಸಿದುದು. ೨. ಒಬ್ಬ ವ್ಯಕ್ತಿ : ಪೂಜಿಪೆವಲ್ತೆ ವ್ಯಷ್ಟಿರೂಪದಿನಿಳದ ಸೃಷ್ಟಿಯ ಸಮಷ್ಟಿಯಂ (ಶ್ರೀರಾಮಾ. ೧೧-೫೬). ೩. ಸಮಷ್ಟಿಯಿಂದ ಬೇರೆಯಾಗಿರುವುದು ; ಬಿಡಿಬಿಡಿಯಾಗಿರುವುದು : ವಿಕವೃಕ್ಷವಾದರೆ ಯಾವ ವೃಕ್ಷವೆಂತ ಹೇಳಲ್ಪಡುತ್ತದೆಯೋ ಹಾಗೆ ವಿಕಸೂಕ್ಷ್ಮಶರೀರವೂ ವ್ಯಷ್ಟಿಯೆಂತಲೂ ಹೇಳಲ್ಪಡುವುದು (ಈಶಸ್ಸ. ೧೫-೨) ; ವ್ಯಷ್ಟಿಯಲ್ಲಿ ಸಮಷ್ಟಿ : ಸಮಷ್ಟಿಯಲ್ಲಿ ವ್ಯಷ್ಟಿ ಕಂಡುಬಂದಂತೆ ಅಕ್ಕನ ಜೀವನದಲ್ಲಿ ಹತ್ತಾರು ಮುಖಗಳನ್ನು ಕಾಣಬಹುದು (ಕರ್ನಾಕ. ೭೫). 'ಸಮಷ್ಟಿ' ಪರಾ. [ಸಂ.]

ವ್ಯಸನ (ನಾ). ೧. ದುಃಖ ; ವ್ಯಥೆ : ಕೆಟ್ಟ ಸುದ್ದಿ ಕೇಳಿ ಬಹಳ ವ್ಯಸನವಾಯಿತು (ರೂಢಿ). ೨. ಗೀಳು ; ಅತ್ಯಾಸಕ್ತಿ : ಅತಿರಭಸರಣವ್ಯಸನಮನಾತ್ಮೀಯಶಾಸನಾಯತ್ತಂ ಮಾಡಿದಂ (ಪಂಪಭಾ. ೧೦-೪೧ ವ) ; ಪೋ ಮಾಣೆನ್ನನ್ಯಕವಿಸ್ತುತಿವ್ಯಸನಮುಂ (ಕಾಡಂಪೂ. ೩) ; ದೇವದಿಗ್ವಿಜಯವ್ಯಸನಾವಷ್ಟಂಭದೊಳೆ ನಡೆಯದಾಟವಿಕರೊಳಾದೀ ವಿಗ್ರಹಕ್ಕೆ ನಡವುದಿದಾವುದು ಜಸಂ (ಪಂರಾಮಾ. ೪-೪೭). ೩. ದುರಭ್ಯಾಸ ; ಕೆಟ್ಟ ಚಟ: ವ್ಯಸನತೃಷ್ಣೆಯು ಕೀಳುಚಿತ್ತದ ಮಿಸುನಿಯೊಳು ಬೆರಸಿತು (ಕುವ್ಯಾಸ. ೧೩-೧೪) ; ಚೀನದೇಶದ ಜನರಿಗಂತೂ ಅಫು ತಿನ್ನುವ ವ್ಯಸನವೂ ಸೇದುವ ವ್ಯಸನವೂ ಪರಮಾವಧಿಯುಂಟು (ಮುಂಬಯಿ. ೪-೪೦). ೪. ಚಿಂತನೆ ; ಧ್ಯಾನ: ಧಾತ್ರಂ ಪದಂಗಯ್ದ ಸಂತೋಸದಿಂ ಧರ್ಮದೊಳೊಂದಿ ನಿರ್ಮಿಸಿದನೀ ವಿಶ್ವಂಭರಾರಕ್ಷಣವ್ಯಸನವ್ಯಾಪ್ತ ಯಶೋವಿಳಾಸವಿಳಸದ್ಭೂನಾಕನಂ ನಾಕನಂ (ಎಕ. V. ಹಾಸನ. ೭೬-೪೭ ; 1165).

ವ್ಯಸನಪಡು = ದುಃಖಿಸು ; ಶೋಕಿಸು : ಸ್ವಾಮಿ, ತಾವು ಇಷ್ಟು ವ್ಯಸನಪಡತಕ್ಕ ಅಗತ್ಯವಿಲ್ಲ (ನೀತಿಚೂ. VII, ೨೩). [ಸಂ.]

ವ್ಯಸನಿ (ನಾ). ೧. ದುರ್ದೈವಿ ; ದುಃಖಿ. ೨. ಕೆಟ್ಟ ಚಟವುಳ್ಳವನು; ದುರಭ್ಯಾಸಿ : ಜ್ಞಾತಿ ಬಹಿಷ್ಕೃತಂ ವ್ಯಸನಿ . . . ವಿಕಳತಂತ್ರಸನಿಶ್ಚಿತಮಂತ್ರನಾಗಳುಂ (ಪಂಚತಂ. ೨೫೧-೬) ; ನಾನು ಕಾಮುಕನಾದರೂ ವ್ಯಸನಿಯಲ್ಲ (ರಕ್ತಕ್ಷ. ೧೬೦). ೩. ಅತ್ಯಾಸಕ್ತಿಯುಳ್ಳವನು ; ತಲ್ಲೀನ : ಪೊಸ ಪಂದಿವೇಂಟೆಯ ವ್ಯಸನಿ ಕೊಲ್ಲುತಲಿರೆ (ನಸ್ಸಕಾ. ೧೦-೨೧). [ಸಂ. ವ್ಯಸನಿನ್]

ವ್ಯಸ್ತ (ಗು). ೧. ಕೆದರಿದ ; ಚೆಲ್ಲಾಪಿಲ್ಲಿಯಾದ ; ಹರಡಿದ : ವ್ಯಸ್ತರಜಸ್ಕತಿಯಾಯ್ತುಳಾವಳಯಂ (ಚಾಂದ್ರಪು. ೩-೯೪). ೨. ಬೇರ್ಪಡಿಸಿದ ; ಪ್ರತ್ಯೇಕಿಸಿದ. ೩. ಬೇರೆಬೇರೆಯಾದ ; ಭಿನ್ನವಾದ : ವ್ಯಸ್ತವಯಸ್ಕರಾದ ಈ ಇಬ್ಬರು ಸ್ನೇಹಜೀವಿಗಳ ನಡುವಿನ ಅದೇ ಆ ಹಳೆಯ ನಗೆಯಾಟ ನಡೆದಾಗ ನನ್ನ ಹೃದಯ ಹಿಗ್ಗಿ ಹತ್ತಾಗುತ್ತದೆ (ಇಪ್ರಕ. ೩೭). ೪. ಗಾಬರಿಗೊಂಡ ; ಕಾತರಗೊಂಡ. ೫. ತಿರುವುಮುರುವಾದ; ತಲೆಕೆಳಗಾದ : 'ವ್ಯಸ್ತಜ್ಞಾನ' ಪರಾ. ೬. ಜಾರಿದ ; ಕಳಚಿಕೊಂಡ : ಗಳಿತಾಶ್ರುಪ್ರವಿಲೋಚನಂ ಕುಚತಟವ್ಯಸ್ತಾಂಬರಂ ಸ್ರಸ್ತಕುಂತಳಕೇಶಂ (ಗದಾಯು. ೧೦-೧೩). (ನಾ). ೭. ಬೇರೆ ; ಪ್ರತ್ಯೇಕ : ಬೆರಸಿರೆ ಸಮಾಸದೊಳ್ ಬಂಧುರಮಾಗದು ಕಾವ್ಯಬಂಧಮೆಂದುಂ ಕೃತಿಯೊಳ್ ದೂರಕೊಳ್ಳ ಪದವಿಶೇಷ್ಯಾಂತರಮದಱಿಂ ವ್ಯಸ್ತಮಾಗಿ ಪೇಟ್ಗೆ (ಕವಿರಾ. ೨-೯೨). ೮. ಪ್ರತ್ಯೇಕವಾಗಿರುವವನು : ವ್ಯಸ್ತನೆನಿಸುವ ಸರ್ವರೊಳಗೆ . . . ವಿಶುದ್ಧಾತ್ಮ ಲೋಕದೊಳು (ಹಸಾರ. ೨೨-೨೨). ೯. ಕೆದರಿದುದು ; ಚೆದರಿದುದು : ''ವ್ಯಸ್ತಃ, ಅಪ್ರಗುಣಃ, ಅಕುಲಃ — ೩ ಕೆದರಿದ್ದು, ಭಿನ್ನಿಸಿಹೋದದ್ದು, ಚದರಿಹೋದದ್ದು, ಕೆದರಿಕೊಂಡಿರುವದು''

(ಸಿದ್ಧಾಂತಿ. ೩೪೨). ೧೦. (?) : ಆಸನ್ನಭವ್ಯಜನಾರಾಧ್ಯಂಗಳಾಗಿ ದರ್ಶನವಿಶುದ್ಧಿಸಹಿತ ಸಮಸ್ತಂಗಳುಂ ವ್ಯಸ್ತಂಗಳುಂ ತೀರ್ಥಕರನಾಮಕರ್ಮಾಸ್ರವಕಾರಣಂಗಳಪ್ಪುದಱಿಂ (ತತ್ತ್ವಪ್ರ. ೨೬೬). [ಸಂ.]

ವ್ಯಸ್ತಪದ (ನಾ). ೧. ಗೊಂದಲಮಯವಾದ ಹೇಳಿಕೆ. ೨. [ವ್ಯಾಕ] ಪ್ರತ್ಯೇಕವಾದ ಪದ ; ಸಮಾಸಪದವಲ್ಲದುದು. [ಸಂ.]

ವ್ಯಸ್ತರೂಪಕ (ನಾ). [ಕಾವ್ಯಮೀ] ರೂಪಕಾಲಂಕಾರದ ಒಂದು ಭೇದ ; ಸಮಾಸಪದಘಟಿತವಲ್ಲದ ರೂಪಕ : ಕುಸುಮಂ ಸ್ಮಿತಮಳಿನಯನಂ ಕಿಸಲಯಮಧರಂ . . . ಎಂಬುದಿದಸಮಸ್ತಂ ವ್ಯಸ್ತರೂಪಕಕ್ರಮಂ (ಕವಿರಾ. ೩-೧೪). IP ಸ್ಮಿತಕುಸುಮ, ಅಧರಪಲ್ಲವ ಎಂಬುವು ಸಮಸ್ತರೂಪಕ, ಕುಸುಮಂ ಸ್ಮಿತಂ, ಕಿಸಲಯಮಧರಂ ಎಂಬುವು ವ್ಯಸ್ತರೂಪಕ. [ಸಂ.]

ವ್ಯಳೀಕ 'ವ್ಯಲೀಕ' ನೋ.

ವ್ಯಾಕರಣ (ನಾ). ೧. ವಿಭಜನೆ ; ವಿಶ್ಲೇಷಣೆ. ೨. ಭಾಷೆಯ ನಿಯಮಗಳನ್ನು ತಿಳಿಸುವ ಶಾಸ್ತ್ರ ; ಆರು ವೇದಾಂಗಗಳಲ್ಲಿ ಒಂದು : ವ್ಯಾಕರಣಕಾವ್ಯನಾಟಕ ಲೋಕಕಳಾಸಮಯಮಾದಳಂಕೃತಿಗಳೊಳಂ (ಕವಿರಾ. ೧-೬) ; ಉಭಯವ್ಯಾಕರಣಪರಿಣತಂ ಕವಿರತ್ನಂ (ಅಜಿಪು. ೧೨-೪೩) ; ಶಬ್ದಗಳ ಸಾಧುತ್ವ ಅಥವಾ ಪ್ರಯೋಗಾರ್ಹತೆ ಬೋಧಿಸುವ ವಿಷಯವು ವ್ಯಾಕರಣವೆಂದು ವಿಶದವಾಗುವುದು (ಸಂಶೋಧ. ೭೮). [ಸಂ.]

ವ್ಯಾಕರಣಕಾರ (ನಾ). ವ್ಯಾಕರಣಶಾಸ್ತ್ರವನ್ನು ರಚಿಸುವವನು ; ವೈಯಾಕರಣಿ : ಕೆಲಂಬರ್ ವ್ಯಾಕರಣಕಾರರ್ ಸ್ವರಸಂಜ್ಞೆಯಲ್ಲಿ ಪೇಟ್ಟರ್ (ಶಮದ. ೧೩ ವಿಚಾರ). [ಸಂ.]

ವ್ಯಾಕರಣಜ್ಞ (ನಾ). ವ್ಯಾಕರಣಶಾಸ್ತ್ರವನ್ನು ಬಲ್ಲವನು ; ವ್ಯಾಕರಣಪಂಡಿತ : ಅಪಿಳ ವೈಯಾಕರಣರಿಂ = ಸಮಸ್ತವ್ಯಾಕರಣಜ್ಞರಿಂದೆ (ಶಮದ. ೧೮೭ ಟೀಕೆ). [ಸಂ.]

ವ್ಯಾಕರಣಿ (ನಾ). ಭಾಷೆಯ ನಿಯಮಗಳಿಗೆ ಸಂಬಂಧಿಸಿದ ಶಾಸ್ತ್ರವನ್ನು ಬಲ್ಲವನು ; ವ್ಯಾಕರಣದಲ್ಲಿ ಪರಿಣತ : ತರ್ಕಿಗಳ್ತಳ್ಕಂಗಳೊಳ್ ವ್ಯಾಕರಣಿಗಳ್ ವಿಹ್ವಲರಾಗೆ (ಉಡುಪಿ. ೪-೬೩ ಪ). [ಸಂ. ವ್ಯಾಕರಣಿನ್]

ವ್ಯಾಕೀರ್ಣ (ಗು). ೧. ದಿಕ್ಕುದಿಕ್ಕಿಗೆ ಚೆಲ್ಲಿದ,—ಹರಡಿದ: ಭೂಭೃನ್ನಿವಹ ವ್ಯಾಕೀರ್ಣಾನಾನಾಮಕುಟಮಣಿಗಣದ್ಯೋತಿ ಪರ್ವಿತ್ತದಾಗಳ್ (ಕಾದಂಪೂ. ೫೯೩). ೨. ಅಸ್ತವ್ಯಸ್ತವಾದ ; ಅವ್ಯವಸ್ಥೆಗೊಂಡ : ಆ ಕಾಳಿಕಾಲಯಕೆ ಬಂದದಱ ಬೆಳಕಿನೊಳ್ಬ್ಯಾಕೀರ್ಣಕೇಶದ ನಿಮಿರ್ದ ಕೈಕಾಲುಗಳ . . . ಸುಕುಮಾರನಂ ಕಂಡನು (ಶೃಂಪಿಘಾ. ೩೧-೫೭). (ನಾ). ೩. ವ್ಯಾಪಿಸಿದುದು ; ಹರಡಿದುದು : ಘೋರಮಾದ್ಯದ್ವಿರದವ್ಯಾಕೀರ್ಣಮಂ ನಿರ್ಜನವನಮನಿದಂ ಬಂದು ನೀನಂತು ಪೊಕ್ಕೆ (ಮಚಿತಂ. ೫೭-೪). [ಸಂ.]

ವ್ಯಾಕೀರ್ಣಿಸು (ಕ್ರಿ). ಹರಡಿಕೊಳ್ಳು ; ಆವರಿಸು : ಗುಹೆಯೊಳಗಗ್ನಿ ವ್ಯಾಕೀರ್ಣಿಸುವುದದು ಸಹಜ (ಭರಚಿ. ೨೮-೭೯). [ವ್ಯಾಕೀರ್ಣ + - ಇಸ್ಸು]

ವ್ಯಾಕುಂಚಿತ (ಗು). ೧. ಬಾಗಿದ ; ಓರೆಯಾದ : ಶ್ರೀಕಮಳಲೋಚನಂ . . . ತಿರ್ಯಗ್ವಳಿತ ವ್ಯಾಕುಂಚಿತಕಂಠನೂದುತಿರ್ದಂ ಕೊಟಲಂ (ಜಗಪ. ೫-೧). (ನಾ). ೨. ಬಾಗಿದುದು ; ಡೊಂಕಾದುದು : ವಕ್ರಂ, ವೃಜಿನಂ . . . ವ್ಯಾಕುಂಚಿತಂ, ಕೌರ್ಮಿಮತ್ -- ಈ ೧೨ ಕೊಂಕಿದುದು (ಪಶಾಯು. ೧೧೬-೧೧). [ಸಂ.]

ವ್ಯಾಕುಲ, ವ್ಯಾಕುಳ (ನಾ). ೧. ದುಃಖ ; ಅಳಲು ; ವ್ಯಥೆ : ವಿಕೋಭಾವದ ನಿಷ್ಠೆ ಭವದ ವ್ಯಾಕುಲವನೆಬ್ಬಿಟ್ಟುವುದು ನೋಡಾ (ಸಿದ್ಧಿಪ. ೪೦೮) ; ಅಮ್ಮಯ್ಯನು ನನ್ನ ಮುಖ ನೋಡಿ ನನ್ನ ಮನಸ್ಸಿನ ವ್ಯಾಕುಲವನ್ನು ತಿಳಿದುಕೊಂಡರು (ಚಿಂಗಾಳ್ಳ. ೧೩). ೨. ಗಾಬರಿ ; ಗೊಂದಲ ; ಕಾತರ. ೩. ತಲ್ಲೀನತೆ ; ಮಗ್ನತೆ. ೪. ಶೋಕದಿಂದ ದಿಕ್ಕೆಟ್ಟವನು ; ದುಃಖದಿಂದ ದಿಗ್ಭ್ರಾಂತನಾದವನು : "ವಿಹಸ್ತಃ, ವ್ಯಾಕುಲಃ — ೨ ಶೋಕಾದಿಗಳಿಂದ ಹಿಂದುಮುಂದು ತಿಳಿಯದವನ ಹೆಸರುಗಳು" (ಸಿದ್ಧಾಂತಿ. ೩೩೪) ; ಆ ಹೊಸಮನೆಯಲ್ಲಿ ಅವಳನ್ನು ನೋಡಿಕೊಳ್ಳುವವರು ಇರುವರೋ ಇಲ್ಲವೋ ಎಂದು ಅವನು ವ್ಯಾಕುಲನಾದ (ಭಾರತಿ. ೪೬). ವ್ಯಾಕುಳ : ೪. "ವಿಹಸ್ತಂ ವ್ಯಾಕುಳಂ ಕಳವಳಿಗನೆನಿಕ್ಕು" (ಮಂಗರಾ. ೭೦-೧೮) ; ಆಗಳಾಕುಳ ವ್ಯಾಕುಳರಾಗಿ ನಾಣ್ಚೆ . . . ಪೋಪುದುಂ (ಆದಿಪು. ೩-೮೯). ೫. ಆಸಕ್ತಿಯುಳ್ಳವನು ; ಅಭಿರುಚಿಯುಳ್ಳವನು : ವ್ಯಾಕರಣ ಕಾವ್ಯನಾಟಕ ಲೋಕಕಳಾಸಮಯಮಾದಳಂ ಕೃತಿಗಳೊಳಂ ವ್ಯಾಕುಳನಲ್ಲದನೇಕೆ ವಿವೇಕಬೃಹಸ್ಪತಿಯ ನಗರಮಂ ಪುಗುತರ್ಪಂ (ಕವಿರಾ. ೧-೮). [ಸಂ.]

ವ್ಯಾಕುಲತೆ, ವ್ಯಾಕುಳತೆ (ನಾ). ಚಿಂತೆ ; ಕಳವಳ : ಗೌಳಿ ಮಯ್ಯ ಮೇಲೆ ಬಿದ್ದ ಫಲ . . . ಬಲದ ಹೆಗಲ ಮೇಲೆ ಬೀಳೆ ವ್ಯಾಕುಲತೆ (ಲೋಕೋಪ. ಪರಿ. ೨. ಪುಟ ೨೮೭) ; ಎಡವಟ್ಟುತನ, ವ್ಯಾಕುಲತೆ, ತಾನು ಹೆರವರಿಗಿಂತ ಕೀಳೆಂಬ ಭಾವನೆ ಮೊದಲಾದ ಲಕ್ಷಣಗಳು ಕಾಣಿಸುವುವು (ಅಡುಸೌ. ೬೧). ವ್ಯಾಕುಳತೆ : ವ್ಯಾಕುಳ [ಶಾಶಾ. ಲ]ತೆ ನಮಗಿಹುದು ಮೂರ್ಖತೆ ಸಾಕು (ತೊರರಾ. ೪-೧೧-೧೨).

[ಸಂ. ವ್ಯಾಕುಲತಾ]

ವ್ಯಾಕುಲಿತ, ವ್ಯಾಕುಳಿತ (ಗು). ೧. ಗಾಬರಿಗೊಂಡ ; ಕಳವಳಗೊಂಡ. (ನಾ). ೨. ಗೊಂದಲ ; ಗಾಬರಿ : ಪಿನಾಕಿಭಕ್ತರು ಮುನಿದಡಂ ಬದುಕುವನೆ ತಾನೆನುತ ವ್ಯಾಕುಲಿತಯುತಹೃದಯರಾಗುತ (ಬಸಪು. ೬೧-೫). ವ್ಯಾಕುಳಿತ : ೧. ವ್ಯಾಕುಳಿತಮನದೊಳಾಗಿ ಇನ್ನಿದನವೋಳಂ ನೋಟ್ಪೆನೆಂದಾ ದೆಸೆಗಾಗಿ ಸಲ್ಪನಂ (ವಡ್ಡಾರಾ. ೫೫-೪). [ಸಂ.]

ವ್ಯಾಕುಳ 'ವ್ಯಾಕುಲ' ನೋ.

ವ್ಯಾಕುಳತೆ 'ವ್ಯಾಕುಲತೆ' ನೋ.

ವ್ಯಾಕುಳಿತ 'ವ್ಯಾಕುಲಿತ' ನೋ.

ವ್ಯಾಕೃತ (ಗು). ೧. ವಿಭಜಿಸಿದ ; ವಿಂಗಡಿಸಿದ : ಅವ್ಯಾಕೃತವಾದ ರೂಪವುಳ್ಳವನೂ ವ್ಯಾಕೃತವಾದ ರೂಪವುಳ್ಳವನೂ ಆದ ಅಗ್ನಿಯು . . . ದ್ಯುಲೋಕದಲ್ಲಿಯೂ ಅಸ್ತಿತ್ವವನ್ನು ಹೊಂದಿದ್ದಾನೆ (ಋಗ್ವೇದ. ೪೨). ೨. ವಿರೂಪ ಹೊಂದಿದ ; ವಕ್ರವಾದ. (ನಾ). ೩. ಒಂದು ವ್ಯವಸ್ಥೆಗೆ ಒಳಪಟ್ಟುದು : ವ್ಯಾಕೃತದಿನವ್ಯಾಕೃತಾದಿ ಸತ್ವಕೆ ನಿನ್ನ ಜಾಗೃತಿಪ ಮತಿಧರ್ಮ (ಮಂಕುಕ. ೯೮). [ಸಂ.]

ವ್ಯಾಕೃತಿ (ನಾ). ೧. ವಿಭಜನೆ ; ವಿಶ್ಲೇಷಣೆ. ೨. ವಿವರಣೆ ; ಪ್ರತಿಪಾದನೆ. ೩. ರೂಪಬದಲಾವಣೆ ; ಆಕಾರಪರಿವರ್ತನೆ. ೪. ರೀತಿ ; ಬಗೆ : "ವ್ಯಾಕೃ(ಕೃ)ತಿಃ, ಭಂಗಿಃ—ಈ ೨ ಪರಿ" (ಹಲಾಯು. ೧೨೫-೭೭). ೫. ವ್ಯಾಕರಣಶಾಸ್ತ್ರ: ದಿವಾಕರರ್ ವ್ಯಾಕೃತಿ ನಾಮಿಗಳ್ ವೋಲ್ ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್ (ಶಮದ. ನ. ೧೯ ವೃತ್ತಿ). [ಸಂ.]

ವ್ಯಾಕೃತಿಸು (ಕ್ರಿ). ಮಾರ್ಪಡಿಸು ; ವಿಕಾರಗೊಳಿಸು ; ಬದಲಾಯಿಸು : ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ . . . ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ ವ್ಯಾಕೃತಿಸರೇನವಳ ? (ಮಂಕುಕ. ೮೫೯). [ವ್ಯಾಕೃತಿ + - ಇಸ್ಸು]

ವ್ಯಾಕೋಚ (ನಾ). ಪೂರ್ತಿಯಾಗಿ ಅರಳುವಿಕೆ ; ಪೂರ್ಣವಿಕಾಸ : "ಉನ್ಮೀಳಿತಂ . . . ವ್ಯಾಕೋಚಂ, ವಿಕಾಸಃ - ಈ ೯ ಅಲರ್ವುದರ್ಕೆ ಪೆಸರ್ (ಹಲಾಯು. ೩೦-೩೩).

[ಸಂ.]

ವ್ಯಾಕೋಚನ (ನಾ). = ವ್ಯಾಕೋಚ : ಹೇಳೀ ಕರಾವಮರ್ಶನಜಾತ ವ್ಯಾಕೋಚನಾಳೀಕ ಸುಮರೇಣುಸೌರಭ್ಯರಾಗ ಸುಮಧೂಳೀಪರಂಪರೆಯು ಪರಪಿರಲ್ (ಪಂಕಾರಾ. ೧-೪-೨೬). [< ವ್ಯಾಕೋಚ]

ವ್ಯಾಕೋಶ (ನಾ). = ವ್ಯಾಕೋಚ : ಘನಬಾಹಾಬಹಳೋರ್ಮ್ಮಿಭಾಸಿತ ಮುಖವ್ಯಾಕೋಶ ಪಂಕೇಜಮಣ್ಣನೆ (ಎಕ. II, ೩೨೬-೪೩ ; 1181). [ಸಂ.]

ವ್ಯಾಖ್ಯಾಕಾರ (ನಾ). (ಗ್ರಂಥಗಳಿಗೆ) ಟೀಕೆಯನ್ನು ರಚಿಸುವವನು ; ಟಿಪ್ಪಣಿ ಬರೆಯುವವನು ; ಭಾಷ್ಯಕಾರ : ಮಹರ್ಷಿಗಳ ದರ್ಶನಲಾಭವನ್ನು ಲೋಕಕ್ಕೆ ವಿವರಿಸುವ ವ್ಯಾಖ್ಯಾಕಾರರು (ಋಗ್ವೇದ. ೯೯ ಟೀಕೆ) ; ಇತರ ವ್ಯಾಖ್ಯಾಕಾರರ ಮತಖಂಡನಕ್ಕಾಗಿ ಬರೆದಿರುವರೆಂದು ಹೇಳಬಹುದು (ಹಿಂದಸಾ. ೧೫೧). [ಸಂ.]

ವ್ಯಾಖ್ಯಾತ (ಗು). ೧. ವಿವರಿಸಿದ ; ವಿಸ್ತರಿಸಿದ : ಜೀವಂಗಳುಂ ದ್ರವ್ಯಂಗಳಪ್ಪುವು ಬಹುತ್ವ ನಿರ್ದೇಶಂ ವ್ಯಾಖ್ಯಾತ ಭೇದ ಪ್ರತಿಪತ್ತ್ಯರ್ಥಮಾದುದು (ತತ್ತ್ವಪ್ರ. ೨೩೨). (ನಾ). ೨. = ವ್ಯಾಖ್ಯಾಕಾರ : ವ್ಯಾಖ್ಯಾತರು ಈ ವಿಷಯವನ್ನು ಹೆಚ್ಚು ವಿಮರ್ಶೆ ಮಾಡಿದ್ದಾರೆ (ಮೂರುಳು. ೫ ಮುನ್ನುಡಿ). [ಸಂ.]

ವ್ಯಾಖ್ಯಾತೃ (ನಾ). = ವ್ಯಾಖ್ಯಾಕಾರ : ತದುಪಾಧ್ಯಾಯಿಗಳು ೩ ಭಟ್ಟದರ್ಶನ ವ್ಯಾ[ಸ] ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗಂ . . . ಸರ್ವನಮಸ್ಯಮಾಗಿ ಕೊಟ್ಟ ಕೆಯ್ ಮಾಣಿಕೇಶ್ವರದಗಟಿಂ ಬಡ[ಗ] ಮತ್ತರು ೧೦೦೦ (ಕಇಅ. ೬-೨-೧೯೪: 1058) ; ಪ್ರಯೋಗಿಸಿರುವ ಪದಗಳಂತೂ ಆಗಾಮಿವ್ಯಾಖ್ಯಾತೃಗಳ ಪಾಂಡಿತ್ಯಪ್ರದರ್ಶನ, ತರ್ಕ ರಸಿಕತೆಗಳಿಗೆ ಸ್ವರ್ಣಭೂಮಿ(ಅರಿಕಾ. ೨೪). [ಸಂ.]

ವ್ಯಾಖ್ಯಾನ (ನಾ). ೧. ವಿಸ್ತಾರವಾಗಿ ಹೇಳುವುದು ; ಕೂಲಂಕಷವಾದ ವರ್ಣನೆ ; ವಿವರಣೆ : 'ವ್ಯಾಖ್ಯಾನಂಗೆಯ್' ಪರಾ. ೨. ಟೀಕೆ ; ಟಿಪ್ಪಣಿ : ಇವುಗಳಿಂದ ಹೊರಟ ವ್ಯಾಖ್ಯಾನ, ಚರ್ಚೆ — ಇದಿಷ್ಟು ಮಾತ್ರವೇ ಸಾಹಿತ್ಯ ಎಂಬುದು ರೂಢಿಯಿಂದ ಬಂದ ತಿಳಿವಳಿಯಾಗಿತ್ತು (ಸಾಹಿಶ. ೫೯) ; ಅನುಮತ, ವ್ಯಾಖ್ಯಾನ . . . ಇವುಗಳ ಅರ್ಥಪ್ರಯೋಗಗಳು; ಶಾಸ್ತ್ರಗ್ರಂಥಗಳಲ್ಲಿ ವಿಧವಿಧವಾಗಿವೆ (ಭಾರದ. ೩೬೯). ೩. ಭಾಷಣ ; ಉಪನ್ಯಾಸ : "ಅಧ್ಯಾಪಕಂ ಮುಂದ ವ್ಯಾಖ್ಯಾನಮಂ ಪೇಳ್ವವಂ" (ಮಂಗರಾ. ೨೪-೪) ; ನಾರದ ವ್ಯಾಖ್ಯಾನವ ಮಾಡುತಿರೆ ಅಗಸ್ತ್ಯನದಕ್ಕೆ ತೂಕಡಿಸುತಿರೆ (ಗಣೇಶ. ೧೧-೨೭೩).

ವ್ಯಾಖ್ಯಾನ ಬಿಗಿ = ಭಾಷಣ ಮಾಡು : ಪ್ರೇಮದ ಮೇಲೆ ವ್ಯಾಖ್ಯಾನ ಬಿಗಿದಿದ್ದಾನೆ (ಮೂರುದಾ. ೨೬೬). ವ್ಯಾಖ್ಯಾನಮಾಡು = ವಿವರಣೆ ನೀಡು ; ಅರ್ಥಮಾಡು : ಆತ್ಮಾರ್ಪಣಭಾವದ ಪ್ರಕಟನೆಯೇ ಕರ್ಪೂರದಾರತಿಯ ಅರ್ಥ ಎಂದೂ ವ್ಯಾಖ್ಯಾನ ಮಾಡಿದರು (ಶಾಸಗಿ. ೫೧). [ಸಂ.]

ವ್ಯಾಖ್ಯಾನಂಗೆಯ್ (ಕ್ರಿ). ವಿವರಣೆ ನೀಡು ; ವರ್ಣಿಸು ; ನಿರೂಪಿಸು : ಉದಾರಸಾರತರವಚನರಚನೆಗಳಿಂ ವ್ಯಾಖ್ಯಾನಂಗೆಯ್ಯಲ್(ಸುಕುಮಾ. ೩-೩೯ ವ).

[ವ್ಯಾಖ್ಯಾನ + ಕೆಯ್]

ವ್ಯಾಖ್ಯಾನಕಾರ (ನಾ). = ವ್ಯಾಖ್ಯಾಕಾರ : ಶ್ರೀವಿಜಯನೇ ನೃಪತುಂಗದೇವನೆಂಬುದು ಈ ವ್ಯಾಖ್ಯಾನಕಾರನ ಬರವಣಿಗೆಯಿಂದ ಸ್ಪಷ್ಟವಾಗಿದೆ (ಶಮಪಾಂ. ೪೩). [ಸಂ.]

ವ್ಯಾಖ್ಯಾನಶಾಲೆ (ನಾ). ಉಪನ್ಯಾಸಮಂದಿರ ; ಪಾಠಶಾಲೆ : ಶಾಸ್ತ್ರಸಮಿತಿ ವ್ಯಾಖ್ಯಾನಶಾಲಾಪರಂಪರೆ ಸುತ್ತಿರ್ಪಿನೆಗಂ ನೃಪಂ ನಿಜಸುತಂಗಾನಂದದಿಂ ಮಾಡಿಸಲ್ ಕರಮೊಪ್ಪಿತ್ತು ಸಲೀಲಕೇಳಿವನದೊಳ್ ವಿದ್ಯಾಮಹಾಮಂಡಪಂ (ಪುಷ್ಪಪು. ೪-೫೪).

[ಸಂ. ವ್ಯಾಖ್ಯಾನಶಾಲಾ]

ವ್ಯಾಖ್ಯಾನಿಸು (ಕ್ರಿ). ೧. = ವ್ಯಾಖ್ಯಾನಂಗೆಯ್ : ಇಂತು ಪ್ರಕೃತಿಸಂಗ್ರಹಂ ರಚನಾನುಸಾರಮಾಗಿ ವ್ಯಾಖ್ಯಾನಿಸಲ್ಪಟ್ಟುದು (ಗೊಮ್ಮಸಾ. ೬೧-೨) ; ಯೋಗಿಕ ಶಬ್ದಪುಂಜಗಳನ್ನೇ ಉಪಯೋಗಿಸಿಕೊಂಡು ತಮ್ಮ ಕಾವ್ಯಗಳನ್ನು ವ್ಯಾಖ್ಯಾನಿಸುತ್ತಾರೆ (ತ್ರೇಷ್ಠಪ್ರ. ೧೪೬). ೨. ಭಾಷಣ ಮಾಡು ; ಉಪನ್ಯಾಸ ಕೊಡು : ಬೇರೆ ಬೇರೆ ತಜ್ಞರು ಬಂದು ಹೈನದ ಬಗ್ಗೆ ಬೇರೆಬೇರೆ ವಿಷಯಗಳನ್ನೆತ್ತಿ, ಬೇರೆಬೇರೆ ದೃಷ್ಟಿಕೋನದಿಂದ ವ್ಯಾಖ್ಯಾನಿಸಿದರು (ಗೋಗ್ರಾಸ. ೯). [ವ್ಯಾಖ್ಯಾನ + - ಇಸ್ಸು]

ವ್ಯಾಖ್ಯಾಪ್ರಜ್ಞಪ್ತಿ (ನಾ). [ಜೈನ] ಜೈನಶಾಸ್ತ್ರದ ಹನ್ನೆರಡು ವಿಭಾಗಗಳಲ್ಲಿ ಒಂದು ; ℙ "ಶ್ರುತಾಂಗಗಳಲ್ಲಿ ಒಂದು. ಗಣಧರರು ಕೇಳಿದ ಪ್ರಶ್ನೆಗಳು ಮತ್ತು ಅವಕ್ಕೆ ತೀರ್ಥಂಕರರ ಉತ್ತರಗಳು ; ಇದರಲ್ಲಿ ಅರವತ್ತು ಸಾವಿರ ಪ್ರಶ್ನೆಗಳಿಗೆ ಉತ್ತರಗಳಿವೆ" (ಜೈನಕೋ. ೨೪೧) : ಆಚಾರಮುಂ . . . ವ್ಯಾಖ್ಯಾಪ್ರಜ್ಞಪ್ತಿಯುಂ . . . ಎಂದು ಅಂಗಪ್ರವಿಷ್ಟಭೇದದಿಂ ದ್ವಾದಶವಿಕಲ್ಪಮುಂ ಅಕ್ಕುಂ (ತತ್ತ್ವಪ್ರ. ೫೮) ; ಆಚಾರ, ಸೂತ್ರಕೃತ, ಸ್ಥಾನ, ಸಮವಾಯ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಧರ್ಮಕಥಾ, ಉಪಾಸಕಾಧ್ಯಯನ, ಅಂತಕೃದ್ದಶ, ಔಪಪಾದಿಕದಶ, ಪ್ರಶ್ನ ವ್ಯಾಕರಣ, ವಿಪಾಕಸೂತ್ರ, ದೃಷ್ಟಿವಾದ ಎಂಬುವು ಹನ್ನೆರಡು ಅಂಗಗಳು (ಭಾತತ್ತ್ವ. ೨೨೮).

[ಸಂ.]

ವ್ಯಾಖ್ಯೆ (ನಾ). ೧. ವಿವರಣೆ. ೨. ಟೀಕೆ ; ಟಿಪ್ಪಣಿ : ಪ್ರಾಚೀನಋಷಿವರ್ಯರು ಧರ್ಮದ ವ್ಯಾಖ್ಯೆಯನ್ನು ಕೊಡುತ್ತಾರೆ (ಧರ್ಮಸಾ. ೩). ೩. ಸೂತ್ರ ; ಲಕ್ಷಣನಿರೂಪಣೆ: ಅಭಾಗಲಬ್ಧಸಂಖ್ಯೆಗಳಿಗೆ ನಿಖರವಾದ ವ್ಯಾಖ್ಯೆ (definition) ಮತ್ತು ಸಿದ್ಧಾಂತ (Theory)ಗಳನ್ನು ಭಾರತೀಯರೂ ಕಂಡುಹಿಡಿಯಲಿಲ್ಲ (ಗಣಿಚ. ೧೯೩). [ಸಂ. ವ್ಯಾಖ್ಯಾ]

ವ್ಯಾಗನ್, ವಾಗೀನು (ನಾ). ೧. ಸಾಮಾನು ಸಾಗಿಸುವ ರೈಲುಬಂಡಿ ; ಸರಕು ಬಂಡಿ : ನಿನ್ನೆ ಹತ್ತಾರು ವ್ಯಾಗನ್‌ಗಳು ಕಂಬಿ ತಪ್ಪಿದ ಸುದ್ದಿಬಂದಿತ್ತು (ರೂಢಿ). ೨. ನಾಲ್ಕುಚಕ್ರದ ಕುದುರೆ ಬಂಡಿ ; ಸಾಮಾನುಗಾಡಿ : ಫೈಲ್, ವ್ಯಾಗನ್ ; ಲೋಡು ಬರದುಕೊಂಡರು ನೋಡು, ತಂತಮ್ಮ ಖಾನೆಗನುಕೂಲವಾಗಿ (ಅರರೋ. ೨೦). ವಾಗೀನು : ೧. ರೈಲ್ವೆಕಂಬಿಗಳ ಮೇಲೆ ಬಾಯ್ದೆರೆದುಕೊಂಡು ನಿಂತಿದ್ದ ವಾಗೀನುಗಳಿಗೆ ಹಲವರು ಅದಿರನ್ನು ತುಂಬುತ್ತಿದ್ದರು (ಹೂಸಮೇ. ೧೫). ೨. ವಾಗೀನು ವೇಳೆಗೆ ಸಿಗುವಂತಿಲ್ಲ (ಪ್ರಣಸ. ೩೬). [<—— ಇಂ. Waggon]

ವ್ಯಾಘಾತ (ನಾ). ೧. ಹೊಡೆತ ; ಪೆಟ್ಟು : ಪ್ರಚಂಡಗಾಂಡೀವವ್ಯಾಘಾತದೊಳಿಂದ್ರ ನೀಲಂಗಳನಡಸಿದಂತಪ್ಪ ಮುಂಗೆಯ್ಯುಮಂ ಕಂಡು (ಪಂಪಭಾ. ೫-೧೦೩ ವ) ; ಗದ್ಯ ಕವಿತೆಯಲ್ಲಿ . . . ಸ್ವರೂಪದಲ್ಲಿಯೇ ಅದಕ್ಕೆ ವ್ಯಾಘಾತ ವುಂಟಾಗಿದೆ (ನಿಬಂಧ. II, ೩೨೩). ೨. ವಿರೋಧವಾದ ಹೇಳಿಕೆ ; ಅಸಂಬದ್ಧವಾದ ಹೇಳಿಕೆ : ವ್ಯರ್ಥಂ ಪೂರ್ವಾಪರವಿಹಿತಾರ್ಥವ್ಯಾಘಾತದಿಂ ವಿರುದ್ಧಾರ್ಥಪದಂ ಸಾರ್ಥಕಮಕ್ಕುಮನರ್ಥಕದರ್ಥಿತ ಜನದುಕ್ತಿವಿಷಯದೊಳ್ (ಕಾವ್ಯಾಮ. ೪೬೫). ೩. ವಿರೋಧಾಲಂಕಾರಗಳಲ್ಲಿ ಒಂದು : ವ್ಯಾಘಾತ . . . ಉದಾತ್ತಾದ್ಯಲಂಕಾರಗಳೊಡಗೂಡಿ (ವಿವೇಕ. ೨೨೫) ; ಆವ ಕಾರ್ಯಕೆ ಸಾಧನವಾ ಕಾರ್ಯಕೆ ವಿರೋಧಭಾವ ತೋರೆ ವ್ಯಾಘಾತ (ಕುವಲ. ೮೮). ೪. [ಜ್ಯೋತಿ] ಜ್ಯೋತಿಶ್ಶಾಸ್ತ್ರದ ಇಪ್ಪತ್ತೇಳು ಯೋಗಗಳಲ್ಲಿ ಒಂದು : ವ್ಯಾಘಾತ . . . ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೩೨೦). [ಸಂ.]

ವ್ಯಾಘ್ರ (ನಾ). ೧. (ಕಾಡಿನಲ್ಲಿ ಬೇಟೆಯಾಡಿ ಜೀವಿಸುವ) ಮಾಂಸಾಹಾರಿಯಾದ ಒಂದು ದುಷ್ಟಪ್ರಾಣಿ ; ಹುಲಿ : ವರಾಹ ವ್ಯಾಘ್ರ . . . ಮಹೋರಗಾದಿ ಮೃಗಸಂದೋಹಂಗಳತ್ಯಂತಭೀಕರಶಬ್ದಂಗಳಿನೆಯ್ದೆ ತೀವಿ ಮೆಱಗುಂ ತಚ್ಛೈಲಾನುಸ್ಥಳಂ (ಯಾದಚಂ. ೪-೪೭) ; ವ್ಯಾಘ್ರ ಭಲ್ಲೂಕ ಹರ್ಯಕ್ಷ ವಿಷಧರೋರಗ ಭೀಷಣಂ ಮಹಾಟವಿ ! (ಶ್ರೀರಾಮಾ. ೮೮-೨೮೭). ೨. ಒಂದು ನರಕದ ಹೆಸರು : ಸಗಲ ಶಲ್ಯ ಸಿಂಹ ಗಜಾನನ ವ್ಯಾಘ್ರವೆಂಬೈದು ಮಂತ್ರಿನರಕಂಗಳ ಮೇಳದಲ್ಲಿ ಮಹಾಚಂಡ ವೆಂಬರಸುನರಕವಿಹುದು (ವಿವೇಕ. ೧೫೨). ೩. ಕೆಂಪುಜಾತಿಗೆ ಸೇರಿದ ಹರಳಿನ ಗಿಡ : "ವ್ಯಾಘ್ರಃ- ಹುಲಿ, ಕೆಂಪಿನೌಡಲ" (ಓಷಧಿ. ೧೫೨). [ಸಂ.]

ವ್ಯಾಘ್ರಕೇತನ (ನಾ). ೧. ಹುಲಿಯ ಚಿತ್ರವಿರುವ ಧ್ವಜ ; ಹುಲಿಯ ಲಾಂಛನವಿರುವ ಬಾವುಟ. ೨. ಹುಲಿಯ ಚಿಹ್ನೆಯಿರುವ ಧ್ವಜವುಳ್ಳವನು ; ಶಲ್ಯ : ಮದ್ರವಿಷಯಾಧಿಪತಿಯುಂ ವ್ಯಾಘ್ರಕೇತನನುಂ ಶಸ್ತ್ರನಿರ್ಭರನಿಪುಣನುಂ ಸಮರೇಭ ಶಲ್ಯನುಮನಿಸಿದ . . . ಶಲ್ಯನ ಸಂಹರಣದೊಳಂ (ಗದಾಯು. ೩-೧೦ ವ). [ಸಂ.]

ವ್ಯಾಘ್ರನಖ (ನಾ). ೧. ಹುಲಿಯ ಉಗುರು. ೨. ಒಂದು ಬಗೆಯ ಗಂಧದ್ರವ್ಯ : ಮುಡಿವಾಳ ವ್ಯಾಘ್ರನಖವೆಂಬ ಗಂಧಿಗದ್ರವ್ಯ (ಸಕವೈ. ೧೪೮). [ಸಂ.]

ವ್ಯಾಘ್ರಪಾದ (ನಾ). ೧. ಹುಲಿಯ ಹೆಜ್ಜೆ. ೨. ಒಂದು ಬಗೆಯ ಸಸ್ಯ : "ವ್ಯಾಘ್ರಪಾದಃ- ಹುಲುಮಾಣಿಕ" (ಓಷಧಿ. ೧೫೨). [ಸಂ.]

ವ್ಯಾಘ್ರಪುಚ್ಛ (ನಾ). ೧. ಹುಲಿಯ ಬಾಲ. ೨. ಔಡಲಮರ ; ಹರಳುಮರ : (ಪಂಡಿತ. ೨೭೪). [ಸಂ.]

ವ್ಯಾಘ್ರಮುಖ (ನಾ). ೧. ಹುಲಿಯ ಬಾಯಿ. ೨. ಹುಲಿಯ ಮುಖದ ಆಕಾರದಲ್ಲಿರುವ ಹೆಬ್ಬಾಗಿಲು ; ಹುಲಿಮುಖ : ಪೊಳಲಂ ನಿರ್ಮಿಪುದೈ . . . ಡೆಂಕಣಿಗಳಿಂದಟ್ಟಾಲಸತ್ಪಂಕ್ತಿಯಿಂ ವಿಳಸದ್ವ್ಯಾಘ್ರಮುಖಂಗಳಿಂದೆ ಕರುಮಾಡಂಗಳ್ ಸಮಂತೊಪ್ಪಿರಲ್ (ಹಾಲಾಸ್ಯ. ೧-೪-೫೨). ೩. (ಆಲಂ) ಹುಲಿಯ ಬಾಯಿಯಂತಿರುವ ಭಯಾನಕವಾದ ಪ್ರದೇಶ : ತುರಗದೆಡಬಲ ಗಜದ ಸಮ್ಮುಖ ತರುಣಿಯರುಗಳ ಸರ್ವತೋಮುಖ ಹಿರಿದು ದುರ್ಜನನಿದ್ದ ದೇಶವದೆಯ್ದೆ ವ್ಯಾಘ್ರಮುಖ . . . ಅಲ್ಲಿಹುದುಚಿತವಲ್ಲ (ಕುವ್ಯಾಲಿ. ೩-೬೭). [ಸಂ.]

ವ್ಯಾಘ್ರವಕ್ತ್ರ (ನಾ). ೧. ಹುಲಿಯ ಮುಖ. ೨. ಹುಲಿಯ ಮುಖದಂತೆ ಇರುವ ಮುಖವುಳ್ಳವನು ; ಶಿವನ ಪ್ರಮಥಗಣದಲ್ಲಿ ಒಬ್ಬನು : ಹರಿವಕ್ತ್ರಂ . . . ವ್ಯಾಘ್ರವಕ್ತ್ರಂ ಪಯಶ್ಚರವಕ್ತ್ರಂ ರುರುವಕ್ತ್ರನೆಂಬರೆಸೆದರ್ವಿಶ್ವೇಶ್ವರಾಸ್ಥಾನದೊಳ್ (ರಾಜಶೇ. ೧೪-೧೫೪). [ಸಂ.]

ವ್ಯಾಘ್ರವಲೆ (ನಾ). ಹುಲಿಯನ್ನು ಹಿಡಿಯುವ ಒಂದು ಬಗೆಯ ಬಲೆ : ಬೀಸುವಲೆ ವ್ಯಾಘ್ರವಲೆ ಸಿಂಗವಲೆ . . . ಶಶಕವಲೆಯು (ಭಕ್ತಾಂಗ. ೧೦-೧೯).

[ವ್ಯಾಘ್ರ + ಬಲೆ]

ವ್ಯಾಘ್ರಸಮ್ಮ (ನಾ). ಹುಲಿಯ ಚರ್ಮ : ಉಡುಗೆ ವಲ್ಕಲ ವ್ಯಾಘ್ರಸಮ್ಮ ಕಕ್ಷಸ್ಥಳದಿ ಪಿಡಿದು . . . ಕಡುಶುಭ್ರತೇಜದೊಬ್ಬುಳಿ ಮೂರ್ತಿಗೊಂಡುದೊ (ನವಮೋ. ೨೭-೧೯). [ವ್ಯಾಘ್ರ + ಸಮ್ಮ]

ವ್ಯಾಘ್ರಾಜಿನ (ನಾ). ಹುಲಿಯ ಚರ್ಮದ ಆಸನ : ಆ ಬ್ರಹ್ಮಸಭೆಯ ಇದಿರಿನಲ್ಲಿ, ಮಿತಿಪರಿವಾರದ ನಡುವೆ, ಜನಕರಾಜ ವ್ಯಾಘ್ರಾಜಿನದ ಮೇಲೆ ಕುಳಿತಿದ್ದಾನೆ (ಚತಂಪಾ. ೧೫೧). [ಸಂ.]

ವ್ಯಾಘ್ರಾಟ (ನಾ). ಒಂದು ಬಗೆಯ ಪಕ್ಷಿ ; ಭರದ್ವಾಜ : "ವ್ಯಾಘ್ರಾಟಃ, ಭರದ್ವಾಜಃ - ಈ ೨ ಹೆಗ್ಗಾರೆ" (ಹಲಾಯು. ೪೨-೯೩). [ಸಂ.]

ವ್ಯಾಘ್ರಾಭ (ನಾ). ಹುಲಿಯ ಬಣ್ಣದ ಕುದುರೆ : ಹುಲಿಯ ಬಣ್ಣವುಳ್ಳ ಅಶ್ವವು ವ್ಯಾಘ್ರಾಭವೆನಿಸಿಕೊಳ್ಳುವದು (ಸೌಗಂಧಿ. ೩೧೨-೯). [ಸಂ. ?]

ವ್ಯಾಘ್ರಾಸನ (ನಾ). ೧. ಹುಲಿಯ ಚರ್ಮದ ಆಸನ : ಆ ತಪೋಧನರು ಜರ್ಝರಿಸಿ . . . ವ್ಯಾಘ್ರಾಸನವ್ರಾತಗಳನುಳಿದು (ನವಮೋ. ೬-೨೪). ೨. ಹುಲಿಯ ಪ್ರತಿಮೆಗಳ ಮೇಲೆ ಅಳವಡಿಸಿರುವ ಪೀಠ : ಟೀಪೂಸುಲ್ತಾನನ ಮನೆಯಲ್ಲಿದ್ದ . . . ರತ್ನಮಯವಾದ ವ್ಯಾಘ್ರಾಸನವನ್ನು ಮುರಿದು ಆ ದ್ರವ್ಯದ ಸಂಗಡ ತಮ್ಮ ದೇಶಕ್ಕೆ ಕಳುಹಿಸಿದರು (ಮಹಾಮಂ. ೨. ೨೪೫). 'ಸಿಂಹಾಸನ' ಪರಾ. ೩. [ಯೋಗ] ಒಂದು ಬಗೆಯ ಆಸನ : ತುಂಬು ವ್ಯಾಘ್ರಾಸನದಿ ಮೋಕ್ಷವು (ಗಗಶಾ. ೪-೨೪).

[ಸಂ.]

ವ್ಯಾಘ್ರಿ (ನಾ). ೧. ಹೆಣ್ಣುಹುಲಿ. ೨. ಒಂದು ಬಗೆಯ ಸಸ್ಯ ; ನೆಲಗುಳ್ಳ ; ಹೆಗ್ಗುಳ್ಳ : "ವ್ಯಾಘ್ರೀ -ಉಳ್ಳಿ, ನೆಲಗುಳ್ಳ" (ಓಷಧಿ. ೧೫೨). [ಸಂ. ವ್ಯಾಘ್ರೀ]

ವ್ಯಾಜ (ನಾ). ೧. ಕಪಟ ; ಮೋಸ ; ಮರೆ : ನೂತನಚೂತಾವನಿಚಾತಗುಚ್ಛನಿವಹ ವ್ಯಾಜಂಗಳೊಳ್ ನಿಂದು (ಸುಕುಮಾ. ೪-೪೫). ೨. ನೆವ ; ನೆಪ : ತದ್ವ್ಯಾಪದೀಲಲನಾವ್ಯಾಜ ದಿನೀಗಳೊಂದ ಪೊಟಲೊಳ್ ಸಂದಿರ್ದ ಭಾಸ್ಯತ್ಸುಹೃದ್ಬಲಕಂ ಮಾರ್ವಲಕಂ ಗುಣಾರ್ಣವ ಶರಪ್ರಾಗಲ್ಭ್ಯಮಂ ತೋಱುವಂ (ಪಂಪಭಾ. ೩-೩೩) ; ದೃಷ್ಟಾಂತಪೂರ್ವಕಂ ಪಾರ್ವತೀ ವ್ಯಾಜದಿಂ ಸ್ಥಾಪಿಸಿದ ಭೃಂಗಿಗಾಂ ಲಿಂಗಿಯಪ್ಪೆಂ (ಪದ್ಮರಾ.೧-೮). ೩. ತುಂಟತನ ; ದುಷ್ಟತನ. [ಸಂ.]

ವ್ಯಾಜನಿಂದೆ (ನಾ). ೧. ಸ್ತುತಿಮಾಡುವ ನೆವದಿಂದ ಹೀಯಾಳಿಸುವುದು. ೨. [ಕಾವ್ಯಮೀ] ಒಂದು ಬಗೆಯ ಅಲಂಕಾರ ; "ಒಂದು ನಿಂದೆಯಿಂದ ಮತ್ತೊಂದು ನಿಂದೆ ಗೋಚರಿಸಿದರೆ ಅದು ವ್ಯಾಜನಿಂದೆ" (ಕೃವಿ. ೨೮೮) : ಆಲಿಸಿನ್ನನ್ಯರ ನಿಂದೆಯೊಳ್ ನಿಂದೆಯು ಪೇಳಲ್ಕೆ ವ್ಯಾಜನಿಂದೆಯು ಕೀಲಾಲಜಾಸನ ನಿನ್ನ ಶಿರವನು ಮೊದಲು ಶೂಲಿಯು ತರಿದ ದುಷ್ಟನು (ಕುವಲ. ೬೮-೧).

[ಸಂ. ವ್ಯಾಜನಿಂದಾ]

ವ್ಯಾಜರೂಪಕ (ನಾ). [ಕಾವ್ಯಮೀ] ಒಂದು ಬಗೆಯ ಅಲಂಕಾರ ; ಅಪ್ರಕೃತ ವಸ್ತುವಿನ ಗುಣಧರ್ಮಗಳನ್ನು ಪ್ರಕೃತವಸ್ತುವಿನಲ್ಲಿ ವ್ಯಾಜಾಂತರದಿಂದ ಆರೋಪಿಸುವುದು : ನಗಯೆಂಬ ನೆವದೆ ಬೆಳಗೀ ಮೊಗಮೆಂಬೀ ನೆವದೆ ತಿಂಗಳೊಳಗಸೆದಾದಂ ಸೊಗಯಿಸಿ ತೋರ್ಕುಂ ಲೋಚನಯುಗಮೆಂಬೀ ನೆವದೆ ಲಕ್ಷ್ಮಿಮನೆ ತದ್ವ್ಯಾಜಂ (ವ್ಯಾಜರೂಪಕಂ) (ಕವಿರಾ. ೩-೨೬). [ಸಂ.]

ವ್ಯಾಜಸಂಸ್ತವ (ನಾ). [ಕಾವ್ಯಮೀ] ಒಂದು ಬಗೆಯ ಅಲಂಕಾರ ; ಸ್ತೋತ್ರರೂಪದಲ್ಲಿ ನಿಂದೆಯೂ ನಿಂದೆಯ ರೂಪದಲ್ಲಿ ಸ್ತೋತ್ರವೂ ವರ್ಣಿತವಾಗುವ ಅಲಂಕಾರ : ತಗುಳೆ ಪಟುವಿಂತ ಕೆಯ್ಮಾಗ ಪೊಗಟ್ಟುದು ತಾಂ ವ್ಯಾಜಸಂಸ್ತವಾಖ್ಯಮೆನಿಕ್ಕುಂ (ಕಾವ್ಯಾವ. ೨೫೫). [ಸಂ.]

ವ್ಯಾಜಸ್ತುತಿ (ನಾ). [ಕಾವ್ಯಮೀ] ಒಂದು ಬಗೆಯ ಅಲಂಕಾರ ; P "ಸ್ತೋತ್ರದ ರೂಪದಲ್ಲಿ ನಿಂದೆಯೂ, ನಿಂದೆಯ ರೂಪದಲ್ಲಿ ಸ್ತೋತ್ರವೂ ವರ್ಣಿತವಾಗಿದ್ದರೆ ಅದು 'ವ್ಯಾಜಸ್ತುತಿ' (ಕೃವಿ. ೨೮೮) : ಅತಿಶಯಮಾಗಿರೆ ಗುಣಸಂತತಿಯಂ ದೋಷಮನೆ ಪೇಳ್ವವೋಲ್ಪೇಳ್ದುದು ನಿಶ್ಚಿತಶಬ್ದಾರ್ಥಂ ವ್ಯಾಜಸ್ತುತಿಯೆಂಬುದು (ಕವಿರಾ. ೩-೧೬೦) ; ಅಂದದಿ ಸ್ತುತಿಮಾಡುತ್ತದರೊಳ್ ನಿಂದೆಯು ತೋರೆ ಛಂದದಿಂದಿದು ವ್ಯಾಜಸ್ತುತಿಯು (ಕುವಲ. ೬೪-೧). [ಸಂ.]

ವ್ಯಾಜಾಂತರ (ನಾ). ಬೇರೊಂದು ನಿಮಿತ್ತ ; ಕಾರಣಾಂತರ : ನಾರದಂ ವ್ಯಾಜಾಂತರದಿನಾ ರಾಜನಂ ಬೇಱೊಂದೆಡಗೆ ಕರೆದೊಯ್ದು (ಅಧ್ಯಾತ. ೯-೪). [ಸಂ.]

ವ್ಯಾಜಿಮ (ನಾ). ಮಣ್ಣು, ಮರ ಮುಂತಾದುವುಗಳಿಂದ ತಯಾರಿಸಿದ ರಂಗಪರಿಕರ ; ಪುಸ್ತ : ಸಂಧಿಮ, ವ್ಯಾಜಿಮ, ವೇಷ್ಟಿಮ ಎಂದು ವರ್ಣಿತವಾಗಿರುವ ('ನಾಟ್ಯಶಾಸ್ತ್ರ', ಅಧ್ಯಾಯ ೨೧) ಕೃತಕವಾದ ರಂಗವಸ್ತುಗಳಿದ್ದರೂ . . . ಅನೇಕ ಕ್ರಿಯೆಗಳೂ, ಪದಾರ್ಥಗಳೂ ನಾಟ್ಯಧರ್ಮಿಯನ್ನನುಸರಿಸಿ ಅಭಿನಯಿಸಲ್ಪಡುತ್ತಿದ್ದುವು (ಸಂನಾಟ. ೨೬). [ಸಂ.]

ವ್ಯಾಜೃಂಭಣ (ನಾ). ವಿಸ್ತಾರ ; ಹಬ್ಬುಗೆ ; ವಿಜೃಂಭಣ : ಅಂತು ನಱೆದ ಚಾತುರ್ದಂತಬಲಜಲಧರರಭಸಂ ಪ್ರಭಿನ್ನ ಬ್ರಹ್ಮಾಂಡಾಖಂಡಶಂಕೆಯಂ ಪುಟ್ಟಿಸ ತೊಟ್ಟನೆ ಕೊಳೆ ತದ್ಬಿಯಚ್ಚರಸೇನಾವ್ಯಾಜೃಂಭಣಮಾ ಪ್ರಸ್ತಾವದೊಳ್ (ಶಾಂತಿಪು. ೩-೧೧೧: ೪).

ವ್ಯಾಜೋಕ್ತಿ (ನಾ). ೧. ಮೋಸದ ಮಾತು ; ಕಪಟೋಕ್ತಿ : ಉಗುರಂ ನೋಟ್ಪಂದದಿಂ ಪಾಣಿಪಲ್ಲವಮಂ ಕೆಂದಳದಿಂದಮರ್ಚುವಳಿಪಂ ವ್ಯಾಜೋಕ್ತಿಯಿಂದಂ ನಿಮಿರ್ಚುವತಿಪ್ರೌಢಯ ಪೊರ್ದುವಾಸೆಗೆ ನೃಪಂ ರೋಮಾಂಚಮಂ ತಾಳ್ದುವಂ (ಮಲ್ಲಿಪು. ೩-೪೩). ೨. [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ ; ಕಾರಣವಲ್ಲದ್ದನ್ನು ಕಾರಣವಾಗಿ ಹೇಳಿ ನಿಜಸ್ಥಿತಿಯನ್ನು ಮುಚ್ಚುವುದು : ಸಮಾಸೋಕ್ತಿ ಪರ್ಯಾಯೋಕ್ತಿ . . . ಸತ್ಯಸಂಗತಿ ತದ್ಗುಣ ಅತದ್ಗುಣ ವ್ಯಾಜೋಕ್ತಿ ಸ್ವಭಾವೋಕ್ತಿ ಭಾವಿಕ ಉದಾತ್ತವೆಂಬ ಅಜವತ್ಕ್ರಿಯಲಂಕಾರಂಗಳಿಂದೊಡಗೂಡಿ (ಎವೀಕ. ೧೭೯) ; ಅನ್ಯೋಕ್ತಿಯ ನೆವದಿಂದ ತನ್ನಾಕೃತಿ ಮರೆಮಾಡೆ ಚೆನ್ನಾಗಿದು ವ್ಯಾಜೋಕ್ತಿಯೆನಿಸೆ ಎನ್ನಂಗವು ಸದನೋಪವನಕುಸುಮಧೂಳಿಂದ ಇನ್ನು ಮಾಸಿದೆ ನೋಡೆ ಸಖಿಯೇ (ಕುವಲ. ೧೫೬-೧). [ಸಂ.]

ವ್ಯಾಜ್ಯ (ನಾ). ೧. ಜಗಳ ; ಕಲಹ : ಕುದುರೆ ದೇವಕ್ಕಿಗೆ ಬರಗೊಡರುಯೆಮ್ಮ ವ್ಯಾಜ್ಯದ ಮೇಲೆ . . . ನೀವು ಬಂದು ಅರ್ಜುಮಾಡಿಕೊಳ್ಳಲಾಗಿ . . . ನಿಮ್ಮ ಸ್ಥಲಮಿರಿಸಿ ನಿಮಗೆ ಕೊಟು ತಾಮ್ರದ ಶಾಸನದ ಲಿಪಿ ಬರೆಸಿ ಕೊಟುಯಿದೇವೆ (ಎಕ. XII, ಶಿರಾ.೧೧೨-೨೫; 1720); ನಂಗೆ ವ್ಯಾಜ್ಯ ಬೇಕಾಗಿಲ್ಲ (ಚಂದತೋ. ೧೬೯). ೨. ದಾವೆ ; ಮೊಕದ್ದಮೆ : ಆ ಹೊತ್ತು ನಾನು ಒಂದು ವ್ಯಾಜ್ಯದಲ್ಲಿ ಪೂರ್ಣ ವಿಚಾರ ಮಾಡದಲೆ ಅನ್ಯಾಯದ ತೀರ್ಪು ಕೊಟ್ಟೆ (ಮುಂಜಯಿ. ೪-೧೪೮).

ವ್ಯಾಜ್ಯತೀರಿಸು = ಜಗಳ ಬಿಡಿಸು ; ನ್ಯಾಯವನ್ನು ಬಗೆಹರಿಸು : ಅವರು ಊರಿನಲ್ಲಿ ವ್ಯಾಜ್ಯತೀರಿಸುವುದರಲ್ಲೇ ಜೀವ ಸವೆಸಿದರು (ರೂಢಿ). ವ್ಯಾಜ್ಯಮಾಡು = ಜಗಳವಾಡು ; ನ್ಯಾಯತೆಗೆ : ವ್ಯಾಜ್ಯಮಾಡುವವ ಅಜ್ಜಗೆ ಬಿಟ್ಟಾನೇ ? (ಗಾದೆ). ವ್ಯಾಜ್ಯವಾಡು = ೧. ಜಗಳವಾಡು. ೨. ಖಟ್ಲೆಹಾಕು ; ದಾವೆಹೂಡು : ವ್ಯಾಜ್ಯವಾಡಿ ಇದ್ದ ಆಸ್ತಿಯನೆಲ್ಲಾ ನೀಗಿಕೊಂಡ (ರೂಢಿ). ವ್ಯಾಜ್ಯಹೂಡು = ಕೋರ್ಟಿನಲ್ಲಿ ದಾವೆ ದಾಖಲುಮಾಡು ; ಕೇಸು ಹಾಕು : ಅವನ ದಾಯಾದಿಗಳು ಹೈಕೋರ್ಟಿನಲ್ಲಿ ವ್ಯಾಜ್ಯಹೂಡಿ ಅವನ ಆಸ್ತಿಯನ್ನೆಲ್ಲಾ ಕಸಿದುಕೊಂಡರು (ಬಂಕಪು. ೧೩೨). [? ./ ತಮಿ. ವಿಯಾಚ್ಚಿಯಮ್ ; ತುಳು. ವ್ಯಾಜ್ಯ; ತೆಲು. ವ್ಯಾಜ್ಯ, ವ್ಯಾಜ್ಯೆ./ ಮರಾ. ವ್ಯಾಜ್ಯ = ಚಿಂತೆ./ ಸಂ. ವ್ಯಾಜ = ಕಪಟ, ಮೋಸ]

ವ್ಯಾತ್ಯುಕ್ಷಿ (ನಾ). ಪರಸ್ಪರ ನೀರೆರಚುವುದು ; ನೀರಾಟ ; ಜಲಕ್ರೀಡೆ : ಅನಿಬರುಮವರ್ ವ್ಯಾತ್ಯುಕ್ಷೀಶಕ್ತರೋಕುಳಿಯಾಡಿದರ್ (ವರ್ಧಮಾ. ೧೨-೪೦).

[ಸಂ. ವ್ಯಾತ್ಯುಕ್ಷೀ]

ವ್ಯಾದೀರ್ಣ (ನಾ). [ನಾಟ್ಯ] ನೃತ್ಯದಲ್ಲಿ ಗದ್ದವನ್ನು ಚಾಚುವ ಒಂದು ಭಂಗಿ ; P "ಗದ್ದವನ್ನು ನೀಡುವುದು ; ಆಕಳಿಸುವುದು, ಆಲಸ್ಯ ಇವುಗಳಲ್ಲಿ ಇದನ್ನು ವಿನಿಯೋಗಿಸಬೇಕು" (ಅಸ್ಸರಂ. ೨೪೧: ಗದ್ಯಾನುವಾದ) : ನಿಡುಚಿಬುಕಂ ವ್ಯಾದೀರ್ಣಂ (ಅಸ್ಸರಂ. ೩-೧೦೦). [ಸಂ.]

ವ್ಯಾಧ (ನಾ). ೧. ಬೇಟೆಗಾರ ; ಬೇಡ ; ಕಿರಾತ : ಅಭಯಾರ್ಥಿವ್ಯಾಧರಾಜಪ್ರತತಿ ಗಭಯಮಂ ಕೊಟ್ಟು (ಆದಿಪು. ೧೩-೭೮) ; ವ್ಯಾಧನೊಂದು ಮೊಲವ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯ (ಬಸವ. ೧೫೮) ; ನೀಚ ಪಡೆದರ್ಥಕಗೆ ಮೂಱು ಕಣ್ಣಿಹವೆಂದು ಪುರಜನ ವ್ಯಾಧಭಜಕಸಮುದಾಯಕ್ಕೆ ಮಾರಹರ ಪೇಳಲು (ಪ್ರೌಢರಾ. ೧೦-೭). ೨. ದುರುಳ ; ನೀಚ. [ಸಂ.]

ವ್ಯಾಧನಿವಾಸ (ನಾ). ಬೇಡರು ವಾಸಿಸುವ ಸ್ಥಳ ; ಬೇಡರ ಹಟ್ಟಿ : ಮಹೇಂದ್ರ ಸಿಂಹನೊರ್ವನೆ ನಾನಾವಿಧ ಗಿರಿಗಹನ ವಿಷಯ ವಿಷಮಪ್ರದೇಶಂಗಳುಮಂ ವ್ಯಾಧ ನಿವಾಸಂಗಳುಮಂ ಯಥಾಕ್ರಮದಿಂದಂ ಕಟಿದು ಪೋಗಿ (ವಡ್ಡಾರಾ. ೫೪-೯). [ಸಂ.]

ವ್ಯಾಧಿ (ನಾ). ೧. (ದೈಹಿಕ) ರೋಗ ; ಖಾಯಿಲೆ ; ಬೇನೆ : ಸನತ್ಕುಮಾರಭಟಾರರು ಮೇಱುನೂಱುಂ ವ್ಯಾಧಿಗಳಂ ನೂಱುವರುಷಂಬರೆಗಂ ಸೈರಿಸಿ ಘೋರವೀರತಪಶ್ಚರಣಂ ಗೆಯ್ದು (ವಡ್ಡಾರಾ. ೭೦-೧೧) ; ಬಳಿಯಿಸುವುದು ನೀತಿಯ ವಿರೋಧಿಯಂ ವ್ಯಾಧಿಯುಮಂ (ಜಗವಿ. ೩-೨೨). ೨. ಒಂದು ಬಗೆಯ ಸಸ್ಯ : "ಗದಂ – ವ್ಯಾಧಿ, ಕೋಷ್ಠ, ವಿಷ" (ಓಷಧಿ. ೪೪) ; "ವ್ಯಾಧಿ – ಚಂಗಲುಕೋಷ್ಠ" (ಪಂಡಿತ. ೨೧೭). [ಸಂ.]

ವ್ಯಾಧಿಗ್ರಸ್ತ (ನಾ). ಬೇನೆಗೆ ಒಳಗಾದವನು ; ರೋಗಪೀಡಿತನಾದವನು : ಪಥ್ಯ ಅರುಚಿಯಾಗುವ ವ್ಯಾಧಿಗ್ರಸ್ತನಂತೆ (ಚಿತಂಬಾ. ೭೧). [< ಸಂ. ವ್ಯಾಧಿಗ್ರಸ್ತ]

ವ್ಯಾಧಿಘಾತ (ನಾ). ಒಂದುಬಗೆಯ ಔಷಧೀಸಸ್ಯ : "ವ್ಯಾಧಿಘಾತ - ಕಕ್ಕೆಗಿಡ" (ಪಂಡಿತ. ೨೧೭). [ಸಂ.]

ವ್ಯಾಧಿತ (ಗು). ೧. ಖಾಯಿಲೆಯಿಂದ ಕೂಡಿದ ; ರೋಗಪೀಡಿತವಾದ. (ನಾ). ೨. ಖಾಯಿಲೆ ಬಿದ್ದವನು ; ರೋಗಗ್ರಸ್ತ ; ರೋಗಿ : ಮೆಚ್ಚವ ಗಜಹಯಶಾಲೆಯಲಿ ಮೈಮುಱಿಕ ವೃದ್ಧ ವ್ಯಾಧಿತಾವಳಿ ಮಱಿಗುದುರ ಮಱಿಯಾನೆ ತಗದವು ಲಕ್ಕಸಂಖ್ಯೆಯಲಿ (ಕುವ್ಯಾಗ. ೪-೧೬). [ಸಂ.]

ವ್ಯಾಧಿನಿರ್ಹರಣ (ನಾ). ರೋಗನಿವಾರಣೆ ; ವ್ಯಾಧಿನಿರ್ಮೂಲನ : ಇಂದು ಇಷ್ಟದೇವತಾಸಮಾರಾಧನಂಗೆಯ್ದು ರಾಸಭಮಂ ವ್ಯಾಧಿನಿರ್ಹರಣಾರ್ಥಂ ದಿವ್ಯೌಷಧ ಮಂದು ಬಗೆದಾರೋಗಿಸಿಂ (ಪಂಚತಂ. ೨೮೪-೧೮). [ಸಂ.]

ವ್ಯಾಧಿಸ್ಥ (ಗು). = ವ್ಯಾಧಿತ ೧ : ಸುಣ್ಣವಿಲ್ಲ ಭಾಗವತರ . . . ವೀಳ್ಯ ಹಾಕುವವನಲ್ಲ ವ್ಯಾಧಿಸ್ಥ ಗಂಡನು ಬಾಳು ಸಟೆ ಎನ್ನ ಬಾಯಿ ನೋಡಿ (ಪುರಂದ. ೨-೮೪-೧). [ಸಂ.]

ವ್ಯಾನ (ನಾ). ಶರೀರದಲ್ಲಿರುವ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಐದು ಪ್ರಾಣವಾಯುಗಳಲ್ಲಿ ಒಂದು : "ಸರ್ವದೇಹಾನಿಲಂ ವ್ಯಾನಮಕ್ಕುಂ" (ಮಂಗರಾ. ೧೫-೧೨) ; ವಾಯು ಅಗ್ನಿಯು ಚರಸಿದಲ್ಲಿ ವ್ಯಾನ ವಾಯುವಿನ ಜನನ (ಸಿದ್ರೇವ. ೨೯-೭೪) ; ಪ್ರಾಣಾಪಾನ ವ್ಯಾನೋದಾನ ಸಮಾನಗಳೆಂಬ ಪಂಚಪ್ರಾಣಗಳು ಹುಟ್ಟುವುವು (ಹಿಂದುಸಾ. ೧೯೬). [ಸಂ.]

ವ್ಯಾನಮ್ರ (ಗು). ವಿನಮ್ರವಾದ ; ವಿನಯದಿಂದ ಕೂಡಿದ : ವ್ಯಾನಮ್ರ ಶ್ರೀಮುಖಸುರವಧೂವಕ್ತ್ರಪದ್ಮಪ್ರಭಾಂಭಸ್ಸಾನೂನ್ಮೀಲತ್ಪದಕಮಳೆ . . . ಗೌರೀ ನೀನೆನ್ನಂ ರಕ್ಷಿಪುದು (ರಾಜಶೇ. ೨-೧೪೫). [ಸಂ.]

ವ್ಯಾಪ (ನಾ). ೧. ವ್ಯವಹಾರ ; ದಂಧೆ ; ಕೆಲಸ : ನನಗೋ ಈ ಪತ್ರಿಕೆಯ ವ್ಯಾಪದಲ್ಲಿ ಇರಬೇಕಾಗುತ್ತದೆ (ಇಪ್ರಕ. ೨೪೧). ೨. ಗೀಳು ; ಆಸಕ್ತಿ : ನನಗೀಗ ದೇವರ ನಾದ ಹತ್ತಿತ್ತು. ನನಗೆ ಮತ್ತೆ ಯಾವ ವ್ಯಾಪವೂ ಇದ್ದಿಲ್ಲ (ಸ್ಮೃತಿಚಿ. ೨೧೬).

[<—— ಮರಾ. ವ್ಯಾಪ]

ವ್ಯಾಪಕ (ಗು). ೧. ಹರಡುವ ; ಆವರಿಸುವ ; ತುಂಬುವ : ಕರುಣಕಥೆಗಳನ್ನೂ . . . ವ್ಯಾಪಕರೂಪದಲ್ಲಿ ಸ್ಪಷ್ಟಗೂಳಿಸಿದ್ದಾರೆ (ಭಾರತಿ. ii ಜೀರಿಕೆ). ೨. ಎಲ್ಲಕಾಲಕ್ಕೂ ಸತ್ಯವಾಗಿರುವ; ನಿತ್ಯವಾದ : ಅಣುವೂ ವ್ಯಾಪಕವೂ ಅಲ್ಲದ ವಸ್ತುಗಳು ನಾಶ ಹೊಂದುತ್ತವೆ (ಭಾರದ. ೨೩೬). (ನಾ). ೩. ಎಲ್ಲೆಲ್ಲೂ ಆವರಿಸಿರುವಂಥದು ; ಸರ್ವವ್ಯಾಪಿಯಾದುದು : ನಿಯತಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕಮಂ (ಕವಿರಾ. ೩ ೩೦) ; ಅಧಿಕದೇಶದಲ್ಲಿರುವ ವಸ್ತುವಿಗೆ ವ್ಯಾಪಕವೆಂದು ಹೆಸರು (ಭಾತತ್ತ್ವ. ೧೭೭). ೪. ಎಲ್ಲಕಡೆ ಇರುವವನು ; ಸರ್ವರನ್ನು ಪ್ರತಿನಿಧಿಸುವವನು : ಪ್ರಾಪಕ ಸಾಪಕ ನಿಯಾಮಕ ವ್ಯಾಪಕಯೆಂದಱಿದು (ಹಸಾರ. ೪-೨೯) ; ಆ ವ್ಯಕ್ತಿ ತಾನೊಬ್ಬನೆ ಸರ್ವಜ್ಞನೆಂಬಂತೆ ಅವರ ಬಾಯಿ ಮುಚ್ಚಿಸಿ ವ್ಯಾಪಕನಂತೆ ಮಾತಾಡು ತ್ತಿದ್ದನು (ಪುಸರು. ೨೫). [ಸಂ.]

ವ್ಯಾಪಕತೆ (ನಾ). ಹಬ್ಬಿರುವಿಕೆ ; ವ್ಯಾಪಿಸಿರುವಿಕೆ : ಆವರು ವಿಶ್ವದ ಅನಂತತ ಮತ್ತು ಅಪರಿಮಿತ ವ್ಯಾಪಕತೆಗಳನ್ನರಿಯಲಿಲ್ಲ (ಶುಕ್ಸಾರ. ೫ ಜೀರಿಕೆ). [ಸಂ. ವ್ಯಾಪಕತಾ]

ವ್ಯಾಪಕತ್ವ (ನಾ). = ವ್ಯಾಪಕತೆ : ಶಿವನ ಸರ್ವಕರ್ತೃತ್ವ , ಸರ್ವಜ್ಞತ್ವ, ಪೂರ್ಣತ್ವ ,ನಿತ್ಯತ್ವ , ವ್ಯಾಪಕತ್ವ ಎಂಬ ಶಕ್ತಿಗಳು . . . ಕ್ರಮೇಣ ಪಂಚಕಂಚುಕ ಗಳಾಗುತ್ತವೆ (ಭಾರದ. ೨೧೪). [ಸಂ.]

ವ್ಯಾಪನೆ (ನಾ). ಹರಡಿದುದು : ಸುತ್ತುಮುತ್ತು ಇರುವ ಊರುಗಳಿಗೂ ಗ್ರಾಮಗಳಿಗೂ ವ್ಯಾಪನೆಯಾಗಿತ್ತು (ಮಾಮರಾ. ೪೩). [ಸಂ. ವ್ಯಾಪನ]

ವ್ಯಾಪರಿಸು (ಕ್ರಿ). ಕಾರ್ಯಮಾಡು ; ವ್ಯವಹರಿಸು : ಆ ಲಿಂಗ ತನ್ನಸರ್ವಾಂಗದಲ್ಲಿ ತಾ ವ್ಯಾಪರಿಸುವಲ್ಲಿ . . . ಅಂದಂದಿಗೆ ಬಂಧ ಮೋಕ್ಷಕರ್ಮ ಹಿಂಗಿ ನಿಂದ ನಿಜ ಲಿಂಗಾಂಗಿಗೆ ಭರಿತಾರ್ಪಣ (ಸರ್ವವ. ೧೩೦-೬೫೭) ; ಸೃಷ್ಟಿವಿಧಾನಕರ್ಮದಲಿ ವ್ಯಾಪರಿಸಲೆನ್ನನು ರಜೋಗುಣ ಲೇಪಿಸದು (ನಿಭಾಗ. ೨-೨-೨). 'ವ್ಯಾಪಾರಿಸು' ಪರಾ.

[< ವ್ಯಾಪಾರ + - ಇಸ್ಸು]

ವ್ಯಾಪಾದ (ನಾ). ೧. ನಾಶ ; ಧ್ವಂಸ. ೨. ಬೇರೆಯವರನ್ನು ಹಿಂಸೆಪಡಿಸುವ ಹಂಚಿಕೆ ; ಹಿಂಸಾಬುದ್ಧಿ : "ವ್ಯಾಪಾದಃ, ದ್ರೋಹಚಿಂತನಂ – ೨ ದ್ರೋಹಮಾಡಬೇಕೆಂಬ ಕೆಟ್ಟ ಇಚ್ಛೆಯ ಪೆಸರು" (ಸಿದ್ಧಾಂತಿ. ೪೫) ; ಕಾಮಚ್ಛಂದ ವ್ಯಾಪಾದ . . . ವಿಚಿಕಿತ್ಸೆ ಎಂಬ ಐದು ನೀವರಣಗಳಿಗೆ ಜರಡಿಯೆಂಬುದು ಸಂಜ್ಞೆ (ಬುದ್ಧಪ. ೭೩). [ಸಂ.]

ವ್ಯಾಪಾದಕ (ಗು). ೧. ನಾಶಗೊಳಿಸುವ ; ಧ್ವಂಸಮಾಡುವ. ೨. ಕೊಲ್ಲುವ ; ಕೊಲೆಮಾಡುವ. (ನಾ). ೩. ಬೇರೆಯವರನ್ನು ಹಿಂಸೆಗೊಳಪಡಿಸುವವನು ; ಹಿಂಸಕ ; ಪೀಡಕ : ನಿಶಿತಾಸಿ ಮುಸಲ ಮುದ್ಗರಾದಿ ಪ್ರಹರಣತಾಡನಪೀಡನಾದಿಗಳಂ ವ್ಯಾಪಾದ್ಯಮಾನಶರೀರನುಂ ವ್ಯಾಪಾದಕರೊಳ್ ಇನಿತಪ್ಪೊಡಂ ಮನೋವಿಷಾದಮಂ ಮಾಡದನುಂ (ತತ್ತ್ವಪ್ರ. ೩೩೫). [ಸಂ.]

ವ್ಯಾಪಾದನ (ನಾ). ಕೊಲೆ ; ವಧೆ : "ಮಾರಣಂ, ನಿಶರಣಂ . . . ವ್ಯಾಪಾದನಂ . . . ಸಂಜ್ಞಪನಂ – ಈ ೨೧ ಕೊಲೆ" (ಹಲಾಯು. ೭೮-೩೨೪) ; ಬಾಲಕ್ರೀಡೆಯೆ ಪೂತನಾಬಕಮುಖವ್ಯಾಪಾದನಂ (ವಸ್ತಂ. ೨-೧೧) . [ಸಂ.]

ವ್ಯಾಪಾದಿತ (ಗು). ನಾಶವಾದ ; ಇಲ್ಲವಾದ : ಸಂಭ್ರಮಾಕುಲಿತಚಿತ್ತಂ ಸ್ವಯಂಪ್ರಭಿಗಮಱಿಪಿ ವಿಷಾದ ವ್ಯಾಪಾದಿತಪ್ರಮೋದರಾಗಿರ್ಪಿನೆಗಂ(ಶಾಂತಿಪು. ೬-೩೦ವ). [ಸಂ.]

ವ್ಯಾಪಾರ (ನಾ). ೧. ಉದ್ಯೋಗ ; ವ್ಯವಹಾರ : "ವ್ಯಾಪಾರಮಯು ದ್ಯೋಗಂ" (ಭಾರಾ. ೫೯); ವ್ಯಾಪಾರ ನಮಗಾಯತು ಶ್ರೀಪತಿ ಪಾದಾರವಿಂದಸೇವೆಯೆಂಬೂ (ಪುರಂದ. ೨-೧೫ ಪಲ್ಲವಿ) . ೨. ಕಾರ್ಯಶಕ್ತಿ ; ಚಟುವಟಿಕೆ : ವಿದ್ಯಾರ್ಥಿಗಳಾಗಿ ಗುರುಶುಶ್ರೂಷಾದಿ ವ್ಯಾಪಾರದಿಂ ಭರವಸಂಗೆಯ್ದು (ಸುಕುಮಾ.೨-೫೫ ವ); (ಧರ್ಮವೆಂಬುದು) ಪುರುಷನ ವ್ಯಾಪಾರಕ್ಕೆ ಅಧೀನವಾಗಿರುತ್ತದೆ (ಬ್ರಹ್ಮಭಾ. ೧೧). ೩. ಕೊಳ್ಳುವ, ಮಾರುವ ವ್ಯವಹಾರ ; ವಾಣಿಜ್ಯ : ಬೂಸದ ವ್ಯಾಪಾರವಾದರೂ ತಕ್ಕಮಟ್ಟಿಗೆ ನಡೆಯುತ್ತದೆ (ಮುಲುಯು. ೪-೧೧೩). ೪. ಕೆಲಸ ; ಕಾರ್ಯ ; ಕ್ರಿಯೆ : ಪೌರವಾರವಿಲಾಸಿನಿಯರಾತ್ಮೀಯಭವನವ್ಯಾಪಾರ ಚಿಂತಾಂತರಾಳಾಪಂಗಳಂ ಮಱೆದು (ಸುಕುಮಾ. ೧೧-೭ವ); ಜನನಿ ಪಿತ ಭೂ ವಾರಿದಾಂಬರವೆನಿಪ ಪಂಚಾಗ್ನಿಯಲಿ ನಾರಾಯಣನ ತ್ರಿಂಶತಿಮೂರ್ತಿಗಳ ವ್ಯಾಪಾರವ್ಯಾಪ್ತಿಗಳ ನೆನೆದು (ಹಸಾರ. ೬-೧). [ಸಂ.]

ವ್ಯಾಪಾರಕ (ನಾ). ತೊಡಗಿರುವವನು ; ವ್ಯವಹರಿಸುವವನು : ವಿಶ್ವವಿದ್ಯೇಶ್ವರ ನುಮಪಗತಾನೇಕಲೋಕವ್ಯಾಪಾರಕನುಂ [ಪಾಠಾಂ. ವ್ಯಾಪಾರನುಂ] ಜನ್ಮಾಂತರಾಭ್ಯಸ್ತ ಕಲಾಕುಶಲನುಂ (ಆದಿಪು. ೮-೩ ವ). [ಸಂ.]

ವ್ಯಾಪಾರಕೇಂದ್ರ (ನಾ). ವಾಣಿಜ್ಯವಹಿವಾಟುಗಳು ನಡೆಯುವ ಮುಖ್ಯಸ್ಥಳ ; ಮಲಯ . . . ಹಳೆ ವ್ಯಾಪಾರಕೇಂದ್ರಗಳಾದ ಸಿಂಗಪುರ, ಪೀನಾಂಗ್, ಮಲಕ್ಕಾ ಇದಕ್ಕೆ ಸೇರಿವೆ (ಭೂವಿಪ. ೪೧೧). [ಸಂ.]

ವ್ಯಾಪಾರಗಾರ (ನಾ). ವಾಣಿಜ್ಯವಹಿವಾಟು ನಡೆಸುವವನು ; ಕೊಳ್ಳುವ, ಮಾರುವ ವ್ಯವಹಾರವನ್ನು ಮಾಡುವವನು ; ವ್ಯಾಪಾರಿ ; ವಣಿಕ : ವ್ಯಾಪಾರಗಾರರಿಗೆ ಹಚ್ಚು ಸಾಲದ ಹಣವೊದಗಿಸಬೇಕೆಂದಾಗ ನೇರವಾಗಿಯೋ ಪರೋಕ್ಷವಾಗಿಯೊ ಸಂಟ್ರಲ್‌ಬ್ಯಾಂಕಿನ ಸಹಾಯವನ್ನು ಪಡೆಯಬೇಕಾಗುತ್ತದೆ (ಹೂಪ್ರ. ೧೭೯). [ವ್ಯಾಪಾರ + - ಗಾರ (<– ಕಾಱ)]

ವ್ಯಾಪಾರಚಿಹ್ನೆ (ನಾ). ವ್ಯಾಪಾರದಲ್ಲಿ ಯಾವುದಾದರೂ ಒಂದು ವಸ್ತುವಿನ ಮೇಲೆ ಅದನ್ನು ಉತ್ಪಾದಿಸುವವರು ತೋರಿಸುವ ವೈಯಕ್ತಿಕವಾದ ಗುರುತು ; ವ್ಯಾಪಾರಸ್ವಾಮ್ಯಮುದ್ರೆ : ವಿಕಸ್ವಗಳು; ನವನಿರ್ಮಿತಿಗಳು ಮತ್ತು ನಕ್ಷೆಗಳು ; ಕೃತಿಸ್ವಾಮ್ಯ; ವ್ಯಾಪಾರಚಿಹ್ನೆಗಳು ಮತ್ತು ಪಣ್ಯಚಿಹ್ನೆಗಳು (ಭಾಧಾಸ. ೨೮೨). [ಸಂ. ವ್ಯಾಪಾರಚಿಹ್ನ]

ವ್ಯಾಪಾರದಾರ (ನಾ). = ವ್ಯಾಪಾರಗಾರ : ಇದು ಅನುಭವಕ್ಕೆ ತಂದ ಈ ಮಾಲಿನ ವ್ಯಾಪಾರದಾರರಿಗೆ ಮಾತ್ರ ಗೊತ್ತೇ ಇರಬಹುದು (ಮುಂಬವ್ಯಾ. ೨೮೪). [ವ್ಯಾಪಾರ + - ದಾರ್]

ವ್ಯಾಪಾರನೀತಿ (ನಾ). ವ್ಯಾಪಾರ ಮಾಡುವ ಪದ್ಧತಿ ; ವಾಣಿಜ್ಯದ ರೀತಿ ನೀತಿ : ಆಗ ವ್ಯಾಪಾರನೀತಿಯನ್ನೂ ಪ್ರಮಾಣಗಳನ್ನೂ ವ್ಯತ್ಯಾಸಮಾಡಿಕೊಂಡು ಆ ದುಃಸ್ಥಿತಿಯಿಂದ ಪಾರಾಗಬೇಕಾಯಿತು (ಹೂಪ್ರ. ೧೭೭). [ಸಂ.]

ವ್ಯಾಪಾರಸಂಸ್ಥೆ (ನಾ). ಕೊಳ್ಳುವ ಮತ್ತು ಮಾರುವ ಸಂಸ್ಥೆ ; ವ್ಯಾಪಾರವನ್ನು ನಡೆಸುವ ಸಂಸ್ಥೆ : ೧೯೪೮ರಲ್ಲಿ ಅಂತರರಾಷ್ಟ್ರೀಯ ವ್ಯಾಪಾರಸಂಸ್ಥೆಯೊಂದನ್ನು ಸ್ಥಾಪಿಸಲು ಹವಾನಾ ಪ್ರಣಾಳಿಕೆ ಎಂಬ ಕರಡು ಒಪ್ಪಂದವನ್ನು ತಯಾರಿಸಲಾಯಿತು (ಪ್ರಕೋ. ೧, ೨೦೪). [ಸಂ. ವ್ಯಾಪಾರಸಂಸ್ಥಾ]

ವ್ಯಾಪಾರಸ್ಥ (ನಾ). = ವ್ಯಾಪಾರಗಾರ : ವ್ಯಾಪಾರಸ್ಥರೂ ಎಲ್ಲಿ ಅಗ್ಗವಾದ ಬೆಲೆಗೆ ಸಾಮಾನು ಸಿಕ್ಕುವುದೂ ಅಲ್ಲಿ ಅದನ್ನು ಕೊಳ್ಳುವರು, ಎಲ್ಲಿ ಪೇಟೆಧಾರಣೆ ಏರಿ ಹೆಚ್ಚು ಲಾಭ ಬರುವುದೊ ಅಲ್ಲಿ ತಮ್ಮ ಸಾಮಾನನ್ನು ಮಾರುವರು (ಹೂಪ್ರ. ೨೮೩). [ಸಂ.]

ವ್ಯಾಪಾರಿ (ನಾ). ೧. ಯಾವುದಾದರೂ ಕೆಲಸದಲ್ಲಿ ತೊಡಗಿರುವವನು ; ಉದ್ಯೋಗಸ್ಥ : ಅತಿಪ್ರಮತ್ತನಾಗಿ ದ್ವಂದ್ವದುಃಖವನ್ನು ಸಹಿಸದ ಯೋಗಕ್ಷೇಮ ವ್ಯಾಪಾರಿಯಾದಂಥವನಿಗ ನಿಷ್ಕಾಮತ್ವವು ಕೂಡದು (ಕೃವಾಭ. ೩೭). ೨. ಕ್ರಯವಿಕ್ರಯ ಮಾಡುವವನು ; ವರ್ತಕ ; ಹರದ : ಇಬ್ಬರು ಮದೋನ್ಮತ್ತರು ಒಬ್ಬ ವ್ಯಾಪಾರಿಯ ಹಡಗನ್ನು ಹಿಡಿದುಕೊಂಡಿದ್ದರು (ಅರ್ಜುಕ. ೫೨). [ಸಂ. ವ್ಯಾಪಾರಿನ್]

ವ್ಯಾಪಾರಿಗ (ನಾ). = ವ್ಯಾಪಾರಿ : ವ್ಯಾಪಾರಿಗನಾಗಿ ದೇಶದೇಶಗಳನ್ನು ಸುತ್ತಿ ನೋಡಿದ್ದ ಅವನು ಇಂತಹ ಕಲಾಕುಶಲತೆಯನ್ನು . . . ಕಂಡಿರಲಿಲ್ಲ (ಶಾಂತಲಾ. ೧೩೩). [ವ್ಯಾಪಾರ + - ಇಗ]

ವ್ಯಾಪಾರಿಸು (ಕ್ರಿ). ವ್ಯವಹರಿಸು ; ಕಾರ್ಯಮಾಡು : ವ್ಯಾಪಾರಿಸುವುದಕ್ಕೆ ಯೋಗ್ಯವಲ್ಲದಂತಪ್ಪ ಠಾವಿನೊಳ್ ಆವಸೊರ್ವಂ ವ್ಯವಹರಿಸಲಿಚ್ಛಿಸಿಹಂ ಆತಂ ಕೀಲನುರ್ಚಿದ ಕೋಡಗನಂತೆ ಕೇಡನ್ಪೆದುವಂ (ಪಂಚತಂ. ೫-೧೦) ; ಶ್ರುತಜ್ಞಾನಂ ತದ್ವಿಷಯಂಗಳೊಳು ವ್ಯಾಪಾರಿಸುಗುಂ (ತಸೂವ್ಯ. ೨೫). [ವ್ಯಾಪಾರ + - ಇಸ್ಕು]

ವ್ಯಾಪಾರೀಬುದ್ಧಿ (ನಾ). ಲಾಭವನ್ನು ಗಳಿಸುವ ಚತುರತೆ ; ವ್ಯಾವಹಾರಿಕ ಜಾಣತನ : ನಿನ್ನ ವ್ಯಾಪಾರೀಬುದ್ಧಿ ಈ ಹುಡುಗನನ್ನು ಈಗ ಸಾಕಿದರ ಮುಂದೆ ತನಗೆ ಕೈಲಾಗದಿದ್ದಾಗ ಸಲಹಲಿಕ್ಕಾದೀತು ಎಂದಣಿಸಿತು (ಮುಂಗಾಮು. ೭). [ಸಂ.]

ವ್ಯಾಪಿ (ನಾ). ೧. ಎಲ್ಲೆಲ್ಲೂ ವ್ಯಾಪಿಸಿರುವ ಗುಣ. ೨. ಯೋಗಿಯು ಮೈಮೇಲೆ ಹಾಕಿಕೊಳ್ಳುವ ಬಟ್ಟೆ ; ಯೋಗಪಟ : ''ಯೋಗಪಟ ವ್ಯಾಪಿಯಕ್ಕುಂ'' (ಮುಂಗರಾ. ೭೬-೯). ೩. ವ್ಯಾಪಿಸಿರುವವನು ; ಆವರಿಸಿರುವವನು : ಜೀವನೂ ಅಣುವಾಗದೆ, ವ್ಯಾಪಿಯಾಗವಿದ್ದಲ್ಲಿ ಅನಿತ್ಯನಾದಾನು (ಭಾರಾದ. ೨೩೬). [ಸಂ. ವ್ಯಾಪಿನ್]

ವ್ಯಾಪಿತ (ಗು). ತುಂಬಿರುವ ; ವ್ಯಾಪಿಸಿರುವ ; ಹರಡಿದ : ಮುಂದಸಯೊಳುದಿತ ವ್ಯಾಪಿತಾಂತರ್ಗತ ಸುವಾಸನೆ ರಂಜಿಸುತ್ತಿರಲು (ಬಸಪು. ೩೩-೭). [ಸಂ.]

ವ್ಯಾಪಿಸು (ಕ್ರಿ). ೧. ಆವರಿಸು ; ಹರಡು ; ಹಬ್ಬು : ಮಣಿದೀಪಕಲಾಪೋದ್ಯ ಜ್ಯೋತಿಗಳ್ ದಿಶಾಮಂಡಲಮಂ ವ್ಯಾಪಿಸುತಿರೆ (ಆದಿಪು. ೫-೪೦) ; ಆಪಾದಮಸ್ತಕಂ . . . ಬಳ್ಳಿಯುಂ ಪುತ್ತುಗಳುಂ ವ್ಯಾಪಿಸಿದುವು (ಧರ್ಮಾಮೃ. ೨-೨೧೮) ; ಪರಿಮಳಿಸುವ ಸಾಂಬ್ರಾಣಿಧೂಪವಾಸನೆ ದಿಕ್ತಟವ ವ್ಯಾಪಿಸೆ (ಕಂನವ. ೬-೧೦೨); ವಿಷವು ಅವನ ರಕ್ತವನ್ನು ಸೇರಿ ಅವನ ಶರೀರವನ್ನು ವ್ಯಾಪಿಸಿತು (ಮಣಿಸ. ೫೦). ೨. ಚಲಿಸು ; ಅಲುಗಾಡು : ನಟ್ಟಡವಿಗೆ ನಡತಂದೇಱಿ ಬಿಲ್ಲಾಗ್ರಮಂ ವ್ಯಾಪಿಸದತ್ತಿತ್ತಂ ಮೃಗಧ್ಯಾನದೊಳಿರೆ (ಪಂಪಾಶ. ೧೫೩). ೩. ಮುನ್ನುಗ್ಗು ; ತಲೆಹಾಕು : ಪರರ ಕಾರ್ಯಕ್ಕೆ ವ್ಯಾಪಿಸದೆ ಸುಮ್ಮನೆ ಇರು (ಕೃವಾಸ. ೧೩೨). [ವ್ಯಾಪನ + - ಇಸ್ಕು]

ವ್ಯಾಪುತ (ನಾ). ಹರಡಿದ ; ತುಂಬಿದ ; ಹಬ್ಬಿದ : ಜಲ ಅನಿಲ ಅನಳ ಬಯಲ ಮಿಕ್ಕಾದ ವಸ್ತುದೊಳಗೆ ವ್ಯಾಪುತನೆಂಬಗ್ಗಳಿಕೆ ಏನೋ (ಮೋಕ್ಷದೀ. ೫೧-೧). [< ಸಂ. ವ್ಯಾಪ್ತ]

ವ್ಯಾಪೃತ (ನಾ). ೧. ತೊಡಗುವಿಕೆ ; ನಿರತವಾಗುವಿಕೆ : ಅವನ ಮನಸ್ಸು ಹಿಂದೂಧರ್ಮ, ಧರ್ಮಗ್ರಂಥಗಳ ವ್ಯಾಸಂಗ, ಗೀತೋಕ್ತಧರ್ಮದ ಪ್ರತಿಪಾದನೆ ಇವುಗಳಲ್ಲಿ ಹೆಚ್ಚಾಗಿ ವ್ಯಾಪೃತವಾದಂತೆ ತೋರುತ್ತದೆ (ಬಂಕಿಮ. ೧೪೪). ೨. ಮನೆಗೆಲಸದಲ್ಲಿ ತೊಡಗಿದವನು ; ಗೃಹಸ್ಥ ; ಸಂಸಾರಿ : ''ವ್ಯಾಪೃತಂ [ಪಾಠಾಂ. ವ್ಯಾಪ್ರಕಂ] ಕುಟುಂಬಯೆನಲ್ಕೆ ಮನವಾರ್ತೆಯುಳ್ಳನಕ್ಕುಂ'' (ಮುಂಗರಾ. ೬೯-೧೨); ವ್ಯಾಪೃತನೆಂದರೆ ಅದರಲ್ಲಿ ಯತ್ನಾಪೂಡುವವನು (ಪೊಸಗ. ೪೮). [ಸಂ.]

ವ್ಯಾಪೃತಿ (ನಾ). ವ್ಯವಹಾರ ; ಉದ್ಯೋಗ ; ಕಾರ್ಯ : ತಳ್ಪತಳದಿಂದೊಸೆದಬ್ಬು ವಿನಾವಿಸತ್ಪ್ರಯಾವ್ಯಾಪೃತಿಯೆಲ್ಲಮಂ ನಜೆಯನುಷ್ಮಿಸಿ ಪೋಗಿ (ಶಾಂತಿಪು. ೮-೫೦೯) ; ಸುಸೌಖ್ಯೋಪಚಯನಿರ್ದನುಚಿತವ್ಯಾಪೃತಿಯಿಂ ಜೈನಜನವನುನೋಹರಚರಿತಂ (ಚಂದ್ರಪು. ೮-೧). [ಸಂ.]

ವ್ಯಾಪ್ತ (ಗು). ೧. = ವ್ಯಾಪುತ : ಶ್ರವ್ಯಮವ್ಯಾಕುಲಂ ವ್ಯಾಪ್ತದಿಗಂತಂ ಕಾವ್ಯಮಂದನ್ವಿತಸುಕವಿಜನಂ ಮೆಚ್ಚಿ (ಆದಿಪು. ೧-೨೬). (ನಾ). ೨. ಗುಂಪು ; ಸಮೂಹ : ''ಅಚಿತಂ, ನಿಚಿತಂ, ವ್ಯಾಪ್ತಂ . . . ಪೂರ್ಣಂ – ಈ ೯ ಸಂದಣಿ'' (ಹಲಾಯು. ೧೧೫-೧೭). ೩. ತುಂಬಿರುವವನು ; ಆವರಿಸಿರುವವನು : ವ್ಯಾಪ್ತನೆಂದರೆ ಒಳಗೂ ಹೊರಗೂ ಸಂಪುಟದಂತೆ ಸಕಲಪ್ರಾಣಗಳನ್ನು ಆವರಿಸಿಕೊಂಡಿರುವವನು (ಹನಾ. ೧೩-೨೭ ತಾತ್ಪರ್ಯ). [ಸಂ.]

ವ್ಯಾಪ್ತಿ (ನಾ). ೧. ವ್ಯಾಪಿಸಿರುವಿಕೆ ; ಹರಹು : ಸರ್ವವಿದ್ಯಾಸಕಲಕಳಾವ್ಯಾಪ್ತಿಯನಱಿಯಬಹುದು (ಅಜಪು. ೧೧೧-೫೦೨) ; ಈ ಚರಾಚರವಿಚಾರವ್ಯಾಪ್ತಿ ನಿಮ್ಮಡಿಗಗೋಚರವೆ ಶಿವಶಿವಾ ಸಾಕಿದೇತಕೆ ಬಜೆದ ನಾಚಸುವಿರಿ (ಚೆಮಿಪಾ. ೨-೫೫); ಸಮಸ್ತ ಅನುಭವಗಳ ವ್ಯಾಪ್ತಿಯು ನಮ್ಮ ಎಲ್ಲಾ ಅನುಭವಗಳಿಗಿಂತಲೂ ಎಷ್ಟೋ ಪಾಲು ಅಧಿಕವಾಗಿರುತ್ತದೆ (ಜೀವಾತ್ಮ. ೧೪೦). ೨. ಸಂಪೂರ್ಣತೆ ; ಪರಿಪೂರ್ಣತೆ : ಜನನಿಪಿತಭೂವಾನಿದಾಂಬರವನಿಪ ಪಂಚಾಗ್ನಿಯಲಿ ನಾರಾಯಣನ ತ್ರಿಂಶತಿಮೂರ್ತಿಗಳ ವ್ಯಾಪಾರವ್ಯಾಪ್ತಿಗಳ ನೆನದು (ಹನಾ. ೬-೧). ೩. ಉದ್ಯೋಗ ; ವ್ಯಾಪಾರ : ಕೂರ್ಪವರನಾರನೂ ಕಾಣನು ಡೋಪಾರ ಕಕ್ಕಯ್ಯನಲ್ಲದೆ ವ್ಯಾಪ್ತಿಯುಳ್ಳ ನಮ್ಮ ಪುಡಿವಾಳ ಮಾಚಯ್ಯ ನಿನ್ನಾಪತ್ತಿಗಿಲ್ಲೆವರಯ್ಯ ಕೂಡಲಸಂಗಯ್ಯಾ (ಬಸವ. ೬೫೧) ; ಕಾಫಿತೋಟಗಳಲ್ಲಿ ದುಡಿಯಲು ಆಳುಗಳನ್ನು ಸರಬರಾಯಿ ಮಾಡುವವರು. ಈ ವ್ಯಾಪ್ತಿ ಪ್ರಾರಂಭಿಸಿ ಅನೇಕ ವರುಷಗಳಾಗಿದ್ದವು (ರಕ್ತರೂ. ೨೬). ೪. (ಅಧಿಕಾರ ನಿರ್ವಾಹದ) ಪರಿಧಿ ; ಸೀಮೆ : ಅವು ಅನಿವಾರ್ಯವೆಂದು ಪರಿಗಣಿಸಿ, ಶಾಸನದ ವ್ಯಾಪ್ತಿಗೊಳಪಡಿಸುವುದರ ಮೂಲಕ ಅವುಗಳಿಗೆ ಪ್ರೋತ್ಸಾಹ ನೀಡುತ್ತೇವೆ (ಪುಸಜ. ೧೬೦). ೫. ವಸ್ತುಗಳಲ್ಲಿರುವ ಅನ್ಯೋನ್ಯಸಂಬಂಧ : ಧೂಮವಿರುವ ಕಡೆ ಪಹ್ನಿ ಇರುವುದೆಂದೂ ವಹ್ನಿ ಇಲ್ಲದ ಕಡೆ ಧೂಮವಿರುವುದಿಲ್ಲವೆಂದೂ ತಿಳಿದಿದೆ. ಧೂಮಪಹ್ನಿಗಳಿಗೆ ನಿಯತವಾದ ಸಂಬಂಧ ಇರುವುದೆಂದು ತಿಳಿದುಬರುವುದು. ಈ ನಿಯತಸಂಬಂಧಕ್ಕೆ ವ್ಯಾಪ್ತಿ ಎಂದು ಹೆಸರು (ಘಾತತ್ರ. ೧೭೬). ೬. [ಸಂಗೀತ] ಇಪ್ಪತ್ತುನಾಲ್ಕು ಬಗೆಯ ಆಲಾಪನೆಗಳಲ್ಲಿ ಒಂದು : ಆಳಾಪ ಕಾಳಾಪ ಹೆಲ್ಲಣಿ ವ್ಯಾಪ್ತಿ ಮುಂತಾದ ಇಪ್ಪತ್ತು ನಾಲ್ಕು ತೆಜದಲ್ಲಿ ಸರಿಗಮಪಧನಿ ಎಂಬ ಸಪ್ತಸ್ವರಾಕ್ಷರಂಗಳನು . . . ಆಳಾಪಿಸಿ (ಎವೀಕ. ೧೫೧). [ಸಂ.]

ವ್ಯಾಪ್ಯ (ನಾ). ೧. ಹರಡಲು ಯೋಗ್ಯವಾದುದು : ವ್ಯಾಪ್ಯವೆಂದರೆ ವ್ಯಾಪ್ತಿಗೆ ಆಶ್ರಯವಾದುದು ಎಂದರ್ಥ (ಭಾಶಕ್ತ್ಯ. ೨೭೧). ೨. ಎಲ್ಲಾ ಕಡೆಯಲ್ಲಿಯೂ ಆವರಿಸಿರುವವನು ; ಪರಮಾತ್ಮ : ವ್ಯಾಪ್ಯನಂದದಿ ಸರ್ವಜೀವರೊಳಿಪ್ಪ ಚಿನ್ಮಯ ಘೋರಭವಸಂತಪ್ಯಮಾನರು ಭಕುತಿಗಳಿಂದಲಿಹಪರದಿ ಪ್ರಾಪ್ಯನಾಗುವನು (ಪಸಾರ. ೧೨-೨೭). ೩. [ತತ್ತ್ವಶಾ] ವಸ್ತುಗಳಲ್ಲಿರುವ ಅನ್ಯೋನ್ಯಸಂಬಂಧವು ವ್ಯಕ್ತವಾಗುವಿಕೆ : ಅನುಮಾನಪ್ರಮಾಣವು ಉಪಪತ್ತಿ, ವ್ಯಾಪ್ಯ, ಯುಕ್ತಿ, ಲಿಂಗ ಎಂದು ಹೇಳಲ್ಪಡುವುದು (ಒಂದಸಾ. ೨೪೧) ; ಸಾಮಾನ್ಯ ವಿಧಿಯು ವ್ಯಾಪಕ. ವಿಶೇಷ ವಿಧಿಯು ವ್ಯಾಪ್ಯ (ಭಾರದ. ೨೫೧). ೪. ಒಳಕೊಳ್ಳುವುದು ; ಗ್ರಾಹ್ಯವಾಗಬೇಕಾದುದು : (೫). ೫. ಒಂದು ಬಗೆಯ ಔಷಧೀಸಸ್ಯ : "ವ್ಯಾಪ್ಯ — ಚಂಗಲುಕೋಷ್ಮ" (ಪಂಡಿತ. ೨೧೭). [ಸಂ.]

ವ್ಯಾಬದ್ಧ (ಗು). ಬಲವಾಗಿ ಬಿಗಿದ ; ಭದ್ರವಾಗಿ ಕಟ್ಟಿದ : ಕಪಿಂಜಲನುದ್ಯಾಪ್ತ ಪರ್ಯಾಕುಲವ್ಯಾಬದ್ಧಲಕ್ಷ್ಮದೃಷ್ಟಿಯಪ್ಪ ಮಹಾಶ್ಮತೆಯನೆಯ್ದುವಂದು (ಕಾದಂಉ. ೬೦೫). [ಸಂ.]

ವ್ಯಾಬಾಧೆ (ನಾ). ೧. ಕಾಯಿಲೆ ; ರೋಗ : ಜರಾಮಯವ್ಯಾಬಾಧಾಬಾಧಿತ್ವಮುಂ ಗಂಭೀರಮೃದುಮಧುರವಾದಿತೆಯುಂ . . . ತನಗನುಸಂಗತಮಾಗೆ (ಶಾಂತಿಪು. ೧೦-೯೪ ವ). ೨. ಕಾಟ ; ಹಿಂಸೆ : ದಿತಿಸುತವ್ಯಾಬಾಧೆಗಳ್ ದೇವರ್ಗಿಲ್ಲವಲಾ (ಪಂಪಭಾ. ೬-೧೭). [ಸಂ. ವ್ಯಾಬಾಧ]

ವ್ಯಾಭಾಸಿ (ನಾ). ಹೊಳಪು ; ಕಾಂತಿ : ಸಸ್ಪೃಹಸಾನಂದಸಲೀಲಸಸ್ಮಿತಮುಖವ್ಯಾಭಾಸಿನೋಡಿಂತು ಸನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮುಚ್ಚೀವಿತಾಧೀಶನಾ (ಆದಿಪು. ೩-೪೨). [ಸಂ.]

ವ್ಯಾಭಾಸಿತ (ಗು). ಹೊಳೆಯುವ ; ಕಾಂತಿಯುಕ್ತವಾದ : ವ್ಯಾಭಾಸಿತರತ್ನಚಯಂ ಶೋಭಾವತಿಯೆಂಬ ಪುರವರಂ ರಂಜಿಸುಗುಂ (ಪಂಚತಂ. ೧೦೩-೨೦). [ಸಂ.]

ವ್ಯಾಭುಗ್ನ (ಗು). ೧. ಬಾಗಿದ ; ಬಗ್ಗಿದ ; ಡೊಂಕಾದ. (ನಾ). ೨. [ನಾಟ್ಯ] ನೃತ್ಯದಲ್ಲಿ ಅಭಿನಯಿಸಿ ತೋರಬೇಕಾದ ಮುಖದ ಒಂದು ಭಂಗಿ ; ೞ "ಮುಖವನ್ನು ಅಡ್ಡಲಾಗಿ ನೀಡುವುದು. ನಿರ್ವೇದ, ಔತ್ಸುಕ್ಯ, ಚಿಂತೆ ಇವುಗಳನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು" (ಲಾಸ್ಮರಂ. ೨೮೨ ಗದ್ಯಾನುವಾದ)! ಸತಿ ವ್ಯಾಭುಗ್ನಂ . . . ವಿವೃತಂ ನುತವಿನಿವೃತ್ತಮಿವಾಱುಂ ಮತದಿಂ ರಂಜಿಸುಗುಮಾಸ್ಯಂ (ಲಾಸ್ಮರಂ. ೩-೧೦೪) ; ವ್ಯಾಭುಗ್ನ, ಭುಗ್ನ, ಉದ್ಯಾಹಿತ, ವಿಧುತ, ವಿವೃತ, ವಿನಿವೃತ್ತ - ಈ ಆಱು ವದನಭೇದಂಗಳ್ (ಲಾಸ್ಮರಂ. ೩-೧೦೪ ವ). [ಸಂ.]

ವ್ಯಾಮ (ನಾ). ೧. ಅಡ್ಡವಾಗಿ ಚಾಚಿದ ಎರಡು ತೋಳುಗಳ ಮಧ್ಯದ ಅಳತೆ ; ಒಂದುಮಾರು ಅಳತೆ : "ವ್ಯಾಮಃ . . . ಕೈಗಳಿಂದೊಡಗೂಡಿದ ಅಡ್ಡವಾಗಿ ಚಾಚಲ್ಪಟ್ಟ ತೋಳುಗಳಿರಡರ ಮಧ್ಯಪ್ರದೇಶ, ಮಾರು" (ಪಿದ್ರಾಂಶಿ. ೧೯೪). ೨. ಒಂದುನೂರು ; ಶತ. ೩. ಅನಾರೋಗ್ಯದವನು ; ಖಾಯಿಲೆಯುಳ್ಳವನು . "ಆಳತೆ ಶತಂ ಸರೋಗಮಿವು ವ್ಯಾಮಸಮಾಹ್ವಯ" (ನಾನಾರ್ಥ. ೧೩೦). [ಸಂ.]

ವ್ಯಾಮಿಶ್ರ (ಗು). ೧. ಕಲೆತಿರುವ ; ಬೆರೆತಿರುವ. (ನಾ). ೨. ಒಂದರೊಳಗೊಂದು ಸೇರಿರುವಿಕೆ, — ಬೆರೆತಿರುವುದು : ಈಗಿನವರ ಮನೋವೃತ್ತಿಗಳು ವಲ್ಲಿವಲ್ಲಿಯಾಗಿ ವ್ಯಾಮಿಶ್ರವಾಗಿ ಹೊರಟಿರುವುವು (ರಾಜ್ಯಶಾ. ೧೯). [ಸಂ.]

ವ್ಯಾಮುಗ್ಧ (ಗು). ಅತಿಶಯವಾದ ಪ್ರೀತಿಯ : ತಾವರೆಯರಲೊಳ್ ಸರಸನಿಜಾಮೋದದೊಳೊಂದಿ ನಲಿದು ಮಕರಂದರಜೋವ್ಯಾಮುಗ್ಧದೊಳೀ ಮುಗುಳೊಳಮಾ ಮಾಬ್ಯೆಯನಱಸಿ ಸುಖಿವುದಳಿ ಕೆಲಕೆಲದೊಳ್ (ಕವಿರಾ. ೩-೧೨೭).

[ಸಂ.]

ವ್ಯಾಮೋಹ (ನಾ). ೧. ಅತಿಶಯವಾದ ಮೋಹ ; ಹೆಚ್ಚಿನ ಪ್ರೀತಿ : ಬೆಸಸಿ ಮಿದನೆನ್ನ ಮನದೊಂದು ಸಂಶಯಂ ಪತ್ತುವಿಡುವಿನಂ ವ್ಯಾಮೋಹಂ ಪ್ರಶಮಿಸುವಿನಂ (ಸುಕುಮಾ. ೫-೭) ; ತನಯನ ಮೇಲಣ ವ್ಯಾಮೋಹವುಳ್ಪುದಕೆ ತಲೆಯನೇತಕೆ ಬೈತಿರಿ (ಬಸಪು. ೨೪-೨೪). ೨. [ಕಾಮಶಾ] ದಶವಿಧ ಕಾಮಾವಸ್ಥೆಗಳಲ್ಲಿ ಒಂದು : [ಮನೋವ್ಯ]ಕಲ್ಯ ರೋಮಾಂಚಕಸ್ತಂಭಕ ಕಂಪ [ಸ್ವೇದವೈವರ್ಣ್ಯ] ಸಂತಾಪನಾಹಾರ ವ್ಯಾಮೋಹ ಗದ್ಗದಾಶ್ರು ಮೋಕ್ಷ ಮೂರ್ಛಾಧಿ ನಾನಾವಿಕಾರಂಗಳನೊಡನೊಡನೆ ತೋಱುವುದುಂ (ಪಂಪಭಾ. ೪-೫೯ ವ). [ಸಂ.]

ವ್ಯಾಮೋಹಿತ (ಗು). ೧. ಅತಿಶಯವಾದ ಮೋಹಕ್ಕೆ ಒಳಗಾದ. (ನಾ). ೨. ಅತಿಶಯವಾದ ಮೋಹಕ್ಕೆ ಒಳಗಾದವನು : ಕಿರಾತನತಿವ್ಯಾಮೋಹಿತನಾಗಿ ಪೋಗದಲ್ಲಿಯೇ ನಿಂದಂ (ಪಂಚತಂ. ೪. ೨೧೨-೨೩). [ಸಂ.]

ವ್ಯಾಯಾಮ (ನಾ). ೧. ಅಂಗಸಾಧನೆ ; ಕಸರತ್ತು : ವ್ಯಾಯಾಮದಿಂ ಮೆಯ್ಸಡಿಲದೆಸೆಯೆ (ಕಾದಂಪು. ೩೭) ; ಒಲೆನಿನ್‌ಗೆ ವ್ಯಾಯಾಮದಿಂದಲೂ . . . ಪ್ರಶಂಸೆಯಿಂದಲೂ ಉತ್ಸಾಹವುಂಟಾಗಿದ್ದಿತು (ಮಲಿನಾ. ೧೦೭). ೨. ದೇಹಪರಿಶ್ರಮ ; ದಣಿವು : ವ್ಯಾಯಾಮಶ್ರಮದಿಂ ಸಡಿಲ್ದವಯವಂ . . . ಸಮುತ್ಪಾತಕೌಕ್ಷೇಯಂ ರಂಜಿಸುವೊರ್ಬ ವಿಕ್ರಮಭುಜಂ ಸಂರಂಭದಿಂ ಬರ್ಪುದುಂ (ಪಶಕು. ೪-೨) : ಅಡಿಗೆಯವನಿಗೆ ಸಾಕಷ್ಟು ವ್ಯಾಯಾಮವೊದಗಿಸುವುದೇ ಅವುಗಳ ಏಕಮಾತ್ರ ಪ್ರಯೋಜನವಾಗಿತ್ತು (ಪುನರು. ೨೦೦). ೩. ಪ್ರಯತ್ನಪೂರ್ವಕವಾದ ಕ್ರಿಯೆ ; ಸಾಧನೆ : ಬೇಂಟೆಯಾತಂಗೆ ಮೃಗವ್ಯಾಯಾಮಕಾರ್ತಿಕೇಯಂ ಮೆಚ್ಚ ಮೆಚ್ಚುಗೊಟ್ಟಂ (ಪಂಪಭಾ. ೫-೪೭ ವ) ; ಧರ್ಮಪದದಲ್ಲಿ ಬುದ್ಧನು 'ವ್ಯಾಯಾಮ' ಅಮರಜೀವನಕ್ಕೆ ಹೆದ್ದಾರಿ . . . ಎಂದು ಸಾರಿದ್ದಾರೆ (ಭಾರದ. ೩೭೪). ೪. = ವ್ಯಾಮ ೧ : ಗಾರ್ಹಪತ್ಯಾಗ್ನಿವೇದಿಕೆಯ ಅಗಲವು ಒಂದು 'ವ್ಯಾಯಾಮ' ದಷ್ಟಿದ್ದು ಐದುವರಸೆ . . . ನಿರ್ಮಿತವಾಗಬೇಕು (ಗಣಚ. ೧೯೩).

[ಸಂ.]

ವ್ಯಾಯಾಮಶಾಲೆ (ನಾ). ಅಂಗಸಾಧನೆ ಮಾಡುವ ಮನೆ ; ಗರಡಿಮನೆ : ಜನ ಜೀವನದ ಕ್ಷೇಮಕ್ಕೆ ಆಸ್ಪತ್ರೆ, ವ್ಯಾಯಾಮಶಾಲೆಗಳು ಅಗತ್ಯ (ಬೀಪು. IX. ಮುನ್ನುಡಿ).

[ಸಂ. ವ್ಯಾಯಾಮಶಾಲಾ]

ವ್ಯಾಯೋಗ (ನಾ). [ಕಾವ್ಯಮೀ] ದಶರೂಪಕಗಳಲ್ಲಿ ಒಂದು ; ೞ "ವ್ಯಾಯೋಗದಲ್ಲಿ ಇತಿವೃತ್ತವು ಪ್ರಸಿದ್ಧವಾದುದಾಗಿರಬೇಕು. ಸ್ತ್ರೀಪಾತ್ರಗಳು ಕಡಮೆ. ಪಂಚಸಂಧಿಗಳಲ್ಲಿ ಗರ್ಭ ಮತ್ತು ವಿಮರ್ಶ ಸಂಧಿಗಳಿರುವುದಿಲ್ಲ. ಬಹುಮಂದಿ ಪುರುಷಪಾತ್ರಗಳಿಂದ ಕೂಡಿರಬೇಕು. ಇದು ಏಕಾಂಕರೂಪಕ. ಇದರಲ್ಲಿ ನಾಯಕನು ಪ್ರಖ್ಯಾತ" (ಸಂಜ್ಞಾ) : ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ — ಎಂದು ರೂಪಕಗಳು ಹತ್ತುವಿಧ (ಸಂನಾಟ. ೫೯). [ಸಂ.]

ವ್ಯಾಲ, ವ್ಯಾಳ (ಗು). ೧. ಕೆಟ್ಟ ; ದುಷ್ಟ. ೨. ಕ್ರೂರವಾದ ; ಹಿಂಸ್ರ. (ನಾ). ೩. ಹಾವು ; ಸರ್ಪ : ಮುಡಿದ ಪೂಮಾಲೆಯುಗ್ರವ್ಯಾಲನಾದೊಡಂ . . . ಮಲಯ ಮಾರುತಂ ಸುಡುವ ಕಿಚ್ಚಾದೊಡಂ ಶಿವಭಕ್ತರಿತರ ಧನಕೆಳಸುವರೆ ಧಾತ್ರೀಧವಾ (ಪಜ್ಮರಾ. ೬-೧೭). ೪. ಕ್ರೂರಮೃಗ ; ಹಿಂಸ್ರಪ್ರಾಣಿ. ೫. ವಂಚಕ ; ಮೋಸಗಾರ. ೬. ಸೊಕ್ಕಿದ ಆನೆ ; ಮದ್ದಾನೆ. ವ್ಯಾಳ : ೩. "ಉರಗಂ ಸರೀಸೃಪಂ . . . ಭುಜಗನಾ ವ್ಯಾಳನೆನಲು ಸರ್ಪಂಗೆ ನಾಮಂ" (ಮಂಗರಾ. ೧೧೪-೧) ; ವ್ಯಾಳ ಕಡೆಯಮದಾಗೆ ವೇದಾಗಮಪುರಾಣಜಾಲಂಗಳುಲಿವ ತೊಡರಾಗೆ ಕಣ್ಗೆಸದಂ ತ್ರಿಶೂಲಿ (ಭಕ್ತಾವ. ೧-೧೩). ೪. ಸಿಂಹಶರಭಶಾರ್ದೂಲವ್ಯಾಳಮೃಗಮಿಥುನಂಗಳ್ . . . ವಿಷಮ ಸ್ವಭಾವಮನಪ್ಪುಕೆಯ್ಯುದುಂ (ಪಂಪಾಮಾ. ೧-೭೧ ವ); ವಿಟನಿಂ ಕ್ರೂರವ್ಯಾಳವ್ಯಕಸೂಕರ . . . ನಿಷೇವಿತಮಲ್ಲಾ ! (ರಾಮಾಶ್ವ. ೨೮-೧೩). ೫. ಪರದಂ ವ್ಯಾಳಂ ಪೆಂಡತಿ ದುರಾತ್ಮೆ ವಿಟನೆಗ್ಗಂ (ಮಡಿತ. ೧೦-೫೧). ೬. ಉಭಯವ್ಯಾಳದಂತಿ [ವ]ಧ್ಯಕ್ರಮಂಗಳೊಳ್ ಭಾರ್ಗವರ್ ಸುರಿಗಿಜ್ಜಿವಂತಿಜ್ಜಿಯೆ (ಪಂಪಭಾ. ೧೦-೯೨ ವ) ; ತುರಗ ಕುಳೀರ ಕುಕ್ಕುರ ವ್ಯಾಳ ಕಚ್ಛಪ ಕರಿ ಮತ್ಸ್ಯಮಕರಾದಿಗಳ ಹರವರಿಯಿಂ ಶೀಕರಗಳಿಂ ನೊರೆಗಳಿಂ ಕರಮೆ ವಿರಾಜಿಸುತಿಹುದು (ನಾಗಕು. ೨-೭). ೭. ನಾಯಿ. ೮. ದುಷ್ಟ ; ಕೆಡುಕ . "ಪನ್ನಗನೊಳುರ್ವ ಭಯಕಾರನೊಳು ಕೋಳ್ಮಿಗದೊಳಭದೊಳಾ ವ್ಯಾಳಮಕ್ಕುಂ" (ಮಂಗರಾ. ೧೪೩-೨೨) ; "ಉರಗಂ ಭಯಕಾರಿ ಮದೇಭದುರ್ಜನಂ ಶುನಕಮತೀವಹಿಂಸಕರ ಕೋಳ್ಮೃಗ ಮೆಂಬಿವು ವ್ಯಾಳವಾಚಕಂ"(ನಾನಾರ್ಥ. ೭೫). ೩ , ೮ : ಅಂಗುಳೊಳಡಸಿದ ವಿಷಮುಂ ಭಂಗುರತರ ವಿಷಮದೃಷ್ಟಿಯುಂ ವ್ಯಾಳಸಮಾಸಂಗಮುಮಮರ್ದಿರೆ ಮದನಹರರಿಗೆಣೆಯೆನಿಪುದಱಿನೆಮಗೆ ಖಿಳರಭವಂದ್ಯರ್ (ಕಾವ್ಯಾವ. ೭೭೩). ೯. ಒಂದು ಸಸ್ಯದ

ಹೆಸರು ; ಚಿತ್ರಮೂಲ : "ಚಿತ್ರಮೂಲ ವ್ಯಾಳವಗ್ನಿ ಚಿತ್ರಕವಕ್ಕು" (ಮಂಗರಾ. ೬೯-೨೬). ೧೦. [ಗಣಿತ] ಏಳು ಎಂಬುದರ ಸಂಕೇತ. "ಶುನಕಂ ಕೋಕಮೃಗಂ ದುರ್ಜನ ಭಯವರನುಂ ಸರ್ಪಮಿಭಮತಿಹಿಂಸಕಂ ಮುನಿಸಂಖ್ಯೆ ವ್ಯಾಳಶಬ್ದಂ" (ನಾನಾಕಂ. ೧೦೫). [ಸಂ.]

ವ್ಯಾಲಂಬಿವಾಲ (ನಾ). ೧. ಅಲ್ಲಾಡುವ ಬಾಲ. ೨. ಅಲುಗಾಡುತ್ತಿರುವ ಬಾಲವುಳ್ಳುದು : ಬದ್ಧೋದರಂ ದಕ್ಷಿಣೋಚ್ಚರದಂ ಕ್ರೋಡನಿತಂಬನಂಬುದರವಂ ವ್ಯಾಲಂಬಿವಾಲಂ . . . ಸಿಂಧುರಂ (ಚಂದ್ರಪ್ರ. ೯-೯೯); ಸಮದಂತಮುಜ್ಜಳಮುಖಂ ವ್ಯಾಲಂಬಿವಾಲಂ ಲಸಧ್ವನಿ ಚೇತೋಗತಿ . . . ಏಳ್ತಂದುದಭಂಗಭಂಗ ವಿಳಸದ್ರಂಗತ್ತುರಂಗವ್ರಜಂ (ರಾಜಶೇ. ೧೩-೬೮). [ಸಂ.]

ವ್ಯಾಲಕುಂಡಲ (ನಾ). ಸರ್ಪಗಳನ್ನು ಕಿವಿಯಾಭರಣವಾಗಿ ಉಳ್ಳವನು ; ಶಿವ : ಜೋ ಜೋ ಎನ್ನಿರಿ ವ್ಯಾಲಕುಂಡಲಗೆ (ಅಖಂಗೇ. ೩೫೭-೩೪). [ಸಂ.]

ವ್ಯಾಲಗಂಧಿ (ನಾ). ಒಂದು ಬಗೆಯ ಸಸ್ಯ ; ನಾಂಗುಲಿಕ : "ವ್ಯಾಲ[ಪಾಠಾಂ. ಳಿ] ಗಂಧಿಯೆನೆ ನಾಂಗುಲಿಕವಕ್ಕುಂ" (ಮಂಗರಾ. ೪೦-೩೧). [< ಸಂ. ವ್ಯಾಲಗಂಧಾ]

ವ್ಯಾಲಗ್ನ (ಗು). ವಿಶೇಷವಾಗಿ ಕೂಡಿದ , — ಬೆರೆತ : ಮಕುಟವ್ಯಾಲಗ್ನರತ್ನಪ್ರಭಾ ಪರಿವೇಷಂ (ಆದಿಪು. ೭-೧೨೭) ; ಬಾಷ್ಪಸರಿದ್ಯಾಲಗ್ನಕೀರ್ಣಭ್ರಮರಕಮಮೃತಾ ಪಾಂಡುಗಂಡಸ್ಥಲಂ (ರಾಜಶೇ. ೭-೭೬). [ಸಂ.]

ವ್ಯಾಲಾಧರತ್ವ (ನಾ). ೧. ಸರ್ಪವನ್ನು ಧರಿಸಿರುವುದು. ೨. ಸರ್ಪವನ್ನು ಹಿಡಿಯುವುದು ; ವ್ಯಾಲಾಧರತ್ವದಿಂದಿಹರು ಗಾರುಡಿಗರುಂ (ಏಕೋಪ್ರ. ೨-೭೪). [ಸಂ.]

ವ್ಯಾಲಾಯುಧ (ನಾ). ಒಂದು ಬಗೆಯ ಸಸ್ಯ ; ಹುಲಿಯುಗುರುಗಿಡ : "ವ್ಯಾಲಾ[ಪಾಠಾಂ. ಡಾ, ಳಾ]ಯುಧಂ, ವ್ಯಾಘ್ರನಖಂ, ಕರಜಂ, ಚಕ್ರಕಾರಕಂ — ೪ ವ್ಯಾಘ್ರನಖವೆಂಬ ಗಂಧದ್ರವ್ಯ , ಹುಲಿಯುಗುರುಗಿಡವು" (ಸಿದ್ಧಾಂತಿ. ೧೪೧). [ಸಂ.]

ವ್ಯಾಲಾರಿ (ನಾ). ಹಾವಿನ ವೈರಿ ; ಗರುಡ : "ಖಗಜಾಲಪತಿ . . . ವ್ಯಾಲಾ [ಪಾಠಾಂ. ಳಾ]ರಿ ವೈನತೇಯಂ ಸುರಪರಿಪುಗರುತ್ಮನೆನಲ್ಕೆ ಗರುಡನಕ್ಕುಂ" (ಮಂಗರಾ. ೭-೨೧). [ಸಂ.]

ವ್ಯಾಲಿ (ನಾ). ಒಂದು ಬಗೆಯ ಸಸ್ಯ : "ವ್ಯಾಲಿ[ಪಾಠಾಂ. ಳಿ] ಕೋಟರಪುಷ್ಪಿ ಯೆನಲೆಮ್ಮೆವಳ್ಳಿ" (ಮಂಗರಾ. ೪೪-೪೬). [?]

ವ್ಯಾಲಿಕ (ನಾ). ೧. ವಂಚನೆ ; ಮೋಸ : "ವ್ಯಾಲಿ[ಪಾಠಾಂ. ಳಿ]ಕಂ ವಂಚನಂ ವಿಪ್ರಕಾರಣಮೆನಲ್ಕಾಳಿಗೊಳುಹಂ" (ಮಂಗರಾ. ೧೩೦-೧೭). ೨. ಸುಳ್ಳು ; ಅಸತ್ಯ : (ಕ). [< ಸಂ. ವ್ಯಲೀಕ]

ವ್ಯಾಲೋಲ, ವ್ಯಾಳೋಳ (ಗು). ೧. ಚಲಿಸುವ ; ಅಲುಗಾಡುವ : ವ್ಯಾಲೋಲ ಕರ್ಣೋತ್ಪಲಮನಮರೆ ಸೈತಿಕ್ಕುತಂ (ಕಾದಂಉ. ೪೯) ; ಮೃಡಾಣಿವರನಂ ವ್ಯಾಲೋಲಬಾಲೇಂದುಶೇಖರನಂ ತಾಳ್ದಿದನಾತ್ಮಹೃತ್ಕಮಲದೊಳ್ (ಪಂಚತಂ. ೭೧-೯). ೨. ಕೆದರಿರುವ ; ಚೆಲ್ಲಾಪಿಲ್ಲಿಯಾದ; ಅಸ್ತವ್ಯಸ್ತವಾದ. ೩. ನಶ್ವರವಾದ ; ಶಾಶ್ವತವಲ್ಲದ : ವ್ಯಾಲೋಲರಾಜ್ಯವಿಭವವಿಶಾಲವಿಭೂಷಣಕಳಾಪಮಂ ಕಳದೊಲವಿಂದೋಲಾಡುತಿರ್ದ್ದನುಪಶಮಲೀಲಾರಸದೊಳ್ ಸರಸ್ವತೀಶೃಂಗಾರಂ (ಅರ್ಧನೇ. ೪-೫೯). ವ್ಯಾಳೋಳ : ೧. ತೀರ್ಥಸಮೀಪಮಂಬುನಿವಹವ್ಯಾಳೋಳ ಕಾಳಿಂದಿಯಾ ವನಮುಂ (ಪಂಪಭಾ. ೫-೭೪). [ಸಂ.]

ವ್ಯಾವರ್ಣನೆ (ನಾ). ಅತಿಶಯವಾದ ಬಣ್ಣನೆ ; ವ್ಯಾಪಕವಾದ ವರ್ಣನೆ : ಸ್ವರ್ಗಲೋಕದ ವ್ಯಾವರ್ಣನೆಯಂ ಮಾಡುವಲ್ಲಿ ಪನ್ನೆರಡನೆಯ ಸಹಸ್ರಾರಕಲ್ಪಮಂ ನೋಡುತುಮಿರ್ಪದುಂ (ಧರ್ಮಾಮೃ. ೮-೩೨); ಎಲ್ಲಾ ವ್ಯಾವರ್ಣನೆಗಳು ಸ್ಥಾಪ್ಯದೊಳಗು ಎಲ್ಲ ವಚನಂಗಳು ತಾಪದೊಳಗು (ತ್ರಿಸಂ. ೧೭೩). [ಸಂ. ವ್ಯಾವರ್ಣನ]

ವ್ಯಾವರ್ಣಿತ (ಗು). ೧. ಬಹುವಾಗಿ ಬಣ್ಣಿಸಿದ ; ವಿಶೇಷವಾಗಿ ವರ್ಣಿಸಲ್ಪಟ್ಟ. (ನಾ). ೨. ವಿಶೇಷವಾಗಿ ಸ್ತುತ್ಯನಾದ ವ್ಯಕ್ತಿ : ವೃದ್ಧ ಕಂಚುಕಿ ವ್ಯಾ[ಪಾಠಾಂ. ಬ್ಯಾ] ವರ್ಣಿತರಪ್ಪವನಿಚರ ಗಗನಚರ ಕುಮಾರಕರನವಧರಿಸಿ (ಚಾಂಪುಪು. ೧೬೬). [ಸಂ.]

ವ್ಯಾವರ್ಣಿಸು (ಕ್ರಿ). ವಿಶೇಷವಾಗಿ ಬಣ್ಣಿಸು ; ಅತಿಶಯವಾಗಿ ವರ್ಣಿಸು : ತನಗ ವ್ಯಾವರ್ಣಿಸಿ ಪೇಟ್ಟೆ ಕೇಳ್ದು (ವಡ್ಡಾರಾ. ೧೨-೬) ; ಕವಿಗಳ ರೂಪಂ ವ್ಯಾವರ್ಣ್ಣಿಪರೆನೆ ರೂಪನದೇವೊಗಟ್ಟೆ (ಸೌಂದಾ. XX. ೪೯ -೩೪ ; 1076) ; ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯಂ (ಧರ್ಮಾಮೃ. ೧-೪೧). [ವ್ಯಾವರ್ಣನೆ + – ಇಸ್ಸು]

ವ್ಯಾವರ್ತ (ನಾ). ೧. ಒಂದು ಬಗೆಯ ಸಸ್ಯ : ಬಿಳಿಯ ಹೂಲಿಯ ಬೇರು ವ್ಯಾವರ್ತದ ಬೇರು ಇವನ್ನು ತೇದು ಮೈಗೆ ಪೂಸಿಕೊಂಡರೆ ಅಗುಳಿಕೆ ತೆಗೆಯುವುದು (ವಿವೃವಿ. ೨೧೩). ೨. [ನಾಟ್ಯ] ನರ್ತನದಲ್ಲಿ ತೋರಬೇಕಾದ ಕೈಬೆರಳುಗಳ ಒಂದು ಭಂಗಿ ; P "ಕಿರುಬೆರಳು ಮೊದಲುಮಾಡಿ ತೋರುಬೆರಳು ವರೆಗಿನ ಬೆರಳುಗಳನ್ನು ಬಗ್ಗಿಸುತ್ತ ಅಂಗೈಯನ್ನು ಪಕ್ಕೆಯಿಂದ ತಂದು ಎದೆಗೆದುರಾಗಿ ಹಿಡಿಯುವುದು" (ಲಾಸ್ಯರಂ. ೨೮೬ ಗದ್ಯಾನುವಾದ) : ನೆಗಳ್ದಿರ್ದಾ ವೇಷ್ಟಿತಮೇ ಮಿಗೆ ಕಿಱುವೆರಳಾದಿಯಾಗಿ ಬರೆ ವ್ಯಾವರ್ತಂ (ಲಾಸ್ಯರಂ. ೪-೯). [ಸಂ.]

ವ್ಯಾವರ್ತಕ (ಗು). ೧. ಸೇರಿಸದ ; ಬಿಟ್ಟ ; ಪ್ರತ್ಯೇಕಿಸಿದ : ಉಳಿದ ದ್ರಾವಿಡಭಾಷೆಗಳಲ್ಲಿ ಕಾಣುವ ವ್ಯಾವರ್ತಕ ಹಾಗೂ ಅಭಿವ್ಯಾಪಕವೆಂಬ ವಿಂಗಡಣೆ ಬ್ರಾಹೂಈ ಭಾಷೆಯಲ್ಲಿ ಇಲ್ಲ (ದ್ರಾವಿವಿ. ೧೬೪). (ನಾ). ೨. ವಿಶೇಷ ಲಕ್ಷಣ : ಅವಿನೀತನ ಸೋದರಮಾವನಾದ ಕೃಷ್ಣವರ್ಮನಿಗೆ ಅಶ್ವಮೇಧಯಾಜಿ ಎಂಬುದು ವ್ಯಾವರ್ತಕ ವಿಶೇಷಣವಾಗಿತ್ತು (ಕರ್ಣಾಅ. ೨೨). ೩. ಬೇರ್ಪಡಿಸುವ ಪದಾರ್ಥ ; ಪ್ರತ್ಯೇಕಿಸುವ ಸಾಧನ : ಅವಚ್ಛೇದ, ಅವಚ್ಛೇದಕ, ಅವಚ್ಛಿನ್ನವೆಂಬ ಪದಗಳಿಗೆ ಪರ್ಯಾಯ ಪದಗಳಾಗಿ ವ್ಯಾವೃತ್ತಿ, ವ್ಯಾವರ್ತಕ, ವ್ಯಾವರ್ತ್ಯ . . . ಎಂದು ವ್ಯವಹರಿಸುವರು (ಹಿಂದಸಾ. ೧೯೯). [ಸಂ.]

ವ್ಯಾವರ್ತಿತ (ನಾ). [ನಾಟ್ಯ] ನೃತ್ಯದಲ್ಲಿನ ನಾಲ್ಕು ಬಗೆಯ ಹಸ್ತಚಲನೆಗಳಲ್ಲಿ ಒಂದು : ಆವೇಷ್ಟಿತ, ಉದ್ವೇಷ್ಟ, ವ್ಯಾವರ್ತಿತ, ಪರಿವರ್ತಿತ — ಈ ನಾಲ್ಕು ಹಸ್ತಕರಣಭೇದಂಗಳ್ (ಲಾಸ್ಯರಂ. ೪-೬ ವ). [ಸಂ.]

ವ್ಯಾವಸಾಯಿಕ (ಗು). ಯಾವುದಾದರೊಂದು ಕಸುಬಿಗೆ ಸಂಬಂಧಿಸಿದ : ನಾಗಾರಾಧನೆಯಲ್ಲಿ ಪಾತ್ರವಹಿಸುವ 'ವೈದ್ಯ'ರು ಅಂತಹ ವ್ಯಾವಸಾಯಿಕ ಜನಗಳು (ಜಾನಗೀ. ೧೦). [ಸಂ.]

ವ್ಯಾವಹಾರಿಕ (ಗು). ೧. ವ್ಯವಹಾರಕ್ಕೆ ಸಂಬಂಧಿಸಿದ ; ವ್ಯವಹಾರದಲ್ಲಿರುವ : ಕೆಲವು ವ್ಯಾವಹಾರಿಕಕಾರಣಗಳಿಂದ . . . ಇಲ್ಲಿಯವರೆಗೂ ತಡೆದೆವು (ವೀರಯೋ. Xii, ಟೀಕೆ). ೨. ದಿನಬಳಕೆಯಲ್ಲಿರುವ ; ಪ್ರಚಲಿತವಾದ ; ರೂಢಿಯಲ್ಲಿರುವ : 'ವ್ಯಾವಹಾರಿಕಭಾಷೆ' ಪರಾ. ೩. ಕೋರ್ಟು ವಹಿವಾಟಿಗೆ ಸಂಬಂಧಿಸಿದ ; ಕಾನೂನಿಗೆ ಸಂಬಂಧಿಸಿದ. ೪. ಉಪಯೋಗಕರವಾದ. (ನಾ). ೫. ಬಳಕೆಯಲ್ಲಿರುವುದು ; ರೂಢಿಯಲ್ಲಿರುವುದು : ಭಾಷೆಗಳನ್ನು ವ್ಯಾವಹಾರಿಕ, ಗ್ರಾಂಥಿಕ ಎಂದು ವಿಭಾಗಿಸಬಹುದು. ವ್ಯಾವಹಾರಿಕವೆಂದರೆ ಜನರು ಮಾತನಾಡುತ್ತಿರುವ ಭಾಷೆ (ಕೃಷಿ. ೨೯೩). ೬. ಉಪಯೋಗ ; ಪ್ರಯೋಜನ : ಪ್ರಲೋಭನ ಪಿಶಾಚಿ ತನ್ನ ಧ್ವನಿಯನ್ನೇರಿಸಿ . . . ಯಾವುದು ವ್ಯಾವಹಾರಿಕವೆಂಬ ಪ್ರಶ್ನೆಯ ಕಡೆಗೆ ಅವನನ್ನು ತುಯ್ಯಲು ಹವಣಿಸುತ್ತಿತ್ತು (ಪುನರು. ೧೯೫). [ಸಂ.]

ವ್ಯಾವಹಾರಿಕಜೀವನ (ನಾ). ಪ್ರಾಪಂಚಿಕಬಾಳು ; ಲೌಕಿಕಜೀವನ : ನಮ್ಮ ವ್ಯಾವಹಾರಿಕಜೀವನವು ಈ ಎರಡು ನೀತಿಗಳ ಸಮನ್ವಯವಾಗಬೇಕು (ಧರ್ಮಸಾ. ೧೪೭). [ಸಂ.]

ವ್ಯಾವಹಾರಿಕಭಾಷೆ (ನಾ). ದಿನಬಳಕೆಯ ಮಾತು ; ರೂಢಿಯಲ್ಲಿರುವ ಭಾಷೆ ; ಆಡುಮಾತು : ಸಂಸ್ಕೃತ ಪ್ರಾಕೃತಗಳೆರಡೂ ಆಸ್ಥಾಪ ಮತ್ತು ವ್ಯಾವಹಾರಿಕ ಭಾಷೆಗಳಾಗಿದ್ದವೆಂದು ಹೇಳಬಹುದು (ಕರ್ಣಾಅ. ೫) ; ವ್ಯಾವಹಾರಿಕಭಾಷೆಯಲ್ಲಿ ಗ್ರಾಮ್ಯತೆ, ಶಬ್ದಸಂಸ್ಕಾರರಾಹಿತ್ಯವೇ ಹೆಚ್ಚು (ಸಂಶೋಧ. ೭೯). [ಸಂ. ವ್ಯಾವಹಾರಿಕಭಾಷಾ]

ವ್ಯಾವೃತ (ಗು). ಮುಚ್ಚಿದ ; ಮರೆಮಾಡಿದ ; ಆಚ್ಛಾದಿಸಿದ : ವ್ಯಾವೃತ ಖಡ್ಗಿಗಳಿಂ ಲೀಲಾವಹ ಮಹಿಷೀವಿತಾನದಿಂ ಕಂಚುಕಿವೇತ್ರಾವಳಿಯಿಂ ನೃಪಕುಟಿಯವೊಲಾವಗ ಮೆಸದತ್ತು ಚಿತ್ರಕೂಟನಗೇಂದ್ರಂ (ಕುಸುಮಾ. ೧-೭೦) ; ವ್ಯಾವೃತವಿದ್ರುಮಮುತ್ಕಳಿಕಾ ವಿದೃತಮನಂತಹರಿಮಯಂ ಶಿಪಿಯುತಮಂತಾ ವನಮಮೃತಾಬ್ಧಿಗೆ ಸರಿ ಭಾವಿಪೊಡಮ ಬಾಧ್ಯದಿಂದಭಂಗವಿನಧಿಕಂ (ಶಾಂತೀಶ್ವ. ೧೩-೪೫). [ಸಂ.]

ವ್ಯಾವೃತ್ತ (ಗು). ಪ್ರತ್ಯೇಕಿಸಿದ ; ಹೊರತುಪಡಿಸಿದ : ಸಾಮಾನ್ಯ ವಿಶೇಷ ವ್ಯಾವೃತ್ತ ವಿರುದ್ಧಾವಿರುದ್ಧ ಧರ್ಮಕ್ರಮದಿಂ (ಸುಕುಮಾ. ೩-೩೯ ವ). [ಸಂ.]

ವ್ಯಾವೃತ್ತಿ (ನಾ). ೧. ಪ್ರತ್ಯೇಕಿಸುವುದು ; ಹೊರತುಪಡಿಸುವುದು : ಸಕಳಾಳಾಪ ಕಳಾಕಳಾಪಕಥಿತವ್ಯಾವೃತ್ತಿಯೊಳ್ ಕೂಡಿ ಚಿತ್ರಕರಂಬೋಲ್ (ಕವಿಪಾ. ೧-೧೫೦) ; ಜೀವ ಸಂಜ್ಞೆಯಹೊತ್ತ ಚದ್ರೂಪವನು ತದ್ವ್ಯಾವೃತ್ತಿಯನು ಮಾಡಿ... ವಿಶುದ್ಧಸಂವಿತ್ತತ್ವವದು ತಾನೆಂದು ನಿಲುವುದು ಮುಕ್ತಿ (ನಿಭಾಗ. ೩-೧೨-೪೪). ೨. ಸುತ್ತ ತಿರುಗುವುದು ; ಪರಿಭ್ರಮಣ. ೩. [ಕಾವ್ಯಮಿಾ] ಪದಗಳು, ವರ್ಣಗಳು ಒಂದಕ್ಕಿಂತ ಹೆಚ್ಚುಸಲ ಆವೃತ್ತಿಗೊಳ್ಳುವಿಕೆ ; ಯಮಕ : ಮಗುಬ್ದುಂ ಮ[ಗುಬ್ದು] ಮಾತಂ ನೆಗಬ್ದಿರೆ ಪೇಬ್ದುಗಳಕ್ಕುಮಾ ವ್ಯಾವೃತ್ತಿ (ಕವಿಪಾ. ೩-೨೦೦) ; ಪದವರ್ಣವ್ಯಾವೃತ್ತಿ ದಲದು ಯಮಕಂ (ಕಾವ್ಯಾವ. ೩೨೫). [ಸಂ.]

ವ್ಯಾಸ (ನಾ). ೧. ಭಾಗಮಾಡುವುದು ; ವಿಭಜಿಸುವುದು . ೨. ಹರಡುವಿಕೆ ; ವಿಸ್ತರಿಸುವಿಕೆ : "ವ್ಯಾಸಃ, ಪ್ರಪಂಚಃ, ವಿಸ್ತಾರಃ – ಈ ೩ ಹಿಂದು ಮಾಡುಹ" (ಹಲಾಯು. ೧೨೬-೪೧). ೩. ಹರಹು ; ವಿಸ್ತಾರ : ಯಥಾಕ್ಯಮದಿಂ ದ್ವಿಲಕ್ಷಯೋಜನವಲಯವ್ಯಾಸಮುಂ ಪಂಚಲಕ್ಷಯೋಜನಪ್ರಮಾಣಸೂಚೀವ್ಯಾಸಮುಂ ಅಕ್ಕುಂ (ತತ್ತ್ವಪ್ರ. ೧೨೪) ; ಇದಱೊಳ್ "ಒಚವಡದೋದುಗು" ಎಂಬರ್ಥಮನೇ ಬಿತ್ತರಿಸಿ ಪೇಬ್ದುದಱಿಂ ವ್ಯಾಸಮೆನಿಪುದು (ಅವ್ಯಕ್ತ. ೧೪-೨) . ೪. ವಿವರಣೆ : ವ್ಯಾಸಮುನಿ ಪ್ರಣೂತಕೃತಿಯಂ ಸಲೆ ಪೇಬ್ದು ಪೊದ[ಬ್ದ] ಸತ್ಕವಿವ್ಯಾಸಸಮಾಗಮಾನ್ವಿತಾದಿ ಪುರಾಣಮನೆಯ್ದೆ ಪೇಬ್ದು (ಪಂಪಭಾ. ೧೪-೬೨). ೫. [ರೇಖಾಗ] ವರ್ತುಲ ಅಥವಾ ಗೋಳದ ಕೇಂದ್ರಬಿಂದುವಿನ ಮೂಲಕ ಹಾದು, ವೃತ್ತಪರಿಧಿಯ ಎರಡು ಬಿಂದುಗಳನ್ನು ಸೇರಿಸುವ ಸರಳರೇಖೆ; ವರ್ತುಲವನ್ನು ಸಮವಾಗಿ ವಿಭಾಗಿಸುವ ರೇಖೆ : ಭೂಗೋಳದ ವ್ಯಾಸವು ಅಥವಾ ಭೂಗರ್ಭದ ಪಾರಳತೆಯು ೭೯೧೨ ಮೈಲುಗಳುಳ್ಳದ್ದಾಗಿದೆ (ಭೂಗೋಳ. ೩). ೬. ಒಟ್ಟುಗೂಡಿಸುವವನು : ಕವಿಗಳೂ, ವ್ಯಾಸರೂ, ಲೇಖಕರೂ ಸಾವಿರ ಗಟ್ಟಲೆಯಾಗಿದ್ದರು (ಭಾಇತ್ರ. ೨೬೩). ೭. ಒಬ್ಬ ಮುನಿಯ ಹೆಸರು ; ಸತ್ಯವತಿ ಮತ್ತು ಪರಾಶರಮುನಿಯ ಮಗನಾಗಿ ಜನಿಸಿ, ಮಹಾಜ್ಞಾನಿಯಾಗಿ ಮಹಾಭಾರತವೇ ಮೊದಲಾದ ಪುರಾಣಗಳನ್ನು ಬರೆದ ಋಷಿ; ಕೃಷ್ಣದ್ವೈಪಾಯನ ; IP ಅಖಂಡ ವೇದರಾಶಿಯನ್ನು ನಾಲ್ಕು ಭಾಗಗಳಾಗಿ ಮಾಡಿ ಬೇರೆ ಬೇರೆ ಶಾಖೆಗಳಾಗಿ ಮಾಡಿದುದರಿಂದ 'ವ್ಯಾಸ' ಎಂದು ಹೆಸರಾಯಿತು: ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮನಗಿಲ್ಲ (ಪಂಪಭಾ. ೧-೧೩) ; ಸ್ಮೃತಿಗಯ್ದಂ ಕೃತ ಪಂಚಮಶ್ರುತಿಪುರಾಣವ್ಯಾಸನಂ ವ್ಯಾಸನಂ (ಜಗವಿ. ೧-೮). ೮. ಚೆಲ್ಲಾಪಿಲ್ಲಿಯಾಗಿ ಒಗೆಯುವುದು : (೪).

ವ್ಯಾಸನ ತೋಳು = ೧. ನಂದಿಧ್ವಜಕ್ಕೆ ಅಳವಡಿಸುವ, ತೋಳಿನ ಆಕಾರದಲ್ಲಿರುವ ಒಂದು ಅಲಂಕಾರ : ವ್ಯಾಸನ ತೋಳು – ವೀರಶೈವರು ನಂದಿಧ್ವಜಕ್ಕೆ ಕಟ್ಟುವ ಒಂದು ಬಿರುದು (ಶರಸಾ. ೨೪-೭). ೨. ಮಾಸ್ತಿಕಲ್ಲಿನಲ್ಲಿ ಕೆತ್ತಿರುವ ತೋಳಿನ ಆಕಾರ : ಬರಿಯ ತೋಳು ಇರುವ ಮಾಸ್ತಿಕಲ್ಲುಗಳನ್ನು ವ್ಯಾಸನ ತೋಳು ಎಂದು ಕರೆಯುತ್ತಾರೆ (ಕಶಾಅ. ೩೧೯). 'ವ್ಯಾಸಧ್ವಜ' ಪರಾ. [ಸಂ.]

ವ್ಯಾಸಂಗ (ನಾ). ೧. ಆಸಕ್ತಿ ; ಒಲವು : ಸಾಸಿಗರ್ನೂರ್ವರನುಜರೆನಗವರೆನ್ನ ವ್ಯಾಸಂಗದೊಳು ಕಾಣ್ಬರು (ಧರಚ. ೪೫-೧೨೩). ೨. ಒಂದೇ ಮನಸ್ಸಿನಿಂದ ಮಾಡುವ ವಿದ್ಯಾಭ್ಯಾಸ,- ಅಭ್ಯಾಸ : ನನ್ನ ವ್ಯಾಸಂಗ ಚೆನ್ನಾಗಿ ನಡೆದಿತ್ತು (ಹೊಸಪ್ರ. ೩). ೩. ಆಯಾಸ ; ಶ್ರಮ : ವ್ಯಾಸಂಗಪರಂಪರಾಭಃ – ಆಯಾಸದ ಮೇಲಾಯಾಸಂಗಳಿಂ (ನೀತಿವಾ. ೨೩-೮೦). ೪. ಅಗಲಿಕೆ ; ವಿಯೋಗ : ಎನ್ನೊಬ್ಬ ತಂಗಿ ಕೈಲಾಸದೊಳ್ತಪಸುದಾಳಿದಳು ವ್ಯಾಸಂಗದಾ ನೋವು ನಿನ್ನ ಕಂಡಗಲಿತು (ಧರಚ. ೩೫-೮೬).

ವ್ಯಾಸಂಗ ಮಾಡು = ಅಭ್ಯಾಸ ಮಾಡು : ಅವರ ಗ್ರಂಥವನ್ನು ವ್ಯಾಸಂಗಮಾಡುವ ಅದೃಷ್ಟ ಒದಗಲಿಲ್ಲ (ಚಂಗಾಳ್ವ. ೨). [ಸಂ.]

ವ್ಯಾಸಂಗಗೋಷ್ಠಿ (ನಾ). ಅಧ್ಯಯನಕೂಟ : ಈ ದಿನದ ವ್ಯಾಸಂಗಗೋಷ್ಠಿಗೆ ನೀವೆ ಅಧ್ಯಕ್ಷರು (ಹೇಮಕೂ. ೧೦೩). [ಸಂ.]

ವ್ಯಾಸಂಗವೇತನ (ನಾ). ವಿಶೇಷವಾದ ಅಭ್ಯಾಸಕ್ಕೆ ಪ್ರೋತ್ಸಾಹರೂಪವಾಗಿ ಕೊಡುವ ವೇತನ, – ಧನಸಹಾಯ ; ವಿದ್ಯಾರ್ಥಿವೇತನ : ಅಲ್ಲಿಯ ವಿಶಿಷ್ಟ ಸಮಸ್ಯೆಗಳನ್ನು ಅಭ್ಯಾಸಮಾಡಲು, ಸಂಶೋಧನಾವ್ಯಾಸಂಗವೇತನವನ್ನು ಗಳಿಸಿಕೊಂಡನು (ಸಸ್ಕೃತ. ೭೮). [ಸಂ.]

ವ್ಯಾಸಕೂಟ (ನಾ). ವ್ಯಾಸರಾಯರ ಅನುಯಾಯಿಗಳ ಪಂಥ, – ಗುಂಪು : ವ್ಯಾಸಕೂಟವೆಂದರ ಜ್ಞಾನಿಗಳ ಪಂಥ (ಪಮಹಾ. ೧೦೩) ; ಅದೇ ಸುಮಾರಿನಲ್ಲಿ ವ್ಯಾಸಕೂಟವು ಬಳಿಕೆಗೆ ಬಂದಿತು (ಭಾರದ. ೨೯೩). 'ದಾಸಕೂಟ' ಪರಾ. [ವ್ಯಾಸ + ಕೂಟ]

ವ್ಯಾಸಧ್ವಜ (ನಾ). ನಂದಿಧ್ವಜಕ್ಕೆ ಅಳವಡಿಸುವ ಒಂದು ಬಗೆಯ ತೋಳಿನಾಕಾರದ ಅಲಂಕಾರ ; P ಶಿವನ ಗುಡಿಯಲ್ಲಿ ಹರಿ ಸರ್ವೋತ್ತಮತ್ವವನ್ನು ಸಾರಿ ಹೇಳಿದ ವೇದವ್ಯಾಸನ ತೋಳುಗಳನ್ನು ನಂದೀಶ್ವರನು ಕತ್ತರಿಸಿದನೆಂಬ ಕತೆಯು ಬಳಕೆಯಲ್ಲಿದ್ದು, ಕತ್ತರಿಸಿದ ಆ ತೋಳುಗಳ ಸಂಕೇತವಾದ ತೋಳಿನಾಕಾರದ ಈ ಅಲಂಕಾರವನ್ನು 'ವ್ಯಾಸನ ತೋಳು' ಎಂದು ಕರೆಯುವ ವಾಡಿಕೆ ಬೆಳೆದುಬಂದಿದೆ : ನಂದಿಯ ಕಂಭದ ಧ್ವಜ ಉಪ್ಪರಗುಡಿಪತಾಕೆ ವ್ಯಾಸಧ್ವಜ ಒಪ್ಪುತ್ತಿರ್ಪವಯ್ಯಾ (ಚನ್ನವ. ೧೫೬-೬೫೭). [ಸಂ.]

ವ್ಯಾಸಪೀಠ (ನಾ). ೧. ಭಾಷಣಕಾರರು ಅಥವಾ ವ್ಯಾಖ್ಯಾನಕಾರರು ಕುಳಿತುಕೊಳ್ಳುವ ಪೀಠ, – ಉನ್ನತಾಸನ : ಅದು ವ್ಯಾಸಪೀಠದ ಮೇಲಣ ವಕ್ತೃತ್ವವೂ ಅಲ್ಲ (ಕಥಕ. ೭೯) ; ಪತ್ರಿಕೋದ್ಯಮಿಯ ವ್ಯಾಸಪೀಠದಿಂದ ಅವರು ಮಾಡಿದ ಕಾರ್ಯವು ಪತ್ರಿಕೋದ್ಯಮಿಗಳಿಗೆಲ್ಲ ಆದರ್ಶಪ್ರಾಯವಾಗಿದೆ (ಮಹಾಯೋ. ೧೫೨). ೨. (ಪವಿತ್ರಗ್ರಂಥಗಳ ಪಠಣ ಮಾಡುವಾಗ) ಪುಸ್ತಕವನ್ನು ಒರಗಿಸಿ ಇಟ್ಟುಕೊಳ್ಳುವ ಮರದ ಒಂದು ಉಪಕರಣ : ಎದುರಿಗೆ, ಮಡಿಸಲು ಬರುವಂತಹ ವ್ಯಾಸಪೀಠ (ವಂಹವ್ಯ. ೫೫). [ಸಂ.]

ವ್ಯಾಸರೇಖೆ (ನಾ). = ವ್ಯಾಸ ೫ : ಭೂಮಿಯ ವ್ಯಾಸರೇಖೆ ಮೇರುವಿನಿಂದ ಮೇರುವಿಗೆ ೭,೯೦೦ ಮೈಲಿ (ಭೂವಿವ. ೮). [ಸಂ. ವ್ಯಾಸರೇಖಾ]

ವ್ಯಾಸಸ್ಮೃತಿ (ನಾ). ವೇದವ್ಯಾಸರಿಂದ ರಚಿತವಾದ ಸ್ಮೃತಿ, – ಧರ್ಮಶಾಸ್ತ್ರ : ವ್ಯಾಸಸ್ಮೃತಿ . . . ವಶಿಷ್ಠಸ್ಮೃತಿಗಳೆಂಬವೇ ಆಯಾಯ ನಾಮಧೇಯವುಳ್ಳವರಿಂದುಕ್ತಮಾದ ಹತ್ತೊಂಬತ್ತು ಧರ್ಮಶಾಸ್ತ್ರಗಳು (ವಿವಿಕ. ೪). [ಸಂ.]

ವ್ಯಾಸಹಸ್ತ (ನಾ). = ವ್ಯಾಸಧ್ವಜ : ಪುಣ್ಯಪದವಿಗಳ ಬೇಹವರು ಬಹುದೆಂದು ಕರಯಲೆತ್ತಿದ ಹಸ್ತವೋ ಎನಿಪಂತೆ ಗಳಿಗಳ ಘನವ್ಯಾಸಹಸ್ತಂ ಮೆಱೆದುದು (ಪಚಕಾ. ೧೦-೨೯) ; ಸುತ್ತ ನೆಗಹಿದ ವೃಷಭಧ್ವಜಂಗಳಿಂ ಕತ್ತಲಿಸಲೆತ್ತಿದ ವ್ಯಾಸಹಸ್ತಂಗಳಿಂ . . . ಬಸವೇಶ್ವರಂ ಸಕಲಗಣಂಗಳ್ಕೆರಸಿ ಪುರವಂ ಪೊಱವಂಟು ಕಿಱಿದಂತರಂ ಪೋಗೆ (ವಸ್ಚಾ. ೨-೫೦ ವ). [ಸಂ.]

ವ್ಯಾಹತ (ಗು). ೧. ತಡೆಗಟ್ಟಿದ ; ಬಿಟ್ಟುಬಿಟ್ಟ. (ನಾ). ೨. ತಡೆಹಿಡಿಯುವಿಕೆ ; ಬಿಟ್ಟುಬಿಡುವಿಕೆ : ಸಮರೋತ್ಸಾಹಶಕ್ತಿಗೆ ಶಾವದಲ್ಲ ವ್ಯಾಪತವೆ ಮತವೆಂದು . . . ಬೆಸಗೊಂಡ (ಕುವ್ಯಾಸ. ೧೨-೧೩). ೩. ವಿರುದ್ಧವಾದುದು ಸಾಧಕವಾದುದು : ಸರ್ವನಿಯಾಮಕ ಬ್ರಹ್ಮನ ವ್ಯಾಪಾರವನ್ನು ಈ ನಿಯಮಗಳಿಂದ ಕಟ್ಟಿಹಾಕುವ ಭಾವ ವ್ಯಾಹತವಾಗುವುದು (ಭಾತತ್ತ್ವ. ೪೮೭). [ಸಂ.]

ವ್ಯಾಹತಿ (ನಾ). ೧. ಅಡ್ಡಿಪಡಿಸುವುದು ; ತಡೆಯುವುದು. ೨. ವ್ಯರ್ಥಪಡಿಸುವುದು. ೩. ಹಿಂದಕ್ಕೆ ಓಡಿಸುವುದು ; ಹಿಮ್ಮೆಟ್ಟಿಸುವುದು. ೪. [ಕಾವ್ಯಮಿಾ] ಅರ್ಥದೋಷಗಳಲ್ಲಿ ಒಂದು : ವ್ಯಾಹತಿ (ಯಾವುದಾದರೂ ಒಂದು ವಸ್ತುವನ್ನು ಹೊಗಳಿ ಅಥವಾ ನಿಂದಿಸಿ ಆಮೇಲೆ ಅದಕ್ಕೆ) ವಿರುದ್ಧವಾಗಿ ಮತ್ತೇನನ್ನಾದರೂ ಹೇಳುವುದು (ಕೃವಿಜ. ೨೨೯). [ಸಂ.]

ವ್ಯಾಹಾರ (ನಾ). ೧. ಉಚ್ಚರಿಸುವುದು; ನುಡಿಯುವುದು : "ಅಭಧಾನಂ, ವ್ಯಾಹಾರಃ, ಉದೀರಣಂ, ಕಥನಂ – ಈ ೪ ಮೊದಲಾಗುಳ್ಳುವ ನುಡಿಯ ಭೇದಂಗಳ್" (ಹಲಾಯು. ೨೩-೧೩೭). ೨. ಧ್ವನಿ ; ಶಬ್ದ : ನೆಯ್ದಿಲ್ಲೊಳಂ ಮೇಲ್ಮರಲ್ದರಲುತ್ತಿರ್ದುವು ಚಂಚರೀಕ ಮಧುರವ್ಯಾಹಾರವಾಚಾಲಿತಂ (ಪಂರಾಮಾ. ೭-೬). ೩. ನಗೆಮಾತು; ಹಾಸ್ಯದ ನುಡಿ. [ಸಂ.]

ವ್ಯಾಹೃತ (ಗು). ೧. ಹೇಳಿದ ; ವಿವರಿಸಿದ ; ನಿರೂಪಿಸಿದ. ೨. ಪ್ರಸಿದ್ಧನಾದ ; ಗಣ್ಯನಾದ : ಸತಿಶಿರೋಮಣಿ ಕುಳ್ಳಿರ್ಕೆ ವ್ಯಾಹೃತ ಗೃಹಸ್ಥನು ಕುಳ್ಳಿರೆನುತವೆ ಮುನಿಪ ಮಂಡಿಸಿದ (ಕುವ್ಯಾಖ. ೧೭-೪೪). [ಸಂ.]

ವ್ಯಾಹೃತಿ (ನಾ). ೧. ಉಚ್ಚಾರಣೆ ; ನುಡಿಯುವಿಕೆ. ೨. ಹೇಳಿಕೆ ; ನಿರೂಪಣೆ. ೩. ಪ್ರತಿದಿನವೂ ಸಂಧ್ಯಾವಂದನೆ ಮಾಡುವಾಗ ಪ್ರಣವಪೂರ್ವಕವಾಗಿ ಜಪಿಸುವ ಮಂತ್ರ ; ಓಂ ಭೂಃ ಭುವಃ ಸ್ವಃ ಎಂಬ ಮಂತ್ರೋಚ್ಚಾರಣೆ : ವ್ಯಾಹೃತಿಯ ಶಿಕ್ಷಾಕ್ಷತದ ವಿಮಳಾಹುತಿ ಸ್ವಾಹಾ ವಷಟ್ಕೃತಿ ಸೋಹಂ ತಂದುದು ಸುರರ ಸುಹವಿರ್ಭಾಗ ಭೋಗಿಗಳ (ಕುವ್ಯಾಸ. ೭-೩೩) ; ಅದು ಸಹಜಬುದ್ಧಿ ಮತ್ತು ಅಂತಃಪ್ರೇರಣೆಯಿಂದ ಪ್ರಕಟವಾದ ಛಂದೋಮಯಿ ವ್ಯಾಹೃತಿ (ಭಾರದ. ೩೭). [ಸಂ.]

ವ್ಯಾಳ 'ವ್ಯಾಲ' ನೋ.

ವ್ಯಾಳಕಂಕಣ (ನಾ). ಹಾವುಗಳನ್ನು ಕಂಕಣವಾಗಿ ಧರಿಸಿಕೊಂಡವನು ; ನಾಗಾಭರಣ ; ಶಿವ : ಭಾಳಾಕ್ಷಭಕ್ತ ಕೊಂಗುಲಿಯನಾರಂಬವಂ ವ್ಯಾಳಕಂಕಣಗೆ ತ್ರೈದಶಸೇರುಧೂಪವನು ಅರ್ಪಿಸುವ ನೇಮವಿಡಿದು (ತ್ರಾಥರಾ. ೧೨-೬).

[ಸಂ. ವ್ಯಾಲಕಂಕಣ]

ವ್ಯಾಳಕುಳ (ನಾ). ಹಾವುಗಳ ಗುಂಪು ; ಸರ್ಪವಂಶ : ವ್ಯಾಳಕುಳಾಂಗನಾ ಜನದ ದೈನ್ಯವಚನಪರಂಪರೆಗಳ್ಗು ಕರುಣಂಗೆಯ್ದು (ಜಗವಿ. ೩-೧೧೪ ವ) ; ನಾನಾ ವ್ಯಾಳ ಕುಳಾಧಿಷ್ಠಾನಂ . . . ಹಿಮತೇಜಂ (ಪಮ್ಮಾರ. ೧-೪೩). [ಸಂ. ವ್ಯಾಲಕುಲ]

ವ್ಯಾಳಗಜ (ನಾ). ಸೊಕ್ಕಿದ ಆನೆ ; ಮದ್ದಾನೆ : ವ್ಯಾಳಗಜಂಗಳನಗ್ಗದ ಸೂಳೆಯರೊಕ್ಕಲನನರ್ಘ್ಯವಸ್ತುಗಳನಿಳಾಪಾಳಂ ಸೋಲ್ತೊಡೆ (ಪಂಪಭಾ. ೭-೭) ; ವ್ಯಾಳಗಜಂಗಳಂ ಕೆಲಬರುದ್ಧತವಾಜಿಗಳಂ ಕೆಲಂಬರ್ . . . ಸಮುತ್ತಾಳದೊಳೇಜಿ (ನಳಚಂ. ೨೪೩). [ಸಂ. ವ್ಯಾಲಗಜ]

ವ್ಯಾಳನಖಿ (ನಾ). ಒಂದು ಬಗೆಯ ಔಷಧೀಸಸ್ಯ : "ವ್ಯಾಳತಿಲಃ, ವ್ಯಾಳನಖಿಃ - - ಈ ಯೆರಡುಂ ವ್ಯಾಳನಖಿ" (ಓಷಧಿ. ೧೫೨). [ಸಂ. ವ್ಯಾಲನಖಿ]

ವ್ಯಾಳವಿಷ (ನಾ). ಹಾವಿನ ನಂಜು ; ಸರ್ಪವಿಷ : ಸಾಮ್ರಾಜ್ಯಭೋಗವ್ಯಾಳ ವಿಷಕಂಜುಪೆನು (ಕುವ್ಯಾಕ. ೧೭-೫೧) ; ವ್ಯಾಳವಿಷ ಸೋಂಕಿದವೊಲ್ ಭೂಪಾಲ ಕವಿರಾಯ ಮರದೊರಗಿದನು (ಕರ್ಣ. ೧೧೭-೨). [ಸಂ. ವ್ಯಾಲವಿಷ]

ವ್ಯಾಳಾಢ್ಯ (ನಾ). ಸೊಕ್ಕಿದವನು ; ಉದ್ಧತ : ವ್ಯಾಳಾಢ್ಯಂ ಪೊರೆ ಪಾಪಿ ಕಷ್ಟರನಣಂ ತಜ್ಜಾಡ್ಯದಿಂ ದುರ್ಜರೋಜ್ಜಾಳಂ . . . ಪಾತಾಳಂ ತುಂಬಿಳೆಯಿಂದಲುಣ್ಮೆ ಕವಿಯಿತ್ತಂಬಂತೆ ದಿಕ್ಚಕ್ರದೊಳ್ ಕಾಳಾಭೀಳವಮಹಾಂಧಕಾರವಸೆಗುಂ (ಪಮ್ಮಾರ. ೩-೧೭). [ಸಂ. ವ್ಯಾಲಾಢ್ಯ]

ವ್ಯಾಳಿ(ನಾ). ಒಂದು ಬಗೆಯ ಕ್ರೂರಪ್ರಾಣಿ ; ಸಿಂಹವನ್ನು ಸಂಹರಿಸ ಬಲ್ಲುದೆಂದು ನಂಬಲಾದ ಒಂದು ಹಿಂಸ್ರಮೃಗ : ಸಿಂಹ, ಶಾರ್ದೂಲ, ವ್ಯಾಳಿಗಳು ಮೈಕೊಡವಿ ಕಪಿ ಕೇಸರ ಲಾಂಗೂಲಗಳನ್ನು ನಿಮಿರಿಸಿಕೊಂಡು ದಿಕ್ತಟಗಳು ಬಿರಿಯುವಂತೆ ಗರ್ಜಿಸಿ . . . ನಡೆದವು (ಶಾಂತಲಾ. ೨೫೧) ; ಸಿಂಹವನ್ನು ಕ್ಷಣಾರ್ಧದಲ್ಲಿ ಸಂಹರಿಸಬಲ್ಲ ಪ್ರಾಣಿ 'ವ್ಯಾಳೀ' ಎಂದು ಪ್ರಾಚೀನ ಹೇಳಿಕೆ ಇದೆ (ಸಂಗೀಚಂ. ೩೧೮). 'ಯಾಳಿ' ಪರಾ. [< ಸಂ. ವ್ಯಾಲ?]

ವ್ಯಾಳೀಭ (ನಾ). = ವ್ಯಾಳಗಜ : ಲೀಲೆಯೊಳ್ ಪಿಡಿದು ನಿಲಿಪಂ ವ್ಯಾಳೀಭಮನೊಂದು ಪೊಯ್ಲಿನಿಂ (ಕಾದಂಪೂ. ೪೩೮) ; ಯುವರಾಜಂ . . . ಎಟ್ಟಿದಂ ದ್ವಿರದಮಂ ವ್ಯಾಳೀಭವಜ್ರಾಂಕುಶಂ (ಪುಷ್ಪಪು. ೫-೧೫). [ಸಂ. ವ್ಯಾಲೀಭ]

ವ್ಯಾಳೋಳ 'ವ್ಯಾಲೋಲ' ನೋ.

ವ್ಯುಚ್ಛಿತ್ತಿ (ನಾ). ೧. ಕತ್ತರಿಸುವಿಕೆ ; ಬೇರ್ಪಡಿಸುವಿಕೆ. ೨. ಸಂಪೂರ್ಣ ಹಾಳು ; ವಿನಾಶ : ಘೋರಸಂಸಾರನಾನಾವ್ಯಸನವ್ಯುಚ್ಛಿತ್ತಿಯೊಳ್ . . . ವಾಗ್ಗದೂಮುದ್ರೆಯೊಳು ಮುದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ (ಆದಿಪು. ೧೬-೭೯). [ಸಂ.]

ವ್ಯುಚ್ಛೇದ (ನಾ). ೧. = ವ್ಯುಚ್ಛಿತ್ತಿ ೧ : 'ವ್ಯುಚ್ಛೇದಕಾಲ' ಪರಾ. ೨. = ವ್ಯುಚ್ಛಿತ್ತಿ ೨ : 'ಧರ್ಮವ್ಯುಚ್ಛೇದ' ಪರಾ. [ಸಂ.]

ವ್ಯುಚ್ಛೇದಕಾಲ (ನಾ). ೧. ಬೇರ್ಪಡೆಯಾದ ಸಮಯ ; ವಿರಹಕಾಲ. ೨. [ಜೈನ] ಜೀವನು ಒಂದು ಗುಣಸ್ಥಾನದಿಂದ ಇನ್ನೊಂದು ಗುಣಸ್ಥಾನಕ್ಕೆ ಹೋಗಿ ಮೊದಲಿನ ಗುಣಸ್ಥಾನಕ್ಕೆ ಬರುವ ಸಮಯ : ಜೀವವು ತಿರುಗಿ ತನ್ನ ಗುಣಸ್ಥಾನವನ್ನು ಸಂಪಾದಿಸುವವರೆಗಿನ ನಡುವಿನ ಕಾಲಕ್ಕೆ ಅಂತರಕಾಲವೆನ್ನುವರು. ಇದಕ್ಕೆ ವಿರಹಕಾಲ, ವ್ಯುಚ್ಛೇದಕಾಲವೆಂದೂ ಹೆಸರಿವೆ (ಜೈನಪ. ೩೧೬). [ಸಂ.]

ವ್ಯುತ್ಕ್ರಮ (ನಾ). ೧. ಸರಿಯಾದ ದಾರಿಯನ್ನು ಬಿಟ್ಟುಹೋಗುವಿಕೆ ; ಉಲ್ಲಂಘನೆ : ಮಹಾರಾಜ, ಈ ವ್ಯುತ್ಕ್ರಮವು ಬೇಡ (ಮಹಾಭಾ. ೭೦). ೨. ತಿರುವುಮುರುವು ಮಾಡಿದ ಸ್ಥಿತಿ ; ಅಸ್ತವ್ಯಸ್ತಕ್ರಮ. ೩. ಗೋಜು ; ಗೊಂದಲ. [ಸಂ.]

ವ್ಯುತ್ಕ್ರಮಗಣನೆ (ನಾ). ವಿರುದ್ಧವಾದ ಎಣಿಕೆ : ಇಲ್ಲಿ ಕೆಲರ್ ವ್ಯುತ್ಕ್ರಮಗಣನೆಯಿಂದೆ ನಿಂದಿತಕ್ರಮಮೆಂದು ಪೇಳ್ಕುರ್ (ಕಾವ್ಯಾವ. ೬೦೨). [ಸಂ. ವ್ಯುತ್ಕ್ರಮಗಣನಾ]

ವ್ಯುತ್ಥಾನ (ನಾ). ೧. ಎದುರುಬೀಳುವಿಕೆ ; ನಿಷೇಧಿಸಿದ್ದನ್ನು ಮಾಡುವುದು : "ವ್ಯುತ್ಥಾನಂ — ಅಡ್ಡವಿಡುವಿಕೆ ; ಪ್ರತಿಕೂಲವಾಗಿ ನಡೆದುಕೊಳ್ಳುವಿಕೆ" (ಪಿಪ್ಪಾಂತಿ. ೪೦೨). ೨. ಮನಬಂದಂತೆ ನಡೆಯುವಿಕೆ ; ಸ್ವತಂತ್ರವೃತ್ತಿ : "ಸ್ವಚ್ಛಂದ . . . ಸ್ವತಂತ್ರ ವ್ಯುತ್ಥಾನಂ ವಿವೃತ್ತಿಯೆನಲೊಲಿದಂತೆ ನಡಹವುಕ್ಕುಂ" (ಮುಂಗರಾ. ೧೩೩-೩೦). ೩. ಮನಸ್ಸಿಗೆ ಬಂದಂತೆ ನಡೆಯುವವನು : "ಸ್ವತಂತ್ರವೃತ್ತಿಃ, ವ್ಯುತ್ಥಾನಂ — ಈ ೨ ಒಲಿದಂತೆ ನಡೆವವಂ" (ಹಲಾಯು. ೧೨೯-೧೩). ೪. ಧಾರ್ಮಿಕ ಕಾರ್ಯವನ್ನು ಕ್ರಮವಾಗಿ ಪೂರೈಸುವಿಕೆ ; ವ್ರತ ಮುಂತಾದುವನ್ನು ಪಾಲಿಸುವುದು. [ಸಂ.]

ವ್ಯುತ್ಪತ್ತಿ (ನಾ). ೧. ಶಬ್ದದ ಹುಟ್ಟು, — ಮೂಲ ; ನಿಷ್ಪತ್ತಿ : ರಮಂತೇ . . . ಇತಿ ರಾಮಃ ಎಂಬುದಾಗಿ ಇನ್ನೊಂದು ಪ್ರಸಿದ್ಧವಾದ ವ್ಯುತ್ಪತ್ತಿ 'ರಾಮ' ಶಬ್ದಕ್ಕಿದೆ (ಭಾರದ. ೪೯) ; ತೆಲುಗಿನ 'ಒಕ್ಕ' ದ ವ್ಯುತ್ಪತ್ತಿಯೇನಿರಬಹುದು ? (ಹಪಬೂ. ೬೯೦). ೨. ಪರಿಣತಿ ; ನೈಪುಣ್ಯ : ವ್ಯುತ್ಪತ್ತಿಯಿಲ್ಲದೆ ಇರುವುದರಿಂದಾಗಲಿ ಅಥವಾ ಪ್ರತಿಭೆಯಿಲ್ಲದೆ ಇರುವುದರಿಂದಾಗಲಿ ಮುಖ್ಯಾರ್ಥವು ಬಾಧಿತವಾಗಿರುವಂತಹ ಶಬ್ದಗಳ ಪ್ರಯೋಗವನ್ನು (ಕವಿಯು) ಮಾಡಿದರೆ, ಅದನ್ನು ಧ್ವನಿಯೆಂದು ವಿಮರ್ಶಕರು ತಿಳಿಯಲಾಗದು (ಧ್ವನ್ಯಾಲೋ. ೧೧೪). ೩. ಪಾಂಡಿತ್ಯ ; ಬಹುಶ್ರುತತ್ವ : "ಬಹುಜ್ಞತಾ ವ್ಯುತ್ಪತ್ತಿಃ" ಅನೇಕ ವಿಷಯಗಳನ್ನು ತಿಳಿದಿರುವುದೇ ವ್ಯುತ್ಪತ್ತಿ (ಧಾರವಿ. ೧೮೩). [ಸಂ.]

ವ್ಯುತ್ಪತ್ತಿಶಾಸ್ತ್ರ (ನಾ). ಶಬ್ದದ ಮೂಲವನ್ನು ಕುರಿತು ಹೇಳುವ ಶಾಸ್ತ್ರ ; ನಿರುಕ್ತಿಶಾಸ್ತ್ರ : ವ್ಯುತ್ಪತ್ತಿಶಾಸ್ತ್ರವು ಈ ಮಾತನ್ನು ಎತ್ತಿ ಹಿಡಿಯಲಾರದು (ಸಮಜೀ. ೩). [ಸಂ.]

ವ್ಯುತ್ಪತ್ತಿಶಾಸ್ತ್ರಜ್ಞ (ನಾ). ನಿರುಕ್ತಿಶಾಸ್ತ್ರವನ್ನು ಬಲ್ಲವನು : ಒಬ್ಬ ವ್ಯುತ್ಪತ್ತಿಶಾಸ್ತ್ರಜ್ಞರಿಗೆ ಈ ಪ್ರಶ್ನೆಯನ್ನು ಕೇಳಿದಾಗ ಅದು ಮೊದಲು 'ಮಾಗಾಯಿ' ಯಾಗಿರಬೇಕೆಂದು ಅವರು ಹೇಳಿದರು (ಸಮಜೀ. ೩). [ಸಂ.]

ವ್ಯುತ್ಪನ್ನ (ಗು). ೧. ಪ್ರಾಪ್ತವಾದ ; ದೊರೆತ ; ನಿಷ್ಪನ್ನವಾದ. ೨. ಪ್ರಾವೀಣ್ಯದಿಂದ ಕೂಡಿದ ; ನೈಪುಣ್ಯವುಳ್ಳ. (ನಾ). ೩. [ವ್ಯಾಕ] ಪ್ರಕೃತಿ, ಪ್ರತ್ಯಯಗಳ ಜೋಡಣೆಯಿಂದ ಹುಟ್ಟಿದ ಶಬ್ದ : ಧಾತುಗಳಲ್ಲಿ ಸಹಜ, ಪ್ರತ್ಯಯಾಂತ (ವ್ಯುತ್ಪನ್ನ), ಸಂಯುಕ್ತ (ಸಮಗ್ರ) ಎಂದು ಮೂರು ವಿಧಗಳಿವೆ (ಕೃವಿ. ೪೨). ೪. ಪ್ರವೀಣ ; ನಿಪುಣ ; ಪಂಡಿತ : ಆಧುನಿಕ ವಿದ್ಯಾಸಂಸ್ಥೆಗಳ ಸ್ಥಾಪಕಾಚಾರ್ಯರೂ ವ್ಯವಸ್ಥಾಪಕಮಹಾಶಯರೂ ಅನ್ಯಭಾಷೆಯಲ್ಲಿ ವ್ಯುತ್ಪನ್ನರಾದವರು (ಆರ್ಯಧ. ೩) ; ಇಷ್ಟರಿಂದಲೇ ವ್ಯುತ್ಪನ್ನರಾದ ಸಹೃದಯರ ಬುದ್ಧಿಗೆ ಪ್ರಕಾಶವು ದೊರೆತು . . . ಸಂದೇಹಕ್ಕೆಡೆಯಿರುವುದಿಲ್ಲ (ಧ್ವನ್ಯಾಲೋ. ೭೬). [ಸಂ.]

ವ್ಯುತ್ಸರ್ಗ (ನಾ). [ಜೈನ] ಆರು ಬಗೆಯ ತಪಗಳಲ್ಲಿ ಒಂದು ; "ಗೃಹಧನಾದಿ ಬಾಹ್ಯೋಪಾದಿಗಳನ್ನೂ, ಕ್ರೋಧಾದಿ ಅಂತರಂಗೋಪಾದಿಗಳನ್ನೂ ತ್ಯಾಗಮಾಡುವುದು ; ಶರೀರದಲ್ಲಿ ನಿರ್ಮಮತೆ" (ಜೈನಕೋ. ೨೪೧) : ಪ್ರಾಯಶ್ಚಿತ್ತ ವಿನಯ ವೈಯಾವೃತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಂಗಳನೊಳಕೊಂಡು

(ಆದಿಪು. ೬-೩೩ ವ) ; ವ್ಯುತ್ಸರ್ಗೋತ್ತರತಪದೊಳತಿವಿಶುದ್ಧಾಂತರಂಗನೆನಿಸಿದಂ (ಸುಕುಮಾ. ೪-೧೯). [ಸಂ.]

ವ್ಯುಷ್ಟಿ (ನಾ). ೧. ಮುಂಜಾನೆ ; ಪ್ರಭಾತಸಮಯ. ೨. ಹೆಚ್ಚಳ ; ಉನ್ನತಿ ; ಏಳಿಗೆ. ೩. ಪ್ರಯೋಜನ ; ಫಲ ; ಪರಿಣಾಮ : "ವ್ಯುಷ್ಟಿ — ೧. ಪ್ರಯೋಜನ, ಸಮೃದ್ಧಿ ೨" (ಸಿದ್ಧಾಂತಿ. ೩೮೩). ೪. [ಜೈನ] ಐವತ್ತುಮೂರುಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು ; ಮಗುವಿಗೆ ಮಾಡುವ ಮೊದಲನೆಯ ವರ್ಷದ ಹುಟ್ಟುಹಬ್ಬ : ದ್ವಾದಶಾಂಗದೊಳ್ ಪೇಳ್ದ ದಾನ ಪ್ರೀತಿ ಸುಪ್ರೀತಿ . . . ಅನ್ನಪ್ರಾಶನ ವ್ಯುಷ್ಟಿ ಕೇಶಾವಾಪ . . . ತ್ಯಾಗನಿರ್ವೃತಿಯೆಂಬಯ್ತತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ). [ಸಂ.]

ವ್ಯೂಢ (ಗು). ೧. ವಿಶಾಲವಾದ ; ಹರವಾದ ; ದೊಡ್ಡ : ವ್ಯೂಢವಕ್ಷಸ್ಥಳನಾಜಾನು ಪ್ರಲಂಬಪ್ರಬಲಭುಜಯುಗಂ (ಆದಿಪು. ೮-೫೧) ; ವ್ಯೂಢವಕ್ಷಸ್ಥಲರುಂ . . . ಅಪ್ರಸೇಕ ವೀರದಾನವಸೇನಾಗ್ರಣಿಗಳಿಂ (ಜಗವಿ. ೨-೩೯ ವ). ೨. ರಚಿಸಿದ ; ಸನ್ನಾಹಗೊಳಿಸಿದ ; ಯೋಜಿಸಿದ : ವ್ಯೂಢಸಂಕಲ್ಪಂ ಸುರತಿಯಲಿ ರೂಢಮಾಗಲ್ಕಿವರೊಡಲನು ಗೂಢಮರೆಯಿಂ ರಕ್ಷಿಸುವರಂತಾ ಶರೀರವನು (ಎವೇಭ. ೧೫-೧೩). [ಸಂ.]

ವ್ಯೂಢೋರಸ್ಕ (ನಾ). ಹರವಾದ ಎದೆಯುಳ್ಳದು ; ವಿಶಾಲವಕ್ಷಸ್ಥಳವುಳ್ಳದು : ಮಂಗಳವಸದನಂಗೊಂಡು ಪರಿಪೂರ್ಣಾಬ್ಜಶಿರೋದ್ಧರಣನಂ ವ್ಯೂಢೋರಸ್ಕನಂ . . . ತರಿಸಿ ದಿಗ್ವಿಜಯಕ್ಕೆ ಜಿನೇಂದ್ರಚಂದ್ರದೇವಂ ಪೊಱಮಟ್ಟನೇಱಿ ಜಯಮಂ ಜಯಪರ್ವತಯಾನಮಂ (ಶಾಂತಿಪು. ೧೦-೧೪೨ ವ). [ಸಂ.]

ವ್ಯೂಹ (ನಾ). ೧. ಗುಂಪು ; ಸಮೂಹ : ಸುರವ್ಯೂಹಮಂಬರದಲ್ಲಿ ಹೂಮಳೆಗಳಂ ಹಿಡಿದು ಮೋಹರಂಬೆತ್ತು ನೋಡುತ್ತಿರಲು (ಪಚಕಾ. ೧೩-೧೩). ೨. ಸೈನ್ಯ ; ದಳ ; ಪಡೆ : ಪರವ್ಯೂಹಭಯಂಕರಂ ನೆಗೆದು ಪಾರ್ದಾರ್ದೆಚ್ಚೊಡೆ (ಪಂಪಭಾ. ೧೧-೧೭). ೩. ರಚನೆ ; ವ್ಯವಸ್ಥೆ : ನವನವವ್ಯೂಹಂಗಳಬುಜೋದ್ಭವನ ಪಾಳಿ ವಿಖಂಡ ನವರಸ ನವವಿಧಗ್ರಹನಾಟಕಂಗಳ ಲಕ್ಷಣವನಱಿದು . . . ನಡೆವುದು (ಕುವ್ಯಾಉ. ೪-೩೬) ; ಕರದೊಯ್ದನತಿಥಿಗಳನಾ ಗಿರಿಧರಾವ್ಯೂಹಮಂ ತೋಱೆ (ಶ್ರೀರಾಮಾ. ೨೯೩-೨೩೨) . ೪. ದಳವನ್ನು ಒಂದು ವಿಶಿಷ್ಟರಚನೆಯಲ್ಲಿ ನಿಲ್ಲಿಸುವ ಕ್ರಮ ; ಸೈನ್ಯದ ರಚನೆ : ಇದು ಚಕ್ರವ್ಯೂಹಮಿಾ ವ್ಯೂಹಮನೊಡೆವದಟಂ ಪಾರ್ಥನಂತಾತನುಂ ಗೆಂಟದನೆಮ್ಮಿ ನಾಲ್ವರುಂ ಭೇದಿಸಲಱಿಯೆವು (ಪಂಪಭಾ. ೧೧-೮೭) ; ವ್ಯೂಹವನು ರಚಿಸುವೆನು ನಾಳಿನೊಳಾಹವಕೆ ತಳತಂತ್ರವೊಂದೇ ಮೋಹರಕೆ ನಡೆತರಲಿ ಷಡುರಥಾದಿ ಯಾದವರು (ಕುವ್ಯಾದ್ಯೂ. ೮-೬೬). ೫. (ಆಲಂ) ತಂತ್ರ ; ಕೈವಾಡ : ಎಲೆ, ದುರ್ವಿಧಿಯೆ, ನಿನ್ನ ವ್ಯೂಹಕೆ ಪ್ರತಿವ್ಯೂಹಮಂ ಒಡ್ಡದಿರೆ ನಷ್ಟಬುದ್ಧಿಯೆ ನಾ ದಿಟಂ ದುಷ್ಟಬುದ್ಧಿಯಲ್ತು (ಚಂದ್ರಪ್ರ. ೯೨-೨೭). ೬. [ವಿಶಿಷ್ಟಾ] ಪರಮಾತ್ಮನ ಐದು ವಿಧವಾದ ರೂಪಗಳು : ಈ ಸಂಪ್ರದಾಯದಂತೆ ಪರಮಾತ್ಮನು ಪಂಚವ್ಯೂಹ ರೂಪದಿಂದ ವಿಶ್ವಾತ್ಮಕನಾಗಿಯೂ ವಿಶ್ವಾತೀತನಾಗಿಯೂ ಇರುತ್ತಾನೆ (ಭಾರದ. ೨೬೨). ೭. ಪರಮಾತ್ಮನ ಐದುವಿಧವಾದ ರೂಪಗಳಲ್ಲಿ ಒಂದು : ಪರ, ವ್ಯೂಹ, ಅಂತರ್ಯಾಮಿ, ವಿಭವ, ಅರ್ಚಾ ಎಂಬುವುಗಳೇ ಪಂಚವ್ಯೂಹಗಳು (ಭಾರದ. ೨೬೨).

[ಸಂ.]

ವ್ಯೂಹಚ್ಛೇದ (ನಾ). ಸೈನ್ಯದ ರಚನೆಯನ್ನು ಭೇದಿಸುವುದು ; ಸೈನ್ಯದ ಕಟ್ಟನ್ನು ಒಡೆಯುವಿಕೆ : ಶಸ್ತ್ರಯುದ್ಧ, ವ್ಯೂಹಬಂಧ, ವ್ಯೂಹಚ್ಛೇದ ಮುಂತಾದ ಅಭ್ಯಾಸಕ್ರಮಗಳು ಜರುಗುತ್ತಿದ್ದುವು (ಶಾಂತಲಾ. ೭೮). [ಸಂ.]

ವ್ಯೂಹಬಂಧ (ನಾ). ಯುದ್ಧದಲ್ಲಿ ಸೈನ್ಯವನ್ನು ಒಂದು ವಿಶಿಷ್ಟರೀತಿಯಲ್ಲಿ ನಿಲ್ಲಿಸುವುದು ; ಸೇನಾರಚನೆ : ಶಸ್ತ್ರಯುದ್ಧ, ವ್ಯೂಹಬಂಧ, ವ್ಯೂಹಚ್ಛೇದ ಮುಂತಾದ ಅಭ್ಯಾಸಕ್ರಮಗಳು ಜರುಗುತ್ತಿದ್ದವು (ಶಾಂತಲಾ. ೭೮). [ಸಂ.]

ವ್ಯೂಹೋತ್ಕರ (ನಾ). ಸೈನ್ಯವನ್ನು ಒಟ್ಟುಗೂಡಿಸುವಿಕೆ : ಗುರುಮುಖದೊಳಾ ಕುಮಾರಂ . . . ಯಂತ್ರಪ್ರಯೋಗಮಖಿಲವ್ಯೂಹೋತ್ಕರಮೆಂಬಿನಿತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಪ್ರಪು. ೪-೬೦). [ಸಂ.]

ವ್ಯೋಕಾರ (ನಾ). ೧. ಕಬ್ಬಿಣದ ಕೆಲಸ ಮಾಡುವವನು; ಕಮ್ಮಾರ. ೨. ಕಬ್ಬಿಣ , ತಾಮ್ರ , ಹಿತ್ತಾಳೆ, ಕಂಚು ಮೊದಲಾದ ಲೋಹಗಳಿಗೆ ಸಂಬಂಧಿಸಿದ ಕೆಲಸ ಮಾಡುವವನು : "ವ್ಯೋಕಾರಃ , ಲೋಹಕಾರಃ — ಈ ೨ ಬೋಗಾಱಂ" (ಹಲಾಯು. ೯೬-೪೩೪). [ಸಂ.]

ವ್ಯೋಮ (ನಾ). ೧. ಪಂಚಮಹಾಭೂತಗಳಲ್ಲಿ ಒಂದು ; ಆಕಾಶ ; ಗಗನ : ಶ್ರೀಮಚ್ಛಳುಕ್ಯವಂಶವ್ಯೋಮಾಮೃತಕಿರಣಂ (ಪಂಪಭಾ. ೧-೧೫) ; ಪವಮಾನವಿಸ್ತಾರಂ ವ್ಯೋಮದೊಳ್ . . . ಅಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ವ) ; ವ್ಯೋಮಸಾಗರಸಮಂ ನಿನ್ನ ರಾಮಾಯಣಂ (ಶ್ರೀರಾಮಾ. ೪-೯೭). ೨. ವಾಯುಮಂಡಲ ; ವಾತಾವರಣ. ೩. [ಗಣಿತ] ಬಿಂದು; ಸೊನ್ನೆ ; ಶೂನ್ಯವೆಂಬುದರ ಸಂಕೇತ : ಗಗನಂ ಶೂನ್ಯಾಂಬರ ಖಂ ಮಿಗೆಯಾಕಾಶಂ ವಿಯತ್ತಳಂ ವ್ಯೋಮಾಂಬರ ಮಿಗ ಘನಮಾರ್ಗಂ ನಭಮುಂ ಸೊಗಯಿಪ ಬಿಂದುವಿನ ನಾಮಂ (ವ್ಯವಹಾ. ೧೦-೧೦). ೪. [ಛಂದ] ಎಂಟು ಬಗೆಯ ಅಕ್ಷರಗಣಗಳಲ್ಲಿ ಒಂದು ; ತಗಣ ; ಎರಡು ಗುರು ಒಂದು ಲಘುವಿರುವ ಗಣ (– – U) : ಧರಣಿ ಜಲಾಗ್ನಿ ಮರುದ್ ವ್ಯೋಮರವಿ ಶಶಾಂಕೇಂದ್ರನಿಲಯಮಿವು ಗಣದ ಪೆಸರ್ (ಛಂದೋಲಿ. ೧-೩೭). [ಸಂ.]

ವ್ಯೋಮಕಪರ್ದಿ (ನಾ). ಆಕಾಶವನ್ನೇ ಜಡೆಯಾಗಿ ಉಳ್ಳವನು ; ಶಿವ : ರಸ ಸಮೃದ್ಧಿಯೇ ಬುದ್ಧಿಯ ಸಿದ್ಧಿ ಸರ್ವರಸನಲಾ ವ್ಯೋಮಕಪರ್ದಿ (ಗಣೇಶ. ೧೦-೨೫೨).

[ಸಂ. ವ್ಯೋಮಕಪರ್ದಿನ್]

ವ್ಯೋಮಕೇಶ (ನಾ). ೧. ಆಕಾಶವನ್ನೇ ಕೂದಲಾಗಿ ಉಳ್ಳವನು ; ಶಿವ : ರಾಮ ಸೋಮಯ್ಯನು ಪ್ರೇಮದಿಂದೊಡಗೂಡಿ ವ್ಯೋಮಕೇಶನ ಧ್ಯಾನಿಸುತಲಿ ತಾಮಸವಿಲ್ಲದೆ ಬಂದರು ಮುನಿಗುಂದದಾ ಮಹಗಿರಿಯನೀಕ್ಷಿಸುತ (ಅಬ್ಬಲೂ. ೩-೧೩). ೨. ಶಿವನ ಪ್ರಮಥಗಣಗಳಲ್ಲಿ ಒಬ್ಬನು ; ಒಬ್ಬ ಗಣನಾಥನ ಹೆಸರು : ಎಡದ ಕಣ ಪಾದದಲ್ಲಿ ವ್ಯೋಮಕೇಶನೆಂಬ ಗಣೇಶ್ವರನೆನಿಸಿರ್ಪಿರಿ ಅಯ್ಯ (ಸಿದ್ಧೇವ. ೬೪-೧೮೮).

[ಸಂ.]

ವ್ಯೋಮಗ (ನಾ). ಆಕಾಶದಲ್ಲಿ ಸಂಚರಿಸುವಂತಹುದು ; ದೇವತೆ, ಪಕ್ಷಿ, ಗ್ರಹ, ವಿಮಾನ ಮುಂತಾದುವು : ತದ್ಗೃಹಮಂ ನಿರೀಕ್ಷಿಸೆ ಪಲರ್ ವೀರ್ಯಾನ್ವಿತರ್ ವ್ಯೋಮಗರ್ ಪಲವುಂ ಕುತ್ತಮವುಂಕೆ ಪುಟ್ಟಿದ ನರಂ ಪಂಚತ್ವ ಮಂ ಪೊರ್ದುಗುಂ (ಜಾತಕ. ೨೩-೧) ; ವ್ಯೋಮಗಸ್ಯಂದನದೊಳಡಗಿ ರಥಿ ರಾವಣಂ ನೋಡಿದನು . . . ದಶರಥಸುತನ ಸತಿಯನೋರ್ವಳಂ (ಶ್ರೀರಾಮಾ. ೨೪೨-೩೮೪). [ಸಂ.]

ವ್ಯೋಮಚರ (ನಾ). = ವ್ಯೋಮಗ : ಅನಂತಕಾಂತವ್ಯೋಮಚರಕಾಂತಾಕಟಾಕ್ಷೈಕ ಲಕ್ಷಂ ದಮಿತಾರಿಮಹಾರಾಜಂ ಮೃಗರಾಜಾಸನಾಸೀನನೊಡ್ಡೋಲಗಂಗೊಟ್ಟರೆ (ಶಾಂತಿಪು. ೨-೨೧ ವ). [ಸಂ.]

ವ್ಯೋಮಯಾನ (ನಾ). ೧. ಗಗನಸಂಚಾರ : ವ್ಯೋಮಯಾನಂ ತುಚ್ಛಮೆನೆಯುಂ ಗ್ರಾಮಯಾನಮತುಚ್ಛಮೆನೆಯುಂ ಧರ್ಮೋಪದೇಶಂಗೆಯುತ್ತುಮುತ್ತಮ ತೀರ್ಥೇಶ್ವರಂ ವಿಹಾರಿಸೆ (ಶಾಂತಿಪು. ೧೨-೨೩ ವ). ೨. ಆಕಾಶದಲ್ಲಿ ಸಂಚರಿಸುವ ವಿಮಾನ : "ನಡೆಮಾಡ ಪಾಱೆನೆ ವ್ಯೋಮಯಾನನಾಮಂ" (ಶಬ್ದಮಂ. ೧೧) ; ವ್ಯೋಮಯಾನದಿಂದ ಹೊರಟುಹೋಗುವಳು (ಶಾಕುಂತ. ೯೫-೮). [ಸಂ.]

ವ್ಯೋಮಾಪಗೆ (ನಾ). ಆಕಾಶಗಂಗೆ ; ದೇವನದಿ : ವಿಲಸದ್ವ್ಯೋಮಾಪಗೆಯ ಸಲಿಲಮದಱೊಳ್ ನೆನೆದೊಡಮಳದಿವ್ಯಸ್ನಾನಂ (ವಿಷ್ಣುಪು. ೨-೨-೧೫೭).

[ಸಂ. ವ್ಯೋಮಾಪಗಾ]

ವ್ಯೋಷ (ನಾ). ಮೆಣಸು, ಹಿಪ್ಪಲಿ ಮತ್ತು ಶುಂಠಿಗಳೆಂಬ ಮೂರು ಔಷಧಿಗಳ ಕೂಟ ; ತ್ರಿಕಟುಕ : "ತ್ರಿಕಟು, ತ್ರ್ಯೂಷಣಂ, ವ್ಯೋಷಂ — ಈ ೩ ತ್ರಿಕಟುಕಂ" (ಹಲಾಯು. ೧೦೧-೪೬೩). [ಸಂ.]

ವ್ರಜ (ನಾ). ೧. ಹೋಗುವಿಕೆ ; ತಿರುಗಾಟ. ೨. ದಾರಿ ; ಮಾರ್ಗ ; ರಸ್ತೆ. ೩. ಸಮೂಹ ; ಗುಂಪು : ಎರೆದರ್ಥಿವ್ರಜಂಗಳ್ಗೆ ಚಿಂತಾಮಣಿಯಂ ಸಾಮಂತ ಚೂಡಾಮಣಿಯನಣಿಯರಂ ಬಂದು ಕಂಡಂ ಸುರೇಂದ್ರಂ (ಪಂಪಭಾ. ೭-೯೫); ಸುಗ್ರಾಮಾಗ್ರಹಾರವ್ರಜದಲಂಪುಗಳ . . . ಈಕ್ಷಿಸುತರಸನ್ನೆತಂದ (ತೂರಶಾ. ೧-೬-೧೦) . ೪. ತುರುವಿನ ಮಂದೆ ; ದನಗಳ ಹಿಂಡು : ದ್ವಿಜವಂಶಾಂಬರತಿಗ್ಮರೋಚಿ

ಸುಬಳಕ್ಕಾ ಪಾಲಪಾಣಿಗ್ರಹವ್ರಜಸಂರಕ್ಷಣದಕ್ಷನಾಶ್ರಿತಜನಾಧಾರಂ . . . ವಿದ್ಯಜ್ಞನಾಳಂಕೃತಂ (ಸುಕುಮಾ. ೨-೩೯). ೫. ದನಗಳ ಕೊಟ್ಟಿಗೆ. ೬. ಆಗ್ರಾ ಮತ್ತು ಮಥುರಾದ ಸುತ್ತಮುತ್ತಲ ಪ್ರದೇಶ ; P ನಂದಗೋಪನ ರಾಜಧಾನಿಯಾಗಿದ್ದ ಗೋಕುಲ : ಆ ಸುತರುಂ ಗೋಪಾಲವ್ಯಾಸಂಗದ ಕೆಲವು ಕಾಲಮಿರ್ಕುಂ ವ್ರಜದೊಳ್ (ಜಗವಿ. ೧ ೭೬). ೭. (ಪರಿವ್ರಾಜಕರ) ಸಮೂಹ ; ಸಂಘ : ಸುವ್ರತನಿಲಯಂ ಸಕಲಮಹಾವ್ರತಿ ಸಂತಾನಕಲ್ಪಭೂಜಂ ದಶವಮ್ಮ್ಯವ್ರಜನಿಯುಕ್ತನೆಸೆದಂ ಪ್ರವ್ರಜ್ಯಮಹೇಂದ್ರಸೋಮಪಣ್ಣಿತದೇವಂ (ಎಸಾ. XVI. ೭೯-೨೯ ; 1152). [ಸಂ.]

ವ್ರಜಭಾಷೆ (ನಾ). ಆಗ್ರಾ ಮತ್ತು ಮಥುರಾದ ಸುತ್ತಮುತ್ತಲಲ್ಲಿ ಪ್ರಚಲಿತವಿರುವ ಒಂದು ಭಾಷೆ ; ಹಳೆಯ ಹಿಂದಿ ಭಾಷೆ : ಈತನ ಕವಿತೆಗಳು ವ್ರಜಭಾಷೆಯಲ್ಲೂ ಗದ್ಯಗ್ರಂಥಗಳು ಆಧುನಿಕ (ಖಡೀಬೋಲೀ) ಹಿಂದಿಯಲ್ಲೂ ರಚಿತವಾಗಿವೆ (ಭಾರದ. ೪೬೫). [ಸಂ. ವ್ರಜಭಾಷಾ]

ವ್ರಜವಧು (ನಾ). ವ್ರಜದೇಶದ ಯುವತಿ ; ಗೋಪಿಕೆ ; ಗೊಲ್ಲಿತಿ : ಆನನಾಂಬುಜ ಸೌಭಗದ ರಸದ ಸುಧೆಯ ಸವಿಸವಿದಕ್ಕಿಗಳಿಗನವಧಿಕತೃಪ್ತಿಗಳಾಗವ್ಮೆ ವ್ರಜವಧುಗಳೇತಕೆ ಮರುಳುಗೊಂಡರು ವಿದುರ ಹೇಳೆಂದ (ನಿಘಾಗ. ೩-೨-೧೧). [ಸಂ.]

ವ್ರಣ (ನಾ). ೧. ಹುಣ್ಣು : ವ್ರಣಗಳಗಿ:- ತಲೆಹುಣ್ಣಿಗೆ — ತಂಗಿನ ಕಾಯ ಓಟೆಯ ರಸವ ತೊಡೆಯಲು ತಲೆಹುಣ್ಣು ಮಾಣ್ಗುಂ (ವಪ್ಯವಿ. ೭೭) ; ಕ್ಷಯರೋಗ . . . ಈ ರೋಗಾಣು ಶ್ವಾಸಕೋಶವನ್ನು ಸೇರಿದಾಗ ಅಲ್ಲಿ ಉಂಟಾದ ವ್ರಣ ಅತಿಸೂಕ್ಷ್ಮವಾಗಿರುತ್ತದೆ (ಕಲರೋ. ೮೩). ೨. ಆಯುಧ ಮೊದಲಾದುವುಗಳಿಂದ ಮೈಯಲ್ಲಿ ಆದ ಸೀಳು ; ಗಾಯ : ಕ್ಷಣಕೆ ಮರಳಿಚ್ಛತ್ತನಸ್ಯವ್ರಣವ ತೊಳೆದರು (ಕುವ್ಯಾಶ. ೩-೪೮) ; ನಿನಗೀ ಕೂರ್ಗಣೆಯಿತ್ತಪುದು ನವವ್ರಣಮಣಿಯಂ ಕೊಳ್ಕೆಂದು ಸಿಂಹಳಂ ಪದದಚ್ಛಂ (ರಾಜಶೇ. ೬-೯೮). ೩. ಗುಳ್ಳೆ ; ಬೊಕ್ಕೆ ; ಹೊಪ್ಪಳೆ. [ಸಂ.]

ವ್ರಣಚಿಕಿತ್ಸೆ (ನಾ). ಹುಣ್ಣಿಗೆ ಮಾಡುವ ಔಷಧೋಪಚಾರ : ಬಹಳ ಹೊಮ್ಮಿ ಪಕ್ವವಾದ ವಿದ್ರಧಿಯಲ್ಲಿ ವ್ರಣಚಿಕಿತ್ಸೆಯನು ನಡಸುವುದು (ಶ್ಯಸ್ಯಸಾ. ೨. ೨೯೦).

[ಸಂ. ವ್ರಣಚಿಕಿತ್ಸಾ]

ವ್ರಣಜಾಡ್ಯ (ನಾ). ಹುಣ್ಣಿನ ರೋಗ : ಶ್ರೀರಂಗರಾಯರು ಚಿಕಿತ್ಸೆಗೆ ಅಸಾಧ್ಯವಾದ ಬೆನ್ನುಫಣಿಯೆಂಬ ವ್ರಣಜಾಡ್ಯವು ತಮಗೆ ಸಂಭವಿಸಿದೆ . . . ಎಂದು ತಿಳಿದು (ಮಹಾವಂ. ೨. ೨೩). [ಸಂ.]

ವ್ರಣರೋಗ (ನಾ). ಮೈಯಲ್ಲಿ ಹುಣ್ಣೇಳುವ ಒಂದು ಬಗೆಯ ರೋಗ : ಕಾಚು, ಶುಂಠಿಚೂರ್ಣ, ಮೆಲತುತ್ತ, ಬಿಳಿಯ ಧೂಪ, ಕಾಕಿಮಾರಿಬೀಜ, ಅರಿಸಿನ ಇವಂ ಚೂರ್ಣವಂ ಮಾಡಿ, ಆ ತೈಲದೊಳು ಮರ್ದಿಸಿ ಅರ್ಚನೆಯಂ ಮಾಡಿ ವ್ರಣಕ್ಕೆ ಹಚ್ಚಲು ಮೇಗಾಲು ಹುಣ್ಣು ಮಾಣ್ಗುಂ, ಅವ ವ್ರಣರೋಗಕ್ಕೂ ಇದೇ ಔಷಧ (ವಪ್ಯವಿ. ೧೭೩). [ಸಂ.]

ವ್ರಣವಿದ್ರಧಿ (ನಾ). ಕುರು ; ಬೊಕ್ಕೆ : ಗಂಡೂಪಗುಣ — ಸಕಲವಾದ ಕಂಠರೋಗವನ್ನು . . . ದಾಡೆಯೊಳಾದ ವ್ರಣವಿದ್ರಧಿ ಇವೇ ಮುಂತಾದ ರೋಗಗಳಂ ಪರಿಹರಿಸಿ ದೃಷ್ಟಿಪ್ರಸನ್ನತೆಯನ್ನುಂಟುಮಾಡುವುದು (ಸಕವ್ಯ. ೨೭).

[P ಇದು ಒಂದೇ ಅರ್ಥದ ಎರಡು ಶಬ್ದರೂಪಗಳು ಸೇರಿ ಆದ ರೂಪ]

ವ್ರಣವೈದ್ಯ (ನಾ). ೧. (ಮೈಮೇಲೆ ಉಂಟಾಗುವ) ಗಾಯಗಳನ್ನು ಗುಣಪಡಿಸುವ ವೈದ್ಯ. ೨. ಗಾಯಗಳನ್ನು ಗುಣಪಡಿಸುವುದಕ್ಕೆ ಸಂಬಂಧಿಸಿದ ವೈದ್ಯಶಾಸ್ತ್ರ. [ಸಂ.]

ವ್ರಣಾಶನ (ನಾ). ಹುಣ್ಣಿನ ರಕ್ತ, ಕೀವುಗಳನ್ನು ಹೀರಿ ಬದುಕುವ ಕ್ರಿಮಿ : "ವ್ರಣಾಶನಮೆನಲ್ಕುಣ್ಣೆ" (ಮಂಗರಾ. ೪೯-೧೪). [ಸಂ.]

ವ್ರಣಿ (ನಾ). ಒಂದು ಬಗೆಯ ಸಸ್ಯ : "ತೇ[ವಾಕಾಂ. ಕ್ಯಾ]ರಣಂ ವ್ರಣಿಯಕ್ಕುಂ" (ಮಂಗರಾ. ೪೯-೧೪). [ಸಂ.]

ವ್ರತ (ನಾ). ೧. ನಡವಳಿಕೆ ; ಆಚರಣೆ ; ಆಚಾರ : ಎನಿತಾನುಂ ತೆಱದ ಕಥೆಗಳುಮಂ ದೃಷ್ಟಾಂತಂಗಳುಮಂ ತೋಱಿ ನುಡಿದುಂ ವ್ರತಕ್ಕೆ ತರಲಾಱದೆ (ಧರ್ಮಾಮೃ. ೧೧-೧೬೯). ೨. (ತಾನಾಗಿ ಕೈಗೊಳ್ಳುವ) ನಿಯಮ ; ನೋಂಪಿ ; ಕಟ್ಟುಪಾಡು : ವ್ರತಮಂ ಪೇಳ್ವೊಡೆ ನೋಂತು . . . ಧರ್ಮದುನ್ನತಿಯಂ ಪೆರ್ಚಿಸುವಂದು ನೀನೆ ಪಿರಿಯೆ ಶ್ರೀದಾನಚಿಂತಾಮಣೇ (ಅಜಪು. ೧೨-೮) ; ವ್ರತವುಳ್ಳವರ ಬತಗೆಡಿಸಿತ್ತು ನೋಡಾ ಮನವು (ಅಖಂಡೇ. ೨೫೭-೫) ; ರಾಜೇಂದ್ರ ಮೆಚ್ಚತಯ್ ನಿನ್ನೀ ವ್ರತಕ್ಕೆ ಋತಂ (ಶ್ರೀರಾಮಾ. ೧೪-೬೫೮). ೩. ಶಾಸ್ತ್ರೋಕ್ತವಾಗಿ ಮಾಡುವ ಪೂಜೆ, ಉಪವಾಸ ಮುಂತಾದ ಧಾರ್ಮಿಕಕ್ರಿಯೆಗಳ ಆಚರಣೆ : ಇದರಂತೆ ಬೇರೆ ಬೇರೆ ಸಮಯದ ಚಾತುರ್ಮಾಸ್ಯವ್ರತ, ಗಣೇಶವ್ರತ . . . ಮುಂತಾಗಿ ಅನೇಕ ವ್ರತಗಳಿವೆ (ಭಾಷಾಪ್ರ. ೪೮). ೪. ಯಜ್ಞ ; ಯಾಗ : ವ್ರತ ಮುಗಿಯೆ ವ್ರತಿಗಳನು ಕಳುಹಿದ ದಾನದಲಿ ತಣಿಸಿ (ಕಾಶಿಖಂ. ೧-೬೪). ೫. ನಡತೆ ; ಶೀಲ ; ಚಾರಿತ್ರ್ಯ : 'ವ್ರತಗೆಡಿಸು' ಪರಾ.

ವ್ರತತಪ್ಪು = ನಿಯಮವು ಹಾಳಾಗು ; ನೇಮಗೆಡು : ವ್ರತತಪ್ಪಲು ಶರೀರವಿಡಿವ ನರಕಂಗೆ ಮುಕ್ತಿ ಇಲ್ಲ (ಸರ್ವಜ್ಞ. ೧೪೬-೮೫೯). ವ್ರತೋಪವಾಸ = ನೋಂಪಿ ಮತ್ತು ಉಪವಾಸ : ವ್ರ [ಕಾಶಾಂ. ಬ್ರ] ತೋಪವಾಸಂಗಳಂ ಮಯ್ಯಂದಂಡಿಸುತ್ತಂ ಸಲ್ಗುದೊಂದು ದಿವಸಂ (ವಡ್ಡಾರಾ. ೧೭೨-೨೬) ; ಅಪುತ್ರವಂತನು ಮಾಡುವ ವ್ರತೋಪವಾಸಗಳು ವ್ಯರ್ಥ (ವಚಿಕಾ. ೮೩). [ಸಂ.]

ವ್ರತಕೊಳ್ (ಕ್ರಿ). ನೋಂಪಿಯನ್ನು ಕೈಗೊಳ್ಳು : ಶ್ರೀಮತ್ ಎಱೆಯಪಗಾಮುಣ್ಡನು ಮದ್ದಯ್ಯನು ಬನ್ದಿಲ್ಲಿ ವ್ರತಕೊಣ್ಡರ್ (ಎಕ. II. ೪೭೮ ; ೪೮೦). [ವ್ರತ + ಕೊಳ್,]

ವ್ರತಗೆಡಿಸು (ಕ್ರಿ). ಶೀಲವನ್ನು ಹಾಳುಮಾಡು ; ಶೀಲವನ್ನು ಕೆಡಿಸು : ಶಿಲೆಯ ಸತಿಯಳ ಮಾಡಿ ತ್ರಿಪುರರ ಲಲನೆಯರ ವ್ರತಗೆಡಿಸಿ ಕೂಡಿದ ಕೆಲಸವುತ್ತಮವಾಯ್ತು (ಪೂರಾ. ೩೦) ; ಲಲನೆಯರು ಯೇಕಾಕಿಯಾಗಿ ಸುಳಿದೊಡೆ ನೋಡಿಯೆಳಸಿ ವ್ರತಗೆಡಿಸುವರು ಕಾಮುಕರು (ಸಮಮೋ. ೮-೫೨). [ವ್ರತ + ಕೆಡಿಸು,]

ವ್ರತಗೆಡು (ಕ್ರಿ). ನೇಮಭಂಗವಾಗು ; ನಿಯಮವು ಹಾಳಾಗು : ವ್ರತಗೆಟ್ಟು ಬಳಿಕ ಘಟ ಉಳಿಯಬಲ್ಲುದೆ (ಅವಚಂ. ೪೨-೧೪೨) ; ಸಿತನಾಗನಾಳ್ವನರ್ಘಾಂಗಿಗೋಸುಗವಿಂ ತನ್ನ ವ್ರತಗೆಟ್ಟು ನೃಪಗೆ ಸಿಕ್ಕಿದನ . . . ತಮ್ಮನ ತಱಿದಾತಗಾನತನಾಗಿ ಪೇಳು ಮೇಲ್ಗತಿಯ (ಮೋಪಶ. ೪-೧). [ವ್ರತ + ಕೆಡು,]

ವ್ರತಗೇಡಿ (ನಾ). ಕಟ್ಟುಪಾಡನ್ನು ಹಾಳುಮಾಡುವವನು ; ನಿಯಮವನ್ನು ಕೆಡಿಸುವವನು : ವ್ರತಗೇಡಿ ವ್ರತಗೇಡಿ ಎಂಬುವ ತಾನೆ ವ್ರತಗೇಡಿ (ಅವಚಂ. ೪೨-೧೪೨) ; ತರುಣಿ ರಜಸ್ಸ್ನತೆಸ್ನೆಲೆತೆಯುಮಾದ ಮೂರು ದಿವಸದೊಳು ಪುರುಷ ಸಂಯೋಗ ಮಾಡಲು ಜಾರ ಪುಟ್ಟುವನು . . . ಆರು ದಿವಸದಲಿ ನಿರುತವ್ರತಗೇಡಿ . . . ತಾಂ ಸಂಭವಿಸುವ (ನಮಮೋ. ೧೪-೪೧). [ವ್ರತ + ಕೇಡಿ,]

ವ್ರತಚರ್ಯೆ (ನಾ). ೧. ಪುಣ್ಯಕಾರ್ಯಾಚರಣೆ : ಬಳಲಿದೆಯಲಾ ತನಗೋಸುಗಿನ್ನೆಗವಕಟಕಟ ನಿಯತಾಶನವ್ರತಚರ್ಯೆಯಲಿ ಮತ್ಪಾದಸೇವೆಯಲಿ . . . ಎನುತಾಸನದಲಿರದೆದ್ದು ತಕ್ಕೈಸಿದನು ನಿಜಸತಿಯ (ನಿಘಾಗ. ೩-೧೧-೩). ೨. [ಜೈನ]ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು ; "ಬ್ರಹ್ಮಚಾರಿಯು ಹಿಂಸಾತ್ಯಾಗವೇ ಮೊದಲಾದ ವ್ರತಗಳನ್ನು ಧರಿಸಿ ಅಧ್ಯಯನವನ್ನು ಕೈಗೊಳ್ಳುವುದು (ಜೈನಕೋ. ೮೫) : ಆದಾನ ಪ್ರೀತಿ . . . ಉಪನಯನ ವ್ರತಚರ್ಯಾ . . . ತ್ಯಾಗನಿರ್ವೃತಿಯೆಂಬಯ್ತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ, ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ).

[ಸಂ. ವ್ರತಚರ್ಯಾ]

ವ್ರತತಿ (ನಾ). ೧. ಹರಹು ; ವಿಸ್ತಾರ. ೨. (ಹಬ್ಬುವ) ಬಳ್ಳಿ ; ಲತೆ : ಕಲ್ಪವ್ರತತೀಸಂಸಕ್ತಕಲ್ಪಕ್ಷಿತಿರುಹಮೆನೆ ಪೋಲ್ದಿರ್ದನಾ ಕಾಂತೆಯರ್ ತಮ್ಮತಿರಾಗಂ ಪೆರ್ಚಿ ತನ್ನಿರ್ಕೆಲದೊಳಮಿರೆ ತನ್ನಾಭಿರಾಜಾಗ್ರಪುತ್ರಂ (ಆದಿಪು. ೮-೨೩) ; ಜಾಜಿ ಮೊಲ್ಲೆಗಳೆನುವ ವ್ರತತಿಗಳಿಂದ ವನ ಸದ್ಮಿನಯಗೊಂಡಿಹುದು (ಬಜ್ಜಪ್ಪ. ೧೯-೧೪). ೩. ಗುಂಪು ; ಸಮೂಹ ; ಸಂದಣಿ : ಸತಿಯರೋಲಗಸಾಲೆಯೊಳು ಗುಣವತಿಯು ಸುತನಾಡಿಸುವ ಸಖಿಯರ ವ್ರತತಿಯೊಳಗಾ ತಾರೆ ನಡುವಣ ರೋಹಿಣಿಂಬಂತೆ ವಿತತದಿಂದೊಪ್ಪಿರಲು (ಬಜ್ಜಪ್ಪ. ೧೩-೧೨). [ಸಂ. ವ್ರತತೀ]

ವ್ರತನಿಯಮ (ನಾ). ಯಾವುದಾದರೂ ವ್ರತಾಚರಣೆಗೆ ಸಂಬಂಧಿಸಿದ ಕಟ್ಟುಪಾಡು,— ಕಟ್ಟಳೆ : ಜಾತಾಭಿಜಂಗಮಾಗಮಜಾತಕ್ಷ(ಮ)ವಿತತಯಾಯ್ತು

ಮುನಿಪತಿಯೆಸೆದಿರ್ದಾ ತನು ಸಪ್ತರ್ಧಿಸಮನ್ವಿತಂ ವ್ರತನಿಯಮಯುಕ್ತ್ವಗಸ್ಥೀಭೂತಂ (ಶಾಂತಿಪು. ೯-೧೧೨); ಸತಿಯರ ಕೈಸೋಂಕಿದನ್ನವ ಸವಿವುದತಿಶಯವಾಡಲೆನ್ನಳವೆ ಅತಿಕೃಚ್ಛ್ರ ಚಾಂದ್ರಾಯಣ ಸಾಂತಪನಾದಿ ವ್ರತನಿಯಮದ ಪವಣಲ್ಲ (ಹದಿಬ. ೨-೧೩). [ಸಂ.]

ವ್ರತಭಂಗ (ನಾ). ನೇಮವನ್ನು ಮೀರುವುದು ; ನಿಯಮದ ಉಲ್ಲಂಘನೆ : ಪುಸಿ ನುಡಿಗಳಂ ಪರಪುವುದುಂ ತಪಂಗಿಡಿಪುದುಂ ವ್ರತಭಂಗಂ ಮಾಟ್ಟುದುಂ . . . ದರ್ಶನ ಮೋಹನೀಯಕರ್ಮದಾಸ್ರವಮಕ್ಕುಂ (ಪಸಾರ. ೪೬); ವ್ರತಭಂಗಮಿಲ್ಲಮಿದಕೆಂದತಿ ಶಯಮುದಮಾಳ್ದು ತೊರೆದ ಪಶುಗಳ ಮೊಲೆಯಂ ಮತಿ ಮಿಗೆ ನಲಿದುಂಡವು ಜನಪತಿಯಚ್ಚರಿವಡೆದು ಕೀರ್ತಿಸುತ್ತಿರೆ ಧರೆಯೊಳ್ (ವೃಷಪ. ೪೧-೨೬). [ಸಂ.]

ವ್ರತಭ್ರಷ್ಟ (ನಾ). = ವ್ರತಗೇಡಿ : ವ್ರತಭ್ರಷ್ಟರನಿಟ್ಟೊರಸುವ (ಸರ್ವವ. ೧೮೬-೮೬೦); ಅಧಿಕಪ್ರತಿಜ್ಞೆಗಳನಾಂತ ನಿನ್ನ ವ್ರತಭ್ರಷ್ಟನನಿಸಿ ಜೋಡಾಡಿ ಕಾಡುವೆನು (ಹಚಕಾ. ೨-೩೪). [ಸಂ.]

ವ್ರತಸ್ಥ (ನಾ). ಧಾರ್ಮಿಕ ಕ್ರಿಯಾಚಾರಗಳ ಕಟ್ಟುಪಾಡಿಗೆ ಬದ್ಧನಾದವನು ; ನೋಂಪಿಯನ್ನು ಕೈಗೊಂಡವನು ; ವ್ರತಿ : ಹುಸಿ ನುಸುಳು ಕೊಲೆ ಕಳವು ಪಾರದ್ವಾರವ ಮಾಡುವನ್ನಬರ ವ್ರತಸ್ಥನಲ್ಲದೆ ನೇಮಕ್ಕೆ ಸಲ್ಲ (ಸರ್ವವ. ೧೮೯-೮೮೧). [ಸಂ.]

ವ್ರತಹಾನಿ (ನಾ). ಹಿಡಿದ ನೇಮಕ್ಕೆ ಉಂಟಾಗುವ ಅಪಚಾರ ; ನಿಯಮಭಂಗ : ವ್ರತಹಾನಿ ಹಿಂಸೆಯೊಂದೀ ಗತಿಗಿಕ್ಕಿದುದುಟಿದ ನಾಲ್ಕುಮಾದೊಡೆ ಬಟಿಕೇಂ ಚತುರಂಗ ಬಲಸಮೇತಂ ಪ್ರತಿಪಕ್ಷಂ ಶೂರನಾದೊಡೇನಂ ಮಾಡಂ (ಯಶೋಚ. ೪-೩೪). [ಸಂ.]

ವ್ರತಹೀನ (ನಾ). ೧. = ವ್ರತಗೇಡಿ : ವ್ರತಹೀನರ್ ಸನ್ಮಾರ್ಗಪ್ರತಿಕೂಲರ್ ವ್ಯಸನವಶಗತರ್ ಪಾಪಿಗಳಿಂತತಿಕಷ್ಟರಪ್ಪರವನಿಯೊಳತಿಥಿಗಳಿನ್ನನ್ನದಾನಮಂ ಕುಡುವೆಡೆಯೊಳ್ (ಆದಿಪು. ೧೫-೪೩); ವ್ರತಹೀನನ ಬೆರೆಯಲಾಗದು ಬೆರೆದರೆ ನರಕ ತಪ್ಪದು (ಸರ್ವವ. ೧೮೬-೮೬೩). ೨. ನೇಮ ತಪ್ಪುವುದು ; ನಿಯಮಬಾಹಿರತೆ : "ಅಪರಾಹ್ಣ ದರ್ಭಯಂಜಳಿ ವ್ರತಹೀನಮುಂ ಕುತಪಮೆಂದನಿಕುಂ" (ನಾನಾರ. ೧೦೮). [ಸಂ.]

ವ್ರತಾಚರಣ (ನಾ). ೧. ಹಿಡಿದ ನೋಂಪಿಯನ್ನು ನಿಯಮಪೂರ್ವಕವಾಗಿ ಆಚರಿಸುವುದು . ೨. ಯಜ್ಞದ ಆಚರಣೆ : ಅರಸಂ ದೀಕ್ಷಿತನಿಲ್ಲಿ . . . ನೀನುಂ ಗೃಹೀತವ್ರತಾಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ ಕೌರವೇಶ್ವರನೀತಂ ಪಶುವಾಗೆ ಬೇಳ್ದೆನಿವನಂ ಕೋಪಾಗ್ನಿಯಿಂದಗ್ನಿಜೇ (ಗದಾಯು. ೮-೪೬). [ಸಂ.]

ವ್ರತಾಚರಣೆ (ನಾ). = ವ್ರತಾಚರಣ ೧ : ವ್ರತಾಚರಣೆಯಲ್ಲೇ ಕಾಲ ಕಳೆದಿದ್ದೇನೆ . . . ನಿಮಗೆ ಅವೆಲ್ಲಾ ಹೇಗೆ ತಿಳಿಯಬೇಕು (ಹಮಕೂ. ೪). [ಸಂ. ವ್ರತಾಚರಣ]

ವ್ರತಾಚಾರ (ನಾ). = ವ್ರತಾಚರಣ ೧ : ಲಿಂಗದ ಪರಿಪೂರ್ಣವ ಕಾಣದಿಹ ಅಂಗಹೀನರಿಗೇಕೆ ವ್ರತಾಚಾರದ ಹೂಲಬು (ಅವಚಂ. ೨೫೬- ೧೧೬೮); ವ್ರತಾಚಾರವ ಹಿಡಿದು ಬಿಟ್ಟಲ್ಲಿ ಗುರುವಾದಡೂ ಪರಿಹರಿಸಬಾರದು . . . ಜಂಗಮವಾದಡೂ ಪರಿಹರಿಸಬಾರದು (ಸಕವ. I, ೨೧೪-೮೨೬). [ಸಂ.]

ವ್ರತಾವತರಣ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು ; IP "ಬ್ರಹ್ಮಚರ್ಯವ್ರತತ್ಯಾಗಕ್ರಿಯೆ ; ಹನ್ನೆರಡು ಅಥವಾ ಹದಿನಾರು ವರ್ಷಗಳ ನಂತರ ಬಾಲಕನು ಗುರುಸಾಕ್ಷಿಕವಾಗಿ ಪೂಜೆಮಾಡಿ ಕೈಕೊಳ್ಳಬೇಕಾದ ಸಾರ್ವಕಾಲಿಕವ್ರತ" (ಜೈನಕೋ. ೮೫): ಆದಾನ ಪ್ರೀತಿ ಸುಪ್ರೀತಿ . . . ಉಪನಯನ ವ್ರತಚರ್ಯಾವ್ರತಾವತರಣ . . . ವಿಹಾರಯೋಗ್ಯತ್ಯಾಗನಿರ್ವೃತಿ ಯೆಂಬಯ್ವತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳಂ (ಆದಿಪು. ೧೫-೧೫ ವ); ವ್ರತಚರ್ಯೆಯುಂ ವ್ರತಾವತರಣಮುಂ ವಿವಾಹಮುಂ . . . ಅಪ್ಪಯ್ವತ್ತುಮೂಱು ಗರ್ಭಾನ್ವಯಕ್ರಿಯೆಯೊಳು (ಚಾಪುಂಪು. ೨೧೨). [ಸಂ.]

ವ್ರತಿ (ನಾ). ೧. ನಿಯಮಬದ್ಧವಾದ ನಡವಳಿಕೆಯುಳ್ಳವನು : ಅತಿಗಂಭೀರ ನುದಾರಧೀರನು ಮಹಾಸಂಪನ್ನ . . . ಲಂಚಕ್ಕೆ ಕೈನೀಡದಂ ವ್ರತಿ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ ಪತಿಕಾರ್ಯಂ ವರಮಂತ್ರಿಯೈ (ಸೋಮೇಶ. ೬೧). ೨. ಯಾವುದಾದರೊಂದು ನೋಂಪಿಯನ್ನು ಹಿಡಿದು ನಿಯಮಪೂರ್ವಕವಾಗಿ ನಡೆಸುವವನು ; ನೇಮಾನುಷ್ಠಾನಗಳನ್ನು ಆಚರಿಸುವವನು : ವೀರನಾದರೆ ವೈರಿಗಳು ಮೆಚ್ಚಬೇಕು (ಬಸವ. ೬೭೧); ತನುಮನದ ಅವಗುಣವೆಂಬ ಭವಿಯ ಕಳೆಯದೆ ಹೊಱಗೆ ವ್ರತಿಗಳೆಂದರೆ ಆರು ಮೆಚ್ಚುವರಯ್ಯಾ (ಸಿದ್ಧೇಪ. ೧೦೦-೩೦೭). ೩. ತಪಸ್ಸು ಮಾಡುವವನು ; ತಪಸ್ವಿ : ವೆಗ್ಗಳಿಸುವ ಜಿತೇಂದ್ರಿಯರು ನಿಷ್ಕಾಮಿಗಳು ವ್ರತಿಗಳೊಳಗಾದವರ ಕುಸುಮಬಾಣನಂಡಲೆ ಯೊಳಳವಳಿವಂತೆ ಮಾಳ್ಪೆನು (ಹಚಕಾ. ೩-೨೯); ವ್ರತಿ ವಾನಪ್ರಸ್ಥಂ ಯತಿಗಳಿರದೆ ಗೈವತಿಘೋರತಪದಾಚರಣೆ ಸತಿಯರ ಧರ್ಮಕ್ಕೆ ಸರಿಯಿಲ್ಲೆಂದು ಗೀಷ್ಪತಿಯಗಸ್ತ್ಯ ನೊಳಾಡಿದನು (ಹದಿಬ. ೨-೪೫); ವಜ್ರರೋಮನ ಚಿತ್ತವಜ್ರದ ಮಹಿಮೆಗಳ್ಕುತಾ ವ್ರತಿಯ ಕೈಂಕರ್ಯಮಂ ನೋಂತಿರ್ದ ವ್ಯಾಘ್ರಮುಂ ಧ್ಯಾನಸ್ಥಮುನಿಯ ಪಕ್ಕದೊಳರೆಯ ಮೇಲಿರ್ದು ನೋಡುತಿರೆಯಿರೆ (ಶ್ರೀರಾಮಾ. ೧೪೩-೪೩). ೪. ಯಾಗಮಾಡುವವನು ; ಯಜ್ಞದೀಕ್ಷಿತ : ವ್ರತ ಮುಗಿಯೆ ವ್ರತಿಗಳನು ಕಳುಹಿದ ದಾನದಲಿ ತಣಿಸಿ (ಕೌಶಿರಾ. ೧-೬೪). ೫. [ಜೈನ] ಜೈನಸಂನ್ಯಾಸಿ ; ಸವಣ : ಈ ವ್ರತಿಗಳು ತಂತಮ್ಮ ಸೀಮೆಯಿಂ ಪೊಱಗೆ ಮಹಾವ್ರತಿಗಳೆನೆ ಪಡುವರ್ (ಪಸಾರ. ೩೧೧). [ಸಂ. ವ್ರತಿನ್]

ವ್ರತಿಕ (ನಾ). [ಜೈನ] ಧರ್ಮಾನುಷ್ಠಾನಗಳನ್ನು ನಿಯಮಪೂರ್ವಕವಾಗಿ ಆಚರಿಸುವವನು : ಪರಮದಯಾತತ್ಪರನೆನಿಸಿದ ಶಲ್ಯತ್ರಯವಿರಹಿತನೆರಡನೆಯ ನೆಲೆಯವಂ ತಾಂ ವ್ರತಿಕಂ (ಸುಕುಮಾ. ೬-೨೭); ವ್ರ[ಪಾಠಾಂ. ಪ್ರ]ತಿಕಂಗಂ ಭಾವಿಪಡವ್ರ [ಪಾಠಾಂ. ಪ್ರ]ತಿಕಂಗಾವುದುತ್ತರಂ ಸುರಮಣಿಯೊಳ್ ಪ್ರತಿಯಿಡೆ ಕಾಚಿನ ಮಣಿಯೊಳು ಮಿತರಂ ನಾಲಗೆ ಮುರುಂಟಿ ಪೋಗದೆ ಧರೆಯೊಳ್ (ಪುಣ್ಯಾಸ್ರ. ೫-೫೪); ಎಮ್ಮರಸನ ಕಂಡು ಕೆಲಕೆಲರು ವ್ರತಿಕರಾದರು (ಭರಚ. ೪೭-೧೦೨). [ಸಂ.]

ವ್ರತಿಪ (ನಾ). ತಪಸ್ವಿ ; ಋಷಿ ; ಮುನಿ : ಕರುಣಿಸುವವೊಲು ಕರುಣಿತನವನು ಮೆಱೆಯಲೋಸುಗವಿರದೆ ಗಗನೇಚರರ ಗತಿಯಲಿ ಬಂದನ್ನೆ ದ್ವೈಪಾಯನವ್ರತಿಪ (ಕುವ್ಯಾದ್ರೋ. ೭-೨೦). [ಸಂ.]

ವ್ರತಿಪತಿ (ನಾ). = ವ್ರತಿಪ : ವಂದ್ಯಂ ವರ್ಧಮಾನವ್ರತಿಪತಿ ಸುಕುಮಾರಂ ಕಥಾನಾಯಕಂ ತಚ್ಚರಿತಂ ಕಾವ್ಯಂ (ಸುಕುಮಾ. ೧-೬೦) ; ವ್ರತಿಪತಿಯಿದು ಸಂಸಾರಸ್ಥಿತಿ ಮಾಣ್ಬುದು ದುಃಖವೇಗಮಂ ನೀಮೆನುತುಂ ಪ್ರತಿಬೋಧಿಸೆ ಮಾಣ್ದಂತಾ ಕ್ಷಿತಿಪತಿಗಳ್ ಬಂದು ಪೊಕ್ಕು ಮಧುರಾಪುರಮಂ (ಮಹಾನೇ. ೧೬-೮೧). [ಸಂ.]

ವ್ರತೀಕ (ನಾ). = ವ್ರತಿ ೫ : ಜಯಭದ್ರಾಖ್ಯ ಸುಭದ್ರ ಪಾಂಡುಯತಿ ಕಂಸಾಚಾರ್ಯ ಲೋಹಾರ್ಯ ಸಜ್ಜಯಪಾಳಾರ್ಯ ವಿಶಾಖದತ್ತ ಜಯಬಾಹ್ವಾದಿ ವ್ರತೀಕರ್ . . . ಸಂದರ್ ಧರಾಚಕ್ರದೊಳ್ (ಸುಕುಮಾ. ೧-೧೨).

[IP ಇದು 'ವ್ರತಿಕ' ಎಂಬುದನ್ನು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ]

ವ್ರಯ 'ಬಿಯ' ನೋ.

ವ್ರಹ್ಮಾದೇಯ (ನಾ). ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಭೂಮಿ, –ಉಂಬಳಿ : ಸಿರಿವಚ್ಚನುಂ ಶ್ರೀಪುರುಷನುಂ ದೇವಾಸುರರಾ ಶಿವಮಾರನುಂ ಅಗ್ರಹಾರಮೆಳಮ್ಬುಣುಸೆ ವ್ರಹ್ಮಾದೇಯಮಾಸಾಮಿಗ ಶ್ರೀ(?ವ್ರಿ)ತಿ ಅಱಿದು ಕೊಳೆ ಕೊಡಲಾರದೆ ಎನೆಬರು ಎಱಿದು ಸತ್ತೂರ್ (ಮೃಆರಿ. ೧೯೪೪, ೬-೨ ; ೮೦೮). 'ಬ್ರಹ್ಮಾದೇಯ' ಪರಾ.

[IP ಇದು 'ಬ್ರಹ್ಮದೇಯ'ವೆಂಬುದರ ಅಪಲಿಖಿತವಿರಬಹುದು]

ವ್ರಾತ (ನಾ). ೧. ಗುಂಪು ; ಸಮೂಹ : ಅವನಿಪತಿವ್ರಾತಮಣಿಮಕುಟ ಕಿರಣದ್ಯೋತಿತಪಾದಂ (ಪಂಪಭಾ. ೧-೧೬); ದುಮ್ಮಿಕ್ಕುವರ್ಬಿಯಾಘಾತದಿಂ ಭೀಷ್ಮವಹ ಜಲಪಾತವ್ರಾತಂಗಳಿಂ ಭೀಕರಮರಣ್ಯಂ! (ಶ್ರೀರಾಮಾ. ೮೮-೨೯೧). ೨. ದೇಹಶ್ರಮ ; ಪರಿಶ್ರಮ. [ಸಂ.]

ವ್ರಾತ್ಯ (ನಾ). ೧. ಉಪನಯನ ಮೊದಲಾದ ಸಂಸ್ಕಾರವಿಲ್ಲದವನು ; ಅಸಂಸ್ಕೃತ : "ಸಂಸ್ಕಾರಗಳಿಲ್ಲದವನಂ ವ್ರಾತ್ಯನೆಂಬುದು" (ಹಲಾಯು. ೬೭-೨೫೦); ಶ್ರುತಿಯನುಷ್ಠಾನರಹಿತಂ ಬಹುಲಸತ್ಕಾರತತಿರಹಿತನೇ ವ್ರಾತ್ಯನವಕೀರ್ಣಿಯಪ್ಪನ್ನೆ ವ್ರತಹತಂ ದುಶ್ಶೀಲನೇ ಸಿತಾಖ್ಯಂ ತ್ಯಕ್ತಘಾತಕಂ ವೀರಹಾಖ್ಯಂ (ವೀಶೃಪು. ೭-೨-೨೨). ೨. ಶೂದ್ರಪುರುಷನಿಂದ ಕ್ಷತ್ರಿಯಸ್ತ್ರೀಯಲ್ಲಿ ಜನಿಸಿದವನು. ೩. ನೀಚ ;

ಅಧಮ ; ಕೆಟ್ಟವನು : ಲೋಭ . . . ಪತಿತ ವ್ರಾತ್ಯ ಸೋಮವಿಕ್ರಯಿಯರಾದಿಯಾದ ದುರಾಚಾರಿಗಳ ಮನೆಗಳೊಳಿರ್ಮಯುಂ ತಿರಿದುಂಡು ದೇಹಮಂ ಪೊರೆಯಲಾಗದು (ಭಾರಕಾಂ. ೩೬-೨೬೫); ಏ ಬಿನದಕೆ ನನ್ನೆಡಗೈತಂದ ವ್ರಾತ್ಯನೆಡೆಗೆ ದೇಹಿ ಎಂದು ಬಂದ ? (ಗಗೇಶ. ೩-೫೦). [ಸಂ.]

ವ್ಯಾಮ್ಮಣ (ನಾ). ಬ್ರಾಹ್ಮಣ ; ಹಾರುವ : ಈದಾನಟ್‌ತ್ತೋನ್ . . . ಸಾಸಿರ್ವ್ವರು ವ್ಯಾಮ್ಮಣರು ಸಾಸಿರ ಕವಿಲೆಯೋಮಾನ್ ಕೊನ್ನೋನ್ ಅಪ್ಪೊನ್ (ಎಪಿ. IV (R). ಹಗ್ಗಡ. ೧೫೬-೧೦; ಸು. 700).

[IP ಇದು 'ಬ್ರಾಹ್ಮಣ' ಎಂಬುದರ ಅಪಲಿಖಿತ]

ವ್ರಿತ್ತಿ , ವಿರ್ತಿ (ನಾ). ೧. ಜೀವನೋಪಾಯಕ್ಕಾಗಿ ಬಿಟ್ಟ ಉಂಬಳಿ, – ದತ್ತಿ : ಉತ್ತರಾಯಣಸಂಕ್ರಾಂತಿಯಂದು ತಮ್ಮ ಮಲ್ಲುಗಾಣದ ನಾಲ್ಕು ವ್ರಿತ್ತಿಯೊಟಗೆ ಬಿಟ್ಟ ವ್ರಿತ್ತಿ ಒಂ XXX (ಪೌಣಾ. XX, ೬೪-೧೩; 1100). ೨. ಗ್ರಾಮಗಳ ಸಮುದಾಯ ; ಹಳ್ಳಿಗಳ ಗುಂಪು : ಉತ್ತರಾಯಣಸಂಕ್ರಾತಿಯಂದು ತಮ್ಮ ಮಲ್ಲುಗಾಣದ ನಾಲ್ಕು ವ್ರಿತ್ತಿಯೊಟಗೆ ಬಿಟ್ಟ ವ್ರಿತ್ತಿ ಒಂ XXX (ಪೌಣಾ. XX , ೬೪-೧೩; 1100). ೩. ಒಂದು ಬಗೆಯ ತೆರಿಗೆ : ಶ್ರೀಮದ್ರಾಜಗುರು ರುದ್ರಶಕ್ತಿದೇವರಿಗೆ ಯೆರಡು ವ್ರಿತ್ತಿ (ಎಪಿ. XVI, ಗುಬ್ಬಿ, ೭೬-೨೩; 1252). ವಿರ್ತಿ : ೩. ಇರ್ತ್ರಿ ವಿರ್ತಿಯ ಸಲಿಸದವರ್ ೬೦,೦೦೦ವರ್ಷ ಕುಂಭೀಪಾಕನರಕಯೊಳುತ್ತ XXX ಕುತ್ತಿಸದೆ ಮಂಗಳಮಹಾಶ್ರೀ (ಎಪಿ. XI, ಹೂಳ್ಕ. ೧೪-೨೪; 1210). 'ವಿತ್ತಿ' ಪರಾ.

[IP ಇದು ಸಂಸ್ಕೃತದ 'ವೃತ್ತಿ' ಎಂಬುದರ ಅಪಲಿಖಿತ]

ವ್ರಿತ್ತಿಮಂತ (ನಾ). ಉಂಬಳಿಯನ್ನು ಪಡೆದವನು : ಆ ವ್ರಿತ್ತಿಮನ್ತರುಗಳ ಕುಳ ಶ್ರೀಮದ್ರಾಜಗುರುರುದ್ರಶಕ್ತಿದೇವರಿಗೆ ಯೆರಡು ವ್ರಿತ್ತಿ (ಎಪಿ. XVI, ಗುಬ್ಬಿ, ೭೬-೨೨; 1252); ಆ ತತ್ತಿನ ವ್ರಿತ್ತಿಮನ್ತರುಗಳಿಗೆ ಈ ಹಸುಗೆಯ ಕಾಲದಲ್ಲಿ . . . . ಕೊಟ್ಟ ಬೇಡರ ಮೂಡೊಕ್ಕಲು (ಎಪಿ. XII, ತಿಪಟೂ. ೪೧-೪೭ ; 1324 ?).

[IP ಇದು 'ವೃತ್ತಿವಂತ' ಎಂಬುದರ ಅಪಲಿಖಿತವಿರಬಹುದು]

ವ್ರಿಹಿಗ (ನಾ). ಒಂದು ಬಗೆಯ ಏಕದಳಧಾನ್ಯ ; ನೆಲ್ಲು ; ಬತ್ತ : ಕ್ರತುಗಳಿಡೆಯೊಳಿಗರಮನೆಯಲಿ ಪ್ರತಿದಿನವು ರಂಜಿಸುತ ದೇವರಿಗತಿಶಯದ ನೈವೇದ್ಯ ತಾನಹೆನೆಂದನಾ ವ್ರಿಹಿಗ (ರಾಮಚ. ೩೮). [< ವ್ರೀಹಿ + – ಗ್ಯ./ IP ಇದು 'ವ್ರೀಹಿಗ' ಎಂಬುದನ್ನು ಧಂದಸ್ಸಿಗಾಗಿ ಮಾಡಿಕೊಂಡಿರುವ ರೂಪ]

ವ್ರೀಡಾಕರ (ನಾ). ಲಜ್ಜೆ ತರುವಂಥದು ; ನಾಚಿಕೆಯನ್ನುಂಟು ಮಾಡುವಂಥದು : ಅವ್ರತಿಕಂಗೆಱಗದ ವೀರವ್ರತಮಂ ಕೇಳ್ದು ಹರ್ಷಮಂ ತಾಳ್ದದ ನಿನ್ನಬ್ರಹ್ಮಣ್ಯಂ ವರ್ಯಜನ ವ್ರೀಡಾಕರಮದಂ ವಿಚಾರಿಸವೇಡಾ (ಪಂರಾಮಾ. ೭-೫೧). [ಸಂ.]

ವ್ರೀಡೆ (ನಾ). ೧. ನಾಚಿಕೆ ; ಲಜ್ಜೆ ; ಸಿಗ್ಗು : ಕ್ರೀಡೆಯುಂ ವ್ರೀಡೆಯುಂ ಪಡೆವನ್ನಂ ಮುದಮಂ ಮುಕುಂದನತಿರಾಗೋದ್ರೇಕಮಂ ತಾಳ್ದಿದಂ (ಜಗವಿ. ೧೦-೧೩೮) ; ಭರ್ತ್ರವಾಕ್‌ಶಲ್ಯರೂಕ್ಷತೆಗೆ ಬಾಗಿದಳ್ ವ್ರೀಡೆಯಿಂ ಬಡಿಗೆ ಪೊಯ್ದಂತೆವೊಲ್ ಬಿನ್ನ (ಶ್ರೀರಾಮಾ. ೮೪೩-೪೫೮). ೨. ಒಂದು ಬಗೆಯ ಸಸ್ಯ : "ವ್ರೀಡೆ ಜಕ್ಕುಲಿಗಾರೆ" (ಪುಂಗಡಾ. ೪೦-೩೨). ೩. [ಕಾವ್ಯಮಿಮಾ] ಸಂಚಾರಿಭಾವಗಳಲ್ಲಿ ಒಂದು : ವ್ರೀಡಾ ಎಂದರೆ ನಾಚಿಕೆ ; ಇದು ಚಿತ್ರದ ಸಂಕೋಚಸ್ಥಿತಿ (ಭಾರಮಿ. ೩೪೭). [ಸಂ. ವ್ರೀಡಾ]

ವ್ರೀಹಿ (ನಾ). ಒಂದು ಬಗೆಯ ಏಕದಳಧಾನ್ಯ ; ನೆಲ್ಲು ; ಭತ್ತ : "ವ್ರೀಹಿ : , ಸ್ತಂಭಕರಿ: – ಈ ೨ ನೆಲ್" (ಹಲಾಯು. ೯೫-೪೨೫) ; ಕರ್ಮರನುಂ ವ್ರೀಹಿಯನಾದಮಂ ಬೆಳೆಯಿಕುಂ ಜೋಳಂ ಮಹೀಭಾಗದೊಳ್ (ಉಚ್ಚಮ. ೪-೧೦) ; ಚರು ಪುರೋಡಾಶಂಗಳಂ ತಿಲ ವ್ರೀಹಿಗಳ ನೆರವಿಯಿಂ . . . ದಕ್ಷನಧ್ವರಶಾಲೆ ಕಣ್ಗೆಸೆದುದು (ಚಬಪ್ರ. ೩೦-೨೪) ;

[ಸಂ.]

ವ್ರೀಳಿತ (ಗು). ನಾಚಿಕೆಗೊಳಗಾದ ; ಲಜ್ಜೆಯ ; ಸಿಗ್ಗಿನ : ವ್ರೀಳಿತಾನನಕಮಲೆ ಕಾಂತನ ಕಾಲ ಮೇಲಡೆಗೆಡೆದು ತನ್ನನು ಪಾಲಿಸಾಯ್ತಪರಾಧವೆನ್ನದೆನುತ್ತ ಹಲು ಬಿದಳು (ನಿಧಾಗ. ೩-೪-೧೪). [< ಸಂ. ವ್ರೀಡಿತ]

ವ್ರೀಟ್ (ನಾ). = ವ್ರೀಡೆ ೧ : ನಾಡಿ, ನಾಟ್ . . . ವ್ರೀಡಾ, ವ್ರೀಟ್ (ಶಬ್ದಾನು. ೧೪೦ ವ್ಯಾಖ್ಯಾ) ; ವ್ರೀಟ್‌ಯಿನೆಱಗಲ್ ಕಣ್ಗಳ್ . . . ವಧು ಭೂಪಾಳಕನೊಳ್ ಮಾಡಿದಳ್ ದರಸ್ಮಿತಕೃತಿಯಂ (ಶಬ್ದಾನು. ೧೪೦ ವ್ಯಾಖ್ಯಾ). [< ಸಂ. ವ್ರೀಡಾ]

ವ್ರೈಹೇಯ (ನಾ). ಬತ್ತದ ಗದ್ದೆ ; ಶಾಲಿವನ : "ನೆಲ್ಲ ಗದ್ದೆ ವ್ರೈಹೇಯವೆಂಬುದು" (ಹಲಾಯು. ೩೭-೭) ; ಲೀಲೆಯಿನದಱ ನೆಲಂ ಪರಿಪಾಲಿಸಿದುವು ಕಣ್ಗೆ ನಾಡೆ ಮೌದ್ಗಂ ಮಾಷ್ಮಂ ಶಾಲೇಯಂ ವ್ರೈಹೇಯಂ (ಚಂದ್ರಪ್ರ. ೧-೯೧). [ಸಂ.]

✱

ಶ

ಶ (ನಾ). ೧. ಕನ್ನಡ ವರ್ಣಮಾಲೆಯ ಐವತ್ತನೆಯ ಅಕ್ಷರ. ೨. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ''ಜಣಮಶಮದ್ಮೆದು'' (ಮಂಗರಾ. ೧೦೪-೧೦).

ಶಂಕತಾಳ (ನಾ). ಕಂಕುಳಲ್ಲಿ ಉಂಟಾಗುವ ಕುರು: ಬಾಣಂತಿಯಾಗಿದ್ದಾಗ ಅವಳಿಗೆ ಶಂಕತಾಳವಾಗಿತ್ತು (ಡೂಢಿ). [?./ತಮಿ. ಚಙ್ಕಮ್ = ಕಂಕುಳು]

ಶಂಕರ (ಗು). ೧. ಸಂತೋಷವನ್ನುಂಟುಮಾಡುವ; ಮಂಗಳಪ್ರದವಾದ. (ನಾ). ೨. ಮನೋಹರವಾದುದು; ಸುಂದರವಾದುದು : ಮೊನೆಯುಗುರ ಗುರ್ವಿಂದ, ಮಿಂಚುಬೇರ್ಗಣ್ಣ ಸಿಡಿಲ ಮರವೆನೆ, ಪದವ್ಯಯಂ ರುದ್ರಶಂಕರಮಾಯ್ತು (ಶ್ರೀರಾಮಾ. ೬೯೨-೪೧೪). ೩. ಮಂಗಳವನ್ನುಂಟುಮಾಡುವವನು; ಶಿವ : ಹರಹರ ಶಂಕರ ಶಿವಶಿವ ಶಂಕರ ಜಯಜಯ ಶಂಕರ ಶರಣೆನ್ನುತ್ತಿರ್ದನೆ ಎನ್ನ ಪಾತಕ ಪರಿಹಾರ (ಬಸವ. ೭೯) ; ರುರು ಘಂಟಾಕರ್ಣನಂಡಾಭರಣನಹಿಧರಂ . . . ಶಂಕರಂ (ರಾಜಶೇ. ೧೪-೧೫೩). ೪. [ಅದ್ವೈತ]ಮತಪ್ರವರ್ತಕರಾದ ಆದಿಶಂಕರಾಚಾರ್ಯ : ಬುದ್ಧ, ಶಂಕರ, ವಿದ್ಯಾರಣ್ಯ, ವಿವೇಕಾನಂದ ಇತ್ಯಾದಿ ಮಹಾಪುರುಷರು ಭಾರತೀಯ ಸಂಸ್ಕೃತಿಯ ಉದ್ಧಾರಕರು (ಋಷ್ಯಾ. ೧೦೫ ಟೀಕೆ). ೫. [ಛಂದ] ಅಂಶಗಣದಲ್ಲಿ ಒಂದು ಬಗೆ; ನಾಲ್ಕು ಅಂಶಗಳಿರುವ ಗಣ; ರುದ್ರಗಣ: ಮದನನ ತಂದೆಯ ಮುಂದುದಯಿಸ ಶಂಕರ ನೊಳ್ಪೊದವಿರೆ ಸಂದುದು ನೋಡಿದೆ ಸತಿ ಚೌಪದಿಗೆ (ಛಂದೋಂಬು. ೫-೨೫೨). [ಸಂ.]

ಶಂಕರಗಂಡ$_1$ (ನಾ). ೧. ರಾಷ್ಟ್ರಕೂಟರ ಒಬ್ಬ ಸಾಮಂತನ ಹೆಸರು: ಯಾದವ ವಂಶದೊಳ್ಪಾಣ್ಮರ ರಾಜನಾತನ ಮಗಂ ಶಂಕರಗಂಡನ್ (ಶಾಸಪ. ೫-೫; ಸಂ. ೨೬೫). ೨. ಒಬ್ಬಾತನ ಹೆಸರು : ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿತ್ತರಿಸುತ್ತಿರ್ಪುದಱಿಂದ · ನೀನೆ ಪಿರಿಯೈ ಶ್ರೀದಾನಚಿಂತಾಮಣೇ (ಅಜಪು. ೧೨-೯). [ಶಂಕರ + ಗಂಡ]

ಶಂಕರಗಂಡ$_2$ (ನಾ). ಜೋಳ; IP ''ತಮ್ಮಲ್ಲಿ ಯಾರ ತೂಕ ಹೆಚ್ಚೆಂದು ಶಿವ ಶಿವೆಯರು ಸ್ಪರ್ಧಿಸಿ ತೂಗಿಕೊಳ್ಳಲು, ಶಿವೆಯ ಕಡೆ ಒಂದು ಜೋಳದ ಕಾಳು ಹಾಕಿದಾಗ ಅವರಿಬ್ಬರ ತೂಕ ಸರಿಹೋಯಿತು.ಅಂದಿನಿಂದ ಜೋಳಕ್ಕೆ 'ಶಂಕರಗಂಡ' ನೆಂದು ಹೆಸರಾಯಿತು'' (ಶಿವಶ. ೪೩೨) : ಬರುತಿರಲ್ಕುಂದೊಂದು ಬಿಳಿಯ ಜೋಳದ ರಾಶಿ . . . ಇರಲದಂ ಮುಂದುಗೊಂಡೊರ್ವನಾ ವ್ಯವಹಾರಿ ಕರೆವುತಂ . . . ಎಲೆಲೆ ಶಂಕರಗಂಡನಂ ಕೊಳ್ಗಿರೇ ಎನುತ ಸಲ ಬರ್ದುಕಿರೇಯಮೃತಮಯ ಧಾನ್ಯವೆಂದನುತ ಇರ್ಪಲ್ಲಿ ಬೊಮ್ಮಿತಂದೆಗಳೊಲಿದು ನೋಡುತಂ (ಜಾಹೂರ ಪ. ೬೧-೭); ಎಳ್ಳು ಜವ ಗೋಧೂಮ . . . ಹುಟ್ಟದವೆಲ್ಲ ಮೂವತ್ತಾಜು ಶಂಕರಗಂಡ ಮೊದಲಾಗಿ ಎಲ್ಲ ಧಾನ್ಯವನೆಸೆ ಹದಿನೆಂಟಲ್ಲಿ (ಸಂಭಪ. ೫-೧೧೩); ಮಾದಣ್ಣ . . . ಜೋಳಕ್ಕೆ, ಒಕ್ಕಲುಕಾಲದಲ್ಲಿ 'ಶಂಕರಗಂಡ' ಎಂದೇ ಕರೆದಾನು (ಬಿಳಿಮ. ೨೩೭) . [?]

ಶಂಕರಪಾಳಿ 'ಶಂಕರಪಾಳಿ' ನೋ.

ಶಂಕರಪಾಳಿ, ಶಂಕರಪಾಳಿ, ಶಂಕರಪೋಳಿ (ನಾ). ಸಕ್ಕರೆ, ತುಪ್ಪ ಮತ್ತು ಕಣಕ ಇವುಗಳಿಂದ ತಯಾರಿಸಿ ಕರಿದುಮಾಡುವ ಒಂದುಬಗೆಯ ಸಿಹಿತಿಂಡಿ: ನನ್ನ ದತ್ತೂ ಕಾಕಾ ಬರುತ್ತಾರೆ. ಅವರಿಗಾಗಿ ಅಜ್ಜಿ ಉಂಡಿ, ಅನಾರಸ, ಕರಜೀಕಾಯಿ, ಶಂಕರಪಾಳಿ ಇತ್ಯಾದಿ ಮಾಡುತ್ತಿದ್ದಾಳೆ (ಸ್ಮೃತಿಚಿ. ೪೨೩). **ಶಂಕರಪಾಳಿ**: ಶಂಕರಪಾಳಿ, ಅನರಸ - ಮುಂತಾದ ರಾಜಸ ಮತ್ತು ತಾಮಸ ಆಹಾರಗಳಿಂದ ಅದಷ್ಟು ದೂರಾಗಿರ್ರಿ (ಬ್ರಹ್ಮಜ್ಞೇ. ೧೩೮). **ಶಂಕರಪೋಳಿ**: ಶಂಕರಪೋಳಿ, ಕೋಡುಬಳೆ, ಚಕ್ಕುಲಿ ಅಷ್ಟನ್ನೂ ಮಾಡಬೇಕಾದರೆ ಅರ್ಧದಿನ ಪೂರ್ತಿ ಓಡಿಯಿತು (ಡೂಢಿ). 'ಶಂಖಿಪಾಲ' ಪರಾ.

[← ಮರಾ. ಶಂಕರಪಾಳಾ, ಶಂಕರಪಾಳೆ; ಹಿಂ. ಶಕರಪಾರಾ ; ಪಾರ. ಶಂಕರ ಪಾರಹ್, ಸಕ್ಕರಪಾರಾ]

ಶಂಕರಪೋಳಿ 'ಶಂಕರಪಾಳಿ' ನೋ.

ಶಂಕರಯ್ಯ (ನಾ). ಒಬ್ಬಾತನ ಹೆಸರು: ಕಣ್ಣಯ್ಯನುಂ ಶಂಕರಯ್ಯನುಂ ಕುಡುಮ್ಮೂರ ಮಹಾಜನಂ ನೂಱೆಣ್ಬಗ್ಗ೦ ಪದಿನಯ್ದುಗದ್ಯಾಣ ಪೊನ್ನ ಕೊಟ್ಟರ್ (ಎಕ. X, ಚಿಂಕಾಮ. ೪೩-೧೪ ; ೯೬೦ ?). [ಶಂಕರ + ಅಯ್ಯ]

ಶಂಕರಾಭರಣ (ನಾ). [ಸಂಗೀತ] ಒಂದು ರಾಗದ ಹೆಸರು: ಮಧುಮಾಧವಿ ಶಂಕರಾಭರಣ ಹಿಂದೋಳ . . . ಕರ್ನಾಟಕ ಬಂಗಾಳಮಂಬಿಪ್ಪತ್ತೇ ರಾಗಾಂಗದಿಂದಾದ ರಾಗಂಗಳು (ವಿವೇಕ. ೧೮೮); ಮಹಾವೈದ್ಯನಾಥ ಅಯ್ಯರ್ ಅವರು ಏನೂ ಮಾತಾಡದೆ ಶಂಕರಾಭರಣರಾಗವನ್ನು ಹಾಡಲು ಸಿದ್ಧರಾದರು (ಸಂಗೀತ. ೧೩). [ಸಂ.]

ಶಂಕರಾರಿ (ನಾ). ಶಿವನ ಶತ್ರು; ಮನ್ಮಥ : ಭೋಂಕೆಂಬ ಅಳಿಗಳಂ ಕಾಲೊಳಗ ಕಟ್ಕೆಂದು ಶಂಕರಾರಿಯ ತಾಪದಿಂ ವಿರುಳ್ಗೊಂಡಳೊಬ್ಬಳು ಮನೆಯ ಮುಂದೆ ಮುಗುದೆ (ಪಚಕಾ. ೪-೪೪). [ಸಂ.]

ಶಂಕರಿ (ನಾ). ೧. ಶಿವನ ಹೆಂಡತಿ; ಪಾರ್ವತಿ : ಸುತಿಪಂ . . . ಸತತಾರಾಧಿತ ಶಂ[ಪಾಣಾಂ. ಶಾಂ]ಕರೀರಮಣ ಪಾದಾಂಭೋಜನಂ ಭೋಜನಂ (ರಾಜಶೇ. ೧-೧೮). ೨. ಶಮಿವೃಕ್ಷ. ೩. ಮಂಗಳವನ್ನುಂಟುಮಾಡುವವಳು: ನಿನ್ನಳಲ ಲಕ್ಕಿಸದ ಪತಿಹಿತಂಕರಿಯಾಗು; ಲೋಕಶಂಕರಿಯಾಗು (ಶ್ರೀರಾಮಾ. ೧೯೩-೪೭೨). ೪. ಒಂದು ಬಗೆಯ ಪಾತ್ರೆ ; ಗಿಂಡಿ : ''ಶಂಕರಿ ಸರಕಮನೆ ದಾರೆವಟ್ಟಲಕ್ಕುಂ'' (ಮಂಗರಾ. ೬೩-೨೫). [ಸಂ. ಶಂಕರೀ]

ಶಂಕಹುಲ್ಲೆ (ನಾ). ಒಂದು ಬಗೆಯ ಜಿಂಕೆ: ಚಿಪರಿಹುಲ್ಲೆ, ಕೊಂಡಗುರಿ, ಶಂಕಹುಲ್ಲೆ (ಸಮ್ಮಾಪು. ೨೩೯). [ಶಂಕ. + ಹುಲ್ಲೆ (< ಪುಲ್ಲೆ.)]

ಶಂಕಾಂತರ (ನಾ). ಬೇರೊಂದು ಅಭಿಪ್ರಾಯ ; ಸಂಶಯಭಾವನೆ: ದಿವ್ಯಾಪ್ಸರೋವೃಂದಮಾ ಕ್ಷಿತಿಗೇನಿಂದ್ರನ ಶಾಪದಿಂದಿಲ್ಲಿದುವೋ ಪೇಟುಂಬ ಶಂಕಾಂತರಂ ಮತಿಗಂ ಪುಟ್ಟುವಿನಂ (ಪಂಪಭಾ. ೪-೩೯). [ಸಂ.]

ಶಂಕಾಕಾರಿ (ಗು). ಅನುಮಾನವನ್ನುಂಟುಮಾಡುವ ; ಸಂಶಯವನ್ನುಂಟು ಮಾಡುವ: ವಿಜಯಶ್ರೀ ಕೇಶಹಸ್ತಶಂಕಾಕಾರಿ ಶಂಕುಕೇಳೀಮಯೂರ ಶೋಭೆಯೊಳಂ . . . ಮಂಗಲಾನೇಕರವಶ್ರವಣ ಕಂಪಿತಪರಚಕ್ರನುಮಾಗಿ ನಡೆಯೆ (ಅಬಪು. ೧೨-೬೧ ವ). [ಸಂ. ಶಂಕಾಕಾರಿನ್]

ಶಂಕಾಕುಲ (ನಾ). ಸಂಶಯದಿಂದ ಪೀಡಿತನಾದವನು; ಸಂದೇಹಗ್ರಸ್ತನಾದವನು : ಲಂಕೆಯಿಂದೀತನಂ ವಿಪರೀತಾತ್ಮನೀಗಳಿಂದೆ ಕಳೆಯಿಂ ಶಂಕಾಕುಲಂ ಬಾಚ್ಪೆಯಾದಪನೇ ಸಂಗರಕೇಳಿಗೆ (ಪಂರಾಮಾ. ೧೨-೭೪). [ಸಂ.]

ಶಂಕಾಕುಳಿತ (ಗು.) ೧. ಅನುಮಾನದಿಂದ ಪೀಡಿತವಾದ; ಸಂಶಯಗ್ರಸ್ತವಾದ. (ನಾ). ೨. ಸಂದೇಹದಿಂದ ಪೀಡಿತವಾದುದು; ಸಂಶಯಗ್ರಸ್ತವಾದುದು: ಆ ಶಿಶುವಿನೆಲ್ಮ ತೆಕ್ಕನೆ ತೀವಿತ್ತನಿತುಂ ದಿಕ್ಕಟಮಂ ಭೋರೆನೆ ಶಂಕಾಕುಳಿತಮಪ್ಪಿನಂ ಭುವನಜನಂ (ಜಗವಿ. ೩-೧೨). [ಸಂ. ಶಂಕಾಕುಲಿತ]

ಶಂಕಾವಹ (ಗು). = ಶಂಕಾಕಾರಿ : ಆಹವಮಹಾಹುಂಕಾರ ಕಾಳಕೂಟವಿಟಪಿಪ್ರರೋಹ ಶಂಕಾವಹನಾಭಿಕೂಪಾವಲಂಬಿಕೂರ್ಚಕಳಾಪಂ (ಆದಿಪು. ೧೩-೪೫ ವ). [ಸಂ.]

ಶಂಕಿತ (ಗು). ೧. ಅನುಮಾನಕರವಾದ; ಸಂಶಯಾಸ್ಪದವಾದ. (ನಾ). ೨. ಸಂದೇಹ; ಅನುಮಾನ: ಶಂಕಿತದ ಮನದವನೆ ಮೊರಟದ ಬಂಕಿದೇವನ ಲಂಕ ನೆನಗಾತಂಕವುಂಟೇ ವೀರಭಕ್ತಂಗೆ (ಬಿಷಪು. ೫೨-೬೫). ೩. ಅನುಮಾನ ಹೊಂದಿದ ವ್ಯಕ್ತಿ; ಸಂದೇಹಗ್ರಸ್ತ ವ್ಯಕ್ತಿ: ಹುತ್ತದ ಮೇಲಣ ರಜ್ಜು ಮುಟ್ಟಿದರೆಯೂ ಸಾವರು ಶಂಕಿತರಾದವರು (ಬಿಷವ. ೭೭೧); ಪ್ರಾಣೇಶಾಚಾರ್ಯರ ನಡುಮನೆಯಲ್ಲಿ ನಿಂತು ಅಲಿಸುತ್ತಿದ್ದ ಹೆಂಗಸರು ತಮ್ಮ ಗಂಡಸರು ಎಲ್ಲಿ ದುಡುಕಿಬಿಡುತ್ತಾರೊ

ಎಂದು ಶಂಕಿತರಾದರು (ಸಂಸ್ಕಾರ. ೫೬). ೪. ಹೆದರಿದ ವ್ಯಕ್ತಿ; ಅಂಜುಕುಳಿ: "ದಿತ, ಚಕಿತಃ . . . ಶಂಕಿತಃ- ಈ ೬ ಪ(ಹ)ಂದೆ" (ಪಲಾಯು. ೫೮-೧೯೯). [ಸಂ.]

ಶಂಕಿನಿ (ನಾ) ಅಪ್ಸರ ಸ್ತ್ರೀ (?): ಸಜ್ಜನ ಕೀರ್ತಿಪ್ರಭೆಯಿಂದಂ ಕಾಮಿನಿ ಭೂಮಿ ಗೌರರುಚಿಯಿಂದಸದೆಂ ಶಜ್ಜಿನಿಯಾದಳೂ ಗೀತಾಲಜ್ಜ ಕೃತನಾನಾವಿನೋದವಿಳಸಿತ ಗತಿಯಿಂ (ಗಿ. VII. ವಿಕಾಂ. ೧೯೬-೨೫ ; 1182). [< ಸಂ. ಶಂಖಿನೀ]

ಶಂಕಿಸು (ಕ್ರಿ). ೧. ಅನುಮಾನಿಸು ; ಸಂದೇಹಪಡು: ನಿಮ್ಮ ಅಂಕಗೆ ಝಂಕಗೆ ಶಂಕಿಸಿದನಾದರೆ ಎನ್ನ ಲಂಕತನಕ್ಕೆ ಹಾನಿ (ಬಸವ. ೭೨೮) ; ಉಸಿರನಾರ್ತೆದು ನಿರ್ಜೀವನೆಂದೆಂದು ಶಂಕಿಸಿ . . . ಹೂರವಿಂದ ದೀವಿಗವಿಡಿದು ದಿಟ್ಟಿಸಿದರು (ಸಿದ್ಧರಾ. ೨-೪). ೨. ಆತಂಕಪಡು ; ಹೆದರು: ಬೆಸಸನ[ಯುಂ]ನುಡಿಯಲ್ ಶಂಕಿಸಿದಪೆ ನಾನೆಂದೊಡೇಕೆ ಶಂಕಿಸುವೈ ನೀಂ ಬೆಸವೇಳ್ಪೆ (ಪಂಪಭಾ. ೧೨-೯೦) : ದುರ್ಗಂಧಕ್ಕಿರ ಲಾಱದ ಲಂಕರ್ ದಂಡಂಗೊಂಡರಂತೆ ಶಂಕಿಸುತ್ತುಂ (ಧರ್ಮಾಮೃ. ೪-೧೫೯); ಬಿಂಕದತಿರಥರಂಟುಕೋಟ ತುರಂಗ ಪಾಯದಳ ಶಂಕಿಸುವನೇ ಬಳಿಕ ಯದುಕುಲ ದಂಕಕಾಱನು ನಿಂದನನಿಬರಿಗೆ (ಕುಮಾಕ. ೩-೧೪). [ಶಂಕೆ + - ಇಸು]

ಶಂಕು$_1$ 'ಸಂಕ$_1$' ನೋ.

ಶಂಕು$_2$ (ನಾ.) ೧. ಗೂಟ; ಬೆಣೆ : "ಗೂಂಟಂ ಶಂಕು" (ಮಂಗರಾ. ೫೯-೧೩). ೨. ದಸಿ ; ಕಂಬ : ಶಂಕುವಿನ (Cone) ಘನಫಲವು ಸಿಲಿಂದರದ (Cylinder) ಘನಫಲದ ಮೂರನೇ ಒಂದರಷ್ಟು ಎಂದೂ ಸಾಧಿಸಿದನು (ಗಣಿತ. ೨೮). ೩. ಮರದ ಕೊರಡು. ೪. ನೆರಳಿನಿಂದ ಕಾಲವನ್ನು ಕಂಡುಹಿಡಿಯುವ ಯಂತ್ರದ ಮುಳ್ಳು; ಛಾಯಾಯಂತ್ರದ ಸರಳುಸೂಚಿ : ಆರ್ಕಿಮಿಡೀಸನು ಮಾರ್ಸೆಲಸ್ಸನ ಹತ್ತಿರ ಹೋಗಬೇಕೆಂದು ತನ್ನ ಗೋಳಗಳು, ಶಂಕು (Sun-Dial) ಪಾದವೃತ್ತಯಂತ್ರ . . . ಮೊದಲಾದ ಸಲಕರಣೆಗಳನ್ನು ಹೊತ್ತುಕೊಂಡು ಹೋಗುತ್ತಿರಲು (ವಿಜ್ಞಾಕ. ೧೮). 'ಶಂಕುಯಂತ್ರ' ಪರಾ. ೫. (ಭೂಮಿಯನ್ನು) ಅಳೆಯುವ ಒಂದು ಸಾಧನ: ಒಂದು ಅಥವಾ ಒಂದೂವರೆ ಅಂಗುಲ ದಪ್ಪವುಳ್ಳ ನಾಲ್ಕುಕಡೆಯೂ ನಾಲ್ಕು ಅಥವಾ ಆರು ಅಂಗುಲ ಪ್ರಮಾಣದ ಚತ್ರೌಕವಾದ ಒಂದು ತುಂಡುಹಲಿಗೆಗೆ ಮಧ್ಯಪ್ರದೇಶದಲ್ಲಿ ಅಡ್ಡವಾಗಿ ಎರಡು ಗೆರೆ ಕೊಯಿದು ಅದನ್ನು ಎರಡೂವರೆ ಗಜದ ಸುಮಾರು ವುದ್ದದ ಪೊಂದು ಕೋಲಿನ ಮೇಲೆ ಕೂಡಿಸುವುದು. ಇದನ್ನೇ ಶಂಕುವೆಂಬುವುದು (ಭೂಮಿಅ. ೨). ೬. ಒಂದುಬಗೆಯ ಮೀನು : "ಶಿಂಶುಮಾರಃ . . . ಶಂಕು, ನೀರಹಂದಿ, ಮಕರಃ, ಚೋರಮೀನು - ೮ ಜಲತಂತು ವಿಶೇಷಗಳು" (ಸಿದ್ಧಾಂತಿ. ೮೩). ೭. ಈಟಿ; ಭಲ್ಲೆ : "ತೋಮರ . . . ಶಂಕು ಯಷ್ಟಿಗಳ್ ಕೈದುಗಳ ಭೇದಮಕ್ಕುಂ" (ಮಂಗರಾ. ೮೮-೩೮); ಇಟ್ಟವನಿಟ್ಟಿಗಳೆನ್ನಂ ನಟ್ಟೊಡಮನ್ನಿಟ್ಟ ಶಂಕುಸಂಕುಲಮವನಂ ನಟ್ಟೊಡಮಿಳರದ ಮಿಳಮಂ ನಟ್ಟೊಡಮನ್ನವನ ಮುಳಿಸನಟೊಯಲ್ಕುಕ್ಕುಂ (ಶಾಂತಿಪು. ೬-೭೯). ೮. ತೂತು; ರಂಧ್ರ. ೯. ಸಂಕೀರ್ಣವಾದುದು. ೧೦. ನಾಶ; ಅಳಿವು : "ಛಿದ್ರ ಸಂಕೀರ್ಣ ಕಾಷ್ಠ ಲಯಂ ಶಂಕು ಸಮಾಖ್ಯಂ" (ನಾನಾರ. ೧೪೮). ೧೧. [ಗಣಿತ] ಒಂದು ಸಂಖ್ಯೆ; ಹತ್ತು ದಶಕೋಟಿ. ೧೨. ಗಣಿತಶಾಸ್ತ್ರದ ಒಂದುವಿಧಾನ : ದಶಮಾಂಶ, ಶಂಕು ಮುಂತಾದ ಗಣಿತಶಾಸ್ತ್ರವಿಧಾನಗಳೂ ಭೂಮಿಯ ವೃತ್ತಾಕೃತಿಯೂ ಈ ಖಗೋಳಶಾಸ್ತ್ರಜ್ಞರಿಗೆ ಸ್ಪಷ್ಟವಾಗಿದ್ದುವು (ಭಾಇಪ್ರ. ೨೬೬). [ಸಂ.]

ಶಂಕುಫಲ (ನಾ). ಒಂದು ಬಗೆಯ ಮರ; ಶಮೀವೃಕ್ಷ: ಅಲೆಗ್ಸಾಂಡರನು ತನ್ನ ನೌಕಾನಿರ್ಮಾಣಕ್ಕೆ ಬೇಕಾದ ಬೀತದಾರು, ಶಂಕುಫಲ, ಸೀಡಾರ್ ಮುಂತಾದ ಮರಗಳನ್ನು ಕಡಿಸಿ. . . ದೊಡ್ಡ ನೌಕಾಪಡೆಯನ್ನು ನಿರ್ಮಿಸಿದನು (ಪ್ರವಾಗ. ೧, ೬೧). [ಸಂ. ಶಂಕುಫಲಾ]

ಶಂಕುಯಂತ್ರ (ನಾ). ಸೂರ್ಯನ ನೆರಳಿನಿಂದ ಕಾಲವನ್ನು ಕಂಡುಹಿಡಿಯುವ ಸಾಧನ; ಛಾಯಾಯಂತ್ರ; ನೆರಳುಗಡಿಯಾರ: ಅವರಿಗೆ ಹೊತ್ತು ತಿಳಿಯಲಿಕ್ಕೆ ಶಂಕುಯಂತ್ರದ ಹೊರ್ತು ಎರಡನೇ ಸಾಧನವಿದ್ದಿಲ್ಲ (ಮುಂಯು. ೪-೧೮೬). [ಸಂ.]

ಶಂಕುಸ್ಥಾಪನೆ (ನಾ). ಕಟ್ಟಡಗಳನ್ನು ಕಟ್ಟುವುದಕ್ಕೆ ಮುಂಚೆ ಖದಿರ ಮೊದಲಾದ ಮರಗಳಿಂದ ಮಾಡಿದ ಗೂಟ ಅಥವಾ ಅಡಿಗಲ್ಲನ್ನು ಇಡುವ ಒಂದು ಸಾಂಪ್ರದಾಯಿಕ ವಿಧಿ : ಶುಭಮುಹೂರ್ತದಲ್ಲಿ ಹೊಸದೇವಾಲಯದ ಶಂಕುಸ್ಥಾಪನೆಯನ್ನು ನೆರವೇರಿಸಿದರು (ಶಾಂತಲಾ. ೧೩೮). [ಸಂ. ಶಂಕುಸ್ಥಾಪನ]

ಶಂಕೆ (ನಾ). ೧. ಸಂದೇಹ ; ಸಂಶಯ: ಮತ್ತೊಂದುದಿವಸಂ ಶ್ರೀಧರಂ ಕುಬೇರ ಕಾಂತನೊಡನೆ ನಿದ್ರೆಗೈದಾತನ ರತ್ನಕಂಬಳಮಂ ಪೊದೆದು ತನ್ನ ಮನೆಗೆ ಬರ್ಪುನಂ ಕಂಡು ಸವತಿಯೊಳಿಪ್ಪ ಶಂಕೆಯಿಂದಂ ಪ್ರಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಟ್ಟು ಸತ್ತೊಳ್ (ವಡ್ಡಾರಾ. ೭೯-೩) ; ಚಕ್ರಿಗುಂಟುಮಾಡಿದುದು ಪೂಟಲ್ ಸುರಾದ್ರಿಮಥಿತಾಂಬುಧಿಜಾತ ನಿನಾದಶಂಕೆಯಂ (ಪಂಪಭಾ. ೯-೨೭); ಶಂಕೆಯನ ಬಿಟ್ಟು ಮನದೊಳ್ ಕೊಂಕದ ಮಿಥ್ಯಾತ್ವಮೆಂಬ ಪರ್ಬುಲಿವಿಂದಂ ಸೋಂಕದೆ (ಧರ್ಮಾಮೃ. ೨-೫). ೨. ಅಳುಕು; ಹಿಂಜರಿತ: ಅಂಗದ ಕಳೆ ಲಿಂಗಸಂಗವಾಗಿ ಅಂಗವೆಂಬ ಶಂಕೆಯ ಭಂಗವ ತೋಱದು (ಆದಪ. ೪೫-೧೨೪); ಕರಿಯ ಕೊಲ್ಲುವ ಹರಿಗೆ ಮರಿಯೆಂಬ ಶಂಕೆ ತಾನೇಕೆ? (ಶ್ರೀರಾಮಾ. ೨೮-೨೦). ೩. ಅಂಜಿಕೆ; ಭಯ: ಕಲಿಗಂ ಶಂಕೆಯ ಚಾಗಿಗಂ ಬೆಚಗ . . . ಚಲಮಂ ಗಂಡುಮನಪ್ಪುಕೆಯ್ವೆನಗಮಾ ಕೌಂತೇಯರೊಳ್ ಸಂಧಿಯೇ (ಗದಾಯು. ೫-೪೬); ಆ ಹೂಹಗುರ ಶಿಶುವಿದ್ದಕಿದ್ದಂತೆ ಗಿರಿಭಾರಮಾಗಿ ಬರ, ನೆಗಹಲಾರದ ತಾಯಿ ತಂಕಿದಳು ಕಾತರಿಸಿ ಮಗನಭ್ಯುದಯಶಂಕೆಯಿಂ (ಶ್ರೀರಾಮಾ. ೧೮-೪೬೩). ೪. ಭರವಸೆ; ನಂಬಿಕೆ. ೫. ವಾದದಲ್ಲಿ ಎತ್ತುವ ಆಕ್ಷೇಪ: "ವಿತರ್ಕ ಸಂದೇಹ ವಿಕಲ್ಪ ಶಂಕಾಮತಿ ಭ್ರಮಾಖ್ಯಂ ವಿಚಿಕಿತ್ಸಿತಾರ್ಥಂ" (ವಸ್ತುಕೋಶ. ೧೧೬-೧೨). ೬. (ದೆವ್ವ, ಪೀಡೆ ಮೊದಲಾದುವುಗಳ ಸೋಂಕಿನಿಂದುಂಟಾಗುವ) ಮನೋವೈಕಲ್ಯ: ಮನೆಯಾಕೆಯಾರೋಗ್ಯವಿದ್ದಕಿದ್ದಂತೆಯೆ ಕೆಟ್ಟತದೇತಕೊ ಅರಿಯ ಅಂಜಿಕೆಯೆನಲಾರ ಶಂಕೆಯಂದೆನಲಾರ ತಾನಾದಳೊಮ್ಮೆ ಗಭೀರ (ಇಂಚಾಪ. ೪೩-೨); ಗಾಳಿ ಹಿಡಿದ ಶಂಕೆ ಆದ ಎಷ್ಟೋ ಜನ ಬೆಟ್ಟಕ್ಕೆ ಹೋಗಿ, ಅಲ್ಲಿ ಕೋಳಿ ಕುರಿ ಬಲಿಕೊಟ್ಟು , ಕಲ್ಲುಹುಯ್ಯಿಸಿ ಬರುತ್ತಾರೆ (ನನ್ನೂರು. ೨೦೭). ೭. ದೇಹದಲ್ಲಿ ಉಂಟಾಗುವ ಪ್ರಾಕೃತಿಕ ವಿಸರ್ಜನೆಯ ಪ್ರೇರಣೆ, - ಒತ್ತಡ : 'ಅಲ್ಪಶಂಕೆ' ಪರಾ. ೮. [ಕಾವ್ಯಮೀ] ಮೂವತ್ತುಮೂರು ಸಂಚಾರಿಭಾವಗಳಲ್ಲಿ ಒಂದು; ತನ್ನ ತಪ್ಪಿನಿಂದಾಗಲಿ, ಬೇರೆಯವರ ತಪ್ಪಿನಿಂದಾಗಲಿ ಅನರ್ಥವನ್ನು ಭಾವಿಸುವಿಕೆ : ಮತಿ ನಿರ್ವೇದಾಪಹೃತ್ಶ್ರಮ . . . ಶಂಕಾತ್ರಸನ . . . ಮೃತಿಗಳಿವಿಂತೆಯ್ದೆ ಸಂಚಾರಿಭಾವಂ (ಕಾವ್ಯಾಪ. ೭೫೫). ೯. [ನಾಟ್ಯ] ಇಪ್ಪತ್ತು ವಿಧವಾದ ಸಂಚಾರಿಭಾವದೃಷ್ಟಿಗಳಲ್ಲಿ ಒಂದು ; ಪ "ಚಂಚಲ ಮತ್ತು ಸ್ಥಿರದೃಷ್ಟಿಗಳಿಂದ ಪಕ್ಕವನ್ನು ಮತ್ತೆ ಮತ್ತೆ ನೋಡಿ ಜಾಗ್ರತೆ ತಿರುಗುವುದು" (ಲಾಸ್ಯರಂ. ೨೬೯ ಗದ್ಯಾನುವಾದ) : ಪಲವಿಧ ಚಲದಿಂ ನಿಲವಿಂ ಕೆಲಪೂಱಗಂ ನೋಡಿ ತಿರುಗೆ ಶಂಕೆಯನಿಕ್ಕುಂ (ಲಾಸ್ಯರಂ. ೩-೨೯). [ಸಂ. ಶಂಕಾ]

ಶಂಕೆಗೈ (ಕ್ರಿ). ಸಂದೇಹಿಸು; ಅನುಮಾನಪಡು: ಶಂಕೆಗೈವರಿಗಿಂತು ದ್ಯೂತದ ಶಂಕೆದೋರುತ್ತಿಹುದು (ಗಗತಾ. ೧೩-೪೬). [ಶಂಕೆ + ಗೈ (< ಕೆಯ್$_1$)]

ಶಂಕೆಪಡು (ಕ್ರಿ). = ಶಂಕೆಗೈ: ತಂದೆಯೂ ಹಿರಿಯನೂ ಆದ ಮಹಾರಾಜನು ಏನು ಹೇಳಿದರೆ ಅದನ್ನು ಶಂಕೆಪಡದ ನಡೆಸಬೇಕು (ಪಚಭಾ. ೩೧). [ಶಂಕೆ + ಪಡು]

ಶಂಖ (ನಾ). ೧. ಸಮುದ್ರದಲ್ಲಿರುವ ಒಂದು ಬಗೆಯ ಜಲಚರಜೀವದ ಗೂಡು, — ಚಿಪ್ಪು ; ಕಂಬು: "ಕಂಬುಃ, ಶಂಖಃ - ಈ ೨ ಶಂಖಂ" (ಪಲಾಯು. ೧೦೯-೪೨): ಶಂಖದಿಂದ ಬಿದ್ದರೇ ತೀರ್ಥ (ಗಾದೆ). ೨. ಮಂಗಳಕರವಾದ ಪಂಚಮಹಾವಾದ್ಯಗಳಲ್ಲಿ ಒಂದು: ಪಟುಪಟುಹತುಣವಭಂಭಾಮರ್ದಳ ಝಲ್ಲರಿ ಮುಕುಂದತಾಳ ಕಾಹಳ ಶಂಖವಂಶವೀಣಾಸ್ವರಂಗಳೆಸೆಯೆ (ವಡ್ಡಾರಾ. ೮೪-೧); ಕಹಳ ಪಟಹ ಶಂಖ ಭೇರಿ ಜಯಘಂಟೆಯೆಂಬ ಪಂಚಮಹಾವಾದ್ಯವಾದನವಿಚಕ್ಷಣರಿಂ (ವೀಕ. ೧೯೦); ಶಂಖದುಂದುಭಿರವದ ಮಂಗಳಂ ಮೊಳಗುತಿರೆ . . . ಆ ಪುತ್ರಯುಗ್ಮಮಂ ಬೀಳ್ಕೊಟ್ಟನ್ನೆ ನೃಪತಿ ಯತಿಯೊಡನೆ (ಶ್ರೀರಾಮಾ. ೩೧-೮೪). ೩. ಕೆನ್ನೆಯ ಎಲುಬು: ಕಟದ ಕಡಗಣ್ಣ ಸಮೀಪದ ಮೇಗಣ್ಣೆ ಶಂಖಮೆಂಬ ಪೆಸರಕ್ಕುಂ (ಅಶ್ವಶಾ. ೮೭-೩೧). ೪. ಹಣೆಯ ಮೂಳೆ. ೫. ಕುಬೇರನ ನವನಿಧಿಗಳಲ್ಲಿ ಒಂದು: ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ಪರತ್ನಗಳೆಂಬ ನವನಿಧಿಗಳುಂ (ಆದಿಪು. ೧೫-೩ ಪ); ಕಾಳ ಮಹಾಕಾಳ . . . ಶಂಖ ಸರ್ಪರತ್ನಂಗಳೆಂಬೊಂಬತ್ತು ನಿಧಿಗಳುಮನನುಕ್ರಮದೊಳರ್ಚಿಸಿ (ಚಂದ್ರಪು. ೬-೧೦೦ ಪ). ೬. ಒಂದುಬಗೆಯ ಸುಗಂಧದ್ರವ್ಯ. ೭. ಬಿಳಿದು; ಶ್ವೇತ. ೮. ಸೇನಾರಚನೆಯ ಒಂದುವಿಧ ; ವ್ಯೂಹಭೇದ : "ನಿಧಿ ಕಂಬು ವ್ಯೂಹ ಸಂಖ್ಯಂ ಸಿತ ವ್ರಾತಂ

ಶಂಖಮೆನಿಕ್ಕು'' (ನಾನಾರ್ಥ. ೬೭). ೯. ಕುದುರೆಯ ಒಂದು ಅಂಗ: ಶಕ್ತಿಯಿಂ ಕೆಟಗ ಮಂಜರಿಯೆಂಬ ಪೆಸರಕ್ಕುಂ ನಡುವ ಶಂಖಮೆಂಬ ಪೆಸರಕ್ಕುಂ (ಅಶ್ವಶಾ. ೮೯-೨೩). ೧೦. [ಗಣಿತ] ಶತಕೋಟಿ ಸಂಖ್ಯೆಯ ಸಂಕೇತ: ''ಹರ್ವ ಪದ್ಮ ಕ್ರೋಣಿ ಶಂಖಂ ಕ್ಷಿತಿ ಕ್ರೋಭಪೂರ್ವಮಪ್ಪಂಕೆಯಾದಿಗೆ . . . ಚತ್ವೀಸ ತಾಣವರೆ ಸಂಖ್ಯೆಯಕ್ಕುಂ'' (ಮಂಗರಾ. ೧೦೫-೧೩) : ಏಕಂ, ದಶಂ . . . ಶಂಖಿ, ಸಮುದ್ರ, ಮಧ್ಯ, ಅಂತ್ಯ ಮತ್ತು ಪರಾರ್ಧ (ಪ್ರವಾಗ. I. ೩೫೭). ೧೧. ಏಳು ಎಂಬ ಸಂಖ್ಯೆಯ ಸಂಕೇತ: ಸಪ್ತಭಯ, ಅದ್ರಿ, ಗಿರಿ, ಮುನಿ, ಪಾತಾಳ, ಶಂಖಿ, ಸಾಗರ . . . ಅಶ್ವ ಇಂತಿವುಂ ೭ಕ್ಕೆ ಪೆಸರು (ವ್ಯವಹಾ. ೧೦). ೧೨. ಸಂಖ್ಯೆಯ ಸ್ಥಾನಗಳಲ್ಲಿ ಹತ್ತೊಂಬತ್ತನೆಯ ಸ್ಥಾನ ಮತ್ತು ಹತ್ತೊಂಬತ್ತು ಅಂಕೆಗಳುಳ್ಳ ಒಂದು ದೊಡ್ಡ ಸಂಖ್ಯೆ: ಏಕಂತು ಪ್ರಥಮಸ್ಥಾನಂ ದ್ವಿತೀಯಂ ದಶಸಂಜ್ಞಿಕಂ . . . ಶಂಖಂ ನವದಶಸ್ಥಾನಂ (ವ್ಯವಹಾ. ೮). ೧೩. [ನಾಟ್ಯ] ಸಂಯುತಹಸ್ತಗಳಲ್ಲಿ ಒಂದು; IP ''ಬೆರಳುಗಳು ಪರಸ್ಪರ ಅಭಿಮುಖವಾಗುವಂತೆ ಕೈಯನ್ನು ಸ್ವಲ್ಪ ಸಂಕುಚಿಸಿ ಹಿಡಿಯಬೇಕು'' (ಶಾಸ್ತ್ರರಂ. ೨೪೧ ಗದ್ಯಾನುವಾದ): ಅಭಿನಯದರ್ಪಣದಲ್ಲಿ- ೧. ಅಂಜಲಿ. . . ೧೨. ಶಂಖ . . . ೨೪. ಅವಹಿತ್ಥ (ಆಭಾನ್ಯ. ೪೮).

ಶಂಖಚಕ್ರದ ಕಲ್ಲು = ಶಂಖ ಮತ್ತು ಚಕ್ರಗಳನ್ನು ಕೆತ್ತಿರುವ ವೈಷ್ಣವಮುದ್ರೆಯ ಕಲ್ಲು: ಆ ಗ್ರಾಮದ ಚತುಸ್ಸೀಮೆಯಲು ಶಂಖಚಕ್ರದ ಕಲ್ಲ ನಡಿಸಿ ಕೊಟ್ಟು (ಎಇ. XVI, ೨೨೬-೫೨; 1414). ಶಂಖಚಕ್ರದ ಕೋಲು = ದನಕರುಗಳಿಗಾಗಲಿ ಅಥವಾ ಮನುಷ್ಯರಿಗಾಗಲಿ ಮುದ್ರೆಹಾಕಲು ಉಪಯೋಗಿಸುವ ಶಂಖ ಮತ್ತು ಚಕ್ರಗಳ ಗುರುತಿರುವ ಕೋಲು: (ಕ). ಶಂಖದ ಹುರಿಕೆ = ಒಂದು ಬಗೆಯ ಸುಗಂಧದ್ರವ್ಯ : ''ಸಖಶಂಖಃ - ಶಂಖದ ಹುರಿಕೆ, ನಖಿ'' (ಒಪಧಿ. ೮೪). ಶಂಖದ ಹುಳು = ಅಧಿಕ ತೇವಾಂಶವಿರುವ ಕಡೆಗಳಲ್ಲಿ ವಾಸಿಸುವ ಒಂದು ಬಗೆಯ ಮೃದ್ವಂಗಿ ಕೀಟ : ಶಂಖದ ಹುಳುವನ್ನು ಮುಟ್ಟಿದಕೂಡಲೇ ಅದು ತನ್ನ ಇಡೀ ದೇಹವನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತದೆ (ರೂಢಿ). ಶಂಖ ಪುಟಿಸು = (ಆಲಂ) ಕೂಗಾಡು; ಬೊಬ್ಬೆಯಿಡು: ತಮ್ಮ ಬೋರ್ಡುಗಳನ್ನೆಲ್ಲ ಸುಟ್ಟುಬಿಟ್ಟಿರುತ್ತಾರೆಂದು ಪಟ್ಟಣದೊಳಗಿನ ಎಲ್ಲ ವಕೀಲ, ಜ್ಯೋತಿಷಿ, ಡಾಕ್ಟರುಗಳು ಶಂಖ ಪುಟಿಸುವರು (ಮೋಜೀವ. ೧೭). ಶಂಖ ಹೊಡೆ = ಶಂಖ ಪುಟಿಸು : ಶಂಖಾ ಹೊಡೀಬ್ಯಾಡ (ತಿಮಗು. ೨). [ಸಂ.]

ಶಂಖಧ್ವಾನ (ನಾ). ಶಂಖವನ್ನು ಊದುವುದರಿಂದುಂಟಾಗುವ ಧ್ವನಿ : ದಿನಾಧೀಶಬಿಂಬಂಬರಂ ಧೀಂಕಿಡ ಶಂಖಧ್ವಾನಮಾಶಾವಿವರಮನಿತುಮಂ ತೀವ ಭೇರೀರವಂ . . . ಮುಟ್ಟೆವಂದರ್ ಕಡುಚೆಲ್ಲಂಬೆತ್ತ ಲಂಕಾಪುರದುಪವನಮಂ (ಪಂರಾಮಾ. ೧೫-೨); ಸಮರಸಿದ್ಧರಾಗಿ ಬಂದ ಕುರುಪಾಂಡವ ವೀರರೆಲ್ಲ . . . ಕದನಕುತೂಹಲರಾಗಿ ಶಂಖಧ್ವಾನ ಮಾಡುತ್ತಿದ್ದಾರೆ (ಭಾರದ. ೧೧೧). [ಸಂ.]

ಶಂಖನಖ (ನಾ). ೧. ಒಂದು ಬಗೆಯ ಜಲಚರ ; ಬಸವನ ಹುಳು. ೨. ಚಿಕ್ಕ ಶಂಖ; ಗುಳ್ಳೆಶಂಖ: ''ಕ್ಷುದ್ರಶಂಖಾಃ, ಶಂಖನಖಾಃ - ೨ ಗುಳ್ಳೆಗಳು, ಗುಳ್ಳೆಶಂಖಗಳು'' (ಸಿದ್ಧಾಂತ. ೮೪). [ಸಂ.]

ಶಂಖಪಾಯ (ನಾ). ಒಂದು ಬಗೆಯ ಮೀನು : ಹಗ್ಗರಿಲುಂ ಕಲ್ಲಡಿ ಶಂಖಪಾಯ ನರಿಲುಂಬಂ ಸಾನ ಮೂಗುಂ . . . ಪಂದಿಗನೆಂಬ ಮೊಂದಗೆದನಾ ಭಕ್ತಂ ಮಹಾಲೀಲೆಯಿಂ (ತ್ರಿಪುವಿ. ೫೭-೮). [?]

ಶಂಖಪಾಲ, ಶಂಖಪಾಳ (ನಾ). ೧. ಅಷ್ಟಫಣೆಗಳಲ್ಲಿ ಒಂದು: ಎಂಟುದಿಕ್ಕಿನ ಭೂಮಿಯಂ ಕ್ರಮದಿಂ ಪೊತ್ತು ಅನಂತ ತಕ್ಷಕ ವಾಸುಕಿ ಶಂಖ [ಪಾಠಾಂ. ಕ]ಪಾಲ ಪದ್ಮಕರ್ಕೋಟಕ ಕ್ರೋಡ ಕಾಳವಂಬಷ್ಟಕುಲಫಣೆಗಳಿರ್ಕುಂ (ಎಪಕ. ೧೫೦) ; ಬೆನ್ನಿನಲ್ಲಿ ತ್ರಿಶೂಲದ ಅರ್ಧಚಂದ್ರಾಕೃತಿ ಉಳ್ಳದು ಶಂಖಪಾಲನೆನಿಸಿಕೊಂಬುದು (ಎಪಚಿ. ೨-೨). ೨. = ಶಂಕರಪಾಳೆ. ೩. ಸೂರ್ಯ. ಶಂಖಪಾಳ: ೧. ''ಘನದನಂತಂ . . . ಶಂಖಪಾಳಂ ಕುಳಿಕನೆಂದು ನಾಗರಕುಲಂಗಳೆಂಟಕ್ಕೆ ನಾಮಂ'' (ಮಂಗರಾ. ೧೧೯-೪); ಮುಂಡಾಸವೇ ಶಂಖಪಾಳ ಸರ್ಪಾಕಾರವಾಗಿಯಾರ್ಭಟಿಸುತ್ತ ತೋಳ ಪರಿಯಂತರಂ ಸುತ್ತಿ ಹೆಡೆಯಿಂ ಮುಖವ ಬಡಿಯಲತಿ ಭೀತಿಗೊಂಡು (ಗುರುಚಾ. ೨-೬೭). [ಸಂ.]

ಶಂಖಪಾಷಾಣ (ನಾ). [ವಿಜ್ಞಾ] ಕಾಯಿಸಿದರೆ ಕರಗದೆ ಬೆಳ್ಳುಳ್ಳಿಯ ವಾಸನೆಯ ಹಬೆಯನ್ನು ಹೊರಸೂಸುವ, ಬಿಳಿಯ ಆರ್ಸನಿಕ್ ಎಂಬ ಖನಿಜವಸ್ತು: ಶಂಖಪಾಷಾಣವನ್ನು ಸಂಪಾದಿಸಿ ತಂದು ಬ್ರಾಂದಿಯೊಡನೆ ಸೇರಿಸಿ ಆ ವರ್ತಕನಿಗೆ ಕುಡಿಸುವುದೆಂದು ಮಾಸ್ಕೋವಳನ್ನು ಪುಸಲಾಯಿಸಿ . . . ಆಪಾದನೆ ಹೊರಿಸಿದ (ಪುಸರು. ೪೬). [ಸಂ.]

ಶಂಖಪಾಳ 'ಶಂಖಪಾಲ' ನೋ.

ಶಂಖಪುಷ್ಪಬಳ್ಳಿ (ನಾ). ಬಿಳಿಯ, ನೀಲಿಯ ದೊಡ್ಡದೊಡ್ಡ ಹೂವುಗಳನ್ನು ಬಿಡುವ ಒಂದು ಬಗೆಯ ಬಳ್ಳಿ: ''ಕಂಠಿಸೊಪ್ಪು . . . ಶಂಖಪುಷ್ಪಬಳ್ಳಿ, ಬಿಳೀ ಸಟುಗ, ಬಿಳಿಯ ಗಿರಿಕರ್ಣಿಕೆ'' (ಸಜ್ಜನ. ೩೭). [ಶಂಖಪುಷ್ಪ + ಬಳ್ಳಿ]

ಶಂಖಪುಷ್ಪಿ (ನಾ). ಒಂದುಬಗೆಯ ಸಸ್ಯ: ''ಲಂಬಫಲಾ - ಶಂಖಪುಷ್ಪಿ'' (ಒಪಧಿ. ೧೪೨): ''ವನವಿಲಾಸಿನೀ - ಶಂಖಪುಷ್ಪಿ'' (ಒಪಧಿ. ೧೯೯) [ಸಂ. ಶಂಖಪುಷ್ಪೀ]

ಶಂಖಪ್ರಣಾದ (ನಾ). = ಶಂಖಧ್ವಾನ : ಒಗೆದತ್ತುತ್ತಾರರಾಗಂ ತ್ರಿಭುವನ ಭವನೋದ್ಭೇದಿ ಶಂಖಪ್ರಣಾದಂ (ಕಾದಂಬ. ೪೨೪). [ಸಂ.]

ಶಂಖಭಸ್ಮ (ನಾ). ಶಂಖದಿಂದ ತಯಾರಿಸಿದ ರಾಸಾಯನಿಕ ಭಸ್ಮ : ಶಂಖಭಸ್ಮಃ- ಶಂಖವನ್ನು ಕೊಲುಮೆಯಲ್ಲಿ ಮೂರು ಮೂರು ಬಾರಿ ಕಾಸಿ ನಿಂಬೇಹುಳಿಯಲ್ಲಿ ಅದ್ದಿದರೆ ಭಸ್ಮವಕ್ಕು (ವೈದ್ಯ. ೫೦). [ಸಂ. ಶಂಖಭಸ್ಮನ್]

ಶಂಖಮುದ್ರೆ (ನಾ). ೧. (ಜಪ ಪೂಜಾದಿಗಳಲ್ಲಿ) ಶಂಖದ ಆಕಾರದಲ್ಲಿ ಮಾಡುವ ವಿಶಿಷ್ಟರೀತಿಯ ಕರವಿನ್ಯಾಸ; ಮಂತ್ರಶಾಸ್ತ್ರಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ: ಚಕ್ರಮುದ್ರ ಶಂಖಮುದ್ರಗಳು ವಿಷ್ಣುಪೂಜೆಗೆ ಅತ್ಯಾವಶ್ಯಕ (ರೂಢಿ). ೨. [ದ್ವೈತ] ಮಾಧ್ವರು ಇಟ್ಟುಕೊಳ್ಳುವ ಶಂಖ, ಚಕ್ರ, ಗದೆ, ಪದ್ಮ ಮತ್ತು ನಾರಾಯಣ ಎಂಬ ಐದು ವಿಧವಾದ ಮುದ್ರೆಗಳಲ್ಲಿ ಒಂದು: ಶಂಖಮುದ್ರೆಯಲ್ಲಿ ಪರಮಾತ್ಮನು ಪ್ರತಿಹಾರನಾಮದಿಂದ ಇರುತ್ತಾನೆಂಬ ನಂಬಿಕೆಯಿದೆ (ರೂಢಿ). [ಸಂ. ಶಂಖಮುದ್ರಾ]

ಶಂಖರೇಖೆ (ನಾ). [ಸಾಮುದ್ರಿ] ಶಂಖದ ಆಕಾರದ ಹಸ್ತರೇಖೆ : ಶಂಖರೇಖೆಯಿರಲು ನೂರುಕೋಟಿದ್ರವ್ಯಕ್ಕೆ ಅಧಿಪತಿಯಾಗುವನು (ಸಾಮುಲ. ೫೫-೨೧). [ಸಂ. ಶಂಖರೇಖಾ]

ಶಂಖಲಿಪಿ (ನಾ). ಶಂಖದಂತೆ ಕೊನೆಗೆ ಬಾಗಿರುವ ಒಂದು ಬಗೆಯ ಲಿಪಿ; ಒಗಟುಲಿಪಿ. [ಸಂ.]

ಶಂಖವಟಕ (ನಾ). ಒಂದುಬಗೆಯ ಔಷಧಿಯ ಗುಳಿಗೆ: ಶಂಖವಟಕಃ - ಹುಣಸೇಚಿಕ್ಕೆಯ ಬೂದಿ ೧ ಪಲ . . . ಗಂಧಕ ೧ ೧ ತೂಕ ಇವೆಲ್ಲವ ಕೂಡಿ ಅಲ್ಲದ ರಸದಲ್ಲೂ ಏಳು ಬಾರಿ ಬಿಲ್ವದೊಳು ಮರ್ದಿಸಿ . . . ಮೆಲ್ಲಲು ಶೂಲೆ, ಗುಲ್ಮ ಮುಂತಾದ ರೋಗ ಹರ (ವೈದ್ಯ. ೫೦). [ಸಂ.]

ಶಂಖವಾದ್ಯ (ನಾ). ಒಂದು ಬಗೆಯ ವಾದ್ಯ: ಚಂಡೆಮದ್ದಳೆಗಳ ಶಂಖವಾದ್ಯಗಳ ಕೋಲಾಹಲದಲ್ಲಿ (ಪುರಪ್ಪಾಡು) ಪ್ರಥಮಪಾತ್ರವು ರಂಗಭೂಮಿಯನ್ನು ಪ್ರವೇಶಿಸುತ್ತದೆ (ಭಾರದ. ೫೨೭).

ಶಂಖವಾದ್ಯ ಮಾಡು : ೧. ಬೊಬ್ಬೆಹಾಕು; ಕೂಗಾಡು: ವೇದನೆಯನ್ನು ತಾಳಲಾರದೆ ಆಚಾರ್ಯರು ಶಂಖವಾದ್ಯ ಮಾಡಿದರು (ಚಿವಿ. ೭೭) ; ೨. (ಅಳುವಾಗ) ಬಾಯಿಬಡಿದುಕೊಳ್ಳು : ತಾಯಿ ಬಿಟ್ಟುಹೋದುದರಿಂದ ಮಗು ಶಂಖವಾದ್ಯ ಮಾಡಿಕೊಂಡು ಅಳುತ್ತಿದೆ (ರೂಢಿ). [ಸಂ.]

ಶಂಖಾಸು (ನಾ). ಒಂದು ಬಗೆಯ ಗಿಡ; ತುಂಬೆ: ''ಶಂಖಾ[ಪಾಠಾಂ.ಕಾ]ಸುಮನೆ ತುಂಬೆ'' (ಮಂಗರಾ. ೪೫-೪೮). [?]

ಶಂಖಿ (ನಾ). ೧. ಕಡಲು; ಸಮುದ್ರ. ೨. ಶಂಖವನ್ನು ಊದುವವನು. ೩. ವಿಷ್ಣು. [ಸಂ. ಶಂಖಿನ್]

ಶಂಖಿನಿ (ನಾ). ೧. ಅಪ್ಸರೆ; ದೇವತೆ. ೨. ಮುತ್ತಿನ ಚಿಪ್ಪು. ೩. ದೇಹದಲ್ಲಿರುವ ಪ್ರಧಾನವಾದ ನಾಡಿಗಳಲ್ಲಿ ಒಂದು: ಶಂಕಿಖಿತಿನ ನಾಡಿಯ ಸಪುರನಾಳದೊಳ ಗಣ ಸಣ್ಣ ಬಣ್ಣದ ಹೊಲಬನಣ್ಣಗಳೆತ್ತ ಬಲ್ಲರು (ಅಪಚಂ. ಕ. ೪೨೯-೧೧೫೫); ಒಂದೊಂದು

ನಾಡಿಯಲ್ಲಿ ಒಂದೊಂದು ನದಿಗಳು ಕುಂದದೆವುಂಟು ಹನ್ನೆರಡರಲ್ಲಿ ಮಂದಾಕಿನೀ ಯಾಡೊನಾಡಿಯಲ್ಲಿ . . . ತಪತಿ ಶಂಖಿನೀನಾಡಿಯಲ್ಲಿ ವಾಸಯಂದು ತಿಳಿಯೊ (ವಿಜಸು. ೧೪-೩). ೪. ಒಂದು ಬಗೆಯ ಸಸ್ಯ ; ಕಡಿಯಾಲದ ಗಿಡ : "ಶಂಖಿನೀ, ಚೋರಪುಷ್ಪೀ; ಕೇಶಿನೀ - ೩ ಕಡಿಯಾಲದ ಗಿಡದ ಪೆಸರುಗಳು" (ಸಿದ್ಧಾಂತಿ. ೧೪೧). ೫. [ಕಾಮಶಾ] ಪದ್ಮಿನಿ, ಚಿತ್ತಿನಿ, ಹಸ್ತಿನಿ, ಶಂಖಿನಿ ಎಂಬ ನಾಲ್ಕು ಬಗೆಯ ಸ್ತ್ರೀಜಾತಿಗಳಲ್ಲಿ ಒಂದು ಮತ್ತು ಆ ಜಾತಿಗೆ ಸೇರಿದ ಹೆಣ್ಣು: ಕಾಮ ದೇವನ ಕಟಾಕ್ಷಕ್ಕಂಜಿ ರತಿದೇವಿಗಡಿಗಡಿಗೆ ಕೆಯ್‌ಮುಗಿದು ಕೆಲಸಾರ್ದಿರ್ಪ ಶಂಖಿನಿಯರಿಂ (ಗಿರಿಕ. ೭-೧೧ ವ); ಬಡವಲ್ಲದುಬ್ಬಲ್ಲದೊಡಲು . . . ಕೆಂಪ ನುಡುವತಿ ಚದುರಿನವಳ ಶಂಖಿನಿ [ಪಾಠಾಂ. ಣಿ]ಯೆನಿಪಳು (ಜನಪ. ೨-೧೫).

[ಸಂ. ಶಂಖಿನೀ]

ಶಂಖೋದರ (ನಾ). ಶಂಖದ ಒಳಭಾಗ: ಕುಂಭಾಂಬುವಿಂದಂಬುಧಿಜಳಂ . . . ಕ್ಷುದ್ರಶಂಖೋದರದಿಂ ಬ್ರಹ್ಮಾಂಡಗರ್ಭಂ ಪಿರಿದೆನೆ (ಜಗವಿ. ೧-೧೯). [ಸಂ.]

ಶಂಟ 'ಶಾಟ$_2$' ನೋ.

ಶಂಡ (ನಾ). ೧. ನಪುಂಸಕ; ಶಿಖಂಡಿ: "ತೃತೀಯಾಪ್ರಕೃತಿಃ, ಶಂಡಃ, ಷಂಡಃ, ಕ್ಲೀಬಂ, ನಪುಂಸಕಂ - ೫ ನಪುಂಸಕನ ಪೆಸರುಗಳು" (ಸಿದ್ಧಾಂತಿ ೧೭೮). ೨. ಗುಂಪು; ನೆರವಿ. ೩. ಬೀಡು ; ಪಾಳೆಯ : "ನಿವೇಶ, ಶಿವಿರ, ಪಾಳೆಯ - ಈ ೩ ಶಂಡ" (ನಾಚಿರಾ. ೬). 'ಷಂಡ' ಪರಾ. [ಸಂ.]

ಶಂಢ (ನಾ). ೧. = ಶಂಡ ೧. ೨. ಸ್ವೇಚ್ಛೆಯಾಗಿ ತಿರುಗುವ ಗೂಳಿ. [ಸಂ.]

ಶಂಪ (ನಾ). ಮಿಂಚು; ವಿದ್ಯುತ್ತು: ಶಂಪದಂತೆ ವಿಜಯವಿಠಲ ಪೂಳವದೆ ಹಬ್ಬ (ಜಗದಾ. ೧೩೧). [ಸಂ. ಶಂಪಾ]

ಶಂಪಾಕ (ನಾ). ಗೊಂಚಲು ಗೊಂಚಲಾಗಿ ಹಳದಿಯ ಹೂವು ಬಿಡುವ ಒಂದು ಬಗೆಯ ಮರ; ಕಕ್ಕೆ: "ಕಕ್ಕೇಗಿಡ, ಕೊಂಡೆ, ರಾಜತರು . . . ಸ್ವರ್ಣಪುಷ್ಪಿ, ಸಂಪಾಕ, ಶಂಪಾಕ" (ಸ್ಯನಿ. ೩೦). [← ಹಿಂ. ಶಂಪಾಕ. / ಸಂ. ಸಂಪಾಕ]

ಶಂಪೆ (ನಾ). = ಶಂಪ : ರಸನಾಶಂಪಾಶತಂ ಸಂಚಳಿಸೆ ಪುದಿಯೆ ಪೂತ್ಕಾರ ಮಾಶಾಂತಮಂ ದಳ್ಳಿಸೆ ವಹ್ನಿಜ್ವಾಲೆ . . . ವಜ್ರಾವರ್ತಚಾಪಂ ಪಡೆದುದು ಭಯಮಂ ಕಾಳಕಾಳಾಹಿರೂಪಂ (ಪಂರಾಮಾ. ೫-೭೪). [ಸಂ. ಶಂಪಾ]

ಶಂಪೆ$_2$, ಶಂಬೆ$_2$, ಶೆಂಬೆ, ಸಂಬೆ$_2$ (ನಾ). ೧. ಒಂದು ಬಗೆಯ ಮರ: "ಇಂಪುವತಿ ಶಂಪೆ[ಪಾಠಾಂ. ಸಂಪಿ]ಯಕ್ಕು" (ಮಂಗರಾ. ೩೫-೧೪); ಧರಣಿ(ರ)ಗೆ ಶಂಪೆಯಿಂ ಬಡಗ ಪುತ್ತಿರ ಕೇಳ್ ಮರುಳಾಗದಯ್ದುಕೆಯ್ಯುರಲಗುಬ್ಬುಗಳೊಪ್ಪುರುಷದಿಂ ಫಣಿ ಭಾವಿಸ ಲೊಮ್ಮಿಗೊಮ್ಮಿಗುಬ್ಬರಿಸುವ ಮಣ್ . . . ಜಲಧಾರೆ ಮಹೇಂದ್ರನಾ(ಶಯಿಂ)ಕದಿಂ (ಜಟ್ಟಿಮ. ೧೧-೨೧). ಶಂಬೆ : ೨. ಒಂದು ಬಗೆಯ ಔಷಧೀಸಸ್ಯ: "ಶಂಬೆ[ಪಾಠಾಂ. ಸಿಂಬೆ, ಸೆಂಬೆ] ಪತ್ರವತಿಯಕ್ಕು" (ಮಂಗರಾ. ೪೫-೪೮) ; ತಮಟೇಬಳ್ಳಿ , ಶಂಬೆ (ಮೃಚ್ಛಿ. ೧೬-೨೯೭). ಶೆಂಬೆ : ೨. ಶಂಬೆಯೆಲೆ ಲಶುನ ವಚೆಗಳ್ "ಕಿಂಬಹುನಾ" ಭುಜಸಂಗತ ವಿಷದಾಡಂಬರಮಂ ಪಿಂಗಿಸುಗುಮವಂಬಲದೊಡನರದು ನಸ್ಯಮಂ ಮಾಡಲೊಡಂ (ಏಮಪ. ೬-೩೫). ಸಂಬೆ$_2$: ೧. "ಜಂಬೀರಜಂಬಲ, ಜಯಜಯ್ಯಾವರ - ಈಯೆರಡುಂ ಸಂಬೆಯ ಮರ" (ಓಷಧಿ. ೬೧). 'ಸೆಂಬೆ$_1$' ಪರಾ.

[?/ ತಮಿ. ಚೆಮ್ಬೈ]

ಶಂಫಳಿ (ನಾ). ತಲೆಹಿಡುಕಿ ; ಕುಂಟಣಿ: ಕುಂಟಣಿ ಶಂಫಳಿ[ಚುಂಡೀ]ಯೆನೆ ನೆಗಳ್ಚುಂ ಕೆಳದಿಯೊಳಾಳೀ ಸಖೀವಯಸ್ಯಾ ಶಬ್ದಂ" (ಮಸ್ತುಕೋ. ೫೩-೮). 'ಶಂಭಲಿ' ಪರಾ.

[ಸಂ. ಶಂಫಲೀ]

ಶಂಬ (ನಾ). ೧. ಇಂದ್ರನ ಆಯುಧ; ವಜ್ರಾಯುಧ: "ಪವಿ ಶತಧಾರಂ ದಂಭೋಳಿ ವಜ್ರಂ . . . ಶಂಬವಿನಿತ್ತುಮುಂ ತದೇಕಾರ್ಥವಾಚಿ" (ಮಸ್ತುಕೋ. ೭-೩೮); ಬೆಡಂಗಾಯ್ತ ಯುಕ್ತವ್ರಜಗರ್ವೋರ್ವಿದ್ರ ಶಂಬಂ ನಯನಸುಖಲತಾಸ್ತಂಬಮಾತ್ರೇಯ ಬಿಂಬಂ (ಚಂದ್ರಪ್ರ. ೯-೩೪) ; ಕಣ್ಗೆ ಚೆಲ್ವಾದುದು ಚಂಚದೃಕ್ಕದಂಬಂ ತಿಮಿರಕುಧರಶಂಬಂ ದಿನಾಧೀಶ ಬಿಂಬಂ (ರಾಜಶೇ. ೧೨-೩೪). ೨. ಹಡಗು ; ಭೈತ್ರ : "ದಂಭೋಳಿ ಹಡಗಿದರಡುಂ ಶಂಬಾಖ್ಯಂ" (ನಾನಾಕಂ. ೧೪೩). [ಸಂ.]

ಶಂಬಪಾಣಿ (ನಾ). ವಜ್ರಾಯುಧವನ್ನು ಹಿಡಿದವನು ; ಇಂದ್ರ : ಶಂಬಪಾಣಿ ವಿಧಾತೃ ವಿಷ್ಣುಕುಟುಂಬಿನೀ ಪರಿಪಾಲಿನೀ ತುಂಬುರಾಜಜಗಾನಲೋಲ ಮದಂಬ ರಕ್ಷಿಪುದೀಶ್ವರೀ (ವೃಷವಿ. ೭-೫೯). [ಸಂ.]

ಶಂಬಮಣಿ (ನಾ). ವಜ್ರ : ಶಂಬಮಣಿರದನ . . . ಕಾಂತಾಶಿರೋಮಣಿ ಕಾಂಭೋಜ ರಾಜನ ಪುತ್ರಿ ಕಾಂತ ಗೌರೀದೇವಿ (ಹಮ್ಮೀರ. ೨-೩೨ ವ). [ಸಂ.]

ಶಂಬರ (ನಾ). ೧. ಪ್ರದ್ಯುಮ್ನನಿಂದ ಹತನಾದ ಒಬ್ಬ ರಾಕ್ಷಸ: ಮಯನೋ ಶಂಬರನೋ ದಶಾಸ್ಯಸುತನೋ ಮಾರೀಚನೋಯೆಂಬಿನಂ . . . ಶಿವಾಜಿಯ ಸೂರ್ಕ್ಕಂ ಮುಱಿದಿಕ್ಕಿಯಪ್ರತಿಮವೀರಾಭಿಖ್ಯೆಯನ್ತಾಳ್ದಿದಂ (ಎಕಿ.III. ಶ್ರೀರಂಗ. ೬೪-೭ ; 1722). ೨. ಒಂದು ಬಗೆಯ ಜಿಂಕೆ : "ವಾತಪ್ರಮಾ, ಶಂಬರಃ, ಕೃಷ್ಣಸಾರಃ - ಈ ೩ ಕೃಷ್ಣ ಮೃಗಂ" (ಹಲಾಯು. ೩೯-೭೭) ; ಶಂಬರ ಭಾಸ್ವತ್ಕುಂಡರೀಕಸ್ಫುರಿತ ಹರಿ ಮರುದ್ಭ್ರಾಜಿತಂ ವಾರ್ಧಿಯಂ . . . ಪೋಲ್ತು ಚೆಲ್ಯಾಯ್ತರಣ್ಯಂ (ರಾಜಶೇ. ೫-೨೫). ೩. ನೀರು; ಜಲ : ಶಕಾರಕ್ಕೆ-ಅಶನಿ-ಅಸನಿ . . . ಶಂಬರ - ಸಂಬರ (ಶಮದ. ೨೫೩ ಪ್ರಯೋ); ಇರುಳು ನರಿಗಳ ಪಿಡಿದು ತಂಮ ಚರಪಾದ ಶಂಬರವ ತಳಿದುತ್ತಮಾಶ್ವಗಳ ಮಾಡಿ (ರಾಭಚ. ೧೧-೪೦). ೪. ಮೋಡ; ಮುಗಿಲು. ೫. ಇಂದ್ರನಿಂದ ಹತನಾದ ಒಬ್ಬ ರಾಕ್ಷಸ. [ಸಂ.]

ಶಂಬರಕೇಳಿ (ನಾ). ನೀರಾಟ; ಜಲಕೇಳಿ : ಪರವೆ ಸೌಂದರರು ಶಂಬರಕೇಳಿಯಲ್ಲಿ ಶಂಕರನ ನೆನಹ ನೆಲೆಗೊಳಿಸಿ ಹರುಷದಿಂದೋರ್ವರೋರ್ವರ ಮೇಲೆ ಚಲ್ಲಿದರ್ ಪಿರಿದರ್ಘ್ಯವೀಶಗಿತ್ತಂತೆ (ಭೈರವೇ. ೨-೩೬). [ಸಂ. ಶಂಬರಕೇಲಿ]

ಶಂಬರಜಾತ (ನಾ). ನೀರಿನಲ್ಲಿ ಹುಟ್ಟಿದುದು ; ಕಮಲ: ಮನ್ಮಥಾರಿರೂಪನ ಚಿಕವೀರದೇವನ ಚಿದಂಬರಶಂಬರಜಾತಮಿತ್ರನಾ (ರಾಜಶೇ. ೧-೬೭). [ಸಂ.]

ಶಂಬರಧಿ (ನಾ). ಸಾಗರ ; ಸಮುದ್ರ : ಇದು ತಮಮೆಂಬ ಶಂಬರಧಿಯಂ ಸಲೆ ಪೀರ್ವ ಮಹೌರ್ವವಹ್ನಿಯೋ (ರಾಜಶೇ. ೧೧-೪೫). [ಸಂ.]

ಶಂಬರಮಥನ (ನಾ). ಶಂಬರನೆಂಬ ರಾಕ್ಷಸನನ್ನು ಕೊಂದವನು ; ಪ್ರದ್ಯುಮ್ನ: ಶಂಬರಮಥನ ಶಿಂಜಿನೀಲೋಲಕುಂತಳೆಯೆಂದು ಕರೆದೆ ಗಡ ನೀನು (ಜೈಮಿಭಾ. ೨೬-೨೨). [ಸಂ.]

ಶಂಬರಸೂದನ (ನಾ). = ಶಂಬರಮಥನ : "ಪ್ರದ್ಯುಮ್ನಃ . . . ಶಂಬರಸೂದನಃ . . ಮನೋಭವಃ - ಈ ೨೮ ಕಾಮ(ದೇವ)ನ ಪೆಸರ್" (ಹಲಾಯು. ೭-೩೩); ಆ ವ್ಯತಿರೇಕದೊಳತಿಕುಪಿತನಾಗಿ ಶಂಬರಸೂದನಂಬೆರಸು ನಡೆತಂದು (ಜಗವಿ. ೧೫-೪ ವ).

[ಸಂ.]

ಶಂಬರಹರ (ನಾ). = ಶಂಬರಮಥನ: ನಿನ್ನಂ ವಿಜಿತಶಂಬರಹರಂ ಮೆಚ್ಚಿ ನಿಜದೊಳೊಂದಿಸುವೆನೆಂದಯ್ದೆ ನೆನೆದಿಂತು ನೆಗಳ್ದಂ (ಪದ್ಮರಾ. ೧೩-೧೫) ; ಜಯ ಶಂಬರಹರಾಹಿತ ಶತಾಂಬಕಸುತಸ್ತುತ ಚಿದಂಬರ ದಿನೇಶಾ (ರಾಜಶೇ. ೧೩-೫೪).

[ಸಂ.]

ಶಂಬರಾರಿ (ನಾ). ಶಂಬರನೆಂಬ ರಾಕ್ಷಸನ ವೈರಿ; ಮನ್ಮಥ: "ಮನಸಿಜಂ . . . ಶಂಬರಾರಿ ಶೂರ್ಪಕವೈರಿ ದರ್ಪಕಂ ಪುಷ್ಪಾಯುಧಂ . . . ಮಾರನೆನೆ ಮದನನಕ್ಕು" (ಮಂಗರಾ. ೭-೨೨); ಅಲ್ಲಿ . . . ಶಂಬರಾರಿಯ ಕರ್ವುವಿಲ್ಲಿನ ಮೌರ್ವಿಯಾಗದಳಿಮಾಲೆಯ ಝಂಕಾರಮಿಲ್ಲ (ಪುಷ್ಪಸು. ೯-೨೦ ವ). [ಸಂ.]

ಶಂಬಲ (ನಾ). ೧. ದಡ; ತೀರ. ೨. ಪ್ರಯಾಣಕಾಲದ ಬುತ್ತಿ; ಪಾಥೇಯ. ೩. ಈರ್ಷ್ಯೆ ; ಕರುಬು. [ಸಂ.]

ಶಂಬವತಿ (ನಾ). ಒಂದು ಬಗೆಯ ಗಿಡ: "ಶಂಬ[ಪಾಠಾಂ. ಸಂಬ; ಸಂಭ]ವತಿಯೆನೆ ಮೊಟಗು" (ಮಂಗರಾ. ೩೬-೧೮). [?]

ಶಂಬಾಕೃತ (ನಾ). ಎರಡುಸಲ ಉಳುಮೆಮಾಡಿದುದು: "ಶಂಬಾಕೃತಂ ದ್ವಿಸೀತ್ಯಮೆನಿಕ್ಕುಂ" (ಮಸ್ತುಕೋ. ೬೩-೭೦). [ಸಂ.]

ಶಂಬುಕ (ನಾ). ೧. ಒಂದು ಬಗೆಯ ಚಿಕ್ಕಚಿಪ್ಪು; ಗುಳ್ಳೆಶಂಖ. ೨. ಬಸವನ ಹುಳು. ೩. ಒಬ್ಬ ರಾಕ್ಷಸನ ಹೆಸರು: ರಾಘವರಾಯನನುಜನು ದಂಡಕಾರಣ್ಯದಲಿ ಮುಱಿದನು ಶಂಬುಕಾಸುರನ (ತೊರರಾ. ೩-೩ ಸೂಚನೆ). [ಸಂ.]

ಶಂಬೂಕ (ನಾ). ೧. = ಶಂಬುಕ ೧: "ಶಂಬೂಕಮಂಭಶ್ಯುಕ್ತಿಪ್ರಖ್ಯಂ" (ಪಪ್ರಕೋ. ೨೬-೯). ೨. = ಶಂಬುಕ ೨ : ಶಂಬೂಕ ಮಾತೃವಾಪಿ ಶಂಖ ಶುಕ್ತಿ ಗಂಡುವಾಳ ಜಲೂಕ ಭೂನಾಗಾಪಾದೋದರ ಕ್ರಿಮ್ಯಾದಿ ದ್ವೀಂದ್ರಿಯಗಳ್ . . . ಅಪ್ಪುವು (ತತ್ತ್ವಪ್ರ. ೯೮). [ಸಂ.]

ಶಂಬೆ$_1$ (ನಾ). ಹೊಲ, ಗದ್ದೆಗಳ ಎರಡನೆಯ ಉಳುಮೆ. [ಸಂ. ಶಂಬ]

ಶಂಬೆ$_2$ 'ಶಂಪ್ಪ' ನೋ.

ಶಂಭ (ನಾ). ಕುದುರೆಯ ಒಂದು ರೋಗ (?): ಅನವರತಮಜ್ಮಜಲ ಅರಿಶಿನವರ್ಸಂ ಕಫಸಂಜನಿತಂ ತುರಗಕ್ಕೆ ಶಂಭಮೆಂಬುದಕ್ಕುಂ (ಅಶ್ವಪ್ಯ. ೧೨-೨೩): ಎಣ್ಣೆ ಷಡುತೂಕ ಕನಕದ ಹಣ್ಣಿನ ರಸವೆಂಟುತೂಕ ಕುಪ್ಪೆಯ ರಸಮಂ ಕಣ್ಣಿನ ತೂಕಮದನಿತಂ ನುಣ್ಣನೆ ನಶ್ಯಂಗಳಿಂದ ಶಂಭಗಳಳಿಗುಂ (ಅಶ್ವಪ್ಯ. ೧೨-೬೭). 'ಸೆಂಬ' ಪರಾ. [ಸಂ. ?]

ಶಂಭಲಿ, ಶಂಭಳಿ (ನಾ). ತಲೆಹಿಡುಕಿ; ಕುಂಟಿನಿ. **ಶಂಭಳಿ** : "ಕುಟ್ಟನೀ, ಶಂಭಳೀ - ೨ ತಲೆಹಿಂಡಿಕೆಯಾದ ಕುಂಟ್ಟಿಗಿತ್ತಿಯ ಹೆಸರುಗಳು" (ಸಿದ್ಧಾಂತಿ. ೧೭೨).

[ಸಂ. ಶಂಭಲೀ]

ಶಂಭವ (ನಾ). [ಜೈನ] ಇಪ್ಪತ್ತುನಾಲ್ಕುಜನ ತೀರ್ಥಂಕರರಲ್ಲಿ ಮೂರನೆಯವನು : ವೃಷಭ ಅಜಿತ ಶಂ[ಪಾಠಾಂ. ಸಂ]ಭವ . . . ವರ್ಧಮಾನರೆಂಬಿಪ್ಪತ್ತು ನಾಲ್ವರ್ ತೀರ್ಥಕರರ್ (ಚಾವುಂಪು. ೪೦೨). [ಸಂ.]

ಶಂಭಳಿ 'ಶಂಭಲಿ' ನೋ.

ಶಂಭು (ಗು). ೧. ಸುಖವನ್ನುಂಟುಮಾಡುವ; ಸಂಪತ್ತನ್ನು ನೀಡುವ. (ನಾ). ೨. ಸುಖ ಮತ್ತು ಸಂಪತ್ತನ್ನು ಹೊಂದಿರುವವನು; ಶ್ರೀಮಂತ. ೩. ಶಿವ; ಈಶ್ವರ: "ಭವನೀಶಂ ಶಂಭು ರುದ್ರಂ ಪಶುಪತಿ ಗಿರಿಶಂ ಶೂಲಿ ಭರ್ಗಂ . . . ವೃಷಾಂಕಂ" (ಪಪ್ರಕೋ. ೩-೧೩); ಶಂಭು ಪದಾಬ್ಜಷಟ್ಚರಣನೋಹಿಲನಾಗ . . . ಒಂದು ದಿನದೊಳ್ ದಿವಮಂ ಪಡೆದಂ (ಅಭಿಮ. ೧೧-೩೮). ೪. ಬ್ರಹ್ಮ; ಸೃಷ್ಟಿಕರ್ತ: "ಬ್ರಹ್ಮಾ . . . ಶಂಭು, ಸ್ವಯಂಭೂ . . . ಕಮಲಾಸನಃ - ಈ ೨೦ ಬ್ರಹ್ಮನ ಪೆಸರ್" (ಪಲಾಯು. ೨-೭). ೫. ವಿಷ್ಣು: "ಸನಾತನಃ, ಅಜಿತಃ (ಜಿನಃ), ಶಂಭುಃ . . . ಪುರುಷೋತ್ತಮಃ- ಈ ೧೧ ನಾರಾಯಣನ ಪೆಸರ್" (ಪಶಾಯು. ೬-೨೬). ೬. ಅರ್ಹಂತ. ೭. ಪೂಜ್ಯ; ಹಿರಿಯ. ೮. ಯುಧಿಷ್ಠಿರ. ೯. ಕುಶಲ; ಕ್ಷೇಮ. "ಅಜ ರುದ್ರಂ ಪಿರಿಯರ್ ಧರ್ಮಜ ಕುಶಲಮಿದ್ದೆದು ಶಂಭು ಶಬ್ದ" (ನಾನಾಕಂ. ೯೮). [ಸಂ.]

ಶಂಭುನಟನ (ನಾ). ೧. ಪರಮೇಶ್ವರನ ನರ್ತನ; ನಟರಾಜನ ತಾಂಡವ. ೨. [ಛಂದ] ಅಕ್ಷರಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಇಪ್ಪತ್ತಾರನೆಯದಾದ, ಪಾದದಲ್ಲಿ ಇಪ್ಪತ್ತಾರು ಅಕ್ಷರಗಳುಳ್ಳ ಉತ್ಕೃತಿ ಛಂದಸ್ಸಿನ ಒಂದು ವೃತ್ತ : ಜಸಂ ನಭಜಸಂ ನಭಲಗಂ ಬಗೆಗೊಳಲ್ ಸೊಗಯಿಸಿರ್ಪುದದು ಶಂಭುನಟನಂ (ಕೃಛಂ. ೪೯). [ಸಂ.]

ಶಂಶೇರು, ಶಮಶೇರಿ (ನಾ). ೧. ಕತ್ತಿ ; ಖಡ್ಗ : ಹುಜೂರಿಂದಾ ಇನಾಯತ ಆಗಿರುವ ಶಂಶೇರನ್ನು ಆ ಇಬ್ಬರು ಸಾಹೇಬರ ಮುಬಾರಕ್ ಹಸ್ತದಿಂದಾ ನಮ್ಮ ನಡುವಿಗ ಕಟ್ಟಿ ಬಹಳ ಖುಷಿ ಮಾಡಿದರು (ರಾಮಂತ್ರ. ೨೯೭). **ಶಮಶೇರಿ** : ೨. ಹಿಂದೆ ಚಲಾವಣೆಯಲ್ಲಿದ್ದ ಹದಿನೆಂಟು ಬಗೆಯ ವರಹಗಳಲ್ಲಿ ಒಂದು; ಸುಮಾರು ಮೂರೂವರೆ ರೂಪಾಯಿ ಬೆಲೆಯ ಒಂದು ಚಿನ್ನದ ನಾಣ್ಯ: ೧೨. ಶಮಶೇರಿ, ೧೩. ಅಶ್ವಪತಿ, ೧೪. ವೆಂಕಟಪತಿ, ಇವೆಲ್ಲ ಕಿಮ್ಮತ್ತು ರೂ. ೩, ಆ. ೮ (ಕ್ಷಾಗ. ೨೮೦).

[← ಪಾರ. ಹಿಂ. ಶಮಶೀರ್, ಶಮಶೇರ್ ; ಮರಾ. ಸಮಶೇರ್]

ಶಂಸನ (ನಾ). ೧. ಹೊಗಳುವುದು; ಸ್ತುತಿಸುವುದು. ೨. ಹೇಳುವುದು; ನುಡಿಯುವುದು. ೩. ಕಂಠಪಾಠ ಒಪ್ಪಿಸುವುದು. [ಸಂ.]

ಶಂಸಿತ (ಗು). ೧. ಹೊಗಳಿದ. ೨. ಹೇಳಿದ. (ನಾ). ೩. ಖಚಿತವಾದ ನಿರ್ಧಾರವುಳ್ಳವನು ; ದೃಢಮನಸ್ಕ: "ಶಂಸಿ[ಪಾಠಾಂ ಸಂಶಿ]ತನಾ ಸುನಿಶ್ಚಿತಂ ದೃಢಚಿತ್ತನೆಂದೆನಿಕ್ಕುಂ" (ಮಂಗರಾ. ೭೫-೫). [ಸಂ.]

ಶಂಸು (ನಾ). ನಂಬಿಕೆಯುಳ್ಳವನು; ವಿಶ್ವಾಸವುಳ್ಳವನು: ವಿಮಲಧರ್ಮದ ಶಂಸುಗಳು ಪಿಡಿದರಿಯ ಮರ್ದಿಸರು (ಪಮ್ಮಟ. ೧-೧೦). [ಸಂ. ?]

ಶಕ$_1$ (ನಾ). ೧. ನಿರ್ದಿಷ್ಟವಾದ ಕಾಲದಿಂದ ಆರಂಭಿಸುವ ಕಾಲಗಣನೆ; ಯುಗ; IP ಈ ಪದವು ವಿಶೇಷವಾಗಿ ಕ್ರಿಸ್ತಶಕ ಎಪ್ಪತ್ತೆಂಟರಿಂದ ಆರಂಭವಾಗುವ ಶಾಲಿವಾಹನ ಶಕಕ್ಕೆ ಅನ್ವಯವಾಗುತ್ತದೆ : 'ಶಕವರುಷ' ಪರಾ. ೨. ಪರಿವರ್ತನೆಯ ಕಾಲ; ಸಂಕ್ರಮಣಕಾಲ: ಈ ಹೊಸದೊಂದು ಶಕವನ್ನೇ ಕಾರ್ಲಮಾರ್ಕ್ಸ್‌ನು ಮೊದಲು ಮಾಡಿದನು (ಮೂವಾದ. ೧೦೪). [ಸಂ.]

ಶಕ$_2$ (ನಾ). ೧. ಒಂದು ದೇಶದ ಹೆಸರು; IP ಸುಮಾರು ೧, ೨ ನೆಯ ಶತಮಾನದಲ್ಲಿ ಶಕರು ಆಳಿದ ಪಶ್ಚಿಮಭಾರತದ ಒಂದು ಪ್ರದೇಶ : ಶಕ ಕಾಶ್ಮೀರಾಂಧ್ರ ಕರ್ನಾಟಕ . . . ದೇಶಂಗಳ ಸಕಳವಿಸೇಯೋತ್ಕರಕ್ಕೆಲ್ಲಮತ್ಯುತ್ಸವಮಂ ಮಾಡುತ್ತಮಿರ್ದಂ (ಆದಿಪು.೧೦-೬೮). ೨. ಒಂದುಜನಾಂಗದ ಹೆಸರು: ಕ್ರಿಸ್ತಪೂರ್ವ ಮೊದಲ ಶತಮಾನದಲ್ಲಿ ಶಕರು, ಕುಷಾಣರು, ಹಿಂದೂ ವರ್ತಕರು ಬೌದ್ಧಧರ್ಮವನ್ನು ಪೂರ್ವತುರ್ಕಿಸ್ತಾನಕ್ಕೆ ಒಯ್ದರು (ಭಾರದ. ೬೪೮). [ಸಂ. ಶಕಾ]

ಶಕಟ (ನಾ). ೧. ಗಾಡಿ ; ಬಂಡಿ ; ರಥ: ಅನೇಕಶರಭರಿತಶಕಟಸಹಸ್ರಮನೊಂದು ಮಾಡಿ ಗಾಂಗೇಯನ ಪೆಱಗೆ ನಿಲಿಸಿದಾಗಳ್ (ಪಂಪಭಾ. ೧೧-೧೬ ವ); ಹೋಗಬಿಡೆ ನಿನ್ನನಿಲಜನ ತಲವಾಗಿಸುವನಿನ್ನೆಸುತ ಶಕಟದ ಬಾಗಿಲಲಿ ಗಿರಿಯಂತೆ ನಿಂದನು ಸಮರಕನುವಾಗಿ (ಕುವಾಪ್ರೋ. ೧೩-೧೫); ಮಾರನೆಯ ದಿನ ನರಸಿಂಹ ಶಕಟಾರೂಢನಾಗಿ ಹೊರಟ (ನಾಗಿಗ. ೪೯). ೨. ಕೃಷ್ಣನಿಂದ ಹತನಾದ ಒಬ್ಬ ರಾಕ್ಷಸ: ತದಂಘ್ರಿತಳಂ ಮುಟ್ಟೆ ಸಿಡಿಲ್ ಪೊಡೆವ ತೆರದ ಕೆಡೆದಂ ಶಕಟಂ (ಜಗವಿ. ೩-೨೮). ೩. [ಜ್ಯೋತಿ] ಐದುನಕ್ಷತ್ರಗಳನ್ನು ಒಳಗೊಂಡಿರುವ ಗಾಡಿಯ ಆಕಾರದಲ್ಲಿರುವ ರೋಹಿಣೀ ನಕ್ಷತ್ರ: ಮೂಜುದಿಸಂಬರಂ ಶಕಟಮಂ ಚಂದ್ರಂ ಗೆಲಲ್ ಶೋಭನಂ (ಜಟ್ಟಪು. ೪-೧೫೩). ೪. ಮೂವತ್ತರಡು ಬಗೆಯ ನಾಭಸಯೋಗಗಳಲ್ಲಿ ಒಂದು: ಉದಯಾಸ್ತದೊಳೊಂದಿರೆ ಶಕಟಂ (ಜಾತಕ. ೧೩-೨). 'ನಾಭಸಯೋಗ' ಪರಾ. ೫. [ನಾಟ್ಯ] ಸಂಯುತಹಸ್ತಗಳಲ್ಲಿ ಒಂದು : ಅಭಿನಯ ದರ್ಪಣದಲ್ಲಿ-೧೦. ಅಂಜಲಿ . . . ೧೧. ಶಕಟ . . . ೨೪. ಅವಹಿತ್ಥ (ಅಭಾಸ್ಯ. ೪೮).

[ಸಂ.]

ಶಕಟಪ್ರಸಂಹಾರ (ನಾ). ಶಕಟಾಸುರನನ್ನು ಕೊಂದವನು; ಕೃಷ್ಣ: ಶಕಟ ಪ್ರಸಂಹಾರನಾಡಿದನಾಡಿದಂ ಯಮುಳಾರ್ಜುನಸದ್ರುಮಘಾತಿಯೆಂಬೀ ರವಂ ನೆಗಟಲ್ಕೆ . . . ಮುರಾರಿ ಕೈಪಱಗಾಡಿದಂ (ಜಗವಿ. ೩-೪೫). [ಸಂ.]

ಶಕಟಭಂಗ (ನಾ). [ಸಾಮುದ್ರಿ] ಪುತ್ರರನ್ನು ಮತ್ತು ಸುಖವನ್ನು ಸೂಚಿಸುವ ಸುಳಿ : ಭಗ ಮೇಲುಭಾಗದಲ್ಲಿ ದಕ್ಷಿಣಸುಳಿಯಿರಲು ರಾಜಪತ್ನಿ ಆಗುವಳು. ಆ ಸುಳಿಯು ಶಕಟಭಂಗವೆಂಬ ಪೆಸರುಳ್ಳದಾದರೆ ಅನೇಕವಾದ ಪುತ್ರರನ್ನು ಸುಖವನ್ನು ಕೊಡುವದು (ಸಾಮುಲ. ೧೪೨-೧೭). [ಸಂ.]

ಶಕಟಭವ (ನಾ). [ಜ್ಯೋತಿ] ಶಕಟಯೋಗದಲ್ಲಿ ಹುಟ್ಟಿದವನು: ಶಕಟಭವಂ ತದುದಿತಭೋಕ್ತೃ ಕುಷ್ಠಿತಸ್ತ್ರೀಯುತಂ ಸರೋಗಂ (ಜಾತಕ. ೧೩-೧೩). [ಸಂ.]

ಶಕಟರೇಖೆ (ನಾ). [ಸಾಮುದ್ರಿ] ಬಂಡಿಯಾಕಾರದ ಹಸ್ತರೇಖೆ : ಹಸ್ತದಲ್ಲಿ ಶಕಟರೇಖೆಯಿರಲು ಧನವಂತನಾಗುವನು (ಸಾಮುಲ. ೧೦೩-೪). [ಸಂ. ಶಕಟರೇಖಾ]

ಶಕಟರೇಫ (ನಾ). ದ್ರಾವಿಡಭಾಷೆಯ ವರ್ಣಮಾಲೆಯ ಒಂದು ವಿಶೇಷಾಕ್ಷರ; 'ಱ' ಎಂಬ ಅಕ್ಷರ ; IP ಬಂಡಿಯ ಚಕ್ರದ ಆಕಾರದಲ್ಲಿದ್ದುದರಿಂದ ಈ ಅಕ್ಷರಕ್ಕೆ ಶಕಟರೇಫವೆಂಬ ಹೆಸರಾಯಿತು; ಈಗ ಇದರ ಸ್ಥಾನದಲ್ಲಿ ಸಾಮಾನ್ಯರೇಫ(ರ)ದ ಬಳಕೆಯಿದೆ: ಹೀಗೆ 'ಬ' ಕ್ಕೆ ರಳ ಎಂದು 'ಱ' ಕ್ಕೆ ಶಕಟರೇಫ ಅಥವಾ ಬಂಡಿಯ 'ರ' ಎಂದೂ ಹೆಸರಾಯಿತು (ಕ್ಷಛಂ. ೪). [ಸಂ.]

ಶಕಟವ್ಯೂಹ (ನಾ). ಒಂದು ಬಗೆಯ ಸೇನಾವ್ಯೂಹ ; ಯುದ್ಧದಲ್ಲಿ ಸೈನ್ಯವನ್ನು ಬಂಡಿಯಾಕಾರದಲ್ಲಿ ನಿಲ್ಲಿಸುವುದು: ಶಕಟವ್ಯೂಹದ ಪೆಱಗೆ . . . ಅಧಿಕಬಲರಪ್ಪ ಸೌಬಲ ದುಶ್ಶಾಸನಾದಿ ಪ್ರಧಾನ ವೀರಭಟಕೋಟಿಯ ನಡುವ ಸಿಂಧುರಾಜನ ನಿರಿಸಿ (ಪಂಪಭಾ. ೧೧-೧೩ ವ); ತೆಗೆದು ಯೋಜನವಾಱಱಲಿ ಕಾಳಗಕೆ ಶಕಟ ವ್ಯೂಹವನು ಹೂಣಿಗರ ಬಲಿದನು ಕೌರವೇಂದ್ರಾನುಜರ ಗಡಣದಲಿ (ಕುವಾಪ್ರೋ. ೯-೧೭).

[ಸಂ.]

ಶಕಟಾಸ್ಯ (ನಾ). [ನಾಟ್ಯ] ಹದಿನಾರು ಬಗೆಯ ಭೌಮಚಾರಿಗಳಲ್ಲಿ ಒಂದು; ೫ "ಎದೆಯನ್ನು ಉದ್ವಾಹಿತ ಮಾಡಿ ಕಾಲನ್ನು ಅಗ್ರತಲಸಂಚರದಿಂದ ಮುಂದಕ್ಕ ನೀಡುವುದು" (ಶಾಸ್ತ್ರರಂ. ೩೧೬ ಗದ್ಯಾನುವಾದ) : ಪಿರಿದುದ್ವಾಹಿತದುರದಿಂ ಚರಣಮನೊಲ್ಲಗ್ರತಲ[ದ] ಸಂಚರದಿಂ ನೀಡಿರೆ ಮುಂದಕ್ಕಾವುರಮೇ ಸ್ಥಿರಮಾಗಿರೆ ಚಾರಿಯಿದುವೆ ಶಕಟಾಸ್ಯಂ ಕೇಳ್ (ಶಾಸ್ತ್ರರಂ. ೬-೨೧). [ಸಂ.]

ಶಕನೃಪಕಾಲ (ನಾ). ಶಾಲಿವಾಹನಶಕ ಗಣನೆಯ ಕಾಲ; ಶಕವರ್ಷ: ಸ್ವಸ್ತಿ ಶಕನೃಪಕಾಲಾತೀತಸಂವತ್ಸರಶತಂಗ[ಳ್] ೯೮೬ನೆಯ ಕ್ರೋಧಿಸಂವತ್ಸರಂ (ಎಕ. I (R). ೭೨-೧ ; 1064); ಈ ಕಾಲಗಣನೆಗೆ ಶಕನೃಪಕಾಲವೆಂಬ ಹೆಸರಿತ್ತು (ಮುಂಬಯಿ. ೫-೨೬). [ಸಂ.]

ಶಕಪುರುಷ (ನಾ). ೧. ಶಕೆಯನ್ನು ಪ್ರಾರಂಭಿಸಲು ಕಾರಣನಾದ ವ್ಯಕ್ತಿ: ಶಾಲಿವಾಹನನು ಒಬ್ಬ ಶಕಪುರುಷ (ರೂಢಿ). ೨. ಒಂದು ಕಾಲದ ಅತ್ಯಂತ ಸತ್ತ್ವ ಶಾಲಿಯಾದ ವ್ಯಕ್ತಿ ; ಯುಗಪುರುಷ: ಮಹಾತ್ಮಾಗಾಂಧಿಯವರು ಶಕಪುರುಷರೆಂದು ಪ್ರಪಂಚದಲ್ಲೇ ಖ್ಯಾತಿಯನ್ನು ಗಳಿಸಿ ಅಮರರಾದರು (ಕ್ರಿಯಾತಿ. ೧೨). [ಸಂ.]

ಶಕಲ, ಶಕಳ (ನಾ). ೧. ತುಂಡು ; ಚೂರು : ವ್ಯೋಮವಿಸ್ತೀರ್ಣ ರಂಗಾಂತರ ವೀಧೀಚ್ಛನ್ನತಾರಾಸ್ಫಟಿಕಶಕಲಮಂ ನೂಂಕುತಂ . . . ಕುಂಕುಮಘನರಸಮಂ ಸಿಂಪಿಸುತ್ತಿರ್ದಂ (ಕಾದಂಪು. ೧೪೧) ; ಒಡೆಯೆಂಬುದು ಬೇಡೆಂಬುದು ಕಾಡೆಂಬುದು ಭಾಂಡ ಶಕಲ ಪಕ್ಕಣದವಱೊಳ್ ಕೂಡಿದ ನುಡಿಯಲ್ಲದೆಯಾ ನಾಡೊಳಗಿಲ್ಲ (ಹಮ್ಮೀರ. ೧-೪೮) ; ಎಷ್ಟು ಶಕಲವ ಕೂಡಿಸಿದರೆ ಇಡಿ ಒಂದಾದೀತು? (ಅರಳು. ೪೨೦-೧). ೨. ಅರ್ಧಭಾಗ : "ಖಂಡಃ, ಅರ್ಧಃ(ರ್ಧಂ), ನೇಮಃ, ಶಕಲಂ, ಭಿನ್ನಂ, ಸಾಮಿ - ಈ ೬ ಅರ್ಧಂ" (ಹಲಾಯು. ೧೧೮-೨೮). ೩. ಮಡಕೆಯ ಚೂರು; ಬೋಕಿ. ೪. ತಲೆಬುರುಡೆ ; ಕಪಾಲ: "ತಲೆಯೆಲುವಱಿಗೆ ಕರೋಟ[ಶಕಲಮ]ಕ್ಕೆ ಕಪಾಲಂ" (ವಸ್ತುಕೋ. ೭೨-೨೯). ೫. ತೊಗಲು; ತೊಗಟೆ. ೬. ಮೀನಿನ ಚರ್ಮವನ್ನು ರಕ್ಷಿಸುವ ಮೇಲುಪದರ ; ಶಲ್ಕ : "ವಲ್ಕಲಮುಂ ಶಕಲಮುಮವು ಶಲ್ಕಂಗಳ್" (ವಸ್ತುಕೋ. ೧೨೪-೩೯). **ಶಕಳ** : ೧. ಅನೇಕ ನೃಪಶಿರಕಪಾಳಶಕಳ ಜರ್ಜರಿತಮುಂ ಪರಸ್ಪರಸಮರರಭಸ[ಸಮುತ್ಸಾ]ರಿತಮುಂ (ಪಂಪಭಾ. ೧೩-೫೧ ವ); ತ್ರಿದಶೇಂದ್ರಮಕುಟಮಂ ಪೂಡೆದ ದೈತ್ಯಗದೆಯಿಂ ಸಿಡಿಲ್ದ ಶಕಳಮೆ ತಾನಾದುದು ಕೃಷ್ಣ ನಿನ್ನ ಗದೆಯನೆ (ಜಗವಿ. ೯-೬೧). [ಸಂ.]

ಶಕಲಿ (ನಾ). ಮೀನು ; ಮತ್ಸ್ಯ : "ವೈಸಾರಿಣಃ . . . ಶಕಲೀ, ಶಲ್ಕೀ, ಸಹಸ್ರದಂಷ್ಟ್ರಃ, ಪಾಠೀನಃ - ಈ ೧೩ ಮೀನ್" (ಹಲಾಯು. ೧೦೮-೩೫). [ಸಂ. ಶಕಲಿನ್]

ಶಕಲು (ನಾ). ೧. ಉಪಾಯ; ಯುಕ್ತಿ: ಇದಕ್ಕ ಏನಾದರೂ ಶಕಲಾ ತೆಗದೀ ಏನು ನಿಂಗೀ ? (ರಕ್ತಧ್ವ. ೧೧೯). ೨. ಚಹರೆ; ಲಕ್ಷಣ: ಇವನ ಕಳಾ, ಶಕಲ ನನಗ ಗೊತ್ತ (ಚಾಬಲ. ೪೬). [← ಅರ. ಶಕ್ಲ್; ಹಿಂ. ಶಕಲ್; ಮರಾ. ಶಕಲ್, ಶಕ್ಕಲ್]

ಶಕವರುಷ (ನಾ). ಶಾಲಿವಾಹನ ಶಕಗಣನೆಯ ವರ್ಷ : ಕೋವಿದರು ಕೇಳ್ದೊಳ್ಳಿತನಲುಡುದೇವನಿಧಿನಯನೇಂದು ಸಂಖ್ಯೆಗಳೋವಿ ಶಕವರುಷಂಗಳಾಗಲು . . . ಬಸವಚರಿತೆ ಸಮಾಪ್ತವಾಯಿತ್ತು (ಬಸಪು. ೬೧-೯೨) ; ಸ್ವಸ್ತಿಶ್ರೀ ಶಕವರುಷ ೧೩೫೭ನೆಯ ಆನಂದಸಂವತ್ಸರದ ಚಯಿತ್ರ ಶು ೧ಲು ಮಾಡಿದ ಪಡಸಾಲೆ ಮಂಗಳಮಹಾಶ್ರೀ (ಎಕ. V (R). ಮೃಸೂರು. ೧೯೯-೧; -434). [< ಸಂ. ಶಕವರ್ಷ]

ಶಕವರ್ಷ (ನಾ). = ಶಕವರುಷ : ಶಕವರ್ಷಮೆಂಟುನೂಱಕ್ಕ ಕಡೆಯೊಳಱುವತ್ತು ಮೂಱು ಸಂದಂದು ಜಗತ್ ಪ್ರಕಟಪ್ಲವಸಂವತ್ಸರದ ಕಾರ್ತಿಕಂ ಮುದಮನೀಯೆ (ಆದಿಪು. ೧೬-೭೬) ; ಸ್ವಸ್ತಿ ಶಕವರ್ಷ ೯೮೦ತ್ತನೆಯ ವಿಳಂಬಿಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದು (ಎಕ. I (R). ೭೨-೨ ; 1059) : ಶ್ರೀ ವಿಜಯನಾರಾಯಣಸ್ವಾಮಿಯನ್ನು . . . ಶಕವರ್ಷ ೧೦೩೯ ಹೇವಿಳಂಬಿಸಂವತ್ಸರ ಚೈತ್ರಶುದ್ಧ ಪಂಚಮಿ ವಡ್ಡವಾರ ಸುಪ್ರತಿಷ್ಠಿಸಿ (ಮಂತಶಾ. ೧೨೧). [ಸಂ.]

ಶಕಸಂವತ್ಸರ (ನಾ). = ಶಕವರುಷ : ಶಕಸಂವತ್ಸರಮಂದು ಸಾಸಿರದ ನೂಱ್ಯವತ್ತರಲ್ಪಲ್ಪಿನಂ ವಿಕೃತಾಬ್ದಂ ಬರೆ . . . ಮಾಡಿಸಿದಂ ಪ್ರತಿಷ್ಠಯನನಂತಶ್ರೀ ಪುರಾಣಕ್ಕೆ . . . ಜನ್ನಮರಸಂ (ಅನಂಪು. ೧೪-೮೪). [ಸಂ.]

ಶಕಳ 'ಶಕಲ' ನೋ.

ಶಕಾಬ್ದ (ನಾ). = ಶಕವರುಷ: ಶಾಲಿವಾಹನ ಶಕಾಬ್ದ ೧೭೭೫ನೇ ಸಂದ ವರ್ತಮಾನವಾದ ಪ್ರಮಾದೀಚನಾಮಸಂವತ್ಸರದ ಜೇಷ್ಠ ಬಹುಳ ೧೦ ಗುರುವಾರದಲ್ಲು (ಎಕ. III (R). ನಂಜನ. ೧೨-೧ ; 1853). [ಸಂ.]

ಶಕಾರ (ನಾ). 'ಶ' ಎಂಬ ಅಕ್ಷರ : ಅಕ್ಕರಂಗಳಕಾರಂ ಮೊದಲಾಗಿ ಳಕಾರಪರ್ಯಂತಂ ಪರಿಪೂರ್ಣಮಾಗಿರ್ಪುವು: ಶಕಾರ, ಷಕಾರ . . . ಕ್ಷಳಂಗಳೆಂಬಕ್ಕರಂಗಳಂ ಕಳೆ (ಶಮದ. ೩೩ ಟೀಕೆ). [ಸಂ.]

ಶಕುಂತ (ನಾ). ೧. ಹಕ್ಕಿ; ಪಕ್ಷಿ: ಬಸಂತವ ಪಿಕಂ ತಿಳಿವೊಲೊಕ್ಕಣ್ಣಿನ ಶಕುಂತ ತಿಳಿಯುವುದೆ (ಮದೇಪು. ೧-೧೬) ; ನಳನಳಿಸಿರ್ದ ನಂದನದಿ . . . ನಾನಾ ಶಕುಂತಂಗಳೇಕ ಕಾಲದೊಳುಲಿಯತೊಡಗಿದುವು (ತ್ರೀರಾಮಾ. ೬೬-೩೪೭). ೨. ಶಕುನದ ಹಕ್ಕಿ; ಹಾಲಕ್ಕಿ: "ಪಿಂಗಲಿ ಶಕುಂತ ಭಾಸಮೆನಲು ಪಾಲ್ವಕ್ಕಿಯೆಂದೆನಿಕ್ಕುಂ" (ಮಂಗರಾ. ೫೨-೮). ೩. [ಜ್ಯೋತಿ] (ಚರ ಮತ್ತು ಸ್ಥಿರಗಳೆಂಬ) ಹನ್ನೊಂದು ಬಗೆಯ ಕರಣಗಳಲ್ಲಿ ಎಂಟನೆಯದು; ಒಂದು ಬಗೆಯ ಕಾಲಮಾನ: (ಕಿ). [ಸಂ.]

ಶಕುಂತವರ (ನಾ). ಪಕ್ಷಿಶ್ರೇಷ್ಠ ; ಗರುಡ : ಒರ್ಮೆ ಕೃಷ್ಣಂ . . . ಶಕುಂತವರ ನನೇಱಿ . . . ಗಂಧಮಾದನನಗಕ್ಕೆಯ್ದಿ (ಪದ್ಮರಾ. ೧೧-೮೩). [ಸಂ.]

ಶಕುಂತಿ (ನಾ). = ಶಕುಂತ ೧: ಮೃಗ ಶಕುಂತಿ ಬಿಡದೊಳುತಿರ್ಪೊಡಂ . . . ಪೇಳ್ ಮಟಿಯಧಿಕ ತಾನೆಂಬುದಂ (ಅಟ್ಟಮ. ೨-೧). [ಸಂ.]

ಶಕುತಿ, ಸಕತ್ತಿ, ಸಕುತಿ (ನಾ). ೧. ಕಸುವು ; ಬಲ : ಯುಕುತಿಯಿನ್ನಿದಕಿಲ್ಲ ಪಾರ್ಥನ ಶಕುತಿ ಘನವು (ಕುವ್ಯಾದ್ರೋ. ೮-೬೦) ; ಈ ಶಕುತಿಗು ಮಿಗಿಲಿಲ್ಲವು ಆದ ಬಣ್ಣಿಸಲಳವೆ? (ಅಹಲ್ಯೆ. ೧೯). ೨. ಒಂದು ಬಗೆಯ ಆಯುಧ: ಸಾಲಱಿದು ನಿಲಿಸಿದನು ನಿಶಿತ ಶರಾಳಿ ಚಾಪ ಕೃಪಾಣ ಪರಶು ತ್ರಿಶೂಲ ಮುದ್ಗರ ಚಕ್ರ ಸೆಲ್ಲಹ ಶಕುತಿ [ಪಾಠಾಂ ವಿಟ್ಟಿ] ತೋಮರವ (ಕುವ್ಯಾದ್ರೋ. ೯-೧). ೩. ಶಕ್ತಿದೇವತೆ ; ಪಾರ್ವತಿ : ಸಕಲಲೋಕಾಧೀಶ್ವರೇಶ್ವರ . . . ಕೇಳು ನೀ ಶಿವಶ [ಪಾಠಾಂ. ಸ]ಕುತಿಗಳನುತ್ತರಿಸಿದಮಳ ಬ್ರಹ್ಮವೆಂಬುದನು (ನಿಭಾಗ. ೪-೩-೪೧). **ಸಕತ್ತಿ** : ೧. ಈ ಶೂರ್ಪಣಖಿ ನಿನ್ನ ವಿಕಳಗೊಳಿಸಿದಳಂಗಜನ ಮೋಹಕದ ಮದ್ದಿನಲಾದಿಪುರುಷನ ಸಕತಿ ಸಾಧ್ಯವೆ ಸಾಕು ಕೊಳ್ಳದು ನಿನ್ನ ಬಗೆ (ತೂರರಾ. ೩-೭-೩೪). **ಸಕುತಿ**: ೧. ಸಕುತಿಯಾದ ನಾ ಪ್ರಾಣಲಿಂಗಕೆ ಮನವೊಲಿದು (ಮಹಾದೇ. ಬ. ೯೬-೨೨೩); ನುಡಿಯುವ ಸಕುತಿಯ ನೀಡೆನಗಂ ನೀಂ ನಡೆ ನುಡಿಯೊಡೆಯನ ಬಸವನ ಕನ್ನಡ ಜೇನಿನ ನುಡಿ ತಾಯೆ (ಸಾಸಮಾ. ೧೫೯). ೨. ಸರಳು ಕಡಿದವು ಸಕುತಿ ಸೆಲ್ಲಹ ಪರಶು ಕವಿದವು . . . ಅಖಿಳದೆಸೆಗಳಲಿ (ಕುವ್ಯಾದ್ರೋ. ೫-೮).

[< ಸಂ. ಶಕ್ತಿ]

ಶಕುತಿಗೆಡಿಸು (ಕ್ರಿ). ಬಲಗುಂದಿಸು ; ಶಕ್ತಿಯನ್ನು ಉಡುಗಿಸು : ಸೌಂದರನ ಬಲವನೊರ್ಬುಳಿಮಾಡಿ ಗರ್ಬಂಗೆಡಿಸಿ ಕಂಗೆಡಿಸಿ ಶಕುತಿಗೆಡಿಸಿ ಹಿಡಿವೊಲಂ ಗೊಂಡೊಡೆಯುಚ್ಚಿಕೊಂಡು (ನಂಬಿರ ೧೮-೩೭). [ಶಕುತಿ + ಕೆಡಿಸು]

ಶಕುನ (ನಾ). ೧. ಪಕ್ಷಿ ; ಹಕ್ಕಿ : "ಶಕುನಿ . . . ಶಕುನಂ ಶಕುಂತಂ ಶಕುಂತಿಯೆನ ಪಕ್ಷಿ" (ಮಂಗರಾ. ೫೦-೧). ೨. ಶುಭಾಶುಭಗಳನ್ನು ಸೂಚಿಸುವ ನಿಮಿತ್ತ: ಪುತ್ರಲಾಭದ ಫಲವಿಶೇಷಿತ ಶಕುನ ಹಿಗ್ಗಿಸಿತವನಿಪನ ಮನವ (ತೂರರಾ. ೧-೬-೬); ಶಕುನವಾಗುತ್ತದೆ ಎಂದು ಬೆಳಗು ತನಕ ಕದ್ದರೆ ಆದೀತೇ ? (ಗಾದೆ). ೩. ಸುಳಿವು; ಸೂಚನೆ: ನೆಲನಂ ನಿಱುಗೆಯಂ . . . ಶಕುನಮನೊಳ್ಳಿತ್ತುಪಾಯಮಂ ಪಿಡಿವಂದೀತನೆ ವಂದಿ ಕುರುಡು ಕುಂಟೆಂದಲಸದಱಿದಿಂತು ಬಲ್ಮೆಗೆ ಬೆರಲೆತ್ತಿ ಪಜ್ಜೆಯಂ ನೆಲೆಗಳಂ ಕಿಡಲೀಯದೆ ಸಿಲೆಯ ಮೇಲಾದೊಡಂ ಶಕುನಮಂ ನಿಱಿಪಂತೆ ನಿಱಿಸುವೆಂ ಪಂದಿಯಂ ನೀಂ ಮೆಚ್ಚಲುಂ (ವಂಪಭಾ. ೫-೪೬); ಅಬ್ಬರವ ಕೇಳಿಯಾಲಿಸುತ ಸೊಪ್ಪಂ ಬೆದಕುತಿಬ್ಬಗಿಯ ತೃಣಮಂ ಶಕುನಮಂ ನೋಡಿ ಹೆಬ್ಬಂದಿ ವಿಪಿನದೊಳು ನಿಂದುದಾ ಶಬರಂಗೆ ಮೃತ್ಯು ತಾನೆಂಬಂದದಿ (ಹಚಕಾ. ೬-೬). ೪. ನಿಮಿತ್ತಗಳ ಮೂಲಕ ಮುಂದಿನ ಆಗುಹೋಗುಗಳನ್ನು ತಿಳಿಸುವ ಶಾಸ್ತ್ರ : ವರಸೂಪಶಾಸ್ತ್ರ ಭೃಗುಚಿತ್ರರಸಾಳಂಕಾರ ಗಣಿತಗಜಹಯವೈದ್ಯಂ ಸ್ವರಶಕುನಕಾವ್ಯನಾಟಕ ಭರದಿ ಕಳಾವಿದನೆನಿಪ್ಪುದತಿಚದುರವಿಟಂ (ಮದತಿ. ೧೦-೧೮) ; ಶಕುನಂ ಜೋಯಿಸಮಾದಿಯಾಗಿ ಪೆಱವುಂ ವಿಜ್ಞಾನವಿದ್ಯಾವಿಶೇಷ

ಕಳಾಳಾಪದೊಳಾಂ ಸಮಗ್ರಂ (ಸುಕುಮಾ. ೩-೨೧) ; ಮಗನ ಮದುವೆಗೆ ಶಕುನವ ನೋಡ ಹೋಹಾಗ ಇದಿರಲ್ಲೊಬ್ಬ ಮೂಕೊಱತಿಯ ಹಾವಾಡಿಗನ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ (ಬಸವ. ೧೦೫).

ಶಕುನದ ಹಕ್ಕಿ = ಶುಭಾಶುಭಗಳನ್ನು ಸೂಚಿಸುವ ಪಕ್ಷಿ; ಹಾಲಕ್ಕಿ: ಶುಭನುಡಿಯೇ ಶಕುನದ ಹಕ್ಕಿ ಶುಭನುಡಿಯೆ (ನಾದಲೀ. ೩-೨); ಈ ಶಕುಂತ ಇಲ್ಲವೆ ಶಕುನದ ಹಕ್ಕಿಯು ಭವಿಷ್ಯವನ್ನು ಸೂಚಿಸುವುದೆಂದು ಕರ್ಣಾಟಕದಲ್ಲಿಯೂ ಬೇರೆ ಪ್ರದೇಶಗಳಲ್ಲಿಯೂ ಬಗೆಯಲಾಗಿದೆ (ಪರಪ. ೭೫); ಶಕುನದ ಹಕ್ಕಿಯ ಗೋಣು ಮುರಿದ ಹಾಗೆ (ಗಾದ). [ಸಂ.]

ಶಕುನಜ್ಞಾನ (ನಾ). = ಶಕುನ ೪ : ಬರೆಪಂ ಬಾಜನೆ . . . ಶಕುನಜ್ಞಾನಂ ರಥಾರೋಹಣಂ . . . ಅಖಿಲವ್ಯೂಹೋತ್ಕರಮಂಬಿನಿತಱೂಳಂ ಬಲ್ಲರೆಲ್ಲರುಂ ಮೆಚ್ಚೆ ಪಡದನತಿಕೌಶಲಮಂ (ಪುಷ್ಪಪು. ೪-೫೯). [ಸಂ.]

ಶಕುನಶಾಸ್ತ್ರ (ನಾ). = ಶಕುನ ೪ : ಜ್ಯೋತಿಷ, ವೈದ್ಯ, ಶಕುನಶಾಸ್ತ್ರ ಮುಂತಾದವುಗಳಲ್ಲಿ ವೇಮನನಿಗಿಂತ ಈತನಿಗೆ ಹೆಚ್ಚು ಪ್ರವೇಶವಿದೆ (ಸಾಹಿಜೀ. ೧೧೧). [ಸಂ.]

ಶಕುನಿ (ನಾ). ೧. ಪಕ್ಷಿ; ಹಕ್ಕಿ: ಅಖಿಳಕಾದ್ರವೇಯವಿದ್ರಾವಣಂ ಸಕಲಶಕುನಿಗಣಸಮೇತಂ ಕ್ಷೀರಪಾರಾವಾರಾಭಿಮುಖನಾಗಿ (ಪಂಚತಂ. ೧೬೧-೭) ; ವನಮೃಗ ಶಕುನಿವ್ರಜ ಶಕುನಂ ಶುಭಮೆನೆ . . . ಎಯ್ದಿದಂ (ಜಗವಿ. ೫-೭೬). ೨. ಶಕುನದ ಹಕ್ಕಿ; ಹಾಲಕ್ಕಿ: ಶಕುನಿಗಳ್ ಕೂಡೆ ಕೂಗುತಿವೆ ದುಶ್ಶಕುನಮಂ (ಶ್ರೀರಾಮಾ. ೩೩-೧೪೫). ೩. ಗುಂಡುಮುಳುಕನ ಹಕ್ಕಿ: "ಆತಾಪೀ, ಶಕುನಿಃ, ಚಿಲ್ಲಃ - ಈ ೩ ಗುಂಡುಮುಳುಕ (ನ ಹಕ್ಕಿ)ಂ" (ಹಲಾಯು. ೪೨-೯೭). ೪. ಹದ್ದು ಅಥವಾ ಗಿಡುಗ. ೫. ಕೌರವರ ಸೋದರಮಾವ; ಗಾಂಧಾರಿಯ ಸಹೋದರ: ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟ ಚತುಷ್ಟಯದೊಳ್ ಮಂತಣಮಿರ್ದು (ಪಂಪಭಾ. ೬-೬೭ ವ); ಶಕುನಿ ಬಂದನು ಕೌರವೇಂದ್ರನ ರಾಜಮಂದಿರಕೆ (ಕುವ್ಯಾಸ. ೧೨-೮). ೬. = ಶಕುಂತ ೩. : ಶಕುನಿ ಚತುಷ್ಟ ನಾಗವ ಕಿಂಸ್ತುಘ್ನವೆಂಬ ನಾಲ್ಕು ಸ್ಥಿರಕರಣಂಗಳು (ವಿವೇಕ. ೨೬೨). 'ನಾಗವ' ಪರಾ. [ಸಂ.]

ಶಕುನಿಕರಣ (ನಾ). = ಶಕುಂತ ೩ : ಶಕುನಿಕರಣಕ್ಕೆ ವನಂ ೪ ಗಳಿಗೆ ಮೇಲೆ ತ್ಯಾಜ್ಯಾ (ಭಾಸ್ಕರ. ೭೧-೮). [ಸಂ.]

ಶಕುನಿಗ (ನಾ). ಶಕುನಗಳ ಸಹಾಯದಿಂದ ಭವಿಷ್ಯವನ್ನು ಹೇಳುವವನು; ನೈಮಿತ್ತಿಕ : ಕರಮುಖಚೇಷ್ಟೆಯನಱಿಗೆ ತಾಂ ಶಕುನಿಗನಂತಿರೆ (ಮದತಿ. ೧೦-೭೬); ಅರಸಂ . . . ಶಕುನಿಗರಂ ಕರೆಯಿಸಿ ಈ ಶಕುನಮದೇನಂ ಪೇೞ್ದಪುದೆಂದು ಬೆಸಗೊಳ್ಳುದುಂ (ಪಂಚತಂ. ೧೨೭-೧೭) ; ಆ ವೇಳೆಯೊಳೊರ್ವ ಶಕುನಿಗನೆಯ್ತಂದಾ ವಸುಪಾಲನನೆಯ್ದಿ ಭೂವಲ್ಲಭಗೆ ಮುಂದಪ್ಪ ಕಾರ್ಯಂಗಳನೋವದೆ ಪೇಳ್ದಂ (ಶ್ರೀಪಾಲ. ೪-೨೮).

[ಶಕುನ + - ಇಗ]

ಶಕುನಿಪರಿಯಂಕ (ನಾ). ಪಕ್ಷಿಗಳ ಕೆತ್ತನೆಯ ಅಲಂಕಾರದ ಕಾಲುಗಳನ್ನುಳ್ಳ ಮಂಚ: ಶಕುನಿಪರಿಯಾEಯ3ಂಕ ಮೃದುವಾಸಿಕೆಯ ಮೇಲೆ ಒಲವಿಂ ಕ್ಷಿತಿ ಮೂರು ಲೋಕದಾ ಸತಿಯರಸಿ ರತಿದೇವಿಯ ಬಲದ ನುಣ್ದೋಳ ಮ್ಯಾಲೆ ತಾನತಿಶಯದಿ ಸಿರಿದಲೆಯ ನಿಟ್ಟು . . . ಸುಖನಿದ್ರೆಯೊಳಗಿರಲು (ನವಮೋ. ೨೭-೨೩). [< ಸಂ. ಶಕುನಿಪರ್ಯಂಕ]

ಶಕುನಿಮಂಚ (ನಾ). = ಶಕುನಿಪರಿಯಂಕ : ಕರೆದೊಯ್ದು ಶಕುನಿಮಂಚದ ಮೇಲೆ ಪ್ರೀತಿಯಲಿ ಕುಳ್ಳಿರಿಸುತ (ಪ್ರೌಢರಾ. ೯-೧೬); ತೂಗುಮಂಚ ಶಳೆಮಂಚ ಶಕುನಿಮಂಚ ಚಪ್ಪರಮಂಚ . . . ಉಯ್ಯಾಲೆಯಿಂ ಮೆರೆಯೆ (ನವಮೋ. ೧೭-೪೧). [ಸಂ.]

ಶಕುನಿವಟ್ಟಲು (ನಾ). ಹಕ್ಕಿಗಳಿಗೆ ನೀರುಕುಡಿಸುವುದಕ್ಕಾಗಿ ಇಟ್ಟಿರುವ ಬಟ್ಟಲು : ಅಲರಂಬನ ಕಯ್ಯೊಳೆಸೆವ ಶಕುನಿವಟ್ಟಲುಲುಪಿನಂತುಱೆ ಮೋಹಿಸುವ ಕಲರವದಿಂದ ಮೆಱವ ಪಾರಿವಂಗಳ ಕಲಕಲವೆಸೆದುದದಱೊಳು (ಕುರಾಸಾಂ. ೮-೯).

[ಶಕುನಿ + ಬಟ್ಟಲು (< ಬಟ್ಟಲ್)]

ಶಕುಲ, ಶಕುಳ (ನಾ). ೧. ಒಂದುಬಗೆಯ ಸಣ್ಣಮೀನು ; ಸೀಗಡಿ: "ಎಳಮೀಂಗಳ್ ಶಕುಲಂಗಳ್" (ವಸ್ತುಕೋ. ೨೩-೬). ೨. ಮೀನು; ಮತ್ಸ್ಯ: 'ಶಕುಲನೇತ್ರೆ' ಪರಾ. ಶಕುಳ : ೧. "ಶ[ಪಾಠಾಂ.ಸು]ಕುಳಮತಿಚಿಕ್ಕಮೀನಕ್ಕು" (ಮಂಗರಾ. ೧೨೧-೭). [ಸಂ.]

ಶಕುಲನೇತ್ರೆ (ನಾ). ಮೀನಿನಂತೆ ಕಣ್ಣುಗಳುಳ್ಳವಳು ; ಮೀನಾಕ್ಷಿ: ನಿರುಪಾಧಿಕಯೊಳನ್ನವ ನೀಡುವುದು ಶರಣರಿಗೆ ಮತವಲ್ಲೆಲೆ ಶಕುಲನೇತ್ರೆ (ಶಂಕದಾ. ೮-೨೦).

[ಸಂ. ಶಕುಲನೇತ್ರಾ]

ಶಕುಲಾದನಿ (ನಾ). ೧. ಒಂದುಬಗೆಯ ಔಷಧೀಸಸ್ಯ; ಕಟುಕರೋಹಿಣಿ: "ಕಟುಃ, ಕಟುಂಭರಾ . . . ಶಕುಲಾದನೀ — ೯ ಕಟುಕರೋಹಿಣೀ ಹೆಸರುಗಳು" (ಸಿದ್ಧಾಂತಿ. ೧೩೧). ೨. ಒಂದುಬಗೆಯ ಸಸ್ಯ ; ನೀರುಹಿಪ್ಪಲಿ : "ಲಾಂಗಲೀ, ಶಾರದೀ, ತೋಯಪಿಪ್ಪಲೀ, ಶಕುಲಾದನೀ - ನೀರುಹಿಪ್ಪಲೀ ಹೆಸರುಗಳು" (ಸಿದ್ಧಾಂತಿ. ೧೩೭). [ಸಂ. ಶಕುಲಾದನೀ]

ಶಕುಳ 'ಶಕುಲ' ನೋ.

ಶಕೃತ್ತು (ನಾ). (ವಿಶೇಷವಾಗಿ ಪ್ರಾಣಿಗಳ) ಮಲ; ಪುರೀಷ : "ವರ್ಚಸುತ್ಸರ್ಗಂ . . . ಶಕೃದ್ವಿಷ್ಠೆ ವಿಶ್ವಟಮೆನಲ್ ವರ್ಚಸ್ಯಮೆನಲು ಮಲಮಕ್ಕು" (ಮಂಗರಾ. ೧೧೭-೫).

[ಸಂ. ಶಕೃತ್]

ಶಕೆ (ನಾ). = ಶಕ ೧ : ಶಾಲೀವಾಹನನು ನಮ್ಮ ದೇಶದಲ್ಲಿ ಒಂದು ಶಕೆಯನ್ನು ಪ್ರಾರಂಭಿಸಿದನು (ರೂಢಿ). [ಸಂ. ಶಕ]

ಶಕ್ಕು, ಷಕ್ಕು (ನಾ). ಸಂದೇಹ; ಅನುಮಾನ: "ಶಕ್ಕು - ಸಂಶಯ" (ಜಾನಕೋ. ೪೫). ಷಕ್ಕು: ಯೀ ಮಾತಿನ ಷಕ್ಕು ಬಂದಲ್ಲಿ . . . ಅವನ ರೋಜಗಾರಿ ನಿಲ್ಲತಕ್ಕದ್ದಿಲ್ಲ (ಮಹಾವಂ. II, ೬೬). [← ಆರ. ಶಕ್ಕ್; ಹಿಂ. ಶಕ್, ಶಕ್ಕ್ ; ಮರಾ. ಶಕ್]

ಶಕ್ಕುಲಿ (ನಾ). ಒಂದು ಬಗೆಯ ಕರಿದ ತಿಂಡಿ ; ಚಕ್ಕುಲಿ: ನಾಲಿಗೆಯ ದೋಸೆ ಕರ್ನಗಳ ಶಕ್ಕುಲಿ ಯಂತ್ರಜಾಲ ಶಾವಿಗೆ (ವಂಕಾರಾ. ೬-೪೬-೫೩). 'ಚಕ್ಕುಲಿ' ಪರಾ.

[< ಸಂ. ಶಷ್ಕುಲೀ, ಶಸ್ಕುಲೀ]

ಶಕ್ಕೆ (ನಾ). ಒಂದು ಬಗೆಯ ಔಷಧೀಸಸ್ಯ(?): ಶಮ್ಯಾಕ = ಶಕ್ಕೆ . . . ಮೂತ್ರಂ = ಗೋಮೂತ್ರವೆಂಬುವು, ವಿರೇಚನಾನಿ = ವಿರೇಚನದ್ರವ್ಯಗಳು (ವಿವೃವಿ. ೫೯). [?]

ಶಕ್ತ (ಗು). ೧. ಕಸುವುಳ್ಳ; ಬಲಿಷ್ಠವಾದ. (ನಾ). ೨. ಅರ್ಹನಾದವನು; ಯೋಗ್ಯನಾದವನು: "ಕ್ಷಮಃ, ಶಕ್ತಃ - ಈ ೨ ಆರ್ಪವಂ" (ಹಲಾಯು. ೬೪-೨೩೨); ಶಿವನಾಗಮಯ್ಯಂ ಸದಮಳಾಚಾರಚಿತ್ತಶಕ್ತನು ಬಸವನಿಂ ಪ್ರಣಿಪತ್ತಿಯಂ ಕೈಕೊಳುತ (ಬಸವು. ೫೫-೨). ೩. ಅರ್ಹವಾದುದು; ಯೋಗ್ಯವಾದುದು: ಭೂರಿವಿಜೃಂಭಣಕ್ಕೆ ಮುಖಮೇನವಗಾಹನಶಕ್ತಮೋ ನಿಜಾಕಾರದೊಳಿಟ್ಟುದೀ ಜಗದ ಚೆಲ್ವನಶೇಷಮುಮಂ ಕುಮಾರಿಯಾ (ಚಂದ್ರಪು. ೫-೧೧೯). ೪. ದಕ್ಷತೆ; ಕುಶಲತೆ: ಸೂಕ್ತಿ ಹೊಗಳಲು ಸರ್ವಮಯನಂ ಭಕ್ತಹೃನ್ಮಯವಾಗಿ ಕರುಣಿಸಿ ಶಕ್ತಧಿಂ ಸರ್ವೇಶನಂ ಪ್ರಾಣೇಶನಂ ಮಾಡಿ (ಬಸವು. ೩೯-೧೨). ೫. ಶೂರ; ಪರಾಕ್ರಮಿ: ಭಕ್ತನಿಗೆ ಭುಕ್ತಿ, ಶಕ್ತನಿಗೆ ಕತ್ತಿ (ಗಾದ). ೬. [ತರ್ಕಶಾ] ಅರ್ಥವನ್ನು ತಿಳಿಸುವ ಶಕ್ತಿಯನ್ನು ಪಡೆದಿರುವ ಪದ : ಪದಗಳಿಂದ ಪದಾರ್ಥಜ್ಞಾನವು, ಪದದ ಸಾಮರ್ಥ್ಯದಿಂದ ಬರುವುದು. ಸಾಮರ್ಥ್ಯವೇ ಶಕ್ತಿ. ಪದವು ಶಕ್ತ. ಅರ್ಥವು ಶಕ್ಯ (ಹಿಂದಸಾ. ೨೦೫). [ಸಂ.]

ಶಕ್ತಿ (ನಾ). ೧. ಕಸುವು; ಬಲ: ಅನುಪಮರಣನಿಸ್ತಾರಕನನೂನಶಕ್ತ್ಯನ್ವಿತಂ ವಿಚಾರಕ್ಷಮನೆಂಬ ನೆಗಳ್ತೆಯಿಂದೆ ಬಲ್ಲಾಳನೃಪಾಳಂ . . . ಒಪ್ಪಿಪ್ಪಂ (ಎಕ. V. ಅರಸೀ. ೩೮-೧೬; ಸು. -200); ಸೃಷ್ಟಿಯ ಶಕ್ತಿದೂತನೆಂ, ರಾಜೇಂದ್ರ, ಋತಚಿನ್ಮಯಾ ಲೀಲೆಗಾಂ ಕವಿಕ್ರತು ಕಣಾ (ಶ್ರೀರಾಮಾ. ೧೩-೩೫೩); ಶಕ್ತಿಇದ್ದವನಾದರೂ ಯುಕ್ತಿ ಇದ್ದವನ ಕೆಳಗೆ (ಗಾದ). ೨. ಪಾರ್ವತಿ ; ಆದಿಶಕ್ತಿ : ಶಕ್ತಿ ಲಕ್ಷ್ಮಿ ದುರ್ಗಿ ಎಂಬ ಕಿಱುಕುಳದೈವಮಂ ಪೂಜಿಸಿ (ಸರ್ವವ. ೧೭೮-೮೨೯) ; ಶಕ್ತಿಯೆಂಬುದು ಮಾಯೆ (ಹರಿಸಾ. ೭೩); ಶಿವ ಮತ್ತು ಶಕ್ತಿ ಈ ಈರ್ವರಿಂದಲೇ ಸಮಸ್ತಪ್ರಪಂಚವೂ ನಡೆಯುತ್ತಿದೆ (ಭಾರದ. ೨೨೫). ೩. ಒಂದು ಬಗೆಯ ಆಯುಧ: ದೇವಾರಿ ಮುರಾರಿಯಂ ಗೆಲಲ್ ನೆಱಯದೆ . . . ಶಕ್ತಿಯೊಳಿಟ್ಟಂ (ಜಗವಿ. ೧೨-೪೩); ಶಕ್ತಿ (ನಾಲ್ಕು ಹಸ್ತಗಳಷ್ಟು ಉದ್ದದ ಲೋಹಾಯುಧ. ಕರವೀರದ ಎಲೆಯನ್ನು ಹೋಲುತ್ತದೆ. ಹಿಡಿಯು ಆಕಳಿನ ಕೆಚ್ಚಲನ್ನು ಹೋಲುತ್ತದೆ) (ಕಶಾಅ. ೨೭೭). ೪. ಹೆಣ್ಣು ; ಸ್ತ್ರೀ: ತನ್ನ ಸತಿಗೆ ಗರ್ಭ ತಲೆದೋಱಿದಲ್ಲಿಯೆ ಮುಖವ ಕಾಬುದಕ್ಕೆ ಮುನ್ನವೆ ಲಿಂಗಧಾರಣಮಂ ಮಾಡಿ . . . ಶಕ್ತಿಯಾದಲ್ಲಿ ತನ್ನ ನೇಮದ ವ್ರತಿಗಳಿಗೆ ಕೊಟ್ಟಿಹೆನೆಂದು ಸುತನಾದಲ್ಲಿ ತನ್ನ ನೇಮದ

ವ್ರತಿಗಳಲ್ಲಿ ತಂದಿಹೆವೆಂದು ಗಣಸಾಕ್ಷಿಯಾಗಿ ವಿಭೂತಿಯ ಪಟ್ಟಮಂ ಕಟ್ಟಿ (ಎಲೇಶ್ವ. ೭೧). ೫. ಕತ್ತಿ; ಖಡ್ಗ. ೬. ಕಸುವುಳ್ಳವನು; ಬಲಾಢ್ಯ: "ಗಿರಿಸುತೆ ಖಡ್ಗ ಕಾಮಿನಿ ಬಲಾನ್ವಿತರೆಂಬಿವು ಶಕ್ತಿ ಶಬ್ದಂ" (ನಾನಾರ. ೬೧). ೭. ಒಬ್ಬ ಋಷಿ ; ವಸಿಷ್ಠರ ಮಗ: "ಶಕ್ತಿ: = ದೇವತೆಯುಂ, ಬಲ್ಮೆಯುಂ, ವಸಿಷ್ಠನ ಮಗನುಂ" (ಕಾಶಕೃ. ೨೦೪). ೮. [ಕಾವ್ಯಮೀ] ಕವಿತಾರಚನೆಗೆ ಮೂಲಕಾರಣವಾದ ಪ್ರತಿಭೆ: ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇಳ್ವೂಡಂತಾ ಪ್ರತಿಭಾನಂ ಶಕ್ತಿ (ಕಾವ್ಯಾವ. ೪೨೪); ಕಾವ್ಯ ನಾಟಕದಲ್ಲಿ ಮುಖ್ಯವಾದ ಅರ್ಥವನ್ನು ಕೊಡುವ ಅಭಿಧಾವೃತ್ತಿ ಅಥವಾ 'ಶಕ್ತಿ' ಇರುವಂತೆ 'ಭಾವಕತ್ವ', 'ಭೋಜಕತ್ವ' ಎಂಬ ಮತ್ತೆರಡು ಶಕ್ತಿಗಳಿವೆ (ಕೃಪಿಡಿ. ೧೯೨). ೯. [ಜ್ಯೋತಿ] ಮೂವತ್ತೆರಡು ಬಗೆಯ ನಾಭಸಯೋಗಗಳಲ್ಲಿ ಒಂದು ; P ಇದರಲ್ಲಿ ಎಲ್ಲ ಗ್ರಹಗಳೂ ೭, ೮, ೯ ಮತ್ತು ೧೦ನೆಯ ಸ್ಥಾನಗಳಲ್ಲಿದ್ದು ಜಾತಕನು ಧನಹೀನನಾಗಿರುತ್ತಾನೆ: ಸಮುಜ್ಜಿತ ಧನರಾಶಿ ಶಕ್ತಿಜನಿತಂ (ಜಾತತಿ. ೧೩-೧೮). 'ನಾಭಸಯೋಗ' ಪರಾ. ೧೦. [ತರ್ಕಶಾ] ಪದಕ್ಕೂ ಅರ್ಥಕ್ಕೂ ಇರುವ ಸಂಬಂಧ: ಅರ್ಥವನ್ನು ಸ್ಮರಣಕ್ಕೆ ತರಲು ಅನುಕೂಲವಾದ ಪದಾರ್ಥದ ಸಂಬಂಧಕ್ಕೆ ಶಕ್ತಿ ಎಂದು ಹೆಸರು (ಭಾತತ್ವ. ೮೪೬). ೧೧. [ಶೈವ] ಮೂವತ್ತಾರು ತತ್ತ್ವಗಳಲ್ಲಿ ಒಂದು: ವಿಸ್ತಾರವಾಗಿ ಮೂವತ್ತಾರು ತತ್ತ್ವಗಳು . . . ಶುದ್ಧಸೃಷ್ಟಿಯಲ್ಲಿ ಬಿಂದು ಮಹಾಮಾಯೆಯೆಂಬ ಶಿವತತ್ತ್ವ, ಶಕ್ತಿತತ್ತ್ವ . . . ವಿದ್ಯಾತತ್ತ್ವಗಳಾಗಿ ಪರಿಣಮಿಸಿ ಪಂಚತತ್ತ್ವಗಳಾಗುವುವು (ಹಿಂದಸಾ. ೨೯೬). ೧೨. ಐವತ್ತುನಾಲ್ಕು ಮಂತ್ರ ಸಾಧನಗಳಲ್ಲಿ ಒಂದು: ಷಡಾಮ್ನಾಯಮೂಲ . . . ಶಕ್ತಿಕೀಲಕ ಅಕ್ಷರದೇವತೆ ಅಭಿದೇವತೆ. . . ಆತ್ಮೈಕ್ಯಗಳೆಂಬ ಪಂಚಚತ್ವಾರಿಂಶನ್ಮಂತ್ರಸಾಧನಂಗಳೊಳು ಪ್ರಜ್ಞೆಗೊಂಡು (ವಿವೇಕ. ೮೦).

ಶಕ್ತಿಮೀರು = ಸಂಪೂರ್ಣಸಾಮರ್ಥ್ಯವನ್ನು ಉಪಯೋಗಿಸು : ಸಾಧ್ಯವಾದುದನ್ನು ಶಕ್ತಿಮೀರಿ ಮಾಡುವೆ (ಕೊತಕಾ. ೪೩). [ಸಂ.]

ಶಕ್ತಿಗಿಡಿಸು (ಕ್ರಿ). ಬಲವನ್ನು ಕುಂದಿಸು; ನಿತ್ರಾಣಗೊಳಿಸು: ಮುಕ್ತಿಪದದ ಹೂಲಬಂ ಮುಗುಳ್ಗಣೆಯನ ಶಕ್ತಿಗಿಡಿಪ ಪರಿವಿಡಿಯಂ . . . ವ್ಯಕ್ತೀಕರಿಸುವುಪಾಧ್ಯಾಯರನಾಂ ಭಕ್ತಿಯಿನಭಿವಂದಿಸುವೆಂ (ಜಯಕಾ. ೧-೪).

[ಶಕ್ತಿ + ಕಿಡಿಸು (< ಕೆಡಿಸು)]

ಶಕ್ತಿಗುಂದು (ಕ್ರಿ). ನಿತ್ರಾಣವಾಗು ; ಶಕ್ತಿಹೀನವಾಗು : ಶರೀರದಲ್ಲಿ ರಕ್ತದ ಅಂಶ ಕಡಿಮೆಯಾದಾಗ ಶಕ್ತಿಗುಂದುವುದು (ಅಡುಸೌ. ೫೯)..

[ಶಕ್ತಿ + ಕುಂದು]

ಶಕ್ತಿಗೆಡು (ಕ್ರಿ). = ಶಕ್ತಿಗುಂದು: ಚಪ್ಪರಿಸಿ ಬಂದು ನಿನ್ನಂ ಮುಪ್ಪಡಿಸಿದುದು . . . ಬಸನಮನಿನ್ನಪ್ಪಡಮಿಲ್ಲೆನಿಸಿ ಶಕ್ತಿಗೆಟ್ಟಂದುಟಿವೋ (ಅಜಿಪು. ೨-೯೭); ಬಡಿವೆತ್ತ[ಬಡವ]ನಂತೆ ಶಕ್ತಿಗೆಟ್ಟು (ಧರ್ಮಾಮೃ. ೧-೧೬೮) ; ನಿರತಮಂತ್ರದ ಶಕ್ತಿಗೆಟ್ಟಂತರದೊಳಾಡುವ ದೋವತಿಗಳೀ ಧರೆಗಿಳಿಯಲೊಡನಾತನಂಜುತ್ತಾಗಳೆಯಿತಂದು (ಬಸಪು. ೫೭-೩). [ಶಕ್ತಿ + ಕೆಡು]

ಶಕ್ತಿತ್ರಯ (ನಾ). ೧. [ರಾಜನೀ] ಅರಸನಿಗಿರಬೇಕಾದ ಪ್ರಭು, ಮಂತ್ರ ಮತ್ತು ಉತ್ಸಾಹಗಳೆಂಬ ಮೂರುಬಗೆಯ ಬಲಗಳು: ಆಕೆಯ ವಳಿತ್ರಯಂಗಳುಂ ಪಗೆವರ ಶಕ್ತಿತ್ರಯಂಗಳುಮೊಡನೊಡನೆ ಕೆಟ್ಟುವು (ಪಂಪಭಾ. ೧-೧೪೧ ವ) ; ನಯಮೆಸಯೆ ನೆಗಟ್ಟ ಶಕ್ತಿತ್ರಯದೊಳ್. . . ಪ್ರಭುಶಕ್ತಿ ಎಸೆವವೋಲೆಸೆದಂ . . . ಕಾಳಿದಾಸ ದಣ್ಡಾಧೀಶಂ (ಕಇಆ. ೨-೩-೬೮; -058). ೨. ಕ್ರಿಯಾಶಕ್ತಿ, ಜ್ಞಾನಶಕ್ತಿ ಮತ್ತು ಇಚ್ಛಾಶಕ್ತಿಗಳೆಂಬ ಮೂರುಶಕ್ತಿಗಳು : ಮನದಿ ಮೂರ್ತಿತ್ರಯವು ಕೇಳ್ಕೆ ಮನದಿ ಶಕ್ತಿತ್ರಯ ಜಗತ್ರಯ . . . ಮನದಿ ಸರ್ವಾರೂಪು ವ್ಯವಹರ (ಜ್ಞಾನಸಿಂ. ೧೦-೫೫). [ಸಂ.]

ಶಕ್ತಿದಾಯಕ (ಗು). ಬಲವನ್ನುಂಟುಮಾಡುವ; ಬಲವನ್ನು ನೀಡುವ: ಈ ಶಕ್ತಿದಾಯಕ ಆಹಾರಾಂಶಗಳೆಲ್ಲವೂ ಉರಿಯಬಲ್ಲ ಸಾವಯವಸಂಯುಕ್ತ ಪದಾರ್ಥಗಳು (ಗೃಹವಿ. ೨). [ಸಂ.]

ಶಕ್ತಿಧರ (ನಾ). ೧. ಶಕ್ತ್ಯಾಯುಧವನ್ನು ಧರಿಸಿದವನು. ೨. ಷಣ್ಮುಖ; ಕುಮಾರಸ್ವಾಮಿ: ಹರಿಯಿಂದಂ ಹರನಿಂದೆ ಶಕ್ತಿಧರನಿಂ ನೀರಿಂದೆ ಪಾಳಾದ ದುಷ್ಕರ ಲಂಕಾಪುರಮಂ . . . ಸುಸ್ಥಿರ ಹಮ್ಮೀರಪುರಕ್ಕೆ ತೋಡಿಸಲೊಡಂ ಮೂಢೋಕ್ತಿ ಮೂಲೋಕದೊಳ್ (ಹಮ್ಮೀರ. ೧ ೬೪). [ಸಂ.]

ಶಕ್ತಿಪರಿಷೆ (ನಾ). [ಶೈವ] ಕಾಳಾಮುಖ ಶೈವಗುರುಗಳ ಸಂಘ: ಸೋಮಗ್ರಹಣದೊಳ ಕಾಲಂ ಕರ್ಚ್ಚಿ ಧಾರೆಯೆಱುದು ಕೊಟ್ಟರ್ ಶಕ್ತಿಪರಿಷೆಯ ಸ್ಥಾನಂ ನನ್ದಿಯ ಬಟುಕ್ಕ ದೇತಾಭೂಗಡೆ ಸಲ್ವ ಮಣ್ಣನೂ . . . ಬಳಿವತ್ತಮುಂ ಸಲ್ವದು (ಎಕ. III (R). ನಂಜನ. ೨೯೪-೮ ; 977) ; ಮೂವರ ಕೋಣೆಯ ಸನ್ತಾನದ ಶಕ್ತಿಪರಿಷೆಯೊಳ್ನೆಗಳ್ತೆವಡೆದು ಶಿಷ್ಯಚಾತಕ ವರ್ಷಾ ಕಾಳಾಮುಖರೆನಿಸಿದ ಕಾಳಾಮುಖರೊಳ್ (ಎಕ. VII. ಶಿಕಾರಿ. ೯೯-೪೯ ; 1113). [ಶಕ್ತಿ + ಪರಿಷೆ (< ಪರಿಸೆ)]

ಶಕ್ತಿಪಾಣಿ (ನಾ). ೧. = ಶಕ್ತಿಧರ ೧. ೨. = ಶಕ್ತಿಧರ ೨ : "ಗೌರೀಪುತ್ರಃ, ಷಣ್ಮುಖಃ, ಶಕ್ತಿಪಾಣಿಃ . . . ಶರಜನ್ಮಾ(ಚ ಕಥ್ಯತೇ) - ಈ ೨೦ ಕಾರ್ತೀಕೇಯನ ಪೆಸರ್" (ಹಲಾಯು. ೫-೨೦). [ಸಂ.]

ಶಕ್ತಿಯೋಗ (ನಾ). [ಜ್ಯೋತಿ] ಮೂವತ್ತೆರಡು ಬಗೆಯ ನಾಭಸಯೋಗಗಳಲ್ಲಿ ಒಂದು; ಜನನಕಾಲದಲ್ಲಿ ಏಳನೆಯ ಸ್ಥಾನದಿಂದ ಹತ್ತನೆಯ ಸ್ಥಾನ ಪೂರ್ತಿ (ನಾಲ್ಕು ಸ್ಥಾನಗಳೊಳಗೆ) ಎಲ್ಲ ಗ್ರಹಗಳೂ ಇರುವಿಕೆ : ಶಕ್ತಿಯೋಗದಲ್ಲಿ ಹುಟ್ಟಿದವನು ಹಣವಿಲ್ಲದವನಾಗುತ್ತಾನೆ (ಜಾತತಿ. ೧೩-೧೬ ಅಡಿಟಿ).

[ಸಂ.]

ಶಕ್ತಿವಂತ (ನಾ). ಬಲಶಾಲಿ ; ಶಕ್ತಿಶಾಲಿ: ಆತನು ಘನತಪೋದ್ಯುಕ್ತ ಭಾವಫಲ ಪ್ರಭಾವದ ಶಕ್ತಿವಂತನದಲ್ಲದೇ ಆರೈದು ನೋಡಿದಡೆ ಭಕ್ತರೊಳು ಸಲೆ ಸಂದುವಡೆದನು (ಬಸಪು. ೫೩-೨೦). [< ಸಂ. ಶಕ್ತಿಮತ್]

ಶಕ್ತಿವಿಶಿಷ್ಟಾದ್ವೈತ (ನಾ). [ವೀಶೈ] ಜೀವಾತ್ಮ ಪರಮಾತ್ಮರ ಸಾಮರಸ್ಯವನ್ನು ಪ್ರತಿಪಾದಿಸುವ ಸಿದ್ಧಾಂತ; "ಪರಾಶಕ್ತಿ ವಿಶಿಷ್ಟ ಪರಮಾತ್ಮನಲ್ಲಿ ಮಾಯಾಶಕ್ತಿ ವಿಶಿಷ್ಟಜೀವನು ಸಮರಸವಾಗಿ ಬೆರೆಯುವುದಕ್ಕೆ ಶಕ್ತಿ ವಿಶಿಷ್ಟಾದ್ವೈತವೆಂದು ಹೆಸರು" (ಶಕ್ತಿವಿ. ೨೦): ಜೀವಾತ್ಮ ಮತ್ತು ಪರಮಾತ್ಮ(ಅಂಗ ಲಿಂಗ)ರು ಒಂದು ಗೂಡುವುದೇ (ಸಾಮರಸ್ಯವು) ಶಕ್ತಿವಿಶಿಷ್ಟಾದ್ವೈತ ಪದದ ವಿಶಿಷ್ಟಾರ್ಥವು (ಭಾರದ. ೨೪೫). [ಸಂ.]

ಶಕ್ತಿಶಾಲಿ (ನಾ). = ಶಕ್ತಿವಂತ: ಅವರೂ ಸಹ ವೈದುಂಬರ ಜೊತೆಗೂಡಿ ಸಾಕಷ್ಟು ಶಕ್ತಿಶಾಲಿಗಳಾಗಿಯೇ ಇದ್ದರು (ನೊಳಯು. ೩೧). [ಸಂ. ಶಕ್ತಿಶಾಲಿನ್]

ಶಕ್ತಿಹೀನ (ನಾ). ಬಲಹೀನ ವ್ಯಕ್ತಿ; ಕಸುವು ಕಳೆದುಕೊಂಡ ವ್ಯಕ್ತಿ: ಹಾಸಿಗೆಯ ಮೇಲೆ ಶಕ್ತಿಹೀನಳಾಗಿ ಮಲಗಿದ್ದ ಪ್ರಭೆಯನ್ನು ಶೇಖರ ದಿಟ್ಟಿಸಿ ನೋಡಿದಾಗ ಒಂದು ನಿಮಿಷ ಅವನ ಮೈ ಜುಂ ಎಂದಿತು (ಮೂಪ್ರೇಮ. ೪೬). [ಸಂ.]

ಶಕ್ತ್ಯನುರೂಪ (ಗು). ಶಕ್ತಿಗೆ ಹೊಂದುವ; ಯಥಾಶಕ್ತಿಯಾದ: ಅಭಯ ದಾನಾದಿಗಳೊಲ್ ಶಕ್ತ್ಯನುರೂಪ ತ್ಯಾಗಮುಮಗೂಢ ಸಾಮರ್ಥ್ಯಶರೀರಕ್ಲೇಶ ಲಕ್ಷಣಮುಮಪ್ಪ ಶಕ್ತ್ಯನುರೂಪತಪಮುಂ (ಚಂದ್ರಪು. ೧೧-೨೨ ವ). [ಸಂ.]

ಶಕ್ತ್ಯನುಸಾರ (ಗು). ಶಕ್ತಿಗೆ ಸಾಧ್ಯವಾಗುವ ಮಟ್ಟಿನ: ತನ್ನ ಶಕ್ತ್ಯನುಸಾರ, ತನ್ನ ವ್ಯವಸಾಯಾನುಸಾರ ವಿಸ್ತೃತವಾದ ಮಾನವಹೃದಯವು . . . ಹೊಸದೊಂದು ಅನುಭವದ ಸ್ವೀಕಾರಕ್ಕಾಗಿ ಎದುರು ನೋಡುತ್ತಿರುತ್ತದೆ (ಚಿದೇವ. ೨೦). [ಸಂ.]

ಶಕ್ತ್ಯಾನುಸಾರ (ಗು). = ಶಕ್ತ್ಯನುಸಾರ: ನಾವು ಧನಿಯರ ಲಗ್ನಕ್ಕೆ ಹೋಗಿ ನಮ್ಮ ಶಕ್ತ್ಯಾನುಸಾರ ಮರ್ಯಾದಿ ಮುಟ್ಟಿಸಿ . . . ಕರಕೊಂಡು ಬಂದು ಈ ಊರಾಗ ಅವರ್ನ ಇಟಗೋತೀವು (ಮನೆಬೆ. ೩೯).

ಶಕ್ತ್ಯಾನುಸಾರವಾಗಿ = ಸಾಧ್ಯವಾದಷ್ಟು ಮಟ್ಟಿಗೆ; ಶಕ್ತಿಗೆ ತಕ್ಕಂತೆ: ಶ್ರೇಯಸ್ಸಿನ ವಿಷಯದಲ್ಲಿ ನನ್ನ ಶಕ್ತ್ಯಾನುಸಾರವಾಗಿ ಪ್ರಯತ್ನಿಸುವೆನು (ಶಾಕುಂತ. ೧೧೫-೨೪).

[< ಸಂ. ಶಕ್ತ್ಯನುಸಾರ]

ಶಕ್ತ್ಯಾಯುಧ (ನಾ). ಒಂದು ಬಗೆಯ ಆಯುಧ: ಯುಧಿಷ್ಠಿರನು ಶಕ್ತ್ಯಾಯುಧವನ್ನು ಅಭಿಮಂತ್ರಿಸಿ ಶಲ್ಯನ ಮೇಲೆ ಪ್ರಯೋಗಿಸಲು (ವಚಭಾ. ೩೦೨). [ಸಂ.]

ಶಕ್ಯ (ಗು). ೧. ಸಾಧ್ಯವಾದ; ಮಾಡಬಹುದಾದ. (ನಾ). ೨. ಸಾಧ್ಯವಾದುದು; ಮಾಡಬಹುದಾದುದು: ಶಕ್ಯಂ ತಾನಲ್ತಣಂ ಬಣ್ಣಿಪ ಫಣಿಪತಿ ವಾಕ್ಯಕ್ಕಮೆಂಬಂತು ಶೋಭಾಧಿಕ್ಯಂಬೆತ್ತತ್ತು... ತ್ರೈಲೋಕಾಧೀಶಾಭಿಷೇಕೋಚಿತಮಮರಕೃತಂ ಕಾಯಮಾನಂ ನವೀನಂ (ಚಂದ್ರಪು. ೧೨-೧೦೭); ತದ್ಗುರುಮಹಿಮೆಯಂ ವಿವರಿಸಲು ಶಕ್ಯವೆ ಪುರಹರಂಗಾದಡೇವೊಗಳ್ವೆ (ಬಸವಪು. ೬೯-೨೦) ; ಶಕ್ಯವಲ್ಲದ ಕಾರ್ಯ ಸಕ್ಕರೆಯಲ್ಲ (ಗಾಪ). ೩. ಒಂದು ನಿರ್ದಿಷ್ಟವಾದ ಶಬ್ದದಿಂದ ಅಭಿವ್ಯಕ್ತಗೊಂಡ ಅರ್ಥ; ಅಭಿಧೇಯ : ಪದಗಳಿಂದ ಪದಾರ್ಥಜ್ಞಾನವು, ಪದದ ಸಾಮರ್ಥ್ಯದಿಂದ ಬರುವುದು. ಸಾಮರ್ಥ್ಯವೇ ಶಕ್ತಿ. ಪದವು ಶಕ್ತ. ಅರ್ಥವು ಶಕ್ಯ (ಹಿಂದಾ. ೨೦೫). [ಸಂ.]

ಶಕ್ಯತೆ (ನಾ). ೧. ಸಾಧ್ಯವಾಗುವಿಕೆ; ಸಾಧ್ಯತೆ. ೨. ಅರ್ಹತೆ : ಈ ಸಂಬಂಧಕ್ಕೆ ಒಪ್ಪುವ ಶಕ್ಯತೆ, ಕಲ್ಪನೆಗೆ ಅತಿ ದೂರವಾಗಿತ್ತು (ದೀಪಹ. ೩ ೨೯); ಕಾವ್ಯಲಕ್ಷಣಗ್ರಂಥಕ್ಕೆ ಸಂಸ್ಕೃತದಲ್ಲಿ ನಾಮಧೇಯಗಳಾಗುವ ಶಕ್ಯತೆಯುಂಟು (ಧ್ವನ್ಯಾಲೋ. ೨೫ ಪೀಠಿಕೆ). [ಸಂ. ಶಕ್ಯತಾ]

ಶಕ್ಯಾನುಷ್ಠಾನ (ನಾ). ಅರ್ಥವನ್ನು ತಿಳಿಯಲು ಮಾಡುವ ಪ್ರಯತ್ನ: ಜನಮಂಗೀಕರಿಪುದು ನೆಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾನ ನಿಜೇಷ್ಟಸಿದ್ಧಿಗಳ್ ನೆಲಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ (ಶಮಪ. ಪೀಠಿಕೆ ೭) ; ಸಂಬಂಧವೆಂದು ಪೊರ್ದುಗ ; ಅಭಿಧೇಯಮೆಂದರ್ಥಂ ; ಶಕ್ಯಾನುಷ್ಠಾನಮೆಂದಾ ಪದಾರ್ಥಮಂ ಸಾಧಿಸಲ್ತಕ್ಕುದ್ಯೋಗಂ (ಶಮಪ. ಪೀಠಿಕೆ ೭ ವೃತ್ತಿ). [ಸಂ.]

ಶಕ್ರ (ನಾ). ೧. ದೇವತೆಗಳ ಅಧಿಪತಿ; ಇಂದ್ರ: ತ್ರಿಶಂಕುನರಾಧೀಶನ ಲಕ್ಷ್ಮಿ ಶಕ್ರನ ಮಹಾಹುಂಕಾರದಿಂ ಬಿರ್ದಳೆಂಬಿನಗಂ (ಕಾದಂಪು. ೨೫) ; ಅಧಿಕ ವಿಭವದೊಳ್ ಶಕ್ರನೆಂತಂತೆ . .. . ಎಸೆದನಭಿನವಂ ಭಾರತೀಭಾಗಧೇಯಂ (ರಾಜಶೇ. ೪-೧೨೪). ೨. ಅರ್ಜುನ ವೃಕ್ಷ ; ಮತ್ತಿ ಮರ. ೩. ಕೊಡಸಿಗೆಮರ; ಕುಟಜವೃಕ್ಷ. ೪. ಬಿಳಿದು; ಶುಭ್ರವಾದುದು. ೫. ಕೃಷ್ಣ. ೬. ಕಾಲ ; ಯಮ. ೭. ಕಳ್ಳಿಯ ಗಿಡ ; ಎಲೆಗಳ್ಳಿ : "ಸಿತದೊಳಿಂದ್ರನೊಳು ಗಿರಿಮಲ್ಲಿಗೆಯೊಳೆಲೆಗಳ್ಳಿಯೊಳು ಶಕ್ರವಕ್ಕು" (ಪಂಗರಾ. ೧೫೧-೫೩); "ಹರಿ ಶಕ್ರಂ ವಜ್ರ ಕಾಲಂ ವಿಚಕಿಲ ಕುಟಜಂ ಶುಭ್ರಮುಂ ಶಕ್ರನಾಮಂ" (ನಾನಾರ. ೫೧). [ಸಂ.]

ಶಕ್ರಗೋಪ (ನಾ). ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಒಂದುಬಗೆಯ ಹುಳು; ಮಿಂಚುಹುಳು ; ಇಂದ್ರಗೋಪ : ಶಕ್ರಗೋಪತತಿ ಸೂಸುವ ರಕ್ತಕಣಂಗಳಾಗೆ ಕಂಗೊಳಿಸ ಖರಾಂಶು... ಫಾಲನೇತ್ರನಿರ್ದಳಿತ ಜಲಂದರೋಗ್ರಶರಮಂಬವೊಲಾದುದು ನೀಲನೀರದಂ (ಧೃಪಾ. ೧೪-೧೬). [ಸಂ.]

ಶಕ್ರಚಾಪ (ನಾ). ಕಾಮನಬಿಲ್ಲು ; ಇಂದ್ರಚಾಪ : ದಶದಿಙ್ಮಂಡಲಮಂ ಪಳಂಚಲೆಯ ಭೇರೀನಿಸ್ವನಂ ... ಶಕ್ರಚಾಪಶತಂಗಳ್ ನೆಲೆವೆರ್ದೆ ಲಕ್ಷ್ಮಣಸಮೇತಂ ರಾಮದೇವಂ ... ಪುರಮಂ ಪೊಕ್ಕಂ (ಪಂರಾಮಾ. ೧೬-೪೨); ಬಸವನ ನುಡಿ ಶಿಲಾಶಾಸನವು ತಪ್ಪದ ನುಡಿಗಳಲ್ಲದೆ ಮಿಕ್ಕಿನಂತೆ ಕೆಡುತ್ತ ಹುಟ್ಟುತಿಹ . . . ಶಕ್ರಚಾಪವೆ ಸೂಡರೆ ಬೀದಿಯ ಗಾಳಿಯೇ (ಬಸವಪು. ೬೭-೨೫). [ಸಂ.]

ಶಕ್ರತನುಜ (ನಾ). ೧. ಇಂದ್ರನ ಮಗ. ೨. ಜಯಂತ. ೩. ವಾಲಿ. ೪. ಅರ್ಜುನ: ಶಕ್ರತನುಜನ ಕರೆದು ಮೂದಲಿಸಿದನು ತುಳುಕಿದನಂಬಿನಂಬುಧಿಯ (ಕುವಾದ್ರೋ. ೧೦-೪೮). [ಸಂ.]

ಶಕ್ರಧನು (ನಾ). = ಶಕ್ರಚಾಪ: ಕಮಲವನಕ್ಕಿನೋದಯಂ . . . ನವಿಲಿಂಗೆ ಕಲಾಪವರ್ಣಮಂತಮರ್ದ ಮುಗಿಲ್ಗೆ ಶಕ್ರಧನುವೋಲ್. . . ರಾಜಸೂನುಗೆಸೆದತ್ತೆನಸುಂ ನವಯವ್ವನೋದಯಂ (ಕಾದಂಪು. ೪೪೨). [ಸಂ. ಶಕ್ರಧನುಸ್]

ಶಕ್ರನಂದನ (ನಾ). ೧. ಇಂದ್ರನ ಮಗ. ೨. ಜಯಂತ. ೩. ವಾಲಿ. ೪. ಅರ್ಜುನ: ದೃಢಸತ್ತ್ವಭಾರತ ಚಕ್ರವರ್ತಿಗಳರಸನೆನಿಸಿದ ಶಕ್ರನಂದನನಾತ್ಮ ಬಾರಂದನುತಲಪ್ಪಿದನು (ಕೃಷ್ಣಾಕಾ. ೨೪-೭೧). [ಸಂ.]

ಶಕ್ರನೃತ್ಯ (ನಾ). [ಜೈನ] ಜಿನನ ಜನ್ಮಾಭಿಷೇಕಸಮಯದಲ್ಲಿ ಜಿನನ ಮಾತಾಪಿತರ ಮುಂದೆ ಇಂದ್ರ(ಸೌಧರ್ಮೇಂದ್ರ)ನು ಮಾಡುವ ನೃತ್ಯ: ತ್ರಿದಶಗಣಾಧಿನಾಯಕನ . . . ಬಾಹುಪರಿಭ್ರಮಂಗಳೊಳ್ ಬೆದಬಿದ ಶಕ್ರನೃತ್ಯ ದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮನೆಯಂತದೇಂ ಪದುಳಮಾದುದೊ ದಿವ್ಯವಧೂಕದಂಬಕಂ (ಆದಿಪು. ೭-೧೨೫) [ಸಂ.]

ಶಕ್ರಪುಷ್ಪಿ (ನಾ). ೧. ಒಂದುಬಗೆಯ ಸಸ್ಯ; ಅಗ್ನಿಶಿಖೆ : "ವಿಶಲ್ಯಾ... ಶಕ್ರಪುಷ್ಪೀ- ೫ ಬೆಣ್ಣೆಬಿದುರುಸೊಪ್ಪು , ಅಗ್ನಿಶಿಖೆ" (ಸಿದ್ಧಾಂತಿ. ೧೪೩). ೨. ಕೋಲುಕುಟಕನ ಗಿಡ; ಲಾಂಗಲಿ. [ಸಂ. ಶಕ್ರಪುಷ್ಪೀ]

ಶಕ್ರಭೋಗ (ನಾ). ಇಂದ್ರನ ವೈಭವ: ಉಪಕ್ರಮಿಪ ಭಾವಲಿಂಗೈಕ್ಯವಿಂತಿವು ಮೂಱು ಶಕ್ರಭೋಗತೃಣೇಕೃತನೆ ಕೇಳ್ಕೆ ಭಾವಲಿಂಗೈಕ್ಯವೆಂದಱಿವುದು (ವೀಕ್ಷಪು. ೮-೧೦-೪೫). [ಸಂ.]

ಶಕ್ರರಿಪು (ನಾ). ೧. ಇಂದ್ರನ ಶತ್ರು. ೨. ಪರ್ವತ : ಶಕ್ರರಿಪುಧರ್ಮ ಮುದ್ರಿತ ಕರಾಂಭೋಜೈಕಚಕ್ರರಥತನುಭವಾಂಭೋಧಿ ಬಾಡಬ ಸಂಗಮೇಶ ರಕ್ಷಿಪುದೆನ್ನನು (ಪ್ರಾಥರಾ. ೮-೧). ೩. ರಾವಣ. ೪. ಇಂದ್ರಜಿತು. ೫. ವೃತ್ರಾಸುರ. [ಸಂ.]

ಶಕ್ರವೈರಿ (ನಾ). ೧.ಇಂದ್ರನ ಶತ್ರು. ೨. ಪರ್ವತ. ೩.ರಾವಣ: ಪೃಥಿವಿಗಿಳಿದತ್ತತುಲಮಾ ಪೃಥುಲಪುಷ್ಪಕಂ ಪೊಕ್ಕನೆಲವನೆಗಾ ಶಕ್ರವೈರಿ! (ಶ್ರೀರಾಮಾ. ೨೦೪-೧೯೯). ೪. ಇಂದ್ರಜಿತು. ೫. ವೃತ್ರಾಸುರ. [ಸಂ. ಶಕ್ರವೈರಿನ್]

ಶಕ್ರಸಾರಥಿ (ನಾ). ಇಂದ್ರನ ರಥವನ್ನು ನಡೆಸುವವನು ; ಮಾತಲಿ: "ಮಾತಳಿ, ಶಕ್ರಸಾರಥಿಃ - ಈ ೨ ಇಂದ್ರನ ಸಾರಥಿಯ ಪೆಸರ್" (ಹಲಾಯು. ೧೧-೬೧). [ಸಂ.]

ಶಕ್ರಸುತ (ನಾ). ೧. ಇಂದ್ರನ ಮಗ. ೨. ಜಯಂತ. ೩. ವಾಲಿ. ೪. ಅರ್ಜುನ: ಶಕ್ರಸುತವಿತಿಪ ನಿನಗಂ ವಿಕ್ರಮಪರನಪ್ಪ ವಿಷ್ಣುಗಂ ದುರ್ಗಮಮಂ ಚಕ್ರವ್ಯೂಹಮನೊರ್ವನೆಯಾಕ್ರಮಿಸಿಯೆ ಕೊಂದು ತವಿಸಿದಂ ನಿಜತನಯಂ (ನೇಮಿಪು. ೧೨-೫೭); ಚಕ್ರಿಸೇವಕನೀ ಕಿರೀಟಿ ದುರ್ಮಾನುಜಂ ಶಕ್ರಸುತನೆನ್ನ ತಾತಂ (ಪ್ರಮಿಭಾ. ೨೪-೨೮). [ಸಂ.]

ಶಕ್ರಾಸ್ತ್ರ (ನಾ). ೧. ಇಂದ್ರನ ಆಯುಧ; ವಜ್ರಾಯುಧ. ೨. ಸಿಡಿಲು: ಮುಗಿಲ ತಿದ್ದಂ ಕುಡುಮಿಂಚನಬ್ಬರವಮೋ ಶಕ್ರಾಸ್ತ್ರಮಂ ತಂದಲಂ . . . ತೋಱುತಿಳೆ ಗೆಟ್ಟರ್ಕೀಂದ್ರಕಾಂತಾಜನಂ (ಪಜಿನ. ೧೪-೪೭). [ಸಂ.]

ಶಕ್ರೇಜ್ಯ (ನಾ). [ಜ್ಯೋತಿ]ಗ್ರಹಗಳಲ್ಲಿ ಒಂದು; ಗುರು: ಶನಿ ಶಕ್ರೇಜ್ಯಗೃಹಸ್ಥನಾಗೆ ನೃಪರಿಂ ಶುದ್ಧಾತ್ಮಕಂ . . . ಪುರಗ್ರಾಮಪತ್ತನಸೇನಾಶ್ರಿತನಲ್ಲಿಮತ್ಪ್ರಧಿಕನಕ್ಕುಂ (ಜಾತಕ. ೧೭-೩೪). [ಸಂ.]

ಶಕ್ರೇಭ (ನಾ). ಇಂದ್ರನ ಪಟ್ಟದ ಆನೆ ; ಐರಾವತ: "ಸಿರಿ ಶಕ್ರೇಭಂಗಳಬ್ಜಾಹ್ವಯಂ" (ನಾನಾರ. ೧೨೫). [ಸಂ.]

ಶಕ್ವರ (ನಾ). ಎತ್ತು; ಗೂಳಿ : ಅತಿಸ್ವಚ್ಛಸ್ವಾದುಸಲಿಲಪಾನದೊಳಂ ಮಲ್ಲಮೆಲ್ಲನೆ ಮೆಲ್ಲಾಡಿ ಪಥವರಿಶ್ರಮಮನಾಜಿಸಿಕೊಂಡು ಕೆಲವು ದಿವಸಕ್ಕೆ ಬಾಲೇಂದುಶೇಖರ ಶಕ್ವರಾಕಾರಮಂ[ಪಾಕಾಂ. ವೃಷಭನ ವಿಲಾಸಮಂ] ತಾಳ್ದಿ (ಪಂಚತಂ. ೨೪-೧೫); ರತ್ನದಿಂ ನಿರ್ಮಳಗುಣನಿಳಯಂ [ಶಕ್ವರಾ]ಧೀಶನಿಂ ಸೌಖ್ಯವದಂ ಪಂಚಾಸ್ಯನಿಂದಂ ಪರಮಜಿನ ಮತಾಂಭೋಜಿನೀರಾಜಹಂಸಂ (ಪಚಮು. ೯-೧೧೭). [ಸಂ.]

ಶಕ್ವರಾರೋಹ (ನಾ). ೧. ಎತ್ತಿನ ಮೇಲೆ ಸವಾರಿ ಮಾಡುವವನು: "ಪ್ರಚಂಡದತ್ತೀಜುವವನನಡ್ವಾಹನಂ ಶಕ್ವರಾರೋಹನೆಂದೆನಿಕ್ಕುಂ" (ಮಂಗರಾ. ೭೩-೨೬). ೨. ವೃಷಭವಾಹನ ; ಶಿವ. [ಸಂ.]

ಶಕ್ವರಿ (ನಾ). ೧. ಬೆರಳು. ೨. ಬೆರಳುಗಳಿಂದ ಮುಟ್ಟುವುದು, - ಹಿಡಿದು ಕೊಳ್ಳುವುದು. ೩. ನಡುಕಟ್ಟು ; ನಡುಪಟ್ಟಿ. ೪. ಗೋವು; ಹಸು. ೫. ಸಾಮವೇದದ ಒಂದು ಮಂತ್ರದ ಹೆಸರು. ೬. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸಿನಲ್ಲಿ ಹದಿನಾಲ್ಕು ಅಕ್ಷರಗಳುಳ್ಳ ಒಂದು ಸಮವೃತ್ತ: ಅಲ್ಲಿ ಉಕ್ತಿ . . . ಶಕ್ವರಿ, ಅತಿಶಕ್ವರಿ . . . ಉತ್ಕೃತಿ - ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಂಬು. ೧-೨೧ ವ). [ಸಂ. ಶಕ್ವರೀ]

ಶಖೆ 'ಸೆಕೆ' ನೋ.

ಶಚಿ (ನಾ). ಇಂದ್ರನ ಪಟ್ಟದ ಅರಸಿ; ಇಂದ್ರಾಣಿ: ಶಚಿಶುಚಿತಮೆ ನಿಜಭೂಷಣ ರುಚಿನಿಚಯಂ ಪರೆಯೆ ಬಂದು ಸೂತೀಗೃಹಮಂ . . . ಪೊಕ್ಕು (ನೇಮಿಪು. ೮-೧೧೨);

ಆ ದಂಪತಿಗೆ ತನೂಭವನಾದಂ ಶಚಿಗಂ ಸುರಾಧಿಪತಿಗಂ ಮುಂನೆಂತಾದಂ ಜಯಂತನಂತ (ಎಕ. II, ೪೫೪-೧೦; 1181). [ಸಂ.]

ಶಚಿರಮಣ (ನಾ). ಶಚೀದೇವಿಯ ಪತಿ; ಇಂದ್ರ: ಶಚಿರಮಣ ಗರುಡರಥನತಚರಣ ಪುರವನುರುಹಿದ ಮಹಿಮ ಕುಶಧಿಸುತಧರ ದುರಿತರಹಿತವಿಷಗಳನೆ ಸಲಹು (ಪ್ರಾಥರಾ. ೨೮-೪೨). [< ಸಂ. ಶಚೀರಮಣ]

ಶಚೀಪತಿ (ನಾ). = **ಶಚಿರಮಣ**: ಭೂಪತಿತಿಲಕಂ ಮತ್ತಂ ಗೋಪುರಮಂ ಕೆಲವು ಗುಡಿಗಳಂ ವರಣಮನಗಜಾಪತಿ ಗೌರೀಶಂಗೆ ಶಚೀಪತಿನಿಭನೊಲ್ದು ರಚಿಸಿದಂ ಮಂಟಪಮಂ (ಎಕ. IV, ಎಳಂದೂ. ೧-೩೦; 1654). [ಸಂ.]

ಶಟಗೋಪ, ಶಠಕೋಪ, ಶಠಗೋಪ, ಶಡಗೋಪ (ನಾ). ವಿಷ್ಣುದೇವಾಲಯಗಳಲ್ಲಿ ಭಕ್ತರ ತಲೆಯ ಮೇಲಿಟ್ಟು, ಆಶೀರ್ವದಿಸುವ, ವಿಷ್ಣುಪಾದಾಂಕಿತವಾದ ಒಂದು ಬಗೆಯ ಲೋಹದ ಕಿರೀಟ: ಶ್ರೀಘಂಟಾಪತಾರ ಪರಕಾಲಸ್ವಾಮಿಗಳವರಿಗೆ ಮೊದಲು ತೀರ್ಥ ತಿರುಮಾಲೆ ವರಶವಿನಿಯೋಗ ಶ್ರೀಶಟಗೋಪ ಮುಂತಾದ ಸಕಲಮರಿಯಾದೆಗಳಂನ್ನು ಪ್ರಥಮತಾ ಕೊಡುವಂತ ಅಪ್ಪಣೆ ಕೊಡ್ಸಿ (ಪ್ಯಆರಿ. ೧೯೩೮, ೧೯-೮; 1811). **ಶಠಕೋಪ** : ಅರ್ಚಕರ್ಕೊರಲ್ಲೆ ದುಂಡು ಮಲ್ಲಿಗದಂಡೆಯಂ ತಲೆಯರ್ದ ಭುಜಂಗಳ್ಗೆ ಶಠಕೋಪಮಂ ಕೆಯ್ಸೆ ತೀರ್ಥಮಂ ಬಟ್ಟಿಕ್ಕಭಯಹಸ್ತಮಂ ಕುಡೆ ಅಂಗೀಕರಿಸಿ (ಚಿಪಂ. ೧೩೧). **ಶಠಗೋಪ** : ಮಹಿಶೂರ ಸಂಸ್ಥಾನ . . . ಕೃಷ್ಣರಾಜವಡಯರವರು ಸಮರ್ಪಿಶಿದ ರತ್ನಪಡಿ ಶಠಗೋಪ (ಪ್ಯಆರಿ. ೧೯೩೮, ೩೫-೨ : ?). **ಶಡಗೋಪ**: ಕಡುಗಿ ವಿಭಾಗಿಸಿ ಕರಣದ ಪಡೆಯ ಶಡಗೋಪವಸರನು ಪಡದಗ್ಗಡೆಯ ಪಿಡಿದಿರುವೆನು (ಗೀತಗೂ. ೪೫). 'ಶಠಾರಿ' ಪರಾ.

[← ತಮಿ. ಚಟಕೋಪಮ್; ತೆಲು. ಶಟಕೋಪಮು./ಸಂ. ಶಟಗೋಪ = ಒಬ್ಬ ಆಚಾರ್ಯರ ಹೆಸರು]

ಶಟವಿ 'ಸೆಟವಿ$_2$' ನೋ.

ಶಟಿ (ನಾ). ಒಂದುಬಗೆಯ ಸಸ್ಯ; ಕಾಡುಅರಿಶಿನ: "ಶಟೀ . . . ಪಲಾಶಃ - ಪಿಗಂಟಕಚೋರ" (ಒಡ್ಡಾಂತಿ. ೧೪೭). [ಸಂ. ಶಟೀ]

ಶಟುಕರ್ಮ (ನಾ). ಬ್ರಾಹ್ಮಣನು ಆಚರಿಸಬೇಕಾದ ಅಧ್ಯಾಪನ, ಅಧ್ಯಯನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹಗಳೆಂಬ ಷಟ್ಕರ್ಮಗಳು : ಜಪ ನಿಯಮ ಹೋಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಪರಾಯಣರುಂ . . . ಶಟುಕರ್ಮ್ಮನಿಯತರುಂ (ಪಾಶಾ. XX, ೧೯೯-೨೪; 1240).

[< ಸಂ. ಷಟ್ಕರ್ಮನ್]

ಶಟ್ಟೆ (ನಾ). ಒಂದುಬಗೆಯ ಮೀನು : ಮುದುಕಿ . . . ಮೊಮ್ಮಗನಿಗಾಗಿ . . . 'ಶೊಟ್ಟೆ ರೊಟ್ಟೆ' ಹಾಗೂ 'ಶಟ್ಟೆಯ ಖಾರಪಳದಿ' ಮಾಡಿಟ್ಟಿದ್ದಾಳೆ (ಹೊಸಕ್ಕಿ. ೭೭)

[?]

ಶಠ (ಗು). ೧. ಕೆಟ್ಟತನದ; ದುಷ್ಟತನದ. (ನಾ). ೨. ದುಷ್ಟ; ಧೂರ್ತ: "ಖಿಳನುಗ್ರಂ ಪಾಪಿ . ದುಷ್ಕಾತಕ(ನವನೆ) ಶಠಂ ದುರ್ಜನಂ ತಾನನಾರ್ಯಂ" (ವಪ್ಪಕೋ. ೧೦೦-೧೧) ; ಧನುವಿನೊಳಿರೆ ಚಂದ್ರಂ . . . ಶಠನುಮವಂ (ಜಾತಕ. ೨೦-೯); ಹಿಂಸಾಪರನ ಹಿಸುಣನ ಶಠನ ಕೃಪಣನ ನರಕವಾಗಲಿ ಕೊಲ್ಲದಿದ್ದರೆ ನಾಳೆ ಸ್ಕಂಧಪನ (ಕುವಾಡ್ರೂ. ೮-೩೭); ಶಠನು, ಸ್ವಜನನಿರ್ದಯನಾ ಸುಯೋಧನನು (ಭಾಸಾ. ೬೯). ೩. ಮೋಸ; ವಂಚನೆ: ಠಕ್ಕತೆಯರಧಮಯರು ಕತ್ತಿಗೆ ಮಿಕ್ಕ ಗೋಟುಗಳಣಕಿಗಳು ಶಠದಿಕ್ಕೆಯರು (ಬಸಪು. ೪೦-೩೨). ೪. [ಕಾವ್ಯಮೀ] ಶೃಂಗಾರನಾಯಕರಲ್ಲಿ ಒಂದು ವಿಧ; ಅನೇಕ ನಾಯಿಕೆಯರಲ್ಲಿ, ಸಮಾನಾನುರಾಗವನ್ನು ತೋರುತ್ತ, ಆಂತರಂಗಿಕವಾಗಿ ಒಬ್ಬಳನ್ನು ಹೆಚ್ಚಾಗಿ ಪ್ರೀತಿಸುವವನು: ಶಠನೆಂದರೆ, ಅನೇಕ ನಾಯಿಕೆಯರಲ್ಲಿ ಹೊರಗೆ ಸಮಾನವಾದ ಅನುರಾಗವನ್ನು ತೋರಿಸುತ್ತ ಒಳಗೆ ಒಬ್ಬಳನ್ನು ಹೆಚ್ಚಾಗಿ ಪ್ರೀತಿಸುತ್ತ ಮತ್ತೊಬ್ಬಳಿಗೆ ತೊಂದರೆಮಾಡುವವನು (ಕೃಪಡ. ೨೧೮); ಶೃಂಗಾರನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂದು ನಾಲ್ಕು ವಿಧ (ಸಂನಾಲ. ೧೮). [ಸಂ.]

ಶಠಕೋಪ 'ಶಟಗೋಪ' ನೋ.

ಶಠಗ (ನಾ). ಕಪಟಿ; ವಂಚಕ: ಬರು ಶಠಗನ ಭಕ್ತಿ ದಿಟವೆಂದು ನೆಚ್ಚಲು ಬೇಡ (ರೇದಾಪ. ೨೧-೩೪). [ಶಠ + - ಗ$_2$]

ಶಠಗೋಪ 'ಶಟಗೋಪ' ನೋ.

ಶಠಣಿ (ನಾ). ಕೆಟ್ಟಸ್ವಭಾವ; ದುಷ್ಟತನ: ಮಣಿದಸವ ಭೂಪನಂ ಮನ್ನಿಸದ ಶಠಣಿಯಿಂ ಭೃಗುರಾಮನು ನಟ್ಟು ಸುಸ್ತಂಭದೊಲು ನಿಂದಿರಲು (ವಠಶು. ೩೮-೩೦). [< ಶಠ]

ಶಠತನ (ನಾ). = **ಶಠಣಿ** : ಮಠಪತಿಯಾದರೂ ಶಠತನ ಬಿಡಲಿಲ್ಲ (ಗಾಪ).

[ಶಠ + - ತನ]

ಶಠತೆ (ನಾ). ವಂಚನೆ; ಕಪಟ: ಶಸ್ತ್ರವನು ಸಹನೆಯಲಿ, ಶಠತೆಯನು ಸತ್ಯದಲಿ ಜಯಿಸಿದ ಕಲಿ (ಅಮತಂ. ೩೮-೪). [ಸಂ. ಶಠತಾ]

ಶಠತ್ವ (ನಾ). ಕೆಟ್ಟತನ ; ದುಷ್ಟತನ : "ಚಹ ಚುಹ . . . ಡುಹ - ಪರಿಕಲ್ಪನೇ, ಶಠತ್ವಮೊಳ್" (ಕಾಶಕ್ಕ. ೭೫). [ಸಂ.]

ಶಠಪ್ರಕೃತಿ (ನಾ). ದುಷ್ಟಸ್ವಭಾವದವನು: ಶಠಪ್ರಕೃತಿ ನಿರ್ಗುಣಂ ಸಕಲಧರ್ಮ ಭೂಜಾವಳೀಕುಠಾರನಿರದಯ್ದಿದಂ (ಪಂಚತಂ. ೧೧-೧೬). [ಸಂ.]

ಶಠಾಗಮಿಕ (ನಾ). ವಂಚನೆಯಲ್ಲಿ ಪಾರಂಗತನಾದವನು; ದಗಾಕೋರ: ಶಠಾಗಮಿಕ ನಿನಗಂಜುವನು (ಕುವಾಲ. ೧೪-೨೯). [ಸಂ.]

ಶಠಾರಿ (ನಾ). = **ಶಟಗೋಪ**: ವ್ಯಕ್ತಿವಡೆದ ಶಠಾರಿಯ ಭಕ್ತಿಯಂತೆಯುಂ ಸನ್ನದಮಾದ ನಾಥಮುನಿಯ ವಿಷ್ಣುದಂತೆಯುಂ . . . ಶ್ರೀವೈಷ್ಣವರ ಭಾಗ್ಯದಂತೆಯುಂ ತೋರ್ಪ ಶ್ರೀರಾಮಾನುಜರಡಿಗಳಿಗೆ (ಚಿಪಂ. ೧೧೯); ಅರ್ಚಕ ತಲೆಯ ಮೇಲೆ ಶಠಾರಿ ಇಟ್ಟುಕೊಂಡು ಸೊಂಟದುದ್ದ ನೀರಿನಲ್ಲಿ ನಿಂತುಕೊಳ್ಳುತ್ತಾನೆ (ಗರುದಾ. ೬೮). [← ತಮಿ. ಚಟಾರಿ]

ಶಠೆ$_1$ (ನಾ). ವಂಚಕಿ ; ಮೋಸಗಾತಿ: ಕಿಸುಗುಳಿ ಕಳ್ಳಿ ಮೂರ್ಖೆ ಶಠೆ ಪಾಪಿ ಕುರೂಪಿಯ ಸತ್ಯವಾದಿ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಮುದಪ್ರ. ೮-೭).

[ಶಠ + - ಎ$_2$]

ಶಠೆ$_2$ (ನಾ). ಮೋಸ; ವಂಚನೆ: ಶಠೆಯಿಂದಾದ ಅಜಾಂಡಬ್ರಹ್ಮಾಂಡಕೋಟಿಗಳ ಸುಂಗಿಪ್ಪ ಲಿಂಗವೇ (ಅಂಶಿ.ಕ. ೮೯-೧೫೨); ಅಮಿತವಹ ಪ್ರಿಯಯಿಂದ ಶಠೆಯಿಂದ ಲಾದೊಡ್ಡಂ ನಮಸ್ಕಾರಕೃತ ಲಿಂಗ ಸರ್ವಪಾಪಂ ಹರೋಹರಯೆಂದುದಾಗಿ ಮತ್ತ ಸುಮತಿಗಳು ಗುರುಲಿಂಗಜಂಗಮಕೆ ವಂದಿಸಲು (ಗುರುಚಾ. ೭-೬೬). [ಸಂ. ಶಠ]

ಶಡಗೋಪ 'ಶಟಗೋಪ' ನೋ.

ಶಣಕಿ (ನಾ). ಒಂದು ಬಗೆಯ ಮೂಲಿಕೆ: "ಕಲಪುಃ - ಶಣಕಿ" (ಒಷಧಿ. ೨೦).

[?./ ತಮಿ. ಚನಕಿಪ್ಪುಣ್ಣು, ಚಾಣಾಕ್ಕಿ]

ಶಣಗ (ನಾ). (?): "ಗಂಟಿಕ್ಕುವಂ ಶಣಗನಕ್ಕು" (ಮಂಗರಾ. ೧೦೭-೩). [?]

ಶಣಪುಷ್ಪಿಕೆ (ನಾ). ೧. ಗಜ್ಜುಗದ ಗಿಡ. ೨. ಸೆಣಬಿನ ಗಿಡ. [ಸಂ. ಶಣಪುಷ್ಪಿಕಾ]

ಶಣಸೂತ್ರ (ನಾ). ಸೆಣಬಿನ ಹಗ್ಗ: ಪ್ರಣವಂ ಶೃಂಖಲ ಸಾರಮೇಯ ಮಮರ್ದಾಮ್ನಾಯಂ ಪುರಾಣವ್ರಜಂ ಶಣಸೂತ್ರಂ . . . ನಾರಾಚಂ ತಪೋವಿಸ್ತರಂ (ಶಮಕಂ. ೩-೨೫). [ಸಂ.]

ಶತ (ನಾ). ೧. ಒಂದು ಸಂಖ್ಯಾವಾಚಕ; ನೂರು: ಯಕ್ಕಂ ದಾಹಂ ಶತಂ ಸಾವಿರ ದಾಸಾವಿರ ಲಕ್ಷ ದಹಲಕ್ಷಾ (ಭಾಸ್ಕರ. ೧೧-೩); ವರುಷಶತ ಗತವಾದರಳಿಯ ದನುರಾಗದಲಿ, ಹರುಷಭೋಗದಲಿ! (ಚತ್ಕಾಗ. ೭೫-೧೭೬೨). ೨. ಬಹಳ; ಅನೇಕ : 'ಶತದಲ' ಪರಾ. ೩. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಮೂರನೆಯ ಸ್ಥಾನ ಮತ್ತು ಮೂರು ಅಂಕೆಗಳನ್ನುಳ್ಳ, ಒಂದು ಸಂಖ್ಯೆ: ತೃತೀಯಂ ಶತಮಿತ್ಯಾಹುಃ (ವ್ಯವಹಾ. ೮).

ಶತಂಪಾತಾಳ = (ಆಲಂ) ಅತ್ಯಂತವಾದ ಆಳ; ಬಹಳ ಆಳ: ಪರಲಾಲನಿಗೆ . . . ನೈರಾಶ್ಯದ ಶತಂಪಾತಾಳದ ಪಂಕವನ್ನು ಆಲೋಡನ ಮಾಡಿ ನೋಡುವ ಅವಧಿ ಹೆಚ್ಚಿತು (ಇಪ್ರತ. ೩೨೮). **ಶತಂಪಾಟ** = (ಆಲಂ) ಹೆಚ್ಚುಹೆಚ್ಚಾಗಿ; ಬಹಳವಾಗಿ (?): ನಾನು ಶತಂಪಾಟ ಹಟ ಮಾಡಿ . . . ಆ ಐದು ರೂಪಾಯಿ ಬರುವ ಹಾಗೆ ಮಾಡಿದೆ (ಸರಸ. ೨). **ಶತತಮಾನ** = ನೂರಾರು ವರ್ಷ; ಅನೇಕ ವರ್ಷ: ಶತಶತಮಾನಗಳಿಂತು ಧುಮುಕಿದೆ! ಪಿನತಿಮಿರದ ಪಾತಾಳದ ಗರ್ಭಕೆ ಧುಮುಕಿದೆ!

(ಪಾಂಚಜ. ೫೪-೫). ಶತಾಯ ಗತಾಯ = (ಆಲಂ) ಏನೇ ಆದರೂ; ಎಷ್ಟೇ ಕಷ್ಟವಾದರೂ : ಶತಾಯ ಗತಾಯ ನಿಮ್ಮ ಕೇಸು ನಡಸೋದಷ್ಟೇ ಅಲ್ಲ, ಗೆಲ್ಲಿಸಿ ಕೊಡೋದು ನನ್ನ ಭಾರ (ಚಂದತೋ. ೧೪೯). [ಸಂ.]

ಶತಕ (ನಾ). ೧. ನೂರರ ಮೊತ್ತ ; ನೂರು. ೨. ನೂರು ವರ್ಷಗಳ ಕಾಲಮಾನ; ನೂರುವರ್ಷ ; ಶತಮಾನ : ಇದರ . . . ಆಂತರಿಕವಿಭಜನೆ ಅರ್ಥಪೂರ್ಣವಾಗಿದೆ, ಪಾಂಡಿತ್ಯಪೂರ್ಣವಾಗಿದೆ ಎಂದು ಈ ಶತಕದ ಆದಿಯಲ್ಲಿ ವರ್ಣಿಸಿದ್ದಾನೆ (ಗ್ರಂಥಾಲ. ೨೫) ; ಕ್ರಿಸ್ತಾಬ್ದದ ನಾಲ್ಕೈದನೆಯ ಶತಕಗಳ ನಡುವಣ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳ ಸ್ಥೂಲಪರಿಚಯವಾದರೂ ಇರುವುದು ಅವಶ್ಯವಿದೆ (ಕರ್ನಾಟ. ೪೩೦). ೩. ಸಾಮಾನ್ಯವಾಗಿ ನೂರುಪದ್ಯಗಳುಳ್ಳ ಒಂದು ಕೃತಿ : ಧರೆಯೊಳ್ ಕೈಕೊಂಡು ರಕ್ಷಾಶತಕವನೊಲವಿಂ ಪ್ರೇಮದಿಂ ನಚ್ಚಿ ಬೇಳ್ಕಂ ಹರಿದೇವಂ (ರಕ್ಷಾಶ. ೧೭-೧೦೦) ; ಜಳದಿಂದಂ ಗಂಧದಿಂದಂ ಸರಳಶತಕದಿಂದಂ ಸುಪುಷ್ಪಂಗಳಿಂದಂ ವಿಳಸತ್ಸಾನ್ನಾಯ್ಯದಿಂದಂ ಥಳಥಳಿಸುವ ದೀಪಂಗಳಿಂ . . . ಪೂಜಿಸಿದನೊಸೆದು (ಬಾಧಪು. ೧೧-೧೬೮). [ಸಂ.]

ಶತಕುಂಭ (ನಾ). ೧. ಒಂದು ಪರ್ವತದ ಹೆಸರು; ಇದರಲ್ಲಿ ಚಿನ್ನವು ದೊರಕುವುದೆಂಬ ಪ್ರತೀತಿಯಿದೆ. ೨. ಒಂದು ಯಾಗದ ಹೆಸರು: ಅವರು ಶತಕುಂಭವೆಂಬ ಯಜ್ಞವನ್ನು ನೋಡುವುದಕ್ಕಾಗಿ . . . ಹೋದರು (ಬಾಲಪ್ರ. II. ೯೨೪). [ಸಂ.]

ಶತಕೋಟಿ (ನಾ). ೧. ಇಂದ್ರನ ಆಯುಧ; ವಜ್ರಾಯುಧ : ದೂಟಿ ಬಿದ್ದವು ಸೀಸಕವು ಶತಕೋಟಿ ಘಾಯದ ಘಟನೆಯೊಳು ಶತಕೋಟಿ ಘಾಯಕೆ ಸಿಡಿದ ಹೇಮಾಚಲದ ತುದಿಯಂತೆ (ಕುವ್ಯಾಗ. ೬-೧೨) ; ಸಾಸಂದಮುನಿವರದ ಯೇನಾದ್ರಿ ಶತಕೋಟಿ ನೀನೆ ಗತಿಯಾಗೆನಗೆ (ಗುರುಚಾ. ೯-೪೭). ೨. ಒಂದು ಸಂಖ್ಯೆ ; ನೂರುಕೋಟಿ : "ಏಕಂ ದಹಂ . . . ಶತಕೋಟಿಯರ್ಬುದನರ್ಬುದಂ" (ಮುಗರಾ. ೧೦೫-೧೨) ; ಸಲಿಸಿ ತಾಂ ಶತಕೋಟಿವರುಷಂಗಳೊಳ್ ಮೇಣ್ ಸಾಸವಯ ತೋರದ ಶಿಲೆಗಳನ ಮಲಿದುಗ್ರತಪವಂ ಮಾಡಿದಾತಂಗ ಒಲಿದು (ಬಸಪು. ೧-೬೫). ೩. [ಗಣಿತ] ಸಂಖ್ಯೆಯ ಸ್ಥಾನಗಳಲ್ಲಿ ಹತ್ತನೆಯ ಸ್ಥಾನ ಮತ್ತು ಹತ್ತು ಅಂಕೆಗಳಿರುವ ಒಂದು ಸಂಖ್ಯೆ: ಕೋಟಿ ದಹಕೋಟಿ ಶತಕೋಟಿ ಅರ್ಬುದಾ . . . ಇವು ೩೨ ವುಘಡಣ ಹೆಸರುಗಳು (ಭಾಸ್ಕರ. ೧೧-೭). [ಸಂ.]

ಶತಕ್ರತು (ನಾ). ೧. ನೂರುಯಾಗ : ಕೃತಯುಗದೊಳ್ ಹರಿಶ್ಚಂದ್ರನೆಂಬ ಚಕ್ರವರ್ತಿ ಶತಕ್ರತುವಂ ನಿರ್ವರ್ತಿಸಿ . . . ಮಹೀತಳಮಲ ಮಂ ಧರಾಮರರ್ಕಳ್ಗೆ ದಕ್ಷಿಣೆಗೊಟ್ಟಂ (ಪಂಪಭಾ. ೬-೧೭ ವ). ೨. ನೂರುಯಾಗಗಳನ್ನು ಮಾಡಿದವನು ; ಇಂದ್ರ : ಕ್ರಮದಿಂ ಪೂಜಿಸುವಂ ಶತಕ್ರತುವ ಪೂಜಾವಸ್ತು ಕಲ್ಪದ್ರುಜಾತಮೆ ಪೂಜ್ಯಂ (ಪುಷ್ಪಪು. ೧೧-೫೬). [ಸಂ.]

ಶತಖಂಡ (ನಾ). ೧. ನೂರಾರು ಚೂರಾದುದು; ಛಿದ್ರಛಿದ್ರವಾದುದು: ಕಾವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ (ಕಾವ್ಯಸಾ. ೪೩೫ಶೂದ್ರಕ); ಪ್ರತಿಮಾರೂಪಮಘಾತಿ ಪ್ರತಿರೂಪದ ಗರ್ವಪರ್ವತಾರೂಢತಯಿಂ ಶತಖಂಡಂ ಮಾಡಿದುವೇನತರ್ಕ್ಯಮೋ ಜಿನನ ಪಡದಘಾತಿವಿಘಾತಂ (ಶಾಂತಿಪು. ೧೨ ೩೭). ೨. ಚಿನ್ನ; ಬಂಗಾರ. [ಸಂ.]

ಶತಘ್ನಿ (ನಾ). ೧. ಚೂಪಾದ ಮೊನೆಗಳಿಂದ ಕೂಡಿದ ಗುಂಡಾಗಿರುವ ಒಂದು ಬಗೆಯ ಆಯುಧ: ಬಿಲ್ಲು ತೀರು . . . ಶತಘ್ನಿ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿ ಸಾಧನವಿಶೇಷಂಗಳಿಂದಲೂ (ವಿವೇಕ. ೨೬೬) ; ಶತಘ್ನಿಗಳ್, ಯಷ್ಟಿಗಳ್ . . . ಭೀಕರಂ ತಾನಾಗಿ ಜೃಂಭಿಸಿದುದು (ಶ್ರೀರಾಮಾ. ೭೫೦-೪೪). ೨. ತೋಪು; ಫಿರಂಗಿ : ಕೋಟೆಕೊತ್ತಳಗಳ ತಾಗಿ ಕೆಂದೂಳ್ಪಹ ದಾಟಿ ಪಾಱುವ ಶತಘ್ನಿಗಳ ಮೀಟನ ಗುಂಡುಗಳೆಸೆದುವು (ಕಂಸವಿ. ೧೨-೧೯) ; ಹತ್ತಿರಿರ್ದೊಂದರೆಯನತ್ತಿ ಸಿಡಿರೋಷದಿಂ ಬಿಟ್ಟನ್ ಶತಘ್ನಿ ಗುಂಡಿಡುವಂತೆ (ಶ್ರೀರಾಮಾ. ೩೦೬-೧೩೨). ೩. ಹೆಣ್ಣುಚೇಳು. ೪. ಒಂದು ಬಗೆಯ ಗಂಟಲುರೋಗ. ೫. ಒಂದು ಬಗೆಯ ಗಿಡ. [ಸಂ. ಶತಘ್ನೀ]

ಶತಚೂರ್ಣ (ನಾ). ನೂರಾರು ಚೂರು ; ಛಿದ್ರಛಿದ್ರ : ಕೋಪಿಸುತೆದ್ದು ಸೆಳೆದು ಸಱ ನೆ ಸೀಳೆ ಸಂದಣಿಸಿ ಶತಚೂರ್ಣವಾಗಿ ನೆಲದೊಳು ಬೀಳೆ (ನಂಬರ. ೭-೮೬). [ಸಂ.]

ಶತಚ್ಛಿದ್ರ (ನಾ). = ಶತಚೂರ್ಣ: ವರಧರ್ಮರೂಪನಂ ಕಾನನಕೆ ಕಳುಪೆನ್ನು ತೊರೆವ ನಾಲಗೆ ಶತಚ್ಛಿದ್ರಮಾಗದೆ (ವಂಕಾರಾ. ೨-೬-೫೧). [ಸಂ.]

ಶತತಂತ್ರಿ (ನಾ). ಒಂದು ಬಗೆಯ ವಾದ್ಯ : ಅವರ ಗಾಯನದಲ್ಲಿ ಸಹಾಯ ನೀಡಲು ಕಾಲಕ್ರಮೇಣ 'ಶತತಂತ್ರಿ' ಅಥವಾ 'ವಾನಾ' ಎಂಬ ವಾದ್ಯವನೂ, 'ಭೂಮಿದುಂದುಭಿ' ಎಂಬ ಲಯವಾದ್ಯವನ್ನೂ ಅವರು ಸೃಷ್ಟಿಸಿಕೊಂಡರೆಂದು ತಿಳಿದುಬಂದಿದೆ (ಸಂಗೀಚಂ. ೨೨). [ಸಂ. ಶತತಂತ್ರೀ]

ಶತತಾರೆ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು; ನೂರು ನಕ್ಷತ್ರಗಳನ್ನು ಒಳಗೊಂಡಿರುವ ಒಂದು ತಾರಾಪುಂಜ ; ಶತಭಿಷಾನಕ್ಷತ್ರ. [ಸಂ. ಶತತಾರಾ]

ಶತದಲ, ಶತದಳ (ನಾ). ಅನೇಕ ಎಸಳುಗಳನ್ನು ಹೊಂದಿರುವುದು; ತಾವರೆ; ಕಮಲ: ಅಭವಂ ಕ್ಷಿತಿಧರೇಂದ್ರಸುತಾಸ್ಯಶತದಲ [ಪಾಶಾಂ. ೪]ಮದಮಧುವ್ರತನು (ಬಸಪು. ೧೩-೩೦). ಶತದಳ: ಈ ಮಾನಸಜಾತ ಶತದಳಂ ಗುಣಯುಕ್ತಂ . . . ಕುಡುಗೆ ನಲವಂ ಗಲವಂ (ವಸ್ತುವಂ. ೧೨೨). [ಸಂ.]

ಶತದಲಾಸನ (ನಾ). ಕಮಲವನ್ನು ಪೀಠವಾಗಿ ಉಳ್ಳವನು ; ಬ್ರಹ್ಮ : ಶತದಲಾ [ಪಾಶಾಂ. ೪]ಸನ ಶತಮಖಾಮರ . . . ದಶಶತದಳಂ ಪ್ರತ್ಯಕ್ಷಮಾಗಿರ್ದು (ಬಸಪು. ೧೬-೨೬). [ಸಂ.]

ಶತದಳ 'ಶತದಲ' ನೋ.

ಶತಧರ್ಮ (ನಾ). = ಶತಕ್ರತು ೨: ಪರಮೇಷ್ಠಿ ಶತಧರ್ಮವಂದಿತಪದಾಂಭೋಜ ಒಲಿದು ಪಾಲಿಪುದೆನ್ನ ಸಂಗಮೇಶ್ವರಪ್ರಸನ್ನ (ಪ್ರಾಥರಾ. ೧೭-೧). [ಸಂ.]

ಶತಧಾರ (ನಾ). ನೂರು ಅಲಗುಗಳನ್ನುಳ್ಳದು ; ವಜ್ರಾಯುಧ : ಶತಧಾರೋದ್ಯತ್ತನುತ್ರಂ ತವದೊಣೆ ವಿಧೃತೋಚ್ಛಂಡಗಾಂಡೀವಮುಜ್ಜೃಂಭಿತ . . . ಅತ್ಯುದ್ಧತ ಬಾಹಾದರ್ಪಂ (ಸಮಿಪು. ೧೨-೧೫೨). [ಸಂ.]

ಶತಧೃತಿ (ನಾ). ೧. = ಶತಕ್ರತು ೨: ಶತಧೃತಿ ಸೂಸಿದನು ಪುಷ್ಪಾಂಜಲಿಯ ಮಳೆಯ (ಸಿಭಾಗ. ೪-೮-೭೨). ೨. ಬ್ರಹ್ಮ : ತನ್ನಯ ಲೀಲೆಯದು ಮಿಗಿಲೊತ್ತ ತಾನದನರಿತು ತನ್ನಯ ಚಿತ್ತದಲಿ ನಿರ್ಮಿಸುತಲಾ ಶತಧೃತಿಯನಾವಾಗ (ಗಗಾಶಾ. ೫-೨೨). ೩. ಗೌತಮ ಋಷಿಯ ಮಗನೂ ನಿಮಿಕುಲದ ಪುರೋಹಿತನೂ ಆದ ಶತಾನಂದ: ಈ ರಹಸ್ಯಮಂ ನಿನ್ನ ಬಿಲ್ಲೋಜನಪ್ಪ ಶತಧೃತಿಯಂ ಕೇಳೆಂದು ಮಾರ್ನುಡಿದಂ (ರಾಮಾಪ್ರ. ೪೮-೨). [ಸಂ.]

ಶತಧೃತಿಪೌತ್ರ (ನಾ). ಬ್ರಹ್ಮನ ಮೊಮ್ಮಗನಾದ ರಾವಣ : ಶತಧೃತಿ ಪೌತ್ರನುಂ ಜಿತಜಗತ್ರಯವೀರನುಮಾಗಿ ನೀಂ ಮಹಾಸತಿಗವನಿಚೆಗನ್ಯವಧುಗಾಟಿಸೆ (ಪಂಚತಂ. ೧೮೫-೩). [ಸಂ.]

ಶತನಾಮೆ (ನಾ). ೧. ಒಂದುಬಗೆಯ ಸೊಪ್ಪು ; ಸಬ್ಬಸಿಗೆ : "ಶತನಾಮ [ಪಾಶಾಂ. ಮಿ] ಶತಪುಷ್ಪಿಯೆನೆ ಸಬ್ಬಸಿಗೆ ಚೋಪಾರನಾಮಂ" (ಮಂಗರಾ. ೪೧-೩೪). ೨. ಒಂದುಬಗೆಯ ಹೂವು : (ಕ). [ಸಂ. ಶತನಾಮಾ]

ಶತಪತ್ರ (ನಾ). ೧. = ಶತದಲ : ವಿದಳಿತನುತ ಶತಪತ್ರದ ಪುದುವಿನೊಳಿರದಗಲೆ ವೋದ ಹಂಸನನಱಸಲ್ (ಪಂಪಭಾ. ೯-೫೬); ಭಾವಿಸೆ ಪೋಲ್ತುದು . . . ಜಲದೇವಿಯ ಪಿಂಛಾತಪತ್ರಮನೆ ಶತಪತ್ರಂ (ಗದಾಯು. ೬-೪೧). ೨. ಸಾರಸಪಕ್ಷಿ : "ಸಾರಸದಲ್ಲಿಯುಂ ಶತಪತ್ರಮೊಂಬುದು" (ಜಲಾಯು. ೧೩೨-೯). ೩. ಮರಕುಟಿಗನ ಹಕ್ಕಿ. ೪. ಒಂದು ಬಗೆಯ ಹೂವು ; ಸೇವಂತಿಗೆ. ೫. ಇಂದ್ರ. "ತಾವರೆ ಸಾರಸವಕ್ಕಿಯು ಸೇವಂತಿಗ ಸುರಪ ನಾಲ್ಕು ಶತಪತ್ರಾಖ್ಯಂ" (ನಾನಾರ್ಥ. ೮೨). [ಸಂ.]

ಶತಪತ್ರಕ (ನಾ). = ಶತಪತ್ರ ೩: "ಶತಪತ್ರಕಃ, ದಾರ್ವಾಗಾಟಃ - ೨ ಮರಗುಟಕನ ಹಕ್ಕಿ" (ಸಿಪ್ರಾಂ. ೧೫೮). [ಸಂ.]

ಶತಪಥ (ನಾ). ನೂರು ಅಧ್ಯಾಯಗಳನ್ನೊಳಗೊಂಡ, ಶುಕ್ಲಯಜುರ್ವೇದಕ್ಕೆ ಸಂಬಂಧಿಸಿದ ಒಂದು ಬ್ರಾಹ್ಮಣಗ್ರಂಥ : ಮನುವು ಆ ಮತ್ಸ್ಯವನ್ನು ಆ ನದಿಯಲ್ಲಿ ದೊಡ್ಡದಾಗಿ ಬೆಳೆಸಿದ್ದು . . . ಮೊದಲಾದ ಸಂಗತಿಗಳಲ್ಲವೂ ಶತಪಥದಲ್ಲಿ ಹತ್ತನೆಯ ಕಂಡಿಕೆಯವರೆಗೂ ಪ್ರಸಕ್ತಗೊಂಡಿದೆ (ಭಾರದ. ೧೪೩). [ಸಂ.]

ಶತಪಥ₂ (ನಾ). ಅನೇಕ ಹೆಜ್ಜೆಗಳನ್ನು ಅತ್ತಿಂದಿತ್ತ ಇತ್ತಿಂದತ್ತ ಹಾಕುವಿಕೆ : ಶತಪಥಮಲಿವನೇಕವಂ, ಏಕಾಂಗಿ ? (ಶ್ರೀರಾಮಾ. ೨೭೮-೬).

ಶತಪಥ ತಿರುಗು = ಅತ್ತಿಂದಿತ್ತ ಇತ್ತಿಂದತ್ತ ನಡೆದಾಡು: ಅವರು ಚಣಕಾಲ ಏನು ಮಾಡುವುದೆಂದು ಶತಪಥ ತಿರುಗಿದರು (ರಾಮ್ಕೋದ. ೧೯೦); ಬೆಟ್ಟದ ಒಡೆಯರು . . . ಒಂದೆಡೆಯಲ್ಲಿ ಶತಪಥ ತಿರುಗುತ್ತಿದ್ದರು (ಒಡೆತ. ೧೨). **ಶತಪಥ ಹಾಕು** = ಶತಪಥ ತಿರುಗು: ಆಚೀಚೆ ಪ್ಲೇಟ್‌ಫಾರ್ಮಿನಲ್ಲಿ ಶತಪಥ ಹಾಕಿದ (ಆಳಿ. ೬); ಏನು ಮಾಣಿ . . . ಶತಪಥ ಹಾಕುತ್ತೀಯಲ್ಲ (ಮೂಜ್ಞಿ. ೭೦). [< ಸಂ. ಶತಪದ್]

ಶತಪಥಂಬೋಗು (ಕ್ರಿ). ಅತ್ತಿಂದಿತ್ತ ಇತ್ತಿಂದತ್ತ ನಡೆದಾಡು, - ತಿರುಗಾಡು: ಆಃ! ಚಂದ್ರಶಾಲೆಯೊಳೊರ್ಮೆಯುಂ ಶತಪಥಂಬೋಗೆ ಬಸವಳಿವ ಗರ್ಭಿಣಿ (ರಾಮಾಶ್ವ. ೩೩-೬). [ಶತಪಥ₂ + ಪೋಗು]

ಶತಪಥಬ್ರಾಹ್ಮಣ (ನಾ). ನೂರುಅಧ್ಯಾಯಗಳನ್ನೊಳಗೊಂಡ ಶುಕ್ಲ ಯಜುರ್ವೇದಕ್ಕೆ ಸಂಬಂಧಿಸಿದ ಒಂದುಬ್ರಾಹ್ಮಣಗ್ರಂಥ : ಯಜುರ್ವೇದದ ಕಾಣ್ವಶಾಖೆಯ ಶತಪಥಬ್ರಾಹ್ಮಣದ ಕಡೆಯ ಕೆಲವು ಅಧ್ಯಾಯಗಳೇ ಬೃಹದಾರಣ್ಯಕ (ಭಾರದ. ೩೮) ; ಶತಪಥಬ್ರಾಹ್ಮಣವಲ್ಲಿ "ಯಾರು ಯಥಾರ್ಥಜ್ಞಾನದಿಂದ ಯಜ್ಞಗಳನ್ನಾಚರಿಸುವುದಿಲ್ಲವೋ ಅವರು ಮರಣಾನಂತರ ಪುನಃ ಹುಟ್ಟಿ ದುಃಖವನ್ನನುಭವಿಸುವರು" ಎಂದು ಹೇಳಿರುವುದು (ಭಾತತ್ತ್ವ. ೨೪). [ಸಂ.]

ಶತಪದ (ನಾ). = ಶತಪಥ₂ : ಶ್ರೀಮಂತರೂಬ್ಬರೆ ತಮ್ಮ ಮನೆದು ಪದುಸಾಲೆಯ ಶತಪದ ಮಾಡುತ್ತಲಿದ್ದಾರೆ (ತಿರುಗು. ೩೧). [ಸಂ. ಶತಪದ್]

ಶತಪದಂಗೆಯ್ (ಕ್ರಿ). ಅತ್ತಿಂದಿತ್ತ, ಇತ್ತಿಂದತ್ತ ತಿರುಗಾಡು, – ನಡೆದಾಡು : ಕೆಯ್ಯ ಭಲ್ಲೆಯದೊಬ್ಬನಾ ಜಾವದ ಪ್ರಹರಿ ಸಿಲುಬೆಗಳ ಮುಂಗಡೆಯೊಳತ್ತಿತ್ತ ಶತಪದಂಗೆಯ್ದು (ಗೂಳೂಕ್ಷಥಾ. ೧೫-೩೬೩). [ಶತಪದ + ಕೆಯ್]

ಶತಪದಿ (ನಾ). ಅನೇಕ ಕಾಲುಗಳುಳ್ಳ ಒಂದುಬಗೆಯ ಹುಳು; ಜರಿ: ಶತಪದಿಗಳಿಗೆ ಶರೀರದ ಪ್ರತಿಭಾಗಕ್ಕೂ ಒಂದು ಜೊತೆ ಒಟ್ಟು ೧೨-೬೯ ಜೊತೆ ಕಾಲುಗಳಿವೆ (ಈಜಪ್ರ. ೧೫). [ಸಂ. ಶತಪದೀ]

ಶತಪರ್ವ (ನಾ). ಅನೇಕ ಗಂಟು ಅಥವಾ ಗಿಣ್ಣುಗಳನ್ನು ಹೊಂದಿರುವುದು; ಬಿದಿರು : "ಪಂಶಃ . . . ಶತಪರ್ವಾ, ಯವಫಲಃ, ವೇಣುಃ, ಮಸ್ಕರಃ, ತೇಜಸಃ – ೧೦ ಬಿದುರು ಹೆಸರುಗಳು" (ಸಿದ್ಧಾಂತ. ೧೪೯). [ಸಂ. ಶತಪರ್ವನ್]

ಶತಪರ್ವಿಕೆ (ನಾ). ೧. ಗರಿಕೆ ಹುಲ್ಲು: "ದೂರ್ವಾ, ಶತಪರ್ವಿಕಾ . . . ಅನಂತಾ - ೬ ಗರಿಕೆಹುಲ್ಲಿನ ಹೆಸರುಗಳು" (ಸಿದ್ಧಾಂತ ೧೪೯). ೨. ಬಿಜೆ : "ವಚಾ . . . ಶತಪರ್ವಿಕಾ - ೫ ಬಚೇ ಹೆಸರುಗಳು" (ಸಿದ್ಧಾಂತ. ೧೩೫). [ಸಂ. ಶತಪರ್ವಿಕಾ]

ಶತಪುಷ್ಪೆ (ನಾ). ಕಾಡುಸಬ್ಬಸಿಗೆ ಸೊಪ್ಪು ; ಶತನಾಮೆ: "ಶತಪುಷ್ಪಾ, ಸಿತಛತ್ರಾ. . . . ಕಾರವೀ - ೭ ಕಾಡುಸಬ್ಬಸಿಕೇ ಹೆಸರು" (ಸಿದ್ಧಾಂತ. ೧೪೭). [ಸಂ. ಶತಪುಷ್ಪಾ]

ಶತಪ್ರಯತ್ನ (ನಾ). ಹೆಚ್ಚಿನ ಯತ್ನ; ಅಧಿಕ ಪ್ರಯತ್ನ : ಯಾವುದು ನಡೆಯಬಾರದು ಎಂದು ಅವರು ಶತಪ್ರಯತ್ನ ಮಾಡಿದ್ದರೋ ಅದೇ ಅತ್ಯಂತ ಅನಪೇಕ್ಷಿತವಾದ ರೀತಿಯಲ್ಲಿ ನಡೆದುಹೋಗಿತ್ತು (ಮೂಯದಾ. ೨೫೨). [ಸಂ.]

ಶತಪ್ರಾಸ (ನಾ). ಬಿಳಿಯ ಕಣಗಿಲೆ ಗಿಡ ; ಗನ್ನೇರಳೆ : "ಪ್ರತಿಹಾಸಃ, ಶತಪ್ರಾಸಃ . . . ಕರವೀರಃ - ೫ ಗನ್ನೇರಳೆ, ಕಣಗಲ ಗಿಡದ ಹೆಸರು" (ಸಿದ್ಧಾಂತ. ೧೭೯). [ಸಂ.]

ಶತಭಿಷೆ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು: ಶತಭಿಷ ಮೂಲಂ ಫಣಿ ರೇವತಿ ಪೂರ್ವಾಷಾಢೆಯುತ್ತರಾಭಾದ್ರೆಯುಮಾಪತಿಯೆನಿಸಿದ ನಕ್ಷತ್ರಪ್ರತತಿ (ಲೋಕೋಪ ೪-೮೫); ಇವುಗಳಲ್ಲಿ ಬಲಗಡೆಯದು ಶತಭಿಷಾ (೨೪) ಯೋಗತಾರೆ (ನಕ್ಷತ್ರ. ೨೬). [ಸಂ. ಶತಭಿಷಾ]

ಶತಮಖ (ನಾ). ೧. ನೂರುಯಜ್ಞಗಳನ್ನು ಮಾಡಿದವನು ; ಇಂದ್ರ: ಶತಮಖನರಸಿಗೆ ಕರ್ಣಾವತಂಸಮಾಗಲ್ಕೆ ನೋಂತ ಪಲ್ಲವಪುಷ್ಪಪ್ರತತಿಯನೆ ಮೆಚ್ಚಿದು ಚೆಲ್ಲೆಗತಿಶಯಮೆನಿಸಿದುದು ಪಾರಿಜಾತಕುಜಾತಂ (ಆದಿಪು. ೬-೯೯); ನಿಖಿಳನಿರ್ಜರಬಲ ಸಹಿತ ಶತಮಖನೊಡನೆ ವಿಗ್ರಹವಲಾ ಸಮ್ಮುಖಕೆ ಬಂದುದು ಭಂಗವೆಂದನು ನಗುತ ಮುರವೈರಿ (ಕವ್ಯಾಳ. ೨೦-೧೭). ೨. [ಛಂದ] ಮೂರುಲಘುಗಳನ್ನು ಹೊಂದಿರುವ ಅಕ್ಷರಗಣ ; ನಗಣ (ುುು).: ಶತಮಖಭಾನುಯುಗಾಗ್ರಲಗಂ ಶೀತಕರ ತ್ರಿತಯಾಗ್ರಹರಂ ಮತಿಯುತೆ ಬಂದೊಡಿದಚ್ಯುತಕಂ ಭೂತಳದೊಳ್ಳೆ ಗಲ್ಬರ್ಧಸಮಂ (ಛಂದೋಂಯು. ೩-೨೦೭). [ಸಂ.]

ಶತಮನ್ಯು (ನಾ). = ಶತಮಖ ೧ : ನಿನಗೀ ಜನ್ಮಸ್ಥಿತಿಯಂ ಪೇಬ್ಯೂಡೆ ಭೂಪತಿ ಶತಮನ್ಯುಗೆ ಪೇಬ್ಬ ತೆಱನೆ ನಾಕಶ್ರೀಯಂ (ಚಂದ್ರಪು. ೫-೩೧). [ಸಂ.]

ಶತಮಾನ (ನಾ). ೧. ನೂರರ ಅಳತೆ ಅಥವಾ ಪ್ರಮಾಣ. ೨. ನೂರರಷ್ಟು; ನೂರುಮಡಿ. ೩. ಒಂದು ಪಲದ ತೂಕದ ಬೆಳ್ಳಿ. ೪. ೯೨ ತೊಲಗಳ ತೂಕದ ಒಂದು ಪ್ರಮಾಣ. ೫. ನೂರುವರ್ಷಗಳ ಅವಧಿ,—ಕಾಲಮಾನ: ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನವು ಬಹಳ ಮಹತ್ವಪೂರ್ಣವಾದುದು (ಸಾಪಿಪ್ರ. ೧) ; ಕ್ರಿ.ಶ. ಮೂರು ನಾಲ್ಕನೆಯ ಶತಮಾನಗಳಲ್ಲಿ. . . . ಶರದ್ಶತಮವದ್ಧಿಂಬವು ಚಿತ್ತಾನಕ್ಷತ್ರದ ಪಕ್ಕದಲ್ಲಿಯೇ ಇತ್ತು (ನಕ್ಷತ್ರ. ೬೮). [ಸಂ.]

ಶತಮೂರ್ಖ (ನಾ). ಅತಿಯಾದ ದಡ್ಡತನವುಳ್ಳ ವ್ಯಕ್ತಿ; ಮಹಾಅವಿವೇಕಿ: ಮೂರ್ಖರಿರುವ ಊರಲ್ಲಿ ವಿವೇಕಿಯಾಗಲೆತ್ನಿಸುವವನು ಶತಮೂರ್ಖನಾಗುತ್ತಾನೆ (ವಂಜಪಂ. ೧೧೯); ನೀನು ಶತಮೂರ್ಖಳೆಂದು ಇಂದು ಖಾತ್ರಿಯಾಯಿತು (ಸ್ಮೃತಿಚಿ. ೬೫೯). [ಸಂ.]

ಶತಮೂಲಿ (ನಾ). ಒಂದು ಬಗೆಯ ಗಡ್ಡೆ; ಶತಾವರಿಗಡ್ಡೆ : "ಶೇರು ಶತಮೂಲಿ ಯೆಸಲಾಸಡಿಯೆನಿಕ್ಕು" (ಮಂಗರಾ. ೪೦-೩೧). [ಸಂ. ಶತಮೂಲೀ]

ಶತಮೂಲಿಕೆ (ನಾ). = ಶತಮೂಲಿ: "ಶತಮೂಲಿ[ಪಾಠಾಂ.ಳಿ]ಕಾ, ಆಭೀರುಃ - ೨ ಆಸಡಿ" (ಹಲಾಯು. ೧೦೧-೪೬೫). [ಸಂ. ಶತಮೂಲಿಕಾ]

ಶತಮೊಂಡ (ನಾ). ಬಹಳ ಹಟಮಾರಿ: ಇವನೊಬ್ಬ ಬುದ್ಧಿಗೆಟ್ಟ ಶತಮೊಂಡ (ವೀರಯೋ. ೧೭). [ಶತ + ಮೊಂಡ (< ಮುಂಡು)]

ಶತಯಜ್ಞ (ನಾ). = ಶತಮಖ ೧: ಆ ಪಾರ್ವತಿ ಶತಯಜ್ಞನಜಹರಿಗಳಾದಿಯಾಗಿರ್ದ ದೇವತೆಗಳೆತ್ತರು ಬಳಿಕ್ಕೊಂದೊಂದು ಬಾಣಮಂ (ವೀಶ್ಯಪ್ರ. ೩-೧೩-೨೮); ಯಜ್ಞಪುರುಷನ ನೇಮದಲಿ ಶತಯಜ್ಞನಪರಾಧವನು ಮಱೆದನು (ನಿಭಾಗ. ೪-೧೩ ಸೂಚನೆ). [ಸಂ.]

ಶತರಂಜ (ನಾ). ಒಂದು ಬಗೆಯ ಆಟ ; ಚದುರಂಗ: ಹಗಲು ಶತರಂಜ, ಹೆಡ್ಡ ಆಡುತ್ತಿದ್ದ (ಜಮಿನ್ಯಾ. ೩೭). [← ಆರ. ಶತ್ರಂಜ್; ಪಾರ. ಹಿಂ. ಶತರಂಜ್ ; ಮರಾ. ಶತರಂಜ್, ಶತ್ರಂಜ್. / ಸಂ. ಚತುರಂಗ]

ಶತರಂಜಿ (ನಾ). ಅನೇಕ ಬಣ್ಣಗಳುಳ್ಳ ರತ್ನಗಂಬಳಿ: ಗದ್ದುಗೆಯ ಸಾಲ್ಗಳಿನಿಟ್ಟು ಶತರಂಜಿಗಳ ಹಾಯಿಕಿ ಸಿಂಗರಿಸಿತೋಲಗದ ಮಂಟಪವ (ಪ್ರಹ್ಲಾಚ. ೧೭-೪೧); ಹುಲ್ಲಿನ ಶತರಂಜಿಯ ಮೇಲೆ ಕುಳಿತಿದ್ದೆ (ಕಪು.ಪು. ೫೨).

[← ಪಾರ. ಶತ್ರಂಜೀ; ಹಿಂ. ಶತರಂಜೀ; ಮರಾ. ಶತರಂಜೀ, ಸತರಂಜೀ, ಸತ್ರಜೀ]

ಶತರುದ್ರೀಯ (ನಾ). ಯಜುರ್ವೇದದಲ್ಲಿ ಬರುವ ಪ್ರಸಿದ್ಧವಾದ ಶಿವಸ್ತೋತ್ರ: ಹರನ ಕರುಣದ ಹದನನೀತಂಗೊರೆದು ಶತರುದ್ರೀಯವನು ವಿಸ್ತರಿಸಿ ಬಿಜಯಂಗೈದನಾ ಮುನಿಪತಿ ನಿಜಾಶ್ರಮಕೆ (ಕುಮಾರ್ಯೋ. ೧೯-೫೪); ಸ್ಫುಟಿವಿತತಪುರಾಣೌಘದೊಳತಿಶಯಮಾ ಶ್ರುತಿಸಮೂಹಮದಱೊಳ್ನಿಸದಂ ಶತರುದ್ರೀಯಮದತಿಶಯಂ (ರಾಜಶೇ. ೪-೮೮). [ಸಂ.]

ಶತವೀರ್ಯೆ (ನಾ). ೧. ಬಿಳಿಯ ಗರುಕೆ ; ದೂರ್ವೆ : "ಗೋಲೋಮಿ, ಶತವೀರ್ಯಾ - ೨ . . . ಬಿಳೀಗರಿಕೆಹುಲ್ಲು" (ಸಿದ್ಧಾಂತ. ೧೪೯). ೨. ಶತಾವರಿಯ ಗಿಡ : "ಶತವೀರ್ಯಾ - ಹೇರಾಸಡಿ, ಮಧುದ್ರಾಕ್ಷೆ, ಮೂರ್ವೆ, ರಂ(ಅ)ಚಿ(ಕೆ)ಗೆ" (ಒಷಧಿ. ೧೬೧). [ಸಂ. ಶತವೀರ್ಯಾ]

ಶತವೃದ್ಧ (ನಾ). ೧. ನೂರುವರ್ಷ ವಯಸ್ಸಾದವನು ; ಶತಾಯು. ೨. ಬಹಳ ವಯಸ್ಸಾದವನು ; ತುಂಬಾ ಮುದುಕ : ಒರ್ವ ಶತವೃದ್ಧನಾಗಿ ನಿಂದಿರ್ದಂ (ಸಂಪಿರ. ೬-೧೪) : ಶತವೃದ್ಧ ಕೊಡೆ ಕಮಂಡಲು ದರ್ಭೆಗಳನಾಂತು ಯತಿಯ ಬಳಿಗೆ . . . ಬಂದು (ವೀಶ್ಯಪ್ರ. ೨-೧೩-೩೦). [ಸಂ.]

ಶತವೇಧಿ (ನಾ). ಒಂದು ಬಗೆಯ ವನಸ್ಪತಿ; ಹುಳಿಹಚ್ಚೆ : ಶಶು ಕಂಡ ಕನಸಿನಂತೆ ಪಶುವಿನ ಉದರದಲ್ಲಿ ಸೋಂಕಿದ ಶತವೇಧಿಯಂತೆ ಇದು ಲಿಂಗೈಕ್ಯವು (ಮೋಳಿಮಾ. ೧೨೪-೪೫೩). [ಸಂ. ಶತವೇಧಿನ್]

ಶತಸಂಕುಲೆ (ನಾ). [ಜೈನ] ಒಂದು ಬಗೆಯ ವಿದ್ಯೆ: ಪ್ರಜ್ಞಪ್ತಿ . . . ಶತಸಂಕುಲಾ [ಪಾಠಾಂ.ಳಿ]ಕುಂಭಾಂಡಿ . . . ಅಭೋಗಿನಿಯೆಂಬಿವು ಮೊದಲಾಗೆ ಕುಲವಿದ್ಯೆ ಜಾತಿವಿದ್ಯೆ ಸಾಧಿತವಿದ್ಯೆಗಳೊಳ್ ಸಂಪನ್ನನಾಗಿರ್ದು (ಚಾವುಂಪು. ೧೯೬). [ಸಂ. ಶತಸಂಕುಲಾ]

ಶತಸಪ್ತತಂತು (ನಾ). ನೂರುಯಾಗಗಳನ್ನು ಮಾಡಿದವನು; ಇಂದ್ರ: ಶತಸಪ್ತತಂತುಗಮರಾವತಿಯಂ ಫಣಿಪತಿಗೆ ನೆಗಟ್ಟ ಭೋಗಾವತಿಯಂ ಮತಿಗೆಟ್ಟು ಜಡರ್ ಬಣ್ಣಿಸುವ ತೆಱದಿ ಬಣ್ಣಿಪೆಮೆ ನಿನಗೆ ಮುಕ್ತಿಯ ಸುಖಮಂ (ಅಜಿಪು. ೬-೮೦). [ಸಂ.]

ಶತಸಹಸ್ರ (ನಾ). ೧. ನೂರುಸಾವಿರ; ಲಕ್ಷ: ಆಯುಧಶಾಲೆಯೊಳ್ ಶತಸಹಸ್ರ ರವಿಪ್ರವಿಭಾಸಿದೇವ ಚಕ್ರಾಯುಧಮಿಂದು ಬಂದು ನೆಲಸಿರ್ದುದು (ಶಾಂತಿಪು. ೮-೧೫೩). ೨. ಸಾವಿರಾರು; ಬಹಳ; ಅನೇಕ: ಶತಸಹಸ್ರ ಕಂಠಗಳು ಏಕಕಂಠವಾಗಿ "ಉಘೇ! . . . ಉಘೇ" ಎಂದು ಬೊಬ್ಬಿರಿದವು (ಶಾಂತಲಾ. ೧೦೭). [ಸಂ.]

ಶತಸಾವಿರ 'ಶತಸಾಸಿರ' ನೋ.

ಶತಸಾಸಿರ, ಶತಸಾವಿರ (ನಾ). ೧. = ಶತಸಹಸ್ರ ೧. ೨. = ಶತಸಹಸ್ರ ೨: ಶತಸಾಸಿ[ಪಾಠಾಂ.ವಿ]ರದ ಸಂಖ್ಯೆಯ ತುಱುಸಮೂಹದ ಭರದೊಳಿಂತು ಕಿರಾತರು ಗಳೆಯ್ತಂದು (ಜೀವಂಚ. ೬-೬). **ಶತಸಾವಿರ**: ೨. ಶತಸಾವಿರ ದಿವಾಕರಬಿಂಬವೆಸೆದುದು ಝಳದ ಹೊಯಿಲಿನಲಿ (ಕುವ್ಯಾಭೀ. ೬-೩೩). [< ಸಂ. ಶತಸಹಸ್ರ]

ಶತಸ್ಸಿದ್ಧ (ನಾ). ನೂರಕ್ಕೆ ನೂರುಪಾಲು ಆಗತಕ್ಕುದು; ಖಂಡಿತವಾಗಿ ನಡೆಯತಕ್ಕುದು: ಅವರಿಬ್ಬರೂ ಊರಿಗೆ ಬರುವುದು ಶತಸ್ಸಿದ್ಧ (ರೂಢಿ). [ಸಂ.?]

ಶತಹ್ರದ (ನಾ). ಮಿಂಚು; ವಿದ್ಯುತ್ತು: ಸ್ತನಿತಧನುರ್ಗುಣಧ್ವನಿ ಶತಹ್ರದ ಶಸ್ತ್ರಮರೀಚಿ ನಾಡೆ ಕರ್ಗನೆ ಕನಿವೊಡ್ಡು ಕಾರಮುಗಿಲಂತಿರೆ ಭೋರನೆ ಕೊಂಡು ದಾಗಳಂಬಿನ ಮಟೆ (ಪಂರಾಮಾ. ೧೩-೪೯). [ಸಂ. ಶತಹ್ರದಾ]

ಶತಹ್ರದೆ (ನಾ). = ಶತಹ್ರದ: "ಶಂಪಾ, ಚಪಲಾ, ಕ್ಷಣಿಕಾ, ಶತಹ್ರದಾ . . . ಐರಾವತೀ (ಚ ವಿಜ್ಞೇಯಾ) - ಈ ೧೧ ಮಿಂಚು" (ಹಲಾಯು. ೧೧-೬೦). [ಸಂ. ಶತಹ್ರದಾ]

ಶತಾಂಗ (ನಾ). ೧. ವಿಶೇಷವಾಗಿ ಯುದ್ಧಸಮಯದಲ್ಲಿ ಬಳಸುವ ಬಂಡಿ, — ರಥ: "ಅನಃ, ಶತಾಂಗಃ, ಶಕಟಃ . . . ಕೂಬರೀ - ಈ ೯ ರಥಂ" (ಹಲಾಯು. ೭೩-೨೯೦). ೨. ಒಂದು ಬಗೆಯ ಮರ; ಹುಲಿಗಿಲು: "ಶತಾಂಗ — ಹುಲಿ(ಗಿ)ವಿಲು, ಗೇರು" (ಓಷಧಿ. ೧೫೯). [ಸಂ.]

ಶತಾಂಬಕಸುತ (ನಾ). ಇಂದ್ರನ ಮಗ; ಅರ್ಜುನ: ಜಯಶಂಬರಹರಾಹಿತ ಶತಾಂಬಕಸುತಸ್ತುತ ಚಿದಂಬರದಿನೇಶಾ (ರಾಜಶೇ. ೧೩-೫೪). [ಸಂ.]

ಶತಾಧಿಕ (ನಾ). ನೂರಕ್ಕಿಂತ ಹೆಚ್ಚಾದುದು; ಮಿಗಿಲಾದುದು: ಗೌರೀದೇವಿಯು ಗಯ್ಯಾಳಿಯೆಂದು ಎಷ್ಟು ಹೆಸರು ಪಡೆದಿದ್ದಳೋ ಅದಕ್ಕಿಂತ ಶತಾಧಿಕವಾಗಿ ಪಾತಿವ್ರತ್ಯದಲ್ಲಿಯೂ . . . ಪ್ರಸಿದ್ಧಿಯನ್ನು ಪಡೆದು ಪತಿಯೊಡನೆ ಸುಖವಾಗಿದ್ದಳು (ಮಂಜುವಾ. ೬೫); ವಾಚಕರಿಗೆ ಹೇಗೋ ಅದಕ್ಕೆ ಶತಾಧಿಕವಾಗಿ ಪ್ರೇಕ್ಷಕರಿಗೂ ರಸ ದೊರಕಲಿ (ವೀರಯೋ. VII. ಮುನ್ನುಡಿ). [ಸಂ.]

ಶತಾಧ್ವರಿ (ನಾ). ನೂರುಯಾಗಗಳನ್ನು ಮಾಡಿದವನು; ಇಂದ್ರ: ಆ ಧ್ವನಿಗಳ್ ನಿಜನಿಜಕರ್ಣಾಧ್ವಗಮೆನೆ ಜೈನಪೂಜೆಗಿತರೇಂದ್ರರ್ ನಾನಾಧ್ವಜಿನಿವೆರಸು ನೆರೆದು ಶತಾಧ್ವರಿ ಸೌಧರ್ಮನಲ್ಲಿಗಂದೇಟ್ಟಂದರ್ (ಮಲ್ಲಿಪು. ೧೪-೧೦೯). [ಸಂ. ಶತಾಧ್ವರಿನ್]

ಶತಾನಂದ (ನಾ). ೧. ಬ್ರಹ್ಮ: "ಬ್ರಹ್ಮಾ . . . ಶತಾನಂದಃ, ಶಂಭುಃ . . . ಕಮಲಾಸನಃ - ಈ ೨೦ ಬ್ರಹ್ಮನ ಪೆಸರ್" (ಹಲಾಯು. ೨-೬); ಹರಿ ಸಿರಿದೇವಿಯ ಚರಣರಜವನ್ನು . . . ಸ್ಮರಿಸಿಕೊಳ್ಳುತ ಮೈಮರೆವ ಶತಾನಂದ ಜಗವ ಪುಟ್ಟಿಸುವ ಮಹಧೀರ (ಎದಾಕೃ. ೭೦-೧). ೨. ಒಬ್ಬ ಋಷಿಯ ಹೆಸರು; ಗೌತಮ ಮತ್ತು ಅಹಲ್ಯೆಯರ ಮಗ: ಸುಮೇಘಪರ್ವತದಲ್ಲಿ ಅತ್ರಿ . . . ಶತಾನಂದ . . . ಉಪಮನ್ಯು ಮೊದಲಾದಷ್ಟಾಶೀತಿಸಹಸ್ರಋಷೀಶ್ವರರ್ಗನಂತಾಶ್ರಯಂಗಳುಂ (ವಿವೇಕ. ೧೭೪). ೩. ವಿಷ್ಣು. ೪. ವಿಷ್ಣುವಿನ ರಥ. [ಸಂ.]

ಶತಾಪರಾಧ (ನಾ). ಅನೇಕ ಅಪರಾಧ, — ತಪ್ಪು: ಮಱೆ ದೇವ ಮದೀಯ ಶತಾಪರಾಧಮಂ (ಶಬಶಂ. ೫-೧೯); ಶತಾಪರಾಧ ಮಾಡಿದ ಪರಮಪಾಪಿಯ ವಿಷಯದಲ್ಲೂ ಇಂಥಾ ಕೆಲಸ . . . ಸಂಕಟಕರ (ವೀರಯೋ. ೧೫). [ಸಂ.]

ಶತಾಬ್ದ (ನಾ). ನೂರುವರ್ಷಗಳ ಕಾಲಮಾನ; ಶತಮಾನ: ಪೆಸರಸವಗ್ರಸಂಧಿಗೆ ಕನಿಷ್ಠಿಕೆ ಮಿಕ್ಕಿರೆ ದಲ್ ಶತಾಬ್ದಮೆಂಗೆ . . . ನರಂಗೆ ಯಥೋಚಿತಾಯು(ವ)ರ್ಷಂ (ಲೋಕೋಪ. ೧೧-೧೮); ಕ್ರಿಸ್ತಪೂರ್ವ ಎರಡು ಮೂರನೆಯ ಶತಾಬ್ದದಿಂದ ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿಯೇ ಕೆಲವು ದೇವಾಲಯಗಳು ಬಹಳ ಪ್ರಸಿದ್ಧವಾಗಿದ್ದವೆಂದು ಹೇಳಬಹುದು (ಹೊಯ್ಸವಾ. ೧). [ಸಂ.]

ಶತಾಬ್ದಿ (ನಾ). = ಶತಾಬ್ದ: ಇಪ್ಪತ್ತೊಂದನೆಯ ಶತಾಬ್ದಿಗೆ ಕಾಲಿಡುತ್ತಿದ್ದೇವೆ (ರೂಢಿ). [< ಸಂ. ಶತಾಬ್ದ]

ಶತಾಯು (ನಾ). ೧. ನೂರುವರ್ಷಗಳ ಆಯುಷ್ಯ: ಈ ಲೌಕಿಕರಾದ ಮನುಷ್ಯರ ಒಂದು ಮಾಸವೇ ಪಿತೃಗಳಿಗೊಂದುದಿನವಹುದಾ ದಿನ ಮುನ್ನೂಱುವತ್ತಾದೊಡೊಂದು ವರ್ಷವಹುದಾ ಕ್ರಮದಿಂದವರ್ಗೆ ಶತಾಯುವೆಂದಱಿಯಲ್ವೇಳ್ಕುಂ (ವಿವೇಕ. ೨೬೪). ೨. ನೂರುವರ್ಷ ಆಯುಸ್ಸುಳ್ಳವನು: ಶತಾಯುಗಳಾಗಿ ತುಂಬುಜೀವನ ನಡೆಸಿ ೧೯೬೨ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಅವರು ನಿಧನರಾದರು (ಕಪಪು. ೬-೧೨೫). [ಸಂ.]

ಶತಾರ (ನಾ). ೧. ಇಂದ್ರನ ಆಯುಧ; ವಜ್ರಾಯುಧ. ೨. [ಜೈನ] ಅರವತ್ತುಮೂರು ಇಂದ್ರಕಗಳಲ್ಲಿ ಒಂದು: ದಿವಮಂತಂತೆ ಶತಾರಮಗ್ರಿಮ ಸಹಸ್ರಾರಂ ಸಹಸ್ರಾರಮಪ್ರವಿಲಕ್ಷ್ಯಂ ದಿನಪೋಪಮಾನವಳಯಂ ಜಾಜ್ವಲ್ಯಮಾನಂ (ಶಾಂತಿಪು. ೧೦-೧೧೫); ಓರಂತೆ ತೊಳಗಿ ಪೊಳೆವ ಶತಾರ ಸಹಸ್ರಾರಕಲ್ಪಯುಗಂಗಳ್ ಶೋಭಾರಮಣೀಯಂಗಳ್ (ಸುಕುಮಾ. ೧೧-೬೬). [ಸಂ.]

ಶತಾರಕಲ್ಪ (ನಾ). = ಶತಾರ ೨: ವಿಶಾಖಭೂತಿಯೆ ಪುಟ್ಟಿದಾ ಶತಾರ ಕಲ್ಪದೊಳ್ ಸಾಮಾಜಿಕದೇವನಾಗಿ ಪುಟ್ಟಿ (ಶಾಂತಿಪು. ೭-೬೧ ವ); ತಪಂಗೆಯ್ದು ಶತಾರಕಲ್ಪದೊಳ್ ಪುಟ್ಟಿಬಂದೀಗಳಾ ಭಾವನನುಂ ಪೂರ್ಣಘನನಾದಂ (ಪಂರಾಮಾ. ೧೦-೯೩ ವ). [ಸಂ.]

ಶತಾರೇಂದ್ರ (ನಾ). [ಜೈನ] ಶತಾರಕಲ್ಪದಲ್ಲಿ ಹುಟ್ಟಿದವನು; ಇಂದ್ರ: ಆ ಕಲ್ಪಂಗಳೆರಡಕ್ಕಂ ಶತಾರೇಂದ್ರನಿಂದ್ರನಕ್ಕುಂ (ಸುಕುಮಾ. ೧೧-೬೬ ವ). [ಸಂ.]

ಶತಾವರಿ (ನಾ). ೧. ಶತಮೂಲಿ ಗಿಡ: ಸಿಂಗರವೆತ್ತ ಶತಾವರಿ ಸಹದೇವಿ ಕಂಗೊಳಿಸುವ ವರ್ಷಾಭೂ (ಸಾಳ್ವಸಾಂ. ೨೦); ಶತಾವರಿಯ ಅಂಕುರುಗಳ ಕಹಿ (ಅಷ್ಟಾಂಗ. ೧೩೯-೯೭). ೨. ಇಂದ್ರಾಣಿ; ಶಚೀದೇವಿ. [ಸಂ. ಶತಾವರೀ]

ಶತೃಇಂತ (ನಾ). [ವ್ಯಾಕ] 'ಅತ್' ಎಂಬ ವರ್ತಮಾನಕೃದಂತಪ್ರತ್ಯಯವುಳ್ಳ ಪದ: ವಿದಿತಮೆನಿಷ್ಟವ್ಯಯಮುಂ ತ್ಯದಾದಿಯುಂ ಶತೃಇಂತಮುಂ ಸಂಸ್ಕೃತದೊಳ್ ಪದವಿಧಿಯಂ ನೆಱೆ ತಳೆದಲ್ಲದೆ ಕನ್ನಡದಲ್ಲಿ ಲಿಂಗಮಾಗವು ನಿಜದಿಂ . . . ಕ್ವಣತ್, ಝಣತ್, ಭ್ರಮತ್ (ಶಮದ. ೮೧). [ಸಂ.]

ಶತ್ರ (ನಾ). ಉಚಿತವಾಗಿ ವಸತಿ ಹಾಗೂ ಊಟವನ್ನು ಒದಗಿಸುವ ಸ್ಥಳ; ಧರ್ಮಚತ್ರ: ಪೃಥಿವಿಗಂಗರಸಂ . . . ಶತ್ರಕ್ಕಂ ಮೂವತ್ತು ಗದ್ಯಾಣ ಪೊನ್ನಂ ಕೊಟ್ಟಂ (ಮೈಆರಿ. ೧೯೩೫, ೧೫-೬; ೩ನೆಯ ಶತ?); ಸಾರಂಗೇಶ್ವರದೇವರ್ಗ್ಗಮಲ್ಲಿಯ ಶತ್ರಕ್ಕಂ ಸರ್ವ್ವನಮಶ್ಯಮಾಗೆ ಬಿಟ್ಟ ಸಿರಿಪುರಂ (ಸೌಇಇ. IX - i, ೧೧೯-೩೩; 1057). 'ಚತ್ರ' ಪರಾ. [IP ಇದು 'ಸತ್ರ' ಎಂಬುದರ ಅಪಲಿಖಿತವಿರಬಹುದು]

ಶತ್ರಸಾಲೆ (ನಾ). ಚತ್ರ; ಧರ್ಮಶಾಲೆ: ತ[ನ್ನ]ಮುನ್ನೆ ಪಡಿಸಲಿಸಿ ಮಾಡಿಸಿದ ವಿಷ್ಣು ಗೃಹದ ಪ್ರತಿಬದ್ಧಮಾಗೆ ಶತ್ರಸಾಲೆಯಂ ಮಾಡಿಸಿ (ಸೌಇಇ. XI- i, ೮೪-೧೪; 1049). [IP ಇದು 'ಸತ್ರಶಾಲೆ' ಎಂಬುದರ ಅಪಲಿಖಿತವಿರಬಹುದು]

ಶತ್ರು (ನಾ). ೧. ಹಗೆತನವುಳ್ಳವನು; ವೈರಿ: ಎನ್ನ ಶತ್ರುವದೊಂದು ತಾಣದೊಳ್ ಪುಟ್ಟಿರ್ದಂ ಆತನಂ . . . ಕೊಂದಿಕ್ಕುವುದೆಂದು ಬೆಸಸಿದಂ (ಜಗವಿ. ೩-೨೨ ವ). ೨. ಹಗೆಯಾದ ನೆರೆಯ ಅರಸ; ನೆರೆಹೊರೆಯ ವೈರಿರಾಜ: ಶತ್ರುಗಳುಮನಭ್ಯಂತರಶತ್ರುಗಳಾಱುಮನದಿರ್ಪಿ ಗೆಲ್ದುದಱಿಂದಂ ಶತ್ರುಂತಪನೆನಿಸಿದ ಜಿತಶತ್ರುಗೆ ಜಿತಶತ್ರುನಾಮಮಾಯ್ತನ್ವರ್ಥಂ (ಅಜಿಪು. ೨-೪೯). [ಸಂ.]

ಶತ್ರುಂತಪ (ನಾ). ವೈರಿಗಳಿಗೆ ದುಃಖವನ್ನುಂಟುಮಾಡುವವನು: ಶತ್ರುಗಳಾಱುಮನದಿರ್ಪಿ ಗೆಲ್ದುದಱಿಂದಂ ಶತ್ರುಂತಪನೆನಿಸಿದ ಜಿತಶತ್ರುಗೆ ಜಿತಶತ್ರುನಾಮಮಾಯ್ತನ್ವರ್ಥಂ (ಅಜಿಪು. ೨-೪೯). [ಸಂ.]

ಶತ್ರುಂದಮ (ನಾ). ಹಗೆಗಳನ್ನು ನಾಶಗೊಳಿಸಿದವನು : ಇಂದಗಿ ಸಾಧಾರಣ ಶರಸಂದೋಹದಿನೆಚ್ಚು ಕಾದಲಣಮಾಱದೆ ಶತ್ರುಂದಮನೊಳ್ ಲಕ್ಷ್ಮಣನೊಳ್ ತಂದಂ ದಿವ್ಯಾಸ್ತ್ರಗರ್ಭಶರಧಿಗೆ ಕೈಯಂ (ಪಂರಾಮಾ. ೧೪-೧೯). [ಸಂ.]

ಶತ್ರುಘ್ನ (ನಾ). ೧. ಹಗೆಗಳನ್ನು ಸಂಹರಿಸುವವನು. ೨. ಶ್ರೀರಾಮನ ತಮ್ಮ; ದಶರಥನ ಕಿರಿಯ ಮಗ: ಶುಭದಿನಮುಹೂರ್ತದೊಳ್ ಸುಮಿತ್ರೆ ಲಕ್ಷ್ಮಣನಂ ಕೈಕೆ ಭರತನಂ ಸುಪ್ರಭೆ ಶತ್ರುಘ್ನನಂ ಪೆಱೆದುದುಂ (ಪಂರಾಮಾ. ೩-೧೩೩ ವ) ; ಲಕ್ಷ್ಮಣ ಭರತ ಶತ್ರುಘ್ನರೊಡಗೂಡಿ ತಳೆದು ಕೌಶಿಕನ ಮಖಮಂ ಕಾಯ್ದು (ಕೃಷ್ಣಾಭಿ. ೧೮-೨). [ಸಂ.]

ಶತ್ರುತ್ವ (ನಾ). ಹಗೆತನ; ದ್ವೇಷ: ಉಳಿದವರ ಶತ್ರುತ್ವಕ್ಕಾಗಲೀ, ಮಿತ್ರತ್ವಕ್ಕಾಗಲೀ ಬೆಲೆಯಿಲ್ಲ (ಅಕ್ಕಾವ. ೨೪) ; ನಿನ್ನಂತವನ ಶತ್ರುತ್ವವನ್ನು ಗಳಿಸಿ ಕಟ್ಟಿಕೊಂಡಿರುವನು (ಸಂಜೀವಿ. ೮೫). [ಸಂ.]

ಶತ್ರುದಲ್ಲಣ (ನಾ). ಹಗೆಗಳನ್ನು ತಲ್ಲಣಗೊಳಿಸುವವನು; ದ್ವೇಷಿಗಳನ್ನು ಹೆದರಿಸುವವನು: ಪರನಾರಿಸೋದರನು ವರ ಶತ್ರುದಲ್ಲಣನು ಕರ ಪಾಪಭಯವ ಹೊರೆವ ಗುಣಿಯಹ ನೃಪಗೆ ಸ್ಥಿರವಿಹಳು ಲಕ್ಷ್ಮಿ (ಸರ್ವಜ್ಞ. ೭೨೬). [ಶತ್ರು + ತಲ್ಲಣ (< ತಲ್ಲಱ)]

ಶತ್ರುಸಂಘಾತ (ನಾ). ಹಗೆಗಳ ಸಮುದಾಯ ; ವೈರಿಗಳ ಗುಂಪು: ಶತ್ರು ಸಂಘಾತಮಿದಿರ್ಚಿ ದೀಪ್ತಿಗಿದಿರಾದ ಪತಂಗದ ಮಾಳೆಯಾದುದುಂ (ಪುಷ್ಪಪು. ೩-೧೯). [ಸಂ.]

ಶತ್ರುಹ (ನಾ). ೧. = ಶತ್ರುಘ್ನ ೧. ೨. = ಶತ್ರುಘ್ನ ೨: ಸುಮಿತ್ರೆಯಣುಗರ ನೇಮದಲಿ ಲಕ್ಷ್ಮಣನು ಶತ್ರುಹ ನಾಮವಿಟ್ಟಾದರದಿ ಸಲಹಿದ ನಿಜಕುಮಾರಕರ (ಕೌಶಿರಾ. ೧-೭೦); ಶತ್ರುಹಂ - ಅಣ್ಣಯ್ಯ! ದೇವಿ ಸಾಕ್ಷಾಲ್ಲಕ್ಷ್ಮೀದೇವಿಯೆಂಬುದಂ ನೀನಱಿಯೆಯ? (ರಾಮಾಶ್ವ. ೨೫-೧೨). [ಸಂ.]

ಶನಿ (ನಾ). ೧. ಸೂರ್ಯನ ಮಗ ; ☿ ಈತನ ಬಣ್ಣ ಕಪ್ಪು. ಕೃಷ್ಣವರ್ಣದ ವಸ್ತ್ರವನ್ನು ಧರಿಸಿದ ಈತನು ಸಾಮಾನ್ಯವಾಗಿ ಕೆಡುಕನ್ನುಂಟುಮಾಡುವನೆಂದು ನಂಬಲಾಗಿದೆ: ಮೂಱು ತಿಂಗಳಾಯ್ತವಚಱನಿಂತು ನಿಂದನೊಳನೇ ಶನಿ ನಿಲ್ವವೊಲಿಲ್ಲಿ ಪಾಱಿಗಿನ್ನವರೆಗಮಿರ್ದು (ಆದಿಪು. ೯-೮೯) ; ತ್ರಿಪೃಷ್ಠನರಾತಿಧ್ವ[ಜಿ]ನೀಸಮಸ್ತಮದ ಸಾಮಜಕುಲನಗಕುಲಕೆ ಶನಿಯುಮಶನಿಯುಮಾದಂ (ಶಾಂತಿಪು. ೫-೨೪) ; ದಿನ ದಿನ ಶನಿ ಕಾಡಿದರೆ ಬಾಳೋದು ಯಾವಾಗ? (ಗಾದೆ). ೨. ಶಿವನ ಹೆಸರುಗಳಲ್ಲಿ ಒಂದು. ೩. ಶನಿವಾರ. ೪. ಹಾವು ; ಸರ್ಪ: "ಉರಗಂ . . . ಶನಿ ಗೂಢಪಾದ್ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ" (ಪಸ್ತಕೋ. ೧೯-೭). ೫. [ಜ್ಯೋತಿ] ನವಗ್ರಹಗಳಲ್ಲಿ ಒಂದು: ಶನಿ ರೋಹಿಣಿಯೊಳ್ ಕುಜನಶ್ವಿನಿಯೊಳ್ ಗುರು ಪುಷ್ಯದೊಳ್ . . . ಇರೆ ಸಿದ್ಧದಿನಂ (ಲೂಕೋಪ. ೧-೨೦) ; ಶನಿ ಘಟ ಮೃಗಕ್ಕೆ ಗುರು ಋಷ ಧನುಗೆ ಬುಧಂ ಮಿಥುನ ವಧುಗೆ ಶಶಿ ಕರ್ಕಿಗೆ ಭೌಮನಜಾಳಿಗೆ ರವಿ ಹರಿಗುಶನನುಕ್ಷತೌಳಿಗೆ ತದಂಶ ಕಕ್ಕಮಧೀಶರ್ (ಜಾತಕಿ. ೧-೨೫). [ಸಂ.]

ಶನಿಕಾಟ (ನಾ). ಶನಿದೇವತೆಯಿಂದುಂಟಾಗಿರುವುದೆಂದು ನಂಬಲಾದ ಹಿಂಸೆ: ಯಾವ ಶನಿಕಾಟದಿಂದ ಅವನು ಹೀಗಾದನೊ (ಸಂಸ್ಕಾರ. ೨೨). [ಶನಿ + ಕಾಟ]

ಶನಿಗ್ರಹ (ನಾ). = ಶನಿ ೫: ಸೂರ್ಯನನ್ನು ಒಂದು ಪ್ರದಕ್ಷಿಣೆ ಹಾಕುವುದಕ್ಕೆ ಶನಿಗ್ರಹಕ್ಕೆ ೨೯ ವರ್ಷಗಳಿಗಿಂತ ಹೆಚ್ಚು ಬೇಕಾಗುತ್ತದೆ (ಆಕಾಶ. ೨೪). 'ನವಗ್ರಹ' ಪರಾ. [ಸಂ.]

ಶನಿಪ್ರದೋಷ (ನಾ). ಶನಿವಾರದಂದು ಬೀಳುವ ಶುಕ್ಲಪಕ್ಷದ ತ್ರಯೋದಶಿಯ ಸಂಜೆಯಲ್ಲಿ ಮಾಡುವ ಶಿವಪೂಜೆ: ಶನಿಪ್ರದೋಷದಿ ವೋತು ಸಾವಿರ ಬಿಲ್ವಪತ್ರಾರಾಧನದ ಫಲವ ಈ ತತುಕ್ಷಣ ಕೊಟ್ಟಡೆ (ಕೌಶಿರಾ. ೧-೭೬). [ಸಂ.]

ಶನಿಬಲ (ನಾ). [ಜ್ಯೋತಿ] ನಿರ್ದಿಷ್ಟಸಮಯದಲ್ಲಿ ಶುಭಫಲವನ್ನು ಕೊಡಲು ಶನಿಗ್ರಹಕ್ಕೆ ಇರುವ ಶಕ್ತಿ: ಗುರುಬಲ ಶನಿಬಲಬಿರವಂ ತರದಿಂದಂ ಕೇಳ್ದು ನೋಡಿ ನಡೆದರ್ ಮೊನೆಗಂ (ಹಮ್ಮೀರ. ೩-೨). [ಸಂ.]

ಶನಿವಾರ (ನಾ). ವಾರದ ಏಳುದಿನಗಳಲ್ಲಿ ಒಂದು ; ಶನಿಯು ಅಧಿಪತಿಯಾಗಿರುವ ದಿವಸ: ಒಂದು ಶನಿವಾರ ಮೂರನೆಯ ತರಗತಿಯ ಮಕ್ಕಳು ಶಾಲೆಗೆ ಬಂದರು (ಕಪಪು. ೩-೩೨) ; ಮೂರನೆಯ ದಿನ ಶನಿವಾರವಾಗಿದ್ದುರಿಂದ . . . ಶಾಲೆಯಿರಲಿಲ್ಲ (ಕನಸಂ. ೨೨೨).

ಶನಿವಾರ ಸಿದ್ಧಿ = ಶನಿವಾರವು ಶುಭಸೂಚಕವೆಂದು ಭಾವಿಸಿರುವವನು; ಒಂದು ಬಿರುದು: ಚಾಳುಕ್ಯರಾಜ್ಯರಾಜ್ಯಾಭಿವೃದ್ಧಿ ಶನಿವಾರಸಿದ್ಧಿ ಶ್ರೀಮನ್ಮಹಾ ಮಣ್ಡಳೇಶ್ವರ ಆಹವಮಲ್ಲ ಪೆರ್ಮ್ಮಾನಡಿಗಳು (ಕಇಅ. ೪೫-೩-೧೯; 1084); ಶನಿವಾರ ಸಿದ್ಧಿ ಸದ್ಧರ್ಮ್ಮಬುದ್ಧಿ ಗಿರಿದುರ್ಗ್ಗಮಲ್ಲ ರಿಪುಹೃದಯಸೆಲ್ಲ (ಎಕ. II, ೫೭೧-೨೩; 1183). [ಸಂ.]

ಶನೀಶ್ಚರ (ನಾ). = ಶನಿ ೧ : ಸಾಮಾನ್ಯರ ಬಾಯಿಯಲ್ಲಿ 'ಶನೈಶ್ಚರ' ಹೋಗಿ 'ಶನೀಶ್ಚರ' ಆಗಿದೆ (ಜ್ಯೋತಿರ್ವಿ. ೧೩೭) ; ರಾಮೇಶ್ವರಕ್ಕೆ ಹೋದರೂ ಶನೀಶ್ಚರ ಬಿಡ (ಗಾದೆ). [< ಸಂ. ಶನೈಶ್ಚರ]

ಶನೈಶ್ಚರ (ಗು). ೧. ನಿಧಾನವಾಗಿ ಚಲಿಸುವ; ಮಂದಗತಿಯಲ್ಲಿ ಸಾಗುವ. (ನಾ). ೨. = ಶನಿ ೧: "ಅಸಿತಃ . . . ಶನೈಶ್ಚರಃ, ಶೌರಿಃ - ಈ ೬ ಶನಿಯ ಪೆಸರ್" (ಹಲಾಯು. ೯-೪೯) ; ರವಿ ಶನೈಶ್ಚರ ರಾಹು ಬುಧ ಭಾರ್ಗವರು ಕರ್ಣನ ದೆಸೆಯಲಾಮಿಕ್ಕವರು ಪಾರ್ಥನ ದೆಸೆಯಲಾಯಿತು (ಅಮ್ಮಾಕ. ೨೨-೬). ೩. [ಜ್ಯೋತಿ] ನಿಧಾನವಾಗಿ ಚಲಿಸುವ ಗ್ರಹ; ಶನಿಗ್ರಹ: "ಶನೈಶ್ಚರ" ಎಂದರೆ ಮೆಲ್ಲನ ನಡೆಯುವವನು (ಜ್ಯೋತಿರ್ವಿ. ೧೩೭). [ಸಂ.]

ಶಪಥ (ನಾ). ೧. ಶಾಪ. ೨. ಆಣೆ ; ಭಾಷೆ ; ಪ್ರತಿಜ್ಞೆ : "ಶಪಥಂ ಸೂರುಳ್" (ಪಸ್ತಕೋ. ೮೦-೩೪) ; ಅವನಿಯನೆಯ್ದೆ ಕೊಂಡಡಂತದನೊಡಂಬಟ್ಟು ಶಪಥಕ್ಕೆ ಮೆಯ್ಗೊಟ್ಟನವನಲ್ಲಿ ಹುಸಿ ಹುಟ್ಟದಿನ್ನಕಟ (ಹಚಕಾ. ೮-೬೧); ಶಪಥವುಂಟೆ ದ್ಯೂತವರ್ತಿಗೆ (ಕೌಶಿರಾ. ೧೯-೨೧). [ಸಂ.]

ಶಪಥಂಗೆಯ್ (ಕ್ರಿ). ಆಣೆಯನ್ನು ಮಾಡು; ಪ್ರತಿಜ್ಞೆಮಾಡು : ಶಪಥಂ ಗೆಯ್ದಲ್ಲದೆಂತುಂ ಬಿಡನೆನುತಧಟಂದಿರ್ವರಂ ತೀರ್ಥವಾರಿ ಸ್ನಪನಂಗೆಯ್ಸುತ್ತೆ (ವೃಷವಿ. ೧೬-೭೮). [ಶಪಥ + ಕೆಯ್]

ಶಪನ (ನಾ). ೧. ಬಯ್ಗುಳು; ನಿಂದೆ: ತೀವಿದುದು ಶಪನಶತಂ . . . ಅದಱೂಡನೆ ಚೈದ್ಯ ನಿನ್ನಾಯುಷ್ಯಂ (ಜಗವಿ. ೧೭-೪೮). ೨. ಆಣೆ ; ಪ್ರಮಾಣ ; ಭಾಷೆ. [ಸಂ.]

ಶಪಿತ (ಗು). ೧. ಶಾಪಗ್ರಸ್ತವಾದ. (ನಾ). ೨. ಶಾಪಗ್ರಸ್ತನಾದವನು; ಶಾಪಕ್ಕೊಳಗಾದವನು: ಗುರುವಿನಿಂದ ಶಪಿತನಾದ ನೀನು ತಿರಿಗಿ ತಾತನಂ ನಮಸ್ಕರಿಸಿ (ಕಜಪಾ. ೧೮-೮). [ಸಂ.]

ಶಪಿಯಿಸು 'ಶಪಿಸು' ನೋ.

ಶಪಿಸು, ಶಪಿಯಿಸು (ಕ್ರಿ). ೧. ಶಾಪವನ್ನು ಕೊಡು : ಈ ಅಳೀಕಕಾಮಿಯಾನುಸಿರ್ದಂತೆ ಗಿಳಿಯಾಗಿ ಪುಟ್ಟುಗೆಂದು ಶಪಿಸಲೊಡನೆ (ಕಾದಂಉ. ೫೭೪) ; ಬನಕೆ ಬಂದನಗೆ ನಮಿಸದೆ ಹೋದನೆಂದು ನೆಟ್ಟನೆ ಶಪಿಸದಿರನು (ಹಚಕಾ. ೬-೫೫); ಕಣ್ವಮುನಿ ತಾ ಮುನಿದನಾದರೆ ಶಪಿಸುವನು (ಕುಮಾಅ. ೩-೧೫). ೨. ನಿಂದಿಸು; ತೆಗಳು : ಪೀಡಿತಗ್ರಾಮಶ್ಯಾಮಾಂಗಿ ಕೋಪಕ್ಕಳುತೆ ಬೈಯುತ್ತೆ ಶಪಿಸುತ್ತೆ ತೊಳಲುವಳ್ (ಚಿತ್ರಾಂಗ. ೫೩-೧೪೫೬). **ಶಪಿಯಿಸು** : ೧. ಪರಮಾರ್ಥಂ ನಿಜಜನಕರ್ಪರಸಿದ ಪರಕೆಗಳು ಬಯ್ದು ಬಯ್ಗುಳ್ಕಳ್ಳಿರದೆಯ್ದುಗುಮದಱಿಂದಂತಿರೆ ಶಪಿಯಿಸಲಾಗದು (ಕಾದಂಉ. ೪೮೭). [ಶಪನ + - ಇಸು]

ಶಪ್ಪ (ನಾ). ಗುಹ್ಯೇಂದ್ರಿಯದ ಮೇಲಿನ ಕೂದಲು; ಶಾಟ: ಕೊಟ್ಟರೆ ನನ್ನಪ್ಪ ಕೊಡದಿದ್ದರೆ ಶಪ್ಪ (ಗಾದೆ). [< ಸಂ. ಶಪ್ಪ]

ಶಫ (ನಾ). (ಹಸು ಮೊದಲಾದ) ಪ್ರಾಣಿಗಳ ಕಾಲಿನ ಗೊರಸು, – ಕೊಳಗು: ರಾಸಭರಾಕ್ಷಸ . . . ಪಾತಾಳತಳದ ಮುಚ್ಚುಳನೊಡೆದು ಕಳೆದಪುದೆಂಬಂತೆ ಭೂತಳಮನಪ್ಪಳಿಸಿ ಪೊಯ್ದ ನಿಷ್ಠುರಶಫಟಂಕಮುಂ ಭಯಂಕರಮಪ್ಪಿನಂ ಬಂದು (ಜಗವಿ. ೪-೪೦ ವ). [ಸಂ.]

ಶಫರ (ನಾ). ೧. ಹೊಳಪುಳ್ಳ ಒಂದು ಬಗೆಯ ಸಣ್ಣ ಮೀನು. ೨. ಮೀನು; ಮತ್ಸ್ಯ : ಅಖಿಲಶಫರಪದಾತ್ಯುತ್ಕರಮುಗ್ರಗ್ರಾಹರಥಂ ಭರತಂಗಿತ್ತುದು ಪಯೋಧಿಬಳ ವಿಳಸನಮಂ (ಆದಿಪು. ೧೨-೭೮); ಮನೋಜರಾಜವಿಜಯಕೇತನಶಫರ ಸಂಚಾರಮಿಲ್ಲದ ಸರೋವರಂಗಳಿಲ್ಲ (ಪಂರಾಮಾ. ೧-೧೦೭ ವ); ಮಡುಗಟ್ಟಿದ ಮುಖರಸದೊಳ್ತೇಂಕಿ ತೇಲ್ವ ಚಪಲಶಫರಂಗಳಿಂಬಂತೆ ಚಂಚಲಾಕ್ಷಿಗಳೆಸೆಯೆ (ರಾಜಶೇ. ೫-೧೯ ವ). [ಸಂ.]

ಶಫರಲೋಚನೆ (ನಾ). ಮೀನಿನಂತೆ ಕಣ್ಣುಗಳುಳ್ಳವಳು ; ಮೀನಾಕ್ಷಿ: ಕೇಳ್ವನಜಾನನೇ ಶಫರಲೋಚನೇ . . . ಈಯ್ದುಕೊಂಡುವಳಿಗಳ್ ಸುಮನೋ ಮಕರಂದಗಂಧಮಂ (ಕಬಿಪ್ರ. ೬-೬೯). [ಸಂ. ಶಫರಲೋಚನಾ]

ಶಫರಿ (ನಾ). ೧. = ಶಫರ ೧: ತರಳನಯನವೂ ಶಫರಿಗಳೂ ತಾವರೆಯೂ ಮುಖವೋ ತುಂಬಿಗಳೂ ನಿಟ್ಟೆಗುರುಳುಗಳೂ (ಉತ್ಪಾಅ. ೧೩-೧೮). ೨. ಹೆಣ್ಣುಮೀನು: "ಪ್ರೋಷ್ಠಾ, ಶಫರೀ - ಈ ೨ ಪ(ಹ)ಣ್‌ಮೀನ್" (ಪಲಾಯು. ೧೦೮-೩೬). ೩. [ಜ್ಯೋತಿ] ಕ್ಷೀಣಕಾಂತಿಯಿಂದ ಕೂಡಿದ ಒಂದು ನಕ್ಷತ್ರಪುಂಜ : ಶಫರಿಯ ಗ್ರೀಕ್ ಹೆಸರು ವೋಲನ್ಸ್ - ಹಾರುವ ಮೀನು (ನಕ್ಷತ್ರ. ೭೫). [ಸಂ. ಶಫರೀ]

ಶಬ 'ಸಬ' ನೋ.

ಶಬರ (ನಾ). ೧. ಬೇಡ ; ಕಿರಾತ : ಒರ್ವ ಶಬರ ಶಿಬಿರಾಧಿನಾಯಕಂ ಬೇಂಟೆವೋಗಿ ಪಕ್ಷಿಗಳನಲ್ಲಿಯುಂ ಪಡಯದೆ . . . ಕಂಪಿತಶರೀರನಾಗಿ ಬರುತ್ತುಂ (ಪಂಚತಂ. ೨೪೫-೫); ಶಬರರೊಳೊಂದಿವೂರನಿಟ್ಟೆವಲ್ಲಿ ನಿಶಾತಶತಾಸ್ತ್ರಘಾತದಿಂದವಿರಳರಕ್ತಧಾರೆ . . . ಪೂಱಪೂಣ್ಮೆ ಜೀವನಂ ತವುತರೆ (ಪಾರ್ಶ್ವಪು. ೪-೭೩). ೨. ಶಿವ. ೩. ನೀರು. ೪. ಮೀಮಾಂಸಾಶಾಸ್ತ್ರದ ಜೈಮಿನೀಸೂತ್ರಗಳ ಭಾಷ್ಯಕಾರ : ಜೈಮಿನಿ, ಶಬರ, ಪ್ರಭಾಕರ, ಕುಮಾರಿಲ ಮೊದಲಾದವರು ನಿರೀಶ್ವರವಾದಿಗಳೆಂದು ಪ್ರಸಿದ್ಧಿಯಿರುವುದು (ಒಂದಸಾ. ೧೫೩). 'ಶಬರೋಕ್ತಿ' ಪರಾ. [ಸಂ.]

ಶಬರಪಳ್ಳಿ (ನಾ). ಬೇಡರು ವಾಸಿಸುವ ಹಳ್ಳಿ: "ಶಬರಪಳ್ಳಿ ಪಕ್ಕಣಮನಿಕ್ಕುಂ" (ಮಂಗರಾ. ೫೫-೧೦). [ಶಬರ + ಪಳ್ಳಿ]

ಶಬರಾಧಿಪ (ನಾ). ಬೇಡರ ಒಡೆಯ; ಮುಖಂಡ : "ಶಬರಾಧಿಪರೆಲ್ಲರ್ ನೆರೆದು ಬಂದು . . . ಕವರಲ್ಕೆ (ದಶಕು. ೧೦-೧೦). [ಸಂ.]

ಶಬರಿ (ನಾ). ೧. ಬೇಡರ ಹಂಗಸು; ಬೇಡಿತಿ: ಇದಿರೊಳ್ ಗರ್ಜಿಸಿ ಪುಲಿ ನಿಲೆ ಬೆದಱೆ ಕರಂ ಶಬರಿ ಬರಿಯನಪ್ಪಲೊಡಂ (ಚಂದ್ರಪ್ರ. ೫-೫೯) ; ಎಸೆದುದಾ ಗಿರಿ . . . ಕಾಡುಗಳ ಬೀಡುಗಳ ಶಬರಿಯರ ಸಂಕುಲದೊಳು (ಚೈಮಿಭಾ. ೧೦-೩) ; ರೂಪಮದೋನ್ಮತ್ತ ಶಬರಿಯ ಸುಖದೊಳು ಸಂದವು ಬಹಳ ದಿನಗಳು (ಗಾಥಾಸ. ೨-೧೯). ೨. ರಾಮನ ಭಕ್ತೆಯಾದ ಒಬ್ಬ ಬೇಡರ ತಪಸ್ವಿನಿ : ರಾಕ್ಷಸಕುಲಾಂತಕರ್ಕೆದಿರು ಶಬರಿಯ ನಿಜಾಶ್ರಮವ (ತೊರರಾ. ೩-೧೨-೨೬) ; ತಾಳಲಾರದ ಶೋಕಭಾರದಿಂ ದಾಶರಥಿ ಏಳಲಾರದೆ ಶಯ್ಯೆಯಿಂ ಶಬರಿಶುಶ್ರೂಷೆಯಂ ಬೇಳ್ಪತಿಥಿಯಾದನ್ (ಶ್ರೀರಾಮಾ. ೨೬೪-೩೦೧). [ಸಂ. ಶಬರೀ]

ಶಬರೋಕ್ತಿ (ನಾ). ೧. ಬೇಡನ ಮಾತು; ಕಿರಾತನ ನುಡಿ. ೨. ಜೈಮಿನೀಯ ಸೂತ್ರಗಳಿಗೆ ಭಾಷ್ಯವನ್ನು ಬರೆದ ಶಬರಸ್ವಾಮಿಯ ಹೇಳಿಕೆ. ೧, ೨: ಷಡಭಿಜ್ಞಂ ಕ್ಷಣಿಕಂ ಜಡಾತ್ಮನೆನಿಪಂ ನೈಯಾಯಿಕಂ ವೃತ್ರ ವಿದ್ವಿಡಮಾತ್ಮಂ ಸಲೆ ಶೂನ್ಯವಾದಿ ಶಬರೋಕ್ತ್ಯಾಸಕ್ತಮೀಮಾಂಸಕಂ ನಡವಂ ಕಾಪಿಳವೃತ್ತಿಯಂ ಬಿಡದೆ ಸಾಂಖ್ಯಂ (ಚಂದ್ರಪ್ರ. ೧-೨೫). [ಸಂ.]

ಶಬಲ, ಶಬಳ (ಗು). ೧. ಅನೇಕ ಬಣ್ಣಗಳಿಂದ ಕೂಡಿರುವ; ಬಣ್ಣಬಣ್ಣದ: ಮಧುಕರಕುಲಶಬಲಮಲ್ಲಿಕಾಮುಕುಳದೊಳ್ (ಅದಿಪು. ೭-೨೬ ವ). ೨. ಚುಕ್ಕೆಗಳಿಂದ ಕೂಡಿದ. (ನಾ). ೩. ಅನೇಕ ಬಣ್ಣ; ಮಿಶ್ರವರ್ಣ : "ಶಬಲಮೆನಲು ಸಾರಂಗಮೆನೆ ಹಲವುವರ್ಣಕ್ಕೆ ನಾಮಂ" (ಮಂಗರಾ. ೧೩೧-೨೨). ೪. ಚುಕ್ಕೆಗಳಿಂದ ಕೂಡಿದುದು. ಶಬಳ : ೩. "ಸಾರಂಗಃ, ಶಬಳಃ - ಈ ೨ ಬೆರಕೆವರ್ಣಂ" (ಹಲಾಯು. ೧೨-೫೧). ೫. ಬೆರಕೆ ; ಮಿಶ್ರಣ: "ಚಿತ್ರಿತಂ . . . ಶಬಳಮೆನೆ ಕಬರಮೆನೆ ಶಾರಮೆನೆ ಮಿಶ್ರಕ್ಕೆ ನಾಮಮಕ್ಕುಂ" (ಮಂಗರಾ. ೧೩೨-೨೫). [ಸಂ.]

ಶಬಲತೆ (ನಾ). ೧. ಅನೇಕ ಬಣ್ಣಗಳಿಂದ ಕೂಡಿರುವಿಕೆ. ೨. ಅನೇಕ ಗುಣ, – ಬಗೆ: 'ಶಬಲತೆವೆಱು' ಪರಾ. ೩. ಮಿಶ್ರಣ: ಒಮ್ಮೊಮ್ಮೆ ವ್ಯಭಿಚಾರಿಭಾವಗಳ ಶಬಲತೆಯೇ ಹೃದಯವಿಶ್ರಾಂತಿಸ್ಥಾನವಾಗಬಹುದು (ಧ್ವನ್ಯಾಲೋ. ೫೯). [ಸಂ. ಶಬಲತಾ]

ಶಬಲತೆವೆಱು (ಕ್ರಿ). ಬೇರೆ ಬೇರೆ ಗುಣಗಳ ಮಿಶ್ರಣವನ್ನು ಹೊಂದು: ತತ್ತನಿಪ ವಾಚ್ಯದಲಿ ಶಬಲತವೆತ್ತ ಬ್ರಹ್ಮದಲಾಯ್ತು ಸದಸದ್ವ್ಯಕ್ತಿಯಾದವ್ಯಕ್ತವದಱಿಂದೀ ಮಹತ್ತತ್ತ್ವ (ಅಮೃತ.೪-೧೧). [ಶಬಲತೆ + ಪೆಱು]

ಶಬಲಿತ, ಶಬಳಿತ (ಗು). ೧. ಅನೇಕ ಬಣ್ಣಗಳಿಂದ ಕೂಡಿದ; ಬಣ್ಣಬಣ್ಣದ: ಭಯಾನಕೋಭಯತಟಗುಹಾಗಹ್ವರ ನಿರ್ಯಜ್ಜರದಜಗರಗಲಗಲಿತಗರಲ ಶಬಲಿ [ಪಾಶಾಂ.೪]ತ ಸಲಿಲಪ್ರವಾಹಯಂ . . . ವೈತರಣಿಯಂ ಪೂಕ್ಕಾಗಳ್ (ಅದಿಪು ೫-೯೭ ವ) (ನಾ). ೨. ಬಣ್ಣಬಣ್ಣವಾದುದು; ಅನೇಕ ಬಣ್ಣಗಳಿಂದ ಕೂಡಿದುದು: ವಿವಿಧ ಮಣಿಶಬಲಿತಂ . . . ದೇವಾಗಾರಂ (ಜಗವಿ. ೩-೩೩). ಶಬಳಿತ: ೧. ನೀಲಮಣಿಶಬಳಿತ ವಿಧ್ರುಮಮಂ ಪಡೆದುವು ಪಂಚಮಸಮುದ್ರ ವಿದ್ರುಮಲತಾಪ್ರತಾನಾವಳಿಗಳ್ (ಶಾಂತಿಪು. ೧೧-೧೦೫); ವಿಚಿತ್ರವರ್ಣ ಶಬಳಿ [ಪಾಶಾಂ. ೮]ತ ಸುವರ್ಣಪರ್ಯಂಣಂಗಳಿಂದುನ್ಮುಖಮಯೂಖ . . . ಮಣಿಪುತ್ರಿಕೆಗಳಂ (ಪಂರಾಮಾ. ೧೨-೨ ವ). [ಸಂ.]

ಶಬಳ 'ಶಬಲ' ನೋ.

ಶಬಳಚ್ಛಾಯೆ (ನಾ). ಅನೇಕ ಬಣ್ಣಗಳ ಕಾಂತಿ, – ಹೊಳಪು: ಕಣ್ಗಸದುದು ಶಬಳಚ್ಛಾಯೆಯಿಂ ಶಕ್ರಚಾಪಂ (ಮಲ್ಲಿಪು. ೮-೮೫). [ಸಂ. ಶಬಲಚ್ಛಾಯಾ]

ಶಬಳಮರೀಚಿ (ನಾ). = ಶಬಳಚ್ಛಾಯೆ: ವಿವಿಧವರ್ಣವಿಶೇಷಚ್ಛದಕುಸುಮಫಳಕುಳಂ ತೋರ್ಪುದು ಶಬಳಮರೀಚಿಹೃದ್ಯಮುದ್ಯಾನವನಂ (ಚಂದ್ರಪ್ರ. ೧೧-೫೧). [ಸಂ. ಶಬಲಮರೀಚಿ]

ಶಬಳಿತ 'ಶಬಲಿತ' ನೋ.

ಶಬಾಲಯ (ನಾ). ಶವಸಂಸ್ಕಾರವನ್ನು ಮಾಡುವ ಸ್ಥಳ; ಸುಡುಗಾಡು; ಸ್ಮಶಾನ: ನಡತಂದಾ ಬಿಚ್ಚಾಧರ ಪೊಳಲ ತೆಂಗಡೆಯ ಶಬಾಲಯಕಾಗಿ . . .ಪೋಗುತಿರೆ (ಶ್ರೀಪಾಲ. ೭-೧೫೨). [< ಸಂ. ಶವಾಲಯ]

ಶಬಾಸ್ 'ಶಹಬಾಸ್' ನೋ.

ಶಬಾಸು 'ಶಹಬಾಸ್' ನೋ.

ಶಬುದ 'ಸಬುದ' ನೋ.

ಶಬೆ 'ಸೆಬೆ' ನೋ.

ಶಬ್ದ (ನಾ). ೧. ಸದ್ದು; ಸಪ್ಪುಳ; ಧ್ವನಿ: ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈ ದುಡಿಕಿದರೆ ಅದು ಪ್ರಸಾದವಲ್ಲ ಕಿಲ್ಬಿಷ (ಬಸವ. ೩೯೯); ಶಬ್ದವೆಂದರೆ ನಮ್ಮ ಕಿವಿಗಳಲ್ಲಿ ಉಂಟಾಗುವ ಒಂದು ಅನುಭವ ಮತ್ತು ಆ ಅನುಭವವನ್ನು ಉಂಟುಮಾಡಬಲ್ಲ ಕಾರಣವಿಶೇಷ (ಭೌತವಿ. ೧೫೩). ೨. [ವ್ಯಾಕ] ಅಕ್ಷರಗಳ ಗುಂಪು ; ಪದ: ಪ್ರಾಯಿಕಮಕ್ಕುಂ ದೀರ್ಘಾಮ್ನಾಯಮದಂತೆಲ್ಲ ಶಬ್ದದೊಳ್ ವೃತ್ತಿಗತಂ (ಕಾವ್ಯಾವ. ೨೫೧); ಅನುಕೂಲಪವನನಿಂ ಜೀವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದದ್ರವ್ಯಂ ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ (ಶಮದ. ೨). ೧, ೨ : ವೈಯಾಕರಣನಂತೆ ಶಬ್ದಮನಾಲಿಸಿಯುಂ ಬೇಂಟೆಕಾಱನಂತೆ ಅಡಿವಚ್ಚೆಯನಱಸಿಯುಂ (ಗದಾಯು. ೬-೨೮ ವ). ೩. ವ್ಯಾಕರಣ. ೪. [ನ್ಯಾಯ] ಹನ್ನೆರಡು ಪ್ರಮಾಣಗಳಲ್ಲಿ ಒಂದು : ಪ್ರಮಾಣವು ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ . . . ಪ್ರಾತಿಭ ಎಂದು ಹನ್ನೆರಡು ಎಂದು ಕೆಲವರು ಹೇಳುತ್ತಾರೆ (ಒಂದಸಾ. ೧೫೩). ೫. [ದ್ವೈತ] ನಲವತ್ತು ವಿಧವಾದ ಗುಣಗಳಲ್ಲಿ ಒಂದು: ಶಬ್ದ ಬುದ್ಧಿ . . . ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಒಂದಸಾ. ೨೩೫). 'ದ್ರವತ್ವ' ಪರಾ. ೬. [ಶೈವ] ಶೈವಾಗಮದ ಮೂವತ್ತಾರು ತತ್ತ್ವಗಳಲ್ಲಿ ಒಂದು: ಷಟ್ತ್ರಿಂಶತ್ತತ್ತ್ವಗಳು: - ಶಿವ , ಶಕ್ತಿ . . . ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ . . . ಭೂಮಯಃ (ಇವು ಶೈವಾಗಮದಲ್ಲಿರುವ ತತ್ವಸಂದೋಹಗಳು) (ಭಾರದ. ೭೩ ಅಡಿಟಿ). 'ಷಟ್ತ್ರಿಂಶತ್ತತ್ತ್ವ' ಪರಾ. ೭. [ಜೈನ] ವಸ್ತುವಿನ ಭಾವ; ದ್ರವ್ಯತ್ವ: ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇಳ್ಪರ್ (ಶಮದ. ೨ ಟೀಕೆ). 'ಶಬ್ದದ್ರವ್ಯ' ಪರಾ. [ಸಂ.]

ಶಬ್ದಂಗೆಡು (ಕ್ರಿ). ಕಿವುಡಾಗು : ಬಳಕೋಳಾಹಲದಿಂ ವಿಯಚ್ಚರಗಣಂ . . . ಪೊಲಗಟ್ಟೋಡಿಯಳುರ್ಕೆಗಟ್ಟು ಕಿವಿ ಶಬ್ದಂಗೆಟ್ಟು ನಿಲ್ವನ್ನೆಗಂ ತಳರ್ದಂ . . . ಮಾಗಧಂ (ಜಗವಿ. ೭-೪೧). [ಶಬ್ದ + ಕೆಡು]

ಶಬ್ದಕಳಾಪ (ನಾ). ೧. ಶಬ್ದಗಳ ಗುಂಪು, – ಸಮೂಹ: ಈ ಪೇಳ್ದನಿತುಂ ಶಬ್ದಕಳಾಪಂ ಸ್ತ್ರೀವಿಷಯಮಾದೊಡಿತಿಪರಮಕ್ಕುಂ ರೂಪಾನ್ಯತ್ವದೊಳಾದಿಗೆ ಲೋಪಂ ತತ್ಪ್ರಾತ್ಯಯಕ್ಕೆ ಸಂಭವಿಸಿರ್ಕುಂ (ಕಾವ್ಯಾವ. ೩೩೦). ೨. ವ್ಯಾಕರಣಶಾಸ್ತ್ರ. ೧,೨: ಚತುರತೆ ಸತ್ಯವಿತ್ತದೊಳಭಿಜ್ಞತೆ ಶಬ್ದಕಳಾಪದೊಳ್ ಪ್ರಸನ್ನತೆ ಮತಿಯೊಳ್ . . . ದೇವಕೀರ್ತ್ತಿ ವಿಬುಧಾಗ್ರಣಿಗೊಪ್ಪುವುದೀ ಧರಿತ್ರಿಯೊಳ್ (ಎಕ. II, ೬೩-೨೭ ; 1163).

[ಸಂ. ಶಬ್ದಕಲಾಪ]

ಶಬ್ದಕೋಶ (ನಾ). ನಿಘಂಟು ; ಅರ್ಥಕೋಶ : ಸಂವಿಧಾನದಲ್ಲಿ ಉಪಯೋಗಿಸಿರುವ ಪಾರಿಭಾಷಿಕಶಬ್ದಗಳಿಗೆ ಪ್ರತಿಯಾಗಿ . . . ಉಪಯೋಗಿಸಬೇಕಾದ ಶಬ್ದಗಳನ್ನು ನಿರ್ದಿಷ್ಟಪಡಿಸಿದ ಒಂದು ಶಬ್ದಕೋಶವನ್ನೂ ಭಾರತಸರ್ಕಾರದವರು ಗೊತ್ತುಮಾಡಿದರು (ಭಾದಾನ. ೫೮೫). [ಸಂ.]

ಶಬ್ದಕ್ರಿ (ನಾ). ಮಾತಿನಲ್ಲಿ ಮಾತ್ರ ಉಳಿಯುವ ಕ್ರಿಯೆ: ಶಾಸ್ತ್ರ ಬಲ್ಲಿತ್ತೆಂಬೆನೆ ಶಬ್ದಕ್ರಿ . . . ಇದು ಕಾರಣ ಕೂಡಲಸಂಗಯ್ಯನೇ ನಿತ್ಯ (ಬಸವ. ೫೫೨).

[< ಸಂ. ಶಬ್ದಕ್ರಿಯಾ]

ಶಬ್ದಖಂಡನ (ನಾ). ೧. ಶಬ್ದವನ್ನು ತಪ್ಪೆಂದು ಹೇಳುವುದು, - ಖಂಡಿಸುವುದು. ೨. [ತರ್ಕಶಾ] (ಗ್ರಂಥದ ಅಥವಾ ಕಾವ್ಯದ) ಶಬ್ದವು ಪ್ರಮಾಣಬದ್ಧವಲ್ಲವೆಂದು ಖಂಡಿಸುವುದು; ತರ್ಕದಲ್ಲಿ ಒಂದು ಬಗೆ : ಶಬ್ದಖಂಡನಮರ್ಥಖಂಡನಮನುಮಾನಖಂಡನಮಂಬ ತರ್ಕತಂತ್ರಕೋವಿದರಪ್ಪ ವಾದಿಗಳೊಳಂ (ಗಿರಿಕ. ೨-೧೦೫ ವ). 'ಅರ್ಥಖಂಡನ' ಪರಾ. [ಸಂ.]

ಶಬ್ದಗುಣ (ನಾ). ೧. ಶಬ್ದವನ್ನು ಗುಣವಾಗಿ ಹೊಂದಿರುವ ದ್ರವ್ಯ; ಆಕಾಶ: "ವಿಹಾಯಸಃ . . . ಶಬ್ದಗುಣಃ, ಮೇಘದ್ವಾರಂ, ಮಹಾಬಿಲಂ – ೭ ಆಕಾಶದ ಹೆಸರುಗಳು" (ಸಿದ್ಧಾಂತಿ. ೨೬). ೨. [ಕಾವ್ಯಮಿಾ] ಶಬ್ದಕ್ಕೆ ಸಂಬಂಧಿಸಿದ ಗುಣ; P ಇದರಲ್ಲಿ ಶ್ಲೇಷ, ಪ್ರಸಾದ, ಸಮತೆ, ಮಾಧುರ್ಯ, ಸೌಕುಮಾರ್ಯ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ ಮತ್ತು ಸಮಾಧಿಗಳೆಂಬ ಹತ್ತು ಗುಣಗಳು ಇವೆ : ಶಬ್ದಾರ್ಥಗುಣಂಗಳಂ ಬೇರ್ಪಡಿಸಿ ಪೇಳ್ದದ . . . ಶಬ್ದಗುಣಂಗಳ್ ಪತ್ತು ಅರ್ಥಗುಣಂಗಳ್ ಪತ್ತು ಎಂಬ ಪಕ್ಷಮೆ ಲೇಸು (ಅಪ್ರತಿ. ೭-೧೧); ಶ್ಲೇಷ ಪ್ರಸಾದಾದಿ ಶಬ್ದಗುಣಗಳು ಹತ್ತೆಂದೂ ಅದೇ ಹೆಸರುಳ್ಳ ಅರ್ಥಗುಣಗಳು ಹತ್ತೆಂದೂ ಹೀಗೆ ಗುಣಗಳು ಒಟ್ಟು ಇಪ್ಪತ್ತೆಂದೂ ವಾಮನನ ಅಭಿಪ್ರಾಯ (ಕೃಪಿಡಿ. ೫೬೨). 'ಅರ್ಥಗುಣ' ಪರಾ. [ಸಂ.]

ಶಬ್ದಗ್ರಹ (ನಾ). ೧. ಧ್ವನಿಯನ್ನು ಹಿಡಿಯುವುದು; ನಾದವನ್ನು ಗ್ರಹಿಸುವುದು. ೨. ಶ್ರವಣೇಂದ್ರಿಯ; ಕಿವಿ: "ಕರ್ಣಃ, ಶಬ್ದಗ್ರಹಃ . . . ಶ್ರವಃ – ೬ ಕಿವಿಗಳು" (ಸಿದ್ಧಾಂತಿ. ೧೯೬). [ಸಂ.]

ಶಬ್ದಚಿತ್ರ (ನಾ). ೧. ಶಬ್ದಗಳ ಮೂಲಕ ಚಿತ್ರಿಸಿದ ವಸ್ತು, – ವಿಷಯ: ವಿಜಯನಗರವನ್ನು ಕುರಿತು . . . ಯಾವ ಕೃತಿಯಲ್ಲಾದರೂ ಶಬ್ದಚಿತ್ರ ತೆಗೆದಿರುವರೆ? (ಕರ್ಣಾಜ. ೭೨). ೨. ಬಾನುಲಿಯಲ್ಲಿ ಬಿತ್ತರಿಸುವ, ಶಬ್ದಗಳಿಂದ ಕೂಡಿದ ನಾಟಕ ಮುಂತಾದುವು: ಮೊನ್ನೆ ಬೆಂಗಳೂರು ಆಕಾಶವಾಣಿ ನಿಲಯದವರು ಸೂಗಸಾದ ಶಬ್ದಚಿತ್ರವನ್ನು ಬಿತ್ತರಿಸಿದರು (ರೂಢಿ). ೩. [ಕಾವ್ಯಮಿಾ] ವ್ಯಂಗ್ಯಶೂನ್ಯ ಹಾಗೂ ಶಬ್ದಪ್ರಧಾನವಾದ ಅಲಂಕಾರ; ಶಬ್ದಾಲಂಕಾರ: "ಚಿತ್ರ"ವು ಶಬ್ದಚಿತ್ರ, ವಾಚ್ಯಚಿತ್ರ ಎಂದು ಎರಡು ಬಗೆ; ವ್ಯಂಗ್ಯಶೂನ್ಯವಾದ ಶಬ್ದಾಲಂಕಾರವು ಶಬ್ದಚಿತ್ರಕ್ಕೂ ಅಂಥದೇ ಅರ್ಥಾಲಂಕಾರವು ವಾಚ್ಯಚಿತ್ರಕ್ಕೂ ವಿಷಯವಾಗುತ್ತದೆ (ಭಾರಮಾ. ೩೧೮). [ಸಂ.]

ಶಬ್ದಚ್ಛಲ (ನಾ). ಶಬ್ದಕ್ಕೆ ಅರ್ಥಾಂತರಗಳನ್ನು ಕೊಟ್ಟು ಮಾಡುವ ವಾದ: ಸರ್ವಜ್ಞಂಗೆ ಕಥಂ ಚಿದಾಹಾರಮುಂಟೆಂದು ಪರಮಾಗಮದೊಳ್ಪೇಳಪ್ಪೊಡಾಹಾರಮುಂಟೆಂಬ ಶಬ್ದಚ್ಛಲಂಬಿಡಿದು ದುರಾಗ್ರಹದಿಂ ಕೇವಳಿಜನಂಗೆ ಭುಕ್ತಿಯುಂಟೆಂಬೊಡೆ (ಪಸಾರ. ೫೨೦). [ಸಂ.]

ಶಬ್ದಜ್ಞ (ನಾ). ೧. ವ್ಯಾಕರಣವನ್ನು ತಿಳಿದವನು; ವೈಯಾಕರಣ: ತರ್ಕಜ್ಞರ್ಪರೀಕ್ಷಿಸಲು ಶಬ್ದಜ್ಞಂ ಶಾಸ್ತ್ರಜ್ಞನಖಿಳತರ್ಕಜ್ಞಂ ಕಾವ್ಯಜ್ಞಂ . . . ಶ್ರೀರಾಜಗುರು ಕಳೇಶ್ವರದೇವಂ (ಶಾಸಪ. ೫೩-೬೭; 1179); ಸಂಖ್ಯಾವ್ಯಯಂಗಳಂ ಕಳೆದುಬೀದ ನಿಘಂಟುವಿನ ಸುಲಲಿತಾಕ್ಷರಂಗಳಪ್ಪ ನಾಮಪ್ರಕೃತಿಗಳಂ ಕನ್ನಡಕ್ಕೆ ಸರಿಮಾಡಿ, ಸಮಸಂಸ್ಕೃತಮೆಂಬ ಪೆಸರನಿಟ್ಟು, ಶಬ್ದಜ್ಞರ್ ಲಿಂಗಮಂ ಮಾಬ್ಬರ್ (ಶಮದ. ೮೦ ವೃತ್ತಿ). ೨. [ಸಂಗೀತ] ತಾಳಹಾಕುವವನು : "ಶಬ್ದಜ್ಞನೆಂದೆನಲ್ ತಾಳಧರನೆನಿಸಿಕ್ಕುಂ" (ಪಂಗರಾ. ೧೧೧-೩). [ಸಂ.]

ಶಬ್ದದೋಷ (ನಾ). [ಕಾವ್ಯಮಿಾ] ಕಾವ್ಯದೋಷಗಳಲ್ಲಿ ಒಂದು; ಶಬ್ದಗತ ದೋಷ: ಶಬ್ದದಲ್ಲಿ ಸ್ವಾಭಾವಿಕವಾಗಿ ಯಾವ ದೋಷವೂ ಇರುವುದಿಲ್ಲ. ಹೇಳುವವನ ದೋಷವೇ ಶಬ್ದದೋಷ. ಅದು ಪ್ರಮಾದ, ಅಶಕ್ತಿ, ಆಲಸ್ಯ ಇವುಗಳಿಂದುಂಟಾಗುವುದು (ಹಿಂದಸಾ. ೧೩೭); ಪಿಂಡಕ್ಕೆ ಬನ್ನಿರೋ, ತಂಡುಲಾರ್ಧಾರ್ಧಾರ್ಧ ತದರ್ಧನಾಯಕ ಅಷ್ಟಾರ್ಧಾರ್ಧ ಬಾಹುಗಳು, ಇತ್ಯಾದಿಗಳು ಶಬ್ದದೋಷಗಳು (ಆರ್ಯಧ. ೫೫). 'ಅರ್ಥದೋಷ' ಪರಾ. [ಸಂ.]

ಶಬ್ದದ್ರವ್ಯ (ನಾ). ಶಬ್ದಗಳು ಹುಟ್ಟಲು ಉಪಾದಾನಕಾರಣವಾದ ವಸ್ತು : ಅನುಕೂಲಪವನನಿಂ ಜೀವನಿಷ್ಠದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದದ್ರವ್ಯಂ ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ (ಶಮದ. ೨). [ಸಂ.]

ಶಬ್ದನಿರೂಪಣ (ನಾ). ಒಂದುಪದದ ನಿಷ್ಕೃಷ್ಟವಾದ ಅರ್ಥವನ್ನು ಸ್ಪಷ್ಟಪಡಿಸುವುದು; ಶಬ್ದಾರ್ಥದ ವಿವರಣೆ: "ಧನಂ ಜೀವಂ ಶಬ್ದನಿರೂಪಣಂ ವಿಮಲಯೋಗಂ ತಾವಿವರ್ಥಾಂಕಿತಂ" (ನಾನಾರ. ೧೫೭). [ಸಂ.]

ಶಬ್ದಪ್ರಮಾಣ (ನಾ). ಲಿಖಿತವಾದ ಅಥವಾ ಮೌಖಿಕವಾದ ಆಧಾರಗಳ ಪ್ರಮಾಣ: ಶಬ್ದಪ್ರಮಾಣಮೆನೆ:- ಇರ್ದುದನಿರ್ದಂತೆ ತಿಳಿಸುವ ನುಡಿ (ಚಕಬಿ. ೧೨); ಶಬ್ದಪ್ರಮಾಣವೆಂದರೆ ವೇದಾದಿಶಾಸ್ತ್ರಗಳೆಂಬ ಆಗಮವೇ ಶಬ್ದಪ್ರಮಾಣವೆಂದು ಹಿಂದೆ ವ್ಯವಹಾರವಿರಬಹುದು (ಹಿಂದಸಾ. ೧೪೪). [ಸಂ.]

ಶಬ್ದಪ್ರವೀಚಾರ (ನಾ). ೧. [ಜೈನ] ಐದುಬಗೆಯ ಪ್ರವೀಚಾರಗಳಲ್ಲಿ ಒಂದು; ಶ್ರವಣಮಾತ್ರದಿಂದ ಇಂದ್ರಿಯಜನಿತಸುಖವನ್ನು ಹೊಂದುವಿಕೆ : ಪರಿಹಾಸಂ ರಸನೀತಿ . . . ವಿಶ್ರುತವಿನೋದಂ ತನ್ನೊಳಾಗಿರ್ಪಿನಂ ಪರಿವಾರಾಮರಕಾಮಿನೀ ಪರಿವೃತಂ ಶಬ್ದಪ್ರವೀಚಾರದಿಂ ಪರಮಾನಂದದೊಳೆಯ್ದೆ ಮಾಡಿ ತಳೆದಂ ಪ್ರೀತಿಂಕರ[ಂ] ಪ್ರೀತಿಯಂ (ವರ್ಧಮಾ. ೭-೬೫). ೨. ಶ್ರವಣಮಾತ್ರದಿಂದ ಇಂದ್ರಿಯಜನಿತ ಸುಖವನ್ನು ಹೊಂದುವವನು: ಆ ಕಲ್ಪಂಗಳೆರಡಕ್ಕಂ ಶತಾರೇಂದ್ರನಿಂದ್ರನಕ್ಕುಂ . . . ವೃಂದಾರಕರೆಲ್ಲಂ ಹಸ್ತಚತುಷ್ಟಯೋತ್ಸೇಧರುಂ ಅಷ್ಟಾದಶರತ್ನಾಕರೋಪಮಾಯುಷ್ಕರುಂ ಶಬ್ದಪ್ರವೀಚಾರರುಮಪ್ಪರ್ (ಸುಕುಮಾ. ೧೧-೬೬ ವ). [ಸಂ.]

ಶಬ್ದಮಾಧುರ್ಯ (ನಾ). ಪದದ ಸೊಗಸು; ಶಬ್ದದ ಇಂಪು: ವಾಲ್ಮೀಕಿಯ ಶ್ಲೋಕಗಳಲ್ಲಿ ಕಂಡುಬರುವ ಶಬ್ದಮಾಧುರ್ಯವು ಸ್ವರ್ಗೀಯವಾದುದು (ಭಾರದ. ೯೨).

[ಸಂ.]

ಶಬ್ದರೂಪ (ನಾ). ೧. [ವ್ಯಾಕ] ವ್ಯಾಕರಣಬದ್ಧವಾದ ಪದದ ರೂಪ: ಈ ಶಬ್ದರೂಪವು ಸಂದೇಹವಾಗಿರುವುದರಿಂದ ಪ್ರಶ್ನಾರ್ಥಕಚಿಹ್ನೆಯನ್ನು ಹಾಕಲಾಗಿದೆ (ರೂಢಿ). ೨. ಶಬ್ದಪ್ರಧಾನವಾದುದು: ಇವುಗಳಲ್ಲಿ ಶಬ್ದರೂಪವಾದ ಗ್ರಂಥವನ್ನು 'ಕಾವ್ಯ', 'ಶಾಸ್ತ್ರ' ಎಂದು ಎರಡುಭಾಗ ಮಾಡಬಹುದು (ಕೃಪಿಡಿ. ೧೬೮). [ಸಂ.]

ಶಬ್ದವಿದ್ಯೆ (ನಾ). ವ್ಯಾಕರಣಶಾಸ್ತ್ರ: ನಯವಿದ್ಯಾವಿದರಿಂ ಕವಿಪ್ರಕರದಿಂ ತರ್ಕಜ್ಞರಿಂ ಶಬ್ದವಿದ್ಯೆಯೊಳಬ್ಜಾಸನಕಲ್ಪರಪ್ಪ ವಿಳಸದ್ಬುದೇವರಿಂ . . . ಒಪ್ಪುವ ಗುಪ್ತವಂಶ ಮಸುಧಾಧೀಶಾವಳೀರಾಜಧಾನಿಯನುಜ್ಜೈನಿಯನೆಯ್ದಿ ಬಂದನಜಿತಂ (ಪಂಚತಂ. ೧೯೩-೧೫).

[ಸಂ. ಶಬ್ದವಿದ್ಯಾ]

ಶಬ್ದವೇದಿ (ನಾ). ಶಬ್ದಶಾಸ್ತ್ರವನ್ನು ಬಲ್ಲವನು; ವಿದ್ವಾಂಸ: ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ ನಿಶ್ಶಬ್ದ ವೇದಿಸದಿದ್ದರೆ ಗುಹೇಶ್ವರ ನೋಡಿ ನೋಡಿ ನಗುತ್ತಿಪ್ಪ ನೋಡಾ (ಅವಚಂ. ೧೦೬-೪೮೩). [ಸಂ. ಶಬ್ದವೇದಿನ್]

ಶಬ್ದವೇಧಿ (ನಾ). ೧. ಕಣ್ಣಿಗೆ ಕಾಣದಿರುವ ವಸ್ತುವಿನ ಕಡೆಗೆ ಕೇವಲ ಶಬ್ದವನ್ನು ಅನುಸರಿಸಿ ಬಾಣವನ್ನು ಪ್ರಯೋಗಿಸುವಿಕೆ; ಶಬ್ದಗ್ರಹಣ ಮಾತ್ರದಿಂದ ಗುರಿಹಿಡಿದು ಹೊಡೆಯುವುದು: ಕಣ್ಗರಿಯದಾ ಕಳ್ತಲೊಳ್, ಶಬ್ದವೇಧಿಧನುರ್ವಿದ್ಯಾ ಪ್ರತಿಷ್ಠೆಯಿಂ ಕೊಂದುದಕೆ, ವಿಧಿ ನನಗೆ ವಿಧಿಸಿದೀ ಶಾಪಮಂ

ಕಾಣ್! (ಶ್ರೀರಾಮಾ. ೧೦೨-೬೪); ಕುಂಜುಶಬ್ದ ಶಬ್ದವೇಧಿಯನ್ನೂ ಬಲ್ಲವನಂತೆ (ಶಾಂತಲಾ. ೨೨೨). ೨. ಶಬ್ದಗ್ರಹಣಮಾತ್ರದಿಂದ ಬಾಣಪ್ರಯೋಗವನ್ನು ಮಾಡುವವನು: ಧನುರ್ವೇದಿಯುಂ ಶಬ್ದವೇದಿಯುಮಪ್ಪ ಬಿಲ್ಲ ಬಿನ್ನಣಿಯನೂರ್ವನಂ ಕರೆದು (ಪಂಚತಂ. ೧೨೭-೧೮). ೩. ಒಂದು ಬಗೆಯ ಬಾಣ: ಅರ್ಜುನನು ಮಂತ್ರಾಸ್ತ್ರಗಳಿಂದಲೂ ಶಬ್ದವೇಧಿ ಬಾಣಗಳಿಂದಲೂ ಹೊಡೆಯಲು ಮೊದಲುಮಾಡಿದನು (ವಚಭಾ. ೧೭೯). ೪. ಬಿಲ್ಲುಗಾರ. ೫. ಯೋಧ; ಸಿಪಾಯಿ. ೬. ದಶರಥ. ೭. ಅರ್ಜುನ. [ಸಂ. ಶಬ್ದವೇಧಿನ್]

ಶಬ್ದವೇಧಿತ್ವ (ನಾ). = ಶಬ್ದವೇಧಿ ೧: ಬಾಣಪ್ರಯೋಗದಲ್ಲಿ ಆ ಲಾಘವವನ್ನೂ ಶಬ್ದವೇಧಿತ್ವವನ್ನೂ ಹೊಗಳಿದರು (ವಚಭಾ. ೧೯). [ಸಂ.]

ಶಬ್ದವೇಧಿವಿದ್ಯೆ (ನಾ). ಶಬ್ದಗ್ರಹಣಮಾತ್ರದಿಂದ ಬಾಣಪ್ರಯೋಗವನ್ನು ಮಾಡುವ ವಿದ್ಯೆ: ದಶರಥ, ಅರ್ಜುನಾದಿಗಳು ಶಬ್ದವೇಧಿವಿದ್ಯೆಯನ್ನಭ್ಯಸಿಸಿದ್ದರೆಂದು ಕೇಳಿದ್ದೇವಷ್ಟೆ? ಶಬ್ದವು ನೇರವಾಗಿ ಪ್ರಸರಿಸುವುದೇ ಈ ವಿದ್ಯೆಗೆ ಮೂಲಾಧಾರವಾಗಿದೆ (ಭೌತಿ. ೧೫೪). [ಸಂ. ಶಬ್ದವೇಧಿವಿದ್ಯಾ]

ಶಬ್ದಶಾಸ್ತ್ರ (ನಾ). ಶಬ್ದವನ್ನು ಕುರಿತ ಶಾಸ್ತ್ರ; ವ್ಯಾಕರಣಶಾಸ್ತ್ರ: ಲಿಪಿ ಶಬ್ದಶಾಸ್ತ್ರಮಭಿಧಾನಪರಂಪರೆ ನಾಟಕಪ್ರಯೋಗಂ ಕಾವ್ಯಂ . . . ಅಖಿಲವ್ಯೂಹೋತ್ಕರ ಮೆಂಬಿನಿತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಪ್ರಪು. ೪-೫೮); ಕರ್ಣಾಟಕ ಲಕ್ಷಣ ಶಬ್ದಶಾಸ್ತ್ರಮಂ ಲಾಕ್ಷಣಿಕರ್ಪೇಳೆಂದು ಬೆಸಸೆ ಬಗೆವುಗೆ ಪೇಳ್ದೊಂ (ಶಮದ. ಪೀಠಿಕೆ ೩); ಸರ್ವಶಾಸ್ತ್ರಕ್ಕೂ ಆಧಾರಭೂತವಾದ ಶಬ್ದಶಾಸ್ತ್ರ ಹಾಗೂ ಬುದ್ಧಿಶಾಸ್ತ್ರಗಳ ಮೂಲಪುರುಷರಾದ ಪಾಣಿನೀ ಕಾಣಾದರನ್ನು . . . ಶಾಸ್ತ್ರಕಾರರು ನಿರ್ಪಚಿಸಿದ್ದಾರೆ (ಭಾರದ ೧೨೩). [ಸಂ.]

ಶಬ್ದಶ್ಲೇಷ (ನಾ). [ಕಾವ್ಯಮೀ] ಒಂದುಪದವನ್ನು ನಾನಾರೀತಿಯಲ್ಲಿ ವಿಭಾಗಮಾಡಿದಾಗ ನಾನಾವಿಧವಾದ ಅರ್ಥವನ್ನು ತಿಳಿಸುವ ಒಂದು ಅಲಂಕಾರ: ಎರಡರ್ಥಮೊಂದ ಶಬ್ದಾಂತರದೊಳ್ ನೆಗಟ್ಟಿಂತು ಪೇಳ್ವುದರ್ಥಶ್ಲೇಷಂ ದೊರೆಕೊಳೆ ಶಬ್ದಾವಯವದೊಳೆರಡಭಿಮತಶಬ್ದಮಱೆಗೆ ಶಬ್ದಶ್ಲೇಷಂ (ಕಾವ್ಯಾವ. ೭೫೩); ಉದಾ:- ಕುವಳಯಬಾಂಧವನೆಸೆವನ ಕುವಳಯಮಂ ಬೆಳಗಿ ಕುವಳಯಂ ಪೊಱಗನೆ ಪಾಂಡವರೆ ಪೊಱಗಾಗೆ ನಿನಗೀ ಕುವಳಯಪತಿಯೆಂಬ ಪೆಂಪೊಡಂಬಡೆ ನೃಪತೀ (ಪಂಪಭಾ. ೯-೩೭). 'ಅರ್ಥಶ್ಲೇಷ' ಪರಾ. [ಸಂ.]

ಶಬ್ದಸಂಖ್ಯೆ (ನಾ). [ಗಣಿತ] ಪದಗಳ ಮೂಲಕ ತಿಳಿಸುವ ಸಂಖ್ಯೆ: ಪದ್ಯರೂಪದಲ್ಲಿ ಸಂಖ್ಯೆಗಳನ್ನು ಕೆಲವು ವಸ್ತುಗಳ ಹೆಸರಿನ ಮೂಲಕ ತಿಳಿಸುವ ಪದ್ಧತಿಯು ಇಂಡಿಯದ ಭಾಷೆಗಳಲ್ಲಿ ಈಗಲೂ ಇದೆ. ಉದಾ: ಸೂರ್ಯ = ೧, ಕರಿ (ಆನೆ) = ೮, ರಾಜ = ೧೬, ಅಗ್ನಿ = ೩, ವೇದ = ೪, ಬಾಣ = ೫ ಇತ್ಯಾದಿ ಶಬ್ದಸಂಖ್ಯೆಗಳು ಶುಲ್ಬಸೂತ್ರಗಳಲ್ಲಿ ಕೂಡ ಕಂಡುಬರುತ್ತವೆ (ಗಣಿತ. ೨೨೫).

[ಸಂ. ಶಬ್ದಸಂಖ್ಯಾ]

ಶಬ್ದಸಂಗ್ರಹ (ನಾ). ಗ್ರಂಥಗಳಿಂದ ಪದಗಳನ್ನು ಆಯ್ದು ಶೇಖರಿಸುವಿಕೆ: ನಿಘಂಟುರಚನೆಗೆ ಶಬ್ದಸಂಗ್ರಹವೇ ಮೊದಲ ಮೆಟ್ಟಿಲು (ರೂಢಿ). [ಸಂ.]

ಶಬ್ದಸಂದರ್ಭ (ನಾ). ಶಬ್ದದ ಬಳಕೆ, — ಪ್ರಯೋಗ: ಕವಿಯಂ ಜಕ್ಕುಲಿಪಂತೆ ನುಣ್ಪಡರ್ದ ಶಬ್ದಂ ಶಬ್ದಸಂದರ್ಭದೊಳ್ ಸವಿಯಂ ಮುಂದಿಡುವರ್ಥಮರ್ಥದೊಳೊಡಂಬಟ್ಟೊಳ್ಸನೋರಂತೆ ಬೀಱುವ ಭಾವಂ . . . ಪೊಣ್ಮುವ ನಾನಾರಸಮಿರ್ಪ ವಸ್ತುಕೃತಿಯಂ ಪೇಳ್ದಗ್ಗಳಂ ಮೆಚ್ಚಿಪಂ (ಚಂದ್ರಪ್ರ. ೧-೫೧). [ಸಂ.]

ಶಬ್ದಸಂದೇಹ (ನಾ). ಶಬ್ದದ ಅರ್ಥ ಮತ್ತು ರೂಪಗಳ ಬಗ್ಗೆ ಉಂಟಾಗುವ ಅನುಮಾನ: ಇದು ಸಮಸ್ತಶಾಬ್ದಿಕಜನವನೋಜನಿತಶಬ್ದಸಂದೇಹ ಶಲ್ಯಚಾರು ಚುಂಬಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತವಪ್ಪ ಶಬ್ದಮಣಿದರ್ಪಣದೊಳ್ ಸಂಧಿಕಾರ್ಯಮೆಂಬ ಪ್ರಥಮಸಂಧಿ ಸಂಪೂರ್ಣಂ (ಶಮದ. ಸಂಧಿ. ೧. ಸಂಧ್ಯಂತ್ಯ ವಾಕ್ಯ). [ಸಂ.]

ಶಬ್ದಸಂಪತ್ತು (ನಾ). ಪದಗಳ ವಿಪುಲತೆ, — ಆಧಿಕ್ಯ: ಪರ್ಜಿಭಾಷೆಯ ವ್ಯಾಕರಣಾಂಶಗಳ, ಶಬ್ದಸಂಪತ್ತಿನ ವಿವರ ತಿಳಿದುಬರುತ್ತದೆ (ದ್ರಾವಿವಿ. ೧೮೨). [ಸಂ. ಶಬ್ದಸಂಪದ್]

ಶಬ್ದಸಂಸ್ಕಾರ (ನಾ). ಶಬ್ದಗಳಿಗೆ ಸಂಬಂಧಿಸಿದ ಜ್ಞಾನ; ವ್ಯಾಕರಣ: ಬರೆಯಲುಂ ಬಾಜಿಸಲುಂ ಬಲ್ಲ ಶಬ್ದಸಂಸ್ಕಾರವುಳ್ಳಾತ ನಾಗದೇಸಿಗರ್ಗ್ಗೆ ನಿತ್ಯ ಸ್ಥಿತಿಯೊನ್ದು ಪೊಟ್ಟಬೂಹಾರಮುಂ ವರಿಷಕ್ಕೊನ್ದು ಕಪ್ಪಡವುವನಿಕ್ಕಿಯೋದಿಸಿ (ಎಇ. XX. ೬೮-೨೬ : 1012). [ಸಂ.]

ಶಬ್ದಸಾಮರ್ಥ್ಯ (ನಾ). = ಶಬ್ದಶಕ್ತಿ: ಶಬ್ದಸಾಮರ್ಥ್ಯಮಮರೆ, ವಿಸ್ತರದಿಂ ಕರ್ಣಾಟಕ ವ್ಯಾಕರಣ ಶಬ್ದಮಣಿದರ್ಪಣಮೆಂಬ ಪೆಸರನಿಟ್ಟು . . . ಪೇಳ್ದೊಂ (ಶಮದ. ಪೀಠಿಕೆ ೩ ವೃತ್ತಿ). [ಸಂ.]

ಶಬ್ದಸಾರಾಯ (ನಾ). ಶಬ್ದದ ಒಟ್ಟು ಅರ್ಥಸ್ವಾರಸ್ಯ: ಒಂದು ಮಾತನ್ನ ಬಹುದ ಶಬ್ದಸಾರಾಯವನು ಒಂದು ಮಾತನ್ನ ಬಹುದೆ ಶರಣಸಂಬಂಧವನು (ಬಸವ. ೬೮೧).

[ಶಬ್ದ + ಸಾರಾಯ್]

ಶಬ್ದಸಿದ್ಧಿ (ನಾ). ಶಬ್ದಗಳ ಸರಿಯಾದ ಬಳಕೆ, - ಪ್ರಯೋಗ: ಪಂಪನಿಗಿಂತ ಪೂರ್ವದಲ್ಲಿ ಮಾರ್ಗಕಾವ್ಯವು ಕನ್ನಡ-ಸಂಸ್ಕೃತಗಳ ಶಬ್ದಸಿದ್ಧಿಯನ್ನು ಪಡೆದು . . . ಪಂಡಿತಪ್ರತಿಭೆಯ ಮೂರ್ತಿಯಾಗಿ ತಲೆದೋರಿತ್ತೆಂದು 'ಶೂದ್ರಕ'ವು ಸ್ಪಷ್ಟವಾಗಿ ತಿಳಿಸುತ್ತದೆ (ಕಸಾಚಿ. ೫೧). [ಸಂ.]

ಶಬ್ದಸಿದ್ಧಿಸ್ಮರಣ (ನಾ). ಶಬ್ದಗಳ ಸಾಧಿತರೂಪಗಳ ನಿಯಮ: ಪರಮಾರ್ಥಂ ಪೇಳ್ದೆ ಪಟ್ಟರ್ದಧಿಕರಣಮಿವಿಂತಯ್ದಱೊಳ್ ಶಬ್ದಸಿದ್ಧಿಸ್ಮರಣಕ್ಕಾದ್ಯಕ್ಕುದಾತ್ತಪ್ರಕರಣ ಗಣನಾವೃತ್ತಿಯಿಂ ಪೊರ್ದಿ ನಿಲ್ಕುಂ (ಕಾವ್ಯಾವ. ೬). [ಸಂ.]

ಶಬ್ದಸುಖ (ನಾ). ಮಧುರವಾದ ಮಾತು, ಸಂಗೀತ ಮೊದಲಾದುವುಗಳಿಂದ ಉಂಟಾಗುವ ಆನಂದ: ಶಬ್ದಸುಖಕ್ಕೆ ಮಚ್ಚಿ ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ ಅನುಭಾವ ಅಕ್ಕವೆಯಾಗದೆ ಬೆಬ್ಬನೆ ಬೆಱತೆನಯ್ಯಾ (ಬಸವ. ೨೯೮).

[ಸಂ.]

ಶಬ್ದಸುಖಿ (ನಾ). ಮಾತುಗಳ ಪ್ರಾಧಾನ್ಯಕ್ಕೆ ಗಮನವಿಟ್ಟು ಆನಂದವನ್ನು ಪಡುವ ವ್ಯಕ್ತಿ: ಪರಮತತ್ತ್ವದ ನಿಜಸಂಯುಕ್ತರ ಆನು ನೀನೆಂಬ ಶಬ್ದಸುಖಿಗಳ ತೋಱೂ ಎನಗೆ (ಬಸವ. ೬. ೮೮೦). [ಸಂ. ಶಬ್ದಸುಖಿನ್]

ಶಬ್ದಸೌಷ್ಠವ (ನಾ). ಶಬ್ದದ ಸೊಬಗು. [ಸಂ.]

ಶಬ್ದಾಂತ (ನಾ). ಪದದ ಕೊನೆ; ಶಬ್ದದ ಕೊನೆ: ತಿಳಿ ಬಹುಳದೆ ಶಬ್ದಾಂತಂಗಳ ನತ್ವಷ್ಟತ್ವಕತ್ವದೆಡೆಗೆ ಣಕಾರಂ ತಳೆಗುಂ (ಶಮದ. ೨೭೮). [ಸಂ.]

ಶಬ್ದಾಂತರ (ನಾ). ಬೇರೆ ಬೇರೆ ಶಬ್ದ; ಭಿನ್ನಶಬ್ದ: ಪ್ರಕರಣದಿಂ ಶಬ್ದಾಂತರದ ಕೂಟದಿಂದಭಿನಯಂಗಳಿಂದಿಷ್ಟಾರ್ಥಪ್ರಕಟನಮಕ್ಕುಂ (ಕಾವ್ಯಾವ. ೪೩೧). [ಸಂ.]

ಶಬ್ದಾನುವಿದ್ಧ (ನಾ). [ಯೋಗ] ದೃಶ್ಯಾನುವಿದ್ಧ, ಶಬ್ದಾನುವಿದ್ಧ, ನಿಃಸಂಕಲ್ಪ, ನಿರ್ವಿಕಲ್ಪ, ನಿರ್ವೃತ್ತಿಕ ಮತ್ತು ನಿರ್ವಾಸನ ಎಂಬ ಆರು ಬಗೆಯ ಸಮಾಧಿಗಳಲ್ಲಿ ಒಂದು: ಒಳಹೊಱಗೆ ಬೆಳಗುತಲಿ ಕರಣದ್ವಾರದಿಂದಾವ ತಿಳಿಯುತಿಹನೊ ಆತ ತಾನೆಂದೊಳಗೆ ತನ್ನನು ಕಂಡು ಮನನದೊಳೊಲಿದು ಸೋಹಮ್ಮೆನುತಲಿರೆ ಶಬ್ದಾನುವಿದ್ಧವದು (ಅಮೃತ. ೬-೫೯). [ಸಂ.]

ಶಬ್ದಾನುಶಾಸನ (ನಾ). ೧. ಶಬ್ದಸ್ವರೂಪವನ್ನು ತಿಳಿಸುವ ಶಾಸ್ತ್ರ; ವ್ಯಾಕರಣಶಾಸ್ತ್ರ: ಅಭಿಮತಜೈನೇಂದ್ರವಚೋವಿಭವಂ ಶಬ್ದಾನುಶಾಸನಪ್ರಭವ ವಚೋವಿಭವಮೊಡನೆಸೆಯೆ ರಂಜಿಪಂ . . . ಕವಿರತ್ನಂ (ಅಜಿಪು. ೧೨-೪೩). ೨. ಭಟ್ಟಾಕಳಂಕನು ಸಂಸ್ಕೃತದಲ್ಲಿ ರಚಿಸಿದ ಕನ್ನಡ ವ್ಯಾಕರಣಗ್ರಂಥ: ಅತ್ಯಮದೆಂತೆಂದೊಡೆ- ಶಬ್ದಾನುಶಾಸನದಲ್ಲಿ . . . ಅತ ಓಷ್ಠ್ಯೇ . . . ಎಂಬುದಾಗಿ ಅಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ, ವತ್ವಸಂಧಿಯಾಗುವುದು (ಶಮದ. ೫೫ ಟೀಕೆ). [ಸಂ.]

ಶಬ್ದಾರ್ಥ (ನಾ). ಪದದ ಅರ್ಥ, — ಅಭಿಪ್ರಾಯ: ಇರೆ ಶಬ್ದಾರ್ಥಗಳ್ ತತ್ಪರತೆಯಿನದು ಕಾವ್ಯಂ (ಕಾವ್ಯಾವ. ೪೩೦). [ಸಂ.]

ಶಬ್ದಾಲಂಕಾರ, ಶಬ್ದಾಳಂಕಾರ (ನಾ). [ಕಾವ್ಯಮೀ] ಅನುಪ್ರಾಸ, ಯಮಕ ಮೊದಲಾದ ಶಬ್ದಪ್ರಧಾನವಾದ ಅಲಂಕಾರ: ಅವಱೊಳ್ ಶಬ್ದಾಲಂಕಾರ ವಿಭಾಗಂ ಯಮಕಮುಸವನುಪ್ರಾಸಂ ಚಿತ್ರವಿಚಿತ್ರ ಭಿತ್ತಿವಕ್ರೋಕ್ತಿವಿಶೇಷಮುಮನ ಚತುರ್ವಿಧಂ ತಾನಕ್ಕುಂ (ಕಾವ್ಯಾಪ. ೫೨೪); ಶಬ್ದಾಲಂಕಾರಗಳು, ಸದ್ವಿಗೋಸ್ಕರ ಕಟ್ಟಿಕೊಂಡಿರುವ ಗೆಜ್ಜೆ ಪಾಡಗಗಳಂತಿರುವುವೆಂದು ಹೇಳಬಹುದು (ಕೈಪಿ. ೨೪೮). **ಶಬ್ದಾಳಂಕಾರ:** ಮುನ್ನಂ ಶಬ್ದಾಳಂಕಾರಂ ನಿಶ್ಚಿತಮಕ್ಕೆ ಪೇಟ್ಟು ಮಾಟ್ಕೆಯೊಳ್ (ಕವಿರಾ. ೨-೩). [ಸಂ.]

ಶಬ್ದಾವೃತ್ತಿದೀಪಕ (ನಾ). [ಕಾವ್ಯಮೀ] ದೀಪಕಾಲಂಕಾರದಲ್ಲಿ ಒಂದು ಬಗೆ; ಯಾವುದಾದರೂ ಪದ್ಯ ಅಥವಾ ಗದ್ಯಭಾಗದಲ್ಲಿ, ಒಂದೇ ಪದವು ಬೇರೆ ಬೇರೆ ಅರ್ಥಗಳಲ್ಲಿ ಮತ್ತೆ ಮತ್ತೆ ಚಮತ್ಕಾರವಾಗುವಂತೆ ಬರುವುದು: ಇದು ಅರ್ಥಂ ಬೇಱುಗಿರ್ದೊಡಂ ಶಬ್ದಂ ಬಳಸಿವರೆ ಶಬ್ದಾವೃತ್ತಿದೀಪಕಮೆಂದುಂ (ಅಪ್ರಯ. ೫೮-೧೬); ಉದಾ: ಚುರ್ಚೆ ಮಹೀಶೂರ ಬಾಣಮಿರ್ಚಿದೆ ಕೆಳದಿಯವರೆಱಗಿ ನರಪತಿಗಳ್ಕಿಂ ಕರ್ಚಿದರಡಿಯುಂಗುಟಮಂ ಕರ್ಚಿದರೊಡನುಗುವ ಸೊಗದ ಕಣ್ಗೇರ್ವೊನಲಿಂ (ಅಪ್ರಯ. ೫೮-೫೩). [ಸಂ.]

ಶಬ್ದಾಳಂಕಾರ 'ಶಬ್ದಾಲಂಕಾರ' ನೋ.

ಶಬ್ದಿಸು (ಕ್ರಿ). ಧ್ವನಿಮಾಡು; ಶಬ್ದಮಾಡು: ರಾಜಕುಮಾರನ ಪ್ರಯಾಣಸೂಚಕವಾಗಿ ಭೇರಿಯು ಶಬ್ದಿಸಿತು (ನಾಗಕಾ. ೫೨). [ಶಬ್ದ + — ಇಸು]

ಶಬ್ಬಿ, ಶೆಬ್ಬಿ, ಸೆಬ್ಬೆ (ನಾ). ಮೃದುವಾಗಿರುವುದು; ಹದವಾದುದು: ರೊಟ್ಟಿ ಬಹು ಶಬ್ಬಿಯಾಗಿಹುದು; ಬಿಸಿ ಬಿಸಿ ರೊಟ್ಟಿ ಮೆಲ್ಲನೊಳಗಡೆ ಬಂದು ಸುತ್ತ ನೋಡಿತು ನಾಯಿ (ಕಾವರ. ೪೧-೨೩); ಮಳೆಯಲ್ಲಿ ನೆನೆದು ಮತ್ತಗಾಗಿ ನನಗೆ ತಿನ್ನುವುದಕ್ಕೆ ಶಬ್ಬಿಯಾಗಿತ್ತು (ಕಥಾಮಂ. IV. ೪೦). **ಶೆಬ್ಬಿ:** ಉದ್ದಿನ ಬೇಳೆಯನ್ನು ಒಡೆದು ಹೂಟ್ಟಿಲ್ಲದೆ ತೊಳೆದು ಶೆಬ್ಬಿಯಾಗಿ ರುಬ್ಬಿ (ಕಥಾಮಂ. IV. ೧೪). **ಸೆಬ್ಬೆ:** ಮಳೆಯಾಯಿತು. ಹೊಲ ಉಳುಮಗೆ ಸೆಬ್ಬೆಯಾಗಿಲ್ಲ (ರೂಢಿ). [ದೇ. ॥ ತಮಿ. ಚೆವ್ವಿ, ಚೆವ್ವೈ. / ಮರಾ. ಚವ]

ಶಮ (ನಾ). ೧. ನೆಮ್ಮದಿ; ಶಾಂತಿ; ಸಮಾಧಾನ: [ಶ] [ಪಾಠಾಂ.ಸ]ಮಮನ ಕೆಯ್ಯೊಳ್ಮೊಡೆ ಬಿಲ್ಲುಮಂಬುಮಂ ಬಿಸುಟು ತಪಕೆ ನೀಂ ಬಗೆವೂಡ ವಿಕ್ರಮಮಂ ಪಗೆಯಂ ಕಿಡಿಸುವ ಶ[ಪಾಠಾಂ. ಸ]ಮದಿಂ ಮುನಿಗಾಯ್ತು ಸಿದ್ಧಿ ಭೂಪತಿಗಾಯ್ತೇ (ಪಂಪಭಾ. ೭-೫೧); ಚೈತನ್ಯದಗ್ನಿಕಣಸ್ತಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ ಶಮದ ಸುಂದರದ ಸಾತ್ವಿಕದ ಗಾಂಭೀರ್ಯವದು ನಮಗೊಂದು ದೇವನಿಧಿ (ಮಂಕುಕ. ೧೧೨). ೨. ಮನೋನಿಗ್ರಹ: ಅಂತಃಕರಣನಿಗ್ರಹವೇ ಶಮವೆಕ್ಕುಂ (ವಿವೇಕ. ೧೫). ೩. [ದ್ವೈತ] ನಲವತ್ತು ಬಗೆಯ ಗುಣಗಳಲ್ಲಿ ಒಂದು: ಶಮ ದಮ ದಯೆ... ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದೂ. ೨೭೫). ೪. [ಕಾವ್ಯಮೀ] ಶಾಂತರಸಕ್ಕೆ ಕಾರಣವಾದ ಸ್ಥಾಯೀಭಾವ: "ರತಿಃ, ಹಾಸಃ... ವಿಸ್ಮಯಃ, ಶಮಃ — ಈ ೯ ಸ್ಥಾಯೀಭಾವಂಗಳ್" (ಹಲಾಯು. ೧೬-೯೧). [ಸಂ.]

ಶಮನ (ನಾ). ೧. ಶಾಂತಗೊಳಿಸುವುದು; ಸಮಾಧಾನಗೊಳಿಸುವುದು. ೨. ನಿವಾರಣೆ; ಪರಿಹಾರ: ಯಾವ ಹಾವಿಯು ತಪ್ಪೂ ಯಾವ ಹಾದಿಯು ಒಪ್ಪೂ ಎಂಬ ಶಂಕೆಗ ಎಲ್ಲಿ ಶಮನವೆಂದ! (ಕಠಶ್ರಾ. ೮೯-೧೮). ೩. ನೋವು, ರೋಗ ಮೊದಲಾದುವನ್ನು ತಗ್ಗಿಸುವುದು, - ಕಡಮೆ ಮಾಡುವುದು: ಔಷಧವೆಂಬುದು ಶೋಧನವೆಂದೂ, ಶಮನವೆಂದೂ ಸಂಕ್ಷೇಪದಿಂದ ಎರಡು ತೆರನಾಗಿರುವುದು (ಸಕವ. ೧೮). ೪. ನಾಶಗೊಳಿಸುವುದು; ಲಯಗೊಳಿಸುವುದು. ೫. (ಯಜ್ಞ ಯಾಗಾದಿಗಳಲ್ಲಿ ಪ್ರಾಣಿಗಳನ್ನು) ಕೊಲ್ಲುವಿಕೆ; ಬಲಿಕೊಡುವಿಕೆ. ೬. ದಕ್ಷಿಣ ದಿಕ್ಕಿನ ಅಧಿಪತಿ; ಯಮ: ಶಮನನಂ ಕಳುಹಿದನು ಹರನು (ಬಸಪು. ೪೧-೨೯); ಸುರಪ ಶಿಖಿ ಶಮನ ನೈಋತಿ ವರುಣಾನಿಲ ಧನಪತೀಶರೊಲವಿಂ ಕೆದರ್ದಂತಿರೆ... ಸಂಧ್ಯಾನಟಂಗ ನೆಗೆದುದು ಭಗಣಂ (ರಾಜಶೇ. ೧೧-೪೨). [ಸಂ.]

ಶಮನ, (ನಾ). ಮೇಲುಹೊದಿಕೆ; ಉತ್ತರೀಯ: ಸಾವಳಗಿಶಿವಲಿಂಗೇಶ್ವರಮಠದಲ್ಲಿ ವಿಶೇಷಸಂದರ್ಭಗಳಲ್ಲಿ ಮಹಮ್ಮದೀಯ ಗುರುಗಳ ಲಾಂಛನವಾದ ಹಸಿರು ಸಿಲೇಮನಿ, ಶಮನ, ಟೊಪ್ಪಿಗೆಗಳ ಧಾರಣೆಯಾಗುತ್ತದೆ (ಶರಚ. ೭೧೧). [?]

ಶಮನಶಮನ (ನಾ). ಯಮನಿಗೆ ಯಮನಾದವನು; ಶಿವ: ಶಮನಶಮನ ಜಿತಕಾಮ... ವಿರೂಪಾಕ್ಷ ಕರುಣಿಸುವುದು (ಪಚಕಾ. ೧-೩). [ಸಂ.]

ಶಮನಿಸು (ಕ್ರಿ). ಶಾಂತವಾಗು; ಸಮಾಧಾನಗೊಳ್ಳು: ರಮಣಿ ಒಬ್ಬಳು... ವೀರಮೂರ್ತಿಯ ಬಳಿಗೆ ನಿಂದು, ರಮಣನಾ ಮೋರೆಮುಸುಕನು ತೆರೆದಳಂದು, ಶಮನಿಸದು ಗಮನಿಸದು ಕಾಂತಯ ಮುಖಂದು (ಕಬಪು. ೪೮-೩). [ಶಮನ, + — ಇಸು]

ಶಮಲ (ಗು). ೧. ಪಾಪಕರವಾದ; ಅಪವಿತ್ರವಾದ: ವಿಮಲಮತಿ ದುಷ್ಕಾರ್ಯಮಂ ಕಾರ್ಯರೂಪನಿಸಿ ಶಮಲಪಾತಕವನಂ ಪುಣ್ಯಮೆನಿಸುತಂ (ಪಂಕಾಗಾ. ೨-೩೪-೧). (ನಾ). ೨. ಮಲ; ಅಮೇಧ್ಯ: "ವರ್ಚಃ... ಪುರೀಷಂ, ಶಮಲಂ, ಮಲಂ - ಈ ೧೩ ವಿಷ್ಟ" (ಹಲಾಯು. ೧೦೫-೧೫). ೩. ದೋಷ; ಕುಂದು: ಧೃತಿಹೃದಯ ಮಹೌಘಶಮಲ ವ್ರಾತ ಪರ್ವತವಜ್ರನನು... ನನೆವುದು (ನಿಭಾಗ. ೩-೧೩-೩೯). [ಸಂ.]

ಶಮಶೇರಿ 'ಶಂಶೇರು' ನೋ.

ಶಮ್ಯೆ, (ನಾ). ೧. ಬನ್ನಿಯ ಮರ: "ಶಮಿಯೆನ ಬನ್ನಿಯಕ್ಕು" (ಮಂಗರಾ. ೩೫-೧೩); ಸಾಲ ಶಮಿ ಗುಗ್ಗುಳ ಮಧೂಕಾಶೋಕ ಬಿಲ್ವಾಮಲಕ ಜಂಬೀರಾದಿಗಳು ನುಗ್ಗಾಯ್ತು ನಿಮಿಷದಲಿ (ಕುಮಾಅ. ೧೮-೩೬); ಶಾಂತಾತ್ಮ ನಿನ್ನ ಸುತೆ... ಮರೆದಬಳಂತಶ್ಶಿಖಿಯಾದ ಶಮಿಯವೋಲ್ (ಶಾಕುಂತ. ೪೯-೮೨). ೨. ಕಾಳುಗಳ ಅಥವಾ ಧಾನ್ಯಗಳ ಮೇಲಿನ ಸಿಪ್ಪೆ, — ಹೊಟ್ಟು. ೩. ಕಾಯಿ; ಅಪಕ್ವಫಲ: "ಶಮಿ ಬೀಜಕೋಶಮನೆ ಕಾಯ್ಗೆ ನಾಮಂ" (ಮಂಗರಾ. ೩೩-೬). ೪. ಕರಿಯ ಜಾಲಿಮರ: (ಕ).

[ಸಂ. ಶಮಿ, ಶಮೀ]

ಶಮ್ಯ, (ಗು). ೧. ನೆಮ್ಮದಿಯಿಂದ ಕೂಡಿದ; ಶಾಂತವಾದ. (ನಾ). ೨. ಶಾಂತಸ್ವಭಾವದವನು: ಏಕಾಕಿ, ಪರಮಶಮಿ ಆಗಿ ನಮ್ಮೀ ಮನವು ನಿನ್ನ ನೆಲೆಯಲ್ಲಿಯೇ ನೆಲೆಸಬೇಕು (ಅರಳು. ೨೩೩-೧೩). [ಸಂ. ಶಮಿನ್]

ಶಮಿತ (ಗು). ೧. ಶಾಂತಗೊಳಿಸಿದ. ೨. ನಿವಾರಿಸಿದ. ೩. ಸಂಹರಿಸಿದ; ಕೊಂದ: ಶಮಿತಶಮನೇ ಶೈವಾಧಾರೇ ಶಿವೇ ಶಿವಾರಿಣೇ ದಮಿಸು ಭವಮಂ ಧರ್ಮಾಕಾರೇ ದಯಾವತಿ ಪಾರ್ವತೀ (ವೃಷವಿ. ೪-೧೨೭). [ಸಂ.]

ಶಮಿಸು (ಕ್ರಿ). ೧. ಶಾಂತಗೊಳಿಸು; ಸಮಾಧಾನಗೊಳಿಸು: ಯುಕ್ತಿಯಿಂ ಕರಣಚೇಷ್ಟಿತವ ತಿದ್ದುತೆ ಶಮಿಪ ಶಕ್ತಿವಂತನ ಮುಕ್ತ (ಮಂಕುಕ. ೬೪೭). ೨. ಲಯವಾಗು: ಎದೆಯ ಹಾಲಿನಲಿ ಬಗೆಯ ಸಕ್ಕರೆಯ ಹರಳು ಕರಗುತಿಹುದು. ತೇಜದಲ್ಲಿ ತಮ ಶಮಿಸಿ ಸೋಮ ರಸಿಕತೆಯೊಳರಗುತಿಹುದು (ಹೃದಸ. ೯-೨೦).

[ಶಮನ, + — ಇಸು]

ಶಮೀಪೂಜೆ (ನಾ). (ವಿಜಯದಶಮಿಯ ದಿನ) ಬನ್ನಿಯ ಮರಕ್ಕೆ ಮಾಡುವ ಪೂಜೆ, — ಅರ್ಚನೆ: ಮಹಾರಾಜರು ಪುಷ್ಪಕದಿಂದ ಇಳಿದು, ವಿಜಯದಶಮಿಯ ಶಮೀಪೂಜೆಗೆ ಸಿದ್ಧರಾಗಿದ್ದಾರೆ (ಚಂದಯ. ೧೦೩). [ಸಂ. ಶಮೀಪೂಜಾ]

ಶಮೆ (ನಾ). ಮನೋನಿಗ್ರಹ: ಆ ಮಹಾದೇವರುದರದೊಳು...: ಶಮೆ ದಮೆ ಶಾಂತಿ ದಾಂತಿ... ಸದ್ಗುಣಸ್ತೋಮವೆಲ್ಲಂ ನೆರೆದು ರೂಪಾದುದು (ಪಚಕಾ. ೧-೧೨); ಅಂತರಿಂದ್ರಿಯನಿಗ್ರಹವೆ ಶಮೆ (ಗಗಾಶ. ೩-೨೫). [ಸಂ. ಶಮ]

ಶಮ್ಮ 'ಸಮ್ಮ' ನೋ.

ಶಮ್ಯಾಕ (ನಾ). ಕಕ್ಕೆಗಿಡ: "ಕೃತಮಾಳಂ ಶಮ್ಯಾಕಂ ಚತುರಂಗುಳವೆಂಬುದಕ್ಕು ಮಾರಗ್ವಧದೊಳ್" (ವಸ್ತುಕೋ. ೩೫-೧೩); ಶಮೀ ಶಮ್ಯಾಕ ಜಂಬಾಳಡಂಬದಿಂ... ನಿಚುಳಾಕ್ಷೋಣಂಗಳಿಂದೊಪ್ಪುಗುಂ (ವರ್ಧಮಾ. ೫-೪೮). [ಸಂ.]

ಶಮ್ಯಾರಮ್ಯ (ನಾ). ೧. ಬನ್ನಿಯ ಮರಗಳಿಂದ ಶೋಭಿಸುವುದು. ೨. ತಾಳವಾದ್ಯಗಳಿಂದ ಇಂಪಾದುದು. ೧, ೨: ತಾಳಪಾತವಿಧಿಯಂತೆ ಶಮ್ಯಾರಮ್ಯಮುಂ ತಳೋಪಲಾತಮುಂ... ಅಲ್ತು (ಚಂದ್ರಪ್ರ. ೫-೫೨ ಪ).

[ಸಂ. (ಶಮಿ + ಆರಮ್ಯ; ಶಮ್ಯಾ + ರಮ್ಯ)]

ಶಮ್ಯೆ (ನಾ). ೧. ನೊಗದ ಕಣ್ಣಿಗೆ ಸೇರಿಸುವ ಬೆಣೆ: "ಶಮ್ಯಾ, ಯುಗಕೀಲಕಃ — ಈ ೨ ಕಳಿಯಡಕು" (ಹಲಾಯು. ೯೪-೪೨೧). ೨. ದಂಡ; ಕೋಲು. ೩. ಒಂದು ಬಗೆಯ ಕಂಚಿನ ವಾದ್ಯ; ತಾಳ. [ಸಂ. ಶಮ್ಯಾ]

ಶಯ (ನಾ). ೧. ನಿದ್ರಿಸುವುದು. ೨. ನಿದ್ರೆ. ೩. ಹಾಸಿಗೆ ; ಮತ್ತೆ. ೪. ಕೈ ; ಹಸ್ತ: ''ಪಾಣಿಃ, ಶಯಃ, ಪಂಚಶಾಖಃ, ಕರಃ, ಹಸ್ತಃ – ಈ ೫ ಕೆಯ್'' (ಹಲಾಯು. ೪೪-೩೩೭). [ಸಂ.]

ಶಯನ (ನಾ). ೧. ಮಲಗಿರುವಿಕೆ ; ಪವಡಿಸಿರುವಿಕೆ : 'ಶಯನಂಗೆಯ್' ಪರಾ. ೨. ನಿದ್ರೆ : ಶಯನ ಕ್ಲೇಶದೊಳನ್ನಪಾನಗಮನಾಯಾಸಂಗಳೊಳ್ ನಿನ್ನ ಸೇದೆಯುಮುಂ ನೋಡದತಿಪ್ರಯತ್ನಪರಿಚರ್ಯಾರಂಭದಿಂ ಸೀತೆಯುಮಂ ರಾಮನುಮಂ ಸಮಾಹಿತಮನರ್ಮಾಡೆಂದು ಸಂಪ್ರೀತಿಯಿಂ ಪ್ರಿಯದಿಂ ಪ್ರಾರ್ಥಿಸಿದಳ್ (ಪಂಪಾಮಾ. ೬-೧೭೬) : ಅಯನ ನೋಡಿದ್ದೂ ಇಲ್ಲ, ಶಯನ ಮಾಡಿದ್ದೂ ಇಲ್ಲ (ಗಾದ). ೩. ಹಾಸುಗೆ ; ಮೆತ್ತೆ : ''ಶಯ್ಯಾ, ಶಯನೀಯಂ, ಶಯನಂ – ೩ ಹಾಸಿಗೆ'' (ಸಿದ್ಧಾಂತ. ೨೯೦). ೪. ಮಂಚ ; ಪರ್ಯಂಕ : ''ಶಯನಮಾ ಪರಿಯಂಕಮಾ ಶಯ್ಯೆಯೆನೆ ಮಂಚಮೆಸಸಿಕ್ಕು'' (ಪುಂಗರಾ. ೬೦-೧೭). ೫. ಕೂಟ ; ಸಂಭೋಗ. ೬. ನೆಲೆ ; ಆಶ್ರಯಸ್ಥಾನ : ''ಶಯನಂ ಸ್ಥಾನಮೆನೆ ಈವಿಗತಿಶಯಮದಕ್ಕುಂ'' (ಪುಂಗರಾ. ೧೩೪-೩೧). ೭. ರೀತಿ ; ಕ್ರಮ : ''ಶಯನಂ, ಸ್ಥಾನಂ – ಈ ೨ ಬಗೆ'' (ಹಲಾಯು. ೧೨೫-೨೭). [ಸಂ.]

ಶಯನಂಗೆಯ್ (ಕ್ರಿ). ಮಲಗು ; ಪವಡಿಸು : ಪರ್ಯಂಕಾಗ್ರದೊಳೊಪ್ಪಿ ನಾಡೆ ಶಯನಂಗಯ್ದುರ್ದು ಮಂತ್ರಾತ್ಮಕಂ... ಗುಣಾಧಿಕಂಗಳನಣಂ ತೋರ್ಪಂತೆ ಸಂಚೇಷ್ಟಿಪಂ (ಹಮ್ಮೀರ. ೨-೨೯). [ಶಯನ + ಕೆಯ್]

ಶಯನಗೃಹ (ನಾ). ಮಲಗುವ ಕೋಣೆ ; ಸೆಜ್ಜೆಮನೆ : ''ಅಂತಃಪುರಂ . . . ರಾಜ್ಞೀನಿವಾಸಮವರೋಧಂ ಮತ್ತಂತದು ಶಯನಗೃಹಂ'' (ಪಜ್ಞಕೋ. ೪೮-೧೪). [ಸಂ.]

ಶಯನಸದನ (ನಾ). = ಶಯನಗೃಹ : ಪುಷ್ಕಲಾವತಿಯೆಂಬ ಶಯನಸದನಮುಂ ಕುಬೇರಕಾಂತಮೆಂಬ ತವದ ಭಂಡಾರಮುಂ (ಆದಿಪು. ೧೫-೩೭) : ಜಿನನಿರ್ದ ಶಯನಸದನ ಮನನಿಮಿಷವಧು ಮೂಮ ಭಕ್ತಿಯಿಂ ಬಲಗೊಳುತಂ . . . ಬಳಸುವಂಚೆಯಂ ನೆನೆಯಿಸಿದಳ್ (ಪುಪ್ರಪು. ೧೦-೧೭). [ಸಂ.]

ಶಯನಸ್ಥಾನ (ನಾ). ೧. ಮಲಗುವ ಜಾಗ, – ಸ್ಥಳ : ''ಪಟ್ಟಿ–ಶಯನಂ; ಶಯನಸ್ಥಾನಂ'' (ಶಮದ. ವಂ. ೧) ; ರವಿಸೂನು ದರ್ಭಾಂಕುರದ ಶಯನಸ್ಥಾನದಲಿ ಮಾಡಿದನು ಜಾಗರವ (ಕುವಾಕ. ೮-೯). ೨. = ಶಯನಗೃಹ. [ಸಂ.]

ಶಯನಾಗಾರ (ನಾ). = ಶಯನಗೃಹ : ಶಯನಾಗಾರದಲ್ಲಿ ಜೊತಗಾತಿಯಿಲ್ಲದ ತಾನೊಂಟಿಯಾಗಿದ್ದಾಗ ಅದನ್ನು ಲಕೋಟೆಯಿಂದ ಪೂರ್ತಿತೆಗದು ಕಣ್ಮನ ತಣಿಯುವ ತನಕ ನೋಡುತ್ತಿದ್ದಳು (ಪುನರು. ೩೨೩). [ಸಂ.]

ಶಯನಿಸು (ಕ್ರಿ). = ಶಯನಂಗೆಯ್ : ಲಲನ ಶಯನಿಸುವಮಳಪುಷ್ಪಕನಿಳಯಲಂಬಿತ ರತ್ನಮಾಲಾಕಲಿತಮಣಿಗಣದೀಪವಿಭ್ರಮಕಾಂತಿಯಗ್ಗಳಿಸೆ (ಜಿಪು. ೧೨-೩೭) ; ಭೂಷಣ್, ಕುಮಾರರು . . . ಸುಸ್ನಾದವರಂತ ಶಯನಿಸುವರು (ಕಂಚಿಪು. ೩೭). [ಶಯನ + -ಇಸು]

ಶಯನೀಯ (ಗು). ೧. ಮಲಗಲು ಯೋಗ್ಯವಾದ. (ನಾ). ೨. ಹಾಸುಗೆ ; ತಲ್ಪ : ''ಶಯನೀಯಂ ಪರ್ಯಂಕಂ ಶಯನಂ ಶಯ್ಯಾಖ್ಯೆ'' (ಪಜ್ಞಕೋ. ೪೮-೨೨) ; ಅಸುಕೆದಳಿರಿಂದ ವಿರಚಿಸುತ ಶಯನೀಯಮಂ ಮಿಸುಪ ಭಕ್ತಿಯೊಳೆ ಲಕ್ಷ್ಮಣನಡೆದನು (ಕುಮುರಾ. ೬-೧೦). [ಸಂ.]

ಶಯನೋತ್ಸವ (ನಾ). ದೇವರ ಮೂರ್ತಿಯನ್ನು ಮಲಗಿಸುವ ಒಂದು ಪೂಜಾವಿಧಾನ : ಮುಮ್ಮುಡಿಕೃಷ್ಣರಾಜಒಡೆಯರವರು . . . ಶಯನೋತ್ಸವಕ್ಕೆ ಅಮ್ಮನವರಿಂದ ಸಹಿತವಾದ ಬೆಳ್ಳಿಯ ವೇಣುಗೋಪಾಲಸ್ವಾಮಿಯನ್ನೂ . . . ಪ್ರತಿಷ್ಠ ಮಾಡಿಸಿದರು (ಸುಪಾವಂ. II, ೧೪೩) ; ಮಂಗಳ ಹಾಡಿದ ಮೇಲೆ – ದೇವರಿಗೆ ಶಯನೋತ್ಸವ ಮಾಡಿಸಿದ ಮೇಲೆ ಮತ್ತಲ್ಲಯ ಕೀರ್ತನೆ ? (ಕಭವಿ. ೫೨೫). [ಸಂ.]

ಶಯಾನಕ (ನಾ). ೧. ಮಲಗುವಿಕೆ. ೨. ನಿದ್ರಿಸುವಿಕೆ. ೩. ಒಂದು ಬಗೆಯ ಹೆಬ್ಬಾವು. ೪. ಒತಿಕೇತ ; ಹೆಂಟೆಗೊದ್ದ : ''ಶಯಾನಕಂ ಬಲಿಸೂರ್ಯಮನಲು ಗೂಸುಂಬ'' (ಮಂಗರಾ. ೪೯-೧೨). [ಸಂ.]

ಶಯಾಲು (ಗು). ೧. ನಿದ್ರೆಮಾಡುವ ಸ್ವಭಾವವುಳ್ಳ. (ನಾ). ೨. ನಿದ್ರೆಮಾಡುವ ಸ್ವಭಾವದವನು ; ತೂಕಡಿಸುವ ಸ್ವಭಾವದವನು. ೩. ಒಂದು ಬಗೆಯ ಹಾವು. ೪. ನಾಯಿ. ೫. ನರಿ. [ಸಂ.]

ಶಯು (ನಾ). = ಶಯಾಲು ೩ : ಶೇಷ ಶಯು ವಾಸುಕಿ ರಾಜಿಳಚಾಳನಿಕೇತಂ ಕಟ್ಟಳಿಪುದು ಫಣಿಲೋಕದಂತೆ ತತ್ಕಾಂತಾರಂ (ಆರ್ಜನ. ೬-೩೭) ; ಶಯುದಂಷ್ಟಾ ವಿಷದಂಶವೊಂದೆ ಜತುಗೇಹೋದ್ದೀಪನಂ ತಾನಮೊಂದು . . . ಪೇಟ್ಟ್ಯಾಗಳೊರ್ಮೆಯೊ ಮೇಣೊರ್ಮೆಯೊ ಮೂರ್ಮೆಯೋ ಕುರುಕುಳಪ್ಪಾರಬ್ಧದುರ್ವೃತ್ತಕಂ (ಕಾವ್ಯಾವ. ೩೪೯). [ಸಂ.]

ಶಯ್ಯಾಗಾರ (ನಾ). = ಶಯನಗೃಹ : ಈ ಕೊಠಡಿಗಳು . . . ಅವುಗಳಲ್ಲಿ ಮುಂದಿನದು ಕಾರ್ಯಾಗಾರ, ಹಿಂದಿನದು ಶಯ್ಯಾಗಾರ (ನಂಬಿರು. ೧೮). [ಸಂ.]

ಶಯ್ಯಾಗೃಹ (ನಾ). = ಶಯನಗೃಹ : ಅಲ್ಲಿಂ ತಳರ್ದು ನಿರ್ವರ್ತಿತಸಂಧ್ಯೋಚಿತ ಜನೇಂದ್ರವಂದನಂ ಶಯ್ಯಾಗೃಹಕ್ಕೆ ವಂದನಲ್ಪತಲ್ಪತಲಗತನಾಗಿರೆ (ಜಾಪ್ರಪು. ೨-೪೭) ; ನಗುವ ಸುತ್ತಮುತ್ತಲಿನಗುಡಿಸಿಲನ್ನು ಬೆಳಗಿ ರತ್ನದೀಪರಂಜಿತವಾದ ಸಾಮ್ರಾಟನ ಶಯ್ಯಾಗೃಹವೋ ಎನ್ನುವಂತೆ ಮಾಡಿತು (ಪುಪಾಗ. ೧೫೦). [ಸಂ.]

ಶಯ್ಯಾಗ್ರ (ನಾ). ಹಾಸುಗೆ ; ತಲ್ಪ : ಸೂಸಿರ್ದಳಿಕಂ . . . ಕಣ್ಗೊಳಿಪನ್ನಂ ಲೀಲೆಯಿಂದುಪ್ಪವಡಿಸಿದಳ್ ಹೃದ್ಯಾಂಗಿ ಶಯ್ಯಾಗ್ರದಿಂದಂ (ಜಗವಿ. ೨-೨೮). [ಸಂ.]

ಶಯ್ಯಾತಳ (ನಾ). ಹಾಸುಗೆ ; ತಲ್ಪ : ಒರ್ವಂ ಶ್ರೀವಿಜಯಂ ನೀನೊರ್ವಯ್ ಖಚರೇಶ ಪೊತ್ತು ನಿಂದಿರ್ ದೂರಮತ್ತುರ್ವೀಭರಮಂ ಪೋದುದು ಶರ್ವರಿ ಬೆಳಗಾದುದೇಱ ಶಯ್ಯಾತಳದೊಳ್ (ಶಾಂತಿಪು. ೫-೮೪) : ಬದಗುಳಿಗನ ತೋಳ್ಮಟ್ಟಿದ ಸುದತಿಯೊಳಿಂಬಾಗದಂತೆ ಕೆಟ್ಟುದು . . . ಪತಿಗೆ ಶಯ್ಯಾತಳದೊಳ್ (ಪುಪ್ರೋಚ. ೨-೫೯). [ಸಂ. ಶಯ್ಯಾತಲ]

ಶಯ್ಯಾವಸಥ (ನಾ). = ಶಯನಗೃಹ : ''ಶಯ್ಯಾವಸಥಮೆನೆ ಸೆಜ್ಜೆಮನೆಯಕ್ಕುಂ'' (ಪುಂಗರಾ. ೫೮-೮). [ಸಂ.]

ಶಯ್ಯಾಸದನ (ನಾ). = ಶಯನಗೃಹ : ಶಯ್ಯಾಸದನಕ್ಕುದ್ಘಟನೋಪ್ಮನೆ ನಡತರ . . . ಸೆಜ್ಜೆಯ ಮನೆ ರಯ್ಯಮೆನಲ್ಮಿಗೆ ವಿರಾಜಿಸಿದುದು (ಅಜಪು. ೪-೮೮) ; ಶಯ್ಯಾಸದನ ಗವಾಕ್ಷಮನೊಯ್ಯನೆ ಪೊಕ್ಕುಲಿದು ನೃಪನ ಸುಖನಿದ್ರೆಯ ಕೆಯ್ಯಂ ತೊಲಗಿಸಿತು . . . ಪ್ರಭಾತಸಮೀರಂ (ಪುಷ್ಪಪು. ೪-೨೦). [ಸಂ.]

ಶಯ್ಯೆ (ನಾ). ೧. ಹಾಸುಗೆ ; ತಲ್ಪ : ''ಪಟ್ಟಿ ಸೆಜ್ಜೆಯೆನಲಾದರಿಪ ಶಯ್ಯೆಗೊಪ್ಪುವ ಪೆಸರು'' (ಕ್ಷತ್ರಕ್ಕೆ. ೨೯). ೨. ಮಂಚ ; ಪಲ್ಲಂಗ : ''ಪರ್ಯಂಕಃ, ಶಯನಂ, ಶಯ್ಯಾ– ಈ ೩ ಮಂಚಂ'' (ಹಲಾಯು. ೫೮-೧೫೨) ; ಮಾಂದಳಿರ ತೂಗುಯ್ಯಲೆಯ ಶಯ್ಯೆಯಲಿ . . . ಎಣೆವಕ್ಕಿಗಳ ಹೂಲಿ ಭೋಗಿಸಿದರನುದಿನಂ (ಚಿತ್ರಾಂಗ. ೪೧-೧೧೩೦). ೩. ಮಲಗುವಿಕೆ : ''ಧಾನ್ಯದೊಳ್ ಶಯ್ಯೆಯಲ್ಲಿ ಪೆಸರಕ್ಕು ಸೆಜ್ಜೆಯೆಂಬುದಕೆ'' (ಶಬ್ದಮಂ. ೪೮). ೪. ನಿದ್ರೆ. ೫. ಹೆಂಗಸು ; ಸ್ತ್ರೀ : ''ವಧು ತಲ್ಪಾ ನಿದ್ರಾ ಶಯ್ಯಾಪ್ಯಯಂ'' (ನಾನಾರ್ಥ. ೩೭). ೬. [ಕಾವ್ಯಮಿಗಾ] ಶಬ್ದ ಅಥವಾ ಪದಗಳ ಜೋಡಣೆ : ಭಾವಂ ಭಾವನನ ಪೂವಿನಂಬಿಸಂತ ಮನಮಂ ನಾಂಟಿ . . . ಶಯ್ಯೆರಯ್ಯಮಾಗ ಬಂಧಮಗುಂದಲೆವಡೆಯೆ (ರಾಜಶೇ. ೫-೧೯ ಪ) ; ಪದಗಳಿಗೆ ಇರತಕ್ಕ ಅನ್ಯೋನ್ಯವಾದ ಮೈತ್ರಿಗೆ ಶಯ್ಯೆ ಎಂದು ಹೆಸರು (ಕ್ಷಮಾ. ೨೨೪). [ಸಂ. ಶಯ್ಯಾ]

ಶರ (ನಾ). ೧. ಅಂಬು ; ಸರಳು ; ಬಾಣ : ಶರಮನಿದಂ ಕಡಿಕಡಿದುಡಿದು . . . ರಿಪುಬಲಗಹನಾಂತರಮಂ ಸುಡಲ್ (ಆದಿಪು. ೧೨-೧೦೨) ; ಕೋದಂಡಮಂ ಸೆಳೆದು ಶರಮೂಡಿಗಯ ಪಡಲಿಱಿದು ಕೈಸೂಡೆಯನು ತಿದ್ದಿ . . . ನಱಿ ಮೃತ್ಯುದೇವತೆಗ ಬಿಪ್ಪನಿಱ್ಪೆನೆಂದು ಭೂವಲ್ಲಭಂ ನುಡಿಯೆ (ಪಚಕಾ. ೬-೩೮). ೨. ಒಂದು ಬಗೆಯ ಹುಲ್ಲು ; ಬಿಳಿಯ ಹುಲ್ಲು : ''ಶರಃ, ಮುಂಜಃ – ಇವೆರಡುಂ ಮೊದೆ'' (ಹಲಾಯು. ೨೨-೨೮). ೩. ಹಾಲಿನ ಕೆನೆ. ೪. ಗಾಯ ; ವ್ರಣ. ೫. ನೀರು ; ಜಲ : ''ನೀರಂ ಶರಂ . . . ಪಾನೀಯಮೆಂದಿಂತನಾಕುಳದಿಂದಂ ತಲೆಸಲ್ಸ ನೀರ್ಗ ಪೆಸರಂ ಪರ್ಯಾಯದಿಂ ವಾಗ್ಮಿದರ್'' (ಪಜ್ಞಕೋ. ೨೨-೧). ೧, ೫ : ಸ್ಫುರದ್ವನು ಶ್ರೀಕರ ಚಂಚಲೇಕ್ಷಣಾ ಶರಧ್ಯುಪಾತ್ತೋರುಶರಂ ಘನಸ್ವನಂ ಹರಿಪ್ರಭಂ ನೀರದರಾಜನಟ್ಟದಂ . . . ನಿದಾಘಸಂ (ರಾಜಶೇ. ೪ ೧೦೪). ೬. ಸರೋವರ. ೭. ಶಬ್ದ ; ಧ್ವನಿ. ''ತೃಣ ಬಾಣ ಸರೋವರ ವಾರಿ ನಿಸ್ವನಂ ಕ್ರಮದಿ ಶರಾಹ್ವಯಂ'' (ನಾನಾ. ೩೭). ೮. ತೆನೆಯ ಕಾಳಿನ ಮೇಲಿರುವ ಸುಂಕು, – ಮುಳ್ಳು : ''ಶರದಲ್ಲಿಯುಂ ಕಿಶಾರುಮೆಂಬುದು'' (ಪಲಾಯು. ೧೭೯-೫). ೯. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ : ''ಶರ ಕರಣಮೈದು'' (ಮಂಗರಾ. ೧೦೩-೪) ; ಪಂಚವ್ರತ, ಇಂದ್ರಿಯ, ಶರ,

ವಿಷಯ . . . ಶುಕ್ಲ- ಇಂತಿನಿತುಂ ೫ಕ್ಕೆ ಹೆಸರು (ಪ್ರಪಾ. ೧೦). ೧೦. = ಶರ ಷಟ್ಪದಿ: ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ವಾರ್ಧಕಂಗಳಿಂದಾದು ತೆರಂ (ಛಂದೋಂಬು. ೫-೨೫೯ ಅಡಿಪದ್ಯ). ೧೧. ರುದ್ರಗಣ : ಜಯಕೀರ್ತಿಯು . . . ಬ್ರಹ್ಮ ವಿಷ್ಣು ರುದ್ರ ಎಂಬ ಹೆಸರುಗಳ ಬದಲಾಗಿ 'ರತಿ', 'ಮದನ', 'ಶರ' ಎಂಬ ಹೆಸರುಗಳನ್ನು ಬಳಸಿದ್ದಾನೆ (ಛಂದೋವಿ. ೧೩೦). ೧೨. [ಕಾವ್ಯಮೀ] ಚಿತ್ರಕಾವ್ಯದ ಒಂದು ಬಗೆ; ಬಾಣದ ಆಕಾರಕ್ಕೆ ಹೊಂದುವಂತೆ ಬರೆದ ಪದ್ಯ; ಶರಃ: ಉದಾ : ಸುಂದರಾಕಾರಸಂಪನ್ನನೆಂದುಮೀ ನೃಪನಂದನಂ ನಂದನಂ ಬುಧ ಕೀರಾಳಿವೃಂದಕ್ಕೆ ಸಕಲರ್ತುಕಂ (ಕಾವ್ಯಾವ. ೪೭೧). [ಸಂ.]

ಶರಕರರಸನ (ನಾ). ಐದು ಮತ್ತು ಎರಡು—ಹೀಗೆ ಒಟ್ಟು ಏಳುನಾಲಿಗೆಗಳುಳ್ಳವನು; ಸಪ್ತಜಿಹ್ವ; ಅಗ್ನಿ : 'ಶರಕರರಸನನೇತ್ರ' ಪರಾ. [ಸಂ.]

ಶರಕರರಸನನೇತ್ರ (ನಾ). ಉರಿಗಣ್ಣುಳ್ಳವನು ; ಅಗ್ನಿನೇತ್ರ ; ಶಿವ: ಶರಕರರಸನನೇತ್ರ . . . ಶತಧರ್ಮವಂದಿತಪದಾಂಭೋಜ ಒಲಿದು ಪಾಲಿಪುದೆನ್ನ ಸಂಗಮೇಶ್ವರ ಪ್ರಸನ್ನ (ಪ್ರೌಢಾ. ೧೭-೧). [ಸಂ.]

ಶರಚೌಪದಿ (ನಾ). [ಛಂದ] ನಾಲ್ಕುಪಾದಗಳಾಗಿ ಮಾರ್ಪಟ್ಟ ಶರಷಟ್ಪದಿ: ಶರಚೌಪದಿ : ಶರಷಟ್ಪದಿಯು ಈಚನ ಕವನಗಳಲ್ಲಿ . . . ನಾಲ್ಕುಚರಣಗಳಿಗೆ ತಿರುಗಿದ ರೂಪವು (ಛಂದೋವಿ. ೨೬೭). [< ಸಂ. ಶರಚತುಷ್ಪದೀ]

ಶರಚ್ಚಂದ್ರ (ನಾ). ಶರದ್ಋತುವಿನ ಚಂದ್ರ; ಶರತ್ಕಾಲದ ಚಂದ್ರ: ಅಡಿ ರಕ್ತಾಂಭೋಜಮೆಂಬಂತಿರೆ . . . ಆಸ್ಯಂ ಶರಚ್ಚಂದ್ರನನಿಬಿಸ ಕರಂ ಧನ್ಯೆ (ಸ)ತತ್ಕನ್ಯೆಯಕ್ಕುಂ (ಕೋಕೋಪ. ೧೧-೫೦); ನಿರ್ಮಲ ಶರಚ್ಚಂದ್ರಕಿರಣಗಳಿನಂಬರಂ ಪ್ರೋಲ್ಲಾಸಗೊಳ್ಳಂತ ದಶರಥಂ ಬಗೆಯುರ್ಬಿ (ತ್ರಿಕಾಮಾ. ೧೪-೩೭೦). [ಸಂ.]

ಶರಚ್ಚಂದ್ರಿಕೆ (ನಾ). ಶರತ್ಕಾಲದ ಬೆಳುದಿಂಗಳು : ಶರಚ್ಚಂದ್ರಿಕೆಯ ಬಳಸಿನೊಳಗಣ ಚಂದ್ರಮನಂತಿರ್ದನನುಪಮಂ ಜಿನಚಂದ್ರಂ (ಪುಪ್ರಸ. ೧೧-೩೦). [ಸಂ. ಶರಚ್ಚಂದ್ರಿಕಾ]

ಶರಜನ್ಮ (ನಾ). ಲಾಳದ ಕಡ್ಡಿಯ ಪೊದರಿನಲ್ಲಿ ಹುಟ್ಟಿದವನು ; ಷಣ್ಮುಖ: ಚೂತಫಲಮಂ ಶಂಭು ಪಿಡಿದಿರಲು ಶರಜನ್ಮ ವಾರಣಾಸ್ಯರು ಬೇಡೆ . . . ಮುಂ ಬಂದವರ್ಗೆ ಕೊಟ್ಟಪೆನೆನಲು (ಪ್ರೌಢಾ. ೧-೧೧); ಕರಿಮುಖನಿದು ಪೊಸತೆಂದಂ ಶರಜನ್ಮಂ ಚಿತ್ರಮೆಂದಂ (ರಾಜಶೇ. ೧೪-೧೦೫). [ಸಂ. ಶರಜನ್ಮನ್]

ಶರಜಾಲ (ನಾ). ಬಾಣಗಳ ಗುಂಪು, — ಸಮೂಹ : ಕುರುಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ (ಗದಾಯು. ೪-೪೭) ; ನರನೆಸಲಾವು ದಂಬರವಾವುದವನಿಯದಾವುದರಿಬಲವೆನಲು ಹಬ್ಬಿತು ಪಾರ್ಥಶರಜಾಲ (ಕುವಾದಿ. ೮-೩೩). [ಸಂ.]

ಶರಟು 2ಷರಟು' ನೋ.

ಶರಣ್, ಶರಣು, ಸರಣ್, ಸರಣು (ನಾ). ೧. ಆಶ್ರಯ ; ರಕ್ಷಣೆ : ಶರಣ ಕೈನಗರಿಕೇಸರಿಯೆರಡುಪದಾಂಬುಜಮುಮಿಗಳೆಂಬುದುಮಾಗಳ್ ಹರಿ ಚಕ್ರಂಕೊಳ್ಪದ ನರ ಶರಮುರ್ಚದೆ ದಹನಶಿಖೆಗಳಳರದೆ ಅವನಂ (ಪಂಪಭಾ. ೫-೯೯); ನೀಂ ಶರಣೆಂದು ಬಂದ ರಿಪುಭೂಪಾಳಕ್ಕಳಿಂ ಕಾದು . . . ಒಪ್ಪಿಟ್ಟಪವ್ (ಎಸಾ. XVIII, ೫-೧೫: ಸು. 1082). **ಶರಣು** : ೧. ಭವಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯಾ (ಬಸವ. ೪೭೧); ಇದಕೆ ನುಡಿಯಿನ್ನಿಲ್ಲ ಮೌನವೇ ಶರಣೆಮಗೆ (ತಿಮರ. ದೇ. ೧೭-೮). ೨. ವಂದನೆ; ನಮಸ್ಕಾರ : ಶರಣು ಸಿದ್ಧಿವಿನಾಯಕ ಶರಣು ವಿದ್ಯಾಪ್ರದಾಯಕ ಶರಣು ಪಾರ್ವತಿತನಯ ಮೂರುತಿ ಶರಣು ಮೂಷಿಕವಾಹನ (ಪುರಂದ. ೧-೫ ಪಲ್ಲವಿ); ಶರಣು ನಿಷ್ಕಿಯ ನಿಷ್ಕಲಾಪನೆ (ಗಗತಾ. ೧-೪೩). **ಸರಣ್**: ೧. 'ಸರಣ್ಕೊಗು' ಪರಾ. **ಸರಣು** : ೨. ಮಲೆವದಟರ್ಕ್ಕಡಂಗುವ ಮಹೀಪತಿಗಳು ಸರಣೆಂಣದಿರ್ದ್ದು ಮಂಡಲಿಕ ರಡಂಗದಾಟವಿಕರೊರ್ವ್ವರುವಿಲ್ಲೆನೆ . . . ಆಳ್ದು (ಕಾಲ. ೭೪-೧೨-೧೦; -1170); ಶ್ರೀ ಸಿದ್ಧರಾಮನಾಥ ಸರಣು (ಎಸಾ. XXIII, ೩೦-೧; 1265) ; ನಿಂಗ ಸರಣು ಮಾಡಲ್ಲವಾ ನಾವು ನೀರಿಗಿಳಿಯೋದು? (ನಡದಾ. II , ೧೪೪೦).

ಶರಣುಶರಣು (ದ್ವಿರುಕ್ತಿ): ಶರಣುಶರಣೆಂದೆನ್ನೆ ಲಿಂಗಕೆ ಗುರುವನೆಂದುಂ ಕಾಣೆ . . . ದುರ್ಮಾರ್ಗವಂ ಮಾಣೆ (ಬಸಪು. ೪೧-೭); ತೊಳಲಿ ಬಳಲುವ ಜೀವಭಾವ ದೊಳುಳಿವುದಾವುದು . . . ಸಮರಕೆ ಶರಣುಶರಣೆಂದ (ಕುವ್ಯಾಭೀ. ೩-೪೧). **ಶರಣಾಗು** = ೧. ಆಶ್ರಯ ನೀಡು; ಕಾಪಾಡು: ದೇವರ್ಕಳಿರಾ ವಿದ್ಯಾಧರರ್ಕಳಿರಾ ಶರಣಾಗಿಮಾರಪ್ಪೊಡಮೆನ್ನಂ ರಕ್ಷಿಸಿಂ (ವಡ್ಡಾರಾ. ೫೮-೩೦). ೨. ಮನಸ್ಸನ್ನು ಒಪ್ಪಿಸು; ಸೋಲು: ಅವನು ಶರಾಬಿಗೆ ಶರಣಾದ (ರೂಢಿ). **ಶರಣು ಮಾಡು** = ೧. ನಮಸ್ಕಾರ ಮಾಡು; ಪಾದಕ್ಕೆರಗು: ತನ್ನ ಕಾಲಿಗೆ ತಾನೇ ಶರಣು ಮಾಡಿ ಹರಸಿಕೊಂಡ ಹಾಗೆ (ಗಾದೆ). ೨. ಒಪ್ಪಿಸು ; ಸಮರ್ಪಿಸು : ನಂಮ ಹೆಸರಲ್ಲು ಮಠವ ಕಟ್ಟಿಸಿ ನಿಮಗೆ ಶರಣುಮಾಡಿದ ವಶೀಕೃತ ಮಠದ ಧರ್ಮಕೆ ಹೇರುವ ಮಾನ್ಯದ ಎತ್ತು (ಎಕ. VII. ಶಿವಮೂ. ೨೮-೧೨; 1670) ; ಗೌಡ ಮರಿಯನು ತನ್ನ ಉಂಬಳಿಯಿಂದ ಶರಣುಮಾಡಿದ ಬಗೆಲು ಗ ಟ (ಎಕ. VII. ಶಿವಮೂ. ೨೯-೨೪ ; 1712). **ಶರಣುಹೊಡೆ** = ೧. ನಮಸ್ಕರಿಸು; ತಲೆಬಾಗು: ಎದುರಿಗೆ ಬಂದ ಅವನಿಗೆ ಶರಣುಹೊಡೆದು ಮುಂದಕ್ಕೆ ಹೋದ (ರೂಢಿ). ೨. (ಆಲಂ) ಬಿಡು; ತ್ಯಜಿಸು: ನೌಕರಿಗೆ ಶರಣು ಹೊಡೆಯವುದೇ ವಿಹಿತವೆಂದು, ಅವಳು ನಿರ್ಧರಿಸಿಕೊಂಡಳು (ಸ್ಕೂಲಮಿ. ೪೪): ಮಹೇಶನು ಕಾಲೇಜಿಗೆ ಶರಣುಹೊಡೆದ (ಮಾಲತೀ. ೫). **ಶರಣುಹೋಗು** = ಮೊರೆಹೊಗು: ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕಂತೂ ಪ್ರವಾಸಿಗಳ ಕಥನಕ್ಕೆ ಶರಣುಹೋಗದೆ ಬೇರೆ ಮಾರ್ಗವೇ ಇಲ್ಲವಾಗಿದೆ (ಪ್ರವಾ. II. VIII. ಪ್ರಸ್ತಾವನೆ); ಇದರ ಒಗಟನ್ನು ಬಿಡಿಸಬೇಕಾದರೆ ಇವುಗಳ ಹಳಗನ್ನಡರೂಪಕ್ಕೆ ಶರಣುಹೋಗುವುದು ಅವಶ್ಯಕ (ಸುಪ್ರೋಧ. ೬೧). [< ಸಂ. ಶರಣ]

ಶರಣ (ನಾ). ೧. ಆಶ್ರಯ ; ರಕ್ಷಣೆ : ಭದ್ರಬಾಹುಚರಣಂ ಶರಣಂ (ಮಲ್ಲಿಪು. ೧-೧೧); ಎನಗಭಿಮತಮಂ ವಿಷ್ಣು ನೆಗಟ್ಟದೊಡೆಮಗದಾರ ಚರಣಂ ಶರಣಂ (ಜಗವಿ. ೧-೩೪); ಸಕಲಭಯಹರನೆ ನಿನ್ನಭಯಕರಂ ಸಂಸಾರವಾರ್ಧಿತರಣಂ ಶರಣಂ (ಮಪ್ರವಂ. ೧೭-೧೨೧). ೨. ಕಾಪಾಡುವವನು; ರಕ್ಷಕ. ೩. ಮನೆ; ನಿವಾಸ: ಕೃತಾಂತಶರಣಂ ಶರಣಂ ಶರಣಂ ಮುರಾರಿಗಾರಿಂದಜೀವೆಂ (ಜಗವಿ. ೧೭-೩೩). ೪. ದೇವರಿಗೆ ತನ್ನನ್ನು ಸಮರ್ಪಿಸಿಕೊಂಡವನು ; ಭಕ್ತ: ರಾಘವಂ . . . ಲಂಕಾಧಿಪತ್ಯಮಂ ಶರಣಂಗೊಪ್ಪಿಸಿ ತಾಂ ಸೀತಾಸಮೇತಂ ಅಯೋಧ್ಯೆಯೊಳರಸು ಗೆಯ್ಯುತಿರ್ದಂ (ರಾಮಾಶ್ವ. ೧೭-೧೪). ೫. [ವೀಶೈ] ಶಿವಭಕ್ತ; ಶಿವಶರಣ: ಅಱಿದಱಿದು ನಿಮ್ಮ ಶರಣನು ಆಚರಿಸುವಾಚರಣೆಯ ಕಂಡು ಕಣ್ಣೆಱೆದೆನಯ್ಯಾ (ಬಸವ. ೫) ; ಶರಣರೇ ಕುಲದೈವವೆಂದು ಕೊಂಡಾಡುತಂ ಶರಣರ್ಗೆ ವಂಚನೆಯದಿಲ್ಲೆನಿಸಿ ಮಾಡುತಂ (ತಿಮರ. ದೇ. ೯-೧) ; ಶರಣರ ಬಾಳು ಮರಣದಲ್ಲಿ ನೋಡು (ಗಾದೆ). ೬. ಷಟ್ಸ್ಥಲಗಳಲ್ಲಿ ಒಂದು; ಐದನೆಯ ಸ್ಥಲ : ಐಕ್ಯ ಶರಣವೆಂಬ ಸ್ಥಲದ್ವಯವು ಕಾರಣಶರೀರದಲ್ಲಿ ಪ್ರಾಜ್ಞ ಜೀವಾಶ್ರಿತವಾಗಿರುವುದು (ಶಿವಾಸೂ. ೫೦-೧೪ ಟೀಕೆ); ಈ ಭಕ್ತಿ ಮಾರ್ಗವನ್ನು ಅನುಸರಿಸುತ್ತಾ ಹೋದರೆ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಆಧ್ಯಾತ್ಮಿಕಸ್ಥಾನಗಳನ್ನು ಹೊಂದುತ್ತಾನೆ (ಪಾರದ. ೨೧೭).

ಶರಣದೇಹಿಕದೇವ = ಭಕ್ತರನ್ನು ತನ್ನ ದೇಹವಾಗಿ ಉಳ್ಳವನು; ಒಂದು ಬಿರುದು : ಶರಣದೇಹಿಕದೇವನೆಂಬೀ ಬಿರುದ ಮೆಱೆಯಲು ರಾಯಭಾರವ ಧರಿಸಿ ಕೌರವನರಮನೆಗೆ ನಡೆತಂದನಸುರಾರಿ (ಕುವ್ಯಾಉ. ೮ಸೂಚನೆ); ಶರಣದೇಹಿಕದೇವನೆನಿಸುವ ಬಿರಿದ ಧರಿಸಿ (ಗಗತಾ. ೫-೨೫). **ಶರಣಪತಿ ಲಿಂಗಪತಿ** = [ವೀಶೈ] ಶಿವನಿಗೆ ಸರ್ವಸಮರ್ಪಣೆ ಮಾಡಿಕೊಳ್ಳುವ ಭಕ್ತಿಭಾವ ; ಸತಿಪತಿ ಭಾವ : ಲಿಂಗವ ಗೆಲುವರೆ ಶರಣಸತಿ ಲಿಂಗಪತಿ ಎಂಬುದೊಂದಲಗು ಸಾಲದೆ ಎನಗೆ ನಿನಗೆ ಜಂಗಮಪ್ರಸಾದವೆಂಬಲಗು ಸಾಲದೆ (ಬಸವ. ೭೩೪). [ಸಂ.]

ಶರಣಂಬಡೆ (ಕ್ರಿ). ಆಶ್ರಯವನ್ನು ಪಡೆ; ರಕ್ಷಣೆಯನ್ನು ಹೊಂದು : ಎನ್ನೊರ್ವನನೆ ನಂಬಿ ಶರಣಂಬಡೆಯೆ (ಮಪ್ರವಂ. ೧೫-೧೧೧). [ಶರಣ + ಪಡೆ]

ಶರಣಮಾರ್ಗ (ನಾ). ಶರಣುಹೋಗುವ ಮಾರ್ಗ: ಸಾಧಕನು ಪರಮಾತ್ಮನಿಗೆ ಪೂರ್ಣ ಶರಣಾಗತನಾಗುವುದರಿಂದ ಇದು ಶರಣಮಾರ್ಗವೆನಿಸುವುದು (ಮಚಿ. ೬೧). [ಸಂ.]

ಶರಣಸಂಗವ್ಯಸನ (ನಾ). ಭಕ್ತರ ಒಡನಾಟದ ಹಂಬಲವುಳ್ಳವನು: ಶರಣಸಂಗವ್ಯಸನ ಭುಜಗಾಭರಣನಮರಮಂಡಿತಚರಣ ಚಾರುಚರಿತ್ರ . . . ಸಲಹುಗೆ ಭಕುತಜನರನು (ಕುವ್ಯಾಅ. ೧-೨). [ಸಂ.]

ಶರಣಸನ್ಮತ (ನಾ). [ವೀಶೈ] ಶಿವಶರಣರ ಸದಾಚಾರ : ಶರಣಸನ್ಮತ [ಪಾಠಾಂ. ಸನ್ನಿಹಿತ]ವಪ್ಪ ನಿಜಗುಣಭರಿತನಪ್ಪಡೆ ಸತ್ತ್ವ ರಜ ತಮ ಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಯದೊ (ಬಸವ. ೮೫೫) ; ಐಕ್ಯ ಶರಣಸನ್ಮತವಾಗಿ ಶರಣ ಪ್ರಾಣಸನ್ಮತವಾಗಿ . . . ಭಕ್ತನ ಸಮ್ಯಕ್ರಿಸನ್ನದ್ಧನಾಗಿ . . . ನಿಶ್ಚಿಂತನಾದೆಯಲ್ಲಾ (ಮೋಳಿಮಾ. ೧೩೪ ೫೧೮). [ಸಂ.]

ಶರಣಸಾರಾಯ (ನಾ). [ವೀಶೈ] ಶರಣರಲ್ಲಿ ಶ್ರೇಷ್ಠನಾದವನು : ಜೀವತಾಮಸದ ಮಾಯದ ಬಲೆಯ ಭ್ರಾಂತಿಗೆ ಸೋಲುವ ಶರೀರ ಸಂಸಾರಸಂಗವ ಭೇದಿಸಿ ನೋಡುವರೆ ದೂರ ಚಿಂತೆಯನೆ ಗೆಲಿದು ಸುಳಿದಡೆ ಗುಹೇಶ್ವರನೆಂದಱಿದ ಶರಣಸಾರಾಯನು (ಅವಚಂ. ೭೬-೩೩೭). [ಶರಣ + ಸಾರಾಯ್$_2$]

ಶರಣಸ್ಥಲ, ಶರಣಸ್ಥಳ (ನಾ). [ವೀಶೈ] ಷಟ್ಸ್ಥಲಗಳಲ್ಲಿ ಐದನೆಯದು : ಷಡ್ವಿಧವಿಚಾರವಿಡಿದು ಆನಂದಭಕ್ತಿಯಿಂದ . . . ಆಕಾಶದ ಭ್ರಮೆಯನು ಪರಿಣಾಮದಿಂ ತಿಳಿದು ಕರ್ಮನಾಸ್ತಿಯಾಗಿ ಶರಣಸ್ಥಲವನಂಗಂಗೊಂಡುದೀಗ ಸುಜ್ಞಾನದ ನೆಲೆ (ಮಿಶ್ರಾರ್ಪ. ೬೯೦); ವ್ಯೋಮಾಂಗದಲ್ಲಿ ಜ್ಞಾನಹಸ್ತದಿಂದ ಪ್ರಸಾದಲಿಂಗಾರ್ಚನೆ ಪರವಾದುದೇ ಶರಣಸ್ಥಲ (ಶಿವಾಸೂ. ೯೭-೩೭ ಟೀಕೆ). **ಶರಣಸ್ಥಳ** : ಎನ್ನ ಆಪತ್ತು ಸುಖ ದುಃಖವನಿನ್ನಾರಿಗೆ ಹೇಳುವೆ ಶರಣಸ್ಥಳದವರಿಗೆ ಹೇಳಿದರೆ ಮಚ್ಚರ (ಬಸವ. ೩೮೯). [ಸಂ.]

ಶರಣಸ್ಥಳ 'ಶರಣಸ್ಥಲ' ನೋ.

ಶರಣಸ್ಥಾನ (ನಾ). ರಕ್ಷಣೆಯ ಸ್ಥಳ ; ಆಶ್ರಯಸ್ಥಾನ : ಪೃಥ್ವೀಮಹಾವಲ್ಲಿಯಂ ತಾಂ ಬಳಸಿರ್ದಾವಾಲದಂತಿರ್ಪುದು . . . ಕುಲಗಿರಿಶರಣಸ್ಥಾನಮುತ್ಕೀರ್ಣಫೇನಂ (ಜಗವಿ. ೧-೨೩). [ಸಂ.]

ಶರಣಾಗತ (ಗು). ೧. ರಕ್ಷಣೆಗಾಗಿ ಬಂದ ; ಮೊರೆಹೊಕ್ಕ : ಶರಣಾಗತಜನಭರಣಂ ಪರತರಧರ್ಮಂ ತಪಸ್ವಿಗಳ್ಗದಱಿಂದಂ ಪೊರೆಯೆನ್ನಂ (ಕಾದಂಬಾ. ೫೬೯) ; ಭಾಪು ಶರಣಾಗತಜನಾಯುಸ್ಥಾಪನಾಚಾರ್ಯ ಕ್ಷಮಪ್ರಾಣೋಪಕಾರಿಗೆ ಮರಳಿಯುಪಕಾರವನೆ ಮಾಡಲ್ಕೆ ಆಪವೇ ನಾವು (ಬಸಪು. ೩೨-೪೬). (ನಾ). ೨. ರಕ್ಷಣೆ ಪಡೆಯಲು ಬಂದ ವ್ಯಕ್ತಿ; ಆಸರೆಯನ್ನು ಬೇಡಿ ಬಂದ ವ್ಯಕ್ತಿ : ತನಗೆ ಶರಣಾಗತನಾದ ವಿಜಯಾದಿತ್ಯನಂ ಕಾದ ಬಲ್ಲಾಳ್ತನದೊಳ್ (ಪಂಪಭಾ. ೧೪-೩೭ವ); ಲಕ್ಷ್ಮೀಕಾಂತನು . . . ತನ್ನ ಶರಣಾಗತರನೊಂದುಪಾಯದೊಳುಳುಹದಿರನೆಂದು ಧೈರ್ಯಮಂ ತಾಳ್ದರು (ಜೈಮಿಭಾ. ೯-೩೪).

ಶರಣಾಗತಪಡಿಪಂಜರ = ಶರಣಾಗತರನ್ನು ಪಂಜರದಲ್ಲಿಟ್ಟು ರಕ್ಷಿಸುವಂತೆ ಕಾಪಾಡುವವನು ; ಒಂದುಬಿರುದು : ಕಾವ ಮಹಿಮಾಸ್ಪದರೊಳ್ ಶರಣಾಗತಪಡಿಪಂಜರರರವಿಂದೋದರನ ದೊರೆಯ[ರೀ] ಮೂನೂರ್ವ್ವರ್ (ಕಇಆ. ೯೭-೪-೬೦; 12ನೆಯ ಶತ). **ಶರಣಾಗತವಜ್ರಪಂಜರ** = ಶರಣಾಗತರನ್ನು ಭದ್ರವಾದ ಪಂಜರದಲ್ಲಿಟ್ಟು ಕಾಯುವಂತೆ ರಕ್ಷಿಸುವವನು; ಒಂದು ಬಿರುದು : ಪ್ರತಿಪನ್ನಮಂದರಂ ಶರಣಾಗತವಜ್ರಪಂಜರಂ ಶ್ರೀಮತ್‌ಶಾನ್ತಿವರ್ಮರಸರ ವಂಶಾವತಾರ ಮೆಂತೆಂದೊಡೆ (ಸೌಇಇ. XX, ೧೮-೯; 980); ಅತ್ಯುದಾತ್ತಮಹಿಮಂ ಶರಣಾಗತ ವಜ್ರಪಂಜರಂ (ಪಂರಾಮಾ. ೧೦-೨೩೬). [ಸಂ.]

ಶರಣಾಗತರಕ್ಷಣ (ನಾ). ಶರಣಾಗತರಾದವರಿಗೆ ಆಶ್ರಯ ನೀಡುವುದು : ಕ್ಷತ್ರಿಯಜಾತಿಗೆ ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತರಕ್ಷಣ ಪ್ರಹರಣಕ್ಷಮಾದಿ ಗುಣಾಚರಣಮುಮಂ (ಆದಿಪು. ೮-೭೩ವ) ; ಶರಣಾಗತರಕ್ಷಣಮೇ ನರಪಂಗೆ ವಿಶೇಷಲಕ್ಷಣಂ ನಿಶ್ಚಯಂ (ಪಂಚತಂ. ೨೫೦-೨). [ಸಂ.]

ಶರಣಾಗತರಕ್ಷಣೆ (ನಾ). = ಶರಣಾಗತರಕ್ಷಣ: ಧರ್ಮಾಧರ್ಮವಿವೇಕ . . . ಶರಣಾಗತರಕ್ಷಣೆ, ಪರೋಪಕಾರ, ಸಹನೆ ಮುಂತಾದ ಮಾನವಧರ್ಮದ ವಿವೇಚನೆಯೇ ಈ ಕಥೆಗಳ ತತ್ವವಾಗಿದೆ (ಭಾರದ. ೧೦೨). [ಸಂ. ಶರಣಾಗತರಕ್ಷಣ]

ಶರಣಾಗತಿ (ನಾ). ಆಶ್ರಯವನ್ನು ಬಯಸುವುದು ; ಮೊರೆಹೋಗುವುದು : ಜೀವಾತ್ಮನನ್ನು ಪರಮಾತ್ಮನಲ್ಲಿ ನೀನೇ ರಕ್ಷಕನೆಂದು ಒಪ್ಪಿಸುವಿಕೆಯೇ ಶರಣಾಗತಿ (ಭಾರದ. ೨೬೪). [ಸಂ.]

ಶರಣಾಯಾತ (ನಾ). ರಕ್ಷಣೆಯನ್ನು ಬೇಡಿ ಬಂದವನು: ಶರಣಾಯಾತರನೆಯ್ದೆ ಕಾದು ಮುನಿಸಿಂ ಮಾಱಾನ್ತರಂ ಕೊಂದು (ಎಇ. XIII, ೩೨೯-೫; 930); ಶರಣಾಯಾತರ್ಕಳಂ ಕಾವುದು . . . ಕ್ಷತ್ರಧರ್ಮಂ (ಪುಷ್ಪಪು. ೮-೪). [ಸಂ.]

ಶರಣಾರ್ತಿ (ನಾ). ೧. ರಕ್ಷಣೆಯನ್ನು ಬಯಸಿ ಬಂದವನು. ೨. ನಮಸ್ಕಾರ ; ಶರಣು : ಶರಣಾರ್ತಿ ದೇವ ಶರಣೆಂದು ಕಾಲೊಳ್ ಕೆದೆದು (ಇಸರ ದೇ. ೩೩-೨೩); ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ತಿ (ನೀತಿಚಿಂ)

ಶರಣಾರ್ತಿಮಾಡು = ನಮಸ್ಕರಿಸು: ಸಿದ್ಧಬಸವರಾಜದೇವರಿಗೆ ಶರಣಾರ್ತಿಮಾಡಿ ೧೫ ದೇವರಿಗೆ ಕೊಟ್ಟ ದುಗಿಹಟಗ್ರಾಮಾ (ಎಕ. XIV, ಎಳಂದೂ. ೧೫-೧೩; 1511 ?). [< ಸಂ. ಶರಣಾರ್ಥಿನ್]

ಶರಣಾರ್ಥಿ (ನಾ). ೧. = ಶರಣಾರ್ತಿ ೧. ೨. = ಶರಣಾರ್ತಿ ೨ : ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಂಗೆ ಶರಣಾರ್ಥಿ ಎಂಬೆನಯ್ಯಾ ಒಕ್ಕುದ ಕೊಂಬ ಹಂಗಿಂಗೆ (ಬಸವ. ೮೮೭) ; ತಿರಿಗೆ ತಿರಿಗಿದುದು ಬಸವನ ಜೀವವವರೊಡನೆ ಶರಣಾರ್ಥಿ ಯೆಂಬ ನುಡಿ ಶರಣರೊಳು ಸೇರಿತ್ತು (ಬಸರ. ೯-೧೪೫). [ಸಂ. ಶರಣಾರ್ಥಿನ್]

ಶರಣಾರ್ಥಿಸು (ಕ್ರಿ). ರಕ್ಷಣೆಯನ್ನು ಯಾಚಿಸು ; ಸಹಾಯವನ್ನು ಕೋರು : ಜೀಯರಿಗೆ ಒಸಗೆಯೇ ಶರಣಾರ್ಥಿ ಶರಣಾರ್ಥಿಸುವೆನೆನಲೊಡನಂತೊಡನೆ ತಾಪಸವರಂ ಶಿವಮಸ್ತು ಶಿವಮಸ್ತೆಂದು ಪರಸಲ್ಕೆ (ಬಸಪು. ೩೨-೧೪). [ಶರಣಾರ್ಥಿ + — ಇಸ್ಸು$_3$]

ಶರಣಿಸು (ಕ್ರಿ). ೧. ಕಾಪಾಡು ; ರಕ್ಷಿಸು : ಇವನ ಕೊಲ್ಲದೆ ಶರಣಿಸಿದನು (ಬಿಜ್ಜರಾ. ೯-೫). ೨. ನಮಸ್ಕರಿಸು : ಶರಣಿಸಿದನುಜನತ್ತಿಂತೆಂದ ದಶಕಂಠ (ಜಿರಾಮಾ. ೩೭೬-೩೦). [ಶರಣು (< ಶರಣ್) + — ಇಸ್ಸು$_3$]

ಶರಣು 'ಶರಣ್' ನೋ.

ಶರಣುಗತಿ (ನಾ). ಶರಣಾದ ಸ್ಥಿತಿ : ನೀವಿರಿಸಿದ ಮನದಲ್ಲಿ ನಾನಂಜೆನಯ್ಯಾ ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ (ಬಸವ. ಕ. ೭೨೯). [< ಸಂ. ಶರಣಾಗತಿ]

ಶರಣುಗೈ (ಕ್ರಿ). ನಮಸ್ಕರಿಸು : ಶರಣುಗೈದಾ ಬಸವನಿಗೆ ಶಿವಗುರುವು ನೀನೀ ಲೋಕಪಾವನಗರೆಯಲವತಾರವನುಯೆತ್ತಿದೆಯೆನುತಲಿ (ಬಿಜ್ಜಪು. ೫-೩). [ಶರಣು (< ಶರಣ್) + ಗೈ (< ಕೆಯ್$_1$)]

ಶರಣುಪೊಗು 'ಶರಣ್ಬೊಗು' ನೋ.

ಶರಣುವೊಗು 'ಶರಣ್ಬೊಗು' ನೋ.

ಶರಣುಹೊಗು 'ಶರಣ್ಬೊಗು' ನೋ.

ಶರಣೆ (ನಾ). [ವೀಶೈ] ಶಿವಭಕ್ತೆ ; ಶಿವಶರಣೆ : ಅನುಭಾವದ ಗಮನವ ನಾನಱಿಯೆ ಶರಣೆ ಏನಪ್ಪೆನಯ್ಯ (ಮಹಾದೇ. ಬ. ೮೦-೨೦೧) ; ೧೨ನೆಯ ಶತಮಾನದಲ್ಲಿ . . . ಅನೇಕ ಶರಣೆಯರು ವಚನಗಳನ್ನು ಬರೆದರು. ಆಧ್ಯಾತ್ಮಿಕಸಾಧನೆಯಲ್ಲಿ ಶರಣರಂತೆಯೇ ಶರಣೆಯರೂ ಮುಂದುವರಿದಿದ್ದರು (ಶೂನ್ಯಕು. ೧೦೫). [ಶರಣ + - ಎ$_2$]

ಶರಣೆನ್, ಶರಣೆನು, ಶರಣೆನ್ನು (ಕ್ರಿ). ೧. ಶರಣಾಗತನಾದೆನೆಂದು ಹೇಳು,— ನುಡಿ: ಶರಣೆಂದಾರ್ ಬಂದೊಡಂ ಕಾಯಲುಮೆರೆದವರ್ಗಾರ್ತೀಯಲುಂ ಮಾಡಿದಂ (ಅಜಿಪು. ೧೦-೯) ; ಶರಣೆಂಬೀ ಮಾತು ನಿಮ್ಮಲ್ಲಿ ನೆಟ್ಟನೆ ಪುಟ್ಟಿರ್ದೊಡೆ ಸಾಲ್ಬುದಲ್ತೆ (ಶಾಂತೀಶ್ವ. ೮-೩೭) ; ಶರಣೆಂದ ಶೈವಲಾಂಛನಧರರಂ ಬಿಟ್ಟು (ವೃಷವಿ. ೩೪-೧೦೨). **ಶರಣೆನು**: ೧. ಬಸವ ಶರಣೆನೆ ವಚನರಚನಾಸಿದ್ಧಿ ವರ್ಧಿಸುಗು (ಬಸಪು. ೧-೨೫) **ಶರಣೆನ್ನು** : ೨. ನಮಸ್ಕಾರವೆಂದು ಹೇಳು : ಸಿರ ಹಱಿದು ಅಟ್ಟೆ ನೆಲಕ್ಕೆ ಬಿದ್ದರೆ ನಾಲಗೆ ಕೂಡಲಸಂಗಾ ಶರಣೆನ್ನುತ್ತಿದ್ದೀತಯ್ಯಾ (ಬಸವ. ೬೯೧). [ಶರಣ್ + ಎನ್$_1$]

ಶರಣೆನು 'ಶರಣೆನ್' ನೋ.

ಶರಣೆನ್ನು 'ಶರಣೆನ್' ನೋ.

ಶರಣ್ಗೊಳ್ (ಕ್ರಿ). ರಕ್ಷಣೆಗೆ ತೆಗೆದುಕೊಳ್ಳು; ಕಾಪಾಡು: ಪತಿವ್ರತ ಪುರುಷಾನುಕೂಲತೆಯಮವರ್ಗೆ ಸ್ಥಿರದಿ ನೇಮಿಸಿಯಿತ್ತು ಶರಣ್ಗೊಂಡು ಕಳುಪುತ್ತೆ (ನವಮೋ. ೫-೨). [ಶರಣ್ + ಕೊಳ್$_1$]

ಶರಣ್ಬುಗು 'ಶರಣ್ಬೊಗು' ನೋ.

ಶರಣ್ಪೊಗು, ಶರಣುಪೊಗು, ಶರಣುವೊಗು, ಶರಣುಹೊಗು, ಶರಣ್ಬುಗು, ಸರಣ್ಬುಗು, ಸರಣ್ಪೊಗು (ಕ್ರಿ). ರಕ್ಷಣೆ ಹೊಂದು ; ಆಶ್ರಯ ಪಡೆ ; ದುಷ್ಟನಾದೊಡಂ ಶರಣ್ಪೊಕ್ಕನಲ್ಲಿ ಮಹಾಪುರುಷರ್ಗೆ ಪಿರಿದು ಸ್ನೇಹಮುಂಟಾಗಿಹುದು (ಪಂಚತಂ. ೧೦೩-೫) : ದೇವಿ ಕೇಳ್ ನಿಮ್ಮುವನು ಬೆದಱಿಸಿದಾ ವಿಹಂಗಾಧಮನನಾ ನರದೇವನುಳುಹಿದ ಗತಿ ಶರಣ್ಪೊಗಲಿದುವೆ ನಿಶ್ಚಯವೆ (ತೊರರಾ. ೫-೩-೮೫) ; ಶರಣ್ಪೊಗು ಪಿಂದನಱಿದಱಿದು ಪೇಳ್ದೆವು ಕೆಡಲ್ ಬೇಡವೆನೆ ಖಳಂ ಖತಿಯೊಳಂದಿಂತೆಂದನು (ಚಿಬಪು. ೪೮-೪೫). **ಶರಣುಪೊಗು** : ವರುಣ . . . ಶರಣುಪೊಕ್ಕನು ಕಾಯಬೇಹುದು ಹರಣವನು ನೀನೆಂದು (ತೊರರಾ. ೧-೮-೩೬). **ಶರಣುವೊಗು** : ಶಿವಭಾವದಿ ಶರಣುವೊಗಲಾ ಮಹಿಮನಾ ದೇವತೆಗಳಂ ಕಾಯ್ದು ಸಲಹುತ್ತ (ಬಸವು. ೨೩-೧೭) ; ಮುರಾರಿಯ ಶರಣುವೊಕ್ಕರೆ ಸರ್ವಥಾ ಕೊಲ್ಲೆನು ಜಯದ್ರಥನ (ಕುಮಾರ್ಯೂ. ೮-೩೬). **ಶರಣುಹೊಗು**: ಶರಣುಹೊಗೆ [ಜಾಠಾ. ವುಗೆ] ನರರಾದೊಡಂ ಪತಿಕರಿಸಿ ಕಾವರು (ಬಸವು. ೨೮-೧೨); ಶರಣುಹೊಕ್ಕುದು ಬಂದು ಮಕುಟದ ಗರುವರವನೀಪಾಲಕರು (ಕುಮಾರ್ಯೂ. ೧೬-೨೦) ; ಶರಣುಹೊಕ್ಕೆನು ದೇವದೇವರ ಚರಣಕಮಲವನು (ತೊರರಾ. ೨-೨-೧೪). **ಶರಣ್ಬುಗು**: ಶರಣ್ಬುಗಲೆಂದಿರ್ಪ್ಪವನೀಶ್ವರಪ್ರತತಿಯಂ ಕೈಕೊಣ್ಡು (ನೈಷ. XIII. ೩೨೯-೪; 929); ಶರಣ್ಬುಗುವೆನೆಂಬಂತೆ ಮನದೊಳೆಡಗುಡೆಂದಳುಪಂ ತೋಱುವಂತೆ (ಕಾದಂಪೂ. ೭೪೬); ಈಯಲಿಱಿಯಲ್ಕರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರ್ (ಗದಾಯು. ೨-೧೬). **ಸರಣ್ಬುಗು** : ತಂನ ಸರಣ್ಬುಗುವರ್ಗೆ ಲೇಸುಮಂ ಪ್ರೇರಿಸಲೋಸುಗಂ ಜಪಿಸುತಿರ್ಪ್ಪಳ್ (ಎಕ. XI. ರಾಪಣ. ೫೯-೯; 1280). **ಸರಣ್ಪೊಗು**: ಬಡಬಾನಲಂಗೆ ಸೆಡೆದಿಂಗಡಲೆ ಸರಣ್ಪೊಕ್ಕುದಮರಶೈಲಮನೆಂಬೀ ಪಡೆಮಾತಂ ನೀರ್ಗಾದಿಗೆ ಪಡೆಯುತ್ತುಂ (ಸಂರಾಮಾ. ೧-೧೫೩). [ಶರಣ್ + ಪೊಗು]

ಶರಣ್ಯ (ಗು). ೧. ರಕ್ಷಣೆಗೆ ಯೋಗ್ಯವಾದ. (ನಾ). ೨. ರಕ್ಷಣೆ ; ಆಸರೆ. ೩. ಆಶ್ರಯಸ್ಥಳ ; ರಕ್ಷಣೆಯ ಸ್ಥಾನ. ೪. ರಕ್ಷಿಸುವವನು ; ಆಸರೆ ನೀಡುವವನು: ಶರಣಾಯಾತಶರಣ್ಯನಪ್ರತಿರಥಂ ರಾಜಾನ್ವವಾಯ್ಯೆಕವಿಸ್ತರಣಂ ಮಾಗಧಕಲ್ಪಶಾಖಿಮಗಧಾಧೀಶಂ (ಶಾಂತಿಪು. ೫-೧೦೬); ಆಸ್ತಿಕಜನಶರಣ್ಯನಗಣ್ಯಪುಣ್ಯನು ಮುಸುಟೆಚೌಡಾರ್ಯ (ಬಸವು. ೩೨-೬೩). [ಸಂ.]

ಶರತ 'ಶರತ್ತು' ನೋ.

ಶರತ್ಕಾಲ (ನಾ). ವರ್ಷದ ಆರುಋತುಗಳಲ್ಲಿ ಒಂದು ; ಆಶ್ವಯುಜ ಮತ್ತು ಕಾರ್ತಿಕಮಾಸಗಳನ್ನೊಳಗೊಂಡ ಕಾಲ ; ಮಳೆಗಾಲದ ನಂತರ ಬರುವ ಋತು: "ಶರತ್ಕಾಲದೊಳುಪಜನಿತಂ ಶಾರದಂ" (ಪ್ರಬೋ. ೧೧೦-೭೧); ನೆಱೆ ಶೋಭಿಸುವ ಶರತ್ಕಾಲದೊಳ್ಪಿರುಗಿತಧ್ವರಹಯಂ ಧರೆಯ ಮೇಲೆ (ಚಿಮಿಭಾ. ೨೫-೫); ಶರತ್ಕಾಲವು ಚಿತ್ರಗಳ ವೀಕ್ಷಣೆಗೆ ಬಹುಸೂಕ್ತಕಾಲವೆಂದೂ . . . ತ್ರಿವಿಕ್ರಮನು 'ನಳಚಂಪೂ'ವಿನಲ್ಲಿ ಹೇಳಿದ್ದಾನೆ (ಭಾರದ. ೫೨೪). [ಸಂ.]

ಶರತ್ತು, ಶರತ, ಶರ್ಯತ್ತು, ಷರತ್ತು (ನಾ). ೧. ಪಣ; ಪಂದ್ಯ: (ಕ). ೨. ಕರಾರು; ನಿಯಮ ; ನಿಬಂಧನೆ : ಸಾಂಬಾರದ ವಸ್ತುಗಳಿಗೆ . . . ಒಪ್ಪಿದ ಬೆಲೆ ಕೊಡುತ್ತೇನೆಂದೂ, ತಾನು ಇಚ್ಛಿಸಿದ ಕಡೆ ಕೋಠಿಗಳನ್ನು ಕಟ್ಟಲೂ . . . ಗಾಮಾ ಶರತ್ತು ಹಾಕಿದ (ಪ್ರಮಾಕಾ. II. ೨೩೫); ಈ ಒಡಂಬಡಿಕೆಯ ಶರತ್ತುಗಳಲ್ಲಿ ಝಾಂಸಿಯ ರಾಜ್ಯವು ರಾಮಚಂದ್ರರಾಯನ ಕುಟುಂಬದಲ್ಲಿಯೇ ಇರಬೇಕೆಂದೂ . . . ನಿಷ್ಫರ್ಷೆಯಾಯಿತು (ಝಾಂಸಿ ೨). **ಶರತ**: ೨. ಯಾವ ಶರತವೂ ಇಲ್ಲದೆ . . . ವಾಚನ್ನು ನನಗೆ ಕಳುಹಿಸಿಕೊಟ್ಟು ಏನು ಮೋಸಮಾಡಬಲ್ಲನಾತ? (ಮುಂಗಾಮು. ೧೬) : ಹೇಳಿದಷ್ಟು ಸಂಬಳದ ಶರತದ ಮೇಲೆ ಒಬ್ಬಳನ್ನು ಗೊತ್ತುಮಾಡಿದಾಗ (ರೂಪಸಾ. ೧೨). **ಶರ್ಯತ್ತು** : ೧. ಬಹಳ ಉದ್ದವಾದ ಮತ್ತು ಸುಂದರವಾದ ಮಾಸೆ ಇದ್ದವರಲ್ಲಿ ಶರ್ಯತ್ತು ನಡೆದು ಒಬ್ಬನಿಗೆ ಬಹುಮಾನ ದೊರೆಯಿತಂತೆ! (ಚಂದ್ರಹಾ. ೨೮); ಓಡುವ ಶರ್ಯತ್ತಿನಲ್ಲಿ ನಿಮ್ಮನ್ನು ಖಂಡಿತ ಗೆಲ್ಲುತ್ತೇನೆ (ಬದುಜ. ೯೬). **ಷರತ್ತು** : ೨. ಗೆದ್ದವರಿಗೆ ಸೋತವರು ಐದುನೂರುರೂಪಾಯಿ ಕೊಡಬೇಕೆಂಬ ಷರತ್ತು ಬೇರೆ (ಭೀಮಕಾ. ೮). ಆತ ಒಂದು ಷರತ್ತಿನ ಮೇಲೆ ಹಾಡಲು ಒಪ್ಪಿದರು (ಸುಗೀತ. ೧೫). [← ಅರ. ಹಿಂ. ಮರಾ. ಶರ್ತ್]

ಶರತ್ಸಮಯ (ನಾ). = ಶರತ್ಕಾಲ : "ವಸಂತ ಗ್ರೀಷ್ಮಂ ಪ್ರಾವೃಟ್ಶರತ್ಸಮಯಂ ಹೇಮಂತಂ ಶಿಶಿರಮೆಂಬಂತವು ತಾವಕ್ಕುಂ ಋತುಗಳ್ ಮತ್ತಾಱುಂ" (ಪ್ರಾಕೋ. ೧೭-೧೨); ಅಮೃತಮಯೋಕ್ತಿ ಶರತ್ಸಮಯಸುಧಾಂಶುವಿಶದಕೀರ್ತಿವಿತಾನಂ (ಆದಿಪು. ೧-೩೦); ಶರತ್ಸಮಯದಂತೆ ಸುಮನೋವನಾಭಿರಾಮಮುಂ . . . ಯಾಮ್ಯ ದಿಶೆಯಂತ ಧರ್ಮಪ್ರಭಾವ ವಿಭಾವಿತಮುಮೆಂಬ ಮಹನೀಯಮಹಿಮೆಯಂ ತಳೆದು (ಪುಷ್ಪಸ್ತ. ೯-೩೦ ವ). [ಸಂ.]

ಶರದ (ನಾ). = ಶರತ್ಕಾಲ : ಒರ್ಮೆಯೆ ಬಂದುದಂದು ಶರದಂ ಲೋಕಕ್ಕೆ ಕಣ್ ಬರ್ಪಿನಂ (ಪಂಪಭಾ. ೭-೭೧) ; ಶರದದ ಹೊಳೆಯೊ ಮೇಘಸ್ಥಿತಿಯೊ ಸುರಪತಿ ಚಾಪವಿಭ್ರಮವೊ ಇಳಿದ ಜವ್ವನದೊಲುಮೆಯೊ ಕುರುಬಲವ ಕಂಡೆನು . . . ನಿನ್ನ ಕುಮಾರನೊಡ್ಡಿನಲಿ (ಕುಮಾಕ. ೨೬-೨). [ಸಂ. ಶರದ್]

ಶರದಂಬರ (ನಾ). ಶರತ್ಕಾಲದ ಶುಭ್ರವಾದ ಆಕಾಶ, – ಗಗನ : ಶರದಂಬರಮುಂ ಮತ್ತೀ ಸರವರಮುಂ ವಿಳಸದತನುಧವಳಚ್ಛವಿಗಳ್ ಹರಿಣಾಲಂಕೃತಮಂಬರಮಿಾ ಕೊಳಮುಚಿತ ರಾಜಹಂಸೋತ್ಕಂಸಂ (ಕವಿರಾ. ೫-೪೬). [ಸಂ.]

ಶರದಂಬುದ (ನಾ). ಶರತ್ಕಾಲದ ಮೋಡ, – ಮುಗಿಲು: ವರಹಂಸಕದಂಬಕ ಮದು ಶರದಂಬುದಮಲ್ತು (ಕವಿರಾ. ೫-೧೧೩). [ಸಂ.]

ಶರದಭ್ರ (ನಾ). = ಶರದಂಬುದ : ಸುರಧನುವಂ ವಿಮಾನಮಣಿಕುಟ್ಟಿಮಮಾ ಶರದಭ್ರಮಂ ನಿಜಾಸ್ತರಣದುಪಚ್ಛದಂ . . . ನಿರಾಕರಿಸೆ (ಶಾಂತಿಪು. ೭-೧೪); ಶರದಭ್ರಾಕಾರಸೌಧ ಪ್ರಕಟವಿಘಟಿತಾಭ್ಯರ್ಣನಾನಾಗವಾಕ್ಷೋತ್ಕರದಿಂದಂ ನೋಡುವಂತೆ (ಕಾದಂಪೂ. ೪೭೭). [ಸಂ.]

ಶರದಾಗಮನ (ನಾ). ಶರತ್ಕಾಲದ ಆರಂಭ, – ಆಗಮನ: ತ್ರಿಭುವನ ಗುರುಪರಿನಿಷ್ಕ್ರಮಣಕಲ್ಯಾಣ ಶರದಾಗಮನ [ಜಾಠಾ. ಶಾರದಾಗಮ] ಪ್ರತೀಕ್ಷಣ ದಿವ್ಯಹಂಸರುಂ ಬ್ರಹ್ಮಕಲ್ಪಾಂತವಾಸಿಗಳುಮಪ್ಪ . . . ಎಣ್ಬರುಂ ಲೋಕಾಂತಿಕದೇವರ್ ಬಂದು (ಆದಿಪು. ೯-೬೦ ವ). [ಸಂ.]

ಶರದಾತಪ (ನಾ). ಶರತ್ಕಾಲದ ಬಿಸಿಲು : ಚಳದಳಕೆಯರರೆಬರದೇಂ ಕಳೆದರೂ ಶರದಾತಪಪ್ರಭೂತಶ್ರಮಮಂ (ಆದಿಪು. ೧೧-೭೪). [ಸಂ.]

ಶರದೃತು (ನಾ). = ಶರತ್ಕಾಲ : ಆ ಮಾಸವರಡಕ್ಕೊಂದು ಋತುವಹುದಾ ಋತುವೇ ಹಿಮ ಶಿಶಿರ ವಸಂತ ಗ್ರೀಷ್ಮ ವರ್ಷ ಶರದೃತುಗಳೆಂಬಾಱು ತೆಱನಾಗಿ (ವಿವೇಕ. ೩೨೧); ಇಂತೊಗೆತಂದ ಶರದೃತುವಿನೊಳಾ ಕುಮಾರಂ ವಿಜಯಯಾತ್ರೆಗೆ ಪೋಗಲು (ರಾಜಶೇ. ೬-೧೦ ವ). [ಸಂ.]

ಶರಧರ (ನಾ). ಮೋಡ; ಮುಗಿಲು : ಎಱಪ ಶರಧರದ ತುಱುಗಲ್ಕಱೆವ ಘನೋಪಳ ಕದಂಬಮುಡುಗಣಮನೆ ಮೇಣ್ ತಱಿಸಂದು ನುಂಗಿ (ರಾಜಶೇ. ೧-೧೨೦). [ಸಂ.]

ಶರಧಿ (ನಾ). ೧. ಬತ್ತಳಿಕೆ ; ಮೂಡಿಗೆ : ಕರ್ಣಂ . . . ದ್ರೋಣಾಚಾರ್ಯಂಗೆ ಪೊಡಮಟ್ಟು ಶರಧಿಯಂ ದಿವ್ಯಾಸ್ತ್ರಂಗಳನುರ್ಚಿಕೊಂಡು (ಪಂಪಭಾ. ೨-೭೮ ವ); ಶರಮಂ ಶರಧಿಯಿನಸುರಾರಿ ತೆಗೆದು ತೊಟ್ಟೆಚ್ಛಣಂ (ಜಗವಿ. ೧೩-೯೯). ೨. ಕಡಲು ; ಸಮುದ್ರ: ತರುಣಿಯ ವಿಭೂಷಣಾರ್ಥದೆ ಶರಧಿಗೆ ಪೋಪಂ ಕುಳೀರದಂತ್ಯತ್ಯಂಶಂ (ಜಾತಕ. ೧೯-೧೨); ಶರಧಿಯ ನೀರಂ ನದಿಗಳ್ ಧರಿಯಿಸಲಾರ್ತಪುವೆ (ಧರ್ಮಾಮೃ. ೬-೧೩೪) ; ನೂರುಯೋಜನದಾಚೆ, ಲಂಕೆ, ರಾಕ್ಷಸದ್ವೀಪಮಿದೆ ಶರಧಿಮೇಖಲೆಯಾಗಿ (ಶ್ರೀರಾಮಾ. ೩೯೪-೮೬೪). ೧, ೨ : ಶರಧ್ಮಾಪಾತ್ತೋರುಶರಂ ಘನಸ್ವನಂ ಹರಿಪ್ರಭಂ ನೀರದರಾಜನೆಟ್ಟಿದಂ . . . ನಿದಾಘನಂ (ರಾಜಶೇ. ೮-೧೦೪). ೩. ನದಿ. ೪. ಕಾಡು; ಅಡವಿ. "ಬತ್ತಳಿಕೆ ಸಮುದ್ರದೊಳರಣ್ಯದಿ ನದಿಯೊಳಂ ಇದು ನಾಲ್ಕುಂ ಶರಧಿಶಬ್ದಮೆನಿಕುಂ" (ನಾನಾರ್ಥ. ೩೧). ೫. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : ಚೌ. ಚತು . . . ಶರಧಿ . . . ಕಷಾಯ ಇಂತಿನಿತು ಳಕ್ಕೆ ಹೆಸರು (ವೃವಹಾ. ೧೦). [ಸಂ.]

ಶರಧಿಶಯನ (ನಾ). (ಕ್ಷೀರ) ಸಮುದ್ರದ ಮೇಲೆ ಮಲಗಿರುವವನು; ವಿಷ್ಣು : "ಹರಿ ಶೌರಿ ವಿಷ್ಣು . . . ಶರಧಿಶಯನಂ ಮುಕುಂದಂ . . . ಗೋವಿಂದನಕ್ಕುಂ" (ಮಂಗರಾ. ೬-೧೭). [ಸಂ.]

ಶರಧಿಸಂಭವ (ನಾ). ಕಡಲಿನಲ್ಲಿ ಹುಟ್ಟಿದವನು ; ಚಂದ್ರ : ಶರಧಿ ಸಂಭವನು ಯ್ಯತರಲು ನೈದಿಲೆನೀಕವರಳಿ ಪರಿಶೋಭಿಸೆ (ಸನಮೋ. ೧೧-೨೬). [ಸಂ.]

ಶರಧಿಸುತೆ (ನಾ). ಸಮುದ್ರದಲ್ಲಿ ಹುಟ್ಟಿದವಳು ; ಲಕ್ಷ್ಮಿ : ''ಶರಧಿಸುತ ರಾಮ . . . ಮನ್ಮಥಮಾತೆಯೆನಲು ಸಿರಿಗಕ್ಕ ನಾಮಂ'' (ಮಂಗರಾ. ೬-೧೮); ಶರಧಿಸುತ ಸನಕಾದಿವಂದಿತ ಸುರನರೋರಗಮಾತೆ . . . ಪದ್ಮಜಮುಖ್ಯಸಕಲಾಮರಸುಪೂಜಿತೆ ಲಕ್ಷ್ಮಿ ಕೊಡುಗೆಮಧಿಕಸಂಪದವ (ಕುಮಾ. ೪. ೧ ೯). [ಸಂ. ಶರಧಿಸುತಾ]

ಶರಧೃತ (ನಾ). ೧. ಜೊಂಡಿನಿಂದ ಕೂಡಿದುದು. ೨. ಬಾಣಗಳಿಂದ ತುಂಬಿರುವುದು. ೧, ೨ : ಶುಭಸುರಭಸಂಭೃತಂ ರಣದಂತೆ ಶರಧೃ [ಪಾಠಾಂ. ವೃ]ತಂ ಸಭೆಯಂತೆ ಚಿತ್ರಪತ್ರಾನ್ವಿತಂ . . . ಆಗಿ ತಚ್ಛಿಲಮೆಸೆದಿರ್ದುದು (ಜೈಮಿಭಾ. ೧೦-೫೫). [ಸಂ.]

ಶರನಿಧಿ (ನಾ). ೧. ಕಡಲು ; ಸಮುದ್ರ : ''ಕಡಲಿನ ಶರನಿಧಿ'' (ಚತುರ. ೩೩); ಶರನಿಧಿ [ಪಾಠಾಂ. ವರನದಿ]ಯಂದವಿಂದತಿಗಭೀರಗುಣೋನ್ನತಿಯಿಂದ ಸಂದ ಮಂದರಧರ ಬಾಹುಗಳ್ (ಕಾದಂಪು. ೩೫೦); ಶರನಿಧಿರತ್ನರಾಶಿಗಳಿನುರ್ವರೆ ರೋಹಣಪರ್ವತಂಗಳಿಂ . . . ಒಪ್ಪಮಂ ತಳೆದುದು (ಪಂಡಾಮಾ. ೫-೩೮); ಶರನಿಧಿ ತನ್ನಯ ರತ್ನಾಕರನಾಮಮನಿಲ್ಲಿ ಸಾರ್ಥಕಂಮಾಡಲ್ ಬಂದಿರುತಿರ್ದಪುದೆನೆ ಮಣಿಗಾಱರ ಪಸರಂ ಮಿಸುಗುತಿರ್ಪುದಾ ಪುರವರದೊಳ್ (ಕುಸುಮಾ. ೨-೧೦೩). ೨. ಬಾಣಗಳಿಗೆ ಆಶ್ರಯಸ್ಥಾನವಾದುದು ; ಬತ್ತಳಿಕೆ : ಕಡಿದುಡಿದ ಕೋಲ್ಗಳ ರಾಸಿಯಂ ನೋಡೆ ಸಾಜಮಾಗಿ ಶರನಿಧಿಯಂತೆ ಕಾಣಿಸಿತು (ಅಜ್ಜಿತ. ೪೩-೧೫). ೩. [ಜೈನ] ಸಾಮಾನ್ಯ ಎಣಿಕೆಗೆ ನಿಲುಕದ ಬಹುದೀರ್ಘಕಾಲ; ಸಾಗರ ಎಂಬ ಕಾಲಗಣನೆ : ಮೂವತ್ತು ಮೂಜು ಶರನಿಧಿ ಜೀವನ ಪರಿಸಂಖ್ಯೆ ತತ್ಪ್ರಮಾಣಸಹಸ್ರಾಬ್ದಾವಧಿ ಸುಧಾಶನಸ್ಮರಣಾವಸರಮನಿತ್ತ ಪಕ್ಷಮಾಗುಸರ್ವ ಪದಂ (ಚಂದ್ರಪ್ರ. ೧೧-೩೫). [ಸಂ.]

ಶರನ್ನವರಾತ್ರಿ 'ನವರಾತ್ರಿ' ಪರಾ.

ಶರಪಂಜರ (ನಾ). ೧. ಬಾಣಗಳಿಂದ ಮಾಡಿದ ಪಂಜರ : ತಱಿದೊಟ್ಟಿ ಸೂರ್ಯಹಾಸದ ಮಱುವಕ್ಕದ ಪುದಿದು ಪೆಱೆದ ಶರಪಂಜರದಿಂ ಪೊಱಮಟ್ಟಿ ಮೃಗೇಂದ್ರನಂತಿರ್ದನುಪೇಂದ್ರಂ (ಪಂಡಾಮಾ. ೯-೬೨) ; ಗುರುಸುತನನೊಟ್ಟೈಸಿ ಫಲುಗುಣ ತಿರುಗಿ ಹಾಯ್ದನು ಮುಂದ ಶರಪಂಜರವ ಹೂಡಿದನು (ಕುವಾಶ. ೧೪-೩೦). ೨. ಬಾಣಗಳ ಮಂಚ ; ಶರತಲ್ಪ : ಕುರುಕುಳವನಸಿಂಹಂ ಶರಪಂಜರದೊಳೂಱಿಗಿದಂ (ಪಂಪಭಾ. ೧೧-೪೭ ವ). [ಸಂ.]

ಶರಪರಿಣತಿ (ನಾ). ಬಾಣಪ್ರಯೋಗದ ನೈಪುಣ್ಯ, — ಪ್ರೌಢಿಮೆ : ಗುಣಾರ್ಣವನ ಶರಪರಿಣತಿಯಿಂದ ಕುಲಶೈಲಂ ಬೀಟ್ಪಂತೆ ನೆಲನವಿರೆ ಬಿಟ್ಟುಗಳ್ (ಪಂಪಭಾ. ೧೨-೨೧೩ ವ) ; ಲಕ್ಷ್ಮಣಾ . . . ಶರಪರಿಣತಿಯಂ ನೆಱೆಯೆ ಮೆಱೆದು ಕಾದುತ್ತಿರ್ದಂ (ಪಂಪಾಮಾ. ೧೭-೧೩). [ಸಂ.]

ಶರಪುಂಖ (ನಾ). ೧. ಗರಿಗಳಿಂದ ಕೂಡಿದ ಬಾಣದ ಹಿಂಭಾಗ; ಹಿಳುಕು. ೨. ಒಂದು ಬಗೆಯ ವನಸ್ಪತಿ : ''ಶರಪುಂಖಿ ಗೋರ್ಗಿ ತಾನದು'' (ಪಪ್ಪರೋ. ೩೮-೩೦) ; ಶರಪುಂಖಿಯನಂಬಿಲದಿಂ ನಿರೂಹಮಂ ಮಾಟ್ಪೆ ಮೊಕ್ಕಳಂ ಕದಡಿ ಬಸಿಱ್ ಪರಿವೂಡೆ ಮೊಸರಂ ಕುಡುವುದು ಪರಿಭವಿಸಿರ್ಕ್ಟುಗಟ್ಟಿನವಂತಿರ ನಿಲ್ಲುಂ (ಅಕ್ಕಸಾ. ೧೧-೩೫); ಶುಂಠಿಯನೂ ಶರಪುಂಖಿಯನೂ ನೀರಿಂದ ಅರದು ನೀರಲ್ಲಿಯೇ ಕುಡಿಯ ಕೊಡಿಸಲು ನೀರ ಕೋಳಿ ಕಚ್ಚಿದ ವಿಷ ಹರವಹುದು (ಪದ್ಮಕಾ. II. ೨೧೩).

[< ಸಂ. ಶರಪುಂಖಾ]

ಶರಪುಂಖಿ (ನಾ). ೧.= ಶರಪುಂಖಿ ೧. ೨. = ಶರಪುಂಖಿ ೨ : ''ಶರಪುಂಖಾ— ಕೊಗ್ಗಿ'' (ಓಷಧಿ. ೧೭೦). [ಸಂ. ಶರಪುಂಖಾ]

ಶರಬಂಡಿ (ನಾ). ಬಾಣಗಳನ್ನು ತುಂಬಿರುವ ಗಾಡಿ : ಚೂರಿಸುವ ಮೊಗಸೂನಿಗಯ ಕೊಲ್ಲಾರಿಗಳ ಶರಬಂಡಿಗಳ ಹೊಂದೇರು ಕವಿದುವು ಕೋಲ ಕೋಲಾಹಲದ ತೋಹಿನಲಿ (ಕುವ್ಯಾಶ. ೨-೪೪). [ಶರ + ಬಂಡಿ]

ಶರಬಂಧ (ನಾ). ಬಾಣಗಳನ್ನು ಕಟ್ಟುವುದು : ಬಕಾರಕ್ಕೆ ಪಕಾರಂ — ದಿಶಾಬಲಿ — ದಸವಲಿ ; ಶರಬಂಧ — ಸರವಂದ (ಶಮದ. ೨೯೨ ಪ್ರಜೋ). [ಸಂ.]

ಶರಬತ್ 'ಶರಬತ್ತು' ನೋ.

ಶರಬತ್ತು, ಶರಬತ್, ಷರಬತ್ತು (ನಾ). (ನಿಂಬೆ, ಕಿತ್ತಳೆ, ದ್ರಾಕ್ಷಿ, ಮೊದಲಾದ) ಹಣ್ಣುಗಳ ರಸವನ್ನು ನೀರಿಗೆಮಿಶ್ರ ಮಾಡಿ ಅದಕ್ಕೆ ಸಕ್ಕರೆ, ಏಲಕ್ಕಿ ಮುಂತಾದುವನ್ನು ಸೇರಿಸಿ ತಯಾರಿಸುವ ಪಾನೀಯ ; ಪಾನಕ : ಈ ಶರಬತ್ತು ತುಸು ತೆಗೆದುಕೋ(ಪಿರಂಗ. ೨೪); ಶರಬತ್ತು ತುಂಬಿಸಿದ ಎರಡು ಟಂಬ್ಲರುಗಳನ್ನು ಒಂದು ತಟ್ಟೆಯಲ್ಲಿ ತಂದಿಟ್ಟರು (ನಿವ್ಯಾಮ. ೧). **ಶರಬತ್** : ಹೋಗು ಮಾಲೀ. ಎರಡು ಲೋಟ ಶರಬತ್ ತಯಾರಿಸು (ಪಾತ್ಪಲ್ಲ. ೧೩೩); ಹತ್ತಿರದ ಅಂಗಡಿಯಿಂದ ತಂಪಾದ ಶರಬತ್ ತರಿಸಿದರು (ಬಜಜ. ೬೪). **ಷರಬತ್ತು** : ಸೂಗದಯ ಬೇರಿನ ಷರಬತ್ತು (ಭಾರಮಾ. ೪೦೦); ಷರಬತ್ತೋ, ಎಳನೀರೋ ಇವರು ಏನು ತೆಗೆದುಕೊಳ್ಳುತ್ತಾರೋ . . . ಅದನ್ನು ಅವರ ಕಯ್ಯಲ್ಲೆ ಇವರಿಗೆ ಕಳಿಸು (ಕೃಷ್ಣಭೂ. ೧೪೧). [← ಅರ. ಪಾರ. ಹಿಂ. ಮರಾ. ಶರಬತ್]

ಶರಭ (ನಾ). ೧. ಪುರಾಣಕಾವ್ಯಗಳಲ್ಲಿ ಉಲ್ಲೇಖಿತವಾಗಿರುವ, ಸಿಂಹಕ್ಕಿಂತಲೂ ಬಲಿಷ್ಠವೆಂದು ಭಾವಿಸಲಾಗಿರುವ, ಎಂಟುಕಾಲುಗಳ ಒಂದುಬಗೆಯ ಪ್ರಾಣಿ : ''ಶರಭಮದಷ್ಟಾಪದಂ'' (ಪಪ್ಪಕೋ. ೪೦-೧). ೨. ಒಂದುಬಗೆಯ ಕಾಡುಮೃಗ : ಶರಭಂಗಳ್ಗಡೆ ಸಿಂಹದುರ್ವ್ ವನಗಂಧೇಭೋತ್ಕರಕ್ಕಂದುಪಾಗರವಿಸಾ ಭೂಧರಂ (ಆದಿಪು. ೧೩-೮೨); ನುಡಿದಡೆ ದನಿಗೆ ಶರಭ ಶಾರ್ದೂಲವಯ್ತುಂದು ಬಗಿವುವು (ಹಚಕಾ. ೯-೪೨). ೩. ಆನೆಯ ಮರಿ. ೪. ಮಹಾಮಂತ್ರಗಳಲ್ಲಿ ಒಂದು : ಗಾಯತ್ರಿ ಮೃತ್ಯುಂಜಯ ದಕ್ಷಿಣಾಮೂರ್ತಿ ನೀಲಕಂಠ ಶರಭ ವೀರಭದ್ರ . . . ಲಲಿತಾಶೂಲಿನ್ಯಾದಿ ಮಹಾಮಂತ್ರಂಗಳುಂ (ವಿಪೋಕ. ೮೧). ೫. ವೀರಭದ್ರ : ''ವೀರಂ ಭಯಂಕರಂ ದಕ್ಷಾರಿ ಶರಭನೆನೆ ವೀರಭದ್ರಸನಕ್ಕಂ'' (ಪಂಗರಾ. ೫-೧೫). ೬. [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು ; ಎರಡು ವ್ಯಂಜನಗಳ ಸಂಯೋಗವುಳ್ಳ ಒಂದು ಪ್ರಾಸ : ಹರಿ ಕರಿ ವೃಷಭ ತುರಂಗಂ ಶರಭಮಜಂಗಳುಮೆನಿಪ್ಪ ಷಟ್‌ಪ್ರಾಸಕ್ಕುಂ ತರುಣಿ ನಿಜದೀರ್ಘಬಿಂದುವಿನಿರದೊತ್ತುಂ ವ್ಯಂಜನಂ ವಿಸರ್ಗದ ಬರ್ಕುಂ (ಛಂದೋಂಬು. ೧-೪೬ ಅಡಿಪಡ್ಡ); ಶರಭಃ — ಎರಡು ವ್ಯಂಜನಗಳ ಸಂಯೋಗಕ್ಕೆ : ಆ ಕ್ಷಣದೊಳ್ ಪರಸ್ಪರನಿರೀಕ್ಷಣದಿಂ ಮುಳಿಸುಣ್ಮೆ . . . ಬಿಗುರ್ತಿರ್ಕ್ಷಿಸ ಮಿಱಿದರ್ ವಿಕಟಶೃಂಗಸಮಗ್ರಕುಲಾಚಲಂಗಳಂ (ಕೃವಿ. ೭೩). [ಸಂ.]

ಶರಭಂಗ (ನಾ). ೧. ಬಾಣದ ತುಣುಕು. ೨. ನೀರಿನ ತೆರೆ. ೧, ೨ : ಸ್ಫುರಿತಶಿಳೀಮುಖಮುತ್ಪಳಸರಕ್ತಕಂಚಾತಯುತಮುಪಾತ್ತಕಬಂಧಂ ಶರಭಂಗಾನ್ವಿತಮಿರದನುಕರಿಸಿದುದಾ ಬನದ ತಿಳಿಗೊಳಂ ಕೊಳುಗುಳಮಂ (ಶಾಶಂ. ೨-೪೨). [ಸಂ.]

ಶರಭಪ್ರಾಸ (ನಾ). = ಶರಭ ೬ : ಪ್ರತಿಪಾದದ ಮೊದಲರಡುಸ್ವರಗಳ ನಡುವ ಒಂದೇ ವಿಧದ ವಿಚಾತೀಯಸಂಯುಕ್ತವ್ಯಂಜನಗಳು ಬಂದು ಅವುಗಳ ಹಿಂದ ಅನುಸ್ವಾರ ವಿಸರ್ಗಗಳಿಲ್ಲದಿರಲು ಶರಭಪ್ರಾಸವಾಗುವುದು (ಕೃವಿ. ೭೨). [ಸಂ.]

ಶರಭಯುಗ (ನಾ). ಶರಭಗಳ ಜೋಡಿ, — ಮಿಥುನ : ಅಮಿತಪರಾಕ್ರಮರಿವರನಿಪ ಮಕ್ಕಳಂ ಪಡೆವ ಶರಭಯುಗದರ್ಶನದಿಂ (ಪಂಡಾಮಾ. ೧೫ ೬೪). [ಸಂ.]

ಶರಭರಿಪು (ನಾ). ಶರಭದ ಶತ್ರು ; ಗಂಡಭೇರುಂಡ : ಕರಿಗೆ ರದನಂ ಭಯಂಕರತರದಂಷ್ಟ್ರಾಂಕುರಮಿಭಾರಿಗುನ್ನತಪಕ್ಷಂ ಶರಭರಿಪುಗಾದುದೆಂಬಂತಿರ ಲಸೆವರ್ ಪ್ರಭುಗಳಲ್ಲಿ ತತ್ಪತ್ತನದೊಳ್ (ಶಾಪಮಾ. ೬೯-೩೭೮; 1122). [ಸಂ.]

ಶರಮಂಚ (ನಾ). ಬಾಣಗಳಿಂದಾದ ಮಂಚ. — ಪರ್ಯಂಕ : ಕವಲುಂಬಾ ತಲೆಗಿಂಬೆನೆ ಕವುಳುಡೆ ಶರಮಂಚವೆರಸದಂತಿಯ ಪಾಸಂಬಿವು ಬಾಣಂ ಬಿಡದೆಸದಿರ ದಿವಿಜನದೀಸೂನು XXX ಶರಶಯಸದೊಳಿರ್ದಂ (ಗದಾಯು. ೫-೩೯). [ಸಂ.]

ಶರಮಪಟ್ಟಿಯಾಟ (ನಾ). ಗೆರೆಗಳನ್ನು ಬರದು ಆಡುವ ಒಂದು ಬಗೆಯ ಆಟ; ತಿಳ್ಳೆಯಾಟ : (ಪ). [ಶರಮಪಟ್ಟಿ + ಆಟ]

ಶರಮುಂಡಿ (ನಾ). (ಬಾಣದಂತಹ) ಒಂದು ಬಗೆಯ ಸಾಧನ ; ಕವಣೆ ; ಮಿಂಟೆ : ''ಶರಮುಂಡಿ ಮಿಂಟೆಯಕ್ಕುಂ'' (ಪಂಗರಾ. ೪೭-೩೫). [?]

ಶರರುಹ (ನಾ). ನೀರಿನಲ್ಲಿ ಹುಟ್ಟಿದುದು: ತಾವರೆ : ಹೃದಯಸ್ಥ ವಿರಹವಹ್ನಿಗ ಕೈಯಂ ಸ್ಮರನೊಡ್ಡಿ ಕಾಸಿ ಬಿಲ್ಲಂ ತಿರುಪ್ಪೊಯ್ದುಸುರ್ತಿರ್ಪನಸಿತಶರರುಹಶರದಿಂ (ರಾಜಶೇ. ೯-೨೧). [ಸಂ.]

ಶರವಣ (ನಾ). ಲಾಳದ ಮೆಳೆ ; ಜೊಂಡಿನ ಪೊದೆ : ಅವರ ಗರ್ಭವನಾ ಮಹಾವೀರ್ಯವಯ್ತೆ ತದ್ಯುಪತಿಯರವಂ ಧರಿಸಲಾಱದೆಮ್ಮಂ ಭಜಿಸೆ ಯವರಱುವರಲ್ಲಿರ್ದುದಂ ಶರವಣದೊಳಿರಿಸಿಪೆನೆ (ಪದ್ಮಕಾ. ೧೦ ೨೨೪). [ಸಂ.]

ಶರವಣಭವ (ನಾ). ಜೊಂಡಿನ ಪೊದೆಯಲ್ಲಿ ಹುಟ್ಟಿದವನು; ಸ್ಕಂದ: ಪಶುಪತಿಪ್ರಿಯರಾಗದಲ್ಲಿ 'ಶರವಣಭವ ಸಮಯಮಿದಿರಾ' ಎಂಬ ಕೀರ್ತನೆ ರಚಿತವಾಗಿದೆ (ರೂಢಿ). [ಸಂ.]

ಶರವಣೋದ್ಭವ (ನಾ).= **ಶರವಣಭವ** : ಶರವಣೋದ್ಭವ ನಂದಿಕೇಶ ಮದ್ದಳೆಗಳಂ ಹರುಷದಿಂ ಧಿಂಧಿಮಿಕಿಟೆಂದು ಧ್ವನಿಮಾಡೆ . . . ಭರತಕಟ್ಟಳೆಗೆ ಕುಣಿದನೀಶಂ (ಗುರುಪು. ೧-೧೯). [ಸಂ.]

ಶರವರ್ಷ (ನಾ). ಬಾಣಗಳ ಸುರಿಮಳೆ, – ವೃಷ್ಟಿ : ಧನುರ್ಧರನ ಶರವರ್ಷಂ ನವಪಯೋದಪ್ರಮೋದಬಂದುವರ್ಷದಂತೆ ಕಳೆಯೆ (ಶಾಂತಿಪು. ೪-೮೮) : ಶರವರ್ಷಮಂ ಕಱಿಯುತರ್ಜುನನ ಸಮ್ಮುಖಕೆ ಬಂದು ನಿಂದು (ಕ್ಷತ್ರಿಪು. ೨೨-೮). [ಸಂ.]

ಶರವಳಿ (ನಾ). = **ಶರವರ್ಷ** : ಬೊಬ್ಬಿಱಿದು ಶರವಳಿಯ ಸುರಿಸುರಿದುಬ್ಬರದ ಬವರದೊಳಗಹಿತರಿಗುಬ್ಬಸವನಿಸಗುವನೆ ಜೋಧನು (ಕುಮಾ. ೩-೧೦೨) ; ಜಡಿವ ತುಂತುರ್ವನಿಗಳನು ಬಿಱುಗಾಳಿ ಮೊಗೆವವೊಲನಿತು ಸೆಲ್ಲಹ ಶರವಳಿಯ ಗದಯಿಂದ ಘಟ್ಟಿಸಿದ (ಕುಮಾಗ. ೧-೨೫). [ಶರ + ಮಳೆ (< ಮಟೆ)]

ಶರವಿದ್ಯೆ (ನಾ). ಬಾಣಬಿಡುವ ಕೌಶಲ; ಬಿಲ್ಲುವಿದ್ಯೆ : ಶರವಿದ್ಯಾಬಲದಿಂದ ಕೊಂಡುಕೊನೆವಾ ಯುದ್ಧಂಗಳಂ ಮಚ್ಚನಾಂ ಪಿರಿದುಂ ಮೆಚ್ಚುವೆನಿಂತುಟೊಂದು ನಿಮಿಷಂ (ಜಗವಿ. ೬-೮೦); ಅರ್ಜುನನ ಶರವಿದ್ಯೆ ವಿವರಿಸೆ ದುರ್ಜಯವಲಾ (ಕುವಾವಿ. ೮-೪೨). [ಸಂ. ಶರವಿದ್ಯಾ]

ಶರವೃಷ್ಟಿ (ನಾ). = **ಶರವರ್ಷ** : ಅನಂತವೀರ್ಯನ ಶರವೃಷ್ಟಿಯೊಳ್ ಗಗನದಿಂ ನವಲೋಹಿತವೃಷ್ಟಿಗಳ್ ವಲುಮ್ಮನೆ ಕೊಳೆ (ಶಾಂತಿಪು. ೪-೭೩); ಶರವೃಷ್ಟಿಯನಾಗಿರಿಶಾಗ್ರದೊಳೆಯ್ದೆ ಕಱಿದನರ್ಜುನನದಟಿಂ (ಶಬಶಂ. ೪-೪೧). [ಸಂ.]

ಶರವೇಗ (ನಾ). (ಬಾಣದಂತೆ) ತೀವ್ರವಾದ ವೇಗ, – ರಭಸ : ಶರವೇಗದಲ್ಲಿ ಬಂದ ಹದ್ದು ಕೋಳಿಮರಿಗಳ ಮೇಲೆ ಎರಗಿತು (ರೂಢಿ). [ಸಂ.]

ಶರವೇದ (ನಾ). = **ಶರವಿದ್ಯೆ** : ಶರವೇದವಿದ್ಯೆಯಂ ತನ್ನರಸಿಗೆ ಮೆಱೆಯಲ್ಕೆ ದೇವಿ ನೋಡೆನುತೆಚ್ಚಂ (ಯಶೋಚಿ. ೪-೩೮) : ಶರವೇದಮೂರ್ತಿಗಳ ತೆಱದಿಂದೆ ರಾಜಿಸುವ ತರಳರಂ ಮಣಿದೆತ್ತಿ . . . ಇದೆತ್ತಣ ಬಲೋತ್ಕರದೇಳ್ಗೆ ಪೇಳ್ಮುದೆನೆ (ಕ್ಷತ್ರಿಭಾ. ೨೧-೪೪). [ಸಂ.]

ಶರವೈರಿ (ನಾ). ಒಂದು ಬಗೆಯ ಹಕ್ಕಿ ; ಸರಕೂಟ : "ಶರ(ಪಾಶಾಂ.ಸ)ರವೈರಿಯೆನಲಾ ಕಕೂಟಮೆನಿಕ್ಕುಂ" (ಮಂಗರಾ. ೫೧-೬). 'ಶರಾರಿ' ಪರಾ. [ಸಂ. ಶರವೈರಿನ್?]

ಶರವ್ಯ (ನಾ). ಬಾಣಪ್ರಯೋಗಕ್ಕೆ ನಿರ್ದೇಶಿಸುವ ಗುರಿ, – ಲಕ್ಷ್ಯ : "ಲಕ್ಷ್ಯಂ ಶರವ್ಯಂ ನಿಮಿತ್ತಮೆನೆ ಗುಱಿಯಕ್ಕುಂ" (ಮಂಗರಾ. ೮೭-೩೫). [ಸಂ.]

ಶರಶಯ್ಯೆ (ನಾ). ಬಾಣಗಳಿಂದ ಸಿದ್ಧಮಾಡಿದ ಹಾಸುಗೆ. – ತಲ್ಪ: ಶರಶಯ್ಯಾಗ್ರದೊಳಿಂತು ನೀಮಿರೆ . . . ಸಂಧಾನಮಂ ವೈರಿಭೂಪರೊಳಂ ಸಂಧಿಸಿ ಪೇಳ್ಮಾರ್ಗ ಮೆಱವೆಂ (ಪಂಪಭಾ. ೧೩-೬೯); ನಂದಿಹೋಗುತ್ತಿರುವೆ ಬೆಂಕಿಯಂತೆ ಶರಶಯ್ಯೆಯಲ್ಲಿ ಮಲಗಿರುವ ಭೀಷ್ಮನನ್ನು ಕುರಿತು ಯೋಚಿಸುತ್ತಿದ್ದೆ (ಪಚಿಭಾ. ೩೩). [ಸಂ. ಶರಶಯ್ಯಾ]

ಶರಶಲ್ಯ (ನಾ). ಬಾಣದ ಚೂಪಾದ ಮೊನೆ : ಶರಶಲ್ಯಮಿನಿತು ಸಿಲ್ಕಿಯುಮಂದಿಸುವಂ ಪಿಡಿಯಲೆರ್ದಯನಲ್ಲದ ನಡೆ ವಿಸ್ಮರಶರತತಿ ಕಿಬಿಲರಿಯವು ವಿರಹಿಯ ನೋವಿಂಗೆ ಸಾಯಲಿಲ್ಲದಱಿಂದಂ (ಅರ್ಧನಾ. ೪-೮೪). [ಸಂ.]

ಶರಶಾಳಿ (ನಾ). ಬಾಣಪ್ರಯೋಗದಲ್ಲಿ ಚತುರನಾದವನು ; ಒಳ್ಳೆಯ ಬಿಲ್ಲುಗಾರ : ಶರಶಾಳಿಯನೆಂಬುದನೀ ಶರದಿಂದೆಮಗಱಿಪಲೆಚ್ಚು . . . ಅಧಟನ ಪುರುಳಂ ಪೊಣರ್ದಾಗಳಱಿವೆನುಗ್ರಾಹವದೊಳ್ (ಆದಿಪು. ೧೨-೯೯).

[ಸಂ. ಶರಶಾಲಿನ್]

ಶರಷಟ್ಪದಿ (ನಾ). [ಛಂದ] ಆರು ಬಗೆಯ ಷಟ್ಪದಿಗಳಲ್ಲಿ ಒಂದು ; ℙ "ನಾಲ್ಕುಮಾತ್ರೆಯ ಗಣವು ಒಂದೆರಡು ನಾಲ್ಕಯ್ದನೆಯ ಪಾದಗಳಲ್ಲಿ ಎರಡೆರಡೂ, ಮೂರಾರನೆಯ ಪಾದಗಳಲ್ಲಿ ಮೂರುಮೂರೂ ಒಂದು ಗುರುವೂ ಇರಲು ಶರಷಟ್ಪದಿಯೆನಿಸುವುದು" (ಕೃಛಂ. ೧೫) : ಮೆಱೆವೆರಡಡಿಯುತ್ತರದೆರಡಡಿಯೊಳ್ ಕರಿಲಘುಗಳ್ ಮೂಱಾಱನೆಯಾ ಚರಣದೆ ಮನುವಿಂತಱುವತ್ತು. ಲಘುವು ಶರಷಟ್ಪದಿಗೆ (ಛಂದೋಂಬು. ೫-೨೫ ಅಡಿಪದ್ಯ). [ಸಂ. ಶರಷಟ್ಪದೀ]

ಶರಸಂಧಾನ (ನಾ). ಬಾಣವನ್ನು ಬಿಲ್ಲಿಗೆ ಹೂಡುವುದು : ಶರಸಂಧಾನದ ವೇಗಮಂಬುಗಳನಂಬೀಂಬಂತೆ ಮೇಣಂಬಿನಾಗರಮಂಬಂತೆನೆ ಪಾಯ್ವರಾತಿಶರ ಸಂಘಾತಂಗಳಂ ನುರ್ಗಿ (ಪಂಪಭಾ. ೧೧-೪೦) ; ಶರಸಂಧಾನದ ವೇಗಂ ಪರಿಕಿಸಲರಿದೆನಿಸಿ ದಿವಿಜಪತಿಯುಂ ದಶಕಂಧರನುಂ ಕಾಯ್ದಿಸೆ (ಪಂಪಾಮಾ. ೧೦-೨೦೬); ಶರಸಂಧಾನವಿಲ್ಲದ ಸಮರ ಮಱೆಯದು (ಕುವಾಭಾ. ೩-೫೦). [ಸಂ.]

ಶರಸಂನ್ಯಾಸ (ನಾ). ಬಾಣಪ್ರಯೋಗವನ್ನು ಕೈಬಿಡುವುದು ; ಶಸ್ತ್ರಸಂನ್ಯಾಸ: ಎಲವೊ ಶರಸಂನ್ಯಾಸವನು ಕುರುತಿಲಕನವಸಾನದಲಿ ಮಾಡಿದೆನಳಲಿದಡೆ ಫಲವೇನು (ಕುವಾಗ. ೧೦-೧೮). [ಸಂ.]

ಶರಸನ್ಯಾಸ (ನಾ). = **ಶರಸಂನ್ಯಾಸ** : ಎನ್ನೊಡನೆ ರಣದಲಿ ಹಳಚಿ ನೀ ತಲೆವೆರಸಿ ಮರಳಿದಡಿಳುಹುವೆನು ಕೈದುವನು ಶರಸನ್ಯಾಸ ನನಗೆಂದ (ಕುವ್ಯಾಪ್ರಾ. ೫-೪೨).

[< ಶರಸಂನ್ಯಾಸ]

ಶರಸೋನೆ (ನಾ). ಒಂದೇ ಸಮನೆ ಸುರಿಯುವ ಬಾಣಗಳ ಮಳೆ : ಕರ್ಣನಂಬಿನ ಹರಹು ಹೇಱಿತು ದಳಪತಿಯ ಶರಸೋನೆ ಸಾರವಲಾ (ಕುವ್ಯಾಪ್ರ. ೨-೪೭).

[ಶರ + ಸೋನೆ]

ಶರಸ್ತಂಬ (ನಾ). ಜೊಂಡುಹುಲ್ಲಿನ ಪೊದರು ; ಲಾಳದ ಪೊದೆ : ಒಗದ ಶರಸ್ತಂಬದೊಳರ್ಬಗಿಯಾಗಿ ಮನೋಜರಾಗರಸಮುಗುತರ . . . ಅಗಲ್ದನಾಶ್ರಮದಿನುದಿತಲಜ್ಯಾವಶದಿಂ (ಪಂಪಭಾ. ೨-೩೩) ; ಚಲಿಸಿತಾತನ ವೀರ್ಯವವನಿಯಲಿ ಅದು ಶರಸ್ತಂಬದಲಿ ನೆಲೆಯಾದುದು (ಸಂಭಪ. ೧೭-೬೭). [ಸಂ.]

ಶರಹತಿ (ನಾ). ಬಾಣದ ಹೊಡೆತ, – ಪೆಟ್ಟು : ಅರಿಯ ಶರಹತಿಗುತ್ತರನ ತನು ಬರಿಯೆ ಬಸವಳಿದನು ಕಪಿಕೇಶ್ವರನೊಱಲಿದನು ರಾವಣನ ಗಾಯವ ನನದನಡಿಗಡಿಗೆ (ಕುವಾವಿ. ೮-೩೫) : ಮನುಜಕತ್ರುಹನ ಶರಹತಿಗೆ ನೋಯದ ಮುನ್ನಂ . . . ಎಮ್ಮವರಂ ಕಂಡು ಮಱವಾಯ್ದುದು ಮೇಲ್ (ರಾಮಾಶ್ವ. ೧೪೩-೫). [ಸಂ.]

ಶರ್ರಾ, ಷರ್ರಾ (ನಾ). ದಾಖಲೆ, ಪತ್ರ ಮುಂತಾದುವುಗಳ ಕೊನೆಯಲ್ಲಿ ಅಭಿಪ್ರಾಯವನ್ನು ತಿಳಿಸಲು ಬರೆಯುವ ವಿಶೇಷ ವಿಷಯ, – ಟಿಪ್ಪಣಿ : ನನ್ನ ವಿಷಯದಲ್ಲಿ ಕೆಟ್ಟ ಶರಾ ಬರೆದು . . . ಬೈದು ಹೋಗಿದ್ದಾರೆ (ಜನಜೀ. ೫೯). **ಷರ್ರಾ** : ನಮ್ಮ ವ್ಯವಸ್ಥೆಯನ್ನು ಮೆಚ್ಚಿಕೊಂಡಿದ್ದ ಸಾಹೇಬರು ನಮ್ಮ ಕಚೇರಿಯ ಬಗೆಗೆ ಉತ್ತಮ "ಷರಾ" ಬರೆದರು (ಬಂಗಾ. ೯); ಬಸಪ್ಪನು ನ್ಯಾಯಾಲಯಕ್ಕೆ ಹೋಗದಂತೆ . . . ಬಸಪ್ಪನು ಊರಲಿಲ್ಲವೆಂದು ಸುಳ್ಳು ಷರಾ ಬರೆಯಿಸಿದರು (ಪಂಜಪಂ. ೨೧೪).

[← ಅರ. ಹಿಂ. ಶರಹ್]

ಶರಾಗ್ನಿ (ನಾ). ಬಾಣಗಳಿಂದುಂಟಾದ ಬೆಂಕಿ, – ಜ್ವಾಲೆ : ಎಲೆಲೆ ಪಾಪಿಗಳಿರ ವೃಥಾ ತಮ್ಮೊಳಗೆ ತೋಟಿ ಶರಾಗ್ನಿಯಿತ್ತಲು ಮೊಳಗುತ್ತದೆ ಕೆಡೆ ಬೀಳಹೊಯ್ ಕುನ್ನಿಗಳನು (ಕುವಾದ್ರೋ. ೧೯-೩೦); ಕಾದವು ಭಟರ ಕೈದುಗಳ್ಗಿಡಿಯಲಿರಿದೆನಲ್ಕಾದವು ಶರಾಗ್ನಿಗಾಹುತಿ ಗಜಹಯಾದಿಗಳ್ (ಕ್ಷತ್ರಿಭಾ. ೧೩-೧೩). [ಸಂ.]

ಶರಾಫ 'ಸರಾಫ' ನೋ.

ಶರಾಬು, ಷರಾಬು (ನಾ). ಮಾದಕಪಾನೀಯ ; ಸಾರಾಯಿ : ಆಪ್ತರನ್ನು ಸಂಜೆ ಹೆಂಡದಂಗಡಿಗೆ ಕೊಂಡು ಹೋಗಿ ಚೆನ್ನಾಗಿ ಹೆಂಡ, ಹಣ ಹೆಚ್ಚಿಗೆ ಇದ್ದರೆ ಶರಾಬು ಕುಡಿಸುವುದು (ರಕ್ತರೂ. ೨೮). **ಷರಾಬು** : ಶೇಂದಿ ಷರಾಬು ಎಲ್ಲಿ ಎಲ್ಲಿ ಪರಿಯಂತರಕ್ಕೂ ಅಲಾಯಿದಾಬಾಬು ಇದೆಯೊ ಅದು ಯಾವತ್ತು ಬಾಬಿಗೂ ತಿಂಗಳುಗಟ್ಟಿ ಪ್ರಕಾರ ಐವಜು ವಸೂಲಾಗತಕ್ಕದ್ದನ್ನೆಲ್ಲಾ ವಸೂಲುಮಾಡಿಕೊಳ್ಳಬೇಕು (ಮಹಾವಂ. II. ೭೭) ; ಷರಾಬಿನಲ್ಲಿ ಮಾದಕವಸ್ತುವಿದೆಯೆಂಬುದನ್ನು ನಾವು ಅನುಭವದಿಂದ ತಿಳಿಯುತ್ತೇವೆ (ಜೀವಾತ್ಮ. ೬೦).

[← ಅರ. ಪಾರ. ಹಿಂ. ಮರಾ. ಶರಾಬ್]

ಶರಾಭ್ಯಾಸ (ನಾ). ಬಿಲ್ಲುವಿದ್ಯೆಯ ಕಲಿಕೆ, – ವ್ಯಾಸಂಗ : "ಶರಾಭ್ಯಾಸಃ, ಉಪಾಸನಂ – ೨ ಬಿಲ್ಲಿನಲ್ಲಿ ಬಾಣವೆಸೆಯುವ ಧನುರ್ವಿದ್ಯೆಯನ್ನು ಕಲಿತುಕೊಳ್ಳುವಿಕೆ" (ಸಿದ್ಧಾಂಶಿ. ೨೬೪). [ಸಂ.]

ಶರಾಯಿ, ಷರಾಯಿ (ನಾ). ದಪ್ಪಬಟ್ಟೆಯಲ್ಲಿ ಹೊಲಿದ ಇಜಾರ, — ಪಾಯಿಚಾಮ : ಈ ಕೋಟು, ಈ ಶರಟು, ಈ ಶರಾಯಿ, ಈ ಭಗ್ನಜೋಪಡಿಯು ನಿನ್ನದೇ (ಸಪ್ತಕ್ಷ. ೮೭). **ಷರಾಯಿ:** ಚಿಕ್ಕಮಕ್ಕಳು ಇಂಗ್ಲೀಷಿನವರಂತೆ ಷರಾಯಿ ಲಂಗಗಳನ್ನು ಹಾಕಿಕೊಳ್ಳುತ್ತಿದ್ದವು (ಹುಚ್ಚಸ. ೬) : ರಾಜಣ್ಣ, ಷರಾಯಿಚೇಬಿಗೆ ಕೈತುರುಕಿ ನೋಡಿದಾಗ ಸಿಗರೇಟು ಸಿಕ್ಕಿತು (ಕಣ್ಣಾಣಿ. ೭೫). [← ಪಾರ. ಶರೀಯಿ]

ಶರಾರತ್ತು (ನಾ). ತಂಟೆ ; ತಕರಾರು : ಕೊಡಗು ಜನ ಯಾವತ್ತು ತಿರುಗಿಬಿದ್ದು ಶರಾರತ್ತು ಮಾಡಿದ್ದರಿಂದ (ರಾಚೇಂದ್ರ. ೨೯); ಕೆಲವರ ಗಲ್ಲು ಹಾಕಿ ಈ ಮೇರ ಶರಾರತ್ತು ನಡಿಸಿದ್ದರಿಂದ (ರಾಚೇಂದ್ರ. ೯೦). [← ಅರ. ಪಾರ. ಹಿಂ. ಮರಾ. ಶರಾರತ್]

ಶರಾರಿ (ನಾ). = ಶರವೈರಿ : "ಆಟಃ, ಶರಾರಿಃ, ಆತಿಃ — ಈ ೩ ಸರಕೂಟವಕ್ಕೆ" (ಪಲಾಯು. ೪೨-೯೬). [ಸಂ.]

ಶರಾರು (ಗು). ೧. ಕೆಡುಕನ್ನುಂಟುಮಾಡುವ; ಹಾನಿಕರವಾದ. (ನಾ). ೨. ಕೊಲ್ಲುವವನು; ಕೊಲೆಗಡುಕ : "ಶರಾರು ಘಾತುಕ ಹಿಂಸಕಂ ಕೊಲ್ಲುವವನಕ್ಕುಂ" (ಮಂಗರಾ. ೭೦-೧೫). ೩. ಹಿಂಸ್ರಜಂತು. [ಸಂ.]

ಶರಾರುಕ (ನಾ). = ಶರಾರು ೨ : ತೀರದಕಟಕಟ ರಕ್ಕಸ ಶರಾರುಕನ ಮಾಯೆಯಂ ಗೆಲುವದೀ ಪರಿ (ವಂಕಾರಾ. ೬-೪೭-೫೦). [ಸಂ.]

ಶರಾವ (ನಾ). ೧. ಮಣ್ಣಿನ ಓಡು ; ಶ್ರಾವೆ : ನಿರಾವರಣಗಗನದೇಶಸ್ಥಿತಾವಧೃತ ಪ್ರಕಾಶಪರಿಮಾಣಪ್ರದೀಪಕ್ಕೆ ಶರಾವಮಾನಿಕಾವರಕಾದ್ಯಾವರಣವಶದಿಂ ತತ್ಪರಿಮಾಣತೆ ಯೆಂತಂತೆ ನಿಶ್ಚಯದಿಂ ಅಮೂರ್ತಸ್ವಭಾವನಾಗಿಯುಂ ಬಂಧಾಪೇಕ್ಷೆಯಿಂ ವಿಕತ್ವಮುಂಟಪ್ಪುದಱಿಂ (ತತ್ತ್ವಪ್ರ. ೨೩೮) ; ಕೀಟ್ಯಾನಿಸರಶ್ಯಾಂತಮುಗುಟ್ಟ ಶರಾವಂಬೊಲಮರ್ದ ವೇಶ್ಯಾಧರಮಂ ತಳ್ಳದೆ ಚುಂಬಿಸಿ ನರಕದೊಳಾಟ್ಟುದದೇಂ ನೀತಿಯೇ (ಉದ್ಭಟ. ೧೦-೮೦). ೨. ಧಾನ್ಯಗಳನ್ನು ಅಳೆಯುವ ಒಂದು ಪ್ರಮಾಣ: ೨. ಕುಡವ = ೧. ಮಾನಿಕಾ (ಶರಾವ — ಸೇರು — ೮ ಪಲ) (ಸಕಪ್ರ. XIII. ಪ್ರಸ್ತಾವನೆ). [ಸಂ.]

ಶರಾವತಿ (ನಾ). ೧. ಕರ್ನಾಟಕದಲ್ಲಿ ಹರಿಯುವ ಒಂದು ನದಿಯ ಹೆಸರು: "ಶರಾವತೀ, ವೇತ್ರವತೀ, ಚಂದ್ರಭಾಗಾ, ಸರಸ್ವತಿ, ಕಾವೇರೀ — ೫. . . . ನದೀವಿಶೇಷಗಳು" (ಸಿದ್ಧಾಂತಿ. ೮೮). ೨. ಶ್ರೀರಾಮನ ಮಗನಾದ ಲವನ ರಾಜಧಾನಿ. ೩. [ಸಂಗೀತ] ಒಂದು ರಾಗದ ಹೆಸರು: ಶರಾವತೀರಾಗವು . . . ಎಲ್ಲಾ ಕಾಲಗಳಲ್ಲಿ ಹಾಡಲ್ಪಡುತ್ತದೆ (ಚತುಪ್ರ. ೧೫೯). [ಸಂ. ಶರಾವತೀ]

ಶರಾವೆ (ನಾ). = ಶರಾವ ೧: ದಡದಡನೆ ಹೋಗಿ, ಮೂಲೆಯ ಮಡಕೆಯಿಂದ ಮೊಗೆಯಲ್ಲಿ ಎಣ್ಣೆಯನ್ನೂ ಅದರ ಮುಚ್ಚುಳ ಶರಾವೆಯಿಂದ ಬತ್ತಿಗಳನ್ನೂ ತಂದು . . . ಹೊತ್ತಿಸುವಳು (ಚಿಟ್ಟಿಅ. ೧೦೬-೪). [ಸಂ. ಶರಾವ]

ಶರಾಶ್ರಯ (ನಾ). ಬಾಣಗಳಿಗೆ ಆಶ್ರಯವಾದುದು; ಬತ್ತಳಿಕೆ: "ಹೂದೆಯೊತ್ತು ಡೊಣ ಶರಧಿ ತೂಣಂ ಶರಾಶ್ರಯಮುಪಾಸಂಗಂ ನಿಷಂಗಮಕ್ಕುಂ" (ಮಂಗರಾ. ೮೭-೩೪). [ಸಂ.]

ಶರಾಸನ (ನಾ). ಬಿಲ್ಲು; ಧನುಸ್ಸು : ಮುನೀಂದ್ರನಿಂದ್ರಿಯದೊಳೊಗೆದ ಪೆಣ್ಗೂಸುಮಂ ಗಂಡುಗೂಸುಮನವಱ ಕೆಲದೊಳರ್ದ ದಿವ್ಯಶರಾಸನಶರಂಗಳುಮಂ ಕಂಡು (ಪಂಪಭಾ. ೨-೩೩ ಪ); ಶರಾಸನಂ ಸಫಲಮಿಂದಾಯ್ತೆಂಬ ನಚ್ಚಿಂ ಮುಗುಳ್ನಗೆ ನಕ್ಕು (ಶಾಂತಿಪು. ೩-೧೧೫); ಕಲಿ ಸುಬಾಹು ಶರಾಸನವ ಪಿಡಿದಲಘುಮಹಿಮನೆಸುತ ತಱುಬಲು . . . ತಱೆದು ಬಿಸುಟನು ಏಳನ ಹಿಂದಲೆಯ (ಕೌಶಾ. ೧-೯೨). [ಸಂ.]

ಶರಾಸನಾಗಮ (ನಾ). ಅಸ್ತ್ರಪ್ರಯೋಗಗಳನ್ನು ಕುರಿತ ಶಾಸ್ತ್ರ; ಧನುರ್ವಿದ್ಯೆ: ಭರದಿಂ ರಾಮಂ ಕಾಕಾಸುರನ ಮುನಿದಿಸುವ ತೆಱದಿನೆಚ್ಚಂ ವಿಹಗೇಶ್ವರನೆನಿಪ ಹಂಸನಂ ವರಶರಾಸನಾಗಮವಿಶಾರದಂ ತತ್‌ಕ್ಷಣದಿಂ (ಪಂಚತಂ. ೧೨೮-೭). [ಸಂ.]

ಶರಾಸಾರ (ನಾ). = ಶರವರ್ಷ : ಅಂತು ನರನಾರಾಯಣರಿರ್ವರುಮನವರತ ಶರಾಸಾರಶೂನ್ಯೀಕೃತಕಾನನಮಾಗೆಚ್ಚು ಮೃಗವ್ಯಾಪಾರದಿಂ ಬಟಲ್ಚು . . . ಬರೆವರೆ (ಪಂಪಭಾ. ೫-೫೦ ಪ) : ಬಿಲ್ಲೊಜಱ ಗಾಂಡೀವಿಯೊಳ್ಪಾದಿದನವರ ಶರಾಸಾರಮಂ ನೀನೆ ಕಂಡೈ (ಗದಾಯು. ೨-೩೦). [ಸಂ.]

ಶರಿರ, ಸರಿರ (ನಾ). ಒಡಲು ; ಮೈ ; ದೇಹ : ಶಂಕರನೆಂದು ತನ್ನ ತಿಂಗಳ ಶಿಶುವ ಕೊಡಲ್ . . . ಉರಿವ ಕಿಚ್ಚಿನ ಹೊರೆಯೊಳಿರಿಸಲದು ಸನ್ನಿವಟ್ಟು ಶರಿರವೆಲ್ಲಂ ಕಂದಿ ಕುಂದಿತು (ಭಾವಚಂ. ೬-೧) : ಶರಿರಮನಭಾವಗಳ ಗುರುಲಿಂಗಜಂಗಮಕೆ ಹರಣ ಮುಂತಾಗಿ ಅರ್ಪಿಸಿದ ಶರಣ ತಾ ಮರಳಿ ಜನಿಸುವನೆ (ಸರ್ವಜ್ಞ. ೧೪೫). **ಸರಿರ :** "ಸರಿರಂ ವಿಗ್ರಹದೊಳ್" (ಕರ್ಣಾನಿ. ೮೪); ಸರಿರವಿಲ್ಲದ ಲಿಂಗರೂಪಾಗಿ ಕೂಡಿಪ್ಪ . . . ಗುರು ಮನದೊಳಿರಲಡಿಯನರ್ಚಿಸುವೆಂ (ವೀಶೃಪ್ರ. ೧-೧-೩). [< ಸಂ. ಶರೀರ]

ಶರಿರಗುಂದು (ಕ್ರಿ). ದೇಹವು ಸೊರಗು, — ಬಡವಾಗು: ತರಳೆ ಪೌರ್ಣಮಿಯ ಮುಂದಣ ಚಂದಿರನಂತೆ ಶರಿರಗುಂದಿದಳಾ ಕ್ಷಣದಿ (ಜೀವಂಸಾಂ. ೧೨-೬೪). [ಶರಿರ + ಕುಂದು]

ಶರೀಕು, ಷರೀಕು, ಷೆರೀಕು (ನಾ). ಶಾಮೀಲು ; ಜೊತೆ : ಈ ಮೋಸದಲ್ಲಿ ಇಬ್ಬರೂ ಶರೀಕಾಗಿದ್ದಾರೆ (ರೂಢಿ). **ಷರೀಕು:** ಇಬ್ಬರೂ ಷರೀಕಾಗಿ ಸಮನ್ಸ್ ಮೇಲೆ . . . ಸುಳ್ಳು ಷರಾ ಬರೆಯಿಸಿ . . . ಅವರ ಕಡೆ ಗಣಂಗಳ ರುಜು ಹಾಕಿಸುತ್ತಿದ್ದರು (ಪಂಜಪಂ. ೪೭). **ಷೆರೀಕು:** ನಾವೆಲ್ಲರೂ ಷೆರೀಕಾಗಿರುತ್ತೇವೆ (ಅಲಮ. ೫೩). [← ಅರ. ಹಿಂ. ಶರೀಕ್]

ಶರೀರ (ನಾ). ೧. ಒಡಲು ; ಮೈ ; ದೇಹ : "ತನು ಗಾತ್ರಂ . . . ಶರೀರಂ ಕಳೇಬರಂ ಕಾಯಂ" (ವಸ್ತುಕೋ. ೬-೭೧); ನರಶರಕೋಟಿ ಜರ್ಜರಿಸ ತನ್ನ ಶರೀರಮನಸ್ಸ ವೇದನಾಪರವಶನಾಗಿಯುಂ ಮಱೆದನಿಲ್ಲ ಮುಕುಂದನಂ (ಗದಾಯು. ೫-೩೮); ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ . . . ಮೃತ್ಯು ಮುಟ್ಟದ ಮುನ್ನ ಪೂಜಿಸು ನಮ್ಮ ಕೂಡಲಸಂಗಮದೇವನ (ಬಸವ. ೧೭೧). ೨. [ನ್ಯಾಯ] ಹನ್ನೆರಡು ವಿಧವಾದ ಪ್ರಮೇಯಗಳಲ್ಲಿ ಒಂದು: ನ್ಯಾಯಶಾಸ್ತ್ರದಲ್ಲಿ ಹೇಗೆಂದರೆ - ಆತ್ಮ ಶರೀರ ಇಂದ್ರಿಯ ಅರ್ಥ ಬುದ್ಧಿ ಮನಸ್ಸು ಪ್ರವೃತ್ತಿ ದೋಷ ಪ್ರೇತ್ಯಭಾವ ಫಲ ದುಃಖ ಅಪವರ್ಗವೆಂದು ಹನ್ನೆರಡು ವಿಧವಾಗಿ ಪ್ರಮೇಯವನ್ನು ಒಂಬತ್ತನೆಯ ಸೂತ್ರದಲ್ಲಿ ವಿಭಾಗ ಮಾಡಿರುವರು (ಓದಸಾ. ೧೧೫). [ಸಂ.]

ಶರೀರಗುಣ (ನಾ). ದೇಹದ ಸ್ವಭಾವ; ದೇಹಪ್ರಕೃತಿ : ಒಬ್ಬೊಬ್ಬರ ಶರೀರಗುಣ ಒಂದೊಂದು ಬಗೆಯಿರುತ್ತದೆ (ರೂಢಿ). [ಸಂ.]

ಶರೀರಜ (ಗು). ೧. ದೇಹದಲ್ಲಿ ಹುಟ್ಟಿದ, — ಉಂಟಾದ. (ನಾ). ೨. ದೇಹದಿಂದ ಹುಟ್ಟಿದುದು : ಅಕೃಜದ ರುಚಿಯೇನು ಮಾನಸವೋ ಶರೀರಜವೋ (ಕವ್ಯಾಸ. ೧-೧೦). ೩. ಕಾಯಿಲೆ ; ರೋಗ. ೪. ಕಾಮಾಸಕ್ತಿ ; ವಿಷಯಾಭಿಲಾಷೆ. ೫. ಮಗ. ೬. ಮನ್ಮಥ ; ಕಾಮ. [ಸಂ.]

ಶರೀರತಪ (ನಾ). ತಪಸ್ಸು, ಉಪವಾಸ, ವ್ರತ, ವ್ಯಾಯಾಮ ಮುಂತಾದುವುಗಳಿಂದ ದೇಹವನ್ನು ದಂಡಿಸುವಿಕೆ ; ದೇಹದಂಡನೆ : ನಿತ್ಯಹರುಷದಿ ಯಾಸ ಮಾಡುತ ದೇಹ ದಂಡಿಸೆ ನೀ ಸಕಲವರಿ ಮಗನೆ ಶರೀರತಪವಿದು (ಜ್ಞಾನಸಿಂ. ೩೧-೬೦). [ಸಂ.]

ಶರೀರತ್ಯಾಗ (ನಾ). ದೇಹವನ್ನು ಬಿಡುವುದು; ಸಾವು; ಮರಣ. [ಸಂ.]

ಶರೀರದಂಡ (ನಾ). = ಶರೀರತಪ: ಭರತಂ ಶರೀರದಂಡಮಂ ಮಾಡಿದಂ (ಚಾವುಂಪು. ೧೧). [ಸಂ.]

ಶರೀರಧರ್ಮ (ನಾ). ೧. ದೇಹದ ಸ್ವಭಾವ, — ಪ್ರಕೃತಿ : (ಬೆ). ೨. ದೇಹದಲ್ಲಿ ತನ್ನಷ್ಟಕ್ಕೆ ನಡೆಯುವ ಶ್ವಾಸೋಚ್ಛ್ವಾಸ ಮುಂತಾದ ಕಾರ್ಯ; ದೇಹಧರ್ಮ. [ಸಂ.]

ಶರೀರನಾಮಕರ್ಮ (ನಾ). [ಜೈನ] ಶುದ್ಧಸ್ವಭಾವದ ಜೀವನಿಗೆ ಹೆಸರಿನ ಸಂಜ್ಞೆಯುಳ್ಳ ಕರ್ಮವು ಆಚ್ಛಾದಿತವಾಗಿ ಮನುಷ್ಯ, ತಿರ್ಯಕ್ ಮೊದಲಾದ ರೂಪಗಳನ್ನು ಕೊಡುವಿಕೆ : ಶರೀರನಾಮಕರ್ಮಂ ಪಂಚವಿಧಮಕ್ಕುಂ (ಗೊಮ್ಮಸಾ. ೩-೮). [ಸಂ. ಶರೀರನಾಮಕರ್ಮನ್]

ಶರೀರಪೂಜೆ (ನಾ). ಗತಿಸಿದವರ ದೇಹಕ್ಕೆ ಮಾಡುವ ಪೂಜೆ: ದಮಿತಾರಿಗ ಶರೀರಪೂಜೆಯಂ ಮಾಡಲ್ಬೇಟ್ಟು (ಶಾಂತಿಪು. ೪-೫೭ ವ) : ಕಾದಿ ಸತ್ತ ನೆಗೞ್ತೆಯ ಬೇಚರರ್ಗಲ್ಲಂ ಶರೀರಪೂಜಾಪೂರ್ವಕಂ ಸಂಸ್ಕಾರವಿಧಿಯಂ ನಿರ್ವರ್ತಿಸಿ (ಶಾಂತಿಪು. ೫-೬೪ ವ). [ಸಂ. ಶರೀರಪೂಜಾ]

ಶರೀರಪ್ರಕೃತಿ (ನಾ). = ಶರೀರಗುಣ : ನನ್ನ ಶರೀರಪ್ರಕೃತಿಗೆ ಅದು ಒಗ್ಗುವುದಿಲ್ಲ (ರೂಢಿ). [ಸಂ.]

ಶರೀರಪ್ರತ್ಯಾಖ್ಯಾನ (ನಾ). [ಜೈನ] ದೇಹವನ್ನು ತಿರಸ್ಕಾರಭಾವದಿಂದ ಕಾಣುವುದು ; ದೇಹದ ಬಗೆಗೆ ತೋರುವ ಅಗೌರವ, – ಅಲಕ್ಷ್ಯ : ಆಂ . . . ಜಾತಿಸ್ಮರರುಮಾಗಿ ಪರಸ್ಪರವ್ಯೆರಮಂ ಬಿಸುಟ್ಟಾಹಾರಶರೀರಪ್ರತ್ಯಾಖ್ಯಾನಪೂರ್ವಕಂ ಸನ್ಯಸನವಿಧಿಯಿಂದಸುವಂ ವಿಸರ್ಜಿಸಿ (ಶಾಂತಿಪು. ೯-೭೧ ವ). [ಸಂ.]

ಶರೀರಸಂಬಂಧ (ನಾ). ೧. ಮದುವೆಯಿಂದ ಉಂಟಾಗುವ ನಂಟುತನ, – ಬಾಂಧವ್ಯ : ಉತ್ತರ – ಹಿಂದೂಸ್ಥಾನದ ಸಾರ್ವಭೌಮರಾಗಿದ್ದ ಗುಪ್ತವಂಶದ ಅರಸರೊಂದಿಗೆ ಇವರು ಶರೀರಸಂಬಂಧವನ್ನು ಬೆಳೆಸಿದ್ದರು (ಕರ್ಣಾಅ. ೪); ಶರೀರಸಂಬಂಧವನ್ನು ಮಾಡಿ, ಸ್ನೇಹವನ್ನು ವೃದ್ಧಿಪಡಿಸಬೇಕು (ಮಂಜುಕ. ೧೬). ೨. ಗಂಡು ಹೆಣ್ಣುಗಳ ಪರಸ್ಪರ ದೇಹಸಂಬಂಧ. [ಸಂ.]

ಶರೀರಸಲ್ಲೇಖನೆ (ನಾ). [ಜೈನ] ಅಂತ್ಯಕಾಲವು ಹತ್ತಿರವಾದಾಗ ದೇವರನ್ನು ಧ್ಯಾನಿಸುತ್ತ, ಆರ್ಯಕೆ, ಔಷಧ ಮುಂತಾದುವುಗಳನ್ನು ಬಿಟ್ಟು ಉಪವಾಸ ವ್ರತದಿಂದ ಶರೀರವನ್ನು ಕ್ರಮೇಣ ಕುಗ್ಗಿಸುತ್ತ ದೇಹತ್ಯಾಗ ಮಾಡುವುದು : ಅನಶನಾದಿ ಬಾಹ್ಯತಪಂಗಳಿಂ ಶರೀರಮಂ ಕೃಶಂ ಮಾಟ್ಟುದು ಶರೀರಸಲ್ಲೇಖನೆ (ಶ್ರಾವಕಾ. ೧೫೭ ೯) ; ಉಪವಾಸ ಮೊದಲಾದುವುಗಳಿಂದ ಶರೀರವನ್ನು ಕೃಶಮಾಡುವುದು ಶರೀರಸಲ್ಲೇಖನೆಯು (ಚೈನಪ. ೫೭೫). [ಸಂ. ಶರೀರಸಲ್ಲೇಖನ]

ಶರೀರಸ್ಥ (ಗು). ದೇಹದಲ್ಲಿ ನೆಲಸಿರುವ : ಜೀವನು ಶರೀರಕ್ಕಿಂತ ಭಿನ್ನವಸ್ತುವಾದುದಾದರೆ ಶರೀರವು ನಷ್ಟವಾದ ಮೇಲೆ ಜೀವನೂ ನಾಶವಾಗುತ್ತಾನೆಯೋ? . . . ಅವನ ಪರಿಸ್ಥಿತಿಯೇನು? ಈ ಸ್ಥಿತಿಗೂ ಶರೀರಸ್ಥಸ್ಥಿತಿಗೂ ವ್ಯತ್ಯಾಸವೇನು? (ಜೀವಾತ್ಮ. ೧೯). [ಸಂ.]

ಶರೀರಿ (ನಾ). ೧. ಶರೀರವಿರುವಂತಹ ಮನುಷ್ಯ, ಪ್ರಾಣಿ ಮುಂತಾದುವು: ಸಾಧಿತಸಮ್ಯಗ್ದರ್ಶನಬೋಧಚರಿತ್ರಂಗಳೆಂಬ ಧರ್ಮಮಿದವ್ಯಾಬಾಧಂ ಧರ್ಮಮಿದಲ್ಲದುದಾಧಿವ್ಯಾಧಿಪ್ರದಂ ಶರೀರಿಗಪಥ್ಯಂ (ಶಾಂತಿಪು. ೬-೪೫). ೨. ದೇಹವನ್ನು ಧರಿಸಿರುವ ಆತ್ಮ, – ಚೇತನ. [ಸಂ. ಶರೀರಿನ್]

ಶರೀರೋಪಾದಾನ (ನಾ). ಹುಟ್ಟು ; ಜನನ : ಜೀವಂಗಳ್ ಶುಭಾಶುಭಕರ್ಮಶ್ಶಲೂಷಪ್ರೇರಿತಂಗಳಾಗಿ . . . ನಾನಾಕಾರಶರೀರೋಪಾದಾನಪರಿತ್ಯಜನಪುರಸ್ಸರಂ ಪರಿಭ್ರಮಿಸುಗುಂ (ಆದಿಪು. ೧೬-೫೭ವ). [ಸಂ.]

ಶರೆ 'ಸೆರ್ಕೆ' ನೋ.

ಶರ್ಕರಾದಂತ (ನಾ). ಒಂದು ಬಗೆಯ ದಂತರೋಗ : ಶುಷ್ಕವಾದ ಶ್ಲೇಷ್ಮವಾತಂಗಳಿಂದ ಉಂಟಾದ ಶರ್ಕರಾದಂತವೆಂಬ ದಂತರೋಗದಲ್ಲಿ ಹಲ್ಲುಗಳು ಸುಣ್ಣಪಾರೆ ಕಲ್ಲಿನ ಹಾಗೆ ಕಠಿಣವಾಗಿ ಸ್ಥಿರವಾಗಿ ಇಹವು (ವೈದ್ಯಸಾ. ೫. ೧೨೨). [ಸಂ.]

ಶರ್ಕರಾಪ್ರಭೆ (ನಾ). [ಜೈನ] ಒಂದುನರಕದ ಹೆಸರು : ಹಂಸೆಯೆಂಬ ಹೆಸರ ಶರ್ಕರಾಪ್ರಭೆಯೆಂಬೆರಡನೆಯ ನರಕಮಿರ್ದುದಾ ನರಕಬಿಲಂಗಳೆಲ್ಲಮಿಪ್ಪತ್ತೈಯ್ದು ಲಕ್ಷಮಕ್ಕುಂ (ಅಜಿಪು. ೧೧-೬ ವ); ಲಕ್ಷ್ಮೀಧರಂಗೆ ಧರ್ಮಮಂ ಪ್ರತಿಬೋಧಿಸಲೆಂದು ಶರ್ಕರಾಪ್ರಭೆಯೆಂಬ ನರಕಕ್ಕೆ ಪೋಗಿ (ಪಂರಾಮಾ. ೧೬-೭೦ ವ). [ಸಂ. ಶರ್ಕರಾಪ್ರಭಾ]

ಶರ್ಕರಾವರ್ತ (ನಾ). ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ ಸುಂಟರಗಾಳಿ : ಶರ್ಕರಾವರ್ತಂ ಪ್ರವರ್ತಿಸಿತು ಪಾರ್ಥಜಂ ಕರ್ಕಶದ ಬಾಣಮಂ ತೆಗೆದಿಸಲ್ (ಚೈಮಿಭಾ. ೨೩ ೪೬). [ಸಂ.]

ಶರ್ಕರಾವರ್ಷ (ನಾ). ನೊರಜುಗಲ್ಲುಗಳ ಮಳೆ: ಮಿಗಿಲೆನಿಪವೊಲು ಶರ್ಕರಾವರ್ಷಗಳೆನಿಸಿಯೆಡೆಬಿಡದೆ ಬಿಱುಗಾಳಿಗಳು ಬೀಸಿದವು (ತಿಮ್ಮಮೌ. ೧-೩). [ಸಂ.]

ಶರ್ಕರಿಲ (ಗು). ೧. ನೊರಜುಗಲ್ಲುಗಳಿಂದ ಕೂಡಿದ. (ನಾ). ೨. ನೊರಜುಗಲ್ಲುಗಳಿಂದ ತುಂಬಿದ ನೆಲ : "ಸಶರ್ಕರಂ ಶರ್ಕರಿಲಂ" (ವಸ್ತುಕೋ. ೨೬-೫). [ಸಂ.]

ಶರ್ಕರೆ (ನಾ). ೧. ಸಣ್ಣಕಲ್ಲು; ನೊರಜುಗಲ್ಲು. ೨. ನೊರಜುಗಲ್ಲುಗಳುಳ್ಳ ನೆಲ, – ಭೂಮಿ : "ಶರ್ಕರಾ, ಶರ್ಕರಿಲಃ, ಶಾರ್ಕರಃ, ಶರ್ಕರಾವಾನ್ – ೪ ನರುಜುಕಲ್ಲುಗಳುಳ್ಳ ನೆಲದ ಹೆಸರುಗಳು" (ಸಿದ್ಧಾಂತಿ. ೪೯೫). ೩. ಸಕ್ಕರೆ : ಪುದಿದ ಶಿಥಿಲಪರಿಣಾಮದೊಳೊದವಿದ ದುರಿತಾನುಗತಮದನುಭಾಗಮೆನಿಪ್ಪುದು ಶರ್ಕರಾವಿಕಿಂಪಾಕದುರ್ವಿಪಾಕಪ್ರಭಾವಶಕ್ತಿಪ್ರತಿಮಂ (ಸುಕುಮಾ. ೮-೩೦); ಸಿರಿಕಂಡಂ ಬಾಳಂ ಶರ್ಕರ ಬೇವಿನ ಕಡ್ಡಿ ಭದ್ರಮುಸ್ತೆ ದ್ರಾಕ್ಷಂಬೆರಸರದು ಕುಡಿಯಲ್ಕೆಱದಡೆ ಪರಿಹರಿಸುಗುಮೆಯ್ದೆ ಪಿತ್ತಜನಿತಜ್ವರಮಂ (ಕಲ್ಯಾಕಾ. ೭-೩೮). ೪. ಮಡಕೆಯ ಚೂರು ; ಬೋಕಿ : "ಶರ್ಕರಾ – ಹೆಂಚುಚೂರು, ಮರಳು, ಸಕ್ಕರೆ" (ಸಿದ್ಧಾಂತಿ. ೪೧೫). [ಸಂ. ಶರ್ಕರಾ]

ಶರ್ಕರೆವಿಲ್ಲು (ನಾ). ಕಬ್ಬಿನ ಬಿಲ್ಲು: ಅಲರ್ದ ತಿಲಕುಸುಮಿರಲು ನಾಸಲರ್ಗಣ್ಣು ಶರ್ಕರೆವಿಲ್ಲ ನಿಡುಪುರ್ಬು (ಜಿರಾಮಾ. ೧೮-೪೩). P ಇದು 'ಇಕ್ಷುಚಾಪ', 'ಇಕ್ಷುಕೋದಂಡ' ಎಂಬ ಪದಗಳ ಸಾಮ್ಯದಿಂದ ಮಾಡಿಕೊಂಡ ರೂಪ.

[ಶರ್ಕರೆ + ಬಿಲ್ಲು$_1$ (< ಬಿಲ್$_2$)]

ಶರ್ಟು 'ಷರಟು' ನೋ.

ಶರ್ಧ (ನಾ). ೧. ಗುಂಪು ; ತಂಡ. ೨. ಕಸುವು ; ಶಕ್ತಿ. ೩. ಅಪಾನವಾಯು; ಹೂಸು. [ಸಂ.]

ಶರ್ಧಿಸು (ಕ್ರಿ). ಅಪಾನವಾಯುವನ್ನು ವಿಸರ್ಜಿಸು : (ಕಿ). [ಶರ್ಧ + – ಇಸ್ಕು]

ಶರ್ಮ (ಗು). ೧. ಸುಖವನ್ನು ಕೊಡುವ ; ಆನಂದದಾಯಕ : ಎಸವ ನಿರ್ಮಿತ ಶರ್ಮಭರ್ಮಹರ್ಮ್ಯದೊಳ್ಕೂರ್ಮೆಯಿಂ ಪರ್ಮೆವತ್ತು ಪದಪದಮರ್ದಿರೆ (ರಾಜಶೇ. ೨-೧೨೦ ವ). (ನಾ). ೨. ಸಂತೋಷ; ಆನಂದ: ಧರ್ಮಮ ದೇಹಿಗ (ಮಿ) ಹಪರಶರ್ಮಕ್ಕೆ ನಿದಾನಂ (ಪುಪ್ರಪು. ೩-೧೦೮); ನೆಗಟ್ಟನ್ನಂ ಪ್ರಜೆಗಳ್ ಸ್ವಜಾತ್ಯುಚಿತ ತತ್ತದ್ಧರ್ಮದಿಂ ಶರ್ಮದಿಂ ನೆಗಟ್ಟಂ ಶ್ರೀಚಿಕದೇವರಾಯಂ (ಅಪ್ರತಿ. ೧ ೨೭). ೩. ಆಶೀರ್ವಾದ ; ಅನುಗ್ರಹ. ೪. ಆಸರೆ; ರಕ್ಷಣೆ. ೫. ಮನೆ ; ಗೃಹ. ೬. ಸಂತೋಷವನ್ನುಂಟುಮಾಡುವವನು : ಅಧಿಕಾರಿಗಳೆನಿಪವರಾರ್ ಬುಧರ್ಗೆನಿಪಂ ಬರ್ಮ್ಮನಖಿಳಬುಧಜನಶರ್ಮ್ಮ (ಎಕ. VII. ಶಿಕಾರಿ. ೧೦೨-೨೧: 1162). ೭. ಕೆಲವು ಬ್ರಾಹ್ಮಣರ ಹೆಸರಿನ ಮುಂದೆ ಸೇರುವ ಒಂದು ಪದ: ಕೃಷ್ಣಶರ್ಮನೆಂದನಗೆ ಸುತನೊರ್ವನುಂಟು (ಚೈಮಿಭಾ. ೨೬-೩೩). [ಸಂ. ಶರ್ಮನ್]

ಶರ್ಮಕಾರಣ (ನಾ). ಸಂತೋಷಕ್ಕೆ ಕಾರಣವಾದುದು; ಸುಖಕ್ಕೆ ನಿಮಿತ್ತವಾದುದು : ಶರ್ಮಕಾರಣಕರ್ಮವೆಂಬರು ಕೆಲರು ನಿಜಸುಖಕೆ ಭ್ರಮೆಯ ಪುಟ್ಟಿಸುವೈಶ್ವರಿಯವು . . . ಎಮಗೆ ಸಾಧನಮುಕ್ತಿಯೆಂಬರು ಕೆಲರು (ನಿಭಾಗ. ೧೧-೨೧-೭). [ಸಂ.]

ಶರ್ಮಿ (ಗು). ೧. ಸಂತೋಷವನ್ನುಂಟುಮಾಡುವ. (ನಾ). ೨. (ನಲ್ಲ ಅಥವಾ ನಲ್ಲೆಯರ) ವಿಗ್ರಹ, – ಪ್ರತಿಮೆ: ಗಮ್ಯೆಯಲ್ಲದ ಸತಿಯನಾವನು ಗಮ್ಯೆಯಲ್ಲದವರನನಾವಳು . . . ರಮಿಸುವರು ಮೇಣವರ ಯಾಮ್ಯರುಭಯವ ಕಾದ ಲೋಹದ ಶರ್ಮಿಯನು ತೋಳುಗಳಲಪ್ಪಿಸಿ ಕರ್ಮ ಸವವನ್ನವರ ಬಿಡಲೀಸರು ದುರಾತ್ಮಕರ (ನಿಭಾಗ. ೫-೧೧-೨೮). [ಸಂ. ಶರ್ಮಿನ್]

ಶರ್ಯತ್ತು 'ಶರತ್ತು' ನೋ.

ಶರ್ವ (ನಾ). ೧. ಶಿವನ ಹೆಸರುಗಳಲ್ಲಿ ಒಂದು : ಪರ್ವಿಸಿಲರ್ವಿಸ ಮೆಯ್ಯನೊಡ್ಡಿ ತಾಂ ನಿರ್ವಹಿಸಲ್ಕಮಾಱದೆ ಹಿಮಾಂಶುಕಳಾಳಿಯನೆತ್ತಿ ಪೊತ್ತನಾ ಶರ್ವಂ (ಬಾಧವು. ೪-೮೧); ಸುಖಮನುಂಟುಮಾಳ್ಪುದಱಿಂದಂ ಶರ್ವನೆಂದು ಹೆಸರು (ಭಾರಶಾಂ. ೪೩). ೨. ವಿಷ್ಣುವಿನ ಹೆಸರುಗಳಲ್ಲಿ ಒಂದು. ೩. [ಶೈವ] ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು: ಕಾಮಿಕ, ಯೋಗಜ . . . ಶರ್ವ, ಪಾರಮೇಶ್ವರ, ಕಿರಣ, ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). ೪. [ಛಂದ] ಗುರು ಅಕ್ಷರದ ಸಂಕೇತ : ಉರ್ವೀಮಾರುತ ಭಾಸ್ಕರಾನಿಲವಿಯದ್ವಂದ್ವಂ ಪದಾಂತಂಗಳೊಳ್ ಶರ್ವಂ ವಿಶ್ರಮಣಂ ದಿನೇಶರೆಡೆಯೊಳ್ನಿಲ್ಕುಂ (ಛಂದೋಂಬು. ೨-೧೭೩). ೫. ಒಂದು ಗಣದ ಹೆಸರು ; ರುದ್ರಗಣ : ಗಿರಿಶಂ ಧೂರ್ಜಟಿ ಶರ್ವಂ ಪುರಾರಿ ಪುರರಿಪುವೆನಿಪ್ಪುವಿಂತಯ್ದು ಗಣಂ ಬರೆ (ಛಂದೋಂಬು. ೪-೨೨೮). [ಸಂ.]

ಶರ್ವರಿ (ನಾ). ೧. (ನಕ್ಷತ್ರಗಳಿಂದ ಪ್ರಕಾಶವಾದ) ಇರುಳು : ರಾತ್ರಿ : ಪೋದುದು ಶರ್ವರಿ ಬೆಳಗಾದುದೇಟ ಶಯ್ಯಾತಳದೊಳ್ (ಶಾಂತಿಪು. ೫-೮೪) ; ಶರ್ವರಿಯ

ಸತ್ತ ಸಪ್ತಲಿಮಯ್ಯ ಪೂಸಮಂ ಮುದ್ದೆಮೆದ್ದೆಯೆ ಕಿತ್ತೆಳೆಯುವಂತೆ. ಕೇಳ್ದುವಯ್ ಕೋಳ್ಮಗಗಳೋಲ್ (ಶ್ರೀತಾಪೂ. ೧೨೯-೧೩೨). ೨. ಸಂಜೆ ; ಸಾಯಂಕಾಲ. ೩. ಅರಿಸಿನ. ೪. ಹೆಂಗಸು. [ಸಂ. ಶರ್ವರೀ]

ಶರ್ವರೀಧವ (ನಾ). ರಾತ್ರಿಯ ಒಡೆಯ; ಚಂದ್ರ : ಅಮರೇಂದ್ರನಮೃತಮಂ ತಪನೀಯಕಲಶದೋಳ್ತುಂಬಿ ಪರಿಪೂರ್ಣದಿಂದೆ ಪವಿತ್ರಮಹಿಮನಿಗೆ ಕಳುಹಿದ ನಿನಲ್ಕರ್ವರೀಧವಂ ಫಳಫಳಿಸಿದಂ (ಪುರಪು. ೪ ೧೯). [ಸಂ.]

ಶರ್ವರೀಶ (ನಾ). = ಶರ್ವರೀಧವ: ಪಾರ್ವತೀವರ ಶರಣಾಗತಪ್ರಕರರಕ್ಷಕ ಶಂಕರ ಶರ್ವರೀಶಶೇಖರ ಜಯ (ರಾಜಶೇ. ೧೪-೯೯). [ಸಂ.]

ಶರ್ವಾಣಿ (ನಾ). ಶಿವನ ಪತ್ನಿ ; ಪಾರ್ವತಿ : ಶರ್ವಾಣಿಯ ಸೌಂದರ್ಯಮನೊರ್ವಂ ಬಣ್ಣಿಸುವೆನೆಂಬವಂ ಗಾಂಪಂ (ಗಿರಿ. ೪ ೧೦). [ಸಂ. ಶರ್ವಾಣೀ]

ಶರ್ವಾಣೀಶ (ನಾ). ಶರ್ವಾಣಿಯ ಪತಿ ; ಶಿವ : ಶರ್ವಾಣೀಶಗೃಹಕ್ಕೆ . . . ಮುಚ್ಚಯದಾತ್ಮೀಯಕಳಾಸರ್ವಜ್ಞತೆಯಂ ಮುಚ್ಚದಂ ಗೀರ್ವಾಣಸ್ಪತಿ ನಿಮ್ಮ ಗೃಹವಿರಚನೆಯಿಂ (ಜಗವಿ. ೯-೧೩೧). [ಸಂ.]

ಶಲ, ಶಳ (ನಾ). ೧. ಮುಳ್ಳುಹಂದಿಯ ಮೈಮೇಲಿರುವ ಮುಳ್ಳು ; ಕಣೆ : ''ಶಲಲಿ ಶಲ್ಕನೆಯ್ಯಮ್ಮಗವಕ್ಕು ಶಲಲಮಾ ಶಲಮನಲ್ಕದಜ ಮುಳ್ಳಕ್ಕುಂ'' (ಮಂಗರಾ. ೪೯-೧೨). ೨. ಸಲಾಕೆ ; ಈಟಿ. ೩. ಶಿವಗಣಗಳಲ್ಲಿ ಒಬ್ಬ. ೪. ಒಂಟೆ. ೫. ಮುಳ್ಳುಹಂದಿ: ಕರಡಿ ಕಾಸರ ಶಲ ಮೃಗಾದನ ಖಡ್ಗ ಗೋಮಾಯು . . . ಕುರಂಗಪ್ರಮುಖಮೃಗಕುಲವುಱುಬಿ ಬಿದ್ದುದು ದಳ್ಳುರಿಯ ಬೆಳ್ಳಾರವಲೆಗಳಲಿ (ಹರ್ಷಾ. ೨೦-೫೧). **ಶಳ** : ೧. ಶಲ [ಪಾಶಾ. ಸಲಿ] ಸೂಬೀಭಿನ್ನವಕ್ಷಂ . . . ವಿನಿಷ್ಕ್ರಾಂತಜಿಹ್ವಾಪ್ರವಾಳಂ ಪೊಳೆದೊಂದೇಂ ಬಂದುದೋ ಬೇಡನ ಬಲೆವಲೆಯಂ ಶ್ವಾನಸೇನಾವಸಾನಂ (ಅರ್ಧನೇ. ೩-೬೨). [ಸಂ.]

ಶಲದಿ[1] 'ಸೆಲಂದಿ' ನೋ.

ಶಲದ್ದಿ, ಚಲದಿ (ನಾ). ೧. (ಮಕ್ಕಳಿಗೆ ಸಿಡುಬು, ದಡಾರ ಮುಂತಾದುವು ಕಾಣಿಸಿಕೊಂಡಾಗ ಅವು ಪೂರ್ತಿಯಾಗಿ ಹೊಮ್ಮಲೆಂದು ಕೊಡುವ) ಶೀತಕಾರಕವಾದ ಆಹಾರಪದಾರ್ಥ; ತಂಪನ್ನುಂಟುಮಾಡುವ ಆಹಾರ ಪದಾರ್ಥ: ಹುಳಿ ಶಲದಿ ವರ್ಜ್ಯವಾಗಿ ಪಥ್ಯ (ಸಚಿ. ೨೦೯): ಹುಳಿ ಶಲದಿ ವರ್ಜ್ಯ (ಕಾಮಶಾ. ೨೬೭). ೨. ತೇವದಿಂದ ಚರ್ಮದ ಸಂಧಿಗಳಲ್ಲಿ ಕೆಂಪಾಗಿ ಕೊಳೆತಂತಾಗುವುದು, – ಸೆಲೆತುಕೊಳ್ಳುವುದು : ಮಗುವಿನ ತೊಡೆಯಲ್ಲಿ ಶಲದಿಯಾಗಿದ (ಕಂಗಿ). (ಗು). ೩. ಶೀತಕಾರಕವಾದ; ತಂಪನ್ನುಂಟುಮಾಡುವ: ಗಂಟಲುಬೇನೆ ಇರುವವರು ಶಲದಿಪದಾರ್ಥಗಳನ್ನು ತಿನ್ನಬಾರದು (ಡೂಗಿ). 'ಸೆಲ್ದ್'[2] ಪರಾ. ಚಲದಿ : ೧. ಈ ರೋಗಕ್ಕೆ ಚುರುಕಾದ ಮತ್ತು ಚಲದಿಯಾದ ಪದಾರ್ಥಗಳು ಸುತರಾಂ ನಿಷಿದ್ಧ (ಜಚಿ. ೩೬). [ದೇ.॥ ತಮಿ. ಚಲತಿ; ತೆಲು. ಚಲಿದಿ]

ಶಲಭ (ನಾ). ೧. ಒಂದುಬಗೆಯ ಹುಳು ; ದೀಪದ ಹುಳು; ಪತಂಗದ ಹುಳು: ''ಶಲಭಂ ಪತಂಗವಿನನುಂ . . . ಎಂದಱಿಗೆ'' (ವಸ್ತುಕೋ. ೧೧೯-೬): ಅರಿಕೇಸರಿರಾಜಂ ತೀಕ್ಷ್ಣೋಗ್ನಿಪಗ್ಗರಿಪುನೃಪಶಲಭಂ ಮಗನಾದಂ (ಪಂಪಭಾ. ೧-೪೧); ಪೊಸಪುಸಿಯ ಸರಲ್ ನಗಧರನ ಮೇಲೆ ಪಾಯ್ದುವು ನೆಗದಗ್ನಿಮುಖಕ್ಕೆ ಪಾಯ್ದ ಶಲಭಂಗಳವೋಲ್ (ಪಂಪಾಪೂ. ೯-೬೦) ; ಹಸುಮೆ ತಿರುಗಲು ಮುತ್ತಿತಮರಾರಿಗಳು ಶಿವಿಯನು ಶಲಭ ಕವಿವಂತೆ (ಕಾಶಿರಾ. ೧೧-೨೬). ೨. ಮಿಂಚುಹುಳು ; ಮಿಣುಕುಹುಳು: ''ಶಲಭಂ ಬಾಣ ವಿಹಂಗಮಂ ರವಿ ಪತಂಗಾಖ್ಯಾನ'' (ನಾನಾರ್ಥ. ೬೨). ೩. ಮಿಡತೆ; ಮಿಡಿಬೆ: ''ಪತಂಗಃ, ಶಲಭಃ — ೨ ಪತಂಗದ ಹುಳುವಿನ ಹೆಸರುಗಳು. ಮಿಡಿಬೆಗೂ ಹೆಸರಾಗುವದು'' (ಪದ್ಯಾಂಶಿ. ೧೬೨). ೪. ಅಮಂಗಳವನ್ನುಂಟುಮಾಡುವ ಒಂದು ಬಗೆಯ ರತ್ನ : ಕರ್ಕರೆಂಬುದು ಮೊರಬಿನಂತೆ ಧರಿಸಲು ಪಾಪಂ . . . ದುಃಖಮಂ ತೋರಿಪುದು ಶಲಭಮೆಂಬುದು (ರತ್ನಶಾ. ೧೬-೪). [ಸಂ.]

ಶಲಲ (ನಾ). ೧. ಮುಳ್ಳುಹಂದಿ. ೨. ಮುಳ್ಳುಹಂದಿಯ ಕಣೆ, – ಮುಳ್ಳು : ''ಶಲಲಿ ಶಲ್ಕನೆಯ್ಯಮ್ಮಗವಕ್ಕು ಶಲಲಮಾ ಶಲಮೆನಲ್ಕದಜ ಮುಳ್ಳಕ್ಕುಂ'' (ಮಂಗರಾ. ೪೯-೧೨). [ಸಂ.]

ಶಲಲಿ (ನಾ). ೧. = ಶಲಲ ೨ : ಬಿಲ್ಲು ತೀರು . . . ಶಲಲೀ ಭಲ್ಲ . . . ಪೇಟಕ ಮುಂತಾದ ಶತ್ರುಜಯಾತ್ಮರಕ್ಷಾವಿಸಾಧನವಿಶೇಷಂಗಳಿಂದಲುಂ (ಎವೀಕ. ೨೬೩). ೨. ಮುಳ್ಳುಹಂದಿ : ''ಶಲಲಿ ಶಲ್ಕಕನೆಯ್ಯಮ್ಮಗಮಕ್ಕು'' (ಮಂಗರಾ. ೪೯-೧೨) . ಶಲಲಿ ತರಕ್ಕು . . . ಭೀಕರದುರಗತತಿ ತದ್ಭೋರಕಾಸನದಲ್ಲಿ ವರ್ತಿಪುವು (ತಿಮ್ಮಅ. ೭-೨೧). [ಸಂ. ಶಲಲೀ]

ಶಲವು 'ಸಲವು' ನೋ.

ಶಲಾಕಾಗ್ರ (ನಾ). ಹೂವಿನ ತಂತುವಿನ ಅಗ್ರಭಾಗ, – ತುದಿ : ಶಲಾಕಾಕೋಶವನ್ನು ಮೂರುಭಾಗಗಳನ್ನಾಗಿ ವಿಂಗಡಿಸಬಹುದು. ೧. ಅಂಡಕೋಶ (Ovary) ೨. ಶಲಾಕೆ (Style) ೩. ಶಲಾಕಾಗ್ರ (Stigma) (ಪಸ್ಮಶಾ. ೬೦). [ಸಂ.]

ಶಲಾಕಾಪುರುಷ (ನಾ). [ಜೈನ] ಇಪ್ಪತ್ತುನಾಲ್ಕು ತೀರ್ಥಂಕರರು, ಹನ್ನೆರಡು ಚಕ್ರವರ್ತಿಗಳು, ಒಂಬತ್ತು ವಾಸುದೇವರು, ಒಂಬತ್ತು ಬಲದೇವರು ಮತ್ತು ಒಂಬತ್ತು ಪ್ರತಿವಾಸುದೇವರು ಎಂಬ ಅರುವತ್ತುಮೂರು ಶ್ರೇಷ್ಠಪುರುಷರಲ್ಲಿ ಒಬ್ಬ : ಅಭ್ಯುದಯನಿಶ್ರೇಯಸಸುಖನಿಮಿತ್ತಂಗಳುಮುದಿತೋದಿತನುಂ ಶಲಾಕಾ ಪುರುಷನುಂ ಚಕ್ರವರ್ತಿಯುಂ ಮನ್ಮಥನು ತೀರ್ಥಂಕರಪರಮದೇವನುಮಪ್ಪ ಸುಪುತ್ರೋತ್ಪತ್ತಿಹೇತುಭೂತಂಗಳುಮಪ್ಪ . . . ಒಳ್ಳನಸನಂಬಿಕೆ ಕಂಡು (ಶಾಂತಿಪು. ೯-೨೦೮ ವ): ಚರಿತಪುರಾಣದೊಳೊಂದನ ಬರೆದರ್ಬರದಿರ್ಕಿದ ತ್ರಿಪಷ್ಟಿ ಶಲಾಕಾಪುರುಷರ ಪುರಾಣಮಂ ಕವಿಪರಮೇಶ್ವರರಂತು ಜಗಕೆ ನೋಂತರುಮೊಳರೆ (ಚಾವುಂಪು. ೨): ಜೈನಪುರಾಣಗಳಲ್ಲಿ ಪ್ರಸಿದ್ಧರಾಗಿರುವ ಅರುವತ್ತುಮೂವರು ಶಲಾಕಾಪುರುಷರು ಜನ್ಮವೆತ್ತಿ . . . ಜಗತ್ತನ್ನು ದಿಗ್ಭ್ರಮೆಗೊಳಿಸುತ್ತಾರೆ (ಭಾರದ. ೧೭೨). [ಸಂ.]

ಶಲಾಕೆ (ನಾ). ೧. ಚೂಪಾದ ಒಂದು ಬಗೆಯ ಆಯುಧ; ಈಟಿ ; ಶಲ್ಯ : ''ಆ ಶಲಾಕೆಯಲಿ ಕೈದುವಿನಲ್ಲಿ ಸಂದ ಶಲ್ಯಮದಂಬುದು'' (ಮಂಗರಾ. ೧೪೩-೫೩). ೨. ಲೋಹದ ತೆಳ್ಳನೆಯ ಕಂಬಿ, ಮರದ ಕೋಲು ಮುಂತಾದುವು : ವೈಡೂರ್ಯದಂಡಮುಕ್ತಾಮಣಿಜಾಲಾಲಂಕೃತರತ್ನಶಲಾಕಾಶತಕಾಂಚನ ಕುಂಭಬಿಂಬ ರಜತಚ್ಛದಚ್ಛತ್ರವಿಚಿತ್ರಜನೇಂದ್ರಪ್ರತಿಕೃತಿಪ್ರಕೀರ್ಣಮುಂ (ಆದಿಪು. ೧-೪೯ವ): ಶಶಿಲೇಖೆಯೆನಲ್ ಕರ್ಪೂರಶಲಾಕೆಯೆನಲ್ ವಿಳೋಚನೋತ್ಸವಮಂ ಮಾಡಿ . . . ಭುವನಮಂ ಸೂಲಿಸಿದಳ್ (ಪಂಪಾಪೂ. ೪-೩೦). ೩. ಚೂಪುತುದಿಯುಳ್ಳ ಗರಿಕೆ, ಮೂಳೆ, ಸೂಜಿ ಮುಂತಾದುವು. ೪. ಮೂಳೆ ; ಎಲುಬು. ೫. ಒಂದು ಬಗೆಯ ಪಕ್ಷಿ; ಶಾರಿಕೆ. ೬. ಹೂವಿನ ಮಧ್ಯದಲ್ಲಿರುವ ತಂತು: ಎಲೆಯ ಮಧ್ಯನಾಳವು ಎಲೆಯ ತುದಿಯಿಂದ ಮುಂದಕ್ಕೆ ಬೆಳೆದು ಶಲಾಕೆಯಾಗುವುದು (ಪಸ್ಮಶಾ. ೬೧). [ಸಂ. ಶಲಾಕಾ]

ಶಲಾಟು (ಗು). ೧. ಎಳೆಯದಾದ ; ಬಲಿಯದ. (ನಾ). ೨. ಎಳೆಯ ಕಾಯಿ; ಹೀಚು; ಮಿಡಿ : ಅಂಕುರಪಲ್ಲವದಳಕೋರಕಕುಸುಮಶಲಾಟುಫಲ ಪಕ್ವಫಲಗಳ ಪಂಕ್ತಿಗಳುಂ (ಎವೀಕ. ೨೨೭) ; ವಿವಿಧಾಮೃತಾನ್ನ ದೇವಾನ್ನ ದಿವ್ಯಾನ್ನದೀ ನವಭಕ್ಷ್ಯಪೂತ ಬಹುಶಲಾಟುಶಾಕಂಗಳಂ ತವೆ ತೃಪ್ತಿಪಡಿಸಿ (ರಾಘವ. ೨-೫೦). ೩. ಬಿಲ್ವಮರ. ೪. ಒಂದು ಬಗೆಯ ಗಡ್ಡೆ. ೫. ಒಣಗಿದ ಹಣ್ಣು : (ಪ). [ಸಂ.]

ಶಲಾಟುಕ (ನಾ). = ಶಲಾಟು ೨ : ''ಅಂಗುಲಿಪ್ರಹರಣ ಶಲಾಟುಕಂಗಳೋಳ್ಮಿಡಿಯೆನಿಕ್ಕುಂ'' (ಶಬ್ದಮ. ೯೩). [ಸಂ.]

ಶಲೆ 'ಸೆಲ್ದ್' ನೋ.

ಶಲ್ಕ (ನಾ). ೧. ತುಂಡು ; ಚೂರು. ೨. ಮರದ ತೊಗಟೆ ; ಚೆಕ್ಕೆ : ''ವಲ್ಕಲಮುಂ ಶಕಲಮುಮವು ಶಲ್ಕಂಗಳ್'' (ವಸ್ತುಕೋ. ೧೨೪-೩೯): ಪಗಲುಳ್ಕಮುಳ್ಕುವಂದದಿನೊಗವ ಗದಾಶಲ್ಕಮುಳ್ಕಿ . . . ಗದಾಹವಮಗುರ್ವಮದ್ಭುತಮುಮಾಯ್ತು ಕುರುಪಾಂಡವರಾ (ಗದಾಯು. ೮-೧೨); ಕಾಮಿನೀಜನಂ ಅಂತು ಪೊಕ್ಕು ಶತಪತ್ರಸೂತ್ರಂಗಳೊಳಂ ರಂಭಾವಲ್ಕಲಶಲ್ಕಂಗಳೊಳಂ ಶೀರ್ಣನಾಳಿಕೇರಪರ್ಣಂಗಳೊಳಂ ಅಮರ್ಕೆಯುಂ ಪೋಲ್ಕೆಯುಂ ಒಲ್ಲುಂ ಚೆಲ್ಲುಮಾಗೆ (ಚಂದ್ರಪ್ರ. ೭-೧೧೫ ವ). ೩. ಕೆಲವು ಬಗೆಯ

ಕೀಟಗಳ ಮೈಮೇಲಿರುವ ಚಿಪ್ಪು : ಚರ್ಮದ ಮೇಲಿರುವ ಬರುಗೂದಲು, ಮುಳ್ಳು, ಕೂದಲು ಮತ್ತು ಶಲ್ಕಗಳು . . . ಸ್ವಾಭಾವಿಕಶತ್ರುಗಳಿಂದ ರಕ್ಷಿಸುತ್ತವೆ (ಈಜಿ. ೨೧). [ಸಂ.]

ಶಲ್ಕಿ (ನಾ). ಮೀನು : "ಮೀನಂ ಝಷಂ ತಿಮಿ ವಿಸಾರಮಾ ಶಲ್ಕಿ . . . ಮತ್ಸ್ಯಮನೆ ಮೀನ್ಗೆ ನಾಮಂ" (ಮಂಗರಾ. ೧೨೧-೬). [ಸಂ. ಶಲ್ಕಿನ್]

ಶಲ್ಮಲಿ (ನಾ). ಒಂದು ಬಗೆಯ ಮರ ; ಬೂರುಗ : "ಪಟ್ಟಿಲಾ . . . ಶಲ್ಮಲೀ — ೫ ಬೂರುಗದ ಗಿಡ, ಚಿಕಮುಕ್ಕೀ ಹತ್ತೀಗಿಡ" (ಪಡ್ಡಾಂ. ೧೨೨). 'ಶಾಲ್ಮಲಿ' ಪರಾ. [ಸಂ. ಶಲ್ಮಲೀ]

ಶಲ್ಯ, ಶಲ್ಕೆ, ಶಲ್ಲ, ಸಲ್ಲ, ಸೆಲ್ಲ, ಸೆಲ್ಲೆಯ (ನಾ). ತೆಳುವಾದ ಹೊದೆಯುವ ವಸ್ತ್ರ; ಉತ್ತರೀಯ : ನೀನಿಲ್ಲಿಯೇ ನಿಲ್ಲು, ನಿಲ್ಲೆಂದು ಬಿಳಿಯ ಶಲ್ಯಮಂ (ಸೊಗಸು. ೧೯೩-೬) : ಅವರ ಅಂಗಿ ಮುಂಡಾಸು ಶಲ್ಯ ಬಣ್ಣ ಬಣ್ಣದ ಚಿಣ್ಣ ನೋಡಿದರೇ ಹೇಳಿಬಿಡಬಹುದು (ತುಂಗಭ. ೩) : ಹೆಗಲ ಮೇಲೊಂದು ಶಲ್ಯ ಹೊದ್ದಿದ್ದ (ಮೂಜು. ೧೦). ಶಲ್ಕೆ : ಹೊದೆಯಲು ಜರತಾರಿಶಲ್ಕೆ . . . ಎಂದು ನಿಷ್ಕರ್ಷ ಮಾಡಿತು (ರಾಮಾಶ್ವ. ೪೩). ಶಲ್ಲೆ : ಮೇಲೆ ಹೊಬಣ್ಣದ ಶಲ್ಲೆಯನ್ನು ಹೊತ್ತುಕೊಂಡಿದ್ದಳು (ಮುಂಬಯಿ. ೫ ೨೦೦). ಸಲ್ಲೆ : 'ಸಲ್ಲೆವಿಕ್ಕು' ಪರಾ. ಸೆಲ್ಲೆ : ಕೆಂದಂಗಳ ದಟಿಸಿ ಸೆಲ್ಲೆ [ಶಾಕಾಂ. ಸೇಲಿ]ಯೊಳು ಬಿಗಿದು ಕಟ್ಟಿ. (ಗುಹೂಚಾ. ೧೦-೪೧) : ಮೋಡವೆಂಬ ಸೆಲ್ಲೆಯನ್ನು ತಲೆಗೆ ಸುತ್ತಿಕೊಳ್ಳುತ್ತೇನೆ (ಮುಂಬಯಿ. ೩-೨೭). ಸೆಲ್ಲೆಯ : "ಸೆಲ್ಲೆಯ — ಪೊದಿಕೆ ; ಮುಸುಕು ; ಮೇಲುದು : ಸರಗು; ಒಲ್ಲಿ" (ಕಂಸುಹಾ. ೯೨).

[ದೇ. ॥ ತುಳು. ಶಲ್ಯ, ಶಲ್ಲೆ. ತೆಲು. ಸಲ್ಲ. / ಸಂ. ಚೇಲ]

ಶಲ್ಯ (ನಾ). ೧. ಈಟಿ; ಬರ್ಜಿ : "ಶಲಾಕೆಯಲಿ ಕೈದುವಿನಲ್ಲಿ ಸಂದ ಶಲ್ಯಮದೆಂಬುದು" (ಮಂಗರಾ. ೧೪೬-೨೩) ; ಶರಣತತಿ ತಮ್ಮಿಚ್ಛೆಯೆಲ್ಲಲ್ಲಿಯುಂಟಲ್ಲಿಗಯ್ದಿದರುಮೆಂದುಸುರ ಶಲ್ಯವರ್ದೆಯಲ್ಲಿ ಮೂಡಿದ ಮಾಳ್ಕೆ ಹಾ ಬಸವ . . . ಬಸವ ಬಯಲಾದೆಯಾ ಎಂದು ಅಳಲಿ ಗೀತವ ಪಾಡಲು (ಗುಹೂಚಾ. ೨-೩೬) ; ಈ ಚಿಂತೆಯು ಭಯಂಕರವಾದ ಶಲ್ಯದಂತೆ ನಸ್ಸ ಹೃದಯದಲ್ಲಿ ನಟ್ಟುಕೊಂಡು ಯಾತನೆ ಕೊಡುತ್ತಿದೆ (ಮಚಿಭಾ. ೨೯). ೨. (ಸೂಜಿ, ಕೊಂಡಿ, ಮುಳ್ಳು, ಮೊಳೆ ಮುಂತಾದ) ಚೂಪಾದ ಮೊನೆಯುಳ್ಳ ವಸ್ತು : ಇದು ಸಮಸ್ತಶಾಬ್ದಿಕಜನವಮನೋಜನಿತಶಬ್ದಸಂದೇಹಶಲ್ಯಚಾರುಚುಂಬ ಕಾಯಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿಶೇಖರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್. . . ಸಂಪೂರ್ಣಂ (ಶಮದ. ೬೨೨ ವೃತ್ತಿ). ೩. ಮೂಳೆ; ಎಲುಬು : ಅಡಗಿನ ತೋಲ ನೆತ್ತರ ಮಿದುಳ್ಗಳ ಶಲ್ಯದ ಪುಂಜಮೊತ್ತಿ ಬಂದಡಸುವ ವಾತಪಿತ್ತಕಫದೋಷಸಮೂಹದ ಪತ್ತಿ ನಿಲ್ಲುದು . . . ಈಯೊಡಲು (ಜೀವಸಂ. ೧೨೯-೨೦) ; ಅಲ್ಲಿಂ ಮುಂದಕೆ ನಡೆಯುತ್ತಿರ್ಪಡೆಯಲ್ಲಿ ಶಲ್ಯದೊಳ್ಕಳೆ ಸೋರಲ್ ಬಿತ್ತರದಿಂದದಱೊಳ್ ಭೂಪೋತ್ತಮನೊಗೆದಂ ಪ್ರತಾಪಿ ಶಲ್ಯನೆನಿಪ್ಪಂ (ಧರ್ಮಾಶ. ೩-೭೩). ೪. ಮುಳ್ಳುಹಂದಿ : "ಶ್ಯಾವಿತ್, ಶಲ್ಯಃ — ೨. ಮುಳ್ಳುಹಂದಿಯ ಹೆಸರುಗಳು" (ಪಡ್ಡಾಂ. ೧೩೪). ೫. ಆವರಣ ; ಬೇಲಿ. ೬. ಮಹಾಭಾರತದಲ್ಲಿ ಉಲ್ಲೇಖಿಸಿರುವ ಮದ್ರದೇಶದ ರಾಜ; ಮಾದ್ರಿಯ ಅಣ್ಣ : ಶಲ್ಯನನಂದಶಲ್ಯನಂ ಬಗವಪೋಲೇಳಿದಂ ಬಗೆದು ದಂತಿಯನಾಗಡೆ ತೋಳಿ ಕೊಟ್ಟು ತೊಟ್ಟಗೆ ರಥಮಂ ಪಡಲ್ಕಡಿಸಿ ಪೂಬ್ಬನರಾತಿಯನಸ್ತ್ರಕೋಟಿಯಿಂ (ಪಂಪಭಾ. ೧೦-೧೧೧) : ರವಿಜ ಗುರುಸುತ ಶಲ್ಯ ಕಲಶೋದ್ಭವರು . . . ಅವನಿಪಾಲನ ಕಂಡರಂದೇಕಾಂತಭವನದಲಿ (ಕುಪಾಭಾ. ೧ ೨) ; ಸುಯೋಧನ ಶಲ್ಯ ಮುಖ್ಯಬಾಂಧವರನೀಡಾಡಿದೆವು ಬದುಕಲೇ ಕಿನ್ನಿಳೆಯೊಳು (ಚಿಮಿಭಾ. ೨-೧೭). ೭. ತೊಂದರೆ ; ಕಷ್ಟ. ೮. ಒಂದು ಬಗೆಯ ಮುಳ್ಳಿನ ಗಿಡ; ಮಂಗಾರೆಗಿಡ : "ಪಿಂಡೀತಕಃ . . . ಶಲ್ಯಃ, ಮದನಃ — ೬ ಮಂಗಾರೆಗಿಡದ ಹೆಸರು" (ಪಡ್ಡಾಂ. ೧೨೪). ೯. ಒಂದು ಬಗೆಯ ನರಕ: ಸಕಲ ಶಲ್ಯಸಿಂಹಗಚಾನನವ್ಯಾಘ್ರಮೆಂಬೈದು ಮಂತ್ರಿನರಕಂಗಳ ಮೇಳದಲ್ಲಿ ಮಹಾ ಚಂಡವೆಂಬರಸುನರಕವಿಹುದು (ಎಪಣ. ೧೮೦). ೧೦. ಪಾಪ. ೧೧. ವಿಷ. ೧೨. ತೆಗಳಿಕೆ. ೧೩. ಬಿಲ್ವವೃಕ್ಷ. ೧೪. ನೀರು. ೧೫. ಬಡಕಲು ದೇಹ. ೧೬. ತುಂಡು ; ಚೂರು : "ಶಲಾಕೆ ಶಸ್ತ್ರಮುಂ ವಾರಿ ಕೃಶಾಂಗ ಪಾರ್ಥಿವವಿಭೇದಲವಂಗಳು ಶಲ್ಯಶಬ್ದಂ" (ನಾನಾ. ೧೪೮). ೧೭. [ಜೈನ] ಮುಳ್ಳಿನಂತೆ ಬಾಧೆಯನ್ನುಂಟುಮಾಡುವ ಮೋಹ : ಮಿಥ್ಯಾಶಲ್ಯಂ ಮಾಯಾಶಲ್ಯಂ ನಿದಾನಶಲ್ಯಮೆಂಬ ಮೂಱುಂ ಶಲ್ಯಂಗಳಿಂ ಪಿಂಗಿದಂ (ಧರ್ಮಾಮೃ. ೫-೧೩೧) : ಶಲ್ಯಂಗಳಿರ್ದೊಡಂ ವೈಕಲ್ಯಕ್ಕೆಡೆಗುಡದ ಧೃತಿಯನವಳಂಬಿಸಿ ನಿಶ್ಶಲ್ಯೋದ್ಧರಿತಿಯನಿಸಿದ ವಾತ್ಸಲ್ಯಪರಂ ಪರಮತತ್ವಮಂ ಭಾವಿಸಿದಂ (ಪಾರ್ಶ್ವಪು. ೧೨-೮೯). 'ಶಲ್ಯತ್ರಯ' ಪರಾ. ೧೮. (ಆಲಂ) ನೋವು; ವ್ಯಥೆ. ೧೯. ಹಿಂಸೆಪಡಿಸುವವನು; ಉಪದ್ರವಕಾರಿ : ಆ ಶಲ್ಯರುಗಳ ಮಾತ ಕೇಳಿ ಪಲ್ಲುದಿನುತ ನಿದ್ರಾವರಣೀಯವಹ ಗೆಲ್ಲಕಾಜರು ಬಂದರಂದು (ತ್ರಿಪುಸಾಂ ೧೭-೧೨೫). [ಸಂ.]

ಶಲ್ಯಕ (ನಾ). ೧. ಮುಳ್ಳುಹಂದಿ : "ಶಲಲಃ, ಶಲ್ಯಕಃ, ಶ್ವಾವಿತ್ — ಈ ೩ ಎಯ್" (ಪಲಾಮು. ೬೯-೮೦). ೨. ಈಟಿ. ೩. ಮುಳ್ಳು. ೪. ಬೇಡ ; ವ್ಯಾಧ. [ಸಂ.]

ಶಲ್ಯಚಿಕಿತ್ಸೆ (ನಾ). ಆಯುಧವನ್ನು ಬಳಸಿ ಮಾಡುವ ಚಿಕಿತ್ಸೆ ; ಶಸ್ತ್ರಚಿಕಿತ್ಸೆ: ದಿವೋದಾಸನೆಂಬ ಧನ್ವಂತರಿ ಸುಶ್ರುತನನ್ನೇ ಮುಂದಾಗಿಟ್ಟುಕೊಂಡು ಔಷಧೇನವ, ವೈತರಣ, ಔರಭ್ರ ಮುಂತಾದವರಿಗೆ ಶಲ್ಯಚಿಕಿತ್ಸೆಯನ್ನೇ ಮುಖ್ಯವಾಗಿ ಉಪದೇಶಿಸಿದ (ಕವಿರಾ. ೧. ೧೯೧). [ಸಂ. ಶಲ್ಯಚಿಕಿತ್ಸಾ]

ಶಲ್ಯತಂತ್ರ (ನಾ). ೧. ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಆಯುರ್ವೇದದ ಒಂದು ಭಾಗ : ದೇಹಾರೋಗ್ಯವನ್ನುಂಟುಮಾಡತಕ್ಕ ಆಯುರ್ವೇದವು ಶಲ್ಯತಂತ್ರ ಶಾಲಾಕ್ಯತಂತ್ರ ಕಾಯಚಿಕಿತ್ಸೆ ಭೂತವಿದ್ಯೆ . . . ವಾಜೀಕರಣತಂತ್ರಗಳೆಂಬ ಎಂಟುಭಾಗಗಳುಳ್ಳದ್ದಾಗಿದೆ (ಸುಷ್ರಾಚಂ. ೯೪). ೨. ತಂತ್ರಶಾಸ್ತ್ರದಿಂದ ಸಿದ್ಧಿಯಾಗುವ ಮಂತ್ರ; ತಾಂತ್ರಿಕಮಂತ್ರ: ಶಾಬರತಂತ್ರ ಶಾಕಿನೀತಂತ್ರ ಡಾಕಿನೀತಂತ್ರ ಕಚಿಮಾರತಂತ್ರ ಶಲ್ಯತಂತ್ರ. . . ವಚನತಂತ್ರಾದಿ ತಾಂತ್ರಿಕಸಿದ್ಧಿಮಂತ್ರಂಗಳಂ. . . ಉಪದೇಶ ಅನುಷ್ಠಾನ ಪರೀಕ್ಷೆಗಳಿಂ ವಿವೇಕಿಸಿ ತಿಳಿದಿರಲಕ್ಕುಂ (ಎಪಣ. ೮೭). [ಸಂ.]

ಶಲ್ಯತ್ರಯ (ನಾ). [ಜೈನ] ಮಾಯಾಶಲ್ಯ, ಮಿಥ್ಯಾಶಲ್ಯ ಮತ್ತು ನಿದಾನ ಶಲ್ಯಗಳೆಂಬ ಮೂರು ಬಗೆಯ ಮೋಹಗಳು : ಪರಮದಯಾತತ್ಪರ ನೆನಿಸಿದ ಶಲ್ಯತ್ರಯವಿರಹಿತನೆರಡನೆಯ ನೆಲೆಯವಂ ತಾಂ ವ್ರತಿಕಂ (ಸುಖವಾ. ೬-೨೭) : ಗತಗೌರವತ್ರಯಂ ನಿರ್ಜಿತದಂಡತ್ರಯನಪೇತಶಲ್ಯತ್ರಯಂ . . . ಅನಾಪ್ತಗುಪ್ತಿತ್ರಿತಯಂ (ಪುಷ್ಪಪು. ೧೪-೧೫). [ಸಂ.]

ಶಲ್ಯವಿದೂರ (ನಾ). [ಜೈನ] ಮಿಥ್ಯೆ, ಮಾಯೆ ಮತ್ತು ನಿದಾನಗಳೆಂಬ ಮೂರು ಬಗೆಯ ಮೋಹಗಳನ್ನು ತೊರೆದವನು: ಶಲ್ಯವಿದೂರ ಬಂಕರಸನಂಕದ ಮಾಚಿಯತಂದ . . . ಬರೆದಪಂ ಬುಧಮಾಧವನೀ ಪ್ರಬಂಧಮಂ (ಪುಷ್ಪಪು. ೧೪-೩೭). [ಸಂ.]

ಶಲ್ಲೆ 'ಶಲ್ಯ' ನೋ.

ಶಲ್ಲಕಿ (ನಾ). ೧. (ಆನೆಗಳಿಗೆ ಪ್ರಿಯವಾದ) ಒಂದು ಬಗೆಯ ಮರ; ಆನೆಬೇಲ; ತದಕು : "ಗಜಭಕ್ಷ್ಯಾ, ಸುವಹಾ, ಸುರಭಿಃ . . . ಶಲ್ಲಕಿ, ಹ್ರಾದಿನಿ — ೮ ತದುಕಿನ ಗಿಡದ ಹೆಸರು, ಆನೇಬೇಲ" (ಪಡ್ಡಾಂ. ೧೪೦). ೨. ಮುಳ್ಳುಹಂದಿ. [ಸಂ. ಶಲ್ಲಕೀ]

ಶಲ್ಲೆ 'ಶಲ್ಯ' ನೋ.

ಶಲ್ಲೆಯ 'ಸೆಲ್ಲೆಹ' ನೋ.

ಶಲ್ಲೆಹ 'ಸೆಲ್ಲೆಹ' ನೋ.

ಶವ (ನಾ). ೧. ಹೆಣ ; ಕಳೇಬರ : ಶವಶೃಂಗಾರಂಗೆಯ್ಯಲ್ ಭವನಕ್ಕಾ ಕಾಮಪಾಲಸಚಿವನ ನಿಜದೇಹವನುಯ್ದೋವರಿಯೊಳ್ ಸಂತವಿಟ್ಟು ಮನ್ಮಾರ್ಗಮಂ ನಿರೀಕ್ಷಿಸುತಿರ್ದಳ್ (ದಶಕು. ೯-೧೦೩) : ಕರ್ಣಕುಂಡಲಗಳಿಗೆ ಬದಲಾಗಿ ಬಲಗಿವಿಗೆ ನೇತಾಡುತ್ತಿರುವ ಮನುಷ್ಯನ ಶವವೂ ಎಡಗಿವಿಗೆ ಗೂಬೆಯ ಚಿತ್ರವೂ . . . ಕೆತ್ತಲಾಗಿದ (ಸೊಳಂ. ೧೦೭). ೨. ನೀರು.

ತವದ ಪೆಟ್ಟಿಗೆ = ಹೆಣವನ್ನು ಇಡುವ ಪೆಟ್ಟಿಗೆ : (Coffin. ಪಾರಿ. ೧೭). [ಸಂ.]

ಶವಪರೀಕ್ಷೆ (ನಾ). (ಆತ್ಮಹತ್ಯೆ, ಕೊಲೆ ಮುಂತಾದ ಸಂದರ್ಭಗಳಲ್ಲಿ) ಸಾವಿನ ಕಾರಣವನ್ನು ಕಂಡುಹಿಡಿಯಲು ಮಾಡುವ ಹೆಣದ ವೈದ್ಯಕೀಯಪರೀಕ್ಷೆ;

ಮರಣೋತ್ತರ ದೇಹಪರೀಕ್ಷೆ : ಸ್ಮೆಲ್ಯೋವ್‌ನ ಶವಪರೀಕ್ಷೆಯಿಂದ . . . ಅವನು ವಿಷಪ್ರಾಶನದ ಪರಿಣಾಮವಾಗಿ ತೀರಿಕೊಂಡಿದ್ದನೆಂಬ ಅಂಶ ಸ್ಪಷ್ಟವಾಗಿತ್ತು (ಪುನರು. ೪೩). [ಸಂ. ಶವಪರೀಕ್ಷಾ]

ಶವವಾಹಕ (ನಾ). ಹೆಣವನ್ನು ಹೊರುವವನು : ಮೃತನ ಸಂಸಾರಕಥೆ ಶವವಾಹಕರಿಗೇಕೆ? (ಮಂಕುಶ. ೭೧೬). [ಸಂ.]

ಶವಸಂಪುಟ (ನಾ). ಹೆಣವನ್ನು ಇಟ್ಟು ಹೂಳುವ ಪೆಟ್ಟಿಗೆ: "ಹೆಣವಿಟ್ಟು ಹೂಳುವ ಪೆಟ್ಟಿಗೆ: ಹೆಣದ ಪೆಟ್ಟಿಗೆ, ಶವಸಂಪುಟ" (Coffin. ಇಂಕಾ). [ಸಂ.]

ಶವಸಂಸ್ಕಾರ (ನಾ). ಮರಣಾನಂತರ ದೇಹವನ್ನು ಒಪ್ಪಮಾಡುವುದು; ಹೆಣವನ್ನು ಹೂಳುವ ಅಥವಾ ದಹನ ಮಾಡುವ ಕ್ರಿಯೆ : ನೀನು ಸತ್ತಾಗ ನಿನ್ನ ಶವಸಂಸ್ಕಾರ ಮಾಡಲು ಹಿಂದೂ ಮುಸ್ಲಿಮರಿಬ್ಬರೂ ನನಗೆ ಬೇಕು, ತನಗೆ ಬೇಕು ಎಂದು ಅದನ್ನು ಕೇಳುವಂತೆ ಬಾಳು ನಡೆಸು (ಭಾರದ. ೩೨೮). [ಸಂ.]

ಶವಾಲು (ನಾ). ಮಹಮ್ಮದೀಯರ ಹಿಜರಿವರ್ಷದ ಹತ್ತನೆಯ ತಿಂಗಳು: ಅದಕ್ಕೆ ದರಜವಾಬಾಗಿ ಶವಾಲುತಿಂಗಳು ೫ನೇ ತಾರೀಕಿನಲ್ಲು (ರಾಚೇಂದ್ರ. ೧೨೬).

[← ಅರ. ಹಿಂ. ಶವ್ವಾಲ್; ಮರಾ. ಸವಾಲ್]

ಶವಾಸನ (ನಾ). [ಯೋಗ] ಎಚ್ಚರದಿಂದಿದ್ದರೂ ದೇಹ ಮತ್ತು ಮನಸ್ಸುಗಳಿಗೆ ವಿಶ್ರಾಂತಿಯನ್ನೂ ಲವಲವಿಕೆಯನ್ನೂ ಉಂಟುಮಾಡುವ, ನೆಲದಲ್ಲಿ ಬೆನ್ನ ಮೇಲೆ ಉದ್ದಕ್ಕೂ ಹೆಣದಂತೆ ಮಲಗುವ ಒಂದು ಬಗೆಯ ಆಸನ : ಶವಾಸನದಲ್ಲಿ ನನಗೆ ಸುಖವೇನೂ ಕಾಣಲಿಲ್ಲ (ಗಾಳಿ. ೫೮). [ಸಂ.]

ಶವ್ವಾಪದ (ಗು). ೧. ಕಾಡುಮೃಗಕ್ಕೆ ಸಂಬಂಧಿಸಿದ. (ನಾ). ೨. ಕಾಡುಮೃಗ; ಕ್ರೂರಪ್ರಾಣಿ : ಬುಧಲಕ್ಷನಂ ಬಾಲಿಶ ದುರಾತ್ಮ ಕಾನನಕೆಂತು ಕಳಿಪುವಂ ಶವ್ವಾ [ಪಾಶಾಂ. ಸರ್ವಾ] ಪದಂಗಳೆಡೆಗೆ (ಪಂಕಾರಾ. ೨-೭-೪); ಕರುಳ ಖಂಡಂಗಳಂ ಧರಣಿಯೊಳಗುಳ್ಳಖಿಳತರುಣಪ್ಯಶಾಚಶವ್ವಾಪದಂಗಳು ತಿಂದು ಸುರಿವ ರಕುತವನೀಂಟಿ ಸಂತೋಷಕರಮಾಗಿ ಪೊಗಳಿ ಪಾಡುವುವು (ವಂಕಾರಾ. ೩-೧೦-೬). [< ಸಂ. ಶೌವಾಪದ]

ಶಶ (ನಾ). ೧. ಮೊಲ : "ಮೊಲಂ ಶಶ[ಪಾಶಾಂ. ಶಶಕ]ಮೆನಿಕ್ಕುಂ" (ಮಂಗರಾ. ೪೮-೮); ಹರಿಣ ಶಶ . . . ಕೇಕಿಗಳಂಜುತ್ತಿರದ ಪವನೇಂದು . . . ಪಣ್ಣುಖರಂ ಮಿಗೆ ಸಾರ್ದೂಳಿದವು (ಹಮ್ಮೀರ. ೪ ೬೩). ೨. ಚಂದ್ರನಲ್ಲಿರುವ ಮೊಲದ ಆಕಾರದ ಕಲೆ, – ಗುರುತು. ೩. ಲೋಧ್ರವೃಕ್ಷ. ೪. ಜಿಂಕೆ. ೫. [ಕಾಮಶಾ] ಪುರುಷರಲ್ಲಿ ಒಂದು ಪ್ರಕಾರಕ್ಕೆ ಸೇರಿದವನು : ಮುನಿವರ ವಾತ್ಸ್ಯಾಯನಮತದೊಳು ನೆಟ್ಟನೆ ಶಶ[ಪಾಶಾಂ. ೨]ವೃಷ ಹಯರೆಂದನಿಪ ಮನುಜರ್ ಮೂದಲಿಸನೆನಿಸುವರವರೊಳು . . . ಕಿಱುಕಾಮದ ಸುಖದಱಕದ ನಿದ್ರೆಗೆ ತಱಪೀಯದ ಮಿಗೆ ಪೂಗಂಪು ತುಱುಗಿದ ತನುಜಲದೊಱೆವಾಱಂಗುಲದುಱುವ ಧ್ವಜದವನೇ ಶಶನು (ಜಸವ. ೪-೧); ಶಶ ವೃಷ ಹಯರೆಂಬ ತ್ರಿವಿಧವರಿಮಾಣಪುರುಷರಿಂ (ವಿವೇಕ. ೨೨೮). ೬. ಗಾತ್ರಪ್ರಮಾಣಕ್ಕನುಗುಣವಾಗಿ ವಿಂಗಡಿಸಿದ ಮನುಷ್ಯನ ಐದು ವರ್ಗಗಳಲ್ಲಿ ಒಂದು : ವರಾಹಮಿಹಿರನು ಮನುಷ್ಯರನ್ನು ಶರೀರದ ಅಳತೆ ಆಕಾರದ ಮೇಲೆ, ಐದು ಜಾತಿಗಳನ್ನಾಗಿ ವಿಂಗಡಿಸುತ್ತಾನೆ. ಹಂಸ, ಶಶ, ರುಚಕ, ಭದ್ರ, ಮಾಲವ್ಯ – ಎಂಬುವೇ ಈ ಐದು ಜಾತಿಗಳು (ಭಾರದ. ೫೧೭). [ಸಂ.]

ಶಶಕ (ನಾ). = ಶಶ ೧ : ಮುನಿಮುಖ್ಯರ ಪಕ್ಕದೊಳಾಗಳುಮಗಲದ ಕರಿರುರುಹರಿಣಶಶಕ ಸಾರಂಗಮೆ ಮೊದಲಾದ ಮೃಗಂಗಳೊಡನೆ ಬದ್ರವೈರಮಂ ಪತ್ತುವಿಟ್ಟು (ಪಂಚತಂ. ೧೧೯-೨೦) ; ಬಸುಱ್ ಬೇವ ಶಶಕ ತೊಡೆ ಬೇವ ಹುಲ್ಲ ಬಾಲಂ ಬೇವ ಕೋಣ . . . ದೆಸೆಗೆಟ್ಟು ಕವಿದವು ಹರಿಶ್ಚಂದ್ರಭೂಪತಿಯ ಮೇಲೆ (ಹಚಕಾ. ೧೦-೯). [ಸಂ.]

ಶಶಕರ್ಣ (ನಾ). ೧. ಮೊಲದ ಕಿವಿ. ೨. ಮೊಲದ ಕಿವಿಯಂತೆ ಕಿವಿಯುಳ್ಳ ವ್ಯಕ್ತಿ : ವಿದಿಗ್ಗತದ್ವೀಪಸಂಸ್ಥಿತರ್ ಶಷ್ಕುಲಿಕರ್ಣರುಂ . . . ಲಂಬಕರ್ಣರುಂ ಶಶಕರ್ಣರುಂ ಅಪ್ಪರ್ (ತತ್ತ್ವಪ್ರ. ೧೪೮). [ಸಂ.]

ಶಶಕವಲೆ (ನಾ). (ಮೊಲವನ್ನು ಹಿಡಿಯುವ) ಒಂದು ಬಗೆಯ ಬಲೆ: ಹಾಸುವಲೆ ಕಣ್ಣವಲೆ . . . ಸುಲಭವಲೆ ನೀರುವಲೆ ಶಶಕವಲೆಯು (ರುಕ್ಮಾಂಗ. ೧೦-೧೯).

[ಶಶಕ + ಬಲೆ]

ಶಶಕಸರ್ಪ (ನಾ). ಮೊಲವನ್ನು ತಿಂದ ಹಾವು ; "ಹೆಬ್ಬಾವು" (ತೊರರಾ. ಕೋಶ): ಗೂಡು ಮಸಗಿತು ಶಶಕಸರ್ಪನ ತೋಱೆಕೆಯ ರುಚಿಯಂತ ಚಲಿಸಿದವೇಱಿಳಿವ ಜೀವದಲಿ ಕೈಕಾಲಸುರವಲ್ಲಭನ (ತೊರರಾ. ೬-೨೩-೧೭). [ಸಂ.]

ಶಶಧರ (ನಾ). ೧. ಚಂದ್ರ; ಶಶಿ: ಅರಮನೆಯೊಳರಸನಂಬರತಳದೊಳ್ ವರತಾರಾಪರಿಗತಶಶಧರನಂತೊಪ್ಪಿರೆ (ಕವಿಗಾ. ೨-೧೦). ೨. ಕರ್ಪೂರ. [ಸಂ.]

ಶಶಪುರುಷ (ನಾ). = ಶಶ ೫ : ಕೆಂಪಾಗಿ ಅಗಲವಾಗಿ ಇರುವ ಕಣ್ಣುಗಳುಳ್ಳವನು. ಸಣ್ಣವಾಗಿ ಅಗಲವಾದ ಪಲ್ಲಗಳುಳ್ಳವನು. ಬಟ್ಟಮೊಗಂ . . . ಅಲ್ಪಕಾಮಸುಖಂ ಶುಚಿವಂತಂ ಧನವಂತಂ ಬಿಳಿದಾಗಿ ಪರಿಮಳವುಳ್ಳ ಕಾಮಜಲಮುಳ್ಳವರು. ಕಾಂತಿಹರುಷಂಗಳುಳ್ಳವರು. ಅಭಿಮಾನಮುಳ್ಳವರು. ಆರು ಅಂಗುಲಪ್ರಮಾಣ ಲಿಂಗದವರು. ಈ ಲಕ್ಷಣಗಳುಳ್ಳವರು ಶಶಪುರುಷರುಗಳು (ಕಾಮಶಾ. ೨೧೩). [ಸಂ.]

ಶಶಪ್ಲುತ (ನಾ). [ಕಾಮಶಾ] ಒಂದು ಬಗೆಯ ನಖಕ್ಷತ : ಮೊಲದುದಿಯ ಬಳಿಯನಂಡಲೆದ್ದೆದುಗುರನೊತ್ತಿ ನಿಲಿಸುತೊಂದಿಸಿ ಸೆಳೆದು ಬಿಡಲಂತದು . . . ಸಲೆ ಶಶಪ್ಲುತಮೆಂದು ಪೆಸರಾದುದು (ಜಸವ. ೭-೪೧) ; ಪಂಚನಖಯೋಗ ದ್ವಂದ್ವಯೋಗ ಅರ್ಧಚಂದ್ರಕಮಂಡಲ ಮಯೂರಪ್ಲುತ ಶಶಪ್ಲುತ ಉತ್ಪಲವೆಂಬ ಸಪ್ತವಿಧ ನಖೋಪಕ್ಷತವಿಹಿತರಿಂ (ವಿವೇಕ. ೨೩೦). [ಸಂ.]

ಶಶಲಕ್ಷ್ಮ (ನಾ) . ಮೊಲದ ಚಿಹ್ನೆಯನ್ನು ಹೊಂದಿರುವವನು ; ಚಂದ್ರ : ಸಂಧಿಗಳುಂ ಕೆಲವೆಡೆಯೊಳ್ ಬಂದು ವಿರೂಪಂಗಳಾಗಿ ಸಮನಿಸೆ ಕವಿತಾಬಂಧನದೊಳಾಗೆ ದೋಷಾಬಂಧುಗೆ ಶಶಲಕ್ಷ್ಮದಂತೆ ಕಱೆಯಂ ತರ್ಕುಂ (ಕವಿಗಾ. ೧-೯೮) ; ಶಶಲಕ್ಷ್ಮಂ ಮಂದನೊಳ್ ಮೇಕ್ ಮಹೀಜನೊಳೊಂದಿರ್ದೊಡೆ ಸೌಮ್ಯರೀಕ್ಷಿಸದೊಡಕ್ಕುಂ ಲಗ್ನಜಂ ಪೊಂದುಗುಂ (ಜಾತಕ. ೬-೪೨). [ಸಂ. ಶಶಲಕ್ಷ್ಮನ್]

ಶಶಲಾಂಛನ (ನಾ). = ಶಶಲಕ್ಷ್ಮ : ಶಶಲಾಂಛನನಿಂದಂ ದ್ವಾದಶದೊಳ್ ಬುಧ ಶುಕ್ರರಿರೆ ಬೃಹಸ್ಪತಿಯಿರೆ ತಾನೆ ಶುಭಗ್ರಹಗೃಹಮೆನಿಸಿದ ದಶಮದೊಳುಡು ನಾಥಜಾತದುರಿತವಿನಾಶಂ (ಜಾತಕ. ೭-೬). [ಸಂ.]

ಶಶವಿಷಾಣ (ನಾ). ಮೊಲದ ಕೊಂಬು, – ಕೋಡು ; P ಮೊಲಕ್ಕೆ ಕೊಂಬು ಇರುವುದು ಎಷ್ಟು ಅಸಂಭವವೋ ಹಾಗೆಯೇ ಅಸಂಭವ ವಿಷಯವನ್ನು ಹೇಳುವಾಗ ಬಳಸುವ ಒಂದು ಮಾತು: ಶಶವಿಷಾಣಂ ವಿಯತ್‌ಪುಷ್ಪದಂತಿಲ್ಲದುದೇ ಸತ್ಯಂ (ರತ್ನಾಕ. ೯೨); ಹಡೆಯಬಹುದಾ ಶಶವಿಷಾಣವ . . . ನಿಮ್ಮ ಚಿತ್ತವ ಪಡೆವುದೆಂತೋ ದೇವ (ಕೌಶಾ. ೪೩-೨೭). [ಸಂ.]

ಶಶಶೃಂಗ (ನಾ). = ಶಶವಿಷಾಣ : ನೀನುಂತೆ ಮುಂತಱಿಯದುಲಿವ ನೀಚೋಕ್ತಿಗಳವೆಲ್ಲಿಯುಂ ಸತ್ಯಮಾಗವು ಭಾವಿಸೆ ಸಂತತಂ ಶಶಶೃಂಗದಂತೆ ಮಿಥ್ಯಂಗಳಾಗಿಂತು ವರ್ತಿಸುತಿರ್ಕುಂ (ಆರಾಚ. ೩-೩-೫೨). [ಸಂ.].

ಶಶಾಂಕ (ನಾ). ೧. ಚಂದ್ರ : ಪರಾಕ್ರಮಧವಳಂಗೆ ಶಶಾಂಕವಿಶದಯಶಮ ತರೆಳ್ಳುರುಳಿಗೊಂಡೆಂತಿರ್ದ ಶಂಖಮಂ ಬಾಸಣಿಗೆಗಳೆದು (ಪಂಪಭಾ. ೬-೩ ಪ) ; ತಮ ಶಶಾಂಕನ ನುಂಗಲಾಱದೆ ಕ್ರಮದಲಾ ರೋಹಿಣಿಯ ನುಂಗಲು ಭ್ರಮಿಸಿ ಹರಿತಹವೋಲು ರಾವಣ ಮೈಥಿಲಿಯ ಬಳಿಗೆ ಅಮಮ ಹರಿದನು (ಕೌಶಾ. ೩೭-೧೫). ೨. ಕರ್ಪೂರ. ೩. [ಛಂದ] ಒಂದು ಗುರು, ಎರಡು ಲಘುಗಳಿರುವ ಒಂದು ಗಣ ; ಭಗಣ: ಎಂಟುಗಣಂ ಧರಣಿ ಜಲಾಗ್ನಿ ಮರುದ್ಯೋಮ ರವಿ ಶಶಾಂಕೇಂದ್ರನಿಲಯಮಿವು ಗಣನಾಮಂ (ಛಂದೋಂಬು. ೧-೩೭). ೪. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: ಶಶಾಂಕ ಸೋಮಂ ಸುಧಾಂಶು . . . ಒಂದಱ ನಾಮಂ (ವ್ಯವಹಾ. ೯-೧). [ಸಂ.]

ಶಶಾಂಕಕಿರಣಲೇಹ್ಯ (ನಾ). ಔಷಧಿಗಾಗಿ ಬಳಸುವ ಒಂದು ಬಗೆಯ ಲೇಹ್ಯ : ಶಶಾಂಕಕಿರಣಲೇಹ್ಯಂ, – ಎಮ್ಮೆಹಾಲು ಸೇ. ೨ನ್ನು ಮೃದ್ವಗ್ನಿಯಿಂದ ಒಂದು ಸೇರು ಸಕ್ಕರೆಗೂಡಿ, ಕಾಯಿಸಿ . . . ಶುಂಠಿ, ಜೀರಿಗೆ, ಶ್ರೀಗಂಧದ ಚಕ್ಕೆ, ಕರಿಜೀರಿಗೆ ಇವು ಪ್ರತ್ಯೇಕ ಗದ್ಯಾಣ ೪ ತೂಕವಂ ಚೂರ್ಣವ ಮಾಡಿ ಪಾಕದಲ್ಲಿ ಹಾಕಿ ಲೇಹ್ಯಪಾಕವಾಗಿ ಅಟ್ಟು (ಸಕಪ್ಯ. ೧೩೭). [ಸಂ.]

ಶಶಾಂಕಜ (ನಾ). ಚಂದ್ರನ ಮಗ ; ಬುಧ : ಶಶಿ ಕನ್ನೆಯೊಳಿರೆ ವೀಕ್ಷಿಸೆ ಶಶಾಂಕಜಾದಿತ್ರಯಂ ನೃಪಂ ಸೇನಾಪಂ ಕುಶಲನೆನಿಕ್ಕುಂ (ಜಾತಕ. ೨೦-೬). [ಸಂ.]

ಶಶಾಂಕಧರ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು ; ಶಿವ : ಶ್ರೀಮತ್ಶಶಾಂಕಧರ ಸತ್ಯೋಮಳಪದಪದ್ಮಭೃಂಗನಘರಿಪುಸಿಂಗಂ ವಾಮಶಿವದೇವಪುತ್ರಂ ಚಾಮಂ (ಎಕ V, ಮಂಜರಾ. ೪೫-೧; ಸು. 1030). [ಸಂ.]

ಶಶಾಂಕಲೇಖೆ (ನಾ). ಬಾಲಚಂದ್ರ ; ಎಳೆಯಚಂದ್ರ : ಬಾಂಬೊಳೆ ತಳ್ತ ಕೆಂಜಡೆಯ ಬಲ್ಮುಡಿ ತಾಳ್ದ ಶಶಾಂಕಲೇಖೆ ಭಾಳಾಂಬಕಮುಲ್ಲಸತ್ಫಣಿಪಕುಂಡಲಂ . . . ವಿರಾಜಿಸೆ ರಂಜಿಸಿದಂ ಮಾಹೇಶ್ವರಂ (ಶಬಶಂ. ೧-೭೪). [ಸಂ. ಶಶಾಂಕಲೇಖಾ]

ಶಶಾಂಕವಂಶ (ನಾ). ಚಂದ್ರನು ಮೂಲಪುರುಷನಾಗಿರುವ ಚಂದ್ರವಂಶ : ರಿಪುನಗರಂ ಕರಂ ವಿಜನವಾಗಿಯುವರ್ಜ್ಜುನರಾಜರಾಜಿತಂ ವಿಪುಳಶಶಾಂಕವಂಶ ಕನಕಾಳ್ಚಿತವಂತದೆ ವಿಭ್ರಮಾನ್ವಿತಂ ಚಪಳಭುಜಂಗಭೀಮನಕುಳಾಶ್ರಯಮುದ್ಗತ ಪುಂಡರೀಕಮ್ (ಎಕ. XI, ದಾವಣ. ೪೪-೩೭; ಸು. 1180). [ಸಂ.]

ಶಶಾಂಕಸೂನು (ನಾ). = ಶಶಾಂಕಜ: ಶಶಾಂಕಸೂನು ಸಿತರೆಂಬೀಯಿರ್ವರುಂ ಕೇಂದ್ರಗೇಹದೊಳಿರ್ದಂದು ರಿಪು ತ್ರಿಲಾಭಗೃಹದೊಳ್ ಮಿಕ್ಕನ್ಯರಿರ್ದಂದು ಪುಟ್ಟಿದಮರ್ತ್ಯಂಗೆ ಚಿರಾಯು ಸಂಭವಿಸುಗುಂ (ಜಾತತಿ. ೮-೧೫). [ಸಂ.]

ಶಶಾದನ (ನಾ). ಮೊಲವನ್ನು ತಿನ್ನುವಂತಹುದು ; ಗಿಡುಗ : "ಶಶಾದನಃ, ಪತ್ರೀ, ಶ್ಯೇನಃ – ೩ ಗಿಡಗನ ಹಕ್ಕಿ" (ಸಿದ್ಧಾಂತಿ. ೧೫೭). [ಸಂ.]

ಶಶಿ (ನಾ). ೧. ಚಂದ್ರ : ಶನಿ ಘಟಮೃಗಕ್ಕೆ . . . ಶಶಿ ಕರ್ಕಿಗೆ ಭೌಮನಜಾಳಿಗೆ ರವಿ ಹರಿಗುಶನನುಕ್ಷತೌಳಿಗೆ ತದಂಶಕಕ್ಕಮಧೀಶರ್ (ಜಾತತಿ. ೧-೨೫); ಶಶಿಯಂ ಜೋಡಾಡುತಿರ್ಕುಂ ಮೊಗಂ (ಲೀಲಾವ. ೭-೯೫); ಮಂಥರೆಯ ಬಾಳ್ ನಿಶೆಗೆ ಶಶಿಯುದಿಸಿದಂತಾಯ್ತು (ಶ್ರೀರಾಮಾ. ೨೩-೬೦೯). ೨. ಕರ್ಪೂರ. ೩. ಪಟ್ಟಣದ ಮಧ್ಯಭಾಗದಲ್ಲಿ ಹಾಯ್ದುಹೋಗುವ ದಕ್ಷಿಣೋತ್ತರವಾದ ಬೀದಿ: ಕಮಲಗರ್ಭನಾ ಕಲ್ಯಾಣವ ಹಸುಗೆಯ ಮಾಡಿದ ತೆಱದಿಂ ಶಶಿ ರವಿನಾಮದಲಿ ವೀಥಿಗಳ್ಮೆಱದಿರ್ಪವು (ನನ್ನಚಾ. ೨-೧೮). 'ಚಂದ್ರವೀಧಿ' ಹೋ. ೪. [ಯೋಗ] ಮೂಗಿನ ಎಡಹೊರಳೆಯಲ್ಲಿ ಸಂಚರಿಸುವ ಉಸಿರು : "ನಾಸಿಕದಿ ಸೇದುವನಿಲಂ ಪೂರಕಮನಿಕ್ಕೆಡಂ ಶಶಿ ಬಲಂ ಭಾಸ್ಕರಂ" (ಮಂಗರಾ. ೧೬-೧೪). ೫. = ಶಶಾಂಕ ೩ : ಆದಿಯ ಮಧ್ಯಾಂತದೆ ಗುರುವಾದೊಡೆ ಶಶಿ ಸೂರ್ಯವಾಯು (ಛಂದೋಂಬು. ೧-೩೮ ಅಡಿಪದ್ಯ). ೬. = ಶಶಾಂಕ ೪ : "ಧರಣಿ ಶಶಿಯೆನಲೊಂದು" (ಮಂಗರಾ. ೧೦೩-೮) ; ಶಶಿಯಿಂದು . . . ಇಳೆ ರೂಪವೈಕಮೊಂದಱ ನಾಮಂ (ವೃಷಹಾ. ೯-೧). [ಸಂ. ಶಶಿನ್]

ಶಶಿಕರ (ನಾ). ಚಂದ್ರನ ಕಿರಣ : ಶಶಿಕರದಿಂ ನೀರೇಱುವ ಶಶಿಕಾಂತಪ್ರತಿಮೆಯಂದದಿಂ ಘರ್ಮಾಂಬುಪ್ರಶಮಿತತಿಲಕಮದಾಗಿರ ಶಶಿಮುಖಿ ಮಳೆಯಜದ ಜಳಮನೊಲವಿಂ ಸುರಿದಳ್ (ತ್ರಿಪುವಿ. ೧೯-೪೬) ; ಶಶಿಕರಂ ಸೊಂಕಿದ ಸಸಿಗಲ್ಲ ಪುತ್ತಳಿಯಂತೆ ಬೆಮರ್ತು (ಶಬಶಂ. ೩-೩೫ ವ). [ಸಂ.]

ಶಶಿಕಲೆ, ಶಶಿಕಳೆ (ನಾ). ೧. ಚಂದ್ರನಲ್ಲಿರುವ ಷೋಡಶಕಲೆಗಳು. ೨. [ಕಾಮಶಾ] ಕಾಮೋದ್ರೇಕವನ್ನುಂಟುಮಾಡುವ ಸ್ಥಾನ : ಒಗವ ಶಶಿಕಲೆಯೆಲ್ಲರಿಗೆ ಸರಿಯದೆನೆ ನಿನಗೆ ಮೃಗನೇತ್ರೆ ಪೇಳ್ವೆನು (ಜನವ. ೩ ಸೂಚನೆ). **ಶಶಿಕಳೆ:** ೩. ಬಾಲಚಂದ್ರ ; ಎಳೆಯ ಚಂದ್ರ : ಮೂಡಿದನು ಕೆಂಜಡೆಯ ಶಶಿಕಳೆಯ . . . ಕಾಶೀರಮಣ ವಿಶ್ವನಾಥಂ ಸುರರ ನೆರವಿ ಜಯ ಜಯ ಎನುತಿರೆ (ಹಚಕಾ. ೧೩-೧೯). ೪. ಚಂದ್ರ : ಶಶಿಕಳೆಯೊಂದೆಯೆಂತು ಕುಮುದಾಳಿವಿಕಾಸಮನೆಯ್ದೆ ಮಾಳ್ಪುದಂತಸಿಯಳ ಗಾಡಿಯೊಂದೆ ಜಗತೀಜನಲೋಚನಸಂಚಯಕ್ಕೆ ಸಂತೊಸಮನೆ ಮಾಡಿ ರೂಢಿವಡೆದತ್ತು (ಬಾಧಪು. ೨-೩೩). [ಸಂ. ಶಶಿಕಲಾ]

ಶಶಿಕಳಾಚೂಡ (ನಾ). ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದವನು; ಶಿವ: ಶಶಿಕಳಾಚೂಡ ವೃಷಭಾರೂಢ . . . ಭಕ್ತಪೋಷಾ (ನವಮೋ. ೩-೧). [ಸಂ. ಶಶಿಕಲಾಚೂಡ]

ಶಶಿಕಳೆ 'ಶಶಿಕಲೆ' ನೋ.

ಶಶಿಕಾಂತ (ನಾ). ೧. ಚಂದ್ರನ ಪ್ರಕಾಶದಿಂದ ದ್ರವಿಸುವುದೆಂದು ಭಾವಿಸಲಾದ ಒಂದು ಬಗೆಯ ಕಲ್ಲು ; ಚಂದ್ರಕಾಂತಶಿಲೆ : ವೈಡೂರ್ಯದ ಗಡಗೆಗಳೆಸೆಯ ಬೇಱೆ ಶಶಿಕಾಂತದ ಜಂತೆಗಳೊಪ್ಪಿ ತೋಱೆ (ಸುಕುಮಾ. ೧೦-೭೬ ರಗಳೆ); ಬರೆದ ವಿಚಿತ್ರ ಪತ್ರನಿಚಯಂ ನಿಜಲೋಚನಚಂದ್ರಿಕಾಪರಂಪರೆ ನಡೆನಟ್ಟು ಸೋರ್ವ ಶಶಿಕಾಂತದ ಕೇರ್ಗಳ ನೀರ್ವೊನಲ್ಗಳಿಂ ಪರೆಯೆ (ವಂರಾಮಾ. ೧-೧೧೭) ; ಕರಗುವುದು ಶಶಿಕಾಂತ ಚಂದ್ರನ ಕಿರಣ ತಾಗಲು (ಕುವ್ಯಾಕು. ೯-೪೫). ೨. [ಛಂದ] ಅಕ್ಷರ ಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಆರು ಅಕ್ಷರಗಳುಳ್ಳ ಗಾಯತ್ರಿ ಛಂದಸ್ಸಿನ ಒಂದು ವೃತ್ತ: ಶೀತಕರತೋಯಂ ದ್ಯೋತಿಸಿರೆ . . . ಶಶಿಕಾಂತಂ (ಛಂದೋಂಬು. ೨-೭೬). [ಸಂ.]

ಶಶಿಕಿರಣ (ನಾ). ಚಂದ್ರನ ಕಾಂತಿ ; ಬೆಳುದಿಂಗಳು : ಮಲಯಾನಿಲನುಂ ಮಲಯಜಜಲಮುಂ ಶಶಿಕಿರಣಮುಂ ವಿಯೋಗಿಗಳೆರ್ದೆಯೊಳ್ಳೆಲಸಿರ್ದುವು (ಕವಿರಾ. ೩-೩೨); ಶಶಿಕಿರಣಮನಾಯ್ದಾಯ್ದೊಳ್ಪಸೆಯಲ್ ಪೋಣಿಸಿದ ತೆಱದ ಮುಕ್ತಾಹಾರಂ ನಸುಸೋಂಕೆ ಮುಗಿದುವೆಂಬಂತೆಸೆಗುಂ ಕುಚಕಮಲಕುಟ್ಮಲಂ (ದಶಕು. ೬-೪೦). [ಸಂ.]

ಶಶಿಕುಲ (ನಾ). ಚಂದ್ರವಂಶ : ಭೂಪಾಲಕ ನಿದಾನಿಸಿ ಕೇಳು ಶಶಿಕುಲಮುಕುರ ವಿತ್ತಂಡದಲಿ ನೆನೆಯೆವು ಭೇದಬುದ್ಧಿಗಳ ಯುಕುತಿಯಿನ್ನಿದಕಿಲ್ಲ ಪಾರ್ಥನ ಶಕುತಿ ಘನವು (ಕುವ್ಯಾದ್ರೋ. ೮-೬೦). [ಸಂ.]

ಶಶಿಖಂಡ (ನಾ). ಬಾಲಚಂದ್ರ: ಅಪನೀತಕಲಾಕಲಾಪಂ (ಸ)ಶಶಿಖಂಡನಿರ್ಮಲ ಯಶೋವಿವಿಧಾವತಂಸಂ (ಕವಿರಾ. ೩-೨೩೦) ; ಆ ಕ್ಷೋಣೀಧರವಲ್ಲಭ ದಕ್ಷಿಣದಿಙ್ಮುಖ ದೊಳೆಸದು ಶಶಿಖಂಡದವೋಲೀಕ್ಷಣಸುಖಮಯಮಿರ್ಪುದು ದಕ್ಷಿಣಭರತ ತ್ರಿಖಂಡದಾರ್ಯಾಖಂಡಂ (ವಂರಾಮಾ. ೧-೪೫). [ಸಂ.]

ಶಶಿಗದಿರ್ಗಲ್ (ನಾ). ಚಂದ್ರಕಾಂತ ಶಿಲೆ : ಪೊಳೆವ ಶಶಿಗದಿರ್ಗಲ್ಗಳಿಂದ ಬಂಧಿಸಿದ ತಿಳಿಗೊಳಲವೊತ್ತಿಲಿ ಮರುಗ ದವನ ಪಚ್ಚಯದಿಂದೆ ಬಳಸಿ ರಚಿಸಿದ ಭಿತ್ತಿ . . . ಕಮಲಚಯತೋರಣದಿ ಮೆರೆದುದು (ನವಮೋ. ೪-೩೭). [ಶಶಿ + ಕದಿರ್$_2$ + ಕಲ್$_3$]

ಶಶಿಗೇಹ (ನಾ). [ಜ್ಯೋತಿ] ಚಂದ್ರನ ಕ್ಷೇತ್ರ ; ಕರ್ಕಾಟಕ ರಾಶಿ: ಬುಧಂ . . . ಶಶಿಗೇಹದೊಳ್ ನೆಲಸೆ ಬಂಧುದ್ವೇಷಿ ತೋಯೋದ್ಭವ ದ್ರವಿಣಂ (ಜಾತತಿ. ೧೭-೨೪). [ಸಂ.]

ಶಶಿಚೂಡ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು ; ಶಿವ : ಕೂಡದನ್ನಂ ಬಿಟ್ಟು ಕಳೆ ಶಶಿಚೂಡನಲ್ಲದತಃಪರವನಾನಱಿಯೆನಲ್ಲದಡೆ ನಾಡ ಮಾತುಗಳೇಕೆ (ಬಸವು. ೫೧-೯). [ಸಂ.]

ಶಶಿಜೂಟ (ನಾ). = ಶಶಿಚೂಡ : ಆಡಿನ ಹಿಕ್ಕೆಯಂ ಶಶಿಜೂಟನೀಶ್ವರನೆಂದು ಪಾಲಂ ತಾನದಱ ಮೇಲೆ ಪಾಟಕುಂಭದಿ ಕಱೆದೆಱೆದು (ಬಸವು. ೯-೧೨) ; ವಿಮಲ ಕಾತ್ಯಾಯನೀವದನಸನ್ನುತದಿವ್ಯಕಮಲಾರ್ಕ ಶಶಿಜೂಟ ಶರಣಜನತಾಪಹರ (ವೀಶ್ಯಪು. ೨-೫೧). [ಸಂ.]

ಶಶಿಧರ (ನಾ). = ಶಶಾಂಕಧರ : ಕರುಣದಿಂ ಶಶಿಧರಂ ನಾಟ್ಯವಾಡಿದನಿಲ್ಲಿ ಹರುಷದಿಂದಂ ವ್ಯಾಘ್ರಪಾದ ನೋಡಿದನಿಲ್ಲಿ (ತಿರುರ. ದೇ. ೩-೧೮). [ಸಂ.]

ಶಶಿನಿ (ನಾ). ಚಂದ್ರನ ಹದಿನಾರು ಕಲೆಗಳಲ್ಲಿ ಒಂದು : ಚಂದ್ರನಾದೊಡೆ ಅಮೃತಾ ಮಾನದಾ ಪೂಷಾ ತುಷ್ಟಿ ಪುಷ್ಟಿ ರತಿ ಧೃತಿ ಶಶಿನಿ . . . ಕಾಮದಾಯಿನಿಯೆಂಬ ಷೋಡಶಕಲಾಭರಿತನಾಗಿ . . . ರಂಜಿಸುತ್ತಿರ್ಪಂ (ವಿವೇಕ. ೨೬೭). [ಸಂ. ಶಶಿನೀ]

ಶಶಿಬಿಂಬ (ನಾ). ಚಂದ್ರಬಿಂಬ : ಎಸೆವ ಪಾಲ್ಗಡಲಿಂದ ಶಶಿಬಿಂಬವೊಗೆವಂತೆ ಶಿವನ ಭಕ್ತಿಯ ಸೊಬಗು ಮೂರ್ತಿಗೊಂಡೊಗೆವಂತೆ (ನಂಬಿರ. ೧-೧೦೬); ಶಶಿಬಿಂಬಂ ರವಿಬಿಂಬಮೆಂಬ ವರಘಂಟಾಯುಗ್ಮಮಂ ಕಾಂತೆಯೆಂಬೆಸವೀ ನೇಣೆನೊಳೆಯ್ದೆ ಕಟ್ಟಿ (ಬಾಧಪು. ೫-೭). [ಸಂ.]

ಶಶಿಭೂಷಣ (ನಾ). ಚಂದ್ರನನ್ನು ಧರಿಸಿದವನು ; ಶಿವ : ಸಕಳಸುಖಮಂ ಶಿವಂಗೊಡನೊಡನೆ ಅರ್ಪಿಸುತೆ ಇಂತು ಶಶಿಭೂಷಣನ ಸುಕುಮಾರನೊಪ್ಪಿದಂ (ನಂಬಿರ. ೧-೧೯೭); ಶಶಿಭೂಷಣನೆ ಮತ್ತೊಂದಭೀಷ್ಟವನೊಲ್ಲೆನವಧರಿಸು (ಬಸವು. ೫೦-೭೧). [ಸಂ.]

ಶಶಿಮಂಡಲ (ನಾ). = ಶಶಿಬಿಂಬ : ಪಡೆಯಱಿಯಲಾದೊಡ[ರಿ]ಯಂ ಕಿಡಿಸುಗುಮಂತಃಕಳಂಕನೃಪಮಂಡಲಮಂ ತಡೆಯದೆ ತಮಸ್ವಭಾವಂ ಕಿಡಿಸುವ

ವೋಲಱಿದು ರಾಹು ಶಶಿಮಂಡಲಮಂ (ಕವಿರಾ. ೩-೧೪೭) ; ಶಶಿಮಂಡಲಮಂ ಗಲೆವಂದುದು . . . ಮೊಗಂ ಸಕಳಸುರಮನೋರಂಜನನಾ (ಜಗವಿ. ೩-೩೪). [ಸಂ.]

ಶಶಿಮಣಿ (ನಾ). = ಶಶಿಕಾಂತ ೧ : ಈ ನಗದ ನೆಗದ ಶಶಿಮಣಿಸಾನುಗಳಿಂದೊಱೆತು ಪರಿವ ಪರಿವೊನಲನಿರುಳ್ ತಾನೆಡೆಯಱಿಯದ ಶಿಖಿಸಂತಾನಂ ಫಣಿಗೆತ್ತು ಕರ್ಚಿ ಬೆಚ್ಚನೆ ಸುಯ್ಯುಂ (ಶಾಂತಿಪು. ೨-೯೫); ಬೆಳರ್ತ ತರುಣಿಯ ವದನಂ ಸೆಳೆದುದು ಕಾವನ ಕೈಯೊಳ್ ತೊಳಗುವ ಶಶಿಮಣಿಯ ಮಣಿಯ ಮುಕುರದ ಚೆಲ್ವಂ (ರಾಜಶೇ. ೪-೩೨). [ಸಂ.]

ಶಶಿಮತ (ನಾ). ಬ್ರಹ್ಮತತ್ತ್ವ ಒಂದೇ, ಎರಡಿಲ್ಲ ಎನ್ನುವ ಸಿದ್ಧಾಂತವನ್ನು ನಂಬಿರುವವನು ; ಅದ್ವೈತಿ : ಸಾಧ್ಯವಲ್ಲವು ಮುಕುತಿ ಸಾಧ್ಯವಲ್ಲವು . . . ಋತುಗಳ ಘಸಣಿಗಂಜದ ಶಶಿಮತನಾಗದ ಕಕುಭಬದ್ಧನೆನಿಸಿ . . . ಪ್ರಸನ್ನವೆಂಕಟಅರಸನ ಚರಣವ ಸ್ಮರಿಸದ ಬರಿದೆ (ಪ್ರಸಕೀ. ೫೮-೧). [ಸಂ.]

ಶಶಿಮುಖಿ (ನಾ). ಚಂದ್ರನಂತೆ ಮುಖವುಳ್ಳವಳು ; ಇಂದುಮುಖಿ : ಶಶಿಮುಖಿಗೆ ಗರ್ಭಚಿಹ್ನಂ ತೋಱಿದುದು ನೋಡ ಸು[ರು]ಚಿರನಿಧಾನದೊಳಗಿರ್ಪ ವಸುಮತಿಯಂತೆ (ನಂಬಿರ. ೧-೯೮). [ಸಂ. ಶಶಿಮುಖೀ]

ಶಶಿಮೌಲಿ, ಶಶಿಮೌಳಿ (ನಾ). ಚಂದ್ರನನ್ನು ಧರಿಸಿದವನು; ಶಿವ : ಆ ಕುಸುಮವಂ ಶಶಿಮೌಲಿ [ಪಾಠಾಂ. ೪] ಗರ್ಪಿತವನುತ ಮನದೊಳು ನೆನೆಯಲು (ಬಸಪು. ೪೧-೧೦). **ಶಶಿಮೌಳಿ** : ಇನ್ನು ದೈತ್ಯರ ಹೊಱಿಗೆಯನು ನೀ ಮಱೆದ ನಿನ್ನವರಱಿಯೆಲಾ ಜಯವಿಜಯರಂಬವರಂದ ಶಶಿಮೌಳಿ (ಕೌಶಿರಾ. ೪೩-೫೧). [ಸಂ.]

ಶಶಿಮೌಳಿ 'ಶಶಿಮೌಲಿ' ನೋ.

ಶಶಿಲೇಖೆ (ನಾ). ಚಂದ್ರನ ಕಲೆಗಳಲ್ಲಿ ಒಂದು : ಪತಿಯನ ಬೇಡಿ ರುದ್ರನ ಸಮೀಪದೊಳುಗ್ರತಪಕ್ಕೆ ನಿಂದಳೋ ರತಿ ಶಶಿಲೇಖೆಯಂ ನೆನೆದು ಬಂದಳೋ ಮೇಣಮೃತಾರ್ಣವಾಧಿದೇವತೆ . . . ಎನಲೇನೆಸೆದಿರ್ದುದೊ ರೂಪು ಕಾಂತೆಯಾ (ಕಾಪಂಪೂ. ೬೬೨) ; ಶಶಿಲೇಖೆಯೆನಲ್ ಕರ್ಪೂರಶಲಾಕೆಯೆನಲ್ ವಿಳೋಚನೋತ್ಸವಮಂ ಮಾಡಿ ಶಿಲೀಮುಖಕುಂತಳೆ . . . ಭುವನಮಂ ಸೋಲಿಸಿದಳ್ (ಪಂರಾಮಾ. ೪-೩೦).

[ಸಂ. ಶಶಿಲೇಖಾ]

ಶಶಿವಂಶ (ನಾ). = ಶಶಾಂಕವಂಶ: ಅತ್ಯುತ್ಸುಕರಾಗಿ ಶಶಿವಂಶಕೇತುಗೆ ರಾಜ್ಯಾಭಿಷೇಕಂಗೆಯ್ಯೆ (ಶಾಂತಿಪು. ೧೦-೧೦೨ ವ); ಈ ಮಹಿಳೆಯಭಿವಂದನೀಯೆ ನಿರಾಮಯದ ಶಶಿವಂಶಜನನಿ ಸನಾಮೆಯಲ್ಲಾ (ಕುವ್ಯಾಅ. ೮-೧೮). [ಸಂ.]

ಶಶಿವದನ (ನಾ). ಚಂದ್ರನಂತೆ ಮುಖವುಳ್ಳವನು : ಶಶಿವದನನಿಗೆ ಬೆಣ್ಣೆಯ ನೀಡಲೋಸುಗ ಏಣಾಂಕಮುಖಿಯರು ಹೂಸಬೆಣ್ಣೆಯನು ತೆಗೆದು . . . ಕೊಡಲು (ಪುರಂದ. ಧಾ. ೪-೨೮-೪). [ಸಂ.]

ಶಶಿವದನೆ (ನಾ). = ಶಶಿಮುಖಿ : ಶಶಿವದನೆಯೊರೆವುತ್ತಿಪ್ಪ ಸಲ್ಲಾಪಂಗಳಾತಂಗೆ ಉರಿಯೊಳಾಜ್ಯವನೆಱೆದಡಂತುಬ್ಬರಿಸಿ ಧಗಧಗ ಎನುತ (ಬಸಪು. ೪-೧) ; ಸುಹೃದನ ದರುಶನದೊಳಗೆ . . . ಶಶಿವದನೆಯುತ್ಸಾಹವತಿಢಾಳಿಸಿತು (ಕುವ್ಯಾಕ. ೧೯ ೮೪).

[ಸಂ. ಶಶಿವದನಾ]

ಶಶಿಶಕಲಧರ (ನಾ). = ಶಶಿಕಳಾಚೂಡ : ನೀಲಕಂಠಂ ಶಶಿಶಕಲಧರಂ ಕೃತ್ತಿವಾಸಂ ಪಿನಾಕಂ . . . ತೋಱಿದಂ ವಿಶ್ವರೂಪಂ (ಉದ್ಯಟ. ೧೧-೧೨೮). [ಸಂ.]

ಶಶಿಶೇಖರ (ನಾ). = ಶಶಿಭೂಷಣ : ಶಶಿಶೇಖರಂ ನೆಟ್ಟನಂತರ್ಧಾನದೊಳ್ ಸಂದನೀಶ್ವರಂ (ನಂಬಿರ. ೭-೧೬೭). [ಸಂ.]

ಶಶಿಹಾಸ (ನಾ). ೧. ಬೆಳುದಿಂಗಳಿನಂತಹ ನಗೆ. ೨. ವಿಷ್ಣುಭಕ್ತನಾದ ಕುಂತಳದೇಶದ ಒಬ್ಬ ದೊರೆ ; ಚಂದ್ರಹಾಸ : ಶಶಿಹಾಸನನುಚರರ್ಬಂದು ಕಾಣಲ್ಕೆ . . . ಅಸುವಿಡಿದಿಹನೆ ಕುಳಿಂದಕನೆಂದು ಶಂಕೆಯಿಂ ಕೇಳ್ದನಾ ದುಷ್ಟಬುದ್ಧಿ (ಜೈಮಿಭಾ. ೨೯-೨೦). [ಸಂ.]

ಶಶೋರ್ಣ (ನಾ). ೧. ಮೊಲದ ಚರ್ಮ. ೨. ಮೊಲದ ಕೂದಲಿನಿಂದ ಮಾಡಿದ ಕಂಬಳಿ : "ಶಶೋರ್ಣಂ, ಶಶಲೋಮ — ಮೊಲದ ಕೂದಲುಗಳಿಂದ ನೆಯಿದ ಕಂಬಳಿ" (ಸಿದ್ಧಾಂತಿ. ೩೦೬). [ಸಂ.]

ಶಶ್ವಜ್ಜೀವನ (ನಾ). ೧. ಶಾಶ್ವತವಾದ ಜೀವನ ; ಪರಮಪದ ; ಮೋಕ್ಷ. ೨. ನಿರಂತರವಾಗಿ ಹರಿಯುವ ನೀರು. ೧, ೨: ಶಶ್ವಜ್ಜೀವನಮನೀವ ಕಾವ . . . ವಿಶ್ವರೂಪಿಣಿಯೆನೆ ಮೆಱೆವ ನೆಲಗಾಣದ ನಿನ್ನೀ ಮೈಮೆಯಂ ಬಣ್ಣಿಸಲಾವಂ ಸಾಲ್ವಂ (ರಾಮಾಶ್ವ. ೩೧-೪). [ಸಂ.]

ಶಷ್ಕುಲಿ (ನಾ). ೧. ಕಿವಿಯ ತೂತು, — ರಂಧ್ರ. ೨. ಒಂದು ಬಗೆಯ ಖಾದ್ಯ ವಿಶೇಷ ; ಚಕ್ಕುಲಿ : ಶಷ್ಕುಲಿ - ಚಕ್ಕುಲಿ (ಶಮದ. ೨೬೩ ಪ್ರಯೋ.). ೩. ಒಂದು ಬಗೆಯ ಅಕ್ಕಿಗಂಜಿ. [ಸಂ. ಶಷ್ಕುಲೀ]

ಶಷ್ಕುಲಿಕರ್ಣ (ನಾ). ಚಕ್ಕುಲಿಯಂತಿರುವ ಕಿವಿಯುಳ್ಳ ವ್ಯಕ್ತಿ : ವಿದಿಗ್ಗತ ದ್ವೀಪಸಂಸ್ಥಿತರ್ ಶಷ್ಕುಲಿಕರ್ಣರುಂ ಕರ್ಣಪ್ರಾವರಣರುಂ ಲಂಬಕರ್ಣರುಂ ಶಶಕರ್ಣರುಂ ಅಪ್ಪರ್ (ತತ್ತ್ವ ಪ್ರ. ೧೪೮). [ಸಂ.]

ಶಷ್ಪ (ನಾ). ಎಳೆಯ ಹುಲ್ಲು; ಗರುಕೆ : "ಎಳೆಯ ಪುಲ್ ಶಷ್ಪಂ ಬಾಲತೃಣಮನಿಕ್ಕುಂ" (ಮಂಗರಾ. ೩೩-೭). [ಸಂ.]

ಶಸನ (ನಾ). ೧. ಕೊಲ್ಲುವುದು. ೨. ಯಜ್ಞದಲ್ಲಿ ಮಾಡುವ ಪಶುವಧೆ : "ಪರಂಪರಾಕಂ, ಶಸನಂ, ಪ್ರೋಕ್ಷಣಂ — ೩ ವಧಾರ್ಥಕಂ, ಯಜ್ಞದಲ್ಲಿ ವೇದೋಕ್ತಪ್ರಕಾರವಾಗಿ ಮಾಡುವ ಪಶುವಿಶಸನವೆಂಬ ಶ್ರೌತ, ಪಶುವಧೆ" (ಸಿದ್ಧಾಂತಿ. ೨೨೧). [ಸಂ.]

ಶಸ್ತ (ಗು). ೧. ಹೊಗಳಿದ ; ಶ್ಲಾಘಿಸಿದ. ೨. ಉತ್ತಮವಾದ ; ಶ್ರೇಷ್ಠವಾದ: "ಹಸ್ತಂ ಪಾಶಂ ಪಕ್ಷಂ ಶಸ್ತಕಚಪ್ರಚಯವಾಚಕಂ ತತ್ಪರದೊಳ್" (ವಸ್ತುಕೋ. ೭೦-೧೯). ೩. (ಮತ್ತೆ ಮತ್ತೆ) ಹೇಳಿದ; ನುಡಿದ. ೪. ಗಾಯಗೊಂಡ. ೫. ಕೊಲ್ಲಲ್ಪಟ್ಟ. (ನಾ). ೬. ಹೊಗಳಲ್ಪಟ್ಟುದು; ಕೊಂಡಾಡಲ್ಪಟ್ಟುದು : "ಈಡಿತಂ, ಶಸ್ತಂ, ಪಣಾಯಿತಂ . . . ಸ್ತುತಂ — ೧೨ ಹೊಗಳಲ್ಪಟ್ಟದ್ದು" (ಸಿದ್ಧಾಂತಿ. ೩೫೨). ೭. ಉತ್ತಮವಾದುದು ; ಶ್ರೇಷ್ಠವಾದುದು : ನವಪಿಷ್ಟಚರ್ಚಿಕಾ ಶಸ್ತಮುಪಾತ್ತದರ್ಭರಚನಂ ನಿಖಿಲೌಷಧಿಪುಂಜಿತಂ ಪರಿನ್ಯಸ್ತಮದೊಂದು ಪೂರ್ಣಕಲಶಂ ತಳೆದತ್ತತುಳಂ ವಿಳಾಸಮಂ (ಚಂದ್ರಪು. ೬-೫೩) ; ವಸ್ತುವೆಯಾತ್ಮಸ್ವರೂಪವೆಂಬಾ ಬುದ್ಧಿವಿಸ್ತರದ ದೇವತೆಗದೇಸ್ಥಾನಮಯಗುಣದ ಶಸ್ತವೆನಿಸಿಸುವ ಜಗತ್ತಂ ವ್ಯಾಪಿಸುತ್ತ . . . ನಾಡೆ ಮೆಱೆವ ಚೈತನ್ಯವೇ (ವೀಶ್ಯಪು. ೫-೧೬-೧೪). ೮. ಶ್ರೇಷ್ಠನಾದವನು; ಉತ್ತಮ : ಪ್ರಸ್ತುತಬುಧಸ್ತವನಭಾಜನಶಸ್ತನಂ ಗುರುಭಕ್ತಿಕೀರ್ತಿ ಗಭಸ್ತಿ ಭಾಸುರನಂ ಸಮುದ್ಯತ್‌ಚಿತ್‌ಪ್ರಭಾಕರನ . . . ನೋಡಿ (ಬಸಪು. ೩೯-೫೪). [ಸಂ.]

ಶಸ್ತ್ರ (ನಾ). ೧. ಕೈದು ; ಆಯುಧ : ಶಸ್ತ್ರಸಂಪನ್ನನೆ ಆಗಿ ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ ನಿನ್ನಯ ಬಲ್ಲ ಮಾಟ್ಕೆಯೊಳ್ (ಪಂಪಭಾ. ೧೨-೫೭) ; ವೈರಚಿಕಿತ್ಸೆಗೆ ಇದೆ ಶಸ್ತ್ರ; ಅಣುಬಾಂಬಿಗೂ ತಾ ಪ್ರತ್ಯಸ್ತ್ರ (ಅನಿಕೇ. ೩೪-೫) ; ಶಸ್ತ್ರದ ಅಭ್ಯಾಸವಿಲ್ಲದಿದ್ದರೆ ವಸ್ತ್ರ ಕದಿಯಲಿಕ್ಕೆ ತಿಳಿಯದೋ ? (ಗಾದೆ). ೨. ಕಬ್ಬಿಣ. ೩. ಉಕ್ಕು: "ಶಸ್ತ್ರಂ, ತೀಕ್ಷ್ಣಂ, ಅಯುಃ, ಪಾರಸವಂ — ಈ ೪ ಉಕ್ಕು" (ಹಲಾಯು. ೨೮-೧೭).

ಶಸ್ತ್ರಾಸ್ತ್ರ = (ನಾನಾಬಗೆಯ) ಆಯುಧಗಳು : ಧನುವ ಶಸ್ತ್ರಾಸ್ತ್ರವ ಸುದರ್ಶನ ಕನಕ ಕವಚ ಕೃಪಾಣವನು ಸ್ಯಂದನದೊಳಿಳುಹು (ಕುವ್ಯಾಉ. ೭-೬) ; ಅಖಿಳ ಶಸ್ತ್ರಾಸ್ತ್ರದಿಂ ಸಮವಿಷಮ ಸೋಲಗೆಲವುಗಳಿಲ್ಲದೆ ತ್ರಿಭುವನಕೆ ರಣರಂಗದೊಳ್ಸುಭಟ ನರ್ತನವನಭಿನಯಿಸುವಂತೆ . . . ಎಚ್ಚಾಡಿದರ್ಕರ್ಣನಂದನ ಸುಧನ್ವರಂದು (ಜೈಮಿಭಾ. ೧೨-೨೬). [ಸಂ.]

ಶಸ್ತ್ರಕರ್ಮ (ನಾ). ೧. ಆಯುಧಪ್ರಯೋಗ; ಶಸ್ತ್ರಪ್ರಯೋಗ : ನಿಖಿಲಕ್ಷತ್ರಿಯ ಸಮೂಹಕ್ಕೆ ಶಸ್ತ್ರಕರ್ಮಮುಮಂ . . . ಯಥಾಯೋಗ್ಯಮುಪದೇಶಂಗೆಯ್ದು (ಆದಿಪು. ೮-೬೪ ವ). ೨. (ಅಂಗವಿಕಾರ, ಗಾಯ, ವ್ಯಾಧಿ ಮೊದಲಾದುವನ್ನು) ಗುಣಪಡಿಸಲು ಮಾಡುವ ಆಯುಧಪ್ರಯೋಗದ ಚಿಕಿತ್ಸೆ : ಜನಿಯಿಸಿದ ಶೋಫಮದು ಲೇಪನದಿಂ ಪೋಗದೊಡೆ ಶಸ್ತ್ರಕರ್ಮವನೆಸಪಂತೆ (ಪಾರ್ಶ್ವಪು. ೨-೪೩).

[ಸಂ. ಶಸ್ತ್ರಕರ್ಮನ್]

ಶಸ್ತ್ರಕೌಶಲ (ನಾ). ಆಯುಧಪ್ರಯೋಗದಲ್ಲಿ ತೋರುವ ನೈಪುಣ್ಯ,— ಚಾತುರ್ಯ: ಶಸ್ತ್ರಕೌಶಲಪ್ರದರ್ಶನವಾದ ಮೇಲೆ ಗದೆಯನ್ನು ತೆಗೆದುಕೊಂಡು ಅದರಲ್ಲಿ ವಿವಿಧ ಚಲನವಲನಗಳನ್ನು ತೋರಿಸಿದನು (ವಚಭಾ. ೨೪). [ಸಂ.]

ಶಸ್ತ್ರಕ್ರಿಯೆ (ನಾ). = ಶಸ್ತ್ರಕರ್ಮ ೨: ಉಸಿರಾಡಲು ಕಂಠನಾಳ (Larynx) ದೊಳಗೆ ತೊಂದರೆಯುಂಟಾದಾಗ . . . ಉಸಿರುಕೊಳವೆ (Trachea)ಯ ಮೇಲೆ ಶಸ್ತ್ರಕ್ರಿಯೆ ನಡೆಸಿ ಉಸಿರಾಡಲು ಒಂದು ನಾಳವನ್ನು ಇಡಬೇಕು (ಕಲರೋ. ೨೬). [ಸಂ. ಶಸ್ತ್ರಕ್ರಿಯಾ]

ಶಸ್ತ್ರಚಿಕಿತ್ಸಕ (ನಾ). ಶಸ್ತ್ರಕ್ರಿಯೆಯನ್ನು ಮಾಡಿ ವ್ಯಾಧಿಯನ್ನು ಗುಣಪಡಿಸುವವನು : ಗಾಜಿನಲ್ಲುಂಟಾಗುವ ಪರಯ ಬದಲಾವಣೆಗಳನ್ನು . . . ಪರಿಣತರಾದ ಶಸ್ತ್ರಚಿಕಿತ್ಸಕರಿಂದ ಚಿಕಿತ್ಸೆ ಹೊಂದಿ ದೃಷ್ಟಿ ಪಡೆಯುವುದು ಮೇಲು (ನಿಮ್ಮಧ್ಯ. ೧೭೧). [ಸಂ.]

ಶಸ್ತ್ರಚಿಕಿತ್ಸೆ (ನಾ). = ಶಸ್ತ್ರಕರ್ಮ ೨: ಆತನಿಗೆ . . . ಶಸ್ತ್ರಚಿಕಿತ್ಸೆಯಿಂದ ದೃಷ್ಟಿ ಹಿಂತಿರುಗುವುದೆಂಬ ನಂಬಿಕೆಯನ್ನು ತುಂಬಬೇಕು (ನಿಮ್ಮಧ್ಯ. ೧೭೨) ; ಅದೆಲ್ಲಾ ತನಗೆ ಶಸ್ತ್ರಚಿಕಿತ್ಸೆಯಾಗಿ ಚೇತರಿಸಿಕೊಂಡ ಮೇಲೆ (ಯೋಧಪ್ರ. ೨). [ಸಂ. ಶಸ್ತ್ರಚಿಕಿತ್ಸಾ]

ಶಸ್ತ್ರಚ್ಯುತಿ (ನಾ). ಆಯುಧವನ್ನು ಪ್ರಯೋಗ ಮಾಡದಿರುವುದು; ಶಸ್ತ್ರವನ್ನು ತೊರೆಯುವುದು : ಕ್ಷಿತಿಪನಂತ್ಯದೊಳಲ್ಲಿ ಶಸ್ತ್ರಚ್ಯುತಿಯ ಮಾಡಿ ವಿರಾಗದಲಿ ವನಗತಿಕರಾಮೃತಂದವೆಂದರು ಗುರುಸುತಾದಿಗಳು (ಕುವ್ಯಾಗ. ೧೧-೨೪). [ಸಂ.]

ಶಸ್ತ್ರಜೀವಿ (ನಾ). (ಯುದ್ಧದಲ್ಲಿ) ಆಯುಧಪ್ರಯೋಗ ಮಾಡುವುದರಿಂದ ಜೀವಿಸುವವನು; ಯೋಧ : "ಕೆಯ್ವುವಿಡಿವಂ ಶಸ್ತ್ರಜೀವಿಯು" (ಮಂಗರಾ. ೭೫-೭). [ಸಂ. ಶಸ್ತ್ರಜೀವಿನ್]

ಶಸ್ತ್ರಜ್ಞ (ನಾ). ಆಯುಧಗಳ ಪ್ರಯೋಗವನ್ನು ಬಲ್ಲವನು : ಸಾಳುವನ ಕೂಡರಗಳಿಗೆ ಸಮಮೇಳವೇ ಶಸ್ತ್ರಜ್ಞನಾದಡೆ ಸೋಲುವುದೆ (ಕುವ್ಯಾಕ. ೧೧-೫೮). [ಸಂ.]

ಶಸ್ತ್ರತ್ಯಾಗ (ನಾ). = ಶಸ್ತ್ರಚ್ಯುತಿ : ಅಶ್ವತ್ಥಾಮನ ಮರಣವಾರ್ತೆಯಿಂದ ಮಾತ್ರ ದ್ರೋಣನು ಶಸ್ತ್ರತ್ಯಾಗ ಮಾಡುವನು (ಭಾರದ. ೧೦೨). [ಸಂ.]

ಶಸ್ತ್ರಧರ (ನಾ). ೧. ಆಯುಧವನ್ನು ಹಿಡಿದಿರುವವನು. ೨. ಯೋಧ. [ಸಂ.]

ಶಸ್ತ್ರಧಾರಿ (ನಾ). = ಶಸ್ತ್ರಧರ ೨ : ಎಲ್ಲ ಯೋಧರಿಗೂ ಆಚಾರ್ಯನೂ ಹಿರಿಯನೂ ಶಸ್ತ್ರಧಾರಿಗಳಲ್ಲಿ ಅಗ್ರೇಸರನೂ ಆದ ದ್ರೋಣನನ್ನು ಸೇನಾಪತಿಯಾಗಿ ಮಾಡಿಕೊಳ್ಳೋಣ! (ಪಚಿಭಾ. ೨೭೯). [ಸಂ. ಶಸ್ತ್ರಧಾರಿನ್]

ಶಸ್ತ್ರಪಾಣಿ (ನಾ). = ಶಸ್ತ್ರಧರ ೧: ಉಭಯಪಕ್ಷದವರೂ ಶಸ್ತ್ರಪಾಣಿಗಳಾಗಿ ಹೋರಾಡುವರು (ಕರ್ಣಾಪ. ೫೯). [ಸಂ.]

ಶಸ್ತ್ರಪ್ರಯೋಗ (ನಾ). ೧. ಆಯುಧವನ್ನು ಪ್ರಯೋಗಿಸುವುದು. ೨. (ಶಸ್ತ್ರಚಿಕಿತ್ಸೆಯಲ್ಲಿ) ಆಯುಧಗಳನ್ನು ಬಳಸುವುದು : ದೇಹದಲ್ಲಿರುವ ಹುಣ್ಣನ್ನು ತಗೆಯುವ ಸಲುವಾಗಿ ಶಸ್ತ್ರಚಿಕಿತ್ಸೆ ಮಾಡುವಾಗ ಜೀವಕ್ಕೆ ಅಪಾಯವಾಗದ ರೀತಿಯಲ್ಲಿ ಶಸ್ತ್ರಪ್ರಯೋಗ ಮಾಡಬೇಕು (ಪಂಜಪಂ. ೧೫೪). [ಸಂ.]

ಶಸ್ತ್ರಮರಣ (ನಾ). (ಯುದ್ಧದಲ್ಲಿ) ಆಯುಧದಿಂದುಂಟಾಗುವ ಸಾವು: ದುರ್ಯೋಧನನ ವಶವರ್ತಿಗಳಾದ ರಾಜರೂ ರಾಜಪುತ್ರರೂ ಶಸ್ತ್ರಮರಣವನ್ನು ಪಡೆದು ಸದ್ಗತಿಯನ್ನು ಹೊಂದುತ್ತಾರೆ! (ಪಚಿಭಾ. ೨೭೦). [ಸಂ.]

ಶಸ್ತ್ರಮಾರ್ಜ (ನಾ). ಆಯುಧವನ್ನು ಸಾಣೆ ಹಿಡಿಯುವವನು,— ಹರಿತಗೊಳಿಸುವವನು : "ಶಸ್ತ್ರಮಾರ್ಜಃ, ಅಸಿಧಾವಕಃ — ೨ ಸಾಣೆಗಾರನ ಪಸರು" (ಸಿದ್ಧಾಂತಿ. ೩೧೦). [ಸಂ.]

ಶಸ್ತ್ರಯುದ್ಧ (ನಾ). ಕತ್ತಿಯಿಂದ ಮಾಡುವ ಕಾಳಗ ; ಕತ್ತಿಕಾಳಗ. [ಸಂ.]

ಶಸ್ತ್ರವಿಡಂಬ (ನಾ). ಆಯುಧಗಳ ಆಡಂಬರ,— ಅಟಾಟೋಪ: ಸೊಕಮರ್ಕ್ಕಟ ದರ್ಭಪಾಣಿ ಯಮಜಂ . . . ದಸ್ಯಾತ್ಮಜರ್ ದಂಡಮುಷ್ಕಿಕರರ್ ಶಸ್ತ್ರವಿಡಂಬ ಮೇವುದವರ್ಗಂ (ಗದಾಯು. ೩-೩೪). [ಸಂ.]

ಶಸ್ತ್ರವಿದ (ನಾ). = ಶಸ್ತ್ರಜ್ಞ : ಶಸ್ತ್ರವಿದರೊಳ್ ಭರದಿಂ ನಿಜಶಸ್ತ್ರವಿದ್ಯೆಯಂ ಪರಿವಿಡಿಗೆಯ್ಯ ರಾಜಸುತರೊಪ್ಪುಗುಮಾ ಪುರಗೋಪುರಂಗಳೊಳ್ (ಜಗವಿ. ೨-೧೭). [ಸಂ. ಶಸ್ತ್ರವಿದ್]

ಶಸ್ತ್ರವಿದ್ಯೆ (ನಾ). ಆಯುಧಗಳ ಪ್ರಯೋಗಕ್ರಮವನ್ನು ತಿಳಿಸುವ ಶಾಸ್ತ್ರ: ಶಸ್ತ್ರವಿದರೊಳ್ ಭರದಿಂ ನಿಜಶಸ್ತ್ರವಿದ್ಯೆಯಂ ಪರಿವಿಡಿಗೆಯ್ಯ ರಾಜಸುತರೊಪ್ಪುಗುಮಾ ಪುರಗೋಪುರಂಗಳೊಳ್ (ಜಗವಿ. ೨-೧೭). [ಸಂ. ಶಸ್ತ್ರವಿದ್ಯಾ]

ಶಸ್ತ್ರವಿಧಿ (ನಾ). = ಶಸ್ತ್ರಕರ್ಮ ೨ : ಬಾಲ್ಯದಲ್ಲಿಯೂ ವೃದ್ಧಾಪ್ಯದಲ್ಲಿಯೂ ಕ್ಷಾರವಿಧಿ, ಅಗ್ನಿವಿಧಿ, ಶಸ್ತ್ರವಿಧಿಗಳನ್ನು ವೈದ್ಯನು ಮಾಡಲಾಗದು (ಸಚಿವ್ಯ. ೧೫). [ಸಂ.]

ಶಸ್ತ್ರವೈದ್ಯ (ನಾ). ೧. ಆಯುಧದಿಂದ ಮಾಡುವ ಚಿಕಿತ್ಸೆ : ಗುರೂಪದೇಶ ಮಂತ್ರವೈದ್ಯ ಜಂಗಮೋಪದೇಶ ಶಸ್ತ್ರವೈದ್ಯ ನೋಡಾ ಭವರೋಗವ ಗೆಲುವ ಪರಿಯ ನೋಡಾ (ಬಸವ. ೬೫೫). ೨. = ಶಸ್ತ್ರಚಿಕಿತ್ಸಕ : ಗಾಯಗಳನ್ನೂ ಅಂಗವಿಕಾರಗಳನ್ನೂ, ರೋಗಗಳನ್ನೂ ಕೈಚಳಕದಿಂದಾಗಲಿ ಶಸ್ತ್ರದಿಂದಾಗಲಿ ಗುಣಪಡಿಸುವ ವೈದ್ಯ : ಶಸ್ತ್ರವೈದ್ಯ (Surgeon. ಇಂಇನ). [ಸಂ.]

ಶಸ್ತ್ರವ್ರಣ (ನಾ). ಆಯುಧದಿಂದಾದ ಗಾಯ : ಗಂಡರ್ ಗುಣಮನೆ ಮಱೆವುದು ಶಸ್ತ್ರವ್ರಣಮಂ ನಿನ್ನಂತೆ ಮಱೆವುದಿಲ್ಲೆವಬಡಂಗಾ (ಗದಾಯು. ೨-೫೫). [ಸಂ.]

ಶಸ್ತ್ರಶಯನ (ನಾ). ಆಯುಧಗಳ ಹಾಸುಗೆ : ತುಜುಗಿದಂಬುಗಳ . . . ವಿಕ್ರಮಾಗ್ನಿಯ ತಗಹು ಬಿಡದಭಿಮನ್ಯು ಮಱೆದನು ಶಸ್ತ್ರಶಯನದಲಿ (ಕುವ್ಯಾದ್ರೋ. ೬-೬೨). [ಸಂ.]

ಶಸ್ತ್ರಶಾಲೆ (ನಾ). ಯುದ್ಧಸಾಧನಗಳನ್ನು ಶೇಖರಿಸಿಡುವ ಮನೆ; ಆಯುಧ ಶಾಲೆ : ಶಸ್ತ್ರಶಾಲಾಜಾತಂಗಳಪ್ಪ ಚಕ್ರಾಸಿದಂಡಚ್ಛತ್ರರತ್ನಂಗಳಿಂದಂ ಶ್ರೀಗೃಹಾದಿ ಸಮುತ್ಸನ್ನಂಗಳಪ್ಪ ಮಣಿಚರ್ಮಕಾಕಿಣೀರತ್ನಂಗಳಿಂದಂ . . . ನೆಱೆದು (ಕಾಂತಿಪು. ೧೧-೮೪ ವ); ಒಳಗೆ ತಳತಳಿಸಿ ಪೊಳೆವ ಕೆಯ್ವುಗಳ ಬಳಗಮಂ ತಳೆದ ವಿಷಮವಿಷಧರ [ಪೂರ್ಣ]ಮಪ್ಪ ಪಾತಾಳಕುಹರದಂತಗುರ್ವಿಸುವ ಶಸ್ತ್ರಶಾಲೆಯುಂ . . . ಅಳುಂಬುಮಾಗ (ಪುಪ್ರಪು. ೨-೧೧ ವ). [ಸಂ. ಶಸ್ತ್ರಶಾಲಾ]

ಶಸ್ತ್ರಶಾಸ್ತ್ರ (ನಾ). ಆಯುಧಗಳ ಪ್ರಯೋಗವನ್ನು ತಿಳಿಸುವ ಶಾಸ್ತ್ರ : ನರಸಿಂಗ ಮೊನೆಯರು ತಮ್ಮ ಪಟ್ಟಣದ ಘನಶಸ್ತ್ರಶಾಸ್ತ್ರಮಂ ಬಲ್ಲವರ್ಗಳಂ ಕ್ಷಣದಲಲ್ಲಿ ಕರಸುತ್ತವರ್ ಬರೆ (ನಂಬರ. ೩-೨೮). [ಸಂ.]

ಶಸ್ತ್ರಸಂನ್ಯಾಸ (ನಾ). = ಶಸ್ತ್ರಚ್ಯುತಿ : ಮೋಸದಿಂದ ಶಸ್ತ್ರಸಂನ್ಯಾಸ ಮಾಡಿಸಿದ ಆ ಯುಧಿಷ್ಠಿರನ ರಕ್ತವನ್ನು ಇಂದು ಭೂಮಿಯು ಕುಡಿಯಲಿ! (ಪಚಿಭಾ. ೨೯೧). [ಸಂ.]

ಶಸ್ತ್ರಸಜ್ಜಿತ (ಗು). ಆಯುಧಗಳಿಂದ ಸಜ್ಜಾಗಿರುವ ; ಆಯುಧಸಹಿತವಾದ : ಸರಮನೆಯ ಸುತ್ತಲೂ ಶಸ್ತ್ರಸಜ್ಜಿತ ಪೋಲೀಸಿನವರ ಕಾವಲಿತ್ತು (ಪಂಜಪಂ. ೧೯೫). [ಸಂ.]

ಶಸ್ತ್ರಸನ್ಯಾಸ (ನಾ). = ಶಸ್ತ್ರಚ್ಯುತಿ : ದ್ರೋಣನಿಂದ ಶಸ್ತ್ರಸನ್ಯಾಸ ಮಾಡಿಸುವ ಉಪಾಯವನ್ನು ಅವನು ಯೋಚಿಸುತ್ತಾನೆ (ಭಾರದ. ೧೦೨). [< ಶಸ್ತ್ರಸಂನ್ಯಾಸ]

ಶಸ್ತ್ರಾಗಾರ (ನಾ). = ಶಸ್ತ್ರಶಾಲೆ : ಚಿತಗಾಂಗ್ ಶಸ್ತ್ರಾಗಾರದ ಮೇಲಿನ ಧಾಳಿ ಬ್ರಿಟಿಷ್‌ಸರ್ಕಾರವನ್ನು ನಡುಗಿಸಿತು (ಆತ್ಮಾಪ್ರ. ೧೫೩). [ಸಂ.]

ಶಸ್ತ್ರಾಗ್ನಿ (ನಾ). ಆಯುಧದಿಂದ ಹೊಮ್ಮುವ ಬೆಂಕಿ, — ಉರಿ : ಶಸ್ತ್ರಾಗ್ನಿಯಿಂ ತೀವ್ರಕೋಪದಿನುದ್ಯತ್ತ ಬಳಾಢ್ಯಿಯಂ ಸುಡೆ (ಪಂಪಭಾ. ೧೨-೬೫). [ಸಂ.]

ಶಸ್ತ್ರಾಘಾತ (ನಾ). ಆಯುಧದ ಪೆಟ್ಟು , — ಹೊಡೆತ: ಜಲಜಾತಪ್ರಿಯನೆಂಬಲೊಳ್ ನಿಲೆ ಮನುಷ್ಯಂ ಕಚ್ಚನಿಂ . . . ಮಹಿಜಾತನಲ್ಲಿ ನಿಲೆ ಶಸ್ತ್ರಾಘಾತದಿಂ . . . ಆರ್ಕಜಂ ನಿಲೆ ಮಹಾಕ್ಷುಧ್ಯಾಧಿಯಿಂ ಪೊಂದುಗುಂ (ಚಾತಕ. ೨೭-೨). [ಸಂ.]

ಶಸ್ತ್ರಾಜೀವ (ನಾ). ಯೋಧ; ಸೈನಿಕ: "ಶಸ್ತ್ರಾಜೀವಃ, ಕಾಂಡಪೃಷ್ಠಃ — ೫ ಕೆಯ್ವುವಿಡಿವವಂ" (ಪಲಾಯು. ೬೭-೨೫೧). [ಸಂ.]

ಶಸ್ತ್ರಾಭ್ಯಾಸ (ನಾ). ಆಯುಧಗಳ ಪ್ರಯೋಗವನ್ನು ಕುರಿತ ವ್ಯಾಸಂಗ,—ಕಲಿಕೆ: ಇಂತು ಶಸ್ತ್ರಾಭ್ಯಾಸಮಾಗಲ್ಕೆ (ನಂಬರ. ೩-೪೩); ಪಡುರಸದೂಟ ಕರ್ಣನ ಕೂಡೆ ಶಸ್ತ್ರಾಭ್ಯಾಸವವ ಕೂಡೆ . . . ತಾವಿಬ್ಬರೊಂದೆನಿಸಿದರು ಜಗವಱಿಯೆ (ಕುವ್ಯಾಆ. ೬-೪೪). [ಸಂ.]

ಶಸ್ತ್ರಾಶಸ್ತ್ರಿ (ನಾ). ಆಯುಧಗಳಿಂದ ನಡೆಸುವ ಯುದ್ಧ : ಜಟ್ಟಿಗರೊಳ್ ಶಸ್ತ್ರಾಶಸ್ತ್ರಿಯುಂ ಖಡ್ಗಾಖಡ್ಗಿಯುಂ ದಂಡಾದಂಡಿಯಂ ಕಚಾಕಚಿಯುಮಾಗಿ (ಅನಂಪು. ೧೧-೮೩ ವ). [ಸಂ.]

ಶಸ್ತ್ರಿ (ನಾ). ಚೂರಿ ; ಚಾಕು : "ಶಸ್ತ್ರೀ, ಅಸಿಪುತ್ರಿ, ಛುರಿಕಾ, ಅಸಿಧೇನುಕಾ — ೪ ಸುರಿಯಕತ್ತಿ, ಸೂರುಕತ್ತಿ, ಚೂರಿ" (ಸಿದ್ಧಾಂತಿ. ೨೬೬). [ಸಂ. ಶಸ್ತ್ರೀ]

ಶಸ್ತ್ರಿಕೆ (ನಾ). = ಶಸ್ತ್ರಿ : "ತಿಳಿಯೆ ಶಸ್ತ್ರಿಕೆ ಪತ್ರಮಸಿಧೇನುವೆಂದೆನಲ್ಕೆಲೆ ಸುರಗಿಯಕ್ಕು" (ಮಂಗರಾ. ೮೮-೩೭). [ಸಂ. ಶಸ್ತ್ರಿಕಾ]

ಶಸ್ತ್ರೋಪಜೀವನ (ನಾ). ೧. (ಯುದ್ಧದಲ್ಲಿ) ಆಯುಧಪ್ರಯೋಗ ಮಾಡುವುದರಿಂದ ಉಪಜೀವನ ನಡೆಸುವುದು : ಪಾತಕವಲಾ ದ್ರೋಣ ನಿನಗೀ ಭೂತಹಿಂಸೆಯದೇಕೆ . . . ಶಸ್ತ್ರೋಪಜೀವನವೇತಕೆಮ ನಿನಗೆ (ಕುವಾದ್ರೋ. ೧೮-೨೩). ೨. ಶಸ್ತ್ರವೃತ್ತಿಯನ್ನು ಅವಲಂಬಿಸಿ ಉಪಜೀವನ ನಡೆಸುವವನು : ಶಸ್ತ್ರೋಪಜೀವನನಿವನು ಋಷಿಯೇ (ಕುವಾದ್ರೋ. ೧೯-೨೩). [ಸಂ.]

ಶಸ್ಯ (ಗು). ೧. ಹೇಳಿದ : (೫). ೨. ಹೊಗಳಲು ಅರ್ಹವಾದ. ೩. ಉತ್ತಮವಾದ. ೪. ಕತ್ತರಿಸಲ್ಪಟ್ಟ. ೫. ಕೊಲ್ಲಲ್ಪಟ್ಟ. (ನಾ). ೬. ಕಣದಲ್ಲಿರುವ ಕಾಳು, – ಧಾನ್ಯ. ೭. ಸಸ್ಯಗಳಿಂದ ಬರುವ ಉತ್ಪತ್ತಿ : (೫). [ಸಂ.]

ಶಹ, ಶಹಾ, ಷಹ, ಷಹಾ (ನಾ). ೧. ಚದುರಂಗದಾಟದಲ್ಲಿ ಪ್ರತಿಪಕ್ಷದ ರಾಜನಿಗೆ ಜಾಗ ಬಿಡಲು ವಿಧಿಸುವಂತೆ ಕಾಯಿ ಇಡುವುದು : ಇದು ಪಾರ್ಥನ ವೀರತ್ಯಕ್ಕೆ ಚದುರಂಗದಾಟದೊಳಗಿನ ಕೊನೆಯ ಶಹ – ಬೇರೆಮಾತೇ ಅಲ್ಲವೇ? (ಜಯಭಾ. ೭ ಪ್ರಸ್ತಾವನೆ). ೨. (ಆಲಂ) ನೇರವಾಗಿ ಒಡ್ಡುವ ಅಡ್ಡಿ, – ಆತಂಕ : ಶಿವಾಜಿಯು ನಮಗೆ ನಿಜವಾಗಿಯೇ ಶಹ ಕೊಡಬೇಕೆಂದು ಮಾಡಿರಬಹುದು. ಈ ಪ್ರಸಂಗದಲ್ಲಿ ನಾವು ಶಹಕ್ಕೆ ಕಾಡಶಹವನ್ನು ಕೊಡಲೇಬೇಕು (ಭತ್ರಪ. ೧೯೯). **ಶಹಾ** : ೧. ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ . . . ಶಬ್ದಗಳೆಂದರೆ . . . ಬಂದೋಬಸ್ತು, ಬಂಗಲಾ, ಶಹಾ (ಭಾಜಾಶಾ. ೧೭೬). ೩. ದೊರೆ ; ರಾಜ : (೫). **ಷಹ**: ೧. ದೂರಗ ಷಹ ಕೊಟ್ಟರೆ ಆ ಪ್ಯಾದೆಗ ದೇವರೇ ಗತಿ (ಡುಂಢಿ. ೪). **ಷಹಾ** : ೧. ಸುಲ್ತಾನನಿಗ ಇನ್ನೊಂದು 'ಷಹಾ' ಕೊಡುತ್ತೇನೆ (ಡೌಲ್ತ. ೭೮).

[← ಪಾರ. ಶಾಹ್; ಹಿಂ. ಮರಾ. ಶಹ್]

ಶಹಣೆ, ಶಹಣ್ಯಾ, ಶಹಾಣೆ, ಶಾಣ್ಯ, ಶಾಣೆ, ಶಾಣೆಯ, ಶಾಣ್ಯಾ, ಶಾಹಣೆ, ಶ್ಯಾಣ, ಶ್ಯಾಣ್ಯಾ (ನಾ). ೧. ಜಾಣ; ಬುದ್ಧಿವಂತ : ಶಾಮರಾವ್ ಬಲು ಶಹಣೆ. ಹೇಳಿದ್ದನ್ನು ಗ್ರಹಿಸಿದ್ದಾನೆ ಅಂತ ಧೈರ್ಯ (ಮನೋಸಂ. ೮೦) ; ಬಲರಾಮನ ಜನಕರು ತಮ್ಮ ಪುತ್ರರುಗಳು ಬಹಳ ಶಹಣೆಯರು ಎಂದೇ ಹೇಳುವರು (ಮಮಪ. ೩೬). **ಶಹಣ್ಯಾ** : (ಗು). ೨. ಜಾಣತನದಿಂದ ಕೂಡಿದ; ಚಾಲೂಕಿನ : ಶಹಣ್ಯಾ ಮಕ್ಕಳು ತನ್ನವು! (ಬಸಿ. ೧೩೦). **ಶಹಾಣೆ** : ೧. "ಶಹಾಣೆ (ಶಾಣೆ) – ಬುದ್ಧಿವಂತ; ವಿಚಾರವಂತ" (ಜಾನಕೋ. ೪೫). **ಶಾಣ** $_3$: ೧. ಒಳ್ಳೇ ಶಾಣಾ ಇದಾನವನು (ಕೂಪಸ. ೧೦೨). **ಶಾಣೆ** : ೧. ವಾರೆ. ಶಾಣೆ ಇದ್ರಿ ನೀನು (ಬಡುಜ. ೨). **ಶಾಣೆಯ** : ೧. 'ಶಾಣೆಯತನ' ಪರಾ. **ಶಾಣ್ಯಾ**: ೧. ದೇವರಿದ್ದಾನ, ನಮ್ಮ ಗಣಪತಿ ಕಲಿತು ಶಾಣ್ಯಾ ಆದರ ಸಾಕು (ಜೀವರಂ. ೩೮). **ಶಾಹಣೆ** : ೧. ತಾ ಶಾಹಣೆ ಅಂಬೂ ಸೂಕ್ಮ ಬಹಳ ಅವಗ (ತ್ರಿರಂಗ. ೪). **ಶ್ಯಾಣ** : ೨. ದೋಸ್ತಿಮಾರ್ಗದಿಂದ ನಮ್ಮ ಕಡೆ ವಚ್ಚ ಶ್ಯಾಣಗ್ಯಹಸ್ಪಗೆ ಕಳುಹಿಸಿ (ರಾಚಂದ್ರ. ೯೫). **ಶ್ಯಾಣ್ಯಾ**: ೧. ಕಲಿತು ಚಲೋ ಶ್ಯಾಣ್ಯಾ ಆಗಿದ್ದೀ (ನಾಪೋಲೀ. ೧೩); ಏನ್ ತಿಳೀತೈತಿ ಅದರಾಗಲ್ಲಾ ನಿನಗ? ಭಾಳ ಶ್ಯಾಣ್ಯಾ ಅಂತ ತಿಳಕೊಂಡಿಯೇನು? (ಹೂಸಂಪಾ. ೨೫೫). [← ಮರಾ. ಶಹಾಣಾ]

ಶಹಣ್ಯಾ 'ಶಹಣೆ' ನೋ.

ಶಹನ (ನಾ). [ಸಂಗೀತ] ಒಂದು ರಾಗದ ಹೆಸರು : ಶಹನ :– ೨೮ನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ . . . ಕರುಣಾರಸಪ್ರಧಾನರಾಗ (ಸಂಗೀಚಂ. ೧೫೯).

[ಸಂ. ಶಹನಾ]

ಶಹನಾಯ್ 'ಶಹನಾಯಿ' ನೋ.

ಶಹನಾಯಿ, ಶಹನಾಯ್ (ನಾ). ನಾದಸ್ವರದಂತಹ ಒಂದು ಬಗೆಯ ಊದುವ ವಾದ್ಯ : ಹೊಕ್ಕಳ ಹುರಿಯ ಕತ್ತರಿಸಿ ಮುಗಿಯೆ ಶಹನಾಯಿ ಆಗಸದ ಚಿಪ್ಪೊಡೆದು ಜೀವ ತರೆಯಿತು ಬಾಯಿ (ನಲಮಾ. ೭೨-೧೩) ; ಇವರಲ್ಲಿದ್ದ ಶಹನಾಯಿ ಎಂಬ ಚಿಕ್ಕ ಓಲಗವನ್ನು ನುಡಿಸುವವನ ವಾದ್ಯದಲ್ಲಿ ಬಹಳ ಕಡಿಮೆ ದ್ರವ್ಯ ಹಿಡಿಸುತ್ತಿದ್ದಿತು (ಭೂರಾಣಿ. ೬೮). **ಶಹನಾಯ್** : ಡೋಲು, ಶಹನಾಯ್, ತಾಳಗಳು ಸೂಕ್ತ ಹಿಮ್ಮೇಳ ಒದಗಿಸುತ್ತವೆ (ಭಾರಜಾ. ೧೦೯). [← ಪಾರ. ಹಿಂ. ಶಹನಾಈ]

ಶಹಬಾಸ್, ಶಬಾಸ್, ಶಬಾಸು, ಶಹಬಾಸು, ಶಹಭಾಸ್, ಶಾಬಾಸ್, ಶಾಭಾಸ್, ಶಾಭಾಸು, ಶಾಹಬಾಸು (ನಾ). ಲೇಸು, ಸರಿ, ಒಳ್ಳೆಯದು ಎಂಬ ಅರ್ಥವನ್ನೊಳಗೊಂಡ ಒಂದು ಕೊಂಡಾಟದ ಮಾತು: ಶತ್ರುವಿಗ ಬೆನ್ನು ತೋರಲಿಲ್ಲ ಶಹಬಾಸ್ (ಆರ್ಯಕ. ೬೯). **ಶಬಾಸ್** : ಅತ್ಯಯನ್ನು ಈಗಲೂ ಹೊತೆಯುತ್ತಿರುವ ಮಾವನಾದರೆ, ಅಳಿಯನ 'ವೀರತನಕ್ಕೆ' ಸೈಯೆಂದು ಶಬಾಸ್ ಸಹ ಕೊಡುತ್ತಾನೆ (ಹುಚ್ಚುಪು. ೧೨) ; ನಮ್ಮ ಭಾಷೆಯಲ್ಲಿ . . . ಅನ್ಯದೇಶೀಯವೆಂದು ಗುರುತಿಸಲಾಗದ ಶಬ್ದಗಳೆಂದರೆ ಕಚೇರಿ . . . ಶಬಾಸ್ (ಭಾಜಾಶಾ. ೧೭೬). **ಶಬಾಸು** : ಸುರರಿಗಲಗಣಸಾದರನು ಸಂಹರಿಸಿ ಸುರಪತಿಯಿಂ ಶಬಾಸನು ಹರುಷಮುಖದಿಂ ಪಡೆದು (ಕೋಗಯ. ೮-೮). **ಶಹಬಾಸು** : "ಶಹಬಾಸು ವಾಹ್ವಾ, ಭವ್ಯರೆ (ಶಹಬಾಸುಗಿರಿ ಹೊಗಳಿಕೆ)" (ಜಾನಕೋ. ೪೫). **ಶಹಭಾಸ್** : ಬಾಲಗುರುಗಳು ಅವನಿಗೆ 'ಶಹಭಾಸ್' ಎನ್ನುತ್ತಾರೆ (ಭೂರಾಣಿ. ೧೭). **ಶಾಬಾಸ್** : ಈ ಸುದ್ಧಿಯ ದೂತರು ಖಾನಗಱುಹೆ ಶಾಬಾಸೆಂದು . . . ಪೊಗಳಿದನು (ಕಂನಮ. ೧೬-೪೯) ; ಸಕಲಋಷಿಸಮೂಹಂಗಳೂ ದುಷ್ಕರವಾದ ಭೀಷ್ಮನ ಪ್ರತಿಜ್ಞೆಯನ್ನು 'ಶಾಬಾಸ್' ಎಂದು ಸ್ತುತಿಸಿ (ಕ್ಷವಾಅ. ೧೮೭). **ಶಾಭಾಸ್** : 'ಶಾಭಾಸ್‌ಗಿರಿ' ಪರಾ. **ಶಾಭಾಸು** : ದೊಡ್ಡಸರಕಾರಕ್ಕೆ ಬೇಕಾದ ಉಪಕಾರ ಮಾಡಿ ಶಾಭಾಸು ತೆಗೆದುಕೊಳ್ಳುವಂಥಾದ್ದಕ್ಕೆ . . . ಕ್ಷಾಣವಿಲ್ಲಾ (ರಾಜೇಂದ್ರ. ೧೮೯). **ಶಾಹಬಾಸು** : 'ಶಾಹಬಾಸುಗಿರಿ' ಪರಾ.

[← ಪಾರ. ಹಿಂ. ಶಾಬಾಶ್ ; ಮರಾ. ಶಾಬಾಸ್]

ಶಹಬಾಸು 'ಶಹಬಾಸ್' ನೋ.

ಶಹಬಾಸುಗಿರಿ, ಶಹಭಾಸ್‌ಗಿರಿ, ಶಾಬಾಸ್‌ಗಿರಿ, ಶಾಭಾಸ್‌ಗಿರಿ, ಶಾಹಬಾಸುಗಿರಿ (ನಾ). ಹೊಗಳಿಕೆ ; ಪ್ರಶಂಸೆ ; ಮೆಚ್ಚುಗೆ : ಪಾಠಕನು ಅನುಗ್ರಹಬುದ್ಧಿಯಿಂದ ಓದುತ್ತ ಸ್ವಲ್ಪ ಚೆನ್ನಾಗಿ ಬರೆದರೂ ಶಹಬಾಸುಗಿರಿ ಪಡೆಯುತ್ತ . . . ತಾನು ನಿಯಮವ್ರತನಿರತನಾಗುವುದು ಮಹಾಸತ್ಯಶಾಲಿಗೇ ಸಾಧ್ಯ (ಬಂಕಿಮ. XXI. ಕವಿಕಾಸಗಳ). **ಶಹಭಾಸ್‌ಗಿರಿ** : ಸುಬ್ಬಪೂಜಾರಿ, ಮಕ್ಕಳಂತೆ ಸಾಕಿ, ಬೆಳೆಸಿದ ತರಕಾರಿ ಧಾನ್ಯಗಳನ್ನು ಇಟ್ಟು ಗುರಿಕಾರನು ಶಹಭಾಸ್‌ಗಿರಿಯನ್ನು ಕಲಕ್ಕರಿಂದ ಪಡೆದಿದ್ದಾನೆ (ಚಾಉಬ. ೨೫). **ಶಾಬಾಸ್‌ಗಿರಿ** : ಅವನ ಕಾರ್ಯದಕ್ಷತೆಗೆ ಮೆಚ್ಚಿ ಅಧಿಕಾರಿಯು ಶಾಬಾಸ್‌ಗಿರಿಯನ್ನು ಕೊಟ್ಟರು (ರೂಫಿ). **ಶಾಭಾಸ್‌ಗಿರಿ** : ಸಾಚಾಸಮು ಅನ್ನಿಸಿ ಶಾಭಾಸ್‌ಗಿರಿ ಪಡೆದಿದ್ದೆ (ಚಿಂಗೂಲಿ. ೮೩). **ಶಾಹಬಾಸುಗಿರಿ** : ಇಂಗ್ಲಿಷರ ರಾಷ್ಟ್ರೀಯ ಚಿತ್ರದ ಸ್ವರದೊಡನೆ ದನಿಗೂಡಿಸಿ ಅವರು ಬಹುಮಾನ ಶಾಹಬಾಸುಗಿರಿಗಳನ್ನು ಪಡೆದರೇ? (ನಿಬಂಧ. II. ೨೯೭).

[ಶಹಬಾಸು (< ಶಹಬಾಸ್) + – ಗಿರಿ$_2$]

ಶಹಭಾಸ್ 'ಶಹಬಾಸ್' ನೋ.

ಶಹಭಾಸ್‌ಗಿರಿ 'ಶಹಬಾಸುಗಿರಿ' ನೋ.

ಶಹರ 'ಶಹರು' ನೋ.

ಶಹರು, ಶಹರ, ಷಹರ, ಷಹರು (ನಾ). ನಗರ; ಪಟ್ಟಣ : ಲೋಹ - ಪಾಷಾಣ ನಿರ್ಮಿತ ಶಹರುಗಳ ನಿಶಿತದೀಪ್ತಿ (ಸಪ್ತಧ. ೨-೧೭); ಗಂಗಾಧರರಾಯನು ಶಹರಿನ ಅರಮನೆಯಲ್ಲಿದ್ದನು (ಭೂರಾಣಿ. ೬). **ಶಹರ** : ಅದು ನೈಸರ್ಗಿಕಸಂಪತ್ತಿನಿಂದ ಕೂಡಿದ ನಾಡು. ಶಹರ ಪಟ್ಟಣಗಳಿಂದ ಅತಿ ದೂರ (ಪಂಚಾಂತ. ೧) ; ಶಹರಗಳಲ್ಲಿ ಗಿರಣಿ ಕಾರಖಾನೆಗಳಲ್ಲಿ . . . ದುಡಿದು ದುಃಖಪಡುವ ಅಸಂಖ್ಯ ಕೆಲಸಗಾರರೆಲ್ಲರೂ ಒಂದೇ ಬಗೆಯ ದೈನ್ಯದ ದಡ್ಡಿಯಲ್ಲಿ ಕಟ್ಟಿದ ಜೀವಿಗಳು (ಪ್ರವಾದ. ೧೪೯). **ಷಹರ** : ಮುಂಬಯಿ ಷಹರದಲ್ಲಿ ಅನೇಕ ಪ್ರಕಾರದ ವ್ಯಾಪಾರಗಳು ನಡಿಯುತ್ತವೆ (ಮುಂಬವ್ಯಾ. ೧೨. ಪ್ರಸ್ತಾವನೆ). **ಷಹರು** : ಪುನಹ ಷಹರು ಕಸಬೆ ಸೋಮವಾರದ ಪೇಟೆ (ಎಕ. IX. ಬೆಂಗಳೂ. ೩-೩; 1855); ಬೆಂಗಳೂರುಷಹರು ಮತ್ತು ಲಷ್ಕರುಗಳಲ್ಲಿಯೂ ಮೈಸೂರುರಾಜಧಾನಿಯಲ್ಲಿಯೂ ಮುನಿಸಿಪಾಲಿಟಿಗಳನ್ನೇರ್ಪಡಿಸಿದರು (ಮಹಾಪಂ. II. ೧೧೨).

[← ಪಾರ. ಹಿಂ. ಮರಾ. ಶಹರ್]

ಶಹಾ 'ಶಹ' ನೋ.

ಶಹಾಣೆ 'ಶಹಣೆ' ನೋ.

ಶಹಾನಿಶಿ (ನಾ). ಕೊನೆಯ ನಿರ್ಣಯ ; ಆಖೈರು ತೀರ್ಮಾನ : ಎಡಕಿನ ಮನಿ ರಾಮರಾಯನರ್ದೂ ಕರಸ್ರಿ, ಬಲಕಿನ ಮನಿ ಶ್ಯಾಮರಾಯನರ್ದೂ ಕರಸ್ರಿ. ಆಗೇ ಹೋಗ್ಲಿ, ಶಹಾನಿಶಿ (ಹೂಸಂಪಾ. ೧೧೩). [← ಮರಾ. ಶಹನಿಶಹ್, ಶಹಾನಿಶಾ]

ಶಹಾಪುರಿ (ನಾ). ಶಹಾಪುರ ಎಂಬ ಊರಿನ ಟಂಕಸಾಲೆಯಲ್ಲಿ ಮುದ್ರಿತವಾದ ನಾಣ್ಯ : ಬ್ರಿಟಿಶ ಸರಕಾರದ ಅಮಲು ಆದ ಬಳಿಕ . . . ಹದಿನಾರು ಪ್ರಕಾರದ ರೂಪಾಯಿಗಳು ನಡಿಯುತ್ತಿದ್ದವು. ಅವು — ಔರಂಗಾಬಾದಿ, ೨. ಬಾಗಲಕೋಟ ಅಥವಾ ಮಲ್ಹಾರಶಾಹಿ, ೩ ಅಂಕುಶೀ, ೪. ಹಲ್ಲಿಶಿಕ್ಕಾ, ೫. ಶಾಹಪುರೀ, ೬. ಕಿತ್ತೂರ ಶಹಾಪುರೀ . . . ೧೬ ಪೀರಖಾನಿ (ಕಭಾಗ. ೨೮೧).

[← ಮರಾ. ಶಹಾಪುರೀ = ಶಹಾಪುರವೆಂಬ ಗ್ರಾಮಕ್ಕೆ ಸಂಬಂಧಿಸಿದ]

ಶಹಾಮೃಗ (ನಾ). ೧. ಹದ್ದಿನ ತಲೆ, ರೆಕ್ಕೆಗಳು ಮತ್ತು ಸಿಂಹದ ಶರೀರವೂ ಉಳ್ಳುದೆಂದು ನಂಬಲಾದ ಗ್ರೀಕರ ಒಂದು ಪೌರಾಣಿಕ ಪ್ರಾಣಿ : (ಕಿ). ೨. ಆಫ್ರಿಕಾ ಮತ್ತು ಅರೇಬಿಯಾದಲ್ಲಿ ಹೆಚ್ಚಾಗಿ ವಾಸಿಸುವ ಒಂದು ಬಗೆಯ ಪಕ್ಷಿ : ಉಷ್ಟ್ರ : ಏಶಿಯ, ಆಫ್ರಿಕಖಂಡಗಳೊಳಗಿನ ವಿಸ್ತೀರ್ಣ ಮರುಪ್ರದೇಶಗಳೇ ಶಹಾಮೃಗದ ಮೂಲಸ್ಥಾನವು (ಮುಂಬಯಿ. ೪ ೧೮೭); ಏಳೆಂಟು ರೂಪಾಯಿಗೆ ಶಹಾಮೃಗದ ಪುಚ್ಛದ ಹ್ಯಾಟು ಕೊಂಡು, ಹಳೆಯದಾದಾಗ ಮಾರಿದರೆ ಒಂದು ಬಿಲ್ಲಿ ಕೂಡ ಬರುವದಿಲ್ಲ (ಗೋಯಾತ್ರ. ೩೩). [← ಪಾರ. ಶಾಹೇಮೃಗ ; ಮರಾ. ಶಹಾಮೃಗ]

ಶಹಾವಲಿ (ನಾ). ಒಂದು ಬಗೆಯ ಸಸ್ಯ ; ಶತಾವರಿ : ಶೀಬಾರಿಬೇರು, ಶಹಾವಲಿ, ಆಪಾಢಿಬೇರು, ಆಹೇರು ಮಜ್ಜಿಗೆಗೆಡ್ಡೆ (ಮೃಔಗಿ. ೧೦-೧೬೮). [?]

ಶಳ 'ಶಲ' ನೋ.

ಶಳಲು (ಕ್ರಿ).(?) : ಒಮ್ಮೆಯಳಲುವರೊಮ್ಮೆ ಬಳಲುವರೊಮ್ಮೆ ತೊಳಲುವರೊಮ್ಮೆ ಶಳಲುವರೊಮ್ಮೆ ಮೂರ್ಛಿಪರೊಮ್ಮೆ ಚೇತರಿಸೊಮ್ಮೆ ಪೊರಳುವರು (ತಿಮ್ಮಸ್ತ್ರೀ. ೩-೧೭). [?]

ಶಾಂಕರಿ (ನಾ). ಶಂಕರನ ಪತ್ನಿ ; ಪಾರ್ವತಿ : ಶಾಂಕರಿಗೆಸೆದುದು ಮುಂದಲೆ ಯೊಳಗರಳೆಲೆ ಬಹುರತ್ನನೂತ್ನ ಕಾಂತಿಗಳಿಂದಂ (ಗಿರಿಕ. ೩-೮೧). [< ಸಂ. ಶಂಕರೀ]

ಶಾಂಖಿಕ (ನಾ). ಶಂಖದಿಂದ ಒಡವೆಗಳನ್ನು ಮಾಡುವವನು : "ಶಾಂಖಿಕಃ, ಕಾಂಬವಿಕಃ — ೨ ಶಂಖದಿಂದ ಕೈಬಳೇ ಮೊದಲಾದ್ದನ್ನು ಮಾಡಿ ಮಾರುವವನ ಪೆಸರು" (ಸಿದ್ಧಾಂತಿ. ೩೧೦). [ಸಂ.]

ಶಾಂಡಿಲ್ಯ (ನಾ). ೧. ಒಂದು ಬಗೆಯ ಮರ ; ಬಿಲ್ವಪತ್ರೆಯ ಮರ : "ಬಿಲ್ವಃ, ಶಾಂಡಿಲ್ಯಃ , ಶೈಲೂಷಃ, ಮಾಲೂರಃ, ಶ್ರೀಫಲಃ — ೫ ಬೆಲ್ಲವತ್ತದ ಮರ, ಬಿಲ್ವವೃಕ್ಷ" (ಸಿದ್ಧಾಂತಿ. ೧೧೯). ೨. ಒಬ್ಬ ಮಹರ್ಷಿಯ ಹೆಸರು: ಶಾಂಡಿಲ್ಯನೆಂಬ ಮುನಿಯೊರ್ವನತ್ಯಂತಪಾಷಂಡಮತಮಂ ಹರಿಸದಿಂ ನೆಗಳ್ಚಿ (ಆರಾಚ. ೩-೮-೯). [ಸಂ.]

ಶಾಂತ (ಗು). ೧. ಉಪಶಮನಗೊಂಡ; ಸಮಾಧಾನ ಹೊಂದಿದ. ೨. ತಳಮಳವಿಲ್ಲದ ; ಕ್ಷೋಭೆಯಿಲ್ಲದ : ಚಿದ್ರಾಮಾವರಕಾಂತ ಶಾಂತಶಿವನಂ ಸೋಮಾಭಿರಾಮಾಂಗನಂ ಹೃದ್ರಾಜೀವದೊಳಿಟ್ಟು ನಾಡೆ ನೆನದಂ ಮುದ್ರಾಜನುರ್ವೀಶ್ವರಂ (ಹಮ್ಮೀರ. ೨-೭) ; ಶಾಂತಗಾಂಭೀರ್ಯದಲಿ, ಭದ್ರರೂಪದಲಿ, ತನುಕಾಂತಿಯಲಿ ಮೆರೆದನಾ ಶ್ರೀರಾಮಚಂದ್ರನಂಬರಮಹಾಮಂಡಲಮೆ ಮೂರ್ತಿವೆತ್ತಂತೆ (ಶ್ರೀರಾಮಾ. ೨೬-೬೮೧). ೩. ಅಂತ್ಯವಾದ; ಕೊನೆಗೊಂಡ. ೪. (ದೀಪ ಮೊದಲಾದುವುಗಳ ವಿಚಾರದಲ್ಲಿ) ನಂದಿದ ; ಆರಿದ. ೫. ಮೃದುವಾದ ; ಕೋಮಲವಾದ. ೬. ಸಾಧುವಾದ; ಸಭ್ಯ. ೭. ವಾಸಿಯಾದ; ಗುಣವಾದ. ೮. ತಡೆಯಲ್ಪಟ್ಟ; ನಿಲ್ಲಿಸಲ್ಪಟ್ಟ. ೯. ಸತ್ತ; ಗತಿಸಿದ. ೧೦. ನಿಶ್ಶಬ್ದವಾದ; ಸದ್ದಿಲ್ಲದ. (ನಾ). ೧೧. ಪಂಚೇಂದ್ರಿಯಗಳನ್ನು ಗೆದ್ದವನು; ಜಿತೇಂದ್ರಿಯ: ಬಲುಮೊಲೆಯ ಸೋಂಕಿನಲಿ ಶಾಂತರ ತಲೆಕೆಳಕ ಮಾಡುವೆವು (ಕುಮ್ಮಾಅ. ೧೮-೧೪). ೧೨. ಪಶ್ಚಿಮ ದಿಕ್ಕು; ಪಡುವಲು: ಮರಸರ್ಪಂ . . . ಶಾಂತದೊಳ್ ತೋರ್ಪೊಡೆ ನೃಪತಿ ಜಯಂ (ಲೋಕೋಪ. ೪-೪೦). ೧೩. [ಕಾವ್ಯಮೀ] ನವರಸಗಳಲ್ಲಿ ಒಂದು : ವೀರಾದ್ಭುತ ಕರುಣಾ ಶೃಂಗಾರಭಯಾನಕರೌದ್ರ ಬೀಭತ್ಸಮಹಾಸಾರತರ ಹಾಸ್ಯಶಾಂತಾಧಾರಂ ನವವಿಧವಿಕಲ್ಪಮಾ ರಸಮಾರ್ಗಂ (ಕವಿರಾ. ೩-೧೮೮); ಸಮಭಾವ ಪ್ರಭವಂ ಶಾಂತಮಕ್ಕುಮಂತಾ ಸಮತ್ವಮುಂ ವರ್ತಿಸುಗುಂ ಸಮನಿಸಿ ಸಮ್ಯಗ್ಜ್ಞಾನಂ ತಮಮಂ ರಾಗಮುಮನಲೆದು ತೊಲಗಿಸೆ ಮನದಿಂ (ಕಾವ್ಯಾವ. ೮೨೮). ೧೪. [ತತ್ತ್ವಶಾ] ಶಾಂತ, ಉದಿತ, ಮತ್ತು ಅವ್ಯಪದೇಶ್ಯ ಎಂಬ ಮೂರುಬಗೆಯ ಭಾವನೆಗಳಲ್ಲಿ ಒಂದು : ಶಾಂತ ಉದಿತ ಅವ್ಯಪದೇಶ್ಯಗಳೆಂಬ ಈ ಮೂರುವಿಧ ಭಾವನೆಗಳಿಗೆ ಫಲವಾಗಿ ಜ್ಯೋತಿಷ್ಮತೀ ಎಂಬುದು ನಾಲ್ಕನೆಯ ಸಿದ್ಧಿ. ಇದರಲ್ಲೇ ವಿವೇಕ ಸಾಕ್ಷಾತ್ಕಾರವು (ಹಿಂದಸಾ. ೧೦೮).

ಶಾಂತಂಪಾಪಂ = ಕೆಡಕು ಪರಿಹಾರವಾಗಲಿ, ಅಮಂಗಳವುಂಟಾಗದಿರಲಿ ಎಂಬ ಅರ್ಥದಲ್ಲಿ ಹೇಳುವ ಮಾತು : ಶಾಂತಂ ಪಾಪಂ, ಶಾಂತಂ ಪಾಪಂ, ಅಕ್ಕನಿಗೆ ಮಂಗಳವಾಗಲಿ . . . ಎಂತಹ ಭೀಕರವಾದ ಮಾತನ್ನಾಡಿದೆ! (ಶಾಂತಲಾ. ೬೭). [ಸಂ.]

ಶಾಂತಕಲ್ಯಾಣಿ (ನಾ). [ಸಂಗೀತ] ಒಂದು ರಾಗದ ಹೆಸರು: ಶಾಂತಕಲ್ಯಾಣಿ ರಾಗವು ಯಾವಾಗಲೂ ಹಾಡುವಂತಹದು (ಚಿತುಪ್ರ. ೧೪೩). [ಸಂ. ಶಾಂತಕಲ್ಯಾಣೀ]

ಶಾಂತಗುಣ (ನಾ). ೧. ಸಮಾಧಾನವಾಗಿರುವ ಗುಣ ; ಸಮಚಿತ್ತ. ೨. ಸೌಮ್ಯಸ್ವಭಾವವುಳ್ಳವನು : ಶಾಂ [ಪಾಠಾಂ. ಕಾಂ] ತಗುಣನೆಟ್ಟು ಪೋಗಿ ಕರಂ ತಡೆದಂ ಸಚಿವನೇಕೆ ತಡೆದನದಲ್ಲಿರ್ಪಂ ತಿಳಿಪಿಮೆಂದೊಡೆ (ವಾರ್ಶ್ವವು. ೪-೮೪). [ಸಂ.]

ಶಾಂತತೆ (ನಾ). = ಶಾಂತಗುಣ ೧ : ಶಾಂತತೆಯನೆ ತಳೆದುಂ ರೂಪಿಂತಿದು ಕಾರ್ಗಾಲ ಮಿಂಚಿದನೆ ಕಣ್ ಕೋರೈಪಂತಿರೆ ಪೊಳೆಯುತ್ತಿರ್ದಪುದೆಂತಕ್ಕುಮೊ ತಪದ ಮಹಿಮ ಮುನಿಪುಂಗವನಾ (ಶಾದಂಪೂ. ೨೪೭); ಅಲರ್ವ ಮುಕ್ತಿಯದೆಲ್ಲಿಯದು ನಿಶ್ಚಲಿತ ಶಾಂತತೆ ಎಲ್ಲಿ ಹೊಕ್ಕಡೆ ತೊಲಗುವುದೆ ಸಕಳೇಶ ನೀ ಮಾಡಿದ ಮಹಾಮಾಯೆ (ಬಸಪು. ೨೦-೨೫).

[ಸಂ. ಶಾಂತತಾ]

ಶಾಂತಪ್ರಾಸ (ನಾ). [ಛಂದ] ಒಂದು ಬಗೆಯ ಪ್ರಾಸ; ಭಿನ್ನಸ್ವರಗಳೊಡನೆ ಸೇರಿದ ವಿಜಾತೀಯ ದ್ವಿತ್ವಪ್ರಾಸಾಕ್ಷರ : ಶಾಂತಪ್ರಾಸದ ಭೇದಮದಿಂತಕ್ಕುಂ ವರ್ಗದಕ್ಕರಂಗಳ್ ನಾಲ್ಕುಂ ಸಂತಮಿರೆ ಪೇಟ್ಟು ತಾಣದೊಳಂತಕ್ಕುಂ ಪ್ರಾಕ್ತನೋಕ್ತ ವರ್ಗಪ್ರಾಸಂ (ಕವಿರಾ. ೨-೩೭). [ಸಂ.]

ಶಾಂತಬಿಲಹರಿ (ನಾ). [ಸಂಗೀತ] ಒಂದು ರಾಗದ ಹೆಸರು : ವಸಂತಭೈರವಿ ಶಾಂತಬಿಲಹರಿ ನಾದರಾಮಕ್ರಿಯೆಯೆಂಬ ಮೂಱುಂ ರಾಮಕ್ರಿಯೆಯ ಮಿಶ್ರರಾಗಂಗಳು (ವಿವೇಕ. ೨೬೫). [ಸಂ. ಶಾಂತಬಿಲಹರೀ]

ಶಾಂತಮನ (ನಾ). ನೆಮ್ಮದಿಯಾದ ಮನಸ್ಸುಳ್ಳವನು ; ನಿರ್ವ್ಯಾಕುಲಚಿತ್ತ: ಬುಧಸಂತತಿಗಪ್ಪಂತು ಪೇಟ್ಟನಿದಂ ಶಾಂತಮನಂ ಕವಿತಾಗುಣೋದಯಂ (ಕಾವ್ಯಾವ. ೪೨೨).

[ಸಂ.]

ಶಾಂತಮಾನಸ (ನಾ). = ಶಾಂತಮನ : ಈ ನರೇಶ್ವರಂ . . . ಪ್ರಚೆಗಳಂ ನಿಜಪುತ್ರರ ಪೋಷಿಪಂದದಿಂ ನಡಸಿ ವಿವಿಕ್ತಮಾದೆಡೆಯ ಸೇವಿಸುವಂ ಸಲೆ ಶಾಂತಮಾನಸಂ (ಶಾಕುಂತ. ೬೨-೧೦೫). [ಸಂ.]

ಶಾಂತರಸ (ನಾ). [ಕಾವ್ಯಮೀ] ನವರಸಗಳಲ್ಲಿ ಒಂದು : ಕೇಸರಿಣೀಸ್ತನ್ಯ ಮನನ್ಯವನ್ಯಗಜಪೋತಾನೀಕಮುಂಡಾಡೆ ಶಾಂತರಸಂ ಪೊಂಪುಟಿವೋದುದಾ ಮುನಿಪನಿಂ ತತ್ಕಾಂತಕಾಂತಾರದೊಳ್ (ಆದಿಪು. ೯-೯೭); ಅಭಿನವಗುಪ್ತನ ಕಾಲಕ್ಕೆ . . . ಅವನು ಶಾಂತರಸವನ್ನು ಒಪ್ಪಿ ಅದಕ್ಕೆ ಅಗ್ರಸ್ಥಾನವನ್ನು ಕೊಟ್ಟನು (ಭಾರಮೀ. ೪೧೭).

[ಸಂ.]

ಶಾಂತಾಂತರಂಗ (ನಾ). = ಶಾಂತಮನ : ಹಿಮಚೂಳಂ ಕುರುಳ್ಪರಿಯೋಡಿದನಿತ್ತ ಶಾಂತಾಂತರಂಗಂಗೆ ಕನಕಶಾಂತಿಮುನಿಮುಖ್ಯಂಗೆ ಪೊಡೆವಟ್ಟು ಧರಣೀಂದ್ರಂ ಪೋಗೆ (ಶಾಂತಿಪು. ೯-೨೧ ವ). [ಸಂ.]

ಶಾಂತಾಂಶು (ನಾ). ಸೌಮ್ಯವಾದ ಕಿರಣಗಳುಳ್ಳವನು ; ಚಂದ್ರ : ವಾರಕಾಂತೆಯರು ಶಶಿಯ ತಮ್ಮಾಸ್ಯಕ್ಕೆ ಪೋಲಿಸುವರೆಂದು ಗಗನಕ್ಕೆ ನೆಗದು ಶಾಂತಾಂಶುವಿನ ನೋಡಿರಮಮೆಂದು ಮರಳಿ ಬರ್ಪಂತೆ . . . ಉಯ್ಯಲೆಯ ಜಡಿದೊದದು ತೂಗತಲಿರ್ದರಂಬರವ ಚುಂಬಿಪಂತೆ (ನವಮೋ. ೧೭-೩೬). [ಸಂ.]

ಶಾಂತಾಗಮ (ನಾ). [ಶೈವ] ಇಪ್ಪತ್ತೆಂಟು ದಿವ್ಯಾಗಮಗಳಲ್ಲಿ ಒಂದು : ಆ ಸಿದ್ಧಾಂತಭೇದಂಗಳಾವಾವವೆಂದೊಡೆ ಕಾಮಿಕಾಗಮ . . . ಶಾಂತಾಗಮ ಸರ್ವೋಕ್ತಾಗಮ ಪಾರಮೇಶ್ವರಾಗಮ ಕಿರಣಾಗಮ ವಾತೂಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ (ವಿವೇಕ. ೬೨). [ಸಂ.]

ಶಾಂತಾತ್ಮ (ನಾ). = ಶಾಂತಮನ : ಶಾಂತಾತ್ಮ ಮದುವೆನಲ್ ನೀ ನಿಂತೆನ್ನ ಗೃಹಸ್ಥಧರ್ಮದಿಂದಂ ನೀನೆಂತಂತೆ ಸಲೆ ನೆಗೞ್ ಜಗತೀಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ (ಆದಿಪು. ೪-೧೩) : ಶಾಂತಾತ್ಮಂಗಸದುದು ತಪಂ (ಚಂದ್ರಪ್ರ. ೧೧-೧೦): ಶಾಂತಾತ್ಮ ನಿನ್ನ ಸುತೆ ದುಷ್ಕಂತನ ಕೈವಿಡಿದು ಧರಿಸಿ ಗರ್ಭವನುರ್ವಿಸಂತೋಷಾರ್ಥಂ ಮರೆದಪಳ್ (ಶಾಕುಂತ. ೪೯-೮೨). [ಸಂ. ಶಾಂತಾತ್ಮನ್]

ಶಾಂತಿ (ನಾ). ೧. ನೆಮ್ಮದಿ ; ಚಿತ್ತಸ್ವಾಸ್ಥ್ಯ. ೨. ತಾಳ್ಮೆ ; ಸ್ಥೈರ್ಯ : ಶಾಂತಿಯೇ ಮನ ನಿಮ್ಮ ಚರಣದ ಚಿಂತೆಯೇ ಮನವಾರ್ತೆ (ಕಬ್ಬಾಅ. ೫-೧೯): ಶಾಂತಿಯಿಂ ಸುಖದುಃಖವುಭಯವನಿಂತು ಸ್ಪರಿಸುವುದ ತಿತಿಕ್ಷೆಯು (ಗಗಾತಾ. ೩ ೨೫). ೩. (ಭಾವೋದ್ರೇಕ ಮೊದಲಾದುವನ್ನು) ಉಪಶಮನ ಮಾಡುವುದು; ಸಮಾಧಾನಪಡಿಸುವುದು. ೪. ಅನಿಷ್ಟಪರಿಹಾರಕ್ಕಾಗಿ ಮಾಡುವ ಜಪ, ತಪ, ಹೋಮ ಮುಂತಾದ ವಿಧಿ : ಏನ ಮಾಡುವ ಎನ್ನ ಪುಣ್ಯದ ಫಲವು ಶಾಂತಿಯ ಮಾಡಹೋದರೆ ಕೂಡ ಬೇತಾಳನಾಯಿತ್ತು (ಬಸವ. ೫೨೬) : ತತ್ಸಮಯೋಚಿತಶಾಂತಿಯನುತ್ಸವದಿಂ ಮಾಡಿ ವಿವಿಧರಕ್ಷಾವಿಧಿಯಂ ವತ್ಸಂಗ ನೆಗೞ್ದು ಸಕಲಸುಹೃತ್ಸಂತತಿ ಪರಸೆ ನಂದನರ್ದಂ ಸುಖದಿಂ (ಜಗವಿ. ೩-೨೬) : ಆ ನುಡಿಗೆ ರಾಜಂ ನೊಂದು, ಮೇಣ್ ಶಾಂತಿಯೇನೆಂಬುದುಂ (ರಾಮಾಶ್ವ. ೬೬-೨೬). ೫. ಒಳ್ಳೆಯ ಅದೃಷ್ಟ ; ಸೌಭಾಗ್ಯ. ೬. ಕೋಮಲತೆ ; ಮೃದುತ್ವ : (೪). ೭. ವಿರಾಮ ; ವಿಶ್ರಾಂತಿ : (೪). ೮. ಮೌನ; ನೀರವತೆ : (೪). ೯. ಯುದ್ಧದ ಗಲಭೆಯಿಲ್ಲದ ಪರಿಸ್ಥಿತಿ : ಅಕ್ಕಪಕ್ಕದ ದೇಶಗಳು ಪಂಚಶೀಲವನ್ನು ಅನುಸರಿಸಿದರೆ ಶಾಂತಿ ಸಾಧ್ಯವಾಗುತ್ತದೆ (ಇಂಡಿ). ೧೦. (ಕರಾ) ದೇವಾಲಯದ ಅರ್ಚಕ, – ಪೂಜಾರಿ : ಅವರಿಗೆ ಮಲೆಯಾಳದ ತಿರುಚೂರಿನಲ್ಲಿ ಶಾಂತಿಯ ಕೆಲಸ (ಪೂಪ್ರಗು. ೧೨). ೧೧. [ಶೈವ] ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ ಮತ್ತು ಶಾಂತ್ಯತೀತ ಎಂಬ ಪರಶಿವನ ಐದು ಕಲೆಗಳಲ್ಲಿ ಒಂದು : ಷಡ್ಗುಣೈಶ್ವರ್ಯ ಸಂಪನ್ನನಾದ ಪರಮೇಶ್ವರನು ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ, ಶಾಂತ್ಯತೀತಗಳೆಂಬ ಐದು ಕಲೆಗಳಿಗಾಶ್ರಯವಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಮುಖಗಳಿಂದ . . . ಭಕ್ತಾನುಗ್ರಹ ಮಾಡುತ್ತಾನೆಂಬುದು ಶೈವಾಗಮದ ಸಿದ್ಧಾಂತ (ಭಾರದ. ೭೫). ೧೨. [ಜೈನ] ಇಪ್ಪತ್ತುನಾಲ್ಕು ಜನ ತೀರ್ಥಂಕರರಲ್ಲಿ ಹದಿನಾರನೆಯವನು : ತಜ್ಜಿನಚಕ್ರವರ್ತಿ ಜಿನನಾಥಂ ಪೊಡಶಂ ಧರ್ಮಚಕ್ರ ನಿಯುಕ್ತಂ ಭರತೋರ್ವಿಗಿಂತು ಸಲೆ ನೋಂತಂ ಶಾಂತಿತೀರ್ಥೇಶ್ವರಂ (ಶಾಂತಿಪು. ೧-೧೬): ವೃಷಭ ಅಜಿತ . . . ಶಾಂತಿ . . . ವರ್ಧಮಾನರೆಂಬಿಪ್ಪತ್ತುನಾಲ್ಕು ತೀರ್ಥಕರರ್ (ಚಾಪೂಪು. ೪೦೨). [ಸಂ.]

ಶಾಂತಿಕ (ನಾ). = ಶಾಂತಿ ೪ : ಶಾಂತಿಕ ಪೌಷ್ಟಿಕಕ್ರಿಯಾಕುಶಲನಂ ಧರ್ಮಕಾರ್ಯಾದಿ ಕುಶಲನುಮಪ್ಪ ಬುದ್ಧಿಸಾಗರನೆಂಬ ಪುರೋಹಿತರತ್ನಮುಂ (ಆದಿಪು. ೧೧-೩ ವ) ; ಷಟ್ಪದ ನಿಬದ್ಧರುಂಕಾರ್ಮಕಾಕ್ಷರವಿನ್ಯಮಂತ್ರದಿಂದಂ ವಿರಚಿಸಿದನೊ ಮನಸಿಜಂಗ ಮಧು ಶಾಂತಿಕಮಂ (ಮಲ್ಲಿಪು. ೪-೫) : ದಾನಂಗೊಟ್ಟಾ ದ್ವಿಜರಿಂ ಗೆಯ್ಯಿಸುಗೆ ಹೋಮಮಂ ಶಾಂತಿಕಮಂ (ಅಶ್ವಶಾ. ೪-೭೫). [ಸಂ.]

ಶಾಂತಿಕಕ್ರಿಯೆ (ನಾ). ಅನಿಷ್ಟಪರಿಹಾರಕ್ಕಾಗಿ ಮಾಡುವ ದಾನ, ಧ್ಯಾನ, ಪೂಜೆ, ಸಂತರ್ಪಣೆ ಮೊದಲಾದ ಕರ್ಮ : ಭಗವದರ್ಹದಭಿಷೇಕ ಮುನಿಪೂಜನ . . . ಸಂತರ್ಪಣಾದಿ ಶಾಂತಿಕಕ್ರಿಯೆಗಳಂ ನೆಗೞ್ದು (ಆದಿಪು. ೧೫-೪೪ ವ). [ಸಂ. ಶಾಂತಿಕಕ್ರಿಯಾ]

ಶಾಂತಿಕಕರ್ಮ (ನಾ). = ಶಾಂತಿಕಕ್ರಿಯೆ : ಸಕಲಮಹೀವಲಯಕ್ಕೆ ಶಾಂತಿಕರ್ಮಂ ಬಲಮನಿಸಲ್ ಜಾತಕರ್ಮಮೇಂ ನೆಱೆದತ್ತೋ (ಆದಿಪು. ೧೧-೫): ಗೋಪಿ ಬಂದು . . . ತತ್ಸಮಳಾಕ್ಷಸನತ್ತಿಕೊಂಡು ಭೂಂಕರಿಸಿ ನಿಜೇಶ್ವರಂಗಱ್ಪಿ ಮಾಡಿಸಿದಳ್ ಬಹುಶಾಂತಿಕರ್ಮಮಂ (ಜಗವಿ. ೩-೩೨): ಸ್ಮೃತಿಗಳು ಬ್ರಹ್ಮಚಾರಿಯ ಜೀವನ . . . ಆಪದ್ಧರ್ಮ, ಪ್ರಾಯಶ್ಚಿತ್ತ ಪುತ್ರು ಶಾಂತಿಕರ್ಮಗಳನ್ನೂ ವಿವರಿಸುತ್ತವೆ (ಭಾರದ. ೫೭).

[ಸಂ. ಶಾಂತಿಕರ್ಮನ್]

ಶಾಂತಿಕೆ (ನಾ). ಸಮಚಿತ್ತ ; ಸಮತೆ : ವಿವೇಕದಿಂಪು ವಿಕಸಿತಸುಮತಿಯಲಂಪು ಶಾಂತಿಕೆಯರಳ ಪೊಸಕಂಪು (ಬಸವ. ೬-೮). [ಶಾಂತ + – ಇಕೆ]

ಶಾಂತಿಧನ (ನಾ). ನೆಮ್ಮದಿಯೇ ಸಂಪತ್ತಾಗಿ ಉಳ್ಳವನು : ಶಾಂತಿಪುರಾಣದ ನಿರ್ವಾಣಂ ತಕ್ಕುದೆ ಮಲ್ಲಪಯ್ಯನಿಂ ತದನುಜನಿಂ ಶಾಂತಿಧನ ಪುನ್ನಮಯ್ಯನಿನೇಂ ತಮ್ಮುತ್ತಿರ್ಪರುಂ ಕೃತಾರ್ಥರೊ ಜಗದೊಳ್ (ಶಾಂತಿಪು. ೧-೪೨). [ಸಂ.]

ಶಾಂತಿಪರ್ವ (ನಾ). ೧. ಸಮಾಧಾನದ ಉತ್ಸವ. – ಹಬ್ಬ : ವೇದವಿದರುದ್ಯೋಗ ಪರ್ವಂ ವೇದಿಸುವರಿಗೆ ಶಾಂತಿಪರ್ವಂ ಮೇದಿನಿಯೊಳುಬಿಳಾಗಮಜ್ಞರ ಕರ್ಣಪರ್ವವಿದು (ಬಸವ. ೪-೨). ೨. ಮಹಾಭಾರತದ ಹನ್ನೆರಡನೆಯ ಪರ್ವ; ಯುಧಿಷ್ಠಿರನಿಗೆ ಭೀಷ್ಮನು ಸಮಾಧಾನ ಹೇಳುವ ಪರ್ವ : ಕರ್ನಾಟ ಕೃಷ್ಣರಾಯಭಾರತಕಥಾಮಂಜರಿಯೊಳ್ ಶಾಂತಿಪರ್ವವು ಸಮಾಪ್ತವಾದುದು (ತಿಮ್ಮಶಾ. ೧೮-೮೬೮). [ಸಂ. ಶಾಂತಿಪರ್ವನ್]

ಶಾಂತಿಪಾಠ (ನಾ). ೧. ಶಾಂತಿಮಂತ್ರಗಳನ್ನು ಪಠಿಸುವಿಕೆ : "ಅಗ್ನಯೇ ನಮಃ" ಎಂಬ ಶಾಂತಿಪಾಠವನ್ನು ಒಂದು ಶಾಸನದಲ್ಲಿ ಕಾಣಬಹುದಾಗಿದೆ (ಶಾಸಗಿ. ೬೬). ೨. ಶಾಂತಿಯನ್ನು ಸಾರುವುದು : ಭಾರತದ ಶಾಂತಿಪಾಠದಿಂದಲೇ ಜಗತ್ತು ಉಳಿಯಬಲ್ಲುದೆಂದು ಪಾಶ್ಚಾತ್ಯರೂ ಅರಿತುಕೊಳ್ಳುತ್ತಿದ್ದಾರೆ (ಭಾರದ. ೨೬೧). [ಸಂ.]

ಶಾಂತಿಪಾಲಕ (ನಾ). ನೆಮ್ಮದಿಯನ್ನು ಕಾಪಾಡುವವನು : ಆ ಬಡಾವಣೆಯಲ್ಲಿ ಉಂಟಾದ ಕೋಮುಗಲಭೆಯು ಹಲವಾರು ಶಾಂತಿಪಾಲಕರಿಂದ ನಿಂತಿತು (ಇಂಡಿ). [ಸಂ.]

ಶಾಂತಿಪಾಲನೆ (ನಾ). ನೆಮ್ಮದಿಯನ್ನು ರಕ್ಷಿಸುವುದು : ಚುನಾವಣೆಯ ಸಮಯದಲ್ಲಿ ನಾಗರಿಕರು ಶಾಂತಿಪಾಲನೆಯನ್ನು ಮಾಡಬೇಕೆಂದು ಹಿರಿಯ ಪೋಲೀಸ್‌ಅಧಿಕಾರಿಯು ಮನವಿ ಮಾಡಿಕೊಂಡಿದ್ದಾರೆ (ಪ್ರಾಂ). [ಸಂ. ಶಾಂತಿಪಾಲನ]

ಶಾಂತಿಭಂಗ (ನಾ). ನೆಮ್ಮದಿಯ ನಾಶ; ಗೊಂದಲ : ಸಭೆಯಲ್ಲಿ ಶಾಂತಿಭಂಗ ಮಾಡಿದವರನ್ನು ಹೊರಹಾಕಲಾಯಿತು (ಪ್ರಾಂ). [ಸಂ.]

ಶಾಂತಿಮಂತ್ರ (ನಾ). ೧. ಅನಿಷ್ಟನಿವಾರಣೆಗಾಗಿ (ವೈದಿಕಧರ್ಮದಲ್ಲಿ) ಪಠಿಸುವ ಕೆಲವು ಮಂತ್ರಗಳಲ್ಲಿ ಒಂದು. ೨. (ಆಲಂ) ಸಹನೆಯ ಉಪದೇಶ : "ಹಾಗೆಲ್ಲ ಹೊಡೆದಾಡಬಾರದು, ಇದರಿಂದ ಒಳ್ಳೇದಾಗೋಲ್ಲ" ಎಂದು ಮಾತ್ರ ಹೇಳಿದ. ಇನ್ನು ಹೆಚ್ಚಾಗಿ ಅವನಿಗೆ ಶಾಂತಿಮಂತ್ರವನ್ನು ಬೋಧಿಸಿ ಪ್ರಯೋಜನವಿರಲಿಲ್ಲ (ಪ್ರಾಗದ. ೧೦೪). [ಸಂ.]

ಶಾಂತಿಮಜ್ಜನ (ನಾ). ಅನಿಷ್ಟನಿವಾರಣಾರ್ಥವಾಗಿ ನಡೆಸುವ ಶಾಂತಿಕರ್ಮದ ಸಂದರ್ಭಗಳಲ್ಲಿ ಮಾಡುವ ಮಂತ್ರಪೂತವಾದ ತೀರ್ಥೋದಕದ ಸ್ನಾನ : ಶೀತಳೋದಕದಿಯೆಲೆ ಶಾಂತಿಮಜ್ಜನವೆರೆದನಸುರೇಂದ್ರನು (ಸಪಮೋ. ೧೯-೨೨). [ಸಂ.]

ಶಾಂತಿಮರ (ನಾ). ಒಂದು ಬಗೆಯ ಮರ : ತಾರೇಮರ, ಶಾಂತಿಮರ (ಮೈಪಿ. ೭೪-೧೪೧೧). [← ತುಳು. ಶಾಂತಿಮರ, ಸಾಂತಿಮರ]

ಶಾಂತಿಮುದ್ರೆ (ನಾ). ಮಂತ್ರಶಾಸ್ತ್ರ ಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ : ಶಾಂತಿಮುದ್ರೆ ಆವಾಹನಮುದ್ರೆ . . . ಆಚ್ಛಾದನಮುದ್ರೆ ಸಂಹಾರಮುದ್ರೆಯೆಂಬಾದಿಯಾಗಿ ಸಕಲಮುದ್ರೋಪಮುದ್ರಾಬಂಧಲಕ್ಷಣಂಗಳಂ ಗುರುಮುಖದಿಂದಱಿತು (ವಿಪೋ. ೧೦೬). [ಸಂ. ಶಾಂತಿಮುದ್ರಾ]

ಶಾಂತಿವಲಯ (ನಾ). ೧. ಯುದ್ಧದ ಚಟುವಟಿಕೆಗಳಿಲ್ಲದ ಪ್ರದೇಶ; ಯುದ್ಧವಿರಾಮ ಪ್ರದೇಶ : ಆ ಪ್ರದೇಶವನ್ನು ಶಾಂತಿವಲಯವೆಂದು ಘೋಷಿಸಲಾಗಿದೆ (ಪ್ರಾಂ). ೨. [ಭೂಗೋಳ] ಒಂದು ಭೂಪ್ರದೇಶ : ಈಶಾನ್ಯ ವಾಣಿಜ್ಯಮಾರುತ ಕ್ಷೇತ್ರದ ಉತ್ತರತುದಿಯಲ್ಲಿರುವ ಶಾಂತಿವಲಯಗಳು (Horse-Latitudes. ಇಂಡಿ). [ಸಂ.]

ಶಾಂತಿವಾಚನ (ನಾ). ಮಂಗಳಕರವಾದ ಪಠನ : ಸುಲಗ್ನಾಸ್ಪಾವಧಾನ, ಸುಮುಹೂರ್ತಾಸ್ಪಾವಧಾನ ಎಂದು ಪುರೋಹಿತರೂ ಬ್ರಾಹ್ಮಣರೂ ಶಾಂತಿವಾಚನ ಮಾಡುತ್ತಿರಲು . . . ತೆರೆಯು ಒಂದು ಪಕ್ಕಕ್ಕೆ ಸರಿಯಿತು (ಶಾಂತಲಾ. ೧೦೮). [ಸಂ.]

ಶಾಂತೆ (ನಾ). ೧. ಪಾರ್ವತಿಯ ಹೆಸರು : ಇದೇ ಶಕ್ತಿಯೇ . . . ಇಚ್ಛಾ, ಜ್ಞಾನ, ಕ್ರಿಯಾರೂಪದಿಂದ ಭೇದವನ್ನು ತೋರಿಸಿದರೂ ಸಮಷ್ಟಿರೂಪದಲ್ಲಿ "ಶಾಂತಾ" ಎನಿಸಿಕೊಳ್ಳುವಳು (ಭಾರದ. ೨೨೨). ೨. ಋಷ್ಯಶೃಂಗನ ಹೆಂಡತಿ. ೩. ಒಂದು ಬಗೆಯ ಹುಲ್ಲು. ೪. [ಸಂಗೀತ] ಒಂದು ನಿರ್ದಿಷ್ಟ ಶ್ರುತಿ. [ಸಂ. ಶಾಂತಾ]

ಶಾಂತೇಕ್ಷಣ (ನಾ). (ಕತ್ತಲೆಯಿಂದ) ಕಣ್ಣು ಕಾಣಿಸದಂತಾದವನು : ರಣಮಹೀಸಂತಮಸಶಾಂತೇಕ್ಷಣರು ದಿಗುಭ್ರಮೆಯಲಿ ಸ್ವಕೀಯಕ್ಷಣನವನು ರಚಿಸಿದರು ರೌರವವಾಯ್ತು ರಾತ್ರಿಯಲಿ (ಕುಪಾರ್ಥ. ೧೪-೩೦). [ಸಂ.]

ಶಾಂತೋದಕ (ನಾ). ತಂಪಾದ ನೀರು; ತಣ್ಣೀರು : ಮಿಗೆ ನಳಿನದಳದ ದೊನ್ನೆಯೊಳು ಶಾಂತೋದಕವ ಮೊಗದು ಪಾನಂಗೈಸಿ ನುಡಿಸಿದೊಡೆ (ನವಮೋ. ೬-೬೦). [ಸಂ.]

ಶಾಂತೋಪನತ (ನಾ). = ಶಾಂತಪ್ರಾಸ : ವಿನುತಪ್ರಾಸಂ ಶಾಂತೋಪನತಂ ವರ್ಗೋದಿತಂ ಸಮೀಪಗತಂ ಮತ್ತನುಗತಮಂತಗತಂ ಸಂಜನಿತವಿಭೇದೋಕ್ತಿಯಿಂದ ಮಿಂತಾಱುತೆಱಂ (ಕವಿರಾ. ೨-೩೧). [ಸಂ.]

ಶಾಂತ್ಯತೀತ (ನಾ). [ಶೈವ] ಪರಶಿವನ ಐದು ಕಲೆಗಳಲ್ಲಿ ಕಡೆಯದು : ಪರಮೇಶ್ವರನು ನಿಯತಿ, ವಿದ್ಯಾ, ಪ್ರತಿಷ್ಠಾ, ಶಾಂತಿ, ಶಾಂತ್ಯತೀತಗಳೆಂಬ ಐದು ಕಲೆಗಳಿಗಾಶ್ರಯವಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಈಶಾನಮುಖಗಳಿಂದ . . . ಪಂಚಕೃತ್ಯಗಳನ್ನು . . . ಪಂಚಮೂರ್ತಿಗಳಿಂದ ನೆರವೇರಿಸುತ್ತ ಭಕ್ತಾನುಗ್ರಹ ಮಾಡುತ್ತಾನೆ (ಭಾರದ. ೭೫). [ಸಂ.]

ಶಾಂತ್ಯಭಿಷೇಕ (ನಾ). ಅನಿಷ್ಟನಿವಾರಣೆಗಾಗಿ ದೇವರ ಪ್ರತಿಮೆಗೆ ಮಾಡುವ ಅಭಿಷೇಕ : ಇರೆಂದಿರಿಸೆ ಶಾಂತ್ಯಭಿಷೇಕಪುರಸ್ಸರಂ ಪೂಚಾವಿಧಾನಮಂ ಸಪ್ತವಾಸರಾವಸಾನಂಬರಂ ಮಾಡಲ್ತಗುಳ್ಳುದುಂ ಪರಿಪೂರ್ಣಾವಧಿದಿವಸಸಾಯಂತನ ಸಮಯದೊಳ್ (ಶಾಂತಿಪು. ೬-೨೮ ವ). [ಸಂ.]

ಶಾಂತ್ಯುದಕ (ನಾ). ಅನಿಷ್ಟನಿವಾರಣೆಗಾಗಿ ಪ್ರೋಕ್ಷಿಸುವ ಮಂತ್ರಪೂತವಾದ ತೀರ್ಥಜಲ ; ಮಂಗಳೋದಕ : ನಿಷ್ಕಂಟಕೀಕೃತಾಶೇಷಜಗದಕಾಂಡೋತ್ಥಿತ ಪ್ರಚಂಡ ವಿಪಕ್ಷೋತ್ಪಾತಪ್ರಶಮನಶಾಂತ್ಯುದಕಧಾರಾಕಾರತತ್ಕ್ಷಣಕ್ಷರದಜಸ್ರದಾನ ಜಲಧಾರಾಭಿರಾಮಕರಟಿಘಟಾಚಕ್ರನುಂ . . . ಬರ್ಪಾಗಳ್ (ಆದಿಪು. ೧೪-೯೧ ವ): ನಾನು ಕೂಡ ಶಕುಂತಳೆಗೋಸ್ಕರ ಯಾಗಸಂಬಂಧಿಯಾದ ಶಾಂತ್ಯುದಕವನ್ನು ಗೌತಮಿಯ ಕರದಲ್ಲಿ ಕಳುಹಿಸಿಕೊಡುವೆನು (ಶಾಕುಂತ. ೩೧-೧೬). [ಸಂ.]

ಶಾಂಬರ (ನಾ). ಕಣ್ಕಟ್ಟು; ಇಂದ್ರಜಾಲ: ಇದು ಕಣಾ ಮಾಯಾವಿಗಳು ಮಾಡಿದ ಮಹಾಶಾಂಬರ [ಪಾಠಾಂ. ಶಾಂಬವ, ಶಾಬರ, ಶಬರಾ]ದ ಕೆಲಸದ ಸುದತಿ ಸುಳಿದರೆ ಬಲ್ಲೆವಾವ್ ನಮ್ಮವರ ಮಾಯೆಗಳ (ತೊರರಾ. ೬-೪೧-೬೫). [ಸಂ.]

ಶಾಂಬರಿ (ನಾ). ೧. = ಶಾಂಬರ : "ಮಾಯಾ, ಶಾಂಬರೀ — ೨ ಇಂದ್ರಜಾಲ ಮೊದಲಾದ ಮಾಯೆಯ ಪೆಸರು" (ಸಿದ್ಧಾಂತಿ. ೩೧೧). ೨. ಮಾಟ ; ಶೂನ್ಯ. ೩. ಮಾಟಗಾತಿ. [ಸಂ. ಶಾಂಬರೀ]

ಶಾಂಭವ (ಗು). ೧. ಶಿವನಿಗೆ ಸಂಬಂಧಿಸಿದ: ದೇವಿ ಶಾಂಭವ [ಪಾಠಾಂ. ವಿ] ದೀಕ್ಷೆಯಂ ಕೊಟ್ಟೋವಿ ದೃಢಶಿವಭಕ್ತಿಮಹಿಮಾಭಾವನೆಯನಿತ್ತು . . . ಶಿವ ಶಿವನಲ್ಲಿಗೆಯ್ದಿದಳು (ಬಸಪು. ೫೦-೪) ; ಭಜಿಸಿದ್ಕೆ ಭರ್ಗನನು ಶಾಂಭವಯಜನಸಾರಸಮಾಧಿ ಶಿವಪದರಜವ ಬೆರಸಿತೆ (ಕುವ್ಯಾಅ. ೧೧-೨೭). (ನಾ). ೨. ಶಿವನ ಆರಾಧಕ ; ಶಿವಭಕ್ತ. ೩. ಶಿವನ ಮಗ. ೪. ಕರ್ಪೂರ. ೫. ಒಂದು ಬಗೆಯ ವಿಷ. ೬. ಗುಗ್ಗುಳ. ೭. [ಯೋಗ] ಶಿವನಲ್ಲಿ ಮನಸ್ಸನ್ನು ಏಕಾಗ್ರತೆಯಿಂದಿರಿಸುವುದು: ಶಾಂಭವ ವಿಶಿಷ್ಟದದ್ವೈತದೊಳಗಿಹುದಲ್ಲ ಶಾಂಭವಿಯ ಚಿದಚಿದ್ವಿಕಾರ (ಅವಚಂ. ಕ. ೪೫೮-೧೨೪೫); ಯೋಗಕ್ಕೆ ಶಾಂಭವ ಭೋಗಕ್ಕೆ ರಜತಾದ್ರಿ ಆಗಮವೆಂಬಡದ ಕೇಳ್ವ ಯೋಗವ ನೆಱೆ ಬಿಟ್ಟು ಭೋಗಕ್ಕೆ ಮನವಿಟ್ಟು ಆಗಳೆ ಬಂದೆ ನಾ ಬಿಟ್ಟು (ಕೋಡಚ. ೧-೪೫). [ಸಂ.]

ಶಾಂಭವಪ್ರಣವ (ನಾ). ಐದು ವಿಧವಾದ ಪ್ರಣವಗಳಲ್ಲಿ ಒಂದು ಬಗೆ : ಸಾಕಲ್ಯಪ್ರಣವ ಶಾಂಭವಪ್ರಣವ ಸಾಂಖ್ಯಪ್ರಣವ ಸಾವಸ್ಯಪ್ರಣವ ಸಾಯುಜ್ಯಪ್ರಣವವೆಂಬ ಪಂಚಪ್ರಣವಮಂತ್ರಗಳಂ . . . ಬೇಱೆ ಬೇಱೆ ಉಪದೇಶ ಅನುಷ್ಠಾನ ಪರೀಕ್ಷೆಗಳಿಂ ವಿವೇಕಿಸಿ ತಿಳಿದಿರಲಕ್ಕುಂ (ವಿವೇಕ. ೮೧). [ಸಂ.]

ಶಾಂಭವಿ (ನಾ). ೧. ಶಂಭುವಿನ ಪತ್ನಿ ; ಪಾರ್ವತಿ : ಶಂಭು ಶಾಂಭವಿಕುಂಭ ವಕ್ಷರುಹ ಕಲಿತಕರ ಶಂಬರಜ ಶಂಬರಾಹಿತ ಮಾತುಳಾಭರಣ ಸಂಗಮೇಶ್ವರಪ್ರಸನ್ನ (ಪ್ರೌಢರಾ. ೧೫-೧) ; ಶಾಂಭವಿ ಬೆನ್ನನೆಳ್ತರೆ ವಿಲಾಸದೆ ಬಂದನಹೀಂದ್ರಭೂಷಣಂ (ಶಬಶಂ. ೫-೫೭). ೨. = ಶಾಂಭವೀಮುದ್ರೆ: ಷಣ್ಮುಖೀ ಖೇಚರೀ ಶಾಂಭವಿ ಮೊದಲಾದ ಮುದ್ರಾಭೇದಂಗಳಂ (ವಿವೇಕ. ೧೫೪). [ಸಂ. ಶಾಂಭವೀ]

ಶಾಂಭವೀಧವ (ನಾ). ಪಾರ್ವತಿಯ ಪತಿ ; ಶಿವ : ನಿಷ್ಕಲ ನೀಲಕಂಠ ನಿರ್ಜರನತ ನಿಷ್ಕಳಂಕ ಜಯಶಂಕರ ನಿರ್ಜಡ ಶಾಂಭವೀಧವಾ (ಶಬಶಂ. ೫-೨೪). [ಸಂ.]

ಶಾಂಭವೀಮುದ್ರೆ (ನಾ). [ಯೋಗ] ಶ್ವಾಸೋಚ್ಛ್ವಾಸವನ್ನು ನಿಗ್ರಹಿಸಿ, ರೆಪ್ಪೆ ಬಡಿಯದೆ ಪರಮಾತ್ಮನಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಮಾಡುವ ಧ್ಯಾನದ ಒಂದು ಭಂಗಿ: ನೇತ್ರಂಗಳ ತುದಿಯ ಸೂಕ್ಷ್ಮರಂಧ್ರವನುಳ್ಳ ಕೃಷ್ಣತಾರಾಮಂಡಲದ ಮಧ್ಯದಲ್ಲಿ ಶುದ್ಧಚಿತ್ತದಿಂದೆ ನಿಶ್ಚಲಮಾದ ಪರಮಾತ್ಮಜ್ಯೋತಿಸ್ವರೂಪಮಪ್ಪ ದಿವ್ಯಲಿಂಗಮಂ ಕಾಣ್ಬುದೇ ಶಾಂಭವೀಮುದ್ರೆಯೆನಿಸುವುದಯ್ಯಾ (ಅಖಂಡೇ. ೨೨೬-೭೩); 'ಖೇಚರಿಮುದ್ರಾ' . . . ಇದನ್ನೇ ಶಾಂಭವೀಮುದ್ರೆ ಅಥವಾ ಉನ್ಮನ್ಯವಸ್ಥೆ ಎಂದು ಕೆಲವರು ಹೇಳುತ್ತಾರೆ (ಭಾರದ. ೧೬೬). [ಸಂ. ಶಾಂಭವೀಮುದ್ರಾ]

ಶಾಕ$_1$ 'ಸೇಕ$_1$' ನೋ.

ಶಾಕ$_2$ (ನಾ). ೧. ಅಡುಗೆಗಾಗಿ ಬಳಸುವ ಕಾಯಿ, ಸೊಪ್ಪು, ಗೆಡ್ಡೆ ಮುಂತಾದುವು; ತರಕಾರಿ; ಕಾಯಿಪಲ್ಯ : ಬಾಟುಕಂ — ಸೀಟ್ಟೊಣಗಿ ಬಾಟ್ಟಿ ಶಾಕಂ (ಶಮದ. ಪರಿ. ೧); ದಂಟು ಕುಡಿ ಕಾಯೆಲೆ ಮಿಡಿಗಾಯಿಗಳೆಂಬ ಪಲವಗೆ ಶಾಕದೊಳುಚಿತಾನುಚಿತವ ನೆಲೆಯಱಿವುದು ನೇಮದೊಳು (ಹದಿಬ. ೮-೧೭). ೨. ಸೊಪ್ಪು, ತರಕಾರಿ ಮುಂತಾದುವುಗಳಿಂದ ತಯಾರಿಸಿದ ಮೇಲೋಗರ ; ಪದಾರ್ಥ : ಶಾಕಂ ಲೇಸಾದುವು . . . ಮಗಮಗಿಸಿದ ತುಪ್ಪಂ ನೆಗಟ್ಟೀ ಪದಾರ್ಥಂ ಸಾಕೆಂಬಂತಿರ್ದುದು (ನಳಚಂ. ೪೬೭) ; ಪರಿಪರಿಯ ಬಹುಭಕ್ಷ್ಯಪಾಕದ ಪರಿಮಳದ ಶಾಕಾದಿಗಳ ವೊಗ್ಗರಣೆಗಳ ಸೌರಭಕೆ ತಿಳಿದುದು ನಿದ್ರೆ ಪವನಜನ (ಕುವ್ಯಾಅ. ೧೦-೨೩); ಮಿಸುನಿಯ ವಣ್ಣದ ತೊಗರಿಯ ಬೇಳೆಯ ಕುಶಲದ ಸೂಪಶಾಕಗಳ ಶಶಿಮುಖಿಯರು ಸಂತೋಷದೆ ಬಡಿಸಿದರೂಸೆದು ಭೂಪಾಲನಿಗಾಗ (ಕಂನವಿ. ೮-೮೬). ೩. ಶಕ್ತಿ ; ಸಾಮರ್ಥ್ಯ. ೪. ಸಪ್ತದ್ವೀಪಗಳಲ್ಲಿ ಆರನೆಯದು. ೫. ಒಂದು ಬಗೆಯ ಮರ ; ತೇಗ : "ನಂದ್ಯಾವರ್ತಃ, ಸರಲಃ, ಸಾಲಃ, ಶಾಕಃ ಧವಃ, ಅರ್ಜುನಃ . . . ಮೋಕ್ಷಃ— ಎಂಬಿವು ಮರಗಂಳುಮಪ್ಪುವು" (ಹಲಾಯು. ೧೩೯-೨೬).

ಶಾಕಾಯಲವಣಾಯ = ೧. ತರಕಾರಿ ಮತ್ತು ಉಪ್ಪಿಗೆ ಸಾಕಾಗುವಷ್ಟು. ೨. (ಆಲಂ) ಅಹನ್ಯಹನಿಕಾಲಕ್ಷೇಪ : ನಿನ್ನ ಶ್ರಮಕ್ಕೆ ಪೂರ್ಣಫಲ ದೊರೆಯದೆ ಹೋದರೂ ಏನಾದರೂ 'ಶಾಕಾಯ ಲವಣಾಯ' ದೊರೆಯುವಂತೆ ಏರ್ಪಾಡು ಮಾಡುತ್ತೇನೆ (ನಾಡಿಗೇ. ೨೪೮). [ಸಂ.]

ಶಾಕಂಭರಿ (ನಾ). ೧. ಸಸ್ಯಗಳ ಅಲಂಕಾರವನ್ನು ಉಳ್ಳವಳು ; ವನದೇವಿ : ಕ್ಷಿತಿ ಶಾಕಂಭರಿ ವಾರದೇವತೆಯರಾಶಾದೇವಿಯರ್ . . . ಎಯ್ದಿದರ್ (ತಬಶಂ. ೩-೧೩); ವನದೇವಿಗೆ — ಎಲೆ ಶಾಕಂಭರಿ! ಇದಕೊಳ್ ಭಾಗ್ಯಲಕ್ಷ್ಮಿ ನಿನ್ನ ಕೆಳೆತನಕ್ಕೆಳಸಿ ಬಂದಿರ್ಪಳ್ (ರಾಮಾಶ್ವ. ೩೯-೮). ೨. ದುರ್ಗೆ.

ಶಾಕಂಭರಿವೇಷ = ದೇವರಿಗೆ ತರಕಾರಿಗಳಿಂದ ಮಾಡುವ ಅಲಂಕಾರ : ಚಾಮುಂಡೇಶ್ವರಿಗೆ ಇಂದು ಶಾಕಂಭರಿವೇಷವನ್ನು ಹಾಕಿದ್ದಾರೆ (ರೂಢಿ). [ಸಂ. ಶಾಕಂಭರೀ]

ಶಾಕಟ (ಗು). ೧. ಗಾಡಿಗೆ ಸಂಬಂಧಿಸಿದ. (ನಾ). ೨. ನೊಗಕ್ಕೆ ಹೂಡಿದ ಎತ್ತು, ಕೋಣ ಮುಂತಾದ ಪ್ರಾಣಿ : "ಯುಗ್ಯಃ, ಪ್ರಾಸಂಗ್ಯಃ, ಶಾಕಟಃ - ಈ ಮೂರು . . . ನೊಗವನ್ನು ಹೊರುವ ಎತ್ತು" (ಸಿದ್ಧಾಂತಿ. ೨೯೩). ೩. ಭೂಮಿ; ಕ್ಷೇತ್ರ. [ಸಂ.]

ಶಾಕಟಿಕ (ಗು). ೧. = ಶಾಕಟ ೧. ೨. ಗಾಡಿಯಲ್ಲಿ ಸಂಚರಿಸುವ : ಮತ್ತೊಂದುದಿವಸಂ ಪಲಂಬರ್ ಶಾಕಟಿಕಪರದರುಂಬೆರಸು ಬಂಡಿಗಳೊಳ್ ಪಟ್ಟಿಯುಂ ಧಾನ್ಯಮಂ ತೀವಿಕೊಂಡು ಪೊಬಲ್ಗೆ ಮಾಱಲೆಂದು ಪೋಪನ್ನೆಗಂ (ವಡ್ಡಾರಾ. ೭೬-೧೧). [ಸಂ.]

ಶಾಕಪಾಕಿ (ನಾ). ಸಸ್ಯಾಹಾರವನ್ನು ಉಪಯೋಗಿಸುವವನು : ಶಾಕಪಾಕಿಗಳೆಲ್ಲ ಏಕಧರ್ಮದಿ ಕೂಡಿ ಶಾಕಪಾಕಿಗಳ ಲಗ್ನಗಳ ಜಗದೊಳಗೆ ಏಕಮಾಡುವರು (ಕಾಲಸಂ. ೬೩-೭೪). [ಸಂ. ಶಾಕಪಾಕಿನ್]

ಶಾಕವಂಗಿ (ನಾ). (ಬದನೆಕಾಯಿಯಿಂದ ತಯಾರಿಸುವ) ಒಂದು ಬಗೆಯ ಮೇಲೋಗರ: ಮೃದುಮಾಡಿಯತ್ತರದೊಳಟ್ಟ ಬದನೆಯಕಾಯ ಹದನಱೆದು ತುಪ್ಪದೊಳಗುಳ್ಳಿಯಲ್ಲದ ರಸವ ಹುದುಗಿ ಬೇಯಿಸಿ ಸೀಳಿ ಕೀರೆ ನಱುವಲು ಚಕ್ಕವತ್ತ ಸೊಲೆ ಸಬ್ಬಸೀಗೆ ಮೊದಲಾದ ಸೊಪ್ಪುಗಳ ಬೇಱೆಬೇಱುಕ್ಕರಿಸಿದುದುರೆಯಂ

ತುಪ್ಪದೊಳು ಹುರಿದ ಹೋಳುಗಳೊಳಗೆ ಹುದುಗಿ ಕೆಲವಂ ತಾಳಿಸಿದೊಡಮವು ತಾ ಶಾಕವಂಗಿ ಹೆಸರಂ ಪಡೆದವು (ಸೂಪಶಾ. ೪-೧೬).

[ಶಾಕ$_2$ + < ವಾಂಗ್ಗಿ$_0$ (IP ← ಮರಾ. ವಾಂಗೀ)]

ಶಾಕವರ್ತಿಕ, ಶಾಕವರ್ತಿಗೆ (ನಾ). ತರಕಾರಿಗಳಿಂದ ತಯಾರಿಸಿದ ಭಕ್ಷ್ಯವಿಶೇಷ: ಅನಿಷ್ಟುರೋಷ್ಠಪುಟಮಧ್ಯಸಂಧಾರಣಮಾತ್ರಚೂರ್ಣನೀಯಶಾಕ [ಪಾಠಾಂ. ಯಾಶಾಕ, ಯಾಶೋಕ]ವರ್ತಿಕಮುಮತಿದೂರೋಚ್ಚ್ವಾಸವಿಕಾಸನಾಸಾಂಜಲಿಪುಟ ಪೀಯಮಾನ ದುಗ್ಧಹಯ್ಯಂಗವೀನಮುಂ (ಆದಿಪು. ೧೧-೨೬ ವ). **ಶಾಕವರ್ತಿಗೆ:** ಮೃದುಲಲಿತ ಕೋಮಲತಲಸಂಗಮಾತ್ರದ್ರಾವಣೆಯಪ್ಪ ಶಾಕವರ್ತಿಗೆಗಳುಮಂ ಪಾಲ್ಗಡಲ ನೊರೆಯ ಪೊರೆಯ ತೆರೆಯನನುಕರಿಸಿಯುಮಲ್ಪದಶನದಂಶಮಾತ್ರ ಖಂಡನೀಯಕರಂ ಗಳೆನಿಸಿದ ಮಂಡಕಂಗಳುಮಂ . . . ಬಡ್ಡಿಸಿದಾಗಳ್ (ಸುಕುಮಾ. ೧೧-೨೯ ವ).

[ಶಾಕ$_2$ + ?]

ಶಾಕವರ್ತಿಗೆ 'ಶಾಕವರ್ತಿಕ' ನೋ.

ಶಾಕಶಾಕಟ (ನಾ). ತರಕಾರಿಯನ್ನು ಬೆಳೆಯುವ ಭೂಮಿ; ತರಕಾರಿ ತೋಟ: "ಶಾಕಶಾಕಟ[ಪಾಠಾಂ. ಸಾಕಸಾಕಟ] ಮೆನಲು ಶಾಕಶಾಕೀನಮೆನಲಾ ಕಾಯ ತೋಟಮೆನಿಸಿಕ್ಕು" (ಮಂಗರಾ. ೨೯-೫). [ಸಂ.]

ಶಾಕಶಾಕಿನ (ನಾ). = ಶಾಕಶಾಕಟ : "ಶಾಕಶಾಕಟಂ, ಶಾಕಶಾಕಿನಂ — ಈ ೨ ಬಾಡು, ಕಾಯ ತೋಂಟಂ" (ಹಲಾಯು. ೨೭-೯). [ಸಂ.]

ಶಾಕಾಹಾರ (ನಾ). ತರಕಾರಿಗಳನ್ನೊಳಗೊಂಡ ಆಹಾರ; ಸಸ್ಯಾಹಾರ : ಚೊಮ್ಮಣ್ಣ ಕೇಶಿರಾಜ ಶಂಕಿಸಿದ್ದಂತೆ ಮಾಂಸಾಹಾರವನ್ನೇನೂ ನೀಡಲಿಲ್ಲ ; ಶಾಕಾಹಾರವನ್ನೇ ಎಡಮಾಡಿದ (ಶರಚ. ೧೦೧) ; ಹೊಯಿಸಳ ವಿಷ್ಣುವರ್ಧನಪ್ರಭುವಿನ ರಾಷ್ಟ್ರದಲ್ಲಿ ಎಲ್ಲರಿಗೂ ಶಾಕಾಹಾರಭೋಜನ ಸಮರ್ಪಕವಾಗಿ ಏರ್ಪಟ್ಟಿತ್ತು (ಶಾಂತಲಾ. ೪೭). [ಸಂ.]

ಶಾಕಾಹಾರಿ (ನಾ). ತರಕಾರಿಗಳನ್ನೊಳಗೊಂಡ ಆಹಾರವನ್ನು ಸೇವಿಸುವವನು; ಸಸ್ಯಾಹಾರಿ : ಊಟಕ್ಕೆ ಕರೆದವರಿಗೆ "ನಾನು ಶಾಕಾಹಾರಿ" ಎಂದು ಅರಿಕೆ ಮಾಡಿದರೆ ಸಾಲದು (ನಂಟರು. ೧೧೮) ; ಶಾಕಾಹಾರಿಗಳು ಈ ಗುಂಪಿಗೆ ಸೇರಿದ ಎಲ್ಲಾ ವಸ್ತುಗಳನ್ನೂ ಉಪಯೋಗಿಸಲಾರರು (ಅಡುಸೌ. ೭೦). [ಸಂ. ಶಾಕಾಹಾರಿನ್]

ಶಾಕಿನ (ನಾ). ಭೂಮಿ ; ಜಮೀನು : 'ಶಾಕಶಾಕಿನ' ಪರಾ. [ಸಂ.]

ಶಾಕಿನಿ (ನಾ). ೧. ತರಕಾರಿಯ ತೋಟ. ೨. ದುರ್ಗೆಯ ಪರಿಚಾರಿಕೆಯರಲ್ಲಿ ಒಬ್ಬಳು ; ಒಬ್ಬ ಕ್ಷುದ್ರದೇವತೆ : ಉರಗಮುಖೋಗ್ರದಂಷ್ಟ್ರಸಹಜಾತೆಯ ನೂರ್ಜಿತಕಾಲಪಾಶನಿಷ್ಠುರತರರೂಪೆಯಂ ಸಹಜಶಾಕಿನಿಯಂ . . . ಬೆಸಗೊಳ್ಳುದೆ (ಕಾದಂಪೂ. ೭೦೪); ಶಾಕಿನಿಯರೊಡಲೋರೆ ನನೆಯದೆ ಡಾಕಿನಿಯರಿಗೆ ಡೊಳ್ಳು ಸಾಲಿಡದೆ ಕೌರವನ ತನಿಗರುಳ ದಂಡೆಯ ತೋರಣದ ಬಾಗಿಲಿನ ವಿಭವದಿ ವಾರಣಾಹ್ವಯನಗರಿಯನು ಹೊಗದಿಹನೆ (ಕುನ್ಯಾಉ. ೧೧-೧೦). [ಸಂ. ಶಾಕಿನೀ]

ಶಾಕಿನೀತಂತ್ರ (ನಾ). [ತಂತ್ರಶಾ] ಒಂದು ಬಗೆಯ ತಾಂತ್ರಿಕಸಿದ್ಧಿಮಂತ್ರ : ಶಾಕಿನೀತಂತ್ರ ಡಾಕಿನೀತಂತ್ರ . . . ಶಲ್ಯತಂತ್ರಾದಿ ಸಿದ್ಧಿಮಂತ್ರಂಗಳಂ . . . ಬೇಱೆ ಬೇಱೆ ವಿವೇಕಿಸಿ ನೋಡಿ (ವಿವೇಕ. ೮೧). [ಸಂ.]

ಶಾಕಿನೀದೋಷ (ನಾ). ಶಾಕಿನೀದೇವತೆಯಿಂದುಂಟಾಗುವುದೆಂದು ಭಾವಿಸಲಾದ ಬಾಧೆ, — ಪೀಡೆ : ಪಂಚಾಮೃತಘೃತ — ಗೋಮೂತ್ರ ಪಲ ೧, ಈ ಸಗಣಿಯ ರಸ, ಮೊಸರು, ಹಾಲು, ತುಪ್ಪ . . . ಕಾಸಿ ಹದದಲ್ಲಿಳುಹಿಕೊಂಡು ಹಸಿಅಡಕೆ ಪ್ರಮಾಣವಂ ಸಕ್ಕರೆವೆರಸಿ ಸೇವಿಸೆ ಪಿತ್ತಭ್ರಮಣೆ, ಅಪಸ್ಮಾರ, ಶಾಕಿನೀದೋಷ ಮುಂತಾದ ಸಮಸ್ತವ್ಯಾಧಿ ಪರಿಹಾರಮಕ್ಕುಂ (ಸಕವೃ. ೧೩೯). [ಸಂ.]

ಶಾಕುನ (ಗು). ೧. ಪಕ್ಷಿಗೆ ಸಂಬಂಧಿಸಿದ. ೨. ಶಕುನಕ್ಕೆ ಸಂಬಂಧಿಸಿದ. (ನಾ). ೩. ಶಕುನಕ್ಕೆ ಸಂಬಂಧಿಸಿದ ವಿಷಯ : ತಳುವದೀಗಲೆ ಮುತ್ತಬೇಕೆನಲಲಘು ಸಾಹಸಿಗೆಂದನೊಬ್ಬನು ಸಲೆ ಬೃಹಸ್ಪತಿಯಣುಗ ಜ್ಯೋತಿರ್ಮುಖನು ಶಾಕುನವ (ಕೌಶಿರಾ. ೩೨-೨). [ಸಂ.]

ಶಾಕುನಿಕ (ಗು). ೧. ಹಕ್ಕಿಗೆ ಸಂಬಂಧಿಸಿದ. ೨. ಶಕುನಕ್ಕೆ ಸಂಬಂಧಿಸಿದ. (ನಾ). ೩. ಹಕ್ಕಿಗಳನ್ನು ಹಿಡಿಯುವವನು; ಹಕ್ಕಿಯ ಬೇಡ: ಮಾವುತರು . . . ಮೃಗಜೀವಿಗಳು ಶಾಕುನಿಕರೆಸೆದರು ರಾಜಸಭೆಯೊಳಗೆ (ಕುನ್ಯಾಉ. ೨-೨೭). ೪. ಶಕುನಗಳ ವ್ಯಾಖ್ಯಾನ, — ವಿವರಣೆ. [ಸಂ.]

ಶಾಕೋಟ (ನಾ). ಒಂದು ಬಗೆಯ ಮುಳ್ಳಿನ ಗಿಡ : "ಶಾಕೋಟಃ, ಶಾಕೋಟಕೀ — ಈ ಯೆರಡುಂ ಮಿಟಲಿ" (ಓಷಧಿ. ೧೬೩). [< ಸಂ. ಶಾಖೋಟ]

ಶಾಕೋಟಕಿ (ನಾ). = ಶಾಕೋಟ : "ಶಾಕೋಟಃ, ಶಾಕೋಟಕೀ — ಈ ಯೆರಡುಂ ಮಿಟಲಿ" (ಓಷಧಿ. ೧೬೩). [< ಸಂ. ಶಾಖೋಟಕ]

ಶಾಕ್ತ (ಗು). ೧. ಶಕ್ತಿಗೆ ಸಂಬಂಧಿಸಿದ; ಸಾಮರ್ಥ್ಯಕ್ಕೆ ಸೇರಿದ. ೨. ಶಕ್ತಿದೇವತೆಗೆ ಸಂಬಂಧಿಸಿದ : ಕೊಲ್ಹಾಪುರವು ಸುಮಾರು ಕ್ರಿಸ್ತಶಕ ಒಂದನೆಯ ಶತಾಬ್ದದಿಂದಲಾದರೂ ಪ್ರಸಿದ್ಧ ಶಾಕ್ತಕ್ಷೇತ್ರವಾಗಿದ್ದಿತು (ಹೊಯ್ಸಾ. ೧೮೦). (ನಾ). ೩. ಶಕ್ತಿದೇವತೆಗೆ ಸಂಬಂಧಿಸಿದುದು: ಇವುಗಳಲ್ಲಿ ಕಾಪಾಲಿಕವು ಶೈವವಾದರೆ ಕೌಲವು ಶಾಕ್ತ (ಶೂನ್ಯಕು. ೪ ಹಿನ್ನಲೆ). ೪. ಶಕ್ತಿದೇವತೆಯನ್ನು ಆರಾಧಿಸುವ ಪಂಥ: "ಶಾಕ್ತಂ, ಶಾಕ್ತೇಯಂ, ಈ ೨ ದುರ್ಗಾಮತಂ" (ಕಾಶಕ್ಯ. ೨೦೪). ೫. ಶಕ್ತಿದೇವತೆಯನ್ನು ಪೂಜಿಸುವವನು; ದುರ್ಗೆಯ ಉಪಾಸಕ : ಶಾಕ್ತರು ಮೆರೆಯುತಿಹರಾ ಶಕ್ತಿತತ್ವಾದಿಯಲಿ (ಗಗತಾ. ೮-೬೬); ಶಾಕ್ತರು ಹಣೆಯ ಮೇಲೆ ಕುಂಕುಮವನ್ನೂ ಭುಜಗಳ ಮೇಲೆ ಚಿನ್ನದ ಪಾದುಕೆಗಳನ್ನೂ ಧರಿಸುವರು (ಮುಂಬಯಿ. ೬-೧೧೨). [ಸಂ.]

ಶಾಕ್ತಧರ್ಮ (ನಾ). ಶಕ್ತಿದೇವತೆಯನ್ನು ಶ್ರೇಷ್ಠಳೆಂದೂ ಪರಾಶಕ್ತಿ ಎಂದೂ ಪ್ರತಿಪಾದಿಸುವ ಮತ : ವೈಷ್ಣವಧರ್ಮವು ಮತ್ತೆ ತಲೆಯೆತ್ತಿ ಶಾಕ್ತಧರ್ಮವು ನಶಿಸುವಂತಾಯಿತಲ್ಲಾ (ಭಕ್ತಮಾ. ೬೩). [ಸಂ.]

ಶಾಕ್ತಮತ (ನಾ). = ಶಾಕ್ತಧರ್ಮ : ಶಕ್ತಿಗೆ ಪಾರಮ್ಯವನ್ನು ಎಣಿಸಿ ವಿಚಾರ ಮಾಡುವ ದೃಷ್ಟಿಯಿಂದ ಶಾಕ್ತಮತ ಎಂದು ಎನಿಸುತ್ತದೆ (ಭಾರದ. ೨೨೧). [ಸಂ.]

ಶಾಕ್ತಾಗಮ (ನಾ). ಪರಾಶಕ್ತಿಯೇ ಪರದೈವವೆಂದು ಸಾರುವ ಆಗಮ; ಶೈವಾಗಮದ ಒಂದು ಪ್ರಭೇದ : ಶೈವಾಗಮದಲ್ಲಿ . . . 'ಶೈವಾಗಮ', 'ದೇವ್ಯಾಗಮ ಅಥವಾ ಶಾಕ್ತಾಗಮ', 'ವಾತುಳಾಗಮ ಅಥವಾ ತಾಂತ್ರಿಕಾಗಮ' ಮತ್ತು 'ವೀರಶೈವಾಗಮ' ಎಂದು ನಾಲ್ಕು ಒಳಭೇದಗಳಿವೆ (ಭಾರದ. ೭೪). [ಸಂ.]

ಶಾಕ್ತೇಯ (ನಾ). ೧. ದುರ್ಗೆಯನ್ನು ಆರಾಧಿಸುವ ಪಂಥ : "ಶಾಕ್ತಂ, ಶಾಕ್ತೇಯಂ, ಈ ೨ ದುರ್ಗಾಮತಂ" (ಕಾಶಕ್ಯ. ೨೦೪). ೨. ದುರ್ಗೆಯ ಉಪಾಸಕ : ಭಜಿಸುವರು ಶಕ್ತಿಯನೆ ಪರಳೆನುತ ಶಾಕ್ತೇಯರುಗಳು (ಗಗತಾ. ೫-೬೭). [ಸಂ.]

ಶಾಕ್ಯ (ನಾ). ೧. ಗೌತಮಬುದ್ಧನ ವಂಶ ಮತ್ತು ಆ ವಂಶಕ್ಕೆ ಸೇರಿದವನು : ನಿವಸತಿಯಂ ತೇಗುಮರಂ ಕವಿದೆಡೆಯೊಳ್ ಮಾಡಿಕೊಂಡ ಕಾರಣದಿಂದಂ ಅವರೇ ಶಾಕ್ಯರೆನಿಪ್ಪರುಂ (ಸೌನಂದ. ೧-೨೪). ೨. ಬೌದ್ಧಮತಸಂಸ್ಥಾಪಕನಾದ ಗೌತಮ ಬುದ್ಧನ ಹೆಸರು : "ಶೌದ್ದೋದನಿಃ, ದಶಬಳಃ, ಬುದ್ಧಃ, ಶಾಕ್ಯಃ . . . ಸಿದ್ಧಾರ್ಥಃ — ಈ ೧೧ ಬುದ್ಧನ ಪೆಸರ್" (ಹಲಾಯು. ೧೫-೮೫). [ಸಂ.]

ಶಾಕ್ಯಮತ (ನಾ). [ಬೌದ್ಧ] ಗೌತಮಬುದ್ಧನಿಂದ ಸ್ಥಾಪಿತವಾದ ಮತ; ಬೌದ್ಧಧರ್ಮ : ತಥಾಗತಮತಮಂ ತಿರಸ್ಕರಿಸಿ ತನ್ನೊಳಶಕ್ಯಾನುಷ್ಠಾನಕ್ಕೆ ಪೊಣರ್ದ ಲೋಕಾಯತಶಾಕ್ಯಮತಾವಲಂಬಿಯನವಿಲಂಬಿತಂ ಗೆಲ್ದು (ಶಾಂತಿಪು. ೮-೧೪೭ ವ). [ಸಂ.]

ಶಾಕ್ವರ (ನಾ). ೧. ಎತ್ತು ; ವೃಷಭ : ನೆರೆದೊಂದಿ ನಿಂದ ಶಾಕ್ವರವರಯೂಥ ಮನವನಿನಾಥ ಕಂಡುದಱಿಂದೊರ್ವರೆ ವಿಹರಿಪುದಂ ಬಿಸುಟಂಬರಾಂಬರರ್ ತಮ್ಮ ಸಮುದಯಂ ಬೆರಸಿರ್ಪರ್ (ಆದಿಪು. ೧೫-೩೨); ಮೇಲುವಲಗೆಯ ಸುತ್ತ ಚಮರೀಜಾಳ ಕನಕಧ್ವಜದ ತುದಿಯಲಿ ಮೇಳವಿಸಿದನು ವಿಶ್ವಕರ್ಮನು ವಿಪುಳಶಾಕ್ವರವ (ಕುನ್ಯಾಕ. ೭-೭). ೨. [ಜ್ಯೋತಿ] ವೃಷಭರಾಶಿ : ನವಮಂ ಮೇಣ್ ಪಂಚಮಂ ಶಾಕ್ವರ ಧನುವೆನಿಪಂದಲ್ಲಿ ನಿಂದಂದಿನಂ ನೋಡುವೊಡುಗ್ರರ್ ಕಾಕನೇತ್ರಂ ಮನುಜನೆನಿಕುಂ (ಚಾತಕಿ. ೨೧-೨೨). [ಸಂ.]

ಶಾಕ್ವರಚಿಹ್ನ (ನಾ). ೧. ವೃಷಭದ ಗುರುತು, — ಲಾಂಛನ. ೨. ವೃಷಭದ ಗುರುತುಳ್ಳ ಧ್ವಜ : ಕೊರಲ ಕಱೆ ಶಿರದ ಪಱೆ ನೊಸಲುರಿಗಣ್ ಧೃತಚಾಪಹಸ್ತ ಶಾಕ್ವರಚಿಹ್ನಂ ವಿರಚಿಸೆ ಕೃಪಕೃತವರ್ಮರ್ಬೆರಸಾಗಳ್ ಮುಳಿದು ಬಂದನಶ್ವತ್ಥಾಮಂ (ಗದಾಯು. ೯-೨). [ಸಂ.]

ಶಾಕ್ಯರಾರೋಹ (ನಾ). ಎತ್ತನ್ನು ಏರಿದವನು : "ಪ್ರಚಂಡದತ್ತೇಜುವವನಸತ್ವ ವಾಹನಂ ಶಾಕ್ಯರಾರೋಹನೆಂದೆನಿಕ್ಕುಂ" (ಮಂಗರಾ. ೭೩-೨೬). [ಸಂ.]

ಶಾಖ$_1$ 'ಸೇಕ$_1$' ನೋ.

ಶಾಖ$_2$ (ನಾ). ಕೊಂಬೆ ; ಗೆಲ್ಲು : ಒಂದು ಶಾಖಂ ನಾಗಕೇಶರವೊಂದು ಶಾಖಂ ನಾರಿಕೇಳವದೊಂದು ಶಾಖಂ ಚಂದನಂ ಘನಸಾರವೊಕ್ಕೊಂಬು (ಬಸಪು. ೧೯-೬೪).

[ಸಂ. ಶಾಖಾ]

ಶಾಖಾಚರ (ನಾ). ಕೊಂಬೆಗಳ ಮೇಲೆ ಸಂಚರಿಸುವ ಕೋತಿ, ಅಳಿಲು ಮುಂತಾದ ಪ್ರಾಣಿ : ಅಂತು ಶಾಖಾಚರಂ ತಂದಿತ್ತ ಫಲಂಗಳಂ ಕೊಂಡು ಶಿವಭೂತಿಯುಮಂದಿನ ದಿವಸಮಲ್ಲಿರ್ದು (ಪಂಚತಂ. ೧೧೧. ೨೦) ; ಸ್ಥಳಚರ ವನಚರ ಜಳಚರ ಶಾಖಾಚರಂಗಳಪ್ಪ ತಂತಮ್ಮ ವಾಹನಂಗಳ್ಗೆ ಯೋಗ್ಯಂಗಳಾದ ಸ್ಥಾನಂಗಳಂ ನೋಡಿ (ಭಾಧಪು. ೮-೨೦ ಪ.).

[ಸಂ.]

ಶಾಖಾಚರಬಂಧ (ನಾ). ಮಲ್ಲಯುದ್ಧದ ಒಂದು ಪಟ್ಟು; ಕಪಿಮುಷ್ಟಿಯಂತೆ ಬಿಗಿಯಾದ ಹಿಡಿತ : ತಳಹತ್ತಂ ದಣುವಟ್ಟ ಖೊಪ್ಪರಮುರೋಬಂಧಂ ಲತಾಬಂಧಮುಜ್ಜ್ವಳಶಾಖಾಚರಬಂಧಮಾಯತಿಕೆಬಂಧಂ... ಬಾಹುತಳಂ ಚಮತ್ಕರಿಸೆ ನಾನಾಕೌಶಲಂದೋಱಿದರ್ (ಶಬಶಂ. ೪-೭೫). [ಸಂ.]

ಶಾಖಾಧ್ಯಾಯಿ (ನಾ). ವೇದದ ಯಾವುದಾದರೊಂದು ಶಾಖೆಯನ್ನು ಅಭ್ಯಾಸ ಮಾಡುವವನು : ಆ ವೇದಪಾಠಶಾಲೆಯಲ್ಲಿ ಅನೇಕ ಜನ ಶಾಖಾಧ್ಯಾಯಿಗಳಿದ್ದಾರೆ (ರೂಢಿ). [ಸಂ. ಶಾಖಾಧ್ಯಾಯಿನ್]

ಶಾಖಾನಗರ (ನಾ). (ರಾಜಧಾನಿ ಅಥವಾ ಪಟ್ಟಣದ) ಬಡಾವಣೆ ; ಉಪನಗರ: "ಶಾಖಾನಗರಂ, ಉಪನಗರಂ — ಈ ೨ ರಾಜಧಾನಿಯ ಕೆಲದ ಬೀಡು" (ಹಲಾಯು. ೪೮-೧೩೧) ; ಶಾಖಾನಗರೋಪವನಂ ಶಾಖಾಯತಕರಮನೆತ್ತಿ (ಧರ್ಮನಾ. ೪-೫೫); ಈ ಪಟ್ಟಣದಲ್ಲಿ ಈಗ ಶಾಖಾನಗರಗಳು ಸಹಿತವಾಗಿ ಸುಮಾರು ೧,೬೦,೦೦೦ ಜನರು ವಾಸಿಸುತ್ತಾರೆ (ಮುಂಬಯಿ. ೬-೪೯). [ಸಂ.]

ಶಾಖಾಪಥ (ನಾ). ಕವಲುದಾರಿ ; ಸೀಳುಹಾದಿ : ಆ ದಿನ ಗುಪ್ತಸಂಕೇತವನ್ನು ಸೂಕ್ಷ್ಮವಾಗಿ ಅನುಸರಿಸುತ್ತ ಒಂದು ವಿಶೇಷಸ್ಥಾನದಿಂದ ಕಲ್ಲು ಮೀಟ ತೆಗೆದು ಒಂದು ಶಾಖಾಪಥವನ್ನು ಆವಿಷ್ಕಾರ ಮಾಡಿದನು (ಇಪ್ರಕ. ೩೪೨). [ಸಂ.]

ಶಾಖಾಪುರ (ನಾ). = ಶಾಖಾನಗರ : ಖಳರಿಗೆ ಕೇಡುಗಾಲವಿದು ಮೊಳವುದಿಲ್ಲಿರ ಬಾರದೆಂದಳವಳಿವುತಲ್ಲಿಯದಲ್ಲಿ ಬಲ್ಲವರಿಳಿದು ದುರ್ಗವನ್ನೆದಿದರು ಶಾಖಾಪುರಾಳಿಗಳ (ತೂರರಾ. ೫-೭-೧೫). [ಸಂ.]

ಶಾಖಾಮೃಗ (ನಾ). ೧. ಮರದಲ್ಲಿ ವಾಸಿಸುವ ಪ್ರಾಣಿ ; ಕೋತಿ : ಶಾಖಾಮೃಗಮಲರ ಮಾಲೆಗಿಳಲ್ ಮಿಗ ಬಲ್ಲುದದಲ್ಲದಂತಿರೇಂ ರಚಿಯಿಕುಮೇ (ಶಬಶಂ. ೧-೧೫). ೨. ಅಳಿಲು. [ಸಂ.]

ಶಾಖಾರಂಡ (ನಾ). ವೇದಾಧ್ಯಯನದಲ್ಲಿ ತನ್ನ ಶಾಖೆಯನ್ನು ಬಿಟ್ಟು ಮತ್ತೊಂದು ಶಾಖೆಯನ್ನು ಅಧ್ಯಯನ ಮಾಡುವ ಬ್ರಾಹ್ಮಣ : ತನ್ನ ಶಾಖೆಯ ನೋಡದನ್ಯಶಾಖೆಯ ಪಠಿಸುವಂ ನೋಡಲಾಗಿ ಶಾಖಾರಂಡನೆನಿಸುವನು (ವೀರಶೈವ. ೭-೨-೨೩). [ಸಂ.]

ಶಾಖಾಸ್ಥಿ (ನಾ). ಕೈ ಅಥವಾ ಕಾಲಿನ ಮೂಳೆ : "ನಳಕಮೆನೆ ಶಾಖಾಸ್ಥಿಯೆಂದೆನಲು ಕೈಕಾಲಯೆಲುವು" (ಮಂಗರಾ. ೧೧೭-೬). [ಸಂ.]

ಶಾಖಿ (ಗು). ೧. ಕೊಂಬೆಗಳನ್ನು ಹೊಂದಿರುವ. (ನಾ). ೨. ಮರ ; ವೃಕ್ಷ : ಒಲ್ಲೆಅಪಂತೆ ತಳ್ತ ಪೂವಿನ ಪೂಸಗೊಂಚಲಿಂ ಮರನಿದೇನೆಸದಿರ್ದುವೂ ಕಲ್ತುವಾಗದೇ ವಿನಯಮನೀ ತಪೋಧನರ ಕೈಯೊಳ ಶಾಖಿಗಳುಂ ನಗೇಂದ್ರ [ದಾ] (ಪಂಪಭಾ. ೧-೧೧೬); ಇತ್ತುದದೊಂದು ಶಾಖಿ ಶುಭಕಾಗೊಲವಿಂ ಶಶಿಪಾಂಡುವಸ್ತ್ರಮಂ (ಶಾಕುಂತ. ೫೧ ೮೩). ೩. ವೇದ. ೪. ವೇದದ ಯಾವುದಾದರೊಂದು ಶಾಖೆಗೆ ಸಂಬಂಧಿಸಿದುದು. ೫. ವೇದದ ಶಾಖೆಯೊಂದನ್ನು ಅನುಸರಿಸುವವನು. [ಸಂ. ಶಾಖಿನ್]

ಶಾಖೆ (ನಾ). ೧. ಮರದ ಕೊಂಬೆ, —ಟೊಂಗೆ : "ಶಾಖಾ, ಲತಾ — ೨ ಕೊಂಬೆಗಳ ಹೆಸರುಗಳು" (ಸಿದ್ಧಾಂತಿ. ೧೧೨). ೨. ವಿಭಾಗ ; ಅಂಗ. ೩. ತೋಳು. ೪. ಪಂಗಡ; ವರ್ಗ : ಇಂಡೊ — ಆರ್ಯನ್ ವರ್ಗ ಇಂಡೊ—ಯೂರೋಪಿಯನ್ ಕುಟುಂಬದ ಒಂದು ಪ್ರಧಾನಶಾಖೆ (ದ್ರಾವಿವಿ. ೨೦ ಹಿನ್ನಲೆ). ೫. ಉಪಸಂಸ್ಥೆ : ತಾಂಡೂರ — ಇಲ್ಲಿಯ ಅಂಗಡಿಯು ಕಲಬುರ್ಗಿ ಅಂಗಡಿಯ ಶಾಖೆಯು (ಮುಂಬಯಿ. ೨೮). ೬. ಒಂದು ಸಂಸ್ಥೆಯ ಅಥವಾ ಕಚೇರಿಯ ಒಳವಿಭಾಗ : ನಗರದ ಈ ಶಾಖೆಯಲ್ಲಿ ಅನೇಕ ಕೆಲಸಗಾರರಿದ್ದಾರೆ. (ರೂಢಿ). ೭. ಪರಂಪರಾಗತವಾಗಿ ಬೇರೆ ಬೇರೆ ಅಧ್ಯಯನ ಸಂಸ್ಥೆ ಅಥವಾ ಪಂಥಗಳಿಗೆ ಅನೂಚಾನವಾಗಿ ಬಂದ ವೇದಪಾಠ ಮತ್ತು ಆ ವೇದಪಾಠವನ್ನು ಅನುಸರಿಸುವ ಪಂಥ. ೮. ನಾಲ್ಕು ವೇದಗಳಲ್ಲಿ ಯಾವುದಾದರೂ ಒಂದು ಪಾಠ : ಓದಿಸಾ ಪದಖಂಡವರ್ಗಾ ಪಾದಶಾಖೆಗಳಿಂದವಱೊಳ್ (ಬಸಪು. ೫೫-೪೫); ನಾನಾಗೋತ್ರದ ನಾನಾಸೂತ್ರದ ನಾನಾಶಾಖೆಗಳಾದ ಸಕಲವಿದ್ಯಾಪಾರೀಣರಾದ ಪಾತ್ರಭೂತರಾದ ಬ್ರಾಹ್ಮಣೋತ್ತಮರಿಗೆ... ಸರ್ವಮಾನ್ಯವಾಗಿ ಧಾರ[ಯ]ಸೆರದು ಕೊಟ್ಟೆವಾಗಿ (ಎಕ. IV. ಕೃಷ್ಣರಾ. ೭೭-೨೪: 1663). ೯. [ರಾಜನೀ] ಮಂತ್ರಿಯ ಅಧಿಕಾರಕ್ಷೇತ್ರ, — ಖಾತೆ. ೧೦. [ನಾಟ್ಯ] ಆಂಗಿಕಾಭಿನಯದ ಮೂರು ವಿಧಗಳಲ್ಲಿ ಒಂದು ; "ಆಂಗಿಕಾಭಿನಯವು ಶಾಖೆ, ಅಂಕುರ, ವೃತ್ತ ಎಂದು ಮೂರು ವಿಧ... ಕರವರ್ತನೆಗಳನ್ನು ಮಾಡುವುದೇ ಶಾಖೆ" (ಲಾಸ್ಯರಂ. ೨೨೦ ಗದ್ಯಾನುವಾದ): ವಿರಚಿಪ ಕರವರ್ತನದಿಂ ದೂರವುದು ತಾ ಶಾಖೆ (ಲಾಸ್ಯರಂ. ೧-೭೧).

ಶಾಖೋಪಶಾಖೆ = ಮರದ ದೊಡ್ಡ ಕೊಂಬೆ ಮತ್ತು ಅದರ ಟಿಸಿಲುಗಳು: ಇಟ್ಟಣಿಸಿ ಛಿಟಛಿಟಸಿ ಶಿಖಿ... ಭುಗಿಲಿಟ್ಟು ಕವಿದುದು ತುದಿಗೆ ಬಹುಶಾಖೋಪಶಾಖೆಗಳ (ಕುವಾಅ. ೨೦-೫೫); ಹೊರವಾಗಿ ಬೆಳೆಯುತು ಹಸುರಾಗಿ ಹರಡಿತು ಶಾಖೋಪಶಾಖೆಗಳಾಗಿ (ಇಂಶಾಪ. ೧೪೪-೭). ೨. ಮೂಲಸಂಸ್ಥೆಯ ಉಪಸಂಸ್ಥೆ ಮತ್ತು ಅದರ ಒಳವಿಭಾಗಗಳು : ಬಹಳ ಹಿಂದೆಯೇ ಸ್ಥಾಪಿತವಾದ ಆ ಸಂಸ್ಥೆಯು ಈಗ ತನ್ನ ಅನೇಕ ಶಾಖೋಪಶಾಖೆಗಳನ್ನು ಬೇರೆ ಬೇರೆ ಊರುಗಳಲ್ಲಿ ತೆರೆದಿದೆ(ರೂಢಿ).

[ಸಂ. ಶಾಖಾ]

ಶಾಗಮಟ್ಟೆ (ನಾ). ಕೇದಿಗೆ; ತಾಳೆಹೂವು : ಹಳ್ಳವಿಲ್ಲದ ಕಡೆಯಲ್ಲಿ ಶಾಗಮಟ್ಟೆ ಎಂದರೆ ಕೇದಿಗೆಗೆ ಹೆಸರು, ಆ ಕೇದಿಗೆಯನ್ನಾದರೂ ಬೇಲಿಯ ಹೊರಮೈಯಲ್ಲಿ ಹಚ್ಚಬೇಕು (ಕೃಷಿಪ್ರ. ೨೦೭). 'ಚಾಗಮಟ್ಟೆ' ಪರಾ. [?]

ಶಾಜೀರಿಗೆ (ನಾ). ಒಂದು ಬಗೆಯ ಉತ್ತಮವಾದ ಜೀರಿಗೆ: ಜೀರಿಗೆಯನ್ನಾದರೂ ಮುಂಗಾರಿಯ ಕಾಲದಲ್ಲಿ ಬಿತ್ತಬೇಕು. ಹಾಗೆ ಶಾಜೀರಿಗೆಯನ್ನಾದರೂ ಬಿತ್ತಿದರೆ ಬರುತ್ತದೆ (ಕೃಷಿಪ್ರ. ೬೮). [← ಪಾರ. ಶಾಹಜೀರಹ್; ಮರಾ. ಶಹಾಜಿರೇ; ಗುಜ. ಶಾಜಿರು]

ಶಾಟ$_1$ (ನಾ). ೧. ಅರಿವೆ ; ಬಟ್ಟೆ ; ವಸ್ತ್ರ. ೨. ಶುಭ್ರವಾದ ಉಡಿಗೆ ; ಮಡಿಯಾದ ಉಡುಪು: (ಕ). ೩. ಒಂದು ಬಗೆಯ ಹೆಂಗಸರ ಉಡುಪು. ೪. ಒಳಲಂಗ. [ಸಂ.]

ಶಾಟ$_2$, **ಶಂಟ** (ನಾ). ಗುಹ್ಯಾಂಗದ ಮೇಲೆ ಬೆಳೆಯುವ ಕೂದಲು; ಶಪ್ಪ : ಊಟಕ್ಕಿಲ್ಲದ ಉಪ್ಪಿನಕಾಯಿ ಕತ್ತೆಶಾಟಕ್ಕಿಂತ ಕಡೆ (ಗಾದೆ). ಶಂಟ: ಕಂಡು ಕರೆಯದ ನೆಂಟ ಗಂಡುಕತ್ತೆಯ ಶಂಟ (ದಾಸಪ. ೫. ೫೪-೪); ದೇವರ ಗಂಟು ಹೋದರೆ ಪೂಜಾರಿ ಶಂಟ ಹೋಯಿತು (ಗಾದೆ). [← ಮರಾ. ಶೇಠ್, ಶೇಂಟ್]

ಶಾಟಕ (ನಾ). ಬಟ್ಟೆ; ವಸ್ತ್ರ. [ಸಂ.]

ಶಾಟಿ (ನಾ). ೧. = ಶಾಟಕ. ೨. ಮೇಲುಹೊದಿಕೆ ; ಧೋತರ ; ವಲ್ಲಿ : "ಬೃಹತಿಕೆ ಶಾಟಿ ವೈಕಕ್ಷಮಾ ಪೊದೆವವುತ್ತರಾಸಂಗಮಕ್ಕು" (ಮಂಗರಾ. ೭೭-೯): ಚೀರ, ಸೀರೆ, ಚೇಲ, ಸಾಡಿ, ಶಾಟಿಗಳು ಮೂಲತಃ ವಲ್ಕಲಗಳು (ಕರ್ಣಾಪೂ. ೧೫೦). ೩. ಸಂನ್ಯಾಸಿಗಳು ತೊಡುವ ಕಾವಿಬಣ್ಣದ ಬಟ್ಟೆ ; ಕಾಷಾಯವಸ್ತ್ರ : ನೀರಲ್ಲಿ ನೆನೆದಿರ್ದ ಶಾಟಿಯಂಗಿಯ ತೋಳ ತೋಱಲ್ಕೆ ಮತ್ತೇಳುಘಳಿಗೆಯೊಳು ಬಂದೋರ್ವ ಧಾರುಣಿಯೊಳುಂ ಬಿದ್ದು ನುತಿಸುತಿರೆ (ಗುರುಚಾ. ೩-೨೪) : ಆಚಾರ್ಯರು ಬಹಳ ಕನಿಕರದಿಂದ ಒಮ್ಮೆ ತಮ್ಮ ಶಾಟಿಯನ್ನು ಅತ್ತ ಬೀಸುತ್ತಲೇ ಆ ಹಡಗಿಗೆ ಅನುಕೂಲ ಮಾರುತನ ಸಹಾಯವಾದಂತಾಗಿ ಅದು ಸರಾಗವಾಗಿ ದಂಡೆಗೆ ಬಂದು ಮುಟ್ಟಿತು (ಭಕ್ತೋಕ್ತಿ. ೩೮). ೪. ಪಂಚೆ : ಚೆಲ್ಲಣಂ ಬಾಲಗೃಪಂ ಬಿಗಿದ ಕಾಸೆ ಬಿಳಿಯೊಲ್ಲಿ ಕಾವಿಯ

ಶಾಟಿಯಂಗದಟ್ಟುಂ ಬೆಳೆದ ಚೆಳ್ಳುಗುರು (ಗುರುಚಾ. ೩-೫೦); ವರಿಷ್ಠರನ್ನು ಕಾಣಬೇಕಾದಾಗ ಸೂಟು ಬಿಟ್ಟು ಶಾಟ ಧರಿಸಿದರೆ ಸೃಷ್ಟಿಯೆ ನಿಂತುಹೋಗಬೇಕಾದೀತು (ಮುಂಗಾಪು. ೨೫). [ಸಂ. ಶಾಟೀ]

ಶಾಠಿ 'ಸಾಟ್ಟಿ$_2$' ನೋ.

ಶಾಠ್ಯ (ನಾ). ೧. ಮೋಸ ; ವಂಚನೆ : ಕೊಲಿಸುವ ಕೊಲ್ವ ಶಾಠ್ಯಪರವಾಗಿಸುವಾಗುವ ಕಳ್ವ ಕಳ್ವರೊಳ್ ಸಲೆ ಪುದುಗೊಳ್ವ ಪಾದರಮನಾಡಿಸುವ ಕಾಂಕ್ಷೆಯೊಳ್ ಮನಂ ಸಲಿಸುವ ಸ್ವಲ್ಪಪಾಪಪರನುಂ (ಸುಕುಮಾ. ೫-೪೪). ೨. ಹಟಮಾರಿತನ; ಚಂಡಿತನ : ತನ್ನ ಶಾಠ್ಯ, ಅನ್ಯಾಯ, ಅಜ್ಞಾನ, ಕಾಮಾಂಧತೆ — ಇವೇ ಈ ದುಃಖಮಯತೆಯನ್ನು ತಂದಿರಬಹುದೆಂಬುದರ ಕಲ್ಪನೆಯು ಅವನಿಗೆ ತುಸುವಾದರೂ ಬರಲಿಲ್ಲ (ಸಮಜೀ. ೧೨೩). ೩. ದುಷ್ಟತನ ; ಕೇಡಿಗಬುದ್ಧಿ. [ಸಂ.]

ಶಾಡ್ವಲ, ಶಾಡ್ವಳ (ಗು). ೧. ಹಸುರಾದ; ಹಚ್ಚನೆಯ : ಪಕ್ಷಂಗಳ ಶಾಡ್ವಲಚ್ಛವಿ ಮನಂಗೊಳೆ ಪಾಱುವ ಕೀರಮಾಲೆ . . . ತೋರಣದಂತೆ ರಂಜಿಕುಂ (ಜಗವಿ. ೪-೬೬). (ನಾ). ೨. ಎಳೆಯ ಹುಲ್ಲಿನಿಂದ ಕೂಡಿದ ಪ್ರದೇಶ; ಹಚ್ಚಹಸುರಾದ ಹುಲ್ಲುಗಾವಲು ; ಹಸಲೆ : ಜೀರ್ಣಚರನ್ಮೃಗಾಳಿ . . . ಜಗದ್ವಿವರಾಂತಮಪ್ಪ ರಾಮನ ಘನಚಾಪದಂಡರವಮಂ ನೆನೆದತ್ತಲುಮಿಕ್ಷಿಸುತ್ತೆ ಕಂಬನಿಗಳನಿಕ್ಕಿ ಮೇಪುಗೊಳಲೊಲ್ಲವು ರೂಢಿಯ ಶಾಡ್ವಲಂಗಳೊಳ್ (ಕಾದಂಪೂ. ೧೧೧) ; ರಾಜಿಸೆ ನೀರ್ದಾಣದೊತ್ತಿನೊಳ್ ಪಚ್ಚನೆ ಬೆಳೆದ ಹರಿತಶಾಡ್ವಲಮುಂ, ಸುತ್ತುಂ ನೀಳ್ದ ಪೊಟ್ಟದುಂಗೆಯ ಚೊಂಪಮುಂ . . . ಚೆಲ್ವಾಯ್ತು (ರಾಮಾಶ್ವ. ೩೦-೧೯). **ಶಾಡ್ವಳ** : ೨. ಆ ಮಹಾತ್ಮಂ ಜಲದೇವತಾನುಗ್ರಹಮಂ ಪಡೆದು ಶಾಡ್ವಳರುಚಿರಗಿರಿನಿತಂಬ ದೋಪಳದೊಳೊಡಂಬಡಿನೊಳೊಱಗುವ ನಗಜೇಂದ್ರನಂತೆ (ವರ್ಧಚ. ೮-೯೬ ವ). ೩. ಎಳೆಯ ಹುಲ್ಲು ; ಗರಿಕೆ : ಬಳವಳಿದ ರಥತುರಂಗವೃಂದಮಂ ಬಿಟ್ಟು ಶೀತಳವಾರಿಯಂ ತೋಱಿ ಮೆಯ್ದೊಳೆದು ಲಲಿತಶಾಡ್ವಳವನೊಲವಿಂ ಕೊಯ್ದು ಮುಂದಿಟ್ಟು ಕಟ್ಟಿ ಪ್ರಧಾನ ನಟ್ಟಡವಿಯೊಳಗೆ . . . ವಿಶ್ರಮಿಸಲು (ಹಚಕಾ. ೬-೪೧). 'ಶಾದ್ವಲ' ಪರಾ. [ಸಂ.]

ಶಾಡ್ವಳ 'ಶಾಡ್ವಲ' ನೋ.

ಶಾಣ$_1$ (ಗು). ೧. ಸೆಣಬಿನಿಂದ ತಯಾರಿಸಿದ. (ನಾ). ೨. ಹರಿತಗೊಳಿಸುವಿಕೆ : (ಕಿ). ೩. ಸಾಣೆಕಲ್ಲು ; ಮಸೆಗಲ್ಲು. ೪. ಚಿನ್ನ, ಬೆಳ್ಳಿ ಮುಂತಾದ ಲೋಹಗಳನ್ನು ಪರೀಕ್ಷಿಸುವ ಕಲ್ಲು; ಒರೆಗಲ್ಲು; ನಿಕಷ: 'ಖರಶಾಣ' ಪರಾ. ೫. ಗರಗಸ. ೬. ಒಂದು ತೂಕದ ಮಾನ; ನಾಲ್ಕು ಮಾಷಗಳ ತೂಕ : "ಶಾಣಮದು ನಿಕಷಮುಂ ಪರಿಮಾಣಮುಮೆರಡುಂ" (ವಸ್ತುಕೋ. ೧೨೫-೪೪) ; ೪. ಮಾಷ = ೧ ಶಾಣ ೪.೮ ಗ್ರಾಂ. (ಸಕಮ್ಯ. xiii. ಪ್ರಸ್ತಾವನೆ). ೭. ಗೋಣಿತಾಟು. [ಸಂ.]

ಶಾಣ$_2$ 'ಶಹಣೆ' ನೋ.

ಶಾಣಶಿಲೆ (ನಾ). ಒರೆಗಲ್ಲು : ನಿರ್ಮಲಶಾಣಶಿಲೆಗಳಂ ನೀರಾಜನಾರ್ಥಫಲಕ ವ್ಯಜನನಿಕರಂಗಳಂ . . . ಬೇಡುವರ ಬಗೆಯಱಿದವರ್ಗಾ ವಸ್ತುವಂ ಕುಡುತೆ (ಅರಾಚ. ೫-೬-೧೬). [ಸಂ. ಶಾಣಶಿಲಾ]

ಶಾಣಾರಿಕಾಸು (ನಾ). ಒಂದು ಬಗೆಯ ನಾಣ್ಯ : ನವಾಬರು ಅವನಿಗೆ ಸನ್ಮಾನಗಳನ್ನು ಮಾಡಿ, ೪ ಲಕ್ಷ ಶಾಣಾರಿಕಾಸುಗಳನ್ನು ಕೊಟ್ಟರೆ ನಿನ್ನ ಕಲ್ಲಿಕೋಟೆಯನ್ನು ನಿನಗೆ ಕೊಡುತ್ತೇನೆಂದು ಹೇಳಿ . . . ದೇವಸ್ಥಾನದಲ್ಲಿ ಇಳಿಸಿದ್ದನು (ಮಹಾವಂ. I, ೨೦೧). [ಶಾಣಾರಿ? + ಕಾಸು$_2$]

ಶಾಣಿತ (ಗು). ಹರಿತಗೊಳಿಸಿದ : ನೋಡು ಮತ್ತೆ ಕಾಮಿನಿ, ವಳಿತ ಶಾಣಿತ ತೀರನು (ಕೋಹಿನೂ. ೧೦೨). [ಸಂ.]

ಶಾಣೆ 'ಶಹಣೆ' ನೋ.

ಶಾಣೆತನ, ಶಾಣೆಯತನ, ಶಾಹಣೇತನ, ಶ್ಯಾಣ್ಯಾತನ (ನಾ). ಜಾಣತನ; ಚಾತುರ್ಯ : ಧಡ್ಡಮಂದೀಗ ಛಾಡೀ ಹೇಳೋ ಶಾಣೇತನಾ ಎಲ್ಲೈತಿ? (ಉದವೃ. ೧೫); ಗಂಡನ್ನ ಇಟಗೊಂಬೋ ಶಾಣೇತನ ಇಲ್ಲದ ಮುಗ್ಗಲಗೇಡಿಗೆ ಇನ್ನೊಬ್ಬರ ರಂಡೆಮುಂಡೆತನದ ಗೊಡವಿ ಯಾಕ? (ಸಮಜೀ. ೨೦೫). **ಶಾಣೆಯತನ** : ಶಾಣೆಯತನವು ಮಾನವಮಾನವು ಶೈನ್ಯಗಳು ಕನಸಣ್ಣಾ (ಚಿದಾವ. ೩೪-೫). **ಶಾಹಣೇತನ** : ದಮಡಿ ದಮಡಿ ಶಾಹಣೇತನ ಮಾಡಿ ಐವತ್ತುಸಾವಿರ ರೂಪಾಯಿ ಕೂಡಹಾಕಿ (ಬಾಂಡಾಯ. ೪). **ಶ್ಯಾಣ್ಯಾತನ** : ದುಡ್ಡು ಗಳಿಸಿದರ ಉಪಯೋಗ ಮಾಡಿಕೊಂಡೇನು ಅನ್ನೂ ಶ್ಯಾಣ್ಯಾತನ ಬೇಕೊ ಬ್ಯಾಡೋ? (ಅಪನಾ. ೨೧೪). [ಶಾಣೆ (< ಶಹಣೆ) + — ತನ]

ಶಾಣೆಯ 'ಶಹಣೆ' ನೋ.

ಶಾಣೆಯತನ 'ಶಾಣೆತನ' ನೋ.

ಶಾಣೋಪಲ (ನಾ). ಸಾಣೆಕಲ್ಲು ; ಮಸೆಗಲ್ಲು : ಪಳುಕಿನ ಶಾಣೋಪಲದೊಳ್ಮಿಗೆ ಬಗೆಗೊಳೆ ಕತ್ತುರಿಯಂ ತೇಯುತ್ತಿರ್ದೊರ್ವಳ ಪಾಂಗೆಂತೆನೆ (ಉದ್ಭದೇ. ೨-೩೬); ಕುಸುಮಶರನಸುಗೆಸರಮಂ ಮಸೆಯೆ ಸುಧಾಕಿರಣಬಿಂಬಶಾಣೋಪಲದೊಳ್ಮಸಗಿ ಪನಿ ಪತ್ತಿ ತುದಿಯೊಳ್ಮಿಸುಗುವುದೆನೆ ಮೆಱೆದುವವಳ ಪದತಳದುಗುರ್ಗಳ್ (ರಾಜಶೇ. ೭-೨೭). [ಸಂ.]

ಶಾಣ್ಯಾ 'ಶಹಣೆ' ನೋ.

ಶಾತ (ಗು). ೧. ಹರಿತವಾದ ; ಚೂಪಾದ : ಕೂಟಾಗ್ರ [ಮು]ದಗ್ರವಜ್ರಘಾತ ದಿಂದುರುಳ್ವಂತೆ ರತ್ನಮಕುಟಮರಾತಿಶಾತಶರದಿನುರುಳ್ವುದುಂ (ಪಂಪಭಾ. ೧೨-೨೦೨ ವ); ಪೂಱಮಟ್ಟತ್ತು ಕಾಂತಾರದಿಂ ಪಾಟಲನೇತ್ರಂ . . . ಶಾತಶೃಂಗಂ ಗವೇಂದ್ರಂ (ಜಗವಿ. ೫-೩೫) ; ಆ ತಳೋದರಿ . . . ಸಾವಿಗೆ ಶಾತಖಡ್ಗಕೆ ಕೈದುಡುಕಿದಳು ಕಾವಲಸುರೆಯರ (ತೊರರಾ. ೫-೩-೬೮). ೨. ತೆಳ್ಳನೆಯ : 'ಶಾತಕುಕ್ಷಿ' ಪರಾ. (ನಾ). ೩. ಹರಿತಗೊಳಿಸಿದುದು : "ನಿಶಿತಂ, ಕ್ಷತಂ, ಶಾತಂ, ತೇಜಿತಂ — ೪ ಹದವಿಡಲ್ಪಟ್ಟದ್ದು" (ಸಿದ್ಧಾಂತಿ. ೩೪೭). ೪. ತೆಳುವಾಗಿರುವಂಥದು : "ಸನ್ನಮೆನೆ ಶಾತ [ಪಾಠಾಂ. ಶಾಂತ]ಮೆನೆ ಸಣ್ಣನದು" (ಮಂಗರಾ. ೧೩೨-೨೬). ೫. ನಿತ್ರಾಣ; ನಿಶ್ಶಕ್ತಿ; ದುರ್ಬಲತೆ : (ಕಿ). ೬. ಸಂತೋಷ ; ಹಿಗ್ಗು : "ಮುತ್, ಪ್ರೀತಿಃ, ಪ್ರಮದಃ, ಹರ್ಷಃ . . . ಶಾತಂ, ಸುಖಂ — ೧೨ ಸಂತೋಷದ ಹೆಸರುಗಳು" (ಸಿದ್ಧಾಂತಿ. ೪೨). ೭. ಚೆಲುವು; ಮನೋಹರತೆ : (ಕಿ). ೮. ಒಂದು ಬಗೆಯ ಸಸ್ಯ ; ಧತ್ತೂರ. [ಸಂ.]

ಶಾತಕುಂಭ (ನಾ). ೧. ಹೊನ್ನು ; ಬಂಗಾರ ; ಚಿನ್ನ : ರಂಭಾಸ್ತಂಭೋಪಮಾನೋರು ಯುಗಳೆಯರ್ ಶಾತಕುಂಭರಂಭಾವನಂಗಳುಮಂ . . . ವಿಲಾಸದಿಂ ತೊಟಲ್ವಲ್ಲಿ (ಆದಿಪು. ೧೧-೯೩ ವ) ; ಕ್ಷೀರಾದಿ ಸವನಪಾವನರಸವಿಚಿತ್ರಾನೇಕಶಾತಕುಂಭಕುಂಭಂಗಳಿಂ . . . ಮನಂಗೊಳಿಪ ದೇವಪೂಜಾಗೃಹಮಂ ಪೊಕ್ಕು (ಪಂರಾಮಾ. ೧೨-೨ ವ); ಆ ತುರಂಗದ ಖುರಪುಟದ ನವಶಾತಕುಂಭದ ಗಾಲಿಯುಱುಬೆಯನಾ ತತುಕ್ಷಣವಾಂಪರಾರೆನೆ ಕವಿದುದುಭಯದೊಳು (ಕುವ್ಯಾಭೀ. ೪-೯೩). ೨. ಧತ್ತೂರದ ಕಾಯಿ. [ಸಂ.]

ಶಾತಕುಕ್ಷಿ (ನಾ). ತೆಳ್ಳನೆಯ ನಡುವಿನ ಹೆಣ್ಣು; ತನೂದರಿ : ಚೇತನದ ವರ್ಗದಲಿ ಸೃಷ್ಟಿಗೆ ಜಾತಸೌಖ್ಯಮದಾವುದೆನಲಾ ಶಾತಕುಕ್ಷಿಯರಾದ ಪೆಣ್ಗಳ ಕೈ ಪುದಿವು Eವ∃ದೊಂದೇ (ವಿವೇಭ. ೪-೩೨). [ಸಂ. ಶಾತಕುಕ್ಷೀ]

ಶಾತನ (ನಾ). ೧. ಹರಿತಗೊಳಿಸುವುದು. ೨. ಪತನಗೊಳಿಸುವಿಕೆ; ನಾಶಗೊಳಿಸುವಿಕೆ : ಅನ್ಯದೈವಮದಾಟವೀಪಟುಶಾತನಕುಠಾರ ಅನ್ಯದೈವಮತಂಗಮದಹರಿ (ಬಸಪು. ೫೩-೪). ೩. ಅಳಿವು ; ನಾಶ. ೪. ಬಾಡುವಿಕೆ ; ಸೊರಗುವಿಕೆ. [ಸಂ.]

ಶಾತಮನ್ಯು (ನಾ). ೧. ಇಂದ್ರನಿಗೆ ಸಂಬಂಧಿಸಿದುದು. ೨. ಐಂದ್ರಾಸ್ತ್ರ : ಅರ್ಜುನ ಕೊಂಡನಗ್ಗದ ಶಾ[ಪಾಠಾಂ. ಜಾ]ತಮನ್ಯುವನು ಆ ಮಹಾಬಾಣಾಭಿಮುಖದಲಿ ಸೋಮಧರಮಾರ್ಗಣವನಿಂತೀ ಭೀಮವಿಕ್ರಮ ಕರ್ಣನೆಚ್ಚನು (ಕುವ್ಯಾಕ. ೨೩-೪೭).

ಶಾತಮನ್ಯುವದೆಸೆ = ಇಂದ್ರನಿಗೆ ಸೇರಿದ ದಿಕ್ಕು ; ಪೂರ್ವದಿಕ್ಕು : ಈತನುತ್ತರದೆಸೆಗೆ ಭೀಮನು ಶಾತಮನ್ಯುವ ದೆಸೆಗೆ ಯಮಳರ ಭೀತರಿದ್ದೆಸೆಗೆಂದು ವೇದವ್ಯಾಸ ನೇಮಿಸಿದ (ಕುವ್ಯಾಸ. ೩-೧೨). [< ಸಂ. ಶತಮನ್ಯು]

ಶಾತೋದರಿ (ನಾ). = ಶಾತಕುಕ್ಷಿ : ಶಾತೋದರಿ ಬಯಸುವ ನಳನೀತಂ ತಾಂ ದೂತನಾಗಿ ಪೋದೊಡೆ (ನಳಚಂ. ೨೬೪) ; ನೀತಿರಹಿತ ನರಪತಿಯ ವಿಭವಜಲಜಾತ ದಲಾಂಬುವಿನಂತೆ ಶಾತೋದರಿಯರ ಬಱುನೋಟದಂತತಿಕಾತರತೆಯನೆಯ್ದದಿಹುದೆ (ಕುರಾಸಾಂ. ೩೫-೩೪). [ಸಂ. ಶಾತೋದರೀ]

ಶಾತ್ತುಮೊರೆ (ನಾ). ೧. ವೈಷ್ಣವದೇವಾಲಯಗಳಲ್ಲಿ 'ಪ್ರಬಂಧವಾಚನ'ದ ನಂತರ ಮಾಡುವ ಪವಿತ್ರ ಸ್ತೋತ್ರಗಳ ಪಠಣ : ನಮೋ . . . ಪುಳಿಯೋರೆ ಯಿರದ ಮೊರೆಯದ ಶಾತ್ತುಮೊರೆಗು ಕಣ್ಮುಚ್ಚಿ ಕೈಮುಗಿದು ಕೂಳ್ ಕಾಯ್ವ ನಿಮಗು ಮುಗಿಯದೇ ನಿಮ್ಮ ಮರೆಯೊಳು ಬಾಳ್ವ ನನಗು! (ಗಣೇಶ. ೭೧-೬). ೨. ಆಳ್ವಾರುಗಳ ಉತ್ಸವಸಮಾರಂಭದ ಕೊನೆ, — ಮುಕ್ತಾಯ : ಉತ್ಸವ ಜರುಗುತ್ತಿರುವ ಇಂದಿನ ಸನ್ನಿವೇಶದಲ್ಲಿ ನಾನು ಬಹಳ ಉಲ್ಲಾಸವಾಗಿದ್ದೇನೆ. ಇನ್ನೇನು ಮಜ್ಜನವಾಗಿ ಶಾತ್ತುಮೊರೆಯ ವೇಳೆ ಸಮೀಪಿಸುತ್ತಿದೆ (ಈಚೆ. ೮೬). [← ತಮಿ. ಚಾತ್ತುಮುಱೈ]

ಶಾತ್ರವ (ಗು). ೧. ಶತ್ರುವಿಗೆ ಸಂಬಂಧಿಸಿದ. (ನಾ). ೨. ಹಗೆ ; ಶತ್ರು : ವಿಕ್ರಾಂತಕ್ಷತ್ರಚಾರಿತ್ರಂಗಳಂ ಕೇಳದ ಶಾತ್ರವಗಣನೆಯೊಳಂ ವಿರೋಧಿದ್ವಜನೀ ಧೂಲೀಪಟಲಪಿಹಿತದೃಷ್ಟಿಗಳಾಗಿ (ಆದಿಪು. ೬ ೧೪-೪೬ ವ); ಅವಯವದಿಂದುದುರ್ಚುವ ಭವಭಯಮುಂ ಶಿಥಿಲಮಾದುದೆಂದೊಡೆ ತಾಂ ಶಾತ್ರವಭಯಮೇಗಹನಮೊ ಕರ್ಮ ವೈರಿರ್ಮೂರ್ಲಾಂಘ್ರಿಕಮಲಾಂತಿಕದೊಳ್ (ಶಾಂಪು. ೬-೪೧); ಇವು ಮಹಾರಣರಂಗದಲಿ ಶಾತ್ರವನಿವಾರಣಮೈಸಲಿ (ಕುವಾಅ. ೬-೨೮). ೩. ಹಗೆತನ; ಶತ್ರುತ್ವ. ೪. ಹಗೆಗಳ ಗುಂಪು; ಶತ್ರುಸಮೂಹ. [ಸಂ.]

ಶಾತ್ರವಮಂತ್ರಪಂಚಕ (ನಾ). [ರಾಜನೀ] ಶತ್ರುವಿನೊಂದಿಗೆ ವ್ಯವಹರಿಸುವಾಗ ಕೈಗೊಳ್ಳುವ ಕರ್ಮಾರಂಭೋಪಾಯ, ಪುರುಷದ್ರವ್ಯಸಂಪತ್ತು, ದೇಶಕಾಲ ವಿಭಾಗ, ವಿನಿಪಾತಪ್ರತೀಕಾರ ಮತ್ತು ಕಾರ್ಯಸಿದ್ಧಿಗಳೆಂಬ ಐದು ಬಗೆಯ ಉಪಾಯಗಳು : ಅವಯವದಿಂದಲಿಗುಂ ಪಂಚವಿಧಾಹಿತವರ್ಗದುರ್ಗಪಂಚಕಮಂ ಶಾತ್ರವಮಂತ್ರಪಂಚಕಮನೊಪ್ಪುವ ತತ್ಪ್ರಭುಮಂತ್ರಶಕ್ತಿಗಳ್ ತೀವ್ರಂಗಳ್ (ಶಾಂಪು. ೨-೪೭). [ಸಂ.]

ಶಾದ (ನಾ). ೧. ಎಳೆಯ ಹುಲ್ಲು. ೨. ಕೆಸರು; ರಾಡಿ : "ಪರಿಷಜ್ಜಂಬಾಳ ನಿಷದ್ವರಕರ್ದಮ ಶಾದ" (ಪಾರ್ಶ್ವ. ೨೫-೨೦). [ಸಂ.]

ಶಾದ್ವಲ (ಗು). ೧. ಹಚ್ಚನೆಯ ; ಹಸುರಾದ. (ನಾ). ೨. ಹಚ್ಚನೆಯ ಹುಲ್ಲುಗಾವಲು : "ಶಾದ್ವಲಃ, ಶಾದಹರಿತೆ — ಎಳೇಹುಲ್ಲಿನಿಂದ ಹಚ್ಚಗಿರುವ ದೇಶಕ್ಕೆ ಹೆಸರುಗಳು" (ಸಿದ್ಧಾಂತಿ. ೯೫). ೩. ಹಸಿರಾದ ಹುಲ್ಲು : ಶಾದ್ವಲದ ಮೇಲೆ ಕಿಸಲಯದ ಪರ್ಯಂಕದಲಿ . . . ವಿಶ್ರಮಿಸಿಕೊಳುತೆ (ಚಿಕ್ಕಾಂಗ. ೪೨-೧೧೪೫). [ಸಂ.]

ಶಾನಬಾಗ 'ಸೇನಬೋವ' ನೋ.

ಶಾನಬಾವ 'ಸೇನಬೋವ' ನೋ.

ಶಾನಬೋವ 'ಸೇನಬೋವ' ನೋ.

ಶಾನಭಾಗ 'ಸೇನಬೋವ' ನೋ.

ಶಾನಭೋಗ 'ಸೇನಬೋವ' ನೋ.

ಶಾನಭೋಗತನ 'ಸೇನಭೋಗತನ' ನೋ.

ಶಾನಭೋವ 'ಸೇನಬೋವ' ನೋ.

ಶಾನಾಯ, ಸೇನಾಯ (ನಾ). ಶಾನುಭೋಗನು ಶುಲ್ಕದ ರೂಪದಲ್ಲಿ ತೆಗೆದುಕೊಳ್ಳುವ, ರೈತರ ಬೆಳೆಯ ಒಂದು ಭಾಗ : 'ಶಾನಾಯಮುದ್ರೆ' ಪರಾ. **ಸೇನಾಯ** : 'ಸೇನಾಯಮುದ್ರೆ' ಪರಾ. [?]

ಶಾನಾಯಮುದ್ರೆ, ಸೇನಾಯಮುದ್ರೆ (ನಾ). ಶಾನುಭೋಗನಿಗೆ ಕೊಡಬೇಕಾದ ಆದಾಯವೆಂದು ತಿಳಿಸುವ ಮೊಹರು : ಕೋರಿನ ದವಸದಲ್ಲಿ ಸೊಲಿಗೆಗುಡ್ಡೆ ಆಯ ಎಂಬುದಾಗಿ ರುಸುಂ ಮಾಡಿ ಕೊಟ್ಟು, ಗೌಡ ಮತ್ತು ಶ್ಯಾನುಭಾಗರಿಗೆ ಶಾನಾಯಮುದ್ರೆ ಎಂಬದಾಗಿ ಕೊಡುವಂತೆ ನೇಮಕಮಾಡಿಸಿದಲ್ಲದೆ . . . ಕಾಣಿಕೆ ಕಡ್ಡಾಯ ಮುಂತಾದ್ದನ್ನು ಬಿಟ್ಟುಕೊಡುವಂತೆ ನಿಬಂಧನೆಯನ್ನು ಮಾಡಿದರು (ಮಹಾಮ. ೧.೧೧೯). **ಸೇನಾಯಮುದ್ರೆ** : ಊರಲ್ಲಿ ಚಾವಡಿಯ ಕಾವಲ್ಗಾರರು . . . ಸೇನಾಯಮುದ್ರೆ, ಕಡತದ ಕಾಣಿಕೆ . . . ಲಂಚ, ಸಂಚೆ, ಅದು, ಇದು — ಎನ್ನುತ ಎಲ್ಲಾವನ್ನೂ ಸಲ್ಲಿಸಿಕೊಳ್ಳುತ್ತಾರೆ (ಬಿಟ್ಟು. ೧೫೫-೨೩). [ಶಾನಾಯ + ಮುದ್ರೆ]

ಶಾನುಭಾಗ 'ಸೇನಬೋವ' ನೋ.

ಶಾನುಭಾವ 'ಸೇನಬೋವ' ನೋ.

ಶಾನುಭೋಗ 'ಸೇನಬೋವ' ನೋ.

ಶಾನುಭೋಗಿಕೆ 'ಸೇನಬೋಯಿಕೆ' ನೋ.

ಶಾನೆ, ಶ್ಯಾನೆ$_1$ (ನಾ). ೧. ಬಾಹುಳ್ಯ ; ಹೆಚ್ಚಳ ; ಆಧಿಕ್ಯ : ಭಸ್ಮಪರಿಧಾನದಿಂ ಪೂಜಾಗ್ನಿ ಶಾನೆಯಿಂ ಕುಳಿತೆಲ್ಲ ತಾಣದಿಂ ಯತಿಗಳ ನಿಧಾನದಿಂ ತೀರಮಸೆಯೆ (ಪರಮ. ೪-೬೦). (ಗು). ೨. ಅಧಿಕವಾದ; ಬಹಳ: ನಿನ್ನ ಪದವೆ ಶರಣುಂ ಶರಣೆಂದೆನುತ ಶಾನೆ ದೈನ್ಯದಲಿ . . . ರೋಧಿಸಲು (ಸೊಗಂಧಿ. ೧೫-೪); ಬೇಗ ಮಸಗಲಿಂತು ಶಾನೆ ದೂರವೆ ವೃಷ್ಟಿ? (ಗಿಳಿವಿ. ೧೦೭-೨೯); ಶಾನೆ ಕ್ಷೀರವ ಕೊಡುವೆ ನಿತ್ಯವು ಮಾನವರಿಗುವಕಾರಿಯು (ಗೋಪಾಡು. ೧೩-೬೧). **ಶ್ಯಾನೆ**$_1$: ೨. ಸರ್ವವೆಂದರ ನನಗೆ ಶ್ಯಾನೆ ಹೆದರಿಕೆ (ಚಂಗಾಳ್ವ. ೩೯). [← ತೆಲು. ಶಾನಾ]

ಶಾನೆ, ಶ್ಯಾನೆ$_2$ (ಅ). ಹೆಚ್ಚಾಗಿ; ತುಂಬ : ಆಳುಮಂದಿ ಶಾನೆ ಇರಲಿ ಕಾಲನು ತಾ ಬೆನ್ನ ಬಿಡನು (ಪುರಂದ. ೨-೪೯-೪). **ಶ್ಯಾನೆ** : ಯಾ ಸಮಯದೊಳ್ ಸೇನೆ ಶ್ಯಾನೆಯಿರಬೇಕು (ಸೊಗಂಧಿ. ೧೮೧-೧೭). [< ಶಾನೆ]

ಶಾಪ (ನಾ). ೧. ಕೆಡುಕನ್ನು ಬಯಸಿ ಹೇಳುವ ಮಾತು : ನಿನಗಾನಿತ್ತ ಬ್ರಹ್ಮಾಸ್ತ್ರವೆಂಬ ದಿವ್ಯಾಸ್ತ್ರವವಸಾನಕಾಲದೊಳ್ ಬೆಸಕೆಯ್ದದಿರ್ಕೆಂದು ಶಾಪಮನಿತ್ತಂ (ಪಂಪಭಾ. ೧-೧೦೫ ವ); ಎಲೆ ನಪುಂಸಕ ಗಂಡುವೇಷದ ಸುಳಿವು ನಿನಗೇಕೆನುತ ಸತಿ ಕಳವಳಿಸಿ ಕರವೆತ್ತಿದಳು ಹಿಡಿ ಹಿಡಿ ಶಾಪವಿದೆಯೆನುತ (ಕುವಾಅ. ೬-೪೦) ; ತನ್ನಿಂದಾದ ಹದನನು ತಿಳಿಯ ಹೇಳಿದು ಶಾಪವನು ಕೈಗೊಳಿಸಿ ತನಗೆಂದವರ್ಗ ಕೈಗಳ ಮುಗಿದ ನಾನೆಂದ (ತೊರಾ. ೨-೫-೨೩). ೨. ನಿಂದೆ; ಬಯ್ಗುಳು: "ಶಾಪಃ, ಆಕ್ರೋಶಃ . . . ವಿರೂಕ್ಷಣಾ — ಈ ೫ ಬಯ್ಗುಳ್" (ಪಲಾಮು. ೨೪-೧೪೮). ೩. ಪ್ರಮಾಣ ; ಪ್ರತಿಜ್ಞೆ.

ಶಾಪತಟ್ಟು = ಶಾಪ ತಗುಲು : ಅದಕ್ಕೆ ಏನೋ ಶಾಪ ತಟ್ಟಿದೆ; ಅದರ ಹಣೆಯ ಬರಹವೇ ಕೆಟ್ಟದ್ದು (ಯೋಧಪು. ೭೪). **ಶಾಪಹಾಕು** = ಬಯ್ಯು ; ನಿಂದಿಸು : ಹುಡುಗರು ಸೀಬೆಮರ ಹತ್ತಿದುದನ್ನು ಕಂಡು ಆಕೆ ಒಂದೇ ಸಮನೆ ಶಾಪ ಹಾಕಲಾರಂಭಿಸಿದಳು (ರೂಢಿ). **ಶಾಪಾದಪಶರಾದಪ** = ಶಾಪದಿಂದಾಗಲಿ ಬಾಣದಿಂದಾಗಲಿ : ರಿಪುಬಲವ ಗೆಲುವಲ್ಲಿ ಶಾಪಾದಪಶರಾದಪಿಯೆಂಬ ಜಯಲೋಲುಪನು . . . ಮಡಿದನು (ಕುವಾರ್ಜು. ೧೮ ಸೂಚನೆ). [ಸಂ.]

ಶಾಪಂಗೊಡು, ಶಾಪಕೊಡು (ಕ್ರಿ). ಶಾಪವನ್ನು ನೀಡು ; ಶಪಿಸು : ಇರ್ಮೆ ನೀಂ ಮರ್ತ್ಯಲೋಕದೊಳ್ಪುಟ್ಟಿನುತ್ತೆ ಶಾಪಂಗೊಟ್ಟಂ (ಕಾದಂಬ. ೬೧೦). **ಶಾಪಕೊಡು** : ಎಂದಿಗೂ ಶಾಪಕೊಡದವನು ಸತ್ಯಾಗ್ರಹಿ! (ಪಾಂಚಜ. ೨೧-೧೦). [ಶಾಪ + ಕೊಡು$_1$]

ಶಾಪಕೊಡು 'ಶಾಪಂಗೊಡು' ನೋ.

ಶಾಪಗ್ರಸ್ತ (ನಾ). ಶಾಪಕ್ಕೆ ಈಡಾದವನು, — ಗುರಿಯಾದವನು: ಆ ಸೌದಾಸನರಪತಿಯು ಶಾಪಗ್ರಸ್ತನಾಗಿ ಆಸುರೀಧರ್ಮವನ್ನು ಸ್ವೀಕರಿಸಿ ಕಾಡಿನಲ್ಲಿ ಕಾಲ ಕಳೆಯುತ್ತಿರುವನು (ಮಣಿಪ. ೬೪) ; ನಮ್ಮವರು ಶಾಪಗ್ರಸ್ತರು, ಮೂರ್ಖರು, ನೀವು ಮನುಷ್ಯರೆಂದೇ ಅವರು ಪರಿಗಣಿಸುವುದಿಲ್ಲ (ಮಲಸಾ. ೬೪). [ಸಂ.]

ಶಾಪಮೋಕ್ಷ (ನಾ). ಶಾಪದಿಂದ ಬಿಡುಗಡೆಯಾಗುವಿಕೆ ; ಶಾಪದ ನಿವಾರಣೆ: ಪುಂಡರೀಕನ ಶರೀರಮಂ ಕಿಡದಂತು ತಂದು . . . ಶಾಪಮೋಕ್ಷಪರ್ಯಂತಮಿರಿಸಿದಪ್ಪೆಂ (ಕಾದಂಬ. ೬೧೨) ; ಹೋಗದೆಂತುಂ ಮುನ್ನ ತಾವನುಭೋಗಿಸದೆ ಮೇಣ್ ಶಾಪವೋಕ್ಷವದಾಗಿ ಬದುಕುವ ಮಾರ್ಗವೆವಗೆಂದಿಂಗಹುದು ದೇವಾ (ಬಸಪು. ೬೪-೧೨). [ಸಂ.]

ಶಾಪಮೋಕ್ಷಿತ (ನಾ). ಶಾಪದಿಂದ ಬಿಡುಗಡೆ ಹೊಂದಿದವನು ; ಶಾಪದಿಂದ ಮುಕ್ತನಾದವನು : ಭೂತಳದೊಳಗೆ ಶಾಪಮೋಕ್ಷಿತರಾಗಿ ತಾವಲ್ಲಿ ಖ್ಯಾತಿ ಮಿಗೆ ಗಂಧರ್ವರಾಗಿ . . . ಕೈಲಾಸಕ್ಕೆ ಹೋಗುತ್ತಿರಲು (ಬಸಪು. ೬೪-೨೫). [ಸಂ.]

ಶಾಪವಿಮುಕ್ತಿ (ನಾ). = ಶಾಪಮೋಕ್ಷ : ಶಾಪಕೊಟ್ಟವರಿಂದಲೇ ಶಾಪವಿಮುಕ್ತಿಯೂ ಆಯಿತು (ರೂಢಿ). [ಸಂ.]

ಶಾಪವಿಮೋಕ್ಷ (ನಾ). = ಶಾಪಮೋಕ್ಷ : ನಿಮ್ಮ ಕೈಯಲಿ ಮಡಿದಡಲ್ಲದೆ ಎಮ್ಮ ಶಾಪವಿಮೋಕ್ಷ [ಪಾಠಾಂ. ವಿಶಾಪ]ವಾಗದು (ಬಸಪು. ೬೪-೧೭) ; ನಿನ್ನ ದೆಸೆಯಿಂದಾಯ್ತಲೇ ಪ್ರತಿಪನ್ನ ಶಾಪವಿಮೋಕ್ಷ (ಕುವಾಅ. ೧೩-೬೧). [ಸಂ.]

ಶಾಪವಿಮೋಚನೆ (ನಾ). = ಶಾಪಮೋಕ್ಷ : ಶಕುಂತಳೆಯನ್ನು ಶಾಪವಿಮೋಚನೆಯಿಂದ ಸ್ಮರಣೆಯನ್ನು ಹೊಂದಿದ ದುಷ್ಮಂತನು ಪರಿಗ್ರಹಿಸಿದನು (ಶಾಕುಂತ. ೧೧೫-೧೩) ; ನನಗೆ ಶಾಪವಿಮೋಚನೆಯಾದರೂ ನಾನು ದೇವಿಯನ್ನು ಪ್ರಾರ್ಥನೆ ಮಾಡಿಕೊಂಡು ನಿಮ್ಮನ್ನು ಪಡೆಯುತ್ತೇನೆ (ಬಂಟಮ. ೧೨೨). [ಸಂ. ಶಾಪವಿಮೋಚನ]

ಶಾಪಹತ (ನಾ). ಶಾಪಕ್ಕೆ ಗುರಿಯಾದವನು ; ಶಪಿಸಲ್ಪಟ್ಟವನು : ಅಂತು ಕರ್ಣನುಂ ಶಾಪಹತನಾಗಿ ಮಗುಳ್ದು ಬಂದು ಸೂತನ ಮನೆಯೊಳಿರ್ಪನ್ನೆಗಂ (ಪಂಪಭಾ. ೧-೧೧೫ ವ) ; ಕಣ್ಣಿನಲ್ಲಿ ನೋಡುತ್ತ ಕರ್ಣಾಗಮನೆಂಬವನಂತೆ ಶಾಪಹತರಿಗೆಲ್ಲಕ್ಕೂ ಲಲಾಮಭೀಮ ಸಂಗಮೇಶ್ವರಲಿಂಗವು ಅಸಾಧ್ಯ ನೋಡಾ (ಸರ್ವಜ್ಞ. ೧೩೩-೬೬೬). [ಸಂ.]

ಶಾಪಹಸ್ತ (ನಾ). ಶಾಪ ನೀಡುವಾಗ ತೋರುವ ಕರವಿನ್ಯಾಸ ; ಶಪಿಸುವುದಕ್ಕೆ ಎತ್ತಿದ ಕೈ : ಧರಣಿಸುರನೆಂದೆನ್ನ ಲಕ್ಷಿಸಿ ಶರವ ಬೇಡಿದೆ ಕಾಳಿಗದೊಳೀ ಶರ ನಿರರ್ಥಕವಾಗಲೆಂದನು ಶಾಪಹಸ್ತದಲಿ (ಕುವ್ಯಾಕ. ೯-೩೨). [ಸಂ.]

ಶಾಪಾಂತ (ನಾ). = ಶಾಪಮೋಕ್ಷ : ಈಗ ಶಾಪಾಂತ ಒದಗಿದೆ ; ಮಹೇಶಪುರದ ಭೈರವೀದರ್ಶನದಿಂದ ಮುಕ್ತಿಯಾಗುತ್ತದೆ! (ಬಂಟಮ. ೧೨೨). [ಸಂ.]

ಶಾಪಾಯುಧ (ನಾ). ಶಾಪವನ್ನು ಅಸ್ತ್ರವನ್ನಾಗಿ ಉಳ್ಳವನು ; ತಪಸ್ವಿ : ಆ ಪಾಕ ಶಾಸನ ಯಾವರ ನುಡಿಗೇಳಿ ಶಾಪಾಯುಧರೀರಿಗೆ ಗೋಪನಿಂತೆಂದ (ಪಮಚ. ೭). [ಸಂ.]

ಶಾಪಾರುಹ (ನಾ). ಶಾಪಕ್ಕೆ ಯೋಗ್ಯನಾದವನು: ಕುರುಕುಲಾನ್ವಯಜನನ ಕೋಪಸ್ಫುಗಣದಲಿ ಶಪಸೆನಗೆ ಶಾಪಾರುಹನು ತಾನು (ಕುವ್ಯಾಗ. ೧೧-೬೪).

[< ಸಂ. ಶಾಪಾರ್ಹ]

ಶಾಪಿಸು (ಕ್ರಿ). = ಶಾಪಂಗೊಡು : ಮುನೀಶರಾ ಗಿರಿಶನ ಲಿಂಗಮಂ ಪಜೆಯೆ ಶಾಪಿಸೆ ಬಿರ್ದುದಿದೆಂಬರೆಲ್ಲರುಂ (ಪಮಪು. ೮-೮) ; ಹರಹರ ಕಾಯವೇಡಾಯೆನ್ನದುಪತಾಪಿಸದೆ ಶಾಪಿಸದ ಈಯಣುಗನಂ ಕ್ರೂರಸರ್ಪನ ಬಾಯಿಗೀವರೆ (ಬಪಪು. ೪೮-೧೧೧) ; ರುದ್ರನು ಶಾಪಿಸಿದ ವಾಣೀಪತಿಯು ವಿನಯದಲಿ ಹೊದ್ದುವುದು ಭೂಮಿಯಲಿ . . . ಘನತೆಯಲಿ ಕಲ್ಯಾಯುವಾಗಿಹುದು (ಸಂಧಕ. ೩೩-೩೭). [ಶಾಪ + — ಇಪ್ಪು]

ಶಾಪು (ನಾ). ೧. ಸಾಮಾನುಗಳನ್ನು ಮಾರುವ ಸ್ಥಳ ; ಅಂಗಡಿ. ೨. ದವಾಖಾನೆ; ಚಿಕಿತ್ಸಾಲಯ : ಏನು ಶಿವು, ಮುಂದಿನ ಯೋಚನೆಯೇನು? ಸರಕಾರಿ ನೌಕರಿಯೆ, ಖಾಸಗಿ ಶಾಪೇ? (ಜಾರುದಾ. ೧೯). [← ಇಂ. Shop]

ಶಾಬ (ನಾ). ೧. (ಯಾವುದಾದರೂ ಪ್ರಾಣಿಯ) ಮರಿ ; ಪೋತ : ವಿದ್ವಣದೇಶಕ ಪ್ರವರ ಹರಿಣಧರಂ . . . ಶಿಷ್ಯಚಕೋರಶಾಬನಿಕರಂಗಳಂ ಏರಿದು ತಣಿವುತ್ತೆ (ಆರಾಚ. ೧-೧-೩೩) ; ಕಿರಾತವನಿತಾಕರ್ಣೋತ್ಪಲಾಕರ್ಷಿಮರ್ಕಟಶಾಬಾಶ್ರಿತಶಾಖಿ ಪಾದಪಯುತಂ ಕಣ್ಗೊಪ್ಪಿತಾ ಕಾನನಂ (ರಾಜಶೇ. ೫-೨೫). ೨. ಮಗು ; ಶಿಶು : "ಶಿಶು ಪೋತ ಬಾಲಕ ಶಾಬ ಡಿಂಬಮರ್ಭಕ ಪಾಕಮೆನೆ ಪಡೆದ ಕೂಸೆನಿಕ್ಕುಂ" (ಮಂಗರಾ. ೯೧-೮). [ಸಂ.]

ಶಾಬಕ (ನಾ). = ಶಾಬ ೧ : ಕೋಮಳಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ (ಕಾದಂಪೂ. ೧೭೮) ; ಜಲದ ನೆಳಲಿನಲೆವೆ ಚಲಿಸದಾ ಜಲಜಲೋಚನೆ ನೋಡುತಿರ್ದಳು ವಿಲಸದಭಿನವಚಿತ್ರಗತಿಯ ಕುರಂಗಶಾಬಕವ (ಹುವರಾ. ೩-೮-೭೫) ; ಕಲಿತರ್ಕ ಬಲ್ಲಿಚ್ಛೆಯಂ, ವೇದಮಂ ನೀತಿನಯವಿನಯನಿಯತಿಯಂ, ಶಾರ್ದೂಲಶಾಬಕಂ ಬೇಂಟೆಕಲ್ಪಿಯ ಕಲಿಯುವಂತೆ (ಶ್ರೀರಾಮಾ. ೨೫-೬೭೧). [ಸಂ.]

ಶಾಬರ$_1$ (ನಾ). ಇಂದ್ರಜಾಲ ; ಯಕ್ಷಿಣಿ ; ಕಣ್ಕಟ್ಟು : ಕೈಯಲ್ಲಿ ಹಿಡಿದರೆ ಕಲ್ಲು ಸಿಕ್ಕಿತ್ತಲ್ಲದೆ ಲಿಂಗವಿಲ್ಲವೆಂದ ಕಣ್ಣಿನಲ್ಲಿ ನೋಡಿ ಶಾಬರ ಕಳೆದವೆಂದಡೆ ಅದು ಕೌಳಿಕವೆಂದೆ (ಮೋಮಾ. ೨೬-೧೦೬) ; ಇದು ಭೀತಿಶಂಕೆಯೆ ? ಶಾಬರಪ್ರಯೋಗವೇ ? (ಮಾಮರಾ. ೨೧೦). 'ಶಾಬರಯಂತ್ರ' ಪರಾ. [< ಸಂ. ಶಾಂಬರ]

ಶಾಬರ$_2$ (ಗು). ೧. ಅನಾಗರಿಕವಾದ ; ಬರ್ಬರ. ೨. ಕೀಳಾದ ; ಅಲ್ಪ. ೩. ಬೇಡರಿಗೆ ಸಂಬಂಧಿಸಿದ. (ನಾ). ೪. ಕಿರಾತ ; ಬೇಡ : "ಕೃಪಣಂ ಶಾಬರರಾರ್ದ್ರ ಲುಬ್ಧಕಮೆನಿಕ್ಕುಂ" (ನಾನಾರ. ೧೨೮). ೫. ಒಂದು ಬಗೆಯ ಮರ; ಲೋಧ್ರ. ೬. ತಪ್ಪು; ದೋಷ. ೭. ಪಾಪ. [ಸಂ.]

ಶಾಬರಯಂತ್ರ (ನಾ). ಮಾಯೆಯ ಯಂತ್ರ ; ವಶೀಕರಣಯಂತ್ರ : ಮಂತ್ರಸಿದ್ಧಿಯೊಮೇಣು ಶಾಬರಯಂತ್ರರಕ್ಷೆಯೊ (ಕುವ್ಯಾಅ. ೧೫-೨೨). [ಶಾಬರ$_1$ + ಯಂತ್ರ]

ಶಾಬರಲೋಧ್ರ (ನಾ). ಲೋಧ್ರ ಮರದಲ್ಲಿ ಒಂದು ಪ್ರಕಾರ : "ಶ್ರೀಮಾನ್ — ಅರಳಿ, ವೃಷಭಕ, ಕಲ್ಲತ್ತಿ, ಬೆಲ್ಲವತ್ತ, ಶಾಬರಲೋಧ್ರ" (ಓಷಧಿ. ೧೬೭) ; ಕೊತ್ತುಂಬರಿ, ಬಜೆ, ಶಾಬರಲೋಧ್ರ ಇವಂ ಎಮ್ಮೆ ಹಾಲಿನಿಂದರೆದು ಲೇಪಿಸಿ . . . ನೀರಿನಿಂದ ತೊಳೆಯಲು ಮುಖದ ಮೇಲೆ ಹುಟ್ಟಿದ ಮೊಡವಿಬೊಕ್ಕೆಗಳು ಮಾಣುವುದು (ಸಕ್ಕ. ೧೪೯). [ಸಂ.]

ಶಾಬರಿ (ನಾ). ಬೇಟೆಗಾತಿ ; ಬೇಡತಿ : ಸರಳಿಸುವ ಕುಕ್ಕುರಕದಂಬದ ವಿರಚಿತಾಡಂಬರನವಶಾಬರಿಯರ್ಕೆದಿದರರಸ ಕೇಳ್ ಮುನಿಮ್ಮಗ ವನಾಂತರವ (ತೊರರಾ. ೧-೫-೪೦).

[ಶಾಬರ್ + — ಇ]

ಶಾಬರೆ (ನಾ). ಒಂದು ಬಗೆಯ ಲೋಧ್ರ : "ಅಕ್ಷಿಲೋಧ್ರಃ — ಶಾಬರಾ, ಬಳಿಯ ಲೋಧ್ರ" (ಓಷಧಿ. ೬.). [ಸಂ. ಶಾಬರ]

ಶಾಬಾಸ್ 'ಶಹಬಾಸ್' ನೋ.

ಶಾಬಾಸ್‌ಗಿರಿ 'ಶಹಬಾಸುಗಿರಿ' ನೋ.

ಶಾಬೂದಾಣ 'ಸಾಬೂದಾಣೆ' ನೋ.

ಶಾಬ್ದ (ಗು). ೧. ಧ್ವನಿಗೆ ಸಂಬಂಧಪಟ್ಟ. ೨. ಶಬ್ದದಿಂದ ನಿಷ್ಪನ್ನವಾದ. ೩. ಬಾಯಿಮಾತಿನ ; ವಾಚಿಕ. ೪. ಅನುರಣನವಾಗುವ. (ನಾ), ೫. ವ್ಯಾಕರಣ. [ಸಂ.]

ಶಾಬ್ದವೇತ್ತೃತೆ (ನಾ). ವ್ಯಾಕರಣಶಾಸ್ತ್ರದಲ್ಲಿರುವ ಪಾಂಡಿತ್ಯ : ವಿದ್ಯನ್ಮುಖವೀರ ಸೇನತೆ ನಿಜಂ ತಾನೆಂದೊಡಿಂ ಶಾಬ್ದವೇತ್ತೃತೆ ಷಟ್ತರ್ಕ ವಿತರ್ಕಭೀತ್ವತೆಯಹಾರಾಧ್ಯಾಂತತತ್ತ್ವಪ್ರಮಾತೃತೆಯೇಂ ಚೋದ್ಯಮೆ ವರ್ಧಮಾನಮುನಿಯೊಳ್ (ಚಂದ್ರಪ್ರ. ೧-೩೧).

[ಸಂ. ಶಾಬ್ದವೇತ್ತೃತಾ]

ಶಾಬ್ದಿಕ (ಗು). ೧. ಧ್ವನಿ ಅಥವಾ ಶಬ್ದಕ್ಕೆ ಸಂಬಂಧಿಸಿದ : ಅದೊಂದು ಶಾಬ್ದಿಕ ಕಸರತ್ತು! (ಕರ್ನಾ. ೨). ೨. ಅನುರಣನವಾಗುವ. ೩. ಆಡುಮಾತಿನ ; ವಾಚಿಕ. (ನಾ). ೪. ಶಬ್ದ ; ಪದ : ಪ್ರಕೃತರಂ ಶಬ್ದಂ ಶಾಬ್ದಿಕಸಮ್ಮತಮರ್ಥಮರ್ಥದೃಷ್ಟಿ ಮನಃಕ್ಷೋಭಜನಕಂ ಭಾವಂ ಭಾವುಕ ಭಾವ್ಯಂ ಕಾವ್ಯತತಿಯೊಳಗ್ಗಳ ನಿನ್ನಾ (ಚಂದ್ರಪ್ರ. ೧-೫೮). ೫. ವ್ಯಾಕರಣಶಾಸ್ತ್ರ ಪಂಡಿತ ; ವೈಯಾಕರಣ : ವಳ ಪ್ರತ್ಯಯಂ ಮುಂತಾದುಬೆದ ಪ್ರತ್ಯಯಂಗಳಂ ಶಾಬ್ದಿಕರಿನನ್ನಿತರಜರ್ಪುದು (ಜಮದ. ೨೧೫ ಪ್ರಯೋ) ; ಸಾವಿರಗಟ್ಟಲೆ ಶಾಬ್ದಿಕರಿರುವರು ತಾರ್ಕಿಕರಿರುವರು ಬಹಳ (ಇಂಚಾಪ್ರ. ೪೧-೯೨). ೬. ನಿಘಂಟುಕಾರ ; ಕೋಶಕಾರ.

ಶಾಬ್ದಿಕತಿಳಕ = ವ್ಯಾಕರಣಪಾಂಡಿತ್ಯದಲ್ಲಿ ಶ್ರೇಷ್ಠನಾದವನು ; ಒಂದು ಬಿರುದು : ಸಕಳಕಳಾಬ್ರಹ್ಮಂ ಶಾಬ್ದಿಕತಿಳಕಂ ಬ್ರಹ್ಮಕವಿಚೂಡಾಮಣಿ ವಾಜಿಕುಳನಭಸ್ಥಳರವಿ (ಸೌಶಾ. XI-i. ೫೦-೨; 1005). [ಸಂ.]

ಶಾಭಾಸ್ 'ಶಹಬಾಸ್' ನೋ.

ಶಾಭಾಸ್‌ಗಿರಿ 'ಶಹಬಾಸುಗಿರಿ' ನೋ.

ಶಾಭಾಸು 'ಶಹಬಾಸ್' ನೋ.

ಶಾಮಂತಿಗೆ 'ಸೇವಂತಿಗೆ' ನೋ.

ಶಾಮಕ (ಗು). ೧. ಅಡಗಿಸುವ ; ಉಪಶಮನಗೊಳಿಸುವ. (ನಾ). ೨. ಉಪಶಮನ ; ಶಾಂತಿ : "ಚಿಕಿತ್ಸಾ ರುಕ್ಪ್ರತಿಕ್ರಿಯಾ — ೨ ರೋಗಕ್ಕೆ ಶಾಮಕವಾಗಿ ವಿಷಧಾದಿ ಪ್ರತಿಕ್ರಿಯೆಗಳನ್ನು ಮಾಡುವಿಕೆ" (ಸಿದ್ಧಾಂಅ. ೧೮೨). 'ಅಗ್ನಿಶಾಮಕ' ಪರಾ.

[ಸಂ.]

ಶಾಮನ (ನಾ). ೧. = ಶಾಮಕ ೨ : ಪ್ರೇಮ ಕನಲೆ ಪಿಶಾಚಿ . . . ಮಾಮಕವಿದೆಂದಾವುದಕೊ ತಾನೆ ಬಲಿವೋಗಿ ಶಾಮನವನೊಂದುವುದು (ಮಂಕುಕ. ೪೨೬). ೨. ಯಮ. ೩. ಕೊಲೆ ; ವಧೆ. ೪. ಕೊನೆ; ಮುಕ್ತಾಯ. [ಸಂ.]

ಶಾಮಲ (ನಾ). ತಲೆಗೆ ಧರಿಸುವ ವಸ್ತ್ರವಿಶೇಷ : ಕಮಲಾಕಾಂತನು ಕಪ್ಪುಹಸುವಿನ ಕಡೆ ನೋಡದೆ, ವಕೀಲನ ಶಾಮಲದ ಕಡೆ ನೋಡಿ (ಕಮಕ. ೧೭೬).

[← ಬಂಗಾಳಿ. ಶಾಮಲಾ]

ಶಾಮಿಲಾತು (ನಾ). ಜಮೀನಿಗೆ ಸೇರಿದ ಜಂಟಿ ಆಸ್ತಿ ; ಅವಿಭಕ್ತಸ್ವತ್ತು : ಸಿಸ್ತು ಇಲ್ಲದ ಭೂಮಿಗೆ ಶಾಮಿಲಾತು ಕೂಡೀತೋ ? (ಗಾದೆ). [← ಹಿಂ. ಶಾಮಿಲಾತ್]

ಶಾಮೀಲ್ 'ಶಾಮೀಲು' ನೋ.

ಶಾಮೀಲ 'ಶಾಮೀಲು' ನೋ.

ಶಾಮೀಲು, ಶಾಮೀಲ್, ಶಾಮೀಲ, ಷಾಮೀಲು (ನಾ). ೧. ಒತ್ತಾಸೆ ; ನೆರವು; ಜೊತೆ : ಯಾವುದೋ ಒಂದು ನೆನಪು ಶಾಮೀಲಾಗಿ ಬಂದು ಹೀಗೆ ಮಾಡಿರಬಹುದು (ಮನೋನಂ. ೭೯). ೨. ಜೊತೆಗಾರ; ಒತ್ತಾಸೆ ನೀಡುವವನು : ಮನೆಯವರೇ . . . ಅವನಿಗೆ ಶಾಮೀಲಾಗಿದ್ದಿರಬೇಕು (ಕೆಲಸ. ೯೯); ಆಗ ನಮ್ಮ ಶಾನುಭೋಗರೂ ಗುಮಾಸ್ತರೂ ಶಾಮೀಲಾಗಿ ಬಿಡುತ್ತಿದ್ದರು (ನನ್ನೂರು. ೧೫೪). **ಶಾಮೀಲ್** : ಯಾರದ್ದಾದ್ರೂ ಅದಕ್ಕೆ ನೀನೂ ಶಾಮೀಲ್ ಇರಲೇಬೇಕು (ಪಕ್ಕಿಮೋ. ೪೭). **ಶಾಮೀಲ**: ೨. ಕುಂಪನಿಸರಕಾರದಲ್ಲಿ ನಮ್ಮ ಶಾಮೀಲರ ಸಂಗಡ ಏನೊಂದು ಮನಸುಬಾ ಮಾಡಿದಾಗ್ಗೂ ತಮಗೆ ನಾವು ಚನ್ನಾಗಿ ಸುದ್ದಿ ಎತ್ತಿಸಿಕೊಡುತ್ತೇವೆ (ರಾಚೋಂದ್ರ. ೧೭೪). **ಷಾಮೀಲು** : ೧. ಇವರು ಮಾಡುವುದಕ್ಕೆಲ್ಲಾ ಅವರ ಷಾಮೀಲು, ಅವರು ಮಾಡುವುದಕ್ಕೆಲ್ಲಾ ಇವರ ಷಾಮೀಲು (ಗೃಹಲ. ೧೩೦). ೨. ಹಾಗಾದರೆ ನೀವೂ ಅವರ ಕಡೆ ಷಾಮೀಲಾಗಿದೀರಿ? (ಮರಳಿ. ೧೫೭) ; ಮಂಜುನಾಥ ತಾಯಿಯೊಡನೆ ಷಾಮೀಲು ಆದ (ಬೆಂಗಬ. ೧೫೩).

[← ಅರ. ಷಾರ. ಹಿಂ. ಶಾಮಿಲ್; ಮರಾ. ಶಾಮಿಲ್, ಶಾಮೀಲ್, ಸಾಮೀಲ್]

ಶಾಮೀಲುದಾರ (ನಾ). = ಶಾಮೀಲು ೨: ಸಹಾಯಕ ; ನೆರವಿಗ . . . ದುಷ್ಕಾರ್ಯದಲ್ಲಿ ಸಹಾಯ ಮಾಡುವವನು. ಅಥವಾ ಮೊದಲೇ ಅದಕ್ಕೆ ಅಭಿಮತ ಕೊಡುವವನು ; 'ಶಾಮೀಲು' ದಾರ (Access.ಇಂಡಿ). [ಶಾಮೀಲು + — ದಾರ್]

ಶಾಯಿ (ನಾ). ಮಸಿ ; ಇಂಕು : ಕ್ರಿಷ್ಣರಾಜವಡೇರುಯಂಬದಾಗಿ ಬಾಳ ಬಂದು ಅಕ್ಷರದಲು ಶಾಯಿವೊಹರಾ ಮಾಡಿಯಿದೆ (ಎಕ. VI, ಕೊಪ್ಪ. ೪೮-೫೮; 1811); ಈ ಮೇಜಿನ ಒಂದು ಮೂಲೆಯಲ್ಲಿ ಶಾಯಿಯನ್ನು ಇಡುವ ಗಾಜಿನ ಒಂದೆರಡು ದೌತಿಗಳು, ಗರಿ ಲೇಖನಿಗಳು, ರತಿದಾನಿ ಕಾಣುತ್ತಿವೆ (ಏಧನ್ಯ. ೬೫).

[← ಪಾರ.ಸಿಯಾಹೀ; ಹಿಂ.ಸ್ಯಾಹೀ ; ಮರಾ. ಶಾಳೀ, ಶಾಯೀ]

ಶಾಯಿಕುಡಿಕೆ (ನಾ). ಮಸಿಯನ್ನು ತುಂಬಿಟ್ಟಿರುವ ಕುಡಿಕೆ : ಶಾಯಿಕುಡಿಕೆಯಲ್ಲಿ ಶಾಯಿ ಮುಗಿದುಹೋಗಿದೆ (ರೂಢಿ). [ಶಾಯಿ + ಕುಡಿಕೆ]

ಶಾಯಿದಿ 'ಶಾಹಿದೀ' ನೋ.

ಶಾಯಿದಿದಾರ (ನಾ). ಸಾಕ್ಷ್ಯ ನೀಡುವವನು ; ಸಾಕ್ಷಿಗಾರ : (ಕ).

[← ಮರಾ. ಶಾಹಿದೀದಾರ್]

ಶಾರ (ಗು). ೧. ಚುಕ್ಕೆಗಳುಳ್ಳ. ೨. ಬಣ್ಣಬಣ್ಣದ ; ನಾನಾವರ್ಣದ. ೩. ಹಳದಿ ಬಣ್ಣದ. (ನಾ). ೪. ಅನೇಕ ಬಣ್ಣಗಳಿಂದ ಕೂಡಿದುದು; ಮಿಶ್ರವರ್ಣ: "ಚಿತ್ರಿತಂ ಕಲ್ಮಾಷಂ ಕರ್ಬುರಂ . . . ಶಾರಮೆನ ಮಿಶ್ರಕ್ಕೆ ನಾಮ ಮಕ್ಕುಂ" (ಮಂಗರಾ. ೧೩೨-೨೫). 'ಶಾರೋದರ' ಪರಾ. ೫. ಗಾಳಿ ; ವಾಯು : "ಶಾರಃ — ವಾಯು, ನಾನಾಬಣ್ಣಗಳುಳ್ಳದ್ದು" (ಸಿದ್ಧಾಂತಿ. ೧೧೩). [ಸಂ.]

ಶಾರದ (ಗು). ೧. ಶರದೃತುವಿಗೆ ಸಂಬಂಧಿಸಿದ ; ಶರತ್ಕಾಲಕ್ಕೆ ಸೇರಿದ : ವಾರಣಘಟೆ ನೆರೆದು ಪತ್ತಿ ಶೀಕರಜಲಮಂ ಧಾರಿಣಿಗೆ ಸೂಸಿದಪುವೆನೆ ಶಾರದಘನಘಟೆಯೆನೆಱಗಿದುವು ಬೆಳ್ಸರಿಗಳ್ (ಜಗವಿ. ೪-೬೭). ೨. ವರ್ಷಾವಧಿಯ; ವಾರ್ಷಿಕ. ೩. ಹೊಸತಾದ ; ನವೀನವಾದ. ೪. ಸೌಜನ್ಯದಿಂದ ಕೂಡಿದ; ನಯವಾದ. ೫. ಬಿಳಿಯ ; ಶುಭ್ರವಾದ : 'ಶಾರದನೀರದ' ಪರಾ. (ನಾ). ೬. ಶರದೃತು; ಶರತ್ಕಾಲ : ಕುವಳಯಕೀರ್ತಿಗೆ ಶಾರದಮವಧಾರಿತಮಾಯ್ತು ಗಂಬುದುತ್ತರಮಾರ್ಗಂ (ಕವಿರಾ. ೨-೬೩) ; ನಿಷ್ಕಲ್ಮಷಾಶಾಂಬರಸ್ಫುರಿತಂ ಶಾರದದೊಳ್ ಸುಧಾಧವಳಧಾಮಂ ಸೋಮನೊಳ್ . . . ಸಮಾನಮೆನಿಕುಂ ಪ್ರೋತ್ತುಂಗಚ್ಛತ್ರಾಲಯಂ (ಪುಷ್ಪಪು. ೨-೭೫) ೭. ಒಳ್ಳೆಯವನು ; ಉತ್ತಮ : "ಕರಂ ಶಾಲೀನಂ ಶಾರದಾಖ್ಯನಕ್ಕುಮಧೃಷ್ಯಂ" (ಮಸ್ತಕೋ. ೬೪-೭೮). ೮. ಒಡೆಯುವಿಕೆ ; ಚೂರು ಮಾಡುವಿಕೆ. ೯. ತಿಂದುಮಿಕ್ಕುದು; ಶೇಷ. ೧೦. ಬಡವು; ಕೃಶ. ೧೧. ಆಕಾಶ; ಗಗನ. ೧೨. ನಾವೆ; ದೋಣಿ. ೧೩. ಚತುರತೆ ; ಜಾಣತನ. ೧೪. ಸತ್ತ್ವ ; ಸಾರ. ೧೫. ಸರಸ್ವತಿ. ೧೬. ಕಾರ್ಯಭಂಗ. ೧೭. ಒಳ್ಳೆಯ ಬುದ್ಧಿ. "ಸಾರದೊಳು ಕುಶಲದೊಳು ಖಂಡನಕ್ರಿಯೆಗಳೊಳು ಭಾರತಿಯೊಳಮಲಪಾಂಡುರದೊಳು ಸುಬುದ್ಧಿಯೊಳು ಶಾರದಾಖ್ಯಂ" (ಮಂಗರಾ. ೧೪೯-೪೬) ; "ಕೌಶಲ ನಭೋಚ್ಛಿಷ್ಟಂ ಕ್ರಿಯಾಖಂಡನಂ ಋತು ಭೃತ್ರಂ ಕೃಶ ಬುದ್ಧಿ ಸಾರ ಧವಳಂ ವಾಕ್ಕಾರದಾಖ್ಯಾನಂ" (ನಾನಾರ. ೨೯). ೧೮. ಏಳೆಲೆಬಾಳೆಯ ಗಿಡ : "ಸಪ್ತವರ್ಣಃ, ಶಾರದಃ, ಶಾರದೀ, ವಿಷಮಚ್ಛದಃ — ೪ ಏಳೆಲೇಬಾಳೇಗಿಡ" (ಸಿದ್ಧಾಂತಿ. ೧೧೭). ೧೯. ನಾನಾ ಬಣ್ಣಗಳಿಂದ ಕೂಡಿದುದು; ಮಿಶ್ರವರ್ಣ. ೨೦. ಮಾಡಿದ ಕೆಲಸ : "ಗಗನಂ ಕೃಶಮುಚ್ಛಿಷ್ಟಂ ಪೊಗರುಂ ಋತು ಬುದ್ಧಿ ಬಾಳೆ ಸಿತಕೃತವಡಗುಂ ಮಿಗೆ ಸಾರಂಗಂ ನುಡಿವೆಣ್ ಸೊಗಸುವ ಪನ್ನೊಂದು ಶಬ್ದ ಶಾರದಮೆನಿಕುಂ" (ನಾನಾಕಂ. ೬೬). ೨೧. ಕಾಳು; ಧಾನ್ಯ. ೨೨. ಒಂದು ಬಗೆಯ ಮರ; ಬಕುಳ : ಸಾರರಂಭಾಕ್ರಮುಕಶಾರದ ಮುಖ್ಯಭೂರುಹವ್ರಂದದಿಂ (ಶಚೀಲೂ. ೪೪). ೨೩. ಬಿಳಿಯ ಕಮಲ, — ತಾವರೆ : "ಶಾರದಂ - ಬಿಳಿಯ ತಾವರೆ" (ಲಿಪಿ. ೧೮೩) ; ಶಾರದಂಗಳ ಜಸದೇಟ್ಟಿ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾಟ್ಟೆ ರತ್ನಸಂಕುಳದಧಿದೈವಮೆಂದಸೆ ದುದುಜ್ವಳಮೌಕ್ತಿಕಹಾರಮಂಡಲಂ (ಕಾರಂಜಾ. ೧೦೬). ೨೪. ಶರತ್ಕಾಲದಲ್ಲಿ ಹುಟ್ಟಿದುದು : "ಶರತ್ಕಾಲದೊಳುಪಜನಿತಂ ಶಾರದಂ" (ವಸ್ತುಕೋ. ೧೧೦-೭೧). [ಸಂ.]

ಶಾರದನೀರದ (ನಾ). ಶರತ್ಕಾಲದ ಶುಭ್ರವಾದ ಮೋಡ; ಬಿಳಿಮುಗಿಲು: ಶಾರದನೀರದನಿಕಾಶವಿಶಾಲಧವಲದುಕೂಲಾಂಬರವಿರಾಜಮಾನಮಂ . . . ಆರ್ಗಿರ್ದಾಗಳ್ (ಆದಿಪು. ೧೧-೧೦೫); ಅನಿಮಿಷಚಾಪದಂತೆ ಸಿರಿ ಶಾರದನೀರದಕಾಂತಿಯಂತೆ ಯೌವನದೆಸಕಂ (ಪಂಚತಂ. ೫೯-೧೪). [ಸಂ.]

ಶಾರದಾಬಿಲ್ಲು (ನಾ). (ಆಂಗ್ಲರ ಆಳ್ವಿಕೆಯ ಭಾರತದಲ್ಲಿ ಮೊದಲ ಬಾರಿಗೆ ಜಾರಿಗೆ ಬಂದ) ಸ್ತ್ರೀಯರ ವಿವಾಹಕ್ಕೆ ಸಂಬಂಧಿಸಿದ ಕಾನೂನು; ಹೆಣ್ಣುಮಕ್ಕಳಿಗೆ ಹದಿನಾಲ್ಕುವರ್ಷಗಳು ಮೀರುವ ಮುಂಚೆ ಮದುವೆ ಮಾಡಬಾರದೆಂಬ ನಿಯಮ, — ಕಾನೂನು: ಇನ್ನೂ ಹದಿಮೂರೇ ಅಂತ ಹೇಳುವವ ಇದ್ದೆ ನಾನು . . . ಆದರ ಅಷ್ಟರೊಳಗ ಆ ಪೀಡಾ ಶಾರದಾಬಿಲ್ಲು ಪಾಸಾಯಿತು (ಅಶ್ರುಮೇ. ೫); ಮದುವೆಯ ವಯಸ್ಸು. ಶಾರದಾಬಿಲ್ಲು ದಾಟುವ ವಯಸ್ಸು (ಹಸುವು. ೬೪).

[P 'ಹರವಿಲಾಸಶಾರದ' ಎಂಬುವನು ಈ ಮಸೂದೆಯನ್ನು ತಂದುದರಿಂದ ಇದಕ್ಕೆ ಈ ಹೆಸರು ಬಂದಿದೆ]

ಶಾರದಾಭ್ರ (ನಾ). = ಶಾರದನೀರದ: ಸುಂದರತುಹಿನಾಚಳಸಂಕ್ರಂದನಗಜ ಶಾರದಾಭ್ರತಾರಾದ್ರಿಪಯಃಕುಂದೇಂದುಯಶೋಭಾಸುರನೆಂದು ಮನಂಗೊಂಡು (ಸುಕುಮಾ. ೧-೫೬); ಶಾರದಾಭ್ರಂ ತಳ್ತ ಶಶಾಂಕನೆನಿಸಿ ಬೆಳ್ಪಟ್ಟೆಯಂ ಪದೆದುಟ್ಟು . . . ರುಜುಭಾವದಿಂ ಕುಳ್ಳಿರ್ದು (ರಾಜಶೇ. ೧೩-೪೫ ಪ). [ಸಂ.]

ಶಾರದಾಲಿಪಿ (ನಾ). ಚಂಬಾಕಣಿವೆ ಮತ್ತು ಕಾಶ್ಮೀರದಲ್ಲಿ ಬಳಕೆಯಲ್ಲಿರುವ ಒಂದು ಬಗೆಯ ಲಿಪಿ: ಶಾರದಾಲಿಪಿಯಲ್ಲಿ ಭೂರ್ಜಪತ್ರದ ಮೇಲೆ ಬರೆದಿರುವ ಮಹಾಭಾರತದ ಆದಿಪರ್ವದ ಒಂದು ಪ್ರತಿ ತುಂಬ ಪ್ರಸಿದ್ಧವಾಗಿದೆ (ಕನ್ನಸಂ. ೩೭). [ಸಂ.]

ಶಾರದಿ (ನಾ). ೧. ಆಶ್ವೀನಮಾಸದ ಹುಣ್ಣಿಮೆ. ೨. ಏಳೆಲೆಬಾಳೆಗಿಡ: "ಸಪ್ತವರ್ಣಃ, ವಿಶಾಲತ್ವಕ್, ಶಾರದೀ, ವಿಷಮಚ್ಛದಃ — ೪ ಏಳೆಲೇಬಾಳೇಗಿಡ" (ಸಿದ್ಧಾಂತಿ. ೧೧೭). ೩. ಒಂದು ಬಗೆಯ ಗಿಡ; ನೀರುಹಿಪ್ಪಲಿ: "ಲಾಂಗಲೀ, ಶಾರದೀ, ತೋಯಪಿಪ್ಪಲೀ, ಶಕುಲಾದನೀ - ನೀರುಹಿಪ್ಪಲೀ ಹೆಸರುಗಳು" (ಸಿದ್ಧಾಂತಿ. ೧೩೭).

[ಸಂ. ಶಾರದೀ]

ಶಾರದೆ (ನಾ). ೧. ವಿದ್ಯಾಭಿಮಾನಿದೇವತೆಯಾದ ಸರಸ್ವತಿಯ ಹೆಸರುಗಳಲ್ಲಿ ಒಂದು : ಶಾರದೆ ರಂಜಿಸಿರ್ಪ ಮುಖಪಂಕಜಮಂ ಸಲೆ ಲಕ್ಷ್ಮಿಯೊಪ್ಪುವೀ ಪೇರುರವಂ . . . ಚುಂಬಿಸಿಯಪ್ಪುವ ಧೈರ್ಯಮಂ ಮಹೋದಾರದೊಳೀಕ್ಷಿಸಿ (ದಶಕು. ೭-೩೦). ವಾರಿಜಾಸನೆ ಸಕಲಶಾಸ್ತ್ರವಿಚಾರದುದ್ಭವೆ ವಚನರಚನೋದ್ಧಾರೆ . . . ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ (ಕುವಾಲ. ೧-೫). ೨. ದುರ್ಗೆಯ ಹೆಸರುಗಳಲ್ಲಿ ಒಂದು. ೩. ಒಂದು ಬಗೆಯ ವೀಣೆ. [ಸಂ. ಶಾರದಾ]

ಶಾರವಿ (ನಾ). "ಕುದುರ(?)" (ಆರಾಚ. ಕೋಶ) : ಶಾರವಿ [ಪಾಶಾಂ. ಲಿ]ಯನೇಱೆರ್ದ ಪಟುಭಟನ ಭಂಗಿಯಂತ . . . ಪಂಡಿತೇಂದ್ರಂ ಕೋಪದ ಮಿಗೆ . . . ದುಟ್ಟರ ನಿಟ್ಟಿಸುತ್ತ ನುಡಿದಂ (ಆರಾಚ. ೩-೨-೨). [?]

ಶಾರಾಬ್ಬಾರ (ನಾ) ಶಿಲ್ಪಿ; ರೂವಾರಿ (?) : ಭುವನಗಿರಿಯ ದುರ್ಗದರಮನೆಯ ಭವಂತಿಗಳೊಳ್ ಶಾರಾಬ್ಬಾರ ನಾಗಪ್ಪನ ಮುಖದಿಂ ಶಿಲಾಸ್ತಂಭಂಗಳಂ ನಿಲಿಸಿ . . . ರಾಜಾಲಯಮಂ ದೃಢತರಮನಾಗಿಸಿ (ಕೆಳೆನ್ನ. ೧೦-೯೪ ವ). [?]

ಶಾರಿ (ನಾ). ೧. ಪಗಡೆಯ ಕಾಯಿ; ಲೆತ್ತದ ಕಾಯಿ: 'ಪಾಶಕಶಾರಿ' ಪರಾ. ೨. ಚದುರಂಗದ ಕಾಯಿ; ಬೇದೆ. [ಸಂ.]

ಶಾರಿಕೆ (ನಾ). ೧. ಒಂದು ಬಗೆಯ ಹಕ್ಕಿ; ಗೊರವಂಕ; ಮೈನಾ: ಶುಕಶಾರಿಕಾದಿ ವಿಹಗಪ್ರಕರಂ ಮುಂ ಕೇಳ್ದ ವಚನಮುಂ ನುಡಿವುದು ಕೌತುಕಂ (ಕಾದಂಪು. ೬೪); ಸುಬಿಂಬಾಧರಾಸಮುದಂಚತ್ಕರಶಾರಿಕಾಶುಕರವಂ ಕೂಜತ್ರಿಕಾಲಾಪಿನೀಕ್ರಮಸಂವಾದಿತ ಸಾಧುನಾದವಹ ವೀಣಾರಾವಮಲ್ಲೊಪ್ಪುಗುಂ (ರಾಜಶೇ. ೨-೧೩೭); ಕೋಕಿಲವು ಕುಕಿಲಿದೆ! ಶಾರಿಕೆಯ ಸ್ವರ ಕೇಳಿದೆ (ಚಿಂತಾನ. ೪೮-೨೨). ☞ ಶಾರಿಕೆ ಹಾಗೂ ಸಾರಿಕೆ ಎಂಬ ಪದಗಳನ್ನು ಸಂಸ್ಕೃತದಲ್ಲಿ ಮೈನಾಹಕ್ಕಿ ಎಂಬರ್ಥದಲ್ಲಿ ಸಾಮಾನ್ಯವಾಗಿ ಬಳಸಲಾಗಿದೆ. ಆದರೆ ಕನ್ನಡಕಾವ್ಯಗಳಲ್ಲಿ ಈ ಎರಡನ್ನು ಹೆಣ್ಣುಗಿಳಿ ಎಂಬರ್ಥದಲ್ಲಿಯೂ ಕೆಲವೆಡೆ ಪ್ರಯೋಗಿಸಲಾಗಿದೆ. "ಪುರುಳಿಯೆಂದುಂ ಸಾರಿಕೆಯೆಂದುಂ ಪೆಣ್ಗಿಳಿ" (ಕಶಸಾ. ೫೫-೨೦೩). ೨. ಅಂಬಾರಿ; ಹೌದಾ: ನಿಜಚತುರ್ಬಲಂ ಬಂದು ಕೂಡಲೊಡಂ ವಿಜಯವಾರಣಮಣಿಶಾರಿಕೆಯೊಳ್ ಸಹಸ್ರಲೋಚನನುಮುತ್ಪಲನೇತ್ರೆಯುಮುಭಯಪಾರ್ಶ್ವಮನಳಂಕರಿಸಿರೆ (ಪಂರಾಮಾ. ೧೦-೮೭ ವ). [ಸಂ. ಶಾರಿಕಾ]

ಶಾರಿಬೆ (ನಾ). ಒಂದು ಬಗೆಯ ಔಷಧಿಮೂಲಿಕೆ; ಸೊಗದೆ: "ಗೋಪೀ, ಶ್ಯಾಮಾ, ಶಾರಿಬಾ, ಚಂದನಾ, ಉತ್ಪಲಶಾರಿಬಾ — ೫ ಸುಗಂಧಪಾಲಗಿಡದ ಹೆಸರು, ಸೊಗದೆಬೇರು ಪ್ರಸಿದ್ಧ" (ಸಿದ್ಧಾಂತಿ. ೧೩೭) : ಶಾರಿಬಾದಿ ಗಣದ ಕಷಾಯಂಗಳನ್ನು ಸಕ್ಕರೆ ಸಹ ಸೇವಿಸೆ, ಪಿತ್ತಜ್ವರ ಗುಣವಾಗುವುದು (ಸಕವೃ. ೮೧). [ಸಂ. ಶಾರಿಬಾ]

ಶಾರೀರ (ಗು). ೧. ಶರೀರಕ್ಕೆ ಸಂಬಂಧಿಸಿದ; ದೇಹಕ್ಕೆ ಸೇರಿದ. ೨. ಶರೀರವನ್ನು ಹೊಂದಿದ; ಸಶರೀರವಾದ. (ನಾ). ೩. ಮೈ; ದೇಹ: ವಾರವಾರಕೆ ಬೆಳೆದು ತಾರ ತಗಲಿ ಬಳಲಿ ಶಾರೀರವನ್ನೆ ಪೊತ್ತು ತತ್ತು ಪಾರಕಬಲವಣಾದಿ ಘೋರತರಮಹಕ್ಲೇಶವಾರಿಧಿಯೊಳಗೆ ಮುಳುಗಿ (ವಿದಾಕ್ಷ. ೫೪-೧). ೪. ದೇಹಪ್ರಕೃತಿ. ೫. ಶರೀರಸಂಬಂಧವಾದುದು; ದೈಹಿಕವಾದುದು: ಅಹಿಂಸಾದಿ ಶುಭಯೋಗವು ಶಾರೀರವು; ಸತ್ಯಮಿತಹಿತಭಾಷಣಾದಿಗಳು ವಾಚಕವು (ಹಿಂದಸಾ. ೮೯). ೬. ಎತ್ತು. ೭. ಒಂದು ಬಗೆಯ ಔಷಧ. ೮. [ವೇದಾಂತ] ದೇಹದಲ್ಲಿರುವ ಆತ್ಮ; ಜೀವಾತ್ಮ: ಜೀವ (ಪ್ರಾಣವನ್ನು ಧರಿಸಿರುವವನು), ಶಾರೀರ (ಶರೀರವುಳ್ಳವನು), ವಿಜ್ಞಾನಾತ್ಮ (ಬುದ್ಧಿಯುಳ್ಳವನು) - ಇವೆಲ್ಲ ಪರ್ಯಾಯಗಳು (ಬ್ರಹ್ಮಭಾ. ೧೬೦ ಅಡಿಟಿ). ೯. [ಜೈನ] ಐದು ಬಗೆಯ ದುಃಖಗಳಲ್ಲಿ ಒಂದು; ದೇಹದಿಂದ ಉಂಟಾಗುವ ದುಃಖ: ಅಂತು ಶಾರೀರಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಂಗಳೆಂಬಯ್ದುಂ ತೆಱದ ದುಃಖಂಗಳೊಳರ್ದಿ (ಅದಿಪು. ೫ ೮೮ ವ); ಶಾರೀರಂ ಮಾನಸಂ ಕ್ಷೇತ್ರಜಂ ಪರಸ್ಪರೋದೀರಿತಂ ಸಂಕ್ಲಿಷ್ಟಾಸುರೋದೀರಿತಂಗಳೆಂಬ ಪಂಚಪ್ರಕಾರ ದುಃಖಂಗಳನನೇಕಪ್ರಕಾರದಿನನುಭವಿಸುತ್ತಂ (ಸುಕುಮಾ. ೧೧-೪೭ ವ). ೧೦. [ಸಂಗೀತ] ಕಂಠದ ನಾದಮಾಧುರ್ಯ; ಧ್ವನಿ : ಕೋಮಲಿತ ಶಾರೀರ ಹೃದಯದ ರಾಮಣೀಯಕ ರಚನೆಯಲ್ಲಿ ಸನಾಮನೆನಿಸುವನವನೆ ಗಾಯಕನು (ಕುಪ್ಪಾಉ. ೩-೯೫); ಮಹಾವೈದ್ಯನಾಥಅಯ್ಯರ್ ಅವರ ಶಾರೀರವು ಧ್ವನಿಸಂಪತ್ತಿನಿಂದ ಕೂಡಿತ್ತು (ಸಂಗೀತ. ೬). ೧೧. [ನಾಟ್ಯ] ಆಂಗಿಕಾಭಿನಯದ ಪ್ರಕಾರಗಳಲ್ಲಿ ಒಂದು: ಆಂಗಿಕಾಭಿನಯವು ಶಾರೀರ ಮುಖಜ ಚೇಷ್ಟಾಕೃತ ಎಂದು ಮೂರು ವಿಧ (ಸಂನಾಟ. ೧೧). [ಸಂ.]

ಶಾರೀರಕ (ಗು). ೧. ದೇಹಕ್ಕೆ ಸಂಬಂಧಿಸಿದ: ಜ್ವರ ಕುಷ್ಠ ಮೊದಲಾದ ರೋಗಂಗಳೇ ಶಾರೀರಕರೋಗವೆನಿಸಿಕೊಂಬುವು (ಸಕವೃ. ೨೪). (ನಾ). ೨. ದೇಹದಿಂದ ಹುಟ್ಟಿದುದು: ಶಾರೀರಕವೆಂದೂ, ಮಾನಸವೆಂದೂ, ಆಗಂತುಕವೆಂದೂ, ಸಹಜವೆಂದೂ ನಾಲ್ಕು ವಿಧ ರೋಗಂಗಳೆನಿಸಿಕೊಂಬುವುವು (ಸಕವೃ. ೨೪). ೩. = ಶಾರೀರ ೮ : ಶಾರೀರಕ ಪದಕ್ಕೆ ಶರೀರದೊಳಗಿರುವ ಆತ್ಮನೆಂದರ್ಥ. . . ಈ ಶಾರೀರಕವೆಂಬ ಪದ "ಶಾರೀರ ಆತ್ಮಾ" ಎಂಬ ಉಪನಿಷತ್ತು ಮೂಲಕವಾಗಿ ಬಂದಿರುವುದು (ಹಿಂದಸಾ. ೧೮೬). ೪. ಜೀವಾತ್ಮನ ವಿಷಯವನ್ನು ವಿಚಾರಪೂರ್ವಕವಾಗಿ ತಿಳಿಸುವ ವೇದಾಂತಶಾಸ್ತ್ರ: ಆತ್ಮೈಕತ್ವದರ್ಶನಕ್ಕೆ ಪ್ರತಿಪಕ್ಷದವರಾಗಿರುವ ಅವರೆಲ್ಲರ ತಿಳಿವಳಿಕೆಗಾಗಿ . . . ಈ ಶಾರೀರಕವನ್ನು ಪ್ರಾರಂಭಿಸಿರುತ್ತದೆ (ಬ್ರಹ್ಮಭಾ. ೪೩೫ ಅಡಿಟಿ); ಸಂಕ್ಷೇಪಶಾರೀರಕವನ್ನು ಅನುಸರಿಸಿ ಕೆಲವರು ಶುದ್ಧಬ್ರಹ್ಮನೇ ಜಗತ್ತಿಗೆ ಕಾರಣ ಎನ್ನುವರು (ತತ್ವಪ್ರಾ. ೩೧೦). [ಸಂ.]

ಶಾರೀರಾಗ್ನಿ (ನಾ). ಜಠರದಲ್ಲಿ ಆಹಾರವನ್ನು ಜೀರ್ಣವಾಗುವಂತೆ ಮಾಡುವ ಅಗ್ನಿ; ಪಾಚಕರಸ; ಜಠರಾಗ್ನಿ: ಈ ಶಾರೀರಾಗ್ನಿಗೆ ಹಾಕತಕ್ಕ ಉರುವಲು ಯಾವದೆಂದರೆ ನಾವು ದಿನಾಲು ತಿನ್ನುವ ಅನ್ನವೇ (ಮಂಬಯಾ. ೪-೩೧). [ಸಂ.]

ಶಾರೀರಿಕ (ಗು). ಶರೀರಕ್ಕೆ ಸಂಬಂಧಿಸಿದ; ದೈಹಿಕ: ಆ ಸಭೆಯಲ್ಲಿ ಶಾರೀರಿಕ ವಿಷಯಗಳನ್ನು ಕುರಿತು ಚರ್ಚಿಸಲಾಯಿತು (ರೂಢಿ). [ಸಂ.]

ಶಾರೀರಿಕಶಿಕ್ಷಣ (ನಾ). ಅಂಗಸಾಧನೆ; ವ್ಯಾಯಾಮ: ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ (ರೂಢಿ). [ಸಂ.]

ಶಾರೆ 'ಸೇರೆ' ನೋ.

ಶಾರೆಗಣ್ಣು 'ಸೇರೆಗಣ್' ನೋ.

ಶಾರೋದರ (ಗು). ಬೇರೆ ಬೇರೆ ಬಣ್ಣಗಳಿಂದ ಕೂಡಿದ ಮಧ್ಯಪ್ರದೇಶವುಳ್ಳ: ಕುಸುಮಚಾಪಂಗೆ ಪಕ್ಕಮಾಡಿದ ಚಂದ್ರಾಪೀಡನನಪಾಂಗವಿಕ್ಷೇಪ ತರಳತರ ತಾರಶಾರೋದರನಯನಂಗಳಿಂದಡಿಗಡಿಗೆ ನೋಡುತ್ತಮಿರ್ದು (ಕಾದಂಉ. ೫೧). [ಸಂ.]

ಶಾರ್ಕರ (ಗು). ೧. ನೊರಜುಗಲ್ಲುಗಳಿಂದ ಕೂಡಿದ; ಸಣ್ಣಕಲ್ಲುಗಳುಳ್ಳ. ೨. ಸಕ್ಕರೆಯಿಂದ ಮಾಡಿದ; ಸಕ್ಕರೆಯ. (ನಾ). ೩. ನೊರಜುಗಲ್ಲಿನ ನೆಲ, — ಪ್ರದೇಶ: "ಶರ್ಕರಾ, — ಶರ್ಕರಿಲಃ, ಶಾರ್ಕರಃ, ಶರ್ಕರಾವಾನ್ — ೪ ನರುಜುಕಲ್ಲುಗಳುಳ್ಳ ನೆಲದ ಹೆಸರುಗಳು" (ಸಿದ್ಧಾಂತಿ. ೯೫). [ಸಂ.]

ಶಾರ್ಙ್ಗ (ಗು). ೧. ಕೊಂಬಿನಿಂದ ಮಾಡಿದ; ಕೊಂಬಿನಿಂದಾದ: 'ಶಾರ್ಙ್ಗಚಾಪ' ಪರಾ. (ನಾ). ೨. ಬಿಲ್ಲು ; ಧನುಸ್ಸು. ೩. ವಿಷ್ಣುವಿನ ಬಿಲ್ಲು: ಚಿತ್ರಮಣಿ ಪ್ರಭಾವಿಳಂ ಗಗನದಿನಂದು ಬಂದು ನೆಲಸಿರ್ದುದು ಶಾರ್ಙ್ಗಮುಚೇಂದ್ರಹಸ್ತದೊಳ್ (ಜಗವಿ. ೭-೭೪). [ಸಂ.]

ಶಾರ್ಙ್ಗಕ (ನಾ). ಒಂದು ಬಗೆಯ ಪಕ್ಷಿ: ಈ ದಾವಾಗ್ನಿಯಲ್ಲಿ ಉಳಿದವು ಆರು ಪ್ರಾಣಿಗಳು ಮಾತ್ರ; ಅವರು ಯಾರೆಂದರೆ, ತಕ್ಷಕನ ಮಗ ಅಶ್ವಸೇನ, ಮಯನೆಂಬ ರಾಕ್ಷಸ, ಮತ್ತು ನಾಲ್ಕು ಶಾರ್ಙ್ಗಕಪಕ್ಷಿಗಳು (ವಚಭಾ. ೭೪). [ಸಂ.]

ಶಾರ್ಙ್ಗಚಾಪ (ನಾ). ಕೊಂಬಿನಿಂದ ಮಾಡಿದ ಬಿಲ್ಲು, — ಧನುಸ್ಸು: ಜಿನಚಂದ್ರಂ . . . ಒಂದಂಬಿನಿಂದೆಚ್ಚನಾ ದಮಿತಾರಿ ದ್ರುಮ ಶಾರ್ಙ್ಗಚಾಪ ಜಯವಜ್ರಾಶಾಶಂ ಕೇಶವಂ (ಶಾಂತಿಪು. ೪-೪೮). [ಸಂ.]

ಶಾರ್ಙ್ಗಧನ್ವ (ನಾ). ಶಾರ್ಙ್ಗವೆಂಬ ಬಿಲ್ಲನ್ನು ಹಿಡಿದಿರುವವನು; ವಿಷ್ಣು. [ಸಂ. ಶಾರ್ಙ್ಗಧನ್ವನ್]

ಶಾರ್ಙ್ಗಧರ (ನಾ). ೧. ವಿಷ್ಣು. ೨. [ಜೈನ] ವಾಸುದೇವ: ಅಂತಶ್ಚಗ್ರೀವಂ . . . ಚಕ್ರಮಂ ಕೊಂಡಿಡೆ ಶಾರ್ಙ್ಗಧರಂ ಕಡಗೊಂಡೊಂ ಕುಡುವಂತೆ ಮಗುಳ್ಚದಂ ಕೊಂಡಿಡೆ ತಚ್ಚಂಡಾರಿಶಿರಂ ಸಿಂಧುರಮಂಡಿಗೆ ಧರೆಗೆನಿಸಿ ಮುಂದೆ ಬಿಟ್ಟುದು ಹರಿಯಾ (ಶಾಂತಿಪು. ೫-೬೩). [ಸಂ.]

ಶಾರ್ಙ್ಗಪಾಣಿ (ನಾ). ೧. ವಿಷ್ಣು. ೨. = ಶಾರ್ಙ್ಗಧರ ೨: ಪರಿಯಣ್ಣನ ಜರ್ವಿಂಗೋಸರಿಸಿದುದಲ್ಲದೊಡೆ ಶಾರ್ಙ್ಗಪಾಣಿಯ ಮುನಿಸುಂ ಹರಮುರಿಗಣ್ಣುಂ ಲೋಕಮನರೆಗಟ್ಟೆಗೆ ಬೂದಿಮಾಟ್ಟುದೊಂದಚ್ಚರಿಯೇ (ಪಂರಾಮಾ. ೬-೧೪೫). [ಸಂ.]

ಶಾರ್ಙ್ಗಿ (ನಾ). ೧. ಬಿಲ್ಲುಗಾರ. ೨. ಶಾರ್ಙ್ಗವನ್ನು ಧರಿಸಿದವನು; ವಿಷ್ಣು: ಮಗಧಾದ್ಯನೇಕನೃಪರೊರ್ಮೆಯ ತಾಗಿದರಂದು ಶಾರ್ಙ್ಗಿಯಂ (ಜಗವಿ. ೮-೬೧);

ಸತ್ಯಭಾಮಾಪರಿಭಾಸ್ಯತ್ಸಂಗದಿಂ ಶಾರ್ಙ್ಗಿಯಂ . . . ಪೋಲ್ವಂ (ಪುಷ್ಪಸು. ೧-೬೨). ೩. ಶಿವ. [ಸಂ. ಶಾರ್ಙ್ಗಿನ್]

ಶಾರ್ಙ್ಗೀಲಿ (ನಾ). ಒಂದು ಬಗೆಯ ಪ್ರಾಣಿ: ಭೂನಾಯಕಂ ವಿಪ್ರನೆಂದು ಮನ್ನಿಸಿ ತಿಳಿದನೂನಪಾಪಂ ಸಂಭವಿಸಿತೆಂದು ಬೆಟ್ಟೇಱಿ ಬೀಳ್ದು ಶಾರ್ಙ್ಗೀಲಿಯಾಗಿ ಅದನನುಭವಿಸಿ ತೋಳನಾಗಿ . . . ನವಿಲಾಗಿರಲ್ಕೆ (ಪದ್ಮಚಾ. ೧೦-೧೭೨). [IP ಇದು ಸಂಸ್ಕೃತದ 'ಶೃಗಾಲ' ಕ್ಕೆ ಸಂಬಂಧಿಸಿರಬಹುದೆ ?]

ಶಾರ್ದೂಲ (ನಾ). ೧. ಹುಲಿ; ವ್ಯಾಘ್ರ: ಮುನಿಪತಿಯ ಮುಖಾರವಿಂದಮಂ ನೋಡುತ್ತಿರ್ದ ಶಾರ್ದೂಲವರಾಹಗೋಲಾಂಗೂಲಸಕುಳಂಗಳಂ ನೋಡುತ್ತುಂ (ಆದಿಪು. ೫-೨ ವ); ಭೂಪಾಲನು . . . ಸಿಂಹವೃಕಶಾರ್ದೂಲಭಯವನು ಪರಿಹರಿಸಿ ಮುನಿಪಾಳಿಗಾಶ್ರಯವೆನಿಸಿದನು ಪಾವನ ತಪೋವನವ (ಕುವಾಆ. ೫-೧) ; ಎತ್ತಲುಂ ಮೊಜೆವ ಸಿಂಹಶಾರ್ದೂಲಭಲ್ಲೂಕ ವೃಕಸೂಕರಾದಿ ದುಷ್ಟಮೃಗಂಗಳ ನಿಷ್ಠುರಧ್ವನಿಗೆ ಅಳ್ಕುವೆನಯ್! (ರಾಮಾಶ್ವ. ೩೪-೩). ೨. ಉತ್ತಮ, ಶ್ರೇಷ್ಠ ಎಂಬ ಅರ್ಥದಲ್ಲಿ ಸಮಾಸದ ಕೊನೆಯಲ್ಲಿ ಸೇರುವ ಶಬ್ದ: ನೃಪಾಲಶಾರ್ದೂಲ ಕೇಳ್ ಸಿದ್ಧಾರ್ಥಮಾನೊಂದು ಜನ್ಮಮಂ ಕೈಕೊಂಡು ತೊಡಗಿಹೆನ್ (ಶ್ರೀರಾಮಾ. ೨೮-೧೩). ೩. ಒಬ್ಬ ರಾಕ್ಷಸನ ಹೆಸರು: ಸಿಂಧುರ ಜಟಾಭಸ್ಮಶಾರ್ದೂಲಾಂಧಲಾಲಾತಾಗಳಗುಹ ಜಲಂಧರಪ್ರಮುಖಾಸುರರನಪಹರಿಸನೇ ಹರನು (ಬಸವ. ೫೪-೫೬). [ಸಂ.]

ಶಾರ್ದೂಲವಿಕ್ರೀಡಿತ, ಶಾರ್ದೂಳವಿಕ್ರೀಡಿತ (ನಾ). ೧. ಹುಲಿಯ ಕ್ರೀಡೆ, — ಆಟ: ರಂಗತ್ತಿಂಗಳಲೋಚನಂ ಘುಳುಘುಳುಪ್ರಧ್ವಾನರೌದ್ರಾನನಂ . . . ವ್ಯಾಕೀರ್ಣಕರ್ಣಂ ಕುಮಾರಂಗಾಶ್ಚರ್ಯಮುಮಾರ್ಗಮಾದುದು ಭಯಂ ಶಾರ್ದೂಲ ವಿಕ್ರೀಡಿತಂ (ಪುಷ್ಪಸು. ೫-೭೦). ೨. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹತ್ತೊಂಬತ್ತು ಅಕ್ಷರಗಳುಳ್ಳ ಅತಿಧೃತಿ ಎಂಬ ಛಂದಸ್ಸಿನ ಒಂದು ವೃತ್ತ: ಉರ್ವೀಮಾರುತಭಾಸ್ಕರಾನಿಲವಿಯದ್ವಂದ್ವಂ ಪದಾಂತಂಗಳೊಳ್ . . . ಭುವನತ್ರಯಂಗಳೊಳಗೀ ವೃತ್ತಂ ಪ್ರಸಿದ್ಧಂ ಕರಂ ಚಾರ್ವಂಭೋರುಹಪತ್ರನೇತ್ರೆ ಪೆಸರಿಂ ಶಾರ್ದೂಲವಿಕ್ರೀಡಿತಂ (ಛಂದೋಂಬು. ೨-೧೭೩). **ಶಾರ್ದೂಳವಿಕ್ರೀಡಿತ** : ೨. ಶಾರ್ದೂಳವಿಕ್ರೀಡಿತಂ ಇದು ಜಾತ್ಯಳಂಕಾರಂ (ಕಾಇ. ೪೧-೫೮-೩೧, 1087). [ಸಂ.]

ಶಾರ್ದೂಳವಿಕ್ರೀಡಿತ 'ಶಾರ್ದೂಲವಿಕ್ರೀಡಿತ' ನೋ.

ಶಾರ್ವರ (ಗು). ೧. ರಾತ್ರಿಗೆ ಸಂಬಂಧಿಸಿದ. ೨. ಕೇಡುತರುವ; ದುಷ್ಟತನದ. (ನಾ). ೩. ಕಗ್ಗತ್ತಲೆ; ಅಂಧಕಾರ: "ಶಾರ್ವರಂ — ಕಾರುಗತ್ತಲು, ಘಾತುಕ" (ಸಿದ್ಧಾಂತಿ. ೪೧೭). [ಸಂ.]

ಶಾರ್ವರಿ$_1$ (ನಾ). ೧. ಇರುಳು; ರಾತ್ರಿ : ಶಾರ್ವರಿ ಪರಿಪೂರ್ಣಚಂದ್ರನಂ ಪಡೆವಂತಂತರ್ವತ್ನಿ ಸರ್ವಲಕ್ಷಣಸರ್ವಗುಣಾನ್ವಿತನೆನಿಪ್ಪ ಸುತನಂ ಪಡೆದಳ್ (ಪಂಪಾಮಾ. ೩-೧೦೯); ಲಂಕಾಪುರದ ಸಿರಿ ಸೇರಿರ್ದುದಾ ಶಾರ್ವರಿಯ ಪರಿಯಟನಪ್ರಚಂಡ ಸುಮಾಲ್ಯವಂತಂಗೆ (ತೊರಾ. ೧-೮-೨೫). ೨. ಶಕ್ತಿದೇವತೆಗಳಲ್ಲಿ ಒಬ್ಬಳು: ಶಾರ್ವರಿ ರತಿ ಮುಕ್ತಕೇಶಿ . . . ಎಯ್ದಿದರ್ (ಶಬಶಾ. ೩-೧೨). [ಸಂ. ಶಾರ್ವರೀ]

ಶಾರ್ವರಿ$_2$ (ನಾ). ಅರುವತ್ತು ಸಂವತ್ಸರಗಳಲ್ಲಿ ಮೂವತ್ತು ನಾಲ್ಕನೆಯದು: ಆ ವರುಷವೇ ಪ್ರಭವ . . . ಶಾರ್ವರಿ . . . ಅಕ್ಷಯವೆಂದಱವತ್ತು ತೆಱನಾಗಿಹುದು (ವಿವೇಕ. ೩೪೨). [ಸಂ. ಶಾರ್ವರಿನ್]

ಶಾರ್ವರೀಶ (ನಾ). ರಾತ್ರಿಯ ಒಡೆಯ; ಚಂದ್ರ : ಶಾರ್ವರೀಶನ ಶಕಲನಿಟಲೆ ಸೂರ್ಪಕಹರನ ಮೌರ್ವಿಯಂ ಪಳಿವ ಬಂಧುರನೀಲಚಿಕುರೆ (ನವಮೋ. ೧೬-೨). [ಸಂ.]

ಶಾಲ$_1$ (ನಾ). ೧. ಮನೆಯ ಒಂದು ಭಾಗ : ಶಾಲ [ಪಾಶಾಂ. ೪] ಹರಿನೀಲ ಮಣಿಕಿರಣಾಳಿ ಪೊದಟ್ಟೆಸೆಯ ರಾಹುಗೆತ್ತಗಿದಗಿದಟ್ಟಾಳಕೆಗಳಲ್ಲಿ . . . ತಡೆದು ನಡೆವಂ ದಿನಪಂ (ಆದಿಪು. ೬-೧೦೫). ೨. ಮನೆ; ನಿವಾಸ : ಉನ್ಮತ್ತ ಗಜಗಮನೆಯರ್ ಬಂದೊತ್ತಗೆ ನಿಲ್ವರ್ ಶಾಲದೊಂದಂಗಣದೊಳ್ (ಸುಕುಮಾ. ೯-೬೨). ೩. ಕುದುರೆಯ ಲಾಯ. ೪. ಮರದ ಮುಖ್ಯವಾದ ಕೊಂಬೆ. ೫. ಮರದ ಕಾಂಡ. [ಸಂ. ಶಾಲಾ]

ಶಾಲ$_2$, **ಶಾಳ** (ನಾ). ೧. ಅಂಟುದ್ರವವನ್ನು ಸ್ರವಿಸುವ ಒಂದು ಬಗೆಯ ಎತ್ತರವಾದ ಮರ; ಸರ್ಜವೃಕ್ಷ: "ಸರ್ಜಂ ಶಾಲಂ" (ವಸ್ತುಕೋ. ೩೪-೧೧); ಶಾಲವೃಕ್ಷಗಳಿಂದ ಗೃಹಗೃಹವೂ ಶೋಭಿಸಿತು (ಶಾಂತಲಾ. ೯೯). ೨. ಮರ; ವೃಕ್ಷ: "ವೃಕ್ಷಃ . . . ಶಾಲಃ . . . ದ್ರುಮಃ, ಪಾದಪಃ — ಈ ೧೯ ಮರಂ" (ಹಲಾಯು. ೨೯-೨೩). ೩. ಸುತ್ತುಗೋಡೆ; ಆವರಣ; ಪ್ರಾಕಾರ: ಶಾಲಂ ವೇದಿದ್ವಿತಯಂ ಶಾಲೋನ್ನತ ವೇದಿಶಾಲವೇದಿಕೆ ವಿಳಸಚ್ಛಾಲಂ . . . ಸೊಗಯಿಸುತಿರ್ಕುಂ (ಪಾರ್ಶ್ವಪು. ೧೬-೧೨); ನಗರವೆಸೆದುದು . . . ಚಾಮೀಕರದ ಚಟುಳಪ್ರಭೆಯ ಶಾಲಾವರಣದಲಿ ಮಖಶಾಲೆಗಳ ಸೌಧಗಳ ಸೊಂಪಿನಲಿ (ತೊರಾ. ೧-೯-೯). ೪. (ಶೀಘ್ರವಾಗಿ ಚಲಿಸುವ) ಒಂದು ಬಗೆಯ ಮೀನು: "ಶಾಲಃ, ಶಲಕಃ . . . ಪಲ್ಲವಕಃ — ಈ ೬ ಮತ್ಸ್ಯದ ಭೇದಂಗಳ್" (ಹಲಾಯು. ೧೦೯-೩೭). **ಶಾಳ** : ೩. ಉದಗ್ರಕನಕಶಾಳದಿಂದೊಳಗೆ ಕುಲನಗಂಗಳಿನಿಪ ದೇವಕುಲದ ಭೋಗದಿಂ (ಪಂಪಭಾ. ೧-೫೮); ಅಗಲಂ ತನಗೊರ್ಗಾವುದ ಮಿಗಿಲಿಲ್ಲೆನೆ ಶಾಳಮೂಳದಿಂದೆ ತಗುಳ್ದೊಪ್ಪುಗುಮಾ ಶ್ರೀಮಂಡಪದೊಳಗೆ ಗಣಾವನಿದೇಶಂ (ಚಂದ್ರಪ್ರ. ೧೫-೭೯). [ಸಂ.]

ಶಾಲಕ, ಸಾಲಕ (ನಾ). ತಂಗಿಯ ಗಂಡ ; ಮೈದುನ : "ತಂಗಿಯಧಿಪಂ ಶಾಲಕಾಖ್ಯನಕ್ಕುಂ" (ಮಂಗರಾ. ೯೨-೧೩). **ಸಾಲಕ** : ಮದನನೆನಿಪ್ಪ ಸಾಲಕನು ದುರುಳ ಕಾಷ್ಠಾಂಗಾರಕಗೆ ಕೈನೆರವ ಬಂದು (ಜೀವಂಧ. ೪-೬೬). [< ಸಂ. ಶ್ಯಾಲಕ]

ಶಾಲಗ್ರಾಮ (ನಾ). ವಿಷ್ಣುವಿನ ಸ್ವರೂಪವೆಂದೂ ಪೂಜಾರ್ಹವೆಂದೂ ಭಾವಿಸಲಾದ, ಪ್ರಮುಖವಾಗಿ ಗಂಡಕೀನದಿಯಲ್ಲಿ ದೊರೆಯುವ ಕಪ್ಪನೆಯ ದುಂಡುಕಲ್ಲು; ಸಾಲಿಗ್ರಾಮ: ನಿಷ್ಠೆಯಿಂದಲಿ ಶಾಲಗ್ರಾಮಶಿಲೆಯ ಸಂಪುಷ್ಟ ದೊಳಿರಿಸಿ ಪೂಜಿಸು (ಪುರಂದ. ೨-೩೮-೨); ದಿವ್ಯಶಾಲಗ್ರಾಮಶಿಲೆಯೊಳುದಿಸಿದ ಕೊಳಲ ಕೃಷ್ಣಮೂರ್ತಿಯ ಮಧುರಮುರಲಿನಾದವು ತಮದ ಕಣ ಕುಣಿಸುತಿದ (ಉಯ್ಯಾಲೆ. ೪-೧೦). 'ಸಾಲಗ್ರಾಮ' ಪರಾ. [ಸಂ.]

ಶಾಲಣ, ಸಾಲಣ (ನಾ). ಶಾಲವೃಕ್ಷದ ಅಂಟು; ರಾಳ: ಶಕಾರಕ್ಕೆ — ಅಶನಿ — ಅಸನಿ . . . ಶಾಲಣ — ಸಾಲಣ (ಶಮದ. ೨೫೩ ಪ್ರಯೋ). **ಸಾಲಣ** : ಮೇಲಿನ ಪ್ರಯೋಗವನ್ನು ನೋಡಿ. [< ಸಂ. ಶಾಲನ]

ಶಾಲಪರ್ಣಿ (ನಾ). ಒಂದು ಬಗೆಯ ಮರ; ಮೂರೆಲೆಹೊನ್ನೆ: "ಶಾಲಪರ್ಣಿ [ಪಾಶಾಂ. ಲಿಪರ್ಣ, ಲಿಪನ್ನಿ] ಯೆನಲ್ಕೆ ಹೊನ್ನೆಯಕ್ಕು" (ಮಂಗರಾ. ೩೯-೨೯).

[ಸಂ. ಶಾಲಪರ್ಣೀ]

ಶಾಲಭಂಜಿಕೆ, ಶಾಳಭಂಜಿಕೆ (ನಾ). ೧. ಶಾಲವೃಕ್ಷದ ಮರದಿಂದ ಮಾಡಿದ ಬೊಂಬೆ. ೨. ಪುತ್ತಳಿ; ವಿಗ್ರಹ: ಎಡೆಯಾಡುತಿಹ ನರಪನ ರೂಪುಗಾಣುತ ಮಡದಿಗೆ ಮರವಟ್ಟ ಭಾವ ತುಡುಕಿದವೊಲು ಶಾ[ಪಾಶಾಂ. ಸಾ]ಲಭಂಜಿಕೆಗಳು ಕಣ್ಗೆ ಕೊಡುವುದು ಮೋಹನರಸವ (ವರ್ಧಚ. ೧-೧೩೩); ಸಾಲ ಮಣಿಮಯದ ಸೋಪಾನ ದೊಳ್ನಿಲಿಸಿರ್ದ ಶಾ[ಪಾಶಾಂ. ಸಾ] ಲಭಂಜಿಕೆಗಳೊ ವಿಚಿತ್ರಮೆನೆ . . . ಅಬಲೆಯರ ರೂಪುಗಳ್ಕಣ್ಗೆಸೆದುವು (ಚೈಮಿಭಾ. ೩೦-೧೩). 'ಸಾಲಭಂಜಿಕೆ' ಪರಾ. ೩. ಸೂಳೆ; ವೇಶ್ಯೆ. **ಶಾಳಭಂಜಿಕೆ** : ೧. ಅನೇಕಕೂಟಕೋಟೀವಿಶಾಳಶಾಳಭಂಜಿಕಾರಂಜಿತಮುಂ ನಾಟ್ಯಶಾಳಾಳಂಕ್ರಿತಮುಂ (ಕಾಆ. ೬-೩-೨೫೩; 1062); ಪಾಂಥರ ಕಣ್ಗೆ . . . ಮನಂಗೊಳಿಸರ್ಪರನಂಗರಾಜಧಾರಾಗೃಹ ಶಾಳಭಂಜಿಕೆಗಳಂತಱವಟ್ಟಿಗೆಯೊಳ್ ಲತಾಂಗಿಯರ್ (ಪುಷ್ಪಸು. ೨-೨೧). [ಸಂ. ಶಾಲಭಂಜಿಕಾ]

ಶಾಲಭಂಜಿಕೆಗಿಱು (ಕ್ರಿ). ಬೊಂಬೆಯೆಂದು ಭ್ರಮಿಸು: ಶಾಲ[ಪಾಶಾಂ. ಸಾರ, ಸಾಲ] ಭಂಜಿಕೆಗೆ [ಪಾಶಾಂ. ವೆ] ತ್ತರಸಂ ನೋಡಿದಂ ಲಲಾಟಕೋಮಲೆಯಂ (ಶಮದ. ೨೪೦ ಪ್ರಯೋ).

[ಶಾಲಭಂಜಿಕೆ + ಗಿಱು]

ಶಾಲಾಕ್ಯತಂತ್ರ (ನಾ). (ಕಣ್ಣು, ಕಿವಿ ಮುಂತಾದುವುಗಳ ರೋಗಗಳಿಗೆ ಚೂಪಾದ ಆಯುಧಗಳಿಂದ ಮಾಡುವ) ಚಿಕಿತ್ಸೆಗೆ ಸಂಬಂಧಿಸಿದ ಆಯುರ್ವೇದದ ಒಂದು ಭಾಗ : ಆಯುರ್ವೇದವು ಶಲ್ಯತಂತ್ರ ಶಾಲಾಕ್ಯತಂತ್ರ . . . ವಾಜೀಕರಣತಂತ್ರಗಳೆಂಬ ಎಂಟುಭಾಗಗಳುಳ್ಳದ್ದಾಗಿದೆ (ಸುಶ್ರುಚಿಂ. ೯೪).

[ಸಂ.]

ಶಾಲಾಜಿರ (ನಾ). ಬಾಯಿ ಅಗಲವಾಗಿದ್ದು ಹುರಿಯಲು ಅನುಕೂಲವಾಗುವಂತಿರುವ ಮಣ್ಣಿನ ಪಾತ್ರೆ ; ಓಡು; ಶ್ರಾವೆ: "ಶಾಲಾ[ಪ್ರಾಶಾಂ. ಳಾ]ಜಿರಃ, ವರ್ಧಮಾನಃ, ಶರಾವಃ — ಈ ೩ ಶ್ರಾವೆ" (ಹಲಾಯು. ೫೨-೧೬೦). [ಸಂ.]

ಶಾಲಾವೃಕ (ನಾ). ೧. ನಾಯಿ: "ಕೌಲೇಯಕಃ . . . ಭಷಕಃ, ಮೃಗದಂಶಃ, ಶಾಲಾವೃಕಃ — ಈ ೮ ನಾಯ್(ಯಿ)" (ಹಲಾಯು. ೪೭-೧೨೬). ೨. ತೋಳ. ೩. ನರಿ. ೪. ಬೆಕ್ಕು. ೫. ಜಿಂಕೆ. ೬. ಕೋತಿ. [ಸಂ.]

ಶಾಲಿ$_1$ (ಗು). ೧. ಮನೆಗೆ ಸಂಬಂಧಿಸಿದ; ಗೃಹಕೃತ್ಯದ. ೨. ಪಡೆದಿರುವ; ಹೊಂದಿರುವ. ೩. ಉಜ್ವಲವಾದ; ಕಾಂತಿಯುಕ್ತವಾದ. [ಸಂ. ಶಾಲಿನ್]

ಶಾಲ್ಯಿ$_2$, **ಶಾಳಿ** (ನಾ). ೧. ನೆಲ್ಲು ; ಬತ್ತ : ಕಳವೆ ಶಾಲಿಗೆ ಓಗರದ ಉದಕ ವನೆಱೆದವರಾರಯ್ಯ (ಮಹಾದೇ. ಬ. ೧೦-೩); ಫಳಭಾರಂಗಳಿಂ ನಮ್ರಂಗಳಾಗಿ ಶೋಭಿಸುವ ಶಾಲಿವ್ರೀಹ್ಯಾದಿ ಸಮಸ್ತಸಸ್ಯಂಗಳೊಪ್ಪೆ (ರನ್ನಕ. ೧-೩೦ವ); ಕಾಲುವೆಯ ನೀರಿಂದ ಹೊರವಾಗಿ ಬೆಳೆದ ಶಾಲಿಗಳ ಮಡಿಯೇನು (ನವರಾ. IV. ೬೮). ೨. ಪುನುಗುಬೆಕ್ಕು. **ಶಾಳಿ** : ೧. ಪೂಸ ನೈದಿಲ ಕಂಪನ ಬೀಱಿ ಕಾಯ್ತು ಕೆಂಗೊಲೆಯೊಳೆ ಜೋಲ್ವ ಶಾಳಿ (ಪಂಪಭಾ. ೧-೫೨); ಶಾಳಿಯ ಕಂಪನೊಟ್ಟು ನಳಿನಂಗಳನಳ್ಕಿಸಿ . . . ತೀಡಿದುದು ಮೂಡಣ ಗಾಳಿ (ಅರ್ಧನೇ. ೪-೬೨); ಶಾಳಿಗಳಂ ಬಹುಪರಿಮಳಶಾಳಿಗಳಂ . . . ರುಚಿನಿಚಿತದಿ ಶಾಳಿಗಳಂ ಬೆಳೆವ ನೆಲನೆ ಪೊಲನಾ ನೆಲದೊಳ್ (ಪುಷ್ಪಪು. ೨-೧೪). [ಸಂ.]

ಶಾಲಿಕೆ (ನಾ). ಮನೆ ; ನಿವಾಸ : ಹರಿಚಂದನವಂದನಮಾಲಿಕೆಗಳ್ ಪರಿವೇಷ್ಟಿಸೆ ಮೆಱೆದುವು ಶಾಲಿಕೆಗಳ್ (ಚಂದ್ರಪ್ರ. ೪-೬೩ ರಗಳೆ). [ಸಂ. ಶಾಲಿಕಾ]

ಶಾಲಿಗ್ಗಾಮೆ (ನಾ). ಒಂದು ಊರಿನ ಹೆಸರು: ಭೂತಶರ್ಮ್ಮರ್ಗ್ಗೆ ಶಾಲಿಗ್ಗಾಮೆ ಸರ್ವ್ವಪರಿಯಾರ ಪರಿಗ್ರಹದಿನ್ತು ಪಾಣಿಗ್ರಹಣಂ ಕೆಯ್ದು ಕೊಟ್ಟಾರ್ (ಮೈಅರಿ. ೧೯೪೧, ೧-೩೨; 788). [< ಸಂ. ಶಾಲಿಗ್ರಾಮ]

ಶಾಲಿಗ್ರಾಮ (ನಾ). = **ಶಾಲಗ್ರಾಮ**: ತಲೆತಲಾಂತರದಿಂದ ಮನೆಯಲ್ಲಿ ಪೂಜೆ ಮಾಡಿದ ಆ ಶಾಲಿಗ್ರಾಮವನ್ನ ಅವ ನೀರಿಗೆ ಎಸೆದು ಥೂ ಎಂದು ಉಗಿದು ಬಿಡೋದ? (ಸಂಸ್ಕಾರ. ೯). [ಸಂ.]

ಶಾಲಿನಿ (ನಾ). ೧. ಮನೆಯ ಒಡತಿ; ಯಜಮಾನಿ. ೨. [ಛಂದ] ವರ್ಣ ಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಹನ್ನೊಂದು ಅಕ್ಷರಗಳುಳ್ಳ ತ್ರಿಷ್ಟುಪ್ಪೆಂಬ ಛಂದಸ್ಸಿನ ಒಂದು ವೃತ್ತ: ಭೂಮಿಯ್ಕೋಮದ್ವಂದ್ವ ರುದ್ರದ್ವಯಂಗಳ್ ತಾಮೆತ್ತಂ ಚೆಲ್ವಾಗೆ ಶೈಲಂಗಳೊಳ್ಪಿಶ್ರಾಮಂ ನಿಲ್ತಂದಕ್ಕುಮಾ ನಾಕಿಯಿಂದಂ ಭೂಮಿಖ್ಯಾತಂ ಶಾಲಿನೀನಾಮವೃತ್ತಂ (ಛಂದೋಂಬು. ೨-೧೨೧).

[ಸಂ. ಶಾಲಿನೀ]

ಶಾಲಿಪಾಲಿಕೆ (ನಾ). ಬತ್ತದ ಗದ್ದೆಯನ್ನು ಕಾಯುವವಳು : ಏಸವ ಶಾಲಿಪಾಲಿಕೆಯರಂ ನೋಡುತುಂ ಮುಂತು ಪವನದ ಪೂಜೆಯನೆಯ್ದೆ ವನಲಕ್ಷ್ಮಿ ಹರಿದಂತದೊಳ್ ಪಸರಿಸಿದ ಕಹಳಾರವದಿನಿವರ ಬರವಱಿದು ಗಂಧವಹನಂ ನೀಂ ತಳ್ಪದಿಲ್ಲಿಗಾರ್ಯನ ಕರೆದು ತಾರೆಂದು ಸಂತಸದೆ ಕಳಿಪಿದಳೊಯೆನೆ ಬಂದುದುದ್ಯಾನದಿಂ ತಂಬೆಲರ್ (ಪದ್ಮರಾ. ೮-೨೧). [ಸಂ. ಶಾಲಿಪಾಲಿಕಾ]

ಶಾಲಿವನ, ಶಾಳಿವನ (ನಾ). ಬತ್ತದ ಗದ್ದೆ : ಶಾಲಿವನಾಳಿಯ ಪೆಂಟಿನಿಂದನಾವರಿಸೆ ಪೊಲಂ ಸರೋಜಕುಮುದೋಜ್ವಲಮಾಗೆ ಕೊಳಂ . . . ಬಂದುದತಿನರ್ಮಲ ನೀರದವಪ್ಪ ಶಾರದಂ (ಕಾದಂಬಾ. ೬೩೨); ತುಂಬುರನಲ್ಲಿ ಬಿನ್ನೈಸುತುಂ ಬರಲು ಮುಂದೆ ನಳನಳಿಸುತ್ತೆ ಶಾಲಿವನವೊ[ಪ್ರಾಶಾಂ. ಶಾಸನವದೊ]ಪ್ಪಿರಲು (ನಂಬಿರ. ೯-೧೨). **ಶಾಳಿವನ** : ಸಕಲದಿಶಾಳಿಯಂ ಪುದಿದ ಶಾಳಿವನಂ (ಮಲ್ಲಿಪು. ೨-೧೨); ಸೊಂಪುವೆತ್ತ ಪೆಂಪಿನ ಕುಂಭಿನಿಯೊಳ್ ಮುಖ್ಯವಾದ ಶಾಳಿವನವಿರ್ದುದು (ಹಮ್ಮೀರ. ೧-೪೯ ವ). [ಸಂ.]

ಶಾಲಿವಾಹನ (ನಾ). ೧. ಶಕಪುರುಷನೆಂದು ನಂಬಲಾದ ಒಬ್ಬ ರಾಜನ ಹೆಸರು. ೨. ಕ್ರಿಸ್ತಶಕ ಎಪ್ಪತ್ತೆಂಟರಲ್ಲಿ ಶಕೆಯೊಂದನ್ನು ಆರಂಭಿಸಿದ ಒಬ್ಬ ಕನಿಷ್ಕರಾಜನ ಹೆಸರು: ವಿಕ್ರಮಸಂವತ್ಸರದ ಮೂಲಪುರುಷ ವಿಕ್ರಮಾದಿತ್ಯನನ್ನು ಶಾಲಿವಾಹನನು ಸೋಲಿಸಿದನೆಂದು ಕಥೆಗಳಿವೆ (ಕಶಾಅ. ೫೩). ೩. ಒಂದು ಬಗೆಯ ಕ್ರಿಮಿ : ವರಶಾಲಿವಾಹನಕ್ರಿಮಿಯಂತೆ ನಿರ್ಲೇಪಕರನಾಗಿ ಭ್ರಮರದಂತತಿಸುವಾಸನೆಗಳಸಿ (ಪರಶು. ೯-೭). [ಸಂ.]

ಶಾಲಿವಾಹನಶಕ (ನಾ). ಕ್ರಿಸ್ತಶಕ ಎಪ್ಪತ್ತೆಂಟರಲ್ಲಿ ದಕ್ಷಿಣ ಭಾರತದಲ್ಲಿ ಶಾಲಿವಾಹನನೆಂಬ ರಾಜನಿಂದ ಆರಂಭವಾದ ಶಕೆ : ಶಾಲಿವಾಹನಶಕದ . . . ಬಹುಳದಶಮಿಯಾ ಗುರುವಾರಕತಿಸಾಂಗದೆ ಪೇಳೆ ಮುಗಿಸಿದ ಪಂಡಿತಾಗ್ರಣಿ ವಿರೂಪಾಕ್ಷ ಲೀಲೆಯಿಂ ಚೆನ್ನಬಸವೇಶನ ಪುರಾಣವ (ಚೆಬಪು. ೬೩-೭೭); ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನಶಕವರ್ಷ ಸಾ ೧೫೯೧ ಸಂದ ವರ್ತ್ತಮಾನವಾದ ಸೌಮ್ಯನಾಮಸಂವತ್ಸರದ ಕಾರ್ತ್ತಿಕಶುದ್ಧ ೧೨ ಭಾನುವಾಸರದಲ್ಲಿ . . . ಸಿಂಹಾಸನಾಧೀಶ್ವರರಾಗಿ (ಎಕ. IV. ಹುಣಸೂ. ೧೫೯-೪; 1669); ಶಾಲಿವಾಹನಶಕದ ವರ್ಷ ಚೈತ್ರಶುದ್ಧ ಪ್ರತಿಪದೆಯಿಂದ ಆರಂಭವಾಗುತ್ತದೆ (ಧಾಹಬ್ಬ. ೫೭). [ಸಂ.]

ಶಾಲಿಸೌಂದರ (ನಾ). ಉಜ್ವಲವಾದ ಸೌಂದರ್ಯ; ಕಾಂತಿಯುಕ್ತವಾದ ರೂಪ: ನೀವುಮೆನ್ನಂತೆ ರಮಣೀಯಮಾದ ಶಾಲಿಸೌಂದರದ ರೂಪಂಗಳಂ ತಳೆದು . . . ಪಟ್ಟಣಕೆ ಬಹುದೆಂದು ಭೃತ್ಯರ್ಗೆ ತರಣಿಜಂ ನೇಮಿಸಿದನು (ಡೈಮಿಭಾ. ೨೭-೨೭). [ಸಂ.]

ಶಾಲಿಹೋತ್ರ, ಶಾಳಿಹೋತ್ರ (ನಾ). ೧. ಕುದುರೆ; ಹಯ: ನಡೆದು ಬಂದರು ಶಾಲಿಹೋತ್ರನ ನಡುವೆ ಕಂಡುಪಚರಿಸಿಕೊಂಡರು ಪಡುವಲಭಿಮುಖರಾದರನಿಬರು (ಕುವ್ಯಾಅ. ೯-೨೫). ೨. ಕುದುರೆಗಳ ಶಕ್ತಿ, ಸ್ವಭಾವ ಮುಂತಾದುವುಗಳನ್ನು ವಿವರಿಸುವ ಶಾಸ್ತ್ರ; ಅಶ್ವಶಾಸ್ತ್ರ : ತರ್ಕ ವ್ಯಾಕರಣ ಅಮರಸಿಂಹ ಛಂದಸ್ಸು ನಿಘಂಟು ಶಾಲಿಹೋತ್ರ . . . ಮಂತ್ರತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ ಚೌಷಷ್ಟಿವಿದ್ಯಾ ಕಳಾವಿದನೆನಿಸಿಕೊಂಬನಲ್ಲದೆ ಲಿಂಗವಂತನೆನಿಸಿಕೊಂಬುದಿಲ್ಲ (ಮಡಿಮಾ. ೪೩-೬೧). ೩. ಅಶ್ವಶಾಸ್ತ್ರವನ್ನು ಬರೆದ ಒಬ್ಬ ಋಷಿಯ ಹೆಸರು: ಜಾತ್ಯಶ್ವಂಗಳಂ ತಿರ್ದುತಿರ್ಪವರ್ಗೆಂ ಸಾರ್ದುವೊ ಶಾಲಿಹೋತ್ರ ರವಿಪುತ್ರಾರೋಹಣಪ್ರೌಢಿಗಳ್ (ಪುಷ್ಪಪು. ೨-೫೮) ; ತುರಗಾರೋಹಣದಲಿ ನಿರ್ಮಳಶಾಲಿಹೋತ್ರನಂತೆಸೆವ (ಮೋಹತ. ೧೭-೭೯). **ಶಾಳಿಹೋತ್ರ** : ೨. ಸಾಮುದ್ರಿಕಂ ಶಾಳಿಹೋತ್ರಂ . . . ಶುಶ್ರುತಮುಮೆಂದಿವು ಮೊದಲಾದ ನರವೈದ್ಯಮುಮಂ (ವಡ್ಡಾರಾ. ೨೩-೧೫). [ಸಂ.]

ಶಾಲೀನ (ಗು). ೧. ವಿನಯದಿಂದ ಕೂಡಿದ; ನಮ್ರವಾದ. ೨. ಹೋಲುವ; ಸಾಮ್ಯವುಳ್ಳ. (ನಾ). ೩. ಗೃಹಸ್ಥ. ೪. ಒಳ್ಳೆಯವನು; ಸಭ್ಯ: "ಶಾಲೀ . . . ಶಾಲೀನಃ, ಶಾರದಃ — ಈ ೫ ಒಳ್ಳಿದಂ" (ಹಲಾಯು. ೬-೨೨೦). [ಸಂ.]

ಶಾಲೀನತೆ (ನಾ). ವಿನಯ; ಸೌಜನ್ಯ : ಮನೋರಥಮಸಂಭಾವ್ಯಮೆಂದು ಭಾವಿಸುತ್ತಂ ಶಾಲೀನತೆಯನವಲಂಬಿಸಿ ನುಡಿಯಲಱಿಯದೆ ಸುದತಿ ಪೆಱತೊಂದು ನೆವದಿಂ ಕೆದಱಿದಳೊಂದಿನಿಸು ಮಂದಹಾಸದ್ಯುತಿಯಂ (ಕಾದಂಬಾ. ೨೪೮); ಅಲ್ಲಿಯೇ ಒಂದು ಬದಿಗೆ ಶಾಲೀನತೆಯಿಂದ ಕೂತಿದ್ದ ಹೊಸನಟಯನ್ನು ನೋಡಿ ಅವನಿಗೆ ಆನಂದವೆನಿಸದಿರಲಿಲ್ಲ (ಪುನರ್ಮಿ. ೨೧೫). [ಸಂ. ಶಾಲೀನತಾ]

ಶಾಲು, ಶಾಹಲು (ನಾ). (ವಿಶೇಷವಾಗಿ) ಉಣ್ಣೆ ಅಥವಾ ರೇಷ್ಮೆ ಎಳೆಗಳಿಂದ ನೆಯ್ದು, ಹೊದೆಯುವ ವಸ್ತ್ರ : ಕಂಬಳಿಯ ಹೊದೆವವಗೆ ಶಾಲದೇಕೆ [ಪ್ರಾಶಾಂ. ಮಡಿಯೇತಕೆ] (ಪುರಂದ. ೨-೬೨-೨); ನವರತ್ನಖಚಿತಮಾದಾಭರಣಜಾಲಮಂ ನವದುಕೂಲಂಗಳನ್ನುಷ್ಣೀಷ ಶಾಲುಗಳನವಸರದಿ ಕಾಯದೊಳ್ ತೊಟ್ಟುಟ್ಟು (ವರ್ಷವ. ೩-೧೨); ಮೋಡ ನೂತೇ ನೂಲುವದು ಬಿಳಿದಾರ ಧಾರಾಕಾರದಿ . . . ಗದ್ದೆ ಹೊಲ ತೋಟಕ್ಕೆ ಹೊಚ್ಚಿದೆ ಕೆಂಪುಖಾದಿಯ ಶಾಲನು (ನಲಮು. ೧೧-೨೦). **ಶಾಹಲು** : ಮೇಲೆ ಶಾಹಲನ್ನು ಪೊದ್ದು ನೀಲದುಂಗುರವನಿಟ್ಟು (ಯನಳ. ೧೨೩).

ಶಾಲುಜೋಡಿ = ಎರಡು ಶಾಲು; ಜೋಡಿ ಶಾಲು: ಸಭೆಯ ಕೊನೆಯಲ್ಲಿ ಆಚಾರ್ಯರಿಗೆ ಗೌರವಸೂಚಕವಾಗಿ ಶಾಲುಜೋಡಿಯನ್ನು ನೀಡಲಾಯಿತು (ರೂಢಿ).

[← ಪಾರ. ಹಿಂ. ಮರಾ. ಶಾಲ್]

ಶಾಲುನಾಮೆ (ನಾ). ಜರಿಯ ನಕಾಶೆಕೆಲಸ ಮಾಡಿದ ಶಾಲು : ಪಟಗಾರ ರಾಯಂಣನಾಯ್ಕನಿಗೆ ಬಿಳಿಚತ್ರಿ ಪಚೆ ವಂಟ ತೋಡ ಬಳೆ ಶಾಲುನಾಮೆ ಸಹ ಕೊಟ್ಟು ಕಂಪಣಕ್ಕೆ ಕರ್ತ ನೆಂದು . . . ನಿಯಮಿಸಿ (ಮೈಅರಿ. ೧೯೩೦, ೧೩-೬೨; 1345 ?).

[← ಪಾರ. ಮರಾ. ಶಾಲ್‌ನಾಮಾ]

ಶಾಲೂಕ (ನಾ). ತಾವರೆಯ ಗೆಡ್ಡೆ ; ಕಮಲದ ಗೆಡ್ಡೆ : ಕೊಳದಿಂದಂ ತಗದೊಟ್ಟಕೊಂಡ . . . ಶಾಲೂಕಮೃಣಾಳಜಾಲಮನಿಡುತ್ತೀಡಾಡುತಂ . . . ಪೋಗಲ್ ಮದೇಭಂಗಳ್ (ಕಾದಂಪು. ೬೩೦). [ಸಂ.]

ಶಾಲೂರ (ನಾ). ಕಪ್ಪೆ ; ಮಂಡೂಕ : ಜಲಮೃಣಾಳನಾಳಮಂ ಜಲವ್ಯಾಳಮೆಂದು ಕೆಲದ ಬಲದಿಂ ಪಿಡಿಯಲೆಂದು ಧೀಂಕಿಡುವ ವಿಷಾಪಹಾರಶಾಲೂರಚಾಲಂಗಳೊಳಂ . . . ಭೀಷಣರಮಣೀಯಮನಿಸಿತ್ತು (ಚಂದ್ರಪ್ರ. ೫-೪೦ ವ). [ಸಂ.]

ಶಾಲೆ$_1$ 'ಸಾಲೆ$_2$' ನೋ.

ಶಾಲೆ$_2$ 'ಸಾಲಿ$_2$' ನೋ.

ಶಾಲೆ$_3$ (ನಾ). ೧. ಮರದ ದೊಡ್ಡ ರೆಂಬೆ, — ಕೊಂಬೆ : "ಸ್ಕಂಧಶಾಖಾಃ, ಶಾಲಾಃ — ಈ ೨ ಮರದ ಹೆಗ್ಲೊಂಬು" (ಪಲಾಯು. ೬೦-೨೮). ೨. ಮನೆ; ನಿಲಯ : "ಕುಟಿ ಕುಲಂ ಶಾಲೆ . . . ಗೇಹಮನೆ ಧಿಷ್ಣ್ಯಮೆನಲಿವು ಮನೆಗೆ ಪೆಸರಕ್ಕು" (ಪಂಗರಾ. ೫೮-೭); ಆ ನಳಿನಾಕರಜಲದಡೆಗಾನೆಸಗಿದ ಶಾಲೆಯಲ್ಲಿ ನೆಲಸಿದನರಸಾ (ದಶಕು. ೧೩-೪೮). ೩. ಹಜಾರ ; ನಡುಮನೆ. ೪. ಕುದುರೆಯ ಲಾಯ; **ಅಶ್ವಶಾಲೆ** : ಕುದುರೆಗಳು ಶಾ[ಪಾಠಾಂ. ಸಾ]ಲೆಗಳೊಳಿದ್ದಹಗೆ ಉರಿದು ಬಿಕ್ಕನೆ ಬಿರಿದು ಬಿದ್ದವು ಸುರಿಯೆ ಬಾಲಂಗಳಲಿ ಕೆಂಡವು (ಬಾಪು. ೬೧-೭೮). ೫. ಮರದ ಬಿಳಲು : "ಸ್ಕಂಧಶಾಖಾ, ಶಾಲಾ — ೨ ಗಿಡಗಳಲ್ಲಿ ಕೆಳಗಡೆ ಬಿಟ್ಟಿರುವ ಬಿಳಲು ಹೆಸರುಗಳು" (ಸಿದ್ಧಾಂತಿ. ೧೧೨). ೬. ವಿದ್ಯೆಯನ್ನು ಕಲಿಸುವ ಸ್ಥಳ ; ಪಾಠಶಾಲೆ : ಶಾಲೆಯ ಬಾಗಿಲು ಮುಚ್ಚದ ತಕ್ಷಣ ನನಗೆ ಗಣಿತದ ವಿಷಯ ಮರತೇಹೋಯಿತು (ಶಾಲಮ. ೧). [ಸಂ. ಶಾಲಾ]

ಶಾಲೇಯ (ನಾ). ೧. ಬತ್ತದ ಗದ್ದೆ : "ಕಲವೆಯ ಗದ್ದೆ ಶಾಲೇಯಮೆಂಬುದು" (ಪಲಾಯು. ೨೭-೭) ; ಲೀಲೆಯಿನದಱ ನೆಲಂ ಪರಿಪಾಲಿಸದುವು ಕಣ್ಗೆ ನಾಡೆ ಮೌದ್ಗಂ ಮಾಷ್ಮಂ ಶಾಲೇಯಂ ವ್ಯಹೇಯಂ (ಚಂದ್ರಪ್ರ. ೧-೧೧). ೨. ಒಂದು ಬಗೆಯ ಸೊಪ್ಪು; ಸಬ್ಬಸಿಗೆ : "ಶಾಲೇಯಃ . . . ಮಿಶ್ರೇಯಾ — ೬ ಸಬ್ಬಸಿಕೇ ಹೆಸರುಗಳು" (ಸಿದ್ಧಾಂತಿ. ೧೩೫). [ಸಂ.]

ಶಾಲ್ಮಲಿ, ಶಾಳ್ಮಳಿ (ನಾ). ೧. ಒಂದುಬಗೆಯ ಮರ ; ಎಲವ ; ಬೂರುಗ : ಇದು ಶಾಲ್ಮಲಿಪಾದಪಮಿಂತಿದು ಜಂಬೂವೃಕ್ಷಮಿದುವೆ . . . ದಶಾಂಗಕಲ್ಪಕುಜ-ನಿಳಯಂಗಳ್ (ಆದಿಪು. ೨-೨೬); ಇಲ್ಲಿ ಪುಟ್ಟಿರ್ದ ಶಾಲ್ಮಲಿಗೆ ಸರಿಯೆ ಸಗ್ಗದ ಭೂರುಹಂ (ಪದ್ಮರಾ. ೧೩-೬೯) ; ಮರಗಳಲ್ಲೆಲ್ಲ ಅತಿ ದೊಡ್ಡದು ಶಾಲ್ಮಲಿ ಎಂಬುದನ್ನು ವೇದಕಾಲದ ಋಷಿಗಳು ಅರಿತಿದ್ದರು (ತಪುಪೂ. ೧೫೭). ೨. ಒಂದು ನರಕದ ಹೆಸರು : ಶಾಲ್ಮಲಿ . . . ಸರೂಪವೆಂಬೈದು ಮಂತ್ರಿನರಕಂಗಳಿಂದಾಢ್ಯಮಾಗಿ ದೀಪ್ತವೆಂಬರಸುನರಕವಿಹದು (ವಿವೇಕ. ೧೫೬). **ಶಾಳ್ಮಳಿ** : ೧. ಪಜ್ಜಿರ್ದಿರ್ದ ಬೆಳ್ಮುಗಿಲ್ಗಳ ಮುಜ್ಜಿಗಳಿವೆನಿಸಿದುವು ಶಾಳ್ಮಳೀಫಲತೂಳಂ (ಪುಷ್ಪಪು. ೫-೮೫). [ಸಂ. ಶಾಲ್ಮಲಿ, ಶಾಲ್ಮಲೀ]

ಶಾಲ್ಯಕ್ಷತ (ನಾ). ಮಂಗಳಕಾರ್ಯಗಳಲ್ಲಿ ಉಪಯೋಗಿಸುವ ಅರಿಸಿನ ಅಥವಾ ಕುಂಕುಮದೊಂದಿಗೆ ಕಲಸಿದ ಅಕ್ಕಿ ; ಅಕ್ಷತೆ ; ಮಂತ್ರಾಕ್ಷತೆ : ಶಾಲ್ಯಕ್ಷತಧೂಪ ದೀಪಚರುಸಂದೋಹಂಗಳಂ ಸರ್ವಮಂಗಳಸಂಪೂರ್ಣಮೆನಿಪ್ಪ ಜೈನಗೃಹಮಂ ಪೊಕ್ಕಂ . . . ಸಾಹಿತ್ಯವಿದ್ಯಾಧರಂ (ಪಂಕಾಮಾ. ೪-೧೩೧); ಫಲಸ್ಪರ್ಶಾಭ್ಯುಕ್ಷಣವರ್ಣ . . . ಶಾಲ್ಯಕ್ಷತ ಪ್ರಸರಕ್ಷಾಲನತೋರಣಗ್ರಥನ ಮುಕ್ತಾಮಳಿಕಾಳಂಬನ ವ್ಯಸನವ್ಯಗ್ರಕರಂ ಕರಂ ಸೊಗಯಿಸಿತ್ತಂತಲ್ಲಿ ಕಾಂತಾಜನಂ (ಚಂದ್ರಪ್ರ. ೬-೨೫). [ಸಂ.]

ಶಾಲ್ಯನ್ನ (ನಾ). ೧. ಒಂದುಬಗೆಯ ಉತ್ತಮವಾದ ಬತ್ತ : ಕಳವೆ ರಾಜಾನ್ನ ಶಾಲ್ಯನ್ನ [ಪಾಠಾಂ. ಶಾಲಿ, ಶಾಲ್ಯಯನ]ಕ್ಕೆ ಓಗರದ ಉದಕವನೆಱೆದವರಾರಯ್ಯಾ (ಮಹಾದೇ. ಕ. ೪-೪). ೨. ಒಂದುಬಗೆಯ ಉತ್ತಮವಾದ ಅಕ್ಕಿಯಿಂದ ಮಾಡಿದ ಅನ್ನ : ಸಣ್ಣ ಶಾವಿಗೆಯು ಶಾಲ್ಯನ್ನವನು ನಿಮಿಷದೊಳ್ ಬಣ್ಣಿಸಿ ದುರ್ಗಾದೇವಿ ಬಡಿಸಿದಳಯ್ಯ (ಪುರಂದ. ೨-೧೭೯-೪) ; ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಕಪ್ಪು ಅರಿಸಿ ತೆಗೆದ ಶಾಲ್ಯನ್ನವನ್ನೂ ಅನೇಕ ಸೂಪ ವ್ಯಂಜನಗಳನ್ನೂ ತಿನ್ನುತ್ತಿದ್ದರೆ? (ಬುದ್ಧಪ. ೧೦೬). ೩. (ವಿಶೇಷವಾಗಿ ವಿಷ್ಣು) ದೇವಾಲಯಗಳಲ್ಲಿ ನೈವೇದ್ಯಕ್ಕಾಗಿಯೂ ಅಭಿಷೇಕಕ್ಕಾಗಿಯೂ ಮಾಡುವ, ಹಾಲು, ಬೆಲ್ಲ ಮುಂತಾದುವುಗಳನ್ನು ಹಾಕಿಮಾಡಿದ ಅನ್ನವಿಶೇಷ. [ಸಂ.]

ಶಾಲ್ಯಾನ್ನ (ನಾ). = ಶಾಲ್ಯನ್ನ ೨ : ಶಾಲ್ಯಾನ್ನಂ ಸ್ಮಿತಮಲ್ಲೀ ಮೌಲ್ಯಮನತಿಮ್ಯದುತೆಯಿಂದ ಪರಿಮಳದಿಂ ನೈರ್ಮಲ್ಯದಿನೇಱಿಸಿ . . . ಏಂ ಸೊಗಯಿಸಿತೋ (ಪಾರ್ಶ್ವಪು. ೮-೫೬) : ಶ್ರೀಕಂಠೇಶ್ವರನಿಗೆ ಶಾಲ್ಯಾನ್ನದ ಅಭಿಷೇಕ ಮಾಡಿಸಿ . . . ನಮ್ಮ ಕೆಲಸ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ (ಅರಮ. ೪೦). [< ಶಾಲ್ಯನ್ನ]

ಶಾಲ್ಯೋದನ (ನಾ). = ಶಾಲ್ಯನ್ನ ೨ : ಎಸವ ಪೊಂಬರಿವಾಣ ಮಿಸುನಿವಟ್ಟಲ್ಲಳೊಳ್ಮಿಸುಪ ಶಾಲ್ಯೋದನಂ ಸೂಪಘೃತಭಕ್ಷ್ಯ ಪಾಯಸ . . . ಪಾಲ್ಮೊಸರ್ಗಳಿವು ಬಗೆಗೊಳಿಸಿ ಪೊಸತನಿಸಿರಲು ಸವಿದನಚ್ಯುತಂ (ಜೈಮಿಭಾ. ೬-೪೪). [ಸಂ.]

ಶಾವಂತಿ 'ಸೇವಂತಿ' ನೋ.

ಶಾವಂತಿಗೆ 'ಸೇವಂತಿಗೆ' ನೋ

ಶಾವಕ (ನಾ). ಮರಿ ; ಪೋತ. [ಸಂ.]

ಶಾವರ (ನಾ). ಅರಗಿನ ಗಿಡ ; ಲೋಧ್ರ. [ಸಂ.]

ಶಾವಿಗೆ 'ಸೇವಗೆ' ನೋ.

ಶಾವೀರ 'ಶಾಹೀರ' ನೋ.

ಶಾವೆ 'ಸೇಬೆ' ನೋ.

ಶಾಶಾಂಕ (ನಾ). [ಜ್ಯೋತಿ] ನವಗ್ರಹಗಳಲ್ಲಿ ಒಂದು ; ಬುಧ : ಧರಣೇಜಂ ಪದಿನೈದು ಘರ್ಮರುಚಿ ಪತ್ತೊಂಬತ್ತು ಶಾಶಾಂಕಿ ಪನ್ನೆರಡಿಪ್ಪತ್ತು ದಿನಾಧಿನಾಥಸುತಂ . . . ದೈತ್ಯಗುರುವಿಪ್ಪತ್ತೊಂದು ಸಂವತ್ಸರಂ ಪರಮೋಚ್ಚಾಂಶದೊಳೊಂದಿ ನಿಂದೊಡದು ಒಂಡಾಯುಷ್ಯಮಕ್ಕುಂ (ಜಾತಕ. ೮-೧೧). [ಸಂ.]

ಶಾಶಾಂಕಿಮಂದಿರ (ನಾ). [ಜ್ಯೋತಿ] ಬುಧನ ಕ್ಷೇತ್ರ ; ಮಿಥುನ ಮತ್ತು ಕನ್ಯಾರಾಶಿ : ಸುರವಂದ್ಯಂ ವೃಷತೌಲಿಯೊಳ್ ನಿಲೆ ಸುಹೃತ್ಸುತ್ರಾಧಿಕಂ . . . ಶಾ[ಪಾಠಾಂ. ಶ]ಶಾಂಕಿಮಂದಿರದೊಳ್ ಪೂರ್ಣಸುಹೃತ್ಸನೂಜಪರಿವಾರಂ ಸೌಖ್ಯಯುಕ್ತಂ (ಜಾತಕ. ೮೭-೩೭). [ಸಂ.]

ಶಾಶ್ವತ (ಗು). ೧. ನಿತ್ಯವಾದ; ಅಮರವಾದ : ಜೀವಜಗತ್ತುಗಳು . . . ಸತ್ಯನಿತ್ಯಶಾಶ್ವತವಸ್ತುಗಳೇ ಆಗಿರುವುವು (ಶಕ್ತಿ. ೧೪). (ನಾ). ೨. ನಿತ್ಯವಾದುದು; ಚಿರವಾದುದು : "ಸನಾತನಂ . . . ಶಾಶ್ವತಂ, ಅನಶ್ವರಂ — ಈ ೫ ಕೇಡಿಲ್ಲದ ವಸ್ತು" (ಪಲಾಯು. ೨೧-೧೨೫). ೩. ನಿತ್ಯನಾದವನು; ಪರಮಾತ್ಮ : ಸ್ವಾಮಿ ನೀನು ಶಾಶ್ವತ ನೀನು ಎತ್ತಿದ ಬಿರುದ ಜಗವೆಲ್ಲಱಿಯಲು ಮಹಾದೇವ ಮಹಾದೇವ ಇಲ್ಲಿಂದ ಮುಂದ ಶಬ್ದವಿಲ್ಲ (ಬಪ್ರ. ೫೨೮); ಶಾಶ್ವತನವತರಿಸಿರ್ದಂ ಗದಾಶಂಖಚಕ್ರಾಂಕಿತಹಸ್ತಂ ವಾಸುದೇವಂ (ಜಗವಿ. ೨-೧೦೦). ೪. ಶಿವ ; ಈಶ್ವರ. ೫. ವ್ಯಾಸ. ೬. ಸೂರ್ಯ. ೭. ಸ್ವರ್ಗ. [ಸಂ.]

ಶಾಶ್ವತಪದ (ನಾ). ನಿತ್ಯವಾದ ಸ್ಥಿತಿ ; ಮೋಕ್ಷ ; ಮುಕ್ತಿ : ಶ್ರೀಮತ್ಸಮಂತ ಭದ್ರಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿಸ್ವಾಮಿಗಳ ಪೂಜ್ಯಪಾದಸ್ವಾಮಿಗಳ ಪದಂಗಳೇಗ ಶಾಶ್ವತಪದಮಂ (ಆದಿಪು. ೧-೧೧); ತ್ರೈಲೋಕ್ಯಸ್ವಾಮಿ ಜಿನಂ ಮಾಡ್ಪೆ ನಮಗೆ ಶಾಶ್ವತಪದಮಂ (ಜಾತಕ. ೧-೧). [ಸಂ.]

ಶಾಸಕ (ನಾ). ೧. ಆಳುವವನು; ಶಾಸನ ಮಾಡುವವನು : ಕೊಲೆಮಾಡುವ ಶಾಸಕರ ಅತ್ಯಾಚಾರಗಳನ್ನು ತಾಳಿಕೊಂಡೂ ಹಿಂದೂಧರ್ಮ ಬದುಕಿತು (ಕರ್ಣಾಕ. ೩೮); ವಿಜ್ಞಾನಶಾಸ್ತ್ರವು ಶರೀರದಲ್ಲಿ ಶಾಸಕನಂತಿರುವ ಒಬ್ಬ ಚೇತನನನ್ನು ಸಿದ್ಧಮಾಡಲಿಲ್ಲ (ಜೀವಾಶ್ಮ. ೧೨೫). ೨. ಶಿಕ್ಷಿಸುವವನು. ೩. [ರಾಜನೀ] ಶಾಸನಸಭೆಯ ಸದಸ್ಯ : "ಶಾಸಕರು" ಎಂದರೆ . . . ಆ ರಾಜ್ಯದ ಶಾಸಕರೆಂದು ಯಾರು ತತ್ಕಾಲದಲ್ಲಿ ರಾಷ್ಟ್ರಪತಿಯವರಿಂದ ಅಂಗೀಕಾರ ಹೊಂದಿದ್ದಾರೋ ಅಂಥ ರಾಜರು, ಪ್ರಭುಗಳು (ಭಾಧಾನ. ೨೨೧). [ಸಂ.]

ಶಾಸಕಭವನ (ನಾ). ಶಾಸನಸಭಾಸದಸ್ಯರು ತಂಗುವ ಕಟ್ಟಡ : ಸಂಸತ್ತಿನ ಅಧಿವೇಶನಕ್ಕಾಗಿ ಬಂದ ಶಾಸಕರೆಲ್ಲಾ ಶಾಸಕಭವನದಲ್ಲಿ ಇಳಿದುಕೊಂಡಿದ್ದಾರೆ (ರೂಢಿ). [ಸಂ.]

ಶಾಸನ (ನಾ). ೧. ಆಡಳಿತ ನಡೆಸುವಿಕೆ ; ಆಳ್ಕೆ ; ಪ್ರಭುತ್ವ : ದೇವದೇವಂ ಪುಲಿಗಿರಿನಗರೀಶಾಸನಾಂಕಂ ವೃಷಾಂಕಂ ಸೋಮೇಶಂ (ಸೋಮೇಶ. ೧).

೨. ಅಪ್ಪಣೆ ; ಆಜ್ಞೆ : "ಶಾಸನಮಾಜ್ಞೆಯುಂ" (ಮಸ್ತುಕೋ. ೬೧-೫೮) ; ಧಾತ್ರಿಯೊಳ್ನುಡಿದುದೆ ನನ್ನಿ ಮಾಡಿದುದ ಶಾಸನಮಿತ್ತುದೆ ದೇವರಿತ್ತುದೆಂದೊಡೆ ಗುಣದೊಳ್ಪನೇಕೆ ಬೆಸಗೊಂಡಪೆನೀ ಗುಣದಂಕಕಾರ್ತಿಯಾ (ಅಜಿಪು. ೧೨-೧೮). 'ಶಾಸನಧಾರಕ' ಪರಾ. ೩. ಕಾನೂನು; ವಿಧಿ ; ಕಟ್ಟಳೆ : ಜನದ ಕ್ಷೇಮಕ್ಕಾಗಿಯೂ ಸೌಖ್ಯಕ್ಕಾಗಿಯೂ . . . ಯಾವ ಯಾವ ಸಾಧನಗಳೂ ಸಂಧಾನಗಳೂ ಯುಕ್ತವೋ ಅದನ್ನೆಲ್ಲಾ ಗೊತ್ತುಮಾಡುವ ಕೆಲಸಕ್ಕೆ "ಶಾಸನ" ಎಂದು ಹೆಸರು (ರಾಜ್ಯಶಾ. ೫೧). ೪. ಧರ್ಮ. ೫. ದಾಖಲೆ : 'ಶಾಸನಿಗ' ಪರಾ. ೬. ಶಿಕ್ಷೆ ; ದಂಡನೆ ; ಶಾಸ್ತಿ : ಫ್ರಾಂಕ್ ಜನರಲ್ಲಿ ಯಾವನಾದರೊಬ್ಬನು ಪ್ರಾಣಹತ್ಯ ಮಾಡಿದರೆ, ಅವನಿಗೆ ರೋಮನ್ನರಿಗಿಂತ ಹೆಚ್ಚು ಶಾಸನ ಮಾಡುತ್ತಿದ್ದರು (ಮುಂಬಯಿ. ೫-೨೫೭). ೭. ನಿಗ್ರಹ ; ಹಿಡಿತ : ಜಯಜಯ ದೇವದೇವ ಪುರಶಾಸನಶಾಸನ ಶಾಸನ್ಯೆಕ ಚಿನ್ಮಯಮಯನುತ್ಯಸಂಪದ . . . ಕರಾಲಸದ್ಭುಚಾ (ರಾಜಪ್ರ. ೧೩-೫೨). ೮. ಕಲಿಸುವಿಕೆ ; ಶಿಕ್ಷಣ. ೯. ತಾಮ್ರದ ತಗಡು ಅಥವಾ ಕಲ್ಲಿನ ಮೇಲೆ ದಾನ, ದತ್ತಿ ಮುಂತಾದುವುಗಳ ಬಗೆಗೆ ಕೊರೆದಿಟ್ಟ ಬರಹ ; ಶಿಲಾಲೇಖ, ತಾಮ್ರಲೇಖ ಮುಂತಾದುವು : ಚಾಗದ ಕಂಬಮಂ ನಿಱಿಸಿ ಬೀರದ ಶಾಸನಮಂ ನೆಗೞ್ಚಿ ಕೋಳ್ಪೋಗದ ಮಂಡಲಂಗಳನೆ ಕೊಂಡು (ಪಂಪಭಾ. ೧-೫೦); ತರದಿಂದಾಲಿಸಿ . . . ಮನದೊಳ್ ತದ್ವೃತ್ತಕಂ ಶಾಸನಂ ಬರೆದಿರ್ದಂತೆ ಜಲಕ್ಕನಾಗೆ (ಸುಕುಮಾ. ೬-೫); ವಿಶ್ವಕಧೀಶನೊರ್ವನೆನಿಸಿದನುಮೇಶನೆಂದು ಬಿದಿ ಶಾಸನಮಂ ಬರೆದಿಟ್ಟು ನಟ್ಟ ನಲ್ಮಿಸುನಿಯ ಕಂಬದಂತೆಸೆದುದಾ ಗಿರಿ (ಶಬಶಂ. ೧-೩೭). ೧೦. (ಲಿಖಿತಮೂಲಕವಾದ) ಒಪ್ಪಂದ ; ಕರಾರು. [ಸಂ.]

ಶಾಸನಇಲಾಖೆ (ನಾ). ಶಾಸನಗಳ ಬಗೆಗೆ ಆಳವಾದ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಶಾಸನಗಳು ಮತ್ತು ಶಾಸನತಜ್ಞರಿರುವ ಇಲಾಖೆ : ಶಾಸನಇಲಾಖೆಯಲ್ಲಿ ಅನೇಕ ಜನ ಶಾಸನತಜ್ಞರಿದ್ದಾರೆ (ರೂಢಿ). [ಶಾಸನ + ಇಲಾಖೆ]

ಶಾಸನಂಬಿಡಿಸು (ಕ್ರಿ). ದಾನ ಮುಂತಾದ ವಿಷಯಗಳನ್ನು ಶಿಲಾಲಿಪಿಯಲ್ಲಿ ಕೊರೆಯಿಸು, — ಕಂಡರಿಸು : ಚೈತ್ಯಾಲಯಂಗಳಂ ಮಾಡಿಸಿ ಭಕ್ತಿಪೂರ್ವಕದಿಂ ಶಾಸನಂಬಿಡಿಸುವುದುಂ ಮುನಿಜನಂಗಳಂ ಪೂಜಿಸುವುದುಮಕ್ಕುಂ (ಅಜಿಪು. ೧೨-೧).

[ಶಾಸನ + ಬಿಡಿಸು]

ಶಾಸನಕವಿ (ನಾ). ಶಾಸನದ ಸಾಹಿತ್ಯವನ್ನು ಬರೆಯುವ ಕವಿ : ನಾಗಚಂದ್ರನು ಮಹಾಕವಿಯಾಗುವ ಪೂರ್ವದಲ್ಲಿ ಅವನಿಗೆ ಶಾಸನಕವಿಯಾಗುವ ಜಾನಪದಸನ್ಮಾನವು ದೊರೆತಿರಲು ಸಾಕು (ಸಾಹಿಸಂ. ೬); ಶಾಸನದ ವಿಷಯ ಶಾಸನಕವಿಯ ಸಂವೇದನೆಗನು ಗುಣವಾಗಿ ಸೊಗಸು ಸ್ವಾರಸ್ಯಗಳು ನಿರೂಪಿತವಾಗಬಹುದು (ನೊಳಂಬ. ೮೫). [ಸಂ.]

ಶಾಸನತಜ್ಞ (ನಾ). ಶಾಸನವನ್ನು ಕುರಿತು ಆಳವಾದ ಅಭ್ಯಾಸ ಮಾಡಿದವನು: ಅವರು ಕರ್ನಾಟಕದ ಶ್ರೇಷ್ಠ ಶಾಸನತಜ್ಞರಲ್ಲಿ ಒಬ್ಬರು (ರೂಢಿ). [ಸಂ.]

ಶಾಸನದೀಪಕ (ನಾ). [ಜೈನ] ಧರ್ಮವನ್ನು ಬೆಳಗುವವನು : ಆಸನ್ನ ಭವ್ಯರರ್ಹಚ್ಛಾಸನದೊಳ್ ಭಕ್ತರೆಂದೊಡಿಂ ಪ್ರತ್ಯಕ್ಷೋದ್ಭಾಸಿಯನೀಕ್ಷಿಸಿ ಜಿನನಂ ಶಾಸನದೀಪಕರ ಭಕ್ತಿ ಕಿಱಿದಾದಪುದೇ (ಶಾಂತಿಪು. ೧೨-೩೯). [ಸಂ.]

ಶಾಸನಧಾರಕ (ನಾ). ೧. ಅಪ್ಪಣೆಯನ್ನು ಪಾಲಿಸುವವನು, — ನಡೆಸುವವನು. ೨. ಧರ್ಮಾನುಯಾಯಿ : ಪಾಶುಪತಾದಿ ಶಾಸನಧಾರಕರು ಬಂದು ತಾವು ತಮತಮಗೆಲ್ಲರುಂ ಮನವೋವಿ ಲಿಂಗೈಕ್ಯರುಗಳಂ ಕಂಡು (ಬಸಪು. ೫೮-೧೫). [ಸಂ.]

ಶಾಸನಪಾಠ (ನಾ). ಶಾಸನದಲ್ಲಿನ ಬರಹ, — ವಿಷಯ, — ಒಕ್ಕಣೆ : ನೊಳಂಬರ ವಂಶಪರಂಪರೆಯನ್ನು ತ್ರಿಣಯನಪಲ್ಲವನಿಂದ ಆರಂಭಿಸಿ ಇಱಿವನೊಟಂಬನೇಕ ವಾಕ್ಯದಿಲೀಪರಸನೊಡನೆ ಕೊನೆಗೊಳ್ಳುವುದು. ಈ ವಂಶಾವಳಿಗೆ ಸಂಬಂಧಿಸಿದ ಶಾಸನಪಾಠವು ಹೀಗಿದೆ (ನೊಳಂಬ. ೮೨). [ಸಂ.]

ಶಾಸನಬಾಹಿರ (ನಾ). ಕಾನೂನಿಗೆ ಹೊರತಾದುದು ; ಕಾನೂನಿನಿಂದ ಬಹಿಷ್ಕರಿಸಲ್ಪಟ್ಟುದು : ಶಾಸನಬಾಹಿರವಾದ ಕಾರ್ಯವನ್ನು ಮಾಡಬಾರದು (ರೂಢಿ).

[ಸಂ.]

ಶಾಸನಸಭೆ (ನಾ). ೧. [ರಾಜನೀ] ರಾಜ್ಯಕ್ಕೆ ಸಂಬಂಧಿಸಿದ ಕಾಯದೆಗಳನ್ನು ರೂಪಿಸುವ ಪ್ರಜಾಪ್ರತಿನಿಧಿಗಳಿಂದ ಕೂಡಿರುವ ಸಭೆ ; ವಿಧಾನಸಭೆ ; ಸಂಸತ್ತು : ಇಲ್ಲಿ ಶಾಸನಸಭೆಗಳು ಕೂಡುವ ವಿಧಾನಸೌಧ ಎಂಬ ನವೀನ ಭವ್ಯ ಮಂದಿರವಿದೆ (ಕಪಪು. ೫-೪೯). ೨. [ಜೈನ] ಜಿನನ ಉಪದೇಶವನ್ನು ಸ್ವೀಕರಿಸಲು ಸೇರುವ ಸಭೆ ; ಸಮವಸರಣಸಭೆ : ಆ ಪರಮೇಶ್ವರಂ ಪ್ರಥಿತಷೋಡಶತೀರ್ಥಕರಂ ಸಚೋದ್ಯವಿದ್ಯಾಪರಿಪಾಕಶಾಸನಸಭಾವಳಯಂ ಗಣನಾಥಯೂಥಮಂ . . . ಇಂತೆಂದು ಬೆಸಸಿದಂ (ಶಾಂತಿಪು. ೧೨-೩). [ಸಂ. ಶಾಸನಸಭಾ]

ಶಾಸನಸ್ಥ (ನಾ). ಶಾಸನದಲ್ಲಿ ನಿರೂಪಿತವಾಗಿರುವಂಥದು : ತಂಕಲು [ಬೆಳ್ಕ] ನೂ[ರ] ಮೂಡ[ದ] ಪಡುವಲು ಶಂಖ(ರ)ಬಸ್ತಿಯ ಶಾಸನಸ್ಥವಹಯೇಕ ನಿವರ್ತ್ತನಾಂತರವಹ XXX ಯುಗಲಪ್ರಮಾಣಿನ ವಳೆಯವೆ ಅವಧಿಯಾಗಿ (ಸೌಇಇ. XX. ೨೩೨-೨೦; 1412). [ಸಂ.]

ಶಾಸನಹರ (ನಾ). ಲೇಖನವನ್ನು ತರುವವನು ; ಓಲೆಕಾರ : ಪುರೋಹಿತಂ ನಿನತೊಂದೋಲೆಗೆ ತೀರ್ವುದೊಂದು ಮನವಾರ್ತೆಗಿದೇನೆಂದರಸ ಬಳೆಯೆ ನುಡಿದಪೆಯೆಂದಟ್ಟಲೆವೇಟ್ಟನವರ್ಗೆ ಶಾಸನಹರರಂ (ಆದಿಪು. ೧೪-೩೦).

[ಸಂ.]

ಶಾಸನಿಕ (ನಾ). ಶಾಸನವನ್ನು ಬರೆಯುವವನು ; ಶಾಸನಗಳ ಲಿಪಿಕಾರ : ಕರಣ(ಕ) ಅಥವಾ ಅಪರೂಪವಾಗಿ ಕರಣಿನ್, ಶಾಸನಿಕ ಮತ್ತು ಧರ್ಮಲೇಖಿನ್ — ಇವು ಶಾಸನಲೇಖಕರ ಇತರ ವೃತ್ತಿನಾಮಗಳು (ಭಾರದ. ೧೮). [ಶಾಸನ + - ಇಕ]

ಶಾಸನಿಗ (ನಾ). ದಾಖಲೆಗಳ ಅಧಿಕಾರಿ : ಆ ದೇವರಾ[ಚಾರ್ಯ್ಯ]ರ ಮಠಕ್ಕ ಆ ಶಾಸನಿಗರು ಆ ಬ್ರಹ್ಮಪುರಿಯ [ದೇವಾಲ್ಯದ] ಪೌಳಿಯ ನಿ(ನೀ)ಳದ ೨೫ ಹಸ್ತದಗಲದ ನಿವೇಶನವಂ . . . [ಕೊ]ಟ್ಟರು (ಎಇ. XIX. ೨೫-೫೨; 1245). [ಶಾಸನ + - ಇಗ]

ಶಾಸಿತ (ಗು). ೧. ಆಳಿದ ; ಪ್ರಭುತ್ವ ನಡೆಸಿದ. ೨. ನಿರ್ದೇಶಿಸಲ್ಪಟ್ಟ ; ಮಾರ್ಗದರ್ಶನ ಹೊಂದಿದ. ೩. ಶಿಕ್ಷೆಗೊಳಗಾದ; ದಂಡಿಸಲ್ಪಟ್ಟ. [ಸಂ.]

ಶಾಸಿಸು (ಕ್ರಿ). ೧. ಆಳು ; ಪ್ರಭುತ್ವ ನಡೆಸು : ಶಾಸಿಸುವ ವಿಧಿಗಳಿಗೆ ಸಱಗನು ಹಾಸಿ ದುಃಖಂಬಡುವ ಜಗವಿನ್ನೇಸು ಮಾಯಾಗುಣವಿಮೂಢವೊ (ನಿಭಾಗ. ೬-೧೫-೨೪). ೨. ಅಪ್ಪಣೆ ಮಾಡು ; ಆಜ್ಞಾಪಿಸು: (ಕ). ೩. ದಂಡನೆ ಮಾಡು ; ಶಿಕ್ಷಿಸು: "ಶಾಸಿಸು-ಶಿಕ್ಷಾಯಾಂ" (ಶಮಧಾ); ಉಳಿದೋಡಿದನ್ಯಭೂಕಾಂತರನಂತಕಾನನದೊಳಳ್ಗಿರ ಶಾಸಿಸಿ . . . ಜೋಗಮನೃಪಂ ಮೆಱೆದಂ (ಎಕ. XI, ದಾಮಣ. ೪೨-೨೨ ; ಸು. 1162) ; ಈ ಧರ್ಮ್ಮಕ್ಕಾವನಾನುಂ ತಪ್ಪಿದವನಂ ಶಾಸಿಸುವುದು (ಸೌಇಇ. XX. ೯೩-೬೫ ; ?). ೪. ವಿಧಿಸು; ನಿಯಮಿಸು : ಶಾಸಿಸುವರ್ ನೂಱರ್ಕಂ ಸಾಸಿರಕಂ ಪ್ರಾಂತಲೋಪಮಂ ಕೆಲವೆಡೆಯೊಳ್ (ಕಾವ್ಯಾವ. ೨೭೮). ೫. ನಿಯಂತ್ರಿಸು; ಹತೋಟಿಯಲ್ಲಿಡು : ನಾವು ನಮ್ಮ ಶರೀರಗಳನ್ನು ಶಾಸಿಸುತ್ತಿರುವಂತೆ ಈ ಕೀಟಾಣುಗಳ ಶರೀರಗಳನ್ನೂ ಬೇರೆ ಬೇರೆಯಾದ ಇಚ್ಛಾಶಕ್ತಿಗಳು . . . ನಡೆಯಿಸುತ್ತಿರಬಹುದು (ಜೀವಾತ್ಮ. ೧೨೫). ೬. ಪರಿಪಾಲಿಸು : ಶಾಸಿಸುತ ಸದ್ಧರ್ಮವನು ಹರಿ ಪರಿತೋಷಕರವೆಂದೆಲ್ಲರಿಗೆ ಕರುಣಾಸಮುದ್ರನು ನಡೆದು ತೋಱುತಿರ್ದನೀ ಧರೆಗೆ (ನಿಭಾಗ. ೪-೧೦-೧).

[ಶಾಸನ + - ಇಸ್ತು]

ಶಾಸೆ 'ಸೇಸ್ಸೆ' ನೋ.

ಶಾಸ್ತಿ (ನಾ). ದಂಡನೆ ; ಶಿಕ್ಷೆ : ಭೀಷ್ಮಕನನೀಗಳ್ ಶಾಸ್ತಿ[ಪಾಠಾಂ. ಸಾಸ್ತೆ]ಯಂ ಮಾಡೆನುತ್ತವೆ ಚಂದ್ರಧ್ವಜಭೂಭುಜಂ ನುಡಿದಂ (ಕುಸುಮಾ. ೧೫-೨೭); ವಿದೂಷಕನರಸಿಂಗೆ ವಿಚಾರಮುಳ್ಳೊಡೀ ದರ್ಪಕನ ತಪ್ಪಿಂಗೆ ರತಿಗೆ ಶಾಸ್ತಿ ಬಾರದೆಂದು ನಗಿಸುತ್ತುಂ ನಡೆದು (ಅನಂಪು. ೭-೧೧ ವ); ಈ ಅಧರ್ಮಾಚರಣೆಗೆ ತಕ್ಕ ಶಾಸ್ತಿಯಾಯಿತು (ವಚಬಾ. ೧೬೧).

[ಸಂ.]

ಶಾಸ್ತಿಗೆಯ್ (ಕ್ರಿ). ದಂಡಿಸು ; ಶಿಕ್ಷೆ ಮಾಡು : ಅರಸಂ ಕಡುಮುಳಿದು ಕಪಿಳನಂ ಪಿಡಿದು ಪೊಡೆಯಿಸಿ ಶಾಸ್ತಿಗೆಯ್ಯದೆ ಕರುಣಿಸಿ ನಾಡ ಗಡಿಯಿಂ ಪೊಱಮಡಿಸಿ ಕಳೆಯೆ (ತಾಂತೀಶ್ವ. ೬-೩೮ ವ). [ಶಾಸ್ತಿ + ಕೆಯ್ಗ]

ಶಾಸ್ತೃ (ನಾ). ಬೋಧಿಸುವವನು ; ಗುರು : ತನ್ನ ಸ್ವಂತ ಸಂಕಲ್ಪದಿಂದ . . . ಮುಕ್ತಿಯನ್ನು ಪಡೆದು ಆ ಮುಕ್ತಿಮಾರ್ಗವನ್ನು ಬೋಧಿಸುವ "ಶಾಸ್ತೃ" ಎಂದರೆ ಗುರು ಆದವನು (ಭಾರದ. ೨೦೫). [ಸಂ.]

ಶಾಸ್ತ್ರ (ನಾ). ೧. ಅಪ್ಪಣೆ ; ಆಜ್ಞೆ ; ಕಟ್ಟಳೆ. ೨. ಧಾರ್ಮಿಕ ವಿಷಯ, ತತ್ತ್ವ ಮುಂತಾದವುಗಳ ಬಗೆಗೆ ಕ್ರಮವಾಗಿ ಬರೆದ ಪ್ರಮಾಣಗ್ರಂಥ ; ದರ್ಶನ : ''ಶಾಸ್ತ್ರಮೆಂಬುದಕ್ಕುಂ ಗ್ರಂಥಂ'' (ವಸ್ತುಕೋ. ೧೩೧-೭೮): ಆತ್ಮರುಚಿ ವ್ಯಪೇತ ಶಾಸ್ತ್ರಾರ್ಥರಚನೆಯೊಳ್ ಸುಕವಿಯಲ್ಲದೊಂ ರಂಜಪನೇ (ಜಾತಕ. ೧-೯) ; ಹಲವು ವೇದಪುರಾಣಶಾಸ್ತ್ರವ ತಿಳಿದು ನೀ ಮರುಳಾದೆ (ಕಾಶಿರಾ. ೩೭-೧೮). 'ಷಟ್ಶಾಸ್ತ್ರ' ಪರಾ. ೩. ಸಾಂಪ್ರದಾಯಿಕವಾದ ಆಚರಣೆ, – ಪದ್ಧತಿ : ಮುತ್ತೈದೆಯರು ಒಂದನ್ನೂ ಬಿಡದೆ ಎಲ್ಲಾ 'ಶಾಸ್ತ್ರ'ವನ್ನೂ ಮಾಡಿದರು (ಸುಪಸಂ. ೩೧) : ಶಾಸ್ತ್ರ ಹೇಳಲಿಕ್ಕೆ, ಬದನೆಕಾಯಿ ತಿನ್ನಲಿಕ್ಕೆ (ಗಾಜ). ೪. ವಿಜ್ಞಾನ, ಗಣಿತ, ಜ್ಯೋತಿಷ್ಯ ಮುಂತಾದವುಗಳನ್ನು ವ್ಯವಸ್ಥಿತವಾಗಿ ನಿರೂಪಿಸುವ ಜ್ಞಾನ : ಆರಯ ತಚ್ಛಾಸ್ತ್ರವ್ಯವಹಾರಜ್ಞಾನಾರ್ಥಮಾಗಿ ಪೇಟಲ್ಪಡುಗುಂ ಧೀರರಿನಕ್ಷರಸಂಜ್ಞಾಕಾಶಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ (ಶಮದ. ೧); ಮನುಷ್ಯ ವ್ಯಾಪಾರಗಳಲ್ಲಿ ಕೆಲವು ಮುಖ್ಯವಾಗಿ ಬುದ್ಧಿಕಾರ್ಯದುವು ; ಅವು ಶಾಸ್ತ್ರ ವಿಷಯಗಳು: – ಭೌತ ರಾಸಾಯನಿಕ ವಿಜ್ಞಾನ, ಗಣಿತ, ತರ್ಕ ಮೊದಲಾದವು (ರಾಜ್ಯಶಾ. ೨೪೨); ಶಾಸ್ತ್ರವೆಂದರೆ ತಿಳಿಯದೇ ಇರುವ ವಿಷಯವನ್ನು ತಿಳಿಯಪಡಿಸುವುದೆಂದರ್ಥ (ಓಂದಶಾ. ೨೪೩). ೫. ಗ್ರಂಥದ ತಿಳಿವಳಿಕೆ ; ಜ್ಞಾನ : ಶಾಸ್ತ್ರಂ ಬಂದೊಡೆ ಶಾಂತಿ ಸ್ಮರಣೆ . . . ನಿಜಾತ್ಮಚಿಂತೆ ನಿಲವೇಱುಂ (ರತ್ನಾಕ. ೭೩). ೬. (ಆಲಂ) ತೋರಿಕೆಯ ಸಂಪ್ರದಾಯ ಪಾಲನೆ; ತೋರಿಕೆಯ ನಿಯಮಪಾಲನೆ: ಅವರು ನನ್ನ ಸಮ್ಮತಿ ಕೇಳುವುದು ''ಶಾಸ್ತ್ರ'' ಕ್ಕೆ (ಸುಪಸಂ. ೧೪).

ಶಾಸ್ತ್ರಕೇಳು = ಜ್ಯೋತಿಷ್ಯರಲ್ಲಿ ಭವಿಷ್ಯ, ಕಾರ್ಯಸಿದ್ಧಿ ಮುಂತಾದವುಗಳ ಬಗೆಗೆ ಕೇಳು : ಲಗ್ನ ಕೂಡಿಬರುತ್ತೋ ಹೇಗೆ ಅಂತ ಶಾಸ್ತ್ರಕೇಳಬೇಕು (ರೂಢಿ). **ಶಾಸ್ತ್ರಮಾಡು** = ನೆಪಮಾತ್ರಕ್ಕೆ ಅಥವಾ ತೋರಿಕೆಗೆ ಸಂಪ್ರದಾಯವನ್ನು ಪಾಲಿಸು : ಈವತ್ತು ಮಧ್ಯಾಹ್ನವೂ ಕೂಳಿನ ಶಾಸ್ತ್ರ ಮಾಡಿದಂತೆ ಮಾಡಿದಳು (ಮುಯುದಾ. ೩೭೩). **ಶಾಸ್ತ್ರಮುಟ್ಟು** = (ಆಣೆ ಮಾಡಿ ಹೇಳುವಾಗ) ಶಾಸ್ತ್ರಗ್ರಂಥವನ್ನು ಸ್ಪರ್ಶಮಾಡು : ತಪ್ಪಿನ ಗಂಟು ತಲಿಗಿ ಬಂದರ ಎಪ್ಪಾ ನನ್ನ ಕೆಲಸ ಅಲ್ಲಾ ಶಪತ್‌ಮಾಡಿ ಹೇಳತೀನಂತ ಶಾಸ್ತ್ರಮುಟ್ಟುತಾರ (ಹೂಸಂದಾ. ೧೭). **ಶಾಸ್ತ್ರಹೇಳು** = ಭವಿಷ್ಯ ಮುಂತಾದುವನ್ನು ಹೇಳು : ಯಾರೋ ಒಬ್ಬನು ಅಡ್ಡಾದಿಡ್ಡಿಯಾಗಿ ರುಮಾಲನ್ನು ಸುತ್ತಿಕೊಂಡು ಕುಳಿತು ಒಬ್ಬನ ಕೈ ಹಿಡಿದು ಶಾಸ್ತ್ರ ಹೇಳುತ್ತಿರುವುದೂ ಕಾಣಿಸಿತು (ಚಿದಸ. ೧೬). [ಸಂ.]

ಶಾಸ್ತ್ರಕಾರ (ನಾ). (ಆಯಾ) ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆಯುವವನು : ಆಂ – ಶಾಸ್ತ್ರಕಾರನಾದ ನಾಂ . . . ಕವಿ ಕೇಶವನೆಂ = ಕೇಶಿರಾಜಕವೀಶ್ವರನೆಂ (ಶಮದ. ೨ ಟೀಕೆ). [ಸಂ.]

ಶಾಸ್ತ್ರಜ್ಞ (ನಾ). ಶಾಸ್ತ್ರಗಳನ್ನು ಚೆನ್ನಾಗಿ ತಿಳಿದಿರುವವನು; ಪಂಡಿತ ; ವಿದ್ವಾಂಸ: ತದ್ಧರ್ಪರೀಕ್ಷಿಸಲು ಶಬ್ದಜ್ಞಂ ಶಾಸ್ತ್ರಜ್ಞನಖಿಳತರ್ಕಜ್ಞಂ ಕಾವ್ಯಜ್ಞಂ . . . ಶ್ರೀ ರಾಜಗುರು ಕಳೇಶ್ವರದೇವಂ (ಶಾಪ. ೯೨) ; ಶಾಸ್ತ್ರಜ್ಞನ ದೃಷ್ಟಿಗೆ ಅಶ್ವಿನೀ ಭರಣೀ ಕೃತ್ತಿಕಾದಿ ನಕ್ಷತ್ರನಾಮಗಳೂ . . . ಬರಿಯ ಹೆಸರುಗಳಲ್ಲ, ತಾರೆಗಳೂ ಅಲ್ಲ (ನಕ್ಷತ್ರ. ೪೯). [ಸಂ.]

ಶಾಸ್ತ್ರದಾನ (ನಾ). [ಜೈನ] ಆಹಾರ, ಅಭಯ, ಔಷಧ ಮತ್ತು ಶಾಸ್ತ್ರವೆಂಬ ನಾಲ್ಕು ಬಗೆಯ ದಾನಗಳಲ್ಲಿ ಒಂದು ; ಜೈನಶಾಸ್ತ್ರಪುರಾಣ ಇತ್ಯಾದಿ ಗ್ರಂಥಗಳ ಹಸ್ತಪ್ರತಿಯನ್ನು ಜನರಿಗೆ ಹಂಚುವುದು : ಭವಾಂಬುಧಿಯುಮನೀಸುವರಭಯೌಷಧ ಶಾಸ್ತ್ರದಾನಫಲವಿಲಸನದಿಂ ಎಂಬುದುಮಾ ಶ್ರೇಯೋವಚನಂ (ಆದಿಪು. ೧೦-೧೧) ; ಶಾಸ್ತ್ರದಾನಾದಿಗಳನ್ನು ಮಾಡುವವರು ಯಾವುದಾದರೂ ತಮ್ಮ ಧರ್ಮಗ್ರಂಥವೊಂದನ್ನು ಹಲವು ಪ್ರತಿಗಳಾಗಿ ಬರೆಯಿಸಿ ಹಂಚುತ್ತಿದ್ದುದರಿಂದ ಲೇಖಕರಿಗೆ ಅಥವಾ ಲಿಪಿಕಾರರಿಗೆ ಪ್ರೋತ್ಸಾಹ ದೊರೆಯುತ್ತಿತ್ತು (ಕ್ಷತ್ರಸಂ. ೪೬). [ಸಂ.]

ಶಾಸ್ತ್ರಪದ್ಧತಿ (ನಾ). ಆಯಾ ಶಾಸ್ತ್ರಗಳಲ್ಲಿ ಸೂಚಿಸಲ್ಪಟ್ಟಿರುವ ಕ್ರಮ; ಶಾಸ್ತ್ರೋಕ್ತವಾದ ಸಂಪ್ರದಾಯ. [ಸಂ.]

ಶಾಸ್ತ್ರಪಾರಗ (ನಾ). ಆಯಾ ಶಾಸ್ತ್ರಗಳನ್ನು ಆಳವಾಗಿ ಅಭ್ಯಾಸ ಮಾಡಿದವನು : ಕರಣಾನುಯೋಗ ದ್ರವ್ಯಾನುಯೋಗಂಗಳಂ ಕಲ್ತು ಶಾಸ್ತ್ರಪಾರ[ಪಾಕಾಂ. ರಾವಾರ]ಗರಾಗಿ ಭಟಾರರಂ ಬೆಸಗೊಂಡು (ವಡ್ಡಾರಾ. ೧೦೩-೧೬). [ಸಂ.]

ಶಾಸ್ತ್ರಪ್ರಮಾಣ (ನಾ). ಶಾಸ್ತ್ರಗಳ ಆಧಾರ : ಆ ಬ್ರಹ್ಮವೆಂಬುದು ಶಾಸ್ತ್ರ ಪ್ರಮಾಣದಿಂದ ಮುಖ್ಯವಾಗಿ ಅರಿಯಲ್ಪಡತಕ್ಕದೇ (ಬ್ರಹ್ಮಭಾ. ೩೧). [ಸಂ.]

ಶಾಸ್ತ್ರಮಾರ್ಗ (ನಾ). = ಶಾಸ್ತ್ರಪದ್ಧತಿ : ಶಿವನನಾಳ್ಗೊಂಡು ದೂದಟ್ಟುವ ಪವಣವ ಶಾಸ್ತ್ರಮಾರ್ಗದೊಳುಂಟು ಪೇಳಿದಿರವನ ಕೀರ್ತಿಯನೆಂದು ನುಡಿದನು (ತ್ರಿಭುಪು. ೧೭-೩೭).

[ಸಂ.]

ಶಾಸ್ತ್ರವಚನ (ನಾ). ಶಾಸ್ತ್ರಗಳಲ್ಲಿ ಹೇಳಿರುವ ಮಾತು, – ಹೇಳಿಕೆ; ಪ್ರಮಾಣ ವಾಕ್ಯ : ಮಲಿನವ ಧರಿಸಲಾಗದು ಶಾಸ್ತ್ರವಚನವು ವರವಿಭೂಷಣದಿಂದಲಂಕೃತೆಯಾಗ ಬೇಕು (ಕಾಶಿರಾ. ೪೩-೧೩). [ಸಂ.]

ಶಾಸ್ತ್ರವಿದ (ನಾ). = ಶಾಸ್ತ್ರಜ್ಞ : ನರಯುಗ್ಮೋದಯದೊಳ್ ಬುಧಂ ನೆಲಸೆ ವಾಚಾಳಂ ಕಲಾವೇದಿ ಸೌಖ್ಯಕರತಂ ಶಾಸ್ತ್ರವಿದಂ ಪ್ರಿಯಂವದನೆನಿಕ್ಕುಂ (ಜಾತಕ. ೧೭-೨೩).

[ಸಂ. ಶಾಸ್ತ್ರವಿದ್]

ಶಾಸ್ತ್ರವಿರುದ್ಧ (ನಾ). ೧. ಶಾಸ್ತ್ರಕ್ಕೆ ವಿರೋಧವಾದುದು. ೨. [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; ಶಾಸ್ತ್ರಕ್ಕೆ ವಿರೋಧವಾದ ವಿಷಯಗಳ ಹೇಳಿಕೆ : ವ್ಯಹಿತಮೇಕಾರ್ಥಂ ವ್ಯರ್ಥಪಕ್ರಮಮಖಿಳಲೋಕಶಾಸ್ತ್ರವಿರುದ್ಧಂ ಸುವಿದಿತ ಯತಿಭಂಗಂ ಭಿನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ (ಕಾವ್ಯಾವ. ೪೫೫). [ಸಂ.]

ಶಾಸ್ತ್ರವ್ಯುತ್ಪತ್ತಿ (ನಾ). ಶಾಸ್ತ್ರಗಳ ವಿಚಾರವಾಗಿ ಇರುವ ಸರಿಯಾದ ಅರಿವು, – ಜ್ಞಾನ. [ಸಂ.]

ಶಾಸ್ತ್ರಶಾಲೆ (ನಾ). ಶಾಸ್ತ್ರಗಳನ್ನು ಕಲಿಸುವ ಸ್ಥಳ ; ವಿದ್ಯಾಲಯ : ''ಸತತಂ ವಿದ್ಯಾರ್ಥಿ ಜನೋಚಿತಶಾಸ್ತ್ರದಮಕ್ಕುಂ ಮತಂ ಶಾಸ್ತ್ರಶಾಲೆ'' (ವಸ್ತುಕೋ. ೪೮-೨೦).

[ಸಂ. ಶಾಸ್ತ್ರಶಾಲಾ]

ಶಾಸ್ತ್ರಶ್ರವಣ (ನಾ). ಧಾರ್ಮಿಕ ಗ್ರಂಥಪಠಣವನ್ನು ಆಲಿಸುವುದು : ಮನನ ಶಾಸ್ತ್ರಶ್ರವಣ ನಿಯಮಾಸನ ಸಮಾಧ್ಯಾನ ವಿದ್ಯಾವಿನಯವಲ್ಲವೆ ರಣದ ಜಂಜಡವೇಕೆ ನಿಮಗೆ (ಕುವಾಶ. ೩-೫೦). [ಸಂ.]

ಶಾಸ್ತ್ರಸಂಪ್ರದಾಯ (ನಾ). = ಶಾಸ್ತ್ರಪದ್ಧತಿ : ಈ ನಿಷ್ಕೃಷ್ಟತೆ ಗಾಂಭೀರ್ಯಗಳಿಂದ ಕೂಡಿದ ಶಾಸ್ತ್ರಸಂಪ್ರದಾಯಗಳು ಆ ಕಾರ್ಯಕಲಾಪಗಳಲ್ಲಿ ಭಾಗವಹಿಸಿದವರಿಗೆ ತುಂಬ ತೃಪ್ತಿಕರವಾಗಿದ್ದುವು (ಪುಸಂಶಾ. ೩೬). [ಸಂ.]

ಶಾಸ್ತ್ರಸಿದ್ಧ (ನಾ). ಶಾಸ್ತ್ರದಿಂದ ಸಮ್ಮತವಾದುದು, – ಅಂಗೀಕರಿಸಿದುದು : ಧರಣಿ ನುಂಗುವಳಿಬ್ಬರನು ಸಂಗರವ ಜಯಿಸದ ನೃಪನ ದೇಶಾಂತರವ ಚರಿಸದ ಪಂಡಿತನನಿದು ಶಾಸ್ತ್ರಸಿದ್ಧವಲೆ (ಕುವಾಖಂ. ೩-೨೨) ; ಪಾತಕದಿಂದ ನರಕದ ಕೂಪದಲಿ ಮುಳುಗುವುದು ತಪ್ಪದು ಶಾಸ್ತ್ರಸಿದ್ಧವಲೇ (ಪಂಪಾ ೬೮). [ಸಂ.]

ಶಾಸ್ತ್ರಸಿದ್ಧಾಂತ (ನಾ). ಶಾಸ್ತ್ರಗಳಿಂದ ನಿರ್ಣಯಿಸಲ್ಪಟ್ಟ, ಸತ್ಯಸಂಗತಿ. [ಸಂ.]

ಶಾಸ್ತ್ರಾಧ್ಯಾಯಿ (ನಾ). ಶಾಸ್ತ್ರಗಳನ್ನು ಅಭ್ಯಾಸ ಮಾಡುವವನು, – ಅಧ್ಯಯನ ಮಾಡುವವನು : ಶಾಲೆಯಲೋದುವ ವೇದಾಧ್ಯಾಯಿಗಳನ್ನೂರ್ವಗ್ಗ೦ ಶಾಸ್ತ್ರಾಧ್ಯಾಯಿಗಳಯ್ವದಿಂಬರ್ಗ್ಗ೦ . . . ತ್ರೈಪುರುಷದೇವರ ಶಾಲೆಯ ಪರಿಷಮಾಣೆಯರ್ಗ್ಗೆ ಸರ್ವ್ವನಮಸ್ಕಮಾಗಿ ಕೊಟ್ಟ ಕೆಯ್ಮಾಣಕೇಶ್ವರದಗಲ್ಪಿಂ ಬಡ[ಗ] ಮತ್ತರು ೧೦೦೦ (ಕೀಇ. ೬-೨-೧೯೨ ; 1058). [ಸಂ. ಶಾಸ್ತ್ರಧ್ಯಾಯಿನ್]

ಶಾಸ್ತ್ರಾನ್ವಿತ (ನಾ). = ಶಾಸ್ತ್ರಜ್ಞ : ಆ ಪ್ರತಿಭಾನಂ ಶಕ್ತಿಲೋಕಾಗಮ ಸಕಲ ಕಲಾವೇದನಂ ವಿದ್ಯೆ ಶಾಸ್ತ್ರಾನ್ವಿತನಪ್ಪಂ (ಕಾವ್ಯಾವ. ೪೨೪). [ಸಂ.]

ಶಾಸ್ತ್ರಾಭ್ಯಾಸ (ನಾ). ಶಾಸ್ತ್ರಗಳ ಅಧ್ಯಯನ, – ಕಲಿಕೆ : ಪಾರಾವತಪ್ರಕರಕ್ಕೆ ಮಕರಕೇತು ಶಾಸ್ತ್ರಾಭ್ಯಾಸವ್ಯಾಸಾದಂಗಳಾದ ಮಣಿಮಯಕೃತಕಗಿರಿಗಳುಂ (ಚಂದ್ರಪ್ರ. ೧-೧೦೬) ; ಶಾಸ್ತ್ರಭ್ಯಾಸದೊಳೆಂತುಂ ವಿಸ್ತೃತಮತಿಯಾದನಾದನೀ ಕಂದರ್ಪಂ (ಕುಸುಮಾ. ೭-೫೬). [ಸಂ.]

ಶಾಸ್ತ್ರಿ (ನಾ). ೧. = ಶಾಸ್ತ್ರಜ್ಞ : ವರಕೋವಿದ ಶಾಸ್ತ್ರಿಗಳಂ ಧರಣೀಶಂ ಕೇಳ್ದನಂದು ಕಲಿಗಳ ಬಗೆಯಂ (ಪಮ್ಮಾರ. ೪-೩) ; ಆ ಶಾಸ್ತ್ರದಿಂ . . . ಕಲಹಮುದ್ಗರ್ವಂ ಮನಂಗೊಂಡೊಡಾ ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ (ರತ್ನಾಕ. ೭೩). ೨. ಕೆಲವು ಮನೆತನಗಳಲ್ಲಿ, ಗೌರವವಾಚಿಯಾಗಿ ಹೆಸರಿನ ಕೊನೆಯಲ್ಲಿ ಸೇರುವ ಪದ: ಸಂಗಮೇಶ್ವರಶಾಸ್ತ್ರಿಗಳು ಬಹಳ ಧರ್ಮಭೀರುಗಳು (ಸಂಗೀತ. ೮೦). [ಸಂ. ಶಾಸ್ತ್ರಿನ್]

ಶಾಸ್ತ್ರಿಗ (ನಾ). = ಶಾಸ್ತ್ರಜ್ಞ : ಲೆಕ್ಕಿಗಂ, ಶಾಸ್ತ್ರಿಗಂ, ಬಾಗರಣಿಗಂ (ಶಬ್ದಾನು. ೪೦೮ ಪ್ರಯೋ). [ಶಾಸ್ತ್ರ + – ಇಗ]

ಶಾಸ್ತ್ರೀಯ (ಗು). ೧. ಶಾಸ್ತ್ರಕ್ಕೆ ಅನುಗುಣವಾದ ; ಶಾಸ್ತ್ರಕ್ಕೆ ಅನುಸಾರವಾದ: ದಕ್ಷಿಣಾದಿ ಸಂಗೀತ . . . ವೇದಕಾಲದ ಶಾಸ್ತ್ರೀಯ ಬುನಾದಿಯ ಮೇಲೆ ಬೆಳೆದು ಬಂದು ತನ್ನ ಮೂಲರೂಪ ಉಳಿಸಿಕೊಂಡಿದೆ (ಸಂಗೀಚಂ. ೧೮೧) ; ಸರಳ ಶಾಸ್ತ್ರೀಯ ವ್ಯಾಸಂಗದಲ್ಲಿ ಸ್ವಲ್ಪ ಕಾಲ ಕಳೆದೆವು (ನಕ್ಷತ್ರ. ೬೭). (ನಾ). ೨. ಶಾಸ್ತ್ರಕ್ಕೆ ಅನುಗುಣವಾದುದು; ವೈಜ್ಞಾನಿಕವಾದ ರೀತಿ : ಇತರ ಶೈವಧರ್ಮಗಳಿಂದ ವೀರಶೈವಧರ್ಮ ಎಲ್ಲಿ ಎಲ್ಲಿ ಭಿನ್ನವಾಗಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು . . . ಅವುಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾಗಿದೆ (ಶೂನ್ಯಕು. ೧೪೬). [ಸಂ.]

ಶಾಸ್ತ್ರೀಯದೃಷ್ಟಿ (ನಾ). ವೈಜ್ಞಾನಿಕವಾದ ತಿಳಿವಳಿಕೆ : ಇಬ್ಬರೂ ಶಾಸ್ತ್ರೀಯದೃಷ್ಟಿಯಿಂದ ತಮ್ಮ ಕಾರ್ಯವನ್ನು ಮಾಡಿದ್ದರೆ ಬಲುಮಟ್ಟಿಗೆ ಏಕರೂಪತೆ ಸಾಧ್ಯ (ಕನ್ನಸಂ. ೨೪೬). [ಸಂ.]

ಶಾಸ್ತ್ರೀಯಸಂಗೀತ (ನಾ). ಸಂಗೀತಶಾಸ್ತ್ರದ ಸೂತ್ರಗಳಿಗೆ ಅನುಗುಣವಾದ ಸಂಗೀತ : ಮದ್ರಾಸ್ ಮತ್ತು ಮೈಸೂರುಪ್ರಾಂತ್ಯಗಳು ಈ ದೃಷ್ಟಿಯಿಂದ ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚು ಅಭಿರುಚಿ ಮತ್ತು ಪ್ರಗತಿ ತೋರುತ್ತವೆ (ಸಂಗೀಚಂ. ೧೯೦). [ಸಂ.]

ಶಾಸ್ತ್ರೋಕ್ತ (ಗು). ೧. ಶಾಸ್ತ್ರದಲ್ಲಿ ಹೇಳಿರುವ, – ಪ್ರತಿಪಾದಿಸಿರುವ : ಯತಿಯೆಂಬುದುಸಿರ್ವ ತಾನಂ ಕೃತಾಸ್ಪದಂ ವೃತ್ತಜಾತಿಪದಪದ್ಧತಿಯೊಳ್ ಸತತಂ ಧಂದೋವಿದಿತಪ್ರತೀತಶಾಸ್ತ್ರೋಕ್ತಮಾರ್ಗದಿಂದಜಿವುದಿದಂ (ಕವಿರಾ. ೧-೭೧) ; ಶಾಸ್ತ್ರೋಕ್ತ ಕರ್ಮಗಳನ್ನು ನೆರವೇರಿಸಿ ಶಿಶುವಿಗೆ 'ನಚಿಕೇತ' ಎಂದು ನಾಮಕರಣ ಮಾಡಿದರು (ಚಿತಂಜಾ. ೬೨). (ನಾ). ೨. ಸಂಪ್ರದಾಯಬದ್ಧವಾದುದು ; ವಿಧಿವತ್ತಾದುದು: ವಾಜಶ್ರವಸ ಶಾಸ್ತ್ರೋಕ್ತವಾದ ರೀತಿಯಲ್ಲಿ ಮಂಥಕರ್ಮವನ್ನು ನೆರವೇರಿಸಿದ (ಚಿತಂಬಾ. ೫೮). [ಸಂ.]

ಶಾಸ್ತ್ರೋಕ್ತಿ (ನಾ). ಶಾಸ್ತ್ರದಲ್ಲಿರುವ ಮಾತು, – ವಚನ : ಪರಮಾಯುಷ್ಯ ಮುಮಯ್ನೂರುಳ್ಳರಸು ನೂಱಿಪ್ಪತ್ತುವರ್ಷಂ ನರದ್ಯಿರದೌಳಿಕ್ಕೆ . . . ಶಾಸ್ತ್ರೋಕ್ತಿಯಿಂ (ಜಾತಕ. ೪-೧೦). [ಸಂ.]

ಶಾಹಣೆ 'ಶಹಣೆ' ನೋ.

ಶಾಹಣೇತನ 'ಶಾಣೆತನ' ನೋ.

ಶಾಹಬಾಸು 'ಶಹಬಾಸ್' ನೋ.

ಶಾಹಬಾಸುಗಿರಿ 'ಶಹಬಾಸುಗಿರಿ' ನೋ.

ಶಾಹಲು 'ಶಾಲು' ನೋ.

ಶಾಹಿ, ಷಾಹಿ (ನಾ). ರಾಜ್ಯ ; ಅರಸೊತ್ತಿಗೆ : ನಿನ್ನೊಡನೆ ಯವನಶಾಹಿಯು ನಾಶವಾಗುತ್ತದ (ರಾಜ್ಯೋದ. ೧೯೯). **ಷಾಹಿ** : ಅಹಮದ್ ನಗರದಲ್ಲಿ ನಿಸಾಂ ಷಾಹಿ ಸಂತತಿಯವರು (ಪಾಳಗಾ. ೧೩). [← ಪಾರ. ಹಿಂ. ಮರಾ. ಶಾಹೀ]

ಶಾಹಿದೀ, ಶಾಯಿದಿ (ನಾ). ೧. ಸಾಕ್ಷ್ಯ ; ರುಜುವಾತು ; ಪ್ರಮಾಣ : ಈ ವಿವರಗಳು ಶಾಶ್ವತವಾಗಿ ಇರುವ ಬಗ್ಗೆ, ಬರೆಸಿ ಶಾಹಿದೀ ಬಗ್ಗೆ, ಪಾಸಾ ದಸ್ಕತ್ತು ಮೋಹರ ಮಾಡಿ, ಮಡಗಿ ಇದೆ (ರಾಚೇಂದ್ರ. ೨೮೭). **ಶಾಯಿದಿ** : ೧. ಇಂಗ್ರೇಜ್‌ಸರದಾರರ ಶಾಯಿದಿಯಿಂದ ಗುರುಹಿರಿಯರ ಕೈಯಿಂದ . . . ಧಾರೆಯನೆರಸಿಕೊಂಡು, ವಿವಾಹವಾದರು (ರಾಚೇಂದ್ರ. ೧೧೦). ೨. ಸಾಕ್ಷಿ ಹೇಳುವವನು.

[← ಅರ. ಹಿಂ. ಶಾಹಿದ್; ಪಾರ. ಶಾಹಿದೀ; ಮರಾ. ಶಾಹದೀ, ಶಾಹೀದೀ, ಶಾಯದೀ]

ಶಾಹೀದುದ್ದು 'ಶಾಹೂದುದ್ದು' ನೋ.

ಶಾಹೀರ್ 'ಶಾಹೀರ' ನೋ.

ಶಾಹೀರ್‌ಗಾಣ (ನಾ). ಮಡಿದ ವೀರರನ್ನು ಕುರಿತು ಹೊಗಳಿ ಹಾಡುವ ಲಾವಣಿ, – ಹಾಡು : ಸೈನಿಕರಲ್ಲಿಯೂ ಪ್ರಜಾಸಾಮಾನ್ಯರಲ್ಲಿಯೂ ರಾಜನಿಷ್ಠೆ ದೇಶಾಭಿಮಾನಗಳನ್ನೂ, ಸ್ವಾಭಿಮಾನ – ಆತ್ಮವಿಶ್ವಾಸಗಳನ್ನೂ ಹುಟ್ಟಿಸುವುದಕ್ಕೆ ಈ 'ಶಾಹೀರ್‌ಗಾಣ'ದ ಉಪಯೋಗವನ್ನಲ್ಲಿ ಚೆನ್ನಾಗಿ ಮಾಡಿಕೊಂಡರು (ಕರ್ನಾಜ. ೧೦೯).

[ಶಾಹೀರ್ (< ಶಾಹೀರ) + ಗಾಣ್ಯ]

ಶಾಹೀರ್‌ಗೀತ (ನಾ). = ಶಾಹೀರ್‌ಗಾಣ : ಮಹಾರಾಷ್ಟ್ರದಲ್ಲಿ 'ಶಾಹೀರ್ ಗೀತ'ಗಳನ್ನು ಹೇಳುವ 'ಶಾಹೀರ'ರ ಜಾತಿಯೊಂದು ತಲೆಯೆತ್ತಿ ನಿಂತಿತು (ಕರ್ನಾಜ. ೧೦೯). [ಶಾಹೀರ್ (< ಶಾಹೀರ) + ಗೀತ]

ಶಾಹೀರ, ಶಾವೀರ, ಶಾಹೀರ್ (ನಾ). ಜನಪದಗೀತೆಗಳನ್ನು ರಚಿಸುವವನು: ಮಹಾರಾಷ್ಟ್ರದಲ್ಲಿ 'ಶಾಹೀರ್‌ಗೀತ' ಗಳನ್ನು ಹೇಳುವ 'ಶಾಹೀರ'ರ ಜಾತಿಯೊಂದು ತಲೆಯೆತ್ತಿ ನಿಂತಿತು (ಕರ್ನಾಜ. ೧೦೯). **ಶಾವೀರ** : ಕನ್ನಡ 'ಶಾವೀರ'ರು ಹಾಡುವ ಹಾಡುಗಳೆಂದರೆ ಹೆಚ್ಚಾಗಿ, ಹೆಣ್ಣು ಗಂಡಿನ ಹೆಚ್ಚು ಕಡಮೆಯ ಹೊಡೆದಾಟದ ಹಾಡುಗಳು (ಕರ್ನಾಜ. ೧೧೦). **ಶಾಹೀರ್** : ಮರ್ಹಾಟಗರು 'ಷಾಯರ್' ಎಂದಿರುವ ಪರ್ಷಿಯನ್ ಪದವನ್ನು ಕೆಡಿಸಿ 'ಶಾಹೀರ್' ಎಂದು ಮಾಡಿಕೊಂಡಿರುವರು (ಕರ್ನಾಜ. ೧೦೯).

[← ಅರ. ಶಾಇರ್, ಶಾಯರ್ ; ಹಿಂ. ಶಾಯರ್ ; ಮರಾ. ಶಾಹೀರ್]

ಶಾಹೀರಗಾನ (ನಾ).= ಶಾಹೀರ್‌ಗಾಣ : ಲಾವಣಿ, ಗೀಗೀಪದಗಳು, ಕೀರ್ತನ ಪ್ರವಚನಗಳು ಶಾಹೀರಗಾನಗಳು (ಹೋಹಬು. ೧೯೪). [ಶಾಹೀರ + ಗಾನ]

ಶಾಹೂದುದ್ದು, ಶಾಹೀದುದ್ದು (ನಾ). ಪೇಶ್ವೆ ಆಡಳಿತದಲ್ಲಿ ಚಲಾವಣೆಯಲ್ಲಿದ್ದ ಒಂದು ಬಗೆಯ ತಾಮ್ರದ ನಾಣ್ಯ : ಈ ಶೀಮೆಯಲ್ಲಿ ಮೊದಲು ಪೇಶವಾಯಿ ಅಮಲು ಇದ್ದ ಕಾರಣ . . . ಶಾಹೂದುದ್ದಲ್ಲದೆ ಶಾಹೀದುದ್ದು ಅಥವಾ ಕರೆದುದ್ದು ನಡಿಯುತ್ತಿತ್ತು (ಕಭಾಗ. ೨೮೧). **ಶಾಹೀದುದ್ದು** : ಈ ಶೀಮೆಯಲ್ಲಿ . . . ಶಾಹೀದುದ್ದು ಅಥವಾ ಕರೆದುದ್ದು ನಡಿಯುತ್ತಿತ್ತು (ಕಭಾಗ. ೨೮೧)

[ಶಾಹೂ + ದುದ್ದು]

ಶಾಹೂಪೈಸಾ (ನಾ). ಪೇಶ್ವೆ ಆಡಳಿತದಲ್ಲಿ ಚಲಾವಣೆಯಲ್ಲಿದ್ದ ಒಂದು ಬಗೆಯ ತಾಮ್ರದ ನಾಣ್ಯ : ಈ ಶೀಮೆಯಲ್ಲಿ ಮೊದಲು ಪೇಶವಾಯಿ ಅಮಲು ಇದ್ದ ಕಾರಣ ಹೆಚ್ಚಾಗಿ "ಶಾಹೂಪೈಸಾ" ಯೆಂಬ ಹೆಸರಿನ ನಾಣ್ಯವು ಯೆಲ್ಲ ಕಡೆಯಲ್ಲಿ ನಡಿಯುತ್ತಿತ್ತು (ಕಭಾಗ. ೨೮೧). [← ಮರಾ. ಶಾಈಪೈಸಾ]

ಶಾಳ 'ಶಾಲ' ನೋ.

ಶಾಳಭಂಜಿಕೆ 'ಶಾಲಭಂಜಿಕೆ' ನೋ.

ಶಾಳಿ 'ಶಾಲಿ' ನೋ.

ಶಾಳಿಕ್ಷೇತ್ರ (ನಾ). ಬತ್ತದ ಗದ್ದೆ : ಪಸುರಾದುದು ಶಾಳಿಕ್ಷೇತ್ರ ವೆಸಗುಮಿಳಿಗತಿಭಾಗ್ಯಂ (ಪಮ್ಮರ. ೧-೫೦). [ಸಂ. ಶಾಲಿಕ್ಷೇತ್ರ]

ಶಾಳಿಗೋಪಿ (ನಾ). ಬತ್ತದ ಗದ್ದೆಯನ್ನು ಕಾಯುವವಳು : ಧವಳೇಕ್ಷುಚ್ಛಾಯ ನಿಷಣ್ಣ, ವಪುಗಳಂದದೊಳೆ ನೆಗಲ್ದ ಬಣ್ಣವನಾ ಶೈಶವದಿಂ ಕಾಕಳಿಯೊಳ್ ಚಕ್ರವರ್ತಿಯಂ ಪಾಡಿ ಶಾಳಿಗೋಪಿಯರೆಸೆದರ್ (ಕಾಂಪ್ರ. ೧-೧೩೮).

[ಸಂ. ಶಾಲಿಗೋಪೀ]

ಶಾಳಿನೀವಿತಾನ (ನಾ). [ಧಂದ] ವರ್ಣಧಂದಸ್ಸಿನ ಇಪ್ಪತ್ತಾರು ಬಗೆಯ ಧಂದಸ್ಸುಗಳಲ್ಲಿ ಆರು ಅಕ್ಷರಗಳುಳ್ಳ, ಗಾಯತ್ರಿಯೆಂಬ ಧಂದಸ್ಸಿನ ಒಂದು ವೃತ್ತ : ಜ್ಯಾಳಿ ತೋಯಮೆಯ್ತಂದೋಳಿವೆತ್ತೊಡಕ್ಕುಂ . . . ಶಾಳಿನೀ [ಪಾಶಾಂ. ಮಾಲಿನೀ] ವಿತಾನಂ (ಧಂದೋಜಾ. ೨-೭೪). [ಸಂ. ಶಾಲಿನೀವಿತಾನ]

ಶಾಳಿವನ 'ಶಾಲಿವನ' ನೋ.

ಶಾಳಿಹೋತ್ರ 'ಶಾಲಿಹೋತ್ರ' ನೋ.

ಶಾಳೀಮನ (ನಾ). ಬತ್ತದ ಗದ್ದೆ : ಪ್ರವರೋದ್ಯಾನಂಗಳಿಂ ಪ್ರವಿಲಸಚ್ಛಾಳೀವನಕ್ಕಾಗಿ ಪಾಡುವ ಕೀರಾವಳಿ . . . ಎತ್ತಲುಂ ಸೊಗಯಿಕುಂ (ಸುಜಮು. ೪-೪೩) ; ಫಳರಸದಿಂ ಬೆಳೆವ ನವಶಾಳೀವನಂಗಳಿಂ (ತಿಪುರ. ದೀ. ೨-೧೦). [< ಶಾಲಿವನ]

ಶಾಳ್ಮಳಿ 'ಶಾಲ್ಮಲಿ' ನೋ.

ಶಿಂಗಣಕ 'ಸಿಂಗಳೀಕ' ನೋ.

ಶಿಂಗರೂಪ, ಸಿಂಗರೂಪ (ನಾ). ಪಾದರಸದಿಂದಾದ ಒಂದು ಅದಿರು ; ಇಂಗುಲಿಕ; ರಸಸಿಂಧೂರ : ಪ್ಯಾಟೆಯಲ್ಲಿ ಮಾರಾಟಕ್ಕೆ ಬರುವ ಕೆಲವು ಜೀನಸಗಳ ಹೆಸರು : – ಲೋಭಾನಾ . . . ಹಿಂಗಡಾ, ಹಿಂಗೂಳ (ಶಿಂಗರೂಪ) . . . ಎಣ್ಣೆ, ಗುಲಾಬನೀರು ಮುಂತಾದವುಗಳು (ಮುಂಬ್ಯಾ. ೧೦೦). **ಸಿಂಗರೂಪ** : ಪುಡಿಗಳ ಮೇಲೆ

ಕಿಮ್ಮತ್ತು ಆಗತಕ್ಕ ಜೀನಸಗಳು — ೧. ಪನ್ಹಿ . . . ೪. ಇಂಗಳೀಕ (ಸಿಂಗರೂಪ) (ಮುಂಬವ್ಯಾ. ೧೩೬).

[← ಪಾರ. ಶಂಗರ್ಫ್ ; ಹಿಂ. ಶಿಂಗರಫ್ ; ಮರಾ. ಶಿಂಗರೂಪ್, ಶಿಂಗರೂಬ್]

ಶಿಂಗಲೀಕ 'ಸಿಂಗಳೀಕ' ನೋ.

ಶಿಂಗವೆಣ್ಣಮ (ನಾ). ಒಬ್ಬಾತನ ಹೆಸರು : ಕೋಟೆಯ ಕೊಳ್ವನ್ನು ಶಿಙ್ಗವಣ್ಣಮ ಪುಟ್ಟಿಯ ಗಙ್ಗ ಪ್ರಭುಮಲ್ಲನೊಬ್ಬಾಗುಣ್ಣನ್ ಅಳಿಯಮ್ಮಡಗಲು ಕೊಳ್ಳುತ್ತಿರೆ (ಎಕ. XII. ತಿಪಟೂ. ೪೭-೬ , ಸು. 880). [?]

ಶಿಂಗಳೀಕ 'ಸಿಂಗಳೀಕ' ನೋ.

ಶಿಂಗಾಡಿ 'ಸಿಂಗಾಡಿ' ನೋ.

ಶಿಂಗಾಡೆ (ನಾ). ಒಂದು ಬಗೆಯ ಸಸ್ಯ , ಶೃಂಗಾಟಕ : ಶೃಂಗಾಟಕ (ಶಿಂಗಾಡೆ) . . . ಇವು ರುಕ್ಷ ಸ್ತಂಭಕ ಶೀತ ಮತ್ತು ಜಡವಿರುತ್ತವೆ (ಅಷ್ಟಾಂಗ. ೧೩೮-೯೦). [← ಹಿಂ. ಸಿಂಘಾಡಾ ; ಮರಾ. ಶಿಂಗಡಾ, ಶಿಂಗಾಡಾ, ಸಿಂಗಾಡಾ./ ಸಂ. ಶೃಂಗಾಟ./ ಪ್ರಾ. ಸಿಂಘಾಡಗ, ಸಿಂಘಾಡಯ]

ಶಿಂಜಿತ (ಗು). ೧. ಶಬ್ದಮಾಡುತ್ತಿರುವ ; ಧ್ವನಿಯಿಂದ ಕೂಡಿದ : ಮಣಿಮಯ ಮಂಜೀರ ಮಂಜುಶಿಂಜಿತವಾಚಾಳಚಾರುಚರಣೆಯರುಂ . . . ನಿಜಾಂತಃಪುರ ಪುರಂಧ್ರಿಯರ್ವೆರಸು ಪೋಗಿ (ಪಂಚತಂ. ೧೨೯-೪). (ನಾ). ೨. (ಆಭರಣಗಳ) ಧ್ವನಿ ; ನಾದ : "ಭೂಷಣರಣಿತಂ ಶಿಂಜಿತಂ" (ವಸ್ತುಕೋ. ೮೧-೩೭) ; ಪಾದತಲಂ ಗಳೊಂದು ಕೆಂಪೆಸೆವಿನಮತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದಟ್ಟೆಸೆದುದೊ ಚಾರುದೇವಗಣಿಕಾಮಣಿನೂಪುರಮಂಜುಶಿಂ[ಪಾಠಾಂ. ಸಿಂ]ಜಿತಂ (ಆದಿಪು. ೭-೨೨) ; ನಿರ್ಜಿತಮದನಧನುರ್ಜ್ಯಾಲತಾಟಂಕೃತಂ ತರ್ಜಿತವೀಣಾಶಿಂಜಿತಂ ಭಂಜಿತರತಿರಮಣೀ ರತ್ನಕಾಂಚೀಪ್ರಣಾದಂ (ಪಂರಾಮಾ. ೧೦-೧೧೦). [ಸಂ.]

ಶಿಂಜಿನಿ (ನಾ). ೧. ಬಿಲ್ಲಿಗೆ ಕಟ್ಟುವ ಹಗ್ಗ ; ಹೆದೆ : ಧನುಶರವ ಕರವಾಂತು ಶಿಂಜಿನಿ ನಿನದವೆಸಗಲು (ಉತ್ತಕ. ೩೩-೪). ೨. ಕಾಲಿಗೆ ಧರಿಸುವ ಒಂದು ಬಗೆಯ ಆಭರಣ ; ಕಾಲಂದುಗೆ ; ನೂಪುರ : "ಶಿಂಜಿನಿ ನೂಪುರಮಂದುಗೆ ಮಂಜೀರಂ ಹಂಸಕಂ ತುಳಾಕೋಟಿ" (ವಸ್ತುಕೋ. ೭೬-೭). [ಸಂ. ಶಿಂಜಿನೀ]

ಶಿಂಜಿನಿಗೊಳಿಸು (ಕ್ರಿ). ಬಿಲ್ಲಿಗೆ ನಾರನ್ನು ಸೇರಿಸು ; ಹೆದೆಯೇರಿಸು : ಕಿಡಿಗಣ್ಣನಭಿಮತವಹುದೆಂದು ಶಾರ್ಙ್ಗವ ಪಿಡಿದೆತ್ತಿ ಶಿಂಜಿನಿಗೊಳಿಸಿ ನುಡಿಸಿದ ಶ್ರೀಕೃಷ್ಣ (ಮೋಹತ. ೩೯-೨೩). [ಶಿಂಜಿನಿ + ಕೊಳ್ಳ್ + - ಇಸ್ಸು]

ಶಿಂತರ್ಗೆ (ನಾ). ಒಂದು ಊರಿನ ಹೆಸರು ; IP ಕೊಲ್ಲಾಪುರಜಿಲ್ಲೆಯ ಈಗಿನ ಶಿತೂರ್ : ಕನ್ನವಾಡ ಗಂಗವಾಡ ಬಳೆಯವಾಡ . . . ಸರ್ಬರಸ ಕೊಟೋರ್ ಶಿನ್ತರ್ಗೆ ಆಜುಂಬಾಳಿಗೆಯೊಡಂ (ಮೃಅರಿ. ೧೯೨೯, ೧೧೮-೨ ; ೯ನಯ ಶತ). [?]

ಶಿಂಪಿಗ 'ಸಿಪ್ಪಿಗ' ನೋ.

ಶಿಂಬಿಧಾನ್ಯ (ನಾ). ಬೀಜದ ಕಾಳುಗಳಿರುವ ಧಾನ್ಯ : ಮೂಲವ್ಯಾಧಿಗೆ . . . ಚಪ್ಪರದವರೆಕಾಯಿ ಮೊದಲಾದ ಶಿಂಬಿಧಾನ್ಯ, ದಿವಾನಿದ್ರ ಮುಂತಾದಿವೆಲ್ಲಂ ಅಪಥ್ಯದ್ರವ್ಯಗಳೆಂದರಿವುದು (ಸಕವ್ಯ. ೨೯೮). [< ಸಂ. ಶಿಂಬೀಧಾನ್ಯ]

ಶಿಂಬಿನಿ (ನಾ). ಒಂದು ಬಗೆಯ ಹುಲ್ಲು : "ಶಿಂಬಿನೀ — ಶಿಂಬಿನೀತೃಣ" (ಓಷಧಿ. ೧೬೫). [ಸಂ. ಶಿಂಬಿನೀ]

ಶಿಂಶಪೆ (ನಾ). ೧. ಒಂದು ಬಗೆಯ ಸುಗಂಧದ ಮರ ; ಅಗರು : "ಪಿಚ್ಛಿಲಾ, ಅಗುರು, ಶಿಂಶಪಾ — ೩ ಅಗುರುಗಿಡದ ಹೆಸರುಗಳು" (ಸಿಟ್ಟಾಂತಿ. ೧೨೬). ೨. ಅಶೋಕವೃಕ್ಷ : "ಸಿಸವೆ — ಶಿಂಶಪ = ಅಶೋಕ, ಅಗುರು" (ತದ್ಭಕೋ. ೪೫).

[ಸಂ. ಶಿಂಶಪಾ]

ಶಿಂಶುಪ (ನಾ). = ಶಿಂಶಪೆ ೨ : ಇತ್ತ ಗುಹನು ಶಿಂಶುಪವೃಕ್ಷದ ಬುಡದಲ್ಲಿ ಶ್ರೀರಾಮನ ಅನುಜ್ಞೆಯಿಂದ . . . ಫಲಮೂಲಗಳನ್ನು ದೊನ್ನೆಗಳಲ್ಲಿ ತುಂಬಿ ತುಂಬಿ ತಂದಿಟ್ಟನು (ತುಳಸೀ. ೧೩೯) ; ಬೆಳಗುಜಾವದೊಳ್ ಬಂದೆನಿಲ್ಲಿಗೆ, ಕುಳ್ತೆನೀ ಶಿಂಶುಪದ ಮರದ ಶಾಖಾಗ್ರದೊಳ್ (ಶ್ರೀರಾಮಾ. ೫೧೦-೨೮೪). [ಸಂ. ಶಿಂಶುಪಾ]

ಶಿಂಶುಮಾರ (ನಾ). ೧. ಮೊಸಳೆ ; ನೆಗಳು : ಭಯಂಕರಶಿಂಶುಮಾರವಿಕಟ ದಂಷ್ಟ್ರಾಕ್ರಕಚಪಾಟ್ಯಮಾನನಾರಕನಿಕರ . . . ಸಲಿಲಲಹರಿಕಾನಿಕರಕರಾಲೆಯಂ (ಆದಿಪು. ೫-೮೭ ವ) ; ಶಿಂಶುಮಾರಂ ಮಾರುತವೇಗದಿಂ ಭೋರೆನೆ ಬಂದತ್ತಿಯ ಮರದ ಸಮೀಪಕ್ಕೆ ಸಾರಲ್ (ಪಂಚತಂ. ೨೮೧-೭). ೨. [ಜ್ಯೋತಿ] ಮೀನಿನಾಕಾರದ ಒಂದು ನಕ್ಷತ್ರಪುಂಜದ ಹೆಸರು : ವೈಶ್ವಾನರನ ದುಸ್ಥಿತಿಯ ಮೀಱಿ ನಡೆವುದು ಶಿಂಶುಮಾರೋದಾರಚಕ್ರವ ಕಳಿದು ಸೂಕ್ಷ್ಮಶರೀರದಲಿ ಸಲುವನು ತಪೋಲೋಕಕ್ಕೆ ವರಯೋಗಿ (ನಿಭಾಗ. ೨-೧-೪೨). [ಸಂ.]

ಶಿಂಶುಮಾರಕ (ನಾ). = ಶಿಂಶುಮಾರ ೧ : ಶಿಂಶುಮಾರಕನ ವಾನರನ ಹಯ ಕುಂಜರನ ಪಂಚಾನನನ . . . ಗುಣವಾ ನರೇಂದ್ರನೊಳಿರಲು ಬೇಹುದು (ಕುವ್ಯಾಲು. ೩-೧೦೯). [ಸಂ.]

ಶಿಕಲ, ಶಿಕಲಿ, ಶಿಕ್ಕಲಿ, ಸಿಕಲ, ಸಿಕಲಿ, ಸಿಕಿನಿ (ನಾ). ಅಸ್ತ್ರ, ಶಸ್ತ್ರಗಳನ್ನು ಸಾಣೆ ಹಿಡಿಯುವುದು : 'ಶಿಕಲಗಾರ' ಪರಾ. ಶಿಕಲಿ : 'ಶಿಕಲಿಗಾರ' ಪರಾ. ಶಿಕ್ಕಲಿ: 'ಶಿಕ್ಕಲಿಗಾರ' ಪರಾ. ಸಿಕಲ : 'ಸಿಕಲಗಾರ' ಪರಾ. ಸಿಕಲಿ : 'ಸಿಕಲಿಗಾರ' ಪರಾ. ಸಿಕಿನಿ : 'ಸಿಕಿನಿವಳೆಯ' ಪರಾ.

ಶಿಕಲಿಮಾಡು = ಸಾಣೆಹಿಡಿ ; ಹೊಳಪು ಕೊಡು : ಶಿಕಲಗಾರರು . . . ಇವರು ಪೂರ್ವದಲ್ಲಿ ಕತ್ತಿಗಳನ್ನು ಶಿಕಲೀ ಮಾಡುವರು (ಕಭಾಗ. ೨೦೫).

[← ಅರ. ಸ್ಕೆಕಲ್; ಹಿಂ. ಸಿಕಲೀ ; ಮರಾ. ಶಿಕಲ್, ಶಿಕೀಲ್, ಶಿಕ್ಕಲ್, ಸಿಕಲ್, ಸಿಕ್ಕಲ್]

ಶಿಕಲಗಾರ, ಶಿಕಲಿಗಾರ, ಶಿಕ್ಕಲಿಗಾರ, ಸಿಕಲಗಾರ, ಸಿಕಲಿಗಾರ, ಸಿಕ್ಕಲಗಾರ (ನಾ). ಕತ್ತಿ, ಚಾಕು, ಚೂರಿ ಮುಂತಾದುವುಗಳನ್ನು ಸಾಣೆ ಹಿಡಿಯುವವನು, — ಹರಿತಗೊಳಿಸುವವನು : ಶಿಕಲಗಾರರು . . . ಈಗ ಚೂರಿ, ನಾದಿಗರ ಕತ್ತಿ . . . ಮುಂತಾದವುಗಳನ್ನು ಸಾಣೀ ಹಿಡಿಯುವರು (ಕಭಾಗ. ೨೦೫). **ಶಿಕಲಿಗಾರ** : ನಾನು ಶಿಕಲಿಗಾರನು ಕತ್ತಿಯ ಮಾರಲಿಕ್ಕೆ ಹೋಗುವೆನು (ಕಸಾರ. ೬೭). **ಶಿಕ್ಕಲಿಗಾರ** : ನಾನು ಡೆಮಾಸ್ಥನಿಸ್ ಶಿಕ್ಕಲಿಗಾರ ಹಸುಳೆ (ಯಕ್ಷಪ್ರ. ೧೩೭). **ಸಿಕಲಗಾರ** : "ಸಾಣೆ ಹಿಡಿಯುವವ, ಶಸ್ತ್ರಮಾರ್ಜ" (ಗಂಗಾಮ. ೬). **ಸಿಕಲಿಗಾರ** : ಜೀನಗಾರಗೆ ಸಿಕಲಿಗಾರ ಸಾಕ್ಷಿ (ಗಾದೆ). **ಸಿಕ್ಕಲಗಾರ** : ಕಮ್ಮಾರರು, ಸಿಕ್ಕಲಗಾರರು, ಬಡಿಗರು, ದಂಡಾಳುಗಳಿಗೋಸ್ಕರ ಶಸ್ತ್ರಗಳನ್ನು ಮಾಡುವುದರಲ್ಲಿ ಅಹೋರಾತ್ರಿ ದುಡಿಯುತ್ತಿದ್ದರು (ಯದುರಾ. ೭೭).

[ಶಿಕಲ + - ಗಾರ (< - ಕಾಱ). / ಮರಾ. ಸಿಕಲಗಾರ್, ಸಿಕ್ಕಲಗಾರ್]

ಶಿಕಲಿ 'ಶಿಕಲ' ನೋ.

ಶಿಕಲಿಗಾರ 'ಶಿಕಲಗಾರ' ನೋ.

ಶಿಕಸ್ತು, ಶಿಖಸ್ತು (ನಾ). ೧. (ಕಾಗದದಂತೆ ಮಡಿಸಿ) ಹರಿದಿರುವುದು ; ಭಗ್ನವಾದ ಸ್ಥಿತಿ : (ಕಿ). ೨. (ಹಡಗು, ನಾವೆ ಮುಂತಾದುವು) ಒಡೆದುದು; ಮುರಿದುದು : (ಕಿ). ೩. (ಕಟ್ಟಡ ಮುಂತಾದುವು) ದುರಸ್ತು ಇಲ್ಲದೆ ಜೀರ್ಣವಾಗಿರುವಿಕೆ, — ಶಿಥಿಲಗೊಂಡಿರುವಿಕೆ : (ಕಿ). **ಶಿಖಸ್ತು** : ೩. "ಶಿಖಸ್ತು" ಆಗಿದ್ದರೆ "ದುರಸ್ತು" ಮಾಡಿಸುವುದು, ತಾಲ್ಲೂಕುಅಧಿಕಾರಿಗಳ ಕರ್ತವ್ಯ (ಕಲನ. ೧೫೯).

ಶಿಕಸ್ತಾಗು = ಚೆದರು ; ಚೆಲ್ಲಾಪಿಲ್ಲಿಯಾಗು : ನವಾಬರಾ ದಂಡು ಹೊಡೆದು ಆಗ್ಯೆ ಇವರು ಶಿಕಸ್ತಾಗಿ ಗಿಡಾಬಿದ್ದು ವೋಡಿಹೋಗುವಾಗ್ಗೆ ನಾವು ಮುಂದೆ ಇರುವಲ್ಲು ಲಡಾಯಿ ಬಿತ್ತು (ಮದಚ. ೪೩-೧೨). [← ಪಾರ. ಹಿಂ. ಶಿಕಸ್ತ್; ಮರಾ. ಶಿಕಸ್ತ್, ಸಿಕಸ್ತ್]

ಶಿಕಾರಾ, ಷಿಕಾರ (ನಾ). (ತಂಗಲು ಅನುಕೂಲವಾಗುವಂತೆ ಇರುವ) ನದಿಯಲ್ಲಿ ತೇಲಾಡುವ ದೋಣಿಮನೆ : ಒಂದು ಬಾರಿ ಶಿಕಾರಾ(ದೋಣಿ)ದಲ್ಲಿ ಕುಳಿತು ನಾವು ವಿಹಾರಕ್ಕೆ ಹೋಗಬಾರದೇಕೆ? (ರಕ್ತಸ. ೮೭). **ಷಿಕಾರ** : ಷಿಕಾರದಂತೆ ಗೃಹನೌಕೆಯೂ ಬೆಟ್ಟ ದಾಲಸರಸಿಯು ಕಣಿವೆ ಉದಕಮಂಡಲ ತೋರೆ ಶ್ರೀನಗರದಂತೆ (ಮಾನಸ. ೬೯-೧೦). [← ಹಿಂ. ಶಿಕಾರಾ]

ಶಿಕಾರಿ, ಷಿಕಾರಿ (ನಾ). ೧. (ಕಾಡಿನಲ್ಲಿ) ಮೃಗಪಕ್ಷಿಗಳನ್ನು ಬೆನ್ನಟ್ಟಿ ಹೋಗಿ ಹಿಡಿಯುವ ಅಥವಾ ಕೊಲ್ಲುವ ಕ್ರೀಡೆ ; ಬೇಟೆ : ವಿಕ್ರಮಾದಿತ್ಯರಾಯನು . . . ಒಂದು ದಿನ ಶಿಕಾರಿಗಾಗಿ ಅರಣ್ಯಕ್ಕೆ ಹೋಗಿ ನಾನಾಮೃಗವಂ ಸಂಹರಿಸಿ ಬರುವಲ್ಲಿ (ಬತ್ತೀಸ. ೬೩) ; ಅವರು ಹಮೇಷಾ ಶಿಕಾರಿಗೆ ಹೋಗುತ್ತಾ ಇದ್ದಾರೆ (ರಾಚೇಂದ್ರ. ೫೫). **ಷಿಕಾರಿ** : ೧. ಷಿಕಾರಿಮಾಡುವುದು, ಷಿಕಾರಿಗೋಸ್ಕರ, ತಿನ್ನುವುದಕ್ಕಲ್ಲ ! (ಬಂಕಿಮ. ೮೨);

ಈಗ ಅವನೊಬ್ಬ ನುರಿತ ಬೇಟೆಗಾರ. ವನಮಿಗಗಳನ್ನು ಅವುಗಳ ದಾಡು ಹಿಡಿದು ಷಿಕಾರಿ ಮಾಡುವುದರಲ್ಲಿ ಎತ್ತಿದ ಕೈ (ಮಗಮೂಂ. ೨೫). ೨. ಬೇಟೆಯಾಡುವವನು ; ಬೇಟೆಗಾರ: ರಾಯರು ನಿಪುಣ ಷಿಕಾರಿಗಳೆಂದು ನಮ್ಮ ಊರಲ್ಲೆಲ್ಲಾ ಪ್ರಸಿದ್ಧ ರಾಗಿದ್ದರು (ರಾಯಕ. ೧೪). ೩. ಬೇಟೆಗೆ ಗುರಿಯಾಗುವ ಪ್ರಾಣಿ: ಈಗ ನೀವು ನನ್ನ ಬಂದಿ, ನನ್ನ ಷಿಕಾರಿ (ದೌಲತ್. ೧೨೮).

[← ಪಾರ ; ಹಿಂ. ಮರಾ. ಶಿಕಾರ್, ಶಿಕಾರೀ]

ಶಿಕ್ಕಲಿ 'ಶಿಕಲ' ನೋ.

ಶಿಕ್ಕಲಿಗಾರ 'ಶಿಕಲಗಾರ' ನೋ.

ಶಿಕ್ಕಾ 'ಸಿಕ್ಕಾ' ನೋ.

ಶಿಕ್ಕಾಮೋರ್ತಬ್ಬ 'ಸಿಕ್ಕೆಮೋರ್ತಬ' ನೋ.

ಶಿಕ್ಕೆ 'ಸಿಕ್ಕಾ' ನೋ.

ಶಿಕ್ಥ (ನಾ). ಅನ್ನದ ಅಗುಳು : ಮಕರಕೇತುಪ್ರಹರರೂಪಂಗೆ ಭಾಂಡೋದನದ ಶಿಕ್ಥದಿಂ ತಣಿಪುದು ಚಕಿತಮಲ್ಲವ ನಮಗೆ ಗುರುರಾಯ (ದಶಕು. ೧೭-೪೪). [< ಸಂ. ಸಿಕ್ಥ]

ಶಿಕ್ಕೆ, ಷಿಕಮಿ, ಷಿಕ್ಕೆ (ನಾ). (ಜಮೀನನ್ನು ಮೂಲಗೇಣೇದಾರನಿಂದ ನಿರ್ದಿಷ್ಟಗೇಣಿಗೆ ಪಡೆದ) ಒಳಗೇಣಿ ; ಪೋಟಿಗೇಣಿ ; ಜಮೀನುದಾರನಿಂದ ನಿರ್ದಿಷ್ಟ ಗೇಣಿಗೆ ಜಮೀನನ್ನು ಪಡೆದು ಒಳಗೇಣಿದಾರನಿಂದ ಸರ್ಕಾರಕ್ಕೆ ಸಲ್ಲಬೇಕಾದ ಭಾಗವನ್ನು ಸಂದಾಯಪಡಿಸುವುದು : (ಮೈಗೆಜ. IV, ೭೮೫). 'ಶಿಕ್ಕೆದಾರ' ಪರಾ. ಷಿಕಮಿ : (ಕ). ಷಿಕ್ಕೆ : ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಾಯರು ಅಮಾನಿಯಾಗಿಯೂ ಇನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಷಿಕ್ಕೆಯಾಗಿಯೂ ನಡೆಯುತ್ತಿತ್ತು (ಚಾಮವಂ. ೩೩೪).

ಷಿಕಮಿಕುಳ = ಕಂದಾಯವನ್ನು ನೇರವಾಗಿ ಸರ್ಕಾರಕ್ಕೆ ಕಟ್ಟದೆ ಭೂಮಾಲೀಕನ ಮೂಲಕ ಸಂದಾಯ ಮಾಡುವ ರೈತ : ಪಟ್ಟೇದಾರನ ಷಿಕಮಿಕುಳಗಳ ಗೊಣಗಾಟಗಳಿಗೆ ಸ್ವಲ್ಪವಾದರೂ ಅವಕಾಶವಿಲ್ಲದಂತೆ ನಿಮಾನಿಮಿ ಕಂದಾಯವನ್ನು ಪಟ್ಟೇದಾರನಿಗೆ ಇತರ ಕುಳಗಳು ಕೊಡುವುದು (ಭೂಮಿಅ. ೩೬). ಷಿಕ್ಕೇಹಿಡುವಳಿದಾರ = ಒಳಗೇಣಿಯನ್ನು ಪಡೆದವನು ; ಒಳಗೇಣಿದಾರ : ಕಂದಾಯವು ಬಾಕಿ ಉಳಿದಲ್ಲಿ ಬಾಕಿ ಷಿಕ್ಕೇಹಿಡುವಳಿದಾರರ ಜಮೀನನ್ನು ಹರಾಜು ಮಾಡಬೇಕೇ ವಿನಹ . . . ಉಳಿದ ಷಿಕ್ಕೆಹಿಡುವಳಿಗಳನ್ನು ಹರಾಜು ಮಾಡಲ್ಪಡಕೂಡದು (ಗ್ರಾಮಾಕ. ೭೮). [← ಪಾರ. ಶಿಕಮ್ಹಿ, ಶಿಕ್ಕ್ ; ಹಿಂ. ಶಿಕಮಿ ; ಮರಾ. ಶಿಕಮ್, ಸಿಕಮ್]

ಶಿಕ್ಕೆದಾರ, ಷಿಕಮಿದಾರ, ಷಿಕ್ಕೆದಾರ (ನಾ). ಒಳಗೇಣಿ ಪಡೆದವನು ; ಒಳಸಾಗುವಳಿದಾರ : (ಮೈಗೆಜ. IV. ೭೮೫). ಷಿಕಮಿದಾರ : (ಕ). ಷಿಕ್ಕೆದಾರ : ಜಮೀನು, ಎಂದರೆ ಜಮೀನಿನಲ್ಲಿನ ಅಥವಾ ಅದರ ಮೇಲಿನ ಅಧಿಕಾರ, ಜಮೀನಿನ ಮಾಲೀಕನ ಮತ್ತು ಷಿಕ್ಕೆದಾರನ ಸಂಬಂಧವೂ ಸೇರಿ ಜಮೀನುಹಿಡುವಳಿ ಮತ್ತು ಕಂದಾಯದ ವಸೂಲಿ (ಭಾಧಾಸ. ೨೦೯). [ಷಿಕ್ಕೆ + -ದಾರ್ / ಮರಾ. ಶಿಕಮಿದಾರ್]

ಶಿಕ್ಯ (ನಾ). ೧. ಪಾತ್ರೆ ಮುಂತಾದವುಗಳನ್ನು ತೂಗುಹಾಕಲು ಬಳಸುವ ಸಾಧನ; ನೆಲುವು : "ಕಾಚಂ ಶಿಕ್ಯಮವಲಂಬಮೆನೆ ನೆಲಹು" (ಮಂಗರಾ. ೬೩-೨೬). ೨. ತಕ್ಕಡಿಯ ತಟ್ಟೆಗಳನ್ನು ಕಟ್ಟಿರುವ ಹುರಿ. [ಸಂ.]

ಶಿಕ್ಕಿತ (ಗು). ೧. ನೆಲುವಿನಲ್ಲಿ ನೇತುಬಿಟ್ಟ, – ಇಳಿಬಿಟ್ಟ. (ನಾ). ೨. ನೆಲುವಿನಲ್ಲಿ ಇಟ್ಟುದು : "ಕಾಚಿತಂ, ಶಿಕ್ಕಿತಂ – ೨ ಉಟ್ಟಯಲ್ಲಿಡಲ್ಪಟ್ಟದ್ದು" (ಸಿದ್ಧಾಂತಿ. ೩೪೭). [ಸಂ.]

ಶಿಕ್ಕೋತ್ಸವ (ನಾ). ಕೃಷ್ಣಜನ್ಮಾಷ್ಟಮಿಯ ಮರುದಿನದಂದು ಹಾಲು, ಮೊಸರು ಮತ್ತು ಬೆಣ್ಣೆಯ ಮಡಕೆಗಳ ನೆಲುವನ್ನು ತೂಗುಹಾಕಿರುವ ಮಂಟಪದಲ್ಲಿ ಕೃಷ್ಣನ ಮೂರ್ತಿಯನ್ನಿಟ್ಟು ನಡೆಸುವ ಉತ್ಸವ, – ಮೆರವಣಿಗೆ : (ಕ). [ಸಂ.]

ಶಿಕ್ಷ (ನಾ). ೧. ಉಪಾಧ್ಯಾಯ ; ಗುರು : ವಿಖ್ಯಾತನಖಿಲಂ ಶಿಕ್ಷನೆನಿಕುರ್ಮಕ ದಸೆಯೊಳ್ (ಜಾತಕ. ೯-೧೭). ೨. ದಂಡಿಸುವವನು ; ಶಿಕ್ಷಿಸುವವನು: 'ದುಷ್ಟಶಿಕ್ಷ' ಪರಾ. [ಸಂ.]

ಶಿಕ್ಷಕ (ನಾ). ೧. ಉಪಾಧ್ಯಾಯ ; ಗುರು : "ಕಲ್ಯಾಯ್ತನೆಂದು ವಿದ್ಯಾಶಿಕ್ಷಕಂ" (ಕಬ್ಬಿಗ. ೩೫) ; ಒಕ್ಕಣಿಕೆಗಳನ್ನು ಎಲ್ಲೆಲ್ಲಿ ಹ್ಯಾಗೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಶಿಕ್ಷಕನು ಹುಡುಗರಿಗೆ ಚೆನ್ನಾಗಿ ತಿಳಿಸಿಕೊಡಬೇಕು (ಮುಂಯಿ. ೪-೮೪); ಸದಾಶಿವರಾಯರು . . . ಸರಕಾರಿಶಾಲೆಯ ಶಿಕ್ಷಕರಾದರು (ಇಂಚಾಪ. ೬-೧೯). ೨. ದಂಡಿಸುವವನು ; ಶಿಕ್ಷಿಸುವವನು: 'ದುಷ್ಟಶಿಕ್ಷಕ' ಪರಾ. ೩. ಕಲಿಯುವವನು. ೪. [ಜೈನ] ಶಿಕ್ಷಾವ್ರತಗಳನ್ನು ಬೋಧಿಸುವವನು : ನಾಲ್ಕಾಸಿರದೈನೂಱಯ್ವದಿಂಬರ್ ಶಿಕ್ಷಕರುಂ ಒಂಭೈಸಾಸಿರ್ವರವಧಿಜ್ಞಾನಿಗಳುಂ (ಆದಿಪು. ೧೬-೪೦ ವ) ; ಎರಡುಲಕ್ಕೆಯ ಪತ್ತುಸಾಸಿರದ ನಾಲ್ವೂರ್ವರ್ ಶಿಕ್ಷಕರುಂ ಇಚ್ಛಾಸಿರ್ವರವಧಿಜ್ಞಾನಿಗಳುಂ (ಚಂದ್ರಪ್ರ. ೧೫-೮೧ ವ). [ಸಂ.]

ಶಿಕ್ಷಕವೃತ್ತಿ (ನಾ). ಉಪಾಧ್ಯಾಯನ ಕೆಲಸ : ಶಿಕ್ಷಕವೃತ್ತಿಯ ಪಾವನಯಾತ್ರೆಯ ಕೊನೆಯ ಮೆಟ್ಟಲನು ಹತ್ತಿ ನಿಂದೆ (ಇಂಚಾಪ. ೫೪-೫೮). [ಸಂ.]

ಶಿಕ್ಷಕಿ (ನಾ). ವಿದ್ಯೆಯನ್ನು ಕಲಿಸುವವಳು ; ಉಪಾಧ್ಯಾಯಿನಿ : ಸುಮತಿ . . . ಹೆಣ್ಣುಮಕ್ಕಳ ಸಾಲೆಯಲ್ಲೇ ಶಿಕ್ಷಕಿಯಾಗಿದ್ದಾಳೆ (ಆಜೋಲೆ. ೭೩). [ಶಿಕ್ಷಕ + – ಇ]

ಶಿಕ್ಷಣ (ನಾ). ೧. ತಿಳಿಯುವಿಕೆ ; ಕಲಿಯುವಿಕೆ ; ಜ್ಞಾನಾರ್ಜನೆ : ವ್ಯಕ್ತಿ ಕಟ್ಟಿಕೊಂಡು ಬರುತ್ತಿರುವ ಅನುಭವವೇ ಶಿಕ್ಷಣ. ಈ ಶಿಕ್ಷಣಕ್ಕೆ ಆಧಾರ ಜೀವನ (ಶಿಕ್ಷದ. ೨). ೨. (ವಿದ್ಯೆಯನ್ನು) ಕಲಿಸುವಿಕೆ ; ಬೋಧಿಸುವಿಕೆ. ೩. ತರಬೇತಿ ; ತರಪೇತು: ಅರೆ ಎಡೆ ಹಸ್ತಿಶಿಕ್ಷಣವಿಚಕ್ಷಣರಿಂದರೆ ಎಡೆ ಅಶ್ವಶಿಕ್ಷೆಯಿಂ (ತಮದ. ೫೬ ಪ್ರಯೋ). ೪. ಶಿಕ್ಷಿಸುವುದು ; ದಂಡಿಸುವುದು: 'ದುಷ್ಟಶಿಕ್ಷಣ' ಪರಾ. [ಸಂ.]

ಶಿಕ್ಷಣಇಲಾಖೆ (ನಾ). ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಪಠ್ಯಪುಸ್ತಕ, ಶಿಕ್ಷಕರ ನೇಮಕ ಮುಂತಾದ ವಿಷಯಗಳನ್ನು ನೋಡಿಕೊಳ್ಳುವ ಸರಕಾರದ ಒಂದು ಆಡಳಿತ ಶಾಖೆ : ಶಿಕ್ಷಣಇಲಾಖೆಯ ಪಠ್ಯಪುಸ್ತಕಸಮಿತಿಯು ಈ ಪುಸ್ತಕವನ್ನು ಹತ್ತನೆಯ ತರಗತಿಯ ಪಠ್ಯಪುಸ್ತಕವನ್ನಾಗಿ ಆಯ್ಕೆಮಾಡಿದೆ (ರೂಢಿ). [ಶಿಕ್ಷಣ + ಇಲಾಖೆ]

ಶಿಕ್ಷಣಕೇಂದ್ರ (ನಾ). ತರಪೇತನ್ನು ನೀಡುವ ಮುಖ್ಯಸ್ಥಳ : ನೂತನರೀತಿಯ ಶಿಕ್ಷಣವನ್ನು ಉಪಾಧ್ಯಾಯರಿಗೆ ಕೊಡಲು ಶಿಕ್ಷಣಕೇಂದ್ರಗಳು ಹೆಚ್ಚಬೇಕು (ಶಿಕ್ಷದ. ೧೩೯). [ಸಂ.]

ಶಿಕ್ಷಣತಜ್ಞ (ನಾ). ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನುರಿತವನು: ಶಿಕ್ಷಣತಜ್ಞರೂ ಪೌರನೀತಿವಿಶಾರದರೂ . . . ತಮ್ಮ ಓದಿನ ಪರಿಜ್ಞಾನವನ್ನು ತಮ್ಮ ಜೊತೆಯ ಜನರ ಯೋಗಕ್ಷೇಮಕ್ಕಾಗಿ ಬರೆದು ಪ್ರಸಾರಮಾಡಬೇಕು (ರಾಮರಾ. ೪೫). [ಸಂ.]

ಶಿಕ್ಷಣಮಂಡಲಿ (ನಾ). ಶಿಕ್ಷಣಕ್ಕೆ ಸಂಬಂಧಿಸಿದ ಆಗುಹೋಗುಗಳನ್ನೂ ನಿಯಮಾವಳಿಗಳನ್ನೂ ರೂಪಿಸಿ ವ್ಯವಸ್ಥಿತಗೊಳಿಸುವ ಆಡಳಿತಸಂಸ್ಥೆ: ಶಿಕ್ಷಣಮಂಡಲಿಯ ಆದೇಶವನ್ನು ವಡೆಯಲಾಗಿದೆ (ರೂಢಿ). [ಸಂ. ಶಿಕ್ಷಣಮುಡಲೀ]

ಶಿಕ್ಷಣಮಾಧ್ಯಮ (ನಾ). ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣದ ಪ್ರಸಾರದ ಮಾಧ್ಯಮವಾಗಿ ಬಳಸುವ ಭಾಷೆ ಇತ್ಯಾದಿ : ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು (ಗೃಹವಿ. III. ಮುನ್ನುಡಿ). [ಸಂ.]

ಶಿಕ್ಷಣವೇತ್ತ (ನಾ). ಶಿಕ್ಷಣದ ರೀತಿ, ಉದ್ದೇಶಗಳನ್ನು ಕೂಲಂಕಷವಾಗಿ ಬಲ್ಲವನು : ಪಠ್ಯವಸ್ತುವಿನ ರಚನೆ ಮತ್ತು ವ್ಯವಸ್ಥೆಯ ಕಡೆಗೆ ಶಿಕ್ಷಣವೇತ್ತರು ಹೆಚ್ಚಿನ ಗಮನಕೊಡುತ್ತಿದ್ದಾರೆ (ಶಿಕ್ಷದ. ೧೭೧). [ಸಂ. ಶಿಕ್ಷಣವೇತ್ತೃ]

ಶಿಕ್ಷಣಶಾಖೆ (ನಾ). ಸಾರ್ವಜನಿಕಶಿಕ್ಷಣಕ್ಕೆ ಸಂಬಂಧಿಸಿದ ಆಡಳಿತವನ್ನುಳ್ಳ ವಿಭಾಗ : ಶಿಕ್ಷಣಶಾಖೆಯ ಮಂತ್ರಿಗಳು ಪ್ರವಾಸದಲ್ಲಿದ್ದಾರೆ (ರೂಢಿ). [ಸಂ. ಶಿಕ್ಷಣಶಾಖಾ]

ಶಿಕ್ಷಣಶುಲ್ಕ (ನಾ). ವಿದ್ಯೆಯನ್ನು ಕಲಿಯುವುದಕ್ಕಾಗಿ ಶಾಲೆಗೆ ಅಥವಾ ಗುರುವಿಗೆ ಕೊಡುವ ಹಣ : ವಿದ್ಯಾರ್ಥಿವೇತನದಿಂದ ಆ ಹುಡುಗನ ಶಿಕ್ಷಣಶುಲ್ಕ ಕಡಮೆಯಾಯಿತು (ರೂಢಿ). [ಸಂ.]

ಶಿಕ್ಷಾಕ್ರಮಣ (ನಾ). ತರಬೇತಿಯ ಹತೋಟಿ : ತಿಮಿರವಡಗಿದ ಲೋಕ ಶಿಕ್ಷಾಕ್ರಮಣವಡಗಿದ ದಂತಿ ಕರ್ಮಭೂಮಿಗಳಡಗಿದ ಯೋಗಿ (ಜಿನ್ವಾಅ. ೮-೨೪). [ಸಂ.]

ಶಿಕ್ಷಾಗುರು (ನಾ). ೧. ಉಪಾಧ್ಯಾಯ ; ಶಿಕ್ಷಕ : ಬರಲಿ ಕರೆ ಕೈತವದ ಶಿಕ್ಷಾಗುರುವನೆನುತವನೀಶ ದೂತರ ಹರಿಯಬಿಟ್ಟನು ಹರಿಯ ನಿಳಯಕೆ (ಕುವಾಉ. ೮-೪೭). ೨. ಧರ್ಮೋಪದೇಶ ನೀಡುವವನು ; ಧಾರ್ಮಿಕಗುರು. [ಸಂ.]

ಶಿಕ್ಷಾಚಾರ್ಯತನ (ನಾ). ಗುರುವಾಗಿರುವಿಕೆ : ಹಿಡಿಹಿಡಿದುಕೊಂಡರ್ತಿಯಲಿ ಬೆಂಬಿಡದೆ ಶಿಕ್ಷಾಚಾರ್ಯತನದಲಿ ಜಡಿದು ಜಂಕಿಸಿ ಮುದ್ದುತನ ಮಿಗೆ ಮಾಯೆ ತನ್ನಂತೆ ನಡೆಯ ಕಲಿಸಿದಳಂಬಿವಿಂಡಿಗೆ (ಪ್ರಭುಲಿ. ೩-೩೨). [ಶಿಕ್ಷಾಚಾರ್ಯ + – ತನ]

ಶಿಕ್ಷಾಧ್ಯಕ್ಷ (ನಾ). ದಂಡನೆಮಾಡುವವನು ; ಪರಮೇಶ್ವರ : ತ್ರಾಹಿಮಾಂ ಜಗದುದಯರಕ್ಷ ಶಿಕ್ಷಾಧ್ಯಕ್ಷ ತ್ರಾಹಿಮಾಂ (ಪಚಕಾ. ೫-೭೯). [ಸಂ.]

ಶಿಕ್ಷಾಪದ (ನಾ). [ಬೌದ್ಧ] ಧರ್ಮಸ್ವೀಕಾರ ಮಾಡುವವನು ಆಚರಿಸಬೇಕಾದ ನಿಯಮ ; ಶೀಲ : ಭಗವಂತನು ಶ್ರಾವಕರಿಗೆ ಶಿಕ್ಷಾಪದವನ್ನು ಅಕಾಲದಲ್ಲಿ ಆಜ್ಞೆ ಮಾಡಲಿಲ್ಲ (ಬುದ್ಧಸ. ಎಲಿಂದ. ೧೦೩) ; 'ಜೈನಶ್ರಾವಕರು ಪರಿಪಾಲಿಸಬೇಕು' ಎಂದು ವಿವಾರ್ಶಕರು ತೋರಿಸಿಕೊಟ್ಟಿರುವ ಎಂಟು ''ಅಣುವ್ರತ''ಗಳಂತೆಯೇ ಬೌದ್ಧಉಪಾಸಕರಿಗೂ ಕೆಲವು ಶಿಕ್ಷಾಪದಗಳು ವಿಧಿಸಲಾಗಿವೆ (ತೀರ್ಥಸ್ನಾ. ೯೮). [ಸಂ.]

ಶಿಕ್ಷಾರ್ಹ (ನಾ). ದಂಡನೆಗೆ ಯೋಗ್ಯವಾದುದು ; ಶಿಕ್ಷೆಗೆ ಅರ್ಹವಾದುದು : ಲೋಕದ ಕಣ್ಣಿನಲ್ಲಿ ಅದು ಅನ್ಯಾಯ ಅಕ್ಷಮ್ಯ ಶಿಕ್ಷಾರ್ಹ ಎಂದು ಕಂಡುಬಂದರೂ . . . ಅಂಜದೆ ಉತ್ಸಾಹದಿಂದ ನೆರವೇರಿಸಿ ಕೃತಕೃತ್ಯನಾದವನು (ವೀರಯೋ. VI.ಮುನ್ನುಡಿ). [ಸಂ.]

ಶಿಕ್ಷಾಲಯ (ನಾ). ಶಿಕ್ಷಣವನ್ನು ನೀಡುವ ಸ್ಥಳ ; ಪಾಠಶಾಲೆ : ''ಶಿಕ್ಷಾಲಯಮದೋದುವಾಗಾರವಕ್ಕುಂ'' (ಮಂಗರಾ. ೫೯-೧೦). [ಸಂ.]

ಶಿಕ್ಷಾವಚನ (ನಾ). ಬೋಧನೆಯ ಮಾತು ; ಉಪದೇಶದ ನುಡಿ : ಗುರುಶಿಕ್ಷಾವಚನಂಗಳಂ ಹೃದಯದೊಳ್ ಮಾಂಗಲ್ಯಗೀತಾಮೃತಸ್ವರಮಂ ಕರ್ಣದೊಳಾಂತು . . . ಮಣಿಶೃಂಗೋತ್ತುಂಗಮಂ ಮೌಳಿಯಂ ಶರದೊಳ್ ತಾಳ್ದಿದಂ (ಚಂದ್ರಪ್ರ. ೪-೨೫). [ಸಂ.]

ಶಿಕ್ಷಾವಿದ (ನಾ). ಆನೆ, ಕುದುರೆ ಮುಂತಾದ ಪ್ರಾಣಿಗಳನ್ನು ಶಿಕ್ಷಿಸಿ ಪಳಗಿಸುವವನು, – ತರಪೇತು ನೀಡುವವನು : ಇದು ಭದ್ರಾಶ್ವಂ ಶಿಕ್ಷಾವಿದನಿದಱೊಳ್ಸನ್ನ ಬಲ್ಮೆಯಂ ಮೆಱೆಯನೆ (ಮಲ್ಲಿಪ್ರ. ೯-೪೬). [ಸಂ. ಶಿಕ್ಷಾವಿದ್]

ಶಿಕ್ಷಾವ್ರತ (ನಾ). [ಜೈನ] ಗೃಹಸ್ಥಾಶ್ರಮದಲ್ಲಿರುವ ಶ್ರಾವಕರು ಪಾಲಿಸಬೇಕಾದ ಸಾಮಯಿಕ, ಪ್ರೋಷಧ, ಅತಿಥಿಸಂಗ್ರಹ ಮತ್ತು ಸಲ್ಲೇಖನಗಳೆಂಬ ನಾಲ್ಕು ಪ್ರಕಾರದ ವ್ರತ : ವಿವಿಧ ಪ್ರಾಣಿಗಣಂಗಳೊಳ್ ಸಮತೆ . . . ಜೀವಿತಾಂತ್ಯದೆಡೆಯೊಳ್ ಸನ್ಯಾಸಮಂ ಮಾಳ್ಪುದೆಂದಿವು ನೇರ್ಪಚ್ಚಿಸವನ್ನೆಗಂ ನೆಗಳ್ವುವಂ ಶಿಕ್ಷಾವ್ರತಂ ನಾಲ್ಕುಮಂ (ಆದಿಪು. ೬-೯) ; ಶೀಘ್ರೋಪವಾಸಮುಂ ದಾನವ್ರತಮುಂ ನಿಖಿಲ ಸಮತೆಯುಂ ಸನ್ಯಾಸವ್ರಜನಮುಮೆಂಬಿವು ಶಿಕ್ಷಾವ್ರತಮಿದು ನಾಲ್ಕು ತೆಱನನೂನಾಗಮದೊಳ್ (ಶಾಂತಿಪು. ೧-೯೦). [ಸಂ.]

ಶಿಕ್ಷಾಶಾಸ್ತ್ರ (ನಾ). ವೇದಾಂಗಗಳಲ್ಲಿ ಒಂದು ; ಸ್ವರ, ವ್ಯಂಜನಗಳನ್ನು ಉಚ್ಚರಿಸುವ ವಿಧಾನ ಮುಂತಾದುವನ್ನು ತಿಳಿಸುವ ಶಾಸ್ತ್ರ ; ℙ ಇದು ಮುಖ್ಯವಾಗಿ ವೇದಗಳಿಗೆ ಸಂಬಂಧಿಸಿದ ಪದವಾಗಿದ್ದು, ಈಚೆಗೆ ಎಲ್ಲಕ್ಕೂ ಅನ್ವಯವಾಗುತ್ತಲಿದೆ : ''ಧ್ವನಿಶಾಸ್ತ್ರ ; ಶಿಕ್ಷಾ(ಶಾಸ್ತ್ರ). (ಒಂದು ಭಾಷೆಯ) ಧ್ವನಿಪದ್ಧತಿ'' (Phonology. ಇಂಕಾ). [ಸಂ.]

ಶಿಕ್ಷಾಸೂತ್ರ (ನಾ). ಶಿಕ್ಷಾಶಾಸ್ತ್ರದ ನಿಯಮ ; ಉಚ್ಚಾರಣಾಕ್ರಮ : ಈಕ್ಷಿಸಿ ಶಿಕ್ಷಾಸೂತ್ರದ ಲಕ್ಷಣಮಂ ಲೋಕರೂಢಿ ಕೆಡದವೊಲಱಿವರ್ ಲಕ್ಷಿಪುದು ನುಡಿಗಳೊಳ್ ಬಹುಳಾಕ್ಷೇಪಣಮಿಲ್ಲದಿರೆಯುಮಱಿಯದ ಕೆಲವಂ (ಕಮದ. ೨೫೨). [ಸಂ.]

ಶಿಕ್ಷಿಕೆ (ನಾ). ಉಪಾಧ್ಯಾಯಿನಿ ; ಶಿಕ್ಷಕಿ : ಒಬ್ಬ ಶಿಕ್ಷಿಕೆಯರೊಡನೆ ಹೋಗಿದ್ದೆವು (ಅಸ್ಪೃ. ೮೫). [ಸಂ. ಶಿಕ್ಷಿಕಾ]

ಶಿಕ್ಷಿತ (ಗು). ೧. ಕಲಿತ ; ಬೋಧಿಸಲ್ಪಟ್ಟ. ೨. ತರಪೇತುಗೊಂಡ ; ಪಳಗಿದ. ೩. ಚತುರತೆಯಿಂದ ಕೂಡಿದ. (ನಾ). ೪. ವಿದ್ಯೆಯನ್ನು ಕಲಿತವನು ; ಶಿಕ್ಷಣ ಪಡೆದವನು : ಕೃತಮಱಿವೊಡೆ ಸದ್ಗುರುಶಿಕ್ಷಿತನಪ್ಪವನಱಿಗುಂ (ಚಂದ್ರಪ್ರ. ೪-೨೪). ೫. ನಿಷ್ಣಾತ ; ಪ್ರವೀಣ : ''ಚತುರಃ, ಕ್ಷೇತ್ರಜ್ಞಃ . . . ಶಿಕ್ಷಿತಃ, ಪ್ರವೀಣಃ – ಈ ೧೧ ಬಲ್ಲವಂ'' (ಹಲಾಯು. ೫೫-೧೬೦). [ಸಂ.]

ಶಿಕ್ಷಿತಾಯುಧ (ನಾ). ಶಸ್ತ್ರಪ್ರಯೋಗದಲ್ಲಿ ನಿಷ್ಣಾತನಾದವನು: ''ಸ್ಯಹಸ್ತಃ, ಶಿಕ್ಷಿತಾಯುಧಃ – ಈ ೨ ಕೆಯ್ದುವಿಡಿವವಂ'' (ಹಲಾಯು. ೬೧-೨೧೭). [ಸಂ.]

ಶಿಕ್ಷಿಸು (ಕ್ರಿ). ೧. ಕಲಿಸು ; ಬೋಧಿಸು : ಶಾಸ್ತ್ರಂಗಳೊಳ್ ಪರಿಣತರ್ ನೀಮುಮಪ್ಪಿರಂತನಿತುಮನೀ ಕೂಸಿಂಗೋದಿಸಿ ಶಿಕ್ಷಿಸಿದುದಂ ತೋಱಿದಿರಪ್ಪೊಡೆ ಕೂಸು ನಿಮ್ಮ ಮಗಳಪ್ಪುದು ನಿಶ್ಚಯಂ (ಸುಕುಮಾ. ೭-೪೫ ವ); ನಯದಿಂದಂ ತಾಯುಂ ತಂದೆಯುಮೊಳ್ಳನೆ ಶಿಕ್ಷಿಪಂತೆ ಮನುಜಾವಳಿಯಂ ನಯದಿಂ ಸಂಭೋದಿಸಿ (ಸಮಪ್ರ.೧-೨೯);ವಿದ್ಯೋಪವಿದ್ಯೆಗಳನತಿಹೃದ್ಯಂಗಳನಾತ್ಮಜಂಗೆ ಶಿಕ್ಷಿಸುವಂತಾತೋದ್ಯರವ ಮುಗ್ಗೆ (ಚಂದ್ರಪ್ರ. ೪-೪). ೨. ತರಪೇತು ಕೊಡು ; ತಿದ್ದು : ಸಕಲಶಾಸ್ತ್ರಾಭ್ಯಾಸ ವಂಗೆಯ್ವಮೆಂದಿರ್ವಮಿವರ್ ನಮ್ಮನತ್ಯಾಗ್ರಹದಿಂ ಶಿಕ್ಷಿಸಿ ಸಾಕ್ಷರಿಕರಂ ಮಾಟ್ಪೊಡೆ ನಮ್ಮೊಳ್ಳಲ್ದುದಾವುದೆಂದು . . . ಒಡಂಬಟ್ಟು (ಸುಕುಮಾ. ೨-೫೫ ವ) ; ದೀಕ್ಷೆಯೆನಗಿಲ್ಲ ಪಾಪಾತ್ಮನಂ ಪತಿಕರಿಸಿ ಕರುಣದಿಂ ಧರ್ಮಪಥಕೆ ಶಿಕ್ಷಿಸಿದೆ ನೀನೆ ಗುರುವು (ಬಲಿಪು. ೫೧-೩೧). ೩. ದಂಡಿಸು ; ಶಿಕ್ಷೆಕೊಡು : ಕಸದೊಡನೆ ಕೂಡಿ ಪೆರ್ಚಿದ ಸಸಿಯುಂ ಶಿಕ್ಷಿಸದ ಮಕ್ಕಳುಂ . . . ಒಪ್ಪಲಾರ್ಕುಮೆ ಕಡೆಯೊಳ್ (ಧರ್ಮಾಮೃ. ೨-೮೨); ಗಂಡಹೆಂಡಿರನತ್ಯುಗ್ರದಿ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್ (ಸೋಮೇಶ. ೨೯); ತನ್ನ ಸಹಜಮಲ್ಲದೆ ಪರಿದಲಂಕರಿಸಿಕೊಂಬವಳ್ಳಳ್ಳೇ ಶಿಕ್ಷಿಸಿದೊಡೆ (ಜ್ಞಮಿಭಾ. ೫-೫೭). [ಶಿಕ್ಷೆ + – ಇಸು]

ಶಿಕ್ಷೆ (ನಾ). ೧. ಕಲಿಕೆ ; ಜ್ಞಾನಾರ್ಜನೆ ; ವಿದ್ಯಾಭ್ಯಾಸ : ಆ ಸಮಯದಲಿ ಬಂದನೊಬ್ಬನು ಭೂಸುರನು ಸಕಲತೂಹಲನು ಬಹುದೇಶಪರಿಯಟಣ ಪ್ರವಾಸಾಭ್ಯಾಸ ಶಿಕ್ಷೆಯಲಿ (ಕುವಾಉ. ೧೧-೨). ೨. ತರಬೇತು ; ಶಿಕ್ಷಣ : ನೀರಿನಲ್ಲಿ ಸಂಚರಿಸುವ ಮಾನುಗಳು ಶಿಕ್ಷೆಯಿಲ್ಲದೆಯಿದ್ದಾಗ್ಯೂ . . . ವಿಚಿತ್ರಗಮನಗಳಿಂದ ಪ್ರಕಾಶಿಸುವವು (ಅರ್ಥಮಾ. ೪೭) ; ಒಳ್ಳೆಯ ಶಿಕ್ಷೆಯಲ್ಲಿ ಬೆಳೆದವನಂತೆ ನಡೆದುಕೊಳ್ಳುತ್ತಾನೆ (ಪೂಪಕ್ಷೆ. ೧). ೩. ದಂಡನೆ; ದಂಡ : ''ಶಿಕ್ಷೆ, ಪಡೆ – ಈ ೨ ದಂಡಮೆಂಬುದು'' (ಹಲಾಯು. ೧೩೭-೩೬) ; ಸಾಕ್ಷಶೀಸನು ನಾಸ್ತಿಕನೆಂದು ನಿರ್ಣಯಿಸಿ, ವಿಷ ಕುಡಿಸಿ ಅವನನ್ನು ಕೊಲ್ಲಬೇಕೆಂಬ ಶಿಕ್ಷೆಯನ್ನು ವಿಧಿಸಿದರು (ಮುಂಬಯಿ. ೪-೧೦೭) ; ನಾಲ್ಕುವರ್ಷದ ಹುಡುಗ ಕಳ್ಳತನ ಮಾಡಿದರೆ ಅವನಿಗೆ ಯಾವ ಶಿಕ್ಷೆಯೂ ಇಲ್ಲ (ಜೀವಾತ್ಮ. ೨೬೫). ೪. (ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ ಎಂಬ ಆರುಬಗೆಯ ವೇದಾಂಗಗಳಲ್ಲಿ ಒಂದು ; ಶಿಕ್ಷಾಶಾಸ್ತ್ರ : ''ವೇದಾಂಗಷಟ್ಕಯಂ ಶಿಕ್ಷಾದಿಗಳುಪನಿಷದಮಂಬುದದು ವೇದಾಂತ'' (ವಸ್ತುಕೋ. ೩-೧೨) ; ಶಿಕ್ಷೆಯೇ ಉದಾತ್ತ ಅನುದಾತ್ತ ಸ್ವರಿತ ಪ್ರಚಯಗಳೆಂಬ ಚತುರ್ವಿಧಸ್ವರಕರಣಪೂರ್ವಕಮಾದ ಪದಪಾಳಕ್ರಮದಿಂ ವೇದಾಧ್ಯಯನಾದಿಕವ ಶಿಕ್ಷಿಸುವುದು (ವೀವೇ. ೪).

ಶಿಕ್ಷೆಕೊಡು = ದಂಡನೆಯನ್ನು ನೀಡು ; ಶಿಕ್ಷಿಸು : ತಪ್ಪು ಮಾಡಿದ್ದಕ್ಕೆ ಶಿಕ್ಷೆ ಕೊಡುವೆನೆಂಬ ಭಯದಿಂದಲೋ ಏನೋ ಎಲ್ಲರೂ ನಾನಲ್ಲ ತಾನಲ್ಲ ಎಂದುಬಿಟ್ಟರು (ಪಪುಪೂ. ೨೦೬). **ಶಿಕ್ಷೆವಿಧಿಸು** = ಶಿಕ್ಷೆಕೊಡು : ಅವನಿಗೆ ಗಲ್ಲಿಗೆತ್ತಬೇಕೆಂದು ಶಿಕ್ಷೆವಿಧಿಸಿರುವುದರಿಂದ, ಅವನಿದ್ದರೂ ಸತ್ತ ಕೂಟವೇ (ಕಲನ. ೧೭೩). [ಸಂ. ಶಿಕ್ಷಾ]

ಶಿಕ್ಷೆಗೆಡು (ಕ್ರಿ). ಅಂಕೆಯಿಲ್ಲವಾಗು ; ದಂಡನೆಗೆಡು : ಇನಿತುಂ ಮೋಹಂ . . . ಅಪ್ಪುದಱಿಂದನಿಯತಿಕೆಯಿಂದೆ ನಡೆಸಲ್ಕಿನಿತಾದುದು ಶಿಕ್ಷೆಗೆಟ್ಟ ಕಾರಣದಿಂದಂ (ಧರ್ಮಾಮೃ. ೨-೮೧). [ಶಿಕ್ಷೆ + ಕೆಡು]

ಶಿಕ್ಷೆಗೆಯ್ (ಕ್ರಿ). ಕಲಿಸು ; ಬೋಧಿಸು : ತಾನುಮಾ ಮಾರ್ಗದೊಳತಿನಿಷ್ಠುರತೆಯಿಂ ಶಿಕ್ಷೆಗೆಯ್ಯುತ್ತುಂ (ಸುಕುಮಾ. ೨-೫೬ವ) ; ಆಚಾರ್ಯಂ ಶಿಷ್ಯನ ಶೀಲಾಚಾರಮನಱಿತು ಶಿಕ್ಷೆಗೆಯ್ಯುದು (ಅಶ್ವಶಾ. ೧೦-೧). [ಶಿಕ್ಷೆ + ಕೆಯ್]

ಶಿಕ್ಷೋಪಕರಣ (ನಾ). ಪಳಗಿಸುವ ಉಪಕರಣ,– ಸಲಕರಣೆ : ಪಿಂಡಾನೆಗಳೊಂದುಗೂಡಿ ಶಿಕ್ಷೋಪಕರಣಂಬೆರಸು ಸುಳಿದೇಱುವ ಸುತ್ತಂ ಮೆಟ್ಟಿಸುವ ವಿಸಟಂಬರಿವ . . . ಆ ಧೋರಣಾರ್ನರೆನೆರೆದು (ರಾಜಶೇ. ೬-೧೧ ವ). [ಸಂ.]

ಶಿಖಂಡ (ನಾ). ೧. ತಲೆಯ ಎರಡೂ ಪಕ್ಕಗಳಲ್ಲಿ ಬಿಟ್ಟಿರುವ ಕೂದಲು ; ಚಂಡಿಕೆ ; ಶಿಖೆ : "ಬಾಳಕರ ಶಿಖೆ ಶಿಖಂಡಂ ಚೂಳಾಖ್ಯಂ ಕಾಕಪಕ್ಷ ಮೆಂಬುದದಕ್ಕುಂ" (ವಸ್ತುಕೋ. ೭೦-೨೧) ; ಚಂಚದ್ಧ್ರಮರಚಲಶಿಖಂಡಂ . . . ಲೀಲೆಯಿಂ ಬಾಲಕನೆನೆ ಸುಳಿದಂ ಸ್ವೈರಚಾರಂ ಸಮೀರಂ (ರಾಜಶೇ. ೧೧-೭೭). ೨. ತಲೆ ; ಶಿರಸ್ಸು: ಸ್ವಸ್ತಿಸಕಲರಾಜಶಿಖಂಡಶೇಖರಾರ್ಚಿತಚರಣಾರವಿಂದನುಂ . . . ಎನಿಸಿದ ಶ್ರೀಮತ್ತಾರಾಪೀಡದೇವಂ . . . ಕಾರ್ಯಮಂ ಬೆಸಸಿರ್ಪಂ (ಕಾದಂಬ. ೨೫೮). ೩. ನವಿಲು ಮುಂತಾದ ಪಕ್ಷಿಗಳ ತಲೆಯ ಮೇಲೆ ಇರುವ ತುರಾಯಿ ; ಕೊಟ್ಟು. ೪. ನವಿಲುಗರಿ : "ಪ್ರಚಳಾಕಃ, ಶಿಖಂಡಃ — ಈ ೨ ಹೀಲಿ" (ಹಲಾಯು. ೪೧-೮೯).

[ಸಂ.]

ಶಿಖಂಡಕ (ನಾ). = ಶಿಖಂಡ ೧ : "ಶಿಖಂಡಕಂ ಚಂಡಿಕೆಯದು" (ಮಂಗರಾ. ೯೪-೬); ತೋರ ಮಾಮಿಡಿ ಶಿಖಂಡಕದಂತಿರೆ ಮಧ್ಯದಲ್ಲಿ ಕಂಗೊಳಿಪಳಿವಿಂಡು ತದ್ರಜಮ ಮೃದ್ರಜದಂತಿರೆ . . . ಮಾಮರಮದೊಪ್ಪುತು ಮಾರನ ಮಲ್ಲನಂತೆವೋಲ್ (ರಾಜಶೇ. ೯-೫೬). [ಸಂ.]

ಶಿಖಂಡಮಂಡನ (ನಾ). ಮುಡಿಯಲ್ಲಿ ಧರಿಸುವ ರತ್ನ ; ಚೂಡಾಮಣಿ : ಲೋಕೈಕಮಿತ್ರಂ . . . ಇಳಾವಿಳಾಸಿನಿಯ ಶಿಖಂಡಮಂಡನವಂತರ್ದ ಶಿಖಂಡಮೆಂಬ ಮಂಡಳದೊಳಗೆ ಬರೆವರೆ (ಪುಷ್ಪಪು. ೫-೫೯ ವ). [ಸಂ.]

ಶಿಖಂಡಮಣಿ (ನಾ). = ಶಿಖಂಡಮಂಡನ : ತನಗೆ ಪೊಡೆವಟ್ಟ ವಜ್ರಬಾಹುವಂ . . . ಆತ್ಮೀಯಶಿಖಂಡ [ಪಾಠಾಂ. ಶಿಖಂಡಮಂಡನ, ಶಿಖಂಡಿತ] ಮಣಿಮರೀಚಿಗಳಿಂ ನಿಜ ಪದಕಮಲದೊಡನೆ ವಸುಂಧರೆಯುಮನಳಂಕರಿಸಿದ ವಸುಂಧರೆಯುಮಂ ನಿಜಾನುಜೆಯಂ ಪರಸಿ (ಆದಿಪು. ೪-೨೪ ವ) ; ಕ್ಷಿತಿಗೆಯ್ದೆನ್ನ ಗುಣಂ ಶಿಖಂಡಮಣಿಯಾಯ್ತೆನ್ನನ್ವಯಂ ಲೋಕಪೂಜಿತಮಾಯ್ತು (ಪುಷ್ಪಪು. ೧೪-೧೨). [ಸಂ.]

ಶಿಖಂಡರತ್ನ (ನಾ). = ಶಿಖಂಡಮಂಡನ : ಆಸ್ಥಾನಮಂಡಪಮಂಡನೀಭೂತ ಮಣಿಮಯಾಸನ ಪ್ರಾಚ್ಯಾಚಲಶಿಖಂಡರತ್ನಮಾಗಿರ್ದ ಕುಮಾರನಂ ಸಾರೆವಂದು . . . ಕುಳ್ಳಿರ್ದು (ಆದಿಪು. ೬-೮ ವ). [ಸಂ.]

ಶಿಖಂಡಿ (ಗು). ೧. ಜುಟ್ಟನ್ನು ಹೊಂದಿರುವ ; ಚಂಡಿಕೆಯುಳ್ಳ. (ನಾ). ೨. ಶಿಖಂಡವುಳ್ಳ ವ್ಯಕ್ತಿ ; ಜಟಾಧಾರಿ : ಹೇ ಶಿಖಂಡಿ ಹೇ ತ್ರಿದಂಡಿ ನಿನ್ನೊಡ ಚಾಮುಂಡೀತಾಂಡವಕ್ಕೆ ಹಾಸ್ಯಲಾಸ್ಯ ಬೆರಸುವ ರಣಚಂಡೀ (ಅರಳಿ. ೪೦೫-೫). ೩. ನವಿಲು ; ಮಯೂರ : ಶಿಖಂಡಿಕುಲಸ್ವನಮಿತ್ರಲಿತ್ತ ಕೇಸರಿರವಮಿತ್ತಲಿತ್ತ ಮೆನುತಿರ್ಪ ರವಂ ನೆಗೆದತ್ತು ಸುತ್ತಲುಂ (ಕಾದಂಪೂ. ೧೫೭) ; ಶಿಖಂಡಿ ತಾಂಡವಕ್ಕಲಸಿದುದು . . . ಶರತ್ಪ್ರಥಮಪ್ರವೇಶದೊಳ್ (ಜಾಪಿ. ೪-೩೭). ೪. ಒಂದು ಬಗೆಯ ಹಾವು : "ರಾಜಿಲಃ, ಡುಂಡುಭಃ— ೨ ಎರಡುತಲೆಗಳುಳ್ಳ ಶಿಖಂಡಿಯೆಂಬ ಸರ್ಪಭೇದದ ಹೆಸರುಗಳು" (ಸಿದ್ಧಾಂ. ೭೨). ೫. ಸಪ್ತರ್ಷಿಗಳಲ್ಲಿ ಒಬ್ಬನ ಹೆಸರು. ೬. ದ್ರುಪದರಾಜನ ಒಬ್ಬ ಮಗ ; ☞ ಕಾಶಿರಾಜನ ಮಗಳಾದ ಅಂಬೆಯು ಭೀಷ್ಮನ ಮೇಲಿನ ಸೇಡುತೀರಿಸಿಕೊಳ್ಳಲು ಶಿವನನ್ನು ಕುರಿತು ತಪಸ್ಸು ಮಾಡಿ ಶಿಖಂಡಿ ಎಂಬ ಹೆಸರಿನಿಂದ ದ್ರುಪದರಾಜನ ಮಗನಾಗಿ ಜನಿಸಿದಳೆಂದು ಮಹಾಭಾರತದಲ್ಲಿ ಹೇಳಿದೆ : ಕೋಲು ಪಾರ್ಥನವಿವು ಶಿಖಂಡಿಯ ಕೋಲುಗಳು ತಾನಲ್ಲ (ಕುಮಾಧೀ. ೧೦-೯). ೭. (ಆಲಂ) ಷಂಡ ; ನಪುಂಸಕ : ನಿನಗಾಜಿರಂಗದೊಳ್ ಸಾರಥಿಯಪ್ಪೊಡಪ್ಪುದು ಶಿಖಂಡಿಯೆ ನಿನ್ನೊರೆಗುಂತೆ ಗಂಡರಾರ್ (ಪಂಪಭಾ. ೮-೯೭) ; ಬೇಕಾದರೆ ಅವಳು ತನ್ನನ್ನು ಶಿಖಂಡಿಯೆಂದು ಭಾವಿಸಲಿ (ಭ್ರಮಾನ. ೧೯) ; ನಪುಂಸಕನಂತೆ ಮಾತನಾಡುವ ನೀನು ಶಿಖಂಡಿಯೇ ಆಗಿಹೋಗು (ಕೊನಷ್ಟ. ೨೦೮). [ಸಂ. ಶಿಖಂಡಿನ್]

ಶಿಖಂಡಿಕೆ (ನಾ). = ಶಿಖಂಡ ೧ : "ಶಿಖಾ, ಕಾಕಪಕ್ಷ, ಶಿಖಂಡಿಕಾ — ಈ ೩ ಚಂಡಿಕೆ" (ಹಲಾಯು. ೮೮-೩೭೮). [ಸಂ. ಶಿಖಂಡಿಕಾ]

ಶಿಖಂಡಿತಾಂಡವ (ನಾ). ನವಿಲಿನ ಕುಣಿತ ; ಜಾಗರ : ಉತ್ಕಶಿಖಂಡಿ ತಾಂಡವಮನೋಹರಮುಜ್ವಲರತ್ನರಾಜಿರಾಜತ್ಕಟಕಂ . . . ಒಪ್ಪುಗುಂ ಕುಮುದ ಪಾಂಡುರಮಾ ವಿಜಯಾರ್ಧಪರ್ವತಂ (ಆದಿಪು. ೧-೬೩). [ಸಂ.]

ಶಿಖರ (ನಾ). ೧. ತುದಿ ; ಅಗ್ರಭಾಗ. ೨. ಬೆಟ್ಟದ ತುದಿ, — ಅಗ್ರಭಾಗ : ಶಿರಮನಿನರಶ್ಮಿಪದತಳಸರೋಜಮಂ ತಪನತಪ್ತಶಿಖರಾಗ್ನಿ . . . ಸುಡೆ (ಸುಕುಮಾ. ೪-೧೪) ; ಬೆಟ್ಟಗಳ ಗುಲಾಬಿಬಣ್ಣದ ಶಿಖರಗಳು ಉದಯಿಸುತ್ತಿದ್ದ ಸೂರ್ಯನ ಕಾಂತಿಯಲ್ಲಿ ಪ್ರಕಾಶಿಸುತ್ತಿದ್ದವು (ಮರಿಸಾ. ೧೮). ೩. ಮರದ ತುದಿ : "ಪ್ರಾಗ್ರಂ (ತು), ಶಿಖರಂ, ಶಿರಃ - ಈ ೩ ಮರದ ತುದಿ" (ಹಲಾಯು. ೩೦-೨೬). ೪. ದೇವಾಲಯದ ಮಹಾದ್ವಾರದ ಮೇಲಿನ ಗೋಪುರ : ಪಲ್ಲವರ ಮತ್ತು ಚೋಳರ ದೇವಾಲಯಗಳ ಶಿಖರಗಳು ದ್ರಾವಿಡನಮೂನೆಯ ಮುಖ್ಯಉದಾಹರಣೆಗಳು (ಭಾರದ. ೪೯೨). ೫. [ನಾಟ್ಯ] ಅಸಂಯುತಹಸ್ತಮುದ್ರೆಗಳಲ್ಲಿ ಒಂದು ಬಗೆ ; ☞ "ಮುಷ್ಟಿಹಸ್ತದಲ್ಲಿ ಹೆಬ್ಬೆರಳನ್ನು ಮೇಲಕ್ಕೆತ್ತುವುದು" (ಲಾಸ್ಯರಂ. ೨೨೯ ಗದ್ಯಾನುವಾದ); ಧರಿಸಲ್ ಮುಷ್ಟಿಸ್ವಸ್ತಿಕಕರಮೆಂದುಂ ನೃತ್ತಹಸ್ತಮಕ್ಕುಂ ಮತ್ತಂ ಪಿರಿದುಂ ಸ್ವಸ್ತಿಕವೇಳೆಯೊಳೆರಡುಂ ಶಿಖರಾಖ್ಯ ಹಸ್ತಮಕ್ಕುಂ ಕಪಿತ್ಥಂ (ಲಾಸ್ಯರಂ. ೨-೭೨); ನಾಟ್ಯಶಾಸ್ತ್ರದಲ್ಲಿ ಹೇಳಿರುವ ಅಸಂಯುತಹಸ್ತಗಳು ಯಾವುವೆಂದರೆ — ೧. ಪತಾಕ . . . ೮. ಶಿಖರ (ಆಧಾನ್ಯ. ೪೭). [ಸಂ.]

ಶಿಖರಣೆ 'ಸೀಕರಣೆ' ನೋ.

ಶಿಖರಿ (ಗು). ೧. ಶಿಖರವನ್ನುಳ್ಳ ; ತುದಿಯನ್ನು ಹೊಂದಿರುವ. (ನಾ). ೨. ಬೆಟ್ಟ ; ಪರ್ವತ : ಸಮರ್ಕಕೇರುವಿನ ಭುಜಶಿಖರಂಗಳ್ ಕುಲಶಿಖರಿ ಶಿಖರಂಗಳಂತಾದುವು (ಪಂಪಭಾ. ೨-೩೯ ವ) ; ದಿನಲಕ್ಷ್ಮೀಕಾಂತೆ . . . ಎಯ್ತರ್ಪಲ್ಲಿ ಕಾಲಿಂ ನವಮಣಿಮಯಮಂಜೀರಕಂ ನುಣ್ಪುತಂ ತೀವಿ ನಿಜಪ್ರದ್ಯೋತದಿಂ ಪಶ್ಚಿಮಶಿಖರಿಶಿರೋಭಾಗದೊಳ್ ಬಿಟ್ಟುದೆಂಬಂತಿನಬಿಂಬಂ ರಂಜಿಸಿತ್ತು (ಕಾದಂಪೂ. ೫೦೭). ೩. ಮರ ; ವೃಕ್ಷ : "ವೃಕ್ಷಃ, ಅಂಘ್ರಿಪಃ, ಕ್ಷಿತಿರುಹಃ, ಶಿಖರೀ . . . ದ್ರುಮಃ, ಪಾದಪಃ — ಈ ೧೯ ಮರಂ" (ಹಲಾಯು. ೨೯-೨೬). ೪. ತಲೆಯ ಮೇಲೆ ಕೊಟ್ಟುಳ್ಳ ಒಂದು ಬಗೆಯ ಪಕ್ಷಿ ; ಕೊಟ್ಟುಕ : "ಶಿಖರಿಯೆನೆ ಕೊಟ್ಟುಕಂ" (ಮಂಗರಾ. ೫೧-೬). ೫. ಒಂದು ಬಗೆಯ ಗಿಡ ; ಅಪಾಮಾರ್ಗ ; ಉತ್ತರಣೆ : "ಉತ್ತರಣೆ ಶಿಖರಿಯಪಾಮಾರ್ಗಮೆನಿಸಿಕ್ಕು" (ಮಂಗರಾ. ೩೮-೨೬). ೬. ಮುಚ್ಚುಳ : "ಉದ್ಭಟಂ ಕರಬೋನಮಕ್ಕಡಱ ಮುಚ್ಚಳಂ ಶಿಖರಿಯಕ್ಕು" (ಮಂಗರಾ. ೬೨-೨೪). ೭. ಕಾಡು ; ಅರಣ್ಯ. ೮. ಬಂಗಾರ ; ಚಿನ್ನ : "ಅರಣ್ಯ ಕಾಂಚನ ಕುಜ ಪರ್ವತಂ ಶಿಖರಿಯಕ್ಕುಂ" (ನಾನಾರ. ೬೬). ೯. ಒಂದು ಬಗೆಯ ಮಲ್ಲಿಗೆ. ೧೦. ಗೋಂದು ; ರಾಳ. ೧೧. ಒಂದು ಬಗೆಯ ಜಿಂಕೆ : ಕೋಡಗಂ ಶಿಖರಿ ಪೇರುಡು ಮುಂಗುಲಿ . . . ಮೊದಲಾದನೇಕಮೃಗಮಿರ್ಪವು ತದ್ಗಹನಾಂತರಾಳದೊಳ್ (ತ್ರಿಪುವಿ. ೨೭-೨೩).

[ಸಂ. ಶಿಖರಿನ್]

ಶಿಖರಿಣಿ (ನಾ). ೧. ಶ್ರೇಷ್ಠಳಾದ ಹೆಂಗಸು ; ಉತ್ತಮ ಸ್ತ್ರೀ. ೨. ಸಕ್ಕರೆ, ಮೊಸರು ಮುಂತಾದುವುಗಳನ್ನು ಬೆರಸಿ ತಯಾರಿಸುವ ಒಂದು ಬಗೆಯ ಸಿಹಿಯಾದ ದ್ರವಪದಾರ್ಥ ; ಸೀಕರಣೆ : ಶಿಖರಿಣಿ ಲವಂಗಂ ನಾಗೋರ್ವೀರುಹ ಕುಸುಮಮಲ್ಲಂ ಮೆಚಸು ಸ್ಕಂಧವಂ ಬೆಲ್ಲಂ ಪತ್ರಂ ತ್ರುಟಿಯಿನಿತುಮಂ ಕೂಡಿ ಮೊಸರೊಳ್ ಶಿವಾಲಾಕ್ಷಾಕ್ಷೌದ್ರೇಕ್ಷುರಸಮಿವಱಂ ಧೂಪಿಸಿ ಹಿಮಾಂಶುವಿಂದಂ ವೇಧಂಗೆಯ್ದೆ ಶಿಖರಿಣಿಯಕ್ಕುಂ ಪೆಸರೊಳ್ (ಲೋಕೋಪ. ೮-೫೪) ; ಇದು ಮಜ್ಜಿಗೆ ತಾನಿದು ಶಿಖರಿಣಿಯೆನುತುಂ ತಿಂಬಿದಿಂಬಿ ತಂದೆಱೆದರಬಲೆಯರ್ ಸಿರ್ಪುಗಳಿಂ (ಸುಕುಮಾ. ೧೧-೩೧); ಹುಳಿದಾಳಿದ ಸಾಱು ಶಿಖರಿಣಿ ಬಹುಕೂಟದಳೆದ ನಿಂಬೆಯ ಹಣ್ಣ ಸವಿದು ಗಳಲನೆ ಬಡಿಸಲೊಗ್ಗರಣೆಯಿಂಗಿನ ಕಂಪು ಸುಳಿದುದು ಬಹಿಃಸ್ಥಳಕೆ (ಮೋಹಿಶ. ೩-೫೩). ೩. ನಾಭಿಯಿಂದ ಎದೆಯವರೆಗಿರುವ ಕೂದಲಿನ ಸಾಲು ; ಬಾಸೆ. ೪. ಒಂದು ಬಗೆಯ ದ್ರಾಕ್ಷಿ. ೫. ಒಂದು ಬಗೆಯ ಸಸ್ಯ. ೬. ಒಂದು ಬಗೆಯ ಮಲ್ಲಿಗೆ. ೭. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ, ಹದಿನೇಳು ಅಕ್ಷರಗಳುಳ್ಳ ಅತ್ಯಷ್ಟಿಯೆಂಬ ಛಂದಸ್ಸಿನ ಒಂದು ವೃತ್ತ : ವನಂ ಧಾತ್ರೀಚಕ್ರಂ ಸುರಪವನಂ ಶೀತಕರನಬ್ಜನಾಭಂ ಭೂತೇಶಂ ನೆಲಸಿ ನಿಲೆ ವಿಶ್ರಾಂತಿಯವಱೊಳ್ ಮನಂಗೊಂಡಾಱೆಂಬೀಯೆಡೆಯೊಳಿರೆ ಕರ್ಣಾಮೃತರಸಂ ಜನಾನಂದಂ ಛಂದಂ ಶಿಖರಿಣಿ ಮದೇಭೇಂದ್ರಗಮನೇ (ಛಂದೋಬು. ೨-೧೬೫) ; ಯಮಂ ನಂ ಸಂ ತೋರಲ್ ಶಿಖರಿಣಿಯದೊಂದಲ್ ಭಲಗಮುಂ (ಕೃಷಿಪಿ. ೮೫). [ಸಂ. ಶಿಖರಿಣೀ]

ಶಿಖರಿದಶನ (ನಾ). ದಾಳಿಂಬೆಯ ಬೀಜದಂತೆ ಹೊಳೆಯುವ, ಚೂಪಾಗಿರುವ ಹಲ್ಲು : ಶಿಖರಿದಶನದ್ಯುತಿಯ ಬೆಳ್ಳಗೆಯ ಸೂಸಲೆನೆ . . . ತಿಳಿನೀರ ತುಂತುರ್ವನಿಗಳೆಸೆ ದಿರ್ದುವು (ಜೈಮಿಭಾ. ೩೦-೧೧). [ಸಂ.]

ಶಿಖರಿದಾವರೆ (ನಾ). ಒಂದು ಬಗೆಯ ತಾವರೆ ; ಬೆಟ್ಟದಾವರೆ : ಸುರಗಿ ಪುನ್ನಾಗ ತಮಾಲ ಕುರವಕ ಶಿಖರಿದಾವರೆ . . . ನಿನ್ನ ಬರವ ಪಾರ್ದವು (ಭೈರಸೂ. I. ೨೬೬).

[ಶಿಖರಿ + ತಾವರೆ (< ತಾಮರೆ)]

ಶಿಖರಿಶಿಖರ (ನಾ). ಬೆಟ್ಟದ ಅಗ್ರಭಾಗ, – ತುದಿ : ಅಂತು ವೃಷಭೇಶ್ವರಂ ತ್ರಿಲೋಕಶಿಖರಿಶಿಖರಶೇಖರಾಯಮಾನನುಂ ಕ್ರಮೋನ್ನತನುಮಾಗಿ . . . ನೆಲಸಿರ್ದಂ (ಆದಿಪು. ೧೬-೫೧ ವ) ; ಆ ಶಿಖರಿಶಿಖರಮೆ ಕಳನಾಗಿಯುಂ ವನದೇವತಾಪೇಟಕಮೆ ನೋಟಕರಾಗಿಯುಂ (ಚಂದ್ರಪು. ೫-೭೭ ವ). [ಸಂ.]

ಶಿಖಸ್ತು 'ಶಿಕಸ್ತು' ನೋ.

ಶಿಖಾ 'ಸಿಕ್ಕಾ' ನೋ.

ಶಿಖಾಕಲಾಪ, ಶಿಖಾಕಳಾಪ (ನಾ). ಉರಿಯ ಗುಂಪು ; ಜ್ವಾಲೆಯ ಸಮೂಹ : ಅಸಹ್ಯಶೋಕಪಾವಕಶಿಖಾಕಲಾಪಸಂತಪ್ತಮಾನಮಾನಸನುಂ ಭಗ್ನಮನೋರಥನುಮಾಗಿ ಭಗೀರಥಂ ಬಂದು (ಅಜಿಪು. ೧೦-೩೧ ವ). **ಶಿಖಾಕಳಾಪ** : ಆತಂಗೆ ತದುತ್ಥಿತಶಿಖಿಶಿಖಾಕಳಾಪಪ್ರಶಮನದರ್ಶನದಿಂದೊಂದು ತಿಂಗಳಾಯುಷ್ಯಂ (ಆದಿಪು. ೨-೪೩ ವ) ; ಉರಿದುದು ರಾಯರಾಯಪುರವಾ ಪುರವಹ್ನಿಶಿಖಾಕಳಾಪವಾ ಪರಿದುವೆ ಕಾಂಚಿಯತ್ತಲೆನುತಂ (ಎಕ. V, ಬೇಲೂರು. ೧೭-೪೯ ; 1136). [ಸಂ.]

ಶಿಖಾಕಳಾಪ 'ಶಿಖಾಕಲಾಪ' ನೋ.

ಶಿಖಾಚಕ್ರ (ನಾ). "ಮಸ್ತಕದಲ್ಲಿರುವ ಚಕ್ರ" (ಅಖಂಡೇ. ಕೋಶ) : ಎನ್ನ ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ (ಮಡಿಮಾ. ೩೭-೫೩) ; ಎನ್ನ ಶಿಖಾಚಕ್ರದಲ್ಲಿ ಅಖಂಡಬೆಳಗನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು (ಅಖಂಡೇ. ೨೩೧-೮೨). [ಸಂ.]

ಶಿಖಾಮಣಿ (ನಾ). ೧. ಮುಡಿಯಲ್ಲಿ ಧರಿಸುವ ಆಭರಣ ; ಚೂಡಾಮಣಿ : ಉಷ್ಣೀಷಪಟ್ಟಂ ಶಿಖಾಮಣಿಯಿಂ ಕಂಧರಮಾರದಿಂ ನೊಸಲುದಾರಾಶ್ವತ್ಥಪತ್ರಾಂಕದಿಂ ಅಲಂಕೃತನಾಗಿಯುಂ (ಶಾಂತಿಪು. ೧೦-೫೮). ೨. ಶ್ರೇಷ್ಠ ವ್ಯಕ್ತಿ ಅಥವಾ ವಸ್ತು : ಶ್ರೀ ಮಜ್ಜಿನಭವನಮನಖಿಲಾಮರನರಖಚರಚಕ್ರವರ್ತಿಸ್ತುತಮಂ ಮೂಮೆ ಬಲಗೊಂಡು ಭವ್ಯಶಿಖಾಮಣಿಯೆನಿಸಿದ ಸರಸ್ವತೀ ಮಣಿಹಾರಂ (ಆದಿಪು. ೪-೧) ; ಶ್ರೀಮತ್ಸಮಸ್ತಲೋಕ ಶಿಖಾಮಣಿ (ಜಿನಾಲೆ. ೧-೧). [ಸಂ.]

ಶಿಖಾಮೊಹರು (ನಾ). ನಿರೂಪಗಳಿಗೆ ಅಧಿಕಾರಯುಕ್ತವಾಗಿ ಒತ್ತಲ್ಪಡುತ್ತಿದ್ದ ರಾಜಚಿಹ್ನೆಯುಳ್ಳ ಮುದ್ರೆ : ಶಿಖಾಮೊಹರು ರುಜುವಿನಿಂದ ಬರೆದುಕೊಟ್ಟ ಶಾಸನ (ಚಿತ್ರಪಾ. ೧೦) ; ರಾಜಚಿಹ್ನೆಗಳಾದ ಪಟ್ಟದ ಕತ್ತಿ ಮತ್ತು ಶಿಖಾಮೊಹರುಗಳನ್ನು ಆ ಚಾಮರಾಜರಿಂದ ತೆಗೆದುಕೋ (ಒಡೆಕ. ೫೯). [← ಮರಾ. ಶಿಕ್ಕಾ ಮೋಹೋರ್]

ಶಿಖಾವಟ್ಟು (ನಾ). ಹೇಳಿಕೊಡುವುದು ; ಬೋಧನೆ : ನಿಜವಾಗಿ ಹೇಳು, ನಂಜಪ್ಪನವರು ನನ್ನ ರುಜು ಹಾಕಿ, ನಿನಗೆ ಶಿಖಾವಟ್ಟು ಮಾಡಲಿಲ್ಲವೇ ? (ಕೆಲನೆ. ೧೬೫).

[← ಪಾರ. ಶಕಾವತ್ = ದೂರು ; ಅರ, ಹಿಂ. ಶಿಕಾಯತ್ = ನಿಂದೆ, ದೂರು]

ಶಿಖಾವಲ, ಶಿಖಾವಳ (ಗು). ೧. ಜುಟ್ಟನ್ನು ಹೊಂದಿರುವ ; ಶಿಖೆಯಿರುವ. (ನಾ). ೨. ನವಿಲು : "ಮಯೂರಃ, ಬರ್ಹಿಣಃ . . . ಶಿಖಾವಲಃ [ಪಾಠಾಂ. ಳಃ], ಶಿಖೀ, ಕೇಕಿ, ಮೇಘನಾದಾನುಲಾಸೀ – ೯ ನೌಲಿನ ಹೆಸರುಗಳು" (ಸಿದ್ಧಾಂತಿ. ೧೬೨). **ಶಿಖಾವಳಃ** ೨. "ಕೇಕೀ, ಶಿಖೀ, ಶಿಖಂಡೀ . . ಶಿಖಾವಳಃ, ಶ್ಯಾಮಕಂಠ (:) – ಈ ೧೦ ನವಿಲ್" (ಹಲಾಯು. ೪೦-೮೮). [ಸಂ.]

ಶಿಖಾವಳ 'ಶಿಖಾವಲ' ನೋ.

ಶಿಖಾವುತ್ರ (ನಾ). ಮೊಹರುಸಹಿತವಾದ ಜವಾಬು, – ಉತ್ತರ : ದೇವರಾಜೈಯ್ಯನವರ ಬಳಿಗೆ ಅರ್ಜಿ ಬರಸಲಾಗಿ ದಳವಾಯಿ ದೇವರಾಜೈಯ್ಯನವರು ಅಪ್ಪಣೆ ಕೊಟ ಶಿಖಾವುತ್ರ ಮಲ್ಲರಾಜೈಯ್ಯನವರಿಗೆ ಬರಶಿದ ವಿವರ (ಹೈದರ. ೨೨).

[ಶಿಖಾ (< ಸಿಕ್ಕಾ) + < ಉತ್ತರ]

ಶಿಖಾಸರ (ನಾ). ಪಟ್ಟದ ಚಿಹ್ನೆಯಾಗಿ ಧರಿಸುವ ರಾಜಮುದ್ರೆಯಿರುವ ಹಾರ : ಪಟ್ಟದಲ್ಲಿ ಚಿಕ್ಕಕ್ರಿಷ್ಣರಾಜವಡೇರಿಗೆ ಶಿಖಾಸರಾ ಹಾಕಿ ದೊಡ್ಡ ವೋಲಗವಾಗಿ (ಹೈದರ. ೩೭) ; ಈ ದಿನ ರಾತ್ರಿಯಲ್ಲಿ ಕಟ್ಟಳೆಯ ಮೇರೆಗೆ ಓಲಗವು ಬೆಳೆದ ನಂತರ . . . ಶಿಖಾಸರವನ್ನೂ ದಪ್ಪರವನ್ನೂ ಸಹ ಪೂಜಿಸಿ (ಮಹಾವಂ. I. ೩೮) ; ನಿನ್ನನ್ನಾಳುವ ಮಹಾರಾಜನಿಗೆ ಮೇಲಾಳ್ತನದ ಮುದ್ರೆಯ ಶಿಖಾಸರವಾಗಿರುವ ಮಹತ್ಕರ್ತವ್ಯ ಭಾರಗಳ ಈ ಹಳೆಯ ಪಯ್ಯದವರ ಮಹಾಸಭೆಯ ಸಭಾಸನ್ದರ್ಭದಲ್ಲಿ ಬಾಯ್ದೆರೆದು (ಮಂತ್ರಶ. ೭೦-೮). [ಶಿಖಾ (< ಸಿಕ್ಕಾ) + ಸರ್ಪ]

ಶಿಖಾಸೇವೆ (ನಾ). ಬೆಂಕಿ ಕಾಯಿಸಿಕೊಳ್ಳುವುದು : ಕಳಿದರೀ ಚಂಡಾಂಶು ವಂಶೋಜ್ವಲರು ಬಳಿಕಾ ಹಿಮಸಮಯವನು . . . ತಳಿರ ತಗಡಿನ ಮನೆಗಳಲಿ ತಳಿಗಳ ಶಿಖಾಸೇವೆಯಲಿ (ತೊರರಾ. ೩-೨-೫). [ಸಂ. ಶಿಖಾಸೇವಾ]

ಶಿಖಾಸ್ರಜ (ನಾ). ಮುಡಿಗೆ ಧರಿಸುವ ಹೂವಿನ ದಂಡೆ : ಸುರುಚಿರಕುಂದಬೃಂದದ ಶಿಖಾಸ್ರಜಮೆಂಬಿವನಬ್ಜಸೂತ್ರದಿಂ ವಿರಚಿಪ ಮಾಲೆಗಾರ್ತಿಯರ ಮಂತಣಮೊಪ್ಪುಗುಂ (ರಾಜಶೇ. ೨-೧೦೪). [ಸಂ. ಶಿಖಾಸ್ರಜ್]

ಶಿಖಿ (ಗು). ೧. ತುದಿಯಿರುವ. ೨. ಜುಟ್ಟುಳ್ಳ ; ಚಂಡಿಕೆಯುಳ್ಳ. (ನಾ). ೩. ಜುಟ್ಟು ; ಚಂಡಿಕೆ : "ಕಾಕಪಕ್ಷಂ ಶಿಖಿ ಶಿಖಂಡಕಂ ಚಂಡಿಕೆಯದು" (ಮಂಗರಾ. ೯೪-೬) ; ಈ ತೀರ್ಥವು ವಿರಾಟ್ಪುರುಷನ ಶಿಖಿಯ ಗಂಟಿನ ಧಾರೆಯಲ್ಲಿ ಹುಟ್ಟಿತೆನಲು (ಅರ್ಕಮಾ. ೧೦). ೪. ನವಿಲು ; ಮಯೂರ : ಶಿಖಿನಾದಭೀತ ಫಣಿವರ್ಜಿತ ಚಂದನಭೂಜರಾಜಿಯಿಂದೊದವಿದ ರಾಗದಿಂದವನಭೀಕ್ಷಿಸುತಾಂ ಚರಿಸುತ್ತಮಿರ್ಪಿನಂ (ಕಾಡಂಪು. ೭೨೨) ; ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯ ಕೇಕೆ ಕರೆವುದು (ಅರಳು. ೪೦೫-೧). ೫. ಬೆಂಕಿ ; ಅಗ್ನಿ : ಶ್ರೀದಾಳಾಮೇಲ್ಶಿಖಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ಳಲ್ಲವೊಲ್ ಸಾಲಾಮ್ಬಾಲ ತಪೋಗ್ರದಿನ್ತು ನಡದೊಂ ನೂಱೆಣ್ಬು ಸಂವತ್ಸರಂ (ಎಕ. II. ೨೨-೧ ; ಸು. 700) ; ಆತಂಗೆ ತದುತ್ಥಿತಶಿಖಿಶಿಖಾಕಳಾಪ ಪ್ರಶಮನದರ್ಶನದಿಂದೊಂದು ತಿಂಗಳಾಯುಷ್ಯಂ (ಆದಿಪು. ೨-೪೩ ವ) ; ರವಿ ಕಂದಿ ಜಲನಿಧಿ ಬತ್ತಿ ಶಿಖಿ ಹಿಮಂದಳೆದ ದಿನದೊಳು ಸತ್ಯನಿಧಿ ಹರಿಶ್ಚಂದ್ರರಾಯನ ವಾಕ್ಯದೊಳು ಹುಸಿಗಳು ಮೊಳೆಯವು (ಹಚಕಾ. ೨-೧೪) ; ಅತ್ತಲಿತ್ತಲು ಹನುಮ ತಿರುಗಲು ಮುತ್ತಿತಮರಾರಿಗಳು ಶಿಖಿಯನು ಶಲಭ ಕವಿವಂತೆ (ಕೌಶಿರಾ. ೧೧-೨೬). ೬. ಮರ ; ವೃಕ್ಷ : "ತರು ಶಾಖಿ ಪಾದಪಂ . . . ಕುಟಮನೋಕಹಂ ಶಿಖಿ ವೃಕ್ಷಂ" (ವಸ್ತುಕೋ. ೩೦-೧). ೭. ಒಂದು ಬಗೆಯ ಮರ ; ಚಿತ್ರಕ. ೮. ದ್ವಿಜ; ಬ್ರಾಹ್ಮಣ. ೯. ನವಗ್ರಹಗಳಲ್ಲಿ ಒಂದು; ಕೇತು : "ಕೇತುಃ, ಶಿಖೀ – ಈ ೨ ಕೇತುವಿನ ಪೆಸರು" (ಹಲಾಯು. ೯-೪೯). ೧೦. ಮಂಗಳಗ್ರಹ ; ಅಂಗಾರಕ. ೧೧. ಧೂಮಕೇತು ; ಬಾಲಚುಕ್ಕೆ. ೧೨. ಒಂದು ಬಗೆಯ ಲೋಹ ; ತಾಮ್ರ : "ನವಿಲೊಳಗ್ನಿಯೊಳು ತಾಂಬ್ರದೊಳು ವಕ್ರನೊಳು ವೃಕ್ಷದೊಳು ಚೂಡದೊಳು ಕೇತುವಿನೊಳಕ್ಕು ಶಿಖಿಯೆಂಬ ನಾಮಂ" (ಮಂಗರಾ. ೧೪೭-೩೯). ೧೩. ಮರದ ತುದಿ. ೧೪. ತಲೆ ; ಶಿರಸ್ಸು. ೧೫. ತಲೆಯ ರಕ್ಷಣೆಗೆ ಹಾಕಿಕೊಳ್ಳುವ ಉಕ್ಕಿನ ಟೋಪಿ. ೧೬. ಕಾಳೋರಗ; ಕೃಷ್ಣಸರ್ಪ. ೧೭. ಮೂಲಿಕೆ : "ಅಂಗಾರಕ ಪಾದಪಾಗ್ರ ನವಿಲಾನಲ ಸೀಸಕ ತಾಮ್ರ ಕೇತು ಕಾಳೋರಗ ವಿಪ್ರ ಚೂಡ ಶಿರ ಮೂಲಿಕೆಗಂ ಶಿಖಿಯೆಂಬ ವಾಚಕಂ" (ನಾನಾರ. ೪). ೧೮. ಸಿಡಿಲಿನ ಬೆಂಕಿ : "ಗೋಯೆನಲು ವಜ್ರವೆಂಬುದಕ್ಕದಱ ದನಿ ಸ್ಫೂರ್ಜಥುಯೆನಿಕ್ಕದಱ ಜ್ವಾಲೆ ಶಿಖಿ[ಪಾಠಾಂ. ಬಿ]ಯೆಂದೆನಿಕ್ಕುಂ" (ಮಂಗರಾ. ೧೩-೫). ೧೯. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ : ಶಿಖಿ, ತ್ರಿ(ತಯ), ಮೂರ್ತಿ, ಶಂಕುನೇತ್ರ, ತ್ರಿಪುರ . . . ಇಂತಿನಿತುಂ ೩ಕ್ಕೆ ಹೆಸರು (ವ್ಯವಹಾ. ೧೦-೧೬). ೨೦. [ಛಂದ] ಎರಡು ಗುರುಗಳ ನಡುವೆ ಒಂದು ಲಘು ಬರುವ ಗಣ ; ರಗಣ : ಗುರು ಮೂಱಾಗಿರೆ ಧಾತ್ರಿ ಮುಂತೆರಡು ಬಿಣ್ಬೆಂ ತೋಯಮಾದ್ಯಂತದೊಳ್ ಬರೆ ವಕ್ರಂ ಶಿಖಿಯೊಂದು ಕೊಂಕು ಕಡೆಯಿಂದಾ ಮಾರುತಂ (ಛಂದೋಂಬು. ೧-೩೮).

[ಸಂ. ಶಿಖಿನ್]

ಶಿಖಿಗ್ರೀವ (ನಾ). ೧. ನವಿಲಿನ ಕೊರಳು : (ಶಿ). ೨. ಮೈಲುತುತ್ತ : "ತುತ್ಥಾಂಜನಂ, ಶಿಖಿಗ್ರೀವಂ . . . ಕರ್ಪರೀ – ೫ ತುತ್ಥಾಂಜನದ ಪೆಸರು (ಸಿದ್ಧಾಂತಿ. ೩೦೫).

[ಸಂ.]

ಶಖಿತೆ (ನಾ). ಉರಿ; ಕಾವು : ಹಲವು ತೆರದಿ ನುಡಿ . . . ಚಲುವರಸ ನಿನ್ನನಗಲ್ದ ಚಿಂತೆಯ ಶಖಿತೆಯಿಲ್ಲ? (ಚಿಕಸ ೫೫). [ಸಂ. ಶಖಿತಾ]

ಶಖಿಧ್ವಜ (ನಾ). ೧. ನವಿಲನ್ನು ಪತಾಕೆಯಾಗುಳ್ಳವನು ; ಷಣ್ಮುಖ. ೨. ಒಬ್ಬ ರಾಜನ ಹೆಸರು ; ಮಯೂರಧ್ವಜ : ಎಲ್ಲಮಂ ವಾಚಸಿಂದಾ ಶಖಿಧ್ವಜ ನಾಡಲಾ ವಿಪ್ರನಿಂತೆಂದು ತನ್ನ ವೃತ್ತಾಂತಮಂ ವಿವರಿಸಿದನು (ಜೈಮಿಭಾ. ೨೬-೩೨). [ಸಂ.]

ಶಖಿನಯನ (ನಾ). ಅಗ್ನಿಯನ್ನು (ಮೂರನೆಯ) ಕಣ್ಣಾಗುಳ್ಳವನು ; ಶಿವ : ಇಲ್ಲಿಗರೆಗಾವುದದಿ ಶಖಿನಯನ ಕಪಿಲೇಶಲಿಂಗದಭಷೇಕಕ್ಕೆ ಭಕುತಿಯಿಂದೊರ್ವ ಪನ್ನೊಂದುಸಾಸಿರಕುಂಭ ಕ್ಷೀರವನು ಎಱೆಯಲು (ಪ್ರಾಥರಾ. ೨೧-೩). [ಸಂ.]

ಶಖಿನೇತ್ರ (ನಾ). = ಶಖಿನಯನ. [ಸಂ.]

ಶಖಿವಟ್ಟೆ (ನಾ). ಬೆಂಕಿಯ ಮಾರ್ಗ, – ವಲಯ : ಸೋಮರವಿಯಗ್ನಿಯಪ್ಪಾ ಮೂಱುನಯನದಿಂ ಕಾಮಹರ ಕಲ್ಪಿಸಿದನತುಳಬಲಕ್ಕೆದುವಂ ಆ ಮಹಾಚಕ್ರರೂಪಂ ಚಂದ್ರನಾದಿತ್ಯವಳಯ ಶಖಿವಟ್ಟೆಯೆನಲು (ಲಕಚಂ. ೧೧-೪). [ಶಖಿ + ಬಟ್ಟೆ]

ಶಖಿವಾಹನ (ನಾ). ನವಿಲನ್ನು ವಾಹನವನ್ನಾಗುಳ್ಳವನು ; ಷಣ್ಮುಖ : ''ಶರಜನ್ಮಂ ಗುಹಂ . . . ಶಖಿವಾಹನಂ ಸ್ಕಂಧಂ ಕುಮಾರಂ ಷಡಾನನಂ ವಹ್ನಿಜಂ ತಾರಕರಿಪು ಸ್ವಾಮಿ ಕಾರ್ತಿಕೇಯಂ'' (ಮಂಗರಾ. ೫-೧೬) ; ಕರೆದು ಸಿಂಹಾಸನದ ಸನ್ನಿಧಿಗೆ ಗಜಮುಖನನುರಗಕಂಕಣದ ಕರದಿಂ ಶಖಿವಾಹನನ [ಪಾಶಾ. ನವಿಲನಡರ್ದನಂ] ಶರವ ತಡವುತ್ತೆ (ಭಾವಚಂ. ೧-೩೪). [ಸಂ.]

ಶಖಿಶರ (ನಾ). ಅಗ್ನಿಮಂತ್ರವನ್ನು ಅಭಿಮಂತ್ರಿಸಿ ಬಿಡುವ ಬಾಣ ; ಆಗ್ನೇಯಾಸ್ತ್ರ : ಧನಂಜಯ ಕೊಂದರೆನ್ನಾಣೀಕೆಯರಸನ ತಂದು ಕೊಡು ಬೇಗದಲಿ ಉಪಸಂಹರಿಸು ಶಖಿಶರವ (ಕುವ್ಯಾಅ. ೧೧-೩೫). [ಸಂ.]

ಶಖೆ (ನಾ). ೧. ಮೊನಚಾದ ತುದಿ ; ಚೂಪಾದ ಭಾಗ. ೨. ಜುಟ್ಟು ; ಚಂಡಿಕೆ : ''ಶಿಖಾ, ಕಾಕಪಕ್ಷಃ, ಶಿಖಂಡಿಕಾ - ಈ ೩ ಚೆಂಡಿಕೆ'' (ಹಲಾಯು. ೮೮-೩೭೮). ೩. ನವಿಲಿನ ಜುಟ್ಟು ; ಕೊಟ್ಟು : ''ಶಿಖಾ, ಚೂಡಾ - ಈ ೨ ನವಿಲ ಕೊಟ್ಟು'' (ಹಲಾಯು. ೪೧-೮೯) ; ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯ ಕೇಕೆ ಕರವುದು (ಆರಳು. ೪೦೫-೧). ೪. ತುದಿ ; ಅಗ್ರಭಾಗ. ೫. ಮೊಲೆಯ ತೊಟ್ಟು ; ಕುಚಾಗ್ರ : ''ಕುಚಮುಖಂ, ಚೂಚಕಂ, ವೃಂತಂ, ಶಿಖಾ - ಈ ೪ ಮೊಲೆಯ ಕೊ(ತೊ)ಟ್ಟು'' (ಹಲಾಯು. ೮೭-೩೭೨). ೬. ಉರಿ ; ಜ್ವಾಲೆ : ಜೃಂಭತ್ಕೋಕೀವಿಯೋಗಾನಲವಿಪುಲ ಶಿಖಾಜಾಲ ಮುತ್ತಾಲನ್ಯತ್ತಾರಂಭಕ್ಕುಭ್ಯದ್ದಿರೀಶಪ್ರಚುರತರಜಟಾವಾಲವಾಶಾಂಗನಾ ಕೌಸುಂಭಾರಕ್ತೋತ್ತರೀಯಂ ವಸಗಿತು (ಚಕವಿ. ೬-೮). ೭. ಕಿರಣ ; ರಶ್ಮಿ. ೮. ಕಾಂತಿ ; ಪ್ರಕಾಶ : ''ಅಗ್ನಿಯ ವಿಶಾಲಕಾಂತಿದ್ಯೋತಿ ಜ್ಯೋತಿಸ್ಸುಹೇತಿ ಶಿಖಯರ್ಚಿ ಪ್ರಭಾಖ್ಯಮಕ್ಕುಂ'' (ಮಂಗರಾ. ೧೪-೮). ೯. ಕಾಮಜ್ವರ. ೧೦. ಮರದ ಶಾಖೆ ; ಕೊಂಬೆ. ೧೧. ತಲೆ ; ಮಸ್ತಕ : ಶುದ್ಧಪ್ರಸಾದವ ಶಿಖೆಯಲ್ಲಿ ಧರಿಸಿದೆ (ಘನವ. ೬೯-೫೭). [ಸಂ. ಶಿಖಾ]

ಶಿಗ್ರು (ನಾ). ೧. ಒಂದು ಬಗೆಯ ಮರ ; ನುಗ್ಗೆ : ''ಕತಕಂ ಪ್ರಸಾದನಂ . . . ಶಿಗ್ರು ಶೋಭಾಂಜನಕಂ'' (ಪಪ್ಪಕೋ. ೩೫-೧೩). ೨. ತರಕಾರಿ ; ಕಾಯಿಪಲ್ಲೆ : ''ಶಾಕಂ, ಹರಿತಕಂ, ಶಿಗ್ರು – ೩ ಪಲ್ಯ, ತರಕಾರಿ'' (ಸಿದ್ಧಾಂಶಿ. ೨೮೪). [ಸಂ.]

ಶಿಡಕು 'ಸಿಡುಕ್ಕು' ನೋ.

ಶಿತ (ಗು). ೧. ಹರಿತವಾದ ; ಚೂಪಾದ : ತನಿವಂತಿರ ರಸದಿಂ ಬುಧರಣಿಯರ ಮೆಸಗುವುದು ಸುಕವಿ ಸತ್ಕೃತಿಯನಣಂ ಗುಣವರ್ಮನಾಗಿ ಶಿತಮಾರ್ಗಣದಂತು ಚ್ಛಳಿಪದಿರ್ಪಿನಂ ಖಳವಚನಂ (ಪುಷ್ಪಸ. ೧-೬೦). ೨. ಬಡವಾದ; ನಿಶ್ಶಕ್ತವಾದ. (ನಾ). ೩. ಬಡವಾದುದು ; ಸೊರಗಿದುದು : ರಾಗಭರಪರಿಲಿಪ್ತಮಾನಸಯೋಗ ವಿಂದ್ರಿಯಗಳಲಿಯಖಿಳೋದ್ಯೋಗವನು ವಿರಚಿಸುತಲೆಲ್ಲ ಶಿತಂಗಳಾಗಿಹವು (ತಿಮ್ಮಶಾ. ೬-೪೦). [ಸಂ.]

ಶಿತಶೂಕ (ನಾ). ೧. ಒಂದು ಬಗೆಯ ಧಾನ್ಯ ; ಯವೆ ; ಜವೆ : ''ಶಿತಶೂಕಃ, ಯವಃ – ೨ ಯವೆಗಳಿಂಬ ಧಾನ್ಯದ ಹೆಸರುಗಳು'' (ಸಿದ್ಧಾಂಶಿ. ೨೭೮). ೨. ಗೋದಿ. [ಸಂ.]

ಶಿತಾಸಿ (ನಾ). ಹರಿತವಾದ ಕತ್ತಿ ; ಚೂಪಾದ ಖಡ್ಗ : ಆ ವ್ರತ ಶಿತಾಸಿ ಸಂಸಾರವ್ರತತಿಚ್ಛಿದುರಮಕ್ಕುಂ (ಶಾಂತಿಪು. ೭-೭) : ಮಿಥ್ಯಾತ್ವಮಂ ನೆಟ್ಟನುತ್ತಮ ಸಮ್ಯಕ್ತ್ವಶಿತಾಸಿಯಿಂದಮಿಱಿ (ಜೀವಸಂ. ೧೫೪-೬). [ಸಂ.]

ಶಿತಾಸ್ತ್ರ (ನಾ). ಹರಿತವಾದ ಬಾಣ : ಕಡಿದೊಡೆ ಕಡುಪಿಂದಂ ಕಿಡಿಕಿಡಿಯಾಗಿ ಶಿತಾಸ್ತ್ರನಿಕರಮಂ ಪ್ರತಿವಿಧ್ಯಂ ಕಡಿದವನ ರಥಮನೊರ್ಮೆಯೆ ಕಡಿದಂ ತಲೆಯುಮನದೊಂದು ದಾರುಣಶರದಿಂ (ಪಂಪಭಾ. ೧೨-೬೪). [ಸಂ.]

ಶಿತಿ (ಗು). ೧. ಬಿಳಿಯ ಬಣ್ಣದ ; ಬಿಳುಪಾದ. ೨. ಕಪ್ಪುಬಣ್ಣದ ; ಕಪ್ಪಾದ : ಶ್ರೀಗಿರಿಜಾಪ್ರಿಯರ್ ಶಿತಿಸಿತಚ್ಛವಿಗಳ್ನುತಕೌಸ್ತುಭಸ್ಫುರದ್ಗೋವಿಭೂಷಣರ್ (ಎಕ. XI. ದಾವಣ. ೩೫-೧ ; ಸು. 1160) : ಇಂದುಮುಖಿ ಮೃಗವಿಲೋಚನೆ . . . ಭೃಂಗೀಬೃಂದಶಿತಿಕೇಶವಿಳಸಿತೆ ಚೆಂದವ್ವೆ ವಿನೂತಿಯಾದಳಖಿಳೋರ್ವ್ಯರೆಯೊಳ್ (ಎಕ.II. ೩೨೨-೫೯ : 1181). (ನಾ). ೩. ಕಪ್ಪುಬಣ್ಣ ; ಶ್ಯಾಮಲವರ್ಣ : ''ಶಿತಿ ಕೃಷ್ಣಮಸಿತಂ ಮೇಚಕಂ ಕಾಳಮನೆ ಕಪ್ಪಿಗಕ್ಕುಂ'' (ಮಂಗರಾ. ೧೩೧-೨೧). [ಸಂ.]

ಶಿತಿಕಂಠ (ನಾ). ೧. ಕಪ್ಪಾದ ಕೊರಳು ; ನೀಲಕಂಠ : ಭವದ ಗರಳವ ಗುಡಿಯ ಶಿತಿಕಂಠದೊಳು ಶಮಿಸಿ ನವಜಾತಚಿತ್ತದೊಳು ಜೀವ ರಮಿಸೆ (ಮಲದೇ. ೪೬-೧). ೨. ಕಪ್ಪಾದ ಕೊರಳುಳ್ಳವನು ; ನೀಲಕಂಠ ; ಶಿವ : ಕಳಶಸಂಭವಂ . . . ಅರ್ಚಿತಶಿತಿಕಂಠನುಮಾಹುತಿಹುತಾಗ್ನಿಹೋತ್ರನುಂ ಪೂಜಿತಧರಾಮರನುಂ ನೀರಾಜಿತರಥತುರಗನುಮಾಗಿ ರಜತರಥಮನೇಱಿ (ಪಂಪಭಾ. ೧೧-೧೩೨ ವ) ; ಶಿತಿಕಂಠನಾಮಪೂರಿತವಾಕ್ಯಪ್ಪುತನಿರೀಕ್ಷಿತನಯನ ಮಣಿಮುಕುರಮಧ್ಯಬಿಂಬಿತವದನಂ (ಪಚಕಾ. ೪-೫೮) ; ಶಿವ ಶಿತಿಕಂಠ ಶಂಭು ಶಶಿಶೇಖರ (ಶಂಕಶ. ೩೨). ೩. ನವಿಲು. [ಸಂ.]

ಶಿತಿಕಂಠಬರ್ಹ (ನಾ). ನವಿಲಿನ ಗರಿ ; ನವಿಲುಗರಿ : ಬಾಲಕರಸದರ್ . . . ಚಿತ್ರಕುಸುಮಮಯವನಮಾಲರ್ ಶಿತಿಕಂಠಬರ್ಹಶೇಖರ್ (ಜಗವಿ. ೩-೭೫). [ಸಂ.]

ಶಿತಿಕಂಠಬಾಣ (ನಾ). ಶಿವಮಂತ್ರದಿಂದ ಅಭಿಮಂತ್ರಿಸಲ್ಪಟ್ಟ ಬಾಣ : ವೀರಲಕ್ಷ್ಮಣ ಖಳನ ಮಾಯವ ಗೆಲಿದನಾ ಶಿತಿಕಂಠಬಾಣದಲಿ (ಕಾಶಿಂ. ೨೨-೩೩). [ಸಂ.]

ಶಿತಿಕಾಕ (ನಾ). ಒಂದು ಬಗೆಯ ಕಾಗೆ ; ಡೊಂಬಕಾಗೆ : ''ಶಿತಿಕಾಕಂ ವನಾಶ್ರಯಂ ಮೌಳಿ ದ್ರೋಣಮಾ ಕಾಕೋಳಮೆನೆ ಕಾಡ ಕಾಗೆ'' (ಮಂಗರಾ. ೫೧-೪). [ಸಂ.]

ಶಿತಿಗಲ, ಶಿತಿಗಳ (ನಾ). = ಶಿತಿಕಂಠ ೨ : ಶಿತಿಗಲನು ಶಿವಜಂಗಮಾಕಾರದಿಂದೈದುತತಿಕರುಣದಿಂದಮ್ಮ ಬಡತನವ ಪರಿಹರಿಸಿ . . . ಪೋದನು (ದುರಪ್ಪ. ೫೯-೨೧). **ಶಿತಿಗಳ:** ಸತತಸರ್ವಾವಿಘ್ನಕಧಿಪತಿಯುಯಂದೊಡಾ ಶತEತಿತಿಗಳನ ಕವಿಗಳುಂ ಪೆರೆದಲೆಯನೆಂದು ಗಣಪತಿಯ ಬಗೆಯದೆಯಿಹರು (ನಮೋ. ೧-೧೧). [ಸಂ.]

ಶಿತಿಗಳ 'ಶಿತಿಗಲ' ನೋ.

ಶಿತಿಶ್ವೇತ (ನಾ). ಬಿಳುಪುಮಿಶ್ರಿತವಾದ ಕಪ್ಪುಬಣ್ಣ ; ಕಂದುಬಣ್ಣ : ''ಶಿತಿಶ್ವೇತ ಮನೆ ಶ್ಯೇನಿಯನೆ ಕುಮುದವರ್ಣಾ'' (ಮಂಗರಾ. ೧೩೧-೨೨). [ಸಂ.]

ಶಿತಿಸಾರಕ (ನಾ). ಒಂದು ಬಗೆಯ ಮರ ; ತೂಬರೆ : ''ತಿಂದುಕಃ, ಸ್ಫೂರ್ಜಕಃ, ಕಾಲಸ್ಕಂಧಃ, ಶಿತಿಸಾರಕಃ – ೪ ತುಂಬರಗಿಡ, ತೂಬರೆಗಿಡ'' (ಸಿದ್ಧಾಂಶಿ. ೧೨೦). [ಸಂ.]

ಶಿತ್ರ (ನಾ). ಒಂದು ಬಗೆಯ ಆಯುಧ : ಐಪತ್ತಾರ್ರುದೇಶಾಧೀಶ್ವರರಾದ ಆನ್ಮಿಜ ಸುಲದಿ ಕಂಬುಕಂಟಿ ಕುಲಿಶಾವನ ಶಿತ್ರಾ ನಂದಿಕೋಲು ಸಂಗಮೇಶ್ವರನ ನುಡಿಗೆ ಸಬಳ ಶಾಶ್ವಿಕ ಸಯಲ್ಲಿ ಕತ್ತಿ . . . ಮೊದಲಾದಾ ಬತ್ತೀಶಾಯುಧಾಶಕ್ತ ಸಮರ್ತಕರಾದಾ (ಎಕ. XVI. ಗುಬ್ಬಿ ೭೪-೨೦ ; ಸು. 1776). [?]

ಶಿಥಿಲ, ಶಿಥಿಳ (ಗು). ೧. ಸಡಿಲವಾದ ; ಅಳ್ಳಕವಾದ : ಉತ್ಸವದಿಂದ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆ ಬೀಭತ್ಸರಸಾಂತರಂ ಶಿಥಿಲಬಂಧನದಿಂ (ಕವಿಕಾ. ೨ ೧೨೦). ೨. ದೃಢವಲ್ಲದ ; ಚೋತುಬಿದ್ದ : ಸುಕ್ಕು ನಿರಿನಿರಿಯಾಗಿ ಬತ್ತಿದ ತೊವಲ್ ಪತ್ತಿ ಬಿಗಿದೆಲ್ಲುಗೂಡಿನಾ ಶಿಥಿಲಕಂಕಾಲತೆಯ . . . ಅಸ್ಥಿಪಂಜರದಂತೆವೋಲಸ್ಥಿರಸ್ಥವಿರೆಯಂ ಕಂಡು (ಶ್ರೀರಾಪಾ. ೨೧-೪೪೭). ೩. ಬಡವಾಗಿರುವ; ಕೃಶವಾಗಿರುವ: ಶಿಥಿಲಮಧ್ಯದ ಲಘುಶ್ವಾಸದತ್ಯಸಮರಾಗಾಧರದ ಗೂಢನಾಭಿಯ ಮಾಜಿ ಕೊಬ್ಬಿದ ನಿತಂಬಯುಗದ . . . ಅನಾಮಿಕೆಯರು

(ಪಚಕಾ. ೭-೩). ೪. ಜೀರ್ಣವಾದ : ದೊಡ್ಡೇಶ್ವರ (ನೊಳಂಬೇಶ್ವರ) ದೇವಾಲಯದ ದಕ್ಷಿಣಭಾಗದ ಗೋಡೆಯ ಮೇಲೆ ವರುಣಶಿವಭಟಾರರ ಹೆಸರನ್ನುಳ್ಳ ಒಂದು ಶಿಥಿಲಶಾಸನವ್ಗೊಂದಿದೆ (ಸೊಳಂಬ. ೧೨೦). ೫. ಕಟ್ಟಿದಿರುವ; ಬಿಚ್ಚಿದ. ೬. (ತೊಟ್ಟಿನಿಂದ) ಕಳಚಿದ; ಬೇರ್ಪಟ್ಟ. ೭. ಶಕ್ತಿಗುಂದಿದ; ಬಲಹೀನವಾದ. ೮. ಕರಗಿದ; ಲೀನವಾದ. ೯. ಅಸ್ಪಷ್ಟವಾದ; ಅಸ್ಫುಟವಾದ : 'ಶಥಿಲಾಕ್ಷರ' ಪರಾ. (ನಾ). ೧೦. ದೃಢವಲ್ಲದುದು : ಪುರುಷನ ಲಿಂಗ ಶಥಿಲಮಾದೊಡಂ ಘನವಹುದು (ಕಾಮಶಾ. ೨೩೩). ೧೧. ಜೀರ್ಣವಾದುದು : ದುರ್ಗದ ಬಾಗಿಲು ಶಥಿಲವಾಗಿದ್ದುದರಿಂದ ಮಲ್ಲಿಕಾರ್ಜುನನು, ಹೊಸತಾಗಿ ಬಲು ಗಟ್ಟಿಯಾದ ಬಾಗಿಲುಗಳನ್ನು ಮಾಡಿಸಿದ್ದ (ಶಾಂತಲಾ. ೪೦೦). ೧೨. ನಿಶ್ಶಕ್ತವಾದುದು ; ಬಲಹೀನವಾದುದು : ಅವಯವದಿಂದಂದುರ್ಚುವ ಭವಭಯಮುಂ ಶಥಿಲಮುದುದೆಂದೊಡೆ ತಾಂ ಶಾತ್ರವಭಯಮೇಗಹನಮೊ ಕರ್ಮವೈರಿನಿರ್ಮೂಲನಾಂಘ್ರಿ ಕಮಲಾಂತಿಕದೊಳ್ (ಶಾಂತಪು. ೬-೪೧); ಆ ಅಂಗದ ಸಂಬಂಧ ಕೈಗೆ ತಪ್ಪಿ ಶಥಿಲವಾಗಿ ಕೆಲಸ ಮಾಡಲು ಅಸಮರ್ಥವಾಯಿತು (ಜೀವಾತ್ಮ. ೭೯). ೧೩. ಅಳಿವು; ನಾಶ : ಶಥಿಲವಾಯಿತು ವೈರಿಬಲಪತಿಮಥನವಾಯಿತು ದೈತ್ಯನೂಳಗ ಪೃಥುವಿ ಲಘುತರವಾಯ್ತು (ಕುವಾದ್ರೋ. ೧೫-೬೭). ೧೪. ವಿರಳವಾದುದು : ಮಿಗೆ ನಿಬಿಡಬಂಧಮೆಂಬುದು ತಗುಳ್ಳುವು ವರ್ಣಂಗಳಗಲದಿರ ಮತ್ತಕ್ಕುಂ ನೆಗಬ್ಬಪ್ರಾಣಾಕ್ಷರ ನಿಗದಿತಮೇತದ್ವಿಪರ್ಯಯೋಕ್ತಂ ಶಥಿಲಂ (ಕವಿಗಾ. ೨-೬೪). ೧೫. ದುರ್ಬಲನಾದವನು ; ಶಕ್ತಿಹೀನನಾದವನು : "ಅರಮುಪ್ಪು ಬಲ್ಲಾಗೆ ಶಥಿಲಸಮ್ಮಂ" (ಮುಂಗರಾ. ೯೧-೧೦). ೧೬. ಸೋಮಾರಿ ; ಜಡಸ್ವಭಾವದವನು : "ಅಲಸಃ, ಶಥಿಲಃ . . . ಮಂಥರಃ — ಈ ೬ ಸೋಂಬಂ" (ಪಲಾಮು. ೬೪-೨೬೨). ೧೭. ಸಡಿಲವಾದುದು; ದುರ್ಬಲವಾದುದು : ಇಮ್ಮಡಿ ವೀರನರಸಿಂಹರಾಯನ ಆಡಳಿತವು ಬಹಳ ಶಥಿಲವಾಗಿತ್ತೆಂದೂ, ಆತನ ರಾಜನೀತಿಯು ಅಷ್ಟಾಗಿ ಯಶಸ್ವಿಯಾಗಲಿಲ್ಲವೆಂದೂ ಹಿಂದಿನ ಪ್ರಕರಣದಲ್ಲಿ ತಿಳಿಸಲಾಗಿದೆಯಷ್ಟೆ (ಕ್ಷದಸಾ. ೧೧). ೧೮. [ವ್ಯಾಕ] ತೇಲಿಸಿ ಉಚ್ಚಾರ ಮಾಡಬೇಕಾದ ಸಂಯುಕ್ತಾಕ್ಷರ ; ತೇಲಿಸಿ ಉಚ್ಚರಿಸಬೇಕಾದ ಒತ್ತಕ್ಷರ : ಆದಿ ದೀರ್ಘಮಾದೊಡಂ ಗುರುವಾದೊಡಂ ಶಥಿಲಮಿಲ್ಲ — ಬಾಸುಬ್ಗಳ್ . . . ಪೊಕ್ಕುಬ್ಗಳ್ (ಶಮದ. ೪೨ ಪ್ರಯೋ). **ಶಥಿಳ:** ೧೦. "ಶ್ಲಥಂ, ಶಥಿಳಂ - ಈ ೨ ಸಡಿಲ್ದುದು" (ಪಲಾಮು. ೧೨೮-೯೨). [ಸಂ.]

ಶಥಿಲಗೊಳ್ಳು (ಕ್ರಿ). ದುರ್ಬಲವಾಗು ; ಶಕ್ತಿಹೀನವಾಗು : ಕಾರಣಾಂತರಗಳಿಂದ ವ್ಯವಸ್ಥೆಗೊಳ್ಳುತ್ತಿರುವ ಅನುಭವಗಳು . . . ಇದ್ದಕ್ಕಿದ್ದ ಹಾಗೆ ಯಾವುದೋ ತಡೆಯನ್ನು ಅನುಭವಿಸುತ್ತವೆ. ಆಗ ಆರಂಭವಾಗಿರುವ ವ್ಯಕ್ತಿತ್ವದ ವ್ಯವಸ್ಥೆ ಶಥಿಲಗೊಂಡು ಅವ್ಯವಸ್ಥೆಯನ್ನು ಕಾಣುತ್ತದೆ (ಶಕ್ಷದ. ೬೪೨). [ಶಥಿಲ + ಕೊಳ್ಳು$_1$ (< ಕೊಳ್$_1$)]

ಶಥಿಲತೆ (ನಾ). ೧. ದುರ್ಬಲತೆ ; ನಿಶ್ಶಕ್ತಿ : ಘೋಟಪ್ರತತಿಗೆ ಗಜಯೂಥಕ್ಕೆ ಪಾದಾತಿವೃಂದಕ್ಕರಿದಾರ್ಗಂ ರೇಣು ಪಂಕಂ ಶಥಿಲತೆ ದೆಸೆಗೆಟ್ಟತ್ತು (ಗಿರಿಕ. ೬-೪೯) ; ಅರಪತ್ತರ ನಂತರ ಸಾಮಾನ್ಯವಾಗಿ ಆ ಶಥಿಲತೆ ಮತ್ತು ಅದರ ಪ್ರಭಾವ ತೀವ್ರಗತಿಯಲ್ಲಿ ಹೆಚ್ಚುತ್ತಿರುತ್ತದೆ (ಶಕ್ಷದ. ೪೪೫). ೨. ಸಡಿಲ ; ಅಳ್ಳಕ : 'ಶಥಿಲತೆವೆಱು' ಪರಾ. ೩. [ವ್ಯಾಕ] ದ್ವಿತ್ವವಿದ್ದರೂ ತೇಲಿಸಿ ಉಚ್ಚರಿಸುವುದು : ಗದವಜಕಾರಮವಿದಿರಿರೆ ಪದವುಧ್ಯಂ ವಿಷಯವಾಗನೇಕಾಕ್ಷರದೊಳ್ ಪುದಿಯೆ ಲಘೂಪಧ ಕೆಲಕೆಲ ವೊದವಿರ್ಕುಂ ರಾಂತ ಳಾಂತಮವು ಶಥಿಲತೆಯಂ (ಶಮದ. ೪೩). [ಸಂ. ಶಥಿಲತಾ]

ಶಥಿಲತೆವಡೆ (ಕ್ರಿ). ನಿಶ್ಶಕ್ತವಾಗು ; ದುರ್ಬಲವಾಗು : ನಡುಗುವ ತಲೆ ಜಗ್ಗಿದ ಬೆನ್ನು ಶಥಿಲತೆವಡೆದಂಗ ದಡದಡಿಸುತ್ತದಡಿವಿಡಿದಡಿಯಿಟ್ಟು ಮಡದಿಯ ಮಂದಿರದೆಡೆಗಾಗಿ ಕಡುವೃದ್ಧನೆಯಿದೆ (ಜಬಂಸಾಂ. ೧೭-೩೧). [ಶಥಿಲತೆ + ಪಡೆ$_1$]

ಶಥಿಲತೆವೆಱು (ಕ್ರಿ). ಸಡಿಲವಾಗು ; ಅಳ್ಳಕವಾಗು : ತನುಲತೆ ಸೌರಭ್ಯಮಂ ಬೀಜೆ ಸೂಸಿರ್ದಳಕಂ ಚೋಲ್ಗಿರ್ದ ಬಂಬಲ್ಮುಡಿ ಶಥಿಲತೆವೆತ್ತಿರ್ದ ನೀವೀಭರಂ ಕಣ್ಗೊಳಿಪನ್ನಂ ಲೀಲೆಯಿಂದುಪ್ಪವಡಿಸಿದಳ್ ನಿದ್ರಾಂಗಿ (ಜಗವಿ. ೨-೭೮). [ಶಥಿಲತೆ + ಪೆಱು$_1$]

ಶಥಿಲತ್ವ (ನಾ). = ಶಥಿಲತೆ ೩ : ಪುಗೆ ದದಪವಕಾರಂ ವಿಧಿಯ ಗಕಾರಂ ವರ್ತಮಾನ ಕಾಲದ ಗುಂ ಧಾತುಗೆ ಉಬ ಕುಳ ರೇಫಾಂತಕ್ಕೊಗೆಗುಂ ಶಥಿಲತ್ವಮಗುರು ಪೂರ್ವ ಸ್ಥಿತಿಯಿಂ (ಶಮದ. ೪೪). [ಸಂ.]

ಶಥಿಲದ್ವಿತ್ವ (ನಾ). = ಶಥಿಲ ೧೪ : ಇನ್ನು ಶಥಿಲದ್ವಿತ್ವಕ್ಕೆ — ಮಗುಬ್ಗಂ . . . ತೆಗಬ್ಗಂ, ನೆಗಬ್ಗಂ, ತಿಮಿರ್ದಂ (ಶಮದ. ೩೬ ಪ್ರಯೋ) ; 'ಶಥಿಲದ್ವಿತ್ವ' ಎಂದರೆ ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವ ಒತ್ತಕ್ಷರ . . . ಅದು ಗುರುವಾಗುವುದಿಲ್ಲ. ಲಘುವಾಗಿಯೇ ಉಳಿಯುತ್ತದೆ (ಕ್ಷಪಾ. ೧೨). [ಸಂ.]

ಶಥಿಲಮತಿ (ನಾ). ತೀಕ್ಷ್ಣವಲ್ಲದ ಬುದ್ಧಿ ; ಮಂದಬುದ್ಧಿ : ಎರಡನೆಯ ಮೃಡ ಹಮ್ಮೀರನ ನುತಿಯೆನ್ನ ಶಥಿಲಮತಿಗಂ ಪವಣೇ (ಹಮ್ಮೀರ. ೧-೨೮). [ಸಂ.]

ಶಥಿಲವೃತ್ತಿ (ನಾ). = ಶಥಿಲತೆ ೩ : ಬರ್ದಿಲಂ . . . ಅದಿರ್ಮುತ್ತೆ ಪೊದಟ್ಟಿರ್ದೆಯೆಂಬಿವು ಸಹಜ ಶಥಿಲವೃತ್ತಿಯನಾಳ್ಗುಂ (ಶಮದ. ೪೫). [ಸಂ.]

ಶಥಿಲಾಕ್ಷರ (ನಾ). ಅಸ್ಫುಟವಾದ ಮಾತು : ಕೆಮ್ಮುತೊಮ್ಮೊಮ್ಮೆ ಗೂಹೆಗೂಹೆ ಗುಟ್ಟುತುಂ ಶಥಿಲಾಕ್ಷರಂಗಳಿಂ ನಮಃಶಿವಾಯ ನಮಃಶಿವಾಯಯೆನುತ್ತೆನಲಾಜದಂತೆ ನಡುಗುತ್ತುಂ (ನಂಜರ. ೬-೨೭). [ಸಂ.]

ಶಥಿಲಿಸು (ಕ್ರಿ). ಸಡಿಲಗೊಳಿಸು : ಪ್ರಾರಬ್ಧದಲ್ಲಿ ನಿನ್ನ ಪುಣ್ಯವಿನಿತಾನುಮಿರೆ ಸೇರೆ ಪಶ್ಚಾತ್ತಾಪಭಾರವದರೊಡನೆ ದಾರುಣದ ಕರ್ಮನಿಯತಿಯನಿನಿತು ಶಥಿಲಿಪುದು ಕಾರುಣ್ಯದಿಂ ದೈವ (ಮಂಜುಕ. ೫೦೯). [ಶಥಿಲ + – ಇಸ್ಕು]

ಶಥಿಳ 'ಶಥಿಲ' ನೋ.

ಶದ್ದಿಗೆ 'ಸಿದಿಗೆ' ನೋ.

ಶಪಾಯಿ 'ಸಿಪಾಯಿ' ನೋ.

ಶಪಾರಸು 'ಶಫಾರಸ್ಸು' ನೋ.

ಶಪಾರಸ್ಸು 'ಶಫಾರಸ್ಸು' ನೋ.

ಶಪಿ (ನಾ). ೧. ಬೆಳಕಿನ ಕಿರಣ. ೨. ತೊಗಲು ; ಚರ್ಮ. [ಸಂ.]

ಶಪಿಗೆಂಡೆ 'ಸೀಪಿಯ ಗೆಡ್ಡೆ' ನೋ.

ಶಪಿವಿಷ್ಣ (ಗು). ೧. ಕುಷ್ಠರೋಗದಿಂದ ಕೂಡಿದ. (ನಾ). ೨. ವಿಷ್ಣು : ಆತ ಸಂಗ್ರಾಮನಾಯಕ ; ಇಂದ್ರಸಹಾಯಕ. ಆತ ಅಚಿಂತ್ಯ, ಶಪಿವಿಷ್ಣ (ಭಾರಪ. ೨೮೨). ೩. ಈಶ್ವರ ; ಶಿವ : ಆ ನಾಯನಾರರ ಪರಮಭಕ್ತಿಯ ನಿಷ್ಠೆಯಂ ಶಪಿವಿಷ್ಣಂ ಕೊಂಡಾಡುತ್ತಾಗಳ್ (ತ್ರಿಪುವಿ. ೧೫-೪೫ ವ). ೪. ಕುಷ್ಠರೋಗ : "ಹೊಲ್ಲಹ ಚರ್ಮದಲ್ಲಿಯುಂ ಶಪಿವಿಷ್ಣಮೆಂಬುದು" (ಪಲಾಮು. ೧೩೭-೩೧). ೫. ತಲೆಯಲ್ಲಿ ಕೂದಲಿಲ್ಲದವನು ; ಬೋಳುತಲೆಯವನು : "ಖಲತಿಃ, ಶಪಿವಿಷ್ಣಃ, ಐಂದ್ರಲುಪ್ತಕಃ — ಈ ೩ ತಲೆಬದಲೆ(ಯಂ)" (ಪಲಾಮು. ೯೯-೪೫೪). ೬. ಕಾಯಿಲೆಯವನು; ರೋಗಿ. ೭. ಕುಷ್ಠರೋಗಿ. "ಅರೋಮಕ ಕುಷ್ಠಚರ್ಮಮುಂ ಅಂಗಜವ್ಯರೋಗಯುತರೆಂಬಿನಿತುಂ ಶಪಿವಿಷ್ಣವಾಚಕಂ" (ನಾನಾರ. ೧೪೪). [ಸಂ.]

ಶಫಾರಸ್ 'ಶಫಾರಸ್ಸು' ನೋ.

ಶಫಾರಸು 'ಶಫಾರಸ್ಸು' ನೋ.

ಶಫಾರಸುಪತ್ರ (ನಾ). ವರ್ಚಸ್ಸುಳ್ಳವರು, ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ತಿಳಿಸಿ ಬರೆಯುವ ಕಾಗದ : ಇವರ ಶಫಾರಸುಪತ್ರದ ಮೇಲೆ ನಾವು ಬದುಕುವದು ಅಷ್ಟರಲ್ಲೇ ಇದ (ಮೂಡುದಾ. ೧೬೦). [ಶಫಾರಸು (< ಶಫಾರಸ್ಸು) + ಪತ್ರ]

ಶಫಾರಸ್ಸು, ಶಪಾರಸು, ಶಪಾರಸ್ಸು, ಶಫಾರಸ್, ಶಫಾರಸು, ಶಫಾರ್ಸು, ಸಿಪಾರಸು, ಸಿಫಾರಸು (ನಾ). ೧. ಪ್ರಭಾವವನ್ನು ಬೀರುವುದು ; ವರ್ಚಸ್ಸನ್ನು ಬೀರುವುದು ; ವಶೀಲಿ : ಶಫಾರಸ್ಸಿಗೆ ಬರುತ್ತಾರಲ್ಲ - ಒಬ್ಬೊಬ್ಬರು ಐದೈದು ರೂಪಾಯ್ನಾದ್ರೂ ಕೊಟ್ರೆ (ನವನೀ. ೪೧). ೨. ಅರ್ಹತೆಯನ್ನು ಸೂಚಿಸಿ ಪ್ರಶಂಸಿಸುವುದು ; ಮೆಚ್ಚುಗೆ ; ತಾರೀಫು : ಅಂದರ ಆಕೆಯ ಬಗ್ಗೆ ನಿನ್ನ ಶಫಾರಸ್ಸು ತಾನೇ? (ಪೀಪಾಪಂ. ೧೯೪). **ಶಪಾರಸು** : (೫). **ಶಪಾರಸ್ಸು:** ೧. ದಿವಾನರಿಗೆ ಅವನ ಶಪಾರಸ್ಸು ಬೇಕಿಲ್ಲ (ದೌಲತ್. ೧೧೫). **ಶಫಾರಸ್** : ೩. = ಶಫಾರಸುಪತ್ರ: ಅವರು ತಮ್ಮ ಪೂರ್ಣ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಶಾಲೆಗೆ ಸರಕಾರದ ಮಂಜೂರಾತಿಗೂ, ವರ್ಷಾಸನಕ್ಕೂ (Grant) ಶಫಾರಸ್ ಬರೆದು ಕಳುಹಿಸಿದರು (ಚಿತಸ. ೩೭). **ಶಫಾರಸು:** ೧. ಅವರ ಕೃತಿಗೆ ಯಾರ ಶಫಾರಸೂ ಅವಶ್ಯವಿಲ್ಲ (ಮಹಾಗ. II. ಸ್ನೇಹದ ಮಾತು) ; ನನಗೆ ಅವನ ಶಫಾರಸು ಗಿಫಾರಸು ಬೇಕಿಲ್ಲ (ರಂಗಕ. ೧೦೭). **ಶಫಾರ್ಸು** : ೧. ಶ್ರೀಮಂತರಿಗೆ

ದೇವರೇಕೆ? ದೇವರ ಶಿಫಾರ್ಸು ಅವರ ಮರ್ಜಿ ಏನೂ ಬೇಕಿಲ್ಲ (ಚಂಗೂಲಿ. ೧೮೧). **ಸಿಫಾರಸು** : ೧. ಅವಳ ಸಿಪಾರಸಿನಿಂದಲೂ, ಬುದ್ಧಿವಂತಿಕೆಯಿಂದಲೂ, ಬ್ರಾಹ್ಮಣೆ, ಇಂದಿರೆ ಇಬ್ಬರೂ ಅಡಿಗೆಯ ಕೆಲಸಕ್ಕಾದರು (ಬಂಕಿಮ. ೧೧೯). **ಸಿಫಾರಸು** : ೧. ಸಹಾನುಭೂತಿಯುಳ್ಳ ಮೇಲಧಿಕಾರಿಗಳ ಸಿಫಾರಸೂ ಬಹಳ ಬೇಕಾಗುತ್ತದೆ (ಮೇದಿಮ. ೨೦೦) ; ಯಾರ ಯಾರ ಸಿಫಾರಸಿನ ಪ್ರಭಾವದಿಂದಲೋ ಕೆಲಸಕ್ಕೆ ಬರುವ ಈ ಹುಡುಗ ಅಮಲ್ದಾರರುಗಳಲ್ಲಿ ಬೈಸಿಕೊಳ್ಳಬೇಕಾಯಿತಲ್ಲಾ (ಬೆಸ್ತ. ೨೬).

ಶಿಫಾರಸ್ಸು ಮಾಡು, ಶಿಫಾರಸು ಮಾಡು = ವಶೀಲಿ ಮಾಡು ; ಪ್ರಭಾವವನ್ನು ಬೀರು : ಶಿವಣ್ಣನ ಮನೆಗೆ ಹೋಗಿ ನನಗೆ ಶಿಫಾರಸ್ಸು ಮಾಡು ಎಂದು ಕೇಳಲೆ (ಚಿಂಗಾಳ್ಳ. ೫೬೧) ; ಸೈನ್ಯದ ಮುಖ್ಯಾಧಿಕಾರಿಗೆ ನಿನ್ನ ಸಾಹಸವನ್ನು ತಿಳಿಸಿದ್ದೇನೆ . . . ಒಂದು ಕ್ರಾಸ್‌ಗೆ ಶಿಫಾರಸು ಮಾಡಿದ್ದೇನೆ (ಮಲೆನಾ. ೧೧೭).

[← ಪಾರ. ಸಿಫಾರಿಶ್; ಹಿಂ. ಸಿಪಾರಸ್, ಸಿಫಾರಿಶ್; ಮರಾ. ಶಿಫಾರಸ್, ಸಿಪಾರಸ್]

ಶಿಫಾರ್ಸು 'ಶಿಫಾರಸ್ಸು' ನೋ.

ಶಿಫೆ (ನಾ). ೧. ನಾರಿನಂತಿರುವ ಸಣ್ಣ ಬೇರು. ೨. ಮರದ ಬಿಳಲು : "ಜಟಾ, ಶಿಫಾ — ಈ ೨ ಮರದ ಬೀಟಲ್" (ಹಲಾಯು. ೩೦-೨೯). ೩. ಕಮಲದ ಗಡ್ಡೆ : "ಕರಹಾಟಃ, ಶಿಫಾ, ಕಂದಃ — ೩ ತಾವರೆಗಡ್ಡೆಯ ಹೆಸರುಗಳು" (ಸಿದ್ಧಾಂತಿ. ೯೦).

[ಸಂ. ಶಿಫಾ]

ಶಿಬಂದಿ 'ಸಿಬ್ಬಂದಿ' ನೋ.

ಶಿಬಿ (ನಾ). ೧. ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಹಿಂಸ್ರಪಶು. ೨. ಒಂದು ಬಗೆಯ ಮರ ; ಭೂರ್ಜ. ೩. ಪುರಾಣಪ್ರಸಿದ್ಧನಾದ ಒಬ್ಬ ಚಕ್ರವರ್ತಿಯ ಹೆಸರು ; P ಪಾರಿವಾಳರೂಪವಾಗಿದ್ದ ಅಗ್ನಿಯನ್ನು ಗಿಡಗರೂಪವಾಗಿದ್ದ ಇಂದ್ರನಿಂದ ರಕ್ಷಿಸಿ, ಪಾರಿವಾಳದ ತೂಕದ ಮಾಂಸವನ್ನು ತನ್ನ ದೇಹದಿಂದ ಕೊಟ್ಟ ಮಹಾದಾನಿ: ಇನಜಂ ಕೊಟ್ಟ ತೊವಲ್ಕಿಬಮುನಿ ಕೊಟ್ಟಡಗಾ ದಧೀಚಿ ಕೊಟ್ಟೆಲ್ಲುಗಳೇಂ ಧನದನ್ತೆ ಸೇವ್ಯವೆ ಪೇಳೆನುತಂ ಹೊಂಗಳನೆ ಕೇಶವಂ ಕುಡುತಿರ್ಪ್ಪಂ (ಎಕ. VII, ಶಿಕಾರಿ. ೧೨೩-೩೧; 1158); ಬೇಡಿದೊಡೆ ತನಗುಳ್ಳ ವಸ್ತುವಂ ಕುಡದೆ ಕಡೆನೋಡುವವನಧಿಕನ ದಧೀಚಿ ಶಿಬಿಗಳ ಮಾಳ್ಕೆ ಪೋಡಿಯಾದುದೆ ಮಣಿಯನೀವೆಂ (ಜೈಮಿಭಾ. ೨೪-೨೧). [ಸಂ.]

ಶಿಬಿಕೆ (ನಾ). ೧. ಅಂದಣ ; ಪಲ್ಲಕ್ಕಿ : ಆ ವೃಷಭನಾಥನುಂ . . . ಗುಣಶ್ರೇಣಿಯನೇಱುವುದನಭ್ಯಾಸಂಗೆಯ್ವಂತೆ ಸುದರ್ಶನವೆಂಬ ಶಿಬಿಕೆಯನೇಱಿದಾಗಳ್ (ಆದಿಪು. ೯-೭೨ ವ) ; ಶಿಬಿಕಾಂದೋಳವಾಜಿವಾರಣವರೂಥವಿಸರಾದಿ ನಾನಾಯಾನಂಗಳುಮಂ (ಚಂದ್ರಪು. ೬-೮೫ ವ); ಶಿಬಿಕಾರತ್ನಮನಾಂತರೇಱಡಿವರಂ ಭೂಪೇಂದ್ರರಲ್ಲಿಂ ಬಱಿಕ್ಕೆ ಬಲಾಢ್ಯರ್ ಖಚರೇಂದ್ರರ್ (ವರ್ಧಪು. ೧೫-೪) ; ಶಿಬಿಕಾಂದೋಳವರೂಥದಂತಿಹಯಮಂ ನೇಪಥ್ಯರತ್ನಾವಳೀಶಬಲಚ್ಛಾಯೆ ಮುಸುಂಕೆ (ಅನಂಪು. ೪-೩). ೨. ಚಟ್ಟ ; ಸಿದಿಗೆ : ಕಳಲ್ದ ಶಿಬಿಕೆಗಳ ಚಿತೆಯೊಳ್ಪೀವ ಕುಣಪಂಗಳ . . . ಚಂಡಿಕಾಲಯದೆಡೆಗೆ ನಡೆತಂದನು (ಜೈಮಿಭಾ. ೩೧-೫೫); ಮೊಗಂ ಪಳದಿಗೊಂಡರಸನಾ ಕಾಯಮಂ, ಕನಕಶಿಬಿಕೆಗೆ ನೆಗಹಿ, ಸುಡುನೆಲಕೆ ಪೊತ್ತುಯ್ದರಾಕ್ರಂದಿಸುತೆ ಜನಂ (ಶ್ರೀರಾಮಾ. ೧೧೯-೨೦೯) : ಪೋಲೀಸರು ರಂಗನ್ನ ಶಿಬಿಕೆಯ ಮೇಲಿರಿಸಿಕೊಂಡು ಹೊರಡುವರು (ಶಕಾರ. ೩೭). [ಸಂ. ಶಿಬಿಕಾ]

ಶಿಬಿರ (ನಾ). ೧. ಸೈನ್ಯವು ತಾತ್ಕಾಲಿಕವಾಗಿ ಬೀಡುಬಿಡುವ ಸ್ಥಳ ; ಠಾಣ್ಯ : ಶಿಬಿರರಕ್ಷಕರ ಗರ್ಭಮುಂ ಶಿಬಿರನಿತಂಬಿನಿಯರ ಗರ್ಭಮುಂ ಒಡನೊಡನೆ ಗಟಿಯಿಸೆ ಸಿಂಹಗರ್ಜನೆಯಿಂ ಗರ್ಜಿಸಿ . . . ಬಂದಾಗಳ್ (ಗದಾಯು. ೬-೩೦ ವ) ; ಹರಿ ಕಿರೀಟಿಗಳಿತ್ತ ಶಿಬಿರಕೆ ತಿರುಗಿದರು (ಕುವ್ಯಾಧ್ರೋ. ೮-೭); ರಮಣನುಂಗುರವನೆದೆಯಲ್ಲಿ ಗುಟ್ಟಾಗಿ ಬೈಚಿಟ್ಟು ನಡೆದಳ್ ಶಿಬಿರದೆಡೆಗೆ (ಚಿತ್ರಾಂಗ. ೫೬-೧೫೩೭). ೨. ರಾಜನ ವಸತಿ, — ಪಾಳೆಯ. ೩. ತಾತ್ಕಾಲಿಕವಾಗಿ ನಿರ್ಮಿಸಿದ ವಸತಿ, — ಬೀಡು : ಶಿಬಿರಂ ಫಣಿಹಿಂಸನಮಿಲ್ಲದಲ್ಲಿ ತೋಲ್ವನೆ ಪೊಲಸಿಲ್ಲದಲ್ಲಿ ಶಬರಂ ಸುಖಮಿರ್ಪನಿದೇಂ ಸುಚಿತ್ತಮೋ (ಅರ್ಧನೇ. ೩-೭೭) ; ದಾರಿಯಲ್ಲಿ ಸರಕಾರದವರು ನಿರಾಶ್ರಿತರ ನೆರವಿಗಾಗಿ ಅಲ್ಲಲ್ಲಿ ಶಿಬಿರಗಳನ್ನು ಕಟ್ಟಿರುವರು (ಪ್ರಣಸ. ೬೫). [ಸಂ.]

ಶಿಬಿರಾಗ್ನಿ (ನಾ). ಪಾಳೆಯದಲ್ಲಿ ಉರಿಸುವ ಬೆಂಕಿ : "ಶಿಬಿರದಲ್ಲಿ ಉರಿಸುವ ಬೆಂಕಿ: ಶಿಬಿರಾಗ್ನಿ" (Campfire. ಇಂಇಸಾ). [ಸಂ.]

ಶಿಬ್ಬಂದಿ 'ಸಿಬ್ಬಂದಿ' ನೋ.

ಶಿಯಳಾರ 'ಸಿಯಳಾಱ' ನೋ.

ಶಿರ$_1$ (ನಾ). ೧. ರಕ್ತನಾಳ ; ನರ ; ಧಮನಿ : ಹಣೆಯ ಮೇಲಿನ ಶಿರ ಎದ್ದು ಕಾಣುತ್ತಿತ್ತು (ಮೂರಾಬ. ೨೦೦). ೨. ಲೋಹಾಂಶದ ಎಳೆಯಿರುವ ಖನಿಜದ್ರವ್ಯ: ಜ್ವಾಲಾಮುಖಿಗಳಿಂದ ಹುಟ್ಟಿದ ಶಿಲೆಗಳಲ್ಲಿಯೂ ತಾಮ್ರ ಕಬ್ಬಿಣ ಮುಂತಾದವುಗಳ ಶಿರಗಳು ವಿಶೇಷವಾಗಿ ದೊರಿಯುವುದುಂಟು (ಮುಂಬಯಿ. ೬-೧೬).

[ಸಂ. ಶಿರಾ]

ಶಿರ$_2$ (ನಾ). ೧. ತಲೆ ; ರುಂಡ : ವಕ್ತ್ರಾರುಣಂ ಸಂಜೆಯಂ ಗಲೆ ಪೋಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ (ಕಾವ್ಯಸಾ. ೫೨೫ ಶೂದ್ರಕ); ಎನ್ನ ಕಾಲೇ ಕಂಭ . . . ಶಿ[ಪಾಠಾಂ. ಸಿ]ರ ಹೊನ್ನ ಕಳಸವಯ್ಯಾ (ಬಸವ. ೮೨೦) ; ಶಿರದೊಳ್ ಮುಸುಱಿದ ಮದ ಮಧುಕರನಿಕರಮನಲೆವ ಪವನಸಂಚಲಶಾಖಾಂಕುರಮೆಸೆದುದು (ಲೀಲಾವ. ೧೪-೯೨); ಗರುಡನಾಕಾರದಲಿ ಬಲವನು ಸರಿಸ ಮಿಗೆ ಮೋಹಿದನು ವಿಹಗನ ಶಿರಕೆ ಕೃಪ ಕುರುರಾಯ ದುಶ್ಶಾಸನನ ನಿಲಿಸಿದನು (ಕುಮಾರ್ಧ್ರೋ. ೨-೨೧). ೨. ಅಗ್ರಭಾಗ; ತುದಿ : ಪರ್ವತ ಶಿರದಿ ಜನ್ಮವೆತ್ತಿದ ತೊರೆ ಸಮುದ್ರಾಭಿಮುಖಮಾಗಿ ಪರಿಯಲರಿಮತೆ (ಶ್ರೀರಾಮಾ. ೨೫-೬೭೨). ೩. ಮರದ ತುದಿ : "ಪ್ರಾಗ್ರಂ (ತು), ಶಿಖರಂ, ಶಿರಃ — ಈ ೩ ಮರದ ತುದಿ" (ಹಲಾಯು. ೩೦-೨೬). ೪. ಮೆಣಸಿನ ಬೇರು. ೫. ಹಿಪ್ಪಲಿಯ ಬೇರು : "ಶಿರ — ಮೋಡಿ, ಹಿಪ್ಪಲೀಬೇರು" (ಗಂಗಾಮ. ೩೦೭). ೬. ಒಂದು ಬಗೆಯ ದೊಡ್ಡ ಹಾವು.

ಶಿರದೊಳಾನ್ = (ಆಜ್ಞೆ, ಅಪ್ಪಣೆ ಮುಂತಾದುವನ್ನು) ತಲೆಯಲ್ಲಿ ಇಟ್ಟುಕೊಳ್ಳು; **ಶಿರಸಾವಹಿಸು** : ನಿಮ್ಮಯಾಜ್ಞೆಯನೆ ಶಿರದೊಳಾಂತು ಪುರಾಂತಕಂ ನೀಂ ಕರೆಯಲೋ ಎನುತಿರ್ದನು (ಬಸಪು. ೨೮-೬೪). **ಶಿರಸಾವಹಿಸಿಕೊಳ್ಳು** = ತಲೆಯಲ್ಲಿ ಧರಿಸು : ಶಿವಪ್ರಸನ್ನವರವಂ ಶಿರಸಾವಹಿಸಿಕೊಂಡು ಬಂದಂತಃಪುರಮಂ ಪೊಕ್ಕು . . . ನಿದ್ದೆಗೆಯ್ಯಾಗಳ್ (ಹಮ್ಮೀರ. ೨-೧೬ ವ). **ಶಿರಸಾವಹಿಸು** = (ಆಲಂ) ಅಪ್ಪಣೆ, ಆಜ್ಞೆಗಳನ್ನು ನಮ್ರಭಾವದಿಂದ ಒಪ್ಪಿಕೊಳ್ಳು : ನೂರೊಂದು ಮಂದಿ ನಮ್ಮ ವಂಶದ ಅರಸುಗಳೆಲ್ಲರೂ ಆತನ ಶಾಸನವನ್ನು ಶಿರಸಾವಹಿಸಿದ್ದಾರೆ (ಕೃವಾಸ. ೨೩). [ಸಂ.]

ಶಿರ$_3$ 'ಶಿರಾ' ನೋ.

ಶಿರಂಟು, ಸಿರಂಟು (ನಾ). ಒಂದು ಬಗೆಯ ಸಸ್ಯ : ಪಾದರು, ನೆಲವೆಂಬು, ಗಂಟುಕಾಲು, ಕೆರೇಹಿಪ್ಪಲಿ, ಶಿರಂಟು, ನಾರವೆ (ನಮ್ಮನು. ೨೩೮). **ಸಿರಂಟು** : ಸಿರಂಟುಗಿಡ (ಮೃಚ್ಛಿ. ೬೪-೧೩೦೩). [?]

ಶಿರಂದೂಗು, ಶಿರದೂಗು (ಕ್ರಿ). ಮೆಚ್ಚುಗೆ, ಸಮ್ಮತಿ ಮೊದಲಾದ ಭಾವಗಳನ್ನು ಸೂಚಿಸಲು ತಲೆಯನ್ನು ಅಲ್ಲಾಡಿಸು ; ತಲೆದೂಗು : ಅಂಗುಲ್ಯಂಕುಶಾಕರ್ಷಣಮಮರೆ ಶಿರಂದೂಗುತಂತೆ [ಪಾಠಾಂ. ಚಿರಂರಾಗದಿಂದೆ]ತ್ತಿ ಕೆಯ್ಯಂ ಕೆದಱುತ್ತಂ ಧೂಳಿಯಂ ಪ್ರೀತಿಯನೊದವಿಪ [ಗಂಡೋಚ್ಚಲಡ್ಡಿಂಡಿ ಮಧ್ಯಾನದಿನೆಂದೋ ಮುಂದೆ ಮನ್ನಂದನೆನೆಸೆವ ಗಜಕ್ರೀಡೆಯಿಂದಾಡುತಿರ್ಪ್ಪಂ] (ಕಾದಂಪು. ೩೫೯). **ಶಿರದೂಗು**: ಶಿಷ್ಯನ ಸ್ವಾನುಭವನಿಸ್ಪೃಹತೆಗೆ ಯುಕ್ತಚಿತ್ತನು ಶಿರದೂಗುತಲಿ (ಗಗಾ. ೨-೨೯). [ಶಿರ$_2$ + ತೂಗು$_1$ (< ತೂಂಕು$_1$)]

ಶಿರಂಬರಂ (ಅ). ತಲೆಯವರೆಗೂ ; ತಲೆಮಟ್ಟ : ತಳ್ತಿಱಿದೊಡುಂಗುಟದಿಂದೆ ಶಿರಂಬರಂ ವರಾಹಂ ದಿಟಮೆತ್ತೆ ಮತ್ತಿಱಿಯೆ ಮತ್ತೆ ಕರಂ ಸೆಳೆದತ್ತೆ ನೊಂದು ತಾನೊಂದೆಸೆಯೊಳ್ ವರಾಹಪತಿಯೊಂದೆಸೆಯೊಳ್ ಕೆಡದತ್ತರಣ್ಯದೊಳ್ (ಗಿರಿಕ. ೧-೧೦೯). [ಶಿರ$_2$ + ಬರಂ (< ವರಂ)]

ಶಿರಃಕಂಪ (ನಾ). ತಲೆದೂಗುವಿಕೆ ; ತಲೆಯ ಅಲುಗಾಟ : ನಮಗಿಂತಿರೆ ಮುನ್ನೆ ನೋಂತರಾರ್ ಎಂದು ಪರಮಾಶ್ಚರ್ಯಪರ್ಯಾತೀತ ಶಿರಃಕಂಪಂಬೆರಸು ಸುರಪತಿ ಕೆಯ್ಯಿಱಿದು. . . ಪೊಗಟಲಱಿಯಂ ಸಭೆಯೊಳ್ (ಶಾಂತಿಪು. ೧೦-೭೫ ವ). [ಸಂ.]

ಶಿರಃಪ್ರಧಾನಿ (ನಾ). ಪ್ರಮುಖ ಸಚಿವ ; ಸಚಿವಮುಖ್ಯ : ಕದನಕನುವಾಗಿರಲಿ ಪಾಯದಳಮೆಂದು ನುಡಿದಂ ಸುಬುದ್ಧಿ ನೊದಲಾಗಿಹ ಶಿರಃಪ್ರಧಾನಿಗಳ ಕೂಡೆ (ಪ್ರಮುಭಾ. ೧೭-೩೦). [ಸಂ. ಶಿರಃಪ್ರಧಾನಿನ್]

ಶಿರಃಪ್ರಹರಣ (ನಾ). ತಲೆಯು ಕತ್ತರಿಸಿ ಹೋಗುವುದು : ಅಹಿತರ್ ಸಂಧಿಯುಮಂ ವಿಗ್ರಹಮುಮನಾತನೊಡರ್ಚರೇಕೆನೆ ಸರ್ವಸ್ವಹರಣಮಂ ಸಂಧಿ ಶಿರಃಪ್ರಹರಣಮಂ ತಮಗೆ ವಿಗ್ರಹಂ ಮಾಟ್ಟುದೆಂ (ಶಾಂತಿಪು. ೧೦-೧೧೪). [ಸಂ.]

ಶಿರಗೊಡಹು (ಕ್ರಿ). (ನಿಷೇಧಾರ್ಥಸೂಚಕವಾಗಿ) ತಲೆಯನ್ನು ಅಲುಗಾಡಿಸು; ತಲೆ ಕೊಡಹು : ಪರಿಪರಿಯನ್ನವಾನವ . . . ತರತರದೊಳು ನೀಡುತಿಹಳು ಶಿರಗೊಡಹುವನು ಸಾಸಿರಂದು (ಭರತ. ೧೮-೫೫). [ಶಿರ$_2$ + ಕೊಡಹು (< ಕೊಡಪು)]

ಶಿರಚ್ಛೇದ (ನಾ). ತಲೆಯನ್ನು ಕತ್ತರಿಸುವಿಕೆ, – ಛೇದಿಸುವಿಕೆ. [ಸಂ. ಶಿರಶ್ಛೇದ]

ಶಿರಚ್ಛೇದನ (ನಾ). = ಶಿರಚ್ಛೇದ : ತಗದುಕೊ ಈ ಕರವಾಳವನ್ನು, ಇದರಿಂದ ನನ್ನ ಶಿರಚ್ಛೇದನ ಮಾಡಿ ನೀನು ಆತ್ಮಹತ್ಯೆಮಾಡಿಕೊ (ಗಾಲಿ. ೪೧೧) ; ಇವಳ ಶಿರಚ್ಛೇದನ ನಾಳೆ ಬೆಳಿಗ್ಗೆ ಆಗಲಿ (ಕೂಷ್ಮಾ. ೧೨೧). [ಸಂ. ಶಿರಶ್ಛೇದನ]

ಶಿರದೂಗು 'ಶಿರಂದೂಗು' ನೋ.

ಶಿರಪೇಚ 'ಸಿರಪೇಷ್' ನೋ.

ಶಿರಪೇಚು 'ಸಿರಪೇಷ್' ನೋ.

ಶಿರಪೊಟ್ಟಲಿ, ಸಿರಪೊಟ್ಟಲಿ (ನಾ). ಒಂದು ಬಗೆಯ ಸಸ್ಯ : ಈ ಮುಂದೆ ಹೂವು, ಹಣ್ಣು, ಕಾಳು, ಗಡ್ಡೆ ಎಲ್ಲ ಸೇರಿದ ಪಟ್ಟಿಯನ್ನು ಕೊಟ್ಟಿದೆ . . . ಶಿರಪೊಟ್ಟಲಿ, ಅಂಟುಪುರುಲೆ, ಉತ್ತರಾಣಿ, ಬಸಲೆ, ಬಾಯಿಬಸಲೆ (ನಮ್ಮಸು. ೨೩೮). **ಸಿರಪೊಟ್ಟಲಿ** : ಸಿರಪೊಟ್ಟಗಿಡ (ಮೃಜಿ. ೬೨-೧೨೬೫). [?]

ಶಿರಪ್ರಧಾನ (ನಾ). = ಶಿರಃಪ್ರಧಾನಿ : ಕೃಷ್ಣರಾಯರ ನಿರೂಪದಿಂ ಅವರ ಶಿರಪ್ರಧಾನರಾದ ಸಾಳುವಗೋವಿಂದರಾಜಯ್ಯನವರು . . . ಅಲಕೆಲೆಯ ನಾನಾಗೋತ್ರದ . . ವಿತ್ತಿಯ ಅಶೇಷಮಹಾಜನಂಗಳಿಗೆ ಧಾರೆಯನೆಱದು ಕೊಟ್ಟರು (ಎಕ. XIV. ಎಳಂದೂ. ೧೯೦ ಕ ; ಸು. 1519) [ಸಂ.]

ಶಿರಬಾಗು (ಕ್ರಿ). ೧. ನಮಸ್ಕರಿಸು ; ತಲೆಬಾಗು : ಕಡುವೇಗದಿಂದ ಮಾಗಡದ ತೀರ್ಥಕೆ ಬಂದು ಒಡನೆ ಸ್ನಾನವ ಮಾಡಿ ಮುದದಿ ಪೊಡಮಟ್ಟು ಶಿರಬಾಗಿದ [ವಾಕಾ. ಶಿರವ ಬಾಗೆದು] ಮಲ್ಲಿಕಾರ್ಜುನನಡಿಗಜಿನಿವನು ಭಕ್ತಿಯಲಿ (ಅಭಿಮ. ೬-೬) ; ಪೃಥಿವಿಪರ್ತಿಯೆಲ ನೆನೆದು, ವೃಥಭಕ್ತಿಯಲಿ ಕೈ ಮುಗಿದು ಶಿರಬಾಗಿ ಗುಡಿಯ ವಿಗ್ರಹಕೆ. ಹೂಲಹೊಂಟಳು (ಚಿತ್ರಾಂಗ. ೬ ೧೪೯). ೨. (ಆಲಂ) ಅಪ್ಪಣೆಯನ್ನು ಸ್ವೀಕರಿಸು : ಅಧಿಕಾರಿಯು ಕೊಟ್ಟ ತೀರ್ಮಾನಕ್ಕೆ ಕವಿಯ ಅಧಿಕಾರಿ ಶಿರಬಾಗಿದನು (ರಘು) ೩. ಸೋಲನ್ನು ಒಪ್ಪಿಕೊಳ್ಳು : ಅಲಕ್ಷಾಂಡರನಿಗೆ ಅನೇಕ ರಾಜರು ಶಿರಬಾಗಬೇಕಾಯಿತು (ರೂಢಿ). [ಶಿರ$_2$ + ಬಾಗು$_1$]

ಶಿರಬೇರು (ನಾ). ನಾಳ ಸಹಿತವಾದ ಕುತ್ತಿಗೆ, – ಕತ್ತು : ಕರಿಮುಖ ಶಾರದೆಯರು ಲೋಕದೊಳು ಮತಿಗರುಹರೆಂಬರು ಕಾಣದವರು ಶಿರಬೇರು ಸಾಸಿಕವರಿವಾಗ ಮತಿಯುಕ್ತಿಯರಿದುಮೊ ಅವರಿರ್ವರಿಗೆ (ಅಮುಸು. ೧೦-೨೨).

[ಶಿರ$_2$ + ಬೇರು (< ಬೇರ್$_1$)]

ಶಿರಮಡ್ಡು (ನಾ). ಒಂದು ಬಗೆಯ ದಿವ್ಯ (?) : ಪರವಾಸಿಗೆ ನಾಂ ತೊಡರ್ದು ಮುಡಿಗೆ ವಿಷನಿರ್ಪ ಶಿರಮಡ್ಡುಗಳು ಮುಂತಾದ ದಿವ್ಯಂಗಳಂ ಗಡ್ಡು ಬೋರ್ದವನ ಕೊಂತಮಂ ಪಾಯಿಸುವೆನು (ರಾಘವ. ೧೯-೧೧೦). [?]

ಶಿರಮುಂಡನ (ನಾ). ತಲೆಯನ್ನು ಬೋಳಿಸುವುದು : ಎಣ್ಣೆ ಅರಿಸಿನ ಗಂಧ ಕುಂಕುಮಂ ಪುಷ್ಪಂಗಳನ್ನುಳಿದು ಶಿರಮುಂಡಣಿನತೆದಿ ಬಣಗುಮಂಡೆಯಾಗಿನ್ನುಂ ನಿರಾಶ್ರಯದಿ ಬಾಳುನೆನೆ (ಸವಮೋ. ೪-೧೫). [ಸಂ.]

ಶಿರಶ್ಛೇದನ (ನಾ). ತಲೆಯನ್ನು ಕಡಿಯುವಿಕೆ, – ಕತ್ತರಿಸುವಿಕೆ : ಕೆಂಚವೀರಾಖ್ಯಂಗ ಮುದದೆ ಪೇೞ್ದೀ ವೀರಶೈವಾಮೃತದೊಳಗಾದುದು ವಿಧಿ ಶಿರಶ್ಛೇದನದ ತಾಣಕೆರಡು ಕಾಂಡದ ಮೇಲೆ ಸುಧಿಯೊಂದು (ವೀಶೈಪು. ೩-೧೦೧) ; ಅಧಿಕಾರಿಗಳು ಕ್ರೂರ ಕಿರಾತನಾದ ದುಷ್ಟಬುದ್ಧಿಗೆ . . . ಶಿರಶ್ಛೇದನವನ್ನು ಮಾಡಿಸಿದ ವರ್ತಮಾನವನ್ನೂ ಪಾಂಡ್ಯರಾಜನಿಗೆ ಬಿನ್ನವತ್ತಲೆಯಲ್ಲಿ ಬರೆದು ಮಧುರಾಪುರಕ್ಕೆ ಕಳುಹಿಸಿದರು (ಕವಿಕ. ೫೪). [ಸಂ.]

ಶಿರಸಿಜ (ನಾ). ತಲೆಯಲ್ಲಿ ಹುಟ್ಟಿದುದು ; ತಲೆಕೂದಲು : "ಚಿಕುರಂ ಕಚಂ ಶಿರಸಿಜಂ ಕೇಶಮಾ ವಾಳಮೆನೆ ಕೂಂದಲಕ್ಕು" (ಮಂಗರಾ. ೯೪-೫). [ಸಂ.]

ಶಿರಸು (ನಾ). ತಲೆ ; ಶಿರ : ಪರಿಹರಿಸಿ ಮತ್ಸ್ಯಾವತಾರವನುರಗಕಟಕಂ ಸುತ್ತಿದನಲಾ ಶಿರಸಿನಲಿ ಕೂರ್ಮನ ಶಿರಂ ಹರ ಹಾರಮಧ್ಯದಲಿ (ಬಸವ. ೫೪-೪೨). [ಸಂ. ಶಿರಸ್]

ಶಿರಸ್ತೆ, ಷಿರಸ್ತೆ (ನಾ). ೧. ಕಂದಾಯ, ತೆರಿಗೆ ಮುಂತಾದುವುಗಳ ವಸೂಲಿಯನ್ನು ನೋಡಿಕೊಳ್ಳುವ ಇಲಾಖೆ : 'ಶಿರಸ್ತೆದಾರ' ಪರಾ. ೨. ಶಿರಸ್ತೇದಾರನ ಪದವಿ, – ಅಧಿಕಾರ : ಸರ್ವಾಧಿಕಾರಿ ನಂಜರಾಜಯ್ಯನಲ್ಲಿ, ತಿಳಿಸಿ ಗಡಿಗಳಲ್ಲಿ ಅಮಲು ಶಿರಸ್ತೆ, ಕಿಲ್ಲೆ, ಮುಂತಾದ ಅಧಿಕಾರಗಳನ್ನು ಕೊಡಿಸುತ್ತ (ಮಹಾವಂ I. ೧೭೫) ; ರಾಮಯ್ಯನವರಿಗೆ ತಾಲೂಕಿನ 'ಶಿರಸ್ತೆ' ಪದವಿ ಸಿಕ್ಕಿತ್ತು (ದಕ್ಷಿಸ. ೯೮). ೩. ಪದ್ಧತಿ ; ರೂಢಿ : ಎರಡನೇ ಪ್ರಕಾರದಿಂದ ಹೋಗುವ ಜೀನಸುಗಳಿಗೆ ಮೊದಲನೇ ಶಿರಸ್ತೆಯ ಪ್ರಕಾರ ತಕ್ಕೊಳ್ಳಲಾದೀತು (ಮುಂಬವ್ಯಾ. ೨೪೮). **ಷಿರಸ್ತೆ** : ೩. ನಾವ್ ಷಿರಸ್ತೆ ಪ್ರಕಾರ ಬಡ್ಡಿ ತಗೋತಾವ್ (ಮೋಮೀ. ೪೧).

[← ಪಾರ. ಸರಿಶ್ತ; ಹಿಂ. ಸರಿಶ್ತಾ, ಸಿರಿಶ್ತಾ; ಮರಾ. ಶಿರಸ್ತಾ, ಶಿರಿಸ್ತಾ]

ಶಿರಸ್ತೆದಾರ, ಶಿರಸ್ತೇದಾರ, ಸಿರಸ್ತೇದಾರ (ನಾ). ೧. ತಾಲ್ಲೂಕು ಮತ್ತು ಜಿಲ್ಲಾಕಚೇರಿಗಳಲ್ಲಿ ಕಂದಾಯದ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿ ; ಮುಖ್ಯ ಅಧಿಕಾರಿ : ಯಾ ಸಂನ್ನದಿನ ನಕಲಂನ್ನ ನಿಮ ನಿಮ ಗಡಿಗಳ ಶಿರಸ್ತೆದಾರರ ಲಿಖಿತ ಬರ್ಸಿ (ಮೈಅಂ. ೧೯೩೮. ೧೯-೧೯ : 1811) : ಆರಮನೆ ಶಿರಸ್ತೆದಾರ ಹಿರಣ್ಣಯ್ಯನ ಮಗ ಮೋದಿಪಾನೆ ಶಿರಸ್ತೆದಾರ ನರಸಯ್ಯನು (ಎಕ. XIV.ಮಂಡ್ಯ.೧೩೪-೬ ; 1865) ; ಸುಬೇದಾರ, ಶಿರಸ್ತೆದಾರ, ಕಿಲ್ಲೆದಾರ ಮುಂತಾದವರಿಗೆ ಅವರವರ ಚಾಕರಿಯ ವಿಧವರಿತು ಸಂಬಳವನ್ನು ನಿಷ್ಕರ್ಷಿಸಿ . . . ಕಟ್ಟಳೆಮಾಡಿದರು (ಮಹಾವಂ. I. ೧೧೫). ೨. ನ್ಯಾಯಾಲಯದ ಕಚೇರಿಯಲ್ಲಿರುವ ಮುಖ್ಯಕರಣಿಕ : (ಮೈಗಜ. IV. ೭೮೬). **ಶಿರಸ್ತೇದಾರ** : ೧. ಸಾಲಿಗ್ರಾಮದ ಅರಳಿಕಟೆ ಶಿರಸ್ತೇದಾರ ಸುಬ್ಬಯ್ಯನವರ ಮಗ . . . ಸುಬ್ಬರಾಯನ ಸೇವೆ (ಎಕ XIV. ಶ್ರೀರಂಗ. ೩೦೯-೪ ; ?) : ಕಲೆಕ್ಟರ ಕಚೇರಿಯ ಶಿರಸ್ತೇದಾರರೂ, ಅವನ ದುರ್ಬೋಧನೆಗೆ ಒಳಗಾಗಿರುವ ಕಲೆಕ್ಟರೂ ದೇವರಾಜಪಿಳ್ಳೆಯವರಿಗೆ ಆಗದವರು (ಪ್ರತಾಪ. ೬೭). **ಸಿರಸ್ತೇದಾರ**: ೧.ಅಮಿಲಾನೆ ಸಿರಸ್ತೇದಾರನೆ ಹುಲಿಯಿಸ್ತಕಬಾಲ ವೊಕದ್ದಮಾನೆ ಮುಚಾರಿಯಾನೆ (ಎಕ. VI.ಕೊಪ್ಪ. ೪೮ ೫೧; 181 :). [← ಪಾರ. ಸರಿಶ್ತದಾರ್; ಹಿಂ. ಸರಿಶ್ತೇದಾರ್, ಸರಿಶ್ತೇದಾರ್; ಮರಾ. ಶಿರಸ್ತೇದಾರ್, ಶಿರಿಸ್ತೇದಾರ್]

ಶಿರಸ್ತೇದಾರ 'ಶಿರಸ್ತೆದಾರ' ನೋ.

ಶಿರಸ್ತೋದ (ನಾ). ತಲೆನೋವು ; ತಲೆಬೇನೆ : ದುಷ್ಕೃತಿಯಂ ವಿಸ್ತಾರಿಸಿ ಸಲೆ ಸುಜನ ಶಿರಸ್ತೋದಮನೇಕೆ ಮಸಗಿ ಮಾಟ್ಪರೊ ಕೆಲಬರ್ (ವೀಲಾವ. ೧೦೨೨). [ಸಂ.]

ಶಿರಸ್ತ್ರ (ನಾ). ೧. ತಲೆಯ ರಕ್ಷಣೆಗಾಗಿ ಧರಿಸುವ ಲೋಹದ ಟೊಪ್ಪಿಗೆ. ೨. ಟೋಪಿ, ಪೇಟ, ರುಮಾಲು ಮುಂತಾದುವು : "ಶೀರ್ಷಕಂ, ಶೀರ್ಷಣ್ಯಂ, ಶಿರಸ್ತ್ರಂ – ೩ ತಲೆಯನ್ನು ರಕ್ಷಿಸುವ ಲೋಹದ ಟೊಪ್ಪಿಗೆ, ತೊಗಲ ಟೋಪಿ, ಕುಳ್ಳಾವಿ ಮುಂತಾದ ಶಿರಸ್ತ್ರಾಣದ ಹೆಸರು" (ವಿದ್ಯಾಂತಿ. ೨೫೬). [ಸಂ.]

ಶಿರಸ್ತ್ರಾಣ (ನಾ). ೧. ತಲೆಯನ್ನು ರಕ್ಷಿಸಿಕೊಳ್ಳುವ ಸಾಧನ ; ತಲೆಕಾಪು: ದಂಡನಾಯಕರಂಗೆ ಶರಣಾಗತರಾಗಿ ನಿಜಶಿರಸ್ತ್ರಾಣಪರಾಯಣರಾದರ್ (ಶಾಂತಿಪು. ೧೦-೨೪ ವ) · ಬಿಲ್ಲು ತೀರು ಹೆದೆ . . . ಶಿರಸ್ತ್ರಾಣ ಮಧ್ಯತ್ರಾಣ . . . ಮಾಯಾರಿ ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿಸಾಧನವಿಶೇಷಂಗಳಿಂದಲು (ವಿವೇಕ. ೨೪೧) : ತನ್ನ ಶಿರಸ್ತ್ರಾಣವನ್ನೂ ನಿಲುವಂಗಿಯನ್ನೂ ಅದರ ತುದಿಗೆ ಸಿಕ್ಕುಹಾಕಿ ಅಲ್ಲಿಯೇ ಸಮಾಪದಲ್ಲಿ ಕುಳಿತುಕೊಂಡರು (ಮೀದಿಮ. ೧೮೩). ೨. ಪೇಟ, ಟೋಪಿ ಮುಂತಾದ ತಲೆಯುಡುಗೆ: ಇಂತಹದೊಂದು ಯಜ್ಞ ಸಮಾರಂಭದಲ್ಲಿ ನನ್ನ ಹೊಸ ಜರತಾರಿ ಶಿರಸ್ತ್ರಾಣ ಅಗ್ನಿಪ್ರವೇಶ ಮಾಡಿ ಪರಂಧಾಮಕ್ಕೆ ಹೋಯಿತು (ಗಾಂವ. ೧೫೯) ; ಅವರ ಬಟ್ಟೆಬರೆಗಳಲ್ಲಿ ಆಡಂಬರವಿರಲಿಲ್ಲ. ಮಾಸಲುಬಣ್ಣಕ್ಕೆ ತಿರುಗಿದ ಪಂಚೆ, ಅಂಥದೇ ಶಿರಸ್ತ್ರಾಣ (ರಂಗರೂ. ೭). [ಸಂ.]

ಶಿರಸ್ಥಲ (ನಾ). [ವೀಶೈ] ಲಿಂಗಧಾರಣೆಯ ಮೂರು ಸ್ಥಳಗಳಾದ ಕರ, ಉರ ಮತ್ತು ಶಿರಗಳಲ್ಲಿ ಒಂದು : ಕಾಯಸ್ಥಲ ಕರಸ್ಥಲ ಉರಸ್ಥಲ ಶಿರಸ್ಥಲ ಪ್ರಾಣಸ್ಥಲ ಭಾವಸ್ಥಲವೆಂದು ನುಡಿದಾಡುವರು ಆ ಸ್ಥಲದೊಳಗಣ ಸ್ವಯಸ್ಥಲವನಱಿಯರು ಕಾಣರೇ . . . ಶಿರಸ್ಥಲವನಱಿದರೆ ಶಿವನೆಂಬುದಕ್ಕೆ ಇಲ್ಲ (ಪಚಸಂ. ೧೪೩-೩೩). [ಸಂ.]

ಶಿರಸ್ನಾನ (ನಾ). ತಲೆಗೆ ಎರೆದುಕೊಳ್ಳುವಿಕೆ ; ಅಭ್ಯಂಜನ. [ಸಂ.]

ಶಿರಸ್ಸು (ನಾ). ೧. ತಲೆ; ಶಿರ : "ಚೂಡದೊಳು ಶಿಖಿಯಲ್ಲಿ ಶಿರಸ್ಸಂಬುದು" (ಮಂಗರಾ. ೧೩೯-೭) ; ಮಧ್ಯಮಾ ಸಂಜ್ಞಿಕಾವಾಣಿಯೆ ಉರಸ್ಸು ಕಂಠ . . . ಶಿರಸ್ಸೆಂಬ ಸ್ಥಾನಾಷ್ಟಕದಲ್ಲಿ ಪ್ರಾಣವಾಯುಸಂಬಂಧಮಾಗಲು (ವೀಕ್ಷ ೧೭೦) ; ಮನಸ್ಸು ಪಯಸ್ಸು ಯಶಸ್ಸು ಶಿರಸ್ಸು (ಶಬ್ದಾನು. ೧೩೩ ಪ್ರಯೋ). ೨. ಮಕುಟ ; ಕಿರೀಟ. ೩. ದಿಕ್ಕು ; ದೆಸೆ. ೪. ಹಾಸುಗೆ. ೫. ಕಬ್ಬು, ಬಿದಿರು ಮೊದಲಾದುವುಗಳ ಗಂಟು ; ಪರ್ವ. ೬. ತಲೆಬುರುಡೆ. ೭. ನಿಜವಾದುದು ; ಖಂಡಿತವಾದುದು. ೮. ಕಣ್ಣೆದುರಿನದು; ಪ್ರತ್ಯಕ್ಷ. ೯. ಪರ್ವತದ ತುದಿ ; ಶಿಖರ. "ದೆಸೆಯುಂ ತಳ್ಪಮುಂ ಪರ್ವಮುಂ ತಾಂ ನಿರುತಂ ಪ್ರತ್ಯಕ್ಷಮುಂ ಸನ್ಮಕುಟ ಶಿಖಿ ಶಿರಂಗಳ್ ಶಿರಸ್ಸೆಂದೆನಿಕುಂ" (ನಾನಾರ್ಥ. ೧೬೩). [ಸಂ. ಶಿರಸ್]

ಶಿರಾ, ಶಿರ್ರ, ಸಿರ್ರ, ಸಿರಾ (ನಾ). (ಉಕ) ತುಪ್ಪದಲ್ಲಿ ರವೆಯನ್ನು ಹುರಿದು ಸಕ್ಕರೆ ಹಾಕಿ ಬೇಯಿಸಿ ಮಾಡುವ ಒಂದು ಬಗೆಯ ಸಿಹಿತಿಂಡಿ ; ಸಜ್ಜಿಗೆ ; ಕೇಸರಿಭಾತು : ಎರಡುನಿಮಿಷದಲ್ಲಿ ಜವಾನ ಹಾಲು ಮತ್ತು ಶಿರಾ ತಂದು ಮೇಜನ ಮೇಲೆ ಇರಿಸಿದ (ನಿರ್ದೋಷಿ. ೬೫) ; ನಿನಗೆ ಶಿರಾ ಮಾಡಿಕೊಡುತ್ತೇನೆ (ಸ್ಮೃತಿಚಿ. ೧೨೬). **ಶಿರ್ರ** : ಪುರೆ. ಶ್ರೀಖಂಡ, ಶಿರ ಎಲ್ಲ ತಿಂದು ತಿಂದು ಮತ್ತೆ ಚೆಲ್ಲಬೇಕಾಯ್ತು (ಇತ್ರಿಶ್ರೀ. ೫೩). **ಸಿರ್ರ** : ಗಿರಾಕಿಗಳ ಬಾಯಲ್ಲಿ ರಸಮೊಸರುವಂತೆ ತಯಾರಿಸುವ ಸಿರ, ಕರಿದ ಎಣ್ಣೆಯಲ್ಲಿಯೆ ಕರಿದರೂ . . . ರುಚಿ ಕೊಡುವ ಆ ಭಜಿ (ಮುಂಗಾವು. ೫೭). **ಸಿರಾ**: ಅಡುಗಲಜ್ಜಿ 'ಸಿರಾ' ಮಾಡಿ ತಿನಬಯಸುವಳು (ಗರಬಾ. ೩). [← ಹಿಂ. ಸೀರಾ = ಹಲ್ವ; ಮರಾ. ಶಿರಾ]

ಶಿರಾಜಿ 'ಶಿರಾದಿ' ನೋ.

ಶಿರಾದಿ, ಶಿರಾಜಿ, ಸಿರಾಜಿ (ನಾ). ಒಂದು ಬಗೆಯ ಆಯುಧ : ಶಿರಾದಿ ಚೂರಿ ಚಿಕ್ಕಠಾರಿ . . . ವಂಕಿ ಲೌಡಿ ಜವದಾಡಿಯೆಂಬ ಬತ್ತೀಸಾಯುಧಪಾಣಿಗಳಾದ ಘನದೇವತೆಗಳಿರ್ಕುಂ (ವೀಕ್ಷ. ೨೬೨). **ಶಿರಾಜಿ** : ಗರಗಸಂ ಮುಸಲ ಚಿಕ್ಕರಿ ಚೂರಿ ಪಾಶಪಟೆಯ ಶಿರಾಜಿಯು ಕಠಾರಿ . . . ಮರವ ಜವದಾಡಿಟ್ಟಿಯೆಂಬ ಮೂವತ್ತೆರಡು ಪರಿಯ ಶಸ್ತ್ರಗಳಾಂತು ಘನದೇವತೆಗಳಿರ್ಕುಂ (ಚತುಪ್ರ. ೫-೨-೪೪). **ಸಿರಾಜಿ** : ನಾನು ನಿಮಗೋಸುಗ ಬಸವಾಪಟ್ಟಣದಿಂದ ಉತ್ತಮವಾದ ಸಿರಾಜಿಯನ್ನು ತಂದಿದ್ದೇನೆ (ವಿಕಾಶ. ೫೩). [← ಪಾರ. ಹಿಂ. ಶಿರಾಜ್, ಶಿರಾಜಿ = ಪರ್ಷಿಯಾದೇಶದ ಒಂದು ನಗರ./ ತೆಲು. ಸಿರಾಜಿ = ಒಂದು ದೇಶ; ಸಿರಾಣ = ಒಂದು ಆಯುಧ]

ಶಿರೀಷ (ನಾ). ಒಂದು ಬಗೆಯ ಮರ ಮತ್ತು ಕೋಮಲವಾದ ಅದರ ಹೂವು; ಬಾಗೆ: "ಶುಕತರು ಭಾಂಡಿ ಶಿರೀಷಂ" (ವಸ್ತುಕೋ. ೩೫-೧೪) ; ವಿನಮಿತಚೂತಕುಜಾತಸಮಾಜಂ ಶಾಳತಾಳ ಹಿಂತಾಳ ಶಿರೀಷಂ ಸ್ಥೂಳಕ್ಕಾಳ ಕರೀರಾಶೇಷಂ (ಸುಕುಮಾ. ೧೦-೫೫ ರಗಳೆ) ; ರುದ್ರಾಕ್ಷ ಭದ್ರಾಕ್ಷ ಗುಂಜಾ ಶಿರೀಷಾದಿ ಲತಾಗೃಹಂಗಳುಂ (ವೀಕ್ಷ. ೨೧೧). [ಸಂ.]

ಶಿರೀಷಕುಸುಮ (ನಾ). ಬಾಗೆಯ ಹೂವು : ವನಭೃತ್ಕುಂತಳೆಯಾ ಶಿರೀಷ ಕುಸುಮಾಭಾಂಗಕ್ಕೆ ಕಂದಂ . . . ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದನಾವನಾತನೆ ವಲಂ ಗಂಧೇಭವಿದ್ಯಾಧರಂ (ಪಂಪಭಾ. ೪-೬೪) ; ಚಂದನಲೇಪಂಗಳಿಂ ಧವಳಾಯಮಾನಮುಂ ಶಿರೀಷಕುಸುಮಾಭರಣಂಗಳಿಂ ಹರಿತಾಯಮಾನಮುಮಪ್ಪ ಮಾರ್ಗಮಂ ನೋಡುತೆ ಬರ್ಪನ್ನೆಗಂ (ಕಾದಂಬಾ. ೧೦೧೦). [ಸಂ.]

ಶಿರುನಾರುಗೆಡ್ಡೆ (ನಾ). ಒಂದು ಬಗೆಯ ಸಸ್ಯ ; "ವನಕೋಲಕಂದ" (ಪಂಡಿತ. ೨೭೬) : ಕಾಡುಬೆಳ್ಳುಳ್ಳಿ, ಶಿರುನಾರುಗೆಡ್ಡೆ, ಸೀಮೆನರೀಈರುಳ್ಳಿ (ಮೈಔಗಿ. ೬೮-೧೫೯೭). [? + ಗೆಡ್ಡೆ (< ಗಡ್ಡೆ)]

ಶಿರೆ (ನಾ). ನರ ; ರಕ್ತನಾಳ ; ಧಮನಿ : "ಎಲೆಯ ಮುಖ್ಯ ಶಿರೆ, ನರ" (Nerve. ಇಂಕನಿ). [ಸಂ. ಶಿರಾ]

ಶಿರೋಗೃಹ (ನಾ). ಮಹಡಿಯ ಮೇಲಿರುವ ಅಂಗಳ ; ಚಂದ್ರಶಾಲೆ : "ಚಂದ್ರಶಾಲಾ, ಶಿರೋಗೃಹಂ — ೨ ಚಂದ್ರಶಾಲೆ" (ಹಲಾಯು. ೫೦-೧೪೯). [ಸಂ.]

ಶಿರೋಗ್ರ (ನಾ). ತಲೆಯ ಮೇಲುಭಾಗ : ಸುಮನೋಮಾಲೆಯುಮೊರ್ಮೆಯುಂ ಓಮದೊಳೇಂ ಬಾಡಿರ್ದಗಲ್ಲಿರ್ಕುಮಗ್ರಿಮಚೂಪಾಲಶಿರೋಗ್ರಮಂ (ಶಾಂತಿಪು. ೯-೧೫೧). [ಸಂ.]

ಶಿರೋಗ್ರಂಥಿ (ನಾ). ತಲೆಯಲ್ಲಿ ಆಭರಣವಾಗಿ ಧರಿಸುವ ಮುತ್ತಿನ ಗೊಂಡೆ: "ತೊಂಡಿಲು ಶಿರೋಗ್ರಂಥಿಯೆನಿಸಿಕ್ಕು" (ಮಂಗರಾ. ೯೯-೨೦). [ಸಂ.]

ಶಿರೋಜ (ನಾ). ತಲೆಯಲ್ಲಿ ಹುಟ್ಟಿದುದು ; ತಲೆಕೂದಲು : "ತಲೆರೋಮಂ ಚಿಕುರಂ ಕಚಂ ಶಿರಸಿಜಂ ಕೇಶಂ ಶಿರೋಜಂ ನವಿರ್" (ವಸ್ತುಕೋ. ೭೦-೨೦) ; ಮೌಳಿಯೊಳುದ್ಭ್ರಮದ್ಭ್ರಮರಭಾರವಿಭಗ್ನಮಧೂಳಿ ಮಾಲತೀಮಾಳ ಮನಕ್ಕೆ ವಂದೆಸೆದುದಾ ದಮಿತಾರಿಯ ಕೀರ್ತಿ ಲೋಕಮಂ ವ್ಯಾಳಿ ತೊಟಲ್ದು ತನ್ನ ಗಮನಶ್ರಮಮಂ ಕಳೆಯಲ್ಕೆ ತನ್ಮೊಹೀಪಾಳಶಿರೋಜರಾಜಿ ಪರಭಾಗಮನಾಶ್ರಯಿಸಿರ್ದಳೆಂಬಿನಂ (ಶಾಂತಿಪು. ೩-೩೬). [ಸಂ.]

ಶಿರೋದಳನ (ನಾ). ತಲೆಯನ್ನು ಸೀಳುವಿಕೆ, — ಕತ್ತರಿಸುವಿಕೆ : ಅರಿಕೇಸರಿಗಾತ್ಮಜರರಿನರಪ ಶಿರೋದಳನ ಪರಿಣತೋಗ್ರಾಸಿಭಯಂಕರಕರರ್ (ಪಂಪಭಾ. ೧-೨೨). [ಸಂ. ಶಿರೋದಲನ]

ಶಿರೋದಾಹ (ನಾ). (ಉಷ್ಣದ ಪರಿಣಾಮವಾಗಿ) ತಲೆ ಬಿಸಿಯಾಗಿರುವುದು: ಆ ಚೂರ್ಣವಂ ಸಕ್ಕರೆಗೂಡಿ ಹಸುವಿನ ಹಾಲಿನಲ್ಲಿ ಸೇವಿಸಲು ಆವರಣರೋಗ, ಮೂತ್ರಕೃಚ್ಛ್ರ, ರಕ್ತಪಿತ್ತ, ಕಾಮಾಲೆ, ಶಿರೋದಾಹ . . . ಪರಿಹರಮಕ್ಕುಂ (ಸಕಪ್ರ. ೧೪೭). [ಸಂ.]

ಶಿರೋದೇಶ (ನಾ). ೧. ತಲೆ ; ಮಂಡೆ: ಶಿಷ್ಯನ . . . ಶಿರೋದೇಶದಲಭಯವಿಡುತ ವರನಿರಂಜನನೆಂಬ ನಾಮವ . . . ತಾನಿಡುತ (ಗಗತಾ. ೨-೩೦). ೨. ಹಣೆ ; ನೊಸಲು: "ನೀಚಕೇ, ಶಿರೋದೇಶ - ಈ ೨ ಹಣೆ" (ಹಲಾಯು. ೪೪-೧೧೨). [ಸಂ.]

ಶಿರೋದ್ಗತ (ನಾ). [ಸಂಗೀತ] ಹದಿನೈದು ವಿಧವಾದ ಸ್ವರದೋಷಗಳಲ್ಲಿ ಒಂದು ; IP (ಒಂಟೆಯ ಹಾಗೆ) ಕತ್ತನ್ನು ಎತ್ತಿ ಹಾಡುವ ಉಚ್ಚಾರಣಾ ದೋಷ : ಕಂಪಿತ ಚಿಂತಿತ ಅನುನಾಸಿಕ ಶಿರೋದ್ಗತ . . . ತಾಳವಿಹೀನವೆಂಬ ಪದಿನೈದು ಸ್ವರದೂಷಣಂ ಪೊರ್ದದೆ ಪಾಡಿ ಮೋಹಿಸುವ ಗಾಯಕರಿಂ (ವೀಕ್ಷ. ೧೯೦). [ಸಂ.]

ಶಿರೋಧರ (ನಾ). ಕತ್ತು ; ಕೊರಳು : "ಕೊರಲುಮಾಸ್ಯಂ ಗಳಂ ಧಮನಿ ಕಂಧರ ಶಿರೋಧರಮದಾ ಗ್ರೀವಮೆನಿಸಿಕ್ಕು" (ಮಂಗರಾ. ೯೫-೭). [ಸಂ. ಶಿರೋಧರಾ]

ಶಿರೋಧರೆ (ನಾ). = ಶಿರೋಧರ : "ಗ್ರೀವಾ, ಧಮನೀಃ, ಮನ್ಯಾ, ಶಿರೋಧರಾ, ಕಂಧರಃ, ಗಳಃ, ಕಂಠಃ — ಈ ೭ ಕೊರಲ್" (ಹಲಾಯು. ೮೫-೩೬೨). [ಸಂ. ಶಿರೋಧರಾ]

ಶಿರೋಧಾರ್ಯ (ನಾ). ತಲೆಯಲ್ಲಿ ಧರಿಸಲು ಅರ್ಹವಾದುದು ; ಪೂಜ್ಯವಾದುದು : ನಿನ್ನ ಆಜ್ಞೆ ನನಗೆ ಶಿರೋಧಾರ್ಯ (ರಾಜ್ಯೋದ. ೧೦೮). [ಸಂ.]

ಶಿರೋಧಿ (ನಾ). = ಶಿರೋಧರ : ತ್ವಜ್ಜನನಿಯ ಹಾರಮನಾಂತುಜ್ಜಳಿಪ ಶಿರೋಧಿ ಹಾರವ ಮನನವರತಂ ಕಜ್ಜಳಮಂ ತಳೆವಕ್ಷಿಗಳಜ್ಜಳಮಂ ತಾಳ್ದೆ ತನಯ ನೀಂ ಸ್ಮರಿಪುದೇ (ಚಂದ್ರಪ್ರ. ೫-೧೨) ; ಮುಳಿದು ಶಿರೋಧಿಯಂ ಕೆಡೆಯಲೆಚ್ಚವರಾರ್ಬಿಸನಾಳಕಾಂಡ ಕೋಮಳತರಕಂಠಮಂ ಕಡಿದುರುಳ್ಳಿದರಾರ್ (ರಾಜಶೇ. ೧೩ ೧೦೫). [ಸಂ.]

ಶಿರೋನಾಮ (ನಾ). ಗ್ರಂಥ, ಲೇಖನ ಮೊದಲಾದುವುಗಳ ಪ್ರಾರಂಭದಲ್ಲಿ ಕೊಡುವ ಹೆಸರು ; ತಲೆಬರಹ ; ಶೀರ್ಷಿಕೆ : "ಭಾರತದ ಪೇಲಿಯೋ ಬಾಟನಿ" ಎಂಬ ಶಿರೋನಾಮದಿಂದೊಡಗೂಡಿದ ಒಂದು ಸಂಚಿಕೆಯನ್ನು ತನ್ನ ನೇತೃತ್ವದಲ್ಲಿಯೇ ನಡೆಸಿಕೊಂಡು ಬಂದನು (ಸಸ್ಮಕ. ೧೨೭); ವಿಷಯ ನಿರ್ಣಯಿಸುವಾಗ ಗ್ರಂಥದ ಶಿರೋನಾಮ, ಮುನ್ನುಡಿ, ಪ್ರಸ್ತಾವನೆ . . . ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ (ಗ್ರಂಥಾಲ. ೧೬). [ಸಂ. ಶಿರೋನಾಮನ್]

ಶಿರೋನಾಮೆ (ನಾ). = ಶಿರೋನಾಮ : ವಿಷಯಕ್ಕೆ ತಕ್ಕ ಶಿರೋನಾಮಗಳನ್ನು (Titles) ಬರೆಯುವುದು - ಇವು ಇವನು ಮಾಡಿರುವ ಕೆಲಸ (ಕನ್ನಸಂ. ೨೪) ; ಒಂದೊಂದು ಅಂಶಕ್ಕೂ ಉಚಿತವೆನಿಸುವ ಶಿರೋನಾಮೆಯಿರಬೇಕು (ಶಕ್ಷದ. ೨೬೮). [< ಸಂ. ಶಿರೋನಾಮನ್]

ಶಿರೋಭೂಷಣ (ನಾ). ತಲೆಗೆ ಧರಿಸುವ ಆಭರಣ : ಯಾರ ಶಿರೋಭೂಷಣವು ಚಂದ್ರಾರ್ಧವೋ ಅವನನ್ನು ಶ್ರೇಯಃಪ್ರಾಪ್ತಿಗಾಗಿ ನಮಸ್ಕರಿಸುತ್ತೇನೆ (ಭಾರದ. ೧೫೯). [ಸಂ.]

ಶಿರೋಭ್ಯಂಜನ (ನಾ). ತಲೆಗೆ ಎರೆದುಕೊಳ್ಳುವುದು : ನೇತ್ರಾಭ್ಯಂಗನದಿಂದ ಶಿರೋರೋಗವೂ ಶಿರೋಭ್ಯಂಜನದಿಂದ ಸರ್ವರೋಗವೂ ಹರವಾಗುವುದು (ಸಚಿತ್ರ. ೩೧). [ಸಂ.]

ಶಿರೋಭ್ರಮಣ (ನಾ). ತಲೆ ತಿರುಗುವಿಕೆ ; ತಲೆ ಸುತ್ತುವುದು : ದ್ರಾಕ್ಷಿಹಣ್ಣು, ಅಮರದ ವಳ್ಳ . . . ಶುಂಠಿ ಇವಂ ಕಷಾಯವಿಕ್ಕಿ ತೆಗದುಕೊಳ್ಳಲು ವಾತಪಿತ್ತಜ್ವರ, ಶಿರೋಭ್ರಮಣ, ತಲೆನೋವು, ದಾಹ ಸಹ ಗುಣವಾಗುವುವು (ಸಚಿತ್ರ. ೯೪) : ಮಜ್ಜಿದುಂಬಗಳ್ಗೆ ಸಂಪಗೆಯತ್ತಣನೊದವಿದ ಶಿರೋಭ್ರಮಣಮನಬೆಯಿಸಿಯುಂ, ಬಸಂತಂ ಬೆಜ್ಜನೆನೆ ಮೈದೋಱಲ್ (ರಾಮಾಶ್ವ. ೧೬-೨೦). [ಸಂ.]

ಶಿರೋಭ್ರಮಣೆ (ನಾ). = ಶಿರೋಭ್ರಮಣ : ಕರ್ಪನ ಕವಿಯ ಕಣ್ಗೆ ಕತ್ತಲೆ ಶಿರೋಭ್ರಮಣೆಯಿಂ ಕೃಷ್ಣ ಫಲುಗುಣರ್ಗೆ (ಜೈಮಿಭಾ. ೧೩-೩೫). [ಸಂ. ಶಿರೋಭ್ರಮಣ]

ಶಿರೋಭ್ರಮೆ (ನಾ). = ಶಿರೋಭ್ರಮಣ : ತಪಕ್ಷೀರ ಗಳ ತೂಕ, ಯಷ್ಟಿಮಧುಕ ಗ ೫ ತೂಕ, ಇಮ್ಮು ಚೂರ್ಣವಂ ಮಾಡಿ ಸಕ್ಕರೆ ಗ ೧೨ ತೂಕವನ್ನು ಬೆರೆಸಿ, ಹಸುವಿನ ಹಾಲು ಬೆಣ್ಣೆಯಲ್ಲಿ ತೆಗೆದುಕೊಳ್ಳಲು ಕ್ಷಯ . . . ಶಿರೋಭ್ರಮೆ, ಇನಿತು ವ್ಯಾಧಿಗಳ ಹರ (ಎಚ್ಚವಿ. ೪೭) : ಆದಿವಾರದ ದಿವಸ ನೆಲತಂಗನ್ನು ತಂದು ಕತ್ತರಿಸಿ ನೆಳಲಲ್ಲಿ ಒಣಗಿಸಿ ಚೂರ್ಣಂಗ್ಗೆದು . . . ಎಳನೀರಲ್ಲಿ ತೆಗದುಕೊಳ್ಳಲು ಶಿರೋಭ್ರಮೆ ತೀರ್ಗುಂ (ಸಚಿತ್ರ. ೧೧೩). [ಸಂ. ಶಿರೋಭ್ರಮಾ]

ಶಿರೋಮಂಡನ (ನಾ). = ಶಿರೋಭೂಷಣ : ಮಂಗಳಾಳಂಕರಣಾಭಿರಾಮ ರಾಜಭವನ ಲಕ್ಷ್ಮೀಶಿರೋಮಂಡನೋಪಮಾನ ಮೌಕ್ತಿಕಮಣಿಮಯಮಂಡಪದೊಳ್ . . . ಅಪೂರ್ವಮಾಗ ಹರಿ ಪೌರೋಹಿತ್ಯಮಂ ತಾಳೆ (ಶಾಂತಪು. ೧೦-೭೭ ವ). [ಸಂ.]

ಶಿರೋಮಣಿ (ನಾ). ೧. ತಲೆಯಲ್ಲಿ ಧರಿಸುವ ರತ್ನ ; ಚೂಡಾಮಣಿ. ೨. (ಆಲಂ) ಶ್ರೇಷ್ಠನಾದ ವ್ಯಕ್ತಿ : ಭಕ್ತಿತ್ರಯವಿನಿಶ್ಚಲಗುಣಿಯೆ ಸುಜನಶಿರೋಮಣಿಯೆ ಮದ್ಯ ಸವಧೀಮಣಿಯೆ (ಬಸಪು. ೭೧-೭೦) : ತೊಳಲುತಿಱಸುವ ಬಳೆ ಕಾಲ್ವೊಡಕಿ ದಂತರಸುಗಳ ಶಿರೋಮಣಿಗೆ ಸಂಭ್ರಮದೊಳ್ಕೆತಂದು ಬಿನ್ನೈಸಿದಂ ಚರನೊರ್ವನು (ಜೈಮಿಭಾ. ೨-೪೫). [ಸಂ.]

ಶಿರೋರತ್ನ (ನಾ). = ಶಿರೋಮಣಿ ೧: "ಚೂಡಾಮಣಿಃ, ಶಿರೋರತ್ನಂ — ೨ ತಲೆಯೊಳಗೆ ಧರಿಸತಕ್ಕ ಮಾಣಿಕ್ಯವೆಂಬ ರತ್ನಾಭರಣ" (ಸಿದ್ಧಾಂಶಿ. ೯೮). [ಸಂ.]

ಶಿರೋರುಹ (ನಾ). = ಶಿರೋಜ : ಕದಲೀಗರ್ಭಶ್ಯಾಮಂ ಮೃದುಕುಟಿಲಶಿರೋರುಹಂ ಸರೋರುಹವದನಂ ಮೃದುಮಧ್ಯಮತನು ಹಿತಮಿತವ್ಯದುವಚನಂ ಲಲಿತ ಮಧುರಸುಂದರವೇಷಂ (ಆದಿಪು. ೧-೫೯) : ಅರೆಮುಗಿದಿರ್ದ ದಿಟ್ಟಿ ನಸುಗರ್ಚಿದ ನಾಲಗೆ ಪಿರ್ಚಿ ನೆತ್ತರೊಳ್ ಪೊರೆದ ಶಿರೋರುಹಂ (ಚಂದ್ರಪು. ೧೦-೧೦೮). [ಸಂ.]

ಶಿರೋಲಿಂಗ (ನಾ). [ಜೈನ] (ಲಿಂಗದ ಆಕಾರದಲ್ಲಿ ಕಾಣುವ) ಮುಂಡನ ಮಾಡಿಸಿಕೊಂಡ ತಲೆ : ಮನ ವಚನ ಕಾಯಗತರಾಗಂಗಳಂ ಕಿಡಿಸಲೆಂದು ಮುಂಡನಂಗೆಯ್ವುದು ಶಿರೋಲಿಂಗಂ (ಚಾವುಪು. ೨೧೫). [ಸಂ.]

ಶಿರೋವಲಯ (ನಾ). ೧. ಮಲ್ಲಯುದ್ಧದ ಒಂದು ಪಟ್ಟು — ವರಸೆ ; ಕತ್ತನ್ನು ತೋಳಿನಲ್ಲಿ ಬಳಸಿ ಹಿಡಿಯುವುದು : ತಳಹತ್ತಂ ದಣುವಟ್ಟಿ . . . ತೋರಹತ್ತಂ ಶಿರೋವಲ[ಪಾಠಾಂ. ಳ]ಯಂ ಬಾಹುತಳಂ ಚಮತ್ಕರಿಸೆ ನಾನಾಕೌಶಲಂದೋಱಿದರ್ (ಕಬಶಂ. ೪ ೭೫). [ಸಂ.]

ಶಿರೋವೇದನೆ (ನಾ). ತಲೆಯಲ್ಲಿ ಉಂಟಾಗುವ ನೋವು ; ತಲೆನೋವು : ಅವರಿಗೆ ಶಿರೋವೇದನೆಯೆಂದು ಕೇಳಿದ ಕ್ಷಣದಿಂದಲೂ ಸನ್ನ ಮನಸ್ಸು ಅವರನ್ನು ನೋಡುವುದಕ್ಕೆ ತಳಮಳಿಸುತ್ತದೆ (ರಾಕ್ಷಮು. ೫೭) : ಶ್ರಮ — ಶಿರೋವೇದನೆಗಳಲ್ಲದ ಇನ್ನೇನನ್ನು ವಿದ್ಯಾರ್ಥಿ ಇದರಿಂದ ಪಡೆದುಕೊಳ್ಳುತ್ತಾನೆ? (ಗಾಆಪ. ೧೪೧).

[ಸಂ. ಶಿರೋವೇದನಾ]

ಶಿರೋವೇಷ್ಟನ (ನಾ). ತಲೆಗೆ ಸುತ್ತುವ ವಸ್ತ್ರ ; ರುಮಾಲು ; ಪೇಟ : ಧೃತವೇತ್ರಂ ಚಾರುಚೀನಾಂಬರರಚಿತ ಶಿರೋವೇಷ್ಟನಂ ಘಂಟಿಕಾಲಂಬಿತಕೂರ್ಪಾಸಂ (ಚಂದ್ರಪು. ೨-೭೪). [ಸಂ.]

ಶಿರೋವೇಷ್ಟಿ (ನಾ). = ಶಿರೋವೇಷ್ಟನ : ಶಿರೋವೇಷ್ಟಿಯನುರಿ ಪತ್ತೆ ಭೋಂಕನೆ ಕಳೆದು ಬಿಸುಟು ತಲ್ಲಣಿಸಿ ತಲೆದಡಪುತೆಡಪುತ್ತೇಳ್ದಂದು ಶಿವಾಗಾರದ ಪಿಂದಣ ಜಲಕುಂಡದೊಳ್ಪಡಲಿಡುವುಪಾಧ್ಯಾಯರುಂ (ಪ್ರಷಪ. ೩೮-೯೮ ವ). [ಸಂ.]

ಶಿರೋವ್ಯಾಧಿ (ನಾ). =ಶಿರೋವೇದನೆ : "ಮಂಡನೋವದು ಶಿರೋವ್ಯಾಧಿಯೆನಿಕುಂ" (ಮಂಗರಾ. ೧೧೪-೪) : ಮಧ್ಯದಲ್ಲಿ ಹಳ್ಳವಾಗಿ ತುದಿಯಲ್ಲಿ ಅಗಲವಾಗಿ ನಾಲಗೆ ಇದ್ದರೆ ಶಿರೋವ್ಯಾಧಿ ಹೆಚ್ಚುವುದು (ಸಚಿತ್ರ. ೧೪). [ಸಂ.]

ಶಿರೋವ್ಯೂಢ (ಗು). ತಲೆಯವರೆಗೆ (ಆಳುದ್ದ) ಪೇರಿಸಿದ : ಶಿರೋ [ಪಾಠಾಂ. ಲಾ]ವ್ಯೂಢ ಧಾನ್ಯಸಂಚಯೋಪಭೋಗಿಜನನಿವಾಸಿಗಳಪ್ಪ ಸಂವಾಹಗಳುಮಂ . . . ಮಾಡಿದಂ (ಆದಿಪು. ೪-೬೬ ವ). [ಸಂ.]

ಶಿರೋವ್ರತ (ನಾ). ಮುಖ್ಯವಾದ ಒಂದು ಧಾರ್ಮಿಕವ್ರತ : ಎಲ್ಲ ರುಷಿಶ್ರೇಷ್ಠರೊಳು ಶ್ರೇಷ್ಠನೆನಿಸುತ ನಿತ್ಯದಲ್ಲಿ ಸುಖಿಸುತ್ತಿರ್ಪ ಶ್ರೀವೀರಶೈವಮತವೆಲ್ಲ ಶೈವಂಗಳ ಶಿರೋವ್ರತಮ್ಮದನುಯಾಚರಿಸುವರೆ ನಿತ್ಯರಹರು (ಸಮಮೋ. ೧೪-೨೧) ; ಲಿಂಗಧಾರಣ, ಲಿಂಗಪೂಜಾವ್ರತವನ್ನು ಶಾಂಭವವ್ರತ, ಪಾಶುಪತವ್ರತ, ಶಿರೋವ್ರತವೆಂದು ಶಿವಾಗಮಗಳು ಹೇಳುತ್ತವೆ (ಭಾರದ. ೨೫೦). [ಸಂ.]

ಶಿರೋಸ್ಥಿ (ನಾ). ತಲೆಬುರುಡೆ : "ಶಿರೋಸ್ಥಿ ಕರೋಟಯೆನೆ ಕಪಾಲಂ" (ಮಂಗರಾ. ೧೧೭-೬). [ಸಂ.]

ಶಿಲ (ನಾ). ೧. (ಕೊಯ್ದಾದ ಮೇಲೆ) ಹೊಲದಲ್ಲಿ ಉಳಿದ ತೆನೆ, ಕಾಳು ಮೊದಲಾದುವನ್ನು ಆಯುವುದು. ೨. (ಕೊಯ್ದಾದ ಮೇಲೆ) ಹೊಲದಲ್ಲಿ ಉಳಿದ ತೆನೆ, — ಧಾನ್ಯ : ಕೊಡುವ ಕೊಂಬವರ ನಿಹತಕ್ಕಂಜಿ ನಡವನ ವ್ರತ ಜಂಬುಕ ಶಿಲವ ಹಿಡಿದು ನಾಲಗಯ ಮುಟ್ಟದ ನುಂಗುವ ತೆಱದಂತೆ (ಎಱೆಕ್ಕ. ೬೧). 'ಉಂಛಶಿಲ' ಪರಾ. [ಸಂ.]

ಶಿಲಂಧರ (ನಾ). (?) : ಶರ ಶಕ್ತಿ ತೋಮರ ಕಣಯ . . . ಸುರಗಿ ಶಲ್ಲಿಹ ಕಡಿತಲೆಗಳ ಬಲು ಶಿಲಂ [ಪಾಠಾಂ. ಶಿಲಾ, ಶೀಲಂ]ಧರರು ಮೋಹರಿಸಿತೊಗ್ಗಿನಲಿ (ಕರಾಸಾಂ. ೪೬-೧೫).

[ಸಂ.]

ಶಿಲಕು 'ಶಿಲುಕು' ನೋ.

ಶಿಲವೃತ್ತಿ (ನಾ). (ಕೊಯ್ದಾದ ಮೇಲೆ) ಹೊಲದಲ್ಲಿ ಉಳಿದ ತೆನೆಯ ಕಾಳುಗಳನ್ನು ಆರಿಸಿ ಜೀವಿಸುವಿಕೆ ; ಹಕ್ಕಲಾರಿಸುವ ಕಸುಬು : "ಋತಂ, ಉಂಛಶಿಲಂ, ಉಂಛವೃತ್ತಿಗೂ ಶಿಲವೃತ್ತಿಗೂ ಹೆಸರು, ಊರುಕೇರಿಗಳಲ್ಲಿ ಬಿದ್ದಿರುವ ಕಾಳನ್ನು ಆರಿಸಿಕೊಂಡುಂಡು ಬದುಕುವದಕ್ಕೆ ಉಂಛವೃತ್ತಿಯೆಂದು ಹೆಸರು" (ಸಿದ್ಧಾಂಶಿ. ೨೭೪) ; ಉಂಛವೃತ್ತಿಯಿಂದಲೂ ಶಿಲವೃತ್ತಿಯಿಂದಲೂ ಜೀವಿಸುವುದು ಸರ್ವೋತ್ತಮವಾದುದು (ಅರ್ಥಧ. ೪೪). [ಸಂ.]

ಶಿಲಹರೆ (ನಾ). ಒಂದು ಸ್ಥಳದ ಹೆಸರು : दक्षिणतः शिलहरे(रे) ग्रामः (ಇಆ. XII. ೨೬೬-೫೫ : 972). [?]

ಶಿಲಾಕರ್ಮ (ನಾ). ಕಲ್ಲಿನ ಕೆತ್ತನೆಯ ಕೆಲಸ ; ಶಿಲ್ಪ : ಹೇಮಕರ್ಮ್ಮ ಲೋಹಕರ್ಮ್ಮ ಶಿಲಾಕರ್ಮ ರತ್ನಕರ್ಮ . . . ಸಮಸ್ತಹಸ್ತಕುಶಲತೆಯುಳ್ಳ ವಿಸ್ವಕರ್ಮ ನಿರ್ಮಿತಮಪ್ಪ ಗವಜಾಚಾರ್ಯನಾತನ ಪುತ್ರ . . . ಮಾಡಿಶಿದ ಧರ್ಮ್ಮಪುರೋವೃದ್ಧಿಯೆನ್ತೆನ್ದಡೆ (ಎಕ. VI (R), ಕೃಷ್ಣರಾ. ೬೬-೧೧ : 1117) ; ಇಂದ್ರಜಾಲಮೆಱಕಂ ಲೆಪ್ಪಂ ಶಿಲಾಕರ್ಮ ಮುತ್ಕರಣಂ ಚಿತ್ರವಿವಕ್ಷೆ ವಾಸ್ತು ಶಕುನಜ್ಞಾನಂ . . . ಅಖಿಲವ್ಯೂಹೋತ್ಕರ ಮಂಬಿನಿತಱೊಳಂ ಬಲ್ಲವರಲ್ಲರುಂ ಮಿಚ್ಚೆ ಪಡೆದನತಿಕೌಶಲಮಂ (ಪುಷ್ಪಪು. ೪-೫೯).

[ಸಂ. ಶಿಲಾಕರ್ಮನ್]

ಶಿಲಾಕೂಟ (ನಾ). ಸಮಾಧಿಕಲ್ಲು ; ನಿಸಿದಿಕಲ್ಲು (?) : ದಹನಸ್ಥಾನದೊಳ್ಪರೋಕ್ಷ XX ನಿಮಿತ್ತವಾಗಿ ಬೈರೋಜನಿಂ ಮಾಡಿಸಿದ ಬಾಳಚಂದ್ರದೇವರ ಮಗನಾ XX ನ ಶಿಲಾಕೂಟಂ (ಎಕ. II(R), ೫೫೯-೧೪ ; ಪು. 1214). [ಸಂ.]

ಶಿಲಾಕ್ಷರ (ನಾ). ಕಲ್ಲಿನ ಮೇಲೆ ಕೆತ್ತಿರುವ ಅಕ್ಷರ ಲಿಪಿ : ವಾಗೀಶರ ದಿವ್ಯನಾಮವನ್ನು ಶಿಲಾಕ್ಷರಗಳಲ್ಲಿ ಬರೆದಿರುವೆನು (ಪುರಾವಿ. ೧೩೮). [ಸಂ.]

ಶಿಲಾಜತು (ನಾ). ೧. ಕಪ್ಪುಬಣ್ಣದ ಒಂದು ಬಗೆಯ ಖನಿಜ : ಶಿಲಾಜತುಮಯವೆಂಬ ಸ್ಥಿತಿಗೆ ಬರುವ ಇದ್ದಲಿಯು ಎಲ್ಲಕ್ಕೂ ಮೇಲಾದ್ದೆಂದು ಹೇಳುತ್ತಾರೆ (ಮುಂಬಯಿ. ೬-೨೫೬). ೨. ಒಂದು ಬಗೆಯ ಕೆಂಪುಖನಿಜ ; ಗೈರಿಕ. [ಸಂ.]

ಶಿಲಾಜಿತು (ನಾ). = ಶಿಲಾಜತು ೨ : ಓವು . . . ಶಿಲಾಜಿತು, ಜಾಕಾಯಿ, ಕೊತ್ತುಂಬರಿ ಸಂವತ್ಸರಲವಣ ಇವನ್ನೆಲ್ಲ ಸಮಾನವಾಗಿ ಕೂಡಿ . . . ತಾರೆಕಾಯ ಪ್ರಮಾಣ ಗುಳಿಗೆಯಂ ಮಾಡಿ ತೆಗೆದುಕೊಳ್ಳಲು ಸಕಲವಾದ ಗ್ರಹಿಣಿಯೂ ಮಾಣ್ಗುಂ (ಸಕವೈ. ೩೪೫). [ಸಂ. ಶಿಲಾಜಿತ್]

ಶಿಲಾತಲ, ಶಿಲಾತಳ (ನಾ). ಸಮತಲವಾಗಿರುವ ಶಿಲಾಭಾಗ ; ಶಿಲಾಫಲಕ : ಪಾಂಡುಕ ಪಾಂಡುಕಂಬಲ ರಕ್ತಕಂಬಲಾತಿರಕ್ತಕಂಬಲ ವಿಶಾಲರತ್ನಶಿಲಾತಲ [ಪಾಠಾಂ. ೪] ಪ್ರತಿಷ್ಠಿತ ಭಗವಜ್ಜನ್ಮಾಭಿಷೇಕಸಿಂಹಾಸನಾಲಂಕೃತಮುಮಾಗಿ (ಆದಿಪು. ೧-೪೯ ವ) ; ಎಲೈ ಮಿತ್ರನೆ ಈ ಶಿಲಾತಲದ ಒಂದು ಭಾಗವನ್ನು ಅಲಂಕರಿಸಬೇಕು (ಶಾಕುಂತ. ೩೯-೭). **ಶಿಲಾತಳ** : ಆತನ ಪೂಣ್ಣ ಪೂಣ್ಕೆ ಶಿಲಾತಳಾಕ್ಷರಮೆನಿಸಿರ್ಪ ಜನೋಕ್ತಿಯಂ ಪುಸಿ ಮಾಟ್ಟನೇ (ಗದಾಯು. ೧-೭೧). [ಸಂ.]

ಶಿಲಾತಳ 'ಶಿಲಾತಲ' ನೋ.

ಶಿಲಾಧಾತು (ನಾ). ೧. ಒಂದು ಬಗೆಯ ಮೃದುವಾದ ಬಿಳಿಯ ಮಣ್ಣು ; ಸುದ್ದೆಮಣ್ಣು. ೨. = ಶಿಲಾಜತು ೨ : ಜಟಾಮಾಂಸಿಶಿಲಾಧಾತು ಕುಸುಂಬೆ ಹುವ್ವು . . . ಸ್ಕಂಧವಲವಣಂಗಳು ಇದಱೊಳಗೆ ಒಂದು ಯೋನಿಗೆ ಲೇಪನಂಗೈಯೆ ಸವುಭಾಗ್ಯಮಪ್ಪುದು (ಕಾಮಶಾ. ೨೭೫). [ಸಂ.]

ಶಿಲಾನ್ಯಾಸ (ನಾ). ಕಟ್ಟಡಗಳನ್ನು ಕಟ್ಟುವ ಪ್ರಾರಂಭದಲ್ಲಿ, ಅಡಿಗಲ್ಲನ್ನು ಇಡುವ ಕಾರ್ಯ ; ಶಂಕುಸ್ಥಾಪನೆ : ನನಗೆ ಅದರ ಶಿಲಾನ್ಯಾಸ ಮಾಡುವ ಕಾಲದಲ್ಲಿಯೇ ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಕರೆಸುವ ಯೋಚನೆ ಬಂದಿತ್ತು (ಒಂಟಿದ. ೧೫೩). [ಸಂ.]

ಶಿಲಾಪಟ್ಟ (ನಾ). ೧. (ಕುಳಿತುಕೊಳ್ಳಲು ಉಪಯೋಗಿಸಬಹುದಾದ) ಅಗಲವೂ ಮಟ್ಟಸವೂ ಆದ ಕಲ್ಲು ; ಹಾಸುಗಲ್ಲು : ನಿರ್ಮಲ ಶಿಲಾಪಟ್ಟದೊಳ್ ನಿಬಿಡನಿಬದ್ಧಪಲ್ಯಂಕಾಸನನುಂಪೂರ್ವಾಭಿಮುಖನುಮಾಗಿರ್ದಾಗಳ್ (ಆದಿಪು. ೧೦-೧೩ ವ); ಬಳಸಿರ್ದಭ್ರಾಳಿಯಿಂದಂ ತುಹಿನಗಿರಿ ಶಿಲಾಪಟ್ಟವೆಂಬಂತೆ ಚೆಲ್ವಾದ ಲತಾಂತಂ ತಳ್ತ ಶಯ್ಯಾಶ್ರಿತ ಸಿತ ಮೃದುಳಪ್ರಚ್ಛದಚ್ಛನ್ನಶಯ್ಯಾತಲದೊಳ್ . . . ಸುಖಾಸೀನನಾಗಿರ್ದಂ (ಕಾದಂಪೂ. ೮೦). ೨. (ಸಂಬಾರ ಮುಂತಾದುವನ್ನು) ಅರೆಯಲು ಬಳಸುವ ಸಮತಟ್ಟಾದ ಕಲ್ಲು; ಅಸಿಯ ಕಲ್ಲು : "ಅಸು ಶಿಲಾಪಟ್ಟಮೆನಲಸಿಯ ಕಲ್" (ಮಂಗರಾ. ೬೧-೧೯). [ಸಂ.]

ಶಿಲಾಪಟ್ಟಕ, ಶಿಳಾಪಟ್ಟಕ (ನಾ). = ಶಿಲಾಪಟ್ಟ ೧ : ಕತ್ತುರಿ ಮೃಗಮದಮಂ ತೊಡದತ್ತಳಿಸೆ ಸುರೇಂದ್ರ ದಾರುರಸದಿಂ ವಿಶದೋದಾತ್ತ ಶಿಲಾಪಟ್ಟಕಮಂ ಬಿತ್ತರಿಸಿದರಂದು ಯತಿಗೆ ವನದೇವತೆಗಳ್ (ಶಾಂತಿಪು. ೧೧-೧೦೮). **ಶಿಳಾಪಟ್ಟಕ**: ೧. ತತ್ಸಮೀಪಸ್ಥಿತರಕ್ತಾಶೋಕಮಹೀರುಹತಳವಿಶಾಳಶಿಳಾಪಟ್ಟಕದೊಳ್ ಉತ್ತರಾಭಿಮುಖನಾಗಿ ಕುಳ್ಳಿರ್ದು (ಶಾಂತಿಪು. ೮-೧೨೨ ವ) ; ಸಹಕಾರ ಭೂರುಹದ ಮೊದಲೊಳಿರ್ದತಿ ವಿಶಾಳ ಶಿಳಾಪಟ್ಟಕದ ಮೇಲೆ ನಿಯಮಂಗೆಯ್ದು (ವರ್ಧಮಾ. ೨-೪೩ ವ). ೨. = ಶಿಲಾಪಟ್ಟ ೨: "ಅಸುವೆ ಶಿಳಾಪಟ್ಟಕಾಭಿಧಾನಮನಾಳ್ಗುಂ" (ವಸ್ತುಕೋ. ೫೦-೩೨). [ಸಂ.]

ಶಿಲಾಪರೀಕ್ಷೆ (ನಾ). ಕಲ್ಲಿನ ಗುಣಾವಗುಣಗಳನ್ನು ಕಂಡುಹಿಡಿಯುವ ವಿದ್ಯೆ: ಭೂಪರೀಕ್ಷಾ, ಶಿಲಾಪರೀಕ್ಷಾ, ರತ್ನಪರೀಕ್ಷೆ . . . ನೃತ್ಯ, ವೈದ್ಯ ಮೊದಲಾದ ಅರವತ್ತು ನಾಲ್ಕು ಕಲೆಗಳಿಗೂ ಆಗಮಶಾಸ್ತ್ರವು ಆಶ್ರಯವಾಗಿದೆ (ಭಾರದ. ೭೦). [ಸಂ. ಶಿಲಾಪರೀಕ್ಷಾ]

ಶಿಲಾಪಾತ್ರೆ (ನಾ). ಕಲ್ಲಿನ ಪಾತ್ರೆ ; ಕಲ್ಲು ಪರಟೆ : ಮರದ ಪಾತ್ರೆ, ಶಿಲಾಪಾತ್ರೆ . . . ತೆಂಗಿನ ಕರಟ ಮುಂತಾದ ಪಾತ್ರೆಗಳಲ್ಲಿ ಭೋಜನವನ್ನು ಮಾಡಿದರೆ ದಾರಿದ್ರ್ಯ ಉಂಟಾಗುವುದು (ಸಕವೈ. ೪೯). [ಸಂ. ಶಿಲಾಪಾತ್ರ]

ಶಿಲಾಪೀಠ (ನಾ). ಕಲ್ಲಿನ ಆಸನ : ಮರದ ನೆಳಲಿಂದ ಶೀತಲವಾದ ಈ ಶಿಲಾಪೀಠದಲ್ಲಿ ಕುಳಿತುಕೊ (ಶಾಕುಂತ. ೨೩-೨೭). [ಸಂ.]

ಶಿಲಾಪ್ರತಿಮೆ (ನಾ). ಶಿಲೆಯಿಂದ ಮಾಡಿದ ವಿಗ್ರಹ, – ಪುತ್ತಳಿ; ಕಲ್ಲಿನ ಬೊಂಬೆ: ಪೇಳಲಾಟಿಸಲ್ ಮಂತ್ರಿ ರಘುರಾಮಸಂದೇಶಮಂ ಮೌನದಿಂ ಕೇಳ್ದನು ಶಿಲಾಪ್ರತಿಮೆಯೊಲ್ (ಶ್ರೀ ರಾಮಾ. ೧೦೧-೩೬) : ಸುತ್ತಲೂ ಒಂದು ಸುತ್ತು ತಿರುಗಿ ಶಿಲಾಪ್ರತಿಮೆಯಂತೆ ನಿಂತಳು (ದೌಲತ್. ೩೭೯). [ಸಂ. ಶಿಲಾಪ್ರತಿಮಾ]

ಶಿಲಾಫಲಕ (ನಾ). ೧. ಹಲಗೆಯ ಹಾಗೆ ಅಗಲವಾಗಿರುವ ಕಲ್ಲು ; ಹಾಸುಗಲ್ಲು : ಶಕುಂತಳೆಯು, ಕುಸುಮಾಸ್ತರಣದಿಂದ ಕೂಡಿದ ಶಿಲಾಫಲಕದಲ್ಲಿ ಮಲಗಿ, ಸಖಿಯರಿಂದ ಸಂತೈಸಲ್ಪಡುತ್ತಿರುವಳು (ಶಾಕುಂತ. ೩೩-೨೧). ೨. ರಾಜ ಮುಂತಾದವರು ಮಾಡಿದ ದತ್ತಿ, ದಾನ, ಆಜ್ಞೆ, ಮಂತಾದ ವಿಷಯಗಳನ್ನು ಕೆತ್ತಲು ಬಳಸುತ್ತಿದ್ದ ಕಲ್ಲಿನ ಹಲಗೆ : ನೀನು ಶ್ರವಣಬೆಳಗೊಳಕ್ಕೆ ಹೋದಾಗ ನೋಡಲಿಲ್ಲವೆ ಹೆಜ್ಜೆಹೆಜ್ಜೆಗೂ ಸಲ್ಲೇಖನದ ಮಹಿಮೆಯನ್ನು ಸಾರುವ ಶಿಲಾಫಲಕಗಳು! (ದಾನಚಿಂ. ೨೦). [ಸಂ.]

ಶಿಲಾಬಾಲಿಕೆ (ನಾ). ಕಲ್ಲಿನಲ್ಲಿ ಕೆತ್ತಿರುವ ಹೆಣ್ಣುಬೊಂಬೆ; ಕಲ್ಲಿನಲ್ಲಿ ಕಡೆದ ಸ್ತ್ರೀ ವಿಗ್ರಹ : ಶಿಲಾಬಾಲಿಕೆಯರನ್ನು ಕಡೆದು, ದೇವಾಲಯದ ಸುತ್ತಲೂ ಕಣ್ಣಿಗೆ ರಮ್ಯವಾಗಿ ಕಾಣಬರುವ ಎಡೆಗಳಲ್ಲಿ ಜೋಡಿಸಿ ನಿಲ್ಲಿಸಿದರು (ಶಾಂತಲಾ. ೧೩೩) ; ಕೊಳಲಿನ ನೃತ್ಯದ ಶಿಲಾಬಾಲಿಕೆಯ ವಿಗ್ರಹವನ್ನು ಕೆತ್ತಿದ ಮಲ್ಲಿಯಣ್ಣ . . . ಪಾದರಿ ಮಲ್ಲೋಜ ಇವರೆಲ್ಲರೂ ವಿಷ್ಣುವರ್ಧನನ ಶಿಲ್ಪಿಗಳು (ಭಾರದ. ೫೦೫). [ಸಂ. ಶಿಲಾಬಾಲಿಕಾ]

ಶಿಲಾಭೇದಿ (ನಾ). ೧. ಕಲ್ಲನ್ನು ಸೀಳಲು ಬಳಸುವ ಒಂದು ಬಗೆಯ ಸಾಧನ; ಉಳಿ; ಚಾಣ. ೨. ಮೂತ್ರಕೋಶದ ಕಲ್ಲನ್ನು ಕರಗಿಸಬಲ್ಲ ಒಂದು ಬಗೆಯ ಸಸ್ಯ : "ಶಿಲಾಭೇದಿ ಹಿಟ್ಟಳಿಕೆಯಕ್ಕುಂ" (ಮಂಗರಾ. ೩೯-೨೯). 'ಪಾಷಾಣಭೇದಿ' ಪರಾ. [< ಸಂ. ಶಿಲಾಭೇದ]

ಶಿಲಾಭೋಗ (ನಾ). (?) : ನರಭೋಗ ಶಿಲಾಭೋಗ ಪ್ರತಿಮಾಭೋಗ ದ್ರವ್ಯ ಭೋಗಾದಿಗಳ ವೈಚಿತ್ರ್ಯಮುಳ್ಳ ಲೋಕದೃಷ್ಟಾಂತಗಳಂ ನಂದಿ ನಾರದ ಭರತದೇವಲಾದಿ ಪುರಾವೃತ್ತಗಳಂ ಸಮನ್ವಯಗೊಂಡು ತನ್ನ ಮರಣಕಾಲಕ್ಕೆ . . . ಶಾಸ್ತ್ರಗಳಂ ಸಹಾಯಗೊಳಿಸಿಕೊಳ್ಳಲಕ್ಕುಂ (ವಿವೇಕ. ೧೯೬). [ಸಂ.]

ಶಿಲಾಮಂದಿರ (ನಾ). ಕಲ್ಲಿನಲ್ಲಿ ಕಟ್ಟಿದ ಕಟ್ಟಡ, – ಮನೆ: ಶಿಲಾಮಂದಿರದಲ್ಲಿ ವಾಸಮಾಡುವುದರಿಂದ ಶೀತವನ್ನೂ ಬಿಸಿಲನ್ನೂ ಹೋಗಲಾಡಿಸಿ, ಹೆಚ್ಚಿದ ಮದವನ್ನು ಕೆಡಿಸಿ, ಪಾದರೋಗಗಳ ನಾಶಮಾಡುವುದು (ಸಕವೈ. ೫೭). [ಸಂ.]

ಶಿಲಾಮುದ್ರಣ (ನಾ). ಒಂದು ಬಗೆಯ ಮಸಿಯಿಂದ ಅಕ್ಷರಗಳನ್ನೂ ನಕ್ಷೆಯ ರೇಖೆಗಳನ್ನೂ ತೆಗೆಯಲು ಉಪಯೋಗಿಸುವ ಕಲ್ಲಿನ ಸಾಧನ ಮತ್ತು ಅದರಿಂದ ಮಾಡುವ ಮುದ್ರಣ; ಕಲ್ಲಚ್ಚು: ಈ ರೀತಿಯ ಮುದ್ರಣದಲ್ಲಿ ಮೊದಲು ಬಳಕೆಗೆ ಬಂದದ್ದು ಒಂದು ಬಗೆಯ ಶಿಲಾಮುದ್ರಣ (ಲಿಥೊಗ್ರಫಿ) (ಮುದ್ರಕ. ೩). [ಸಂ.]

ಶಿಲಾಯಂತ್ರ (ನಾ). ೧. (ಯುದ್ಧಸಮಯದಲ್ಲಿ) ಕಲ್ಲನ್ನು ತೂರುವ ಯಾಂತ್ರಿಕ ಸಾಧನ : ಗಂಡಶೈಲಾಭೀಲ ಶಿಲಾ[ಪಾಠಾಂ. ಶಿಳಾ]ಯಂತ್ರಭಯಂಕರಂಗಳುಂ . . . ಯಂತ್ರಾಯುಧಾವರಣೋಪಕರಣಪರಿಣತಂಗಳಾಗಿರ್ದ ದುರ್ಗಂಗಳೊಳ್ (ಆದಿಪು. ೧೩-೫೭ ವ). ೨. ಮುದ್ರಣಕ್ಕೆ ಉಪಯೋಗಿಸುವ ಕಲ್ಲಚ್ಚಿನ ಸಾಧನ: ಅಕ್ಷರಮಾಲೆ . . . ಭೂಗೋಲಗಳನ್ನು ಶಿಲಾಯಂತ್ರದಲ್ಲಿ ಅಚ್ಚುಮಾಡಿಸಿದರು (ಸಾಹಿಸಂ. ೧೮೨). [ಸಂ.]

ಶಿಲಾಯುಗ (ನಾ). ಮುಖ್ಯವಾಗಿ ಕಲ್ಲಿನ ಉಪಕರಣಗಳೂ ಆಯುಧಗಳೂ ಬಳಕೆಯಲ್ಲಿದ್ದ, ಯಂತ್ರಗಳ ನಾಗರಿಕತೆಯಿಲ್ಲದಿದ್ದ ಕಾಲ : ಮಧ್ಯಪ್ರಾಚೀನ ಶಿಲಾಯುಗದ ಆದಿಭಾಗದಲ್ಲಿ . . . ಚಕಮಕಿ ಕಲ್ಲಿನ ಹತಾರಗಳು ಕಾಣಬರುತ್ತವೆ (ಶಿಲ್ಪನಾ. ೧೯). [ಸಂ.]

ಶಿಲಾರಸ (ನಾ). ೧. ಒಂದು ಬಗೆಯ ಸುವಾಸನೆಯ ದ್ರವ್ಯ : ಹಾಲಮಡ್ಡಿ ಕರ್ಪುರ ಶಿಲಾರಸ ದೇವದಾರ ಲೋಲ ನಾಗರಮೋತಿ ಚಂದನ ಕರ್ಚುರ ರಾಳ ಗುಗ್ಗುಳದ ದಶಾಂಗ (ಸಿದ್ದಪು. ೧೯-೩). ೨. [ಭೂಗೋಳ] ಜ್ವಾಲಾಮುಖಿಯಿಂದ ಹೊರಹೊಮ್ಮುವ

ಧಾತುಗಳ ರಸ : ಸಾಮಾನ್ಯವಾಗಿ ಅಗ್ನಿಶಿಲೆಗಳು ಶಿಲಾರಸದಿಂದಲೋ (ಲಾವಾ) ಅಥವಾ ಶಿಲಾಪಾಕಗಳಿಂದಲೋ (ಮ್ಯಾಗ್ಮ) ಜನ್ಮತಾಳಿದುವು (ಕವಿಕೋ. I. ೨೯೫). [ಸಂ.]

ಶಿಲಾಲಿಖಿತ (ನಾ). ಕಲ್ಲಿನ ಮೇಲೆ ಕೆತ್ತಿದ ಬರಹ, — ಬರವಣಿಗೆ : ಶಿಲಾಲಿಖಿತವೇನು ಜಲಲಿಪಿಯಂತೆ ಕೆಡುವುದೇ (ಎಕ್ಶೃಪ್ರ. ೩-೧೪-೮). [ಸಂ.]

ಶಿಲಾಲಿಪಿ (ನಾ). ಕಲ್ಲಿನ ಮೇಲೆ ಕೆತ್ತಿರುವ ಬರಹ; ಶಿಲಾಶಾಸನ : ಸಾತಕಣ್ಣಿ ಎಂಬ ರಾಜನ ಆಳ್ಕೆಯ ಎರಡನೆಯ ವರ್ಷದ ಶಿಲಾಲಿಪಿಯಿಂದ ರಾಜನು . . . ಭೂದಾನ ಮಾಡುವಂತೆ ಮಹಾವಲಭನೆಂಬ ತನ್ನ ಅಧಿಕಾರಿಗೆ ಅಪ್ಪಣೆ ಕೊಟ್ಟನೆಂದು ತಿಳಿಯುತ್ತದೆ (ಕರ್ಣಾಅ. ೩) : ಭಾರತೀಯ ಸಂಸ್ಕೃತಿಯ ದೊಡ್ಡ ಆಸ್ತಿಯಾಗಿವೆ, ಈ ಶಿಲಾಲಿಪಿಗಳು (ಕನ್ನಸಂ. ೪೨). [ಸಂ.]

ಶಿಲಾಲೇಖ (ನಾ). = ಶಿಲಾಲಿಪಿ : ಶಿಲಾಲೇಖವು ಅಚ್ಚಳಿಯದಂತಿರುವುದು (ಶಿವಾಸೂ. ೧೩೦-೨೬) : ಆ ಕಾಲದ ಶಿಲಾಲೇಖಗಳಲ್ಲಿ ವಿವರಿಸಿದಂಥ ಇತಿಹಾಸದ ಸಂಗತಿಗಳನ್ನು ಬೈಲಿಗೆ ತಂದಿದ್ದಾರೆ (ಮುಂಬಯಿ. ೫-೨೯೬). [ಸಂ.]

ಶಿಲಾವಲ್ಕ (ನಾ). ಪಾಚಿಯೊಡನೆ ಬೆಳೆಯುವ ಒಂದು ಬಗೆಯ ಅಣಬೆ; ಕಲ್ಲುಹೂವು : ಸಾಮಾನ್ಯವಾಗಿ ಹಾವುಚಿ ಜಲನೀಲಿಕಾ ಶಿಲಾವಲ್ಕಗಳು ಇಲ್ಲಿ ಬೆಳೆಯುತ್ತವೆ (ಭೂವಿವ. ೧೬೭). [ಸಂ. ಶಿಲಾವಲ್ಕಾ]

ಶಿಲಾವಿಗ್ರಹ (ನಾ). ಕಲ್ಲಿನ ಬೊಂಬೆ, — ಪ್ರತಿಮೆ : ಈ ರೀತಿಯಾಗಿ ಗಣಪತಿ ಮೊದಲಾಗಿ ಹೇಳಿರುವ ಶಿಲಾವಿಗ್ರಹಗಳನ್ನೂ . . . ಪ್ರತಿಷ್ಠೆ ಮಾಡಿಸಿದರು (ಮಹಾವಂ. II. ೧೩೬). [ಸಂ.]

ಶಿಲಾವೃಷ್ಟಿ (ನಾ). ೧. ಕಲ್ಲಿನ ಮಳೆ : ಚಾರು ಮನಾನಂದದ ಸಲುವಾಗಿ ಅತ್ಯಂತ ಏಕಾಂತದಲ್ಲಿ ಆ ಒಂದು ಸಣ್ಣದಾದ ಸಾಹಿತ್ಯನೀಡವನ್ನು ನಿರ್ಮಿಸಿಕೊಂಡಿದ್ದಾಳೆ. ಅದರ ಮೇಲೆ ಇಂದು ಹಠಾತ್ ಪ್ರಶಂಸಾರೂಪದ ಶಿಲಾವೃಷ್ಟಿಯಾಗಿ . . . ಅವಳ ನಿಭೃತನೀಡವನ್ನು ಆಮೂಲಾಗ್ರ ಕೆಡವಿಬಿಡುವಂತಾಯಿತಲ್ಲ (ಇಪ್ರಕ. ೨೫೪). ೨. ಆಲಿಕಲ್ಲು. [ಸಂ.]

ಶಿಲಾಶಾಸನ (ನಾ). ರಾಜ ಮುಂತಾದವರಿಂದ ಕೊಡಲ್ಪಟ್ಟ ದತ್ತಿ, ದಾನ, ಧರ್ಮ, ಆಜ್ಞೆ ಮುಂತಾದ ನಿರೂಪಗಳನ್ನು ಕಲ್ಲಿನ ಮೇಲೆ ಕೆತ್ತಿರುವ ಬರಹ : ನುಡಿದು ತಪ್ಪದ ಭಾಷೆ ಬಸವನ ನುಡಿ ಶಿಲಾಶಾಸನವು (ಬಸಪು. ೩೭-೨೫) ; ಇದೇ ರಾಜನ ಹನ್ನೆರಡನೆಯ ವರ್ಷದ ಶಿಲಾಶಾಸನದಲ್ಲಿ ಈ ರಾಜನ ಮಗಳು . . . ಕೆರೆಯನ್ನೂ ಒಂದು ವಿಹಾರವನ್ನೂ ದಾನ ಮಾಡಿದಳೆಂದು ತಿಳಿದು ಬಂದಿದೆ (ಕರ್ಣಾಅ. ೩). [ಸಂ.]

ಶಿಲಾಸಂಕಟ (ನಾ). ಒಂದು ನರಕದ ಹೆಸರು : ಕ್ವಾರಕೂಪ ಅಂಧತಮಃಕೂಪ ಅಮೂಲವಿಶಾತನ ಮುಸಲೊಲೂಖಲಮರ್ದನ ಶಿಲಾಸಂಕಟ[ಪಾಠಾಂ. ಶಕಟ]ವೆಂಬೈದು ಮಂತ್ರಿನರಕಂಗಳಿಂದೊಪ್ಪಿ ವಿಷವರ್ತುಳವೆಂಬರಸುನರಕವಿಹುದು (ವಿವೇಕ. ೧೮೧). [ಸಂ.]

ಶಿಲಾಸಂಗ (ನಾ). ಶಿಲೆಗಳ ಸಂಬಂಧವುಳ್ಳುದು, — ಸಂಪರ್ಕವುಳ್ಳುದು : ಶೃಂಗಮಯಮುರುಶಿಲಾಸಂಗ [ಪಾಠಾಂ. ಪಾಂಗ]ಮಯಮಧಿಕಮಾತಂಗಮಯಮನುಪಮ ಭುಜಂಗಮಯಂ . . . ಅಮರಿಯರನಂಗಮಯಕೇಳಿಗಳ ಸಂಗಮಯಮೆನಿಪ ಗಿರಿ ಭಂಗಮಯಮಲ್ಲದುತ್ತುಂಗಮಯಮಾಗಿರ್ದುದು (ಚೈಮಿಭಾ. ೧೦-೭). [ಸಂ.]

ಶಿಲಾಸನ (ನಾ). ಕಲ್ಲಿನ ಆಸನ, — ಪೀಠ : ಘನಸಮಯದೊಳರ್ದು ಶಿಲಾ [ಪಾಠಾಂ. ಖಾ,ಳಾ]ಸನದೊಳ್ ಶೃಳೇಯಸುರಭಿತಳದೊಳ್ ಗೋವರ್ಧನ ಕಂದರದೊಳ್ ಶಿಖಿನರ್ತನಂಗಳಂ ನೋಡು ಮದನಮದಗಜಗಮನೇ (ಶಾಂತಿಪು. ೫-೧೩೧); ಮೃತ್ಯುಂಜಯನು ತನ್ನ ಆ ಶಿಲಾಸನವನ್ನು ಬಿಟ್ಟು ಎದ್ದು ನಿಂತನು (ಇಪ್ರಕ. ೩೪೦) [ಸಂ.]

ಶಿಲಾಸಾರ (ನಾ). ಕಬ್ಬಿಣ : "ಗಿರಿಸಾರಂ ಶಿಲಾಸಾರವಾಯಸಂ ಲೋಹಮೆನೆ ಕರ್ಬೊನ್ನಿಗಕ್ಕು ನಾಮಂ" (ಮಂಗರಾ. ೩೦-೩) [ಸಂ.]

ಶಿಲಾಸ್ತಂಭ (ನಾ). ೧. ಕಲ್ಲಿನ ಕಂಬ : ಮುನಿದೆಮ್ಮಂ ಕೊಲಲೊಡ್ಡಿದಂದಿನ ಶಿಲಾಸ್ತಂಭಕ್ಕೆ ಕೆಯ್ಯಾಡಿದಂದಿನ . . . ನಿನ್ನ ಗರ್ಜನೆಯುಂ ಬೀರಮುಮಿಗಳಿಂತು ಪುಡಿಯೊಳ್ ಚಿಕ ಸೀ ಪೂರಳ್ಪಿರ್ಪುದೇ (ಶಾಂತಿಪು. ೭-೬೦). ೨. ಶಾಸನಸ್ತಂಭ; ಶಿಲಾಶಾಸನದ ಕಂಬ : ಮಣ್ಡಲಕ್ಕೆಲ್ಲಂ ಪಡಿಛನ್ನಮಾಗೆ ಶಿಲಾಸ್ತಂಭಶಾಸನಮಾಗೆ ನಟ್ಟಂ (ಎಕ. III (R), ಹೆಗ್ಗಡ. ೬೦-೩೨; 1057). ೩. (ಶಿಲಾಶಾಸನದ) ಕಂಬದಂತಿರುವವನು : ಸುಯೋಧನೋರು ಮಕುಟೋದ್ಘಟ್ಟಪ್ರತಿಜ್ಞಾಕ್ಷರಾವಳಿವಿನ್ಯಸ್ತ ವಿಶಾಲನಿಶ್ಚಳಶಿಲಾಸ್ತಂಭಂ ಕುರುಕ್ಷೇತ್ರದೊಳ್ ಪ್ರಳಯೋಗ್ರಾಂತಕನಂತಗುರ್ವನೊಳ ಕೊಂಡಿರ್ದಂ ಹಿಡಿಂಬಾಂತಕಂ (ಗದಾಯು. ೧-೫೫). [ಸಂ.]

ಶಿಲಾಹಾರ (ನಾ) (ಪ್ರಾಚೀನ ಕರ್ಣಾಟಕದ) ಒಂದು ರಾಜಮನೆತನದ ಹೆಸರು : ತಗರಪುರವರಾಧೀಶ್ವರ ಶಿಲಾಹಾರನರೇಂದ್ರ ಜೀಮೂತವಾಹನಾನ್ವಯಪ್ರಸೂತಂ (ಕೊಲ್ಹಾಶಾ. ೨೪ ೩ ; ?) ; ಕೊಲ್ಹಾಪುರದ ಶಿಲಾಹಾರದ ಮುಕ್ಕಾಲುಭಾಗ ಶಿಲಾಶಾಸನಗಳು ಕನ್ನಡದಲ್ಲಿವೆ (ಭಾಷಾಶಾ. ೧೯೫). 'ಸಿಯಳಾಱ' ಪರಾ. [ಸಂ.]

ಶಿಲಾಹಿ (ನಾ). ಕಲ್ಲಿನ ಹಾವು ; ಕಲ್ಲಿನ ನಾಗರ : ಚರಲಿಂಗಮೆಂಬ ಪೊಗದೊಳ್ ತೃಪ್ತನಕ್ಕುಮಾಶ್ವರನದಂ ಬಿಟ್ಟು ಲಿಂಗಾಸ್ಯದೊಳ್ ಕುಡೆ ಶಿಲಾಹಿಗೆ ಪಾಲನೆಱೆದಂತದು (ಆರಾಚಿ. ೧-೧೨-೨೬). [ಸಂ.]

ಶಿಲಿ (ನಾ). ೧. ಬಾಗಿಲಿನ ಕೆಳಮರ. ೨. ಹೆಣ್ಣು ಎರೆಹುಳು : "ಶಿಲೀ, ಗಂಡೂಪದೀ — ೨ ಹೆಣ್ಣುಯರುಬುಹುಳುವಿನ ಹೆಸರುಗಳು" (ಸಿದ್ಧಾಂತಿ. ೮೪). ೩. ಈಟಿ. ೪. ಬಾಣ. ೫. ಹೆಣ್ಣುಕಪ್ಪೆ. [ಸಂ. ಶಿಲಿ, ಶಿಲೀ]

ಶಿಲೀಂದ್ರ, ಶಿಳೀಂದ್ರ (ನಾ). ೧. ನಾಯಿಕೊಡೆ; ಅಣಬೆ : ಪುಟ್ಟದುವಲ್ಲಿಗಲ್ಲಿಗೆ ಶಿಲೀಂದ್ರಚಯಂ[ಪಾಠಾಂ. ಶಿಕಿಪ್ರಚಯಂ, ಶಿಖಿಪ್ರಚಯಂ] ಕರುಮಾಡದಲ್ಲಿ ಜೇನಿಟ್ಟುದು (ಜಗವಿ. ೧೨-೪); ಮಾನವನಲ್ಲೂ ಪ್ರಾಣಿಗಳಲ್ಲೂ ಪಿವತ್ತಕ್ಕೂ ಮೀರಿದ ಬಗೆಗಳ ಅಣಬೆ (ಬೂಜು, ಬೂಷ್ಟು, ಶಿಲೀಂದ್ರ)ಗಳಿಂದ ಸೊಂಕುರೋಗಗಳು ಕಾಣಿಸಿಕೊಳ್ಳುತ್ತವೆ (ಕವಿಕೋ. I. ೨೨೭). ೨. ಒಂದು ಬಗೆಯ ಮರ : "ಅಣಂಬೆಯಲಿ ವೃಕ್ಷದಲ್ಲಿ ನಾಮಂ ಶಿಲೀಂ[ಪಾಠಾಂ. ಶಿಳಿಂ]ದ್ರಮೆನಿಸಿರ್ಕುಂ" (ಮಂಗರಾ. ೧೪೩-೨೧). ೩. ಬಾಣ; ಶರ : "ಅಣಂಬ ಶರ ವೃಕ್ಷಂಗಳ್ ಶಿಲೀಂಧ್ರಾಹ್ವಯಂ" (ನಾನಾರ. ೮೭). ಶಿಳೀಂದ್ರ : ೧. ಪೂಡವಿ ಘನಾಗಮನೃಪನಂ ಸಡಗರದುತ್ಸವದಿನಿದಿರ್ಗೊಳಲೆತ್ತಿದ ಬೆಳ್ಗೂಡೆಗಳ್ ತಾವೆಂಬಂತಿರೆ ಬಿಡದೆಸೆದುವು ಪರಿಕಿಸಲ್ ಶಿಳೀಂದ್ರವ್ರಾತಂ (ತ್ರಿಪುವಿ. ೮-೩೦). [ಸಂ.]

ಶಿಲೀಮುಖ, ಶಿಳೀಮುಖ (ನಾ). ೧. ಬಾಣ; ಶರ : ಶಿಶಿರೋಪಚಾರದಿಂ ಖಚರ ಶಿರೋಮಣಿ . . . ಮನೋಜ ಶಿಲೀ[ಪಾಠಾಂ. ಳೀ]ಮುಖ ಕೀಲಿತ ಹೃತ್ಕುಶೇಶಯಂ ತಡೆದು ಮೂರ್ಛಯಿಂದೆಟ್ಟರ್ತಂ (ಪಂಚಾಮೃ. ೪-೯೪) ; ಅವರು ಮಗುಳೆಟ್ಟರು ಶಿಲೀಮುಖದವಯವದೊಳುಟ್ಟೆದ್ದು ಗಿರಿಗಳು ಕವಿಯೆ ಕಡಿದೊಟ್ಟಿದೆನು ಭಾರಿಯ ವಜ್ರಬಾಣದಲಿ (ಕುವ್ಯಾಅ. ೧೨-೪೩). ೨. ದುಂಬಿ; ಭ್ರಮರ : ಶಿಲೀಮುಖ ಕುಂತಳ ಮದನಶಿಲೀಮುಖದಂತೆ ಭುವನಮಂ ಸೋಲಿಸಿದಳ್ (ಪಂಚಾಮೃ. ೪೦-೩೦). ೧, ೨ : ಪರಿಕಲಿತ ಶಿಲೀ[ಪಾಠಾಂ.ಳೀ]ಮುಖ ವಾನರಚಿಹ್ನಂ . . . ಎನಿಪಂತಕಕೃತ ನವತರು ವಿರ್ಪಂತಿರ್ದುದಲ್ಲಿ ಗಾಂಡಿವಿಯ ರಥಂ (ಗದಾಯು. ೪-೬೪) ; ಕೆದಱೆದುದು ಶಿಲೀಮುಖ ಪಾತದಿಂದ ಶೋಣಿತಪರಾಗತತಿ ಪದ್ಮವ್ಯೂಹದೊಳೆನೆ ಕೃಷ್ಣಶರಾಘಾತದಿನೊಗೆದುದು ದೈತ್ಯಬಲದೊಳರುಣಜಲೌಘಂ (ಜಗವಿ. ೧೨-೧೩); ಆ ಮಹಾವನಂ . . . ಚಮೂರಚಿತಪ್ರಹರಣವಿಶೀರ್ಣರೂಪಮುಂ ದಂತಿದಾನವವಿಲೀನಶಿಲೀಮುಖಮುಂ . . . ಆಗಿಯುಂ ಅಪರ್ಣಾನ್ವಿತಮಲ್ತು (ಚಂದ್ರಪ್ರ. ೫-೫೨ ವ). ೩. ಮೂರ್ಖ. ಶಿಳೀಮುಖ : ೧. ತೊಟ್ಟರೋರೊರ್ವರು ಶಿಳೀಮುಖವಿಟ್ಟರೋರೋರ್ವರ ಸಮೀಪಕೆ (ಮುಲ್ಲಾಶಾ. ೭-೨೩). ೨. ನಿಖಿಳವಿನಮನ್ನರೇಶ್ವರ ಮುಖಾಬ್ಜನೇತ್ರೋತ್ಪಳಾಳಕಾಳೋಳಶಿಳೀಮುಖನಿಕರದಿನೆಸೆವುದು (ಎಕ. II. ೧೩೩-೫೪; 982). ೧, ೨ : ಕಾದಲಿದಿರ್ಚಿ ಬಂದ ಪಗೆ ಸಂಪಗೆಯಂತೆ ಶಿಳೀಮುಖಕ್ಕೆ ಗೆಂಟಾದುದು (ಪಂಪಭಾ. ೧೨-೮೭) ; ಧನುರ್ಧರರ ಕಳಾಪದಂತೆ ರಮಣೀಯ ಶಿಳೀಮುಖಸಂಕುಳಂ ಕೊಳಂ (ಗಿರಿಕ. ೨-೫೪); ಚಳಶಿಳೀಮುಖ ರವಕೆ ಪಟುಭಟರಳುಕಿದರು ವಿರಹಿಗಳವೊಲು (ಕುವ್ಯಾಭಾ. ೭-೯). [ಸಂ.]

ಶಿಲುಕು, ಶಿಲಕು, ಶಿಲ್ಕು, ಶಿಲ್ಲಕು, ಸಿಲುಕ್ಕು$_4$, ಸಿಲ್ಕು$_3$, ಸಿಲ್ಲಕು (ನಾ). ೧. ಹಣ, ಪದಾರ್ಥ ಇತ್ಯಾದಿ ವಸ್ತುಗಳು ಖರ್ಚಾದ ನಂತರ ಉಳಿದಿರುವ ಬಾಕಿ, — ಶೇಷ : ನಿನ್ನಿನ ಸಾಯಂಕಾಲದವರೆಗಿನ ಜಮೆಯ ಹಾಗೂ ಖರ್ಚಿನ ರಕಮುಗಳ ಬೇರೀಜು ಮಾಡಿ, ಶಿಲುಕು ತೋರಿಸಲ್ಪಟ್ಟಿತು (ಭಾಮಿನಿ. ೫೭); ತನ್ನ ಬೀಗದ ಕೋಣೆಯ ಬಾಗಿಲನ್ನು ತೆಗೆದು ಅದರಲ್ಲಿ ಎಷ್ಟು ಶಿಲುಕು ಉಳಿದಿದೆ ಎಂದು ಲೆಕ್ಕಮಾಡಿ ನೋಡಿದನು (ಎಧಿವೃ. ೧೮೫). ಶಿಲಕು : ೧. ಪೂರ್ವದ ಶಿಲಕು ಸಹಾ ಖರ್ಚು ಮಾಡುತ್ತಾ (ಹೃದರ. ೩೦). ಶಿಲ್ಕು : ೧. ಅಂಗಡಿಯ ಬೀಗ ಮುರಿದು ಪೆಟ್ಟಿಗೆಯಲ್ಲಿದ್ದ ಶಿಲ್ಕನ್ನಲ್ಲ

ಹೊತ್ತಿದ್ದರು (ಆಳಿ. ೧೬೧). ೨. ಕಾಯ್ದಿರಿಸಿದುದು; ಮೀಸಲು: ಎಲ್ಲಾ ಕೇಂದ್ರ ಬ್ಯಾಂಕುಗಳ ವಿದೇಶ ವಿನಿಮಯ ಶಿಲ್ಕುಗಳ (Reserves) ಸ್ವಲ್ಪ ಭಾಗವನ್ನು ಅಂತರರಾಷ್ಟ್ರೀಯ ತೀರುವೆಯ ಬ್ಯಾಂಕಿನಲ್ಲಿ ಕೇಂದ್ರೀಕೃತಗೊಳಿಸಿ . . . ಸೂಕ್ತ ಕ್ರಮಗಳನ್ನು ಆರಂಭಿಸಿತು (ಅಂತಸಂ. ೧೪೭). **ಶಿಲ್ಲಕು** : ೧. ಒಟ್ಟು ಶಿಲ್ಲಕು ಉಳಿದ ಹಣವೆಷ್ಟು, ಸೆಟ್ಟರೆ? (ಜಠರಾ. ೨೬೮). **ಸಿಲುಕು**$_4$: ೧. "ಸಿಲುಕು-ಉಳಿತಾಯ" (ಜಾನಪದೋ. ೪೯). **ಸಿಲ್ಕು**$_3$: ೧. ಆತನ ಬಳಿಯಲ್ಲಿ ಯಾವಾಗಲೂ ಮಣಗಟ್ಟಿ ಅಪ್ಪು ಸಿಲ್ಕು ಇರುತ್ತಿತ್ತು (ಪಾಪಾ. ೧೫೦). ಸಿಲ್ಲಕು . ೨. ಪದ್ಮಾವತಿಯೂ ತನ್ನ ಹೆರಿಗೆಗ ಬೇಕೆಂದು ಕುರುಳುಗಳನ್ನು ಸಿಲ್ಲಕು ಮಾಡತೊಡಗಿದಳು (ಅಶೋಕ.೧೫೪). [← ಆರ. ಸಲ್ಪ್; ಮರಾ. ಶಿಲಕ್, ಶಿಲ್ಲಕ್]

ಶಿಲುಬೆ, ಸಿಲುಬೆ, ಸಿಲುವೆ (ನಾ). ೧. (ಕ್ರೈಸ್ತಜನಾಂಗದವರಲ್ಲಿ) ಹಿಂದಿನ ಕಾಲದಲ್ಲಿ ತಪ್ಪಿತಸ್ಥರನ್ನು ಸಾಮಾನ್ಯವಾಗಿ ಅಡ್ಡಮರ ಹಾಕಿದ ಉದ್ದವಾದ ದಸಿಗೆ ಬಂಧಿಸಿ, ಮೊಳೆಹೊಡೆದು ಸಾಯಿಸಲಾಗುತ್ತಿದ್ದ ಒಂದು ಬಗೆಯ ಮರದ ಸಾಧನ; ☩ ಈ ಸಾಧನವನ್ನು ಬಳಸಿ ಏಸುಕ್ರಿಸ್ತನನ್ನು ಶಿಕ್ಷಿಸಲಾಗಿತ್ತು : ಬ್ಲೇಕಿನ ಮತ್ತೊಂದು ಕಾಣಿಕೆ ಎಂದರೆ ಆತ ಶಿಲೆಗೆ ಬಂಧಿಸಲ್ಪಟ್ಟ ಪ್ರಮಿತ್ಯೂಸಿನಲ್ಲಿ ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನ ಪ್ರತಿಮೆಯನ್ನು ಕಂಡದ್ದು (ಬದ್ರಪ್ರ. XX ಪೀಠಿಕೆ); ಭವ್ಯವಾದ ಆ ಪ್ರಾರ್ಥನಾಮಂದಿರದಲ್ಲಿ . . . ಶಿಲುಬೆಯಲ್ಲಿ ಸಿಕ್ಕಿಸಿದ ಏಸುಕ್ರಿಸ್ತರ ಪ್ರತಿಮೆಯಿತ್ತು (ರಕ್ಕರೂ. ೫೩). ೨. ಏಸುವಿನ ಸ್ಮಾರಕವಾಗಿ ಕ್ರೈಸ್ತಧರ್ಮದವರು ಕೊರಳಲ್ಲಿ ಧರಿಸುವ ಲಾಂಛನ; ಕ್ರೂಜೆ : ಚಿನ್ನದ ಶಿಲುಬೆಯನ್ನುಳ್ಳ ವಿಧವಿಹಿತವಾದ ರಜತವರ್ಣದ ಪೋಷಾಕಿನಲ್ಲಿ ಪುರೋಹಿತರೂ . . . ಗಾಯಕರೂ ರಾರಾಜಿಸುತ್ತಿದ್ದರು (ಪುನರು. ೬೯). **ಸಿಲುಬೆ**: ೧. ಬೆಕ್ಕಿಹಂಗೆ ಉತ್ತರದಲ್ಲಿ ಜೆರುಸಲಂ ರಾಜಧಾನಿಯೇಸುಕ್ರಿಸ್ತನು ಸಿಲುಬೆಗೆ ಹಾಕಲ್ಪಟ್ಟ ಸ್ಥಳ (ಭೂಗೋಳ. ೧೦೫); ಕಂಬದಿಂ ಕವಿವಂದು . . . ಅರಳಿಯಡಿ ತಪಿಪಂದು ಸಿಲುಬೆಯಿಂ ಕ್ಷಮಿಪಂದು - ರವಿಯೊ ಮೇಣ್ ಕವಿಯೊ ಕಾಣಿಸುವನಂದುಮನಿಂದು? (ಗಿಳಿವಿಂ. ೬೨-೪೨); ಸತ್ಯಕ್ಕೋಸ್ಕರ ಸಿಲುಬೆಯನ್ನೇರಲಿಕ್ಕೆ ಸಿದ್ಧವಾದ . . . ಸ್ವಾಮಿಭಕ್ತಿಗೋಸ್ಕರ ಅಸುವನ್ನು ನೀಗಲು ಉದ್ಯುಕ್ತವಾದ ಜೀವನಗಳ ಗುಟ್ಟನ್ನು ಕಂಡುಹಿಡಿಯುವುದು ಸಾಮಾನ್ಯ ಕೆಲಸವಲ್ಲ (ಕವೀ. ೭೫). **ಸಿಲುವೆ** : ೧. ಬೆರಳಲಿ ಬೇಡನ ಬಾಣ ಬೇಯುತಿರೆ ಸಿಲುವೆ ಮೊಳೆಗೆ ಕೆಯ್ನಾದಿದಯಾ ? (ಗಿಳಿವಿಂ. ೪೧-೯). [← ಸಿರಿಯಕ್. ಸ್ಲೀಬೊ./ ತಮಿ. ಚಿಲುವೈ; ಮಲ. ಶ್ಲೀಬ; ತೆಲು. ಸಿಲುವ. / ಪಾರ. ಶಲೀಬ್]

ಶಿಲುವು 'ಸಿಲುಪು' ನೋ.

ಶಿಲೆ (ನಾ). ೧. ಕಲ್ಲು ಬಂಡೆ ; ಅರೆ : ನಡೆವ ತಳರ್ನಡೆಯೊಳ್ ಪುಡಿವುತಿಯಾದುವು ಶಿಲೆಗಳೊಡದು ಕರಿಗಳ್ ಭೀಮಂ ಪಿಡಿದಡರ್ದೊಡ್ಡಿ ಬಾಯ್ಬಿಟ್ಟೆಲ್ಲಡಗಾದುವು (ಪಂಪಭಾ. ೨-೫); ಭೀಮ ಬಿದ್ದನು ತೊಡೆಯ ಮೇಲಿಂದೀ ಮಹಿಗ ತಚ್ಛೈಲಶಿಲೆ ನಿರ್ನಾಮವಾದುದು ಹಸುಳೆ ಹೊರಳಿದು ಬಿದ್ದ ಭಾರದಲಿ (ಕುವ್ಯಾಆ. ೪-೫೭). ೨. ಅರಯುವ ಗುಂಡು; ರುಬ್ಬುಗುಂಡು. ೩. ಹೊಸ್ತಿಲ ಮುಂದೆ ಕಾಲಿಡಲು ಹಾಕಿರುವ ಹಲಗೆ, – ಮೆಟ್ಟುಹಲಗೆ. [ಸಂ. ಶಿಲಾ]

ಶಿಲೆದಾರ, ಶಿಲೇದಾರ, ಸಿಲೆದಾರ, ಸಿಲೇದಾರ (ನಾ). ಅಶ್ವದಳದ ಯೋಧ; ಕುದುರೆಹೌಜಿನ ಸೈನಿಕ : ಆ ಜನರಿಗೂ ಮತ್ತು ಇಲಾಖೆಯ ಶಿಲೆದಾರರಿಗೂ ಸಾಗುವಳಿಗಾಗಿ ಜಮಿನುಗಳನ್ನು ಕೊಟ್ಟಿದ್ದರಿಂದ ಆ ಜನರು ಇಲ್ಲಿ ವ್ಯವಸಾಯ ಜೀವಿಗಳೆನಿಸಿ ಸ್ಥಳವಂತರಾದರು (ಮಹಾವಂ. II. ೪೮). **ಶಿಲೇದಾರ**: ಶಿಲೇದಾರನು ಅಲ್ಲಿಂದೆದ್ದು ಕುದುರೆಗೆ ಜೀನು ಹಾಕಿದನು (ಅಮಾರಾ. ೧೭). **ಸಿಲೆದಾರ** : ಚಿರಕಾಲದಿಂದಲೂ ಮೈಸೂರುಸಿಲೆದಾರರು ಹೆಸರುವಾಸಿ ಪಡೆದಿರುವರು (ಮಹಾವಂ. II. ೧೫). **ಸಿಲೇದಾರ** : ಅಶ್ವಸೇನೆಯಲ್ಲಿ ಭಾರ್ಗೀರಿಯವರೂ ಸಿಲೇದಾರರೂ ಎಂದು ಎರಡು ಬಗೆಯವರಿದ್ದರು (ಭತ್ರಶಿ. ೧೫೬).

ಶಿಲೆದಾರಿಯಿಲಾಖೆ = ಕುದುರೆಯ ಸೈನ್ಯದ ವಿಭಾಗಕ್ಕೆ ಸಂಬಂಧಿಸಿದ ಇಲಾಖೆ: ಈಚೆಗೆ ಶಿಲೆದಾರಿಯಿಲಾಖೆಯಲ್ಲಿ ತಿದ್ದುಪಾಟಾಗಿ ೭ ತುಕಡಿಗಳೇರ್ಪಟ್ಟು ಪ್ರತಿಯೊಂದಕ್ಕೂ ಒಬ್ಬೊಬ್ಬ ತುಕಡಿದಾರರನ್ನು ನೇಮಿಸಿದರು (ಮಹಾವಂ. II. ೪೭). [← ಆರ. ಪಾರ. ಸಿಲಾಹ್‌ದಾರ್ ; ಮರಾ. ಶಿಲೇದಾರ್]

ಶಿಲೇದಾರ 'ಶಿಲೆದಾರ' ನೋ.

ಶಿಲೇಮುದ್ದ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಶಿಲೇಮುದ್ದರ ಮರ್ಮ್ಮಾನ್ ಸರ್ವ್ವಸಿದ್ಧಿ ಆಚಾರ್ಜ್ಯ[ರ್ಯ್ಯ]ರ ಚಟ್ಟರ ರೆವಡಿಒವಚ್ಚರ್ ತೆಂಕಣದಿಶೆ ಮಾಡಿದೊರ್ (ಇಆ X. ೧೭೦-೧ ; ೬ನೆಯ ಶತ). [?]

ಶಿಲೋಂಛಜೀವಿ (ನಾ). ಹಕ್ಕಲಾರಿಸುವ ಕಸುಬಿನಿಂದ ಜೀವಿಸುವವನು : ಕುಶೂಲಧಾನ್ಯ, ಕುಂಭೀಧಾನ್ಯ, ತ್ರ್ಯಾಹಿತ, ಅಶ್ವಸ್ತನ, ಶಿಲೋಂಛಜೀವಿ ಇವರುಗಳಲ್ಲಿ ಮೊದಮೊದಲು ಹೇಳಿದವರಿಗಿಂತಲೂ ಆಮೇಲಾಮೇಲೆ ಹೇಳಿದವರು ಶ್ರೇಷ್ಠರು (ಆರ್ಯಾಧ. ೮೭). [ಸಂ. ಶಿಲೋಂಛಜೀವಿನ್]

ಶಿಲೋಂಛವೃತ್ತಿ (ನಾ). ಕೊಯ್ದಾದ ಮೇಲೆ ಹೊಲದಲ್ಲಿ ಉಳಿದ ತೆನೆಯ ಕಾಳುಗಳನ್ನು ಆರಿಸಿ ಜೀವಿಸುವಿಕೆ; ಹಕ್ಕಲಾರಿಸುವಿಕೆಯ ಕಸುಬು: ಕ್ಷಮಾಶೀಲರಾಗಿ ನಡದುಕೊಂಬಂಥಾ ಭೂಭುಜರೊರ್ಮೆ ಕಾಲವಶದಿಂದ ಕಡುದರಿದ್ರರಾಗಿ ಶಿಲೋಂಛವೃತ್ತಿಗಳಿಂದಂ ಬಾಳ್ಕೆಯನೆಸಗುತ್ತಿರ್ದೂಡಂ (ಭಾರಶಾಂ. ೧೪-೭೭); ಮುದ್ಗಲನು ಸತ್ಯಸಂಧನಾಗಿ, ಅಸೂಯಾರಹಿತನಾಗಿ ಶಿಲೋಂಛವೃತ್ತಿಯಿಂದ ಕುರುಕ್ಷೇತ್ರದಲ್ಲಿ ವಾಸಿಸುತ್ತಿದ್ದನು (ಧಾರಶ. ೧೦೫). [ಸಂ.]

ಶಿಲೋಚ್ಚಯ, ಶಿಳೋಚ್ಚಯ (ನಾ). ಕಲ್ಲು ಬಂಡೆಗಳಿಂದ ಕೂಡಿದುದು; ಬೆಟ್ಟ; ಪರ್ವತ : ಆ ಕುಜುವದ ಕಱಿದಾನುಂ ಶಿಲೋ[ಪಾಶಾಂ..ಳೋ]ಚ್ಚಯಮನೇಱಿ ನೋಡ್ಪನಲ್ಲಿ ಕಾಯೋತ್ಸರ್ಗದೊಳಿರ್ದ ಮುನೀಂದ್ರನಂ ಕಂಡು ಮನಂಗೊಂಡು ಬಲವಂದು (ನೇಮಿಪು. ೪-೧೦೪ ವ) ; ಶಿಲೋಚ್ಚಯಸಾನುವಿನ ಗಹ್ವರದ ಗಂಡಸ್ಥಾನ ದೀರ್ಘದ್ರೋಣಗಳಲಱಿಸಿದರು ಮೃಗಕುಲವ (ಕುವ್ಯಾಆ. ೧೩-೨೪). **ಶಿಳೋಚ್ಚಯ** : "ಆಚಳಃ, ಶಿಳೋಚ್ಚಯಃ, ಶೈಲಃ, ಕ್ಷಿತಿಧರಃ . . . ಅದ್ರಿಃ, ಕುದ್ರಃ – ಈ ೧೪ ಬೆಟ್ಟು" (ಪಲಾಯು. ೩೭-೧೧). [ಸಂ.]

ಶಿಲ್ಕು 'ಶಿಲುಕು' ನೋ.

ಶಿಲ್ಪ (ನಾ). ೧. ಸಂಗೀತ , ನೃತ್ಯ , ಚಿತ್ರಕಲೆ ಮುಂತಾದ ಅರುವತ್ತುನಾಲ್ಕು ವಿದ್ಯೆಗಳು : ಪರಿನಿರ್ಮಿಪ ಮಾಜುಡುವ ದೊರೆವಡದ ನಿಯೋಗದನ್ಯತದಜಿತದ ಋಣದಾಚರಣದ ಶಿಲ್ಪದ ಮೂಲದ ಪರಸಂ ಪೇಟ್ಟಲ್ಲಿ ಮಾಟ್ಕಿಗಪ್ರತ್ಯಯಮಂ (ಶಮದ. ೧೯೭) ; ಭಾರತೀಯರ ಪ್ರಕಾರ ಶಿಲ್ಪ ಮತ್ತು ಕಲೆ ಎರಡೂ ಅಭಿನ್ನಾರ್ಥದಲ್ಲಿ ಬಳಸಲ್ಪಟ್ಟಿವೆ. ಶಿಲ್ಪ ಎನ್ನುವುದು ಸಮಸ್ತಕಲೆಗಳನ್ನು ಒಳಗೊಳ್ಳುತ್ತದೆ (ಸೌಂದ. ೧೧೯). ೨. ಕಲ್ಲು, ಲೋಹ ಇತ್ಯಾದಿಗಳನ್ನು ಕೆತ್ತಿ ಆಕೃತಿ ಕೊಡುವ ಕಲೆ; ಕೆತ್ತನೆಯ ಕೆಲಸ : ಯಾವುದಾದರೂ ಒಂದು ವಿಷಯವನ್ನು . . . ರೇಖಾದಿಗಳಿಂದ ವ್ಯಕ್ತಪಡಿಸಿದರೆ ಚಿತ್ರವಾಗುವುದು; ಶಿಲಾಲೋಹಾದಿಗಳಿಂದ ವ್ಯಕ್ತಪಡಿಸಿದರೆ ಶಿಲ್ಪವಾಗುವುದು (ಕ್ರಪ್ರ. ೧೭೮); ಭಗವಂತನ ಔನ್ನತ್ಯವನ್ನು ಶಿಲ್ಪದಲ್ಲಿ ನಿರೂಪಿಸಲು ಸಾಧ್ಯವಾದ ಬಗೆ ಎರಡು (ಕಾಂತಲಾ. ೧೩೬). ೩. ಕೆಲಸ; ವೃತ್ತಿ; ಉದ್ಯೋಗ: ಶಿಲ್ಪವೆಂದರೆ ಜೀವನೋಪಾಯದ ಕೆಲಸವು (ಪೂಸಾಗ. ೧೫). ೪. ಕಟ್ಟಡ, ಸೇತುವೆ ಮೊದಲಾದುವನ್ನು ನಿರ್ಮಿಸುವ ವಿಜ್ಞಾನ; ವಾಸ್ತುಕಲೆ : 'ಶಿಲ್ಪಶಾಸ್ತ್ರ' ಪರಾ. ೫. ಸಂಗೀತ, ನೃತ್ಯ ಇತ್ಯಾದಿ ಕಲೆಗಳಲ್ಲಿರುವ ನೈಪುಣ್ಯ, – ಕುಶಲತೆ. ೬. ರಚನೆ; ನಿರ್ಮಾಣಕಾರ್ಯ: 'ಶಿಲ್ಪಿಸು' ಪರಾ. ೭. ಮಿಳ್ಳೆ; ದರ್ವಿ. [ಸಂ.]

ಶಿಲ್ಪಕ (ನಾ). ೧. ಯಾವುದಾದರೂ ಕುಶಲಕಲೆಯಲ್ಲಿ ನಿಷ್ಣಾತನಾದವನು: ಮಾಡುವನೊಳಂ . . . ವರ್ತಕನೊಳಂ, ಶಿಲ್ಪಕನಲ್ಲಿಯುಂ ಮೂಲದಲ್ಲಿಯುಂ - ಇಗ ಪ್ರತ್ಯಯಮಕ್ಕುಂ (ಶಮದ. ೧೯೭ಷ್ಠ). ೨. [ನಾಟ್ಯ] ಹದಿನೆಂಟು ಉಪರೂಪಕಗಳಲ್ಲಿ ಒಂದು ; ಇಂದ್ರಜಾಲ , ತಂತ್ರಶಾಸ್ತ್ರ ಮುಂತಾದ ವಿಧಿಗಳನ್ನು ಚಿತ್ರಿಸುವ ಒಂದು ಬಗೆಯ ನೃತ್ಯರೂಪಕ : ಉಪರೂಪಕಗಳು-೧.ನಾಟಿಕಾ . . . ೧೩. ಶಿಲ್ಪಕ. ೧೪. ವಿಲಾಸಿಕಾ. ೧೫. ದುರ್ಮಲ್ಲಿಕಾ. ೧೬.ಪ್ರಕರಣೇ. ೧೭. ಹಲ್ಲೀಶ. ೧೮. ಭಾಣಿಕ (ಸಂನಾಟ. ೬೨): ಶಿಲ್ಪಕ – ಇದರಲ್ಲಿ ನಾಲ್ಕು ಅಂಕಗಳು. ನಾಲ್ಕು ವೃತ್ತಿಗಳು; ಶಾಂತ ಹಾಸ್ಯರಸಗಳಿಲ್ಲ . . . ಆಶಂಸೆ ಮುಂತಾದ ಇಪ್ಪತ್ತೇಳು ಅಂಗಗಳಿರುತ್ತವೆ (ಸಂನಾಟ. ೬೩). [ಸಂ.]

ಶಿಲ್ಪಕರ್ಮ (ನಾ). ಕುಶಲಕಾರ್ಯ; ಕುಶಲವೃತ್ತಿ: ಅಸಿ ಮಷಿ ಕೃಷಿ ವಣಿಗ್ವಿದ್ಯಾಶಿಲ್ಪಕರ್ಮಂಗಳಿಂ ಶುದ್ಧವೃತ್ತಿಯಿಂದರ್ಥೋಪಾರ್ಜನಂಗೆಯ್ವ ವಾರ್ತೆಯುಂ (ಆದಿಪು. ೧೫-೧೩ ವ). [ಸಂ. ಶಿಲ್ಪಕರ್ಮನ್]

ಶಿಲ್ಪಕಲೆ (ನಾ). ಕಲ್ಲಿನಲ್ಲಿ ಕೆತ್ತನೆ ಮಾಡುವ ಕುಶಲವಿದ್ಯೆ : ಕರ್ಣಾಟಕದಲ್ಲಿ ಶಿಲ್ಪಕಲೆಯು ಉರ್ಜಿತಸ್ಥಿತಿಯಲ್ಲಿದ್ದಿತೆಂದು ಹೇಳಬಹುದು (ಕರ್ಣಾಅ. ೬).

[ಸಂ. ಶಿಲ್ಪಕಲಾ]

ಶಿಲ್ಪಕಾರ (ನಾ). ಕಲ್ಲಿನಲ್ಲಿ ಕೆತ್ತನೆ ಮಾಡುವವನು; ಶಿಲ್ಪಿ : ಶಿಲ್ಪಕಾರರು ಮೊದಲಾದವರಂ ಕಳುಹಿಸಂದು ನೇಮಿಸಲು (ಸೌಂಧಿ. ೧೨೭-೧). [ಸಂ.]

ಶಿಲ್ಪಜ್ಞ (ನಾ). ಶಿಲ್ಪಶಾಸ್ತ್ರವನ್ನು ತಿಳಿದವನು : ಎಂಟನೆಯ ಶತಮಾನದ . . . ಗಣೇಶ ಮತ್ತು ನಂದಿಯ ಮೂರ್ತಿಗಳು ಶಿಲ್ಪಜ್ಞರ ಮೆಚ್ಚುಗೆ ಪಡೆದವೆ (ಭಾರದ.೫೧೯).

[ಸಂ.]

ಶಿಲ್ಪವಿದ್ಯೆ (ನಾ). ೧. ಕುಶಲಕಲೆ; ಲಲಿತಕಲೆ : ಸ್ಕರಂಧ್ರಿ-ಲೋಗರ ಮನೆಯಲ್ಲಿ ಇದ್ದವಳಾಗಿ ಮಕರಿಕಾಪತ್ರ ಮೊದಲಾದ ಶಿಲ್ಪವಿದ್ಯೆಯ ಮಾಡುವವಳು (ನಾಚಿರಾ. ೬). ೨. ಯಂತ್ರರಚನೆಯನ್ನು ಕುರಿತ ಶಾಸ್ತ್ರ : ಮಾನವನ . . . ನಾಗರಿಕತೆಯಲ್ಲಿ ಒಂದೊಂದು ಯುಗದಲ್ಲಿಯೂ ಶಿಲ್ಪವಿದ್ಯೆಯಿಂದ (Engineering) ಏನು ನೆರವು ದೊರಕಿದೆ? (ಶಿಲ್ಪಾ. ೧). [ಸಂ. ಶಿಲ್ಪವಿದ್ಯಾ]

ಶಿಲ್ಪಶಾಸ್ತ್ರ (ನಾ). ೧. ಕಟ್ಟಡ, ವಿಗ್ರಹ ಮುಂತಾದುವುಗಳ ನಿರ್ಮಾಣವನ್ನು ಕುರಿತ ವಿದ್ಯೆ ; ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಶಾಸ್ತ್ರ : ಶಿಲ್ಪಶಾಸ್ತ್ರ ವಿಶಾರದರಪ್ಪಾ ಚಾರ್ಯರಂ ಬರಿಸಿ . . . ನೆಲಗಟ್ಟಂ ಶೋಧಿಸಲ್ಕುದ್ಯೋಗಮಂ ತಾಳ್ದಿರ್ಪಾಗಳ್ (ತ್ರಿಪುವಿ. ೨೧-೩ ವ); ಹೊಯ್ಸಳದೇವಾಲಯಗಳಲ್ಲಿ ವಿಗ್ರಹಗಳನ್ನು ಯಾವ ಶಿಲ್ಪಶಾಸ್ತ್ರವನ್ನನುಸರಿಸಿ ಶಿಲ್ಪಿಗಳು ಮಾಡಿದರೆಂಬುದನ್ನು ನಿರ್ಧರಿಸುವುದು ಕಷ್ಟವಾಗಿದೆ (ಹೊಯ್ಸಳಾ. ೧೨). ೨. = ಶಿಲ್ಪವಿದ್ಯೆ ೨: ಸ್ಥಿತಿಸ್ಥಾಪಕತ್ವಪ್ರಕರಣವು ಶಿಲ್ಪಶಾಸ್ತ್ರದಲ್ಲಿ (Engineering) ಬಹುಮುಖ್ಯವಾದುದಾಗಿದೆ (ಭೌತಿ. ೧೦೯). ೩. ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ ಲಲಿತಕಲೆಗಳನ್ನು ಕುರಿತ ಶಾಸ್ತ್ರ: (೬). [ಸಂ.]

ಶಿಲ್ಪಿ$_1$ (ನಾ). ೧. ಕುಶಲಕಲೆಯನ್ನು ಬಲ್ಲವನು; ಕುಶಲಕರ್ಮಿ : ಶಿಲ್ಪಿ ಗಡ ಕಲ್ಪಪತಿ ಸಂಕಲ್ಪಂ ರತ್ನೋಪಲಂ ದಳಂ ಗಡ ಶೋಭಾತಲ್ಪಮಿದನ್ನದ ಬೇಱ್ ವಿಕಲ್ಪಿಸುವನೆ ಗಾಂಪನೆನಿಸುಗುಂ (ಪಂಠಾಮಾ. ೧-೧೨೫). ೨. ಕಲ್ಲಿನಲ್ಲಿ ಕೆತ್ತನೆ ಕೆಲಸ ಮಾಡುವವನು: ಕಲಿತರ್ಕ ಬಿಲ್ಪಿಱ್ಪೆಯಂ . . . ಬಂಡೆಯ ಕೊರೆದು ವರಶಿಲ್ಪಿ ಭುವನ ಸುಂದರಕಲಾಲಕ್ಷ್ಮಿಯಂ ಸೃಜಿಪಂತೆ (ಶ್ರೀರಾಮಾ. ೨೫-೬೭೪) ; ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದ ಸ್ಥಪತಿಗಳ ಮತ್ತು ಶಿಲ್ಪಿಗಳ ವಂಶಗಳೆಲ್ಲ ನಾಶವಾಗಿ ಹೋದವು (ಮೃವಾಸ್ತು. ೫೨). ೩. ಯಂತ್ರಶಿಲ್ಪವನ್ನು ಬಲ್ಲವನು; ಯಂತ್ರಶಿಲ್ಪಿ : ಭೂಗೋಳವನ್ನೇ ಒಂದುಗೂಡಿಸುವುದಕ್ಕೆ ಇನ್ನೂ ಕೆಲವು ಉಪಕರಣಗಳನ್ನು ಶಿಲ್ಪಿಯೇ ನಮಗೆ ಒದಗಿಸಿದ್ದಾನೆ (ಶಿಲ್ಪಾ. ೮). ೪. ಕಲ್ಲಿನಲ್ಲಿ ಕಡೆದ ವಿಗ್ರಹ : (೬). [ಸಂ. ಶಿಲ್ಪಿನ್]

ಶಿಲ್ಪಿ$_2$ 'ಸಿಲ್ಪಿ' ನೋ.

ಶಿಲ್ಪಿಗ (ನಾ). ೧. ಕಲ್ಲು, ಲೋಹ ಇತ್ಯಾದಿಗಳಲ್ಲಿ ವಿಗ್ರಹ ಮುಂತಾದುವನ್ನು ಕಡೆಯುವವನು: ಕಂಚುಗಾಱರು ಕೈದುಗಾಱರು ಹೊಳೆವ ಹೊಮ್ಮಂಚ ಗಾಱರು ಶಿಲ್ಪಿಗರು ಸಂಚಗಾಱರು ಸದ್ವಿದ್ಯಾಧಿಕರಾದ ಪಾಂಚಾಳರಿರ್ದರಿಕ್ಕೆಲದಿ (ಪೋಪತ. ೩-೨೨); ಶಿಲ್ಪಿಗರ ಕೈದುಗಳು ಯಂತ್ರಗಳು . . . ಕಡಿಮೇ ಧಾತುಗಳಿಂದಾಗುವವು (ಮುಯಿಯಾ. ೪-೧೧). ೨. ಸೇತುವೆ , ಕಟ್ಟಡ ಮುಂತಾದುವುಗಳ ನಿರ್ಮಾಣ ಕಾರ್ಯದ ನಿರ್ದೇಶಕ ; ಯಂತ್ರಶಿಲ್ಪಿ : ಭೂ ಗಗನ ಪಾತಾಳದರಮನೆಗಳದಱೊಡನೆ ತೂಗ ಸರಿಬಾರವೆಂದೆಲ್ಲರುಂ ಪೊಗಳಲತಿವೇಗದಿಂದಾ ಶಿಲ್ಪಿಗಂ ಬಂದು ಮಯ್ಯಿಕ್ಕಿ ಬಸವನೊಡನಿಂತೆಂದನು (ಚಿಬಪು. ೫-೫೨).

[ಶಿಲ್ಪ + - ಇಗ]

ಶಿಲ್ಪಿಸು (ಕ್ರಿ). ರಚಿಸು; ರೂಪಿಸು: ಕನ್ನಡನಾಡಿನಲ್ಲಿ ಅವರು ಶಿಲ್ಪಿಸಿದ ಮಹತ್ಕಾರ್ಯಗಳು, ಸಮುದ್ರಗಳು ಅವರ ಸಜೀವಪ್ರತಿಮೆಗಳಾಗಿ ಅಚ್ಚಳಿಯದೆ ನಿಂತಿವೆ (ಕಬಸಾ. ೧೫೯). [ಶಿಲ್ಪ + — ಇಸ್ತು]

ಶಿಲ್ಲಕು 'ಶಿಲುಕು' ನೋ.

ಶಿವ (ಗು). ೧. ಮಂಗಳಕರವಾದ; ಶುಭಕರವಾದ : ಅನಿಬರುಂ ತೊರೆಯ ಶಿವಸಲಿಲದೊಳ್ ಮೊಗಂದೊಳೆದು ಮುಂಬರಿದರಾ ಚಿತ್ರಕೂಟಕ್ಕೆ (ಶ್ರೀರಾಮಾ. ೧೫೯-೪೦೧). (ನಾ). ೨. ಮಂಗಳ; ಶುಭ: ಶಿವದ ಶಾಶ್ವತಮಪ್ಪ ಸೌಖ್ಯಮನೀಯಲಾರ್ಪ ಜಿನೇಶ್ವರ ಪ್ರವರಪಾದದೊಳಲ್ಲದರ್ತಿಯುಂ (ಧರ್ಮಪ್ರ. ೨-೨೩೨); ವೈರಮಂ ಹಿಂಸೆಯಂ ತೊರೆಯಲೆಳಸುವ ತಪದ ಸಾಧನೆಗೆ ಪ್ರಾರ್ಥನಾನಿರತಳಾದಳ್ ಶಿವದ ಸಫಲತೆಗೆ (ಶ್ರೀರಾಮಾ. ೩೨೬-೧೯೦). ೩. ಸಂತೋಷ; ಆನಂದ. ೪. ಏಳಿಗೆ; ಅಭ್ಯುದಯ. ೫. ವೇದ. ೬. ಗಂಡಸಿನ ಜನನೇಂದ್ರಿಯ ; ಶಿಶ್ನ. ೭. ದೇವತೆ. ೮. ಪಾದರಸ. ೯. ಗುಗ್ಗುಳ. ೧೦. ಮದ್ಯ. ೧೧. ಮಜ್ಜಿಗೆ. ೧೨. ಮಾಣಿಕ್ಯ. ೧೩. ಕಾಲ. ೧೪. ಪರಿಷ್ಕಾರಹೊಂದಿದ ಬಿಳಿಗಾರ. ೧೫. ಕಡಲುಪ್ಪು. ೧೬. ಕಲ್ಲುಪ್ಪು. ೧೭. ಕಬ್ಬಿಣ. ೧೮. ಚಂದನ. ೧೯. ಮೋಕ್ಷ ; ಮುಕ್ತಿ: 'ಶಿವನಿಲೆ', 'ಶಿವಪಥ' ಪರಾ. ೨೦. ಹಸುಗಳನ್ನು ಕಟ್ಟುವ ಮರದ ಕಂಬ, — ಗೂಟ. ೨೧. ತ್ರಿಮೂರ್ತಿಗಳಲ್ಲಿ ಒಬ್ಬ; ಈಶ್ವರ : ಶಿವನಾಮಾಂಕಿತಮಂ ರತ್ನವಿರಚಿತ ಮನುತ್ತಮಾಂಗದೊಳ್ ಪಾದೂಯುಗ್ಮವನೆಸೆಯ ತಳೆದು . . . ಇರ್ದಳ್ (ಕಾಪಂಪು. ೬೭೦) ; ಮಾಡಿದನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ (ಬಸವ. ೨೩೪); ಶಿವನಂ ಮರುಳ್ಗೊಂಡು ಭವಾನಿಯಿರೆ ಕಂಡು (ಗಿರಿಕ. ೩-೯೮ವ). ೨೨. ಹಾವು ; ಸರ್ಪ. ೨೩. ನರಿ ; ಜಂಬುಕ : ನಿನ್ನಯ ಗೂಡವೆ ಬೇಡಂದಾ ಶಿವಾಗ್ರಣಿ ಪುಲಿಗೆ ಪೇಳಿದುದು (ತಿಮ್ಮಕಾಂ. ೪-೨೨). ೨೪. ಗಿಣಿ ; ಶುಕ. ೨೫. ಒಂದು ಬಗೆಯ ಮರ ಮತ್ತು ಅದರ ಕಾಯಿ; ಅಣಿಲೆ. ೨೬. ನೆಲ್ಲಿಗಿಡ ಮತ್ತು ಅದರ ಕಾಯಿ; ಆಮಲಕ: ಸಲೆ ಶಿವಮಯಂ ಶಿವಮಯಂ ಶಿವಮಯಂ ಸಮುಜ್ವಲಶಿಖಿಮಯಂ . . . ಶಬರಬಲ ಬಾಣಮಯ ಬಾಣಮಯ ಬಾಣಮಯವಾಗಿ ಕಾನನಂ ಕಣ್ಗೆಸೆದುದು (ಹಚಕಾ. ೫-೧೮). ೨೭. ದಟ್ಟವಾದುದು ; ಸಾಂದ್ರವಾದುದು. ೨೮. ನೊರೆ ; ಬುರುಗು. "ಗಿರಿಚೇಂದ್ರನೊಳು ತರಣಿಯೊಳು ಫೇನದೊಳು ಸರ್ಪದೊಳು ಸಾಂದ್ರ ಶುಭದೊಳು ನರಿಯೊಳಣಿಲೆಯೊಳು ನೆಲ್ಲಿಯೊಳು ಶಿವಶಬ್ದಮಂದನಿಕ್ಕುಂ" (ಮಂಗರಾ. ೧೪೫-೩೧). ೨೯. ಆಲದ ಮರ ; ವಟವೃಕ್ಷ. ೩೦. ಕರಿಯ ಮದ್ದುಗುಣಿಕೆ; ಕರಿಯ ಉಮ್ಮತ್ತಿ. ೩೧. ನೀರು ; ಜಲ. ೩೨. ಬಿಳಿಯ ಬಣ್ಣ ; ಧವಳವರ್ಣ. ೩೩. ಮರಳು. ೩೪. ಒಂದು ಅಳತೆ ; ನಾಲ್ಕು ಬಳ್ಳಗಳ ಪರಿಮಾಣ; ಕೊಳಗ: "ಸಾ[ಪಾಶಾಂ.ಶಾ]ಖ್ಯಂ ಶಿವಂ ಕೊಳಗಮಕ್ಕುಂ" (ಮಂಗರಾ. ೬೧-೧೯). ೩೫. ವಿದ್ಯೆಯ ಅಧಿದೇವತೆ; ಸರಸ್ವತಿ : "ಶುಕ ಜಲ ಫೇನ ಶಂಕರ ಸರಸ್ವತಿ ಸಾಂದ್ರ ಫಣೀಂದ್ರ ಪುಣ್ಯ ಕೀಲಕಮಭಯಾದ್ರಿಜಾಮಲಕ ಭದ್ರಸುಖಂ ಧವಳಂ ಶೃಗಾಲಮುಂ ಸಿಕತ ವಟಾದಿಗಳ್ ಶಿವಮೆನಿಕ್ಕು" (ನಾನಾರ. ೭). ೩೬. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂದು : ವಿಷ್ಕಂಭ . . . ಶಿವ . . . ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿಚೇಕ. ೨೬೨).

ಶಿವಶಿವ, ಶಿವಶಿವಾ (ದ್ವಿರುಕ್ತಿ) = (ಆಶ್ಚರ್ಯ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ) ಒಂದು ಉದ್ಗಾರವಾಚಕ ಪದ : ಶಿವಶಿವ ನೆನೆನೆಸುವ ಶೃಶವದೊಳ್ ಬಳೆಯುತ್ತುಮಿರ್ಪ ಗಿರಿಜೆಗೆ . . . ದಶವರ್ಷವದಾಯ್ತು (ಗಿರಿಕ. ೪-೨) ; ರವಿಯೊಡನೆ ತಮ ಕೈ ಮೇಳವಿಸಿತೇ ಶಿವಶಿವಾಯೆನುತಸುರ ಹಲುಮೊಱೆದ (ಕುಮಾಅ. ೧೨-೨೭). ಶಿವನ ಪಾದಸೇರು = ಸಾಯು; ಮರಣಹೊಂದು : ಮುಂದ ಶಿವನ ಪಾದ ಸೇರಿದರು (ಮನಿಪ. ೧೮). ಶಿವಪಾದಶೇಖರ = ಒಂದು ಬಿರುದು : ಮಚ್ಚರಿಪವರ ಗಣ್ಡಂ ವನ್ದಿಚಿನ್ತಾಮ[ಣಿ] ಶಿವಪಾದಶೇಖರಂ ನಿಜಸುತೆಗನುರಾಗದಿಂ ಮಣ್ಡಲಕ್ಕೆಲ್ಲ ಪಡಿಭಗ್ನಮಾಗೆ ಶಿಲಾಸ್ತಂಭಂ ಶಾಸನಮಾಗೆ ನಟ್ಟಂ (ಎಕ. IV, ಹೆಗ್ಗಡ. ೧೮ ೩೨; 1057). [ಸಂ.]

ಶಿವಂಕರ (ಗು). ೧. ಮಂಗಳಕರವಾದ; ಶುಭದಾಯಕವಾದ. (ನಾ). ೨. ಮಂಗಳವನ್ನುಂಟುಮಾಡುವವನು; ಶುಭದಾಯಕನಾದವನು: "ಶಿವತಾತಿಃ, ಶಿವಂಕರಃ- ಈ ೨ ಸುಖವಂ ಮಾಟ್ಟುವಂ" (ಪಲಾಯು. ೫೬-೧೮೫). [ಸಂ.]

ಶಿವಂಗಿ$_1$ 'ಸಿವಂಗಿ' ನೋ.

ಶಿವಂಗಿ₂ (ನಾ). ಒಂದು ಬಗೆಯ ಸಸ್ಯ: ಕಳ್ಳಿ ದಾಳಿಂಬರದ ತೊಕ್ಕು ಹೆಗ್ಗುಳ್ಳದ ಬೀಜ ಕೋಷ್ಟಂ ಶಿವಂಗಿಯ ರಸಮನಾರುಮಡಿಯ ಕೂಡಿ ಎಲ್ಲಮಂ ಸಾಸುವೆಯಣ್ಣೆಯಲ್ಲಿ ಅಟ್ಟು ಪೂಸಲು ಲಿಂಗವೃದ್ಧಿ (ಕಾಮಶಾ. ೨೭೪). 'ಸೀವನ್ನಿ' ಪರಾ. [?]

ಶಿವಕ (ನಾ). ಗೂಟ; ಕಂಬ: "ಧ್ರುವಕಃ, ಶಿವಕಃ . . . ಕೀಳಕಃ - ಈ ೬ ಗುಡಿಯ ಗೂಂಟಂ" (ಹಲಾಯು. ೭೪-೨೯೭). [ಸಂ.]

ಶಿವಕಲೆ (ನಾ). ೧. ಮಂಗಳಕರವಾದ ಕುಶಲಕಲೆ : ಇನ್ನೊಮ್ಮೆ ಸಾಱಿದರ್ ತಮ್ಮ ಕಣ್ಣಿನ್ ಕಂಡು ಪೂಸಪೂಸತು ಪರಿಯಿನ್, ಆಳ ಬಾಟಿನ್ ಕಡೆವ ಶಿವಕಲೆಯ ಕೃಪೆಯಿನ್: ಅದು ಶಿವಂ, ಸತ್ಯಮದು, ಸುಂದರಂ (ಹೊಂಗಳು. ೪೦-೯). ೨. ಶಿವನ ಅಂಶ: ಮಗುವಿಗೆ ಎಂಟುವರ್ಷಗಳು ಕಳೆದ ಮೇಲೆ ಕ್ರಮವಾಗಿ ಕುಂಡ, ಮಂಡಪ, ಪಂಚಕಲಶಗಳನ್ನು ಸ್ಥಾಪಿಸಿ ಸುಪ್ತಾವಸ್ಥೆಯಲ್ಲಿದ್ದ ಶಿವಕಲೆಯನ್ನು ಶಿವಯೋಗಬಲದಿಂದಲೂ ಆಯಾಯ ಮುದ್ರಾಲಕ್ಷಣಗಳಿಂದಲೂ ಜಾಗ್ರದವಸ್ಥೆಗೊಳಿಸಿ (ಭಾರದ. ೨೪೯). ೩. ಭಸ್ಮ; ವಿಭೂತಿ: "ಶಿವಕಲೆ - ವಿಭೂತಿ" (ಶರಸಾ. ೨೪೮); ಮಗುವಿಗೆ ಎಂಟು ವರ್ಷಗಳು ಕಳೆದ ಮೇಲೆ . . . ಶಿವಕಲಾಸಮಾವಿಷ್ಟವಾದ ಲಿಂಗವನ್ನು ಮಂತ್ರೋಪದೇಶಪೂರ್ವಕವಾಗಿ ನೆಲೆಗೊಳಿಸುವನು (ಭಾರದ. ೨೪೯). [ಸಂ. ಶಿವಕಲಾ]

ಶಿವಕವಿ (ನಾ). ಈಶ್ವರ ಹಾಗೂ ಆತನ ಭಕ್ತರನ್ನು ಕುರಿತು ಕಾವ್ಯವನ್ನು ರಚಿಸುವವನು: ಈ ಕಾವ್ಯಮಂ ವಿಸ್ತರದಿಂ ತಾನೊಲ್ಲು ಪೇಳ್ದಂ ಶಿವಕವಿ ಹರಿದೇವಂ (ಗಿರಿಕ. ೧-೩೩) ; ಶಾಂತನಂಜೇಶ್ವರನ ಪಾದತಾಮರಸ ಮತ್ತಮದಭೃಂಗ ಶಿವಕವಿ ಜನಸ್ತೋಮಸನ್ನುತ ಮಲ್ಲಣಾಚಾರ್ಯಗಕ್ಕಱಿಂ ವೀರಹಲಗೆಯ ದೇವರು . . . ಪೇಳ್ದೋ ಮಹಾವೀರಶೈವಾಮೃತಪುರಾಣದೊಳು (ವೀಶೈಪು. ೮-೧-೫). [ಸಂ.]

ಶಿವಕೀರ್ತನ (ನಾ). ಈಶ್ವರನ ಗುಣಗಾನ : ಶಿವಕೀರ್ತನಮಂ ಕೇಳ್ವಂ ಶಿವಾಂಘ್ರಿ ಪೂಜೆಯನೊಱಲ್ದು ನೋಳ್ಪಂ . . . ಶಿವಂಗೆ ಕೊಟ್ಟಲ್ಲದೇನುಮಂ ಕೊಳಲೊಲ್ಲಂ (ರಾಜಶೇ. ೧೩-೧೫೬). [ಸಂ.]

ಶಿವಕುಲ (ನಾ). ವೀರಶೈವರ ಜಾತಿ; ಲಿಂಗವಂತರ ಮತ : ಶಿವಕುಲಮ ಮಿಗಿಲೆಂದು ವಾದದೊಳ್ ಭೂದೇವನಿವಹಕ್ಕೆ ಸಾಱಿ (ಆರಾಚ. ೧-೧-೨೮). [ಸಂ.]

ಶಿವಕೂಟ (ನಾ). ೧. ದೇವಾಲಯದಲ್ಲಿ ಶಿವಭಕ್ತರು ದಾಸೋಹಕ್ಕಾಗಿ ಸೇರುವ ಸ್ಥಳ : (ಕ). ☞ ನಂಜನಗೂಡಿನ ನಂಜುಂಡೇಶ್ವರದೇವಾಲಯದ ಭೋಜನ ಶಾಲೆಗೆ ಈ ಹೆಸರಿದೆ. ೨. ಜಂಗಮರ ಸಭೆ : "ಶಿವಕೂಟ: ಜಂಗಮರ ಓಲಗ" (ಕನ್ನಾಜಾ. ೧೯೯). [ಸಂ.]

ಶಿವಕ್ಷೇತ್ರ (ನಾ). ೧. ಈಶ್ವರನು ನೆಲಸಿರುವ ಸ್ಥಳ : ಸದ್‌ಭಕ್ತಮಹೇಶ್ವರರು ಇದ್ದ ಠಾವೆಲ್ಲ ಶಿವಕ್ಷೇತ್ರ (ಅಖಂಡೇ. ೫೫-೧). ೨. ಪ್ರಸಿದ್ಧವಾದ ಈಶ್ವರದೇವಾಲಯ ಗಳಿರುವ ಶ್ರೀಶೈಲ, ಕಾಶಿ, ರಾಮೇಶ್ವರ ಇತ್ಯಾದಿ ತೀರ್ಥಕ್ಷೇತ್ರ : ನಮ್ಮ ದೇಶದಲ್ಲಾದರೋ . . . ಮಧುರೆ, ರಾಮೇಶ್ವರ ಮುಂತಾದ ಶಿವಕ್ಷೇತ್ರಗಳೂ ಇನ್ನೂ ಅನೇಕ ಪುಣ್ಯಸ್ಥಳಗಳೂ ಇವೆ (ಒಡಕ. ೪೯); ಅನೇಕ ಶಿವಕ್ಷೇತ್ರಗಳಲ್ಲಿ ಶೈವಾಗಮದ ಉತ್ತರತಂತ್ರವಾದ "ವಾತುಳಾಗಮ" (ತಾಂತ್ರಿಕಾಗಮ)ದ ಅನುಷ್ಠಾನವು ಪರಂಪರೆಯಿಂದ ಅನಾದಿಯಾಗಿ ನಡೆದು ಬರುತ್ತಿದೆ (ಭಾರದ. ೭೪). [ಸಂ.]

ಶಿವಗಣ (ನಾ). ಈಶ್ವರನ ಭಕ್ತಸಮೂಹ ; ಪ್ರಮಥರು, ಜಂಗಮರು ಮುಂತಾದವರ ಸಮೂಹ : "ಆ ಮಹಾಶಿವಗಣಂ ಪ್ರಮಥರಕ್ಕು" (ಮಂಗರಾ. ೫-೧೪); ನೂತನಪುರಾತನಶಿವಗಣಪ್ರೀತಿಗಳು ಶಿವಧರ್ಮವರ್ಮವಿನೀತಿಗಳು (ಬಸಪು. ೫೭-೯೭); ಶಿವಗಣಕೆ ನೀಂ ಕುಡುವ ದಂತಿ ವಾಜಿ . . . ವನಿತಾಮಣಿಗಳ್ ವಿವರಿಪೊ ಡೇವಾಳ್ತ ಸರಿದ್ವವಂಗೆ ಮುಗಿಲೀವ ಪನಿಗಳಂತಿರೆ ಧರೆಯೊಳ್ (ವೃಷವಿ. ೧೭ ೧೫). [ಸಂ.]

ಶಿವಗಣಾರಾಧನೆ (ನಾ). [ವೀಶೈ] ಶಿವೈಕ್ಯರಾದವರಿಗಾಗಿ ಹನ್ನೊಂದನೆಯ ದಿನ ಮಾಡುವ ಪುಣ್ಯತಿಥಿ ಮತ್ತು ಆ ಸಂಬಂಧವಾಗಿ ಮಾಡುವ ಅನ್ನಸಂತರ್ಪಣೆ: ಸ್ವಾಮಿಗಳ ಶಿವಗಣಾರಾಧನೆಯನ್ನು ಮಠದಲ್ಲಿ ಏರ್ಪಡಿಸಿದ್ದರು (ಯೂಧ). 'ಗಣಾರಾಧನೆ' ಪರಾ. [ಸಂ. ಶಿವಗಣಾರಾಧನಾ]

ಶಿವಗತಿ (ನಾ). ಮೋಕ್ಷ ; ಮುಕ್ತಿ : "ಅಪವರ್ಗಂ . . . ಕೈವಲ್ಯಪದವಿ ಶಿವಗತಿ ನಿರಾಮಯಂ ನಿರ್ವಾಣಂ" (ವಸ್ತುಕೋ. ೨೦-೧೯) [ಸಂ.]

ಶಿವಗೀತ (ನಾ). ಈಶ್ವರನ ಸ್ತುತಿ : ಶಿವನ ಕಹಳೆಯ ದನಿಗೆ ಬಳೆದ ಕೋಕಿಳನಿಲ್ಲಿ ಶಿವಗೀತದೊಳು ಬೆರಸಿ ಬಳೆದ ಮಧುಕರವಿಲ್ಲಿ (ನಂಜರ. ೯-೪೨); ಶಿವಕಥನಂ ಶಿವಗೀತಂ . . . ಶಿವಭಕ್ತನೃತ್ಯಮೆಸೆಯಲ್ ಶಿವಮಯಮಾಗಿರ್ಪುದಾವಗಂ ತತ್ಪುರದೊಳ್ (ತ್ರಿಪುವಿ. ೯-೪). [ಸಂ. ಶಿವಗೀತಾ]

ಶಿವಗೃಹ (ನಾ). ಈಶ್ವರನ ಆಲಯ, — ದೇವಸ್ಥಾನ : ತನ್ನ ದೇಹದೊಳಾಂ ಬಿತ್ತರಿಪಂ ಶಿವಗೃಹಮಂ (ತ್ರಿಪುವಿ. ೨೧-೫) ; ಶಿವಗೃಹದಂತರಾಳಮನಣಂ ಪುಗಲಂಜ ಮುರಾರಿ ನಿಲ್ವಂ (ವೃಷವಿ. ೨೯-೮೩). [ಸಂ.]

ಶಿವಗೋಷ್ಠಿ (ನಾ). ಶಿವಭಕ್ತರ ಕೂಟ; ಶರಣರ ಸಭೆ : ಶಿವಗೋಷ್ಠಿರಸದಿಂದ ಬಳೆದ ಶರಣನ ತೆಱದೆ ತೆನೆವಾಲನುಂಡು ಬಳೆದವು ಗಿಳಿಗಳು (ನಂಜರ. ೯-೧೬).

[ಸಂ. ಶಿವಗೋಷ್ಠೀ]

ಶಿವಚರಿತ (ನಾ). ಈಶ್ವರನ ಕಥೆ, — ಚರಿತ್ರ : ಶಿವಚರಿತಮನಾಕರ್ಣಿಪ ಶಿವನಡಿಯಂ ಪೂಜೆಗೆಯ್ದು ಬಯಕೆ ಕರಂ ಸಂಭವಿಸಿದುದು ಸತಿಗೆ (ವೃಷವಿ. ೩-೮). [ಸಂ.]

ಶಿವಜನ್ಮ (ನಾ). ವೀರಶೈವನಾಗಿ ಹುಟ್ಟುವಿಕೆ : ಶಿವಜನ್ಮದಲ್ಲಿ ಹುಟ್ಟಿ ಲಿಂಗೈಕ್ಯರಾಗಿ ತಮ್ಮಂಗದ ಮೇಲೆ ಲಿಂಗವಿರಲು . . . ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು (ಬಸವ. ೧೦೭). [ಸಂ. ಶಿವಜನ್ಮನ್]

ಶಿವಜ್ಞಾನ (ನಾ). [ವೀಶೈ] ಶಿವಸಂಬಂಧವಾದ ತಿಳಿವಳಿಕೆ, — ಅರಿವು : ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ಸಗಣಿಗೆ ಸಾಸಿರಹುಳು ಹುಟ್ಟುವೆ ದೇವಾ (ಬಸವ. ೧೫೬) ; ಶಿವಜ್ಞಾನದ ಸೀಮೆಗೆ . . . ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ ದಂಡಿಗೆಯ ಧವಳಛತ್ರದ . . . ವಿಳಾಸಿನಿಯರ್ವೆರಸು ನಡೆತಂದು (ಗಿರಿಕ. ೩-೯೧ಪ) ; ಶಿವನಡೆ ಶಿವನುಡಿ . . . ಶಿವಜ್ಞಾನ ಶಿವಾನುಭಾವ ಶಿವಶರಣರ ಸಂಗ ಇವನೆ ಕರುಣಿಸಿ ಬದುಕಿಸಯ್ಯ ಎನ್ನ (ಅಖಂಡೇ. ೧೪೮-೧೪೩). [ಸಂ.]

ಶಿವಜ್ಞಾನಿ (ನಾ). ಶಿವಜ್ಞಾನವನ್ನು ಪಡೆದಿರುವವನು : ಇದಿರ ಹಳಿದು ತನ್ನ ಬಣ್ಣಿಸುವನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ ಹಮ್ಮು ಬಿಮ್ಮು ಹೆಮ್ಮೆ ಹಿರಿತನವುಳ್ಳನ್ನಕ್ಕರ ಶಿವಜ್ಞಾನಿ ಎಂತಪ್ಪನಯ್ಯಾ (ಅಖಂಡೇ. ೧೯೦-೯). [ಸಂ. ಶಿವಜ್ಞಾನಿನ್]

ಶಿವತತ್ತ್ವ (ನಾ). [ವೀಶೈ] ಶಿವನ ಪಾರಮ್ಯವನ್ನು ಸಾರುವ ಸಿದ್ಧಾಂತ : ಶರಣ ನುಡಿದುದ ಶಿವತತ್ತ್ವ ಕಾಣೋ (ಬಸವ. ೮೭೨); ವಿಶಾಲಚಿಚ್ಚಂದ್ರಮಧ್ಯಸ್ಥನೇ ಶಿವನ ಶಿವತತ್ತ್ವ ವಿದ್ಯಾತತ್ತ್ವನೇ (ವೀಶೈಪು. ೩-೧೬-೨೨); ಶುದ್ಧಸೃಷ್ಟಿಗೆ ಮೂಲಕಾರಣವಾಗಿರುವ ಜಡವಾದ ನಿತ್ಯವಾದ ದ್ರವ್ಯವೇ ಶಿವತತ್ತ್ವ (ಓಂದಾಸಾ. ೨೯೮). [ಸಂ.]

ಶಿವತಾಂಡವ (ನಾ). [ನಾಟ್ಯ] ಶಿವನ (ಉಗ್ರವಾದ) ಒಂದು ಬಗೆಯ ನೃತ್ಯ: ಎಲ್ಲ ನಾಟ್ಯಗಳಿಗೂ ಶಿವತಾಂಡವವೇ ಮೂಲ (ಭಾರದ. ೫೪೯). [ಸಂ.]

ಶಿವತಾತಿ (ಗು). ೧. ಮಂಗಳದಾಯಕವಾದ ; ಶುಭಕರವಾದ. (ನಾ). ೨. ಮಂಗಳಕರವಾದುದು; ಶುಭಪ್ರದವಾದುದು. ೩. ಶುಭವನ್ನು ಮಾಡುವವನು: "ಶಿವತಾತಿಃ, ಶಿವಂಕರಃ - ಈ ೨ ಸುಖವಂ ಮಾಟ್ಟುವಂ" (ಹಲಾಯು. ೫೬-೧೮೫). [ಸಂ.]

ಶಿವದಾನ (ನಾ). ೧. ಈಶ್ವರನ ಹೆಸರಿನಲ್ಲಿ ನೀಡುವ ದಾನ : (ಕ). ೨. ಕಡೆದ ಮೊಸರು; ಮಜ್ಜಿಗೆ : ದಾಸಯ್ಯ ಶಿವದಾನವನೆಱೆಯ ನೋಡಯ್ಯಾ (ಬಸವ. ೩೪೩); ನೆನೆಹಿನ ಅವಲಂಬವೇ ಅಭಿಘಾರವಾಗಿ ನಿರ್ಮಲವೆಂಬ ಶಿವದಾನವನಳವಡಿಸಿ ಕಾದಿದ್ದರಯ್ಯ ಪಂಚೇಂದ್ರಿಯವೆಂಬ ಶುನಕ ಮುಟ್ಟದಂತೆ (ಅವಚಂ. ೨೭೭-೧೨೭೦); ನಾಲ್ಪತ್ತುಒಡೆಯರುಗಳಿಗೆ ಸಲುವ ಸಕಲ ಸಯಿದಾನ ಅಭಿಗರ ಪರುಪು ಪದಾರ್ಥ ಶಿವದಾನ ವಿಳೆಯ ಮುಂತ್ತಾಗಿ ಸಲುವುದೆನೆ (ಎಕ. III(R), ಗುಂಡ್ಲುಪೇ. ೭೭-೧೯ ; 1478) ; ಅಲ್ಲಿ ಉಂಟು, ಇಲ್ಲಿ ಉಂಟು ಕಲ್ಲೊಳಗುಂಟೇ ಶಿವದಾನ ? (ಗಾದೆ). [ಸಂ.]

ಶಿವದಾರ (ನಾ). [ವೀಶೈ] ವೀರಶೈವರು ಇಷ್ಟಲಿಂಗದ ಕರಡಿಗೆಯನ್ನು ಧರಿಸಲು ಬಳಸುವ ದಾರ : ಆದಿಯಲ್ಲಿ ಶಿವದಾರವ ಕಂಡ ಬೀದಿಯಲ್ಲಿ ಬಿದ್ದ ಸಚ್ಚೆಯ ಕಂಡೆ ಪ್ರಾಣಲಿಂಗವ ಬೈಚಿಟ್ಟುಕೊಂಡೆ (ಅವಚಂ. ೧೩೦-೫೯೫); ತಿಳಿವೊಡಾ ಶಿವದಾರ ಸಚ್ಚೆಗಳಳವಡುವೊಡಾ ಮೂಱುತನುವಿನ ಮಲುಕಿನಂತಿರಲ್ (ಪ್ರಭುಲೀ. ೧೬-೨೩).

[ಶಿವ + ದಾರ]

ಶಿವದಿಡು (ಕ್ರಿ). ಶಿವ, ಶಿವ ಎಂದು ಆರ್ತನಾದ ಮಾಡು; ಮೊರೆಯಿಡು: ಅವರಂ ಮುನ್ನವೆಯ್ತಂದೊಳಗಂ ಪೊಕ್ಕು ತೋರಣದ ತಳರಂ ಪಱಿದು ಶಿವದಿಡುತ್ತಿರಲ್ (ನಂಬರ. ೬-೫೯); ಎಳಹೂಟೆಯಿಂದೆಳಸಿಕೊಂಡು ಶಿವದಿಡುವರಂ (ಲಿಂಗಪು. ೩೦-೩೮); ಶಿವ ಶಿವ ಶಿವದಿಡುತಿರ ಶರಣಗಣ ರಚಿಸಿರೆ ನಾಲ್ಮೊಗ ಮಂತ್ರಾವರಣ (ಗಣೇಶ. ೧೫-೩೮೩).

[< ಶಿವಧೋ + ಇಡು$_1$]

ಶಿವದೀಕ್ಷೆ (ನಾ). [ವೀಶೈ] ವಿಧಿವತ್ತಾಗಿ ದೀಕ್ಷೆಯನ್ನು ಸ್ವೀಕರಿಸುವಾಗ ನಡೆಸುವ ಸಂಸ್ಕಾರವಿಶೇಷ : ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ ಭಕ್ತ ಎಂತಹುದೂ (ಬಸವ. ೯೨) ; ವಿನಯದಿಂ ಶೃಪಚಯ್ಯಗಳ ಪದವನಜಯುಗಳಕ್ಕೆಱಗಿ ವಂದಿಸಿ ಮನವೊಲಿದು ಶಿವದೀಕ್ಷೆಯಂ ಸಲೆ ಪಡೆದು (ಬಸಪು. ೫೭ ೪) ; ಸದಾಶಿವನೀಶ್ವರಂ ಮಹೇಶಂ ರುದ್ರರನಿಪವರ್ ಶಿವದೀಕ್ಷೆವಡೆದಾರ್ಯರಾಗಿಯೂ ಸಕಲಗಣಕುಲಕೆ ದೀಕ್ಷೆಯನೆ ಮಾಡಿ (ಚಿಬಪು. ೫೯-೨೦). [ಸಂ. ಶಿವದೀಕ್ಷಾ]

ಶಿವದೂತ (ನಾ). ಈಶ್ವರನ ಕಿಂಕರ, — ಸೇವಕ : ಲಿಂಗವ ಪೂಜೆಯ ಮಾಡಿ ಜಂಗಮವ ಕಂಡುದಾಶೀನವ ಮಾಡಿದರೆ ಆ ಲಿಂಗಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದು (ಬಸವ. ೪೨೩). [ಸಂ.]

ಶಿವದೊಡಕು (ನಾ). ಶಿವನ ಅಸ್ತಿತ್ವವನ್ನು ವಿವರಿಸಲು ಸಾಧ್ಯವಿಲ್ಲದ ಅನೂಹ್ಯ ಸ್ಥಿತಿ : ಕುಱುಹಿಲ್ಲ ಕುಱುಹಿಲ್ಲ ಲಿಂಗವೆಂದೆಂಬರ ತೆಱಹಿಲ್ಲ ತೆಱಹಿಲ್ಲ ಜಂಗಮವೆಂದೆಂಬರ ಇದೆ ನೋಡಾ ಶಿವಾಚಾರ ಇದೆ ನೋಡಾ ಶಿವದೊಡಕು (ಬಸವ. ೯೪೮).

[ಶಿವ + ತೊಡಕ್ಕು$_3$ (< ತೊಡಂಕ್ಕು$_3$)]

ಶಿವದ್ರೋಹಿ (ನಾ). ಶಿವನಿಗೆ ದ್ರೋಹಮಾಡಿದವನು : ಅಯ್ಯೋ ಶಿವನ ಬಾಯ ತುತ್ತಿನಿಂತೊಕ್ಕನೇ ಅಯ್ಯೋ ಶಿವದ್ರೋಹಿಯಾನಿನ್ನು ಬಾಳ್ಳೆನೇ (ಅರಿ.ದೇ. ೧೭೭-೪); ಮೃಡನ ಬೋನವನಿಂತು ತುಡುತಿಂದನು ಶಿವದ್ರೋಹಿ ಕಡುದುರುಳನಿವನು (ಬಸಪು. ೨೪-೫೬).

[ಸಂ. ಶಿವದ್ರೋಹಿನ್]

ಶಿವಧರ್ಮ (ನಾ). ವೀರಶೈವ ಧರ್ಮ : ಶಿವಧರ್ಮವ ಕೆಡಿಸಿದವನು ಅಧರ್ಮಕ್ಕಿಳಿವನು ಕೂಡಲಸಂಗಮದೇವ ಸಾಕ್ಷಿಯಾಗಿ (ಬಸವ. ೬೨೫) ; ಶಿವಧರ್ಮಪಥಕುಮುದ ಸಮುದಯವಿಧು ಚರಪ್ರಾಣಿ ಬಸವ ಪರಸಮಯಗಜಸಿಂಹನೆಂಬುದು ಪುರಾತನ ಸೂಕ್ತಿ (ರಾಘಚಿ. ೮-೩೫). [ಸಂ.]

ಶಿವಧರ್ಮಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು: ಸನತ್ಕುಮಾರಪುರಾಣ ನಾರಸಿಂಹಪುರಾಣ ನಂದಿಪುರಾಣ ಶಿವಧರ್ಮಪುರಾಣ . . . ಭಾರ್ಗವಪುರಾಣವೆಂಬವೇ ಆಯಾಯ ನಾಮಧೇಯಮುಳ್ಳವರಿಂ ನಿರೂಪಿತಂಗಳಾದ ಹದಿನೆಂಟು ಉಪಪುರಾಣಂಗಳು (ವೀಕೇ. ೯). [ಸಂ.]

ಶಿವಧಾತು (ನಾ). ೧. ಪಾದರಸ; ಪಾರದ . ೨. ಅಮೃತಶಿಲೆ ; ಹಾಲುಗಲ್ಲು : ಸ್ಫಟಿಕ, ಗೋಮೇದ, ಅಕೀಕ, ಶಿವಧಾತು . . . ಇವು ಸಿಲಿಕದ . . . ರೂಪಾಂತರಗಳಿರುತ್ತವೆ (ಮುಂಬಯಿ. ೬-೪೬). [ಸಂ.]

ಶಿವಧೋ (ಅ). ಆರ್ತತೆಯಿಂದ ಶಿವ ಶಿವ ಎಂದು ಮೊರೆಯಿಡುವ ಒಂದು ಶಬ್ದ : ಶಿವಧೋ ಎನುತ್ತ ಅಡಸಿ ಬಸವಂ ಸುತ್ತಿ ಮುತ್ತಿ ಗೋಳಿಡೆ (ಹಚಕಾ. ೩-೬೫) ; ಸಂಗರಬಾಧೆಗಳ್ಳಿ ಶಿವಧೋ ಎನುತಿರ್ದನದೊರ್ಬ ಭೂಸುರಂ (ದಶಕು. ೫-೪೭). 'ಅವಿಧೋ' ಪರಾ.

ಶಿವಧೋ ಶಿವಧೋ, ಶಿವಧೊ ಶಿವಧೊ (ದ್ವಿರುಕ್ತಿ) : ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ . . . ಹುರುಳಿಲ್ಲ ಹುರುಳಿಲ್ಲ ಕೂಡಲ ಸಂಗಮದೇವಾ ಶಿವಧೋ ಶಿವಧೋ (ಬಸವ. ೧೩); ನಿಮ್ಮ ಕಾಣದೆ ಕಣ್ಣಡಕದ ಕಣ್ಣೆನಂತ ಕಣ್ಣೆನಿಸಿ ಕೆಟ್ಟೆನಯ್ಯ ಶಿವಧೊ ಶಿವಧೊ (ಆದವ. ೧೫-೩೨). [ಶಿವ + ಉಧೋ?]

ಶಿವಧ್ಯಾನ (ನಾ). ಈಶ್ವರನನ್ನು ಕುರಿತ ಧ್ಯಾನ : ಶಿವಧ್ಯಾನರಕ್ತಂ ಶಿವಜ್ಞಾನಯುಕ್ತಂ . . . ಶಿವಪ್ರಾಣಿಯೊಳ್ಪೊಪ್ಪಿದಂ ಮಾದಿರಾಜಂ (ವೃಷವಿ. ೧೧-೫). [ಸಂ.]

ಶಿವನಕಡ್ಲೆ (ನಾ). ೧. ಒಂದು ಬಗೆಯ ಸಸ್ಯ : "ಅಂಟುತೊಗರಿ, ಬಾಲರಾಕ್ಷಸ, ಶಿವನ ಕಡ್ಲೆ, ಚಿಟ್ಟಾಮುಟ್ಟಿಗಿಡ" (ಸಸ್ಯನಿ. ೧೦೨). ೨. ಒಂದು ಬಗೆಯ ಸಸ್ಯ : (ಕ).

[< ಶಿವ + ಕಡ್ಲೆ$_2$ (< ಕಡಲೆ)]

ಶಿವನಾಭಿ (ನಾ). ೧. ಶಿವಲಿಂಗದ ಒಂದು ವಿಶಿಷ್ಟವಾದ ರೂಪ. ೨. ಒಂದು ಬಗೆಯ ಸಸ್ಯ : "ಚಂದ್ರಿಕೆ, ಸೂತ್ರನಾಭಿ, ಶಿವನಾಭಿಗಿಡ . . . ಸರ್ಪಗಂಧ" (ಸಸ್ಯನಿ. ೧೮೩). [ಸಂ.]

ಶಿವನಾರುಬಳ್ಳಿ (ನಾ). ಒಂದು ಬಗೆಯ ಸಸ್ಯ : ಶಿವನಾರುಬಳ್ಳಿ, ಕಡ್ಡಿಯರಕಿನ ಗಿಡ (ಮೈಪಿಗಿ. ೪೮-೯೫೮). [ಶಿವನಾರು$_2$ + ಬಳ್ಳಿ]

ಶಿವನಿ$_1$ 'ಸೀವನ್ನಿ' ನೋ.

ಶಿವನಿ$_2$ 'ಸಿವನಿ' ನೋ.

ಶಿವನಿಲೆ (ನಾ). ಮೋಕ್ಷಪದವಿ; ಮುಕ್ತಿಸ್ಥಾನ: ಚನ್ನದೇವಾಚಾರ್ಯನಾಮನ್ ಉಚಿತಶ್ರೀಕಟ್ಟಪ್ಪಿನುಳ್ಳೇ ರಿಷಿಗಿರಿಶಿಲೆಮೇಲ್ನೋನ್ತು ತನ್ನೇಹಮಿಕ್ಕಿ ನಿರವದ್ಯನ್ನೇಱಿ ಸ್ವರ್ಗ್ಗಂ ಶಿವನಿಲೆ ಪಡೆದಾನ್ಸಾಧುಗಳ್ಪೂಜ್ಯಮಾನನ್ (ಎಕ. II, ೮೪-೪; ಸು. 700).

[ಶಿವ + ನಿಲೆ$_1$ (< ನೆಲೆ$_1$)]

ಶಿವನೆ 'ಸಿವನೆ' ನೋ.

ಶಿವನ್ನಿ 'ಸೀವನ್ನಿ' ನೋ.

ಶಿವಪಥ (ನಾ). ಮೋಕ್ಷದ ದಾರಿ ; ಮುಕ್ತಿಮಾರ್ಗ : ಶಿವಪಥವೊಲ್ಲದವರೊಡ ನಾಡದಂತೆ ಅನ್ಯಜಾತಿಯ ಸಂಗವ ಮಾಡದಂತೆ ಎನ್ನ ಪ್ರತಿಪಾದಿಸು ಕೂಡಲಸಂಗಮದೇವಾ (ಬಸವ. ೨೬೩) ; ವಿಗತಾಳೋಕಂ ಶಿವಪಥವಿಗಳಿತಮನಿಸಿದ ಜನಕ್ಕೆ ಕೃತಸನ್ಮಾರ್ಗಾನುಗತೋಪದೇಶದಿಂದೀ ಜಗದೊಳ್ ನೀನಾದೆ ನಾಥ (ಚಂದ್ರಪು. ೫-೨೯). [ಸಂ.]

ಶಿವಪದ (ನಾ). ೧. ಶಿವನ ಪಾದ, — ಚರಣ : ಶ್ರೀಮತ್ ಅಱವತ್ತಗೆಯ ಜೋಗಿ ಮಯ್ಯಂ ಶಿವಪದಪಂಕಜಭ್ರಮರನೀಶ್ವರದಾಸಿ ಸಾಸನಮನಿ[ಱಿ]ಸಿದಂ (ಶಾಸಾ. XX. ೩೮-೩೭; 1058); ಶಿವಪದಭಕ್ತಿಯೆ ತಾಯ್ಯನೆ ನವರಸದೆಡೆ ಲಕ್ಷ್ಯ ಲಕ್ಷ್ಯಣಂಗಳ ನೆಲೆಯಾಯ್ತವನಿಗೆ (ತ್ರಿಪುವಿ. ೧-೩೮); ಇವನಂತೆ ಶಿವಪದದಂದುಗೆಗ್ಗನಿಗೇಳ್ಳ ಕಿವಿಗೇಳ್ಳ ಕಿವಿಗಳ ಪಡೆದವರಾರ್ (ತ್ರಿಭಕಿ. ೨೫-೩೮). ೨. ಮೋಕ್ಷ; ಮುಕ್ತಿ : ಕಾರ್ಯಮೆಮಗಿದುವೆ ಶಿವಪದ ಪರ್ಯಂತಂಬರಮಮೋಘಮುದ್ಧರಿಸುಗೆ ತಾತ್ಪರ್ಯದಿನರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸರ್ವಸಾಧುಗಳೆಮ್ಮಂ (ಆದಿಪು. ೧-೬). [ಸಂ.]

ಶಿವಪಸಾಯ (ನಾ). ಈಶ್ವರನ ಪ್ರಸಾದ, — ಅನುಗ್ರಹ : ಜೋಳದ ರಾಶಿಯಂ ಶಿವಪಸಾಯದ ನಿರ್ಮಳದಿವ್ಯದೃಷ್ಟಿಯಿಂ ಮೇಳಿಸಿ ನೋಡೆ ಪೊಚ್ಚಪೊಸ ಮುತ್ತಿನ ರಾಶಿಯದಾಗೆ (ವೃಷವಿ. ೬-೨೨). [ಶಿವ + ಪಸಾಯ]

ಶಿವಪಸಾಯತ (ನಾ): ಈಶ್ವರನಿಂದ ಅನುಗ್ರಹೀತವಾದುದು : ಶಿವನಾಗ ಮಯ್ಯಂಗಱಿಪತನುವೆರಸಿ ವಂದಿಸುತ್ತವೆ ಶಿವಪಸಾಯತವೆಂದೆನಿಪ ಶಸ್ತ್ರಕ್ಕೆ ಹಸ್ತಂ ಸಂಧಿಸುತ್ತಂ ಸರಸವಾಡುವ ಹಾಂಗೆ ಲಾಲಿಸುತ (ಬಸಪು. ೫೭-೮೧).

[ಶಿವ + ಪಸಾಯತ (< ಪಸಾಯ್ತ)]

ಶಿವಪಾದೋದಕ (ನಾ). [ವೀಶೈ] ಶಿವಲಿಂಗಕ್ಕೆ ಅಭಿಷೇಕ ಮಾಡಿದ ನೀರು : ಶಿವಪಾದೋದಕಬಿಂದುಗಳವೆ ಶಿರದೊಳ್ತಳೆದ ಮೌಕ್ತಿಕದ ಜಾಲಿಕೆಯಂದವನೀಯೆ (ತ್ರಿಪುವಿ. ೧೭-೧೧೭). [ಸಂ.]

ಶಿವಪುರ (ನಾ). ೧. ಶಿವನು ನೆಲಸಿರುವ ಪುಣ್ಯಕ್ಷೇತ್ರ : ಭವನಂ ಶಿವಭವನಂಗಳೂರೆಲ್ಲ ಶಿವಪುರಂ ವಿವಿಧ ಜನವೆಲ್ಲ ಶಿವಭಕ್ತರ್ನಿರಂತರಂ (ಮಾದರ.ದೇ. ೩೧೭-೧೭); ಪಲವು ಶಿವಪುರಂಗಳಂ ಪೊಕ್ಕು ಸಲುಗೆಯಿಂ ಬೇಡುತುಂ . . . ತಿರುವಾರೂರ್ಗೆ ನಡತಪ್ಪಾಗಳು (ನಂಬರ. ೮-೭೭). ೨. ಈಶ್ವರನ ನೆಲೆ ; ಕೈಲಾಸ : ಶಿವಪುರಕೆ [ಪಾಠಾಂ. ಶಿವನ ಪುರಿಗಾಗಿ] ಬಾಲಕಂ ತಾ ಪೋದಂ (ಬಸಪು. ೨೫-೧೧). [ಸಂ.]

ಶಿವಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು : ಶಿವಮಠದೊಳುಚ್ಚರಿಪ ಶಿವಪುರಾಣಂಗಳಂ . . . ತೋಱುತುಂ (ನಂಬರ. ೯-೧೦೧). [ಸಂ.]

ಶಿವಪೂಜೆ (ನಾ). ೧. ಈಶ್ವರನ ಆರಾಧನೆ : ನಡತಂದಳ್ ಶಿವಪೂಜೆಗೆಂದಗಜೆ ಪುಷ್ಪವ್ರಾತಮಂ ಕೊಂಡು ಸಂಗಡದೊಳ್ ಬರ್ಪ ವಿಲಾಸಿನೀನಿಕರದಿಂ (ಗಿರಿಕ. ೮-೪೧); ಶಿವಪೂಜೆಗೆ ತಂದಲರ್ಗಳನವನಿಗೆ ಕರಿ ಚೆಲ್ಲಿತಕಟ (ತ್ರಿಪುವಿ. ೨೨-೨೦); ಶಿವಪೂಜೇಲಿ ಕರಡಿ ಬಿಟ್ಟ ಹಾಗೆ (ಗಾದೆ). ೨. [ವೀಶೈ] ಇಷ್ಟಲಿಂಗದ ಪೂಜೆ : ಶಿವಪೂಜೆ ಮಾಡದಿದ್ದರೆ 'ಮಾದರಸ'ರಿಗೆ ಊಟವೇ ಸೊನ್ನೆ (ಚೆಳುಮ. ೭೭). [ಸಂ. ಶಿವಪೂಜಾ]

ಶಿವಪ್ರಸಾದ (ನಾ). ಶಿವನಿಗೆ ಅರ್ಪಿಸಿ ಪಡೆದ ನೈವೇದ್ಯ: ಇಲ್ಲಿ ಉಂಟೆ ಶಿವಪ್ರಸಾದವನಲ್ಲಿ ಚಂಡೇಶಂಗೆ ಗೌರೀವಲ್ಲಭಂ ಕೊಟ್ಟಂದವಂ ನೀವಱಿಯದಡೆ ಕೇಳಿ (ಬಸಪು. ೫೮-೩೧); ಆ ಮಹಾನುಭಾವಂ ಮಿತವಚನಸಮೇತಂ ಶಿವಪ್ರಸಾದ ಸುಧಾಸ್ವಾದನಂಗೆಯ್ದು (ರಾಜಶೇ. ೧೩-೧೪). [ಸಂ.]

ಶಿವಪ್ರಸಾದಿತ (ಗು). ಶಿವನಿಂದ ಅನುಗ್ರಹೀತವಾದ : ತದ್ಗೃಹಮಂ ಪೊಕ್ಕು ಶಿವಗಣಪದಾಂಬುವಿಂ ಮಂಗಳಮಜ್ಜನಂಗೈದು ಶಿವಪ್ರಸಾದಿತ ದಿವ್ಯಪ್ರಸಾಧನಮಂ ತಳೆದು (ವೃಷವಿ. ೫-೧೫ ವ). [ಸಂ.]

ಶಿವಪ್ರಾಣಿ (ನಾ). ಶಿವನನ್ನು ಪ್ರಾಣವೆಂದು ತಿಳಿದವನು; ಲಿಂಗವಂತ; ಶಿವಶರಣ : ಶಿವಪ್ರೇಮಧಾಮಂ ಶಿವಾನಂದಭೂಮಂ ಶಿವಪ್ರಾಣಿಯೊಲ್ಪೊಪ್ಪಿದಂ ಮಾದಿರಾಜಂ (ವೃಷವಿ. ೧೧-೫). 'ಜಂಗಮಪ್ರಾಣಿ' ಪರಾ. [ಸಂ. ಶಿವಪ್ರಾಣಿನ್]

ಶಿವಪ್ರೇಮ (ನಾ). ಶಿವನ ಬಗೆಗಿರುವ ಅನುರಾಗ, – ಭಕ್ತಿ : ಭಕ್ತಿಯೆಂಬ ನಿಧಾನವ ಸಾಧಿಸುವರೆ ಶಿವಪ್ರೇಮವೆಂಬಂಜನವನೆಚ್ಚಿಕೊಂಬುದು (ಬಸವ. ೨೪೩); ಶಿವಪ್ರೇಮಧಾಮಂ . . . ಶಿವಪ್ರಾಣಿಯೊಲ್ಪೊಪ್ಪಿದಂ ಮಾದಿರಾಜಂ (ವೃಷವಿ. ೧೧-೫). [ಸಂ. ಶಿವಪ್ರೇಮನ್]

ಶಿವಬಟ್ಟೆ (ನಾ). ಈಶ್ವರನನ್ನು ಅರಿಯುವ ಮಾರ್ಗ ; ಶರಣರ ಹಾದಿ : ಶಿವಬಟ್ಟೆಯೊಳೆನ್ನನು ಇರಿಸಯ್ಯಾ ಹರನೇ ಹೊಲಬುಗೆಟ್ಟೆನು ಬಟ್ಟೆಯ ತೋಱಯ್ಯಾ (ಬಸವ. ೬೩). [ಶಿವ + ಬಟ್ಟೆ]

ಶಿವಬೀಜ (ನಾ). ಶಿವಭಕ್ತನಿಂದ ಜನಿಸಿದವನು : ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು ಶಿವಜ್ಞಾನ ಶಿವಭಕ್ತಿ ಲಿಂಗಸ್ಥಳವಳವಡದು (ಬಸವ. ೪೫೮). [ಸಂ.]

ಶಿವಬೀಜಾಕ್ಷರ (ನಾ). ಪಂಚಾಕ್ಷರೀಮಂತ್ರ: ಶಿವಬೀಜಾಕ್ಷರದಿಂದಂ ದಿವಿಜಾಳಿಗೆ ಬಸಿಲ ಬೇನೆ ಜವನೂರ ಲಯಂ ಭವರೋಗಂ ಕ್ಷಯಮಪ್ಪುದು (ಹಮ್ಮೀರ. ೭-೪೫). [ಸಂ.]

ಶಿವವ್ರತಿ (ನಾ). ಶಿವೋಪಾಸನೆಯ ವ್ರತವನ್ನು ಹಿಡಿದವನು; ಶಿವಭಕ್ತ: ಒಸದು ಶಿವಲಿಂಗಮಂ ಪೂಜಿಸುವ ಶಿವವ್ರತಿಗೆ ಭಕ್ತಿಯಂ ಮಾಳ್ಪ ಜಗತ್ಕೈಸೆಯೆ ಶಿವಾಲಯಮಂ ಮಾಡಿಸುವಂಗೆ ನೊಳಂಬವಟ್ಟಮೆಂಬುದು ಬರಿದೇ (ಸೌಂದಾ. XX. ೪೯-೬೨; ಸು. 1076). [< ಸಂ.ಶಿವವ್ರತಿನ್]

ಶಿವಬ್ರಾಹ್ಮಣ (ನಾ). ಶಿವಭಕ್ತನಾದ ಬ್ರಾಹ್ಮಣ ; ಆರಾಧ್ಯ ಬ್ರಾಹ್ಮಣ : ಪುರದ ಪಲಂಬರು ಶಿವಬ್ರಾಹ್ಮ[ಣ]ರ ಪೆಸರ್ಗೊಂಡೊಡೆ ಕೇಳದಂತಿರ್ಪ ಪರವಯರು ನಿಮ್ಮಡಿಗಳ ನಾಮಗ್ರಹಣಂಗೊಳಲೊಡನಂತಂತೆ ಪುಳಕಿಸುತೆ ತಲೆವಾಗಿ ಲಜ್ಜಿತೆಯಾಗಿರಲ್ (ನಂಜರ. ೧೧-೧೪). [ಸಂ.]

ಶಿವಭಕ್ತ (ನಾ). ೧. ಪರಮೇಶ್ವರನಲ್ಲಿ ಭಕ್ತಿಯುಳ್ಳವನು. ೨. [ವೀಶೈ] ಶಿವದೀಕ್ಷೆಯನ್ನು ಪಡೆದವನು; ಲಿಂಗವಂತ; ವೀರಶೈವ : ಎನ್ನಿಂದ ಕಿಱಿಯರಿಲ್ಲ ಶಿವ[ಪಾಶಾಂ.ಲಿಂಗ]ಭಕ್ತರಿಂದ ಹಿರಿಯರಿಲ್ಲಾ ನಿಮ್ಮ ಪಾದಸಾಕ್ಷಿ (ಬಸವ. ೩೩೪); ಶಿವಭಕ್ತನಾದಡೆ ಹೇಂಗೆ ತಾ ಶಿವಭಕ್ತನಂ ಕೊಂದ (ಬಸಪು.೨೫-೨೨); ಶಿವಭಕ್ತಂ ಕೊಳಲೂದುವ ರವದೊಳ್ಗೆಗೆ ಸೋಲ್ತು ಮೂರ್ಛೆಯಿಂ ಬಿದ್ದಂ (ತ್ರಿಪುವಿ. ೧೫-೧೯). [ಸಂ.]

ಶಿವಭಕ್ತಿ (ನಾ). ಈಶ್ವರನಲ್ಲಿಟ್ಟಿರುವ ನಿಷ್ಠೆ ,– ಶ್ರದ್ಧೆ : ಎಂತೋ ಶಿವಭಕ್ತಿಯ ನಾನುಪಮಿಸುವೆನಯ್ಯಾ (ಬಸವ.೪೭); ಶಿವಭಕ್ತಿಗಿಕ್ಕೆದಾಣಂ ಶಿವಭಕ್ತರ ಜನ್ಮಭೂಮಿ ಶಿವಭಕ್ತರ ಸದ್ಭವನಂ ತಾನೆನಿಸುತ್ತೊಪ್ಪುವ ಕಾರಿಯಕಾಲಿಗಾವ ಪುರವೇಕ್ ಧರೆಯೊಳ್ (ತ್ರಿಪುವಿ. ೬೧-೩). [ಸಂ.]

ಶಿವಭಜನೆ (ನಾ). ಪರಮೇಶ್ವರನ ಸ್ತುತಿ; ಶಿವನ ಸ್ತೋತ್ರರೂಪವಾದ ಹಾಡು: ಶಿವಭಜನೆಗವಸರಮನಾ ರವಿ ಕಾಣದೆ ಪಿಡಿದು ಕಮಳಮಂ ತಿರುಗುವನು (ವೃಷವಿ. ೫೯-೮೪). [ಸಂ. ಶಿವಭಜನ]

ಶಿವಭವನ (ನಾ). ೧. ಈಶ್ವರನ ನಿಲಯ: ಎಮೆಯಿಕ್ಕಲಿಂಬಿಲ್ಲದಿರ್ಪ ಶಿವಭವನದಿಂ ಕ್ರಮದಿಂದೆ ಮಿಗೆ ಮೆಱಿವ ತಿರುನಾಳ್ಗಳೊಪ್ಪದಿಂ ಸರ್ವದಸೆಗಂ ಪರದು (ತಿರು. ದೇ. ೨-೫). ೨. ನೆರಿಯ ವಾಸಸ್ಥಾನ. ೧, ೨: ಆ ಕಾನನ ಚಂದ್ರ ಸೂರ್ಯಾವಾಸ ಮತ್ತಾ ಕಾನನ ಶಿವಭವನ ಆ ಕಾನನ ಹರಿಕೌಶಿಕವನೆಯಂತೆ ಭೂಕಾಂತನ ಕಣ್ಸೆಸೆಯೆ (ಜೀವಂಸಾಂ. ೨೦-೪). [ಸಂ.]

ಶಿವಭಾವ (ನಾ). ೧. ಮಂಗಳವನ್ನುಂಟುಮಾಡುವ ಮನಸ್ಸು, – ಚಿತ್ತವೃತ್ತಿ: ಶಿವನಡೆ ಶಿವನುಡಿ ಶಿವನೋಟ ಶಿವಭಾವ . . . ಶಿವಶರಣರ ಸಂಗ ಇವನ ಕರುಣಿಸಿ ಬದುಕಿಸಯ್ಯ ಎನ್ನ (ಅಖಂಡೇ. ೧೪೮-೧೪೩). ೨. ಶಿವನ ಸ್ವರೂಪ ; ಶಿವತ್ವ: ಜೀವನ ಸ್ವಾಭಾವಿಕಸ್ಥಿತಿ ಜೀವಭಾವ ; ಅವನ ವಾಸ್ತವಿಕಸ್ಥಿತಿ ಶಿವಭಾವ (ಶಕ್ರವಿ. ೬೧). [ಸಂ.]

ಶಿವಮಂತ್ರ (ನಾ). ಈಶ್ವರನನ್ನು ಸ್ತುತಿಸುವ ಸ್ತೋತ್ರಭಾಗ ; ಪಂಚಾಕ್ಷರಿ ಮಂತ್ರ : ಶಿವಮಂತ್ರದೋಲೆ ಬೈಲಿಗೆ ಕವಿಯಲ್ (ತ್ರಿಪುವಿ. ೩೩-೭೭) ; ವಿಭೂತಿಯನು ಧರಿಸಿ ಶಿವಮಂತ್ರವ ಜಪಿಸಿರ್ದವರ ಕಂಡು (ನನ್ನಚಾ. ೫-೮೩). [ಸಂ.]

ಶಿವಮಂದಿರ (ನಾ). ಈಶ್ವರನ ಆಲಯ, – ದೇವಸ್ಥಾನ : ಶಿವಮಂದಿರದೊಳ್ಪು ಪಿರಿದು ಪೊಗಲ್ಕುದನಹೆರಾಜಂಗಮಂದು (ಶಾಂತಿಪು. ೩-೭ ರಗಳೆ) ; ನರಪತಿ ಧರೆಯೊಳ್ ಶಿವಮಂದಿರಮಂ ಸಮೆಯಲ್ಕೆ (ತ್ರಿಪುವಿ. ೫೧-೫). [ಸಂ.]

ಶಿವಮಠ (ನಾ). ವೀರಶೈವಗುರುಗಳ ವಾಸಸ್ಥಾನ : ಶಿವಮಠದೊಳುಚ್ಚರಿಪ ಶಿವಪುರಾಣಂಗಳಂ . . . ತೋಱುತುಂ (ನಂದಿರ. ೯-೧೦೧). [ಸಂ.]

ಶಿವಮತ (ನಾ). ಶೈವಧರ್ಮ : ಜಿನಮತಮಂ ಶಿವಮತಮಂ ಘನವೆಂಬುದನಱಿವೊಡೆ (ತ್ರಿಪುವಿ. ೩೩-೫೮) ; ಶಿವಮತವಾರ್ಧಿವರ್ಧನಶಶಾಂಕನಂ . . . ಕುವರನನೀಗಳೆನ್ನ ಬಗೆಯುಂ ಬಯಸಿರ್ದಪುದು (ರಾಜಶೇ. ೩-೭೧). [ಸಂ.]

ಶಿವಮಲ್ಲಿ (ನಾ). ೧. ಒಂದು ಬಗೆಯ ಸಸ್ಯ ; ಕೊಕ್ಕರೆಹೂವಿನ ಗಿಡ : ''ಶಿವಮಲ್ಲೀ, ಪಾಶುಪತಃ, ವಿಕಾಷ್ಟಿಲಃ, ಬಕಃ, ವಸುಃ - ೫ ಬಕಪುಷ್ಪದ ಹೆಸರು'' (ಪಾಲ್ಕಾಂತಿ. ೧೩೧). ೨. ಒಂದು ಬಗೆಯ ಸಸ್ಯ; ನೀಲಿಗಿಡ : ಶಿವಮಲ್ಲಿ, ನೀಲಮಲ್ಲಿ, ಕೊಗ್ಗೆ (ಮೃಜಿ. ೪೫-೪೬). ೩. ಒಂದು ಬಗೆಯ ಮರ; ಅಗಸೆ. [ಸಂ. ಶಿವಮಲ್ಲೀ]

ಶಿವಮಾರ (ನಾ). ಒಬ್ಬಾತನ ಹೆಸರು; ೪ನೆಯ ಕರ್ನಾಟಕದ ಅರಸು ಮನೆತನಗಳಲ್ಲೊಂದಾದ ಗಂಗವಂಶದ ಒಬ್ಬ ರಾಜ: ವಿಜಯಸಂವತ್ಸರ ಇಪ್ಪದಾ ಎಣ್ಪತ್ತನೆಯೊಳು ಶಿವಮಾರ ಕದಮ್ಬುರ ಆಳೆ (ಎಕ. X, ಕೋರಾರ. ೬-೨; 753); ಸ್ವಸ್ತಿಶ್ರೀ ಶಿವಮಾರ ಪೃಥುವೀರಾಜ್ಯಂಗೆಯೆ ಪುನ್ನಾಡಱಸಾಸಿರಕ್ಕೆ ಎಱಿಯರ್ ನೆಲ್ಲಕ್ಕಿ ಸೊಲ್ಲಿಗೆ ಬಿಟ್ಟು (ಎಕ. III. ನಂಜನ.೨೬-೧ ; ಸು. 810). 'ಸೈಗೊಟ್ಟ' ಪರಾ. [ಸಂ.]

ಶಿವಮಾರಗಾವುಂಡ (ನಾ). ಒಬ್ಬಾತನ ಹೆಸರು : ಎಡನಾಡ ಪಿರಿಯ ಪೊಟ್ಮದ ಪನ್ನಿರ್ವ್ವರಂ ಒಲಭರ ಶಿವಮಾರಗಾವ್ಣುರ ಮಗಂ ಅಯ್ಯಪಗಾವ್ಣುನುವಿಟ್ಟು (ಎಕ.III. ನಂಜನ. ೧೪೩-೫ ; 977). [ಶಿವಮಾರ + ಗಾವುಂಡ (< ಗಾಮುಂಡ)]

ಶಿವಮಾರಮ್ಮ (ನಾ). ಒಬ್ಬಾತನ ಹೆಸರು :ಪುತ್ತೂರುಡ ಶಿವಮಾರಮ್ಮಂದುಣ್ಮುಗೆರ್ಗ್ಗಂ ನಲ್ಲತ್ತೂರೊಡೆ ಒಗ್ಗಮನೆ ಬಳೆಗಮುಂ ಅಯ್ಪುಮ್ಬು ಮೆದಕಲನಿಯು ಎಟ್ಟುಮ್ಬು ಬಳೆ ತೊಟ್ಪಪಟ್ಟು ಬ್ರಹ್ಮದೇಯಂ ಕೊಟ್ಟೋದು (ಎಕ. X, ಕೋರಾರ. ೨೩೧-೨ ; ಸು. ೪೧೦7). [ಶಿವಮಾರ + ಅಮ್ಮ]

ಶಿವಮಾರ್ಗ (ನಾ). = ಶಿವಬಟ್ಟೆ : ಇದು ಚೇರಮಾಂಕಭೂವರನ ಚಾರಿತ್ರ . . . ಸದಮಲಾಸಂದನಂದನಚೈತ್ರ ಶಿವಮಾರ್ಗದೆ ಚರಿಸುವ ಭಕ್ತಜನಮಿತ್ರ (ತ್ರಿಪುತಿ.೧-೨೨). [ಸಂ.]

ಶಿವಮೂರ್ತಿ (ನಾ). ಶಿವನ ವಿಗ್ರಹ, –ರೂಪ : ದೇವಗಣತತಿಯೊಳಗೆ ಶಾಂತಾರ್ಕ ಕೋಟಿ ಪ್ರಭಾಪುಂಜದಿಂ ಬೆಳಗೆ ಮುಂತೆ ಶಿವಮೂರ್ತಿ ಜಗವೆಲ್ಲಡೊಳು ತೊಳತೊಳಗೆ (ನಂಜರ. ೭ ೧೩೪). [ಸಂ.]

ಶಿವಯಗವುಂಡ (ನಾ). ಒಬ್ಬಾತನ ಹೆಸರು : ಅಧಿಕರಿಗವ್ಣುನೂ ಚರಮಗವ್ಣುನು ಶಿವಯಗವ್ಣುನುಂ ಮುವರುಮಿಟ್ಟು ಇಗ್ಗಲಿಯೂರಾಗವತೆಯ ಎಡಿಸಿದ (ಎಕ.III (R), ನಂಜನ. ೧೩೮-೨; ೮ನೆಯ ಶತ.). [ಶಿವ + ಅಯ್ಯ (< ಅಯ್ಯ) + ಗವುಂಡ (< ಗಾಮುಂಡ)]

ಶಿವಯೋಗ (ನಾ). ೧. ಶುಭಯೋಗ : ಭಾದ್ರಪದಬಹುಳ ಶ್ರೀಯೇಕಾದಶಿ ಆದಿವಾರ ಪುಷ್ಯನಕ್ಷತ್ರಶಿವಯೋಗಬಾಲವಾಕರಣದಂದು (ಎಕ IV. ಹಗ್ಗಡ. ೨೫-೧೨; 1211). ೨. [ವೀಶೈ] ಶಿವನೇ ಪರತತ್ವವೆಂಬ ಸಾಧಕನ ಚಿಂತನೆ, – ಧ್ಯಾನ: ಇಹಪರವೆಂಬ ಭೇದಾಭೇದವ ತಿಳಿದು ಶೈವಮಾರ್ಗದಷ್ಟಾಂಗಯೋಗವನುಳಿದು ವೀರಶೈವ

ಶಿವಯೋಗಸಂಪನ್ನನಾಗಿ ಭಕ್ತಿ ಜ್ಞಾನ ವೈರಾಗ್ಯದಲ್ಲಾಚರಿಸಿ . . . ಬದುಕಿದ ಕಾಣಾ (ಮಡಿವಾ. ೬೧-೮೯); ಭೂಪಂ . . . ಸುಖದಿಂ ಶಿವಯೋಗ ನಿದ್ರಾಮುದ್ರಿತ ಭದ್ರಾಂಗನಾಗಿರಲೊಡಂ (ಹಮ್ಮೀರ. ೨-೯೨ಪ) ; ಶಿವಯೋಗ ಸುಖಮನಾಳ್ದೊಪ್ಪುವ ಮಾದಾರ್ಯನ ಮರುಳ್ಳಲಾರ್ತುದೆ ಸಾಮ್ರಾಜ್ಯವಿಶೇಷ ಸುಖಂ (ವೃಷಪಿ. ೧೧-೬). [ಸಂ.]

ಶಿವಯೋಗಿ (ನಾ). ಶಿವಯೋಗದಲ್ಲಿ ನಿರತನಾದವನು : ಅಂತೂರ್ಪ ಶಿಲೆಯಾಂಡಾಖ್ಯ ಶಿವಯೋಗಿ ನಿಜದೇಹದೊಳ್ ಶಿವಗೃಹಮಂ ವಿರಚಿಪೆನಂ ದುದ್ಯೋಗಿಸಿರಲ್ (ತ್ರಿಪುವಿ. ೨೧-೫ ಪ) ; ಶಿವಯೋಗಿ ನಾರದಮುನೀಶ್ವರನುಸುರ್ದನಿಂತೆಂದು (ನವಮೋ. ೧೬-೧೬). [ಸಂ. ಶಿವಯೋಗಿನ್]

ಶಿವರಸ (ನಾ). (ಮೂರು ದಿವಸಗಳಷ್ಟು ಹಳೆಯದಾಗಿ) ಹುಳಿ ಬಂದಿರುವ ಅನ್ನದ ಗಂಜಿ, – ಅಂಬಲಿ : ಶರಣಪಥ ತನಗುಳ್ಳರೆ ಶಿವಭಕ್ತರ ಮನೆಯ ಶಿವರಸವ ಪಂಚಾಮೃತವ ಮಾಡಿಕೊಳ್ಳಬೇಕು (ಬಸವ. ೬೭೨). [ಸಂ.]

ಶಿವರಾತ್ರಿ (ನಾ). ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಮತ್ತು ಶಿವನ ಪ್ರೀತ್ಯರ್ಥವಾಗಿ ಅಂದು ಆಚರಿಸುವ ವ್ರತೋಪವಾಸ : ಅರ್ಚಿಸಲಱಿಯೆ ಪೂಜಿಸಲಱಿಯೆ ನಿಚ್ಚನಿಚ್ಚ ಶಿವರಾತ್ರಿಯ ನಾ ಮಾಡಲಱಿಯೆ (ಬಸವ. ೩೪೧); ಜಿನನೆಂದು ಶಿವನೆಂದು ಪೆಸರೀಶಗುಂಟದು ಜಿನರಾತ್ರಿ ಶಿವರಾತ್ರಿಯೆಂದು ಮನುಜರು ಮನ್ನಿಸುತಿರ್ದರು (ಭರಚ. ೭೪-೯೭); ಏಕಾದಶೀ ಮನೆಗೆ ಶಿವರಾತ್ರಿ ಔತಣಕ್ಕೆ ಬಂದ ಹಾಗೆ (ಗಾದೆ). [ಸಂ.]

ಶಿವರಾತ್ರೆ (ನಾ). = ಶಿವರಾತ್ರಿ : ಅಕ್ಕಿ ಮುಡಿ ೪೮ ಶಿವರಾತ್ರೆ ಪೂಜೆಗೂ (ಸೌಇಎ. ೧೯೩೨, ಉಡುಪಿ. ೨೮೩-೩೮; 1485); ಶಿವರಾತ್ರೆಯ ಪುಣ್ಯಕಾಲದಲ್ಲಿ . . . ಗ್ರಾಮಕ್ಕೆ ವಾಮನಮುದ್ರೆಯ ಕಲ್ಲನ ಚತುಸ್ಸೀಮೆಗೆ ಹಾಕಿಸಿ ಕೊಟ್ಟು (ಎಕ. III (R). ಗುಂಡ್ಲುಪೇ. ೧೬೮-೫; 1497). [< ಸಂ. ಶಿವರಾತ್ರಿ]

ಶಿವರಾಮಕಳ್ಳಿ (ನಾ). ಒಂದು ಬಗೆಯ ಕಳ್ಳಿಗಿಡ : ಪಾಪಾಸುಕಳ್ಳಿ, ಶಿವರಾಮಕಳ್ಳಿ, ಚಪ್ಪಟೆಕಳ್ಳಿ (ಮೃಜಿಗಿ. ೫೮-೧೧೬೧). [ಶಿವರಾಮ್ಯ + ಕಳ್ಳಿ]

ಶಿವರಾಯಿಹೊನ್ನು (ನಾ). (ಚಿತ್ರದುರ್ಗದ ಪಾಳೆಯಗಾರನಾಗಿದ್ದ ಕಡೆಯ ಮದಕರಿನಾಯಕನ ಕಾಲದಲ್ಲಿ ಬಳಕೆಯಲ್ಲಿದ್ದ) ಒಂದು ಬಗೆಯ ಬಂಗಾರದ ನಾಣ್ಯ : ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು, ಯಾವುವೆಂದರೆ :- ೧, ಗಬರು . . . ೧, ಶಿವರಾಯಿಹೊನ್ನು, ೧,ಬಾದಷಾಯಿಹೊನ್ನು (ಚಿತ್ರವಾ. ೧೦೪).

[ಶಿವರಾಯ್ಯಿ (IP ← ಮರಾ. ಶಿವರಾಈ = ಶಿವಾಜಿಯ ಕಾಲದ ನಾಣ್ಯ) + ಹೊನ್ನು (< ಪೂನ್)]

ಶಿವಲಗ್ನ (ನಾ). ಶುಭಲಗ್ನ ; ಮಂಗಳಕರವಾದ ಮುಹೂರ್ತ: ನಾಳೆ ಲಗ್ನಂ ದೇವ ತಱಹಿಲ್ಲ ಶಿವಲಗ್ನ ಸಾರಾಸನಂ ದೇವ (ನಂಬಿರ. ೫-೪೮). [ಸಂ.]

ಶಿವಲಾಂಛನ (ನಾ). ವಿಭೂತಿ, ರುದ್ರಾಕ್ಷಿ ಮುಂತಾದ ಶಿವಾಚಾರದ ಗುರುತು, – ಚಿಹ್ನೆ : ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ (ಘನವ. ೭-೫). [ಸಂ.]

ಶಿವಲಿಂಗ (ನಾ). ೧. ಈಶ್ವರನ ಪ್ರತೀಕವೆಂದು ಭಾವಿಸುವ ಕಲ್ಲಿನ ಅಥವಾ ಇತರ ಲೋಹದ ಒಂದು ನಿರ್ದಿಷ್ಟ ಆಕಾರ, – ಮೂರ್ತಿ: ಶಿವಲಿಂಗೇಕ್ಷಣ ಲೋಲುಪೆ ಶಿವಪ್ರಸಾದಾತ್ತಚಿತ್ತೆ ಶಿವಭಕ್ತೆ (ಗಿರಿಕ.೩ ೪೯); ಮಹಾಹಾಟಕೇಶ್ವರನೆಂಬ ಶಿವಲಿಂಗಮಿರೆ . . . ಪುಂಡರೀಕಂ ಮಣಿದನು (ಚೃಮಿಭಾ. ೨೪-೧೪). ೨. [ವೀಶೈ] ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎಂಬ ಆರು ಬಗೆಯ ಲಿಂಗಗಳಲ್ಲಿ ಒಂದು : ಆಚಾರಲಿಂಗವಿಡಿದು ಗುರುಲಿಂಗವ ಕಾಣಬೇಕು ಗುರುಲಿಂಗವಿಡಿದು ಶಿವಲಿಂಗವ ಕಾಣಬೇಕು ಶಿವಲಿಂಗವಿಡಿದು ಜಂಗಮಲಿಂಗವ ಕಾಣಬೇಕು (ಅವಚಂ. ೧೬೮-೭೫೭); ಆವ ಕುಲವಾದರೇನು ಶಿವಲಿಂಗವಿದ್ದವನೆ ಕುಲಜನು (ಬಸವ. ೭೧೭) ; ಬಿಂದುವಾಚಾರ ರಸವೆಂದು ಗುರುಲಿಂಗ ಕಳೆಯೆಂದು ಶಿವಲಿಂಗ (ಮನೋವಿ. ೨-೪೨). [ಸಂ.]

ಶಿವಲಿಂಗಿ (ನಾ). ಒಂದು ಬಗೆಯ ಔಷಧೀಸಸ್ಯ : ಲಿಂಗತೊಂಡೆಬಳ್ಳಿ, ಶಿವಲಿಂಗಿ (ಮೃಜಿಗಿ. ೧೪-೨೫೯). [< ಸಂ. ಶಿವಲಿಂಗಿನೀ./ ಹಿಂ. ಶಿವಲಿಂಗೀ]

ಶಿವಲಿಂಗೈಕ್ಯ (ನಾ). ಶಿವಲಿಂಗದಲ್ಲಿ ಬೆರೆತವನು, – ಐಕ್ಯನಾದವನು : ತನುಶುಚಿಗಳ ಮನಶುಚಿಗಳ ತೋಱಾ ಇಂತಪ್ಪ ಶಿವಲಿಂಗೈಕ್ಯರ ತೋಱಿ ಬದುಕಿಸು (ಬಸವ. ೫೧೪): ಶಿವಲಿಂಗೈಕ್ಯಾತಿಸೌಖ್ಯಂಬಡೆದು ಮಱಪಿನಿಂದಿರ್ಪನೋ . . . ದೇಶಿಕೇಂದ್ರಂ (ವೃಷಪಿ. ೨೩-೧೪). [ಸಂ.]

ಶಿವಲೀಲೆ (ನಾ). ೧. ಪರಮೇಶ್ವರನ ಲೀಲೆ, – ವಿನೋದ; IP "ಲೀಲೆಗಳು - ೨೫ : ಸೋಮಧಾರಿತ್ವ, ಉಮಾಸಮೇತತ್ವ, ವೃಷಭಾರೂಢತ್ವ, ನೃತ್ಯ ವಿಲಾಸಿತ್ವ, ವಿವಾಹೋತ್ಸಾಹಿತ್ವ, ಭಿಕ್ಷಾಟನತ್ವ, ಕಾಮಾರಿತ್ವ, ಕಾಲಾರಿತ್ವ, ತ್ರಿಪುರಾರಿತ್ವ, ಜಲಂಧರಾರಿತ್ವ, ಅಜಾರಿತ್ವ, ವೀರಭದ್ರಾವತಾರಿತ್ವ, ಹರಿ ಧ್ವಂಸಿತ್ವ, ಅರ್ಧನಾರೀಶ್ವರತ್ವ, ಕಿರಾತರೂಪತ್ವ, ಕಂಕಾಳಧಾರಿತ್ವ, ಚಂಡೇಶಾನುಗ್ರಾಹಿತ್ವ, ವಿಷಾಪಹಾರಿತ್ವ, ಚಕ್ರಪ್ರದಾನದಕ್ಷತ್ವ, ವಿಘ್ನೇಶ್ವ ಪ್ರಧಾನಾಭಿಮುಖತ್ವ, ಉಮಾಕುಮಾರಸಹಿತತ್ವ, ಏಕಪಾದತ್ವ, ಸುಖಪ್ರದತ್ವ, ದಕ್ಷಿಣಾಮೂರ್ತಿ ಸ್ವರೂಪತ್ವ ಮತ್ತು ಮಹಾಲಿಂಗಸ್ವರೂಪತ್ವ" (ಶ್ರೀವತ್ಸ. ೩೮೫) : ಶಿವಲೀಲಾಕಥನಾವಳೀಶ್ರವಣದಿಂ ತತ್ಪಾದಪೂಜಾಸಮುತ್ಸವದಿಂ . . . ಕಾಂತಾಸಮೇತಂ ಮಹೀಧವನೊಪ್ಪಿರ್ದಂ (ರಾಜಶೇ. ೯-೨). ೨. ಶಿವನೊಂದಿಗೆ ಆಡುವ ಆಟ : ಇಂತು ಬಾಲಲೀಲೆ ಶಿವಲೀಲೆಯಾಗಿ . . . ಭವಾನಿಯಿರೆ ಕಂಡು (ಗಿರಿಕ. ೩-೯೮ ಪ). ೩. (ಆಲಂ) ಭ್ರಮೆಯಿಂದ ಕೂಡಿದ ಮಾತು, ಕೆಲಸ ಮುಂತಾದುವು: ಹುಚ್ಚಲ್ಲ, ಬೆಪ್ಪಲ್ಲ, ಶಿವಲೀಲೆ (ಗಾದೆ). [ಸಂ. ಶಿವಲೀಲಾ]

ಶಿವಲೋಕ (ನಾ). ಪರಮೇಶ್ವರನು ನೆಲೆಸಿರುವ ಸ್ಥಳ; ಕೈಲಾಸ: ದುದ್ದರಸಂ . . . ಬ್ರಾಹ್ಮಣರ್ಗ್ಗೆ ಚತ್ರಮಂ ನಿಲಿಸಿ ತೊಱೆ ಗಟ್ಟೆಯ ಮಾಡಿಸಿ ಅನೇಕ ಧಮ್ಮಮ ಬೆಳಗಿ ಶಿವಲೋಕಪ್ರಾಪ್ತನಾಗಲ್ (ಎಕ. I. ೬೨-೪೮; 1095); ಶಿವಲೋಕಕ್ಕೆ ಸರಿ ಬೇಱೆ ಮಂತ್ರವಿಲ್ಲ (ಬಸವ. ೭೪೬); ಸಂತತಮುಂ ಭೋಗದೊಳಿರ್ದು ನಂಬಿ ಶಿವಲೋಕಕ್ಕೆದನೇ (ಉದ್ಧಟ. ೧೨-೧೨). [ಸಂ.]

ಶಿವವಳ್ಳಿ, ಶಿವಳ್ಳಿ (ನಾ). ೧. ಒಂದು ಸ್ಥಳದ ಹೆಸರು; IP ಉಡುಪಿ ತಾಲ್ಲೂಕಿನ ಈಗಿನ ಶಿವಳ್ಳಿ: ಇದನಟಿದೊ ಬಾರಣಾಸಿಯು ಶಿವವಳ್ಳಿಯುಮ ಅಟಿದ ಪಞ್ಚ ಮ(ಹಾ)ಪಾತಕನಕ್ಕು(ಕ್ಕುಂ) (ಎಇ. IX. ೨೨-೧೬; 8ನೆಯ ಶತ). ಶಿವಳ್ಳಿ : ೨. ಶಿರಸಿ ತಾಲ್ಲೂಕಿನ ಒಂದು ಊರಿನ ಹೆಸರು : ಶಿರಸಿಯಿಂದ ಒಂಭತ್ತು ಮೈಲು ದೂರದಲ್ಲಿರುವ ಹಿಂದಕ್ಕೆ ಸಾಂತಪುರವೆಂದು ಕರೆಯಲ್ಪಡುತ್ತಿದ್ದ ಶಿವಳ್ಳಿ ಗ್ರಾಮದಿಂದ ಈ ಹೆಸರು ಅವರಿಗೆ ಬಂದುದಾಗಿದೆ (ತುಳುನಾ. ೨೩೦). ೩. ಶಿವಳ್ಳಿ ಎಂಬ ಊರಿಗೆ ಸೇರಿದ ಒಂದು ಬ್ರಾಹ್ಮಣಪಂಗಡದ ಹೆಸರು : ಕೋಟರು, ಸಕಳಾಪುರಿ, ಶಿವಳ್ಳಿ ಇವು ಮೂರು ಹೈಗರೊಳಗಿನ ಒಳಭೇದಗಳು (ಕಭಾಗೆ. ೮೫); ಶಿರಸಿಯ ಹತ್ತಿರದ ಶಿವಳ್ಳಿಯವರು ಮತಾಂತರ ಹೊಂದಿದ ಹವಿಕರು ಎಂಬುದರಲ್ಲಿ ಎರಡು ಮಾತಿರಲಾರದು (ತುಳುನಾ. ೨೩೦). [ಶಿವ + ಪಳ್ಳಿ]

ಶಿವವಿಪ್ರ (ನಾ). = ಶಿವಬ್ರಾಹ್ಮಣ : ಜಗತಿಯೊಳು ಶ್ರೀಕಾಳಿಯೆಂಬಾ ನಗರಿಯಲ್ಲಿ ಕುಮಾರನಂಶದಿನೊಗದು ಶಿವವಿಪ್ರಂಗೆ ಪಿಳ್ಳೆಯ ನಾಯನಾರೆನಲು (ಬಸಪು. ೫೦-೧). [ಸಂ.]

ಶಿವಶಕ್ತಿ (ನಾ). ೧. ಪರಮೇಶ್ವರನ ಪತ್ನಿಯೆಂದು ಭಾವಿಸುವ ಶಿವನ ಶಕ್ತಿ. ೨. ದೈವಶಕ್ತಿ : ಈ ಎರಡು ಚಾಪಗಳ ಹಿಂದೆಯೂ ಒಂದು ಶಿವಶಕ್ತಿ ಇದ್ದೆ ಇರುತ್ತದೆ (ಇಂಚಾಪ. III. ಅರಿಕೆ). ೩. ಒಂದು ಬಗೆಯ ಸಸ್ಯ; ಅಗ್ನಿಶಿಖೆ: ಕರಡಿಕಣ್ಣಿನ ಗೆಡ್ಡೆ, ಕೋಳಿಕುಟುಮನ ಗೆಡ್ಡೆ, ಶಿವಶಕ್ತಿ, ಲಾಂಗುಲಿಕ (ಮೃಜಿಗಿ. ೩೯-೭೭೭). [ಸಂ.]

ಶಿವಶಕ್ತಿವಾಸ (ನಾ). ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು: ಬಳಿಕ ಹದಿನೆಂಟಂಗುಲ ಹದಿನೇಳಂಗುಲ . . . ಒಂದಂಗುಲ ಪ್ರಮಾಣಿನ ಕ್ರಮವಿಡಿದು ಜಾತಿವಾಸ ಸಜಾತಿವಾಸ . . . ಶಿವಶಕ್ತಿವಾಸ ಭುವನಾಧಿಪತಿವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವನಱಿದು (ವಿವೇಕ. ೧೯೧). [ಶಿವಶಕ್ತಿ + ವಾಸ]

ಶಿವಶರಣ (ನಾ). [ವೀಶೈ] ವೀರಶೈವ ಮತಾನುಯಾಯಿಯಾದ ಶಿವಭಕ್ತ : ಹಿಂಗಲಾಗದು ಶಿವಶರಣಪಥ [ಪಾಠಾಂ.ಶರಣಪಥ, ಶರಣಸ್ಥಲ]ಕ್ಕೆ ಸಲ್ಲದಾಗಿ ಕೂಡಲ ಸಂಗಮದೇವರ ಹಿಂಗಿ ನುಂಗಿದುಗುಳು ಕಿಲ್ಬಿಷ (ಬಸವ. ೭೩೩); ಶಿವಾನುಭಾವ ಶಿವಶರಣರ ಸಂಗ ಇವನೆ ಕರುಣಿಸಿ ಬದುಕಿಸಯ್ಯ (ಅಖಂಡೇ. ೧೪೮-೧೪೩); ಅನುಭಾವಿಗಳಾದ

ಸ್ತ್ರೀ ಪುರುಷರು . . . ಶಿವಭಕ್ತಿಯನ್ನು ಪ್ರಸಾರಮಾಡಿದರು. ಈ ಅನುಭಾವಿಗಳಿಗೆ ಶಿವಶರಣರೆಂಬ ಹೆಸರಿದೆ (ಭಾರದ. ೩೦೮). [ಸಂ.]

ಶಿವಶರಣೆ (ನಾ). [ವೀಶೈ] ವೀರಶೈವಮತಾನುಯಾಯಿಯಾದ ಶಿವಭಕ್ತೆ : ನಿಜದೇವಿ ಶಿವನನ್ನೇ ಮೋಹಿಸಿ ವೀರವಿರಾಗಿಣಿಯಾಗಿ ಕಲ್ಯಾಣಕ್ಕೆ ಬಂದು ಮೊಂತಾದೇವಿ ಯೆಂಬ ಪ್ರಸಿದ್ಧ ಶಿವಶರಣೆಯಾದ ಸಂಗತಿ ಅನೇಕ ವೀರಶೈವಗ್ರಂಥಗಳು ತಿಳಿಸುತ್ತವೆ (ಮೋಮಾ. ೮೨ ಪ್ರಸ್ತಾವನೆ). [ಶಿವಶರಣ + - ಎ]

ಶಿವಶಾಸನ (ನಾ). ಶಿವನ ಅಪ್ಪಣೆ : ಭಕ್ತರೆಂದುದ ತನಗೆ ಶಿವಶಾಸನಂ ನೋಡ (ಸೋಮ. ದೇ. ೫೯- ೧೩). [ಸಂ.]

ಶಿವಸಮಯ (ನಾ). ಶೈವಧರ್ಮ, – ಮಾರ್ಗ : ಆತನಿಂದಮ್ಮ ಶಿವಸಮಯಂ ಪ್ರಬಲಮಪ್ಪುದು (ಪದ್ಮರಾ. ೨-೫೪); ಪರಸಮಯದವನಾದಡೂ ಆಗಲಿ ಶಿವಸಮಯದವನಾದಡೂ ಆಗಲಿ ವರ್ಮಗೆಟ್ಟು ನುಡಿವ ಕರ್ಮಜೀವಿಗಳ ಬಾಯಲ್ಲಿ ಬಾಲ್ಮುಳ ಸುರಿಯದೆ ಮಾಣ್ಬುವ ಹೇಳಾ (ಆಪಂಡೇ. ೨೬೭-೭). [ಸಂ.]

ಶಿವಸಾದಾಖ್ಯ (ನಾ) [ವೀಶೈ] ಐದು ಬಗೆಯ ಸಾದಾಖ್ಯಗಳಲ್ಲಿ ಒಂದು: ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗದಲ್ಲಿ ಯಕಾರಮಂತ್ರಸ್ವರೂಪವಾದ ಶ್ರವಣೇಂದ್ರಿಯಸಂಯೋಗವ ಮಾಡಬಲ್ಲಾತನೆ ಪ್ರಾಣಲಿಂಗಿ (ಆಪಂಡೇ. ೨೪೫-೯೮). [ಸಂ.]

ಶಿವಸಾಯುಜ್ಯ (ನಾ). ಶಿವನಲ್ಲಿ ಐಕ್ಯ ಹೊಂದುವುದು; ಮುಕ್ತಿ : ಸಾಧಕನು . . . ಜ್ಞಾನಮಾರ್ಗ ಅಥವಾ ಸನ್ಮಾರ್ಗವನ್ನನುಸರಿಸಿ ಧ್ಯಾನಪೂರ್ವಕ ಸಮಾಧಿಸ್ಥಿತಿಯನ್ನು ಹೊಂದಿ ಶಿವಸಾಯುಜ್ಯವನ್ನು ಹೊಂದುವನು (ಭಾರದ. ೨೧೭); ಶಿವಸಾಯುಜ್ಯಪದವಿಗೆ ಇವರಿಗಿಂತ ಹೆಚ್ಚಿನ ಅರ್ಹತೆಯನ್ನು ಪಡೆದವರಾರು? (ರಂಗರೂ. ೧೭೦). [ಸಂ.]

ಶಿವಸುಖ (ನಾ). ಶಾಶ್ವತವಾದ ಆನಂದ; ಮೋಕ್ಷಸುಖ : ಶಿವಸುಖಮನಱಿಯದೀ ಮಾನವಸುಖದ ನಿಮಿತ್ತದಿಂ ತಪಂಗೆಯ್ವವರೊಪ್ಪುವ ಮಾಣಿಕಮಂ ತೊಡಿಂಗವಯವದಿಂ ಮಾಱುಗುಡುವ ಮರುಳಂ ಪೋಲ್ದುಂ (ಕಾಂಬಿ. ೧೧-೯೧); ಆಗದಾಗದು ಮರ್ತ್ಯದ ಮನುಜರಿಗೆ ಶಿವಸುಖ (ಲಿಂಗಪ. ೨೨-೮೭). [ಸಂ.]

ಶಿವಸೂತ್ರ (ನಾ). = ಶಿವದಾರ : ಈಶಂ ತನ್ನುಡಿಯ ಶಿವಸೂತ್ರಮಂ ತೋಱಿ (ಬಸಪು. ೪೪-೬೧). [ಸಂ.]

ಶಿವಸೆರಗು (ನಾ). [ವೀಶೈ] "ಶಿವಸೆರಗು – ಸಮಾಧಿಕಾಲದಲ್ಲಿ ಜಂಗಮರಿಗೆ ಬಿಲ್ವಪತ್ರೆ ಮತ್ತು ದಕ್ಷಿಣೆ ಕಟ್ಟಿಕೊಡುವ ಹೊಸಬಟ್ಟೆಯ ಗಂಟು" (ಶರಸಾ. ೨೪-೮). [ಶಿವ + ಸೆರಗು, (< ಸಱಂಗು)]

ಶಿವಸೊಮ್ಮು (ನಾ). ದೇವರ ಸಂಪತ್ತು : ಆರು ಶಿವಸೊಮ್ಮ ಶಿವನವರ್ಗೀವನೆಂಬವರ ಘೋರಭವಭಾರವ ನಿವಾರಿಸುವ ಶಿವನವರ ಪಡೆದನೆಂದೊಡವೆಯಂ ಮಡಗಿ ನೀಂ ಕೆಡಬೇಡ (ದೀಕ್ಷಾಪೋ. ೫೩-೧೧೦೭); ಶಿವಾಭ್ಯಂಜನಕೆ ಮನವೊಲಿದು ತಿಲಗಳಂ ಪರಪಿ ಶಿವಸೊಮ್ಮಂದು ಬಲ್ಲಾವಲಿಕ್ಕಿರಲ್ಕೆ (ರಾಷಚಿ. ೧೨-೨೬). [ಶಿವ + ಸೊಮ್ಮು]

ಶಿವಸೋದರಿ (ನಾ). ಶೈವಮತಕ್ಕೆ ಸೇರಿದ ಹೆಣ್ಣು : ಎನ್ನ ಶಿವಸೋದರಿಯ ಮಠದಲಿ ಚನ್ನಪಾಯಸವುಂಟು ಬೇಕೆಂದೆನ್ನು ನಿನಗಾನೆಯ್ದಿ ತಂದಪೆನೆಲ ಮಹಾದೇವ (ಬಸಪು. ೧೪-೧೩). [ಸಂ. ಶಿವಸೋದರೀ]

ಶಿವಳಿಕೆ (ನಾ). ಹಣ್ಣನ್ನು ಪರೀಕ್ಷಿಸಲು ಹಾಕುವ ಉಂಡಿಗೆ: ಹಲಸಿನ ಹಣ್ಣಿಗೆ ಶಿವಳಿಕೆ ಹಾಕು (ಡೂಢಿ). [?]

ಶಿವಳ್ಳಿ 'ಶಿವವಳ್ಳಿ,' ನೋ.

ಶಿವಾಂಗಿ (ನಾ). ಒಂದು ಬಗೆಯ ಮರ ; ಬಾಗೆಯ ಮರ : "ಶಿವಾಂಗಿ [ಪಾಠಾಂ. ಗೆ]ಯನೆ ಬಾಗೆಯನಿಕು" (ಮಂಗರಾ. ೩೮-೨೫). 'ಶಿವಂಗಿ$_2$' ಪರಾ. [?]

ಶಿವಾಕ್ಷಿ (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ; ರುದ್ರಾಕ್ಷಿ : ಶಿವಾಕ್ಷಿ ವೃಕ್ಷದಡಿಯಲುದಿರ್ದ ಸುಪಣ್ಣ ಛಿದ್ರವಂ ಮಾಡುತ ನಾರಿನೊಳ್ ಸರವನೇಱಿಸಿ ನಾಯ ಕೊರಳಿಗೆ ಕಟ್ಟಲು (ನನ್ನಚಾ. ೫-೧೦೮): ಕೊರಲೊಳ್ತಳ್ತ ಶಿವಾಕ್ಷಿ [ಪಾಠಾಂ. ಶಿವಾಕ್ಷ]ಮಾಲೆ ಭಸಿತಾಲೇಪಂ ಲಲಾಟಾಗ್ರದೊಳ್ (ರಾಜಶೇ. ೩-೪೪). [ಸಂ. ಶಿವಾಕ್ಷ]

ಶಿವಾಗಮ (ನಾ). [ವೀಶೈ] ಶಿವೋಪಾಸನೆ, ಶಿವದೀಕ್ಷೆ ಮುಂತಾದ ಶಿವಾಚಾರಗಳ ಸಾಧನೆ ಹಾಗೂ ಸಿದ್ಧಿಗಳನ್ನು ಪ್ರತಿಪಾದಿಸುವ ಧರ್ಮ; ಶೈವಧರ್ಮ; IP ಇವು ಇಪ್ಪತ್ತೆಂಟು ಬಗೆ : ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮತ್, ಸುಪ್ರಭೇದಕ, ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ, ಭಾಕುಟ್ಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಶರ್ವೋಕ್ತ, ಪಾರಮೇಶ್ವರ, ಕಿರಣ ಮತ್ತು ವಾತುಲ : ಸೌಗತ ಸಾಂಖ್ಯ ಶಿವಾಗಮಗಳಂ ನ್ಯಾಯನಯ ಪ್ರಮಾಣಸುವಚಃಕ್ರಮದಿಂ ಸಲೆ ಸೋಲೆ ಗೆಲ್ದುವಾಧ್ಯಾಯರಜೇಯರ್ (ಶಾಂತಪು. ೧-೪); ಮೊಣುಪಾಲಿನವನ ಶಿವಾಗಮದ ಸೇವೆಗೆ ನೇಮಿಸಿ ಹುಡುಗರು ಪೂಜಾಕರ್ತರೆಂದು ಇವರು ಉತ್ತ ಭೂಮಿಗೆ ತೆರಿಗೆ ಇಲ್ಲವೆಂದು ಮಾಡಿ (ಮೈಅರ್. ೧೯೩೦. ೧೩-೩೧; ಸು. 1345); ವೇದಾರ್ಥ ಪ್ರತಿಪಾದಕಗಳಾಗಿಯೂ ಪಶು ಪತಿ ಪಾಶಗಳೆಂಬ ತ್ರಿಪದಾರ್ಥಗಳನ್ನು ತಿಳಿಸುವುದಾಗಿಯೂ ನಾಲ್ಕುಪಾದಗಳಿಂದ ಕೂಡಿದುದಾಗಿಯೂ ಇರುವ ಕಾಮಿಕ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). [ಸಂ.]

ಶಿವಾಚಾರ (ನಾ). [ವೀಶೈ] ವೀರಶೈವರ ಧಾರ್ಮಿಕ ಆಚರಣೆ ಹಾಗೂ ಸಂಪ್ರದಾಯ; ಶೈವಮತೀಯರ ಆಚಾರ : ಕುಱುಂಬ್ಲ ಕುಱುಂಬ್ಲ ಲಿಂಗವೆಂದೆಂಬರೆ ತೆಱಹಿಲ್ಲ ತೆಱಹಿಲ್ಲ ಜಂಗಮವೆಂದಂಬರೆ ಇದೆ ನೋಡಾ ಶಿವಾಚಾರ ಇದ ನೋಡಾ ಶಿವದೊಡಕು (ಬಸವ. ೯೪೮); ದೇವರಾಜಒಡೆಯರು ಸುಜನ ಶುದ್ಧ ಶಿವಾಚಾರ ಸಂಪನ್ನರುಮಪ್ಪ ನಮ ಶ್ರೀಗುರು ಶ್ರೀ ರುದ್ರಾಕ್ಷಿ ಒಡೆಯರ ದಿವ್ಯಶ್ರೀಪಾದಪದ್ಮಂಗಳಿಗೆ ನಾವು ಶರಣಾರ್ತ್ತಿ ಮಾಡಿ (ಎಕ. IV, ಗುಂಡ್ಲುಪೇ. ೪೭-೬-1489 ?); ಶಿವಾಚಾರ ಶಿವಭಕ್ತಿ ಶಿವಜ್ಞಾನ ಶಿವಾನುಭಾವ ಶಿವಶರಣರ ಸಂಗ ಇವನೆ ಕರುಣಿಸಿ ಬದುಕಿಸಯ್ಯ ಎನ್ನ (ಆಪಂಡೇ. ೧೪೮-೧೪೩). [ಸಂ.]

ಶಿವಾಚಾರಿ (ನಾ). ಶಿವಾಚಾರವನ್ನು ಅನುಸರಿಸುವವನು : ಶರಣರ್ಬಂದೊಡುಬ್ಬುದಂ ಪೊದೆದುದಂ ಉತ್ತಮಶಿವಾಚಾರಿ ಕೊಟ್ಟಪ್ಪನುಳ್ಳುದಂ (ಇಳಿರ. ದೇ. ೫೦-೧೬).

[ಸಂ. ಶಿವಾಚಾರಿನ್]

ಶಿವಾಚಾರ್ಯ (ನಾ). ವೀರಶೈವಮತದ ಗುರು, – ಆಚಾರ್ಯ : ಭೂಪಂ . . . ಶಿವಸ್ಥಾನ ಶಿವಾಚಾರ್ಯನಿಳಯಂಗಳನೀಕ್ಷಿಸುತ್ತ ಸಂತಸದಿಂದೆಯ್ದುವಾಗಳ್ (ಪಮ್ಮರ. ೨-೯೨ವ). [ಸಂ.]

ಶಿವಾಟ (ನಾ). ಒಂದು ಬಗೆಯ ಮೂಲಿಕೆ; ಕೊಮ್ಮೆ; ಗಣಜಿಲು. [ಸಂ. ಶಿವಾಟೀ]

ಶಿವಾಟಿಕೆ (ನಾ). ೧. = ಶಿವಾಟ : "ಗಣಜಿಲ ಪುನರ್ನವಿ ಶಿವಾಟ [ಪಾಠಾಂ.ಶವಾಟ]ಕೆಯೆನಿಕ್ಕಂ" (ಮಂಗರಾ.೪೦-೩೧). ೨. ಒಂದು ಬಗೆಯ ಹುಲ್ಲು. [ಸಂ.ಶಿವಾಟಿಕಾ]

ಶಿವಾಣಿ (ನಾ). ಶಿವನ ಹೆಂಡತಿ ; ಪಾರ್ವತಿ : ಭವನಾಶಿನಿ ಎಂಬ ಶಿವಾಣಿಯ ಸಿರದಲ್ಲಿ ಜಗಂಜ್ಯೋತಿಯ ಕಂಡೆನಯ್ಯ (ಸಿದ್ಧೇವ. ೧೫೮-೩೮೧); ರಜತಶೈಲಮಂ ಶಿವ ಶಿವಾಣಿಯರೊಡನೆ, ಬೇರ್ ಬಿಡಿಸುತಳ್ಳಾಡಿ ನೆಗಹಿದೀ ದೈತ್ಯರ ದೊರೆಯ ತೋಳ್ . . . ಪೂವೆಸಳ ಪೂರೆಗುರುಳ್ವುದು ಸೋಲ್ತು (ತ್ರೇರಾಮಾ. ೬೯೯-೨೮). [< ಸಂ. ಶಿವಾನೀ]

ಶಿವಾಣು (ನಾ). ಪಂಚಾಕ್ಷರಿಮಂತ್ರ (?) : ಅಖಿಲಭಕ್ತಪಾದಾಬ್ಜಮಂ ಸ್ಮರಿಸುತುಂ ಶಿವಾಣುವನುಚ್ಚರಿಸುತೇಳ್ದು ಸಡೆಯಲೊಡನೆ (ಪದ್ಮರಾ.೯-೨೦). [ಶಿವ + ಅಣು?]

ಶಿವಾದ್ವೈತ (ನಾ). ೧. ಶಿವ ಮತ್ತು ಜೀವರಲ್ಲಿರುವ ಅಭೇದಭಾವ : ತಾನೇ ಶಿವಾರ್ಪಿತವದುವ[ಪಾಠಾಂ. ಯರ್ಪಿತವಾದುದೆ]ಶಿವಾದ್ವೈತವಿದ್ಯಾನಿರತಸದ್ಭಕ್ತಿಚರಿತವೆಂದೂರದ ಪರಮಾನಂದಮೂರ್ತಿಯನಿಸುವ ದೇಶಿಕೋತ್ತಮನ ಚರಣಾಂಬುಜಕ್ಕೆ ಶರಣು (ಲಕ್ಷಚಂ. ೫೪-೪೦). ೨. ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ : ಶಿವನನ್ನು ಬಿಡದೆ ಜೀವಿಸುವಿಕೆ ಅರ್ಥಾತ್ ಶಿವಾತ್ಮಕವಾದ ಜೀವನ ಎಂಬುದೇ ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತ ಸಿದ್ಧಾಂತ (ಭಾರದ. ೧೫೧). ೩. ಶಿವಾದ್ವೈತ ಸಿದ್ಧಾಂತದ ಅನುಯಾಯಿ : ಚೇತೋ ಜ್ಯೋತಿರಖಂಡಸತ್ಪರಲಸಚ್ಚಿಲ್ಲಿಂಗಯುಕ್ತಂ ಶಿವಾದ್ವೈತಂ ಭಾಸುರಭದ್ರ ಭಕ್ತಿಚಕಿತಂ ರಾಜೇಂದ್ರ ಚಕ್ರೇಶ್ವರಂ (ಪಮ್ಮರ. ೧-೩೭).

[ಸಂ.]

ಶಿವಾಧೀನ (ನಾ). ಮರಣಹೊಂದುವುದು; ಶಿವನನ್ನು ಸೇರುವುದು; ದೈವಾಧೀನವಾಗುವುದು : ವಿಕಾರಿಸಂವತ್ಸರದ ಮಾಘ ಬ ೧೦ ಯು ಬುಧವಾರ ದಿವಿಗಳಿಗೆ ೨೭$^{1}/_{2}$ ಗೆ ಶಿವಾಧೀನವಾದ್ದು (ಎಕ. I(R). ೫೯-೭; 1779). [ಸಂ.]

ಶಿವಾನುಬಂಧ (ನಾ). ೧. ಮಂಗಳಕರವಾದ ಸಂಬಂಧ. ೨. ಶಿವನ ಭಕ್ತಿ. ೧, ೨ : ಆ ನರೇಂದ್ರಂ . . . ಶಿವಾನುಬಂಧಸಯುಕ್ತನಾಗಿಯುಂ ದಶಾನನಾಸ್ತ್ರಂಗತ ಪ್ರಾಭವನಲ್ಲದ ಪುಣ್ಯಜನೇಶ್ವರನುಮನಿಸಿ ದೇವತಾಸ್ವರೂಪನಾದಂ (ಪುಷ್ಪಸ. ೩-೨೦೪). [ಸಂ.]

ಶಿವಾನುಭವಿ (ನಾ). ಶೈವಮತದ ತತ್ತ್ವಜ್ಞಾನವುಳ್ಳವನು ; ಶಿವತತ್ತ್ವಜ್ಞಾನಿ: ಹತ್ತನೆಯ ಶತಮಾನದ ಆರಂಭದಲ್ಲಿ ಶ್ರೀಶೈಲಕ್ಷೇತ್ರವು ವೀರಶೈವ ಗುರುವರ್ಯರ ಶಿವಾನುಭವಿಗಳ ಕೇಂದ್ರವಾಗಿ ಹೆಸರುಗೊಂಡಿತ್ತು (ಸಾಪಸ. ೩೪). [ಸಂ. ಶಿವಾನುಭವಿನ್]

ಶಿವಾನುಭಾವ (ನಾ). ಶಿವಸಂಬಂಧವಾದ ಆತ್ಮಜ್ಞಾನ; ಶಿವತತ್ತ್ವಜ್ಞಾನ: ಶಿವಾಚಾರ ಶಿವಭಕ್ತಿ ಶಿವಜ್ಞಾನ ಶಿವಾನುಭಾವ ಶಿವಶರಣರ ಸಂಗ ಇವನೆ ಕರುಣಿಸಿ ಬದುಕಿಸಯ್ಯ ಎನ್ನ (ಅಖಂಡೇ. ೧೪೮-೧೪೩). [ಸಂ.]

ಶಿವಾಯ 'ಶಿವಾಯಿ$_2$' ನೋ.

ಶಿವಾಯಿ$_1$ (ಗು). ಬೇರೆ ವಿಧವಾದ ; ಇತರ : 'ಶಿವಾಯಿಬಾಬು', 'ಶಿವಾಯಿಮದತ್ತು' ಪರಾ. [← ಹಿಂ. ಸಿವಾಯ್, ಸಿವಾಯ್, ಸಿವಾ = ಅಧಿಕವಾದ]

ಶಿವಾಯಿ$_2$, ಶಿವಾಯ, ಸಿವಾಯಿ (ಅ). ಹೊರತು; ವಿನಾ : ಶ್ರೀಗಂಧ ಹೊರ್ತು ಕಡಿಮೆ ಯಾವತ್ತು ಬಾಬುಗಳಂನ್ನು ಶಿವಾಯಿ ಬೇರೀಜಗೆ ದಾಖಿಲಾದ ಅಲಾಯಿದಾ ಸಾಗವಳಿ ಆಗಿಯಿರುವ ಬಾಜೆ ಬಾಬುಗಳು ಸಹಾ . . . ಅನುಭವಿಸುವದೂ (ಮೈಆರ. ೧೯೩೯, ೪೨-೯೭: 1825); ನಾನು ಹೇಳುವುದೆಲ್ಲಾ ಸತ್ಯ ಶಿವಾಯಿ ಅನ್ಯಥಾ ಅಲ್ಲಾ (ಗ್ರಾಮೂಕ. ೬೩). **ಶಿವಾಯ** : ಕೆಲಸದ ಶಿವಾಯ ಅವರಿಗೆ ಜೀವನದಲ್ಲಿ ಬೇರೆ ವಿಷಯದ ಧ್ಯಾನವೇ ಇಲ್ಲದಂತೆ ಅವರ ಬಾಳುವೆಯಾಗಿತ್ತೆಂದರೆ ಅತಿಶಯೋಕ್ತಿ ಯಾಗಲಾರದು (ಪಮಾಂತ. ೧೯೦). **ಸಿವಾಯಿ**: ನಾನು ಪಾಠ, ಕೂಟದ ಹೊತ್ತುಗಳ ಸಿವಾಯಿ ನಿಮ್ಮ ಬಂಗಲೆಯಲ್ಲಿ ಇರೋದಿಲ್ಲ (ಕೆಲವ.೪೮೭). [← ಅರ. ಸಿವಾ ; ಮರಾ. ಶಿವಾಈ , ಶಿವಾಯ]

ಶಿವಾಯಿಜಮೆ (ನಾ). ೧. ಹಕ್ಕುದಾರರಿಲ್ಲದವರ ಆಸ್ತಿಪಾಸ್ತಿಯನ್ನು ಸರ್ಕಾರಕ್ಕೆ ಸೇರಿಸಿಕೊಂಡುದು : (ಆ). ೨. ಬೇರೆ ಬಾಬತ್ತಿನಿಂದಾದ ಜಮೆ, – ಸಂಗ್ರಹ : ಜಮಾಬಂದಿಪ್ರಕಾರ ಐನುಜಮೆ, ಶಿವಾಯಿಜಮೆಯೂ ಗುದಸ್ತಾಬಾಕಿ ಸುದಾ ದಾಖಲುಮಾಡಿ (ಮಹಾವಂ. II. ೬೪). [← ಮರಾ. ಶಿವಾಈಜಮಾ]

ಶಿವಾಯಿಬಾಬು (ನಾ). ಇತರ ಬಾಬತ್ತು ; ಬೇರೆ ಬಾಬತ್ತು : ಆಚಾರಬಾಬು, ಶಿವಾಯಿಬಾಬುಗಳೆಂಬ ಧಾರ್ಮಿಕನಿಬಂಧನೆ ಪ್ರಕಾರ ಕಲಹಗಳ (ವ್ಯಾಜ್ಯ)ನಿರ್ಣಯ ಮಾಡಿ (ಗುಮುದ.೧೯). [ಶಿವಾಯಿ$_1$ + ಬಾಬು$_1$]

ಶಿವಾಯಿಮದತ್ತು (ನಾ). ಬೇರೆ ಬೇರೆ ವಿಧವಾದ ಸಹಾಯ, – ಉಪಕಾರ : ರಾಜ್ಯಸಂರಕ್ಷಣೆಗಾಗಿ ರಾಣೇಸಾಹೇಬರಿಂದ ಕೇಳಿಕೊಳ್ಳಲ್ಪಟ್ಟ ಪೌಜನ ಖರ್ಚು ಶಿವಾಯಿಮದತ್ತು ಮಾಡಿದವರ ತವಜ್ಞಾ . . . ರಾಣೆಯವರ ಕಡೆಯಿಂದ ತೆಗೆದುಕೊಳ್ಳುವದಿಲ್ಲ (ಚಾಮವಂ. ೨೨೫). [ಶಿವಾಯಿ$_1$ + ಮದತ್ತು]

ಶಿವಾರಮಣ (ನಾ). ಪಾರ್ವತಿಯ ಪತಿ; ಪರಮೇಶ್ವರ : ಹಲಾಯುಧನನೂರ್ಜಿತ ರಜತಶೈಲಕ್ಕೆ ಕೊಂಡೊಯ್ದನು ಶಿವಾರಮಣ (ಬಸಪು. ೨೯-೨೧). [ಸಂ.]

ಶಿವಾರ್ಚನೆ (ನಾ). ಈಶ್ವರನ ಪೂಜೆ, – ಆರಾಧನೆ : ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದರೆ ಶಿವಾ[ಪಶಾಂ.ಲಿಂಗಾ]ರ್ಚನೆಯ ಮಾಡಿಸುವೆ (ಬಸವ. ೬೭೧); ಆ ಸುಪ್ರಭಾತಸಮಯದೊಳ್ ಶಿವಾರ್ಚನೆಯಂ ಮಾಡಿ ಸಂಗ್ರಾಮಕ್ಕೆ ಸನ್ನದ್ಧನಾಗಿ ನಡೆಯಲ್ ಪ್ರಾರಂಭಿಸಿ (ಹಮ್ಮೀರ. ೩-೨೬೪); ಶಿವಾರ್ಚನೆಯನು ಮಾಡಿಕೊಂಡು ಸುಖದಲ್ಲಿಯಿರುವರಿಯೆಂದು ಕೊಟ್ಟ ದಾನಸಾಧ(ನ)ನಾ (ಪ್ಯಆರಿ. ೧೯೩೧, ೫೨-೨೯; 1563). [ಸಂ. ಶಿವಾರ್ಚನ]

ಶಿವಾರ್ಪಿತ (ನಾ). ಈಶ್ವರನಿಗೆ ಸಮರ್ಪಿಸಿದುದು: ಶಿವಪ್ರಸಾದಾಮೃತಮಂ . . . ಶಿವಾರ್ಪಿತದೊಡನೆ ಕೈಕೊಂಡು (ಸಂಜಿರ. ೧೦-೩೭): ಕೇತಿಹಳಿಗ್ರಾಮವನೂ . . . ಮಹತ್ತಿನ ಮಠದ ಅನ್ನದಾನದ ಧರ್ಮಕೆ ಶಿವಾರ್ಪಿತವಾಗಿ ಕೊಟ್ಟೆವಾಗಿ (ಮೈಆರ. ೧೯೩೧, ೩೩-೧೩ ; 1668). [ಸಂ.]

ಶಿವಾಲಯ (ನಾ). ೧. ಶಿವನ ದೇವಸ್ಥಾನ; ಈಶ್ವರನ ದೇವಾಲಯ : ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವ ಬಡವನಯ್ಯಾ (ಬಸವ. ೬೨೦); ಮರುಳುಗೊಂಡು ಶಿವಾಲಯಕೆ ಮಜ್ಜನದಾದಡಂ ಹೋಗಿ ಶರಣು ಶರಣೆಂದೆನ್ನೆ (ಬಸಪು. ೪೧-೭). ೨. ಈಶ್ವರನ ಆವಾಸಸ್ಥಾನ; ಕೈಲಾಸ. [ಸಂ.]

ಶಿವಾಲ್ಯ 'ಸಿವಾಲ್ಯ' ನೋ.

ಶಿವಾಸ್ತ್ರ (ನಾ). ಐದು ಮಂತ್ರಾಸ್ತ್ರಗಳಲ್ಲಿ ಒಂದು : ಶಿವಾಸ್ತ್ರ ಕ್ಷುರಿಕಾಸ್ತ್ರ ಪಾಶುಪತಾಸ್ತ್ರ ವ್ಯೋಮಾಸ್ತ್ರ ಅಘೋರಾಸ್ತ್ರವೆಂಬ ಪಂಚಾಸ್ತ್ರ ಮಂತ್ರಗಳಂ (ಎಪೀಕ. ೭೫). [ಸಂ.]

ಶಿವಾಸ್ಪದ (ಗು). ಮಂಗಳಕರವಾಗಿರುವ ; ಶುಭಕ್ಕೆ ನೆಲೆಯಾದ : ಸದಾಚಾರ ಸಮೇತರಾದರಮಗೀಗೆ ಶಿವಾಸ್ಪದಮುಖ್ಯಸೌಖ್ಯಮಂ ಸೂರಿಗಳಂಗಜಾರಿಗಳ ತತ್ಪವಿದಾರಿಗಳುದ್ಭಾವಿಗಳ್ (ಕಾಂಪ್ರ. ೧-೩). [ಸಂ.]

ಶಿವಿಕೆ (ನಾ). ಪಲ್ಲಕ್ಕಿ; ಡೋಲಿ : ನಾನು ಬರುತ್ತಲೇ ಅವರು ಶಿವಿಕೆಗಳನ್ನೇರಿ ಗಂಗಾತೀರದತ್ತ ಹೊರಟರು (ಬಾಗಾಜ. ೯೧). [ಸಂ. ಶಿವಿಕಾ]

ಶಿವಿಗ 'ಸಿವಿಗೆ' ನೋ.

ಶಿವಿರ (ನಾ). ಪಾಳೆಯ ; ಶಿಬಿರ: ಶಿವಿರಾಭ್ಯುತ್ಥಿತಕಾಹಳಾಘನರವಂ ಮುಟ್ಟಿತ್ತು ದಿಕ್ಕಾರಮಂ (ಚಂದ್ರಪ್ರ. ೧೦-೧೪). [ಸಂ.]

ಶಿವೆ (ನಾ). ೧. ಶಿವನ ಪತ್ನಿ; ಪಾರ್ವತಿ: ಚಂದ್ರಧರಂಗೆ ಮುದದಿಂದಂ ಚಂದ್ರಾನನೆ ಶಿವೆಯನೊಲ್ದು ಕೊಡು ಗಿರಿರಾಜಾ (ಗಿರಿಕ. ೧೦-೨೬ವ); ಶಿವೆಯ ವರದಿಂದೆ ಪುಟ್ಟಿದ ಕುವರಿಯವಳ್ (ರಾಜಶೇ. ೪-೬೭). ೨. ಅಳಿಲೆಕಾಯಿ; ಹರೀತಕಿ: ''ಚೇತಕಿ ಶಿವೆ ಹೈಮಾವತಿ ಹರೀತಕಿ'' (ವಸ್ತುಕೋ. ೩೫-೧೨); ಶಿವೆ[ಪಾಶಾಂ.ಸಿಲೆ]ಯಂ ಫಲತ್ರಯಮನ ಮರ್ದುವಳ್ಳಿಯಂ ಮಧುಕಮಂ . . . ಸಣ್ಣಿಸಿ ತಿನೆ ಬೇಱವೇಱ ನಿರ್ಮಾಜದಿಂ ಪ್ರಮೇಹಂ ಕಿಡುಗುಂ (ಕೋಕೋಪ. ೯-೧೩೬). ೩. ನೆಲ್ಲಿಗಿಡ ಮತ್ತು ಅದರ ಕಾಯಿ; ಆಮಲಕ: ''ಧಾತ್ರೀ, ಆಮಳಕೀ, ಶಿವಾ – ಈ ೩ ನೆಲ್ಲಿ'' (ಹಲಾಮು. ೧೦೧-೪೬೪). ೪. ಬನ್ನಿಮರ; ಶಮೀವೃಕ್ಷ : ''ಶಮೀ, ಸಕ್ತುಫಲಾ, ಶಿವಾ – ೩ ಬನ್ನೀಮರದ ಹೆಸರುಗಳು'' (ಏಕ್ಷಾಂಶಿ. ೧೨೪). ೫. ನರಿ; ಜಂಬುಕ : ಈ ಮಹೋಗ್ರಕೇಸರಿಕರಿಕಂಠಗರ್ಜಿತ ಮಹಾಟವಿಯೊಳ್ ಮಜಕೆಂದಿ ನೀಮುಮಿ ಮರದಡಿಯೊಳ್ ಶಿವಾಶಿವರವಂಗಳಿ ನೆಬ್ಬಲುವಂತುಟಾದುದೇ (ಪಂಪಭಾ. ೩-೧೧). ೬. ಅದೃಷ್ಟವಂತೆ. ೭. ಮುಕ್ತಿ. ೮. ಹುಲ್ಲು ; ಗರಿಕೆ. ೯. ಅರಿಸಿನ. [ಸಂ. ಶಿವಾ]

ಶಿವೇತರ (ನಾ). ಅಶುಭವಾದುದು : ಶೈವಾಧಾರೇ ಶಿವೇತರವಾರಿಣೇ ಜಮಿಸು ಭವಮಂ . . . ಪಾರ್ವತೀ (ಪ್ರಸವಿ. ೪-೧೩೭). [ಸಂ.]

ಶಿವೈಕ್ಯ (ನಾ). ೧. ಶಿವನಲ್ಲಿ ಸೇರುವುದು, – ಲೀನವಾಗುವುದು. ೨. ಶಿವನಲ್ಲಿ ಸೇರಿದವನು : ಶಿವನಂ ಭಜಿಸಿ ಮೆಱೆವ ಶಿವೈಕ್ಯರಾಳಾನು (ಬಸಪು. ೨೭-೭೧). [ಸಂ.]

ಶಿವೋಚ್ಛಿಷ್ಟಭುಕ್ತಿ (ನಾ). ಶಿವನಿಗೆ ನೈವೇದ್ಯ ಮಾಡಿದ ಪದಾರ್ಥವನ್ನು ಭುಜಿಸುವುದು : ಉದಯದೊಳ್ ಜಪ ಶಿವಾರ್ಚನೆ ಶಿವಧ್ಯಾನಗಳ್ ತದನಂತರಾಗಮ ಪುರಾಣನಿಗಮಾವಳಿಯ ಚದುರಪ್ರಸಂಗ ಮೇಣದಱ ಕಡೆಯೊಳ್ ಶಿವಾರ್ಚನೆ ಶಿವೋಚ್ಛಿಷ್ಟಭುಕ್ತಿ (ವಿಕೋಪ. ೭-೪೪). [ಸಂ.]

ಶಿವೋಪಾಸನೆ (ನಾ). ಶಿವನ ಸೇವೆಮಾಡುವುದು ; ಶಿವನನ್ನು ಉಪಚರಿಸುವುದು: ಶಿವೋಪಾಸನೆಯ ವಿನಾ ಅನ್ಯದೇವೋಪಾಸನೆಯನ್ನು ಮಾಡದೆ, ಶಿವಜೀವೈಕ್ಯಬೋಧಕವಾದ ವಿದ್ಯೆಯಲ್ಲಿ ನಿರತರಾಗಿರುವವರು (ಬಾರಪ್ರ. ೭೪). [ಸಂ. ಶಿವೋಪಾಸನ]

ಶಿವೋಹಂ (ನಾ). 'ನಾನೇ ಶಿವನು' ಎಂಬ ಭಾವ : ಸೋಹಂ ಎಂದಡೆ ಅಂತರಂಗದ ಗರ್ವ ಶಿವೋಹಂ ಎಂದಡೆ ಬಹಿರಂಗದ ಅಹಂಕಾರ (ಅಖಂಡೇ. ೧೧೮ ೭೧); ಶಿವೋಹಂ– ಶಿವನೇ ನಾನೆಂಬ ಭಾವ , 'ಶಿವೋಸ್ಮಿ' ಎಂಬುದು (ಸರಪ್ರಾ. ೨೪-೮). 'ದಾಸೋಹಂ' ಪರಾ. [IP ಸಂಸ್ಕೃತದಲ್ಲಿ 'ಶಿವಃ ಅಹಂ' ಎಂಬುದು ಒಂದು ವಾಕ್ಯ. ಕನ್ನಡದಲ್ಲಿ ಇದು ಒಂದು ಪದವಾಗಿ ಬಳಕೆಯಾಗಿದೆ]

ಶಿಶಿರ (ಗು). ೧. ತಣ್ಣಗಿರುವ; ತಂಪಾದ; ಶೀತಲವಾದ : ಅಂತು ಕಾಳಿಂದೀಜಲಶಿಶಿರ ಶೀಕರವಾರಿಚಾರಿಯುಂ . . . ಆಗಿ ಬಂದ ಮಂದಾನಿಲಕ್ಕೆ ಮೆಯ್ಯನಾಱಿಸುತ್ತುಂ (ಪಂಪಭಾ. ೫-೫೩ವ). (ನಾ). ೨. ತಂಪು; ಶೀತ; ಚಳಿ. ೩. ಹಿಮ; ಮಂಜು : ''ಪ್ರಾಳೇಯಂ . . . ಶಿಶಿರಂ, ಹಿಮಂ, ತುಷಾರಂ, ಮಿಹಿಕಾ, ನೀಹಾರಃ - ಈ ೮ ಮಂಜು'' (ಹಲಾಯು.೧೦೭-೨೮); ಶಿಶಿರಪಯಃಕಣವೆಳಸಿದ ಕುಶೇಶಯಚ್ಛದಮನಕ್ಷಿಗಳ್ ಬಾಷ್ಪಜಲಪ್ರಶಮಿತರುಚಿಗಳ್ ಪೋಲ್ತಿರೆ (ಜಗವಿ. ೩-೮೭). ೪. ಆರು ಋತುಗಳಲ್ಲಿ ಒಂದು; ಮಾಘ ಮತ್ತು ಫಾಲ್ಗುನ ಮಾಸಗಳನ್ನೊಳಗೊಂಡಿರುವ ಋತು: ಮುಂ ಮಹಿಯೆಲ್ಲಮಂ ಶಿಶಿರರಾಜನೆ ಬಿಚ್ಚಿತಮಾಳ್ದಂ (ಪಂಪಭಾ. ೫-೩೧) ; ಶಿಶಿರದ ತವುದಲೆಯುಂ ನವವಸಂತಸಮಯ ಪ್ರವೇಶಮುಂ ತಮ್ಮೊಳ್ ಸಂದಿಸ ಬಣ್ಣಿಸಲರಿದಾದೊಡಂ . . . ವಿಭಾಗಿಸಿ ಪೇೞ್ದಂ (ಗಿರಿಕ. ೭-೩೫). ೫. ಹಿಮಕರ; ಚಂದ್ರ: ಗಗನಕ್ಕೆ ಶಿಶಿರನಂತೆ ಕೊಳಕ್ಕುಳ್ಳಲರ್ದಬ್ಜದಂತೆ ಕುರುಜಾಂಗಲವಿಷಯಂ ನಯನವಿಷಯಸುಖಮಂ ಪಡೆಗುಂ (ಶಾಂತಿಪು. ೯-೧೩೨). [ಸಂ.]

ಶಿಶಿರಕರ (ನಾ). ೧. (ಚಂದ್ರನ) ತಂಪಾದ ಕಿರಣ,— ಶೀತಲ ರಶ್ಮಿ : ಆ ಬಾಲಕರ್ . . . ಶಿಶಿರಕರನಿಕರದಂತೆ ಕುಮುದಪ್ರಕಾಶಕರರುಂ (ಸುಕುಮಾ. ೨-೫ ವ). ೨. ತಂಪಾದ ಕಿರಣಗಳುಳ್ಳವನು ; ಚಂದ್ರ : ಅಮೃತಭವಂ ಶಿಶಿರಕರಂ (ಕವಿರಾ. ೩-೭೪); ಶಿಶಿರಕರನಲ್ಲಿ ನಿಂದೊಡಮಶಿಶಿರಕಿರಣಾದಿಗಳ್ ನಿರೀಕ್ಷಿಪೊಡೆ ಫಲಂ . . . ದೊರೆಕೊಳ್ಗುಂ (ಜಾತಕ. ೨೦-೧೫). [ಸಂ.]

ಶಿಶಿರಾಂಶು (ನಾ). = ಶಿಶಿರಕರ ೨ : ಅಮೃತಮಯಕಿರಣನೆಂಬುದುಮಮರದು ಶಿಶಿರಾಂಶುವೆಂಬುದುಂ ಶಶಿಗೆಂದುಂ (ಕವಿರಾ. ೩-೧೮೩). [ಸಂ.]

ಶಿಶಿರೋಪಚಾರ (ನಾ). ತಂಪನ್ನುಂಟುಮಾಡುವ ಶುಶ್ರೂಷೆ ; ಶೈತ್ಯೋಪಚಾರ : ತರಳಿಕೆ ತಂದ ಚಂದನದ ಚರ್ಚೆಗಳಿಂ ಮತ್ತಮನೇಕಶಿಶಿರೋಪಚಾರಂಗಳಿಂದುಪಚರಿಸಲ್ (ಕಾದಂಪು. ೮೮೪); ಮೂರ್ಛಾಪ್ರಸಂಗನಾದ ಪನ್ನಗಪತಾಕಂಗೆ ಶಿಶಿರೋಪಚಾರ ಕ್ರಿಯೆಗಳಂ ಮಾಟ್ಪ ಸಂಜಯನಿರವಂ ತತ್ಪರಿಜನಂ ಕಂಡು (ಗದಾಯು. ೩-೭೭ ವ); ಪರಿಹರಿಸಲೆಂದು ವಿರಹಜ್ವರಮಂ ಶಿಶಿರೋಪಚಾರಮಸಗಿದೊಡದು ತಾಂ ಪಿರಿದಾದುದಕಟ (ರಾಜಶೇ. ೭-೭೫). [ಸಂ.]

ಶಿಶಿರೋಪಸೇವನೆ (ನಾ). ೧. ಶಿಶಿರಋತುವಿನ ಆಗಮನ ; ಶಿಶಿರವನ್ನು ಪಡೆಯುವುದು. ೨. ತಂಪನ್ನು ಹೊಂದುವಿಕೆ; ಶೈತ್ಯೋಪಚಾರ. ೧, ೨: ಘನಸಮಯಾತ್ಮನಾಥವಿರಹಾತುರ ಭೂವಧು ಭೂಮಿಭದ್ರನಸ್ತನ ಶಿಶಿರೋಪಸೇವನೆಯನೊಂದಿರೆ ಬಂದಿರೆ ಚೈತ್ರನಾಗಳ್ (ರಾಜಶೇ. ೫-೩೦). [ಸಂ. ಶಿಶಿರೋಪಸೇವನ]

ಶಿಶು (ನಾ). ೧. ಕೂಸು; ಮಗು; ಹಸುಳೆ : ಬಾಲತ್ವದೊಳಂ ಗುಣಮಣಿಮಾಲಿನಿ ಶಿಶು ಸುಮತಿ . . . ಜಿನಪತಿಗೆ ವಿನಯವಿನಮಿತೆಯಕ್ಕುಂ (ಶಾಂತಿಪು. ೪-೮೭); ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ . . . ಬಯಸುತ್ತಿರ್ದನಯ್ಯಾ ನಿಮ್ಮ ಶರಣರ ಬರವನು (ಬಸವ. ೩೭೫). ೨. ಯಾವುದಾದರೂ ಪ್ರಾಣಿಯ ಮರಿ : ''ಶಿಶು ಶಾಖಂ ಪೋತಂ ಮಜೆ'' (ವಸ್ತುಕೋ. ೮೭-೨೫); ಜಲವಿಕಳಮಾಗಿರ್ದ ಜಲಾಶಯದೊಳ್ ಶಿಶುಕುೞರಂ ನೀರಂ ಪಡೆಯದೆ ಮಲುಮಲನೆ ಮಱುಗುತ್ತಿರ್ದುದಂ ಕಂಡು ಕರುಣಿಸಿ (ಪಂಚತಂ. ೨೯-೧೭). ೩. ಶಿಷ್ಯ; ವಿದ್ಯಾರ್ಥಿ. [ಸಂ.]

ಶಿಶುಕ (ನಾ). ಒಂದು ಬಗೆಯ ಮಿಾನು; ಉಣಚಿ : ''ಉಲೂಪೀ, ಶಿಶುಕಃ — ೨ ಶಿಶುವಿನ ಹಾಗೆ ಚಪಲವಾದ ಉಣಚಿಮಾನಿನ ಹೆಸರುಗಳು'' (ಪಕ್ಷಿಶಾ. ೮೨). [ಸಂ.]

ಶಿಶುಗೀತ (ನಾ). ಮಕ್ಕಳಿಗಾಗಿ ರಚನೆಯಾದ ಹಾಡು; ಮಕ್ಕಳ ಹಾಡು: ಜಾನಪದಗೀತ ಮತ್ತು ಶಿಶುಗೀತ; ಲಯದ ಗೂಢಾತ್ಮ; ಅಲಗ್ಷಾಂಡ್ರೀಯ, ಅಷ್ಪಾಕ್ಷರೀಯ ಮತ್ತು ಸರಳರಗಳೆಯ ಛಂದೋಬಂಧಗಳು (ನವ್ಯಕಾ.೧೩೨). [ಸಂ.]

ಶಿಶುಘಾತಕ (ನಾ). ಮಗುವನ್ನು ಕೊಲ್ಲುವವನು; ಶಿಶುಹತ್ಯ ಮಾಡುವವನು: ಜ್ವಲನದನ ಶಿಶುಘಾತಕನ ಪರಿದಳಿತಧರ್ಮನ ಗತಿಗಳಲಿ ತಾನಿಳಿವೆನಿಂದೇ ಕೊಲ್ಲದಿರ್ದರೆ ಸೂತನಂದನನ (ಕುಮಾಸ. ೧೮-೭). [ಸಂ.]

ಶಿಶುತನ (ನಾ). ೧. ಎಳೆಯ ಪ್ರಾಯ; ಶೈಶವ : ಶಿಶುತನದಲಿ ಸಮಸ್ತ ವಿದ್ಯಾವ್ಯಸನಿಗಳು ಯೌವನದೊಳನುಭವವಿಷಯಿಗಳು (ತೂರಾ. ೧-೩-೧೯); ಕಲ್ಲೊಳಗುದಯಿಪ ಹಗ್ಗಿಯವೊಲ್ ಶಿಶುತನವುಳಿದೇಱುಂಜೌವನವ ವಿದಿತಮನಲ್ಪಡೆದರಸುಮಗನ ನಿಜವದನಂಗಾಣುತ (ಜಯಕಾ. ೨-೭೭). ೨. ಹುಡುಗಾಟಿಕೆ; ಬಾಲಿಶ ಭಾವ: ಅಸಮಪದ್ಮವ್ಯೂಹವನು ಭೇದಿಸುವನಾವವನೆನಲು ಕೇಳ್ದು ಶಿಶುತನದಲಾಹವಕೆ ನಡೆದನು ನಾವು ಬೇಡೆನಲು (ಕುವಾದ್ರೋ. ೮-೨೨). [ಶಿಶು + — ತನ]

ಶಿಶುತೆ (ನಾ). = ಶಿಶುತನ ೧: ಮನುಜಂ ವಜ್ರಸಮುದ್ಭವಂ ಶಿಶುತೆಯೊಳ್ ವೃದ್ಧತ್ವದೊಳ್ ಸೌಖ್ಯಭಾಜನನಕ್ಕುಂ (ಜಾತಕ.೧೩-೧೭); ನವೋದಯದೊಳವಾ ಪ್ರಶಮಿತತಮನೊಳ್ ನೆಱೆದುದು ಶಿಶುತೆಯೊಳಂ ನಾಡೆ ರೂಢಿವತ್ತ ವಿವೇಕಂ (ಚಂದ್ರಪ್ರ. ೨-೧೯). [ಸಂ. ಶಿಶುತಾ]

ಶಿಶುತ್ವ (ನಾ). = ಶಿಶುತನ ೧: ''ಶಿಶುತ್ವಂ, ಶೈಶವಂ, ಬಾಲ್ಯಂ — ೩ ಹದಿನಾರು ವರುಷಗಳಿಗೆ ಕಡಮೆಯಾದ ವಯಸ್ಸು, ಹುಡುಗುತನ'' (ಸಿದ್ಧಾಚಿ.೧೭೯). [ಸಂ.]

ಶಿಶುಪ್ರಾಸ (ನಾ). ಮಕ್ಕಳಿಗೆ ಪ್ರಿಯವಾಗುವಂತೆ ರಚಿಸುವ ಪ್ರಾಸಸಹಿತವಾದ ಪದ್ಯ : ಈಚೆಗೆ ಕನ್ನಡದಲ್ಲೂ ಶಿಶುಪ್ರಾಸಗಳ ರಚನೆ ಹೆಚ್ಚಾಗಿದೆ (ಪೂರ್ಣ). [ಸಂ.]

ಶಿಶುಮತಿ (ನಾ). ೧. ಮಗುವಿನ ಬುದ್ಧಿ. ೨. ಮಗುವಿನಂತೆ ಬುದ್ಧಿಯುಳ್ಳವನು: ಶಿಶುಮತಿಗಳಿಗೆ ಹೇಳಯ್ಯ, ನಿನ್ನ ಹದಿಬದೆತನದ ಹಿರಿಮೆಯಂ! (ಶ್ರೀರಾಪು. ೨೨೨-೩೧೮). [ಸಂ.]

ಶಿಶುಮಾರ (ನಾ). ೧. ತಿಮಿಿಂಗಿಲ ವರ್ಗಕ್ಕೆ ಸೇರಿದ ಸಮುದ್ರಪ್ರಾಣಿ: ಮೊಸಳೆ: ರೋಭಮಕರಾನೀಕಂಗಳಾಟಂದು ನುಗ್ಗಿಗೆ ನುಂಗುತ್ತಿರೆ ಮಾರರಾಗಶಿಶುಮಾರಂಗಳ್ ಮಹೋಗ್ರಂಗಳಿನ್ನೆಗಮೋರಂತೆ ತೊಲ್ದೆಂ (ಅವಿಷ. ೯-೬೦); ಮಧುವಿಂ ಕೃತಪಾನದೆ ನಸ್ಯದಿಂದೆ ತಾಂ ತೊಲಗುಗುಮುಗ್ರಮಪ್ಪ ಶಿಶುಮಾರವಿಷಂ (ಖಮದ. ೧೩-೯೭). ೨. [ಜ್ಯೋತಿ] ಒಂದು ನಕ್ಷತ್ರಪುಂಜದ ಹೆಸರು. [ಸಂ.]

ಶಿಶುರಾಜ (ನಾ). ೧. ಮಕ್ಕಳ ನಾಯಕ; ಶಿಶುಗಳಲ್ಲಿ ಶ್ರೇಷ್ಠನಾದವನು. ೨. ಬಾಲಚಂದ್ರ. ೧ , ೨: ಕುಮುದಾನಂದನಸಪರಾಜಿತಂ ಪ್ರಸನ್ನಂ ಶಿಶುರಾಜಂ ದಲನೆಸಂದು ಪರಿಪೂರ್ಣೇಂದುವಿಲಾಸದಿನದೇಂ ಪೊದಟ್ಟೊದವಿದನೋ (ಶಾಂತಿಪು. ೨-೨). [ಸಂ. ಶಿಶುರಾಜನ್]

ಶಿಶುವಧ (ನಾ). ಮಗುವಿನ ಕೊಲೆ; ಹಸುಳೆಯ ಹತ್ಯೆ : ದಿವಿಜವಧಪಟುಗೆ ನಿನಗಭಭವಮಾ ಶಿಶುವಧಮೆನಲ್ಕೆ ಮಾರ್ಪೆನೆ ಪುತ್ರೇಭವಧಪ್ರಚಂಡಯಮದಂಡವದೇಂ ಮಾಣ್ಗುದೆ ಪಿಪೀಲಿಕಾವಧವಿಧಿಯಂ (ಜಗವಿ. ೨-೫೪). [ಸಂ.]

ಶಿಶುವಿಹಾರ (ನಾ). ಮಕ್ಕಳ ದೈಹಿಕ ಹಾಗೂ ಮಾನಸಿಕವಿಕಾಸಕ್ಕೆ ಅನುಕೂಲವಾಗುವಂತೆ ರಚನೆಯಾದ ಪಾಠಶಾಲೆ; ಬಾಲವಾಡಿ: ಹೊಸದಾಗಿ ಸ್ಥಾಪಿತವಾಗಿರುವ ಒಂದು ಶಿಶುವಿಹಾರಕ್ಕೆ ಅವಳೇ ಮುಖ್ಯೋಪಾಧ್ಯಾಯಿನಿ (ದೂರಪ. ೩೩೩); ೩ ವರ್ಷಗಳಿಂದ ೬ ವರ್ಷಗಳ ತನಕ ಮಕ್ಕಳಿಗೆ ಅನುಕೂಲಿಸುವಂತೆ ಶಿಶುವಿಹಾರಗಳೆಂಬ ನೂತನಶಿಕ್ಷಣಸಂಸ್ಥೆಗಳು ಪ್ರಚಾರಕ್ಕೆ ಬರುತ್ತಿವೆ (ಶಿಪ್ರದ. ೧೭೪). [ಸಂ.]

ಶಿಶುವೇಷ (ನಾ). ೧. ಮಗುವಿನ ಉಡುಗೆತೊಡುಗೆ. ೨. ಮಗುವಿನ ರೂಪ, ಆಕಾರ : ನಂಬಿಯಣ್ಣಂ ಶಿಶುವೇಷದೊಳ್ ನಳನಳಿಸಿ ತೊಳತೊಳಗಿ ಕಂಡವರ ಕಣ್ಗಳ ಮಣಿ . . . ಎನಿಸಿ (ನಂಬರ. ೨-೧). [ಸಂ.]

ಶಿಶುಸಂಗೋಪನೆ (ನಾ). ಮಕ್ಕಳನ್ನು ಸಾಕುವುದು; ಹಸುಳೆಗಳನ್ನು ಪೋಷಿಸುವುದು : ಗೃಹದೇವತೆಗೆ ಶಿಶುಸಂಗೋಪನೆಯೊಂದಿಗೆ ಮನೆಯ ಎಲ್ಲಾ ಕೆಲಸಗಳ ಹೊಣೆಯೂ ಸೇರಿದ್ದು (ಹೊಸಕ್ಷಿ.೩೦). [ಸಂ. ಶಿಶುಸಂಗೋಪನ]

ಶಿಶುಹತ್ಯೆ (ನಾ). = ಶಿಶುವಧ : ಅವನು ಹಿಂದೂಸಮಾಜದಲ್ಲಿ ಬೆಳೆದು ಬಂದಿದ್ದ ಸ್ತ್ರೀ, ಶಿಶುಹತ್ಯೆ, ಸಹಗಮನ ಮತ್ತು ಪ್ರಾಣಿಬಲಿ ಮುಂತಾದ ಪದ್ಧತಿಗಳನ್ನು ತಪ್ಪಿಸಲು . . . ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡ (ಕವಿಕೋ. I. ೧೫೮). [ಸಂ. ಶಿಶುಹತ್ಯಾ]

ಶಿಶ್ನ (ನಾ). ೧. ಪುರುಷನ ಜನನೇಂದ್ರಿಯ : ಗುದ ಶಿಶ್ನ ನಖಿಗಳಂ . . . ಕಿಟ್ಟಂ ಮೂತ್ರಗಳ್ಸಹಂ ಭೇದಿಸಿಯೆ ಪೊಱಮಡುವವೆ (ಲಘುಸಿ. ೩೯-೩೧). ೨. ಬಾಲ. [ಸಂ.]

ಶಿಶ್ಯಸಂತತಿ (ನಾ). ವಿದ್ಯಾರ್ಥಿಪರಂಪರೆ : ಸನ್ಮಿಗಣದ ಶಾನ್ತಮುನಿಗಳ ಶಿಶ್ಯಸನ್ತತಿ ಶ್ರೀ ವಾದಿರಾಜದೇವರ ಶಿಷ್ಯರು (ಪ್ರಮೇ. ೧೯೨೪ ೧೦-೨ : ೨೨೮೮ ಸಾಲು).

[ಇದು 'ಶಿಷ್ಯಸಂತತಿ' ಎಂಬುದರ ಅಪಲಿಖಿತ]

ಶಶ್ರೂಷೆ (ನಾ). ಸೇವೆ; ಉಪಚಾರ : ವೇಸಿಯಹ ಪರಿಯಂಕದಲಿ ನಿಜದಾಸಿಯಹ ಶಶ್ರೂಷೆಯಲಿ [ಪಾಠಾಂ. ಪರಿಚರ್ಯೆಯೊಳು] ನರ್ದೋಷಿಯಹ ಪತಿಭಕ್ತಿಯಲಿ ಮೋಹದಲಿ ತಾಯೆನಿಸಿ (ಕುವ್ಯಾಉ. ೩-೮೦). [< ಸಂ. ಶುಶ್ರೂಷಾ]

ಶಷಿತ್ತಿ, ಶಷ್ಟಿಂತಿ, ಷಿಶಿಂತಿ, ಸಿಶ್ಯಂತಿ, ಸಿಷಿತ್ತಿ, ಸಿಷ್ಟಿಂತಿ (ನಾ). ಗುರುಗಳಲ್ಲಿ ಅಭ್ಯಾಸ ಮಾಡುವವಳು; ವಿದ್ಯಾರ್ಥಿನಿ; ಶಿಷ್ಯೆ : ಅದ ಯಚ್ನಾಡ ಚಿತ್ತೂರ ಮೋನಿಗುರವಡಿಗಳ ಶಿಷಿತ್ತಿಯರ್ ನಾಗಮತಿಗನ್ತಿಯರ್ ಮೂರುತಿಂಗಳ್ ನೋನ್ತು ಮುಡಿಪ್ಪಿದರ್ (ಎಕ.II. ೨೦-೧;ಸು. 700); ಸನ್ಯಸನಂಗೆಯ್ದು ಮುಡಿಪಿದರವರ ಶಿಷಿತ್ತಿಯರಪ್ಪ ಮಾದೇವಿಕಂತಿಯರ್ (ಎಕ. XIV, ಮಂಡ್ಯ. ೧೫೧-೯; ?). **ಶಿಷ್ಟಿಂತಿ:** ಮಹತ್ತ್ವದಿಂ ಸರಿಯನನ್ತಿಮುಸೀಂದ್ರರ ದೇವರುರ್ವ್ವಿಯೊಳ್ ಅವರ ಶಿಷ್ಟಿಂತಿಯರ್ (ಇಂ. XVIII, ೩೮-೯; 1076). **ಷಿಶಿಂತಿ:** ತೊಯ್ವುಬ್ಬೆರಳಿಯರ ಪೆರಿಯ ಷಿಶಿನ್ತಿಯಳ್ ಅಮಿಬ್ಬೆಕನ್ತಿಯಳ್ (ಎಕ. XIV, ತಿರುಮ. ೮೮-೧೧;?). **ಸಿಶ್ಯಂತಿ:** ಗುಣ[ಭದ್ರ] ಸಿದ್ಧಾಂ[ತಿ]ದೇವರ ಸಿಶ್ಯಂತಿಯರಪ್ಪ ಶ್ರೀಮೋನಿಮಸಿಕನ್ತಿಯರ (ಪಾರ್ಶ್ವ. XX, ೩೨-೪೦; 1045). **ಸಿಷಿತ್ತಿ:** ಮಾಳವೆಕನ್ತಿಯರ ಸಿಷಿತ್ತಿಯರಪ್ಪ ಮಂಕಬ್ಬೆಕನ್ತಿಯರ್ (ಎಕ. IX (S), ಬೆಂಗಳೂ. ೯೩-೭; 1000). **ಸಿಷ್ಟಿಂತಿ:** ಶ್ರೀಮತ್ ಪ್ರಭಾಚನ್ದ್ರಸಿದ್ಧಾನ್ತದ ಭಟಾರರ ಸಿಷ್ಟಿನ್ತಿಯರಪ್ಪ ದೇವಿಯಬ್ಬೆ ಕನ್ತಿಯರ ನಿಸಿದಿಗೆ (ಎಕ. XV, ಹೊಳೆನ. ೬೫-೧೦; 950). [< ಶಿಷ್ಯ + - ಇತ್ತಿ]

ಶಿಷ್ಟ (ಗು). ೧. ಉಳಿದ; ಮಿಕ್ಕ. ೨. ಅಪ್ಪಣೆಮಾಡಿದ; ಆಜ್ಞಾಪಿಸಿದ. ೩. ಯೋಗ್ಯವಾದ; ಉತ್ತಮವಾದ: ರೂಢಿವಶದಿಂ ಸಲೆ ಸಲ್ಗುದಿದಲ್ತೆ ಶಿಷ್ಟಸಂಭಾವಿತಮಪ್ಪ ಕಾವ್ಯಸಮಯಂ (ಕಾವ್ಯಾವ. ೮೪೪); ಶಿಷ್ಟ ಸಾಕ್ಷಿಕೆ ಸೆಡೆಯುವುದೆ ಭ್ರಷ್ಟಸಂಕ್ಷಸನೀತಿ? (ಶ್ರೀರಾಮಾ. ೨೯೧ - ೧೫೭). ೪. ಪಳಗಿದ; ತರಪೇತು ಹೊಂದಿದ. (ನಾ). ೫. ಒಳ್ಳೆಯದು; ಉತ್ತಮವಾದುದು : ಆ ಮಾತು ಶಿಷ್ಟವಿರುದ್ಧ ಸಾಧ್ಯವಲ್ಲವೆಂದು ನಿನಗೆ ಹಿಂದೆ ಹೇಳಿದ್ದೆ (ಶಾಂತಲಾ. ೨೩೯). ೬. ಒಳ್ಳೆಯ ನಡವಳಿಕೆ; ಸದಾಚಾರ : ಬಸವ ಶಿಷ್ಟದಿಂ ಕಾಣ್ಬಳತಯಲಿ ನಡವಮ್ಮ ದೂರಂ ಕೀರ್ತಿ ಸುತ್ತೂಸದಷ್ಟವಂತ್ರದೊಳಿಂತು ಯೋಜನಮಾತ್ರವ್ಯತಂದು (ಬಸವ. ೪-೫೦). ೭. ಯೋಗ್ಯನಾದ ವ್ಯಕ್ತಿ; ಉತ್ತಮನಾದವನು : ಶಿಷ್ಟರಶಿಷ್ಟಮೆನೆ ಪಾಸಜೆಯೊಳ್ ಕೂಸನಪ್ಪಳಿಸಿ (ಜಗವಿ. ೨-೨೬೪); ಓಲೆಯಾಡುಗೊಜೆಸಹಿತ ಧರಣೀಪಾಲರಿಗೆ ಪಾಂಡವರು ಶಿಷ್ಟರು ಕಾಳಗಕೆ ನೆರವಾಗಲೋಸುಗ ಕರೆದರಲ್ಲಲ್ಲಿ (ಕುವ್ಯಾಉ. ೧-೧೫); ಮೋಹಕ್ಕೆ ಬೀಳದವನೂ, ಕ್ರೋಧವಿಲ್ಲದವನೂ, ಶಿಷ್ಟನೆಂದು ಬೋಧಾಯನರು ನುಡಿದಿದ್ದಾರೆ (ಆರ್ಯಧ. ೫೬). ೮. ಜ್ಞಾನಿ ; ತಿಳಿದವನು. ೯. ಆದೇಶ ; ಆಜ್ಞೆ. [ಸಂ.]

ಶಿಷ್ಟಜನ (ನಾ). ಯೋಗ್ಯರಾದ ಮಂದಿ; ಸುಸಂಸ್ಕೃತರಾದ ಜನ: ಶಿಷ್ಟಜನೋಚ್ಛಿಷ್ಟಂ ಬಹುಕಷ್ಟಂ ಬಹುದುಷ್ಟಮಷ್ಟಕರ್ಮಾಗ್ನಿಪರಿಪುಷ್ಟಂ . . . ಸಂಸಾರಂ (ಅಜಿಪು. ೨-೭೪); ನೀರ್ಗುಡಿಯಲೆಜೆವುತ್ತ ಮೊನೆವೆರಸಿದಲಗಂ ತೋರ್ಪ ಕುಡಿ ನಾಲಗೆಯೊಳೊಪ್ಪೆಯೊಪ್ಪಿದರು ಶಿಷ್ಟ[ಪಾಠಾಂ.ಪಾಂಥ]ಜನಕಿಟ್ಟ ಬಲುಗಾಣದಂತೆ (ಪಚಕಾ. ೪-೩೮). [ಸಂ.]

ಶಿಷ್ಟತನ (ನಾ). ಯೋಗ್ಯವಾಗಿರುವಿಕೆ; ಸಭ್ಯವಾಗಿರುವಿಕೆ: ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ (ಬಸವ. ೬೯೭). [ಶಿಷ್ಟ + - ತನ]

ಶಿಷ್ಟತೆ (ನಾ). ಸಭ್ಯವಾಗಿರುವಿಕೆ; ಯೋಗ್ಯವಾಗಿರುವಿಕೆ: ಶಿವಾರ್ಚನ ನಿತ್ಯನೈಮಿತ್ತಿಕದ ಕರ್ಮಗಳ ಸನುಮತದಲಾರ್ಜಿಸಲು ಶಿಷ್ಟತೆ ಜನಕೆ ಕರ್ಮವಿಲೋಪಭ್ರಷ್ಟತೆ ಎನುತ ವಿಧಿಯರಲೆಂತುವೇಕ್ಷೆಯ ಮಾಡಲಹುದೆಂದ (ಗಗತಾ. ೧೬-೩೧). [ಸಂ. ಶಿಷ್ಟತಾ]

ಶಿಷ್ಟಪರಿಪಾಲಕ (ನಾ). ಸಭ್ಯರನ್ನು ಕಾಪಾಡುವವನು; ಸಜ್ಜನರನ್ನು ರಕ್ಷಿಸುವವನು : ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲ ಸಂಗಮದೇವ (ಬಸವ. ೫೪೮). [ಸಂ.]

ಶಿಷ್ಟಪರಿಪಾಲನೆ (ನಾ). ಸಭ್ಯರನ್ನು ಕಾಪಾಡುವಿಕೆ; ಯೋಗ್ಯರನ್ನು ಸಲಹುವಿಕೆ: ದುಷ್ಟನಿಗ್ರಹ ಶಿಷ್ಟಪರಿಪಾಲನೆಯೇ ಭಗವದವತಾರದ ಗುರಿ (ರೂಢಿ).

[ಸಂ. ಶಿಷ್ಟಪರಿಪಾಲನ]

ಶಿಷ್ಟಪಾಲಕ (ನಾ). = ಶಿಷ್ಟಪರಿಪಾಲಕ: ಶಿವಂ ಸರ್ವಥಾ ದುಷ್ಟನಿಗ್ರಹ ಶಿಷ್ಟಪಾಲಕಂ (ಚೆಬಸ. ೪೭-೨೭). [ಸಂ.]

ಶಿಷ್ಟಪ್ರತಿಪಾಲನ (ನಾ). ಯೋಗ್ಯರನ್ನು ರಕ್ಷಿಸುವುದು: ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನಾರ್ಥಮೆನ್ನವತಾರಂ (ಜಗವಿ. ೩-೬೨); ವಿಹಿತಂ ಕ್ಷತ್ರಿಯನಂದನಂಗೆ ದಿಟಮಂತುಂ ನೀತಿಯೊಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಲನಂಗಳ್ (ಪುಷ್ಪಸ್ತ. ೫-೫). [ಸಂ.]

ಶಿಷ್ಪಬಾಗೆ (ನಾ). ಬಾಗೆಮರದಲ್ಲಿ ಒಂದು ಬಗೆ: ಶಸ್ತು, ಬರಡಿ, ಶಿಷ್ಪಬಾಗೆ, ಬಿಂಡಿ, ಇರಗುಂಡಿಮಾವು (ಮೃಚಿಗಿ. ೨೮-೫೫೮). [? + ಬಾಗೆ]

ಶಿಷ್ಯಭಾಷೆ (ನಾ). ತಿಳಿದವರು ಆಡುವ ಭಾಷೆ; ಸುಧಾರಿಸಿದ ಭಾಷೆ: ಇದರಂತೆ ಲಂಡನ್ನಿನ ಇಂಗ್ಲಿಷ್ ಭಾಷೆ ಇಂಗ್ಲಂಡಿನ ಪ್ರಮಾಣಭಾಷೆ ಅಥವಾ ಶಿಷ್ಯಭಾಷೆಯಾಯಿತು . . . ಮೈಸೂರಿನ ಕನ್ನಡಭಾಷೆ ಕರ್ನಾಟಕದ ಶಿಷ್ಯಭಾಷೆಯಾಗಿದೆ! (ದ್ರಾವಿ. ೬೮೧).

[ಸಂ. ಶಿಷ್ಯಭಾಷಾ]

ಶಿಷ್ಟಾಚಾರ (ನಾ). ೧. ಒಳ್ಳೆಯ ನಡವಳಿಕೆ , –ಸಂಪ್ರದಾಯ: ಇದು ಮಹಾಋಷಿ ಸೇವಿತಾಶ್ರಮವಿದಲಿ ಶಿಷ್ಟಾಚಾರವನು ಕೆಡಿಸಿದವರೇ ಕ್ಷಯವಹರು (ಕುವ್ಯಾಉ. ೧೪-೧೦); ನೀವು ಶಿಷ್ಟಾಚಾರದ ಮಾತು ಏನನ್ನೂ ಹೇಳಬೇಡಿ (ದೂರಸ. ೩೧). ೨. (ಆಲಂ) ತೋರಿಕೆಯ ಆಚಾರ; ಮನಃಪೂರ್ವಕವಲ್ಲದ ನಡವಳಿಕೆ: ಏನೋ ಶಿಷ್ಟಾಚಾರ ಕ್ಕಾಗಿ ಕಾರ್ಯಮಾಡಿ ಮುಗಿಸಿದರು (ರೂಢಿ). [ಸಂ.]

ಶಿಷ್ಟಿ (ನಾ). ೧. ಆಳ್ವಿಕೆ; ಪ್ರಭುತ್ವ: ಜಾನಪದಶಿಷ್ಟಿಯಲಿ ಸಂಪತ್ಸಮಷ್ಟಿಯಲಿ ಜ್ಞಾನಸಂಧಾನದಲಿ, ಮೌಲ್ಯಗಣನೆಯಲಿ . . . ಧಾರ್ಮಿಕತೆಯೆದ್ದು ನಿಲೆ ಆನಂದ ಧರೆಗಂದು (ಮಂಜಿಕ. ೮೮೫). ೨. ಆಜ್ಞೆ; ಶಾಸನ; ಆಜ್ಞೆ: "ಅಪವಾದಃ . . . ಶಿಷ್ಟಿಃ, ಆಜ್ಞಾ - ೫ ಆಜ್ಞೆಗೆ ಹೆಸರುಗಳು" (ಸಿದ್ಧಾಂತ. ೨೪೨). ೩. ಶಿಕ್ಷೆ; ದಂಡನೆ. [ಸಂ.]

ಶಿಷ್ಯ (ನಾ). ೧. ವಿದ್ಯಾರ್ಥಿ; ಛಾತ್ರ : ಆದಿಗುರು ಅನಾದಿಶಿಷ್ಯ ಈ ಉಭಯಕುಳ ಸ್ಥಳವ ಬಲ್ಲರೆ ಆತ ಲಿಂಗಸಂಬಂಧಿ (ಬಸವ. ೪೦೩); ಭಕ್ತಿಯಿಲ್ಲದ ಶಿಷ್ಯಗೊತ್ತಿಕೊಟ್ಟುಪದೇಶ ಬತ್ತಿದ ಕೆಱೆಯ ಬಯಲಲ್ಲಿ ರಾಜಾನ್ನ ಬಿತ್ತಿ ಬೆಳೆದಂತೆ (ಸರ್ವಜ್ಞ. ೭೬); ಗುರುವಿನಂತೆ ಶಿಷ್ಯ, ತಂದೆಯಂತೆ ಮಗ (ನೀತಿಚಿಂ. IV, ೩೨). ೨. (ನಿರ್ದಿಷ್ಟ ಅವಧಿಯವರೆಗಿನ ಒಪ್ಪಂದದ ಮೇಲೆ) ಕೆಲಸ ಕಲಿಯುತ್ತಿರುವವನು; ಅಭ್ಯಾಸಿ : (೬). [ಸಂ.]

ಶಿಷ್ಯತ್ವ (ನಾ). ವಿದ್ಯಾರ್ಥಿಯಾಗಿರುವಿಕೆ; ಶಿಷ್ಯನಾಗಿರುವಿಕೆ: ಆತ್ಮೀಯ ವಿದ್ಯಾಗರ್ವಪರ್ವತಮವರ ವಚೋವಜ್ರನಿರ್ಘಾತದಿಂ ನುಚ್ಚುನುಜ್ಜಿಯಾಗಿ ಪೋದೊಡೆ . . . ತಚ್ಛಿಷ್ಯತ್ವಮಂ ಪೂಣ್ದು (ಆದಿಪು. ೩-೭೫ ಎ); ನರೇಂದ್ರ ರಾಮಕೃಷ್ಣರ ಶಿಷ್ಯತ್ವವನ್ನು ಸ್ವೀಕರಿಸಿದ (ಧರ್ಮಾಸಾ. ೪೭). [ಸಂ.]

ಶಿಷ್ಯವೃತ್ತಿ (ನಾ). ೧. = ಶಿಷ್ಯತ್ವ: ಭೀಷ್ಮನು ತನ್ನ ಮೊಮ್ಮಕ್ಕಳನ್ನು ಅವನಲ್ಲಿ ವಿಧಿಪೂರ್ವಕವಾಗಿ ಶಿಷ್ಯವೃತ್ತಿ ಕೈಕೊಳ್ಳುವಂತೆ ನೇಮಿಸಿದನು (ವಚಭಾ. ೧೮). ೨. ವಿದ್ಯಾರ್ಥಿಗಳಿಗೆ ದೊರೆಯುವ ವೇತನ; ವಿದ್ಯಾರ್ಥಿವೇತನ : ಸ್ವರ್ಗದಿಂದ ಇವರಿಗೊಂದು ಶಿಷ್ಯವೃತ್ತಿ ಸಿಕ್ಕಿದೆ (ಸಂಜೀವಿ. ೧೬) ; ಹರಲಾಲನು ಎಫ್. ವಾಯ್ ಪಾಸಾಗಿ ಶಿಷ್ಯವೃತ್ತಿ ಪಡೆದು ಮೂರನೆಯ ವರ್ಷದಲ್ಲಿ ಓದುತ್ತಿದ್ದಾನೆ (ಇಷ್ಟಸ. ೭೦೪). [ಸಂ.]

ಶಿಷ್ಯವೇತನ (ನಾ). = ಶಿಷ್ಯವೃತ್ತಿ ೨ : 'ಸಾಮ್ಯೂಲ್ ಕೋಲಿನ್ಸ್' ಎಂಬಾತನೊಬ್ಬನ ಸಹಾಯದಿಂದ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ರೇಗೆ ಒಂದು ಶಿಷ್ಯವೇತನ ದೊರೆಯಿತು (ಸಪ್ಮಸ. ೧). [ಸಂ.]

ಶಿಷ್ಯೆ (ನಾ). ವಿದ್ಯೆಯನ್ನು ಕಲಿಯುವವಳು; ವಿದ್ಯಾರ್ಥಿನಿ: ಸಂಯಮವ ಸಾಧಿಸಿ ಮತ್ತೆ ನುಡಿದೋರಿದಳ್ ಮನ್ಮಥನ ಶಿಷ್ಯೆ (ಚಕ್ರಾಗ. ೬೮-೧೦೬೪). [ಸಂ. ಶಿಷ್ಯಾ]

ಶಿಷ್ಟಿಂತಿ 'ಶಿಷಿತ್ತಿ' ನೋ.

ಶಿಸವೆ 'ಸಿಸವೆ' ನೋ.

ಶಿಸ್ತು, ಸಿಸ್ತು (ನಾ). ೧. ಅಲಂಕಾರ; ಶೃಂಗಾರ : ಕಸ್ತೂರಿತಿಲಕವನಿಟ್ಟು ಶಿಸ್ತಿನಿಂದಾ ಪರಿಮಳಾವ ಹಂಸೆಗಮನೆಗೆ ಧರಿಸಿ ಬೇಗಾದಿ ಆ ವನಿತೆಯಾರು ಮುತ್ತಿನಾ ಮೂಗುತಿಯಾನಿಟ್ಟಾರು (ಯನಳ. ೪೯); ಚಿತ್ರವರ್ಣಂಗಳಾದ ಬಟ್ಟೆಗಳಿಂದ ಶಿಸ್ತು ಮುಸ್ರ್ಕದೆಗಳಂ ಮಾಡಿಕೊಂಡು (ಸಾಗಂಧಿ. ೧೪೧-೧೭); ಸೆಟ್ಟಿ ಶಿಸ್ತುಮಾಡುವುದರೊಳಗೆ ಪಟ್ಟಣ ಸೂರೆ ಹೋಯ್ತು (ಗಾಡಿ). ೨. ಕಟ್ಟುಪಾಡು; ಕಟ್ಟಳೆ; ನಿಯಮ: ಹಡಗಿನಲ್ಲಿ ಶಿಸ್ತು ಎಂಬುದೇ ಉಳಿಯಲಿಲ್ಲ. ಶಿಸ್ತನ್ನು ಕಾಪಾಡಲು ಗಾಮಾನಂಥ ಗಟ್ಟಿಗನಿಗೂ ಕಷ್ಟವಾಯಿತು (ಪ್ರವಾ. II, ೨೨೨); ಮಕ್ಕಳು ಶಿಸ್ತಿನಿಂದ ಇರುವುದು ಒಳ್ಳೆಯದು (ಮಹಾತ್ಮ. ೭). ೩. ಒಪ್ಪ; ಓರಣ: ಮನೆಯ ಸಾಮಾನುಗಳನ್ನು . . . ಒಂದು ಬಗೆಯ

ಶಿಸ್ತಿನಿಂದ ಜೋಡಿಸಿ, ಅಣಿಯಾಗಿಡುತ್ತಿದ್ದಳು (ಮಲೆಮಂ. ೮೦); ಇಡೋದೆಲ್ಲ ಶಿಸ್ತಾಗಿ ಇಟ್ಟೇಯಿಲ್ಲೋ (ಅಶ್ವಮೇ. ೮೧). ೪. ಗುರಿ; ಲಕ್ಷ್ಯ: ಆ ಫಿರಂಗಿಯಿಂದ ಖಾಸಾ ವೀರರಾಜೇಂದ್ರ ಒಡೆಯರವರೇ ಶಿಸ್ತುನೋಡಿ ಕೋಟೆಗೆ ಇಡುತ್ತಿದ್ದರು (ರಾಜೇಂದ್ರ. ೪೯). ೫. ಕಂದಾಯ; ತೆರಿಗೆ: ಆ ಅಮರದ ಮಾಗಣೆ ಯರಡುಸಾವಿರವರಹ ಶಿಸ್ತಿನದು ಇದೆ (ರಾಜೇಂದ್ರ. ೧೨೦). ೬. ಕಂದಾಯ ಬಾಕಿ ನಿಂತ ಕುಳಗಳ ದಾಖಲೆಯ ಪುಸ್ತಕ,— ಕಟ್ಟು : (ಕಿ). ಸಿಸ್ತು: ೨. ತಮ್ಮ ತಮ್ಮ ವಿಶಿಷ್ಟ ಆಚರಣೆಗಳು, ನಡತೆ ಮತ್ತು ಸಿಸ್ತಿನ ನಿಯಮಾವಳಿಗಳು ಮತ್ತು ಬೋಧನೆಗಳನ್ನು ಒಳಗೊಂಡ ಸಂನ್ಯಾಸೀಸಂಘಟನೆಗಳು ಅಸ್ತಿತ್ವಕ್ಕೆ ಬಂದುವು (ತತ್ತ್ವಪ್ರಾ. ೫೫೪). ೫. ತಾನುಗೊಡಿಗೆಯಲ್ಲಿ ಗದ್ದೆ ಖ ೮ಕ್ಕೆ ಸಿಸ್ತು ಗ ೮ ಗುಬ್ಬಿ ಬಯಲಲ್ಲಿ ಗದ್ದೆ ಖಂ ೧೦ ೧/೪ (ಮೈಆರಿ. ೧೯೨೯, ೧೮-೬; 1402); ಮೂರು ವರಹಾಂನ್ನು ಆರು ಹಣವಿಗೆ ವಿವರ ಸಿಸ್ತಿನಿಂದ ಮೂರು ವರ ಗ ೩ ನಷ್ಟ (ಮೈಆರಿ. ೧೯೩೪, ೯-೯; -690); ಕೊಡಲಿಮಂದೆ ಸ್ಥಳ ವಂದಕ್ಕೆ ಹುಟ್ಟುವಳಿ ಸಿಸ್ತು ಗ ೩೦೦ ಮುಂನೂರು ವರಹ (ಮೈಆರಿ. ೧೯೩೩, ೩೪-೧೫ ; 1756).

ಶಿಸ್ತುಕಟ್ಟು = ಗುರಿ ತಾಗುವಂತೆ ಬೇಟೆಯ ಸಲಕರಣೆ ಜೋಡಿಸು : ರೈತನು ಹೊತ್ತಾರೆ ಎದ್ದು ಶಿಸ್ತು ಕಟ್ಟಿದ್ದ ಸ್ಥಳಕ್ಕೆ ಹೋದನು (ಪಂಜಪಂ. ೨೩). ಸಿಸ್ತುಮಾಡು = ಕಂದಾಯವನ್ನು ಗೊತ್ತುಮಾಡು, — ನಿಗದಿಪಡಿಸು : ಯಾ ಗ್ರಾಮದಲು ಹಳೇಪೇಠೆಯಲು ಪ್ರಕು ಯಿದ್ದ ಹೂಗೊಪಲಸ್ಥಳಕ್ಕೆ ತೆರಿಗೆಯಿಲ್ಲ ಯಿ ಸ್ತಳಕ್ಕೆ ಸಿಸ್ತುಮಾಡಿ ಯಿ ಸ್ತಳನ ಹಾಲುತ್ತಾರ ಕೊಡಬೇಕೆಂದು (ಎಕ. VIII. ಸೊರಬ. ೩೫೪-೧೪; 1743).

[← ಪಾರ.ಮರಾ. ಶಿಸ್ತ್]

ಶಿಸ್ತುಗಾತಿ, ಸಿಸ್ತುಗಾತಿ (ನಾ). ೧. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವಳು : ಆಕೆ ಎಲ್ಲ ವಿಷಯಗಳಲ್ಲೂ ಶಿಸ್ತುಗಾತಿ (ರೂಢಿ). ಸಿಸ್ತುಗಾತಿ : ೨. ಅಂದವಾಗಿ ಅಲಂಕರಿಸಿಕೊಳ್ಳುವವಳು; ಸೊಗಸುಗಾತಿ : ಸಿಸ್ತುಗಾತಿಯರ . . . ನೋಡಿ (ಸೌಂದಕಾ. ೪-೫೨). [ಶಿಸ್ತು + — ಕಾತಿ$_5$]

ಶಿಸ್ತುಗಾರ, ಸಿಸ್ತುಗಾರ (ನಾ). ೧. ಅಲಂಕಾರ ಮಾಡಿಕೊಳ್ಳುವವನು; ಶೋಕಿಲಾಲ: (ಕಿ). ೨. ಸ್ತ್ರೀಲಂಪಟ : (ಕಿ). ೩. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವನು: ಆತ ಮನೆಯಲ್ಲಿ ಹೇಗೋ ಹಾಗೆಯೇ ಕಛೇರಿಯಲ್ಲೂ ಶಿಸ್ತುಗಾರ (ರೂಢಿ). ಸಿಸ್ತುಗಾರ : ೨. ಹಸ್ತದಿ ಮಲ್ಲಿಗೆಚೆಂಡು ಸಿಸ್ತುಗಾತಿಯರ ಕುಚಗಳಿಗಣಿಯ ನೋಡಿ ಸಿಸ್ತುಗಾರರು ಇಟ್ಟು ನಗುತ (ಸೌಂದಕಾ. ೪-೫೨). [ಶಿಸ್ತು + — ಗಾರ (< - ಕಾಱ)]

ಶಿಸ್ತುಗಾರಿಕೆ, ಸಿಸ್ತುಗಾರಿಕೆ (ನಾ). ೧. ಅಲಂಕಾರ; ಸೊಗಸುಗಾರಿಕೆ: ಶಿಸ್ತುಗಾರಿಕೆಗೆ ಅವರು ಹೆಸರುವಾಸಿ (ರೂಢಿ). ೨. ಜಾರತನ; ಕಾಮುಕತೆ: (ಕಿ). ೩. ಕಟ್ಟುಪಾಡು; ನಿಯಮ: ಯಾವುದೇ ಕೆಲಸವನ್ನಾದರೂ ಶಿಸ್ತುಗಾರಿಕೆಯಿಂದ ಮಾಡುವುದನ್ನು ಕಲಿಯಬೇಕು (ರೂಢಿ). ಸಿಸ್ತುಗಾರಿಕೆ: ೨. ಅವನನ್ನು ಕುರಿತು ಹಲುಬುವ ಈ ವಿರಹಿಣಿಯ ಮಾತಿನಲ್ಲಿ ಅವನ ಸಿಸ್ತುಗಾರಿಕೆಯೂ ಇವಳ ಪ್ರೇಮವೂ ಒಟ್ಟೊಟ್ಟಿಗೆ ಹೇಗೆ ಹೊಮ್ಮುತ್ತವೆ! (ಸಮಾಲೋ. ೫೧). [ಶಿಸ್ತುಗಾರ + — ಇಕೆ]

ಶಿಸ್ತುಗಾರ್ತಿ (ನಾ). ೧. ಚೆನ್ನಾಗಿ ಅಲಂಕಾರ ಮಾಡಿಕೊಳ್ಳುವವಳು; ಸೊಗಸುಗಾತಿ: (ಕಿ). ೨. ಜಾರೆ; ವ್ಯಭಿಚಾರಿಣಿ : (ಕಿ).

[ಶಿಸ್ತುಗಾರ + — ತಿ$_1$ (< — ಇತ್ತಿ)]

ಶಿಸ್ತುಪಟ್ಟೆ (ನಾ). ಎರಡುಜಮೀನುಗಳ ನಡುವೆ ಇರುವ ಸ್ಥಳ : ಎರಡುನಂಬರಿನ ಮಧ್ಯದಲ್ಲಿ ಇರುವಂತಾ ಬದುವಿಗೆ ಶಿಸ್ತುಪಟ್ಟೆಯೆಂದು ಕರೆಯುವುದು (ಭೂಮಿಅ. ೨೪).

[ಶಿಸ್ತು$_7$ + ಪಟ್ಟೆ$_3$]

ಶಿಸ್ತುಬಿಡು (ಕ್ರಿ). ಎರಡು ಜಮೀನುಗಳ ನಡುವೆ ಸ್ಥಳಬಿಡು : ಪ್ರವಾಹ ಬಂದು ಬಾಂದು ಕೊಚ್ಚಿಹೋಗುವ ಸಂಭವವಿರುತ್ತಿದ್ದಿತೋ ಅಂತಹ ಸ್ಥಳದಲ್ಲಿ ಶಿಸ್ತುಬಿಟ್ಟ ಹಾಗೆ ೭-೮ ಕೈದೂರದಲ್ಲಿ ಬಾಂದು ಹಾಕಬೇಕು (ಭೂಮಿಅ. ೨೩). [ಶಿಸ್ತು$_7$ + ಬಿಡು$_1$]

ಶಿಸ್ತುಹೊಡೆಸು (ಕ್ರಿ). ಗುರಿಯಿಟ್ಟು ಹೊಡೆಯಿಸು : ಕರಾಚೂರಿ ನಂಜರಾಜೈಯ್ಯ ಅರಶಿನವರು ನಿಂಬೆಹಣ್ಣ ಗುರಿಯಿಡಿಸಿ ಸರ್ವಜನರಿಂದಾಲು ಶಿಸ್ತುಹೊಡೆಸಲಾಗಿ ವಬ್ಬರ ಕೈಯಿಂದಲೂ ಗುರಿ ತಗಲದೆ ಶಾಬಾಸಾಬರ ತಮ್ಮ ಹೈದರಲ್ಲಿ ಖಾನರ ಕೈಯಿಂದಾ ಬಂದೂಖಿನ ಗುರಿ ತಗಲಿದ ಕಾರಣ (ಹೈದರ. ೨೩). [ಶಿಸ್ತು + ಹೊಡೆಸು (< ಪೊಡೆಯಿಸು)]

ಶಿಸ್ಸು 'ಶಿಸವೆ' ನೋ.

ಶಿಳಱ 'ಸಿಯಳಾಱ' ನೋ.

ಶಿಳಾಪಟ್ಟಕ 'ಶಿಲಾಪಟ್ಟಕ' ನೋ.

ಶಿಳಾಱ 'ಸಿಯಳಾಱ' ನೋ.

ಶಿಳೀಂಧ್ರ 'ಶಿಲೀಂಧ್ರ' ನೋ.

ಶಿಳೀಮುಖ 'ಶಿಲೀಮುಖ'ನೋ.

ಶಿಳೋಚ್ಚಯ 'ಶಿಲೋಚ್ಚಯ'ನೋ.

ಶಿಳ್ಳಿ 'ಸಿಳ್ಳು$_1$' ನೋ.

ಶಿಳ್ಳಿಹೊಡೆ 'ಸಿಳ್ಳುಹೊಡೆ' ನೋ.

ಶಿಳ್ಳು 'ಸಿಳ್ಳು$_1$' ನೋ.

ಶಿಳ್ಳುದನಿ (ನಾ). ಶೀಟಿ ಹಾಕಿದಂತೆ ಕೇಳುವ ಧ್ವನಿ : ಹಳದಿ ಹಾಗೂ ಕೆಂಪುಬಣ್ಣದ ರೆಕ್ಕೆಗಳುಳ್ಳ ಪಕ್ಷಿಯೊಂದು ಶಿಳ್ಳುದನಿಯಲ್ಲಿ ಹಾಡುತ್ತದೆ (ಪ್ರವಾಇ. I, ೧೪೪).

[ಶಿಳ್ಳು (< ಸಿಳ್ಳು$_1$) + ದನಿ$_1$]

ಶೀಂಬಾಲ 'ಸೀಂಬಾಲ' ನೋ.

ಶೀಕನ್ನ (ನಾ). ಕಾಂತಿಯುತವಾದ ಕಿವಿ : ಚೆಂಬಾಯ್ಜೇನನೀಂಟುತ್ತುಮಗ್ಗಳದೊಳ್ಬಾರಿವ ಗೂಗಿನಿಂ ತಣಿಪೆನಾನಿನ್ನೆನ್ನ ಶೀಕನ್ನಮಂ (ಚಿಕವಿ. ೬-೨೫೩). [< ಸಂ. ಶ್ರೀಕರ್ಣ]

ಶೀಕರ (ನಾ). ತುಂತುರು; ಹನಿ: ಆಕಾಶಕ್ಕುಚ್ಚಳಿಸುವನೇಕಪಯಶ್ಶೀಕರಂಗಳಿಂದಂ ಜ್ಯೋತಿರ್ಲೋಕಮಿದೊಂದುಂಟು (ಅದಿಪು.೭-೯೪); ಅಮರನದೀಶೀಕರೋದಾರತಾರಾರಾಮಂ . . . ಆನಂದಮಂ ಮಾಡುಗೆಂದುಂ (ಕಾದಂಪೂ. ೧); ತರಳತರತರಂಗಾವರ್ತಗರ್ತನೀಹಾರಶೀಕರದ ನಿಕರಂ . . . ಜಳೂಕವ್ಯಾಳಕೋಳಾಹಳಧ್ವಾನವೆರಸಿ ಜಲನಿಧಿ ಮೆಱೆದುದು (ಹಚಕಾ. ೧-೩೩). [ಸಂ.]

ಶೀಕರಣೆ 'ಸೀಕರಣೆ' ನೋ.

ಶೀಕೆ (ನಾ). ಭೂಮಿಯ ಒಂದು ಅಳತೆ (?) : ಕಿಕ್ಕುಂದನಾಡ ನಡುಭಾಗಿಯಲ್ಲಿ ಪೂರ್ವದತ್ತ ಹೊಱಗಾಗಿ ಕೇಇ ೭ ಕಂ ಶೀಕೆ ೧ ಶೆಡೆ ೨ಕಂ ತೆಱುವ ವರಹ ಗದ್ಯಾಣ ೧೨೭ (ಮೈಆರಿ. ೧೯೩೩, ೨೪-೪೫ ; ಸು.1386). [?]

ಶೀಗೆ 'ಸೀಗೆ' ನೋ.

ಶೀಗೆಕಾಯಿ 'ಸೀಗೆಕಾಯಿ' ನೋ.

ಶೀಗೆಹುಣ್ಣಿಮೆ 'ಸೀಗೆಹುಣ್ಣಿಮೆ' ನೋ.

ಶೀಘ್ರ (ಗು). ೧. ವೇಗದಿಂದ ಕೂಡಿದ; ತ್ವರಿತವಾದ. (ನಾ). ೨. ಜಾಗ್ರತೆ; ತ್ವರೆ: "ಇನಿತು ಬೋಂಕನೆ . . . ಚಕ್ಕನೆಯೆನಲ್ ನೋಡಲಿಳೆಗಿದುವೆ ಶೀಘ್ರಾರ್ಥ ಮಕ್ಕುಂ" (ಕಬ್ಬಿಕೈ. ೪೯); ಒಂದು ದಿನದಲ್ಲಿ ಹೊತ್ತುದಕವಂ ಶೀಘ್ರದಿಂದ ತರುತ್ತ ಹಳ್ಳವನಾಚೆದಾಟಲು (ಬಸಪು. ೪೪-೫). ೩. ಬಾಣಪ್ರಯೋಗದಲ್ಲಿ ಒಂದು ವಿಧ : ಪಾತಂ ಲಕ್ಷ್ಯಂ ಶೀಘ್ರಂ ಘಾತಂ ಬಹುವೇಗಮೆಂಬಿವಯ್ದೇಸಿನೊಳಂತೀತನ ದೊರೆಯಿಲ್ಲೆನಿಸಿದುದಾತನ ಬಿಲ್ಪಲ್ಮೆ (ಪಂಪಭಾ. ೧೨-೧೮೫). [ಸಂ.]

ಶೀಘ್ರಕಾರಿ (ನಾ). ವೇಗವಾಗಿ ಕೆಲಸಮಾಡುವವನು; ಅವಸರದವನು : ಎಲ್ಲೆ ಶೀಘ್ರಕಾರಿಯೇ ಬಳೆಗಾರ ಶೆಟ್ಟಿಯಾದ ಚಂದನದಾಸನಂ ಕರೆದುಕೊಂಡು ಬಾರೆಂದು ಹೇಳಲು (ಮುದ್ರಾಮಂ.೨೯೮). [ಸಂ. ಶೀಘ್ರಕಾರಿನ್]

ಶೀಘ್ರಕೋಪಿ (ನಾ). ಬೇಗನೆ ಸಿಟ್ಟು ಬರುವ ಸ್ವಭಾವದವನು ; ಮುಂಗೋಪಿ: ಆ ಶೀಘ್ರಕೋಪಿಯ ಬಳಿಗೆ ಇವನನ್ನು ಕಳಿಸಿದರೆ ಜಗಳ ಕಟ್ಟಿಟ್ಟದ್ದು (ರೂಢಿ).

[ಸಂ. ಶೀಘ್ರಕೋಪಿನ್]

ಶೀಘ್ರಗಾಮಿ (ನಾ). ವೇಗವಾಗಿ ನಡೆಯುವನು; ಜಾಗ್ರತೆಯಾಗಿ ಹೋಗುವವನು. [ಸಂ. ಶೀಘ್ರಗಾಮಿನ್]

ಶೀಘ್ರತೆ (ನಾ). ವೇಗ ; ತ್ವರೆ : ಬಲ್ಮೆ ಶೀಘ್ರತೆ ಕಿಱಿದುಂಟು ಪೇೞ್ವೊಡ ವರಿನ್ನಳವಲ್ಲದುದಂತಣಂ ಸರಸ್ವತಿ ವರವಿತ್ತವೋಲ್ಕೆಲಬರೋದದೆ ಕೇಳದೆ ಕಲ್ಗಳಂತೆ ಗರ್ವಿತರಡಸಿರ್ಪರರ್ಥ ಕೃತಿಗೇಂ ಮತಿವಂತರೊ ಪುಣ್ಯವಂತರೋ (ಗದಾಯು. ೧-೫೦).

[ಸಂ. ಶೀಘ್ರತಾ]

ಶೀಘ್ರಲಿಖಿತ (ನಾ). ವೇಗವಾಗಿ ಬರೆಯುವ ಬರಹದ ಒಂದು ಪ್ರಕಾರ : ನಾಗನಾರ್ಯ್ಯನ ಶೀಘ್ರಲಿಖಿತಂ (ಸೌಇ. XI - i, ೪೨-೩೬ ; ಸು. 971). [ಸಂ.]

ಶೀಘ್ರಲಿಪಿ (ನಾ). ಭಾಷಣ ಮುಂತಾದುವನ್ನು ಯಥಾವತ್ತಾಗಿಯೂ ಜಾಗ್ರತೆಯಾಗಿಯೂ ಬರೆದುಕೊಳ್ಳಲು ಬಳಸುವ ಸಂಕೇತಲಿಪಿ : ಶೀಘ್ರ ಲಿಪಿಯಿಂದ ಬರೆದುಕೊಳ್ಳುವಂತೆ ಶ್ರೀಧರ ಹೇಳುತ್ತಿದ್ದ (ವಾತ್ಸಲ್ಯ. ೧೦೦). [ಸಂ.]

ಶೀಘ್ರವೇಧಿ (ನಾ). ವೇಗವಾಗಿ ಬಾಣಪ್ರಯೋಗಮಾಡುವುದರಲ್ಲಿ ನಿಪುಣನಾದವನು; ನಿಷ್ಣಾತನಾದ ಬಿಲ್ಲುಗಾರ: "ಲಘುಹಸ್ತಃ, ಶೀಘ್ರವೇಧೀ — ಈ ೨ ಶೀಘ್ರವಿಸುವಾತಂ" (ಪಲಾಯು. ೭೭-೩೧೭). [ಸಂ. ಶೀಘ್ರವೇಧಿನ್]

ಶೀಘ್ರಸಂಧಾನ (ನಾ). ವೇಗವಾಗಿ ಬಿಲ್ಲಿಗೆ ಬಾಣವನ್ನು ಹೂಡುವಿಕೆ, — ಸೇರಿಸುವಿಕೆ: ಅಂತು ಕಡುಗೆಯ್ಯನಾಗಿ ಶೀಘ್ರಸಂಧಾನಮಿಸುವಶ್ವಗ್ರೀವನ ತಕ್ಕುಂ ಬೇಗಯ್ಯೆಯುಂ ಕಿಡೆ (ಶಾಂತಿಪ್ರ. ೧-೬೦ ವ). [ಸಂ.]

ಶೀಘ್ರಾಸ್ತ್ರ (ನಾ). = ಶೀಘ್ರವೇಧಿ: ಶೀಘ್ರಾಸ್ತ್ರನಾದ ಅರ್ಜುನನು ನನ್ನ ಕುದುರೆಗಳನ್ನು ಹೂಡಿದ ಅಂಥ ದಿವ್ಯರಥದಲ್ಲಿ ಕುಳಿತು ಯುದ್ಧಮಾಡುವುದಕ್ಕೆ ಉಪಕ್ರಮಿಸಿದರೆ . . . ಅವನಿಗೆ ಯಾರು ಸಮನಾಗಬಲ್ಲರು? (ವಚಭಾ. ೭೧). [ಸಂ.]

ಶೀಘ್ರೆ (ನಾ). ೧. ಒಂದು ಬಗೆಯ ಗಿಡ; ದಂತಿಮರ; "ಪ್ರತ್ಯಕ್ಪರ್ಣೀ" (ಪಂಡಿತ. ೨೪೪). ೨. ಒಂದು ಬಗೆಯ ಗಿಡ; ರಕ್ತಪದಿ: "ಹತ್ತಿದರೆ ಮುರುಟುಹಂ ರಕ್ತಪದಿ ಶೀಘ್ರೆಯದು" (ಮಂಗರಾ. ೪೩-೪೩). [ಸಂ. ಶೀಘ್ರಾ]

ಶೀತ$_1$ 'ಸೀನ್$_1$' ಪರಾ.

ಶೀತ$_2$ (ಗು). ೧. ತಣ್ಣಗಿರುವ; ಶೈತ್ಯವುಳ್ಳ. (ನಾ). ೨. ಚಳಿ; ಶೈತ್ಯ; ಥಂಡಿ: ಶೀತದಿನುಷ್ಣದಿನುತ್ಕಟವಾತದಿನನ್ಯೋನ್ಯಘಾತದಿಂ ತೀವ್ರರುಜಾವ್ಯಾತದಿಂ . . . ನೋಗುಂ ಸಾಗುಂ (ಜೀವಸಂ. ೯೬-೫); ಶೀತ ಮೀರಿದವನಿಗೆ ವಾತದ ಭಯವೇನು ? (ಗಾದೆ). ೩. ನೀರು; ಉದಕ. ೪. ಜಡ; ಸೋಮಾರಿ. ೫. ಒಂದು ಬಗೆಯ ಗಿಡ; ಹಬ್ಬೆಯ ಗಿಡ: "ವಾನೀರಃ, ವಂಜುಳಃ, ಶೀತಃ, ವಿದುಳಃ, ವೇತಸಃ — ಈ ೫ ಹಬ್ಬೆ(ಬ್ಬೆ)ಯ ಮರಂ" (ಪಲಾಯು. ೩೩-೪೮). ೬. ಒಂದು ಬಗೆಯ ಗಿಡ; ಚಳ್ಳೆಗಿಡ: "ಶೇಲುಃ, ಶ್ಲೇಷ್ಮಾತಕಃ, ಶೀತಃ, ಉದ್ದಾಲಃ, ಬಹುವಾರಕಃ — ೫ ಚಳ್ಳೆಮರ, ಬೊಂಕೇಕಾಯಿಗಿಡ" (ಸಿದ್ಧಾಂತಿ. ೧೧೯). ೭. ಒಂದು ನರಕದ ಹೆಸರು: ರೌರವ ಕ್ಷ್ವಾಂತ ಶೀತ ಉಷ್ಣ ಸಂತಾಪ ಅಂಬುಜ ಮಹಾಂಬುಜ ಕಾಲಸೂತ್ರಂಗಳೆಂಬವೇ ನರಕಂಗಳು (ವಿವೇಕ. ೧೫೧). [ಸಂ.]

ಶೀತಕ (ನಾ). ೧. ತಣ್ಣಗಿರುವ ವದಾರ್ಥ. ೨. ಜಡ; ಸೋಮಾರಿ: "ಮಂದಃ . . . ಶೀತಕಃ, ಅಲಸಃ, ಅನುಷ್ಣಃ — ೬ ಆಲಸ್ಯಕಾರನ ಪೆಸರು" (ಸಿದ್ಧಾಂತಿ. ೩೧೨). ೩. ತಣ್ಣಗೆ ಇಡುವಂಥದು: ಘನಸಂಗಾಲದ ಡೈಆಕ್ಸೈಡ್ ಮತ್ತು ಈಥರ್ ಇವುಗಳ ಮಿಶ್ರಣ ಒಳ್ಳೆಯ ಶೀತಕ (ರೆಫ್ರಿಜಿರಂಟ್) ಎಂಬುದನ್ನು ಕಂಡುಹಿಡಿದ (ಕಬೊ. I, ೩೦೨). ೪. ವಸ್ತುಗಳನ್ನು ತಣ್ಣಗೆ ಇರಿಸುವ ಸಾಧನ, — ಸಲಕರಣೆ: "ತಣ್ಣಿಸುವ ಪಾತ್ರೆ; (ಬಿಸಿ) ಆರಿಸುವ ಪಾತ್ರೆ; ಶೀತಕ" (Cooler. ಇಂಗ್ಲಿ). [ಸಂ.]

ಶೀತಕರ (ನಾ). ೧. ತಂಪಾದ ಕಿರಣಗಳುಳ್ಳವನು; ಚಂದ್ರ: ತ್ರಿದಶಾಧೀಶ್ವರಮಂತ್ರಿ ಶೀತಕರರೆಂಬೀಯರ್ವರುಂ ಕರ್ಕಗೇಹದೊಳಿರ್ದರೆಂದು (ಜಾತಕ. ೮-೧೫); ಶೀತಕರನಿಂ ಸಾಂದ್ರತರಕೌಮುದೋಜ್ಜ್ವಲಂ ಪುಟ್ಟುವಂತಿರೆ ಪುಟ್ಟಿದಂ ಶಿವನ ಶಿರುವಲ್ಲಿ (ಬಸರ. ೧-೧೨೮). ೨. ಕರ್ಪೂರ. ೩. [ಛಂದ] ಒಂದು ಗುರುವಿನ ನಂತರ ಎರಡು ಲಘುಗಳನ್ನುಳ್ಳ ಒಂದು ಅಕ್ಷರಗಣ ; ಭಗಣ : ಶೀತಕರ ತೋಯಂ ದ್ಯೋತಿಸಿರೆ . . . ಶಶಿಕಾಂತಂ (ಛಂದೋಂಬು. ೨-೨೬). [ಸಂ.]

ಶೀತಕರಧರ (ನಾ). ಚಂದ್ರನನ್ನು ಧರಿಸಿದವನು; ಶಿವ: ಪ್ರೀತಿಯಿಂದಿಂತಾಡುತಾಡುತ ಶೀತಕರಧರನೊಲಿದ ಭಕ್ತನು ಭೂತಳೇಶನು ನಗಲು (ಬಸವು. ೪೩-೯); ಶೀತಕರಧರನ ಪೂಜಾಸೌಖ್ಯದಿಂ ಘನಪುರಾತನರ ವಚನಾಗಮಾರ್ಥಮಂ ಬಿತ್ತರಿಪ ಗೀತಗಳ ಸೂಗಸಿನಿಂದಿರೆ ಬಂದುದಾ ಶರತ್ಕಾಲ (ಭಾವಚಿಂ. ೬-೧೧). [ಸಂ.]

ಶೀತಕಷಾಯ (ನಾ). ತಂಪನ್ನುಂಟುಮಾಡುವ ಕಷಾಯ: ಔಷಧಗಳನಿಡಿದು ಉದಯ ತೊಡಗಿ ಸಾಯಂಕಾಲ ಪರ್ಯಂತ ನೆನೆಸಿಕ್ಕೆ ಹಿಂಡಿಕೊಂಡುದು ಶೀತಕಷಾಯವೆನಿಸಿಕೊಂಬುದು (ವೃದ್ಧಸಾ. I, ೧೧೫); ದ್ರಾಕ್ಷಿಹಣ್ಣು, ಯಷ್ಟಿಮಧುಕ . . . ಇವಂ ಕಷಾಯವನಿಟ್ಟಾದರೂ ಶೀತಕಷಾಯವನಾದರೂ ಸೇವಿಸೆ ಸಮಸ್ತತೃಷ್ಣೆ, ಮದಮೂರ್ಛೆ, ಬುದ್ಧಿಭ್ರಂಶ ಇವೆಲ್ಲ ಪರಿಹರಮಕ್ಕುಂ (ಸಕಪ್ಯ. ೨೮೫). [ಸಂ.]

ಶೀತಕಾಲ (ನಾ). ಚಳಿಗಾಲ; ಶಿಶಿರಋತು; ಹೇಮಂತ: ಕಾಲಭೇದ — ಕಾಲವು ಸಂಕ್ಷೇಪದಿಂದ ಶೀತಕಾಲ, ಉಷ್ಣಕಾಲ, ವರ್ಷಾಕಾಲವೆಂದು ಮೂರುತೆರನಾಗಿರುವುದು (ಸಕಪ್ಯ. ೧೫); ಈ ಆರುತಿಂಗಳುಗಳ ಮಧ್ಯದ ಮೂರುತಿಂಗಳು ನಮ್ಮ ಶೀತಕಾಲ (ನಕ್ಷತ್ರ. ೪೩). [ಸಂ.]

ಶೀತಕಿರಣ (ನಾ). ತಂಪಾದ ಕಿರಣಗಳನ್ನುಳ್ಳವನು ; ಚಂದ್ರ : ಯಾದವಕುಲ ಮಹಾಂಬುನಿಧಿ ಶೀತಕಿರಣಂ ತನ್ನ ಶರಣರನುಳಿದನೊ (ಚೈಮಿಭಾ. ೪-೪); ವನದ ಚಕೋರದ ಸವಿದುತ್ತಿದಾವುದು ಹರಿಣವಿಲ್ಲದ ಶೀತಕಿರಣ (ಇಂಚಾಪ. ೧೬೯-೩೧). [ಸಂ.]

ಶೀತಕೃತ್ಕರ (ನಾ). ೧. ತಣ್ಣನೆಯ ಕಿರಣಗಳಿಂದ ತಂಪನ್ನುಂಟುಮಾಡುವವನು; ಚಂದ್ರ. ೨. ತಂಪನ್ನುಂಟುಮಾಡುವ ಚಂದ್ರನ ಕಿರಣ: ಚೂತಮನಪ್ಪಿ ಪುಷ್ಪವತಿಯಾದುದು ಮಲ್ಲಿಗೆ ಶೀತಕೃತ್ಕರವ್ರಾತಮನಪ್ಪಿಯೊಪ್ಪೆ ಕರಗಿತ್ತು ಹಿಮೋಪಲಂ (ಗಿರಿಕ. ೪-೧೧೨). [ಸಂ.]

ಶೀತಗು (ನಾ). = ಶೀತಕರ ೧: ಜಲರುಹಬಂಧು ಚಂದ್ರಮನಿನಕ್ಕೆ ವಿಲಗ್ನದಿನಕ್ಕೆ ಪತ್ತಱೊಳ್ ನಿಲೆ ಪಿತೃವಿಂ ಧನಂ ಸಮನಿಕುಂ ನಿಲೆ ಶೀತಗು ಮಾತೃವಿಂ (ಜಾತಕ. ೧೧-೧). [ಸಂ.]

ಶೀತಜ್ವರ (ನಾ). ಚಳಿಯಿಂದ ಕೂಡಿದ ಜ್ವರ: "ಹಿಮಘರ್ಮಮೆನೆ ಶೀತಜ್ವರಂ" (ಮಂಗರಾ. ೧೧೪-೪); ಶೀತಜ್ವರವು ದೇಹವನ್ನು ಪ್ರವೇಶಿಸುವ ಕ್ರಮ — ತ್ವಕ್ಕನಾಶ್ರಯಿಸಿರುವ ಶ್ಲೇಷ್ಮವಾಯುಗಳು ಆದಿಯಲ್ಲಿ ಶೀತಜ್ವರವನ್ನುಂಟುಮಾಡುವುವು (ಸಕಪ್ಯ. ೧೦೦). [ಸಂ.]

ಶೀತದಂತ (ನಾ). ಒಂದು ಬಗೆಯ ದಂತರೋಗ: ದಂತಗಳಿಗೆ ಆಧಾರವಾದ ಮಾಂಸ ಕೆಟ್ಟು ಕಪ್ಪಾಗಿ ಮೃದುವಾಗಿ ದುರ್ಗಂಧಸಹಿತವಾಗಿ ರಕ್ತವು ಸುರಿವದು. ಈ ರೀತಿಯಲ್ಲಿದ್ದುದು ಶೀತದಂತವೆನಿಸಿಕೊಂಬುದು. ಇದು ಶ್ಲೇಷ್ಮರಕ್ತಗಳಿಂದ ಹುಟ್ಟುವದು (ವೃದ್ಧಸಾ. II. ೧೨೩). [ಸಂ.]

ಶೀತದ್ಯುತಿ (ನಾ). ಚಂದ್ರ : ಶೀತದ್ಯುತಿ ನಿಚ್ಛಂ ಕಂದುತುಂ ಕುಂದುತು ಮುದಯಿಪ ನೆಂಬುಕ್ತಿಗಾ ಕಾಂತೆ ಪೋಲ್ತಳ್ (ಸುಕುಮಾ. ೯-೯೧). [ಸಂ.]

ಶೀತಬಾಧೆ (ನಾ). ಶೈತ್ಯದಿಂದಾಗುವ ತೊಂದರೆ; ಥಂಡಿಯಿಂದಾಗುವ ಬಾಧೆ: ಅಗ್ನಿಷ್ಟಿಕೆಯನ್ನು ಸಂತತವೂ ಉರಿಸುತ್ತಾ ಶೀತಬಾಧೆಯನ್ನು ದೂರವಿರಿಸಿರಬಹುದು (ಸಂಬರು. ೪೦). [ಸಂ. ಶೀತಬಾಧ]

ಶೀತಭೀತ (ನಾ). ಚಳಿಗೆ ನಡುಗುವವನು, — ಹೆದರುವವನು: ವನಿತಾಪುತ್ರರತಂ ವಿಲಜ್ಜನಲಸಂ ಧರ್ಮಧ್ವಜಂ ಶೀತಭೀತನಧೋಭಾಗಕೃಶಂ (ಜಾತಕ. ೧೭-೧೦). [ಸಂ.]

ಶೀತಭೀರು (ಗು). ೧. ಚಳಿಗೆ ಹೆದರುವ. (ನಾ). ೨. ಒಂದು ಬಗೆಯ ಮಲ್ಲಿಗೆ: "ತೃಣಶೂಲ್ಯಂ . . . ಮಲ್ಲಿಕಾ, ಭೂಪದೀ, ಶೀತಭೀರುಃ — ೪ ಮಲ್ಲಿಗೇಗಿಡದ ಹೆಸರುಗಳು" (ಸಿದ್ಧಾಂತಿ. ೧೨೮). [ಸಂ.]

ಶೀತಮರೀಚಿ (ನಾ). = ಶೀತಕರ ೧: ಸೂಗಯಿಪ ತಾರಕೋತ್ಕರದ ಮಧ್ಯದ ಶೀತಮರೀಚಿ ರೋಹಿಣೀಯುಗಮೆನೆ ಚೆಲ್ಲುವೆತ್ತ . . . ವನಿತಾಳಿಯ ಮಧ್ಯದೊಳಂದು ನಾಡೆಯುಂ ಬಗೆಗೊಳಿಸಿತ್ತು ಮತ್ತಜಿತಸೇನಮಹೀಶಶಶಿಪ್ರಭಾಯುಗಂ (ಚಂದ್ರಪ್ರ. ೭-೧೫೦). [ಸಂ.]

ಶೀತಮಾರುತ (ನಾ). ತಣ್ಣನೆಯ ಗಾಳಿ; ತಂಪಾದ ಗಾಳಿ: ಶೀತಮಾರುತಗಳು . . . ಧ್ರುವದ ಕಡೆಯಿಂದ ಸಮಶೀತೋಷ್ಣವಲಯದ ಕಡೆಗೆ ವರ್ಷವೆಲ್ಲಾ ಬಹಳ ತಣ್ಣಗೆ ಗಾಳಿ ಬೀಸುತ್ತದೆ (ಭೂವಿವ. ೬೧). [ಸಂ.]

ಶೀತರುಕ್ತನುಜಾತ (ನಾ). ಚಂದ್ರನ ಮಗ; ಬುಧ: ಶೀತರುಕ್ತನುಜಾತಂ ಪದಿನೈದೆಱೊಳ್ . . . ನಿಂದೊಡಲ್ಲಿ ನಿಜೋಚ್ಚಾಲಯಭಾಗದಲ್ಲಿ ಪರಮೋಚ್ಚಸ್ಥಾಯಿ ತಾನಾ ಗ್ರಹಂ (ಜಾತಕ. ೧-೪೧). [ಸಂ.]

ಶೀತರುಕ್ಸುತ (ನಾ). = ಶೀತರುಕ್ತನುಜಾತ: ಇರೆ ಜಲಲಗ್ನದೊಳಸಿತಂ . . . ಶೀತರುಕ್ಸುತಂ ನೋಡಲುದಕದೊಳ್ ಪೆಱುಗುಮವಳ್ (ಜಾತಕ. ೪-೨೦). [ಸಂ.]

ಶೀತರುಚಿ (ನಾ). = ಶೀತಕರ ೧: ಪ್ರೀತಿಯಿಂದಂಬುಧಿಗ ಮಣಿಯಂ ಶೀತರುಚಿ ಗಳಿಯಂ ಕೊಡುವವೊಲು ಪೂತ ನವರತ್ನಾಂಬರಂಗಳನಿತ್ತು (ಬಾಪು ೧೧-೧೮). [ಸಂ.]

ಶೀತರೋಚಿ (ನಾ). = ಶೀತಕರ ೧: ಖರಕಿರಣಂ ತೀವ್ರಂ ಶೀತರೋಚಿ ಜಡಮೂರ್ತಿ ಕಲ್ಪವೃಕ್ಷಂ ಸ್ತಬ್ಧಂ ನಿರತಿಶಯಗುಣಂಗೀ ನೃಪವರಂಗ (ಶಾಂತಪು. ೨-೭೭); ಪಾಪಯುಗ್ಮಮಧ್ಯದ ಚತುರಸ್ರರಾಶಿಗಳೊಳಸ್ತರೊಳಿಕ್ಕರೆ ಶೀತರೋಚಿ ಪುಟ್ಟಿದ ಮನುಜಂ ಸುಧಾರಸಮನೀಂಟಿದೊಡಂ ಬದುಕಲ್ಕೆ ಬಲ್ಲನೇ (ಜಾತಕ. ೬-೪೧). [ಸಂ. ಶೀತರೋಚಿಸ್]

ಶೀತಲ, ಶೀತಳ (ಗು). ೧. ತಣ್ಣಗಿರುವ; ತಂಪಾಗಿರುವ. (ನಾ). ೨. ತಂಪು; ಶೈತ್ಯ. ೩. ತಂಪಾದ ಪದಾರ್ಥ; ಶೈತ್ಯವಸ್ತು : ತಿಳದೊಳ್ ಶೀತಲದೊಳ್ ಪಯೋವಿಕೃತಿಯೊಳ್ ನೀರೊಳ್ . . . ಉಪ್ಪಿನೊಳ್ ಜನಿಯಿಕುಂ ಶ್ಲೇಷ್ಮಂ ಮಸಂತಾಗ್ರದೊಳ್ (ರೋಕೋಪ. ೯-೬). ೪. ಶಾಂತಸ್ವಭಾವದ ವ್ಯಕ್ತಿ; ಸೌಮ್ಯ ಪ್ರವೃತ್ತಿಯವನು: ಲವಲೇಶವಾದರೂ ಹೊಟ್ಟೆಯ ಕಿಚ್ಚಿನ ಕಿಡಿಕಾರದಂಥ ಶೀತಲರು (ಇಂಚಾಪ. ೨೨-೯೮). ೫. ಸೋಮಾರಿ; ಆಲಸಿ; ಮೈಗಳ್ಳ: ''ಅಳಸಂ ಮಂದಂ ಜಡಂ ಮಂಥರನೆನಿ (ಪನವನುಂ) ಶೀತಲಂ ದೀರ್ಘಸೂತ್ರಂ'' (ಮಪ್ರಕೋ. ೧೦೦-೧೧). ೬. ಒಂದು ಬಗೆಯ ಗಿಡ : ''ವಾತಕಃ, ಶೀತಲಃ, ಅಪರಾಜಿತಾ, ಶತಪರ್ಣೀ – ೪ ಸಿದಿರೊಲ್ಲದ ಗಿಡ'' (ಸಿದ್ಧಾಂತ. ೧೪೬). ೭. [ಜೈನ] ತೀರ್ಥಂಕರರಲ್ಲಿ ಹತ್ತನೆಯವನು : ವೃಷಭ . . . ಶೀತಲ . . . ವರ್ಧಮಾನರೆಂಬಿಪ್ಪತ್ತುನಾಲ್ವರ್ ತೀರ್ಥಕರರ್ (ಜಾವುಂಪು. ೪೦೨). **ಶೀತಳ**: ೨. ಜಳಮಂ ಶೀತಳಮಂ ನಿರಸ್ತಮಳಮಂ ತೀರ್ದ ಕುಂಭಂಗಳಾಗಳೆ . . . ಎತ್ತಿ ಬಿತ್ತರಿಸಿದರ್ ಗಂಧೋದಕಸ್ನಾನಮಂಗಳಮಂ ತೀರ್ಥಕರಂಗೆ (ಪುಪ್ರಪು. ೧೮-೪೬); ಪಾತಿವ್ರತ್ಯದೇಳ್ಗೆಯ ಪರಿಪಿನೆಂದೋತು ರಾಘವನುಸಿರ್ದೊಡನೆ ಸೀತೆ ಬೆಂಕಿಯ ಪುಗೆ ಶೀತಳಮಾದುದು (ಪದಿ. ೨-೪೭). ೮. ಒಂದು ಬಗೆಯ ಶೀತರೋಗ; ಸನ್ನಿಪಾತ: ''ಶೀತಳಮನಲು ಸನ್ನಿ'' (ಮಂಗರಾ. ೧೮೪-೪). [ಸಂ.]

ಶೀತಲಕ್ರಿಯೆ (ನಾ). ತಂಪುಂಟುಮಾಡುವಿಕೆ; ಶೈತ್ಯೀಕರಣ: ಮನುಷ್ಯಲೋಕದೊಳಾದ ಸುಖಿಮಲ್ಲ ದಾಹಕ್ಕೆ ಶೀತಲಕ್ರಿಯೆಗೆಯ್ಯಂತೆ ನೋವನಾಱಿಸುವ ಸುಖಂ ಅದು ಸುಖಿಮ (ಜೀವಸಂ. ೫೧-೨೪ ವ). [ಸಂ. ಶೀತಲಕ್ರಿಯಾ]

ಶೀತಲೆ (ನಾ). ಸಿಡುಬು; ಮೈಲಿ: (೫). [ಸಂ. ಶೀತಲಾ]

ಶೀತವಲಯ (ನಾ). [ಭೂಗೋಳ] ಶೈತ್ಯವು ಹೆಚ್ಚಾಗಿರುವ ಸಮಭಾಜಕ ವೃತ್ತದ ಉಭಯಪಾರ್ಶ್ವಗಳಲ್ಲಿರುವ ಭೂಭಾಗ: ಅತ್ಯಂತಶೈತ್ಯಕರವಾದ ಭೂಭಾಗಗಳಿಗೆ ಶೀತವಲಯಗಳು . . . ಎಂದು ಹೆಸರು (ಭೂಗೋಳ. ೯); ಉತ್ತರದಕ್ಷಿಣಮೇರುವೃತ್ತಗಳ ಒಳಭಾಗದಲ್ಲಿರತಕ್ಕವು ಅನುಕ್ರಮವಾಗಿ ಎರಡು ಶೀತವಲಯ (ಭೂವಿವ. ೧೯). 'ಉಷ್ಣವಲಯ' ಪರಾ. [ಸಂ.]

ಶೀತವಾತ (ನಾ). ೧. ತಣ್ಣನೆಯ ಗಾಳಿ; ಥಂಡಿಗಾಳಿ: ಪನ್ನಗವಿತತಿ ರಸಾರಂಧ್ರಮಂ ಪಾಂಥವರ್ಗಂ ವರಕಾಂತಾಶ್ಲೇಷಮಂ ಕೆಯ್ಯೊಳಲರೆದುದುದೀಚೀಭವಂ ಶೀತವಾತಂ (ಪುಷ್ಪಪು. ೬-೩೭). ೨. ಶೈತ್ಯದಿಂದುಂಟಾಗುವ ವಾತರೋಗ: ಸವಳದ ಸಿತಘೃತ ಮಿಶ್ರಿತಮವುಂಗುರುಂ ಸೂಸಲೆಂಬಿವಂ ಸೇವಿಸೆ . . . ಶೀತವಾತಮುಂ ಕೆಟ್ಟು ನಿರುಜನಕ್ಕುಂ ಮನುಜಂ (ರೋಕೋಪ. ೯-೭). [ಸಂ.]

ಶೀತವೇತಾಳವಿದ್ಯೆ (ನಾ). ಮನುಷ್ಯ, ಪ್ರಾಣಿ ಇತ್ಯಾದಿಗಳನ್ನು ರೂಪಾಂತರಗೊಳಿಸುವ ಒಂದು ಬಗೆಯ ಮಾಂತ್ರಿಕವಿದ್ಯೆ: ಮನೋಹರ ನಗರದ ಭೀಷಣ ಸ್ಮಶಾನದೊಳು ಶೀತವೇತಾಳವಿದ್ಯೆಯಿಂ ಕುಮಾರನಂ ಜರತೀರೂಪುಧರನಂ ಮಾಡಿ ಬಿಸುಟು ಪೋಪುದುಂ (ಜಾವುಂಪು. ೭೪). [ಸಂ. ಶೀತವೇತಾಲವಿದ್ಯಾ]

ಶೀತಶಿವ (ನಾ). ೧. ಒಂದು ಬಗೆಯ ಸೊಪ್ಪು ; ಸಬ್ಬಸಿಗೆ. ೨. ಕಲ್ಲುಹೂವು; ಶಿಲಾಪುಷ್ಪ: ''ಕಾಲಾನುಸಾರ್ಯಂ, ವೃದ್ಧಂ, ಅಶ್ಮಪುಷ್ಪಂ, ಶೀತಶಿವಂ, ಶೈಲೇಯಂ – ೫ ಕಲ್ಲುಹುವ್ವಿನ ಪೆಸರು, ಶಿಲಾಪುಷ್ಪ'' (ಸಿದ್ಧಾಂತ. ೧೪೦). ೩. ಒಂದು ಬಗೆಯ ಉಪ್ಪು; ಸ್ಕಂಧವಲವಣ: ''ಸ್ಕಂಧವಃ, ಶೀತಶಿವಂ, ಮಾಣಿ ಬಂಧಂ – ೩ ಸಿಂಧುಜೆ, ಸ್ಕಂಧಲವಣದ ಹೆಸರುಗಳು'' (ಸಿದ್ಧಾಂತ. ೨೮೫). ೪. ಹಾಲುಮಡ್ಡಿ; ಗುಗ್ಗುಳ: (೫). [ಸಂ.]

ಶೀತಶಿವೆ (ನಾ). = ಶೀತಶಿವ ೧: ''ಶಾಲೇಯಃ, ಶೀತಶಿವಾ . . . ಮಿಶ್ರೇಯಾ – ೬ ಸಬ್ಬಸಿಕೆ ಹೆಸರುಗಳು'' (ಸಿದ್ಧಾಂತ. ೧೩೫). [ಸಂ. ಶೀತಶಿವ]

ಶೀತಳ 'ಶೀತಲ' ನೋ.

ಶೀತಳಿಕೆ$_1$ (ನಾ). ನೆಮ್ಮದಿ; ಸಮಾಧಾನ : ಕೂಷ್ಮಾಂಡಗಣವರ್ಯ ಬೀವಸಂಬಳದು ವಂಮ್ಮಳಿಗೊಳ್ಳ ಸಂದಿಯ ವನಕ್ಕೆ ಶೀತಳಿಕೆ ಸಂಭವಿಸಿ ಪುರುಳೊಗೆವಂತೆ ಸಾರ ಮಾಧುರ್ಯೋತ್ತರವ ನುಡಿದನು (ನಂಬಿಮಾ. ೧೦-೪).

[ಶೀತಳ (= ಶೀತಲ) + — ಇಕೆ]

ಶೀತಳಿಕೆ$_2$ (ನಾ). ತಾವರೆ: ಒತ್ತುವ ಶೀತಳಿಕಾಕದಂಬಕಂ ಬೀಸುವ ಪುಷ್ಪ ವೀಜನವಮರ್ಚುವ ಕಪ್ಪುರವಚ್ಚವಾಗಳುಂ ಪೂಸುವ ಚಂದನಂ ಬಿಸುಪನಾಱಿಸಲಾಜವೆ ಸತ್ಯಭಾಮೆಯಾ (ಜಗವಿ. ೧೧-೨೦). [< ಸಂ. ಶೀತಲಕ]

ಶೀತಾಂಗಿ (ನಾ). ಶೀತಶರೀರಪ್ರಕೃತಿಯುಳ್ಳವಳು: ವಿನುತಶ್ಯಾಮೆ ಮೃದುಚ್ಛವಿ ದ್ವಿಜನಖಾಕ್ಷಿದ್ವಂದ್ವೆ ಶೀತಾಂಗಿ ಮಾನಿನಿ (ಮುದತಿ. ೫-೨). [ಸಂ. ಶೀತಾಂಗೀ]

ಶೀತಾಂಬು (ನಾ). ತಣ್ಣಗಿರುವ ನೀರು; ತಂಪಾದ ಜಲ: ಯಶೋಭದ್ರೆ . . . ಇದಂ ಕೇಳ್ದು ತಟ್ಟನೆ ಮೂರ್ಛಾಗತೆಯಾಗೆ ಬಂಧುಜನಮೆಲ್ಲಂ ಬಂದು ಶೀತಾಂಬುವಂ ಘನವಾಗಲ್ಕಳಿದಾಗಳಿಚ್ಚಱಿಸಲ್ (ಸುಳುವಪ. ೧೨-೧೯); ಸೊಗಯಿಸುವ ಶೀತಾಂಬುಧಾರೆಯ ನೀಂಟುತೆ (ಚಿಮಭಾ. ೩-೧೨). [ಸಂ.]

ಶೀತಾಂಶು (ನಾ). ತಂಪಾದ ಕಿರಣಗಳುಳ್ಳವನು; ಚಂದ್ರ: ಇನನಂ ಶೀತಾಂಶುವಂ ವಂಜನ ಮುಗಿಲ ಪೊಡರ್ಪಿಂ ಜನಂ ಕಾಣದಾಕಂಪನಮಂ ಕೈಕೊಳ್ಳುಮಂ (ಪಂಡಾಮಾ. ೧-೮೧) ; ಕೀಲಿಸಿದ ಹೃದ್ವೀಜಬಿಂದು ಚಢಾಳಿಸಿದ ಶೀತಾಂಶುವಾಗಲು ಮೇಳವಿಸಿ ತನುವೊಪ್ಪುತಿರ್ದುದು ಪಾರ್ವತೀಪತಿಯ (ಪ್ರಭುಲೀ. ೨-೧೦) ; ಒಡಲಿನೊಂದು ಸೂಡುಂ ಸೀತಾಂಗನಾವದನಶೀತಾಂಶುದರ್ಶನದತ್ರಣಂ ತಿಳಿದು ಮಾರ್ಪಟ್ಟುದೋ ಎನೆ (ಉಮಾಶ್ಯ. ೨೯-೩೨). [ಸಂ.]

ಶೀತಾದ್ರಿಜಾತೆ (ನಾ). ಹಿಮವಂತನ ಮಗಳು; ಪಾರ್ವತಿ; ಗಿರಿಜೆ: ಶೀತಾದ್ರಿ ಜಾತಾರ್ಧಶೋಭಿತಶರೀರ ಮನ್ಮಾಥ ನಿಗಮಾತೀತನೆ . . . ರಕ್ಷಿಸೆನ್ನಂ (ಪ್ರಾಢಾ. ೯-೧). [ಸಂ. ಶೀತಾದ್ರಿಜಾತಾ]

ಶೀತಾಶ್ಮ (ನಾ). ಹಿಮಗಲ್ಲು; ಮಂಜುಗಡ್ಡೆ: ತಪ್ತಾಶ್ಮಂ ಶೀತಾಶ್ಮದಂತಿರ ಕೋಡುಗುಂ (ಶಾಂತಪು. ೭-೮೫). [ಸಂ. ಶೀತಾಶ್ಮನ್]

ಶೀತಾಳ$_1$ 'ಸೀತಳ' ನೋ.

ಶೀತಾಳ$_2$ 'ಸೀತಾಳೆ' ನೋ.

ಶೀತಾಳು (ಗು). ಶೈತ್ಯದಿಂದ ಸೊರಗಿದ: ಶೀತಾಳುಕಮಲೋಪವೀತಮೆನಿಸಲಾ ಮೊಗಂ ವೇತಾಳಸೋಂಕನನುಕರಿಸಿ ಬರೆ ಶುಭರದಂ ಸೋತಾಳಿಯಿಂದದೊಳ್ಕೆಡೆದಳ್ (ವಂಗಾಲಾ. ೨-೯೨). [ಸಂ. ಶೀತಾಲು]

ಶೀತೋದಕ (ನಾ). = ಶೀತಾಂಬು : ಅಕಳಂಕಜಿನಾಭಿಷವೋತ್ಸುಕದೊಳ್ ನಾಂದಾಱಿಸಲ್ಕೆ ಪರಪಿದ ಕುಟಿಳಾಳಕದೊಳ್ ತಗುಳ್ದ ಶೀತೋದಕವನೆ ಕರ್ಬುರಿತಮಾಗಿ ಸೊಗಯಿಸಿ ತೋರ್ಪುದಂ (ಶಾಂಪು. ೧೦-೫೩); ಶೀತಪ್ರದೇಶಗಳಿಂದ ಉಷ್ಣಪ್ರದೇಶಗಳಿಗೆ ಹರಿಯುವ ಉದಕಪ್ರವಾಹ ಶೀತೋದಕಪ್ರವಾಹ (ಭೂವಿವ. ೯೧). [ಸಂ.]

ಶೀಧು (ನಾ). ಮದ್ಯ; ಹೆಂಡ; ಮಧುಃ - ಪಕ್ವವಾದ ಕಬ್ಬಿನ ರಸದಿಂದ ಮಾಡಿದ ಹೆಂಡ; ಸಾರಾಯಿ'' (ಸಿದ್ಧಾಂತ ೧೨೫); ಅಂಥಾತ್ಮಶೀಧುಗಳ ಸಿಂಧುವೆನಲೆಸೆವುದೀ ದೈವಸುಂದರಭಾವ ಜಾನಪದಿಕ (ಮಲಿದೇ. ೪೦-೫). [ಸಂ.]

ಶೀನ (ಗು). ೧. ಹೆಪ್ಪುಗಟ್ಟಿದ; ಘನೀಭೂತವಾದ. (ನಾ). ೨. ಹೆಪ್ಪಾದುದು; ಗರಣೆ : ''ಶೀನಂ ಸ್ಯಾನಂ'' (ಮಪ್ರಕೋ. ೯೨-೨). ೩. ಮೂರ್ಖ ; ದಡ್ಡ. ೪. ಅಜಗರ ; ಹೆಬ್ಬಾವು. [ಸಂ.]

ಶೀನು 'ಸೀನ್$_1$' ನೋ.

ಶೀಬಾರಿಬೇರು 'ಸೀಬರಿಬೇರು' ನೋ.

ಶೀಮೆ (ನಾ). ಪ್ರದೇಶ; ಪ್ರಾಂತ : ಘನಗಿರಿನಗರಕ್ಕೆ ಪಶ್ಚಿಮಭಾಗದಲ್ಲಿಯಿಹ ವೈತಳದ ಶೀಮೆ (ಎಕ. XII, ಚಿಕ್ಕನಾ. ೧-೮ ; 1622); ಬೈಲುಶೀಮೆ ಅಥವಾ ಬೆಳವಲು (ಕಫಾಗ. ೪).

[< ಸಂ. ಸೀಮಾ]

ಶೀಯವಲ್ಲವರಸ 'ಸೀಯವಲ್ಲವರಸ' ನೋ.

ಶೀರಣಿಗಾಱ (ನಾ). (ಉಳಿಯಿಂದ) ಕೆತ್ತನೆ ಕೆಲಸ ಮಾಡುವವನು (?) : ಅಂದದ ಕಂಚುಗಾಱರ ತಮ್ಮಟೆ ದ್ವಂದ್ವ ಅಕಸಾಲೆ ಚಿನಿವಾರನು ಬಂದ ಶೀರಣಿಗಾಱ ಗಾಣಿಗ ಕೇಣಿ ಮಣಿಗಾಱ . . . ಹಱಿದ ಅಂಗಿಯ ಹೊಲಿವ ಸೂಜಿಗ (ನಂದಿಲೀ. ೯-೯).

[ಶೀರಣ್ಣಿ (< ಚೀರಣೆ) + — ಗಾರ (< — ಕಾಱ]

ಶೀರಣಿಗೆಹಂಬು 'ಸೀರನಿಗೆಹಂಬು' ನೋ.

ಶೀರ್ಣ (ಗು). ೧. ಒಣಗಿದ; ಬತ್ತಿದ: ಅಸುರಾತ್ಮಜನ್ಮನ ಮಹಾವಿದ್ಯಾಬಲಂ ಶೀರ್ಣಪಲ್ವಲ[ದು]ತಾಗೆ (ಶಾಂತಿಪು. ೬-೩೮). ೨. ಹಳೆಯದಾದ ; ಜೀರ್ಣವಾದ. ೩. ಹರಿದುಹೋದ; ಚಿಂದಿಯಾದ: ಎನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ ಕಂಡವರೆಲ್ಲಮೆಟ್ಟೆದು ಕಳೆಯೆ ಪರೇತವನಭೂಮಿಯೊಳ್ ಜೀರ್ಣಶೀರ್ಣಚೀರಂಗಳೊಳ್ ಪುದಿದಿರಿಸಿ ಪೋಗಿ ತಾವಿರ್ಬರುಂ . . . ಬಳೆಯೆ (ಆದಿಪು. ೩-೩೪ ವ). ೪. ಸೀಳಿದ : ರಂಭಾವಲ್ಕಲಶಲ್ಕಂಗಳೊಳಂ ಶೀರ್ಣನಾಳಿಕೇರಪರ್ಣಂಗಳೊಳಂ . . . ಗೊಜ್ಜಗೆಯ ಮುಗುಳ ಗೆಜ್ಜೆಯುಮಂ ಬಂದುಗೆಯಂದುಗೆಯುಮಂ . . . ಮನೋಹರಮೆನೆ ಸಮೆದು (ಚಂದ್ರಪು. ೭-೧೧೪ ವ). ೫. ಕೃಶವಾದ; ತೆಳ್ಳಗಿರುವ. ೬. ಚೂಪಾಗಿರುವ; ಮೊನಚಾದ: ಪುಣ್ಡಂತಿಣಿಗೆಱಗೆ ನೊಳಂ ಶೀರ್ಣಶೃಂಗಾಗ್ರದಿಂ ಮಾರ್ದೊಡೆಯುತ್ತುಂ ಪಾಯ್ದು ಪಿಂಡಂ ಕಲಂಕಿ ಕೆಲೆಯುತುಂ . . . ಬಂದುದು ಮದವಿದಳತ್ಪಿಂಗಳಾಕ್ಷಂ ಮಹೋಕ್ಷಂ (ಲೀಲಾವ. ೫-೮೭). [ಸಂ.]

ಶೀರ್ಷ (ನಾ). ೧. ತುದಿ; ಅಗ್ರ : ಗಿರಿಶೀರ್ಷಗತಂಗಳ್ ಅಱುನೂಱುಯೋಜನಂ ಪೋದಲ್ಲಿರ್ಪುವು (ತತ್ತ್ವಪ್ರ. ೧೪೮); ಆ ಗಿರಿಯ ಶೀರ್ಷದೊಳ್ಳಿವಲೋಕವಿರ್ಪುದದನೀಗರಿದು ಬಣ್ಣಿಸುವರಾರು (ಕುಮಾಪು. ೧-೪೫). ೨. ತಲೆ; ಶಿರ: "ಮುಂಡಃ . . . ಶೀರ್ಷಃ, ಮೂರ್ಧಾ, ಕಂ — ಈ ೮ ಮಂಡೆ" (ಹಲಾಯು. ೮೫-೩೬೪). [ಸಂ.]

ಶೀರ್ಷಕ (ನಾ). ೧. ತುದಿ ; ಅಗ್ರಭಾಗ. ೨. ತಲೆ; ಶಿರ. ೩. ತಲೆಯ ಬುರುಡೆ; ಓಡು. ೪. ತಲೆಗೆ ಧರಿಸುವ ಕುಲಾವಿ, ಟೋಪಿ, ರುಮಾಲು ಮುಂತಾದುವು: "ಶೀರ್ಷಕಂ ತಲೆಸುತ್ತು" (ಮಂಗರಾ. ೧೦೧-೨೮). ೫. ಶಿರಸ್ತ್ರಾಣ; ಸೀಸಕ: "ಶೀರ್ಷಕಂ, ಶೀರ್ಷಣ್ಯಂ, ಶಿರಸ್ತ್ರಂ — ೩ ತಲೆಯನ್ನು ರಕ್ಷಿಸುವ ಲೋಹದ ಟೊಪ್ಪಿಗೆ" (ಸಿದ್ಧಾಂತಿ. ೬. ತಲೆಯಲ್ಲಿ ಧರಿಸುವ ಹೂವು, ಆಭರಣ ಮುಂತಾದುವು: "ಮಂಡೆಯಲಿ ಮುಡಿದ ಹೂ ಚೌರಿಗಳು ಶೀರ್ಷಕಂ" (ಮಂಗರಾ. ೯೮-೨೦); ನಾನಾರತ್ನ ಸುವರ್ಣಪದಕವಿರಚನಾದಿ ಭೇದದಿಂ ಪ್ರತ್ಯೇಕಶೀರ್ಷಕೋಪಶೀರ್ಷಕಾವಘಾಟಕಪ್ರಕಾಂಡಕ ತರಲತರಬಂಧೋಪಪದಪಂಚಕಸಮೇತಂಗಳಾಗಿ (ಆದಿಪು. ೮-೫೪ ವ). [ಸಂ.]

ಶೀರ್ಷರತ್ನ (ನಾ). ತಲೆಯಲ್ಲಿ ಧರಿಸುವ ಶ್ರೇಷ್ಠವಾದ ಮಣಿ; ಚೂಡಾಮಣಿ: ಅಹಿರಾಜರುಚಿರಶೀರ್ಷರತ್ನದೃಢಬೀಜಕರಾಂಕುರತತ್ಪ್ರತಾಪವಲ್ಲರಿ ರವಿರೋಚಿಯೆಂಬ ವಿಷಧಿಂ ದಶದಿಕ್ಕನೆ ಪರ್ಬಿ ಪೆತ್ತುದೊ (ರಾಜಶೇ. ೫-೫). [ಸಂ.]

ಶೀರ್ಷಾಭರಣ (ನಾ). ೧. ತಲೆಯಲ್ಲಿ ಧರಿಸುವ ಒಡವೆ; ಶಿರೋಭೂಷಣ. ೨. ಶ್ರೇಷ್ಠವಾದುದು; ಅತ್ಯುತ್ತಮವಾದುದು: ಶೀರ್ಷಾಭರಣಂ ಧರೆಗುತ್ಕರ್ಷ ವಿಳಾಸನದ ಭೂಮಿ ಸಕಳಜನಕ್ಕಂ ಹರ್ಷಮನೀವುದು . . . ರಾಜಪುರಂ (ಯಶೋಚ. ೧-೨೭). [ಸಂ.]

ಶೀರ್ಷಾಸನ (ನಾ). [ಯೋಗ] ತಲೆಯನ್ನು ಕೆಳಗೆ ಮಾಡಿ ನಿಲ್ಲುವ ಒಂದು ಬಗೆಯ ಆಸನ : ಆಸನಗಳಲ್ಲಿ ಶೀರ್ಷಾಸನ, ಸರ್ವಾಂಗಾಸನ ಎರಡು ಹೊತ್ತು ಮಾಡಬೇಕಾದವುಗಳಾಗಿವೆ (ಭಾರದ. ೧೫೭). [ಸಂ.]

ಶೀರ್ಷಿಕೆ (ನಾ). ತಲೆಬರಹ ; ಶಿರೋನಾಮೆ: 'ಈ ವಾರದ ವ್ಯಕ್ತಿ' ಎಂಬ ಶೀರ್ಷಿಕೆ [illegible] ಮಾಡತಕ್ಕದ್ದು (ಅಪನಾ. ೬); "ಆನಂದವರ್ಧನನ ಕಾವ್ಯಮೀಮಾಂಸೆ" ಎಂಬ [illegible] ಕೆಯಲ್ಲಿಯೂ . . . ಪ್ರಕಟವಾದುವು (ಧ್ವನ್ಯಾಲೋ. XII, ಅರಿಕೆ). [ಸಂ. ಶೀರ್ಷಿಕಾ]

ಶೀರ್ಷೋದಯ (ನಾ). [ಜ್ಯೋತಿ] ಅಗ್ರಭಾಗದಿಂದ ಹುಟ್ಟುವ ರಾಶಿ; IP ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಂಭ - ಈ ಐದು ಶೀರ್ಷೋದಯ ರಾಶಿಗಳು : ಅರಿ ನೀಚಗೃಹಂ ಪೊಱಗಾಗಿರೆ ಶೀರ್ಷೋದಯದೊಳಿರೆ ಸಮಸ್ತ ಗ್ರಹಮೊಂದಿರೆ ಕರ್ಕಲಗ್ನದೊಳ್ ಶೀತರೋಚಿ ಪರಿಪೂರ್ಣನಾಗೆ ನೃಪನಕ್ಕುಮವಂ (ಜಾತತಿ. ೧೨-೭). [ಸಂ.]

ಶೀಲ, ಶೀಳ (ನಾ). ೧. ನಡತೆ; ಸ್ವಭಾವ : "ಶೀಲಂ ಸುಚರಿತ್ರಮುಂ ಸ್ವಭಾವಮುಮಕ್ಕುಂ" (ವಸ್ತುಕೋ. ೧೨೩-೩೩) ; ಶೀಲ ಒಳ್ಳೇದಾದರೂ ಗುಣ ಕೆಟ್ಟದ್ದು (ಗಾದೆ). ೨. ಒಳ್ಳೆಯ ನಡತೆ; ಸದಾಚಾರ: ಶೀಲಾಲಂಕೃತೆಯನಾ ಮಹಾಸತಿಯಂ ಶ್ರೀತೈಲಾಂಬಿಕೆಯಂ . . . ಕಲಂಕಮೇಂ ಪೊರ್ದುಗುಮೇ (ಅಜಿಪು. ೧-೭೪); ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸುವುದು (ಬಸವ. ೬೧೩); ಶೀಲದ ಫಲಮೇಂ ಶ್ರೀಯೊಳ್ ಮೇಲಪ್ಪನಿತೆ ವಲಮದುವುಮಿಂ . . . ಲೀಲೆಯಿನೀ ಭವದೊಳಪ್ಪ ಸಿರಿಯದು ಪೊಲ್ಲಾ (ಜೀವಸಂ. ೨೨೭-೩೭). ೩. ಒಳ್ಳೆಯ ಆಕಾರ, — ರೂಪ. ೪. ಹೆಣ್ಣಿನ ಪಾವಿತ್ರ್ಯ,— ಪವಿತ್ರತೆ : ಶೀಲ ಒಳ್ಳೇದಾದರೂ ಗುಣ ಕೆಟ್ಟದು (ಗಾದೆ). ೫. ಮಡಿವಂತಿಕೆ : ನೀರು ಹೆಚ್ಚಾಗಿ ಶೀಲ, ಕೂಳು ಹೆಚ್ಚಾಗಿ ಕುಲ (ಗಾದೆ). ೬. (ಸಮಾಸಪದದಲ್ಲಿ ಉತ್ತರಪದವಾಗಿ ಬಂದಾಗ) 'ಪ್ರವೃತ್ತಿಯುಳ್ಳವನು', 'ಸ್ವಭಾವವುಳ್ಳವನು' ಎಂಬರ್ಥವನ್ನು ಸೂಚಿಸುವ ಶಬ್ದ: 'ದಾನಶೀಲ' ಪರಾ. ೭. [ಜೈನ] ಧಾರ್ಮಿಕ ಆಚರಣೆಯ ನಿಯಮ; IP "ದಿಗ್‌ವ್ರತ, ದೇಶವ್ರತಾದಿಗಳಿಗೆ ಮತ್ತು ಸಾಮಯಿಕ ಪ್ರೋಷಧೋಪವಾಸಾದಿಗಳಿಗೆ ಶೀಲವೆನ್ನುತ್ತಾರೆ" (ಆದಿಪು. ಜೈನಪಾರಿಭಾಷಿಕ ಶಬ್ದಕೋಶ): ಬಗೆಯೊಳ್ ಪೊಣ್ಮೆ ದಯಾರಸಂ ಚರಿತದೊಳ್ ಕೈಗಣ್ಮೆ ಚಾರಿತ್ರಮಾಗಮಾವಶ್ಯಕದೊಳ್ ತಗುಳ್ದು ಪಲವುಂ ಶೀಲಂಗಳಂ ತಾಳ್ದಿ (ಆದಿಪು. ೧-೫); ನಿಯಮಂ ವೃತಿ ಶೀಲಮಾಳವಳಮೆನಲ್ಕೇಟ್ಗೆಯನಾಳ್ದು ಸುಖದ ಫಲಪ್ರಾಪ್ತಿಯನಾಗಿಪ ಕಲ್ಪವೃಕ್ಷಮಲ್ಲದೆ ಧರ್ಮಂ (ಪುಷ್ಪಪು. ೧೩-೫೫). ೮. [ವೀಶೈ] ಯೋಗ್ಯವಾದ ಆಚಾರಗಳನ್ನು ಅನುಸರಿಸುವುದು; IP ಇದರಲ್ಲಿ ಇಪ್ಪತ್ತುನಾಲ್ಕು ಮತ್ತು ಅರುವತ್ತುನಾಲ್ಕು ಪ್ರಭೇದಗಳಿವೆ : ಆದಿ ಆಧಾರ ತನುಗುಣ ಉಳ್ಳನ್ನಕ್ಕರ ಸಮತೆ ಎಂಬುದೇನೋ ಕಾಲಕಲ್ಪಿತ ಉಪಾಧಿ ಉಳ್ಳನ್ನಕ್ಕರ ಶೀಲವೆಂಬುದು ಭಂಗ (ಅವಚಂ. ೧೦೫-೪೭೭) ; ಇಂತಿವಿರ್ಪತ್ತನಾಲ್ಕೀ ತೆಱದ ಶೀಲಗಳನಂತವುಂಟೈ ಕೆಂಚವೀರಾಹ್ವಯಾ ಕೇಳು (ವೀಶೈಪು. ೭-೧೬-೩೨); ತಿಳಿದೆಯಾ ಶೀಲವಱುವತ್ತನಾಲ್ಕುಂ ಮಹೋಜ್ವಳವಾದವೈ (ವೀಶೈಪು. ೭-೧೬-೫೯). ಶೀಳ: ೭. ಕೈಕೊಂಡು ಪರ್ಯಷ್ಟಿಯನನವರತಂ ಮಾಟ್ಪ ಶೀಳೋತ್ಕರಂ ಕೂಡಿರೆ ವೈಯಾಪೃತ್ಯಮೆಂಬೀ ತಪದೊಳೆಸಗಿದಂ ಸೂರ್ಯಮಿತ್ರಬ್ರತೀಂದ್ರಂ (ಸುಕುಮಾ. ೪-೧೭).

[ಸಂ.]

ಶೀಲಭದ್ರ (ನಾ). ಶ್ರೇಷ್ಠವಾದ ಗುಣವುಳ್ಳವನು: ಶ್ರೀಶೀಲಭದ್ರಂ ದ್ವಿಷಜ್ಜನ ದುರ್ಭಾರಗಜಾಂಕುಶಂ ಸುಜನರತ್ನಂ ತಾತನಲ್ಕೇಂ [ಕೃತಾ]ರ್ಥನೊ . . . ಶ್ರೀಧರಂ (ಜಾತತಿ ೧-೫). [ಸಂ.]

ಶೀಲವಂತ (ನಾ). ೧. ಒಳ್ಳೆಯ ನಡತೆಯುಳ್ಳವನು; ಸಚ್ಚರಿತ: ಶೀಲವಂತರ ಕೈಯ ಕನ್ನಡಿ ಕಾಲಕಂಠನ ಕೂರಲಗು ಕರುಣಾಳ ಬಸವಂ ಲಿಂಗಜಂಗಮದೊಳು ಸೊಬಗನು (ಬಸಪು.೧-೩೩) ; ಶೀಲವಂತರನಂತರುಂಟಿವಳಂತೊಱಂತೆಯನೆಯ್ದೆ ತಮ್ಮಾಲಯಸ್ಥಳದಲ್ಲಿ ತೋಡಿದರುಂಟೆ (ವೃಷವಿ. ೩೨-೪೮); ಶೀಲವಂತರಿಗೆ ಶಿಲೆಯೂ ಒಲಿಯುವುದು (ಪೈಮಹ. ೪೭). ೨. ಲಿಂಗಾಯಿತರ ಒಂದು ಪಂಗಡ: ಶೀಲವಂತರ ಸಂಖ್ಯೆ ಬಹು ಸ್ವಲ್ಪವಿರುತ್ತದೆ (ಕಭಾಗೆ.೯೫). ೩. [ವೀಶೈ] ಅರುವತ್ತು ನಾಲ್ಕುಶೀಲಗಳನ್ನು ಪಾಲಿಸುವ ಸಂಕಲ್ಪಮಾಡಿಕೊಂಡವನು : ಲಿಂಗದ ಹೊಲಬನಱಿಯದೆ ಭಕ್ತ ಶೀಲವಂತನಾದ ಆದಿಮಧ್ಯಾವಸಾನದಲ್ಲಿ ಗುಹೇಶ್ವರಲಿಂಗವು ಅಱಿವಿನ ಮಱೆಯಲ್ಲಿಹುದನಾದರೂ ಅಱಿಯರಲ್ಲಾ (ಅವಚಂ. ೧೧೪-೫೧೬); ವೀರಮಹೇಶ್ವರಾರಾಧಕನಾದ ಶೀಲವಂತ ದಳವಾಯಿ ಪರಮ X ಪ್ಪ X ಮಠ ಕೆರೆ ತೋಟ ಯಿ XX ಮಾಡಿಸಿ (ಎಕ. XVI, ಚಿಕ್ಕನಾ. ೧-೧೧ ; 1623).

[ಸಂ. ಶೀಲವತ್]

ಶೀಲವತಿ (ನಾ). ಒಳ್ಳೆಯ ನಡತೆಯುಳ್ಳವಳು ; ಸದಾಚಾರಿಣಿ: ಜಳದೇವತ ಕೋಡುವ ತಿಳಿಗೊಳದೊಳಗಿರ್ಪಂತೆ ಶೀಲವತಿ ಸೀತೆ ವಿನಿಶ್ಚಳಮಿರೆ ಮನದೊಳ್ ಜಿನಪತಿಚಳಣಂ ದಳ್ಳುರಿಯ ನಡುವೆ ಕೋಡುತ್ತಿರ್ದಳ್ (ಪಂರಾಮಾ. ೧೬-೨೮).

[ಸಂ. ಶೀಲವತೀ]

ಶೀಲವ್ರತ (ನಾ). [ಜೈನ] ಮುನಿಜೀವನದ ವ್ರತಾಚರಣೆ : ದರ್ಶನವಿಶುದ್ಧನಾಗಿಯುಂ ಶೀಲವ್ರತಭಾವನಾರಹಿತನಸಂಯುತಂ ಜಘನ್ಯಪಾತ್ರಂ (ಆದಿಪು. ೧೦-೯ ವ); ಶೀಲವ್ರತಮಂ ತಾಳ್ದದ ಮೇಲೆನಿಸುವ ಪಾತ್ರದಾನಮಂ ಮಾಡದೆ ಸಲ್ಲೀಲೆಯಿನಿಂದ್ರನ ಸಿರಿಯಂ ಪಾಲಿಸಲೆಲೆ ಮರುಳೆ ಬಾರದವನೀತಳದೊಳ್ (ಧರ್ಮಾಮೃ. ೬-೧೫೦).

[ಸಂ.]

ಶೀಲಸಂಪನ್ನ (ನಾ). ೧. ಒಳ್ಳೆಯ ನಡತೆಯಿಂದ ಕೂಡಿರುವ ವ್ಯಕ್ತಿ : ಅವರು ಶೀಲಸಂಪನ್ನರು (ಮೂಢ). ೨. [ಜೈನ] ಶೀಲವ್ರತವನ್ನು ಆಚರಿಸುವವನು: ದರ್ಶನವಿಶುದ್ಧನುಂ ಶೀಲಸಂಪನ್ನನುಮಪ್ಪ ಸಂಯತನುತ್ತಮಪಾತ್ರಂ (ಆದಿಪು. ೧೦-೯೨ ವ); ವಿಶದಯಶೋನಿಳಯಂ ವಿಮಳಶೀಲ[ಪಾಠಾಂ.ಳ]ಸಂಪನ್ನನುಚಿತಭೈಕ್ಷಾನೀಕಂ (ಸುಕುಮಾ. ೬-೩೬). [ಸಂ.]

ಶೀಲಸಂಪನ್ನೆ (ನಾ). ಒಳ್ಳೆಯ ನಡತೆಯನ್ನು ಹೊಂದಿರುವವಳು : ನೀನು ಶೀಲಸಂಪನ್ನೆಯಾಗಿ ಕನ್ನಡಕನ್ನೆಯರ ಚೂಡಾಮಣಿಯಾಗಿರುವೆ (ದಾನಚಿಂ. ೧೭೬).

[ಶೀಲಸಂಪನ್ನ + — ಎ]

ಶೀಲಿಗ (ನಾ). ನಟನೆ ಮಾಡುವವನು: ಅಯ್ಯಾ ನಾಟಕನಲ್ಲ ಬೂಟಕನಲ್ಲ ಶೀಲಿಗನಲ್ಲ ಕಪಟನಾಟಕನಲ್ಲ . . . ನೋಡಾ ನಿರವಯಶೂನ್ಯಲಿಂಗಮೂರ್ತಿ ಗುಹೇಶ್ವರಲಿಂಗವು (ಪಚಶಾ. ೧. ೧). [< ಸಂ. ಶೀಲಿಕ]

ಶೀವಿಗೆದ್ದೆ 'ಸೀವಿಯ ಗೆದ್ದೆ' ನೋ.

ಶೀಶೆ 'ಸೀಸೆ' ನೋ.

ಶೀಸೆಬಿರಟುಮರ 'ಸೀಸೆಬಿರಟುಮರ' ನೋ.

ಶೀಳ 'ಶೀಲ' ನೋ.

ಶುಂಟ, ಶೊಂಟಿ, ಸುಂಟ (ನಾ). ೧. ದಡ್ಡ; ತಿಳಿಗೇಡಿ; ಮೂರ್ಖ: ಆ ಶುಂಟನಿಗ ಎಷ್ಟು ಹೇಳಿದರೂ ಬುದ್ಧಿ ಬಾರದು (ಮೂಢ). **ಶೊಂಟಿ** : ೧. 'ಶೊಂಟಿಕೊಂಬು' ಪರಾ. **ಸುಂಟಿ**: ೧. ನಂಬಿದರ್ಗರಡ ಬಗೆವವನ ಸುಂಟಂ ತುಂಟಗಂಟುಕನ ಪರರೊಡಮೆಗಂ ಪಂಬಲಿಸುವನ . . . ತುಚ್ಛದ ಮದಡನಂ (ಪ್ರಭುವ. ೭-೨೩೮). ೨. ಹೆಡವಾದಿ; ಮೊಂಡ: ಅನೇಕವಾದದಿಂದನ್ಯವಾದಕೋಳಾಹಳಂಗಯ್ಯಲೊಡಂ ಸೋಲ್ತು ತಲೆ ಸತ್ತುಂ ಬಾಲಂ ಸಾಯದೆಂಬ ಸುಂಟರಂತೆ ಕುಂಠಿತಮಾದ ನೀತಿಹೀನ ನಿಷ್ಠುರವಾದದಿಂ ಜನುಗುತ್ತಿರೆ ನೋಡಿ (ಪಮ್ಮೂರ. ೭-೪೫ ವ). [< ಸಂ. ಶುಂಠ./ ತೆಲು. ಶುಂಠ./ ಮರಾ. ಶುಂಟ, ಶುಂಠ]

ಶುಂಟಿಕೆ 'ಸುಂಟಿಗೆ' ನೋ.

ಶುಂಠ (ಗು). ೧. ತಿಳಿವಳಿಕೆಯಿಲ್ಲದ; ಮೂರ್ಖತನದಿಂದ ಕೂಡಿದ : ಬದ್ಧವಾದ ನಯನುಡಿಯು ಇಲ್ಲದಾತನ ಹೊಲೆಯ ಶುದ್ಧ ತಾನೆಂಬಾತ ಶುಂಠ ಹೊಲೆಯ (ಪುರಂದ. ೧-೧೭೬-೩); ಪಂಠಿಸಲಕ್ಕೆ ದ ಧರೆಯನೊಪ್ಪಿಸಿಕೊಟ್ಟ ಶುಂಠಭೂಪರ ಬಿಟ್ಟು ಬಂದು (ಕಂಪಿ. ೫೧-೬೦); ಶುಂಠಮನುಷ್ಯರಾ ಧರಣಿಪರ್ ದನುಜರ್ ಮುನಿಗಳ್ (ಕಳಿಕಂ. ೬). (ನಾ). ೨. ದಡ್ಡ; ಮೂರ್ಖ: ಶುಂಠನ ನೆರೆ ಸಲ್ಲ ಕುಂಟನ ಕೆಳೆ ಸಲ್ಲ ತುಂಟನೊಳೇಕಾಂತ ಸಲ್ಲ (ಸಂಚಾಪ. ೧೭೧-೪೫); ಶುಂಠನಿಗೆ ಎಂಟಮ್ಮ ಕಲಿಸಿದರೂ ವ್ಯರ್ಥ (ಗಾದ). [ಸಂ.]

ಶುಂಠತನ (ನಾ). ೧. ದಡ್ಡತನ; ಮೂರ್ಖತನ: ಅವನ ಶುಂಠತನಕ್ಕೆ ಮಿತಿಯೇ ಇಲ್ಲ (ಮೂಢ). ೨. (ಆಲಂ) ಮೋಸ; ವಂಚನೆ: ಭೂಪರ ಹಣಗಳನ್ನು ತಿಂದು . . . ನಿಜಶ್ರೇಯಪ್ರಾಪ್ತಿಗೆ ಶುಂಠತನದಲಿ ಮೆಱೆವ ಕರಣಕಧೂರ್ತರನು ಕಂಡ (ಕೌಶಿಕಾ. ೧೦-೩೦). [ಶುಂಠ + — ತನ]

ಶುಂಠಿ (ನಾ). ೧. (ಅಡುಗೆಗೂ ಔಷಧಿಗೂ ಬಳಸುವ) ಅರಿಸಿನದ ಜಾತಿಗೆ ಸೇರಿದ ಒಂದು ಬಗೆಯ ಬೇರು: ರಾಜಾನ್ನದಕ್ಕಿ ಜೀರಿಗೆ ಕೊತ್ತುಂಬರಿ ಶುಂಠಿ ಲಂಬಿವೊಡಗೂಡಿರೆ ಕಾಸಿದ ಗಂಜಿ (ಕಲ್ಕಾಕಾ. ೩-೨೫); ಜೀರಿಗೆ ಶುಂಠಿ ಹಾರಕಂ (ಷಡ್ಭಕಾ. ೧೩-೪೩); ಅರಿಶಿನ, ಶುಂಠಿ – ಇವುಗಳು ೬ ತಿಂಗಳಿಗಿಂತ ಹೆಚ್ಚಾಗಿ ಭೂಮಿಯಲ್ಲಿರಬೇಕಾದ ಕಾರಣ ವರ್ಷಕ್ಕೆ ಆಗುವುದು ಒಂದೇ ಬೆಳೆ (ವೃವಮ. ೫೪). ೨. (ಆಲಂ) ಶೂನ್ಯ; ಸೊನ್ನೆ : ಕಾವಲುಗಾರರಿಗೆ ಹಿಂದೂಸ್ಥಾನೀಭಾಷೆ 'ಶುಂಠಿ' (ಯದುರಾ. ೧೩). ೩. ದಡ್ಡ; ಮೂರ್ಖ : ಇವನೊಬ್ಬ ಶುದ್ಧ ಶುಂಠಿ (ಮೂಢ).

ಶುಂಠಿಕಷಾಯ = ಶುಂಠಿ ಮೊದಲಾದುವನ್ನು ಹಾಕಿ ಕಾಯಿಸಿ ಮಾಡಿದ ದ್ರವ : ಶುಂಠಿಕಷಾಯ ಶೀತಕ್ಕೆ ತುಂಬಾ ಒಳ್ಳೆಯದು (ಮೂಢ). ಶುಂಠಿಯ ಘೃತ = ಶುಂಠಿಯನ್ನು ಸೇರಿಸಿ ತುಪ್ಪದಲ್ಲಿ ಪಾಕಮಾಡಿ ತಯಾರಿಸುವ ಒಂದು ಬಗೆಯ ಲೇಹ್ಯ : ಶುಂಠಿಯ ಘೃತ — ತೊಕ್ಕ ತೆಗೆದ ಶುಂಠಿ ಒಂದು ಮಾನ, ಹಿಪ್ಪಲಿಮೂಲ ಒಂದು ಪಡಿ ಸಹ ಜಜ್ಜುಗುಟ್ಟಿ ಎರಡುಬಳ್ಳ ನೀರಿನಲ್ಲಿ ಹಾಕಿ . . . ಕಾಸಿ ಹದದಲ್ಲಿಳುಹಿ ದಿನಂಪ್ರತಿಯೂ ಗ ೧ ತೂಕವಂ ಸೇವಿಸೆ ನನೆಹೊರಟ ಸರ್ವಾತಿಸಾರಂ ಮಾಣ್ಗುಂ (ಸಕವೈ. ೩೫). [ಸಂ. ಶುಂಠಿ, ಶುಂಠೀ]

ಶುಂಠಿಹುಲ್ಲು (ನಾ). ಒಂದು ಬಗೆಯ ಹುಲ್ಲು : ಶುಂಠಿಹುಲ್ಲು, ಕರೀಕಡ್ಡಿಹುಲ್ಲು (ಮೈದಿಗಿ. ೫೯-೧೧೯೦). [ಶುಂಠಿ + ಹುಲ್ಲು (< ಪುಲ್)]

ಶುಂಡ (ನಾ). ೧. ಆನೆಯ ಸೊಂಡಿಲು : ಎಸವ ಶುಂಡಂ ತುದಿಯಲ್ಲಿ ನೇಲ್ವ ಪೆರ್ವಾವು (ಕುಮಾಪ್ರ. ೪-೧೯೨). ೨. ಆನೆಯ ಮದೋದಕ. ೩. ಕಪ್ಪೆ; ಮಂಡೂಕ: "ಇಭಹಸ್ತಂ ಭೇಕ ಶುಂಡಾಂಕಿತಂ" (ನಾನಾರ. ೧೩೨). [ಸಂ.]

ಶುಂಡಲ 'ಸುಂಡಿಲ್' ನೋ.

ಶುಂಡಾದಂಡ (ನಾ). ಆನೆಯ ಸೊಂಡಿಲು : ದ್ವಿಪಶುಂಡಾದಂಡಸೀತ್ಕಾರ ದಿನರದಚಲಚ್ಚಕ್ರಚೀತ್ಕಾರದಿಂ . . . ಶಬ್ದಾತ್ಮಕಂ ಮಾಡಿದುದುಭಯಮಹೀ ಭೃಚ್ಚಮೂಚಕ್ರವಾಳಂ (ಚಂದ್ರಪ್ರ. ೧೦-೬೭); ಮದನಮದಗಜದ ಮದರಸಂ ಪತ್ತಿದ ಶುಂಡಾದಂಡಾಗ್ರಮನದಱಿ ಕಂಪಿಗೆಳಸಿ ಬಳಸಿದಳಿಮಾಲೆಯ ಲೀಲೆಯಂ ತಳೆದು (ರಾಜಶೇ. ೧೨-೫೬ ವ). [ಸಂ.]

ಶುಂಡಾಪಾನ (ನಾ). ಮದ್ಯಪಾನ ಮಾಡುವ ಅಥವಾ ಮದ್ಯವನ್ನು ಮಾರುವ ಸ್ಥಳ ; ಗಡಂಗು. [ಸಂ.]

ಶುಂಡಾಲ, ಶುಂಡಾಳ (ನಾ). ೧. ಆನೆ : ಇಕ್ಷುದಂಡಪ್ರಣೇತನಿಜಭುಜದಂಡ ಕ್ರೀಡಾವಖಂಡಿತೋಚ್ಚಂಡ ಶುಂಡಾಲ[ಪಾಠಾಂ.ಳ] ಗಾತ್ರಾಪರಮತಿಬಾಲಕದಲಿಕಾ ಕಾಂಡಲೀಲಾಚ್ಛಿನ್ನಸಿಂಧುರಮಧ್ಯಹಸ್ತಂ (ಆದಿಪು. ೧೫-೪೫ ವ); ಸಿಂಹ ಶರಭ . . . ಶುಂಡಾಲ ಶಾರ್ದೂಲ ಸರ್ಪಾದಿ ಕ್ರೂರರೂಪಂಗಳಿಂ ಬಾಧಿಸದಂತು ಶಾಂತಿಯಂ ಮಾಡಲ್ಕೇಟ್ಟುದು (ಜಗವಿ. ೪-೭೭ವ). ೨. ಸೊಂಡಿಲು: "ದಿಗ್ಗಜದ ಹಸ್ತಮಂ ಶುಂಡಾಲಮೆಂಬುದು" (ಮಂಗಕಾ.೧೪೦-೧೧); ಮಹಾಲಿಂಗನೆಂಬ ಬಾಲಕ ಅರಸನ ಆನೆಯ ಶುಂಡಾಲಕ್ಕೆ ಸಿಲುಕಿ ಸತ್ತುಹೋಗುತ್ತಾನೆ (ಶರಚ. ೭೦೪). ೩. ಕಪ್ಪೆ : "ಗಜಹಸ್ತ ಕಪ್ಪೆಯರಡುಂ ನಿಜದಿಂ ಶುಂಡಾಲ" (ನಾನಾಕಂ. ೧೫೪). **ಶುಂಡಾಳ** : ೧. ಇದು ಶುಂಡಾಳಂ ನರೇಂದ್ರಂ ನಿಮಗೆ ಕುಡುವನಾಗಿರ್ದಪಂ ನೋಡ ದೃಷ್ಟಂ (ಸುಕುಮಾ. ೩-೭). [ಸಂ.]

ಶುಂಡಾಲಕೇತನ (ನಾ). ಆನೆಯ ಚಿಹ್ನೆಯುಳ್ಳ ಧ್ವಜ, — ಪತಾಕೆ : ಕುಮಾರಂ ಬಾಲಕಂ ಯುದ್ಧಯೋಗ್ಯನೆ ಕೈಕೊಳ್ಳುದು ದೇವರಿಂದಗಿಯನೆಂದಾಲೋಲ ಶುಂಡಾಲಕೇತನಮಂ ಚೋದಿಸಿದಂ ದಶಾಸ್ಯರಥಮಂ ಸೂತಂ ಮನೋವೇಗದಿಂ (ಪಂರಾಮಾ. ೧೦-೨೦೫). [ಸಂ.]

ಶುಂಡಾಳ 'ಶುಂಡಾಲ' ನೋ.

ಶುಂಡಿಲ್ 'ಸುಂಡಿಲ್'ನೋ.

ಶುಂಡಿಲು 'ಸುಂಡಿಲು' ನೋ.

ಶುಂಡೆ (ನಾ). ೧. ಆನೆಯ ಸೊಂಡಿಲು : "ಆನೆಯ ಕೈಯಲ್ಲಿಯುಂ ಶುಂಡಾಯೆಂಬುದು" (ಪಲಾಯು. ೧೩೪-೨೦). ೨. ಮದ್ಯ; ಕಳ್ಳು: "ಮಧು . . . ಸ್ವಾದುರಸಾ, ಶುಂಡಾ . . . ಮಧು - ಈ ೨೪ ಕಳ್ಳು" (ಪಲಾಯು. ೨೫-೧೭೪). ೩. ಮದ್ಯಪಾನ ಮಾಡುವ ಸ್ಥಳ : "ಶುಂಡಾ, ಪಾನಂ, ಮದಸ್ಥಾನಂ — ೩ ಮದ್ಯಪಾನ ಮಾಡುವ ಮನೆಯ ಹೆಸರು; ಗಿಡ್ಡಂಗಡಿ" (ವಿದ್ಯಾಂತ. ೩೧೪). ೪. ಕಮಲದ ಬಳ್ಳಿ. ೫. ಸೂಳೆ. [ಸಂ. ಶುಂಡಾ]

ಶುಂಭ 'ಸೋಂಬ' ನೋ.

ಶುಕ (ನಾ). ೧. ಗಿಣಿ; ಗಿಳಿ: ಶುಕಶಾಂಕಾದಿವಿಗ್ರಹಪ್ರಕರಮುಂ ಕೇಳ್ದ ವಚನಮಂ ನುಡಿವುದು ಕೌತುಕಂ (ಕಾದಂಪೂ. ೬೪); ಓದಿತ್ತು ಕಾಣಿರೋ ಶುಕನು ಶಿವಪಥವನಱಿಯದನ್ನಕ್ಕ

(ಬಸವ. ೧೪೩); ಶುಕಪಿಕದುಂದುಭಿಧ್ವನಿಗಳುಣ್ಮೆ ಮನೋಭವರಾಜನಾ ವಸಂತಕ ಸಖಯುಕ್ತನಾಗಿ ಬರಲ್ (ಕುಸುಮಾ. ೨-೯೪). ೨. ಒಬ್ಬ ಋಷಿಯ ಹೆಸರು; ವ್ಯಾಸ ಮಹರ್ಷಿಯ ಮಗ : ಸುಮೇಘವರ್ಣತಡಲ್ಲಿ ಅತ್ರಿ . . . ಶುಕ . . . ಉಪಮನ್ಯು ಮೊದಲಾದ ಅಷ್ಟಾಶೀತಿಸಹಸ್ರಋಷಿಗಳಿಗನಂತಾಶ್ರಯಂಗಳುಂ (ಎರೇಕ. ೨೮೬) : ಮನದ ರಂಭೆಯ ಗೆದ್ದು ಶುಕನಾತನಂತೊಲಿಸಿ. ಭಕ್ತಿಗಂಗೆಯ ಭಾರತದ ತೃಷೆಗ ತಂದಂ (ಗಿಳಿಂ. ೪೫-೩). ೩. ಶಿವ; ಈಶ್ವರ ೪. ರಾವಣನ ಒಬ್ಬ ಮಂತ್ರಿಯ ಹೆಸರು: ''ಚೂತಕುಜಂ ಗಿಳಿಯತಿವರಭೂತೇತನುಮಪುರಸಚಿವನೆಲವದವರನೆಂಬಾತ ಶಯನಾರು ನಾಮಂ ಕೌತುಕಮಲ್ಲನಿತು ಸಲುವ ಶುಕ ಶಬ್ದಂಗಳ್'' (ನಾಸಾಕಂ. ೧೭). ೫. ಬೂರುಗದ ಮರ; ಶಾಲ್ಮಲೀವೃಕ್ಷ : ಶುಕಮಯಂ ಶುಕಮಯಂ ಶುಕಮಯಂ ಗಿರಿಯ ಸಾನುವಿಂದೊಸರ್ದು ಪರಿವ ಜಲ ಹರಿಮಯಂ . . . ಕಾನನಂ ಕಣ್ಗೆಸೆದುದು (ಪಚಾ. ೨-೧೮). ೧, ೨, ೫ : ಭಾರದ್ವಾಜ ಶಾಂಡಿಲ್ಯಕ ಶುಕವಿಮದಾಗಸ್ತ್ಯಕಂ ತಾಪಸಪ್ರೋತ್ಕರಮಂ ಸೂವರ್ಚಿರುಕ್ಷಾಂಚಿತಮದು ನಭವಂ ಪೋಲ್ತು ಚೆಲ್ವಾಯ್ತರಣ್ಯಂ (ರಾಜಶೇ. ೫-೭೫). ೬. ಬಾಗೆಮರ ; ಶಿರೀಷವೃಕ್ಷ : ''ಮಾಕಂದಂ ಗಿಳಿ ಯೋಗಿ ಶಾಲ್ಮಲಿ ಕುಜ ರುದ್ರಂ ಶುಕವಾಚಕಂ'' (ನಾಸಾರ. ೧೫೪). ೭. ಮಾವಿನ ಮರ ; ಚೂತ. ೮. ಒಂದು ಬಗೆಯ ಸುಗಂಧದ ಗಿಡ ; ಮಾಚಿಪತ್ರ: ''ಗ್ರಂಥಿಪರ್ಣಂ, ಶುಕಂ, ಬರ್ಹಂ, ಪುಷ್ಪಂ, ಸ್ಥಾಣೇಯಂ, ಕುಕ್ಕುರಂ — ೬ ಸ್ಥಾಣೇಯಕವೆಂಬ ಗ್ರಂಥ್ಯಧ್ರವ್ಯದ ಹೆಸರುಗಳು, ಮಾಚಿಪತ್ರೆ'' (ಸಿದ್ಧಾಂಜ. ೧೪೨). [ಸಂ.]

ಶುಕಕಾಮಿನಿ (ನಾ). ಹೆಣ್ಣುಗಿಳಿ; ಶಾರಿಕೆ : ರತದೊಳಗಗ್ಗಳಂ ಮುಖರತಂ ಸುರತೋತ್ಸವಕೆಂದು ಕಾಮಿನೀಪ್ರತತಿಗ ತೋರ್ಪವೋಲ್ . . . ಅಮ್ರಭೂಷಿತಕ ಮನಾಮ್ರಪಕ್ಕಪಳದೊಳ್ ಶುಕಕಾಮಿನಿ ಚೆಲ್ಲುದೋಱಿದಳ್ (ಅಬಿಪ್ರ. ೧೧-೬೭).

[ಸಂ. ಶುಕಕಾಮಿನೀ]

ಶುಕತುಂಡ (ನಾ). ೧. ಗಿಳಿಯ ಕೊಕ್ಕು, — ಚಂಚು. ೨ [ನಾಟ್ಯ] ಇಪ್ಪತ್ತು ನಾಲ್ಕು ಬಗೆಯ ಅಸಂಯುತ ಹಸ್ತಗಳಲ್ಲಿ ಒಂದು : ನಾಟ್ಯಶಾಸ್ತ್ರದಲ್ಲಿ ಹೇಳಿರುವ ಅಸಂಯುತಹಸ್ತಗಳು ಯಾವುವೆಂದರ — ೧. ಪತಾಕ . . . ೬.ಶುಕತುಂಡ, ೭. ಮುಷ್ಟಿ . . . ೨೪. ತಾಮ್ರಚೂಡ (ಅಭಾವ್ಯ. ೪೭). [ಸಂ.]

ಶುಕದೇರ (ನಾ). ಗಿಣಿಯನ್ನೇ ವಾಹನವಾಗುಳ್ಳವನು; ಕಾಮ; ಮನ್ಮಥ: ಶುಕದೇರನೆಚ್ಚ ಪೂಸಗೋಲುಗಳು ಪೆರ್ಚ ಪಣ್ಮುಖನ ಮೈಮುರ್ತಿ (ನವಮೋ. ೩೦-೪೩). 'ಗಿಳಿದೇರ' ಪರಾ. [ಶುಕ + ತೇರು (< ತೇರ್) + — ೩]

ಶುಕನಾಸ (ಗು). ೧. ಗಿಣಿಯ ಕೊಕ್ಕಿನಂತೆ ಮೂಗನ್ನು ಹೊಂದಿರುವ. (ನಾ). ೨. ಗಿಳಿಯ ಕೊಕ್ಕಿನಂತೆ ಮೂಗುಳ್ಳವನು; ಗಿಣಿಮೂಗಿನವನು. ೩. ಒಂದು ಬಗೆಯ ಸಸ್ಯ : ''ಮಂಡೂಕಪರ್ಣಾ, ಪತ್ರೋರ್ಣಾ: . . . ಶುಕನಾಸಾ: . . . ಅರಳುಃ — ೧೨ ಹೆಮ್ಮರದ ಹೆಸರುಗಳು'' (ಸಿದ್ಧಾಂಜ. ೧೨೯). ೪. ಬಾಣಕವಿಯ 'ಕಾದಂಬರಿ' ಎಂಬ ಕಾವ್ಯದಲ್ಲಿ ಚಿತ್ರಿತವಾಗಿರುವ ತಾರಾಪೀಡನೆಂಬುವನ ಮಂತ್ರಿ; ವೈಶಂಪಾಯನನ ತಂದೆ : ಶುಕನಾಸಾರ್ಯಗುರುತ್ವದಿಂದ . . . ಕುಮಾರಂಗ ಮಹಾ ಪ್ರಧಾನತನಯಂ ಮಿತ್ರತ್ವಮಂ ತಾಳ್ದದಲ (ಕಾದಂಪೂ.೪೪೦). [ಸಂ.]

ಶುಕಫಲನ್ಯಾಯ (ನ್ಯಾ). ಲೌಕಿಕನ್ಯಾಯಗಳಲ್ಲಿ ಒಂದು ; ಗಿಳಿಯ ಕೆಂಪಾದ ಕೊಕ್ಕನ್ನು ಮುಂಬಿಯು ಮುತ್ತುಗದ ಹೂವೆಂದೂ ಮುಂಬಿಯನ್ನು ಗಿಣಿಯು ನೇರಿಳೆಹಣ್ಣೆಂದೂ ಪರಸ್ಪರ ಭ್ರಾಂತಿಯಿಂದ ಭಾವಿಸುವಿಕೆ: ಅದು (ಲಂಕಾನಗರ) ನಿಮಗೆ ಚಿರಕಾಲವಿರತಕ್ಕುದು ವಿಚಾರಿಸೆ ಶುಕಫಲನ್ಯಾಯದಲಿ ಸಾರ್ದುದು ನಿಮಗೆನುತ ತತ್ಪುರಕೆ ಕಳುಹಿದನು (ಉತ್ತರಾ. ೨-೧೭). [ಸಂ.]

ಶುಕಲೂರ್ತಿ 'ಶುಕ್ಲೂರ್ತಿ' ನೋ.

ಶುಕವಾಣಿ (ನಾ). ೧. ಗಿಳಿಯ ಮಾತು. ೨. ಗಿಳಿಯಂತೆ ಮಾತನಾಡುವವಳು.

[ಸಂ. ಶುಕವಾಣೀ]

ಶುಕವೃತ್ತಿ (ನಾ). ಗಿಣಿಯಂತೆ ಹೇಳಿಕೊಟ್ಟುದುದನ್ನು ಮಾತ್ರ ಹೇಳುವುದು; ಗಿಳಿಪಾಠ: ನಚಿಕೇತನ ಚಿತ್ರ, ಕಲಿಸಿದುದನ್ನು ಆಡುವ ಶುಕವೃತ್ತಿಗ ಒಗ್ಗುವುದಿಲ್ಲ (ಚತಂಪಾ. ೧೦೩). [ಸಂ.]

ಶುಕಿ (ನಾ). ಹೆಣ್ಣುಗಿಳಿ: ಗರಿಯ ತಿದ್ದೆ ಬೆಡಗಿ ಶುಕಿಯು ಕೊರಲ ಕೊಂಕಿದ (ಪಾರ್ಶ್ವ. ೧೦-೧). [ಸಂ. ಶುಕೀ]

ಶುಕ್ಲ (ನಾ). ೧. (ಹುಳಿಯಾದ) ಗಂಜಿ; ಅಂಬಲಿ: ''ಅಭಿಷವಂ, ಅಪಂತಿಸೋಮಂ, ತುಷೋದಕಂ, ಶುಕ್ಲಂ[ಪಾಠಾಂ. ಕ್ಲಂ] — ೪ ಅಕ್ಕಿಗರ್ಚು'' (ತರಂಯು. ೫೩-೧೬೩). ೨. ಹುಳಿ; ಆಮ್ಲ. ೩. ಒಂದು ಬಗೆಯ ಹುಳಿರಸ; ಆಮ್ಲಾಯ ದ್ರವ: (೫). ೪. ಒರಟಾದುದು ; ''ಪರುಷ , ಬಿಜುಸಿಹುದು'' (ನಾಚರಾ. ೫). [ಸಂ.]

ಶುಕ್ತಿ (ನಾ). ೧. ಮುತ್ತಿನ ಅಥವಾ ಕಪ್ಪೆಯ ಚಿಪ್ಪು : ಶುಕ್ತಿಕರಂಡದಲ್ಲಿ ಬಿದ್ದ ಅಪ್ಪು ಶುಕ್ತಿಯ ಭೇದವೋ ಕರಂಡದ ಭೇದವೋ ಅಪ್ಪುವಿನ ಭೇದವೋ (ಪೋಮಾ. ೧೨೮-೪೭); ಲಲಿತಶುಕ್ತಿಗ ಕರ್ಮಕಾಂಡಸ್ಥಲಂ ವಿಮಲಜಲಜಪತ್ರಮೆ (ಲಶಿಂ. ೪೪-೧೩) ; ದೇವೀ! ಕಡಲ ಶುಕ್ತಿಯಿಂ ಜಗುಬ್ಬ ನುಣ್ಮುತ್ತುಗಳನುಂಡ ವಿಾಂಗಳೀಗಳುಗುಬ್ಬುವಿಂತನೆ . . . ಸುರಿವಶ್ರುಧಾರೆಯಿರವಿದೇಂ ಪೇಟ! (ರಾಮಾಶ್ವ. ೧೯-೨೩). ೨. ಚಿಪ್ಪು : ಕಾಳಾಯಸಶುಕ್ತಿಯಿಂ ಸಮೆದ ಸೀಸಕದಿಂ ಬಹುರಾಹು ಮಂಡಲಪ್ರಾಯಮೆನಿಪ್ಪ ದಾನವರ ಪಂದಲೆಗಳ್ ರವಿಮಂಡಲಂಬರಂ ಪಾಯೆ ಬಿಸಿಲ್ ಪೊದರ್ವುಗಿಡೆ ಪಾಳಿಸಿದತ್ತುಪರಾಗಲೀಲೆಯಂ (ಪಂರಾಮಾ. ೧೩-೬೨). ೩. ಒಂದು ಬಗೆಯ ಸುಗಂಧದ್ರವ್ಯ: ''ಹಸುಃ, ಹಟ್ಟುವಿಲಾಸಿನೀ, ಶುಕ್ತಿಃ, ಶಂಖಃ, ಖುರಃ, ಕೋಲದಳಂ, ನಖಂ - ೭ ನಖವೆಂಬುವ ಗಂಧಿಕದ್ರವ್ಯ'' (ಸಿದ್ಧಾಂಜ.೧೪೨). ೪. ಕುದುರೆಯ ಕೊರಳು ಅಥವಾ ಎದೆಯಲ್ಲಿರುವ ಸುಳಿ. [ಸಂ.]

ಶುಕ್ತಿಕೆ (ನಾ). ೧. = ಶುಕ್ತಿ ೧: ಶುಕ್ತಿಕೆಗಳಿಂ ಮುಕ್ತಾಫಲಂ ಪುಟ್ಟುವೇ (ಮಲ್ಲಿನಾ. ೧-೬೭); ಮಿಸುಪ ಶುಕ್ತಿಕೆಗಳಿನಲ್ ದೇವಿಯ . . . ತೆಳ್ಗದಂಪುಗಳಿಸಗುಂ (ಪುಷ್ಪಸ. ೬-೪೮); ಶುಕ್ತಿಕೆ ಸಮುದ್ರಮಂ ಒಳಕೊಳ್ವುದೇನ್? (ಶ್ರೀರಾಮಾ. ೧೭೨-೫೪೬). ೨. (ಸುಗಂಧ ಪದಾರ್ಥಗಳನ್ನಿಡುವ) ಕಪ್ಪೆಚಿಪ್ಪಿನ ಆಕಾರದ ಭರಣಿ, - ಸಂಪುಟ: ಪಳಿಕಿನ ಶುಕ್ತಿಕೆಯೊಳ್ ಕಣ್ಗೊಳಿಸುವ ಕತ್ತುರಿಯ ಕರ್ದಮಂ . . . ನಯನೋತ್ಪಲಮನಲರ್ಚಿದುದು (ಪಂರಾಮಾ.೩-೭೬) ; ಮೌಕ್ತಿಕದ ಶುಕ್ತಿಕೆಗಳೊಳಂ . . . ತೀವಿದನಿತಾನುಂ ತೆಱದ ಬಂಧುರಸುಗಂಧವಸ್ತುಸಂದೋಹಮಂ ಪಿಡಿದು . . . ಕುಬ್ಜೆಯೆಂಬ ಸ್ಮರಂದ್ರಿ ನಡತರೆ (ಜಗವಿ. ೬-೧೮ ವ). [ಸಂ. ಶುಕ್ತಿಕಾ]

ಶುಕ್ತಿಜ (ನಾ). ಚಿಪ್ಪಿನಲ್ಲಿ ಹುಟ್ಟಿದುದು; ಮುತ್ತು: ಮಳರಹಿತತಾಮ್ರ ಪರ್ಣೀಜಲದೊಳೆ ಶುಕ್ತಿಜಮಣಿಪ್ರಕಾಂಡಪ್ರಭವಂ (ಕಾವ್ಯಾವ. ೪೮೩); ಶುಕ್ತಿಜದಳರ್ಕೆ ಸರೋಜದ ಗುಣ್ಪು . . . ಚೆಲ್ಪ ಚಿತ್ರರಿಸೆ ಪೊದರ್ಪುವೆತ್ತು ಬಗಗೊಂಡುದು ಪೂರ್ಣಗುಣಂ ಮಹಾರ್ಣವಂ (ಶಜಶಂ. ೧-೩೪). [ಸಂ.]

ಶುಕ್ತಿಪುಟ (ನಾ). ಮುತ್ತು ಇರುವ ಚಿಪ್ಪು : ಕುಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋ[ದ]ಬಿಂದುವನಿಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದಂ (ಪಂಪಭಾ. ೧-೧೩೯ ವ) ; ಕಡಲೊಳ್ಪಡಬಾನಲಜ್ವಲ ಜ್ವಾಲೆಯಿಂ ಶುಕ್ತಿಪುಟಂ ಗಿಳಿಲೆನೆ ಸಿಡಿದೊಡದಱಿಂದುಚ್ಚಳಿಸಿದಚ್ಚಮುತ್ತಂದು ತುಡುಂಕಲವ್ಯಳಪ ಖೇಚರಾಂಗನೆಯರಂ (ರಾಜಶೇ. ೧-೧೦೨ವ). [ಸಂ.]

ಶುಕ್ತಿಮುದ್ರೆ (ನಾ). ಮಂತ್ರಶಾಸ್ತ್ರಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ: ಅಸ್ತ್ರಮುದ್ರೆ . . . ಶುಕ್ತಿಮುದ್ರೆ, ಬೀಜಮುದ್ರೆ . . . ಸಂಹಾರಮುದ್ರೆಯೆಂಬ ಸಕಲಮುದ್ರಾ ಲಕ್ಷಣವನಱಿದಾಯಾ ಕ್ರಿಯೆಗಳಲ್ಲಿ ಪ್ರಯೋಗಿಸಿ (ಎರೇಕ. ೧೦೩); ಪುಷ್ಪಯಪ್ಪು ವನಾಂತಃ ಶುಕ್ತಿಮುದ್ರೆಯಲಿ ಮಂತ್ರೋಕ್ತದಿಂ . . . ಅರ್ಘ್ಯಮುಮನಿತ್ತು (ನಪಪೂ. ೧೯-೧೩). [ಸಂ. ಶುಕ್ತಿಮುದ್ರಾ]

ಶುಕ್ತಿರಜತನ್ಯಾಯ (ನಾ). ಲೌಕಿಕನ್ಯಾಯಗಳಲ್ಲಿ ಒಂದು ; ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯಂತೆ ಮಿನುಗುವಂಥದು ; ಬರಿಯ ಭ್ರಮೆ : ಉಪಾಧಿಯಿಂದ ತೋರ್ಪುದಲ್ಲ ನಿಜವ ಅಯ್ಯ ಸ್ಥಾಣುಚೋರನ್ಯಾಯದಂತೆ ಶುಕ್ತಿರಜತನ್ಯಾಯದಂತೆ ರಜ್ಜು ಸರ್ಪನ್ಯಾಯದಂತೆ ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸುಂಟೇ (ಸಿದ್ಧವ. ೩೫೯). [ಸಂ.]

ಶುಕ್ತಿಸಂಪುಟ (ನಾ). = ಶುಕ್ತಿಪುಟ: ನಿನ್ನ ಜನ್ಮದಿಂ ಜನನುತರಾದವಾವಮಳ ಮೌಕ್ತಿಕ ರತ್ನ[ಕೆ] ಜನ್ಮಭೂಮಿಯಾದನುಪಮಶುಕ್ತಿಸಂಪುಟದವೋಲ್ ಸುರಶೇಖರ ರತ್ನಪೂಜಿತಾ (ಪುಷ್ಪಸ. ೧೨-೯೨). [ಸಂ.]

ಶುಕ್ರ (ಗು). ೧. ಹೊಳೆಯುವ; ಕಾಂತಿಯುತವಾದ. ೨. ಬಿಳುಪಾದ; ಬೆಳ್ಗಿರುವ. (ನಾ). ೩. ಬಿಳಿಯ ಬಣ್ಣ; ಧವಳವರ್ಣ. ೪. ನಕ್ಷತ್ರ; ತಾರೆ: 'ಶುಕ್ರನಕ್ಷತ್ರ', 'ಶುಕ್ರೋದಯ' ಪರಾ. ೫. ಅಗ್ನಿಯ ಹೆಸರುಗಳಲ್ಲಿ ಒಂದು: "ಅಗ್ನಿಃ . . . ಶುಕ್ರಃ, ಚಿತ್ರಭಾನುಃ, ವಿಭಾವಸುಃ, ಶುಚಿಃ, ಅಪ್ಪಿತ್ತಂ - ೩೪ ಅಗ್ನಿಹೋತ್ರನ ಹೆಸರುಗಳು" (ಸಿದ್ಧಾಂತಶಿ.೨೩). ೬. ರಾಕ್ಷಸರ ಗುರು; ಭೃಗುಋಷಿಯ ಮಗ: "ದನುಜರ ಗುರು . . . ಭೃಗು ಶುಕ್ರಂ" (ಪಪ್ಪುಕೋ. ೧೩-೭೪); ಶುಕ್ರ ವಕ್ರನಾದರೂ ತಕ್ರ ಬಿಡ (ಗಾಡ). ೭. ವೀರ್ಯ; ರೇತಸ್ಸು: ಉತ್ಪತ್ತಿ ಶುಕ್ರ ಶೋಣತದಿಂದಾದ ಲಚ್ಚೆ ಸಾಲದೇ (ಬಸವ. ೧೫೯). ೮. ಮಾಸಗಳಲ್ಲಿ ಒಂದು; ಜ್ಯೇಷ್ಠಮಾಸ: "ಕ್ರಮದೊಳೊಂದಿರ ಮಧುಮಾಧವಂ ಶುಕ್ರಂ ಶುಚಿ ನಭೋಮಾಸಂ ನಭಸಾಖ್ಯೆ" (ಪಪ್ಪುಕೋ. ೧೭-೧೨). ೯. [ಜ್ಯೋತಿ] ನವಗ್ರಹಗಳಲ್ಲಿ ಒಂದು: 'ಶುಕ್ರದೆಸೆ' ಪರಾ. ೧೦. [ಜೈನ] ಹದಿನಾರು ಕಲ್ಪಗಳಲ್ಲಿ ಒಂಬತ್ತನೆಯದು: ಸೌಧರ್ಮ . . . ಶುಕ್ರ ಮಹಾಶುಕ್ರ ಶತಾರ . . . ಅಚ್ಯುತಮೆಂಬ ಪದಿನಾಱುಂ ಕಲ್ಪಂಗಳೊಳಂ (ವಡ್ಡಾರಾ. ೯೭-೨೬); ಈ ಹದಿನಾರು ಕಲ್ಪಗಳನ್ನು ೧೨ ಜನ ಇಂದ್ರರು ಆಳುವರು . . . ಶುಕ್ರ ಮಹಾಶುಕ್ರಗಳು ಶುಕ್ರೇಂದ್ರನಿಂದ ಆಳಲ್ಪಡುವುವು (ಚೈನಧ. ೧೩). [ಸಂ.]

ಶುಕ್ರದೆಸೆ (ನಾ). ೧. [ಜ್ಯೋತಿ] ಶುಕ್ರಗ್ರಹವು ಒಳ್ಳೆಯ ಫಲಗಳನ್ನು ನೀಡುವ ಕಾಲ; IP ಆಯುರ್ದಾಯ ಗಣನೆಯಿಂದ ಬಂದಿರುವ ದೆಸೆಯನ್ನೂ ನೈಸರ್ಗಿಕ ದೆಸೆಯನ್ನೂ ಬೇರೆ ಬೇರೆಯಾಗಿ ಗಣಿಸುತ್ತಾರೆ. ಇವೆರಡೂ ಒಂದೇ ಆದರೆ ಪೂರ್ಣ ಶುಭಫಲವಿರುತ್ತದೆ. ಶುಕ್ರದೆಸೆಯ ಅವಧಿ ಇಪ್ಪತ್ತುವರ್ಷಗಳ ಕಾಲ. ೨. (ಆಲಂ) ಅಭ್ಯುದಯಕಾಲ; ಅದೃಷ್ಟದ ಕಾಲ: ಈ ಒಲೆ ನಮ್ಮ ಮನೆಗೆ ಬಂದಾಗಿನಿಂದ ಶುಕ್ರದೆಸೆ ಪ್ರಾರಂಭವಾಯಿತು (ಹೂಪಣ್ಣು. ೧೨).

[ಶುಕ್ರ + ದೆಸೆ (< ದಸೆ)]

ಶುಕ್ರನಕ್ಷತ್ರ (ನಾ). ಒಂದು ನಕ್ಷತ್ರದ ಹೆಸರು; ಬೆಳ್ಗಿಚುಕ್ಕೆ: ಸೂರ್ಯ ಚಂದ್ರರಾದ ಮೇಲೆ ನಾವು ಆಕಾಶದಲ್ಲಿ ಅತ್ಯಂತ ಪ್ರಕಾಶಮಾನವಾದ ಶುಕ್ರನಕ್ಷತ್ರವನ್ನು ನೋಡುತ್ತೇವೆ (ಆಕಾಶ.೧೭). [ಸಂ.]

ಶುಕ್ರಮೂಢ (ನಾ). ೧. ಶುಕ್ರಗ್ರಹವು ಅಸ್ತಂಗತವಾಗಿರುವಿಕೆ, — ಮರೆಯಾಗಿರುವಿಕೆ; ಶುಕ್ರಾಸ್ತ. ೨. [ಜ್ಯೋತಿ] ವಿವಾಹಾದಿ ಮಂಗಳ ಕಾರ್ಯಗಳಿಗೆ ಪ್ರಶಸ್ತವಲ್ಲದ ಕಾಲ; ಅಶುಭಕಾಲ. [ಸಂ.]

ಶುಕ್ರವಾರ (ನಾ). ವಾರದ ಏಳುದಿನಗಳಲ್ಲಿ ಒಂದು; ಶುಕ್ರನು ಅಧಿಪತಿಯಾಗಿರುವ ದಿನ: ಭಾಗ್ಯದ ಲಕ್ಷ್ಮೀ ಬಾರಮ್ಮ . . . ಶುಕ್ರವಾರದ ಪೂಜೆಯ ವೇಳೆಗೆ ಅಕ್ಕಜವುಳ್ಳ ಅಳಗಿರಿರಂಗನ ಚೊಕ್ಕಪುರಂದರವಿಠಲನ ರಾಣಿ (ಪುರಂದ. ೧-೨೧೧-೫). [ಸಂ.]

ಶುಕ್ರಶಿಷ್ಯ (ನಾ). ಶುಕ್ರಾಚಾರ್ಯನ ಶಿಷ್ಯ; ರಾಕ್ಷಸ: "ದನುಜರ್ ದೈತೇಯರ್ . . . ಸುರದ್ವಿಷರನೆ ದೈತ್ಯರ್ ಶುಕ್ರಶಿಷ್ಯರಾರ್ಗಮದೃಶ್ಯರ್" (ಪಪ್ಪುಕೋ. ೬-೩೨); ಶುಕ್ರಶಿಷ್ಯಾಧಿಪ ಶಿರೋಮಾಲ ಕರಶೂಲ ನಕ್ರಕೇತನನಾಶ . . . ಸಂಗಮೇಶ ರಕ್ಷಿಪುದನ್ನನು (ಪ್ರೌಢರಾ. ೮-೧). [ಸಂ.]

ಶುಕ್ರಾಸ್ತ (ನಾ). = ಶುಕ್ರಮೂಢ ೨: ಶುಕ್ರಾಸ್ತದಲ್ಲಿ ಮದುವೆ ಮಾಡುವುದಿಲ್ಲ (ರೂಢಿ). [ಸಂ.]

ಶುಕ್ರೋದಯ (ನಾ). ಬೆಳ್ಗಿಚುಕ್ಕೆ ಮೂಡುವ ಸಮಯ: ಶುಕ್ರೋದಯ ಕಾಲದಲ್ಲಿ ಬಂದ ಕಲ್ಪನಾವಿಲಾಸ (ಮುಕ್ತಕಂ. ೮೨-೧೫). [ಸಂ.]

ಶುಕ್ಲ (ಗು). ೧. ಬಿಳುಪಾದ. ೨. ಶುಭ್ರವಾದ. ೩. ಹೊಳಪುಳ್ಳ. (ನಾ). ೪. ಬಿಳಿಯ ಬಣ್ಣ; ಶ್ವೇತವರ್ಣ: "ಅವದಾತಂ ಶುಭ್ರಂ . . . ಶುಕ್ಲಂ ಧವಳಂ ವಳಕ್ಷಮೆನೆ ಗೌರವರ್ಣಂ" (ಪಪ್ಪುಕೋ. ೧೦೮-೬೨); ಶುಕ್ಲ ರಕ್ತ ಪೀತ ಕೃಷ್ಣ ಎಂಬ ನಾಲ್ಕು ಬಣ್ಣಗಳಿಂದ ಜಾತಿವಿಭಾಗವೆಂದು ಮಹಾಭಾಷ್ಯದಿಂದ ತಿಳಿದುಬರುತ್ತದೆ (ಒಂದಾ. ೧೫೬). ೫. ರೇತಸ್ಸು; ವೀರ್ಯ: "ಧಾತು ರೇತಂ ಶುಕ್ಲಂ" (ಪಪ್ಪುಕೋ. ೭೨-೩೦); ರತಿಯ ಪದದಲ್ಲಿ ಗರ್ಭಸ್ಥಿತಿಯೊಳು ಶುಕ್ಲಂ ವಿಶೇಷಮಾದಡೆ ಪುರುಷಂ (ಮದಕಿ. ೧-೮೨); ಮಚ್ಚಯಂತದಱಿನಿಂ ಸರೆಯಸ್ಥಿ ನುಖಗಳಾ ಕೇಶಗಳುಮದಱಿನಿಂದ್ರಿಯ ಪೆರ್ಚ ಶುಕ್ಲವಹುದಾ ಬಲದಿ ದೇಹ ಪರಿಪೂರ್ಣವಹುದು (ಲಕಿಶಾ. ೩೯-೩೨). ೬. ತಿಂಗಳಿನ ಮೊದಲನೆಯ ಅರ್ಧಭಾಗ; ಪಾಡ್ಯದಿಂದ ಹಿಡಿದು ಪೌರ್ಣಮೆಯವರೆಗಿನ ಕಾಲಮಾನ: "ಶುಕ್ಲಃ, ಕೃಷ್ಣಃ - ಪೂರ್ವಾಪರೌ - ಕ್ರಮದಿಂದ ಪೂರ್ವಪಕ್ಷಕ್ಕೂ - ಅಪರಪಕ್ಷಕ್ಕೂ ಹೆಸರುಗಳು" (ಸಿದ್ಧಾಂತಶಿ.೩೮). ೭. ಅರುವತ್ತು ಸಂವತ್ಸರಗಳಲ್ಲಿ ಮೂವತ್ತೇಳನೆಯ ಸಂವತ್ಸರ: ಆ ವರುಷವೇ ಪ್ರಭವ ವಿಭವ ಶುಕ್ಲ . . . ಕ್ರೋಧನ ಅಕ್ಷಯವಾಂದಱವತ್ತು ತೆಱನಾಗಿಹುದು (ವೆಂಕಟ. ೩೪೨). ೮. ಕಣ್ಣು; ನೇತ್ರ: "ಸುರತರಸದೊಳ್ ಕಣ್ಣೆನೊಳು ಬಿಳಿದಿನೊಳ್ ಕಲಿಯೊಳಿರೆ ಶುಕ್ಲಮಕ್ಕುಂ" (ಮಂಗರಾ. ೧೪೯-೪೪). ೯. ಒಂದು ಬಗೆಯ ಕಣ್ಣಿನ ರೋಗ. ೧೦. ಒಂದು ತಿಂಗಳಿನ ಹೆಸರು; ವೈಶಾಖಿ. ೧೧. ದೊಡ್ಡದು; ವಿಶಾಲವಾದುದು. ೧೨. ಕಲಿ; ವೀರ. ೧೩. ಕಸ್ತೂರಿಮೃಗದಿಂದ ದೊರಕುವ ಸುಗಂಧದ್ರವ್ಯ: ಮೂಱುಲೋಕಕ್ಕಾದ ಬೇಡಿದವರಿಗಿತ್ತು ಭಾವಕ್ಕೆ ಹೊಜಗಾದವಂಗ ಲೀಲೆಯುಂಟೆ ಆ ಗುಣ ಚಿಪ್ಪಿನ ಮುತ್ತಿನ ತೆಱ ಕಸ್ತುರಿಯ ಶುಕ್ಲದ ತೆಱ ಕದಳಿಯ ಕರ್ಪೂರದ ತೆಱ ಬಂದುದಕ್ಕೆ ಸಂದೇಹವ ಮಾಡಲಿಲ್ಲ (ಮೋಳಿಮಾ. ೪-೧೨). ೧೪. ಅಕ್ಕಿ ತೊಳೆದ ನೀರು; ಅಕ್ಕಚ್ಚು: "ಅಭಿಷವಂ, ಅವಂತಿಸೋಮಂ, ತುಷೋದಕಂ, ಶುಕ್ಲಂ[ಪಾಠಾಂ. ಕ್ರಂ] - ಈ ೪ ಅಕ್ಕಿಗರ್ಚು" (ಹಲಾಯು. ೫೩-೧೬೩). ೧೫. ವಿಷ್ಣು. ೧೬. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: "ಋಷಿಸಂಖ್ಯೆ ಶುಕ್ಲಶಬ್ದಮೆನಿಕ್ಕು" (ನಾನಾಕಂ. ೬೭). ೧೭. ಐದು ಎಂಬ ಸಂಖ್ಯೆಯ ಸಂಕೇತ: ಪಂಚವ್ರತ, ಇಂದ್ರಿಯ . . . ಹರವಕ್ತ್ರ, ಪಾಂಚಜನ್ಯ, ಶುಕ್ಲ — ಇಂತಿನಿತುಂ ೫ಕ್ಕೆ ಪೆಸರು (ವೃಹಾ. ೧೦-೨೨). ೧೮. [ಜೈನ] ಕರ್ಮಮಲವು ನಾಶವಾಗಿ ಮೋಕ್ಷವು ಸಿದ್ಧಿಸುವ ಪರಿಶುದ್ಧವಾದ ಆತ್ಮಧ್ಯಾನ: ಶುಕ್ಲಧ್ಯಾನಮುಂ ಶುಕ್ಲ ಪರಮಶುಕ್ಲಮೆಂದಿತ್ತೆಱನಕ್ಕುಂ ಅವಱೊಳ್ ಶುಕ್ಲಮೆಂಬುದು ಪೃಥಕ್ತ್ವವಿತರ್ಕ ವಿಚಾರಮುಂ ಏಕತ್ವವಿತರ್ಕವಿಚಾರಮುಂ ಎಂದೆರಡುತೆಱನಕ್ಕುಂ (ಅಪಿಪು. ೮-೨೮ ವ). ೧೯. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂದು; ಇಪ್ಪತ್ತನಾಲ್ಕನೆಯ ಯೋಗ: ವಿಷ್ಕಂಭ ಪ್ರೀತಿ . . . ಶುಕ್ಲ ಬ್ರಹ್ಮ ಐಂದ್ರ ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವೆಂಕಟ. ೩೨೦). [ಸಂ.]

ಶುಕ್ಲಕೀಟ (ನಾ). ಒಂದು ಬಗೆಯ ಚೇಳು: ಕುಂದುರುಜ, ರಕ್ತಪುಚ್ಛ, ಎಮ್ಮ ಚೇಳು, ಶುಕ್ಲಕೀಟ ಎಂದು ಚೇಳುಗಳು ನಾಲ್ಕು ತೆಱ (ವೃದ್ಧಸಾ. II. ೧೯೦). [ಸಂ.]

ಶುಕ್ಲತ್ವ (ನಾ). ಬೆಳ್ಗಿರುವುದು; ಬಿಳುಪು. [ಸಂ.]

ಶುಕ್ಲದ್ರವ್ಯ (ನಾ). ಸುಂಕದ ಹಣ: ಅಂತು ಸೋಮೇಶ್ವರಭಟ್ಟರು ತಮ್ಮ ಪಿತ್ರುಧನಂ ಶುಕ್ಲದ್ರವ್ಯಮಪ್ಪ ಧಸವಂದದ ಸರ್ವಬಾಧಾಪರಿಹಾರಂ ಮಾನ್ಯದ ಏಳುಸ್ಥಳದ ಭೂಮಿಯುಂ . . . ಕೊಟ್ಟರು (ಕಾಇ. ೭೯-೧೩-೩೪; ಸು. 1088).

[IP ಇದು 'ಶುಲ್ಕದ್ರವ್ಯ' ಎಂಬುದರ ಅಪಲಿಖಿತವಿರಬಹುದು]

ಶುಕ್ಲಧಾತು (ನಾ). ದೇಹದಲ್ಲಿರುವ ಸಪ್ತಧಾತುಗಳಲ್ಲಿ ಒಂದು: ಧಾತುಗಳು — ರಸಧಾತು, ರಕ್ತಧಾತು, ಮಾಂಸಧಾತು, ಮೇದೋಧಾತು, ಅಸ್ಥಿಧಾತು, ಮಜ್ಜಧಾತು, ಶುಕ್ಲಧಾತು ಎಂದು ಏಳು ತೆರನಾಗಿವೆ (ಸಕವೃ. ೧೮). [ಸಂ.]

ಶುಕ್ಲಧ್ಯಾನ (ನಾ). [ಜೈನ] ಪರಿಶುದ್ಧವಾದ ಆತ್ಮಧ್ಯಾನ: ಮೃತಕಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತ್ತಿರ್ಪನ್ನೆಗಂ (ವಡ್ಡಾರಾ. ೨೯-೨); ಪ್ರಥಮಶುಕ್ಲಧ್ಯಾನಪರಿಣತನಾಗಿರ್ದಾಯುಃಕರ್ಮಮನುಬೊಪಿ ಮತ್ತಿನುಬೊದ ಕರ್ಮಂಗಳಂ . . . ನಿರ್ಜರಾದಿ ವಿಧಿಯಿನನುಕ್ರಮದಿಂ ಕಿಡಿಸುತ್ತುಂ (ಆದಿಪು. ೧೦-೧೪ ವ); ತಾನೆಯ್ದೆ ಮೊದಲ ಶುಕ್ಲಧ್ಯಾನಮನೊಳಕೆಯ್ದು ಬಬೆಯಮುಪ ಶಾಂತಗುಣಸ್ಥಾನದೊಳ್ ನಿಂದು ಸುಕೃತನಿಧಾನಮನಾ ಯೋಗಿನಾಯಕಂ ಸಾಧಿಸಿದಂ (ಚಂದ್ರಪ್ರ. ೧೧-೨೬). [ಸಂ.]

ಶುಕ್ಲಪಕ್ಷ (ನಾ). ಪಾಡ್ಯದಿಂದ ಪೌರ್ಣಮೆಯವರೆಗಿನ ಹದಿನೈದು ದಿನಗಳ ಕಾಲಮಾನ; ಚಂದ್ರನು ವೃದ್ಧಿಹೊಂದುವ ಪಕ್ಷ: ಆಷಾಢಮಾಸದ ಶುಕ್ಲಪಕ್ಷದ ಚತುರ್ದಶಿಯೊಳಪರಾಹ್ಣವೇಳೆಯೊಳ್ ಸುಕುಮಾರಸ್ವಾಮಿಗೆ . . . ಪುಣ್ಯಸಂಪದಮೆ ಸಾರ್ಚಿದಂತೆ ಯೋಗಸಾರ್ಚಿತ ಬಂದು (ಸುಕುಮಾ. ೧೧-೩೭ ವ); ರಾಮಭಟ್ಟಾರಕರಂತುಮಸ್ಖಲಿತಚಿತ್ತದಿಂ ಶುಕ್ಲಧ್ಯಾನಪ್ರವಿಷ್ಟರಾಗಿ ಮಾಘಮಾಸದ ಶುಕ್ಲಪಕ್ಷದಿ ದ್ವಾದಶಿಯ ಬೆಳಗಪ್ಪ ಜಾವದೊಳ್ (ಪಂರಾಮಾ. ೧೩-೬೨ ವ); ಕಳೆಗಳೇಱಲು ಶುಕ್ಲಪಕ್ಷದಿ ಬಲದೊಳಿಳಿಯಲು ಮುನ್ನೆಡದ ಕಡೆಯಲಿ ಮೊಳೆವ ಮನುಮಥರಸಾಂಭೋನಿಧಿಯೊಳಂತದ್ವಿ ಜಲಜದಳಲೋಚನೆಯರಂ . . . ಕೈಗೊಳಿಸಿ (ಬಸಪು. ೪೦-೨೧). [ಸಂ.]

ಶುಕ್ಲಪ್ರಮೇಹ (ನಾ). ಒಂದು ಬಗೆಯ ಮೂತ್ರರೋಗ : ಫಲದಾನಂದರಸ: — ರಸ ಹಣ ಒಂದು ತೂಕ, ಗುಂಜಿಯ ತೂಕವನ್ನು ಆಲದ ರಸದಲ್ಲಿ ಕೊಡಲು, ವಾತ . . . ಸಂಗ್ರಹಣಿ, ಶುಕ್ಲಪ್ರಮೇಹ ಇಷ್ಟೂ ಮಾಣುವುವು (ಎವ್ಯವಿ. ೩೯) ; ಅವಿಪತ್ಯಾದಿ ಚೂರ್ಣ . . . ಸಮಸಕ್ಕರೆವೆರಸಿ ಸೇವಿಸಲು ಪ್ರವೃತ್ತಿಯು, ಉರಿಪೈತ್ಯ, ಶುಕ್ಲಪ್ರಮೇಹ, ತ್ರಿದೋಷದಿಂದಾದ ಗುಲ್ಮ, ಜಲೋದರ, ಹಳೆಜ್ವರ, ಕ್ಷಯ, ಪಾಂಡುರೋಗ ಸಹ ಗುಣವಹುದು (ಸಕವೈ. ೩೦೨). [ಸಂ.]

ಶುಕ್ಲಮೇಹ (ನಾ). = ಶುಕ್ಲಪ್ರಮೇಹ : ಶುಕ್ಲಶೋಷಣದಿಂದಾದ ಮೂತ್ರಕೃಚ್ಛ್ರದಲ್ಲಿ ಶುಕ್ಲವೂ ರಕ್ತವೂ ಮೂತ್ರವೂ ಮೂರೂ ಕೂಡಿ ಬೀಳುವುದು. ಈ ಲಕ್ಷಣಗಳುಳ್ಳದೆ ಕ್ರಮದಿಂದ ರಕ್ತಮೇಹ, ಶುಕ್ಲಮೇಹಮೆಂದರಿವುದು (ಸಕವೈ. ೩೭೦). [ಸಂ.]

ಶುಕ್ಲಯೋಗ (ನಾ). ೧. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಇಪ್ಪತ್ತ ನಾಲ್ಕನೆಯದು: ದೊರೆವತ್ತಾ ಪುಷ್ಯಮಾಸಂ . . . ಶುಕ್ಲಯೋಗಂ ಸಮಂತೊಂದಿರೆ ಲೋಕಕ್ಕಗ್ಗಳಂ ಸಂತಸಮೊಗವಿನೆಗಂ ಪುಟ್ಟಿದಂ (ಚಂದ್ರಪು. ೧೨-೩೧); ಶುಕ್ಲಯೋಗಕ್ಕೆ ಮಯಾ ೧೫ ಗಳಿಗೆ ಮೇಲೆ ತ್ಯಾಜ್ಯ (ಫಾಸ್ಕರ. ೭೦-೮). ೨. = ಶುಕ್ಲಧ್ಯಾನ : ಅಱಿವು ಬೆಳಗು ಸುಖ ಪಿರಿದಾಗಿ ತೋಱುತ ಮಱೆಸದಿಹುದು ಶುಕ್ಲಯೋಗ (ಭರಚ. ೬೯-೩೮). 'ಧರ್ಮಯೋಗ' ಪರಾ. [ಸಂ.]

ಶುಕ್ಲಲೇಶ್ಯೆ (ನಾ). [ಜೈನ] ಆರು ಬಗೆಯ ಲೇಶ್ಯೆಗಳಲ್ಲಿ ಒಂದು: ಶುಭಭಾವ ಶುಕ್ಲ ಲೇಶ್ಯಾನುಭಾವದಿಂ ಧವಳಪುಂಡರೀಕನಿಕಾಶಪ್ರಭೆ ದೊರೆಕೊಂಡುದು . . . ತನುಭೃದ್ಗಣದಾ (ಆದಿಪು. ೬-೪೨); ನಿರತಿಶಯಶುಕ್ಲಲೇಶ್ಯಾಪರಿಣಾಮಮ ಮೂರ್ತಿಗೊಂಡು ಪರಿಣಮಿಸಿದ ವೋಲ್ . . . ಧವಳಪ್ರಭಾಕರಂ ಕರಮೆಸದಂ (ಸುಕುಮಾ. ೧೨-೪೫). [ಸಂ. ಶುಕ್ಲಲೇಶ್ಯಾ]

ಶುಕ್ಲವತ್ರಿ (ನಾ). ಒಂದು ಬಗೆಯ ಸಸ್ಯ: ನೆಲಬೇವುಬೇರು . . . ಶುಕ್ಲವತ್ರಿಬೇರು ಇವಂ ಸಮಾಂಶವಾಗಿ ಹಾಕಿ ಕಷಾಯಂ ಮಾಡಿ ಕುಡಿಸೆ ಎಂತಹ ಜ್ವರವಾದರೂ ಗುಣಮಕ್ಕುಂ (ಸಕವೈ. ಪರಿ. ೪೦೪). [?]

ಶುಕ್ಲವೃತ್ತಿ (ನಾ). ಬ್ರಾಹ್ಮಣರು ಬ್ರಾಹ್ಮಣರಿಂದಲೇ ಭಿಕ್ಷೆ ತೆಗೆದುಕೊಂಡು ಉಪಜೀವನ ನಡೆಸುವುದು : ಗೋಪಾಳಾ ಹಾಕ್ರಪ್ಪಾ ಎನ್ನುತ್ತ ಶುಕ್ಲವೃತ್ತಿಗಾಗಿ ಬರುವಳು (ಹುಚ್ಚಾಟ. ೯೦); ಮೊದಲು ಪಟ್ಟಣದಲ್ಲಿ ಶುಕ್ಲವೃತ್ತಿಯಿಂದ ಜೀವನ ಸಾಗಿಸುತ್ತಿದ್ದ (ಚವರಿ. ೨೧). [ಸಂ.]

ಶುಕ್ಲಾಂಬರ (ನಾ). ಬಿಳಿಯ ಉಡುಗೆ; ಶ್ವೇತವಸ್ತ್ರ : ಶುಕ್ಲಾಂಬರವನುಟ್ಟ ಚಕ್ರಧರೆಗೆ ನಮಿಸಿ ವಕ್ರಬುದ್ಧಿಯ ತಿದ್ದಿಕೊಂಬೆ ನಾನು (ಕರ್ನಾಕ. ೨೭೪). [ಸಂ.]

ಶುಕ್ಲಾಪಾಂಗ (ನಾ). ಕಣ್ಣಿನ ತುದಿಯಲ್ಲಿ ಬಿಳುಪನ್ನು ಹೊಂದಿರುವಂಥದು; ನವಿಲು. [ಸಂ.]

ಶುಕ್ಲೂರ್ತಿ, ಶುಕಲೂರ್ತಿ (ನಾ). ೧. (ಉಕ) ಬ್ರಾಹ್ಮಣನು ಇತರ ಬ್ರಾಹ್ಮಣರಿಗೆ ನೀಡುವ ಸಹಾಯ, — ನೆರವು. ೨. ಬ್ರಾಹ್ಮಣರು ಬ್ರಾಹ್ಮಣರಲ್ಲಿ ತೆಗೆದುಕೊಳ್ಳುವ ಅಕ್ಕಿಯ ಭಿಕ್ಷೆ : ಈ ಶುಕ್ಲೂರ್ತಿ ಬೇಡೋದರಕ್ಕಿಂತ ಸರಕಾರದ ಮ್ಯಾಲೆ ಪೋಟಿಗೆ ದಾವೆ ಮಾಡ್ರಿ (ತಿಡುಗು.೬). ಶುಕಲೂರ್ತಿ : ೨. ಓಣಿಯಲ್ಲಿಯ ನಾಲ್ಕು ಮನೆಗಳಿಗೆ ಹೋಗಿ ಅವನ ಹೆಂಡತಿ ಬೇಡಿ ತರಹತ್ತಿದಳು. ಬರಬರುತ್ತ ಶುಕಲೂರ್ತಿಯೇ ಅವರಿಗೆ ರೂಢಿಯಾಗಿ ಬಿಟ್ಟಿತು (ಕಾಲಚ. ೫೮). [< ಸಂ. ಶುಕ್ಲವೃತ್ತಿ]

ಶುಜ್ಮಲಿನ (ನಾ). ದುಃಖದಿಂದ ಮಲಿನನಾದವನು ; ವ್ಯಥೆಯಿಂದ ಕಲುಷಿತನಾದವನು : ಭುವನದುಲ್ಬಣಕೆ ಮರುಗಿ ಶುಜ್ಮಲಿನನಾಗಿ ಸಂತಾತ್ಮವೈಭವದ ಮಲೆಗುಡಿಯ ನೆನೆದಿಂತು ಸಂಹೃಷ್ಟನಾದೆನೈ ಕೊರಗ ನೀಗಿ (ಮಲೆದೇ. ೫೯-೯). [ಸಂ.]

ಶುಚಿ (ಗು). ೧. ನಿರ್ಮಲತೆಯಿಂದ ಕೂಡಿದ : ಬಾಯ್‌ವಾಯೊಳ್ ನೆಲಸಿಯುಮತಿ ಶುಚಿ ವಾಗ್ದೇವಿ ಕೂರ್ತು ಮಾಟ್ಕೆಮಗಱಿವಂ (ಜಾತತಿ. ೧-೨). (ನಾ). ೨. ನಿರ್ಮಲವಾದುದು; ಶುಭ್ರವಾದುದು : "ಶುಚಿ, ಮೇಧ್ಯಂ, ಪವಿತ್ರಂ, ಪುಣ್ಯಂ, ಪಾವನಂ - ಈ ೫ ಶುದ್ಧಮಪ್ಪ ವಸ್ತು" (ಹಲಾಯು. ೨೨-೧೩೨). ೩. ಬಿಳಿಯ ಬಣ್ಣ; ಶ್ವೇತವರ್ಣ : "ಬಿಳಿದರಲ್ಲಿಯುಂ ಶುಚಿಯೆಂಬುದು ರಾಮಮುಮೆಂಬುದು" (ಹಲಾಯು. ೧೩೪-೨೨). ೪. ಪವಿತ್ರವಾದುದು; ಪರಿಶುದ್ಧವಾದುದು: "ಪಾವನಂ ಶುಚಿ ಮೇಧ್ಯಮೆನೆ ಪವಿತ್ರಮದಕ್ಕು" (ಮಂಗರಾ. ೯-೨೯) ; ಶುಚಿಯಾವಿಭಾಗ ಮಣಿಗಣರುಚಿತಾಸನದಲ್ಲಿ ತಂದು ಕುಳ್ಳಿರಿಸಿ ನೃಪಂ . . . ಚಾರಣರ ಚರಣಕಮಲಮಂ ಕ್ಷಾಲಿಸಿದಂ (ಶಾಂತೀಶ್ವ. ೬-೪೬). ೫. ಪವಿತ್ರನಾದವನು; ಪರಿಶುದ್ಧನಾದವನು: ಶುಚಿ ತಾನಾಗದೆ ಸರ್ವಶಾಸ್ತ್ರ ನಿಪುಣಂ ತಾನಾಗದೆ . . . ವಚನಬ್ರಹ್ಮದೆ ಮುಕ್ತಿಯೇ (ಸೋಮೇಶ. ೧೦೦); ಮಲಿನತರಂ ಬರೆ ಶುಚಿ ಸುವೃತ್ತನೇನಿರ್ದಪನೇ (ರಾಜಶೇ. ೮-೯೭). ೬. ಪ್ರಾಮಾಣಿಕನಾದ ಮಂತ್ರಿ. ೭. ಒಳ್ಳೆಯ ಮಿತ್ರ, — ಸ್ನೇಹಿತ. ೮. ಮುನಿ; ತಪಸ್ವಿ. ೯. ಬ್ರಾಹ್ಮಣ. ೧೦. ಬೆಂಕಿ; ಅಗ್ನಿ : "ವಸುಸಿತೇತರಗತಿ ಸ್ವಾಹಾಪ್ರಿಯಂ . . . ಧೂಮಕೇತನಂ ಶುಚಿ ವಿರೋಚನನೆನಿಕ್ಕುಂ" (ಮಂಗರಾ. ೧೪-೬) ; ಸಚರಸ್ಥಾವರಕೆಲ್ಲ ಸರ್ವಸುಖದುಃಖಂಗಳ್ ಸಮಾನಂಗಳೆಂದಚಲಾನಂದದಿ ತನ್ನನನ್ಯರೆಣಿಸಲ್ ಸುಜ್ಞಾನಿಗಳ್ ನೀರಿನೊಳ್ ಶುಚಿಯೊಳ್ ಪಾದವನಿಟ್ಟು ತೋರ್ಪ ತೆಱದೊಳ್ (ಸೋಮೇಶ. ೯೯). ೧೧. ಅಮರವಾದುದು ; ಶಾಶ್ವತವಾದುದು. ೧೨. ಅಮೃತ; ಸುಧೆ. ೧೩. ಮುಖ್ಯವಾದುದು; ಪ್ರಧಾನವಾದುದು. ೧೪. ಆಷಾಢಮಾಸ : "ಮಧುಮಾಧವಂ ಶುಕ್ರ ಶುಚಿ ನಭೋಮಾಸಂ . . . ಚೈತ್ರಾದಿ ನಾಮಂಗಳ್" (ವಸ್ತುಕೋ. ೧೭-೧೨). ೧೫. ಕಟ್ಟಿಗೆ; ಸೌದೆ: "ಲತೆ ಯೋಗಿಯಗ್ನಿ ಶುದ್ಧಂ ಋತುವಿಪ್ರಾಷಾಢಮಾಸ ಕೇಡಿಲ್ಲದದುಂ ಸಿತಮುಖ್ಯಕಾಷ್ಠಮಮೃತಂ ಮಿತಿಯಿಂ ಪನ್ನೆರಡು ನಾಮ ಶುಚಿಶಬ್ದಂಗಳ್" (ನಾನಾಕಂ. ೫೧). ೧೬. [ನಾಟ್ಯ] ಹಸ್ತಮುದ್ರೆಗಳಲ್ಲಿ ಒಂದು : ಪತಾಕ, ಅರ್ಧಚಂದ್ರ . . . ಶುಚಿ, ಕಪಿತ್ಥ, ಶಿಖರಹಸ್ತ — ಮೊದಲಾದ ನೂರಾರು ಹಸ್ತಮುದ್ರೆಗಳಿವೆ (ಬಾಲವ್ರ. II, ೯೧೯). [ಸಂ.]

ಶುಚಿಗೈ (ಕ್ರಿ). ಚೊಕ್ಕಟಮಾಡು; ಪರಿಶುದ್ಧಗೊಳಿಸು : ಮಹಡಿಯ ಮೆಟ್ಟಲುಗಳನು ಶುಚಿಗೈವಂದು ಮೇಲಿನಿಂದುಡುಗುವರಲ್ತೆ ಮೊದಲು ಮೇಲಧಿಕಾರಿ ಸಲೆ ತಿದ್ದಿಕೊಳುವುದು ತನ್ನ ಚಾರಿತ್ರವನಂತೆ (ಇಂಚಾಪ. ೨೦೪-೬). [ಶುಚಿ + ಗೈ (< ಕೆಯ್ಗೆ)]

ಶುಚಿಗೊಳಿಸು (ಕ್ರಿ). = ಶುಚಿಗೈ : ಡಬ್ಬಿಯನ್ನು ಪ್ರತಿದಿನ ಖಾಲಿಮಾಡಿ, ಶುಚಿಗೊಳಿಸಿ ಬಿಸಿಲಲ್ಲಿ ಒಣಗಿಸಬೇಕು (ಅಡುಸೌ. ೪೦). [ಶುಚಿ + ಕೊಳ್ಗೆ + — ಇಸ್ಸು]

ಶುಚಿತನ (ನಾ). ೧. ಸ್ವಚ್ಛವಾಗಿರುವಿಕೆ ; ಪರಿಶುದ್ಧವಾಗಿರುವಿಕೆ. ೨. ಒಳ್ಳೆಯತನ; ಸಜ್ಜನಿಕೆ : ಸೆರಗಿಲ್ಲದೀವ ದಾನದೊಳರವಿಂದಪ್ರಿಯತನೂಜನಂ ಶುಚಿತನದೊಳ್ಮರುತಾತ್ಮಜರಂ ದೇವರೊಳ್ದೊರೆ ಪಂಡಿತಪುಂಡರೀಕವನಮಾರ್ತಂಡಂ (ಸೌಇಇ. XX, ೫೭-೨೧; 1084); ವಿಚರಿತಾನ್ವಯವೆರಡನೆತ್ತುವ ಶುಚಿತನವು ನಿಮಗಲ್ಲದಿತರರಲಚಲತೆಯದಾರ್ಗುಂಟೆಂಬುದ ನೋಡಿ ನೀವು (ತೂರರಾ. ೨-೩-೨೦).

[ಶುಚಿ + — ತನ]

ಶುಚಿತೆ (ನಾ). = ಶುಚಿತನ ೨: ವರಶುಚಿ ವೀರರಾಮನ ಚರಿತವನಿದನೊರೆವೆನೊಲಿದು . . . ಆದರಿಪುದು ಶುಚಿತೆ ವೀರತೆ ಬಂದು ದೊರೆಕೊಂಬುದಂತರಂಗದೊಳು (ಕುರಾಸಾಂ. ೧-೮೫). [ಸಂ. ಶುಚಿತಾ]

ಶುಚಿತ್ವ (ನಾ). = ಶುಚಿತನ ೧ : ಎಷ್ಟೇ ಬಡವರ ಮನೆಯಾಗಿರಲಿ, ಮನೆಯಲ್ಲಿ ಶುಚಿತ್ವ ಮತ್ತು ಅಚ್ಚುಕಟ್ಟುತನ ಬೇಕು (ಅಡುಸೌ. ೩೭). [ಸಂ.]

ಶುಚಿರ್ಭೂತ (ನಾ). ೧. ಚೊಕ್ಕಟ; ಪರಿಶುದ್ಧ: 'ಶುಚಿರ್ಭೂತಗೊಳಿಸು' ಪರಾ. ೨. ನಿರ್ಮಲನಾದವನು : ಜೈನದೇವತೆಗೆ ಶುಚಿರ್ಭೂತನಿತ್ತನರ್ಘ್ಯವನು (ಭರಚ. ೧೬-೪೯). [ಸಂ.]

ಶುಚಿರ್ಭೂತಗೊಳಿಸು (ಕ್ರಿ). ಚೊಕ್ಕಟಗೊಳಿಸು; ಪರಿಶುದ್ಧಗೊಳಿಸು : ಸಾಹಿತ್ಯವು ಮಾನವಜನಾಂಗದ ಮನಸ್ಸನ್ನೇ ಶುಚಿರ್ಭೂತಗೊಳಿಸಿ ಅಲ್ಲಿ ಅನೇಕ ಉದಾತ್ತ ಗುಣಗಳನ್ನೂ . . . ನೋಡುವ ನವೀನದೃಷ್ಟಿಕೋನವನ್ನೇ ನಿರ್ಮಿಸಬಲ್ಲುದು (ಪ್ರಬಂಧ. ೪). [ಶುಚಿರ್ಭೂತ + ಕೊಳ್ಗೆ + — ಇಸ್ಸು]

ಶುಚಿರ್ಭೂತತೆ (ನಾ). = ಶುಚಿತನ ೧ : ಕೂಡಲಸಂಗನ ಶರಣರ ಒಕ್ಕುದ ಕೊಂಡು ಅನ್ಯವನಾಚರಿಸಿದೊಡೆ ತಪ್ಪದು ಸೂಕರನ ಶುಚಿರ್ಭೂತತೆಯ ಪ್ರಾಣಿಯಂತೆ (ಬಸವ. ೬೨೮). [ಸಂ. ಶುಚಿರ್ಭೂತತಾ]

ಶುಚಿವಂತ (ನಾ). ಪರಿಶುದ್ಧವಾದ ನಡತೆಯುಳ್ಳವನು; ಸಚ್ಚರಿತ : ಧಾರ್ಮಿಕನೂ ಶುಚಿವಂತನೂ ಆದ ನಿನಗೆ ಲೋಕವೇದಗಳೆರಡಕ್ಕೂ ವಿರೋಧವಾದ ಈ ಆಚರಣೆ ಹೇಗೆ ಮನಸ್ಸಿಗೆ ಬಂತು? (ವಚಭಾ. ೫೯). [ಸಂ. ಶುಚಿವತ್]

ಶುಚಿಸ್ಮಾಂತೆ (ನಾ). ನಿರ್ಮಲವಾದ ಮನಸ್ಸುಳ್ಳವಳು; ಶುದ್ಧವಾದ ಅಂತಃಕರಣವುಳ್ಳವಳು: ಚಿಂತಿತ ಫಲದಾಯಕಮಂ ಚಿಂತಾಮಣಿಯಂ ಕುಳಾಧಿದೇವತೆ ತಂದೀವಂತೆ ಶುಚಿಸ್ಮಾಂತೆ ಶಚೀಕಾಂತೆ ಜಿನಾರ್ಚಕನನಿತ್ತಳಿಂದ್ರನ ಕೈಯೊಳ್ (ಮಲ್ಲಿಪು. ೧೨-೪೮). [ಸಂ. ಶುಚಿಸ್ಮಾಂತಾ]

ಶುಚೀಭೂತ (ನಾ). = ಶುಚಿರ್ಭೂತ ೨ : ಇರ್ವರುಂ ಶುಚೀಭೂತರಾಗಿ ಪೋಗಿ ಪೊಡವಟ್ಟು ಅರ್ಚಿಸಿ ಮಗಂಬಡೆವೆವಕ್ಕೆ ಎಂದು ಪರಸಿ ಬಂದು ಮನೆಗೆ ವಂದಿರ್ಪುದುಂ (ಜೀವಸಂ. ೩೭-೨೨ ವ). [ಸಂ.]

ಶುಚೆ (ನಾ). ಅಳಲು; ದುಃಖ. [ಸಂ. ಶುಚಾ]

ಶುಚ್ಕಂಬಕ (ನಾ). ಉರಿಗಣ್ಣುಳ್ಳವನು; ಅಗ್ನಿನೇತ್ರ; ಶಿವ: ಒಪ್ಪಿದಂ . . . ಶರಣಾನುಸಂಗಜನನಚ್ಯುತನಿಗಮನುತ ಸುಧಾಸೂತಿ ಹರಿದಶ್ವಶುಚ್ಕಂಬಕಂ (ಉದ್ಭವ. ೭-೩೭). [ಸಂ.]

ಶುದ್ಧ (ಗು). ೧. ಚೊಕ್ಕಟವಾದ ; ಶುಭ್ರವಾದ. ೨. ಪವಿತ್ರವಾದ ; ಪುನೀತವಾದ : ತನ್ನ ಬೆಳಗೆ ಬೆಳಗಾಗೆ ಶುದ್ಧಗರ್ಭವಾಸದೊಳ್ ಜಿನಾರ್ಚಕಂ ಬಳೆಯೆ (ಶಾಂತಿಪು. ೯-೨೧೪ ವ). ೩. ಪೂರ್ಣವಾದ; ಸಮಗ್ರವಾದ. ೪. ಅಪ್ಪಟವಾದ: ಈ ವಿಕರ್ಣ ಶುದ್ಧಹುಡುಗನಾದರೂ ಮಹಾಬುದ್ಧಿವಂತನ ಹಾಗೆ ಮಾತನಾಡುತ್ತಾನೆ (ಮಚಿಪಾ. ೧೦೦) ; ನೀನು ಮುದುಕ, ಇಂತಹ ಮಾತುಗಳನ್ನೇ ಹೇಳುವುದು. ಇದು ಶುದ್ಧಪಾಪ (ಮಲಪಾ. ೬೭). ೫. ತಪ್ಪಿಲ್ಲದ; ದೋಷರಹಿತವಾದ : 'ಶುದ್ಧಪಾಠ', 'ಶುದ್ಧಪ್ರತಿ' ಪರಾ. (ನಾ). ೬. ಚೊಕ್ಕಟ; ಶುಚಿ: ''ಮಲವಿದೂಷಿತಂ ಶುದ್ಧಮದು'' (ಪಾರ್ಶ್ವನಾ. ೧೦೮-೬೧); ಹೊಜಗೆ ಹೂಸಿ ಏವನಯ್ಯ ಒಳಗೆ ಶುದ್ಧವಾಗದನ್ನಕ್ಕ (ಬಸವ. ೪೫೫). ೭. ಮಡಿ ; ನೈರ್ಮಲ್ಯ : ಶುದ್ಧಕ್ಕೆ ಹೋದರೆ ಒದ್ದ ಉಡಬೇಕಾಗುತ್ತದೆ (ಗಾದೆ). ೮. ಸಂಪೂರ್ಣ; ಸಮಗ್ರ; ಪೂರ್ತಿ: ಮುಸಲ್ಮಾನನಾದನೆಂದು ಆತ್ಮೀಯರೆಲ್ಲರೂ . . . ಶುದ್ಧವಾಗಿ ತ್ಯಜಿಸಿಬಿಟ್ಟರು (ಕಪಾಕಂ. ೩೪). ೯. ಸರಿಯಾದುದು; ತಪ್ಪಿಲ್ಲದುದು: ಇರ್ಬರ್ಕರ್ತ್ಯಗಳ್ಗೆ ನಿಮಿತ್ತಮಪ್ಪ ಸತಿಸಪ್ತಮಿಗೆ ಎಕಾರಮಕ್ಕುಂ; ಆ ಎಕಾರಕ್ಕೆ ಅಲುವಂ ಕೆಲರ್ ಅಂಜದೆ ಪೇಟ್ಪರ್ ; ಅದುವುಮಾಗದು ; ಅಲೂಡಮಂದೊಡೆ ಶುದ್ಧಂ (ಶಮದ. ೨೪೯ ವೃತ್ತ). ೧೦. = ಶುಕ್ಲಪಕ್ಷ : ''ಸಿತಪಕ್ಷಮನೆ ಶುದ್ಧಮಕ್ಕು'' (ಮಂಗನಾ. ೧೧-೫) ; ಕೃಷ್ಣಶುಕ್ಲಪಕ್ಷಗಳನ್ನು ಬಹುಳ ಶುದ್ಧಗಳೆಂದೂ ಕರೆಯುವ ವಾಡಿಕೆಯುಂಟು (ಜ್ಯೋತಿರ್ವಿ. ೨೧೬). ೧೧. ಪರಿಶುದ್ಧನಾದವನು ; ನಿರ್ಮಲನಾದವನು: ಅಷ್ಟವಿಧಾರ್ಚನೆ ಮೋಡಶೋಪಚಾರವ ಅಂದಂದಿನ ಕೃತ್ಯವನಂದಂದಿಗೆ ಅನು ಮಾಡಿ ಶುದ್ಧನಯ್ಯಾ (ಬಸವ. ೫೦೮). ೧೨. [ಕಾವ್ಯಮೀ] ಪ್ರಹಸನದ ಒಂದು ಭೇದ; ಸರಳವಾದ ವಸ್ತುವುಳ್ಳದು : ಪ್ರಹಸನವು ಶುದ್ಧ, ಸಂಕೀರ್ಣ, ವಿಕೃತ ಎಂದು ಮೂರು ವಿಧ (ಸಂನಾಲ. ೩೦); ವಸ್ತುಗಳು (plot) ಶುದ್ಧವೋ (simple) ಅಥವಾ ಸಂಕೀರ್ಣವೋ (complex) ಆಗಿರುತ್ತವೆ (ಆಂಕಾ. ೮೭). ೧೩. [ಶೈವ] ಎರಡು ಬಗೆಯ ಸೃಷ್ಟಿಗಳಲ್ಲಿ ಒಂದು: ಸೃಷ್ಟಿ ಶುದ್ಧ, ಅಶುದ್ಧವೆಂದು ಎರಡು ಪ್ರಕಾರ . . . ಶುದ್ಧಸೃಷ್ಟಿಯಲ್ಲಿ ಐದು, ಅಶುದ್ಧಸೃಷ್ಟಿಯಲ್ಲಿ ಮೂವತ್ತು, ಪುರುಷನೂ ಸೇರಿ ಮೂವತ್ತಾರು ತತ್ತ್ವಗಳು (ಒಂದಾ. ೨೯೬). ೧೪. [ವೀರಶೈ] ಶುದ್ಧ, ಸಿದ್ಧ ಮತ್ತು ಪ್ರಸಿದ್ಧಗಳೆಂಬ ಮೂರು ಬಗೆಯ ಪ್ರಸಾದಗಳಲ್ಲಿ ಒಂದು; ಗುರುವು ಸ್ವೀಕರಿಸಿ ಉಳಿದುದು: ನಿಗುತಪ್ರಸಾದವುಂ ಮೂಱುವಿಧವುಂಟಲ್ಲಿ ಉರು ಶುದ್ಧ ಸಿದ್ಧ ಪ್ರಸಿದ್ಧಂ . . . ಇನಿತುಮಂ ನಿಯಮದಿಂದಿರದ ಕೊಂಬರ ವಿವರಮಂ ಪೇಳ್ವೆನು (ಲಘುಚಿ. ೪೭-೧೫) ; ಶುದ್ಧ ಸಿದ್ಧ ಪ್ರಸಿದ್ಧವೆಂದು ಪ್ರಸಾದಲಿಂಗ ತ್ರಿವಿಧವವಱಲ್ಲಿ ಗುರುಭುಕ್ತಶೇಷವೇ ಶುದ್ಧವೆನಿಸುವದು (ವೀವಿಗ. ೧೨೩). ೧೫. ವೀರಶೈವದ ಒಂದು ಪ್ರಭೇದ : ಶುದ್ಧ ವಿಶೇಷ ನಿರ್ವಾಣ ಎಂದು ವೀರಶೈವವು ಮೂಱು ತೆಱನಾಗಿರ್ಪುದು (ಪ್ರಭುವಿ. ೪-೯). ೧೬. [ಸಂಗೀತ] ಆರು ಸಾಧಾರಣ ರಾಗಜಾತಿಗಳಲ್ಲಿ ಒಂದು: ಶುದ್ಧ ಭಿನ್ನ ಗೌಡ ಅಷ್ಟಸಾಧಾರಣ ಸಪ್ತಸಾಧಾರಣ ಷಟ್ಸ್ವರವೆಂಬಾಱು ಸಾಧಾರಣ ಜಾತಿಗಳು (ವೀವಿಗ. ೧೮೭). ೧೭. ಶುದ್ಧ, ಸಾಳಗ ಮತ್ತು ಸಂಕೀರ್ಣಗಳೆಂಬ ಮೂರು ರಾಗಭೇದಗಳಲ್ಲಿ ಒಂದು ; ಬೇರೆಯ ರಾಗಗಳ ಅವಲಂಬನೆಯಿಲ್ಲದ ರಾಗ : ಸ್ಥಾಯಿ ಸಂಚಾರಿಗಳ ಸರಿಗಮಪಧನಿಯ ಸರದಾಯತದ ಶುದ್ಧ ಸಂಕೀರ್ಣ ಸಾಳಗದ ಪೂರಾಯತ ಸುತಾನಂಗಳಂ ತಾರಮಧ್ಯಮಂದ್ರಗಳಿಂದೆ ಸೊಗಸುಗೊಳಿಸಿ . . . ಪಾಡಿದರು (ಚೈಮಿಭಾ. ೫೧-೫೮). ೧೮. ಮೃದಂಗವಾದನದ ನಾಲ್ಕುಭೇದಗಳಲ್ಲಿ ಒಂದು : ಶುದ್ಧ ಸಾಳಗ ಸಂಕೀರ್ಣ ಅವನೆಗಳೆಂಬ ಚತುರ್ವಿಧ ಮೃದಂಗಮಂ ಮೇಳ್ಗೆಸಿ (ವೀವಿಗ. ೨೩೭). ೧೯. ತಾಳದ ಆರುಭೇದಗಳಲ್ಲಿ ಒಂದು : ಭಂಗತಾಳ ಉಪಭಂಗತಾಳ ವಿಭಂಗತಾಳ ವಿತಾಳ ಶುದ್ಧತಾಳ ಅನುತಾಳವೆಂಬಾಱು ವರ್ಗಸಂಖ್ಯಾಭೇದ ಮಾಗಿಹುವೆಂದು ಪೇಳ್ದ ಭರತಶಾಸ್ತ್ರ ಪರಿಣತರಪ್ಪ ತಾಳಧಾರಿಗಳಿಂ (ವೀವಿಗ. ೧೯೨).

ಶುದ್ಧಕಳ್ಳ = ಪಕ್ಕಾ ಕಳ್ಳ : ಒಳ್ಳಿದರ ಒಡನಾಡಿ ಕಳ್ಳನೊಳ್ಳಿದನಕ್ಕು ಒಳ್ಳಿದನು ಕಳ್ಳರೊಡನಾಡಿ ಅವ ಶುದ್ಧಕಳ್ಳ ತಾನಕ್ಕು (ಸರ್ವಜ್ಞ. ೮೨೬). **ಶುದ್ಧಮೊದ್ದು = ಸಂಪೂರ್ಣವಾಗಿ ಅಜ್ಞಾನಿಯಾದ ವ್ಯಕ್ತಿ** : 'ಶುದ್ಧಮೊದ್ದು' ಎಂದು ಮಾಲತಿ ನಿರ್ಧರಿಸಲು ತಡವಾಗಲಿಲ್ಲ (ವಾತ್ಸಲ್ಯ. ೪೭). **ಶುದ್ಧಸುಳ್ಳು = ಅಪ್ಪಟಸುಳ್ಳು** : ಅವನು ಹೇಳುತ್ತಿರುವುದೆಲ್ಲಾ ಶುದ್ಧ ಸುಳ್ಳು (ರೂಢಿ). [ಸಂ.]

ಶುದ್ಧಕ (ನಾ). [ವ್ಯಾಕ] ಮೂಲಾಕ್ಷರ ; ಶುದ್ಧಾಕ್ಷರ : ವರ್ಣಸಮಾಮ್ನಾಯೇ ಶುದ್ಧಕಃ ಪರಿಕೀರ್ತಿತಃ (ಶಬ್ದಾನು. ೧ ವ್ಯಾಖ್ಯಾ); ಶುದ್ಧಕ ಎಂದರೆ ವರ್ಣವೆಂತಲೂ ವರ್ಣಮಾಲೆಯೆಂತಲೂ ಅಭಿಪ್ರಾಯವಾಗುವುದು. ಶುದ್ಧಾಕ್ಷರ, ಶುದ್ಧಕ ಇವರಡೂ ಸಮಾನಾರ್ಥಕಗಳು (ಸಂಶೋಧ. ೧೩). 'ಸುದ್ದಗೆ' ಪರಾ. [ಸಂ.]

ಶುದ್ಧಗೆ 'ಸುದ್ದಗೆ' ನೋ.

ಶುದ್ಧಗೊಳಿಸು (ಕ್ರಿ). ಚೊಕ್ಕಟಮಾಡು; ಶುಚಿಮಾಡು : ಎರಡುದಿನ ರಜೆಯಿದ್ದದ್ದರಿಂದ ಮನೆಯನ್ನೆಲ್ಲಾ ಶುದ್ಧಗೊಳಿಸಿದೆ (ರೂಢಿ).

[ಶುದ್ಧ + ಕೊಳ್₁ + — ಇಸು₅]

ಶುದ್ಧತಾನ (ನಾ). [ಸಂಗೀತ] ಸ್ವರಗಳ ಕ್ರಮಸಂಚಾರದಿಂದಾಗುವ ತಾನ; ವಕ್ರಸಂಚಾರವಿಲ್ಲದ ತಾನ : ತಾನದಲ್ಲಿ ಕೂಟತಾನವೆಂದೂ ಶುದ್ಧತಾನವೆಂದೂ ಎರಡು ವಿಧ . . . ಶುದ್ಧತಾನದಲ್ಲಿ ಸ್ವರಗಳ ವಕ್ರತ್ವವಿಲ್ಲ (ಸೂಗೀಚಂ. ೮೯). 'ಕೂಟತಾನ' ಪರಾ. [ಸಂ.]

ಶುದ್ಧತೆ (ನಾ). ೧. ಪರಿಶುದ್ಧವಾಗಿರುವಿಕೆ; ಸ್ವಚ್ಛತೆ : ಈ ವಿಸ್ತುತಸಿತಕೀರ್ತಿಯಾ ಸದ್ಭಾವಶುದ್ಧತೆಯಾ ಪ್ರಸಿದ್ಧತೆಯಾ ವಿಬುಧಸನ್ಮಾನತೆಯು ನಿಮಗೀಯಹಂಕೃತಿಯೆ (ಬಸವ. ೪೬-೧೧). ೨. ದೋಷರಹಿತವಾಗಿರುವಿಕೆ ; ತಪ್ಪಿಲ್ಲದಿರುವಿಕೆ : 'ಬ' ಯ ಎಲ್ಲ ಪಾಠಾಂತರಗಳ ಶುದ್ಧತೆಗೂ ಇದು ಒಂದು ಅಳತೆಗೋಲೆಂದು ಭಾವಿಸಬಾರದು (ಧಾರವ. ೪೭). [ಸಂ. ಶುದ್ಧತಾ]

ಶುದ್ಧಧವಳಿತ (ನಾ). ಅಚ್ಚಬಿಳಿಯ ಬಣ್ಣದವನು : ಒಬ್ಬ ಕೆಂಚನೊಬ್ಬ ಕರಿಕನೊಬ್ಬ ಶುದ್ಧಧವಳಿತನಂತಯ್ಯಾ (ಬಸವ. ೫೪೩). [ಸಂ. ಶುದ್ಧಧವಳಿತ]

ಶುದ್ಧಧೈವತ (ನಾ). [ಸಂಗೀತ] ಸ್ವರಗಳಲ್ಲಿ ಒಂದು ಬಗೆ; ಶ್ರುತಿ ಶುದ್ಧ, ಚತುಶ್ರುತಿ, ಷಟ್ಶ್ರುತಿ ಎಂಬ ಮೂರು ಧ್ವನಿಭೇದಗಳನ್ನುಳ್ಳ ಧೈವತಸ್ವರದ ಒಂದು ಭೇದ : ಇಲ್ಲಿ ಹೊರಗಿನ ಸ್ವರಗಳನ್ನೂ ಅಂತರಗಾಂಧಾರ, ಶುದ್ಧಧೈವತ ಮತ್ತು ಕಾಕಲಿನಿಷಾದವನ್ನೂ ಬಳಸಿಲ್ಲ (ಸಂಗೀತ. ೫೦). [ಸಂ.]

ಶುದ್ಧನೀರು (ನಾ). ಸ್ವಚ್ಛವಾದ ನೀರು : ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯಾ (ಬಸವ. ೬೭೯). [ಶುದ್ಧ + ನೀರು₁ (< ನೀರ್)]

ಶುದ್ಧಪಾಠ (ನಾ). [ಗ್ರಂಥಸಂ] ದೋಷರಹಿತವಾದ ಗ್ರಂಥಸ್ವರೂಪ ; ತಪ್ಪಿಲ್ಲದ ಪಾಠ : ಮೇಲೆ ಹೇಳಿದ ಎರಡು ಹಸ್ತಪ್ರತಿಗಳಲ್ಲಿ 'ಎ' ಕೆಳಮಟ್ಟದ್ದೇ ಆದರೂ ಅದು ಕೆಲವೆಡೆ 'ಬ'ಯಲ್ಲಿಲ್ಲದ ಶುದ್ಧಪಾಠಗಳನ್ನು ಉಳಿಸಿಕೊಂಡಿರಬಹುದು (ಭಾರವ. ೪೭).

[ಸಂ.]

ಶುದ್ಧಪಾರ್ಷ್ಣಿ (ನಾ). ೧. ಬಲಯುತವಾದ ಹಿಂಚೂಣಿಸೈನ್ಯ. ೨. ಬಲಯುತವಾದ ಹಿಂಚೂಣಿಸೈನ್ಯವುಳ್ಳವನು : ಅಂತಪರಿಮಿತ ಶುದ್ಧಪಾರ್ಷ್ಣಿಯುಂ ಗುಪ್ತಮೂಲಪ್ರತ್ಯಂತನುಂ . . . ವಿಜಯಪ್ರಸ್ಥಾನೋದ್ಯುಕ್ತಂ ಮಂಗಳವಸದನಂಗೊಂಡು (ಶಾಂತಿಪು. ೧೦-೧೪೨ ವ). [ಸಂ.]

ಶುದ್ಧಪೂರ್ವರಂಗ (ನಾ). [ಕಾವ್ಯಮೀ] ನಾಟಕವನ್ನು ಸ್ಥಾಪಿಸುವ ಕ್ರಮದ ಒಂದು ಬಗೆ : ವಸ್ತುತಃ ಹಿಂದೆ ಎರಡು ಪದ್ಧತಿಗಳೂ ಇದ್ದುವೆಂದೂ, ಇವುಗಳಿಗೆ

ಕ್ರಮವಾಗಿ 'ಶುದ್ಧಪೂರ್ವರಂಗ', 'ಚಿತ್ರಪೂರ್ವರಂಗ' ಎಂಬ ಹೆಸರುಗಳಿದ್ದಂತೆಯೂ ತೋರುತ್ತದ (ಕ್ಷಿಪ್ರ. ೨೧೩). 'ಚಿತ್ರಪೂರ್ವರಂಗ' ಪರಾ. [ಸಂ.]

ಶುದ್ಧಪ್ರತಿ (ನಾ). [ಗ್ರಂಥಸಂ] ತಪ್ಪಿಲ್ಲದ ಪಾಠಭಾಗವುಳ್ಳ ಪ್ರತಿ; ದೋಷರಹಿತವಾದ ಪ್ರತಿ. [ಸಂ.]

ಶುದ್ಧಪ್ರಸಾದ (ನಾ). [ವೀಶೈ] ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ಎಂಬ ಮೂರು ಬಗೆಯ ಪ್ರಸಾದಗಳಲ್ಲಿ ಒಂದು ; ಗುರುವು ಸ್ವೀಕರಿಸಿ ಉಳಿದುದು : ತ್ರಿವಿಧ ಪ್ರಸಾದವೆಂದೆಂಬರು ಅದಂತಹುದೋ ಶುದ್ಧಪ್ರಸಾದ ಗುರುವಿನದದು ಸಿದ್ಧಪ್ರಸಾದ ಲಿಂಗದದು ಪ್ರಸಿದ್ಧಪ್ರಸಾದ ಜಂಗಮದದು ಇಂತೀ ತ್ರಿವಿಧವುಂಡಾದವರ ತೋಱೂ (ಬಸವ.ಕ. ೭೯೦). [ಸಂ.]

ಶುದ್ಧಯಿಸು (ಕ್ರಿ). ಚೊಕ್ಕಟಮಾಡು; ನಿರ್ಮಲಗೊಳಿಸು : ಒಳಗೆ ಶೋಧಿಸಿ ಹೊಱಗೆ ಶುದ್ಧಯಿ [ಪಾಶಾ. ವಿ] ಸಿ ಒಳಹೊಱಗೆಂಬ ಉಭಯಶಂಕೆಯ ಕಳೆದು ಸ್ಪಟಿಕದ ಶಲಾಕೆಯಂತೆ ತಳವೆಳಗು ಮಾಡಿ (ಮಹಾದೇ. ಬ. ೨೧-೩೬) : ಶುದ್ಧ + ಇಸಿದಂ - ಶುದ್ಧಯಿಸಿದಂ; ತಾರ + ಇಸಿದಂ - ತಾರಯಿಸಿದಂ (ಶಪರಿ. ೨೪ ವ್ಯಪೋ).

[ಶುದ್ಧ + -ಇಸು]

ಶುದ್ಧವಾಹಿನಿ (ನಾ). [ಸಂಗೀತ] ಒಂದು ರಾಗದ ಹೆಸರು : ಕೌಶಿಕ . . . ಕುರಂಜಿ ಶುದ್ಧವಾಹಿನಿ ಪ್ರಥಮಮಂಜರಿ ನಟನಾರಾಯಣೀ ಫಲಮಂಜರಿ ಸಯಸೋದರೆಯೆಂಬ ಮುವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದಾದ ರಾಗಂಗಳು (ವಿವೇಕ. ೧೮೮).

[ಸಂ. ಶುದ್ಧವಾಹಿನೀ]

ಶುದ್ಧವಿಷ್ಕಂಭ (ನಾ). [ಕಾವ್ಯಮೀ] ನಾಟಕದ ಒಂದು ಅಂಗ; IP ''ನಡದು ಹೋದ ಮತ್ತು ಮುಂದೆ ನಡೆಯುವ ಕಥಾಂಶಗಳನ್ನು ಮಧ್ಯಮಪಾತ್ರಗಳ ಮೂಲಕ ಸಂಕ್ಷೇಪವಾಗಿ ಸೂಚಿಸುವುದು'' (ಕ್ಷಿಪ್ರ. ೨೦೬) : ವಿಷ್ಕಂಭ – ನಡದುಹೋದ ಕಥಾಂಶವನ್ನು ಸಂಕ್ಷೇಪವಾಗಿ ಸೂಚಿಸುವುದು; ಇದನ್ನು ಪ್ರಧಾನ ಪಾತ್ರಗಳು ಮಾಡುವುದಿಲ್ಲ. ಮಧ್ಯಮಪಾತ್ರಗಳಿಂದಾದರ 'ಶುದ್ಧವಿಷ್ಕಂಭ'ವಾಗುತ್ತದೆ (ಸಂಸಾಬ. ೧೫). [ಸಂ.]

ಶುದ್ಧವೃತ್ತ (ನಾ). ೧. ಒಳ್ಳೆಯ ನಡತೆ ; ಪರಿಶುದ್ಧವಾದ ನಡವಳಿಕೆ. ೨. ಒಳ್ಳೆಯ ನಡತೆಯುಳ್ಳವನು; ಸದಾಚಾರಿ : ಆ ಪುರುಷೋತ್ತಮಂ ತಿಳಿಪಿದಂ ಕನಸಂ ನೆನಸಾಗ ರಾಗದಿಂ . . . ಕುಂಭವಿಂದುತ್ತಮನಮಲಪಯಸ್ವದ್ಮವಿಂ ಶುದ್ಧವೃತ್ತಂ (ಶಾಂಪು. ೯-೨೧೮); ಭೂಮಿಪಾಲಕಂ ಸಂದು ವಿರಕ್ತಿಗಾಗಳೆ ತದೀಯ ಸಮಕ್ಷದ ದೀಕ್ಷೆಗಂ ಮನಂದುದನದಂತೆ . . . ಎಡೆಯೊಳ್ ನಿಲಲೀಗುಮ ಶುದ್ಧವೃತ್ತರಂ (ಚುಪ್ರಪು. ೬-೨೬).

[ಸಂ.]

ಶುದ್ಧಶೈವ (ನಾ). ೧. [ಶೈವ] ಸಾಮಾನ್ಯ, ಮಿಶ್ರ, ಶುದ್ಧ ಮತ್ತು ವೀರ ಎಂಬ ಶೈವಮತದ ನಾಲ್ಕು ಪಂಗಡಗಳಲ್ಲಿ ಒಂದು ಬಗೆ : ಶುದ್ಧಶೈವಸಂಪನ್ನರಪ್ಪ ಅಱವತ್ತು ಮೂವರು ಅಸಂಖ್ಯಾತರು (ಅಪ. ಮುಖ-೨೮); ಇಂತು ಬಸವರಾಜಂ . . . ಕೀರ್ತಿಯ ತಳೆದು . . . ಶುದ್ಧಶೈವಸರೋನಿಧಿತರಂಗಮಾಲಾನಿಮಗ್ನಚಿತ್ತನಾಗಿರ್ದಂ (ಬಸ. ೧೨-೩); ವಾತೂಲ ಶುದ್ಧಾಖ್ಯವೆಂಬ ಗ್ರಂಥದಲ್ಲಿ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂದು ಶೈವಮತವನ್ನು ನಾಲ್ಕಾಗಿ ವಿಂಗಡಿಸಿದ್ದಾರೆ (ಭಾರವ. ೭೪). ೨. ಶೈವಮತದ ನಾಲ್ಕು ಪಂಗಡಗಳಲ್ಲಿ ಒಂದಾದ ಶುದ್ಧಶೈವಪಂಗಡಕ್ಕೆ ಸೇರಿದವನು : ಕೌಶಿಕ . . . ಗೌತಮರೆಂಬ ಆದಿಶೈವರ ಗೋತ್ರಸಂಭವನಾಗಿ ಮಹಾಶೈವನೆನಿಪ ಶಿವದ್ವಿಜನೇ ಶುದ್ಧಶೈವನು (ವಿವೇಕ. ೭೮). [ಸಂ.]

ಶುದ್ಧಸಾವೇರಿ (ನಾ). [ಸಂಗೀತ] ಒಂದು ರಾಗದ ಹೆಸರು : ಶುದ್ಧಸಾವೇರಿ ರಾಗದ . . . ತ್ಯಾಗರಾಜಕೀರ್ತನೆಗಳನ್ನು ಅವರು ಹಾಡುವುದರಲ್ಲಿ ಸೌಂದರ್ಯ, ಜೀವಂತತೆ, ಸೊಗಸು ಮತ್ತು ಗಾಂಭೀರ್ಯಗಳು ತುಂಬಿರುತ್ತಿದ್ದುವು (ಸಂಗೀತ. ೨೭).

[ಸಂ. ಶುದ್ಧಸಾವೇರೀ]

ಶುದ್ಧಾಂತ (ನಾ). ೧. ಅಂತಃಪುರ ; ರಾಣೀವಾಸ : ಪ್ರಿಯಕುಬ್ಜವಾಮನ ಗಣಾಲಾಪಂಗಳತ್ಯಂತಸೌಂದರಶುದ್ಧಾಂತವಧೂಕದಂಬಂಕಮನೇಂ ಮೆಯ್ಯೆರ್ಚಿಸಲ್ಯಾರ್ತುದೋ (ಆದಿಪು. ೧೧-೪೨); ಒಳ್ಪುವೆತ್ತ ಶುದ್ಧಾಂತನಿತಂದಿನೀನಿವಹಮೊಲ್ದೆಳಸುತ್ತಿರೆಯುಂ ಧರಾಂಗನಾಕಾಂತನ ಚಿತ್ತವೇಕಜೆಯೆಮೊಂದದಣಂ ಸುರತೋಪ ಭೋಗಮಂ (ಕಾದಂಪು. ೨೦); ಶುದ್ಧಾಂತಕ್ಕೆದಿ ಮುದದಿ ಪೊಡವಿಪತಿಯಂ ಕಂಡು ಪೊಡಮಟ್ಟು (ವಡ್ಡಾರಾ. ೨-೮-೧). ೨. ರಾಜನ ಅಂತಃಪುರದ ಸ್ತ್ರೀವರ್ಗ. [ಸಂ.]

ಶುದ್ಧಾಕ್ಷರ (ನಾ). ವರ್ಣಮಾಲೆಯ ಮೂಲಾಕ್ಷರ : ಅಂತಕಾರಾದಿ ಹಕಾರಾಂತ ಸ್ವರ ವ್ಯಂಜನ ಭೇದ ಭಿನ್ನ ಶುದ್ಧಾಕ್ಷರಂಗಳುಮಂ ಯೋಗವಾಹಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಂಗೆ . . . ಉಪದೇಶಂಗೆಯ್ದು (ಆದಿಪು. ೮-೫೯ ವ); ನಮಸ್ಸಿದ್ಧೇಭ್ಯ ಎಂದಾದಿತೀರ್ಥೇಶರ್ ವಂದಿಸಿ ದೀಕ್ಷೆಗೆಯ್ದು [ಶದಲಿಂ] ಸಿದ್ಧಂ ನಮಾದ್ಯಂ ಜಗಜ್ಜಾ ಶುದ್ಧಾಕ್ಷರಮೆಂಬ ಸುದ್ದಿಗೆಯುಂ (ಶಾಂತಿಪು. ೧-೨). [ಸಂ.]

ಶುದ್ಧಾತ್ಮ (ನಾ). ೧. ನಿರ್ಮಲವಾದ ಮನಸ್ಸು. ೨. ಪರಿಶುದ್ಧವಾದ ಮನಸ್ಸುಳ್ಳವನು ; ಸಾತ್ವಿಕ : ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು ರತ್ನಕ್ಕೆ ಹೆಣಗಾಟವನಾತಿಹರು (ಬಸವ. ೯೦೫); ಪುದ್ದುಮಂತ್ರಗಳ ಸಾಧ್ಯವ ಮಾಡಿಕೊಳುತಿಹ ಶುದ್ಧಾತ್ಮರುಗಳ ನೋಡಿದನು (ಅಭಿನವ. ೩-೪೪). [ಸಂ. ಶುದ್ಧಾತ್ಮನ್]

ಶುದ್ಧಾವಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಕೌಶಿಕೆ ವೇಣಾವಳಿ ಶುದ್ಧಾವಳಿ . . . ಸಯಸೋದರಿಯೆಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದಾದ ರಾಗಂಗಳು (ವಿವೇಕ. ೨೩೩). [ಸಂ. ಶುದ್ಧಾವಲಿ]

ಶುದ್ಧಾಶುದ್ಧಪತ್ರಿಕೆ (ನಾ). ಗ್ರಂಥದ ಕೊನೆಯಲ್ಲಿ ಸೇರಿಸುವ ತಪ್ಪು ಒಪ್ಪುಗಳ ಪಟ್ಟಿ : ಮುದ್ರಣದಲ್ಲಿ ಬಹಳ ತಪ್ಪುಗಳು ಉಳಿದು ಬಿಟ್ಟು ಕಾರಣ ನಂತರದಲ್ಲಿ ಶುದ್ಧಾಶುದ್ಧಪತ್ರಿಕೆಯನ್ನು ಸೇರಿಸಲಾಯಿತು (ಕೂಡ). [ಸಂ. ಶುದ್ಧಾಶುದ್ಧಪತ್ರಿಕಾ]

ಶುದ್ಧಿ (ನಾ). ೧. ಪರಿಶುದ್ಧತೆ; ಪವಿತ್ರತೆ. ೨. ಚೊಕ್ಕಟ ಮಾಡುವುದು; ಶುಚಿಗೊಳಿಸುವುದು. ೩. (ದೋಷ, ಮೈಲಿಗೆ ಮುಂತಾದುವುಗಳನ್ನು) ಕಳೆದುಕೊಳ್ಳುವಿಕೆ. ೪. ಸಾಲ ಮುಂತಾದ ಋಣವನ್ನು ತೀರಿಸುವುದು; ಋಣಸಂದಾಯ. ೫. ದೋಷವಿಲ್ಲದಿರುವಿಕೆ; ಸರಿಯಾಗಿರುವಿಕೆ: 'ಪಾಯಶುದ್ಧಿ' ಪರಾ. ೬. ಎಚ್ಚರ ; ಜ್ಞಾನ; ಪರಿವೆ : ಮಾಮಾ ಹೇಗೋ ತನ್ನ ಕೈಯನ್ನು ಬಿಡಿಸಿಕೊಂಡಾಗ ನನ್ನ ಕೈಕಾಲುಗಳಲ್ಲಿಯ ಶಕ್ತಿ ಹೋದಂತಾಯಿತು. ನಾನು ಶುದ್ಧಿಯ ಮೇಲಿದ್ದೆ (ಸ್ಮಶಿಚ. ೧೯೧); ಅವಳಿಗೆ ಮೈಮೇಲಿನ ಶುದ್ಧಿಯೇ ಇದ್ದಂತಿರಲಿಲ್ಲಮ್ಮಾ (ಮೂಯದಾ. ೬೭). ೭. ಶೋಧನೆ; ತಪಾಸಣೆ :(೬). ೮. ಸಮಾಚಾರ; ಸುದ್ದಿ : ಲಂಕಾನಗರಿಗ ಪೋಗಿ ನುಡಿದು ದಶಕಂಧರನೊಳ್ ಜಾನಕಿಯ ಶುದ್ಧಿಯಂ (ವಂಕಾಪಾ. ೧೧-೪೨). ೯. (ತೆರಿಗೆಯ) ವಿನಾಯಿತಿ (?) : 'ಕುಳಾಗ್ರಶುದ್ಧಿ' ಪರಾ. ೧೦. [ಜೈನ] ವೀತರಾಗರಾದ ಮುನಿಗಳು ಉತ್ತಮಸಂಯಮವನ್ನು ಕಾಪಾಡಿಕೊಳ್ಳಲು ಸಾಧಿಸಬೇಕಾದ ನೈರ್ಮಲ್ಯ: 'ಅಷ್ಟವಿಧಶುದ್ಧಿ', 'ಶುದ್ಧಾಷ್ಟಕ' ಪರಾ. [ಸಂ.]

ಶುದ್ಧಿಗೊಳಿಸು (ಕ್ರಿ). ಶುಚಿಗೊಳಿಸು; ಸ್ವಚ್ಛಮಾಡು : ಅಂಗಡಿ ಮನೆ ಮುಂಗಟ್ಟುಗಳಲ್ಲಿ ಇಮ್ಮೆಯ್ಯ ಕಿಟಕಿ ಬಾಗಿಲುಗಳನ್ನು ತೆರೆದು, ಶುದ್ಧಿಗೊಳಿಸಲಾಗಿತ್ತು (ಪುನರು. ೧೮೨). [ಶುದ್ಧಿ + ಕೊಳ್ + -ಇಸು]

ಶುದ್ಧಿಪತ್ರ (ನಾ). ೧. ಸಾಮಾನ್ಯವಾಗಿ ಗ್ರಂಥಗಳ ಕೊನೆಯಲ್ಲಿ ಸೇರಿಸುವ ತಿದ್ದುಪಡಿಯ ಭಾಗ; ತಪ್ಪೋಲೆ. ೨. ಪ್ರಾಯಶ್ಚಿತ್ತದ ಮೂಲಕ ಪಡೆದ ಪ್ರಮಾಣಪತ್ರ. [ಸಂ.]

ಶುದ್ಧೀಕರಣ (ನಾ). ೧. ಸ್ವಚ್ಛಗೊಳಿಸುವಿಕೆ ; ಶುಚಿಮಾಡುವಿಕೆ. ೨. ಶುದ್ಧಿಗಾಗಿ ಮಾಡುವ ಪ್ರಾಯಶ್ಚಿತ್ತಕರ್ಮ : ಈಗ ಈ ಪ್ರಕರಣ . . . ಜಗದ್ಗುರು ಶಂಕರಾಚಾರ್ಯರ ಕಡೆಗೆ ಹೋಗುವದೆಂದೂ, ನಂತರ ಬಳಕರ ಶುದ್ಧೀಕರಣವಾಗಬೇಕೆಂದೂ ಗೊತ್ತಾಯಿತು (ಸ್ಮಶಿಚ. ೨೦೬). [ಸಂ.]

ಶುದ್ಧೀಕರಿಸು (ಕ್ರಿ). ೧. ನಿರ್ಮಲಗೊಳಿಸು; ಶುಚಿಗೊಳಿಸು : ನಲ್ಲಿ ಪದ್ಧತಿಯಿರುವ ಹಚ್ಚನ ದೊಡ್ಡನಗರಗಳಲ್ಲಿ ಶುದ್ಧೀಕರಿಸಿದ ನೀರು ಸಿಗುವುದು (ಅಡುಸೌ. ೮೪). ೨. ಪವಿತ್ರಗೊಳಿಸು; ಸಂಸ್ಕಾರಗೊಳಿಸು : ಇಷ್ಟೆಲ್ಲಾ ಪಾಪಕೃತ್ಯಗಳು ತುಂಬಿ ತುಳುಕುವ ಈ ದೇಹವನ್ನು ಶುದ್ಧೀಕರಿಸುವುದಕ್ಕಾಗಿ ನನ್ನ ಆತ್ಮಸಂತೋಷದಿಂದ ನನ್ನ ಹತ್ಯೆಯನ್ನು ಮಾಡುವ ಈ ಸಾಹಸಕಾರ್ಯಕ್ಕೆ ಕೈ ಹಾಕುವೆ (ದೇಶಭಾ. ೧೧೫).

೩. ಪರಿಷ್ಕರಿಸು; ಸುಧಾರಿಸು: ಸ್ಪ್ರೆಬೋವಿನ . . . ಲೇಖನಗಳಂತೆ ಅಲೆಗ್ಸಾಂಡರನು . . . ಇಲ್ಲಿಂದ ಒಂದು ಗಾಯಕವಾದಕತಂಡವನ್ನು ಗ್ರೀಸ್‌ಸಂಗೀತವನ್ನು ಶುದ್ಧೀಕರಿಸಲು ಕರದೊಯ್ದನಂತೆ (ಭಾರದ. ೫೪೫). [ಶುದ್ಧೀಕರಣ + - ಇಸ್ಸು]

ಶುದ್ಧೆ (ನಾ). ಪರಿಶುದ್ಧಳಾದವಳು; ಪವಿತ್ರಳಾದವಳು : ಲೋಕವಱಿಯಲು ಶುದ್ಧೆ ಜಾನಕಿ ಸಾಕು ಕಾಡದೆ ಕೂಡಿಕೊಳ್ಳು (ಕೌಶಾ. ೪೩-೪೦). [ಸಂ. ಶುದ್ಧಾ]

ಶುದ್ಧೈಷ್ಟಕ (ನಾ). [ಜೈನ] ವೀತರಾಗಿಯಾದ ಮುನಿಯು ಸಾಧಿಸಬೇಕಾದ ಎಂಟುಬಗೆಯ ಶುದ್ಧಿಗಳು: ಭಾವಶುದ್ಧಿಯುಂ ಕಾಯಶುದ್ಧಿಯುಂ ವಿನಯಶುದ್ಧಿಯುಂ ಈರ್ಯಾಪಥಶುದ್ಧಿಯುಂ ಭಿಕ್ಷಾಶುದ್ಧಿಯುಂ ಪ್ರತಿಷ್ಠಾಪನಶುದ್ಧಿಯುಂ ಶಯನಾಶನಶುದ್ಧಿಯುಂ ವಾಕ್ಶುದ್ಧಿಯುಮೆಂಬ ಶುದ್ಧೈಷ್ಟಕದೊಳಂ (ಅಜಿಪು. ೭-೮೨). [ಸಂ.]

ಶುನಕ (ನಾ). ೧. ನಾಯಿ; ಸೊಣಗ : ಸ್ವರಾಗಸಂತತಿ ಶುನಕಗೋಷ್ಠಿಯೊಳು ಚತುರದ್ವಿಜೋಪಚಾರಂ ದಂತಧಾವನದೊಳು . . . ಸ್ವಸ್ವತಾಗತಿ ಮುಕ್ತರಾದವರೊಳಲ್ಲದಾ ನಾಡೊಳಿಲ್ಲ (ಹಚಕಾ. ೨-೧೧) ; ಕೆಳೆಯುಂ ಪಗೆಯುಂ ದುರ್ಜನನೊಳನುತ್ತಮಂ ನೋಡೆ ದಲ್ ಶುನಕಂ ಕೂರ್ತುಂ ಮುಳಿದುಮಪಕಾರಮಂ ಮೊಕ್ಕಳಮಾಗಿರೆ ನೆಕ್ಕಿ ಕರ್ಚಿ ಮಾಡದುದುಂಟೇ (ಪಾರ್ಶ್ವಪು. ೪-೪೭); ದಾಸರೋ ನಾವೆಲ್ಲ ಶುನಕನಂದದಿ ಜಗದ ವಾಸನೆಗಳೆಳತಕ್ಕೆ ದಿಕ್ಕುದಿಕ್ಕಿನಲಿ (ಮಂಕಿಕ. ೩೮೫). ೨. ಒಂದು ನರಕದ ಹೆಸರು: ಶುನಕ ಸೂಕರ ಅಜ ಮಹಿಷ ಅವಿಕವೆಂಬೈದು ಮಂತ್ರಿನರಕಂಗಳ ನಡುವೆ ಚಂಡಕೋಲಾಹಲ ವೆಂಬರಸುನರಕವಿಹುದು (ವಿವೇಕ. ೧೮೦). ೩. ಒಬ್ಬ ಋಷಿಯ ಹೆಸರು. [ಸಂ.]

ಶುನಕಿ (ನಾ). ಹೆಣ್ಣುನಾಯಿ: ಶುನಕನೊಡಗೂಡಿ ತಿರ್ದಿದ ಶುನಕಿಗಮಾ ತಿರ್ದ ತಿರ್ದು ಬೆನ್ನಡೆತಂದಾ ಶುನಕಂ ವಕ್ರಿಸಿದ ನಯಂ ಶುನಕಿಯ ತಿರ್ದಕ್ಕುಂ (ಲೋಕೋಪ. ೧೨-೩೨). [ಸಂ. ಶುನಕೀ]

ಶುನಾಸೀರ (ನಾ). ದೇವೇಂದ್ರ; ಇಂದ್ರ. [ಸಂ.]

ಶುನಿ (ನಾ). ನಾಯಿ: "ಶ್ವಾನಂ ಶುನಿ" (ವಸ್ತುಕೋ. ೯೦-೧೦); ನೆಲಕ್ಕೆ ಬಿದ್ದರೆ ನಾನೆತ್ತಿಕೊಂಬುದಕೆ ಮುನ್ನವೇ ಶುನಿ ಎತ್ತಿಕೊಂಬಂತೆ ಮಾಡಾ (ಮಹಾದೇ. ಬ. ೭೯-೨೦೦); ಕಲಿಯುಗಮಹಿಮೆಯೊ ನೆಲನ ವಾಸಿಗಳುಂಟೊ ಮೊಲ ಶುನಿಗಳನು ಕೊಲ್ಲುವದು (ಅಮುಸಾಂ. ೨-೩೫); ಸತ್ತವರ ಬಾಯೊಳಗೆ ಒತ್ತಿ ನೀರೆಱೆದಂತೆ ಚಿತ್ತವಿಲ್ಲದವಳ ಸಂಸಾರ ಶುನಿ ಹೆಣನ ಹತ್ತಿ ತಿಂದಂತೆ (ಸರ್ವಜ್ಞ. ೧೭೦೩). [ಸಂ.]

ಶುನಿಗಿಲು (ನಾ). ಒಂದು ಬಗೆಯ ಪಕ್ಷಿ : ಶಕುನಿ ಶುನಿಗಿಲು ಚಟ್ಟಿಭಂ ಕೌಶಿಕಂ . . . ನಾಗರಪಕ್ಷಿ ಮುಖ್ಯಗಳ್ ಸುಖಮಿಪ್ಪವಾ ವನದೊಳು (ಪಿಕೋಪು. ೧೦-೩೧). [?]

ಶುಭ (ಗು). ೧. ಹೊಳೆಯುವ ; ಪ್ರಕಾಶಿಸುವ. ೨. ಮನೋಹರವಾದ ; ಸುಂದರವಾದ. ೩. ಮಂಗಳಕರವಾದ; ಒಳ್ಳೆಯ. (ನಾ). ೪. ಮಂಗಳ ಕರವಾದುದು ; ಒಳ್ಳೆಯದು : ಶ್ರೀಕಾಂತಯುಂ . . . ಸಮಸಂದಿಷ್ಟಾರ್ಥಮಂ ಮಾಟ್ಕೆ ಕಾಂತನ್ಯಲೋಕಸ್ತುತ ನಿನ್ನೊಳಿಂದು ವಿಜಯಂ ಭದ್ರಂ ಶುಭಂ ಮಂಗಳಂ (ಪುಪ್ಪಪು. ೮-೬೪) ; ಶುಭಗಳು ಪರಿಗ್ರಾಹ್ಯಗಳು ; ಅಶುಭಗಳು ಪರಿತ್ಯಾಜ್ಯಗಳು (ಹಿಂದಸಾ. ೫೭). ೫. ವಿಶೇಷವಾದುದು; ಶ್ರೇಷ್ಠವಾದುದು. ೬. ಪರಿಶುದ್ಧ ವಾದುದು; ನಿರ್ಮಲವಾದುದು. ೭. ಒಳ್ಳೆಯ ಅದೃಷ್ಟ; ಭಾಗ್ಯ. ೮. ಸಂತೋಷ; ನಲಿವು. ೯. ಬಟ್ಟೆ; ವಸ್ತ್ರ. ೧೦. ಪೌರುಷ; ಪರಾಕ್ರಮ: "ಮಂಗಳದಲ್ಲಿ ಪಟದಲ್ಲಿ ವಿಕ್ರಾಂತದಲಿ ವಿಶೇಷದಲಿ ಶುಭಶಬ್ದಮಕ್ಕುಂ" (ಮಂಗರಾ. ೧೫೪-೬೬). ೧೧. ಅರಸುತನ; ದೊರೆತನ. ೧೨. ನಿಜವಾದುದು; ಸತ್ಯವಾದುದು. ೧೩. ಮರ ; ವೃಕ್ಷ : "ವಿಕ್ರಾಂತ ಭೂಜಾತಮಂಗಳಮುಂ ರಾಜ್ಯಪದಂ ವಿಶೇಷವಿಮಲಂ ಸತ್ಯಂ ಶುಭವಾಚಕಂ" (ನಾನಾರ್ಥ. ೧೪೦). ೧೪. ಒಂದು ಬಗೆಯ ಕಳ್ಳಿಗಿಡ : (ಕ). ೧೫. [ಜೈನ] ನಾಮಕರ್ಮಗಳಲ್ಲಿ ಒಂದು ; ಶರೀರದ ಅವಯವಗಳನ್ನು ಸುಂದರಗೊಳಿಸುವ ಕರ್ಮ : ಅಸ್ಥಿರ ಶುಭ ಅಶುಭ ಸುಭಗ . . . ತೀರ್ಥಕರನಾಮಮೆಂದಿಂತಲ್ಲಿ ಗತಿನಾಮಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೭). ೧೮. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂದು ; ಇಪ್ಪತ್ತುಮೂರನೆಯ ಯೋಗ : ವಿಷ್ಕಂಭ . . . ಶುಭ ಶುಕ್ಲ ಬ್ರಹ್ಮ ಐಂದ್ರ ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೩೦೦). [ಸಂ.]

ಶುಭಂಕರಕತ್ತಿಗೆ 'ಶುಭಂಕರಗತ್ತಿಗೆ' ನೋ.

ಶುಭಂಕರಗತ್ತಿಗೆ, ಶುಭಂಕರಕತ್ತಿಗೆ (ನಾ). ಒಂದು ಬಗೆಯ ಕತ್ತಿ : ಸುರಿಗೆ ಶುಭಂಕರಗತ್ತಿಗೆ ಕರಗಂ ತಲೆಮಂಡೆ ಮರುಳ ಬಾಯ್ಕೆಱೆ ಪಱೆಯಾಗಿರ ಕಳದೊಳೆಱೆಯಲಿರ್ದುವು ನೆರೆದು ನಿಶಾಚರರ ತಕ್ಕನೆಕ್ಕತುಳಂಗಳ್ (ಕಾವ್ಯಾವ. ೬೬). **ಶುಭಂಕರಕತ್ತಿಗೆ** : ಕಾಳರಕ್ಕಸಿ ಶುಭಂಕರಕತ್ತಿಗೆಯಿಂದೆ ಗಂಟಲಂ ಕೊಯ್ದು (ಅರ್ಧನೇ. ೫-೩೯). [ಶುಭಂಕರ್ರ + ಕತ್ತಿಗೆ]

ಶುಭಕರ (ಗು). ೧. ಮಂಗಳಕರವಾದ; ಕಲ್ಯಾಣವನ್ನುಂಟುಮಾಡುವ. (ನಾ). ೨. ಮಂಗಳವನ್ನುಂಟುಮಾಡುವುದು; ಕಲ್ಯಾಣವನ್ನುಂಟುಮಾಡುವಂಥದು: ಊರೂರೊಳತಿಶುಭಕರಮೆನಲು ಸಿರಿಯಾಳಚರಿತೆಯನೊರೆದೊರೆದು ವಿರಚಿಪರು ಭಕ್ತಸಭಾಂತರಂಗಳೊಳು (ಬಸಪು. ೨೫-೨೦). [ಸಂ.]

ಶುಭಕರಣ (ನಾ). [ಜ್ಯೋತಿ] ಒಳ್ಳೆಯ ಸಮಯ; ಶುಭಯೋಗ: ಇಂದಿನ ಕರಣ ಶುಭಕರಣ ಇಂದಿನ ಯೋಗ ಶುಭಯೋಗ (ಪುರಂದ. ೫-೧೬೧-೧೪೩); ಶುಭಕರಣದಿಂ ಕಾರ್ಯಸಿದ್ಧಿಯು ಶುಭಕರಗಳಹವಾಗಿ . . . ತಿಥಿವಾರಗಳನಾರ್ಯೆದ ನಂತರದಿ (ಗಗತಾ. ೪-೭೧). [ಸಂ.]

ಶುಭಕರ್ಮ (ನಾ). ೧. ಮದುವೆ, ಮುಂಜಿ ಮುಂತಾದ ಮಂಗಳಕಾರ್ಯ. ೨. [ವೀಶೈ] ಕರ್ಮಚತುಷ್ಟಯಗಳಲ್ಲಿ ಒಂದು; ಸ್ವರ್ಗಪ್ರಾಪ್ತಿಯನ್ನುಂಟು ಮಾಡುವ ಕರ್ಮ : ಕರ್ಮವು ಅಶುಭಕರ್ಮ, ಶುಭಕರ್ಮ, ಜ್ಞಾನಕರ್ಮ, ಪ್ರಸಾದಕರ್ಮವೆಂದು ನಾಲ್ಕು ತೆರನಾಗಿರುವುದು. ಅಶುಭಕರ್ಮದಿಂದ ನರಕವೂ, ಶುಭಕರ್ಮದಿಂದ ಸ್ವರ್ಗವೂ ಲಭಿಸುವುವು (ತಿವಾಸಾ. ೧೩೧). [ಸಂ. ಶುಭಕರ್ಮನ್]

ಶುಭಕಾಮನೆ (ನಾ). ಮಂಗಳಕರವಾದ ಅಪೇಕ್ಷೆ ; ಶುಭಾಶಯ: ಇಬ್ಬರು ಮಹಾವಿಭೂತಿಗಳ ಶುಭಕಾಮನೆ ಮಹಾರಾಜರನ್ನು ವಜ್ರಕೋಟೆಯಂತೆ ಸುತ್ತುಗಟ್ಟಿದ (ರೂಪಶಾ. ೫೯); ಆ ಪತ್ರದಲ್ಲಿ ಅಶೋಕನು ತನ್ನ ವಿವಾಹವಾಗುವ ಅಭಿಪ್ರಾಯವನ್ನು ಸೂಚಿಸಿ ಅವಳಿಂದ ಶುಭಕಾಮನೆಯನ್ನು ಕೇಳಿದ್ದನು (ಮೃಚ್ಛ. ೧೬೭).

[ಸಂ. ಶುಭಕಾಮನಾ]

ಶುಭಕಾರ್ಯ (ನಾ). ಶುಭ ಕರ್ಮ ; ಒಳ್ಳೆಯ ಕೆಲಸ : ಶೈವಸಮಯ ಸಮುದ್ಧರಣ ವಿದ್ಯಾವಿಶಾರದನತಿವಿಭವದಿಂ ಜೀವಿಸುತ ಶುಭಕಾರ್ಯಮಂ ಮಾಡುತ್ತಲಿ (ಬಸಪು. ೬೦-೧) ; ಶುಭಕಾರ್ಯಗಳಿಗೆ ಹೋಗುವಾಗ ಉಡುವುದಕ್ಕೆ ಉಪಯೋಗವಾಗುವಷ್ಟು ಉತ್ತಮವಾದ ಸೀರೆ ಅದು (ಪಡ್ಡಸ. ೨೧೨). [ಸಂ.]

ಶುಭಕೃತು (ನಾ). ಅರವತ್ತುಸಂವತ್ಸರಗಳಲ್ಲಿ ಮೂವತ್ತಾರನೆಯದು : ಆ ವರ್ಷವೇ ಪ್ರಭವ . . . ಶುಭಕೃತು ಶೋಭನಕೃತು ಕ್ರೋಧಿ ವಿಶ್ವಾವಸು . . . ಅಕ್ಷಯವೆಂದಱುವತ್ತುತೆಱನಾಗಿಹುದು (ವಿವೇಕ. ೩೬೩). [ಸಂ. ಶುಭಕೃತ್]

ಶುಭಗಳಿಗೆ (ನಾ). ಮಂಗಳಕರವಾದ ಸಮಯ; ಒಳ್ಳೆಯ ಕಾಲ : ಯಾವ ಕೆಲಸವನ್ನೇ ಆಗಲಿ ಶುಭಗಳಿಗೆಯಲ್ಲಿ ಪ್ರಾರಂಭಿಸಬೇಕು (ರೂಢಿ).

[ಶುಭ + ಗಳಿಗೆ (< ಗಟಿಗೆ)]

ಶುಭಗೇಡಿ (ನಾ). ಅಮಂಗಳವನ್ನು ನುಡಿಯುವವನು : ಶುಭ ನುಡಿಯೋ ಶುಭಗೇಡಿ ಅಂದರೆ ಹಂದರದವರೆಲ್ಲ ಬೋಳಿಯರು ಅಂದ (ಗಾದೆ). [ಶುಭ + ಕೇಡಿ]

ಶುಭಚರಿತ (ನಾ). ಪರಿಶುದ್ಧವಾದ ನಡವಳಿಕೆಯುಳ್ಳವನು : ಉಭಯಕುಲವಿ ಶುದ್ಧರ್ ಸ್ಯಾಯವಂತರ್ . . . ಮುನ್ನ ನಿಮ್ಮಜ್ಜಪಜ್ಜರ್ ಶುಭಚರಿತ ತದೀಯಾನೂನ ವಂಶಾಧಿಪತ್ಯ ಪ್ರಭವನೆಯದಱಿಂದೀ ದುರ್ಯಶಕ್ಕೆಂತು ನೋಂತೈ (ಶಾಂತಿಪು. ೩-೭೬).

[ಸಂ.]

ಶುಭಚರಿತೆ (ನಾ). ಪರಿಶುದ್ಧವಾದ ನಡವಳಿಕೆಯುಳ್ಳವಳು : ಪರಮಾನಂದರಸಾರ್ಣವ ಪರಿಸರವೃಕ್ಷಮೇ ಕೊನರ್ತುದೆನೆ ವಸುದೇವಂ ಧರಿಯಿಸಿ ಪುಳಕಮನಾ ಶುಭಚರಿತೆಗೆ ತತ್ಪಲಮನಱಿಪಲುಂದಿಂತೆಂದಂ (ಜಗವಿ. ೨-೮೨). [ಸಂ. ಶುಭಚರಿತಾ]

ಶುಭತಿಥಿ (ನಾ). ಮಂಗಳಕರವಾದ ದಿವಸ : ಶುಭತಿಥಿ ಶುಭನಕ್ಷತ್ರ ಶುಭವಾರಂ ಶುಭಮೂಹೂರ್ತಮೆನೆ ಗಣಕನಿಳಾಪ್ರಭುವೊಗೆದಂ (ಪಂಪಭಾ. ೧-೧೨೭).

[ಸಂ.]

ಶುಭದ (ಗು). ೧. ಮಂಗಳಕರವಾದ; ಶುಭಕರವಾದ : ಸಿತಪಕ್ಷದ ಪಂಚಮಿ ದಿನಪತಿವಾರಂ ಶುಭದ ಮೂಲನಕ್ಷತ್ರದೊಳನ್ವಿತಮಾಗೆ ನೆಗಳ್ದುದೀ ಮತ್ಪತಿ ಜಗದೊಳ್ (ಆದಿಪು. ೧೭-೭೭). (ನಾ). ೨. ಒಳ್ಳೆಯ ಫಲವನ್ನು ಕೊಡುವಂಥದು: ದಿನಪಾದಿ ಗ್ರಹಮಾತ್ಮೋಚ್ಚನಿಳಯದಿಂ ದ್ಯಾದಶಾಲಯಂಗಳ ನವಸಂಖ್ಯೆ ನವಾಂಶಕದೊಳು ತಾಂ ನೆಲಸಿ ನಿಂದುದುಚ್ಚಾಭಿಲಾಷಿ ತದ್ದೆಸೆ ಶುಭದಂ (ಜಾತಕ. ೯-೪); ಅತಿಶುಭದಂ ಪದ್ಮಜನ ಧವಳಮಂಗಳವೇಷಂ (ಪುಷ್ಪಪು. ೪-೮೨). [ಸಂ.]

ಶುಭದಾಯಕ (ನಾ). ೧. ಸಂತೋಷವನ್ನುಂಟುಮಾಡುವಂಥದು. ೨. ಸಂತೋಷವನ್ನುಂಟುಮಾಡುವವನು. [ಸಂ.]

ಶುಭದಾಯಕಿ (ನಾ). ೧. ಸಂತೋಷವನ್ನುಂಟುಮಾಡುವವಳು. ೨. ಮಂಗಳವನ್ನುಂಟುಮಾಡುವವಳು ; ಕಲ್ಯಾಣವನ್ನುಂಟುಮಾಡುವವಳು: ಪರಮಮಂಗಳಮೂರ್ತಿ ಶುಭದಾಯಕಿಯೆ ಕಲ್ಯಾಣಿ . . . ಕೊಡು ಕಾರುಣ್ಯದಿಂ ದೆಮಗಧಿಕಸಂಪದವ (ತೊರಕಾ. ೧-೧-೪). [< ಸಂ. ಶುಭದಾಯಿಕಾ]

ಶುಭದಿನ (ನಾ). ಒಳ್ಳೆಯ ದಿವಸ ; ಮಂಗಳಕರವಾದ ದಿವಸ : ಶುಭದಿನ ನಕ್ಷತ್ರಮುಹೂರ್ತದೊಳ್ . . . ಜಿನೇಂದ್ರಮಂದಿರಂಗಳಂ ನಿರ್ಮಿಸಿ (ಆದಿಪು. ೮-೬೩ ವ); ತನ್ನ ಮಳಮಂ ಕಿಡಿಸಲ್ ಪುಟ್ಟಿದುದನೆ ಶುಭದಿನದೊಳ್ ಪುಟ್ಟಿದುದವಿಳಾವಬೋಧಿ ಕೇವಳಬೋಧಂ (ಶಾಂತಿಪು. ೯-೬೮) ; ಶುಭದಿನಮುಹೂರ್ತದೊಳ್ ನಿಜವಿಭವಂ ಕೈಗಣ್ಮೆ . . . ಹೇಮಪ್ರಭೆಯಂ ಗುಣೆ ರತ್ನದತ್ತನಿತ್ತನಲಂಪಿಂ (ದಶಕು. ೨-೮೨). [ಸಂ.]

ಶುಭಧ್ಯಾನ (ನಾ). ಮಂಗಳಕರವಾದ ಚಿಂತನೆ, – ಮನನ : ಚತುರ್ಮುಖ ಪ್ರತಿಮಾಯೋಗದೊಳ್ ನಿಂದು ಶುಭಧ್ಯಾನಮನವ್ಪುಕೆಯ್ದು ಮಹರ್ಷಿಯರಂ ಕಂಡಯ್ದೆವರ್ವ್ದುಂ (ಪಂಡಾಮು. ೮-೪೬ ವ). [ಸಂ.]

ಶುಭಪಂತುವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಪಲ್ಲವಿ ಶೇಷಯ್ಯರ್ ಅವರು ನಾದನಾಮಕ್ರಿಯಾ . . . ಶುಭಪಂತುವರಾಳಿ, ಪೂರ್ವಕಲ್ಯಾಣಿ ಮತ್ತು ಷಣ್ಮುಖಪ್ರಿಯ ರಾಗಗಳಲ್ಲಿ ರಚಿಸಿರುವ ಕೃತಿಗಳು ಮನಮೋಹಕವಾಗಿವೆ (ಸಂಗೀತ. ೪೮). [ಸಂ. ಶುಭಪಂತುವರಾಲೀ]

ಶುಭಮುಹೂರ್ತ (ನಾ). ಮಂಗಳಕರವಾದ ಗಳಿಗೆ; ಒಳ್ಳೆಯ ಸಮಯ : ನೈಮಿತ್ತಿಕನಂ ಬರಿಸಿ ತದಾತನಮುಮತ್ಮಂತನೂತನಮುಮಪ್ಪುದೊಂದು ಲಗ್ನಮಂ ಪೇಲಿಮೆಂಬುದುಂ ಆತಂ ತನ್ಮುಹೂರ್ತಮೆ ಶುಭಮುಹೂರ್ತಮೆಂಬುದುಂ (ಶಾಂತಿಪು. ೫-೩೭ ವ). [ಸಂ.]

ಶುಭಯೋಗ (ನಾ). ೧. = ಶುಭಧ್ಯಾನ : ಶುಭಯೋಗಭಾಗಿಯೋಗ ಪ್ರಭುವಧಿಯಿಂದಾದ ಪಾಪದಿಂ ದುಃಖದವಪ್ರಭವಾಟವಿಯೆನಿಪ ತಮಃಪ್ರಭೆಯೊಳ್ ಜನಿಯಿಸಿ (ಪಾರ್ಶ್ವಪು. ೧೨-೭೬). ೨. ಒಳ್ಳೆಯ ಸಮಯ : ಶುಭಯೋಗದಲಿ ರೋಗ ಹರ (ಗಗಕಾ. ೪-೭೧). ೩. [ಜ್ಯೋತಿ] ೧೪೨ ತ್ತೇಳು ಯೋಗಗಳಲ್ಲಿ ಒಂದು; ಮಂಗಳವನ್ನುಂಟುಮಾಡುವ ಯೋಗ : ಶುಭಯೋಗಕ್ಕೆ ರವಿ ೪೨ ಗಳಿಗೆ ಮೇಲೆ ತ್ಯಾಬ್ಯಾ (ಭಾಸ್ಕರ. ೭೦). [ಸಂ.]

ಶುಭಲಕ್ಷಣ (ನಾ). ಮಂಗಳಕರವಾದ ಚಿಹ್ನೆ, – ಗುರುತು : ಸಂಗತ ದಶಧ್ರುವ ಕ್ಷೇತ್ರಂಗಳ್ ಶುಭಲಕ್ಷಣಂಗಳವ್ಯತೋದ್ಭವವಾಹಂಗಳಜಮೃಗ್ಯುಳೂಕಭವಂಗಳ್ ಪದಿನೆಂಟುಕೋಟಿ ಜಾತ್ಯಶ್ವಂಗಳ್ (ಶಾಂತಿಪು. ೧೮-೧೨೪); ಶುಭಲಕ್ಷಣಾಶ್ಲಯುಕ್ತಮಂ . . . ಪ್ರಭಾವಿರಾಜಿತಮನೇಯಿದಂ ಪೊದೇರಂ (ಜಗವಿ. ೫-೬೬). [ಸಂ.]

ಶುಭಲಕ್ಷಣೆ (ನಾ). ಮಂಗಳಕರವಾದ ಲಕ್ಷಣವನ್ನುಳ್ಳವಳು : ಶುಭಲಕ್ಷಣೆ ರತ್ನತ್ರಯವಿಭೂಷಣಾಲಂಕೃತಾಂಗಿಯಾಗಿ . . . ತಪಃಪ್ರಭಾವದಿಂ ನೆಗಳ್ದಳ್ (ಸುಕುಮಾ. ೯-೬). [ಸಂ. ಶುಭಲಕ್ಷಣಾ]

ಶುಭಲಗ್ನ (ನಾ). = ಶುಭಮುಹೂರ್ತ : ಎಮ್ಮವರು ಬೆಸಗೊಂಡರೆ ಶುಭಲಗ್ನವನ್ನಿರಯ್ಯಾ (ಬಸವ. ೮೩). [ಸಂ.]

ಶುಭಲೇಶ್ಯೆ (ನಾ). [ಜೈನ] ಕರ್ಮಲೇಪದಿಂದ ಜೀವನಿಗೆ ಉಂಟಾಗುವ ಮಂಗಳಕರವಾದ ಬಣ್ಣ ; ☞ ಪೀತ, ಪದ್ಮ ಮತ್ತು ಶುಕ್ಲಗಳೆಂಬ ಮೂರು ಲೇಶ್ಯೆಗಳು: ಪೀತ, ಪದ್ಮ, ಶುಕ್ಲಲೇಶ್ಯೆ – ಶುಭಲೇಶ್ಯೆಯುಳ್ಳವರು ಏಳನೆಯ ಗುಣಸ್ಥಾನದವರೆಗೂ ಮುಂದರಿಯುವರು (ಜೈನಪ. ೩೦೨). 'ಅಶುಭಲೇಶ್ಯೆ' ಪರಾ. [ಸಂ. ಶುಭಲೇಶ್ಯಾ]

ಶುಭವಾರ್ತೆ (ನಾ). ಒಳ್ಳೆಯ ಸುದ್ದಿ, – ಸಮಾಚಾರ : ಸುಗ್ಗಿಯಲ್ಲಿ ಮದುವೆಯೆಂದು ನಿಶ್ಚಯಮಾಡಿದರು. ಈ ಶುಭವಾರ್ತೆಯನ್ನು ಕೇಳಿ ಮೆಚ್ಚಿ ಬಳಗದವರೆಲ್ಲ ದಿನವನ್ನು ಕಾಯುತ್ತಿದ್ದರು (ಕಾಲೂರ. ೫ ಕಥಾಸಾರ). [ಸಂ. ಶುಭವಾರ್ತಾ]

ಶುಭವೃತ್ತ (ನಾ). ಒಳ್ಳೆಯ ನಡವಳಿಕೆಯುಳ್ಳವನು; ಸಜ್ಜನ : ಧರ್ಮಚಿತ್ತನೆಂಬುದು ಶುಭವೃತ್ತನೆಂಬುದು ಮಹೋದಯನೆಂಬುದು ದೇವಭಕ್ತನೆಂಬುದು ಪತಿಭಕ್ತನೆಂಬುದು ಜಗದ್ವಳಯಂ ಪಡೆವಳ್ಕೈಲನಂ (ಅಜಪು. ೧೨-೨೫). [ಸಂ.]

ಶುಭಶಕುನ (ನಾ). ಮಂಗಳಕರವಾದ ಸೂಚನೆ, – ನಿಮಿತ್ತ : ಶುಭಕಾರ್ಯಗಳಿಗೆ ಹೊರಡುವ ಮುನ್ನ ಶುಭಶಕುನವನ್ನು ನಿರೀಕ್ಷಿಸುತ್ತಾರೆ (ರೂಢಿ). [ಸಂ.]

ಶುಭಸೂಚನೆ (ನಾ). = ಶುಭಶಕುನ : ಪ್ರಾಣಕ್ಕೆ ಪ್ರಾಣವೊಂದಾಗಿ ಶುಭಸೂಚನೆಯೊಂದಾಗಿರದ ನಚ್ಚು ಮಚ್ಚು ಪಾರವೈದುವುದೆ (ಬಿಜ. ೬೧೦); ಶುಭಸೂಚನೆಗಳನಾಹಯಮಭಿನಯಿಸುವುದಂ ಸಮಂತಭೀಕ್ಷಿಸುತಾಗಳ್ ಸಭೆ ಜಯಜಯ ಎನುತಿರೆ (ಕುಸುಮಾ. ೮-೭೦). [ಸಂ. ಶುಭಸೂಚನಾ]

ಶುಭಸ್ವೀಕಾರ (ನಾ). ಮೃತನ ಶವಸಂಸ್ಕಾರವಾದ ಹದಿಮೂರನೆಯ ದಿನ (ವೈಕುಂಠಸಮಾರಾಧನೆಯ ಮರುದಿನ) ಮೃತನ ಮನೆಯವರು ಶುಭವಾದುದನ್ನು ಸ್ವೀಕರಿಸುವ ಗುರುತಾಗಿ ಆಚರಿಸುವ ಒಂದು ವಿಧಿ : ದಾಸರಿಗೆ ಬಹಿಷ್ಕಾರಪತ್ರವನ್ನು ತರಿಸಿ ಶುಭಸ್ವೀಕಾರದ ದಿವಸ ಅದನ್ನು ಓದಿಸಿದರು (ಕಥಾ. ೪೧೫). [ಸಂ.]

ಶುಭಾಂಗಿ (ನಾ). ಸುಂದರವಾದ ಅವಯವಗಳುಳ್ಳವಳು; ಚೆಲುವೆ : ಶುಭಾಂಗಿ ಸರ್ವಮಂಗಳೆ ರತಿಕೋಟಿಯಂ ಪಳಿದು ರಂಜಿಸಿದಳ್ ಪದವೆತ್ತ ಚಿಲ್ಮಿನಿಂ (ಶಬಶಂ. ೧-೭೬). [ಸಂ. ಶುಭಾಂಗೀ]

ಶುಭಾವಹ (ಗು). ಮಂಗಳವನ್ನುಂಟುಮಾಡುವ; ಒಳ್ಳೆಯದನ್ನು ಮಾಡುವ. [ಸಂ.]

ಶುಭಾಶಯ (ನಾ). ಒಳ್ಳೆಯದಾಗಲೆಂಬ ಹಾರೈಕೆ : ಮಂಗಳವೆನ್ನಿ ರಕ್ಷಿಸಿ ನಿಮ್ಮ ಶುಭಾಶಯ ಸಂಜೀವಿನಿಯ ನೆರೆದಣುಗನನೋವಿ (ಇಂಚಾಪ. ೨೪೪-೧೧೦). [ಸಂ.]

ಶುಭೇತರ (ನಾ). ಕೆಡುಕು; ಅಮಂಗಳ : ನಿನ್ನಸಿಮುಖದಿಂ ದಾವಣಿಗುಱಿಯಂ ತಱಿದೊಡೆ ದೇವಿ ಶುಭೇತರವಿನಾಶಮಂ ದಯೆಗೆಯ್ಗುಂ (ಯಶೋಚ. ೩-೧೩). [ಸಂ.]

ಶುಭೇದಾರ 'ಸುಬೇದಾರ' ನೋ.

ಶುಭೇದಾರು 'ಸುಬೇದಾರ' ನೋ.

ಶುಭೋದಯ (ನಾ). ಮಂಗಳಕರವಾದುದು; ಶುಭವಾದುದು : ಹದುಳದಿಂದೆಱೆದಿರೆಯನು ಸಂಪದದ ಮುಕುತಿಯ ಪದವನೊಲುವಡೆ ಇದು ಶುಭೋದಯ (ಜಿವ್ಯಾಕ. ೨೭-೧೭); ಕಾರುಣ್ಯದಿಂ ಮಾಳ್ಪುದು ಶುಭೋದಯವನೆನಗೆ (ಜೈಮಭಾ. ೨-೨೪). [ಸಂ.]

ಶುಭೋರ (ನಾ). ೧. ಸುಂದರವಾದ ವಕ್ಷಸ್ಥಳ. ೨. ಮನೋಹರವಾದ ವಕ್ಷಸ್ಥಳವುಳ್ಳವನು : ಅವಂ ಕಂಡಂ . . . ವಿಲಸಿತಶ್ರೀವತ್ಸಕೌಸ್ತುಭಶುಭೋರನಂ (ಜೈಮಭಾ. ೫-೬). [ಸಂ. ಶುಭೋರಸ್]

ಶುಭ್ರ (ಗು). ೧. ಹೊಳೆಯುವ ; ಕಾಂತಿಯುತವಾದ. ೨. ಬಿಳುಪಾದ ; ಬಿಳಿಯ: ಕನಕಶ್ಮಲದೆ ಮೂಡಿ ಶುಭ್ರಮೇಘವ ಪೊಕ್ಕನಿಮಿಷಚಾಪದಂತೆ . . . ವಿನುತ ತೋರಣಗಳೊಪ್ಪಿದುವು (ಕಂಪಂ. ೬-೬೯). ೩. ನಿರ್ಮಲವಾದ; ಸ್ವಚ್ಛವಾದ. (ನಾ). ೪. ಬಿಳಿಯ ಬಣ್ಣ; ಬಿಳುಪು : ಪೊಡವಿಪ ಪುರಲಕ್ಷ್ಮಿಗೆ . . . ಎತ್ತಿದಾ ಬೆಳ್ಗೊಡೆಗಳ ಸಡಗರದಂತೆ ಶುಭ್ರದ ಸಾಲುಸೆಚ್ಚೆಗಳ್ಕಡುಚಲುವಿಕೆಯ ಬೀಲಿದುವು (ಕಂಪಂ. ೬-೬೬). ೫. ನಿರ್ಮಲತೆ; ಸ್ವಚ್ಛತೆ. [ಸಂ.]

ಶುಭ್ರಕರ (ನಾ). ೧. ಬೆಳಕಿನ ಕಿರಣ. ೨. ಬೆಳಕಿನ ಕಿರಣಗಳುಳ್ಳವನು; ಚಂದ್ರ: ಶುಭ್ರಕರಶಕಲಶೋಭಿತ ಗುರುಜಟಾಮೌಳಿ . . . ಪೋಪಿಸೆಮ್ಮ (ಸವಮೋ. ೧೦-೧). [ಸಂ.]

ಶುಭ್ರಕರಿ (ನಾ). ೧. ಬಿಳಿಯ ಬಣ್ಣದ ಆನೆ; ಐರಾವತ. ೨. ಐರಾವತವನ್ನು ಹೊಂದಿರುವವನು; ಇಂದ್ರ : "ಗಿರಿ ನಮುಚಿ ಬಲವೃತ್ರ ಜಂಭರಿಪುವೆನೆ ಶುಭ್ರಕರಿ ಪೂರ್ವದಿಗಧಿಪ ದಿವತ್ರಿದಿವ ಶಚಿಪಾಲನೆಂದರೆ ಶಕ್ರನಕ್ಕುಂ" (ಮಂಗರಾ. ೧೨-೨).

[ಸಂ. ಶುಭ್ರಕರಿನ್]

ಶುಭ್ರಚ್ಛದ (ನಾ). ಬಿಳಿಯ ಬಣ್ಣದ ಪಕ್ಷಿ; ಹಂಸ : "ಕಾದಂಬಕಂ ಮನಸೌಕಸಂ ಶುಭ್ರಚ್ಛದಂ ಮರಾಳಂ" (ಮಂಗರಾ. ೫೧-೭). [ಸಂ.]

ಶುಭ್ರವಣ್ಣ (ನಾ). ಬಿಳಿಯ ಬಣ್ಣ; ಬಿಳುಪು : ಸಣ್ಣಸೇವಗೆ ಹಾಲುಂಡೆ ಜೇನ್ದೊಡೆ ಶುಭ್ರವಣ್ಣದುದ್ದಿನ ಸವಿಗಡುಬು . . . ಭೂಪಗೆ ಮುದ್ದುವೆಣ್ಣುಗಳೆಡೆಮಾಡಿದರು (ಕಂನಪ. ೮-೮೭). [< ಸಂ. ಶುಭ್ರವರ್ಣ]

ಶುಭ್ರಮಸನ (ನಾ). ಬಿಳಿಯ ಸೀರೆ : ಮಿಸುಪ ಸಂಪಗೆಗಾವಿ ಸಂಧ್ಯಾವಳಿ ಚೆಲ್ವ ಪೊಸಶುಭ್ರವಸನವನುಟ್ಟು (ಕಂನಪ. ೨೧-೧೮). [ಸಂ.]

ಶುಭ್ರವಸ್ತ್ರ (ನಾ). ನಿರ್ಮಲವಾದ ಬಟ್ಟೆ : ಶುಭ್ರವಸ್ತ್ರಾಸನದಿ ಕಾಂತಿಯು (ಗಗಾ. ೪-೨೩). [ಸಂ.]

ಶುಭ್ರವಾಹನ (ನಾ). ೧. ಬಿಳಿಯ ಬಣ್ಣದ ಕುದುರೆ. ೨. ಬಿಳಿಯ ಕುದುರೆಗಳನ್ನು ವಾಹನವಾಗಿ ಉಳ್ಳವನು; ಅರ್ಜುನ : ಶುಭ್ರವಾಹನ ಮಯೂರಧ್ವಜ ಪ್ರದ್ಯುಮ್ನ ಬಭ್ರುವಾಹನ ಹಂಸಕೇತು ನೃಪರಿವರ್ಮೆವರಭ್ರವಾಹನನಂತೆ ಸರ್ವತ್ರಗಮನದ ವರೂಥದ ಮಹಾವೀರರು (ಚೈಮಿಭಾ. ೩೨-೨೪). [ಸಂ.]

ಶುಭ್ರವಿಡಿ (ಕ್ರಿ). ಶುಭ್ರತೆಯನ್ನು ಹೊಂದು; ನಿರ್ಮಲವಾಗು : ಆ ಪುರದತುಳ ಭಾಗ್ಯಕೀರ್ತಿಯ ನಗುತಾಗ ಗೋಪತಿಗಱುಹುವಂದದಲಿ ತಾ ಪಿರಿದಾಗಿ ಬಾಗಿಲ ಸಜ್ಜೆಯಭ್ರವ ವ್ಯಾಪಿಸಿದುವು ಶುಭ್ರವಿಡಿದು (ಕಂನಪ. ೬-೧೩). [ಶುಭ್ರ + ಪಿಡಿ]

ಶುಭ್ರಾಂಶು (ನಾ). ೧. ಬಿಳುಪಾದ ಕಿರಣಗಳುಳ್ಳವನು; ಚಂದ್ರ : ಶಿವಸುಜ್ಞಾನವ ಯೋಗಿಗಳ್ಗೆ ನಯನಂ ಚಂಡಾಂಶುಶುಭ್ರಾಂಶುಗಳ್ ಭವನೇತ್ರಂ (ಸೋಮೇಶ. ೮೬). ೨. ಕರ್ಪೂರ. [ಸಂ.]

ಶುಭ್ರಾತಪತ್ರ (ನಾ). ಬಿಳಿಯ ಬಣ್ಣದ ಕೊಡೆ; ಶ್ವೇತಚ್ಛತ್ರ : ಸ್ಮರನೃಪವರ ಶುಭ್ರಾತಪತ್ರಂ ವಿಯನ್ನೀರಜನಿ ಮಧ್ಯೋಲ್ಲಸತ್ಕಾಂಡುರತರಶತಪತ್ರಂ ಬೆಡಂಗಾಯ್ತು (ಚಂದ್ರಪ್ರ. ೮-೩೪). [ಸಂ.]

ಶುಭ್ರಾಭ್ರ (ನಾ). ಬಿಳಿಯ ಬಣ್ಣದ ಮೋಡ : ರಜತಗಿರಿಶಿಖರಮಂ ಸಾರ್ದ ಶುಭ್ರಾಭ್ರದೊಳ್ಮೂಡಿದಮರೇಂದ್ರಚಾಪದಂತೆ . . . ಸೀಗುರಿ ಚೌರಿಗಳ ಸಾಲ್ಗಳೆಸೆದುವು (ಚೈಮಿಭಾ. ೬-೧೧); ಹಬೆಯಾಡಿಸುತ ಶುಭ್ರಾಭ್ರಚ್ಛವಿ ಮೋದಕ ಬರಲು ಮುದವಾಂ ತಟ್ಟವಳಂ ಹರಸುವೊಲು (ಗಣೇಶ. ೧೩-೩೩೧). [ಸಂ.]

ಶುಭ್ರೋಪಲ (ನಾ). ಬಿಳಿಯ ಕಲ್ಲು ; ಬಳಪ : "ಬಳಪಮದು ಶುಭ್ರೋಪಲಂ" (ಮಂಗರಾ. ೧೦೬-೧೫). [ಸಂ.]

ಶುರು, ಷುರು, ಸುರು, ಸುರುವ್ವು (ನಾ). ಮೊದಲು; ಪ್ರಾರಂಭ : ಈಗ ಯಾವ ವಿಚಾರಕ್ಕೆ ಜಗಳ ಶುರುವಾಗಿದೆ? (ದೂಬಟ್ಟ. ೭೭); ಮೇಷ್ಟ್ರುಗಳು ಕಾಟಕೊಡಲು ಈಗಾಗಲೇ ಶುರುಮಾಡಿರುತ್ತಾರೆ (ರೂಪಸಂ. ೩೫). **ಷುರು** : ಆ ನೌಕರಿಗೆ ಷುರುವಿನಲ್ಲಿ ಲಗತ್ತಾಗಿದ್ದ ಕೆಲಸಗಳು ಈಗ ಮಾಡಲ್ಪಡುತ್ತಿರಲಿ (ಗ್ರಾಮಾಕ. ೮೪); ನೀವು ಹೊಗಳಲು ಷುರು ಮಾಡಿದರೆ, ಅದಕ್ಕೆ ಕೊನೆಯೆ ಇರುವುದಿಲ್ಲ (ಶೇಪ್ರಶ್ನೆ. ೩೮). **ಸುರು** : ಎಂಟಾಯಿತು, ಇನ್ನು ದಿನದ ಕೆಲಸ ಸುರುವಾಗಬೇಕು (ಅನ್ನ. ೧೯೪); ಶಿಶುವಿಗೆ ಗರ್ಭದಲ್ಲಿ ಶ್ವಾಸ ಸುರುವಾದಂದಿನಿಂದ ಆ ಜೀವ ಜನ್ಮಜನ್ಮಾಂತರಗಳನ್ನು ಹೊಂದಿ ಕೊನೆಗೆ . . . ಮುಕ್ತಿಯಲ್ಲೂ ಸಹ ವಾಯುದೇವರ ಸಂಬಂಧ ಕಡಿಯುವಂತಿಲ್ಲ (ಜಗದಾ. ೨೭೫). **ಸುರುವ್ವು** : ನಾವು ಅಲ್ಲಿಗೆ ಹೋಗುವಷ್ಟರಲ್ಲಿ ನಾಟಕ ಸುರುವು ಆಗಿಬಿಟ್ಟಿತು (ರೂಢಿ).

ಷುರೂಹುಕುಮು = ಮೊದಲು ಕೊಟ್ಟ ಅಪ್ಪಣೆ : ಆ ಅಫೀಸರವರೇ ತಾವು ಇನ್ನೊಂದು ಹುದ್ದೆಯಲ್ಲಿದ್ದಾಗ್ಯೆ ಸದರೀ ಅಪೀಲಿಗೆ ಕಾರಣವಾದ ಷುರೂಹುಕುಮನ್ನು ಕೊಟ್ಟಿದ್ದ ಪಕ್ಷದಲ್ಲಿ (ಗ್ರಾಮಾಕ. ೯೮).

[← ಅರ. ಶುರೂ, ಶುರೂಅ; ಹಿಂ. ಶುರೂ; ಮರಾ. ಶುರೂ, ಸುರೂ]

ಶುರುಳಮುದು (ನಾ). ವೀಳೆಯದ ಎಲೆ ಮತ್ತು ಅಡಿಕೆ; ತಾಂಬೂಲ : ಅಂತು ತಿರುಪಂಣ್ಣಾರಕೆ ಗ ೧೧೪೫ಂ ಶುರುಳಮುದು ಗ ೩೮೦ ಅನ್ತು ನಿತ್ಯಗಟ್ಟಳೆ ಆರೋಗಣೆ ಗ ೪೧೨ ವರಹ ದೀಕ್ಷೆಯ ಕಟ್ಟಳೆ (ಎಕ. XIV, ಶ್ರೀರಂಗ. ೨೫೮-೧೦; 1544). 'ಚುರುಳೊಮುದು' ಪರಾ. [← ತಮಿ. ಚುರುಳಮುತು]

ಶುಲ್ಕ (ನಾ). ೧. ಸುಂಕ; ತೆರಿಗೆ : ಶುಲ್ಕ ಮತ್ತು ದಂಡ. ಸುಂಕಗಳು ಜನರಿಗೆ ಉಪದ್ರವಪಡಿಸದಂತೆ ಅತಿಸೂಕ್ಷ್ಮವಾದ ವಿಧಿಗಳು ಕಲ್ಪಿಸಲ್ಪಟ್ಟಿದ್ದವು (ಭಾರದ. ೩೫೮). ೨. ಕನ್ಯಾಶುಲ್ಕ; ತೆರ. ೩. ವಧುವಿಗೆ ತಂದೆ, ಗಂಡ ಮುಂತಾದವರು ಕೊಡುವ ಧನ ; ಸ್ತ್ರೀಧನ : "ಸ್ತ್ರೀದ್ರವ್ಯದೊಳು ಶುಲ್ಕಮೆಂಬಾಭಿಧಾನಮಕ್ಕುಂ" (ಮಂಗರಾ. ೧೪೩-೨೦). ೪. ವೇಶ್ಯೆಗೆ ತೆರುವ ಹಣ; ಒತ್ತೆ : ಶಾಲಾವತಿಯೊಡನೆ ಒಂದು ರಾತ್ರಿ ಕಳೆಯುವುದಕ್ಕೆ ಕೊಡಬೇಕಾದ ಶುಲ್ಕವನ್ನು ಎರಡುಸಾವಿರ ಚಿನ್ನದ ನಾಣ್ಯಗಳೆಂದು ನಿಗದಿಮಾಡಿದನು (ಪತ್ತುಮ. ೧೦೦). ೫. ವ್ಯಾಪಾರಿಗೆ ದೊರೆಯುವ ಶೇಕಡ ರುಸುಮು; ದಳ್ಳಾಳಿ ಹಣ : ಅವನ ಶುಲ್ಕ ಎಲ್ಲರಿಗೂ ತಿಳಿದ ಹಾಗೆ ಮನೆಯ ಒಟ್ಟು ಬೆಲೆಯ ಮೇಲೆ ಶೇಕಡಾ ೧೦ರಷ್ಟು (ಯೋಧಪ್ರ. ೩೪). ೬. ಶಿಕ್ಷಣಕ್ಕಾಗಿ ವಿದ್ಯಾರ್ಥಿಯಿಂದ ಪಡೆಯುವ ಹಣ; ಶಿಕ್ಷಣವನ್ನು ಪಡೆಯುವುದಕ್ಕಾಗಿ ವಿದ್ಯಾರ್ಥಿಯು ಉಪಾಧ್ಯಾಯ ಅಥವಾ ವಿದ್ಯಾಸಂಸ್ಥೆಗೆ ನೀಡುವ ಹಣ : ಎಷ್ಟು ಕಡಿಮೆ ಶುಲ್ಕ ತೆಗೆದುಕೊಳ್ಳುತ್ತಾರೆ ಕಾಲೇಜಿನವರು (ನನ್ನಪ. ೧೧೫); ಅನುಭವಶಾಲೆಯ ಶುಲ್ಕ ದುಬಾರಿಯಾದಲ್ಲಿ ರಿಯಾಯಿತಿಯಿಲ್ಲ (ಇಂಚಾಪ. ೧೦೮-೨೯). ೭. ಲಾಭ; ಗಳಿಕೆ. ೮. ವ್ಯಾಪಾರವನ್ನು ದೃಢಪಡಿಸಲು ಕರಾರಿನಂತೆ ತೆರುವ ಮುಂಗಡ ಹಣ; ಸಂಚಕಾರ . [ಸಂ.]

ಶುಲ್ಬ (ನಾ). ೧. ಹುರಿ; ಹಗ್ಗ : "ಶುಲ್ಬಂ, ವಟಾರಕಃ, ರಜ್ಜುಃ, ವಟೀ, ತ್ರಿಗುಣಃ - ೫ ನೇಣಿನ ಪೆಸರು. ಹುರಿ, ಹಗ್ಗ" (ಸಿದ್ಧಾಂತಿ. ೩೧೪). ೨. ತಾಮ್ರ : "ತಾಮ್ರಕಮುದುಂಬರಂ ಕಿಸು ಶುಲ್ಬಂ" (ಮಸ್ತುಕೋ. ೨೯-೯). ೩. ಯಜ್ಞಕಾರ್ಯ; ಯಾಜ್ಞಿಕವಿಧಿ. [ಸಂ.]

ಶುಶ್ರೂಷ (ನಾ). ಉಪಚಾರ; ಪರಿಚರ್ಯೆ; ಸೇವೆ : "ಶುಶ್ರೂಷಮದಿಷ್ಟಮುಪಚಾರಂ ಪ್ರಸಾದನಮುಪಾಸ್ತಿ ಪರಿಚರ್ಯಮೆನೆ ಸೇವೆಯಕ್ಕುಂ" (ಮಂಗರಾ. ೮-೨೭).

[ಸಂ. ಶುಶ್ರೂಷಾ]

ಶುಶ್ರೂಷಣ (ನಾ). = ಶುಶ್ರೂಷ : ಕಾಲಕ್ರಮದಲ್ಲಿ ಅಸೂಯಾಪ್ರಾದುರ್ಭಾವದಿಂದ ವರ್ಣಧರ್ಮಗಳ ವ್ಯತ್ಯಾಸದಲ್ಲಿ ಶೂದ್ರರು ಶುಶ್ರೂಷಣವನ್ನು ಬಿಟ್ಟರು. (ಹಿಂದಸಾ. ೨೬೧).

[ಸಂ.]

ಶುಶ್ರೂಷೆ (ನಾ). ೧. = ಶುಶ್ರೂಷ : ಮುನಿಮಂಡಳೀಪದಪಯೋಜಶುಶ್ರೂಷೆಯಿಂ ವಿದಗ್ಧಜನವಲ್ಲಭಂ ಕಳೆವನಿಂತು ಪೊಟ್ಟಂ ನೃಪಂ (ಕಾದಂಪೂ. ೨೨); ನಿನ್ನ ಪೆಸರು ನಂಬಿಯೆಂಬುದು ಇನಿತುದಿನಂ ಶುಶ್ರೂಷೆಗೆ ಸಮರ್ಥನಲ್ಲದ ಕಾರಣದಿಂ ಬಾರದಿರ್ದೆವು (ನಂಬಿರ. ೬-೯೪). ೨. ವಿಧೇಯತೆ. [ಸಂ. ಶುಶ್ರೂಷಾ]

ಶುಶ್ರೂಷೆಗೆಯ್ (ಕ್ರಿ). ಸೇವೆಮಾಡು ; ಉಪಚರಿಸು; ಪರಿಚರ್ಯೆಮಾಡು : ವದನಂ ತೋಳ್ ತೊಡೆ ಪಾದಮೆಂಬಿವನಿವಂ ಶುಶ್ರೂಷೆಗೆಯ್ಯಲ್ಕೆ ಲಾಭದಲಂಪಿಂ ನಡೆಯಲ್ಕೆ . . . ಆ ವರ್ಣಚತುಷ್ಟಮಂ ಕುಮತಿಗಳ್ ತತ್‌ಸ್ಥಾನದೊಳ್ ಮುನ್ನ ಪುಟ್ಟಿದುವೆಂಬರ್ (ಆದಿಪು. ೮-೭೩). [ಶುಶ್ರೂಷೆ + ಕೆಯ್]

ಶುಶ್ರೂಷೆಗೆಯಿಸು (ಕ್ರಿ). ಸೇವಿಸುವಂತೆ ಮಾಡು; ಉಪಚರಿಸುವಂತೆ ಮಾಡು: ಗಿರಿರಾಜಂ ಗೌರಿಯನಾ ಹರಂಗೆ ಶುಶ್ರೂಷೆಗೆಯಿಸಲೊಡಗೊಂಡೊಯ್ಯಂತಿರೆ ಸತಿಯ ಪೆಱಗೆ . . . ಕಂಚುಕಿ ಬಂದಂ (ಕಾದಂಪೂ. ೫೧೯). [ಶುಶ್ರೂಷೆಗೆಯ್ + — ಇಸ್ಸು]

ಶುಷಿ (ನಾ). ೧. ಒಣಗುವಿಕೆ ; ಬತ್ತುವಿಕೆ. ೨. ನೆಲದಲ್ಲಿಯ ತೂತು, — ರಂಧ್ರ.

[ಸಂ.]

ಶುಷಿರ (ಗು). ೧. ತೂತುಗಳುಳ್ಳ; ರಂಧ್ರಗಳಿಂದ ಕೂಡಿದ. (ನಾ). ೨. ತೂತು; ಕುಳಿ : "ನಿಮ್ನಂ, ಅಗಾಧಂ, ಗರ್ತಃ, ಶ್ವಭ್ರಂ, ಶು[ಪಾಠಾಂ. ಸು]ಷಿರಂ . . . ದರಃ — ೧೫ ಕುಟಿ" (ಹಲಾಯು. ೧೦೩-೨). ೩. ಕಹಳೆ, ಕೊಳಲು, ಮುಂತಾದ ರಂಧ್ರಗಳ ಮೂಲಕ ಊದುವ ವಾದ್ಯ. [ಸಂ.]

ಶುಷ್ಕ (ಗು). ೧. ಒಣಗಿದ ; ಬಾಡಿದ : ಶುಷ್ಕಪತ್ರಂಗಳನಾದರದಿಂ ಮೇವಜಕುಲಮಂ ದೊರಕೊಳೆ ನೀಂ ಸ್ವಪ್ನಕಾಲದೊಳ್ ಕಂಡುದಱಿಂ (ಆದಿಪು. ೧೫-೩೫). ೨. ಸಾರವಿಲ್ಲದ;

ನೀರಸವಾದ : ಹೃದಯದ ಕಾವ್ಯವು ನ್ಯಾಯಾಲಯದ ಶುಷ್ಕತರ್ಕದಲ್ಲಿ ಪ್ರವೇಶಿಸಿ ಬುದ್ಧಿಯ ರಣಸಂಗ್ರಾಮದಲ್ಲಿ ತೊಡಗಿದಾಗ (ಪ್ರಬಂಧ. ೫೩). ೩. ಆಧಾರವಿಲ್ಲದ. ೪. ಪ್ರಯೋಜನವಿಲ್ಲದ ; ವ್ಯರ್ಥವಾದ. ೫. ಸಣಿಕಲಾದ; ಬಡಕಲಾದ : ಶುಷ್ಕತನು ಬೇತಾಳಂ ಸ್ಥೂಲಶಿರನಾರ್ದ್ರ ಕುಣಿದಂ (ಅರ್ಧನೇ. ೫-೨೭). ೬. ತೋರಿಕೆಯ; ನಟನೆಯ. ೭. ಒರಟಾದ; ಕಠಿಣವಾದ. ೮. ನೀರಸವಾದ; ನಿಸ್ಸಾರವಾದ; 'ಶುಷ್ಕಪಾಂಡಿತ್ಯ' ಪರಾ. (ನಾ). ೯. ಒಣಗಿದುದು; ನೀರಸವಾದುದು. ೧೦. ತೆಳುವಾದುದು; ಸಪೂರವಾದುದು : ಆವಾತನ ಕೆಳಗಣ ತುಟಿ . . . ಶುಷ್ಕವಾಗಿರೆ ಸೌಭಾಗ್ಯವಂತನು (ಸಾಮುಲ. ೧೭-೮). [ಸಂ.]

ಶುಷ್ಕತಾರ್ಕಿಕ (ನಾ). ನೀರಸನಾದ ತಾರ್ಕಿಕ : ಇರು ಮರುಳೆ ಶುಷ್ಕವೈಯಾಕರಣಂಗಂ ಶುಷ್ಕತಾರ್ಕಿಕ [ಪಾಠಾಂ. ಗ]ಂಗಂ ಬೆಳ್ಕಕ್ಕರಿಗಂಗಂ ವಿಷಯಮೆ ಕಾವ್ಯರತ್ನಮತಿಚತುರ ಕವಿಕದಂಬಕವಿಷಯಂ (ಆದಿಪು. ೭. ೧-೨೩). [ಸಂ.]

ಶುಷ್ಕಪಾಂಡಿತ್ಯ (ನಾ). ನಿಸ್ಸಾರವಾದ ವಿದ್ವತ್ತು; ನೀರಸವಾದ ಪಾಂಡಿತ್ಯ : ಅವನು ಶುಷ್ಕಪಾಂಡಿತ್ಯಕ್ಕೆ ಮನಸೋಲದೆ, ಹೆಚ್ಚು ಪ್ರಯಾಸವಿಲ್ಲದೆ ಚೆನ್ನಾಗಿ ಕಲಿತು . . . ಪದಕಗಳನ್ನು ಅನಾಯಾಸವಾಗಿ ಗಳಿಸಿದ್ದನು (ಪುನರು. ೩೭೦). [ಸಂ.]

ಶುಷ್ಕವೈಯಾಕರಣ (ನಾ). ನೀರಸನಾದ ವ್ಯಾಕರಣಪಂಡಿತ : ಇರು ಮರುಳೆ ಶುಷ್ಕವೈಯಾಕರಣಂಗಂ ಶುಷ್ಕತಾರ್ಕಿಕಂಗಂ . . . ವಿಷಯಮೆ ಕಾವ್ಯರತ್ನಮತಿ ಚತುರಕವಿಕದಂಬಕವಿಷಯಂ (ಆದಿಪು. ೭. ೧-೨೩). [ಸಂ.]

ಶುಷ್ಕಸಾಧನ (ನಾ). (ಸೌದೆ ಮುಂತಾದ) ಒಣಗಿದ ಸಾಮಗ್ರಿ; ನಿರ್ದ್ರವವಾದ ವಸ್ತು : ಹೋಮಾಗ್ನಿಯಂ ನಂದಿಸಲುಂ ಕುಂದಿಸಲುಮಾಯದೆ ಶುಷ್ಕಸಾಧನಂ [ಪಾಠಾಂ. ಸಮಿತ್ತು]ಗಳಂ ಸಂಧಿಸುವ ಕರಿಕರೇಣುಗಳುಮಂ (ಪಂಚತಂ. ೧೧೮-೧೯). [ಸಂ.]

ಶುಷ್ಕಹೃದಯ (ನಾ). ನೀರಸನಾದ ವ್ಯಕ್ತಿ : ಸಾಕೆನ್ನ ಮನಸೆ ನಮಗೇನಾತ್ಮತೃಪ್ತನಾ ಶುಷ್ಕಹೃದಯನ ಬಗೆಯ ಗೊಡವೆ ? (ಗೂಳ್ಗೊಥಾ. ೩-೬೮). [ಸಂ.]

ಶುಷ್ಕೇಂಧನ (ನಾ). ಒಣಗಿದ ಕಟ್ಟಿಗೆ, — ಸೌದೆ : ಸಮುಚ್ಛಿನ್ನಕ್ರಿಯಾನಿವೃತ್ತಿಧ್ಯಾನ ಪರಿಣತೆಯಿನಘಾತಿಚತುಷ್ಕಶುಷ್ಕೇಂಧನಪಾವಕನಾಗಲೊಡಂ (ಸುಕುಮಾ. ೧-೧೨). [ಸಂ.]

ಶುಷ್ಮ (ನಾ). ೧. ಶಕ್ತಿ; ಪರಾಕ್ರಮ. ೨. ಕಾಂತಿ; ತೇಜಸ್ಸು. ೩. ಸೂರ್ಯ. ೪. ಅಗ್ನಿ. ೫. ಗಾಳಿ; ವಾಯು. ೬. ಪಕ್ಷಿ. [ಸಂ.]

ಶೂಕ (ನಾ). ೧. ಧಾನ್ಯದ ಮೇಲಿನ ಊಬು; ಸುಂಕು : "ಕಿಂಶಾರು ಶೂಕಮದು" (ಪಪ್ರಕೋ. ೧೯-೨೨). ೨. (ಧಾನ್ಯ, ಆಯುಧ ಮುಂತಾದುವುಗಳ) ಚೂಪಾದ ತುದಿ, — ಮೊನೆ : ಲಸಿತದಿವ್ಯೋನ್ನತಶರೀರಂ ನಿಸಿತಶೂಲದ ಶೂಕನಿಹತಿಗೆ ಕುಸಿಯದೇ (ಬಸವಪು. ೫೯-೬೪). ೩. ಕರುಣೆ; ದಯೆ : "ಅನುಕ್ರೋಶಃ, ಕೃಪಾ, ಶೂಕಂ, ದಯಾ, ಕರುಣಾ, ಘೃಣಾ - ಈ ೬ ಕರುಣಂ" (ಹಲಾಯು. ೧೨೦-೫೯). ೪. (ಕೀಟಗಳ) ಬಿರುಸಾದ ಕೂದಲು, ಮೊನಚಾದ ಕೊಂಡಿ ಮುಂತಾದುವು : 'ಶೂಕಕೀಟ' ಪರಾ. ೫. ಬಿರುಸು ಕೂದಲುಗಳುಳ್ಳ ಕೀಟ. [ಸಂ.]

ಶೂಕಕೀಟ (ನಾ). ೧. ಮೈತುಂಬ ಬಿರುಸಾದ ಕೂದಲಿರುವ ಹುಳು; ಕಂಬಳಿಹುಳು. ೨. ಕೊಂಡಿಯಿರುವ ಕಣಜ, ಚೇಳು ಮುಂತಾದ ಕೀಟ : "ವೃಶ್ಚಿಕಃ, ಶೂಕಕೀಟಃ - ೨ ಕೊಂಡಿವಿಷದ ಚೇಳು, ಕರಿಚೇಳು, ಖಣಜದ ಹುಳುವಿಗೂ ಹೆಸರು" (ಸಿದ್ಧಾಂಶಿ. ೧೫೭). [ಸಂ.]

ಶೂಕಧಾನ್ಯ (ನಾ). ಊಬುಸಹಿತವಾದ ಕಾಳು; ಧಾನ್ಯ : "[ಶಾಲಿ]ಸ್ತಂಬಕರಿ ಪ್ರಭೃತಿ ಶೂಕಧಾನ್ಯಮದಕ್ಕುಂ" (ಪಪ್ರಕೋ. ೧೯ ೨೨). [ಸಂ.]

ಶೂಕರ (ನಾ). ಹಂದಿ; ವರಾಹ : ತರುಣಿ ಮಿಂದಾಟಕೆಯೊಳಾರ್ಜಿಸಿದುರು ಮಹಾವಿತ್ತದಲಿ ಜೀವಿಪ ಪುರುಷನ . . . ನೆರಳ ತುಳಿದಡೆ ಜನ್ಮಜನ್ಮಾಂತರದಿ ಶೂಕರಜನ್ಮ (ಅಂಬಿಕಾ. ೪೭-೬೦); ಮಕರರಾಶಿಗೆ ಗುರು ಬಂದರೆ ಶೂಕರಗೆ ಏನು ? (ಗಾದೆ). [ಸಂ.]

ಶೂಕಲ, ಶೂಕಳ (ನಾ). ತುಂಟ ಕುದುರೆ; ದುಷ್ಟಾಶ್ವ : ಶೂಕಲ [ಪಾಠಾಂ. ಸೂಕಳ]ಮಲ್ತಿದು ಸಕಲಗುಣಾಕರಮೆನೆ ಜನಕಮುಖವಿಲೋಕನದಿಂದುದ್ರೇಕಮನುಟ್ಟಿದಿರ ವಾಹಕರಾ ಕುಟಿಳಾಶ್ವಕ್ಕೆ ಖರಖಲೀನಮನಿಟ್ಟರ್ (ಪಂಚಾಮಾ. ೪-೧೧೪). **ಶೂಕಳೆ** : "ಶೂ[ಪಾಠಾಂ. ಸೂ]ಕಳನೆಂಬುದು ಸಿಲುಕುಗುದಿರ" (ಹಲಾಯು. ೭೨-೨೫೬). [ಸಂ.]

ಶೂಕಲಾಶ್ವ (ನಾ). = ಶೂಕಲ : ಪೂಜಕಾಲೊಳ್ ನಡೆವ ಶೂಕಲಾಶ್ವಮಂ ಬೇಗದಿಂ ಬೆಂಗಾವಯ್ದು ರಾಘೆಯೊಳ್ಗಾಂಕಿ ವಾಘೆಯೊಳ್ ನಿಲಿಸಿ . . . ನಡೆತಂದು (ಗಿರಿಕ. ೨-೧೦೫ ಪ). [ಸಂ.]

ಶೂಕಶಿಂಬಿ (ನಾ). ಒಂದು ಬಗೆಯ ಸಸ್ಯ ; ನಸುಗುನ್ನಿ ಗಿಡ : "ಆತ್ಮಗುಪ್ತಾ . . . ಶೂಕಶಿಂಬಿಃ . . . ಮರ್ಕಟೀ - ೯ ನಸುಗುನ್ನೀಗಿಡ" (ಸಿದ್ಧಾಂಶಿ. ೧೩೨).

[ಸಂ. ಶೂಕಶಿಂಬೀ]

ಶೂಕಳೆ 'ಶೂಕಲ' ನೋ.

ಶೂದ್ರ (ನಾ). ೧. ಚತುರ್ವರ್ಣಗಳಲ್ಲಿ ನಾಲ್ಕನೆಯದು : ಶೂದ್ರಗಣದ ಮದುವೆಯೊಳೊನ್ದಂ ಪ್ರಾಯಶ್ಚಿತ್ತನಿಮಿತ್ತದೊಳಾಯದ . . . ಪಣಮುಂ ಪೆರ್ಗ್ಗೆಱ್ಗಾಯಮಿದೆನ್ದೊಸದು(ಸದು) ಕೊಟ್ಟೊರೀ ದ್ವಿಜಮುಖ್ಯರ್ (ಕಾ. II. ೪-೮ ; ೨-೩). ೨. ಚತುರ್ವರ್ಣಗಳಲ್ಲಿ ನಾಲ್ಕನೆಯ ವರ್ಗದವನು; ಚತುರ್ವರ್ಣೀಯ : ಕ್ಷತ್ರಿಯರ್ಗೆ ಸತ್ಕಾದಿಗಳುಮಂ . . . ಶುಶ್ರೂಷಾದಿಯಂ ಶೂದ್ರಂಗೆ ವರ್ತನಂ ಮಾಡಿ (ಚಾವುಂಪು. ೩೬): ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ ನಂದಿಮುಖವಲ್ಲದೆ ಮಾಡಲಾಗದು (ಬಸವ. ೬೧೪); ನಿಖಿಳವೈಶ್ಯವ್ರಜ ಘನೋರುಗಳಿಂದ ಶೂದ್ರರು ಪಾದಪದ್ಮದಲಿ . . . ಜನಿಸಿದರು (ಕುಮಾಸ. ೯-೨೨). ೩. ರತ್ನಗಳಲ್ಲಿ ಒಂದು ಬಗೆ : ಪೊಳೆವುದರಿಸಿನದ ಬಣ್ಣವನಾಂತು ಮಿಸುನಿಯೊಲು ತೊಳಪುದದು ವೈಶ್ಯಜಾತಿಯು ಸಾಣೆ [ವಿಡಿ]ದಲಗಿನೊಳುಗಾಂತಿ ಯಂದಮೆಳಗಪ್ಪು ಮೆರೆದಿರೆ ಶೂದ್ರಜಾತಿಯಂಬರು (ರತ್ನಶಾ. ೩-೯). 'ವೈಶ್ಯ' ಪರಾ. ೪. ಹಾವುಗಳಲ್ಲಿ ಒಂದು ಬಗೆ : ಆಡವಿ ನೀರು ಕಲ್ಲುಸಂಧಿ ಯಿ ಸ್ಥಾನದಲ್ಲಿ (ಸರ್ಪ)ಯಿರುವದು ಶೂದ್ರಜಾತಿ (ವಿಷಚಿ. ೫ ೨). [ಸಂ.]

ಶೂದ್ರಕ (ನಾ). ೧. ಒಬ್ಬಾತನ ಹೆಸರು : ನಾಗಮ್ಮನೀ ಶೂದ್ರಕನ್ ಪೆರ್ಮ್ಮಕ್ಕಿ ಮೀಗಿರ ಪತ್ತೊನ್ದಿದೊಡೆ ಕಾದು ರಣಸಾಗರನ್ಪರಿಯಾರಂ ಕೊಟ್ಟನ್ (ಸೌಕಾ. IX - ೧, ೩೯೨-೫; ೫ನೆಯ ಶತ); ಪಾದಪದ್ಮಂಗಳನೊತ್ತುತ್ತಿರಲು ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್ (ಕಾದಂಪು. ೮೦). ೨. 'ಮೃಚ್ಛಕಟಿಕಾ' ಎಂಬ ಸಂಸ್ಕೃತ ನಾಟಕದ ಕರ್ತೃವಿನ ಹೆಸರು. ೩. ಒಂದನೆಯ ಗುಣವರ್ಮನು ರಚಿಸಿದ ಒಂದು ಚಂಪೂಕಾವ್ಯದ ಹೆಸರು. [ಸಂ.]

ಶೂದ್ರತ್ವ (ನಾ). ಶೂದ್ರನ ಸ್ಥಿತಿ ; ಶೂದ್ರತನ : ಜಾತಿಶೂದ್ರತ್ವದ ಪರೇತವಿಮುಕ್ತಿ ಯಾಚರಣೆಯೊಳಲಾ ಬಹುದು (ಬಸಪು. ೫೫-೪೨). [ಸಂ.]

ಶೂದ್ರವಾಡ (ನಾ). ಶೂದ್ರರು ವಾಸಿಸುವ ಸ್ಥಳ : ಈ ಗ್ರಾಮ ಶೂದ್ರವಾಡವಾಗಿದ್ದುದನೂ ಅಘ್ರಾರವ ಮಾಡಿ (ಮೃಅರಿ. ೧೯೪೦, ೩೫-೬; ಸು. 15ನೆಯ ಶತ); ಶೂದ್ರವಾಡದ ಗೊರು ಗದ್ದೆಗ್ರಾಮದ ವಳಗಣ ಮಠವ ಹೊಂದಿದ ಹೊಳೆಹೊದ್ದಿನ ಸ್ಥಳ ೧ (ಮೃಅರಿ. ೧೯೩೩, ೨೮-೨೮; 1630). [ಶೂದ್ರ + ವಾಡ]

ಶೂದ್ರಿ (ನಾ). ಶೂದ್ರಜಾತಿಯ ಹೆಂಗಸು : ರಾಯರಂಬವರಿಲ್ಲಲಾ ಸ್ವಾಧ್ಯಾಯ ಕೆಟ್ಟುದು ಮುಟ್ಟದರುಪಾಧ್ಯಾಯರನು ಶೂದ್ರಿಯರು ಸೆಳೆದರು ಮೌಂಜಿಮೇಖಲೆಯ (ಕುಮಾಶ. ೧೮-೯). [ಸಂ. ಶೂದ್ರೀ]

ಶೂದ್ರಿತಿ (ನಾ). = ಶೂದ್ರಿ : ಶೂದ್ರಿತಿ ಸಹವಾಗಿ ಈ ಹದಿಮೂರು ಮಂದಿ ಊಯಿ . . . ಪಾರಿಪತ್ಯವ ಮಾಡಿ ನಡಸಿಯರು (ಎಕ. VIII, ತೀರ್ಥಹ. ೩೩-೭೨; ಸು. 1430); ಮಾನುಷಯೋನಿಯಲಿ ಶೂದ್ರಿತಿಗೆ ಜನಿಸೆನು (ಸಂಭವ. ೧೪-೧೮) ; ಕ್ಷತ್ರಿಯಿತಿ, ಒಕ್ಕಲಿಗಿತಿ, ಶೂದ್ರಿತಿ (ಶಬ್ದಾನು. ೧೯೧ ಪ್ರಯೋ). [ಶೂದ್ರ + — ಇತಿ$_1$ (< — ಇತ್ತಿ)]

ಶೂದ್ರೆ (ನಾ). = ಶೂದ್ರಿ. [ಸಂ ಶೂದ್ರಾ]

ಶೂನ್ಯ (ಗು). ೧. ಖಾಲಿಯಾದ; ಬರಿದಾದ. ೨. ಇಲ್ಲದ; ವಿಹೀನವಾದ : 'ಶೂನ್ಯಶೀರ್ಷ' ಪರಾ. ೩. ಅರ್ಥಹೀನವಾದ ; ಅರ್ಥವಿಲ್ಲದ. ೪. ಏಕಾಂಗಿ ಯಾದ ; ಒಂಟಿಯಾದ. ೫. ಹಾಳಾದ ; ನಶಿಸಿದ : (ಕ). (ನಾ). ೬. ಬರಿದಾದುದು; ಇಲ್ಲವಾದುದು; ರಿಕ್ತವಾದುದು : ಅಲಕಂ ಮಂದಾರಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ ತಿಲಕಾಲಂಕಾರಶೂನ್ಯಂ (ಆದಿಪು. ೩-೧೩) ; ಎನಗೆ ಮನಮಿಂದು ಶೂನ್ಯಂ ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾವನಿ ಶೂನ್ಯಮಾಯ್ತು

ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ (ಗದಾಯು. ೩-೬೯); ವನಮಿಂದು ಶೂನ್ಯಂ . . . ಎನ್ನಯ ರಾಜ್ಯಮುಮಿಂದು ಶೂನ್ಯಮೇ (ಅರ್ಜುನ. ೫-೨೨). ೭. ನಿರ್ಜನವಾದ ಪ್ರದೇಶ; ಬಯಲು: ಶೂನ್ಯಮನ ಪಡಿದೆಳಸಿ ಬೋಳ್ಕಿಸಿದನ್ ಲಲ್ಲೆಗ್ಗಯುತೆ ಕುಮಾರನಾ ಮುದ್ದುವಸರಂ ಮೆಲ್ಲನುಚ್ಚರಿಸಿ (ಶ್ರೀರಾಮಾ. ೧೦೦-೧೧). ೮. ಆಕಾಶ ; ಗಗನ : ಅದು ಆ ಪರಮದ ಪೀಠದಿನ್. ಶೂನ್ಯಕ್ಕೆ ಬೀಸಿ ಎಸೆದಪುದು ಅವನನ್ (ಬದ್ರಪ್ರ. ೪೮-೧೦೪೩). ೯. ಮಸ್ತುವಲ್ಲದುದು : ಸತ್ ಅಸತ್ತೂ ಆಗಲಾರದು. ಶೂನ್ಯದಿಂದ ಮಸ್ತುವಾಗಲಾರದು. ಇರುವ ವಸ್ತು ಶೂನ್ಯಸ್ವರೂಪವನ್ನೂ ತಾಳಲಾರದು (ಋಷ್ಯಾರ. ೯ ಪೀಠಿಕೆ). ೧೦. ಮಾಟ; ಮಾಯ : ಪೀಡಾಪರಿಹಾರಾರ್ಥವಾಗಿ ಮೃತ್ಯುಂಜಯಜಪ . . . ಶೂನ್ಯವನ್ನು ಹಿಂತಿರುಗಿಸುವ ಪ್ರತೀಕಾರ. ಇವುಗಳೆಲ್ಲವನ್ನೂ ಮಾಡಿ ಮುಗಿಸಿದರು (ಮುಸುಗ. ೧೪೭). ೧೧. [ವ್ಯಾಕ] ಬಿಂದು; ಅನುಸ್ವಾರ : ಬಿಂದು ಮುತ್ತಂ ಪೋಲ್ತು ಸೊನ್ನೆಯಂತೆ ಬಟ್ಟತ್ರಾಗಿರ್ಪುದಱಿಂ ಶೂನ್ಯಶಬ್ದಂ (ಶಮದ. ೧೧ ವೃತ್ತಿ). ೧೨. [ಗಣಿತ] ಸೊನ್ನೆ : ಗಗನಂ ಶೂನ್ಯಾಂಬರಂ ಖಂ . . . ಬಿಂದುವಿನ ನಾಮ (ವ್ಯವಹಾ. ೧೦-೧೦). ೧೩. [ಯೋಗ] ಪ್ರಾಣಾಯಾಮದ ಏಳು ಬಗೆಗಳಲ್ಲಿ ಒಂದು : ''ಓಸರಿಸಿ ನಡೆಯದಿರೆ ಶೂನ್ಯಮಕ್ಕುಂ''(ಮಂಗರಾ. ೧೭-೧೪); ರೇಚಕ ಪೂರಕ . . . ಶೂನ್ಯ ಉತ್ಕ್ರಾಂತಿ ಎಂಬ ಸಪ್ತಪ್ರಾಣಾಯಾಮಲಕ್ಷಣಂಗಳುಂ (ವೀರೇ. ೧೩೩). ೧೪. [ಬೌದ್ಧ] ದಕ್ಷಿಣಭಾರತದ ಬೌದ್ಧತತ್ತ್ವಜ್ಞಾನಿ ನಾಗಾರ್ಜುನನು ಬೋಧಿಸಿದ ಒಂದು ವಾದ; IP ದುಃಖ, ಜೀವ ಮತ್ತು ನಿರ್ವಾಣ ಎಂಬುವು ಪಾರಮಾರ್ಥಿಕವಲ್ಲವೆಂದು ಈ ವಾದ ಸಾರುತ್ತದೆ : ಶೂನ್ಯವೆಂದರೆ ಒಂದು ಪದಾರ್ಥವನ್ನು ವಿವರಿಸಬಹುದಾದ ನಾಲ್ಕು ಕಲ್ಪಗಳಿಗೆ ಗೋಚರವಲ್ಲದಿರುವುದು (ಧಾತತ್ತ್ವ. ೨೦೭). ೧೫. [ವೀಶೈ] ಆಕಾರವಿಲ್ಲದುದು; ನಿರವಯ; ಬಯಲು : ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು (ಅವಚಂ. ೧೭೫-೭೪೭). ೧೬. ದಿವ್ಯಸಾಕ್ಷಾತ್ಕಾರ ; ಮೋಕ್ಷ : ಶೂನ್ಯ ಎಂಬ ಮಾತನ್ನು . . . ಸಾಧಕನಿಗೆ ಅಂತ್ಯದಲ್ಲಿ ಒದಗುವ ಬ್ರಹ್ಮ ಸಾಕ್ಷಾತ್ಕಾರ ಎಂಬ ಅರ್ಥದಲ್ಲಿ, ಆ ಸಾಕ್ಷಾತ್ಕಾರದ ಅನುಭವ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ (ಶೂನ್ಯಕು. ೫೯). ೧೭. [ನಾಟ್ಯ] ಇಪ್ಪತ್ತು ವಿಧವಾದ ಸಂಚಾರಿಭಾವದ ನೋಟಗಳಲ್ಲಿ ಒಂದು; IP ''ಚಲಿಸದೆ ನೋಡುವ ಪದಾರ್ಥದ ಅರಿವಿಲ್ಲದಂತೆ ಮಬ್ಬಾದ ಸಮದೃಷ್ಟಿಯಿಂದ ನೋಡುವುದು'' (ಲಾಸ್ಯರಂ. ೨೬೯ ಗದ್ಯಾನುವಾದ) : ಚಲನಮನೊಂದದ ಸಮಪುಟವಲಸದ ನಿಂದಾಲಿಯಾಗಿ ದೂಸರವರ್ಣದೊಳೊಲವಿಂ ನೋಡಲ್ ಕುಜುಪಂ ನೆಲೆಗೊಳ್ಪದ ನೋಟಮದುವ ಶೂನ್ಯಮೆನಿಕ್ಕುಂ (ಲಾಸ್ಯರಂ. ೩-೨೬).

ಶೂನ್ಯದ ಬೊಂಬೆ = ಮಾಂತ್ರಿಕನು ನಾಶಪಡಿಸಬೇಕೆಂದಿರುವ, ಮನುಷ್ಯನ (ಮಣ್ಣಿನ) ಪ್ರತಿಕೃತಿ : (ಕ). [ಸಂ.]

ಶೂನ್ಯಗಾರ (ನಾ). ಮಾಟಮಾಡುವವನು; ಮಾಂತ್ರಿಕ : 'ಶೂನ್ಯಗಾರ್ತಿ' ಪರಾ. [ಶೂನ್ಯ + – ಗಾರ (< – ಕಾಜಿ)]

ಶೂನ್ಯಗಾರ್ತಿ (ನಾ). ಮಾಟ ಮಾಡುವವಳು : (ಕ).

[ಶೂನ್ಯಗಾರ + – ತಿ (< – ಇತ್ತಿ)]

ಶೂನ್ಯತತ್ತ್ವ (ನಾ). ಬ್ರಹ್ಮಸಾಕ್ಷಾತ್ಕಾರದ ತತ್ತ್ವ : ಅದರ ಕೆಳಗಣ ಮನೆಯ ನಾಳ ಅಲ್ಲಿ ನ್ಯಾಸವಾದ ಕ್ಷಕಾರವೆ ಶೂನ್ಯತತ್ತ್ವ . (ಉದ್ಭವಾ. ೮-೪). [ಸಂ.]

ಶೂನ್ಯತೆ (ನಾ). ಬರಿದಾದುದು; ರಿಕ್ತವಾದುದು : ಇಲ್ಲಿ ಸತ್ತಾ ಸತ್ತ್ವ . . . ಕಾರಣತ್ವಾ ಕಾರಣತ್ವ ಮೊದಲಾದ ಸರ್ವಪ್ರಕಾರದಿಂದಲೂ ನಿರ್ಣಯಿಸಲಶಕ್ಯವಾದುದೇ ಶೂನ್ಯತೆ, ಮಿಥ್ಯ, ಮಾಯೆ (ಪಂಪಾ. ೨೧೦). [ಸಂ. ಶೂನ್ಯತಾ]

ಶೂನ್ಯದೃಷ್ಟಿ (ನಾ). ಅರ್ಥಹೀನವಾದ ನೋಟ, – ದೃಷ್ಟಿ : ರಾಮಸಿಂಗ್ ಸ್ವಲ್ಪ ಆಶ್ಚರ್ಯದಿಂದ ಬಿಡುಗಣ್ಣಾಗಿ ಶೂನ್ಯದೃಷ್ಟಿಯಿಂದ ನೋಡುತ್ತಾನೆ (ವೀರಯೋ. ೨೮). [ಸಂ.]

ಶೂನ್ಯದೈವತ (ನಾ). [ಜ್ಯೋತಿ] ದೈವಬಲವಿಲ್ಲದವನು : ಬಲವದ್ಭಂಹಧರ್ಮ ಮಾರ್ಗತತ್ಪರನೆನಿಕುಂ ವಿಹೀನಬಲರೆಲ್ಲರುಮಾಗಿರೆ ಶೂನ್ಯದೈವತಂ (ಜಾತಕ. ೧೭-೭). [ಸಂ.]

ಶೂನ್ಯಪೀಠ (ನಾ). [ವೀಶೈ] ಶಿವಧರ್ಮತತ್ತ್ವವನ್ನು ತಿಳಿಸುವ ಪೀಠ : ''ಶೂನ್ಯಪೀಠ – ಶಿವಧರ್ಮವನ್ನು ಬೋಧಿಸುವ ಪೀಠ'' (ಶರಸಾ. ೨೪-೭). [ಸಂ.]

ಶೂನ್ಯಮಾಸ (ನಾ). ಧನುರ್ಮಾಸ : ಶೂನ್ಯಮಾಸದಲ್ಲಿ ಶುಭಕಾರ್ಯಗಳನ್ನು ಮಾಡುವುದಿಲ್ಲ (ರೂಢಿ). [ಸಂ.]

ಶೂನ್ಯಲಿಂಗ (ನಾ). [ವೀಶೈ] ಬಯಲೇ ರೂಪವಾಗಿರುವ ಶಿವಲಿಂಗ : ಆದಿ ಅನಾದಿಯ ಮೇಲಣ ಜ್ಯೋತಿರ್ಮಯವಪ್ಪ ಶೂನ್ಯಲಿಂಗಮಂ ಬೆರಸಿ ಭಿನ್ನವಿಲ್ಲದಿರ್ಪ ಆಚರಣೆಯ ವೀರಮಾಹೇಶ್ವರ ಬಲ್ಲನಲ್ಲದ ಅಜ್ಞಾನಿ ಬಾಯಿಬಡಿಕರವರೆತ್ತ ಬಲ್ಲರಯ್ಯ (ಘನವ. ೪೬-೪೧). 'ಆಕಾಶಲಿಂಗ' ಪರಾ. [ಸಂ.]

ಶೂನ್ಯವಾದ (ನಾ). [ಬೌದ್ಧ] ಎಲ್ಲವೂ ಶೂನ್ಯವೆಂಬ ವಾದ ; ನಿರೀಶ್ವರ ವಾದ; ನಾಸ್ತಿಕವಾದ : ಶೂನ್ಯವಾದಪ್ರಕಾಶನಪರನಾವುದಂತರ್‌ಬಹಿರೂಪದಿಂ ವಿಶದ ದರ್ಶನಾವಗಮ್ಯಮದಲ್ಲಮಸತ್ಯಾವಭಾಸಿಯೆಂತು ಮರುಮರೀಚಿಕಾ ಸ್ಪಷ್ಟೇಂದ್ರ ಜಾಲಾದಿಗಳೊಳ್ . . . ಜೀವಮೆಂಬುದೆಲ್ಲಿತ್ತು (ಆದಿಪು. ೨-೯ ವ). [ಸಂ.]

ಶೂನ್ಯವಾದಿ (ನಾ). [ಬೌದ್ಧ] ಶೂನ್ಯವಾದವನ್ನು ಪ್ರತಿಪಾದಿಸುವವನು ; ನಿರೀಶ್ವರವಾದಿ ; ನಾಸ್ತಿಕ : ಮಿಥ್ಯಾಜ್ಞಾನಿಗಳು ಶೂನ್ಯವಾದಿಗಳೊಂದು ದಿವಸಮಜಿತಂಜಯನೊಡನೆ ಪೋಗಿ (ಚಾವುಂಪು. ೨೧) ; ನಿಮ್ಮಡಿ ನೀವಿಂತು ವಿಪರೀತಗ್ರಹಣಂಗೆಯ್ದು ಶೂನ್ಯವಾದಿಗಳಾಗಿರಲಾಗದು (ಪಂಚತಂ. ೨೧೩ ೧೪).

[ಸಂ ಶೂನ್ಯವಾದಿನ್]

ಶೂನ್ಯಶೀರ್ಷ (ನಾ). ಏನನ್ನೂ ಧರಿಸಿರದ ತಲೆ; ಬರಿದಾದ ಅಗ್ರಭಾಗ : ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾಕ್ಷಣಮೆ ತಳ್ಪಡರ್ದಾ ಕಿರಾತನ ಮಂಡೆಯಲ್ಲಿರೆ ಕಂಡು . . . ಮಗುಳ್ದೀಕ್ಷಿಸುತ್ತಣಿಯರಂ ಬಡದಿತ್ತ ಲಿಂಗದ ಶೂನ್ಯಶೀರ್ಷಮನರ್ಜುನಂ (ಶಬಶಂ. ೪-೧೦೮). [ಸಂ.]

ಶೂನ್ಯಸಂಪಾದನೆ (ನಾ). [ವೀಶೈ] ಶಿವಶರಣ–ಶರಣೆಯರ ವಚನಗಳನ್ನು ಸಂದರ್ಭೋಚಿತವಾಗಿ ಜೋಡಿಸಿ ಬರೆದ ವೀರಶೈವಸಾಹಿತ್ಯದ ಒಂದು ಸಂಕಲನ ಗ್ರಂಥ : 'ಶೂನ್ಯಸಂಪಾದನೆ' ಎಂಬುದು ವೀರಶೈವರಿಗೆ ಅತ್ಯಂತ ಪವಿತ್ರವಾದ ಗ್ರಂಥಗಳಲ್ಲೊಂದು (ಶೂನ್ಯಕು. ೧. ಒನ್ನೆಲ); ಶೂನ್ಯಸಂಪಾದನೆಯಲ್ಲಿ ವೋಳಿಗೆಯ ಮಾರಯ್ಯಗಳ ಸಂಪಾದನೆಯನ್ನೂ ವಿವರಿಸಿದ್ದಾರೆ (ಮೋಮಾ. ೫೧ ಪ್ರಸ್ತಾವನೆ).

[ಸಂ. ಶೂನ್ಯಸಂಪಾದನ]

ಶೂನ್ಯಸಿಂಹಾಸನ (ನಾ). ೧. = ಶೂನ್ಯಪೀಠ. ೨. ಅನುಭವಮಂಟಪದ ಅಧ್ಯಕ್ಷಪೀಠ : ಶೂನ್ಯಸಿಂಹಾಸನವೆನ್ನುವುದು ಕೇವಲ ಭೌತಿಕಪೀಠವಲ್ಲ, ಅದೊಂದು ಪದವಿಯೂ ಹೌದು (ಶೂನ್ಯಕು. ೧೪೫). [ಸಂ.]

ಶೂನ್ಯಾಧ್ವ (ನಾ). ೧. ಆಕಾಶಮಾರ್ಗ; ನಭೋಮಾರ್ಗ. ೨. ಮಾಟ ಮಾಡಿದ ವಸ್ತುಗಳನ್ನಿರಿಸಿದ ದಾರಿ. ೧ , ೨: ಕುಮಂತ್ರಜಪಮಂ ತದ್ಭೇಷದಿಂ ಮಾಡೆ ಕೋಮಳೆ ಶೂನ್ಯಾಧ್ವಮನ್ಕೆದೆ ದಾಂಟಿ ನಿಜಪಾದಂ ಪೋಗೆ ಮೈಗಂದಿ ಬಿಳ್ಪಳಿದಂ . . . ಭಾಸ್ಕರಂ (ರಾಜಶೇ. ೧೩-೩೨). [ಸಂ. ಶೂನ್ಯಾಧ್ವನ್]

ಶೂನ್ಯಾಲಯ (ನಾ). ಯಾರೂ ವಾಸವಿರದ ಮನೆ; ಬರಿದಾದ ಮನೆ: ಹೇಳಲೇನು ಸಮುದ್ರವಿಭವವನೇಳಿಸುವ ಪಾಳಿಯದ ಸಿರಿ ಶೂನ್ಯಾಲಯಕೆ ಜೋಡಿಸಿತಲ್ಕೆ (ಕುವಾಗ. ೪-೧೮). [ಸಂ.]

ಶೂನ್ಯಾಸನ (ನಾ). ಏಕಾಂತಸ್ಥಾನ : ನಮ್ಮಯ ನಗರಿ ಶೂನ್ಯಾಸನದಲಿಹುದು (ಕುವಾಅ.ರಾ-೨೮). [ಸಂ.]

ಶೂರ (ಗು). ೧. ಕಲಿತನದಿಂದ ಕೂಡಿದ; ಸಾಮರ್ಥ್ಯವುಳ್ಳ : ಶೂರ ಪದಾತಿ ಮುಂದೆ ಘಟೆ ಪಿಂದೆ ರಥಂ ನಡುವರ್ಕೆಲಂಗಳೊಳ್ ಸಾರ ಹಯೋತ್ಕರಂ ನೆರೆದು ನಿಲ್ಪಿನ (ಶಾಂತಿಪು ೩-೧೧೪); ಶೂರಜೋದರ ಮೇಲುವಾಯಿದು ವೀರಸಿರಿ ಬಿಗಿಯಪ್ಪೆ (ಕುವಾಭೀ. ೪-೮೭). (ನಾ). ೨. ಕಲಿ; ವೀರ : ದಾನಿಯುಮಂ ಶೂರನುಮಂ ತಾನೆಚ್ಚಱಿಕುಂ ಗದಾನಿಲಂ ಮೂರ್ಧಿತನಂ (ಗದಾಯು. ೮-೩೩). ೩. ಸಿಂಹ. ೪. ವರಾಹ; ಹಂದಿ. ೫. ಸೂರ್ಯ. ೬. ಶಾಲವೃಕ್ಷ. ೭. ಎಕ್ಕದ ಮರ. ೮. ನಾಯಿ. ೯. ಹುಂಜ. ೧೦. ಶ್ರೀಕೃಷ್ಣನ ತಾತನಾದ ಒಬ್ಬ ಯಾದವನ ಹೆಸರು; ಶೂರಸೇನ. [ಸಂ.]

ಶೂರಣ (ನಾ). ಒಂದು ಬಗೆಯ ಗೆಡ್ಡೆ ; ಸುವರ್ಣಗೆಡ್ಡೆ ; "ಸೂರಣ" (ಪಂಡಿತ. ೨೫೧). [ಸಂ.]

ಶೂರತನ (ನಾ). ಕೆಚ್ಚು; ಕಲಿತನ; ಶೌರ್ಯ : ಪುರುಷನ ಭಾವಂ, ಪುರುಷತನಂ; ಏವಂ ವೀರತನಂ, ಶೂರತನಂ, ಬಲ್ಲತನಂ (ಶಬ್ದಾನು. ೪೩೦ ಪ್ರಯೋ). [ಶೂರ + — ತನ]

ಶೂರತೆ (ನಾ). = ಶೂರತನ : ನೃಪಶಾಸ್ತ್ರಜ್ಞತೆಗಿಲ್ಲಿ ಮಲ್ಲಪನೊಳಶ್ವೇಭಾಗಮಕ್ಕಿಲ್ಲಿ ಮಲ್ಲಪನೊಳ್ ಶೂರತೆಗಿಲ್ಲಿ ಮಲ್ಲಪನೊಳಾರ್ತಿಯೊಳ್ಪುಣಕ್ಕಿಲ್ಲಿ . . . ಕಾಣಲಾಗದು ಸಮಾನಂ ಮಾನವಾನೀಕಮಂ (ಅಜಿಪು. ೧-೨೭); ಆರು ಬಣ್ಣಿಸಬಲ್ಲರಾ ಮಮಕಾರ ನೃಪನ ಮಹಾಪ್ರತಾಪವ ಶೂರತೆಯ ಸಾಹಸವನು (ಪ್ರಭುಲಿಂ. ೩-೭). [ಸಂ. ಶೂರತಾ]

ಶೂರತ್ವ (ನಾ). = ಶೂರತನ : ಶಾಂತಿಯೆಂಬ ನಿಶಾತಖಡ್ಗದಿ ಕೋಪವೆಂಬಭಿಯಾತಿಯಂ ಖಂಡಿಸುವವಂ ತಾನಾವನವನಿಯೊಳು ಆತನೇ ಶೂರತ್ವವುಳ್ಳವನು (ಬಸಪು. ೩೮-೬೪). [ಸಂ.]

ಶೂರ್ಪ (ನಾ). ೧. ಧಾನ್ಯಗಳನ್ನು ಕೇರಿ ಶುದ್ಧಪಡಿಸುವ ಸಾಧನ; ಮೊರ : "ಕೆ(ಗೆ)ರಸಿ(ಶಿ)ಕೂರ್ಪಮನಿಕ್ಕು ಶೂರ್ಪಮನಿಸಿಕ್ಕು" (ಮಂಗರಾ. ೬೨-೨೨). ೨. ಎರಡು ದ್ರೋಣಗಳ ಒಂದು ಅಳತೆ. ೩. ಒಂದು ದೇಶದ ಹೆಸರು : ಸ್ತ್ರೀರಾಜ್ಯಂ ಶೂರ್ಪ ವಂಗಂ ಮಗಧ ಮಹಿತಳಂ ಪಾಂಡ್ಯ ಸೌರಾಷ್ಟ್ರಂ (ಅಜಿಪು. ೧೨-೭೨). [ಸಂ.]

ಶೂರ್ಪಕ (ನಾ). ೧. = ಶೂರ್ಪ ೧. : "ಶೂರ್ಪಕಂ ಪ್ರಸ್ಫೋಟಂ" (ಪಸ್ತಕೋ. ೪೯ ೨೭). ೨. ಮನ್ಮಥನ ವೈರಿಯಾದ ಒಬ್ಬ ದೈತ್ಯ : ಅರಿಭೂಪಾಲದರ್ಪ ಶೂರ್ಪಕದರ್ಪಕಂದರ್ಪಕೋಪವಾಪೂರ್ವರೂಪಂ ರೂಪಿಸುವೊಡರಿದೆನಿಸುವ ಮಲತರಕೀರ್ತಿ (ಪದ್ಮರಾ. ೩ ೨೩). [ಸಂ.]

ಶೂರ್ಪಕರ್ಣ (ನಾ). ೧. ಮೊರದಂತೆ ಅಗಲವಾದ ಕಿವಿಯುಳ್ಳದು; ಆನೆ. ೨. ಗಣಪತಿ : ಏಕದಂತನು ಶೂರ್ಪ[ಪಾಠಾಂ. ಪೂರ್ವ]ಕರ್ಣ . . . ವಿನಾಯಕ ನಂಘ್ರಿಗೂಂಟಿಸುವೆ (ಅಭಿಲೂ. ೧ ೬). [ಸಂ.]

ಶೂರ್ಪಶ್ರವ (ನಾ). = ಶೂರ್ಪಕರ್ಣ ೧ : ಕಿಸಲಯಜಾಲಾನುಸಂಸರ್ಪಿ ಶೂರ್ಪಶ್ರವ ಸಂಪ್ರಸ್ಮೃತ್ವತಂಗಾಶಯ ಶಯಗಳಿತಾಪತ್ತಿತ್ತಿರ್ಣಾರ್ಪಣಂ (ಅರ್ಜನಸಂ. ೩ ೩೬). [ಸಂ. ಶೂರ್ಪಶ್ರವಸ್]

ಶೂಲ (ನಾ). ೧. ಚೂಪಾದ ತುದಿಯುಳ್ಳ ಒಂದು ಬಗೆಯ ಆಯುಧ; ಈಟಿ: ಚಾನುಭಂಜನಿಶೂಲಪ್ರಕರಪರಿವೃತಂಗಳುಂ (ಆದಿಪು. ೧೩ ೫೭ ವ); ಆಕಾಶವ ಶೂಲದಲೆತ್ತಿದ ಬಲ್ಲಿದ ತಳವಾಱನೀತನು (ಅವಚಂ. ೧೧೯-೫೪೧); ಗಿರಿದುರ್ಗದಲ್ಲಿ ಶೂಲಗಳು ಮೆಱೆದುವು (ಕುರಾಸಾಂ. ೨೦-೧೩). ೨. ಶಿವನ ಆಯುಧ; ತ್ರಿಶೂಲ: ಲಲಿತಖಟ್ವಾಂಗದ ಕಪಾಲದ ಹೂಳವ ಶೂಲದ ಕರದ ನಿಗಮಾವಳಿ ಶಿರೋಮಣಿ ಮೆಱೆದನುಬೀಶಾನವಕ್ತ್ರದಲಿ (ಕುವಾಂಅ. ೬-೭೩); ಪರಶು ಮೃಗ ಢಮರು ಶೂಲವ ಧರಿಸುತ (ಗಗತಾ. ೭-೮೫). ೩. ಮಾಂಸವನ್ನು ಸುಡಲು ಉಪಯೋಗಿಸುವ ಚೂಪಾದ ಸಲಾಕಿ; ಸುಡುಗಂಬಿ. ೪. ಮರಣದಂಡನೆಗೊಳಗಾದವರನ್ನು ಏರಿಸಿ ಕೊಲ್ಲಲು ಬಳಸುವ ಮೊನಚಾದ ಕಬ್ಬಿಣದ ಕಂಬ : ಸ್ಥೂಲಶಿರನಾರ್ದು ಕುಣಿದಂ ಶಾ [ಪಾಠಾಂ. ಸೂ]ಲದ ತಲೆ ಕುಣಿವ ತೆಱದೆ (ಅರ್ಜನಸಂ. ೫-೨೭); ಬಸಿದ ಶೂಲಕೆ ಸವಣನನು ಸೇರಿಸಿದ ಗಾದೆಯ ಮೆಱೆವರೆಯಪಯಶವ ಹೊತ್ತ (ತೂರರಾ. ೪-೫-೧೮); ದುಃಕರಶೂಲಕ್ಕೇಡಾದಂ ಪರಪುಸಿ ಮಾಂಡವ್ಯನ ಪರತಪಿದಂ (ಹಮ್ಮೀರ. ೨-೧೮). ೫. ತೀವ್ರವಾದ ನೋವು, — ಯಾತನೆ: ಉದಯಿಸುಗುಂ ಶೂಲಂ ವಾತದಿನುರಿಪಂ ಪಿತ್ತದೆಱೆಪ್ಪೆಯಿಂ (ಲೋಕೋಪ. ೯-೩). ೬. (ಹೊಟ್ಟೆಯಲ್ಲಿ ಅಥವಾ ತಲೆಯಲ್ಲಿ) ಉಂಟಾಗುವ ತೀವ್ರ ನೋವಿನ ಒಂದು ಬಗೆಯ ರೋಗ : ವಾತ ಪಿತ್ತ ಶ್ಲೇಷ್ಮ . . . ಪಿಟಕಂ ಶೂಲ ಭಗಂದರಂ ಕುಷ್ಠಕ್ಷಯ ಗಂಡ ಶಿರೋವೇದನೆ ಮೊದಲಾಗೂಡೆಯ ವೇಱುನೂಱುವ್ಯಾಧಿಗಳೊರ್ಮೊದಲೆ ಮಯ್ಯೊಳ್ ಪುಟ್ಟಿದೊಡೆ (ವಡ್ಡಾರಾ. ೬೯-೧೧). ೭. ಉರುಳು; ಪಾಶ : "ಉರಲು ತಂತ್ರಿ ಶೂಲಾಖ್ಯಮಕ್ಕುಂ" (ಮಂಗರಾ. ೧೧೨-೫). ೮. ಸಾವು ; ಮರಣ. ೯. ಗುರುತು ; ಲಾಂಛನ. ೧೦. ಮಾರಾಟ ಅಥವಾ ಮಾರಾಟದ ವಸ್ತು. ೧೧. [ಕಾವ್ಯಮಿ] ಶೂಲದ ಆಕಾರದ ಚಿತ್ರಬಂಧವುಳ್ಳ ಪದ್ಯ : ಶರಶೂಲಚಾಪಚಕ್ರಾಸಿರೂಪಮಿಳರಥತುರಂಗಪದಗತಪಾಠಂ ಮುರಜಂ ಗೋಮೂತ್ರಿಕೆ ಪುಷ್ಕರಮರ್ಧಭ್ರಮಣಸರ್ವತೋಭದ್ರಂಗಳ್ (ಕಾವ್ಯಾವ. ೫೬೯). ೧೨. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂಬತ್ತನೆಯದು : ಅಶ್ವಿನೀ ಮೊದಲಾದಿಪ್ಪತ್ತೇಳುನಕ್ಷತ್ರಂಗಳುಂ ವಿಷ್ಕಂಭ ಪ್ರೀತಿ ಆಯುಷ್ಮಾನ್ ಸೌಭಾಗ್ಯಶೋಭನ ಅತಿಗಂಡ ಸುಕರ್ಮ ಧೃತಿ ಶೂಲ . . . ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇಕ. ೨೬೨) ; ಯೋಗಗಳತಿಶಯವನರಿಯ್ಯೆಯ . . . ವಿಷ್ಕಂಭ ಶೂಲವು (ಗಗತಾ. ೪-೬೯). ೧೩. ಸಂಖ್ಯಾಯೋಗಗಳಲ್ಲಿ ಒಂದು ; ಏಳು ಗ್ರಹಗಳು ಮೂರುರಾಶಿಗಳಲ್ಲಿರುವಿಕೆ : ನಿಲೆ ಸಪ್ತಗ್ರಹಮೊಂದ ರಾಶಿಯೊಳ್ ಯೋಗಂ ಗೋಳನಾಮಂ ಯುಗಂ ನಿಲೆ ಗೇಹದ್ವಯದೊಳ್ ತ್ರಿಗೇಹದೊಳಿರಲ್ ಶೂಲಂ (ಜಾತಕ. ೧೩-೫).

ಶೂಲಕ್ಕೇರಿಸು = ಶೂಲಕ್ಕೆ ಹಾಕು ; ಮರಣದಂಡನೆಗೊಳಪಡಿಸು: ಚಕ್ರವರ್ತಿಯ ಆಜ್ಞೆಯಂತೆ . . . ಧರ್ಮಗುರುಗಳನೇಕರನ್ನು ಶೂಲಕ್ಕೇರಿಸಲಾಗಿತ್ತು (ಆಶ್ರಮ. ೪೯). **ಶೂಲದಮರ** = ಮರಣದಂಡನೆಗೊಳಗಾದವರನ್ನು ಏರಿಸಿ ಕೊಲ್ಲಲು ನೆಟ್ಟಿರುವ ಕಂಬ : ಶೂಲದ ಮರಕ್ಕೋಸ್ಕರವಾಗಿಯೇ ಹುಟ್ಟಿರುವ ಕೂಳಕಳ್ಳರೇ ! (ಬೆಟ್ಟಅ. ೫೦-೨೧). **ಶೂಲದ ಹಬ್ಬ** = ಗುಂಡಬ್ರಹ್ಮಯ್ಯನೆಂಬ ಶರಣನನ್ನು ಶೂಲಕ್ಕೆ ಏರಿಸಿದ ದಿನ ಮತ್ತು ಆ ಶರಣನ ಸ್ಮರಣಾರ್ಥವಾಗಿ ಅಂದು ಆಚರಿಸುವ ಹಬ್ಬ : ಆ ಕಾಲದೊಳು ಬಂದುದು ಶೂಲದ ಹಬ್ಬ (ಕುರಾಸಾಂ. ೨೧-೮) ; ಆ ಗುಂಡಬ್ರಹ್ಮಯ್ಯರನ್ನು ಶೂಲಕ್ಕೆ ಏರಿಸಿದ ದಿನದ ಹಬ್ಬವೇ ಶೂಲದ ಹಬ್ಬ (ಸಡಾ. II. ೧೭೧). [ಸಂ.]

ಶೂಲಧರ (ನಾ). ೧. ತ್ರಿಶೂಲವನ್ನು ಹಿಡಿದುಕೊಂಡಿರುವವನು ; ಶಿವ : "ಉಮಾಪತಿಯೆನಲು . . . ಕಪಾಲಶೂಲಧರನೆನೆ ಶಿವಾಖ್ಯಂ" (ಮಂಗರಾ. ೪-೧೨) ; ಶೂಲಧರಭಕ್ತನಿವಹಮನೀ ಲೋಕದ ಸುಜನನಿಕರಮಂ ಪರಮತಮಂ ಲಾಲಿಸಲುಂ ಪಾಲಿಸಲುಂ ಸೋಲಿಸಲುಂ ಮಹಿಗೆ ಬಂದ ಮಹಿಮಾಧಾರಾ (ವೃಷಪ. ೨೪-೪೫). ೨. [ಛಂದ] ರುದ್ರಗಣದ ಭೇದಗಳಲ್ಲಿ ಒಂದು : ರುದ್ರಗಣಮಂತೆಂದೊಡೆ ೧. ಗಂಗಾಧೀಶಂ . . . ೭. ಶೂಲಧರಂ (ಛಂದೋಂಬು. ೫-೨೪೦ ವ). [ಸಂ.]

ಶೂಲಪಾಣಿ (ನಾ). = ಶೂಲಧರ ೧ : ಹರಹರ ಶೂಲಪಾಣಿ ಮುಕುಂದಯೆನುತವೆ ರವಿಯನೀಕ್ಷಿಸುತ . . . ತಲೆಬಾಗಿದಳು ತರಳೆ (ಕುವಾಪ. ೨-೨೪). [ಸಂ.]

ಶೂಲಮುದ್ರೆ (ನಾ). ಮಂತ್ರಶಾಸ್ತ್ರಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ: ಅಸ್ತ್ರಮುದ್ರೆ . . . ಶೂಲಮುದ್ರೆ . . . ಸಂಹಾರಮುದ್ರೆಯೆಂಬ ಸಕಲಮುದ್ರಾ ಲಕ್ಷಣವನಱಿದಾಯಾ ಕ್ರಿಯೆಗಳಲ್ಲಿ ಪ್ರಯೋಗಿಸಿ (ವಿವೇಕ. ೯೩). [ಸಂ. ಶೂಲಮುದ್ರಾ]

ಶೂಲಯೋಗ (ನಾ). ೧. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂಬತ್ತನೆಯ ಯೋಗ : ಶೂಲಯೋಗಕ್ಕೆ ದೇಶ ೫೮ ಗಳಿಗೆ ಮೇಲೆ ತ್ಯಾಜ್ಯಾ (ಫಾಸ್ಕರ. ೭೦-೧). ೨. ಏಳು ಗ್ರಹಗಳು ಮೂರುರಾಶಿಗಳಲ್ಲಿರುವಿಕೆ : ೩ ರಾಶಿಯಲ್ಲಿ ಗ್ರಹರಿರಲೂ ಶೂಲ ಯೋಗವೆಂಬುದುಂ, ಇದರಿಂದ ಮೃತ್ಯುಫಲ (ಆಯುರ್ವೇ. ೨೪-೭). [ಸಂ.]

ಶೂಲವರಿ (ನಾ). ೧. ಒಂದು ಬಗೆಯ ತೆರಿಗೆ (?) : ಪೊಂಗೊಡುವೆಲದ ಗ್ರಾಮಗಳಲೂ ಅರಮನೆಗೆ ಎತ್ತಿ ಬಹ ಜೋಡಿ ಶೂಲವರಿಗಳನೂ ಬಿಟ್ಟು ತಿರುಪತಿಯ ಕೆರೆಗೆ ಮೂನೂರು ಹೊನನೂ ಕೊಟ್ಟು (ಸೌಇಇ. IX-ii, ೪೬೨-೩ ; 1467). [ಶೂಲ + ವರಿ]

ಶೂಲಾಕೃತ (ಗು). ೧. ಸುಡುಗಂಬಿಯಲ್ಲಿ ಚುಚ್ಚಿ ಬೇಯಿಸಿದ. (ನಾ). ೨. ಸುಡುಗಂಬಿಗೆ ಚುಚ್ಚಿ ಸುಟ್ಟ ಮಾಂಸ ಮೊದಲಾದುವು : "ಶೂಲಾಕೃತಂ, ಘಟಿತ್ರಂ, ಶೂಲ್ಯಂ — ೩ ಕುಡುಗೋಲಿಗೆ ಚುಚ್ಚಿ ಪಕ್ವಮಾಡುವ ಭಕ್ಷ್ಯಕ್ಕೂ, ಸುಟ್ಟು ನಂಚಿಕೊಳ್ಳುವ ಪದಾರ್ಥಕ್ಕೂ ಪೆಸರುಗಳು" (ಸಿದ್ಧಾಂತಿ. ೨೮೭). [ಸಂ.]

ಶೂಲಾರೋಹಣ (ನಾ). (ಮರಣದಂಡನೆಗಾಗಿ) ಶೂಲಕ್ಕೆ ಏರಿಸುವುದು : ಶಕಟದಾಸನಂ ಶೂಲಾರೋಹಣವಂ ಮಾಡಿಸುವ ಸಮಯದಲ್ಲಿ ಸಿದ್ಧಾರ್ಥಕನೆಂಬುವನು ಖಡ್ಗಪಾಣಿಯಾಗಿ ಅಟ್ಟಿ ಬಂದು . . . ಶಕಟದಾಸನಂ ಕರೆದುಕೊಂಡು ಎಲ್ಲಿಯೋ ಪಲಾಯನಂಗೈದನಂತೆ (ಮುದ್ರಾಮಂ. ೩೦೩). [ಸಂ.]

ಶೂಲಾಸನ (ನಾ). [ಯೋಗ] ಒಂದು ಬಗೆಯ ಆಸನ : ಸಿದ್ಧಾಸನ . . . ಶೂಲಾಸನ ಸುಖಾಸನ . . . ಅರ್ಧಾಸನಾದಿ ಎಂಭತ್ತುನಾಲ್ಕು ಆಸನಭೇದಂಗಳು (ವಿವೇಕ. ೧೩೧). [ಸಂ.]

ಶೂಲಿ, ಶೂಳಿ (ಗು). ೧. ಶೂಲವನ್ನು ಹಿಡಿದ,- ಧರಿಸಿದ. (ನಾ). ೨. ಶೂಲವನ್ನು ಹಿಡಿದಿರುವವನು. ೩. = ಶೂಲಧರ ೧ : ಕೃತಯುಗಕ್ಕೆ ಅರಸು ಶೂಲಿ . . . ದ್ವಾಪರ ಯುಗಕ್ಕೆ ಅರಸು ಸರಸ್ವತಿಯ ಪತಿ (ಮೋಮಾ. ೩.-೧೦) ; ಶೂಲವೀತಗೆ ಕೈದು ಗಲುವರೆ ಶೂಲಿಗಸದಳ (ಕೌಶಿಕಾ. ೨೫-೮). ೪. ತೀವ್ರವಾದ ಯಾತನೆಯನ್ನು ಅನುಭವಿಸುವಿಕೆ. ೫. ತೀವ್ರವಾದ ಯಾತನೆಯನ್ನು ಅನುಭವಿಸುವವನು. **ಶೂಳಿ** : ೩. ಶೂಳಿಯಣುಗರು ಚಾಂಗುಮೊಲ್ಲೆಂದು ಪರಸುತಿರೆ ಪಶುಪಾಶಮಂ ಪಱಿಯಲೊದೆದು (ಕೊಂಗುರ.ಡಿ. ೧೫೭-೧೪), ಕಾಲನಂ . . . ಶೂಲದಿಂದಿಡಿದೊತ್ತಿದನಲಾ ಶೂಳಿ [ಪಾಶಾಂ. ಲಿ] (ಬಸಪು. ೫೪-೫೧). [ಸಂ. ಶೂಲಿನ್]

ಶೂಲಿಕ (ಗು). ೧. ಶೂಲವನ್ನು ಹೊಂದಿರುವ. (ನಾ). ೨. ಚುಚ್ಚುವಿಕೆ : (ಕ). ೩. ಕೊಲ್ಲುವಿಕೆ : (ಕ). ೪. ಅಪರಾಧಿಗಳನ್ನು ಶೂಲಕ್ಕೆ ಹಾಕುವವನು. ೫. ಮೊಲ. ೬. ಹುಂಜ. ೭. ಸುಡುಗಂಬಿಗೆ ಚುಚ್ಚಿ ಸುಟ್ಟ ಮಾಂಸ. [ಸಂ.]

ಶೂಲಿಕೆ (ನಾ). ೧. ಮೊನಚಾದ ಆಯುಧವನ್ನು ತುದಿಗೆ ಅಳವಡಿಸಿರುವ ಕೋಲು; ಹಾರೆಗಟ್ಟಿಗೆ : "ಒತ್ತುವ ಹಾರೆಗಟ್ಟಿಗೆ ಅಯೋಮುಖಂ ಶೂಲಿಕೆಯೆನಿಕ್ಕು" (ಮಂಗರಾ. ೪೭-೬). ೨. ಕಬ್ಬಿಣದ ಕಂಬಿಗೆ ಸಿಕ್ಕಿಸಿ ಕೆಂಡದಲ್ಲಿ ಸುಟ್ಟ ಮಾಂಸ : "ಬಜಿಗಂಡದೊಳು ಸುಟ್ಟಡಗು ಶೂಲಿಕೆಯೆನಿಕ್ಕು" (ಮಂಗರಾ. ೫೪-೪). ೩. ಒಂದು ಬಗೆಯ ಸಸ್ಯ : "ಶೂಲಿಕೆಯೆನಲ್ ಚಾಲೆ" (ಮಂಗರಾ. ೪೨ ೩೭). [ಸಂ. ಶೂಲಿಕ]

ಶೂಲಿಗೆ 'ಸೂನಗೆ' ನೋ.

ಶೂಲಿನಿ (ನಾ). ೧. ಪಾರ್ವತಿ; ದುರ್ಗೆ. ೨. ಒಂದು ಮಂತ್ರದ ಹೆಸರು : ದುರ್ಗಾ ಕಾಳಿ . . . ಶೂಲಿನ್ಯಾದಿ ಮಹಾಮಂತ್ರಂಗಳಿಂ (ವಿವೇಕ. ೮೧). [ಸಂ. ಶೂಲಿನೀ]

ಶೂಲೆ$_1$ (ನಾ). ೧. ತೀಕ್ಷ್ಣವಾದ ನೋವು. — ವೇದನೆ : ಶೂಲೆ ಬಾಧಿಸುತಿಪ್ಪ ಸಂಕಟಕಾಱಿಳೆಯೊಳು ದೊಪ್ಪದೊಪ್ಪನೆ ಕೆಡದು ಹೊರಳುತ ಮಿಗೆ ನರಳುತಿರಲು (ಬಸಪು. ೪೯-೨೬) ; ಉಂಡ ಮೇಲೆ . . . ಸಂಕಟ ಪ್ರಾರಂಭವಾಗುತ್ತದೆ ೩-೪ ತಾಸುಗಳು ಸಂಕಟ ಶೂಲ ಎಲ್ಲವೂ ಕಾಡುತ್ತದೆ (ಮನೋಸಂ. ೭೯). ೨. = ಶೂಲೆ ೬ : 'ಶೂಲವೇನೆ' ಪರಾ. [ಸಂ. ಶೂಲ]

ಶೂಲೆ$_2$ (ನಾ). ೧. ಸೂಳೆ; ವೇಶ್ಯೆ. ೨. ಅಪರಾಧಿಗಳನ್ನು ಶೂಲಕ್ಕೇರಿಸುವ ಕಂಬ ; ಶೂಲದ ಮರ. [ಸಂ. ಶೂಲಾ]

ಶೂಲೆಗಂಟು (ನಾ). ತೀವ್ರವಾದ ಹೊಟ್ಟೆನೋವಿನಿಂದ ಹೊಟ್ಟೆಯಲ್ಲಿ ಉಂಟಾಗುವ ಗೆಡ್ಡೆ : ಶೂಲೆಗಂಟಗಿ:- ಹುಣಸೆಚೆಕ್ಕೆ ಕೆಂಡವಾಗಲೀ ಕರಟದ ಕೆಂಡವಾಗಲೀ ಹಾಕಲು ಶೂಲೆಗಂಟು ಮೊದಲಾದುದೆಲ್ಲ ಮಾಣ್ಗುಂ (ವಿವೃವಿ. ೬೪). [ಶೂಲೆ$_1$ + ಗಂಟು]

ಶೂಲೆಗೊಡು (ಕ್ರಿ). ತೀಕ್ಷ್ಣವಾದ ವೇದನೆಯಿಂದ ಕೂಡಿರು : ನರವು . . . ಕಠಿಣವಾಗಿ ಅತಿವೇಗವಾಗಿ ಇಲಿಯ ನಡೆಯಂತೆ ನಡೆಯುತ್ತಿದ್ದರೆ ಶೂಲೆಗೊಡಿದ ಕ್ಷಯವೆಂದರಿಪುದು (ಸಕಪ್ರ. ೧೨). [ಶೂಲೆ$_1$ + ಕೂಡು$_1$]

ಶೂಲೆರೋಗ (ನಾ). = ಶೂಲ ೬ : ಶೂಲಮಂತ್ರವನಱಿದೆಯಾದಡೆ ಶೂಲೆರೋಗ ನಿರೋಗವಹುದು (ಬಸಪು. ೪೯-೨೮) ; ಶ್ರಾವಕಾಚಾರ್ಯನಂ ಶೂಲೆರೋಗಂ ಕಾಡಲ್ (ವಾಸುಪೂ. ೪-೯೪). [ಶೂಲೆ$_1$ + ರೋಗ]

ಶೂಲೆವೇನೆ (ನಾ). = ಶೂಲ ೬ : ಇಂಗು ಬಚೆ . . . ಮೆಣಸು ಮದ್ಯಂ ಪಿಂಗಿಸುಗುಂ ಶೂಲವೇನೆಯಂ ತತ್ಕ್ಷಣದೊಳ್ (ಅಶ್ವಶಾ. ೧೧-೧೩). [ಶೂಲೆ + ಬೇನೆ]

ಶೂಲೆವ್ರಣ (ನಾ). ಶೂಲೆರೋಗದಿಂದಾದ ಹುಣ್ಣು : ಇಲಿಪಾಷಾಣ ವರಹತೂಕ ಇಕ್ಕಿ ಗೋಧಿ ಹಿಟ್ಟು ಸುತ್ತ ಕಟ್ಟಿ ಇಪ್ಪೇಎಣ್ಣೆಯಲ್ಲಿ ಮರ್ದಿಸಿ ಅದ . . . ಮೂವತ್ತೊಂದು ದಿನ ಆಜಿಸಿ ಕಿವಿಯಲ್ಲೆಱೆಯಲು ಶೂಲೆವ್ರಣ ಮಾಣ್ಗುಂ (ವಿವೃವಿ. ೧೭೪). [ಶೂಲೆ$_1$ + ವ್ರಣ]

ಶೂಲೋದ್ಭವ (ನಾ). [ಜ್ಯೋತಿ] ಶೂಲಯೋಗದಲ್ಲಿ ಹುಟ್ಟಿದವನು : ಶೂಲೋದ್ಭವಂ ಧನದೂರಂ ವರಶೀಲಶೌರ್ಯನಿಧಿ (ಜಾತಕ. ೧೩-೧೫). [ಸಂ.]

ಶೂಲ್ಯ (ಗು). ೧. ಚುಚ್ಚುಗಂಬಿಯಿಂದ ಬೇಯಿಸಿದ, — ಪಕ್ವಮಾಡಿದ. (ನಾ). ೨. ಸುಟ್ಟ ಮಾಂಸ : "ಶೂಲ್ಯಂ, ಭಟಿತ್ರಂ - ಈ ೨ ಸುಂಟಗೆ" (ಹಲಾಯು. ೫೪-೧೬೮). [ಸಂ.]

ಶೂಳಿ 'ಶೂಲಿ' ನೋ.

ಶೃಂಖಲ, ಶೃಂಖಳ (ನಾ). ೧. ಸರಪಣಿ; ಸಂಕೋಲೆ. ೨. ನಡುವಿಗೆ ಕಟ್ಟುವ ಸರಪಣಿ; ಮೇಖಲೆ. ೩. ಉಡಿದಾರ; ಸೊಂಟದ ದಾರ : "ಶೃಂಖಲಂ ಪುಂಸ್ಕಟ್ಯಾಂ - ಪುರುಷನ ಉಡದಾರ, ಕಟಿಸೂತ್ರ" (ಸಿದ್ಧಾಂತಿ. ೨೦೧). ೪. ಆನೆಯ ಕಾಲಿಗೆ ಕಟ್ಟುವ ಸರಪಣಿ : "ಶೃಂಖಲಂ, ಅಂದುಕಃ, ನಿಗಳಃ - ೩ ಆನೆಯನ್ನು ಕಟ್ಟಿಹಾಕುವ ಲೋಹದ ಸರಪಣಿ" (ಸಿದ್ಧಾಂತಿ. ೨೪೮). **ಶೃಂಖಳ** : "ಹಿಂಜೀರಮಂದುಕಂ ಶೃಂಖಳಂ[ಪಾಶಾಂ. ಲಂ]ಪಾದಬಂಧಂ ನಿಗಳಮೆನಲು ಸಂಕಲೆಯೆನಿಕ್ಕುಂ" (ಮಂಗರಾ. ೪೬-೨). [ಸಂ.]

ಶೃಂಖಲಕ, ಶೃಂಖಳಕ (ನಾ). ೧. ಸರಪಣಿ. ೨. ಮರದ ಕಾಲ್ಬಂದಿಯಿಂದ ಕೂಡಿದ ಒಂಟೆ ಮುಂತಾದ ಪ್ರಾಣಿಗಳ ಮರಿ. ೩. ಒಂಟೆ : "ದಾಸೇರಕಃ, ಕ್ರಮೇಳಕಃ, ಉಷ್ಟ್ರಃ . . . ಶೃಂಖಲ[ಪಾಶಾಂ. ಳ]ಕಃ - ಈ ೭ ಒಟ್ಟೆ" (ಹಲಾಯು. ೪೭-೧೨೫). **ಶೃಂಖಳಕಃ** ೩. "ರವಣಮುಷ್ಟ್ಯಂ . . . ಶೃಂಖಳಕಮೆನೆ ದಾಸೇರಮನಲೊಂಟೆಗಭಿಧಾನಮಕ್ಕುಂ" (ಮಂಗರಾ. ೫೫-೭). [ಸಂ.]

ಶೃಂಖಲಾಬದ್ಧ (ಗು). ೧. ಸರಪಣಿಯಿಂದ ಕಟ್ಟಿದ ; ಸಂಕೋಲೆಯಿಂದ ಬಂಧಿಸಿದ : ಶೃಂಖಲಾಬದ್ಧ ಘಂಟಾಸ್ವನಾಮುದದ ಕಾಂಸ್ಯಂ ಹೇಮಕೃತ ಪುಣ್ಯದಿಂದಪೂರ್ವದ ಸುಘಂಟಾಕರ್ಣನಧಿಕಪದಮಂ ಪಡೆದು . . . ಇರ್ಪನಾ ಶಿವಪುರದೊಳು (ವೀರೇಶಪು. ೭-೫-೪೦). (ನಾ). ೨. ಸರಪಣಿಯ ಕೊಂಡಿಗಳಂತೆ ಸೇರಿಕೊಂಡಿರುವುದು, — ಸಂಗತವಾದುದು : ಅವನು ಆ ಮುಂದಿನ ಒಂದೊಂದೇ ಸಂಗತಿಗಳನ್ನು ಶೃಂಖಲಾಬದ್ಧವಾಗಿ ಮಾಡುತ್ತ ವಿಚಾರಮಗ್ನನಾಗಲು (ಅಂಬಿಕ. ೧೩೫). [ಸಂ.]

ಶೃಂಖಲೆ (ನಾ). ೧. = ಶೃಂಖಲ ೧ : ಲಲಿತನಿಜಕನಕಮಯಶೃಂಖಲೆಯಿಂ ಹರಿಚರಣಯುಗಳಮುಂ ನಿಯಮಿಸಿ . . . ಮುಂದೆ ಸಾರ್ಚಿದನಾಗಳ್ (ಕಾದಂಪು. ೬೪೭). ಪ್ರಣವಂ ಶೃಂಖಲೆ ಸಾರಮೇಯಮಮರ್ದಾಮ್ನಾಯಂ ಪುರಾಣವ್ರಜಂ ಶಣಸೂತ್ರಂ (ಶಬಶಂ. ೩-೨೫). ೨. = ಶೃಂಖಲ ೪: "ನಿಗಳಃ, ಪಾದಬಂಧಃ, ಹಿಂಜೀರಃ, ಶೃಂಖಲಾ, ಅಂದುಕಃ - ಈ ೫ ಆನೆಯ ಕಾಲ್ಗಟ್ಟು" (ಹಲಾಯು. ೩೭-೭೦). ೩. ಒಂದು ಬಗೆಯ ಬಳ್ಳಿ : "ಕಾಂಡೇರಿ ಪವಿಮೂರ್ತಿ ಶೃಂಖಲೆಯಸ್ಥಿವಳ್ಳಿ ಮಂಗುರವಳ್ಳಿ" (ಮಂಗರಾ. ೪೩-೪೩). [ಸಂ ಶೃಂಖಲಾ]

ಶೃಂಖಳ 'ಶೃಂಖಲ' ನೋ.

ಶೃಂಖಳಕ 'ಶೃಂಖಲಕ' ನೋ.

ಶೃಂಗ (ನಾ). ೧. ಪ್ರಾಣಿಯ ಕೊಂಬು, — ಕೋಡು : "ವಿಷಾಣಂ, ಶೃಂಗಂ - ಈ ೨ ಕೊಂಬು" (ಹಲಾಯು. ೪೫-೧೧೩); ಮುತ್ತ ಸಿಂಗಕ್ಕೆ ತನ್ನ ಕೇಸರಮೆ ಜಾಲಮಾಗಿ ಪರಿಣಮಿಸೆ . . . ಕಡವೆ ಕೇಳ್ಕು ನೆಟ್ಟನಾ ಎಡೆಗೆ ಬಂದು ತನ್ನೆರಡುಂ ಶೃಂಗದಿಂ ಸಿರ್ಕುಂಗೊಂದಲಂ ಬಿಡಿಸುತಿರೆಯುಂ (ರಾಮಾಶ್ವ. ೪೨-೨೮). ೨. ಬೆಟ್ಟದ ತುದಿ ; ಶಿಖರ : ಕುಡೆ ವೈಡೂರ್ಯ ಮರೀಚಿಜಾಳಜಳದಿಂ ಮುಂ ಪಾದ್ಯಮಂ ಸೇಸೆಯಂ ಕುಡೆ ಶೃಂಗಂ . . . ಮಂದರಮಂದದೇನಡರ್ದುದೊ ದೇವೇಂದ್ರನೈರಾವತಂ (ಮಲ್ಲಿಪು. ೧೨-೯೩); ಗಿರಿಶೃಂಗೋತ್ತುಂಗ ಚಂಚಚ್ಚಟುಲಖರರುಚಿಗ್ರಾವದಗ್ರಂಗಳೊಳ್ (ರಾಜಶೇ. ೫-೫೦). ೩. ಕೊಂಬಿನಾಕಾರದ ಒಂದು ಬಗೆಯ ಊದುವ ವಾದ್ಯ. ೪. ಎತ್ತರ ; ಔನ್ನತ್ಯ. ೫. ಆಳ್ವಿಕೆ; ಪ್ರಭುತ್ವ. ೬. ಮುಖ್ಯವಾದುದು; ಪ್ರಧಾನವಾದುದು: "ಶೃಂಗಂ, ಪ್ರಧಾನಂ - ಈ ೨ ಕಕುದಮಂಬುದು" (ಹಲಾಯು. ೧೩೭-೩೫). ೭. ದೊರೆ; ರಾಜ. ೮. ಆನೆಯ ದಂತ ; ಕೋರೆ : "ಪ್ರಭು ದೊಡ್ಡಿತು ಗಿರಿದುದಿವಿಭಕೋಡ್ಗಳ್ ಶೃಂಗ ಶಬ್ದ" (ನಾನಾಕಂ. ೨೪-೬೭). ೯. ಮರದ ತುದಿ. ೧, ೯ : ವರವೃಷಭನಂತೆ ಶೃಂಗಾಂಕಿತಂ ಪರಮಮಂಗಳನಂತೆ ಕುಜನಾಮದಿಂ ಶರನಿಧಿಯುಮೊಲಖಿಳ ಪಕ್ಷಿಗಳ ರವದಿಂದೆ . . . ಒಪ್ಪುವೆತ್ತೊಂದು ವಟವೃಕ್ಷವು (ನವಮೋ. ೮-೩೮).

೧೦. ಚಂದ್ರನ ಕೋಡು,– ಕೊಂಬು. ೧೧. ಪಿಚಕಾರಿ; ಜೀರ್ಕೊಳವೆ. ೧೨. ಧನುರ್ದಂಡ. ೧೩. ಕಮಲ. ೧೪. ಕುಚ. ೧೫. ಒಬ್ಬ ಮುನಿಯ ಹೆಸರು; ಋಷ್ಯಶೃಂಗ. ೧೬. ಒಂದು ಬಗೆಯ ಸಸ್ಯ; ಜೀವಕ. ೧೭. [ರೇಖಾಗ] ತ್ರಿಕೋನದ ಮೂಲೆ, – ತುದಿ : ಪ್ರತಿಯೊಂದು ಮೂಲ ಅಥವಾ ಶೃಂಗ(vertex)ದಲ್ಲಿಯೂ ಇವುಗಳಿಗೆ ಕ್ರಮವಾಗಿ ೩, ೩, ೪, ೫ ಮುಖಗಳು ಸೇರುತ್ತವೆ (ಗಣಿತ. ೨೦). ೧೮. [ಜ್ಯೋತಿ] ಒಂದು ನಕ್ಷತ್ರಪುಂಜದ ಹೆಸರು : ರೋಹಿಣಿಯು ಶೃಂಗದ ಬಲ ಅಡಿಯಲ್ಲಿದೆ (ನಕ್ಷತ್ರ. ೮). [ಸಂ.]

ಶೃಂಗಬೇರ (ನಾ). ಹಸಿಶುಂಠಿ; ಅಲ್ಲ : "ಆರ್ದ್ರಕಂ, ಶೃಂಗಬೇರಂ – ಈ ೨ ಅಲ್ಲದ ಕೊಂಬು" (ಪಥ್ಯಾಯು. ೧೦೧-೪೬). [ಸಂ.]

ಶೃಂಗರ 'ಸಿಂಗಾರ' ನೋ.

ಶೃಂಗರಂಗೈ 'ಸಿಂಗರಂಗೆಯ್' ನೋ.

ಶೃಂಗರವಡು 'ಸಿಂಗರವಡು' ನೋ.

ಶೃಂಗರಿಸು 'ಸಿಂಗಾರಿಸು' ನೋ.

ಶೃಂಗರುಹೆ (ನಾ). ಒಂದು ಬಗೆಯ ಸಸ್ಯ : "ಶೃಂಗರುಹಾ - ಶೃಂಗಾಟಕ" (ಓಷಧಿ. ೧೭೦). [ಸಂ. ಶೃಂಗರುಹಾ]

ಶೃಂಗವೇರ (ನಾ). = ಶೃಂಗಬೇರ : "ಶೃಂಗವೇರಮನೆ ಹಸಿಯಲ್ಲವಳ್ಕು" (ಮಂಗರಾ. ೪೧-೩೫). [ಸಂ.]

ಶೃಂಗಸಭೆ (ನಾ). ರಾಷ್ಟ್ರಗಳ ಅತ್ಯುನ್ನತ ಅಧಿಕಾರಿಗಳು ನಡೆಸುವ ಸಭೆ ; ವರಿಷ್ಠರ ಸಭೆ : ರಾಷ್ಟ್ರದ ಅತ್ಯುನ್ನತ ಅಧಿಕಾರಿಗಳು ಶೃಂಗಸಭೆ ಸೇರಿ ರಾಷ್ಟ್ರದ ಏಳಿಗೆಯ ಬಗ್ಗೆ ವಿಚಾರ್ಚರ್ಚೆ ನಡೆಸಿದರು (ಡೂಢ). [ಸಂ. ಶೃಂಗಸಭಾ]

ಶೃಂಗಾಟ (ನಾ). ೧. ನಾಲ್ಕು ದಾರಿಗಳು ಸೇರುವ ಸ್ಥಳ ; ಚೌಕ : "ಬಟ್ಟೆಗಳು ಕೂಡೆ ಶೃಂಗಾಟಮದು" (ಮಂಗರಾ. ೫೭-೫). ೨. ಒಂದು ಬಗೆಯ ಮುಳ್ಳಿನ ಬಳ್ಳಿ : "ಜಲವಾಸಿ ಶೃಂಗಾಟ(ಕ)" (ಓಷಧಿ. ೭೦). ೩. [ಜ್ಯೋತಿ] ನಾಭಸ ಯೋಗಗಳಲ್ಲಿ ಒಂದು : ಉದಯಿಸುತ ನವಮರಾಶಿಯೊಳ್ ನಿಂದೊಡೇಳುಮದು ಶೃಂಗಾಟಂ (ಜಾತಕ. ೧೩-೨). [ಸಂ.]

ಶೃಂಗಾಟಕ (ನಾ). ೧. = ಶೃಂಗಾಟ ೧ : "ಬಟ್ಟೆಗೂಡಿದೆಡೆ ಶೃಂಗಾಟಕವೆಂಬುದು" (ಪಥ್ಯಾಯು. ೪೮-೧೩೪). ೨. = ಶೃಂಗಾಟ ೨ : ತಾಲಪತ್ರ ಶೃಂಗಾಟಕನಿಚಯನಿಚಿತಂಗಳುಂ . . . ದುರ್ಗಮಂಗಳಪ್ಪ ದುರ್ಗಂಗಳೊಳ್ (ಆದಿಪು. ೧೩-೫೭ ವ); ಮದಮತಂಗ ಜಾಂಘ್ರಿತಳಮನಳಜಿಸುವ ಶೃಂಗಾಟಕಂಗಳಂ ಸಂಗಳಿಸಿಯುಂ (ಪುಪ್ರಪು. ೭-೬೯). ೩. ಒಂದು ಬಗೆಯ ಮುಳ್ಳುಗಿಡ; ಕೊಳಗುಳಿಕೆ; "ಕೋಕಿಲಾಕ್ಷ" (ಪಂಡಿತ. ೫೩೪). ೪. = ಶೃಂಗಾಟ ೩ : ಶೃಂಗಾಟಕಸಂಭವನನವರತಂ ಸುಖಮಿರ್ಪಂ ಹಲಸಮುದ್ಭವಂ ಕೃಷಿಗೆಯ್ಯಂ (ಜಾತಕ. ೧೩-೧೩). ೫. [ವೀಶೈ] ಎರಡು ಹುಬ್ಬುಗಳ ನಡುವಿನ ಸ್ಥಳ ; ಭ್ರೂಮಧ್ಯಸ್ಥಾನ : ಸ್ವಸ್ಥ ತುರೀಯಾತೀತಾವಸ್ಥೆಯನೊಳಕೊಂಡು ತೊಳಪ ಶೃಂಗಾಟಕ ಪದ್ಮಸ್ಥಿತನೊಳನಘನೊಳ್ ನಿರವಸ್ಥನೊಳೊಡವೆರೆದು ಬಾಹ್ಯಮತಿಯಱಿದರ್ಂ (ಶಬಶಂ. ೨-೧೦೩); ಭಂಡಿಸಿದ ಚಾರ್ವಾಕಮುಖ್ಯಮುದುಶ್ಯಾಸ್ತ್ರಗಳ ಮಂಡಿಸಿದ ರಾಜಭೃಂಗತ್ರದೊಳ್ ಶೃಂಗಾಟಕದ ಪದ್ಮಮಧ್ಯದಲ್ಲಿ . . . ರಾಮನಾಥಾಗ್ರಗಣ್ಯಂ (ವಿಕ್ರೀಪು. ೮-೫೯). [ಸಂ.]

ಶೃಂಗಾಟಕವ್ಯೂಹ (ನಾ). ಒಂದು ಬಗೆಯ ಸೇನಾರಚನೆ ; ನಾಲ್ಕು ದಾರಿಗಳು ಕೂಡುವ ಸ್ಥಳದಂತಿರುವ ಸೇನಾರಚನೆ : ಸಮಭೂಮಿಯೊಳ್ ಚತುರ್ಬಲಂಗಳನೊಂದುಮಾಡಿ ಶೃಂಗಾಟಕವ್ಯೂಹಮನೊಡ್ಡಿ ನಿಂದಾಗಳ್ (ಪಂಪಭಾ. ೧೨-೧೭ ಪ). [ಸಂ.]

ಶೃಂಗಾರ (ನಾ). ೧. ಅಲಂಕಾರ ; ಭೂಷಣ : "ಸಿಂಗರಮನೆ ಶೃಂಗಾರ" (ಕವಿಕಂ. ೨೬೫); ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ (ಬಸವ. ೭೪); ಆ ಸ್ವಾಮಿಗಾನಲ್ತು ಮೊದಲೊಲ್ಮೆ, ಕರ್ಣನ್. ಸೇನಾಧಿಪತ್ಯಮೇ, ಕರ್ಣನ್ ; ಶೃಂಗಾರಮೇ, ಕರ್ಣನ್ (ಆಶ್ವಾ. ೧೪-೩೭); ಬಂಗಾರವಿದ್ದರೆ ಶೃಂಗಾರ (ಗಾಡ). ೨. ವಿಲಾಸದ ಉಡುಗೆ; ರಸಿಕವೇಷ : ತರುಣ ಶೃಂಗಾರದ ಮಹಾಬಂಧುರದ ನೂರ್ವರು ಕೌರವೇಂದ್ರನ ವರಕುಮಾರರು ಮುಂದೆ ಮೆಱೆದರು ಲಕ್ಷಣಾದಿಗಳು (ಕುಮಾಉ. ೮-೩೩). ೩. ಅನುರಾಗ; ಪ್ರಣಯ. ೪. ಕಾಮಲಾಲಸೆ ; ಕಾಮಾಸಕ್ತಿ. ೫. ಸಿಂದೂರ. ೬. ಗುರುತು; ಚಿಹ್ನೆ. ೭. ಲವಂಗ. ೮. ಹಸಿಶುಂಠಿ. ೯. ಸುಗಂಧಚೂರ್ಣ. ೧೦. ಕೃಷ್ಣಾಗರು; ಕಾಳಾಗರು. ೧೧. [ಕಾವ್ಯಮೀ] ನವರಸಗಳಲ್ಲಿ ಒಂದು ; ವಿಭಾವ, ಅನುಭಾವ ಮತ್ತು ಸಂಚಾರಿಭಾವಗಳಿಂದ ಪರಿಪುಷ್ಟವಾದ 'ರತಿ' ಎಂಬ ಸ್ಥಾಯಿಭಾವದಿಂದ ವ್ಯಂಗ್ಯವಾಗುವ ರಸ : ವೀರಾದ್ಭುತಕರುಣಾಶೃಂಗಾರ ಭಯಾನಕಸರೌದ್ರಬೀಭತ್ಸಮಹಾಸಾರತರ ಹಾಸ್ಯಶಾಂತಾಧಾರಂ ನವವಿಧವಿಕಲ್ಪಮಾ ರಸಮಾರ್ಗಂ (ಕವಿಪಾ. ೩-೧೪೯); ಶೃಂಗಾರಾಂಭೋಧಿವೇಳಾವಿಳಸನದೆಸಕಂ . . . ಎಂಬಂತೆ ಲೀಲಾಪಾಂಗಜ್ಯೋತ್ಸ್ನಾವ್ಯತಿಕಾಂಭಃಪ್ಲವಧವಳಿತದಿಗ್ವಿತ್ತಿ ಬಂದತ್ತು ಪುಷ್ಪಾ ಸ್ತ್ರಂಗೇಕಚ್ಛತ್ರಮಾಯ್ತಾ ಜಗಮೆನೆ ಭರತಾಂತಃಪುರಸ್ತ್ರೀಸಮೂಹಂ (ಆದಿಪು. ೧೧-೪೪); ಶೃಂಗಾರಾದಿಗಳಪ್ಪ ರಸಂಗಳ್ ವರ್ತಿಸುಗುಮಂತವೆಂಟೆ ವಲಂ ಕಾವ್ಯಾಂಗಕ್ಕೆ ಸತ್ಕ್ರಿಯಾರೂಪಂಗಳ್ ರತ್ಯಾದಿ ಭಾವಸಂಪನ್ನಂಗಳ್ (ಕಾವ್ಯಾವ. ೭೬). [ಸಂ.]

ಶೃಂಗಾರಂಗೆಯ್ (ಕ್ರಿ). ಅಲಂಕಾರಮಾಡಿಕೊಳ್ಳು; ಸಿಂಗರಿಸಿಕೊಳ್ಳು : ಚಿತ್ರಚೀನಾಂಶುಕಸುಗಂಧಾನುಲೇಪನ ನೂತ್ನರತ್ನಾಭರಣಂಗಳಿಂ ಶೃಂಗಾರಂಗೆಯ್ದು ಪರಿವೇಷ್ಟಿಸಿರ್ದಂಗನಾಜನಂಗಳಿಂ ಶೃಂಗಾರರಸಮುಂ . . . ನೆಗೞುತ್ತುಮಿರೆ (ಜಗವಿ. ೨-೩೯ ವ); ಮುಂದಿಟ್ಟಿಪಿದ ಸುಗಂಧಾನುಲೇಪನ ಕುಸುಮವಸನಭೂಷಣಂಗಳಿನರಸಿಯುಂ ತಾನುಂ ಶೃಂಗಾರಂಗೆಯ್ದು ವಿಳಾಸಿನೀಜನಕ್ಕಮಿಯಲೊಡಂ (ಚಂದ್ರಪ್ರ. ೭-೧೩೦ ವ). [ಶೃಂಗಾರ + ಕೆಯ್]

ಶೃಂಗಾರಂಬೆಱು (ಕ್ರಿ). ಅಲಂಕಾರವನ್ನು ಹೊಂದು; ಶೃಂಗಾರದಿಂದ ಕೂಡಿರು: ಪದ್ಮರಾಶೀತಳಸುರಭಿಸಲಿಲಸಂಭೃತಕನಕಭೃಂಗಾರಮಂ ಶೃಂಗಾರಂಬೆತ್ತು ಪಿಡಿದು ನಿಂದ ವರುಣಾಂಗನೆಯಿಂ (ಶಬಶಂ. ೧-೭೯ ವ). [ಶೃಂಗಾರ + ಪೆಱು]

ಶೃಂಗಾರಗೊಳ್ಳು (ಕ್ರಿ). = ಶೃಂಗಾರಂಬೆಱು : ಕುಶಲಪರಿಕರ್ಮದಿಂ ಶೃಂಗಾರಗೊಂಡು ಕಲೆ ಬಾಡಿರುವ ಮೊಗವೆತ್ತಿ ಬೇಡುತಿಹ ವರವೇ (ಮಲಪ. ೧೭-೫). [ಶೃಂಗಾರ + ಕೊಳ್ಳು (< ಕೊಳ್)]

ಶೃಂಗಾರಚೇಷ್ಟೆ (ನಾ). ಪ್ರಣಯವನ್ನು ವ್ಯಕ್ತಪಡಿಸುವ ಹಾವಭಾವ; ಕಾಮ ಚೇಷ್ಟೆ : ಆ ದಿವಿಜವನಿತೆಯರನಿತಾನುಂ ತೆಱದ ಶೃಂಗಾರಚೇಷ್ಟೆಗಳನುಪಯೋಜಿಸಿ ಯುಮಂತುಮೇಗೆಯ್ದುಮಾ ಜಂಗಮಮೇರುವೆನಿಸಿದ ಸೌಜನ್ಯಕಂದಾಂಕುರನಂ ಸಂಚಳಿಸಲಾಱದೆ ಸಿಗ್ಗಿನನುಕಂಪೆಯಂ ತರೆ (ಶಾಂತಿಪು. ೯-೯೯ ವ); ಲೋಕದಲ್ಲಿ ಮನುಷ್ಯರಿಗೆ ಹಲವು ಬಗೆಯ ಶೃಂಗಾರಚೇಷ್ಟೆಗಳನ್ನು ಮನ್ಮಥನೇ ಹೇಳಿಕೊಡುತ್ತಾ ಇದ್ದಾನೆ (ವಚನಾ. ೧೮). [ಸಂ. ಶೃಂಗಾರಚೇಷ್ಟಾ]

ಶೃಂಗಾರದೃಷ್ಟಿ (ನಾ). ೧. ಪ್ರಣಯಭಾವದ ನೋಟ. ೨. [ನಾಟ್ಯ] ಪ್ರೇಮವನ್ನು ವ್ಯಕ್ತಪಡಿಸುವ ದೃಷ್ಟಿ ; IP "ಸಂತೋಷದಿಂದ ಮತ್ತೆ ಮತ್ತೆ ನೋಡುತ್ತ ಆಲಿಗಳನ್ನು ಚಲಿಸುವುದು. ವಿ–ಹರ್ಷ ಮತ್ತು ಅನುಗ್ರಹಗಳನ್ನು ತೋರಿಸುವಾಗ" (ಅಸ್ಯರಂ. ೨೬೬ ಗದ್ಯಾನುವಾದ) : ಒದವಿದ ಕಣ್ಣಾಲಿಗಳತಿ ಮುದದಿಂದಂ ನೋಡಿ ನೋಡಿ ಮರಳ್ದುಂ ತಿರುಗಲ್ ಉದಯಿಸುವಪಾಂಗಮದು ತಾಂ ಮದವಾರಣ ಗಮನೆ ಕೇಳ್ ಕಟಾಕ್ಷಮೆನಿಕ್ಕುಂ – ಇದು ಶೃಂಗಾರದೃಷ್ಟಿ (ಅಸ್ಯರಂ. ೩-೧೦). [ಸಂ.]

ಶೃಂಗಾರಯೋನಿ (ನಾ). ಕಾಮ ; ಮನ್ಮಥ : "ಶೃಂಗಾರಯೋನಿಃ ಶ್ರೀಪುತ್ರಃ ಶೂರ್ಪಕಾರಾತಿಃ – ೩ ಮನ್ಮಥನ ಹೆಸರುಗಳು" (ಸಿದ್ಧಾಂಶಿ. ೧೮). [ಸಂ.]

ಶೃಂಗಾರಸಾರ (ನಾ). ಶೃಂಗಾರರಸವನ್ನು ಸತ್ತ್ವವನ್ನಾಗಿ ಉಳ್ಳವನು : ಇವಳಂ ಶೃಂಗಾರಸಾರಂ ಕುಸುಮಶರನೆ ಮೇಣ್ ಮಾಡಿದಂ (ಕಾವ್ಯಾವ. ೪೨). [ಸಂ.]

ಶೃಂಗಾರಾಜಿತೆ (ನಾ). ೧. ಶ್ರೇಷ್ಠವಾದ ಕೋಡುಗಳಿಂದ ಶೋಭಿಸುವವಳು ; ಕಾಮಧೇನು. ೨. ಶ್ರೇಷ್ಠವಾದ ಪರ್ವತಶೃಂಗದಿಂದ ಶೋಭಿಸುವವಳು ; ಕಾವೇರಿ. ೧, ೨ : ಚಾರುಪಯೋಧರೆ ಮಹಿಮಾಧಾರೆ ಸದಾನಿಮಿಷಸೇವ್ಯರಸಯುತೆ ವರಶೃಂಗಾರಾಜಿತೆಯೆನಿಸುವ ಕಾವೇರಿ ಧರಾಕಾಮಧೇನುವೆನಿಪುದು ಪುಸಿಯೇ (ರಾಜಶೇ. ೨-೮). [ಸಂ. ಶೃಂಗಾರಾಜಿತಾ]

ಶೃಂಗಾರಿ (ಗು). ೧. ಪ್ರಣಯಭಾವದ; ಅನುರಾಗದಿಂದ ಕೂಡಿದ. ೨. ಕಾಮಾಸಕ್ತಿಯುಳ್ಳ. ೩. ಸಿಂದೂರದ ಕಲೆಯುಳ್ಳ. (ನಾ). ೪. ಅನುರಾಗಿ; ಪ್ರಣಯಿ. ೫. ಅಲಂಕಾರ; ಭೂಷಣ. ೬. ಪದ್ಮರಾಗ. ೭. ಆನೆ. ೮. ವೀಳೆಯದೆಲೆಯ ಬಳ್ಳಿ. – ಹಂಬು. [ಸಂ. ಶೃಂಗಾರಿನ್]

ಶೃಂಗಾರಿಸು (ಕ್ರಿ). ೧. ಅಲಂಕೃತವಾಗು; ಸಿಂಗರಗೊಳ್ಳು : ಕುಶನ ಕೇಳ್ ಪಟ್ಟಾಭಿಷೇಕದ ವಸತಿ ಶೃಂ[ಶಾಕಾಂ. ೨೦]ಗಾರಿಸಿತು (ತೊರವಿ. ೨-೨-೧೪). ೨. ಪ್ರಣಯ ಭಾವವನ್ನು ವ್ಯಕ್ತಪಡಿಸು : ಮನೋಹರರೂಪಮಂ ನೆನೆಪ ಯುವತಿ ಶೃಂಗಾರಿಸುವ ಚೇಷ್ಟೆಯನವಿರತಂ ನೆನೆವಂ (ಜಿಪಾ. ೪೨-೨೧). [ಶೃಂಗಾರ + -- ಇಸ್ಯು]

ಶೃಂಗಿ$_1$ (ಗು). ೧. ಕೊಂಬುಳ್ಳ ; ಕೋಡುಳ್ಳ. (ನಾ). ೨. ಬೆಟ್ಟ ; ಪರ್ವತ : "ಧರಮದ್ರಿ ಕುಧರಂ . . . ಶೃಂಗಿ ಸಾನುಮಂತಂ ಗೋತ್ರಮೆನಲು ಬೆಟ್ಟಕ್ಕೆ ನಾಮಂ" (ಮಂಗರಾ. ೨೯-೧). ೩. ಕೋರೆಯುಳ್ಳುದು ; ಆನೆ : ಶೃಂಗಿಯಲಿ ಉರಗನಲಿ . . . ದುಶ್ಚರಿತನಲಿ ವಿಶ್ವಾಸಿಸೆ (ಹರ್ಷಾಸ. ೯ :೮೯). ೪. ಎತ್ತು ; ವೃಷಭ. ೫. ಒಂದು ಬಗೆಯ ಜಿಂಕೆ; ಸಾರಂಗ : "ರುಷ್ಯಮದು ಮರುತ್ ಪೃಷತಮಾ ಶೃಂಗಿಯೆನೆ ಸಾರಂಗಮಕ್ಕುಂ" (ಮಂಗರಾ. ೪೮-೧೦) ; ಕಂಗಳ ಮಧ್ಯದ ಮಲೆಯಲ್ಲಿ ಒಂದು ನಿಷ್ಪಂಗ ಶೃಂಗಿ ಮೇವುತ್ತದೆ (ಸಣ. ೪. ೨. ೪೨-೧೫೦). ೬. ಕುದುರೆಗಳಲ್ಲಿ ಒಂದು ಬಗೆ : ಕರ್ಣಪ್ರದೇಶದಲ್ಲಿ ಕೀಲಿನಲ್ಲಿ ಸುಳಿಯುಳ್ಳ ಅಶ್ವವು ಶೃಂಗಿಯನಿಸಿಕೊಳ್ಳುವದು (ಸೌಗಂಧಿ. ೩೧೨-೮). [ಸಂ. ಶೃಂಗಿನ್]

ಶೃಂಗಿ$_2$ (ನಾ). ೧. ಒಂದು ಬಗೆಯ ಮೂಲಿಕೆ; ಹೆರಿಗೆಹಾಲೆ : "ಶೃಂಗೀ, ವೃಷಭಃ, ವೃಷಃ - ೩ ಹೆರಿಗೆಹಾಲೆಯ ಹೆಸರು" (ಸಿದ್ಧಾಂತಿ. ೧೩೮). ೨. ಒಂದು ಬಗೆಯ ಔಷಧೀಮೂಲಿಕೆ; ಅತಿಬಜೆ : "ಶ್ಯಾಮಕಂದಂ ಶೃಂಗಿಯೆಂದೊಡತಿಬಜೆಯಕ್ಕುಂ" (ಮಂಗರಾ. ೪೧-೩೬); ೪(ಹಿ)ಂಗು ಬಜೆ ಚಿತ್ರಮೂಲಂ ಶೃಂಗಿಯುಮಜಮೋದ . . . ತಿಗಡಯಿಂತಿವನಿಂಗು ಮೊದಲ್ಗಾಡಿ ಕೊಳ್ಗೆ ಭಾಗೋತ್ತರಮಂ (ಅಶ್ವಶಾ. ೧೧೧-೭). ೩. ಒಂದು ಬಗೆಯ ಸಸ್ಯ; ಕಡಸಿಗೆ : "ಆ ಶೃಂಗಿ ಕಡಸಿಗೆ ದ್ಯುತಿಯೆನಲು ಮುಷ್ಟಿಯಕ್ಕುಂ" (ಮಂಗರಾ. ೪೫-೪೮). ೪. ಒಂದು ಬಗೆಯ ಮರ ; ಭೂರ್ಜ. ೫. ಒಂದು ಬಗೆಯ ವಿಷ : ಸಿಡಿಲೇಂ ಶೇಷನ ದಾಡೆಯೇಂ ವಡಬನೇಂ ಕಾಲಾಗ್ನಿಯೇಂ ಶೃಂಗಿಯೇಂ ತಡೆದಾಂತಗ್ಗಳೆಯಂ ಗಡಂ ಮದನನೇಂ ಪಾಪಾರಿಯೇಂ ಕಾಲನೇಂ . . . ನಿಲಲ್ಕೆಱೆಗುಮೇ (ರಕ್ಷಾಶ. ೧೦೫). [ಸಂ. ಶೃಂಗೀ]

ಶೃಂಗಿಕ (ನಾ). ಒಂದು ಬಗೆಯ ವಿಷ : "ಶೃಂಗಿಕಃ . . . ಏಸ್ಯಲಿಂಗಃ – ಈ ೬ ವಿಷಭೇದಂಗಳ್" (ಹಲಾಯು. ೧೦೬-೨೫). [ಸಂ.]

ಶೃಖಿಂಡ (ನಾ). ಶ್ರೀಗಂಧ ; ಚಂದನ : ಶ್ರೀಬ್ರಹ್ಮೇಶ್ವರದೇವರ ನಂದಾದೀವಿಗಗಂ ಶೃಖಿಂಡಕ್ಕಂ ನಾಲ್ಕುನಾಡ ಸುಂಕಮಂ ಪೂರ್ವ್ವಮಾರ್ಯ್ಯಾದೆಯಂ ಪ್ರತಿಪಾಳಿಸಿ ಕೊಟ್ಟ ಸಾಸನಂ (ಕೀಳ. ೧೧೫-೧೯-೨೫ ; 1052). 'ಸಿರಿಕಂಡ' ಪರಾ. [<ಸಂ. ಶ್ರೀ ಖಂಡ]

ಶೃಗಾಲ (ನಾ). ನರಿ ; ಜಂಬುಕ : ಪಡುವಣದಡವಿಯ ರಾಜಕಾರಣಪಟು, ಬಂದಿತಾ ಶೃಗಾಲ (ದ್ರಾಪಾಪ್ಯ. ೯-೨). [ಸಂ.]

ಶೃಣಿ (ನಾ). ಅಂಕುಶ : ಇಸೆ ಮದನನಾಗಳ್ಕುಸುಮಬಾಣಮಂ ಬಲುನೊಂದು ವಿರಹವಿಹ್ವಲತೆಯಿಂ ಕಯ್ಯ ಶೃಣಿ ನೆಲದಲ್ಲಿ ಬೀಳೆ ಧೈರ್ಯದ ಬೆಸುಗೆ ಬಿರ್ಚಿ ತನು ಕಾಮಾಗ್ನಿಯಿಂ ಬೆಂದುದು (ಕುಮಾಪು. ೩-೭೨). [ಸಂ.]

ಶೃತ (ಗು). ೧. ಕುದಿಸಿದ ; ಮರಳಿಸಿದ : ಔಷಧಗಳನಿಡಿದು ಜಜ್ಜುಗುಟ್ಟಿ ನೀರಿನಲ್ಲಿ ಹಾಕಿ ಚತುರ್ಭಾಗಾವಶೇಷವಾದುದು ಶೃತಕಷಾಯವೆನಿಸಿಕೊಂಬುದು (ವೈದ್ಯಸಾ. , ೨. ೧೧೫). (ನಾ). ೨. ಬೇಯಿಸಿದ ಪದಾರ್ಥ. ೩. ಕಾಸಿದ ತುಪ್ಪ : "ಶೃತಂ, ಪಕ್ವಂ – ಈ ೨ ಕಾಸಿದ ತುಪ್ಪ" (ಹಲಾಯು. ೪೬-೧೧೧). [ಸಂ.]

ಶೆಂಕಟುನೀರ್ (ನಾ). ಒಂದು ಬಗೆಯ ಬಳ್ಳಿ ಮತ್ತು ಅದರ ಹೂವು : ಶೆಂಕಟುನೀರ್ (ಎಸಾ XVIII. ೧೫೯-೧೯; ೧೮೩೪). [← ತಮಿ. ಚೆಙ್ಕುನೀರ್]

ಶೆಂತಮಿಳ (ನಾ). ಶುದ್ಧವಾದ ತಮಿಳುಭಾಷೆ : ಶನ್‌ತಮಿಳದೊಳಗಿನ ಅತಿಸರಸವಾದ ಕುರಲ್ ಎಂಬ ಪ್ರಾಚೀನಕಾವ್ಯದಲ್ಲಿ ಸಂಸ್ಕೃತಶಬ್ದಗಳು ಬಹುತರ ಕಾಣಿಸುವುದಿಲ್ಲ (ಮುಜಯಿ. ೪-೧೨೬). 'ಚೆಂದಮಿಟುಂ' ಪರಾ. [← ತಮಿ. ಚೆನ್ತಮಿಟ್]

ಶೆಂಬಾಜ (ನಾ). ಒಬ್ಬಾತನ ಹೆಸರು : ಕನ್ನವಾಡ ಗಂಗವಾಡ ಬಳಿಯವಾಡ ರನ್ನಾಡಾಳ ಸಿಯಳಾಜಸಾಮಿ ಸರ್ಬರಸ ಕೊಟ್ಟೋರ್ ಶಿನ್ಗರ್ಗೆ ಆ ಶೆಂಬಾಜ ಗಯೋದಂ (ಮೈಅ. ೧೯೫, ೧೧೪-೨; 820). [?]

ಶೆಂಬ 'ಶಂಪೆ$_2$' ನೋ.

ಶೆಟವಿ 'ಸೆಟವಿ$_2$' ನೋ.

ಶೆಟ್ಟಿ$_1$ 'ಸೆಟ್ಟಿ' ನೋ.

ಶೆಟ್ಟಿಗಾದ 'ಸೆಟ್ಟಿಕಾಱಿ ನೋ.

ಶೆಡ್ಡು, ಷೆಡ್ಡು (ನಾ). ದನಕರುಗಳನ್ನು ಕಟ್ಟುವುದು, ಸಾಮಾನುಗಳನ್ನು ಶೇಖರಿಸಿ ಇಡುವುದು, ವಾಹನಗಳನ್ನು ನಿಲ್ಲಿಸುವುದು ಇತ್ಯಾದಿಗಳಿಗಾಗಿ ಕಟ್ಟಿರುವ ಕೊಠಡಿ : ಡ್ರೈವರು ಕಾರು ಸ್ಟಾರ್ಟ್‌ಮಾಡಿ ಶೆಡ್ಡಿನಿಂದ ಹೊರತಂದನು (ಗೋಪುರ. ೧೨೦). **ಷೆಡ್ಡು** : ಸಣ್ಣ ಜಂಕ್‌ಪೀಟ್ ಷೆಡ್ಡಿನಲ್ಲಿ ನಮ್ಮ ಹಿತ್ತಿಲಲ್ಲೇ ವಾಸವಾಗಿದ್ದ ಚೆಲುವ . . . ಕೆಮ್ಮಿದ (ಬಿಂಗೂಲಿ. ೧). [← ಇಂ. Shed]

ಶೆಬ್ಬ 'ಶಬ್ಬಿ' ನೋ.

ಶೆಲೆ 'ಸೆಲೆ$_4$' ನೋ.

ಶೆಲ್ಫು (ನಾ). "(ಸಾಮಾನುಗಳನ್ನಿಡಲು) ಕಲ್ಲು, ಮರ, ಲೋಹ ಮುಂತಾದುವುಗಳ ಹಲಗೆಗಳನ್ನು ಜೋಡಿಸಿ ಮಾಡಿದ ಸಾಧನ : ಅವಳು ಶೆಲ್ಫಿನ ಮೇಲಿನ ಪುಸ್ತಕಗಳನ್ನು ತಿರುವಿಹಾಕುತ್ತಿದ್ದಹಾಗೆ . . . ಅವಳ ದೃಷ್ಟಿ ಅತ್ತ ತಿರುಗಿತು (ಜಸಾವಾ. ೭೧). [← ಇಂ. Shelf]

ಶೆಲ್ಲೆಹ 'ಸೆಲ್ಲೆಹ' ನೋ.

ಶೆಶಿಗಳಬೀವ (ನಾ). ಒಬ್ಬಾತನ ಹೆಸರು : ಶೆಶಿಗಳಬೀವನುರ್ಗ್ಗವುಣ್ಮುಂಗಯ್ಯ ಕೂದಲಿಯ ನಿಜೆದು (ಎಇ VIII. ಸೊರಬ. ೨೦೨-೪; 953). [?]

ಶೇಂಗಾ, ಸೇಂಗ, ಸೇಂಗಾ (ನಾ). ಮೇಲೆ ಗಟ್ಟಿಯಾದ ಸಿಪ್ಪೆ ಇದ್ದು ಒಳಗಡೆ ಕಾಳುಗಳಿರುವ ಒಂದು ಬಗೆಯ ಕಾಯಿ; ನೆಲಗಡಲೆ ; ಕಡಲೆಕಾಯಿ : ತೆಂಗು. – ಶೇಂಗಾ, ಎಣ್ಣೆಯ ಕಾಳು ಮುಂತಾದುವುಗಳ ಬೇಸಾಯದಲ್ಲಿಯೂ . . . ಬಂಡವಾಳಗಾರಿಕೆಯು ತಲೆಹಾಕುವದು (ಮೂವಾದ. ೧೪೫). **ಸೇಂಗ** : ಎತ್ತು ಮೂಟೆ ಹೊತ್ತಂತೆ ದಿಗ್ಗಿಗಳನ್ನು ಹೊತ್ತು, ಸೇಂಗ ತಿಂದು ಸಂತೆಗಳಲ್ಲಿ ಬೊಪ್ಪುಗೆಗಳನ್ನು ಮಾರಿ ಸತ್ತವರು ವಿಭೂತಿಗಳು (ಹುಚ್ಚುಹು. ೪೩). **ಸೇಂಗಾ** : ಸ್ವಲ್ಪ ಕಪ್ಪು ಅಥವಾ ಕೆಸರಿ ನೆಲವಾದರೆ ಮೆಣಸಿನಗಿಡ, ಸೇಂಗಾ . . . ಬೆಳೆಯಬಹುದು (ಕೃಪತ್ರ. ೪೨); ಅವರ ಚಿತ್ರವೆಲ್ಲ ವ್ಯಾಪಾರದಲ್ಲಿ ರೂಪಾಯಿ ಆಣೆ ಕಾಸುಗಳಲ್ಲಿ ಬೆಲ್ಲದ ಪೆಂಟೆ, ಮೆಣಸಿನಕಾಯಿ ಸೇಂಗಾ ಧಾರಣೆಗಳಲ್ಲಿ (ಮೂಸಚಿ. ೪೧).

[← ಮರಾ. ಶೇಂಗ]

ಶೇಕ 'ಸೇಕ$_1$' ನೋ.

ಶೇಕಡ 'ಶೇಕಡಾ' ನೋ.

ಶೇಕಡಾ, ಶೇಕಡ, ಸೇಕಡಾ (ನಾ). ೧. ನೂರಕ್ಕೆ ಇಷ್ಟು; ಪ್ರತಿಶತ : ಪ್ರತಿನೂರಕ್ಕೆ, ಪ್ರತಿಶತ, ಶೇಕಡಾ (Per cent. ಪತ್ರಾ. ೬೧). ೨. ಪ್ರತಿಶತವನ್ನು ಸೂಚಿಸುವ ಚಿಹ್ನೆ; (%) : ಇಂಗ್ಲೀಷ್‌ಭಾಷೆಯ ಮೇಲ್ಬಟ್ಟೆಯಲ್ಲಿ . . . ಸಮುಚ್ಚಯಾಕ್ಷರಗಳು, ಶೇಕಡಾ, ಆವರಣ, ಅರ್ಧವಿರಾಮ . . . ಇರುತ್ತವೆ (ಮುದ್ರಣ. ೨೩). **ಶೇಕಡ** : ೧. ಶೇಕಡ ಒಂಭತ್ತಕ್ಕಿಂತ ಕಡಿಮೆ (ಗಲಿಪ್ರ. ೭೦); ೨ ಮತ್ತು ೩ ಗುಂಪಿನವರು ಶೇಕಡ ೭-೭ ರಂತೆ (ಶಿಪ್ರಪ.೩೪೭). **ಸೇಕಡಾ** : ೧. ಸಾಮಾನ್ಯವಾಗಿ ಒಬ್ಬರೇ ಮೇಷ್ಟರು ಇರುವ ಪಾಠಶಾಲೆಗಳ ಸಂಖ್ಯೆ ಹೆಚ್ಚು ; ಸೇಕಡಾ ಎಪ್ಪತ್ತರವರೆಗೆ ಎಂದು ಹೇಳಬಹುದಾಗಿತ್ತು (ರಂಗಕ. ೩೫).

ಶೇಕಡಾವಾರು = ನೂರರ ದರ; ಪ್ರತಿಶತ ಸಂಖ್ಯೆ : ಯಾವುದಾದರೂ ವಿತ್ತೀಯ ವರ್ಷದಲ್ಲಿ . . . ಗೊತ್ತುಮಾಡಬಹುದಾದಷ್ಟು ಶೇಕಡಾವಾರು ಮೊಬಲಗು (ಭಾದಾನ. ೧೫೩). [← ಹಿಂ. ಸೈಕಡೇ]

ಶೇಕದಾರ, ಶೇಕ್ದಾರ, ಷೇಕ್‌ದಾರ (ನಾ). ಭೂಕಂದಾಯವನ್ನು ವಸೂಲುಮಾಡುವ ಇಲಾಖೆಯ ಮೇಲ್ವಿಚಾರಕ, – ಅಧಿಕಾರಿ : ಆಯಾ ಗ್ರಾಮಗಳ ಶೇಕದಾರ, ಗೌಡ, ಶ್ಯಾನುಭೋಗ ವಗೈರೆ ರೈತರಿಗೆ . . . ತಾಕೀತು ಮಾಡಿ

(ಮಹಾವಂ. II, ೬೦) ; ಅಮಲ್ಪಾರರೂ, ಶೇಕದಾರರೂ ಘಾರಂನ್ನು ಶಾನುಭೋಗನಿಗೆ ಕೊಟ್ಟು ಬಿಟ್ಟರೆ ಕೃತಕೃತ್ಯರಾದವೆಂದುಕೊಳ್ಳುತ್ತಾರೆ (ಚಿತ್ರಕ. ೨೪). **ಶೇಕ್ದಾರ** : ಶೇಕ್ದಾರ ಶಾನುಭೋಗರನು ಕರೆದುಕೊಂಡು ನಾಳಿನ ಸಂಜೆಗೆದಿರಿ (ಅರ್ಜುನ. ೩೧-೪೦). **ಷೇಕ್‌ದಾರ** : ನಮ್ಮೂರಿಗೆ ಷೇಕ್‌ದಾರ್ರೇ ಕಣಪ್ಪೋ ಸರ್ಕಾರ! (ನಮ್ಮಳ್ಳಿ. ೧೧).

[← ಮರಾ. ಶೇಕದಾರ್, ಶೇಖದಾರ್]

ಶೇಕದಾರಿ (ನಾ). ಜಿಲ್ಲೆ ಅಥವಾ ಹೋಬಳಿಯ ಕಂದಾಯವನ್ನು ವಸೂಲು ಮಾಡುವ ಅಧಿಕಾರ, - ಹುದ್ದೆ : (ಕೆ). [← ಮರಾ. ಶೇಖದಾರೀ]

ಶೇಕ್ದಾರ 'ಶೇಕದಾರ' ನೋ.

ಶೇಖದಾರಿಕೆ (ನಾ). = ಶೇಕದಾರಿ. [ಶೇಕದಾರ + — ಇಕೆ]

ಶೇಖರ$_1$ (ನಾ). ಒಟ್ಟಾದುದು ; ಸಂಗ್ರಹ : ಆ ಜಿಲ್ಲೆಯಿಂದ ಸಂತ್ರಸ್ತರಿಗಾಗಿ ಸಾವಿರಾರು ರೂಪಾಯಿಗಳು ಶೇಖರವಾಯಿತು (ರೂಢಿ). 'ಶೇಖರಿಸು' ಪರಾ.

[ದೇ. ॥ ತಮಿ. ಚೇಕರಮ್; ಮಲ. ಶೇಖರಮ್; ತೆಲು. ಸೇಕರಮು]

ಶೇಖರ$_2$ (ನಾ). ೧. ತಲೆಯಲ್ಲಿ ಧರಿಸುವ ಹೂಮಾಲೆ, ಒಡವೆ ಮುಂತಾದವು: "ಆಪೀಡಃ, ಶೇಖರಃ — ಈ ೨ ಬಾಸಿಗಂ" (ಹಲಾಯು. ೧೧-೪೦೦). ೨. ಕಿರೀಟ; ಮಕುಟ. ೩. (ಬೆಟ್ಟದ) ತುದಿ; ಶಿಖರ. ೪. ಮುಖ್ಯನಾದವನು ; ಮುಖಂಡ : ಬಸವಯ್ಯ ಅಭಯಾಘನದಯಾನಂಬುಧಿಯ ಭಯಮಭಯವಮಾತ್ಮಶೇಖರನೆ ಎಂದುವುಂ ನಿಮ್ಮಡಿಯ ಸರಿಯೇ ತಂದೆ (ಬಸವು. ೫೯-೫೦). ೫. ತುದಿಯನ್ನು ಮುಟ್ಟಿದವನು : ಕೋಕನದಬಾಂಧವನುದಯಾಚಳಶಿಖರಶೇಖರನಾದಂ (ಪಂಪಭಾ. ೩-೧೧ ಪ). [ಸಂ.]

ಶೇಖರಣೆ (ನಾ). ಕೂಡಿಸುವಿಕೆ ; ಸಂಗ್ರಹಿಸುವಿಕೆ : ಕೆಲವು ದಿನಗಳ ನಂತರ ನಿರಾಶ್ರಿತರಿಗಾಗಿ ಹಣ ಶೇಖರಣೆ ಮಾಡಬೇಕೆಂದು ಎಲ್ಲ ಶಿಬಿರದವರಿಗೂ ಸೂಚನೆ ಬಂದಿತು (ಗೂಪುರ. ೮೯); ಹಣದ ಗುಣ ಅದರ ಸದ್ವಿನಿಯೋಗದಲ್ಲಿದೆ; ಆದರೆ ಅದರ ಶೇಖರಣೆಯಲ್ಲಿಲ್ಲ (ರಂಗರೂ. ೧೫೮). [ಶೇಖರಿಸು + — ಅಣ್ಕೆ]

ಶೇಖರಿಸು (ಕ್ರಿ). ಕೂಡಿಡು; ಸಂಗ್ರಹಿಸು : ಅನೇಕವರ್ಷಗಳು ವೆನಿಸಿಯನರು ಖಾಸನ ಆಸ್ಥಾನದಲ್ಲಿದ್ದು ಬೇಕಾದಷ್ಟು ಒಡವೆಗಳನ್ನೂ ಚಿನ್ನವನ್ನೂ ಶೇಖರಿಸಿದರು (ಪ್ರವಾಗ. II, ೭) ; ಮಳೆಗಾಲದಲ್ಲಿ ಹೆಚ್ಚಾಗಿ ಬೀಳುವ ಮಳೆಯನ್ನು ಜಲಾಶಯಗಳಲ್ಲಿ ತಡೆಹಿಡಿದು, ಶೇಖರಿಸಿ ಬೇಸಿಗೆಯಲ್ಲಿ ಬಳಸುತ್ತೇವೆ (ನನಡು. ೪).

[ಶೇಖರ$_1$ + — ಇಸ್ಯು$_3$. / ತೆಲು. ಸೇಕರಿಂಚು]

ಶೇತಕಿ (ನಾ). (ಉಕ) ವ್ಯವಸಾಯ ; ಕೃಷಿ ; ಒಕ್ಕಲುತನ.

ಶೇತಕೀಶಿಕ್ಷಣಶಾಲೆ = ಕೃಷಿವಿದ್ಯಾಲಯ : ಪ್ರತಿಹಳ್ಳಿಯಲ್ಲಿಯೂ ಶೇತಕೀಶಿಕ್ಷಣ ಶಾಲೆಯನ್ನು ತೆರೆಯುವ ಅಗತ್ಯವಿದೆ (ರೂಢಿ). [← ಮರಾ. ಶೇತಕೀ]

ಶೇನಭಾವಿಕೆ 'ಸೇನಬೋಯಿಕೆ' ನೋ.

ಶೇನಭೋಗ 'ಸೇನಬೋವ' ನೋ.

ಶೇಫ (ನಾ). ೧. ಪುರುಷನ ಜನನೇಂದ್ರಿಯ ; ಶಿಶ್ನ : "ಶಿಶ್ನಃ, ಶೇಫಃ, ಮೇಢ್ರಃ, ಲಿಂಗಂ, ಮೇಹನಂ, ಶೇಫನ್ - ಈ ೬ ಶೇಫಂ" (ಹಲಾಯು. ೮೫-೩೬೦). ೨. ತರಡು. ೩. ಬಾಲ. [ಸಂ.]

ಶೇಫಸ್ಸು (ನಾ). = ಶೇಫ ೧ : "ಶಿಶ್ನಃ, ಶೇಫಃ, ಮೇಢ್ರಃ, ಲಿಂಗಂ, ಮೇಹನಂ, ಶೇಫಸ್ — ಈ ೬ ಶೇಫಂ" (ಹಲಾಯು. ೮೫-೩೬೦); ವರತಪಸ್ವಿಂ ಸ್ಥೂಲಮಷ್ಟ ಶೇಫಸ್ಸು ಸತ್ತಿರೆ ಮೃತ್ಯುಮಾನವಂದೆಮ್ಮುಡಿಗೆ ಪಾಯ್ದು ತಿಂಬರು ಕಣಾ (ಪಿತೃವ. ೪-೭-೫೦).

[ಸಂ. ಶೇಫಸ್]

ಶೇಫಾಲಿಕೆ, ಶೇಫಾಳಿಕೆ (ನಾ). ಒಂದು ಬಗೆಯ ಗಿಡ ; ಕರಿಯ ಲಕ್ಕಿಗಿಡ : ಬಿದ್ದಿರುವ ಹೂಗಳನೆ ಆರಿಸಿಕೊ ಗೌಡಸೂಸ ಶೇಫಾಲಿಕೆಯ ನೀನಳ್ಳಾಡಿಸದೆಯೆ (ಧೃನ್ಯಾಲೋ. ೧೧೩). **ಶೇಫಾಳಿಕೆ** : ಕಂಡೊಗದೊಸಗೆ ಮನಕ್ಕಧಿಕಮಾಗೆ ಶೇಫಾಳಿಕೆ ಸಂತಸದಿಂದಿಕ್ಕಿದ ಬಾಷ್ಪಪ್ರಸರಮನಿಳಿಸಿದುವು (ಕಾವ್ಯಾವ. ೮೭೭). [ಸಂ. ಶೇಫಾಲಿಕಾ]

ಶೇಫಾಳಿಕೆ 'ಶೇಫಾಲಿಕೆ' ನೋ.

ಶೇಮುಷಿ (ನಾ). ೧. ಬುದ್ಧಿ ; ಜ್ಞಾನ : ಸಭಾಮಂಡಿತಾಂತದೊಳಿಂದ್ರವಂತಿ ಏಕಾಶಾತಿ[ಶ]ಯಿ ಶೇಮುಷಿಕಭೈವೊತ್ತರ ಮಹತ್ತರಾಮರಮುಮ[ಮ]ಗಣ್ಯ ಲಾವಣ್ಯ ರಸ . . . ಮಾನನೀಯ ಮಹಾದೇವೀಜನಮುಮ[ಂ] (ವರ್ಧಮಾ. ೬-೪೦ ಪ). ೨. ಉದ್ದೇಶ. [ಸಂ. ಶೇಮುಷೀ]

ಶೇರವಾನಿ, ಷೆರ್ವಾನಿ (ನಾ). ಒಂದು ಬಗೆಯ ಸಡಿಲವಾದ ನಿಲುವಂಗಿ : ಕಡ್ಡಿಪೊಟ್ಟಣ, ಸಿಗರೇಟು ಮತ್ತು ಇಸ್ತೀಟುಗಳ ಕೇಸುಗಳು, ಬೂದಿಕರಂಡಗಳು, ಶೇರವಾನಿ, ಶರ್ಟುಕೋಟುಗಳ ಗುಂಡಿಗಳು (ಕವಿಕೋ. I, ೮೨೦). **ಷೆರ್ವಾನಿ** : ಕೆಲವರು ಯೂರೋಪಿಯನ್ ಉಡುಪು . . ಇನ್ನು ಕೆಲವರು ಉತ್ತರ ಹಿಂದೂಸ್ಥಾನದ ಷೆರ್ವಾನಿ ಮತ್ತು ಸುರ್ವಾಲ್ (ವಿಲ್ಸನ್. ೪೪). [← ಪಾರ. ಮರಾ. ಶೇರವಾನ್, ಶೇರವಾನೀ; ಹಿಂ. ಶೇರವಾನೀ]

ಶೇರು 'ಸೀಜು$_3$' ನೋ.

ಶೇಲು (ನಾ). ೧. ಒಂದು ಬಗೆಯ ಮರ; ಚಳ್ಳೆಮರ : "ಶೇಲುಃ . . . ಬಹುವಾರಕಃ - ಚಳ್ಳೆಮರ, ಬೊಂಕೇಕಾಯಿಗಿಡ" (ಸಿದ್ಧಾಂತಿ. ೧೧೯). ೨. ಆಂಬಟೆಯ ಗಿಡ : "ಶೇಲುಃ, ಶ್ಲೇಷ್ಮಾತಕಃ - ಈ ೨ ಅಂಬಟೆಮರದ ಪೆಸರ್" (ಹಲಾಯು. ೩೩-೪೪).

[ಸಂ.]

ಶೇಲೆ 'ಸೇಲೆ' ನೋ.

ಶೇವ (ನಾ). ೧. ಹಾವು; ಸರ್ಪ. ೨. ಎತ್ತರ; ಔನ್ನತ್ಯ. ೩. ಸಂತೋಷ; ಆನಂದ. ೪. ಸಂಪತ್ತು ; ಐಶ್ವರ್ಯ. ೫. ಅಗ್ನಿ. ೬. ಶಿಶ್ನ. ೭. ಸೋಮರಸ.

[ಸಂ.]

ಶೇವಂತಿ 'ಸೇವಂತಿ' ನೋ.

ಶೇವಣಿಗೆ (ನಾ). ಒಂದು ಬಗೆಯ ಗಿಡ : ನೆಲ್ಲಿ ಶೇವಣಿಗೆ . . . ಚಂದನಂಬೆತ್ತ ಪೇರ್ಮಳಿಗಳೊಳು ವಲ್ಲರಿಗಳುಂ ಪರ್ವಿ (ಪ್ರಭುಪ್ರ. ೩-೧೩೦). [?]

ಶೇವಧಿ (ನಾ). ೧. ನಿಧಿ; ಸಂಪತ್ತು. ೨. ಕುಬೇರನ ನವನಿಧಿಗಳಲ್ಲಿ ಒಂದು.

[ಸಂ.]

ಶೇವಲ (ನಾ). ಒಂದು ಬಗೆಯ ಗಿಡ : "ಹಸುರುರಿಬ್ಬನ್ ಗಿಡ, ಕುದುರೆಬಾಲದ ಗಿಡ, ಶೈವಾಲ, ಶೇವಲ, ಶೈವಲಿ" (ಸಸ್ಯನಿ. ೧೫೩). [ಸಂ.]

ಶೇಷ (ಗು). ೧. ಉಳಿದ ; ಮಿಕ್ಕ. (ನಾ). ೨. ಉಳಿಕೆ ; ಮಿಕ್ಕುದು; ಶಿಲ್ಕು : ಶೇಷಗ್ರಹಣಂ ಉಕ್ತಾವಶಿಷ್ಟ ಸಂಗ್ರಹಾರ್ಹಂ (ತತ್ತ್ವಪ್ರ. ೧೮೨): ಶೇಷಕ್ಕೆ - ಬಳ್ಳದಱ; ಅದಱ ಮಱ (ಶಮದ. ೧೫೨ ಪ್ರಯೋ). ೩. ತಿಂದು ಉಳಿದುದು ; ಎಂಜಲು ; ಉಚ್ಛಿಷ್ಟ. ೪. ದೇವರು, ಗುರುಹಿರಿಯರಿಗೆ ಅರ್ಪಿಸಿ ಪಡೆದ ಆಹಾರ ಪದಾರ್ಥ ಮುಂತಾದುವು ; ಪ್ರಸಾದ : ಶಿವಪ್ರಸಾದವನಿತ್ತು ಕುವರ ನಾಳಿನ ದಿವಸ ನಿನಗೆ ಪುಟ್ಟುವ ನಿನ್ನ ಸತಿಸಹಿತ ಈ ಶೇಷವ ತವಕದಿಂ ಸೇವಿಸೆನಲು (ಪ್ರೌಢರಾ. ೮-೭೪); ಸಕಲ ಭೋಗಾದಿ ಭೋಗಂಗಳಂ ಶಂಭುಶೇಷವನಲ್ಲದನುಭವಿಸನಾ ಭಕ್ತ (ಗುರುಚಾ. ೧೧-೧೮). ೫. (ಪುರಾಣದಲ್ಲಿ ವರ್ಣಿತವಾಗಿರುವ) ಸಾವಿರ ಹೆಡೆಗಳುಳ್ಳ ಸರ್ಪ; ಆದಿಶೇಷ : ಶೇಷಂ ಫಣಂ ಬಳ್ಳಿ ಸುರ್ಕಿದಪಂ ಸೀರೆಯ ಸಿಂಬಿಪೋಲ್ ಖಳನ್ಯಪಾಲಾಕ್ಷೌಹಿಣೀಭಾರದಿಂ (ಜಗವಿ. ೧-೩೦). ೬. ಒಂದು ಬಗೆಯ ಹಾವು : "ತನುವಿನಲಿ ಕಪ್ಪಿರಲು ಕಾಳಿಂಗನಕ್ಕು ಕಾಂಚನವರ್ಣಮಾಗೆ ಶೇಷನೆನಿಕ್ಕು" (ಪಂಗರಾ. ೧೧೯-೪); ಸಿರಸ್ಸಿನಲ್ಲಿ ಶಂಖ ಉಳ್ಳದು ಶೇಷನೆನಿಸಿಕೊಂಬುದು (ವಿಷಚಿ. ೨-೫). ೭. ಬಲರಾಮ. ೮. ಲಕ್ಷ್ಮಣ. ೯. ದಿಗ್ಗಜಗಳಲ್ಲಿ ಒಂದು. ೧೦. [ಗಣಿತ] ಭಾಗಾಕಾರಲೆಕ್ಕದಲ್ಲಿ ಭಾಗವಾಗದೆ ಕಡೆಯಲ್ಲಿ ಉಳಿಯುವ ಸಂಖ್ಯೆ : ಮೇಲಿನ ಲೆಕ್ಕದಲ್ಲಿ, ಯಾವುದೋ ಒಂದು ಸಂಖ್ಯೆಯನ್ನು ಬೇರೆ ಬೇರೆ ಸಂಖ್ಯೆಗಳಿಂದ ಭಾಗಿಸಿದರೆ, ಬೇರೆ ಬೇರೆ ಶೇಷಗಳು ನಿಲ್ಲುತ್ತವೆ (ಗಣಿತ. ೩೦೨).

[ಸಂ.]

ಶೇಷಧರ (ನಾ). ಹಾವನ್ನು ಆಭರಣವಾಗಿ ಧರಿಸಿರುವವನು ; ಶಿವ : ಶೇಷಧರನಂತಿರದ ತಾಪಸವೇಷದಿಂದೆಯ್ತಂದು ಸೂನೃತಭಾಷಣಂ ಸಿರಿಯಾಳಸೆಟ್ಟಿಯ ಪುತ್ರನಂ ಬೇಡೆ (ಬಸವು. ೨೫-೧೪). [ಸಂ.]

ಶೇಷಧಾಮ (ನಾ). ಆದಿಶೇಷನನ್ನು ನೆಲೆಯನ್ನಾಗಿ ಮಾಡಿಕೊಂಡವನು; ವಿಷ್ಣು : ಸದ್ಭಾವಾವಹಾಹಿತಗ್ರಾಮಾಂತಕಾಶ್ಮಲಜಾಮಾತ ಜಯಶೇಷಧಾಮಾ ಕಲಿತವಿಗ್ರಹ (ಉದ್ಧವ. ೨-೬೯). [ಸಂ. ಶೇಷಧಾಮನ್]

ಶೇಷಪ್ರಸಾದ (ನಾ). [ವೀಶೈ] ದೇವರು, ಗುರುಹಿರಿಯರಿಗೆ ಅರ್ಪಿಸಿ ಪಡೆದ ನೈವೇದ್ಯ : ನಿಮ್ಮ ಒಕ್ಕ ಶೇಷಪ್ರಸಾದವನಿಕ್ಕಿ ಎನ್ನ ಪಾವನಮಾಡಿ ಉಳಿಹಿದೆಯಯ್ಯ ಲಿಂಗವೆ (ಕರ್ನಾಕ. ೧೩೧). [ಸಂ.]

ಶೇಷಭೂಷಣ (ನಾ). = ಶೇಷಧರ : ಭಾಷಗೆಟ್ಟರ್ದವನ ಸಭೆಯಲಿ ದೋಷವಲ್ಲಾ ಕುಳಿತಿದ್ದಡೆ ಶೇಷಭೂಷಣಭಕ್ತರಿದ್ದಹರವರೆ ಸಾಕಿನ್ನು ದೂಷಿಸಲು ನಾವಱಿಯೆವು (ಬಸಪು. ೩೭-೧೨). [ಸಂ.]

ಶೇಷಮೂರ್ತಿ (ನಾ). ಶಾಶ್ವತವಾಗಿರುವವನು; ಆದಿಶೇಷ : ಜಗಂ ವಿಲಯಮನೆಯ್ದುವಾ ಪದದೊಳಂ ಲಯಮೆಯ್ದದ ಶೇಷಮೂರ್ತಿ ನೀಂ (ಜಗವಿ. ೪-೫೫). [ಸಂ.]

ಶೇಷಶಯನ (ನಾ). ಆದಿಶೇಷನನ್ನು ಹಾಸಿಗೆಯಾಗಿ ಉಳ್ಳವನು : ವಾಸಕ್ಕೆ ಯೋಗ್ಯವಲ್ಲ ಗೋಕುಲವಿನ್ನು . . . ಸೋಳಸಾಸಿರ ಹೆಂಗಳ ಶೇಷಶಯನ ಕೃಷ್ಣ ಮೋಸಮಾಡಿದ ಮೇಲೆ (ಪುರಂದ. ಧಾ. ೪-೧೦೧ ಅನುಪಲ್ಲವಿ). [ಸಂ.]

ಶೇಷಶಾಯಿ (ನಾ). = ಶೇಷಶಯನ : ಕೊಡಬಹುದೇ ಮಗಳ . . . ಶೇಷಶಾಯಿ ಯಾದಂಥ ಪುರಂದರವಿಠಲನೆಂದಱಿಯದೆ (ಪುರಂದ. ಧಾ. ೩-೯೧-೩).

[ಸಂ. ಶೇಷಶಾಯಿನ್]

ಶೇಷಾಕ್ಷತ (ನಾ). ಆಶೀರ್ವಾದಪೂರ್ವಕವಾಗಿ ತಲೆಯ ಮೇಲೆ ಹಾಕುವ ಅಕ್ಷತೆ; ಸೇಸೆ : ನಿರ್ವರ್ತಿತಾಶೇಷದಿಗ್ವಿಜಯಸಾಹಸಾಶ್ಚರ್ಯಾವಲೋಕನನಿರತಪುರ ಜನಾಶೀರ್ವಾದ ಶೇಷಾಕ್ಷತಂಗಳನಾಂತು (ಆದಿಪು. ೧೪-೧೪೮ ವ) ; ಬುದ್ಧಿವೇಳ್ದು ಶೇಷಾಕ್ಷತಮನಿಕ್ಕಿ ಪರಸಿ (ರಾಜಶೇ. ೯-೩೮ ವ). [ಸಂ.]

ಶೇಷಾಕ್ಷತೆ (ನಾ). = ಶೇಷಾಕ್ಷತ : ಮುದದಿಂದಿದಿರ್ವಂದುನ್ನತ ನೃಪಾಂಗನಾವೃತ ಮನ್ನಿಸಿ ತಳಿದಳ್ ಸುತಂಗೆ ಶೇಷಾಕ್ಷತೆಯಂ (ಪುಷ್ಪಪು. ೪-೭೫). [ಸಂ ಶೇಷಾಕ್ಷತ]

ಶೇಷಾದ್ರಿ (ನಾ). ತಿರುಪತಿಯ ಬೆಟ್ಟಗಳಲ್ಲಿ ಒಂದು : 'ಶೇಷಾದ್ರಿವಾಸ' ಪರಾ.

[ಸಂ.]

ಶೇಷಾದ್ರಿವಾಸ (ನಾ). ತಿರುಪತಿಯ ಬೆಟ್ಟದಲ್ಲಿ ನೆಲಸಿರುವವನು; ಶ್ರೀನಿವಾಸ: ವಾಸುಕಿಶಯನನು ತಂದೆ ಪುರಂದರವಿಠಲ ಶೇಷಾದ್ರಿವಾಸನಯ್ಯ (ಪುರಂದ. ೪-೧೭೨-೩). [ಸಂ.]

ಶೇಷಾನ್ನ (ನಾ). ಊಟ ಮಾಡಿ ಮಿಕ್ಕ ಅನ್ನ, — ಆಹಾರ : ಮತ್ತೆ ಶೇಷಾನ್ನದಲಿ ತೋಱುತ ತುತ್ತುಗಳ ತೂಗುತ್ತ ಮಾರುತಿ ಮತ್ತಿಕೊಂಡನು ಬಾಯೊಳವನನು ಬೆರಳ ಲೇಡಿಸುತ (ಕುವ್ಯಾಆ. ೧೦-೩೨); ಏಕಾದಶೀವ್ರತಮಲಂಘ್ಯಶ್ರಾದ್ಧಮಿನಿತೊಂದು ದಿನಮೆ ಸಂಗತಮಾದೊಡೆಂತು ಕರ್ತವ್ಯಮೆನೆ ಪೈತೃಕದ ಶೇಷಾನ್ನಮಾಘ್ರಾಣಿಸೆ ಕೃತಭೋಜ್ಯಮಾದಪುದು (ಚೈಮಿಭಾ. ೧೧-೨೦). [ಸಂ.]

ಶೇಷಿಸು (ಕ್ರಿ). ಉಳಿಯುವಂತೆ ಮಾಡು; ಉಳಿಸು : ಮೊದಲಿಂದ್ರಕಂ ಮನುಷ್ಯ ಕ್ಷೇತ್ರಮಾತ್ರಂ ಕಡೆಯಿಂದ್ರಕಂ ಜಂಬೂದ್ವೀಪಪ್ರಮಾಣಂ ಎರಡುಮಂ ಶೇಷಿಸಿ ರೂಪೋನೇಕೇಂದ್ರಕ ಸಂಖ್ಯೆಯಿಂ ಭಾಗಂಗೊಂಡೊಡೆ ಬಂದ ಲಬ್ಧಂ ಹಾನಿವೃದ್ಧಿಯಕ್ಕುಂ (ತತ್ತ್ವಪ್ರ. ೧೨೦). [ಶೇಷ + — ಇಸ್ಕು]

ಶೇಷೆ (ನಾ). ೧. ದೇವತಾರಾಧನೆ ಅಥವಾ ಶುಭಕಾರ್ಯಗಳಲ್ಲಿ ಪೂಜಾದಿಗಳ ನಂತರ ವಿತರಿಸುವ ಹೂವು, ಅಕ್ಷತೆ ಮುಂತಾದ ಪ್ರಸಾದ : ಜಿನಸಿದ್ಧ ಶೇಷಯನಪ್ಪಾಜಿ ಕೈಕೊಳ್ಳುದೆನುತ ಪೊಂದಟ್ಟೆಯ ನೀಡೆ (ನಾಗಕು. ೩-೧೮). ೨. ಆಶೀರ್ವಾದ ಪೂರ್ವಕವಾಗಿ ತಲೆಯ ಮೇಲೆ ಹಾಕುವ ಅಕ್ಷತೆ ; ಸೇಸೆ : ಮುದ್ದುಮಗನಂ ತೋಳ್ಗಳಿಂ ಬಾಚಿದಳ್ ತಬ್ಬಿ ಕಣ್ಣೀರ ಧಾರೆಯನೆರೆದು ತಳಿದಳಾ ತಾಯಿ ಮಂಗಳಾಶೀರ್ವಾದಶೇಷೆಯಂ (ಶ್ರೀರಾಮಾ. ೮೪-೧೬೫). [ಸಂ. ಶೇಷಾ]

ಶೈಕ್ಷ (ನಾ). ೧. ವೇದದ 'ಶಿಕ್ಷಾ' ಎಂಬ ಅಂಗವನ್ನು ಅಧ್ಯಯನ ಮಾಡುವ ವಿದ್ಯಾರ್ಥಿ. ೨. ಅಧ್ಯಯನ ಮಾಡುವವನು; ಕಲಿಯುವ ಸ್ವಭಾವವುಳ್ಳವನು : ಶೈಕ್ಷ — ಶ್ರುತಜ್ಞಾನಶಿಕ್ಷಾಶೀಲರುಂ ಅಖಂಡಿತವ್ರತೋಪೇತರುಂ ಅಪ್ಪ ಶಿಕ್ಷಕರುಂ (ತತ್ತ್ವಪ್ರ. ೩೪೪); ಇನ್ನು ಶೈಕ್ಷನಹೆನನಿತರೊಳೆ ಶಾಸ್ತನಿದೂ ಪರಿ ನಿರ್ವೃತಿಸಲಿರುವನೆನಿತೆನ್ನೊಳಾತನನುಕಂಪೆ! (ವೃಶಾಖಿ. ೭೬-೩೪೧). [ಸಂ.]

ಶೈಕ್ಷಣಿಕ (ಗು). ಶಿಕ್ಷಣಕ್ಕೆ ಸಂಬಂಧಿಸಿದ : ಸಾಮಾಜಿಕ-ಧಾರ್ಮಿಕ ಸಮಾನತೆ ಸ್ತ್ರೀ ಪುರುಷರಲ್ಲಿದ್ದಾಗ, ಬಾಲಕನಿಗೆ ದೊರೆವ ಶೈಕ್ಷಣಿಕ ಅವಕಾಶವು ಬಾಲಕಿಗೂ ದೊರೆಯುತ್ತಿತ್ತು (ಕರ್ನಾಕ. ೪). [ಸಂ.]

ಶೈಕ್ಷ್ಯ (ನಾ). ನೈಪುಣ್ಯ ; ಪ್ರಾವೀಣ್ಯ : ಗುರುಶೈಕ್ಷ್ಯಗ್ಲಾನಸಂಘಪ್ರವಣಗಣತಪೋ ನಿಷ್ಠಿತಾನೀತ ಸಾಧೂತ್ಕರದೊಳ್ (ಸುಕುಮಾ. ೪-೧೭). [ಸಂ.]

ಶೈತ್ಯ (ನಾ). ತಂಪು ; ಶೀತಲತೆ : "ಕುಳಿರೆನೆ ಶೈತ್ಯಂ" (ರನ್ನಕಂ. ೧); ಚಂದ್ರನ ಶೈತ್ಯದಲು ಬೆಳೆದ ಕಾಯಕ್ಕೆ ಬೆಳದಿಂಗಳ ಬಯಸುವ ಹಂಗೇಕಯ್ಯಾ (ಬಸವ. ೪೪೨) ಉರಿ ಶೈತ್ಯವಾದಂತೆ ವಿಷವಮೃತವಾದಂತೆ ತರಣಿ ತಂಪಾದಂತೆ (ಹಚಕಾ. ೩-೫೩). [ಸಂ.]

ಶೈತ್ಯಕಾರಿ (ನಾ). ಶೀತವನ್ನುಂಟುಮಾಡುವುದು : ಶೈತ್ಯಕಾರಿಯು ಪರಮಾಣು ಮಾತೃಕೆಯಲ್ಲಿ ಉತ್ಪತ್ತಿಯಾದ ಉಷ್ಣವನ್ನು ಹೀರಿ ಆದನ್ನು ತಣ್ಣಗಿಟ್ಟಿರುತ್ತದೆ (ಶಿಲ್ಪನಾ. ೨೭೪). [ಸಂ. ಶೈತ್ಯಕಾರಿನ್]

ಶೈತ್ಯಚುಂಬನ (ನಾ). [ಕಾಮಶಾ] ಒಂದು ಬಗೆಯ ಚುಂಬನ : ಸ್ತ್ರೀಯು ಗಂಡನು ಮಲಗಿದ ಹಾಗೆ ತಾಂ ನಿದ್ರಗ್ಯೆಯದೆಯುಂ ಕೃತಕನಿದ್ರಯಂ ಮಾಡದೆಯುಂ ಸ್ತ್ರೀ ಚುಂಬಿಸುವುದು ಶೈತ್ಯಚುಂಬನವೆಂಬುದು (ಕಾಮಶಾ. ೨೨೬). [ಸಂ.]

ಶೈತ್ಯಪೂರ (ನಾ). ತಂಪಿನಿಂದ ತುಂಬಿದುದು : ಕೌರವಜನಪ ಬಂದನು ತತ್ಸರೋವರಕನಿಲನಿದಿರಾದನು ಸುಗಂಧದ ಶೈತ್ಯಪೂರದಲಿ (ಕುವ್ಯಾಗ. ೩-೩೭). [ಸಂ.]

ಶೈತ್ಯಭಾರ (ನಾ). ತಂಪಿನಿಂದ ಭಾರವಾದುದು ; ಅತ್ಯಂತ ತಂಪಾದುದು : ಸಾರತರಶೈತ್ಯಭಾರಂ ಸ್ವೈರಚರಂ ಸುಟಿವುದಲ್ಲಿ ಚಾರುಸಮೀರಂ (ಜಗವಿ. ೨-೨೫). [ಸಂ.]

ಶೈತ್ಯವಕ್ಕೆ (ನಾ). ತಣ್ಣನೆಯ ಹಾಸುಗೆ : ತಕ್ಕೆಗೊಂಡನ್ನ ಪೀಡಿಸಬೇಡ ಕಡುಶೈತ್ಯ ವಕ್ಕೆಯೊಳಿರಿಸು (ಮೂಹತ. ೨೭-೫೯). [ಶೈತ್ಯ + ಪಕ್ಕೆ (< ಪಟ್ಕೆ)]

ಶೈತ್ಯಸಾಲೆ (ನಾ). ತಂಪಾಗಿರುವ ಮನೆ; ಕುಳಿರ್ವನೆ : ದೇಶದೇಶದ ಬಂಧುನೃಪ ಜನರು ಬರಲವರ್ಗ . . . ಉಪವನಶೈತ್ಯಸಾಲೆಗಳಯೆಡೆ ಬಿಡಾರಮನು ತೋರಿ (ನವಮೋ. ೧೩-೩೪). [ಶೈತ್ಯ + ಸಾಲ್ಕೆ]

ಶೈತ್ಯಾಲಯ (ನಾ). = ಶೈತ್ಯಸಾಲೆ : "ಶೈತ್ಯಾಲಯಂ ಕುಳಿರ್ವನೆಯನಿಕ್ಕು" (ಕಬ್ಬಿಕ್ಕ. ೨೨). [ಸಂ.]

ಶೈತ್ಯೋಪಚಾರ (ನಾ). ಮೂರ್ಛೆ, ಜ್ವರ ಮೊದಲಾದ ಸಂದರ್ಭಗಳಲ್ಲಿ ನೀರು ಚಿಮುಕಿಸಿ, ಗಾಳಿ ಬೀಸುವುದೇ ಮೊದಲಾದ ತಂಪುಂಟುಮಾಡುವ ಉಪಚಾರ ; ಶೀತಲಕ್ರಿಯೆ : ಕುಂತಿಯು . . . ಮೂರ್ಛೆ ಹೋದಳು; ವಿದುರನು ಶೈತ್ಯೋಪಚಾರದಿಂದ ಅವಳನ್ನು ಎಚ್ಚರಗೊಳಿಸಿದನು (ಪಚಭಾ. ೨೫); ರಾಜಮಾತೆಯವರ ಧ್ವನಿ ನಿಂತಿತು . . . ಚೇಟಿಯರು ಶೈತ್ಯೋಪಚಾರ ನಡೆಸಿದರು (ಶಾಂತಲಾ. ೧೦೬).

[ಸಂ.]

ಶೈಥಿಲ್ಯ (ನಾ). ೧. ಅಳ್ಳಕ ; ಸಡಿಲ. ೨. ದೌರ್ಬಲ್ಯ ; ದುರ್ಬಲತೆ : ನಾವು ಅರ್ಥವನ್ನು ಭಿಕ್ಷೆಯಿಂದ ಪಡೆಯಲಾರೆವು . . . ಆದ್ದರಿಂದ ಈ ಶೈಥಿಲ್ಯವನ್ನು ಬಿಟ್ಟು ಕ್ಷಾತ್ರವನ್ನು ಹಿಡಿ (ಪಚಭಾ. ೧೨೧). ೩. ಆಲಸ್ಯ. ೪. ಉದ್ದೇಶರಾಹಿತ್ಯ. ೫. ಔದಾಸೀನ್ಯ; ಅಲಕ್ಷ. ೬. [ವ್ಯಾಕ] ಶಿಥಿಲವಾದ ಅಕ್ಷರದಿಂದ ಕೂಡಿದುದು : ಕೆಲವು ಶಬ್ದಗಳಲ್ಲಿ ಶೈಥಿಲ್ಯವು ಸಹಜವಾಗಿರುತ್ತದೆ (ಕೈಪಿಡಿ. ೧೩). [ಸಂ.]

ಶೈಲ, ಶೈಳ (ಗು). ೧. ಶಿಲೆಗೆ ಸಂಬಂಧಪಟ್ಟ. ೨. ಕಲ್ಲಿನಿಂದ ಮಾಡಿದ ; ಶಿಲೆಯಿಂದ ನಿರ್ಮಿತವಾದ. (ನಾ). ೩. ದೊಡ್ಡಗಾತ್ರದ ಕಲ್ಲು; ಬಂಡೆ. ೪. ಕಲ್ಲುಗಳಿಂದಾದುದು; ಬೆಟ್ಟ; ಪರ್ವತ : ಕಟವಪ್ರಶೈಲಮಡಱ್ಱೇನಮ್ಮಾ . . . ಪೆರ್ಗ್ಗೂರವಂ ಸಮಾಧಿ ನೆಱೆದೊನ್ (ಎಕ. II(R). ೨೫-೩; 7ನೆಯ ಶತ); ಅಮರಾಪಗೆ . . . ಗಗನದಿನಂಧಕದ್ವಿಷಜಟಾಟವಿಯೊಳ್ ಬಟಿಕಾದ ಶೈಲದೊಳ್ ಸೊಗಯಿಸೆ ಪಾಯ್ದುದಿಂತಿದುವೆ ಬಂಧುರಕೂಟಕುಳಂ ಹಿಮಾಚಳಂ (ಪಂಪಭಾ. ೪ ೧೩); ಸೀಳಬಹುದೇ ಸೀಸದುಳಿಯಲಿ ಶೈಲವನು (ಕುವ್ಯಾದ್ರೂ. ೧-೨೯). ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ಸಪ್ತ . . . ಶೈಲ, ಅಚಲ, ನಗ, ಸಿತಾಂಶು?, ಹಯದ್ವೀಪ, ಅಶ್ವ—ಇಂತನಿತುಂ ೭ಕ್ಕೆ ಪೆಸರು (ವ್ಯವಹಾ. ೧೦-೧೧ ವ). ೬. [ವೀಶೈ] ಜಗದ್ಗುರುವಿನ ಪಟ್ಟಾಧಿಕಾರವನ್ನು ಸ್ವೀಕರಿಸುವಾಗ ಧರಿಸುವ ರಾಜಮರ್ಯಾದೆಯ ಮೂರು ಬಗೆಯ ಲಾಂಛನಗಳಲ್ಲಿ ಒಂದು ; ಶಿಖಾಶೈಲ : "ಇವೆರಡನ್ನೂ

ಶೂನ್ಯಸಿಂಹಾಸನದ ಜಗದ್ಗುರುಪಟ್ಟವನ್ನು ಕಟ್ಟುವಾಗ ಆ ಪಟ್ಟಾಧಿಕಾರಿಯ ಕೊರಳಿಗೆ ಹಾಕುವಂಥವು'' (ಮಹಾವಿ. ಕೋಶ) : ಸ್ವರ್ಣ ಸಿಂಹಾಸನಂ ವರಶಿಖಾಶೈಲಂಗಳಂ ಅವನ ವಶಕೀ ತ್ರಿವಿಧಮಂ ಕೊಟ್ಟು (ಮಹಾವಿ. ೧೩-೩೮); ಲಕ್ಷಿತ ಶಿಖಾಶೈಲ ಸ್ವರ್ಣಸಿಂಹಾಸನಗಳ ಕ್ಷೇಮದಿಂ ನಿನ್ನ ಪೂರ್ವಜ ವಜೀರನಾದ ಕ್ಷುದ್ರನಾದ ಮಲ್ಲೂಖಾನನೆಂಬನ ವಶಕ್ಕಿತ್ತು ಪೋದಂ (ಮಹಾವಿ. ೧೭-೭೪); ಪಂಚಮುದ್ರಿಕೆಗಳಂ ಕರ ಬೆರಳುಗಳ್ಗೆ ಸೇರಿಸಿ ಬಲಾತ್ಕಾರದಿಂದಾ ಶಿಖಾಶೈಲಂಗಳಂ ಕೊರಳಿಂಗೆ ಧರಿಸುತೆ (ಮಹಾವಿ. ೨೫-೨೮). ಶೈಳ : ೪. ಶೈಳಮನೆತ್ತುವುದುಂ ಗೋಪಾಳಂ ಫಣಮಣಿಗಳೆಸೆಯೆ . . . ಪಾವಿನ ಪೇಳಿಗೆಯಂ ತೆಱೆದ ತೆಱದಿನೇಂ ತೋಱಿದುವೋ (ಅರ್ಧನೇ. ೮-೧೫). [ಸಂ.]

ಶೈಲಚಾಪ (ನಾ). ಬೆಟ್ಟವನ್ನು ಬಿಲ್ಲಾಗಿ ಉಳ್ಳವನು; ಶಿವ : ಅತಿಭಕ್ತಿ ವಶೀಕೃತ ಶೈಲ ಚಾಪನಾತ್ತದಯ ಜಿತತ್ರಿತಾಪ ಬಸವೇಶ್ವರನೀಗಮಗೀಶಭಕ್ತಿಯಂ (ರಾಜಶೇ. ೧-೧೧). [ಸಂ.]

ಶೈಲಜಾಧವ (ನಾ). ಪಾರ್ವತಿಯ ಪತಿ ; ಶಿವ : ಹುದ್ಗ್ರಹದಲ್ಲಿ ಶೈಲಜಾಧವನನೆ ನೆಟ್ಟು ಜಾನಿಪ . . . ತಾಪಸವರ್ಯರೊಪ್ಪಿದರ್ (ರಾಜಶೇ. ೧-೧೩೦). [ಸಂ.]

ಶೈಲಜಾಧಿಪ (ನಾ). = ಶೈಲಜಾಧವ : ದೀಪದ ಕಲಿಯೆನಿಪ್ಪ ಶಿವೈಕ್ಯಂ . . . ಶೈಲಜಾಧಿಪನೂಬ್ಬನುಂ ಜೀರ್ಣಾಲಯದೊಳರ ನೋಡಿ ತನ್ನೊಳು ಹೆದಱುತಿಂತೆಂದ (ಬಸವಪು. ೧೬-೧). [ಸಂ.]

ಶೈಲಜೆ (ನಾ). ಪರ್ವತರಾಜನ ಮಗಳು; ಪಾರ್ವತಿ : ಶೈಲಜಾ ಮುಖಾಬ್ಜ ಗಂಧಲುಬ್ಧ ಚಂಚರೀಕವಿಕ್ಕೇಲಸರ್ವಲೋಕಪಾಲ . . . ರಕ್ಷಿಸೆನ್ನನೀಶ್ವರ (ಉದ್ಯಟ. ೪-೧೦). [ಸಂ. ಶೈಲಜಾ]

ಶೈಲಪ (ನಾ). ಬೆಟ್ಟಗಳ ಒಡೆಯ ; ಗಿರಿರಾಜ : ಬಾರನ್ನ ಮಾತಾಮಹೇ ಬಾರ ನ್ನಾಳ್ಳಳೆನೆತ್ತುಮೊಲ್ಲು ಕರದಂ ಶರ್ವಾಣಿಯಂ ಶೈಲ[ಪಾಠಂ. ಳ]ಪಂ (ಗಿರಿಕ. ೩-೧೦೫). [ಸಂ.]

ಶೈಲಪತಿ, ಶೈಳಪತಿ (ನಾ). ೧. ಹಿಮಾಲಯ ಪರ್ವತ. ೨. ಶ್ರೇಷ್ಠವಾದ ಪರ್ವತ : ವಿಜಯಾರ್ಧ ಶೈಲಪತಿ ಸವೆಯಿಸಿ ತಂದೋಳಿಯೆ ನಿಜಿಸಿದ ಬೆಳ್ಳಿಯ ಲಾಳಾವಿಂಡಿಗೆವೊಲಿರ್ಪುವಿದಱ ಮಡಲ್ಗಳ್ (ಶಾಂತಿಪು. ೨-೧೦೪). **ಶೈಳಪತಿ** : ೩. ಹಿಮಾಲಯದ ಒಡೆಯ; ಶಿವ : ಶೈಳಪತಿಯುಂ ಶರ್ವಾಣಿಯುಂ ಸ್ನೇಹದಿಂದಿರೆ (ಗಿರಿಕ. ೧೦-೧೪). [ಸಂ.]

ಶೈಲಪುತ್ರಿ (ನಾ). = ಶೈಲಜೆ : ಕಿಟಿಯ ಕತದ ಮದ್ವೇಷಮಂ ತಾಳ್ದಿದಂ ಸಂಗರಮಂ ಕೆಯ್ಕೊಂಡಿವಂಗಿತ್ತಪೆನಿವನೆಳಿರ್ದಸ್ತ್ರಮಂ ಶೈಲಪುತ್ರೀ (ಶಬಶಂ. ೪-೬೯). [ಸಂ. ಶೈಲಪುತ್ರೀ]

ಶೈಲರಾಜ (ನಾ). = ಶೈಲಪತಿ ೨ : ಕನಕಕಳಶದ ನೀರ್ಗಳ್ ಸುರಿದುವು ವಿಭುಶಿರದೊಳ್ ಶೈಲರಾಜಮಸ್ತಕದೊಳಱಗಿದಬ್ಬಜಲಂಬೋಲ್ (ಶಾಂತಿಪು. ೧೦-೧೦೩). [ಸಂ.]

ಶೈಲಲಿಪಿ (ನಾ). ಒಂದು ಬಗೆಯ ಲಿಪಿ : ಗಗನಲಿಪಿ ಧೂಮಲಿಪಿ ಜಲಲಿಪಿ ಪಿಶಾಚಲಿಪಿ ಖಗಲಿಪಿ . . . ಶೈಲಲಿಪಿ, ದೇವಲಿಪಿ ನಂದಿಲಿಪಿ ಈ ಅಗಣಿತ ಲಿಪಿಗಳನೋ ಡEದ3ಲಱಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲಾ (ಭಾಸ್ಕರ. ೭೭-೬). [ಸಂ.]

ಶೈಲಾಂಗನೆ (ನಾ). = ಶೈಲಜೆ : ಶೈಲಾಂಗನೆಯ ಲೀಲೆಯಲಾಡುವರೆಲ್ಲರು ಕಾಲಬಂಧುಗಳು (ಪೋಳಿಮಾ. ೧೨-೪೩). [ಸಂ. ಶೈಲಾಂಗನಾ]

ಶೈಲಾಟ (ನಾ). ೧. ಪರ್ವತನಿವಾಸಿ. ೨. ಸಿಂಹ. [ಸಂ.]

ಶೈಲಾದಿ (ನಾ). ಶಿವಗಣದಲ್ಲಿ ಒಬ್ಬ; ನಂದಿ : ಭೂತಲದಲ್ಲಿ ಮಾನುಷತ್ವಂ ಬಡವುದೆನಲಾಗಿ ಕುಲಿಶದಿಂ ತಾಡಿಸಿದ ಗಿರಿಯಂತುಟಾದನಾ ಶೈಲಾದಿ ಶಾಪದಿಂದ (ವೀಶೃಪು. ೩-೨೦-೧೦). [ಸಂ.]

ಶೈಲಾಲಿ (ನಾ). ೧. ನರ್ತಿಸುವವನು; ನರ್ತಕ. ೨. ನಟ ; ಅಭಿನೇತೃ : ''ಶೈಲಾಲೀ, ಶೈಲೂಷಃ, ಕುಶೀಲವಃ . . . ನಟಃ - ಈ ೮ ನಟ್ಟವಿಗಂ'' (ಹಲಾಯು. ೯೭-೪೩೮); ಶಿಲಾಲಿ ಕೃಶಾಶ್ವ ಎಂಬವರು ನಟಸೂತ್ರಕಾರರೆಂದೂ ಅವರ ಅನುಯಾಯಿ ಗಳಾದ ನಟರಿಗೆ ಶೈಲಾಲಿ ಕೃಶಾಶ್ವಿಗಳೆಂದು ಹೆಸರಾಯಿತೆಂದೂ ಗೊತ್ತಾಗುತ್ತದೆ (ಸಂನಾಟ. ೪೧). [ಸಂ. ಶೈಲಾಲಿನ್]

ಶೈಲಿ (ನಾ). ೧. ಕ್ರಮ ; ಧಾಟಿ : ಹಿರಿಯಣ್ಣನಂ ಚಿರದಿನಂ ಬೆಂಬಿಡದೆಯಿರ್ದ ಲಕ್ಷ್ಮಣದೇವನೆಸೆದನಯ್ . . . ನೆರೆಯೇರ್ದ ಮಳೆಗಾಲದ ಮಹಾತರಂಗಿಣಿಯ ಧೀರ ಶೈಲಿಯಲಿ (ಶ್ರೀರಾಮಾ. ೨೬-೬೮೯). ೨. [ಕಾವ್ಯಮೀ] ಕಾವ್ಯರಚನೆಯಲ್ಲಿಯ ರೀತಿ, — ಮಾರ್ಗ : ನಾಟಕದ ಗದ್ಯವು ಮೊದಮೊದಲು ಸ್ವಾಭಾವಿಕವಾದ, ಸಂಭಾಷಣೆಗೆ ಉಚಿತವಾದ, ಸರಳ ಶೈಲಿಯಲ್ಲಿರುತ್ತದೆ (ಸಂನಾಟ. ೨೧) ; ಸಣ್ಣ ಸಣ್ಣ ವಾಕ್ಯಗಳನ್ನೂಳ ಗೊಂಡ ಶೈಲಿಯಲ್ಲಿ ಅವರ ಮಾತುಗಳೇ ಪ್ರದರ್ಶಿಸುವಂತೆ ರಚನೆಯಾಗಿರಬೇಕು (ಶಿಕ್ಷದ. ೨೬೯). [ಸಂ. ಶೈಲೀ]

ಶೈಲೂಷ (ನಾ). ೧. = ಶೈಲಾಲಿ ೧. ೨. = ಶೈಲಾಲಿ ೨ : ''ಶೈಲಾಲೀ, ಶೈಲೂಷಃ . . . ಭರತಃ ನಟಃ - ಈ ೮ ನಟ್ಟವಿಗಂ'' (ಹಲಾಯು. ೯೭-೪೩೮). ೩. ಸೂತ್ರಧಾರ : ಜೀವಂಗಳ್ ಶುಭಾಶುಭಕರ್ಮಶೈಲೂಷಪ್ರೇರಿತಂಗಳಾಗಿ ಚತುಸ್ಸಂಸರಣಂಗಳೊಳ್ . . . ಪರಿಭ್ರಮಿಸಿಗುಂ (ಆದಿಪು. ೧೬-೫೭ ವ); ಜಯಲಕ್ಷ್ಮೀನರ್ತ್ತಕೀನರ್ತ್ತನ ಪರಿಣತ ಸ್ಯ(ಶೈ)ಲೂಷನುವಿರ್ವೀವಧೂಟೀಪ್ರಿಯ . . . ಚಟ್ಟಯದೇವಂ (ಎಇ. XIII, ೩೦೨-೭; 1125). ೪. ಮೋಸಗಾರ ; ವಂಚಕ. ೫. ಒಂದು ಬಗೆಯ ಮರ ; ಬಿಲ್ವ : ''ಬಿಲ್ವಃ, ಶಾಂಡಿಲ್ಯಃ, ಶೈಲೂಷಃ, ಮಾಲೂರಃ, ಶ್ರೀಫಲಃ — ೫ ಬೆಲ್ಲವತ್ತದ ಮರ'' (ಸಿದ್ಧಾಂತಿ. ೧೧೯). [ಸಂ.]

ಶೈಲೇಂದ್ರ (ನಾ). ಬೆಟ್ಟಗಳಲ್ಲಿ ಶ್ರೇಷ್ಠವಾದುದು; ಹಿಮಾಚಲ : ನೋಡಿಮಮಗೀ ಶೈಲೇ[ಪಾಠಾಂ. ಳೇ]ಂದ್ರಮೆಂದೆಂದು ತೋಱಿದನಾ ತನ್ನೊಡವರ್ಪ ಭೂಪನಿಕರಕ್ಕುತ್ತುಂಗ ಹೈಮಾದ್ರಿಯಂ (ಆದಿಪು. ೧೩-೬೯). [ಸಂ.]

ಶೈಲೇಯ, ಶೈಳೇಯ (ಗು). ೧. ಕಲ್ಲುಗಳಿಂದ ತುಂಬಿದ. ೨. ಗಡುಸಾದ; ಕಠಿಣವಾದ. (ನಾ). ೩. ತೇವವಾಗಿರುವ ಕಲ್ಲಿನ ಮೇಲೆ ಬೆಳೆಯುವ ಸಸ್ಯ ; ಪಾಚಿ ; ಕಲ್ಲುಹೂವು : ''ಕಾಲಾನುಸಾರ್ಯಂ, ವೃದ್ಧಂ . . . ಶೈಲೇಯಂ — ೫ ಕಲ್ಲುಹುವ್ವಿನ ಪೆಸರು, ಶಿಲಾಪುಷ್ಪ'' (ಸಿದ್ಧಾಂತಿ. ೧೪೦). ೪. ಒಂದು ಬಗೆಯ ಸುಗಂಧ ದ್ರವ್ಯ ; ಸಾಂಬ್ರಾಣಿ. ೫. ಸಿಂಹ. ೬. ದುಂಬಿ. **ಶೈಳೇಯ** : ೭. ಶಿಲಾಜಿತುವೆಂಬ ಖನಿಜದಿಂದ ಕೂಡಿದ : ಘನಸಮಯದೊಳಿರ್ದು ಶಿಲಾಸನದೊಳ್ ಶೈಳೇಯ ಸುರಭಿತಳದೊಳ್ . . . ಶಿಖಿ ನರ್ತನಮಂ ನೀಂ ನೋಡ (ಶಾಂತಿಪು. ೫-೧೩೧). [ಸಂ.]

ಶೈವ (ಗು). ೧. ಶಿವನಿಗೆ ಸಂಬಂಧಿಸಿದ . (ನಾ). ೨. ಶಿವನ ಆರಾಧನೆಯನ್ನು ಪ್ರತಿಪಾದಿಸುವ ಆಗಮ; ಶಿವಾಗಮ : ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲಾ ಶರಣೆನ್ನುತ್ತಿದ್ದುವು (ಬಸವ. ೧೧೭); ಆಗಮಗಳು — ಶೈವ, ವೈಖಾನಸ, ಪಾಂಚರಾತ್ರಾ ಗಮಗಳೆಂದು ಪ್ರಧಾನವಾಗಿ ಮೂರಾಗಿವೆ (ಭಾರದ. ೭೨). ೩. ಶಿವನ ಆರಾಧನೆಯನ್ನು ಪ್ರತಿಪಾದಿಸುವ ಮತ; ಶೈವಮತ. ೪. ಶಿವನ ಆರಾಧಕ ; ಶೈವ ಮತಾವಲಂಬಿ : ''ಶರಣನೆನೆ ಶೈವನೆನಿಸಿಕ್ಕು'' (ಮಂಗರಾ. ೭೨-೨೨); ಭೂವಳಯ ದೊಳಗೆಮ್ಮುವಱಿಯದ ಶೈವನಾವನು ಇಲ್ಲ (ಬಸಪು. ೨೫-೫); ಶೈವರುಗಳಿಗೆ ಪರಶಿವನಿಳಯತತ್ವಪ್ರಾಪ್ತಿಯಾಗುವದು (ಗಗತಾ. ೮-೬೭); ಶಿವನನ್ನೆ ಪರಬ್ರಹ್ಮ ಸ್ವರೂಪವೆಂದು ತಿಳಿದು ಆರಾಧಿಸುವವರು ಶೈವರು (ಭಾರದ. ೨೦೭). ೫. [ನಾಟ್ಯ] ಇಪ್ಪತ್ತುಮೂರು ದೇಶೀಯಸ್ಥಾನಕಗಳಲ್ಲಿ ಒಂದು ; ಈ ''ಎಡಗಾಲನ್ನು ಸಮನಾಗಿರಿಸಿ ಬಲಗಾಲನ್ನು ಕುಂಚಿತಮಾಡಿ ಎತ್ತಿ ಎಡಮೊಳ ಕಾಲ ಹತ್ತಿರ ಅಡ್ಡಲಾಗಿ ನಿಲ್ಲಿಸುವುದು'' (ಶಾಸ್ಕರಂ. ೩೩೧ ಗದ್ಯಾನುವಾದ) : ಶೈವ- ಎಡಗಾಲ್ ಸಮಪದಮಂ ಕೇಳ್ ಪಡೆದಿರಲಾ ಜಾನುವಲ್ಲಿ ದಕ್ಷಿಣಪಾದಂ ಬಿಡದಡ್ಡವಾಗಿ ಕುಂಚಿತಮೊಡರ್ಚುತೆತ್ತಿರ್ದೊಡಾಯ್ತು ಶೈವಸ್ಥಾನಂ (ಶಾಸ್ಕರಂ. ೭-೪೭). [ಸಂ.]

ಶೈವದೀಕ್ಷೆ (ನಾ). ಶೈವಮತದ ವ್ರತಗಳನ್ನು ವಿಧಿವತ್ತಾದ ಸಂಸ್ಕಾರದಿಂದ ಕೈಗೊಳ್ಳುವಿಕೆ : ಮಂಗಳಪ್ರದ ಶೈವದೀಕ್ಷಾಲಿಂಗಿತನನಂತ್ಯಜನೆನುತ್ತವೆ ಹೇಂಗೆ ನುಡಿಯಲುಬಹುದು (ಬಸಪು. ೫೭-೬೭). [ಸಂ. ಶೈವದೀಕ್ಷಾ]

ಶೈವಪುರಾಣ (ನಾ). ಹದಿನೆಂಟು ಪುರಾಣಗಳಲ್ಲಿ ಒಂದು : ಬ್ರಹ್ಮಪುರಾಣ ಪದ್ಮಪುರಾಣ ವೈಷ್ಣವಪುರಾಣ ಶೈವಪುರಾಣ . . . ಹದಿನೆಂಟು ಮೂಲಪುರಾಣಂಗಳವು (ವಿವೇಕ. ೮). [ಸಂ.]

ಶೈವಮತ (ನಾ). ಶಿವನ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಪಂಥ, — ಪಂಗಡ: ಶಿವಪಾರಮ್ಯವನ್ನು ಮುಖ್ಯವಾಗಿಟ್ಟುಕೊಂಡು ತತ್ವವಿಚಾರವನ್ನು ಮಾಡುವ ಸಂಪ್ರದಾಯಕ್ಕೆ ಶೈವಮತವೆಂದು ಅಭಿಪ್ರಾಯವಿದೆ (ಭಾರದ. ೨೨೦). [ಸಂ.]

ಶೈವಲ, ಶೈವಳ (ನಾ). ನೀರಿನ ಮೇಲೆ ಬೆಳೆಯುವ ಪಾಚಿ; ಹಾವಸೆ : ತಮಾಲ ನೀಲ ಭಾಸುರತರರೋಮರಾಜಿ ನವಶೈವಲದೊಳ್ಪಡೆದಾಡಿ ತನ್ಮುಖಾಂಬುರುಹ ರಸಪ್ರವಾಹದೆ ಮುಳುಂಗಿದುವಕ್ಷಿರೂಪಂಗಳಾತನಾ (ರಾಜಶೇ. ೭-೬೫). ಶೈವಳ . "ಶೈವಾಳಂ, ಶೈವಳಂ, ಜಳಶೂಕಂ, ನೀಳಿಕಾ - ಈ ೪ ಪಾವಸೆ" (ಹಲಾಯು. ೧೧೩-೬೧). [ಸಂ.]

ಶೈವಲಿನಿ, ಶೈವಳಿನಿ (ನಾ). ನದಿ; ಹೊಳೆ : ಕುಲದ ನಗಳ್ತೆಯುಮಂ ನೀಂ ಕಲುಷಿತಮಂ ಮಾಡಲೆನ್ನುಮಂ ಕೆಡಪಲ್ಕೇಕೆಳಸುವ ಕೂಲಂಕಷ ಶೈವಲಿನಿಯವೋಲ್ ತಿಳಿದ ಜಲಮುಮಂ ತಟಜಮುಮಂ (ಶಾಕುಂತ. ೬೯-೧೨೧). ಶೈವಳಿನಿ : "ಸಿಂಧುಃ . . . ಶೈವಳಿನೀ, ಸರಸ್ವತೀ, . . . ರೋಧೋವಕ್ತ್ರಾ - ಈ ೨೧ ಕೂಡೆ" (ಹಲಾಯು. ೧೧೦-೪೩). [ಸಂ. ಶೈವಲಿನೀ]

ಶೈವಶಮಿ (ನಾ). ಶೈವಮುನಿ, — ತಪಸ್ವಿ : ಯುದ್ಧವಿಧಿಯೊಳ್ಪನ್ನಿತ್ತು ನಾಯುಂಗದೋಡಿನಲುಂಡಿರ್ದ್ದವನತ್ತ ಶೈವಶಮಿವೊಲ್ಪಾಮಂತದಾವೋದರಂ (ಎಕ. II, ೨೪೦-೨೭; ಸು. 1175). [ಸಂ. ಶೈವಶಮಿನ್]

ಶೈವಶೃಂಗಾರ (ನಾ). ಶೈವಮತಸ್ಥನಿಗೆ ಯೋಗ್ಯವಾದ ಅಲಂಕಾರ, — ವೇಷ ಭೂಷಣ: ಆಗಮಸ್ನಾನದೊಳಿಟ್ಟ ವಿಭೂತಿಯ ತೊಟ್ಟ ರುದ್ರಾಕ್ಷಿಯ . . . ಶಾಂತಿಮುಖದ ಶೈವಶೃಂಗಾರಂ ಸರ್ವಾಂಗದೊಳ್ ಬಳೆಯೆ (ನಂದಿರ. ೧೭ ೧೦೫). [ಸಂ.]

ಶೈಮಸಂಪನ್ನ (ನಾ). ಶಿವಭಕ್ತಿಯಿಂದ ಪರಿಪೂರ್ಣನಾದವನು ; ಶರಣ : ಪರಮಾರ್ಥದ ತಿರುಳ ಪುಣ್ಯದಂತರ್ದ ಸೌಂದರನಂ ನೋಡಿ . . . ಎಲ್ಲರುಂ ಶೈವಸಂಪನ್ನರಾಗಿ ಪುಳಕದ ಪುಂಜವಾಗಿ . . . ನುಡಿಯಲಱಿಯದೆ ನೋಡುತ್ತಮಿರೆ (ನಂದಿರ. ೮-೪೦). [ಸಂ.]

ಶೈವಸಿದ್ಧಾಂತ (ನಾ). ಶೈವಧರ್ಮದ ಒಂದು ಪಂಥ, — ಸಂಪ್ರದಾಯ : ಪಾಶುಪತ, ಕಾಳಾಮುಖ, ಲಕುಲೀಶ, ಮಾಹೇಶ್ವರ, ಶೈವಸಿದ್ಧಾಂತ, ವೀರಶೈವ — ಇವೇ ಮೊದಲಾದವು ಶಿವಭಕ್ತಿ ಪಂಥದ ಮುಖ್ಯ ಪ್ರಭೇದಗಳು (ಭಾರದ. ೩೦೬). [ಸಂ.]

ಶೈವಸ್ತವ (ನಾ). ಶಿವನ ಕೀರ್ತನೆ ; ಶಿವಸ್ತುತಿ : ಅಮಲಶೈವಸ್ತವವ ಹೇಳಿದು ನಮಿಸಿದನು ಬಲವಂದು (ಕಾವ್ಯಾಲಂ. ೬-೪೪). [ಸಂ.]

ಶೈವಳ 'ಶೈವಲ' ನೋ.

ಶೈವಳಿನಿ 'ಶೈವಲಿನಿ' ನೋ.

ಶೈವಾಗಮ (ನಾ). ಶಿವನ ಆರಾಧನೆಯನ್ನು ಪ್ರತಿಪಾದಿಸುವ ಆಗಮ; ಶೈವಧರ್ಮಶಾಸ್ತ್ರ : ಶೈವಾಗಮಾರ್ಥವಿದನಾ ಷಡಂಗಂ ಸಹಿತ ಪಾವನ ಮಹಾ ವೇದವಂ ಪಠಿಸಿದಾತನೆಲೆ ಕೋವಿದೆಯ ಕೇಳು (ವೀಶೈಪು. ೭-೪-೧೩); ಶಿವೋಪಾಸನೆಗೆ ಪ್ರಾಧಾನ್ಯವನ್ನು ಕೊಟ್ಟು ಶೈವಸಿದ್ಧಾಂತವನ್ನು ಪ್ರತಿಪಾದಿಸುವುದೇ ಶೈವಾಗಮದ ವೈಶಿಷ್ಟ್ಯ (ಭಾರದ. ೭೫). [ಸಂ.]

ಶೈವಾಲ, ಶೈವಾಳ (ನಾ). = ಶೈವಲ : ಆಗಳಾಕೆಗಳ ಪಸುರ್ಪಸವಸಿಯ ಬಾಸ ಲಾವಣ್ಯನದಿಯ ಶೈವಾಲಲತೆಯ ಲಾಸ್ಯಮನಪಹಾಸ್ಯಂಗೆಯ್ಯುಂ (ಪಂರಾಮಾ. ೩-೧೩೩ ವ). ಶೈವಾಳ : ಶೈವಾಳಜಾಳವಲ್ಲರಿ ಪೀವರಕುಚಕೋಕಮಿಥುನ ಮೊಲದೊಂದೊಂದರ್ಕೀವಲ್ಲಿ ಜಗುಟ್ಟುದೆನೆ ರೋಮಾವಳಿ ರಂಜಿಸಿದುದಾ ಸರೋಜಾನನೆಯಾ (ಲೀಲಾವ. ೩-೩೨); ಕರಿಮಕರನಕ್ರಶೈವಾಳವಿದ್ರುಮ . . . ವ್ಯಾಳಕೋಳಾಹಳಧ್ವಾನವೆರಸಿ ಜಲನಿಧಿ ಮೆಚ್ಚೆದುದು (ಪಚಕಾ. ೧-೩೩). [ಸಂ.]

ಶೈವಾಳ 'ಶೈವಾಲ' ನೋ.

ಶೈವಾಳಂಬೊರೆ (ಕ್ರಿ). ಪಾಚಿ ಅಂಟಿಕೊಳ್ಳು, — ಮೆತ್ತಿಕೊಳ್ಳು : ಮರಕತಮಣಿ ಕುಂಡಳರಶ್ಮಿರೇಖೆಯಿಂ ಗಂಡಮಂಡಳಂ ಶೈವಾಳಂಬೊರೆದ ಕನಕಾಬ್ಜದಳದಂತಿರ ಕಣ್ಗೆಸೆದಂ ನರೇಂದ್ರಚೂಡಾರತ್ನಂ (ಮಲ್ಲಿಪು. ೮-೧೨೩). [ಶೈವಾಳ (= ಶೈವಾಲ) + ಪೂರ್ವ]

ಶೈಶವ (ನಾ). ೧. ಎಳಮೆ ; ಶಿಶುತನ : ಪಾಡಿವದ ಚಂದ್ರಮನಂತೆ ಚಂದ್ರಾಪೀಡಂ ಪ್ರತಿದಿನಂ ಪ್ರವೃದ್ಧಮಾನನಾಗೆ . . . ಶೈಶವಮಂ ಪತ್ತುವಿಡುವುದಂ ಕ್ರೀಡಾವ್ಯಸನಮಗಲ್ಕಂತು . . . ವಿದ್ಯಾನಿಕೇತನಮಂ ಮಾಡಿಸಿ (ಕಾದಂಪು. ೪೩೩); ಶೈಶವಮಂ ಸ್ಮಿತಬಂಧು ಕುಶೇಶಯನಿನನಂತಿರಿಂತು ಕಳೆದುರುತೇಚೋರಾಶಿ ವಿರಾಜಿಸಿದಂ . . . ತೀರ್ಥಕರಂ (ಪಾರ್ಶ್ವಪು. ೧೫-೩). ೨. ಶಿಶು; ಹಸುಳೆ : ಐಸಲೇ ಮುನಿನಾಥ ರಾಮನದ್ಯಸರವನತ್ತುಂಬ ಹರೆಯದ ಶೈಶವನ ಕೈಯಿಂದ ಸಲಹಿಸಿಕೊಂಬುದೇ ಯಜಸ (ತೂರಹಾ. ೧-೯-೨೯). [ಸಂ.]

ಶೈಶವಕೇಳಿ (ನಾ). ಮಕ್ಕಳಾಟ ; ಬಾಲಲೀಲೆ : ಶೈಶವಕೇಳಿ ಮನಕ್ಕಮೃತಾಶನ ಸೇವನವೊಲೀಯ ಸುವಿನಯಂ ಶಿಶುಗುರ್ವೀಶಂ ಮಾಡಿದನನ್ನಪ್ರಾಶನ ಚೌಲೋಪನಯನ ವಿಧಿಯಂ ಕ್ರಮದಿಂ (ಪಾರ್ಶ್ವಪು. ೬-೯೫). [ಸಂ. ಶೈಶವಕೇಲಿ]

ಶೈಶವಭಾವ (ನಾ). = ಶೈಶವ ೧ : ತ್ಯದೀಯ ಭಾಗಿನೇಯಂ ಮುನ್ನಮುಳ್ಳ ಭಾಗಾಂಶಮಲ್ಲಮಂ ತ್ಯಾಗಭೋಗೋಪಭೋಗಾದಿ ವ್ಯಸನಕ್ಕಸದ್ಯಯಂ ಮಾಡಿ ಕಿಡಿಪಿಯುಂ ಶೈಶವಭಾವದಿಂ ತಾಳ್ದಿನ್ನಗಂ ಸುವಿದ್ಯಾಭ್ಯಾಸಭಾಗ್ಯಮುಂ . . . ಕಂಡು (ಸುಕುಮಾ. ೨-೫೨ ವ). [ಸಂ.]

ಶೈಶಿರ (ಗು). ೧. ಶಿಶಿರಋತುವಿಗೆ ಸಂಬಂಧಿಸಿದ ; ಚಳಿಗಾಲದ : ಒಂದಾದ ಮೇಲೊಂದು ನಿರ್ವಾಣವೂಂದಲಾ ತೃಲಾರ್ಚತತಿ, ಮಂಜುಮಂಜಾಗಿ ತೋರ್ದಡಂ ಕೈಗಣ್ಮೆದೋಳಾಯ್ತು ಶೈಶಿರಜ್ಯೋತ್ಸ್ನೆ (ಶ್ರೀರಾಮಾ. ೪೪೯-೧೦೬). (ನಾ). ೨. ಚಳಿಗಾಲ; ಮಾಗಿಕಾಲ ; ಶಿಶಿರ : ಐಕಿಲಿಂದೆ ಹೇಮಂತ ಶೈಶಿರದ ಮಾಗಿ ಮಡಲಿಡೆ ತರಣಿ ಸೋಮನಂತಿರ . . . ಕುಗ್ಗಿದುವು ಕೋಗಿಲೆಯ ಕಂಠಕಲರವಗಳು (ಚೈಮಿಭಾ. ೨೮-೧). [ಸಂ.]

ಶೈಳ 'ಶೈಲ' ನೋ.

ಶೈಳಪತಿ 'ಶೈಲಪತಿ' ನೋ.

ಶೈಳಾಕ್ಷರ (ನಾ). ಕಲ್ಲಿನ ಮೇಲೆ ಕೊರೆದ ಲಿಪಿ ; ಶಿಲಾಲಿಪಿ : ಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊಂದೊಂದುಯ(೯)ಶಂ XX ಮಿಡದ ಸಾಱಿದಪವೀ ಶೈಳಾಕ್ಷರ ಭ್ರಾಜಿಗಳ್ (ಸೌಇ. VIII, ೩೬೯-೧೯; 1074); ವಾರಣಾಶಿಯೊಳೆಳ್ಳೋಟಿ ಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊಂದುದೊಂದಯಸಂ ಸಾರ್ದ್ದಪುದೆಂದು ಸಾಱಿದಪುದೀ ಶೈಳಾಕ್ಷರಂ ಧಾತ್ರಿಯೊಳ್ (ಕಇಶಿ. ೧೫-೫-೫೮, 1124). 'ಶಿಲಾಕ್ಷರ' ಪರಾ. [ಸಂ. ಶೈಲಾಕ್ಷರ]

ಶೈಳೇಯ 'ಶೈಲೇಯ' ನೋ.

ಶೈಳೋದಕ (ನಾ). ಪರ್ವತದಿಂದ ಹುಟ್ಟಿದ ಶೀತಲವಾದ ನೀರು : ಬಿಡದೇ ದುರ್ಮೋಹಮಂ ನಿರ್ವೃತಿಗೆಳಸದೆಲೇ ದೇಹಸಂಬಂಧದಿಂದಂ ಜಡನಾದಂ ದೇಹ ಶೈಳೋದಕವನೆಳಸಿ ಕಲ್ಲಪ್ಪನೊಲ್ಪಾಷ್ಟಮಲ್ಲಂ (ಮಲ್ಲಿಪು. ೧೩-೧೮). [ಸಂ. ಶೈಲೋದಕ]

ಶೊಂಟಿ 'ಶುಂಟಿ' ನೋ.

ಶೊಂಟಿಕೊಂಬು (ನಾ). ೧. ಶುಂಠಿಯ ಬೇರು : ಶೊಂಟಿಕೊಂಬು, ಜೀರಿಗೆ, ಮೆಣಸು ಹಾಕಿ ಕಷಾಯಮಾಡುತ್ತಾರೆ (ಗ್ರಾಡಿ). ೨. (ಆಲಂ) ದಡ್ಡ; ತಿಳಿಗೇಡಿ : ಆ ಸಾವುಕಾರ ಸಂಕನ ಮಗ ಶುದ್ಧ ಶೊಂಟಿಕೊಂಬು (ಬೆಳುಮ. ೧೩೧). [ಶೊಂಟಿ (< ಶುಂಟಿ) + ಕೊಂಬು]

ಶೊತ್ತಿಯ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣ ; ವೈದಿಕ ; ಶ್ರೋತ್ರಿಯ : ಯಜ್ಞೋನ್ನತಸೂತ್ರಮೊಪ್ಪಲುಜ್ಜಳೋತ್ತಮರ್ಶೋಭಿಪರಲ್ಲಿ ಶೊತ್ತಿಯರ್ (ಉದ್ಧಟ. ೪-೫೩). [< ಸಂ. ಶ್ರೋತ್ರಿಯ]

ಶೊತ್ರ 'ಸೂತ್ರ' ನೋ.

ಶೋಕ (ನಾ). ೧. ಅಳಲು ; ದುಃಖ : ಕೊಂತಿಯುಂ ಕರ್ಣನ ಶೋಕದೊಳ್ ಧರ್ಮಪುತ್ರನಂ ಬೀಳ್ಕೊಂಡವರೊಡನೆ ತಪಶ್ಚರಣಪರಾಯಣೆಯಾದಳ್ (ಪಂಪಭಾ. ೧೪-೧೦೬); ತನ್ನ ಕಾಣಲೊಡನಿರ್ಮಡಿಸಿದ ಶೋಕದಾವಾನಲನೆರ್ದೆಯೊಳ್ ಪೊಟ್ಟರದ ಕಿರ್ಬನಂತಳುರೆ (ಶಾಂತಿಪು. ೧-೯೪ ವ) ; ಶೋಕಂ ಮಿಗೆ ಫಣಿರಾಜಪತಾಕಂ ವಿಗಳಿತವಿವೇಕನವಿರಳಬಾಷ್ಪೋದ್ರೇಕಂ . . . ಮೂರ್ಛೆಗೆ ಸಂದಂ (ಗದಾಯು. ೩-೭೭). ೨. [ಕಾವ್ಯಮೀ] ಕರುಣರಸದ ಸ್ಥಾಯಿಭಾವ: ರತಿ ಪರಿಹಾಸಂ ಶೋಕೋದ್ಗತ ಮುತ್ಸಾಹಂ ಭಯಂ ಪ್ರಕೋಪಂ ವಿಜುಗುಪ್ಸತೆ ವಿಸ್ಮಯಾಶಯತ್ವಂ ಪ್ರತಿನಿಯತ ಸ್ಥಾಯಿಭಾವಮುವು ತಾಮಕ್ಕುಂ (ಕಾವ್ಯಾವ. ೭೯೪). [ಸಂ.]

ಶೋಕಗೀತೆ (ನಾ). ವಿಯೋಗದ ಶೋಕವನ್ನು ವ್ಯಕ್ತಪಡಿಸುವ ಗೀತೆ : ವೈಯಕ್ತಿಕ ಕವಿತೆಯ ಅತ್ಯಂತಮುಖ್ಯವಿಭಾಗಗಳಲ್ಲೊಂದಾದ ಶೋಕಗೀತೆ(Elegy)ಗೆ ಬರುತ್ತೇವೆ (ಸಾಪಿಪ್ರ. ೯೮). [ಸಂ. ಶೋಕಗೀತ]

ಶೋಕಗ್ರಹಣಿ (ನಾ). ಗ್ರಹಣಿರೋಗದ ಒಂದು ಭೇದ : ಬಳುಗಾರ, ಕಾಂತಭಸ್ಮ, ಲೋಹಭಸ್ಮ, ಅಭ್ರಕಭಸ್ಮ ಇವು ಪ್ರತ್ಯೇಕ ಗ ೫ ತೂಕ . . . ಸೇವಿಸಲು ವಾತಗ್ರಹಣಿ, ಪಿತ್ತಗ್ರಹಣಿ, ಶ್ಲೇಷ್ಮಗ್ರಹಣಿ, ಭಯಗ್ರಹಣಿ, ಶೋಕಗ್ರಹಣಿ . . . ಮುಂತಾದ ಸಕಲರೋಗಗಳೂ ಗುಣಮಕ್ಕುಂ (ಸಕವೈ. ೩೪೦). [ಸಂ, ಶೋಕಗ್ರಹಣೀ]

ಶೋಕಬಾಷ್ಪ (ನಾ). ದುಃಖದಿಂದ ಸುರಿಯುವ ಕಂಬನಿ : ಸೂಬ್ಬೂಟೊಳ್ ಪೆರ್ಚಿ ಬಂದೊಟ್ಟುದುಗುವ ಶೋಕಬಾಷ್ಪಂಗಳುಮನಾನಂದಾಶ್ರುಜಲಂಗಳುಮಂ ತೊಳೆದು (ಶಾಂತಿಪು. ೪-೧೦೪ ವ). [ಸಂ.]

ಶೋಕರಸ (ನಾ). = ಶೋಕ ೨ : ಮುನ್ನಾದ ಶೋಕರಸಮೆಲ್ಲಂ ಪೋಗಿ ನಿರ್ವೇಗ ರಸಂ ಪುಟ್ಟಿಸಿದ್ದರಸಂ ಮುಟ್ಟಿದ ಲೋಹದಂತೆ ಶುದ್ಧಾಂತರಂಗನಾಗಿ (ಆದಿಪು. ೩-೫೬ ವ). [ಸಂ.]

ಶೋಕವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಶೋಕವರಾಳಿ ವಸಂತ ವರಾಳಿ . . . ನಾಗವರಾಳಿಯೆಂಬ ವರಾಳೀಸಪ್ತಕವೇ ಶುದ್ಧವರಾಳಿಗೆ ಮಿಶ್ರರಾಗಂಗಳುಂ (ವಿವೇಕ. ೨೩೫). [ಸಂ. ಶೋಕವರಾಲೀ]

ಶೋಕಾಂಧ (ನಾ). ದುಃಖದಿಂದ ಕುರುಡಾದವನು, — ಕಂಗೆಟ್ಟವನು : ಶೋಕಾಂಧಂ ಕರ್ಣವಿರಹಿತನಪ್ಪುದಱಿಂ ಸಂಕ್ರಂದನನಂದನಂಗೆ ಮುಳಿದು ತರಣಿಯ ತನಯನ ನೆನೆದು (ಗದಾಯು. ೫-೩೬ ವ). [ಸಂ.]

ಶೋಕಾಕುಲ (ನಾ). ದುಃಖದಿಂದ ಕೊರಗುವವನು, — ಕಳವಳಪಡುವವನು : ಈಶ್ವರ ವಿರಹದ ಶೋಕಾಕುಲಂ ವಿಶೇಷಾಪ್ತಜನಂ (ಕವಿಗಾ. ೭-೩೧). [ಸಂ.]

ಶೋಕಾಕುಲಿತೆ (ನಾ). ದುಃಖದಿಂದ ಚಿಂತೆಗೊಳಗಾದವಳು : ದಂತದ ಕೃತ್ರಿಮದ ಶಿರವ ಧರಣಿಸುತ ದಿಟವೆಂದು ಬಗೆದಳು ಓರಿದು ಶೋಕಾಕುಲಿತೆಯಾದಳು (ಕೌಶಿಗಾ. ೧೭-೫೬). [ಸಂ. ಶೋಕಾಕುಲಿತಾ]

ಶೋಕಾಕುಲೆ (ನಾ). = ಶೋಕಾಕುಲಿತೆ : ಶೋಕಾಕುಲೆಯಾದ ಶಕುಂತಳೆ ನಮ್ಮ ಸಂಗಡ ಬರುವಳು (ಶಾಕುಂತ. ೭೨-೧೦). [ಸಂ. ಶೋಕಾಕುಲಾ]

ಶೋಕಾರ್ತ (ನಾ). ದುಃಖದಿಂದ ನರಳುವವನು ; ದುಃಖಿತ : ಘೋರತರ ಗಹನಕೊರ್ವಳೆ ಬಂದೆಯೆಂತಕಟ ಭೀರು ಹೇಳಾ ಬೆದಱಬೇಡ ವಾಲ್ಮೀಕಿ ನಾಂ ಭೂರಿಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲ (ಜೈಮಿಭಾ. ೧೯-೩೯). [ಸಂ.]

ಶೋಕಾಶ್ರುಗಱೆ (ಕ್ರಿ). ಕಂಬನಿ ಸುರಿಸು ; ಅಳು : ನೀನಿಲ್ಲಿಗೇಕೆದ್ದು ಬಂದೆನ್ನ ಕಂದ ಈಕಡು ಬರವೇನು ಕಾರಣ ಹೇಳೆಂದು ಶೋಕಾಶ್ರುಗಱೆದಳಕ್ಷಿಯಲಿ (ಮೋಹಪ. ೨೭-೫೩). [ಶೋಕಾಶ್ರು + ಕಱೆ]

ಶೋಕಿ 'ಶೋಕು' ನೋ.

ಶೋಕಿಗ (ನಾ). ದುಃಖವನ್ನು ಅನುಭವಿಸುವವನು; ದುಃಖಿತ : ವ್ಯಾಕುಲಿತ ವಿಪ್ರರ ವಿಸತಿಯ . . . ದಾಯಭಾಗಿಗಳ ಶೋಕಿಗರ . . . ಸರ್ವಕಮತ್ಸರದೊಳಗ ಬದುಕುವನಾವ ಪೇಳೆಂದ (ಕುಮಾಅ. ೮-೫೧). [ಶೋಕ + — ಇಗ]

ಶೋಕಿಗಾರ (ನಾ). ಥಳುಕುಮಾಡುವವನು; ವಿಲಾಸಪ್ರಿಯ : ನನ್ನ ಸ್ನೇಹಿತ ಸೀತಾಪತಿ . . . ಬಹಳ ಶೋಕಿಗಾರ (ಚಿಸ್ರ. ೧೬).

[ಶೋಕಿ (< ಶೋಕು) + — ಗಾರ (< — ಕಾಱ)]

ಶೋಕಿತೆ (ನಾ). ದುಃಖಹೊಂದಿದವಳು ; ದುಃಖಿತೆ : ಸಾಕು ಮೂವರು ಸುತರು ತನಗೆಂದೀಕೆ ಮಾದ್ರಿದೇವಿಗಗ್ಗದ ಶೋಕಿತೆಗೆ ಮಂತ್ರೋಪದೇಶವಿಧಾನವನು ಕಲಿಸಿ ನಾಕನಿಲಯರ ವೊಲಿಸೆನಲು (ಕುಮಾಅ. ೪-೬೫). [ಸಂ. ಶೋಕಿತಾ]

ಶೋಕಿಸು (ಕ್ರಿ). ದುಃಖಪಡು; ಪ್ರಥೆಗೊಳ್ಳು : ನೀನೆ ಗಳ ಶೋಕಾಕ್ರಾಂತೆಯುಮಾಗೆ ಶೋಕಿಸಲ್ಸಂತಯಿಸುವರಾರಂಧನೃಪತಿಯಂ ನೃಪತಿಯುಮಂ (ಗದಾಯು. ೪-೪); ಹಾಡಲಱಿಯೆವು ಶೋಕಿಸುತ ಕೊಂಡಾಡಲಱಿಯೆವು ಬಣ್ಣಿಸುತ ಕೈಗೂಡಿ ಕೈವಿಡಿ ಗೂಡಲಲಱಿಯವಾವಲ್ಲಿಗೈತಂದು (ಬಸಪು. ೩೬-೧೮) ; ಇಂತು ನೀನೇಕೆ ಶೋಕಿಪೆ (ವರ್ಧಚ. ೮-೩೮). [ಶೋಕ + — ಇಸ್ಸು]

ಶೋಕು, ಶೋಕಿ, ಷೋಕಿ, ಷೋಕು (ನಾ). ೧. ವಿಲಾಸ ; ಚೈನಿ : ಕಲಿಯುವುದಕ್ಕೆ ಬಂದವರು ಶೋಕುಮಾಡಿ ತಿರುಗಿದರೆ ಸಾಲದು (ತ್ಯಾಗಮ. ೧೫೪). **ಶೋಕಿ** : ೧. ಯುವಕರು ಬೀಡಿ ಸಿಗರೇಟು ಸೇದಿಕೊಂಡು ಶೋಕಿಯಾಡುತ್ತ . . . ಬಂದರು (ಗಂಧಕ. ೭೫). ೨. ಡೌಲು ; ಆಡಂಬರ ; ಥಳಕು : ಬರಿಯ ಶೋಕಿಗಾಗಿ, ವಿಲಾಸಕ್ಕಾಗಿ ಮೋಹಕ್ಕೆ ಬಲಿಬಿದ್ದು ಜನರು ಅನ್ಯರ ಆಚರಣೆ, ಸಂಸ್ಕಾರಗಳನ್ನು ಅನುಕರಿಸುವುದುಂಟು (ಯಕ್ಷಬಿ. ೩). ೩. ಅಭಿರುಚಿ : ಬೇರೆ ಬೇರೆ ದೇಶಗಳಲ್ಲಿ . . . ಯಾವ ಜಾತಿಯ ಮೆಟ್ಟಿನ ಇಲ್ಲವೆ ಬೂಟ್ಸಿನ ಶೋಕಿ ನಡೆಯುತ್ತಿದ್ದೆಯೆಂದು ತಿಳಿಯುವರು (ಬಾಲಪ್ರ. ೧. ೪೭೦). **ಷೋಕಿ** : ೧. ಯೌವನದಲ್ಲಿ ಬಹುಷೋಕಿಯಿಂದ ಕಾಲ ಕಳೆದನು (ಉರ್ದುಪಾ. ೧೦೩). ೨. ಮೋಟು ಪಂಚೆ ವಿನಾ ಬತ್ತಲೆಯಾಗಿದ್ದ ಮರಾಟಿಯವನ ಮುಂದೆ ಹೊಲೆಯನು ಕೊಳೆ ಸರ್ವವ್ಯಾಪ್ತಿಯಾಗಿದ್ದರೂ, ಷೋಕಿಯಾಗಿದ್ದನು (ಮಲೆಮ. ೨.). ೩. ಏನಾದರೂ ಅವನಿಗೆ ಬೈಸಿಕ್ಲು ಸವಾರಿಯ ಷೋಕಿ, ಕುದುರೆಸವಾರಿಯ ಷೋಕಿಗಿಂತಲೂ ಹೆಚ್ಚಾಗಿ ಅಮರಿಬಿಟ್ಟಿತ್ತು (ಮಲೆಮ. ೩೩೩); ನನಗೆ ಪಗಡೇಲಿ ಬಹು ಷೋಕಿ (ಮಲ್ಲಿ. ೨೧). **ಷೋಕು** : ೧. ಕೃಷ್ಣಭಟ್ಟರು ಷೋಕಿನಲ್ಲಿ ಮುಂದಾಗಿ ಓದಿನಲ್ಲಿ ಹಿಂದಾಗಿ ಒಂದೊಂದೇ ಕ್ಲಾಸುಗಳಲ್ಲಿ ಚನ್ನಾಗಿ ಸರ್ವಿಸುಮಾಡುತ್ತಾ ಇಂಗ್ಲಿಷು ಕಲಿಯತೊಡಗಿದರು (ಧ್ಯಾಂತಿಸು. ೭). ೪. ಅಚ್ಚು ಕಟ್ಟು ; ಒಪ್ಪ : ದುಃಖ ದುಃಖ ಅಂತಾನೆ ಅದೇನು ಷೋಕಾಗಿ ಬಾಣಂತನ ಮಾಡಿಸಿಕೊಂಡಳು ಅಂತೀರಿ (ಬಾಡಿಬಿ. ೧೪). [← ಆರ. ಹಿಂ. ಮರಾ. ಶೌಕ್]

ಶೋಕೋದ್ರೇಕ (ನಾ). ೧. ದುಃಖದ ಆಧಿಕ್ಯ ; ದುಃಖಾತಿರೇಕ : ನಿನಗಿನತು ದೇವಿ ಬಗೆಪೊಡಯುಕ್ತಂ ಹೃದಯಶರೀರೇಂದ್ರಿಯಶೋಷದಾಯಕಂ ತಾನೆನಿಪ್ಪ ಶೋಕೋದ್ರೇಕಂ (ಚಂದ್ರಪ್ರ. ೩-೬೪); ಧೃತರಾಷ್ಟ್ರಂಗೆ ಮಕ್ಕಳ ಮೇಲೆ ನೆನೆಹಾಯ್ದಧಿಕ ಶೋಕೋದ್ರೇಕ ಪಲ್ಲವಿಸೆ (ಕುಮಾಭಾ. ೧-೫೪). ೨. ಶೋಕದಿಂದ ಉದ್ರಿಕ್ತನಾದವನು; ಶೋಕಭರಿತನಾದವನು : ಬಿಟ್ಟಳಂದಜಿತಸೇನೆ ನೃಪಾಲಪದಾಬ್ಜ ಮೂಲದೊಳ್ ಅದಂ ಕಾಣಲೊಡಂ ದ್ವಿಗುಣೇಭೂತಶೋಕೋದ್ರೇಕನಾಗಿ (ಚಂದ್ರಪ್ರ. ೫-೧೧ ವ). [ಸಂ.]

ಶೋಚನೀಯ (ಗು). ೧. ದುಃಖಪಡಬೇಕಾದ. (ನಾ). ೨. ದುಃಖಪಡಬೇಕಾದುದು : ಅವನ ಪರಶುರಾಮಚರಿತವೂ . . . ಅವುಗಳಿಂದಲೇ ಎತ್ತಿಕೊಂಡುವೆಂದು ಖಚಿತವಿರುವ ಪದ್ಯಗಳಾದರೂ ದೊರಕಿಲ್ಲ ಎಂಬುದು ಶೋಚನೀಯವೇ (ಮೂರುಅ. ೨). [ಸಂ.]

ಶೋಚನೀಯಸ್ಥಿತಿ (ನಾ). ದುಃಖಪಡಬೇಕಾದ ಸ್ಥಿತಿ ; ಸಂಕಟಕರವಾದ ಪರಿಸ್ಥಿತಿ : ರಾಮನಂ ಗಂಗೆಯೆಡೆ ಬೀಳ್ಕೊಂಡು ಬಂದಾ ಸುಮಂತ್ರನಾ ಕಂಡನೀ ಶೋಚನೀಯಸ್ಥಿತಿಯ ರಾಜೇಂದ್ರನಂ (ಶ್ರೀರಾಮಾ. ೧೦೧-೩೦). [ಸಂ.]

ಶೋಚಿ (ನಾ). ೧. ಬೆಳಕು; ಕಾಂತಿ. ೨. ಕಿರಣ ; ರಶ್ಮಿ : "ರೋಚಿಃ, ಶೋಚಿಃ, ಅಭೀಷುಃ . . . ವಿರೋಕಃ, ಗೌಃ — ಈ ೩೨ ರಶ್ಮಿಗಳ ಪೆಸರ್" (ಹಲಾಯು. ೭-೩೮).

[ಸಂ. ಶೋಚಿಸ್]

ಶೋಚ್ಯ (ನಾ). = ಶೋಚನೀಯ ೨ : ಅದರ್ಕಾನಂದಮಂ ತಾಳ್ದದಾಕುಲಮಂ ತಾಳ್ಪುದೇ ಮದಗ್ರಜನೊಳಾದೀ ಪೌರುಷಂ ಶೋಚ್ಯಮೇ (ಪಂರಾಮಾ. ೬-೧೭೧).

[ಸಂ.]

ಶೋಣ (ಗು). ೧. ಕೆಂಪಾದ. (ನಾ). ೨. ಕೆಂಪುಬಣ್ಣ : ಗಿರಿಶಿಖರಾವನಿಯೊಳ್ ಮಿಳ್ಳಿಸಿದುದು ಕೇತನಪಲ್ಲವಮೊಂದಶೋಕಪಲ್ಲವಶೋಣಂ (ಪಂರಾಮಾ. ೧೦-೪೯); ಶೋಣನವೀನವಾಸಮನಲಂಪಿನೊಳುಟ್ಟೆಳೆಮುತ್ತುದೊಟ್ಟು (ರಾಜಶೇ. ೮-೭೩). ೩. ರಕ್ತವರ್ಣದ ಕುದುರೆ : "ರಕ್ತವರ್ಣದ ಕುದಿರೆ ಶೋಣನೆಂಬುದು" (ಹಲಾಯು. ೭೨-೨೮೩); ಬಂದುಗಯರಲಂ ತೊಳಗುವ ಸಿಂಧುರಮಂ ಪವಳಮಂ ಪ್ರಭಾತದೊಳುದಯಿಪ್ಪಿಂದೀವರಮಿತ್ರನ ರುಚಿಯಂದಮನನುಕರಿಸಿ ತೋರ್ಪ ತುರಗಂ ಶೋಣಂ (ಅಶ್ವಶಾ. ೨-೩). ೪. ಒಂದು ನದಿಯ ಹೆಸರು : "ಶೋಣಃ, ಹಿರಣ್ಯಬಾಹುಃ — ಈ ೨ ಶೋಣ ನದಿ" (ಹಲಾಯು. ೧೧೧-೫೨); ಈ ಕುರುಬರು . . . ಮಧ್ಯಪ್ರಾಂತ, ಗಂಗಾ ಶೋಣ - ಭದ್ರಾನದೀತೀರದವರೆಗೂ ವಾಸವಾಗಿದ್ದುದನ್ನು ಇಂದು ನಿರ್ಧರಿಸಿಕೊಳ್ಳಬಹುದಾಗಿದೆ (ಕರ್ಣಾಟ. ೬೨). ೫. ಬೆಂಕಿ ; ಅಗ್ನಿ. ೬. ಗಂಡುನದಿ. ೭. ಪದ್ಮರಾಗ; ಮಾಣಿಕ್ಯ. ೮. ರಕ್ತ ; ನೆತ್ತರು. ೯. ಸಿಂದೂರ ; ಚಂದ್ರ. [ಸಂ.]

ಶೋಣಕ (ನಾ). ಒಂದು ಬಗೆಯ ಮರ ; ತಿಗಡೆ : "ಮಂಡೂಕಪರ್ಣಃ, ಪತ್ರೋರ್ಣಃ, ನಟಃ, ಕಟ್ವಂಗಃ . . . ಶೋಣಕಃ, ಅರಳುಃ - ೧೨ ಹೆಮ್ಮರದ ಹೆಸರುಗಳು, ದೊಡ್ಡಮರ, ತಿಗಡುಮರ" (ಸಿದ್ಧಾಂತಿ. ೧೨೫). [ಸಂ.]

ಶೋಣತೆ (ನಾ). ಕೆಂಪುಬಣ್ಣ : ಅವಿಶೇಷದಿನುದ್ಗಮದೊಳ್ ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇಘವಿತಾನದೊಳ್ ವಿನೀಳತೆ . . . ಒಂದಿರ್ಕುಂ (ಕಾವ್ಯಾವ. ೮೯೪). [ಸಂ. ಶೋಣತಾ]

ಶೋಣತೆವೆಱು (ಕ್ರಿ). ಕೆಂಪಾಗು : ಶೋಣತವತ್ತ ಮರೀಚಿಶ್ರೇಣಿಯ ಕೆಂದಳಿರನಗ್ರದೊಳ್ ತಳೆದು (ಜಗವಿ. ೧೬-೧೦೫); ಶೋಣತವತ್ತ ನಿಜಾಂಶುಶ್ರೇಣಿಯೊಳಿರ್ಪರುಣನಂತೆ (ಉದ್ಧಟ. ೮-೫೧). [ಶೋಣತೆ + ವೆಱು]

ಶೋಣಮಣಿ (ನಾ). ಕೆಂಪುರತ್ನ; ಮಾಣಿಕ್ಯ : ಶೋಣಮಣಿಕಳಶಕರಕಿಸಲಯಂಗಳಾ ನಭಶ್ಶ್ರೀಯನಾಲಿಂಗಿಸುವ ಬಾಗಿಲ್ವಾಡಂಗಳೊಳಮವಱ ಮುಂದೆ ಸಂದಣಿಸಿದ ಮರಕತ ಮಕರತೋರಣಂಗಳೊಳತಿರಮಣೀಯಮಾಗಿ (ಪಂರಾಮಾ. ೫-೩೪ ವ). [ಸಂ.]

ಶೋಣಾಂಬುಜ (ನಾ). ಕೆಂಪುತಾವರೆ; ಕೆಂದಾವರೆ : ಅರಳ್ದ ಶೋಣಾಂಬುಜ [ಪಾಠಾಂ. ಶೋಣಾಂಬರ]ಚ್ಛಾಯೆಗಳಡರ್ದುವನೆ ಭರದಿಂದ ಕತ್ತಲೆಯ ಮೇಲೆ ಬಹ ರವಿಯ ರಥತುರಗಖುರಪುಟದಿಂದಮೇಳ್ವ ಕೆಂದೂಳ್ಗಳೆನೆ . . . ಸಂಧ್ಯಾರಾಗಮ್ಮೆದ ರಂಜಿಸುತಿರ್ದುದಂದು ಮೂಡಣದಸೆಯೊಳು (ಚೈಮಿಭಾ. ೧೭-೧೧). [ಶೋಣ + ಅಂಬುಜ]

ಶೋಣಾಶ್ವ (ನಾ). ಕೆಂಪು ಬಣ್ಣದ ಕುದುರೆ : ಶೋಣಾಶ್ವಂಗಳ್ ರಜತರಥಮಂ ಪೂಡೆ ಕುಂಭಧ್ವಜಂ . . . ಮಾ[ಱೊ]ಡ್ಡು ದಲ್ ಸಾಲದನ್ನೀ ಬಾಣಾವಾಸಕ್ಕೆನುತುಮಳವಂ ಬೀಱುತುಂ (ಪಂಪಭಾ. ೧೧ ೫೬). [ಸಂ.]

ಶೋಣಿತ (ಗು). ೧. ಕೆಂಪುಬಣ್ಣದ. (ನಾ). ೨. ನೆತ್ತರು ; ರಕ್ತ : ಕುರುಕುಲ ಶೋಣಿತಪಾದಪದ್ಮತಳಂ ತಳೋದರಿಗೆ ವೃಕೋದರನಾಗಿಪಂ ಕಚಬಂಧ ಬಂಧು ರತೆಯಂ (ಗದಾಯು. ೧-೭೧). ೩. ಕುಂಕುಮಕೇಸರಿ. ೪. (ಸಂತತಿಯ ಮೂಲ ರೂಪವಾದ) ಸ್ತ್ರೀಯ ಗರ್ಭಾಣು, — ಅಂಡಾಣು : ಉತ್ಪತ್ತಿ ಶುಕ್ರ ಶೋಣಿತದಿಂದಾದ ಲಜ್ಜೆ ಸಾಲದೇ ಮತ್ತೆ ದುರಿತಂಗಳ ಹೆಱುವ ಹೇಗತನವೇಕಯ್ಯಾ (ಬಸವ. ೧೫೯); ಸ್ತ್ರೀಯ ಶೋಣಿತ ಅಧಿಕವಾದರೆ ಸ್ತ್ರೀಯಹಳು ಪುರುಷನ ಶುಕ್ಲ ಅಧಿಕವಾದರೆ ಪುರುಷನಹನು (ಎವೃವಿ. ೨೦೬). [ಸಂ.]

ಶೋಣಿತಮೇಹನ (ನಾ). ಮೂತ್ರದಲ್ಲಿ ರಕ್ತಹೋಗುವ ಒಂದು ಬಗೆಯ ರೋಗ ; ರಕ್ತಮೇಹ : ಇನಿತಿನಿತು ರಕ್ತಮಂ ನೀರೆನಿತನಿತುಂ ಮೂತ್ರಿಸುತ್ತುಮಿರೆ ಶೋಣಿತಮೇಹನಮಂಬುದು (ಅಶ್ವಶಾ. ೧೧-೨೩). [ಸಂ.]

ಶೋಣೋತ್ಪಲ (ನಾ). ಕೆಂಪುಬಣ್ಣದ ನೈದಿಲೆ : "ಅರುಣಂ-ಕುಂಕುಮ, ಸಿಂಧೂರ, ಶೋಣೋತ್ಪಲ" (ಓಪಧಿ. ೩). [ಸಂ.]

ಶೋತೆ 'ಸೊದೆ' ನೋ.

ಶೋಥ (ನಾ). ಊದಿರುವುದು ; ಬಾವು : "ಶೋಫಃ, ಶ್ವಯಥುಃ, ಶೋಥಃ— ಬಾತುಕೊಳ್ಳುವಿಕೆ, ಬಾವು" (ಸಿದ್ಧಾಂತಿ. ೧೮೩). [ಸಂ.]

ಶೋಥಘ್ನ (ನಾ). (ಊತವನ್ನು ವಾಸಿಮಾಡುವ) ಕೊಮ್ಮೆಗಿಡ ; "ಶ್ವೇತ ಪುನರ್ನವ" (ಪಂಡಿತ. ೨೩೬). [ಸಂ. ಶೋಥಘ್ನೀ]

ಶೋಧ (ನಾ). ೧. ಶುದ್ಧಿಗೊಳಿಸುವುದು ; ಶುಭ್ರಗೊಳಿಸುವುದು. ೨. ಹುಡುಕುವುದು ; ಪತ್ತೆ ಹಚ್ಚುವುದು. ೩. ತನಿಖೆ ; ತಪಾಸಣೆ : ಸಿಂಹವು . . . ಬೇಟೆಯ ಶೋಧಕ್ಕಾಗಿ ನಡೆಯಿತು (ಮುಂಬಯಿ. ೪ ೮೭). ೪. ಹೊಸದಾಗಿ ಕಂಡುಹಿಡಿಯುವುದು ; ಶೋಧನೆ : ಹೊಸ ವೈಜ್ಞಾನಿಕ ಶೋಧಗಳಿಂದ ಅವನ ಇರುವಿಕೆ ಇನ್ನೂ ಬದಲಾಗಿರಲಿಲ್ಲ (ಗ್ರಾಮಾಯ. ೨); ಉದಯನೂ ಸುರೇಶನೂ . . . ತಾವು ಮಾಡಿದ ಶೋಧದ ಬಗೆಗೆ ಹೆಮ್ಮೆಪಟ್ಟರು (ಕಪಪು. ೪-೬೮). ೫. ತಪ್ಪನ್ನು ತಿದ್ದುವುದು, — ಸರಿಪಡಿಸುವುದು. [ಸಂ.]

ಶೋಧಕ (ಗು). ೧. ಶುದ್ಧಿಗೊಳಿಸುವ ; ಸ್ವಚ್ಛಗೊಳಿಸುವ. (ನಾ). ೨. ಬರವಣಿಗೆಯ ಲೋಪದೋಷಗಳನ್ನು ಸರಿಪಡಿಸುವವನು. ೩. ಪತ್ತೆ ಹಚ್ಚುವವನು; ಹುಡುಕುವವನು : ಶೋಧಕನಾದರೆ ಬಾಧಕವಿಲ್ಲ (ಗಾದೆ). [ಸಂ.]

ಶೋಧನ (ನಾ). ೧. ಶುದ್ಧಗೊಳಿಸುವುದು ; ಸ್ವಚ್ಛಮಾಡುವುದು. ೨. (ಲೋಹದಂತೆ) ಪರಿಶುದ್ಧಿಗೊಳಿಸುವುದು. ೩. ತಪ್ಪುಗಳನ್ನು ತಿದ್ದುಪಡಿಮಾಡುವುದು. ೪. ಸಾಲತೀರಿಸುವಿಕೆ; ಋಣ ಸಂದಾಯ. ೫. ಶಿಕ್ಷೆ; ದಂಡನೆ. ೬. ಸುಣ್ಣ. ೭. [ಗಣಿತ] ಕಳೆಯುವುದು ; ವ್ಯವಕಲನ : "ಗತ ಮದೂನಂ ಶೋಧನಂ ಕಳಹಮಕ್ಕು" (ಮಂಗರಾ. ೧೩೦-೧೮). ೮. (ವಮನ, ವಿರೇಕ ಮೊದಲಾದುವುಗಳ ಮೂಲಕ) ಶರೀರವನ್ನು ಶುದ್ಧಿಗೊಳಿಸುವುದು : ಔಷಧವೆಂಬುದು ಶೋಧನವೆಂದೂ ಶಮನವೆಂದೂ ಸಂಕ್ಷೇಪದಿಂದ ಎರಡು ತೆರ ನಾಗಿರುವುದು (ಸಕವ್ಯ. ೧೮). [ಸಂ.]

ಶೋಧನಿ (ನಾ). ಕಸಪೊರಕೆ; ಬರಲು : "ಸಮ್ಮಾರ್ಜನೀ, ಶೋಧನೀ - ೨ . . . ಪರಕೆ, ಕಸಬರಲು" (ಸಿದ್ಧಾಂತಿ. ೧೦೪). [ಸಂ. ಶೋಧನೀ]

ಶೋಧನೆ (ನಾ). ೧. ಶುದ್ಧಿಗೊಳಿಸುವಿಕೆ. ೨. ಸೋಸುವಿಕೆ : (ಕಿ). ೩. ಪರಿಶೀಲನೆ ; ಪರಿಶೋಧನೆ : ರುದ್ರನಾಟಕವು ಕರುಣೆ ಭಯಗಳನ್ನು ಪ್ರಚೋದಿಸಿ ಅಂತಹ ಭಾವಗಳ ಶೋಧನೆಯನ್ನು ಮಾಡಬೇಕೆಂದು ಅರಿಸ್ಟಾಟಲನು ಹೇಳಿರುವುದು ತಾತ್ವಿಕವಾಗಿ ಸರಿಯಾದುದೇ . . . ಎಂಬುದನ್ನು ಈಗ ವಿಮರ್ಶಿಸಬಹುದು (ಅರಿಕಾ. ೧೯೭). ೪. ಹುಡುಕುವುದು; ಪತ್ತೆಹಚ್ಚುವುದು. ೫. ತನಿಖೆ; ತಪಾಸಣೆ. ೬. ತಪ್ಪುಗಳನ್ನು ತಿದ್ದುವುದು, — ಸರಿಪಡಿಸುವುದು. ೭. ಸಾಲ ತೀರಿಸುವುದು; ಋಣಸಂದಾಯ. ೮. ಹೊಸದಾಗಿ ಕಂಡುಹಿಡಿಯುವುದು; ಸಂಶೋಧನೆ : ಮಕ್ಕಳಿಗೆ ಚಟುವಟಿಕೆಯಿಂದಿರಲು ತುಂಬ ಆಸೆ. ಅವರ ಆಸಕ್ತಿಯ ಪ್ರವಾಹ ಸಾಮಾನ್ಯವಾಗಿ ಆಟ, ಸಮಾಜಜೀವನ, ರಚನೆ, ಶೋಧನೆ, ಕಲಾಕೌಶಲ — ಈ ಐದು ಮಾರ್ಗಗಳಲ್ಲಿ ಹರಿಯುತ್ತದೆ (ಶಿಕ್ಷದ. ೧೪೨). [ಸಂ. ಶೋಧನ]

ಶೋಧಿತ (ಗು). ೧. ಚೊಕ್ಕಟಗೊಳಿಸಿದ ; ಶುದ್ಧಮಾಡಿದ. ೨. ಸೋಸಿದ. ೩. ಸರಿಪಡಿಸಿದ ; ತಿದ್ದಿದ. ೪. ಋಣದಿಂದ ವಿಮೋಚನೆ ಹೊಂದಿದ ; ಸಾಲದಿಂದ ಬಿಡುಗಡೆ ಹೊಂದಿದ. ೫. ದೇಹದ ಕಲ್ಮಶವನ್ನು ವಿರೇಚಕಗಳ ಮೂಲಕ ಶುದ್ಧಿಗೊಳಿಸಿದ. [ಸಂ.]

ಶೋಧಿಸು (ಕ್ರಿ). ೧. ಚೊಕ್ಕಟಗೊಳಿಸು; ಶುದ್ಧಿಮಾಡು : ಆಗಳಾ ಗುಹಾದ್ವಾರಮಂ ಆ ಪತಾಕಿನೀಪತಿ ಪಡೆಗೆ ನಡೆಯಲಿಂ ಬರ್ಪಂತು ಶೋಧಿಸಿ [ಪಾಠಾಂ. ಮಾಡಿ] (ಆದಿಪು. ೧೩-೪೦ ವ) : ಪೂರ್ವದ ರಾಜಸೂಯದ ವಿನುತಮಖಭೂಮಿಯನು ಶೋಧಿಸಲಲ್ಲಿ ಲಾಂಗಲದ ಮೊನೆಗೆ ಸಿಲುಕಿದ ಭೂಗತಾಲಯವನರುಹಾಕರವಿರಲು ಕಂಡೆನು . . . ಕೋಮಲೆಯ (ತೂರರಾ. ೧-೧೬-೨೭). ೨. (ಕೃತಿ ಮುಂತಾದುವುಗಳ) ದೋಷವನ್ನು ತಿದ್ದಿ ಪರಿಷ್ಕರಣಗೊಳಿಸು : (ಕಿ). ೩. ಸೋಸು ; ಗಾಳಿಸು : ತಣ್ಣಿತಪ್ಪಗ್ರವಣಿಯಂ ಶೋಧಿಸಂದಂಬ ಸಣ್ಣೀರಮಪ್ಪ ಸಿರಿಗಂಧಮಂ ಬೆರಸಂಬ (ಬಸರ. ೭-೪೭); ಒಳ್ಳಿತಾಗವೂ ನಿನ್ನ ಸಾರಣೆಯಲ್ಲಿ ಜಂತುಗಳಿದ್ದು ಶೋಧಿಸಿತಿಲ್ಲವೋ (ಬಸಪು. ೪೭-೧೪) ; ಶೋಧಿಸಿದ ತನಿಬೆಲ್ಲವಿಕ್ಕಿದ ಹೂರಿಗೆಯ ಮದೆಯಲ್ಲಿ ಪರಡಿಯ ಶಾವಿಗೆಯ . . . ನವಘೃತ ಸೂಪದಂಶಕದಲ್ಲಿ ನೋಡಲಿ ನಮ್ಮನೆಂದುದು ಧೂರ್ತ ವಟುನಿಕರ (ಕುವ್ಯಾಅ. ೧೫-೭); ಕಷಾಯವನ್ನು ಕಂಚಿನ ಬಟ್ಟಲಿಗೆ ಶೋಧಿಸಿ ಬಿಟ್ಟರು (ಚಿಂಗಾಳ್ವ. ೧೫೫). ೪. ಅಕ್ಕಿ ಮುಂತಾದ ಧಾನ್ಯಗಳಿಂದ ಕಸವನ್ನು ಆರಿಸಿ ತೆಗೆ; ಹಸನುಗೊಳಿಸು : (ಕಿ). ೫. ಹುಡುಕು; ಅರಸು : ಸಜ್ಜೆಯ ಕಾಪಿನವರ್ ಪರಿತಂದು ಶೋಧಿಸಿ ನೋಡಿ ಪಚ್ಚಡಿಕೆಯಂ ಪತ್ತಿರ್ದ ಕೂಱೆಯಂ ಕಂಡು (ಪಂಚತಂ. ೧೩೦-೧೪) ; ಜಲಗಾಱನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ (ಮಹಾದೇ. ಬ. ೪೬-೧೦೯); ನಿನ್ನೆ ಶಸ್ತ್ರವ ಬಿಸುಟ ಯೋಗವಿಪನ್ನನನು ನೀನೇನ ಮಾಡಿದೆ ನಿನ್ನ ಶೋಧಿಸಿ ಬಳಿಕ ಪರರನು ಹಳಿವುದೇನೆಂದ (ಕುವ್ಯಾದ್ರೋ. ೧೯-೨೮); ಮನೆ ಮನೆಯ ರಕ್ಕಸಮಡದಿಯರ ಮಱದೊಱಗಿದರ ವಂಗಡವ ಶೋಧಿಸಿ ದಾಟಿದನು ಕೋಟೆಯನು (ತೂರರಾ. ೫-೨-೧೭). [ಶೋಧನ + — ಇಸ್ಸು]

ಶೋಧ್ಯ (ಗು). ೧. ಶೋಧಿಸಬೇಕಾದ. (ನಾ). ೨. ಪರೀಕ್ಷೆಗೊಳಗಾಗಬೇಕಾದ ವ್ಯಕ್ತಿ : ದಿವ್ಯವನ್ನು ನಡೆಯಿಸುವ ನ್ಯಾಯಾಧಿಪತಿ ಮತ್ತು ದಿವ್ಯಕ್ಕೆ ಗುರಿಯಾಗಿರುವ 'ಶೋಧ್ಯ'ರಿಬ್ಬರೂ ಹಿಂದಿನ ದಿನ ಉಪವಾಸವಿದ್ದು ಮಾರನೆಯ ದಿನ ಪ್ರಾತಃಕಾಲ

ಸ್ನಾನಮಾಡಬೇಕು (ಕಶಾಅ. ೧೯೫). ೩. [ಗಣಿತ] ಕಳೆಯುವುದು ; ವ್ಯವಕಲನ : ರಜತಂ, ರಜಿತಂ . . . ವಿಶೋಧ್ಯಂ, ಶೋಧ್ಯಂ, ತ್ಯಜಿಸು, ಕಳೆ — ಇಂತಿನಿತುಂ ಕಳೆವುದಕ್ಕೆ ಪೆಸರು (ವ್ಯವಹಾ. ೧೧-೨೨). [ಸಂ.]

ಶೋಫ (ನಾ). ೧. ಬಾವು ; ಊತ : ಜನಿಯಿಸಿದ ಶೋಫಮದು ಲೇಪನದಿಂ ಪೋಗದೊಡೆ ಶಸ್ತ್ರಕರ್ಮವನೆಸಪಂತೆ (ಪಾರ್ಶ್ವಪು. ೨-೪೩); ನೊಸಲೊಳ್ ಪುಟ್ಟಿದ ಶೋಫಂ ಪಸರಿಸಿ ತಲೆ ಬಾತು ಸುಯ್ದೊಡಂ . . ವಿಗತಜೀವಿತನಕ್ಕುಂ (ಅಶ್ವಶಾ. ೬-೪೪); ಗಣಕೆಯ ಸಮೂಲವಂ ಅಂಬಿಲದಲ್ಲಿ ಅರೆದು ನೆತ್ತಿಗೆ ಒತ್ತಲು ಮೈಯ ಮಾಸಲು ಜಲಗರ ಶೋಫ ವಾತ ಗುಣ (ವಿವೇಕ. ೪). ೨. ಕ್ಷಯರೋಗ : "ರಾಜಯಾಕ್ಷ್ಮಾ, ಕ್ಷಯಃ, ಶೋಫಃ – ಈ ೩ ಕ್ಷಯವ್ಯಾಧಿ" (ಹಲಾಯು. ೯೪-೪೪೮). [ಸಂ.]

ಶೋಬಾನ 'ಸೋಬಾನ' ನೋ.

ಶೋಬೆ, ಶೋಭೆ$_1$ (ನಾ). ೧. ಖಾಯಿಲೆಯಿಂದುಂಟಾಗುವ ಊತ, – ಬಾವು: (ಕ). ೨. ಹೊಟ್ಟೆಯು ಊದಿಕೊಳ್ಳುವ ಒಂದು ಬಗೆಯ ಖಾಯಿಲೆ; ಜಲೋದರ: 'ಶೋಬೆರೋಗಿ' ಪರಾ. **ಶೋಭೆ**$_1$: ೧. ಹೃದಯ, ಶ್ವಾಸಕೋಶ, ಪಿತ್ತಕೋಶ, ಮೂತ್ರಕೋಶ ಸಂಬಂಧವಾದ ರೋಗಗಳಿಂದಲೂ ಶೋಭೆಯುಂಟಾಗುವುದು (ಗ್ರಾಮಾಕ. ೧೮೨); ನನ್ನ ಶರೀರದಲ್ಲಿ ಈಗ ತಿಂಗಳಿಂದ ಕೇವಲವಾಗಿ ಅಲಸಿಕೆಯಾಗಿದೆ. ಜ್ವರ ಬಂದು ಬಹಳಮಟ್ಟಿಗೆ ನಿತ್ರಾಣಮಾಡಿತು. ಶೋಭೆ ಕಾಣಿಸಿದೆ (ಮಾಮರಾ. ೧೦). ೨. ಕೆಂಪಾದ ಚಂದನವನ್ನು ಧರಿಸಿದರೆ . . . ವಿಸರ್ಪರೋಗವನ್ನೂ ಶೋಭೆ ಮೊದಲಾದ ರೋಗವನ್ನೂ ಹೋಗಲಾಡಿಸುವುದು (ಸಕವೈ. ೪೨). [< ಸಂ. ಶೋಫ. / ತಮಿ. ಚೋಪ್ಪೆ]

ಶೋಬೆರೋಗಿ (ನಾ). ಜಲೋದರರೋಗವುಳ್ಳ ವ್ಯಕ್ತಿ : ಶೋಬೆರೋಗಿ, ರಕ್ತಪಿತ್ತರೋಗಿ, ಮೇಹರೋಗಿ ಇವೇ ಮೊದಲಾದ ರೋಗವುಳ್ಳವರು ಮರ್ದನಕ್ಕೆ ಅಯೋಗ್ಯರು (ಸಕವೈ. ೩೦). [ಶೋಬೆ + ರೋಗಿ]

ಶೋಭಕೃತು (ಗು). ೧. ಶುಭವನ್ನುಂಟುಮಾಡುವ. (ನಾ). ೨. ಅರುವತ್ತು ಸಂವತ್ಸರಗಳಲ್ಲಿ ಒಂದು : ಆ ವರ್ಷವೇ ಪ್ರಭವ . . . ಶೋಭ [ಪಾಠಾಂ. ಶೋಭನ] ಕೃತು ಕ್ರೋಧಿ ವಿಶ್ವಾವಸು . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩) [ಸಂ. ಶೋಭಕೃತ್]

ಶೋಭನ (ಗು). ೧. ಹೊಳೆಯುವ ; ಪ್ರಕಾಶಮಾನವಾದ. ೨. ಮಂಗಳಕರವಾದ: ಇಂದಿನ ವಾಸರಮೆ ಶೋಭನವಿಧೇಯವಾಸರಮಿಂದಿನ ದಿವಸಮೆ ಶುಭದಿವಸಾಗ್ರೇಸರಂ (ಆದಿಪು. ೪-೩೦ ವ); ಎಲೆ ಕಮಲನಾಭನೆ ನಿನ್ನ ಭಕ್ತನು ಆವವನಾದರೂ ಶೋ[ಭ]ನ ಸಾಮ್ರಾಜ್ಯಪದವನು ಸುಲಭವಾಗಿ ಕಾಣುವನು (ಶಪಥ. ೨). (ನಾ). ೩. ಹೊಳಪು; ಕಾಂತಿ : ಶೋಭನದ ದೂಣೆಯೊ ಸಿದ್ಧರಸದ ಸದನಮೋ . . . ಇಂತೊಪ್ಪುವಾ ಕಲಧೌತಶೃಲದಲಿ (ಬಸಪು. ೧-೩೯). ೪. ಮಂಗಳಕರವಾದುದು; ಕಲ್ಯಾಣಕರ ವಾದುದು: ಶುಭಮಸ್ತು, ಶೋಭನಮಸ್ತು (ಮದಕಿ. ೧-೧ ಅಡಿಟಿ). ೫. ಸೊಗಸು; ಚೆನ್ನು ; ಅಂದ : ನೃತ್ಯಗೀತಂಗಳಿಂದತಿಶೋಭನಮಾಗ ಚಿತ್ತವೃತ್ತಿಯಿಂ ಶಿವನಂ ಭಜಿಸಿ (ಹಮ್ಮೀರ. ೨-೫೫ ವ); ಎಲೆ ಶೋಭನವಾದ ಹುಬ್ಬುವುಳ್ಳಾಕೆಯೆ ರುದ್ರಾಣಿ ನಾಮಗಳ್ ನಾರಾಯಣನಲ್ಲಿ ಸಮನ್ವಯ ಮಾಡಬೇಕು (ತಾತ್ಪಸಿ. ೪-೧). ೬. ಹಿತ; ಇಂಪು : ಕೆಲರಾ ಕುಂಮಿಂಗ ದ್ವಿತ್ವಮಂ ಪೇಟ್ಟರ್; ಅದಂ ಶ್ರವಣಕ್ಕೆ ಶೋಭನವಾಗದ ತಾಣದೊಳ್ ಪೇಟಲಾಗದು (ಶಮದ. ೨೨೮ ವೃತ್ತಿ). ೨. ವಿವಾಹ ಮುಂತಾದ ಮಂಗಳಕಾರ್ಯ, - ಶುಭಕಾರ್ಯ : ನೀವಱಿವೆಡೆಯೊಳ್ ರೂಪವಯೋವಿದ್ಯಾವಿಭವ ವಂಶಸಂಪತ್ತಿಯೊಳಿಂದೀವರನೀಕೆಗ ತೂಣೆಯೆನೆ ಭೂವರರೊಳ್ನೋಡಿ ಮಾಡುವುದು ಶೋಭನಮಂ (ವರ್ಧಪು. ೯-೪೦). ೮. ಮಂಗಳಕರವಾದ ದಿನ ; ಶುಭದಿವಸ : ಶುಭಾಶುಭದ ಫಲವ ಹೊತ್ತು 'ಶೋಭನ'ವಿದೊ ಬಂದಿದೆ (ನಲಮು. ೨೫-೧೪). ೯. ಮಂಗಳಪ್ರಸಂಗ ಗಳಲ್ಲಿ ಹಾಡುವ ಹಾಡು; ಸೋಬಾನೆ : ಮುತ್ತೈದೆಯರು ಪಾಡಿದರು ಶೋಭನವನು (ಭಾವಚಂ. ೫-೨೬); ಗಂಧರ್ವಸ್ತ್ರೀಯರು ಗಾನವ ಕೇಳಿಸಲು ರುದ್ರಕನ್ನಿಕೆಯರು ಶೋಭನವಂ ಪಾಡಲು (ಧೃರಸಾ. ೬ ೩೪). ೧೦. ನಿಷೇಕ; ಪ್ರಸ್ತ : ಮದುವೆಯಾದ ಮರುತಿಂಗಳಲ್ಲೇ ಶ್ರದ್ಧಾ ಮೈನೆರೆದಳು. ಶೋಭನವೂ ಆಯಿತು (ಹೊಕ್ಕಿ. ೧೯). ೧೧. ಮೈಥುನ; ಸಂಭೋಗ. ೧೨. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಐದನೆಯದು : ವಿಷ್ಕಂಭ ಪ್ರೀತಿ ಆಯುಷ್ಮಾನ್ ಸೌಭಾಗ್ಯ ಶೋಭನ . . . . ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳು (ವಿವೇಕ. ೩೨೦). [ಸಂ.]

ಶೋಭನಂಬೆಱು (ಕ್ರಿ). ಅಂದವಾಗು ; ಮನೋಹರವಾಗು : ಪೂಸಜಾದಿ ಚೆಲ್ವನೀಯುತ್ತಿರೆ ದೇಸಿಯಿಂ ನಿಮಿರ್ದ ಸೋರ್ಮುಡಿಯೊಳ್ ನೊಸಲಲ್ಲಿ ಶೋಭನಂಬೆತ್ತಿರೆ ಚಾರುಚಂದನದ ಬೊಟ್ಟು . . . ಪೆಂಡವಾಸದೊಳುವೆಂಡಿರಲಂಕೃತಿಯಿಂದಮಿರ್ಪಿನಂ (ಧರ್ಮಾಮೃ. ೪-೧೩೭). [ಶೋಭನ + ಪೆಱು]

ಶೋಭನಗಾನ (ನಾ). = ಶೋಭನ ೯ : ವಿದ್ಯಾಧರನಂಸುರೋರಗಾದಿಗಳ ಮುತ್ತೈದೆಯರು ಶೋಭನಗಾನಂಗಳನೆಸಗೆ . . . ಬೃಹಸ್ಪತಿಯೆಯ್ದಿ ಜಾತಕರ್ಮಮಂ ರಚಿಯಿಸಿದ (ಹಾಲಾಸ್ಯ. ೧-೧೨-೧೬ ವ). [ಸಂ.]

ಶೋಭನಗೂಡು (ಕ್ರಿ). ಸಂತೋಷಹೊಂದು : ಭಕ್ತರು ಪಾಡೆ ಶೋಭನಗೂಡ ತಾಯ್ ಮೊಲೆಯೂಡೆ ಮುದ್ದುಗಳ ಬೇಡೆ ಧನಮಂ ನೀಡೆ ಬುಧರಿದು ಕೋಡನುತ ಕೊಂಡಾಡೆ (ಬಸಪು. ೨೪-೪೫). [ಶೋಭನ + ಕೂಡು]

ಶೋಭನಿಕ (ನಾ). ನಟರ ಒಂದು ಪ್ರಕಾರ : "ಗ್ರಂಥಿಕ"ರು ಮಾತಿನಲ್ಲಿ ವರ್ಣಿಸುತ್ತಿದ್ದ ಕಂಸವಧ ಬಲಿಬಂಧಗಳನ್ನು "ಶೋಭನಿಕರು" (ಅಥವಾ "ಶೌಭಿಕರು") ಪ್ರತ್ಯಕ್ಷವಾಗಿ ಮಾಡಿ ತೋರಿಸುತ್ತಿದ್ದರು (ಸಂನಾಟ. ೪೧). [ಸಂ.]

ಶೋಭಸ್ಕರ 'ಸೋಬಸ್ಕರ' ನೋ.

ಶೋಭಾಂಜನ (ನಾ). ನುಗ್ಗೆಯ ಮರ : "ಶಿಗ್ರು ಶೋಭಾಂಜನಕಂ" (ಪಪ್ರಕೋ. ೩೫-೧೩). [ಸಂ.]

ಶೋಭಾಕರ (ಗು). ೧. ಸೊಬಗನ್ನುಂಟುಮಾಡುವ ; ಸೊಗಸುಗೊಳಿಸುವ : ಅನಂತದರ್ಶನಮುಮವ್ಯಾಬಾಧಶೋಭಾಕರಾಕ್ಷರನಿರ್ವ್ಯಾಕುಲಮಪ್ಪನಂತಸುಖಮುಂ ಮೆಯ್ವೆತ್ತು ನಿನ್ನೊಳ್ಕರಂ ದೊರೆವೆತ್ತಿರ್ದುದು (ಸುಕುಮಾ. ೪-೫೨). (ನಾ). ೨. ಸೊಗಸನ್ನು ಉಂಟುಮಾಡುವಂಥದು : ನಿರತಿಶಯಕಾವ್ಯ ಶೋಭಾಕರಂ ಗಳಾಗಿರ್ಪ ಧರ್ಮಮವು ಗುಣಮಕ್ಕುಂ (ಕಾವ್ಯಾವ. ೪೯೯); ಹರಿಹರ ಹಿರಣ್ಯಗರ್ಭಾದಿ ಸಕಲಗೀರ್ವಾಣ ಮಣಿಭವನವಾಪೀಕೂಪ ದೀರ್ಘಿಕಾತಟಾಕ ತಟಿನೀನಿಕರ ಶೋಭಾ ಕರಮುಂ (ಜಗವಿ. ೨-೧ ವ). [ಸಂ.]

ಶೋಭಾಕ್ಷತೆ (ನಾ). ಮಂಗಳಕಾರ್ಯಕ್ಕೆ ಉಪಯೋಗಿಸುವ ಅಕ್ಷತೆ : ಅಕ್ಷತೆಯೊಳು ಕುಂಕುಮದಲರ್ಗೂಡಿ ಶೋಭಾಕ್ಷತವಟ್ಟಲಿಟ್ಟಿಹಳು (ಮೋಹತ. ೨೧-೧೦). [ಸಂ. ಶೋಭಾಕ್ಷತ]

ಶೋಭಾಡಂಬರ (ನಾ). ಅತಿಶಯವಾದ ಸೊಬಗು ; ಶೋಭೆ : ವಿನುತಪ್ರಾಸ ಸಂಬಂಧಾಕ್ಷರದೊಳೆಲ್ಲ ಮಾತ್ರಗಳುಂ ತಟ್ಟುಂಬಾಗಿ ಬೆರಸೆ ಶೋಭಾಡಂಬರಮಂ ಪಡೆಗುಮುಚಿತ ಕಾವ್ಯೋಕ್ತಿಗಳೊಳ್ (ಕವಿರಾ. ೨-೩೪). [ಸಂ.]

ಶೋಭಾನ 'ಸೋಬಾನೆ' ನೋ.

ಶೋಭಾನಪಾಠಕ (ನಾ). ಮಂಗಳಗೀತೆಯನ್ನು ಹೇಳುವವನು : ಶುಕ ಶಂಖಂ ಗಜವಾಜಿ ವೀಣೆ ಪಶು ತಾಳಂ ಭೇರಿ ಶೋಭಾನಪಾಠಕ ನೃತ್ಯಂ . . . ಪರ್ಗಿಚ್ಚನಾರ್ ಕಂಡೊಡಂ ಶಕುನಂ ಶೋಭನಕಾಸ್ಪದಂ (ಸೋಮೇಶ. ೬೭). [ಶೋಭಾನ (< ಸೋಬಾನೆ) + ಪಾಠಕ]

ಶೋಭಾನೆ 'ಸೋಬಾನೆ' ನೋ.

ಶೋಭಾವಹ (ಗು). ೧. ಸೊಗಸಾದ ; ಮನೋಹರವಾದ. (ನಾ). ೨. ಸೊಗಸಾದುದು ; ಮನೋಹರವಾದುದು : ಶ್ರೀವನಿತಾಸ್ಯಯಂವರ ವಿನೀಳಸರೋರುಹಮಾಳಿಯಂತೆ ಶೋಭಾವಹಮಾಗೆ ಖಡ್ಗಲತೆ . . . ಆವಗಮೊಪ್ಪೆ ಬೆಳ್ಗೊಡೆ ಮನೋಹರಮಾದುದು ರಾಜ್ಯಮಂಡಪಂ (ಮಲ್ಲಿಪು. ೯-೧೧೦). [ಸಂ.]

ಶೋಭಾಷ್ಟಕ (ನಾ). ಮದುವೆ, ಮುಂಜಿ ಮುಂತಾದ ಮಂಗಳಕಾರ್ಯಗಳಲ್ಲಿ ಸಾಂಪ್ರದಾಯಿಕವಾಗಿ ಶುಭವನ್ನು ಕೋರಿ ಹೇಳುವ ಎಂಟು ಮಂಗಳ ಶ್ಲೋಕಗಳು : ವೀಣಾನಿಕರನಾದಂ ಮೊರೆಯೆ ಶೋಭಾಷ್ಟಕ [ಪಾಠಾಂ. ಕಕುಭಾಷ್ಟಕ] ವದಿರುತಿರೆ ಚಾಂಗುಬಲಯೆಂಬಾ ರವಂಗಳಲಿ (ಬಸಪು. ೪-೭). 'ಮಂಗಳಾಷ್ಟಕ' ಪರಾ. [ಸಂ.]

ಶೋಭಿತ (ಗು). ೧. ಸುಂದರವಾದ ; ಅಂದವಾದ. ೨. ಅಲಂಕೃತವಾದ. (ನಾ). ೩. ಅಂದವಾದುದು ; ಮನೋಹರವಾದುದು : ಶೋಭಿತವೆನಿಪ ಧಿಧ್ರಿತವಾಗಿರದಖಂಡಬಿಲ್ವಪತ್ರೆಯನೆಯ್ದೆ ಕೊಯ್ದು (ಬಸಪು. ೪೩-೨೬); ಚತುರಪದಗತಿಯ ಸರಸಧ್ವನಿಯ ವರ್ಣಶೋಭಿತದಲಂಕಾರದ ಸುಲಕ್ಷಣದ ಲಾಲಿತಶ್ರುತಿರಂಜನದ . . . ವಾಜಿಯಂ ಕಂಡು (ಚ್ಮಮಿಭಾ. ೪-೮). [ಸಂ.]

ಶೋಭಿತಾಂಗ (ನಾ). ಸುಂದರವಾದ ಅವಯವಗಳುಳ್ಳವನು; ಚೆಲುವ : ಶ್ರೀವೃಕ್ಷ ಸಂಪೂರ್ಣ ಲಾಂಛನವಕ್ಷಂ ಕರಮೊಪ್ಪಿ ತೋರ್ಪ ಧವಳಾಕ್ಷಂ ಶೋಭಿತಾಂಗಂ ಭುಚಾನನಮಂದಿಂತಿವಗಣ್ಯಪುಣ್ಯಜನಿತಂ ಜೀವಕ್ಕೆ ನಿರ್ವ್ಯಾಕುಲಂ (ಸುಕುಮಾ. ೫ ೩೬). [ಸಂ.]

ಶೋಭಿಸು (ಕ್ರಿ). ೧. ಅಂದವಾಗು ; ಚೆಲುವಾಗು : ದಸ ಮಖಧೂಮದಿಂ ದ್ವಿಜರ ಹೋಮದಿನೊಳ್ಗೆಱೆ ಹಂಸಕೋಕಸಾರಸಕಳನಾದದಿಂದೊಳಗೆ ವೇದನಿನಾದದಿನೆತ್ತಮೆಯ್ದೆ ಶೋಭಿಸೆ (ಪಂಪಭಾ. ೧೪-೫೭); ಹೇಳಲೇನದನಂಗ ಧರಣೀಪಾಲನವನಿಯ ಸಿರಿಯ ಸೊಂಪಿನ ಲೀಲೆಗಿದು ನೆಲವೀಡೆನಲು ಶೋಭಿಸಿತು ಸೊಗಸಿನಲಿ (ತೊರರಾ. ೧-೬-೮). ೨. ಒಪ್ಪು ; ಹೊಂದು ; ಅಳವಡು : ಗುಣವರ್ಮನ ಜಾಣ್ಮವಿರತ್ನನೋಜೆ ಶೋಭಿಸೆ ನೆಲಸರ್ಕೆ ಧಾರಿಣಿ ಮನಂಗೊಳೆ ಮತ್ತಿತಿಯೊಳ್ವಿರಂತರಂ (ಧರ್ಮಾಮೃ. ೧-೩೯); ಕೈಶಿಕಿಯೋಳ್ ವರಾಳವರ್ಣಂ ಶೋಭಿಸುಗುಂ (ಹಮ್ಮೀರ. ೨-೯೦ ವ). [ಶೋಭನ + — ಇಸ್ಕು]

ಶೋಭೆ$_1$ 'ಶೋಬೆ' ನೋ.

ಶೋಭೆ$_2$ (ನಾ). ೧. ಹೊಳಪು ; ಕಾಂತಿ ; ಪ್ರಕಾಶ : "ಉದ್ಯನ್ಮಂಡಲಾಗ್ರಂ ಸಲೆ ಘನಪದವೀಶೋಭೆಯಂ ಪರ್ಚಿಸುತಿರ್ಪಿನಮೊಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂ ಗೋಪಮಾರ್ತಂಡದೇವಂ (ಜಗವಿ. ೧-೪); ಲಲಿತಯ ಮುಖದಲ್ಲೊಂದು ಬಗೆಯ ಶೋಭೆ, ಕಣ್ಣಿನಲ್ಲೊಂದು ಹೊಸ ಕಾಂತಿ ಸೂಸುತ್ತಿತ್ತು (ಅಲಹಾ. ೮೦). ೨. ಚೆಲುವು ; ಅಂದ ; ಸೊಗಸು : ಶೋಭಾಧಾಮಾಮರೇಂದ್ರಸ್ತುತಜನನಿರ ಕುಂಭಾಗ್ರದೊಳ್ . . . ದೇವೇಭಂ ಶ್ರೀಪಾಂಡುರಂ ಮುನ್ನಡರ್ದಮರಕುಭೃತ್ಕಂದರಕ್ಕೆಯ್ದುದಾಗಳ್ (ಪಾರ್ಶ್ವಪು. ೧೪-೬೦); ಸೊಂಡಿಲೊಂದು ಚೆಲ್ವಿನ ಪಲ್ಲಮಱೆ ಬಗೆಯೊಳೊಡರ್ವಂತು ಪೊತ್ತ ನಾಲ್ದೋಳ ಶೋಭೆಯ ಕಂದನೊಂದಿರಂ ಮನಂಬುಗಲೊಡಂ (ರಾಮಾಶ್ವ. ೭೭-೧೩); ಇವನಿಲ್ಲದೆಯೆ ಯಾವ ಸಭೆ ಸಮಾರಂಭಕ್ಕು ಶೋಭೆಯಿಲ್ಲ (ನೆಲಮು. ೨೯-೩). ೩. ವಿಶಿಷ್ಟವಾದ ಅರ್ಹತೆ, — ಯೋಗ್ಯತೆ. ೪. ಬೆಡಗು ; ವಿಲಾಸ. ೫. ಲಕ್ಷ್ಮಿ : "ಸಿರಿ ವಿಭ್ರಮ ಕಾಂತಿ ಗದಾದಿ ಶೋಭೆಯಕ್ಕು" (ನಾನಾರ. ೧೩೦). ೬. ಎಣೆ; ಜೋಡು; ಸಮಾನ : "ಪಡೆ ದೊರೆ ಪಾಸಟಿ ಪಾಟಿಯು ಗಡೆಯಣೆಯನೆ ಶೋಭೆ" (ಕವಿಕಾ. ೧೩೬). [ಸಂ. ಶೋಭಾ]

ಶೋಭೆಗೊಳ್ಳು (ಕ್ರಿ). ಅಂದವಾಗು; ಮನೋಹರವಾಗು : ಅರುಹಮಂದಿರ ಶೋಭೆಗೊಂಡಿರೆ . . . ಪುರಜನ ರಾಜಸುತ ಬಂದಿರಲು (ಪಜ್ಜಪು. ೧೧೩-೧೦೦). [ಶೋಭೆ$_2$ + ಕೊಳ್ಳು$_1$ (< ಕೊಳ್$_1$)]

ಶೋಭೆವಡಿಸು (ಕ್ರಿ). ಅಂದಗೊಳಿಸು; ಸೊಗಸುಗೊಳಿಸು : ತೊಂಡಲು ಝಲ್ಲಿ ಜಲ್ಲರಿಯನಿಳುಹಿಯತಿಶೋಭೆವಡಿಸೀಯಲ್ಲಭಿತ್ತಿಯನ್ನು ಕರ್ಪೂರಕದಡಿಂ ಪೂಸಿ ಸಲ್ಲಲಿತಕುಂಕುಮವ ಕಾರಣೆಯ ರಚಿಸಿ (ನವಮೋ. ೨೧-೧೭). [ಶೋಭೆ$_2$ + ಪಡಿಸು]

ಶೋಭೆವಡೆ (ಕ್ರಿ). ಚೆಲುವಾಗು ; ಮನೋಹರವಾಗು : ಈಳಾಪತಿ ರಂಜಿಸಿರ್ದನತ್ಯಂತ ವಿಚಿತ್ರ ಶೋಭೆವಡೆದೋಲಗಶಾಲೆಯೊಳ್ (ಪುಪ್ರಪು. ೭-೨೫). [ಶೋಭೆ$_2$ + ಪಡೆ$_1$]

ಶೋಭೆವೆಱು (ಕ್ರಿ). = ಶೋಭೆವಡೆ : ನಾನಾವನಕುಸುಮಕೃತೋತ್ತಂಸಕರ್ಣಾವತಂಸಂ ಮನುವಂಶಂ ಶೋಭೆವೆತ್ತಂ ಸುಕವಿಜನಮನೋಮಾನಸೋತ್ತಂಸಹಂಸಂ (ಆದಿಪು. ೧೧-೧೫); ವಿನಯ XX ದಾರಮುನ್ನತಿಕುಲಂಗಾಜಯಮೈಶ್ವರ್ಯಮಂಬಿನಿತುಂ ಶೋಭಿಸೆ ಶೋಭವೆತ್ತನೆನುತುಂ . . . ಕೀರ್ತ್ತನಗೆಯ್ದುಂ (ಎಕ. VII. ಶಪೂ. ೯೭-೭. ೧೧೩); ತಲೆಮಾಲೆಗಳ್ ಶೋಭವೆತ್ತು ರಂಜಿಸೆ ಮದನಬಲಶಿಕ್ಷನಮಳಭಾಳಾಕ್ಷಂ ವಿರೂಪಾಕ್ಷನಿರ್ದಂ ವಿಲಾಸದಿಂದೆ (ಚಿಪು. ೨-೨೨). [ಶೋಭೆ$_2$ + ಪೆಱು$_1$]

ಶೋಷ (ನಾ). ೧. ಒಣಗುವಿಕೆ; ಬಾಡುವಿಕೆ. ೨. ಕ್ಷಯರೋಗ : ನುಗ್ಗೆ, ಮಂಗರವಳ್ಳಿ, ಕೀರಕಸಲೆ, ಗಣಜಿಲೆ, ಇವುಗಳ ರಸದಲ್ಲಿ ಪ್ರತ್ಯೇಕ ೭ ಭಾವನೆ ಕೊಟ್ಟು ಬಿಸಿ ನೀರಲ್ಲಿ . . . ಕೊಡಲು ಉಚ್ಚರಿಸುವುದು ಮಾಣ್ಗುಂ. ಶೋಷ ಹರ (ವೈದ್ಯವಿ. ೧೬). [ಸಂ.]

ಶೋಷಂಬೆರು (ಕ್ರಿ). ಒಣಗಿಹೋಗು ; ಬಾಡು : ಈ ಕೋಮಳೆ ಕಾಮಕ್ಲಿಷ್ಟ ಚಿತ್ತಕ್ಕಳಲನೊಲವುಮಂ ಪುಟ್ಟಿಪಳ್ ನೋಡೆ ಪತ್ರಾವಳಿ ಶೋಷಂಬೆತ್ತ ಚ್ಛೈತ್ರಾ ಗಮಪವನ ಪರಿಸ್ಪೃಷ್ಟವಾಸಂತಿಯಾವೋಲ್ (ಶಾಕುಂತ. ೩೫-೬೧). [ಶೋಷ + ಪೆರು$_1$ (< ಪೆಱು$_1$)]

ಶೋಷಣ (ಗು). ೧. ಒಣಗುವಂತೆ ಮಾಡುವ ; ಒಣಗಿಸುವ. (ನಾ). ೨. ಒಣಗುವಿಕೆ ; ಬಾಡುವಿಕೆ : "ಶಕುನ ಶೋಷಣಗಳೊಳ್ ತಾಱೆನಿಕ್ಕುಂ" (ಶಬ್ದಮಂ. ೧೧೭). ೩. ಒಣಗಿಸುವಿಕೆ : ಗ್ರಹಣ, ಕಬಳನ, ಶೋಷಣ, ದಹನ, ಶೋಧನವೆಂಬ ಪಂಚಕ್ರಿಯೆಗಳಿಂ . . . ವಿಭೂತಿಗಳ್ಳಮದಿಂ ಜನಿಸಿ (ವಿವೇಕ. ೧೦೩). [ಸಂ.]

ಶೋಷಣೆ (ನಾ). ೧. ಬತ್ತಿಹೋಗುವುದು ; ಒಣಗುವುದು : ವಯಸ್ಸಾಗಿದ್ದ ಆಕೆಗೆ ಈ ದುರ್ಧರ ದುಃಖದಿಂದ ಮಿದುಳಿನ ಒಂದು ಭಾಗಕ್ಕೆ ರಕ್ತ ಶೋಷಣೆ ಉಂಟಾಗಿದ್ದಿತು (ಶಾಂತಲಾ. ೩೨೪). ೨. (ಆಲಂ) ತುಳಿತ ; ಮೆಟ್ಟುವಿಕೆ : ದಲಿತರು ಶೋಷಣೆಗೆ ಗುರಿಯಾಗುವುದನ್ನು ತಪ್ಪಿಸಬೇಕು (ರೂಢಿ). [ಸಂ. ಶೋಷಣ]

ಶೋಷರುಜಾರ್ತ (ನಾ). ಕ್ಷಯರೋಗಪೀಡಿತನಾದವನು; ಕ್ಷಯರೋಗಿ : ಖರಕಿರಣಂ ಚಂದ್ರಾಂಶದೊಳೆರೆ ಚಂದ್ರಂ ಖರಕರಾಂಶದೊಳ್ ನೆಲಸಿರೆ ಶೋಷರುಜಾರ್ತಂ (ಜಾತಕ. ೨೧-೧೪). [ಸಂ.]

ಶೋಷಿತ (ಗು). ೧. ಬಾಡಿದ ; ಸೊರಗಿದ. ೨. (ಆಲಂ) ತುಳಿತಕ್ಕೆ ಒಳಗಾದ: ಇಡೀ ಉತ್ತರಭಾರತದ ಶೋಷಿತವರ್ಗದ ಜನತೆಯ ನಿತ್ಯಜೀವನದ ಪರಿಚಯವನ್ನು ಜಗತ್ತಿಗೆ ಮಾಡಿಕೊಟ್ಟ ಕಲಾವಿದ ಈತ (ಭಾರದ. ೪೬೭). [ಸಂ.]

ಶೋಷಿಸು (ಕ್ರಿ). ೧. ಒಣಗು ; ಬಾಡು ; ಬತ್ತು : ಸಮಸ್ತ ದುರ್ಜನರ ಹೃತ್ಕುಮುದಂ ಮುಗಿಯ ಸುಜನಚಕ್ರಂಗಳೊಡಗೂಡೆ ದುರ್ಧರವರಸಂ ಶೋಷಿಸೆ (ಪದ್ಮರಾ. ೨-೬೨); ತಟಾಕಗಳೆಲ್ಲವು ಶೋಷಿಸಿ ನಷ್ಟವಾಗುವದಂ ನೋಡಿ . . . ಸಿದ್ಧವಿದ್ಯಾಧರ ಸಂಘವುಯಿದೇನೆಂದು ವಿಸ್ಮಯಪಡುತ್ತಿರಲು (ಸೌಗಂಧಿ. ೨೯೮-೭); ಮನವಚನದಿಂ ಸ್ಮರಿಸುವರ ಭವವನಧಿ ಶೋಷಿಸಿ ಪೋಗುವುದು (ಜಗದಾ. ೨೮೫). ೨. ಒಣಗಿಸು ; ಶುಷ್ಕಗೊಳಿಸು; ಬತ್ತಿಸು : ರಸಯಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿಸುತ್ತುಂ . . . ದವಶಿಖಿಯವೊಲೆಳ್ವತ್ತಮೋಘಂ ನಿದಾಘಂ (ಗಿಶಿ. ೯-೧೭); ವಾಯವ್ಯಾಸ್ತ್ರದಿಂದ ಶೋಷಿಸಿದನಾ ಜಲವನರ್ಜುನನು (ಚ್ಮಮಿಭಾ. ೧೩-೧೫). ೩. (ಆಲಂ); ತುಳಿ ; ಮೆಟ್ಟು : ದಲಿತರನ್ನು ಶೋಷಿಸುವುದೇ ಕೆಲವರ ಹವ್ಯಾಸವಾಗಿದೆ (ರೂಢಿ). [ಶೋಷಣ + — ಇಸ್ಕು]

ಶೌಂಡ (ಗು). ೧. ಕುಡಿದ ; ಮತ್ತೇರಿದ. ೨. ಮದ್ಯಸೇವನೆಯ ಆಸಕ್ತಿಯುಳ್ಳ. ೩. ಆಸಕ್ತನಾದ. (ನಾ). ೪. ಆಸಕ್ತನಾದವನು ; ಆಸಕ್ತಿಯುಳ್ಳವನು : ಕದನಪ್ರಾರಂಭಶೌಂಡಂ ರಿಪುನೃಪಬ[ಲದಾ]ವಾನಲಂ ವೈರಿಭೂಭೃನ್ಮದವನ್ಮಾತಂಗಕುಂಭ ಸ್ಥಲದಳನ[ಖ]ರೋಗ್ರಾಸಿಪಂಚಾಸ್ಯಧೈರ್ಯಂ (ಪಂಪಭಾ. ೬-೭೭). ೫. ಚತುರ; ನಿಷ್ಣಾತ: 'ಜಯಶೌಂಡ', 'ದಾನಶೌಂಡ' ಪರಾ. ೬. ಮದ್ಯಪಾನ ಮಾಡಿ ಮತ್ತನಾದವನು. [ಸಂ.]

ಶೌಂಡಿ (ನಾ). ಒಂದು ಬಗೆಯ ಸಸ್ಯ ; ದೊಡ್ಡಹಿಪ್ಪಲಿ : "ಕೃಷ್ಣಾ, ಉಪಕುಲ್ಯಾ, ವೃದೇಹೀ . . . ಶೌಂಡೀ. ಕೋಲಾ - ೧೦ ಪಿಪ್ಪಲೀಗೀಡದ ಹೆಸರುಗಳು" (ಸಿದ್ಧಾಂತಿ. ೧೩೪). [ಸಂ. ಶೌಂಡೀ]

ಶೌಂಡಿಕ (ನಾ). ಮದ್ಯವನ್ನು ತಯಾರಿಸುವವನು ಮತ್ತು ಮಾರುವವನು : "ಕಲ್ಯಪಾಲಃ, ಶೌಂಡಿಕಃ - ಈ ೨ ಕಳ್ಳವಾಳಂ" (ಹಲಾಯು. ೯೭-೪೯೯). [ಸಂ.]

ಶೌಂಡೀರ (ಗು). ಜಂಬದಿಂದ ಕೂಡಿದ ; ಗರ್ವದಿಂದ ಕೂಡಿದ. ೨. ಮೇಲೆತ್ತಿದ. [ಸಂ.]

ಶೌಕ (ನಾ). ಗಿಳಿಗಳ ಗುಂಪು, — ಸಮೂಹ : "ಶೌಕಂ - ಗಿಣಿಗಳ ಹಿಂಡು" (ಸಿದ್ಧಾಂತಿ. ೧೬೬). [ಸಂ.]

ಶೌಕ್ತಿಕೇಯ (ನಾ). ಮುತ್ತು; ಮೌಕ್ತಿಕ : ಪಾದಾಲಂಕಾರ ಶೌಕ್ತಿಕೇಯದೀರ್ಘದೀಧಿತಿ ಕ್ಷೀರಧಾರಾಪ್ರಕ್ಷಾಳಿತಾಕ್ಷೂಣಹರಿನೀಳಮಣಿಕುಟ್ಟಮನುಮಾಗಿ ಪಾದಮಾರ್ಗದಿಂ ಪೋಗಿ (ಚಂದ್ರಪು. ೪-೬೮ ವ). [ಸಂ.]

ಶೌಕ್ಲಿಕೇಯ (ನಾ). ಒಂದು ಬಗೆಯ ವಿಷ : "ಬ್ರಹ್ಮಪುತ್ರಃ, ಶೌ(ಕ್ಲಿ)ಲ್ಕಿಕೇಯಃ, ದಾರದಃ . . . ವಿಷಂ ಈ ೯ ವಿಷಂ" (ಹಲಾಯು. ೧೦೬ ೨೪). [ಸಂ.]

ಶೌಕ್ಲ್ಯ (ನಾ). ಬಿಳುಪು ; ಧವಳತೆ : "ಶ್ವೇತಿಮಮದು ಶೌಕ್ಲ್ಯಂ" (ವಸ್ತುಕೋ. ೧೧೫ ೨೭). [ಸಂ.]

ಶೌಚ (ನಾ). ೧. ನೈರ್ಮಲ್ಯ; ಪರಿಶುದ್ಧತೆ : ಸ್ವದೇಹಮಲವಿಮೋಚನಾರ್ಥಮಾಗಿ ಮೃತ್ತಿಕೆಜಲಂಗಳಿಂ ಮನೋಮಲಹರಾರ್ಥಮಾಗಿ ಮಂತ್ರಧ್ಯಾನಾದಿಗಳಂ ಮಾಳ್ಪುದೇ ಶೌಚವನಿಸುವುದು (ವಿವೇಕ. ೧೪೮); ಮೇಣೊಂದಡೆಯೊಳ್ ಶೌಚದ ಸ್ನಾನದ ವೇದಪಾರಾಯಣದ ಸಂಧ್ಯೋಪಾಸಿಯ ಜಪದ ತಪದ ಸಂಕೀರ್ತನೆಯ . . . ಋಷಿ ವರ್ಗದಿಂ ಸೂಗಯಿಸಿದುದು (ರಾಮಾತ್ವ. ೪೩-೨೯). ೨. ಕಳಂಕರಹಿತವಾದ ನಡತೆ; ಸದಾಚಾರ : ಸುಕುಮಾರಸ್ವಾಮಿಯ ರೂಪಮಂ . . . ಶುಚಿತ್ವಮಂ ಶೌಚಮಂ ಶ್ರೀಯಂ . . . ನೆನೆದು (ಪಡ್ವಾರಾ. ೩೦-೧೦); ಲೋ[ಬ]ದ ದೆಶೆಯಱಿಯದ ಜಾಗಮನ್ಯವನಿತಾಜನದೊಳ್ ಸುಸಿಲಱಿಯದ ಶೌಚಂ (ಕಾಅ. ೨-೨-೪೫; 1058) ; ಶೌಚದ ಪೆಂಪು ತಾಂ ಪರವಧುವಿಂಗಱಗದಿರ್ಪುದೆ (ಜೀವಸಂ. ೨೨-೭). ೩. ಮಲ ಮೂತ್ರ ವಿಸರ್ಜನೆ: ಶೌಚಕ್ಕೆಂದು ಹೋಗಿದ್ದ ನಾನು ನಿರ್ಜನವಾದ ಅರಣ್ಯದಲ್ಲಿ ಮಲಗಿದ್ದ ಆ ಮಗುವನ್ನು ಕಂಡು ಕರೆತಂದೆ (ಪಚಭಾ. ೭೯). ೪. [ಜೈನ] ಹತ್ತು ಕುಲಧರ್ಮಗಳಲ್ಲಿ ಒಂದು ; ಲೋಭವನ್ನು ತ್ಯಜಿಸುವುದು : ಉತ್ತಮಕ್ಷಮಾ ಮಾರ್ದವಾರ್ಜವಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಪರ್ಯಾಯ ಪರ್ಯಾಪ್ತದಶಧರ್ಮಂಗಳಂ ಕೈಕೊಂಡು (ಆಪಿಪು. ೬-೩೦ ವ) ; ಉತ್ತಮಕ್ಷಮಾಮಾರ್ದವಾರ್ಜವಶೌಚಸತ್ಯಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಾಭಿಧಾನ ದಶಕುಲ ಧರ್ಮನಿರ್ಮಳರೆನಿಸಿದ ಸುಧರ್ಮಾಚಾರ್ಯರ ಪಾದಪದ್ಮಮಂ ನಿಚೋತ್ತಂಸಂಗಳಂ ಮಾಡಿ (ಸುಕುಮಾ. ೩-೪೪ ವ). ೫. [ಯೋಗ] ಯೋಗಾಂಗದ ನಿಯಮಗಳಲ್ಲಿ ಒಂದು : ನಿಯಮಗಳಲ್ಲಿ ಮೊದಲನೆಯದಾದ ಶೌಚವು ಶರೀರಕ್ಕೆ ಅನ್ವಯಿಸುತ್ತದೆ (ಭಾರದ. ೨೬೩); ನಿಯಮವೆಂದರೆ ಮಾಡತಕ್ಕದ್ದು. ಅದು ಶೌಚ ಸಂತೋಷ ತಪಸ್ಸು ಸ್ವಾಧ್ಯಾಯ ಈಶ್ವರ ಪ್ರಣಿಧಾನ ಎಂದು ಐದು ಪ್ರಕಾರ (ಹಿಂದಸಾ. ೧೦೫).

ಶೌಚಾಂಜನೇಯ = ಶುಚಿತ್ವದಲ್ಲಿ ಮಾರುತಿಯಂತಿರುವವನು ; ಒಂದು ಬಿರುದು : ಕದನತ್ರಿಣೇತ್ರಂ ಮನುಜಮಾಂಧಾತಂ ಪ್ರತಿಜ್ಞಾಗಾಂಗೇಯಂ ಶೌಚಾಂಜನೇಯನಕಳಂಕ ರಾಮಂ ಸಾಹಸಭೀಮಂ (ಪಂಪಭಾ. ೧-೧೪೮ ವ); ಶೌಚಾಂಜನೇಯಂ ಮಹಾಲಕ್ಷ್ಮೀ ಲಬ್ಧವರಪ್ರಸಾದಂ ಕದನಕೇಳೀವಿನೋದ ಶ್ರೀಮತ್ತ್ರಿಭು ವನಮಲ್ಲದೇವ ಪಾದಾರಾಧಕಂ (ಸೌಂಗ. XI-ii. ೧೩೫-೫ ; 1087). [ಸಂ.]

ಶೌಚಕೂಪ (ನಾ). ಮಲವಿಸರ್ಜನೆಯ ಸ್ಥಳ; ಕಕ್ಕಸು : ಚೌಡಪ್ಪ ಅಲ್ಲಿಂದ ಎದ್ದು ಹೊರಗೆ ಹೋಗಿ ಶೌಚಕೂಪಕ್ಕೆ ಪ್ರಯಾಣ ಬೆಳೆಸಿದರು (ಹಳ್ಳಿಗಾ. ೫೫). [ಸಂ.]

ಶೌಚಮಣಲೆ (ನಾ). ಒಬ್ಬಾತನ ಹೆಸರು : ಶೌಚಮಣಲೆಯರುಂ ನನ್ನಿ ಮಳಲೂರುಂ ಸನ್ದೊನಮಾಳಕಿಱುವೆಟ್ಟಗರಾ ಪನ್ನಿರ್ವ್ವರ್ಗ್ಗಂ ರಣಪಾರರಾ ಮಣಲೆಯ ರಸರಾ ಸಮಾಧಿಯ ಸಮಾಧಿ (ಎಕ. XIV. ತಿರುಮ. ೨೫೩-೨; ಸಾ. 800). [?]

ಶೌಚವಿಧಿ (ನಾ). ೧. ಮಲಮೂತ್ರವಿಸರ್ಜನೆ, ಸ್ನಾನಮಾಡುವುದು ಮೊದಲಾದ ಶುದ್ಧಿಕಾರ್ಯ : ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಶೌಚವಿಧಿ ತೀರಿಸಿಕೊಂಡು ಶುಚಿಯಾಗಿ ಸ್ವಸ್ಥಾನನಾಗಿ ಕುಳಿತುಕೊಂಬುದು (ಸಕವೃ. ೨೮). ೨. ಬಂಧುವಿನ ಮರಣ ಸೂತಕವನ್ನು ಪರಿಹರಿಸಿಕೊಳ್ಳಲು ಮಾಡುವ ಶುದ್ಧಿಕ್ರಿಯೆ. [ಸಂ.]

ಶೌಚಾಚಾರ (ನಾ). ೧. ಕೊಳೆ, ಮೈಲಿಗೆ, ಸೂತಕ ಮುಂತಾದುವನ್ನು ಪರಿಹರಿಸಿಕೊಳ್ಳಲು ಮಾಡುವ ಶುದ್ಧಿಕ್ರಿಯೆ. ೨. ಕಳಂಕರಹಿತವಾದ ನಡತೆ; ಸದಾಚಾರ : ತ್ರಿದಶರ್ ಪೂಜಿಸ ಮಾನವರ್ ಪೊಗೞ್ ಶೌಚಾಚಾರಮಂ ದಿವ್ಯದಿಂ ವಿದಿತಂ ಮಾಡಿದರಾರ್ ಮಹಾಸತಿಯರಾರ್ ನಿಮ್ಮಂದದಿಂ . . . ಎಂದೆಱಗಿ ಸೀತಾಸಂಸ್ತವಂ ಮಾಡಿದರ್ (ಪಂರಾಮಾ. ೧೬-೩೬); ಸತ್ಯಶೌಚಾಚಾರಕುಲ ವೇದಶಾಸ್ತ್ರ ಪಾಂಡಿತ್ಯದ ಸುವಿಪ್ರರಿಪ್ಪತ್ತು ಸಾವಿರಕೆ . . . ಪೊನ್ನಂ ಕುಡುವುದು (ಚೈಮಿಭಾ. ೨-೨೭). [ಸಂ.]

ಶೌಚಿ (ನಾ). ಶುಚಿಯಾದ ನಡವಳಿಕೆಯುಳ್ಳವನು; ಸದಾಚಾರಿ : ವನಿತೆಯ ಮೊಲೆ ಮುಟ್ಟಿ ಶೌಚಿ ಯಾವಂ ಜಗದೊಳ್ (ಜಗವಿ. ೪-೧೧). [ಸಂ. ಶೌಚಿನ್]

ಶೌಚೇಯ (ನಾ). ಮಡಿವಾಳ; ಅಗಸ. [ಸಂ.]

ಶೌಭಿಕ (ನಾ). ನಟರ ಒಂದು ಪ್ರಕಾರ : ಕಂಸವಧ ಬಲಿಬಂಧಗಳನ್ನು "ಶೋಭನಿಕರು" (ಅಥವಾ "ಶೌಭಿಕರು") ಪ್ರತ್ಯಕ್ಷವಾಗಿ ಮಾಡಿ ತೋರಿಸುತ್ತಿದ್ದರು (ಸಂನಾಟ. ೪೧). [ಸಂ.]

ಶೌರಸೇನ (ಗು). ೧. ಶೂರಸೇನರಿಗೆ ಸೇರಿದ, – ಸಂಬಂಧಿಸಿದ. (ನಾ). ೨. ಪ್ರಾಕೃತಭಾಷೆಯ ಪ್ರಭೇದಗಳಲ್ಲಿ ಒಂದು : ಸಂಸ್ಕೃತ ಪ್ರಾಕೃತ ಪೈಶಾಚಿಕ ಮಾಗಧ ಶೌರಸೇನ ಭಾಂಡೀರ ಅಪಭ್ರಂಶ ವೈಕಪಿತ ಶುದ್ಧ ಮಿಶ್ರಾದಿ ಭಾಷಾಭೇದಂಗಳಿಂ ಪೇಳ್ಕ (ವಿವೇಕ. ೨೪೨). [ಸಂ.]

ಶೌರಸೇನಿ (ನಾ). = ಶೌರಸೇನ ೨ : ಮಧ್ಯಮಾಧಮಪಾತ್ರಗಳಿಗೆ ಪ್ರಾಕೃತಭಾಷಾ ಪ್ರಭೇದವಾದ ಶೌರಸೇನೀಭಾಷೆಯೂ . . . ವ್ಯವಹಾರಾರ್ಹವಾಗಿ ವಿಹಿತವಾಗಿರುವುದು (ಭಾರದ. ೪೩೫). [ಸಂ. ಶೌರಸೇನೀ]

ಶೌರಿ (ನಾ). ೧. ಶೂರಸೇನನ ವಂಶದವನು; ಕೃಷ್ಣ : ಯಶೋದೆಗೆ ಸಂಭವಿಸಿರ್ದ ಕನ್ನಯೊಳ್ ಶೌರಿಯನಂದು ಪಲ್ಲಟಿಸಿ ಚೆಚ್ಚರಮಾಕೆಯನೆತ್ತಿಕೊಂಡು . . . ಪರಿದ್ಯದಿದನಾತ್ಮಗೇಹಮಂ (ಜಗವಿ. ೩-೧೧); ಸ್ಮರಿಸುವನಪರಾಧಶತವ ಕುಮಾರಕನ ತಾ ಕೊಲ್ಲನೆಂದೀ ಶೌರಿ ಭಾಷೆಯ ಮಾಡಿ ಹಿಂಗಿದನಿವನ ತಾಯೊಡನೆ (ಕುವಾಸ. ೧೦-೩೬). ೨. ಬಲರಾಮ. ೩. ವಸುದೇವ. ೪. [ಜ್ಯೋತಿ] ನವಗ್ರಹಗಳಲ್ಲಿ ಒಂದು; ಶನಿ : "ಅಸಿತಃ, ಕ್ರೋಡಃ, ಪಂಗುಃ, ಛಾಯಾತನಯಃ, ಶನೈಶ್ಚರಃ, ಶೌರಿಃ – ಈ ೮ ಶನಿಯ ಪೆಸರ್" (ಹಲಾಯು. ೯-೪೯). [ಸಂ.]

ಶೌರಿಯ 'ಸೌರಿಯ' ನೋ.

ಶೌರ್ಯ (ನಾ). ೧. ಸಾಹಸ ; ಪರಾಕ್ರಮ : "ವಿಕ್ರಾಂತಂ ಪರಾಕ್ರಮಂ ಶೌರ್ಯಂ" (ವಸ್ತುಕೋ. ೧೧೨-೮); ತಮ್ಮಣ್ಣನಂ ಶೌರ್ಯದಿಂದಂ ಕಾದಂ (ಪಂಪಭಾ. ೧೧-೬೧); ಬಲುಸರಿಯ ನಾರಾಚಚಾಳದ ಮಳೆಯ ನೆತ್ತರ ಹೊನಲುಗಳ ರೌಕುಳದ ಮಳೆಗಾಲದಲಿ ಹೆಚ್ಚಿತು ಭಟರ ಶೌರ್ಯಶಿಖಿ (ಕುವಾಪ್ರೂ. ೧೫-೨೯). ೨. ಯುದ್ಧೋತ್ಸಾಹ ಪ್ರದರ್ಶನವುಳ್ಳ ಒಂದು ಬಗೆಯ ನಾಟಕ.

ಶೌರ್ಯಮಾರ್ತಂಡ = ಪರಾಕ್ರಮದಲ್ಲಿ ಸೂರ್ಯನಂತಿರುವವನು; ಒಂದು ಬಿರುದು : ಚಳಕೆ ಬಲ್ಗಣ್ಡಂ ಶೌರ್ಯಮಾರ್ತ್ತಣ್ಡಂ . . . ಶ್ರೀ ಮನ್ಮಹಾಮಣ್ಡಳೇಶ್ವರಂ ಲಕ್ಷ್ಮೀರಸರ್ (ಸೌಂಗ. XX. ೪೭ ೭; 1074). [ಸಂ.]

ಶೌರ್ಯಮದ (ನಾ). ಅಷ್ಟಮದಗಳಲ್ಲಿ ಒಂದು ; ಪರಾಕ್ರಮದಿಂದುಂಟಾದ ಅಹಂಕಾರ : ಅಂತು ಶೌರ್ಯಮದಜ್ವರಂ ಮಂತ್ರಿವರ್ಗವೈದ್ಯವಚನೌಷಧಿಗಳಂ ಪತ್ತುವಿಡೆ (ಆಪಿಪು. ೧೨-೧೦೯ ವ). [ಸಂ.]

ಶೌರ್ಯವಂತ (ನಾ). ಪರಾಕ್ರಮಿ ; ಶೂರ. [ಸಂ. ಶೌರ್ಯವತ್]

ಶೌರ್ಯವಡೆ (ಕ್ರಿ). ಪರಾಕ್ರಮವನ್ನು ಹೊಂದು; ಸಾಮರ್ಥ್ಯವನ್ನು ಪಡೆ : ಮದ್ದೂರ ಸುಭಟರು . . . ಮಾರ್ಬಲವ ಹೊದ್ದಿಯಿಱಿದು ನಾನೂರು ಮೂಗಿಱಿದಾಗ ಸದ್ಯದೆ ಶೌರ್ಯವಡೆದರು (ಕಂನವಿ. ೧೩-೫೭). [ಶೌರ್ಯ + ಪಡೆ]

ಶೌರ್ಯವಿಪನ್ನ (ನಾ): ಪರಾಕ್ರಮದಿಂದ ಕಷ್ಟಕ್ಕೆ ಒಳಗಾದವನು; ಸಾಹಸದಿಂದ ಕುಗ್ಗಿದವನು : ತನ್ನೊಡನೆ ಹಗೆಬೆಳೆದ ಶೌರ್ಯವಿಪನ್ನರನು ತೋಱ್ಕೆ ಜನಾರ್ದನ (ಕುವಾಗ. ೧೨-೨). [ಸಂ.]

ಶೌರ್ಯವೃದ್ಧ (ನಾ). ಪರಾಕ್ರಮದಿಂದ ಹಿರಿಯನೆನಿಸುವವನು; ಸಾಹಸದಿಂದ ದೊಡ್ಡವನಾದವನು : ಜ್ಞಾನವೃದ್ಧರು ವಿಪ್ರರಲಿ ಸನ್ಮಾನನೀಯರು ಶೌರ್ಯವೃದ್ಧರು ಮಾನವೇಂದ್ರರೊಳಧಿಕವಿದು ಪೌರಾಣಸಿದ್ಧವಲೆ (ಕುವಾಸ. ೮-೫೦). [ಸಂ.]

ಶೌರ್ಯಸಖ (ನಾ). ಪರಾಕ್ರಮದ ಕಾರ್ಯಗಳಲ್ಲಿ ನೆರವಾಗುವ ಸ್ನೇಹಿತ : ಕಾರ್ಯಸಖಂ ಶಕುನಿ ಗಡಾ ಶೌರ್ಯಸಖಂ ಸೂತಜಂ ಗಡಾ (ಗದಾಯು. ೨-೨೭). [ಸಂ.]

ಶೌಲ್ಪಿಕ (ನಾ). ತಾಮ್ರದ ಕೆಲಸಮಾಡುವವನು. [ಸಂ.]

ಶೌಷ್ಕಲ (ನಾ). ೧. ಒಣಗಿದ ಮಾಂಸ ಅಥವಾ ಮೀನು ತಿಂದು ಜೀವಿಸುವವನು. ೨. ಒಣಗಿದ ಮಾಂಸವನ್ನು ಮಾರುವವನು. [ಸಂ.]

ಶ್ಮಶಾನ (ನಾ). ಹೆಣಗಳನ್ನು ಸುಡುವ ಅಥವಾ ಹೂಳುವ ಪ್ರದೇಶ; ಸುಡುಗಾಡು; ಮಸಣ : ಎನ್ನುಮನೀತನಂತೆ ಪೆಡಂಗಯ್ಯುಡಿಯೆ ಕಟ್ಟಿಯೊಂದೆ ವಜ್ರಗುಟ್ಟಿ ನೀಮೆಲ್ಲ ನಂಟರ್ ನೋಡ ಶ್ಮಶಾನಕ್ಕುಯ್ದು ಸೂಲದೊಳಿಕ್ಕಿ ಕೊಲ್ವರ್ (ವಡ್ಡಾರಾ. ೧೪ ೧೨); ಶ್ಮಶಾನಧರಯರಮನೆ ಪ್ರೇತಗಾಹಿನ ತವಗ ಮಗಪೀಠ . . . ಸಂಬಳಿಗೋಲು ಕರವಾಳು ಸತ್ಯಭಂಡಾರ ಪಶಿಯಾಜ್ಞೆ ಭಾಸುರತರ ಕ್ಷತ್ರಧರ್ಮಗಳೆಂದೇ ಕಾಣುತಿರ್ದನು ಹರಿಶ್ಚಂದ್ರನು (ಪಚಕಾ. ೧೧-೪೬). [ಸಂ.]

ಶ್ಮಶಾನವಾಸಿ (ನಾ) ಸುಡುಗಾಡಿನಲ್ಲಿ ವಾಸಿಸುವವನು; ಶಿವ.

[ಸಂ. ಶ್ಮಶಾನವಾಸಿನ್]

ಶ್ಮಶಾನವೈರಾಗ್ಯ (ನಾ) ಸ್ಮಶಾನವನ್ನು ನೋಡಿದ ಕ್ಷಣದಲ್ಲಿ ಮಾತ್ರ ಉಂಟಾಗುವ ವಿರಕ್ತಿ ; ತಾತ್ಕಾಲಿಕವಾದ ವೈರಾಗ್ಯ. [ಸಂ.]

ಶ್ಮಶ್ರು (ನಾ). ೧. ಕೂರ್ಚ; ಮಿಸೆ : ಅಭಿನವೋದ್ಭಿದ್ಯಮಾನಮೃದುಕುಟಿಲ ಶ್ಮಶ್ರುಮಧುಕರಪಟಲಪರಿವೃತಮುಗ್ಧಮುಖಿಸರಸಿಜನುಂ (ಆದಿಪು. ೩ ೯೦ ೫); ಕುವಲಯನಯನಂ ತುಂಗಘೋಣಂ ಗಭೀರಧ್ವನಿ ಸೂಕ್ಷ್ಮಶ್ಮಶ್ರು . . . ಅಂತಂತಸಯೆ ನೃಪಸುತಂ ನೋಡೆ ಕಣ್ಗೆಡ್ಡಮಾದಂ (ಪುಪುಸ. ೪-೭೭). ೨. ಗಡ್ಡ ; ದಾಡಿ : ಎಳಮಿಂಚಂ ಪೋಲ್ವ ಬಂಬಲ್ಪೆಡೆ ಬಳದ ಘನಶ್ಮಶ್ರು ಭಸ್ಮತ್ರಿಪುಂಡ್ರಂ ತೊಳಪುದ್ಯಾಳಮಾಲಂಬಿತ ವಿಳಸಿತರುದ್ರಾಕ್ಷಮಾಲಾಳಿ . . . ಮಿಸುಗೆ ಚರಿಯಿಪರ್ ತಪ್ಪಲೊಳ್ ತಾಪಸೇಂದ್ರರ್ (ರಾಜಶೇ. ೧-೧೩೨); ಪರ್ವತವಾಸೀಕಿರಾತರು ಅವರ ವಿಶಾಲದೇಹ ನಿಬಿಡ ಶ್ಮಶ್ರು ಹಾಗೂ ಮಧುರಸದಯವ್ಯವಹಾರವನ್ನು ನೋಡಿ ಮುಗ್ಧರಾದರು (ಖಂಡೂ. ೪೯). [ಸಂ.]

ಶ್ಮಶ್ರುಲೇಖ (ನಾ). ೧. ಗೆರೆಯಂತಿರುವ ಮಿಸೆ. ೨. ಗೆರೆಯಂತಹ ಮಿಸೆಯನ್ನು ಹೊಂದಿದವನು : ಯೂಥಪತಿ ಪ್ರಥಮೋದ್ಭಿನ್ನದಾನಲೇಖಾಸುಕಾರಿ ಶ್ಮಶ್ರುಲೇಖಿನುಂ ಗಜಮದಮಳಿನಕೇಸರಿಜಟಾಕುಟಿಳಕುಂತಳಕಳಾಪನುಂ (ಕಾರಂಪು. ೧೬೬): ಅವಿರಳಗಳದಶ್ರುಬಿಂದುಸಂದೋಹಮಿಶ್ರಿತಶ್ಮಶ್ರುಲೇಖಿನುಂ . . . ಆಗಿ (ಚಂದ್ರಪು. ೫-೯ ೫). [ಸಂ. ಶ್ಮಶ್ರುಲೇಖಾ]

ಶ್ಯಾಣ 'ಶಹಣೆ' ನೋ.

ಶ್ಯಾಣ್ಯಾ 'ಶಹಣೆ' ನೋ.

ಶ್ಯಾಣ್ಯಾತನ 'ಶಾಣೆತನ' ನೋ.

ಶ್ಯಾನಭಾಗ 'ಸೇನಬೋವ' ನೋ.

ಶ್ಯಾನಭಾವ 'ಸೇನಬೋವ' ನೋ.

ಶ್ಯಾನಭೋಗ 'ಸೇನಬೋವ' ನೋ.

ಶ್ಯಾನುಭಾಗ 'ಸೇನಬೋವ' ನೋ.

ಶ್ಯಾನುಭೋಗ 'ಸೇನಬೋವ' ನೋ.

ಶ್ಯಾನೆ$_1$ 'ಶಾನ$_1$' ನೋ.

ಶ್ಯಾನೆ$_2$ 'ಶಾನ$_2$' ನೋ.

ಶ್ಯಾನ್ಭೆ (ನಾ). (?) : ಯರಕೆರೆಗೆ ಬರುವ ಶ್ಯಾನೆ ಬಡಗವತ್ತಿನಲ್ಲಿ ಗಂಗ್ಯಾಡಿಯವರು (ಎಕ. III. ತಿರುಮ. ೬೩-೪೭; 1748). [?]

ಶ್ಯಾಮ (ಗು). ೧. ಕಪ್ಪುಬಣ್ಣದ; ಕಡುನೀಲವರ್ಣದ. (ನಾ). ೨. ಕಪ್ಪುಬಣ್ಣ; ಅಸಿತ ವರ್ಣ : ''ಶ್ಯಾಮಂ ಕಾಳಂ'' (ಮಜ್ಕೂ. ೧೦೮-೬೩); ಸಾಮಂತಚೂಡಾಮಣಿಯ ಮೈಯ ಬಣ್ಣಂ ವಿಧಾತ್ರನೆಂಬ ಚಿತ್ರಾರಿಯ ವರ್ಣಕ್ರಮಂಗಳ್ಗೆ ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು (ಪಂಪಭಾ. ೨-೬೯ ೫). ೩. ಕಪ್ಪುಮಿಶ್ರವಾದ ಕಡುಹಸುರು ಬಣ್ಣ : ''ಶ್ಯಾಮಂ. ಶ್ಯಾಮಳಂ . . . ಹರಿತ್- ಈ ೬ ಪ(ಹ)ಸುರ್'' (ಪಲಾಮು. ೧೨೧-೪೯); ಅರಮನೆಯ ಉದ್ಯಾನಶಾದ್ವಲಶ್ಯಾಮವೇದಿಕೆಯಲ್ಲಿ ರಾಣಿಯರ್ ತಮ್ಮ ಮಕ್ಕಳ್ಳರಸಿ ವಿಹರಿಸುತ್ತಿರ (ಶ್ರೀರಾಮಾ. ೧೯-೪೯೮). ೪. ದತ್ತೂರದ ಗಿಡ. ೫. ಪ್ರಿಯಂಗುವೃಕ್ಷ : ''ಫಳಿನಿ ಶ್ಯಾಮಂ ಪ್ರಿಯಂಗು ನಾಮಂ'' (ಮಜ್ಕೂ. ೩೩-೪). ೬. ಹೊಂಗೆಮರ. ೭. ಒಂದು ಬಗೆಯ ಏಕದಳಧಾನ್ಯ; ಸಾಮೆ. ೮. ಮೋಡ. ೯. ಸಮುದ್ರದ ಉಪ್ಪು. ೧೦. ಕರಿಯ ಮೆಣಸು. ೧೧. ಕೋಗಿಲೆ. ೧೨. ನೀಲವರ್ಣದವನು. ೧೩. ವಿಷ್ಣು. ೧೪. ರಾಮ : ರಾಮನಂ . . . ಕುವಲಯಶ್ಯಾಮನಂ ನಿಜತನು ಶ್ಯಾಮನಂ ಘನಪುಣ್ಯನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನಂತು (ಜೈಮಿಭಾ. ೧೯-೨೨); ಲಕ್ಷ್ಮಣದೇವನೆಸೆದನಯ್ . . . ಶ್ಯಾಮಶ್ರೀಯೊಲ್ಮೆಯಲಿ (ಶ್ರೀರಾಮಾ. ೨೬-೬೮೭). ೧೫. ಕೃಷ್ಣ. [ಸಂ.]

ಶ್ಯಾಮಂತಿಗೆ 'ಸೇವಂತಿಗೆ' ನೋ.

ಶ್ಯಾಮಕ (ಗು). ೧. ಕಪ್ಪನೆಯ; ಶ್ಯಾಮಲವರ್ಣದ : ಅರಸಿಯರ ತನು ಶ್ಯಾಮಕಾಗ್ರಂಗಳೊಳ್ ಸ್ನೇಹವಶಾನಂಗಾಗ್ನಿಯಂ ನೀರ್ದಳಿದು ನದಿಪುವಂತಾದ ನಂಘೋದಲೀಲಂ (ಶಾಂತಿಪು. ೮-೩೧). (ನಾ). ೨. ಒಂದು ಬಗೆಯ ಏಕದಳ ಧಾನ್ಯ; ಸಾಮೆ: ''ಶ್ಯಾಮಾಕಃ. ಶ್ಯಾಮಕಃ - ಈ ೨ ಸಾವೆ'' (ಪಲಾಮು. ೧೬-೪೩೦). ೩. ಸಾವೆಯ ಹುಲ್ಲು. [ಸಂ.]

ಶ್ಯಾಮಕಂಠ (ನಾ). ೧. ಕಡುನೀಲಿಬಣ್ಣದ ಕೊರಳುಳ್ಳದು; ನವಿಲು : ''ಕೇಕೀ, ಶಿಖೀ . . . ಶ್ಯಾಮಕಂಠ(ಃ) - ಈ ೧೦ ನವಿಲ್'' (ಪಲಾಮು. ೪೦-೮೮). ೨. ಕಪ್ಪು ಕೊರಳುಳ್ಳವನು ; ನೀಲಕಂಠ ; ಶಿವ. [ಸಂ.]

ಶ್ಯಾಮಕಂಧರ (ನಾ). ೧. = ಶ್ಯಾಮಕಂಠ ೧. ೨.= ಶ್ಯಾಮಕಂಠ ೨ : ಶ್ಯಾಮಕಂಧರನೀವನೀ ಕೃತಿಗತಿಚಮತ್ಕೃತಿಯ (ಬಸಪು. ೧-೫); ಶ್ಯಾಮಕಂಧರ ನಾಗಾಸುರಚರ್ಮಾಂಬರ ಪ್ರೇಮದಿಂದೊಲಿದು ರಕ್ಷಿಪುದು (ಪರಿಹಾಂ. ೧-೧). ೩. ಹಾವು; ಸರ್ಪ : ಶ್ಯಾಮಕಂಧರರಾಜಕಟಕಂ ಶ್ಯಾಮಕಂಧರನೀವನೀ ಕೃತಿಗತಿಚಮತ್ಕೃತಿಯ (ಬಸಪು. ೧-೫). [ಸಂ.]

ಶ್ಯಾಮಕಂಧರಗಮನ (ನಾ). ನವಿಲನ್ನು ವಾಹನವಾಗಿ ಉಳ್ಳವನು; ಷಣ್ಮುಖ: ಶ್ಯಾಮಕಂಧರಗಮನಜನಕಂ ಶ್ಯಾಮಕಂಧರರಾಜಕಟಕಂ ಶ್ಯಾಮಕಂಧರನೀವನೀ ಕೃತಿಗತಿಚಮತ್ಕೃತಿಯ (ಬಸಪು. ೧-೫); ಶ್ಯಾಮಕಂಧರಗಮನನಯ್ಯ ಪಾಲಿಪುದೆನ್ನ (ಪ್ರಭುರಾ. ೧೦-೧). [ಸಂ.]

ಶ್ಯಾಮಗಾತ್ರ (ನಾ). ೧. ನೀಲವರ್ಣದ ಶರೀರವುಳ್ಳವನು. ೨. ವಿಷ್ಣು. ೩. ಕೃಷ್ಣ : ಶ್ಯಾಮಗಾತ್ರಪ್ರೀಯ ತಾಮರಸಶರವಿಜಯ . . . ಪಾಲಿಪುದು ಕಾಮಿತವನಿತ್ತು ಮುದದಿ (ಪ್ರಭುರಾ. ೧-೧). [ಸಂ.]

ಶ್ಯಾಮತೆ (ನಾ). ಕಪ್ಪುಬಣ್ಣ : ಶ್ಯಾಮತೆಯಿಂ ವಿರೂಪತೆಯಿನಾರಯೆ ನಿನ್ನ ಸಖಿಂ ಮನೋಜನಂತಾ ಮದನಂಗಮಾದುದು ವಸಂತನ ಪೊರ್ದುಗಯಿಂದಮುತ್ಸವೋದ್ಭಾಮತೆ (ಚಂದ್ರಪು. ೭-೭೪). [ಸಂ. ಶ್ಯಾಮತಾ]

ಶ್ಯಾಮತೆವೆಱು (ಕ್ರಿ). ಕಪ್ಪುಬಣ್ಣವನ್ನು ಹೊಂದು : ನಿಬಿಡಮನೆ ಮುಸುಂಕಿದ ಮಧುಮುದಿತಮಧುಕರವ್ರತಾನದಿಂ ಶ್ಯಾಮತೆ [ಪಾಠಾಂ. ಶ್ಯಾಮಳತೆ]ವತ್ತು ನಿಜಮೂಲದೊಳ್ ಬಳಸಿ ತಳರ್ತ ಚೆಂದಳಿರ್ಗಳುಟ್ಟು ಪೀತಾಂಬರದಂತಿರೆ (ಶಬಶಂ. ೨-೪೨ ೫). [ಶ್ಯಾಮತೆ + ಪೆಱು,]

ಶ್ಯಾಮಪುಷ್ಪಿ (ನಾ). ಒಂದು ಬಗೆಯ ಸಸ್ಯ : ''ಧ್ಯಾಮಂ - ಗಂಜಳಿಗಬುಲ್ಲು, ಶ್ಯಾಮಪುಷ್ಪಿ, ಶ್ಯಾಮಲೋದ್ರ'' (ಓಷಧಿ. ೮೨). [ಸಂ. ಶ್ಯಾಮಪುಷ್ಪೀ]

ಶ್ಯಾಮಲ, ಶ್ಯಾಮಳ (ಗು). ೧. ಕಪ್ಪುನೆಯ : ಹಾ! ರಮಣ . . . ನಿನ್ನ ಘನಶ್ಯಾಮಲ ಕೋಮಲಗಾತ್ರಮುಮಂ, ನಿನ್ನ ಸೊಬಗುಗುವ ಮುಖಕಮಲಮುಮಂ . . . ಕಂಡು ಸೋಲ್ತು ಮೆಚ್ಚಿದಂ (ರಾಮಾಶ್ವ. ೬೬-೭). (ನಾ). ೨. ಕಪ್ಪು ; ಕಡುನೀಲವರ್ಣ. ಶ್ಯಾಮಳ: ೨. ಪದಧೂಳೀಕ್ಕೋಭದಿಂ ದಿಗ್ಯುವತಿವದನಮಂ ಶ್ಯಾಮಳಂ ಮಾಡಿ (ಆದಿಪು. ೧೪-೮೮); ಕಾಳಾಗುರು ಧೂಪೋದ್ಭಾಮಧೂಮಸ್ತೋಮಜಲಪೀಮೂತಸಮುದಯ ಶ್ಯಾಮಳಮುಂ . . . ಎನಿಸಿ ಗೋವರ್ಧನನಗಂ ಸೊಗಯಿಸೆ (ಜಗವಿ. ೪-೮೨ ೫). ೩. ಅಚ್ಚ ಹಸುರು : ''ಶ್ಯಾಮಂ. ಶ್ಯಾಮಳಂ . . . ಹರಿತಂ, ಹರಿತ್ - ಈ ೬ ಪ[ಹ]ಸುರ್'' (ಪಲಾಮು. ೧೨೧-೪೯). [ಸಂ.]

ಶ್ಯಾಮಲಾಂಗ, ಶ್ಯಾಮಳಾಂಗ (ನಾ). ೧. ನೀಲವರ್ಣದ ಶರೀರವುಳ್ಳವನು. ೨. ವಿಷ್ಣು. ೩. ಕೃಷ್ಣ. ೪. ಶಿವ : ಶ್ಯಾಮಳಾಂಗೀಸಂಗತಾಂಗಂ ಶ್ಯಾಮಲಾಂ [ಪಾಠಾಳಾಂ]ಗ ದ್ಯಗಂಕಪಾದಂ . . . ಸಿದ್ಧವಟನಾಥಂ (ಬಸಪು. ೧-೫). ಶ್ಯಾಮಳಾಂಗ : ೩. ಮೇಘಶ್ಯಾಮಳಾಂಗಂ ತ್ರಿಭಂಗದಿನಿಂಬಾಗಿರೆ . . . ತಾನಾಗಳಾಡಿದಳ್ (ಜಗವಿ. ೩-೧೩).

[ಸಂ.]

ಶ್ಯಾಮಲಾಂಗಿ (ನಾ). ಕಪ್ಪಾದ ದೇಹವುಳ್ಳವಳು; ಕಾಳಿ; ಪಾರ್ವತಿ : ಶ್ಯಾಮಲಾಂ [ಪಾಠಾಂ. ಳಾಂ]ಗೀ ಸಂಗತಾಂಗಂ . . . ಸಿದ್ಧವಟನಾಥ (ಬಿಪು. ೧-೫).

[ಸಂ. ಶ್ಯಾಮಲಾಂಗೀ]

ಶ್ಯಾಮಲಿತ (ಗು). ಕಪ್ಪಾದ; ಶ್ಯಾಮಲವಾದ : ಅತಿಬಹಳದಹ್ಮಮಾನ ಕಾಳಾಗುರುಧೂಪಧೂಮಯಷ್ಟಿಘಟಿತಘನಶ್ಯಾಮಲಿ [ಪಾಠಾಂ. ಳಿ]ತವ್ಯೋಮತಳ ಧೂಪಂಗಳಿಂದಂ (ಅಪು. ೨-೩೨ ವ); ಬಹುಳಕಾಲಾಗರುಧೂಮ ಶ್ಯಾಮಲಿತ ಕಲಧೌತ ಧೂಪಘಟಂಗಳಿಂ ಕ್ಷೀರಾದಿ ಸವನಪಾವನರಸವಿಚಿತ್ರಾನೇಕಶಾತಕುಂಭಕುಂಭಂಗಳಿಂ . . . ಯಥಾವಿಧಿಯಿನಭಿಷವಮಂ ತೀರ್ಚಿ (ಪಂರಾಮಾ. ೧೭-೨ ವ). [ಸಂ.]

ಶ್ಯಾಮಲೆ (ನಾ). = ಶ್ಯಾಮಲಾಂಗಿ. [ಸಂ. .ಶ್ಯಾಮಲಾ]

ಶ್ಯಾಮಳ 'ಶ್ಯಾಮಲ' ನೋ.

ಶ್ಯಾಮಳಾಂಗ 'ಶ್ಯಾಮಲಾಂಗ' ನೋ.

ಶ್ಯಾಮಾಂಗ (ನಾ). ೧. ಕಪ್ಪಾದ ಶರೀರ; ಕಪ್ಪುಬಣ್ಣದ ದೇಹ : ಈ ಭಾಗದೊಳಿನವಪ್ರಿಯಂಗುಶ್ಯಾಮಾಂಗಮರ್ದಚಂದ್ರಬುದ್ಬುದವ್ಯಾಕೀರ್ಣ ತ್ರಿಶೂಲ . . . ಅನೇಕಾಹವ ದೃಷ್ಟದೋಸ್ಸಾಹಸಮಿದು ವರಾಟ ಸುಭಟಬೀಳ್ (ಅಪು. ೧೩-೧೫ ವ). ೨. ಶ್ಯಾಮಲಶರೀರವುಳ್ಳವನು; ವಿಷ್ಣು : 'ಶ್ಯಾಮಾಂಗಸಖಿ' ಪರಾ. ೩. ಬುಧಗ್ರಹ. ೪. [ಛಂದ] ವರ್ಣಛಂಧಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ, ಪಾದದಲ್ಲಿ ಮೂರು ಅಕ್ಷರಗಳುಳ್ಳ ಮಧ್ಯೆ ಎಂಬ ಛಂದಸ್ಸಿನ ಒಂದು ವೃತ್ತ : ಭೂಮಿಪ್ರೋದ್ಯಾಮಂ ಕೇಳ್ ಶ್ಯಾಮಾಂಗೀ ಶ್ಯಾಮಾಂಗಂ [ಪಾಠಾಂ. ವಾಮಾಂಗೀ ವಾಮಾಂಗಂ] (ಛಂದೋಜಂ. ೨-೫೭). [ಸಂ.]

ಶ್ಯಾಮಾಂಗಸಖಿ (ನಾ). ವಿಷ್ಣುವಿನ ಸ್ನೇಹಿತ ; ಶಿವ : ಶ್ಯಾಮಾಂಗಸಖಿ ಪಾಹಿ ಮಂದರನಿಲಯನೆ ಪಾಹಿ (ಪ್ರಭರಾ. ೫೧-೪೩). [ಸಂ.]

ಶ್ಯಾಮಾಂಗಿ (ನಾ). ೧. ಶ್ಯಾಮಲವರ್ಣದವಳು : ಭೂಮಿಪ್ರೋದ್ಯಾಮಂ ಕೇಳ್ ಶ್ಯಾಮಾಂಗೀ ಶ್ಯಾಮಾಂಗ [ಪಾಠಾಂ. ವಾಮಾಂಗೀ ವಾಮಾಂಗಂ] (ಛಂದೋಜಂ. ೨-೫೭) ; ಗ್ರಾಮಶ್ಯಾಮಾಂಗಿ ಕೋಪಕ್ಕಳುತೆ ಬೈಯುತ್ತ ಶಪಿಸುತ್ತ ತೊಳಲುವಳ್ ಗದ್ದೆಯಂ ಮರುಳಮರ್ದಳಂತೆ (ಚಾತ್ರಾಂಗ. ೫೩-೧೪೫೫). ೨. ಕಾಳಿ ; ದುರ್ಗೆ. [ಸಂ. ಶ್ಯಾಮಾಂಗೀ]

ಶ್ಯಾಮಾಕ (ನಾ). = ಶ್ಯಾಮಕ ೨ : "ಶ್ಯಾಮಾಕಃ, ಶ್ಯಾಮಕಃ - ಈ ೨ ಸಾವ" (ಹಲಾಯು. ೯೬-೪೩); ಶ್ಯಾಮಾಕ . . . ಕ್ಷೀರಾದಿ ಚರು ಪುರೋಡಾಶಾದಿಗಳಿಂದಲು (ಎವೇಕ. ೧೩೫). [ಸಂ.]

ಶ್ಯಾಮೆ (ನಾ). ೧. ಇರುಳು; ರಾತ್ರಿ : "ತಮೀ . . . ವಾಸತೇಯೀ. ಶ್ಯಾಮಾ. ರಾತ್ರಿಃ – ಈ ೧೯ ಇರುಳಿನ ಪೆಸರ್" (ಹಲಾಯು. ೧೮-೧೦೮). ೨. ಮಕ್ಕಳಿಲ್ಲದ ಮಧ್ಯವಯಸ್ಸಿನ ಹೆಂಗಸು : ಅಲ್ಲಿ ಪ್ರಮದೆಯರು . . . ಶ್ಯಾಮೆಯರು ಮತ್ತು ಪದ್ಮರಾಗಿಣಿಯರು (ಧ್ವನ್ಯಾಲೋ. ೯೪). ೩. ಪ್ರಿಯಂಗುಮರ : "ಪ್ರಿಯಂಗುಃ, ಫಲಿನೀ, ಶ್ಯಾಮಾ - ಈ ೩ ಪ್ರಿಯಂಗು" (ಹಲಾಯು. ೩೨-೪೦). ೪. ಒಂದು ಬಗೆಯ ಸಸ್ಯ; ಕರಿಯ ತಿಗಡೆ : "ಶ್ಯಾಮಾ. ಪಾಳಿಂದೀ . . . ಕಾಲಮೇಷಿಕಾ – ೬ ಕರಲಾಲ್ ತಿಗಡೆ" (ಸಿದ್ಧಾಂತಿ. ೧೩೬). ೫. ಸೊಗದೇಬೇರು : "ಶ್ಯಾಮಾ- ಪ್ರಾಯಪದಳು, ಸೊಗದೇಬೇರು, ರಾತ್ರಿ" (ಸಿದ್ಧಾಂತಿ. ೪೦೪). ೬. ನೆರಳು; ಛಾಯೆ. ೭. ಕಪ್ಪುಬಣ್ಣದ ಹೆಂಗಸು. ೮. ಹಸು. ೯. ಅರಿಸಿನ. ೧೦. ಹೆಣ್ಣು ಕೋಗಿಲೆ. ೧೧. ನೀಲಿಗಿಡ. ೧೨. ತುಳಸಿ. ೧೩. ಯಮುನಾನದಿ. ೧೪. ದುರ್ಗೆ. ೧೫. ಕಮಲದ ಬೀಜ.

[ಸಂ. ಶ್ಯಾಮಾ]

ಶ್ಯಾಲ (ನಾ). ಹೆಂಡತಿಯ ಸಹೋದರ; ಭಾವಮೈದುನ. [ಸಂ.]

ಶ್ಯಾಲಕ (ನಾ). = ಶ್ಯಾಲ : ಅರ್ಜುನ ನೆನೆದುದೇ ತಡ; ಆ ಕ್ಷಣದಲ್ಲಿಯೇ ಕೃಷ್ಣ ಗರುಡನಿಂದ ತನ್ನ ಶ್ಯಾಲಕನ ರಥಾಗ್ರಕ್ಕೆ ಇಳಿಯಲು ಸೇನೆಯಲ್ಲಿ ಉತ್ಸವವಾಯಿತು (ಪಜರ. ೫೯). [ಸಂ.]

ಶ್ಯಾವ (ನಾ) . ಕಪ್ಪುಮಿಶ್ರವಾದ ಕೆಂಪು; ಕಂದುಬಣ್ಣ : "ಶ್ಯಾವಃ, ಕಪಿಶಃ - ೨ . . . ಕೆಂಪಾದ ಬಣ್ಣ" (ಸಿದ್ಧಾಂತಿ. ೪೮). [ಸಂ.]

ಶ್ಯಾವಂತಿ 'ಸೇವಂತಿ' ನೋ.

ಶ್ಯಾವಂತಿಗೆ 'ಸೇವಂತಿಗೆ' ನೋ.

ಶ್ಯಾವದಂತ (ನಾ). ಹಲ್ಲು ಕಪ್ಪಾಗುವ ಒಂದು ಬಗೆಯ ದಂತರೋಗ : ಶ್ಯಾವದಂತವೆಂಬ ದಂತರೋಗದಲ್ಲಿ ಹಲ್ಲುಗಳು ಒತ್ತ ರಕ್ತದೋಷಗಳಿಂದ ಬೆಂದು ಕಂದುವ ಕಾರಣ ಕಪ್ಪಾಗಿಹವು (ತ್ರಯಾ. II. ೧೨೨). [ಸಂ.]

ಶ್ವೇತ (ಗು). ೧. ಬಿಳುಪಾದ ; ಧವಳವರ್ಣದ. (ನಾ). ೨. ಬಿಳುಪು ; ಶ್ವೇತವರ್ಣ : "ಶುಕ್ಲಃ, ಶುಭ್ರಃ, ಶುಚಿಃ, ಶ್ವೇತಃ, ವಿಶದಃ, ಶ್ವೇತಃ . . . ಅರ್ಜುನಃ – ೧೩ ಬಿಳುಪು ಬಣ್ಣದ ಹೆಸರುಗಳು" (ಸಿದ್ಧಾಂತಿ. ೪೭). [ಸಂ.]

ಶ್ವೇನ (ನಾ). ೧. ಬಿಳಿಯ ಬಣ್ಣ ; ಬಿಳುಪು. ೨. ಗಿಡುಗ; ಡೇಗೆ : ಮಾನಿಸರ ನುಡಿವ ತೆಱದಿಂ ಶ್ವೇನನುಮರವೊಱಸುಮಿಂತು ಗಟಿಪಿದಪುದಿದಂ ಶ್ರೀನಾಥ ಬೆಸಸಿಮವಧಿ ಚ್ಛಾನದಿನೆಱೆದು (ಶಾಂತಿಪು. ೯-೯೧); ಇವರ್ . . . ನಗನುಡಿಗಳಿಂದ ಕೈಯೊಳಗಾದರನವೇಡ ಪಾಱುವರ್ ಶ್ವೇನನಂತೆ (ಆರಾಜ. ೨-೫-೪೬). ೩. ಒಂದು ಬಗೆಯ ಸೇನಾವ್ಯೂಹ. ೪. ಓಂಸೆ. [ಸಂ.]

ಶ್ವೇನವ್ಯೂಹ (ನಾ). (ಗಿಡುಗನ ಆಕಾರದಲ್ಲಿದ್ದು, ಭೇದಿಸುವುದಕ್ಕೆ ತೊಡಕಾಗಿರುವ) ಒಂದು ಬಗೆಯ ಸ್ಯೆನ್ಯವ್ಯೂಹ : ಮರುದಿನ ಪಾಂಡವರು ಶ್ವೇನವ್ಯೂಹವನ್ನೂ ಕೌರವರು ಮಕರವ್ಯೂಹವನ್ನೂ ರಚಿಸಿ ಯುದ್ಧಕ್ಕೆ ಮೊದಲು ಮಾಡಿದರು (ಪಚಭಾ. ೪೭). [ಸಂ.]

ಶ್ಯೋನಾಕ (ನಾ). ಒಂದು ಬಗೆಯ ಮರ ; ತಿಗಡೆಮರ ; "ಪತ್ರೋರ್ಣ" (ಪಂಡಿತ. ೩೩೬). [ಸಂ.]

ಶ್ರಂಥನ (ನಾ). ೧. (ಹೂವಿನಂತೆ) ಒಂದನ್ನೊಂದು ಸೇರಿಸಿ ಕಟ್ಟುವುದು. ೨. (ಗ್ರಂಥದ) ರಚನೆ : "ಶ್ರಂಥನಂ ಗ್ರಂಥನಂ ಗುಂಫಮೆನೆ ರಚನೆಗಭಿಧಾನಮಕ್ಕುಂ" (ಮಂಗರಾ. ೧೩೬-೩). ೩. ಸಡಿಲಗೊಳಿಸುವುದು. ೪. ನಾಶಪಡಿಸುವುದು. ೫. ಕೊಲ್ಲುವುದು. [ಸಂ.]

ಶ್ರದ್ಧಾಂಜಲಿ (ನಾ). ೧. ಮೃತರಿಗಾಗಿ ಶ್ರದ್ಧೆಯಿಂದ ಬಿಡುವ ತರ್ಪಣ : ಗಂಗೆಯಲ್ಲಿ ಮತ್ತೊಮ್ಮೆ ಮಿಂದು ತನ್ನ ಬದುಕಿಗೆ ಈ ರೂಪ ಬರುವುದಕ್ಕೆ ನಿಮಿತ್ತವಾಗಿ ಒದಗಿಬಂದಿದ್ದ ಶಬ್ಬರ ಪುಣ್ಯಾತ್ಮಕ್ಕೆ ತನ್ನ ಶ್ರದ್ಧಾಂಜಲಿಯನ್ನರ್ಪಿಸಿದ (ಹೂಸಕ್ತಿ. ೬೯). ೨. ಮೃತರಿಗೆ ಸಲ್ಲಿಸುವ ಶ್ರದ್ಧಾಪೂರ್ವಕವಾದ ವಂದನೆ : ಹೂಸ ಬತ್ತಿಯಲಿ ಸ್ವಂತ ಬೆಳಕು ಹಿಡಿದು ಎದೆಹಣತೆಯಲಿ ಸಲಿಸು ಶ್ರದ್ಧಾಂಜಲಿಯ ಅವನ ಹೊಂಗನಸುಗಳ ಬೀಳ್ಕೆ ಪಡದು (ನಲಮು. ೫೧-೧೧). [ಸಂ.]

ಶ್ರದ್ಧಾಭಕ್ತಿ (ನಾ). ೧. ವಿಶ್ವಾಸದಿಂದ ಕೂಡಿದ ಭಕ್ತಿ. ೨. [ವೀಶೈ] ಆರು ವಿಧವಾದ ಭಕ್ತಿಗಳಲ್ಲಿ ಒಂದು : ಭಕ್ತಿ ಆರು ವಿಧವಾಗಿದೆ. ಶ್ರದ್ಧಾಭಕ್ತಿ, ನೈಷ್ಠಿಕಭಕ್ತಿ, ಸಾವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿ, ಭಗವತ್ಪಾದಾತ್ಮವೇ ಭಕ್ತಿಯ ಅಂತಿಮಗಮ್ಯ (ಭಾರದ. ೧೧೯) ; ನಮ್ಮ ಶಿವಶರಣರೂ ತಮ್ಮ ಪಟ್ಟ ಫಲ ತತ್ತ್ವಚ್ಛಾನದಲ್ಲಿ ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿಯೆಂಬುದಾಗಿ ಭಕ್ತಿಯನ್ನು ಸಾಧಕನ ನೆಲೆಗನುಸರಿಸಿ ಷಡ್ವಿಧವಾಗಿ ಹೇಳಿರುವರು (ಸಾಪಿ. ೪೮). [ಸಂ.]

ಶ್ರದ್ಧಾಲು, ಶ್ರದ್ಧಾಳು (ಗು). ೧. ವಿಶ್ವಾಸದ; ನಂಬಿಕೆಯ. (ನಾ). ೨. ವಿಶ್ವಾಸವುಳ್ಳವನು; ನಂಬಿಕಸ್ಥ : ಅವನೊಬ್ಬ ದಯಾಮಯಿಯೂ ಶ್ರದ್ಧಾಲುವೂ ಆದ ಅಧಿಕಾರಿಯಾಗಿದ್ದನು (ಪುಸಚ. ೨೨೨). ಶ್ರದ್ಧಾಳು : ೩. ಗರ್ಭಿಣಿಯಾಗಿ ಬಯಕೆಯುಳ್ಳವಳು : "ಶ್ರದ್ಧಾಳುಃ, ದೋಹದವತೀ - ೨ ಬಸುರಿಂದ ಬೈಕೆಯುಳ್ಳವಳ ಹೆಸರುಗಳು" (ಸಿದ್ಧಾಂತಿ. ೧೭೩). [ಸಂ.]

ಶ್ರದ್ಧಾವಂತ (ನಾ). ವಿಶ್ವಾಸವುಳ್ಳವನು ; ನಿಷ್ಠೆಯುಳ್ಳವನು : ಈತನು ರಾಜಕಾರ್ಯನಿಪುಣನೂ, ಕಾರ್ಯನಿಷ್ಠನೂ, ಶ್ರದ್ಧಾವಂತನೂ ಮತ್ತು ಧರ್ಮಭೀರುವೂ ಆಗಿದ್ದನೆಂದು ಅನೇಕ ಶಾಸನಗಳಲ್ಲಿ ಹೇಳಿದೆ (ಸೂಳಂಬಿ. ೫೭).

[ಸಂ. ಶ್ರದ್ಧಾವತ್]

ಶ್ರದ್ಧಾಳು 'ಶ್ರದ್ಧಾಲು' ನೋ.

ಶ್ರದ್ಧೆ (ನಾ). ೧. ನಂಬಿಕೆ; ವಿಶ್ವಾಸ : ಗುರುವೇದಾಂತ ವಾಕ್ಯಂಗಳೊಳು ದೃಢತರಮಾದ ವಿಶ್ವಾಸವೇ ಶ್ರದ್ಧೆಯೆನಿಸುವುದು (ವಿವೇಕ. ೧೫). ೨. ಬಯಕೆ; ಅಪೇಕ್ಷೆ : ಶುದ್ಧಜೀವನು ಶಿವಶಕ್ತಿಯರೆಂಬ ತಂದೆತಾಯಿಗಳನ್ನು ಸೇರಿ ಸುಖಿಸಬೇಕೆಂಬ (ಹಂಬಲ) ಉತ್ಕಟೇಚ್ಛೆಗೆ "ಶ್ರದ್ಧೆ" ಎಂದು ಹೆಸರು (ಭಾರದ. ೨೫೪). ೩. ಗರ್ಭಿಣಿಯ ಬಯಕೆ, — ಆಸೆ : "ದೋಹಳಂ, ದೌಹೃದಂ, ಶ್ರದ್ಧಾ, ಲಾಲಸಾ — ಈ ೪ ಬಯಕೆ" (ಹಲಾಯು. ೮೨-೩೪೪). ೪. ಗೌರವ ; ಮನ್ನಣೆ. ೫. ಸೂರ್ಯನ ಮಗಳು : ಸೂರ್ಯಪುತ್ರಿಯಾದ ಶ್ರದ್ಧೆಯು ಪರ್ಜನ್ಯನಂತೆ ಬಲಶಾಲಿಯೂ ಪೂಜ್ಯನೂ ಆದ ಸೋಮನನ್ನು ದ್ಯುಲೋಕದಿಂದ ತಂದಳು (ಋಕ್ಸಾರ. ೫೨). [ಸಂ. ಶ್ರದ್ಧಾ]

ಶ್ರದ್ಧೇಯ (ಗು). ೧. ನಂಬಿಕೆಗೆ ಅರ್ಹವಾದ ; ವಿಶ್ವಾಸಾರ್ಹವಾದ. (ನಾ). ೨. ನಂಬಲರ್ಹನಾದ ವ್ಯಕ್ತಿ; ವಿಶ್ವಾಸಯೋಗ್ಯ : ಇಂತಹ ಯಶಸ್ವಿಯಾದ ಶ್ರದ್ಧೇಯರಾದ ಪುರುಷರಿಗೆ ಪ್ರಾಯಶ್ಚಿತ್ತದ ಅಗತ್ಯವೇ ಇಲ್ಲ (ಪ್ರೇಮಾಶ್ರ. ೨೩೭). [ಸಂ.]

ಶ್ರಮ (ನಾ). ೧. ದಣಿವು; ಆಯಾಸ ; ಬಳಲಿಕೆ : ವನಿತಾಸೇವನೆ . . . ಶ್ರಮಮತ್ಕ ಜೀರ್ಣಮಿವಱಂ ಕಾರ್ಗಾಲದೊಳ್ ಮಾರುತಂ ಜನಿಯಿಕ್ಕುಂ (ಲೋಕೋಪ. ೯-೪); ಪಸಿದಿರ್ ನೀರಡಿಸಿದಿರೆಂದು ಸೇದೆಯಂ ಶ್ರಮಮನಱಿವುದೆನಸುಂ ಗೆಂಟು (ಸುಕುಮಾ. ೨-೬೫). ೨. ಕಷ್ಟ ; ತೊಂದರೆ : 'ಶ್ರಮಿಸು' ಪರಾ. ೩. ಯತ್ನ; ಪ್ರಯತ್ನ. ೪. ಅಂಗಸಾಧನೆ; ವ್ಯಾಯಾಮ. ೫. ಶಸ್ತ್ರಾಭ್ಯಾಸ : "ಬವರಮೆನಲ್ ಸಂಗ್ರಾಮಂ . . . ಶ್ರಮಮೆನಲ್ಕಭ್ಯಾಸಂ" (ಭಾರಸಿ. ೪೨). 'ಗರುಡಿಶ್ರಮ' ಪರಾ. ೬. ತಪಸ್ಸು. ೭. [ಕಾವ್ಯಮೀ] ಸಂಚಾರಿಭಾವಗಳಲ್ಲಿ ಒಂದು : ಮತಿನಿರ್ವೇದಾವಹಿತ್ವ ಶ್ರಮಮದ . . . ಮೋಹಾಮಯಮೃತಿಗಳಿವಿಂತೆಯ್ದೆ ಸಂಚಾರಿಭಾವಂ (ಕಾವ್ಯಾಪ. ೭೯೫); "ಪುನಃ ಶರೀರಖೇದಂ ಶ್ರಮಂ" - ಇದು ಪ್ರಯಾಣ, ವ್ಯಾಯಾಮ ಮೊದಲಾದವುಗಳಿಂದ ಒದಗುವುದು (ಭಾರಮೀ. ೩೪೬). [ಸಂ.]

ಶ್ರಮಂಗಳಿ (ಕ್ರಿ). ಆಯಾಸವನ್ನು ನಿವಾರಿಸು; ಬಳಲಿಕೆಯನ್ನು ಹೋಗಲಾಡಿಸು : ತುಂತುರ್ಗಳಂ ತಳೆದು ಬರ್ಪೆಲರಿಂದ ಬೀಸಿ ಇಂತೊಯ್ಯನೊಯ್ಯನೆ ಶ್ರಮಂಗಳಿ ರಾಮ ಭದ್ರಂ ಸಂತಾಪದಿಂದಿರೆ ಸುಖಂಗೊಡು ದೇವಿ ನೀನು (ಉರಾಚ. ೬೦).

[ಶ್ರಮ + ಕಳಿ$_1$ (< ಕಳಿ$_1$)]

ಶ್ರಮಗಾರ (ನಾ). ಕಷ್ಟಪಟ್ಟು ಕೆಲಸಮಾಡುವವನು; ಶ್ರಮಜೀವಿ : ಶ್ರಮಗಾರರಿಗೆ ಜ್ವರದ ಕಾಟ ಇಲ್ಲವೆಂದಲ್ಲ (ಚಟ್ಟಜೀ. ೧೩೪). [ಶ್ರಮ + — ಗಾರ (< - ಕಾಱ)]

ಶ್ರಮಗೃಹ (ನಾ). ಶಸ್ತ್ರಾಭ್ಯಾಸದ ಸ್ಥಳ ; ಗರುಡಿಯ ಮನೆ : "ಖಲೂರಿಕೆ ಶ್ರಮ [ಪಾಠಾಂ. ವ]ಗೃಹಂ ಗರುಡ್ಡಿಸಾಧನೆಯ ಮನೆಯೆನಿಕ್ಕುಂ" (ಮಂಗರಾ. ೫೯-೧೦). [ಸಂ.]

ಶ್ರಮಗೆಯ್ (ಕ್ರಿ). ಶಸ್ತ್ರಾಭ್ಯಾಸವನ್ನು ಮಾಡು : "ಖಲೂರಿಕಾ ಎಂಬುದು ಶ್ರಮಗೆಯ್ವ ಠಾವು" (ಹಲಾಯು. ೭೭-೩೧೬). [ಶ್ರಮ + ಕೆಯ್$_1$]

ಶ್ರಮಜೀವಿ (ನಾ). = ಶ್ರಮಗಾರ : ಅಜಂತಾಚಿತ್ರಕಾರರು ಸಾಮಾನ್ಯ ಶ್ರಮಜೀವಿಗಳು, ಕೃಷೀವಲರು, ಕರ್ಮಕುಶಲರು ಇವರ ಜೀವನವನ್ನು ನಿರೂಪಿಸಿದ್ದಾರೆ (ಭಾರದ. ೫೮೦). [ಸಂ. ಶ್ರಮಜೀವಿನ್]

ಶ್ರಮಣ (ಗು). ೧. ದುಡಿಯುವ; ಕಷ್ಟಪಡುವ . ೨. ಕೀಳಾದ; ನೀಚತನದ. (ನಾ). ೩. ಶ್ರಮಪಡುವಿಕೆ. ೪. ನೀಚ ; ಅಧಮ. ೫. ಯತಿ; ಮುನಿ : ಶ್ರಮಣರು ಊರ ಹೊರಗೆ ವಾಸಮಾಡುತ್ತ ಸದಾ ದೇವರ ಧ್ಯಾನದಲ್ಲಿ ಕಾಲಕಳೆಯುತ್ತಾರೆ (ಪ್ರವಾಗ. I. ೧೩೨). ೬. [ಬೌದ್ಧ] ಸಂನ್ಯಾಸಿ ; ಕ್ಷಪಣ : ಬೇರೆ ಬೇರೆ ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು, ವಿವಿಧ ಶ್ರಮಣ ಬ್ರಾಹ್ಮಣ ಜನರು ಅಲ್ಲಿ ಸಭೆ ಸೇರುತ್ತಿದ್ದರು (ಬುದ್ಧಪ್ರ. ಮಿಲಿಂದ. ೧೬). ೨. [ಜೈನ] ಸಂನ್ಯಾಸಿ ; ಶ್ರವಣ : ನಿಜವಾಗಿಯೂ ನರನು ಸಮತೆಯಿಂದ ಶ್ರಮಣನಾಗುತ್ತಾನೆ (ಜೈನಪ. ೫೦). ೮. (?) : ಅಱಿತಿಹಿನಱಿತಿಹಿನೆಂದು ಹೊಱಹೊಮ್ಮುವಾಗ ಕಾಯ ಮಱುಜವಣೆಯ ಮಹಾ ಪ್ರಳಯಕ್ಕೆ ಶ್ರಮ [ಪಾಠಾಂ. ವ]ಣವೆ ಅವತಾರಕ್ಕೆ ಹೊಱಗಾದ ನಿರಂಗವೆ ಅಸಗ ನೀರಡಿಸಿ ಸತ್ತಂತಾಯಿತ್ತು ಅವನಿರವು (ಮೋಮಾ. ೭೨-೨೮೫). [ಸಂ.]

ಶ್ರಮಣಕ (ನಾ). = ಶ್ರಮಣ ೬ : ಈ ಮುಂಡಕರು, ಶ್ರಮಣಕರು, ಇಭ್ಯರು, ಕೃಷ್ಣರು, ಬಂಧುಪಾದಾಪತ್ಯರು - ಇವರೆಲ್ಲ ! (ಬುದ್ಧಪ್ರ. ೧೦೪). [ಸಂ.]

ಶ್ರಮಣಿ (ನಾ). ೧. ಸಂನ್ಯಾಸಿನಿ : ರಾವಣಂ ಧರಣಿಜೆಯ ಕದ್ದೊಯ್ಯಲು ಶ್ರಮಣಿ ಪೇಳಿದ ಪರಿಯೊಳಿಲ್ಲಿ ಪರಿಯಂತ ಸಂಭ್ರಮದಿಂದ ಬಂದುದಾದುದು (ಪಂಕಾರಾ. ೪-೩-೪). ೨. [ಬೌದ್ಧ] ಭಿಕ್ಷುಣಿ : ಬೌದ್ಧರಲ್ಲಿ ಸ್ತ್ರೀಯರೂ ಕೂಡ ಸಂನ್ಯಾಸಿಗಳಂತೆ ವಿರಕ್ತರಾಗಿ ಸಂಘಗಳಲ್ಲಿ ಸೇರಿ ಶ್ರಮಣಿಗಳಾಗುತ್ತಿದ್ದರು (ಕರ್ನಾಸಂ. ೮೩). [ಸಂ. ಶ್ರಮಣಾ]

ಶ್ರಮಣೆ (ನಾ). ೧. ವಿರಾಗಿಣಿ ; ವಿರಕ್ತೆ. ೨. [ಜೈನ] ಸಂನ್ಯಾಸಿನಿ; ಕಂತಿ : "ಶ್ರಮಣಾ, ಭಿಕ್ಷುಕೀ, ಮುಂಡಾ - ಈ ೩ ಕಂತಿ" (ಹಲಾಯು. ೮೦-೩೩೩). [ಸಂ. ಶ್ರಮಣಾ]

ಶ್ರಮದಾನ (ನಾ). ಸಾಮಾಜಿಕ ಸೇವೆಗಾಗಿ ಮಾಡುವ ಶ್ರಮದ ಕೆಲಸ : ನಿಮ್ಮ ಶಾಲೆಯವರು ಮಾಡಿದ ಶ್ರಮದಾನದ ಬಗೆಗೆ ಬರೆಯಿರಿ (ಕಪಪ. ೩-೭೫). [ಸಂ.]

ಶ್ರಮದಾಯಕ (ಗು). ಕಷ್ಟವನ್ನುಂಟುಮಾಡುವ; ಆಯಾಸಕರವಾದ : ಅತ್ಯಂತ ಶ್ರಮದಾಯಕ ಮತ್ತು ಸಹನಾತೀತಕೆಲಸವನ್ನು ನಾವು ಏಕೆ ಮಾಡಬೇಕು ? (ಬಂಗಾಪ. ೫೪). [ಸಂ.]

ಶ್ರಮಪಡಿಸು (ಕ್ರಿ). ತೊಂದರೆಯನ್ನು ಅನುಭವಿಸುವಂತೆ ಮಾಡು : ಶ್ರಾದ್ಧದ ಊಟಕ್ಕೆ ಕರೆದು ಶ್ರಮಪಡಿಸಿದ ಹಾಗೆ (ಗಾದೆ). [ಶ್ರಮಪಡು + — ಇಸ್ಸು]

ಶ್ರಮಪಡು (ಕ್ರಿ). ಕಷ್ಟಪಡು; ತೊಂದರೆ ಅನುಭವಿಸು : "ನೀನ್ಯಾರಪ್ಪಾ? ಬಹಳ ಶ್ರಮಪಟ್ಟು ಬಂದಿದ್ದೀಯೆ ಎಲ್ಲಿಂದ ಬಂದೆ?" (ನೀತಿಚಂ. VII. ೧೩). [ಶ್ರಮೆ + ಪಡು$_1$]

ಶ್ರಮರಹಿತ (ಗು). ೧. ಆಯಾಸವಿಲ್ಲದ; ದಣಿವಿಲ್ಲದ. (ನಾ). ೨. ಕಷ್ಟವಿಲ್ಲದವನು : ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲದೊಡಾಳ್ವನಾಳ್ ಸರೋಗನರೋಗಂ ಶ್ರಮರಹಿತಂ ಕ್ಲೇಶಕೃತಶ್ರಮನೆಂಬೀ ಲೋಕಯಾತ್ರೆ ಕಿಡದೆ (ಶಾಂತಿಪು. ೮-೧೪೦). [ಸಂ.]

ಶ್ರಮಸಹಿಷ್ಣುತೆ (ನಾ). ಕಷ್ಟವನ್ನು ತಾಳಿಕೊಳ್ಳುವುದು; ದಣಿವನ್ನು ಸಹಿಸಿಕೊಳ್ಳುವುದು : ನಮ್ಮ ದೇಶದಲ್ಲಿಯೇ ಆಹಾರಪದ್ಧತಿಯ ವೈವಿಧ್ಯತೆಗೆ ಅನುಗುಣವಾಗಿ ಜನರ ಎತ್ತರ, ದೇಹದಾರ್ಢ್ಯ, ಶ್ರಮಸಹಿಷ್ಣುತೆ ಮತ್ತು ಆರೋಗ್ಯ ವಿವಿಧವಾಗಿರುತ್ತವೆ (ಗೃಪವಿ. ೧). [ಸಂ. ಶ್ರಮಸಹಿಷ್ಣುತಾ]

ಶ್ರಮಸ್ಥಾನ (ನಾ). ಶಸ್ತ್ರಾಭ್ಯಾಸವನ್ನು ಮಾಡುವ ಸ್ಥಳ : ಈವೊತ್ತು, ಪ್ರಾತಃಕಾಲ, ಸೈನ್ಯಗಳ ಶ್ರಮಸ್ಥಾನದ ಬಯಲಲ್ಲಿ, ತನ್ನದೊಂದು ಹೊಸಕಲ್ಪಿತದ ಸೇನಾನಿಯಮದಂತೆಯೇ ತಮ್ಮ ಹಗ್ಗಡೆಗೆ ವೀರವನ್ನನವನೊಪ್ಪಿಸಲಿಲ್ಲವೆಂದು . . . ನೂಂಕಿಸಿಬಿಟ್ಟನು (ಪಾಂಡ್ರಪ್ರ. ೬೮-೪). [ಸಂ.]

ಶ್ರಮಾಪಹಾರಿ (ನಾ). ಆಯಾಸವನ್ನು ಹೋಗಲಾಡಿಸುವಂಥದು : ಕಲ್ಯಾಣ ಮಲ್ಲನು . . . ಶ್ರಮಾಪಹಾರಿಯಾದ ತೀವ್ರಮದ್ಯವನ್ನು ಒಂದು ಪಾತ್ರೆಗೆ ಬಗ್ಗಿಸಿಕೊಂಡು ಹೀರಿಬಿಟ್ಟನು (ಚನ್ನಬೀ. ೪೮). [ಸಂ. ಶ್ರಮಾಪಹಾರಿನ್]

ಶ್ರಮಿ (ನಾ). ಕಷ್ಟಪಡುವ ವ್ಯಕ್ತಿ : ದಮಿ ನೀನು, ನಾನು ದುರ್ದಮ್ಯ, ನಿನ್ನ ಕರುಣೆಯೊಳೆ ನನ್ನ ತೊಯ್ಸು, ಶ್ರಮಿ ನೀನು ನಿನ್ನ ಶ್ರವಮಾಡಿಕೊಂಡೆ ಮೈಮುರಿಯೆ ನನ್ನ ಗೈಸಿ (ಅರಳಿ. ೧೪೬-೧೨). [ಸಂ. ಶ್ರಮಿನ್]

ಶ್ರಮಿಕ (ನಾ). = ಶ್ರಮಗಾರ : ಇಂದಿಗೆ ಬಂಡವಾಳಗಾರ ಮಧ್ಯಮವರ್ಗವನ್ನು ಇದುರಿಸಿ ನಿಂತ ಎಲ್ಲ ವರ್ಗಗಳಲ್ಲಿಯೂ ಕೇವಲ ಶ್ರಮಿಕವರ್ಗವೇ . . . ನಿಜವಾಗಿಯೂ ಕ್ರಾಂತಿಕಾರಿಯಾಗಿರುವುದು (ಸಾವಾದ. ೯೯); ಮಲೇರಿಯಾ ಬೆಳವಣಿಗೆ, ಶ್ರಮಿಕರ ಸಂಖ್ಯೆ ಕಡಿಮೆಯಾದುದು, ಇವೆಲ್ಲ ಸಾಗುವಳಿಯ ಕ್ಷೇತ್ರ ಕಡಿಮೆಯಾಗಲು ಮುಖ್ಯ ಕಾರಣಗಳು (ಕರವೀ. ೯). [ಸಂ.]

ಶ್ರಮಿಸು (ಕ್ರಿ). ೧. ಕಷ್ಟಪಡು ; ದುಡಿ : ಸೇವೆಗೋಸ್ಕರ ಶ್ರಮಿಸುತ್ತಲೇ ಇರುವುದರಿಂದ ಪರಮಾತ್ಮನನ್ನು ಅಮರನಾಗಿರುವಂತೆ ಹರಸಿದ್ದಾನೆ (ನನದಿ. ೩೯). ೨. ತಪಸ್ಸುಮಾಡು (?) : ಮರೆತ ಸಂಗೀತರಸ ಗರಿಗಣ್ಣಗಳಿಗತಿಯೆ ನಿರುತ ನರ್ತನದಿಂ ವಸಂತ ನ್ಯಪಾಲಕನವುರಿವ ಏನಿಯೋಗದಾಸ್ಥಾನಮೆನೆ ಮೆರೆದುದಾ ವನ ಶ್ರಮಿಸುವರ ಪಾವನ (ನಪಮೋ. ೨೪-೫೨). [ಶ್ರಮ + — ಇಸ್ಸು]

ಶ್ರಮೆ (ನಾ). ದಣಿವು ; ಆಯಾಸ : ಸ್ವಾಮಿಯ ಪಾದಗಳ ಮೇಲೆ ಬಿದ್ದು, ಶ್ರಮೆಯಿಂದಲೂ ಶಿವನ ಅನುಗ್ರಹದಿಂದಲೂ ನಿದ್ರೆಗೈದರು (ಪುರಾವಿ. ೨೨೭); ಭ್ರಮೆಯಿದ್ದವಗೆ ಶ್ರಮೆಯಿಲ್ಲ, ಶ್ರಮೆಯಿದ್ದವಗೆ ಭ್ರಮೆಯಿಲ್ಲ (ಗಾದೆ). [ಸಂ. ಶ್ರಮ]

ಶ್ರಯ$_1$ (ನಾ). ಆಸರೆ ; ರಕ್ಷಣೆ : ಶಿವಶಿವ ಮಹಾದೇವಾ ಶ್ರಯ [ಪಾಠಾಂ ಮ]ವೆನಲು ತಾನೀ ಶಿಶುವ ಕತಿಪಯದಿನವನಾರೈದು ಹರಿಣಾನ್ವಯಕೆ ಶೇರಿಸಿಕೊಡುವುದೇ ಸದ್ಧರ್ಮವೆನಗೆಂದ (ನಿಭಾಗ. ೫-೫-೨೨). [ಸಂ.]

ಶ್ರಯ$_2$ (ನಾ). ೧. ಸಾಗುವಳಿಯಿಂದ ಭೂಮಿಯನ್ನು ಅಭಿವೃದ್ಧಿಪಡಿಸುವುದು : ಶ್ರಯ ನಷ್ಟ ಗ ೨ . . . ಬಿರಾಡದಿಂದಲು ಭತ್ತ ಸುಂಕ (ಮೃಆರಿ. ೧೯೩೩. ೨೮-೨೩; 1629). ೨. ಭೂಮಿಯನ್ನು ಅಭಿವೃದ್ಧಿಪಡಿಸಲು ನಿಕೃಷ್ಟ ಭೂಕಂದಾಯದಿಂದ ಪ್ರಾರಂಭಿಸಿ ವರ್ಷಂಪ್ರತಿ ಹೆಚ್ಚುತ್ತಾ ಹೋಗಿ ಕೊನೆಯ ಮಟ್ಟಕ್ಕೇರುವ ಪ್ರಗತಿಪರ ವಾರ್ಷಿಕ ಕಂದಾಯ (ರೈಸ್‌ಗ. II. ೫೬೨). ೩. ಕಡಮೆ ಕಂದಾಯದ ಕರಾರಿನಿಂದ ಮಾಡುವ ಭೂಮಿಯ ಸಾಗುವಳಿ: ಆ ಪ್ರಕಾರಕ್ಕೆ ಶ್ರಯಕ್ಕೆ ಮಾಡಿಕೊಂಡಿದ್ದೇನೆ (ಮಹಾವಂ. II. ೭೯). [?]

ಶ್ರಯಣ (ನಾ). ಆಶ್ರಯಿಸುವಿಕೆ ; ಅವಲಂಬನ : "ಶ್ರಾಯಃ, ಶ್ರಯಣಂ - ೨ ಆಶ್ರಯಿಸುವಿಕೆ, ಅವಲಂಬಿಸುವಿಕೆ" (ಸಿದ್ಧಾಂತಿ. ೩೫೯). [ಸಂ.]

ಶ್ರಯಣೀಯ (ನಾ). ಆಶ್ರಯಿಸಿದವನು; ಅವಲಂಬಿಸಿದವನು : ನಯಶಾಲಿ ವತ್ಸಗೋತ್ರಶ್ರಯಣೀಯನನೇಕಸಕಳಶಾಸ್ತ್ರಾರ್ಥವಿನಿಶ್ಚಯಮತಿಕೃತಿಮಾಧವಸೋಮಯಾಜಿ ಸಲೆ ನೆಗಟ್ಟಂ (ಪಂಪಭಾ. ೧೪-೪೨). [ಸಂ.]

ಶ್ರಯಪಟ್ಟೆ (ನಾ). ಪ್ರಗತಿಪರ ಭೂಕಂದಾಯದ ದಾಖಲಿನ ಪತ್ರ; ಕಂದಾಯದ ಪಟ್ಟೆ : ಪಾಳುಭೂಮಿ ಸಾಗುವಳಿಮಾಡುತ್ತೇನೆಂದು . . . ದರಖಾಸ್ತು ಮಾಡಿದಲ್ಲಿ ಅದಕ್ಕೆ ಸಹ ಆಮೀಲ ಶಿರಸ್ತೆದಾರರ ರುಜುವಿನಿಂದ ಶ್ರಯಪಟ್ಟೆ ಬರೆದುಕೊಡುವ ಕಾಯಿದೆ ತಪ್ಪೀಲು (ಮಹಾವಂ. II. ೬೧). [ಶ್ರಯ$_2$ + ಪಟ್ಟೆ$_3$]

ಶ್ರಯಸಾಗುವಳಿ (ನಾ). ಕಡಿಮೆ ಕಂದಾಯದ ಕರಾರಿನಿಂದ ಸಾಗುವಳಿ ಮಾಡುವ ಭೂಮಿ : (ಕಿ). [ಶ್ರಯ$_2$ + ಸಾಗುವಳಿ]

ಶ್ರವ$_1$ 'ಸವ$_3$' ನೋ.

ಶ್ರವ$_2$ 'ಸಬ' ನೋ.

ಶ್ರವ$_3$ (ನಾ). ೧. ಕೇಳುವಿಕೆ; ಆಲಿಸುವಿಕೆ. ೨. ಶ್ರವಣೇಂದ್ರಿಯ; ಕಿವಿ : ಶ್ರವ [ಪಾಠಾಂ. ಮ]ದಿಂ ಭಾಳಕ್ಕೆ ಬಾನಲ್ವರಿದ ಕುರುಳ ಕಸ್ತೂರಿಕಾರೇಣುಜಾಳದ್ರವಮಂ ಕಂಡರ್ದಿಕೊಂಡೊಳ್ನನೆಯ ಮೊನೆಯೊಳಾಂ ಬಂದಪೆಂ (ಅರ್ಧನೇ. ೫-೭೩). [ಸಂ.]

ಶ್ರವಣ$_1$, ಸವಣ$_1$ (ನಾ). ಅಕ್ಕಸಾಲಿಗನ ಚಿಮ್ಮಟ, - ತಂಡಸ : (ಕಿ). ಸವಣ$_1$: (ಕಿ). [ದೇ. ॥ ಮಲ. ಚವಣ; ತೆಲು. ಶ್ರಾವಣ, ಸ್ರಾವಣ]

ಶ್ರವಣ$_2$ (ನಾ). ೧. ಕೇಳುವಿಕೆ ; ಆಲಿಸುವಿಕೆ : ಅಂತು ನಿಜತನೂಜನ ಮರಣಶ್ರವಣಾಶನಿಘಾತದಿಂ ಕುಳಶೈಲಂ ಕೆಡೆವಂತೆ ಕೆಡೆದು ಮೂರ್ಛಾಗತನಾದ ಧರ್ಮಪುತ್ರನಂ . . . ಮುಂದಿಟ್ಟೊಡಗೊಂಡು ಬೀಡಿಂಗೆ ಪೋದರಾಗಳ್ (ಪಂಪಭಾ. ೧೧-೧೦೬ ವ) ; ನಾನಾಕಘಾಶ್ರವಣದಿಂದಧ್ವಶ್ರಮಂಗಳಂ ನೀಗುತಂ (ಶ್ರೀರಾಮಾ. ೩೯-೩೧೭); ಶ್ರವಣದಿಂದ ಮನನ, ಮರಣದಿಂದ ಮುಕ್ತಿ (ಗಾದೆ). ೨. ಕಿವಿ; ಶ್ರವಣೇಂದ್ರಿಯ : ಮಹೋಗ್ರರಿಪುಭೂಭುಜಶ್ರವಣಭೈರವಾಡಂಬರಂ ಗುಹಾಗಹನಗಹ್ವರೋದರವಿಶೀರ್ಣಮಾದಂದದೇಂ ಮುಹುಃಪ್ರಕಟಮಾದುದಾ ರವಿತನೂಭವಜ್ಯಾರವಂ (ಪಂಪಭಾ. ೧೨-೧೩೬); ಶಿವಂ ಪ್ರತ್ಯಕ್ಷನಾಗುತಾಗ ಮನದಿಷ್ಟ ಬೇಡನಲು ಮಾಡಿದಘವನು ಪೇಳಿ ತನಗೆ ಶ್ರವಣದಿ ಕೇಳ್ವ ಉಲುಹ ನಿರ್ಮಲಗೆಯ್ದು ಅನುನಯದಿ ನಿನ್ನುದರದೊಳಗಿರಿಸಿಕೊಳ್ಳುದೆಂದವನಿಪಂ ಬಿನ್ನೈಸಲು (ಪ್ರೌಢರಾ. ೧೪-೧೩). ೩. (ಕೇಳುವುದರ ಮೂಲಕ) ಕಲಿಯುವುದು; ಅಧ್ಯಯನಮಾಡುವುದು. ೪. ಯಜ್ಞಭೇದಗಳಲ್ಲಿ ಒಂದು. ೫. ಒಳ್ಳೆಯ ಗಾಯನ ; ಸುಮಧುರಸಂಗೀತ. ೬. ಮೂಗು; ನಾಸಿಕ. ೭. [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಇಪ್ಪತ್ತೆರಡನೆಯ ನಕ್ಷತ್ರ : ಶ್ರವಣಂ ಧನಿಷ್ಠ ರೋಹಿಣಿ (ಲೋಕೋಪ. ೪-೮೩); ಅಶ್ವಿನಿ ಭರಣಿ . . . ಶ್ರವಣ ಧನಿಷ್ಠೆ ಶತವಿಶಾಖೆ ಪೂರ್ವಾಭಾದ್ರಪದೆ ಉತ್ತರಾಭಾದ್ರಪದೆ ರೇವತಿಗಳೆಂಬಿಪ್ಪತ್ತೇಳು ನಕ್ಷತ್ರಂಗಳುಂ (ವಿವೇಕ. ೨೫೮) ; "ಅಧ್ವರಭೇದ ನಾಸಿಕಂ ಪಾಡುವ ಗಾನ ಕರ್ಣ ಭಗಣಾದಿಗಳುಂ ಶ್ರವಣಾಭಿಧಾನಮುಂ" (ನಾನಾರ. ೫೧). ೮. [ವೇದಾಂತ] ಗುರುಮುಖದಿಂದ ವೇದಾಂತದ ನುಡಿಗಳನ್ನು ಆಲಿಸುವುದು, — ಕೇಳುವುದು: ಶ್ರವಣಮನನವಾ ನಿಧಿಧ್ಯಾಸನವನೆ ತ್ರಿಪುಟಿಭೇದಂಗಳಿಂದಂ ಪುಟ್ಟಿ ರಾಜಿಸಿರ್ಪ ಪರೋಕ್ಷದನುಭವಂ (ವೀಶೈಪು. ೫-೧೧-೧೧); ಇದುವೆ ಶ್ರವಣವು ಪ್ರಥಮವಾದುದು ಯಿದುವೆ ತನಗೆಯು ನಿಶ್ಚಯಕೆ ಬರೆ (ಚ್ಛಾನಸಂ. ೧೨-೧೭). ೯. [ಜೈನ] ಜೈನಸಂನ್ಯಾಸಿ : ಶ್ರವಣರುಗಳಂ ನೋಡಿ ಜೇಡರ ದಾಸಿಯಿಂತೆಂದ (ಬಸಪು. ೫೧-೩೬) ; ಜಿನ್ನನೇ ದೈವವಲ್ಲದೆ ಬೇಱೆಯಿಲ್ಲೆನುತ ತನ್ನ ಪುರಜನಕ್ಕೆಲ್ಲ ಶ್ರವಣರನೆ ಭಜಿಸೆಂದು ಮುನ್ನ ಡಂಗುರ ಸಾಱೆ (ಪ್ರೌಢರಾ. ೧೮-೩೫). [ಸಂ.]

ಶ್ರವಣಪಟುತೆ (ನಾ). ಕಿವಿಯ ಗ್ರಹಣಶಕ್ತಿಯ ಚುರುಕುತನ, — ಸೂಕ್ಷತೆ : ಕಿವಿಯಂ ಜಿನವರಚರಿತಶ್ರವಣಪಟುತೆ ಪಿಂಗದನ್ನಮಾರ್ಜಿಪೆನಱನಂ (ಚಂದ್ರಪು. ೪-೧೭). [ಸಂ. ಶ್ರವಣಪಟುತಾ]

ಶ್ರವಣಭೂಷಣ (ನಾ). ೧. ಕಿವಿಯ ಆಭರಣ ; ಕರ್ಣಕುಂಡಲ. ೨. ಶ್ರವಣನಕ್ಷತ್ರ. ೧, ೨ : ಶ್ರವಣಭೂಷಣದಿಂದೆ ಹಸ್ತಾಭರಣದಿಂದೆ ದಿವಿಜಪದ ಮೆಸವಂತೆ ಕುಂತಳಶ್ರೀಯ ವೈಭವದಿಂದೆ ರಮಣೀಯ ಕಾಂಚೀಪ್ರದೇಶದಿಂ ಭೂಭಾಗ ಮೊಪ್ಪುವಂತೆ . . . ವಿಷಯೆ ಕಂಗೊಳಿಸಿರ್ದಳು (ಚೈಮಿಭಾ. ೩೧-೧೦). [ಸಂ.]

ಶ್ರವಣವಿವರ (ನಾ). ಕಿವಿಯ ತೂತು, — ರಂಧ್ರ : ಶ್ರವಣವಿವರದೊಳ್ ತಪ್ತಾಯ ಸಮಂ ಪೊಯ್ತಂತೆ ದಾರಕವಿದಾರಣಮುಂ ದಾರಪರಾಭವಮುಂ ತನಗಟಲನೆರ್ದೆ ವಟಲುಮನೊದವಿಸೆ (ಪಂರಾಮಾ. ೯-೪೬ ವ). [ಸಂ.]

ಶ್ರವಣಶೂಲ (ನಾ). ೧. ಕಿವಿನೋವು; ಕರ್ಣಶೂಲೆ. ೨. ಕಿವಿಗೆ ಶೂಲದಂತೆ ಇರಿಯುವುದು; ಕರ್ಣಕಠೋರವಾದುದು : ಪರಸುವ ಪೌರರ ಪರಕೆಯ ಸರಂ ಶ್ರವಣಶೂಲಮಾಗಿ ಕಿವಿಯೊಳ್ ಪುಗುವಂತಿ[ರೆ] ಕಿವಿಯಂ ಪುಗೆ ನೆರೆದರಸರ ಮಕ್ಕಳ್ ವಿರಸರಾದರಾ ಸಂಕಟದೊಳ್ (ಶಾಂತಿಪು. ೬-೩). 'ಕರ್ಣಶೂಲ' ಪರಾ. [ಸಂ.]

ಶ್ರವಣಸುಖ (ನಾ). ಕೇಳುವುದಕ್ಕೆ ಹಿತಕರವಾದುದು ; ಆಲಿಸುವುದಕ್ಕೆ ಸುಖಕರವಾದುದು : ಭವದಗ್ರಜ ದಿಗ್ವಿಜಯೋತ್ಸವಮಧಿಕಮಹೋತ್ಸವಂ ವಲಂ ನಿನಗಾದಂ ಶ್ರವಣಸುಖಮಂದೆ ದಿಙ್ಮಾತ್ರವರ್ಣನಂಗೆಯ್ವೆನುಂತದೇನೆನ್ನಳವೇ (ಆದಿಪು. ೧೪-೫೧). [ಸಂ.]

ಶ್ರವಣಾಭರಣ (ನಾ). ೧. ಕಿವಿಯ ಆಭರಣ. ೨. ಶ್ರವಣನಕ್ಷತ್ರದಿಂದ ಕೂಡಿದುದು. ೧, ೨ : ಮಲಯಮೇಖಲೆಯಂತೆ ಚಂದನಪಲ್ಲವಾವತಂಸೆಯುಂ ನಕ್ಷತ್ರಮಾಲೆಯಂತೆ ಚಿತ್ರಾಶ್ಲೇಷಶ್ರವಣಾಭರಣಭೂಷಿತೆಯುಂ (ಕಾದಂಪೂ. ೪೯). [ಸಂ.]

ಶ್ರವಣಾಮಯ (ನಾ). ಕಿವಿಯ ರೋಗ ; ಕರ್ಣವ್ಯಾಧಿ : ಶ್ರವಣಾಮಯಮುಂ ನಿಜಭೃತ್ಯವೈರಮುಂ ಪಾಪಕರ್ಮವಿರಸತೆಯುಂ . . . ಸಮನಿಸುಗುಂ ಸುರೇಜ್ಯನವ ರೋಹಿಣಿಯೊಳ್ (ಜಾತತಿ. ೯-೨೬). [ಸಂ.]

ಶ್ರವಣೀಯೆ (ನಾ). ಶ್ರವಣಸುಖವನ್ನುಂಟುಮಾಡುವವಳು : ಇವರಪ್ಪೂಡ ವಿದ್ಯಾದೇವತಾತ್ಮಿಕೆಯರ್ ಶ್ರವಣೀಯೆಯರಲ್ಲದನುಭವನೀಯೆಯರಲ್ಲರ್ (ಶಾಂತಿಪು. ೨-೮೧ ವ). [ಸಂ. ಶ್ರವಣೀಯಾ]

ಶ್ರವಣೇಂದ್ರಿಯ (ನಾ). ಶಬ್ದವನ್ನು ಗ್ರಹಿಸುವ ಅಂಗ; ಕಿವಿ : ಶ್ರವಣೇಂದ್ರಿಯ ವಿಷಯದಿಂದೆ ಎರಳೆ ಕೆಡುವುದು ಬೇಟೆಗಾಱನ ಸರಳಿನಲಿ (ಅಖಂಡೇ. ೭-೪). [ಸಂ.]

ಶ್ರವಿಷ್ಠೆ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಇಪ್ಪತ್ತೆರಡನೆಯ ನಕ್ಷತ್ರ; ಧನಿಷ್ಠೆ : "ಧನಿಷ್ಠಾ, ಶ್ರವಿಷ್ಠಾ - ಈ ೨ ಧನಿಷ್ಠೆ" (ಹಲಾಯು. ೧೦-೫೧). [ಸಂ. ಶ್ರವಿಷ್ಠಾ]

ಶ್ರವ್ಯ (ಗು). ೧. ಕಿವಿಗೆ ಬೀಳುವ: ಕೇಳುವ. ೨. ಕೇಳಲು ಅರ್ಹವಾದ; ಇಂಪಾದ. (ನಾ). ೩. ಕೇಳಲು ಯೋಗ್ಯವಾದುದು; ಕಿವಿಗೆ ಇಂಪಾದುದು: ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಲಂ ವ್ಯಾಪ್ತದಿಗಂತಂ ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚೆ ನಿಚ್ಚಂ (ಆದಿಪು. ೧-೨೬); ಪರ್ವತದಿಂದ ಹೊಮ್ಮುವ ಆನಂದದ ಬುಗ್ಗೆಯಂತೆ ನಮ್ಮ ಈ ಹಾಡುಗಳು ಬೃಹಸ್ಪತಿಗೆ ಶ್ರವ್ಯವಾಗಿವೆ (ಭಾವಗೀ. ೧೧೧). ೪. [ಕಾವ್ಯಮೀ] ಕಾವ್ಯದ ಎರಡು ಭೇದಗಳಲ್ಲಿ ಒಂದು; ಕೇಳಲು ಹಿತವಾದ ಕಾವ್ಯ : ನಾಂದೀವಿಧಿಯಂ ನಿರ್ವರ್ತಿಸಿ ದೃಶ್ಯ ಶ್ರವ್ಯ ದೃಢಮಾತ್ರಾದಿ ಪ್ರಯೋಗಂಗಳೊಳಂ ನಾನಾವಿಧವಾದ್ಯಂಗಳೊಳಮಾಂಗಿಕಾಭಿನಯಂಗಳೊಳಮೆಸೆಯೆ (ಆದಿಪು. ೭-೧೧೫ ವ);

'ಶ್ರವ್ಯ'ವೆಂದರೆ ಕೇಳುವುದಕ್ಕೆ ಅನುಕೂಲವಾದವುಗಳು. ಮಹಾಕಾವ್ಯ, ಖಂಡಕಾವ್ಯ, ಕಥೆ ಮುಂತಾದ ಗ್ರಂಥಗಳೆಲ್ಲಾ ಈ ಪಂಗಡಕ್ಕೆ ಸೇರುತ್ತವೆ (ಕೃಪಿ. ೧೮೧). 'ದೃಶ್ಯ' ಪರಾ. [ಸಂ.]

ಶ್ರವ್ಯಕಾವ್ಯ (ನಾ). ಕೇಳಲು ಹಿತವಾದ ಕಾವ್ಯ : ದೃಶ್ಯಕಾವ್ಯ ಶ್ರವ್ಯಕಾವ್ಯಗಳೆರಡಕ್ಕೂ ತಿರುಳು ಒಂದೇ (ಭಾರಮೂ. ೭). [ಸಂ.]

ಶ್ರವ್ಯೋಪಕರಣ (ನಾ). ಕೇಳಲು ಸಹಾಯಕವಾದ ಉಪಕರಣ, — ಸಾಧನ : ವಿವಿಧರೀತಿಯಲ್ಲಿ ಪಾಠೋಪಕರಣಗಳಾಗಿ ಬಳಕೆಗೆ ಬರುತ್ತಿವೆ. ಅವನ್ನು ಪ್ರದರ್ಶಿಸಲು ಅನುಕೂಲಿಸುವ ದೃಶ್ಯ ಮತ್ತು ಶ್ರವ್ಯೋಪಕರಣಗಳೂ ಪ್ರಚಾರಕ್ಕೆ ಬರುತ್ತಿವೆ (ಶಿಕ್ಷದ. ೨೯೦). [ಸಂ.]

ಶ್ರಾಂತ (ಗು). ೧. ದಣಿದ; ಆಯಾಸಗೊಂಡ. ೨. ಶಾಂತವಾದ; ನೆಮ್ಮದಿಯ. ೩. ವಿಶ್ರಮಿಸಿಕೊಳ್ಳುತ್ತಿರುವ : ವಿದಿತ ಪ್ರತ್ಯಕ್ಷನಾಶಾಕರಿನಿಕಟತಟಶ್ರಾಂತದಾನಂ ಭರಂಗಯ್ದುದಿರೊಳ್ ವಿಕ್ರಾಂತತುಂಗಂ ಹರಿಗನಿರ (ಪಂಪಭಾ. ೬-೭೭). (ನಾ). ೪. ದಣಿದುದು ; ಆಯಾಸಗೊಂಡುದು : ರಾಯನಿಂದುಮೊದಲಿನ ಉತ್ಸಾಹಮೂರ್ತಿಯಲ್ಲ, ಉಲ್ಲಾಸಮೂರ್ತಿಯಲ್ಲ. ಮನಸ್ಸು ಚಿಂತಾಕುಲ, ದೇಹ ಶ್ರಾಂತ (ಆಳಿಕ. ೧೬೭). ೫. ಬಳಲಿದವನು ; ಆಯಾಸಗೊಂಡವನು : ಆ ವನಾಂತರಾಳ ಮಧ್ಯಸ್ಥಿತವಿಶಾಳವಟವಿಟಪಿಯನೆಯ್ತಂದದಱ ಕೆಟಗಯ್ಯರುಮನಿಟಪಿ . . . ಪರಿಶ್ರಮಶ್ರಾಂತರ್ ನಿದ್ರಾ[ಭ]ರಪರವಶರಾಗಿರೆ (ಪಂಪಭಾ. ೩-೧೦ವ); ದಿನವೆಲ್ಲಾ ದುಡಿದು ತಾವು ಶ್ರಾಂತರಾಗಿದ್ದೀರಿ (ಸಣ್ಣಕ. I. ೮-೩). ೬. ಶಾಂತನಾದವನು ; ಉದ್ವೇಗವಿಲ್ಲದವನು : ಕುಂತೀಸುತ ಭೀಮಗದಾಭ್ರಾಂತಂ ಜಂಘಾವ್ಯಪೇತನುಣ್ಮುಖ ರಕ್ತಾತ್ಮಂತ ಪ್ರವಾಹಸಹಿತ ಶ್ರಾಂತಂಯೋಗಿಯ ಮುನಿವೊಲಿರ್ದನಾ ಕುರುರಾಜಂ (ಗದಾಯು. ೯-೧೮). ೭. ಇಂದ್ರಿಯನಿಗ್ರಹವುಳ್ಳವನು; ಮುನಿ: "ಇಂದ್ರಿಯದೃಢನು ಶಾಂತಂ ಶ್ರಾಂತನೆನಿಸಿಕ್ಕು" (ಮಂಗರಾ. ೭೪-೪). ೮. ಹಸಿದವನು; ಕ್ಷುಧಿತ : "ಕ್ಷುತ್ಕಾನ್, ಬುಭುಕ್ಷಿತಃ, ಶ್ರಾಂತಃ, ಜಿಘತ್ಸುಃ, ಕ್ಷುಧಿತಃ - ಈ ೫ ಹಸಿದಾತಂ" (ಹಲಾಯು. ೫೯-೨೦೫). ೯. [ನಾಟ್ಯ] ದಣಿವನ್ನು ತೋರುವ ಅಭಿನಯ; IP "ದೃಷಿಯನ್ನು ಬಹಳ ದೂರ ಪ್ರಸರಿಸದೆ ಸ್ವಲ್ಪ ಮೇಲುದೃಷ್ಟಿಮಾಡಿ ರೆಪ್ಪೆಯ ರೋಮಗಳನ್ನು ಸೇರಿಸಿ ಕರೀಗುಡ್ಡೆ ಬೀಳುವುದೋ ಎನ್ನುವಂತೆ ಕಡೆಗಣ್ಣಿನಿಂದ ನೋಡುವುದು" (ಲಾಸ್ಯರಂ. ೨೬೯ ಗದ್ಯಾನುವಾದ): ಕಡುದೂರಂ ಪರಿಯದೆ ಮೇಲೊಡರ್ಚಿದ[ರ] ನೋಟದಿಂದ ಮೆಲ್ಲನೆ ಪಕ್ಷ್ಮಮನೊಡಗೂಡಿಯಾಲಿಬೀಳ್ವವೊಲಿಡುಕಿಪಿದಾ ನೋಟಮದುವ ಶ್ರಾಂತಮೆನಿಕ್ಕುಂ (ಲಾಸ್ಯರಂ. ೩-೨೮). [ಸಂ.]

ಶ್ರಾಂತಿ (ನಾ). ಬಳಲಿಕೆ; ಆಯಾಸ : ಶ್ರಾಂತಿಯುಂ ಘನಮಾದತ್ತು ತುರಂಗಮಕ್ಕ ದಱಿನಾಂ ನೀರ್ದಾಣಮಂ ನೋಡಿ ಮೆಲ್ಲನೆ ಸಾರ್ದಲ್ಲಿ ಬಟಲ್ಕೆಯಂ ಕಳೆದು ಪೋಪಂ (ಕಾದಂಪೂ. ೬೨೯) ; ಶಿಖರಶಾಖೆಯ ನೆಟಲಿಂ ಮಸುಳಿಸಿ ಖಚರಶ್ರಾಂತಿ [ಪಾಠಾಂ. ಶ್ರುತಿ] ಯನೆಸದುದು ಭುವನೈಕಭವನದಂತಾ ಭೂಜಂ (ಜಗವಿ. ೪-೪೬); ಘನಶ್ಯಾಮ, ರಾಧೇಶ್ಯಾಮ ಎಂದು ಕರೆದು ನಾವು ಸ್ವಲ್ಪಹೊತ್ತು ನಮ್ಮ ಶ್ರಾಂತಿಯನ್ನು ಕಳೆದುಕೊಳ್ಳುತ್ತೇವೆ (ಈಶಕ. ೧೨೪). [ಸಂ.]

ಶ್ರಾಣ (ಗು). ೧. ಕುದಿಸಿದ. ೨. ಬೇಯಿಸಿದ. ೩. ಒದ್ದೆಯಾದ; ತೇವವಾದ. [ಸಂ.]

ಶ್ರಾಣೆ (ನಾ). ಅನ್ನದ ಗಂಜಿ : "ಯವಾಗೂಃ, ಉಷ್ಣಿಕಾ, ಶ್ರಾಣಾ (ಶ್ರೋಣಾ), ತರಳಾ, ವಿಲೇಪಿಕಾ - ಈ ೫ ಗಂಜಿ" (ಹಲಾಯು. ೫೩-೧೬೫). [ಸಂ. ಶ್ರಾಣಾ]

ಶ್ರಾದ್ಧ (ಗು). ೧. ನಂಬಿಕೆಯುಳ್ಳ; ನಿಷ್ಠೆಯುಳ್ಳ. (ನಾ). ೨. (ಮೃತರಾದ ಪಿತೃಗಳ ಆತ್ಮತೃಪ್ತಿಗಾಗಿ) ಶ್ರದ್ಧಾಪೂರ್ವಕವಾಗಿ ಆಚರಿಸುವ ಕರ್ಮ : ಮತ್ರೋರ್ಮೆ ಜಾಲದೊಳ್ಸಿಕ್ಕಿತ್ತಯಾಗಿರ್ದ ಮೀನದಂ ಶ್ರಾದ್ಧಕೃತ್ಯುತ್ತಮಲೋಹಿತ ಮತ್ಸ್ಯಮುಮುತ್ತಮಮಂದೊಂದು ಕಡೆಯನಡಿಸಿದನರಸಂ (ಯಶೋಧ. ೩-೫೦); ಚಂಡಿ ಪೇಳಿದವೊಲಾ ಶ್ರಾದ್ಧಮಂ ಮಾಡಿ (ಚೈಮಿಭಾ. ೧೦-೩೦). [ಸಂ.]

ಶ್ರಾದ್ಧದೇವ (ನಾ). ಪಿತೃಗಳ ಒಡೆಯ; ಯಮ : ಭೂವರನೆ ನಿನ್ನ ಕೊಂಡೊಯ್ವೆನೆ ನಲಾ ಶ್ರಾದ್ಧದೇವನೊಳು ಮರಳಿ ರಾಜಶ್ರೇತನಾಡಿದಂ (ವೀಶ್ವಪು. ೨-೫-೧೬). [ಸಂ.]

ಶ್ರಾದ್ಧಭೋಕ್ತೃ (ನಾ). ಶ್ರಾದ್ಧದ ಅನ್ನವನ್ನು ತಿನ್ನುವವನು. [ಸಂ.]

ಶ್ರಾಪ 'ಸಾಪ' ನೋ.

ಶ್ರಾಪಿಸು 'ಸಾಪಿಸು' ನೋ.

ಶ್ರಾಯ (ನಾ). ೧. ಆಸರೆ; ಆಶ್ರಯ. ೨. ಆಶ್ರಯಿಸುವುದು; ಅವಲಂಬಿಸುವುದು: "ಶ್ರಾಯಃ, ಶ್ರಯಣಂ - ೨ ಆಶ್ರಯಿಸುವಿಕೆ" (ಸಿದ್ಧಾಂಶಿ. ೩೫೯). ೩. ಸುಭಿಕ್ಷದ ಕಾಲ; ಏಳಿಗೆಯ ಸಮಯ : ಸಮನಾದ ಶ್ರಾಯ ಬಂದಾಗ, ಅಲ್ಲಿ ನಿಲ್ಲುವುದಕ್ಕೂ ಜನರು ಬಂದು ಕಿಕ್ಕಿರಿಯುತ್ತಾರೆ (ನಂಬಿನಾ. ೧) ; ಮಿಡಿಯ ಶ್ರಾಯ ಕಳೆಯಿತು; ಗೊರಟು ಮೂಡಿದ್ದರೆ ನನ್ನನ್ನು ಮಾತ್ರ ದೂರಬಾರದು (ಸ್ವಪ್ನಹಿ. ೪೮). [ಸಂ.]

ಶ್ರಾವಕ (ನಾ). ೧. ಕೇಳುವವನು; ಆಲಿಸುವವನು : ಗಾಯಕಗಣಕಂಠರವಂ ಶ್ರಾವಕಮಧುರಸ್ನಿಗ್ಧಮೆಸೆದುದಾಸ್ಥಾಯಿಕೆಯೊಳ್ (ಅಜಿಪು. ೫-೧೧); ಸಂಪನ್ನಸಂಗೀತಗಾರರು ಶ್ರಾವಕರಿಗೆ ವಾಗ್ಗೇಯಕಾರರ ಹೃದಯವನ್ನು ಕೊಂಚವಾದರೂ ಬಿಚ್ಚಿ ತೋರಿದ್ದಾರೆನ್ನ ಬಹುದು (ಸಂಗೀತ. ೧). ೨. ವಿದ್ಯಾರ್ಥಿ; ಶಿಷ್ಯ. ೩. [ಜೈನ] ಐದು ಅಣುವ್ರತ, ಮೂರುಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತಗಳನ್ನು ಪಾಲಿಸುವವನು; ಗೃಹಸ್ಥ: ಗೃಹೀತೋಪಾಸಕವ್ರತಂ ಶ್ರುತಕೀರ್ತಿಯೆಂಬಂ ಶ್ರಾವಕಾಗ್ರಣಿಯಾವಂ (ಅಬಪು. ೧೦-೬೫ ವ): ಅಹಿಂಸಾಪರಮೋಧರ್ಮ ಎಂಬ ಶ್ರಾವಕರ ನಾನಾರನೂ ಕಾಣೆ (ಅವಚಂ. ೧೭೦-೭೬೪); ಪರಮಶ್ರಾವಕನಮಳಂ ಧರಣಿಯೊಳೀ ಶಿವೆಯನಾಯಕಂ ವಿಭುವೆಸೆದಂ (ಏಕ. II. ೩೨೭-೪೬; 1181). [ಸಂ.]

ಶ್ರಾವಕತನ (ನಾ). [ಜೈನ] ಗೃಹಸ್ಥಧರ್ಮವನ್ನು ಅನುಸರಿಸುವಿಕೆ : ವಿನಯದಿ ನವಳ ಶ್ರಾವಕತನಮಂ ಲೇಸಾಗಿ ಕಿಡಿಸಿ ತಿಳಿಪಿ ಬಟ್ಟೊಕ್ಕಾ ವನಿತೆಯನೇಗೆಯ್ದುಂ . . . ಧರ್ಮದೊಳ್ಪತ್ತಿಸುವಂ (ಧರ್ಮಾಮೃ. ೪-೧೯೪). [ಶ್ರಾವಕ + — ತನ]

ಶ್ರಾವಕತ್ವ (ನಾ) = ಶ್ರಾವಕತನ : ಪ್ರಭಾವತೀಮಹಾದೇವಿಯ ಶ್ರಾವಕತ್ವಮಂ ಕಿಡಿಸುವ ಉಪಾಯಮಂ ಚಿಂತಿಸಿ ತನ್ನೊಳಿಂತೆಂದಳ್ (ಧರ್ಮಾಮೃ. ೪ ೨೦೧). [ಸಂ.]

ಶ್ರಾವಕಧರ್ಮ (ನಾ). [ಜೈನ] ಶ್ರಾವಕರ ಮತ; ಜೈನಧರ್ಮ : ಜಿನವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನ ಪೂಜೆ ಶಿಲೋಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳಗ್ಗಳನಾಗಿ (ಪಜ್ಜಾರಾ. ೭೪-೩); ಶ್ರಾವಕ ಧರ್ಮದೊಳ್ ದೊರೆಯನಲ್ ಪಱರಿಲ್ಲನೆ ಸಂದ ರೇವತೀ ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ . . . ಎಂದು ಭವ್ಯಾವಳಿ ಮೆಚ್ಚಿ ಬಣ್ಣಿಪುದು (ಅಜಿಪು. ೧ ೫೩); ಜೈನಆಚಾರಶಾಸ್ತ್ರದಲ್ಲಿ ಶ್ರಾವಕಧರ್ಮ, ಮುನಿಧರ್ಮಗಳೆರಡರ ವಿವರವೂ ಇದೆ (ಜೈನಪ. ೪೫೭). [ಸಂ.]

ಶ್ರಾವಕಬ್ರತ (ನಾ). [ಜೈನ] ಶ್ರಾವಕರು ಪಾಲಿಸಬೇಕಾದ (ಐದು ಅಣುವ್ರತ, ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತಗಳೆಂಬ ಹನ್ನೆರಡು) ವ್ರತಗಳು : ತನ್ನಂ ತಾನೆ ಪಱಿದು ನಿಂದಿಸಿ ಪಾಪಕ್ಕಂಬಿ ಅಣುವ್ರತಂ ಮೊದಲಾಗೂಡೆಯ ಶ್ರಾವಕ ಬ್ರತಂಗಳಂ ಕೈಕೊಂಡು (ಪಜ್ಜಾರಾ. ೧೧-೩೦). [< ಸಂ. ಶ್ರಾವಕವ್ರತ]

ಶ್ರಾವಕಮಾನಿ (ನಾ). ಶ್ರಾವಕನೆಂದು ಗೌರವಹೊಂದುವವನು, — ಮನ್ನಣೆ ಪಡೆಯುವವನು : ಶ್ರಾವಕಮಾನಿಗಳನನೇಕವಿಧದಿನುಪಜೀವಿಪರಜ್ಞಾನಿಗಳ ಬುದ್ಧಿ ಪೌರುಷಹೀನಮಜೀವಿಕೃತಂ ಬೃಹಸ್ಪತಿಮತದೊಳ್ (ಶಾಂತಿಪು. ೬ ೧೩೧). [ಸಂ. ಶ್ರಾವಕಮಾನಿನ್]

ಶ್ರಾವಕವ್ರತ (ನಾ). = ಶ್ರಾವಕಬ್ರತ : ಸಕಲಶ್ರಾವಕವ್ರತಾರೋಪಣಪವಿತ್ರನಾಗಿ ಧರ್ಮಕಥಾಪ್ರಸಂಗದೊಳಂ ಲಬ್ಧಪ್ರಸ್ತಾವನವರೊಳಾದಿತ್ಯಗತಿಗಳಂ ಮನ್ನಿಸಿ (ಅಬಪು. ೨-೩೩ ವ) ; ಪರಮಶ್ರಾವಕವ್ರತಪ್ರಾಸಾದಕ್ಕಧಿಷ್ಠಾನಸೋಪಾನಪಂಕ್ತಿಗಳಾಗಿ ನೆಗೞ್ದೆವೆತ್ತ ವಿಮಳಾಣುಬ್ರತಪಂಚಕಮುಂ (ಸುಕುಮಾ. ೫-೪೧ ವ). [ಸಂ.]

ಶ್ರಾವಕಾಚಾರ (ನಾ). [ಜೈನ] ಶ್ರಾವಕವ್ರತದ ಆಚರಣೆ : ಇಂತೀ ಸಮೀಚೀನ ಶ್ರಾವಕಾಚಾರಂಗಳಂ ನಿರತಿಚಾರಮಾಗೆ ತಾಳ್ದಿದ ದೇಶವಿರತಂಗಿಚ್ಛೆ ವಾರ್ತೆ . . . ತಪಮಂದಾರ್ಯಕರ್ಮಮಾಱುತೆಱನಕ್ಕುಂ (ಸುಕುಮಾ. ೬-೨೫ ವ). [ಸಂ.]

ಶ್ರಾವಕಿ (ನಾ). ೧. ಕೇಳುವವಳು; ಆಲಿಸುವವಳು. ೨. [ಜೈನ] ಶ್ರಾವಕವ್ರತವನ್ನಾಚರಿಸುವವಳು : ಅರ್ಹದ್ವಾಸಿಯರ್ಮೊದಲಾಗಿ ನಾಲ್ಕು ಲಕ್ಷಶ್ರಾವಕಿಯರುಂ (ಚಾಪುಪು. ೨೪೬); ಶ್ರಾವಕಧರ್ಮದೊಳ್ ದೊರೆಯೆನಲ್ ಪಱರಿಲ್ಲನೆ ಸಂದ ರೇವತೀ

ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆಶೀಲದೊಳ್ ದೇವಕಿ ತಾನೆ . . . ಎಂದು ಭವ್ಯಾವಳಿ ಮೆಚ್ಚಿ ಬಣ್ಣಿಪುದು (ಅಜಪು. ೧-೫೩) ; ಪಂಗುಶ್ರೀಯೆಂಬ ಶ್ರಾವಕಿಯಕ್ಕುಂ (ಶ್ರಾವಕಾ. ೧೭). [ಶ್ರಾವಕ + — ಇ]

ಶ್ರಾವಣ (ಗು). ೧. ಕೇಳುವುದಕ್ಕೆ ಸಂಬಂಧಿಸಿದ. ೨. ಶ್ರವಣನಕ್ಷತ್ರದಲ್ಲಿ ಜನಿಸಿದ. (ನಾ). ೩. ಕಿವಿಗೆ ಕೇಳುವಂತಹುದು : ವ್ಯವಹರಿಪುವರಡುರೂಪಿಂದವಕ್ಕರಂ ಶ್ರಾವಣಂ ಸ್ವನೈಕಾಕಾರಂ ವಿವಿಧಾಕಾರಂ ಲಿಪಿಭೇದ ವೃತ್ತಿಯಿಂ ಚಾಕ್ಷುಷಂ ಪುರಾತನ ಮತದಿಂ (ಶಮದ. ೩). ೪. ಚಾಂದ್ರಮಾಸದ ಐದನೆಯ ತಿಂಗಳು; ಶ್ರವಣ ನಕ್ಷತ್ರದಿಂದ ಕೂಡಿದ ಹುಣ್ಣಿಮೆಯುಳ್ಳ ಮಾಸ : ಶ್ರಾವಣಬಹುಳಪಕ್ಷದಶಮಿ ಜೀವವಾರದೊಳಾದಿವೃಷಭೇಂದ್ರಾವತಾರದ ಬಸಪಚರಿತೆ ಸಮಾಪ್ತವಾಯಿತು (ಬಸಪು. ೬೧-೯೨) ; ಬಳಿಕಾ ಮಾಸವೇ ಚೈತ್ರ ವೈಶಾಖ ಆಷಾಢ ಶ್ರಾವಣ ಭಾದ್ರಪದ ಆಶ್ವೀಜ ಕಾರ್ತಿಕ ಮಾರ್ಗಶಿರ ಪುಷ್ಯ ಮಾಘ ಫಾಲ್ಗುನಮೆಂದು ಹನ್ನೆರಡು ತೆಱನಾಗಿಹುದು (ಎವೇಕ. ೩೨೧). ೫. ಶ್ರಾವಣಮಾಸದ ಹುಣ್ಣಿಮೆ. ೬. ಮುಂಗಾರು ಮಳೆಗಾಲ : ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ ಬಂತು ಬೀಡಿಗೆ ಶ್ರಾವಣಾ ಬಂತು (ಕೃಷ್ಣಾಜ. ೩೪-೧) ; ಬೇಸಗೆ ಬಣಬಣ, ಚಳಿಗೋ ಒಣಒಣ, ಶ್ರಾವಣ ತಣ್ಣಗೆ ನಡುವ (ನಲಮು. ೧೦-೧೪). [ಸಂ.]

ಶ್ರಾವಣಮಾಸ (ನಾ). = ಶ್ರಾವಣ ೪ : ಶ್ರಾವಣಮಾಸದ ಚತುರ್ದಶಿಯ ಉಪವಾಸ ಹಾವನು ಮನೆಯಲಿ ತಂದಿಟ್ಟುಕೊಂಡು . . . ಮಣ್ಣುಹುತ್ತಿಗೆ ಹಾಲನೆಱೆದೆಯೆ ಮೂಳೆ (ಪುರಂದ. ಧಾ. ೫-೧೩೭-೫). [ಸಂ.]

ಶ್ರಾವಣಿ (ಗು). ೧. ಕೇಳುವಂತೆ ಮಾಡುವ. (ನಾ). ೨. ಶ್ರವಣನಕ್ಷತ್ರದಿಂದ ಕೂಡಿದ ಶ್ರಾವಣಮಾಸದ ಹುಣ್ಣಿಮೆಯ ದಿನ ; ಹೊಸ ಯಜ್ಞೋಪವೀತವನ್ನು ಧರಿಸುವ ಅಂದಿನ ಸಮಾರಂಭ; ಉಪಾಕರ್ಮ; ನೂಲ ಹುಣ್ಣಿಮೆ : ಶ್ರಾವಣಿಯಾದ್ದರಿಂದ ನಾವು ಹೋದಾಗ ಸುಮಾರು ೫೦೦ ಜನ ವಟುಗಳು ಅಗ್ನಿಕಾರ್ಯ ಮಾಡುತ್ತಿದ್ದರು (ದಿಲ್ಲಿಪ. ೫೭) ; ಶ್ರಾವಣಿಯ ದಿನ . . . ಜನಿವಾರವನ್ನು ಹಾಕಿಕೊಂಡ ನೆನಪು ಅವನಿಗಾಯಿತು (ಕವಲು. ೩೭). [ಸಂ. ಶ್ರಾವಣೀ]

ಶ್ರಾವಣಿಕ (ನಾ). = ಶ್ರಾವಣ ೪ : "ಶ್ರಾವಣಃ, ನಭಾಃ ಶ್ರಾವಣಿಕಃ - ೩. ಶ್ರಾವಣ ಮಾಸದ ಹೆಸರುಗಳು" (ವಿದ್ಯಾಂತಿ. ೪೦). [ಸಂ.]

ಶ್ರಾವಿಕೆ (ನಾ). = ಶ್ರಾವಕಿ ೨ : ಮುನಿನಾಥರ್ ಕಲ್ಪಕಾಂತಾಜನತತಿಗಣನೀ ಶ್ರಾವಿಕಾ ಸಂಕುಲಂ . . . ಸಿಂಹಾದಿ ತಿರ್ಯಕ್ ಸಮೂಹಂ ಎಂಬೀ ದ್ವಾದಶಗಣಂಗಳಿರ್ಪುಂ (ಆದಿಪು. ೧೮-೩೬); ಮೂವತ್ತಾರುಸಾವಿರ ಶ್ರಾವಿಕೆಯರು ಜೈನಧರ್ಮವನ್ನು ಪ್ರಸಾರಮಾಡಿದರೆಂಬ ಪ್ರತೀತಿಯಿದೆ (ಆರ್ಷಾ. ೧೦). [ಸಂ. ಶ್ರಾವಿಕಾ]

ಶ್ರಾವಿತ (ಗು). ೧. ಕೇಳುವಂತೆ ಮಾಡಿದ. (ನಾ). ೨. ಕೇಳುವಂತೆ ಮಾಡಿದುದು. 'ರಾಜಶ್ರಾವಿತ' ಪರಾ. [ಸಂ.]

ಶ್ರಾವೆ, ಸರವೆ, ಸ್ರಾವೆ (ನಾ). ೧. ಅಗಲವಾಗಿರುವ (ಮಣ್ಣಿನ) ಪಾತ್ರೆ ; ಶರಾವೆ : "ಶಾಳಾಜಿರಃ, ವರ್ಧಮಾನಃ, ಶರಾವಃ - ಈ ೩ ಶ್ರಾವೆ" (ಹಲಾಯು. ೫೨-೧೬೦) ; ತನುತಮಗೆ ಭಕ್ತರು ತೀವಿ ಪೊಂಗಳಸಂಗಳೊಳು ತತ್ ಶ್ರಾ [ಪಾಠಾಂ. ಸಾ]ವಗಳೊಳುಂ ಪೊನ್ನ ತಂಬುಗೆಗಳೊಳು ವೊಗೆವೊಗೆದು ತಂದು . . . ಲಿಂಗಾರ್ಚಿತಂಗಳೆನೊಂದಿಸುತ ಕೈಕೊಳುತ (ಬಸಪು. ೫೫-೬೮). ೨. (ಮಣ್ಣಿನ) ಮುಚ್ಚಳ, — ತಟ್ಟೆ : ಒಂದು ಮಡಿಕೆಗೆ ಕೆಳಗೆ ನಾಲ್ಕು ಸಣ್ಣ ರಂಧ್ರಗಳನ್ನು ಮಾಡಿ ಅವುಗಳಿಗೆ ಕಡ್ಡಿಗಳನ್ನು ಸಿಕ್ಕಿಸಿ ಒಳಗೆ ಈ ಒಣಗಿದ ದ್ರವ್ಯಗಳನ್ನು ಹಾಕಿ ಒಂದು ಶ್ರಾವೆಯನ್ನು ಮುಚ್ಚಿ (ಸಕಸ. ಪಾ. ೫೦೨). ೩. ಮಣ್ಣಿನ ಹಣತೆ; ಪ್ರಣತಿ : ಎದೆಮಟ್ಟದ ಕಂಬಗಳ ಮೇಲೆ ಇಟ್ಟಿದ್ದ ನೂರಾರು ಶ್ರಾವೆಗಳಿಂದ ಬೆಳಗುತ್ತಿದ್ದ ಕಂದುಬಣ್ಣದ ಬೆಳಕಿನಲ್ಲಿ ರಾತ್ರಿದರ್ಬಾರು ಆರಂಭವಾಗಿತ್ತು (ಕೃಷ್ಣಭೂ. ೨೨೪). **ಸರವೆ** : ೧. ರಸವ ತೆಗೆದುಕೊಂಡು ಸರವೆಯಲ್ಲಿ ಹನಿಸಿ (ವಾತಾಚಿ. ೪೪-೫). ೨. ಜ್ಞಾನಸರವೆಯನೆ ಹಚ್ಚಿ (ಚಿದಾವ. ೧೦೫-೩). **ಸ್ರಾವೆ** : ೧. ಸಾವಿರ ಚಿನ್ನದ ತಗಡಿನ ಸೀರೆಯ ಸಾವಿರ ಸ್ರಾವೆಯಲ್ಲಿರಿಸಿ (ಜನರಾ. ೮-೧೬೯); ಶ್ರಾವಕರ್ . . . ಅನ್ನಮಂ ಬೇಡಿಕೊಂಡು ಸ್ರಾವೆಯೊಳ್ ಬಸದಿಯೊಳಿಟ್ಟರ್ದು (ರಾಜಾವ. ೮೯-೩೬). [< ಸಂ. ಶರಾವ]

ಶ್ರಾವ್ಯ (ಗು). ೧. ಕೇಳಬಹುದಾದ; ಆಲಿಸತಕ್ಕ. (ನಾ). ೨. ಕಿವಿಗೆ ಇಂಪಾದುದು; ಶ್ರವಣಯೋಗ್ಯವಾದುದು : ಶ್ರಾವ್ಯಮಾದಡೆಯೊಳ್ ಎರಡುಂ ಪತ್ತುಗುಂ - ಸೂಚಿಸುಗು, ಸೂಚಿಕುಂ; ಮಾಡುಗುಂ, ಮಾಡ್ಕುಂ (ಶಮದ. ೨೨೭, ಪ್ರಯೋ). ೩. [ಕಾವ್ಯಮಾ] ಎರಡು ಬಗೆಯ ಕಾವ್ಯಗಳಲ್ಲಿ ಒಂದು; ಕೇಳಬಹುದಾದುದು; ಶ್ರವಣಯೋಗ್ಯವಾದುದು : (ನಾಟ್ಯಧರ್ಮವನ್ನು ಅನುಸರಿಸಿ) ವಸ್ತುವಿನಲ್ಲಿ ಕೆಲವು ಭಾಗಗಳು 'ಶ್ರಾವ್ಯ'ವಾಗಿಯೂ ಮತ್ತೆ ಕೆಲವು ಭಾಗಗಳು 'ಅಶ್ರಾವ್ಯ'ವಾಗಿಯೂ ಇರುತ್ತವೆ (ಕೃವಿ. ೨೦೭). [ಸಂ.]

ಶ್ರಾಹೆ, ಸ್ರಾಹೆ (ನಾ). ಹನ್ನೆರಡು ತಿಂಗಳ ಅವಧಿ ; ವರ್ಷ : ಮಾನ್ಯಕಾಜರ್ಮೂಱು ಶ್ರಾಹೆಗೆ ಪರಿಯರ ಗದ್ಯಾಣವನ್ರಿಱುವರ್ (ಶಾಸಾ. IX - ೬. ೭೭-೭೯; 992); ತದ್ವರ್ಷ ಮೊದಲಾಗಿಯೆರಡು ಶ್ರಾಹೆಯ ಸಿದ್ಧಾಯಮೊಳಗಾಗಿ ಸರ್ಬ್ಬಬಾಧಾಪರಿಹಾರಂಗೊಟ್ಟು (ಎಸಾ. XV. ೭೯-೨೦; 1050). **ಸ್ರಾಹೆ** : ಎಲ್ಲಾ ಕಾಲಕೆ ಸರ್ವ್ವನಮಸ್ಯವಪ್ಪಂತಾಗಿ ಕೊಟ್ಟ ಕೆಯ ಸ್ರಾಹೆ ಱೊಕ್ಕ ಗದ್ಯಾಣ ಹದಿನಾಱು (ಶಾಸಾ. XX. ೬೨೦-೭; 12ನೆಯ ಶತ).

[< ಸಂ. ಶರದ್, ಶರದಾ]

ಶ್ರಿತ (ಗು). ೧. ಆಶ್ರಯಿಸಿದ ; ಮರೆಹೊಕ್ಕ. ೨. ಮನ್ನಿಸಿದ ; ಗೌರವಿಸಿದ. ೩. ಆಚ್ಛಾದಿಸಿದ ; ಹೊದಿಸಿದ. ೪. ಹೊಂದಿದ ; ಕೂಡಿದ. (ನಾ). ೫. ಆಸರೆಗಾಗಿ ಬಂದವನು : ಬಿಸಿಲಿನ ಬೇಗೆಗೆ ತಲೆಯಾನಿಸಿ ತರುವುಂ ಶ್ರಿತರ ತಂಪಿಸುವುದಲೆ ನೆಳಲಿಂ (ಶಾಕುಂತ. ೬೩-೧೦೭). [ಸಂ.]

ಶ್ರಿತಜನ (ನಾ). ಆಶ್ರಿತರಾದ ಜನ ; ಮರೆಹೊಕ್ಕವರು : ಮಾರುತಮತ ಶ್ರಿತಜನ ಚತುರರ ಸತತಸಂಗತಿ ಕೊಡು ಮುಕುತಿಗೆ ದಿಶಿಸುತಮಥನ (ವಿದಾಕೃ. ೬೦-೨). [ಸಂ.]

ಶ್ರೀ (ನಾ). ೧. ಸಿರಿ; ಸಂಪತ್ತು; ಐಶ್ವರ್ಯ : ಶ್ರೀಗೆ ನೆಗಟ್ಗೆಗೆ ವೀರಶ್ರೀಗಾಗರಂ (ಪಂಪಭಾ. ೯-೧) ; ಶ್ರೀಗೆಂತುಂ ವಿನಯಮೊಂದೆ ಭೂಷಣಮಲ್ತೇ (ಪಂಪಾಮಾ. ೫-೧೬); ಶ್ರೀಗಳೆಯಲ್ಲ ವಿಕ್ರಮದಳರ್ಕೆಯೊಳೆಲ್ಲಿಯುಮಾ ನರೇಂದ್ರನಿಂ ಮೇಗಣಮಿಲ್ಲ ಪೆಂಪಿನೆಡೆಯೊಳ್ ದೂರೆಯಪ್ಪವರಿಲ್ಲ ಮಾನಿಸರ್ (ಜೀವಪಂ. ೧೮-೩೫). ೨. ಅಭಿವೃದ್ಧಿ; ಏಳಿಗೆ. ೩. ಘನತೆ; ಗಾಂಭೀರ್ಯ. ೪. ಕಾಂತಿ; ಶೋಭೆ : "ಲಕ್ಷ್ಮೀ, ಶ್ರೀ, ಕಾಂತಿ, ವಿಭ್ರಮಮೆಂಬವು ಶೋಭೆಯಲ್ಲಿಯುಂ ವರ್ತಿಸುಗುಂ" (ಪಂಪಾಮಾ. ೧೩೫-೩೭). ೫. ಸಂಪತ್ತಿನ ಅಧಿದೇವತೆ ; ಲಕ್ಷ್ಮಿ : ಶ್ರೀ ತಳ್ತುರದೊಳ್ ಕೌಸ್ತುಭಜಾತಮೃತಿ ಬಳಸಿ ಕಾಂದಪಟದಂತಿರೆ ಸಂಪ್ರೀತಿಯಿನಾವನನಗಲಳ್ಳೀತಿ ನಿರಂತರನುದಾರನಾ ನೃಪಸುಂಗಂ . . . ನೆಲೆಗೊಳ್ಳೆ ಕೂರ್ತ್ತು ಮನ್ಮಾನಸದೊಳ್ (ಪಂಪಾ. ೧೮-೧); ಶ್ರೀಗಗಲುರಮಂ ಕೀರ್ತಿಶ್ರೀಗೆ ದಿಗಂತಮುಮನಹಿತರಳಿಗೆಲ್ಲ ಜಯಶ್ರೀಗೆ ಭುಜಶಿಖರಮಂ ನೆಲೆಯಾಗಿಸಿ ನೀಂ ನೆಲಸು ನೇಸಱುಳ್ಳನಮರಿಗಾ (ಪಂಪಭಾ. ೨-೧); ಶ್ರೀಗಂ ಪರಮಾತ್ಮಪದಶ್ರೀಗಂ ನೆಲೆ ಧರ್ಮಂ (ಮಲ್ಲಿನಾ. ೧೦-೧). ೬. ಹೆಚ್ಚುಗಾರಿಕೆ ; ಶ್ರೇಷ್ಠತೆ. ೭. ಅಲಂಕಾರ. ೮. ಬುದ್ಧಿಶಕ್ತಿ; ಪ್ರತಿಭೆ. ೯. ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಗಳು : ಶ್ರೀಯಂ ಶ್ರೀಯುಂ ಶ್ರೀಯಂ ರಾಯರ ಪತಿ ಕೊಡೆ ಕಡಂಗಿ ನತನುತಹಿತವರ್ಗಾಯವನೆಱೆದು ಮುಕುಂದಂ ಶ್ರೀಯಂ ಪೊಕ್ಕಂ (ಹರಿವಂ. ೨-೪೨). ೧೦. ಲವಂಗ : "ಕೇಶವನರಸಿಯೊಳು ಲೋಕೇಶನ ವರರಾಣಿಯೆಲ್ಲಿಯೈಶ್ವರ್ಯದೊಳುಂ ಯೋಷಿಜ್ಜನದೊಳಗೆ ವರ್ತಿಪ ಶ್ರೀಶಬ್ದಂ" (ಪಾಪಾಕಾ. ೧೬೮). ೧೧. (ದೇವರು, ವ್ಯಕ್ತಿ, ಪವಿತ್ರಗ್ರಂಥ ಮೊದಲಾದ ಹೆಸರುಗಳ ಹಿಂದೆ ಸೇರುವ) ಒಂದು ಗೌರವಸೂಚಕ ಪದ : ಶ್ರೀ ಮಾಸೇನರ್ಪ್ಪರಮ ಪ್ರಭಾವ ರಿಷಿಯರ್ತ್ತಬ್ಬಿನಾ ವೆಟ್ಟುದುಳ್ಳೀಸಂಗಂಗಳ ಪೇಳ್ದ ಸಿದ್ಧ ಸಮಯನ್ರತ್ನಾಪ್ತೆ ನೋಸ್ತಮ್ಮಿನಿನ್ . . . ಸ್ವರ್ಗ್ಗಾಗ್ರಮನೇಜಿದಾರ್ (ಎಕ II (R). ೬೦-೧; 700); ಪ್ರೌಢವಿಲಾಸಿನೀಮನಸಿಜಂ ಶ್ರೀ ಶೀಲಭದ್ರಂ (ಜಾತಕ. ೧-೫); ತಿಪ್ಪಣಾರ್ಯನೆಂದೆಂಬ ಸುಕವಿ ಶ್ರೀ ಹನುಮಚ್ಚಿಲಾಸವಂ ಭಕ್ತಿಯೊಳ್ ಗೈದನೊಮ್ಮನಿಂದ (ಪಸುಮ. ೧೧೪). ೧೨. ಸ್ವಾಮಿಗಳನ್ನು ಗೌರವಸೂಚಕವಾಗಿ ಸಂಬೋಧಿಸುವ ಒಂದು ಶಬ್ದ : ಶ್ರೀಗಳವರ ದರ್ಶನದಿಂದ ಧನ್ಯನಾಗಿ ಮಕ್ಕಳನ್ನವರ ಪಾದಗಳಲ್ಲಿ ಸಮರ್ಪಿಸಿದನು (ತಪವಿ. ೩೧೦); ಶ್ರೀಗಳವರು . . . ಧರ್ಮನಿಷ್ಠೆ ಅಗತ್ಯವೆಂದು ಬೋಧಿಸಿದರು (ಮುಖ್ಯ. ೧೯೭). ೧೩. ಮಂಗಳಸೂಚಕವಾಗಿ ಬರವಣಿಗೆಯ ಪ್ರಾರಂಭ ಅಥವಾ

ಅಂತ್ಯದಲ್ಲಿ ಬರೆಯುವ ಪದ : ಕಾಗದ ಬರೆಯುವಾಗ ಮೇಲುಗಡೆ ಶ್ರೀ ಎಂದು ಬರೆಯುವುದು ಸಂಪ್ರದಾಯ (ರೂಢಿ). ೧೪. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು : ಅಮೃತಾ ಮಾನದಾ ಪೂಷಾ ತುಷ್ಟಿ . . . ಶ್ರೀ ಅಂಗದಾ ಪೂರ್ಣ ಪೂರ್ಣಾಮೃತಾ ಕಾಮದಾಯಿನಿಯೆಂಬ ಷೋಡಶಕಲಾಭರಿತನಾಗಿ (ಏಕೋ. ೨೬೭). ೧೫. ಒಂದು ಬಗೆಯ ಸಸ್ಯ. ೧೬. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಪಾದದಲ್ಲಿ ಒಂದು ಅಕ್ಷರವಿರುವ ಉಕ್ತಿ ಎಂಬ ಛಂದಸ್ಸಿನ ಒಂದು ವೃತ್ತ : ಶ್ರೀ ವೃತ್ತಂ - ಶ್ರೀ ಶಂ ಕಾಂ ತೇ (ಛಂದೋಽನು. ೨-೫೧). ೧೭. [ಜೈನ] ಅಪ್ಪಚಿಕ್ಕನ್ನಿಕೆಯರಲ್ಲಿ ಒಬ್ಬಳು : ಅಲಂಬೂಷೆ ಮಿತ್ರಕೇಶಿ ಪುಂಡರೀಕಿಣಿ ವಾರುಣ್ಯಾದರ್ಶೆ ಶ್ರೀ ಹ್ರೀ ಧೃತಿಯಂಬ್ಬಾದುಂ ದಿಕ್ಕನ್ಯೆಯರಂ ಮರುದೇವಿ ಮಹಾದೇವಿಗೆ ಚಾಮರಮನಿಕ್ಕಲುಂ (ಆದಿಪು. ೭-೩ ಪ). ೧೮. [ಸಂಗೀತ] ಒಂದು ರಾಗದ ಹೆಸರು.

ಶ್ರೀಓನಾಮ = ಬರವಣಿಗೆಯ ಆರಂಭ ಅಥವಾ ಅಂತ್ಯದಲ್ಲಿ ಮಂಗಳಕರ ವಾದುದು ಎಂಬರ್ಥದಲ್ಲಿ ಉಪಯೋಗಿಸುವ ಪದ : ಈ ಪ್ರಾಣಿಗೆ ಈ ಶಾಸ್ತ್ರದಲ್ಲಿ ಈಗ ತಾನೆ ಶ್ರೀ ಓ ನಾಮ ಆಗುತ್ತಿದೆ (ಶಿವರಾ. ೧೪). ಶ್ರೀರೂಪವಿದ್ಯಾಧರಿ = ವಿದ್ಯಾಧರಿಯಂತೆ ಅತಿಶಯವಾದ ರೂಪವುಳ್ಳವಳು; ಒಂದು ಬಿರುದು: ಎಸವ ಜಯಶ್ರೀಯೆನಲ್ಮಿಕ್ಕ ಕಾಂತಾತಿಳಕಂ ಶ್ರೀರೂಪವಿದ್ಯಾಧರಿಗೆ ಸಮನಿಪಳಂತ್ಯಕಾಂತಾ ಕದಂಬಂ (ಸೌಾ. XX. ೪೯-೩೦ ; ಸು. 1076). [ಸಂ.]

ಶ್ರೀಕಂಠ (ನಾ). ೧. ಸುಂದರವಾದ ಕೊರಳುಳ್ಳವನು ; ಶಿವ : "ಈಶಾನಃ . . . ಶ್ರೀಕಂಠಃ, ಉಗ್ರಃ, ಹರಃ, . . . ನೀಲಲೋಹಿತಃ - ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೧) ; ಶ್ರೀಕಂಠನಿಸುವ ಕಣಿಗಳ್ ವೈಕುಂಠನನೆಯ್ದಿ ಮುಸುಱುತಿರ್ದುವು ರಣದೊಳ್ (ಜಗಪ. ೧೮-೨೮) ; ಶ್ರೀಮಂನ್ಮಹಾದೇವದೇವೋತ್ತಮಂ ಶ್ರೀನಂಜಲುಗೂಡು ಶ್ರೀಕಂಠದೇವರ ಅಮ್ಮುತಪಡಿ ಅಂಗರಂಗಭೋಗಕ್ಕೆ ಸಮರ್ಪಿಸಿ ಕೊಟ್ಟ ಗ್ರಾಮದ ಶಿಲಾಶಾಸನದ ಕ್ರಮ (ಮೈಆ. ೧೪೪೬, ೧೮-೪; 1488). ೩. [ಸಂಗೀತ] ಒಂದು ರಾಗದ ಹೆಸರು : ಕೌಶಿಕ . . . ಶ್ರೀಕಂಠ ಬೃಹಸ್ಪತಿ . . . ಎಂಬ ಮೂವತ್ತುನಾಲ್ಕು ಭಾಷಾಂಗದಿಂದಾದ ರಾಗಂಗಳು (ಏಕೋ. ೧೮೮). [ಸಂ.]

ಶ್ರೀಕಂಠಯ್ಯ (ನಾ). ಒಬ್ಬಾತನ ಹೆಸರು : ಶ್ರೀಕಣ್ಣಯ್ಯ (ಎಕ. II. ೧೨೫; 10ನೆಯ ಶತ). [ಶ್ರೀಕಂಠ + ಅಯ್ಯ.]

ಶ್ರೀಕಂಠರಿಪು (ನಾ). ಶಿವನ ಶತ್ರು ; ಮನ್ಮಥ : ಶ್ರೀಕಂಠರಿಪುವಿನಸ್ತಾನೀಕಂ ಬಗವುಗಲದೊರ್ಮೆ ಸತ್ಯಾಜಿತ್ಯನ್ಯಾಕಾರಂ ಬಗವೊಕ್ಕುದು (ಜಗಪ. ೧೧-೧). [ಸಂ.]

ಶ್ರೀಕಂಠಸಖ (ನಾ). ಶಿವನ ಸ್ನೇಹಿತ ; ಕುಬೇರ : "ಏಳಬಲಃ, ಪೌಲಸ್ತ್ಯಃ . . . ಶ್ರೀಕಂಠಸಖಃ . . . ಪುಣ್ಯಜನೇಶ್ವರಃ - ಈ ೧೭ ಕುಬೇರನ ಪೆಸರ್" (ಹಲಾಯು. ೧೪-೭೮). [ಸಂ.]

ಶ್ರೀಕಂಡಿಯ್ಯ (ನಾ). ಒಬ್ಬಾತನ ಹೆಸರು : ತಾಟ್ಟಿಲ್ಲರ x x ಮನ್ನೆಯರಾ ಶ್ರೀಕಣ್ಣಿಯ್ಯ ತುಱುಗೊಣ್ಡಿಲ್ಲಿ ಪುಯಲ್ಲಾಗಿ ತುಱು ಅಟ್ಟಿ ಸತ್ತ (ಎಕ. X, ಶ್ರೀನಿವಾ. ೫೦-೮; ಸು. 880 ?). [ಈ ಇದು 'ಶ್ರೀಕಂಠಯ್ಯ' ಎಂಬುದರ ಅಪಲಿಖಿತವಿರಬಹುದು]

ಶ್ರೀಕರ (ನಾ). ೧. ಸಂಪತ್ತನ್ನುಂಟುಮಾಡುವಂಥದು : ಶ್ರೀಕರವ ಸರ್ವಜ್ಞನಾಮಂ ಪ್ರಾಕಟಮನಲು ಸಲುವುದೆಲ್ಲಾ ಲೋಕದೊಳಗ (ಬಸಪು. ೨-೨೮); ಪರಿಶೋಭಿಸಿತು ಮುಂದೆ . . . ಶ್ರೀಕರಂ ಪದ್ಮಾಕರಂ ಚೆಲ್ವನ (ಚಿಮಿಭಾ. ೧೫-೮). ೨. ವೈಭವದಿಂದ ಕೂಡಿದುದು: ಶ್ರೀಕರಮೆನಿಸುವ ಚೀನಪತಾಕಾವಳಿತೋರಣಾವಳೀವೃತಪುರಮಂ ವೈಕುಂಠನೊಸೆದು ನೋಡುತ್ತ (ಜಗಪ. ೧೨-೧). ೩. ಲಕ್ಷ್ಮೀಪತಿ ; ವಿಷ್ಣು. ೪. ಕೆಂಪುತಾವರೆ; ಕೆಂದಾವರೆ. ೫. ಲಕ್ಷ್ಮಿಯ ಕೈ. ೧, ೫ : ಅವಗಂ ನಿರ್ಮಲಶ್ರೀಕರಗ್ರಾಹಿ ಮತ್ತಾಪಗಂ ಪ್ರಣುತವನಮಾಲಾಸುಶೋಭಿ ತಾನಾವಗಂ ಮನ್ಮಥೋದ್ಭವಕಾರಿ ಹರಿವೊಲಾನೆಂಬ ಪೆಂಪಿಂದೆಸೆದುದು (ಚಿಮಿಭಾ. ೩-೧). [ಸಂ.]

ಶ್ರೀಕರಣ (ನಾ). ೧. ಲೇಖನಿ. ೨. ಲೆಕ್ಕಪತ್ರಗಳ ಮುಖ್ಯಾಧಿಕಾರಿ ; ಕರಣಿಕ : ಮಂತ್ರಿ ಪುರೋಹಿತ ಶ್ರೀಕರಣಮುಂ ಸಾಸಿರ್ವರುಂ ಅಱುನೂರ್ವರುಂ ಸಹಿತಂ ತಮ್ಮ ಪ್ರಸಾದಪರನಪ್ಪನ್ನೆ ಆರಿದ (ಹಾರೀತ) ಗೋತ್ರಜನ್ನೆ . . . ಗೋಪಾಲದೇವರ್ ಕೊಟ್ಟರ್ (ಎಇ. XXI. ೧೬೮-೬, ಸು.೩ನೆಯ ಶತ); ಶ್ರೀಕರಣಮೆನೆ ನೆಗಟ್ಟನಂ . . . ಕರಣಿಕತ[ನ] ಮೆಂಬುದು ಜಗಜ್ಜನಂ ಶ್ರೀಧರನಂ (ಜಾತಕ. ೧-೬); ಇನ್ತೆನಿಸಿದ ಕರಣಂಗಳೊಡನೆ ಬರೆ ಬೆಳ್ವಲನಾಡಧಿಕಾರಿ ಶ್ರೀಕರಣಂ ಬಾಹತ್ತರಸಿಯೋಗಾಧಿಪತಿ ಮಹಾಪ್ರಚಂಡ ದಂಡನಾಯಕಂ ತೇಜಿರಾಜಂ (ಕಾಶಾ. ೧೨-೭೫-೪೩; 1170).

ಶ್ರೀಕರಣದ ಹೆಗ್ಗಡೆ = ಲೆಕ್ಕಪತ್ರಗಳ ಮುಖ್ಯಸ್ಥ : ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ ಶಿರಿಯ ದಂಡನಾಯಕಂ ಭರತಿಮಯ್ಯಂಗಳುಂ ಶ್ರೀಕರಣದ ಹೆಗ್ಗಡೆ ಬೂಚಿಮಯ್ಯಂಗಳುಂ (ಎಕ. II(R), ೭೧-೧೦೨; 1163); ಶ್ರೀಕರಣದ ಹೆಗ್ಗಡೆ ಎಲೆಯಣ್ಣನ ಕಯ್ಯಲು ಕ್ರಯದಾನಂ ಕೊಣ್ಮು (ಎಕ. XIV, ಶ್ರವಂಗ. ೨೨೪-೪; ಸು. 1175). [ಸಂ.]

ಶ್ರೀಕರಣಬೋವ (ನಾ). = ಶ್ರೀಕರಣ ೨ : ಅಪೂರ್ವಾಯಮೊಳಗಾಗಿ ಗ್ರಾಮಕೆ ಶ್ರೀಕರಣಬೋವಮಯ್ಯರ್ಮದೆಯ ಬಳಯ ಹೊನ್ನು ಸಹಿತ ಅಚಳಪ್ರಕಾಶಸ್ವಾಮಿಗಳ ಕಯ್ಯಲು ಧಾರಾಪೂರ್ವಕಂ ಮಾಡಿ ತಾಮ್ರಶಾಸನಮಂ ಕೊಟ್ಟರು (ಮೈಆ. ೧೪೪೦. ೩-೩೭; 1215). [ಶ್ರೀಕರಣ + ಬೋವ (< ಬೋಯ)]

ಶ್ರೀಕಲ (ನಾ). ಒಂದು ಬಗೆಯ ಸಸ್ಯ : ಶ್ರೀಕಲ, ಸೂರ್ಯಾವರ್ತ, ನಿರಿಡಿಬಿತ್ತ (ಮುಕಿಗಿ. ೪೧-೬೨೨). [?]

ಶ್ರೀಕಾಂತ (ನಾ). ಲಕ್ಷ್ಮೀಪತಿ ; ವಿಷ್ಣು : ಶ್ರೀಕಾಂತಂ ವಿಶದಯಶಃಶ್ರೀಕಾಂತಂ ಬೀಡುಪೊಕ್ಕು ಸುಖಮಿರೆ (ನೇಮಿಪು. ೧೨-೧); ಶ್ರೀಕಾಂತ ಎನ್ನ ಮೇಲೆ ಎಳ್ಳಷ್ಟು ದಯವಿಲ್ಲ (ಪುರಾಪ. ಧಾ. ೧-೪೪ ಪದ್ಯವಿ). [ಸಂ.]

ಶ್ರೀಕಾಂತೆ (ನಾ). ಸಂಪತ್ತಿನ ಅಧಿದೇವತೆ ; ಲಕ್ಷ್ಮಿ : ಮಹೀಕಾಂತಯುಮಂ ಶ್ರೀಕಾಂತಯುಮಂ ಕಣ್ಗೆಡೆ ಜಡಿಯೆ (ಗದಾಯು. ೯-೨೯ ಪ); ಶ್ರೀಕಾಂತೆ ಭೂಕಾಂತೆಯರ್ ನಮ್ಮನುಳಿವರು ಮುಂದೆ ಅನ್ಯರನೊಲಿದವರು (ಇಂಚಾಪ. ೮೮-೩೦). [ಸಂ. ಶ್ರೀಕಾಂತಾ]

ಶ್ರೀಕಾರ (ನಾ). ೧. ಪುಸ್ತಕ, ಪತ್ರ ಮೊದಲಾದವುಗಳ ಪ್ರಾರಂಭದಲ್ಲಿ ಬರೆಯುವ 'ಶ್ರೀ' ಎಂಬ ಶುಭಸೂಚಕವಾದ ಅಕ್ಷರ : ವಿಮಳಿತ ಶ್ರೀಕಾರದಾಕಾರ ಮನೆಣಕೆಗೊಳ್ಳದೆ ಮಿಜುಗುವುವು ಕುಮುದದಳಲೋಚನೆಯ ಕರ್ಣಂಗಳಂ ಪೊಸತಿವೆನಿಸಿ (ಬಸಪು. ೪-೨೭). ೨. ಮೊದಲು ; ಪ್ರಾರಂಭ : ಬಲ್ಲಾಣನಾಗೆಂದು ಹರಸಿದುದೆ ನನಗಾಜ್ಞೆ ಮೇಣದುವೆ ನನ್ನ ಕಲಿಕೆಗೆ ಗಡಾ ಶ್ರೀಕಾರ! (ಹಪ್ಪಿರ. ೪೯-೨೬). [ಸಂ.]

ಶ್ರೀಕಾರ್ಯ (ನಾ). ಪೂಜಾಕಾರ್ಯ ; ಸೇವೆ : ಗಂಗೇಶ್ವರದೇವರ ದೇವಾಲ್ಯವಂ ಮಾಡಿಸಿ ಆ ದೇವರ ಶ್ರೀಕಾರ್ಯ್ಯಕೆ ಅಮ್ಮಿತರಾಸಿ ಗುರುಗಳ ಶಾಲಂ ಕರ್ಚ್ಚ . . . ಬಿಟ್ಟು ದತ್ತಿ (ಎಕ. VII. ಶಿವಮೊ. ೫-೪೯; 1218); ನಂಜನಾಥದೇವರ ಶ್ರೀಕಾರ್ಯಕ್ಕೆ ಬಿಟ್ಟ ಮಗ್ಗ ತೆಜ್ಗೆ (ಮೈಆ. ೧೪೨೮, ೩೬-೬; ?). [ಸಂ.]

ಶ್ರೀಖಂಡ[1] (ನಾ). ೧. ಶ್ರೀಗಂಧದ ಮರ ; ಚಂದನವೃಕ್ಷ : "ಮಳಯರುಹಂ ಚಂದನದ್ರುಮಂ ಶ್ರೀಖಂಡಂ" (ವಸ್ತುಕೋ. ೭೭-೧೩). ೨. ಶ್ರೀಗಂಧದ ಕೊರಡನ್ನು ತೇದು ಮಾಡಿದ ಲೇಪನ ವಸ್ತು, — ಗಂಧ : ದೇವರ್ಗ್ಗ [ಶ್ರೀ]ಖಂಡಾಕ್ಕಂ ಧೂಪಕ್ಕಂ . . . ಬಿಟ್ಟು ಗಟ್ಟಿ ಕಮ್ಮ ನಾಲ್ವತ್ತ X (ಸೌಾ. XX. ೨೦-೨೦; 1015); ಮೆಯ್ಗನ್ನುಗಳಂ ಶ್ರೀಖಂಡ ಕರ್ಪೂರದೆ ರಚಿಸಿತೊ ಮುಕ್ತಾಳಿಯಂ ತೊಟ್ಟುದೋ . . . ಎಂಬಂತದೇಂ ವರ್ಣಿದುದೂ ನೃಪನತಿಸ್ಫೂರ್ತಿ ಕೀರ್ತಿಪ್ರತಾನಂ (ಪುಷ್ಪಪು. ೩-೧೪). [ಸಂ.]

ಶ್ರೀಖಂಡ[2] (ನಾ). ಗಟ್ಟಿಯಾದ ಕೆನೆಮೊಸರಿಗೆ ಸಕ್ಕರೆ, ಏಲಕ್ಕಿಪುಡಿ, ಕೇಸರಿ ಮುಂತಾದುವನ್ನು ಹಾಕಿ ತಯಾರಿಸುವ ಒಂದು ಬಗೆಯ ಸಿಹಿಖಾದ್ಯ : ಶ್ರೀಪಿಂಡಪು ಪೌಷ್ಟಿಕ, ವೀರ್ಯವರ್ಧಕ (ಅಷ್ಟಾಂಗ. ೧೩೧-೩೩); ವೀರಪ್ಪ ಈ ದಿನ ಮೇಜವಾನಿ ಉತ್ತಮ ಮಾಡಿಸಿದ್ದ! ಪುರಿ, ಶ್ರೀಖಂಡ, ಶಿರ ಎಲ್ಲ ತಿಂದು ತಿಂದು ಮತ್ತೆ ಬೆಲ್ಲಬೇಕಾಯ್ತು (ಚಿಪ್ರೀ. ೫೩). [<— ಮರಾ. ಶ್ರೀಖಂಡ. / ಗುಜ. ಸಿಖಂಡ. / ಪ್ರಾ. ಛಿಹಂಡಅ]

ಶ್ರೀಖಂಡಶರ್ಕರೆ (ನಾ). ಒಂದು ಬಗೆಯ ಔಷಧೀಸಸ್ಯ : "ಶಾರ್ಕರಜಾ — ಶ್ರೀಖಂಡಶರ್ಕರೆ" (ಓಷಧಿ. ೧೬೩). [?]

ಶ್ರೀಗಂಧ (ನಾ). ೧. ಶ್ರೀಗಂಧದ ಮರ : ಕೃಷ್ಣಾಗರು ಶ್ವೇತಾಗರು ಶ್ವೇತಗುಗ್ಗುಲ ಶ್ರೀಗಂಧ ಕರ್ಪೂರವೆಂಬ ದಶಾಂಗಗಳಂ (ಏಕೋ. ೧೦೫). ೨. ಶ್ರೀಗಂಧದ ಕೊರಡು, — ಚೆಕ್ಕೆ : ಶ್ರೀಗಂಧವನ್ನು ತೇದು ಕುಡಿಯೆ ಒಕರಿಕೆ ಮಾಣ್ಗುಂ (ಏವ್ಯವ. ೬).

೩. = ಶ್ರೀಖಂಡ, ೨ : ಕೇಸರಿ, ಶ್ರೀಗಂಧ, ಅಗರು, ಪನ್ನೀರು ಮುಂತಾದ ಸಹಜ ಸುಗಂಧದ್ರವ್ಯಗಳಲ್ಲಿ ಮುಳುಗಿ ತೇಲಿದವರು ಆ ಕಾಲದವರು (ಸಾಹಿಚೇ. ೫೨).

ಶ್ರೀಗಂಧದ ಮರ = ಚಂದನದ ಮರ : ಶ್ರೀಗಂಧದ ಮರವು ಒಂದು ಉಪಸ್ಯ (ಸಸ್ಯಶಾ. ೧೦೮). [ಸಂ.]

ಶ್ರೀಗದಿತ (ನಾ). [ಕಾವ್ಯಮೀ] ಉಪರೂಪಕಗಳಲ್ಲಿ ಒಂದು ವಿಧ : ೧. ನಾಟಿಕಾ . . . ೧೨. ಶ್ರೀಗದಿತ. ೧೩. ಶಿಲ್ಪಕ . . . ೧೮. ಭಾಣಿಕಾ — ಎಂದು ಉಪರೂಪಕಗಳು ಹದಿನೆಂಟು ವಿಧ (ಸಂನಾಟ. ೩೨). [ಸಂ.]

ಶ್ರೀಗಿರಿ (ನಾ). ೧. ಶ್ರೀಶೈಲ: ಶಿಲಾದನುಗ್ರಹಪವನೊಡರ್ಚಿದನಾದಿಯೆನಿಪ್ಪ ಶ್ರೀಗಿರಿಯ ನೈರುತ್ಯಭಾಗದಲಿ (ಬಸಪು. ೧-೬೪). ೨. ತಿರುಪತಿ ಬೆಟ್ಟ : ಏಳಯ್ಯ ಬೆಳಗಾಯಿತು . . . ಏಳು ಶ್ರೀಗಿರಿಯೊಡೆಯ ವೆಂಕಟೇಶ (ಪುರಂದ. ಧಾ. ೧-೧೭೭ ಪಲ್ಲವಿ). [ಸಂ.]

ಶ್ರೀಘನ (ನಾ). ೧. ಹುಳಿಮೊಸರು. ೨. ಗೌತಮಬುದ್ಧ : "ಸರ್ವಜ್ಞಸ್ಸುಗತಃ, ಬುದ್ಧಃ . . . ಶ್ರೀಘನಃ, ಶಾಸ್ತಾ, ಮುನಿಃ — ೧೮ ಬುದ್ಧದೇವರ ಹೆಸರುಗಳು" (ಸಿದ್ಧಾಂತಿ. ೧೬). [ಸಂ.]

ಶ್ರೀಚಕ್ರ (ನಾ). [ತಂತ್ರಶಾ] ಐಶ್ವರ್ಯವನ್ನು ಹೊಂದುವುದಕ್ಕಾಗಿ ಪೂಜಿಸಲ್ಪಡುವ ಲಕ್ಷ್ಮೀಮಂತ್ರದ ಬೀಜಾಕ್ಷರಗಳನ್ನುಳ್ಳ ಪವಿತ್ರಯಂತ್ರ : ಶ್ರೀಚಕ್ರಾದಿ ಯಂತ್ರಗಳನ್ನು ಸಂಪ್ರದಾಯದಂತೆ ನಿರ್ಮಿಸಿ, ತಾಂತ್ರಿಕ ಕಲ್ಪರೀತ್ಯಾ ಪೂಜೆ ಮಾಡುವುದು ಬಹಿರ್ಯಾಗವೆನಿಸುತ್ತದೆ (ಭಾರದ. ೨೨೬); ಇತರ ಭುವನೇಶ್ವರಿಗಳಲ್ಲಿ ಹನ್ನೆರಡು ಕಿರಣದ ನಕ್ಷತ್ರ, ವೃತ್ತ, ಶ್ರೀಚಕ್ರ, ೧೬ ಕಿರಣದ ನಕ್ಷತ್ರ ಇತ್ಯಾದಿ ನಕಾಸೆಗಳಿವೆ (ಹೊಯ್ಸಲಾ. ೫೫). [ಸಂ.]

ಶ್ರೀಚಾವುಂಡಯ್ಯ (ನಾ). ಒಬ್ಬಾತನ ಹೆಸರು : ಶ್ರೀ ಚಾವುಣ್ಣಯ್ಯ (ಎಕ. II, ೩೯-೧; ಸು. 960). [ಶ್ರೀ + ಚಾವುಂಡ + ಅಯ್ಯ,]

ಶ್ರೀಚೂರ್ಣ (ನಾ). ಶ್ರೀವೈಷ್ಣವರು ನಾಮದ ಮಧ್ಯರೇಖೆಗೆ ಬಳಸುವ ಕೇಸರಿಬಣ್ಣದ ಪುಡಿ ; ತಿರುಚೂರ್ಣ : ಶ್ರೀಚೂರ್ಣಧಾರಣೆಯಿಂದ ಶ್ರೇಯಸ್ಸೂ, ಶ್ರೀಹರಿಯಲ್ಲಿ ಭಕ್ತಿಯೂ ಹೆಚ್ಚುವುವು (ಸಕ್ವ. ೪೧). [ಸಂ.]

ಶ್ರೀಜಾಯಾವಲ್ಲಭ (ನಾ). ಐಶ್ವರ್ಯಕ್ಕೆ ಒಡೆಯನಾದವನು; ರಾಜ; ಚಕ್ರವರ್ತಿ : ಶ್ರೀಜಾಯಾವಲ್ಲಭನಪರಾಜಿತನಯವಿನಯಗುಣನಿದಾನಂ ಬುಧಸಾಮಾಜಿಕಮತಮನೆ ಪೇಳ್ದು ವಿರಾಜಿತಮನನದರೆ (ಶಾಂತಿಪು. ೨-೨೯). [ಸಂ.]

ಶ್ರೀತಾಲ, ಶ್ರೀತಾಳ (ನಾ). ಒಂದು ಬಗೆಯ ತಾಳೆ. ಶ್ರೀತಾಳ: "ಬಂಧಿನೀ — ಶ್ರೀತಾಳ" (ಓಷಧಿ. ೧೦೫). [ಸಂ.]

ಶ್ರೀತಾಳ 'ಶ್ರೀತಾಲ' ನೋ.

ಶ್ರೀತಾಳಿ (ನಾ). = ಶ್ರೀತಾಲ : "ಕರತಾಳಿ ಹಿಂತಾಳಿ ಶ್ರೀತಾಳಿಯೆನಿಕ್ಕುಂ" (ಮಂಗರಾ. ೧೦೫-೧೫). [ಸಂ. ಶ್ರೀತಾಲೀ]

ಶ್ರೀತಾಳಿಕ (ನಾ). = ಶ್ರೀತಾಲ : ಪ್ರಂಪೋಲಿತಮನಸಿಜವಿಜಯಪ್ರಶಸ್ತಿ ಲೇಖನೋಚಿತಚ್ಛದ ಶ್ರೀತಾಳಿಕಮುಮಪ್ಪ ವೇಲಾವನದೊಳಾವಾಸಿತವಿಜಯಕಟಕನಾಗಿ ಪೂರ್ವಸ್ಥಿತಿಯೊಳೆ ಪೋಗಿ (ಆದಿಪು. ೧೩-೩ ವ). [ಸಂ. ಶ್ರೀತಾಲಿಕ]

ಶ್ರೀತಾಳೆ (ನಾ). = ಶ್ರೀತಾಲ : "ಲೇಪಾಯನಃ — ಶ್ರೀತಾಳೆ" (ಓಷಧಿ. ೧೪೩); ತಾಳೆಎಲೆ, ವಾಲೆ, ಶ್ರೀತಾಳೆ ಎಲೆ, ತೆಂಗಿನ ಎಲೆ . . . ಇವುಗಳಲ್ಲಿ ಊಟಮಾಡುವುದರಿಂದ ಮೂತ್ರಕೃಚ್ಛ್ರ . . . ಮುಂತಾದ ರೋಗಗಳನ್ನು ಹೋಗಲಾಡಿಸುವುದು (ಸಕ್ವ. ೪೯). [< ಸಂ. ಶ್ರೀತಾಲ]

ಶ್ರೀತುಲಸಿ, ಶ್ರೀತುಳಸಿ (ನಾ). ತುಳಸಿಯಲ್ಲಿ ಒಂದು ಬಗೆ : ಶ್ರೀತುಲಸಿಯನ್ನು ಧರಿಸುವುದರಿಂದ ಸಕಲಪಾಪಗಳನ್ನೂ ನಾಶಮಾಡಿ . . . ವಾತ ಶ್ಲೇಷ್ಮ ದೋಷಂಗಳನ್ನು ನಾಶಮಾಡುವುದು (ಸಕ್ವ. ೪೫). ಶ್ರೀತುಳಸಿ : ವಿಷ್ಣುತುಳಸಿ, ಕರೀತುಳಸಿ, ಶ್ರೀತುಳಸಿ (ಮೃಚಿಗ ೫೭-೧೧೪೯). 'ವಿಷ್ಣುತುಳಸಿ' ಪರಾ. [ಸಂ. ಶ್ರೀತುಲಸೀ]

ಶ್ರೀತುಳಸಿ 'ಶ್ರೀತುಲಸಿ' ನೋ.

ಶ್ರೀತೊಲಸಿ, ಶ್ರೀತೊಳಸಿ (ನಾ). = ಶ್ರೀತುಲಸಿ : ಪಕ್ಕಕ್ಕೊಂದುಪವಾಸ ಪುಕ್ಕಟೆ ಶ್ರೀತೊಲಸಿ ಸಿಕ್ಕಿಸಿಕ್ಕಿದಲಿ ಹರಿನಾಮ ಭವಭವದಿ ಸಿಕ್ಕಿ ಸಾಯುವದು (ಸರ್ವಜ್ಞ. ೯೧೪). ಶ್ರೀತೊಳಸಿ : ಅಹೋರಾತ್ರೆ ಶತಬಿಲಪತ್ರೆ ಶ್ರೀತೊಳಸಿ ಸಹ ಮುಡಿ ೯ ಅಂತುಯೆಪ್ಪತ್ತು ಯೆಂಟು ಮುಡೆ ಅಕ್ಕಿಯ ಭೂಮಿಯ (ಸೌಶಾ. IX - ii, ೬೦೯-೫೯; 1544); ಲೊಕ್ಕಿಬೇರು, ಶ್ರೀತೊಳಸಿಬೇರು, ಇವಿಷ್ಟನ್ನೂ ಸಮಭಾಗವಾಗಿ, ಬಿಸಿನೀರಿನಿಂದರೆದು ಕೊಡಲು ಶೀತಜ್ವರ ಪರಿಹಾರಮಕ್ಕುಂ (ಸಕ್ವ. ೬೩). [< ಸಂ. ಶ್ರೀತುಲಸೀ]

ಶ್ರೀತೊಳಸಿ 'ಶ್ರೀತೊಲಸಿ' ನೋ.

ಶ್ರೀದ (ನಾ). ೧. ಸಂಪತ್ತನ್ನು ಕೊಡುವವನು. ೨. ಕುಬೇರನ ಹೆಸರುಗಳಲ್ಲಿ ಒಂದು : "ಐಳಬಿಲಃ, ಪೌಲಸ್ತ್ಯಃ, ವೈಶ್ರವಣಃ, ಕಿನ್ನರೇಶ್ವರಃ, ಧನದಃ, ಶ್ರೀದಃ . . . ಪುಣ್ಯಜನೇಶ್ವರಃ — ಈ ೧೭ ಕುಬೇರನ ಪೆಸರ್" (ಹಲಾಯು. ೧೪-೭೮); ಶ್ರೀದನೈಶ್ಯಭವಂ ತಾನೆನೆ ಲೋಕಪಾಳತೆಯನೇಕಾಯತ್ತಮಂ ಮಾಡಿ ನಿಂದಭಿರೂಪಂ ಸುತನಾದನಲ್ತೆ ನರಸಿಂಹಕ್ಷೋಣಿಪಾಳೋತ್ತಮಂ (ಎಕ. IV, ನಾಗಮಂ. ೭೦-೨೦; 1178). ೩. ವಿಷ್ಣು. [ಸಂ.]

ಶ್ರೀದಯಿತ (ನಾ). ೧. ಲಕ್ಷ್ಮಿಯ ಗಂಡ ; ವಿಷ್ಣು. ೨. ಸಂಪತ್ತಿಗೆ ಒಡೆಯ ; ರಾಜ : ಶ್ರೀದಯಿತಂ ಮನುಕುಲಗಗನಾದಿತ್ಯಂ ಹಿಮಮನೆಯ್ದೆ ಷಟ್ಖಂಡಮುಮಂ ಸಾಧಿಸಿ ಜಿತದಿಙ್ಮಂಡಲನಾದ ಮಹಾತ್ಮಂ (ಆದಿಪು. ೧೫-೧); ಶ್ರೀದಯಿತಂ ವರವಿಜಯ ಶ್ರೀದಯಿತಂ . . . ಇರ್ದನಖಿಳವಿನೋದದೆ (ಶಾಂತೀಶ್ವ. ೪-೧). [ಸಂ.]

ಶ್ರೀದಯಿತೆ (ನಾ). ಸಂಪತ್ತಿನ ಅಧಿದೇವತೆ ; ಲಕ್ಷ್ಮಿ : ಶ್ರೀದಯಿತೆಗೆ ನಿರ್ವಾಣಶ್ರೀದಯಿತೆಗೆ ದರ್ಶನಾಂಗಮೆಂಟುಂ ಚಿತ್ತಾಹ್ಲಾದಕರಮೆಂದು ನಂಬಿದನಾದರದಿಂ ಸುಕವಿನಿಕರಪಿಕಮಾಕಂದಂ (ಧರ್ಮಾಮೃ. ೧೦-೧). [ಸಂ. ಶ್ರೀದಯಿತಾ]

ಶ್ರೀದಸಖ (ನಾ). ಕುಬೇರನ ಸ್ನೇಹಿತ; ಶಿವ: ಶ್ರೀದಸಖಂ ಪುರಿಪುಬಿಲ್ಮೋದಕಪತಿನಾಮನಲ್ಲಿ ಸನ್ನಿದನಾಗಿರ್ದಾ ದೇವೇಂದ್ರನ ಪರಿಭವಪೇದವನಾಱಿಸಿ (ಜಗವಿ. ೧೪-೧). [ಸಂ.]

ಶ್ರೀದಾನ (ನಾ). ಸಂಪದ್ಭರಿತವಾದ ದಾನ : ಆದರದಿಂ ಗೋದಾನಂ . . . ಧನದಾನಂ ಶ್ರೀದಾನಂಗುಡುತುಮೊಪ್ಪಿದಂ ಗಿರಿರಾಜಂ (ಗಿರಿಕ. ೩-೬೩). [ಸಂ.]

ಶ್ರೀದೇವಿ (ನಾ). ೧. ಮಂಗಳವನ್ನುಂಟುಮಾಡುವ ದೇವತೆ ; ಗೃಹದೇವತೆ : ವೈರಿದೇವತೆಗಳ್ ಎಮ್ಮ ಮನೆಯಂ ಪುಗದಿರ್ಕೆಂದು ಶ್ರೀದೇವಿಯರನುಪಾಸ್ತಿಗೆಯ್ಯುದು (ಚಾವುಂಪು. ೨೨೨). ೨. ಸಂಪತ್ತಿನ ಒಡತಿ ; ಲಕ್ಷ್ಮಿ : ಕಂಡೆ ತಿರುಪತಿ ವೆಂಕಟೇಶನ . . . ಉರದಿ ಶ್ರೀದೇವಿ ಇರಲು ಕಂಡೆನು (ಪುರಂದ. ಧಾ. ೧-೭೪-೩). [ಸಂ. ಶ್ರೀದೇವೀ]

ಶ್ರೀದ್ವಾರ (ನಾ). ಹೆಬ್ಬಾಗಿಲು ; ರಾಜದ್ವಾರ : ಶ್ರೀದ್ವಾರ — ಸಿರಿಯದರ, ಸಿರಿಯದಾರ, ಸಿರಿಯಬಾರ (ಶಮದ. ೨೯೬ ಪ್ರಯೋ); ತೊರಮಾವಿನ ಹಳ್ಳಿ, ದುರ್ಗದ ಶ್ರೀದ್ವಾರದ ಒಳವಾಗಿಲು (ಸುಗುಗಂ. ೧೨೮-೧). [ಸಂ.]

ಶ್ರೀಧರ (ನಾ). ೧. ಲಕ್ಷ್ಮಿಯನ್ನು ಹೊಂದಿರುವವನು ; ವಿಷ್ಣು : "ವಿಷ್ಣುಃ, ಕೃಷ್ಣಃ . . . ಶ್ರೀಧರಃ, ಅಚ್ಯುತಃ, ಉಪೇಂದ್ರಃ . . . ಗದಾಧರಃ — ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೪); ಶ್ರೀಧರಂ ಶ್ರೀರಿ(ಂ)ಶಿಕೇಶಿ ಶ್ರೀಪದುಮನಭಂ ಶ್ರೀದಮೋದರ (ಎಕ. VI, (R) ಕೃಷ್ಣರಾ. ೪೧-೯; 13ನೆಯ ಶತ); ವಿಶ್ವೇಶ್ವರನ ಕಟ್ಟಿದಿರೊಳಿಂದುಂ ಶ್ರೀಧರಂ ನಮಿಸಿದ ತೆಱದೊಳಿರ್ದಹನು (ಬಸಪು. ೫೩-೬೬). ೨. ಚಂದ್ರಕಲೆಯನ್ನು ಧರಿಸಿದವನು ; ಶಿವ. ೧ ;೮೨ : ಶ್ರೀಧರನೆಂದು ಶಂಕರನಂ ಮಾಂಕರಿಸಿಯುಂ ಧರಣೀಧರನೆಂದು ಸುರಶೈಳಮಂ ಚಾಳಿಸಿಯುಂ ಶಂಖಚಕ್ರಾನ್ವಿತನೆಂದು ಉದಧಿಯಂ ಕಲಂಕಿಯುಂ . . . ಮಾಣದೆ (ಜಗವಿ. ೯-೫೩ ವ). [ಸಂ.]

ಶ್ರೀನಂದನ (ನಾ). ಲಕ್ಷ್ಮಿಯ ಮಗ ; ಮನ್ಮಥ : "ಪ್ರದ್ಯುಮ್ನಃ . . . ಶ್ರೀನಂದನಃ, ಮನೋಭವಃ — ಈ ೨೮ ಕಾಮ(ದೇವ)ನ ಪೆಸರ್" (ಹಲಾಯು. ೭-೩೩). [ಸಂ.]

ಶ್ರೀನಾಥ (ನಾ). ೧. ಲಕ್ಷ್ಮಿಯ ಪತಿ ; ವಿಷ್ಣು : ಶ್ರೀನಾಥ ಗದುಗಿನ ವೀರನಾರಾಯಣ (ಪುರಂದ. ೨-೧೬೯-೫). ೨. ಸಂಪತ್ತಿಗೆ ಒಡೆಯನಾದವನು ; ಸಾರ್ವಭೌಮ : ಕನ್ಯಾನೊನೋಚಿತರತ್ನಮಂ ತನಗೆ ಮಾಡಲ್ಕೆಂದು ಬಂದಿರ್ದನೀ ಶ್ರೀನಾಥಂ (ಶಾಂತಿಪು. ೫-೮೧). [ಸಂ.]

ಶ್ರೀನಾರಿ (ನಾ). ಲಕ್ಷ್ಮಿ ; ಇಂದಿರೆ.

ಶ್ರೀನಾರೀನಿಳೆಯ = ಶ್ರೀ ಎಂಬ ಸ್ತ್ರೀಗೆ ಆವಾಸಸ್ಥಾನನಾದವನು ; ಒಂದು ಬಿರುದು : ಶ್ರೀನಾ[ರೀ] ನಿಳೆಯಂಶ್ರೀಮಾನಾಂಬರದಿವ್ಯಸ್ಥಾ[ನಾ][ಮೋ]ದಿ ಚೂಡಾಮಣಿ ಮುನಿಪಂ ಧ್ಯಾನಾರೂಢದೆ ನೋಡಿ ತಾನೊಪ್ಪೆ ಕೇವಳಜ್ಞಾನಪ್ರಸಿದ್ಧಮೇಂ ಪ್ರಕಟಿಸಿದ (ಕಾಇ. ೩೮-೫೨-೧; ?). [ಸಂ. ಶ್ರೀನಾರೀ]

ಶ್ರೀನಾರೀಕಾಂತ (ನಾ). ೧. ಲಕ್ಷ್ಮೀರಮಣ ; ವಿಷ್ಣು : ''ಜ್ಞಾನಂ ಚಾರಿತ್ರಮೋಕ್ಷಾಗಮತತಿ ಯಜನಾಧ್ಯಾತ್ಮಕಂ ವೇದವಿಪ್ರಂ ಶ್ರೀನಾರೀಕಾಂತಮುಖ್ಯಂ ಸುಲಲಿತ ಪರಮಾತ್ಮೋದರಂ ಬ್ರಹ್ಮಶಬ್ದಂ'' (ನಾನಾರ. ೮೦). ೨. ಐಶ್ವರ್ಯಲಕ್ಷ್ಮಿಗೆ ಒಡೆಯನಾದವನು ; ಒಂದು ಬಿರುದು : ಆರೂಢವತ್ಪರಾಜನುದಾರಗುಣಂ ವಿನುತಕಂದುಕಾದಿತ್ಯಂ ಶ್ರೀನಾರೀಕಾಂತಂ ನಿರ್ಜ್ಜಿತಮೈರಿವ್ರಜನೆನಿಸಿ ಪಿಟ್ಟುಗಂ ಸಲೆ ನೆಗಟ್ಟಂ (ಸೌಕಾ. xx, ೧೮-೧೨; 980). [ಸಂ.]

ಶ್ರೀನಾರೀಪತಿ (ನಾ). = ಶ್ರೀನಾಥ ೨ : ಶ್ರೀನಾರೀಪತಿ ಬೀಕ್ಷೆಯಂ ಕೊಳಲೊಡಂ ಭೋಂಕಲ್ ಮನಃಪರ್ಯಯಜ್ಞಾನಂ ಪುಟ್ಟಿದುದಂತು . . . ಜಗಕ್ಕಾಶ್ಚರ್ಯಮಾಯ್ತಾಶನಾ (ಆದಿಪು. ೧೭-೭೩); ಶ್ರೀನಾರೀಪತಿ ಬಂದಿಸಿ ಮಾನಿತಗಣಧರಯತೀಂದ್ರರಂ . . . ಸಮವಸರಣಮಂ ಪೊಱಮಟ್ಟು (ಶಾಂತಿಪು. ೯-೧). [ಸಂ.]

ಶ್ರೀನಿಕೇತನ (ನಾ). ೧. ಲಕ್ಷ್ಮಿಯ ನೆಲೆ, — ಆವಾಸಸ್ಥಾನ. ೨. ಭಂಡಾರ ; ಕೋಶಗೃಹ : ಶ್ರೀನಿಕೇತನಸಂಜಾತ ಕಾಳಮಹಾಕಾಳನೈಸರ್ಪ ಪಾಂಡುಕಪದ್ಮ ಪಿಂಗಳಮಾಣವಕಶಂಖಸರ್ವರತ್ನಂಗಳೆಂಬೊಂಭತ್ತು ನಿಧಿಗಳಿಂದಂ (ಶಾಂತಿಪು. ೧೧-೪೪ ವ). ೩. ಲಕ್ಷ್ಮಿಗೆ ಆವಾಸಸ್ಥಾನನಾದವನು ; ವಿಷ್ಣು. [ಸಂ.]

ಶ್ರೀನಿಲಯ, ಶ್ರೀನಿಳಯ (ನಾ). ೧. = ಶ್ರೀನಿಕೇತನ ೧. ೨. [ಜೈನ] ಸೌಧರ್ಮಕಲ್ಪದ ಒಂದು ವಿಮಾನ : ಶ್ರೀವಧೂಚಂಚನತ್ಯಾಂಚನಲೀಲಾಮಂದಿರ ಶ್ರೀನಿಲಯಪೃಥುಲವಕ್ಷಸ್ಥಲಂ ತೀರ್ಥನಾಥಂ (ಆಜಪು. ೫-೯೪). **ಶ್ರೀನಿಳಯ** : ೩. ಲಕ್ಷ್ಮಿಗೆ ವಾಸಸ್ಥಾನನಾಗಿರುವವನು ; ಸಂಪತ್ತಿಗೆ ನೆಲೆಯಾದವನು : ದಳತ್ಪದ್ಮದಿಂದಧಿಕಶ್ರೀನಿಳಯಂ ಸುಪುತ್ರನೊಗತಕರ್ಂ ನಿವೊ್ಮಳರ್ವೀಶ್ವರಾ (ಪುಷ್ಪಪು. ೩-೧೨೨). [ಸಂ.]

ಶ್ರೀನಿವಾಸ (ನಾ). ೧. ಲಕ್ಷ್ಮಿಯ ವಾಸಸ್ಥಾನ, - ನೆಲೆ. ೨. = ಶ್ರೀನಿಕೇತನ ೩ : ಶ್ರೀನಿವಾಸ ನೀನೇ ಪಾಲಿಸೋ ಶ್ರತಜನಪಾಲ ಗಾನಲೋಲ ಶ್ರಮುಕುಂದನೇ (ಪುರಂದ. ೧-೭ ತಲ್ಲವಿ); ಶ್ರೀವೆಂಕಟಾಚಲನಿವಾಸ ಶ್ರೀನಿವಾಸಚರಣಾರವಿಂದ ಕರುಣಾವಿಧಾಯಕ ಕೈಂಕರ್ಮಧೌರೇಯನುಂ (ಎಕ. III, ಶ್ರೀರಂಗ. ೬೪-೬೫; 1722). [ಸಂ.]

ಶ್ರೀನಿಸರ್ಗ (ನಾ). ಅತಿಶಯವಾದ ದಾನವನ್ನು ಮಾಡುವವನು : ವರಮಾರ್ಗ್ಗಂ ಶ್ರೀನಿಸರ್ಗ್ಗಂ ವಿನಯವಿನತಭರ್ಗ್ಗಂ ಜಿತಾರಾತಿವರ್ಗ್ಗಂ ಸ್ಥಿರಕಾರ್ಯ್ಯಂ . . . ಧರೆಗೆಲ್ಲಂ ರಾಚಮಲ್ಲಂ ಕುಡುತವಿರಲೆ ಬಲ್ಲಂ (ಎಕ XIV, ೨೮೦-೧೩; 1181). [ಸಂ.]

ಶ್ರೀನಿಳಯ 'ಶ್ರೀನಿಲಯ' ನೋ.

ಶ್ರೀನೀಡ (ನಾ). ಲಕ್ಷ್ಮಿಯ ವಾಸಸ್ಥಾನ : ಶ್ರೀನೀಡಂ ಪುರಮದ್ವಿತತ್ವನಯಘೋಷಂ ಕರ್ಣಧಾರಂ ಮಹಾಮಾನಸ್ತಂಭಕುಳಂ ಶಿಳಂ . . . ಆಗೇನೊಪ್ಪಿರ್ಪುವೊ ಪೋಲ್ತು ದಿವ್ಯಜಿನಚೈತ್ಯಂಗಳ್ ಬಹಿತ್ರಂಗಳಂ (ಪುಷ್ಪಪು. ೨-೭೪). [ಸಂ.]

ಶ್ರೀಪ (ನಾ). ವಿಷ್ಣು : ಜಕ್ಕಣಾಚಾರ್ಯನಿಂ ಶ್ರೀಪನುತಪದಭಕ್ತ ಮಹಿಮೆಗಳ ನೆಜಕೇಳ್ದು . . . ಮಜದನುಜೆ ಪ್ರೌಢಭೂಪಂ (ಪ್ರೌಢರಾ. ೧ ಸೂಚನ). [ಸಂ.]

ಶ್ರೀಪಂಚಮಿ (ನಾ). ಮಾಘಶುದ್ಧಪಂಚಮಿ : ಅಂತು ಯೌವನಂ ನೆಜವಿನಂ ಒಂದುದೆವಸಂ ಶ್ರೀಪಂಚಮಿಯೊಳುಪವಾಸನಿರತೆಯಾಗಿ (ಶಾಂತಿಪು. ೫-೧೮ ವ).

[ಸಂ. ಶ್ರೀಪಂಚಮಿ]

ಶ್ರೀಪತಿ (ನಾ). ೧. ಲಕ್ಷ್ಮಿಯ ಗಂಡ : ಶ್ರೀಪತಿಯುಂ ಸಕಲವಚಶ್ರೀಪತಿಯುಮು ಮಾಪತಿಯುಮೆಮಗಮಾದರದಿಂ ಶ್ರೀಪದವುಂ ಸಕಳವಚಶ್ರೀಪದವುಂ ಪರಮಪದಮನೀಗಭಿವಂದ್ಯರ್ (ಅಜಿತೋಪ. ೧-೧); ಶ್ರೀಪತಿಗೆ ಸೂಬಗನುಡುಪತಿಗೆ ಶಾಂತಿಯನು . . . ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಪೂಳ್ಕೆ (ಹಚಕಾ. ೧-೧); ಶ್ರೀಪತಿವಿಭವಂ ಮಾನಸಿಜರೂಪಂ ದೇವೇಂದ್ರಸೂನು ರಾಮನೃಪಾಲಂ (ಎಕ. IV. ಎಳಂದೂ. ೧-೩೨; 1654). ೨. ಸಂಪತ್ತಿಗೆ ಒಡೆಯನಾದವನು; ರಾಜ : ಶ್ರೀಪತಿಗೆ ಯುದ್ಧಮಲ್ಲಮಹೀಪತಿಗೆ ನೆಗಟ್ಟೆ ಪುಟ್ಟಿ ಪುಟ್ಟಿದನಖಿಳಕ್ಷ್ಮಾಪಾಲ ಮೌಳಿಮಣಿ . . . ರಂಜಿತಚರಣಂ (ಪಂಪಭಾ. ೧-೧೮). ೩. [ಜೈನ] ಜಿನ ; ಅರ್ಹಂತ : ಶ್ರೀಪತಿ ಸುರದಾರಕರೊಡನಾ ಪೊತ್ತುಂ ನೆಜೆದು ರತ್ನಧೂಳೀಪಟಲವ್ಯಾಪಿತ ತನುಮೃದುಮುಗ್ಧಾಲಾಪಂ ಬಳೆದಂ ಸರಸ್ವತೀಮಣಿಹಾರಂ (ಆದಿಪು. ೮-೧); ಶ್ರೀಪತಿ ಜಿನಪತಿ ಮದ್ಗಗಿನೀಪುತ್ರಂ . . . ಭಾನುಮತಿಗೆ ವರನೇತೆಱದಿಂ (ಪುಷ್ಪಪು. ೭-೫೩). ೪. [ಛಂದ] ವಿಷ್ಣುಗಣದಲ್ಲಿ ಒಂದು ಬಗೆ; ಆದಿಯಲ್ಲಿ ಒಂದು ಗುರುವೂ ಕಡೆಯಲ್ಲಿ ಎರಡು ಲಘುಗಳೂ ಬರುವ ಅಂಶಗಣ (–UU) : ವಿಷ್ಣುಗಣಮಂತೆಂದೊಡೆ : — ೧. ಗೋವಿಂದಂ . . . ೭. ಶ್ರೀಪತಿ. ೮. ಮುರರಿಪು (ಛಂದೋಂಬು. ೫-೨೪೦ ವ). [ಸಂ.]

ಶ್ರೀಪರ್ಣ (ನಾ). ೧. ಒಂದು ಬಗೆಯ ಮರ. ೨. ತಾವರೆ ; ಕಮಲ. [ಸಂ.]

ಶ್ರೀಪರ್ಣಿ (ನಾ). ೧. ಒಂದು ಬಗೆಯ ಸಸ್ಯ ; ಕುಂಬಳೆಗಿಡ : ''ಗಂಭಾರೀ . . . ಶ್ರೀಪರ್ಣೀ, ಭದ್ರಪರ್ಣೀ, ಕಾಶ್ಮರ್ಯಃ -೭ ಶೀವನೆಯ ಮರದ ಹೆಸರು. ಕೀಏವರಿದಕ್ಕೆ ಕುಂಬಳೆಗಿಡವೆಂದು ಅರ್ಥ ಹೇಳುವರು'' (ಏಕ್ಷಾಂತ. ೧೩೦). ೨. = ಶ್ರೀಪರ್ಣ ೧ : ''ಶ್ರೀಪರ್ಣೀ — ನರಿವಾಲ, ಸಿವನ್ನಿದ್ಯಯ, ನರುವಲು, ಬೆಲ್ಲವತ್ತ, ಉತ್ಪಲ'' (ಓಷಧಿ. ೧೬೭). [ಸಂ. ಶ್ರೀಪರ್ಣೀ]

ಶ್ರೀಪರ್ಣಿಕೆ (ನಾ). = ಶ್ರೀಪರ್ಣ ೧ : ''ಶ್ರೀಪರ್ಣಿಕಾ . . . ಕಟ್ಟಲಃ — ೫ ಕಿರಿಯ ಶಿವನೀಮರದ ಹೆಸರುಗಳು'' (ಏಕ್ಷಾಂತ. ೧೩೧). [ಸಂ. ಶ್ರೀಪರ್ಣಿಕಾ]

ಶ್ರೀಪರ್ಬತ (ನಾ). ತಿರುಪತಿ ಬೆಟ್ಟ : ೇ ದತ್ತಿಯನಳಿದೋಂ ಶ್ರೀಪರ್ಬತಮುಂ ವಾರಣಾಸಿಯುಂ ಕವಿಲೆಯುಂ ಬ್ರಾಹ್ಮಣರುಂ ತಪೋಧನರುಮನಳಿದ ಪಾಪ್ಮಮಹಾಪಾತಕಂ (ಎಕ. IV. ಚಾಮರಾ. ೧೮-೨೧; ಪ. 1000 ?). [< ಸಂ. ಶ್ರೀಪರ್ವತ]

ಶ್ರೀಪರ್ವತ (ನಾ). ೧. ಶ್ರೀಶೈಲ: ಮಲ್ಲರಸನೆಂದೊಬ್ಬ ಧರಣೀವಲ್ಲಭು . . . ಎಲ್ಲಾ ತ್ಯಜಿಸಿ ತಾಂ ಶ್ರೀಪರ್ವತಕೆ ಹೋಗಿ (ಬಾಸಪು. ೧೯-೨೦). ೨. ತಿರುಪತಿ ಬೆಟ್ಟ : (೬). [ಸಂ.]

ಶ್ರೀಪಾದ (ನಾ). ೧. ಮಂಗಳಕರವಾದ ಚರಣ, — ಪಾದ : ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹಱಿಯಿತು (ಬಾಮ. ೬೫೩); ಶ್ರೀಪಾದಮಂ ತೊಳೆದು ಪಾದೋದಕಮಂ ತಳೆದು (ಸಂಬರ. ೮-೩೧). ೨. ಗುರುಹಿರಿಯರನ್ನು ಸಂಬೋಧಿಸುವಾಗ ಬಳಸುವ ಗೌರವಸೂಚಕಶಬ್ದ : ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರಿಂದ ವಟು ಲಕ್ಷ್ಮೀನಾರಾಯಣನಿಗೆ ಬ್ರಹ್ಮೋಪದೇಶವಾಯಿತು (ಕಥಎ. ೬೫೫). [ಸಂ.]

ಶ್ರೀಪಿಷ್ಟ (ನಾ). ದೇವದಾರುವೃಕ್ಷದ ಅಂಟು ; ಗುಗ್ಗುಳ : ''ಶ್ರೀಪಿಷ್ಟ — ಧೂಪ'' (ಗಂಗಾಮ. ೩೧೧). [ಸಂ.]

ಶ್ರೀಪುರುಷ (ನಾ). ಒಬ್ಬಾತನ ಹೆಸರು ; ℙ ಗಂಗವಂಶದ ಒಬ್ಬ ರಾಜ : ಸ್ವಸ್ತಿಶ್ರೀ ಶ್ರೀಪುರುಷ ಪೃಥಿವೀರಾಜ್ಯಗೆಯೆ ವೈಳಕಟ್ಟುಂಡರ ತಲ್ಗೊಯೂರಾಳ ಆವುಕ್ಕ ಇಯುರೆ (ಎಕ. IV. ಗುಂಡ್ಲುಪೇ. ೮೬-೧; ಪು. 750). [ಸಂ.]

ಶ್ರೀಫಲ, ಶ್ರೀಫಳ (ನಾ). ೧. ಒಂದು ಬಗೆಯ ಮರ ; ಬಿಲ್ವಪತ್ರೆ : ಇರ್ದುದು . . . ಆತನ ಸುಕೃತದ ಬೀಜಂ ಪೂತ ಶ್ರೀಫಲ ಸುವರ್ಣಕಾದ್ರಿನಿವಾಸಂ (ಹಮ್ಮೀರ. ೮-೩೦). ೨. ಬಿಲ್ವದ ಕಾಯಿ : ಶ್ರೀಫಲಪಯೋಧರೆಯೆ ಕೇಳು (ಸವಮೋ. ೩-೧೭). **ಶ್ರೀಫಳ** : ೨. ಶ್ರೀಫಳೋದ್ಭತ್ಫಳಂ ಬಂಧುರಗೋಲಾಂಗೂಲಮಂ ಕೊರ್ವಿಸೆ ಸೊಗಯಿಪುದೀ ಕಾನನೋದ್ದೇಶಂ (ಪುಷ್ಪಪು. ೫-೬೯). [ಸಂ.]

ಶ್ರೀಫಲಿ (ನಾ). ೧. ನೀಲಿಯ ಗಿಡ : ''ನೀಲೀ . . . ರಂಜನೀ, ಶ್ರೀಫಲೀ . . . ದೋಲಾ, ನೀಲಿನೀ — ೧೧ ನೀಲೀಗಿಡದ ಹೆಸರುಗಳು'' (ಏಕ್ಷಾಂತ. ೧೩೨). ೨. ನೆಲ್ಲಿಮರ : ''ಶ್ರೀಫಲೀ — ನೆಲ್ಲಿ'' (ಓಷಧಿ. ೧೬೭). [ಸಂ. ಶ್ರೀಫಲೀ]

ಶ್ರೀಫಳ 'ಶ್ರೀಫಲ' ನೋ.

ಶ್ರೀಬಳ್ಳಿ (ನಾ). ಶ್ರೀಕಾರವನ್ನು ಬರೆದು ಬಳಿಕ ಬರೆಯುವ ವರ್ಣಗಳು ಮತ್ತು ಅವುಗಳ ಕಾಗುಣಿತ : ಅಕ್ಷರಾರಂಭಕಾಲದಲ್ಲಿ ಅಂಥಾ ಮಂಗಳಾಚರಣರೂಪವಾದ 'ಶ್ರೀಬಳ್ಳಿ,' 'ಓಬಳ್ಳಿ' ಎಂಬ ವರ್ಣಮಾಲೆಗಳು (ಬಳ್ಳಿಗಳು) ನೆಲೆಗೊಂಡವು (ಕನ್ನಾ. ೧೨೪). 'ಕಾಬಳ್ಳಿ,' ಪರಾ. [ಶ್ರೀ + ಬಳ್ಳಿ]

ಶ್ರೀಮಂತ$_1$ (ನಾ). ಚೊಚ್ಚಿಲ ಗರ್ಭಿಣಿಸ್ತ್ರೀಗೆ ಮಾಡುವ ಒಂದು ಸಂಸ್ಕಾರ; ಸೀಮಂತ : ಆಕೆ ಗರ್ಭಿಣಿಯಿದ್ದಾಗ ಮಾಡಿದ 'ಶ್ರೀಮಂತ'ವೂ ಮಧುರವಾಗಿದ್ದು ಈಗ ಅಳಿಸಿಹೋಗುತ್ತಿರುವ ಪರಂಪರೆಯ ಸವಿನೆನಪನ್ನು ತಂದುಕೊಡುತ್ತವೆ (ಸಮಜೀ. ೭ ಜೀಲಿಕೆ).

[< ಸಂ. ಸೀಮಂತ]

ಶ್ರೀಮಂತ್ಯ (ನಾ). ೧. ಸಂಪತ್ತಿನಿಂದ ಕೂಡಿದುದು ; ಐಶ್ವರ್ಯದಿಂದ ಕೂಡಿದುದು. ೨. ಸಂಪತ್ತುಳ್ಳವನು ; ಹಣವಂತ ; ಧನಿಕ : ಗೋಮಿನೀಪತಿ

ಗೋಬ್ರಾಹ್ಮಣರಕ್ಷಣ ಶ್ರೀಮಂತ ಸಲಹೆನ್ನನೊಲಿದು (ಶತಸಾಂ. ೬೨-೯). ೩. (ಆಲಂ) ಪರಿಪೂರ್ಣವಾದುದು : ಆಂತರಿಕಜೀವನವೆಲ್ಲ ಹೀಗೆ ಶ್ರೀಮಂತವಾದಂತೆ ಸ್ವಾಮಿದಾಸರಲ್ಲಿ ಇನ್ನೊಂದು ವಿಕಾಸವು ಕಾಣಿಸಿಕೊಂಡಿತು (ಸಮಜೀ. ೧೦೨೦); ವೈಯಕ್ತಿಕ ಮಿತಿಯನ್ನು ದಾಟಿದಾಗ ಮಾತ್ರ ಕೇಶವನ ಅಂತರಂಗ ಅನೇಕಪ್ರಜ್ಞೆಗಳಿಂದ ಶ್ರೀಮಂತವಾಗಿದೆ (ಹೂಸಕ್ಷಿ. ೨೯೬). [ಸಂ. ಶ್ರೀಮತ್]

ಶ್ರೀಮಂತಿಕೆ (ನಾ). ೧. ಸಂಪತ್ತು ; ಸಿರಿವಂತಿಕೆ : ಕೀರ ಶ್ರೀಮಂತಿಕೆಯಿಂದಲ್ಲದಿದ್ದರೂ . . . ಸಂಸ್ಕೃತಿಪೂರ್ಣರು ಎನಿಸಿಕೊಂಡವರಿಗೆ 'ಎವರ್‌ಗ್ರೀನ್'ನಲ್ಲಿ . . . 'ದಿನ್ನರಿದೆ' ಎಂದರೆ ಅದೊಂದು ಗೌರವದ ಸಂದರ್ಭ (ಒಟಿದ. ೧). ೨. (ಆಲಂ) ಘನತೆ ; ಗೌರವ : ಇಂತಹ ಗ್ರಂಥಗಳಿಂದ ನಮ್ಮ ಶಾಸ್ತ್ರಸಾಹಿತ್ಯದ ಶ್ರೀಮಂತಿಕೆ ನಿಜವಾಗಿಯೂ ಹೆಚ್ಚುತ್ತದೆಂದು ನನ್ನ ಭಾವನೆ (ಸಂಶೋಧ. ೨೩೩). [ಶ್ರೀಮಂತ + - ಇಕೆ]

ಶ್ರೀಮಜ್ಜನ (ನ್ನಾ) ೧. ಮಂಗಳಕರವಾದ ಸ್ನಾನ. ೨. ಗೌರವಾನ್ವಿತ ಜನ. ೧, ೨ : ಶ್ರೀಮಜ್ಜನಲಲಿತಂ ಸುಮನೋಮಾಳಾರಂಮ್ಮವುದ್ಭವಪ್ತ ಬ್ರಜಶೋಭಾಮಂಡನ ವೆಣೆಯೆನಿಪುದು ಭೂಮಹಿಳೆಯ ಕುಂತಳಕ್ಕೆ ಕುಂತಲದೇಶಂ (ಎಸಾ. XV, ೩೪-೮; 1189).

[ಸಂ. (ಶ್ರೀ + ಮಜ್ಜನ ; ಶ್ರೀಮತ್ + ಜನ)]

ಶ್ರೀಮತಿ (ನಾ). ೧. ಸಂಪತ್ತನ್ನುಳ್ಳವಳು ; ಐಶ್ವರ್ಯವುಳ್ಳವಳು. ೨. ಹೆಂಗಸರನ್ನು ಸಂಬೋಧಿಸುವಾಗ ಬಳಸುವ ಒಂದು ಗೌರವಸೂಚಕ ಪದ: ಶ್ರೀಮತಿ ವಿಶಾಲಾಕ್ಷಿಯವರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ (ಠೂಳಿ). ೩. ಹೆಂಡತಿ : ನನ್ನ ಶ್ರೀಮತಿ ಮನೆಯಲ್ಲಿ ಇಲ್ಲ (ಠೂಳಿ). [ಸಂ. ಶ್ರೀಮತೀ]

ಶ್ರೀಮತು (ಗು). ೧. ಸಂಪತ್ತುಳ್ಳ ; ಶ್ರೀಮಂತವಾದ. (ನಾ). ೨. 'ಗೌರವಾನ್ವಿತನಾದ' ಎಂಬರ್ಥದಲ್ಲಿ ಬಳಸುವ ಪದ : ಸ್ವಸ್ತಿಶ್ರೀಮತು ಆಳುಅರಸರ್ ಗುಣಸಾಗರಾದ್ವಿತೀಯನಾಮಧೇಯನ್ ಕದಮ್ಮಮಣ್ಣಲಮನಾಳುತ್ತುಂ . . . ಕಿಟ್ಟುನ ದೇವಕೆ ಎಲ್ಲಮಾನ್ಸರ್ವಪರಿಹಾರಂ ಬಿಟ್ಟು (ಎಕ. VI, ಕೊಪ್ಪ. ೩೮-೧; ಸು. 675 ?); ಪಶ್ಚಿಮರಾಯ ಭೋಜದೇವ ದಿಸಾಪಟ್ಟು ಶ್ರೀಮತು ಪ್ರತಾಪಚಕ್ರವರ್ತ್ತಿ ಸಿಂಗಣದೇವ ದಕ್ಷಿಣಭುಜಾದಂಡನಾಯಕ (ಎಸಾ. XXX, ೯-೬; 1220). [ಸಂ. ಶ್ರೀಮತ್]

ಶ್ರೀಮಾನಿನಿ (ನಾ). ೧. ಗೌರವಾನ್ವಿತ ಹೆಂಗಸು : ವ್ಯೋಮಾದಿ ಜಲಾಂತಂ ತಾಮಾಗೆ ನಿತಾಂತಂ ಶ್ರೀಮಾನಿನಿ ಕೇಳಾ ನಾಮಂ ತನುಮಧ್ಯಂ (ಧಂದೋಣಬು. ೨-೭೮). ೨. ಲಕ್ಷ್ಮಿ.

[ಸಂ. ಶ್ರೀಮಾನಿನೀ]

ಶ್ರೀಮುಂಜ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಬಾಲಾದಿತ್ಯರಾಳು ಶ್ರೀಮುಂಜನೆಮ್ಮೊನ್ನೀಲಸಿನ್ದಮನಸಿಜರಾನಿಱಿದು ಪಿಡಿದು ತಾನ್ಮೊನ್ನಿದಾನ್ (ಮೈಆರ. ೧೯೪೧, ೨-೨; ಸು. ೩ನೆಯ ಶತ). [?]

ಶ್ರೀಮುಖ (ನಾ). ೧. ಸುಂದರವಾದ ಮುಖ : ಅದು-ಎಂತಹ ಗಡ್ಡವನ್ನಾದರೂ ಒಲ್ಲೆನೆಂದು ಅಕ್ಷೇಪಿಸಿ ದಂಗೆಯೇಳುವ ಶ್ರೀಮುಖವಹುದು (ಮುಂತ್ರಶ. ೯೧-೧). ೨. ಬರಹದ ರೂಪದಲ್ಲಿರುವ ರಾಜಾಜ್ಞೆ ಮುಂತಾದುವು ; ನಿರೂಪ : ಈಶನೀ ಪಲ್ಲಕ್ಕಿಯಂ ಕಳುಹಿದಂ ನೀಂ ಸುಖಾಸೀನನಾಗೇಳು . . . ಎಂದೆನುತ್ತಿತ್ತ ಶ್ರೀಮುಖವನು ಶ್ರೀಶರದೊಳಾಂತು (ರಾಘಚ. ೧೪-೬೧); ಪೋಪರು ಮಹಾಖಾನನಿಗೆ ಒಂದು ಶ್ರೀಮುಖವನ್ನು ಬರೆಸಿಕೊಟ್ಟುದಲ್ಲದೆ . . . ಬೆಲೆಯಾದ ಬಹುಮಾನಗಳನ್ನೂ ಕಳುಹಿಸಿಕೊಟ್ಟರು (ಪ್ರವಾ II, ೬). ೩. ಅರುವತ್ತು ಸಂವತ್ಸರಗಳಲ್ಲಿ ಏಳನೆಯದು: ಶ್ರೀಮುಖಸಂವತ್ಸರದ ಮಾರ್ಗಶಿರ ಸು ೧೦ (ಎಕ IX, ನಲಮಂ. ೯-೨; 1333); ಆ ವರ್ಷವೇ ಪ್ರಭವ ವಿಭವ ಶುಕ್ಲ ಪ್ರಮಾದೂತಂ ಪ್ರಜೋತ್ಪತ್ತಿ ಆಂಗೀರಸ ಶ್ರೀಮುಖ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ಎವೇಕ. ೨೬೩). [ಸಂ.]

ಶ್ರೀಮುದ್ರೆ (ನಾ). ೧. ವಿಷ್ಣುವಿನ ಶಂಖ, ಚಕ್ರ, ಗದೆ, ಪದ್ಮ ಮೊದಲಾದ ಲಾಂಛನ : ಹರಿಯ ದಾಸರು ಎನ್ನ ಬಂಧುಬಳಗಾದರು ಹರಿಯ ಶ್ರೀಮುದ್ರೆ ಆಭರಣವಾಯಿತು (ಕನಕ. ೯೭-೧). ೨. [ದ್ವೈತ] ವೈಷ್ಣವರ ಲಾಂಛನವಾದ ಶಂಖ, ಚಕ್ರ, ಗದೆ, ಪದ್ಮ ಮೊದಲಾದವುಗಳ ಗುರುತುಳ್ಳ (ಲೋಹದ) ಸಾಧನ ಮತ್ತು ಆ ಸಾಧನದಿಂದ ದೇಹದ ಮೇಲೆ ಧರಿಸುವ ಗುರುತು : (೬).

[ಸಂ. ಶ್ರೀಮುದ್ರಾ]

ಶ್ರೀಮುದ್ರೆಗಿಡ (ನಾ). ಒಂದು ಬಗೆಯ ಗಿಡ : ಶ್ರೀಮುದ್ರೆಗಿಡ, ತುತ್ತಿ, ಕಿಸಂಗಿ, ತುರುಬೀಗಿಡ, ಗಿಡುತಿಂಗಿ (ಮೃಔಗಿ. ೧-೬). [ಶ್ರೀ + ಮುದ್ರೆ + ಗಿಡ (< ಗಿಡು)]

ಶ್ರೀಯಮ್ಮ (ನಾ). ಒಬ್ಬಾತನ ಹೆಸರು : ತೊಣ್ಣಿನ್ದರ ಮಗನುಂ ಪೊರಿಗೊಣ್ಣಿನ್ದಮ್ಮಗನುಂ ಶ್ರೀಯಮ್ಮನಿ[ಮ್ಮೈ] XX ಯ್ವಸರ್ ಅರಿಧೀರನೆ [ಮ್ಮೀ] ದ XXX (ಸೌಾ XX, ೧೦-೩; ೩ನೆಯ ಶತ). [ಶ್ರೀ + ಅಮ್ಮ]

ಶ್ರೀಯಾಣ್ಮ (ನಾ). ಲಕ್ಷ್ಮೀಪತಿ ; ವಿಷ್ಣು : ಮೃದು ಮಧುರವಹ ಮಹಾಸ್ತೋತ್ರದಿಂದೆ ಪೊಗಳುವೆ ಶ್ರೀಯಾಣ್ಮನ (ವಿಷ್ಣಪು. ೩-೬-೩೬). [ಶ್ರೀ + ಆಣ್ಮ (< ಆಳ್ಮ)]

ಶ್ರೀಯುತ (ಗು). ೧. ಸಂಪತ್ತಿನಿಂದ ಕೂಡಿದ. (ನಾ). ೨. ಐಶ್ವರ್ಯವಂತ : ಶ್ರೀಯುತನೊಳುದಾರತೆ ವಾಕ್ಶ್ರೀಯುತನೊಳಮತ್ಸರತ್ವಮಾಗದುದಾರಂ ಶ್ರೀಯುತ ಸಮತ್ಸರಂ ವಾಕ್ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ (ಗದಾಯು. ೧-೪೯). ೩. ದೇವರು, ಪೂಜ್ಯವ್ಯಕ್ತಿ ಮುಂತಾದವರ ಹೆಸರಿನ ಹಿಂದೆ ಸೇರುವ ಒಂದು ಗೌರವಸೂಚಕಪದ : ಶ್ರೀಯುತ ಶಾಂತಿವರ್ಮ ವೆಱರಾರ್ಪು ವಿಚಾರಿ ಪೊಡಂಧರ್ವರ್ತಕನ್ಯಾಯಮ (ಪುಸ್ಕ. ೧-೭೬). [ಸಂ.]

ಶ್ರೀರಂಗ (ನಾ). ೧. ವಿಷ್ಣುವಿನ ಹೆಸರುಗಳಲ್ಲಿ ಒಂದು : ಲೋಕವ ಕಾಯ್ದ ಪತ್ರವತಾರ ಶ್ರೀರಂಗ (ಶತಸಾಂ. ೧೪-೭೭). ೨. ದಕ್ಷಿಣಭಾರತದ ತಮಿಳುನಾಡಿನಲ್ಲಿರುವ ಪ್ರಸಿದ್ಧವಾದ ಒಂದು ವೈಷ್ಣವಕ್ಷೇತ್ರ : ಶ್ರೀರಂಗ, ಶ್ರೀಮುಷ್ಣ, ಕುಂಭಕೋಣ, ಮನ್ನಾರುಗುಡಿ ಮುಂತಾದ ಅನೇಕ ವಿಷ್ಣುಕ್ಷೇತ್ರಗಳಿರುವುದು (ಮಹಾವಂ. I, ೧೩೯). ೩. ಕರ್ನಾಟಕದ ಮೈಸೂರುಜಿಲ್ಲೆಯಲ್ಲಿ ಇರುವ (ಇತಿಹಾಸ)ಪ್ರಸಿದ್ಧವಾದ ಒಂದು ವೈಷ್ಣವಕ್ಷೇತ್ರ ; ಶ್ರೀರಂಗಪಟ್ಟಣ : ಶ್ರೀರಂಗದ ಕಂದಾಡಿ ಅಂಣನವರ ಶಿಷ್ಯರಾದ ವೇದಾಂತಿ ರಾಮಾನುಜ ಜೀಯವರಿಗೆ ನಮಸ್ಕರಿಸಿ ಸಮರ್ಪಿಸಿದೆವು (ಎಕ. VI(R), ಕಾಂಡವ. ೧೩೦-೬; 1544). [ಸಂ.]

ಶ್ರೀರಂಜನಿ (ನಾ). [ಸಂಗೀತ] ಒಂದು ರಾಗದ ಹೆಸರು : ಶ್ರೀರಂಜನಿಯು . . . ಎಲ್ಲ ಕಾಲಗಳಲ್ಲಿಯೂ ಹಾಡುವಂತಹುದು (ಚಮಪ್ರ. ೧೩೮). [ಸಂ. ಶ್ರೀರಂಜನೀ]

ಶ್ರೀರಮಣ (ನಾ). ೧. ಲಕ್ಷ್ಮಿಗೆ ಒಡೆಯನಾದವನು ; ವಿಷ್ಣು : ಶ್ರೀರಮಣ ವಿಬುಧಪತಿ ವಾರಿಜಭವಾದಿ ವೃಂದಾರಕಪ್ರಚಯ . . . ಪಾಲಿಪುದೆನಗೆ ಚಾರುಮತಿಯಂ (ಕಬ್ಬಿಕ್ಕ. ೧). ೨. ಕೃಷ್ಣ : ಶ್ರೀರಮಣಂ ಪುಟ್ಟರೆ ಕೋಟೀರಾದ್ಯಾಭರಣಚಕ್ರ ಮುಖ್ಯಾಯುಧನಾನಾರಶ್ಮಿಯನು ವಿಜೃಂಭಿಸೆ ರಾರಾಜಿಪುದತ್ತು ಕೌಸ್ತುಭಂ ಪೇರುರದೊಳ್ (ಜಗವಿ. ೩-೧). ೩. ಸಂಪತ್ತಿನ ಒಡೆಯ ; ಚಕ್ರವರ್ತಿ : ಶ್ರೀರಮಣನೆಱಗಿ ಮುಕ್ತಿಶ್ರೀರಮಣನ ಪಾದಪೀಠದೊಳ್ ಸುರಸಭೆ ಕಣ್ಣಾರೆ ನಡೆನೋಡೆ ಮದನಾಕಾರಂ ತಳರ್ದಂ ಸರಸ್ವತೀಮಣಿಹಾರಂ (ಆದಿಪು. ೧೪-೧). [ಸಂ.]

ಶ್ರೀರಮಣಿ (ನಾ). ಸಂಪತ್ತಿನ ಅಧಿದೇವತೆ ; ಲಕ್ಷ್ಮಿ : ಶ್ರೀರಮಣಿಯಂ ದ್ವಿಷದ್ವಳಪಾರಾವಾರದೊಳುದಗ್ರ ಭುಜವಿಜಯಮಹಾಮೇರು[ವಿ]ನೆ ಕಡೆದು ಪಡೆದಳವಾರುಮನಿಟ್ಟಿಸಿದುದುದಾತ್ತನಾರಾಯಣನಾ (ಪಂಪಭಾ. ೪-೧); ಶ್ರೀರಮಣಿಗೆ ನೆಲೆ ತನ್ನಯ ಪೇರುರಮಂ ಮಾಟ್ಪೆನೆಂಬ ಬಗೆ ಮಿಗೆ . . . ಪೂಣ್ದರ್ದಂ ಕೌರವಕುಲವಿಲಯಕೇತು ಸಾಹಸಭೀಮಂ (ಗದಾಯು. ೪-೧). [ಸಂ. ಶ್ರೀರಮಣೀ]

ಶ್ರೀರಾಗ (ನಾ). ೧. ಅತಿಶಯವಾದ ಸಂತೋಷ, — ಆನಂದ : ಶ್ರೀರಾಗಂ ಮೆಲ್ಲರ್ದಗಂ ಶ್ರೀರಾಗಮನೀಯೆ ಪಾಡಿದರ್ ಶಶಿಮುಖಿಯರ್ (ಉದ್ಭಟ. ೬-೧). ೨. [ಸಂಗೀತ] ಒಂದು ರಾಗದ ಹೆಸರು : ಮಧುಮಾಧವಿ ಶಂಕರಾಭರಣ . . . ಶ್ರೀರಾಗ ಸಾಳಗ . . . ಕರ್ನಾಟಕಬಂಗಾಳಮೆಂಬಿಪ್ಪತ್ತೇ ರಾಗಾಂಗದಿಂದಾದ ರಾಗಂಗಳು (ಎವೇಕ. ೧೮೮). [ಸಂ.]

ಶ್ರೀರಾಮಟಂಕೀವರಹ (ನಾ). ಶ್ರೀರಾಮನ ಪಟ್ಟಾಭಿಷೇಕದ ಚಿತ್ರವಿರುವ ಒಂದು ಚಿನ್ನದ ನಾಣ್ಯ : ಶ್ರೀರಾಮಟಂಕೀವರಹಾ ಮುಂತಾದ ವಳಯ ನಾಣ್ಯ ಸುಂದರ (ಕುಚೀಲೋ. ೧೩೪). [ಶ್ರೀರಾಮ್ಮ + < ಟಂಕ್ಕ + ವರಹ]

ಶ್ರೀರಾಮೆ (ನಾ). = ಶ್ರೀರಮಣಿ : "ಶ್ರೀರಾಮೆ ಲಕ್ಷ್ಮೀಗೋಮಿನಿ ವಾರಿಯಹಾವಸಥೆ . . . ದನುಜಾರಿಪ್ರಿಯೆಯೆಂದಿವಿಂದಿರಾನಾಮಂಗಳ್" (ವಸ್ತುಕೋ. ೫-೨೬).

[ಸಂ. ಶ್ರೀರಾಮಾ]

ಶ್ರೀರುದ್ರ (ನಾ). ೧. (ವಿಶೇಷವಾಗಿ ರುದ್ರಾಭಿಷೇಕಸಮಯದಲ್ಲಿ) ರುದ್ರನನ್ನು ಕುರಿತು ಹೇಳುವ ವೇದಮಂತ್ರ : ರಸಿಕದಿಂ ಶ್ರೀರುದ್ರವಂ ಪಠಿಯಿಸುತ ಮನೆಗೆಯ್ತರಲು (ಬಸಪು. ೫೩-೩೯). ೨. ಉಪನಿಷತ್ತುಗಳಲ್ಲಿ ಒಂದು : ಶ್ರೀರುದ್ರ ಬೃಹದಾರಣ್ಯಕ . . . ಎಂಬಿವು ಮೊದಲಾದವೇ ಉಪನಿಷತ್ತುಗಳು (ವಿವೇಕ. ೪). [ಸಂ.]

ಶ್ರೀಲ (ಗು). ೧. ಪ್ರಸಿದ್ಧವಾದ ; ಪ್ರಖ್ಯಾತವಾದ : ತಿರುವಲಿನಾಚಿಯಿಂದ ಜ್ಞಾನವು ಪುಟ್ಟಿ ಶ್ರೀಲಸೋಮೇಶನಿಂದುಪದೇಶಮಂ ಪಡೆದವಂ ವೀರಶೈವನಾದಂ (ಪ್ರಭುಧಾ. ೬ ೨೦). (ನಾ). ೨. ಹಣವಂತ ; ಧನಿಕ : "ಲಕ್ಷ್ಮೀವಾನ್, ಲಕ್ಷ್ಮಣಃ, ಶ್ರೀಲಃ, ಶ್ರೀಮಾನ್ – ೪ ಸಂವತ್ತುಳ್ಳವನ ಹಸರುಗಳು" (ಸಿದ್ಧಾಂತಿ. ೩೨೬). [ಸಂ.]

ಶ್ರೀವಚ್ಛ (ನಾ). ೧. ಶ್ರೀವತ್ಸ; ವಿಷ್ಣು : ಶ್ರೀವಚ್ಛಂ ಸಿರಿಯಿಂ ಸಮೃದ್ಧನೆಸೆವಾ ನಾಗಾಂಬಿಕಾಸೂನು ಭೋಗಾವಾಸಂ ವಸುಧೈಕಬಾನ್ಧವನುದಾರಂ (ಎಕ. VII, ಶಿಕಾರಿ. ೧೯೭-೩೬; 1182 ?) 'ಸಿರಿವಚ್ಛ' ಹೋ. [< ಸಂ. ಶ್ರೀವತ್ಸ]

ಶ್ರೀವತ್ಸ (ನಾ). ೧. ಎದೆಯ ಮೇಲೆ ಕಪ್ಪುಮಚ್ಚೆಯುಳ್ಳವನು ; ವಿಷ್ಣು : ಭವದೀಯ ಮನೋಹರಬಾಲ್ಯವಿನೋದಾಮೃತದೊಳೆಯ್ದೆ ತೀವಿದ ಮತ್ಸ್ಯಾಂತವನಿಂತೀ ವಿಷದಿಂ ತೀವುವುದೇ ಶ್ರೀವತ್ಸವತ್ಸವತ್ಸಸವತ್ಸಾ (ಜಗವಿ. ೩-೯೨). ೨. ವಿಷ್ಣುವಿನ ಎದೆಯ ಮೇಲಿರುವ ಕಪ್ಪು ಮಚ್ಚೆ : ಶ್ರೀವತ್ಸಂ ಕೌಸ್ತುಭಂ ಪೇರುರದೊಳೆಸೆದಿರೆ ಕಂಬು ಚಕ್ರಂ ಗದಾ ರಾಜೀವಂ ಹಸ್ತಂಗಳೊಳ್ ತಳ್ತಿರೆ . . . ಸುರವಿಜಯಿಯಂ ತೋಱಿದಂ ಜಾಲಗಾಱಂ (ದಶಕು. ೬-೧೩೭). [ಸಂ.]

ಶ್ರೀವತ್ಸಕಿ (ನಾ). ಕೊರಳಿನಲ್ಲಿ ಶುಭಸೂಚಕವಾದ ದೇವಮಣಿಯೆಂಬ ಹೆಸರಿನ ಸುಳಿಯಿರುವ ಕುದುರೆ : "ಆ ದೇವಮಣಿಯೆಂಬ ಕುಱುಹಿರಲದುಂ ಶ್ರೀವತ್ಸಕಿಯೆನಿಕ್ಕು" (ಮಂಗರಾ. ೮೨-೧೫). [ಸಂ. ಶ್ರೀವತ್ಸಕಿನ್]

ಶ್ರೀವತ್ಸಲಾಂಛನ (ನಾ). = ಶ್ರೀವತ್ಸ ೧: ಜಯಮಂಗಲಂ . . . ಶ್ರೀವತ್ಸಲಾಂಛನಗೆ ಸಿರಿದೇವಿಯರಸನಿಗೆ (ಪುರಂದ. ೩-೨೨೦-೨). [ಸಂ.]

ಶ್ರೀವನಿತೆ (ನಾ). ಐಶ್ವರ್ಯದ ಅಧಿದೇವತೆ ; ಲಕ್ಷ್ಮಿ : ಶ್ರೀವನಿತಾಪ್ರಸವದಿನಾ ಲಾವಣ್ಯದಿನತಿಗಭೀರಭಾವದೆ ನೀನಿಂತಾ ವಾರಿಧಿಯಂ ಪೋಲ್ತೈ (ಕವಿರಾ. ೩-೪೦); ಶ್ರೀವನಿತೆಗೆ ನಿಜವಿಜಯಶ್ರೀವನಿತೆಯೆ ಸವತಿಯಾಗೆ ರಿಪುನೃವರಂ ಶೌರ್ಯಾವಷ್ಟಂಭದೆ ಗೆಲ್ದ (ಗದಾಯು. ೪-೧); ಶ್ರೀವನಿತೆಯರಸನೆ ವಿಮಲರಾಜೀವಪೀಠನ ಪಿತನೆ ಜಗಕತಿಪಾವನನೆ . . . ಕಾವುದಾನತಜನವ (ಕುವ್ಯಾಆ. ೧-೧). [ಸಂ. ಶ್ರೀವನಿತಾ]

ಶ್ರೀವರ (ಗು). ೧. ಚೆಲುವಾದ ; ಸುಂದರವಾದ : ಶ್ರೀವರ ಸಲ್ಲಕೀವನದ ಪಲ್ಲವಮಂ ನಲವಿಂದೆ ಮೇದು . . . ಕುಂಜಾವಳಿಯೊಳ್ ವಿಹಾರಿಸಿ ವಿರಾಜಿಸುತ್ತಿರ್ಪುದು ಗಂಧಸಿಂಧುರಂ (ಪಾರ್ಶ್ವಪು. ೪-೧೧೨). (ನಾ). ೨. ಐಶ್ವರ್ಯಕ್ಕೆ ಒಡೆಯನಾದವನು; ಚಕ್ರವರ್ತಿ : ಶ್ರೀವರ ವಿದ್ಯಾಧರಜನತಾವಿಭು ನಿಜಸುತೆಗೆ ಸಮನಿಪತಿಶಯಭಾಗ್ಯ ಕ್ಕಾವಗಮೊಸೆದಂ ಮನದೊಳ್ (ವರ್ಧಪು. ೪-೧). ೩. ಲಕ್ಷ್ಮಿಯ ಪತಿ ; ವಿಷ್ಣು : ಶ್ರೀವರನೊಡನೆಯೆ ವನಜಳದೇವತೆಗಳ್ ಬರ್ಪುವೆನಿಸಿ ತನ್ನೊಡವರೆ ಮಾದೇವಿಯರಿನೆಸೆದನೋ ಧೃತಲಾವಣ್ಯರಸಂ ಸರಸ್ವತೀಮಣಿಹಾರಂ (ಆದಿಪು. ೧೨-೧); ಶ್ರೀವರಂ ನಿನ್ನ ತಪಕ್ಕೆ ಮೆಚ್ಚಿ ವರವಿತ್ತಂ (ಜಗವಿ. ೨-೬೯). ೪. ಕೃಷ್ಣ : ಶ್ರೀವರಂ ನಸುನಗೆಯೊಳಾಗಳಱಿದಂದದಿಂದಾವಾಗ ಬಂದನನಿಲಜನಿತ್ತ ಕರೆ . . . ಎನೆ (ಜೈಮಿಭಾ. ೬-೫೪). [ಸಂ.]

ಶ್ರೀವಲ್ಲಿ (ನಾ). ಒಂದು ಬಗೆಯ ಸಸ್ಯ : "ಕಟುಫಲಾ – ಶ್ರೀವಲ್ಲಿ" (ಓಷಧಿ. ೨೩). [ಸಂ. ಶ್ರೀವಲ್ಲೀ]

ಶ್ರೀವಾಸ (ನಾ). ೧. ವಿಷ್ಣು. ೨. ಶಿವ. ೩. ಕಮಲ. ೪. ಒಂದು ಬಗೆಯ ಸುಗಂಧದ್ರವ್ಯ ; ಗುಗ್ಗುಳ : "ಪಾಯಸಃ, ಶ್ರೀವಾಸಃ, ವೃಕ್ಷಧೂಪಃ, ಶ್ರೀವೇಷ್ಟಃ, ಸರಳದ್ರವಃ – ೫ ಸರಳ ದೇವದಾರುವೃಕ್ಷದ ಬೊಂಕೆ, ರಾಳದ ಬೊಂಕೆ" (ಸಿದ್ಧಾಂತಿ. ೨೦೮). [ಸಂ.]

ಶ್ರೀವಿಲಾಸ (ನಾ). ಕಾಂತಿಯಿಂದೊಡಗೂಡಿದ ಸೌಂದರ್ಯವನ್ನುಳ್ಳುದು : ಸರಸಿರುಹಮಿಂದುದೀಧಿತಿಪರಾಜಿತಶ್ರೀವಿಲಾಸಮಿಾ ನಿನ್ನ ಮುಖಂ ಹರಿಣಧರ ವಿಜಯಶೋಭಾಕರಂ (ಕವಿರಾ. ೩-೭೧). [ಸಂ.]

ಶ್ರೀವಿಲಾಸಿನಿ (ನಾ). ೧. ಚೆಲುವೆಯಾದ ಹೆಣ್ಣು. ೨. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಪಾದದಲ್ಲಿ ಒಂಭತ್ತು ಅಕ್ಷರಗಳುಳ್ಳ ಬೃಹತಿ ಎಂಬ ಛಂದಸ್ಸಿನ ಒಂದು ವೃತ್ತ : ಪಾವಕೇಂದ್ರಹುತಭುಗ್ಗಣಂ ಭಾವಿಸಿರ್ದೊಡಱಿ ನೀಂ ಮಹಾದೇವನಿಷ್ಠಮಿದು ನಿಶ್ಚಯಂ ಶ್ರೀವಿಲಾಸಿನಿ ಧರಿತ್ರಿಯೊಳ್ (ಛಂದೋಂಬು. ೨-೪೯ ಅಡಿಟಿ). [ಸಂ. ಶ್ರೀವಿಲಾಸಿನೀ]

ಶ್ರೀವಿಶದವರ್ಣೆ (ನಾ). ಮನೋಹರವಾದ ಬಿಳಿಯ ಬಣ್ಣವುಳ್ಳವಳು ; ಸರಸ್ವತಿ: ಶ್ರೀವಿಶದವರ್ಣೆ ಮಧುರಾರಾನೋಚಿತ ಚತುರರುಚಿರಪದರಚನೆ ಚಿರಂನೇವಿಸರಸ್ವತಿ ಪಂಸೀಭಾವದ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ (ಕವಿರಾ. ೧-೩). [ಸಂ. ಶ್ರೀವಿಶದವರ್ಣಾ]

ಶ್ರೀವೃಕ್ಷ (ನಾ). ೧. ಬಿಲ್ವವೃಕ್ಷ. ೨. ಅರಳಿಮರ ; ಅಶ್ವತ್ಥ : "ಶ್ರೀವೃಕ್ಷಃ, ಪಿಪ್ಪಲಃ, ಅಶ್ವತ್ಥಃ, ಬೋಧಿಃ – ಈ ೪ ಅರಳಿ" (ಹಲಾಯು. ೩೩-೪೩); ಶ್ರೀವೃಕ್ಷಪನಸ ನಿವಹಮುಮಾವಿಷ್ಟೃತಕುಸುಮವಿಸರಮೆನೆ ಶಿಖರಿವನಂ ತೀವಿರೆ (ಜಗವಿ. ೧೬-೧); ನಿತ್ಯವು ಚಲಿತಪವಮಾನಾಂತರ ಶ್ರೀವೃಕ್ಷಪರ್ಣಾಗ್ರಜಲಕಣಕ್ಷಣಚಲನಮಾತ್ರೌ ಬಳಿಕಮಿಂತುಟುಕಾಗಿ ಮೈಮಱೆದು . . . ಪೋಪತಿ ಮರಾತ್ಮರಿಗೆ (ಬಸಪು. ೪೦-೭೧). ೩. ಶುಭಲಕ್ಷಣಸೂಚಕವಾದ ಚಿಹ್ನೆ : ಶ್ರೀವೃಕ್ಷಸ್ವಸ್ತಿಕನಂದ್ಯಾವರ್ತ ಪ್ರಮುಖಾಷ್ಟೋತ್ತರಶತಪ್ರಶಸ್ತಲಕ್ಷಣಮುಂ . . . ತನಗನುಸಂಗತಮಾಗೆ ಯೌವನಪ್ರಾಪ್ತನಾಗಿ (ಶಾಂತಿಪು. ೧೦-೯೪ ವ); ಶ್ರೀವೃಕ್ಷಸಂಪೂರ್ಣಲಾಂಛನವಕ್ಷಂ ಕರಮೊಪ್ಪಿ ತೋರ್ಪ ಧವಳಾಕ್ಷಂ ಶೋಭಿತಾಂಗಂ ಭುಜಾನನಮೆಂದಿಂತಿವಗಣ್ಯಪುಣ್ಯಜನಿತಂ ಜೀವಕ್ಕೆ ನಿರ್ವ್ಯಾಕುಲಂ (ಸುಕುಮಾ. ೫-೩೬). ೪. [ಅಶ್ವಶಾ] ಕುದುರೆಯ ಕೊರಳಿನಲ್ಲಿರುವ ಶುಭಸೂಚಕವಾದ ಸುರುಳಿಗೂದಲು : ಶ್ರೀವೃಕ್ಷಂ ಕನ್ನಡಿ ನಂದ್ಯಾವರ್ತಂ ವರ್ಧಮಾನಕಂ ಸ್ವಸ್ತಿಕಮೆಂಬೀ ನಿವಿಧಲಾಂಛನಂಗಳನಾವರಿಸಿದ ವಾಜಿಗಾಯು ತ್ರಿಂಶದ್ವರ್ಷಂ (ಅಶ್ವಶಾ. ೫-೩೬). [ಸಂ.]

ಶ್ರೀವೃಕ್ಷಕಿ (ನಾ). = ಶ್ರೀವತ್ಸಕಿ : "ಶ್ರೀವೃಕ್ಷಮೆಂಬ ಕುಱುಪನುಳ್ಳ ಕುದಿರೆ ಶ್ರೀವೃಕ್ಷಕೀ ಎಂಬುದು" (ಹಲಾಯು. ೭೨-೨೮೪). [ಸಂ. ಶ್ರೀವೃಕ್ಷಕಿನ್]

ಶ್ರೀವೆಱು (ಕ್ರಿ). ಐಶ್ವರ್ಯವನ್ನು ಹೊಂದು ; ಸಂಪದ್ಭರಿತವಾಗು : ಉತ್ತಮೋತ್ತಮದುನ್ನತ ಶ್ರೀವೆತ್ತ ಸಿರಿಗಿರಿಗೆಣೆಯೆನಲು ಪ್ರಭೆವೆತ್ತ ಪುರವಂ ರಚಿಸಿ (ಬಸಪು. ೧೦-೧೩). [ಶ್ರೀ + ಪೆಱು]

ಶ್ರೀವೇಷ್ಟ (ನಾ). ಒಂದು ಬಗೆಯ ಸುಗಂಧದ್ರವ್ಯ ; ಗುಗ್ಗುಳ : "ಪಾಯಸಃ, ಶ್ರೀವಾಸಃ, ವೃಕ್ಷಧೂಪಃ, ಶ್ರೀವೇಷ್ಟಃ, ಸರಳದ್ರವಃ – ೫ ಸರಳದೇವದಾರು ವೃಕ್ಷದ ಬೊಂಕೆ, ರಾಳದ ಬೊಂಕೆ" (ಸಿದ್ಧಾಂತಿ. ೨೦೮). [ಸಂ.]

ಶ್ರೀವೈಷ್ಣವ (ನಾ). ಶ್ರೀವೈಷ್ಣವಮತದ ಅನುಯಾಯಿ : ಶ್ರೀ ಮತ್ತು ಪಿರಿಯ ಪೆರುಮಾಳಿಗರು ಶ್ರೀವೈಷ್ಣವರಿಂಗೆ ಬಿಟ್ಟ ಪುರ (ಎಕ. IV, ಎಳಂದೂ. ೨೦-೫; 1272 ?). [ಸಂ.]

ಶ್ರೀವೈಷ್ಣವಮತ (ನಾ). ಶ್ರೀರಾಮಾನುಜಾಚಾರ್ಯರಿಂದ ಸ್ಥಾಪಿತವಾದ ವಿಶಿಷ್ಟಾದ್ವೈತಮತ : ಈ ಮತಕ್ಕೆ ವಿಶಿಷ್ಟಾದ್ವೈತಮತವೆಂದೂ ಶ್ರೀವೈಷ್ಣವಮತವೆಂದೂ ಹೆಸರು (ಭಾರದ. ೨೯೬). [ಸಂ.]

ಶ್ರೀಶ (ನಾ). ಲಕ್ಷ್ಮೀಪತಿ ; ವಿಷ್ಣು : ನಿಜೋದಾರತೆಯೊಳ್ ಅನುಪಮಗುಣದೊಳ್ ಶ್ರೀಶಂ ಘನಮೆನೆ ಮಾಲೋಪಮಾನಭೇದಮಿದಕ್ಕುಂ (ಕವಿರಾ. ೩-೮೨); ವಿಮಲಶ್ರೀಶ ಸರಸ್ವತೀನಿಳಯ ಕೀರ್ತಿಶ್ರೀವಧೂಕಾಂತಗೌತಮಗೋತ್ರಾಂಬುಜಮಿತ್ರ (ಪಂಚತಂ. ೩೧೧-೧೪). [ಸಂ.]

ಶ್ರೀಶೈಲ (ನಾ). ಒಂದು ಪರ್ವತದ ಹೆಸರು ; IP ಈಗಿನ ಆಂಧ್ರಪ್ರದೇಶದ ಕರ್ನೂಲುಜಿಲ್ಲೆಯಲ್ಲಿರುವ ಒಂದು ಪುಣ್ಯಕ್ಷೇತ್ರ. ಪ್ರಸಿದ್ಧವಾದ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಲ್ಲಿಕಾರ್ಜುನಲಿಂಗವು ಸ್ಥಾಪಿತವಾಗಿರುವ ಮತ್ತು ಹದಿನೆಂಟು ಶಕ್ತಿಯೋಗಪೀಠಗಳಲ್ಲಿ ಒಂದಾದ ಭ್ರಮರಾಂಬಿಕೆ ಯಿರುವ ಪುಣ್ಯಕ್ಷೇತ್ರ : ಮಟ್ಟೆದಗವಡರ್ರಾಚಗವಡಯಿವರ ಕುಲದೇವರ್ರು ಶ್ರೀಶೈಲದ ಮಲ್ಲಿಕಾರ್ಜುನ (ಎಕ. XIV, ಗುಂಡ್ಲುಪೇ. ೧೪೮-೩೮; 1087 ?); ಶ್ರೀಶೈಲವಿಪಿನೋದಾತ್ತ ಭೂಮಿಯೊಳವಿರಳಸಮಾಧಿಸ್ಥನಾಗಿರಲು (ಬಸಪು. ೩೪-೪). [ಸಂ.]

ಶ್ರೀಸಂಗ (ನಾ). [ಜೈನ] ಜೈನಮುನಿಗಳ ಸಂಘಗಳಲ್ಲಿ ಒಂದು : ಶ್ರೀಮಾಸೇನರ್ಪ್ಪರಮಪ್ರಭಾವರಿಷಿಯರ್ಕ್ಕಟ್ಟಪ್ಪಿನಾ ವೆಟ್ಟದುಳ್ಳ್ರೀಸಂಗಂಗಳ ಪೇಟ್ಟ ಸಿದ್ಧಸಮಯನ್ತಪ್ಪಾದ ನೋನ್ತಿಮ್ಬಿನಿನ್ . . . ಪೂಜೆ[ಗೊಟ್ಟು]ಯೆ ಅವರ್ಸ್ವರ್ಗ್ಗಾಗ್ರ ಮಾನೇಱಿದಾರ್ (ಎಕ. II (R). ೩೦-೧; ಸು. 700). [< ಸಂ. ಶ್ರೀಸಂಘ]

ಶ್ರೀಸಂಜ್ಞ (ನಾ). ಲವಂಗ : "ಲವಂಗಂ, ದೇವಕುಸುಮಂ, ಶ್ರೀಸಂಜ್ಞಂ — ೩ ಲವಂಗದ ಹುವ್ವು, ಲವಂಗ" (ಸಿದ್ಧಾಂತಿ. ೨೦೭). [ಸಂ.]

ಶ್ರೀಸಾಮಾನ್ಯ (ನಾ). ಸಾಧಾರಣವರ್ಗದ ವ್ಯಕ್ತಿ ; ಜನಸಾಮಾನ್ಯ : ಶ್ರೀಸಾಮಾನ್ಯರ ಕತ್ತಿಯನ್ನು ಹೊರದೆಗೆದು . . . ಕ್ಷೌರಮಾಡಲು ಸಿದ್ಧಮಾಡಿಕೊಳ್ಳುತ್ತಿದ್ದ (ನನ್ನೂರು. ೨೩೦). [ಸಂ.]

ಶ್ರೀಸೂಕ್ತ (ನಾ). ಋಗ್ವೇದದ ಒಂದು ಮಂತ್ರ : ವಾದಿರಾಜರು . . . ಶ್ರೀಸೂಕ್ತಮಂತ್ರವನ್ನು ಪಠಿಸಿ ಸುವರ್ಣವೃಷ್ಟಿಯಾಗುವಂತೆ ಮಾಡಿದರು (ಕಭವಿ. ೧೪೫). [ಸಂ.]

ಶ್ರೀಹಸ್ತಿನಿ (ನಾ). ಒಂದು ಬಗೆಯ ಗಿಡ ; ಗುರುಗುಲು ಗಿಡ : "ಶ್ರೀಹಸ್ತಿನೀ, ಭೂರುಂಡೀ-೨ ಹಣ್ಣೇಗಿಡದ ಹೆಸರುಗಳು, ಗುರುಗಲಗಿಡ" (ಸಿದ್ಧಾಂತಿ. ೧೨೭). [ಸಂ. ಶ್ರೀಹಸ್ತಿನೀ]

ಶ್ರೀಹೊನ್ನೆ (ನಾ). ಒಂದು ಬಗೆಯ ಮರ : ಹೊಳೆಹೊನ್ನೆ, ಶ್ರೀಹೊನ್ನೆ, ಕೂವೆ, ಬೊಬ್ಬೆ (ಮೃಜಿಗಿ. ೧೬-೨೮೮). [ಶ್ರೀ + ಹೊನ್ನೆ (< ಪೊನ್ನೆ)]

ಶ್ರುಂಗಾರ (ನಾ). ಒಂದು ಬಗೆಯ ಆಯುಧ (?) : ಬಿಲ್ಲು ನಾರಾಚ ಗದೆ ಸೂಲ್ಲಿ ಚಕ್ರ ವಂಕ್ಕಿ ಚೂರ್ರಿ ಜಯಬಾಡಿ ಶ್ರುಂಗಾರ ತೊಡುಪೂ . . . ಮೊದಲಾದಾ ಬತ್ತೀಶಾಯುಧಾಶಕ್ತ (ಎಕ. XVI, ಗುಬ್ಬಿ. ೭೪-೨೨; ಸು. 1672). [?]

ಶ್ರುತ (ಗು). ೧. ಕೇಳಿದ ; ಆಲಿಸಿದ : ದೇವನಿಕಾಯದೊಡನೆ ನಾಮೆಲ್ಲಮರ್ಚಿಸಿ ಬಂದವಿದು ದೃಷ್ಟಮೆಂದಿಂತು ಶ್ರುತಾನುಭೂತದೃಷ್ಟಕಥೆಗಳಂ ತೋಱಿ ಜೀವಸಿದ್ಧಿಗೆಯ್ಯೆ (ಚಾವುಂಪು. ೧೫). ೨. ಹೆಸರುವಾಸಿಯಾದ ; ಪ್ರಸಿದ್ಧ : ಶ್ರೀಮದರ್ಹಣಂದಿ ತ್ರೈವಿದ್ಯದೇವರ್ ಶ್ರುತಗುರುಗಳುಮಪ್ಪ ಶ್ರೀಸಕಳಚನ್ದ್ರಭಟ್ಟಾರಕದೇವರ್ಗ್ಗೆ . . . ಮಾಡಿಸಿದ ನಿಶಿಧಿ (ಮೈಆರಿ. ೧೯೨೯, ೧೪-೨೧; 1236). (ನಾ). ೩. ಕೇಳಬಹುದಾದುದು : ಮರಳು ಕೌರವ ಜಂಗಮ ಸ್ಥಾವರದ ದೇಹಕೆ ನೆಳಲಹುದು ದಿನಕರನ ದೇಹಕೆ ನೆಳಲು ಶ್ರುತವೋ ದೃಷ್ಟವೋ ನಿನಗೆ (ಕುವ್ಯಾದ್ರೋ. ೧೫-೫೪). ೪. ಪ್ರಸಿದ್ಧವಾದುದು : ಪರಿಚಿತಸ್ಥಾನಂಗಳಂ ಮತ್ತೆ ವಿಶ್ರುತಗಳಂ, ಶ್ರುತಗಳಂ . . . ಪಣ್ಣೆಡೆಗಳಂ ಪುಡುಕಿದರ್ ಕುದಿವೆದೆಯೊಳಲೆದು ತೊಳಲಿ (ಶ್ರೀರಾಮಾ. ೨೫೬-೭೪೯). ೫. ಹೆಸರುವಾಸಿಯಾದವನು; ಕೀರ್ತಿವಂತ : ವೈಶ್ರವಣಂ ಶ್ರುತನಾದಂ ಭೂಪರಿನ್ನರಾರೆಂಬಿನೆಗಂ (ಮಲ್ಲಿಪು. ೩-೬). ೬. ವೇದ : ಸಲ ಶ್ರುತಂಗಳನೊರೆಯಲಾದುದು ಸುಳುಹಿನಿಂ (ಗಗತಾ. ೧೩-೪೭). ೭. [ಜೈನ] ಐದು ವಿಧವಾದ ಜ್ಞಾನಗಳಲ್ಲಿ ಒಂದು ; ಮತಿಜ್ಞಾನದಿಂದ ತಿಳಿದ ಅರ್ಥದ ಆಧಾರದಿಂದ ಬೇರೊಂದು ಅರ್ಥವನ್ನು ತಿಳಿಯುವ ಜ್ಞಾನ: ಮತಿಶ್ರುತಾವಧಿಮನಃಪರ್ಯಯಕೇವಲಜ್ಞಾನಭೇದದಿಂ ಪಂಚವಿಧಂ (ಆದಿಪು. ೧೦-೬೩ ವ) ; ಮತಿಶ್ರುತಾವಧಿಮನಃಪರ್ಯಯ ಕೇವಲಜ್ಞಾನಮೆಂದೈದು ತೆಱನಕ್ಕುಂ (ಶ್ರಾವಕಾ. ೪-೧೫). ೮. ಎಂಟು ವಿಧವಾದ ಜ್ಞಾನಗಳಲ್ಲಿ ಒಂದು : ಕುಮತಿ ಕುಶ್ರುತ ವಿಭಂಗ ಮತಿ ಶ್ರುತ ಅವಧಿ ಮನಃಪರ್ಯಯ ಕೇವಲಜ್ಞಾನವಿಕಲ್ಪದಿಂ ಜ್ಞಾನಮಷ್ಟವಿಧಂ (ತತ್ತ್ವಪ್ರ. ೧೭). [ಸಂ.]

ಶ್ರುತಕೀರ್ತಿ (ಗು). ೧. ಪ್ರಖ್ಯಾತವಾದ ; ಪ್ರಸಿದ್ಧವಾದ. (ನಾ). ೨. ಪ್ರಸಿದ್ಧನಾದವನು ; ಕೀರ್ತಿವಂತ : ಮದ್ಗುರುಮೂರ್ತಿ ಶಾಶ್ವತಬಹಳಶ್ರುತ [ಪಾಠಾಂ. ಸತ್, ಸಿತ] ಕೀರ್ತಿ ಎನ್ನೊಳಾವರಿಸಿರ್ದ ಪಟುಗರ್ವೋನ್ನತಿಯನಪಹರಿಸಿ . . . ಸಲಹಿದಿರಿ (ಬಸಪು. ೨೬-೬೫). ೩. [ಜೈನ] ಒಬ್ಬ ಮುನಿಯ ಹೆಸರು : ಆರ್ಯನುತ ಗೃಧ್ರಪಿಂಛಾಚಾರ್ಯಜಟಾಚಾರ್ಯವಿಶ್ರುತಶ್ರುತಕೀರ್ತ್ಯಾಚಾರ್ಯಪುರಸ್ಸರಮಪ್ಪಾಚಾರ್ಯ ಪರಂಪರೆಯ ಕುಡುಗೆ ಭವ್ಯೋತ್ಸವಮಂ (ಆದಿಪು. ೧-೧೨). [ಸಂ.]

ಶ್ರುತಕೇವಲಿ, ಶ್ರುತಕೇವಳಿ (ನಾ). [ಜೈನ] ಶ್ರುತಜ್ಞಾನ ಮತ್ತು ಕೇವಲಜ್ಞಾನಗಳನ್ನು ಪಡೆದವನು : ಶ್ರುತಕೇವಲಿ ವಿಷ್ಣುವ್ರತಿಪತಿಚರಣಂ ನಂದಿ ಪರಮಮುನಿ . . . ಭದ್ರಬಾಹುಚರಣಂ ಶರಣಂ (ಪಂರಾಮಾ. ೧-೮). **ಶ್ರುತಕೇವಳಿ** : ಚತುರ್ದಶಪೂರ್ವಧಾರಿಗಳಪ್ಪ ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರ್ (ವಡ್ಡಾರಾ. ೭೩-೨೬); ಶ್ರುತಕೇವಳಿಗಳು ಪಲಬರುಮತೀತರಾದಿಂ ಬಳಿಕ್ಕೆ ತತ್ಸಂತಾನೋಂನತಿಯಂ ಸಮಸ್ತಭದ್ರಬ್ರತಿಪ್ಪರ್ತ್ತಳೆದರು ಸಮಸ್ತವಿದ್ಯಾನಿಧಿಗಳ್ (ಎಕ. II (R), ೫೬೯-೧೭; 1124). [ಸಂ. ಶ್ರುತಕೇವಲಿನ್]

ಶ್ರುತಕೇವಳಿ 'ಶ್ರುತಕೇವಲಿ' ನೋ.

ಶ್ರುತಜ್ಞಾನ (ನಾ). ೧. [ಜೈನ] ಓದುವುದರಿಂದ ಮತ್ತು ಕೇಳುವುದರಿಂದ ಉಂಟಾಗುವ ಜ್ಞಾನ : ನೂಱಯ್ವತ್ತೆಂಟು ದಿವಸದಿಂ ಸಮೆಯೆ ನೋಂಪ ವಿಶ್ರುತಶ್ರುತಜ್ಞಾನಮುಮಂ ಯಥೋಚಿತವಿಧಿಯಿಂ ನೋಂತು (ಆದಿಪು. ೩-೪೦ ವ); ಮತಿಜ್ಞಾನದಿನಱಿತರ್ಥಮನಾಧಾರಂ ಮಾಡಿ ಮತ್ತೊಂದರ್ಥಮನಱಿವ ಶ್ರುತಜ್ಞಾನಮುಂ (ತಸೂವೃ. ೧೭). ೨. ಕುಮತಿ, ಕುಶ್ರುತ, ವಿಭಂಗ ಎಂಬ ಮೂರು ರೀತಿಯ ಅಜ್ಞಾನಗಳಲ್ಲಿ ಒಂದು : ಮತ್ಯಜ್ಞಾನಂ ಶ್ರುತಜ್ಞಾನಂ ವಿಭಂಗಜ್ಞಾನಮುಮೆಂಬ ಅಜ್ಞಾನತ್ರಿತಯಮುಂ (ಸುಕುಮಾ. ೮-೪ ವ). [ಸಂ.]

ಶ್ರುತಜ್ಞಾನಾವರಣೀಯ (ನಾ). [ಜೈನ] ಶ್ರುತಜ್ಞಾನವನ್ನು ಆವರಿಸುವ ಕರ್ಮ; ಶ್ರುತಜ್ಞಾನವನ್ನು ಉಂಟುಮಾಡುವ ಕರ್ಮ : ಮತಿಜ್ಞಾನಾವರಣೀಯಂ ಶ್ರುತಜ್ಞಾನಾವರಣೀಯಂ . . . ಕೇವಲಜ್ಞಾನಾವರಣೀಯಮೆಂಬೀ ಪ್ರಕಾರದೆ ಪಂಚಪ್ರಕಾರ ಜ್ಞಾನಾವರಣೀಯಮಂ (ಸುಕುಮಾ. ೩-೩೯ ವ). [ಸಂ.]

ಶ್ರುತದುಷ್ಟ (ನಾ). [ಕಾವ್ಯಮೀ] ಕಾವ್ಯದೋಷಗಳಲ್ಲಿ ಒಂದು ; ಕೇಳಲು ಅಹಿತವಾಗಿರುವುದು: ಶ್ರುತದುಷ್ಟಮರ್ಥದು(ಷ್ಟಂ) ಶ್ರುತಿಕಷ್ಟಂ ಕಲ್ಪನೋಕ್ತಿಕಷ್ಟ (ಮು)ಮೆಂದೀ . . . ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ (ಕವಿರಾ. ೧-೬೨). [ಸಂ.]

ಶ್ರುತದೇವತೆ (ನಾ). ವಿದ್ಯೆಯ ಅಧಿದೇವತೆ ; ಸರಸ್ವತಿ : ಶ್ರುತದೇವತೆಯ ಚತುರ್ಭುಜದಂಡದ ಚತುರನುಯೋಗದ . . . ಸುಸಾರಸಮುಚ್ಚಯಮಂ ಕ್ಷಿತಿಗೆಯ್ದೆ ಪ್ರಕಟಂಮಾಡಿ (ಕುಮುರಾ. ೧-೧೮). [ಸಂ. ಶ್ರುತದೇವತಾ]

ಶ್ರುತದೇವಿ (ನಾ). = ಶ್ರುತದೇವತೆ : ಶ್ರುತದೇವೀವಚನಾಮೃತಂ ಶ್ರುತಕಥಾಳಾಪಂ ಶ್ರುತಸ್ಕಂಧಸಂತತಿ . . . ಆರೂಢಸರ್ವಜ್ಞಭೂಪತಿಗೊಲ್ದಾಗಳುಮಿಾಗೆ ಮಂಗಳಮಹಾಶ್ರೀಯಂ (ಪಂಪಭಾ. ೧೪-೩೨); ರತಿವನಿತೆಗೆ ವಿಧವತೆಯಂ ಶ್ರುತದೇವಿಗೆ ಚತುರವೃತ್ತಿಯಂ ಮಾಟ್ಟ ತಪಶ್ಶ್ರುತಮೆರಡುಂ ನಿರುಪಮಮಿಾ ಕ್ಷಿತಿಯೊಳ್ (ಚಂದ್ರಪು. ೧-೩೫). [ಸಂ. ಶ್ರುತದೇವೀ]

ಶ್ರುತಪಂಚಮಿ (ನಾ). [ಜೈನ] ಜ್ಯೇಷ್ಠಶುದ್ಧ ಪಂಚಮಿಯಂದು ಮಾಡುವ ಒಂದು ಬಗೆಯ ವ್ರತ ; ಶಾಸ್ತ್ರಗ್ರಂಥಗಳನ್ನು ಪೂಜೆಮಾಡುವ ಹಬ್ಬ : ದೇವಣನು ಸಿದ್ಧಚಕ್ರದ ನೋಂಪಿ ಶ್ರುತಪಂಚಮಿ ನೋಂಪಿಗೆ ಮಾಡಿಸಿದ ಪಂಚಪರಮೇಷ್ಠಿಗಳ ಪ್ರತಿಮೆ (ಕಇಆ. ೭೩-೧೧-೪; 14ನೆಯ ಶತ ?). [ಸಂ. ಶ್ರುತಪಂಚಮೀ]

ಶ್ರುತಪಡಿಸು (ಕ್ರಿ). ಕೇಳುವಂತೆ ಮಾಡು ; ತಿಳಿಸು : ಶಿಕ್ಷಣಕ್ಷೇತ್ರದಲ್ಲಿ ಗೋಚರಿಸುವ ಫಲಾಫಲಗಳನ್ನು ಸಮಾಜಕ್ಕೂ ಸಮಾಜದ ಮನೋಭಾವ ಮತ್ತು ಆಶಯಗಳನ್ನು ಶಿಕ್ಷಕವರ್ಗಕ್ಕೂ ಶ್ರುತಪಡಿಸುವುದು (ಶಿಕ್ಷದ. ೭೫೭). [ಶ್ರುತ + ಪಡಿಸು]

ಶ್ರುತಪಾರಗ (ನಾ). ವೇದವಿದ್ಯಾಪಾರಂಗತ : ಒಡಮೆಯನರ್ಥಿಗಿತ್ತೆಂ . . . ಈಗಳೊಂದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂಬಡಿಸುವೆಂ . . . ಕುಂಭಸಂಭವಾ (ಪಂಪಭಾ. ೨-೪೬). [ಸಂ.]

ಶ್ರುತಮೂರ್ತಿ (ನಾ). ಜ್ಞಾನವೇ ಆಕಾರಗೊಂಡಂತಿರುವವಳು ; ಸರಸ್ವತಿ : ಶ್ರುತಮೂರ್ತಿಯಾಗಿಯುಂ ರುಚಿರತನು ಕರಂ ಬಿಳಿಯಳಾಗಿಯುಂ ಚತುರವಚೋನ್ವಿತೆ . . . ವಾಗ್ದೇವಿ ಕೂರ್ತು ಮಾಟ್ಕೆಮಗಱಿವಂ (ಜಾತಕಿ. ೧-೨). [ಸಂ.]

ಶ್ರುತವಿದ್ಧ (ನಾ). ಇನ್ನೊಬ್ಬರಿಂದ ಕೇಳಿ ತಿಳಿದುಕೊಂಡು ಮಾಡಿದ ಚಿತ್ರಣ : ಶ್ರುತವಿದ್ಧಾತ್ಮವಿದ್ಧಪರವಿದ್ಧಮೆಂಬ ವಿದ್ಧಪದ್ಧತಿಯೊಳಂ . . . ಅಪೂರ್ವಭಿತ್ತಿಯಂ ತಳೆದು (ಚಂದ್ರಪು. ೧೫-೬೯ ವ). 'ಶ್ರುತಿವಿದ್ಧ' ಪರಾ. [ಸಂ.]

ಶ್ರುತವಿಹೀನ (ನಾ). ಶಾಸ್ತ್ರಗಳನ್ನು ತಿಳಿಯದವನು : ಇವರೊಳೊರ್ವನಂ ಮದೀಯ ಭುಜಬಲಾವಷ್ಟಂಭದಿಂದಂಭೋಧಿವರಂ ನಿಮಿರ್ದ ಸಕಲವಸುಂಧರಾವಳಯಮಂ ರಕ್ಷಿಸುವಂತು ಮಾಟ್ಟೊಡಿವರ್ ಶ್ರುತವಿಹೀನರ್ (ಪಂಚತಂ. ೧೭-೫). [ಸಂ.]

ಶ್ರುತವಿಳಾಸ (ನಾ). ಶಾಸ್ತ್ರಗಳ ಪಾಂಡಿತ್ಯದಿಂದ ಶೋಭಿಸುವವನು ; ವಿದ್ಯಾವಂತ : ವಸುಧೆಯೊಳೊಳ್ಪುವೆತ್ತ ನರರೇಮಱಿವನ್ನರೆ . . . ಗುಣವ್ಯಸನರೆ ನೀಂಬರಂ ಶ್ರುತವಿಳಾಸರೆ ನೀಂಬರವೇನುದಾತ್ತರೇ (ಪುಷ್ಪಸ್ತ. ೧-೭೬).

[ಸಂ. ಶ್ರುತವಿಲಾಸ]

ಶ್ರುತಸ್ಕಂಧ (ನಾ). [ಜೈನ] "ತೀರ್ಥಂಕರರ ದಿವ್ಯಧ್ವನಿಯನ್ನು ಹೃದಯದಲ್ಲಿ ಧರಿಸಿಕೊಂಡು ಗಣಧರರು ರಚಿಸಿದ ದ್ವಾದಶಾಂಗರೂಪದ ಸೂತ್ರ" (ಆದಿಪು. ಜೈನಪಾರಿಭಾಷಿಕಶಬ್ದಕೋಶ) : ನೆವಂ ತಾಳ್ದಿದಪಾಸ್ತದುರ್ನಯತಮೋಬಂಧಂ ಶ್ರುತಸ್ಕಂಧಮಾದಱಿವಿಂದಂ ಗಣನಾಯಕರ್ ಸಮಱೆ (ಆದಿಪು. ೧-೩೯). [ಸಂ.]

ಶ್ರುತಹೀನ (ನಾ). = ಶ್ರುತವಿಹೀನ : ಶ್ರುತಹೀನರಂತೆ ಕೆಮ್ಮನೆ ಕೃತಘ್ನರಾದಂದು ನಮಗಿಹಂ ಪರಮುಂಟೇ (ಸುಕುಮಾ. ೨-೬೬). [ಸಂ.]

ಶ್ರುತಾನುಗಂತ (ನಾ). ಒಂದು ಬಗೆಯ ತಂತೀವಾದ್ಯ : ದುಕ್ಕಡಿ ಗೀತಾನುಗಂತ ಶ್ರುತಾನುಗಂತ ಉಭಯಾನುಗಂತ ವೀಣಾನುಗಂತವೆಂಬೈದು ತೆಱನಾಗಿಹುದು (ವಿವೇಕ. ೧೯೦). 'ಗೀತಾನುಗಂತ' ಪರಾ. [< ಸಂ. ಶ್ರುತಾನುಗಂತೃ]

ಶ್ರುತಾರ್ಥಾಪತ್ತಿ (ನಾ). [ತರ್ಕಶಾ] ಎರಡು ವಿಧವಾದ ಅರ್ಥಾಪತ್ತಿಗಳಲ್ಲಿ ಒಂದು ; ಒಂದು ವಿಷಯವನ್ನು ಕೇಳಿ, ಅದರಿಂದ ಮತ್ತೊಂದು ವಿಷಯವನ್ನು ಕಲ್ಪಿಸುವುದು : ಬದುಕಿರ್ದ ದೇವದತ್ತನು ಗೃಹದೊಳಗಿಲ್ಲವೆಂದೊಡೆ ಕೇಳಿ ಶ್ರುತಮಾದ ತದ್ವಚನದಿಂ ಸ್ವಾಸ್ಥಾಂತರದೊಳರ್ಥನೆಂದು ತಿಳಿವುದೇ ಶ್ರುತಾರ್ಥಾಪತ್ತಿ ಪ್ರಮಾಣ ವೆನಿಸುವುದು (ವಿವೇಕ. ೨೧); ಅರ್ಥಾಪತ್ತಿಯು ದೃಷ್ಟಾರ್ಥಾಪತ್ತಿ ಮತ್ತು ಶ್ರುತಾರ್ಥಾಪತ್ತಿ ಎಂದು ಎರಡು ವಿಧ (ಭಾತತ್ತ್ವ. ೬೦೨). 'ದೃಷ್ಟಾರ್ಥಾಪತ್ತಿ' ಪರಾ. [ಸಂ.]

ಶ್ರುತಿ (ನಾ). ೧. ಕೇಳುವಿಕೆ ; ಶ್ರವಣ. ೨. ಕೇಳಿದುದು : ಶ್ರುತಿ ಎಂದರೆ ಕೇಳಿದ್ದು. ಸ್ಮೃತಿ ಎಂದರೆ ಕೇಳಿದ್ದನ್ನು ತಲೆಯಲ್ಲಿ ತಾಳಿದ್ದು (ಭಾರದ. ೧೨೦). ೩. ಕಿವಿ ; ಕರ್ಣ : ಶ್ರುತಿಸೌಖ್ಯಾವಹವಲ್ಲಕೀಕ್ಷಣಿತದೊಳ್ ಕರ್ಪೂರಪಾಲೀವಿಮಿಶ್ರಿತ ತಾಂಬೂಲರಸೋತ್ಕಟ ಪ್ರಮದದೊಳ್ . . . ಸಿದ್ಧದಂಪತಿಗಳ್ ಕ್ರೀಡಿಸುತಿರ್ಪರ್ (ಆದಿಪು. ೯-೧೧೮); ಶ್ರುತಿಯಂ ಭೇರೀರವಮಶ್ರುತಪೂರ್ವಂ ತಾಗೆ ಜಾನಪದಜನಮನಿತುಂ ಪ್ರತಿಹತಮಾದತ್ತು (ಪಾರ್ಶ್ವಪು. ೧೧-೬೯). ೪. ಶಬ್ದ ; ಧ್ವನಿ. ೫. ಸುದ್ದಿ ; ವಾರ್ತೆ. ೬. ವೇದ : ವಿದ್ಯಾವ್ರತತಿಗೆ ಸ್ವಯಂವರಪತಿಯುಂ ಸಮಸ್ತಶ್ರುತಿಗಳಿಗೆ ಸಂಕೇತ ನಿಕೇತನಮುಮೆನಿಸಿದಂ (ಕಾದಂಬಾ. ೭೩೯); ಶ್ರುತಿಗಗಮ್ಯದ್ವಾದಶಾಂತ್ಯಸಪ್ರತಿಮಮಹಿಮಂಗೆ ಪ್ರತಿಯುಂಟೇ (ಬಸವ. ೫೨೯); ಶ್ರುತಿಪೌರಾಣದಾಗಮಸಿದ್ಧಿದಾಯಕಿಯೆ . . . ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ (ಕುಮಾಅ. ೧-೫). ೭. (ಆಲಂ) ವೈವಿಧ್ಯವಿಲ್ಲದುದು ; ಒಂದೇ ರಾಗ ; ಏಕನಾದ : ಅಳುವಿನ ಶ್ರುತಿ ಅವನಿಗೆ ಏಕನಾದವಾಗಿತ್ತು (ಗೋಪಿಚ. ೨); ಹೆಂಗಸರ ಮಾತಿಗೆ . . . ರಾಗ ಯಾವುದಾದರೂ ಶ್ರುತಿ ಒಂದೇ (ಹೊಸಕೃ. ೧೮). ೮. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ : "ಶ್ರುತಿ ಯುಗಾಂಬುಧಿ ನಾಲ್ಕು" (ಮಂಗರಾ. ೧೦೩-೮). ೯. [ಸಂಗೀತ] ಸ್ವರದ ಅಂಶ: 'ಶ್ರುತಿಗಮಕ' ಪರಾ. ೧೦. ಗಾಯನವಾದನ ಪ್ರಸ್ತುತಿಗೆ (ಪ್ರಯೋಗಕ್ಕೆ) ಆಧಾರವೆಂದು ಇಟ್ಟುಕೊಳ್ಳುವ ಸ್ವರ : ಶ್ರುತಿಸ್ಫೂರ್ತಿ ಕಮ್ಮನೆ ಕಸ್ತೂರಿಯ ಕಂಪಿನಂತೆ ಕವಿಗುಂ ನಾದಸ್ವರಪ್ರಕ್ರಮಂ ಘನರತ್ನಾವಳಿಯಂತೆ ತೋಱೆ ಚಿಕದೇವಂ ಬಾಜಿಕುಂ ಬೀಣೆಯಂ (ಚಿಕದೇ. ೪-೧೧೩); ಷಡ್ಜ ಮಧ್ಯಮ ಪಂಚಮಗಳಿಗೆ ನಾಲ್ಕು ನಾಲ್ಕು ಶ್ರುತಿಗಳ ಅಂತರವಿರುವ 'ಖರಹರಪ್ರಿಯ' ರಾಗದಿಂದ ಅಭ್ಯಾಸವನ್ನಾರಂಭಿಸುವುದು ಸ್ವಲ್ಪ ಕಷ್ಟ (ಹೇಮಕೂ. ೧೦೪).

ಶ್ರುತಿಮಾಡು = ಗಾಯನವಾದನ ವ್ಯವಹಾರದಲ್ಲಿ ಆಧಾರವೆಂದು ಇಟ್ಟುಕೊಂಡ ಸ್ವರದೊಡನೆ ವಾದ್ಯಗಳ ಧ್ವನಿಯನ್ನು ಒಂದುಗೂಡಿಸು : ಈ ಹಾಡಿಗೆಂದೆ ಶ್ರುತಿಮಾಡಿಟ್ಟ ವೀಣೆ — ಕೃಷ್ಣೆ, ಕಾವೇರಿ, ಪರದೆ, ತುಂಗಭದ್ರೆ! (ನಲಮು. ೩-೨೫). [ಸಂ.]

ಶ್ರುತಿಕಟು (ನಾ). [ಕಾವ್ಯಮೀ] ಒಂದು ಬಗೆಯ ಪದದೋಷ ; ಪರುಷಾಕ್ಷರಗಳಿಂದ ಕೂಡಿ ಕೇಳುವುದಕ್ಕೆ ಕರ್ಕಶವಾಗಿರುವ ಪದ : ದೋಷವುಳ್ಳ ಪದಗಳನ್ನು — ೧. ಶ್ರುತಿಕಟು . . . ೧೩. ವಿರುದ್ಧಮತಿಕೃತ್ ಎಂದು ವಿಭಾಗಿಸಬಹುದು . . . ಶ್ರುತಿಕಟು — ಪರುಷಾಕ್ಷರಗಳಿಂದ ಕೂಡಿ ಕಿವಿಗೆ ಅಶ್ರಾವ್ಯವಾಗಿ ಇರುವುದು (ಕೈಪಿಡಿ. ೨೨೭). [ಸಂ.]

ಶ್ರುತಿಕಠೋರ (ನಾ). [ಕಾವ್ಯಮೀ] ವಾಕ್ಯದೋಷಗಳಲ್ಲಿ ಒಂದು ; ಕೇಳಲು ಕರ್ಕಶವಾಗಿರುವ ಪದಗಳಿಂದ ಕೂಡಿದ ವಾಕ್ಯ : ಅನರ್ಥಕ, ಶ್ರುತಿಕಠೋರ . . . ಖಂಡಿತ ವ್ಯಸ್ತಸಂಬಂಧ ಅಸಮ್ಮತ ಅಪಕ್ರಮ ಛಂದೋನೀತಿ ಯತಿಭ್ರಷ್ಟ ದುಷ್ಟ ಅಸತ್ಕ್ರಿಯೆಂಬೆಂಟು ವಾಕ್ಯದೋಷಮಿಲ್ಲದೆ (ವಿವೇಕ. ೧೮೦). [ಸಂ.]

ಶ್ರುತಿಕಷ್ಟ (ನಾ). ೧. [ಕಾವ್ಯಮೀ] ನಾಲ್ಕು ವಿಧವಾದ ಕಾವ್ಯದೋಷಗಳಲ್ಲಿ ಒಂದು ; ಕೇಳುವುದಕ್ಕೆ ಕರ್ಕಶವಾಗಿರುವುದು: ಶ್ರುತಿದುಷ್ಟಮರ್ಥದುಷ್ಟಂ ಶ್ರುತಿಕಷ್ಟಂ ಕಲ್ಪನೋಕ್ತಿ ಕಷ್ಟಮುಮೆಂದೀ ಕೃತಕೃತ್ಯಮಲ್ಲವಲ್ಲಭಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ (ಕವಿರಾ. ೧-೬೧). ೨. [ವ್ಯಾಕ] ಕರ್ಣಕಠೋರವಾಗಿರುವಂತೆ ಅಕ್ಷರಗಳನ್ನು ಕೂಡಿಸುವಿಕೆ : ಪದಂಗಳೆರಡಱಂತರಾಳರೇಫಗಳಂ ಕೂಡಿದಂತೆ ಶ್ರುತಿಕಷ್ಟಮಾಗೆ ಸಂಧಿಯಂ ಮಾಡಲಾಗದು . . . ಶ್ರುತಿಕಷ್ಟಕ್ಕೆ — 'ವಿದ್ವಿಟ್ಸ್ತ್ರೀಯರೆಂದು' ಮಾಡಲಾಗದು (ಶಮದ. ೬೩ ಪ್ರಯೋ) ; ಕನ್ನಡದ ಕೇಶಿರಾಜನು ಶ್ರುತಿದುಷ್ಟ ಮತ್ತು ಶ್ರುತಿಕಷ್ಟಗಳನ್ನು ಸಂಧಿದೋಷಗಳಾಗಿಯೇ ಹೇಳಿದನು (ಭಾಷಾಶಾ. ೨೩). [ಸಂ.]

ಶ್ರುತಿಗಮಕ (ನಾ). [ಸಂಗೀತ] ಸ್ವರಾಂಶವನ್ನು ಅತ್ಯಂತ ಸೂಕ್ಷ್ಮವಾಗಿ ಇಂಪಾಗಿರುವಂತೆ ಕಂಪಿಸುವುದು : ಸ್ಫುರಿತ, ಪ್ರಮಿತ, ದೀರ್ಘ, ಲಲಿತೋಚ್ಚದ . . . ಕೋಮಲವೆಂಬಿವಿಪ್ಪತ್ತರಡೇ ಶ್ರುತಿಗಮಕಂಗಳು (ವಿವೇಕ ೨೪೮). [ಸಂ.]

ಶ್ರುತಿಗರೆ (ಕ್ರಿ). ವೇದಘೋಷಮಾಡು ; ವೇದಮಂತ್ರವನ್ನು ಹೇಳು : ವಸುಧೆಗೊಡೆಯ ರಾಮ ಹಸೆಗೇಳೆನುತಲಿ ಋಷಿಗಳೆಲ್ಲರು ಶ್ರುತಿಗರೆದರಾಗ (ಕರ್ನಾಕ. ೨೬೯). [ಶ್ರುತಿ + ಕರೆ]

ಶ್ರುತಿಗಾನ (ನಾ). ವೇದದ ಪಠನ.

ಶ್ರುತಿಗಾನೈಕಸುಖ = ವೇದಪಠನದಲ್ಲಿ ಆನಂದಿಸುವವನು ; ಬ್ರಹ್ಮ : ಇರ್ದಂ ಜಗತ್ಪತಿಯೊಡ್ಡೋಲಗದೊಳ್ ಚತುರ್ಮುಖನತರ್ಕ್ಯಬ್ರಹ್ಮತೇಜಶ್ಶಿಖಂ ಶ್ರುತಿಗಾನೈಕಸುಖಂ ನಮಚ್ಛತಮಖಂ ವಾಣೀವಧೂಟೀಸಖಂ (ಜಗಮ. ೧-೨೬). [ಸಂ.]

ಶ್ರುತಿಗೂಡು (ಕ್ರಿ). [ಸಂಗೀತ] ಆಧಾರವೆಂದು ಇಟ್ಟುಕೊಂಡ ಸ್ವರದೊಡನೆ ಹೊಂದಿಕೊಳ್ಳು,— ಏಕೀಭವಿಸು : ಪಾಡುತವೆ ತಾಯ್ಮೆಚ್ಚುತಿರೆ ಶ್ರುತಿಗೂಡಿ ಮಱೆದುಂಬಿಗಳು (ಸಾಳ್ವಧಾ. ೩-೯); ಪರಿಸರದೊಳ್ ಸಂಚುವೆತ್ತಿಂಚರದಿಂ ತನ್ನ ಚೆನ್ನ ಕಿನ್ನರಿಯೊಳ್ ಶ್ರುತಿಗೂಡಿ ಪಾಡುವ ಕಿನ್ನರಿಯ ಸರಸಸಂಗೀತಮಂ ಕೇಳ್ದು (ಶಬಶಂ. ೩-೩೫ ವ); ಶ್ರುತಿಗೂಡಿದಾಗ ಹೊಮ್ಮುವದು ಹಾಡಿನ ಲಹರಿ, ಗಾಳಿಯ ಚೆನ್ನ ಮೇಲೆ ಮೋಡದ ಸವಾರಿ (ನಲಮು. ೩೨-೨೪). [ಶ್ರುತಿ + ಕೂಡು]

ಶ್ರುತಿಗೊಳಿಸು (ಕ್ರಿ). [ಸಂಗೀತ] ಗಾಯನವಾದನ ವ್ಯವಹಾರದಲ್ಲಿ ಆಧಾರವೆಂದು ಇಟ್ಟುಕೊಂಡ ಸ್ವರದೊಡನೆ ವಾದ್ಯಗಳ ಧ್ವನಿಯನ್ನು ಒಂದುಗೂಡಿಸು : ಅವರ ಶಿಷ್ಯರು ವಾದ್ಯಗಳನ್ನು ಶ್ರುತಿಗೊಳಿಸಿ ಗಾಯನಕ್ಕೆ ಸಿದ್ಧಪಡಿಸಿಟ್ಟಿದ್ದರು (ರೂಢಿ). [ಶ್ರುತಿ + ಕೊಳ್ + - ಇಸು]

ಶ್ರುತಿಪಥ (ನಾ). ೧. ಶಬ್ದವು ಪ್ರವೇಶಿಸುವ ಮಾರ್ಗ ; ಕಿವಿ : ಮಣಿಮೇಖಲಾರವಂ ಶ್ರುತಿಪಥಮಂ ಪಳಂಚೆ (ಪಂಡಾಮಾ. ೩-೫೧); ಈ ದಾರುಣದ ವಾಣಿ ಶ್ರುತಿಪಥ ಮಂಟುವನ್ನೆಗಂ ಹಾ ಕಷ್ಟಮೆನುತ . . . ಬನ್ನಬಡುವಯ್ಯನಂ ಪಿಡಿದೆತ್ತಿ ಸಂತೈಸಿ (ವಂಕಾರಾ. ೨-೮-೨೨). ೨. ಸಂಪ್ರದಾಯ. [ಸಂ.]

ಶ್ರುತಿಪುರುಷ (ನಾ). ವೇದಗಳ ಒಡೆಯ ; ವೇದಪುರುಷ : ಶ್ರುತಿಪತಿ ಗೋಪತಿ ಲಕ್ಷ್ಮೀಪತಿ . . . ಆದಿಪುರುಷಂ ಶ್ರುತಿಪುರುಷನಿರಲ್ಕೆ ಮಿಕ್ಕ ಪುರುಷರಪೂಜ್ಯರ್ (ಜಗಮ. ೧೭-೧೭). [ಸಂ.]

ಶ್ರುತಿಪೂರ (ನಾ). ೧. ಕಿವಿಯ ಆಭರಣ ; ಕರ್ಣಪೂರ : ಸ್ತುತಿಗೆಯ್ದಂ ಕೃತಪಂಚಮ ಶ್ರುತಿ ಪುರಾಣವ್ಯಾಸನಂ ವ್ಯಾಸನಂ ಕೃತಿಲೋಕಶ್ರುತಿಪೂರಕಲ್ಪಕವಿತಾಗೀರ್ಬಾಣನಂ ಬಾಣನಂ (ಜಗಮ. ೧-೮). ೨. ಕಿವಿಗೆ ಇಂಪಾದುದು. ೧, ೨ : ವಿಶ್ರುತ ತೀರ್ಥ ಕೃತ್ಪುರಾಣಂ ಶ್ರುತಿಪೂರಮೆನಲ್ ಕರಂ ಸುತಾರ್ಥಿನಿ ಕೇಳ್ಪಳ್ (ಪುಷ್ಪಸ್ತ. ೩-೧೧೨). [ಸಂ.]

ಶ್ರುತಿಪೆಟ್ಟಿಗೆ (ನಾ). ಹಾಡುವಾಗ ಆಧಾರಶ್ರುತಿಗಾಗಿ ಉಪಯೋಗಿಸುವ, ಒಂದು ಬಗೆಯ ವಾದ್ಯ : ಆಧಾರಷಡ್ಜವನ್ನು ತಿಳಿಯಲು ತಂಬೂರಿಯನ್ನೋ ಶ್ರುತಿಪೆಟ್ಟಿಗೆಯನ್ನೋ ಇಟ್ಟುಕೊಂಡಿರುವರಷ್ಟೆ ? (ಭೌತವಿ. ೧೨೧). [ಶ್ರುತಿ + ಪೆಟ್ಟಿಗೆ]

ಶ್ರುತಿಬಾಹಿರ (ನಾ). ವೇದಗಳನ್ನು ನಂಬದವನು : ಜೀವಿಗಳು ಶ್ರುತಿಬಾಹಿರರುಗಳ್ ತಾವಿಹಗೆ ಪಶುಪತಿಗಳಹರೇ ಭಾವಿಸಲು ಪ್ರತ್ಯಕ್ಷಮಾಗಿದು ತೋಱುತಿರ್ದುದಲಾ (ಬಸವು. ೫೪-೭). [ಸಂ.]

ಶ್ರುತಿಮಾರ್ಗ (ನಾ). ವೇದೋಕ್ತವಾದ ಸಂಪ್ರದಾಯ : ಶ್ರುತಿ[ಪಾಶಾ. ಮತ] ಮಾರ್ಗಂ ಬಿಡದಾತ ಸುವ್ರತಿ (ಸೂಮೇಶ. ೮); ಕಲಿಯುಗದ ವ್ಯಾಬಲ್ಯದಿಂದ ಶ್ರುತಿಮಾರ್ಗಗಳು ನಿರ್ವೀರ್ಯವಾಗುತ್ತಾ ಬಂದಾಗ . . . ಆಗಮೋಕ್ತ ಕರ್ಮಾನುಷ್ಠಾನವೇ ಪ್ರಶಸ್ತವೆನಿಸುವುದು (ಭಾರದ. ೬೮). [ಸಂ.]

ಶ್ರುತಿರಸಾಯನ (ನಾ). ಕಿವಿಗೆ ಆಪ್ಯಾಯಮಾನವಾದುದು : ಕರ್ಣರಸಾಯನ: ಪಾರ್ಥ ಹೇಳ್ಕೆ ಮಾತಿನಾಳಾಪವನು ಕೇಳುವೆ ಶ್ರುತಿರಸಾಯನವ (ಕುಮಾಸಂ. ೬-೧೨). [ಸಂ.]

ಶ್ರುತಿವಚನ (ನಾ). ವೇದೋಕ್ತಿ : ಪಿತೃಸಮೋ ಭ್ರಾತಾ ಎನಿಪ್ಪುದು ಶ್ರುತಿವಚನವು (ಕುಮಾಕ. ೧೭-೨೦); ಬಿಂಕವೇ ಶ್ರುತಿವಚನ ಸಮ್ಮತಿ (ನಗಶಾ. ೧೩-೪೬). [ಸಂ.]

ಶ್ರುತಿವಿದ್ಧ (ನಾ). = ಶ್ರುತವಿದ್ಧ : ರಸಚಿತ್ರಧೂಳೀಚಿತ್ರದೋಚೆಯುಮಂ ಶ್ರುತಿವಿದ್ಧ ಮಾತ್ಮವಿದ್ಧಂ ಪರವಿದ್ಧಮೆಂಬ ವಿದ್ಧಪದ್ಧತಿಯುಮಂ ಲಾಕ್ಷಾರಸರೇಖಾಶುದ್ಧಿಯುಮಂ . . . ನೋಡಿ (ಮಲ್ಲಿಪು. ೫-೪೨). [ಸಂ.]

ಶ್ರುತಿವಿರಸಪದ (ನಾ). ಕೇಳಲು ಕರ್ಕಶವಾದ ಪದ : ಶ್ರುತಿವಿರಸಪದ ಕ್ಷೇಪಸ್ಥಿತಿಕಷ್ಟಂ ಗ್ರಾಮ್ಯಶಬ್ದಸಂದರ್ಭಸಮನ್ವಿತಮುಮಸಭ್ಯಾರ್ಥಕೃತಿಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ (ಕಾವ್ಯಾವ. ೪೪೩). [ಸಂ.]

ಶ್ರುತಿಶರಣ (ನಾ). ವೇದಾದಿ ಶಾಸ್ತ್ರಗಳ ಹೇಳಿಕೆಯನ್ನು ಪಾಲಿಸುವವನು,-ಅನುಸರಿಸುವವನು : ವ್ಯಾಕರಣಾಧಿಕರಣವು ಶ್ರುತಿಮೂಲಕವು ; ಶ್ರುತಿಶರಣರು ವ್ಯಾಕರಣಾಧಿಕರಣ ಪ್ರಕಾರ ನಡೆಯಬೇಕೆಂದು ಸಿದ್ಧಾಂತ (ಬೊಂದಸಾ. ೧೭೬). [ಸಂ.]

ಶ್ರುತಿಶೂನ್ಯ (ನಾ). ೧. ಶ್ರವಣಶಕ್ತಿಯನ್ನು ಕಳೆದುಕೊಂಡವನು ; ಕಿವುಡ. ೨. ಕಿವಿಗಳಿಲ್ಲದುದು ; ಹಾವು. ೧, ೨ : ನಿಜಶ್ರುತಿಶೂನ್ಯವಾಗಿ ಮಾರುತಭುಗುವಲ್ತು ದಂಡಧರನಾಗಿ ದಿಟಂ ಜವನಲ್ತು . . . ಎನೆ ಪೃದ್ಧನಿದೇಂ ವಿರುದ್ಧನೋ (ಪುಪ್ರಪು. ೧೩-೩೫). [ಸಂ.]

ಶ್ರುತಿಸಹ್ಯ (ಗು). ಕೇಳಲು ಹಿತವಾದ ; ಶ್ರವಣಯೋಗ್ಯವಾದ : ಗಮಕಸಮಾಸದಿಂ ಅಱಳುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ . . . ಯತಿವಿಲಂಘನದಿಂದರಿದಲ್ತೆ ಕನ್ನಡಂ (ಶಮದ. ೫, ಸಮುಪ್ರಿವಾಕ್ಯಂಗಳ್). [ಸಂ.]

ಶ್ರುತಿಸುಭಗ (ನಾ). ಕೇಳಲು ಇಂಪಾದುದು; ಕರ್ಣಾನಂದವಾದುದು: ಅತಿನಿಪುಣರಱಿಗೆ ತೋರ್ಪಂ ಶ್ರುತಿಸುಭಗಮೆನಿಪ್ಪ ರೂಪಕಾಲಂಕೃತಿಯಂ (ಕವಿರಾ. ೩-೧೧). [ಸಂ.]

ಶ್ರುತಿಹೀನ (ನಾ). [ಸಂಗೀತ] ಸ್ವರದೋಷಗಳಲ್ಲಿ ಒಂದು : ಕಂಪಿತ ಚಿಂತಿತ . . . ಶ್ರುತಿಹೀನ [ಪಾಶಾಂ. ವಿವರ್ಜಿತ] ಕಾಕಸ್ವರ ಪ್ರಯಾಣ ಅಸಮಾನ ತಾಳವಿಹೀನವೆಂಬ ಪದಿನೈದು ಸ್ವರದೂಷಣಂ ಪೊರ್ದದೆ ಪಾಡಿ ಮೋಹಿಸುವ ಗಾಯಕರಿಂ (ವಿವೇಕ. ೨೫೬). [ಸಂ.]

ಶ್ರುತ್ಯರ್ಥ (ನಾ). ವೇದಗಳಲ್ಲಿನ ಅರ್ಥ ; ಶಾಸ್ತ್ರಗಳಲ್ಲಿನ ಅಭಿಪ್ರಾಯ : ನೂತನಶ್ರುತ್ಯರ್ಥ ನುಡಿಗಲಿತುದೋ ಘನಸ್ವಾತಂತ್ರ್ಯವೃತ್ತಿ ಬೋಧಿಸತೊಡಗಿತೋ ಎಂಬ ಚಾತುರ್ಯದಿಂದಿರ್ದ ಮುನಿನಾಥನಂ ಕಂಡು (ಪಚಕಾ. ೫-೬೭); ಶ್ರವಣ ಎಂದರೆ ಸತ್ಸಂಪ್ರದಾಯಜ್ಞರಾದ ಗುರುಗಳ ಉಪದೇಶದಿಂದ 'ಶ್ರುತ್ಯರ್ಥ ಇದೇ ಸರಿ, ಮತ್ತೊಂದಲ್ಲ' ಎಂದು ನಿರ್ಧರಿಸುವುದು (ಭಾತತ್ತ್ವ. ೯೧). [ಸಂ.]

ಶ್ರುತ್ಯಾರೂಢ (ನಾ). ೧. ವೇದಾದಿ ಶಾಸ್ತ್ರಗಳಲ್ಲಿ ಪ್ರತಿಪಾದಿತವಾದುದು. ೨. ವೇದಾದಿ ಶಾಸ್ತ್ರಗಳಲ್ಲಿ ಪ್ರತಿಪಾದಿತನಾದವನು ; ಪರಮಾತ್ಮ ; ಭಗವಂತ: ನಿತ್ಯಾನಂದಂ . . . ಶ್ರುತ್ಯಾರೂಢಂ ಶುಭಗುಣಯುತಂ ಶುದ್ಧಸಿದ್ಧಾಂತಸಾರಂ ಭೃತ್ಯಾಧಾರಂ ಭುವನಶರಣಂ ತ್ವಾಂ ಶರಣ್ಯಂ ಪ್ರಪದ್ಯೇ (ರಾಜಶೇ. ೧೩-೫೮). [ಸಂ.]

ಶ್ರೇಢೀಬದ್ಧ (ನಾ). [ಜೈನ] ಮೂರು ವಿಧವಾದ ನರಕಬಿಲಗಳಲ್ಲಿ ಒಂದು ; "ಇಂದ್ರಕಬಿಲದ ನಾಲ್ಕೂದಿಕ್ಕುಗಳಲ್ಲಿ ಸಾಲಾಗಿರುವ ಬಿಲಗಳು" (ಆದಿಪು. ಜೈನಪಾರಿಭಾಷಿಕಶಬ್ದಕೋಶ) : ಆ ಬಿಲಂಗಳುಮಿಂದ್ರಕ ಶ್ರೇಢೀಬದ್ಧ ಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ (ಆದಿಪು. ೫-೮೩ ವ). [ಸಂ.]

ಶ್ರೇಣಿ (ನಾ). ೧. ಪಂಕ್ತಿ; ಸಾಲು: ಎಳಗೌಂಗೊಳ್ಗಂಬದಿಂ ಬಾಳೆಯ ತೊಲೆಯಿನಳಿಸ್ಸಾರ ಕಲ್ಚಾರಪುಷ್ಪಂಗಳ ಘಂಟಾಶ್ರೇಣಿಯಿಂ ಕೇತಕಿಯ ದಳದ ಕಿಳ್ಗಂತೆಯಿಂ . . . ಕಣ್ಮೊಳಿಕುಂ ನಾನಾಲತಾಂತಪ್ರಸರ ಸರಯುತಂಗಳ್ ಪ್ರಪಾಮಂಟಪಂಗಳ್ (ರಾಜಶೇ.೨-೨೧). ೨. ಗುಂಪು ; ಸಮೂಹ : ಸಕಳೋದ್ಯಾನಂಗಳೊಳ್ ಸಂತತ ಸರಸ ಫಳವ್ರಾತದಿಂ ಸೇವ್ಯಮಲ್ಲಲ್ಲಿ ಕರಂ . . . ಚೂತೋತ್ಕರಂ ದಾಡಿಮತತಿ ಪನಸಶ್ರೇಣಿ ಜಂಬೀರಜಾಳಂ (ಪುಷ್ಪಪು. ೯-೧೫); ತೀರರುಹಫಲಪುಷ್ಪಧಾರಾವನತತರುಲತಾಶ್ರೇಣಿ ತಾಂ ಮಣಿನಿಕಾಶೋದಕ ನದೀವಕ್ಷದರ್ಪಣದಿ ಮಾರ್ಪೊಳೆವವೊಲ್ ಬಾಗಿ (ಶ್ರೀರಾಮಾ. ೧೫೦-೨೨೧). ೩. ವರ್ತಕರ ಅಥವಾ ಕಸುಬುದಾರರ ಮುಖ್ಯಸ್ಥರು ಸೇರಿ ನಡೆಸುವ ಸಭೆ: ಪ್ರಾಯಕವಾಗಿ ಪ್ರತಿಕಸಬು ಕೈಗಾರಿಕೆಯಲ್ಲಿಯೂ ವ್ಯವಸ್ಥೆಯು ಆ ಕಸಬುದಾರರಲ್ಲಿ ಮುಖ್ಯಸ್ಥರು ಸೇರಿದ ಶ್ರೇಣಿಯೆಂಬ ಸಭೆಯಲ್ಲಿ ನಡೆಯುತ್ತಲಿತ್ತು (ಭಾಇಪ್ರ. ೧೪೨); ಗುಂಪುಗಳ ಅಭಿಪ್ರಾಯದ ಮೇಲೆ ರಚಿಸಲ್ಪಟ್ಟ ಪೂಗ, ಶ್ರೇಣಿ, ಕುಲ ಎಂಬ ವಿಚಾರಣಾ ಸಮಿತಿಗಳಿರುತ್ತಿದ್ದವು (ಭಾರದ. ೫೬). ೪. ದರ್ಜೆ ; ವರ್ಗ : ನಿಮ್ಮ ಹುಡುಗ ಯಾವ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ ? (ರೂಢಿ). ೫. ಮಜಲು; ಮೆಟ್ಟಿಲು : ಜೀವನದ ಯಾವ ಕ್ಷೇತ್ರದ ಆಶೋತ್ತರವೇ ಆಗಲಿ, ಮೂರು ಶ್ರೇಣಿಯಲ್ಲಿ ಉತ್ಕರ್ಷವೆನಿಸಬೇಕು. ವ್ಯಕ್ತಿಯ ಅಭ್ಯುದಯ, ಸಮಾಜದ ಅಭ್ಯುದಯ, ಮಾನವತ್ವದ ಅಭ್ಯುದಯ — ಇವೇ ಆ ಅಂತಿಮ ಆಶೋತ್ತರದ ಮೂರು ಮೆಟ್ಟಲು (ಶಿಸ್ವದ. ೩೭೯). ೬. ಒಂದು ಬಗೆಯ ಸಸ್ಯ : "ಶ್ರೇಣಿ — ವೇಣುಪತ್ರಿ" (ಓಷಧಿ. ೧೭೦). [ಸಂ. ಶ್ರೇಣಿ, ಶ್ರೇಣೀ]

ಶ್ರೇಣಿಕೆ (ನಾ). ೧. ಗುಂಪು ; ಸಮೂಹ : ಬುಧಜನಪ್ರೇಣನಾಗ್ರೇಸರಗ್ರಾಮಣಿಯಾದಂ ದಾನಚಿಂತಾಮಣಿ ಗುಣಮಣಿ ಶ್ರೇಣಿಕಾಶ್ರೇಣಿಯಿಂದಂ (ಅಜಿಪು. ೧೨-೧೫). ೨. ಡೇರೆ ; ಗುಡಾರ. [ಸಂ. ಶ್ರೇಣಿಕಾ]

ಶ್ರೇಣಿಬದ್ಧ (ನಾ). = ಶ್ರೇಢೀಬದ್ಧ : ಆ ನರಕಬಿಲಂಗಳೆಲ್ಲಮೆಣ್ಬತ್ತುನಾಲ್ಕುಲಕ್ಷಪರಿ ಪ್ರಮಾಣಮಾಗಿಯುಮಿಂದ್ರಕಶ್ರೇಣಿಬದ್ಧಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ (ಸುಕುಮಾ. ೧೧-೪೧ ವ) ; ಸೌಧರ್ಮೇಶಾನಾದಿಗಳ ವರವಿಮಾನಂಗಳಿಂದ್ರಕ ಶ್ರೇಣಿಬದ್ಧ ಪ್ರಕೀರ್ಣಕಂಗಳೆಂದು ಮೂದೆಱಂ (ಚಂದ್ರಪ್ರ. ೩-೩೨ ವ). [ಸಂ.]

ಶ್ರೇಯ (ನಾ). ೧. ಉತ್ತಮವಾದುದು; ಯೋಗ್ಯವಾದುದು: ಶ್ರೇಯಮನೆನಱಿಪಲು ಪಾಧ್ಯಾಯನೆ ತನಗಱಿಯನಱಿವನಪ್ಪೊಡೆ ಭರತಂ ಜ್ಯಾಯನ ರಾಜ್ಯಮನಯ್ಯ ಕನೀಯಂ ಕೈಕೊಂಡ ತೊಂದು ತನಗಾವುಚಿತಂ (ಪಂರಾಮಾ. ೭-೫೩); ಶ್ರೇಯಂ ಶ್ರೇಯಂ ದ್ವಿಷದ ವಸಾಯಕಸಾಯಕಪರಂಪರಂ ಲಲಿತಯುವತ್ಯಾಯತನತ್ಯಾಯತನಂ ಗೇಯೋದ್ಗಾಯಕ್ಷ ಕಳಕಳಂ ಸಕಳಕಳಂ (ಕಾವ್ಯಾವ. ೫೪೯). ೨. ಶುಭ ; ಮಂಗಳ: ಸ್ವಸ್ತ್ಯಾದಿಗೆ . . . ಶ್ರೇಯಂ, ಶಿವಂ, ಶುಭಂ, ಸ್ವಸ್ತಿ, ಮಂಗಳಂ (ಶಮದ. ೧೩೦ ಪ್ರಯೋ). ೩. ಪುಣ್ಯ ; ಸುಕೃತ: "ಧರ್ಮಃ, ಪುಣ್ಯಂ, ವೃಷಃ, ಶ್ರೇಯಃ, ಸುಕೃತಂ — ಈ ೫ ಪುಣ್ಯದ ಪೆಸರ್" (ಹಲಾಯು. ೨೧-೧೨೫); ಮಾರದಿರ್ ಚಲಕೆ ಜೀವನಶ್ರೇಯಮಂ (ಶ್ರೀರಾಮಾ. ೩೧೦-೨೨೪); ದಾಯ ಸಮಸಂಸೃಷ್ಟಿ ಭೂಭಾಗ್ಯವಾದಂದು ಶ್ರೇಯ ನೆರೆವುದು ಜಗಕೆ (ಮಂಕುಕ. ೮೮೩). ೪. ಮೋಕ್ಷ. [ಸಂ. ಶ್ರೇಯಸ್]

ಶ್ರೇಯಸಿ (ನಾ). ಒಂದು ಬಗೆಯ ಸಸ್ಯ ; ಆಣೆಲೆ : "ಶ್ರೇಯಸೀ — ರಾಸ್ನೆ, ಅಳಲೆ, ಗಜಹಿಪ್ಪಲಿ, ಪ್ರಿಯಂಗು, ಅಗುಳುಶುಂಠಿ" (ಓಷಧಿ. ೧೭೦). [ಸಂ. ಶ್ರೇಯಸೀ]

ಶ್ರೇಯಸ್ಕರ (ಗು). ೧. ಸಂತೋಷದಾಯಕವಾದ ; ಆನಂದದ. ೨. ಮಂಗಳಕರವಾದ ; ಶುಭವನ್ನುಂಟುಮಾಡುವ. (ನಾ). ೩. ಒಳ್ಳೆಯದು; ಮಂಗಳಕರ : ಮಕ್ಕಳಿಗೆ ಒಳ್ಳೆಯ ಅಭ್ಯಾಸಗಳನ್ನು ಕಲಿಸಿದರೆ, ಮುಂದೆ ಅವರಿಗೂ ವಂಶಕ್ಕೂ ಶ್ರೇಯಸ್ಕರ (ಗೃಪವಿ. ೧೨೯); ಲೋಕರೂಢಿಗೆ ಮರ್ಯಾದೆ ಕೊಟ್ಟು ನಾನು ಗಂಡು ಹುಟ್ಟಲಿ ಅನ್ನೋದು ಶ್ರೇಯಸ್ಕರ ಖರೆ (ಗಂಮಾಯಿ. ೨೪೦). ೪. [ಜೈನ] ಅಂತರಾಳದಲ್ಲಿರುವ ಲೋಕಾಂತಿಕದೇವತೆಗಳಲ್ಲಿನ ಒಂದು ಕುಲ : ವಹ್ನ್ಯರುಣಾಂತರದೊಳ್ ಶ್ರೇಯಸ್ಕರ ಕ್ಷೇಮಂಕರರುಂ ಅರುಣಗರ್ದತೋಯ ಮಧ್ಯದೊಳ್ ವೃಷಕೋಷ್ಠಕಾಮಧರರುಂ (ತತ್ತ್ವಪ್ರ. ೨೨೨). [ಸಂ.]

ಶ್ರೇಯಸ್ಸು (ನಾ). ೧. ಶುಭ ; ಮಂಗಳ : ಮೇಣೆಂಬ ವಿಕಲ್ಪಾರ್ಥದಿಂ ಸಕಾರಾಂತದಲ್ಲಿ . . . ಮನ, ಮನಸ್ಸು ; ಶ್ರೇಯ, ಶ್ರೇಯಸ್ಸು (ಶಮದ. ೮೬ ಪ್ರಯೋ); ದೈವವು ಅನುಕೂಲವಾದರೆ ಶ್ರೇಯಸ್ಸಿನ ಮೇಲೆ ಶ್ರೇಯಸ್ಸು (ವಚಕಾ. ೫). ೨. ಶ್ರೇಷ್ಠತೆ ; ಉತ್ಕೃಷ್ಟತೆ. ೩. ಅಭಿವೃದ್ಧಿ ; ಏಳಿಗೆ. ೪. ಅತಿಶಯವಾದ ಸಂತೋಷ ; ಪರಮಸುಖ.

[ಸಂ. ಶ್ರೇಯಸ್]

ಶ್ರೇಯಾಂಸ (ನಾ). ೧. ಅಭ್ಯುದಯವನ್ನು ಹೊಂದಿದವನು ; ಏಳಿಗೆಯನ್ನು ಪಡೆದವನು. ೨. [ಜೈನ] ಹನ್ನೊಂದನೆಯ ತೀರ್ಥಂಕರ : ಶ್ರೀಮತ್ಕಾಶ್ಯಪಗೋತ್ರ ಮಹಾಮಹಿತೇಕ್ಷ್ವಾಕುವಂಶತಿಳಕಂ ನತಪೌಳೋಮಿಪತಿ ನಿರುಪಮಸುಖಧಾಮಂ ಶ್ರೇಯಾಂಸನೀಗೆ ನಿಃಶ್ರೇಯಸಮಂ (ಚಾವುಂಪು. ೧೫೯). [ಸಂ.]

ಶ್ರೇಯೋಮಾರ್ಗ (ನಾ). ಶಾಶ್ವತಸುಖವನ್ನು ನೀಡುವ ಹಾದಿ ; ಮೋಕ್ಷಪಥ : ಶ್ರೇಯೋಮಾರ್ಗದೊಳೊಂದಿದಾರ್ಯರೊಡನೊಲ್ಪಾಳೋಚನಂ ಮಾಡಿಯುಂ ಪ್ರಾಯಶ್ಚಿತ್ತ ಮನೊಲ್ಲದಿರ್ಪ ಮುನಿಪಂ . . . ಏಂ ಶಾಶ್ವತಶ್ರೇಯಂ ತಾಳ್ಗುಗುಮೇ (ಮಲ್ಲಿಪು. ೧೧-೩೩ ವ). [ಸಂ.]

ಶ್ರೇಷ್ಠ (ಗು). ೧. ಉತ್ತಮವಾದ ; ಉತ್ಕೃಷ್ಟವಾದ. ೨. ಬಹಳ ಅಭಿವೃದ್ಧಿಯ; ಅತ್ಯಂತ ಏಳಿಗೆಯ. ೩. ಹಿರಿಯ ; ವರಿಷ್ಠ. (ನಾ). ೪. ಉತ್ತಮವಾದುದು; ಉತ್ಕೃಷ್ಟವಾದುದು : ವಜ್ರವು ರತ್ನಗಳಲ್ಲಿ ಶ್ರೇಷ್ಠವಾದದ್ದು (ಮುಂಬಯಿ. ೪-೧೬೯). ೫. ಮುಖ್ಯವಾದುದು ; ಪ್ರಧಾನವಾದುದು : ವಿದ್ಯಕ್ಕಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಆಹಾರ ಶ್ರೇಷ್ಠ (ಗಾದೆ). ೬. ಹೆಚ್ಚುಗಾರಿಕೆ ; ಮೇಲ್ಮೆ : 'ಶ್ರೇಷ್ಠಗೆಡು' ಪರಾ. ೭. ಉತ್ತಮನಾದವನು; ಮೇಲಾದವನು : ಕಳುಹು ರಕ್ಷೆಗನ್ನೊಡನೆ ನಿನ್ನಾ ಜ್ಯೇಷ್ಠನಂ, ಕಾಕಪಕ್ಷಧರ ಕಲಿರಾಮನಂ, ಶ್ರೇಷ್ಠನಂ (ಶ್ರೀರಾಮಾ. ೨೮-೧೯). ೮. ಸೃಷ್ಟಿಕರ್ತ; ಬ್ರಹ್ಮ : "ಪಿತಾಮಹಂ . . . ಶ್ರೇಷ್ಠಂ ಜಗಾತ್ಮನಂಬುರುಹಾಸನಂ ಹೇಮಕುಕ್ಷಿ ಸುರಜ್ಯೇಷ್ಠಂ ವಿರಂಚಿಯೆನೆ ಬ್ರಹ್ಮನಕ್ಕುಂ" (ಮಂಗರಾ. ೩-೯). ೯. ಶಿವ ; ಪರಮೇಶ್ವರ. ೧೦. ವಿಷ್ಣು. ೧೧. ಕುಬೇರ. ೧೨. ಬುದ್ಧ. ೧೩. ರಾಜ ; ದೊರೆ. [ಸಂ.]

ಶ್ರೇಷ್ಠಗೆಡು (ಕ್ರಿ). ಹೆಚ್ಚಳಿಕೆಯು ಕುಂದು ; ಹಿರಿಮೆಯು ಅಳಿ : ಪರಿಪೂರ್ಣವಪ್ಪ ಸಮ್ಯಕ್‌ಜ್ಞಾನವಂತರೆಲ್ಲರು ಆಶೆ ಎಂಬ ಪಾಶವು ತಲೆದೋಱೆ ತಮ್ಮ ಜ್ಞಾತೃ ಅಲ್ಲಿಯೆ ಶ್ರೇಷ್ಠಗೆಟ್ಟಿತ್ತು (ಮೋಳಿಮಾ. ೧೯೨-೭೨೩). [ಶ್ರೇಷ್ಠ + ಕೆಡು]

ಶ್ರೇಷ್ಠತನ (ನಾ). ಹಿರಿಮೆ ; ಮೇಲ್ಮೆ : (ಕ). [ಶ್ರೇಷ್ಠ + - ತನ]

ಶ್ರೇಷ್ಠತೆ (ನಾ). = ಶ್ರೇಷ್ಠತನ : ಶಿವನಿಗಿಂತ ಜಿನನ ಶ್ರೇಷ್ಠತೆಯನ್ನು ಸಾರಲು ಕವಿಯು ಹವಣಿಸಿರುವನೆಂಬುದರಲ್ಲಿ ಸಂದೇಹವೇ ತಲೆಯೆತ್ತಲಾರದು (ಸಾಹಿಸ. ೧೫೭).

[ಸಂ. ಶ್ರೇಷ್ಠತಾ]

ಶ್ರೇಷ್ಠತ್ವ (ನಾ). = ಶ್ರೇಷ್ಠತನ. [ಸಂ.]

ಶ್ರೇಷ್ಠನ್ಯಾಯಾಲಯ (ನಾ). ಉಚ್ಚನ್ಯಾಯಾಲಯ : ಅವರು ಶ್ರೇಷ್ಠನ್ಯಾಯಾಲಯಕ್ಕೆ ಅಪೀಲು ಹೋದರು (ರೂಢಿ). [ಸಂ.]

ಶ್ರೇಷ್ಠಪಾರ್ಷ್ಣಿ (ನಾ). ಉತ್ತಮವಾದ (ಬೆನ್ನಿನ) ಭಾಗವನ್ನುಳ್ಳದು : ಸುಸಂಚಿತ ಪ್ರೋಹಫಳೀಹಸ್ತಗಾತ್ರನುಂ ಪರಿಪೂರ್ಣ ಶ್ರೇಷ್ಠ [ಪಾಠಾಂ. ತುಷ್ಟ, ಶ್ಲಿಷ್ಟ] ಪಾರ್ಷ್ಣಿಯುಮಂಸಳಕಾಳಭಾಗನುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ಲುದುಂ (ಆದಿಪು. ೧೨-೫೬ ವ). [ಸಂ.]

ಶ್ರೇಷ್ಠಶಾಕ (ನಾ). ಒಂದು ಬಗೆಯ ಸಸ್ಯ : "ಜೀವಂತೀ -- ಸಿಹಿಪಾಲೆ, ಮೆದೆ, ಹೊಂಬಾಳೆ, ಅಣಕೆ, ಶ್ರೇಷ್ಠಶಾಕ" (ಓಷಧಿ. ೬೩). [ಸಂ.]

ಶ್ರೇಷ್ಠಾಗಮ (ನಾ). [ವೀಶೈ] ಪಾತೂಲಾಗಮದ ಹನ್ನೆರಡು ಭೇದಗಳಲ್ಲಿ ಏಳನೆಯದು : ಪಾತೂಲ ಉತ್ತರವಾತೂಲ ಕಾಲಜ್ಞಾನ ಪರಾಜಿತ ಸರ್ವಾಗಮ ಸರ್ವಾಷ್ಟಾಗಮ ಶ್ರೇಷ್ಠಾಗಮ . . . ವಿಶ್ವಾತ್ಮಕಾಗಮವೆಂದು ಪಾತೂಲಾಗಮದ ದ್ವಾದಶಭೇದಂಗಳು (ವಿವೇಕ. ೭೨). [ಸಂ.]

ಶ್ರೇಷ್ಠಿ (ನಾ). ೧. ಒಂದೇ ವಿಧವಾದ ವ್ಯಾಪಾರ ಅಥವಾ ಕಸುಬಿನವರ ಸಂಘದ ಮುಖಂಡ ; ವಾಣಿಜ್ಯೋದ್ಯಮ ಸಂಘದ ಮುಖ್ಯಸ್ಥ : ವರ್ತಕರಲ್ಲಿ ಮುಖ್ಯನಾಗಿದ್ದವನೇ ಶ್ರೇಷ್ಠಿಯೆನಿಸಿದ್ದನು (ಜಾಶಾಬ್ರ. ೭೬) 'ಕುಲಶ್ರೇಷ್ಠಿ' ಪರಾ. ೨. ವ್ಯಾಪಾರವನ್ನು ವೃತ್ತಿಯನ್ನಾಗಿ ಉಳ್ಳವನು ; ವೈಶ್ಯಕುಲದವನು ; ಸೆಟ್ಟಿ : ಧರ್ಮಪುರಮೆಂಬುದು ಪೊಟಲಲ್ಲಿ ನಾಗದತ್ತನೆಂಬೊಂ ಶ್ರೇಷ್ಠಿ (ವಡ್ಡಾರಾ. ೧೮-೩); ಜೈನರು ಮೊತ್ತಮೊದಲು ವ್ಯಾಪಾರಕ್ಕಾಗಿ ನಮ್ಮೀ ನಾಡಿನಲ್ಲಿ ನೆಲೆಸಿದರೆನ್ನಬೇಕು. ಇವರೇ ಶ್ರೇಷ್ಠಿಗಳು (ಶೆಟ್ಟಿಗಳು) (ತುಳುನಾ. ೧೮೮). [ಸಂ. ಶ್ರೇಷ್ಠಿನ್]

ಶ್ರೇಷ್ಠೆ (ನಾ). ೧. ಅತ್ಯುತ್ತಮಳಾದ ಹೆಂಗಸು. ೨. ಉತ್ತಮವಾದ ಹಸು : "ನೈಚಿಕಿ ಶ್ರೇಷ್ಠಿಯೆನೆ ತಲೆಯಾವೆನಿಕ್ಕು" (ಮಂಗರಾ. ೫೪-೪). [ಸಂ. ಶ್ರೇಷ್ಠಾ]

ಶ್ರೋಣ (ನಾ). ೧. ಬೇಯಿಸಿದ ; ಪಕ್ವಮಾಡಿದ. (ನಾ). ೨. ಹೆಳವ ; ಕುಂಟ : "ಶ್ರೋಣಾಃ, ಪಂಗುಃ -- ೨ ಕಾಲಿಲ್ಲದ ಕುಂಟನ ಹೆಸರುಗಳು" (ಸಿದ್ಧಾಂತಿ. ೧೮೨). [ಸಂ.]

ಶ್ರೋಣಿ (ನಾ). ೧. ಜಘನ ; ನಿತಂಬ : ಹರಿಣೀಲೋಚನೆ ಪಂಕಜಾನನೆ ಘನಶ್ರೋಣೀಸ್ತನಾಭೋಗಭಾಸುರೆ ಬಿಂಬಾಧರೆ . . . ಅಚಲದೇವಿ ಕನ್ನುಸತಿಯಂ ಸೌಂದರ್ಯದಿಂದೇಳಿಪಳ್ (ಎಕ. II, ೩೨೭-೫೮; 1181); ಬಗೆಯಂ ಬಲ್ಸೆಱೆಗೆಯ್ದುದೀಗಳಿ ವಳೀ ಮಾಧುರ್ಯವು . . . ಈ ಪೃಥುಳವೃತ್ತಶ್ರೋಣಿಯಾ ಬೇಟದುಜ್ಜುಗವೀ ವಿಭ್ರಮ (ರಾಜಶೇ. ೭-೭೦). ೨. ಹೆಳವ ; ಕುಂಟ : "ಖಂಜಃ, ಪಂಗುಃ, ಶ್ರೋಣಿಃ -- ಈ ೩ ಪೆಬವಂ" (ಹಲಾಯು. ೧೦೦-೪೫೬). ೩. ದಾರಿ ; ರಸ್ತೆ. [ಸಂ.]

ಶ್ರೋಣಿತ (ನಾ). ೧. ಕೆಂಪುಬಣ್ಣ : ಕಾಳೆಮ್ಮೆಯ ಕಱೆಯಲಾಗಿ ಹಾಲು ರೋಹಿತವಾಗಿ ಬಿದ್ದಿತ್ತು . . . ಶ್ರೋಣಿತವಳಿದು ಹೋಗಲಾಗಿ ಹಾಲು ಹೆಪ್ಪಾಯಿತ್ತು (ಮೋಳಿಮಾ. ೨೨೩-೭೭೬). ೨. ನೆತ್ತರು ; ರಕ್ತ : ಹೊರ ಊರ ಭೈಲಲ್ಲಿ ಮುಸುಕೀತು ಜಗಳವು ವಸವಂತವಾಡ್ಯಾರು ಶ್ರೋಣಿತವ (ಕಾಲಸಂ. I. ೨೩). [< ಸಂ. ಶೋಣಿತ]

ಶ್ರೋತ (ನಾ). ಕರಣ ; ಇಂದ್ರಿಯ : "ಶ್ರೋತಂ ಖಮಿಂದ್ರಿಯಂ ಹೃಷಿಕಮಕ್ಷಂ ಕರಣಮಾತನುವಿನಿಂದ್ರಿಯಂಗಳು" (ಮಂಗರಾ. ೯೭-೧೫). [ಸಂ. ಶ್ರೋತಸ್]

ಶ್ರೋತವ್ಯ (ಗು). ೧. ಕೇಳಬಹುದಾದ ; ಶ್ರವಣಾರ್ಹವಾದ. (ನಾ). ೨. ಕೇಳುವಂಥದು ; ಶ್ರವಣಯೋಗ್ಯವಾದುದು : ಪ್ರಭುದೇವರ 'ಅನಾಯಾಸದ ಅನು', 'ಚಿಂತೆಯಿಲ್ಲದ ಅನುಭಾವ ಗೊಹೇಶ್ವರ' ಇನ್ನೂ ಶ್ರೋತವ್ಯ, ಇನ್ನೂ ಮಂತವ್ಯ (ವಚಸಂ. VIII, ೭೪ಗೆ ಪ್ರವೇಶ). ೩. ಶ್ರವಣಯೋಗ್ಯನಾದವನು : ಶ್ರೋತವ್ಯನನು ಸಂಕೀರ್ತಿತವ್ಯನನು ಅವ್ಯಯನನಕ್ಷಯನನಭವನನವ್ಯಥನನಜ್ಞಾನದಲಿ ಯೋಗವ್ಯನೆಂದೇ ಸಣಿಸಿದೆವಲಾ (ಕುಮಾಅ. ೬-೬೪). [ಸಂ.]

ಶ್ರೋತಾರ (ನಾ). ಕೇಳುವವನು ; ಶ್ರೋತೃ : ಸಹಾನುಭೂತಿಯಿಂದ ಕವಿ ಶ್ರೋತಾರರು ಒಂದಾಗುತ್ತಾರೆ. ಕವಿತೆ ಸಫಲವಾಗುತ್ತದೆ (ವಿಚಾಮಂ. ೧೪೭); ಉಪನ್ಯಾಸಗಳನ್ನು ಮೈಸೂರಿನಲ್ಲಿ, ಹಲವಾರು ಶ್ರೋತಾರರ ಮುಂದೆ ಮಾಡಿಯೂ ಆಯಿತು (ಜಾಸಂಗ. V, ಪ್ರಸ್ತಾವನೆ). [ಸಂ. ಶ್ರೋತೃ]

ಶ್ರೋತೃ (ನಾ). ೧. = ಶ್ರೋತಾರ : ಕಲ್ಯಾಣಾರ್ಥಿಯಪ್ಪಾತಂ ವಿವಕ್ಷಿತಮಪ್ಪ ವಸ್ತುವಂ ಪೇಳ್ವುವರ್ಗಳು ಮನ್ನಮಾಪ್ತಾಗಮವಕ್ತೃ ಕಥೆ ಶ್ರೋತೃವೆಂಬಿವಂ ಪೇಳ್ದುದವರೊಳ್ (ಜಾಪುಂಪು. ೫); ದಾಕ್ಷಿಣ್ಯವಂತನುಂ . . . ಮಧ್ಯಸ್ಥನುಮೆಂಬ ದಶವಿಧಶುದ್ಧಗುಣಂಗಳಿಂ ನೆರೆದಂ ಶ್ರೋತೃವೆಂಬೊನಕ್ಕುಂ (ಅಜಿಪು. ೧೧-೨ ವ). ೨. ವಿದ್ಯಾರ್ಥಿ. [ಸಂ.]

ಶ್ರೋತ್ರ (ನಾ). ೧. ಕಿವಿ ; ಕರ್ಣ : "ಶ್ರವಣಂ ಕರ್ಣಂ ಶ್ರೋತ್ರಂ ಕಿವಿ" (ವಸ್ತುಕೋ. ೭೦-೧೮); ರುದ್ರ ಮುಖದಲ್ಲಿ . . . ಶ್ರೋತ್ರದಲ್ಲಿ ದಶದಿಕ್ಕುಗಳೂ ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಂತನು (ಬಸವ. ೫೩೬); ಶ್ರೋ ವಾಗ್ದೇವಿಗೆ ಶಬ್ದದಿನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳುದ್ಭಾವಿಪ ನಿರ್ಮಲಮೂರ್ತಿಗಿಳಾವಂದ್ಯಗ ಶಾಸ್ತ್ರಮುಖದೊಳವನತನಪ್ಪೆಂ (ಶಮದ. ೧). ೨. ವೇದ. ೩. ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ಕೊಟ್ಟ ಭೂಮಿಯನ್ನು ಗುತ್ತಿಗೆಯಾಗಿ ಪಡೆದ ರೈತರ ಮೇಲೆ ಹಾಕಲಾಗುತ್ತಿದ್ದ ಒಂದು ಬಗೆಯ ತೆರಿಗೆ : ಶ್ರೋತ್ರ ನಿಧಿ ನಿಕ್ಷೇಪ ಬಲ ಪಾಶಾ(ಪಾ)ಣ ತೇಜಸ್ವಾ (ಸ್ವ್ಯಾ)ಮ್ಯಮಿತ್ಯಾದಷ್ಟ ಕೋಗಸಹಿತಂ . . . ಬ್ರಾಹ್ಮಣೇಭ್ಯಃ ಪ್ರದಾತ್ (ಏಇ. XXXII, ೨೨-೭೭; ಸು.೫೦೧). [ಸಂ.]

ಶ್ರೋತ್ರಗುತ್ತಗೆ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದಂತೆ, ಕೊಟ್ಟ ಭೂಮಿಯ ಗೊತ್ತುವಳಿ, — ಕರಾರು : ಬೊಂಮಾಣ್ಣ ಹೆಗ್ಗಡೆಯ ಸೊಸೆ ಮಾರುವೆಗೆ ಏತ್ತಿಯ ಕಯ್ಯಲು ಶ್ರೋತ್ರಗುತ್ತಗೆಯಾಗಿ

ಮಾಡಿಕೊಂಡ ಹಣ ಬೊಮ್ಮಣ ಹೆಗ್ಗಡೆಗೆ ಮೂಱು ಹಣ (ಎಕ. VIII. ತೀರ್ಥಹ. ೧೪೯-೨೦; 1417). 'ಶ್ರೋತ್ರಿಯಗುತ್ತಗೆ' ಪರಾ. [ಶ್ರೋತ್ರ + ಗುತ್ತಗೆ]

ಶ್ರೋತ್ರನಾಶ (ನಾ). ಶ್ರವಣಶಕ್ತಿಯನ್ನು ಕಳೆದುಕೊಂಡವನು ; ಕಿವಿ ಕೇಳಿಸದವನು ; ಕಿವುಡ : ಎನ್ನ ಮಾಟ ಕುರುಡ ಸಭೆಯಲ್ಲಿರ್ದು ನಗೆಯ ನಕ್ಕಂತಾಯಿತ್ತು ಶ್ರೋತ್ರನಾಶನಲ್ಲಿ ಜಯಸ್ವರನ ಪಾಡಿದಂತಾಯಿತ್ತು (ಮೋಳಮಾ. ೧೦-೩೩). [ಸಂ.]

ಶ್ರೋತ್ರಪಥ (ನಾ). = ಶ್ರುತಿಪಥ : ಶ್ರೋತ್ರಪಥಕಿಳಿದುಬಹ ವೇದಬ್ಯೂಹಂತಕೆ ಮನದೆಲ್ಲ ಸದ್ದಡಗಿ ಮತ್ತೆಲ್ಲು ದೊರೆಯದಿಹ ಗಾಂಭೀರ್ಯವಳವಡಲು ಸನ್ನಿಧಿಯ ಜನಕೆ (ಮಲದೇ. ೨೨-೬). [ಸಂ.]

ಶ್ರೋತ್ರವಿಜ್ಞಾನ (ನಾ). ಕಿವಿಗಳಿಂದ ಪಡೆಯುವ ಜ್ಞಾನ : ಪ್ರವೃತ್ತಿವಿಜ್ಞಾನವು — ಚಕ್ಷುರ್ವಿಜ್ಞಾನ, ಶ್ರೋತ್ರವಿಜ್ಞಾನ . . . ಮನೋವಿಜ್ಞಾನ ಎಂದು ಆರು ಪ್ರಕಾರವಾಗಿದೆ (ಒಂದಸಾ. ೨೯). 'ಚಕ್ಷುರ್ವಿಜ್ಞಾನ' ಪರಾ. [ಸಂ.]

ಶ್ರೋತ್ರಸುಖ (ನಾ). ಕಿವಿಗೆ ಹಿತವಾದುದು ; ಕರ್ಣಾನಂದಕರವಾದುದು: ಅರ್ಥಭೂತಂಗಳನೆನಿತಾನುಮಂ ನುಡಿವ ನಾಗರಕಶ್ರೋತ್ರಸುಖಮುಖರ ವಾರ್ತಾಮೃತಾಕ್ಷರಂಗಳಂ ಕೇಳುತ್ತುಂ (ಶಾಂತಿಪು. ೬-೧೨ ವ); ಹೊಕುದರಸನ ಹರುಷಲತೆ ಪುರುಹೂತವಿಜಯದ ವಿಜಯವಾರ್ತಾ ಶ್ರೋತ್ರಸುಖ ಸಂಪ್ರೀತಿನಯನಜಲಾಭಿಷೇಕದಲಿ (ಕುಮಾಸ. ೧-೩). [ಸಂ.]

ಶ್ರೋತ್ರಿ (ನಾ). ಕೇಳಿಸಿಕೊಳ್ಳುವವಳು : "ಶ್ರೋತ್ರಿ — ಕಿವಿಯುಳ್ಳಾಕೆ" (ಗಂಗಾಮ. ೩೧೨). [ಸಂ. ಶ್ರೋತ್ರೀ]

ಶ್ರೋತ್ರಿಯ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣ ; ವೈದಿಕ : ಒಬ್ಬ ಶ್ರೋತ್ರಿಯನಪ್ಪ ಪಾರ್ವಂ ಯಜ್ಞನಿಮಿತ್ತಂ ಒಂದಾಡಂ ಬೇಱೂರಿಂ ಮಾಱುಗೊಂಡು ಬೆಗಲೊಳಿಕ್ಕಿ ಪೋಪನಂ . . . ಕಂಡು (ಪಂಚತಂ. ೧೪೬-೮) ; ಶ್ರೋತ್ರಿಯರು ತಾವೆಂದು ದಾನಕೆ ಪಾತ್ರರಾವೆಂದೆಂಬ ಗಡ್ಡದ ಹೋತ್ಯಗಳ ಮನೆಮನೆಯ ಹೊಕ್ಕಱಸಿದನು ಹನುಮಂತ (ಕಾಶಿಕಾ. ೧೦-೨೫).

ಶ್ರೋತ್ರಿಯವಾಗು = ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದೆ ಕೊಟ್ಟ ಆಸ್ತಿಯಾಗು : ಹೊಸಹಳ್ಳಿಯ ಗ್ರಾಮವನೂ ನಮಗೆ [ಶ್ರೋ]ತ್ರಿಯವಾಗಿ ಕೊಟ್ಟುಯಿದ್ದರಾಗಿ ಆ ಗ್ರಾಮದ ಸೀಮೆಯ ಮೇಲೆ ನಾಳು ಕಾಲುವೆಯನು ತಂದು ಆ ಹೊಸಹಳ್ಳಿ ಗ್ರಾಮವನೂ ಯಿ ದಿನ ಪರ್ಯ್ಯಂತರ ಶ್ರೋತ್ರಿಯವಾಗಿ ಅನುಭವಿಸಿಕೊಣ್ಮು (ಎಕ. III, ಶ್ರೀರಂಗ. ೧೪೯-೯; 1468). [ಸಂ.]

ಶ್ರೋತ್ರಿಯಅಗ್ರಹಾರ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದೆ ಕೊಟ್ಟ ಭೂಮಿ,- ಉಂಬಳಿ : ಮಹಾಜನಂಗಳಿಗೆ ಸೂರ್ಯೋಪರಾಗಪು(ಂ)ಣ್ಯಕಾಲದಲು ಕೊಟ್ಟ ಶ್ರೋತ್ರಿಯಅಗ್ರಹಾರ ದಾನ (ಸೌಸಾ. IX - ii, ೪೪೦-೧೨; 1419). [ಸಂ.]

ಶ್ರೋತ್ರಿಯಗುತ್ತಗೆ (ನಾ). = ಶ್ರೋತ್ರಗುತ್ತಗೆ : ಹಬಾರುವರಿಗೆ ಕೊಟ್ಟ ಶ್ರೋತ್ರಿಯ ಗುತ್ತಗೆಯ ಶಿಲಾಶಾಸನದ ಕ್ರಮನೆಂತೆಂದರೆ (ಎಕ. III (R), ನಂಜನ. ೨೯೨-೬; 1527).

[ಶ್ರೋತ್ರಿಯ + ಗುತ್ತಗೆ]

ಶ್ರೋತ್ರಿಯಮಾನ್ಯ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆ ಇಲ್ಲದೆ ಕೊಟ್ಟ ಭೂಮಿ. [ಸಂ.]

ಶ್ರೋತ್ರೇಂದ್ರಿಯ (ನಾ). ಶ್ರವಣೇಂದ್ರಿಯ ; ಕಿವಿ : ನಿತ ಅರ್ಧಭಾಗದಲ್ಲಿ ಆಕಾಶದೊಂದಂಶ ಕೂಡಲು ಶ್ರೋತ್ರೇಂದ್ರಿಯವಾಯಿತು (ನಾನಾಗು. ೧೧-೧೪). [ಸಂ.]

ಶ್ರೌತ (ಗು). ೧. ಕಿವಿಗೆ ಸಂಬಂಧಿಸಿದ. ೨. ವೇದಗಳಿಗೆ ಸಂಬಂಧಿಸಿದ. ೩. ವೇದಗಳಿಂದ ಅನುಮೋದಿತವಾದ; ವೇದವಿಹಿತವಾದ : ತ್ರಿದಶರಿಗೆ ಸರಿತೂಕ ಸಾಮರ್ಥ್ಯದಲಿ ಶುದ್ಧ ಶ್ರೌತ ಸನ್ಮಾರ್ಗದಲಿ ಶಿವಶಿವ ರಾಜಋಷಿಗಳಲಾ ಮಹೀತಳಕೆ (ಕುಮಾಸ. ೪-೧೫). (ನಾ). ೪. ಕೇಳಬಹುದಾದುದು ; ಶ್ರಾವ್ಯವಾದುದು : ಶ್ರೌ[ಪಾಠಾಂ. ಶ್ರೋ]ತಮಿದು ತನಗೆ ಗಂಗಾಸ್ರೋತದವೊಲಳುಂಬಮಾಗಿ ಗೆಡೆಗೊಳ್ಳದ . . . ಬರಿಸದೊಳಗೆ ಸಮವಿನೆಗಮಿದಂ (ಪಂಪಭಾ. ೧೪-೫೨). ೫. ಉಪದೇಶ ; ಬೋಧೆ: ಎಮಲಶ್ರೌತಂ[ಪಾಠಾಂ. ಶ್ರುತಂ] ಕೈವಲ್ಯಮೆಂಬ ಸಂಕಲ್ಪಮಿನಿತೆ ನೇರ್ಗಿಱಿಯಂ ವಿಶ್ವಮನಱಿವ ಮಹಿಮೆಯಿಂ ವರ್ಧಮಾನಜಿನಪತಿಗೆ ವರ್ಧಮಾನಮುನೀಂದ್ರಂ (ಪಂರಾಮಾ. ೧-೧೫). ೬. ವೇದವಿಹಿತವಾದ ಕಾರ್ಯ, — ಕರ್ಮ : ದ್ವೈತವೇನದ್ವೈತವೇನಾತ್ಮದರ್ಶನಿಗೆ? ಶ್ರೌತಾದಿವಿಧಿಯೇನು? ತಪನಿಯಮವೇನು ? (ಮುಂಕಸ. ೧೦೯). ೭. ವೇದೋಕ್ತ ವಿಧಿಗಳನ್ನು ಮಾಡಿಸುವವನು ; ಪುರೋಹಿತ: ವಾಕ್ಯಮಾಲೆಗೆ ಅಹಿಂಸಾ ಪರಮೋಧರ್ಮಮೆಂಬುದನೀ ತತ್ಪವಿತುರ್ವರೇಣ್ಯರಟ್ಟಿದರ್ ತ್ರೈಲೋಕ್ಯಚೂಡಾಮಣೀ (ತತ್ಪವಿತುರ್ವರೇಣ್ಯರೆಂದು ಶ್ರೌತರ್) (ಶಮದ. ೭೫ ಪ್ರಯೋ). [ಸಂ.]

ಶ್ರೌತಕರ್ಮ (ನಾ). ವೇದೋಕ್ತವಾದ ಅನುಷ್ಠಾನ ; ವೇದವಿಹಿತವಾದ ವಿಧಿ: ಮೊದಲಣ ಋಕ್ಕಿನಲ್ಲಿ ಧರ್ಮವೆಂದರೆ ಶ್ರೌತಕರ್ಮವೆಂದೂ ಎರಡನೆಯದರಲ್ಲಿ ಸ್ಮಾರ್ತಕರ್ಮವೆಂತಲೂ ಅರ್ಥವಾದಂತಾಯಿತು (ಆರ್ಯಧ. ೮). [ಸಂ. ಶ್ರೌತಕರ್ಮನ್]

ಶ್ರೌತಪಥ (ನಾ). ವೇದೋಕ್ತವಾದ ಹಾದಿ ; ಶ್ರುತಿಯು ವಿಧಿಸುವ ಮಾರ್ಗ : ಅಹುದಹುದಲೇ ಶ್ರೌತಪಥದಲಿ ಬಹಿರಿ ನೀವೇ ಸ್ಮಾರ್ತವಿಧಿ ಸನ್ನಿಹಿತರೆಂಬುದನಱಿಯದೇ ಮೂಜಗದ ಜನವೆಲ್ಲ (ಕುಮಾಳ. ೮-೩೦). [ಸಂ.]

ಶ್ರೌತಸೂತ್ರ (ನಾ). (ಆಶ್ವಲಾಯನ, ಸಾಂಖ್ಯಾಯನ, ಕಾತ್ಯಾಯನ ಮೊದಲಾದವರಿಂದ ರಚಿತವಾದ) ಯಜ್ಞಯಾಗಾದಿಗಳನ್ನು ಆಚರಿಸುವ ನಿಯಮಗಳನ್ನು ವಿವರಿಸುವ ಧರ್ಮಶಾಸ್ತ್ರಗ್ರಂಥ : ಗೃಹ್ಯಸೂತ್ರಗಳೂ ಶ್ರೌತಸೂತ್ರಗಳೂ ಪ್ರತಿಮಯ ಅಸ್ತಿತ್ವಕ್ಕೆ ಆಧಾರವಾಗಿವೆ (ಭಾರದ. ೫೧೦); ವೇದಗಳಲ್ಲಿ ಅಥರ್ವಣವೇದವೇ ಮುಖ್ಯ. ಆ ವೇದಕ್ಕೂ ಶ್ರೌತಸೂತ್ರಗಳಿವೆ (ಒಂದಸಾ. ೧೫೭). [ಸಂ.]

ಶ್ರೌತಿ (ನಾ). ೧. ವೇದಾಧ್ಯಯನ ಮಾಡಿದ ಬ್ರಾಹ್ಮಣ ; ವೇದ ಪಾರಂಗತನಾದ ಬ್ರಾಹ್ಮಣ : ಆ ವಿಪ್ರನು . . . ಒಬ್ಬ ಶ್ರೌತಿಯ ಮನೆಬಾಗಿಲಿಗೆ ಹೋಗಿ "ಭವತಿ ಭಿಕ್ಷಾಂದೇಹಿ" ಎಂದು ಕೂಗಿದನು (ನೀತಚು. XI. ೧೦). ೨. ಸ್ಮಾರ್ತರ ಹೆಸರಿನ ಕಡೆಯಲ್ಲಿ ಸೇರುವ ಒಂದು ಪದ. [ಸಂ. ಶ್ರೌತಿನ್]

ಶ್ಲಕ್ಷ್ಣ (ಗು). ೧. ತೆಳ್ಳಗಿರುವ ; ಸೂಕ್ಷ್ಮವಾದ. ೨. ಕೋಮಲವಾದ ; ಮೃದುವಾದ. ೩. ನಯವಾದ ; ನುಣುಪಾದ. (ನಾ). ೪. ಸೂಕ್ಷ್ಮವಾದುದು: "ಸೂಕ್ಷ್ಮಃ, ಲೇಶಃ, ಲವಃ, ಶ್ಲಕ್ಷ್ಣಃ . . . ಕಣಃ, ಅಣುಃ . . . ಅಲ್ಪಃ, ತ್ರುಟಿಃ — ಈ ೧೫ ಕಿರಿದು" (ಹಲಾಯು. ೧೧೪-೩). ೫. ಮಧುರವಾದ ಮಾತುಗಳನ್ನಾಡುವವನು : "ಶ್ಲಕ್ಷ್ಣಃ, ಮಧುರವಾಕ್ - ಈ ೨ ಇನಿದಂ ನುಡಿವವಂ" (ಹಲಾಯು. ೬೦-೨೧೦). [ಸಂ.]

ಶ್ಲಕ್ಷ್ಣಪಾರ್ಷ್ಣಿ (ನಾ). ಮೃದುವಾದ (ಬೆನ್ನಿನ) ಭಾಗವನ್ನುಳ್ಳುದು : ಉಪಸಂದಿಗ್ಧಕರ ಶ್ಲಕ್ಷ್ಣಪಾರ್ಷ್ಣಿಯಂ . . . ವಪುಷ್ಮಮಂ ಸಂಪದುಪೇತಮುಂ ತರಿಸಿ ದಿಗ್ವಿಜಯಕ್ಕೆ ಜಿನೇಂದ್ರಚಂದ್ರದೇವಂ ಪೊಱವಟ್ಟನೇಱಿ ಜಯವುಂ ಜಯಪರ್ವತಯಾನಾಗಮಂ (ಶಾಂತಿಪು. ೧೦-೧೪೬). [ಸಂ.]

ಶ್ಲಥ (ಗು). ೧. ಸಡಿಲವಾದ ; ಅಳ್ಳಕವಾದ. ೨. ಶಿಥಿಲವಾದ ; ದುರ್ಬಲವಾದ: ಆ ಜರೆ ಬಂದಾಗಳ್ ಶ್ಲಥಶರೀರ ಕರಣಂಗಳನಾನೊಂದಿದಂ (ವಿಷ್ಣುವ. ೧-೫-೭೮). (ನಾ). ೩. ಸಡಿಲವಾದುದು : "ಶ್ಲಥಂ, ಶಿಥಿಲಂ — ಈ ೨ ಸಡಿಲ್ದುದು" (ಹಲಾಯು. ೧೨೮-೯೨). [ಸಂ.]

ಶ್ಲಥೆ (ನಾ). [ಕಾಮಶಾ] ಸ್ತ್ರೀಜಾತಿಯ ಒಂದು ಭೇದ : ಉದ್ದವ ಕಪ್ಪಿನ ತನುವಿನನುದಿನ ವಿರಹದನುಭವದ ಕುಳಿಕಂಕುಳಿನವಳೇ ಶ್ಲಥೆ (ಜನವ. ೫-೧); ಉದ್ದವುಳ್ಳವಳು ಕಪ್ಪಾದವಳು ಹಲವು ಕಾಮಗಲಿಕೆಯನ್ನು ಸ್ಮರಿಸುವಳು ಕುಳಿ ಕಂಕುಳುಳ್ಳವಳು ಇವಳು ಶ್ಲಥೆ ಎನಿಸುವಳು (ಕಾಮಶಾ. ೨೧೪). [ಸಂ. ಶ್ಲಥಾ]

ಶ್ಲಾಘನೀಯ (ನಾ). ಹೊಗಳಲು ಅರ್ಹವಾದುದು ; ಪ್ರಶಂಸಿಸಲು ಯೋಗ್ಯವಾದುದು : ತಪ್ಪುಮಾಡಿದವರಿಗೆ ಶಿಕ್ಷೆಯನ್ನು ವಿಧಿಸುವುದಕ್ಕಿಂತ . . . ಅವರನ್ನೂ ಉತ್ತಮ ಪ್ರಜೆಗಳನ್ನಾಗಿ ಪರಿವರ್ತಿಸಲು ಆಕೆ ಸರ್ವ ಪ್ರಯತ್ನಪಡುತ್ತಿದ್ದುದು ಅತಿ ಶ್ಲಾಘನೀಯವಾಗಿತ್ತು (ಶಾಂತಲಾ. ೧೫೫). [ಸಂ.]

ಶ್ಲಾಘಿ (ಗು). ಹೊಗಳಿಕೆಗೆ ಅರ್ಹವಾದ : ಮೃಗರಾಜಾಸನದಿಂದಮೆರ್ದು ಮುದದಿಂದಂ ದ್ರಾಘಿಮಶ್ಲಾಘಿಬಾಹುಗಳಿಂದಂ ತೆಗೆದಪ್ಪಿಕೊಂಡನರಸಂ ಶ್ರೀರೂಪಕಂದರ್ಪನಂ (ಸುಕುಮಾ. ೧೧-೨). [ಸಂ. ಶ್ಲಾಘಿನ್]

ಶ್ಲಾಘಿಸು (ಕ್ರಿ). ಹೊಗಳು ; ಪ್ರಶಂಸಿಸು : ಭಟರು ಸಂತೋಷದಿಂ ಪ್ರಭುವಂ ಶ್ಲಾಘಿಸುತ (ಸೌಂದಿ. ೨೪೬-೨೦). [ಶ್ಲಾಘನ್ + -ಇಸು]

ಶ್ಲಾಘೆ (ನಾ). ೧. ಮೆಚ್ಚುಗೆ ; ಪ್ರಶಂಸೆ : "ಅರ್ಥವಾದಃ, ಪ್ರಶಂಸಾ . . . ಶ್ಲಾಘಾ, ವರ್ಣನಂ (ನಾ)—ಈ ೧೦ ಸ್ತುತಿಯ ನಾಮಂ" (ಹಲಾಯು. ೨೪-೧೪೪). ೨. ಸಂತೋಷ ; ಆನಂದ. ೩. ಸೇವೆ. ೪. ಆಸೆ ; ಬಯಕೆ. [ಸಂ. ಶ್ಲಾಘಾ]

ಶ್ಲಾಘ್ಯ (ಗು). ೧. ಹೊಗಳತಕ್ಕ ; ಪ್ರಶಂಸೆಗೆ ಅರ್ಹವಾದ. (ನಾ). ೨. ಹೊಗಳಿಕೆ ; ಪ್ರಶಂಸೆ. ೩. ಪ್ರಶಂಸಾರ್ಹವಾದುದು : ಹರಿವ್ಯಭವಶ್ಲಾಘ್ಯ ಮಲ್ಲವಿರಲು ಲಸದಪ್ಸರೋದ್ಯಾನ ಸೌಭಾಗ್ಯಮೊಂದಿರದೊಡೆಸೆವ ರಾಜೇಂದ್ರಂಗೆ ಸೊಗಸು ವೀಡಾಗಿ ರಂಜಿಸದೊಡೀ ಹಸ್ತಿನಾವತಿಯನಮರಾವತಿಗ ಸರಿಯೆಂಬರೇ ಪ್ರೌಢರು (ಚಿವಿಜಿಭಾ. ೨-೧೧). ೪. ಉತ್ಪಪ್ಪವಾದುದು ; ಶ್ರೇಷ್ಠವಾದುದು : ಶ್ಲಾಘ್ಯದಿಂದಾದ ಮಜ್ಜನ ಭೋಜನದ ಸದಾರೋಗ್ಯದಿಂ . . . ಅರಸನಿರುತಿರ್ದನು (ಚಿವಿಜಿಭಾ. ೮-೯). [ಸಂ.]

ಶ್ಲಿಷ್ಟ (ಗು). ೧. ಸೇರಿದ ; ಹತ್ತಿದ : ಅಪರಿಭಿನ್ನಾಂತ ಶ್ಲಕ್ಷ್ಣಶ್ಲಿಷ್ಟ ಸನ್ನಿಕಾಂತರ ಸುಸನ್ನಿವಿಷ್ಟ ಸುಸಂವೃತ್ತಾಂತದರ್ಧ ಚಂದ್ರಾಕಾರವಿಂಶತಿನಖನುಂ (ಆದಿಪು. ೧೨-೫೬ ವ). (ನಾ). ೨. [ಕಾವ್ಯಮಿಾ] ಅರ್ಥಾಲಂಕಾರಗಳಲ್ಲಿ ಒಂದು ; ಒಂದೇ ಶಬ್ದಾನುಪೂರ್ವಿಯಲ್ಲಿ ಅನೇಕ ಅರ್ಥಗಳನ್ನಿಟ್ಟು ವರ್ಣಿಸುವುದು ; ಶ್ಲೇಷೆ : ವಾಸ್ತವಮುಪಮೆಯತಿಶಯಂ ಶ್ಲಿಷ್ಟ[ಪಾಠಾಂ. ಶ್ಲೇಷ]ವೆಂದು ನಾಲ್ಕುಂ ಪ್ರಕಾರದಿಂ ನೆಱೆದಿರ್ಕುಂ (ಕಾವ್ಯಾವ. ೬೦೫); ಪದವೆಂದನೇಕಮರ್ಥಂ ಪುದಿದಿರೆ ತಾಂ ಶ್ಲಿಷ್ಟಂ ಅದುವೆ ಭಿನ್ನಮಭಿನ್ನಂ (ಉದಯಾ. ೫೪). [ಸಂ.]

ಶ್ಲಿಷ್ಟರೂಪಕ (ನಾ). [ಕಾವ್ಯಮಿಾ] ಶ್ಲೇಷೆಯಿಂದ ಕೂಡಿದ ರೂಪಕಾಲಂಕಾರ : ಶ್ಲೇಷಮೂಲಕವಾದ ರೂಪಕಕ್ಕೆ 'ಶ್ಲಿಷ್ಟರೂಪಕ'ವೆಂದು ಹೆಸರು (ಕೃವಿಡಿ. ೨೮೫). [ಸಂ.]

ಶ್ಲಿಷ್ಟಾಕ್ಷರ (ನಾ). ಸಂಧಿಯಾಗುವ ಅಕ್ಷರ, — ವರ್ಣ : ಸನ್ನತಮಪರಾರ್ಧಂ ಸಂಪನ್ನಂ ಶ್ಲಿಷ್ಟಾಕ್ಷರೋಪರಚಿತಮದೋಷಂ (ಕವಿರಾ. ೧-೯೭). [ಸಂ.]

ಶ್ಲೀಪದ (ನಾ). ೧. ಆನೆಯ ಕಾಲಿನಂತೆ ಕಾಲು ಊದಿಕೊಳ್ಳುವ ಒಂದು ಬಗೆಯ ರೋಗ ; ಆನೆಕಾಲು ರೋಗ : "ಶ್ಲೀಪದಂ, ಪಾದವಲ್ಮೀಕಂ — ಈ ೨ ಒಜೆಲಿಗಾಲ್" (ಹಲಾಯು. ೧೪-೪೫೦). ೨. ಒಂದು ಬಗೆಯ ಚರ್ಮರೋಗ ; ವಿಸರ್ಪ : "ಶ್ಲೀಪದಂ ವಿಸರ್ಪಮೆನೆ ವಿಷಭಮಕ್ಕುಂ" (ಮಂಗರಾ. ೧೧೩-೨); ಗೋಮೂತ್ರದಲ್ಲಿ ಅಣಲೆಕಾಯ ಕಲ್ಕವ ಮಾಡಿ ಕೊಡಿಸಲು ಶ್ಲೀಪದವೆಂಬ ಗ್ರಂಥಿಗಳು ಶಮನವಹವು (ವೈದ್ಯಸಾ. II. ೧೬೯). [ಸಂ.]

ಶ್ಲೇಷ (ನಾ). ೧. ಸೇರುವಿಕೆ ; ಕೂಡುವಿಕೆ : "ಸಂಧಿಃ, ಶ್ಲೇಷಃ — ಸಂಬಂಧಿಸೋಣವು, ಕೂಡಿ ಬೆರತಂತೆ ಸೇರುವಿಕೆ" (ಸಿದ್ಧಾಂತಿ. ೩೫೮). ೨. ಅಪ್ಪುಗೆ ; ಆಲಿಂಗನ. ೩. [ಕಾವ್ಯಮಿಾ] ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಕೊಡುವ ಶಬ್ದಗಳ ಜೋಡಣೆ ; ಶಬ್ದ ಮತ್ತು ಅರ್ಥಾಲಂಕಾರದ ಒಂದು ಭೇದ : ನಾನಾರ್ಥವೀಕರೂಪಾಧೀನವಚೋರಚಿತಮಪ್ಪೊಡಕ್ಕುಂ ಶ್ಲೇಷಂ . . . ಉದಯಾರೂಢಂ ಕಾಂತ್ಯಾಸ್ಪದನನುರಕ್ತಾತ್ಮಮಂಡಳಂ ಕುಮುದಕರಂ ಮೃದುತರ ಕರಂಗಳಿಂದತಿಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ (ಕವಿರಾ. ೩-೧೦೮, ೧೦೯); ಪ್ರಮರಾರ್ಥಾಲಂಕಾರಂ ವಿವಿಧವಿಕಲ್ಪ ಪ್ರಪಂಚಿತಂ ಕ್ರಮದಿಂ ವಾಸ್ತವಮುಪಮೆಯತಿಶಯಂ ಶ್ಲೇಷ[ಪಾಠಾಂ. ಶ್ಲಿಷ್ಟ]ವೆಂದು ನಾಲ್ಕುಂ ಪ್ರಕಾರದಿಂ ನೆಱೆದಿರ್ಕುಂ (ಕಾವ್ಯಾವ. ೬೦೫). ೪. ವೈದರ್ಭಮಾರ್ಗದ ಹತ್ತು ಶಬ್ದಗುಣಗಳಲ್ಲಿ ಒಂದು : ಶ್ಲೇಷ — ಪದಗಳು ಅನೇಕವಿದ್ದರೂ ಅವೆಲ್ಲವೂ ಹೊಂದಿಕೊಂಡು ಒಂದೇ ಪದದಂತೆ ತೋರುತ್ತಿರುವುದು (ಕೃವಿಡಿ. ೨೩೩); ಶ್ಲೇಷ, ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿ ಈ ಹತ್ತುಗುಣಗಳೇ ವೈದರ್ಭಮಾರ್ಗದ "ಪ್ರಾಣ" (ಭಾರಮಿ. ೨೯). ೫. ವೈದರ್ಭಮಾರ್ಗದ ಹತ್ತು ಅರ್ಥಗುಣಗಳಲ್ಲಿ ಒಂದು : ಶ್ಲೇಷ — (ಚತುರನಾದವನ) ಕಾರ್ಯ ಕೌಟಿಲ್ಯಾದಿ ಚಮತ್ಕಾರವಾದ ಘಟನೆಗಳು (ಕೃವಿಡಿ. ೨೩೫). ೬. [ನಾಟ್ಯ] ಇಪ್ಪತ್ತು ಬಗೆಯ ಹಸ್ತಭೇದಗಳಲ್ಲಿ ಒಂದು : ಧೂನನ, ಶ್ಲೇಷ, ವಿಶ್ಲೇಷ, ಕ್ಷೇಪ, ರಕ್ಷಣ . . . ಆಹ್ವಾನ, ತರ್ಜನ — ಈ ಇಪ್ಪತ್ತು ಕರಕರ್ಮಭೇದಂಗಳ್ (ಅಸ್ಯರಂ. ೪-೧೩ ವ). [ಸಂ.]

ಶ್ಲೇಷರೂಪಕ (ನಾ). [ಕಾವ್ಯಮಿಾ] ಶ್ಲೇಷಾರ್ಥದಿಂದ ಕೂಡಿದ ರೂಪಕಾಲಂಕಾರ : ಕುಮುದಾನಂದನಕರವತಿಕಮಲಾಕರರಾಗಹರಮುದಾರಂ ನಿನ್ನಾ ವಿಮಳ ಯಶೋವಿಭುವೆಂಬುದು ಕಮನೀಯಂ ಶ್ಲೇಷರೂಪಕಾಲಂಕಾರಂ — (ಶ್ಲೇಷರೂಪಕಂ) (ಕವಿರಾ. ೩-೨೧). [ಸಂ.]

ಶ್ಲೇಷಾಕ್ಷೇಪ (ನಾ). [ಕಾವ್ಯಮಿಾ] ಆಕ್ಷೇಪಾಲಂಕಾರಗಳಲ್ಲಿ ಒಂದು: ಶ್ಲೇಷೆಯ ಮೂಲಕ ಪ್ರಸಿದ್ಧವಾದ ಅರ್ಥವನ್ನು ವಿರೋಧಿಸುವ ಅಲಂಕಾರ: ಸರಸಿಜವಿರೋಧಿ ಕಾಂತ್ಯಾಕರಮಮೃತಮಯಂ ತ್ವದೀಯ ಮುಖಶಶಿಯುಂಟಾಗಿರೆ ಶಶಿಯದೇವುದಂಬುದು ನಿರುತಂ ಶ್ಲೇಷಾನುವಿದ್ಧಮವ್ಯಾಕ್ಷೇಪಂ (ಶ್ಲೇಷಾಕ್ಷೇಪಂ) (ಕವಿರಾ. ೩-೧೦೨). [ಸಂ.]

ಶ್ಲೇಷಾರ್ಥಾಂತರನ್ಯಾಸ (ನಾ). [ಕಾವ್ಯಮಿಾ] ಶ್ಲೇಷೆಯಿಂದ ಕೂಡಿದ್ದು, ಸಾಮಾನ್ಯಾರ್ಥ ಹಾಗೂ ವಿಶೇಷಾರ್ಥಗಳೆರಡೂ ಒಂದರಿಂದ ಒಂದು ಸಮರ್ಥಿತವಾಗುವ ಅಲಂಕಾರ : ದಿನನಾಯಕನಪರದಿಗಂಗನೆಯೊಳ್ ನೆರೆದುದಿತರರಾಗನಾದಂ ಪೀನಂ ಜನಿಯಿಸುಗುಮಧಿಕರಾಗಮನೆನಸುಮಪಕ್ರಮದ ವಾರುಣೀ ಸಂಶ್ಲೇಷಂ (ಶ್ಲೇಷಾರ್ಥಾಂತರನ್ಯಾಸಂ) (ಕವಿರಾ. ೩-೩೪). [ಸಂ.]

ಶ್ಲೇಷಾರ್ಥಿ (ನಾ). ಮಾತಿನಲ್ಲಿ ಎರಡುರೀತಿಯ ಅರ್ಥಗಳ ಕಡೆ ಗಮನ ಕೊಡುವವನು : ಶ್ಲೇಷಾರ್ಥಿಯವಳ ನುಡಿಯಂ ಶ್ಲೇಷಮನಭಿರೂಪರೂಪಮಂ ಬಯಸುವವಂ . . . ಈ ತೆಱದೆ ಮಾಡಿ ಧೂರ್ತಂ ನುಡಿದಂ (ಪಾರ್ಶ್ವಪು. ೩-೮೯).

[ಸಂ. ಶ್ಲೇಷಾರ್ಥಿನ್]

ಶ್ಲೇಷಾಲಂಕಾರ (ನಾ). [ಕಾವ್ಯಮಿಾ] ಒಂದು ಬಗೆಯ ಶಬ್ದಾಲಂಕಾರ ; ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಕೊಡುವ ಶಬ್ದಗಳ ಜೋಡಣೆಯನ್ನು ಉಳ್ಳ ಅಲಂಕಾರ : ಒಂದೇ ಶಬ್ದಾನುಪೂರ್ವಿಯಲ್ಲಿ ನಾನಾರ್ಥಗಳನ್ನಿಟ್ಟು ಆ ಅರ್ಥಗಳ ಮೂಲಕ ಬೇರೆಬೇರೆ ವಸ್ತುಗಳನ್ನು ವರ್ಣಿಸುವುದು ಶ್ಲೇಷಾಲಂಕಾರ (ಕೃವಿಡಿ. ೨೭೩). [ಸಂ.]

ಶ್ಲೇಷೆ (ನಾ). = ಶ್ಲೇಷ ೩ : ಶ್ಲೇಷೆ — ಒಂದೇ ಶಬ್ದಾನುಪೂರ್ವಿಯಲ್ಲಿ ನಾನಾರ್ಥಗಳನ್ನಿಟ್ಟು . . . ವರ್ಣಿಸುವುದು ಶ್ಲೇಷಾಲಂಕಾರ (ಕೃವಿಡಿ. ೨೭೩). [ಸಂ. ಶ್ಲೇಷಾ]

ಶ್ಲೇಷೋಪಮೆ (ನಾ). [ಕಾವ್ಯಮಿಾ] ಶ್ಲೇಷಾರ್ಥದ ಮೂಲಕ ಸಾದೃಶ್ಯವನ್ನು ಕಲ್ಪಿಸುವಿಕೆ ; ಶ್ಲೇಷೆಯಿಂದ ಕೂಡಿದ ಉಪಮಾಲಂಕಾರ : ವರಮಶ್ರೀನಿಳಯಂ ಶಶಧರಕಾಂತಿವಿರೋಧಿ ರೋಚಿವದನಂ ನಿನ್ನಾ ಸರಸಿರುಹದವೋಲೆಂಬುದು ನಿರುತಂ ಶ್ಲೇಷೋಪಮಾವಿಕಲ್ಪವಿಶೇಷಂ — (ಶ್ಲೇಷೋಪಮ) (ಕವಿರಾ. ೩-೭೨); ಶ್ಲೇಷೋಪಮೆಗೆ — ಸಮವೃತ್ತ ಸಂಧಿಲಕ್ಷಣ ಸಮನ್ವಿತಂ ಜಾತ್ಯಲಂಕೃತಿಭ್ರಾಜತಮುತ್ತಮಕಾವ್ಯಬಂಧದಂತಾದಮಸಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್ (ಕಾವ್ಯಾವ. ೬೭೦). [ಸಂ. ಶ್ಲೇಷೋಪಮಾ]

ಶ್ಲೇಷ್ಮ (ನಾ). ೧. ವಾತ, ಪಿತ್ತ, ಶ್ಲೇಷ್ಮಗಳೆಂಬ ಶರೀರದಲ್ಲಿರುವ ಮೂರು ಧಾತುಗಳಲ್ಲಿ ಒಂದು ; ಕಫ : "ಶ್ಲೇಷ್ಮದಲ್ಲಿಯುಂ ಪೇಟುವೆಂಬುದು" (ಹಲಾಯು. ೧೩೨-೬); ಏನೆಂಬೆಂ ಬಾಲ್ಮದೊಳ್ ಮೇಲಱೆಯದೆ ಮಲದಿಂ ಮೂತ್ರದಿಂ ಶ್ಲೇಷದಿಂ ತೊಯ್ದಾನಾರೆಂದೇನುಮಾಂ ಭಾವಿಸದೆ ಬಧಿರನಂತಂಧನಂತಿರ್ದು (ರಕ್ಷಾಶ. ೪); ಘನಕಪ್ಪದಿಂದವಂ ನಾಲಗೆಯನಜರಂಧ್ರಕಿಟ್ಟು ಶ್ಲೇಷ್ಮವನೆ ಸವಿದು (ಪ್ರೌಢರಾ. ೧-೮); ಕಣ್ಣು ಉರಿಗೆಂಡವಾಗಿ ಅಂಗುಳು ಹುರಿಹೆಂಚಾಗಿ ಗಂಟಲು ಶ್ಲೇಷ್ಮದ ಕೆಸರಿನಲ್ಲಿ ಅಡಗಿಹೊಗುತ್ತದೆ (ನಂಬರು. ೩೪). ೨. ಶೀತ ; ಥಂಡಿ. [ಸಂ. ಶ್ಲೇಷ್ಮನ್]

ಶ್ಲೇಷ್ಮಕ್ಷಯ (ನಾ). ದೇಹದಲ್ಲಿ ಕಫವು ಕಡಮೆಯಾಗುವುದರಿಂದ ಉಂಟಾಗುವ ಒಂದು ಬಗೆಯ ಕ್ಷಯರೋಗ : ಊರ್ಧ್ವವಾಗಿ ಏರುವ ಶ್ವಾಸವುಳ್ಳುದೆ ಶ್ಲೇಷ್ಮಕ್ಷಯಲಕ್ಷಣಂ (ಸಶ್ರು. ೨೪೬). [ಸಂ.]

ಶ್ಲೇಷ್ಮಶ್ವಾಸ (ನಾ). ಕಫದಿಂದ ಕೂಡಿದ ಕೆಮ್ಮು : ಉಗುಳು ಶ್ವೇತವರ್ಣವಾಗಿ ಬಹಳ ಶ್ಲೇಷ್ಮದಿಂ ಕೂಡಿಕೊಂಡಿಹುದೆ ಶ್ಲೇಷ್ಮಶ್ವಾಸ (ಸಶ್ರು. ೨೦೬). [ಶ್ಲೇಷ್ಮ + ಶ್ವಾಸ]

ಶ್ಲೇಷ್ಮಗುಲ್ಮ (ನಾ). ಕಫದೋಷದಿಂದ ಹೊಟ್ಟೆಯು ಊದಿಕೊಳ್ಳುವ ಒಂದು ಬಗೆಯ ರೋಗ ; ಗಡ್ಡೆರೋಗ : ಮೆಣಸು, ಬೆಳ್ಳುಳ್ಳಿ, ಇಂಗು, ಎಲೆಗಳ್ಳಿಯ ಹಾಲು . . . ಯವಕ್ಷಾರ, ಇವು ಎಲ್ಲವನ್ನು ಸಮಾನಂಗೊಂಡು ನೀರಲ್ಲಿ ಅರೆದು ಗುಳಿಗೆ ಮಾಡಿ

ಏಳುದಿನ ನುಂಗೆ ಎಂಥಾ ಗುಲ್ಮ, ಶ್ಲೇಷ್ಮಗುಲ್ಮ, ಸನ್ನಿಪಾತಗುಲ್ಮ ಇವು ಎಲ್ಲಾ ಮಾಣುವುವು (ಏಪ್ರಿವಿ ೧೨೭). [ಸಂ.]

ಶ್ಲೇಷ್ಮಗ್ರಹಣಿ (ನಾ). ಕಫದೋಷದಿಂದ ಉಂಟಾಗುವ ಅತಿಸಾರ : ಕಚೋರ, ಶುಂಠಿ . . . ಸೈಂಧವಲವಣ, ಮಾದಳದ ಹಣ್ಣಿನ ಕೇಸರ ಸಹ ಇವಂ ಬಿಸಿನೀರಿನಿಂದರೆದು ಕುಡಿಯೆ ಶ್ಲೇಷ್ಮಗ್ರಹಣಿ ಹರ (ಸಕವ್ಯ. ೩೪೮). [ಸಂ. ಶ್ಲೇಷ್ಮಗ್ರಹಣೀ]

ಶ್ಲೇಷ್ಮಚರ್ಮ (ನಾ). ತಣ್ಣಗಿರುವ ಚರ್ಮ, — ತೊಗಲು : ನೋಡುತಿರೆ ರಾಘವಂ, ಮೂಡಿತೊಂದಕಶೇರುಕಶ್ಮಲಸರೀಸೃಪಂ ಮಂಜೆ ಮೈಗೊಂಡಂತೆವೋಲ್ ಶ್ಲೇಷ್ಮಚರ್ಮವಿಂ ಭೀಕರತೆವೆತ್ತುದಾ ವಿಕೃತತಿರ್ಯಗ್ಯೋನಿ (ಶ್ರೀರಾಮಾ. ೨೬೪-೩೯).

[ಸಂ. ಶ್ಲೇಷ್ಮಚರ್ಮನ್]

ಶ್ಲೇಷ್ಮಜಿಹ್ವೆ (ನಾ). ನಾಲಗೆಯಲ್ಲಿ ಮುಳ್ಳುಗಳೇಳುವ ಒಂದುಬಗೆಯ ರೋಗ : ಬೂರಗದ ಮರದ ಮುಳ್ಳಿನ ಹಾಗೆ ಮುಳ್ಳುಂಟಾಗಿದ್ದುದು ಶ್ಲೇಷ್ಮಜಿಹ್ವೆ ಎನಿಸಿಕೊಂಬುದು (ವೈದ್ಯಸಾ. II. ೧೦೭). [ಸಂ. ಶ್ಲೇಷ್ಮಜಿಹ್ವ]

ಶ್ಲೇಷ್ಮಜ್ವರ (ನಾ). ಕಫದೋಷದಿಂದುಂಟಾಗುವ ಜ್ವರ : ಶುಂಠಿ, ಹಿಪ್ಪಲಿ . . . ಜೀರಿಗೆ, ಲವಂಗ ಇವುಗಳನ್ನು ಸಮಾಂಶವಾಗಿ ಅರೆದು ಜೇನುತುಪ್ಪಗೂಡಿ ಸೇವಿಸೆ ಶ್ಲೇಷ್ಮಜ್ವರ ನಾಶವಾಗುವುದು (ಸಕವ್ಯ. ೮೭). [ಸಂ.]

ಶ್ಲೇಷ್ಮಣ (ಗು). ೧. ಕಫಸಂಬಂಧವಾದ. (ನಾ). ೨. ಶ್ಲೇಷ್ಮವ್ಯಾಧಿಯುಳ್ಳವನು ; ಕಫಸಂಬಂಧವಾದ ರೋಗವುಳ್ಳವನು : "ಶ್ಲೇಷ್ಮಲಃ, ಶ್ಲೇಷ್ಮಣಃ, ಕಫೀ - ೩ ಶ್ಲೇಷ್ಮವ್ಯಾಧಿಯುಳ್ಳವನ ಹೆಸರುಗಳು" (ಸಿದ್ಧಾಂತಿ. ೧೮೬). [ಸಂ.]

ಶ್ಲೇಷ್ಮನಾಡಿ (ನಾ). ಕಫದ ಆಧಿಕ್ಯವನ್ನು ಸೂಚಿಸುವ ನಾಡಿ : ಶ್ಲೇಷ್ಮನಾಡಿಯು ಏಕತಾಳದ ಹಾಗೆ ಸ್ಥಿರವಾಗಿ ಆಡುವುದು (ಸಕವ್ಯ. ೧೧). [ಸಂ.]

ಶ್ಲೇಷ್ಮರಾಜಚೂರ್ಣ (ನಾ). ಕಫವನ್ನು ಹೋಗಲಾಡಿಸುವ ಒಂದು ಬಗೆಯ ಪುಡಿ, — ಚೂರ್ಣ : ಶ್ಲೇಷ್ಮರಾಜಚೂರ್ಣ — ಹಿಪ್ಪಲಿ, ಶುಂಠಿ, ಗಂಟುಭಾರಂಗಿ, ಅಜಾಮೋದ, ಮೆಣಸು, ಜೀರಿಗೆ . . . ಸೇವಿಸುತ್ತ ಬರಲು ಖಾಸ, ಶ್ವಾಸ, ಮಂದಾಗ್ನಿ, ಕ್ಷಯ, ಪಾಂಡು . . ಅಹಿಕ ತ್ರ್ಯಾಹಿಕ ಚಾತುರ್ಥಿಕಜ್ವರ ಮುಂತಾಗಿ ಶೀಘ್ರದಿಂ ಗುಣಮಕ್ಕುಂ (ಸಕವ್ಯ. ೨೧೫). [ಸಂ.]

ಶ್ಲೇಷ್ಮರೋಗ (ನಾ). ಕಫದ ಆಧಿಕ್ಯದಿಂದುಂಟಾಗುವ ರೋಗ : ತಲೆ ಅತ್ಯಂತ ಭಿನ್ನಂತಪ್ಪುದುಂ . . . ಶ್ವಾಸ, ಕೆಮ್ಮು ಇನಿತು ಶ್ಲೇಷ್ಮರೋಗಲಕ್ಷಣ (ಏಪ್ರಿವಿ. ೧೮೯).

[ಸಂ.]

ಶ್ಲೇಷ್ಮಲ, ಶ್ಲೇಷ್ಮಳ (ನಾ). = ಶ್ಲೇಷ್ಮಣ ೨ : "ಶ್ಲೇಷ್ಮಲಃ, ಶ್ಲೇಷ್ಮಣಃ, ಕಫೀ - - ೩ ಶ್ಲೇಷ್ಮವ್ಯಾಧಿಯುಳ್ಳವನ ಹೆಸರುಗಳು" (ಸಿದ್ಧಾಂತಿ. ೧೮೬). **ಶ್ಲೇಷ್ಮಳ:** "ಶ್ಲೇಷ್ಮೋಪೇತಂ ಶ್ಲೇಷ್ಮಳಂ" (ವಸ್ತುಕೋ. ೭೩-೩೭). [ಸಂ.]

ಶ್ಲೇಷ್ಮಳ 'ಶ್ಲೇಷ್ಮಲ' ನೋ.

ಶ್ಲೇಷ್ಮಾತಕ (ನಾ). ಒಂದು ಬಗೆಯ ಮರ ; ಚಳ್ಳೆಮರ : "ಶೇಲು ಶ್ಲೇಷ್ಮಾತಕ ತರು ಪೀಲುವೆನಲ್ಲಿಡಫಲಂ" (ವಸ್ತುಕೋ. ೩೪-೮). [ಸಂ.]

ಶ್ಲೇಷ್ಮಾತಿಸಾರ (ನಾ). = ಶ್ಲೇಷ್ಮಗ್ರಹಣಿ : ನೋವು ಉಂಟಾಗಿ ನಯವಾಗಿ ಮಿಂಟಾಗಿ ಗಟ್ಟಿಯಾಗಿ ನಿಬಿಡವಾಗಿ ಅಡಿಗಡಿಗೆ ತೀವ್ರಗೈವುತ್ತಿಹುವುದೆ ಶ್ಲೇಷ್ಮಾತಿಸಾರವೆನಿಸಿಕೊಂಬುದು (ಸಕವ್ಯ. ೩೦೬). [ಸಂ.]

ಶ್ಲೋಕ (ನಾ). ೧. ಸ್ತೋತ್ರರೂಪವಾದ ಪದ್ಯ : ಶ್ಲೋಕಾರ್ಥೋಪನ್ಯಾಸ ಶ್ಲಾಘ್ಯನಿನಾದಮುದಮಾಗಳ್ ನವಮಾರ್ಗೀಶ್ಲೇಷಂ ಮಿಗೆ ತೋಱಲುಪಶ್ಲೋಕಿಸಿ ದಿಂಬಲಿಕ್ಕೆ ಕೊಟ್ಟು ಶೇಷಾಕ್ಷತಮಂ(?) (ಸುಕುಮಾ. ೨-೭೪). ೨. ಕೀರ್ತಿ ; ಪ್ರಸಿದ್ಧಿ : 'ಕೀರ್ತಿಃ, ಶ್ಲೋಕಃ, ಯಶಃ, ಅಭಿಖ್ಯಾ, ಸಮಖ್ಯಾ -- ಈ ೫ ಕೀರ್ತಿಯ ಪೆಸರ್" (ಹಲಾಯು. ೨೯-೧೫೨). ೩. [ಛಂದ] ಎಂಟು ಅಕ್ಷರಗಳುಳ್ಳ, ನಾಲ್ಕು ಪಾದಗಳಿಂದ ಕೂಡಿದ. ಅನುಷ್ಟುಭ್ ಛಂದಸ್ಸಿನ ಒಂದು ವೃತ್ತ ; IP ಇದರಲ್ಲಿ ಪ್ರತಿಪಾದದ ೫.೬ನೆಯ ಅಕ್ಷರಗಳು ಕ್ರಮವಾಗಿ ಲಘು ಮತ್ತು ಗುರುವಾಗಿದ್ದು, ೧, ೨, ೪ನೆಯ ಪಾದಗಳ ೭ನೆಯ ಅಕ್ಷರ ಲಘುವಾಗಿರಬೇಕು : ಯಮಕಂ [ಪ]ದಾಪಾದಾರ್ಧ ಸಮಶ್ಲೋಕ[ಸು]ಗೋಚರಂ (ಕವಿಪಾ. ೨-೧೫೯) ; ಅಯ್ದಾಜೇಚೆಂಬೆಡೆಯೊಳಮಯ್ದುಗೆ ಗುರು ಲಘು ಕರಾಬ್ಧಿಪದ [ಪಂಚಕ]ದೊಳ್ ಮೆಯ್ದೋಱುಗೆ ಲಘುಲಕ್ಷಣಮೆಯ್ದುಗೆ ಪರಿಪೂರ್ಣಮಷ್ಟವರ್ಣಂ ಶ್ಲೋಕಂ (ಛಂದೋಂಬು. ೩-೨೧೭). ೪. ಲೌಕಿಕಕಾವ್ಯಗಳಲ್ಲಿ ಬಳಕೆಯಾಗುವ ಎರಡು ಪಾದಗಳಿಂದ ಕೂಡಿದ ಪದ್ಯ : ಶ್ಲೋಕ: — ಕಡೆಕಡೆಗೆ ಇದು ಎರಡೇ ಪಾದಗಳಾಗಿ, ಮೊದಲನೆಯ ಮತ್ತು ಮೂರನೆಯ ಪಾದಗಳ ಕಡೆಯ ಗಣದ ದ್ವಿಲಗು (U -. U -) ಲಕ್ಷಣ ಮಾರ್ಪಟ್ಟು ಲೌಕಿಕ ಕಾವ್ಯದ ಶ್ಲೋಕವಾಯಿತು (ಕೈಪಿಡಿ. ೧೦೭). [ಸಂ.]

ಶ್ವದಂಷ್ಟ್ರೆ (ನಾ). ಒಂದು ಬಗೆಯ ಔಷಧೀಸಸ್ಯ ; ನೆಗ್ಗಿಲು : "ಗೋಕ್ಷುರಃ, ಸ್ಥಳಶೃಂಗಾಟಃ, ಶ್ವದಂಷ್ಟ್ರಾ, ತ್ರಿಕಂಟಕಃ — ಈ ೪ ನೆಗ್ಗಿಲು" (ಹಲಾಯು. ೩೩-೪೮).

[ಸಂ. ಶ್ವದಂಷ್ಟ್ರಾ]

ಶ್ವನಿಶ (ನಾ). (ನಾಯಿಗಳು ಬಗುಳುವ) ಅಮಾವಾಸ್ಯೆಯ ಹಿಂದಿನ ರಾತ್ರಿ ; ಕೃಷ್ಣಚತುರ್ದಶಿ : "ಶ್ವನಿಶವೆಂದರೆ ಕೃಷ್ಣಚತುರ್ದಶೀ" (ಸಿದ್ಧಾಂತಿ. ೪೫೮).

[ಸಂ.]

ಶ್ವಪಚ (ನಾ). ನಾಯಿಯನ್ನು ಬೇಯಿಸಿ ತಿನ್ನುವವನು ; ಚಂಡಾಲ : ಚತುರ್‌ವೇದಿಯಾದರೇನು ಲಿಂಗವಿಲ್ಲದವನೇ ಹೊಲೆಯ ಶ್ವಪಚನಾದರೇನು ಲಿಂಗವಿದ್ದವನೇ ವಾರಣಾಸಿ (ಬಸವ. ೬೦೭); ಪೊಡವಿಪತಿ ಮಡಿದ ಕೇಡಡಸಿತಲ್ಲದೊಡೆನ್ನ ಗುಪ್ತಮಂಗಳಸೂತ್ರದೆಡೆಯ ಹೊಳೆಹೊಳೆವೈದೆದಾಳಿಯನಿದಂ ಶ್ವಪಚನೆಂತು ಕಂಡಪನೆಂದಳು (ಹಚಕಾ. ೧೨-೩೮). [ಸಂ.]

ಶ್ವಪಚಕ (ನಾ). = ಶ್ವಪಚ : ಆ ಶ್ವಪಚಕರ್ ಬೆದಱಿಯಾ ಗೋವಿನ ಪೃಷ್ಠಭಾಗಕ್ಕೆ ಕಾಯ್ದ ನೀರಂ ತಂದೆಱೆದು (ಪಂಚತಂ. ೧೯-೧೭). [ಸಂ.]

ಶ್ವಪಚಿ (ನಾ). ಚಂಡಾಲಸ್ತ್ರೀ : ಕಾನನಕೆ ಶ್ವಪಚಿ ಸಹಿತಂ ಪೋಗಿ ಬಲದಲ್ಲಿ ತಾನಿರುತ ಮಾರ್ಗದೊಳು ಬರುವವರನಪಹರಿಸಿ ಏನಿರ್ದುದಂ ಕೊಂಡು ಗೋಮಹಿಷಿಗಳ ತಿಂದು ಪಲದಿವಸಮಾಗಲು (ಪ್ರಾಥರಾ. ೧೪-೨೦). [ಸಂ. ಶ್ವಪಚೀ]

ಶ್ವಭ್ರ (ನಾ). ೧. ಕಂಡಿ ; ತೂತು ; ರಂಧ್ರ : "ನಿಮ್ನಂ, ಅಗಾಧಂ, ಗರ್ತಃ, ಶ್ವಭ್ರಂ . . . ದರಃ — ಈ ೧೫ ಬಿಟಿ" (ಹಲಾಯು. ೧೦೩-೨). ೨. ಪಾತಾಳ ; ನರಕ : ಘುಳುಮ್ಮನಿಟಿಗುಂ ಶ್ವಭ್ರಾಂತಮಂ ತಾಪಿನಂ (ಆದಿಪು. ೫-೮೧); ಉರ್ವೀಸುತ[ಂ] ಸ್ಥಾಯಿಯಾದೊಡೆ ಮಂದೇಂದುಜರಾಳ್ದರಾದೊಡಱಿ ನೀಂ ಬಂದಂ ನರಂ ಶ್ವಭ್ರ [ಪಾಠಾಂ. ಸ್ವಭ್ರಮ, ಸ್ವಭ್ರ]ದಿಂ (ಜಾತಕ. ೨೩-೨೫). [ಸಂ.]

ಶ್ವಯಥು (ನಾ). ೧. ಬಾತುಕೊಳ್ಳುವಿಕೆ ; ಊದಿಕೊಳ್ಳುವಿಕೆ. ೨. ಬಾವು ; ಶೋಭೆ : "ಶೋಫಃ, ಶ್ವಯಥುಃ — ಈ ೨ ಬಾ(ವು)ಹು" (ಹಲಾಯು. ೯೦-೪೪೮).

[ಸಂ.]

ಶ್ವಯು (ನಾ). ಒಂದು ಬಗೆಯ ಹಾವು ; ಹೆಬ್ಬಾವು ; ಅಜಗರ : ದಂಡಕನೃಪಂ ಲೋಭಾಭಿಭೂತಂ ವಿಷಾವಿಲದಂಷ್ಟಂ ಶ್ವಯುವಾಗಿ ಪುಟ್ಟಿ ಸುಟಿಗುಂ ಮುಂ ಬಯ್ತ ಭಂಡಾರದೊಳ್ (ಆದಿಪು. ೨-೧೫); ಮೊಗಂಗಳಂ ನೆಗಪಿ ಸುಯ್ದ ಶ್ವಯುನಿಕರದ ಮೇಗೊಗೆವ ನಿಡುಸುಯ್ಯ ಕಡುವೆಂಕಗಳಂ ಕಟಿಪುವುವು ಕಪಿಗಳದಱೊಳ್ ಹಿಮಮಂ (ಚಂದ್ರಪ್ರ. ೫-೫೨). [< ಸಂ. ಶ್ವಯು]

ಶ್ವವೃತ್ತಿ (ನಾ). ೧. ನಾಯಿಯ ಬಾಳು. ೨. ಸೇವೆ ; ಚಾಕರಿ : "ಸೇವಾ, ಶ್ವವೃತ್ತಿಃ — ೨ ಚಾಕರಿ ಮಾಡಿ ಜೀವಿಸುವಿಕೆ" (ಸಿದ್ಧಾಂತಿ. ೨೭೪). [ಸಂ.]

ಶ್ವಶುರ (ನಾ). ಹೆಂಡತಿಯ ಅಥವಾ ಗಂಡನ ತಂದೆ ; ಮಾವ : ಎಲೆ ದೇವಿ ಮತ್ತಿನಳಿಯಂದಿರವೋಲೆನ್ನುವಂ ನಲಿದು ಮನ್ನಿಸನವಂ ಶ್ವಶುರನಾನೆಂದು ತಾನಲರ್ದು ವಂದಿಸನು (ಅರಾಚ. ೩-೧೬-೩). [ಸಂ.]

ಶ್ವಶುರಗೃಹ (ನಾ). ಮಾವನ ಮನೆ : ಆ ಹುಡುಗಿಗೆ ಏನು ಅರ್ಥವಾಯಿತೋ ಏನೋ! ಆದರೆ ಇದಕ್ಕಿಂತ . . ಕಾವ್ಯಮಯವಾದ ಶ್ವಶುರಗೃಹವರ್ಣನೆಯು ಸಾಧ್ಯವಿಲ್ಲ (ಬಂಕಿಮ. ೧೨೬). [ಸಂ.]

ಶ್ವಶುರ್ಯ (ನಾ). ಹೆಂಡತಿಯ ಅಥವಾ ಗಂಡನ ಸಹೋದರ; ಭಾವಮೈದುನ: "ಶ್ವಶುರ್ಯಃ -- ೧. ಗಂಡನ ಒಡಹುಟ್ಟಿದವನು. ೨. ಹೆಂಡತೀ ಒಡಹುಟ್ಟಿದವನು" (ಸಿದ್ಧಾಂತಿ. ೪೦೮). [ಸಂ.]

ಶ್ವಶ್ರು (ನಾ). ಹೆಂಡತಿಯ ಅಥವಾ ಗಂಡನ ತಾಯಿ ; ಅತ್ತೆ : "ಶ್ವಶುರ ಶ್ವಶ್ರೂನಾಮವದೆಸಗುಂ ಕೂಸಿತ್ತ ಮಾವನೊಳಮತ್ತೆಯೊಳಂ" (ವಸ್ತುಕೋ. ೫೬-೨೪). [ಸಂ. ಶ್ವಶ್ರೂ]

ಶ್ವಸನ (ನಾ). ೧. ಉಸಿರಾಡುವಿಕೆ ; ಉಸಿರಾಟ. ೨. ಉಸಿರು ; ಶ್ವಾಸೆ. ೩. ಗಾಳಿ ; ವಾಯು : ಯಮುನಾನದೀತರಂಗಮನಮುಂಕಿ ವನಲತೆಯ ಮನೆಗಳಂ ಸೋಂಕಿ ವನಭ್ರಮಣಪರಿಶ್ರಮಮಂ ಮುನ್ನಮೆ ಕಳೆದುದು ಬಂದದೊಂದು ಮಂದಶ್ವಸನಂ (ಪಂಪಭಾ. ೫-೫೩); ಶ್ವಸನನುಮರ್ಕಪ್ರಭೆಯುಂ ನುಸುಳದೆನಲ್ ಪಾಯ್ದ ಕಣೆಯ ಕಣೆಗಟ್ಟಲೆಯೊಳ್ ಮಿಸುಪ ಕಲಧೌತಪುಂಖಪ್ರಸರಂ ಖದ್ಯೋತತತಿವೊಲಾದುದು ನಭದೊಳ್ (ಜಗವ. ೧೨-೧೨). ೪. ಶ್ವಾಸರೋಗ ; ಉಬ್ಬಸ : ಬಿಸರುಹಸಖನಿರೆ ಮಕರದೊಳಸದ್ಗ್ರಹದ್ವಿತಯಮಿರೆ ನಿಶಾನಾಥ'ಂಗಿರ್ದೆಸೆಯೊಳ್ ಮನುಜಂ ಪ್ಲೀಹ ಶ್ವಸನ ಕ್ಷಯ ಗುಲ್ಮವಿದ್ರಧಿವ್ಯಾಧಿಯುತಂ (ಜಾತಕ. ೨೧-೧೩). ೫. ಒಂದು ಬಗೆಯ ಮುಳ್ಳುಗಿಡ; ಮಂಗಾರೆಗಿಡ : "ಪಿಂಡೀತಕಃ . . . ಶ್ವಸನಃ — ಮಂಗಾರೆಗಿಡದ ಹೆಸರು" (ಸಿದ್ಧಾಂತ. ೧೫೪). ೬. [ಛಂದ] ಆದಿಯಲ್ಲಿ ಎರಡು ಲಘುಗಳೂ ನಂತರ ಒಂದು ಗುರುವೂ ಬರುವ ಅಕ್ಷರಗಣ ; ಸಗಣ (UU–) : ಶ್ವಸನೇಂದುಜ್ವಲನಾಮರಾವನಿ ಜಲಂ ದೈತ್ಯಾರಿ ಕಾಮಾಂತಕಪ್ರಸರೋದ್ಭಣದಿಂ . . . ಸಂದುದು ಕರಂ ಮತ್ತೇಭವಿಕ್ರೀಡಿತಂ (ಛಂದೋಂಬು. ೨-೧೭೫). [ಸಂ.]

ಶ್ವಸನಪಥ (ನಾ). ಗಾಳಿಯು ಚಲಿಸುವ ದಾರಿ ; ಆಕಾಶ : ಶ್ವಸನಪಥಮಮಳ ಮಾಯ್ತುಂದೊಸಗೆಗಳಂ ಬೀಱುವಂತೆ ಶರದಾಗಮದೊಳ್ (ಕವಿಕಾ. ೨-೭೧). [ಸಂ.]

ಶ್ವಸನಾಶನ (ನಾ). ಗಾಳಿಯನ್ನೇ ಆಹಾರವಾಗಿ ಉಳ್ಳುದು ; ಹಾವು. [ಸಂ.]

ಶ್ವಸಿತ (ಗು). ೧. ಉಸಿರಾಡಿದ. (ನಾ). ೨. ಉಸಿರಾಡುವುದು ; ಉಸಿರಾಟ. ೩. ಉಸಿರು ; ಶ್ವಾಸ : ಪೌರವಧೂಶ್ವಸಿತಪದ್ಮಗಂಧವಿಚಾರಂ . . . ಸುಬ್ಬಿವುದಲ್ಲಿ ಚಾರುಸಮೀರಂ (ಜಗವ. ೨-೨೫); ಶ್ವಸಿತದ ಕಂಪು ಕಂಪನಭವರ್ಧಿಸೆ ಬಣ್ಣದ ಸೊಂಪು ಬಣ್ಣವೇಱಿಸೆ . . . ಮಾಲೆಗೇನೆಸೆದುವೊ ಮಾಲೆಗಾರ್ತಿಯರ ವರ್ತನೆ (ಪುಷ್ಪಪು. ೨-೮೦). ೪. ನಿಟ್ಟುಸಿರು ; ದೀರ್ಘಶ್ವಾಸ. ೫. [ನಾಟ್ಯ] ನೃತ್ಯದ ಒಂದು ಭಂಗಿ ; IP "ಗಡ್ಡವನ್ನು ಒಂದು ಅಂಗುಲದಷ್ಟು ಕೆಳಕ್ಕೆ ಇಳಿಸುವುದು" (ಅಸ್ಕರಂ. ೫೦ ಗದ್ಯಾನುವಾದ) : ನಿಡುಚಿಬುಕಂ ವ್ಯಾದೀರ್ಣಂ ಬಿಡದಂಗುಲದುದ್ದ ಕೆಳಗದಾಗಲ್ ಶ್ವಸಿತಂ (ಅಸ್ಕರಂ. ೩-೧೦೦). [ಸಂ.]

ಶ್ವಾನ (ನಾ). ೧. ನಾಯಿ ; ಶುನಕ : ಶ್ವಾನಂಗಳ್ ಗಂಧಮಾರ್ತಂಡನನತಿಹಿತದಿಂ ಕಾಪುಗೊಂಡಿರ್ದುವು (ಕಾವ್ಯಾವ. ೧೮೩); ಶ್ವಾನಕುಕ್ಕುಟಕಾಕಬಕಪವಮಾನಖಗಪತಿ . . . ಮೃಗಪೋತಕನ ಗುಣವಾ ನರೇಂದ್ರನೊಳಿರಲುಬೇಹುದು (ಕುವ್ಯಾಉ. ೩-೧೦೯); ಮಂಗವನ್ನು ಕೊಬ್ಬಿದ ಶ್ವಾನವೊಂದು ಬೆಂಬತ್ತಿ ಹಿಡಿದು ಕಚ್ಚಿ ಎಳೆದುಬಿಟ್ಟಿತು (ಹೇಮಂತ. ೩೦೦). ೨. [ವಾಸ್ತು] ಕಟ್ಟಡದ ಆಯಪ್ರಮಾಣದಲ್ಲಿ ಅನುಸರಿಸಬೇಕಾದ ಎಂಟು ಆಯ ಪ್ರಕಾರಗಳಲ್ಲಿ ಒಂದು : ಗಜ, ಉಷ್ಟ್ರ (ಒಂಟೆ), ಖರ, ಸಿಂಹ, ವೃಷ, ಧ್ವಜ, ಧೂಮ, ಶ್ವಾನ ಎಂಬ ಆಯಗಳನ್ನರಿತು ನಿರ್ಮಾಣವಾಗತಕ್ಕದೆಂದೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಭಾರದ. ೮೦). 'ಧೂಮಾಯ' ಪರಾ. [ಸಂ.]

ಶ್ವಾನಜ್ಞಾನ (ನಾ). ೧. ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಬುದ್ಧಿ ; ಅಸ್ಥಿರಚಿತ್ತ. ೨. ಹಿಂದಿನ ಜನ್ಮದಲ್ಲಿ ನಡೆದ ಸಂಗತಿಗಳ ನೆನಪನ್ನುಂಟುಮಾಡುವ ಜ್ಞಾನ ; ಜಾತಿಸ್ಮರಣೆ : ಶ್ವಾನಜ್ಞಾನ, ಗಜಜ್ಞಾನ ಕುಕ್ಕುಟಜ್ಞಾನವೆಂಬ ಜ್ಞಾನತ್ರಯಂಗಳೇನಾದುವು (ಬಸವ. ೭೯೮). 'ಗಜಜ್ಞಾನ' ಪರಾ. [ಸಂ.]

ಶ್ವಾನಜ್ಞಾನಿ (ನಾ). ೧. ಚಂಚಲಚಿತ್ತನಾದವನು. ೨. ಪೂರ್ವಜನ್ಮದ ನೆನಪುಳ್ಳವನು ; ಜಾತಿಸ್ಮರ : ಶ್ವಾನಜ್ಞಾನಿಗಳೆಲ್ಲರು ಸಮ್ಯಕ್‌ಜ್ಞಾನವ ಬಲ್ಲರೆ ಲೌಕಿಕಧ್ಯಾನಮೌನಿಗಳೆಲ್ಲರು ಸ್ವಾನುಭಾವಿಗಳಹರೇ (ಮೋಳಮಾ. ೨೦೧-೭೪೮). [ಸಂ. ಶ್ವಾನಜ್ಞಾನಿನ್]

ಶ್ವಾನವೃತ್ತಿ (ನಾ). = ಶ್ವವೃತ್ತಿ ೨ : ಹೀನಸೇವಾವೃತ್ತಿ ಧರೆಯಲಿ ಶ್ವಾನವೃತ್ತಿಯದೆಂತುಟೆಂದರೆ ಶ್ವಾನನಿಜಚಾರಿತ್ರಸೇವಕನಸ್ವತಂತ್ರಕನು (ಕಾಶಿರಾ. ೩೮-೫೮). [ಸಂ.]

ಶ್ವಾಪದ (ನಾ). ೧. ಕ್ರೂರವಾದುದು ; ಉಗ್ರವಾದುದು : "ವ್ಯಾಲಂ ಶ್ವಾಪದ ಭುಜಂಗಮುಂ ಕ್ರೂರಾರ್ಥಂ" (ಮಲ್ಲಿಕೋ. ೧೩೦-೭೫). ೨. ಕ್ರೂರಮೃಗ ; ದುಷ್ಟಪ್ರಾಣಿ : ಅಖಿಲವ್ಯಕವರಾಹಶ್ವಾಪದಂಗಳೇ ಬಲಂಗಳಾಗಿಯುಂ (ಪಂಚತಂ. ೫೫-೯); ಚತುರಮಾತುಳ್ಳ ಸುಕುಮಾರಿ ಮಾರಸತಿಗತಿಶಯದ ರೂಪಾಂತರಣ್ಯದೊಳ್ ಚರಿಪುದೇಂ ಶ್ವಾಪದಂಗಳ ಸಂತೆಯೊಳ್ (ವೆಂಕಾರಾ. ೩-೯-೧೫). ೩. ಹುಲಿ ; ವ್ಯಾಘ್ರ : ಬರುತ್ತಿದೆ ಹೊಸನಾತ ಹತ್ತಿದ ಶ್ವಾಪದ! ಎಲ್ಲಿಯಾದರೂ ಓಡಿ ಹೋಗಬೇಕು (ಕ್ಷತಿಜ. ೧೦೧). [ಸಂ.]

ಶ್ವಾಸ (ನಾ). ೧. ಉಸಿರು : ದೊಡ್ಡನ ಶ್ವಾಸ ಮಾತ್ರ ಆಡುತ್ತಿತ್ತು (ಕಾಲೂರ. ೭ ಕಥಾಸಾರ). ೨. ಉಸಿರುಬಿಡುವುದು : ಶ್ವಾಸಮತಿಮೂರ್ಛೆಯಕ್ಕುಂ ಮಾಸುಗುಮಾನನದ ವರ್ಣಮುಂ . . . ಅಸುರದ ಸಮಿರಣಸ್ಥವಿಷದಿಂ (ಖಮದ. ೫-೨೨); ಶ್ವಾಸದಲ್ಲಿ — ಶ್ವಾಸ, ಉಚ್ಛ್ವಾಸ, ನಿಶ್ವಾಸಗಳೆಂದು ಮೂರುವಿಧಗಳುಂಟು. ಶ್ವಾನವೆಂದರೆ — ಮೂಗಿನಿಂದ ಗಾಳಿಯನ್ನು ಹೊರಗೆ ಬಿಡುವುದು (ಪಸಾರ. ೧-೪ ವಿಶೇಷಾರ್ಥ). ೩. ನಿಟ್ಟುಸಿರು; ದೀರ್ಘಶ್ವಾಸ. ೪. ಗಾಳಿ ; ವಾಯು. ೫. ಗೂರಲು ; ಉಬ್ಬಸ : ತಲೆ ಅತ್ಯಂತ ಭಿನ್ನಂತಪ್ಪುದುಂ . . . ಶ್ವಾಸ, ಕೆಮ್ಮು ಇನಿತು ಶ್ಲೇಷ್ಮರೋಗಲಕ್ಷಣ (ವೈಎ. ೧೮೯). [ಸಂ.]

ಶ್ವಾಸಕ (ನಾ). ಉಚ್ಚಾರಣೆ : "ಶ್ವಾಸಕಂ ಜಿಹ್ವಾರವಂ" (ಮಂಗರಾ. ೯೭-೧೬). [ಸಂ.]

ಶ್ವಾಸಕುಠಾರಚೂರ್ಣ (ನಾ). ಗೂರಲುರೋಗನಿವಾರಕವಾದ ಒಂದು ಬಗೆಯ ಔಷಧಿ : ಶ್ವಾಸಕುಠಾರಚೂರ್ಣ — ಪರಂಗಿಚಕ್ಕೆ, ಗಂಟುಭಾರಂಗಿ, ಶುಂಠಿ, ಮೆಣಸು, ಹಿಪ್ಪಲಿ, ವಾದಕ್ಕಿ, ಜಾಕಾಯಿ, ಜಾಪತ್ರೆ, ಸಬ್ಬಸಿಗೆ . . . ಚೂರ್ಣವ ಮಾಡಿ . . . ಈ ಬಗೆಯ ಸೊಪ್ಪುಗಳ ರಸದಲ್ಲಿ ಪ್ರತ್ಯೇಕ ಮೂರು ಭಾವನೆಯಂ ಮಾಡಿ ನೆಳಲಲ್ಲಿ ಒಣಗಿಸಿ ನಿತ್ಯವೂ ೧ ತೂಕವಂ ತೆಗೆದುಕೊಳ್ಳೆ, ಶ್ವಾಸಪಾಸ ಹರ (ಸಕ್ಕ. ೨೩೭). [ಸಂ.]

ಶ್ವಾಸಕೋಶ (ನಾ). ಉಸಿರಾಟಕ್ಕೆ ಸಹಕಾರಿಯಾದ ಅಂಗ ; ಪುಪ್ಫುಸ : ಹೃದಯದ ಬಡಿತ, ಶ್ವಾಸಕೋಶಗಳ ಸಂಕೋಚ ವಿಕಾಸ (ಶಿಕ್ಷಣ. ೭೩); ದೇಶ ಆಕಾಶಗಳ ಶ್ವಾಸಕೋಶಗಳಿಗೆ ಉಸಿರನಿತ್ತು ನಾಡಿನಾಡಿಗಳಲ್ಲಿ ಕಾಡುಕಾಡುಗಳನ್ನೆ ಕೋಡಿ ಹರಿಸಿತ್ತು! (ಅನಿಕೇ. ೫೩-೭). [ಸಂ.]

ಶ್ವಾಸಕ್ರಿಯೆ (ನಾ). ಉಸಿರಾಟದ ಕಾರ್ಯ : ವೈದ್ಯರು ಬಂದು ನೋಡುವಷ್ಟರಲ್ಲಿ ಅವರ ಶ್ವಾಸಕ್ರಿಯೆ ನಿಂತುಹೋಯಿತು (ರೂಢಿ). [ಸಂ. ಶ್ವಾಸಕ್ರಿಯಾ]

ಶ್ವಾಸಧಾರಣೆ (ನಾ). ೧. ಉಸಿರನ್ನು ಬಿಗಿಹಿಡಿಯುವಿಕೆ. ೨. [ಯೋಗ] ಪ್ರಾಣಾಯಾಮದಲ್ಲಿ ಒಳಗೆಳೆದುಕೊಂಡ ಉಸಿರನ್ನು ಬಿಗಿಹಿಡಿಯುವಿಕೆ ; ಕುಂಭಕ : ಆಚಾರ್ಯರು ಧರ್ಮರಾಯನ ಬಾಯಲ್ಲಿಯೂ ಈ ಮಾತು ಹೊರಟ ಮೇಲೆ ತನ್ನ ಮಗ ಸತ್ತದ್ದು ನಿಜವಾಗಿರಬೇಕೆಂದು . . . ಶ್ವಾಸಧಾರಣೆಯನ್ನು ಮಾಡಿ ಪ್ರಾಣವನ್ನು ಬಿಟ್ಟರು (ನೀತಿಚಂ. IV. ೩೧). [ಸಂ. ಶ್ವಾಸಧಾರಣ]

ಶ್ವಾಸನಾಳ (ನಾ). ಉಸಿರನ್ನು ಪುಪ್ಫುಸಗಳಿಗೆ ಒಯ್ಯುವ ಕೊಳವೆ, — ನಳಿಕೆ: ಕೀಟಕಗಳ ಶ್ವಾಸೋಚ್ಛ್ವಾಸವು ಶ್ವಾಸನಾಳಗಳಿಂದ (Trachae) ನಡೆಯುತ್ತದೆ (ಕೀಟಪ. ೭). [ಸಂ. ಶ್ವಾಸನಾಲ]

ಶ್ವಾಸಿಸು (ಕ್ರಿ). ೧. ಉಸಿರಾಡು ; ಶ್ವಾಸೋಚ್ಛ್ವಾಸಮಾಡು : ಅನ್ ಎಂದರೆ ಶ್ವಾಸಿಸು ಉಸಿರಾಡು ಎಂದರ್ಥ, ಜೀವನದ ಉಸಿರೇ ಆತ್ಮ (ಕವಿಕೋ. I. ೭೩೧). ೨. ವಾಸನೆ ನೋಡು ; ಆಘ್ರಾಣಿಸು : ಮೋಹಿಸಿತು ಮಾಯಾಮೃಗವು ರಘುಪತಿಯ ಚಿಗಿವುದೆಡಬಲಕುದಿರ್ದ ತಱಗೆಲೆ ಜಗುಳಿ ಬೆದಱುವುದವನಿಜೇಶನ ಸೊಗಡನು ಶ್ವಾಸಿಸುವುದಂಜುವುದನಿಲದುಱುಬೆಯಲಿ (ತೊರಾ. ೩-೮-೭೫). [ಶ್ವಾಸ + - ಇಸು]

ಶ್ವಿತ್ರ (ನಾ). ಚರ್ಮವು ಬಿಳುಪಾಗುವ ಒಂದು ಬಗೆಯ ರೋಗ ; ತೊನ್ನು : ತರಣಿಯಿಂ ಪೋಗದಾ ಶ್ವಿತ್ರರುಜೆಯಂ ಶಿವಸ್ಮರಣದಿಂದೇನಳಿಯನೇ ಮಯೂರಂ (ಪದ್ಮರಾ. ೪-೫೮); ಅರಿದಳ, ಗಂಧಕ . . . ಕಾಸಿ ಹದದಲ್ಲಿ ಇಳುಹಿ ಮೈಗೆ ಲೇಪ ಇಕ್ಕಿಸಲು ಹದಿನೆಂಟು ತೆಱದ ಕುಷ್ಠ, ಶ್ವಿತ್ರ, ದದ್ದು ಮುಂತಾದ ಸಕಲ ವ್ರಣಂಗಳು ನಾಶವಹುವು (ವೈದ್ಯಸಾ. I. ೬೯೫). [ಸಂ.]

ಶ್ವೇತ (ಗು). ೧. ಬಿಳಿಯ ಬಣ್ಣದ: 'ಶ್ವೇತಕಪೋತ' ಪರಾ. (ನಾ). ೨. ಬಿಳಿಯ ಬಣ್ಣ ; ಗೌರವರ್ಣ : ಶ್ವೇತಾದಿ ಚತುರ್ವರ್ಣೋಪೇತಂ . . . ತಾನದುಮುಲ್ಕಾಪಾತಂ ವಿಪ್ರಾದಿವರ್ಣಮಂ ಸಂಹರಿಕುಂ (ಲೋಕೋಪ. ೪-೧೯); ಆತ್ಮನ ಇರವು ಶ್ವೇತಪೋ ಹರಿತವೋ ಕಪೋತವೋ (ಮೋಮಾ. ೮೯-೩೫೩). ೩. ಬೆಳ್ಳಿ ; ರಜತ: ''ಬೆಳ್ಳಿಯಲ್ಲಿಯುಂ ಶ್ವೇತಮೆಂಬುದು'' (ಹಲಾಯು. ೧೩೧-೫). ೪. ಶ್ವೇತಾದ್ರಿ ; ಬಿಳಿಗಿರಿ. ೫. ಕ್ಷೀರಸಮುದ್ರದ ಮಧ್ಯದಲ್ಲಿರುವುದೆಂದೂ ವಿಷ್ಣುವಿನ ವಾಸಸ್ಥಾನವೆಂದೂ ನಂಬಲಾದ ಒಂದು ಉಪದ್ವೀಪ ; ವೈಕುಂಠ : ''ಧವಳಂ ದ್ವೀಪವಿಶೇಷ ಪರ್ವತವಿಭೇದಂ ಬೆಳ್ಳಿಯುಂ ಶ್ವೇತಮಕ್ಕುಂ'' (ನಾನಾರ್ಥ. ೧೦೪). ೬. ಒಂದು ಬಗೆಯ ಗಿಡ : ''ಶ್ವೇತಂ — ಅಬಲ್, ಶ್ವೇಗಂಧ'' (ಓಷಧಿ. ೧೭೦). ೭. ಒಂದು ಬಗೆಯ ಕುದುರೆ ; ಬಿಳಿಯ ಬಣ್ಣದ ಕುದುರೆ : ಹಿಮಾಚಲಸಿತಪಂಕೇರುಹರುಚಿಯಂ ಪೋಲ್ವ ಶರೀರದಿನತಿಧವಳನಪ್ಪ ತುರಗಂ ಶ್ವೇತಂ (ಅಶ್ವಶಾ. ೨-೨).

ಶ್ವೇತಕೃಷ್ಣಕಾರಕ = ೧. ಬಿಳಿದನ್ನು ಕಪ್ಪಾಗಿ ಮಾಡುವವನು. ೨. (ಆಲಂ) ಮೋಸಗಾರ ; ವಂಚಕ : ದುರ್ಯೋಧನನಪ್ಪೊಡೆ ಶ್ವೇತಕೃಷ್ಣಕಾರಕಂ ಕೃಷ್ಣನಂ ತನಗೆ ಮಾಡದನ್ನೆಗಂ ಮುನ್ನಮೆ ಪನ್ನಗಶಯನನಂ ನಮಗೆ ಮಾಡುವುದುತ್ತಮಪಕ್ಷಂ (ಪಂಪಭಾ. ೯-೧೦); ಕೃಷ್ಣ ನಿನ್ನವೋಲ್ ಶ್ವೇತಕೃಷ್ಣಕಾರಕರೊಳರೇ (ಗದಾಯು. ೬-೫೩).

[ಸಂ.]

ಶ್ವೇತಕಡವ (ನಾ). ಒಂದು ಬಗೆಯ ಮರ : ''ಮಧುರೇಣುಃ — ಶ್ವೇತಕಡವ'' (ಓಷಧಿ. ೧೨೦). [ಶ್ವೇತ + ಕಡವ, (< ಕಡಂಬ)]

ಶ್ವೇತಶಸ್ಯೋತ (ನಾ). ೧. ಬಿಳಿಯ ಪಾರಿವಾಳ. ೨. ಒಂದು ಬಗೆಯ ಪಕ್ಷಿ : ಕಚದ್ರುಮಂ ನಿರ್ಬುದ್ಧಿಯೊರ್ವನೆ ಕರುಮಾಡದೊಳ್ ಶ್ವೇತಕಪೋತನಂತಿರ್ದು ಶತ್ರು ಸಂಗ್ರಹಣಕ್ಕೊಳಗಾದಂ (ಪಂಚತಂ. ೨೯-೨). ೩. ಒಂದು ಬಗೆಯ ಇಲಿ. ೪. ಒಂದು ಬಗೆಯ ಹಾವು. [ಸಂ.]

ಶ್ವೇತಕಾಡುವಿಟ್ಟಿ (ನಾ). ಒಂದು ಬಗೆಯ ಸಸ್ಯ : ''ನಾಭಿಕಾ-ನಾಭಿ, ಶ್ವೇತಕಾಡುವಿಟ್ಟಿ'' (ಓಷಧಿ. ೮೫). [ಶ್ವೇತ + ಕಾಡುವಿಟ್ಟಿ]

ಶ್ವೇತಕುಷ್ಠ (ನಾ). ಚರ್ಮವು ಬಿಳುಪಾಗುವ ಒಂದು ಬಗೆಯ ಕುಷ್ಠರೋಗ : ತಾರೇಕಾಯಿ, ಕಲ್ಲತ್ತಿಯ ಸೊಪ್ಪು, XXX ಬಾವಂಜಿಯ ಬೀಜವನ್ನೂ ಬೆಲ್ಲ ಸಹವಾಗಿ ಒಡಲೊಳಕ್ಕೆ ಕೊಟ್ಟರೆ ಶ್ವೇತಕುಷ್ಠ ಮಾಣ್ಗುಂ (ವೈದ್ಯ. ೮೬). [ಸಂ.]

ಶ್ವೇತಚ್ಛತ್ರ (ನಾ). ೧. (ಅರಸರಿಗಾಗಲಿ, ದೇವತಾವಿಗ್ರಹಗಳಿಗಾಗಲಿ ಹಿಡಿಯುವ) ಬಿಳಿಯ ಕೊಡೆ ; ಧವಳಚ್ಛತ್ರ. ೨. (ಆಲಂ) ನೆಲೆ ; ಆಶ್ರಯ: ಹಿಂದೂಧರ್ಮದ ಶ್ವೇತಚ್ಛತ್ರದ ಅಡಿಯಲ್ಲಿ, ನಾನು ಬೇರೆ, ಜಗತ್ತು ಬೇರೆ, ದೇವರು ಬೇರೆ ಎನ್ನುವವರಿಗೆ ಸ್ಥಳವಿದೆ (ಭಾರದ. ೩೧೬). [ಸಂ.]

ಶ್ವೇತಚ್ಛದ (ನಾ). ಬಿಳಿಯ ರೆಕ್ಕೆಗಳುಳ್ಳ ಪಕ್ಷಿ; ಹಂಸ : ''ಹಂಸಃ, ಶ್ವೇತಚ್ಛದಃ, ಚಕ್ರಾಂಗಃ, ಮಾನಸೌಕಾಃ(ಕಸಃ) — ಈ ೪ ಹಂಸಂ'' (ಹಲಾಯು. ೪೨-೯೮). [ಸಂ.]

ಶ್ವೇತತುರಗ (ನಾ). ೧. ಬಿಳಿಯ ಕುದುರೆ. ೨. ಬಿಳಿಯ ಕುದುರೆಯುಳ್ಳವನು; ಅರ್ಜುನ : ಶಬರನಿವನಲ್ಲ ಈತ ಪಲ್ಲಟವಾದನೋ ಮೇಣ್ ಶ್ವೇತತುರಗನ ಪಲ್ಲಟವೋ ಕುಂತೀತನುಜ ತಾನಲ್ಲ ನಿಶ್ಚಯವೆನುತ ಚಿಂತಿಸಿದ (ಕುವಾಅ. ೬-೩೯). [ಸಂ.]

ಶ್ವೇತದ್ವೀಪ (ನಾ). ೧. ಬಿಳಿಯ ದ್ವೀಪ : ಶ್ವೇತದ್ವೀಪಮಿದೆಂಬ ಶಂಕೆ ಮಿಗೆ ಜಂಬೂದ್ವೀಪಮಂ ಪಾಂಡುರಕ್ ಖಾತಂ ಕೂಡಿ ಪೊದಪ್ಪು ಪಜ್ಜಳಿಪ ಚಂದ್ರಾಲೋಕಮಂ ಕಂಡು (ಪುಷ್ಪಪು. ೧೩-೨೫). ೨.= ಶ್ವೇತ ೫ : ಅವ್ಯಾಕೃತಾಕಾಶದಲ್ಲಿ ಪರಮಪದ, ವೈಕುಂಠ, ಶ್ವೇತದ್ವೀಪ ಮೊದಲಾದ ಶಬ್ದಗಳಿಂದ ಹೇಳಲ್ಪಡುವ ಅತ್ಯದ್ಭುತಾನಂದ ಮಯವಾದ ಮುಕ್ತಿಸ್ಥಾನವೆಂಬ ಲೋಕವಿರುವುದು (ಹಿಂದಸಾ. ೨೯೩). [ಸಂ.]

ಶ್ವೇತಪಕ್ಷ (ನಾ). ಪಾಡ್ಯದಿಂದ ಹಿಡಿದು ಪೌರ್ಣಮಿಯವರೆಗಿನ ಕಾಲಮಾನ; ಶುಕ್ಲಪಕ್ಷ : ವಾರ್ತೆಯಾದೊಡಂ ಶ್ವೇತಪಕ್ಷದ ಚೈತ್ರಪಂಚಮಿಯ ವಾಸರಂ ಮುಗಿವನ್ನೆಗಂ ಬರದಿರಲ್ಕಾಂ ನಿವೇದಿಪೆನ್ ವೈಶ್ವಾನರಂಗೀ ಕಳೇಬರವನೆನುತೆ (ಶ್ರೀರಾಮಾ. ೮೫೧-೪೪). [ಸಂ.]

ಶ್ವೇತಪಟ (ನಾ). ೧. ಬಿಳಿಯ ಬಟ್ಟೆ, — ವಸ್ತ್ರ. ೨. [ಜೈನ] ಜೈನಮುನಿಗಳ ಸಂಘಗಳಲ್ಲಿ ಒಂದು : ಕಂಬಳತೀರ್ಥವೆಂಬುದಾದುದವರುಂ ಶ್ವೇತಪಟರೆಂಬೊರಾದರ್ (ವಡ್ಡಾರಾ. ೯೩-೧೯). [ಸಂ.]

ಶ್ವೇತಪತ್ರ (ನಾ). ೧. ವಿವರಣೆಯೊಡನೆ ಇದ್ದುದ್ದನ್ನು ಇದ್ದ ಹಾಗೆ ಹೇಳುವ ವರದಿ ; ಯಾವ ಉತ್ಪ್ರೇಕ್ಷೆಯೂ ಇಲ್ಲದ ವರದಿ : ಇದರ ಎಲ್ಲಾ ಸೂಚನೆಗಳೂ ಶ್ವೇತಪತ್ರರೂಪದಲ್ಲಿ ಪ್ರಕಟವಾದುವು (ಎಚ್ಚಸಾ. ೧೦). ೨. ಹಂಸ. [ಸಂ.]

ಶ್ವೇತಮಂದಾರ (ನಾ). ಒಂದು ಬಗೆಯ ಮರ ; ಬಿಳಿಯ ಮಂದಾರ : ''ಪೃಥ್ವೀಕುರವಕಃ — ಶ್ವೇತಮಂದಾರ'' (ಓಷಧಿ. ೧೦೩). [ಸಂ.]

ಶ್ವೇತಮರಿಚ (ನಾ). ೧. ಬಿಳಿಯ ಮೆಣಸು. ೨. ನುಗ್ಗೆಯ ಬೀಜ : ''ಶಿಗ್ರುಜಂ, ಶ್ವೇತಮರಿಚಂ — ೨ ನುಗ್ಗೇಬೀಜದ ಪೆಸರು'' (ಪಥ್ಯಾಂಜ. ೩೦೭). [ಸಂ.]

ಶ್ವೇತರಕ್ತ (ನಾ). ಬಿಳುಪು ಮತ್ತು ಕೆಂಪು ಮಿಶ್ರಿತವಾದ ರಕ್ತ ; ತಿಳಿಗೆಂಪು ಬಣ್ಣದ ರಕ್ತ : ಕೀಟಗಳ ರಕ್ತಕಣಗಳು — ಹೀಮೊಸೈಟುಗಳು — ಮುಖ್ಯವಾಗಿ ಶ್ವೇತರಕ್ತ ಕಣಗಳು (Phagoytes) — ರಕ್ತಗತವಾಗುವ ವಿಷಾಣುಗಳನ್ನು ನುಂಗಿ ಜೀರ್ಣಿಸಿ ರೋಗ ಸೋಂಕದಂತೆ ಮಾಡಿ ಗಾಯಗಳನ್ನು ಅಂಟಿಕೊಂಡು ವಾಸಿಮಾಡುತ್ತವೆ (ಕೀಟವಿ. ೩೩).

[ಸಂ.]

ಶ್ವೇತರೋಚಿ (ನಾ). ಬಿಳಿಯ ಬಣ್ಣದ ಪ್ರಕಾಶವುಳ್ಳವನು ; ಚಂದ್ರ : ''ಇಂದುಃ, ಚಂದ್ರಃ . . . ಶ್ವೇತರೋಚಿಃ, ಶಶಾಂಕಃ . . . ದಾಕ್ಷಾಯಣೀರಮಣಃ — ಈ ೨೧ ಚಂದ್ರನ ಪೆಸರ್'' (ಹಲಾಯು. ೮-೪೨). [ಸಂ. ಶ್ವೇತರೋಚಿಸ್]

ಶ್ವೇತವರಾಹಕಲ್ಪ (ನಾ). ಹದಿನಾರು ಕಲ್ಪಗಳಲ್ಲಿ ಒಂದು ; ವಾರಾಹಕಲ್ಪ.

[ಸಂ.]

ಶ್ವೇತವಾಸ, (ನಾ). ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು : ಹದಿನಂಟಂಗುಳ ಮೊದಲಾಗಿ ಒಂದಂಗುಳ ಪರ್ಯಂತಮಾದ ಪರಿಮಾಣಕ್ರಮವಿಡಿದು ಜಾತಿವಾಸ . . . ಶ್ವೇತವಾಸ . . . ಭುವನಾಧಿಪವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವಲ್ತಿತು (ವಿವೇಕ. ೩೩೭). [ಶ್ವೇತ + ವಾಸ,]

ಶ್ವೇತವಾಸ್ಯ (ನಾ). ಬಿಳಿಯ ಬಟ್ಟೆಯನ್ನು ಧರಿಸಿದ ಬೌದ್ಧ ಅಥವಾ ಜೈನ ಸಂನ್ಯಾಸಿ : ''ಮುನಿಃ . . . ಶ್ವೇತವಾಸಾಃ, ಸಂಯತಃ — ಈ ೯ ಸವನರ ಪೆಸರ್'' (ಹಲಾಯು. ೫೭-೧೯೦). [ಸಂ. ಶ್ವೇತವಾಸಸ್]

ಶ್ವೇತವಾಹನ (ನಾ). ೧. ಬಿಳಿಯ ಕುದುರೆಗಳನ್ನು ಹೊಂದಿರುವವನು. ೨. ಚಂದ್ರ. ೩. ಅರ್ಜುನ : ಬ್ರಹ್ಮಾಸ್ತ್ರಮಂ ಶ್ವೇತವಾಹನನಾರ್ದಿಸಲ್ಕೆ ಹಂಸಧ್ವಜನ ಜಾತಂ . . . ಬೊಬ್ಬಿಲಿದನು (ಕೃಷ್ಣಾ. ೧೩-೧೭). ೪. ಒಬ್ಬಾತನ ಹೆಸರು : ಶ್ವೇತವಾಹನನ್ ಉದಯಪುರಮಾನ್ ಪೊಗುವಲ್ಲಿ (ಎಸಾ. IX, ೧೯-೧೨; ಸು. ೪೦೦). [ಸಂ.]

ಶ್ವೇತಾಂಗ (ನಾ). ಚರ್ಮವು ಬೆಳ್ಳಗಾಗುವ ರೋಗವಿರುವವನು ; ಪಾಂಡುರೋಗಿ : ಜಗವಲ್ಲಿಯ ತಾಂ ಕಳಂಕಂ ಕಳಾಹೀನ ಹಾವಗಿದುಗಿದ ವಿಷವಕ್ಕ ದೋ[illegible]ಸ್ಮಿರ ಹಂದೆ ಮೃಗದಿಕ್ಕೆಗಾಡು ಹುತ್ತಿಟ್ಟಡವಿಯಾಲ ಹಬ್ಬಿದ ಹಾಳಾ ಶ್ವೇತಾಂಗನು (ಹ...[illegible] ೪-೧೫೫). [ಸಂ.]

ಶ್ವೇತಾಂಬರ (ನಾ). ೧. ಬಿಳಿಯ ಬಟ್ಟೆ ; ಧವಳವಸ್ತ್ರ. ೨. [ಜೈನ] (ಬಿಳಿಯ ಬಣ್ಣದ ಬಟ್ಟೆಯನ್ನು ಧರಿಸುವ) ಜೈನರ ಒಂದು ಪಂಗಡ : ಆಸನ್ನಭವ್ಯನುಂ ಸ್ವಪರಹಿತಾರ್ಥಿಯುಂ ದ್ವಿಜಕುಲೋತ್ಪನ್ನನುಂ ಶ್ವೇತಾಂಬರಭಕ್ತನುಮಪ್ಪ ದ್ವೈಪಾಯಕನೆಂಬಂ (ತತ್ತ್ವಪ್ರ. ೧); ಜೈನರಲ್ಲಿ ಶ್ವೇತಾಂಬರ ದಿಗಂಬರರೆಂಬ ಎರಡು ಪಂಗಡಗಳುಂಟು (ಭಾತತ್ತ್ವ. ೨೨೬). ೩. ಶ್ವೇತಾಂಬರ ಪಂಗಡಕ್ಕೆ ಸೇರಿದವನು : ಬಂದೊಳಗಂ ಪೊಕ್ಕಾಂ ಶ್ವೇತಾಂಬರರಂ ಕಂಡು ನೀವಾರೆತ್ತಣಿಂ ಬಂದಿರಿ . . . ಎನೆ (ಧರ್ಮಾಮೃ. ೯-೪೮). 'ದಿಗಂಬರ' ಪರಾ. [ಸಂ.]

ಶ್ವೇತಾಕ್ಷತೆ (ನಾ). ಶ್ರಾದ್ಧಾದಿ ಅಪರಕಾರ್ಯಗಳಲ್ಲಿ ಬಳಸುವ ನೆನೆಸಿದ ಅಕ್ಕಿ.

[ಸಂ. ಶ್ವೇತಾಕ್ಷತ]

ಶ್ವೇತಾಗುರು (ನಾ). ಬಿಳಿಯ ಬಣ್ಣದ ಅಗರು ; ಬಿಳಿಯ ಚಂದನ : ಶ್ವೇತಾಗುರು [ಪಾಠಾಂ. ಬಿಳಿಯಗುರು] ಗುಗ್ಗುಲ ಶ್ರೀಗಂಧ ಅಗರು ಬಿಲ್ವಫಲ ತುಪ್ಪ ಜೇನುತುಪ್ಪ ಸಜ್ಜರಸ ಕರ್ಪೂರವೆಂಬ ದಶಾಂಗಧೂಪಂಗಳಂ (ವಿವೇಕ. ೯೪). 'ಕೃಷ್ಣಾಗರು' ಪರಾ. [ಸಂ.]

ಶ್ವೇತಾತಪತ್ರ (ನಾ). = ಶ್ವೇತಚ್ಛತ್ರ ೧ : ಉದ್ದಂಡಪುಂಡರೀಕಂಗಳಂ ಶ್ವೇತಾತಪತ್ರಂಗಳೆಂದೇ ಮಾಡಿ ಪಿಡಿಯಿಸಿಯುಂ . . . ಜಲಾರ್ದ್ರಜಲಕುಸುಮಂಗಳಂ ಸಾರ್ವಭೌಮೋಚಿತ ದ್ವಾತ್ರಿಂಶಚ್ಚಾರುಚಾಮರಂಗಳಂ ಮಾಡಿ ಬೀಸಿಸಿಯುಂ (ಆದಿಪು. ೮-೪೧ ವ); ನವಪುಷ್ಪೋತ್ಕರಪಾಂಡುಚೂತನಿವಹಂ ಶ್ವೇತಾತಪತ್ರಾಳಿ ಭೃಂಗವಧೂಝಂಕೃತಿ ಶಂಖಪೂತ್ಕೃತಿರುತಂ (ಚಂದ್ರಪ್ರ. ೭-೩೮). [ಸಂ.]

ಶ್ವೇತಾದ್ರಿ (ನಾ). ಒಂದು ಪರ್ವತದ ಹೆಸರು ; ಕೈಲಾಸ ; ರಜತಗಿರಿ : ಶ್ವೇತಾದ್ರಿ ಶಿಖರದೊಳ್ಕಂಗೊಳಿಸುವುಜ್ವಲಜ್ಯೋತಿರ್ಲತೆಯೊ ಮೇಣು ಸಲ್ಲಲಿತಶುಭ್ರ ಜೀಮೂತದೊಡ್ಡಿನ ಮೇಲೆ ಪೊಳವ ಸೌದಾಮನಿಯೊ (ಕ್ರಮಿಭಾ. ೩-೧೪). [ಸಂ.]

ಶ್ವೇತಾಭ್ರಕ (ನಾ). ಬಿಳಿಯ ಕೊಡನಾರಿಗಡ್ಡೆ : ಶ್ವೇತಾಭ್ರಕವನ್ನು ಕುಟ್ಟಿ ವಸ್ತ್ರಗಾಳಿತ ಚೂರ್ಣಮಾಡಿ ಆವರಿಕೆಬೇರಿನ ಕಷಾಯದಲ್ಲರೆದು ಉಂಡೆ ಮಾಡಿ . . . ಕೊಟ್ಟರೆ ಬಹುಮೂತ್ರ ನಿಲ್ಲುವುದು (ಸಚಿತ್ರ. ೫೦೦ ಪಂ). [ಸಂ.]

ಶ್ವೇತಾಮ್ಲ (ನಾ). ಒಂದು ಬಗೆಯ ಗಿಡ : "ತ್ವಜಿಕಾ - ಶ್ವೇತಾಮ್ಲ" (ಓಷಧಿ. ೬೬).

[ಸಂ.]

ಶ್ವೇತಾರ್ಕ (ನಾ). ಬಿಳಿಯ ಎಕ್ಕದ ಗಿಡ : "ಅಲರ್ಕಃ, ಪ್ರತಾಪಸಃ . . . ಶ್ವೇತಾರ್ಕ-ಬೆನಕನ ಯಕ್ಕೆ" (ಸಿದ್ಧಾಂತ ೧೩೧). [ಸಂ.]

ಶ್ವೇತಾರ್ಜುನವೃಕ್ಷ (ನಾ). ಒಂದು ಬಗೆಯ ಮರ ; ಬಿಳಿ ಮತ್ತಿಮರ : "ಸಾಲಃ . . . ಸಸ್ಯಸಂವರಃ - ೫ ಮತ್ತಿಗಿಡ, ಮದ್ದಿಮರ, ಶ್ವೇತಾರ್ಜುನವೃಕ್ಷ" (ಸಿದ್ಧಾಂತಿ ೧೨೨)

[ಸಂ.]

*

ಷ

ಷ (ನಾ). ೧. ಕನ್ನಡವರ್ಣಮಾಲೆಯ ಐವತ್ತೊಂದನೆಯ ಅಕ್ಷರ. ೨. [ಗಣಿತ] ಆರು ಎಂಬ ಸಂಖ್ಯೆಯ ಸಂಕೇತ : "ಚಷಮಾಱು" (ಮಂಗರಾ. ೧೦೪ -೧೦).

ಷಂಡ (ನಾ). ೧. (ಮರ, ಗಿಡ ಮುಂತಾದುವುಗಳ) ಗುಂಪು ; ಸಮೂಹ ; ಮೊತ್ತ : ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೆಯ್ದಿಲ್ಲೊಳಂ . . . ಎಸೆಗುಂ ವಿದ್ಯಾಧರೋದ್ಯಾನದೊಳ್ (ಆದಿಪು. ೧-೬೭) ; ಉತ್ತಮಸ್ಥಳದ ಮಾಕಂದವ ಷಂಡಮನುತ್ತಮ ಬಂದು ಪೊರ್ದಿದಳು (ಅನಂಚ. ೯-೪೯). ೨. (ಸ್ವೇಚ್ಛೆಯಾಗಿ ತಿರುಗಾಡಲು ಬಿಟ್ಟ) ಗೂಳಿ ; ಬೀಜದ ಹೋರಿ ; ಬಸವ : "ಷಂಡಃ, ಗೋಪತಿಃ, ಇಟ್ಟರಃ- ೩ ಗೂಳಿಹೋರಿ" (ಸಿದ್ಧಾಂತಿ. ೨೯೨). ೩. ನಪುಂಸಕ ; ಕೊಜ್ಜೆ : ಊರಬಿವಿನೊಳಂ ತಱೆಸಂದು ಗಂಡುತನಮನೆ ನೆಜಪದವಂ ಗಂಡನಲ್ಲನೆಂತುಂ ಷಂಡಂ (ಗದಾಯು. ೨-೨೪). ೪. (ಆಲಂ) ಹೇಡಿ ; ದುರ್ಬಲ : 'ಷಂಡತನ' ಪರಾ.

[ಸಂ.]

ಷಂಡಕ (ನಾ). ನಪುಂಸಕ : "ಕ್ಲೀಬಃ, ವರ್ಷಧರಃ, ಷಂಡಃ, ಷಂಡಕಃ, ನಪುಂಸಕಃ- ಈ ೫ ನಪುಂಸಕಂ" (ಹಲಾಯು. ೭೧-೨೭೬). [ಸಂ.]

ಷಂಡಕವೇದ (ನಾ). [ಜೈನ] ಒಂದು ಬಗೆಯ ನೋಕಷಾಯ ; ಚಾರಿತ್ರ ಮೋಹನೀಯದ ಭೇದಗಳಾದ ಮೂರು ಪ್ರಕಾರದ ವೇದಗಳಲ್ಲಿ ಒಂದು : ದೇವರೊಳಾಗಿರ್ಕುಂ ಪುಂಸ್ತ್ರೀವೇದಂ ನಿರಯಜನಿತಸಮ್ಮೂರ್ಛಿತರೊಳ್ ಭಾವಿಸೆ ಷಂಡಕವೇದಂ ತಾವುಲ್ದಿವರೊಳ್ ತ್ರಿವೇದಮುಂ ಪರಿಭವಿಕುಂ (ಸುಬುಮಾ. ೮-೧೩). 'ನಪುಂಸಕವೇದ' ಪರಾ. [ಸಂ.]

ಷಂಡತನ (ನಾ). ೧. ನಪುಂಸಕತ್ವ. ೨. ಹೇಡಿತನ ; ದೌರ್ಬಲ್ಯ : ಧರ್ಮವೆ ತಪವಲಾಯಿಂದಱಿತು ನಡೆದರೆ ಷಂಡತನವಾಯ್ತು (ಕುವ್ಯಾಳ. ೮-೪೭) ; ಎಲ್ಕೆ ಪಾರ್ಥನೆ, ನೀನು ಷಂಡತನವನ್ನು ಹೊಂದಬೇಡ (ಆನಾಸ. ೬). [ಷಂಡ + - ತನ]

ಷಂಢ (ನಾ). ೧. = ಷಂಡ ೩ : ಥೂ ನರರ ಬೆದಿಗುದಿಗೆ ಷಂಢ ಗಂಡಸುತನಕೆ . . . ಗತವೀರ್ಯಹತಜನಕೆ (ಕೃಷ್ಣಾಭಿ. ೨-೨). ೨. [ವ್ಯಾಕ] ನಪುಂಸಕಲಿಂಗ. [ಸಂ.]

ಷಂಢತಿಲ, ಷಂಢತಿಳ (ನಾ). ೧. ಜಳ್ಳಾದ ಎಳ್ಳು ; ಪೊಳ್ಳಾದ ಎಳ್ಳು. ೨. (ಆಲಂ) ನಿರುಪಯೋಗಿಯಾದ ವ್ಯಕ್ತಿ ; ಅಪ್ರಯೋಜಕ : ಸಭೆಯಲ್ಲಿ ನಮ್ಮನ್ನು ಷಂಢತಿಲವೆಂದರು. ಜಳ್ಳು, ಯಾರು, ಗಟ್ಟಿ ಯಾರು ಎಂಬುದನ್ನು ಅವರಿಗೆ ತೋರಿಸಿಕೊಟ್ಟೆ (ಅಗ್ರಹ. ೧೨). **ಷಂಢತಿಳಿ** : ೧. "ತಿಳಪಿಂಜಃ, ತಿಳಪೇಷಃ, ಷಂಡ Eಥತಿಳಿಃ - ಈ ೩ ಹೊಳ್ಳೆಳ್ಳು" (ಹಲಾಯು. ೧೫-೪೫). [ಸಂ.]

ಷಂಢತಿಳ 'ಷಂಢತಿಲ' ನೋ.

ಷಕಾರ (ನಾ). 'ಷ' ಎಂಬ ಅಕ್ಷರ : ಷಕಾರಕ್ಕೆ - ಆಮಿಷ - ಆಮಿಸ, ಔಷಧ - ಔಸದ (ಶಮದ ೨೫೩ ಪ್ರಯೋ). [ಸಂ.]

ಷಕ್ಕು 'ಶಕ್ಕು' ನೋ.

ಷಟುತರ್ಕ (ನಾ). [ತತ್ತ್ವಶಾ] ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ವೇದಾಂತ ಮತ್ತು ಪೂರ್ವಮೀಮಾಂಸೆ ಎಂಬ ಆರು ಬಗೆಯ ದರ್ಶನಗಳು : ವೇದವೇದಾಂಗ ವಿದ್ಯಾವಿದಿತರ್ ಷಟುತರ್ಕ್ಯಶತುಪ್ರವುಡಿಯೊಳತಿಶಯದುದುಗ್ರಾಹಕರು ನಿತ್ಯಯಜ್ವರು (ಎಸಾ. XVIII, ೧೮೪-೯ ; 1097). [< ಸಂ. ಷಟ್ತರ್ಕ]

ಷಟುಸ್ಥಲ 'ಷಡುಸ್ಥಲ' ನೋ.

ಷಟ್ಕ (ನಾ). ಆರರಿಂದ ಒಡಗೂಡಿದುದು ; ಆರರ ಗುಂಪು : ಯಾರಿಗುಂಟು ಶಮಾದಿ ಷಟ್ಕಮಸಾರಮಾದೀ ಭುವನಭೋಗವಿಕಾರಮಂಟಪವರ್ಗಳಂತಃಕರಣಮದರಿಂದ ಸೇರಿರುವವರ್ಥಕೆ ನಿವೃತ್ತಿಯ ಸಾರಿವುದು (ವಿವೇಭ. ೧೧-೫೭) ; ಷಟ್ಕವೆಂದರೆ ಆರು ಅಧ್ಯಾಯಗಳ ಸಮೂಹವೆಂದರ್ಥ (ಭಾತತ್ತ್ವ. ೧೦೦). [ಸಂ.]

ಷಟ್ಕಮಲ (ನಾ). [ಯೋಗ] ಶರೀರದ ಒಳಭಾಗದಲ್ಲಿರುವುವೆನ್ನಲಾದ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ ಎಂಬ ಆರು ಕಮಲಗಳು ; ಷಟ್ಚಕ್ರ : ಬಾಲ ಕೇಳ್ ಪೂರ್ವೋಕ್ತ ಷಟ್ಕಮುಸುಮಾಳಿ ರಾಜಿಸುತಿಹುವು ಷಟ್ಕಮಲಗಳ ಪೆಸರಾಂತು (ಗಗಾ. ೧೮-೬). [ಸಂ.]

ಷಟ್ಕರ್ಮ (ನಾ). ೧. ಬ್ರಾಹ್ಮಣನು ನಿತ್ಯವೂ ಆಚರಿಸಬೇಕಾದ ಅಧ್ಯಾಪನ, ಅಧ್ಯಯನ, ಯಜನ, ಯಾಜನ, ದಾನ ಮತ್ತು ಪರಿಗ್ರಹ ಎಂಬ ಆರು ಕ್ರಿಯೆಗಳು : ವಿದಿತವೇದಾರ್ಥ ವಿದ್ಯಾಪಾರಗರ್ಷಟ್ಕರ್ಮನಿರತರ್ . . . ಶ್ರೀಮಲ್ಲೊಕ್ಕಿಗುಣ್ಣೆಯೂರೋಡೆಯಪ್ರಮುಖಮಹಾಜನಂ ಶ್ರೀಸಾಸಿರ್ವ್ವರುಂ . . . ರಕ್ಷಿಸುತ್ತಮಿರೆ (ಕಾ. II. ೧೦-೬ ; 1078) ; ಷಟ್ಕರ್ಮಮಾರ್ಗಪ್ರೇಮಿ ಸಂತತ ವರತನೂ ಭವಕಾಮಿ ಮಂಡಗೆ ಮಾದಿರಾಜನೆನಲ್ಕೆ ಸನ್ನಾಮಿ (ಬಸಪು. ೨-೪೬). ೨. ಪ್ರತಿನಿತ್ಯ

ಆಚರಿಸಬೇಕಾದ ಸಂಧ್ಯಾಸ್ನಾನ, ಜಪ, ಹೋಮ, ದೇವತಾಪೂಜೆ, ಆತಿಥ್ಯ ಮತ್ತು ವೈಶ್ವದೇವ ಎಂಬ ಆರು ಬಗೆಯ ಕರ್ಮಗಳು : ಆಚಾರಕಾಂಡದಲ್ಲಿ ಮುಖ್ಯವಾಗಿ ಗಮನಿಸತಕ್ಕ ವಿಷಯವೆಂದರೆ ದಿನಚರ್ಯೆ ಅಥವಾ ಷಟ್‌ಕರ್ಮಗಳು (ಭಾರದ. ೫೪). ೩. ಜೀವನೋಪಾಯಕ್ಕಾಗಿ ಕೈಕೊಳ್ಳಬೇಕಾದ ಅಸಿ, ಮಸಿ, ಕೃಷಿ, ವಾಣಿಜ್ಯ , ಶಿಲ್ಪ ಮತ್ತು ಪಶುಪಾಲನೆ ಎಂಬ ಆರು ವೃತ್ತಿಗಳು : ಅಸಿಮಸಿಕೃಷಿವಾಣಿಜ್ಯಶಿಲ್ಪಪಶುಪಾಲ್ಯಮೆಂಬ ಷಟ್ಕರ್ಮಂಗಳೊಳ್ ನ್ಯಾಯದಿನರ್ಥೋಪಾರ್ಜನಂಗೆಯ್ಯುದು ವಾರ್ತೆಯೆಂಬೆರಡನೆಯಾರ್ಯಕರ್ಮಂ (ಸುಕುಮಾ. ೬-೨೫ ವ) ; ಲೇಖನ ವ್ಯವಹಾರ ಕೃಷಿ ಖಡ್ಗ ಗೋಪಾಲ ಯಾಚಂಗಳೆನಿಪ ಷಟ್ಕರ್ಮದಿಂದೆ ತವೆ ಜೀವಿಪ . . . ಜನಂ ಕೂಡಿ ಬರುತಿರ್ದರು (ಚಿಬಪು. ೪೭-೪೩). ೪. [ಜೈನ] ಶ್ರಾವಕನು ನಿತ್ಯವೂ ಆಚರಿಸಬೇಕಾದ ಇಜ್ಯೆ, ವಾರ್ತಾ, ದತ್ತಿ, ಸ್ವಾಧ್ಯಾಯ, ಸಂಯಮ ಮತ್ತು ತಪಸ್ಸು ಎಂಬ ಆರು ಬಗೆಯ ಕರ್ಮಗಳು : ಸ್ತ್ರೀಪುರುಷನಪುಂಸಕಭೇದತ್ರಿಕಮಂ ಚಿರಂತನ ಷಟ್ಕರ್ಮಂಬೆರಸು ಹಾಸ್ಯ ರತಿ Eಹಾಸ್ಯರತ್ಯರತಿ3 ಶೋಕಭಯಜುಗುಪ್ಸಾಭಿಧಾನಷಟ್ಕಷಾಯಮುಮಂ ಕಿಡಿಸಿ (ಶಾಂತಿಪು. ೧೧-೧೧೧ ವ). [ಸಂ. ಷಟ್ಕರ್ಮನ್]

ಷಟ್ಕರ್ಮಿ (ನಾ). ಯಜನ, ಯಾಜನ ಮುಂತಾದ ಆರುಕರ್ಮಗಳನ್ನು ಆಚರಿಸುವವನು : ಷಟ್ಕರ್ಮಿಗಳಾದ ಬ್ರಾಹ್ಮಣರು ಅಗ್ನಿಹೋತ್ರ ಮುಂತಾದ ಪಂಚಮಹಾಯಜ್ಞಗಳನ್ನು ನಡೆಸಿಕೊಂಡು ಬರಬೇಕು (ತುಳುನಾ. ೯೯). [ಸಂ. ಷಟ್ಕರ್ಮಿನ್]

ಷಟ್ಕಷಾಯ (ನಾ). [ಜೈನ] ಹಾಸ್ಯ, ರತಿ, ಅರತಿ, ಶೋಕ, ಭಯ ಮತ್ತು ಜುಗುಪ್ಸೆ ಎಂಬ ಆರು ಬಗೆಯ ದೋಷಗಳು,- ಕಷಾಯಗಳು : ಚಿರಂತನ ಷಟ್ಕರ್ಮಂಬೆರಸು ಹಾಸ್ಯರತಿ Eಹಾಸ್ಯರತ್ಯರತಿ3 ಶೋಕಭಯಜುಗುಪ್ಸಾಭಿಧಾನ ಷಟ್ಕಷಾಯಮುಮಂ ಕಿಡಿಸಿ (ಶಾಂತಿಪು. ೧೧-೧೧೧ ವ). [ಸಂ.]

ಷಟ್ಕೋಣಕುಂಭ (ನಾ). ಆರುಮೂಲೆಗಳುಳ್ಳ ಆಕೃತಿಯ ಕ್ಷೇತ್ರಫಲ : ಒಂದೆಸೆಯ ಮೂರು ಅಳತೆಯನೊಂದಿಸು ಹತ್ತುಳಿದ ಮೂರು ದೆಸೆಗಳ ಗಳೆಯಂ ಸಂಧಿಸಿ ಕೂಡುತೆ ಗುಣಿಸಲು ಅಂದದಿ ಷಟ್ಕೋಣಕುಂಭ ತಪ್ಪದೆ ಬರ್ಕುಂ (ಕ್ಷೇತ್ರಗ. ೨೩-೧೪). [ಸಂ.]

ಷಟ್ಖಂಡ (ನಾ). [ಜೈನ] ವಿಜಯಾರ್ಧಪರ್ವತದ ಉತ್ತರದಲ್ಲಿ ಗಂಗಾ ಹಾಗೂ ಸಿಂಧೂನದಿಗಳಿಂದ ಪ್ರತ್ಯೇಕಿಸಲ್ಪಟ್ಟ ಮೂರು ಭೂಭಾಗಗಳು ಮತ್ತು ಅದರಂತೆ ಆ ಪರ್ವತದ ದಕ್ಷಿಣದಲ್ಲಿರುವ ಮೂರು ಭೂಭಾಗಗಳು: ಹಿಮಶೈಲಾವಧಿಷಟ್ಖಂಡಂ ಮಹೀಮಂಡಳಂ (ಅದಿಪು. ೪-೭೮) ; ಮಹಿಭರತಂ ಷಟ್ಖಂಡಾವಹಂ (ಸುಕುಮಾ. ೧-೬೮) ; ಷಟ್ಖಂಡಕ್ಷಿತಿನಾಥನಪ್ರಧಿಕಪುಣ್ಯಂ . . . ಸಾರ್ಗುಮಿನ್ನಾತನಂ (ಚಂದ್ರಪ್ರ. ೫-೩೫). [ಸಂ.]

ಷಟ್ಚಕ್ರ (ನಾ). [ಯೋಗ] ಶರೀರದ ಒಳಗಿರುವುದೆಂದು ಹೇಳಲಾದ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ ಮತ್ತು ಆಜ್ಞಾ ಎಂಬ ಆರು ಚಕ್ರಗಳು ; ಷಟ್ಕಮಲ : ಷಟ್ಚಕ್ರಸಂಚಾರಿಣೀಂ . . . ಬಾಲಾಂ ಸದಾಹಂ ಭಜೇ (ಉಭಟ. ೫-೫೭) ; ಷಟ್ಚಕ್ರಮಧ್ಯದೊಳೊಪ್ಪುವ ಭಾಸುರಪ್ರಣವಂ (ಚಿಬಪು. ೬೧-೪೮). [ಸಂ.]

ಷಟ್ಚರಣ (ನಾ). ೧. ಆರುಕಾಲುಗಳುಳ್ಳದು ; ದುಂಬಿ : "ಅಳಿ ಷಟ್ಚರಣಂ ಮಧುಪಂ . . . ಭ್ರಮರಂ" (ವಸ್ತುಕೋ. ೪೩-೨೨) ; ಉರಿವುರಿಯಿಂ ಕರಿಮುರಿಕನಾದುವುನ್ಮದ ಪರಭೃತಷಟ್ಚರಣರಾಜಕೀರಕುಲಂಗಳ್ (ಪಂಪಭಾ. ೫-೯೦). ೨. ಹೇನು. [ಸಂ.]

ಷಟ್ತರ್ಕ (ನಾ). ೧. [ತತ್ತ್ವಶಾ] ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ವೇದಾಂತ ಮತ್ತು ಪೂರ್ವಮೀಮಾಂಸೆ ಎಂಬ ಆರುಬಗೆಯ ದರ್ಶನಗಳು: ಶಾಬ್ದನೇತೃತೆ ಷಟ್ತರ್ಕ ವಿತರ್ಕಭೇತ್ತೃತೆ . . . ಏಂ ಚೋದ್ಯಮೆ ವರ್ಧಮಾನಮುನಿಯೊಳ್ (ಚಂದ್ರಪ್ರ. ೧-೩೧) ; ಕಮಲೋದರನು ಕೈಕೊಂಡನು . . . ವಾದಿಸುವ ಷಟ್ತರ್ಕಗಿರ್ಕದ ಭೇದ ಕೊಳ್ಳದ ಸಕಲಲೋಕದ ಬೀದಿ ವಿಸಟಂಬರಿವ ವಿಮಲವಿರಾಟರೂಪವನು (ಕುಮಾಭಾ. ೩-೭೪). ೨. [ಜೈನ] ಬೌದ್ಧ, ನೈಯಾಯಿಕ, ಸಾಂಖ್ಯ, ಜೈನ, ವೈಶೇಷಿಕ ಮತ್ತು ಜೈಮಿನೀಯ ಎಂಬ ಆರು ಬಗೆಯ ಆಸ್ತಿಕದರ್ಶನಗಳು : ಶ್ರೀಪ್ರಭಾಚಂದ್ರದೇವಬ್ರತಿ ಷಟ್ತರ್ಕಾಕಳಂಕಂಗಣೆಯನೆ ನೆಗಟ್ಟಂ (ಸೌಂದ. XX. ೧೮-೩೪ : ೯೮೦).

ಷಟ್ತರ್ಕಷಣ್ಮುಖ = ಆರು ಜೈನದರ್ಶನಗಳಲ್ಲಿಯೂ ಪಾರಂಗತನಾದವನು; ಒಂದು ಬಿರುದು : ಷಟ್ತರ್ಕಷಣ್ಮುಖರು ಪರಮತತಪತ್ಪರಣನಿರತರು . . . ಶ್ರೀಮತ್ ಶ್ರೀನನ್ದಿಪಣ್ಡಿತದೇವರ್ಗ್ಗೆ (ಸೌಂದ. XX. ೪೬-೨೬ ; 1072). [ಸಂ.]

ಷಟ್ತ್ರಿಂಶತ್ತತ್ತ್ವ (ನಾ). [ಶೈವ] ಶೈವಾಗಮದಲ್ಲಿ ಹೇಳಿರುವ ಮೂವತ್ತಾರು ತತ್ತ್ವಗಳು ; ಇ ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ, ಕಾಲ, ಮಾಯಾ, ಕಲಾ, ವಿದ್ಯಾ, ರಾಗ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ವಹ್ನಿ, ಜಲ ಮತ್ತು ಭೂಮಯ : ಷಟ್‌ತ್ರಿಂಶತ್ತತ್ತ್ವಂಗಳ್ ದೇಹವಾಗಿ ಪರಶಿವನದಕ್ಕೆ ದೇಹಿಯಾಗಿಪ್ಪುದಱಿಂದ ತತ್ತ್ವಮಯವಾದ ಭಕ್ತನಂಗದಲ್ಲಿ ಪ್ರಾಣಮಯವಾದ ಶಿವನಿಪ್ಪನಯ್ಯ (ಅರವ. ೧೨-೨೩) ; ವರಷಟ್ತ್ರಿಂಶತ್ತತ್ತ್ವೋಪರಿಗತನ ನವಿದ್ಯೆ ಪುಗದ ಶುದ್ಧಾತ್ಮನನಕ್ಷರನನನುಪಮನನಭವನನುರುತರಚಿದಖಂಡರೂಪನಂ ಜಾನಿಸಿದಂ (ಶಬಶಾ. ೨-೯೩). [ಸಂ.]

ಷಟ್ತ್ರಿಂಶದ್ಗುಣ (ನಾ). ೧. [ಜೈನ] ಆಚಾರ್ಯನಲ್ಲಿರಬೇಕಾದ ಹನ್ನೆರಡು ತಪಸ್ಸು, ಆರು ಆವಶ್ಯಕಗಳು, ದಶಧರ್ಮಗಳು, ಪಂಚಾಚಾರಗಳು ಮತ್ತು ಮೂರು ಗುಪ್ತಿಗಳು ಎಂಬ ಮೂವತ್ತಾರು ಗುಣಗಳು : ಇರೆ ಷಟ್ತ್ರಿಂಶದ್ಗುಣಂಗಳ್ ತಮಗಮರ್ದಿರಲಾಚಾರಮಯ್ದುಂ . . . ಚಾರಿತ್ರಸಂಶುದ್ಧರೀ ದುಸ್ತರ ಸಂಸಾರಾಬ್ಧಿಯಿಂದಂ ಪೊಱಮಡಿಸುಗೆ ಸದ್ಧರ್ಮರಾಚಾರ್ಯರೆಂದುಂ (ಸುಕುಮಾ. ೧-೩). ೨. ಮೂವತ್ತಾರು ಗುಣಗಳನ್ನು ಹೊಂದಿದವನು : ಮುನಿನಾಥಂ ದಶಧರ್ಮಧಾರಿ ದೃಢಷಟ್ತ್ರಿಂಶದ್ಗುಣಂ (ಪಂಚಾಮಾ. ೧-೨೦). [ಸಂ.]

ಷಟ್ಪದ (ನಾ). ೧. ದುಂಬಿ ; ಭೃಂಗ : ಎಱಗಿರ್ದುವು ಷಟ್ಪದಂಗಳುತ್ಕೇಸರಕೋಟಿ ಸಂಕಟಕುಶೇಶಯ[ಕೋ]ಶಕುಟೀರಕಂಗಳೊಳ್ (ಪಂಪಭಾ. ೪-೪೭) ; ಕುಸುಮಕ್ಕೆ ಷಟ್ಪದಂ . . . ಈಶ್ವರಭಕ್ತಿಗೆ ಭಕ್ತನಾಸೆಮಾಳ್ಪೋರಗೆಯಾಗಿ ಸಂಕಿಲಿಯೊಳಂ ನೆರೆವಾಸೆಯೊಳಿರ್ದ ಸೌಂದರಂ (ನಂಬಿರ. ೧೪ ಸೂಚನೆ). ೨. ಹೇನು : "ಷಟ್ಪದಂ ಹೇನೆನಿಕ್ಕುಂ" (ಮಂಗರಾ. ೪೯-೧೪). ೩. [ಛಂದ] ಆರುಪಾದಗಳುಳ್ಳ ಒಂದು ಪದ್ಯಜಾತಿ ; ಷಟ್ಪದಿ : ಮಂಗರಸನತಿ ಖ್ಯಾತಿಯಂ ಪಡೆದ ಸಂಸ್ಕೃತಸೂಪಶಾಸ್ತ್ರದೊಳ್ ಪ್ರೀತಿಯಿಂದಱಿವನಿತ ತೆಗೆದು ಕನ್ನಡದಿ ವಾರ್ಧಕಮೆಂಬ ಷಟ್ಪದದೊಳು . . . ಓತು ಪೇಳ್ದೆಂ (ಸೂಪಶಾ. ೪ ಪೀಠಿಕೆ). [ಸಂ.]

ಷಟ್ಪದಾರ್ಥ (ನಾ). [ತರ್ಕಶಾ] ವೈಶೇಷಿಕದರ್ಶನದ ಮೇರೆಗೆ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಎಂಬ ಪ್ರಪಂಚದ ಆರು ಭಾವ ಪದಾರ್ಥಗಳು : ಷಡ್ವಿಷಯವೇ ಷಟ್‌ಪದಾರ್ಥಂಗಳು (ಚಿಬಪು. ೬೧-೫೬) ; ಸದಾಚಾರ್ಯಸಂಬಂಧದಿಂದ ಷಟ್ಪದಾರ್ಥಗಳ ತತ್ತ್ವಜ್ಞಾನವುಂಟಾಗಿ, ಅಜ್ಞಾನ ನಿವೃತ್ತಿಯಾಗಿ, ವೈರಾಗ್ಯದಿಂದ ರಾಗದ್ವೇಷಗಳ ವಿಜಯ ಆಗುವುದು (ಹಿಂದಸಾ. ೧೨೩). [ಸಂ.]

ಷಟ್ಪದಿ (ನಾ). ೧. ಆರುಕಾಲುಗಳುಳ್ಳದು : ಕೀಟಗಳು ಷಟ್ಪದಿ - ಸಂಧಿಪದಿಗಳು (Arthropoda). ಅವುಗಳ ತರಗತಿ ಷಟ್ಪದಿ (Hexapoda) (ಕೀಟಬೆ. ೧೫). ೨. ಹೆಣ್ಣುದುಂಬಿ: ಮದಪಿಕಂ ಮುಟ್ಟದ ತಳಿರೊ ಷಟ್ಪದಿಯೆಱಗದರಲೊ . . . ಎನಲೆಸೆವ ಕನ್ನಿಕೆಯ . . . ಸಿಂಗರಿಸವೇಳ್ಕು (ಬಸಪು. ೪-೩೧). ೩. ಹೇನು. ೪. [ಛಂದ] ಆರು ಪಾದಗಳುಳ್ಳ ಒಂದು ಪದ್ಯಜಾತಿ ; ಇ ಇದು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ ಎಂದು ಆರು ಬಗೆಯಾಗಿದೆ : ಮಂದರಧರಗಣಮೊಂದಿರೆ ಕಡೆಯೊಳ್ ಕುಂದದೆ ನೆಲಸುಗೆ ಮದನಹರಂ ಇಂದುನಿಭಾನನೆ ಮುಂದಣ ತೆಱನೀಯಂದಮೆಯಾಗಲೆ ಷಟ್ಪದಿ ಕೇಳ್ (ಛಂದೋಂಬು. ೫-೨೫೯) ; ತ್ರಿವಶಶತಷಟ್‌ಶತ ತ್ರಿವಿಂಶತಿವಿದಿತಸಂಖ್ಯಾಯುಕ್ತದಿಂ ಷಟ್‌ಪದಿಗಳೆಂಟಾಶ್ವಾಸದಿಂದ ಱುವತ್ತುಸಂಧಿಗಳಿಂ . . . ಒಪ್ಪಿದುದು ಬಸವಪುರಾಣವೀಶ್ವರಗಣಕಥನವಾಗಿ (ಬಸಪು. ೬೧-೯೧). ೨, ೪ : ನಿರುತಮಂಜುಳಶಬ್ದದಿಂದೆ ಕಿವಿಗಿಂಪಾಗಿ ಚರಿಸುವ ಸುಲಲಿತಷಟ್ಪದಿಗಳೆಡೆವಡದೆ ಝೇಂಕರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾನೀರೇರುಹಾಕರದೊಳು (ಚೈಮಿಭಾ. ೧-೧೩) [ಸಂ. ಷಟ್ಪದೀ]

ಷಟ್ಪುರುಷ (ನಾ). ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಲೋಕವ್ಯವಹಾರ ಹಾಗೂ ತತ್ಪಾರ್ಥಗಳನ್ನೂ ಚೆನ್ನಾಗಿ ತಿಳಿದವನು : ಚಾಟುಶ್ಲೋಕಗಳಲ್ಲಿಯೂ ದೇವತಾಸ್ತುತಿಗಳಲ್ಲಿಯೂ . . . ಇವುಗಳನ್ನು ಬರೆದವರು ಷಟ್ಪುರುಷರು (ಧ್ವನ್ಯಾಲೋ. ೨೫). [ಸಂ.]

ಷಟ್ಪ್ರತ್ಯಯ (ನಾ). ವರ್ಣ ಮಾತ್ರಗಳ ಸಂಖ್ಯೆ, ಪಾದಪ್ರಸ್ತಾರ ಮೊದಲಾದುವುಗಳನ್ನು ಕಂಡುಹಿಡಿಯಲು ವಿಧಿಸಲಾದ ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವ್ಯಾದಿಲಗಕ್ರಿಯಾ, ಸಂಖ್ಯಾನ ಮತ್ತು ಅಧ್ವಯೋಗ ಎಂಬ ಆರು ಕ್ರಮಗಳು; IP ಅವುಗಳ ವಿವರ ಈ ರೀತಿ ಇದೆ : ಪ್ರಸ್ತಾರ—ಇಪ್ಪತ್ತಾರು ಛಂದಸ್ಸುಗಳಲ್ಲಿ ಯಾವ ಯಾವ ಛಂದಸ್ಸಿನಲ್ಲಿ ಎಷ್ಟೆಷ್ಟು ವೃತ್ತಗಳಿವೆ, ಅವುಗಳ ಲಕ್ಷಣವೇನು ಎಂಬುದನ್ನೂ, ನಷ್ಟ – ಒಂದು ಛಂದಸ್ಸಿನಲ್ಲಿ ಒಂದು ವೃತ್ತದ ಲಕ್ಷಣವು ಗೊತ್ತಿಲ್ಲದಿದ್ದರೆ ಕಂಡುಹಿಡಿಯಲೂ, ಉದ್ದಿಷ್ಟ – ಒಂದು ವೃತ್ತವನ್ನು ಕೊಟ್ಟು ಇದು ಯಾವ ಛಂದಸ್ಸಿನ ಎಷ್ಟನೆಯ ವೃತ್ತ ಎಂಬುದನ್ನೂ ತಿಳಿಯಲು ಸಹಾಯ ಮಾಡುತ್ತವೆ. ಅಲ್ಲದೆ ಏಕಾದ್ವ್ಯಾದಿಲಗಕ್ರಿಯೆ – ಯಾವುದಾದರೂ ಒಂದು ಛಂದಸ್ಸಿನಲ್ಲಿ ಒಂದು ಲಘು ಅಥವಾ ಗುರುವಿರುವ ವೃತ್ತಗಳೆಷ್ಟಿವೆ, ಎರಡು ಲಘು ಅಥವಾ ಗುರುಗಳಿರುವ ವೃತ್ತಗಳೆಷ್ಟಿವೆ ಎಂಬ ವಿವರವನ್ನೂ, ಸಂಖ್ಯಾನ-ಒಂದು ಛಂದಸ್ಸಿನಲ್ಲಿ ಎಷ್ಟು ವೃತ್ತಗಳಿವೆ ಎಂಬುದನ್ನೂ, ಅಧ್ವಯೋಗ – ಆಯಾ ಛಂದಸ್ಸಿನ ಪ್ರಸ್ತಾರವನ್ನು ಹಾಕಲು ಎಷ್ಟು ಉದ್ದಗಲ ಸ್ಥಳ ಬೇಕೆಂಬುದನ್ನೂ ತಿಳಿಸುತ್ತವೆ: ಇಲ್ಲಿಂ ಷಟ್ಪ್ರತ್ಯಯಮಂ ಚೆಲ್ವಾಗೆ ಪೇಳ್ದೆಂ (ಛಂದೋಂಬು. ೬-೨೦). [ಸಂ.]

ಷಟ್ಪ್ರಾಸ (ನಾ). [ಛಂದ] ಸಿಂಹ, ಗಜ, ವೃಷಭ, ಅಜ, ಶರಭ ಮತ್ತು ಹಯ ಎಂಬ ದ್ವಿತೀಯಾಕ್ಷರಪ್ರಾಸವಿರುವ ಆರು ಬಗೆಯ ಪ್ರಾಸಗಳು : ನಿಜದಿಂ ಬಂದೊಡೆ ಗಜದೀರ್ಘಂ ಬಂದು ವೃಷಭ ಬೆಂಜನ ಶರಭಂ ಅಜನು ವಿಸರ್ಗಂ ಹಯಮಂಬುಜಮುಖಿ ದಡ್ಡಕ್ಕರಂಗಳಿವು ಷಟ್ಪ್ರಾಸಂ (ಛಂದೋಂಬು. ೧-೪೬ ಅಡಿಟಿ). [ಸಂ.]

ಷಟ್ಶಾಸ್ತ್ರ (ನಾ). ತರ್ಕ, ವೇದಾಂತ, ಮೀಮಾಂಸೆ, ವ್ಯಾಕರಣ, ಜ್ಯೋತಿಷ ಮತ್ತು ಧರ್ಮಶಾಸ್ತ್ರ ಎಂಬ ಆರು ಪ್ರಕಾರದ ಶಾಸ್ತ್ರಗಳು : ಚತುರ್ವೇದ - ಷಟ್‌ಶಾಸ್ತ್ರ-ನಾಟಕಾಂತಸಾಹಿತ್ಯ . . . ಹೀಗೆ ಎಲ್ಲವುದರಲ್ಲಿಯೂ ಶಿಷ್ಯಾದಿಚ್ಛೇತ್ ಪರಾಜಿತಂ ಎನ್ನುವ ಮಟ್ಟಿಗೆ ಗಣಪತಿಯಾಗ ಪರಿಣತನಾಗಿದ್ದ (ಪೊಸಪ್ಪಿ. ೩೭). [ಸಂ.]

ಷಟ್ಸಮಾಧಿ (ನಾ). ೧. [ಯೋಗ] (ಉಪರತಿಗೆ ಅನುಸಾರಿಯಾದ) ದೃಶ್ಯಾನುವಿದ್ಧ, ಶಬ್ದಾನುವಿದ್ಧ, ನಿರ್ವಿಕಲ್ಪ ಎಂಬ ಬಾಹ್ಯಾಭ್ಯಂತರ ಭೇದದಿಂದ ಆಗುವ ಆರು ಬಗೆಯ ಸಮಾಧಿಗಳು : ಉಪರತಿಗನುಸಾರಿಗಳಾದ ದೃಶ್ಯಾನುವೇದ ಶಬ್ದಾನುವೇದ ನಿರ್ವಿಕಲ್ಪವೆಂಬವೇ ಬಾಹ್ಯಾಭ್ಯಂತರಭೇದದಿಂ ಷಟ್ಸಮಾಧಿಗಳು (ವಿವೇಕ. ೫೨). ೨. ವ್ಯಷ್ಟಿ, ನಿಶ್ಚಿತ, ವಿಲಕ್ಷಣ, ನಿರ್ವಿಷಯ, ಸಮಷ್ಟಿ ಮತ್ತು ಪೂರ್ಣ ಎಂಬ ಆರುಬಗೆಯ ಸಮಾಧಿಗಳು : ಕಂದ ಕೇಳ್ ಷಟ್ಸಮಾಧಿಯನೊಂದಿರಲಿ ವಾಚಿಸಲಿ ಕೇಳಲಿ ಸಂದಿಸಲಿ ಶ್ರದ್ಧೆಯನು ಕರ್ಮದ ತೊಡರ ಬಿಡಿಸುವುದು (ಗಗತಾ. ೧೭-೫೬). [ಸಂ.]

ಷಟ್ಸಮ್ಮಾರ್ಜನೆ (ನಾ). ಹಸುವಿನ ಹಾಲು, ಮೊಸರು, ತುಪ್ಪ ಮತ್ತು ಗೋರೋಚನ, ಗೋಮಯ, ಗೋಮೂತ್ರಗಳಿಂದ ಮಾಡುವ ಆರು ಬಗೆಯ ಶುದ್ಧೀಕರಣ : ಗೋಮಯಂ ಗೋರೋಚನಂ ದಧಿ ಕ್ಷೀರ ಘೃತ ಗೋಮೂತ್ರದಿಂದ ಷಟ್ಸಮ್ಮಾರ್ಜನೆಯನೆಸಗುವಾ ಮಹೇಶ್ವರರು ಭಸಿತಾಂಗರಾಗಲ್ಬೇಹುದು (ವೀಶೈಪ್ರ. ೭-೫-೧೬). [ಸಂ. ಷಟ್ಸಮ್ಮಾರ್ಜನ]

ಷಟ್ಸಾಧನೆ (ನಾ). ಆರು ಬಗೆಯ ಸಾಧನೆಗಳು : ಸತ್ಕರ್ಮೋಪದೇಶವನೆಯ್ದುಂ ಸ್ವರ್ಗಮರ್ತ್ಯದಲ್ಲಿ ಸುಖವೀವ ಗುರುಗಳು ನೂಱುಂ ವಿಚಾರಮುಖದಿಂದ ಷಟ್ಸಾಧನೆಯನೆಯ್ದುಹುವ ಗುರುಗಳು ನೂಱಾಱು (ಷಡ್ವ. ಕ. ೨೩೧-೭೫೪). [ಸಂ. ಷಟ್ಸಾಧನಾ]

ಷಟ್ಸ್ಥಲ, ಷಟ್ಸ್ಥಳ (ನಾ). [ವೀಶೈ] (ಅಧ್ಯಾತ್ಮಸಾಧಕನು ಏರಬೇಕಾದ) ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಮೋಕ್ಷಸಾಧನೆಯ ಆರು ಹಂತಗಳು : ಆ ಜಂಗಮವನಱಿವಲ್ಲಿ ಷಟ್ಸ್ಥಲಸಂಬಂಧವಾಯಿತ್ತು (ಮಡೀವ. ೨೭೭-೭೯) ; ಷಟ್ಸ್ಥಲವದೆಂತುಟದು ಸದಾದಿಯದೆಂತು ಕರುಣಿಸು (ಮಸೋವಿ. ೨-೪೧). **ಷಟ್ಸ್ಥಳ**: 'ಷಟ್ಸ್ಥಳಸಿದ್ಧಾಂತ' ಪರಾ. [ಸಂ.]

ಷಟ್ಸ್ಥಲಬ್ರಹ್ಮ (ನಾ). [ವೀಶೈ] ಲಿಂಗಾಂಗಸಾಮರಸ್ಯ ; ಷಟ್ಸ್ಥಲಾನುಷ್ಠಾನದಿಂದ ಪಡೆಯುವ ಪರಮಾತ್ಮ : ಷಟ್ಸ್ಥಲಬ್ರಹ್ಮವನಱಿದಾತನೇ ಶರಣ ಆತನೇ ಲಿಂಗೈಕ್ಯ ಇಂತೀ ಷಟ್ಸ್ಥಲಬ್ರಹ್ಮವೆಂಬುದು ಅಪ್ರಮಾಣ ಅಗೋಚರ ಅನಿರ್ವಾಚ್ಯ (ಚನ್ನವ. ಕ. ೧೬೧-೭೬೮) ; ಇದೆ ಷಟ್ಸ್ಥಲಬ್ರಹ್ಮಪದ ಸಚ್ಚಿದಾನಂದಪದೆ ನಿತ್ಯಪರಿಪೂರ್ಣವಱಿವುದು (ಮನೋವಿ. ೨-೪೧). [ಸಂ. ಷಟ್ಸ್ಥಲಬ್ರಹ್ಮನ್]

ಷಟ್ಸ್ಥಲಬ್ರಹ್ಮಿ (ನಾ). [ವೀಶೈ] ಲಿಂಗಾಂಗಸಾಮರಸ್ಯವನ್ನು ಹೊಂದಿದ ಶಿವಯೋಗಿ ; ಷಟ್ಸ್ಥಲಸಿದ್ಧಾಂತವನ್ನು ತಿಳಿದುಕೊಂಡಿರುವವನು : ಘಟಭೇದವಱಿತು ಆತ್ಮದ ಸುಖದುಃಖವನಱಿತು ಭಕ್ತಿಗೆ ಸತ್ಯ ವಿರಕ್ತಿಗೆ ಮಲತ್ರಯದೂರ ಸರ್ವಜೀವಕ್ಕೆ ದಯ ಹುಟ್ಟುಕುಂದಿಲ್ಲದೆ ನಿಶ್ಚಯವಾಗಿ ನಿಂದ ನಿಶ್ಚಿತಾಂಗನೇ ಷಟ್ಸ್ಥಲಬ್ರಹ್ಮಿ ಸರ್ವಸ್ಥಲಭರಿತ ಸರ್ವಾಂಗಲಿಂಗಿ (ಮೋಳಮಾ. ೧೧೯-೪೬೬) ; ಷಟ್ಸ್ಥಲಬ್ರಹ್ಮಿಗಳ ಪಾವನಗೃಹಗಳಿಂದೆ . . . ಮೂದೇವನರಮನೆ ಬಡಂಗಾಗಿ ಮೆಱೆದುದು (ಭಾವಚು. ೧-೨೯). [ಸಂ. ಷಟ್ಸ್ಥಲಬ್ರಹ್ಮಿನ್]

ಷಟ್ಸ್ಥಲಸಿದ್ಧಾಂತ, ಷಟ್ಸ್ಥಳಸಿದ್ಧಾಂತ (ನಾ). [ವೀಶೈ] ಷಟ್ಸ್ಥಲಗಳಿಂದ ಆತ್ಮಸಾಧನೆಯನ್ನು ಮಾಡಬಹುದೆಂಬ ತತ್ವ : ಶಿವಶರಣರ ತತ್ವಸಿದ್ಧಾಂತಕ್ಕೆ ಶಕ್ತಿವಿಶಿಷ್ಟಾದ್ವೈತ, ಷಟ್ಸ್ಥಲಸಿದ್ಧಾಂತ, ಭೇದಾಭೇದ ಇವೇ ಮೊದಲಾದ ಹೆಸರುಗಳಿವೆ (ಭಾರದ. ೩೦೮). **ಷಟ್ಸ್ಥಳಸಿದ್ಧಾಂತ** : ಷಟ್‌ಸ್ಥಳಸಿದ್ಧಾಂತದ ಬಗೆಗೆ ತನ್ನ ಅನುಭವಗಳನ್ನು ಹೇಳುವಾಗೆಲ್ಲ . . . ಶಿವಶರಣರನ್ನು ಮನಸಾರೆ ಹೊಗಳಿದ್ದಾರೆ (ಶಂಸಾ. ೭೦ ಕವಿಕಾವ್ಯಪರಿಚಯ). [ಸಂ.]

ಷಟ್ಸ್ಥಳ 'ಷಟ್ಸ್ಥಲ' ನೋ.

ಷಟ್ಸ್ಥಳಸಿದ್ಧಾಂತ 'ಷಟ್ಸ್ಥಲಸಿದ್ಧಾಂತ' ನೋ.

ಷಡಂಗ (ನಾ). ೧. ಚತುರಂಗಬಲ, ದಿವಿಜಸೈನ್ಯ ಮತ್ತು ಖೇಚರಸೈನ್ಯ ಎಂಬ ಆರು ಬಗೆಯ ಸೇನಾಬಲ : ಕರಿರಥತುರಗ ಪದಾತಿವಿದ್ಯಾದೇವ ಪರಿವೃತನೆಯ್ದುದನಾಗ ಕರಮೆಸೆದುದು ಷಡಂಗದಿ ಕೂಡಿ ಚಕ್ರೇಶ್ವರನೆಯ್ತಪ್ಪ ಮಾಳ್ಕೆಯೊಳು (ಅನಂಚ. ೮-೬೦). ೨. ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷವೆಂಬ ಆರು ವೇದಾಂಗಗಳು ಅಥವಾ ಉಪವೇದಗಳು : ಎತತಮಂತ್ರಾಖ್ಯಾನ ವೇದಸ್ಮೃತಿ ಪುರಾಣ ಷಡಂಗವಿಂದ್ರನ ಸುತನ ದೆಸೆಯುಚ್ಚಾಟನ ಸ್ತಂಭಾದಿ ವಿದ್ಯಗಳು ಕ್ಷಿತಿಪ ಕೇಳ್ ಕರ್ಣನತ್ತಲು (ಕುವಾಕ. ೨೨-೫) ; ಆ ವೇದಕ್ಕೆ . . . ಕ್ರಮದಿಂ ಛಂದಸ್ಸು ಕಲ್ಪ ವ್ಯಾಕರಣ ಶಿಕ್ಷೆ ಜ್ಯೋತಿಷ ನಿರುಕ್ತಗಳೆಂಬವೇ ಷಡಂಗಗಳು (ವಿವೇಕ. ೪). ೩. ಹಸುವಿನಿಂದ ದೊರೆಯುವ ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ ಮತ್ತು ಗೋರೋಚನ ಎಂಬ ಆರು ಬಗೆಯ ದ್ರವ್ಯಗಳು. ೪. [ಸಂಗೀತ] ಅನುದ್ರುತ, ದ್ರುತ, ಲಘು, ಗುರು, ಪ್ಲುತ ಮತ್ತು ಕಾಕಪಾದ ಎಂಬ ತಾಳದ ಆರು ಅವಯವಗಳು : ತಾಳಕ್ಕೆ ಬರುವ ಅವಯವಗಳಿಗೆ ಅಂಗಗಳು ಎಂದು ಹೆಸರು. ಇವುಗಳ ಸಂಖ್ಯೆ ಆರು . . . ಅನುದ್ರುತ, ದ್ರುತ, ಲಘು, ಗುರು, ಪ್ಲುತ ಮತ್ತು ಕಾಕಪಾದ ಇವೇ ಷಡಂಗಗಳು (ಸಂಗೀಚಂ. ೫೪). ೫. [ವೀಶೈ] ನೆಲ, ಜಲ, ಬೆಂಕಿ, ಗಾಳಿ, ಆಕಾಶ ಮತ್ತು ಆತ್ಮ ಎಂಬ ಆರು ಅಂಗಗಳು : ಆತ್ಮಗೂಡಿ ಪಂಚಭೂತಂಗಳನ ಷಡಂಗ[ಪಾಶಾಂ. ಷಡ್ವಿಧ ಅಂಗ]ವೆಂದೆನಿಸಿ (ಮಹಾದೇ ಬ. ೧೦೬-೨೬೫) ; ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮರೆಂಬ ಷಡಂಗಂಗಳಂ . . . ಪರಿವಿಡಿದು (ವಿವೇಕ. ೧೧೦). ೬. = ಷಟ್ಸ್ಥಲ : ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರೆಂಬ ಷಡಂಗಗಳಲ್ಲಿ . . . ಷಡ್ಬ್ರಹ್ಮಂಗಳನೇಕೀಕರಿಸಿ ವೊಂದೆಯಾಗಿಪ್ಪ ಗುರುವೆ (ಮನೋವಿ. ೯-೨೩ ಟೀಕು). ೭. ಓಂ ನಮಃಶಿವಾಯ ಎಂಬ ಆರು ಅಕ್ಷರಗಳುಳ್ಳ ಮಂತ್ರ: ಯೋಜಿಸಲು ಮಂತ್ರಂಗಳಿಗೆ ಮಿಗೆ ರಾಜಮಂತ್ರವಿದೆಂದೆನಿಸಿ ವಿಭ್ರಾಜಿಸುವದೀ ಮಂತ್ರವಿದಕೆ ಷಡಂಗವೆನಲಿಹುದು (ಬಸಪು. ೩-೬೮). ೮. [ಚಿತ್ರಶಾ] ರೂಪಭೇದ, ಪ್ರಮಾಣ, ಭಾವ, ಲಾವಣ್ಯಯೋಜನ, ಸಾದೃಶ್ಯ ಮತ್ತು ವರ್ಣಿಕಾಭಂಗ ಎಂಬ ಆರು

ಲಕ್ಷಣಗಳು : ಭಾರತೀಯರಿಗೆ ತಂತ್ರಜ್ಞಾನವಿದ್ದಿತೇ ಇಲ್ಲವೇ ಎನ್ನುವುದಕ್ಕೆ ಷಡಂಗ ಲಕ್ಷಣಗಳು ಉತ್ತರಿಸಬಲ್ಲವು (ಭಾರದ. ೫೮೦). [ಸಂ.]

ಷಡಂಗಬಲ (ನಾ). = ಷಡಂಗ ೧ : ಎಡೆನಿಲ್ಲೆಯದು ಭುವನತಳಂ ನಡೆವ ಚತುರ್ಬಲಕೆ ದಿವಿಜಪೇಚರಸ್ಯನ್ಯಕ್ಕೆಡೆನಿಲ್ಲೆಯದು ಗಗನಮುಮೆನೆ ಷಡಂಗಬಲಮಿಂತು ತಳರೆ ತಳರ್ದಂ ಭರತಂ (ಆದಿಪು. ೧೧-೩೪). [ಸಂ.]

ಷಡಂಗಸೇನೆ (ನಾ). = ಷಡಂಗ ೧ : ಷಡಂಗಸೇನಾವಿರಾಜಮಾನನುಂ ಸಪ್ತಾಂಗ ಸಂಪತ್ಸಮೇತನುಂ . . . ಆಗಿ (ಚಂದ್ರಪ್ರ. ೭-೬೫ ವ). [ಸಂ. ಷಡಂಗಸೇನಾ]

ಷಡಂಗಿ (ನಾ). ಆರುವೇದಾಂಗಗಳನ್ನು ತಿಳಿದವನು ; ಷಡಂಗಗಳನ್ನು ಅರಿತವನು : ಮಾಧವಭಟ್ಟರ ತನೆ(ನ)ಯಂ ಬಸವ(ವ)ಯ ಷಡಂಗಿ ಸಂಗತಚರಿತಂ (ಎಗ.XIII, ೪೫-೪೨; 1112). [ಸಂ. ಷಡಂಗಿನ್]

ಷಡಂಘ್ರಿ (ನಾ). ಆರುಕಾಲುಗಳುಳ್ಳುದು ; ದುಂಬಿ : ಹಂಸನಿಲ್ಲದ ಸರಸಿ ಬಲುವಿದ್ವಾಂಸರಿಲ್ಲದ ಸಭೆ ಷಡಂಘ್ರಿಗೆ ಮಿಸಲೆನಿಸದ ಕಮಲ . . . ಪೀತಸುವಾಸವಿಲ್ಲದ ತೊಡುಗೆಯಂತಾವಾಸ ನೆರೆಯದು ಮಕ್ಕಳಿಲ್ಲದ ಭೂಪದಶರಥಗೆ (ಕಾಶಿಕಾ. ೧-೨೮). [ಸಂ.]

ಷಡಂತರಂಗತಪ (ನಾ). [ಜೈನ] ಪ್ರಾಯಶ್ಚಿತ್ತ, ವಿನಯ, ವೈಯ್ಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನ ಎಂಬ ಆರು ಬಗೆಯ ಅಂತರಂಗತಪಸ್ಸುಗಳು : ಅನಶನಾವಮೋದರ್ಯಾದಿ ಷಡ್ವಿಧಬಾಹ್ಯತಪಮುಂ ಪ್ರಾಯಶ್ಚಿತ್ತವಿನಯಾದಿ ಷಡಂತರಂಗತಪಮುಂ . . . ತನ್ನೊಳುಂ ಸಚ್ಚಿನ್ನಮಾಗಿ (ಪುಷ್ಪದ. ೧೪-೧೬ ವ). 'ಅಭ್ಯಂತರತಪಸ್ಸು' ಪರಾ. [ಸಂ.]

ಷಡಕಿ 'ಸಡಕು' ನೋ.

ಷಡಕ್ಷರ (ನಾ). ೧. ಆರುಅಕ್ಷರಗಳು : ಇಂತೀ ಷಡ್ಡಾತುವೆ ಷಡಕ್ಷರಮಯವಾಗಿ ಅವೆ ಲಿಂಗಂಗಳಾಗಿ (ಚೆನ್ನವ. ೪. ೧೭೧-೩೫೮). 'ಷಡಕ್ಷರಮಂತ್ರ' ಪರಾ. ೨. ಶಿವ. ೩. = ಷಡಕ್ಷರಿ ೨ : ಚಿತ್ತಂಬಿಡಿದಪ್ಪುದೀ ಕೃತಿ ಷಡಕ್ಷರದೇವಕೃತಂ (ರಾಜಶೇ. ೧-೮೪). [ಸಂ.]

ಷಡಕ್ಷರಮಂತ್ರ (ನಾ). ಓಂ ನಮಃಶಿವಾಯ ಎಂಬ ಆರುಅಕ್ಷರಗಳುಳ್ಳಮಂತ್ರ : ವೀರಶೈವರ ಉಪಾಸನಾಮಂತ್ರವೆಂದರೆ ಷಡಕ್ಷರಮಂತ್ರವು (ವಿವಾಪ್ರ. ೧೧೩). [ಸಂ.]

ಷಡಕ್ಷರಿ (ನಾ). ೧. = ಷಡಕ್ಷರಮಂತ್ರ : ವದನದಲ್ಲಿ ಷಡಕ್ಷರಿಯ ಬರೆಯಯ್ಯಾ (ಬಸವ. ೪೯೯) ; ಏಕಾಕ್ಷರಿ . . . ಪಂಚಾಕ್ಷರಿ, ಷಡಕ್ಷರಿ ಮುಂತಪ್ಪ ಪ್ರಸಿದ್ಧಮಂತ್ರಂಗಳೊಳವಲ್ರ್ (ರಾಮಾಶ್ವ. ೧೧೬-೨). ೨. ರಾಜಶೇಖರವಿಳಾಸ ಮೊದಲಾದ ಚಂಪೂಕಾವ್ಯಗಳನ್ನು ಬರೆದ ಒಬ್ಬ ಕನ್ನಡಕವಿಯ ಹೆಸರು : ಅಖಿಳಕಾವ್ಯಕಳಾವಿದರೊಲ್ದು ಕೇಳ್ದು ಮಚ್ಚದ ನುತಿಗೆಯ್ದಿರ್ಪರೆ ಷಡಕ್ಷರಿ ದೇವಕೃತ ಸ್ಪಬಂಧಮಂ (ರಾಜಶೇ ೧೪-೧೭೮) ; ಜೇಂಗೊಡದಂತೆ ಝೇಂಕರಿಪ ತುಂಬಿಗಳಿಂಚರದಂತೆ . . . ಚಿತ್ತಂಗೊಳಲಾರ್ಪುದೀ ಕೃತಿ ಷಡಕ್ಷರಿದೇವಕೃತಂ ರಸಜ್ಞರಾ (ಶಬಶಂ. ೧-೨೭). [ಸಂ. ಷಡಕ್ಷರೀ]

ಷಡಧ್ವ (ನಾ). [ವೀಶೈ] ಮಂತ್ರ, ಪದ, ವರ್ಣ, ಭುವನ, ತತ್ತ್ವ ಮತ್ತು ಕಲಾ ಎಂಬ ಆರು ಮಾರ್ಗಗಳು : ಜಯ ಷಡಧ್ವವಿಶುದ್ಧ ಜಯ ಷಟ್ಕುಲಬ್ರಹ್ಮ ಜಯ ಸಚ್ಚಿದಾನಂದ ಜನ್ಮದೂರ (ಮನೋವಿ. ೯-೨೩) ; ಷಡಧ್ವವೆಂದಾವಾವವೆನಲು ನಿರ್ಮಳನೇ ಕಲಾಧ್ವ ತತ್ವಾಧ್ವ ಭುವನಾಧ್ವ ವರ್ಣಾಧ್ವಂ ಪದಾಧ್ವವಿವಱೂಳಗೆ ಮಂತ್ರಾಧ್ವಂಗಳೆಂದಾಱು ಪರಿ (ವೀಶೈಪ್ರ. ೬-೪-೧೨) . [ಸಂ.]

ಷಡಭಿಜ್ಞ (ನಾ). [ಬೌದ್ಧ] ದಿವ್ಯದೃಷ್ಟಿ, ದಿವ್ಯಶ್ರುತಿ, ಪೂರ್ವಾನುಸ್ಮೃತಿ, ಪರೇಂಗಿತಜ್ಞಾನ, ಪರೋಕ್ಷವಿಷಯಜ್ಞಾನ, ಗಗನಗಮನಾದಿವಿದ್ಯಾಬುದ್ಧಿ ಎಂಬ ಆರು ಶಾಸ್ತ್ರಗಳನ್ನು ತಿಳಿದವನು ; ಬುದ್ಧ : "ಬುದ್ಧಂ ಸಮಂತಭದ್ರಂ ಸಿದ್ಧಾರ್ಥಂ ಮುನಿ ತಥಾಗತಂ ಷಡಭಿಜ್ಞಂ" (ವಪ್ರತೋ. ೨-೧೦) ; ಷಡಭಿಜ್ಞಂ ಕ್ಷಣಿಕಂ ಜಗತ್ಕಾತ್ಮನೆನಿಪಂ ನೈಯಾಯಿಕಂ . . . ನಡೆವಂ ಕಾಪಿಲವೃತ್ತಿಯಂ ಬಿಡದೆ ಸಾಂಖ್ಯಂ ನೋಲ್ಪೊಡಂದೊಲ್ಲದೊಳ್ಪಡರ್ವನ್ನಂ ಶ್ರುತಕೀರ್ತಿದೇವನೊಳ್ ನಿಂದಳ್ ವಾಣಿ (ಚಂದ್ರಪ್ರ. ೧-೨೫). [ಸಂ.]

ಷಡಯನ (ನಾ). = ಷಟ್ಚರಣ ೧ : ಷಡಯನಕುಲದಂತಿರೆ ಕರ್ಪಿಡಿದೊಪ್ಪುವುದರ್ಹನಿನ್ನ ಪದಪಂಕರುಹಕ್ಕೊಡನೆಱಗಿದಮರಸಮಿತಿಯ ಬೆಡಂಗುವೆತ್ತಳಕಪಂಕ್ತಿ (ಜಿನಾಲ. ೬೨); ಒಡವೆಳೆದು ಸುರರೊಳಿದಱೊಳ್ ನುಡಿವುದು ಶುಕಸಮಿತಿ ದೇವಭಾಷೆಯನೆ ತೊದಳ್ಪಿಡೆಗುಡದೆ ಪಾಡುವುದು ಸಲೆ ಷಡಯನತತಿ ದೇವಗಾನಮನೆ ನುಣ್ಣನಿಯಿಂ (ಚಂದ್ರಪ್ರ. ೧೨-೯೭). [ಸಂ.]

ಷಡರಿ (ನಾ). ಮನುಷ್ಯನ ಏಳಿಗೆಗೆ ಅಡ್ಡಿ ಬರುವ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಆರು ಶತ್ರುಗಳು : ಕರಣವಿಷಯಕ್ಕಿಂಬು ಗೂಡದಚ್ಚರಿಯ ಭಾಷೆ ಷಡರಿಗಳಂ ಪರಿಹರಿಪ ಭಾಷೆ (ಬಸವ. ೬-೬). 'ಅರಿಷಡ್ವರ್ಗ' ಪರಾ. [ಸಂ.]

ಷಡಾಧಾರ (ನಾ). ೧. ದೇಹದಲ್ಲಿರುವ ಷಟ್ಚಕ್ರಗಳ ಸ್ಥಾನ : ಆಧಾರ ಒಂದಲ್ಲದೆ ಷಡಾಧಾರವಿಲ್ಲವೆಂದೆ ಒಂದು ಬೀಜದಲ್ಲಾದ ವೃಕ್ಷದ ಹಣ್ಣಿನ ರುಚಿಗೆ ನಾನಾಫಲದ ರಸದ ರುಚಿಯುಂಟೇ (ಮೋಮಾ. ೧-೧) ; ಈ ಷಡಕ್ಷರಿಯೆ ಮುಖ ಭುಜಯುಗ ದೇಹ ಮಧ್ಯ ಪದದ್ವಯ ಷಡಾಧಾರಂಗಳಲ್ಲಿ ಸಂಬಂಧವಾಗಿರ್ಪ ಕಾರಣ (ಉಡ್ಡವಾ. ೬-೫). ೨. = ಷಟ್ಚಕ್ರ : ಆಧಾರ ಸ್ವಾಧಿಷ್ಠಾನ ಮಣಿಪೂರಕ . . . ಆಜ್ಞ ಎಂಬ ಷಡಾಧಾರ ಬಳಿ ಎಡಿದು ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ (ಆದಪ್ರ. ೧೧ ೨೯). [ಸಂ.]

ಷಡಾಧಾರಚಕ್ರ (ನಾ). = ಷಟ್ಚಕ್ರ : ಶರೀರದಲ್ಲಿ ಷಡಾಧಾರಚಕ್ರವುಟೆಂಬ ಚೆಡೆಗಡಿಗದಲೆಯ ಬಿಡುಗುರುಳಣ್ಣಗಳು ಕೇಳಿರೋ (ಮೋಮಾ. ೭೪-೩೩೪) ; ಅಂತಪ್ಪ ಅಸಾಧ್ಯವಾದ ಪರಬ್ರಹ್ಮವ ಷಡಾಧಾರಚಕ್ರದಲ್ಲಿ ಷಡುಸೋಪಾನವಿಟ್ಟರಸುತ್ತಿ ಹರೆಂಬುದೀಗ 'ಮನೆಮನೆಯ ಹೊಕ್ಕು ಸುತ್ತುತ್ತ್ಯದಾರೆ' ಎಂಬ ಶಬ್ದಕ್ಕರ್ಥ (ವಚಸಂ. ೫೫೭ ೧೧ ಟೀಕ). [ಸಂ.]

ಷಡಾನನ (ನಾ). ೧. ಆರುಮುಖಗಳು : ಈ ನಮ್ಮ ನಿಜತತ್ಪಚಿತ್ಕಳಾರೂಪೀ ಷಡಾನನನಂಗಳೊಳೆ ಷಟ್ಪ್ರಣವರೂಪಾಗಿರ್ಪೆ ನೀನೆ ಷಣ್ಮುಖಿ ಷಟ್ಸ್ಥಲಬ್ರಹ್ಮಿ ಕೇಳ ಬೇಕೆಂದೊಡಾಂ ಪೇಳ್ವೆನಿನ್ನು (ಚಿಲುಪ. ೩-೬). ೨. ಆರುಮುಖಗಳುಳ್ಳವನು ; ಷಣ್ಮುಖ : "ಷಡಾನನಂ ವಹ್ನಿಜಂ ತಾರಕರಿಪು ಸ್ವಾಮಿ ಕಾರ್ತಿಕೇಯಂ" (ಮಂಗರಾ. ೫-೧೬) ; ಶಾತಕುಂಭಾಚಲನಿಲಯ ಷಡಾನನಗಣಪತಾತ . . . ಸಂಗಮೇಶ್ವರ ಓತು ರಕ್ಷಿಸೆನ್ನಂ (ಪ್ರಾಥರಾ. ೯-೧). [ಸಂ.]

ಷಡಾಯತನ (ನಾ). [ಬೌದ್ಧ] ಪಂಚೇಂದ್ರಿಯಗಳು ಹಾಗೂ ಮನಸ್ಸು : 'ಷಡಾಯತನ' ವೆಂಬುದು ಪಂಚೇಂದ್ರಿಯಗಳು ಮತ್ತು ಮನಸ್ಸು (ಭಾರದ. ೧೯೫). [ಸಂ.]

ಷಡಾರ (ನಾ). [ಸಂಗೀತ] ಒಂದು ರಾಗದ ಹೆಸರು : ಷಡಾರ ಟೀಕರಾಗ ಮಾಳವಿ ಪಂಚಮಾಳವಿ ಕೌಶಿಕೆ . . . ಹಿಂದೋಳವೆಂಬಿಂಟು ಅಷ್ಟಸಾಧಾರಣದಿಂದಾದ ರಾಗಂಗಳು (ವಿವಣ. ೧೮೭). [?]

ಷಡಾವಶ್ಯಕ (ನಾ). [ಜೈನ] ಮುನಿಗಳು ಪ್ರತಿನಿತ್ಯ ಆಚರಿಸಬೇಕಾದ ಸಾಮಾಯಿಕ, ತೀರ್ಥಂಕರಸ್ತವನ, ಪಂಚಪರಮೇಷ್ಠಿವಂದನ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗ ಎಂಬ ಆರು ಕ್ರಿಯೆಗಳು : ಚತುರ್ವಿಧ ಸತ್ಕಥಾನಿರತನುಂ ಚಾರಿತ್ರವಂತನೆಂಬೊಂ . . . ಪಂಚಸಮಿತಿಸಮೇತನುಂ ನಿರುದ್ಧ ಪಂಚಾಸ್ರವನುಂ ಷಡಾವಶ್ಯಕ [ಪಾಠಾಂ. ಷಟ್ಕಮಾಯ] ಸಂಯುತನುಂ (ಚಾವುಂಪು. ೬). [ಸಂ.]

ಷಡಾವಶ್ಯತೆ (ನಾ). = ಷಡಾವಶ್ಯಕ : ಹಿತಸಾಧುಸಮಾಧಿ ವ್ಯಾಪೃತಿ ಗುರುವಂದಿತ ಜಿನಪ್ರವಚನ ಷಡಾವಶ್ಯತೆಯೆನಿಸಿ ನೆಗಟ್ಟುವೀ ಜಿನಪತಿಶಾಸನದೀಪಕತೆ ಶ್ರುತಾಭಿಪ್ರಾಯಂ (ಶಾಂತಿಪ್ರ. ೯ ೧೧೭). [ಸಂ. ಷಡಾವಶ್ಯತಾ]

ಷಡಿಂದ್ರಿಯ (ನಾ). ಕಣ್ಣು, ಕಿವಿ, ಮೂಗು, ನಾಲಿಗೆ, ದೇಹ ಮತ್ತು ಮನಸ್ಸು ಎಂಬ ಆರು ಇಂದ್ರಿಯಗಳು : ಹೃದಯದಲ್ಲಿ ಮಹಾಲಿಂಗವೆಂದು ಶ್ರೋತ್ರದಲ್ಲಿ ಪ್ರಸಾದಲಿಂಗವೆಂದು . . . ಇಂತು ಷಡಿಂದ್ರಿಯಂಗಳಲ್ಲಿ ಷಡ್ವಿಧಲಿಂಗವಾಗಿ ತೋಱಿತ್ತು (ಚೆನ್ನವ. ೪. ೧೫೯-೩೫೮). [ಸಂ.]

ಷಡೀರಣ (ನಾ). [ವೈದ್ಯಶಾ] ಉಪಶಮನಕಾರಕವಾದ ಆರು ಬಗೆಯ ಸಸ್ಯಮೂಲವಾದ ದ್ರವ್ಯಗಳು : ಚಿತ್ರಮೂಲ, ಕೊಡಸಿಗನ ಚೆಕ್ಕೆ, ಅಗಳುಶುಂಠಿ, ಕಟುಕರೋಹಿಣಿ, ಅತಿಬಿದೆ, ಅನೆಲೆಕಾಯಿ, ಈ ಆಱು ಕೂಡಿ ಷಡೀರಣವೆನಿಸಿಕೊಂಬುದು (ವೈದ್ಯಸಾ. ೬೨೩). [ಸಂ.]

ಷಡುಋತು (ನಾ). ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಮತ್ತು ಶಿಶಿರ ಎಂಬ ಆರು ಋತುಗಳು : ಷಡಧ್ವ ಷಡುಋತುಗಳಿಲ್ಲದಂದು . . . ಅಖಂಡೇಶ್ವರಾ ನಿಮ್ಮ ನೀವಱಿಯದೆ ಅನಂತಕಾಲವಿರ್ದಿರಂದು (ಅಖಂಡೇ. ೨-೪).

[< ಸಂ. ಷಡೃತು]

ಷಡುಖಂಡ (ನಾ). = ಷಟ್ಖಂಡ : ರಾಜ ನಾನೊಬ್ಬನಲ್ಲದೆ ಷಡುಖಂಡಕೆ ರಾಜರಿಬ್ಬರೆ (ಭರಬಿ. ೬೯-೯೭). [< ಸಂ. ಷಟ್ಖಂಡ]

ಷಡುಗವ್ಯ (ನಾ). ಹಸುವಿನಿಂದ ದೊರಕುವ ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ ಮತ್ತು ಗೋರೋಚನವೆಂಬ ಆರು ವಸ್ತುಗಳು : ಹವ್ಯಕವ್ಯಗಳೆಲ್ಲ ಗೋವಿಂದ ಷಡುಗವ್ಯ ಸಮ್ಮಾರ್ಜನೆ ಗೋವಿಂದ (ಶರಚ. ೬೭೬).

[< ಸಂ. ಷಡ್ಗವ್ಯ]

ಷಡುಚಕ್ರ (ನಾ). = ಷಟ್ಚಕ್ರ : ಸಪ್ತಧಾತು ಷಡುಚಕ್ರ ಷಡುವರ್ಗ ಪಂಚಭೂತ . . . ಭಾವಜ್ಞಾನ ಮೊದಲಾದ ಬಾಹತ್ತರವಿನಿಯೋಗಮಂ ತಳೆದು (ಆದಪ. ಮು. ೧೭೪-೨೯೯); ದೃಷ್ಟ ಷಡುಚಕ್ರವಕ್ಷರವನಿರಿಸಿದರಾರು (ದೀಕ್ಷಾಟೋ. ೪೦-೭೭೮). [< ಸಂ. ಷಟ್ಚಕ್ರ]

ಷಡುದರುಶನ, ಷಡುದರ್ಶನ (ನಾ). [ತತ್ತ್ವಶಾ] ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ವೇದಾಂತ ಮತ್ತು ಪೂರ್ವಮಿಮಾಂಸೆ ಎಂಬ ಆರು ಬಗೆಯ ದರ್ಶನಗಳು : ಕಲಿಯುಗದಲ್ಲಿ ಷಡುದರುಶನ ಪಲ್ಲವಿಸಿತ್ತು (ಮೋಮಾ. ೧-೧೦) ; ಆಚಾರ ಶಿವಾಚಾರವೆಂದಱಿಯದ ಕಾರಣ ಷಡುದರುಶನಂಗಳೆಲ್ಲಾ ತಮತಮಗೆ ಶರಣೆನ್ನುತ್ತಿದ್ದುವು (ಬಸವ. ೧೧೭). **ಷಡುದರ್ಶನ** : ಷಡು[ಪಾಠಾಂ. ಟ್]ದರ್ಶನಂಗಳ ಶೋಧಿಸಿ ಕಡುಮುಕ್ತಿಯ ಪಡೆವೆನೆಂಬ ಜಡಮತಿಯವನಲ್ಲ ನೋಡಾ ಲಿಂಗೈಕ್ಯನು (ಅಖಂಡೇ. ೬೧೫-೨). [< ಸಂ. ಷಡ್ದರ್ಶನ]

ಷಡುದರ್ತನ 'ಷಡುದರುಶನ' ನೋ.

ಷಡುಪದ (ನಾ). = ಷಟ್ಪದ ೧ : ಕಡುಚಲ್ಮ ಮಡದಿಯರು ನಡುಬಾಗಿ ಕುಸುಮಮಂ ವಡನೆತ್ತುತಿರಲು . . . ಷಡುಪದಾಳಕದ ನಿಡುಜಡೆಯು ಬೆಂಗಡೆ ನಿಮಿರ್ದು ಕಡುರಮ್ಮಮಾಗಿ ಕಂಗೊಳಿಸುತಿರ್ದರು (ನಮಮೋ. ೨೪-೨೮). [< ಸಂ. ಷಟ್ಪದ]

ಷಡುಭ್ರಮೆ (ನಾ). ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ ಮತ್ತು ನಾಮ ಎಂಬ ಆರು ವಿಧವಾದ ಭ್ರಾಂತಿಗಳು : ಷಡುಭ್ರಮೆಗಳಲ್ಲಿ ಭ್ರಮಿತರನೇನೆಂಬೆನಯ್ಯಾ (ಆದಪ. ಮು. ೮೮-೧೪೬). [< ಸಂ. ಷಡ್ಭ್ರಮ]

ಷಡುರಸ (ನಾ). ೧. ಉಪ್ಪು, ಕಾರ, ಸಿಹಿ, ಕಹಿ, ಹುಳಿ ಮತ್ತು ಒಗರು ಎಂಬ ಆರು ಬಗೆಯ ರುಚಿಗಳು,—ಭೋಜ್ಯರಸಗಳು : ಷಡುರಸಾದಿಗಳು ಮನವ ಸೋಂಕದ ಮುನ್ನವೆ ಪರಿಪೂರ್ಣಭಾವಿ ತಾನಾಗಿ (ಆದಪ. ಮು. ೧೧೯-೨೦೧) ; ಎಲ್ಲಿ ಷಡುರಸಮಯದ ಭೋಜನ . . . ಅಲ್ಲಿ ನಿನ್ನುರವಣೆಗಳೊಪ್ಪುವದು (ಕುವಾದ್ರೋ. ೧೩-೬೭). ೨. ಷಡ್ರಸದಿಂದ ಕೂಡಿದ ಪದಾರ್ಥ,— ಖಾದ್ಯ : ಮೇಲಾದ ಷಡುರಸಗಳನು ಶಾಲಿಯ ದಿವ್ಯಾನ್ನ ಸದ್ಯೋಘೃತಗಳ ಲೋಲಾಕ್ಷಿಯರು ಬಡಿಸಿದರು (ಕಂನಮಿ. ೮-೮೫). [< ಸಂ. ಷಡ್ರಸ]

ಷಡುರುಚಿ (ನಾ). = ಷಡುರಸ ೧ : ಷಡಕ್ಷರವೇ ಷಡುರುಚಿಯಾಗಿ ತೋಱಿಹುದಾಗಿ . . . ಗುರುಲಿಂಗವಾಗಬೇಕಾಯಿತ್ತು (ಆದಪ. ಮು. ೨೦೧-೩೫೨) ; ಪಂಚಭಕ್ಷ್ಯವನು . . . ಚದುರಿನಿಂದೆ ಪರಿಪಾಕಮಂಗೈದೂಲಿದು ವಂಚನಿಲ್ಲದೆಯಸುರದಂಪತಿಗಳಿಗೆ ನೀಡೆ ಷಡುರುಚಿಯೊಳುಂಡು (ನಮಮೋ. ೯-೫). [< ಸಂ. ಷಡ್ರುಚಿ]

ಷಡುಲಪನ (ನಾ). = ಷಡಾನನ ೨ : ಷಡುಲಪನ ಪೋಗೆ ವಿಘ್ನೇಶ ಹರನಂ ಸುತ್ತಿ . . . ಕೊಡು ಪಣ್ಣನೆಂದು ಬೇಡೆ (ಕ್ರೌಡರಾ. ೧-೧೧). [< ಸಂ. ಷಡ್ಲಪನ]

ಷಡುಲಿಂಗ (ನಾ). [ವೀಶೈ] ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎಂಬ ಆರು ಬಗೆಯ ಲಿಂಗಗಳು : ಇಂತು ಷಡುಸ್ಥಲಂಗಳಾದ ದೆಸೆಯಿಂ . . . ಷಡುಲಿಂಗವಾಗಬೇಕಾಯಿತ್ತು (ಆದಪ. ಮು. ೨೦೧-೩೫೨) ; ಆಚಾರಾದಿ ಮಹಾಲಿಂಗಾಂತವಾದ ಷ[ಡ್]ಲಿಂಗಗಳಲ್ಲಿ ವರ್ತಿಸುವ ಪ್ರಾಣಲಿಂಗವು ಪ್ರಾಣಭಿನ್ನ ಭಾವಭಿನ್ನವಾಗಿ ತೋರಲಾಗದು (ಚೆನ್ನಸಾ. ೧೦೩). [< ಸಂ. ಷಡ್ಲಿಂಗ]

ಷಡುವರ್ಗ (ನಾ). = ಷಡರಿ : ಕಾದಿದ್ದರಯ್ಯಾ ಷಡುವರ್ಗವೆಂಬ ತೊತ್ತಿರು ಮುಟ್ಟದಂತೆ (ಅವಚಂ. ೨೭೭-೧೨೭೦) ; ಕಾಮವಿಕಾರವಾದಿ ಷಡುವರ್ಗವಱಿಯದುದು ನೇಮವಿದೆಂದು ನಡೆವ ಹಂಪೆಯ ಮಹಾದೇವ ಗುರುರಾಯ ರಕ್ಷಿಸುಗಮ್ಮನು (ಪಚಕಾ. ೯-೧೧) . [< ಸಂ. ಷಡ್ವರ್ಗ]

ಷಡುವರ್ಣ (ನಾ). ಬಿಳಿ, ಕೆಂಪು, ಹಸಿರು, ಹಳದಿ, ನೀಲಿ ಮತ್ತು ಮಿಶ್ರವರ್ಣವಾದ ಚಿತ್ರ ಎಂಬ ಆರು ಬಗೆಯ ಬಣ್ಣಗಳು : ಅಪ್ಪುವಿನ ಮಱೆಯ ಷಡುವರ್ಣದ ಟಪ್ಪಣದಂತೆ . . . ಇಂತಿಹ ತದ್ರೂಪು ತದ್ರೂಪಂಗಳ ಹೊದ್ದಿಹವಾದ ಕಾರಣ ಇಂತೀ ಆತ್ಮತತ್ವಭೇದದಲ್ಲಿ ಆಗುಚೇಗೆಯನಱಿಯಬೇಕು (ಮೋಮಾ. ೧೧-೪೧) ; ಆ ಮನವು ಮಹದಲ್ಲಿ ಲಯವಾದಲ್ಲಿ ಆತ್ಮನಾವೆಡೆಯಲ್ಲಿದ್ದಿತ್ತು ಷಡುವರ್ಣದೊಳಗಲ್ಲ (ಆದಪ. ಮು. ೨೦೯-೩೬೫). [< ಸಂ. ಷಡ್ವರ್ಣ]

ಷಡುಸಕ್ಕರಿಗ (ನಾ). ಒಂದು ಬಗೆಯ ಮಿಠಾಯಿ : ಗಱಿಮಱಿವ ಕಾಗಿಂಡೆಯಯ್ಯರಿಗ . . . ಹಿರಿಯ ಷಡುಸಕ್ಕರಿಗ ನಿಱಿಲು ಹಂದೆಗನಾನೆಮೊಗನೆಂಬ ಪರಿಪರಿಯ ಮಿಠಾಯ್ಗಳಂ ಗುದಿಗೆಯ್ದುರು (ಪಚಕಾ. ೫-೪೫). [?]

ಷಡುಸಮಾರ್ಜನೆ 'ಷಡುಸಮ್ಮಾರ್ಜನೆ' ನೋ.

ಷಡುಸಮ್ಮಾರ್ಜನೆ, ಷಡುಸಮಾರ್ಜನೆ (ನಾ). = ಷಟ್ಸಮ್ಮಾರ್ಜನ : ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು ಗುಡಿ ತೋರಣವ ಕಟ್ಟಿ ಷಡುಸಮ್ಮಾರ್ಜನೆಯ ಮಾಡಿ ರಂಗವಾಲಿಯನಿಕ್ಕಿ ಉಳಿ ಚಾಂಗು ಭಲಾ ಎಂಬೆ (ಬಸವ. ೬೭೬) ; ಪಾದತೀರ್ಥವ ಕೊಂಡು ಷಡುಸಮ್ಮಾರ್ಜನೆಯ ಮಾಡಿ (ಚೆನ್ನವ. ಕ. ೧೫೯-೩೧೪). **ಷಡುಸಮಾರ್ಜನೆ** : ಮೃಡಭಕ್ತಗಣತತಿ ತಂಡತಂಡದಲಿ ಸಡಗರದೊಳೆಯ್ತರೆ ಮೃಗಮದದ ಷಡುಸಮಾರ್ಜನೆ ಮಾರ್ಗದೊಳು ಬೆಡಗಡರೆ (ಬಸಪು. ೬-೨೦). [< ಸಂ. ಷಟ್ಸಮ್ಮಾರ್ಜನ]

ಷಡುಸಾದಾಖ್ಯ (ನಾ). ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ ಮತ್ತು ಮಹಾ ಎಂಬ ಆರು ಸಾದಾಖ್ಯಗಳು : ಆ ವೃಕ್ಷದಿಂದ ಷಡುಸಾದಾಖ್ಯಂಗಳು ಹುಟ್ಟಿದವು ಆ ಷಡುಸಾದಾಖ್ಯಂಗಳ ನೆಳಲಲ್ಲಿ ಕುಳ್ಳಿರ್ದು ನಾನು ಬಸವ ಬಸವ ಎನುತಿರ್ದೆನು (ಆದಚಂ. ೧೯೭-೨೯೨). [< ಸಂ. ಷಟ್ಸಾದಾಖ್ಯ]

ಷಡುಸ್ಥಲ, ಷಟುಸ್ಥಲ, ಷಡುಸ್ಥಳ (ನಾ). = ಷಟ್ಸ್ಥಲ : ನುಡಿದ ನುಡಿಯೊಳಗೆ ಷಡುಸ್ಥಲ ಬಂದು ಎನ್ನ ಮನವನಿಂಬುಗೊಳ್ಳದಿದ್ದರೆ ಸುಡುವೆನೀ ತನುವ (ಬಸವ. ೮೯೬). **ಷಟುಸ್ಥಲ** : ಅಂದೊಂದು ಪರಿ ಇಂದೊಂದು ಪರಿಯೆ ಷಟುಸ್ಥಲಂಗಳು (ಆದಪ. ಮು. ೬೧-೯೬). **ಷಡುಸ್ಥಳ** : ಈ ಷಡುಸ್ಥಳನಿರ್ಣಯ ಸಾಧಕರಿಗಳವೆ ಪೂರ್ವಸಂಸ್ಕಾರದ ಸಹಜದೊಡೆಯರಿಗಲ್ಲದೆ (ಚೆನ್ನವ. ಕ. ೫೭೮-೧೨೪೧). [< ಸಂ. ಷಟ್ಸ್ಥಲ]

ಷಡುಸ್ಥಳ 'ಷಡುಸ್ಥಲ' ನೋ.

ಷಡೂರ್ಮಿ (ನಾ). ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು ಮತ್ತು ಮರಣ ಎಂಬ ಆರು ಬಗೆಯ ತೊಂದರೆಗಳು : ಅರಿಷಡ್ವರ್ಗಂಗಳು ಷಡೂರ್ಮಿಗಳು . . . ಇಂತಿವು ಆದಿಯಾಗಿ ತೋಱುವ ತೋಱಿಕೆಯೆ ನಾನಲ್ಲ ಎನ್ನವೇ ಅಲ್ಲ (ಮಹಾದೇ. ಬ. ೧೦೧-೨೬೫) ; ಶೋಕ ಜರೆ ಮರಣ ಮೋಹಾಕಾರವಂತವಱ ಜೋಕೆಯಿಂ ಕ್ಷುತ್ಪಿಪಾಸಂಗಳಾದು ನೀ ಕೇಳ್ ಷಡೂರ್ಮಿಗಳ್ (ಮನೋವಿ. ೫-೩೨). [ಸಂ.]

ಷಡೂಷಣ (ನಾ). ಹಿಪ್ಪಲಿ, ಚವ್ಯ, ಶುಂಠಿ, ಚಿತ್ರಮೂಲ, ನೋಡಿ ಮತ್ತು ಮೆಣಸು ಎಂಬ ಆರು ಬಗೆಯ ಉಷ್ಣಕಾರಕ ವಸ್ತುಗಳು. [ಸಂ.]

ಷಡೃತು (ನಾ). = ಷಡುಋತು. [ಸಂ.]

ಷಡ್ಕ 'ಸಡ್ಡುಕ' ನೋ.

ಷಡ್ಗವ (ನಾ). ೧. ಆರು ಎತ್ತುಗಳ ನೊಗ. ೨. ನೊಗ ಹೇರಿದ ಆರು ಎತ್ತು, ಕುದುರೆ ಮೊದಲಾದುವು : "ಆಱು ಪಶು ಷಡ್ಗವಮಕ್ಕು" (ಮುಂಗರಾ. ೫೫-೯).

[ಸಂ.]

ಷಡ್ಗವ್ಯ (ನಾ). = ಷಡುಗವ್ಯ : ನಾರಿಯರು ಷಡ್ಗವ್ಯಸಮ್ಮಾರ್ಜನೆಯನೆಸಗಿ ತಾರ ಚೂರ್ನದ ರಂಗವಲ್ಲಿಯಂ ವಿಸ್ತರಿಸಿ . . . ಅಲಂಕರಿಸಿರೆ (ನವಮೋ. ೧೮-೪೧). [ಸಂ.]

ಷಡ್ಗೀತ (ನಾ). [ಸಂಗೀತ] ಒಂದು ಬಗೆಯ ತಾಳ : ಚಂಚತ್ಪುಟ ಚಾಚತ್ಪುಟ ಷಡ್ಗೀತ . . . ಜಯಾಳವೆಂಬವು ಮೊದಲಾದ ನೂಱೆಂಟು ತಾಳಂಗಳುಂ (ವಿವೇಕ. ೨೫೪). [?]

ಷಡ್ಗುಣ (ನಾ). ೧. ಆರುಪಟ್ಟು ; ಆರುಮಡಿ : 'ಷಡ್ಗುಣಿಸು' ಪರಾ. ೨. ರೂಪ, ವಿದ್ಯೆ, ಸಾಹಸ, ಜ್ಞಾನ, ಸೌಭಾಗ್ಯ, ಮತ್ತು ಭೂಮಿಯ ಒಡೆತನ ಎಂಬ ಆರುಗುಣಗಳು : ಕಡುರೂಪು ವಿದ್ಯ ಸಾಹಸ ಜ್ಞಾನ ಸೌಭಾಗ್ಯ ಪೊಡವಿಯೊಡೆತನಗಳಿಂದಂ ಸಲೆ ವಿರಾಜಿಸುತ ಬಿಡದೆ ಷಡ್ಗುಣಗಳೈಶ್ವರ್ಯಸಂಪನ್ನನೆನಿಸುತ (ನವಮೋ. ೩-೨೯). ೩. ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು ಎಂಬ ಭಗವಂತನ ಆರು ಗುಣಗಳು : ನಾರಾಯಣನಾದೊಡೆ . . . ಜ್ಞಾನ ಶಕ್ತಿ ಬಲ ಐಶ್ವರ್ಯ ತೇಜ ವೀರ್ಯಂಗಳೆಂಬ ವೈಷ್ಣವೋಕ್ತ ಷಡ್ಗುಣಸಹಿತನಾಗಿ . . . ದೇವತೆಗಳಿಂದೋಲೈಸಿಕೊಳುತ್ತಿರ್ಪಂ (ವಿವೇಕ. ೨೩೧) ; ಆತ್ಮತತ್ತ್ವವನ್ನು ತಿಳಿಯಲೋಸ್ಕರ ಷಡ್ಗುಣಪರಿಪೂರ್ಣನಾದ ಶ್ರೀಕೃಷ್ಣನಂ ಕುರಿತು ಪ್ರಶ್ನೆಮಾಡುತ್ತಿದ್ದನೂ (ಉತ್ತರೋ. ೧-೭). ೪. ಕ್ಷಮೆ, ದಯೆ, ಶಾಂತಿ, ಸ್ಥೈರಣೆ, ಸತ್ಯ ಮತ್ತು ನಿತ್ಯ ಎಂಬ ಆರು ಗುಣಗಳು : ಕ್ಷಮೆ ದಯೆ ಶಾಂತಿ ಸ್ಥೈರಣೆ ಸತ್ಯ ನಿತ್ಯವೆಂಬ ಷಡ್ಗುಣ ಸಂಪದಂಗಳ ನಿಮಿಷಾರ್ಧವಗಲದಿರಬೇಕು (ಮಡಿಮಾ. ೯-೧೦). ೫. ಐಶ್ವರ್ಯ, ಜ್ಞಾನ, ಯಶಸ್ಸು, ಶ್ರೀ, ವೈರಾಗ್ಯ ಮತ್ತು ಧರ್ಮ ಎಂಬ ಆರು ಬಗೆಯ ಗುಣಗಳು : (೩). ೬. [ರಾಜನೀ] ನೆರೆರಾಜ್ಯಗಳೊಡನೆ ರಾಜನು ಇಟ್ಟುಕೊಳ್ಳುವ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯ ಎಂಬ ಆರು ಬಗೆಯ ಸಂಬಂಧಗಳು; ೫ ಈ ಗುಣಗಳ ನಿರ್ದೇಶನದಲ್ಲಿ, ವಿವರಣೆಯಲ್ಲಿ ಅನೇಕ ವ್ಯತ್ಯಾಸಗಳಿವೆ : "ಷಡ್ಗುಣಗಳು - ಸಂಧಿ ; ೨ ವಿಗ್ರಹ ; ೩ ಯಾನ; ೪ ಆಸನ; ೫ ದ್ವೈಧೀಭಾವ ; ೬ ಸಮಾಶ್ರಯ" (ನಾನಾರ್ಥ. ೨೯೦). [ಸಂ.]

ಷಡ್ಗುಣಿಸು (ಕ್ರಿ). ಆರರಷ್ಟಾಗು ; ಆರುಪಟ್ಟಾಗು : ಆ ಆತ್ಮಪ್ರಜ್ಞೆ ದಿಗ್ದೇಶ ಮುಟ್ಟೆ ಎಂಟೆದೆಯೆ ರೂಪ ತಳೆದು ಅಗೂ ಬ್ರಹ್ಮಬಿಂದು ಚೈತನ್ಯದಿಂದ ಷಡ್ಗುಣಿಸಿ ಘನದಿ ಬೆಳೆದು (ಅರಳು. ೫೫-೨). [ಷಡ್ಗುಣ + - ಇಸ್ಸು]

ಷಡ್ಗ್ರಂಥ (ನಾ). ಒಂದು ಬಗೆಯ ಮರ ; ಹುಲಿಗಿಲು : "ಷಡ್ಗ್ರಂಥಃ, ಮರ್ಕಟೀ, ಅಂಗಾರ ವಲ್ಲರೀ - ೩ ಕ್ರಮದಿಂ (ಕರಂಜಭೇದಾಃ) . . . ಕೆಂಪುಬಣ್ಣದ ಗೊಂಚಲುಗಳುಳ್ಳ ಹುಲಿಗಿಲಿಗಿಡಕ್ಕೂ ಹೆಸರುಗಳು" (ಸಿದ್ಧಾಂತಿ. ೧೨೩). [ಸಂ.]

ಷಡ್ಗ್ರಂಥಿ (ನಾ). ೧. ಒಂದು ಬಗೆಯ ಸುವಾಸನೆಯ ಬೇರು : "ವನಿತೆ ಷಡ್ಗ್ರಂಥಿ ಕರ್ಪೂರಶಂಠಿ" (ಮಂಗರಾ. ೪೧-೩೩). ೨. ಹಿಪ್ಪಲಿಯ ಬೇರು. ೩. ಬಚೆ. ೪. ಕಚೋರ. ೫. ಒಂದು ಬಗೆಯ ಸಸ್ಯ : "ಗಜಗ, ಗೆಜ್ಜೆಗಬಳ್ಳಿ . . . ಷಡ್ಗ್ರಂಥಿ" (ಸಸ್ಯಸಂ. ೨೫). [ಸಂ.]

ಷಡ್ಗ್ರಂಥಿಕೆ (ನಾ). ೧. ಒಂದು ಬಗೆಯ ಸಸ್ಯ ; "ವನಹರಿದ್ರಾ" (ಪಂಡಿತ. ೨೪೫). ೨. ಒಂದು ಬಗೆಯ ಬೇರು ; ಬಚೆ : "ಬಚೆ ಷಡ್ಗ್ರಂಥಿಕೆ" (ವಸ್ತುಕೋ. ೩೮-೩೩). [ಸಂ. ಷಡ್ಗ್ರಂಥಿಕಾ]

ಷಡ್ಗ್ರಂಥೆ (ನಾ). ೧. = ಷಡ್ಗ್ರಂಥಿಕೆ ೨ : "ವಚಾ, ಉಗ್ರಗಂಧಾ, ಷಡ್ಗ್ರಂಥಾ, ಗೋಲೋಮಾ, ಶತಪರ್ವಿಕಾ - ೫ ಬಚೆ ಹೆಸರುಗಳು" (ಸಿದ್ಧಾಂತಿ. ೧೩೫). ೨. ಕಚೋರ. [ಸಂ. ಷಡ್ಗ್ರಂಥಾ]

ಷಡ್ಜ (ಗು). ೧. ನಾಲಿಗೆ, ಹಲ್ಲು, ಅಂಗುಳು, ಮೂಗು, ಗಂಟಲು ಮತ್ತು ಎದೆ ಎಂಬ ಆರು ಸ್ಥಾನಗಳಲ್ಲಿ ಹುಟ್ಟುವ. (ನಾ). ೨. [ಸಂಗೀತ] ಸಪ್ತ ಸ್ವರಗಳಲ್ಲಿ ಮೊದಲನೆಯದು : ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಂಗಳೆಂಬ ಸಪ್ತಸ್ವರಮುಮಂ . . . ಭರತದ ಸಾರಸರ್ವಸ್ವಮುಮಂ ನಾಟ್ಯ ಧರ್ಮದೊಳ್ ಸೌಧರ್ಮಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್ (ಅಜಿಪು. ೫-೩೦ ವ) ; ಮದುರದ ಷಡ್ಜ ಪಂಚಮದೆರಡಂ ತಂತಿಯನಾರಯಿದು ನುಣ್ಗೊರಲು ಬೆರಲೊಂದಾದುದೆನೆ ಬಾಜಿಸಿದಳಾ ಚದುರೆ (ಸಾಳ್ವಭಾ. ೮೮೭). [ಸಂ.]

ಷಡ್ಜೀವ (ನಾ). [ಜೈನ] ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯಅಸೈನೀ ಮತ್ತು ಪಂಚೇಂದ್ರಿಯಸೈನೀ ಎಂಬ ಆರು ಬಗೆಯ ಜೀವಿಗಳು : ಏಕವಿಹಾರಿಯುಂ ದ್ವಿವಿಧಸಂಯಮಧಾರಿಯುಂ ತ್ರಿಗುಪ್ತಿಗುಪ್ತನುಂ ಚತುಷ್ಕಷಾಯದರ್ಪದಳನನುಂ ಪಂಚಸಮಿತಿನಿಯತನುಂ ಷಡ್ಜೀವದಯಾನಿರತನುಂ . . . ಪಂಚದಶಪ್ರಮಾದಪರಿವರ್ಜಿತನುಮಾಗಿ (ಅಜಿಪು. ೩-೧ ವ) ; ಷಡ್ಜೀವನಿಕಾಯ ಜೀವಿದಯೆಯುಂ . . . ಪಂಚೇಂದ್ರಿಯ ವಿಷಯವಿಚ್ಛಿತ್ತಿಯುಂ ತನ್ನೊಳುಂ ಸಚ್ಛನ್ನಮಾಗಿ (ಪುಷ್ಪಸು. ೧೪-೧೬ ವ). [ಸಂ.]

ಷಡ್ಡಕ 'ಸಡ್ಡುಕ' ನೋ.

ಷಡ್ದರ್ಶನ (ನಾ). = ಷಟ್ತರ್ಕ ೧ : ಮಾಟಲದೇವಿಯರುಂ ಷಡ್‌ದರ್ಶನಸರಸಿರುಹ ನಿಕರಕ್ಕಾದಿತ್ಯನೆನಿಸಿದುದಯಾದಿತ್ಯನುಂ ತಂತಮ್ಮ ದೇವತಾರ್ಚ್ಚನೆಯ ತದನಂತರ ದೊಳ್ಮಾಹೇಶ್ವರನ ಜನಪರಿವ್ರಿತರಾಗಿ ಕುಳ್ಳಿರ್ದ್ದುರ್ (ಸೌಇಇ. XX. ೪೯-೪೧ ; 1076 ?) ; ಇಂತು ಷಡ್ದರ್ಶನಂ ಕೀಳಾದುವು ಮೃಡದರ್ಶನಂ ಮೇಲಾದುದು (ಬಸವ. ೮-೯೫). [ಸಂ.]

ಷಡ್ದಶನ (ನಾ). ಆರುಹಲ್ಲುಗಳಿರುವ ಎತ್ತು : "ಷಡ್ದಶನಮೆನಲಱುಹಲ್ಲಿನ ನಡ್ವಮಕ್ಕುಂ" (ಮಂಗರಾ. ೫೩-೨). [ಸಂ.]

ಷಡ್ದ್ರವ್ಯ (ನಾ). ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲಎಂಬ ಆರು ದ್ರವ್ಯಗಳು : ಸಮನಿಸಿ ಜೀವಂ ತಾಮವು ಸಮಂತು ಷಡ್ದ್ರವ್ಯಮೆನಿಕುಂ (ಚಂದ್ರಪ್ರ. ೧೭-೨೦); ನೆರೆದುದು ಷಡ್ದ್ರವ್ಯನಿಯತಭವನಂ ಭುವನಂ (ಧರ್ಮನಾ. ೨-೪) . [ಸಂ.]

ಷಡ್ಧಾತು (ನಾ). ಶರೀರದಲ್ಲಿರುವ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ ಮತ್ತು ಮಜ್ಜೆ ಎಂಬ ಆರು ಮೂಲಧಾತುಗಳು : ಷಡ್ಧಾತುವಿನಲ್ಲಿ ಷಡಕ್ಷರರೂಪಿಂದ ಷಡ್ಲಿಂಗ ಸ್ಥಾಪ್ಯವಾಗಿಹವು (ಚನ್ನವ.ಕ. ೧೭೧-೩೫೮) ; ಅಷ್ಟಮದಂಗಳು ಅರಿಷಡ್ವರ್ಗಂಗಳು ಷಡೂರ್ಮಿಗಳು ಷಡ್ಭಾವವಿಕಾರಂಗಳು ಷಟ್ಕರ್ಮಂಗಳು ಷಡ್ಧಾತುಗಳು . . . ಇಂತಿವೆ ಆದಿಯಾಗಿ ತೋಱುವ ತೋಱಿಕೆಯೆ ನಾನಲ್ಲ ಎನ್ನವೇ ಅಲ್ಲ (ಮಹಾದೇ. ಬ. ೧೦೧-೨೩೫). [ಸಂ.]

ಷಡ್ಬಲ (ನಾ). ೧. ರಾಜನ ಬಳಿ ಇರಬೇಕಾದ, ವಂಶಪರಂಪರೆಯಿಂದ ಬರುವ ಮೂಲಸೈನ್ಯ, ಸೇವಕವರ್ಗ, ಮಿತ್ರರಾಜರ ಸೇನೆ, ವ್ಯಾಪಾರಸ್ಥರ ಸಂಘಗಳ ಬಲ, ಸೆರೆಹಿಡಿಯಲ್ಪಟ್ಟ ಶತ್ರುಸೈನ್ಯ ಮತ್ತು ವನಚರರ ಸೈನ್ಯ ಎಂಬ ಆರು ಬಗೆಯ ಸೈನ್ಯಗಳು : ಸಾಧಿತಶತ್ರುಷಡ್ಬಲರನುಕ್ರಮದಿಂ ಚರರಂ ದ್ವಿಷನ್ನೃಪಾಷ್ಟಾದಶತೀರ್ಥದೊಳ್ಪಡೆಯಿಸಲ್ಪೆಚೆವರ್ (ಶಾಂತಿಪು. ೨-೪೨) ; ಪೃಥ್ವೀಪಾಲ ಭೂಪಾಲಂ . . . ಷಡ್ಬಲಬಲಿಷ್ಠನುಂ ದುರ್ಗಪಂಚಕಸಮಗ್ರನುಂ . . . ಆಗಿರ್ಪಂ (ಚಂದ್ರಪ್ರ. ೯-೧೧೭ ವ). ೨. [ಜ್ಯೋತಿ] "ಸ್ಥಾನ ಚೇಷ್ಟಾ ನಿಸರ್ಗ ಕಾಲ ದಿಕ್ ದೃಷ್ಟಿ ಎಂಬ ಗ್ರಹಗಳ ಆರು ವಿಧವಾದ ಬಲ" (ಜಾತಕ. ಪರಿ. ೩೯೧). [ಸಂ.]

ಷಡ್ಬಿಂದು (ನಾ). ಒಂದು ಬಗೆಯ ಹುಳು ; ನೆಲಗಿರುಬ : ಷಡ್ಬಿಂದುಹುಳು ವಿಷಕ್ಕೆ-ಘೃತಮಂ ಪಾಲಂ ಕುಡಿಸಲ್ಕತಿಶ(ಭ)ಯಷಡ್ಬಿಂದುಕೀಟಕಂಗಳ ವಿಷಮಂ ಕ್ಷಿತಿಯೊಳಮಾಗಳೆ ಕಿಡಿಸುಗುಂ (ಏಮದ. ೧೩-೧೧೩) ; ಷಡ್ಬಿಂದು ಎಂಬ ಹುಳು ಕಚ್ಚಿದರೆ ಎಕ್ಕೆಯ ಹಾಲನು ಕಚ್ಚಿದ ಗಾಯಕ್ಕೆ ಇಕ್ಕಿಸುವುದು. ಷಡ್ಬಿಂದು ಎಂದರೆ ನೆಲಗಿರುಬ ಎಂಬರು (ವೃದ್ಧಸಾ. II, ೨೦೩). [ಸಂ.]

ಷಡ್ಭಾಗ (ನಾ). (ರಾಜನಿಗೆ ಕೊಡುತ್ತಿದ್ದ ಧಾನ್ಯದ ಉತ್ಪತ್ತಿಯ) ಆರರಲ್ಲೊಂದು ಪಾಲು,– ಭಾಗ : ಷಡ್‌ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿ ಪಾಳಿಪರ್ ಪ್ರಜೆಗಳಂ (ಆದಿಪು. ೧-೫೧) ; ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ (ಬಸವ. ೩೮೫). [ಸಂ.]

ಷಡ್ಭಾವವಿಕಾರ (ನಾ). ಹುಟ್ಟುವುದು, ಇರುವುದು, ಬೆಳೆಯುವುದು, ರೂಪಾಂತರ ಹೊಂದುವುದು, ಸೊರಗುವುದು ಮತ್ತು ಸಾಯುವುದು - ಹೀಗೆ ದೇಹಕ್ಕೆ ಇರುವ ಆರು ಬಗೆಯ ಬದಲಾವಣೆಗಳು : ಷಡೂರ್ಮಿಗಳು ಷಡ್ಭಾವವಿಕಾರಂಗಳು . . . ಇಂತಿವಾದಿಯಾಗಿ ತೋಱುವ ತೋಱಿಕೆಯೆ ನಾನಲ್ಲ

ಎನ್ನವೇ ಅಲ್ಲ (ಮಹಾದೇ.ಬ. ೧೧೧-೨೩೫) ; ಜಾಯತೆ ಅಸ್ತಿತೆ ವಿಪರಿಣತೆ ವಿವರ್ಧತೆ ಅಪಕ್ಷೀಯತೆ ವಿವಶ್ಯತೆ ಎಂಬ ಷಡ್ಭಾವವಿಕಾರಮುಳ್ಳಾತನೆನಿಸಿ (ವಿವೇಕ. ೨೫೭). [ಸಂ.]

ಷಡ್ಭಾಷೆ (ನಾ). ಮಹಾರಾಷ್ಟ್ರಿ, ಮಾಗಧಿ, ಶೌರಸೇನೀ, ಪೈಶಾಚೀ, ಚೂಲಿಕಾ ಪೈಶಾಚೀ ಮತ್ತು ಅಪಭ್ರಂಶ ಎಂಬ ಆರು ಭಾಷೆಗಳು : (ಕಿ). 'ಪ್ರಾಕೃತ' ಪರಾ. [ಸಂ. ಷಡ್ಭಾಷಾ]

ಷಡ್ಭ್ರಮೆ (ನಾ). = ಷಡುಭ್ರಮೆ : ಅರಿಷಡ್ವರ್ಗಂಗಳು ಷಡೂರ್ಮಿಗಳು ಷಡ್ಭ್ರಮೆಗಳು . . . ಅಂತಃಕರಣಂಗಳು ಇಂತಿವಾದಿಯಾಗಿ ತೋಱುವ ತೋಱಿಕೆಯೇನೂ ನಾನಲ್ಲ (ಮಹಾದೇ. ಕ. ೧೪೫-೩೪೧) ; ಜಾತಿವರ್ಣಾಶ್ರಮಸಮೇತ ಕುಲಗೋತ್ರನಾಮಾತಿಶಯಮೆಂಬ ಷಡ್ಭ್ರಮೆಯಿಂತಿವಂ ಪ್ರೀತಿಯಿಂ ಜೀವ ಮುಯ್ಯಾತು ಬೆಂಬಿಡನು (ಮನೋವಿ. ೫-೩೦) . [ಸಂ. ಷಡ್ಭ್ರಮ]

ಷಡ್ಯಂತ್ರ (ನಾ). ಒಳಸಂಚು ; ಗುಪ್ತಕಾರಸ್ಥಾನ : ಅವಳನ್ನು ಮೋಸಗೊಳಿಸಲು ಷಡ್‌ಯಂತ್ರವನ್ನು ಹುಡುಕುತ್ತಿದ್ದಾರೆ (ಕೊತಕಾ. ೩೫) ; ಮನುಷ್ಯನ ಸರ್ವಸ್ವವನ್ನೂ ಕಳೆದುಕೊಳ್ಳುವ ಈ ಷಡ್ಯಂತ್ರ ಮಾಡಿದವರಿಗೆ ದುಃಖದ ನಿಜವಾದ ಅನುಭವವಿಲ್ಲ (ಶೇಪ್ರಶ್ನ. ೨೮೧). [ಸಂ.?/ ಹಿಂ. ಷಡ್ಯಂತ್ರ್]

ಷಡ್ರಸ್ತ್ರಿ (ನಾ). ಆರು ಮೊಳ : ಅಲ್ಲಿಯ ನಿಳಿಂಪರೆಲ್ಲಂ ಷಡ್ರಸ್ತ್ರಿಪ್ರಮಾಣದೇಹರುಂ . . . ಅಪ್ಪರ್ (ಸುಕುಮಾ. ೧೧-೬೨ ವ). [ಸಂ.]

ಷಡ್ರಸ (ನಾ). ೧. = ಷಡುರಸ ೧ : ಷಡ್ರಸಗಳನ್ನು ಸೇರಿಸಿ ನಳಪಾಕ ಭೀಮಪಾಕಗಳನ್ನು ಇಳಿಸುವವರೇ ಪಾಕಕಲಾನಿಪುಣರು (ಜೀವಾತ್ಮ. ೧೭೨). ೨. = ಷಡುರಸ ೨ : ನೃಪಂ . . . ಷಡ್ರಸಾದಿಗಳನಾರೋಗಿಸಿ ವಿಮಳಹಂಸತೂಲದೊಳ್ಪವಡಿಸಿದನು (ಜೈಮಿಭಾ. ೨-೬೪). [ಸಂ.]

ಷಡ್ರುಚಿ (ನಾ). ೧. = ಷಡುರಸ ೧ : ನಾಲಿಗೆಗೆ ವಿಷಯ ರಸ-ಉದಕದಲ್ಲಿ ಕೂಡಿಕೊಂಡು ಷಡ್‌ರುಚಿಗಳ ಗುರುತಿಸುವದು (ಚೆನ್ನಸಾ. ೧೩೧). ೨. = ಷಡುರಸ ೨: ಪೂಜಾಫಲದಿಂ ಕನ್ನಯ್ಯನ ಮಾಂಸವೆಲ್ಲ ಪರಮಷಡ್ರುಚಿಯಾಯಿತ್ತಯ್ಯ ನಿನ್ನ ರಸೆಗೆ (ಸಿದ್ಧವ. ೧೦೯-೩೩೩). [ಸಂ.]

ಷಡ್ಲಿಂಗ (ನಾ). = ಷಡುಲಿಂಗ : ಷಡಾಧಾರಂಗಳಲ್ಲಿ ಷಡಕ್ಷರರೂಪದಿಂದ ಷಡ್ಲಿಂಗಸ್ಥಾಪ್ಯವಾಗಿಹವು (ಚೆನ್ನವ. ಕ. ೧೬೧-೩೫೮); ಷಡ್ಲಿಂಗಾವರಣ ಸಚ್ಚಿದಾಕಾರ . . . ಜಯ ಜಯ ಕೃಪಾರತ್ನಾಕರ (ಏಕೋಪು. ೧-೧). [ಸಂ.]

ಷಡ್ವದನ (ನಾ). ೧. ಆರುಮುಖಗಳು : ಮದನಾರಿಯ ಷಡ್ವದನಗಳಿವು (ದೀಕ್ಷಾಬೋ. ೬೧-೫೫). ೨. = ಷಡಾನನ ೨ : ಪಠನಾಗಾರಕ್ಕೆದಿ ಷಡ್ವದನನಂ ಗದ್ದುಗೆಯೊಳಿರಿಸಿ . . . ಓಂಕಾರಮಂ ಬರೆಯಲೆನ್ನ ಕೈವಿಡಿದು . . . ಹೊಡೆದನಯ್ಯ (ಭಾವಚಿಂ. ೧-೩೮) ; ಷಡ್ವದನನಳವಿಗೈತಂದು ಬಿಲ್ಗೊನೆಯನುಟೆ ನೇವರಿಸಿ (ಚಿಬಪು. ೪೦-೧೩). [ಸಂ.]

ಷಡ್ವರ್ಗ (ನಾ). ೧. = ಷಡರಿ : ಪಂಚೇಂದ್ರಿಯ ಷಡ್ವರ್ಗ ಸಪ್ತಧಾತು ಅಷ್ಟಮದಂಗಳ ತಡೆಯಬಲ್ಲಡೆ ಕೂಡಲಸಂಗಯ್ಯನಲ್ಲಿ ಅದೆ ಅಚ್ಚಶೀಲ (ಚೆನ್ನವ. ೫. ೫೯೯-೧೧೬೮). ೨. [ಜ್ಯೋತಿ] ಲಗ್ನ, ಹೋರೆ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ ಮತ್ತು ತ್ರಿಂಶಾಂಶ ಎಂಬ ಆರು ವಿಧವಾದ ವರ್ಗ : ಭವನಂ ದ್ವಾದಶಭಾಗಂ ನವಾಂಶಕಂ ತ್ರಿಂಶದಂಶ ಹೋರಾ ದ್ರೇಕ್ಕಾಣವೆನಿಪ್ಪಿನಿತುಂ ಷಡ್ವರ್ಗವೆಂಬ ಪೆಸರಿಂ ಪ್ರವರ್ತಿಕುಂ (ಜಾತಕಿ. ೧-೪೫). [ಸಂ.]

ಷಡ್ವರ್ಣ (ನಾ). ೧. = ಷಡುವರ್ಣ : ಶ್ವೇತಾದಿ ಷಡ್ವರ್ಣದ್ರವ್ಯವನೊಲವಿನಿಂದಲರ್ಚಿಸಿ (ಚಿಬಪು. ೬೧-೬೦). ೨. ಆರು ಅಕ್ಷರಗಳು : ರುದ್ರತ್ವಮಂ ತಾಂ ಪೊರೆದತ್ತೀ ಮಂತ್ರ ಕೋಟಿಸ್ಫುಟಮಕುಟಮಹಾರತ್ನಷಡ್ವರ್ಣಮಂತ್ರಂ (ರಾಜಶೇ. ೪-೮೫); ಮಕಾರದಿಂ ಬಕಾರಾದಿ ಷಡ್ವರ್ಣಂಗಳು . . . ಉದಿಸಿದವು (ಉದ್ಧವಾ. ೭-೨). [ಸಂ.]

ಷಡ್ವಿಧ (ನಾ). ಆರು ಬಗೆ, – ಪ್ರಕಾರ : ಷಡ್ವಿಧ ಲಿಂಗಾಂಗದ ಮೂಲವನಱಿದು ಷಡ್ವಿಧ ಅರ್ಪಿತಾವಧಾನವನಾಚರಿಸಿ . . . ನಡೆನುಡಿಸಂಪನ್ನರಾದವರೇ ಶಿವಭಕ್ತರು ಕಾಣಾ (ಮಡಿಮಾ. ೧೧-೧೨) ; ಅನಶನಾವಮೋದರ್ಯಾದಿ ಷಡ್ವಿಧಬಾಹ್ಯತಪಮುಂ . . . ತನ್ನೊಳುಂ ಸಚ್ಛನ್ನಮಾಗಿ (ಪುಷ್ಪಪು. ೧೪-೧೬ ವ). [ಸಂ.]

ಷಡ್ವಿಧಭಕ್ತಿ (ನಾ). ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ ಮತ್ತು ಸಮರಸಗಳೆಂಬ ಆರು ವಿಧವಾದ ಭಕ್ತಿ : ಆ ಅಂಗಕ್ಕೆ ಕಲೆಗಳನೆ ಷಡ್ವಿಧ ಶಕ್ತಿಗಳೆಂದೆನಿಸಿ ಆ ಶಕ್ತಿಗಳಿಗೆ ಷಡ್ವಿಧಭಕ್ತಿಯನಳವಡಿಸಿ (ಮಹಾದೇ. ಬ. ೧೦೩-೨೩೫) ; ಶ್ರದ್ಧಾಭಕ್ತಿ ನಿಷ್ಠಾಭಕ್ತಿ ಅವಧಾನಭಕ್ತಿ ಅನುಭವಭಕ್ತಿ ಆನಂದಭಕ್ತಿ ಸಮರಸಭಕ್ತಿಯೆಂಬ ಷಡ್ವಿಧಭಕ್ತಿಗಳಂ ಪರಿವಿಡಿದಪ್ಪುದು (ವಿವೇಕ. ೧೧೧). [ಸಂ.]

ಷಡ್ವಿಷಯ (ನಾ). ರೂಪ, ಶಬ್ದ, ರಸ, ಗಂಧ, ಸ್ಪರ್ಶ ಮತ್ತು ಜ್ಞಾನ ಎಂಬ ಆರು ವಿಷಯಗಳು : ಷಡ್ವಿಷಯವೇ ಷಟ್ಪದಾರ್ಥಂಗಳು (ಚಿಬಪು. ೬೧-೫೬). [ಸಂ.]

ಷಣ್ಮತ (ನಾ). ೧. ಶೈವ, ವೈಷ್ಣವ, ಶಾಕ್ತ, ಸೌರ, ವೈನಾಯಕ ಮತ್ತು ಸ್ಕಾಂದ ಎಂಬ ಆರು ಭಕ್ತಿಮಾರ್ಗದ ಧರ್ಮಗಳು : ಷಣ್ಮತದಿಂದ ಬಳಲುವ ಕಥೆಯದಲ್ಲವುಯಿಂದಿದುವೆ ನಿಜಮುಕ್ತಿ ತಾನಹ ಮುಕ್ತಿ ಮಹಮುಕ್ತಿ (ಜ್ಞಾನಸಿಂ. ೧-೨೪); ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯ, ಸ್ಕಾಂದಗಳೆಂಬ ಷಣ್ಮತಗಳು ಪೂಜ್ಯದೇವತಾ ವಿಭಾಗದಿಂದ ವಿಭಕ್ತಗಳಾಗಿರುವುವು (ಹಿಂದಾಸಾ. ೯). ೨. ಆರು ಮತಗಳ ಅನುಯಾಯಿಗಳು : ಷಣ್ಮತರಿರುವ ಮ್ಮಾರೆಯ ಮೀರದಂತಾಗಮರು ಧರ್ಮಜರ ತೆರನನರಿದಾರೈದು ದುಷ್ಟರ ಮುರಿದು ಜನರಕ್ಷಣೆಯಗರೆಯದೆ ತರಿಗೆ ದಂಡಗಳಾಸೆಗೈವರೆ (ಬಿಷ್ಟಪು. ೭೦-೩೨). [ಸಂ.]

ಷಣ್ಮುಖ (ನಾ). ೧. ಆರುಮುಖಗಳು : ಆತ್ಮಾದಿ ಷಡಂಗಗಳೂ ಷಣ್ಮುಖಗಳೂ ಷಟ್ಕರಗಳೂ ಷಟ್‌ಪದಾರ್ಥಗಳೂ ಆಗಿ ರೂಪುಗೊಳ್ಳುವವು (ಶಿವಾಸೂ. VI. ಪ್ರಸ್ತಾವನ). ೨. ಆರು ಮುಖಗಳುಳ್ಳದು : ಆ ವರೆಗೂ ಮೂಕವಾಗಿ ನಡೆದ ಆಟ . . . ಒಮ್ಮೆಲೇ ಚತುರ್ಮುಖವಾಗಿ, ಷಣ್ಮುಖವಾಗಿ ಕಲೆಯಹತ್ತಿತು (ಮೂರುದಾ. ೮). ೩. ಆರು ಮುಖಗಳುಳ್ಳವನು ; ಕುಮಾರಸ್ವಾಮಿ : ಷಣ್ಮುಖ ನೋಡುವಡೆ ತಾರಕಧ್ವಂಸಿ (ಸಿದ್ಧವ.ಕ. ೫೭-೧೮೨) ; ಷಣ್ಮುಖನಿಂದೆ ತಾರಕಂ ಮಡಿದ ಸಮನಂತರದೊಳು ತಲೆದಡಹಿದಳ್ ಧರಾವನಿತೆ (ಚಿಬಪು. ೪೧-೨). ೪. ಅಗ್ನಿ : (ಕಿ). ೫. ಒಂದು ಬಗೆಯ ಹುಣ್ಣು (?): ಅಂಬುಳುವಾದಡೆ ಷಣ್ಮುಖನೆಂಬರು ಸೀವಳಿಗೆಯಾಗೆ ಸಲೆ ಮಾರಿಯ ಹುಣ್ಣೆಂಬರು ತುಱಿಯಾದಡೆ ಫಣಿಯೆಂಬರ್ ಮತಿಹೀನಜನರದೇನಂ ಮಾಡರ್ (ಸಮಪ. ೯-೨೬). [ಸಂ.]

ಷಣ್ಮುಖಪ್ರಿಯ (ನಾ). [ಸಂಗೀತ] ಒಂದು ರಾಗದ ಹೆಸರು : ಷಣ್ಮುಖಪ್ರಿಯ-೫೬ನೇ ಮೇಳಕರ್ತರಾಗ. ಪ್ರಾಚೀನನಾಮ 'ಚಾಮರ'. ಪ್ರಸಿದ್ಧರಾಗ. ಎಲ್ಲಾ ವೇಳೆಯಲ್ಲೂ ಹಾಡಬಹುದು (ಸಂಗೀಚಂ. ೧೪೩). [ಸಂ.]

ಷತ್ವ (ನಾ). 'ಷ' ಎಂಬ ಅಕ್ಷರ : ಷತ್ವಕ್ಕೆ ಮತ್ವಂ – ಉಷ್ಮನ್ – ಉಮ್ಮೆ (ಶಮದ. ೨೬೫ ಪ್ರಯೋ). [ಸಂ.]

ಷಬಕೂನು (ನಾ). ರಾತ್ರಿಕಾಲದಲ್ಲಿ ಮಾಡುವ ದಾಳಿ,– ಮುತ್ತಿಗೆ : ಹೈದರಲ್ಲಿಖಾನಬಹದರವರು . . . ಗೋಪಾಲಹರಿರಾಸ್ತೆದವರ ದಂಡಿನ ಮೇಲೆ ಷಬಕೂನು ಮಾಡಿ ಮರುದಿನ ವಿಭಾಮ ಕೊಡಲಾಗಿ (ಹೈದರ. ೪೩).

[<- ಪಾರ. ಮರಾ. ಶಬ್‌ಖೂನ್]

ಷರಟು, ಶರಟು, ಶರ್ಟು (ನಾ). ಅಂಗಿ : ಒಂದು ದಟ್ಟ ಪಂಚೆ - ಖಾದಿಯದು. ಮೇಲಕ್ಕೊಂದು ಅರೆತೋಳಿನ ಷರಟು (ಆಲಹಾ. ೧೦೬) ; ಅಗಸನಿಂದ ಬಂದ ಚೆಡ್ಡಿ ಷರಟಿನ ಅಲಂಕಾರ (ಮಾರ್ಗದ. ೨೪). ಶರಟು : ಈ ಕೋಟು, ಈ ಶರಟು, ಈ ಶರಾಯಿ . . . ನಿನ್ನದೇ ತೆಗೆದುಕೋ (ನವ್ಯಕ್ರ. ೮೭). ಶರ್ಟು : ಕೇಶವನು ಬಕ್ಕತಲೆ ಮಾಡಿಕೊಂಡು ಬರಿ ಶರ್ಟಿನ ಮೇಲೆ ನಿಂತಿದ್ದ ಹಾಗೆ ಧೋತರವನ್ನು ಮೇಲೇರಿಸಿದ (ಸಮಜೀ. ೪೮೩) ; ಇಸ್ತ್ರಿ ಮಾಡಿರದಿದ್ದರೂ ಸ್ವಚ್ಛವಾದ ಅರ್ಧತೋಳಿನ ಶರ್ಟು (ಮೂರುದಾ. ೨೪೩).

[<- ಇಂ. Shirt]

ಷರತ್ತು 'ಶರತ್ತು' ನೋ.

ಷರಬತ್ತು 'ಶರಬತ್ತು' ನೋ.

ಷರ್ಾ₁ 'ಶರಾ' ನೋ.

ಷರ್ಾ₂ (ನಾ). ಮಹಮ್ಮದೀಯರ ಮದುವೆಯಲ್ಲಿ ಓದುವ ಇಸ್ಲಾಂಧರ್ಮಶಾಸ್ತ್ರದ ವಾಕ್ಯ : ನಿನ್ನನ್ನು ಮಸಜಿದಿಗೆ ಕರೆದುಕೊಂಡು ಹೋಗಿ ಷರಾ (ಮದುವೆಯಾಗುವ ಮಂತ್ರ)ವನ್ನು ಓದಿಸುವೆನು (ಕೋಹಿನೂ. ೬೫).

[<- ಅರ. ಹಿಂ. ಶರ್ಅ; ಮರಾ. ಶರಾ]

ಷರಾಕಟ್ಟು (ಕ್ರಿ). (ಹಣ ಕಟ್ಟಿದುದಕ್ಕೆ) ದಾಖಲೆ ಮಾಡು ; ಟಿಪ್ಪಣಿ ಬರೆ : ಅಸಲಿನಲ್ಲಿ ಸ್ವಲ್ಪ ಕೊಟ್ಟು ಪತ್ರಕ್ಕೆ ಷರಾಕಟ್ಟದಿದ್ರೆ ಅವರಂತೂ . . . ಜಮಿನು ಹರಾಜು ಮಾಡುವುದೇ ಸರಿ (ಕುಂಜೂ. ೫೩). [ಷರಾ (< ಶರಾ) + ಕಟ್ಟು]

ಷರಾಬು 'ಶರಾಬು' ನೋ.

ಷರಾಯಿ 'ಶರಾಯಿ' ನೋ.

ಷರಾರತಿ (ಗು). ಮಾತ್ಸರ್ಯವುಳ್ಳ ; ಮತ್ಸರದಿಂದ ಕೂಡಿದ : ದಿಂಡಿಗಲ್ಲು ಕಡೆ ಷರಾರತಿ ಪಾಳ್ಯೇಗಾರರ ತಂಬೀ ಬಗ್ಗೆ ಹೈದರಲ್ಲಿಖಾನಬಹದರವರಿಗೆ ಮೊಕರೂರು ಮಾಡಿ (ಹೈಚ. ೩೪). [← ಅರ. ಹಿಂ. ಮರಾ. ಶರಾರತೀ]

ಷರಿಯತ್ತು (ನಾ). ಮುಸಲ್ಮಾನರ ಧರ್ಮಶಾಸ್ತ್ರ : ಈ ಎರಡನೆಯ ಸೂಕ್ತಿಯಲ್ಲಿ ಸಂಪೂರ್ಣ ಕುರಾನ್, ಷರಿಯತ್ತಿನಲ್ಲಿ ಅರ್ಧ, ತರೀಖತ್‌ನಲ್ಲಿ ಕಾಲು ಭಾಗ - ಇಷ್ಟೂ ಅಡಗಿದೆ (ನಗಹೂ. ೬೭). [← ಅರ. ಹಿಂ. ಶರೀಅತ್ ; ಮರಾ. ಶರೀಯತ್]

ಷರೀಕು 'ಶರೀಕು' ನೋ.

ಷರ್ತಿ (ನಾ). "ಷರ್ತಿ ಎಂದರೆ ತಾಲ್ಲೂಕಿನ ವರಮಾನವನ್ನು ಗುತ್ತಿಗೆಗೆ ಕೊಡುವ ವಿಪ್ಪಾಡು" (ಮಹಾವಂ. ೭೮). [← ಅರ. ಹಿಂ. ಶರ್ತೀ]

ಷವರ್ಣ (ನಾ). 'ಷ' ಎಂಬ ಅಕ್ಷರ. [ಸಂ.]

ಷಷ್ಟಿ (ನಾ). ಒಂದು ಸಂಖ್ಯೆ ; ಅರುವತ್ತು : ತ್ರಿಶತಸಂಯುತಷಷ್ಟಿರುಜೆಗಳ ವಶದಿ ನೊಂದುಮ್ಮಳಿಸುವದಱಿಂ . . . ಉತ್ತಮತಪಸಿಗೆನ್ನೊಡಲ ಅಶನವಾಗಿ ಕೃತಾರ್ಥನಪ್ಪೆನು (ಬಸಪು. ೨೪-೧೪). [ಸಂ.]

ಷಷ್ಟಿಕ (ನಾ). ಅರುವತ್ತುದಿನಗಳಲ್ಲಿ ಫಸಲಿಗೆ ಬರುವ ಒಂದು ಬಗೆಯ ಭತ್ತ : ಚರಕನ ಕಾಲದಲ್ಲಿ . . . ಷಷ್ಟಿಕವೆಂಬ ಜಾತಿ ಬೇಸಗೆಯ ೬೦ ದಿನಗಳಲ್ಲಿ ತೆನೆ ಬಿಡುವುದೆಂದೂ ತಿಳಿಯಲಾಗಿತ್ತು (ಕಾಸಗ. ೧೩). [ಸಂ. ಷಷ್ಟಿಕಾ]

ಷಷ್ಟಿಕಾವ್ರೀಹಿ (ನಾ). = ಷಷ್ಟಿಕ : ಕಳಮಷಷ್ಟಿಕಾವ್ರೀಹಿ ಯವಯಾವನಾಳ . . . ಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ (ಅದಿಪು. ೬-೭೨ ವ). [ಸಂ.]

ಷಷ್ಟಿಕೆ (ನಾ). =ಷಷ್ಟಿಕ : "ಯವ್ಯಂ, ಯವಕ್ಯಂ, ಷಷ್ಟಿಕ್ಯಂ . . . ಷಷ್ಟಿಕೆಗಳು ಬೆಳೆಯುವ ಕ್ಷೇತ್ರವಾಗಿದೆಯೋ ಅವರ ಪೆಸರುಗಳು" (ಸಿದ್ಧಾಂತಿ. ೨೭೫). [ಸಂ. ಷಷ್ಟಿಕಾ]

ಷಷ್ಟಿಕ್ಯ (ನಾ). ಷಷ್ಟಿಕಧಾನ್ಯವನ್ನು ಬಿತ್ತಿದ ಭೂಮಿ : "ಯವ್ಯಂ, ಯವಕ್ಯಂ, ಷಷ್ಟಿಕ್ಯಂ . . . ಷಷ್ಟಿಕೆಗಳು ಬೆಳೆಯುವ ಕ್ಷೇತ್ರವಾಗಿದೆಯೋ ಅವರ ಪೆಸರುಗಳು" (ಸಿದ್ಧಾಂತಿ. ೨೭೫). [ಸಂ.]

ಷಷ್ಟಿಪೂರ್ತಿ (ನಾ). ಅರವತ್ತುವರ್ಷಗಳು ತುಂಬಿದಾಗ ನೆರವೇರಿಸುವ ಸಮಾರಂಭ ; ಷಷ್ಟ್ಯಬ್ದ ಸಮಾರಂಭ : ಅವರ ಷಷ್ಟಿಪೂರ್ತಿಯು ವಿಜೃಂಭಣೆಯಿಂದ ಜರುಗಿತು (ರೂಢಿ). [ಸಂ.]

ಷಷ್ಟಿಹಾಯನ (ನಾ). ಅರವತ್ತುವರ್ಷದ ಆನೆ : ಬಳಸೂನು . . . ಬಳಗರ್ವದೆ ಷಷ್ಟಿಹಾಯನಂ ತುಂಗಗಜಂ ಕಳಭಕ್ಕದಿರ್ಚದಂತಿರೆ ಮುಳಿದು ಕುಮಾರಂಗಿದಿರ್ಚಿ ನಿಂದವಸರದೊಳ್ (ಜಗವಿ. ೧೭-೧೩೦). [ಸಂ.]

ಷಷ್ಟ್ಯಬ್ದ (ನಾ). = ಷಷ್ಟಿಪೂರ್ತಿ : ಅವರ ಷಷ್ಟ್ಯಬ್ದದಂದು ಬಡವರಿಗೆ ಅನ್ನದಾನ ಮಾಡಿದರು (ರೂಢಿ). [ಸಂ.]

ಷಷ್ಠ (ಗು). ೧. ಆರನೆಯ : 'ಷಷ್ಠಭಾಗ' ಪರಾ. (ನಾ). ೨. ಆರನೆಯದು. [ಸಂ.]

ಷಷ್ಠಭಾಗ (ನಾ). (ಭೂಮಿಯ ಹುಟ್ಟುವಳಿಯಲ್ಲಿ ಅರಸನಿಗೆ ಸಲ್ಲಿಸಬೇಕಾದ) ಆರನೆಯ ಒಂದು ಭಾಗ ; ಷಡ್ಭಾಗ : ಜನಪರ್ಗ ನಿಖಿಲವರ್ಣದ ಜನಗಳ್ ಕುಡುತಿರ್ಪ ಷಷ್ಠಭಾಗಮದಳಿಗುಂ (ಶಾಕುಂಶ. ೨೬-೪೮); ಷಷ್ಠಭಾಗದೊಳೆ ಬಾಳ್ವರಸಂಗಮಿದಲ್ತೆ ಬೇಹರಂ (ಶಾಕುಂಶ. ೬೧-೧೦೪). [ಸಂ.]

ಷಷ್ಠಾಷ್ಟಕ (ನಾ). ೧. [ಜ್ಯೋತಿ] ವಧು ಮತ್ತು ವರರ ರಾಶಿಗಳು ಪರಸ್ಪರ ಆರು ಮತ್ತು ಎಂಟನೆಯ ಮನೆಗಳಲ್ಲಿರುವುದು ; ವಿವಾಹಕ್ಕೆ ಯೋಗ್ಯವಲ್ಲದ ಸಂಬಂಧ. ೨. (ಆಲಂ) ಪರಸ್ಪರ ವಿರೋಧ,- ವೈಮನಸ್ಯ : ಮದುವೆಯಾದಾಗಿನಿಂದಲೂ ಗಂಡನಿಗೂ ಹೆಂಡತಿಗೂ ಷಷ್ಠಾಷ್ಟಕವಾಗಿ ಕಡೆಗೆ ಬೇರೆಯಾಗಿ ಹೋದರು (ರೂಢಿ). [ಸಂ.]

ಷಷ್ಠಿ (ನಾ). ೧. ಕೃಷ್ಣಪಕ್ಷ ಅಥವಾ ಶುಕ್ಲಪಕ್ಷದ ಆರನೆಯ ದಿನ, – ತಿಥಿ : ಕಾಳದ ಪಂಚಮಿ ಷಷ್ಠಿ ಬಿದಿಗೆಯೆಂಬಿವು ಸಮಸ್ತಸುರಪುರಗೃಹಪ್ರತಿಷ್ಠೆಗ ಶುಭದಂ (ರೋಕೋಪ. ೨-೫೦) ; ಆ ಪಕ್ಷಂಗಳೊಳಗೆ ಅಗ್ನಿಯೇ ದೇವತೆಯಾಗುಳ್ಳ ಪಾಡ್ಯ . . . ಷಣ್ಮುಖನಧಿದೇವತೆಯಾದ ಷಷ್ಠಿ (ವಿವೇ. ೨೬೨). ೨. ದುರ್ಗಾದೇವಿಯ ಹೆಸರುಗಳಲ್ಲಿ ಒಂದು. ೩. ಶಕ್ತಿದೇವತೆಗಳಲ್ಲಿ ಒಂದು : ವಿಜಯೆ ಯಮದೂತಿ ಪರಾಜಿತೆ ಮಕರಿ ಜಯೆ ಅಜಿತೆ ಷಷ್ಠಿ ಕಾಳರಕ್ಕಸಿ ಬಂದರು ಸೋಜಿಗದ ಶಕ್ತಿಯರುಗೂಡಿ (ಷಡ್ವಪು. ೮-೯೦). ೪. [ವ್ಯಾಕ] ನಾಮವಿಭಕ್ತಿಗಳಲ್ಲಿ ಆರನೆಯದು ; ಸಂಬಂಧವನ್ನು ಸೂಚಿಸುವ ವಿಭಕ್ತಿ : ಪತಿಕುಲ ಜಾತ್ಯವಯವ ವಿಶ್ರುತಲಕ್ಷಣ ಸಂನಿಧಾನ ಸಂಸ್ಪರ್ಶ ಸಮಾಗತ ಸಂಬಂಧದೊಳಂ ತದ್ಗತ ಸಂಬಂಧದೊಳುಮುಂಟು ಷಷ್ಠಿಗೆ ಯೋಗಂ (ಶಮದ. ೧೩).

ಷಷ್ಠೀಹಬ್ಬ = ಮಾರ್ಗಶಿರಶುದ್ಧಷಷ್ಠಿ ಮತ್ತು ಅಂದು ಆಚರಿಸುವ ಕಾರ್ತಿಕೇಯನ ಪೂಜಾ ಸಮಾರಂಭ ; ಸುಬ್ಬರಾಯಷಷ್ಠಿ : (ಆ).

[ಸಂ. ಷಷ್ಠೀ]

ಷಷ್ಠೋಪವಾಸ (ನಾ). ಆರುದಿನಗಳ ಉಪವಾಸ : ಸಹೇತುಕವನದೊಳ್ ಷಷ್ಠೋಪವಾಸದಿಂ ವೈಶಾಖಶುದ್ಧನವಮಿಯ ಪೂರ್ವಾಹ್ಣದೊಳ್ . . . ದೀಕ್ಷೆಗೊಂಡು (ಚಾವುಪು. ೧೦೮); ದುಷ್ಕರ್ಮಾರಿ ಷಷ್ಠೋಪವಾಸದೊಳಿರ್ದು ಸೌಷ್ಠವಮತಿಮಾರ್ಗದಿರವ ಪುಟ್ಟಿದ ಜನಕೆಲ್ಲ ತೋಱಲು (ಆನಂಚ. ೧೩-೮೪). [ಸಂ.]

ಷಷ್ಠೋಪವಾಸಿ (ನಾ). ಆರುದಿನಗಳವರೆಗೆ ಉಪವಾಸವ್ರತವನ್ನು ಮಾಡುವವನು : ಆ ಮುನೀಶ್ವರಂ ಷಷ್ಠೋಪವಾಸಿ ನಿಯಮನಿಯಮಿತನಾಗಿರ್ಪುದುಂ (ಮಲ್ಲಿಪು. ೧೩-೧೧೧). [ಸಂ. ಷಷ್ಠೋಪವಾಸಿನ್]

ಷಹ 'ಶಹ' ನೋ.

ಷಹಜಾದ (ನಾ). ರಾಜಕುಮಾರ ; ದೊರೆಯ ಮಗ : ಸುಲ್ತಾನರು ಕ್ಷೇಮ. ಆದರೆ ಷಹಜಾದರನ್ನು ಇಂಗ್ಲೇಜಿಗಳಿಗೆ ಒಪ್ಪಿಸುವರಂತೆ (ಅನ್ನಾವ. ೨೯).

[<— ಹಿಂ ಶಹಜಾದಾ; ಮರಾ. ಶಹಾಜಾದ]

ಷಹರ 'ಶಹರು' ನೋ.

ಷಹರು 'ಶಹರು' ನೋ.

ಷಹಷಾದೆ (ನಾ). ದೊರೆಯ ಮಗಳು ; ರಾಜಕುಮಾರಿ : ದಿಲ್ಲೀ ಷಹಸಾದಯಿಂದ ರಾಜ್ಯವನ್ನು ಹೊಂದಿದ ಸಾಹುಮಹಾರಾಯನ ದರಬಾರು ಕಟ್ಟಕಡೆಗೆ ಯಾವ ಗತಿಗೆ ಇಳಿಯಿತು ಬಲ್ಲಿರ ? (ಮುಸಗ. ೪೮). [← ಹಿಂ. ಶಾಹಜಾದೀ; ಮರಾ. ಶಹಾಜಾದೀ]

ಷಹಾ 'ಶಹಾ' ನೋ.

ಷಹೀದ, ಷಹೀದು (ನಾ). ಧರ್ಮಕ್ಕಾಗಿ (ಅಥವಾ ಯುದ್ಧ ಇತ್ಯಾದಿ ಸಂದರ್ಭಗಳಲ್ಲಿ) ಆತ್ಮಾರ್ಪಣೆ ಮಾಡುವವನು ; ಹುತಾತ್ಮ : ಜ್ಞಾನಿಯ ಲಕ್ಕಣಿಕೆಯ ತುದಿಯಲ್ಲಿರುವ ಮಸಿಯ ಹನಿಯು ಧರ್ಮಾರ್ಥವಾಗಿ ಪ್ರಾಣವನ್ನು ಕೊಟ್ಟ ಷಹೀದನ ರಕ್ತಕ್ಕಿಂತ ಪವಿತ್ರವಾದುದು (ಹಮಪ. ೩೮). **ಷಹೀದು** : ನಾವು ಶತ್ರುಗಳಿಗೆ ಬೆನ್ನ ಕೊಟ್ಟು ಬಂದುದು ಅಯುಕ್ತವಾಯಿತು, ಇಲ್ಲ ಅವರಿಗೆ ಹೊಡೆಯಬೇಕು, ಇಲ್ಲ ಷಹೀದು ಆಗಬೇಕು (ಚಿತ್ರಪಾ. ೬೪). [← ಅರ. ಪಾರ. ಹಿಂ. ಮರಾ. ಶಹೀದ]

ಷಹೀದು 'ಷಹೀದ' ನೋ.

ಷಾಪಸಂದ್, ಷಾಪಸಂದ್ (ನಾ). ಒಂದು ಬಗೆಯ ಕುದುರೆಗಾಡಿ : ಮೈಸೂರಿನಲ್ಲಿ ಆಗಲೂ ಷಾಪಸಂದನ್ನು ನೋಡಬಹುದು (ರೂಢಿ). **ಷಾಪಸಂದ್** : ಸೊಗಸುಗಾರರಾದ ಮೈಸೂರಿನವರಿಗೆ 'ಷಾಪಸಂದ್' ಬೇಕು. ಈ ಜಟಕಾವನ್ನು ಷಾಪಸಂದ್ ಆಗಿ ಪರಿವರ್ತಿಸಲು ಸಾಧ್ಯವಿದೆ (ನಾಡಿಗೀ. ೪೪). [?]

ಷಾಗಿರ್ದ್‌ಪೇಷಾ 'ಷಾಗಿರ್ದಪೇಷ್' ನೋ.

ಷಾಗಿರ್ದ್‌ಪೇಷಾಕಚೇರಿ 'ಷಾಗಿರ್ದಪೇಷ್‌ಕಚೇರಿ' ನೋ.

ಷಾಗಿರ್ದಪೇಷ್, ಷಾಗಿರ್ದ್‌ಪೇಷಾ (ನಾ). ಕಚೇರಿಯಲ್ಲಿ ಕೆಲಸಮಾಡುವ ನೌಕರ, – ಚಾಕರ : 'ಷಾಗಿರ್ದಪೇಷ್‌ಕಚೇರಿ' ಪರಾ. **ಷಾಗಿರ್ದ್‌ಪೇಷಾಕಚೇರಿ** : 'ಷಾಗಿರ್ದ್‌ಪೇಷಾಕಚೇರಿ' ಪರಾ. [← ಪಾರ. ಮರಾ. ಶಾಗಿರ್ದ್‌ಪೇಶಾ]

ಷಾಗಿರ್ದಪೇಷ್‌ಕಚೇರಿ, ಷಾಗಿರ್ದ್‌ಪೇಷಾಕಚೇರಿ (ನಾ). ಅಠಾರಾ ಕಚೇರಿಗಳಲ್ಲಿ ಒಂದು : ವ್ಯಾಸರಾಯರು ಅರಮನೆಗೆ ಸೇರಿದ ಷಾಗಿರ್ದಪೇಷ್‌ಕಚೇರಿಯ ಕೆಲಸವನ್ನೂ, ಸಂದಲ್ ಇಲಾಖೆಯ ಕೆಲಸವನ್ನೂ ಸಹ ನೋಡುತ್ತಿದ್ದರು (ಮಷಾವಂ. II, ೨೮). **ಷಾಗಿರ್ದ್‌ಪೇಷಾಕಚೇರಿ** : ಚೊಪದಾರ, ಮಹಲದಾರ, ನವೀಬ . . . ಮುಂತಾದವರು ಅಲಾಹಿದ ಷಾಗಿರ್ದ್‌ಪೇಷಾಕಚೇರಿ ದಾಖಲ್ (ಮಷಾವಂ . I, ೨೨೬).

[ಷಾಗಿರ್ದಪೇಷ್ + ಕಚೇರಿ]

ಷಾಗಿರ್ದು (ನಾ). ಒಬ್ಬನ ಕೈಕೆಳಗೆ ಕಲಿಯುತ್ತಿರುವವನು ; ಅಭ್ಯಾಸಿ ; ಶಿಷ್ಯ : ಉಸ್ತಾದ್‌ಗೆ ಹೆಸರು ತರೋ ಷಾಗಿರ್ದು ಆಗಬೇಕು (ಭೀಮಕಾ. ೬).

[← ಪಾರ. ಹಿಂ. ಶಾಗಿರ್ದ್; ಮರಾ. ಶಾಗಿರ್ದ್, ಶಾಗೀರ್ದ್, ಶಾಗಿರ್ತ್]

ಷಾಜಲು (ನಾ). (?) : ಸದರಹೂ ನಗದು ಜಿನಸು ಸಂದದ್ದಕ್ಕೆ ವಡ್ಡರ ಕಡೆಯಿಂದ ರಶೀತಿ ತೆಗದುಕೊಳ್ಳುವುದು. ವಡ್ಡರಿಗೆ ಷಾಜಲು ಕೊಡ ಕೆಲಸವಿಲ್ಲಾ (ಮಷಾವಂ. II, ೭೭).

[?]

ಷಾಡವ (ನಾ). [ಸಂಗೀತ]ಆರೋಹಣ ಹಾಗೂ ಅವರೋಹಣಗಳಲ್ಲಿ ಆರು ಸ್ವರಗಳನ್ನು ಹೊಂದಿರುವ ರಾಗ : ಠಕ್ಕೆ ಸ್ಕಂಧವಿ ಪಂಚಮ ಷಾಡವ ದೇವಗುಪ್ರ . . . ಉಪಾಂಗವೆಂಬಿಂಟು ಷಟ್‌ಸ್ವರಜಾತಿಯಿಂದಾದ ರಾಗಂಗಳುಂ ಷಟ್ಸ್ವರಜಾತೀಯಂಗಳು (ಎವೀಕ. ೧೮೭) ; ಷಾಡವ – ಆರೋಹಣ ಮತ್ತು ಅವರೋಹಣಗಳಲ್ಲಿ ಆರು ಸ್ವರಗಳನ್ನು ಹೊಂದಿರುವ ರಾಗ. ಉದಾ : ಶ್ರೀರಂಜನಿ, ಮಲಯಮಾರುತ (ಸಂಗೀಚಂ. ೬೧). [ಸಂ.]

ಷಾಡ್ಗುಣ್ಯ (ನಾ). ೧. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ ಮತ್ತು ತೇಜಸ್ಸು ಎಂಬ ಭಗವಂತನ ಆರು ಗುಣಗಳು : ಶುದ್ಧಸತ್ತ್ವವೆಂಬುದು . . . ಷಾಡ್ಗುಣ್ಯಮಯವು (ಪಂದಶಾ. ೨೬೮). ೨. ಸರ್ವಜ್ಞತ್ವ, ನಿತ್ಯತೃಪ್ತತ್ವ, ಅನಾದಿಬೋಧಸಿದ್ಧಿತ್ವ, ಸ್ವತಂತ್ರತ್ವ, ನಿತ್ಯಾಲುಪ್ತಶಕ್ತಿತ್ವ ಮತ್ತು ಅನಂತ ಶಕ್ತಿತ್ವ ಎಂಬ ಪರಮೇಶ್ವರನ ಆರು ಗುಣಗಳು : ಆ ಷಾಡ್ಗುಣ್ಯ ರತ್ನಂಗಳಾ ಭೇದವಿಲ್ಲದ ತಡಿಯೊಳೇ ಪಡವರು (ವೀಶೈಪು. ೫-೮-೧೯). ೩. [ರಾಜನೀ] ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯಗಳೆಂಬ ರಾಜನೀತಿಯ ಆರು ಗುಣಗಳು : ದಮಿತಾರಿಗೆ ಷಾಡ್ಗುಣ್ಯದೊಳ್ ಯಾನಮುಮುಪಾಯಚತುಷ್ಟಯದೊಳ್ ದಂಡಮುಮಲ್ಲದುಬಿದ ಗುಣಪಂಚಕಮು ಮುಪಾಯತ್ರಯಮುಂ ದೊರೆಯಲ್ಲವು (ಶಾಂತಿಪು. ೨-೫೧ ವ) ; ಮುನೀಂದ್ರೋತ್ತಮರ್ ಪೇಳ್ದ ನೀತಿಕ್ರಮದಿಂ ಷಾಡ್ಗುಣ್ಯಮಂ ಯೋಜಿಸುವುದೆ ಸುನಯಂ ಪ್ರಾಪ್ತಕಾಲಾನುರೂಪಂ (ಪಂಚತಂ. ೨೧೯-೯). [ಸಂ.]

ಷಾಣ್ಮಾತುರ (ನಾ). ಆರು ಜನ ತಾಯಂದಿರನ್ನುಳ್ಳವನು ; ಕಾರ್ತಿಕೇಯ ; ಷಣ್ಮುಖ ; ಪ್ರ ''ಈತನು ಪಾರ್ವತೀಪುತ್ರನಾದ ಕುಮಾರಸ್ವಾಮಿ. ಈತನು ಹುಟ್ಟಿದ ಕೂಡಲೇ ಕೃತ್ತಿಕಾ ನಕ್ಷತ್ರಾಭಿಮಾನಿದೇವತೆಗಳು ಆರು ಮಂದಿಯೂ ಈತನಿಗೆ ಸ್ತನ್ಯವನ್ನು ಕೊಡುವುದಕ್ಕೆ ಬಂದರು. ಆಗ ಕುಮಾರನು ಆರು ಮುಖಗಳಿಂದ ಕೂಡಿ ಆ ಆರುಮಂದಿಯ ಸ್ತನ್ಯವನ್ನೂ ಪಾನಮಾಡಿ, ಅವರ ಅಭಿಮಾನಪುತ್ರನೆನಿಸಿಕೊಂಡ ಕಾರಣ ಈ ಹೆಸರು ಬಂದಿದೆ : ''ಕಾರ್ತಿಕೇಯಃ . . . ಷಾಣ್ಮಾತುರಃ . . . ಕುಮಾರಸ್ವಾಮಿಯ ಹೆಸರುಗಳು '' (ಸಿದ್ಧಾಂ. ೨೦). [ಸಂ.]

ಷಾತೂದು (ನಾ). ಹಿಪ್ಪಲಿನೇರಿಳೆ ; ಕೋರಿಹಣ್ಣು : ಕಮಿಷನರ್ ಕಬ್ಬನ್‌ರವರು . . . ತರಿ, ಕುಷ್ಕಿ, ಬಾಗಾಯಿತು, ಷಾತೂದು, ಕಾಫಿ ಇವುಗಳ ವ್ಯವಸಾಯಕ್ಕೆ ವಿಶೇಷ ಪ್ರೋತ್ಸಾಹವನ್ನಿತ್ತರು (ಮಷಾವಂ. II. ೧೦೫).

[← ಪಾರ. ಹಿಂ. ಶಹತೂತ್ ; ಮರಾ. ಶಹಾತೂತ್]

ಷಾದಮಾನಿ (ನಾ). ಕ್ಷೇಮ ; ಕುಶಲ ; ಸೌಖ್ಯ : ಸಾಹೇಬ್ ತಮ್ಮ ಷಾದಮಾನಿ ದರಹಮೇಷ ಕಲಮು ಮಾಡಿಸುತಾ ಇರಬೇಕು (ಚಿತ್ರಪಾ. ೭೭).

[← ಪಾರ. ಶಾದಮಾನೀ ; ಮರಾ. ಶಾದಮಾನೀ, ಷಾದಮಾನೀ]

ಷಾಪಸಂದ್ 'ಷಾಃಪಸಂದ್' ನೋ.

ಷಾಮಿಲು 'ಶಾಮಿಲು' ನೋ.

ಷಾಷ್ಟಿಕ (ನಾ). ಅರುವತ್ತು ದಿನಗಳಲ್ಲಿ ಫಸಲಿಗೆ ಬರುವ ಬೆಳೆಗೆ ಯೋಗ್ಯವಾದ ಭೂಮಿ : ''ಅಱುವತ್ತುದಿನಕ್ಕೆ ಬೆಳೆವ ಷಷ್ಟಿಕಗದ್ದೆ ಷಾಷ್ಟಿಕಮೆಂಬುದು'' (ಹಲಾಯು. ೨೭-೮) ; ''ಹಲವು ಧಾನ್ಯಂಗಳಱುವತ್ತು ದಿವಸಕೆ ಬೆಳೆವ ಮಹಿಯೆಯ್ದೆ ಷಾಷ್ಟಿಕವು'' (ಮಂಗರಾ. ೨೯-೪). [ಸಂ.]

ಷಾಹಿ 'ಶಾಹಿ' ನೋ.

ಷಾಳ್ಗುಣ್ಯ (ನಾ). = ಷಾಡ್ಗುಣ್ಯ ೧ : ಖಡ್ಗ, ಖಳ್ಗ; ಷಾಡ್ಗುಣ್ಯ, ಷಾಳ್ಗುಣ್ಯ (ಶಬ್ದಾನು. ೧೪೦ ಪ್ರದೋ). [< ಸಂ. ಷಾಡ್ಗುಣ್ಯ]

ಷಿಕಮಿ 'ಶಿಕ್ಮಿ' ನೋ.

ಷಿಕಮಿದಾರ 'ಶಿಕ್ಮಿದಾರ' ನೋ.

ಷಿಕಾರ 'ಶಿಕಾರಾ' ನೋ.

ಷಿಕಾರಿ 'ಶಿಕಾರಿ' ನೋ.

ಷಿಕ್ಮಿ 'ಶಿಕ್ಮಿ' ನೋ.

ಷಿಕ್ಮಿದಾರ 'ಶಿಕ್ಮಿದಾರ' ನೋ.

ಷಿಡ್ಲ (ನಾ). ವಿಷಯಲಂಪಟ ; ವ್ಯಭಿಚಾರಿ ; ಹಾದರಿಗ. [ಸಂ.]

ಷಿರಸ್ತೆ 'ಶಿರಸ್ತೆ' ನೋ.

ಷಿಷಿಂತಿ 'ಶಿಷಿತ್ತಿ' ನೋ.

ಷೀವಟ 'ಸೀವಟ್ಟ' ನೋ.

ಷುತಾರ್‌ನಲ್ (ನಾ). ಒಂಟೆಯ ಬೆನ್ನಿನ ಮೇಲಿಟ್ಟು ಸಾಗಿಸುವ ಸಣ್ಣ ಫಿರಂಗಿ , – ತೋಪು : ನಾಲ್ಕುಕಡೆಯಿಂದ ಗೋಲಿ ಮರುವಾಯಿತು . . . ರೈಫಲ್, ಜಂಜಾಲು, ಷುತಾರ್‌ನಲ್, ಹತ್ಯಾರ್‌ದಲ್, ಬಂದೂಖ್ ವಗ್ಗರೆ ಸಲಾಖಿ ಒಂದೇ ಆವರ್ತಿ ಆಯಿತು (ಚಿತ್ರಪಾ. ೬೪).

[<– ಪಾರ. ಹಿಂ. ಶುತುರ್‌ನಾಲ್ ; ಮರಾ. ಶುತರ್‌ನಾಲ್, ಶುತುರ್‌ನಾಲ್]

ಷುರು 'ಶುರು' ನೋ.

ಷೆಡ್ಡು 'ಶೆಡ್ಡು' ನೋ.

ಷೆರೀಕು 'ಶರೀಕು' ನೋ.

ಷೆರೀಫ (ನಾ). ಶಾಂತಿಪಾಲನೆ, ನ್ಯಾಯನಿರ್ವಹಣೆ ಮುಂತಾದುವುಗಳನ್ನು ನೋಡಿಕೊಳ್ಳುವ ಅಧಿಕಾರಿ : ನ್ಯಾಯಾಲಯಗಳ ಷೆರೀಫರಿಗೂ . . . ನ್ಯಾಯವಾದಿಗಳಿಗೂ. . . ಕೊಡಬಹುದಾದ ಫೀಜುಗಳ ಪಟ್ಟಿಗಳನ್ನು ಸಹ ನಿರ್ಧರಿಸಬಹುದು (ಭಾಧಾನ. ೧೨೪). [< ಇಂ. Sheriff]

ಷೆರ್ವಾನಿ 'ಶೇರವಾನಿ' ನೋ.

ಷೇಕ್‌ದಾರ 'ಶೇಕದಾರ' ನೋ.

ಷೇಖ್ (ನಾ). ಮುಖಂಡ ; ನಾಯಕ : ಪ್ರತಿಯೊಂದು ಬುಡಕಟ್ಟಿಗೂ ಒಬ್ಬ ಷೇಖ್ ಅಥವಾ ನಾಯಕನಿದ್ದನು (ಇಸ್ಲಾಂಸಂ. ೩೪). [← ಆರ. ಹಿಂ. ಮರಾ. ಶೇಖ್]

ಷೇರು (ನಾ). ಬಂಡವಾಳದಲ್ಲಿ ಇಂತಿಷ್ಟು ಹಣವೆಂದು ನಿಗದಿಯಾದ ಮೊತ್ತ; ಬಂಡವಾಳದ ಪಾಲು : ಲಾಭದ ದರ ಕಡಮೆಯಾಗುವುದರಿಂದ ಷೇರಿನ ಬೆಲೆ ಇಳಿಯುವುದು (ಹಣವ್ಯ. ೫೦). [← ಇಂ. Share]

ಷೇರುದಾರ (ನಾ). ಬಂಡವಾಳದ ಪಾಲನ್ನು ಹೊಂದಿದವನು ; ಷೇರು ಕೊಂಡವನು : ಇವುಗಳ ಕೆಲಸಕ್ಕೆ ಬೇಕಾದ ಹಣ ಷೇರುದಾರರು ಕೊಡುವ ಬಂಡವಾಳ (ಹಣವ್ಯ. ೧೬೪). [ಷೇರು + – ದಾರ್]

ಷೋಕಿ 'ಶೋಕಿ' ನೋ.

ಷೋಕಿಲಾಲ್ (ನಾ). ಸೊಗಸುಗಾರ ; ವಿಲಾಸಪ್ರಿಯ : ಅವನು ಸುಮಾರು ಇಪ್ಪತ್ತುವರ್ಷದ ಸುರದ್ರೂಪಿ, ಸ್ವಲ್ಪ 'ಷೋಕಿಲಾಲ್' (ಅಲಮ. ೧೩).

[ಷೋಕಿ (< ಶೋಕಿ) + ಲಾಲ್ (← ಹಿಂ. ಲಾಲ್)]

ಷೋಕೀದಾರ (ನಾ). = ಷೋಕಿಲಾಲ್ : ಷೋಕೀದಾರರು ಆ ಹೋಟೆಲಿನಲ್ಲಿ . . . ಕಾಲಹರಣ ಮಾಡುವರು (ಛಾಚಮು. ೬೮). [ಷೋಕಿ (< ಶೋಕಿ) + - ದಾರ್]

ಷೋಕು 'ಶೋಕು' ನೋ.

ಷೋಡಶ (ಗು). ೧. ಹದಿನಾರನೆಯ : ಆ ಷೋಡಶತೀರ್ಥನಾಥನೊರೆಗಂ ದೊರೆಗಂ ದೊರೆಯಾರಘಾಂತಕರ್ (ಶಾಂತಿಪು. ೧೨-೨೫) : ಇದಂ . . . ಷೋಡಶವತ್ಸರ ಪರ್ಯಂತಮಾಗಿ ಮಾಳ್ಪುದು (ಹಮ್ಮೀರ. ೭-೬೭ ವ). (ನಾ). ೨. ಒಂದು ಸಂಖ್ಯೆ ; ಹದಿನಾರು : ಅಲ್ಲಿ ಷೋಡಶಮುಖದ ಬೊಮ್ಮನಂ ಕಂಡವನ ಮೆಲ್ಲಡಿಗೆ ನಮಿಸೆ (ಚೃಮಿಭಾ. ೩೨-೪೩). ೩. ವ್ಯಕ್ತಿಯ ಮರಣಾನಂತರ ಹನ್ನೆರಡು ಅಥವಾ ಹದಿನಾರನೆಯ ದಿನದಂದು ಆಚರಿಸುವ ಶ್ರಾದ್ಧ : (ಕಿ). ೪. ಒಂದು ಬಗೆಯ ಮಹಾಯಜ್ಞ : ಅಗ್ನಿಷ್ಟೋಮ . . . ಷೋಡಶ ವಾಜಪೇಯ ಪೌಂಡರೀಕಾದಿ ಮಹಾಕ್ರತುಗಳಂ (ವಿವೇಕ. ೧೪೩).

ಷೋಡಶಮಹಾರಾಯರು = ಪುರಾಣಪ್ರಸಿದ್ಧರಾದ ಹದಿನಾರು ಜನ ಚಕ್ರವರ್ತಿಗಳು : ಗಯ ಅಂಬರೀಷಕ ಶಶಬಿಂದು ದಂತಿ ಪೃಥು ಮರುತ್ವಂತ ಭರತ ಸುಹೋತ್ರ ರಾಮ ದಿಲೀಪ ರಘು ರಂತಿದೇವ ಯಯಾತಿ ಮಾಂಧಾತೃ ನೃಗ ಭಗೀರಥರೆಂಬ ಷೋಡಶಮಹಾರಾಯರುಗಳುಂ (ವಿವೇಕ. ೨೩೯) ; ℙ ಈ ಹದಿನಾರು ಜನರ ಹೆಸರು ಮಹಾಭಾರತದಲ್ಲಿಯ ದ್ರೋಣಪರ್ವ ಹಾಗೂ ಶಾಂತಿಪರ್ವದಲ್ಲಿ ಬೇರೆ ಬೇರೆ ಪ್ರಕಾರ ಇದೆ. ಸಗರ, ಶಿಬಿ, ನಹುಷ, ಮತ್ತು ನಳ · ಈ ನಾಲ್ಕು ಹೆಸರು ಕೆಲವೆಡೆ ಬರುತ್ತವೆ. ಷೋಡಶರಾಯರು = ಷೋಡಶಮಹಾರಾಯರು: ಷೋಡಶರಾಯರಾ ಕಥೆಯಿಂದ ನೃಪತಿಯ ಸಂತವಿಟ್ಟನು (ಕುವ್ಯಾದ್ರೋ. ೭-೩೯). ಷೋಡಶರು = [ವೀಶೈ] ಪ್ರಸಿದ್ಧರಾದ ಹದಿನಾರು ಜನ ಶಿವಶರಣರು : ವೀರಗಲಸದ ಷೋಡಶರಿಗೆಯು ತೇರಸಗಣಂಗಳಿಗೆ ನಮಿಸಿಯಪಾರಪರಿಯಲಿ ಹರಸಿಕೊಂಡೆಹೆವು (ಬಸಪು. ೪೮-೧೮).

[ಸಂ. ಷೋಡಶನ್]

ಷೋಡಶಕರ್ಮ (ನಾ). ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ವೇದವ್ರತಚತುಷ್ಟಯ (= ಮಹಾನಾಮ್ನೀ, ಮಹಾವ್ರತ, ಉಪನಿಷದ್ವ್ರತ, ಗೋದಾನವ್ರತ), ಸಮಾವರ್ತನ, ವಿವಾಹ ಮತ್ತು ಅಂತ್ಯೇಷ್ಟಿ ಎಂದು ಮನುಷ್ಯನಿಗೆ ಧಾರ್ಮಿಕವಾಗಿ ಮಾಡಬೇಕಾದ ಹದಿನಾರು ಪ್ರಕಾರದ ಸಂಸ್ಕಾರಕರ್ಮಗಳು : ಸಕಲಧರ್ಮಶಾಸ್ತ್ರಗಳಲ್ಲೂ ಶೂದ್ರರಿಗೆ ಪಂಚಮಹಾಯಜ್ಞಗಳು, ವೈಶ್ವದೇವ, ಆಹ್ನಿಕ, ಷೋಡಶಕರ್ಮಗಳು, ದೇವಾರ್ಚನೆ . . . ಇತ್ಯಾದಿ ವೇದೋಕ್ತ ಧರ್ಮಾಧಿಕಾರವು ಅಪಾರವಾಗಿರುವುದು (ಒಂದಸಾ. ೧೬೨).

[ಸಂ. ಷೋಡಶಕರ್ಮನ್]

ಷೋಡಶಕಲೆ, ಷೋಡಶಕಳೆ (ನಾ). ೧. ಚಂದ್ರನಲ್ಲಿರುವ ಅಮೃತಾ, ಮಾನದಾ, ಪೂಷಾ, ಪುಷ್ಟಿ, ತುಷ್ಟಿ, ರತಿ, ಧೃತಿ, ಶಶಿನೀ, ಚಂದ್ರಿಕಾ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದಾ, ಪೂರ್ಣಾ, ಪೂರ್ಣಾಮೃತ ಎಂಬ ಹದಿನಾರು ಬಗೆಯ ಕಲೆಗಳು : ಅಷ್ಟಮದಸಿರಿಯನೀವಾ ಸಿಷ್ಟಷೋಡಶಕಲಾಪೂರ್ನ ಚಿಚ್ಚಂದ್ರಮಾಭೀಷ್ಟಾಮೃತಂಗೊಂಬ ಯೋಗಿ (ವೀಶೈಪು. ೫ ೧೬-೨). ೨. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಚಿತ್ತ, ಮನಸ್ಸು, ಅಹಂಕಾರ, ವಿದ್ಯೆ, ವಾಕ್ಕು ಮತ್ತು ಶಕ್ತಿಗಳೆಂಬ ಹದಿನಾರು ಪ್ರಕಾರದ ಕಲೆಗಳು : ಜ್ಞಾನೇಂದ್ರಿಯ ಕರ್ಮೇಂದ್ರಿಯ ಚಿತ್ತ ಮನ ಅಹಂಕಾರ ವಿದ್ಯೆ ವಾಕ್ಕು ಶಕ್ತಿಗಳೆಂಬ ಷೋಡಶಕಲೆಯಿಂ ವಿಕಲಮಾಗಿ (ವಿವೇಕ. ೧೯೮). ಷೋಡಶಕಳೆ : ೧. ಮೃಗಧರನೆಂತು ಷೋಡಶಕಳಾಪರಿಪೂರ್ಣತೆಯಿಂ ಪ್ರಮೋದಮಂ ಬಗೆಗಡೆ ಮಾಟ್ಕುಂ . . . ಅಂತೆ ಷೋಡಶಮಹಾವಿಷಯಂಗಳಿನೊಪ್ಪಿ ಮಾಟ್ಟುದುರ್ವಿಗೆ ಮುದಮಂ ಸುಖ್ಯೆಕನಿಧಿಪೂರ್ವವಿದೇಹಮುಖರ್ವಸಂಪದಂ (ಪುಷ್ಪಪು. ೨-೬). ೨. ಇಂತು ಹದಿನಾಱುಪ್ರಣವಂಗಳ ಷೋಡಶವರ್ಣಸ್ವರೂಪವಾದ ಷೋಡಶಕಳೆಗಳೆಂದು ಭಾವಿಸಿ (ಚನ್ನವ. ಕ. ೬೭-೧೫೧) ; ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು . . . ಷೋಡಶಕಳೆಗಳು ನಿಮ್ಮ ರಾಣಿವಾಸ (ವಚಸಂ. ೨೫೫-೪೫). ೩. ಪಂಚಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಹಾಗೂ ಮನಸ್ಸು : ನೀಡದಂದದಲಿಪ್ಪ ಲಿಂಗಕೆ ಷೋಡಶಾತ್ಮಕ ರಸವಿಭಾಗವ ಮಾಡಿ ಷೋಡಶಕಳೆಗಳಿಗೆ ಉಪಚಯಗಳನೆ ಕೊಡುತಾ . . . ಆನಂದಾತ್ಮ ಚರಿಸುವ ಲೋಕದೊಳು ತಾನು (ಹಸಾರ. ೪-೨). [ಸಂ. ಷೋಡಶಕಲಾ]

ಷೋಡಶಕಲ್ಪ (ನಾ). [ಜೈನ] ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ, ಬ್ರಹ್ಮೋತ್ತರ, ಲಾಂತವ, ಕಾಪಿಷ್ಟ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ, ಆನತ, ಪ್ರಾಣತ, ಆರಣ, ಅಚ್ಯುತ ಎಂಬ ಹದಿನಾರು ಸ್ವರ್ಗಗಳು: ಷೋಡಶಕಲ್ಪಮೆಂಬ ನೆಲೆಮಾಡಮನಾಂತಿರ ಲೊಂದೆ ಕಂಬಮಂ ಮಾಡಿದನಬ್ಜ ಗರ್ಭನೆನಲ್ . . . ಎಸೆದತ್ತು ಮಂದರಂ (ಮಲ್ಲಿಪು. ೧೨-೮೨); ಷೋಡಶಕಲ್ಪದೊಳ್ . . . ಇಂದ್ರನಾದನಾ ಯೋಗೀಂದ್ರಂ (ವರ್ಧಪು. ೧೩-೨೬). [ಸಂ.]

ಷೋಡಶಕಳೆ 'ಷೋಡಶಕಲೆ' ನೋ.

ಷೋಡಶತೀರ್ಥಕರಭಾವನೆ (ನಾ). ತೀರ್ಥಂಕರನಾಗುವುದಕ್ಕೆ ಕಾರಣವಾದ ದರ್ಶನವಿಶುದ್ಧಿ, ವಿನಯಸಂಪನ್ನತೆ, ಶೀಲವ್ರತಗಳಲ್ಲಿ ಅನತಿಚಾರ, ಅಭೀಕ್ಷ್ಣಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯಾವೃತ್ಯ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗ ಪ್ರಭಾವನೆ ಮತ್ತು ಪ್ರವಚನವತ್ಸಲತ್ವ ಎಂಬ ಹದಿನಾರು ಬಗೆಯ ಮನೋವೃತ್ತಿಗಳು: ಷೋಡಶತೀರ್ಥಕರಭಾವನೆಗಳಂ . . . ಪಂಚಮಹಾ ಕಲ್ಯಾಣಂಗಳುಮಂ ನಾಮೋದ್ದೇಶಂಗೆಯ್ದು (ಆದಿಪು. ೩-೪೦ ವ); ತತ್ವಾರ್ಥಸೂತ್ರದೊಳ್ ಪೇಳ್ದ ಷೋಡಶತೀರ್ಥಕರಭಾವನೆಗಳಂ ಭಾವಿಸಿ (ಅಜಿಪು. ೩-೨ ವ).

[ಸಂ. ಷೋಡಶತೀರ್ಥಕರಭಾವನಾ]

ಷೋಡಶದಾನ (ನಾ). ಹಸು, ಭೂಮಿ, ಚಿನ್ನ, ವಸ್ತ್ರ, ಆಭರಣ, ಛತ್ರ, ಚಾಮರ, ಶಯ್ಯೆ, ಬೀಸಣಿಗೆ, ಸಾಲಗ್ರಾಮ, ಧನ, ಧಾನ್ಯ, ದೀಪ, ಪಾದುಕೆ, ತುಪ್ಪ ಮತ್ತು ಕನ್ಯೆಯನ್ನು ಉಪಾಯನವಾಗಿ ನೀಡುವ ಹದಿನಾರು ಬಗೆಯ ದಾನ : ಮಾಡಿ ಷೋಡಶದಾನವನು ಮನ ಬೇಡಿದಂದದ ಲನ್ನಪಾನವ ನೀಡಿ ವಿಪ್ರರಿಗೆ (ಅಮೃತ. ೨-೧೦೦); ಬೇಡಿ ಬೇಡಿದ ವಸ್ತುವ ಪೆಣ್ಮಗುವಿಗೆ ನೀಡುವ ನೇಮಗಾಱರಿಗೆ ಷೋಡಶದಾನದ ಫಲ ಸುಲಭದೊಳು ಕೈಗೂಡುವುದು (ಹದಿಬ. ೫-೨೪). [ಸಂ.]

ಷೋಡಶಪದಾರ್ಥ (ನಾ). [ನ್ಯಾಯಶಾ] ವಾದದ ಅಂಶಗಳನ್ನು ಒದಗಿಸುವ ಹದಿನಾರು ಬಗೆಯ ವಿಭಾಗ,- ಪ್ರಕರಣ : ನ್ಯಾಯವೇ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯ ವಾದ ಜಲ್ಪ ವಿತಂಡೆ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನಂಗಳೆಂಬ ಷೋಡಶಪದಾರ್ಥಂಗಳಂ ಪೇಳುತ್ತವೇ ಪ್ರಪಂಚಕ್ಕೀಶ್ವರಕರ್ತೃತ್ವಮಂ ನಿಶ್ಚೈಸುವುದು (ವಿವೇಕ. ೧೨).

[ಸಂ.]

ಷೋಡಶಪಾತ್ರ (ನಾ). ಹದಿನಾರು ಜನ ಮಂತ್ರಿವರ್ಗ : ಷೋಡಶಪಾತ್ರೆEತ್ರ3ಗಳೊಳಗಾ ರಾಯನಾಳೋಚಿಸಿದನಿಂತೆಂದು (ಕುರಾಸಾಂ. ೧೬-೨). [ಸಂ.]

ಷೋಡಶಪ್ರಾಯ(ನಾ). ೧. ಹದಿನಾರು ವರ್ಷಗಳ ವಯಸ್ಸು ; ಹದಿನಾರರ ಹರೆಯ. ೨. ಹದಿನಾರುವರ್ಷ ಪ್ರಾಯದವನು : ಶಿವಪೂಜೆಗೆ ನವಯೌವನವಾದಂತೆ ಮೆಱೆವ ಷೋಡಶಪ್ರಾಯಂ ಪ್ರಜ್ವಳಮೂರ್ತಿಯೆನಿಸಿದ ಬಸವರಾಜಂ ಕಾರಣಿಕಪುರುಷಂ ಶಿವಭಕ್ತಿಸರ್ವಾಂಗಚರಿತಂ ನೆನೆದು ನೋಡಿ (ಬಸರ. ೨-೩೬). [ಸಂ.]

ಷೋಡಶಭಾವನೆ (ನಾ). = ಷೋಡಶತೀರ್ಥಕರಭಾವನೆ : ತೀರ್ಥಕರಪುಣ್ಯಕ್ಕೆ ಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ (ಚಾವುಂಪು. ೩೦) ; ದಶಗ್ರೀವಂ . . . ತಪಂಗೊಂಡು ಷೋಡಶಭಾವನೆಗಳಂ ಭಾವಿಸಿ (ಪಂರಾಮಾ. ೧೬-೭೩ ವ).

[ಸಂ. ಷೋಡಶಭಾವನಾ]

ಷೋಡಶವರ್ಣ (ನಾ). ೧. ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಅಂ ಅಃ ಎಂಬ ಹದಿನಾರು ಅಕ್ಷರಗಳು :

ಷೋಡಶವರ್ಣ ದ್ಯಾದಶಾಚಾರ ಸಗುಣನಿರ್ಗುಣಲೀಲೆಯ ಕರುಣಿಸಿ (ಚನ್ನಮ. ೪. ೩೫೪-೩೩೮). ೨. ಚಿನ್ನದ ಶುದ್ಧತೆಯ ಒಂದು ಪರಿಮಾಣ ; ಚಿನ್ನದ ಶುದ್ಧತೆಯ ಹದಿನಾರು ಪರಿಮಾಣ : ತನ್ನ ಶಕ್ತಿಯಿಂದ ಷೋಡಶವರ್ಣ ಪೂರ್ಣವಾದ ಸುವರ್ಣವನ್ನಾಗಿ ಮಾಡುವಂತೆ . . . ಮಾಡುವುದು (ಶಿವಾಸೂ. ೧೨೮).

[ಸಂ.]

ಷೋಡಶಸಂಸ್ಕಾರ (ನಾ). = ಷೋಡಶಕರ್ಮ: ಷೋಡಶಸಂಸ್ಕಾರಗಳು ಆತ್ಮ ಗುಣಗಳೊಡನೆ ಆಚರಿಸಬೇಕೆಂಬುದು ಮುಖ್ಯ ಕಟ್ಟಳೆಯಾಗಿದೆ (ಭಾರದ. ೨೬೬).

[ಸಂ.]

ಷೋಡಶಸ್ವಪ್ನ (ನಾ).[ಜೈನ] ಜಿನಗರ್ಭಾವತರಣಕಾಲದಲ್ಲಿ ಜಿನನ ತಾಯಿಯು ಕಾಣುವ ಐರಾವತ, ಬಿಳಿಯ ಹೋರಿ, ಸಿಂಹ, ಲಕ್ಷ್ಮಿ, ಹೂವಿನ ಹಾರ, ಚಂದ್ರ, ಬಾಲಸೂರ್ಯ, ಎರಡು ಎಳೆಯ ಮೀನು, ರತ್ನಕುಂಭಗಳ ಜೊತೆ, ತಾವರೆಕೊಳ, ಸಮುದ್ರ, ಸಿಂಹಾಸನ, ದೇವವಿಮಾನ, ನಾಗವಿಮಾನ, ರತ್ನಸಮೂಹ ಮತ್ತು ಉಜ್ವಲಜ್ವಾಲೆ ಎಂಬ ಹದಿನಾರು ಬಗೆಯ ಸ್ವಪ್ನದೃಶ್ಯಗಳು: ನಗಟ್ಟ ಕವಿತಾಗುಣಾರ್ಣವನ ವರ್ಣಿಸುವುದಂ ಪೊಗಟ್ಟು ಬಗದೋದುವರ್ ಮನದೊಳಾಟಿಸುವುದಂ ಪಡೆವರೀ ಷೋಡಶಸ್ವಪ್ನದ ಫಲಂಗಳಂ ಪಡೆಯಲಣಮಾಗದ ಸುಖಂಗಳಂ ಮಂಗಳಂ (ಆದಿಪು. ೭-೨೭) ; ಷೋಡಶಸ್ವಪ್ನದರ್ಶನಾನಂತರಂ ನಿಜಾಸ್ಯಾಬ್ಜಮಂ ಗಜಂ ಪುಗುವುದಂ ಕಂಡು ಅವಧಿಜ್ಞಾನಿಯಪ್ಪ ತನ್ನರಸನಿಂ ತತ್ಫಲಮನಱದು ಸುಖಮಿರ್ದನಂ (ಚಾವುಂಪು. ೧೩೩). [ಸಂ.]

ಷೋಡಶಿ$_1$ (ನಾ). ೧. ಒಂದು ಬಗೆಯ ಯಜ್ಞ : ಅಗ್ನಿಷ್ಟೋಮ . . . ಅತಿರಾತ್ರ ಉಕ್ಥ್ಯ ಷೋಡಶಿ ವಾಜಪೇಯ ಪೌಂಡರೀಕ ಸರ್ವಸ್ವಷ್ಟ ಅಶ್ವಮೇಧಾದಿ ಕ್ರತುಗಳಂ (ವಿಷೇ. ೧೪೩). ೨. ಒಂದು ಬಗೆಯ ಯಜ್ಞಪಾತ್ರೆ : ಅತಿರಾತ್ರ (ಎಂಬ ಯಾಗ)ದಲ್ಲಿ ಷೋಡಶಿ (ಎಂಬ ಪಾತ್ರೆ)ಯನ್ನು ಗ್ರಹಣ ಮಾಡಬೇಕು (ಬ್ರಹ್ಮಪಾ. ೨೨).

[ಸಂ. ಷೋಡಶಿನ್]

ಷೋಡಶಿ$_2$ (ನಾ). ಹದಿನಾರು ವರ್ಷ ವಯಸ್ಸಾದವಳು ; ಹದಿನಾರರ ಹರೆಯದವಳು : ಮಹಡಿಯ ಮೇಲೆ ನಿಂತಿದ್ದ ನವೀನರಲ್ಲೊಬ್ಬಳು . . . ಸುಮುಖಿಯಾಗಿಯೂ ಷೋಡಶಿಯಾಗಿಯೂ ಕೃಶಾಂಗಿಯಾಗಿಯೂ ಇದ್ದಳಲ್ಲದೆ ಮುದ್ದಾದ ಸಣ್ಣದಾದ ಮುಖವುಳ್ಳವಳಾಗಿದ್ದಳು (ಕಪಾಖಂ. ೫೭).

[ಸಂ. ಷೋಡಶೀ]

ಷೋಡಶೋಪಚರಣೆ (ನಾ). ದೇವತೆಗಳಿಗೂ ಪೂಜ್ಯರಿಗೂ ಮಾಡುವ ಆವಾಹನ, ಆಸನ, ಪಾದ್ಯ, ಅರ್ಘ್ಯ, ಸ್ನಾನೋದ್ವರ್ತನ, ವಸ್ತ್ರ, ಉಪವೀತ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ ಆಚಮನ, ಫಲ, ತಾಂಬೂಲ ಮತ್ತು ನಮಸ್ಕಾರ ಎಂಬ ಹದಿನಾರು ಬಗೆಯ ಉಪಚಾರ,-ಸತ್ಕಾರ : ಮಣಿದು ಭಯದಿಂ ಷೋಡಶೋಪಚರಣೆಯಸೆಯೆ ಶಿವರಾತ್ರಿವಿಧಿಯಲಿ ಪ್ರಣವಯುತ ಪಂಚಾಕ್ಷರಿಯನುಚ್ಚರಿಸುತಾಚರಿಸೆ . . . ಬೆಳಗಾಗಲು (ಬಸವ. ೪೧-೨೩.).

[ಸಂ. ಷೋಡಶೋಪಚರಣ]

ಷೋಡಶೋಪಚರ್ಯ (ನಾ). = ಷೋಡಶೋಪಚರಣೆ: ಇಷ್ಟಲಿಂಗವಂಬ ಭಾವನೆಯಿಂದ ಅಷ್ಟವಿಧಾರ್ಚನೆ ಷೋಡಶೋಪಚರ್ಯಂಗಳಿಂದಿಷ್ಟಲಿಂಗಧಾರಣ ದಿಂದಿಪ್ಪುದು ಧಾರಣಯೋಗ (ಅದವ. ೧೩೫-೨೩೧). [ಸಂ. ಷೋಡಶೋಪಚರ್ಯಾ]

ಷೋಡಶೋಪಚಾರ (ನಾ). = ಷೋಡಶೋಪಚರಣೆ : ಅಷ್ಟವಿಧಾರ್ಚನೆ ಷೋಡಶೋಪಚಾರವಲ್ಲದ ನಿಮ್ಮ ಮುಟ್ಟಲಱಿಯದವರ ಕಂಡರೆ ಅಯ್ಯನೆಂತೆಂಬನವರ (ಬಸವ. ೪೯೮) ; ಆ ಷೋಡಶೋಪಚಾರಂಗಳಾ ವಾಹನ ಸುತೋಷದಾಸನಶಯ್ಯ ವರ್ಘ್ಯಪಾದ್ಯಾಚಮನ ಭೂಷಣಂ ವಸ್ತ್ರೋಪವೀತವಾ ಛತ್ರ ಚಾಮರ ದರ್ಪಣಂಗಳಿನ್ನು ಈಶಪ್ರದಕ್ಷಿಣ ನಮಸ್ಕಾರವಧಿಕಶುಭವೇಷಿಯೇ ಸ್ತೋತ್ರಮಯ ಪೌರಾಣಪಠಣಂ ವಿಶೇಷತೌರ್ಯತ್ರಯಂಗೂಡಿ ಹದಿನಾಱಿವರ ವಿವರವಾ ಸ್ಕಾಂದದಲ್ಲಿ (ಎಚ್ಕಪು. ೭-೧೧-೩). [ಸಂ.]

ಷೋದ 'ಷೋದಾ' ನೋ.

ಷೋದಾ, ಷೋದ (ಗು). ೧. ಸ್ವೇಚ್ಛಾವೃತ್ತಿಯ ; ಸ್ವಚ್ಛಂದತೆಯ : ದುರ್ವ್ಯಯ, ದುರ್ವ್ಯಸನಗಳಿಗೆ ಸಿಕ್ಕಿದವನು ; ಶಕ್ತಿಯನ್ನೂ ಆಯುಸ್ಸನ್ನೂ ಬೇಗ ಬೇಗ ಕಳೆದು ಕೊಳ್ಳುತ್ತಿರುವವನು ; ಷೋದಾಮನುಷ್ಯ (Fast-person. ಇಂಡಾ). (ನಾ). ೨. ನೀತಿಗೆಟ್ಟ ವ್ಯಕ್ತಿ ; ಸ್ವಚ್ಛಂದಪ್ರವೃತ್ತಿಯ ವ್ಯಕ್ತಿ : "ಸಡಿಲ ನಡತೆಯ ವ್ಯಕ್ತಿ ; ನೀತಿಗೆಟ್ಟನು(ಳು); ಷೋದಾ" (Rep. ಇಂಡಾ). **ಷೋದ** : ೧. ಅವನು ಮನ್ಮಥನಲ್ಲ . . . ಸುಮಾರು ನಲವತ್ತು ನಲವತ್ತೈದು ವರ್ಷ ಸ್ವಾಭಾವಿಕವಾಗಿ ದುರ್ಬಲವಾದ್ದೋ ಅಥವಾ ಕೆಟ್ಟ ಜೀವನದಿಂದ ಶಿಥಿಲವಾದ್ದೋ ಕೋಲು ನೀಳಾದ ಶರೀರದ, ಕುಣಗಣ್ಣಿನ, ಬತ್ತಿದ ಕೆನ್ನೆಗಳ, ಷೋದಭಾವದ ಮನುಷ್ಯ (ಕಲನ. ೩೩೪).

[<— ಪಾರ. ಹಿಂ. ಶೋಹದಾ ; ಮರಾ. ಶೋದಾ, ಸೋದಾ, ಸೋಧಾ]

ಷ್ಠೀವನ (ನಾ). ಉಗುಳುವಿಕೆ : "ಖಾತ್ಕಾರಂ ಷ್ಠೀವನದೊಳ್" (ಮಸ್ತಕೋ. ೪೧-೪೦).

[ಸಂ.]

✱

ಸ

ಸ$_1$ (ನಾ). ಕನ್ನಡ ವರ್ಣಮಾಲೆಯ ಐವತ್ತೆರಡನೆಯ ಅಕ್ಷರ ; ಅವರ್ಗೀಯ ವ್ಯಂಜನಗಳಲ್ಲಿ ಒಂದು : ತಳಿಗುಂ ಮೇಲಣ ಕ ಸ ಪಂ ತಳದ ತಕಾರ ಸ್ವರೂಪಮಂ . . . ಧರಿಯಿಸುಗುಂ (ಶಮದ. ೨೬೪).

ಸ$_2$ (ನಾ). ಒಂದು ಅಳತೆ ; ಶಾಸನಗಳಲ್ಲಿ ಬರುವ 'ಸಲಗೆ' ಎಂಬುದರ ಸಂಕ್ಷಿಪ್ತರೂಪ : ಮಠಪತಿ ದಾಸ ವೈಷ್ಣವರಾಹಾರದಾನಕಂ ಬಿಟ್ಟ ದತ್ತಿ ಮಾಚ ಸಮುದ್ರದ ಮೂಡಣ ಕೋಡಿಯಲ್ಲಿ ಸಿಂದೇಶ್ವರದೇವರಿಗೆ ಸ ೨ ಗೋಪಾಳದೇವರಿಗೆ ಸ ೨ (ಎಕ. XIV, ನಾಗಮಂ. ೧೪೦-೬೭ ; ಸು. 1224). [< ಸಲಗೆ$_1$]

ಸ$_3$ (ನಾ). ೧. [ಛಂದ] ಅಕ್ಷರಗಣಗಳಲ್ಲಿ ಒಂದು ; ಆದಿಯಲ್ಲಿ ಎರಡು ಲಘುಗಳಿದ್ದು ಕಡೆಯಲ್ಲಿ ಒಂದು ಗುರುವಿರುವ ಗಣ ; ಸಗಣ (UU-) : ಮಯರಸತಜಭನಲಗವಿನಿಚಯಮೆಂಬವು ನಿಯಮದಿಂ ಗಣಾಕ್ಷರಮಕ್ಕುಂ (ಛಂದೋಂಬು. ೧-೩೭) ; "ಯಮಾತಾರಾಜಭಾನಸಲಗಂ" ಎಂಬ ಸೂತ್ರದಲ್ಲಿ, ಕ್ರಮವಾಗಿ ಮೂರು ಮೂರಕ್ಷರಗಳನ್ನು ತೆಗೆದುಕೊಂಡರೆ ಮೊದಲನೆಯಕ್ಷರವು ಗಣದ ಹೆಸರನ್ನು ಸೂಚಿಸುವುದು (ಕೃಷಿ. ೭೦). ೨. [ಸಂಗೀತ] ಸಂಗೀತದ ಸಪ್ತಸ್ವರಗಳಲ್ಲಿ ಒಂದು ; ಷಡ್ಜ : ಸ್ಥಾಯಿ ಸಂಚಾರಿಗಳ ಸರಿಗಮಪಧನಿಯ ಸರದಾಯತದ . . . ತಾರ ಮಧ್ಯ ಮಂದ್ರಗಳಿಂದ ಸೊಗಸುಗೊಳಿಸಿ (ಕೃಷ್ಣಿಧಾ. ೨೧-೫೮) ; ನಿನ್ನೊಳು ನಾ ನನ್ನೊಳು ನೀ . . . ಇದೆ ಒಲವಿನ ಸರಿಗಮಪದನೀ (ಗೋಕಾಸಿ. ೨೫-೧೦). [ಸಂ.]

ಸಂಕ$_1$, ಶಂಕು$_1$, ಸಂಕು$_1$, ಸಂಕೆ$_2$ (ನಾ). ಪಂಚಮಹಾವಾದ್ಯಗಳಲ್ಲಿ ಒಂದು ; ಊದಿದರೆ ಧ್ವನಿಯನ್ನುಂಟುಮಾಡುವ, ಸಮುದ್ರದಲ್ಲಿ ದೊರೆಯುವ ಒಂದು ಬಗೆಯ ಚಿಪ್ಪು ; ಕಂಬು ; ಶಂಖ : ಪಲ್ಲವ ಸತ್ತಿಗೆ ಸಂಕಂ ಝಲ್ಲಳಿ ಜಯಮಂಗಳಂಗಳಂ ಚೋಳಮಹೀವಲ್ಲಭನಿತ್ತಡೆ ಕುಡಿಯರ ವಲ್ಲಭನುಱೆ ಮಣ್ಣಳೀಕಪದಮಂ ಪಡೆದಂ (ಎಕ. IV, ಹೆಗ್ಗಡ. ೧೮-೧೦ ; 1057) ; ಪಂಕರುಹದಲರ್ದ ಮೊಲ್ಲೆಯ ಸಂಕದ ಗೋಕ್ಷೀರದಿಂದುಕಾಂತದ ಹಂಸೆಯ? ಸಂಕುಳದಂದದ ಮೇಘಚಯಂ ಕಱೆಗುಂ ಪಿರಿಯ ಪೆರ್ಮಱೆಯುಮಂ ಜಗದೊಳ್ (ಅಜಿಮ. ೮-೧೬) ; ಸಂಕಂ ಕೂಂಕುವ ಮುದ್ದುಮೂಗೆಱೆಗೊರಲ್ತಳ್ತಿರ್ಪ ಕಂದಂ ಕರಂ ಬಿಂಕಂ ತೆಂಗುವ ಗೂಢಜತ್ರು ಸುದೃಢಾಯದ್ಬಾಹುಕಾಂಡಂ . . . ನಿರಾತಂಕಂ ನೆರ್ಗಿಪುದಾಸೆಯಳ್ಕಿನಿದಿರ್ಗೊಳ್ಳೊಳ್ಳಂಡಿರಂ ಗಂಡರಂ (ಚಕವಿ. ೩-೨೦). **ಶಂಕು$_1$** : ಶಂಕು ಶಲಾಕೆಯುಂ ಗಟ್ಟಿಗೆವಟ್ಟಲುಮೊಪ್ಪಿರೆ ವೇದನಾದದೊಳ್ ಸಂಕರಮಾಗಿ . . . ಮಂಗಳಗೀತತೂರ್ಯಘೋಷಂ ಕಡಲೂರ್ಮಿಯಂತುಲಿಯೆ (ಸೂತ್ರಸು. ೬-೫೭) ; ಶ್ರೀ ನಗರೇಶ್ವರದೇವರಿಗೆ . . . ಕೊಟ್ಟ ಉಪಕರಣ . . . ದೂಪಾರತಿ ಬಟ್ಟಲು ಶಂಕು (ಎಕ. IX, ಬಂಗಳೂ. ೯೦-೧೧ ; ಸು. 1400). **ಸಂಕು$_1$** : ದೇಗುಲದ ಭೇರಿ ಮೊಟಗೆ, ಸಂಕಿನೊಂದು ನಿಡುಸರಂ ಪೆರ್ಚೆ . . . ರಜನೀಮುಖಮೆಡ್ಡಮಾದುದು (ರಾಮಾಶ್ವ. ೨೩-೧). **ಸಂಕೆ$_2$** : ತಕ್ಕಿನ ಪವಳದ ಸಂಕೆಯ ಟೆಕ್ಕೆಯ ಮಣಿಗಳನನೇಕಮಂ ಕೊಂಡು (ಧರ್ಮಾಮೃ. ೨-೩೬).

ಸಂಕದೋಲೆ = ಶಂಖದಿಂದ ಮಾಡಿದ ಅಥವಾ ಶಂಖದಾಕಾರದ ಓಲೆ: ಸಾವರ ಹಿಡಿದು ಸಂಕದೋಲೆಯನಿಕ್ಕಿ ವಿಧಿಯಲ್ಲಿ ಸಾಯಸಗೊಳ್ಳದೆ ಭಾವವಡೆದಂತೆ ಭ್ರಮೆಗೊಳಗಾದ ಮತ್ತೆ ಇವನೇನೆನ್ನದಿಪ್ಪುದೇ ಸರ್ವಜ್ಞಾನದ ಒಳಗು (ಮೋಳಾಮಾ. ೧೦೫-೪೧೮) ; ಪಂಕಸಂಕಲಿತವಾಮಕರಾಟ್ಟಂ ತಕ್ರಘಟಾಂಚಿತಮಸ್ತಕಂ ಸಂಕದೋಲೆ ಜಳಪಂಕಕಣಂ . . . ಅಮರ್ದೊಪ್ಪಿರೆ ಬಂದಳ್ಗೋಪವಧೂಟಿ ವಿಳಾಸದಿಂ (ವೃಷಾ. ೭-೯).

[< ಸಂ. ಶಂಖ]

ಸಂಕ$_2$ (ನಾ). ಸಣ್ಣ ತೊರೆ, ಹೊಳೆ, ಹಳ್ಳ ಮುಂತಾದುವುಗಳನ್ನು ದಾಟಲು ಅಡ್ಡಮರವನ್ನಿಟ್ಟು ಮಾಡುವ ಸೇತುವೆ ; ಪೂಲು : ತೊರೆಯಿಳಿದ ಮೇಲೆ ಸಂಕವನ್ನಿಕ್ಕಲೇನಹುದು? (ಶ್ರೀರಾಮಾ. ೬೬-೩೨೪) ; ನಡುಹಳ್ಳದೆಡೆಯೊಳು ಸಂಕವು ಮುರಿದಂತೆ (ಚಂದ್ರನೀ. ೧೩೨-೨೭) ; ಸಂಕ ಮುರಿದಲ್ಲೇ ಸ್ನಾನ, ಗ್ರಹಚಾರ ಹಿಡಿದಲ್ಲೇ ದಾನ (ಗಾದೆ). [<—ಮರಾ. ಸಾಂಕೂ, ಸಾಂಕವ./ ಪ್ರಾ. ಸಂಕಮ ; ಪಾಲಿ. ಸಂಕಮೋ./ ತುಳು. ಸಂಕ./ ಸಂ. ಸಂಕ್ರಮ]

ಸಂಕಟ (ಗು). ೧. ಇಕ್ಕಟ್ಟಾದ ; ದುರ್ಗಮವಾದ : ಎಱಗಿರ್ದುವು ಷಟ್ಪದಂಗಳು ತ್ಕೇಸರಕೋಟಿ ಸಂಕಟಕುಶೇಶಯ[ಕೋ]ಶಕುಟೀರಕಂಗಳೊಳ್ (ಪಂಪಭಾ. ೪-೪೭). (ನಾ). ೨. ಇಕ್ಕಟ್ಟಾದುದು ; ದುರ್ಗಮವಾದುದು : ಜಾನುಭಂಜನೀ ಶೂಲ ಪ್ರಕರಪರಿವೃತಂಗಳುಂ ಕೂಪಕೂಟಾವಪಾತಲೋಹಕಂಟಕಸಂಕಟಂಗಳುಂ . . . ಅಪ್ಪ ದುರ್ಗಂಗಳೊಳ್ (ಆದಿಪು. ೧೩-೫೭ ವ). ೩. ಬಾಧೆ ; ನೋವು : ಸಾವ ಸಂಕಟವನದ ನಾನೇನೆಂಬೆನಯ್ಯಾ ಅದು ಅಗಣಿತದುಃಖ (ಪಿದ್ರೇವ. ೯. ೧೩-೧೫೭). ೪. ಕಷ್ಟ ; ತೊಂದರೆ; ಹಿಂಸೆ : ರಣಸಾಗರನಾ ಸಾಂ(ಸಂ)ಕಟದುಳ್ ಉದೆಯ ಪುರಂ ಧರೆಗಿ[ಲ]ಶನ್ ಪಡೆಪೊಗುವಲ್ಲಿ (ಎಾ. IX, ೧೭-೨ ; ಸು. 800) ; ಕಟಿಸೂತ್ರ ವಿಳಿದು ನಡೆಯಲೀಯದಿರಲದ ನಟನಳಿಲನೆ ಮುಱಿದಿಟ್ಟು ಚಟುಲಾಕ್ಷಿಯರು ರಾಮನ ನೋಡುವ ಸಂಕ[ಪಾಶಾಂ. ಗ]ಟವನದೇನ ಪೇಳುವೆನು (ಕುಶಾಸಾಂ. ೩೧-೧೭) ; ಕಂಟಕದ ಸಂಕಟವ ಕಳೆದು ಮೇಲೇರ್ದರೂ ತಟ್ಟಿದೊಡನೆಯೆ ತೆರೆವ ಕದವದಲ್ಲ (ಅನಿಕೇ. ೨-೯) ; ಸಂಕಟ ಬಂದರೆ ವೆಂಕಟರಮಣ (ಗಾದೆ). ೫. ದುಃಖ; ಅಳಲು ; ವ್ಯಥೆ : ಪೊಡವಡುವಪ್ಪಿಕೊಳ್ಳ . . . ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ ಬಹು ಪ್ರಕಾರಜನಸಂಕಟಮೊಪ್ಪಿದುದಾ ಪ್ರಯಾಣದೊಳ್ (ಆದಿಪು. ೪-೫೭) ; ಪಾಯಿಲೆಯಿಂದ ನರಳಿ ಬಡಕಲಾಗಿದ್ದ ಅವಳ ಮೈಯನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ಸಂಕಟವಾಯಿತು (ಪ್ರತಾಪ. ೪೪). ೬. ಒಂದು ನರಕದ ಹೆಸರು : ಸಂಕಟ . . . ವಿಕಟವೆಂಬೈದು ಮಂತ್ರಿನರಕಂಗಳಂ ಮೋಹಿಸಿ ವಿಕರಾಳವೆಂಬರಸುನರಕವಿಹುದು (ವಿವೇಕ. ೧೫೩). [ಸಂ.]

ಸಂಕಟಕ (ನಾ). ದಾರದ ಕುಣಿಕೆ , — ಗಂಟು : "ಸಂಕಟಕಮನಲು ಹಮ್ಮುಗೆಯ ಕುಣಿಕೆಗಳು" (ಮಂಗರಾ. ೮೬-೩೧). [ಸಂ. ?]

ಸಂಕಟಕಾಲ (ನಾ). ತೊಂದರೆಯ ಸಮಯ ; ಕಷ್ಟದ ಕಾಲ : ತಮ್ಮ ಸಂಕಟ ಕಾಲದಲ್ಲಿ ಎರಡನೆಯವರು ತಮಗೆ ಸಹಾಯ ಮಾಡಬೇಕೆಂದು ಮನಸ್ಸು ಇದ್ದರೆ ತಾವು ಅವರ ಆಪತ್ತನ್ನು ದೂರಮಾಡಲಿಕ್ಕೆ ಕೈಲಾದ ಮಟ್ಟಿಗೆ ಯತ್ನಮಾಡಬೇಕು (ಮುಂಬಯಿ. ೪-೮೫). [ಸಂ.]

ಸಂಕಟಗೊಳ್ (ಕ್ರಿ). ತೊಂದರೆಗೆ ಸಿಲುಕು ; ಕಷ್ಟಕ್ಕೆ ಗುರಿಯಾಗು : ದೇಗುಲಕೆ ಸಾರದೆ ಹೆಗಲ ಕಂಬಿಯನಿಳುಹದೆಲ್ಲಿಯು ನಿಲ್ಲದಡಿಯಿಡಬಾರದಿಂತಪ್ಪ ಬಲಿದವಸ್ಥೆಯೊಳೆಯ್ದೆ ಸಂಕಟಗೊಳಲದೇತಕೆ (ಬಸಪು. ೪೪-೧೩).

[ಸಂಕಟ + ಕೊಳ್$_1$]

ಸಂಕಟಜ್ಯೋತಿಗ (ನಾ). ಒಂದು ಕ್ಷುದ್ರದೇವತೆಯ ಹೆಸರು : ಹಳ್ಳದ ಜೋಗಾಯಿ ಬೇತಾಳ ಬೊಮ್ಮಯ್ಯಾ ಮುಳ್ಳಿನ ಮಹಾವೀರ ಸಂಕಟ(ಚೌತಿ)ಜ್ಯೋತಿಗನು (ಏಸಾಸು. ೫೮-೨). [ಸಂಕಟ + ಜ್ಯೋತಿಗ?]

ಸಂಕಟಪಡು (ಕ್ರಿ). ೧. ಆಯಾಸವನ್ನು ಹೊಂದು ; ಬಳಲು : ತಮ್ಮಾ ನೀನು ಹಸಿವೆಯಿಂದ ಸಂಕಟಪಡುವುದಿಲ್ಲವೋ? (ಮುಂಬಯಿ. ೪-೭೭) ; ಅಯ್ಯಾ ಮಾರ್ಗಸ್ಥನೆ ಯಾಕೆ ಇಷ್ಟು ಸಂಕಟಪಡುತ್ತೀಯೆ? (ನೀತಿಚಿಂ. XII. ೧೨). ೨. ಕಷ್ಟಪಡು ; ತೊಂದರೆಗೊಳಗಾಗು : ಮುಂದಣ ಪರಿಣಾಮವನ್ನು ಪರಿಕಿಸದೆಯೇ ತಿನ್ನುವ ಅನ್ನಕ್ಕೂ ಮಣ್ಣಿನ್ನು ತೂರಿಕೊಂಡು ಸಂಕಟಪಡಬೇಕೆನಿಸಿದ ನನ್ನ ಅಲ್ಪಬುದ್ಧಿಯನ್ನು ಸುಟ್ಟರು (ಚನ್ನಬಸ. ೧೦) ; ಇಂಡಿಯಾದಲ್ಲಿ ಮೊಟ್ಟಮೊದಲು ಮಹಮ್ಮದೀಯ್ಯರಿಂದ ಸಂಕಟಪಟ್ಟದ್ದು ಸಿಂಧುದೇಶ (ಭೂಗೋಳ. ೭೧). [ಸಂಕಟ + ಪಡು$_1$]

ಸಂಕಟಿ$_1$, ಸಂಗಟಿ$_1$ (ನಾ). ೧. ರಾಗಿ ಅಥವಾ ಇತರ ಧಾನ್ಯದ ಹಿಟ್ಟಿನಿಂದ ಬೇಯಿಸಿ ಮಾಡುವ ಮುದ್ದೆ : ನವಣೆಯ ಪಿಟ್ಟಂ ನೆಲದಾಬದ ಗೆಂಡೆಯುಮಂ ಕೂಡಿ ಹಿಟ್ಟುಗುಟ್ಟಿ ಸಂಕಟಿಯಾಗಿ[ಪಾಠಾಂ. ಸಂಟೆಯಾಗಿ, ಸಂಕುಟೆಯಂ] ತೊಳಸಿ ತುಪ್ಪಮನಾದೊಡಂ ಪಾಲನಾದೊಡಂ ಕಲಸಿ ಮೆಲಲ್ ವೀರ್ಯವೃದ್ಧಿಯಕ್ಕುಂ (ರೋಹಿಣಿ. ೯-೪೫ ಟೀಕು). ೨. ತೆಳುವಾದ ಅಂಬಲಿ ; ಗಂಜಿ : ''ಸಂಕಟ (ಸಂಗಟ) – ಅಳ್ಳಕನುಚ್ಚು, ಅಳ್ಳಕಸಜ್ಜಕ'' (ಜಾನಪೋ. ೪೭). **ಸಂಗಟಿ$_1$** : ೧. ನುಚ್ಚು, ಅಂಬಲಿ, ಗಂಜಿ, ಗುಗ್ಗರಿ, ಸಂಗಟಿ, ರೊಟ್ಟಿ ಮೊದಲಾದವು (ಪಾಣ್ಡಿ. ೬೯). ೨. ಸೆಜ್ಜೆಯ ಸಂಗಟಿಯು, ಚಳಿಗಾಲದಲ್ಲಿ ಹಿಂಡುವ ಎಮ್ಮೆಗಳಿಗೆ ಬಹಳ ಹಿತಕರವಾಗಿದೆ (ಗೋಗ್ರಾಸ. ೭೦). [ದೇ. ॥ ತಮಿ. ಚಜ್ಜಟ ; ತೆಲು. ಸಂಕಟಿ]

ಸಂಕಟ್ಟಿ$_2$ 'ಸಂಕಡ್ಡಿ$_2$' ನೋ.

ಸಂಕಟಿಸು (ಕ್ರಿ) ಇಕ್ಕಟ್ಟಾಗುವಂತೆ ತುಂಬು ; ಇರುಕು ; ಇಡಿಕಿರಿ : ಭಟರುಗಳು ವಿದ್ವಾನುಗಳು . . . ಗಮಕಿ ಗಾಯಕರು ಮಿಗೆ ಸಂಕಟಿಸಿ ಮೆಲೆದುದು ಚಪ್ಪರದೊಳು (ಜೀವಂಜಿ. ೭-೫೭). [ಸಂಕಟ + – ಇಸು$_3$]

ಸಂಕಡ್ಡಿ$_1$ 'ಸಂಗಡ್ಡಿ$_1$' ನೋ.

ಸಂಕಡ್ಡಿ$_2$, ಸಂಕಟ್ಟಿ$_2$, ಸಂಗಟ (ನಾ). ೧. ಸ್ಥಳಸಂಕೋಚ ; ಇಕ್ಕಟ್ಟು. ೨. ಇಕ್ಕಟ್ಟಾದ ಸ್ಥಳ ; ಆಯಕಟ್ಟಾದ ಪ್ರದೇಶ : ಮಣಲೆತ್ತಿ ಹೊತ್ತಿ ಕವಿದಿಕ್ಕುವ ಪೆರ್ಗೊಡವಾವಿನೋಳ ಸಂಕಡಿಯೆಡೆಗೆಯ್ದೆ ವಂದಿಡುವ ಡೆಂಕಣಿ ಮುಟ್ಟಿವರಲ್ಕೆ ಬಿಟ್ಟು ಮುಂಗೆಡುಪುವ ಕಟ್ಟುಗಾಲಿಗಳನದ್ಭುತಮಾದುದು ಕೋಂಟೆಗಾಳಿಗಂ (ಕುಸುಮಾ. ೧೧-೪೨). ೩. ದುಃಖ ; ವ್ಯಥೆ ; ಕ್ಲೇಶ. ೧,೩: ಬಡತನಮೆಂಬುದು ಸತಿಯರ ನಡುವಿನೊಳಾಲೀಢವಲಗುವಿನ್ನಣದೊಳ್ ಸಂಕಡಿ[ಪಾಠಾಂ. ಟಿ] ಕುಚಮದ್ಧದೊಳಾ ಕೋಳ್ನುಡಿ ಕುಂಟಣವದಿರೊಳಲ್ಲದಿಲ್ಲಾ ನಾಡೊಳ್ (ಧರ್ಮವ. ೧-೪೩). ೪. ನಿಬಿಡವಾಗಿರುವ ಗೊಂಚಲು : ಚಂದನದ ವಂದನಮಾಲೆಗಳಿಂ ಗೊಜ್ಜೆಯ ಸಂಕಡಿಗಳಿಂ . . . ಕಂಟಿನ ಕಡಾರಮುಂ ತನ್ನೆನ ತಾಣಮುಮೆನಿಸಿರ್ದ ಲತಾಮಂಟಪಮಂ ಪೊಕ್ಕು (ಕುಸುಮಾ. ೧೨-೧೫೭ ವ). **ಸಂಕಟ್ಟಿ$_2$** : ೩. ಅರಿಗೆ ಪೇಳುವೆನೀ ಸಂಕಟಿಯ[ಪಾಠಾಂ. ಸಂಕಟವ, ಸಂಗಡಿಯ] (ಹಚಣಾ. ೧೨-೩೦ ರಗಳೆ). **ಸಂಗಟಿ** : ೩. ಆವ ಫಲವನದಾವ ರಸವನದಾವ ಚಿಗುರ ಕಪೋತಿ ಬಯಸುವಳಾವ ಸಂಗಟವಾದಡಾತನದನು ಮನದೊಳಗೆ ಭಾವಿಸದೆ (ನಿಭಾಗ. ೧೧-೧೩-೫೩). [< ಸಂ. ಸಂಕಟ]

ಸಂಕಡಿಗೊಳ್ (ಕ್ರಿ). ದುಃಖಪಡು ; ವ್ಯಥೆಗೊಳ್ಳು : ಮಾನಹಾನಿಯಿಂದಾದ ಬರ್ದುಂಕದೇವುದನುತುಂ ಸಲೆ ಸಂಕಡಿಗೊಂಡರಾ ನೃಪರ್ (ಶಾಂತೀಶ್ವ. ೭-೧೩೧). [ಸಂಕಡ್ಡಿ$_2$ + ಕೊಳ್$_1$]

ಸಂಕಥೆ (ನಾ). ಮಾತುಕತೆ ; ಸಂಭಾಷಣೆ : ''ಸಂಕಥಾ, ಅನ್ಯೋನ್ಯಸಂಗೀತಿ: — ಈ ೨ ಕೂಡಿಕೂಡಿ ಮಾತಾಡುವುದು'' (ಹಲಾಯು. ೧೨೮-೯೪). [ಸಂ. ಸಂಕಥಾ]

ಸಂಕಪಾಲ, ಸುಂಕಪಾಳ (ನಾ). ಒಂದು ಬಗೆಯ ನಾಗ ; ಅಷ್ಟಕುಲಫಣಿಗಳಲ್ಲಿ ಒಂದು : ''ಸಂಕಪಾಳ(ಲ) — ಶಂಕಪಾಲ = ಒಬ್ಬ ನಾಗ'' (ಹಬ್ಬಕೋ. ೪೧); ಅಂಕಡೊಂಕ ಸಂಕಪಾಲ ಮೂರುತಲಗೆ ಹತ್ತು ಕಾಲು (ಒಗಟು. ೬). **ಸುಂಕಪಾಳ** : ಬೇರೆ ವಿಷಯುಕ್ತಸರ್ಪಗಳು . . . ಸುಂಕಪಾಳ, ಜೋಗಿ, ಸುರ್ಗಂಡ, ಅಜಗರ ಮುಂತಾದವುಗಳು ಪ್ರಸಿದ್ಧ ಉಂಟು (ಕಭಾಗ. ೬೭). [< ಸಂ. ಶಂಖಪಾಲ]

ಸಂಕಮ (ನಾ). ಇಂದ್ರ : ಪಾಂಡುರಾಜತನಯಂ ಗಾಂಡೀವಿಯಂ . . . ಅನ್ನನೆಂದೊಂದು ಮಾತನಣಂ ಮಿಱದೆ ನಿಂದEದುತೆ ಸಂಕಮ[ಪಾಠಾಂ. ನಿಂದು ಶಂಕರ, ನಿಂದ ಪಂಕಮ, ನಿಂದ ಸಂಕತ]ನ ನೀನಾರಾಧಿಸೆಂದಿಂತಿದ ಮುನಿ ಪಾರಾಶರನೊಲ್ದು ಪೇಟೆ ಹರEಂತೆ ಬರ್ಪನ್ನಂ ತಪಂಗೆಯ್ದಪೆಂ (ಪಂಪಭಾ. ೮-೫) ; ನೆಗಟ್ಟಾ ಭಾರತಮಲ್ಲ ಶಂತನುಜ Eಸಂಕಮಜತೆ ಬಾಣಾಘಾತದಿಂ ಭೀಮ ಭೀಮಗದಾದಂಡವಿಘಾತದಿಂ ಕುರುನೃಪಾನೀಕಂ ಪಡಲ್ವಟ್ಟು . . . ಬಿಟ್ಟಶ್ವದಿಂ ಬಿಟ್ಟ ದಂತಿಗಳಿಂದಂ ಜವನುಂಡು ಕಾಲಿದವೊಲಾಯ್ತತ್ತಂ ಕುರುಕ್ಷೇತ್ರದೊಳ್ (ಗದಾಯು. ೩-೨) ; IP ಈ ಪದದ ಬಗೆಗೆ ಇರುವ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸೂಚಿಸಲಾಗಿದೆ. ''ಶಂತನುಜ — ಶಂತನು ಪುತ್ರನಾದ ಭೀಷ್ಮ. ಭೀಮಾರ್ಜುನರ ಸಾಹಸವರ್ಣನೆಯ ಸಂದರ್ಭದಲ್ಲಿ ಭೀಷ್ಮನ ಬಾಣಪ್ರಯೋಗದ ಹೊಗಳಿಕೆಗೆ ಔಚಿತ್ಯ ಕಾಣಿಸುವುದಿಲ್ಲ. ಮುಂದಿನ ಪದ್ಯದಲ್ಲಿಯೇ ಭೀಮನ ಗದೆಯ ಪ್ರಶಂಸೆ ಬರುತ್ತದೆ. ಅರ್ಜುನನ ಹೆಸರು ಪದ್ಯದಲ್ಲಿ ಇನ್ನೆಲ್ಲೂ ಬಂದಿಲ್ಲ. ಇದನ್ನು ನೋಡಿದರೆ ''ಶಂತನುಜ'' ಎಂಬುದು ಮೂಲಪಾಠವಾಗಿರಲಾರದೆಂದೂ ಅದಕ್ಕೆ ಪ್ರತಿಯಾಗಿ ಅಲ್ಲಿ ಅರ್ಜುನನ ಹೆಸರು ಇದ್ದಿರಬೇಕೆಂದೂ ತೋರುತ್ತದೆ; [ಶಕ್ರಸುತ] ಎಂದೋ [ಸಂಕಮಜ] ಎಂದೋ ಇದ್ದಿರಬಹುದೆ? ''ಸಂಕಮ'' ಎಂಬುದಕ್ಕೆ ಇಂದ್ರ ಎಂಬ ಅರ್ಥವಿರುವಂತೆ ತೋರುತ್ತದೆ (ಪಂಪಭಾ. ೮-೫ರ ಪಾಠಾಂತರಗಳನ್ನು ನೋಡಿ)'' (ಗದಾಸಂ. ಉಪೋದ್ಘಾತ. ೧೧೭) – ಹೀಗೆ ಶ್ರೀ. ತೀನಂಶ್ರೀಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಪಂಪಭಾರತ ೮-೫ರ ಪದ್ಯದಲ್ಲಿ ವರ್ಣಿತವಾಗಿರುವ ಅರ್ಜುನನ ತಪಸ್ಸು ಶಂಕರನನ್ನು ಕುರಿತದ್ದೋ ಅಥವಾ ಇಂದ್ರನನ್ನು ಕುರಿತದ್ದೋ ಎಂಬುದರ ಬಗೆಗೇ ಹಲವು ಭಿನ್ನಾಭಿಪ್ರಾಯಗಳಿವೆ. (ಉದಾಹರಣೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ವಿಕ್ರಮಾರ್ಜುನ ವಿಜಯ'ದ ಪುನರ್ಮುದ್ರಣದ ಉಪೋದ್ಘಾತವನ್ನು ನೋಡಿ). ಇದರ ಮೇರೆಗೆ 'ಶಂಕರನ' ಎಂಬ ಪಾಠಾಂತರವು ಹೆಚ್ಚು ಸ್ವೀಕಾರಯುಕ್ತವಾಗಬಹುದಾದ್ದರಿಂದ 'ಸಂಕಮ' ಎಂಬ ಪಾಠಾಂತರರೂಪವನ್ನು ಬಿಡುವುದು ಉಚಿತವಾಗಬಹುದೆ? [< ಸಂ. ಶಕ್ರನ್?]

ಸಂಕಯ್ಯ (ನಾ). ಒಬ್ಬಾತನ ಹೆಸರು : ಶ್ರೀ ಪೆರ್ಗ್ಗಡೆ ರೇತಯ್ಯನ ವೆದ ಸಂಕಯ್ಯ (ಎಕ. ॥ (R), ೨೪೨-೨ ; ಸು. 1000). [ಸಂಕ? + ಅಯ್ಯ$_1$]

ಸಂಕರ$_1$ (ನಾ). ಶಿವ ; ಈಶ್ವರ : ''ಸಂಕರ — ಶಂಕರ = ಶಿವ'' (ಹಬ್ಬಕೋ. ೪೧). 'ಸಂಕರಗೊಂಡ' ಪರಾ. [< ಸಂ. ಶಂಕರ]

ಸಂಕರ$_2$ (ನಾ). ೧. ಕಲಬೆರಕೆ ; ಮಿಶ್ರಣ : ಕರ್ನಾಟಕಸಾಮ್ರಾಜ್ಯದ ಮಹಾಪ್ರಯತ್ನದ ಫಲವಾಗಿ ದಕ್ಷಿಣದೇಶದಲ್ಲಿ ಪ್ರಾಚೀನಭಾರತೀಯಸಂಗೀತವು ಬಹಳ ಮಟ್ಟಿಗೆ ಸಂಕರವಿಲ್ಲದೆ ನಿಂತಿತು (ಗಾನಕ. ೪೮). ೨. ಅಂತರ್ಜಾತೀಯವಿವಾಹಗಳಿಂದ ಉಂಟಾಗುವ ಮಿಶ್ರಜಾತಿ, — ಸಂಕೀರ್ಣವರ್ಣ : ಸರಿಯನಿಸದೆ ಬೇಜೆ ಬೇಜೆ ಬೆರಸಿದಾಗಲಲ್ಲಿ ಪುಟ್ಟಿದರನೆ ನೋಡಿ ಸಂಕರದವರೆಂದು ಬಗೆವುದು (ಜನಪ. ೨-೧೮). ೩. ಅಡ್ಡತಳಿ ; ಮಿಶ್ರತಳಿ : ಬಲುಮೆಯ ಸಂಕರದ(ಹೈಬ್ರಿಡ್) ಫಲವನ್ನೂ ಪಡೆಯಬಹುದು (ಕವಿಕೋ. I, ೨೨೨). ೪. ಗುಡಿಸಿಹಾಕುವಂಥದು ; ಕಸ : ''ಸಂಕರಃ, ಅವಕರಃ — ಈ ೨ ಕಸವು'' (ಪಲಾಯು. ೫೦-೧೪೭) ; ಎರಟ್ಟಡಿಯ ಪೂಮರದಿಂ ಕಲಿವೂಗಳತ್ಯಮಿತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ ನೂಂಕುವವೂರ್ಮಿಮಾಲಿನಿಯ ತುಂಗತರತ್ತರಲೋರ್ಮಿಮಾಲೆಗಳ್ (ಆದಿಪು. ೧-೭೧). ೫. ಹೊಲಸಾದುದು ; ತಿಪ್ಪೆ : ''ಸಂಕರಃ = ತಿಪ್ಪೆಯುಂ, ಬರಕೆಯ ಜಾತಿಯುಂ'' (ಕಾಶಕ್ಕ. ೧೮೫) ; ಆ ತಿಳಿವಿನ ಅರುಣಾಂಕುರ ಮೊಳೆಯಲು ಬಾಳ್ಮೆಯು ಶಂಕರ ; ಇಲ್ಲದಿರಲು ಬರಿ ಸಂಕರ (ಮಂತ್ರ. ೨೭-೧೭). ೬. [ಕಾವ್ಯಮೀ] ಮಿಶ್ರಾಲಂಕಾರಗಳಲ್ಲಿ ಒಂದು ; ಒಂದರಲ್ಲಿ ಮತ್ತೊಂದು ಕಲೆತುಹೋಗುವ ಅಲಂಕಾರ : ಸಂಸೃಷ್ಟಿಯಲ್ಲಿರುವ ಅಲಂಕಾರಗಳು ಒಂದರಲ್ಲಿ ಮತ್ತೊಂದು ಕಲೆಯದೆ ತಿಲತಂಡುಲಗಳಂತೆ ಇರುತ್ತವೆ. ಆದರೆ 'ಸಂಕರ' ವೆನ್ನುವುದು ಹಾಲುನೀರುಗಳಂತೆ ಸೇರಿಹೋಗಿ ಒಂದಕ್ಕೆ ಮತ್ತೊಂದು ಉಪಜೀವಕವಾಗಿರುತ್ತದೆ (ಕ್ಕಪಿ. ೨೯೯). [ಸಂ.]

ಸಂಕರ$_3$ (ನಾ). ಗೊಬ್ಬರ ಮತ್ತು ಧಾನ್ಯವನ್ನು ಸಾಗಿಸಲು ಎತ್ತಿನ ಹೆಗಲ ಮೇಲೆ ಹೊರಿಸುವ ಇಬ್ಬಾಯಿಯ ಚೀಲ ; ಹಸುಬೆಯ ಚೀಲ : (೪). [?]

ಸಂಕರಗೊಂಡ (ನಾ). ಒಬ್ಬಾತನ ಹೆಸರು : ಮಾರಸಿಂಗದೇವಂ ಮೆಚ್ಚಿ ಅಸಗಯ್ಯನ ಮಗಂ ಸಂಕರಗೊಂಡಂಗೆ ಕಲ್ನಟ್ಟುಗೊಟ್ಟಂ (ಎಕ. V, ಚೆನ್ನರಾ. ೨೭೭-೧೭ ; 971).

[ಸಂಕರ$_1$ + ಗೊಂಡ$_1$ (< ಗಾಮುಂಡ)]

ಸಂಕರಗೊಳ್ (ಕ್ರಿ). ಬೆರಕೆಯಾಗು ; ಮಿಶ್ರವಾಗು : ಕಡಿವರ್ದ ಭಟರ್ . . . ಸಿಡಿಲ್ದುಡಿದ ರಥಂಗಳ್ ಪೋಪ್ಪೋದೊಡಲೊಂದೊಂದೆಸಗೆ ಬಿದ್ದ ಭದ್ರಗಜಂಗಳ್ ಪರಿವರುಣಜಲದ ತೊಜೆಗಳ ತರಂಗದೊಳ್ ತೇಂಕಿ ಸಂಕರಗೊಳಲ್ (ಮಹಾನೇ. ೧೨-೨೨೦).

[ಸಂಕರ$_3$ + ಕೊಳ್$_1$]

ಸಂಕರಜಾತಿ (ನಾ). ಮಿಶ್ರಜಾತಿ,- ಜನಾಂಗ : "ಸಂಕೀರ್ಣಾಃ — ಸಂಕರಜಾತಿ ಗಳೆಂಬಲ್ಲಡುವರು" (ಓಡ್ಯಾಂತಿ. ೩೦೮). [ಸಂ.]

ಸಂಕರದೇಶ (ನಾ). ಮಿಶ್ರಗುಣಲಕ್ಷಣಗಳನ್ನೊಳಗೊಂಡ ದೇಶ : ಅಲ್ಪನೀರುಳ್ಳ ದ್ದಾಗಿಯೂ ಅಲ್ಪವೃಕ್ಷಂಗಳುಳ್ಳದ್ದಾಗಿಯೂ ಇರುವ ದೇಶವೇ ಜಾಂಗಲದೇಶವೆನಿಸಿ ಕೊಂಬುದು . . . ಬಹಳ ನೀರು ಉಂಟಾದ ದೇಶವು ಅನೂಪದೇಶವೆನಿಸಿಕೊಂಡು ಶ್ಲೇಷ್ಮವ್ಯಾಧಿವಾತರೋಗಗಳನ್ನುಂಟುಮಾಡುವುದು. ಈ ಎರಡೂ ಲಕ್ಷಣಗಳೂ ಕೂಡಿರುವ ಸಂಕರದೇಶವು ಸಾಧಾರಣದೇಶವೆನಿಸಿಕೊಂಬುದು (ಸಚಿತ್ರ. ೧೫). [ಸಂ.]

ಸಂಕರರೋಗ (ನಾ). ಮಿಶ್ರಗುಣಲಕ್ಷಣಗಳಿಂದ ಕೂಡಿದ ಖಾಯಿಲೆ, — ರೋಗ : ಈ ಎರಡೂ ಲಕ್ಷಣಗಳೂ ಕೂಡಿರುವ ಸಂಕರದೇಶವು ಸಾಧಾರಣದೇಶ ವೆನಿಸಿಕೊಂಬುದು. ಸಂಕರರೋಗಗಳನ್ನುಂಟುಮಾಡುವುದು (ಸಚಿತ್ರ. ೧೫). [ಸಂ.]

ಸಂಕರಾತ್ರಿ (ನಾ). ಸಂಕ್ರಾಂತಿ ಹಬ್ಬ : ನಮ್ಮ ವಂಶಕೆ ವರುಷಕೊಂದು ಸಂಕ ರಾತ್ರಿಯ ಹಬ್ಬದೊಳಗೆ ಪಾಲುಪೊಂಗಲ ಮಾಳ್ಪೆವೆಂದು ಆಗ ಹಬ್ಬವ ಮಾಡಿದ (ಗೋಪಾಮ. ೨೩- ೧೧೨). [< ಸಂ. ಸಂಕ್ರಾಂತಿ]

ಸಂಕರಿಸು (ಕ್ರಿ). ಕಲೆ ; ಸೇರು : ಸುಪ್ರವಾನಂದಬಾಷ್ಪಗಳಿಂದಲೂ ಸಕಲಾಂಗದೊಳು ಸಂಕರಿಸಿದ ರೋಮಾಂಕುರಂಗಳಿಂದಲೂ (ಕಉಮಾ. ೩೨೨-೧೦). [ಸಂಕರ್ + – ಇಸು.]

ಸಂಕರೀಕರಣ (ನಾ). ೧. ಮಿಶ್ರಗೊಳಿಸುವುದು ; ಬೆರಸುವುದು. ೨. ಅನೀತಿ ; ಪಾಪ. ೩. ಗಲಿಬಿಲಿ ; ಗೊಂದಲ. [ಸಂ.]

ಸಂಕರುಷ (ನಾ). ನಿವಾರಿಸುವಿಕೆ ; ತೊಡೆದುಹಾಕುವಿಕೆ : ಕೋಲ ಸ್ಕೆರಿಸು ಸ್ಕೆರಿಸಾದಡೆ ಭಾಳಲಿಪಿ ಸಂಕರುಷ ವಿಪುಳ ಶರಾಳಿಯವೆ ಕೊಳ್ಳೆನುತ ನಕುಳನನೆಚ್ಚನಾ ಕರ್ಣ (ಕುವ್ಯಾಕ. ೪-೧೪). [< ಸಂ. ಸಂಕರ್ಷ]

ಸಂಕರುಷಣ (ನಾ). ೧. ಬಲರಾಮ : ಪುರವ ಹೊಱವಂಟವರು ಬರಲಬ್ಬರಣೆ ಯಾಯ್ತರಮನೆಯೊಳಗೆ ಸಂಕರುಷಣಂಗಱುಹಿದರು ಸಂನ್ಯಾಸಿಯ ಸಮಾಧಿಗಳ (ಕುವ್ಯಾಆ. ೧೯-೪೦); ಸಂಕರುಷಣನು ನುಡಿದನನುಜಗೆ ಕುರುನೃಪನ ಹದನ (ಕೃಷ್ಣಾಕಾ. ೧೯-೩೭). ೨. ಆಕರ್ಷಕವಾದ ರೂಪುಳ್ಳವನು ; ವಿಷ್ಣು : ಪಂಕಜಾಕ್ಷ ನೀನು ಎನ್ನ ಮಂಕುಬುದ್ಧಿ ಬಿಡಿಸಿ ನಿನ್ನ ಕಿಂಕರನ್ನ ಮಾಡಿಕೊಳ್ಳೊ, ಸಂಕರುಷಣ (ಕನಕ. ೯೮-೧೨) ; ಹರಿ ನರಸಿಂಹ ಪ್ರದ್ಯುಮ್ನ ಜನಾರ್ಧನ ಪುರುಷೋತ್ತಮ ಸಂಕರುಷಣ (ಎಕ. VI (R), ಶ್ರೀರಂಗ. ೧೦ ; 17ನೆಯ ಶತ). [< ಸಂ. ಸಂಕರ್ಷಣ]

ಸಂಕರ್ಷಣ (ನಾ). ೧. ಆಕರ್ಷಿಸುವಿಕೆ ; ಸೆಳೆತ. ೨. ಪರಿಹರಿಸುವಂಥವನು ; ನಿವಾರಕ : ಸಕಲಜಗತ್ಪವಿತ್ರತೀರ್ಥಸಲಿಲಸಂಪಾದಿತ ನಿಖಿಲಾಘಸಂಕರ್ಷಣಂ [ಪಾಠಾಂ. ಮರ್ಷಣಂ] ಸಂಕರ್ಷಣಂ ಜಂಗಮಹಿಮಾಚಲಮೆ ಬರ್ಪಂತೆಯುಂ ಬಂದು (ಗದಾಯು. ೭-೫೬ ವ). ೩. ಶ್ರೀಕೃಷ್ಣನ ಅಣ್ಣ ; ಬಲರಾಮ : ಸಂಕರ್ಷಣನಾತನ ಮನದುತ್ಕರ್ಷತೆಯನಱಿದು . . . ಧರ್ಮಪುತ್ರನನಿಂತೆಂದಂ (ಪಂಚಭಾ. ೧೩-೯೦ ವ).

[ಸಂ.]

ಸಂಕಲ (ನಾ). ಗುಂಪು ; ಸಮೂಹ ; ಮೊತ್ತ : (ಚತುನಿ. ೬ ।. ೮೦). [ಸಂ.]

ಸಂಕಲನ, ಸಂಕಳನ (ನಾ). ೧. ಒಟ್ಟುಗೂಡಿಸುವುದು ; ಕಲೆ ಹಾಕುವುದು ; ಸಂಗ್ರಹಿಸುವುದು : ಸಲೆ ಮಥನವಕ್ಷಕ್ರಿಯಾಸಂಕಲನಮಾನಂಗಳೊಳು ಪ್ರತಿತಸ್ಥಳ ಮದಾಗಲು ಮೇಲೆ ಇದು ಸನ್ಮಾರ್ಗವಲ್ಲೆನುತ (ಬಸವ. ೫೧-೩೯). ೨. ಆಯ್ದು ಕೂಡಿಸಿದ ಸಾಹಿತ್ಯಭಾಗಗಳ ಸಂಪುಟಿ, — ಸಂಗ್ರಹ : ಸಂಗೀತದ ಕೃತಿಕಾರರ ಕೀರ್ತನೆಗಳ ಮತ್ತು ಕೃತಿಗಳ ಸಂಕಲನಗಳೂ ಪ್ರಕಟವಾಗಿವೆ (ಸಂಗೀತ. V ಮುನ್ನುಡಿ) ; ಇದು ವಚನಗಳನ್ನು ಸಂಕಲನ ಮಾಡಿರುವ ಗ್ರಂಥ (ಶೂನ್ಯಕು. ೧). ೩. [ಗಣಿತ] ಕೂಡುವುದು ; ಒಟ್ಟು ಮೊತ್ತವನ್ನು ಕಂಡುಹಿಡಿಯುವುದು : ಪರಿಕರ್ಮಗಳು ಎಂಬ ಪದದಲ್ಲಿ ಸಂಕಲನ, ವ್ಯವಕಲನ, ಗುಣಕಾರ, ಭಾಗಹಾರ, ವರ್ಗಮೂಲ, ಘನಮೂಲ ಮುಂತಾದುವುಗಳು ಅಡಕವಾಗುತ್ತವೆ (ಗಣಿಚ. ೨೦೨). 'ವ್ಯವಕಲನ' ಪರಾ. **ಸಂಕಳನ** : ೧. 'ಸಂಕಲಿಸು' ಪರಾ. [ಸಂ.]

ಸಂಕಲಿಕೆ (ನಾ). ೧. ಕೂಟ ; ಸೇರುವೆ : (ಟಿ). ೨. ವಧೂವರರು ವಿವಾಹ ಸಮಯದಲ್ಲಿ ಉಡುವ (ಜೋಡಿ)ವಸ್ತ್ರ : ಹಳದಿಯ ಬಣ್ಣದ ಸಂಕಲಿಕೆ ಯೊಂದನ್ನು ವಧುವಿಗೆ ಉಡಿಸಿದ್ದರು (ಎದಿರೇ. ೯). 'ಸಂಕಲಿಕೆಪಂಚೆ' ಪರಾ.

[ಸಂಕಲ + - ಇಕೆ ./ ಸಂ. ಸಂಘಾಟಿಕಾ = ೧. ಜೊತೆ, ಜೋಡಿ. ೨. ಸ್ತ್ರೀಯ ಉಡುಪು]

ಸಂಕಲಿಕೆಪಂಚೆ (ನಾ). ವಿವಾಹಸಮಯದಲ್ಲಿ ವಧುವಿನ ಕಡೆಯವರು ವರನಿಗೆ ಕೊಡುವ ಜೋಡಿಪಂಚೆ : ಒಂದು ಬೆಳ್ಳಿಯ ರೂಪಾಯಿ, ತಾಮ್ರದ ಪಂಚಪಾತ್ರೆ, ಉದ್ಧರಣೆ, ಸಂಕಲಿಕೆಪಂಚೆ, ಪಾದರಕ್ಷೆ, ಕೊಡೆ ಇಷ್ಟನ್ನು ವರೋಪಚಾರವಾಗಿ ಕೊಟ್ಟು . . . ಮದುವೆ ಮಾಡಿಕೊಟ್ಟರು (ವಂಶವೃ. ೧೯೫). [ಸಂಕಲಿಕೆ + ಪಂಚೆ]

ಸಂಕಲಿಕೆಸೀರೆ (ನಾ). ವಿವಾಹಸಮಯದಲ್ಲಿ ವರನ ಕಡೆಯವರು ವಧುವಿಗೆ ಕೊಡುವ (ಜೋಡಿ) ಸೀರೆ : ತೌರಿನಲ್ಲಿ ಏನು ಇಟ್ಟಿದ್ದಾರೆ ? . . . ಸಂಕಲಿಕೆಸೀರೆ ಯಾವುದು? (ಸಾಮಾ ೪೫). [ಸಂಕಲಿಕೆ + ಸೀರೆ]

ಸಂಕಲಿತ, ಸಂಕಳಿತ (ಗು). ೧. ಒಟ್ಟುಗೂಡಿಸಿದ ; ಸಂಗ್ರಹಿಸಿದ. ೨. ಮಿಶ್ರವಾದ : ಒಲಿದು ಜಂಗಮಲಿಂಗ ಗುರುಪದಜಲಜಪರಿಚರಿಯಕ್ರಿಯಾಸಂಕಲಿತಭಕ್ತಿಯೊಳಲಸ ದಾಗಳು ಮಾಡಬೇಕೆಂದು (ಬಸವ. ೨೨-೨೫). (ನಾ). ೩. ಒಟ್ಟುಗೂಡಿಸಿದುದು ; ಸಂಗ್ರಹ : ಈಗ ಪ್ರಸಿದ್ಧವಾಗಿರುವ ಶೂನ್ಯಸಂಪಾದನೆಯು ಗೂಳೂರ ಸಿದ್ಧವೀರ ಣ್ಣೊಡೆಯನಿಂದ ಸಂಕಲಿತವಾದದ್ದು (ಶೂನ್ಯಕು. ೩೫). ೪. [ಗಣಿತ] ಕೂಡುವುದು ; ಸಂಕಲನ. **ಸಂಕಳಿತ** : ೧. ಸಂಕಳಿತ ಬಹುಳ ತಾರಾಸಂಕುಳದಿಂ ಪೋಲ್ತುದಭ್ರಮಾವೃತತಿಮಿರಂ ತೇಂಕುವ ಮಲ್ಲೀಮುಕುಳದ ಸಂಕುಳಮಂ ತಳೆದು ನಿಂದ ಜಗುಸೆಯ ಮಡುವಂ (ಪುಷ್ಪಸ. ೪-೧೧). [ಸಂ.]

ಸಂಕಲಿತಜ್ವರ (ನಾ). ಒಂದು ಬಗೆಯ ಜ್ವರ : ಗಂಟುಭಾರಂಗಿ, ಪರ್ಪಾಟಕ . . . ಇವಂ ಕಷಾಯವಿಕ್ಕಿ ಕೊಡಲು ಚಾತುರ್ಥಿಕ, ಶೀತಜ್ವರ, ಸಂಕಲಿತಜ್ವರ ಸಹ ಮಾಣ್ಗುಂ (ಕಚಿತ್ರ. ೧೧೮). [ಸಂ.]

ಸಂಕಲಿಸು, ಸಂಕಳಿಸು (ಕ್ರಿ). ೧. ಸೇರಿಸು ; ಕೂಡಿಸು : ಸ್ಥಿತಋಣಮಂ ತೆಗೆದು ಪೃಥಕ್ ಸ್ಥಾಪಿಸುತ್ತಂ ವಿರಲು ಅದಕ್ಕೆ ಸಂದೃಷ್ಟಿಯಿದಂ ಸಂಕಲಿಸುತ್ತಂ ವಿರಲು ರೂಪೋನ್ಮೆಕ ಸ್ಪರ್ದ (ಗೂಮ್ಮಸಾ. ೪೮-೨). ೨. (ಕತೆ, ಹಾಡು ಮೊದಲಾದುವನ್ನು) ಆಯ್ದು ಕಲೆಹಾಕು ; ಸಂಗ್ರಹಿಸು : ಗೌರಮ್ಮ ಸ್ಮಾರಕ ಕಥಾಸ್ಪರ್ಧೆಯ ಕತೆಗಳನ್ನು . . . ಸಂಕಲಿಸುವ ಸಮಯದಲ್ಲಿ ಗಾತ್ರಕ್ಕೆ ಇನ್ನು ಕೆಲವು ಹೊಸ ಕತೆಗಳನ್ನು ಸೇರಿಸಬೇಕಾಗಿ ಕಂಡಿತು (ತಃಮೋಡ. ೩ ನಿವೇದನೆ) : ಬೆಳುವಲದಲ್ಲಿ ಸಂಕಲಿಸಲಾದ ಹಾಡಿನಲ್ಲಿ ಗಂಗೆಯು . . . ಪಾತಾಳದಿಂದ ಹೊರಬಿದ್ದು ಕತ್ತೆಯ ಮೂಗನ್ನು ಸೀಳಿದಳೆಂದು ಹಾಡಿನಲ್ಲಿ ಬಂದಿದೆ (ಕನ್ನಜಾ. ೧೭೯). **ಸಂಕಳಿಸು** : ೧. ಪ್ರಥಮ ದ್ವಿತೀಯೋಭಯಪಂಕ್ತಿ ಸಂಬಂಧಿ ಋಣಮಿದು ಇದಂ ಸಂಕಳಿಸಿ ಅಧಿಕದ್ವಿರೂಪಮ ತೆಗೆದು (ಗೂಮ್ಮಸಾ. ೪೫-೨).

[ಸಂಕಲನ + - ಇಸು]

ಸಂಕಲೆ೧, ಸಂಕವಾಲಿ, ಸಂಕವಾಲೆ, ಸಂಕಾಲೆ, ಸಂಕೊಲೆ, ಸಂಕೋಲೆ (ನಾ). ೧. (ಕಬ್ಬಿಣದ) ಸರಪಣಿ ; ಬೈನು : "ಹಿಂಜೀರಮಂದುಕಂ ಶೃಂಖಿಳಂ ಪಾದಬಂಧಂ ನಿಗಳಮನಲು ಸಂಕಲೆಯೆನಿಕ್ಕು" (ಮಾಗರಾ. ೪೬-೨) ; ರಂಗಮಂಟಪದ ಮುಖದ ಮೂಱುಂ ಕದವನಿಕ್ಕುತಂ ವಿಸ್ತರದ ಸಂಕಲಿಗಳಂ ಹೂಡಿ ಬಿಯ್ಯಗಂಗಳನಿಕ್ಕಿ (ಕ್ಷಾರ. ದೇ. ೧೩೫-೩). ೨. ಬೇಡಿ ; ಕೋಳ : ತನ್ನಂ ಸಂಕಲೆಯೊಳಿಟ್ಟು ಸೆಱೆಗೆಯ್ದು ಪಲಕಾಲಂ ನಮೆಯಿಸಿದ ಪಗೆಯುಮಂ ನೆನೆದು (ಪಡ್ಡಾರಾ. ೧೯೧-೨೧) ; ಭೋಂಕನೆ ಪೋಪೆನೆಂಬಾಗ ಪಂಕಜಾಕ್ಷಿಯ ಕಡೆಗಣ್ಣ ಕಾಂತಿಯ ಬೆಳ್ಳಿಸಂಕಲೆಗಳನಿಕ್ಕಿಸುವೆನು (ಭರಚ. ೯ ೪೧). ೩. ಸೆರೆ ; ಬಂಧನ : ಮುಂ ಪೇಟ್ದ ಸುರದೇವಂ ಪಿಂಗಳಕನೆಂಬೊಂ ರಾಕ್ಷಸನಾಗಿ ದೋಷದಿಂ ಸಂಕಲೆಯೊಳ್ದರ್ದ ಸುರದೇವನ ತಾಯಿಯುಮರಸನ ಮಗಳಾಗಿ ಪುಟ್ಟಿ (ಚಾಪೂಪು. ೭೧) ; ನೂಲ ಸಂಕಲೆಗಡಿದು ಕನಕದ ಕೋಳವನು ಕಾಲಿಂಗೆ ಕೀಲಿಪ ಕಾಳುಮತಿಯವನಂತೆ ಸತಿಸುತ ಕೂಟಭಯವೆಂದು ಬಾಳಿಕೆಯನತಿಗಳೆದು (ಪ್ರಭುಲೀ. ೧೩-೩). **ಸಂಕವಾಲಿ** : ೨. ಅತ್ಯಂತ ಬಂಧನವಾದರೂ ಹೂವಿನಾ ಸಂಕವಾಲಿಯಂತೆ ಅರ್ಥಿಯಾಗಿಪ್ಪುದು ನಿನ್ನ ಒಲುಮೆ ಅವಗೆ (ಮೋಕ್ಷದೀ. ೨೯-೨). **ಸಂಕವಾಲೆ** : ೩. ಶ್ರೀಕೃಷ್ಣ ಕಂಸನ ಕೊಂದು ತಾಯಿ ತಂದೆರ ಸಂಕವಾಲೆ ಕಡಿಸಿ ನಮಸ್ಕಾರ ಮಾಡಿ (ತಾತ್ಪ. ೮೫-೭). **ಸಂಕಾಲೆ** : ೨. ಕಾಲಮೇಘದ ಮಳೆಯ ಸಂಕಾಲೆ

ತೆಗಿಸೆಂದು ದೇವೇಂದ್ರನಿಗೆ ಓಲೆ ಬರೆಸಿದರು (ಜಗೀತ. ೧೧೭). **ಸಂಕೊಲೆ** : ೧. ಇವರಡೆಂತಿರ್ಪುವು ಚಿನ್ನ ಕಬ್ಬಿನದ ಸಂಕೊಲೆಗಳಂತಿರ್ಪವು (ಅರಸಾ. ೧-೨೦೨). **ಸಂಕೋಲೆ** : ೨. ರತ್ನದ ಸಂಕೋಲೆಯಾದರೆ ತೊಡರಲ್ಲವೆ ಮುತ್ತಿನ ಬಲೆಯಾದರೆ ಬಂಧನವಲ್ಲವೆ (ಮಹಾದೇ. ಬ. ೪೨-೯೨) ; ತಪ್ಪು ಮಾಡಿದವಂಗೆ ಒಪ್ಪುವುದು ಸಂಕೋಲೆ ತಪ್ಪಿಲ್ಲದಿಪ್ಪ ಶರಣಂಗೆ ಸಂಕೋಲೆ ಬಪ್ಪುದದೇಕೆ (ಸರ್ವಜ್ಞ. ೧೨೬೯). [< ಸಂ. ಶೃಂಖಲಾ]

ಸಂಕಲ್ಲೆ (ನಾ). ಅಡ್ಡಗಟ್ಟೆ ; ಸೇತುವೆ (?) : ಕಲ್ಲೆಡೆಯಲಿ ಮಣ್ಣು ಜರಿದುಬೀಳದ ಹಾಗೆ ಅಲ್ಲಲ್ಲಿ ಬಜ್ಜರಸರಿಯ ತಳ್ಳಿ ನಿಲಿಸಿಯಲೆ ಬಡಿವಲ್ಲಿ ಮೀಸಲ ಕಲ್ಲ ಸಂಕಲೆಯ ಕಟ್ಟಿದರು (ಪಾರ್ತಿಸು. ೯೪). [< ಸಂಕ್ಲ?]

ಸಂಕಲೆಗಿಡಿಸು (ಕ್ರಿ). ಬೇಡಿಯನ್ನು ಕಳಚು ; ಬಂಧನದಿಂದ ಮುಕ್ತಗೊಳಿಸು : ನುಡಿಸಿದರಖಿಲೋಪಚಾರದಿಂ ಸಂಕಲೆಗಿಡಿಸಿದರ್[ಪಾಠಾಂ. ಬುಧ ನಳ ಕಡಿಸಿದರ್] ಮಜ್ಜನಗೆಯ್ಸಿ ಉಡಿಸಿದು ನವ್ಯವಸ್ತ್ರವನಾಯಾ ತಾಣಕೆ ತೊಡಿಸಿದರ್ ಮಣಿಭೂಷಣವ (ಮೋಹತ. ೪೧-೩೦). [ಸಂಕಲೆ + ಕಡಿಸು (< ಕೆಡಿಸು)]

ಸಂಕಲೆಯಿಕ್ಕು (ಕ್ರಿ). ಬೇಡಿ ತೊಡಿಸು ; ಬಂಧಿಸು : ಓಪನಂ ಮಿಡುಕಲೀಯದೆ ಕಾಲ್ಪಿಡಿದಟ್ಟು ತೋರಕಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್ (ಪಂಪಭಾ. ೪-೯೭) ; ಸಂಕಲೆಯಿಕ್ಕಿ ಕೈಗಳೆರಡಂ ರವಿಬಿಂಬಮನೆಯ್ದೆ ಮುಟ್ಟುವಾ ಬಿಂಕದ ವೃಕ್ಷದಗ್ರದಲಿ ಕಟ್ಟಿಸಿ ತೂಗುವರು (ನನ್ನಚಾ. ೫-೧೩೧). [ಸಂಕಲೆ + ಇಕ್ಕು]

ಸಂಕಲೆವಂದ (ನಾ). ಸರಪಣಿಯಿಂದ ಕಟ್ಟಿರುವುದು ; ಶೃಂಖಲಾಬಂಧ : ಶರಬಂಧ — ಸರವಂದ ; ಶೃಂಖಲಾಬಂಧ — ಸಂಕಲೆವಂದ (ಶಮದ. ೨೯೨ ಪ್ರಯೋ). [< ಸಂ. ಶೃಂಖಲಾಬಂಧ]

ಸಂಕಲೆವಡೆ (ಕ್ರಿ). ಸರಪಣಿಯಿಂದ ಕಟ್ಟಲ್ಪಟ್ಟಿರು : ಭೋಂಕನ ಹೊಕ್ಕರು ಸೆಱೆವನೆಯೊಳು ಹೊನ್ನ ಸಂಕಲೆವಡೆದ ಬಾಲಕನ ಸಂಕಟವನು ಕಂಡು ಬಲರಾಮದೇವ ಮೀನಾಂಕ ದುಃಖದೊಳಪ್ಪಿದರು (ಮೋಹತ. ೪೧-೨೯). [ಸಂಕಲೆ + ಪಡೆ]

ಸಂಕಲೆವನೆ (ನಾ). ಬಂದೀಖಾನೆ ; ಸೆರೆಮನೆ : ಜನಮನದ ಸಂಕಲೆವನೆಯೊ ಲೋಚನಮೃಗದ ತಡೆವೇಂಟೆಕಾತಿಯೊ . . . ಎಂದೆನಿಸಿದೂರ್ವಶಿ ಬಂದಳರ್ಜುನ ದೇವನರಮನೆಗೆ (ಕುಮ್ಯಾಅ. ೮-೧೦). [ಸಂಕಲೆ + ಮನೆ]

ಸಂಕಲೆವೀಡು (ನಾ). = ಸಂಕಲೆವನೆ : ಕಾಮನ ಕಿಸುಗಣ್ಮಲರ್ವೀಡು ವಿಯೋಗಿಗೆ ಸಂಕಲೆವೀಡು ವಸಂತದಂತಿಗುಪನಗರವನಂ (ಚಂದ್ರಪ್ರ. ೧-೧೦೩). [ಸಂಕಲೆ + ಬೀಡು]

ಸಂಕಲ್ಪ (ನಾ). ೧. (ಮನಸ್ಸಿನ) ನಿರ್ಧಾರ ; ನಿರ್ಣಯ ; ಪ್ರತಿಜ್ಞೆ : ಭವಿಯೆಂಬುದು ಹುಸಿ ಭಕ್ತಿಯೆಂಬುದು ಉಪದೇಶ ಶೀಲವೆಂಬುದು ಸಂಕಲ್ಪ ಸಮತೆಯೆಂಬುದು ಸೂತಕ (ಅವಚಂ. ೧೧೬-೫೨೪) ; ಒರ್ಮೊದಲೆ ಬಿರಿದತ್ತು ಪ್ರಣಯನೃತ್ಯದ ಮೋಹಸಂಕಲ್ಪಬುದ್ಬುದಂ ! (ಚಿತ್ರಾಂಗ. ೫೪-೧೪೮೭). ೨. ಮನಸ್ಸಿನಲ್ಲಿ ಉಂಟಾಗುವ ಭಾವನೆ ; ಆಲೋಚನೆ : ಸ್ಮೃತಿ, ಸಂಕಲ್ಪ . . . ಕಾಮ, ವಶ ಈ ಹದಿನಾರು ಮನಸ್ಸಿನ ವಿಕಾರಗಳೆಂದಿರುವುವು (ಅಮೃತ. ೬-೨೬ ಟೀಕು) ; ನಿನ್ನ ಮಾರ್ಗವು ಬೇರೆಯಾಗುವ ಯೋಚನೆ ಯಾವಾಗ ನಿನ್ನ ಸಂಕಲ್ಪದಲ್ಲಿ ಬರುತ್ತೋ ಆ ದಿನದಿಂದಲೇ ನಿನ್ನ ಮೇಲಿನ ನನ್ನ ಯಜಮಾನಿಕೆ ತನಗೆ ತಾನೇ ಅಳಿದುಹೋಗುತ್ತೆ (ವಂಶವೃ. ೧೯೦). ೩. ಇಚ್ಛೆ ; ಅಭಿಪ್ರಾಯ : ಭವಬಂಧನವೆಲ್ಲಿಯದೊ ಸಂಕಲ್ಪವಿಕಲ್ಪವೆಂಬ ಸಂದೇಹ ಕಳೆದುಳಿವಂಗೆ (ಬಸವ. ೮೭೦) ; ಭೂಜಾಳಿ ಶೌರಿಯ ಸಂಕಲ್ಪದೆ ಪತ್ರಪುಷ್ಪಫಲಭಾರಾಕ್ರಾಂತಮಾಗಿರ್ದುವು (ಜಗವಿ. ೩-೬೮) ; ಪರಮಾತ್ಮನ ಸಂಕಲ್ಪ ಅತ್ಯದ್ಭುತವೂ ವಿಲಕ್ಷಣವೂ ಹಾಗೆಯೇ ಅನಂತವೂ ಅಪಾರವೂ ಅಹುದು (ಶಕ್ತಿವಿ. ೫೨). ೪. ಕಳವಳ ; ಚಿಂತೆ : ಲಲಿತಾಂಗಿ ಸಂಕಲ್ಪವಂ ಮಾಡಬೇಡ ನಾಂ ತಿಳಿಪುವೆಂ ಪೊಸತಪ್ಪ ಚೋದ್ಯವಂ (ಚಿಬಪು. ೪-೪). ೫. ಯಾವುದಾದರೂ ಶಾಸ್ತ್ರವಿಧಿಯನ್ನು ಕೈಗೊಳ್ಳುವ ಮೊದಲು ಮಾಡುವ ಸಾಂಪ್ರದಾಯಿಕ ಪ್ರತಿಜ್ಞಾವಿಧಿ ಮತ್ತು ಅದಕ್ಕೆ ಸಂಬಂಧಿಸಿದ ಮಂತ್ರ : ನಿರಶನವ್ರತವೆಂದು ಮಂತ್ರೋಚ್ಚರಿತಸಂಕಲ್ಪದಲಿ ಕೌರವರರಸ ಪವಡಿಸಿದನು ಕೃತ ಪ್ರಾಯೋಪವೇಶದಲಿ (ಕುಮ್ಯಾಅ. ೨೧-೧೬) ; ಪುರೋಹಿತರು ಮಂತ್ರಾಕ್ಷತೆಗಳನ್ನು ತಟ್ಟೆಯಲ್ಲಿಟ್ಟುಕೊಂಡು ಸಂಕಲ್ಪವನ್ನು ಹೇಳಲೋಸುಗ ಮದುವಣಿಗನ ಗೋತ್ರ ನಾಮಗಳನ್ನು ಕೇಳಿದರು (ಕವಿಕ. ೫೦) ; ಕೆಲವೆಡೆಯಲ್ಲಿ ಬ್ರಾಹ್ಮಣರು ಸಂಕಲ್ಪವನ್ನು ಹೇಳುತ್ತಿದ್ದರು (ಮಂಜುಕ. ೬). ೬. [ಕಾಮಶಾ] ಹತ್ತುವಿಧವಾದ ಕಾಮಾವಸ್ಥೆಗಳಲ್ಲಿ ಒಂದು ; (ಮನಸ್ಸಿನಲ್ಲಿ) ಪ್ರಿಯನನ್ನು ಕೂಡಲು ಬಯಸುವುದು : ಮನದಲ್ಲಿ ಸಂಕಲ್ಪಕ್ಷೇಪದೆ ನೆರೆವುದದುವೆ ಸಂಕಲ್ಪಾಖ್ಯಂ (ರಸರ. ೧-೪೦) ; ನೆಱೆ ನೋಟ ಚಿಂತೆ ಸಂಕಲ್ಪ ಜಾಗರ ಕೃಶ ಅರತಿ ಲಜ್ಜಾಹೀನೋನ್ಮಾದ ಮಱವೆಯನಿತು ಒಂಬತ್ತವಸ್ಥೆಗಳೆಯ್ದ ಲರಗಿಳಿ ಬಂದಿತಾ ಸಮಯ (ಜೀವಂಸಾಂ. ೧೨-೪೯). 'ದಶಕಾಮಾವಸ್ಥೆ' ಪರಾ.

ಸಂಕಲ್ಪಮಾಡು = ೧. ನಿರ್ಣಯಿಸು ; ತೀರ್ಮಾನಿಸು : ಅತ್ತಿಮಬ್ಬೆ . . . ಅಣ್ಣಿಗನಿಗಾಗಿ ಅರಮನೆ ನಿರ್ಮಾಣವಾಗಬೇಕೆಂದು ಸಂಕಲ್ಪಮಾಡಿದಳು (ದಾನಚಿಂ. ೧೭೫). ೨. ಯಾವುದಾದರೂ ಶಾಸ್ತ್ರವಿಧಿಯನ್ನು ಕೈಗೊಳ್ಳುವ ಮೊದಲು ಮಂತ್ರೋಚ್ಚಾರಪೂರ್ವಕವಾದ ಪ್ರತಿಜ್ಞಾವಿಧಿಯನ್ನು ಆಚರಿಸು : ಶುಭಾಶುಭ ಕಾರ್ಯಗಳನ್ನು ಕೈಗೊಳ್ಳುವಾಗ, ನದಿಯಲ್ಲಿ ಸ್ನಾನಮಾಡುವಾಗ 'ಸಂಕಲ್ಪ' ಮಾಡುವುದು ಹಿಂದುಗಳ ಪುರಾತನಪದ್ಧತಿ (ನನದಿ. ೧೭). ಸಂಕಲ್ಪಮಾತ್ರ = ಬರಿಯ ಅಭಿಪ್ರಾಯ : ಕೇವಲ ಇಚ್ಛೆ : ಆ ನಿವೃತ್ತಿಕಲೆಯ ಸಂಕಲ್ಪಮಾತ್ರದಿಂದ ಮಾಯಾಶಕ್ತಿ ಹುಟ್ಟಿತ್ತು (ಸಿದ್ಧೇವ. ೧೫-೩೯). [ಸಂ.]

ಸಂಕಲ್ಪಜ (ನಾ). ಇಚ್ಛಾಮಾತ್ರದಿಂದ ಜನಿಸಿದವನು ; ಕಾಮ ; ಮನ್ಮಥ. [ಸಂ.]

ಸಂಕಲ್ಪಜನ್ಮ (ನಾ). = ಸಂಕಲ್ಪಜ : ರತಿಗೆ ಕಾಮನಂ ಸಂಕಲ್ಪಜನ್ಮನಂ ಮಾಡಿಕೊಟ್ಟು ಗಿರಿಜೆಯಂ ಗಿರಿರಾಜನಲ್ಲಿಗೆ ಪೋಗವೇಳ್ದು (ಗಿರಿಕ. ೧೦-೮ ವ). [ಸಂ. ಸಂಕಲ್ಪಜನ್ಮನ್]

ಸಂಕಲ್ಪನವಧೆ (ನಾ). ಮನಸ್ಸಿನಲ್ಲಿ ನಿರ್ಧರಿಸಿದ ಕೊಲೆ : ಸಂಕಲ್ಪನವಧೆಗಿನಿತಾಯ್ತು ದಿಟದೊಳೇನೇನಾಗರ್ (ಯಶೋಚ. ೪-೬೨). [ಸಂ. ಸಂಕಲ್ಪನವಧಾ]

ಸಂಕಲ್ಪಭಂಗ (ನಾ). (ಮನಸ್ಸಿನ) ನಿರ್ಧಾರ ಕೈಗೂಡದಿರುವುದು, - ನೆರವೇರದಿರುವುದು : ಸಂಕಲ್ಪಭಂಗಾಸ್ವದವ ಮಾಡುವುದೊಳ್ಳಿತೇ ನಿಜಸದನಕಭಿಮುಖರಾಗಿ ಕರುಣಿಪುದೆಂದನಾ ಭೂಪ (ಕುಮ್ಯಾಅ. ೨೧-೪೬). [ಸಂ.]

ಸಂಕಲ್ಪಭ್ರಮೆ (ನಾ). (ಮನಸ್ಸಿನ) ನಿರ್ಧಾರದ ಭ್ರಾಂತಿ ; ಚಿತ್ತವಿಕಲ್ಪದ ಸ್ಥಿತಿ : ಮಹಾಜ್ಞಾನಸ್ವರೂಪರಪ್ಪ ಶರಣರೇ ಲಿಂಗವೆಂದಱಿದ ಮಹಾತ್ಮಂಗೆ ಸಂಕಲ್ಪಭ್ರಮೆಯುಂಟೇ (ಸಿದ್ಧೇವ. ೨೧-೫೮). [ಸಂ. ಸಂಕಲ್ಪಭ್ರಮಾ]

ಸಂಕಲ್ಪಮಂತ್ರ (ನಾ). ಸಂಕಲ್ಪಮಾಡುವಾಗ ಹೇಳುವ ಮಂತ್ರ : ಭರತಖಂಡದಲ್ಲಿ, ಭರತವರ್ಷದಲ್ಲಿ ವಾಸಿಸುವ ನಾನು ಈ ಪವಿತ್ರನದಿಯಲ್ಲಿ ಮಿಂದು ಈ ರೀತಿ ಪ್ರಮಾಣ ಮಾಡುತ್ತೇನೆ ಎಂದಿದೆ 'ಸಂಕಲ್ಪ' ಮಂತ್ರದಲ್ಲಿ (ನನದಿ. ೧೮). [ಸಂ.]

ಸಂಕಲ್ಪಶಕ್ತಿ (ನಾ). (ಮನಸ್ಸಿನ) ನಿರ್ಧಾರವನ್ನು ಸಾಧಿಸುವ ಶಕ್ತಿ : ನಿಮ್ಮ ಆಶೀರ್ವಾದದಿಂದ ನನ್ನ ಸಂಕಲ್ಪಶಕ್ತಿಯನ್ನು ಹುರಿದುಂಬಿಸಿ ಈ ಕೆಲಸವನ್ನು ಮುಂದುವರಿಯುವಂತೆ ಮಾಡಿದ್ದೀರಿ (ವಂಶವೃ. ೩೪೯). [ಸಂ.]

ಸಂಕಲ್ಪಸಿದ್ಧಿ (ನಾ). ೧. (ಮನಸ್ಸಿನ) ಬಯಕೆಯು ಈಡೇರುವಿಕೆ : ಸಂಕಲ್ಪಸಿದ್ಧಿಯಾದುದು ಸಂಕೆಯನುಟಿ ನಳನೃಪಾಲ (ನಳಚಂ. ೧೮೦). ೨. ಒಂದು ಶಾಸ್ತ್ರವಿಧಿ : ಆಲಯವನು ಶೃಂಗರಿಸಿ ಮೇಲೆ ಪುಣ್ಯಾರ್ಚನೆ ಸಂಕಲ್ಪಸಿದ್ಧಿಯ [ಪಾಠಾಂ. ನಾಮಕರಣವ] ಲೋಲ ಮಾಡಿಸಿದ ಬ್ರಾಹ್ಮಣನು (ಅಬ್ಬಲೂ. ೨-೪೮). [ಸಂ.]

ಸಂಕಲ್ಪಹಾನಿ (ನಾ). = ಸಂಕಲ್ಪಭಂಗ : ನೆನೆಯದಿರು ಸಂಕಲ್ಪಹಾನಿಯನನುಚಿತಕೆ ಮನ ತಾರದಿರು (ಕುಮ್ಯಾಅ. ೨೨-೩೫). [ಸಂ.]

ಸಂಕಲ್ಪಹಿಂಸೆ (ನಾ). ಮನಸ್ಸಿನಲ್ಲಿ ನಿರ್ಧರಿಸಿದ ಹಿಂಸೆ ; ಭಾವನಾಹಿಂಸೆ : ಸಂಕಲ್ಪಹಿಂಸೆಯೊಂದಱೊಳಾಂ ಕಂಡೆಂ ಭವದ ದುಃಖಮುಂಡೆಂ (ಯಶೋಚ. ೪-೭೦). [ಸಂ. ಸಂಕಲ್ಪಹಿಂಸಾ]

ಸಂಕಲ್ಪಿತ (ಗು). ೧. ಇಚ್ಛಿಸಿದ ; ಬಯಸಿದ. ೨. ಉದ್ದೇಶಿತವಾದ. ೩. ಕಲ್ಪಿಸಿದ ; ಊಹಿಸಿದ. (ನಾ). ೪. ಮನಸ್ಸಿನಲ್ಲಿ ಯೋಚಿಸಿ ನಿಶ್ಚಯಿಸುವವನು, — ತೀರ್ಮಾನಿಸುವವನು : ಸರ್ವಾಂಗ ಗುಣಲುಪ್ತ ಪ್ರಮುದಚಿತ್ತಂ ಪ್ರಳಯದೂರಂ ದಮಿತ ಕಾಲಾಕಾಲ ಸಂಕಲ್ಪಿತ ವಿಕಲ್ಪಿತನು (ಬಸಪು. ೭-೩). [ಸಂ.]

ಸಂಕಲ್ಪಿಸು (ಕ್ರಿ). ೧. ಬಯಸು ; ಇಚ್ಛಿಸು : ಬಲ್ಪಿನೆರಡನೆಯಾಶ್ವರಂ ಪಣಿತಲ್ಪ ನಿನ್ನಯ ಪದವಿಯಂ ಸಂಕಲ್ಪಿಸುವನೇ (ಬಸಪು. ೨-೧೯) ; ಹೆಗಡೆಯ ನಿರ್ಧಾರದ ಮುಂದೆ ಏನಿದೆ? ಸಂಕಲ್ಪಿಸಿಕೊಂಡ ಮೇಲೆ ಮುಗಿದೇ ಹೋಯ್ತು (ದೇವಹಂ. ೧೪೪). ೨. ಒದಗಿಸು ;

ದೊರಕಿಸು : ಎಲ್ಲ ಜೀವರಿಗನ್ನಪಾನಾದಿವಸ್ತುವನು ಸಂಕಲ್ಪಿಸಿ (ನವಮೋ. ೩೨-೪೬). ೩. ಯಾವುದಾದರೂ ಶಾಸ್ತ್ರವಿಧಿಯನ್ನು ಕೈಗೊಳ್ಳುವ ಮೊದಲು ಮಂತ್ರೋಚ್ಚಾರಪೂರ್ವಕವಾಗಿ, ಸಾಂಪ್ರದಾಯಿಕ ಪ್ರತಿಜ್ಞಾವಿಧಿಯನ್ನು ಆಚರಿಸು : ಶ್ರೀಗುರುವಿಂಗೆ ಸಾವಿರ ಅಜಪಾಗಾಯತ್ರೀಮಂತ್ರಮಂ ನಿವೇದಯಾಮಿಯೆಂದು ಸಂಕಲ್ಪಿಸುವುದು (ಏವೇಕ. ೮೫). [ಸಂಕಲ್ಪ + -ಇಸು]

ಸಂಕವರಿ (ಕ್ರಿ). ಸೇತುವೆಯಂತೆ ಬೆಳೆ, — ವೃದ್ಧಿಯಾಗು : ಪುಂಜೀಭೂತ ಬೃಹಜ್ಜೀಮೂತದೊಡ್ಡುಗಳ್ ಓಳಗೊಳ್ಳಂದದಿಂ ಪೆರ್ಬಂಡೆ ಪೆರ್ಮರಂ ಮಳಲೊಟ್ಟು ಮಣ್‌ಗುಡ್ಡೆಗಳ್ ಸಂಕವರಿದುವಾ ರಾಕ್ಷಸದ್ವೀಪಕೀ ವಾನರದ್ವೀಪಕ್ಕಿತಿ ತಾಂ ವಾರ್ಧಿವೀಧೀತೋರಣಂಗಟ್ಟುವೋಲಂತೆ! (ಶ್ರೀರಾಮಾ. ೫೯೩-೩೩೭). [ಸಂಕ್ + ಪರ್]

ಸಂಕವಾಲಿ 'ಸಂಕಲೆ' ನೋ.

ಸಂಕವಾಲೆ 'ಸಂಕಲೆ' ನೋ.

ಸಂಕಷ್ಟ (ನಾ). ತೊಂದರೆ ; ಕಷ್ಟ : ನಾವು ಮುಂದೆ ಹಲವು ಸಂಕಷ್ಟಗಳಿಗೀಡಾಗಬೇಕಾಗುವುದು . . . ಎಂದು ಅವರು ತಿಳಿದರು (ಜಗಸಂ. ೩೦). [ಸಂ.]

ಸಂಕಳನ 'ಸಂಕಲನ' ನೋ.

ಸಂಕಳಿತ 'ಸಂಕಲಿತ' ನೋ.

ಸಂಕಳಿಸು 'ಸಂಕಲಿಸು' ನೋ.

ಸಂಕಾನಿ (ನಾ). ಒಂದು ಬಗೆಯ ಸಸ್ಯ : (ಮೃಬಿಗಿ. ೭೩-೧೪೮೯) ; ಸಂಕಣಿ. ಸಂಕಾನಿ (ಸಸ್ಯನಿ. ೧೨೪). [?]

ಸಂಕಾಲೆ 'ಸಂಕಲೆ' ನೋ.

ಸಂಕಾಶ (ಗು). ೧. ಹತ್ತಿರದ ; ಸಮೀಪದ . ೨. ಸದೃಶವಾದ ; ಸಮಾನವಾದ : ಪಯಃಪಯೋಧಿಫೇನಸಂಕಾಶದುಕೂಲಪ್ರಚ್ಛದಾಚ್ಛಾದಿತ ವಿಚಿತ್ರನೇತ್ರೋಭಯೋಪಧಾನ ಶಯ್ಯಾತಲದೊಳ್ (ಆದಿಪು. ೫-೨೨ ವ) ; ಶರತ್ಸಮಯಸಮುದಿತ ಶಶಾಂಕಸಂಕಾಶ ವಿಶದವರ್ಣನುಂ (ಅಜಿಪು. ೩-೨ ವ). (ನಾ). ೩. ಹತ್ತಿರ ; ಸಾಮೀಪ್ಯ. ೪. ಕಾಣಿಸಿಕೊಳ್ಳುವಿಕೆ ; ದರ್ಶನ. ೫. ಕಾಂತಿ ; ಪ್ರಕಾಶ : "ವಾಸವ ಕಲ್ಪಭೂಜ ಫಳಕಾರ್ಕ ವಿಚಿತ್ರ ವನೇಜಮಿತ್ರ ಸಂಕಾಶಮಿವರ್ಕವಂಕ್ಕು" (ನಾನಾರ. ೧೪). ೬. ಹೋಲುವಂಥದು ; ಸಮಾನವಾದುದು : ಅದೊಂದಿನಿಸು ಬೇಗದಿಂ ನವಜಪಾಪ್ರಸೂನಾಭಮಾಯ್ತು . . . ಮತ್ತದೊಂದಿನಿಸುಬೇಗದಿಂ ಮೃದುಮೃಣಾಳ ಸಂಕಾಶಮಾಯ್ತು (ಆದಿಪು. ೧೨-೭) . ೭. ಹೋಲುವವನು ; ಸದೃಶನಾದವನು : ಅಖಿಲ ನಿಗಮಾವಳಿ ಶಿರೋಮಣಿ ಶೀತಕರ ಸಲ್ಲಲಿತ ಮಸ್ತಕಮಣಿ ನಭೋಮಣಿ ಕೋಟಿಸಂಕಾಶ (ತೊರಾ. ೬-೫೩-೧೦೨) ; ಜಯಜಯ ಕುಂದಮಂದಾರೇಂದು ಸಂಕಾಶ (ತ್ರಿಪು. ೧೨-೬) ; ಸೂರ್ಯಸಂಕಾಶನಾಗಿ ಶೋಭಿಸುತ್ತಿರುವ ಕರ್ಣನು ಹೇಗೆ ಅಂಗರಾಜ್ಯಕ್ಕೆ ಅರ್ಹನಲ್ಲ? (ವಚಭಾ. ೨೬). [ಸಂ.]

ಸಂಕಾಶಿ (ನಾ). ಹೋಲುವಂಥದು ; ಸದೃಶವಾದುದು : ಶರದಮಲಗಗನತಲ ವಿಭವಸಂಕಾಶಿಯಂ ಕರಿಮಕರಕರದಲಿತ ವೀಚಿವಾರಾಶಿಯಂ (ಆದಿಪು. ೬-೨೬ ರಗಳೆ).

[ಸಂ. ಸಂಕಾಶಿನ್]

ಸಂಕಿರಣ (ನಾ). ೧. ಕೂಟ ; ಸಭೆ ; ಗೋಷ್ಠಿ : 'ವಿಚಾರಸಂಕಿರಣ' ಪರಾ. ೨. ಬೆರಕೆ ; ಮಿಶ್ರಣ : ದೇಹ ಹೇಗೆ ಅನೇಕ ಅಂಗಾಂಗಗಳಿಂದ ಕೂಡಿ ಜಟಿಲವಾಗಿದೆಯೋ ಹಾಗೆಯೇ ನಾವು ವ್ಯಕ್ತಿ ಎಂದು ಕರೆಯುವುದು . . . ದೈಹಿಕ ಮಾನಸಿಕಅಂಶಗಳ ಸಂಕಿರಣ (ತತ್ತ್ವವ್ಯಾ. ೧೭೫). [< ಸಂಕೀರ್ಣ]

ಸಂಕಿಸು (ಕ್ರಿ). ಅನುಮಾನಿಸು ; ಶಂಕಿಸು : ವಿಜಯಾರ್ಧಮಿಲ್ಲಿಗೆ ಗಂಟು ನಮಗೆ ಸಮೀಪವರ್ತಿಯಾಗಿ ರಾವಣನಿರ್ಪೊನಾತಂಗೆ ನಾಮುಂ ಮುನ್ನಂ ಸಂ[ಪಾಠಾಂ. ಶಂ]ಕಿಸುತಿರ್ಪಮದಱಿಂ ನಮ್ಮ ಯಾಗಮಂ ಕಾಯಲ್ವಮರ್ಥನಪ್ಪಂಗೆ ಸೀತೆಯಂ ಕುಡುವಮೆನೆ (ಚಾವುಂಪು. ೨೮೨) ; ಬಂದರ್ ಬಿಂಕದಿಂ ಸಂಕಿಸದೆ ಸಕಲವಿದ್ಯಾಧರ ಸ್ತ್ರೀಸಮೂಹಂ (ಧರ್ಮಾಮೃ. ೮-೨೦೩). [ಸಂಕೆ + -ಇಸು]

ಸಂಕೀರ್ಣ (ಗು). ೧. ಮಿಶ್ರವಾದ ; ಬೆರೆತ. ೨. ಇಕ್ಕಟ್ಟಾದ ; ಕಿರಿದಾದ. ೩. ನಾನಾ ಬಗೆಯ ; ವಿಧವಿಧವಾದ : ಕನಲಿಕೆಯಿಂದ ವಿಷ್ಣುನ ಅಗಲಿಕೆಯಿಂದ ಎದುರು ಬಂದಿದ್ದ ಸಂಕೀರ್ಣಮನೋರೋಗಗಳನ್ನು ಎದುರಿಸುವ ಸಾಮರ್ಥ್ಯ ತುಸುವಾದರೂ ಪ್ರಮಿಳೆಯಲ್ಲಿರಲಿಲ್ಲ (ಸಮಜೀ. ೮೬೨). ೪. ಬೆದರಿದ ; ಹರಡಿದ : ವ್ಯಕ್ತಿಯ ಭಾಷೆಯನ್ನು ಭಾಷೆಯ ಸಂಕೀರ್ಣರೂಪವೆಂದು ಹೇಳಬಹುದು (ಡ್ರಾಎಂ. ೩೭೯). ೫. ಅಸ್ಪಷ್ಟವಾದ ; ಅಸ್ಫುಟವಾದ . ೬. ಜಟಿಲವಾದ ; ಕ್ಲಿಷ್ಟವಾದ ; ಗಹನವಾದ : ಮನಸ್ಸು ಸಂಕೀರ್ಣರೀತಿಯ ವಿವರಗಳನ್ನು ಸರಳಗೊಳಿಸಲು ಯತ್ನಿಸುವುದುಂಟು (ಶಕ್ನಿದ. ೫೩೨). (ನಾ). ೭. ಸೇರಿಕೊಂಡಿರುವುದು ; ಮಿಳಿತವಾಗಿರುವುದು : ಉತ್ತರಶ್ರೇಣಿಯೊಳುದಗ್ರಹಿಮಶಿಖರಿಶೇಖರಶಾರದ ನೀರದಾಕಾರಸುಧಾಧವಲಿತೋತ್ತುಂಗಪ್ರಾಸಾದಕೂಟಕೋಟಿಸಂಕೀರ್ಣಮುಂ . . . ಆಗಿ (ಆದಿಪು. ೧-೭೦ ವ) ; ಅತಿಶಯೋಕ್ತಿಯು ಉಳಿದ ಅಲಂಕಾರಗಳೊಡನೆ ಸಂಕೀರ್ಣವಾಗುವುದು (ಧ್ವನ್ಯಾಲೋ. ೨೧೩). ೮. ಕಿಕ್ಕಿರಿದಿರುವುದು ; ತುಂಬಿರುವುದು : ನಾಗಲತಾವಿಸ್ತೀರ್ಣಮದಪ್ಪುದು ಪೂಗದ್ದುಮಸಂಕೀರ್ಣಮನಿಪ್ಪುದು (ಸುಕುಮಾ. ೧೦ -೫೬). ೯. ನಾನಾವಿಧವಾಗಿರುವುದು ; ವಿವಿಧರೀತಿಯಿಂದ ಕೂಡಿದುದು : ಈ ಯುಗದ ಕಾಲವಿಸ್ತಾರವು ಮೊದಲಿನ ಯುಗಗಳಿಗಿಂತ ಇಮ್ಮಡಿಯಾಗಿದೆ. ಸಾಹಿತ್ಯನಿರ್ಮಿತಿಯೂ ಸಂಕೀರ್ಣವಾಗಿದೆ (ಕಸಾಚ. ೨೪೩). ೧೦. ಗಹನವಾದುದು ; ಜಟಿಲವಾದುದು ; ಕ್ಲಿಷ್ಟವಾಗಿರುವುದು : ಆ ಗೂಗೆಗಳ್ ದಿವಸಾಂಧಂಗಳಾಗಿಯುಂ ನಮ್ಮೊಳ್ ಪಗೆಯುಂಟಾಗಿಯುಂ ಘೋರಾಂಧಕಾರದಿಂದತಿಸಂಕೀರ್ಣಮಪ್ಪ ಗುಹಾಗಹ್ವರಂಗಳೊಳ್ ಪೊಕ್ಕಿರ್ಪುವು (ಪಂಚತಂ. ೨೧೬-೩೧) ; ಭಾರತದ ಕಾಲದ ರಾಜ್ಯಗಳು ವಿಸ್ತಾರವಾಗಿದ್ದುವಲ್ಲದೆ ಆಡಳಿತಕ್ರಮವು ಬಹುಸಂಕೀರ್ಣವಾಗಿದ್ದಿತು (ಭಾರದ. ೮೫). ೧೧. ಭಿನ್ನಜಾತಿಯವರೊಡನೆ ಏರ್ಪಡುವ ಸಂಬಂಧ : "ಸಂಕೀರ್ಣಾಃ- ಸಂಕರ ಜಾತಿಗಳೆಂಬಲ್ಲಡುವರು" (ಸದ್ಧಾಂತ. ೩೦೭) ; ಅಗಲರ್ ಸೂಳೆಯನಾಳರ್ ಕುಲಜೆಯಂ ಸಂಕೀರ್ಣವಂ ಮಾಳ್ಪರ್ (ಸೋಮೇಶ. ೪೬). ೧೨. ಭದ್ರ, ಮಂದ, ಮೃಗ ಮತ್ತು ಸಂಕೀರ್ಣಗಳೆಂಬ ಆನೆಯ ನಾಲ್ಕು ಜಾತಿಗಳಲ್ಲಿ ಒಂದು ; ಮದವೇರಿದ ಆನೆ ; ಸೊಕ್ಕಿದ ಆನೆ : ನಿಯಮಿಸುವರ್ ಭದ್ರ ಮಂದ ಮೃಗ ಸಂಕೀರ್ಣಾನ್ವಯದ ನೃಪಕರಿಗಳಂ (ಪಾರ್ಶ್ವ. ೨-೫೬). ೧೩. [ಛಂದ] ಆರ್ಯಾಗೀತಿಯ ಒಂದು ಮಾತ್ರಾವೃತ್ತದ ಹೆಸರು; ಪ್ರಹೇಳಿಕೆಯ ಒಂದು ಪ್ರಭೇದ : ಸಂಕೀರ್ಣಕೆಸವ [ಪಾಠಾಂ. ಸಂಕೀರ್ಣಕಕ್ಕೆ] ದುವಯಿಗೆ ಮಾತ್ರಾವ್ಯಂದಮುಮಂ ಗಣವಿವರಣೆಯಂದಮುಮಂ ತಿಳಿಯೆ ಪೇಳ್ದೆಂ (ಛಂದೋಂಬು. ೪-೨೨೬). ೧೪. [ಕಾವ್ಯಮೀ] ಮಿಶ್ರಾಲಂಕಾರದ ಒಂದು ಪ್ರಭೇದ ; ವಿವಿಧ ಅಲಂಕಾರಗಳನ್ನು ಬೆರಸುವುದರಿಂದ ನಿಷ್ಪನ್ನವಾಗುವ ಅಲಂಕಾರ : ಸಂಕೀರ್ಣಮಂಬುದುಕ್ತಾಳಂಕಾರಸಮೂಹಸಂಕರ ಕ್ರಮಮಕ್ಕುಂ (ಕವಿಪ್ರ. ೩-೧೫೬) ; ಸಂಕೀರ್ಣಸಮೇತಕಂ ಅಂಗಾಂಗಿಕಂ ಎಂದು ಎರಡು ತೆಱಂ (ಕುದಯಾ. ೧೫). ೧೫. ಪದದೋಷಗಳಲ್ಲಿ ಒಂದು ; ವಾಕ್ಯದ ಪದಗಳು ಮಿಶ್ರವಾಗಿ ಅರ್ಥಮಾಡುವುದಕ್ಕೆ ಕಷ್ಟವಾಗುವುದು : ಸಂಕೀರ್ಣ - ಎರಡು ಮೂರು ವಾಕ್ಯಗಳಿರುವ ಕಡೆಯಲ್ಲಿ ಒಂದರ ಪದಗಳು ಮತ್ತೊಂದರೊಡನೆ ಬೆರೆದುಹೋಗಿ (ಅರ್ಥ ಮಾಡುವುದಕ್ಕೆ ಕಷ್ಟವಾಗಿ) ಇರುವುದು (ಕೃಪಿ. ೨೨೮). ೧೬. [ನಾಟ್ಯ] ಪ್ರಹಸನದ ಶುದ್ಧ, ಸಂಕೀರ್ಣ, ವಿಕೃತಗಳೆಂಬ ಮೂರು ಪ್ರಕಾರಗಳಲ್ಲಿ ಒಂದು ; ಬಹುಜನ ಭ್ರಷ್ಟರ ಚರಿತ್ರೆಯನ್ನೊಳಗೊಂಡ ಪ್ರಹಸನ : ಪ್ರಹಸನವು ಶುದ್ಧ, ಸಂಕೀರ್ಣ, ವಿಕೃತ ಎಂದು ಮೂರು ವಿಧ . . . ಬಹುಜನ ಭ್ರಷ್ಟರ ಚರಿತ್ರೆ ಇದ್ದರೆ ಅದು ಸಂಕೀರ್ಣವಾಗುತ್ತದೆ (ಸಂನಾಟ. ೩೦). ೧೭. [ಸಂಗೀತ] ರಾಗದ, ಶುದ್ಧ, ಸಂಕೀರ್ಣ, ಸಾಳಗಗಳೆಂಬ ಮೂರು ಭೇದಗಳಲ್ಲಿ ಒಂದು ; ಯಾವುದಾದರೊಂದು ರಾಗದ ಮೂಲಭಾವದ ಛಾಯೆಯಿಂದ ರಂಜಿಸುವ ರಾಗ : ನುತ ಶುದ್ಧ ಸಾಳಂಗ ಸಂಕೀರ್ಣಮಂ ಯಥೋಚಿತ ತಾರ ಮಧ್ಯರ ಮಂದ್ರಂಗಳಿಂ ಹಾಡಿ ಭೂಪತಿಯ ದುಗುಡವನು ತೊಳೆದರು ರಾಗರಸಲಹರಿಯಿಂದ ನಾಮಿಕ ಸತಿಯರು (ಹಚಕಾ. ೭-೬) ; ಶುದ್ಧದ ಸಾಳಗದ ಸಂಕೀರ್ಣ ದೇಸಿಯ ವಿವಿಧ ರಚನೆಗಳ . . . ಸೂಳುಗಳ ಲಯಮಾನವಱಿದವನವನೆ ಗಾಯಕನು (ಕುವ್ಯಾಲಾ. ೩-೯೬); ಶುದ್ಧ ಸಾಳಗಂ ಸಂಕೀರ್ಣಂ ಬೆರೆದೊಪ್ಪಲ್ಕಾಡಿದಂ (ವೀರವಿ. ೬-೯೧). ೧೮. ತಾಳದ ಅಂಗಗಳಲ್ಲಿ ಒಂದು ; ಒಂಬತ್ತು ಲಘುಗಳ ಕಾಲದ ಮಿತಿಯುಳ್ಳ ಒಂದು

ತಾಳ : ಜಾತಿ . . . ಇದು ಐದು ವಿಧವಾಗಿದೆ. ಅವು ಕ್ರಮವಾಗಿ (೧) ತ್ರಿಶ್ರ (೨) ಚತುರಶ್ರ (೩) ಖಂಡ (೪) ಮಿಶ್ರ (೫) ಸಂಕೀರ್ಣ. ಈ ಐದು ಜಾತಿಗಳೂ ಲಘುವಿಗೆ ಮಾತ್ರ ಸಲ್ಲುತ್ತವೆ (ಸಂಗೀಚಂ. ೫೬). ೧೯. ಶುದ್ಧ, ಸಾಳಗ, ಸಂಕೀರ್ಣ, ಠವಣೆಗಳೆಂಬ ನಾಲ್ಕು ವಿಧದ ಮೃದಂಗವಾದನಗಳಲ್ಲಿ ಒಂದು : ಶುದ್ಧ ಸಾಳಗ ಸಂಕೀರ್ಣ ಠವಣೆಗಳೆಂಬ ಚತುರ್ವಿಧ ಮೃದಂಗಮಂ ಮೇಳೈಸಿ . . . ಬಾಜಿಸುವಾವುಜಕಾರರಿಂ (ವಿವೇಕ. ೧೯೧) ; ಶುದ್ಧ ಸಾಳಂಗ ಸಂಕೀರ್ಣ ಠವಣೆಗಳೆಂಬ ಚತುರ್ವಿಧ ಮೃದಂಗಮಂ ಮೇಳೈಸಿ (ಭೈರಪ್ಪ. ೫-೫೨). [ಸಂ.]

ಸಂಕೀರ್ಣಕ (ನಾ). ೧. ಹತ್ತುವಿಧವಾದ ಪಾತಕಗಳಲ್ಲಿ ಒಂದು : ಮನೋ ವಾಕ್ಕಾಯವೆಂಬ ತ್ರಿಕರಣದಲ್ಲಿ ಮಹಾಪಾತಕವೆಂದು ಅತಿಪಾತಕವೆಂದು ಪ್ರಾಸಂಗಿಕವೆಂದು ಪಾತಕವೆಂದು ಉಪಪಾತಕವೆಂದು ಜಾತಿಭ್ರಂಶಕಮೆಂದು ಸಂಕೀರ್ಣಕಮೆಂದು . . . ದಶವಿಧಮಾದ ಪಾತಕಂಗಳನುದ್ಯೋಷಿಸುತಿರ್ಕುಂ (ವಿವೇಕ. ೧೫೪). ೨. [ಛಂದ] ಆರ್ಯಾಗೀತಿಯ ಒಂದು ಮಾತ್ರಾವೃತ್ತದ ಹೆಸರು ; ಪ್ರಹೇಳಿಕೆಯ ಒಂದು ಪ್ರಭೇದ : ಕಂದದ ಪೂರ್ವಾರ್ಧದೊಳನುಸಂದಿಸಲಾರ್ಯಾಪರಾರ್ಧಮದನು ಕ್ರಮದಿಂದೊಂದಿರ್ದೊಡೆ ಸಂಕೀರ್ಣಕಮೆಂದಂ (ಛಂದೋಂಬು. ೪-೨೩೪). [ಸಂ.]

ಸಂಕೀರ್ಣಗೊಳಿಸು (ಕ್ರಿ). ಒಟ್ಟುಗೂಡಿಸು : ಕಿಲೆಹಾಕು : ಪ್ರಶ್ನಾವಳಿಗಳನ್ನು ಹೆಚ್ಚು ಹೆಚ್ಚು ಸಂಕೀರ್ಣಗೊಳಿಸಿ ೩ರಿಂದ ೧೩ ವರ್ಷ ವಯಸ್ಸಿನವರಗಿನ ಮಕ್ಕಳನ್ನು ಪರೀಕ್ಷಿಸಿ (ಶಿಕ್ಷದ. ೫೬೯). [ಸಂಕೀರ್ಣ + ಕೊಳ್ + -ಇಸು]

ಸಂಕೀರ್ಣಜಾತಿ (ನಾ). ೧. ಭಿನ್ನಜಾತಿ : ಮಿಶ್ರಜಾತಿ. ೨. [ಕಾಮಶಾ] (ನಾಲ್ಕು ಬಗೆಯ ಸ್ತ್ರೀಜಾತಿಯ ಗುಣಗಳು ಮಿಶ್ರವಾಗಿ ಉಂಟಾಗುವ) ಒಂದು ಮಿಶ್ರಜಾತಿ, — ಮಿಶ್ರವರ್ಣ : ಇಂತೀ ನಾಲ್ಕುಂ ಜಾತಿಯ ಕಾಂತೆಯರವಯವ ಗುಣಂಗಳೊಂದೊಂದೆಳತ್ಯಂತಂ ಕೂಡಿದೂಡೆಯೆ ನೀಂ ಭ್ರಾಂತೇಂ ಸಂಕೀರ್ಣ ಜಾತಿಯೆಂದಾ ವಧುವಂ (ಮಣಿ. ೨-೬). ೩. [ಸಂಗೀತ] ಹಾಡಿನ ಒಂದು ಪ್ರಕಾರ : ಭರತಮುನಿಯು . . . ರಾಗಪದ್ಧತಿಯ ಪೂರ್ವರೂಪವಾದ ಜಾತಿಗಳು, ಏಳೇಳು ಮತ್ತು ನಾಲ್ಕು ಸಂಕೀರ್ಣಜಾತಿ, ಇವುಗಳನ್ನೆಲ್ಲಾ ವಿವರಿಸಿದ್ದಾನೆ (ಭಾರದ. ೫೩೮). [ಸಂ.]

ಸಂಕೀರ್ಣತೆ (ನಾ). ೧. ವಿಧವಿಧವಾಗಿರುವುದು ; ನಾನಾ ಬಗೆಯಿಂದ ಕೂಡಿದುದು : ವಾಸ್ತವವಾಗಿ ಆ ಮನೆ ಬೃಹತ್ತಾಗಿತ್ತು ; ಅದರ ಶೈಲಿ ಸಂಕೀರ್ಣತೆಯಿಂದ ನವೀನವಾಗಿತ್ತು (ಪುನರು. ೩೧೬). ೨. ಜಟಿಲತೆ ; ಕ್ಲಿಷ್ಟತೆ : ರಾಮಿಯ ಭಾವಸೃಷ್ಟಿಯಲ್ಲ ನೆನಪಿನದಾಗುವುದರಿಂದ ಸಂಕೀರ್ಣತೆ ಇಲ್ಲಿ ಸಾಧ್ಯವಾಗಿಲ್ಲ (ಹೊಸಕ್ಷ. ೨೮೩) ; ಶಿಕ್ಷಕವೃತ್ತಿಗೆ ಅಂಥ ನಿರಾಶೆ ಕಟ್ಟಿ ಬಂದುದು. ಅದರ ಫಲವಾಗಿ . . . ಗುಪ್ತಮನಸ್ಸಿನಲ್ಲಿ ಸಂಕೀರ್ಣತೆ ಗಳೇರ್ಪಟ್ಟರೆ ಆಶ್ಚರ್ಯವೇನಲ್ಲ (ಶಿಕ್ಷದ. ೬೬೪). [ಸಂ. ಸಂಕೀರ್ಣತಾ]

ಸಂಕೀರ್ಣರಾಗ (ನಾ). = ಸಂಕೀರ್ಣ ೧೭ : ಶುದ್ಧ ಮಿಶ್ರ ಸಂಕೀರ್ಣರಾಗಂಗಳಂ ರಂಜಿಸಿ ಪಾಡಿ ಮೋಹಿಪ ಸಂಗೀತವಿಶಾರದರಿಂ (ರಾಜಶಾ. ೫-೧೯೨). [ಸಂ.]

ಸಂಕೀರ್ಣರಾಶಿ (ನಾ). ನಾನಾವಿಧವಾದ ವಸ್ತುಗಳ ರಾಶಿ, — ಸಮೂಹ. [ಸಂ.]

ಸಂಕೀರ್ಣಲಿಂಗ (ನಾ). [ವೀಶೈ] ಐದು ವಿಧವಾದ ಲಿಂಗಗಳಲ್ಲಿ ಒಂದು : ಸ್ವಯಂಭುಲಿಂಗ ಬಾಣಲಿಂಗ ಚರಲಿಂಗ ಸಂಕೀರ್ಣಲಿಂಗ ಪ್ರಾಣಲಿಂಗವೆಂಬ ಪಂಚ ವಿಧಲಿಂಗಂಗಳಂ ತಮ್ಮ ತಮ್ಮ ಶಕ್ತ್ಯನುಸಾರಮಾದರ್ಚನಾತತ್ಪರರಾಗಲ್ವೇಳ್ಕುಂ (ವಿವೇಕ. ೯೨). [ಸಂ.]

ಸಂಕೀರ್ಣವಡು (ಕ್ರಿ). ಗೊಂದಲಗೊಳ್ಳು ; ಕ್ಷೋಭೆಗೊಳ್ಳು ; ಕಸಿವಿಸಿ ಗೊಳ್ಳು (?) : ಮನಕೆ ಬಂದಂತೆಂಬರಲ್ಲದೆ ಸಲೆ ಗುಣಾವಗುಣ ಜನಪರಿಣಿಪರ್ ಲೋಕಸಮ್ಮತಯೆನುತ ಕರ ಸಂಕೀರ್ಣವಟ್ಟನು ಹನುಮ ಕಟ್ಟುಮ್ಮಳವ ತಾಳಿದ ರಾಮನೆಂದುದಕೆ (ಕೌಶಿಕಾ. ೩೮-೫೪). [ಸಂಕೀರ್ಣ? + ಪಡು]

ಸಂಕೀರ್ಣವಿಷ್ಕಂಭ (ನಾ). [ಕಾವ್ಯಮೀ] ನಾಟಕ ಅಥವಾ ದೃಶ್ಯಕಾವ್ಯಗಳಲ್ಲಿ ನಡೆದು ಹೋದ ಮತ್ತು ಮುಂದೆ ನಡೆಯುವ ಕಥಾಂಶವನ್ನು ಮಧ್ಯಮ ಮತ್ತು ನೀಚಪಾತ್ರಗಳ ಸಂಭಾಷಣೆಯ ಮೂಲಕ ಸೂಚಿಸುವುದು : ಮಧ್ಯಮಪಾತ್ರಗಳೂ ನೀಚಪಾತ್ರಗಳೂ ಸೇರಿ ಸೂಚಿಸಿದರೆ ಅದಕ್ಕೆ 'ಸಂಕೀರ್ಣವಿಷ್ಕಂಭ' ಅಥವಾ 'ಮಿಶ್ರವಿಷ್ಕಂಭ'ವೆಂದು ಹೆಸರು (ಕೃಷಿ ೨೦೬). 'ಮಿಶ್ರವಿಷ್ಕಂಭ' ಪರಾ. [ಸಂ.]

ಸಂಕೀರ್ಣಾಂಶಕೆ (ನಾ). [ಕಾಮಶಾ] ಸ್ತ್ರೀಯರಲ್ಲಿ ಒಂದು ಬಗೆ, — ಜಾತಿ ; ಈ ಸ್ತ್ರೀಯರ ಪದ್ಮಿನಿ, ಶಂಕಿನಿ, ಹಸ್ತಿನಿ ಮತ್ತು ಚಿತ್ತಿನಿ ಎಂಬ ನಾಲ್ಕು ಜಾತಿಯ ಗುಣಗಳನ್ನು ಹೊಂದಿದವಳು : ನೆಗತದಂಶಕತತಿ ನುಡಿ ಕೂಡಿ ಬಂದಡೆ ಸಂಕೀರ್ಣಾಂಶಕೆಯೆಂದಱಿ (ಮದಿ. ೩-೬). [ಸಂ. ಸಂಕೀರ್ಣಾಂಶಕಾ]

ಸಂಕೀರ್ತನ (ನಾ). (ಪರಮಾತ್ಮನ) ಗುಣಗಳ ಕೀರ್ತನ ; ಸ್ತೋತ್ರ ; ಸ್ತುತಿ : ಹಲವು ಮಾತೇನೊಂದು ಪದ್ಯದೊಳೊಲಿಸಿ ಮಾತಾಡಿಸುವನೆಮ್ಮೊಡನೆಳವೆಱೆಯ ತಲೆಯಭವನಂ ಸಂಕೀರ್ತನಂ ಪಾಡಿ (ಬಸವಪು. ೪೨ ೩೦ . . . ಸಿದ್ಧಾಂತೆಯಿಂದ ಹರಿನಾಮ ಸಂಕೀರ್ತನತತ್ಪರರಾಗಿ ಎಲ್ಲರೂ ಪ್ರಯಾಣ ಸಾಗಿಸಿದರು (ಕಥಾವಿ. ೧೮೮). [ಸಂ.]

ಸಂಕೀರ್ತನಂಗೆಯ್ (ಕ್ರಿ). ಸ್ತುತಿಸು : ಸ್ತೋತ್ರಮಾಡು : ಸಹಜಸದ್ಗುಣಗಣಮಂ ಸರಸರವದಿಂ ಸಾರ್ದು ಸಂಕೀರ್ತನಂಗೆಯ್ದು ಶ್ರುತಿಸತಿಯರಿಂ (ಶಬಶಂ. ೧ ೨೯೫). [ಸಂಕೀರ್ತನ + ಕೆಯ್]

ಸಂಕೀರ್ತನೆ (ನಾ). ೧. = ಸಂಕೀರ್ತನ : ಶ್ರೀ ಪರಮಾತ್ಮನ ಗುಣನಾಮಸಂಕೀರ್ತನೆಗಳನ್ನು ಹಾಡುವಂತೆ ಆದೇಶವನ್ನಿತ್ತಂತೆಯೂ ಭಾಸವಾಯಿತು (ವಿದಾಕ. ೩. ಜೀರಿಕೆ). ೨. ಸ್ತುತಿಸುವುದು ; ಸ್ತೋತ್ರಮಾಡುವುದು : ಅಂತುಮಲ್ಲದೆ ತನ್ಮಹಾದಿ ಮಹಂತರುಗಳತ್ಯಂತ ವಿಮಳಾನಂತಸಂಕೀರ್ತನೆಗಳಿಂದ ಶ್ರಾಂತವೊಪ್ಪುತಿರೆ (ಬಸವಪು. ೬೯ ೨೮) : ವಿಠಲನ ಭಜನೆ ಸಂಕೀರ್ತನೆಗಳಲ್ಲಿ ತಲ್ಲೀನನಾಗಿ . . . ತಾಳ ಹಾಕುತ್ತ ಕುಣಿಯುತ್ತ ಇದ್ದುಬಿಡುತ್ತಿದ್ದನು (ಭಾರದ. ೨೯೯) [ಸಂ. ಸಂಕೀರ್ತನ]

ಸಂಕೀರ್ತಿತವ್ಯ (ನಾ). ಸ್ತುತಿಗೆ ಅರ್ಹನಾದವನು ; ಸ್ತುತಿಸಲ್ಪಡಬೇಕಾದವನು : ಸೇವ್ಯನನು ಸತ್ಪ್ರತಿಗಳಲಿ ದೃಷ್ಟವ್ಯನನು ದೃಢಚಿತ್ತದಲಿ ಮಂತ್ರವ್ಯನಾ ಶ್ರೋತವ್ಯನನು ಸಂಕೀರ್ತಿತವ್ಯನನು . . . ಅಜ್ಞಾನದಲಿ ಯೋಗವ್ಯನೆಂದೇ ಸೆಣಸಿದವಲಾ . . ಶಿವಶಿವಾಯೆಂದ (ಕುಮಾಶ. ೬-೬೪). [ಸಂ.]

ಸಂಕು$_1$ 'ಸಂಕ$_1$' ನೋ.

ಸಂಕು$_2$ (ನಾ). ಗೂಟ ಅಥವಾ ಬೆಣೆಯಂತಿರುವ ಆಯುಧ : ನಡುವ ಸರಲ್ಗ ಮೆಯ್ಯೊಳಗಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡಗಿದಿರುರ್ಚುವಿಟ್ಟಗಿದಿರಾನೆಯ ಕೋಟ್ಟಳ ಕೋಳ್ಗೆ ನೊಂದು . . . ಬಿಟ್ಟುವರ್ದ ನೆಲೆಯಿಂ ಕೆಲವನ್ನದಗಂಧಸಿಂಧುರಂ (ಪಂಪಭಾ. ೧೦-೯೪) ; ತರುಣೆ ಸೂತಕಿ ವಾಮಕರದಿಂದ ತತ್ಸೂತ್ರಮಿರದಾಂತು ವರಹಸ್ತದಿಂದ ಸಂಕುಳ Eವ3 ಪಿಡಿದುಯಿರದ ತನ್ನಾಳಮಂ ಕೊಯ್ವುಮಳರತ್ನಕ್ಕೆ ಒಪ್ಪವಿಟ್ಟಂತೊಳೆವೊಲು ಬಾಲಚಂತಾಮಣಿಯ ಮೈದೊಳೆದು (ನವಮೋ. ೧೫-೧೮). [< ಸಂ. ಶಂಕು]

ಸಂಕುಗೊರಲ್ (ನಾ). ಶಂಖದ ಆಕಾರದ ಕೊರಳು ; ಶಂಖದಂತಿರುವ ಕೊರಳು : ರಂಗ ನಿನ್ನಯ ಸಂಕುಗೊರಲ ಗೋಚರದಿಂದ ಹಿಂಗುಗು ಗಡ ಭವಪಾಶ (ಶತಸಾಂ. ೬-೧೪) ; ಸಂಕುಗೊರಲೊಳ್ ತಳ್ತ ಮುತ್ತಿನ ಸರಂಗಳ್ (ಚಕವಿ. ೫-೧೦) ; ಚಲ್ಲಗಂಗಳ ಚಲ್ಲಗಾರ್ತಿಯರ್ ಸಂಕುಗೊರಲ ಕೊಂಕುಗುರುಳ ನೀಱೆಯರ್ (ರಾಮಾಶ್ವ. ೧೨೨-೨೬). [ಸಂಕು$_1$ (< ಸಂಕ$_1$) + ಕೊರಲ್]

ಸಂಕುಚನ (ನಾ). ಕುಗ್ಗುವಿಕೆ : ಅಂಗಾಂಗಗಳ ಸಂಕುಚನ ಪ್ರಕುಚನಗಳೂ ನಿಂತುಹೋಗಿದ್ದುವು (ಶಾಂತಲಾ. ೩೨೪). [ಸಂ.]

ಸಂಕುಚಿತ (ಗು). ೧. ಕುಗ್ಗಿದ ; ಚಿಕ್ಕದಾದ. ೨. ಸೀಮಿತವಾದ ; ಪರಿಮಿತವಾದ . (ನಾ). ೩. ಕುಗ್ಗಿದುದು ; ಚಿಕ್ಕದಾದುದು : ಎದೆಹಾಲು ಕೊಡುವುದರಿಂದ ನವಮಾಸದಲ್ಲಿ ಹಿಗ್ಗಿದ ಗರ್ಭಕೋಶವು ಮತ್ತೆ ಬೇಗ ಸ್ವಾಭಾವಿಕವಾಗಿ ಸಂಕುಚಿತ ವಾಗುತ್ತದೆ (ಗೃಹವಿ. ೧೦೬). ೪. ಅಲ್ಪವಾದುದು ; ಸೀಮಿತವಾದುದು : ಈ ಪರಿಷತ್ತು ಸಾಹಿತ್ಯವೆಂಬ ಮಾತಿಗೆ ಕೊಟ್ಟಿರುವ ಅರ್ಥವಾದರೋ, ಹೀಗೆ ಸಂಕುಚಿತ ವಾದದ್ದಲ್ಲವೆಂದು ಅದರ ನಿಬಂಧಾವಳಿಯ ಮೊದಲಲ್ಲಿರುವ ಉದ್ದೇಶವಿವರಣೆಯಿಂದಲೇ ಸ್ಪಷ್ಟಪಡುತ್ತಿದೆ (ಸಾಹಿಶ. ೫೯). [ಸಂ.]

ಸಂಕುಚಿತತ್ವ (ನಾ). ಅಲ್ಪತನ ; ಸಣ್ಣತನ : ಉಪಾಧಿಕವಾದ ಅವನ ಸಂಕುಚಿತತ್ವ ಹಿಮ್ಮೆಟ್ಟುತ್ತದೆ (ಸೌಂದಸ. ೬೪). [ಸಂ.]

ಸಂಕುಚಿತದೃಷ್ಟಿ (ನಾ). ಪರಿಮಿತವಾದ ದೃಷ್ಟಿಕೋನ ; ಸೀಮಿತವಾದ ದೃಷ್ಟಿ : ಎಲ್ಲವನ್ನೂ ಸಂಕುಚಿತದೃಷ್ಟಿಯಿಂದ ನೋಡುವುದು ಸರಿಯಲ್ಲ (ರೂಢಿ).

[ಸಂ.]

ಸಂಕುಚಿಸು (ಕ್ರಿ). ೧. ಚಿಕ್ಕದಾಗು ; ಕುಗ್ಗು ; ಮುದುರು : ಈ ರೀತಿ ಸಂಕುಚಿಸುವುದರಿಂದ ಕೋನಯುತಚಲನ ಮೊತ್ತಸ್ಥಾಯಿತ್ವನಿಯಮದಂತೆ, ಅದು ಇನ್ನೂ ಹೆಚ್ಚು ವೇಗದಿಂದ ಸುತ್ತಾಡಿರಬೇಕು (ಭೂಪಟ್ಟು. ೨೦) ; ನೀವು ತಡ ಮಾಡಿದರೆ ಬಾಳೆಲ್ಲ ಸಂಕುಚಿಸಿ ಕುಗ್ಗಿಸುವದಾತ್ಮನನು (ಚಂದುಚಿ. ೨೮). ೨. ಕುಗ್ಗಿಸು ; ಮುದುರಿಸು : ನಾನು ದೇಹವನ್ನು ಆದಷ್ಟು ಸಂಕುಚಿಸಿ ನಿದ್ದೆಹೋಗುವ ಪ್ರಯತ್ನದಲ್ಲಿದ್ದೆ (ಮುಗ್ಧಾಮು. ೮೮) . ೩. (ಆಲಂ) ಕೃಪಣತನ ಮಾಡು ; ಜೀನತನ ತೋರಿಸು : ಕವಿ ಬುಧ ಗಾನ ವೈಣಿಕ ವಚನಶೂರರ ಮನ್ನಿಸುತ ಸಂಕುಚಿಸದೆ ದಣಿಸಿದನು ಪುರಜನಪರಿಜನಂಗಳನು (ಆನಂರಾ. ೧-೨೪-೩೯). [ಸಂಕುಚನ + -ಇಸು$_3$]

ಸಂಕುಬುಲ್ಲು (ನಾ). ಒಂದು ಬಗೆಯ ಹುಲ್ಲು : "ಕಚ್ಚುಕಾಢ್ಯಂ --- ಸಂಕುಬುಲ್ಲು" (ಓಷಧಿ. ೨೫). [? + ಪುಲ್ಲು (< ಪುಲ್)]

ಸಂಕುಮದ (ನಾ). ಒಂದು ಬಗೆಯ ಸುಗಂಧದ್ರವ್ಯ ; ಜವ್ವಾಜಿ : ಪ್ರೀತಿಯಿಂ ಮಾಳ್ಪ ಪಂಚಾಮೃತಾಭಿಷೇಚನಾದಿ ಮೃಗಮದ ಘನಸಾರ ವೃಕ್ಷಸಾರ ಪುಷ್ಪಸಾರ ಕೇಸರಾದಿ ನಾನಾಸುಗಂಧಾಳಿಗಳಿಂ (ಸೌಪರಿ. ೮-೨) ; ಚಾರುತರ ಹರಿಚಂದನಾಗರುಸಾರ ಕುಂಕುಮ ಸಂಕುಮದ ಕಸ್ತೂರಿ ಪುನುಗು ಕದಂಬ ಕರ್ಪೂರಾನುಲೇಪನದಿ . . . ನಡೆತಂದನು ಸಭಾಂತರಕೆ (ಆನಂರಾ. ೫-೫-೧೯).

[<— ತೆಲು. ಸಂಕುಮದ]

ಸಂಕುರ (ನಾ). = ಸಂಕರ$_3$: ಸುಂಕಕಾದುದು ಸಂಕುರಕ್ಕೆ [ಪು]ಟ್ಟಿಗೆ ಒನ್ದರೆ ಮಳವಗೆ ಪಟ್ಟಿ ಪದಿನಾಱು ಪಲಂ (ಎಇ. IX, ೨೨-೬ ; ಸು. ೫೦೦).

[IP ಇದು 'ಸಂಕರ' ಎಂಬುದರ ಅಪಲಿಖಿತವಿರಬಹುದೆ?]

ಸಂಕುಲ, ಸಂಕುಳ$_1$ (ಗು). ೧. ತಬ್ಬಿಬ್ಬಾದ ; ಭ್ರಾಂತಿಗೊಂಡ ; ದಿಗ್ಭ್ರಮೆ ಹೊಂದಿದ. ೨. ತುಂಬಿದ ; ಕಿಕ್ಕಿರಿದ. ೩. ಅವ್ಯವಸ್ಥೆಗೊಂಡ ; ಗೊಂದಲಮಯವಾದ. (ನಾ). ೪. ಗುಂಪು ; ಸಮೂಹ : "ನಿಕುರುಂಬಂ ನಿವಹಂ ವ್ರಜಂ ಸಮುದಯಂ . . . ಸಂಕುಲಮುತ್ಕರಂ . . . ವ್ರಾತಮೇಕಾರ್ಥಕಂ" (ಪಟ್ಟಕೋ. ೧೦೨-೨೭) ; ರತ್ನಕೃತ ಕೃತಕಖದ್ಯೋತಸಂಕುಲಮಯಂ . . . ಲತಾಭವನಮಂ ಪೊಕ್ಕು (ತ್ರೇರಾಮಾ. ೨೦-೫೩೩). ೫. ತುಮುಲಯುದ್ಧ ; ದೊಂಬಿಕಾಳೆಗ. **ಸಂಕುಳ$_1$** : ೪. ಪುಷ್ಪಸಂಕುಳದೊಳ್ ನೀನೆ ವಿಲಾಸಿಯ್ಯೆ ಮಿಡಿಗಳೊಳ್ ನೀಂ ಚೆಲ್ಲುನ್ಮ (ಆದಿಪು. ೧೧- ೯೬) ; ನಡೆತಂದು ಧರೆಯೊಳು ವಿಶಾಲತೆಯೊಳತಿಪೆಸರ್ವಡೆದಿರ್ಪ ಪುರಪಟ್ಟಣ ಗ್ರಾಮಸಂಕುಳದ ನಡುವೆ ಕಿಱುವಳ್ಳಿಯಾಗಿಯು ಕಣ್ಣ ಮೆಚ್ಚದು ಹೆಂಪಿನೊಳಿರ್ಪುದು (ಸಿದ್ಧರಾ. ೧-೩೧). [ಸಂ.]

ಸಂಕುಲತೆ (ನಾ). ಗೊಂದಲ ; ಕ್ಷೋಭೆ : ಸ್ತವಮಂ ಪಳಿಯಂ ಕಪರ್ದಿ ಮಂಜುಲಗುಣವಾರ್ಧಿ ಕೇಳ್ದುಮೆರಡಂ ಸರಿಗಂಡು ಮನೋನುರಾಗಸಂಕುಲತೆ ಯನಾಳ್ದನಂತೆ ನುತಿಯುಂ ಪಳಿಯುಂ ಸಮನಲ್ತೆ ಭವ್ಯದೊಳ್ (ಶಜಶಾ. ೪-೧೦೭).

[ಸಂ. ಸಂಕುಲತಾ]

ಸಂಕುಲಸಮರ (ನಾ). ದೊಂಬಿಯುದ್ಧ : ಗುರುತನುಜನಸ್ತ್ರವ ತಿರುಹೆ ಸೇನಾವನಧಿ ಗರ್ಜಿಸಲಾಯ್ತು ಸಂಕುಲಸಮರಸೌರಂಭ (ಕುಮಾಭೀ. ೫-೩). [ಸಂ.]

ಸಂಕುವಿಡು (ಕ್ರಿ). ಅಂಕುಶದಿಂದ ತಿವಿ,- ಚುಚ್ಚು : ಸಾಂದ್ರಮಾನಲ್ಕೆ ಸಂಕುವಿಡೆ ತದ್ರುಚಿ ರಾಜಿಸೆ ಮೌಕ್ತಿಕಾವಳೀರುಂದ್ರವರತ್ರೆ ಬತ್ತರಿಸೆ ಚೆಂಚೆಯಿನಂ ಚಿತಮಾಗೆ ಪಟ್ಟದಂತೀಂದ್ರನುಮಿಂತು ಪಣ್ಣಿ ಮಿಗೆ ಕಂಗೊಳಿಸುತ್ತಮೆ ಬಂದುದು (ಶಾಂತೀಶ್ವ. ೧೦-೬೧). [ಸಂಕು$_2$ + ಇಡು$_1$]

ಸಂಕುಸುಕ (ನಾ). ಕೆಟ್ಟವನು ; ದುಷ್ಟ : ಹುಸಿಕನಂ ಸಂಕುಸುಕನಂ ಶಠನನುತ್ಕಟನ . . . ತಪ್ಪನೆಣಿಸದಲೆ ಮಲರಹಿತಮಾಯಾವಿದೂರ ಸಿದ್ಧೇಂದ್ರಯತಿರಾಜ ರಕ್ಷಿಪುದೆನ್ನನು (ಸಿದ್ಧೇಪು. ೬-೯೮). [ಸಂ.]

ಸಂಕುಳ$_1$ 'ಸಂಕುಲ' ನೋ.

ಸಂಕೃತಿ (ನಾ). [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಒಂದು ; ಪ್ರತಿಯೊಂದು ಚರಣದಲ್ಲಿಯೂ ಇಪ್ಪತ್ತುನಾಲ್ಕು ಅಕ್ಷರಗಳು ಬರುವ ಸಮವೃತ್ತಗಳ ಸಮುದಾಯ : ಅಲ್ಲಿ ಉಕ್ತಿ ಅತ್ಯುಕ್ತಿ ಮಧ್ಯ . . . ಸಂಕೃತಿ ಅತಿಕೃತಿ ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಬು. ೧-೪೬ ವ) ; ಸಮವೃತ್ತಗಳು . . . ೧ ಉಕ್ತಿ . . . ೨೪ ಸಂಕೃತಿ ೨೫ ಅಭಿಕೃತಿ ೨೬ ಉತ್ಕೃತಿ ಎಂಬವು ಸಂಜ್ಞೆಗಳು (ಕೈಪಿಡಿ. ೭೮). [ಸಂ.]

ಸಂಕೃಷ್ಟ (ನಾ). [ಸಂಗೀತ] ಒಂದು ಬಗೆಯ ತಾಳ : ಧ್ರುವ ಮಟಯ ರೂಪಕ . . . ಪಂಚಪಾಣಿ ಸಂಕೃ [ಪಾಶಾಂ. ಕ್ರಿ] ಷ್ಟ ಖಂಜಾ ಖಂಜ . . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳಾದೊಡೆ (ಏವೇಕ. ೧೯೨). [ಸಂ.]

ಸಂಕೈ$_1$, ಸಂಖೈ$_1$ (ನಾ). ೧. ಅನುಮಾನ ; ಸಂದೇಹ : ಇವಱೊಳ್ ಸಂಕೆವೇಡಂ (ರಾಮಾಶ್ವ. ೧೫-೯). ೨. ಭ್ರಾಂತಿ ; ಭ್ರಮೆ : ಪಸರಿಸಿದ ಪದ್ಮರಾಗದ ಪೊಸಗೆಂಪಂ ಮಾಂಸಮೆಂದು ಮುಂ ಕರ್ದುಕಲ್ಕಾಟಿಸಿಯುಂ ಬಱಿಕದನುರಿಯೆಂಬ ಸಂಕೆಯಿಂ ಪೊರ್ದದಿರ್ದುವೀ ಮತ್ಸ್ಯಂಗಳ್ (ಆದಿಪು. ೧೨-೧೨೨) ; ಮನಕ್ಕೆ ಸಂಕೆಯನ್ತೊಲಗಿಸಿದಂ (ಸೌಇಾ. XI-i.೪೧-೩೬ ;969) . ೩. ಭಯ ; ಅಂಜಿಕೆ : ಉರುಬರ್ಹಮಂ ನೆಗಪಿಕೊಂಡು ಮಯೂರದ ಮೊತ್ತಮಿರ್ಪುಗುಂದಿರೆ ಪುದಿದಾ ನೆಟಲ್ಗೆಳಸಿ ಸಾರ್ದುದು ಸಂಕೆಯನೊಕ್ಕು ಪನ್ನಗೋತ್ಕರಂ (ಶಾಂತೀಶ್ವ. ೧೨-೨೪). **ಸಂಖೈ$_1$** : ೧. ಶನಿ ರಾಹು ಕೇತು ಕುಜರಿಂ ಘನಮೆನಿಸಿದ ಕಲಹಮಕ್ಕುಮಿನಗುರುಶಶಿಯಿಂದಿನಿತಾನುಂ ಸಂಖೆ(ಶಂಕೆ)ಯಿಲ್ಲದೆ . . . ನೋಡೆ(ಡಿ) ನಿರ್ಭಯಮಕ್ಕುಂ (ಅಭಿಮಾ. ೧೨-೧೭೭). [< ಸಂ. ಶಂಕಾ]

ಸಂಕೈ$_2$ 'ಸಂಕೈ$_1$' ನೋ.

ಸಂಕೈ$_3$ (ನಾ). ೧. ಒಂದು ಬಗೆಯ ಸಸ್ಯ ; ಮೆಂತ್ಯದ ಗಿಡ. ೨. ಒಂದು ಗಂಧದ್ರವ್ಯ ; ಸ್ಪೃಕ್ಕೆಯ ಬೇರು : "ಮರುನ್ಮಾಲಾ . . . ಲಂಕೋಯಿಕಾ - ೧೦ ಸ್ಪೃಕ್ಕೆಯೆಂಬ ಗ್ರಂಧದ್ರವ್ಯ, ಸಂಕೇಬೇರು" (ಸಿದ್ಧಾಂತಿ. ೧೪೩). [< ಸಂ. ಸ್ಪೃಕ್ಕಾ]

ಸಂಕೈ$_4$, ಸಂಖೈ$_2$ (ನಾ). ಅಂಕಿ ; ಅಂಕೆ : ಬೆಂಕಿಯುಂ ನೇಸಱುಂ ಸೋಂಕದ ಪೊಸವಗೆಯ ಪಲಸಾಸಿರ್ಸಂಕೆಯ ಸಸಿವಟ್ಟುಗಳಂ (ಚಕವಾ. ೧೦೬-೫). **ಸಂಖೈ$_2$** : ಬರುತಿರ್ದುವು ಲಕ್ಕಸಂಖೆಯೊಳಾ ಬಲದಿರವ ಬಣ್ಣೆಪೊಡಾರಳವು (ಕಂಸವಿ. ೧೧-೩೭).

[< ಸಂ. ಸಂಖ್ಯಾ]

ಸಂಕೆಗಿಡು (ಕ್ರಿ). ೧. ಅನುಮಾನವಿಲ್ಲದಾಗು. ೨. ಭಯವಿಲ್ಲದಾಗು ; ಹಿಂಜರಿಕೆಯಿಲ್ಲವಾಗು : ಪದೆಯಿಸೆ ಸೊಂಕಿ ಸಂಕೆಗಿಡೆ [ಪಾಶಾಂ. ಸಂಕಿಸದೆ] ಮೇಳಿಸಿ ಮೆಯ್ಯಡೆ ತಳ್ತು ತೋಳ ತಳ್ಪದಿರ್ಗೊಳಿ ಮೆಲ್ಲನಪ್ಪಿ (ಕಾವ್ಯಾವ. ೮೦೦).

[ಸಂಕೈ$_1$ + ಕಿಡು (< ಕೆಡು$_1$)]

ಸಂಕೆವೆಱು (ಕ್ರಿ). ಅನುಮಾನಹೊಂದು ; ಶಂಕಿಸು : ಸಮಭೂತಳಮಂ ಅಂತು ಕಂಡಾ ಮಹಾಪುರುಷಶಿಖಂಡಮಣಿಮಂಡನಂ ಮಗುಳ್ದು ಬರುತ್ತಿದಿರೊಳ್ ಬರ್ಪ ರುದ್ರದತ್ತಾದಿಗಳಂ ಭೋಂಕೆನೆ ಕಂಡು ಸಂಕೆವೆತ್ತು ನಿಲ್ಲುದುಂ (ನೇಮಿಪು. ೪-೧೦೦ ವ).

[ಸಂಕೈ$_1$ + ಪೆಱು$_1$]

ಸಂಕೇತ (ನಾ). ೧. ಸೂಚನೆ ; ಸುಳಿವು ; ಸಂಜ್ಞೆ : ದುರ್ಯೋಧನನ ಸಂಕೇತದೊಳ್ ಮುನ್ನಮೆ ಸಮೆದಿರ್ದ ಪುರೋಚನಂ . . . ಕಳಮಾವೃತ ಕರಪಲ್ಲವೆಯರಪ್ಪ ಪುರಂಧ್ರಿಯರುಂ ಬದ್ದವಣದ ಪಱೆಗಳುಂ ಬೆರಸಿದಿರ್ವಂದು (ಪಂಪಭಾ. ೩-೨ ವ) ; ಪ್ರೀತಿ ಮಿಗೆ ಶಂಖಪಟಹವಿನೂತೋದ್ಭುರಸಿಂಹಘಂಟಕಾನಿಸ್ವನಸಂಕೇತದ ಭಾವನಭೌಮ ಜ್ಯೋತಿಷ ವೈಮಾನಿಕಾಮರರ್ನೆರೆತಂದರ್ (ಸುಕುಮಾ. ೮-೬೪) . ೨. ಗುರುತು ; ಚಿಹ್ನೆ : ಹೆಸರನ್ನು ಉತ್ತರಪತ್ರಿಕೆಗಳ ಮೇಲೆ ಬರೆಯುವುದನ್ನು ತಪ್ಪಿಸಿ ಸಂಕೇತಗಳನ್ನು ಮಾತ್ರ ಹಾಕುವ ಏರ್ಪಾಟು (ಶಿಕ್ಷದ. ೩೪೮). ೩. ಸೂಚಕವಾದ ಗುರುತು, ವ್ಯಕ್ತಿ, ವಸ್ತು ಇತ್ಯಾದಿ : ದೇವರ ಸಂಕೇತವೇ ಆದ ಗುಡ್ಡನು . . . ಜನರನ್ನು ಸಂತೃಪ್ತಿಗೊಳಿಸುತ್ತಾನೆ (ಮೋರದೇ. ೧೫) ; ಶ್ವೇತವರ್ಣವು ಒಪ್ಪಂದದ ಸಂಕೇತ (ಹೇಮಂತ. ೬೭೧). ೪. ಒಪ್ಪಂದ ; ಒಡಂಬಡಿಕೆ ; ಕರಾರು. ೫. ಪ್ರಣಯಿಗಳು ಪರಸ್ಪರ ಸೇರಲು ಗೊತ್ತುಮಾಡಿಕೊಳ್ಳುವ ಏರ್ಪಾಡು,- ವ್ಯವಸ್ಥೆ. ೬. ಪ್ರಣಯಿಗಳು ಪರಸ್ಪರ ಸೇರುವ ಸ್ಥಳ : 'ಸಂಕೇತಭೂಮಿ' ಪರಾ.

೬. ಸಮಯ : ಅವಕಾಶ : "ಉಟದಂ ಬಿಟ್ಟಾಡಲಂ ಬಿಡಿಸದಂ ಸಂಸ್ಕಾರಂ ಸಮಾಯಿಸುಗುಮೇ" (ಪಂಪಾ. ೧೫-೬೬). ೭. ಕ್ಷಿಪ್ರವಾಯು : ಈ ಶಬ್ದಕ್ಕೆ ಇದು ಅರ್ಥವೆಂದು ಸಂಸ್ಕೃತ (ಭಾಷಾ. ೨೫೯-೬೬). ೯. ನಿರ್ಬಂಧ : ದೃಢೀಕರಣ ; ಅಧಿಕಾರಪತ್ರ : ಒಂದು ವಸ್ತು ಮಾಂತ್ರಿಕವಾಗಿ ಬಾಳ್ವಂತೆ ಸಂಸ್ಕಾರಮನ್ನು (ಭಾಷಾ. ೧೫೮-೬೬) : ಈ ಅಧಿಕಾರ ಸಂಸ್ಕಾರವಾಗಿ ಅಜ್ಜನಿಗೆ ಬಹುಗಾಲ ಬಿಲ್ಲ ಮೇಲೆ ಅಧಿಕಾರವಿತ್ತು (ಭಾರತ. ೨೬೭). ೧೧. [ಶಾಸ್ತ್ರವಿ] ಅದೃಷ್ಟಕ್ಕೆಯ ಪ್ರಯತ್ನಗಳಲ್ಲಿ ಒಂದು : ಈ ಶುಷ್ಕಾಂಶಕ್ಕೆ ಇತ್ಯಾದಿಗಳಲ್ಲಿ ದೃಢಪ್ರಯತ್ನವಿದು ನಿನ್ನ ತೊಂಗಲ ಮೇಲೆ ಹೋಯಿಸಲೇ ಪಾಲಿಸು ಅಲ್ಲ. ಆಸಾವಿನ ಕ್ರಮಾಭ್ಯಸ್ಥಿಗೆ ಹೋಗಿ ಗೊಂಬಾಟಿಕೆ ಪಾಗಿ (ರಾಮಾ. ೮೧). [ಸಂ.]

ಸಂಸ್ಕಾರಗೀತ (ಕ್ರಿ). ಸಂಸ್ಕಾರ್ಯವನ್ನು ಗೊಳ್ಳುವಿಕೆ : ಭೂಮಿಯ ಸ್ವರವನ್ನು ಸೂಚಿಸು : ಜಾತಿಯಾದ ದೂರದರ್ಶನದ ತೆರನು ಸಂಸ್ಕಾರಗೀತವಾದ (ಪಾರಾಶ. ೩-೧೪). [ಸಂಸ್ಕೃತ + ಗೀತ್, + -ಆಲ್.]

ಸಂಸ್ಕಾರ (ನಾ). ೧. ಒಪ್ಪಿದ ; ಒಡಂಬಡಿಕೆ ; ಅರಾರು. ೨. ಶ್ರೇಯಾಗಿಗಳ ಸೇವಾವೇಳೆಯಲ್ಲಿ ಮೊದಲೇ ಗೊಳ್ಳುವುದಿಲ್ಲಿಂದ ಸ್ವಳ ; ಸಂಸ್ಕಾರಸ್ಥಳ. [ಸಂ.]

ಸಂಸ್ಕಾರ (ನಾ). ೧. = ಸಂಸ್ಕಾರ ೧, ೨. = ಸಂಸ್ಕಾರ ೨ : ಚಾಂಗ ಬಾಯಿಂ ಪಾಯಿದ್ದ) . . . ಶಾಂ ಶಬ್ದಾಲಂಕಾರಾಂಗಿಂ ಸಂಸ್ಕಾರಂ, ಶೂಚಾಶಬ್ದಂ (ಚಾಸ್ಪಾ. ೫೫-೨೨). [ಸಂ.]

ಸಂಸ್ಕಾರಪದ್ಧತಿ (ನಾ). ಶ್ರೇಯಾಗಿಗಳು ಸೇವೆಯೇಳೆಂದು ಮೊದಲೇ ಗೊಳ್ಳುವುದಿಲ್ಲಿಂದ ಮೆದ : ಸೂಚಾಯ್ಕೆಗೆ ಜಾಹೀರಾ ಹೊಟ್ಟು ಬಂದಾಯ . . . ಇದಿಪ್ಪಗೆಂಟಿಸಿ(ಲಾಂಗ. ಸಂಸ್ಕಾರಪದ್ಧತಿಯಲ್ಲಾಂದಿರ್ ಗಾಂಚಾಲಗೆ (ಶ್ರೀಮಾ. ೨೬-೯). [ಸಂ.]

ಸಂಸ್ಕಾರಸೇವೆ (ನಾ). ಗೊಳ್ಳುವುದಿಲ್ಲ ಮೆದ. — ನಿರ್ಣಾಪ : ಸಚಿವಾಗಿ ಶಾಸ್ತ್ರಿಗೆ ವಿಶಾಖಪಟ್ಟಿಂಗೆ ಶಾಸ್ತ್ರಾಲ್ಲಾಗೆ ಸಂಸ್ಕಾರಸೇವೆಯಲ್ಲಿಯಾ ಇಂದು ಮೊಂಬಾಯಿಯಲ್ಲಿ (ಆಚ್ಚಾ. ೯-೧೬). [ಸಂ.]

ಸಂಸ್ಕಾರಹೀನ (ವಿ). ಸಂಸ್ಕಾರವಾಗಿ ಮಟ್ಟು ರಚನ್ಯವಾಗಿರಲು, ನಿರ್ದಿಷ್ಟ ಪದಗಳಿಗೆ ಬದಲಾಗಿ ಬೇರೆ ಪದಗಳನ್ನು ಒಂದು ಕ್ರಮವಿಲ್ಲದೆ. ಸ್ವಚ್ಛಂದವಾಗಿ ಬಾಗಿ ಬಳಸುವ ಭಾಷೆ ; ಗೊಡ್ಡಲಮಿಸ : "ಸಂಸ್ಕೃತ, ಸಂಸ್ಕಾರಹೀನ" (Cult. ೧೪೭. ೧೭೬). [ಸಂ. ಸಂಸ್ಕಾರಹೀನ]

ಸಂಸ್ಕಾರಪ್ಪ.ಕಿಯ (ನಾ). ಶ್ರೇಯಾಗಿಗಳು ಸೇವೆಯೇಳೆಂದು ಮೊದಲೇ ಗೊಳ್ಳುವುದಿಲ್ಲಿಂದ ಸ್ವಳ ; ಸಂಸ್ಕಾರಸ್ಥಳ : "ಮಂಟಪಿಂ ಸಂಸ್ಕಾರಮಿಯಂ" (ಕ್ಷೇಮ. ೨೮). [ಸಂ.]

ಸಂಸ್ಕಾರಿಯಿ (ನಾ). ಸಂಗ್ರಹವಾಗಿ ಮಟ್ಟು ರಚನ್ಯವಾಗಿರಲು, ನಿರ್ದಿಷ್ಟ ಪದ, ಅಕ್ಷರಗಳಿಗೆ ಬದಲಾಗಿ, ಒಂದು ಕ್ರಮವಿಲ್ಲದೆ ಸ್ವಚ್ಛಂದವಾಗಿ ಸರಿಯದ ಬೇರೆ ಪದ,ಅಕ್ಷರಗಳಿಂದ ಕೂಡಿದ ರೀತಿ : ಸ್ಪೂರಣಕ್ಕ ಗಾಯಾಂದ ಸಂಸ್ಕಾರಾಸಿ (Alphabetic Code language)ಯಮ್ಮಿಗಳಿಂದ ಒಂದು ಪ್ರಮುಖ ಶ್ರೇಯಸ್ಸ ಭೂಗಾಲಾ ವಿಗಾಲ ಪಥದ ಅಧಿಕಾರಾಲ್ಲಿ ಯಂತಿಯಿಂದ ಸ್ಪೂರಣಕ್ಕ ಸಂಸ್ಕಾರಿಯಿಯಲ್ಲಿ ಶಿಷ್ಟಿಯಿಂ (ಗಣಿ. ೧೨೨). [ಸಂ.]

ಸಂಸ್ಕಾರಿಸು (ನಾ). = ಸಂಸ್ಕಾರಿಸಿಕ : ಇಂಗಾಲಂ ಗಾಯಾಲ್ಲಿ ಸ್ಪೂಲಾಗಿ ಇಂಗಾಲ ಮತ್ತು ಸ್ಪೂಲ್ಯಸ್ಥಿಯಾಲ್ಲಾ ಸಂಸ್ಕಾರಿಸುವ ಕ್ರಿಯೆ (ಪ್ರಾಣಿ. ೯-೧೨೦). [ಸಂ. ಸಂಸ್ಕಾರಿಸು+ಅಲ್]

ಸಂಸ್ಕಾರಿಸುವಿಕೆ (ನಾ). ಶ್ರೇಯಾಗಿಗಳು ಸೇವೆಯೇಳೆಂದು ಮೊದಲೇ ಗೊಳ್ಳುವುದಿಲ್ಲಿಂದ ಮೆದ ಸೇವೆ, — ಕಾಲ : ಸಂಸ್ಕಾರವಿಯಾಯಂ ಸುಲಿಂ ಸಿಂಬಿಲ್ಲಾ ಮಟ್ಟಾಯ್ಕಿಯಾಯಿಂದ ಮಾಯಿಯಂ ಯಾ ಭೂಮಲ್ಲು ಸುಲಂಯಾಯಿಂದ ಸಂಸ್ಕಾರಂ ಸೊಗಯಿಂದ (ಆಚ್ಚಾ. ೯-೨೨). [ಸಂ.]

ಸಂಸ್ಕಾರ್ಯ.ಲ, ಸಂಸ್ಕಾರ್ಯಳ (ನಾ). = ಸಂಸ್ಕಾರ ೨ : ಸಂಸ್ಕಾರ್ಯಂ ಬಾಲಿಯಾ ಮಾಗ (ಶಬ್ದಾ. ೪-೨೨). ಸಂಸ್ಕಾರ್ಯಳ : "ಹೀಂ ಸಂಸ್ಕಾರ್ಯಳಂ" (ಆಚ್ಚಾ. ೧೯). [ಸಂ.]

ಸಂಸ್ಕಾರ್ಯಳ 'ಸಂಸ್ಕಾರ್ಯಲ' ನೋ.

ಸಂಸ್ಕಾರ್ಯಾಸ (ನಾ). = ಸಂಸ್ಕಾರ ೨ : ಆಗಿಂ. ಭಾಗಾಲ್ ಸಂಸ್ಕಾರ್ಯಾದ್ಯ ಸೊಗಾಯಿಂದ, ಸೊಂಪಾಲ ಬಯಸ್ಸಿಲ್ಲ (ಭಾಷಾ. ೫೫). [ಸಂ.]

ಸಂಸ್ಕಾಸು (ಕ್ರಿ). ಸೂಚನೆ ಕೊಡು ; ಸೂಚಿಸು : ಈ ಬಾಲ್ಯಂದು . . . ಅಂಗಾಲಾಗಿಗಳ ಬಿಟ್ಟಲ್ಲ ಮೂಲ ರಂಗಾಗಿಲ್ಲ ಸಂಸ್ಕಾಸಿಲ್ಲಿಂ (ಭಾಷಾ. ೫೫) ; ಅವಯ ಅಧಿಯಿಂದೆಯಿಂದ ಸಂಸ್ಕಾಸು, ಅಳಿಸಿಲ್ಲಿ, ಅಲ್ಲಾ ಪಾಯಿಸುವುದು ಮುಂದಿನಿಸುವುದು (ಭಾಷಾ. ೨೫೦). [ಸಂಸ್ಕೃತ + -ಆಲ್.]

ಸಂಸ್ಕೃತಿ 'ಸಂಸ್ಕೃತ' ನೋ.

ಸಂಸ್ಕೃತ 'ಸಂಸ್ಕೃತ' ನೋ.

ಸಂಸ್ಕೃತ (ಗು). ೧. ಮುಯಿಯಿದ ; ಸಂಪಾಯಿಸಿದಾದ : ಮೂಲಿಯಲ್ಲಾ ಬಯಸ ಜಿಲ್ಲ ಭೂಲಾಯಿಂದ ಸಂಸ್ಕೃತವಿಲ್ಲಂ ಮಟ್ಟು ಭೂಮಿಯಾ ಸಂಪಾಯಿ ಸೊಂಪಾಲ (ಸಂಸ್ಕೃ. ೧-೧) (ನಾ). ೨. ಉಚ್ಚಾರಿಸಿ ; ಸಂಪಾಯಿಸಿಲ್ಲಾಗಿಸಿ ; ಮುಯಿಯಿಸಿಲ್ಲಾಗಿಸಿ: ಸ್ಪಾಯಿಯಾಗಿ ಸಂಪಾಲ ರಿಗಾಲ (ಸಂಸ್ಕೃ. ೮೫). ೩. ಭೂಮಿ : ಅಂಗಿಸಿ : ಬಿಂಬ ಬ್ಯಾಲಾಯಿಗಾ ಭಕ್ತಿಯಾಲಾಂ ಸಂಪಾಲಾಯಿಂ ಶಾಲ್ಲಿ (ಸಂಸ್ಕೃ. ೧-೬೧) ೪. ನಾಚಿಗೆ : ಲಜ್ಜೆ : ಸಂಪಾಯಿಸಿಲ್ಲಾಯಿಂದ ಶಾಲಾಯಿಂದಾಗಿ ನಿಯಾಗಿಲಾ ಭೂಮಾಲಾಗಿಲಾಂ ಬಿಂಬಾಗಿ ಭೂಮಿಸಿಲ್ಲಿ (ಆಚ್ಚಾ. ೨೯-೨೫೦) : ಸಾಯಿಸಿಲ್ಲಾ ಸಾಲಿಲಾಗಿ ಇಚ್ಛೆಯಂ ಶಾಲ್ಲಾಯಿಂಗಳ ಸಂಪಾಲ ಏನು ಮಾಯಿಯಂ ತೋಯಿಸಿ (ಆಚ್ಚಾ. ೧೫೯). ೫. ಒಂದು ಬಗೆಯ ವಿಷಯ. ೬. ಅಂಗಸಂಸ್ಕೃತಿ. [ಸಂ.]

ಸಂಸ್ಕೃತಪಡಿಸು (ನಾ). ದಾಖ್ಯಸ್ಥ : ಭಿಡೆಯ : ಸಂಪಾಲಾಯಿಸಿಲ್ಲಾಯಾಲ . . . ಮಿಲ್ಲ ಮಾಯಾಲ ಒಂದ ಮುಂದ ತೋಯಿಸಿಲಾ (ಭಾಷಾ. ೫೫). [ಸಂ.]

ಸಂಸ್ಕೃತಿ (ನಾ). ೧. ಬುದ್ಧಿವಿಕ ; ಸಂಪಾಲಾಯಿಸಿಲ್ಲಾಯಿಕ . ೨. ಸಂಗ್ರಹವು ಭೂಮಿ ; ಸಂಸ್ಕೃತಿಯಾಯಿಲ್ಲಾ : ಒಂದು ಜಾತ್ಯಾಲಾಂಗದಲ್ಲಿ, ಸೂಚಿಸಿ ಭೂಮಿಲಾ ಬಿಟ್ಟಾಯಿಂದ, ಸಂಪಾಲಾಯಿಂದ . . . ಇಂಯಿಲ್ಲಿ ಬಾಲಾ ಗಾಲಾ ಇಚ್ಚಿ ಬಾಲ್ಯಗಳಲ್ಲಿಲ್ಲ (ಆಚ್ಚಾ. ೫೫). [ಸಂ.]

ಸಂಸ್ಕೃತಿಯಿ (ಕ್ರಿ). ೧. ಸಂಪಾಲಾಯಿಸಿಲ್ಲಾ ; ಮುಯಿಯಾ ; ಬಾಲಾ : ಸಂಪಾಲಾಯಿಸಿಲ್ಲಿ ಮುಯಿಯಾಲಿಂದ ವಿಶಾಲಾಯಿಂದ (ಭಾಷಾ. ೬-೨೬-೨೫). ೨. ಬಿಸ್ಸಿಸಿ ; ಸಂಪಾಲಾಯಿಸಿಲ್ಲಾಯಿಂ : ವಿಷಾಲಾ ಸಂಪಾಲಾಯಿಲ್ಲಾಯಿಂದ ಏನಾಲಾ ವಿಷಯಿಸಿಲ್ಲಾಯಿಂದ ಸಾಲಾಲಾಸಿಲಾಯಿಂ ಇಂಯಿಲಾಯಿಂದ ಭೂಮಿಲಾಯಿಸಿಲ್ಲಿ ಸಂಪಾಲಾಯಿಸಿಲ್ಲಿ ಸಿಲಿಸಿ ಸಂಪಾಲ . . . ಭೂಮಿಲಾಯಿಲಾಂ ಏಲ್ಲಾಯಿಲಾಂ ಲೆಂಲಾಂ (ಭಾಷಾ. ೬೭೦); ಭೂಲಾಂ ಸಂಪಾಲಾ ಬಿಲ್ಲಿ ದಿಲ್ಲಿಗಳ್ಳಿಲಾ ನಿಲ್ಲಿಸ ಸೊಂಪಾಲಾಯಿಲಾಂ (ಭಾಷಾ. ೧೫೨-೧೫). [ಸಂಸ್ಕೃತ + -ಆಲ್.]

ಸಂಸ್ಕೃತಿ 'ಸಂಸ್ಕೃತ' ನೋ.

ಸಂಸ್ಕೃತಿ (ನಾ). ೧. ಭೂಮಿಯಲ್ಲಿಸಿಲಾ ; ಭಂಬಿಸಿಲಾ. ೨. ಇಂದ್ರ : ಸಂಪಾಲಾ ಸಂಸ್ಕೃತಿ ಬಂಬಿಲಾಂ ಪಾಲಿಲಾಂ ಸಿಲ್ಲಿಂ ಪಾಲಿಲಾಯಿಲಾಂ ಬಿಲಾಂ (ಭಾಷಾ. ೬-೧೬) ; ಒಂದ ಸಂಪಾಲಾಯಿಲಾಂ ಗಾಲಾಂ ಬಿಲಾಂ ಸಂಸ್ಕೃತಿಯ ಸಿಲಾ ಬಿಲಾಲಾಂ ಬಿಲಾಲಾಂ ಬಿಲಾಯಿಲಾಂ ಬಿಲಾಯಿಲಾಂ (ಭಾಷಾ. ೬-೧) ೩. ಯಿಲ್ಲಿ ; ಕೆಲಸ. [ಸಂ.]

ಸಂಸ್ಕೃತಿಯಾಗು (ನಾ). ಇಂದ್ರನ ಬಲ ; ಬಲಾಯಿ : ಸಂಸ್ಕೃತಿಯಾಗು ಬಲಾಯಿಲಾಂ ಸಾಲಾಲಾಯಿಲಾಂಲಾಂ ಸಿಲಾಲಾಂ ಬಿಲಾಲಾಂ ಬಿಲಾಲಾಂ (ಭಾಷಾ. ೧-೧೬). [ಸಂ.]

ಸಂಸ್ಕೃತಿಯಾಗುಲು (ನಾ). ಇಂದ್ರನ ಬಿಲಾ ; ಬಲಾಯಿ : ಇಲಾಲಿ ಸಂಬಂಧಿಸಿಲಾ ಸಂಬಂಧಿಸಿಲಾಂ ಬಿಲಾಲಾಂ ಬಿಲಾಲಾಂ ಬಿಲಾ

ಸಂಖ್ಯಾಮಾನ (ನಾ). ೧. ಒಂದು ; ನೇರ ; ಒಂದರ ; ಪ್ರಚಲಿತ ಸಂಖ್ಯಾ ವ್ಯವಸ್ಥೆಯಲ್ಲಿ ಸಂಖ್ಯೆಗಳನ್ನು ಬರೆಯುವಾಗ ಬಲದಿಂದ ಎಡಕ್ಕೆ ಸಾಗುತ್ತಾ ಮೊದಲನೆಯ ಸ್ಥಾನದಲ್ಲಿ ಬರೆಯುವ ಅಂಕೆ ಅಥವಾ ಚಿಹ್ನೆ ಒಂದರ ಸ್ಥಾನವನ್ನು ಸೂಚಿಸುತ್ತದೆ. ಅದರ ಎಡಕ್ಕಿರುವ ಅಂಕೆ ಹತ್ತರ ಸ್ಥಾನವನ್ನು ಸೂಚಿಸುತ್ತದೆ. ಅದರ ಎಡಕ್ಕಿರುವ ಅಂಕೆ ನೂರರ ಸ್ಥಾನವನ್ನು ಸೂಚಿಸುತ್ತದೆ. ಹೀಗೆ ಮುಂದುವರಿಯುತ್ತದೆ (ಅಂಕ. ೬-೨೦ ಪ). ಸ್ಥಳಾವಕಾಶವನ್ನು ಸಂಕ್ಷಿಪ್ತವಾಗಿ ವಿವರಿಸುವುದಕ್ಕೂ ಅಂಕಿಗಳ ಮೌಲ್ಯವನ್ನು ಸುಲಭವಾಗಿ ಗುರುತಿಸುವುದಕ್ಕೂ ಸಂಖ್ಯಾಮಾನ ವ್ಯವಸ್ಥೆ ಅನುಕೂಲಕರವಾಗಿದೆ (ಅಂಕ. ೧೨-೧೦ ಪ) : ಒಂದರಿಂದ ಒಂಬತ್ತರವರೆಗೆ ಸಂಖ್ಯೆಗಳ ಬರಹ ಸಂಖ್ಯಾಮಾನ ಪದ್ಧತಿಯಲ್ಲಿ ಸರಳವಾಗಿದೆ ಮತ್ತು ಸಂಖ್ಯಾಮಾನ ವ್ಯವಸ್ಥೆಗೆ ಆಧಾರವಾಗಿದೆ (ಅಂಕ. ೧೩-೧೦ ಪ). ೨. ಶೂನ್ಯ (ಸೊನ್ನೆ) ; ಯಾವುದೂ ಇಲ್ಲದ ಸ್ಥಿತಿ ; ಏನೂ ಇಲ್ಲದಿರುವುದು : ಅಂಕೆಗಳ ಸ್ಥಾನವನ್ನು ಸೂಚಿಸಲು ಸಂಖ್ಯಾಮಾನ ವ್ಯವಸ್ಥೆಯಲ್ಲಿ ಸೊನ್ನೆಯ ಬಳಕೆ ಅತ್ಯಗತ್ಯವಾಗಿದೆ. ಸೊನ್ನೆಯ ಸಂಕೇತವಾಗಿ ಚುಕ್ಕಿಯನ್ನು ಬಳಸಿದ್ದಾರೆ (ಅಂಕ. ೧೨-೧೦ ಪ) : ಒಂದಕ್ಕಿಂತ ಕಡಿಮೆ ಸಂಖ್ಯೆಯ ಸಂಕೇತವಾಗಿ ಸೊನ್ನೆಯನ್ನು ಬಳಸಲಾಗುತ್ತದೆ (ಅಂಕ. ೧೩-೧೦ ಪ). ೩. ಶೂನ್ಯ ಸಂಕೇತ ; ಸೊನ್ನೆಯ ಸಂಕೇತ : ಸೊನ್ನೆಯ ಸಂಕೇತವನ್ನು ಸಂಖ್ಯಾಮಾನ ವ್ಯವಸ್ಥೆಯಲ್ಲಿ ಬಳಸಿದ್ದಾರೆ (ಅಂಕ. ೧೩-೧೦ ಪ). ೪. ಒಂದರಿಂದ ಒಂಬತ್ತರವರೆಗಿನ ಸಂಖ್ಯೆಗಳು : ಸಂಖ್ಯಾಮಾನ ವ್ಯವಸ್ಥೆಯಲ್ಲಿ ಒಂದರಿಂದ ಒಂಬತ್ತರವರೆಗಿನ ಸಂಖ್ಯೆಗಳಿಗೆ ಪ್ರತ್ಯೇಕ ಚಿಹ್ನೆಗಳಿವೆ (ಅಂಕ. ೧೩-೧೦ ಪ).

ಸಂಖ್ಯಾಮಾನ = ಒಂದು ಬಿಡುವು ; P ಲೆವೆಲ್‌ನ ಎಡಕ್ಕೆ ಬಿಡುವಿರುವ ಬಿಡುವು : ಲೇಖ್ಯಾಭಿನ್ನವು ಸಂಖ್ಯಾಮಾನವನ್ನು ಸೂಚಿಸಲು ಬಳಸುವ ಸಾಧನವಾಗಿದೆ (ಲೇಖ. ೧೨೩, ೧೨೦-೨ ; ೧೧೨೩). [ಸಂ.]

ಸಂಖ್ಯಾಪಟ್ಟಿಯಲ್ಲಿ (ನಾ). ೧. ಮೊದಲಿನಿಂದಲೂ ಅಧಿಪತ್ಯದ : ಸಂಖ್ಯಾಪಟ್ಟಿಯಲ್ಲಿ ಇರುವ ಅಥವಾ ಇದ್ದ ಸ್ಥಾನಮಾನಗಳಿಂದಲೂ ಅಧಿಕಾರಗಳಿಂದಲೂ ಕೂಡಿದ ಅಥವಾ ಅವುಗಳಿಗೆ ಸಂಬಂಧಿಸಿದ : ಸಂಖ್ಯಾಪಟ್ಟಿಯಲ್ಲಿ ಇರುವ ಅಥವಾ ಇದ್ದ ಸ್ಥಾನಮಾನಗಳಿಂದಲೂ ಅಧಿಕಾರಗಳಿಂದಲೂ ಕೂಡಿದ ಅಥವಾ ಅವುಗಳಿಗೆ ಸಂಬಂಧಿಸಿದ (ಅಂಕ. ೧೨-೧೦ ಪ). ೨. ಅಧಿಕಾರ ಸ್ಥಾನಮಾನಗಳಿಂದ ಕೂಡಿದ ; ಅಧಿಕಾರ ಸ್ಥಾನಮಾನಗಳಿಂದ ಕೂಡಿದ (ಅಂಕ. ೧೨-೧೦ ಪ).

ಸಂಖ್ಯಾಪಟ್ಟಿಯಲ್ಲಿ = ಅಧಿಕಾರ ಸ್ಥಾನಮಾನಗಳಿಂದ ಕೂಡಿದ ; ಅಧಿಕಾರ ಸ್ಥಾನಮಾನಗಳಿಂದ ಕೂಡಿದ : ಸಂಖ್ಯಾಪಟ್ಟಿಯಲ್ಲಿ ಇರುವ ಅಥವಾ ಇದ್ದ ಸ್ಥಾನಮಾನಗಳಿಂದಲೂ ಅಧಿಕಾರಗಳಿಂದಲೂ ಕೂಡಿದ ಅಥವಾ ಅವುಗಳಿಗೆ ಸಂಬಂಧಿಸಿದ (ಅಂಕ. ೧೨-೧೦ ಪ). [ಸಂಖ್ಯಾ + -ಆಪ್ಟ್]

ಸಂಖ್ಯಾಭಿನ್ನ (ನಾ). ೧. = ಸಂಖ್ಯಾಮಾನ ೩ : ಲೇಖ್ಯಾಭಿನ್ನ ಸೂಚಿಸುವ ಸಂಖ್ಯಾಮಾನವನ್ನು ಸೂಚಿಸುವ ಲೇಖ್ಯಾಭಿನ್ನ

ಬಹಿಗ ಪೂರ್ವಕ ಹೋಮ (ಯಜ್ಞ). ಪ. (ಅಂಗ) ಎಳ್ಳು ಮೊದಲಾದವನ್ನು ಬೆರೆಸಿದ ಪದಾರ್ಥ : ಸಂಸ್ಕೃತ ಒಡಿಯ ಶುಗಂಧವಾಗಿರುವ ಸಾಧಿಯ ಪ್ರಭಾವ. — ಮಾಂಸ್ಯ : ಸ್ವಾತಿಕಾರ : ಅಂಗ್ಯಾ . . . ಈ ಸ್ಯಾಮಾಯಿಂಗ ಮಾಸ್ಯ ಮಾಂಸ್ಯಾಯಾ ಸಂಸ್ಕೃತಮಿಶ್ರಪಾಣಿಸ್ಯಾಗಿ (ಯಜ್ಞ. ೬ ೮೨೨) ; ಇದು ಸಾಧಿಸಿದಾಗ ಅಳ್ಳಿದ ಜೀವಾಣಿಯು ಬರುತ್ತದೆ. ಧಾಮಿಂಗಿಯು ಸಂಸ್ಕೃತಮಿಶ್ರಪಾಣಿಯಾಗಿ (ಯಜ್ಞ. ೧೦. ೬). [ಸಂ.]

ಸಂಸ್ಕಾರವಿಧಿಸ್ಥ (ನಾ). [ಭೂಮಿಗೋಸ್ಕ] ಭೂಮಿಯನ್ನು ಸೇವಿಸಿದ ಅಂತ್ಯಕ್ಕೆ ಅಥವಾ ದೈವಿಗಳಿಗೆ ಸೂರ್ಯನು ಬೆಳಿಸುವುದನ್ನು ಸೂಚಿಸುವಂತೆ ಭೂಮಿಯ ಅಥವಾ ಗೂಳಾದ ಮೇಲೆ ಎಳೆದಿಯ ಗೆರೆ : ಸೂರ್ಯಾಯಂಯಾಗಿ ಯಾವ ಸ್ಥಳಗಳ ಮೇಲೆ ಹಾಲ್ಕು ಸಂಖ್ಯೆಯ ಮುಳ್ಳುಗಳು ಹೊಂದಿಕೊಳ್ಳಿ ಇ ಸ್ಥಳಗಳನ್ನು ಹೊಂದಿಸಲ್ಪಟ್ಟಾಗಿ ಭೂಮಿಯಾದ ಸತ್ಯವು ಬರೆಯಲ್ಪಟ್ಟಿತ್ತು ಭಾವಿಸಲ್ಪಟ್ಟಿತ್ತು ಮೊದಲಾಗಿ ''ಸಂಸ್ಕಾರವಿಧಿಸ್ಥ'' ಎಂದು ಹೆಸರು (ಭೂಗೋಳ. ೦). [ಸಂ.]

ಸಂಸ್ಕಾರವಿಷ್ಟು (ನಾ). (ಸಂಸ್ಕೃರಿಯಾದ ಶುಗಾರ) ಸೂರ್ಯಾಗ ಮಳೆರಾಶಿಯ ಯನ್ನು ಕ್ಷುದ್ರಮಿಯ ದಿಗೆ ಹಿಂದುಗಾಗಿ ಉಳಿಯಾದ ಹೆಸ್ಸು : ಪೌರಾಣ್ಯಾಸ್ಸು; ಮಳೆಪಂಕ್ಷಮಾಗ : ಸಂಸ್ಕಾರವಿಷ್ಟುವನ್ನು ಗಣಿಸುಗಾಗ ಭೂಮಿ ಸಹಮಿಸ್ಸಿ (ಯಜ್ಞ. ೬೦). [ಸಂಸ್ಕಾರ + ಪಿಷ್ಟು (< ಪಿಷ್)]

ಸಂಸ್ಕಾರಿ (ನಾ). ೧. ದುರ್ಗಮವಾದ ಮಾರ್ಗ, — ಹಾದಿ. ೨. ಕ್ಲಿಷ್ಟಕರವಾದ ಶ್ರಗಡಿ. ೩. ಸೆಣಕುವ ; ಸಂಕಟ. [ಸಂ.]

ಸಂಕ್ಲಿಷ್ಟ (ನಾ). ಅಕ್ಲಿಷ್ಟ ಅವಾದವನು ; ಹೊಂದಿಕೆಗೆ ಒಟ್ಟುಂಡವನು : ಪೂರ್ವಾಷ್ಟ ಧಾನಿಂ ಶಿಷ್ಟಮಂಕ್ಲಿಷ್ಟ ಪೌರಾಣಿಯಾಗಿಯಾಯಿಂದಲೂ ಸಂಸ್ಕಾರ ಕ್ಲಿಷ್ಟಮಿಷ್ಟಾಂ ಸಂಸ್ಕಾರ್ಷ್ಟ (ಆ_ಪ್ರ. ೧೨೨). [ಸಂ.]

ಸಂಕ್ಷಾಭ್ಯಮಧೀರತೆ (ನಾ). [ಸ್ಥಿತ] ಬದು ಬಗೆಯ ದುಃಖಗಳಲ್ಲಿ ಒಂದು ; ರಾಷ್ಟ್ರದಿಂದ ಅಂಯಾಗದ ದುಃಖ : ಅಂಗಾಂ ಮಾಯಾ ಕ್ಲೇಶಮಾ ಜಾಸ್ಯಗೊಂಡಿರಂತೆ ಸಂಕ್ಷಾಭಿಯಮಧೀರತೆಯಾಗಿಯೂ ಮಾಯಾಸ್ಥಿತಮಾಯಿಂಗಳಾಗಿ ಶುಗಾದಾಯಿಸುವುದಿಲ್ಲಂ (ಆಯಾಮ. ೧೧-೧೬ ಬಿ). ಔ 'ದಾಯಿಷ್ಟೀರತೆ' ಎಂಬುದಕ್ಕೆ ಬದಲಾಗಿ ಇದ್ದಿ. ಈ ಶಬ್ದವನ್ನು ಬಳಸಲಾಗಿದೆ. [ಸಂ.]

ಸಂಕ್ಷೇಪ (ನಾ). ದುಃಖ ; ಸಂಕಟ : ಯಾವುಷಾಗ್ಯ ಯಾವ ಅಂಗಾಷ್ಟಿಯಲ್ಲಿಯೂ ಸಿದ್ಧ ಯಾವಾಂಗಗಾಯಾಯಾಂ ಯಾವಂಯಾಂಗಾಯಾಂಗಾಯಾಂಗಾ

ಸಂಖ್ಯೆ (ನಾ). ಮುದ್ರೆ ; ಲಿಪಿ : "ಸಂಗ್ರಾಮ, ಸಮಾಜ, ಸಮಾಖ್ಯ, ಸಮಾಲಂ, ಸಂಖ್ಯೆಂ . . . ವಿಗ್ರಹ — ಈ ೨೫ ಕಾಗಂ" (ಅಮರಾವ. ೩೫-೫೯). (ಹಿ. ಸಂಖ್ಯಾ)

ಸಂಖ್ಯೇಕ (ನಾ). ವಿಗಣಿಸಿಕೆ ; ರಕ್ಷಣಾವಿಧಿ ; ನಿರ್ದಿಷ್ಟಅಂಕೆಯನ್ನು ಅಂಟಿಸಿಯಿಡುವುದು. (ಕ.)

ಸಂಖ್ಯೇತ (ನಾ). ೧. ಎಣಿಕೆ ಮಾಡುವುದು ; ವಿಗಣಿಯದು. ೨. ವಿಗಣಿಸಲು ಸಾಧ್ಯವಾಗುವಂಥದು ; ವಿಗಣಿಸಿ ಸಲ್ಲಬಹುದು : ಸಂಖ್ಯೇತಾತ್ಮಕ ಯಾವ ವಿಷಯಕ್ಕೂ ಸಂಬಂಧಿಸಿದಂತೆ ಸಂಖ್ಯಾತೀತವಾದುದನ್ನು ಸಂಗ್ರಹಿಸಿ (ಸಂಪೂರ್ಣ. ೧೯-೨೦ ಪೀ) ; ಸಂಖ್ಯೇತವಿದ್ಯಾರ್ಥಿಯಿಂದಲೂ ಸಂಖ್ಯೇತ ದೇವರಿಂದಲೂ ಕೊಚ್ಚಲಾಯಿತು (ಕಾಪಾ. ೧೪-೧೬). ೩. ಸಂಖ್ಯೆ : ಅಂಕೆ : "ಗಣಂ ಸಂಖ್ಯೇತಂ ಬಹುಗಣ ಶಬ್ದಂ ಧನವಾಚಿ ಸಂಖ್ಯೆಯಲ್ಲಿ . . ." (ಸಮ್ಮೇ. ೧೮೦-೮೨). ೪. (ವೈ.ಸ) ಶಾಲಾಕ್ರಮಾಗತೆಗಳಲ್ಲಿ ಒಂದು : ಸಪ್ತಮ ಸಂಖ್ಯೇತಾಮಾಖ್ಯಾತ ಮಾಯಾಜಾಲಗಳಲ್ಲಿಯು ಬಿಡದೆ ಸಂಖ್ಯಾತೀತವಾಗಿ ಸುಳಿಯುವ ಸೃಷ್ಟಿಯ ಸೊಗಸನ್ನು ಸವಿಯುವುದು ಸಾಧ್ಯವಿಲ್ಲ (ಮಾಗಾಸ್ವಾ. ೧೮-೧೯). ೫. ದೃಷ್ಟ ಕೃಷ್ಣಮಾಗಳೆಂದಾಗಲಿ ಒಂದು : ಕೃಷ್ಣಕೃಷ್ಣಾಜಾದ್ಯ, ಸಂಖ್ಯಾತೀ, ಅಮಾಖ್ಯಾತಿ, ಅಮಾಖ್ಯಾಯಂತು ಮುಂತಾ ಭೇದಗಳಿವೆ. ಮುಂದಿನ ಸಂಖ್ಯೆಯು ಮಂಗಳಾಖ್ಯಾಯಿಗಳಿಗೆ ಸಲ್ಲುವಾಗಿರುವಂತೆ ಅದು ಸಂಖ್ಯಾಪಾಗಿದೆ (ಭೂಪ. ೬೦೪). (ಹಿ.)

ಸಂಖ್ಯೇತರ (ಗ). ೧. ವಿಗಣಿಸಲಾಗದ ; ಅಸಂಖ್ಯಾತವಾದ ; ಅಲ್ಲಿ ಮೊದಲಿನಿಂದ ಕೊನೆಯವರೆಗೆ ಕೊಟ್ಟ ಸಂಖ್ಯಾಂಕಗಳ ಸಾಲಿನಲ್ಲಿ ಸಂಖ್ಯಾತರ ಸಾಲಿನಲ್ಲಿರುವಂತೆ ಅಕ್ಷರಗಳೂ (ಕಾಲಾಪ್ರ. ೧-೧೦ ಪೀ) ; ಅದರ ಕೆಳಗೆ ನಿಮ್ಮ ದಾಖಲೆಗಳ ಸಂಖ್ಯೆಯಂತೆ ಕೃತಿಯೂ . . . ಮೀಸಲಾಗಿ ಇಡಬೇಕಾಗಿಲ್ಲ. ಸಂಖ್ಯಾತರ ಬಾಬುಗಳ (ಅಕ್ಷಾ. ೧೫-೧೬). (ನಾ). ೨. ವಿಗಣಿಸಲಿಗೆ ಅಳವಡಿಸಲಾಗದಿರುವುದು ; ಅಸಂಖ್ಯಾತವಾಗಿರುವುದು : ಅಕ್ಷರಮಾಲೆಯ ರೀತಿಯಲ್ಲಿ ಸಂಖ್ಯಾತೀತವಾಗಿರುವುದೂ (ಅಂಬಿ. ೧೨ ಪೀ) . ಭಾಷೆಯಲ್ಲಿರುವ ಅಸಂಖ್ಯಾತವಾದ ಸೊಬಗು ಸಂಖ್ಯಾತೀತವಾಗಿರುವುದು ಸಂಭವನೀಯ ಸೃಷ್ಟಿಗೆ (ಅಕ್ಷಾ. ೧೫-೧೬). (ಹಿ.)

ಸಂಖ್ಯಾತ (ಸಾ). ೧. ವಿಗಣಿಸಿರುವ ; ಗಣನೆ. ೨. [ವ್ಯಾ.ಶ] ಸಂಖ್ಯಾವಾಚಕವಾದ ನಾಮಪದ : ನೀವೆಷ್ಟು ಸಂಖ್ಯೇತರ ಸಂಖ್ಯಾತರ ದೊಡ್ಡಪ್ಪ ಭಾವಜೀವಕ್ಕೆ ಬಹುಮಾನಿಸಲು ವಿಷಯಗಳು ಬಹಳಷ್ಟಾಗಿವೆ ಎಂಬುದನ್ನು ಲೆಕ್ಕಿಸಬೇಕಾಗುತ್ತಿಲ್ಲ (ಆಚಾ. ೧೪೯). ೩. [ಛಂದ] ಹತ್ತಿಕ್ಕದುಗಳಲ್ಲಿ ಒಂದು : ಶ ಅಕ್ಷರ ಛಂದಸ್ಸಿನ ಒಂದಿಡಿ ಮುಂದಿನ ಛಂದಸ್ಸುಗಳಲ್ಲಿ, ಎಷ್ಟು ಸಮಸ್ಯಕ್ಷರಗಳು, ಅರ್ಧಸಮ ವೃತ್ತಕ್ಷರಗಳು ಮತ್ತು ವಿಷಮವೃತ್ತಕ್ಷರಗಳವರೆಗೆ ಎಂಬುದನ್ನು ತಿಳಿಸಲು ಸಹಕಾರಿಯಾದ ಒಂದು ಕ್ರಮ : ಸಂಖ್ಯಾತಮಂ ತೆಗ್ಗಲ್ಕಂ (ಅಜಿತಪು. ೬-೨೦೦). (ಹಿ.)

ಸಂಖ್ಯಾಪೂರಣ (ನಾ). [ವ್ಯಾ.ಶ] (ಕ್ರಿಯೆಯಿಂದ) ಸಂಖ್ಯೆಗಳನ್ನು ಪೂರಿಸಿ ಗೊಳಿಸುವುದು : ಅದು ಕೃತ್ರಿಮಬುದ್ಧಿಮಿಷಯಲ್ಲಿ ಅಭ್ಯಸಾಧಾರಣದಲ್ಲಿ ಸಿಸ್ಟಿಕ ಸಂಖ್ಯಾಪೂರಣದಲ್ಲಿ ಬಹುಮುಖ (ಅಜಿತ. ೨೦೬). (ಹಿ.)

ಸಂಖ್ಯಾಪ್ರಕೃತಿ (ನಾ). [ವ್ಯಾ.ಶ] ಸಂಖ್ಯಾವಾಚಕಗಳಿಗಿರುವ ಪದದ ಮೂಲರೂಪ. — ಪ್ರತ್ಯಯಿತ : ಸಾಮಾನ್ಯಪ್ರ ಅಭ್ಯಾಸಪ್ರ (ಧಾತು)ಗಳಾ ನಂತರ ಗಣಾಪ್ರ ಸಂಖ್ಯಾಪ್ರಗಳಾಂ ಆದ್ಯಾಯಿ ಹೋಪ್ರದೆ. ಅವರ ಅಭ್ಯ ಕೃತ್ಯಪ್ರಗಳಾಗುವ ಈಗ ಅಯಿಯಾಪ್ರಯಿಸಿ (ಭೂಪ. ೧೫). (ಹಿ.)

ಸಂಖ್ಯಾಬಲ (ನಾ). . ಹೆಚ್ಚಿನ ಸಂಖ್ಯೆಯಿಂದ ಸಿಗಬಹುದಾದ ಬಲ : ಅಭ್ಯಾಸ್ಯಾಗಿ ಮಾಡಿಯಾಗಿ ಸಂಖ್ಯಾಬಲದ ಮುಂದೆ ವಿಷಯ ನಿಲ್ಲಲಾರದಾಗಿರುವುದು (ಆಚಾ. ೪೨). (ಹಿ.)

ಸಂಖ್ಯಾಮಟಿಕೆ (ಗ). ವಿಗಣಿಸಿದಾಗಿ : ಅಸಂಖ್ಯಾತವಾದ : ಮಹಾಸಾಧುಪುರುಷರಾದ ಭಗವಂತನ ಸಮಷ್ಟಿಸೃಷ್ಟಿಯಲ್ಲಿರುವ ಸಂಖ್ಯಾತೀತವಾದ ಸಂಖ್ಯಾಮಟಿಕೆಯನ್ನು (ಅಷ್ಟಾ. ೧ ಪು). (ಹಿ.)

ಸಂಖ್ಯಾಯುಗ (ನಾ). ಮಿಥ ; ಬುದ್ಧಿ ; ದೃಷ್ಟಿ : "ಸಂಖ್ಯಾಯುಗ ಮಿಥ ಕೃಷ್ಣ ಮುಖ ಸಂಖ್ಯಾಮುಷ್ಟಿಯಿಂದ್ಯಾದಿಂ ಬುದ್ಧಿಯಾಂ" (ಅಂಗಾರ. ೧೬-೨). (ಹಿ.)

ಸಂಖ್ಯಾಯ್ಯ (ನಾ). ಸಂಖ್ಯೆಗಳಿಂದ ನಿರ್ದೇಶಿಸಲ್ಪಡುವ ಮಿಥ್ಯ : ಸಂಖ್ಯಾಮಿಥ್ಯ ವಿಷಯಂಗ ಸಂಖ್ಯೆಯೆಂಗಂ ಭಾಷಾದೇಶಂ ಪೆಸರಿಡಲಮಿಯಂ ಬಹುಜನಪದಮಂ ಪೆಸ್ಸುವುದು (ಅಜಿತ. ೧೮೫ ಪೃ.). (ಹಿ.)

ಸಂಖ್ಯಾವಾಚಕ (ನಾ). [ವ್ಯಾ.ಶ] ಸಂಖ್ಯೆಯನ್ನು ತಿಳಿಸುವ ಪದ : ಮಾತ್ರ ಮಗಳ ಮುಂಬಾಗಿ ಒಂದು, ಎರಡು . . . ಮೊದಲಾದ ಸಾಮಾನ್ಯಗಳನ್ನು ಇದ ಮೂಲಾಗಿವೆ. ಸಂಖ್ಯೆ ಮಾಡಿದ ಲಿಪ್ಯಗಳನ್ನು ಇದ ತಿಳಿಯುವಂತೆ ಇದಕ್ಕೆ ಸಂಖ್ಯಾವಾಚಕಗಳು ಮೊದಲು ಬಂದಿದೆ (ಭಾಷಾ. ೨೦೨). (ಹಿ.)

|< ಸಂ. ಸಂಖ್ಯಾ|

ಸಂಗ್ಯ (ನಾ). ೧. ಬೆಂಬಲಗೊಡುವುದು ; ಜೊತೆಗೆ ನೆರವುಪಡಿಸು. ೨. ಒಪ್ಪಂದ ; ನಿಶ್ಚಯವಾದ ; ಗೆಳೆತನ : ಅಮಾಯಾಮಯಿಯಾದ ಪ್ರಾಣಿಗಳ ಸಂಗಡ ಸೌಹಾರ್ದ (ಅಷ್ಟಾ. ೨೦-೨೨೦) ; ಅಲ್ಲಿ ಸಂಗ ಅಥವಾ ಧರ್ಮ (ಅಂಬಿ. ೩. ಒಡಂಬಿಕೆ ; ಸಲ್ಲಿಕೆಗಳ : ಸಂಗಾಯಾಮ್ಯು ಪಾಂ ಯ ಪಾಯಿಂದಾಯ್ಯು ಮಾಡಿ (ಅಜಿತ. ೨೫೯-೨೬೦) ; ದಿಗ್ಯೆಗಾದ ಸಂಗತಿಯ ಪ್ರಭಲ್ಲಾ ಗಾಯದ ಗಾಯದಾಗ ಗಾಯಿಲ್ಲಾ (ಸಿದ್ಧ. ೧೦-೧೦೦) ; ಧರ್ಮರಾಯನ ಸಂಗಡ ನಿಷಾದರೂಪ ಸಂಗಮೇಶ್ವರ ಮಾಯಾವಿಯ (ಮೋಹ. ೫೫-೫೯). ೪. ಜೊತೆಯಿಲೆ ;

ಸಾಮರ್ಥ್ಯ : ಅವಿಯಾಪ್ತಿಗಂ ಅವ್ಯಾಪ್ತಿಗಂ ಬಾರದಂತೆ ಲಕ್ಷ್ಯ ಸಾಮರ್ಥ್ಯ ದೋಷವಿಲ್ಲದ ಪಂಚಾವಯವವಾಕ್ಯವೆಂದರಿಯಲಿ (ಪಟ್ಟಣ. ೧- ೧೭೦). ೫. ಕೊಂಡಲ : ಸಂಗಡದಲ್ಲಿ ದೊರ ಗೆಂಗ ಅಥವಾ ಪಿಸಿಯ ಪೆಸರು : ಸಂಗ ಕೊಂಗ ಅಂ ಸಂಯೋಗ ಸಾಹಚರ್ಯವಾಚಿ (ಭಾಷಾ. ೬-೧೦) : ಸಂಬಂಧ ಸಾಧಿಸಿದ ಪದ ಸಂಗಡವಾಗಿ ಬಹುದು ಮುಂತಾದ ಮಾತುಗಳಲ್ಲಿ (ಅಭಿ. ೬-೧೦). ೬. (ಅಬ್ಬಿ) ಸಂಗಡಾಲ ಹೊಗುವ ಸಹಚಾರದಲ್ಲಿರುವವರು : ಹೆಗ್ಗಡಗ : ಅಗಲಿಲ್ಲ ಬಿಟ್ಟ ಸಂಗ ಅವರಂತ ದಾನ ಕೊಟ್ಟರು ಗುರುವಿಗು (೧೯೬೦). [ಸಂ.]

ಸಂಗತಿ (ನಾ). ಸಹವಾಸದಿಂದಬಂದಿರುವ ಗುಣ, ... ಸ್ವಭಾವ : ಕೆಟ್ಟವರ ಸಂಗತಿ ಯಿಂದು ಒಳಿತಾಗಲಿ ಕೆಟ್ಟವರಿಂದ ಸಾಧನ ಸಂಗತಿ ಒಳಿತಿಗೆ ಉಪಯೋಗ ಆಗುವುದು ಒಂದಿರಲಿ (ಮೋಹನ. ೧೫-೧೬೨). [ಸಂ.]

ಸಂಗದ 'ಸಂಗ' ನೋ.

ಸಂಗಡಿಕ (ಕ್ರಿ). ದುಃಖವನ್ನು ಹೊಂದುವ ; ಸಂಕಟವನು : ಅಂತರಂಗ ಸ್ಪೃಷ್ಟ ಸಂಗಡಿಕರು ಮಂತ್ರಿಯಾಗಿ ಬಾಹ್ಯವರ್ತಿಗಳಿಂದ ತೊಂದರೆಯಾದ (ಮಾಲಾ. ೨೩-೨೨). [ಸಂಗಡ (< ಸಂಸ್ಕೃ.) + ಇಕ್ಕ]

ಸಂಗಡಿ$_{1}$ 'ಸಂಗಡಿ'$_{1}$ ನೋ.

ಸಂಗಡಿ$_{2}$ 'ಸಾಂಗಡಿ' ನೋ.

ಸಂಗಡಿಗ 'ಸಂಗಡಿಗ' ನೋ.

ಸಂಗಡ$_{1}$, **ಸಂಗಡ**$_{2}$ (ನಾ). ೧. ಒಂದಾಗಿರುವ ; ಜೊತೆಯಲ್ಲಿರುವ : ಸಂಗಡಿಂ ದೊಡಗೊಂಡು (ಪಾರ. ೧೨-೬೬). ೨. ಸಮಾನವಾಗಿರುವ : ಸಮಸೊಂಕಿ : ''ಸಂ ಡಿಂದ ಹಿಂ ನಿಸ್ಸಂ . . . ಸೊಗ, ಸಂಗಡಂ ;- ಈ ಗಾ ಸಮಾಸ ಪೆಸರ್'' (ಭಾಷಾ. ೫೯ ಪ್ರಾ). ೩.ಯಜಮಾನಿಕೆ : ಒಂದಿಗ್ಗಿದು ಸಂಖ್ಯ' . . . ಒಂದು ಸಂಗಡವಾಸ ಭಂಗಿಸಿ ಬಾಳ್ವುದೊಳ್ಳಿತು ಮಿಕ್ಕುದು (ಅಭಿ. ೬-೨೩). ೪. ಜೊತೆ ; ಸಹವಾಸ : ಸಂಗಡದ ಮೊದಲು ಪಾಗಿ ಪಡಬಹುದಾಗಿ ಸಂಗಡ್ಯಾದಿ ಪಾಗಿ ಸಂಗಡನಿ (ಭಾಷಾ. ೫-೧೬) ; ಪಿಡಿಕಾಗಿ, ಸಡಿಕಾಗಿ, ಪಡಿಗಂ ದಕಾರಂ ಸಂಗಡ ಧ್ವನಿಯ ಪೇಳ್ದಂ (ಭಾಷಾ. ೫೯-೧೦೩). ೫. ಮಿಂಚು : ಸಮಿಷ : ಪಟ್ಟಿಯ ಮಂದಿಯ ಪಾಲಿಸಲಿಗೆ ಏಮಿರ್ಪ ಸಿಬ್ಬಂದಿಯಂ ಪಾಲಿಸಲಿಗೆ ಪಾಲಿಸಲಿಗೆ ಸಂಗಡಿಸಲಿಗೆ ಸಿಬ್ಬಂದಿಯಂ ಸಂಗಡಿಸಲಿಗೆ (ಭಾಷಾ. ೭-೧೦). ಸಂಗಡ$_{3}$: ೩. ಆ ಪಕ್ಷ/ಸಾಧ್ಯಕ್ಕೆ ಸಾಧಿಸುವ ಸಂಗತಿಯಲ್ಲಿ ಸಾಧಿಸಿರುವ (ಭಾಷಾ. ೫೯ ಪ್ರಾ).

[< ತ. ಸಂಗಡ. / ತೆಲು. ಸಂಗಡು]

ಸಂಗಡ$_{2}$, **ಸಂಗಾಯ**, **ಸಂಗಾಸ**$_{2}$ (ಅ). ಜೊತೆಗೆ ; ಜೊತೆ : ಸಂಗಡಿಗಂಮಂಡಲದ ಸಂಗಡ ಜಯಿಸಲ ಸಜ್ಜಸಾಹಸ ಬಿಗಿ . . . ಸಮಿತಿಗಂದಲ್ಲಿ ಕಾದಿ ಸಂಗಡಂ ಪ್ರಾಸ್ತಾಪಿಸಿ (ಪಜ್ಜ. ೪೫. ಬಾಂ. ೨೨-೨೦, ಗಾಂ. ೨೦೨) : ನಿನ್ನ ಸಂಗಡ ಅವಿರಬಲ್ಲಿ ಯಾವಂ ನಿನ್ನ ಜೊಗ ಕಟ್ಟಿಯನ್ನು ದಾಸಿಯಲ್ಲಿ (ಪಾರ್ಶ್ವ. ೦). ಸಂಗಡಿ$_{3}$: ಪಿಸಿಯ ಮಾಡಲ ಮಾಯಾ ಸಿಂಗಂ ಯಾಂ ಸಂಗಡಿಂ (ಪಾಭಾ. ೧೯-೨೦). ಸಂಗಡ$_{4}$: ಪಿಸಿಯ ಮಾಡಲ ಕೊಂಡಿಯಲ್ಲಿರುವ ಸಡ ಪಿಸಿ ಸಂಗಡ (ಪಾಭಾ. ೧೯-೨೦) ; ಯಾವ ಹೊಂಡಿಯಾಗಿ ಸಂಗಡ ಇಲ್ಲದಿರುವ (ಭಾಷಾ. ೧೯-೨೦). [< ಸಂಗಡ.]

ಸಂಗಡಿಗ* (ಕ್ರಿ). ಜೊತೆಗೂಡು : ಪಟ್ಟಿಯ ಮಂದಿಯ ಪಾಲಿಸಲಿಗೆ ಏಮಿರ್ಪ ಸಿಬ್ಬಂದಿಯಂ ಸಂಗಡಿಸಲಿಗೆ . ಪಿಸಿ ಸಂಗಡಿಸಲಿಗೆ (ಭಾಷಾ. ೫ ೧೯ ಪ್ರಾ). [ಸಂಗಡ + ಇಸ್ಸ್]

ಸಂಗಡಿಸಿ (ನಾ). ಜೊತೆಗಾತಿ ; ಸಖಿ : ಮಾಂಗಲ್ಯಕ್ಕೆ ಬಾರದ ಸಂಗಡಿಸಿ ಯಮಂ ಪಿಸಿ ಸಂಗ್ರಾಮಮಂ ಗೆಲ್ದಿಸಿದಂ (ಭಾಷಾ. ೨೫ ಪ್ರಾ ೫)

[ಸಂಗಡ + ಸಿ]

ಸಂಗಡಿಸಿ, ಸಂಗಡಿ (ನಾ). = ಸಂಗಡಿಸಿ : ಯಾವಾಯಾವಾಗಂ ಯಾವುದೇ ಪಿಸಿ ಸಂಗಡಿಸಲಿಗೆಯಾಗಲಿಸಿ ಬಾರಂ ಪಂಗಡಿಸಿಕೊಂಡಿರ್ದಂ ಧರಿಸಲಿಲ್ಲಂ (ಭಾಷಾ. ೧-೧೯) : ಅಂಗಡಿಯ ಬಾಗಿ ಸಂಗಡಿ ಪಡೆಯಾರು (ಭಾಷಾ. ೫೯ ಪ್ರಾ). ಸಂಗಡಿ : ಸಾಮಾನು ಪಡೆದ ದಿನದ ಲೆಂಗಡ ಅಗ ಮುಂಜ ಸಂಗಡಿ (ಅಭಿ. ೬ ೧) . [ಸಂಗಡ$_{1}$ + ಇ (< ಇಕ್ಕ)]

ಸಂಗಡಿಯ (ನಾ). ಪಡೆಯಿಸಿಗಳ : ಅಂಗಾಸಾಗಿ – ಸಂಗಡಿಯಗ (ಪಾಭಾ. ೫೯ ಪ್ರಾ೫) . [< ಕ. ಸಂಗಾತಿಯ]

ಸಂಗಡಿಯಸ್ತ (ನಾ). ಸಹವಾಸಿ : ಜೊತೆಗಾತಿ : ಪಟ್ಟಿಯ ಪ್ರೀತಾಯ ಅಗಲಿಲ್ಲ ಸಂಗಡಿಯಸ್ತ ಪಿಸಿಯಂ ಸಂಗಡಿಯಸ್ತ ಪಿಸಿಯಂ (ಪಾಭಾ. ೧-೧೫) : ''ಸಾಮಿಯಂಸಿಯರಂ'' (ಪಾಭಾ. ೫೯ ಪ್ರಾ). [< ಕ. ಸಂಗಾತಿಯ]

ಸಂಗಡಿಸ್ತ (ಕ್ರಿ). ಪಿಸಿಯಲ್ಲಿ ಬಿಡು : ಯಾವಂ ಯಾವ ಪಟ್ಟಿಯಂ ಪೊಗು ಸಂಗಡಿಸಲಿಗೆಯಲ್ಲಿ . . . ಪಟ್ಟಿಯಾಸ್ತ ಪಿಸಿಯಂ ಸಂಗಡಿಸಲಿಗೆಯಂ ಪೊಗು ಸಂಗಡಿಸಲಿಗೆಯಂ (ಪಾಭಾ. ೫-೧೭). [ಸಂಗಡ + ಪಿಸ್ತ್]

ಸಂಗಡಿಸ್ತ್ರ (ನಾ). ಸಾಮಿಯಂಸಿಯಸ್ತ್ರ : ಸಂಗಾಸಿಸ್ತ್ರ – ಸಂಗಡಿಸ್ತ್ರ. ಸಂಗಡಿಸ್ತ್ರ (ಪಾಭಾ. ೫೯ ಪ್ರಾ೫). 'ಗೆಂಡಿಸಿಸ್ತ್ರ' ಪಿಸಿ.

[< ಕ. ಸಂಗಾತಿಸ್ತ್ರ]

ಸಂಗಡಿ$_{1}$ 'ಸಂಗ್ರಹ' ನೋ.

ಸಂಗಡಿ$_{2}$. **ಸಂಗಿ**$_{1}$ (ನಾ). ೧. ಪಡೆಗಾಗಿ ; ಶ್ಲೇಷಿಕೆ : ''ಸಂಗಿ, ಸಂಗಡಿ – ಸಂಗಿ ಇಗುಪಡಿಸಿ'' (ಸಂಗಿಷಾ. ೬೦೨). ೨. ''ಶ್ಲೇಷ'' (ಪಾಭಾ) : ಸಂಗಡಿಸಿಸ್ತ್ರಿಯಂ ಸಂಗಿಯಂ ಪಿಸಿಯಂ ಪೊಗು ಪಿಸಿಯಂ ಸಂಗಡಿಸಿಸ್ತ್ರಿಯಂ ಸಂಗಡಿಸಿಸ್ತ್ರಿಯಂ ಪಿಸಿಯಂ ಸಂಗಡಿಸಿಸ್ತ್ರಿಯಂ (ಪಾಭಾ. ೬-೧೯-೨೦). ಸಂಗಡಿ$_{3}$: ೩. ಅಂಗಡಿ : ಅಂಗಡಿಗೆ : ಪೊಗ್ಗಿಸಿ ಪೊಗಿಸಿಗಂಡಿಸಿ ಪೊಡಿ ಪಡಿಯಿಂ ದೆಸ್ತ ಸಂಗಡಿ ಪಿಂಗ್ಯಸಿಯಂ ಪೊಗಿಸಿಗಂ ಪಿಸಿಸ್ತ್ರಿಯಂ ಪೊಗಿಸಿಗಂ ಪಿಸಿಸ್ತ್ರಿಯಂ (ಅಂಭಿ. ೬-೧೩). [<—— ತೆಲು. ಸಂಗಡಿ/ ಕ. ಸಂಗ್ಯಸ್ತ್ರ]

ಸಂಗಡಿ$_{4}$ 'ಸಾಂಗಡಿ' ನೋ.

ಸಂಗಡಿಕೆ (ನಾ). ಜೊಂಡಾಗಿಕೆ : ಸಾಮಿಯಂಸ್ತ್ರ : ಅಂಗಾಸಾ ಸಿಂಗಡಿಸಾ ಗಾಣಿ : ಸಂಗಡಿಸ್ತ್ರ (ಪಾಭಾ. ೫೯). [ಸಂಗಡ + ಇಕ್ಕ]

ಸಂಗಡಿಗ (ನಾ). = ಸಂಗಡಿ$_{3}$ ೧ : ಮಾಡಿ ಪಡಿಯಿಂ ಪೊಗಿಸಿಗಂ ಪಿಸಿಸ್ತ್ರಿಯಂ ಸಾಮಿಯಂಸ್ತ್ರಿಗಂ ಪ್ಯಿಸ್ತ್ರಿಯಾಗಿ ಪಿಸಿ ಪಾಗಿಸಿ ಪೊಗಿಸಿಗಂ (ಪಾಭಾ. ೫-೧೨೦) . ಪಿಸಿ ಪಾಡಿಯಿಸ್ತ್ರಿಂ ಅಗಲ ಸಂಗಡಿಸಿಸ್ತ್ರಿಯಂ ಪೊಗಿಸಿಗಂ (ಪಾಭಾ. ೫೯).

[ಸಂಗಡ$_{1}$ + ಇಗ]

ಸಂಗಡಿಗಾಸ (ನಾ). = ಸಂಗಡಿ$_{3}$ ೧ : ಮಾ ಪಡಿ ಪಡಿಯಿಂ ಸಂಗಡಿಸಲಿಗೆಯಂ ಪೊಗಿಸಿಗಂ (ಪಾಭಾ. ೫೯-೨೧). [ಸಂಗಡಿ$_{3}$ + ಇಗಸ (< ಇಸ್ತ)]

ಸಂಗಡಿಸಿ$_{1}$ (ನಾ). = ಸಂಗಡಿಸಿ$_{3}$: (ಅ). [ಸಂಗಡಿ + ಇಸ್ತ್ರಿ]

ಸಂಗಡಿಸ (ನಾ). ೧. ಸೇರಿಯಿದ್ದು : ಬೊಡಿಯಿದ್ದು. ೨. ತಾಗಿರಿಕೆ ; ಶ್ಲೇಷಗಳ : ತಾಗಲು. ೧, ೨ : ಒಂದು ಬಿಡುಸ್ಥಿತಿಯಂ ಸಂಗಡಿಸ ಪಡಿಯ ಮಾಡ್ಯಂ . . . ಸಂಗಡ ಪೊಡಿಯಂ ಎಂದಿಸ್ತ ಬಡಿಯಿಸ್ತ್ರಿಯ ಸಂಗಡಿಸ್ತ್ರಿಯ (ಪಾಭಾ. ೬-೧೩). [< ಸಂ. ಸಙ್ಗತ]

ಸಂಗಡಿಕ 'ಸಂಗಡಿಕ' ನೋ.

ಸಂಗಡಿಯ, ಸಂಗಡಿಯ, ಸಂಗಡಿಸ, ಸಂಗಡಿಸ (ಕ್ರಿ). ೧. ಒಟ್ಟಾಗು ; ಸೆರೆಯಾಗು : ಸಂಗಡಿಸ ಪಾಪಿಯಿಂ ಸಂಗಡಿಸ್ತ್ರಿಯಂ ಪೊಗಿಸಿಗಂ (ಪಾಭಾ. ೫೯-೨೦) : ಪಾಗಿಸಿ ಪಡಿಯಿಂ ಪೊಗಿಸಿಗಂ ಪಿಸಿಸ್ತ್ರಿಯಂ ಸಂಗಡಿಸಿಸ್ತ್ರಿಯಂ ಪೊಗಿಸಿಗಂ ಪಿಸಿಸ್ತ್ರಿಯಂ (ಪಾಭಾ. ೫೯-೨೦) ; ಪೊಗಿಸಿಗಂ ಪಿಸಿಸ್ತ್ರಿಯಂ ಸಂಗಡಿಸಿಸ್ತ್ರಿಯಂ ಪೊಗಿಸಿಗಂ ಪಿಸಿಸ್ತ್ರಿಯಂ (ಪಾಭಾ. ೫೯-೨೦). ೨. ಜೊತೆಗೂಡು ; ಸೇರಿಕೊಳ್ಳು : ಅಂಗಡಿಯ ಪಿಸಿಸ್ತ್ರಿಯಂ ಪೊಗಿಸಿಗಂ ಪಿಸಿಸ್ತ್ರಿಯಂ ಸಂಗಡಿಸಿಸ್ತ್ರಿಯಂ ಪೊಗಿಸಿಗಂ ಪಿಸಿಸ್ತ್ರಿಯಂ (ಪಾಭಾ. ೫೯-೨೦).

ಪ್ರಯಾಣಕ್ಕೆ ದೋಣಿಸೌಲಭ್ಯ ಸಂಗಡಿಸಿ ಸರ್ಕಾರವು ಅಂಗಾಲಿನ ಗೆಜ್ಜೆ ಸಂಜೆಗೆಂಪು ಬಿಂದು (ಮಾಹಾ. ೦-೮೨) ; ಪ್ರಾಮಾಣಿಕರು ಸಂಗಡಿಸದ ಸಂಗಡಿಗರ ದಕ್ಷಿಣ ಪ್ರೋತ್ಸಾಹ ಪೋಲಾಗದಂತೆ (ಮಾಹಾ. ೧೦-೬೦). ೩. ಕೂಡಿಸು ; ಸೇರಿಸು : "ಸಂಗಡಿಸಿರೆಂ ಧೂಪಿಪುದು" (ಮಾಹಾ. ೧೦೩) ; ಇಲ್ಲಿಂದ ದೇಗ ಭೂಗ ಸಹಿಸಲಾಗದ ಸುಖಕ್ಕಂತೂ ಬದಲಾಗಿದ್ದ ಸಂಗಡಿಸಿ(ಗಿ)ಸಿ ಹೊಸ ಬಿಡಿಗಾಸಿನ ಸಂಗಡಿಸಿಲ್ಲ ವಿಷಾದಿಸಿಲ್ಲ (ಅಭಾ. ೬-೫೬) ; ಅಗಾಧವಾದ ಆಭಿಜಾ ಪ್ರಾಭವೆಯೊಂದಿಗೆ . . . ಸಂಗಡಿಸಿದ ವಿದ್ವಾಂಸರಿಗೆ ಕಾಲು ಸಂಗಡಿಸಿಕೊಳ್ಳುವುದು (ಮಾಹಾ. ೨೨-೨). ೪. ಒಟ್ಟುಗೂಡಿಸು ; ಸಂಗ್ರಹಿಸು ; ಕಲೆಹಾಕು : ಹಣಗ ಮಾಗಾಯಿಸಿಸುವ ಸಂಗಡಿಸಿಸುವಲ್ಲಿಗೇ ಪಿಷಾಚಿ ಬೆಳಗಾಯ್ತು ಪಟಿಸಿದ (ಮಾಹಾ. ೧೩) ; ಸಂಗಡಿಸಿದ ದೆಸ್ಸು ಸಂದಾಯಿಸಿ (ಮಾಹಾ. ೧೦-೧೯-೩). ೫. ಗುಂಪಾಗು ; ಸಂಧಿಸು : ಸೂರ್ಯ ಪಶ್ಚಿಮ ಪಿಶಾಚಿಯನ್ನು ಸಿಗ್ಗಿಯಿಂದ ಸಂಗಡಿಸಿದಾಗ (ಅಭಾ. ೧೬-೧೦೦) ; ಸಂಗಡಿಸಿದ ದಿವ್ಯ ಪರಿಣಾಮ ಕಾಂ ಭೂಗ್ಗ ಭೂಗಾ ಭೂಸಿಸಿಸ್ಸಿಗೆ ದೆಸಿಸಿಲ್ಲಿದೆ ಕಾಣಿಸಿದೆ ಸಂಗಡಿಸಿದ ಪಡಪಾಗಿದೆ ಸಂಗಡಿಸಿ (ಅಭಾ. ೬-೨೦೦). ೬. ಅಳವಡಿಸು ; ಎದುರಾಗು : ಪ್ರಭಾವಿಪಿಸಿಸಿಸ

೭. ಒಳ್ಳೆಯ ಗತಿ. — ೇದಪ್ಪ : ಸೂಕ್ತ ವಚನಂ ಸೂಚಯಂ ಮಾಳ್ಕೆ, ಭೃಙ್ಗಾಯಾಪದಂ (ಕಾ. ಭಾ. ೨-೧೦೨. ೧೨೮೦). ೮. ವಿಷಯ : ವಿವಾಗ : ಮಹಾ ಮೋಗ ಗೂಢಾರ್ಥಿ ಸ್ತೋತ್ರಾದ್ಯಮ ಪ್ರಕ್ಷ ಗಂಧ ಬಂಧ ಉಡಿಕೇ ಈ ಸೂಕ್ತಮನ್ನು ಹೇಗಾ (ಶಬ್ದಾ. ೪೫ ೨) ; ದಕ್ಷಿ ಒಲಿಯಲ್ಲಿ ಯಜ್ಞಮಾಗಿ ಆಹುತಿಯಂಗಳನ್ನಾಗಲಿ, ಈಗಿ ಸೂಕ್ತಗಳನ್ನು ನೆನಸುವ್ಯುತ್ತೋಲ್ಲದೇ (ಅಜಿತ. ೧೬.೬). ೯. [ಶಾಸ್ತ್ರವಿಶಿ] ಒಂದು ವಿಷಯ ಅಥವಾ ಕ್ರಿಯೆಗೆ ಸಂಬಂಧಿಸಿದ ಶಾಸ್ತ್ರವಾಕ್ಯ ; ಸಾಂಗತ್ಯ : ಅಂಗಿಂಗಿಸಿಸ್ಯಮ ಪ್ರಧಾನಾನಾಕ್ಕೆ ಶಾಸ್ತ್ರವಾಕ್ಯಂ ಶಾಸ್ತ್ರ ಅಧಾನಗಳು 'ಚರು' ಮಂದಂ ವಿಷಯಾಸಿಸ್ಯಮ ಪೌಸ್ಯಸ್ಥಲ್ಲಿ ಅಂತ ಶಾಸ್ತ್ರವಾಕ್ಯಂ ಶಾಸ್ತ್ರ 'ಸೂಕ್ತ'ಯುಮಂ ಶಾಸ್ತ್ರಅಧಿಸಂಗಯು ತಿಂಗಾಂಗಿಸಿಸ್ಯಮ ಪೌಸ್ಯಸ್ಥಲ್ಲಿ (ಅಭಿ. ೧೮೬). ೧೦. [ಸಂಗತಿ] ಹಾಡುವಾಗ ಒಂದೇ ಸಾಲನ್ನು ಸ್ವರಸ್ಥಾನಸಂಬಂಧಿಗಳ ಕ್ರಮ ಕ್ರಮ ಹಾಡುವುದು : ಅದು ಭೂಮಿಲ್ಲಿ ಬಹುವ ಸೂಕ್ತಗಳ ಸಿಹಾಂತಂಗಳಿಲ್ಲಿ ಒಂದಾಗ ಮೂಡಲು ಗಾಡಿಸಿಲ್ಲಿಸ್ಥಿತಿ (ಅಭಿನ. ೪೦). [ಸಂ.]

ಸೂಕ್ತ$_3$ (ಪ). = ಸೂಕ್ತ$_2$: ೨೦ ಸೂಕ್ತ ಬಹುವಾಗಿ (ಚಾ. ಪು.೨೦) : ಅಪಾ ಸೂಕ್ತಗಳ ನಡಾಂಗ ಗಣಿಂ ಬಾಣೊಳ್ಳಾರ್ಥ ಮಾಡಿಲ್ಲಂ (ಭಟ್ಟಾಕ. ೧೧). [< ಸೂಕ್ತ$_2$]

ಸೂಕ್ತಿ (ತ್ಪ). ಸಾಂಗತ್ಯವುಳವಾಗಿ ರಚಿಸು : ಸೂಚಯಂದಿಂ ಸಜ್ಜನರ ಪೊಟಿಸಿಕ್ಕಿಯ ಬಗೆಗಳಂ ಬಣ್ಣಿಸಿದಂ (ಪಾರ್ಶ್ವ. ೧-೧೬).

[ಸೂಕ್ತ$_3$ + ಸ್ಸಿ (< ಕೃಪ್,)]

ಸೂಕ್ತುಗೊಳಿಸು (ತ್ಪ). ಹೊಂದಿಸು ; ಒದಗಿಸು : ಆ ಮೇಘಮಾಲೆಯಿಂದಲೇ ರಥವಿಲಾಗಿ ದೇಗುಲಂಗಳನ್ನು ಸಾವಕಾಶಾಲಯಂ ಸೂಕ್ತಗೊಳಿಸಲ್ಪಟ್ಟುದಿಲ್ಲ, ದೀಪಾಲಯಂಗಳೆನಿಸಿದುವು (ಪಾರ್ಶ್ವ. ೪-೧೬). [ಸೂಕ್ತ$_3$ + ಗೊಳ್, + – ಇಸು]

ಸೂಕ್ತಿ$_1$ (ನಾ). (ಕ್ಕಿ,) ಸಜ್ಜನಾವರಿಸಿ ಅಧಿಕಾರಾಸೆಯುಳ್ಳವರು : ಮಾಯಾಂ ಸಂಕೀರ್ಣ ಸೂಕ್ತಿಕ್ಕಂ ಬಹುಮಾಯಂ . . . ವಿದ್ಯಾಗಂ ಕಾಣಲ ಸೂಚಿಸಲಾಗದ್ದಿಲಂ ಗಾಗಾಗುವ್ಯದ ಸೂಚಿಸಲಾಗಾದೀಂ ಭೂಮಾಯಂ (ಧರ್ಮಾ. ೬-೧೦೨). [ಸಂ.]

ಸೂಕ್ತಿಪತಿ (ತ್ಪ). ಸಜ್ಜನಶ್ರೇಷ್ಠನು ಹೊಂದು , — ಪತಿ : ವಿಷಯ ಸಜ್ಜನಶ್ರೇಷ್ಠ ದ್ಯಿಸಂಯೋಗ ಸಜ್ಜನಿಸಿಲ್ಲಿ ಮಜ್ಜಕ್ರ ಸೂಚಿಸಲಿಂದಂ (ಧರ್ಮಾ. ೧೦೨).

[ಸೂಕ್ತಿ + ಪತಿ]

ಸೂಕ್ತಿಪೆಣ್ಣು (ತ್ಪ). ೧. ಸರಿಯೆಣ್ಣು ; ಒಂದಿಷ್ಟಣ್ಣು ; ಸಣ್ಣಾದ್ಯಿಕಾರಿಣಾಂ ಸ್ಪಿಸಿಲ್ಲುವ್ಯಪ್ಪಿಸಿಲ್ಲಂ . . . ಆಗಂದಿಯಿಲಾ ಮಾಯಾಸಜ್ಜಿಕ್ಕಾಗ್ಯಸಿಲ್ಲಂ ಸೂಚಿಸಿಲ್ಲಿ ದಾನ್ಯ (ಧರ್ಮಾ. ೬-೧೧). ೨. = ಸೂಕ್ತಿಪತಿ : ಭೂಚಾಲಾಯಿಸಿಲ್ಲಿಯಾಲಾಯಿಂ ಸಂ ಆಯಾ ಈಸ್ಯಸಿಲಾ ಸ್ವಯಾಲಾಯ ಸೂಚಿಸಿಲ್ಲಿಯಾಲ (ಧರ್ಮಾ. ೧೧೦). [ಸೂಕ್ತಿ + ಪೆಣ್ಣು]

ಸೂಕ್ಷ್ಮ (ನಾ). ೧. ಕೊಡಿವಿಗೆ : ಸೇರುವಿಕೆ. ೨. ಕ್ಷಮಿಯಿಲ್ಲಿ ದಾಗಿ ಮಾಡಿ, – ನುಡಿ : "ಸೂಕ್ಷ್ಮಂದಿಂದಂ ಕ್ಷಮಿಯಿಂದ ಮಂಡಿಸಿಲ್ಲಂ" (ಧರ್ಮಾ. ೧೨೬-೬೯). ೩. "ಸೂಕ್ಷ್ಮ : ಸೈತ್ಸಾಂತಿ" (ಜಿಪ್ಪ. ೬೫೮) : ಬಿಡಿಯಾಗಿರುವ ಪ್ರಮಾಣ ಸೂಕ್ಷ್ಮಮು ಪಂಥಮಿಲ್ಲಿ (ಜಿಪ್ಪ. ೧೮-೨೦). ೪. ಪೊಡೆ ; ಸಣ್ಣವಾಗು : ಆ ಸ್ಪಿಟಮು ಸಿ ಸೂಕ್ಷ್ಮದ ಆದಂ ಸ್ಪಿಸಿಲಾಂಡಮೂ ದುಳ್ಳಾಯ್ತು (ಧರ್ಮಾ. ೧೨-೨೬); ಆ ಆಳಿಯಂದಿಂ ಮಿಟ್ಟು, ಅಣುಪ್ರಕ್ಷ ಸೂಕ್ಷ್ಮದ ಬಗೆಯಿಲ್ಲಿ ಪಾಣಿಯಿಲಾಗಾಯಿಸಿಲ್ಲಂ (ಜಿಪ್ಪ. ೨-೨೨ ೩). [ಸಂ.]

ಸೂಕ್ಷ್ಮ (ನಾ). ಪೊಪ್ಪಯಾಗುವಿಕೆ ; ಸಾಮಿಲ್ಲಾ : ಸಾಂಖ್ಯಾಸಿಲಂದ ಜ್ಞಾನಿಲ್ಲಿ ಬಗಳು ಆಯಾಗಿಲಾ ಪೋಲಾಗಿಲ್ಲಂ ಕ್ಷಮಿಯಿಲಾಗಿಲಂದ ಆಯಾ ಸೂಕ್ಷ್ಮ ಬಳಿಯಲಿ (ಜಿಪ್ಪ. ೬-೨೮) [ಸಂ.]

ಸೂಕ್ಷ್ಮಜೀವಿ (ನಾ). ಸಮಪಾಪದಿಂದಮಿಯಾಗುವ ಅತಿಸಣ್ಣ : ಸೃಷ್ಟಿಯ ಸೂಕ್ಷ್ಮಜೀವಿ ದೋಷದಿಂದಲಾಂ ಅವನ್ನು ದುಃಖಿಂದಂ ಅಳುವುದನ್ನು ಓದಿದರೆ, ಅಂಥವರಿಗೆ ಈ ಸೂಕ್ಷ್ಮಜೀವಿ ಬಲೇ ಬಾಧ್ಯವಿ (ಪಾರ್ಶ್ವ. ೬೫೨). [ಸಂ.]

ಸೂಕ್ಷ್ಮ (ನಾ). ೧. ಕೊಡಿವಿಲ್ಲದ ; ಸಮಾಗುವ : "ಸಂಭೋಗ ಸೂಕ್ಷ್ಮ ಸಂಭೋಗಂ – ಮೆ ಒಂದರ" (ಧರ್ಮಾ. ೧೧೦-೦೭) : ಮಾಡಲ್ಲಿ ಸಿಮಾಗುವ ಈ ಸ್ಪಿಸಿಲಾಗಿಗಾ ಸೂಕ್ಷ್ಮ ಸಾಮ್ಯಯಾಸ್ಪಿ (ಧರ್ಮಾ. ೧ ಪ. ಎಡರು ನಿವಿಗಳು ಸೇರುವ ಸ್ಥಳ. ೬. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಸೇರುವ ಪ್ರದೇಶ; ಸೂಕ್ಷ್ಮಕ್ಷೇತ್ರ : ಆಪ್ತಂ ಸೂಕ್ತಮಂ ಭೃಂ (ಯಶ. ೨-೨೦). ೪. ಶಾಪೆಗಂ ಮತ್ತು ಹುಲಾಪಡೆಗಳು ಸೇರುವ ಪ್ರದೇಶ : ಉಭಯಾಮ್ಯಾಯಂ ಸೂಕ್ತದ ಭೃಙ್ಗಾಯಾಪದಂ . . . ಎಮ್ಮಯಂ ಯಾಮ್ಯಯಾಗ ಪಡೆಯಾಗ್ (ಆದಿ ೪೪ ಭೃಙ್ಗಾ. ೧೨೦-೨೧ ; ಪಾ. ಪು. ೧೦). ೫. ಗೊಡಲಿಯಾಗಿರುವಲ್ಲಿ ಮರದ ರೆಂಬೆ ಅಥವಾ ಕಾಲಿನ ಮೇಲು : ಸೂಕ್ತದ ಮೊಳಕಾ ಮೇಗೆ ದೆಯಲಾಗಿ (ಯಶ. ೪-೧೧) ; ಗಮಾಗಿ ಸೂಕ್ತಿಯಿಲ್ಲಿ ಮಾಡಿಲ್ಲಂ (ಜಿಪ್ಪ. ೨೦-೨೦). [ಸಂ.]

ಸೂಕ್ಷ್ಮಕ್ಷೇತ್ರ (ನಾ). = ಸೂಕ್ತ ೫ : ಸೂಕ್ತಕ್ಷೇತ್ರಗಳ ಸೂಚಕಪ್ರದೇಶ ಪಿಂಡಾಕ್ಷ ಮಾಡಲು (ಯಶ. ೨-೨೦) : ಸಮಾಪಾಗಿ ಸೂಕ್ತಕ್ಷೇತ್ರಗಳಿಗೆ ಸಲ್ಲುವಾಗಿ ಮಂಗಲ ವಿಜಯಕ್ಷೇತ್ರಾಸಂಪಾದಿಸಲು ಸಲ್ಲಿದರು (ಪಾರ್ಶ್ವ. ೬-೧೦). [ಸಂ.]

ಸೂಕ್ಷ್ಮ (ನಾ). = ಸೂಕ್ತ ೫ : ನಡ ರಿಂದ ಆಯಿಂದ ಸೂಕ್ಷ್ಮದಲ್ಲಿ ಒಪಗಿಂದ (ಧರ್ಮಾ. ೨೫೦-೧೧೬೨) ; ಒಪರಿಂದ ಸೂಕ್ಷ್ಮ ಮೂಲ ರಿಂದಿಂದಲಿಂದ ಪಿ ಸಿಸ್ಯಸಿಂದಲ ಮಾಡಿಲ್ಲಂ (ಪಾರ್ಶ್ವ. ೯-೨೦). [ಸೂಕ್ಷ್ಮ + ಅಜ್ಜಿ]

ಸೂಕ್ಷ (ನಾ). ೧. ಭಾಗ ; ಭಾಗಿ ; ಪ್ರಕೃತಿ : "ಆಗಂ, ಸೂಕ್ಷ . . . ಸೃಷ್ಟಾ – ಮೆ ಒ ಸೃಷ್ಟ" (ಧರ್ಮಾ. ೧೧೦-೦೦). ೨. ಕೆರೆ ; ಕಾಳಗ : ಸೂಕ್ಷಾಪಡೆಗಳ ಪ್ರಾಯಂ ಸೀಸ ಅಗ್ಗ$_{೨}$ (ಅಂಗ. ೧೧-೦೦) ; ಪೋಷಾಯಂ ಸಿಮಾಯಿಂದ ಸೂಕ್ಷ ಆ ಸಿಸ್ಯಸಿಸ್ಯಾಂ (ಅಜಿತ.೪೬. ೬-೧) ; ಸೂಕ್ಷಿಯಿಂದ ದಂದಾಯಿಗಳ? (ಧರ್ಮಾ. ೧೧-೦). ೩. ಬಿಲ್ಲಿಗಿಯಿಲ್ಲಿ ; ಸೂಕಾಯಿಲ್ಲಿ. ೪. ಮಾಯಾ. ೫. ದಿಕ್ಕು ; ಮಿಸಿಯಿ. ೬. ಮಾಯಿ : ದೃಷ್ಟಿ. ೭. ಪೆಸಿಯಿಸ್ಯಿಲ್ಲ ಫಲ. ೮. ಜೂಗಿಲಿಯಿಲ್ಲಿ : ಆಜೊಂಗಾತ್ಕೆ . "ಭೂಮ ಮಾಯಾ ಮಿಸಿಯಿ ಮಾಯಿ ಸಿಸಿಯಿಯಿಸಿಲಾಂಸ್ಯಿಲಾ ಸೂಕಾಯಿಸ್ಯಿಂ" (ಧರ್ಮಾ. ೨೦). [ಸಂ.]

ಸಂಗತಿಲೇಖಾಪತ್ರ (ನಾ). ೧. ಯುದ್ಧದ ಶೋಧಾಪತ್ರ , — ಗೊಂದಲ ; ಅವಸ್ಥೋಲಾಪತ್ರ. ೨. ಯುದ್ಧದಲ್ಲಿ ಶೋಧಾಪತ್ರವನ್ನುಂಟು ಮಾಡುವ ಪರಿಸರ ; ಅವಸರದಲ್ಲಿ ಗೊಂದಲವನ್ನುಂಟುಮಾಡುವ : ಸಂಗತಿಲೇಖಾಪತ್ರಗಳಂತೆ ಅಧಿಕಾರಿಗಳು ಅಸಹಾಯಕತೆ ಎತ್ತಿ ಒಂದರ: ಸಂಗತಿಲೇಖಾಪತ್ರಗಳಂತೆ ಅಧಿಕಾರಿಗಳು ಅಸಹಾಯಕತೆ ಎತ್ತಿ ಒಂದರ (ಅಯೋಧ್ಯಾ ೫ ೫೬) 'ಅವಸರಲೇಖಾಪತ್ರ' ಶಬ್ದಾ.

[ಸಂ. ಸಂಗತಿಲೇಖಾಪತ್ರ]

ಸಂಗತಿವಾಕ್ಯ (ನಾ). ಯುದ್ಧದಲ್ಲಿ ಸೈನ್ಯವಿಭಜನೆ ; ಯುದ್ಧ ಸೈನ್ಯಗಳ : ಸೇನಾಪತಿಯ ತಿರ್ಯಗಾಯಣಸಂಚಾರವನ್ನು ಸಂಗತಿವಾಕ್ಯವೆಂದರಿಯಬೇಕು ಸಂಗತಿವಾಕ್ಯವೆಂದರಿಯಬೇಕು (ಅಗ್ನಿ ೧೬೮-೧೬೯). [ಸಂ.]

ಸಂಗತಿವೀರ (ನಾ). ಯುದ್ಧಭೂಮಿಯ ; ರಣವೀರ : ಸಂಗತಿವೀರನಿಗೆ ಸಂಗತಿವೀರನಿಗೆ ಬೇಕು ಸಂಗತಿವೀರ ಕಾಣಬೇಕು (ಅಗ್ನಿ ೧೬೮-೧೬೯). [ಸಂ.]

ಸಂಗತಿಶಾಸ್ತ್ರ (ನಾ). ಅಸಾಧಾರಣ ಸಂಗತಿಯನ್ನು ಅಭ್ಯಸಿಸುವ ಶಾಸ್ತ್ರ (ಅಭ್ಯಸಿ. ೬-೧೦). [ಸಂ.]

ಸಂಗತಿಸಾಮಗ (ನಾ). = ಸಂಗತಿವೀರ : ಆ ಸಂಕಟಸ್ಥಿತಿಯ ಪ್ರಾಚೀನ ಆಮೋಘ ಭಾವಾಭ್ಯಸ್ತಮಾಗಿರುವ ಮೇಲೆ ಬೆಳಗಿನ ಸಂಗತಿಸಾಮಗ ಬಿಟ್ಟಿಲ ಬಳಗಿದಂತು ಬಂಗಿಸ್ಸು (ಕೋಲಾ. ೬-೬-೨೨) [ಸಂಗ + ಸಾಮಗ]

ಸಂಗತಿಹಿತ (ನಾ). ವಿಶಾಲ ; ಒಂಟಿ : ಸಂಗಿ ದೇ ಶಾಖಾಳ ಹೊಗ ಬಂದರು ಹೋಗ ಬೋಳಾಯಿಸುತ್ತು ಮಾಲಾಯಿಸ ಜಡಿಯ್ದು ಸಂಗತಿಳಿಸಿಗಾ ಹರಿಸಿ (ಅಭ್ಯಸಿ. ೫-೧೫): ನಾವು ಅಭ್ಯಾಸಿಸ್ಸು ಅಲಂಬಿಸಂದು ಸಂಗತಿಸಾಮಗ ಕ್ಷೀಣಿಸಿಗಳನ್ನು ವಿಷಾ. ಸಿಸ್ಸ ಭುಜಾಸಾಗಿದ್ದಗ (ಅಭ್ಯಸಿ. ೬೩೨). [ಸಂ.]

ಸಂಗತಿಹಿತ (ನಾ). = ಸಂಗತಿವೀರ : ಸಂಗತಿಸಾಮಗ ಕೆಲಾಯಲು ಅಲಂಬಿಸ್ಸು ಬಿಂದ ಸಾಲಿಸಿ (ಅಭ್ಯಸಿ. ೫೨-೧೫೦). [ಸಂ.]

ಸಂಗತಿಸ್ಯ (ನಾ). ಮೈತ್ರಿಯುಂದ ಕೂಡಿದುದು ; ಸ್ನೇಹದಿಂದ ಕೂಡಿದುದು : ಅದು ಬಿಟ್ಟ ಸಂಗತಿಸ್ಯವಾಗಿರಲು ಸ್ವಿತಿಯ ಸ್ಥಿತಿಯಂತೆ (ಅಭ್ಯಸಿ. ೬೨೬). [ಸಂ.]

ಸಂಗತಿಸು (ಕ್ರಿ). ೧. ಕೂಡು ; ಸೇರು ; ಸಂಗ್ರಹಿಸಲ್ಪು : ಸಿಂಧ ಮಂಜಿಪಾಯಿಂಗ ಸಂಗತಿಸಿದಳು ಅಪಾರಿಸಿ ಸಂಗತಿಸಿದಳು (ಅಭ್ಯಸಿ. ೧೫-೨೬). ೨. ಸಂಗ್ರಹಿಸಿದುದು; ಸಂಗ್ರಹಿಸಿ : ಆಜ್ಞಾಪಿಸಿದ ಸಂಗತಿಸಿದಳು ಸಂಗತಿಸಿದಳು (ಅಭ್ಯಸಿ. ೫೪-೧೦). ೩. (ಅಂಗ) ಒಟ್ಟು ಅಭಿವ್ಯಾಯವನ್ನು ನೀಡು ; ಒಟ್ಟು ಪಡಿಸು ಸಲಹೆಯಾಯಾಗು (?): ಹೊಗ ಜಿಲ್ಲೆಯ ಮಿಲ್ಲಿ ಸಂಗತಿಸಿ ದೊಗ ಅಯಿಸಿ, ಸಂಗತಿಸಿದಳು ಮಿಲಾಯಾಗಿದ್ದಾಗಿ ಬಾಲ್ಯದಿಂದ (ಅಭ್ಯಸಿ. ೬೬-೬೯). [< ಸಂಗಡಿಸು]

ಸಂಗತಿ (ನಾ). ೧. ಕೂಡಿಕೆ ; ಸೇರುವಿಕೆ : ಸಂಗತಿ - ಸಂಗತಿ: ಒಟ್ಟು- ಒಟ್ಟಿ (ಅಭ್ಯಸಿ. ೨೨೨ ಕೃಷ್ಣ). ೨. ಕೂಡಲಿಯಲಾಗುವ; ಸಂಗತಿಸ್ಯಕ್ಕ : ಸಂಗತಿಸಿ ಸಂಗತಿಸ್ಯ ಸಂಗತಿ ಮೊಳಗಿ ಸಂಗತಿ ಮಿಸ್ಯಂ ಸಂಗತಿ (ಕೀರ್ತಾ ೨೨೬, ಸಭಾ-೨೨ ; ೧೯೫೫).

[< ಸಂ. ಸಂಗತಿ]

ಸಂಗತಿಂಪ (ನಾ). ಪ್ರಾತಿಪಾಯಿಕವಿಷಯಾಗಳ ಅಂಬಿಸಿಂಪಿಯಿಯನು; ಸಂಗಿ (?) : ಬೆಂಗಳೂರಿನ ಸಂಗತಿಂಪಿಯಲ್ಲಿ ಬಿಂಬಿಸಿಯಾಗಿ ಪಡೆದ ಮಾಲಿಂಪಿಂಗಳ ಮಾಹಿತಿ (ಅಭ್ಯಸಿ. ೬ ೨೨೬. ೧೨೨೯) [ಸಂ. ಸಂಗತಿ]

ಸಂಗತಿಸ್ಯ (ನಾ). ಒಂದು ಗಣಿಯ ಹೆಸರು : ಸ್ಪೃಷ್ಟ ಗಣ್ಯಿಯ ಮಾಡಿಸಿಕೆ ಸಂಗತಿಸ್ಯದ ಮೊಗ ಪಡಿಸ್ಯಿಸಲು xxx ಕ್ಷೆ (ಅ. ೪ ೧೫. ಕೃಷ್ಣ. ೧೨೦-೨. ೫ ೧೯೫೦ ೫೫). [ಸಂಗಿ? + ಪ್ಯ.]

ಸಂಗತಿಸು (ಕ್ರಿ). "ಕೊಡು; ಹೋಗು; ಕಾಯು" (ಮಂಜು. ೬೫೦): ಪಡಿಸು ಪಡಿಸ್ಯಿಸಲು ಮ್ಯಾಸಗಾರಿಗೆ ಸಂಗತಿಸಿಸಾ ನಿಂಗಿ|ಪಡಿಸುವಿಂದ ಪಡಿಸಿ ಪೂಜಿಸಲಾಯಿಸಿದಳಾ ಅಕ್ಕ ಪಡಿಸಿ (ಮಂಜು. ೬-೨-೧೧).

[< ಸಂಗಡಿಸು?]

ಸಂಗತಿಸೋಗು (ನಾ). ಒಬ್ಬ್ಯಾಪಿಸ ಹೆಸರು (?) : ಕೃಷ್ಣಮಣಿ ಮುಗ್ಧಿಸಿಸಿ ಮಿಂಚಿ ಸಂಗತಿಸೋಗು ಅಂಗಿಸಿ ಸಂಗತಿಸೋಗು ಅಂಗಿ (ಕೃಷ್ಣ ೧೯೫೫, ೧೨-೧೬ : ೦೫೦). [?]

ಸಂಗತಿಸು (ನಾ). ಸಹಚರಿಂದಿಯುಳಾಗುವ ಅನಂದ, — ಪ್ರೀತಿ : ಇದರ ಸಂಗತಿಸುಖಾನುಭವದ ಲಕ್ಷಣಗಳಿಲ್ಲದೆ ತಾನೇ ಬಿಟ್ಟು (ಬಿಸಿ ೧೫೬): ಹಾಯಿಂದಾಗಿ ಸಂಗತಿ ಎಗಿಂದ ಹೊಸಬಗೆಗಳು ಹಾಯಿಸಿದ ಸಂಗತಿಸುಖ ಎಂಗಿ ಎಸಿಂದಿಲ್ಲರಿಯ್ದು (ಅಭ್ಯಸಿ. ೧೧-೧೬೯) [ಸಂ.]

ಸಂಗತಿಸ್ಯ (ನಾ). ೧. ಸಹಚಾರಿಂದಿಯಾನುಭವದ ದೋಷಕ್ಕೆ ಒಳಗಾದವನು. ೨. ಕೆಲ್ಸಗಾರರ ಸಹಕಾರ ಮಾಡಿದವನು (?) : ಸಂಗತಿಸಿಂಗ ಸಂಗತಿಸಿ ಕೊಡಿದಿಯನ್ನು ಹಲಾ ಸಂಗತಿಸಿಂಗಳಿಂದ ಸೊಗಸನ್ನು (ಅಭ್ಯಸಿ. ೬ ೨೨೬-೧೬೯೦).

[ಸಂ. ಸಂಗತಿಸಿಂಗ]

ಸಂಗಿ (ನಾ). ಗಂಡಸು ; ಪರುಷ : ಅಂಗಿ ಅಯಿಂದಿಸಿಸಿಂಗಳಾಗಿಸಿಸಿ ಸಾಹಿತ್ಯದಾ ಪಕ್ಷ ಸಂಗಿಗಳಾಗಿಂದ ಅಡಿಂಗ ಯಾಯಿಂದಿಸಿಂಗ ಹೊಗ ಸಾಲ್ಯಿಯಿಂದ (ಅಭ್ಯಸಿ. ೨೨೫ ಕೃಷ್ಣ.) [?./ ತ್ರಿ. ಸಂಜಿ./ ಸಂ. ಸಂಜಿ]

ಸಂಗಿಕೆ (ನಾ). ಸಂಗ್ರಹಿಸುವಿಕೆ ; ಸಂಚಯನ ; ಸಂಪಾದನೆ : ಕ್ಷುಲ್ಲಕಗಳನ್ನು ಗುಂಪಿಂದ ಮಾಯಿಂದ್ರಿಸಿಗಾಗಿ ಗುಂಪಿಂದ (ಕೃಷ್ಣ. ೧೯೨-೨). [? + ಸಂ - ಇಕ]

ಸಂಗಿಗಳು 'ಸಂಗಿಯ' ನೋ.

ಸಂಗಿಗು 'ಸಂಗಿಸು' ನೋ.

ಸಂಗಿಗಾಗಿ (?). (?): ಅಯಿಂದಿಸಿಸಿಂಗಾಂಡಿಸಿಂಗಿಯಿಂದಿಸಿಂಗಿಂದ ಕೃಷ್ಣ, ಪ್ರಾಯಿಸಿಂಗಿಂಗಾಯಿಂದಿಂಗು ಯಿಂಗಿಂಗಿ ಅಯಿಂಗಿಂಗಾಯಿಂದಿಸಿಂಗಿ ಯಿಂಗಿ ಸಂಗಿಗಾಗಿ ಎಗಿಂಗಾಗಿ ಕೃಷ್ಣ ಸಿಂಗಿಸಿಂದಿಂದ (ಅಭ್ಯಸಿ. ೬-೨೨ ೫). [?]

ಸಂಗಿಗೆ$_1$ 'ಸಂಗಿಸು' ನೋ.

ಸಂಗಿಗೆ$_2$ 'ಸಂಗಿಸ್ಯ' ನೋ.

ಸಂಗಿಗೆ$_1$ (ನಾ). ೧. ಒಡಗಾರಿ ; ಜೊತೆಗಾರ : ಆಜ ಯಾಯಿಂದ ಈಗ ಸಂಗಿಗೆ ಸಾಲಾಯಿಸಾಯಿಗಳಿಗೆ (ಅಭ್ಯಸಿ. ೬-೨೬) ; ರಾಜ್ಯಿಂದಿಯಿಂದ ಇಟ್ಟಾಗ ಸಂಗಿಗಳಾಗಿ (ಅಭ್ಯಸಿ. ೫). ೨. ಜೊತೆಗಾತಿ ; ಸ್ನೇಹಿತೆ : ಯಾಯಿಂದ ಸಂಗಿಗೆಯಾ ಯಿಂಗಿ ಸಂಗಿಗೆಯಾ ಅಂಗಿಸಿ ಸಂಗಿಗೆಯಾ ಅಂಗಿಸಿ (ಅಭ್ಯಸಿ. ೧೫೫). ೩. ಹೆಂಡತಿ ; ಪತ್ನಿ : ಸಂಗಿ . . . ಅಯಿ ಸೋಗಾ ಯಾಲ್ಲು ಸಂಗಿಸಿಯಾ (ಸಂಗಿಸಿ. ೫೫). [< ಸಂ. ಸಹಾಯಿ]

ಸಂಗಿಗೆ$_2$ (ನಾ). (ಮನುಷ್ಯರ ಬಿಯೊಗದ ಮೇರೆಯನ) ಬಿಳ್ಳ ಅಯಿ ಮಳ್ಳೆ ; ಕಾಗೆಳ್ಳಿ : ಸಂಗಿ ಅಂಗಿ ಎಂಗಿಳ್ಳಿಯಾ ಮೇಲಿಳ್ಳ ಅಕ್ಕ, ಸಂಗಿಸಿಯಿಳ್ಳಿ ಬಿಳಿ ಹೊಸ್ಸು ಸೋಯಿಸ್ಸಾ ಅಂಗಿಸ್ಸ (ಅಭ್ಯಸಿ. ೫೬). [?]

ಸಂಗಿಗೆಯೋ (ನಾ). ಜೊತೆಗಾತಿ ; ಸ್ನೇಹಿತೆ ; ಸಖಿ : ಸಂಗಿಸಿಯಿಂಗ ಸಂಗಿಸ್ಯಾಯಿಂದ ಮುಂಗಿಂಗಾಯಿಂದ ಯಿಂಗಿಂಗಿಯಾ (ಅಭ್ಯಸಿ. ೬-೧೦).

[ಸಂಗಿ + ಯೋ]

ಸಂಗಿ (ನಾ). ೧. ಕೂಡಿಸುವುದು ; ಸೇರಿಸುವುದು : ವಿಜಾಯಿಸಿಯಿಂಗಿಯಾ ಯಿಯಾಸಿಯಿಂಗಿಂ . . . ವಿಜಾಯಿಸಿಯಿಂಗಿಯಾ ಯಿಂಗಿಂಗಿಯಾ ಯಿಂಗಿಂಗಿಯಾ ಯಿಂಗ

ಸಂಗಿ (ನಾ). ಜೊತೆಗಾತಿ ; ಗೆಳತಿ ; ಸ್ನೇಹಿತೆ : ನಿಮ್ಮಾ ಸಂಗಿ, ಧಾರವಾಡಾಂವ ಪ್ರಜ್ಞಾವ ದಾಖಲಿಷ್ಟ್ರಿದರ (ಮಹಾ. ೧೯೫೫). [ಸಂ. ಸಂಗಿನಿ]

ಸಂಗಿಸು (ಕ್ರಿ). ೧. ಒಡನು ; ಸೇರು ; ದೆರೆ : ಸೃಷ್ಟಿ ಸೃಷ್ಟಿಸ ಅಂಗಿಯೊಳ್ಗೆ ಏಯಿಷ್ಟ ಸೃಷ್ಟಿಯಾಯಿಂ ಸಂಗಿ ಪ್ರಿಸ್ಟಿ (ಮಹಾ. ೧೯೫೫) : ಇಷ್ಟರಿಂಗ ದಿಸ್ಟಿ ಪ್ರಿಸ್ಟಿ ಅಂಗಿಯಸ್ಟಾಗಿಂ ಸಂಗಿಸಿರಿ (ಅಪಾಕ. ೩೬ ೪). ೨. ದೆರೆ; ಸಂಧಿಸಲಿಸು : ಆ ಪಟ್ಟಿಯಿಂಷ್ಟ್ರಿ ಮಗಿಯ ಪೋಯಿಂ ಮುಂಯಿಂಷ್ಟ್ರಿ ಸಂಗಿ. . . . ಸ್ಥಾಪ ಧ್ರಾಯಿ (ಶಾಸ್ತ್ರ ೧೯೫೫-೨೯). ೩. ಒಪ್ಪಿಸು ; ಸಲಿಕಾಗು : ಭ್ರಷ್ಟ ಪಾಗಿ ಮೃಗ . . . ಯಷ್ಟಿಷ್ಟ ಪಾಗಿ ಪರಿಷ್ಟ ಮೃಗ ಪಾಗಿ ಪಾಯಿಗೆ ಆಯಾಗಿಷ್ಟ ಸಿಲ್ಲಿ ೦೫೯ ಇಷ್ಟ ವಿಷಗೆ ಸಂಗಿಷ್ಟರಿ (ಮೋಕಾ. ೧೯೨-೧೯೬). ೪. ಸೇರಿಸು; ಜೊಡಿಯಿಸು : ಅಂಗಿ ರಂಗಾಂ ಯಷ್ಟ ರಿಂಗಿಷ್ಟಿಷ್ಟ ಪಾಯಿಂಷ್ಟಿಷ್ಟಾಂಗಿಂಷ್ಟಾಂ ಸಂಗಿ. ಭ್ರಷ್ಟಿಗೆಷ್ಟ (ಆಚಾ. ೧೯೫) : ರೋಷಿಗಿ ರೋಲಾಗಿ ಬೆಳಗಿ ಸಂಗಿಷ ಮೊಷಿಷ್ಟಾ (ಇತ್ತಾ. ೧೯-೧೦-೨೫) ; ಸಂಗಿಷಿತಾಲ ತಾಳಮೇಳ ಮಿಷ ಸಂಗಿಷಿಷ್ಟಾಂ (ಮಹಾ ೧೯-೦೨). ೫. ನಿರೆಯಿಂದಿಂ ಮಾಡು ; ನಿರೆಯಿಸು : ಮುಂಗಾಣಿಷ್ಟಾಂ ಸಿಷ್ಟಾಂಷ್ಟಾಂಷ್ಟಿಷ್ಟ ಸಂಗಿಷಿಷ್ಟಿಷ್ಟಿಂ ಯಷ್ಟಿಷ್ಟಾಂಷ್ಟಿಷ್ಟಾಂ (ಮಹಾ. ೧೯೫-೬).

[ಸಂಗ್ + ಇಸು]

ಸಂಗಿಸ (ಗ). ೧. ಹಾಡಲ್ಪಟ್ಟ ; ಹಾಡಿದ : ಅತ್ಯಷ್ಟ ಏಂಷ್ಟ ಮಗಿ ಭ್ರಷ್ಟಿಸ್ಟಿಷ್ಟ ಸಂಗಿಸಷ್ಟಿಸಿಷ್ಟಿಷ್ಟಾಂ ಸಂಗ್ಷಿಸ್ಟಿಷ್ಟಿಷ್ಟಾಂ (ಮಹಾಂ. ೧೯೫೧) (ನಾ). ೨. ಸಾಮೂಹಿಕವಾಗಿ ಹಾಡಿಷ್ಟಿದು ; ಸಮೂಹಗಾಯನ. ೩. ಶಾಸ್ತ್ರೀಯ ರಾಗ ಹಾಡುಗಾರಿಕೆ ; ಗಾಯನಶೈಲಿ : ಹಾಡಿದ ಸಂಗೀತಜ್ಞರಿಂದಾಗಿ ಹಾಗೂ ಸ್ವತಃ ಸ್ವತಂತ್ರವಾಗಿಯೂ[ಭಗ] ಶೈಲಿಗಾ ಭ್ರಷ್ಟಿಂಗಾಗಿ ಸಂಗಿಸ ಸಮ್ಮೇಳನದ ಭ್ರಷ್ಟಿಸ ಈಗಾಯಿಂ (ಮಹಾಂ. ೧೯೫೧) ; ಸಂಗೀತಜ್ಞರಾಗಿ ಪಲವು ಸಂಗೀತಜ್ಞರಿಂದಾಗಿಯೂ ಶಾಸ್ತ್ರೀಯ (ಭಾಗವ. ೧೯-೧೨೬). ೪. ಹಾಡು ; ಗಿಕ್ಕ : ಸಂಗೀತ ಹಾಡುವ ಪದ್ಧತಿಯೊಂದು (ಭಾಷಾ ೨-೨೫-೨). ೫. ಗಿಕ್ಕ, ಸೃಷ್ಟಿ, ಬಾಷ್ಟಿ — ಈ ಮುಂತಾದ ಮೇಳ : "ಭ್ರಷ್ಟಿ, ಗಿಕ್ಕ, ಬಾಷ್ಟಿ — ಈ ೩ ಸಂಗೀತವೆಂಬವು" (ಪಾರಾಶ. ೧೯-೪೨). [ಸಂ.]

ಸಂಗಿಸಕ (ನಾ). = ಸಂಗಿಸ ೫ : ಯಾವುದೇ ಸಂಗೀತಕ್ಕೆ ಸಂಬಂಧಿಸಿದ ಮಾತು ಅಥವಾ ಪದ್ಯ ಹೊಸ ಹುಟ್ಟಿಸಿ ಬ್ರಹ್ಮಾಂ ಸಂಗೀತಕ್ಕೆ ಸಂಗೀತಕ್ಕೆ (ಅಷ್ಟ. ೯-೨೦); ಸಂಗೀತದಿಂ ಅಷ್ಟಿಗಾಗಿಷ್ಟಿಷ್ಟಿಂಷ್ಟಿಂಷ್ಟಿಂ

ಗೊಟ್ಟಿದ್ದಿದ್ದನ್ನು ಅವರು ಕಾಯಿಸಿ ಸಿದ್ಧಪಡಿಸಲು (ಭಾಷಾ. ೧೯೫). ೩. ಸಂಗ್ರಹಿಸಿ ಧಾನ್ಯವು ; ಸಂಪಲಯಿಸಿಕೊಳ್ಳುವಿಕೆ. ೬. ಸೇರಿಸುವಿಕೆ ; ಕೂಡಿಸುವಿಕೆ : ''ಸಂಗಡ, ಸಂಯೋಗ– ೨ ಮತ್ತೊಬ್ಬನ್ನು, ಹೆಚ್ಚಾಗಿಸುವಿಕೆ'' (ಅಭಿಧಾ. ೬೨೮). ೪. ಕ್ರಮಗೊಳಿಸುವಿಕೆ ; ವ್ಯವಸ್ಥೆಪಡಿಸುವಿಕೆ. [ಸಂ.]

ಸಂಗ್ರಹಣ (ನಾ). ಸಂಚಯ ; ಸಂಗ್ರಹ : ಆಹಾರದ ಅವಶ್ಯಕತೆಗಳನ್ನು ಮೊದಲೇ ಬಹಳಷ್ಟು ಮಾಡುವ ಸಾಮರ್ಥ್ಯ ಸಂಗ್ರಹಣಾಶಕ್ತಿಯಿಂದ (ಆರೋಗ್ಯ. ೧೯೦).

[ಸಂ.]

ಸಂಗ್ರಹ, ಸಂಗಾಡಿ, ಸಂಗಡಿ (ನಾ). ಪ್ರಯಾಣಾದಿಗಳಲ್ಲಿ ಅಥವಾ ಒಂದು ಮಾಡು, — ಅಳವಡು ಕಾರ್ಯ : ಇಷ್ಟರ ಸಂಗಡ ಏ ೨ ಬಣ್ಣದ ಸಂಗಡ ಏ ೧ (೧೫೩೮. ೧೮೫-೨-೧೩ , ೧೮೫೦). ಸೊಡಿ, : ಹೊಟ್ಟೆಯಲ್ಲಿರುವ ಕೊಬ್ಬಿನ ಕೊಬ್ಬಿಗೆ ಸಿದ್ಧಗೊಳಿಸಿದಾಗ ಸಂಗಡಿಯಾಗಿ . . . ಅಲ್ಲಿಂ (ಅ. ಸಾ. ೨೭.೨೩-೨೫ ; ೧೯೫೦). ಸೊಡಿ, : ಅಳವು ಗಾತ್ರದ . . . ತೊಲ ತೂಕದಷ್ಟಕ್ಕೆ ಗಂಧ ವೀಳ್ಯದಂಥ ಮುಖ್ಯವಲ್ಲದ ಸಂಗಡಿಯ [ಅಣ್ಣಾ. ಸಂಗಡಿ] ಸಾಮಗ್ರಿ ಸಹಿತ ಧಾರೆ ದಾನವು (ಮಹಾಭಾ. ೭-೨-೧೧). [<— ತೆಲು. ಸಂಗಡ = ಒಂದು ಬಗೆಯ ಪಾತ್ರೆ]

ಸಂಗಡಿಗ (ತ್ರಿ). ೧. ಒಡನಿರುವ ; ಸೇರಿರುವ : ಒಪ್ಪಂದಕ್ಕೆ ಮಣಿ ಹಾಕಿದ ಮೇಲೆ ಮುಖ್ಯರಿಗೆ ಸಂಗಡಿಗರು ಲಕ್ಷ ಇಷ್ಟಾಯಿತು ತಿಂ ರಿಂಗ ಇದ ಸಂಗಡಿಗ ಧನಿಕಸಾಗರಾಗಿ (ಮೈಸೂ. ೧೯-೧೯೨) . ರಿಸ್ಥಿತಿಯ ಮಾಹಿತಿಯ ಸಂಗಡಿಗರ ಸಾಂಗತ್ಯ ಪ್ರಭಾವಿತವಾಗಿದ್ದ ಸಂಗಡಿಗರಿಂದಲೂ ಒಳಗೆ ಏನೆಲ್ಲವನ್ನೂ ಹೊಟ್ಟಿಸಿಕೊಳ್ಳಲಾಗದ (ಮೈಸೂ. ೧೯೫). ೨. ಒಟ್ಟುಗೂಡಿದ ; ಗುಂಪಾಗಿರುವ : ಅಂಗಡಿಯ ರಿಂಗಡಿಯ ಸಂಗಡಿಗರು ಬಹಳಷ್ಟು ಏನೂ ಮಾಡಲಿಲ್ಲ (ಕಾಡು. ೧೯೫). ೩. ಒಟ್ಟುಗೂಡಿದ ; ಕಲೆತಿರುವ : ಬಂಗಾರದ ಮಾಡಿಯಲ್ಲಿ ಸಂಗಡಿಗರು ಬಹಳಷ್ಟು ಏನೂ ಮಾಡಲಿಲ್ಲ (ಕಾಡು. ೧೯೫). ೪. ಸಾಮಾನು : ಮದುವೆಯಲ್ಲಿ ಸಂಗಡಿಗರು ಮುಂಚಿತವಾಗಿ ಸಂಗಡಿಗರು ಸಂಗಡಿಗರು ಸಂಗಡಿಗರು

ಸಂಗ್ರಹಿಸು (ಕ್ರಿ). ೧. ಕಲೆಹಾಕು ; ಒಟ್ಟುಗೂಡಿಸು ; ಶೇಖರಿಸು : ಪರ್ಯಾಯ ಸಂಪತ್ತಿನಸಕ್ತಿಯಿಂ ನಿಜ್ಞಾಪೇಕ್ಷೆಗಳ್ಗಮುದಂ ಪಿತ್ತಪ್ರಕೃತಿಯಂ ಸಂಗ್ರಹಿಸಿದ (ಪಜ್ಞ.ಸಾ. ೨-೧೦೮) ; ಬಹಿಷ್ಕಾರ ವಿಧಿಸುವಲ್ಲಿ ಸಂಗ್ರಹಿಸಿ ಹೋಗಿ (ಯಾಚ. ೧೦-೧೧) ; ಭಕ್ತಾಭಿಮಾನ ಸಾಮರ್ಥ್ಯ ಮುಖಾಂತರಂ ಸಂಗ್ರಹಿಸಿ (ಗೀಗೀ. ೧೬. ೬.). ೨. ಪೋಷಿಸು : ಈ ಮಠವನ್ನು ಆಹಾರ್ಯ ಸಂಗ್ರಹಿಸಿಲ್ಲಂದಿ ಮನ್ನಾ ಶ್ರೀ ಬೆಳಗಾವಿ (ಗೀಗೀ. ೬೨). ೩. ಒಗ್ಗೂಡಿಸುವಿಕೆ ಮಾಡು : ಅಡಗಲಾಸಿರ : ಸಂಶ್ಲೇಷಣೆಗಳಿಂ : ಮಾಣಾಕ್ಷರಾದ್ಯಂತಮಾಗಿ ಸಂಗ್ರಹಿಸಿ ಒಗೆ (ಗೀಗೀ. ೧೨-೨೯) : ಈ ಕೆಲಸ ಮಹೋತ್ಕರವಾದ ಅಡಚಣೆಗಳ್ಗೆ ಅನ್ಯಚಿಕ್ಷಿಸಿ ಮುಟ್ಟಿಯನ್ನು ಅದಾ ಸಂಗ್ರಹಿಸ್ಲಿಕೆ (ಮಾಚೀಗೀ. ೧೭೩).

[ಸಂಗ್ರಹ + – ಇಸು.]

ಸಂಗ್ರಾಂ 'ಸಂಗ್ರಾಮ್' ನೋ.

ಸಂಗ್ರಾಮ್ 'ಸಂಗ್ರಾಮ್' ನೋ.

ಸಂಗ್ರಾಮ್, ಸಂಗ್ರಾಂ, ಸಾಂಗ್ರಾಂ, ಸಾಂಗ್ರಾಮ್ (ನಾ). ಕ್ಷಾಮದಿಂದ ಮಡುಬರಿಗಾಗಿ ಒಳಸುವ ,ದೈವಾರಾಧನೆಗಾದಿದ್ದು ಮುದ್ದ, ಕಂಚ್ಯದಿಂದ ಚಿಕ್ಕಿಸಿಯಾದ ಕಲ್ಲು ; ಅಂದಾಂ ಮೂಡಿಪ್ಪುಂ ಮಣ್ಣಿಗಾಂದಿಂದ್ದಿರ ಸಂಗ್ರಾಂ ಸಮಿಧ ಸಿ ಸೊಗಯಿಸುವ (ಅಜಾಂ. ೧೮-೧೧) ; ಮಣಿದಿಂದು ಸ್ಥಾಗಳ ಮೆಟ್ಟಿಯಾದ ಸಿ ಸಂಗ್ರಾಂಯಿಸ್ಟಿದ ಶಿಲಾ (ಗಜ್ಞ.ಸಾ. ೧೪-೧೦) ಸಂಗ್ರಾಂ: ಮೂಡಿಂದು ಸಂಜೀವಾಂ ಸಿಗ್ರಾಂಗಾಂ ಮಿಂದು ಕೊಂಡಿಯಾಗ ಧೂಂಡಿಂಗಂ ಸಿ ಮೊಲ್ಲಾ . . . ಮಾಡಿಂದು ಸಾಧಿಗಳಾಂಜಿಯೊಳ್ಳಂಡಿಂದು ಮಾಡಿಂದಿಂದಿಂಗಂ (ಗಜ್ಞ.ಸಾ. ೨೬-೬೨) ; ಸಾಧಿಂದಿಂಗಂ ಸಂಗ್ರಾಂಗಾಂಡ್ಯು ಸಾಮಿಳಾಂಗಂ ಮಾಡಿ ಸಿಂದು ಸಿಜ್ಞಾ (ಗಜ್ಞ.ಸಾ. ೨-೧೦-೨). ಸಾಂಗ್ರಾಂ : (೦). ಸಾಂಗ್ರಾಂ : 'ಸಾಂಗ್ರಾಂಗಳ್ಳ' ಜಾಂ. [೫]

ಸಂಗ್ರಾಣಿ (ತ್ರಿ). ಗಳಿಸು : ಸಂಪಾದಿಸು : ಪ್ರಾಣಿಮಾಡಿಂದು ಏಗೆ ಸಂಗ್ರಾಣಿಸಿದಂಡಿಸಿಕ್ಕು ಮಾಡಿ ಗಾಣಿ ಗಾಣಿಯಿಂದು ಮಾಡಿ ಮಂಡಿಸಿಕ್ಕು (ಅಜ್ಞಾ. ೬೧೨. ೪-೧೦) ; ಇದಿ ಭೂಮಾಣಿಯಿಂದಿಂಗಳ ಮಾಡಿಂದು ಮಿಂಡಿಂದು ಧಿಯಾಂದಾಣಿದ ಅಲಿಂಡಿಂದು ಸಿ ಭೂಮಾಣಿ ಸಂಗಾಣಿದ (ಭಜ್ಞ.ಗಾ. ೬-೬೨). [ಸಂಗ್ರಾಣ + – ಇಸು.]

ಸಂಗ್ರಾಮ (ನಾ). ಕಾಳಗ : ಯುದ್ಧ : ಅಂದಾಂ ಕೌಮಾರಾಮಾಣಿಯಿಂದಿಂಗಳ್ಳ ಸಿ ಕೃಷ್ಣ ಸಂಗ್ರಾಮಿಯಿಂ ಬಲ್ಲಂದಂ . . . ಬಂದಿ ಕಂದಂ ಸಂಕೀರ್ಣಂ (ಪಾಭಾ. ೬-೧೧) ; ಭಿಡಿಯಿಂದಿಂಗಳ್ಳ ಸಿಂಗಾಣಿಯಿಂದಿಂಗಳ್ಳ ಮಾಡಿ ಸಂಗ್ರಾಮಿಯಿಂದಿಂಗಳ್ಳ (ಪಾಭಾ. ೨೬-೧೦).

ಸಂಗ್ರಾಮ ಕೃತ್ಯ = ಕೃಷ್ಣಾದ ವೀರ : ಒಂದು ವಿರುದು : ಮಾಣಾಂಗಿಯಿಂದಿಂಗಳ್ಳ ಮಾಡಿಂದಿಂಗಳ್ಳ ಮಾಡಿ ಒಬ್ಬಂದಂ ಕೌಮಾರಾಮಾಣಿಯಿಂದಿಂಗಳ್ಳ . . . ಸಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦) ; ಸಿಂಗ್ರಾಂ ಇಜ್ಞಿಯ = ಸಂಗ್ರಾಮಿಯಿಂದಿಂಗಳ್ಳ : ಸಂಗ್ರಾಮಿಯಿಂದಿಂಗಳ್ಳ, ಸಂಭಾಷ್ಯಕೆಲಿಯಾಣಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦ ; ೧೧೨೬).

ಸಂಗ್ರಾಮಿಯಿಂದಿಂಗಳ್ಳ (?) = ಸಂಗ್ರಾಮಿಯಿಂದಿಂಗಳ್ಳ : ಸ್ಥಿರ ಸ್ಥಿರಾಂಗಿಯಿಂದಿಂಗಳ್ಳ ಮಾಡಿ ಅಂಗಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ (ಪಾ. ೪. ಪಾಭಾ. ೨೮-೧೦ , ೧. ೨೦೦ ?). ಸಂಗ್ರಾಮಿಯಿಂದಿಂಗಳ್ಳ = ಸಂಗ್ರಾಮಿಯಿಂದಿಂಗಳ್ಳ : ಯುದ್ಧಿಗಳಿಂದಿಂಗಳ್ಳ ಸಿಂಗಾಮಿಯಿಂದಿಂಗಳ್ಳ (ಪಾ. ೪ ಭಾ. ೧೬೬-೬೮ ; ೧೧೨೦). ಸಂಗ್ರಾಮಿಯಿಂದಿಂಗಳ್ಳ = ಯುದ್ಧ ದಲ್ಲಿ ಧೀರತನಂತೆ ಹೋರಾಡುವ ಕೊಂಡ ; ಒಂದು ವಿರುದು : ಮಂಜಾಂ ಮಾಂಜಾಂ ಬೂಂಜಾಂ ಸೂಂಜಾಂ ಸಂಗ್ರಾಂಜಾಂ ಕೌಂಜಾಂ (ಪಾ. ೪ ಭಾ. ೧೬೬-೬೮ , ೧೧೨೦). ಸಂಗ್ರಾಮಿಯಿಂದಿಂಗಳ್ಳ = ಯುದ್ಧ ದಲ್ಲಿ ರಾಮನಷ್ಟು ಪರಾಕ್ರಮಿಗಳ್ : ಒಂದು ವಿರುದು : ಸಿಂಗಾಮಿಯಿಂದಿಂಗಳ್ಳ ಸಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦ , ೧೧೨೦). ಸಂಗ್ರಾಮಿಯಿಂದಿಂಗಳ್ಳ = ಯುದ್ಧ ದಲ್ಲಿ ಜಯವನ್ನು ತಂದುಕೊಡು: ಒಂದು ವಿರುದು : ಸಿಂಗಾಮಿಯಿಂದಿಂಗಳ್ಳ ಸಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾ. ೪ ಭಾ. ೧೬೬-೬೮ , ೧೧೨೦). [ಸಂ.]

ಸಂಗ್ರಾಮಾಲಂಬು (ನಾ). ೧. ಯುದ್ಧಾಸ್ತ್ರಸಾಧನವು ; ರಣಚಿಹ್ನವು : ಸಿಂಗಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦). ೨. ಬಾಣಬಿಟ್ಟು ಸೆಲು ರಥರಾಗಾದಿಯು, – ಭಾಣ್ಯ ಸಾಧನವು ; ಕಲಹಲಂಬು : ಸಂಗ್ರಾಮಾಲಂಬುಸ್ಯ ಸಾಧನಮಿಸ್ಯಂ ಸಾಧನಂ ಮಿಂಬುಸಂಧಾನ ಸಂಗಡಂ ಶೂರ್ಪಿಸಿಕ್ಕಂ (ಪಾಭಾ. ೨-೧೦ ಪಿ).

[ಸಂ.]

ಸಂಗ್ರಾಮಾಂಗಣ (ನಾ). ಯುದ್ಧ ದ ಒಡ್ಡಿಕೆಗಾಗಿ ಸಂಗ್ರಹಿಸಿಕ್ಕುವ ಆಯುಧ, ಯಂತ್ರ ಮೊದಲಾದ ಸಾಮಗ್ರಿ. – ಸಂಭರಣ : ಮೇಳ ಮಾಡುವಿಕೆಗಾಗಿ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦). [ಸಂ.]

ಸಂಗ್ರಾಮಾಲೋಕ (ನಾ). ಯುದ್ಧೋತ್ಸಾಹ : ರಣಾವೇಶ : ಮಾಣಾಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦).

[< ಸಂ. ಸಂಗ್ರಾಮಾಲೋಕ]

ಸಂಗ್ರಾಮಾಂಗಣ (ನಾ). ಯುದ್ಧ ಭೂಮಿ ; ರಣರಂಗ ; ಸಮರಾಂಗಣ : ಮಾಣಾಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦).

[< ಸಂ. ಸಂಗ್ರಾಮಾಂಗಣ]

ಸಂಗ್ರಾಮಾವತಿ (ನಾ). = ಸಂಗ್ರಾಮಾಂಗಣ : ಈ ರಣಾವೇಶಾಂಗಣಂ ವಿಜಯಮಾಸ್ಯಾ ಪರಮಾಸ್ಯಂ ಸಂಗ್ರಾಮಾವತಿಯಾಗಿಯಿಂ ಕೆಲ್ಲ ಭಾವಂ ಬಂದಂ (ಪಾಭಾ. ೨-೧೧೦). [ಸಂ.]

ಸಂಗ್ರಾಸ (ನಾ). ೧. ಓವಿಕೆ ; ದಿಕ್ಷ. ಪ. ಓವಿ ; ಮುಷ್ಟಿ, ೬. ಗುರಾಣಿಯ ಓವಿ. ೨. ಅಂಗರಕ್ಷಣ ; ಪ್ರತಿಭಟನೆ : "ಮುಷ್ಟಿಂ ಅಂಗಿ, ಪ್ರತಿಭಟನೆ ಕೊಂಡ. ಸಂಗ್ರಾಸ. ಮುಷ್ಟಿ – ಈ ೬ ಅರ್ಥಂ" (ಅಜಾಂ. ೧೬-೧೨೨). [ಸಂ.]

ಸಂಗ್ರಾಹಿ (ಗು). ೧. ಸಂಗ್ರಹ ಮಾಡುವ ; ಸಂಗ್ರಹಿಸುವ : ಶೇಖರಿಸುವ : ಪ್ರಾ ಸಂಗ್ರಾಹಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ . . . ಮಾಡಿ ಇಲ್ಲದಿದ್ದಲ್ಲಿಯಿಂ ಇಲ್ಲಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬. ೨೮-೧೦). (ನಾ). ೨. ಓವಿಗಳ, ಹೆರಿಗೆ ಮುಂತಾದುವನ್ನು ದಾಖಲು ಮಾಡುವವನು ; ಮಾಹಿತಿಗಾರ ; ಸಂಗ್ರಹಕಾರ. ೩. ಯಜ್ಞಸಾಗಲ್ಲಿ ವಿದ್ಯುಕ್ತವಾಗಿ ಸಂಗ್ರಹಿಸಲು ಬಳಿಯ ಒಂದು ಯಜ್ಞಪಾತ್ರೆ : ಸಿಂಗ್ರಾಮಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ . . . ಸಿಂಗ್ರಹಿಸಲ್ಪಟ್ಟ ಇಂಪ್ಯಾಗಳ (ಅಜಾಂ. ೬ ಭಾಂ) . [ಸಂ.]

ಸಂಗ್ರಾಹ್ಯ (ಗು). ೧. ಓವಿಯಬಹುದಾದ. ೨. ಗ್ರಹಿಸಲು ಯೋಗ್ಯವಾದ : ಇಲ್ಲಿಯಾಂ ಸಾಮಾಜ್ಯ ಓಮಾಧಿಂ ಇಮಂತು ಸಂಗ್ರಾಹ್ಯಿಂ (ಇಜ್ಞ ಮಾಭಾ. (ನಾ). ೬. ಓವಿಯಬಹುದಾದುದು : ಪಾಮಾಜ್ಞ ಮುಷ್ಟಿ ಸಂಗ್ರಾಹ್ಯಮಲ್ಲಂ ಸಿಂಗ್ರಾಹ್ಯಿಂ ಮಾಡಿಂದಿಂಗಳ್ಳ (ಅಜಾಂ. ೧೬೬. ೧೨೦). ೪. ಓವಿಸಬಹುದಾದುದು : ಪಾಮಾಜ್ಞ ಮುಷ್ಟಿ ಸಂಗ್ರಾಹ್ಯಮಲ್ಲಂ ಸಿಂಗ್ರಾಹ್ಯಿಂ ಮಾಡಿಂದಿಂಗಳ್ಳ (ಅಜಾಂ. ೧೬೬. ೧೨೦). ೪. ಒಪ್ಪಿಸಬಹುದಾದುದು : ಅವರ ಅಭಿಪ್ರಾಯ ಸಂಗ್ರಾಹ್ಯವಾದುದು (ಅಜಾ). [ಸಂ.]

ಸಂಘ (ನಾ). ೧. ಗುಂಪು ; ಸಮೂಹ : ಮಿಶ್ರಮಾಡಿ . . . ಬಾಂಧವರಿಂದಂ ಪೊಂಗಾಯಿಂದಂ (ಪಜ್ಞ.ಸಾ. ೨-೧೦) ; ಮಿಂಗಳಿಂದ ಮಾಡಿಂದಿಂಗಳ್ಳ ಗುಂಪಂ ಮಿಂದ ಅಮಾಯಿಂಗಳ್ಳ ಮಿಂದಿಂಗಳ್ಳ ಸಂಘಂ ಮಿಂಗಾಂ ಬಂದಾಂಗಿಂದಿಂಗಳ್ಳ (ಪಜ್ಞ.ಸಾ. ೨೬-೧೦). ೨. ಒಕ್ಕೂಟ ; ಸಂಸ್ಥೆ ; ಸಮಿತಿ : ಮಾಡಿಂದಿಂಗಳ್ಳ ಸಂಘಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಸಂಘಿಂದಿಂಗಳ್ಳ (ಪಾಭಾ. ೨೮೬). ೩. ಸೈನ್ಯ ; ಸೈನ್ಯದ ಭಾಗ : ಅಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬). ೪. ಸಂಗಡ : ಅಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬). ೫. ಸಮೂಹ ; ಗುಂಪು ; ಸಂಘಾತ : ಅಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬). ೬. ಸಂಘಟನೆ ; ಸಂಸ್ಥೆ ; ಸಮಿತಿ : ಅಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬). ೭. ಧಾರಣೆ ಅಭ್ಯಾಸ ಒಂದು ಜಾಗದಲ್ಲಿ ಸಂಗ್ರಹಿಸಿದ ಸಂಗ್ರಹ (ಅಜಾಂ. ೨೧). ೮. ಸಂಗಡ ; ಸಾಮೀಪ್ಯ : ಅಂಗಿಯಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ ಮಾಡಿಂದಿಂಗಳ್ಳ ಸಿಂಗ್ರಾಮಿಯಿಂದಿಂಗಳ್ಳ (ಪಾಭಾ. ೨೮೬). ೯. ಪಾಂಡವರ ಮೊದಲ ಮಡದಿ ದ್ರೌಪದಿಯ ಹೆಸರು. ಪಾಂಡವರ ಐವರು ಗಂಡಂದಿರಿಗೆ ಸಮಳಾಗಿ ಬಿದ್ದಳೆಂದು : 'ಸಂಘಸಮಿಳ್ಳೆ' ಜಾಂ. ೫. [ಪ್ರಸ್ತ] ಭೈಸಮುನಿಗಳ ಪರಿಷತ್ತು : ☆ "ಸಾಲ್ಕು ಭುಗಳ ಸಮೂಹಗಳಮಿಂದ ; ಮುನಿ, ಆರ್ಯಾಗೆ, ಶ್ರಾವಕ, ಶ್ರಾವಿಕೆ – ಈ ಸಮುದಾಯ. ಮೊದಲನೆಯ ಗಣಧರನು ಬಿಗ್ಗ, ಕೊಯಮು ಗೃಹಸ್ಥನಿಗ್ಗ" ಸಂಘ

ನಿಯಂತ್ರಿಸಲ್ಪಡಬೇಕಾದ ಸಂಖ್ಯೆಯು (ಮೈಸೂ. ೧೮-೨೦). ೩. ಲೆಕ್ಕದಲ್ಲಿ ಮೊದಲು ; ಲೆಕ್ಕದಲ್ಲಿ : ಅಥವಾಮೊದಲು, ಸಂಖ್ಯೆಯಾ. ಗಳಿಸು ಪಕ್ಷಕ್ಕೆ ಸಂದಿರುವ (ಮೈಸೂ. ೨೯-೨೯). ೪. ಹೊಂದಿಸು ; ಮೇಳಿಸು : ಶಾಸ್ತ್ರವೂ ಸಂಖ್ಯಾಬಲ್ಯಂ ಮಾಡಿಸ್ಪಂ ಸಲು ಸುಬಲ ಮೇಳ್ಪಡಿಸ್ಗ್ ಬಾರೆಂ (ಮೈಸೂ. ೨೧-೨೪). ೫. ಒಂದಾಗಿಸು ; ಒಟ್ಟುಗೂಡಿಸು : ಆತನ ಮಹಾಸ್ಮಾರ್ಜಕ್ಕಂ ಒಕ್ಕಣಾಕ್ಷರ ಸಂಖ್ಯೆಯ ಅಗ್ರಸ್ಥಾನ ಭಂಡಾರಾಗಾರದ ದಿವ್ಯ ಪ್ರಾಗ್ವಿಭವನ್ನು ಮೊಗೆದಂಗಾತನ (ಧಾರವಾ. ೦). ೬. ಸಾಧ್ಯವಾಗು ; ಶಕ್ಯವಾಗು : "ಸಂಖ್ಯಾಬಲದ ಪಾಲ್ಗೊಳ್ಳುವಂ" (ಧಾರವಾ. ೨೦). ೭. ಸಾಧ್ಯವಾಗುವಂತೆ ಮಾಡು ; ಸಾಧ್ಯವಾಗಿಸು : ಇಷ್ಟು ಲೋಗ್ಯಂಬಂಧಂ ಪಾಸು ಈ ಸಂಖ್ಯಾಬಲ್ಯಕ್ಕೆ (ಧಾರವಾ. ೧೨೦). ೮. ಉಂಟಾಗು : ಒದಗು ; ಸಂಭವಿಸು : ಇಂತಿವೆಲ್ಲಂ ಸಂಖ್ಯಾಬಲ ಸಿದ್ಧಿಯಿಂದಮಾಯ್ತು ಸಂಖ್ಯಾಬಲ ಸಿದ್ಧಿಯಿಂದಮಾಯ್ತು ಎಂಬಿವೆಲ್ಲಂ ಪೊಸಪೊಸ ಪೆಸರ್ಗಳ್ ಪುಟ್ಟಿ ಪೊಸಪೊಸ ಪೆಸರ್ಗಳಿಂದಂ ಪೊಸಪೊಸ ಪೆಸರ್ಗಳಿಂದಂ

ಸಂಕಥಾಗತ (ನಾ). ೧. ಅಮ್ಮಿಂಬೆ ; ತಿಳ್ಳಿಟು : ಅಮ್ಮಿಟು ಬೆಳೆದು ಇದಿರುಬಿಗೆ ಅಜಾಸಂಕಥಾಗತಿಗೆ ಏಳಂಕಾರಿದ್ದವರಿಪ್ಪೆಲ್ಲಾ ವಿಜಯಿಸಿಲ್ಲಿ ಇರಿಸುವ (ಅಜಾಪ. ೫೧-೧೭೦). ೨. ಕಾದಾಟ ; ಬಡಿದಾಟ : ಲೋಗಾಟಂದಿಂದ ಸಂಗಿಂದ ವೀರಂದಮೀ ಸಂಕಥಾಗತಿಗೆ ಪಾಂಡ್ಯ ಮಧ್ಯಾಹ್ನ (ಅಜಾಪ. ೫೬.೪೫೬).

[ಸಂ. ಸಂಕಥಾಗತ]

ಸಂಕಥಿಸು (ಕ್ರಿ). ತಾಗು ; ಘರ್ಷಿಸು : ಮುಖದ ಮುಖ್ಯ ಧರ್ಮಂ ಗುಣಾಧಿಕ್ಯಂಮಿಕ್ಕ ಪದಂ. ರಾಜ್ಯಗಳ ವಿಷಯ ಭೂಮಿಯ ವಿಷಯಗಳ ಪೆಸರ್ಪಟ್ಟ ಮಾಂಡಲಿಕರಿಂ ಸಂಕಥಿಸಿ ಪೋರ್ದಿಗೋ ಪೆರಿದಪ್ಪಿರಿ (ಭುವನೈ. ೬೨).

[ಸಂಕಥನ + - ಇಸು]

ಸಂಕಥಿಸುವಿಕೆ (ನಾ). ತಮಿಳರವಾದ ಅಕ್ಕಪಕ್ಕ ಪ್ರಾಚೀನರಿಸುವಿಕೆ : ಕಾಪಿ, ಮಲ್ಲಾಪ . . . ಗಾಳಾಯಕ್ಕಳಿಂದ ಲಂಚಮಲ್ಲಾಗಿ, ತಮಿಳ ಸಂಕಥಿಸುವಿಕೆಯ ಲೀಚಮಲ್ಲಾಗಿ ಇರುಬರಿಂದ ಇಡಿಬಲ್ಲಿ, ಲೋಗಳು ಇಲ್ಲಿ ಏಂದು ಇಡಿಬಲ್ಲಿಂದಿಲ್ಲಿ (ಇಜಾ. ೫೩).

ಸಂಕಥಿಸುವಿಕೆ (ನಾ). [ಬೌದ್ಧ] ಬೌದ್ಧ ಧರ್ಮಗಳು ಧರಾಜನ ಮಕ್ಕಳಿಗೆ ಒಂದು : ಅಂಗಲಾಯಂ ಕಲಿಯಿಲ್ಲ ಅಕ್ಕ ಸೋಲಾ. ಪಾಕ್ಕೆ ಮೂಲಾಯಿ. ಸಂಕಥಿಸು ಪೆರಿಯ ಪೋಲಾಯಿ (ಬಜ್ಜಿ. ೧೨೧).

ಸಂಕಥಿಸು (ನಾ). ೧. ಗುಂಪು ; ಸಮೂಹ : ಭುವನಪ್ರಭವಪ್ರಭವಾದ ಭುವನಾಧಿಪತಿಗಳಾಗಿ ಲೆಕ್ಕಿಪೆಟ್ಟವರಾದ ಸಿಬ್ಬಿಸಂಘಗಳ (ಜಯಾಪ. ೧೦-೨೯); ಬಾಕ್ಕೆಗಾಲಿ ಭೂಮಂಡಲಾಧಿಪತ್ಯ-ಸಂಘಾತಪೆಟ್ಟುಮೆಗಳಾಗಿ ಕೃತ್ಯಗ್ರಹಣಂಗಳಾದ (ಜಯಾಪ. ೧-೨೯ ಪ). ೨. ''ಪೊಂದಿಕೆ ; ಸಾಮರಸ್ಯ'' (ಪಾರ್ಶ್ವ. ೪೫೫) : ದೊಡ್ಡಲೋಕ ಸಿಬ್ಬಿ ಜನಿಪಕ್ಕೆ ಸಾಲ್ಪಡಿಂ ಬಂದು ಭೂಮಿಕ್ಕೆಯಂದಂ ರಜಿಸಿ ಸಂಘಾತವಾಗಿ ಭೂಮಿಯಂ ಕಾಯ್ದು (ಪಾರ್ಶ್ವ. ೧೧-೨೨). ೩. ಸಾಮರಸ್ಯವಿಲ್ಲದೆ ; ಕೊರೆ. ೪. ಚಕ್ಷ ; ಕ್ಷೇತ್ರ್ಯ. ೫. ಸಂಘಟನೆ ಒಂದು ವಿಭಾಗ. ೬. ಯುದ್ಧ ; ಕಲಹ. ೭. ಹೊಡೆತ ; ಘರ್ಷಣೆ : ಆಬಲ ಅಂಗಾಂಗ . . . ಒಂಗ ಪಾಲಯಿಲ್ಲಾ ಮಾಗಾಗಿ ಒಂಡಾಕ್ಕಾ ಆಗಿ ಒಂಡಿಲ್ಲಕ್ಕ ತಾಂಗಿ ಸಂಘಾತ ಪೊಡಪಟ್ಟಿದಂದ ಇಲ್ಲಾಗಿಲ್ಲಿಲ್ಲಾ (ಭಾಷಾ. ೨೫೫). ೮. ಆಗೆಗಳು ಪೆರಿಯ ಮುಖಗಳನ್ನು ತಾಮಿಸುವುದು : ಸಿಲಾಗಿ ಪಾಲ್ಪಡಿಸಿಗಳ ಮುಖಗಳಿಂದ ಪಾಲಿಯಿಸಿಲಾಗಿ ಮಿಲ್ಲಿದು (ಭಾಷಾ. ೨೫೫ ಎ). ೯. [ವ್ಯಾಕ] ದ್ವಂದ್ವಸಮಾಸದಲ್ಲಿ ಸಮಾಸವಾದ ಸ್ವರ. ೧೦. [ಶಬ್ದವಿದ್ಯೆ] ಒಂದೇ ಧಾತುವಿನಲ್ಲಿ ರಚಿಸಲಾದ ಶಬ್ದ. ೧೧. [ಜ್ಯೋತಿ] ನಾಮಯೋಗಕ್ಕೆ ಸೇರಿದ ಒಂದು : ಪಾಲಾ ಬಂದಾ ಸಂಘಾತ ರಾಜಾ ರಾಜ ಪಾಲಾ . . . ನಿಮಿತ್ತಾ ಪಾಲಿಸಿಲ್ಲಾ ನಿಮ್ಮಲ್ಲಾಗಿಸಿಲ್ಲಾಂಗಳು ಧೈರ್ಯಕ್ಕೆಸ್ಥಿಸಿಲ್ಲಾಗಳು ನಿಮಿತ್ತಗಳು ಪೆರಿ (ಪಾಲಿ. ೧೨-೧೪ ಪ) : ಪಂಚಾಂಬಂಧಪದಿಂದಂ ಗಿರಿ ಪಾಲಿ ಪೆರಿಯಂದು ಸಂಘಾತ ಸಂಜ್ಞೆ... ಪಾಲಿಯಾಲಾಪಿಯಿಂದಿಲ್ಲಿ ಗುಣಾಪಿಯಾಗಿ ಪೆರಿಯಿಸಿಲ್ಲಾಂ (ಗಣ್ಯಾ. ೬೬). [ಸಂ.]

ಸಂಘಾತನಾಗ (ನಾ). = ಸಂಗಡಿಗ : ಸಂಘಾತನಾ - ಸಂಘಾತಿಗಾ (ಪಾರ್ಶ್ವ. ೫೫ ಟೀಪಣಿ). [ಸಂ. ಸಂಘಾತಿಕ]

ಸಂಘಾತಪ್ರೇಷ್ಠ (ನಾ). = ಸಂಗಡಿಗ : ಸಂಘಾತಪ್ರೇಷ್ಠ - ಸಂಘಾತಿಗಾ. ಸಂಗಡಿಪ್ರೇಷ್ಠ (ಪಾರ್ಶ್ವ. ೫೫ ಟೀಪಣಿ). [ಸಂ.]

ಸಂಘಾತಮರಣ (ನಾ). ಸಾಮೂಹಿಂಮರಣ : ಬಂದು ವಿಷ್ಣವಾದ ವಿಷ್ಣಲ ಸಮೂಗಳ ಬಾಂಧವರು ಸುತ್ತಿ ಅಮರುವ ಸಂಘಾತಮರಣಗಳಿಲ್ಲಿ ಇದು ಮೂರು (ಪಾಪ್ಯ. ೬-೨೦) [ಸಂ.]

ಸಂಘಾತಿ (ನಾ). = ಸಂಗಾತಿ ; ಭಾಷಾಪ್ರಯೋಗವಿಚಾರ . . . ಸಂಘಾತಿಗಳು ಪೋಲಾ ಅಲು ಮಿಶ್ರಣವಾದಿಪ್ಪುದು (ಪಾಪ್ಯ. ೫೬-೧೦). 'ಸಂಗಾತಿ' ನೋ. [ಸಂ. ಸಂಘಾತಿಕ]

ಸಂಘಾಯನ (ನಾ). ಪೊಂದಿ ಕಿಟ್ಟಿಸಿ ಒಂದು ರೀತಿ ; ಭಕ್ಷ್ಯವಿಶೇಷದ ಒಂದು ಬಗೆ : ಭೂಸ್ಪಾಪ್ಯಾಂ ಅಲು ತಾಲಿಯಾಲ ಅಲಿಯಾಲ ಅಲ್ಲಿಯಾ ಸಂಘಾಯನ

ಗ್ರಹಿಸಿ ಇರಿಸಿದಾಗ ಬೆಳಗು ಸಂಕ್ರಾಂತಿ ಸಂಘಾಯನಮೆಂಬುದನ್ನು ತೋರ ಭಕ್ಷ ಮಾಡಿಗಳಂ ಸಮಿತಿ (ಲಜ್ಜಾ. ೨ ೫೫ ಪ). [< ಪ್ರಾ. ಸಂಘಾಯನ = ಮೊಗಾಯನ]

ಸಂಘಾರಾಮ (ನಾ). [ಬೌದ್ಧ] ಬೌದ್ಧಸಂನ್ಯಾಸಿಗಳ ವಾಸಕ್ಕಳ : ವಿಹಾರ : ಬೌದ್ಧಸನ್ಯಾಸಿಗಳು ಉಪವಾಸದ ಅಥವಾ ಪಾಕ್ಷಿಕದಂದು ಸೂರು ಧ್ಯಾನದ ಸಂಘಾರಾಮಗಳಲ್ಲಿ ಕಲೆಯುತ್ತಾರೆ (ಭೂಪಾ. ೬ ೧೦) ; ಪಾಗಾರದ ಮಧ್ಯದಲ್ಲಿ ಇರುವ ಭವ್ಯ ಭಕ್ಷಗಳನ್ನು ದಿನ ಭಾಗದಿಂದ ಎನ್ನಿ ಸಂಘಾರಾಮಕ್ಕೆ ಹೋಗುವ (ಬಜ್ಜಿ. ಉಪೋ. ೧೫೫). [ಸಂ.]

ಸಂಘಿ (ನಾ). ಸಂಧಿಸಾಮಿಕ್ಕೆದನ್ನು ರಚಿಸಿದ ಶ್ಲಾಘನ ತಮಿಳರವರಿ : ಸಂಘಗಳ್ಳಿಲ್ ಪಲಂ ಸಂಘಾಪತ್ಯಂ ಇವರಂ ಲಂಘಿಯಿನ್ನಿ ಕ್ಷುಲಂಗಳ್ ಸಂಘಿಯಾಗುಂ' ಧರಿಂ (ಪಾಪ್ಯ. ೨-೬-೨). [ಸಂ. ಸಂಧಿ?]

ಸಂಘಿಪಾರ್ಶ್ವ (ನಾ). ಮೇಳಾವಿಂಚೆ ; ರಥದ್ಯೂತಲಗ : ''ಅಜ್ಜಗಾಂ ಸಂಘಿಪಾರ್ಶ್ವ ಸಂಘಿಪಾರ ಪಾಪ್ಯಂ'' (ಅಲ್ಲಿಪ. ೧೨೨ ೨೨). [ಸಂ.]

ಸಂಘಿ 'ಸಂಧಿ' ನೋ.

ಸಂಘ್ಯ, ಸಂಘ್ಯೆ, ಸಂಘ್ಯಾ (ನಾ). ೧. ಲೆಂಬಿಸುವಿಕೆ ; ಸಂಗ್ರಹ : Present ಗೊಂಡ ಲೆಂಬಾಗಲಾ ಸಂಘ ಬಾಲಿಯಲು ಬಯಿಸ . . . ಒಡಿಪೆಣಿಗಳು ಪೋಲ್ಸಿಂಗ್ . . . ಮುಂಬರಲು ಗಾಲ ಪಾಲಾಗಿ (ಪಾಪ್ಯ. ೮ ೫ . ೨೫೫-೨೮); ಅಲಾಪಿಪಾಲಾಪಿಯಲು ಸಂಘಲು ಮುಂಬರಿಯು . . . ಪ್ರಭುಗಳಿಂದಲು ಸಂಘಲಿಂಗ್ಸಾನ ಅಂಬರಾಲ ಪೋಲಿ (ಪಾಪ್ಯ. ೬-೨೮). ೨. ದೊಡ್ಡ ; ಗುಂಪು; ರಾಶಿ : ಅಲಿ ಪಲಿಯಾಲಿಯಲ್ಲಿಯು ಮಾಲಿಯಲು ಭಾಲ ಪೊಲಿಯಿ ಭುಲಾಲ ಸಂಘ ಪೆರಿಗೆ (ಪಾಪ್ಯ. ೬-೨೫) ; ಪೆಂಚಾಲಾಯಿಲೆ ಸಂಘಿಲಾ ಪೆಲಿ . . . ಪಾಲಾಗಳು ಗೆಲಿಲಾ (ಪಾಪ್ಯ. ೬೬-೨೫). ೩. ಓಲಿಕೆ ; ಪಲಿ : ಪಾಲಾಗಳ ಮಾಲಾಪ್ಪಲಿಂದ ಪಾಲಿಸಿಲ್ಲಾ ಸಂಘ ಕೆಗ್ಗಿಲ್ಲಾ ಮೋಲಾ (ಪಾಪ್ಯ. ೬ ೨೨ ೧೫೦). 'ಸಂಘಿಸಿಲ್ಲಿ' ನೋ. ೪. ಓಲಿಯಿಲೆ ; ಓಲಿ ; ಸಂಘಿಗೆ : ಮಲ್ಲಾಗಾಲಿ ಸಂಘ ಅಂಗಲ ಸಂಘ ಸಂಘಾಲಾಗಲಾಗಿ ಅಲ್ಲಿ ಇಂಘ ಪಾಲಿಸಿ ಸಂಘ ಲಿಂಘಿಸಿ ಸಂಘ ಲಿಂಘಿಸಿ ಪೋಲಿಸಿಲ್ಲಿಂಘಿಸಿ (ಪಾಪ್ಯ. ೨೦-೨೫) ; ಅಂಘಿ ಸಂಘಿ ಪಾಲಿಯಿಲಿಯಿಲಿಯಲು ಲೋಲಿಂಘ ಗುಣಾಲಾಲ ಪಲಿಯಿಲಿಯಲು ಲೆಂಘ ಲೆಗ್ಗಿಲಿಯಲು ಮಿಲಿಲಿಯಿಲಿಲ (ಪಾಪ್ಯ. ೨-೨೫); ಪೋಲ ಅಲ್ಲಿ ಇಲಿಯಲು ಸಂಘಿ ಪಿಲಿ ಸಂಘಿಲಾ ಲಿಯಿ ಲಿಲ್ಲಿಯಲು (ಪಾಪ್ಯ. ೨೨-೨೫). ೫. ಸಂಘಿ : ಪಿ. ಮಿಲಿಯಿಲಿಲ ಲೆಲಿಯಲು ಮಿಲಿಯಲು ಸಂಘಿಲಾ . . . ಲೋಲಾಲಿಯಿಲಿಯಿಲಿಲ (ಪಾಪ್ಯ. ೨೨-೨೫); ಮಿಲಿ ಸಿಲಿಲಿಲ್ಲಿಲಿ ಲೆಲ್ಲಿಲಿಲ ಲೆಲ್ಲಿ ಮಿಲ್ಲಿಲಿ ಲೆಲ್ಲಿಲಿಲ ಮಿಲ್ಲಿಲಿಲಿಲಿಲಿ (ಪಾಪ್ಯ. ೨-೨೫). ಸಂಘಿ : ೧. ಸಂಘಿ – ಸಂಘಿ (ಪಾಪ್ಯ. ೨೨ ೨೫೫). [< ಪ್ರಾ. ಸಂಘಿ]

ಸಂಘಿ (ನಾ). ಮೂಲಗಿ ; ಸಂಘಿಗಿ : ಸಂಘಿಪಾಲಿಯಲಿ ಲಿಲಿಲಿ ಪೋಲಿಲಿಲಿ ಅಲಿಲಿಲಿಲಿಲಿ ಅಲಿಲಿ ಪಲಿಲಿಲಿಲಿಲಿ (ಪಾಪ್ಯ. ೨೨೨). [?]

ಸಂಘಿ 'ಸಂಘಾಗ' ನೋ.

ಸಂಘಿಲಿಲಿಲಿ 'ಸಂಘಿಲಿಲಿಲಿಲಿ' ನೋ.

ಸಂಘಿಲಿಲಿ (ಕ್ರಿ) . ಪಾಲಿಯಲ್ಲಿ ಲಿಯಲಿಲಿ ; ಲೆಲಿಲಿಯಲಿಲಿ : ಸಂಘಿ ಲಿಲಿಲಿ ಪಿಲ್ಲಿಲಿಲಿಲಿ ಪಲಿಲಿಲಿಲಿ ಲಿಲಿಲಿಲಿಲಿ ಲಿಲಿಲಿಲಿಲಿಲಿ (ಪಾಪ್ಯ. ೨-೨೫).

[ಸಂಘಿ (< ಸಂಘಿ) + - ಇಲಿ]

ಸಂಘಿ, ಸಂಘಿ, ಸಂಘಿ, ಸಂಘಿ (ನಾ). ೧. ಮುಂಗಡ; ಅಗಾವಿ : ಲಿಲಿಲಿಲಿ ಸಂಘಿಲಿಲಿಲಿಲಿಲ

ಹಿಗ್ಗಿ ದಾಳಿಗೆ ಸಂಚಾರವಾಂ ಹೊಟ್ಟಿಕೆ (ಭೂಪಾ. ೧೯-೧೩); ಇವರಿಂದ ಸಾಮರ್ಥಿಯಲ್ಲಿ ಸ್ಪಾಸಿಸ್ಟಿಕ್ಕೆ ಸಂಚಾರ ಬಂದಿರಿಲ್ಲ (ಅಭಿ. ೮೪). ಸಂಚಿತ : ೧. "ಸ್ಪಿರಿಗಳ ಪೂಜಾರ್ಥಿಗಾಂ ಸಂಚಿತಂ"(ಅಭಿ.ಚಿಂ. ೬.೨-೬೪); ಕೇದಾರೋಗ್ರದಿಂದಲೇನು ಪಾಪ್ತಿಯಾಗಿಸಿದಲು ಭೂಮಿಯಂ ದೇವರ ದೇಗ ಸಂಚಿತವಾಗಿ ಭೂಮಿಯಲ್ಲಿ ಸುಖಿಸಿದ್ದ (ಹರಿಹರ ೩-೨); ಅಂತು ಪೂರ್ವಾರ್ಜಿತವಾದುದಿಂತು ಪೂರ್ವಾರ್ಜಿತಕ್ಕೆ ಸಂಚಿತಂ ಪೋಲ್ಪಡೆ ದಿಕ್ಕೆಯಂ ಪೆಟ್ಟೊಳಿಯಂ (ಅಭಿ. ೧೩-೧೫೩. ೪). ಸಂಚಿತಾರ್ಥ : ೧. ಆ ಕೆಯಿಕ್ಕೆಯಂ ವಿಶಿಗೆ ಒಂದಿಷ್ಟೂ ಗೂಡಿಸಲು ಸಂಚಿತಾರ್ಥ ಕೊಡಿಸ್ಪೆನೆ (ವಿಕ್ರಾ. ೬೨). ಸಂಚಿತಾರ್ಥ : ೧. ಬುದ್ಧಿಗಂತಿಸಿದ ಸಾಮರ್ಥಿಯು ಗಣ್ಯಮೆಸ್ಸಿ ಗೋಡಿಯೇ ಸಂಚಿತಾರ್ಥವನ್ನು ಮುಂಗಡ ಕೊಡಲು ಒಂದಿಷ್ಟೂಮಾಲು ಗೋಯಾಸ್ಪಿಗೆ (ಸಾಮಾ. ೩, ೬.). ೩. ಕಡಿಮಿ ವಿಶಾಸಗಳ ಪಾಶ್ಚಾಗೊಸಿರಿ ಒಟ್ಟಿಸ್ಪಿಸ್ಪ ಪಾರಿಗೆ ಸಂಚಿತಾರ್ಥವನ್ನಿಸ್ಪಿ (ಹೊಸಾಸ. ೬೪). [< ಸಂ. ಸಞ್ಚಿತ. / ಮರಾ. ಸಂಚಿತ್]

ಸಂಚಿತಾರ್ಥಗೊಳ್ಳು, ಸಂಚಿತಿಸಲ್ಪಡು (ಕ್ರಿ). ಮುಂಗಡವನ್ನು ಕೊಡಿ,—ಸೊಂದು : ಮಹಾದಾನ ಸ್ಪಿಗೆ ಸಂಚಿತಾರ್ಥಗೊಂಡಿತ್ತ ಪಶ್ಚಿಮ ಕೊಡಿಸಲು ಕೊಂದು (ಭೂಪಾ. ೨೨). ಸಂಚಿತಿಸಲ್ಪಡು : ಪಶ್ಚಿಮಾಸ್ಪಿಸ್ಪಿಗೆ ಸಂಚಿತಾರ್ಥಗೊಳ್ಳಿ ಪಶ್ಚಿಮಿಸಲ್ಪಡಿಸಿಗೆ ಕೊಡು (ಅಷ್ಟ. ೪-೨). [ಸಂಚಿತ + ಪೋ.]

ಸಂಚಿತಾಸ್ಪಿಸು, ಸಂಚಿತಾಸ್ಪಿಸು (ಕ್ರಿ). ಹಾನಿಯನ್ನುಂಟುಮಾಡು; ವಿಪತ್ತಿಗೆ ಗುರಿಮಾಡು : ಹಡಗನ್ನು ಅಂಚಿಯಲ್ಲಿ ರಭಸದಿಂದ ಮಾರ ಪ್ರಾಣಾಸ್ಪಿದಲೂ ಶಿಕ್ಷಾಪಥದ ಒಂದಿಷ್ಟು ಮಾಡಿಗಂಡು (ಕಾಮ. ೮೧), ನಿರಾಸ್ಪಿಸ್ಪಿಸಿದ ಕಣ್ಣು ನೀರು ಮತ್ತು ಧಿಕ್ಕಾರ ಅಭಿಪ್ರಾಯ ಸಂಚಿತಾಸ್ಪಿಸಿತ್ತು (ಮಲ್ಲಿ. ೬೨೨). ಸಂಚಿತಾಸ್ಪಿಸು : ಇದ್ದಿ ಇಷ್ಟು ಗಂಗಾ ಅಲ್ಲಿ ಮಿಸ್ಪಿ ಸ್ಪಾಸ್ಪಿ ಸಂಚಿತಾಸ್ಪಿಸಿತ್ತಾಗಿ (ಮಾಸ. ೧೧); ಒಂದಿಷ್ಟಪಡಿಸಿದ ಅಸ್ಪಿಸ್ಪಿಗೆ ಸಂಚಿತಾಸ್ಪಿಸಿಂಗಳು ಪಶ್ಚಿಸಿಸಿಸಿದಾಗಿ . . . ಅವಳ್ಳೆ ಜೀವಿಗೆ ಕೊಟ್ಟಿ, . . . ಬೇಗಾಯಿಂದ ಮಾಡಿದರು (ಭಾಸ. ೨೧೬). [ಸಂಚಿತ + ಪಿಸು, (< ಪಸ್)]

ಸಂಚಿತಾಳುವು (ಕ್ರಿ). ಕೇದಾರಿಸಿಗೆ; ಹಾನಿಯಿಸಿಗೆ : ಇಷ್ಟು ಕೆಲಸಿಗೆ ಮಿಸ್ಪಿಸಲ ಮೇಗ ಮೇಗ ಗೊಗ ಅಷ ಇಷ್ಟಿಸಿಗೆ ಪ್ರಸ್ತಾಗಿ ಸಂಚಿತಾಳುವಿದೆ (ಹಾಸಾ. ೭೮); ಸಂಚಾರದ ಕೆಲಸದಲ್ಲಿ ಮಾಡಿಸಲು ಒಟ್ಟಿಗೆಗಳ ಮಿಸ್ಪಿಗೆ ಪಟ್ಟಿಸಿಗೆ ಇಷ್ಟಿಸಿಸಿದ್ದಕ್ಕೆ ಆದರ ಕೆಲಸ ಸಂಚಿತಾಳುವಿದೆ (ಮಾಸಾ. ೬೭೬). [ಸಂಚಿತ + ಆಳು, (< ಪಸ್)]

ಸಂಚಿತಿಸು (ಕ್ರಿ). ಕೇದಾರಿಸಿಗೆ; ಹಾನಿಯಿಸಿಗೆ : ಇಷ್ಟಿಸಿಗೆ ಕೆಲಸಿಗೆ ಮಾಂಸ ಪಟ್ಟಿಸಿದ ಪಶ್ಚಿ ಸಂಚಿತಿಸಿ ಇಷ್ಟಿ ಸಂಚಿತಾಳುವಿಸಿದಲ್ಲಿ ಮೇಗಾ (ಮಾಸಾ. ೬೭-೭೦). [ಸಂಚಿತ + -ಇಸು]

ಸಂಚಿತಿಸಿ 'ಸಂಚಿತಿಸು' ನೋ.

ಸಂಚಿತಿಸಿಸಿ 'ಸಂಚಿತಿಸಿಸು' ನೋ.

ಸಂಚಿತಿಸು (ಕ್ರಿ). ಒಟ್ಟಾಗಿ ಸಾಗಿಸಿಸಾಗು, — ಹಾಳಾಗು: ಪಟಿಸಿಸಿಸ್ಪಿ ಅಲ್ಲಿಸಿಸಿಸ್ಪಿಯಿಂದ ಪಂಚಿಸಿಸ ಪ್ರಾಣಿಗಳು ಸಂಚಿತಿಸಿದ (ಮಾಸಾ.೩.೬೬೬-೭೦); ಪಂಚಿಸಿಸಿಸ

ಹಂಬರಿಸು (ಕ್ರಿ). ೧. ಕೆಲಸ; ಮೊದಲು : (೦) ಪ. ಉಂಬಾಗು; ಸಂಭವಿಸು : (೦) ಪ. ಬಳಿಕ ಬರು; ಪ್ರಯೋಗವಾಗು : ಭಯಮೂಲಗ ಉಪಾಸಕ್ಕ ಭಜನಗಳು ಬಾಳ್ಗೆ ನೆಲೆ ಮಾತ್ರ ಬಾಳ್ಗಲ್ಲಿ ಏಳ್ಗತಿಗೆ ಎಡೆಯೂ ಮಾಡೊಂದು ರಹಿತಕ್ಕೆ ಕಂಬರಮಹತಾವೆದ್ಯಸ್ಯಾಲ್ಲಿ ಪಡಿತ್ಯೆ (ಧಾಮೋಪಾ. ೬. ೫-೬೨). ೪. ಬಿಡಿಸು ; ಅರ್ಪಿಸು : ಚಕ್ರಗುಡಾಮಾಂ ಸೋಡಿ ಸಂಬರಿಸಿದಳ್ (ಗಣಪ. ೧೦೬); ಮುಟ್ಟಾಡಿಪ್ಪರ್ಗಲ ಸಂತೆಯಿಸಿ ಸುಗಳ್ಳ ಅಲ್ಲಾರಿ ಮೇಗೆ ಧೂಪದಡೆ (ಮಾಪ್ರ. ೧೨-೨); ಅಲ್ಲಿರಿ ಮೇಗೆಯಾದ ಸಂಬರಿಸಿಪ್ಪಿರ್ದರು (ಹಾಲ. ೧೬೬). ೫. (ಗಾಳಿಯು) ಸುಳಿ; ಹೀಡು : ಮ್ಯಾರುವ ಗಾಳಿ ಪ್ಪಗಳಿಯಾ ಹಂಬರಿಸಿ ಪೆಮ್ಮಿಗಾಡಿದ್ದು ಗಂಜಿಗಿ ಪಂಜರಿ ಗ್ಯಾಬಿಸಿತ್ತ (ಹಾಲ. ೧೭). [ಸಂಬರ + -ಇಸು]

ಹಂಬಲ, ಸಂಬಳ್ (ಗು). ೧. ಅಲಾಗಾಯಿತ; ತೊಗಾಡಿದ; ಅಟ್ಟಿತ್ತ ಬಲಿದಿದ. ೨. ಅಟ್ಟಿರದಾದ; ಬಲಿಬಲಾದ; ಬಲಿಬಲೆಯ : ಕಾಯಿಬಲಿದಂತಾ ವಿಷ್ಣಂ ಭಾಷಾಗಾಗ ಭೂಪಿ. ಸಬಲ ಸಂಬಲ ಸಬಲ ಸಾಲ್ (ಜಾಪ್ರಾ. ೮೯-೧೦೦೦). (ನಾ). ೩. ಅಟ್ಟಿರತೆ; ಬಾಲಲ್ಯ : ಮುಚ್ಚ ಸಂಬಲ ಏಲಿ ಪಲು ಅಗಾಗಾಗ ಅಂಪಿಂಗಾಹುಮಾಪಿಸಿ (೦೮೫೫. ೨೮೮-೧೦೦೦). ೪. ಕ್ಷೀಣತೆಯಾದುದು; ಅಶಾಶ್ವತೆಯಾದುದು : ಸಂಜೀವಾ ಬಚಿಬಲಾಶ್ಚಾಯುಷಂ... ಯಾವುಜ್ಞಾನಿಗಳ ಪಲುಚ ಅಲ್ಲಾಮುಚಿಗಳಿಂದ ಸುಜಿಯಾಗ (೦೮೫. ೪-೨೦). ೫. ಬಿಡಲಿಯಿಂದ ಕೊಡಿದುದು : ಅಟ್ಟಿಶಾಲಿಯಲ ಮಿಟ್ಟ ಭಾಯಾ ಪೂಜಾ ಭೂಪಾಲ ಭೂಪಾಲ ಭೂಪಾಲ . . . ಬಂಬಾಲಿಂಗಳ್ಳ ಏಂಬಾ ಸಿಲ್ಲಿಗಾಲಿಯಲ್ಲಿ ಸಾಲಿಯಾಲಿಯಲ್ಲಿ ಮೊಂಬಾ ಪಲುಚಾಲಿಯಲ್ಲಿ (೦೮೫. ೪-೨೦). [ಸಂ.]

ಹಂಬಲಿಕೆ, ಸಂಬಳಿಕೆ (ನಾ). ೧. ಅಲಾಗಾಯ ; ಬಲಿಬೆ : "ಬಂಗಲಿಂದ ಸಂಬಲಾಗ ಬಂಬಲಿಬಲೆ" (೦೮೫. ೪೭). ಈಗಲ್ಲಿ ಬಿಬಲಿಂದಾಗಿ ಪಲುಚಾಲಿಯಲ್ಲಿ ಯಾವ ಏಲಿಂ ಸಾಲಿಗ ಪಲ್ಲಿಗಾಲಿಯ ಅಬಲಾಪಲ್ಲಿಗಾಲಿಯಲ್ಲಿ (೦೮೫. ೭-೨೨). ಸಂಬಳಿಕೆ : ೧. ಬಡಿಗಾಲಿಗ ಸಂಬಲಾ ಬಂಬಾಲಿಯಾ ಸೋಡಿ ಪಲ್ಲಿಗಾಲಿಯಾಲಿಯಾ (೦೮೫. ೧೬-೨೨). ೨. ಹೊರಮುಟ್ಟದು; ಪ್ರಕಾಶವಿಲ್ಲದು : ಪೂರ ಮಾಣ್ಯಳ ಧೀಕಾಲಾಲ್ಯಂ ಮಿಂಬಾಗ ಸಂಬಳಿಂ ಮೊಂಗಾಗ ಬಾಣಾಲ್ಲಿಗಾಂ... ಬಿಬ್ಬಿತ ಮಿಂಬಲ (೦೮೫. ೧೦-೨೨). [ಸಂ. ಸಂಬಲಾ]

ಹಂಬಲ್ಲ , ಸಂಬಳ್ಳ (ನಾ). ೧. ಸಮೂಹ; ಕಂಪನ. ೨. ಬಾಹುಲ್ಯ; ಬಲಾಬಲ : ಹಂಬಲ್ಲಗಾಲು ಪಲು ಮಾಣ್ಯಳ ಸಂಬಲ್ಲಿಗಾ ಪೆಗೆ ಮಿಂಬಲ ಅಂಬಾಲಾಂಬಾಲ್ಲಿ ಪಲುಚಾಲಿ (೦೮೫. ೧-೨). ಸಂಬಳ್ಳಿ : ೨. ಮಂಬಾಲಿಂದ ಬಾಳ್ಗೆ ಪೊಲಿಂದ ಲಂಬ ಬಲಿ ಸಂಬಳ್ಳಿ ಪೊಲ್ಲಿಗಳಿಂದ ಸೋಡಿದ (೦೮೫. ೨-೨೦). [ಸಂ.]

ಹಂಬಲಿಸು , ಸಂಬಳಿಸು (ಕ್ರಿ). ಅಲಾಗಾಯ; ಬಲಿಬೆ : ಪಲಿಂದ ಏಲಾಬಲಾಲ್ಲಿ ಬಲಾಬಲಿಸಿದ್ದ ಸಂಬಲಿಸಿ, ಏಲ್ಲಿಗಲಿಂದಿಗ ಸಾಲಿಸಿಪ್ಪಿರ್ದರು (೦೮೫. ೧೦-೨೨). ೧. ಬಿಡಿಸು; ಅರ್ಪಿಸು : ಮಾಣ್ಯಳ ಸಂಬಲಿಸಿದ ಪೂಜಾಲಿಂದ ಸಾಲಿಸಿಪ್ಪಿರ್ದರು (೦೮೫. ೧೦-೨೨). ೨. ಸಾಲಿಸಿಪ್ಪಿರ್ದರು : ಏಲಾಬಲಾಲ್ಲಿ ಬಲಾಬಲಿಸಿದ್ದ ಸಂಬಲಿಸಿ, ಏಲ್ಲಿಗಲಿಂದಿಗ ಸಾಲಿಸಿಪ್ಪಿರ್ದರು (೦೮೫. ೧೦-೨೨). [ಸಂ.]

ಹಂಬಲಿಸು, ಸಂಬಳಿಸು (ಕ್ರಿ). ೧. ಸಮೂಹ; ಕಂಪನ : ಬಿಜ್ಜರ ಮಾಯಾಜಾಲ ಬಿಂದಂ ಕಲಿ ಬಲಿಂದಿಂಬ ಮೊಗ ಸಂಬಲಿಂದಾಗಿದೆ (೦೮೫. ೬-೨೨). ಸಂಬಲಿಸಿದ ಧೀಗ ನೀ ಮಾಲಿಂದಂದ ಮಾಲಿಸ ಮಾಳ್ಗಲಿಂದ್ರಿಂಬ್ಬ. . . ಎಂದು ಪಲುಚ್ಚ ನೆಗಳ ಕೊಲ್ಲುಳಿದ (೦೮೫. ೮೯-೧೦). ೨. ಅಲುಗು; ಅಲ್ಲಾಡು : ಅಚಲಿಗಾ ಸಂಬಲಿಸಿದ ಬಲಿಂದಂ ಎಂದಿಸಿದೆ (೦೮೫. ೬-೨೦). ೩. ಭೀಬಲಿಸು : ಬಾಹಿಲ್ಲಿಬಿಸಿ ಪೊಂದಿದ : ದಾಸ ಪಲ್ಲಾಸ ಬಾಸಾಗಿದ ಧೂಲಿಯಾಗ ಸಂಬಲಿಂದ ಬಿಚ್ಚ (೦೮೫. ೬-೨೨). ೪. ಮರೆಯಾಗು; ಹೊಂಬಿಹೊಗು : ಪರಮಾಗಲಿಂದಿಗೆ ಸಂಬಲಿಂದ ಏಗೆ ಸಂಬಲಿಂದ ಧೂಲಿಗೆ ಮಾಪ ಬಿಚಿಬಲಿ ಧೂಲಿಗೆ (೦೮೫. ೧೨-೨೨). ಸಂಬಳಿಸು : ೧. ಭೃತ್ಯಸ್ಥಂ ಅಟ್ಟಿಗಲ ಸೋಗ ಬಾಣಾ ಮುಂಬಾಮಿಂದಿಸ್ಥಾಂ ಸಂಬಲಿ... ಮಿಗಿಲಾ ಲೊಂಬಾ ಬಿಲ್ಲ ಭೂಮಿಲ್ಲಾ ಸೋಡಿಗಲಿಂದ (೦೮೫. ೮೧-೨೨); ಇಂಗಿಂತ್ತಿಗೆ ಒಲ್ಲಿಗಲಿಂದಾಲಾಲ್ಲಿಗಾಂ ಸಂಬಲಿಗ . . . ಬೆಗಿಬಿಸಿಂದಾಲ್ಲಿಗಲಿಂದಾ ಬಿಗಿ (೦೮೫. ೧೭-೨೨). ೫. ಬಿಲಿಂದಾ; ಸಬಿಗೆ : ಮೊಗ ಪಾಲ್ಲಿಗಲ್ಲಿಗಾಲಿಗಾಂ ಭಾಗಿಂದಿಂದಾ ಭೂಗ ಬೊಗಾಂದಿಂಡಾಂ (೦೮೫. ೧೮-೨೨; ೧೦೮೧); ಮಿಂಬಾಲ ಗಿಂಬಾಲಿಗ ಸಂಬಾಗಾ ಭೂಗ ಬ್ಯಾಭಗಾಲಾಗ ಭೂಬಿಂ ಲಿಂದಾ (೦೮೫. ೬-೨೨ ಬಿ). ೬. ಬಿಡಿದಾಗು; ಬಿಡಿಮೊಗು : ಇಂಬ ಬಿಚ್ಚಂ ಮಾಲಿ ಸೋಡಿ ಸಂಬಲಿಗಾಲಿಂದಾ ಮಾಲಿಂಬಾಲಿಂದಾ. ೭. ತಿರುಗಾದು; ಸಂಚರಿಸು : ಅಲ್ಲಾಲಿಂ ಲಿಂದಾಲಿಂದಾ ಬಾಲ್ಲಿ ಪೆಗಲಿಂಬ್ಲಿಂದಾ (೦೮೫. ೧೬-೨೨). ೮. ಅಲುಗಾಡು; ಬಲಬಲಗೊಳ್ಳು : ಆ ಲಿಂಬಾಲಿಂಬಲಿಂಬಾಲಿಂದಾಲಿಂದಾ ಲಿಂಲಿ ಭೂಗಾಲಿಂಬ್ಲಿಗಾಲಿಂದಾಲಿಂದಾ... ಸೊಂಬ್ಲಿಂಬಾಲಿಂದಾ ಸಂಬಲಿಗಾಲಿಂದಾ (೦೮೫. ೯-೨೨ ಬಿ). ೯. ಅಟ್ಟಿರಗೊಳ್ಳು; ಹೆದರು : ಈ ಬಾಲಾ ಲಿಂದಾಲಿಂದಾ ಲಿಂಲಿಂದಾಲಿಂದಾಲಿಂದಾ ಸಂಬಲಿಂದಾ ಭೂಬ್ಲಿಸಿಂದಾ ಬಿಳ್ಳಿಂ ಭೂಬ್ಲಿಂ (೦೮೫. ೬-೨೦). ೧೦. ಪರಾದು; ದ್ಯಾಪಿಸು : ಇಂಬ ಲಿಂಬಾ ಭೂಬಿಂ ಸಂಬಲಿಂದಾ ಬಲ್ಲಿಂಬಾಲಿಂದಾ ಬಿಚಿಬಲಿಂಬಾಲಿಂದಾ (೦೮೫. ೧೦-೨೨). ೧೧. ಓಪ್ಪಾದು (?) : ಭಲಲಿಂಬಾಲಿಂಬಾಲಿಂದಾ ಬಲಿಂಬಾ ಬಿಲ್ಲಿಲಿಂಬಿಂದ ಬಿಬಿಲಿಂಬಿಂದಾಲಿಂದಾ ಬಿಲಿಂಬಿಂದಾಲಿಂದಾಲಿಂದಾಲ

ಸಂಚಯನ , ಸಂಚಯಾನ (ನಾ). = ಸಂಚಯ [1] : (೧). **ಸಂಚಯಾನ:** "ಅಜಿನ . . . ಒಣದ ತರಪ ಅಜ್ಜ, ಸಂಚಯಾನ" (ಸಂಗಾ. ೩೩೨).

[ಸಂಚಯ + ಅನ/ಆನ]

ಸಂಚಯಾನ 'ಸಂಚಯನ' ನೋ.

ಸಂಚಯಿಸು (ನಾ). ಕ್ರಿ.ಗಳಿಗೆಯಾಗಿಸು ; ಬಲವಂತಪಡಿಸಿ ಸಂಪಾದಿಸು : ಅರಿಂಜ್ಞಾಪ ಸಚ್ಚ ಸಿಱಪ್ಪ ಧರ್ಮಪತ್ನಿಯರಂ ಸಂಚಯಿಸಿ ಕೊಂಡಿರ್ಪುದುಂ ಅಲ್ಲಮಂ ಬಂದು . . . ಭೂಮಿಯಂ ಬೇಡಿದಂ (ಭೋಗ. ೩೫. ೫೯-೫೬; ೪೦೧).

[ಸಂ. ಸಂಚಯಿಸ್]

ಸಂಚಯಿತ 'ಸಂಚಿತ' ನೋ.

ಸಂಚಯ್ಯ 'ಸಂಚಿಸ್ಯೆ' ನೋ.

ಸಂಚಯಿಸು 'ಸಂಚಿಸು' ನೋ.

ಸಂಚಯಿತ 'ಸಂಚಿತ' ನೋ.

ಸಂಚಯಿಸು 'ಸಂಚಿಸು' ನೋ.

ಸಂಚಲಿ (ನಾ). ಬೆಂಚಲುಚಿತ್ತಕ್ಕಳ್ಳನು: ಬಿಡದೆ : ಬಿಚ್ಚಿಲ ಮಚಿಂಬ್ಳಿಕ ಸಂಚಲಿ . . . ಮಾಂಸ್ಕಂಡ ಮಚ್ಚಿ ಮಾರಿ ಸಿಚ್ಚಿದೆ (ಅಜಿ. ೨-೭). [ಸಂ. ಸಂಚಲಿ]

ಸಂಚರಣ (ನಾ). ೧. ತಿರುಗಾಟ; ಅಲ್ಲಾಡುವಿಕೆ : ರಾಮಣಂಗೆ ಸಾಲಿ ರೂಪ ಸಂಚರಣ (ಮಲ್ಲಿನಾ. ೨-೩೬) ; ಸಂಚಾರದಿಂದ ತೇರಿನ್ನ ಚಕ್ರಗಳ ಸಂಚರಣ ದಿಟ್ಟು ರಾಮನಿಂದ ಸಂಚಾರಂಗೆ ಎದ್ದು ಸಂಚರಣ ನಿಜಂ ಆ ತೇರಾ . . . ಮತ್ತೊಂದು ಸಂಚಾರಕ್ಕೆ ಒಗ್ಗಾಯನ್ನು (ಪಾಪ. ೧, ೧೬೦ ೦೩೬)· ಮಾಯಪಂಯ ದೇವಾಲಯಾಂತರಾಳ ಪೆರಾಟ್ಟಿಗಳ್ ಘೋರಿಪ (ಭುವನೈ. ೧೨-೧೦೩). ೩. ಪ್ರಯೋಗ; ಪ್ರಯೋಗ : ಶ್ರೀಗಂಧಪ್ಪಿಗಾ ಆ ವಿಧ ಪಯಣಿಲ್ಲಿಯೇ ಸಂಚಾರಕ್ಕೆ ಹೊಂದಿರುವ ವಿಧಾನ - ಹಬ್ಬಿನಿಂ ಪಯಣಿಯಲ್ಲಿರುವ ರೀತಿಯ ಸಂಚಾರಾಗಳ ಚೆಳಕಾರು (ಸಂಗಾಂ. ೩೮). ೨. ಜಾಡು ಹೋಗುವ ಮಾರ್ಗ. — ದಾನಿ. ೪. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಬರಿಯುವಿಕೆ; ಸಂಕ್ರಾಂತಿ. ೫. [ಸಂಗೀತ] ತಾನಗಳಲ್ಲಿ ಒಂದು ಬಗೆ : ಇದ್ದು . . . ಗಾಯಕಂ ಪಂಚಮದ ವಿಷಯ ಸಂಚಾರಂಗಳಂ ಬಹುವಿಧ (ಸಂಗೀ. ೨೦). 'ಸಂಚಾರಿ' ನೋ. [ಸಂ.]

ಸಂಚಾಡು (ಗ). ೧. ತಿಳಿಯುವಂತೆ ಮಾಡುವಿಕೆ; ತಿಳಿಸುವಿಕೆ. (ನಾ). ೨. ಮಾರ್ಗದರ್ಶನ; ಮುಂದಾಳು. ೩. ಸುದ್ದಿಯನ್ನು ತಿಳಿಸುವಿಕೆಯನು; ದೂತ; ಚಾರ. ೪. (ಅಲಂ) ಗಾಳಿ; ವಾಯು : ಅಜಂ ದಿಕ್ಕಿಲ್ಲಿ ಬಿಟ್ಟಿಯಮಿಂ ಸಾಲ್ಲಾಂ . . . ಧರ್ಮಪ್ರಭಂ ಸಂಚಾಡಂ ಲೋಕಪ್ರಸಿದ್ಧಂ ಪಾಪಾಂಗಿ ದಿಗ್ಗಿಪ್ಪಿಂ ಸಂಚಾಡಂ ಲೋಕಪ್ರಸಿದ್ಧಂ (ಧರ್ಮಾ. ೨-೧೩). [ಸಂ.]

ಸಂಚಾಡಿಕೆ (ನಾ). ಬಲಿಪ : ಸಂಚಾರ : ಗಾಪಂ ಪಿಚ್ಚಿಪಿ . . . ಪಾಯಾಣಾಡಿ ಪೊಗ್ಗಿಯಾಯಿಂ ಬಿಳಿಪ್ಪಿಂಗಳ್, ಕಾಲ್ಗಳಿಂ ಜಗಿಪೆಂಬಂತಮಿರ್ದು, ಕಿಲ್ಬಿಡ್ಡಾಂಡಿಂ ದೂರಿಲ್ಲಿ (ಧರ್ಮ. ೯-೩೨). [ಸಂ. ಸಂಚಾರ]

ಸಂಚಾರಪಥಗಳ (ನಾ). ಸಚಿಯುವ ದಾರಿ, — ಮಾರ್ಗ : ಸಚ್ಚಿಪಿಂ ಸಂಚಾರಪಥಗಳ್ಗೆ ಆಯಾಯ ಘಾಟ ದಾರಿಗಳಿಗ್ಗಿದು . . . ದುಷ್ಟಚ್ಚಾಸ್ಥಾನ ಪರಮಾತ್ಮಾನ (ಮಾಪ್ರ. ೧೫೧). [ಸಂ.]

ಸಂಚಾರಿ (ಗ). ೧. ತಿರುಗುವ ; ಬಲಿಯುವ : ಒಟಿಚಾರ ಸ್ಥಾಳ ಸಂಚಾರಿ ಸಾಳ್ಳಗಳಾಗಲದುವು ರಾತ್ರಾಶ್ರಾಚಾರಿಯಿಕ್ಕಳ ವಿಸಾಲಚಿತ್ತಗಾದಿಂ ಕೃಪಾವಿಶೇಷಮಾಂಗಳ್ (ಧರ್ಮಾಪ್ರ. ೬-೧೫) (ನಾ). ೨. ಸುದ್ದಿಯನ್ನು ತಿಳಿಸುವವಳು ; ದೂತಿ ; ದೂತಿ : "ಸಂಚಾರಿಯ ದೂತಿಯಕ್ಕುಂ" (ಸಂಗಾ. ೧೦-೨) ೩. ಕಿಂಬಿಗೆ; ಕುಂಬಳಗಿತ್ತಿ. ೪. ಸಂಚರಿಸುವವನು : ಆತ್ಮನ ನಾಡಾಳ್ವಾ ಒಟ್ಟಿಗೆ ಅರಮನೆ ಸಂಚಾರಿಗಳ್ ಬಾರು ಹೋಡಿಯಾಯಿತು ಮಾ. ೫. ಪ್ರಯಾಣಿಸುವವನು : ಸಂಚಾರಿಯಾಗಿ ಸೊಸಚ್ಚಿದಾ ಅ ಸ್ಥಾನದಲ್ಲಿ ಅಳಿಗಳಿಗಲಿಲ್ಲ ೧೦ ಕಂಡಿಗಳ ಮಚ್ಚಿಗೆ ಅಳ್ಳಿಯೇ ಬೆಂಬಿಡದ ಒಟ್ಟಿಯಿಂದಿರುವ (ಮಾಪ್ರ) ೬. = ಸಂಚಾರಿಧಾತು : ವಿಷಾಂಶ ಸ್ಥಾಯಿಭಾವಂ ಸಂಚಾರಿಭಾವಂ ಸಂಚಾರಿಭಾವಮೆಂಬೀ ಮೂವತ್ತುಮೂರುಂ ಸಾತ್ವಿಕಭಾವಂಗಳುಮಂ . . . ರಾತ್ರಿಸಂಯೋಜಿಸಲ್ಕಂ ಪೆಸರುಂ ಪಿಸಿಲ್ಲಂ (ಅಜಿ. ೧-೧೦ ಪ); ಸಂಚಾರಿಗಳ ಬಚ್ಚಿಟ್ಟಿಗಳ್ಗೆ ಅರಮನೆ ಅಲ್ಲಾ ಚಿಂತೆ ಅಪಾಯಾಗಂಗಳಂ ಪ್ರಕ್ಷಿಪ್ತಗಳಾಗಿ (ಪ್ರಾ. ೧೫೫). 'ಸಂಚಾರಿಧಾತು' ಪೆರಾ. ೭. [ಸಂಗೀತ] ತಾನಗಳಲ್ಲಿ ಒಂದು ಬಗೆ ; ಗಾನಕ್ರಿಯೆಯ ಸ್ಥಾಯಿ, ಅರೋಹಿ, ಅವರೋಹಿ, ಸಂಚಾರಿಗಳೆಂಬ ನಾಲ್ಕು ವಿಧಗಳಲ್ಲಿ ಒಂದು ; "ದೇಶಲು ಮತ್ತು ದುಷ್ಟಾಲುಲ ವಿಧದಿಂ ಮತ್ತು ಮುಂದಿಂ ತಾಲಗಳ ಸ್ಥಿರದಿಂ ಹೊಂದಿರುವಿರ್" (ಸಂಗೀ. ೪೫) : ಸ್ಥಾಯಿ ಸಂಚಾರಿಗಳ ಮಾಡುವಿಕೆಯು ಸಂಚಾರಿಯ ಮತ್ತ ಸಂಚಾರಿ ಮಾಗಿದ . . . ಶಾಪದಿಂದ ಸೊಸಚ್ಚಿರುಗಿ (ಭೃಹಿ. ೫೯-೬೦); ಗಾಯ್ಕನಿಯ ದೀಗಳೆಂದು ಭೀಗಿ: ಆದಿ ಸ್ಥಾಯಿ, ಅರೋಹಿ, ಅವರೋಹಿ ಮತ್ತು ಸಂಚಾರಿ ಎಂದು [ಗಾಯ್ಕನಿಯಲಾಗಿ ವಿಚಿಂತಿಸಿಗಾಗಿ] (ಅಜಿ. ೧೬). [ಸಂ. ಸಂಚಾರಿ]

ಸಂಚಾರಿತೆ (ನಾ). ೧. ಸಚಿಸುವಂತಿನ್ನು ತಿಳುಸಿಸುವ ಹೆಂಗಸು; ದೂತಿ; ದಾನಿ : "ದೂತಿ. ಸಂಚಾರಿ - ಳಿ ೨ ದೂತಿ" (ಪಾಪಾ. ೩-೧೬೬). ೨. ಕಿಂಬಿಗೆ; ಕುಂಬಳಗಿತ್ತಿ. [ಸಂ. ಸಂಚಾರಿ]

ಸಂಚಾರಿಧಾತು (ನಾ). [ಶಾಸ್ತ್ರವಿದ] ಒದಲಾವಣೆ ಹೊಂದುವ ಚಿತ್ತವೃತ್ತಿ; ಸ್ಥಿರವಲ್ಲದ ಧಾತು ; ಸ್ಥಾಯಿಧಾತುಗಳ ದೊಡೆಯಲ್ಲಿ, ಬರುವ ಇತರ ಸಣ್ಣ ಧಾತು : ಧಾತು ವಿಧಾತುಮೆಂಬಿತ್ತಾದಂ ಸಂಚಾರಿಧಾತುಮೆಂಬಿತ್ತಾದಂ ವಿಷ್ಣುಮಯಂ ಅಖಿಲಾಧಿಪತಿಯಪ್ಪಂಗಳಿಗೆ ಭಯಮಿಲ್ಲಮೆಂದಿಂ (ಧರ್ಮಪ್ರ. ೮೧೦). ಕಿಂಬಿ ಅಲಾಂಗಂ ಈ ಸ್ಥಾಯಿಧಾತುಗಳ್ಗೆ ಸಮಿಪ್ತಿಗಾಗಿ ಹೋಗಿರ್ಪ ಸಂಚಾರಿಧಾತುಗಳ್ಳು ಅಲ್ಲಿಗಳ್ಗೆ ವಾಯಿದ ಕಾರಣಗಳ ಹೋಗಿರ್ಪುದ್ದೆ (ಭೃಹಿ. ೧೫೬). [ಸಂ.]

ಸಂಚಾರಿಯು (ಕ್ರಿ). ೧. ತಿರುಗು ; ಅಲ್ಲಾಡು; ಸಂಚರಿಸು : ಮಚ್ಚ ಪಾಯಾಣ ವಿಷಯಾಲ್ಲಿ ಶಾ ಸಂಚಾರಿಯು ಕೆಯಿದ್ದ (ಪಾಪಾ. ೩೧). ೨. ಸ್ಥಾಯಿಯಾಗಿ ನಿಲ್ಲದಿರು; ಸಚಿಸುವಿಕೆ (ಸಂದರ್ಭೋಚಿತವಾಗಿ) ಬರು ಹೋಗು : ದಾನಿ ಸಾಚ್ಚಿಕ ಭೂಚೀಯಾಧಿಪಯಿಯಾಯಿಯು ಭೃಚ್ಚಿಯಲ್ಲಿ ರಥಂ ಸಂಚಾರಿಯ ಧಾನಿಯಂ ವಿಸ್ಮಾಧಿಪಿಂ ಬಿಡಲಾ ಮೇಲೆ ಸಾಲಾಂಚಿಯಿಂ (ಅಜಿ. ೯-೩೬). ೩. ದೇಸಿಯು; ಸಚರಿ : ಗೋಳಾಯಿಯ ಬಚ್ಚಿಂ ಪಯಣಾಂ ಅಖಿಲಾಧಿಪಚ್ಚಿಯಿಂ ಧಾರಿಲ್ಲಿ ಸಂಚಾರಿಯಪ್ಪಿಂ . . . ಸ್ಥಾನಾ ಪಿಚ್ಚಿಂ (ಪಾಪಾ. ೯-೧೬) 'ಸಂಚಿಯು' ನೋ. [ಸಂಚಾರಿ + -ಆ/ಅ]

ಸಂಚಾರಿಸಲಿಗ (ನಾ). = ಸಂಚಾರಿ ೬ : ಒಂದಿಷ್ಟಂ ಸ್ಥಿರವಲ್ಲ ನಿತ್ಯ ನಿತ್ಯ ಪ್ರಕೃತಿಸಂಭವಿಪ್ಪುದು ಸ್ಥಾಯಿಭಾವಗಳ್ ದಂದು ಪೇಳ್ದಪರಂ . . . ಇಪ್ಪಗಳ ಪಿಚ್ಚಿಸಂದಿಪ್ಪ ಸಂಚಾರಿಭಾವಾವಾಯ್ದಪ್ಪರ್ (ಅಜಿ. ೧೬). [ಸಂ.]

ಸಂಚಾರಿಸು (ನಾ). ಕೆಲಸವನ್ನು ಸ್ವಯಚ್ಛೆಗೊಳಪಾದ ಪ್ರಕಾರ : ಸಮಾಜ ಸಚ್ಚ ದಾನ ಸಂಚಾರಿಸು (ಧರ್ಮಪ್ರ. ೧೫). [ಸಂ.]

ಸಂಚಾರಿಸು (ನಾ). ೧. ಬಲಿಯುವಿಕೆ. ೨. ಬಲಿಯುವಿಕೆಯ ಮಾಡುವಿಕೆ. [ಸಂ.]

ಸಂಚಾರಿಸು (ನಾ). ಕಾರ್ಯಪ್ರವೃತ್ತಿಯನ್ನು ನೋಡಿಕೊಳ್ಳುವಿಕೆ : ಆಯ ಬಡಿಯಾಗಿರು ಶಂಖ ಸ್ಥಾಯಿಭಾವ ಆತ್ಮಿಂದ ಸಂಚಾರಿಯನ್ನು ಇರಿಂಗೂ ಮಾಡಿ ಸ್ಥಿರ ಇದ್ದಾಗ (ಮಾಪ್ರ. ೨೭) [ಸಂ. ಸಂಚಾರಿ]

ಸಂಚಾರಿಕೆ (ನಾ). (?) : ಕ್ಷೀರಾಂಗಿಕ ಆಹಾರವ್ಯಾಸಂಚಾರಿಕ್ಕಾಗಿ ಸಂಚಾರಿ ಸ್ಥಾನೀಯಾಂಚಾರಿಯ ಪಾಯಾಸಂಚಾರಿಂ ಮಚ್ಚಿಯಾಯಿಗಿ (ಧರ್ಮಪ್ರ. ೧೨-೭೭ ಪ). (ಕ ಇದು 'ಸಂಚಾರಿಯ' = ದೇಶಕ್ಕಾಗಿರುವ ಬಳ್ಳೆ ವಿಂದಿರುವುದೆ?) 'ಸಂಧ್ಯಾವಳಿ' ನೋ. [?]

ಸಂಚಿ , ಚಿಂಚಿ (ನಾ). ೧. ಚೀಲ; ಹರಿಚಿಚೆ : ಮಚ್ಚಿ ಸಂದಿ ಸಿಂದಿ ಬಾಸಿಕಿಲ್ಲ ಚಾಲಿಯಾಗಿ ಮಿಲ್ಲಿಸಿ ಮಾಚಿಂ ಪೆದುಗಿ ಪಿಚ್ಚಿಲೆ ಸಂಚಿಂ ಭೂಗಿ ಮಚ್ಚಿ ಧಾನ ಮಚ್ಚಿಲೊಳ್ಳಿಪಾಚಿ ಒಗಿ ಮಿಂ ::::ಚ್ಚಿ (ಅಜಿ. ೨ ೦೪ ೨) ಸಾಚಿಂಗಾಲ ಎಂದು

ಮುಂದು ಕೂಗಿ ಅಮಾವಾಸೆ ಸಂಜೆ ಅಳ್ಳಿ ಪಿಸ್ತ ಅಗಲ ಅಗಿ ಅಳ್ಳಿಸಲು ಪ್ರಯತ್ನಿಸಿದರು . . . ಹೊಯಿತು (ಅಮಾ೨ ೧೪. ೧೩). ಸಂಜೆ ಮೊಸ್ತಾಗಲೆ ಯಾವ ಹೊಯಿದಾಗೆ? (ಗಾಪ).

೨. ಏಳೆ ಅಡಿಕೆಯ ಬೀಜ : ಅಡಿಕೆ ಗಿಡ ಬಾಯಿಗೆ ಸಂಜೆ ಅಗಲ ಸ್ಥಗಿತ ಅಡಿಕೆಯಲ್ಲಿ ಪಿಸ್ತ ಸಮಾನವಾಗಿ ಪಡೆದರು (ಎಂಡಿಮಾ ೧೪. ೩೬). ಬೆಸ್ಸಿಗೆ ಬಳಸುವಾಗಿನ ಸಮಯ ಹೊಸ್ತಯಿಸಿದ ಬೆಸ್ಸ ಪಡೆ (ಪಾಸಾ. ೧-೩೬). ಸಿಸ್ತ ಸಂಜೆಯಲ್ಲಿ ಬೆಸ್ಸ ಏರಿ ಅಡಿ ಹೊಸ್ತಿಯಲ್ಲಿ ಮುಂದಿನ ಪಾರ್ಟಿಗಳನ್ನು (ಅಪಾ. ೧೬) ಬೆಸ್ಸಿ : ೨. ಪೊಲ ಬಳ ಬೆಸ್ಸಿಗೆ ಸಂಜೆ ಸಜ್ಜಾದ ಗಾಯ . . . ವಿಶಾಪಟಿಯ ಮಿಗೆ ಅಗಲ್ಲಿ ಯಾ ರಾಷ್ಟ್ರಪತಿ ಪಾಸಾಗಿರಲು (ಗಾಪಾ. ೬-೨೧); ಗಾಪಟಿಯಿ, ಬೆಸ್ಸ ಪಟ್ಟಿ ಸಪೆಗೂ ಪಾಲಿಸಲು ಅಪ್ಪಿಸಿದರೆ (ಪಾಪಾ. ೫.೧೬.೨).

ಸಂಜಾತ ಗಾಳಿಗೆ = ರಾಜ, ರಾಣಿಯರಿಗೆ ಬೇಕಾದಾಗ ತಾವಿಚ್ಛಿಸಿದಾಗ ಸಿಕ್ಕಿ ಸಿಗುವ ಹೊಸ ಕೆಲಸ — ಉದ್ಯೋಗ : ಪಟ್ಟ ಸಂಜಾತ ಇಂಗಳ ಪಾಲಿಸಿಯಲ್ಲಿರುವ ಸಚಿವರಿಗೆ ಹೊಸದು ಸ್ಥಾನಮಾನಗಳಿಗೆ ಬಾಧಿ (ಇಪಾ. ೨೨). ಅಧಿಪತಿಯನ್ನು ಸ್ಥಿರವಾಗಿ ಇರಿಸಿದಾಗ ಇಂದ ಸಂಜಾತ ಇಂಗಳ, ಬಂದಿನ ಬೆಸ್ಸಿ ಇಂಗಳ (ಇಪಾಪಾ. ೧೫).

[ಪೆ. ೪ ಪೆಂ. ಸಂಜ ; ಪ್ರಾಕೃ. ಸಂಜ, ಸಂಜ]

ಸಂಜೆ, ಸಂಜಿಗೆ (ನಾ). ೧. ಹಗಲಿನಲ್ಲಿನ ಬೆಳಕು ಮರೆಯಾಗಿ ಕತ್ತಲೆ ಪಸರಿಸುವ ಹೊತ್ತಿಗೆ ಮುಂಚಿನ ಸಮಯ : ಬರಬರುತ್ತಾ ಮಧ್ಯಾಹ್ನವಾಗುವುದರಲ್ಲಿ ಸಂಜೆಯಾಗಿ ಕತ್ತಲೆ ಆವರಿಸಿಕೊಳ್ಳುವುದು ಸಹಜ ಪ್ರಕೃತಿ ನಿಯಮ (ಮಾಪ್ರ. ೨೦-೨೩). ೨. ಸಂಧ್ಯಾವಂದನೆ ಒಂದು ವಿಧಿವಿಧಾನ : ಗೃಹಸ್ಥರ ದೊಂಬಿಯು ಸಂಜೆಯಾಯ್ತು ಪ್ರಯಾಣವು (ಪ್ರಸ್ತ. ೧೧), ಸಾರೀ ಅಡಿಗೆ ಸಂಜೆ ತಾವೊಂಬರೊಳಗೆ ಬಂದ ಮಾಡಿಸಿದ (ಆಪಾ. ೨). ೩. ನಿಯತಕಾಲಿಕೆಗಳ ಒಂದು ಪ್ರತಿಯಿ : ದಿನ್ಯಾಲಿಗಾಗಿ ಅಗಲಿ ಬಾಲ ಒಂದು ಚಿತ್ರಿತ ಸಂಜೆಯನ್ನು ಮೊಯಿಸಿದ್ದಳು (ಅಗಾಪ. ೧೨೨). ಸಿಂಜೆಗೆ : ೧. ಹಗಲು ಭೂಮಿಯನ್ನು, ಕೃಷಿಯಾದಿಯ ಭಕ್ಷ್ಯಕ ಇಂದ ಸಂಜೆಗೆ ಒಡಿದ ಹಂಗಾಮು ಸಾಮಿಸ್ಥಗಳು ಬಳಿಕ ಸಜ ಮಾಡಿಕೆ ಪೂರಾದ ಗೃಹಕೆ ತೆಗೆದ ಅಳತೆ ಮಾಡಿಕ್ಕಾಗಿ ಬಂದ ಮೊಡಿಸಿದ (ಅಗಾಪ. ೩-೧೪).

[< ಪೂ. ಸಂಜೆ < ? < ಪೆಂ. ಸಂಜ]

ಸಂಜೆ 'ಸಂಜೆ' ನೋಡಿ.

ಸಂಜೆ (ಗು). ೧. ಬಂಧಿಸಿ ; ಸಂಗ್ರಹಿಸಿದ : ಸಾಮ್ರಾಜ್ಯಾಧಿಪತಿ ಮಾಗಿಯಲ್ಲಿ ಅಗಾಂಗಾಯಿಯಿಂದಲೂ ಅಧಿಕವಾಗಿ ಭೂಮಿಯನ್ನು ನಿಷ್ಠಯಪಾಲಿಸಿಕೊಳ್ಳಲಾಗಿ ಸಜಿ ಮುಂದಿದೆ (ಅಪಾಪ್ರ. ೧೨-೨೦ ಪ). ೨. ಅಧಿಕವಾದ ; ಹೆಗಲಾದಾದ. (ನಾ). ೩. ಸಂಗ್ರಹಿಸಿದಾದುದು ; ಸಂಗ್ರಹ : ಪಟ್ಟ ಸಂಜೆ ಸಂಖ್ಯ ಪಾಪ್ಪ ಪಾಪ್ಪಿಗಳು ಭೂಮಿಯಲ್ಲಿ ಸಂಜೆಯಾಗಿವೆ (ಅಪ್ಪಿ. ೨-೧೨) ; ಸಂಜೆಗಿ ಅಧಿಕ ಪ್ರಮಿಸಿಯಾಗಿ ವಿಶೇಷವಾಗಿ ಸಂಜೆಯ . . . ಸಂಜೆ-ಬಂಧನದಿಂದಲೂ ಅಧಿಕವಾಗಿ ಅಳತೆ (ಪ್ರಸ್ತ. ೨-೨) ೪. [ಪೆಜ್ಞಾ] ಕರ್ಮಾಧಿಗಳಲ್ಲಿ ಒಂದು ; ಒಂದಿದೆ ಜನ್ಮಗಳಲ್ಲಿ ಮಡಿದಿದ ಆರ್ಮ : ಸಂಜೆಯಿಂದ ಗಣಿಸ್ಥಿಯ ಬಳ್ಳಿಯಾದಿಂದ ಸಂಗ್ರಹ (ಅಪ್ಪಿಸ್ತ. ೬-೨೪-೨) ; ವಿಷ್ಣ ಪ್ರಭಾವಸಂಜೆಯೇ ಬಳ್ಳಿಯಾದಿಂದ ಆಧಿಕವಾಗಿ೦ (ಅಪ್ಪಿಸ್ತ. ೬೬-೧೨). [ಪೆ.]

ಸಂಜೆಕಾರ್ಮ (ನಾ). [ಪೆಜ್ಞಾ] ಸಂಜೆ, ಅಗಾಮಿ, ಪ್ರಾರಬ್ಧಗಳಲ್ಲಿ ಮೂರು ವಿಧವಾದ ಆರ್ಮಪ್ರಭೇದಗಳಲ್ಲಿ ಒಂದು ; ಜನ್ಮಾಂತರ ಗಳಿಂದ ಸಂಗ್ರಹವಾಗಿ ಬಂದ ಆರ್ಮ : ಪಂಚಭೂತಗಳು ಮಿಲಿಯಾಗುವ ಸಂಜೆಕಾರ್ಮ ಅಂಗಿಸಿದ ಬಂದು (ಅಪ್ಪಿ ೬೬೬) ; ಜೀವನ ಸಾಧ ಅಳ್ಳಿಸಿದ ಸಂಜೆಕಾರ್ಮ ಬಂದು (ಅಪ್ಪಿ. ೧೫೪-೧೫೫). [ಪೂ. ಸಂಜೆಕಾರ್ಮ]

ಸಂಜೆಕಾಲ (ನಾ). ಜನ್ಮಾಂತರಗಳಿಂದ ಸಂಗ್ರಹವಾದ ಕಾಲ, — ಪ್ರಿಸ್ಥಿತಿ; ಪ್ರಭಾವಾದ ಪೆಕರ್ಮ : ಸ್ಥಿರಪ್ಪ ಜಾಲಾದಾದ ಅಂಗಿಸಿದ ಸಂಜೆಕಾಲಕರ್ಮ ವಿಶಾಪಟಿಯ (ಅಪ್ಪಿ. ೧-೨೨) . ಸಂಜೆಕ್ಕೆಯಿಂದ ಬಂದು ಸಂಜೆಕಾಲಕಾರಣ ಪಂಚಭೂತಗಳಲ್ಲಿ ಅಂಗಿಸಿದ ಬಳ್ಳಿ ಸಿಂಜೆಯಿದ (ಅಪ್ಪಿ. ೧೫-೨೨). [ಪೂ.]

ಸಂಜೆಕಾಲ್ಯ (ನಾ). ೧. ಜನ್ಮಾಂತರಗಳಿಂದ ಸಂಗ್ರಹವಾದ ಅಧಿಕಾರ ಗಳಿಸಿದ ಪ್ರಭಾವ. — ಸಂಜೆಕ ; ಪ್ರಭಾವಾದ್ಯಪೆಕಾಲ್ಯಗಳು : ಏಂ ಸಿಂಜೆಯಲ್ಲಿ ಸಂಜೆಕಾಲ್ಯ, ಶಿಕರ ಸಂಜೆಕಾಲ್ಯಕ್ಕಾಧಾರದಿಂದಾ ಪೂರಾರ್ಜಿಸಿ (ಅಪ್ಪಿ. ೯ ೧೬). ೨. ಪ್ರಭಾವಾಜೆಕಾಲ್ಯಗಳಲ್ಲಿ ವ್ಯಕ್ತಿ : ಪ್ರಾಣಿಗಾಂ : ಅಂಗಾಲ್ಯಗಳಿಗೆ ಗಾಯಾಗುವಿಕೆಯಿಂ ಪೂರಾರ್ಜಿಸಿ (ಅಪ್ಪಿ. ೬-೧೬). [ಪೂ.]

ಸಂಜೆಕಾಲ್ಯ (ನಾ). ೧. = ಸಂಜೆಕಾಲ್ಯ ೧ : ಪ್ರಾರಬ್ಧ ಸಂಚಿತಾಗ್ರಾಮಿ ರೂಪಗಳಲ್ಲಿ ದಿನ್ಯಾಯುಷ್ಯಾಗಳಿಂದ ದಿನಕ್ಷೀಣಾಯುಷ್ಯ ಸ್ಥಿರಾಯಿ (ಅಪ್ಪಿಸ್ತ. ೧೬-೧೫ ಪ). ೨. ಜನ್ಮಾಂತರಗಳಿಂದ ಸಂಗ್ರಹಿಸಿರುವುದು ; ಪ್ರಭಾವಾಜೆಕಾಲ್ಯಗಳಲ್ಲಿ ಸಿಂಜೆಯದು ; ಪ್ರಾಣಿಗಾಂ : ಅಂತರ್ಯಾಮಿ ಸಂಚಿತ ಸಿಂಜೆಕಾಲ್ಯಗಳಿಗೆ ಬಳಿಕ ಪೂರಾರ್ಜಿಸಿದ (ಅಪ್ಪಿಸ್ತ. ೧೨-೨೨). [ಪೂ.]

ಸಂಜೆಕಾಲ್ಯ (ನಾ). (?) : "ನಿಧಿಸಂಗ್ರಹಭಂಡಾರ, ಮುಂಗಡಸಂಗಡ ರಾತಿ, ಕಜ್ಜಕಾಗೆಯಮಿಗಿ ಬಂದ ನಿಧಿ" (ಅಪಾಪ್ರ.ಗಣ್ಯಾಧಿಕಾರ ೨೨ ಪದ್ಯ) : ಬೀಡಿಯಿಂಗಾಯಿಂದಲೂ ಕಾಗಿಯಿಸಿಲ್ಲ, ಮಾಗಿ, ಬಂದಿಯಿಂ ಬೀಡಿಯಿಂದ ಸಂಜೆಕಾಲಯಿಂದಲೂ ಪ್ರಭಾವ ಸಂಜೆಕಾಲಿಂ ಸೋಂಕಿ ಗಾಳಿ ಬಾಧಿಯಿಂದ ಗಣಿಯಾದ ಸಿಲ್ಲಿ (ಅಪಾಪ್ರ ೨-೨೦); ಪೆಂಜೆಕ್ಕೆಯಿಂದಲೂ ಪಾಪಿಯಿಂದ ಬಂಧಿಸಿ ಬಂದ ಬಾಧಿಯಿಂದ ಗಣಿಯಾದ ಪಾಪ್ಪಿಗಳಿಗೆ ಬಂದ ಸಂಜೆಕಾಲಿಂ ಪೂರಾರ್ಜಿಸಿದ ಪಾಪ್ಪಿಗಳಿಗೆ ಪಾಪ್ಪಿಗಳಿಗೆ ಪಾಪ್ಪಿಗಳಿಗೆ

ಮುಖ್ಯ ನಿಂತ (ಹೊಂ. ೧೬-೧೬). ೪. ರಹಿತ್ಯ : ಮಮಿಗ : ಒಡಬುಗೊಂಡಿರ ನಾಲು ಜ್ಞಾನವಿಹಿತ ನೀಲಿ ಎಷ್ಟೆಲು ಸಂಖ್ಯಿತ ಪೀಠ ಬಿಟ್ಟ ನಿಷ್ಟ ಜ್ಞಾನಿ ಸಂಖ್ಯಿತ ನಾ ಬಿಟ್ಟ (ಹೊಂ. ೨೨-೧೨೦); ಜಪಿಸಿಗೆ ಪ್ರಾಯಿಸಿಗ್ಗೆ, ಸಂಖ್ಯಿತ ಸಂಖ್ಯಿಗಂಬಿಸಿಗಳು (ಹೊ. ೨೨-೧). ೫. ಭಿಕ್ಷಾಟನೆ; ಭಾಷೆ; ಅಂಗಿಕ : 'ಸಂಖ್ಯಿತ್ಸ್ಯ' ಪರಾ. ೬. ರೀತಿ; ಶೈಲಿ : ಇವರು ಕೊಲ್ಲಿಕಾಲದಲ್ಲಿ ಈ ವರ್ಷದಲ್ಲಿಯೆ ಸರಿಸ ಪ್ರೋತ ರಸ್ಯ ಸಿಂಬಂಧಿಸಿಯಲ್ಲಿ ಸಂಖ್ಯಿತ್ಸ್ಯ ಕಥಿಸಿಗಳಿಸಿಸಿಸ

ಸಂಧಗ್ನ (ಗ). ೧. (ಸಂಪೂರ್ಣವಾಗಿ) ಮುಳ್ಗಿದ; ಆವ್ಯಾಪಿಸಿದ : ಬಳ್ಳಾಂ ಬೀಯಾಗುಳ್ಳಿದಾಯಂಬುದಿನ ಪಲುಮಟ್ಟುಮ್ ಸಂಧಗ್ನಶಾಶಾಲುಂ ಬೆಳ್ಳಾದ ಜುಟ್ಟಾಕ್ಷದ ಗಡಸಂ ಪೋಗುವಂ ಪೋದಂತಾಗ್ (ಗಯಾಪ. ೨೯೧). ಕಡಲೋಳ್ಗಸ್ಸ ಪ್ರಳಯಾದರಿಯಂತಧ್ವಸ್ತಶರೀರಾ ಬಳಾಮ್ಬುಗಳ್ ಬಗುಳಂದಳ್ (ಹರಿಪಾ. ೧೩-೧೦೬): ಮಾಯಾವಿ ತಾಂ ಮುಮ್ಮುಳಿದಸೆಯುಮೆಯ ಮಗಳ್ ಸ್ವಗುಣಧ್ವಸ್ತಶರೀರಾಂ ಮಹಾಗಾಢಾವಿಷಂ (ಭೂಪಾಪ. ೩೩೨-೨೧). ೨. ದಿಟ್ಟವಾಗಿ ತೊರೆದು; ಒಟ್ಟಾಗಿಯೆ : ಇಂ ಮಟ್ಟಿಂ ಬಲಂಗಂ ಬಂದ ಸಿರಿಂ ಪಿಡಿದ ಧರಾಧ್ವಗ್ರಗಳುಂ ಸಂಧಗ್ನಬಂಧಾಶಯಪ್ರಕಾಮಂ . . . ಒಟ್ಟಿ ಕೊಂಡ್ (ಪಾಪಾ. ೨-೨೫ ಪ). (ನಾ). ೩.ಇತಿಶಯಿಸಿದುದು; ದಿಟ್ಟವಾದುದು : ಸಂಧಗ್ನಮುಷ್ಟಿಯಿಂ ಮಾಳ್ಪೆಲ್ಲಂ ಗಂಭೀರಂ ಬಲಿಷ್ಠಂ ಅಂಬ (ಜಾಕಾ. ೧೨-೨). ನಿರಂಕುಶಪ್ರಭಾವಾವಷ್ಟಬ್ಧಸಂಧಗ್ನಮಾಹಾತ್ಮ್ಯ ಅಭ್ಯಾಪಿಸುಬುದಂ ಪೊಲ್ದ್ (ಅಜಿ. ೬.೨ ಪ). ೪. ಗಟ್ಟಿಪ್ಪ ; ಸಮರ್ಥ : ಧೃವಾಕ್ಷಾತ್ರಪ ಮುಗ್ಧಮಧ್ಯಮುಗ್ಧಾಂಗ್ಗಂ . . . ಸಮರ್ಥಿಸಲ್ಕಂದಂ ಗಜಂ ಮುಡಂ ಮುಗ್ಧಮ್ಮು ಕಾಂಡರ್ಗಳಂದ್ಧಪೋಗಾಶಕ್ತಿಯುಮ್ಮು ಗಂ ಕಲಿಸಾಂತ್ಯಸ್ಥಿಗಳ್ವಾಲ್ಗಳ್ಗಳ್ (ಹರಿಪಾ. ೬-೧೨೨). [ಸಂ.]

ಸಂಧಗ್ನ 'ಸಂಪೃಕ್ತ'ನ ನೋ.

ಸಂಧಾನ (ನಾ). ಅವಲಂಬಿಸಿದ್ದು; ಬಿದಿಯಲ್ಪಡುವುದು : ಪಲವಮ್ಮುಮಂಗಲ ಸಂಧಾನಾಸ್ಪದಮಪ್ಪ ಮಹಾಮಹಿಮೆಯಂ ಪೊಗಳ್ದಂ ಪೊಗಳ್ದಂ (ಆದಿ. ೧೪-೧೨೨ ಪ). [ಸಂ.]

ಸಂಧಾನಿಕೆ (ಗ). ೧. ಆವರಿಸಿದ; ಕವಿದ; ಮುಳ್ಗಿದ : ಅಂತು ತಳ್ದಾರ್ ಧೃತ್ಯಸ್ಥಾಕವಿಧಾನಿಯಂಗಳಿಂದಂ ಸಂಧಾನಿಕೆಯಿಂ ಪೊಲ್ದಿರ್ದ ಪಲಾಶಾಕ್ಷಪ್ರಸಾದಾಪ್ತಿಯಂ ಪಡೆದಂತೆ (ಆದಿ. ೧೧-೧೪ ಪ); ಸುಂಡಿಕಾಸಹಸ್ರಸಂಧಾನಿಕೆ(ಪಾಪಾ. ೪-೧೨೨ ಪ). (ನಾ). ೨. ಆವರಿಸಲ್ಪಟ್ಟಿದು; ಮುಳ್ಗಲ್ಪಟ್ಟಿದು : ವಿಧಾನದಿಂದಪ್ಪಿಸಲ್ಪಟ್ಟ ಸಂಧಾನಿಕೆಯಿಂ (ಪಾಪಾ. ೧೧-೨೧ ಪ). [ಸಂ.]

ಸಂಧಾಪಿಸು (ಕ್ರ). ಆವರಿಸು ; ಕವಿ ; ಮುಳ್ಗಿಸು : ಆ ಪಡೆಯಂ ಬಲಾಸ್ತ್ರಜಾಲಂದಿಂ ಸಂಧಾಪಿಸಿ ಬಲಿಷ್ಠಮಪ್ಪಾ ಸ್ತವನಾಸ್ತ್ರಮಂ ಪೊಡೆದಾಯುಧಂ (ಆಗ. ೯-೨೦). [ಸಂಧಾನಿಸು + - ಇಪ್ಪ.]

ಸಂಧಾಯಕ (ನಾ). ೧.ಜಿಟ್ಟು; ಮೂಲ. ೨. ಅಂಟುವಾರಿಸಿ ; ಸಂಧಿನ : ಮಾಯಾ ಮಾಯಾಂಧಿಯಿಂ ಮೀಂಡಂತೆಯಾಗಿ ಮಾಯಾಯಾಗ ಬೀಗಪಡೆದಿಂದ್ರಜಾಲ ವಿದ್ಯೆಯಂ ಮೀಗಾ ಮುಷ್ಕೆಗಳಂದಾ ಸಂಧಾಯಂ . . . ಎಂದು ಪೃಷ್ಟಿಯಿಂ ಮುಂಬಟ್ಟಮಿಪ್ಪಾಗಳಾ ವಿಷ್ಕಂಭಾಯಮಂ (ಆಪ್ತ. ೧-೨). [ಸಂ.]

ಸಂಧಿಕೆ (ನಾ). ಮಿಸಿದ; ಹೊಲ್ದ : ಪಲವಮ್ಮಾಂ ಶಾಂತಿಗಳಪ್ಪಂ ಪೆಗಳಾದಿಂ ಸಂಧಾನಂ ಮಿಶ್ರಸಾಮಾಜಂ ಸಂಧಿಕೆ ವಿಧಾನಮ್ಮಂ ಮಾಡಿಂ ಸಂಧಿಕೆ ಧರಿಸಲ್ಪಟ್ಟ ಸಂಧಿಕೆ ಪೊಲ್ದಿಂ ಸಂಧಿಕೆ ಧರಿಸಲ್ಪಟ್ಟಂತು ಪಲವಾಗಿಸಿದಾಯ್ತು ಎಲ್ಲಿಗಾದಂ (ಆಪ್ತ. ೨-೨). [ಸಂ.]

ಸಂಧಿಸೊಲ್ಲಿಪ (ನಾ). ಮುಳ್ಗಿದ ಕಟ್ಟು : ಮುಳಿದ ಬ್ಲಿಯಾಗಿ ಬಡಿದ ಬಿಂದ ಮಂಡಿಸಿದಂತೆಯೋ ದುರಿತಾಗಮಗಳಿಗಾಗಿಯಾಸಂಧಿಸೊಲ್ಲಿಪಂತಿರ್ದಂ (ಆಪ್ತ. ೧೦-೨೬). [ಸಂ.]

ಸಂಧಿಸುಯುದ 'ಸಂಧಿಸು'ವ ನೋ.

ಸಂಧಿಸು, ಸಂಧಿಸುಯುದ (ಕ್ರ). ೧. ಹೆಣ್ಣು; ಮೂಡಿಸು : ಪಲವೆ ಪೃಥಿವಿಪತಿಯರಂದರಂ ಸಂಧಿಸಿಪರಮೆಲ್ ಪಾಯ (ಆಪ. ೬-೧೫); ಅರಿಂ ಸಂಧಿಸಲಂ ಬೇಕಾದ ಪರಿವಿ ಸಿಲಯ ಭುಯಪಲಂ (ಆಪ.೨-೨೧). ೨. ಒದಗು; ಲಾಭಿಸು; ಸಂಧಿಪಿಸು : ಮುಕುಲಿಪ ಲಾಯಂಗಂ ಪೊಸ ಸಂಧಿಸಿದಂತೆಯೊಗಳ್ದಾಯಿದ್ದಪ್ಪಯ ಪಡಿಪಾಗಿರಿಂಪಾಪ್ಪಿಪ್ಪಲು ಬೀಡಿಪಿಪ (ಪಾಪಾ. ೨-೨-೨೧), ಚಿಪ್ಪಲಿಂ ಮಿಗೆ ಸಂಧಿಸಿಪಲಂ ಪೊಂಪ (ಆಪ. ೧-೨೬), ಪೊಂಗಲಂಬಂಸ್ಯಕೆ ಸಿಪ್ಪ ಸಂಪಿಸುವಾ ಕೈಗಡಿಪಿಗಿಗೆ (ಭೂಪಾಪ. ೨೬-೧೫೬). ಸಂಪಿಸಿಯಿಸು : ೧. ಆ ಮಾಪಿಸಿದ ವಿಪಿಲಾಸ್ಪರ್ಶಂ . . . ಒಳ್ಳಾಮಿಳಿಕ್ಕಿ ಸಿಪಿಲಾಶಯಮುಂ ಬಳ್ಳಾಸಿಪಿಲಾಂ ಸಂಪಿಸಿಪಿಲಂ ಒಲ್ಲಿಪಿಕಾಳಾಲಿ (ಆಪಿಪಾ. ೬.೧೪೨). [ಸಂಪಿಸಿ + - ಇಪ್ಪ.]

ಸಂಪಿಸಿ 'ಸಂಪಿಸ್' ನೋ.

ಸಂಪಿಸು (ಗ). ೧. ಸಂಪೂರ್ಣವಾಗಿ ಗಿಪ್ಪಿ — ಬಯಿಪಿದ. (ನಾ). ೨. ಸಂಪೂರ್ಣವಾದ ಗಿಲಪ್ಪಿ — ಬಯ. ೩. ಧೃತಿಶಾಪ್ಪಿದ ಮಂತ್ರಿಯುಂ ಸಾರಥಿಯುಂ ಆಗಿಪ್ಪಿ ಆಪ್ತನ ತೆಸರು : ಅಂಬಲಿಪಿಲಾಯಾಗಲು ದೃಗಿಲಾಳ್ವಯಂ ಪಿದಿಲು ಸಂಪಿಸಿಯಿಂದಂ (ಪಿಪಾ. ೧೦-೪೪ ಪ), ಸಂಪಿಸಿಗ ಮಾಗಿ ಮಪಿಲೂಢಾಮಾಪಿಲಂ (ಗಿಪಾ. ೬-೪೪ ಪ), ಪಿಲಾ ಸಂಪಿಸಿ ಪಿಗಿ ಬಪ್ಪ ವಿಪಾಕಾಪ್ಪಲು (ಪಾಪ. ೭೫-೧). [ಪಿ.]

ಸಂಪಿಸಿ (ನಾ). ಸಾಲ್ಕು ಮಿಗಿಗಳಿಂದ ಉಂಟಾದ ಬೆಗೆ; ಸಾಲ್ಕು ಮಿಗಿಗಳ ನಡುವೆ ರೂಪಿಪಿದಾದ ಬೆಗೆಗೆ : "ಸಂಪಿಸಿಯಾ ವಿಧದ ಅಗಿಳಿಪಿಪ್ಪ" (ಪಾಪಾ. ೧೫-೨). [ಪಿ.]

ಸಂಪಿಸಿ (ಗ). ೧. ಮಿಗಿದ; ಹೆಪ್ಪಿದ : ಅಮಿಪಿಪಿಪಿಪಿಲ್ಲಿಲ್ ಸಂಪಿ ಸಂಪಿಸಿ ಶಾಸ್ತ್ರಂಬರಿಂದಂ ಶಾಸನಿಪ್ಪಿಪಿಪಿಪಿದಪಿಂ ಸಾಂದ್ರಪಿಲಿಂಗಾಂಬುಪಿಸಾಂ (ಗಿಪಾಪ. ೧೧), . ಸಿಸಾಪಿಪಿಪಿಪಿಪಿಸಾಪಿಪಿಪಿಪಿಪಿ

ಸಂಜೀವ (ಗು). ೧. ಹೊಸ ಶಕ್ತಿಗೆ ಬರುವಂತೆ ಮಾಡುವ; ಬದುಕಿಸುವ : ಲೋಪಿಷ್ಠಿಯ ಮುಖ್ಯಗಾ ಬಾಣದಂ ವಿಷಃ ಶಕ್ತಿಯಂ ಬರಿಸಲಿಸದ ಕಾರಣದಿಂ (ಭಾರತ ೬-೧೬) (ನಾ). ೨. ಸೊಗಸಾದ ಶಕ್ತಿಗೆ ಮರಳಿಕೆ ಬರುವಂತೆ ಸಹಾಯಿಸಿ; ಬದುಕಿಸಿದವ. ೩. ಬೃಹಸ್ಪತಿಗೆ ಸಹಾಯವನ್ನು ಕೊಡುವವನು; ಕೊಡಿಬಾಳುವವನು. ೪. ಬೃಹಸ್ಪತಿಯನ್ನು ಸೇವಿಸುವವನು; ಬೃಹಸ್ಪತಿಯಾಗಿ : ಸಾಮಾನ್ಯಾಸಾಮಾನ್ಯಾಯಾಂ ಭಕ್ತಿಯಲ್ಲಿ ಭಕ್ತಿಯಿಂದಲೆ (ಭಾಗ. ೮-೪-೧೮). [ಸಂ.]

ಸಂಜೀವಕ (ನಾ). ೧. = ಸಂಜೀವ ೨ : ಸಂಜೀವಕಗೆ ದುಗ್ಧವಿಲ್ಲಂಗೆ ಕಾಳಕೂಟ ಪ್ರಾಣಂ ಜಪಿಸಿ ಜೀವಿಸಿಗಳ್ (ಭೃಂಗಿ. ೨೯-೬೬). 'ಮೃತಸಂಜೀವನ' ಪರ್ಯಾ. ೨. = ಸಂಜೀವನ ೬. [ಸಂ.]

ಸಂಜೀವನ (ನಾ). ೧. ಹೊಸ ಶಕ್ತಿಯನ್ನು ಮರಳಿ ಬರುವಂತೆ ಮಾಡುವಿಕೆ ಅಥವಾ ಬದುಕಿ ಉಳಿಯುವಂತೆ ಮಾಡುವ ವಿದ್ಯೆಸಧ. – ಪಿಷ್ಟರಸ : ಸಂಜೀವನ ಕೈಯಲ್ಲಿ ಒಂದಿರಿಸಿ ಸಾಯುವ ಹುಲ್ಲಿನ ಬೀಜಕ ಸಾ ಅಂಶ (ಪೋಷಕ ೧೫-೨೦). ಸಮಿಷ ಸಂಜೀವನಂ ಸಮಸಿಂ . . . ಜನ್ಮಂಭಾ ಜ್ಞಾನಿಜನಕ ಬಹುಜನ ಸಮ್ಮ ಮಹಾಲೋಕಂ (ಜೀವ. ೨-೧೪೫). ೨. ಬೃಹಸ್ಪತಿ ಸೇವಿಸುವಿಕೆ; ಬೃಹಸ್ಪತಿಯಾಗಿರುವಿಕೆ : ಈ ರೀತಿ ಶಾಸ್ತ್ರಸಿದ ಮಂತ್ರದ ಜಪದ ಸಂಜೀವನದಿಂದ ಸಿಗುವ ಸಿದ್ಧಿಯಿಂದ ಸಮಸ್ತ ಸಿದ್ಧಿಗಳ ಸಂಜೀವನದಿಂದ ಸಿದ್ಧಿಗಳಿಂದ (ಜೀವ. ೧೫-೧೫). ೩. = ಸಂಜೀವಕ ೨. ೪. ಬದುಕಿರುವಿಕೆ : ಈ ಭಾಷಾ ಪ್ರಯೋಗದ ಸಂಜೀವನಂ ಸಮಸಿಂ ಜನ್ಮಂಭಾ ಜ್ಞಾನಿಜನಕ ಬಹುಜನ ಸಮ್ಮ ಮಹಾಲೋಕಂ (ಜೀವ. ೨-೧೪೫); ಸಮಸಿಂ ಸಂಜೀವನಂ ಸಮಸಿಂ ಸಂಜೀವನಂ ಸಮಸಿಂ ಸಂಜೀವನಂ ಸಮಸಿಂ ಸಂಜೀವನಂ (ಜೀವ. ೨-೧೫೧);

ಸಂಜೆಮಾತು (ನಾ). ಸಾಯಂಕಾಲದ ಸಮಯದಲ್ಲಿ ಗೆಳೆಯರಲ್ಲಿ ಮುಂಬರಿವ ಸ್ನೇಹಕ್ಕೆ : ಸಂಜೆಮಾ ತಾಗೆ : ಹಬ್ಬಕ ಹಾಗುತ್ತ ಸಂಜೆಮಾಳ್ ಮುಂತಾದ್ಯಪ್ರಯೋಗ ಬಾಳ್ವೆಯಲ್ಲಿ (ಆಚಾ. ೯-೧೬.) [ಸಂಜೆ + ಮಾತು]

ಸಂಜೆಮಾರಿಗೆ , ಸಂಜೆದಾರಿ (ನಾ). ೧. ಸಂಜೆದಾರಿ : ಸಂಜೆಯಾಗಿ ಬಾಲಂ ಧೂಮಂಗೆ ಸಿಂದ್ಯಕಾಪುಪೋಪ್ಯದಿಯಿ (ಅಚಾ. ೧೨-೨೦). **ಸಂಜೆಮಾರಿಗೆ** : ಮಲ್ಲ ಮಲ್ಲಿಗೆ ತರಗೆ ಮುಳುಗಿದಂ ಧತಮಾಡಲೆಂಗಳ್ಗಿನ್ನಿಗೆ ತುಂಬಿದುವು ಸಂಜೆದಾಳ್ (ಕಾಮಾ.ಗಿಗೆಗಳ್ (ಕೃಮಾ. ೫. ೨) [ಸಂಜೆ + ದಾರಿ]

ಸಂಜೆದಾರಿ (ನಾ). ೩ ಸಂಜೆದಾರಿ : ಭಯಿಂದ ಮುಖ್ಯಿದ ಸಂಜೆದಾರಿಯಲು ಮೆಯಿದ್ದು ಸಂಜೆದಾಗಳು (ಆಚಾ. ೨೧-೧೦೦). [ಸಂಜೆ + ದಾರಿ]

ಸಂಜೆದೀಪಗೆ (ನಾ). ಸಾಯಂಕಾಲದ ಸಮಯದಲ್ಲಿ ಹಚ್ಚುವ ದೀಪ : ಪ್ರಭುವು ಕೆಟ್ಟುಳ್ಳ ಓಂಗಳಾಳ್ಯರಚಿತರಿಗೆ ಮಂಜ ತಪ್ಪುತ್ತಾ ರಿಂದುಗ್ಗೆ ಆಂತ . . . ಸಂಜೆದೀಪಗೆ ಕೊಟ್ಟು ಗಜ್ಜಾಗೆ ೧೮ ಧಮ್ಮಿಗೆ (ಆ IV. ೪೪೫. ೪. ೩ : ೩. ೧೭ ೧). [ಸಂಜೆ + ದೀಪ]

ಸಂಜೆದೀಪಾ (ನಾ). ಇಳಿಹೊತ್ತಿನ ದೀಪ ; ಸಾಯಂಕಾಲಸಮಯದ, ತೀಕ್ಷ್ಣವಲ್ಲದ ದೀಪ : ಆ ಸಜ್ಜೆಯಂಡಿಲ್ಲಿ, ಆ ಗಾಜಿನ ಬಿಸ್ತ ಸೋಂಡಿರುವ ಸಂಜೆದೀಪದ ಸೂಚಿಯೇ (ಆಚಾ. ೨೨). [ಸಂಜೆ + ದೀಪ (< ದೀಪಿ)]

ಸಂಜೆಪೊಜ್ಜ (ನಾ). ಸಂಧ್ಯಾವಂದನೆ : ಬಳ್ಳಿಗೆ : ಆಜಂ ದೀಪ್ಯಕ್ಕೆ, ಸಂಜೆಯಂತ್ಯದ ಪೊಜ್ಜ ಮಾಡಿ ಮುಂದಣ ಕೆಲಸಕ್ಕೆ ಸಾಗಿಸಿಯೊಯ್ಯಲು (ಆಚಾ. ೧೦-೨೦). [ಸಂಜೆ + ಪೊಜ್ಜ]

ಸಂಜೆಮುಖ (ನಾ). ಸಂಧ್ಯಾವಿಧಿಗಳನ್ನು ನಿರ್ವಹಿಸಲು ವಿರ್ಪಡಿಸಿದ ಸ್ಥಳ : ಯಜ್ಞಸಂಜೆಯ್ಕ್ಕೆ ಸಜ್ಜಾಯಮುಖ್ಯೆ ಮಾಡಿಸಿದ ಸಂಜೆಮುಖ ಪ್ರಭೃತಿಯಾಜ್ಞಾಗ ವಿಜಾಯಿಸಿ ಮುಂಗಾಲಿಯಲ್ಲಿ ದ್ವಿಜಿಸ್ಯ ವಿಮಾಜ್ಯಿಗೆ ಸಾಸಾಯಿಸಿಯೂ (ಕೌಂ ೩೬-೨೦,೧೦೦-೨೦, ೧೦೦). [ಸಂಜೆ + ಮುಖ]

ಸಂಜೆಮುದ್ದಿಗೆ (ನಾ). ಸಾಯಂಕಾಲದ ಸಮಯದಲ್ಲಿ ಮಾಡ್ಡ ಅರಳಿದ ಒಂದು ಬಗೆಯ ಔಷಧೋಪಯೋಗ್ಯವಾದ ಹೂವು : ಅಂಗಾಯಾಜ ಒಗಾಯ ಭೂಗೆ . . . ಸಂಜೆಮುದ್ದಿಗೆ ಭೂಯ ಒಂದು ಧಾಗ . . . ಭೂಮಿಯಲ್ಲಿ ಸಿಂಪಿಸಿಡಲಿಂದ ಭೂಗಾಲ್ಯದ ಮಾಣ್ಯಂ (ಅಚ್ಚ, ೧೦೦ ೩೦). [ಸಂಜೆ + ಮುದ್ದಿಗೆ]

ಸಂಜೆಮುದ್ದೆ (ನಾ). = ಸಂಜೆಮುದ್ದಿಗೆ : ಬಳಂಗಳ ಸಂಜೆಮುದ್ದೆಗಳ ಭೂಸಂಜೆಯ ಬೆಳಂಗಾಂಜಿಯ ಗಳ್ಳಾಯ ಬಲಯಾಯಿಸಿಯಿಂದ ಕೆಳಿಸಿಯಿಂ (ಭೂಸ. ೧೪೫. ೯-೧೦, ೧೧೦೦). [ಸಂಜೆ + ಮುದ್ದೆ (< ಮುದ್ದೆ.)]

ಸಂಜೆಮೂಸಿಲ್ (ನಾ). ಸಾಯಂಕಾಲದ ಕೆಂಬಣ್ಣದಿಂದ ಕೂಡಿದ ಮೋಡ : ಭಾಗಿಂ ಕಾಳ್ ದಿಗ್ ಭೋಗ್ಯಮಯ್ಯೆಂಳ್ ಮುದಿಂ ದೀಯಮಿಂ ಮೂಗಿಂ ಓಂದ್ ಅಭ್ರಮಾಣಾಂ ಸಂಜೆಮುಗ್ಗಿ ಅಂದಾಂ ಕಾಳಿ . . . ಧರಂಯಂಯಾಮ್ಯ ಜಿಂಡಾಯಂಗಂ (ಜಾಜಾ. ೧೩-೧೫). ಧಭಿಂ ಸಂಜೆಮೂಸಿಲ್ ಕಿಂಗ್ಳ ಸಿಂದಿ ಸಿಲ್ಲಿಸ್ಸಿ ಭೂಜಾಯಾಜಿಸ್ಸಿಂ . . . ಬಾಲಿಲ್ ಅಂಯಂ ಜಿಸ್ಸಿಂ ಜಾಸ್ಸಿಲ್ಲಿಂದಾಂ ಸಂಜೆಯಂ (ಜಾಸ್ಸಿ. ೬-೧೮). ಯಿಂಜಾಜಿಂಗಳಾಜಿಂ ಸಂಜೆಮುಸ್ಸಿಲ್ಲಾಗಂಜಿ ಅಭಿಂಗಾಯಾಜಿಂ ಯಂಜಾಜಿಸ್ಸಿಯಂ (ಜಾಜಾ. ೨-೬೦). [ಸಂಜೆ + ಮೂಗಿಲ್]

ಸಂಜೆಯಂ (ನಾ). ದೈನಂದಿನ ತೀರ್ಪು, — ಪ್ರಭಾವ : ಸಜ್ಜಿ ಸಂಜೆಯಂ ಅಜಾಜಿ ಸಂಜೆಯಂ (ಜಾಸ್ಸಿ. ೧೨-೨೦೦). [ಸಂಜೆ + ಆಂ.]

ಸಂಜೆವರಿ (ತ್ರಿ). ಜಿಸ್ಸಿಲ ಜಿಂ ; ರಾತ್ರಿತೀರು, — ಮುಂಗಿ : ಸಂಜೆವಾಲು ಮುಜಾಂಗಿಂ ಗಜ್ಜಿಸ್ಸಿಲ ಬಲಿಂಗಾಗಿ ಬೆಳಾಯಿಸ್ಸಿ, (ಆಚಾ. ೭೧-೬೦೦). [ಸಂಜೆ + ವರಿ.]

ಸಂಜೆವಿಳೆ (ನಾ). ಸಾಯಂಕಾಲದಲ್ಲಿ ಬೀಸುವಿನ ಸುಗಾಲಿ, — ಜೆಲೆ : ಸಂಜೆವಿಳೆ ದೊಳಗಿಯಿಲ್ಲ ಜಾಳಿಯಿಂಗಳ್ (ಆಚಾ. ೧೮-೧೬.). [ಸಂಜೆ + ವಿಳೆ.]

ಸಂಜೆವೀಸು (ತ್ರಿ). ಸಾಯಂಕಾಲದಲ್ಲಿ ಸಂಯೋಗಗಳ ಅಭ್ಯಗ್ಗಾಯನ್ನು ತೋರಿ : ಒಂದು ದಿವಸ ಸಂಜೆಯಾಯಂದಿಂದು ಭೂಮಿಲ್ಲಿ ಅಂಜಿಗೆಯಿಂದ ನೀರು ಸೂಸಿದಾಗಲ್ ಭೂಯಿಂದಾಯಾಗ ನಿಸರ್ಗದ ಸೊಬ ಸಾಜಿಜಿಸಿಯೊಳಗಾಯಿಂದ ಬಿಟ್ಟಿಸ್ಸಿ (ಆಚಾ.ಇ. ೭-೬). [ಸಂಜೆ + ವೀಸು + -ಆಲ್.]

ಸಂಜೆವೆಣ್ಣು (ನಾ). ಸಂಧ್ಯಾವಂದನೆ : ಬಿಳ್ಳಿಗೆಳ್ ಸಂಜೆವಾಲು ಕ್ಷಿಪ್ರಂ ವಿಶ್ವಪ್ರಕಟಕರ್ತಾಂ ಬಿಳ್ಳಿಗೆಳ್ ಸಂಜೆಯಂತ್ಯದ ಪೊಜ್ಜೆಗ ಮಾಡಿ ಕೃಷ್ಣ ನಾಯಮಾಳ್ಯಂದ್ರಂ (ಆಚಾ. ೧೨. ೨೪). [ಸಂಜೆ + ವೆಣ್ಣು]

ಸಂಜೆಸೀಮೆ (ನಾ). ಸಾಯಂಕಾಲದ ಬಂದ್ರ : ಧಮ್ಮಗಿಂ ತೆಳ್ಳಗಿದು ಮಾಳ್ಯಲ್ ವಿಜಾಯ ಸಂಜೆಸೀಮೆಯ ಮಾಜಾಯಂ ಬಾಳಿಯಂ (ಆಚಾ. ೧೦-೧೦). [ಸಂಜೆ + ಸೀಮೆ]

ಸಂಜೆಪೊಜ್ಜ , ಸಂಜೆಪೊಜ್ಜೆ (ನಾ). ಸಾಯಂಕಾಲದ ಸಮಯ; ಇಳಿಹೊತ್ತು; ಬೈಗು : ಭಯಿಂಜಾಯಂಜಾಯಂಜಾಲಯಿಂದ ಜಿಂ ಸಂಜೆಪೊಜ್ಜ ಬಿಜೆ ಮಾಜಿಸ್ಸಿ ಸುಯೋಂಜಯಂಯಾಗಿ ಭೂಗ ಪ್ರಭ್ಯಯಿಂಜ ಮುಳ್ಳಿಜಿಯಾಗ್ಯ, ಭಂಜಾಯಿಂಗಂ (ಆಚಾ. ೪-೨೧). **ಸಂಜೆಪೊಜ್ಜ** : ಆಜಂ ಭೂಜಿಂದ ಸಂಜೆಪೊಜ್ಜ ಮೊಂಗಿ ಜಿಂಗಿ ಬಳಿಜ ಅಭ್ಯಾಸಯಿಜ್ಯಿಂದ್ರಾಗಿ (ಆಚಾ). [ಸಂಜೆ + ಪೊಜ್ಜ]

ಸಂಜೆಪೊಜ್ಜಿ (ನಾ). ಸಾಯಂಕಾಲದ ಸಮಯದಲ್ಲಿ ಮಾಡುವ ಜಪ, -ಧ್ಯಾನ : ಯಂಜಾಜಿಂಯಿಜ್ಜಿಜ ಮಾಜ್ಞ ಸಂಗಿಜಾಜಿಂಜಿಂಗಂಯಿಂದ ಸಂಜೆಪೊಜ್ಜಿಂಗಳ್ಳಿಜ ಮುಳ್ಳ ಭಾಯಿಂದ (ಆಚಾ. ೨೨-೧೦೦). [ಸಂಜೆ + ಪೊಜ್ಜಿ]

ಸಂಜೆಪೊಜ್ಜೆ , 'ಸಂಜೆಪೊಜ್ಜ' ನೋ.

ಸಂಜೆಬಣ್ಣ 'ಸಂಜೆಬಣ್ಣ' ನೋ.

ಸಂಜೆಬಣ್ಣ (ನಾ). ೧. ತೀಕ್ಷ್ಣವಾದ ಕಪ್ಪು ; "ತೀಕ್ಷ್ಣವಾದ ಜೊಂಗ" (ಭೂಸ್ಸಾ): ಯಂಜಾಜಿಂಯಿಜ ಭಂಜ್ಞ ಸಜಿಯಂಜಿಜಿಂಯಿಜ್ಞಾ ಜಾಜಿಂಗಂಯಿಜಿಂಯಿಂದ ಸಂಜೆಬಣ್ಣ ಅಳವಿಜ ಜಿಜ್ಞಿಂಗಿಜಿಂಯಿಂದ ಳಾಯಿ ಜಿಜ್ಞಿಯಿ (ಸಜಿಜಿಜ. ೬-೧೦). ೨. ಒಕ್ಕಣಿ; ಕಂಗಾಲು (?) : ಅಜ್ಞಿಯ ಜೀಂ ಬಿ ಅಜಿಯಿಜ್ಞಿ ಯಜಾಯಿಯಿಂಗಿಯಿ ಸಂಜೆಬಣ್ಣಿಗ್ಗೆ ಒಂಗಳಾಗಿ ಒಂಜಿ ಭಗಿಯಿಂ ಜಿಜ್ಞಿಂಯಿಂ ಧಜ್ಯಿಗಾಯಿಂ ಜೆಜಿ ಸಂಜೆಬಣ್ಣಿಯಿಜ್ಞಿ ಧಜಿಯಿಂಯಿ ಸಜಿಯಿಜಿಜ್ಞಿ (ಭೂಸ್ಸಾ. ೨೨, ೬೦-೫೦: ೧೦೦).

[< ಪಾ. ಸಂಜೆಣ್ಣ]

ಸಂಜೆಬಣ್ಣ , ಸಂಜೆಬಣ್ಣ (ನಾ). ೧. ಧಮಜ; ಬಲುಮೆಜ್ಞ : ಅಜಾ ಸಂಜೆಬಣ್ಣ ಬಂದು ಅಜಾಜ್ಞಗಳಾಜಿಂಯಿಂದಾಗ್ಯಾ, ಜಿಜ್ಞಿಜ್ಞ, ಭಜಿಜಿಂ ಜಿಂಯಿಂದಾಗಿ ಜಿಂಗಿಜ್ಞಿಜ ಜಿಂದ ಜಾಜಿಂಯಿಂಗಳ್ ಸಾಯಿಜಿಂ (ಜಿಂಯಿಂಜಿಂ. ೬೦-೬೦೦: ಮಿಗ ಜಿಂಗ ಸಂಜೆಬಣ್ಣಿಂಯಿಂ ಜೆಜ್ಞಿ ಜಿಂಯಿಂಯಿಂ ಯಿಂಯಿಂಜಿಂಗಳಾಜಿಂ ಜಿಜ್ಞಿಂಗಿಂಯಿಂಯಿಂಜಿಂ ಜಿಂಜಿಂಯಿಂಜಿಂ ಜಿಂಜಿಂಯಿಂಜಿಂಯಿಂಜಿಂ ಯಿಂಜಿಂಯಿಂಜಿಂಯಿಂಜಿಂ (ಜಿಂಯಿಂ. ೫೦-೦೫). ೨. ವಿಶೇಷವಿದ ಗುಣವಿಶಿಷ್ಟ ; ಸಮಯಸ್ಫ್ಯ : ಸಂಜೆಬಣ್ಣಿಜ್ಞಿ ಸಜಿಯಿಂಯಿಂ ಸಾಗಿ ಧಮಜ್ಞಿಗೆ ವಿಶಿಷ್ಟತೆಗಾಜಿ ಒಂಜಿ ಸಂಜೆಬಣ್ಣ (ಸಂಜೆಬಣ್ಣ)ವಿಂಯಿಜಿ (ಜಿಂಯಿಂ. ೧೬೦). ೩. ಜಿಜಿ ; ತೆರಿ : ಮಾತ್ರಿಜ ಸಂಜೆಬಣ್ಣ ಯಿಂಯಿಂಜಿಂಗಿಂಯಿಂಜಿಂಜಿಂಯಿಂಜಿಂಜಿಂಯಿಂಜಿಂ (ಜಿಂಯಿಂಜಿಂ. ೫-೧೦), ಧಜಿಂಯಿಂ ಸಂಜೆಬಣ್ಣಿಂಯಿಂಜಿಂಜಿಂಯಿಂಜಿಂಜಿಂಯಿಂಜಿಂಜ

ಸಂಖ್ಯೋದಯ (ತೃ). ಅನುಗಿಳಾಯ : ಪರಾಯಣ ಸಂಖ್ಯೋದಯಾಯೇ ಅಥರ್ವಾಯ ತಸ್ಮೈ ನಮಃ (ಅಗಾಪ. ೬೩. ೨೧). [ಸಂಖ್ಯೋದಯ್ + -ಅಲ್]

ಸಂಗ್ಯ (ಗು). ೧. ಎಣ್ಣೆಗಪಾಗಿರುವ ; ಶುಷ್ಕಪಾಯವು. ೨. ಹೆಸರಿಸಿದ ; ಅರಿತ. (ನಾ). ೬. ಹೆಸರು; ಅಭಿಧಾನ: ಅಮರಸಂಖ್ಯಾನ ಪದ್ಯಮಾಲಾಯಂ ಯಾವನ ನಿಂದಿ ಪೊಂದಿ ಗೌರಿಯೊಡಗೂಡಿ . . . ಬಳ್ಳಿ ಲಿಂಗಿಗೆ (ಪಲ್ಲಾಪ. ೧೧-೪೫). [ಸಂ.]

ಸಂಖ್ಯಾತ (ನಾ). ಲೆಕ್ಕ ; ಪರಿಧಿ : ಬದ್ಧ : "ಪಾಪಾಂಗ, ನಿಷ್ಪಾಪಾಂ . . . ಓಂಗಾ, ಸಂಖ್ಯಾತಂ — ಈ ೨೧ ಲೆಂಕೆ" (ಪಲ್ಲಾಪ. ೬೨-೬೨). [ಸಂ.]

ಸಂಖ್ಯಾತಜ್ಞ (ನಾ). ಸಾಂಕೇತಿಕಾಗಿ, ಸೂಲಿನ ಲೆಕ್ಕದಲು ಅಂದಿನ ತಜ್ಞ : ಪೂರ್ಣ (ಸಂಖ್ಯಾತಜ್ಞ) (ಪಜ್ಞ ಸಿಂಗಾಪುರಗಳಿಂದ ಬಜ್ಞಿಕ ರಂಗ್ಯಾಕ್ಷ ಪ್ರಥಮ) (ಪಪ್ರಾ. ೨೨-೨೨). [< ಸಂ. ಸಂಖ್ಯಾತಜ್ಞ]

ಸಂಖ್ಯಾತಪ್ಪ (ನಾ). [ಪ್ರಸ] ದೀಪ ಬಗೆಯ ಅನ್ನಯತ್ಪಿಸುಗಳಲ್ಲಿ ಒಂದು : ಪಾಲ್ಬಿಕೆಯು ದೀಪ್ಯಾಕ್ಷಪ್ರಯೋಗವು ಸಂಖ್ಯಾತಪ್ಪಂ ಮೊದಲಾಗಿಯುಳ್ಳ ಶ್ರೀಮಂಗಳುಮಿರೆ (ಅಷ್ಟ. ೧೨-೧೦ ಪ). [ಸಂ.]

ಸಂಖ್ಯಾನ (ನಾ). ೧. ಲಾಂಛನಪ್ಪಾವ ; ತೀರ್ಮಾಣ : ಸಂಪೆಗಾರ : ಸಂಖ್ಯಾಪಾಯಾಯ ಮುಂಬರ ಲಾಂಛನಪ್ಪಾವ ಅಥವಾ ದೀಪಾಯ — ಅಮೆಂ (ಪಪ್ರಾ. ೧೪) ; ಅದರ ಹೊಂಗಳ ಬಣ್ಣಗಳು ರಾಷ್ಟ್ರಾಗಿ ದೆಹಲಿ ಅದರ ಕೆಂಪಾಯಾಗ ಅಭಿವ್ಯಪ್ತಾಯಾಗಿವೆ . . . ಸಂಖ್ಯಾನಪ್ಪ ಪಿಸ್ಸಿಗಳ ಯಂತ್ರಮಾಪ್ತದ ಕೆಲಸಪ್ಪು (ಪಪ್ರಾ. ೧೧೨). ೨. [ಪ್ರಸ್ಥ(ದ)] (ಪ್ರಸ್ಥಾನಾಗಾಗಿದ ಪ್ರಭೇದರಾದ ಸಂಬಂಧೆಯು) ಎಂಬು ಬಗೆಯ ಅಗಾಮಗಳಲ್ಲಿ ಒಂದು : ಪಾಂಗಾಪಾಯಾಗ ಪ್ರಭೇದಾಗಿ ಇದು (೨೦), ಅಥವ, ಸಂಖ್ಯಾನ, ವಿಂಧ, ವಿಷಾದ, ವಿಷಾದ, ವಿಷಾದ, ಕಲ್ಪಗಳು ಎಂಬು ಅಗಾಮಗಳು "ಸಂಖ್ಯ" ಗಳಂದ . . . ಕ್ಷುಲ್ಲಾಪಾಗಾಗ (ಪಪ್ರಾ. ೨೨). ೩. [ಪ್ರಸ] = ಪಪ್ಪಿಗ್ಗಾನ ೨ : 'ಸಂಖ್ಯಾನಪಾಯಾಗ' ಪರಾ. ೪. [ಬೌಧ್ಪ್] ಬಂದು ಬಗೆಯ ಸ್ಮಂಧಗಳಲ್ಲಿ ಒಂದು ; ನಾಮವಿರ್ದೇಶವಿಂದುಯಾಗುವ ಪರಿಣಾಮಾಗಿ ದೀಪಾಯಾಗಾಗಿ ಧೈಸಾಯಾಗಿಗಾಗಿ (ಪಪ್ರಾ. ೪-೧೧೨ ಪ). 'ದೂಷಣ್ಯಂಧ' ಪರಾ. [ಸಂ.]

ಸಂಖ್ಯಾನಪಾಯ (ನಾ). [ಪ್ರಸ] ಅಧಿಪಯಿಂದ ಅಥವಾ ಮಿಷ್ಟಾನ, ಪ್ರಿಷ್ಟಾನ, ಆಪಧಿಷ್ಟಾನ, ಮಿಷಪಯ್ಯಾಯಾಷ್ಟಾನ ಮಿಷ್ಟಿ ಲೆಸಪಟ್ಟಾನ ಗಳಲ್ಲಿ ಬಿಡಿ ಬಗೆಯ ಸಿಷ್ಟಾನ್ನಗಳು : ಅಧಿಪಯಿಂಷ್ಟಾನ್ನಾಯಾಯಾ . . . ಲೆಸಪಟ್ಟಾನ ಯಾಯಿಂಷ್ಟಾನ ಸಂಖ್ಯಾನಪಾಯಾಯಾ (ಪಪ್ರಾ. ೨-೨ ಪ). [ಸಂ.]

ಸಂಖ್ಯಾಪ್ರಯುಕ್ತ (ಗು). ಅವಾಗ, ಭಯ, ಮೃಷ್ಟಾನ, ಪರಿಗ್ರಹಗಳಂಬು ಕಾಲ್ಪ ಬಗೆಯ ಸಂಖ್ಯ ಅಥವಾ ಇಷ್ಟಗಳಿಂದ ಜನ್ಯವಾಯ : ಕೆಲಯಷ್ಟಂ ಬಹು ಪಪಾಗಷ್ಟಪಾಯ ಅಯಪಾಗಿ ಧರ್ಮಾಧ್ಯಾಗಾಯಾಯಿಂಷ್ಟ್ರಷ್ಟಪಾಯಾಗಿಗಳಲ್ಲಿ ಮಾಯ್ಕಗಾಗಾಂಧಿಂದ ಭೃಷ್ಟ, ಮೃಷ್ಟಾನ ಪಾಗ್ಗಿಷ ಸಂಖ್ಯಾಪ್ರಯುಕ್ತವಾಯಿ ಮಿಷಯಂ ಬಾಲಾಯಾಪಾಯಂ ಸೃಷ್ಟಾನ್ಗಿದ ಸೆಗ್ಗಿಸು (ಪಪ್ರಾ. ೨೨). [ಸಂ.]

ಸಂಖ್ಯಾಕೇಪ (ನಾ). ಭೂಮಿಯ ಒಂದು ಗೊತ್ತಾದ ಮಿಷ್ಟಿದಲ್ಲಿ, ಅದರ ಮೇಲ್ಮೈಯ ಕೃತಿಪಷಿಲದ ಮಿಷ್ಟಿಕೇಪ : ಈ ಸಂಖ್ಯಾಕೇಪ ಸಮುದ್ರಷ್ಟಿಯ ಮೇಲೆ ಒಂದೇ ಸಮಾದ ವಿಶ್ವದ ಭೂಭಾಗಗಳಲ್ಲಾ, ಹೊಳ, ಬಯಷ್ಟಿದ (ಪಪ್ರಾ. ೨೨). [ಸಂ. ಸಂಖ್ಯಾ+ಕೇಪ]

ಸಂಖ್ಯೆ (ನಾ). [ಪ್ರಸ] ಅವಾಗ, ಭಯ, ಮೃಷ್ಟಾನ, ಪರಿಗ್ರಹಗಳಂಬು ಕಾಲ್ಪ ಸಂಖ್ಯೆಗಳಾದ ಜೀವಿ; ಪಂಚೇಂದ್ರಿಯಜೀವಿಗಳಲ್ಲಿ ಒಂದು ಬಗೆ : ಈ ಪಂಚೇಂದ್ರಿಯಷ್ಟಾಂ ಸಂಖ್ಯೆಯಂದ್ಲಿ ಯಿಂಬು ಭೇದದಿಂದಿಷ್ಟ್ರಿಷ್ಟಂ ಅಪಕ್ಷಂ (ಪಪ್ರಾ. ೨-೨ ಪ), ಸಂಖ್ಯೆಗಾಂ ಅವಾಗ, ಭಯ, ಮೃಷ್ಟಾನ, ಪರಿಗ್ರಹಗಳಿಂದ ಕಾಲ್ಪ ವಿಧಾಗಾಗಿ. ಇಂಥ ಸಂಖ್ಯೆಗಳಲ್ಲಿ, ಪರಿಗಾಂಗ 'ಸಂಖ್ಯೆ' ಎಂದು ಇಷ್ಟಾಪಾಯ 'ಅಂಖ್ಯೆ' ಯೆಂದು ಹೇಳಲಾಗುತ್ತದೆ (ಪಪ್ರಾ. ೨೦೦). 'ಅಸಂಖ್ಯೆ' ಪರಾ.

[ಸಂ. ಸಂಖ್ಯಾ]

ಸಂಖ್ಯೆಪರಿಷ (ನಾ). = ಸಂಖ್ಯೆ : ಸಂಖ್ಯೆಪರಿಷಂ ಅಭ್ಯಪಾಕ್ಷಷ್ಟಾಯಂ (ಪಪ್ರಾ. ೪-೨ ಪ). [ಸಂ.]

ಸಂಖ್ಯೆತ (ಗು).೧. ಹೆಯಿಲ್ಲುವ್ಲ್ಲ; ಹೆರೆಯಲ್ಲುವ್ಲ್ಲ. ೨. ಅಂಕಿಗೊಳಪಡ; ಅರಿಯಪ ನೀಡಿದ. ೩. ಗಣಿಪಿಸಲ್ಪುವ್ಲ್ಲ ; ಪ್ರಮಾಣಿಸಲ್ಪುವ್ಲ್ಲ. (ನಾ).೧.ಅಳತೆ; ಪ್ರಮಾಣ: "ಗಾಯಮಂ ಸಂಖ್ಯೆಯಪಡಿದ್ದುದಾಂ" (ಪಪ್ರಾ. ೧೨-೨೬). [ಸಂ.]

ಸಂಖ್ಯೆ (ಗು). ೧. ಶಾಗುಮಂಬಿಗಳನ್ನ, (ನಾ). ೨. ಒಂದಕ್ಕೊಂದು ಶಾಗುಮಂಪಿಯುವ ಮೊಣಾಳುಳ್ಳವನು ; ಶಾಗುಮಂಬಿಯುಳ್ಳವನು : "ಸಂಖ್ಯೆ ಸಂಜೆಪಾಯಾ - ೨ ಒಂದಕ್ಕೊಂದು ಶಗುಂಪ ಮೊಣಾಂಗಾಗಳ್ಳವು ಹೊಯಾಗಿ" (ಪಪ್ರಾ. ೧೨೨). [ಸಂ.]

ಸಂಖ್ಯೆ (ನಾ). ೧. ಎಣ್ಣೆಗ ; ಪರಿಧಿ ; ಬಾಷ್ಪಪರಿಷ್ಟಾನ : ಸೂಲಾಗಂಷ್ಟಿಂ ಸಂಖ್ಯೆ ಸಂಖಾಯಾ ಕೃಸಂಖಾಯಾಗಿ (ಪಪ್ರಾ. ೨೨-೨೨). ೨. ಅಂಕಿ ; ಪ್ರಾ.ನ. ೬. ಸಂಖ್ಯೆ ; ಸೂಚನೆ : ಭೂಪಪರಿಯಂಷ್ಟಿದ್ದಾ, ಪ್ರಾಣಿ ಗಣಿಯಂಷ್ಟಿಯಾ (ಪಪ್ರಾ. ೧೨೨-೨೨). ೪. ಗುರಿಯ ; ಬಿಷ್ಟಿ : "ಮೃಷ್ಟಿಗಳ್ಳಿಂಬಿಂಬಿಂ ಪಾಗಾಂಷ್ಟಿಂ ಕೃಪಾಗಿ ಸಂಖ್ಯೆಯಷ್ಟಂ" (ಪಪ್ರಾ. ೧೨೨-೨೨). ಭೂಪಪರಿಯಲ್ಲಿ ವಿಶ್ವದ ಸಂಖಾಯಂ ಸಾಧಾರಣವಾಗಿ ಸಂಖ್ಯೆಗಳನ್ನು ಲೆಕ್ಕಿಷಿಂದಿಷ್ಟಿಗೆ (ಪಪ್ರಾ. ೧೨). ೫. ಗಾಯತ್ರಿಷ್ಟಿಯಷ್ಟಿ : "ಪಾಯಿಂಬಂ ಯಾಷ್ಟಿಯಂ ಸಂಖ್ಯೆಯಂ ಸಂಖ್ಯೆಯಂ" (ಪಪ್ರಾ. ೧೨೨-೨೨). ೬. ಹೆಸರು ; ನಾಮಧೇಯ : ಷ್ಟಿಪಾಯಿಂಬಿಂಬಿಂ ಯಾಯಿಂ ಪಾಯಿಂಷ್ಟಿಂ ಯಾಯಿಂಷ್ಟಿಂಗಾಂ ಯಾಯಿಂಷ್ಟಿಂ ಪಾಯಿಂಷ್ಟಿಂ ಸಾಯಾಯಿಂಷ್ಟಿಂ ಯಾಯಿಂಷ್ಟಿಂ ಪ

ಮಾಡಿಸುವ ಪೋಷಕಪ್ರಮಾಣದಿಂ (ಅಷ್ಟಸ. ೧೧-೧೧೮೭); ಸಂಜ್ಞೆಯಪ್ಪಿಂದಾದ ಮಾಯಾವಿಜೃಂಭಣಮಿದು ಮೇಣಾ ಪಂಪಿಂದಾ ಭೀಮಪ್ಪಿಂ (ಪಾಂಚಾ. ೧೩.೬). [ಸಂ.]

ಸಂಜ್ಞೆಕ (ಗು). ೧. ಆತುರದ ತಾಪದಿಂದ ಕೂಡಿದ ; ಪ್ರಜ್ಞೆಯಿಲ್ಲದ. (ನಾ). ೨. [ಜ್ಞೆನ] ಒಂದು ನಂಜಿನ ಹೆಸರು : ಶಾಖಾಸ್ಪರ್ಶದೊಳ್ ಸಜ್ಞೆ ಸಿಂಪಿ . . . ಸಂಜ್ಞೆಕಿ ಸಂಜ್ಞಾಸ್ಪರ್ಶ ಜಾತ ಸರೀಸೃಪ ಪಕ್ಷಿಜಾಲ ಶ್ವೇತಾಜ್ಞೆ ಶ್ವೇತಾಶ್ವಮಂಜ್ಞಾಂ ಪಂಚವಿಧಂಗಳ್ಗಂ ದಿಙ್ನಾಗಜ್ಞೆಯ (ಅ_ಪ್ರ. ೧೫೦). [ಸಂ.]

ಸಂಜ್ಞೆಗಣ 'ಸಂಜ್ಞೆಯ' ನೋ.

ಸಂಜ್ಞೆ (ನಾ). ಉಸಿರಿ ; ಗುಸ್ಸುರಿ : "ಸಜ್ಞಿಂ ಸಂತಸಮಿಲ್ಲ" (ಮೋಕ್ಷ. ೧೫೦-೬).

[ಸಂ. ಶ ಸಮ. ಜೃಜ್ಞಸ್]

ಸಂಜ್ಞೆ (ನಾ). ಸಜ್ಞೆಯಿಗೆ ; ಸಂಜ್ಞೆ : "ಸಂಜ್ಞ — ಸಜ್ಞೆ" (ಅಜಿತ ಪುರಾಣ); ಏಕಿಲ್ ನೀವಿ ಸಂಜ್ಞೆಯಾದು ಅಂತು ಆಳ್ವಲು ನಿಷ್ಠ ಗಣಾಧಿಪರಾದಂ ಸಿದರ್ (ಅಜಿತ. ೬೦-೨೦). [< ಸಂ. ಸಂಜ್ಞೆ]

ಸಂಜ್ಞೆ , ಸಂಜಿಗೆ, ಸೊಂಜಗೆ, ಸೊಂಜಿಗೆ (ನಾ). ೧. ಅಕ್ಷ, ಅರಳು ಮುಂತಾದುವುಗಳಿಂದ ತಯಾರಿಸಿ, ಒಗಸಿಗೆ ಹಿಡಿಯುವ ಒಂದು ಬಗೆಯ ಸಂಚಿಯೊಳ್ಗಿನ ದಬ್ಬ . — ಪರಾರ್ಥ : ಆಸ ತಿಟಾರ್ಜಿಗಳಿಟಿಯಿಂದ ನಿಂದಾಗಲಿಂ ಬಿಲ್ಲಿಗೆ ಮಾಲ್, ಸಂಜಿಗೆಯಾಯಂ (ಯಶೋಧ. ೪-೧೩); ಅಂಬಿನ ಸಂಜಿಗೆ ಸೀಗುರಿಯಿಟ್ಟಿಲ್ಲಿ ಬೆಂಡಿಗಾ ಸೆಜ್ಜೆಯಂಗಳಂ ಮಂಡಲಗಳಂ . . . ಸಂಜಿಗೆ ಸಂದೊಪ್ಪಿಸಿತ್ತ (ಚಿಕ್ಕ. ೪-೩೨) ; ಪಾರ್ಶ್ವದ ಸೊಗ ಶೆಜ್ಜಿ ಸೊಗಸಾ ಬಾಬರಿಗ ಒಂದಲ್ಲೊಂಗಾಮಿಸಿಕ್ಕೆ ಯಾವಯಾವ ಹೋಯಿಸಿಕ್ಕಿ ಬಳಸಾ ಸಂಜಿಗೆಗಳಂ ಪೆಣಸಿದಂ (ಯಶೋಧ. ೨-೨೯). ೨. (ಅಲಂ) ತೀರಾ ಒಗಸಿಹೋಗುವಿಕೆ ; ಸಿಟ್ಟಿಬೆಯಿಸಿಕೆ : ಒಗಸಿ ಸಂಜಿಗೆಯಾಯಂ (ಯಶ. ೬೪). ಸಂಜಿಗೆ : ೧. ಸಂಜಿಗೆ ಸಂದಾಗಿಸಿದ ಅಥವ ಅಲ್ಲಿಗಾಯಿಸಿದುಬ್ಬಿಗಳು ಮುಂಜಾವ್ಹದ ಭಕ್ಷ್ಯಗಳ ಬಲ್ಲಿಮೊಳಿಸಿಂದಾದ ಸೊ' ಸಜ್ಜಿಪಯ (ಯಶೋಧ. ೧೪-೩೩). ನಿಮ್ಮ ಮಡಿದ ಸಂಜಿಗೆ ಹಾಯಿದಾಗಿ ಬಿಜ್ಜಿಸಿದೆ (ಯಶೋಧ. ೧೦೦); ಮಡಿ ಸಿಲುಪಿದಿಗೆ ಆದ ಪಜ್ಜಿಳ ಸಂಜಿಗೆ (೧೪೭). ಸೊಂಜಿಗೆ : ೧. ಅಡಿಯಲು ಬಾಯಿ ಬಂದಾಗಿಸಲಾಗಿ ಬಿಜ್ಜಿಸಿದ ಕುಂಡಾಕಾರದ ಬಿದಿರಿನ ಅಥವಾ ಲೋಹದ ಪಾತ್ರೆ (೧೬೨೨. ೧೧-೨೪). ಸೊಂಜಿಗೆ : ೧. ಇಡಿ ಸೊಂಜಿಗೆ ಹೊಡಿಯುವಲ್ಲಿ ಬಿಜ್ಜಿಸಿದಾಗಿ ನಿಂತು ಪಡಿಸಿ ಬಿಜ್ಜಿಸಿ ಗಾಯಿಸಿಲ್ಲಿ (ಪಾಪ. ೧೫೭-೬).

[ಸಂ. ಶ ಸಮ. ಜೃಜ್ಞಸ್]

ಸಂಜಗೆಬಿಜ್ಜಿ (ನಾ). ಬಿಜ್ಜಿಯ ಒಂದು ಹಿಜ್ಜಿ (?) : ಪಜ್ಜಿಯ ಹೊಡಿಸಿಲ್ಲಿ ದೇವರ ಸೊಂಜಿಗೆ ಬಿಜ್ಜಿಗೆ ಸಂಜಗೆಬಿಜ್ಜಿಯಂದು (ಪಾ. ಪಪ. ೧೮-೨೮; ೧೧೫೬).

[ಸಂಜಗೆ + ಬಿಜ್ಜಿ]

ಸಂಜಗೆ 'ಸಾಂಜಗೆ' ನೋ.

ಸಂಜಪತಿ (ನಾ). (ಗಾಣ) ಶಾಮಿಜಾಗಿಯ ಮಿಸೆ ; ಶಕ್ಷಿಯ : ಆಪಾ ಸಾಂಜಪತಿ ಒಳಾಂಗಾಯಿಸಿ ಸ್ವಯಂಸಿಜಿಸಿಲ್ಲಿ ಸೊಂಜಾಯಿಂದ ಪೊಜ ಬಾಗಿಯಿಲ್ಲಿ ಸಂಜಾಯಿಂದ (ಅಷ್ಟಸ. ೧೩). [<— ಓಂ. ಮಜ್ಞಾ. ಸಜ್ಞಾಪ್]

ಸಂಜಿಗೆ 'ಸಂಜಗೆ' ನೋ.

ಸಂಜಿಗೆಬಿಂಬಲ್ಲ (ನಾ). ಸಂಜಿಗೆ ಮಾಡಲು ಗಾಜಿಯೋಲಿಸಿದ ಒಂದು ಬಗೆಯ ಬಿಂಬಲ್ಲಿಯಾಯ ; ಬಿಜಿಬಿಬಿಬಿಬಿಲ್ಲ : "ಸಜ್ಞಾ ರಜಾ, ಗಾಜಾ – ಈ ೨ ಸಂಜಿಗೆಬಿಂಬಲ್ಲ" (ಅಷ್ಟಸ. ೧೩೨). ಸಂಜಿಗೆ(ಬಿಜಿ)ಬಿಂಬಲ್ಲ . . . ಪ್ರಜಾಪಾಲ (ಅಷ್ಟಸ. ೧೩೬-೩೬). [ಸಂಜಿಗೆ (< ಸಂಜಗೆ) + ಬಿಂಬಲ್ಲ]

ಸಂಜಿಗೆಸೊಪ್ಪ (ನಾ). ಸಂಜಿಗೆಯಂತೆ (ಸಜ್ಞಾ ಬಿಜಿಬಿಗಳಾಗಿ) ಮಡಿದಿ ಒಗಸಿಲ್ಲಿ : ಗಂಡಿನ ಏಡಿದು ಸಿಂಗಾರ ಮಿಸೆ ಪಾ ಬಿಜಿಯಂತಾ ಕಿಲ್ಲಿಸ್ಥಿತ ಕೊಡ್ಡಿಸಿ ಸಂಜಿಗೆಸೊಪ್ಪ ಶಕ್ತಿಯಿಟ್ಟಿಲ್ಲಿ ಪಾಪ ಬಿಜಿಯಂತಾ ಕಿಲ್ಲಿಸ್ಥಿತ ಕೊಡ್ಡಿಸಿ ಸಂಜಿಗೆಸೊಪ್ಪ (ಅಷ್ಟಸ. ೧೧-೨೬).

[ಸಂಜಿಗೆ (< ಸಂಜಗೆ) + ಸೊಪ್ಪ]

ಸಂಜಿತ (ನಾ). ಒಂದು ಬೆಸಿಕೆ ಇಜ್ಞೆಯ, — ಬೆಸಿಯುವ. (ಅಂ.)

ಸಂಜಿಗಣ (ನಾ). ೧. (ಪಕ್ಷಿಗಳು) ಒಟ್ಟಿಗೆ ಹಾರುವಿಕೆ. ೨. ಪಕ್ಷಿಗಳ ಹಾರಾಟದ ಒಂದು ಬಗೆ ; ಪಕ್ಷಿಗಳು ಕೆಳಗೆ ಇಳಿಯುವಾಗ ಅಥವಾ ಏರಿಗುವಾಗ ಹಾರುವ ರೀತಿ : ಪಕ್ಷಿವಾಂ ಒಂದು ಮಿಸ್ಸುಮಾಡಿಲ್ಲಿ ಭೂಮಿಯ ಕಡೆಗಂ ರಂಗ ಸಂಜಿಗಣ ಒಂದುಗಿ ಗೋಲ್ಮ ಗಾಳಿಯಿಂದ ಪಕ್ಷಿಸಿಗಳಿಂ (ಅಷ್ಟ. ೧೫-೨೨); ಪ್ರೊಟಪಾಯಿಯಿಂದ ಪಕ್ಷಿಯ ಗಣಿಯಿಂದ ಹಾರಿ ಬಿಡುವ ಮಾಯಾಯಿಂದ ಹಾರಿ ಬಿಡುವ ಭಾವಿಸಲಂ (ಅಷ್ಟಸ. ೧೬-೨೦). [ಸಂ.]

ಸಜ್ಜ (ಗು). ೧. ಶಾಂತವಾದ ; ಸಮುದ್ರಾನುದಿಂದ ಕೂಡಿದ. ೨. ಮೃದುವಾದ ; ಮೆದುವಾದ. ೩. ಲೇಲುವಾದ ; ಮಿಗೋಳತಕ್ಕವಾದ. ೪. ಗಂಭೀರವಾದ ; ಭೂಜ್ಯವಾದ : ಸಂಜ ಅಜಿತ ೪೫೫ ಪಕ್ಷಿಯಿಟ್ಟಿ ಮಂಡಿಯಿದು (ಅಷ್ಟ. ೨೫-೨೨). ೫. ಗೌರವಕ್ಕೆ ಶಾಶ್ವತವಾದ; ಭೂಜ್ಯವಾದ. (ನಾ). ೬. ನೆಮ್ಮದಿ; ಸಮುದ್ರಾನ : ಸಜ್ಞಿಯಾಯ ಸಂಜಗಿಯಿಲ್ಲ ಮಿಗಿ ಲೋಪಿಸ ಸಂದಿಲ್ಲ ಇಂಥಾ ಸಿಯಿಂ ಸಜ್ಞಿಯಾಯಿಂ (ಅಷ್ಟ. ೧೫೦). ೭. ಶಾಂತಿಯಿಂದಿರುವಿಕೆ; ಮಾಡಿಕೊಳ್ಳುವಿಕೆ ಒಪ್ಪಿಗೆ: ಸಂದಾನ: ಹೋಗಾಯಿಲ್ಲದ ಸಜ್ಞಿಯಾಗಿಲ್ಲಿಂದಾಯಿಲ್ಲಿಂದ ಪಜ್ಞಿ ಬಗೆ (ಅಷ್ಟ. ೧೫-೧). ಸಂಜ ಮಾತಿಗೊಂಡಿಂದಾಗಿಯಿಲ್ಲಿ ಪಜ್ಞಿ ಬಗೆಯ (ಅಷ್ಟ. ೧೩-೧೫). ೯. ಸಾಹಿತ್ಯಗ್ರಂಥದ ವೈಶಿಷ್ಟ್ಯ ; ಸಾಧನ : ಸಜ್ಞಾಗಾಯಿಸಿಲ್ಲಿಂದಾಗಿಯಿಲ್ಲಿ ಶಾಯಿಂದಾಯ ಬಾಗಿಯಿಲ್ಲಿ (ಅಷ್ಟ. ೧೫-೧೫); ಈ ಪಾಯಿಲ್ಲಿಂದಾಗಿಯಿಲ್ಲಿ . . . ಬೆಳ ಸಂಜಾಂಲಿಂ ಪಾಯಿಲ್ಲಿಂ ಸ್ಪಷ್ಟಯಾಗಿ ಮೂಲ ಈಗ್ಗೆ ಪಜ್ಞಿ ಕೊಯಿಸಿಲ್ಲಿ (ಅಷ್ಟಸ. ೧೫-೧೫೦). ಸಜ್ಞಿಯಾಯಿಸಿಲ್ಲಿ ಸಿಜ್ಞಿಯಾಗಿ ಪಿಲ್ಲಿಸಿಂದಾಯಿಂ ಪಿಲ್ಲಿ (ಅಷ್ಟಸ. ೧೫-೧೫). ೧೦. ದೊಗ್ಗಿಸಾದಗೆಯ ಮೂಲ ಮುಖ್ಯಮಾಗಗಳಲ್ಲಿ ಒಂದಾದ ಭೂತ್ಪೆಯಾಗಿದಿಯ್ಲಿ ಅನುಸರಿಯಬೇಕಾದ ; ಭೂತ್ಪೆಸಂಬಂಧ ಅನುಯಾಯ: ಅಜಾಲ್ಲ ಇಜ್ಞಾ ಪಂಥಾಂ ಕೆಂಪಿಯ್ಲಿಗ ಭೂತ್ಪೆಯ, ಇಜ್ಞಾ ಸಜ್ಞಾಯಾದ ಸಂಜಾ. ಪಾಯಾಂಗಾ ಮುಖ್ಯ ಗಾಜಿಯಾಂಗೆ ಆ ಸಂಜಾ (ಅಷ್ಟಸ. ೫). 'ಸಂಜಿಪಿ' ಜೊತಾ. ೧೧. ಸಂದಾಯಿಸಿಲ್ಲಿ : ಬಿಜ್ಞಿ ಭೂಪಾ ಭಕ್ಷ್ಯಾಜಿಪಿಯಿಲ್ಲಿ ಪಿಲ್ಲಿಸಿಂದಾಯಿಂ ಸಿಂಪಿಯಾಯಿಂದ ಸಂಜ ಲಿಂಗಾಯ ಸಿಂಪಿ (ಅಷ್ಟಸ. ೧೫೦-೧೧೧). 'ಸಂಪಿಯಿಲ್ಲಿ' ಜೊತಾ.

ಸಜ್ಞಾಪಿಸು = ಸಂದಾನವನ್ನು ಮಾಡಿಸು; ರಾಜಿಮಾಡಿಸು : ಪಂಥಾಳ ನಿಷ್ಠ ಭೂಪಾ ನಿಷ್ಠಿಸಿ ಗಳಿಗೆ ಮಾಯಿಂದಾ ಮಿಸ್ಸ ಭೂಪಾ ಭಾಷಿಯಾ ಸಂಪಿಂದಾ ಸಂಜ [ಜಾಂಗ. ಸಂಜಿ] ಮಾಯಿಯಿಲ್ಲಿ ಮುಂಜಾಂಡಿಯಿಂದಾ (ಭೂಷಾ. ೧೧-೧೧). ಸಜ್ಞಾಪ = ಗಾಯಿಪಿಯಿಸಿಲ್ಲಿಂದಾಗಿ; ಶಾಂತಿಯಾಗಿ : ಪಾಯಿಯಿಂದ ಭಾಗಿಯಿ ಮಾಯಿಂದ ಗಂಭೀರ್ಯಾಂ ಸಜ್ಞಾಗಿ ಮಿಸ್ಸಿಂ ಳಿಗೆ ಪಾಯಿಂದ ಸಿಂಪಿಯಿಂದ ಪಿಲ್ಲಿಸಿಂದಾಯಿಂ ಭೂಪಾಯಿಂದ (ಪಾಪಾ. ೨೫-೧೩). [< ಪ್ರಾ. ಸಜ್ಞ. / ಜಾ. ಸಜ್ಞ, ಶಾಜ್ಞ. / ಓಂ. ಮಜ್ಞಾ. ಸಜ್ಞಾ]

ಸಂಪಂ (ಅ). ೧. ಶಾಂತವಾಗಿ; ಸಮುದ್ರಾನುದಿಂದ ಕೂಡಿ : ಸಂಜ ಮಾಯಿಂದ ಮಾಯಿಂದ ಸಜ್ಞಿಯಾ" ಸೊಜ್ಞಿಯಲ್ಲಿ ಸಾಯಿಂದಾಂ (ಅಷ್ಟ. ೨-೧೨೭); ಶಾಯಿಂದ ಸಿಂಗಾಂ, ಪಕ್ಷ ಬಿಂದಿಂ ಇಜ್ಞಾಯಿಂ ಪಾಯಿಂ ಭೂಪಾ ಸಂಜ ಭೂಪಾಯಿಯಿಂದ ಬಿಜ್ಞಿಯಿಂದಾ" (ಅಷ್ಟಸ. ೧೨-೧೩). ೨. ಸುಖವಾಗಿ ; ಕ್ಷೇಮವಾಗಿ : 'ಸಂಪಿಯಿಂ' ಜೊತಾ. ೩. ನೆಮ್ಮದಿಗೆ ; ಸಾಮರಸ್ಯವಾಗಿ : ''ಸಾಯಿಂದಾ ಬಿಜ್ಞಿಯಿಂದಾ ಪಾಯಿಂದಾ ಸಂಜ ಭೂಪಾಯಿಂದಾ ಸಂಜಾಯಿಂದಾ ಸಂಜಾಯಿಂದಾ ಸಂಜ

(ಮಾಪಾ. ೬-೬೨); ಒಳಮುಖಗಳ ರೀತಿಯಾದ ಸಂಜೆ ಮಲಿತ (ಪಾಭಾ. ೧೨-೧೩). ೬. ಬಿಳ್ಳು ಕಪ್ಪಗೂ; ಸಮಾಸ್ತ : ಸಂಜೆ ಸುಬ್ಬಿತ ಸಜ್ಜಾಗಿಸಲಕ್ಷಮಾದಿಂ ಗಂಜರ ಸಜ್ಜಾಯಿಂ ಅಂಜಿ ಮಹಾಸಂತಾಪಾಗಿಸಲ್ಪಟ್ಟ ಮಧ್ಯಸ್ಥಗಂ (ಸಿಪ. ೧-೧೫೫). [ಸಂ ಸಂಜೆ]

ಸಂಜೆಮಿ (ನಾ). ಭಿಕ್ಷೆಬೇಡಿಗಳನ್ನು ಸಾಯುವ ಕಡಿ : ಶ್ವಾಸದ ಬೆಳ್ಳಿ. ಹುಟ್ಟಿದ ಸಂಜೆ ಅಜ್ಜಾ ಶಕ್ತಿಬೇಗ್ಗೆ, ಮೃತ್ಯುದೇವತೆಯಿಂದ ಕೆಣಕಿ (ವಿರಾಪ. ೨೦೭). [ಸಂಜೆ + ಮಿ.]

ಸಂಜೆಮುಸ್ಸೆ (ನಾ). ಸಂಜೆಮಿಗಳು ರಚಿಸಿದ ಸಾಮಿಸ್ತೆ : ಕರುಣಾ, ಭಾವಗಾನ ಮುಖಾಂತರ ಸಜಾಮಿಸ್ತೆಯನ್ನು ಉಪದೇಶಿಸಿದ್ದಿ ಕ್ರಮುಖರು (ಅಷ). [ಸಂಜೆ + ಸಾಮಿಸ್ತೆ]

ಸಂಜೆ (ಗು). ೧. ಬಾಗಿದ ; ಡ್ಯಾಬಿದ. ೨. ಒಂದಕ್ಕೊಂದು ಜೋಡಿ: ಜೋಡಿಸಿದ. ೩. ದುಃಖಾದ; ಸಾಂದ್ರವಾದ. ೪. ನಿರಂತರವಾದ; ವಿಶೇಷದ : ಸಂಜೆ ಧರ್ಮಾಚಾರಿಯಾಗಿರುವುದು ಸೆಬೆ ಧರಗೆ ಸಿದ್ಧಾಯಿಸ್ಕಂ ಪಿಂಡಿಯಾಗಿಗೆ ಸಜಜಾಗಿರಂ ಶಾಪಿಸ್ಕಗಿಗೆ ಸಿಬ್ಬಿ ಸಾರಂ (ಪಾಲಾ ೧೨-೧೩); ಸಂಜೆಯಾಜ್ಞಾಪಿಸಲಾಯಿತು ಏಯಾಸ್ಕಮಿಯಂ (ಆಚ್ಚಾ. ೦೮-೧೨). ಸಂಜೆಪ್ರಜಾನಿ ಸ್ತ್ರೀಯಾಗಿ ಬೆಸೆ ಕೆಲಸಿಗಾಗಿ (ಪ್ರಾಚಾ. ೪-೪೪ ೧). ೫. ಶಾಸ್ತ್ರೀಯವಾದ : ಸ್ಥಿರವಾದ : ಧರ್ಮಾಚರಣೆಯಿಂಗಳಷ್ಟಾವಿಚಾರಿಯಾಗಿ ಸಂಜೆ ಸಿಲ್ಲಾಸ್ಕಂಗಳಿಂದಿಗಾ (ಮಾಪಾ. ೧ ಬಿ). (ನಾ). ೬. ನಿರಂತರವಾದುದು; ವಿಚ್ಛೇದವಿಲ್ಲದುದು : ಅಖಂಡವಾದ ವಿಶ್ವಗಳನ್ನು ಸಮಚಿತ್ತದಿಂದ ಮುಂದೆ ಮುಂದೆ ತೋರಿ ಪ್ರಕೃತಿ ಭೃಮ್ಯಾಜ್ಞಗಳು ಒಂದಾಗಲೆಂದು ಸಮಚಿತ್ತಾಗಿ ಬಲಿಷ್ಠಳು ಇಂದಿಯನ್ನು ಬಾಧಿಸಿದ್ದನ್ನು ಮಾಡಿ ತೋರಿಸಿದ್ದಿ (ಸಿಪ್ರಸಾ. ೧೧). ೭. ವಿಚ್ಛೇದವಿದ್ದ ಇರುವ ಒಂದು ಬಗೆಯ ಪ್ರಕೃತಿ : ಈ ವಿಚಿತ್ರಸ್ಥಿತಿ ಸಂಜೆ, ಸಜಲ, ಅಭ್ರಜ್ಞಾತಿ, ಶಾಖಿಂ, ಅಂತರ್ಧಾನವಿದು ಮಾದಿ ಪ್ರಸಂಗಾಗಿರುವುದು. ಸಂಜೆಯಲ್ಲು ಪ್ರಾಣಿ ಪ್ರಕೃತಿಸಮುಚ್ಚಯ ವಿಶ್ವಾ ನೋಂಪಿಯಾಗಿ ಗಣಿಸಲ್ಪಟ್ಟಿದೆ (ಸಜ, ೧೪) [ಸಂ.]

ಸಂಜೆಯ (ಆ). ಯಾವಾಗಲೂ ; ಎಷ್ಟಿದಿದೆ : ಸಜಜಯಂದ ಎಷ್ಟ ಕಡಲಿಂಗ ಸ್ಥಿತಿಯಿಂಗ ಗಣಿಸಿಂಗ ವಿಶೇಷಿಸಿಂಗಿಸಿಲ್ಲಂದ ಎಲಿದಂ (ಕಾಪಾ. ೧-೬೦); ಇಂದಿ ಏಯಾಸಿಯಿಂಗಳಿಗಾಗಿಯಂದು ಏಯಾಸಿಂದ ಸಂಜೆಯ ರಂಜಿಸಿದ ಪ್ರಾಣಿಯಿಂದ ಪ್ರಾಣಿ (ಕಾಪಾ. ೫. ೨-೫೨). [ಸಂ.]

ಸಂಜೆಯಗೆಲು (ನಾ). ಯಾವಾಗಲೂ ಭೇದಿಯಾಗುವ ಒಂದು ಬಗೆಯ ರೋಗ : ಕಾಲಿಸ್ಕ, ಬಿಂಗಾಗಿದ ಮೀನ, ಧಾತಿಯಾಗಿರುವ, ಯೋಸ್ಕ ಇಂದ ಸಿಲ್ಲಾಗಿಯಾಗಿ ಪಾಯಿಂದ ಮಿಶ್ಯಗಿಯಾಗಿದ ಮಿಶ್ಯಗಿಯಲ್ಲಿ, ಕಲಿ ಕೊಡಿದ ಸಂಜೆಗೆಲು ಗಣಿಸಿಲ್ಪಟ್ಟಿದೆ (ಸಜ, ೬೫೬). [ಸಂ.]

ಸಂಜೆ (ಗು). ೧. ನೀರಿದ; ವಿಶ್ವಾಸಿದ. (ನಾ). ೨. ವಿಶ್ವಾಸ; ಹರಿಯ. ೩. ನಾಲು; ಕಂಠ್ಯ. ೪. ನಿರಂತರವಾಗಿರುವಿಕೆ; ನಿತ್ಯತೆ. ೫. ಬಿ. ದಂಡ; ಏಳಿಗೆ: ಸುಖಗೆ ಎಷ್ಟಾ ಮಿಶ್ಯಿಂ ಹಾಂ ಪಡಿಯದೆ ಪಡಿಯಿಂದಿಸ್ಥಿಂ ಮುಸ್ಥಿಂ ಅಂತಿದಿ ಪಡಿದಿಂ (ಪಾಪಾ. ೧-೧೫೨). ಶಾಸಿಸಿದ್ದಾಗಿ ಸಜಜಯಿಲ್ಲಿ ಪ್ರಾಣಿಯಾಗಿ ಪಡಿಯಿ ಪಡಿದ ರಾಜಯಾಗಿದ್ದಿರಿಸಿದ (ಪಾಪಾ. ೬೧). ೬. ಮಿಗೆ ಅಥವಾ ಮಿಗಿಂ; ಸಂಜಾನ : ಸಜಜಪಡಿಯುವಿಂದ ಸುಖಿಂ ಸಿಲ್ ಪಿಂಡಿಯಾ . . . ಧಾನಾಜಾಯಾಂಯ ಬಿಶ್ವಪ್ರಯೋಜಿಸಿಲ್ಲಂದಾಗಿ ಸಜಜಿಸಿಲ್ಲಂಗಳಾಗಿ (ಗಾಪಾ. ೨೦). ಸಂಜೆ ಧಾನ್ಯಸ್ಥಿಗಳ ಧಾನ್ಯದ ಸಜಜಯಿಂ ಮಿಸ್ಯಿಂಗಿಂ ಸಜಜಿ ಧಾನ್ಯ ಮಿಸ್ಯ ಧರಿಂದ ಸಜಜಿಂಗಿ ಪಿಶ್ಯಿಂಗಿಸಿಲ್ಲಿದಿಂದು ಬಾಯಾಜಿಸಿಲ್ಲಿಂ ಮಿಸ್ಯಿಂ ಬಿಜಿ (ಪಾಪಾ. ೨-೨೦). ಮಿಶ್ಯಿಂಗಿಸಿಲ್ಲಿ ಸಜಜಿಸಿಲ್ಲಾಯಿಂದಿಸಿ (ಗಿಪಾ. ೪೮-೨೦). ೭. ಗುಂಪು; ಸಮುದಾಯ : ಸಜಜಿಸಿಲ್ಲಿಂಗಳು ತಜ ಸಂದಿಯಾಂ ಮಿಯಿಂದಿ (ಬಿಸಿ. ೨-೨). ಇಂದಿ ಬಿಶ್ಯಾಯಿಸಿಲ್ಲಿದಿ . . . ಸಜಜಿಂ ಗಣಿಸಿಲ್ಲಿಂಗಳಿಸಿಲ್ಲಿಂಗಳಿಗಾಗಿ ಗಣಿಸಿಲ್ಲಿಂ ಬೆಂಗಳೂರಿಂ ಪ್ರಾಣಿಯಿಂದ ಪ್ರಾಣಿಯಿಂದ (ಸಜಜ, ೬೯-೧೬). [ಸಂ.]

ಸಂಜೆಮೆಲು (ಕ್ರಿ). ನಂಬಿಕೆ ಹುಟ್ಟಾಗು : ನಿರ್ಣಯವಾಗು : ಬಂಬಿಗೆ ಸಜಜಿ ಸ್ಥಿಸಿಂಗಿಂದ ಸಜಜಿಂಗಿಸಿಲ್ಲಿಂ ಪಿಂಡಿಯಾಗಿ (ಪಾಪಾ, ೨-೬೨) [ಸಜಜಿ + ಆಗು.]

ಸಂಜೆಮೆಲ್ಕೆನ (ನಾ). ನಂಬಿಕೆ ಪ್ರಶ್ನಿಸಿಸಿಲ್ಲಿಂಗುವುದು : ಬೆಳಗಿನ ಗಾಳಿ: ಬಾಗಿಂದಿಂದಿಸ್ಥಿಂ ಮಜಿಸಿಲ್ಲಿಂಗಿಂದಿಂ ಬಿಂಗಿಂಗಿಂಗಿಂ (ಪಾಪಾ, ೬-೨೫ ೧). ಬಾಗಿಂದಿಂದ ಪಾಪಿಂಗಿಂಗಿಂದಿಂದಿಂಗಿಂ ಕ್ಷಿಂ ಪಾಪಿಂಗಿಸಿಲ್ಲಿಂ ಬಿಂಗಿಂ ಸಜಜಿಸಿಲ್ಲಿಂಗಿಂ (ಪಾಪಾ. ೧೦-೧೬). [ಸಂ.]

ಸಂಜೆಯಿಂ (ಕ್ರಿ). ಮಿಶ್ಯಿಂಪಿ ಪಡೆ, – ಜೊಂದು : ಸಜಜಿಸಿಲ್ಲಿಂಗಿಂಗಿಂ ಸಿಲ್ಲಿಂಗಿಂಗಿಂ ಬಿಂಗಿಂಗಿಂಗಿಂ ಸಿಲ್ಲಿಂ . . . ಆಯಾಯಿಂ ಪಿಂಡಿಯಾಗಿ ಪಡಿದ ಸಂಜೆಯಿಂ (ಪಾಪಾ. ೨ ಬಿ). [ಸಂಜೆ + ಪಿಂ.]

ಸಂಜೆಮೊಗ (ನಾ). ಮಿಶ್ಯಿಂಪ್ಪಿದ ಪ್ರಶ್ನೆ : ಈಗ ಪಿಂಪ್ಪಿ ಪ್ರಯೋಗಿಂದು ಆಯಿಂಪಿಂದ ಪಿಂಪ್ಪಿಂಗಿಂದು ದೊಂಪಿದ ಪ್ರಶ್ನೆಯ ಆಯಿಂ ಸಂಜೆಯಿಂಗಾಗಿ ಪ್ರಯೋಗಿಂದು (ಪಾಪಾ. ೬) [ಸಂ.]

ಸಂಜೆಯಿಂಗ 'ಸಂಜೆಗಾರ' ನೋ.

ಸಂಜೆ (ನಾ). ದುಃ; ಳಲು : ಸಂಜೆಪ್ಪಿ ದೇಯಾಪಿಂದಾಯಿಂ ಪ್ರಶ್ನೆಯಾಯಿಂ ಮಿಶ್ಯಿ ಪಾಯಿಂಗ/ ಪ್ರಾಣಿಯ ಸಜಜಿಸಿಲ್ಲಿಂಪಿಂಪಿಂ ಸಂಜೆಯಿಂಗಾಯಿಂ ಪ್ರಾಣಿಯಿಂದಿಂ ಪಿಂಪಿಂಗಿಂಗಿಂ (ಪ್ರಾಪಾಪಾ. ೨೧-೧೨೯) [ಸಂ.]

ಸಂಜೆಪ (ನಾ). ೧. ಸುಮಿಂಪಿ; ಕಾಯುಸಿಂಪಿ. ೨. ಪೀಡಿಸಿಂಪಿ. [ಸಂ.]

ಸಂಜೆಮು (ಕ್ರಿ). ಪ್ರಶ್ನೆಗೊಳ್ಳು ; ದುಃಖಿಸು : ಸಜಜಿ ಯಾವಪ್ಪಿ ಆಶ್ಚರ್ಯಿಂದ ಸ್ಥಿತಿ ಈ ಪಾಪಿಂಗ್ಗಿಂದು ರಚಿಸಿಲ್ಲಿಂದ್ಯಿಂದ ಪಿಂಪಿಂದ ಆಶ್ಚರ್ಯಿಂಗಿಂದು ಮಾಡುವುದಕ್ಕಾಗಿ ಸಂಜೆಯಿಂಗಾಗಿ (ಆಚ್ಚಾ. ೨೦ ಒಚಿ) [ಸಂಜೆ + ಇಸು.]

ಸಂಜೆಸ್ಸ (ಗು). ೧. ಹುಣ್ಣಿಗಿ ಕಾದ; ಅತಿಯಾಗಿ ಸುಡುವ : ಮಾಪಾಯಾ . . . ಮುಖ್ಯಲಕ್ಷಣಮುಖಂಗಳಿಸ್ಥಿಸಜಜಿಯಾಂಯಂ ನೋಡಿ (ಸಾಜ, ೧-೨ ಜಿ). ೨. ಸಂಖ್ಯೆಗೆ ಗುರಿಯಾದ: ನೋಡಿದ. ೩. ಹುಟ್ಟಿ: ಕಿರಾದ. ೪. ಬಳಲಿದ; ಬೇಸತ್ತ. ೫. ಒಗಾಡಿ; ದಾಡಿದ. (ನಾ). ೬. ಕಾಯುವಿಂದುದು : "ಸಜಜಿಸಿಲ್ಲಿಂಗಿಂಗಿಂ, ಸಜಜಿ... ಮಾಡಿ ಗಾಯಾಲ್ಲಿಸ್ಥಿಸಿಲ್ಲಿಂಗಿಂದ್ಯಿಂ" (ಸಜಜ, ೬೫೧). ೭. ಬಳಲಿಕೆಯು : ಬೇಸಜಜಿಸ್ಥಿಸಿಲ್ಲಿಂದಿಸಿಂ : ಗಾಜಲಿಂಗಿಂಗಿಂಗಿಂಗಿಂಗಿಂಗಿಂಗಿಂ ಸಜಜಿಸ್ಥಿಸಿಲ್ಲಿಂಗಿಂ ಶಾಸ್ತ್ರಿಸಿಲ್ಲಿಂಗಿಂಗಿಂಗಿಂಗಿಂಗಿಂಗಿಂಗ

೩. ಸುವಿಧಾನಗಿಯುವಂತೆ ಮಾಡು : ಹಾಯಮಾಗಿಸು : ಆ ಗಾಡಿಯ ಭೃಮರಿ ಕೆಲಸಕ್ಕೆ ಬಾರದು ಕೊಡಿ ಮಮ್ಮಿಗ ಸಂಪಡಿಸಿ (ಮಾ.ಸಾ. ೬-೨೨). ೪. (ಅಲಂ) ಒಳಗೊಳ್ಳು: ಅಡಗಿಸು: ಆದ ಕೆಸ್ಸ ನಿಮ್ಮ ಧೀರತ್ವ ಹೊಯ್ದಾಗ ಪಾ ಬಂತಿ ಮುಂದ ಪಾಂಡವ್ಯರ ಸಂಪಡಿಸ್ಲಿಲ್ಲ ಪೆಕ್ಕ ಜಾರಿದರು (ಮಾ.ಸಾ. ೧೦-೨೨). ೫. ಸಿದ್ಧಪಡಿಸು; ತಿದ್ದಿ : ಸ್ಪಿ ಗಾಡಿ ಸಂಪಡಿಯಿಸಿತ್ತೆ . . . ಸಂಪಡಿಸಿ ಬಲ್ಲಿ ಯುದ್ಧಕ್ಕೆಳೆಯಿ (ಮಾಭಾ. ೮-೧೦೧); ಸಿಲ್ಲಿಗೆ ಬಿಲ್ಲಿಗೆ ಸಂಪಡಿಸಿ ಸಾಲಿಯ ಸೊಗ ಮೀಸುದ ಸಂಪಡಿಯ . . . ಜೋಗಾಟಮಿಲ್ಲದೆಯೆಯಾರಿ (ಗದಾ. ೨೮-೫೬). ೬. ಅಲಂಕರಿಸು ; ಗಾಯಿಸಿಯಿ : ಗುಣಿಯಾಯಂ ಸ್ಪತ್ತಿಯ ಬೀಳ್ಕೊಟ್ಟುಗಳ ಬಂದಾಗಂದು ಸಂಪಡಿಸು, (ಮಾ.ಗ ೧೩-೫೩); ಮಾಣಿಕ್ಯ ಬಂಪಡಿಸಲಿಗಳಂ ಧೃತಿಯಿಂದಿಸಿಕ್ಕೆ ಮುಗುಳಾಳಿಗಳಾಡಿಯಿಂದ ಸಂಪಡಿಸು, (ಮಾಭಾ. ೬-೨-೧೦). ಸಂಪಡಿಸು : ೧. ಸಂಜೆಗೆ ಮುಂಚೆ ಮುಂಜೆಯೂ ಅದನ್ನೂ ಆಗಲೆಯೂ (ಮಾಭಾ. ೧೦೨). ಕುಮ್ಮಿ ಸಂಪಡಿಸು ಪಕ್ಕೆ ಕಳಾಸ್ಪಿ. [ಸಂಪ + ಇಡು.]

ಸಂಪಡಿಸು, ಸಂಪಡಿಯು, ಸಂಪಡಿಯು (ಕ್ರಿ). ೧. ಸುವಿಧಾಗಿಸು; ಹಾಯಮಾಗಿಸು: ಏಗಳಾಗಿಯಾ... ಮುಂಬ್ಯಸೊಂಡ್ಯಬಾಯಿಂ ಬೆಂಬಿಕ್ಕೆ ಸಂಪಡಿಯಿಂ ಬಂಬಂಡಿಸಿ ಕೆಟ್ಟು ಹೊಗ್ಗಳುವಂ ಧರ್ಮಜಂಗಾಗಿ ಧರ್ಮದಿಂದಾಗ್ಗೆಯಲ್ಲಿ ಬೆಂಬಿಡದೆ ಬಂಬಂಡಿಸಿಂ (ಜೈಮಿ. ೯-೧೦೨); ಸಂಪಡಿಸಿ ಏಕಿಗಾಮ್ಯ ಧೋಗಿಸ (ಭೂಪ. ೯-೧೨೨). ೨. ಕಾಂತಿಯಾಗಿಯು; ಸಮರ್ಥನಾಗಿಂದ ಒಂಡಿಯು : ಸಂಪಡಿಸಿಲ್ಲದ ಸಾಲ್ಯಪಡಿಸಿಸಿಲ್ಲಿಂ ಪೋಗಿಸಿದ (ಗದಾ. ೯-೧೦೨); ಕೆಲಸಿಂ ಸಿಂಪಡಿ ಸಂಪಡಿಸಿ ಮುಂಗಡ ೬-೨೧); ಅಂಬಡಿ ಸಂಪಡಿಸಿ ಬಿಲ್ಲಿಗೆ ಬಾಣಿಯಾಗಿ (ಮಾಭಾ. ೬-೨೦); ಭೀಮಸೇನ ಸಿಂಪಡಿ ಸಂಪಡಿಸಿ ಮುಗಿಸಿ ಮಮ್ಮಿಗ ಸಂಪಡಿಸಿ (ಗದಾ. ೧-೨೧). ೩. ಸುಮ್ಮನೆ ಇರು; ಬೆಲಸಯಿಲ್ಲದಿರು : ಸಂಪಡಿಸಿಲ್ಲಾಯಿಸಿಲ್ಲಿಂ ಮೋಗಾಲ್ಲಿಗಳ ಮುಖ್ಯಪಡಿ ಪಡಾಗಾಮುಖಿಗಳ (ಗದಾ. ೧೨-೨೧). ಇಂತಿಲ್ಲ ಒಟ್ಟಾದ ಮುಖಂಡಿಸಿಲ್ಲಿಸಿಲ್ಲಾಯಿಸಿಲ್ಲಾಯಿಂ ಮೋಗಾಲ್ಲಿಂ ಸಂಪಡಿಂಗಿಸಾಂ. ಪೆಗಾಳಿಸಿಲ್ಲಿಂ (ಆಭಾ. ೬-೨೨). ಸಂಪಡಿಸಿಲ್ಲಿ ಭೂಮ್ಯ ಗಾಮಂ ಕ್ರಮಾಮಂ ಪಕ್ಕ ಭೂಮಿಪಡಿಲಿ ಸಪ್ಪಿಂಪಡಿಸ್ಲಿಸ್ಲಿಸಿಲ್ಲಿಯಮಿಯಿಂ (ಗದಾ. ೩೬-೧೦) ಸಂಪಡಿಯು : ೧. ನಿಶ್ಶಬ್ದಮಾಗಿಯು; ಸ್ಪಿಸ್ಲಿಯಾಗಿಯು : ಮುಂಬಾಡಿಯಿಂಬಾಯಿಂ ಸಂಪಡಿಯಿಸ್ಲಿ ಆಪಿಯಿಂ ಧರಿಂ ಮಿಸ್ಲಿಯಿಂ ಸಂಪಡಿಯಿಂ ಬಂದ . . . ಗೊಂಡ್ಯಿ ಪ್ರಾಣಿಗಳಿಗೆ (ಗಿಯಿಪ್ಪಾ. ೧೧-೨೬೨). ಸಂಪಡಿಯಿ : ೧. ಸುಮ್ಮನಿಸ್ಲಿ ಮಿಂಗಿ ಮೋಜಾಡ ಪಾಂಡಿ ಅಂಬಿಯ ಸಂಪಡಿಯಿಂ ಸಂಪಡಿಯಿಂ (ಆಭಾ. ೧೦೦). ೨. ಮಾಯಾಗಿಯು ಸಂಪಡಿಯು ಪಾಂಡಿ ಒಂಬಿಯ ಅಂಬಿಯಿಂ ನಿಸ್ಲಿ ಮಾಗಿಯು (ಆಭಾ. ೦೮-೨೦). [ಸಂಪ + ಇಡು.]

ಸಂಪಡಿಯು 'ಸಂಪಡಿಯು' ನೋ.

ಸಂಪಡಿಯು 'ಸಂಪಡಿಯು' ನೋ.

ಸಂಪಡಿಕೆ, ಸಂಪ್ಪಿಕೆ (ನಾ). ಸುವಿಧಾನ; ಸಾಂಪ್ಪಿಸ : ಬ್ಲಿಪಡಿಸ್ಲಿಯಾಗಿ ಸಾಲ ಕ್ಷಯಿಸ್ಲಿ ಹೋ ಯುದ್ಧಿಸ್ಲಿಯಿಗೆ ಸಂಪಡಿಯು ಪಡಿಸಿಸ್ಲಿ ಆಪಿಯು (ಪ್ರಾಣಿ. ೧೫೩). ಸಂಪ್ಪಿಕೆ : ಸಡಗ ಪಡಿಕೆ ಇದ್ದ, ಆಗಲೆ, ನಿಮ್ಮ ಸಂಪ್ಪಿಕೆ ಬೇಡ (ಹೂಗಾಪ. ೨೨೦). [ಸಂಪ + - ಇಕೆ]

ಸಂಪಡಿಯು, ಸಂಪಡಿಯ್ದು, ಸಂಪಡಿಯು, ಸಂಪ್ಪಿಯು (ಕ್ರಿ). ೧. ಸುವಿಧಾನ ಪಡಿಯು; ಸಾಂಪ್ಪಸಿಗೊಳಿಯು : ಬ್ಲಿಪಡಿಯಾಂ ಬಂಬಿ ಅಮ್ಮಾಯಾಂ ಸಂಪಡಿಯಾ [ಮಾಭಾ. ೬೫] (ಮಾ. ೨-೦); ಮುಮ್ಮಾಯಾಂ ಮಾಯಾಯಂಧಾಂಗಾಲ್ಲಾ ಯಾಳಾಳಂ ಸಂಪಡಿಯಿಪಡಿಪ್ಪಾಲಾಗಿ ಸಾಲಪ್ಪಿಸಾಲಾಗಿ ಸಾಲಿಸಾಂ (ಆಭಾ. ೬-೨೩). ಕೆಂಬಾಗಲು) ಧಾಂಬಿಸಾಲಾಗಿ ಆಪಿಯಿಂಬಾಂ ಸಂಪಡಿಯಿಪ್ಪಿ ಯಿಬಿಯಾಂಬಾ ಮಗ ಪಡಿಯಿಪ್ಪಿ (ಆಭಾ.ಭಿ. ೨೨೦ ಭಾ). ೩. ಪೆಡಿಪಡಿಯಿಸ್ಲಿ; ನಿಗ್ರಹಿಸು; ಅಂಡಿಯಿಪ್ಪಿ ಯಿಬಿ: ಧಾಂಬಿಸ್ಲಿಪಾಂಗಳಾಂ ಬಂಪಡಿಯಿಂಬಾಂಗಳಿಂಬಾಂಪಡಿಯಿಂ ಸಂಪಡಿಯಿಂ ಸಂಪಡಿಯಿಂ ಧಾಂಬಿ (ಆಭಾ. ೩೩೨) ಸಂಪಡಿಸ್ಲಿ : ೧. ಅಬ್ಬ ಅಧಿಂ ಪೆಪ್ಪಾಂಗಳಿಗೆ ಪುಡಿಪಡಿಸ್ಲಿಪಡಿಸಾಂ ಪಡಿಂ ಮಮ್ಮಿಯಿಪ್ಪಿಂ ಅಂಂ ಪೆಪಡಿಪ್ಪಿಸಿಂಬಿ ಮಮ್ಮಿಯಿಂ ಪೆಂಗಳಿಪ್ಪಿಸಿಗಾಂ ಅಬ್ಬ ಗಾಂಂ ಧಾಂಪಡಿಂ ಸಂಪಡಿಸ್ಲಿ (ಆಭಾ. ಮುಗಿಂಬಿಯಿಂ (ಮಾಭಾ. ೧೪-೬೮), ಪಡಿಂಬಿಂಬಿಗೆ ನೀಪಡಿಸ್ಲಿ ಸಿಪಡಿ ಬಿಂಗಿಂ ಗಂಪಡಿಂ ಸಂಪಡಿಸ್ಲಿಯಾಂ. ಸ್ಪಿಗಿ (ಭೀಪ. ೨೧-೧೦). ನೀಗಡಪಡಿಂಪಡಿಪಡಿಗಳಾ ಪಾಪಡಿಸಾಂಪಡಿಂ ಸಂಪಡಿಯಿ [ಮಾಭಾ. ಸ್ಪಿಂಬಿಂಪಡಿಂಪಡಿ (ಭೂಪಾ. ೫-೨.). ಸಿಪಡಿಯಿ : ೧. ನೀಪಡಿಂಪಡಿ ಬಿಪಡಿಸ್ಲಿಯಾಗಿಂಪಡಿಪಡಿಂಪಡಿಂ ಸಂಪಡಿ[ಮಾಭಾ. ೧೦೫. ಪೂಪಾಪಾ (ಮಾ.ಸಾ. ೧೪-೨೨); ಸಿಪಡಿಸಿಸಿಂಪಡಿಸಿಂಪಡಿಸಿಂಪಡಿಂಪಡಿಂಪಡ

ಸಂಪಯು (ತ್ರಿ). ೧. ಪಾಲುಮಾಡು; ಪಾಯಗಾಣಿಸು : ಅಮಲಂ ಅಳ್ಳದೇ ಎಂಬ ಏಣಾಮಲಂ ಸಂಪಯಮಯು ಇಷ್ಟಾರ್ಥಕ್ಕೆ ಕೊಂಡು (ಅಳಾಪ. ೨೮೧-೮) ೩. ನಿರ್ಣಯಿಸು; ನಿಶ್ಚಯಿಸು : ಗೌಡಯಮಯು ಸಮಿಯಂಮಲ ಸಂಪಯಂಗಳು ಬಳಿಕಾಮಲಮಕ್ಕೆ ಏಗಾಗಲ ಭಯಂ ಸಂಪಯಮಯ್ದು ಭಯಮಾನಮಿಯಲು ಸಂ ಸಂಪಯಂಗಳಿಂ (ಅಪ್ಪಾಗ ೧೦೮೮). ೩. ಬೊಂಬಿಸು; ಭಯಪಡಿಸು : ಬಲಪಯು ಸಂಪಯಮೆಂಬು ನಿಮ್ಮತ್ತಿಗಿ ಅಲ್ಲ ಕಿಲ್ಬಿ ದಿಪಯಿಲ್ಲಿ (ಅಪಾ. ೧೦).

(ಸಂಪಯ + - ಅಲ್)

ಸಂಪಯಣ (ನಾ). ಭಯಪಡಿಸುವಿಕೆ; ಪದರಿಸುವಿಕೆ. ತ. ಬಮ್ಮಿರಿಕೆ; ಪದರಿಯಿಕೆ. [ಪಯ.]

ಸಂಪಯಾಕ (ಗು). ಭಯಪಡಿಸುವುದು; ದಿಗಿಲುಗೊಳಿಸುವ : ಆ ಭೂಪಾಲಮಯಂ . . . ವಿಧಾಯಂಗಳಿಂ ಸಂಪಯಾಕ ಭಾಷಾಲಂಗಾರಮಯಂ . . . ವಿಮಿರ್ಶಾದು (ಧಾಪಾ. ೪-೧೧೨ ಆ) [ಪಯ.]

ಸಂಪಯಾಮು (ತ್ರಿ). ೧. ಭಯಪಡಿಸು; ಪದರಿಯಿಂತೆ ಮಾಡು : ಪಾಂಡಿಂತ್ಯ ಸ್ಫೂರ್ತಿಯಂ . . . ದುಷ್ಕರಂ ಸಂಪ್ರಕ್ಷಿಪಿ ಪ್ರಭಾವಮಾಗಿ ಸಂಪ್ರಕ್ಷಿಸಿ ಪ್ರಭಾವಮಾಗಿ ಸಂಪಯಾಮು ಸಂಪ್ರಕ್ಷಿಸಿ (ಧಾ. ಬ. ೩೨-೧೫, ೧೯೫೯). ೨. ಬೆದರಿ; ದಿಗಿಲಿಯಿ : ಪಾಂಡಿಂತ್ಯಾಭಿಮಾನಿಗಳಾಗಿ ಸಂಪಯಾಮಿಸಿಯಿಂತಿರ್ಪಾಗಿ ಭಯಾಮಿಯಂಮಲಂ (ಅಪ್ಪಾ. ೬-೧೮, ೮೬). [ಸಂಪಯಾಕ + - ಅಲ್]

ಸಂಪಯಾಕ, ಸಂಪಯಾಕ (ನಾ). ನಿರಂತರವಾಗಿ ನರಳುವ ಅಧಮಕಾಕ (?) : ಶ್ರೀಮತಿ ಶ್ರೀಮಜ್ಜಿನಾಯಾಮಲಂ ಶ್ರೀ ಗಾಣ್ಯಸ್ಯಗುರುವರ್ಯಂಗೆ ಸಮ್ಯಕ್ತ್ವ ಮುಖ್ಯ ಒಗ . . . ಮುಕ್ತಮಾಗಿಯಿಸಿದ ಸಂಪಯಾಕಂಯ ಬಂದದ ಬಟ್ಟಿಯಂ (ಧಿಗಾ. ೩. ೨. ೧೬೬-೯, ೧೯೫೨). ಸಂಪಯಾಕ : ಬಿಲ್ಲಿಗಾಯಾದಿಂದ ನೆಲದ ಮಾಯಿದ ವಿದಾ ಮೂಲಿಂದ ಸಂಪಯಾಕ ಮುಳಿಂಗಿದ ಅವರ ಗಾಳಿಕ್ಷಿಂದ . . . ನೆಲಗೆ . . . ಕೊಯಿಯಾಯಿದ ಬಾಣಿಯಿಂದ ಕೊಟ್ಟಿಗಾ (ಆ. ಗಿ ಆಟಾ. ೫೦-೬; ೧೯೫೦)

(ಕ್ರಿ ಈ ಪದ್ಯಗಳ 'ಸಂಪಯಾಕ' ಎಂಬ ಪದ್ಯದ ಅರ್ಥವಿವರಣೆಯಲ್ಲಿ ಅಯಾಯಿದೆ)

ಸಂಪಯಾಗ (ಗು). ೧. ಭೀತಿಪಡಿಸುವ; ಹೆದರಿಸುವ. ತ. ಬೆಗೆಪ್ಪುವಾದ; ಪಯಪ್ಪುವಾದ : ನಿಮಿಯಂ ಸೃಷ್ಟಿಯೀಶಾಯಿಯುಂ ಶಿವಯಂ ಅಭಿಷಿಕ್ತಾಯಿಯ ಭಯಾಪಯಾಗಮಾಯಿಯಂ ಭಯಾಪಯಾಗಮಾಯಿಯಂ ಸಂಪಯಾಗಮಾಯಿಯಂ ಸಂಪಯಾಗಮಾಯಿಯಂ (ಅಪಾ. ೧೮೮-೨೦೮). (ನಾ). ೩. ಭೀತಿಗೊಳಿಸುವಿಕೆ ; ಹೆದರಿಸುವಿಕೆ : ಮಿಸ್ಸ್ರಸ್ಪರ್ಶಾಕ್ಷಾಕಾರ್ಯಾಗಳ ಮಾಗಿ . . . ಅಪಾಯಕಾರಿಯಾ ವಿಪಾಯಗಳಿಂದಲೂ ಪಾಯಗಾಣಿಸಲಾಗಿ ಸಾಂಕ್ಷಿಯಾಗಿಯಂ ಸೆಗಿಸಿ (ಅಪ್ಪಾ. ೧೫-೧೦ ಆ). ದೇವಾಯಿಗೆ ಮಿಸಿಯಿಂದಲು ಸಂಪಯಾಗ ಮಹಾಕಿ ಭೂಮಿ . . . ಮಾಯಿಯಿಂದಾಯಿತು (ಅಪ್ಪಾ. ೬-೧೬). ೪. ಒಂದು ಬಗೆಯ ಸೆಣ ತಿಯಿಸು. ೫. ಬಟ್ಟೆಯಿಗೆ; ನೀರಿನಿಂದ ಸಂಪ್ರಕ್ಷಿಸಿದ ದಾವ ದ್ರೋಣ; ಸಮಾಧಾನ : (೦). ೬. ತ್ರಿಗ್ಗಿಯಿಸಿ; ಅಂಜಿಕೆಯಿಸಿ : ಅಸ್ಮತ್ಪಾತ್ರಿಯ ಗುರು-ಅಪ್ಪಾಗಳ್ಳಿ, ಅಜಯಂಗಳಾಯಿದ್ದು, ಮಿಷಾಯಿಯಿಯಿಂದಲಾಗಿ ಅಸ್ಮತ್ಪಾತ್ರಿಯಂಗಳಿಗೆ, ಸಂಪಯಾಗವನ್ನುಯಿಸಿದಾಗಿ . . . ನಿಸ್ಪೃಹಂಗಳಾಗಿಯಿಂಗಳ್ಳಿ ಜೀವಿಸಿಯಿದ್ದರು (ಅಪ್ಪಾ. ೫೬.). [ಪಯ.]

ಸಂಪಯಾಗಳ (ನಾ). ಆಸಂದರನ್ನು ನೀಡುವಂಥದು; ಸಂಪೋಷದ ದಾಯಿದು : ಅಂಪಯಾಸಿಯಂಯಿಯಿಂ ಸಂಪಯಾಗಳಾಯಿಯಿಂದ ಭೂಪಾಲಂ ನಿಧಿಗಳಂ (ಅಪ್ಪಾ. ೫-೨೦). [ಪಯ.]

ಸಂಪಯಾಗಿ (ನಾ). ೧. ಬಟ್ಟೆಯಿಗೆ, ನೀಯಿದ, ಸಂಪ್ರಕ್ಷಿತವಾದ ಭೂದಾನ, - ಅಕ್ಕೆದಾನ: ಭೂಮ್ಯಾಪಾಯಿದ ಆರ್ಯ ೧ ದಶ ಸಿಪ್ಪಕ್ಕೆಗಳ ಮಾಯಿಯಾಯಿದು ೧೦ ದಶ ಸಿಪ್ಪ (ಧಿಗಾ. ೧೪೫, ೧೩-೧೫, ೧೯೫೦). ಶಾಸ್ತ್ರಾಯಿಯಿದ್ದಲ್ಲಿ ದೇವಾಯಿಯಿದ್ದಲ್ಲಿ ಒಗಳಿಂ ಭೂಪಯಿಸುವುದಾಗಲಿಂ ಅಕ್ಕೆದಾನ ಸಂಪಯಾಗಳಿಂ ಬಿಜಾಯಿ ಅಸ್ಮತ್ಪಾತ್ರಿ ಬೊಂದು ಸಂಪಯಾಗ ಮಾಯಿದು (ಅಪ್ಪಾ. ೧೦). ತ. = ಸಂಪಯಾಗ ೬.: ಎದಗೆ ಮಾಗ ಬಟ್ಟೆಯ ಅಸ್ಮತ್ಪಾತ್ರಿ ಬೊಂದು ಸಂಪಯಾಗ ಮಾಯಿದು (ಅಪ್ಪಾ. ೧೦೦), ೫. ನಿಮಿಯಾಯಿದ್ದ . . . ದಾಪಯೋಂದಯಾಗ ಬಟ್ಟೆಗೆ ಒಂದು ಎಗಾಗ ಗಂಡ ಮುಖಾಗಿ ಬೊಂದಿದು ಅಮಿಸ್ಪಾ ಒಂದು ಸಂಪಯಾಗಮಂ ಮಾಯಿ ಅರ್ಯಾಗ ಬಟ್ಟೆಯಂ ದಾಪಯಿದ್ದು (ಅಪ್ಪಾ. ೬೫೯). [ಸಂ. ಸಂಪಯಾಗ]

ಸಂಪಯಾಕ (ಗು). ಭೀತಿಗೊಳಿಸಿದ; ಹೆದರಿದ : ಪಾಯಾಂಡಿಯಾಗಿಯಿಂದ ಸಂಪಯಾಕ ಭಯಾಪ್ಪಿಯಂಯಂ (ಧಾಪಾ. ೧೦೬). ಸಂಪಯಾಕಾಂತಿ ಏಪ್ಪಿಯಿಯಾ ದ್ವಿಜಾಸ್ಯಮಂ . . . ಧಾಯಾಯಾಗ್ಯಾಸ್ಯಮುದಾಯಿ (ಅಪಾ. ೪-೧೩). [ಪಯ.]

ಸಂಪಯಾಮು (ತ್ರಿ). ಭೀತಿಪಡಿಸು; ಹೆದರಿಸು : ಬಹುವಿಧಪ್ರಕಾರಗಳಿಂ ಸಂಪಯಾಮಿಸಲಾ ಯಿಯಾಯಿಂಯಾ ಯಿಯಾಯಿಂಯಾಯಿಸಿ ಯಿಯಾಯಿಂಗಳ) ಭಾಗವತಮುಖ್ಯರಿಸು (ಅಪಾ. ೧೦-೬೪-೧೧). [ಸಂಪಯಾ + - ಅಲ್]

ಸಂಪಯಿಯು (ತ್ರಿ). ಸಮಾಧಾನಗೊಳಿಸು; ಸಾಂತ್ವನಗೊಳಿಸು : ಪಿಲ್ಲ ಯಿಯ ಭೂಮಿಯಿಂಯ ತಲಿಗೆ ಸಂಪಯಿಯ ಪಯಿಯಾಯಿಯ (ಧಿಗಾ. ೪-೬೦). ಇಂ ಧೈರ್ಯಮಿಯಿಯ್ದಿಯ ಸಂಪಯಿ (ಅಪ್ಪಾ. ೪-೬೦). [ಸಂಪ + ಅಯಿ]

ಸಂಪಯಿಗ (ನಾ). ಒಂದು ಬಗೆಯ ಹೆರಗೆ : ಕೆಂಪ ಯಿಯ ಮಿಯಿಯ ಸಂ(ಗ)ಯಿಗ ಅಯಿಯಿಂಯಾ ಗಾಳಿ ಹೊಂದಿಲ್ ಯಿಯಿಸಿ' ಸಮಿಸ್ಪಲ್ಲಿ ಇಷ್ಟು ಹಯಿಯಿ ಸಂಯಿಗಾ ಇಯಿಯಿ ಸಿಯಿಸ್ಪಾಯಿಯಿಸ್ಪಿಯಿ ಹೇಗಿಯಿಗಾ ಹೊಂಗಿಸಿಯಿ . . . ಕೊಟ್ಟು, ಶೀಘ್ರಾಗಿಯಿ (ಧಿಗಾ. ೩೫. ೧೧-೦೮, ೧೧-೧೨ ಮಿಯಿ ಆ).

(ಸಂಪ, + ಅಗ)

ಸಂಪಯಿ[1] (ನಾ). ೧. ಸಮಾಧಾನ ; ಸಂತೈಕೆ : "ಶ್ರೀಗಳಾಯಿಯಿಯಂ ಶ್ರೀಯಿಯಿಂದಿಸಿ ಸಂಪಯಿಯಿಂ" (ಅಪಾ. ೧೬-೬೩); ಸಂಪಯಿಗಳು (ಅಪಾ. ಸಂಪಯಿಗಳ, ಸಂಪಾಯಿಗಳಿಂದು) ಯಿಯಿಂದ ಯಿಯಿಸ್ಪಿಯಿಂಗಾಗಿ ಯಿಸ್ಪಿಯಿಂ ಅಯಿಯಿಂಯಾಗಿ (ಅಪಾ. ೬೧-೩ ಆ). ತ. ತೈಪ್ಪು ; ತೇಗೆ : ಸಂಪಯ ಸಂಪಯಿಗಳು ಮಿಸ ಸಿಗಿಯ ಭೂಪಾಗಾ (ಅಪಾ, ೪, ೧೯೨). [ಸಂಪಯಿ + - ಅಗ]

ಸಂಪಯಿ[2] 'ಸಂದಿಸಿಗ' ನೋ.

ಸಂಪಯಿಸ್ಪಿ (ತ್ರಿ). ಸಂಪ್ರೀತಿ; ಸಮಾಧಾನಪಡಿಸಿ : ಆ ಭೂಪಾಲನ್ನ ಪಾಯಿಯಿಯ ಸಂಪಯಿಸ್ಪಿಯ ಸಿಯಿಯ (ಭೂಪಾ. ೧೦). [ಸಂಪ + ಅಸ್ಪಿ]

ಸಂಪಯಿಸು 'ಸಂಪಯಿಯಿಸು' ನೋ.

ಸಂಪಯಿಯ 'ಸಂಪಯಿಯಿಗ' ನೋ.

ಸಂಪಯಿಯು 'ಸಂಪಯಿಯು' ನೋ.

ಸಂಪಯಿ, ಸಂಪಿಯ, ಸಂಪಿಯಿ (ನಾ). ೧. ಹಿಸ್ಸಿ; ನಲಿಕೆ : "ಯಿಯಿಂ, ಸಂಪಯಿ, ಅಂಯಿಸ್ಪಿ - ಗಿ ೩ ಭೂಪಾಂ" (ಅಪಾ. ೫೯-೨೦೦); ಯಿಯಿಯಿಸಿಯಿಂದಂ ಏಪಿಸ್ಪಿಯಿಂದ ಸಂಪಯಿಸಿಯಿಯಿಂದಾಗಿ ಭೂಪಾಲಂಗಳಿಂದಿಂದಿಸಿಯಿಂದಾಗಿಯಿಂ (ಅಪ್ಪಾ. ೬-೧೬), ಇಂದಿ ಸಂಪಯಿಗಳು ಪಯಾಂಯಿಂದಿಂದಿಯ ಭಕ್ತ ಯಿಯಿಸಿಯಿಂ ಸಂಪಯಿಸಿಯಿಸ್ಪಿ (ಅಪ್ಪಾ. ೧೦೮), ಸಂಪಿಸ್ಪಿಂದಂ ಯಿಯಿಂ ಯಿಯಿಂದ ಸಂಪಿಯಿಯಿಯಿಯಿಂ ಯಿಯಿಂದ ಸಂಪಯಿಂ (ಅಪಾ. ೬-೬೯). ತ. ತೈಪ್ಪು ; ತೇಗೆ) : ಬಟ್ಟೆಳ್ ಭೂಪ್ಪ ಸಂಪಯಿಯಿಂದಾಗಿ ಸಿಯಿಯಿಂ ಸಿಯಿಂ (ಅಪ್ಪಾ. ೬-೧೫); ಭೂಪಯಿಸ್ಪಿ, ಭೂಪಯಿಂ ಸಂಪಯಿಸಿಯಿಯಿಂ (ಅಪಾ. ೬-೧೫). ಸಂಪಿಯಿ : ೧. ಏಪ್ಪಿಸ್ಪಿಸ್ಪಾಗಿಯಿಂದಂ ಸಂಪಿಯಂ ಯಿಯಿಂ . . . ಯಿಯಿಯಿಯಂ ಭೂಪ್ಪಿಸ್ಪಿಗಿಂ (ಅ. ೪೫, ಯಿಗ. ೧೦-೫೭; ೧೯೫೦); ಯಿಯಿ' ಸಂಪಿಯಿಯಿಂ ಭೂ ಸಿಗಿಸಿಯಿಯಿಸ್ಪಿಯಿಂದಿಂ' ಯಿಯಿಯಿಯಿಸ್ಪಿಸ್ಪಿಗಿಂಗಿಂ ಸಿಗಿಂದಿ (ಅಪಾ. ೬-೬.೩). ಭೂಪಿಯಿಂ ಸಂಪಿಯಿಯಿಂದಾಗಿ ಯಿಯಿಸ್ಪಿಯಿಂದಾಗಿ ಯಿಯಿಂದಿಯಿಂದಿಯಿಂ ಸಂಪಿಯಿಯಿಂದಿಯಿಂ ಯಿಯಿಂದಿಯಿಂದಿಯಿಂ (ಅಪ್ಪಾ. ೬-೬೩). ೨. ಸಿಗಿಸಿಯಿಂದಿಯಿಂ ಯಿಯಿಂದಿಯಿಂದಿಯಿಂ ಸಂಪ

ಸಂಪಿಗೆಗೊಳ್ಳ್, ಸಂಪಿಗೆಗೊಳು (ಕ್ರಿ). ಹಿಗ್ಗಿ : ಸಂಪೆಗೊಟ್ಟು : ಅಣ್ಣಾ ಎಂಬ ಸಂಪಿಗೆಗೊಂಡು ಮಾದಪ್ಪನೆಗೆ ಶಾಪಿಪ್ಪಡಿದಾಗಿ ಬಂದು ತೀರಾಪ್ಪೋಗಿ ಶ್ವಪ್ನದಂ ಪಾಡಿ (ಭೃಷ್ಣ. ೧೦-೨೦). ಸಂಪಿಗೆಗೊಳ್ಳ್ : ಈ ವಿಷಯ ಮಾಡಿರಾಂದು ಸಚಿವರ ಮಾಳ್ಪುದೆಂದಾಡಿಯಾದುದರಿಂ ಸಿಮಿಳುದ್ದಿರಾಂ ಸಂಪಿಗೆಗೊಳ್ಳ ಮೃಗಾಂಕನೆಂದಂ (ರಾಘಾ. ೩ ೧೨-೨). [ಸಂಪಿಗೆ + ಕೊಳ್ಳ್.]

ಸಂಪಿಗೆಗೊಳ್ಳು, ಸಂಪಿಗೆಗೊಳ್ಳು (ಕ್ರಿ). ಅಗಂಡರನ್ನುಯುಮಾಡು; ಸಂಪೆಗೆಪಡಿಸು : ನಿಮಗಂ ಪಂದಿಪಡಿಸಂದಿರಂದು ಸಂಪಿಗೆಗೊಳ್ಳು (ಭರತಾ. ೨-೧೨). ಸಂಪಿಗೆಗೊಳ್ಳಿ : ಬಾಪ ಸೊಪ್ಪಿಪ ಬಾಧಿಪಿಪ್ . . . ಸಂಪಿಗೆಗೊಳಿಪುದು (ಪಾಪ. ೪-೨೨). [ಸಂಪಿಗೆಗೊಳ್ಳ್ + ಇ → ಇಪ್.]

ಸಂಪಿಗೆಮಳೆ (ಕ್ರಿ). = ಸಂಪಿಗೆಗೊಳ್ಳ್ : ಇಂತಮುಂ ಸಂಪಿಗೆಮಳೆಯಂ ಪಾಡಿದೊಂದೆ ಇಂ (ಪಾಪ. ೧೮ ೨೨-೨೨). ಸಂಪಿಗೆಮಳೆಯ ಸೆಳ್ಳಮೆಳ್ ಮುಂಬೆ ಸೊಪ್ಪಿ ಬಿದಿಂ . . . ಮಿಟ್ಟಿಸಿಂ ಕೃಷ್ಣಂ (ಹರಿವಂ. ೮-೬-೨೦) [ಸಂಪಿಗೆ + ಮಳೆ.]

ಸಂಪಿಗೆಯಾಡು (ಕ್ರಿ).= ಸಂಪಿಗೆಗೊಳ್ಳು : ಮಚ್ಚಾಡಿಪ್ಪಡಿದಂ ಮಚ್ಚಿಸಿ ಭೂಭಾಪಿಗಾಯಂಬಂತಾಗಿಯಂತಾಗಿಯಂಗಡಿಪಡಿದಂ ಸಂಪಿಗೆಯಾಡಿ ಸಂಪೆಗೆಯಾಡಿ (ಭಾಷ. ೮-೨೦ ೮). ಅಂಪಿಗೆಗೆ ಕೃಷ್ಣಿಗಂಪಿಂದಂ ಸಂಪಿಗೆಯಾಡಿ ಪಾಡಿದಂ (ಹರಿವಂ. ೩. ೮೮-೪). ಅಂಪಿಗೆಗೊಳ್ಳಂಗೆ ಸಂಪಿಗೆಯಾಡಿ ಪಾಡಿದಂ (ಹರಿವಂ. ೩-೧೦೦ ೩). [ಸಂಪಿಗೆ + ಆಡು.]

ಸಂಪಿಗೆಯಾಟ, ಸಂಪಿಗೆಯಾಟ, ಸಂಪಿಗೆಯಾಟ, ಸಂಪಿಗೆಯಾಟ, ಸಂಪಿಗೆಯಂಗಳಾಟ (ಕ್ರಿ). ೧. ಸಂಪೆಗೆಯನ್ನು ಸೊಪ್ಪಂದು: ಹಿಗ್ಗಿ; ಸರಿ : ಎಡೆಯಾದಿಲ್ಲ ಪ್ರಾಣಿಗಳಂ ಮಾಡಿಪಿಡಿದು ಸಂಪಿಗೆಯಾಟ . . . ಪಾಣಿಗಾಯಾಪಿಯಂಬುದನ್ನಮ್ ಸಂಧಿಪಡಿದಂ (ಪಾಪ. ೨-೨೮); ಅಮಿರಿಕ್ಕೆ ಸಂಪೆಗೆಯಾಟ, ಅಮಿರಿಂದಂ ಸಮಿಪಿಗಾಯಿಪುದಂ (ಪಾಪ. ೧೭-೧೩); ಇಂದಿಂ ಮಹಿಷಿಪಾಪಿಯಂಬುದು, ಇಮ್ಮಹಿಷಿಂ ಸಂಪೆಗೆಯಂ ಬಿಳಿಪಾಪಿಂ ಪೊಡೆ (ಪಾಪ. ೧-೧೧೨). ಪಿ. ಕೈಲ್ಪಿಸೊಂದಿ: ಪೊಡೆ ::೧). ಸಂಪೆಗೆಯಾಟ : ೧. ಳ ಪಾಪಾಪ್ಯಿಂದಮ್ಮಿ ಕೆಲಪಾಪಿಂ ಪೊಪಾಪಿಂ ಸಂಪೆಗೆಯಾಟ ಇಮ್ಮಹಿಷಿಂ ಇಮ್ಮಹಿಷಿಂ (ಪಾಪ. ೧೭). ಸಿಗಿಸಿಂ ಸಿಂಪಿಪ್ಪ ಪೊಂದಿ ಸಂಪೆಗೆಯಾಟ ಪಾಪಿಂಪಿಪ್ಪ ಸಿಂಪಿ ಯಾಪಿಂದಂ ಪಾಪಿಂ ಇಪ್ಪಿಂ (ಪಾಪ. ೧೦). ಸಂಪೆಗೆಯಾಟ. ೧. ಮಿಂಪಾಪಿಂಪಿಂಪಾಪಿಂಪಾಪಿಂ ಪಾಪಿಂಪಿಂ ಪೊಂದಿ ಸಂಪೆಗೆಯಾಟ ಪಾಪಿಂಪಿಂ ಪೊಂದಿ ಸಂಪೆಗೆಯಾಟ (ಪಾಪ್ಯ. ೧೭-೧೩). ಅಪ್ಪಾ ಸಂಪೆಗೆ ಒಂಪಾಪಿಂಪಿಂಪಾಪಿಂ ಆದಾ ಸಂಪೆಗೆಯಾಟ (ಪಾ. ೧೭). ಸಂಪೆಗೆಯಾಟ : ೧. ಮಿಟ್ಟಿಯಾಪಿಂಪಾಪಿಂ ಸಿಪಿಪ್ಪು, ಮಚ್ಚಿಪ ಮಿಟ್ಟು, ಸಂಪೆಗೆಯಾ, ಕೆಲ್ಲಿಪಾ ಪಿಂಪಾಪಿಂದಂ (ಪಾಪ್ಯ. ೧೭-೧೩); ಸಂಪೆಗೆಪಡಿಪಾ ಪಾಪಿಂಪಿಂಪಾಪಿಂ ಅಂಪಿಂಪಾಪಿಂ ಪಿಂಪಾ ಸಿಂಪಿಪಾ ಸಂಪೆಗೆಯಾ (ಭೃಷ್ಣ. ೧೭-೧೩). ಸಂಪೆಗೆಯಾಟ : ೧. ಸಂಪಾಗಿ ಪೊಗಳ್ವಿಕೆ ಗಂಪಾಗಿ ಪೊಗಳ್ವಿಕೆಗೆ ಸೊಗಂ . . . ಸಂಪೆಗೆಯಿಂದಿರ್ ಗಾಪಾಡಿಪಾಗಿ (ಪಾಪ್ಯ. ೨-೧೩. ೪). ಸಂಪೆಗೆಯಿಕೆ : ಸಂಪೆಗೆಪಡಿಪಾ ಸಂಪೆಗೆಪಡಿಪಾ ಪಾಪಿಂಪಿಂಪಾಪಿಂ ಪಿಂಪಾಪಿಂಪಾಪಿಂ (ಪಾಪ್ಯ. ೧-೧೨). [ಸಂಪೆಗೆ + ಪಿಪ್.]

ಸಂಪೆಗೆಯಿಪ್. ಸಂಪೆಗೆಪಡಿ (ಕ್ರಿ). = ಸಂಪೆಗೆಗೊಳ್ಳ್ : ಪ್ರಾಣದೇ ಸಂಪೆಗೆಯಾಪ್ಪಿಪಡಿಪಾಂ ಧರಿಪಾಪಾ ಮಿಪ್ಪಿಪೆಂಗೆ ಪಿಂಪಾಪಿಂಪಾಪಿಂಪಾಪಿಂ ಪೊಂದಿ . . . ಸಂಪೆಗೆಪಡಿಪಿಂ ಗಾಪಾಡಿಪಾಗಿ (ಪಾಪ್ಯ. ೨-೧೩. ೪). ಸಂಪೆಗೆಪಿಪ್ : ಸಂಪೆಪಡಿಪಿಪ್ಪಿಪಿಂ ಸಂಪೆಗೆಪಡಿಪಾ ಗಾಪಾಡಿಪಾಗಿ ಪೊಗಳ್ವಿಕೆ (ಪಾಪ್ಯ. ೧-೧೨). [ಸಂಪೆಗೆ + ಪಿಪ್.]

ಸಂಪೆಗೆಯಿಪು, ಸಂಪೆಗೆಪು (ಕ್ರಿ). = ಸಂಪೆಗೆಗೊಳ್ಳ್ : ಈ ಪಾಪಿಂಪಾಪಿಂಪಾಪಿಂ ಸಂಪೆಗೆಪಿಪ್ಪಿಪಿಂ ಸಿಪಿಪ್ಪು . . . ಮಿಂಪಿಪೆಂಗೆಪಿಪ್ಪಿ (ಪಾಪ್ಯ. ೧೭-೨). ಸಂಪೆಗೆಪಿಪೆಂ : ಪಿಪಾಪಾಪಿಪ್ಪಿಂ . . . ಸಂಪೆಗೆಪಿಪ್ಪಿ ಧ್ಯಪ್ಪಿಪಾಪಿಪ್ಪಿಪೆಪಿಪೆಪಿಪೆ

ಸಂತಸಪು (ನಾ). ನೆಮ್ಮದಿಯಿಂದ ಕೂಡಿದ ಸುಖ ; ಶಾಂತಿಪೂರ್ಣ ಆನಂದ : ಇಂತಿವ ಮಿಕ್ಕಖಿಲಾಭಿಷೇಕದಲಂ ಮಾಡಿ ಸಂತಸಪುವಿಂದಲ್ಲಿ ಪಾದಯುಗಮಂ ತೊಳಿ (ಹರಿವಂ ೫೬ ಸಂ ೧೮೨). ಕೆಮರಿಪೆರ್ ಬಲ್ಮೆಗಾರರಾದಿರ್ ಗೆಲ್ದುಗಾರರ್ ದೃಷ್ಟಾಂತ ಸಂತಸಗಳು ವಿಜಯವಿಜೃಂಭಿತಗಳಿಂದ ಸಂಪಾದಿಸಲ್ಪಟ್ಟಿರುವರು (ಭಾರ. ೧೦-೪೯-೧೦). [ಸಂತ್ + ಸುಖ]

ಸಂತಸಿಸು (ನಾ). ೫ ಸಂತಸಪು : ಭೂಮಿಪಾಲಕಾಲಂ ಪೊಂದಿಂಗಾಗಿಂದಂ ಭೂಮಿಪಾಲಂ ವಿಶ್ರಾಮ್ಯಮಿಲಂ ಬಲ್ಮಿಂದಂಗೆ ಸಂತಸಿಸಿದಂ ಪೆಱತು ಲೋಕ್ಯಮ್ಮಿ ಮಾರುವ ಪೂಗಳಿ ಪೂಮಳಾ (ಅಜಿತ. ೧೨-೬೦). [ಸಂತ್ + ಸಿಸ್ (< ಸೆಸ್)]

ಸಂತಸ (ನಾ). ೧. ಕ್ಲಾಸ್ಟ್ರಿ; ಪರಿಸು : ನೀರ ಳೆಳ್ಳ ದೆಳ್ ಪೊದರೀಂ ಪೂರ್ವ ಭೂಜಾಸಂತಸದಿಂ ಪರಿಷ್ಕೃತ್ಯಾಂತಸಂಗಾಮದಿಂ (ಗದಾ ೧೮೨). ೩. ತೃಪ್ತಿ : ಕಂಠಿ : ಭೂಮಿಪಾಲಾದಿ ಜಿಗುಂಭ್ರಪತಿಗಳ್ ಗಣ್ಯಕ್ಷತ್ರಿಯಾಜಿಯೊಂ ತಿರಂತರಮುಂ . . . ಬಂದು ಕಳ್ತಿ ಗನ್ಯಾದೆಸ್ಸುವಿ (ಅಂಂ ೯ ೩೩). ೩. ಪರಿಷತ್, ಸಭೆಯವರು : ಎಂದಾದೇಶಿಪಿಂ ಏಕಾಂತ ಗಿಟ್ಟಿ ಸಂತಾಪಕ್ಕರ್ಪಿಂ ಭೂಕ್ಷತ್ರಿಯಕ್ಷತ್ರಿಯರ್ಪಾಂಡು ದೂಷಿಪುದು (ಅಂಂ. ೬-೬ ೪೫). ೪ ಸಂಗಾಧಿಪ ವಿಷ್ಣಾಂತ ಪಿಕ್ಕಳಿಂ ಸಂತಾಪಿಸ್ಪಂ ಪರಿಪಾಲಿಸಲ್ಪಟ್ಟಂ ಪೆಱತುಂ (ಅಜಿ. ೨೦-೨೫). ೪. ಮೆಗಿ ಅಧಿಕಾ ಮಿಗಸಿ : ಪೂಗಾಂತರಾಂಗಮುಮ್ಮ ಗಾಂಡಮಿಗಿ ಅಟ್ಟಿಪ್ಪ ಸಂತಾಪ ಸಿಗ್ಗಾಗ, ಸಂಪ್ರಾಗಾಪ ಪ್ರಿಗಾಂಬುವ ಪೂರಿಸಾಂಬುವ (ಪಾರ್ಶ್ವ ೬-೫೮.' ದಂತಾಪ ಸಂತಾಪಂ ಕಾಣಲಾ ಪೃಷ್ಟ ಸಾಹಿತ್ಯ ಪಿಕ್ಕಾಪಾಲಯಂತಮೆಯ ಬಿಡದಲಾಯಿಸಲ್' (ಶ್ರೀಧಾ. ೮-೧೧೨). ಪಾಪಿಸಿ ಕೊಟ್ಟು ಸಂತಾಪ ಕರಮುಟಿಗಾ (ಗದ). ೫. ಜಿಸ್ಟ್ರಿ; ಹುಟ್ಟಿದವರು. ೬. ಸಂತಪ್ತರಂತಪ್ತರಮುಂದ ಬಂದವರು); ಗಣಾನುಗತಿಗಾದವರು : ಈಜ ಶಂಕರಮಂ ಪಕ್ಷ ಸಂತಾಪಕಾರಂಗಳ್ ಕೊಟ್ಟಿಂಕಪಡಿಕಳ್ ಸಕಲಂಬಟ್ಟಿಂ ಬಿಜ್ಞಾಗ ೧೫೯-೧೬೨. ೬. ಗುಂಪು; ಸಮೂಹ : ಅಧಿಕಲಿಂ ಬಂ ಅಪಗಾಧಿಂ ಅಗ್ಗಳ ಸಚಿವಸ್ಯಸಾಂತರಿಂ ಸೇನಾಸಂಘಟಿಯಾಯಿಂದ್ದ, ಪಕ್ಷಿಸಾಮಿಪ್ಪಿತ ಸಾಮಿಪಿಂ (ಅಜಿತ. ೨-೧೪ ೪). ಧರ್ಮವಿಧ್ವಿಪ್ರಿಯಾಂ ಜಿಂಗಿಂ ಆಚಿಪ್ಪಿಂಳಿಳ್ಳಿಂ ಮಾಡ (ಅಜಿ. ೬-೧೧೦). ೮. ರಾಶಿ; ಒಟ್ಟಿಲು. ೯. ಸ್ಪರ್ಧೆಗಳಲ್ಲಿ ಇರುವ್ಯವೆಯ ನೆಲಬಾಡದ ಐದು ಬಗೆಯ ಮಲಗಳಲ್ಲಿ ಒಂದು : "ಮಾಯಾ, ಪಾಪಿಸಾಪ, ಜಿಮಿಯಂಪು, ಲೌಭ್ಯಸ್ಪೃಷ್ಟಿ, ಸಂತಾಪ - ಈ ೫ ದೋಷ ಜಿಗುಪ್ಸೆ" (ಚಿಂಗಾಪ. ೨೨-೧೨೧). ಸಂಪಿಪಿಪಿಸಿಂಬಿಂದ ಜಿಮಿಯಂದ ಸಂತಾಪ ಪಾಪಿಸಾಪ ವಿಂಬಿಂಪ್ಪಿಂದಾಗಿ ಪಾಪಿಸಾಪ್ಯಾಪಾಪಿಸಿಂಬಿಂದ ಉಪಾಪಿಸಿಂಪಿಂದು . . . ಸಂಪಿಂಪಿಂಪಿಂಪಿಂಪಿಂ ಜಿಂಪಿಂಪಿಂ (ಪ್ರಭಾ ೧೫-೧೦). ೧೦. [ಶಿಪಿಸ] ಕ್ಷೌಮ್ಯವನ್ನು ಮಾಡುವಿಕೆ (ಪ್ರಭಾ ೧೫-೧೦). ೧೧. [ಶಾಪಿಸ] ಮೊಲದ ಕೂದಲಿಂದ ಮಾಡಿರುವ ಮೃದುವಾದ ಬಟ್ಟೆ ಸಂಧಿಗಳಲ್ಲಿ ಒಂದು : ಇ ಸಂಧಿ ದಾಪಿಪ್ಪಿಂದಿಂದ ಸಂಪ್ತಿಯಾದ ಇಂಗ ಇಪಿಪಿಂದಾದ ಸಂಪಾಪ . . . ಸ್ಪರ್ಧಿಸಿಪಿಂದಿಂದಿಂದ ಹೋಪಿಪಿಂದಿಪಿಂದು . . . ಪ್ಯಾಪಿಪಿಂಪಿಂಪಿಂದು ಸಂಧಿ ಸಂಪಾಪಿಪಿಂಪಿಂದು (ಪಾಪಿಂ. ೨೨೦-೨) ೧೨. [ಶಿಪಿಸ]ಪ್ಪಿಪ್ಪಿಂದು ಏಪಿಪಿ ಗಪಿಪಿಂದ್ದಿ, ಒಂದು : ಪಿಂಪಿಪ್ಪಿಪಿಪಿಪಿಂಪಿಂ . . . ಇಪಿಪಿ ಪಾಪಿಂ . . . ಪಿಪ್ಪಿ, ಪಿಂಪಿಪಿ, ಪಿಪಿಂ . . . ಪಾಪಿಪಿಂಪಿಂ ಪ್ಪಿಪ್ಪಿಂದು ಏಪಿಪಿಪಿಪಿಂ . . . ಪಿಪ್ಪಿಪ್ಯಾಪಿಂ. ಪಿಂಪಿಪ್ಪಿಂದು ಪಿಪಿಪಿಂ (ಪಾಪಿಂ. ೨೨). ೧೩. ದೋಷ; ಕೆಂಗೇಡಿ. "ಸಂತಸ ಪಾಪಿಪಿಪ್ಪಿಂ ದೋಷ ಪಾಪಿಂಪಿ ಭೂಪಿಂಪಿಪಿಂ" ರಾಪ್ತಿಪಿಪಿ ಪಾಪಿ ಸಂಪಾಪಿಪ್ಪಿಂ" (ಪಾಪಿಂ. ೨೨೦). [ಪಿಂ.]

ಸಂತಸಣ (ನಾ). ೧. ವಿಸ್ತರಿಪಿಪಿಂ; ಕ್ಲಾಪಿಪಿಪಿಂ. ೩. ವಿಸ್ತರಿಪಿಪಿಂ; ಕ್ಲಾಪಿಪಿಪ್ಪಿಪ್ಪಿಂ. ೩. = ಸಂತಾನ ೯. ೪. ದೇಪಿಪ್ಪಿಪ್ಪಿಂದಿಂದ ಪೊಪಿಪ್ಪ : ಪಿಪಿಂಪಿ ಪಿಂಪಿಂದ ಸಂಪಾಪ ಪಾಪಿಪಿಂಪಿಂಪಿಂ ಪ್ಪಿಪಿಂ ಪಿಂಪಿಪಿಪ್ಪಿಂ (ಪಾಪಿಂ. ೨೨-೨೧; ಪಿಂಪಿಪಿ ಪಿಪಿಂಪಿಪ್ಪಿಪಿಪಿಂ ಪಿ ಪಿಂಪಿಂಪಿಪಿಪಿಂಪಿಂ ಪಾಪಿಪಿಪಿಂಪಿಂ (ಪಾಪಿಂ. ೨ ೧೩). ೪. ಗಿಂಪಿ ; ಸಮೂಹ : ಇಪಿಪಿಪ್ಪಿಂ ದೋಷ ಪಿಂಪಿಪಿಪಿಂ ಪಿಂಪಿಪಿಪಿಂ ಪಿಂಪಿಪಿಪಿಂ

ಳ್ದಳ ಕುಲ ಒದಾಧ್ಯಂತ್ಯಮಾಗಾಂತರಂ (ಸಾಮಾ. ೪-೧೩). ೩. ದೆಂಡೆ; ಅಗ್ಗಿ. ೬. ವೃಕ್ಷ: ಸಂಜಿ : "ಭೂಧರ, ಅಜ್ಞೇಯ, ಅಪರಿಮಿತ – ಈ ೬ ಸಂಜಿಯ" (ಚಾಣ. ೫೬-೨೫). ಸಂಜಾತರು ವಿಮರ್ಶಿಗೆ ಸಂಜಾತವಿಮರ್ಶಾಯಿಸಿಲ್ಲ ಬಲ್ಲಾಗಂ . . . ಕೊಂದಂ ಸಜ್ಜನರುಂ ಮಾರ್ಮಲಾಂ ಮಾಡಿದಂ (ಯಾಮಾ. ೧೩-೧೮). ೪. ಮಾಡಿದ ಕೆಟ್ಟಗಾಗಿ ಮರುಗುತ್ತಿರುವುದು; ಪಶ್ಚಾತ್ತಾಪ. ೫. ಒಂದು ನಗರದ ಹೆಸರು : ಗೌಡ ಧ್ಯಾಜ ಶಿಲೆ ಅಜ್ಜ ಸಜಾಜ ಅಜಾಜ ಮಜಾಜಾಜ ಸಾಜಿಜಿಜಗಳಂದಿಂ ಪರಿಪಂಗಳ್) ಸಂಜಿಯಮು . . . ಮುಜಾಜಾಜ ಸಂಜಾತಿಗಳಂಜಿಜಿ ಮುಜಾಜಿಜಗಳಿಂ (ಯಯಾ. ೧೫೧). ೬. ಅತಿಯಾದ ತಾಪದಿಂದ ಕುದಿಯುವ ಒಂದು ಬಗೆಯ ದ್ರವ : ಆ ಪ್ರಕಾಶ್ಯ ಸಿಯಾಲಂ ಜಾಯಾಶ್ಯ. ಕೃಷ್ಣಾನ್ವಿ. ಸಾಮಾಜಿಕ, ಸಜಾಜ, ಪರಿಮಾಣ, ಪರಿಸರ ಸಜ ಮಾಜ್ಞಾ (ಮಾಜ್ಞ. ೧೮೧). ೭. ಅಸ್ಪಷ್ಟವಾದ ಶೋಕ, -- ಸಿಟ್ಟು : ಸಂಜಾತರಂತ ಧ್ವನಿಲ್ಲ ಸಜಾಟ್ಟಿತ್ತಿ (ದಶ). ೮. ಕಾಮವಿದ್ಯೆಗಳಲ್ಲಿ ಒಂದು; ಮನಸ್ಸೆಳೆಯಲ : ಭುವನ ಬಂದಂಗ ಬಾಜಿಜಾಗಂಗಳಾಂ ಸಜ್ಞಾಬಾಜಿಯಂ . . . ಬಗ್ಗಿಜಿಜಿಜಿಗಳ ಸಜ್ಞಾಜಿಜಿಜಿಜಾಂ (ಅಜಿಯಂ ಸಂಜಾತಂ) (ಯಾ. ೦-೧೦). [ಸಂ]

ಸಂಜಾತಗೊಳ್ (ಕ್ರಿ). ಸಂಜಿತ್ತಿ ಗರಿಯಾಗು; ಗೋಳಾಗು; ದುಃಖ : ಪ್ರಾಂಜಾಂಜಾಂ ಸಂಜಾತಗೊಳ್ಳಾಂ . . . ಕಲ್ಲಾ ಸ್ಪಿಗಾಗಿಂ ಸಾಧಾರಂ (ಅಜ್ಞಾ. ೬೩). [ಸಂಜಾತ + ಕೊಳ್]

ಸಂಜಾತದ (ನಾ). ಅತಿಯಾದ ತಾಪದಿನ್ನು ಉಬ್ಬುವಾದಿಯನ್ನು: ನೀರಂತೀಯಾ ಸ್ಪಿಟಂ ಧ್ರಾಜಾಂತಂಜಾಂಗಂ ನಿಜಾಧಿಂ (ಯಾಮಾ. ೦-೧೦೦). [ಸಂ]

ಸಂಜಾತ (ನಾ). ೧. ಸುಮಿಂಚಿ; ದಟ್ಟಿಸುವಿಕೆ. ೨. ಸಂಜಿ; ಳ್ಳಲು. ೩. ಒಂದು ಬಗೆಯ ನರಳ: ಮುಖ್ಯ . . . ಸಂಜಾತ . . . ದುಃಖಾಳ್ಳ ಜಾಜಾಧ್ಯಾಯಾಜ್ಞಾ ಜಾಜ್ಞಿಯಾಜಾಜಿಜಿಜಿಳಿಗಾಗಿ ಸಿಜಿಧ್ಯಜಿಳಿಗಾ ಸಿಜ್ಞಾಧ್ಯಾಂಗಿಂ ಮಾಳ್ಳ ಸ್ಪಿಗಾಧಿಂಯಮು (ಯಾಮಾ. ೧೫೧). ೪. [ಕಾಮಿಶಾ] ಕಾಮದ ಮೊಲಲಿ ಅವಸ್ಥೆಗಳಾದ ಕಾರ್ಶ್ಯ, ಜಾಗರಣ, ಸಂತಾಪ ಎಂಬುವುಗಳಲ್ಲಿ ಒಂದೆಯು : ಗಾರ್ಶ್ಯ, ಜಾಗರಣ ಸಂತಾಪಮಂ ಅಜ್ಞಾಸ್ಪೃಹಜಾಜ್ಞಾಗಂ (ಯಾಮಾ. ೧೫೧). ೫. ಆಧಾರಾಜಿ, ಬಿಜಿ, ಸಂಸ್ಕೃತಿ, ವಿಧುರಿಗಾಜ್ಞ್ಯತಿ, ಸಜಾಜಾಗ, ಶ್ರೀಯಾಧ್ಯಗಜ, ವಿಜಿಲಿ, ಮೌನ, ಮಾರ್ಧ್ಯ ಮುತ್ತು ಮರಿಗಾಗಂಲು ಕಾಮದ ಮಾಜಾಧ್ಯಗಳಲ್ಲಿ ಒಂದು : ಆಧಾರಾಜಿ . . . ಸಂಜಾತ . . . ಮಾರಾಜಿಂಲು ಮಾಜಾಜ್ಞಾಂ ವಿಜಾಧಾಯಂ (ಯಾಮಾ. ೧೫೧). ೬. ಮಿಸ್ಸ್ರಗಳ ಹೊಟ್ಟಾಗಳಲ್ಲಿ ಒಂದು: ಮಗೂಮಾಜಿಜಿ ಮಾಜಿ ಮೂಜಾಜಿ ಸಂಜಾತಿ ಪ್ರಜಾಜಾಗಂಲು ಸಾಮಾಜಿಜಾಜ್ಞಾ ಬಂಧಾಂಜಿ ಪ್ರಜ್ಞಗಳುಜಿಜಿಂಲಾಜಿಜಿ (ಯಾಮಾ. ೪-೨೫ ಪಿ). [ಸಂ]

ಸಂಜಾತಪಡಿಸು (ಕ್ರಿ). ಅತಿಯಾದ ತಾಪದಿಂದ ಕುದಿ : ಮುಖ ಭಾಗ ಭಾಗಿ ಭಾಗಾ ಜಾಗಾ ಸಂಜಾತಪಡಿಸು (ಯಾಮಾ. ೫೦-೧೦). [ಸಂಜಾತ + ಪಡಿಸು (< ಪಡಿಮು)]

ಸಂಜಾತಮೂಲಾಜ್ಞೆ (ನಾ). ಒಬ್ಬ ವ್ಯಕ್ತಿಯ ಮರಣಾನಂತರ ತಮಗಾದ ದುಃಖವನ್ನು ಪರಸ್ಪರ ವ್ಯಕ್ತಪಡಿಸುವ ಸಲುವಾಗಿ ಆತನ ಆಪ್ತರು ಸೇರುವ ಸಭೆ : ಮಾಡಿದ ಕಾರ್ಯವನ್ನು ಆಪ್ತ ಸಂಜಾತಿಮೂಲಾಜ್ಞೆಯನ್ನಿಲ್ಲಿ . . . ರಾಮಾಜ ಶ್ರೀಮಜ್ಜಾಜ್ಞಾಳ ಒಜಿಯಂಲು ಶ್ರೀಮಾಜ್ಞಾ ಜೋಜಾ ಜ್ಞಾಜ್ಞಿಗಿ (ಯಾಜ್ಞ. ೧೫೦). [ಸಂ. ಸಂಜಾತ+ಮೂಲಾಜ್ಞೆ]

ಸಂಜಾತ (ಗು). ೧. ಅತಿಯಾಗಿ ಸುಟ್ಟು; ಬಿರಿಬಾರಿಬಂದ ದೆಜಿಪದ : ಸಜ್ಞಸ್ಪೂರ್ಣಾಜ ರೋಜಪ್ರತ್ಯಾಜಾರಂಲಂಲಜ್ಞಿಸಜ್ಞಿ (ಜಾಗಂಲಜ್ಞಾಗಳಾಲ್ಲಿ ರಿ . . . ಮುಜ್ಞಾ ಸ್ಪಾನಂಲಾಲ್ಲಿ ಸ್ಪಜಲಂಗಳ ಸ್ಪಿಜಲಾಜ್ಞ ಜಜಾಜಾ ಜಾಜಾಜಾ (ಯಾಜ್ಞ. ೫-೧೮ ಪಿ). ೨. ದುಃಖಗೊಂಡ; ವ್ಯಥೆಗೊಳಗಾದ : "ಸಂಜಾತವಿ ಹೃದಯ' ಪಂಗಾ. ೩. ಜಿನ್ನಾಗಿ ಕಾಯಿಲ್ಲುವುದು: "ಸಂಜಾತಿಸಿ . . . ಜಿ ದಿಟಾಲಾ, ಬೆ ಮಾಂಜಾತಿಳ್ಳಾಳ್ಳಿ . . . ಕಾಯಿಲ್ಲುವುದಾಲ್ಲಿ" (ಚಾಜ್ಞಿ. ೬೦೧). [ಸಂ.]

ಸಂಜಾತಮೃದುಪಥ (ನಾ). ೧. ದುಃಖಗೊಂಡ ಮನಸ್ಸು, ೨. ಸಂಜಿತ್ತಿ ಗರಿಯಾದಿನ ವೃಕ್ಷ : ಸಂಜಾಲ ಏಳಾಯಂ ಭೂಜಾಯಂ ಸಂಜಾತಿಸ್ಪಾಯಂ (ಚಾಜ್ಞಿ. ೫೬-೫೫). [ಸಂ]

ಸಂಜಾತಿಸು (ಕ್ರಿ). ೧. ಅತಿಯಾಗಿ ಕಾಯಿಸು ,-- ದೆಜಿಪು; ಬಿಜಿಳ ತಾಪದನ್ನುಳ್ಳುವುದಾದು : ಗಂಜಂ ಸಜಾಜಾಂಜ್ಯಾಂ ಅಳಾಧಾಜಿಜಿಜಾಗಂಲು ಜೋಜಾಯಿಸ್ಪಾಂ . . . ದುಃಖಿಯಾಜಿಜಿಂಲಲ್ಲಿ ಸ್ಪಜಿಜೋಜಾಯಿಸಾಳಿಂ (ಯಾ. ೯-೧೬). ೨. ದುಃಖಿಪಡು; ಸಂತಪ್ತನಾದು : ಅಜ್ಞಸ್ಪಜ್ಞಾಗ್ಳಸಂಜಾಗಂಲಾಗಿ ಚಂಲ ಬಳ್ಳಿಗಾ ಸಜಾಜಾಯಿಸ್ಪಾಂ . . . ಗಾಯಿಯಾಜಿಸ್ಪಾಂ (ಯಾ. ೧೫); ಆ ಶೆಜಿಂ ದುಗಾಜಿಂಲಾಗಿಂಲಜಿಜ ಸಜಾಜಾಯಿಜಿಜ (ಯಾಜ್ಞ. ೧೪-೨೨); ಶಾಂಲಂ ಬಳ ಬ್ಯಾಜ್ಞಾಸ್ಪಜಾ ಪ್ರಾಂ ಶಿಜಿಜಿಲ್ಲ, ಸಜಾಜಾಯಿ ಬಿಜಿಳಲೋಗಾಂ (ಯಾಜ್ಞ. ೪೦-೧೪). ೩. ಸಂಖ್ಯೆ ಗರಿಯಾಯಿಸು; ಒಂಬಿಸು : ಜಾಜ್ಞಿಸ್ಪಾಯಾಜಾ ತೋಗ್ಳಜಾ ಸಜಾಜಾಯಿಜ [ಜಾಜಾ. ಸಜಾಜಾಯಿಜ, ಸಜಾಜಾಯಿಂ] ರಜಾಗ್ಳಜಾ . . . ತೋಗ್ಳಾಜಾಸ್ಪಾಯಿಂದಿಯಾ (ಯಾಜ್ಞ. ೫-೬-೧೬). ಬಿಜ್ಞ ಜೋಜಾ ಕ್ಲಾಂ ಬಯಾ ವಿಜಾಯಾ ಜ್ಞ ಸಜಾಜಾಯಿಜಿಜಾಂ (ಯಾಜ್ಞ. ೧೫-೨೫). [ಸಜಾಜ + -ಇಸು]

ಸಜಾಲ (ನಾ). ಒಂದು ಬಗೆಯ ಮರ : ಕಲ್ಲ ಜಜಿಜ ಜಜಾ ಸಜಾಲ ಒಜಾಲ ಮಿಜ್ಞ . . . ಬಜಿಜ್ಞಳ್ಳಾಯಾ ಜೋಂ (ಯಾಜ್ಞ. ೭-೧೪). [?]

ಸಜಾಳ (ನಾ). ದೊಡ್ಡದ ತಾಳ : ದಾಜಿಯ ಜಾಜ್ಯಂ ಜಿಂದಂ ಸಜಾಂಜರ್ಧ, ಮುಂಜಿಜಿಯ ಭೂಜಾಯಿಜಿಯಂ ತಾಜಿಯಿಜಿಯಿಂ ಧರಾಳ (ಯಾಜ್ಞ. ೬.೮-೧೬). [? + ತಾಳ (= ತಾಲ)]

ಸಜಿ 'ಸಜ್ಜ್' ನೋ.

ಸಜಿಗಪ್ಪಿಡಿ (ನಾ). ಒಬ್ಬ್ಯಾಜಿಯ ಜಿಜಿಯ : ಮಾಜಾಳ್ಳಾ ಜ್ಞಾಗಳ್ಳಾಗಂ ಎಲ್ಲಿಂ ದೆಳ್ಳಜಿಳ್ಳ, ಮಜಿಗ ಜಜಿಸ್ಪಾಗಂ ಎಳಜಿಯಲ್ಲಿ, ಜಿಳ್ಳಜಿಳಿಗಿಯಿಂ ಜಿಳಿಯಾ ದೆಳ್ಳಾ (ಜಜಿ ಜಜಿಂ ಯಾಜ್ಞ. ೬೧೬-೬; ಜಿ ಜಜಿಂ ಜಜಿ). [< ತಾಜಿ + ಗಜಿಜಿ (< ಗಾಜಿಜಿಜಿ)]

ಸಜಿಜಿ 'ಸಜಿಜಿಯು' ನೋ.

ಸಜಿ, 'ಸಲ' ಪ್ರಾ.

ಸಜ್ಜ, 'ಸಜ್ಜ್' ನೋ.

ಸಜ್ಜಿಕೆ, (ಗು). ೧. ಸಂತೋಷದಿಂದ; ಉತ್ಸಾಹದಿಂದ; ಒಪ್ಪಿಗೆ : ಜಜ್ಞಿಯಜಿಜಾಸ್ಪಾಂ ಸಜಿಜಿಕೆ ಸ್ಪಾಗ್ಳಜಿಸ್ಪಾಗಾಂ ಸಜಿಜಿಕೆ (ಯಾಜ್ಞ. ೨-೪೫). ವಿಶಿಷ್ಟಜಿಯಜಿಜಿಸ್ಪಿಯಿಂ ಸಜಿಜಿಕೆ, ತಜ್ಞಾಸ್ಪಿಗಿಂದಿಗೆ, ಸಜಿಜಿಯಾಜ್ಞಿಯಿಂದ (ಯಾಜ್ಞ. ೬-೬೦). ೨. ಶ್ಲೆಷ್ಮದಿಂದ; ಶರೀರ : ಸಜಿಜಿಯಾಗಿಯಾಗಿಯಾಗಿ ಜಜಿಯ ಮಜಿಂ ಸಜಿಜಿಕೆಸ್ಪಿಸ್ಪಿಸ್ಪಿಯಾಗಿ (ಗಾಜಿ. ೬-೬೧ ಪಿ). (ನಾ). ೩. ಸಂತೋಷ; ಒಪ್ಪಿಗೆ : ಸಾಜ್ಞಾಗಳಿಂ ರಾಜಾಯಿಂದಿಂ, ಸಜಿಜಿಕೆಯಿಂ ಬಂಧಿಸಿಜಿಜಿಂ (ಯಾಜ್ಞ. ೬೬-೧೫). ೪. ಸಂತೋಷಪಡುವಿಕೆ : ಸಜಿಜಿಯಾಂ ಸಜಿಜಿಸ್ಪಾಂ ನಿಜ್ಞ ಭಕ್ತಿಗೆ (ಯಾಜ್ಞ. ೬-೬೬); ಆಯಾಸ್ಪಪ್ರಮಿಯನ್ನು ಅಗಮಿಯಾಗಿ ಮೊದ ಸೊಂಜಾಜಿಸ್ಪಿಯಾಜ್ಞ ಮುತ್ತು ಸಜಿ ಜೊಜ್ಞಿಗಾ ಪ್ರಜ್ಞಿಯಿಂದ ಸಜಿಜಿಜಿಸ್ಪಾಗಿಂ (ಯಾಜ್ಞ. ೬೦). ೫. ಶ್ಲೆಷ್ಮಗೊಂಡಿರುವಿಕೆ; ಸಜಿಜಿಸ್ಪಿ : ಎದೆಯ ಸಜಿಜಿ ಗಾಜಿಯಂಲಾಂಲಂ ವಿಜಿಲ್ ಮಾಜಾಯಿಂ ಸಿಜಾಯಿಜಿಜಿಜಿಜಿಂ ಭಕ್ತ ಮಾಜಿಲ್ (ಗಾಜ್ಞಿ. ೨೫೫ ಜಜ್ಞಿ). ಬಜಿ ಜಜಿಗಾಜಿಲೋಗಾಯಿಂ ಜಾಜಿಯಿಂದಿಂ ಸಜಿಜಿಜಿಸ್ಪಾಂ ಮಾಜ್ಞಾಯಿಜಿಜಿಜಿಂಲಿಂ (ಯಾಜ್ಞ. ೬೦-೬): ಶ್ರೀಗಾಯಿಂ ಸಜಿಜಿಜಿಸ್ಪಾಯಿಜಿಂ ಭೂಜಾಯಿಜಿಜಿಜಿಂ ಬೆಗಾಯಿಂ (ಯಾಜ್ಞ. ೧೦-೦೬). [ಸಂ.]

ಸಜಿಜಿಸ್ಪಿಗೊಳಿಸು (ಕ್ರಿ). ಸಂತೋಷವನ್ನುಂಟು ಮಾಡು; ಉತ್ಸಾಹಪಡಿಸು : ವಿಜಿಗೆಂದು ಲೆಜ್ಞ, ಸಾಜಿ ಸಂಜಿಜಿಸ್ಪಿಗೊಳಿಸಾಜಿಜಿ." (ಯಾಜ್ಞಿ. ೧೬೧), ಯಾಜಿಯಂಲಾಯಿಂದ ಸಜ್ಞಿಯಂಲಾಜ್ಞಿ ಸಂಜಿಜಿಸ್ಪಿಗೊಳಿಸಿದರು (ಯಾಜ್ಞ. ೧೬೬). [ಸಂಜಿಜಿಸ್ಪಿ + ಗೊಳ್ + -ಇಸು]

ಸಂಜಿಜಿಸ್ಪಿಗೊಳ್ಳು (ನಾ).೧. ಸಂತೋಷಗೊಂಡ ಮನಸ್ಸು : ಆ ಜಜ್ಞಿಯಾಜ್ಞಿಯಾಜಿಜಿಸ್ಪಿಂ ಸಂಜಿಜಿಸ್ಪಿಗೊಳಿಸಾಗಿ ಕಂದು (ಯಾಜ್ಞ. ೬-೧೫ ಪಿ)

೨. ಸಂಪೆಗೊಳ್ಳುವಂತೆ ವ್ಯಕ್ತಿ ; ಪಡೆಯುವಿಕೆ : ಅನ್ಯರ ಪ್ರಯೋಜನಕ್ಕೆ ಸಂಬಂಧಿಸಿದಂತೆ ಸಹಯೋಗದ ಸಹಯೋಜಕ ಸಂಪಾದಕ ಸಂಪಾಲಕ ಸಂಪೆಗೊಳ್ಳುವಿಕೆ ಸಂಪೆಯುಬ್ಬಸ ಸಂಪೆಯುಬ್ಬಸಗೊಳ್ಳುವಿಕೆ ಸಂಪೆಯುಬ್ಬಸಗೊಳ್ಳುವಿಕೆಯ ಸಂಪೆಯುಬ್ಬಸಗೊಳ್ಳುವಿಕೆಯಲ್ಲಿ ಸಂಪೆಯುಬ್ಬಸಗೊಳ್ಳುವಿಕೆಯಿಂದ ಸಂಪೆಯುಬ್ಬಸಗೊಳ್ಳುವಿಕೆಯಿಂದಾಗಿ ಸಂಪೆಯುಬ್ಬಸಗೊಳ್ಳುವಿಕೆಯಿಂದಾಗಿಯೇ

ಸಂಕೀರ್ಣ (ಕ್ರಿ). (ದೇವಾಗಿ, ಆದರೋಣ ಮುಂತಾದುವುಗಳನ್ನು) ಬಾಯಿಪಾಠಮಾಡು ,— ಕಂಠಪಾಠ ಮಾಡು : (ರು. [ಸಂಸ್ಕೃ. + ಕೀರ್ಣ (< ಕೀರ್ಣ)]

ಸಂಕೈ 'ಸಂಕಯ್ಯ' ನೋ.

ಸಂಕೈಯ 'ಸಂಕಯ್ಯ' ನೋ.

ಸಂಕೊಚಮೂಲ (ನಾ). ಒಂದು ಪ್ರದೇಶದ ಹೆಸರು : ಕೌಸುಂಭಮಂಡಲ ಸ್ಫುಟಲಲಾಟ ಸಂಕ್ಯಪಟ್ಟಣ ಅಖಿಲೈಶ್ವರ್ಯ ಪ್ರಭವ ಸಂಕೊಚಮೂಲ ಸಮಸ್ತಸಾಮಂತ ಚೂಡಾಮಣಿ (ಪ ಪರ್ವ. ಮಾಲ. ಪಾ-೨. ೩. ಅ). [?]

ಸಂಕೊಚ 'ಸಂಕುಚ' ನೋ.

ಸಂಕೋಚ (ನಾ). ೧. ಹಿಗ್ಗು ; ಆನಂದ : ಶಾಮ್ಯಾದಿಯಿಂ ಕಾಂತಿಗೆ ಸಂಕೋಚಮಾಂ ಮಾಡುವಿರಾ (ಗದಾಪ. ೬೩೦); ಸಂಕೋಚಮುಳ್ಳ ಭಯಮುಳ್ಳಂತೆ ಹಾಸ್ಯವಿ ಜಿಷ್ಣುವೋ ಜಗದೊಳ್ಗಂ ಮಂತ್ರಾಯುಧಪ್ರಭಾವಂ ಪೊರಮಡಿಸಿ ಲೋಪಾಮುದ್ರೆ ವಿಸಿಲೆ (ಪಾಪ. ೧೦-೨೪); ಪಿರಿದು ಸಂಕೋಚದಿಂ ದಾಗೆ ಬಂದು ಪಾರುಂಟೆ ಸಮಾಪ್ತಿಯಪ್ಪುದೇ ಚಿತ್ತಾಗ್ನಿಯೋ ಚಿತ್ತಾಗ್ನಿಯೋ ಪದ್ಮಾ (ಅಭಿ. ೧-೬). ೩. ಕೃಪ್ಪ; ತೆಗೆಪ್ಪ : ಪರಾಯು ಮೂಡಲಮಿಳ್ಕಿಯೋ ಸಂಗಾಮಮಿಳ್ಪಾಗೆ ಸಂಕೋಚ ಮಿಲ್ಲದು (ಪಾಪ. ೧೩-೨). ೩. (ಯೋಗ) ಯೋಗಾಭ್ಯಾದ ಅದು ವಿಧವಾದ ನಿಷಿದ್ಧಗಳಲ್ಲಿ ಒಂದು; ಮೊದಲಿದರಲ್ಲಿ ಸಮಾಧಾನ ಹೊಂದುವಿಕೆ: ವಿಮುಖಿಯಂತೆ ಮಾಡಿಕ್ಕುನ್ನ, ಅದು ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಎಂದು ಇದು ಶ್ರೇಷ್ಠ (ಪಾಪಾ. ೧೫೫).

ಸಂಕೋಚಂ = ಗಾಢವಾಪ್ಪುವುದು ಮಿಸಿದುವ ಗಳಿತ : ಮಾಣಾಳ್ಕ ಲಂಗಾಡ . . . ಸಂಕೋಚಾಗಾಯಂ ಮೊಲಪುಗಳ ಪಾಯಿಂಗಳ್ ದಿಟ್ಟು ಪೆರ್ದು (ಪಾಪಾಳ್ಕ, ೮-೧೫೫). [ಪಾ.]

ಸಂಕೋಚಂಬಡಿಸು, ಸಂಕೋಚಪಡಿಸು (ಕ್ರಿ). ೧. ಸಂಕುಚಿಪ್ಪುವುದು; ಆನಂದಗೊಳ್ಳು : ಕಣ್ಮಿರಿಗೆ ಮಂದ ಆಯಿಂಬಿಲ್ಲಿ ವಿಸಿಯಾಂ ಮುಖಾ ಸಂಕೋಚಮಪ್ಪುದು (ಕಾಪಾಪಾ. ೨-೨. ೫); ಸಿಸ್ಸಾ ಪಾಪಾಪಾಪಾಪಾಂಗಳಂದು ಪ್ರಭಾ ಸಂಕೋಚಮಪ್ಪುತಿಪ್ಪಂ (ಪಾಪ್ಪ. ೨-೨೦). ೩. ತೆಗೆ; ಕೃಪ್ಪಗೊಳ್ಳು : ಪಾಂತಿಗೆ ವಿಶ್ವವಿಜೃಂಭಣಂಗಂ ಕೊಂಬ್ ಮಾಡಿ ಪಾಪಾಪ್ಪಾ ಸಾಪಾಗೊಂಬ್ ಸಂಕೋಚಮಪ್ಪುದು (ಪಾಪ್ಪ. ೪-೨೦ ೫). ಪಿಂದ ಪಾಪಾಪಾಪಾ ಪಾಪಾಪಾಪಾಪಾಪಾಪಾಪಾ ದಿಕ್ಕಿಪಿ ಪಾಪಾಪಾಪಾಪಾಪಾಪಾಪಾ

ಸಂಜ್ಞಾ (ನಾ). ಅಧಿಕವಾದ ಭಯ ; — ಅಂಜಿಕೆ. [ಸಂ.]

ಸಂಜ್ಞಾಪನ (ನಾ). ಅರಿಯುವಂತೆ ಹೇಳುವಿಕೆ ; — ಭಯಪಡಿಸುವಿಕೆ : ಒಳ್ಳೆಯದೊಳ್ಳೆಯಜ್ಞಾಪನಮಂ ದುಷ್ಟಜನಮನ್ಯಾಯಮಾರ್ಗದೊಳ್ಪಡಿಸಿ (ಆದಿ. ೧೫-೫). [ಸಂ.]

ಸಂಜ್ಞಾಭಂಗ (ಗು). ೧. ಅತಿಯಾದ ಭೀತಿಯಿಮ್ಮನಾಯಿಸುವಿಕೆ : ಜಯಸಂಜ್ಞಾಭಂಗಮಂ ಕಾಣದೆ ಸಂತ್ಯಕ್ತಜೀವಿತಾಶೆಯಾಗಿ ಬಲಂ (ಆದಿ. ೬೯-೦). (ನಾ). ೨. ಅತಿಭಯವನ್ನುಂಟು ಮಾಡುವಂಥದು : ಅಂತಾ ಮಹಿಮಾಪ್ರಭಾವಂ ಸ್ಮಾಪ್ತಸಂಜ್ಞಾಭಂಗಂ ಭೀಮ್ಮನ್ ಎಂದ್ರಂ ಯಜಗೆ ಕಳಿಪಲ್ಕುಂ ಕೈಗಾಪಿಕಾಂ (ಗದಾಯು. ೧೦೨). [ಸಂ.]

ಸಂಜ್ಞಾತ (ನಾ). ಬಹಳ ಭೀತಿಯನ್ನುಟುಮಾಡುವವನು : ಆ ಸಮಿಯೊಳಾಂಜನೇಯಾಸ್ತ್ರಾಂ ಬಂಧ್ಯಂ ಪ್ರಬುಧ್ಯಂ . . . ಆಯಾಸಕ್ಕಂ ಧೈರ್ಯಾಯಾಸಮಂ (ಗದಾಯು. ೨-೦೨); ಸಜ್ಜುಮಿರೋಧಾಧಿ ಸಿಲೆ ರೋಧಾಸ್ತ್ರಾಂತ ರೂಪ್ತ ಧಾರಿಯ ದರ್ಶಾಸಂಜ್ಞ ಶಂಬಾಸಿ ಜೋಳ (ಗದಾಯು. ೧೦-೧೦). [ಸಂ. ಸಂಜ್ಞಾಪ್ತ]

ಸಜ್ಜಕಿತ (ಗು). ಅಮ್ಮನ್ನೆಸಿಕೊಂಡದ ಸೂಜಿದ : ಎಂದಾ ಸೆಂಬಾ ಸಜ್ಜಕಿತ ಮಾಜಿಂ, ಪೃಂಗ್ಯಾಜ್ಞಕೆಂಬಂ, ವೀಗಾಜಿಂ ಬ್ಯಾಯಿ . . . ಗೊಂಚಲಿಗೆ (ಕೃಷ್ಣಾ. ೧೬-೧೧೦). [ಸಂ.]

ಸಜ್ಜೆ 'ಸಜ್ಜ' ನೋ.

ಸಂಜೆಗೆಂಪು (ನಾ). ಸಂಜೆಯಾಗುವ ಮುಂದು ಸಂಜೆಗೆ ತಮದು ಎಂದರೆ ಒದಗಿದ ಬೀಲ್ ; ಹಜಾಬಿಸೀಲ್ : ಅಂಗಾ ವಿಜಯಾಂ ಸಂಜೆಗಾಲಾಂ ಮೀಲ್ ಎಂದು ರಿಜಿಗೆ ಲಂಗಾಜ್ಞಿಂಕ್ಕೆ ಹೋಂಚ ಅಂತೆಯು ಹೇಳಾಯಿಂದಲು . . . ಬಿಟ್ಟಿಗಂ (ಗೌಗಾ. ೪೬, ೬೦೦-೦, ೧೩೦). [ಸಜ್ಜೆ (< ಸಜ್ಜೆ) + ಕೆಂಪ್ಪ್ (< ಕೆಂಪು)]

ಸಜ್ಜೆ 'ಸಜ್ಜ' ನೋ.

ಸಂಜೆಯಾಗು (ಕ್ರಿ). ಸಂಜೆಯಾಗುವ ಮುಂದು ಸಂಜೆಗೆ ತಮದು ಎಂದರೆ ಒದಗಿದ ಬೀಲ್ ; ಹಜಾಬಿಸೀಲ್ : ಅಂಗಾ ವಿಜಯಾಂ ಸಂಜೆಗಾಲಾಂ ಮೀಲ್ ಎಂದು ರಿಜಿಗೆ ಲಂಗಾಜ್ಞಿಂಕ್ಕೆ ಹೋಂಚ ಅಂತೆಯು ಹೇಳಾಯಿಂದಲು . . . ಬಿಟ್ಟಿಗಂ (ಗೌಗಾ. ೪೬, ೬೦೦-೦, ೧೩೦). [ಸಜ್ಜೆ (< ಸಜ್ಜೆ) + ಆಗು (< ಆಯ್ತು)]

ಸಜ್ಜೆ 'ಸಜ್ಜ' ನೋ.

ಸಂಜೆಹೊತ್ತು (ನಾ). ೧. ಸೂರ್ಯಾಸ್ತ ಮತ್ತು ಸಂಜೆ ಕತ್ತಲಾಗುವ ಮಧ್ಯದ ಸಮಯ : ಸಂಜೆಯಾಗಿ ಸಂಜೆಯಾಗಿ ಸಂಜೆಯಾಗಿ

ಸಿಂಧಿಸ ಸಂದಣಿಗೊಂಡು ವಿಜಯ ಸೊಬಗ್ಗಳ್ತಾಂ ಜರೆವುದೆಲ್ಲಿ ಸಂದಣಿಸ್ಸು ವಿಧಿ (ಆಚಾ. ೨-೧೯ ಪ). ತ. ದಿಟ್ಟಿವಾಗು; ಸಾಂದ್ರವಾಗು : ಕಾಲಾವಯವಕ್ಕೆಯ ದೊಗ್ಗಡಣಂಗಳು ಕಾಲವಾಯೆ ಗಾಳಿತ್ಯಮು ಮಾಡಿತೆಂದು ಯಥಾಜಾತ, ಬಾಹುಗಳ್ಗೆ ಮನ ಮುಂಬುಂದ್ಯ ಕೈದಾಯಂದಂ (ಗದಾಯು. ೫೩). ೩. ಮೊಗೆ ವಿಸರು; ಅತಿಯಾಗು : ಸಜ್ಜನರು ಭೂದಲ್ಲಮುಂ ಮುಸಲ ಭೀಜಿಗಗ ಸಂದಣಿಗೊಳ್ಳಲಂ ಜಡಾಬ್ಜಮುಖವಾಗೊಳ್ಳ ಮೇಗ ಮಾಡಂ (ಗಾಯ ೯-೧೦). ಸಂದಣಿಗೊಳಿ : ಗಿ. ಭೂಮಾಣಾಗಂದು ಭಕ್ತಿಗಿಂದಲ್ಲಿ ಸಂಬಮಿಯಂ ಒಂದುಗೊಂದು ಇಂದಿಲಂ ಸಂದಣಿಗೊಂಬಿಸ್ಸ ಬಿಂದ ಕೃಷ್ಣ ಕೆಲ್ಲಿ ದೆಲಂ ಸಂದಿ ಸಂದಿಯಿಸ್ಸಿ (ಚಾಜ ೪ ೩೬, ೪-೧೧); ಶಚಿಮಿಳಿಳಾಯಿಂದ ವಿಜಿಸ್ಸ ವಿಮಾಳ್ಕೆಯಾಲ್ಲಿ, ಸಂದಣಿಗೊಳಿಸಲಂ (ಚಾಭಾ. ೩೬). ೬. ಸಂಭವಿಸಾಗ ಸೊಗಸಿ ದಾರಿಲ್ಲಿ ಸಂದಣಿಗೊಳ್ ಬಾಯಿನ . . . ಸಜ್ಜನಮಾಡುದೀಗ ಬಿಗಿಗೊಂಡಮಲಂ ಕಾಂಚಿಪ್ಪಟ್ಟಣಾ (ಚಾಜ ೨-೬೩). ೪. ಸಜ್ಜನಿಸಿದಿಂದ ಲೊಡಿದು; ಸಡಿಗಾದು : ಭಯ ಲೊಯಿಜ ರಿಂಗಲ ಇಲ್ಲಾ ಚಿತ ಬಿಗಿ ಗಣ ಎಜ್ಜಿ ಕೈಯ ಮಾಡಿದು ಸಂದಣಿಗೊಂಬ್ಯಿನ್ನ (ಆಚಾ. ೬ ೧೫೦-೧೫೨). ಸಂದಣಿಗೊಳ್ : ತ. ಆವರಿಸು ಸುತ್ತುವರಿದು ಬಂಧಿಸು, ಸುತ್ತಿಕೊಳ್ಳು ದಿನ್ನ ಮೂಡಿದಂತೆ ನಿಂದಿಸಿಯುಸ್ಸು ಶೀಲ್ ಕೈಂದಳಿಯುಲ್ಲಿ ಮಾಡಿದನ ಮುಖಿ ಮಂಬುದಾನ ಸ್ಮಶಾನಲ್ಲಿ (ಗಾಸ್ಮ. ೫೩). ಸಂದಣಿಗೊಳಿ: ೪. ಬಡಿಗಾರಿಂದಿಗೆ ಮೂಡಿಸಿ ಸಂದಣಿಗೊಂಬಿಸಿಲ್ಲಂ ಕೆಲಿಸ್ಸಿ (ಭೂಪ್ರ. ೧೫೬-೧೬೦). [ಸಂದಣಿ + ಗೊಳ್]

ಸಂದಣಿಗೊಳಿ 'ಸಂದಣಿಗೊಳ್' ನೋ.

ಸಂದಣಿಪು (ನಾ). ಮರಗಳ ಗುಂಪು. — ಸಮೂಹ; ಜೊಡಣ : ಬಾಲು ಜೊಲ್ಲದ ಮೂಗಂಗಲ ಸಿಂಪಿಗಳ ಸಂದಣಿಪಿನ ಕಾಂಬಿ ಕೆಲೆಗಿಸಿ ಸಾಲಿಪಿನ ಸಂದಣಿಪುಗ ಕೆಮ್ಮಿಗ (ಆಚ್ಚಾ. ೯-೨೪). [ಸಂದಣಿ + ಪುಲ್]

ಸಂದಣಿಯುಪು (ನಾ). ಗುಂಪಾಗಿ ಬಲುವ ಸ್ಥಿತಿ; ಕಲಸಲಲ್ಪಿವ : ಇಂದುಮಿಂಬ ಮಾಡಿಸ ಸೊಂಪ್ಪ ಮಧುಪಾಗಳಂದಿಂದ ತೆಂಪ್ಪ ಒಳಗ ಸಂದಣಿಯುಪಿಸಲ್ಲಿನ ಮಾಡಿದ ಬಲಿಯ (ಆಚಾ. ೪-೧೦೦). [ಸಂದಣಿ + ಇಯುಪ್]

ಸಂದಣಿಯೂರಿ (ನಾ). = ಸಂದಣಿಯುಪಿಕೆ : ಮಳಲಂದಂಬಿಸಿ ಮೇಗ ಒಡಿಗಾ ಜೊಂಗಿಸಿ ಬಿಡಿಲ್ಲಿಗ ಸಂದಣಿಯೂರಿಯಂತ್ತಿಂ (ಆಚಾ. ೧೫-೬೨). [ಸಂದಣಿ + ಊರಿ]

ಸಂದಣಿಸು (ಕ್ರ). ಗುಂಪ್ಪಗೂಡು; ಒಟ್ಟಾಗು : ಎಲ್ಲ ಶತ್ರುಸೈನ್ಯವೂ ಯುದ್ಧಾ . . . ಬಿಲ್ಲಿದ ಎಂದು ಶರಾ ಕೊಲ ದಾಸಿಂದಿ ಮುಟ್ಟಿದ ಬೆಂಗಳೂರ ಕೋಟೆ ಸಂದಣಿಸಿದು ಬೆಳಿಗೆಯ (ಆಚಾ. ೧೫-೨೦). [ಸಂದಣಿ + ಉಪ್]

ಸಂದಣಿಸು, ಸಂದಾಸು, ಸಂದಿಸು, ಸಂದಿಳಸು (ಕ್ರ). ೧. ಗುಂಪ್ಪಗೂಡು; ಒಟ್ಟಾಗು : "ಸಂದಣಿಸು - ಸಮಿಷ್ಟೀ, ಕಾಮಿಸ್ಟ್ರಗಳ" (ಆಚಾ), ಜೊಗ ನೀಲ ಕಂದಾಯದ ಸಂದಣಿಸಿ ಸಮಾಸಾಯದಲ್ಲಿಗಾದು ಮಾಯಾಪಾಲಿಗಳಾದಿಗಳಾ ವಿಚಿತ್ರ (ಆಚಾ. ೪ ೬೦), ಸಂದಿಲ್ಲಿ ವಿಲಾಸಾಯ ಅಂತಿ ಮಾಳಿಲ್ಲ ಸಂದಣಿ ಒಂಬಯಿಲ್ಲಿ ಬ್ಯಗಿಸಿ ಜೊಯ್ದ (ಗಾಚ ೧೬ ೨೦-೨೦). ಅಬಾಧಿಲ್ಲಿಂದಿಂದ ಪಿಂಡಿಸಿಗಿ ಮೇಗ ಸಂದಣಿ (ಆಚಾ. ೫-೨೩). ತ. ದಿಟ್ಟಿಗೊಳ್ಳು; ನಿಬಿಡವಾಗು : ಭಕ್ತಿಸ್ಥಲಂ . . . ಭೂಮಿ ಲಂಗಾಲ ಗಲಿಂಗಾಲಿಯಲಿಂಗಾಲಿ ಯೋಗಾಸಾಧನೆಯಿಂದ ಗಣ ಅಸ್ತಿತ್ವಯಿಂ ಜಾಗಿಂದಿ ಮುಗಲ ಭುವಿಯಿಲ್ಲಿ ವಿಚಾರಿಸಿದಲ್ಲಿ ಮಾಳಿಲ್ಲ ಭೂಮಿಯಿಲ್ಲಿ ಮೇಗ ಆಳಿದ ಭೂಗಲ ವಿಸ್ತಿಯಿಂ (ಆಚಾ. ೧೫-೬೧೦), ಬಂದ ಮೇಗಿಂದ ಇದ ಅಸ್ತಿತ್ವ ಅಂ ಮಿಲ್ಲಿ ಸಂದಣಿ ವಿಚಾರಮಿಂಗಿಂದಿ ಜಾಗಿಂ ಮಾಲ್ಲಿ (ಗಾಚ ೧೬ ೨೦-೨). ೩. ರಾಶಿಯಾಗು; ಒಟ್ಟಿಗಾಗು : ಭಾವಾಗಳ ಮಂತ್ರಿಯ ಮಾಲಿ ಸಂದಣಿ ವಿಸ್ತಮಯಿಲ್ಲಿಯಲ್ಲಿ ಸಂದಣಿಸಿಲ್ಲಿಯಲ್ಲಿಯಲ್ಲಿಯ

ಸಂದರ್ಶಿಸಿಕೊಳ್ಳು (ಕ್ರಿ). ಕಾಣು; ಭೆಟ್ಟಿಯಾಗು : ಅವರು ಸಂದರ್ಶಿಸಿಕೊಳ್ಳಲು ಸಂದಿ ಪಡಿಯಾಕಿದರು ಏನು ತಾವಿಷ್ಟಾದರೆ ಬರಲಿ (ಕೌಷ್ಣ. ೧೬-೨).
[ಸಂದರ್ಶನ (< ಸಂದರ್ಶನ) + ಇಸ್ಕೊ.]

ಸಂದರ್ಶಿಸು (ಸಾ). ೧. ನೋಡುವಿಕೆ. ೨. ಕೂಡಿಸುವಿಕೆ; ಒಟ್ಟುಗೂಡಿಸುವಿಕೆ. ೩. (ಸಾಮ್ಯ, ಸಂಗತಿಗಳ ಮುಂತಾದುವುಗಳ) ಅರಿವು; ಸ್ಫೃತಿ : '' ಕೃಷ್ಣಾದಿ . . . ಸಂದರ್ಶನ, ಅರಾ– ಈ ೩ ಅರಿವು'' (ಅಮಾಮ. ೧೨೨-೨೩). ೪. ಸಮೀಪ; ದೇಗ : ಆ ಸಂದರ್ಶನದ್ದೇ ಸಾಲ ಬಿಟಿಸಾಳಿಗೆ ಕೊಡಿಸ್ಕುವ (ಶಾಕಾಮ. ೭೨) ೫. ಅನುಭವ; ಅನುಭ; ಸೌಖ್ಯ : ಅವರ ಸಂದರ್ಶನಲ್ಲಿ ಸಮಾಜಾಭಿವೃದ್ಧಿಯಾಗಿರಲಿ, ಅವರಿಂದಾಗುವುದೂ . . . ಅಭಿವೃದ್ಧಿಯಾಗಲಿ (ಕಾಮಾ. ೧೦). ೬. ಆವರಣ; ರಚ್ಚಿಲೆ : ಸಂದರ್ಶನದಿಂದಾದರೂ ಮೇಘವು ಸಮುದ್ರದ ಮೇಲೆ ಸ್ವಲ್ಪವಾದರೂ ಮಳೆಯನ್ನು ಸುರಿಸುವಂತೆ ಆ ಕ್ಷುದ್ರಾಶ್ರಮವು ರಾಜಾಲಯ (ಮಾಮಾ. ೮, ೧೪) ೭. ವಿಚಿತ್ರ; ಸೊಗಸು : ಮೋಡ ಅಂದರೆ, ಸಂದರ್ಶನ ಅಂದರೆ, ಅಲ್ಲಿಂದ ಬೀಳುವ ಒಂದು ವಿಶೇಷ ಪದ್ಧತಿಯಿದ್ದಿರಬೇಕು (ಗೀಚಾ. ೨೨). ೮. ಸ್ಪೃಷ್ಟಿ; ಶ್ರವಣ : ಇದ್ದಾಗ ಭೂಮಿಯ ಮೇಲೆ ಸಂದರ್ಶನ ಪಡೆಯಲಾಗದ ಅಪೂರ್ವ ವಸ್ತುಗಳನ್ನು ಕಂಡು ಕೇಳಿ ಅನುಭವಿಸಿ ಆನಂದಿಸಬೇಕು (ಅಷ್ಟಾ. ೧೬-೬). [ಸಂದರ್ಶ + -ಇಸು]

ಸಂದರ್ಶನ (ನಾ). ೧. ನೋಡುವಿಕೆ; ಅವಲೋಕನ; ನೋಟ : ಆಹಾರ ಸಂದರ್ಶನ ಅಸ್ಪಷ್ಟವಾಗಿ ಮುಂಜಾನೆಯ ಬೆಳಕಿನಲ್ಲಿ ಮಾತ್ರ ಸಾಧ್ಯವಾಗುವಂತೆ ಮಾಡಿದೆ (ಮಾಮಾ. ೪-೫೫). ೨. ಒಂದನ್ನು ಸಮಗ್ರವಾಗಿ ನೋಡುವಿಕೆ; ದೃಷ್ಟಿ ೩. ರಾಜ, ಗುರುಹಿರಿಯರೇ ಮುಂತಾದವರಿಂದ ಅನುಗ್ರಹವನ್ನು ಪಡೆಯುವುದಕ್ಕಾಗಿ ಮಾಡುವ ಭೇಟಿ : ಆ ಕಂಡ ರೀಯಮ್ಮಿಂದಲಾ ಗುರುವಿಂಗಸಂದರ್ಶನ(ಶಾಕಾ. ದಶರಥ)ವಿಷ್ಟಮ್ಮೆಯಾಯ್ತು (ಬಸ್ಕ. ೨೨-೬). ೪. ದರ್ಶನ ಕೊಡುವುದು; ಗಾಡಿಸಿಕೊಳ್ಳುವಿಕೆ : ಒಂದು ವಿಶಿಷ್ಟವಾದ ಮುಖಾಲಾಂ ಮುಖಾಲಾಂಬರ . . . ಶ್ರೀಮಾತೆಯಿಷ್ಟಕ್ಕೆಯಿಂದಲೂ ಸಂದರ್ಶನದಿಂದ ಸಂಸಾರದ ಪರಾಸಾರದ ಪರಾಸಾಲಯದಿಂದ ಸಂಸಾರಾಂತರ ಸಂ

ಳ್ಳಗೊಂಡ ಸಂಪಾಜ್ಯಮಿಂ (ರಾಷ್ಟ್ರಕೂ. ೬-೧೧ ಶ). ೮. (ಸಂಗಡ) ಹಲ್ಲುಗಳನ್ನು ದಿಗಮಾಗಿ ಕಿಟ್ಟಿಕೊಂಡು ಕಾಣಿಸುವಂತು : ಗಾಯನ ಮೂಡಿಳಿಂ- ೧ ಸಂಪಕ್ಕ ಅ ಕಣ್ಣುಳ್ಳ ಹಾಯುವಂತು . . . ಜಾ ಅಧಿಯಾಗಿ ಅ ಮುಳಿಲ್ಲಿ ಹಾಯುವಂತು (ಅಭಿಜ್ಞಾ. ೧೫೩). ೯. [ಶಾಸ್ತ್ರವಿಷ] ಯಮುಳಾಲಂಬಾದರ ಪ್ರಭೇದಗಳಲ್ಲಿ ಒಂದು: ಕಾಳ್ಯಸ್ಯಂ ಸಂಪಿಕ್ಕಂ ವಿಂಬಂಗಾಲಂ ಸಮುಸ್ಸಿ ಮೂಲಕ್ಕ ಮೊದಲಾಗಿ ಅಂಗಾಂಗಕ್ಕಮಿಂಬಂ ಹೆಸ್ಸುಗಾಲಿಂ ಕಿಟ್ಟಿಸಲ್ಪಟ್ಟಿರಂ (ಅಜ್ಞಾ. ೨೫೩).

[ಹಿಂ.]

ಸಂಪಿಗೆ೩ (ಕ್ರಿ). ೧. ಸಂಬಂಧವನ್ನು ಕಳೆದುಕೊಳ್ಳು; ದಾಂಪತ್ಯವನ್ನು ತೊರೆದುಕೊಳ್ಳು : ಇಂದಿನ ಮುಕ್ತ ಓಂದಾಗ ಪುಗಾಡಿಳಿಂ ಸಂಪಾಲು ಅವಂದಿಗೆ ಬಾದಿಸ ಕಂದು ಮಾಡುವುಕ್ಕೆ ಪ್ರಮಿಯ್ಯುವಿಸಿದರು (ಮೂಡಾ. ೮೯-೧೨೦); ಪ್ರಿಸ್ಥ ಪ್ರಣಿ ವಿಪ್ಪಕೆಯಂದಿಕ ಭೂಮಾಡುಗಾಲಂ ಮೊಂಡಿಲಿಂ ಸಿಲಾ ವಿಪ್ಪಕೆ ಮಾಳ್ ಒಂಗಿ ಪಡೆಯಿಸಿ ಸಂಪಕಿಂ ಪ್ರಮಾಣಂ ವಿವಿಧಿಸಿ ಪ್ರಮಾಲ್ಯಗಿಂ ಹೆಸ್ಸಕ್ಕ ರಾಷ್ಟ್ರಪತಿಯ, ಬಿಷ್ಟಾಪಿಂ ಭಾವಿಸಲ್ಪಟ್ಟಿಸ್ಸಿ (೧೫೫ ಅ). ೨. ಭೇದಭಾವವನ್ನು ಕಳೆದುಕೊಳ್ಳು: ಭಿಷ್ಟ ತೆಯಿಲ್ಲ ರಾಗಿ : ಮಾಜಿಯಾಜಿಗಾಲಿಯಂ ಸಂಪಿಗೆ ವಿಮಾಗಿಂದಿರು ವಿಷ್ಟಿಸಿಲ್ಲಿಸಿಲ್ಲಿ (ಆಗಾ. ೨೫-೧೨೫); ಇದರ ಕಳೆ ಇದು ಅದಂತಿಹುದು ಸಂಪಿಗೆ ಮಿಲ್ಲಾ ಮಿಲ್ಲಾ ಮಿಲ್ಲಾ ಎಂಬುದ ಕಂದ ಸುರಿ ಕೇಗ ಪಡಿಸಾ (ಜಜ್ಞಾ. ೨-೨೦). [ಸಂಪು + ಅಲ್, (< ಅಲ್)]

ಸಂಪಿಗೆ೪ 'ಸಂದಣಿ' ನೋ.

ಸಂಪಿಗೆಲೋ 'ಸಂದಣಿಲೋ' ನೋ.

ಸಂಪಿಗೆಲೊಳು 'ಸಂದಣಿಲೊಳ್' ನೋ.

ಸಂಪಿಗೆಳು 'ಸಂದಣಿಯು' ನೋ.

ಸಂಪಿಣ್ಣ (ನಾ). ರಾಜ; ಒಕ್ಕೂಟ.

ಸಂಪಿಣ ಪಟ್ಟಿಯ = ರಾಜಿಗೆ ವಿಶ್ವಾಸವುಪಾತ್ರ; ಒಕ್ಕೂಟಕ್ಕೆ ಪ್ರಯತ್ನಿಸು: ಭರತಾದಿ ದಯಾಪಟ್ಟಿಯಿಂ ಬಳಿ ಸಂಪಿಣ ಪಟ್ಟಿಂ ಸಮಸ್ತ ಪೃಥ್ವಿಯ ಅಧ್ಯಕ್ಷಮಾಯಿ ವಿಸಿಗೆ ಕೊಡುತ್ತಿರ (ಪ್ರಭಾ. ೨೫).

[☞ ಇದು 'ಸಂಧಾನ' ಪಂಚಾಂಗ ಆಕಲಿಯಿಂದ]

ಸಂಪಿಣ್ಣ (ನಾ). ೧. (ದಪ್ಪಗಳನ್ನು ಕಿಟ್ಟುವ) ಹಗ್ಗ; ರಜ್ಜು : "ಪಾಯಿಂ, ಸಂಪಿಣಂ — ೨ ಪಟಗಳನ್ನು ಕಿಟ್ಟಾಂದ ಓಂಗ ಪಟಗೆ . ಹಗ್ಗಾದಿಗಳ" (ಅಭ್ಯಭಿ. ೨೫೨). ೨. ಸರಪಣಿ; ಸಂಕೋಲೆ. ೩. ಪಡಪಣಿಯನ್ನು ದಿಗಿಯುವ , ಆವರು ಮೊಣಕಾಲಿನ ಕೆಳಭಾಗ. ೪. ವಸಿಯ ಕುಂಬ್ಯಸ್ಥಳದಿಂದ ಹಾರಿಯುವ ಮುದೋದರ. ೫. ವಿಧಾಗಿಸುವಿಕೆ; ಧಾಗಮಾಡುವಿಕೆ. ೬. ಕಿಟ್ಟುವಿಕೆ; ಕೊಂಡಿಯುವಿಕೆ : 'ಸಂಧಾನಿಸು' ಪರಾ. [ಸಂ.]

ಸಂಪಿಣಿಸು (ಸ). ೧. ಕಿಟ್ಟಿದ; ಸೊಂಟಿಸಿದ. (ನಾ). ೨. ಕಿಟ್ಟಿಸಿದು : "ಬಟ್ಟಿಂ, ಸಂಪಾನಿಸಲು, ಮುಂದು, ಅಧ್ಯಿಂದ, ಸಂದಿಸಲು, ಸಲಂ - ೬ ಕಿಟ್ಟಲ್ಪಟ್ಟಿದ ಹೊದು" (ಅಭ್ಯಭಿ. ೨೫೨). [ಸಂ.]

ಸಂಪಾನಿಸಿ (ನಾ). [ಶಾಸ್ತ್ರವಿಷ] ಒಂದು ವಾಸ್ತವ್ಯ ವಿರಲು ಅಥವಾ ಮೂರು ಪಟ್ಟಗಳಲ್ಲಿ ವಿಷ್ಣುವಿನಿಂದ ಬಿದಿದ ರಚನೆ : ಅಷ್ಟದಲ್ಲಿ, ಆಚೆ ಪೃಥ್ವಿ ಗಳೆಂಬುದು:- ಸಂಪ್ಟಿಗೆ, ಶಾಸ್ತ್ರಿಗೆ ಮತ್ತು ಆಚ್ಚಿಯಂಪಾಣಿಗಳಲ್ಲಿ ರಚನೆಯಾದ 'ಮಾಪ್ಟಿಗೆ', 'ಸಂದಾನಿಸಿ' . . . 'ಬಾಸ್ಮಾಯಾ', 'ಆಪ್ಟಾ' ಇತ್ಯಾದಿಗಳು (ಪ್ರಭ್ಯಾದಿ. ೧೫೫). [ಸಂ.]

ಸಂಪಾಯಿಸು (ಕ್ರಿ). ಕಿಟ್ಟು; ಜೋಡಿಸು : ಎಡಗೆಂಗಾ ಪರಿಗೂಲಾಯಗಳು ಸಂಪಾಯಿಸಿ ಪೆಡೆಯಲ್ಲಾಗಿ ಗೂಡಾಡಿಯಂ ಮಿದ್ದು ಬಂಡಿಗಳ ಪರಿಚಾಲಂ ಪ್ರಾಣಿಗಳಿಂದಿಸಲು (ಆಪಾ. ೨೧-೭೦). [ಸಂಪಾನ್ + — ಇಸ್]

ಸಂಪಾಯಿ (ನಾ). ೧. (ಹೆಗಲುಮೊದಲ ಜೋಡಿ ಮುಂಗಾಲುಗಳನ್ನು) ಸಿಲ್ಲಿಸುವುದು; ಕಾಪಡಿ; ಸಲುವಳಿ : ಒಂದಾನ ಸಂಚಿ ಸಾಲ್ಗಳಕ್ಕಳ್ಳ ಸಂಪಾಯಿಯಾಗಿ ಗಂಡಾಯಿ (ಗಾಪ). ೨. ಕೊಟ್ಟುದಕ್ಕೆ ಪ್ರತಿಯಾಗಿ ಕೊಡುವುದು; ಒಂಪಿಲುಗಿಸುವುದು : ಶಾಪಾಪರಾಧ . . . ಗಂಧರ್ವಸಿ ಪಳಿ ಸಂಪಾಯಿಯಾಗಿ ಕೊಟ್ಟಿರೆಂಬುದಂ ಪಿಡಿದು (ಮಯೂ. ೨೨-೨೩). 'ಸಲ್' ಪರಾ.

ಸಂಪಾಯಿಯಾಗು = ಕೆಳೆ; ಸೊಂಟ : ಅತ್ಯಿಂದ ಬಚ್ಚಿಂಗ ವಿಷ್ಣಮುಖ್ಯದ ಸಂಪಾಯಿ ಮಾಡಿಸಿದ್ದಂತಾದ ಬೆಳಗ ಅಂಗಿಸಿಂದಿಸಿದ್ದು (ಅಜ್ಞಾ. ೧೫೩).

[ಹಿಂ. ಸಂಪಾಯಿ = ಕೊಂಬಿಸುವ ./ ಮೂ. ಬೊ°ಯಮ್, ಬಾಪ್ಪಾಯಮ್ = ದಿಬ್ಬಾಗು, ಕಿಟ್ಟುವ ಅಥ; ಮಲ. ಸಂಪಾಯ]

ಸಂಪಾಯಿಸು (ನಾ). ೧. ಕೊಂಬುವಂತಾಗು; ನಿಲುಮಂತಾಗುವು : ಪೃಥಿಂಗಾ ಯುಮುಂ ಜೋಡಿಯಾ . . . ಶ್ರೀಯಾಪ ಸಚ್ಚಿಸುವಂ ಸಂಪಾಯಿಸಿ ವಿಶ್ವಾಂ ಭಾಷಾಧಾರಿಣ ಪ್ರಾಣಿಸುತ್ತಿರ (ಅಜ್ಞಾ. ೨-೧೫). ೨. ಕೊಂಬುವಂತು; ನಿಲುಮಂತು : ಪಟ್ಟಿಂ ಸಂಪಾಯಿಸಿಂದಾ ಪಂದ ಅಥಂ ಬಚ್ಚಿಸ್ತಿರಂ (ಅಜ್ಞಾ. ೧-೧೫). [ಸಂ.]

ಸಂಪಾಯಿಸಿ, ಸಂಪಾಯಿಕೆ (ನಾ). = ಸಂಪಾಯಿ ೧ : ಮಂಪಿಯಿಂಗಾಳ್ಳ ಭಜಾಭಾಳ್ಳಿ, ಕೈಣಾ ಅಧಿಕಿಸ, ಇಳ್ಳಿಶ್ಯಾಲ್ಲಾ ಕಾಪಡಿ ರೂಪಾಲು ಸಂಪಾಯಿ ಮಾಡಿ (ಅಜ್ಞಾಭಿ. ೧೧೧). ಸಂಪಾಯಿಕೆ : (ಅ). [< ಸಂಪಾಯಿ]

ಸಂಪಾಯಿತ 'ಸಂಧಾಯಿತ' ನೋ.

ಸಂಪಿ 'ಸಂಪ್ಪಿ' ನೋ.

ಸಂಪಿಕ್ಕು (ಕ್ರಿ). ಒಂಪಿಸು; ಸೇರಿಸು; ಜೋಡಿಸು : ಪಂದ ಸುರಿಯ ಸಂದಿ ಮುಳ್ಳಂಡ ರೂಪಾಧಾರಿಯ್ಯ (ಅಜ್ಞಾ. ೧೮-೧೨೦). ಆಧಾರಗಳಿಂ . . . ಳಾಗಾಂದರುಮ್ಮಾ ಸಿಪ್ಪಮಿಸ್ತ್ರ ಆರಂಭಿಸುವುಕ್ಕಳ್ಳಂ ಮೊದಲಾಯ್ದ ಸಂಧಿಸಿಲೊಂಡಂತಾ ಸಂದಿ ಸಂಧಿಸ್ಪ್ರವಿಷ ಶೆಂದಿ ಪ್ರಸ್ತಿಕ್ಕಿಸಾಯಿಸ್ಪಟ್ಟಿಗಳ (ಪ್ರಭಾ. ೯-೧೬). [ಸಂಪ್ಪು + ಇಪ್ಪು]

ಸಂಪಿಗೆ (ನಾ). ಒಂದು ಮನೆಹರದ ಹೆಸರು : ಸಂಪಿಗೆ ಅಥಿಪ್ಪಳ್ಳಂ ಕೊಂಡಗಾಮಿಗಳ್ಗೆ ಪ್ರಗ್ಗಾಪಿಸುಗಾಮ್ಮಿಸಿದ (ಪ್ರ. ೨೮, ಬಾಲ. ೨೫೪-೧೬; ೧೬೦). [?]

ಸಂಪಿಗಾಪುಷ್ಪ ಪೂಜೆ (ನಾ). ಒಂದು ಸ್ವಳದ ಹೆಸರು : ಇಂಗಳ ಗಾಪ್ಪ ಗೂಗಾಪುಷ್ಪಮ್ಮಿಯಂ ಪ್ರಾಗಾಪುಷ್ಪಾಪುರ ಕಳ್ಪಾಗಿಯಿ ಮಾಡಾಪಟ್ಟಿಯಂ (ಪ್ರ. ೨೪, ಶ್ರೀಪಾ. ೧೨೦-೧೬, ಪ. ೧೦೦). [?]

ಸಂಪಿಗೆಮಾಲೆ 'ಸಂಪಿಗೆಮಾಲೆ' ನೋ.

ಸಂಪಿಗೆ (ನಾ). ಒಂದು ಬಗೆಯ ಸುಗಂಧದವ್ಯ : ಬಕುಲ ಸಂಪಿಗೆ ಮಚಕಾಪ ಸುಗಂಧಪ್ಪವನ್ನು ಬೆಳಿ ಚ್ಚಿ ಪಚ್ಚಿಗಾ ಮೂಲ ಚ್ಚಾಂಚ್ಚಾ ಚಿಚಿಯಿಚಿಗಳ (ಮೀಮಾಪ. ೨೨೦). [?]

ಸಂಪಿಗೆ (ಗ). ೧. ಬಳದ; ಹಬ್ಬಿದ; ಲೇಪಿಸಿದ. ೨. ತಬ್ಬಿಬ್ಬಾದ; ದಿಗ್ಭ್ರಮಗೊಂಡ. ೩. ಅಸ್ಪುಟವಾದ; ಅಪ್ಪಕ್ಷ. ೪. ಬಯಲುವಾದ; ಅಶ್ಲೀಲವಾದ : ಕ್ಷಿಪ್ತವಾದ : ನೀಚ ಪೋಲಾಡಂ ಮಾಡಿ ಈ ಸಂಪಿಗೆ ಸಂಪಕ್ಷಾಯಿಸಿ ಪಚ್ಚಿಸಂಗಳು (ಪಾಪಾಪ. ೨೨೯). ೫. ಸಂದೇಹಾಸ್ಪದವಾದ; ಅನುಮಾನದಿಂದ ಕೂಡಿದ : ಪ್ರಗ್ಯಪಯಾಗಾ ಸಂಪಿಗೆ ಅಪಾಯಗಳು ಮುಖ್ಯ ದಶಿಷ್ಟೂಡಗಳನ್ನು ಬಗೆಗಂಡಯಾಪಿಸಿ ಅಪ್ಪಿಸಿಸಿಸಿಸಿ, (ಗಾಪಾ. ೧೬-೧೦). ೬. ಅಶಾಯಿಗಳು; ಗಂಧಾಪರಿಧಾನ. (ನಾ). ೭. ಅಯಿಮಾಣ; ಶಂಕೆ; ಸಂದೇಹ : ಪಾಪಾಪಾಪಾಪಾಗಳಾಪಾಪಾಪಾಪಾ ಸಂಪಿಗೆಯಾಪಾಪಾ ಬಂಗಳ ಭಾಪ್ಪಾಪಾಗ ವಿಪಾಪಾಪಾಪಾ (ಅಜ್ಞಾ. ೫-೨೦). ಸಾಪಾಪಾಪಾ ಸಂಪಿಗೆಗಾಂ ಏಗಾ ಪಚ್ಚಿಸಿಸಿಸಿ ಪಚ್ಚಿಸಿಸಿಸಿಯಾಪಾಪಾ ಬಂದ ಮಾಪಾಗ ಪಾಪಾಯಾ ಪೋಪಾ . . . ಯಾಪಾಪಾಗಾ ಸಾಪ್ಟಿಂ (ಪ್ರಭಾ. ೨೦-೨). ೮. ಬಯಲುವಾದ ಪರಿಸ್ಥಿತಿ ; ಇಳ್ಳಿಟ್ಟು : ಸಂಪಿಗೆ ಮಾಡಿದ್ದ ಕಾಪಾಲ ಪೂಜಿಪ್ಪಾ ಮಾಪಾಂದಪ್ಪ ಗಳಾಪಾಯಾ (ಪ್ರಭಾ. ೫ ಎಸ್); ಇದರ ಶಬ್ದ ಬ್ರಾಹ್ಮಣಪ್ಪಗಳಿಂದ ಹೊಗೆ ಸಂಪಿಗೆಯಿಂದ ಬಯಿಸಿಲೊಂಡಿರುವುದನ್ನು ಒಪಾಪಿಡಿ ಒಂದು ಗೂಡು (ಪಾಪಾ. ೧೧ . ಒಪಾ). ೯. ಸಂದೇಹದವನ್ನುಂಟು ಮಾಡುವ ವ್ಯಕ್ತಿ : ಏಷ್ಟು ಪೆಂಗಾಯ,

[illegible] ಸಂದಿಗ್ಧದ . . . [illegible] ಸಂದಿಗ್ಧದ. [illegible] ೧೦. [ಕಾವ್ಯಮೀ] [illegible] : ಸಂದಿಗ್ಧ- [illegible] [ಹೊ.]

ಸಂದಿಗ್ಧತೆ (ನಾ). ೧. ಅನುಮಾನ; ಸಂದೇಹ : [illegible] ಸಂದಿಗ್ಧತೆಗಳನ್ನು [illegible] ೨. [illegible] ೩. [ಕಾವ್ಯಮೀ] ಅರ್ಥದೋಷಗಳಲ್ಲಿ ಒಂದು : ಸಂದಿಗ್ಧತೆ - [illegible] [ಹೊ. ಸಂದಿಗ್ಧತ್ವ]

ಸಂದಿಗ್ಧಾರ್ಥ (ಗು). ೧. ಸಂದೇಹಕ್ಕೆ ಎಡೆಯಾದ; ಅನುಮಾನಾಸ್ಪದವಾದ : [illegible] (ನಾ). ೨. ಸಂದೇಹಾಸ್ಪದವಾದ ಅರ್ಥ. [ಹೊ.]

ಸಂದಿಸು (ಗು). ೧. [illegible] (ನಾ). ೨. [illegible] : "[illegible]" [ಹೊ.]

ಸಂದಿಸು 'ಸಂದಯು' ನೋಡಿ.

ಸಂದಿಸಾಟ 'ಸಂದಯಿಸಾಟ' ನೋಡಿ.

ಸಂದಿಸು (ಕ್ರಿ). ೧. ಸೇರಿಸು; ಜೋಡಿಸು; ಹೊಂದಿಸು : "[illegible]" [illegible] ೨. ಸೇರು; ಕೂಡು : [illegible] ೩. [illegible] ೪. [illegible] ೫. [illegible] ೬. [illegible] ೭. [illegible] ೮. [illegible] ೯. ಒಪ್ಪು; ಒಂದಿಸು : [illegible] ೧೦. [illegible]

[illegible] ಸಂದಿಸು : [illegible] ೧೧. [illegible] ೧೨. [illegible] ೧೩. ಸಾಧಿಸು; [illegible] ೧೪. [illegible] ೧೫. ತಾಗು; ಮುಟ್ಟು : [illegible] ೧೬. [illegible] ೧೭. [illegible] ೧೮. [illegible] 'ಸಂಧಿಸು' ಪರ.

ಸಂದಿಸಿಕೊ, ಸಂದಿಸಿಕೊಳ್ಳು = ೧. ಸೇರಿಸಿಕೊಳ್ಳು; ಕೂಡಿಸು : [illegible] ೨. ಸಂಧಿ ಮಾಡಿಕೊಳ್ಳು : [illegible] [ಸಂದು + [illegible]]

ಸಂದಿಸಿತ (ಗು). ೧. [illegible] ೨. ([illegible]) [illegible]; [illegible] : 'ಸಂದಿಸಿತ' ಪರ. [ಹೊ.]

ಸಂದಿಸಿದ [illegible] (ನಾ). ([illegible]) [illegible] : [illegible] [ಹೊ.]

ಸಂದಿಸು (ನಾ). [illegible] ; [illegible] : [illegible] [ಹೊ.]

ಸಂದು 'ಸಲ್' ಪರ.

ಸಂಜ್ಞೆ, ಸಂಜ್ಞಿ (ನಾ). ೧. ಸೆಗಪು; ಸಂಜ್ಞೆಗಾಗಿ; ಕೂಡು: ಇಷ್ಟಮ್ಮಂ . . . ಕುಸ್ತ-ಮಾಡು: ಸಂಜ್ಞಿ - ಸಂಜ್ಞಿ (ಚಾಣ. ೩೮೫ ಪೂರ್ವಾ). ೨. ಹುಬಿಲ; ಕೊಡಪ : ದಿಶೇಗ ಸಂದು ಪೞೆಯಾಗಲಂದು ಶಬ್ದವಿವಿಧಪತಪ್ತಿಯಿಂದಮು ಮುಳಿದಲ್ ಪ್ರಿಯ ಪೇರಯಿಸಲಿಯದು ನೀಗಲ್ಪಡದೆಂದಿಂ: ಸಜ್ಞಂ (ಅಜಿ. ೧೨-೭೦); ಪಟ್ಟಿಯಾಯಿಸ ಸಿಗೆ ಮಾಳ್ಪಡೆಯೆ ಪಟ್ಟಡಕ್ಕಿಂದ ಬಳಿಕಿಗಿಯಿಂದ ಸಂದರ್ಭಕ್ಕೆ ಸಂಜ್ಞೆ (ಧರ್ಮಾ. ೪೩, ೧೦ ೨೦.೪೫). ೩. ಬಿಡುವು; ಸೀಳು : ಹಿತ್ತ ಇವರ ಮುಟ್ಟಡಿಂ ಮುಟ್ಟಿಸಿ ಸಂಜ್ಞಂ(ಜ್ಞಾ. ೦೦. ಪಂಚಾಜಾಯಿಯಂ ಎಂಬಿಯಂ ಎಂದಪೆಯಿ ಗಾಯಿಯಿಂ (ಅಧಿಗ. ೦-೧೧, ೮); ಒಂದರ ಜಗಡಿಯಿಗಂದಂ ಸಂದಾಗಲಂ ಪಡಾಗಲಿಲ್ ಅಲ್ಲಾಲುದಂ ಸಂದಿ ಪೃಲ್ಲಪ್ರಿಯದಿಯು ಮುಟ್ಟಿಸಿದ ಸಂಜ್ಞೆಯ ಪಡಿಯಿಲ್ ಪಡಿಯಿಂದಪೆಟ್ಟಿಂ (ಅಗ. ೧೨.೨೮). ೪ಎಂದೆ ಜಿಂಗದ ಧಾಟಿ ನೋಡಿದ ಪರದ ಸಂದಿಂ ಪಡಿದಟಿಪಟ್ಟಿದಿಂದ ಅಲ್ಲಿದ ಅಜಿಪಾಯಿ ಸಜ್ಞಿಪಾಯಿ (ಮೀಮಾ. ೬-೧೦.೬); ಆಡಿ ಮುಟ್ಟಿಲ್ಲ ಸಜ್ಞಿ. ಮಿಟ್ಟಿ ಮುಟ್ಟಿಲ್ ಪ್ರಾಗ (ಗಣ). ೯. ಹೊಳೆ; ಸೀಳಾದ ಧಾಗಿ : ಒಟ್ಟಾಯಿ ಪೀಗಳ್ ಪ್ರಿಯ್ ಪಡಿಯಿಲ್ಲಾಗಲಾಯಿ ಗಜಿಗಿಯಿಂ ಸಜ್ಞಿಗಳ ಪಾಗಿಳಿಯಿಂದಿಲ್ಲಿ ರೀಗಾಕಿಪಡಿಯಿಲ್ಲಿ ಎಟ್ಟಿಪಟ್ಟಿಲ್ ಬಡಿಯಿಪಟ್ಟಿಲ್ಲಿಲ್ಲಿ ಮೊಟ್ಟಿಯಿಲ್ಲಿ ಸಂದಿಲ್ಲಿಪಡಿಯಿಂ ಸಜ್ಞಿ ಪಿಟ್ಟಿಕ್ಕಿಗಾಟಿಗಳ್ ಮೊಟ್ಟಿಯಿಲ್ಲಿ (ಪ್ರಜಾ. ೯-೩೩). ೫. ಕಿರಿದಾದ ಓಗೆ; ಗಡ್ಡಿ : ಮಾಣಿಪು ಅ ಸಂಜ್ಞಾಕಾಯಿಂದ ಕಾಗಾಯಿಂ ಅಜ್ಞಗ ಒಜಿಯಿಂ (ಗಣಿತ. ೧೨). ೬. ಪೊಡವು; ಸಂದ್ಯ : ಪ್ರಾಣಿಗಳ ಮಿಡಿಯಿಂಗಳ್ ಬಡುವ ದಿಂ, ಸಜ್ಞಿಗಳ್ಳಿ ಎಟಿಯಿಂದಿಲ್ ಮುಟ್ಟಿದಿಂದಂ (ಜ್ಞಾಪ. ೨೨). ೭. ವಿಧಿ; ಸ್ಥಿತಿ : ಇಜ್ಜ ಬಟ್ಟು ಶಾಮಿಪ ಇಗ್ಗಿಂದು ಅಟ್ಟಿಪ ಮುಟ್ಟಿಂಪಾಂ ಸಜ್ಞಿಯಿಂ, ಸಿಜ್ಞಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೫೯.೧೦೪, ೧೦೬); ಬಾಗಿಲಿಂ ಪೊಟ್ಟಿದಂಡ್ಡ ಶಾಶ್ವತಿಯಂ ಸಂದಿಗಂ ಮಿಂಗಿಂ ಸಜ್ಞಿಯಿಂದಮಿಲ್ಲಿ ಪೊಟ್ಟಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧-೧೦೦). ೮. ಅವಸರ; ಸಂದರ್ಭ : ಸಜ್ಞಿಯಿಂ ಪಾಗಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೯. ಸಮಯ; ಅವಕಾಶ : ಪಟ್ಟಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೧. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೨. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೩. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೪. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೫. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೬. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೭. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೮. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೯. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೨೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦).

ಸಂಜ್ಞೆ, ಸಂಜ್ಞಿ (ನಾ). ೧. ಸೆಗಪು; ಸಂಜ್ಞೆಗಾಗಿ; ಕೂಡು: ಇಷ್ಟಮ್ಮಂ . . . ಕುಸ್ತ-ಮಾಡು: ಸಂಜ್ಞಿ - ಸಂಜ್ಞಿ (ಚಾಣ. ೩೮೫ ಪೂರ್ವಾ). ೨. ಹುಬಿಲ; ಕೊಡಪ : ದಿಶೇಗ ಸಂದು ಪೞೆಯಾಗಲಂದು ಶಬ್ದವಿವಿಧಪತಪ್ತಿಯಿಂದಮು ಮುಳಿದಲ್ ಪ್ರಿಯ ಪೇರಯಿಸಲಿಯದು ನೀಗಲ್ಪಡದೆಂದಿಂ: ಸಜ್ಞಂ (ಅಜಿ. ೧೨-೭೦); ಪಟ್ಟಿಯಾಯಿಸ ಸಿಗೆ ಮಾಳ್ಪಡೆಯೆ ಪಟ್ಟಡಕ್ಕಿಂದ ಬಳಿಕಿಗಿಯಿಂದ ಸಂದರ್ಭಕ್ಕೆ ಸಂಜ್ಞೆ (ಧರ್ಮಾ. ೪೩, ೧೦ ೨೦.೪೫). ೩. ಬಿಡುವು; ಸೀಳು : ಹಿತ್ತ ಇವರ ಮುಟ್ಟಡಿಂ ಮುಟ್ಟಿಸಿ ಸಂಜ್ಞಂ(ಜ್ಞಾ. ೦೦. ಪಂಚಾಜಾಯಿಯಂ ಎಂಬಿಯಂ ಎಂದಪೆಯಿ ಗಾಯಿಯಿಂ (ಅಧಿಗ. ೦-೧೧, ೮): ಒಂದರ ಜಗಡಿಯಿಗಂದಂ ಸಂದಾಗಲಂ ಪಡಾಗಲಿಲ್ ಅಲ್ಲಾಲುದಂ ಸಂದಿ ಪೃಲ್ಲಪ್ರಿಯದಿಯು ಮುಟ್ಟಿಸಿದ ಸಂಜ್ಞೆಯ ಪಡಿಯಿಲ್ ಪಡಿಯಿಂದಪೆಟ್ಟಿಂ (ಅಗ. ೧೨.೨೮). ೪ಎಂದೆ ಜಿಂಗದ ಧಾಟಿ ನೋಡಿದ ಪರದ ಸಂದಿಂ ಪಡಿದಟಿಪಟ್ಟಿದಿಂದ ಅಲ್ಲಿದ ಅಜಿಪಾಯಿ ಸಜ್ಞಿಪಾಯಿ (ಮೀಮಾ. ೬-೧೦.೬); ಆಡಿ ಮುಟ್ಟಿಲ್ಲ ಸಜ್ಞಿ. ಮಿಟ್ಟಿ ಮುಟ್ಟಿಲ್ ಪ್ರಾಗ (ಗಣ). ೯. ಹೊಳೆ; ಸೀಳಾದ ಧಾಗಿ : ಒಟ್ಟಾಯಿ ಪೀಗಳ್ ಪ್ರಿಯ್ ಪಡಿಯಿಲ್ಲಾಗಲಾಯಿ ಗಜಿಗಿಯಿಂ ಸಜ್ಞಿಗಳ ಪಾಗಿಳಿಯಿಂದಿಲ್ಲಿ ರೀಗಾಕಿಪಡಿಯಿಲ್ಲಿ ಎಟ್ಟಿಪಟ್ಟಿಲ್ ಬಡಿಯಿಪಟ್ಟಿಲ್ಲಿಲ್ಲಿ ಮೊಟ್ಟಿಯಿಲ್ಲಿ ಸಂದಿಲ್ಲಿಪಡಿಯಿಂ ಸಜ್ಞಿ ಪಿಟ್ಟಿಕ್ಕಿಗಾಟಿಗಳ್ ಮೊಟ್ಟಿಯಿಲ್ಲಿ (ಪ್ರಜಾ. ೯-೩೩). ೫. ಕಿರಿದಾದ ಓಗೆ; ಗಡ್ಡಿ : ಮಾಣಿಪು ಅ ಸಂಜ್ಞಾಕಾಯಿಂದ ಕಾಗಾಯಿಂ ಅಜ್ಞಗ ಒಜಿಯಿಂ (ಗಣಿತ. ೧೨). ೬. ಪೊಡವು; ಸಂದ್ಯ : ಪ್ರಾಣಿಗಳ ಮಿಡಿಯಿಂಗಳ್ ಬಡುವ ದಿಂ, ಸಜ್ಞಿಗಳ್ಳಿ ಎಟಿಯಿಂದಿಲ್ ಮುಟ್ಟಿದಿಂದಂ (ಜ್ಞಾಪ. ೨೨). ೭. ವಿಧಿ; ಸ್ಥಿತಿ : ಇಜ್ಜ ಬಟ್ಟು ಶಾಮಿಪ ಇಗ್ಗಿಂದು ಅಟ್ಟಿಪ ಮುಟ್ಟಿಂಪಾಂ ಸಜ್ಞಿಯಿಂ, ಸಿಜ್ಞಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೮. ಅವಸರ; ಸಂದರ್ಭ : ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೯. ಸಮಯ; ಅವಕಾಶ : ಪಟ್ಟಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೧. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೨. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೩. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೪. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೫. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೬. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೭. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೮. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೯. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೨೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦).

ಸಂಜ್ಞೆ, ಸಂಜ್ಞಿ (ನಾ). ೧. ಸೆಗಪು; ಸಂಜ್ಞೆಗಾಗಿ; ಕೂಡು: ಇಷ್ಟಮ್ಮಂ . . . ಕುಸ್ತ-ಮಾಡು: ಸಂಜ್ಞಿ - ಸಂಜ್ಞಿ (ಚಾಣ. ೩೮೫ ಪೂರ್ವಾ). ೨. ಹುಬಿಲ; ಕೊಡಪ : ದಿಶೇಗ ಸಂದು ಪೞೆಯಾಗಲಂದು ಶಬ್ದವಿವಿಧಪತಪ್ತಿಯಿಂದಮು ಮುಳಿದಲ್ ಪ್ರಿಯ ಪೇರಯಿಸಲಿಯದು ನೀಗಲ್ಪಡದೆಂದಿಂ: ಸಜ್ಞಂ (ಅಜಿ. ೧೨-೭೦); ಪಟ್ಟಿಯಾಯಿಸ ಸಿಗೆ ಮಾಳ್ಪಡೆಯೆ ಪಟ್ಟಡಕ್ಕಿಂದ ಬಳಿಕಿಗಿಯಿಂದ ಸಂದರ್ಭಕ್ಕೆ ಸಂಜ್ಞೆ (ಧರ್ಮಾ. ೪೩, ೧೦ ೨೦.೪೫). ೩. ಬಿಡುವು; ಸೀಳು : ಹಿತ್ತ ಇವರ ಮುಟ್ಟಡಿಂ ಮುಟ್ಟಿಸಿ ಸಂಜ್ಞಂ(ಜ್ಞಾ. ೦೦. ಪಂಚಾಜಾಯಿಯಂ ಎಂಬಿಯಂ ಎಂದಪೆಯಿ ಗಾಯಿಯಿಂ (ಅಧಿಗ. ೦-೧೧, ೮): ಒಂದರ ಜಗಡಿಯಿಗಂದಂ ಸಂದಾಗಲಂ ಪಡಾಗಲಿಲ್ ಅಲ್ಲಾಲುದಂ ಸಂದಿ ಪೃಲ್ಲಪ್ರಿಯದಿಯು ಮುಟ್ಟಿಸಿದ ಸಂಜ್ಞೆಯ ಪಡಿಯಿಲ್ ಪಡಿಯಿಂದಪೆಟ್ಟಿಂ (ಅಗ. ೧೨.೨೮). ೪ಎಂದೆ ಜಿಂಗದ ಧಾಟಿ ನೋಡಿದ ಪರದ ಸಂದಿಂ ಪಡಿದಟಿಪಟ್ಟಿದಿಂದ ಅಲ್ಲಿದ ಅಜಿಪಾಯಿ ಸಜ್ಞಿಪಾಯಿ (ಮೀಮಾ. ೬-೧೦.೬); ಆಡಿ ಮುಟ್ಟಿಲ್ಲ ಸಜ್ಞಿ. ಮಿಟ್ಟಿ ಮುಟ್ಟಿಲ್ ಪ್ರಾಗ (ಗಣ). ೯. ಹೊಳೆ; ಸೀಳಾದ ಧಾಗಿ : ಒಟ್ಟಾಯಿ ಪೀಗಳ್ ಪ್ರಿಯ್ ಪಡಿಯಿಲ್ಲಾಗಲಾಯಿ ಗಜಿಗಿಯಿಂ ಸಜ್ಞಿಗಳ ಪಾಗಿಳಿಯಿಂದಿಲ್ಲಿ ರೀಗಾಕಿಪಡಿಯಿಲ್ಲಿ ಎಟ್ಟಿಪಟ್ಟಿಲ್ ಬಡಿಯಿಪಟ್ಟಿಲ್ಲಿಲ್ಲಿ ಮೊಟ್ಟಿಯಿಲ್ಲಿ ಸಂದಿಲ್ಲಿಪಡಿಯಿಂ ಸಜ್ಞಿ ಪಿಟ್ಟಿಕ್ಕಿಗಾಟಿಗಳ್ ಮೊಟ್ಟಿಯಿಲ್ಲಿ (ಪ್ರಜಾ. ೯-೩೩). ೫. ಕಿರಿದಾದ ಓಗೆ; ಗಡ್ಡಿ : ಮಾಣಿಪು ಅ ಸಂಜ್ಞಾಕಾಯಿಂದ ಕಾಗಾಯಿಂ ಅಜ್ಞಗ ಒಜಿಯಿಂ (ಗಣಿತ. ೧೨). ೬. ಪೊಡವು; ಸಂದ್ಯ : ಪ್ರಾಣಿಗಳ ಮಿಡಿಯಿಂಗಳ್ ಬಡುವ ದಿಂ, ಸಜ್ಞಿಗಳ್ಳಿ ಎಟಿಯಿಂದಿಲ್ ಮುಟ್ಟಿದಿಂದಂ (ಜ್ಞಾಪ. ೨೨). ೭. ವಿಧಿ; ಸ್ಥಿತಿ : ಇಜ್ಜ ಬಟ್ಟು ಶಾಮಿಪ ಇಗ್ಗಿಂದು ಅಟ್ಟಿಪ ಮುಟ್ಟಿಂಪಾಂ ಸಜ್ಞಿಯಿಂ, ಸಿಜ್ಞಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೮. ಅವಸರ; ಸಂದರ್ಭ : ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೯. ಸಮಯ; ಅವಕಾಶ : ಪಟ್ಟಿಯಿಂ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೧. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೨. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೩. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೪. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೫. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೬. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೭. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೮. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೧೯. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦). ೨೦. ಸಂಕೇತ; ಆಸಯಿಪಾಡ : ಪ್ರಿಯಾಪಾಡ ಪಾಗಿಯಿಂ ಸಜ್ಞಿಯಿಂ ಪಾಗಿಯಿಂ ಸಜ್ಞಿಯಿಂ (ಜ್ಞಾ. ೧೦೦.೧೦೦).

ಸಂದುಗಟ್ಟು, ಸಂದುಕಟ್ಟು (ನಾ). ೧. ಸಂಧಿಯಾದ ಕಾಲು; [illegible] ೨. ಸಂದಿಗ್ಧಕಾಲು; [illegible]

ಸಂದುಗಾಣು (ಕ್ರಿ). [illegible]

ಸಂದುಗುಟುಕು, ಸಂದುಗುಟುಕ (ನಾ). ೧. [illegible]

ಸಂದುಗೊಳಿಸು, ಸಂದುಕೊಳಿಸು (ಕ್ರಿ). ೧. ಸೇರಿಸು; [illegible]

ಸಂದುಗೊಳ್ಳು, ಸಂದುಕೊಳ್ಳು (ಕ್ರಿ). [illegible]

ಸಂದುಬಲ್ಲೆ (ನಾ). ಒಂದು ಬಗೆಯ ಬಳ್ಳಿ; [illegible]

ಸಂದುಬಿಗು (ಕ್ರಿ). [illegible]

ಸಂದುಬೇನೆ (ನಾ). ಶಿಶುವಿಂದಾಗಿ ದೇಹದ ಕೀಲುಗಳ ಚಲನೆಗೆ [illegible]

ಸಂದುಮೊಳೆ (ನಾ). [illegible]

ಸಂದುವಡೆ (ಕ್ರಿ). ಸೇರು; [illegible]

ಸಂದುವಾತ, ಸಂದಿವಾತ (ನಾ). = ಸಂದುಬೇನೆ [illegible]

ಸಂದುವಿಡು (ಕ್ರಿ). [illegible]

ಸಂದುಸೇರುವೆ (ನಾ). [illegible]

ಸಂದೂಕ, ಸಂದುಕ (ನಾ). ೧. [illegible] ಮರ ಮುಂತಾದವುಗಳಿಂದ ಮಾಡಿದ ದೊಡ್ಡ ಪೆಟ್ಟಿಗೆ; [illegible]

ಸಂದೃಷ್ಟ (ಗು). [illegible]

ಸಂದೃಷ್ಟಿ (ನಾ). ೧. [illegible]

ಸಂದೆ 'ಸಂದ' ನೋ.

ಸಂದೆಗ 'ಸಂದೆಯ' ನೋ.

ಸಂದೆಗೊಳ್ (ಕ್ರಿ). [illegible]

ಸಂದೆಗಾಡು [illegible] ನೋ.

ಸಂದೆಗಟಾ (ನಾ). [illegible]

ಸಂದೆಯಿಸು (ನಾ). ೧. [illegible]

ಸಂಜೆಮು, ಸಂದಯ, ಸಂದಿಮು, ಸಂದಿಗ, ಸಂದಿತ, ಸಂದಿಗೆ (ನಾ). ೧. ಆಯುಮಾನ; ಸಂಚಿಮ : "ಸಂದಿಮುಮುಂ ಸಂದಿಗಂ" (ಭಾಮ. ೭೦-೬೧); ಇತು ಕೆಲ್ಲ ದುಃಖ್ಮಮೊಂದುಮಿಲ್ಲದುಮುಮೊಂದಿ ಬಾಡದುಮುಂ ಒಡದಂ ಸಂದಿಮುಮ್ಮಿದ ಸದ ಜಳಸಂದೋಹಮುಮಿಲ್ಲದು ಅತ್ಮಭವಾಸ್ಪದಮೆಂಬ್ (ಭಾಮ. ೨-೧೪); ಬಿಡದ ಸಂದಿಮುಮಾಮ್ಮಿದಿರೆ ದುಃ (ಅತ್ತಿ. ೪-೭); ಳಿಂದ ಸಂದಿತ ಮೋಗಮಿಲ್ಲ ಸಂದಿಂ ಬಗೆಯಾದಪ್ಪಿಮಿದಾಗಿಂ ಒಡದಿಂ ಪೃಸಂಗಾದಿ ಪ್ರಾಣಾಯಾಮಂ (ಗದಾಪ. ೬-೧೧); ಆವೊಡಂ ಒಡ್ಡಿಂ ಸಂದಿಮುಮ್ಮಿಂ (ಅತ್ತಿ. ೪-೪). ಸಂದಿಮು : ೧. ಸಂದಿಮಾಂಚಿಯಿಂದ ಮುನಿ ಸಣ್ಣಿಸಲೊಡನೆ ಬಗೆಯಿಸಿಳುಂ ಲಂಡಿದು; ವಿಜಯಿ ಗಾಂಧರ್ವಂ ಒಡದಂತ್ ತಳ್ಳಲಿದ್ದಲುಮಾಯ್ತಮಿತ್ತೆಂತೊ (ಭಾಮಾ. ೧೦-೧೩); ಬಿಡಿಯೊ ಭಯಂ ಬೀರಾಧಾರ್ಯಂ ದಯೋಪಯುಕ್ತಮಲ್ಲದಿದೆಂಬ ಸಂದಿಮಂ ಪೃಜ್ಞಾ ಬಲಿಯುಮದಂ ಸಂದಂಗಮುಮಿಲ್ಲಂ ದಯಾ ಗುಣಮಿಲ್ಲಂ ಬೂಡಿಲ್ಲಂ (ಅತ್ತಿ. ೬-೧೦); ಸಂದಿಮುಮ್ಮಿದಯಿಂ ಪೃಜೆಯಂ ಬೇಡಿದಂ ಅಭಿಮಾನಾಧಿಕ್ಯಂ ಮಹಾಸಂಪತ್ತಿಯಿಂದಂ ಸಮಸಿಂಹಾಸನಮನಿತ್ತಂ ಪೃಥಿವಿಯಂ ನೀಡಿದಂ (ಅತ್ತಿ. ೬-೧೪). ಸಿಂದಿಮು : ೧. ಒಂಬಮುಳಿಂ ಗೃಗ; ಬಿಡಂ ಅಳ್ಳಣಮುಮಿ ಸಂದಿಂದಿ ಪಿಜ್ಞ ಗಿ (ಅಜಿತ. ೪೨). ೨. ಆಯುಮಾನದಿಂದ ಒಡಿದವನು; ಸಂಪಯಗ್ಗೆಸ್ಸ : ಸಂದಿಮಿಂದಿ ಬ್ಯಾಡ ಪಿಜ್ಞ ಗೊಳ್ಳುರಿಂದಮ್ಮ ಭಾಷಾಂ ಬಿಂದಿಮಿಸಿಗಿಸ್ಸ ಪಿಜ್ಞ ಅತ್ಮಯಂ (ಅಜಿತ. ೬.೬). ಸಂದಿಗೆ : ೧. "ಸಂದಿಂ ಪಿಜಿಯಾರ್ಂ" (ಅಜಿತ. ೪೨); ಬಿಸ್ಸ ಳ್ಳಿಯಂ ಪೃಜ್ಞಪ್ಪಿಂ ಪಿಜ್ಞ ಮಾಂಜ ಪಿಂದಿಮಿಸಿಗಿಂದ ಸಂದಿಗೆಯಿಯಾಗಿ (ಅಜಿತ. ೧೨೨); ಪೃಥಿವಿಯಿಂದಿಂದ ಸಂದಿಗೆ ಬಿಗಿದ ದೊಡೆಯಿಮಿಯಿಂದಿಂದಿಂದಿಂದ ಪಜ್ಞಿಲಿಂ ಬಿಸ್ಸಿಯಂ (ಅಜಿತ. ೮-೨೧); ಸಂಪೆಗಿಯಂ ಮಿಸಿಯಿಸ್ಸಿಯಂ ಬಂದಿ (ಅಜಿತ. ೬-೨೩). ಸಿಂದಿಮ : ೧. ಳಿಂದಿಂ, ಮಿಸಿ ಸಂದಿಮ (ಭಾಮಾ.೧೪೦) ಬಿಂದಿಮಿಮ್ಮಿ, . . . ಬಿಗಿ ಸಂಪಂದಿಮಿಸ್ಸಿಯಾಗಿ ಪೊಂಬಾಪಿಸಿ (ಭಾಮ. ೧೩-೧೬); ಸಂದಿಸಿಗಿಂ ಬೀಸ ಬಾದಿಸಿಯಿಂದಿಂ ಪೊಂಬಿಸಿಯಿಂದಿಂ (ಭಾಮ. ೧೪-೭). ಸಿಂದಿಸಿ : ೧. ಳಿಂದಿಂ ಮಿಸಿ ಸಂದಿಸಿ (ಭಾಮಾ.೧೪೦) ಬಿಂದಿಮಿಮ್ಮಿ, . . . ಬಿಗಿ ಸಂಪಂದಿಮಿಸ್ಸಿಯಾಗಿ ಪೊಂಬಾಪಿಸಿ (ಭಾಮ. ೧೩-೧೬); ಸಂದಿಸಿಗಿಂ ಬೀಸ ಬಾದಿಸಿಯಿಂದಿಂ ಪೊಂಬಿಸಿಯಿಂದಿಂ (ಭಾಮ. ೧೪-೭). ಸಿಂದಿಸಿ : ೧. ಇಂದಿಂ ಬಿಸ್ಸಿಯಂ ಪೊಂಬಿಸಿಯಿಂದಿಂ (ಭಾಮ. ೧೪-೭). ಸಿಂದಿಸಿ : ೧. ಇಂದಿಂ ಬಿಸ್ಸಿಯಂ ಪೊಂಬಿಸಿಯಿಂದಿಂ (ಭಾಮ. ೧೪-೭).

ಸಂಜೆಮುಂಬು , ಸಂದಿಗಂಬು , ಸಂದಿಯಂಬು (ಕ್ರಿ). ಆಯುಮಾನಿಮು; ಕ್ರಿಯೆಯಿಂ: ಸಂದಿಂಬುಮಿಂ ಅಲ್ಪಪ್ರಮಾಣಮಿಂ ಬಿ ಳ್ಳಿಪ್ಪಿಸ್ಸಿಮ್ಮಿಯಂ (ಭಾಮಾ. ೨-೨೪); ಬಿಂದಿಂಬುಮಿಂ ದೀರ್ಘ ಮಾಮಾಂಗಿಂದಿಂ ಸಂದಿಂಬುಮಿಂದಂ (ಗದಾಪ. ೬-೪೪). ಸಂದಿಗೆಂಬುಮಿಂ: ಅಲ್ಪಪ್ರಮಾಣಮ್ಮಿಂದಂ ಒಮಾಯಿಸಿಯಿಂದಂ ಬಿಂದಿಂಬುಮಿಂದಂ ಮಿಂದಿಂಬುಮಿಂದಂ ಸಂದಿಂಬುಮಿಂದಂ (ಭಾಮಾ. ೧೪-೬). ಇಬಮೊಂದುಮಿಂದಂಕ್ಕಿಂದಂ ಶಕ್ತಿ ಮುಂದಿಳ್ಳಿಪ್ಪಿಂದಂಬುಮಿ, ದೆಂಬಿಂದಂಬುಮಿ (ಭಾಮಾ. ೧೪-೬). ಸಂದಿಂಬುಮಿಂ : ಒಂದಿಮ್ಮಿ ಭಾಗಿಂ ಕೆಲ್ಲ ಮಿಂದ ಮಿಂಗ್ಳಿ ಸಂದಿಂಬುಮಿಂದ ಪಿಜ್ಞ ಪ್ರಿಂದಂ ಎಂದಿಂದಂ ಮಿಂಗ್ಳಿದಿಂಬುಮಿಂಗ್ಳಿ ಮುಂದಿಳ್ಳಿಪ್ಪಿಸ್ಸ ಸಂಬಿಳ್ಳಿಪ್ಪಿಸ್ಸಿಯಂ (ಭಾಮಾ. ೧೪-೬). [ಸಂದಿಂ + ಬುಂ.]

ಸಂದಿಂದಿಮು ‘ಸಂದಿಯಂಬು’ ನೋ.

ಸಂದಿಮಾನ (ನಾ). ಸಂದಿಮು ಕೆಲ್ಲುನ್ನ ; ಸಂಧ್ಯಾಕಾಗಿ: ಬಾಧಾಗಾಲಂದಿಂಪ್ಪಿಸ್ಸಾಗಿ ಸಂದಿಂದಿಂದ ಬಂದಿಳ್ಳಿಗಿಂ (ಅತ್ತಿ. ೭-೨೨). [ಸಂದಿ (< ಸಂದಿ) + ದಿಂದ]

ಸಂದಿಮುಮು (ನಾ). ಸಂದಿಮು ಹೊಯ್ದು ; ಸಾಯಂಕಾಲ : ಕೊಟ್ಟುಮಾಂದಂ ಸಂದಿಮುಮಾಯಾಂದಂ (ಗದಾಪ. ೭-೧೪). [ಸಂದಿ (< ಸಂದಿ) + ಮುಮು.]

ಸಂದಿಯ ‘ಸಂದಿಯ’ ನೋ.

ಸಂದಿಗೆ ‘ಸಂದಿಯ’ ನೋ.

ಸಿಂದಿಗೆ (ನಾ). ೧. ಅಳ್ಳಿ ; ಅಳ್ಳಿಗೆ : ಮಾಳ್ಪಂ ಬಿಜಿಗೆ ಪೃಜ್ಞಮಾಣಾಂ ಮಿಳ್ಳಿ ಳಂದಿಂ ಪಾಣಿಳಂದಿಂ ಒಣ್ಣಾಡಿಸಿಯಿಂದ ಮಿಳ್ಳಿಂ ಬಿಜಿಂದಿಂ ಸಂದಿಂದಿಂ ಪೃಜ್ಞಿಯಿಂ (ಅಗ. ೬-೮ ಆ). ೨. ಸಿದ್ಧಿ ; ಸಮಾಪಿಸಿ: ಸಂದಿಂದಂ ಬೀದಿಂದಂ ದಿಸಿಯಿಂದಂ ಬೀಗ ಸಂಬಿಸಿಯಿಂ (ಗದಾಪ. ೬೮); ಇತು ಕೆಲ್ಲ ಗಿಸಿಗಿಂಗಿಂ ಒಂದಿ ಸಂದಿಂಬುಮಿಂ ಸಂದಿಂದಿಂ (ಭಾಮಾ. ೧೪-೧೪). ೩. ಮಹಿತಾತ್ಮ ರ ದಿವ್ಯಶ್ರೀಗಳು ಮಿಸಿಯಿ, — ಹೇಳಿಕೆ : ಬಾಣ್ಮಕಂಗಳಿಂ ದೃಸ್ಸಾಸಿಸ್ಸ ಪೊಂಬಿಸ್ಸಿದಂ ಮಿಸ್ಸಿ ದೃಸಿಂದ ಅಳ್ಳಣಿಂ ಇಂದಿಯಿಂಗಿಂ ಧೃಡಾಪಿಯಿಂ ಸಂದಿಂದ ಮಿಗಿಳಾಗಿಂ ಗಿಂಗಿಂದ (ಅತ್ತಿ. ೧೮-೧೦). ೪. ಒಂದು ಬಗೆಯ ಸಿಹಿತಿಂಡಿ : ಸಂಜೆ ಮುಂದೆ ಕೆಸರು ಒಂದು ಸಂದಿಗೆ ಮಾಡ ಪಂದು ಬಾಡುವಿದರು (ಅಭಿ. ೬೮೯), ಅದು ಗೃಹಯಾಗ್ರಿಸ್ಸ ಪೆರಮಕೊಡಿಸ್ಸ ಗೊರಬಿಗಾಗು "ಸಂದಿಗೆ ಪ್ಪಿಂ" ಎಂದ (ಅಜಿ. ೧೦೦). [ಪಾ.]

ಸಂದಿಗೆಕಾಱ್ಱ (ನಾ). ಸಂದಿಗೆಪಕ್ಷೇ ವಿಷಯವಾಗಿಸ್ಸಿ ರಚಿಸಿದ ಕಾವ್ಯ; ಮೊಳಗಿಮೊಡೆದ ಮಡಿದಿರಿಯ ಕಾವ್ಯ : ಸಂಸ್ಕೃತದಿಂದ ಹೊಗ, ಳ್ಳಡಕಿಂದ ಸಂದಿಗಾಱ್ಱಗಳು ರಚಿತವಾಗಿವೆ (ಎಷ್ಟ). [ಪಾ.]

ಸಂದಿಗೆಮಣೆ (ನಾ). ಸಿಬ್ಬಿಯನ್ನು ಒಯ್ಯುವವನು; ದೊಡ್ಡ : "ಸಂದಿಗೆಮಣಿ, ದೊಡ್ಡ, ೨ ದೊಡ್ಡ ಪೊಯಿಗಳು" (ಅಣ್ಣಿಗ. ೫೮). [ಪಾ.]

ಸಂದಿಗೆಯಿಂ (ಕ್ರಿ). ತಿಳಿದು; ಪೇಳಿ : ಗಾಱ್ಱಗಾಱ್ಱಗಂದಱಿಯಂ ಮಹಾತ್ಮರ್ ಕಾಱ್ಱದಿಯಿಂದ ಮಾರಗ ಸಂದಿಗೆಯಿಂದಂ ಧರಣಿಪ್ರಭುವರ್ದಿಂಗಿಂದಂ) ಮುಖಂಡಿಸ್ಸ ಪೆಮಡಿಗಳ್ (ಗದಾಪ. ೫೮.); ಆದೆ ಅಭಿಪ್ರಾಯವನ್ನು . . . ಇ. ನೈರಾಶ್ಯಗೊಂಡೂ ಸಂದಿಗೆಯಿಂದ (ಹಾಸ್ಯ. ೬ ಮುಖ್ಯ). [ಸಂದಿಗೆ + - ಇಂ.]

ಸಂದಿಗೆ (ನಾ). ೧. ಆಯುಮಾನ ; ಸಂಪಯ : ಆಳಿದ ಆಯಿಂಬಿಯಂದ ಸಂಬ್ಬಿಯಿಂ ಪೊಯಿಂಬುದು ಸಂದಿಗೆಯಿಂದ ಕೃಗಾ (ಅಭಿ. ೬೨-೧); ಇಗ ಪಲರ ಯೊಕ್ಕಿಮಾಯಿಕ್ಕಿಗಳಾಗಿಂ ಪೋಲ್ದ ಪಾಯಿ ಮಿಗಾಪ್ತಿಯಿಂ ಬಾಲಂ ಕೆಲ ಲಂಬಾಪಿಂ ಪೊಲಿಂಬುದು ಪೊಲಿಗಿಲಂ ಪ್ತಿಂ ಪಲಿಪ್ತಿಂ ಸಂದಿಗೆಯಿಂ (ಭಾಮಾ. ೧-೮-೬೬); ಅಲಿಯಿಸ್ಸಿ ಅಂದು ಮಗಿ ಸಂದಿಗೆಯಾಯಿಂ (ಭಾಮಾ. ೭೦). ೨. ಆಪಾಯ; ವಿಪತ್ತು. ೩. [ಶಬ್ದವಿ] ಕಿಬಿಯನ್ನು ಮುಂಡಾದ ಆಭರಣಾಲಂಕಾರಗಳನ್ನಿಲ್ಲಿ ಒಂದು : ಪಾಮಿಸಿಂಗ್ಳಿ . . . ಸಂದಿಗೆ ಧೃನಿ . . . ಅಲಾಪ್ತಿದಲು ಅಂಡಿಕ್ಷಿದಂಗಾಲಂಗಳಿಂದಲೆಗಳಿ (ಅಜಿ. ೧೮೯); ಇಷ್ಟಿಸ್ಸಿಮೊಲಂಗಳಾಗಿ ಅಳ್ಳಿಸಿಯಾಗಿ ಸಂದಿಗೆಪ್ತಿ ಸಂದಿಗೆಯಾಂಗಾಲಂಗಳಿಂದ (ಭಾಮ. ೧೪೬). [ಪಾ.]

ಸಂದಿಗೆಪ್ತಿ (ನಾ). ಆಯುಮಾನದಿಂದ ಒಡಿದವನು; ಸಂಪಯದಿಂದ ಒಡಿದವನು: ಮಿಸ್ಸಿಯಂ ಒಳ್ಳಿಗಂ ಸಂದಿಗೆಪ್ತಿಗಳಂ (ಅಜಿ ೧೧-೧೩); ಅಪಾಂ ಭೃಗಾಂ ಸಂದಿಗೆಪ್ತಿಗಳಂ (ಭಾಮಾ. ೧೧೨). [ಪಾ.]

ಸಂದಿಗೆಪ್ತಿ (ಕ್ರಿ). ಆಯುಮಾನವನ್ನು ಳೆದುಕೊಳ್ಳು; ಪಂಪಯಮ್ಮು ಬಾಗಿ: ಒಂದೇ ಹೊಡೆದ್ದಿ ಮಿಂದ ಮಿಂಪಿಯಿಂದ್ದಿ ಬಿಂದ ಸಂದಿಂದ ಳೆದಿ ಅಪಾಯದ ಸಂದಿಂಪಿಯಿಂದ ಪೊಂದಿಂಗಿಂದ್ದಿಯಿಂದ್ದಿಗೆ ಪೊಲಿಂಬುಪ್ತಿಯಿಂದ (ಹರಿಶ. ೬೨-೧೦೦). [ಸಂದಿಗೆ + ಅಲ್ (< ಅಲ್ಪ್).]

ಸಂದಿಗಾಱ್ಱಪೊಗ (ನಾ). ಆಯುಮಾನದ ಪರಿಹಾಸ; ಸಂಪಯನಿಸಾರಗಳ: ೧೫ ಪಿಂದಿಂಬುಂ ಧರಣಿಪ್ತಿಯಾಳಿದಂ ಮಿಂಬಿಯಿಂ ಸಂದಿಗಾಱ್ಱಪೊಗಳಿಂದ ಗೃಮಿ ಪಿಳಿಪಿಯಿಂ ಮಿಟಿಂಬುಂದಿಂ (ಭಾಮಾ. ೧೨-೧೨). [ಪಾ. ಸಂದಿಗಾಱ್ಱಪೊಗಳಿ]

ಸಂದಿಗಾಱ್ಱಪೊಗಳಿ (ನಾ). = ಸಂದಿಗೆಪ್ತಿ ೩. : ಪೂರ್ವದ ಅಭಿಪ್ತಿ ಅಳಿಯ ಪಿಂಬಿ ಸಂದಿಗಾಱ್ಱದಿಂದ ಪೋಗಿಬಿಟ್ಟಿದಲು ಪಾಗಿತ್ತ ಸಂದಿಗಾಱ್ಱಪೊಗಳಿಯಿಂದ (ಭಾಮಾ. ೨೫-೨); ಸಂಪ್ತಿಯಿಂಬುದಾಗಿ ಅಳ್ಳಿಸಿಯಿಂದ ಪಾಗಿತ್ತ ಸಂದಿಗಾಱ್ಱಪೊಗಳಿ ಸಂದಿಗಾಱ್ಱಪೊಗಳಿಂದ ಪಾಗಿತ್ತಿದು (ಭಾಮ. ೫೬.). [ಪಾ.]

ಸಂದಿಗೆಂ (ನಿ). ೧. ಸಂಪಯಗೊಳ್ಳಿಸಿದ ; ಆಯುಮಾನಿಯದ : ಅಂಬಿಯಂ ಬಂದಿಪ್ತಿಂ ಸಂದಿಗೆಂ ಮಾಡಿದಾ ನೀ ಳೆಂಗಾ ಅಂಬಿಯಿಂಗಾಯಿಪ್ತಿಂ ಬಿಪ್ತಿ ನೀ ಳೆಂದಿ ಸೊಗಂ (ಭಾಮಾ. ೨೮೦); ಬಿಂದಿಂ ದೀರಿಂ ಪೃಜಾಪಿಂದಿಂ ಸಂದಿಂ ಮಾಡಿ ನೀ ಳೆಂಗಾ (ಭಾಮಾ. ೨೮.೧೧೫೫). (ನಾ). ೨. = ಸಂದಿಗೆಪ್ತಿ ೨ : ಸಂಬಿಗಾಂಗಿ ಒಂದಿಮಿಯಾಂದ ಸಂದಿಂ ಸಾಯಿಪ್ತಿ (ಹೊಂಗಾ. ೧೧೦); ಸಂದಿಂ ಬಿಪ್ತಿಗ ದೀರ ನಿಪ್ಪಂದಿಂಬಿಯಾಂಗಾಯಿಂದಂ (ಭಾಪ್ತಿ. ೧೧-೨೩). [ಪಾ. ಸಂದಿಂಬಿಲ್]

ಸಂದೇಹನು (ಕ್ರಿ). ಅನುಮಾನಿಸು; ಸಂಶಯಿಸು: ಇಲ್ಲಿಂದು ಸಂದೇಹವೇಕೆ ಆಜ್ಞೆಯಂತು ಮಾಳ್ಪಿರಿ (ರಾಮಾ. ಪಾರ-೧೨೮); ಶತ್ರುಲಂ ನಿಜಾನಿ ಸಂದೇಹಪಡೆ ಪೆಸ್ಸ ಬಲಾಢ್ಯ (ಪಾರ್ವ. ೧-೧೩); ದೈವೀಕಪ್ರಗಂ ಅಳ್ಳಡೆ ಅಸ್ಪಷ್ಟ ಬಗ್ಗೆ ಸಂದೇಹಪಟ್ಟಾಕೆ (ಪಾರ್ವ. ೧೭೧). [ಸಂದೇಹ + - ಆಡ್]

ಸಂದೇಹಿಸು (ಸಾ). ೧. ಶಾಲು ಕರೆಯುವುದು, – ಒಂದಿಷ್ಟು ಎಲ್ಲು ಗೊತ್ತುಗುರಿಂದ ಆರಿದ ವಿಷ್ಯಾಕಾಲು. ೩. ಸಮೀಪಿಸು; ಗುರಿತ್ತಿ : ಸಂದೇಹಿಸಿ ಮಹಿಷ ಮಾಳಾಸುರಮೇಷಾದ ಬಗಿಮಾಳ್ಪಿಸಿಂ ಳೆಕಮ್ಮು ಎಂದುಮ್ ಗಂಗರೊಳ್ ಎಲ್ಲಿಸಿದ್ ಪೊಗಳ್ದಿರ್ ಪೊಗಳ್ದಿರ್ ಪೊಗಳ್ದಿರ್ ಎಂಬಿರ್ ಪೊಗಳ್ದಿರ್ (ರಾಷ್ಟ್ರಕೂ. ೧೦-೧೩); ಬಹುಮಾಸಾರ ಸಂದೇಹಪೆರೊಳ್ ಮಲಿಸಿಂ ಮಾಸಿದ ಮಾಸ್ಟ್ರ ಈಕಾಪಿಂ ಪೊರಂ ಧಾತಾಧೂಪಿಂದೆಂ (ಪಾರ್ವ. ೬-೭). ೪. ರಾತ್ರಿ; ಗುರ್ತ್ತಿ : ಇಲ್ಲಿಗ್ಗೆನ್ನ ಮಾಡಿಂ ಮಾರ್ಗಾಳಾಪಿಂಡಿಂಡಿಂ (ರಾಷ್ಟ್ರ ೦-೦); ಸಿನ್ನಿಮಾಪಿಂಡಿಂಡಿಂಡಿಂ ಪೆಸ್ಸಿಂದಿಂ (ರಾಷ್ಟ್ರಾ. ೧೨); ಭೃತ್ಯಪಿಂಡಿಂಡಿಂಡಿಂಡಿಂಡಿಂ (ಪಾರ್ವ. ೧-೦). ೫. [ಸ್ಮೃತಿ] (ಗೃಹಗಳ) ಕೂಡು; ರಾತ್ರಿ (?): ರಾಜಾ ಮಂಚಿಂಡಿ ಪಟ್ಟಿದ ಗಂಡಂಗಳ್ಗಳ್ಗೆಯ ಒಂಬಾಪಿಂಗ್ ಪಲ್ಲಿಪಿಂಡಿಂಡಿಂ ರಾಜಾಪಿಂಡಿಂಡಿಂಡಿಂಡಿಂ ಪೆಸ್ಸ ಡಿಂಡಿಂಡಿಂಗ್ಳಿಂ ಪೊಗಳ್ದಿಂ (ಪಾರ್ವ. ೬-೦). [ಸಂ.]

ಸಂದೇಹಾಪಹ (ನಾ). ೧ ಸಂದೇಹಾಪ ೬. : ಅಜಾಪಾಪಿಂಡಿಂಡಿಂ ರಾಜಾ ಸಿನ್ನಿಂದ್ರಾ ಪಿಂಡಿಂಡಿಂಗ್ಳಿಂ ರಾಪಿಂಡಿಂ ಸಿಂಡಿಂಡಿಂಡಿಂಡಿಂಡಿಂ (ಪಾರ್ವ. ೬-೨೯). [ಸಂ.]

ಸಂದೇಹಾಪಹ (ನಾ). ೧. (ಶಾಂಗಿಂಗಂ) ಕೊಡುವಿಂ; ನೀಡುವಿಂ. ೩. ಸಮೀಪ; ಗುರಿತ್ತಿ. [ಸಂ.]

ಸಂಧ (ಗು). ೧. ಪಡೆದಿರುವ; ಹೊಂದಿರುವ. ೩. ಜೋಡಿಸಿದ ; ಹೆಗೆದ. ೬. ಇಟ್ಟ; ಇರಿಸಿದ. (ನಾ). ೧. ಪಡೆದಿರುವ; ಹೊಂದಿದವರು: "ಸಂಧಂ ಪರಿಜಾತಮೆಂಬೊಡಿಂದಮಿಂದ್ರಾಜಾಪಿಂಡಿಂಡಿಂಡಿಂ" (ಪಾರ್ವ. ೧೨೪-೧೦೬). [ಸಂ.]

ಸಂಧನ (ನಾ). ೧. (ಬಟ್ಟೆ, ಮುಂತಾದವನ್ನು) ಧರಿಸುವಿಂ; ತೊಡುವಿಂ. ೩. ಕೂಡಿಸುವಿಂ; ಸಂಗ್ರಹಿಸುವಿಂ : ಸಂಬಂಧಾಲಾಪಿಂಡಿಂಡಿಂ ಧಾರಾಪಿಂಡಿಂಡಿಂ ಸಂಧಾನಿಂದಾಂಗಂ ಬಪಿಂಡಿಂಡಿಂಡಿಂ (ಪಾರ್ವ. ೨೯೨). [ಸಂ.]

ಸಂಧಾಪಿ (ನ). ೧. ಪಾಲು; ಹೊಲ : ಪಿ ಗುಣಾಳಿ ಪೃಗಾಳ್ಗಿ ಪಿಂಡಿಂಡಿಂ ಪೊಡೆಂಡಿಂಡಿಂ ಪಿಗ್ಗಿಪಿಂಡಿಂ ಆಪಿಂಡಿಂಡಿಂಡಿಂಡಿಂಗಿಂ ಪಿಂಡಿ ಸಂಧಾಪಿಂ ಪಿಂಡಿ ದಿಗ್ಗಿಪಿಂ (ಪಾರ್ವ. ೫ ೫). [ಸಂಧಾನ + - ಆಪ್]

ಸಂಧಾನ (ನಾ). ೧. ಸೇರಿಸುವುದು ; ಹೊಂದಿಸುವುದು : "ಸಂಪಿಂಡಿಂಡಿಂ . . . ಸಂಧಾನಂ" (ಪಾರ್ವ. ೨೦೦); ಭಾಷಾಸಂಧಿಗೆ ಮಣಿಯ್ದು ಹೊಂದಿಕ್ಕಿದ (ಅಭಿ ೧೧೨). ೩. ಸಂಪಿಂಡಿಂಗೆ; ಸೇರುವಿ : ವಿಪಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂ ಧಾರಾಪಿಂಡಿಂಡಿಂಡಿಂ ಸಂಧಾನಂ (ಪಾರ್ವ. ೧-೨೨); ಅಭ್ಯಸಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ (ಪಾರ್ವ. ೧೨೮). ೪. ಸೇರುವಿಕ್ಕಡೆಯ; ಬೆಸೆಯುವಿಕ್ಕಡೆಯ : ಧೃಷ್ಟ ಇದ ಸಂಧಾನಿಯಿಂದ ಸ್ಪಷ್ಟಿಸಿ ಮಾಡಿಸಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ (ಪಾರ್ವ. ೬-೦೦). ೫. ಬಂಧ; ರಚನೆ : ಪಾಪಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ ಪಿಂಡಿಂಡಿಂಡಿಂಡಿಂಡಿಂ (ಪಾರ್ವ. ೧೦-೨೦ ಅಚ್ಚು). ೫. (ದಿವ್ಯದ ಪದಗಳ) ವಾಕ್ಯವನ್ನು ಹೊಂದಿಸುವುದು : ಸಮಸ್ಯೆಂ ಸಮಸಂಧಾನಂ ಸಮಾಪ್ತಿಯಾಪಿಂಡಿಂಡಿಂಡಿಂಡಿಂಡಿಂ ಸಮಿತಿಂಗಂ ಸೊಗಂ (ಪಾರ್ವ. ೧-೦೦); ಅಪಾಯದಿಂದಗ್ಗಂಳ್ಕಾಪಿಂದಿಂದಿಂದಿಂದಿಂ ಪಾಗಳ್ಕಿಂ ಪೋಗಂ ಸಂಧಾನಮೆಮ್ಮುದ್ಯಂ ಮಾಪ್ತಿ ಮಂಧಿಂಡಿಂಗಳ್ಗಂಳ್ಗಂಮಂಡಿಂಡಿಂಡಿಂ (ಪಾರ್ವ. ೧). ೬. ಒಟ್ಟಾಗಿ ಕಟ್ಟುವಿಕೆ ; ಬಂಧಿಸುವಿಕೆ. ೭. ಪಣ್ಣ; ನಿಯಮ; ರೆಟ್ಟು : "ಸಂಧಾನ, ಮಾಯೆ, ರಾಮ - ಈ ೩ ಅಚ್ಚ" (ಪಾರ್ವ. ೧೦-೧೨೨). ೮. (ಶಿಷ್ಟರ ಮುಂಜಾವಿದ್ದಳ್ಗನ್ನು) ಮಿತ್ರವಾಡಿಸುವಿಂ. ೯. ಪರಿಸಿಸುವು; ಮಿತ್ರಗಾ. ೧೦. ಒಪ್ಪಂದವಿಂ; ರಾಜಿ : ಯಂ ಅಚ್ಚ ಸಂಧಿಯ ಪರಾಪಿಂಡಿಂಡಿಂಡಿಂಡಿಂಡಿಂ ಸಂಧಾನಮಿಂದಂ ಪೊಡೆಂಡಿಂಡಿಂಡಿಂಡಿಂ (ಪಾರ್ವ. ೬-೦೦); ಧಾರಿಸಿ ಸಂಧಾನ ಧಾರ್ಮಿಕ ನಿಲಿಸ್ಪ ನಿಲಿಸಿ ಪೊಡೆದ ಪಾಗಿಸಿಂದ್ರದ ನಿಲಿಗೆ ಸಿಂಡಿ ಯಾಪಿಂಡಿಂಡಿಂಡಿಂ (ಗಾಪಾ. ೧೦-೧೩); ಮುಂದುಳಿ ಒಪ್ಪಿದ, ಮುಂದುಳಿ ಯುದ್ಧ ಆದಿದ ಸಂಧಾನ ದೊರಕಿ ನಿಲ್ಲ (ಪಾರ್ವ. ೫-೧೪). ೧೧. ಸಮಾಪ್ತಿ ; ಸಂಗ : ರಾಜ್ಯರಾಂ ಪಡಗಳಾಂ ಸಂಧಾನದ ಇಂದಿಲ್ಲ (ಪಾರ್ವ. ೦೩). ೧೨. ಒಳ್ಪಿಯನ್ನು ಬಾಯಿಪಿದನು; ಕೈಗೆಂತ : ಆ ಮಹಿಳಾಧಿಪನ ಸಂಧಾನವು ಮನ್ಮಥನ ಯಾಪಾಯಿದ ವಿಳಾಸ್ಪದಲ್ಲಿ ಅಭ್ಯಸಿ (ಪಾರ್ವ. ೧೨-೧೩). ೧೩. ಗುರಿಯಾಪಿಸುವುದು. ೧೪. ಸಿಂ; ಲಕ್ಷ್ಯ. ೧೫. ಹೊಡಿಯಿಂದ; ಪಾಳಿಯಿಂದ. ೧೬. ಕಂಪನ್ನು ತಪ್ಪಿಯಿಂಡಿಂ : "ಸಂಧಾನ, ಅಭಿಷು – ೨ ಪೆಸ್ಸ ಮಾಡಿಪ್ಪಕ್ಕೆ ಹುಲು" (ಪಾರ್ವ. ೬೨೯). ೧೭. ಅಂಬುಲಿ; ೧೧೦೦ : "ಧಾನ್ಯಾಪ್ಪಿಂ, ಅಪಾಯಂ, ಸಂಧಾನಂ, ಗಾಪಾಯಂ, ಪಿಂಡಿಂಗಂ – ೫ ೫ ಅಂಬುಲಿ" (ಪಾರ್ವ. ೫೬-೧೬). ೧೮. ಜಗಳೋಗ್ಗಾಡ; ಮಾರಿಸ್ಪ. ೧೯. ಒಂದು ಬಗೆಯ ಮದ್ಯ. ೨೦. ಅನ್ಯಸಗಾಯಿಯನ್ನು ಸಮಾಪಿಸಿಂಡಿಂ. ೨೧. ಒಂದು ಬಗೆಯ ದೋಣಿ; ಕಂಪಿ. ೨೨. ಅಪಾಯ; ಹೊಡಿ : 'ಸಂಧಾನಂಗಳ್' ಪಠಾ. ೨೩. [ಶಾಸ್ತ್ರವಿ] ಅಂಚಪಾಲಂಗಾಗಳಲ್ಲಿ ಒಂದು: ವಿಜಿಂಗಂ ಪಠಾಪಾಯಂಗಳಾಂ ಮಧ್ಯ ಧ್ರುವಮಿಶ್ರಾಂ ಪಠ್ಯ ವಿಜಿಂಗಾಯಿಸಿಂದ್ರವು ಯಿಂಂ ಯಾಪಾಳ್ಕಿಂಯಿಂದಾಯಿಂ ಸಂಧಾನಾಂಗಂ (ಪಾರ್ವ. ೬-೦೬). [ಸಂ.]

ಸಂಧಾನಗೆಯ್ (ಕ್ರಿ). ೧. ಅಜಾಪಾಯ ಹೊಡು; ಯುಪ್ಪಿಯಾಯಿ : ಯಿಂಂ ಬಗೆಯಾಂ ಸಂಧಾನಗೆಯ್ದು ಪಠಾಪಾಯಿಂ ಯಾಪಿಂಡಿಂಡಿಂಡಿಂಡಿಂ (ಪಾರ್ವ. ೧೪-೪). ೩. ಸಿದ್ಧಪಡಿಸು; ಪೆಯ್ದಾಯಿಂ : ಯಾಪಾಂ ಧೀಂಪಾಂಗಳಾಂಪ್ಪಕ್ಕೆಯಂಗಳಾಂಗಳ್ಗಾಂ ಸಂಧಾನಂಗೆಯ್ದು (ಪಾರ್ವ. ೫-೦೦ ಪ). [ಸಂಧಾನ + ಪೆಯ್]

ಸಂಧಾನಗೆಯ್ದು (ಕ್ರಿ). ೧. ಸೇರಿಸು; ಜೋಡಿಸು: ಬಳಿಯಾಂ ಗಂಧ ಬೀಜಿಯಾ ಧೀಂಪಾಗಳಿಂಗಳಾಂಪ್ಪಕ್ಕೆಯಂ ಏಂಪಿಂಗಳ ಕಳಿಂಪಿಂ ಸಂಧಾನಗೆಯ್ದು ದಾಗಳಾಂಪಿಂಪಿಂಪಿಂ ಪಾಗಳ್ಕಿಂ ಪಿಂಪಿಂ ಪಿಂಪಿಂಪಿಂಪಿಂಪಿಂ (ಪಾರ್ವ. ೧೨-೧೬). ೩. ಪೆಳೆಸು; ಜೋಡಿಸು : ಆ ಪಿಂಗಪ್ಪಿಂ ಪಿಂಪ್ಪಿಯಾ ಸಂಧಾನಗೆಯ್ದಿಪ್ಪಿಂಪಿಂ . . . ಪಿಂಪಿಂ ಪಿಂಪ್ಪಿಂಪಿಂ ಒಡೆ (ಪಾರ್ವ. ೫-೬-೬). [ಸಂಧಾನ + ಗೆಯ್, + - ಆಪ್]

ಸಂಧಾನಿ (ನಾ). ಕೂಡಿದುದು ; ಸೇರಿದುದು : ಪಿಪ್ಪಾಯಾಂ ಪಿಂಗಾಂಪಿಂ ಪಿಂಪಿಂಪಿಂಪಿಂಪಿಂ

ಸಂಧಾನ (ನಾ). ಇದಮಿಥಂ ಬಗೆಯ ಒಂದು ರೀತಿಗೆ : ಅಮೀಷಾಮಿತ್ಥಂಗಳ ಸಾಮರ್ಥ್ಯಸಿದ್ಧಿಯಾಗಿ ಸಂಧಾನವಿಷಯಕವಾಗಿ ಸಂಧಾನವಿಷಯಕವಾಗಿ ಮೂರನೆಯ ಪಿಠಿಕೆ (ಅಭಿ. ೬-೨೬). (೧)

ಸಂಧಾರಣ (ನಾ). ೧. ಒಪ್ಪಿಸುವಿಕೆ; ಆಧಾರವಾಗಿರಿಸುವಿಕೆ : ಅಂತರ್ಗ್ರಹಣಮಂ, ಪ್ರಾಣಿತವಾಗಮಿಸುವಂತೆ ಮಾಂಡಲ್ಯಂಗಂ ಸ್ವಾಮಿಸಂಧಾರಣಾರ್ಥಂ (ಭೂಪಾಲ. ೬೩-೧೩). ೨. ಧರಿಸುವಿಕೆ; ತೊಡಿಸಿಕೆ. ೩. ಅಳವಡಿಸಿ ಇಡುವಿಕೆ; ನಿಗ್ರಹ. ೪. ಅಪೇಕ್ಷಿಸುವಿಕೆ; ಆಸರೆಗೆ. ೫. ಪೋಷಿಸುವಿಕೆ; ಕಾಪಿಡುವಿಕೆ. ೬. ನೆನಪಿನಲ್ಲಿಟ್ಟುಕೊಳ್ಳುವಿಕೆ. ೭. ಸಾಹಾಯ್ಯವಿಧಿ; ಪ್ರೋತ್ಸಹನೆ. (ಜಿಪಾ)

ಸಂಧಾರಿತ (ಗು). ೧. ಧರಿಸಿದ; ತೊಟ್ಟ ; ಅಮೀಷಾಮಿತ್ಥಂ ಸಂಧಾರಿತಮೆಂದು ಧೃತಿಶಸ್ತ್ರಕವಚಮಾಂ ತಾಂ (ಭಾಷಾ. ೨-೧೨) (ನಾ). ೨. ತೊಡಿಸಿರುವಿಕೆಯನು; ಕವಿದಿರುವಿಕೆಯನು : ಅಜ್ಞಮಾಲಾಬಂಧಿತ್ವ ಧೃತಿ ಸಂಧಾರಿತತ್ವಂ (ಭಾಷಾ. ೧೨-೨೮). (ಜಿಪಾ.)

ಸಂಧಿ (ನಾ). ೧. ಸೇರಿಕೆ; ಸಂಯೋಗ : ಆ ತಂಬಾಳ್ದಿ ಸಂಧಿಗಳ ಶಾಶ್ವತೀಕರಣಮ ಗುಣಾಂಶ ವಿಚ್ಛಿತ್ತಿಯಾದ ಪಾಯಮನ್ದು (ಭೂಪಾ. ೨೫೧). ೨. ಸಂಪರ್ಕ; ಸಾಮರಸ್ಯ. ೩. ಅಂಗೀಕಾರ; ಸಮ್ಮತಿ. ೪. ದೇಹದ ತೀಲು,–ಸಂದು : ಪರಾ ಸಂಧಿ ಸಾಧಿಗಳಿಲ್ಲಿ ಸಮಾಪ್ತಿಯಾಯ್ತು . . . ಇಮಾಯಿಯಾ ಪೀಯಾಯಿಗಳ (ಭಾಷಾ. ೪೯-೨೦ ಸಾಷ್ಟಾಂಗ). ೫. ದಿವಾಳಿ; ಸೋಲು. ೬. (ಶಬ್ದ ಗೊಂಡಿಗೆ ಪಾಠದ) ಪೆಸ್ಸ್; ಕಂಡಿ : "ಪಾಟಾಲಾ, ಸಂಧಿ - ಡಿ ೨ ಚ್ಚಂ" (ಕಾಷಾ. ೧೨೬-೩೨). ೭. ಪೆಸ್ಸ್; ತೂಸ್ಸ್ : "ಮಣಿಯಲ್ಲಿ ಕೊಯಲಿರ ಸಂಧಿಯೊಟಾಯಿ" (ಪಾಷಾ. ೧೫೫-೫೩). ೮. ಸಿದಿಯಿಲ್ಲ ಕಾಲ,–ಅಧಃಪತನ. ೯. ಸಂದಿಗ್ಧಪರಿಸ್ಥಿತಿ: 'ಸಂಧಿಕಾಲ' ಪರಾ. ೧೦. ಬಡಮನ; ವಿಶಾಮಿ. ೧೧. ವಿಶಯಮುಯಗಳ ಸಮಿಯನ ಕಾಲ : ಒಂದ ಸ್ವಗಾಲ್ಯಾಪಯಯಾಗಳ ಸಂಧಿಯಲ್ಲಿ, ಯಜ್ಞಪಶುಯಾಜ್ಞ . . . ದೊಡ್ಡ ಸ್ಥಾಪಿಸುಗಾಯಿ (ಅಭಿ. ೫೩). ೧೨. ಸೂರ್ಯನು ಹುಟ್ಟುವುದಕ್ಕೆ ಸ್ವಲ್ಪ ಮುಂಚೆ ಅಥವಾ ಪೂರ್ತಿ ಮುಳುಗಿರುವುದಕ್ಕೆ, ಹೊದಲು ಳಂಯಿಯುವ ಬೆಳಗು . – ಪ್ರಭೆ. ೧೩. ಯೋಗ. ೧೪. ಸಿಲೆ ಮುಂತಾದ ರಾಯಿಗಳ ಸೆರಿಗೆ . – ನಿರಿ. ೧೫. ಅಲ್ಪ; ಸ್ವಲ್ಪ : "ಅಲ್ಲ ಸ್ವಲ್ಪಮೂ ಅಲ್ಲ ಸಂಧಿಯೂ" (ಪಾಷಾ. ೧೫೫). ೧೬. [ಶಾಸ್ತ್ರವಿಜ್ಞಾ] ಶಾಸ್ತ್ರ, ನಾಟಕ ಮುಂತಾದುವುಗಳಲ್ಲಿ ಯ ಒಂದು ಭಾಗ; ಪರಿಚ್ಛೇದ; ಅಧ್ಯಾಯ : ಪ್ರಮಾಣಾಪಚಾರಾಭ್ಯಾಂ ದೆರ್ಘಸಂಧಿಃ (ಭಾಷಾ. ೩-೨೨) ; ಮುಂದಿನ ಸಂಧಿಯ ಆರಂಭ ವಿಷ್ಕಂಭಕ ಪರಿಸಮಾಪ್ತಿಯ ಕೆಳಗೆ (ಪಾಷಾ. ೫-೬). ೧೭. ಪೆಸ್ಸ್ಗಳಿಂದ ಮಾಡಿದ ಜೋಡಿಸಲ್ಪಟ್ಟ ಸಾಮಾನು (ಸಾಷಾ. ೧೫೫). ೧೮. ಪೆಸ್ಸ್ಗಳಿಂದ ಮಾಡಿದ ಒಂದು ಬಗೆಯ ಸಾಮಾನ್ಯ ಪ್ರಕಾರ : ಪಾಲ್ಯಾಯಿಯ ಆಯಾಳ್ದಿ ಪಾತ್ರಿಯಾಗಿ ವಿಂಗಡಿಸಿ; ಆದು ದೃಢಾಂ ಪ್ರಯಾಣಾಂ ಚಾಂ. ಆಮ್ಲಾ ಸ್ಪೃಷ್ಟಿಯ ಇಷಯಾ 'ಸಂಧಿಗಳು' ಎಂಬ ಇಷ್ಟೊಂದು ಬಗೆಯ ಸಾಮಾನ್ಯಯನ್ನು ಪಡೆದರು. ಅವ್ಯ ಬಿಂದು ಪ್ರಯಾಗ (ಸಾಷಾ. ೧೫೦). ೧೯. [ನ್ಯಾಯ] ಒಂದು ಪಡದ ಅರ್ಥಾತ್ಪತ್ತಿಗೆ ಮುಂದಿನ ಪದದ ತಾತ್ಪರ್ಯದ ಅನ್ವಯದಲ್ಲಿ ಸೆಸುವ ತೊಡಕು : ಪದಮಂ ಪಲುಂ ಪಾಗ ಪಡಿಸುಂ ಪೊಂದಿಸಲ್ಕೆ ಸಂಧಿಯಿಲ್ಲಂ (ಪಾಷಾ. ೪೯); ಸಾಸ್ಯಾರ್ಥಯಲ್ಲಿ ಪೂರ್ಣಾಗಿ ಸಪಡಿ ಕಾಲಿಳಿಯುವುದಕ್ಕೆ ಸಂಧಿಯಿಲ್ಲಂ . . . ಪೆಯಲಿ (ಪಾಷಾ. ೧೩). ೧೯. [ರಾಜಾನ] ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯಗಳೆಂಬ ಆರು ನೀತಿಗಳಲ್ಲಿ ಒಂದು: ರಾಜ; ಒಪ್ಪಂದಿಕೆ; ಆರಾಧ: ಆಟಿಪ್ಪ ಸಂಧಿಯಮಂ ವಿಗ್ರಹಮುಮಾಸನಮುಂ ದ್ವೈಧಮುಮಾಶ್ರಯಮುಮಾ (ಕಾಷಾ. ೧೦ ೧೧೦); ಇಂಥಲ್ಲಿ ಪಾಗಾಪ ಸಂಧಿಯಂ ಪೂರ್ಣಾಶಾಪ್ತಿಯಿಲ್ಲಾದಿದಾಗಿ ಸೊಪ್ಪಿಂಬಿಪ್ಪಿಸಿಸ್ಥ (ಪಾಷಾ. ೨೨೧-೨); ಸಿಪಿಪಿಪಿಪಿಪಿಪಿಪಿಪಿ ಪೆಯ್ದಿಪಿಪಿಪಿಪಿಪಿಪಿಪಿಪ

ಸಂಧಿಪಾತ (ನಾ). ದೇಹದ ಕೀಲುಗಳಲ್ಲಿ ಉರಿಯೂತವುಂಟಾಗಿ ನೋವು ಉಂಟಾಗುವ ಒಂದು ಬಗೆಯ ರೋಗ: [illegible]

ಸಂಧಿಪಾತಜ್ವರ (ನಾ). ದೇಹದ ಕೀಲುಗಳಲ್ಲಿ ಉರಿಯೂತ ಮತ್ತು ನೋವುಗಳೊಡನೆ ಬರುವ ಒಂದು ಬಗೆಯ ಜ್ವರ: [illegible] ಸಂಧಿಪಾತಜ್ವರ (Rheumatic fever) [illegible]

ಸಂಧಿಬಿಲ್ಲು (ನಾ). [ವ್ಯಾಕ] ಬೇರೆಬೇರೆಯಾಗಿದ್ದ ಅಕ್ಷರಗಳು ಸೇರಿದಾಗ ಕೆಲವು ಕಡೆ ಸಂಧಿಯಾಗಿ ಕೆಲವೆಡೆಗಳಲ್ಲಿ ಸಂಧಿಯಾಗದಿರುವಿಕೆ: [illegible]

ಸಂಧಿವಿಗ್ರಹ (ನಾ). ಶಾಂತಿ ಮತ್ತು ಯುದ್ಧ : [illegible]

ಸಂಧಿವಿಗ್ರಹಿ (ನಾ). ರಾಜ್ಯದ ಶಾಂತಿ, ಯುದ್ಧ ಮುಂತಾದ ವಿಷಯಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವನು; ವಿದೇಶಾಂಗ ಸಚಿವ: [illegible]

ಸಂಧಿಸಾಧಿಸು (ಕ್ರಿ). ತಕ್ಕ ಸಂದರ್ಭವನ್ನು ಎದುರುನೋಡು; ಹೊಂಚುಹಾಕು: [illegible]
[ಸಂಧಿ + ಸಾಧಿಸು]

ಸಂಧಿಸು (ಕ್ರಿ). ೧. ಕೂಡು; ಸೇರು: [illegible] ೨. ಕೊಡಿಸು; ಸೇರಿಸು: [illegible] ೩. [illegible] ೪. ಬಾಣವನ್ನು ಹೂಡು; ಶರಸಂಧಾನ ಮಾಡು: [illegible] ೫. ಮುತ್ತು; ಸೋಕು: [illegible] ೬. ಎದುರಿಸು; ವಿರೋಧಿಸು : [illegible] ೭. ನೋಡು; ಕಾಣು: [illegible] ೮. ಉಂಟಾಗು; ಒದಗು: [illegible] ೯. [illegible] ೧೦. ಸಿದ್ಧಗೊಳಿಸು; [illegible] ೧೧. [illegible] ೧೨. [illegible] [ಸಂಧಿ + -ಇಸು]

ಸಂಧ್ಯಕ್ಷರ (ನಾ). [ವ್ಯಾಕ] (ಅ + ಇ; ಅ + ಈ; ಅ + ಉ; ಅ + ಊ ಅಥವಾ [illegible]) ಸಂಧಿಯಾದಾಗ ಹುಟ್ಟುವ ಏ, ಐ, ಓ ಮತ್ತು ಔ ಎಂಬ ನಾಲ್ಕು ಅಕ್ಷರಗಳು : [illegible]

ಸಂಧ್ಯಾ[illegible] (ಗು). ೧. [illegible] (ನಾ). ೨. [illegible]

ಸಂಧ್ಯಾ[illegible] (ಗು). ೧. [illegible] ೨. [illegible] ೩. [illegible] ೪. [illegible]

ಸಂಧೇಯ (ಗು). ೧. ಜೋಡಿಸಲು ತಕ್ಕುದಾದ; ಸೇರಿಸಲು ಯೋಗ್ಯವಾದ. ೨. ಸಂಧಾನ ಮಾಡಲು ಅರ್ಹವಾದ. ೩. ಗುರಿಯಿಡಲು ತಕ್ಕುದಾದ. (ನಾ). ೪. ಸಂಧಾನ ಮಾಡಿಕೊಳ್ಳಲು ಅರ್ಹನಾದವನು : [illegible]

ಸಂಧ್ಯಂಶ (ನಾ). [illegible] [illegible]

ಸಂಧ್ಯಕ್ಷರ (ನಾ). = ಸಂಧಿಸ್ವರ : [illegible] [ಹಿಂ.]

ಸಂಧ್ಯಾಂಬುದ (ನಾ). ಸೂರ್ಯಾಸ್ತಸಮಯದಲ್ಲಿ ಕಂಡುಬರುವ ಸುವರ್ಣದ ಬಣ್ಣದ ಮೋಡ : [illegible] . . . [illegible] [ಹಿಂ.]

ಸಂಧ್ಯಾಕಾಲ (ನಾ). ೧. ಸೂರ್ಯನ ಉದಯ ಹಾಗೂ ಅಸ್ತದ ಕಾಲ; ಪ್ರಾತಸ್ಸಂಧ್ಯೆ ಮತ್ತು ಸಾಯಂಸಂಧ್ಯೆ. ೨. ಸಾಯಂಕಾಲ; ಸಂಜೆ : "ಸಂಧ್ಯಾ [illegible] " [illegible]. ೩. ಎರಡು ಯುಗಗಳ ನಡುವಿನ ಕಾಲ. ೪. ಪ್ರಳಯದ ಕಾಲ; ಲಯಕಾಲ; ಪ್ರಳಯ. ೨, ೪ : [illegible] . . . [illegible] [ಹಿಂ.]

ಸಂಧ್ಯಾಪಟ (ನಾ). ಸಂಜೆಯ ಸೂರ್ಯ : [illegible] [ಹಿಂ.]

ಸಂಧ್ಯಾರಾಗ (ನಾ). ಸೂರ್ಯ ಮುಳುಗಿದ ಮೇಲೆ ಆವರಿಸುವ ಕತ್ತಲೆ; ಸಂಜೆಗತ್ತಲೆ : [illegible] . . . [illegible] [ಹಿಂ.]

ಸಂಧ್ಯಾತ್ರಯ (ನಾ). ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಎಂಬ ಮೂರು ಕಾಲಗಳು; ತ್ರಿಕಾಲ : [illegible] [ಹಿಂ.]

ಸಂಧ್ಯಾನ (ನಾ). (ಉಪನಯನವಾದ ಮೇಲೆ ದ್ವಿಜರು ಮಾಡುವ) ನಿತ್ಯ ಕ್ರಿಯೆಗಳಲ್ಲಿ ಒಂದು; ತ್ರಿಕಾಲಗಳಲ್ಲಿ ಮಾಡುವ ಧ್ಯಾನ ಅಥವಾ ಪ್ರಾರ್ಥನೆ : [illegible] . . . [illegible] [< ಸಂ. ಸಂಧ್ಯಾವಂದನ]

ಸಂಧ್ಯಾನಟ (ನಾ). ಸಾಯಂಕಾಲದಲ್ಲಿ ಬಾಡಿಸುವ ನಗಾರಿ, – ಪಟಹ : [illegible] [ಹಿಂ.]

ಸಂಧ್ಯಾಪಟೋಲ (ನಾ). = ಸಂಧ್ಯಾಂಬುದ : [illegible] [ಹಿಂ.]

ಸಂಧ್ಯಾಪೂಜೆ (ನಾ). ಸಂಜೆಯ ಸಮಯದಲ್ಲಿ ನಡೆಸುವ ಪೂಜೆಗಳು : [illegible] [(ಸಂ. ಸಂಧ್ಯಾ) + ಪೂಜೆ (< ಪೂಜಾ)]

ಸಂಧ್ಯಾಭ (ನಾ). (ಸಂಧ್ಯಾಕಾಲದಲ್ಲಿ ಕಂಡುಬರುವ) ಕೆಂಬಣ್ಣ; ಕೆಂಪುಬಣ್ಣ : "[illegible] ಸಂಧ್ಯಾಭ" [illegible] [ಹಿಂ.]

ಸಂಧ್ಯಾಭ್ರ (ನಾ). = ಸಂಧ್ಯಾನ : [illegible] [ಹಿಂ.]

ಸಂಧ್ಯಾಭ್ರ (ನಾ). = ಸಂಧ್ಯಾಂಬುದ : [illegible] [ಹಿಂ.]

ಸಂಧ್ಯಾರಾಗ (ನಾ). ೧. ಸಾಯಂಕಾಲದಲ್ಲಿ ಸೂರ್ಯ ಮುಳುಗಿದ ನಂತರ ಕಂಡುಬರುವ ಕೆಂಪುಬಣ್ಣ; ಸಂಜೆಗೆಂಪು : [illegible]. ೨. ಕೆಂಪುಬಣ್ಣ; ಕೆಂಬಣ್ಣ : [illegible]. ೩. ಕೆಂಪುಬಣ್ಣದ ಸೀರೆ, – ಬಟ್ಟೆ : "[illegible] ಸಂಧ್ಯಾರಾಗ . . . [illegible]" [illegible] . . . [illegible]. ೪. [illegible], ಒಂದು ಬಗೆಯ ಕೆಂಪುಬಣ್ಣದ ಪಟ್ಟೆ; [illegible]. ೫. ಒಂದು ಬಗೆಯ ನಕ್ಷ : [illegible]. ೬. (ಅಲಂ) [illegible]; [illegible] (?) : [illegible] [ಹಿಂ.]

ಸಂಧ್ಯಾರುಚಿ (ನಾ). = ಸಂಧ್ಯಾರಾಗ ೧ : [illegible] . . . [illegible] [ಹಿಂ.]

ಸಂಧ್ಯಾರುಣ (ನಾ). = ಸಂಧ್ಯಾರಾಗ ೧ : [illegible] . . . [illegible] [ಹಿಂ.]

ಸಂಧ್ಯಾರುಣಿತ (ಗು). ಸಂಜೆಯ ಕೆಂಪುಬಣ್ಣದಿಂದ ಕೂಡಿದ : [illegible] [ಹಿಂ.]

ಸಂಧ್ಯಾವಂದನ (ನಾ). = ಸಂಧ್ಯಾನ ; ೩ ಸಲದಲ್ಲಿ ಪ್ರಾತಸ್ಸಂಧ್ಯಾ, ಮಧ್ಯಾಹ್ನಸಂಧ್ಯಾ ಮತ್ತು ಸಾಯಂಸಂಧ್ಯಾ ಎಂದು ಮೂರು ಬಗೆಗಳು : [illegible] . . . [illegible] . . . [illegible] [ಹಿಂ.]

ಸಂಧ್ಯಾವಂದನೆ (ನಾ). = ಸಂಧ್ಯಾನ : [illegible] [ಸಂ. ಸಂಧ್ಯಾವಂದನ]

ಸಂಧ್ಯಾಸಿರಿ (ನಾ). ಕೆಂಪುಬಣ್ಣದ ಸಿರಿ : [illegible] . . . [illegible]

[(ಸಂ. ಸಂಧ್ಯಾ) + ಸಿರಿ (< ಶ್ರೀ)]

ಸಂಧ್ಯಾಶ್ರಿತ (ನಾ). ೧. ಸಂಧ್ಯೆಯಿಂದ ಕೂಡಿದುದು. ೨. (ಅಲಂ) ಕೆಂಪುಬಣ್ಣದಿಂದ ಕೂಡಿಕೊಂಡಿರುವುದು : [illegible] [ಹಿಂ.]

ಸಂಧ್ಯೆ (ನಾ). ೧. ಸೇರಿಕೆ; ಸಂಯೋಗ. ೨. ಸಂಜೆ : [illegible]. ೩. ಸೂರ್ಯ [illegible] ಮುಂಚೆ ಮತ್ತು ಸೂರ್ಯ

ಮುಳುಗಿದ ಕೂಡಲೆ ಆಕಾಶದಲ್ಲಿ ಕಂಡುಬರುವ ಕೆಂಪುಬಣ್ಣ. ೪. ಮುಂಜಾವು; ಮುಸುಕು. ೫. ಎರಡು ಯುಗಗಳ ನಡುವಿನ ಕಾಲ; ಸಂಧಿಕಾಲ. ೬. ಬೆಳಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲಗಳೆಂಬ ದಿನದ ಮೂರು ಕಾಲಗಳು. ೭. ಬ್ರಾಹ್ಮಣರು ತ್ರಿಕಾಲಗಳಲ್ಲಿ ಮಾಡುವ ಆಹ್ನಿಕ. [illegible] ೯. ಒಪ್ಪಂದ; ಒಡಂಬಡಿಕೆ. ೧೦. ಗಡಿ; ಎಲ್ಲೆ; [illegible] ೧೧. ಚಿಂತನ; ಧ್ಯಾನ. ೧೨. ಒಂದು ಬಗೆಯ ಹೂವು. ೧೩. ದಿನದ ತ್ರಿಕಾಲಗಳಿಗೂ ಅಧಿಷ್ಠಾತೃವಾದ ದೇವತೆ. [illegible]

[illegible]

[illegible] (ನಾ). ೧. ತೊರೆಯುವಿಕೆ; ಬಿಡುವಿಕೆ. ೨. [illegible]

[illegible]

[illegible] (ನಾ). ಒಂದು ಬಗೆಯ [illegible]

[illegible] (ನಾ). ೧. ಒಂದು ಬಗೆಯ ಮರ ಮತ್ತು ಸುಗಂಧದಿಂದ ಕೂಡಿದ ಅದರ ಹೂವು; [illegible]

[illegible]

ವಿ. ಸಮೃದ್ಧಿ : ಸಂಪನ್ನಗಾತ್ರೆ. ೬. ಮೇರ್ಕ್ಷ; ಶ್ರೇಷ್ಠತೆ : ಮುಳಿದಾ ಸಂಪನ್ನ ಸಂಪನ್ನಮಂ ಆವರೊಪ್ಪಮಲ್ಲಾ (ಆಚಾ. ೪-೪೯). ೭. ಆಧಿಕ್ಯ: ಹೆಚ್ಚಳ. ೫. ಒಳ್ಳೆಯ ಸ್ಥಿತಿ ; ಸುಸ್ಥಿತಿ. ೬. ವಿಧಿಗೆ; ಆಧಿಪತ್ಯ. ೭. ಅಧ್ಯಕ್ಷ; ಧಣಿ : ಆ ಗಾವುದ ಸಂಪನ್ನಂ ಕೊಂಡು ಕೊಂಡ್ಯಾಗಿದುದು ಮಲ್ಲಿದ ಬಂಧಕ್ಕೆ ಸಂಪನ್ನಂ (ಆಚಾ. ೬-೫೩). [ಸಂ.]

ಸಂಪನ್ನ (ನಾ). ಬಿಚ್ಚಿದ್ದು; ಏರಿ : ಆಮಂ ಚಾಯಮುದಾಯ ಪ್ರಸ್ಥಕ್ಕೆ ಪ್ರಸ್ಥಕಮಪ್ಪುದಿಲ್ಲಿ ಆಡಗೆ ಸಂಪನ್ನಮಪ್ಪುದಕ್ಕೆ ಬಚಪಯಂಗಳ ಪಚಿಚಯಮುಂ ಪೇಳಲ್ಪಾಯ್ತು (ನೀತಿ. ೧೪-೫೩). [< ಸಂ. ಸಂಪದ್]

ಸಂಪನ್ನ (ನಾ). ೧. ಬಿಚ್ಚಿದ್ದು; ಸಂಪನ್ನ ; ಎಲ್ಲ ಮುಖಕ್ಕೆ ಮುಂಡಿಸ್ಸ ಏರಿ ಸಂಪನ್ನಂ ಬಲಯುಪಾರಿಗಳ್ಗೆ ಎಲ್ಲ ಸಜನಂ (ಆದಿ ೯ ೭೮): ತೋಂಗಲ ಸಂಪನ್ನಂ ಸೊಬಗುಗುಂದದ ಯೌವನದ್ದು . . . ಅಗಲಲಾ ಸಮಸ್ಯಾ ಭವಿಷ್ಯಾಲಾ ನಿಜವಿಲಾಸದ ಸಜ್ಜಿತ್ರಕ್ಕಳಾ (ರಾಷಾ. ೧೦); ಮುಖದೊಳಾ ಬಳಲಿಕೆಯಿಂ ಸಜ್ಜಾಪನ್ನಮಪ್ಪ ಭಯದಾಲ್ ಮೊಗದಾಲ್ ಸಂಚರಿಸುವಮ್ಮಾಗ್ನಾಗಳೊಂ (ಪಾ.ಭಾ. ೫-೧೫). ೨. ಮೇರ್ಕ್ಷ: ಹೆಚ್ಚುಗಾರಿಕೆ : ನಾವು . . . ಅಖಿಲ ಗುಣಾಂಬುಧಿಗ ಮಣಿಪಾತ್ರರು. ಅಂತಪುದು ಅನಂತಪುಣ್ಯಾಂಬುಧಿ ಮಂ ಅ ಸಜನ ತೋಷಾ (ಜಾಪಾ. ೧೨). ೩. ವಿಧಿಗೆ; ಗಣ್ಯತೆ : ಪಜ್ಞ ಮಾಗ್ಯಕ್ಕೆ ಸಂಜನದಂ ಲೋಕದ ದೃಷ್ಟಗ್ಯಸ್ಥಮಂ . . . ಪಡಮುಟ್ಟಿನ್ಯಾಪ್ಯಸಿಂಹಂಗಳ್ಗೆ ಕೈಂದಿರದೆಟ್ಟಿಸಲಾರ್ಪ ದೃಢಾಯ ಕೈಲೋಸ್ಯಾಸ್ಥಂ ಮಲಂ (ಆಚಾ. ೧೭-೨). ೪. ಅಧ್ಯಕ್ಷ; ಧಣಿ. ೫. ಬಯಸುವ ವಸ್ತುಗಳನ್ನು ಪಡೆಯುವಿಕೆ. ೬. ಅರ್ಥ ; ಹೆಚ್ಚಳ. ೭. ಪ್ರಯೋಜನ; ಫಲ. ೮. ಸಿದ್ಧಿ ; ಸಾಧನೆ. ೯. ಸಂಪತ್ತಿನಿಂದ ಕೂಡಿರುವುದು; ಐಶ್ವರ್ಯದಿಂದ ಪಜ್ಞಮಾದ ಗುಣಾಚಾರಾದಿಗಳಿಂದಾಗಿರುವುದು ಶಾಸನಮುಪಜ್ಞಮಾಯ (ಧರ್ಮಾ. ೨-೧೦). [ಸಂ. ಸಂಪದ್]

ಸಂಪನ್ನತರ (ತ್ರಿ.). ಬಿಚ್ಚಿದ್ದು ಅಂಗವಾದ; ಶ್ರೀಮಂತಿಕೆ ಬರು : ಪುಟ್ಟುವಿಲ್ಲಿಗಳ ಬಿಚಿಲ ಸಂಪನ್ನತರ ಪಜ್ಞಿ ಪೊಲ್ಲಾಡಲಿಲ್ಲಿ (ಮೋಪಾ. ೧೨-೧೦).

[ಸಂಪನ್ನ + ತರ, (< ತರ)]

ಸಂಪನ್ನತೆ (ನಾ). ಶ್ರೇಷ್ಠವಾದ ಸ್ಥಾನ; ಶ್ರೇಯಸ್ಸಿನ; ಮೇರ್ಮೆ : ಅಂತಾಂ ನಿಜ್ಞ ಭಾವಿ ಸಂಪತ್ತಿಗಳಂಗ ಇಜ್ಞ ಗುಣಪ್ರಭ್ಞಿ ಸಂಪನ್ನತೆಗೆ ಪಾಲಾಗಿಪ್ಪಿಂತಾ ಇಜ್ಞಾ ಸಂಪನ್ನತೆಯೊಳ್ಳಿಪ್ಪ ಇಜ್ಞ (ಮೋಪಾ. ೧೮-೧). [ಸಂ.]

ಸಂಪನ್ನರಿಸು (ಕ್ರಿ.). ಅಂತಸ್ಸಿಯನ್ನು ಹೊಂದು : ಅಣಂ ಅಂತೆಯೇ ಸಂಪನ್ನರಿಸಲ್ಪಂ ಸಂಪನ್ನರಿಸಲ್ ಮಂಗಲಮಂ ಪ್ರಾಂಪ್ತಮಾದಂ (ಮೋಪಾ. ೧೮-೧೧).

[ಸಂಪನ್ನ + ಪಿಸು, (< ಪಿಸ್)]

ಸಂಪನ್ನವಿ (ನಾ). ಶ್ರೇಷ್ಠವಾದ ಸ್ಥಾನ; ಶ್ರೇಯಸ್ಸಿನ; ಮೇರ್ಮೆ : ಅಂತಾಂ ನಿಜ್ಞ ಭಾವಿ ಸಂಪತ್ತಿಗಳಂಗ ಇಜ್ಞ ಗುಣಪ್ರಭ್ಞಿ ಸಂಪನ್ನವಿಗೆ ಪಾಲಾಗಿಪ್ಪಿಂತಾ ಇಜ್ಞಾ ಸಂಪನ್ನವಿಯೊಳ್ಳಿಪ್ಪ ಇಜ್ಞ (ಮೋಪಾ. ೧೮-೧). [ಸಂ.]

ಸಂಪನ್ನವಿಸು (ಕ್ರಿ.). ಅಂತಸ್ಸಿಯನ್ನು ಹೊಂದು : ಅಣಂ ಅಂತೆಯೇ ಸಂಪನ್ನವಿಸಲ್ ಮಂಗಲಮಂ ಪ್ರಾಂಪ್ತಮಾದಂ (ಮೋಪಾ. ೧೮-೧೧).

[ಸಂಪನ್ನ + ವಿಸು, (< ವಿಸ್)]

ಸಂಪನ್ನಿಕೆ (ನಾ). ಸಿರಿಸಂಪತ್ತುಗಳು; ಬಿಚ್ಚಿದ್ದಾದಿಕೆ : ಅಣಂ ಅಂತೆಯೇ ಸಂಪನ್ನಿಕೆಯೊಳ್ ಮಂಗಲಮಂ ಪ್ರಾಂಪ್ತಮಾದಂ (ಮೋಪಾ. ೧೮-೧೧).

ಸಂಪನ್ನಿಕೆ (ನಾ). ಸಿರಿಸಂಪತ್ತುಗಳು; ಬಿಚ್ಚಿದ್ದಾದಿಕೆ : ಅಣಂ ಅಂತೆಯೇ ಸಂಪನ್ನಿಕೆಯೊಳ್ ಮಂಗಲಮಂ ಪ್ರಾಂಪ್ತಮಾದಂ (ಮೋಪಾ. ೧೮-೧೧).

ಸಂಪನ್ನಿತ (ಗು). ೧. ಶ್ರೀಮಂತವಾದ; ಸಂಪತ್ತಿನಿಂದ ಕೂಡಿದ. (ನಾ). ೨. ಅತಿಶಯವಾದ ಸಂಪತ್ತೈಶ್ವರ್ಯ : ಸಂಪನ್ನಿತಗಾದ ನಿಜ ಪರಿಜ್ಞಾ ಪೈಶ್ವರ್ಯಾನ್ವಿತ (ಆಚಾ. ೧೭). [ಸಂ.]

ಸಂಪನ್ನ (ಗು). ೧. ಏರಿಪಟ್ಟಿಯು; ಬಿಚ್ಚಿದ್ದುದಿಂದ ಕೂಡಿದ. ೨. ಸಮೃದ್ಧಿವಾದ: ಸಮೃಗ ಜಲಯ ಧಾನ್ಯಯಾಧಿಪತ್ಯದ ಜೊತೆಗೆ ಸಂಪನ್ನ ಧಾನ್ಯಯೂ ಹೌದು (ಆಚಾ. ೧೮೬). ೩. ಶ್ರೇಷ್ಠವಾದ : ಸಂಪನ್ನಗಾಲದ ಪ್ರಾಂಪ್ತಂ ಜೊತೆಯೂ ಗಲಿದು ಜೊತೆ, ಪಂಪಿದು ಏಪಿದು (ಆಚಾ. ೬-೧೧). ಧೃಷ್ಟಾದ ಗಲಿದು [ಪ್ರಾಪ್ತಾಪಾಂಪಿ ಆಪಾಪ್ತಾಸ್ಯಗಾಂ ಪಾಪಿದುದಿ ಸಂಪನ್ನಾಪ್ತಿಗಳಾಂಪ್ತಾಸ್ಯಾಂ ಪಾಂ ಸಂಪಾಪಿಸಿ(ಪಿ) (ಪಾ. ೨೨೩, ೧೪೪-೬.೧೩೫). ೪. ಅಧ್ಯಕ್ಷತಾರಿಯಾದ; ಸುಸಿದ್ಧದಿಂದ ಕೂಡಿದ. ೫. ಮುಗಿದ; ಕೊನೆಗಾಣಿದ. ೬. ಸಮಗ್ರವಾದ; ಪರಿಪೂರ್ಣವಾದ : ಸಂಪನ್ನ ದೃಷ್ಟಿಯಾಂ ಸಂಗಂಪಡೆಯಿಂ ವಿಮಲಗಂಧಾಲಂಕರಂ ಸಿಂಹಗತಿಯಿಂ ಸಿಂಹಾಸನಂ ಪೃಥ್ವೀಪತಿ (ಆಚಾ. ೧೪-೪೯). ೭. ಮಿಸಿದ; ಕೆಳೆದ; ಗಳಿದ : ಪ್ರಾಸಿಂದಾಯಾಂಗಾಂಪಾಂಪಾಂ ಸಂಪನ್ನ ಧೃಷ್ಟಾಪಾಂಪಾಂ ತೆರದ ಸಿಂಪ್ತಿಪಾಂಪಾಂಗಳಂ ತರದ (ಪ್ರಾಪಾ. ೨೨೩). ೮. ತೆಳ್ಳ; ಆರ್ಜವಾದ; ಮುಖ್ಯವಾದ. (ನಾ). ೧೦. ಬಿಚ್ಚಿದ್ದು. ೧೧. ಬಿಚ್ಚಿದ್ದು; ಗಣ್ಯ : ಸಂಪನ್ನಗಾಂಪಾಂಪಾಂಪ

ಸಂಜೆಮ್ಮೆಲು (ನಾ). ಸಂಜೆಯ ಅಳತೆ. – ನೆಲೆ : ಆದಿಯಿಂದ ದೇವರ ಸಂಜೆಮ್ಮೆಗಳ ಚಳವಳಿಯೊಳಗಿತ್ತು . . . ಸಂಜೆಮ್ಮೆಗಳನ್ನು ಪೆಟ್ಟಿಸಲು ಶೋಧಿಸಿದಾಗಿಂದ ಆದಿಮಯಾಜಿಗಳೆಲ್ಲ ಯಾಜ್ಞಿಕಬ್ರಾಹ್ಮಣಾದಿಗಳು ಅನ್ಯ, (ಕರ್ನಾ ೧. ೧೨೧). [ಸಂ.]

ಸಂಜೆಮ್ಮೆ (ನಾ). ಒಬ್ಬಾತನ ಹೆಂಡತಿ : ಅಮಿಷ್ಟುವು ಮಾಮಿಷ್ಟುವು ಸಂಜೆಮ್ಮೆಯಿಲ್ಲಿ ಈ ಧರ್ಮಗಳು XXII (ಪಂ. ಗೀ ೧೫. ೪೦೪). ೨.೨-೩; ಪಾ. ಚರಿತ ೫೫). [ಸಂಜೆ, + ಅಮ್ಮೆ.]

ಸಂಜೆಯಾಟ (ನಾ). ೧. ಶಾಪಗ; ಯುದ್ಧ. ೨. ಕೇಡು; ವಿಪತ್ತು. ೩. ಭವಿಷ್ಯತ್ಕಾಲ. ೪. ಮಗ. ೫. ಸಾವು; ಮರಣ. [ಸಂ.]

ಸಂಜೆಯ (ನಾ). ೧. ಒಂದನ್ನೊಂದನ್ನು ಬೆರೆಸುವಿಕೆ; ಮಿಶ್ರಮಾಡುವಿಕೆ. ೨. ಸೇರಿಕೆ; ಸಂಯೋಗ. ೩. ಸಂಬಂಧ; ಸಹವಾಸ : ಶ್ರೀಮಾನ ಸಂಜೆಯನ್ನು ಮಾಡಿದ್ದಳ ಶ್ರೀಮಾಲಾದ ಒಂದು ಮಾಸವನ್ನೂ ಆಪ್ತಳ್ಳ ನಾನು ಗಾಣುವುದು (ಶಿಶಾಪ. ೧೭೪). [ಸಂ.]

ಸಂಜೆಯಾಧಾನ (ನಾ). ಹಾಲ್ಲಿನ ದ್ವಿದಾರದಲ್ಲಿ ಬಳಿಯುವ ಧಾತು : ಯಾವುದೇ ಆಯುರ್ವೇದ ಪಚ್ಚ ಸಂಜೆಯಾಧಾನಗಳ ಶ್ರೀಮಾಲಾದಿಂದ ಹೊಗೆ ಸಾರ ಮಂಡಿಸಲು ಸಾಧ್ಯ? (ಪ್ರಾಯ. ೧೧೨). [ಸಂ. ಸಜ್ಜೆಯಾಧಾನ]

ಸಂಜೆಯಾಷಧ (ನಾ). ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಂದು, ದೈವ ಮುಂತಾದುವುಗಳ ಮೂಲಕ ಸಂಬಂಧವನ್ನು ಉಂಟುಮಾಡುವ ಸಾಧನ : ಸಂಜೆಯಾಷಧಗಳು ಚಿಟ್ಟಿದಂತಿಲ್ಲ. ದೇವರ ಸ್ಥಳ ಶ್ರೀಮಾನ ಸಾಗಿಸಿದೆ (ಮಾಪ). [ಸಂ.]

ಸಂಜೆಯಾಸು (ಕ್ರಿ). ೧. ಸಂಬಂಧವನ್ನು ಹೊಂದು; ಜೊತೆ : ಅಗಾಲಿ . . . ಅಭಿಯಂತಿಯಿ ಚಿಟ್ಟಿಸ ಅಳತ ಮಿಶ್ರ, ಸಜ್ಜೆ ಅಭಿಮಾ. ಗಂಡಸಿಯಲ್ಲಿ ಸಂಜೆಯಾಸುವುದು (ಅಪಾ. ೫೯). ೨. ಧೈರ್ಯವಾಗು; ಸಂದಿಸು : ಚಿಟ್ಟಿಸ ಮಾಷಿಸಿಗಳಿಗೆ ಮಿಶ್ರ ಧೈರ್ಯದ ಅಭಿಯಾಯನ್ನು ಸಂಜೆಸಿ (ಮಾಪ). [ಸಂಜೆ + ಆಸು.]

ಸಂಜೆಲ್ (ನಾ). ಒಂದು ಅಥವಾ ಹೆಚ್ಚು : ಚಿಟ್ಟಿಸಿದ ಮಗ ಮಾಮಿಷ್ಟ ಚೋಳರಾಯ, ಸಜ್ಜಾಗೋಳ್ಳು,ಗಳ ಸಾಗಿಲ್ಲ ಚಿಟ್ಟಿಗ (ಪಂ VIII, ಸಜ್ಜಾ ೪೫-೧೦೧೨). [?]

ಸಂಜೆಲಿ 'ಸಂಜಲಿ' ನೋ.

ಸಂಜೆಲ್ 'ಸಂಜಲ್' ನೋ.

ಸಂಜೆಳಗ (ನಾ), ಹಳದಿರಸ ಮಿಶ್ರವಾದ ದೀಪದ ಬಣ್ಣದ ಒಂದು ಜಾತಿಯ ಜಿಮಿದ : ಕೃಷ್ಣಾಗಾಲಿಗಳ ಸಾಧನ ಸಜ್ಜಾಗಿ ಸಾಧನಗಳು (ಅಪಾ. ೨೧೩). 'ಸಾಧಳಗ', 'ಮೋಧಳಗ', 'ಸಂಜೆ' ಪದಾ. [? + ಅಗ.]

ಸಂಜೆಳ 'ಸಂಜಳ' ನೋ.

ಸಂಜೆಳಸು 'ಸಂಜಳಸು' ನೋ.

ಸಂಜೆಳೆ, ಸಂಜೀಗ, ಸಂಜೆಳ, ಸಂಜೆಳ (ನಾ). (ದೊಡ್ಡ ಹುಲ್ಲಿನ ಹಾಸಿಗೆ) ಕೆಲುವು ಹುಲ್ಲು : ಗಾಜ್ಞ ಅಮಾಲ್ಲ ಮಾಧಾರಿಷ್ಟುಗಳನ್ನು ಸಲು ಸಜ್ಜಾಗಿಸಾಮಾ. ಸಂಜೆಳೆ, ಸಜ್ಜಾಗಿ, ಸಜ್ಜಿಳೆ, ಸಜ್ಜಾಗಿ ಅಮಿಷ್ಟಾಷ್ಟುಗಳನ್ನು ಮಂಜ್ಯಿಸಲುವುದು ಅಂ ಹಾಸಾಸಲಂ (ಅಪಾ ೧೬-೧೭); (ಸಜ್ಜಿಸಿ ೧೦-೧೦೦ ಸೂ); ಸಂಜೆಳೆಯಲ್ಲಿ ಜಂಜಿಯಿಷ್ಟ . . . ಮಾಮಿ ಚಿಟ್ಟಿಸಿಯಲ್ಲಿ ಬಿಡಿ ಬಾಜಾಯಿಷ್ಟಾಯಿಷ್ಟುವು (ಸಜ್ಜಾ ೧೦-೧೦); ಮಾಲಿಸಿ ಮಾಸಿಲ್ಲ ಸಜ್ಜಾಗಿ ಅಮಿಷ್ಟು . . . ಸಂಜೆಸಿಸಿ ಅಂ, ಸಾಧಿಸಿಯಿ ಮಾಗ ಮೂಲಾಯಿ ಅಮಿಷ್ಟುವು (ಅಪಾ ೨೦). ಸಂಜೆಸಿ : ಚಿಟ್ಟಿಸಿಗಳಿಂದಿಷ್ಟಾಗಿ ಚಿಟ್ಟಿ,ಗಳಿಂಗಳಲ್ಲಿ ಅಲ್ಲಿ ಧೈರ ಸಾಗಿಲ್ಲಿಸಿಯಲು ಚಿಟ್ಟಿಸಿಯಾಸಿಯಾಂ ಮಾಮಿಷ್ಟುವುದ ಸೂಲಾಷಿಸಿಯಲು ಸಂಜೆಸಿಸಿಯಲ್ಲಿ ಸಜ್ಜಿಸಿಯಲ್ಲಿ, ಸಾಜ್ಞಿಗಳ ಮೂಲಿಸಿಷ್ಟುಸಿಯಿಂದ ಮಾಲಿಸಿಯಲ್ಲಿಸಿಷ್ಟಾಸಿಸಿಷ್ಟಾಸಿಸಿಗಾ (ಅಪಾ. ೧-೨೦). ಸಂಜೆಸಿ : ಮಾಲಿ ಚಿಟ್ಟಿಸಿಯ ಸಿಷ್ಟಾ ಚಿಟ್ಟಿ ಸೂಲಿಸಿ ಚಿಟ್ಟಿಸಿಯಾಸಿಷ್ಟಾ ಸಂಜೆಸಿ ಮಾಲಿ ಸಿಷ್ಟಿಸಿಯ ಅಷ್ಟಿಸಿಯಲ್ಲಿ ಸಾಧ್ಯವ ಚಿಟ್ಟಿ ಮಾಲಿ ಮಾಲಿ ಸಿಷ್ಟಿಸಿಯ ಅಸಿ ಸಾಗ

ಸಂಜೀವಿನಿವಿದ್ಯಾಗ (ನಾ). (ಭ್ರಮಿಮಾಹ್ಮ) ಗ್ರಂಥಗಳನ್ನು ಹೆಂಚ್ಚಿರಿಯಿಸಿ ಶಾಖೆ: ಸಂಜೀವಿನಿವಿದ್ಯೆಯ ಸಂಜೀವನವಿದ್ಯಾಗಳಲ್ಲಿ ಕೆಲಸ ಮಾಡ್ಸಿ ಸಿದ್ಧಿಯಾಗಿಸಿದ (ಮಂಜು). [ಸಂ.]

ಸಂಜೀವಿನಿ (ನಾ). ೧. ಗಂಧ; ಅದಾಯ : ಎಲ್ಲ ಅಂಜನಗಳ ಸಂಜೀವನ ಹೊಲ್ಲ, ಅಲ್ಲ ಕ್ಕೆ ಸಮಸ್ಯೆಯಿಂದ ಗಾನ (ಮಾಮ. ೨೨-೨೩); ವಿವಿಧವೀರಾಣಾಂ ಪ್ರತಿಯಾಧ್ಯಾಪಿಸಿಯಿಂದ ದೇಹಾಂಡಿಯಲ್ಲಿಯಾಗಿಯಾಂ ದೃಷ್ಟಿ, ಸಂಜೀವನಂ ಸೋಲ್ (ಮಾಮ್ಮ. ೩೬-೨೦); ಪ್ರಜಿಯಾಗಿಂ ಸಂಜೀವದ ಗಡಿಂದ ಪ್ರೊಂದ ಪೆರಿಂದ ಮೊಗ ಕಂಡಾಯಿಂದ ೧ (ಮಾ ೩. ೨೦೦. ೮೩-೮೯೦.೧೨೦); ಗಂಧಿಂಗೆ ಸಂಜೀವನಿಯ ಪೊಲ್ಲಿಗೆ ಬಾಡಿಯೆಂಗಾ ಅಜ್ಜಿಯ ಪೆಸರೊ ಇಲ್ಲ (ಮಾಮ. ೨). ೨. (ಭ್ರಮಿಮಾಹ್ಮ) ಗ್ರಂಥವನ್ನು ಹೆಂಚ್ಚಿರಿಯಿಸಿ: 'ಗ್ರಂಥಸಂಜೀವನಿ' ಪರಾ. ೬. (ಬಿಂಚ್ಚಿ) (ಅಧ್ಯಾತ್ಮ ಕಾವ್ಯ) ಸೊಲ್ಲಿರಿ; ಸಂಜೀವನ; ಬಿಸಿಲೆ (?) : ಭೂಮಾಲ್ಕಿಗ್ರಾಮಿ ಭೂಮಾಲಿಯಿಂದ ಸಂಜೀವನ ಮಾಡಾಲ್ಕಿಗ್ರಹಿಸಿ ಭೈಗ್ರಹಿಸಿಯಿಂದ ಸಂಜೀವನ (ಮಾಮ. ೧೨-೧೩); ಎಣಿಸಿಯಾಗ್ಗಿಗೆ ಸಂಜೀವನಿಗಾಗಿಯುಳ್ಳಿಯಿಂದ ಬಚ್ಚಿಗೆ ಪೊಲಿ ಭೂಮಿ ಭೂಮಿಯಿಂದ ಬಿಳ್ಳಿಗಾಲಿಯಿಂದ ಭೂಮಿಯಿಂದ ಭೂಮಿಯಿಂದ ಮಾಡಿಯಿ (ಮಾಮ. ೧-೩). [ಸಂ. ಸಂಜೀವಿನಿ]

ಸಂಜೀವಿನಿ (ಗಿ). ೧. ಗಂಧಿಸಿದ; ಜೀವಿದ : ಸಂಜ ಎಣ್ಣಿ ಯಾಗಾಯ್ಕಿಸಿಸಿಸಿಯಿಂದ ಕೃಷ್ಣುಗಳಂ ಸಂಜೀವಿಸಿಯಿಂದಾಯಿಯಿಂದ ಪೆಸರಿಯಿಂ (ಮಾಮ್ಮ. ೫೩-೬). ೨. ಉಂಟಾಯಿ; ಪ್ರಾಪ್ತಿಸಿದಾದ : ಸಂಜೀವಿ ಪ್ರಾಯಿಯಿಂಯಿಯಿಂ . . . ಮೂಗ ಪ್ರಿಯಂ (ಮಾಮ್ಮ. ೬-೨೪). ೩. (ಭ್ರಮಿಮಾಹ್ಮ) ಗ್ರಂಥವನ್ನು ಹೆಂಚ್ಚಿರಿಯಿಸಿ : ಅಜ್ಜ ಸಂಜೀವಿ ಭೃಗಾಂ ಭ್ರಮಿಯಾಗಿ (ಮಾಮ್ಮ). [ಸಂ.]

ಸಂಜೀವಿಸು (ಕ್ರಿ). ೧. ಹೆಂಚಿ; ಹೆಂಚಿಂದು : ಎಲ್ಲ ಗುಣಾಯಾಗಾಗಿ ಸಂಜೀವಿಸಿಸಿ ಅಯ್ಯಾ (ಮಾಮ. ೨೭); ಈ ಯುಂಡಿಂದ ಸಂಜೀವಿಸಿಯಾ ವಿಜಾಯಾಸಿಯಿಂದ ಪೆಸ್ಸಿಂಗಿ ಸಂಜೀವಿಸಿಯಿಂದ ಸೆಸಿಸಿಯಿಸಿಸಿಸಿ (ಮಾಮ್ಮ. ೧-೫); ಸಂಜೀವಿಸಿ ಪೊಸ ಮುಖ್ಯ ಅಜ್ಜಿ ಅಜ್ಜಿ ಅಜ್ಜಿಗಾಗಿ ಪೊಲಿಸಿಯಿಸಿಸಿ ಮೂಲಿಗಾಯಿಂದ (ಮಾಮ್ಮ. ೫೩). ೨. ಬೆಂಯಿಸಿ; ಸಂಗ್ರಹಿಸಿಯಿಂದ : ಎಲ್ಲಿಯಾಯಿಯಿಂದ ಅಯಿಯಿಯಿಂದ ಸಂಜೀವಿಸಿಯಿಂದ ಸಂಜೀವಿಸಿಯಿಂದ ಸಂಜೀವಿಸ

ಸಂಪ್ರತಿ (ನಾ). ೧. ಭರಣ; ಪಟ್ಟಿ : "ಸಮುದ್ಭವ, ಸಂಪ್ರತಿ - ೨ ಶಾಖದ ಪ್ರಕಾಶ. ಭರಣ, ಸಂಪ್ರತಿ" (ಅಭ್ಯು. ೨೧೧). ೨. [ಕಾವ್ಯ] ಒಪ್ಪಿದ ಬಗೆಯ ಮಿಲನ : ಇಂತು ಅಗಲಿಕೆಯಿಂದಿ ನೀನು ಮಾಗಲ್ಕೆ ಆಗಾಗಲಾ ತಿಂದ ಫಲವು ಗಾಳಿಗೆ ಪರಾಗ ಮೇಗೆ ಅಂಡಯಿಸಿದಂತಾ ಸಂಪ್ರತಿಯಂ (ಅಜಿ. ೯-೧೫). [ಸಂ.]

ಸಂಪ್ರತಿಪತ್ತಿ (ನಾ). = ಸಂಪ್ರತಿಪತ್ತಿ ೨ : ಮಾತ ಮಾಳ್ಕೆಯಾ ಮುಖ್ಯಕ್ಕೆ ಪ್ರಾಣಾಯಾಮವಿಕಾರಾಯಮೊಂದಿಂಬಯಂತೆಂ ಪ್ರತಿಸಂಬಂಧ ಮಾಳ್ಪಿಕೆಯಿಂ ಪರಮಾಂಗದ ಅರಿ ಸಂಪ್ರತಿಪತ್ತಿಯಪ್ಪಿದು (ಅಜಿ ೯ ೧೬). [ಸಂ.]

ಸಂಪ್ರತಿಪತ್ತಿ (ಕ್ರಿ). ೦.೦೨ ಮೇಗೆ ಮುಖ್ಯಿಂದುದನ್ನು ಪೇಳ್ದಂತು; ಮುಖ್ಯಿಸಿ : ಸೆಗಿದಿ : ಭೂಭಕ್ತಮಂಪ್ರತಿಪತ್ತಿಯಿಂದ ಭೂಮಿಯಂಕ್ಕಿ ಗೆಗಾ ಅಖಾರಂ ಅಖ್ಯ ಬೀಕಾಗಿ ಪಕ್ಷಿಪ ಪೇಗಿದ ಲ ಪಕ್ಷಿಯಿಂ ಸಂಪ್ರತಿಪತಿ ಸ್ವಾಯಿಯಿಂ। (ಪಕ್ಷಿಪ. ೬ ೩೩). (ಸಂಪ್ರತಿ + - ಇಪ್ಪ)

ಸಂಪ್ರತಿ (ನಾ). ೧. (ಮುನ್ನಿಟ್ಟಾಗಿ ಸಾಂಗೀಕೃತಮಪ್ಪುದು) ಇಷ್ಟಮತ) ಪಟ್ಟಿ, ಒಪ್ಪಿಗೆ : ಅಖಾಯಾಗಿ ವಿಷಯ ಸಂಪ್ರತಿಪ ಭೂಷಣಮನ್ನು ಪಟ್ಟಿಕೆ ಮಾಡುವಿಕ್ಕಿತು (೩೩೨). ೨. (ಅಭಿಯ) ಒಿಗೆ; ಮುಖ್ಯಾಯ; ನಾತಿ : ಅಖಾ ಸಂಪ್ರತಿಯಂ ಪಕ್ಷಿಪ ಮಾಗ 'ಸಂಪ್ರತಿ'ಳ ಬಂದಿಯ (೩೩೩೩. ೧೩); ಅಳಿ ಸಂಪ್ರತಿ ಸಂಪ್ರತಿಪ್ಪಿ ಬಂಪ್ರತಿಪ್ಪಿ ಸೊಂ ಅಮ್ಮಿಪಿಪ ಎಕೆ ಒಪಿಯಾ (೩೩೩. ೧೩). [< ಸಂ. ಸಂಪ್ರತಿ]

ಸಂಪ್ರತಿಪ್ಪಿಕೆ (ನಾ). [ಪ್ರಸ್ಥ] ಅಖ್ಯಪಿಯಾಗಿ ಫಲ : ಭೂಪಿಂ ಅಗ್ರಹಾರಾದಿಂ ಏಕೆ . . . ಸ್ಥಿರಾಯಖ್ಯಸ್ಥಿರಸ್ಯಾಗಿಸಲೆಂ ಖ್ಯಿ ಮುಖ್ಯಿಂ ಸಂಪ್ರತಿಪ್ಪಿಕೆಂ (೩೩೩. ೯-೦೩). [ಸಂ.]

ಸಂಪ್ರತಿಪ್ಪಿ (ಗ). ಗೌರವಿಪ್ಪಿಸು; ಅಧಿಕೆಗೆ ಖಾಪ್ಪಿಯಾದ : ಅಖಾಪಿಯಾಗಿ ನಿಯಮ ಸಂಪ್ರತಿಪ್ಪಿಗಾಗಿ ನಿಯಮ ಅಖಾಪಿಯಾಗಿಯಾಗಿಯಾಗಿಯಂ ಧರಿಸಿ ಧ್ಯಾನ (೩೩೩. ೬-೧೦). [ಸಂ.]

ಸಂಪ್ರತಿಪ್ಪಿ (ನಾ). ಸಮಿಪ್ಪಿಕಾಯಿಗಳು : ಅಖ್ಯಿಪ್ಪಿಗಾ ಖ ಅಖಾಖ್ಯಾಪ್ಪಿ . . . ಸಂಪ್ರತಿ ಮೊಗಾ ಒತಿಕೊಗಾಂ, ಧ್ಯಾ! (೩೩೩೩. ೩೩೩-೩೩೦). [ಸಂ. ಸಂಪ್ರತಿ]

ಸಂಪ್ರತಿಯರು (ನಾ). ಹೊಯ್ಸಳರಾಯರ

ವರ್ತಮಾನದ ರಾಲ : ಭೂತ ಭವಿಷ್ಯತ್ಕಾಲಗಳಂತೆ ವಿಧ್ಯರ್ಥಗಳಿಂಗೆಯ ಕೃತ್ಯಾದ್ಯರ್ಥಂ ಸಂಜ್ಞಾವಿಧಾನಗೊಳಗಾ ಕೆಯಿಂ ಇದ್ದೋಕ್ತಿ ಶ್ರಮಗೊಳಂ (ಪಾಣಿ. ೩.೩). [IP ಸಂಜ್ಞೆವರ್ಧ್ಯ ಇದು ಅನ್ವಯ]

ಸಂಜ್ಞಿ (ಪು). ೧. ಶಬ್ದ; ಧ್ವನಿ. ೨. ಕೊಗ; ಕೃಷ್ಣಕ್ಕೆ : ಬಹುಸಾಧಾರಣ ಪಡಿಯ ಮೃಗಿ ಪಡಿಯಲೊಂಗಿಗೆ ತಲಂ ಸಂಜ್ಞಿ ಪೂಡಿಪೆಯಿ ಪಡಿಯಲಿ ದಪಿ (ಗೀತಾ. ೧೫-೧೬). [ಹಿ.]

ಸಂಜ್ಞಿತಾಕ್ಷರ (ನಾ). ಮುದ್ರಿತ ಅಥವಾ ಲಿಖಿತದ ಗ್ರಂಥ ಮುಂತಾದುಗಳಿಗ ಸಲಿಸು ತಮಿಳರಿಯದವನು; ಪ್ರತಿಕಾರ : ಸಂಜ್ಞಿತಾಕರ ಲಿಖಿತಕ್ಕು ಪ್ರತ್ಯಕ್ಷಾಕಾರಂಗ ಈ ಪ್ರಮಾಣಕ್ಕು ಇದ್ದ ಅಬ್ಬಿತಾಗಲಿ? (ಪಾಣಿ. ೧೬.). [ಹಿ.]

ಸಂಜ್ಞಿತಿಸು (ನಾ). ೧. ಹತ್ತಿಕ್ಕಿ ಬಡಿದಿಕೆ; ಬಳಕಾದಿಸಿಕೆ ತಿ. ಕಾಪ್ಪಿಸು; ಗಳಿಕೆ. ೬. ಸಿದ್ಧವಾದ ತಿಳವಳಿಕೆ. ೪. ಉಂಟಾಗುವುದು; ಸಂಭವಿಸುವುದು. ೫. ಒಪ್ಪಿದರೆ; ಒಡಂಬಡಿಕೆ. [ಹಿ.]

ಸಂಜ್ಞಿತಿಸು (ಸ). ೧. ಸಮಿಪಕ್ಕೆ ಹೋದ; ಬಳಗಾದಿದ. ತಿ. ಕೂಡಿದ; ಹೊಂದಿದ : ಇನ್ನು ಸಂಯುಕ್ತ ಧಾರಾಸಂಪ್ರಹಣಕ್ಕೆ ಗಣಾಜನಾಗಳ ಸಂಜ್ಞಿತ ಯಂತಂಬಂಲಿ ಮಾಣಿಸಿ ನಿಲ್ಲಿಸಬೇಕಾಗಿ (ಪಾಣಿ. ೨-೧೦); ವಿಷ್ಣುಸಂಜ್ಞಿತ್ಕೆ ಗೆ ಭಕ್ತಿಯಿಂದ್ಕೆ ದಯೆಯಿ ಸಂಜ್ಞಿತಿಸಿ ಬಿದ್ದಿಗಳಾಗಿದು ನಿನ್ನ (ಪಾಣಿ. ೧೦-೧೨-೬೧). ೬. ಒಪ್ಪಿದ; ಅನುಮೋದಿಸಿದ. ೪. ಪೂರ್ಣಿಸಿದ; ನಡೆಸಲಿಂದ. [ಹಿ.]

ಸಂಜ್ಞೆಯ (ನಾ). ೧. ದೃಢವಾದ ನಂಬಿಕೆ; ಸಂಭಾವನೆಯಾದ ವಿಶ್ವಾಸ. ತಿ. ಒಪ್ಪಿದ; ಒಡಂಬಡಿಕೆ. ೬. ಸಮಾಜದ ತಿಳವಳಿಕೆ. ೪. ಎಗಳೆ; ಖಲ್ಲಸಿ. [ಹಿ.]

ಸಂಜ್ಞಿತ (ಗು). ಜೋಡಾದ; ಕ್ರಮವಿದ್ದಿಗೊಂಡ : ಸ್ವಭಾವಾಯಾ ಭೂಲಾಂ ಸಂಜ್ಞಿತಂ ಸಚಿವಾನಾಂ ನಿಜಾಂ (ಪಾಣಿ. ೨-೬). [ಹಿ.]

ಸಂಜ್ಞಿತ (ಗು). ೧. ಧಾರಣೆಯಾದ; ಕೊಡಿಬಗ್ಗೆಯ. (ನಾ). ತಿ. ಅಂಗೀಕರ; ಕಾಗಳೆ. ೬. ಏಕ್ಕಿತೆ; ಬೆಗ : "ಪಾಣಿ ಸಚಿವಿ ಅಂಚಿಂದ ಸಂಜ್ಞಿತಿಸಿಂ" (ಪಾಣಿ. ೧೬-೨೨). [ಹಿ.]

ಸಂಜ್ಞಿತಿ (ನಾ). ೧. ಕೊಡಿಪಿಕೆ; ನಿಷ್ಠಾಪಿಕೆ. ತಿ. ಕೊಡಿಗೆ; ದಾನ; ಒಬ್ಬರ ಸಂಜ್ಞಿತಿಯ ಪಡೆಯಿಂದ ಒಬ್ಬರ ವಿಷಾಸ್ಯಧೀನಕ್ಕೆ ಬರುವ ಸಂಜ್ಞಿತಿ (ಸಾಣಿ. ೧-೨೨). ೬. ಕಾಗಳೆ; ಉಡುಗೊಡ. ೪. [ಸ್ಮೃ] ಕಾರಣಗಳಲ್ಲಿ ಒಂದು; ವಿವಿಧೀ ವಿಧಿಪ್ರತ್ಯಯ ಅರ್ಥ : ಪ್ರಾ/ಷಿಜಿ ಭಾ/ಗಾ ಕಾಲಂ ಕಾಲಾನ್ಯಂ ಸಂಜ್ಞಿತಾಂ; . . . ಅನಿಯಂಗಾಯುಷಾಂ ಗಾಣಿಯಂಗಾಯಾಂ ನಿಗಚ್ಚುಂ (ಗಾಣಿ. ೩.). ಸಂಜ್ಞಿತಾಪಿಯಂಗಾಧ್ಯಾಯಿಯೊಂದು ಪಿಲ್ಲಾಯಾಯಿಯಲು ಕಾತ್ಯಂ; ಅಲ್ಲಿ ಪಚಿಯೊಂಗಾಯಿ. ಅಯಿ, ಯಿ, ಉಯ್, . . . ಇತ್ಯಂ-ಎಂದಿವಿಲ್ಲಿ ಪೂರ್ವಾಯಂ (ಪಾಣಿ. ೧೦ ಪೃ.); ವಿಧಿ ಪ್ರಯೋಗ ಯಜ್, ಪಠ್ಯ, ಗಾಗ, ಸಂಜ್ಞಿತಿ, ಅಧಿಕಾರ, ಸಂಬಂಧ, ಅಧಿಕಾರ ವಿಂದಿ ವಿಗ ವಿಧಿ. ಇತ್ಯಾಗಳಲ್ಲಿ ಸಂಬಂಧಪಡ್ಡಾಗಿ ಮಿಕ್ಕಾದಿಕ್ಕೆ ಗಣಕಲಿಂದ ಸಂಜ್ಞಿ (ಭೂಷ. ೫೩). ೫. [ಧಾರಣೆ] ಪದಿನಾರು ಬಗೆಯ ಸಂಧಿಗಳಲ್ಲಿ ಒಂದು ಕೃಷ್ಣ; ಉಡುಗೊಡೆಯನ್ನು ಕೊಡುವುದರ ಮೂಲಕ ಮಾಡಿಕೊಳ್ಳುವ ಸಂಧಾನ : ಕೃಷ್ಣ ರಾಜಾಯಂ ಕೊಟ್ಟು ಮಿತ್ರಿಯಾ ಸಂಜ್ಞಿತಾಯಿಯಾಯಿಂ (ಪಾಣಿ. ೨೨೦-೨). [ಹಿ.]

ಸಂಜ್ಞಿತಾಯಿಸಿ (ನಾ). ೫ ಸಂಜ್ಞಿತಿಸಿ ೪ : ಕೊಟ್ಟು ದಕ್ಕು ಮಾಡುವುದನ್ನು ಸೂಚಿಸುವ ಅರ್ಥ ಸಂಜ್ಞಿತಾಯಿಸಿಯಿಯಲ್ಲಿ. ಇದು ತಿಗಾದ ಪ್ರತ್ಯಯ ಮೂಲ ಸಚಿವಿಗೆ ಬರುತ್ತದೆ (ಭೂಷ. ೫೫).

ಸಂಜ್ಞಿತಿಸಿ (ನಾ). ೧. ಪೂರ್ವಕಾಲದಿಂದ ಸಂಬಂಧಪಟ್ಟಿಯಾಗಿ ಬಂದಿರುವ ಆಚಾರ, – ವ್ಯವಹಾರ : ಭೂಮಿ ಬಂದ ಯಾ ರಾಜ್ಯಕಾ ಸಚಿವಾ ಪಿಲ್ಲಿಸಿಂಗಾಯಿ ಸಂಜ್ಞಿತಾ . . . ಎಂಬಂತಿ ಪೊಂದಾವಾಗಿಯಂ ಶಾಲಿ (ಭೂಷ. ೧೫.); ಸಂಜ್ಞಿತಾಯಿ ಪೊಂದಾಗಿ ಬಾಯಾಗಿ ಅಲ್ಲ-ಅಲ್ಲದಲ್ಲಿ ದೊಂಪೋಗಿದ. ಒಮ್ಮೆಯ್ಗೆ ಬರಿದ ಧರ್ಮಾಯಿ ಪಾಯಿಯಿಂದ; ಆವರ ಸಂಜ್ಞಿತಾಯಿಯನ್ನು ಪಾಲಿಯುವುದು ಶಿಂಗಾಸನಿಯ್ಗೆ (ಪೃ.ಪ. ೧೫೧). ೫. (ಪರಂಪರಾಗತವಾಗಿ ಬಂದ) ರೂಢಿ; ಪದ್ಧತಿ : ಭೂಮ್ಯಂಗೆ ಬಾಲಾಯಿಯಂಗೆ ಸೂಗ ಬಿಚ್ಚಿಯಂದುಂ ಸಂಜ್ಞಿತಾಯಿಯಲ್ಲಿ? (ಪಾಣಿ. ೨೫-೨೫): ದಿಟ್ಟಗಾದಲ್ಲಿ ಸಂಜ್ಞಿ ಪೋಗ. ಪಟ್ಟಿದ ಇಲ್ಲಾಂ ರಾಜ್ಯ, ಶಾಲಾಗಾ, ರಾಜಂ ಪೂರ್ವಾಲ್ಲಿ ಭೂಜಾಗಾಗಿ ಪೃಥಿಯ್ಗೆಯಲ್ಲಿ ಸಂಜ್ಞಿತಾಯಿಯಲ್ಲಿ ಸೋಲಿಸಿಲ್ಲ (ಪಾಣಿ. ೧೦೨ ಎಳ್ಳ); ಶೆಗಲೆಗಾದ ಯಾಂ ಕೆಗಲಾಯಿ, ಶೆಗಲೆಗಾಯ್ಗೆ ಪೂರ್ವಾಲಂ ಯಿಜ್ಞ, ಆಜಾಯಾಯಿಗಾ ಬಂದ ಸಂಜ್ಞಿತಾಯಿ (ಪಾಣಿ, ೧೧೦). ೬. ಬಿಗೆ; ಕ್ರಮಾಗ; ವಿಧಿ : ಪಣ್ಣು ಕಾಲ್ಲು ಮುಖ್ಯ ಸಂಜ್ಞಿತಾಯಿಗಳಾದ ಭಾಷಣಾಲ್ಲು, ಆಶ್ಚಿಲ್ಲ. ಮಗಳು ಅಥಾ ಅಲ್ಲದ ಭೂಮ್ಯಿಕ್ಕಿ. ಒಪ್ಪಿ ಮುಂಜಾನೆ ಆಯಿ ಕೃಷ್ಣಾಯಿ ಸಂಜ್ಞಿತಾಯಿಗಳ . . . ಶೇಷ ಬಂದಿತ್ತ (ಭಾಷಾ. ೧೦೨). ೪. ಗುರುಹಿರಿಯರಿಂದಲೂ ಬಂದ ಉಪದೇಶ; ದೋಧನೆ : "ಅಮ್ಮಾಯಿ, ಸಂಜ್ಞಿತಾಯಿ, ಶಾಸಿಯಾಗಾ, ಗುರುಕ್ಷಿಯಿ . . . ಈ ೪ ಪಚಿಯಿಂದಿದ ಗುರುವಿದೇಶಂ" (ಭಾಷಾ. ೬೬-೨೧). ೫. [ಶಬ್ದ] "ಎಲ್ಲಾ ಪೂರಾಯಿಗಳಿಯೇ ಇದಿಲ್ಲಿ ವರ್ತಿಸಿ ಮತ್ತು ಸಂಜ್ಞಿತಾಯಿಯಿಂದು ಎಲ್ಲಿ ಭಾಗಗಳಿ. ವರ್ತಿಸಿದ ಸ್ಥಳಿಯಿಯನ್ನು ಭಿನ್ನ ವಿಶೇಷ್ಯಿಸಿಯಂದು ಸಂಜ್ಞಿತಾಯಿಯನ್ನು ಪಿಲ್ಲು ಬಳಿಸ್ಥಾ ಯಿಸಿದಂತೆ ಶಬ್ದಾಯಿಯಂದು" (ಪೃ.ಪ. ೧೫). [ಹಿ.]

ಸಂಜ್ಞಿತಾಯಿಸಿ (ನಾ). ಪೂರ್ವದಿಂದ ಬಂದ ಆಚಾರ, ವಿಚಾರಗಳಲ್ಲಿ ನಂಬಿಕೆಯುಳ್ಳವನು : ಭೂಮ ಭೂಚಾರಾಂಗಿಯಿ, ಆಚ್ಚಾರಿ ಸಂಜ್ಞಿ ಇಂ ಬಚಾರಾಯಿ ಅಯಿ ಸಂಜ್ಞಿತಾಯಿಸಿ (ಭಾಷಾ. ೨೨). [ಹಿ.]

ಸಂಜ್ಞಿತಾಯಿಸಿ (ನಾ). ಹಿಂದಿನಿಂದ ಬಂದ ಆಚಾರ, ವಿಚಾರಗಳಲ್ಲಿ ಭೃಯಿಯ ನಂಬಿಕೆ, – ಶ್ರದ್ಧೆ : ಆಯಿ ಪಚ್ಚಿಲ್ಲಿ ಭೇಗಿ ಬಂದ ಆಚಾರಕ್ಕೆಗಳಲ್ಲಿ ಭೇಗ ಬಿಚಾರಾಯಿಯ ಸಂಬಂಧಾಗಿ ಒಟ್ಟಿಸಿದಿಲ್ಲ. ಇದ್ದ ಗಣಿ . . . ಸಂಜ್ಞಿತಾಯಿಸಿ (ಗೃಚ. ೧). (ಸಂ. ಸಜ್ಞಿತಾಯಿಸಿ)

ಸಂಜ್ಞಿತಾಯಿಯಿ (ನಾ). ಶ್ರಾಯಿಯಿಸಿದ್ದ ತಿಯಿನ್ನು ಆಯಿಸಿಯಿಯಲು : ದಾಂಡಿ ಬಿಚಾರಿಗಳ ಶ್ರ ಗೊಂಬಿಯಿಲ್ಲಿಗ ಪಾಟಿಸ್ಥಿ, ಪಾಯಾಯಿಗಳ ಶ್ರೀಯಿ ಸಂಜ್ಞಿತಾಯಿಯಿಲ್ಲಿ ಯಿಂ ಆಯಿಸಿ (ಪಾಣಿ. ೧೧೦). (ಸಂ. ಸಜ್ಞಿತಾಯಿಸಿ)

ಸಂಜ್ಞಿತಾಯಿಸಿ (ನಾ). ಶ್ರಾಯಿಸಿಯಿಂದಿಯಿಲ್ಲಿ ನಂಬಿಕೆಯುಳ್ಳವನು : ದಾಂ/ಗಣಿ ಯಾಯಿಗಳ್ಳಿ ಬಿ. ಬಿ ಇಟ್ಟ ಪಿಟ್ಟ ಪಿಟ್ಟಿಯಿ ಸಂಜ್ಞಿತಾಯಿಸಿಗಳು ಪೂರ್ವಾಲ್ಲಿ (ಪಾಣಿ. ೧೬.). (ಸಂ. ಸಜ್ಞಿತಾಯಿಸಿ)

ಸಂಜ್ಞಿತಾಯಿ (ನಾ). ೫ ಸಂಜ್ಞಿತಾಯಿಸಿ : ಪಟ್ಟು ಕಾಲ್ಲ ಇಯಿಸಿದ ಒಟ್ಟು ಮಿಗ ಒಟ್ಟು ಮೂಗು; ಆಯಿ ಸಂಜ್ಞಿತಾಯಿಸ್ಥಿಗ ಮಿಗ್ಗಿಂಗ ಭೇಗ ಮಾಂಸ್ಥಿ ಬಿಯಿಸಿದ ಪೂರ್ಗ? (ಪಾಣಿ. ೧೨): ಪೀಳಿಯಾದ ಭೂಗಿಸಿಲ್ಲಿ ಸಂಜ್ಞಿತಾಯಿಸ್ಥಿಗಳಿಸ್ಥಿಯಿಲ್ಲಿ ಸ್ಥಾಸ್ಥಾಗಾಗಿ (ಪಾಣಿ. ೧೨). [ಹಿ.]

ಸಂಜ್ಞಿತಾಯಿಸಿ (ನಾ). (ಪರಂಪರೆಯನ್ನು) ನೀಡುವವನು : ಯಾಜಿಸಿಯಿಂಗಾಯಿಗಳ ಸಂಜ್ಞಿತಾಯಿ . . . ಸಂಜ್ಞಿತಿಯಿಂ ಯಾಯಿಯಿಸ್ಥಿಯಿಂಯಿಂ (ಪಾಣಿ. ೨). [ಸಂ.ಸಜ್ಞಿತಾಯಿ]

ಸಂಜ್ಞಿತೋಕ್ತ (ನಾ). ಅಕ್ಷರಿಯಾದ ನಂಬಿಕೆ; ಅಚ್ಚಾನಂದ : "ಸ್ಥಿರ ಮಿಂ ಮುಂ ಸಜ್ಞಿಂ ಪೋಗಾಯಿಯಿಯಿಸ್ಥಿಂ ಸಜ್ಞಿತೋಕ್ತಂ ಸುಮಂಯಿಸ್ಥಿ" (ಪಾಣಿ. ೨-೨೫). [ಹಿ.]

ಸಂಜ್ಞಿಯೋಗ (ನಾ). ೧. ಒಟ್ಟಾಗಿ ಸೇರಿರುವುದು, – ಕೂಡಿರುವುದು. ತಿ. ಮೇಳಾಗ; ಸೇರ್ಪಡೆ. ೬. ಸಂದರ್ಭಿಗ; ಸಂಬಂಧ : ಇಂತ ಕೆಲ್ಲ ಮಾಡುವ ಸಂಜ್ಞಿತಾಯಿಯಿಂ ಕೃಷ್ಣಿಯಾಲು ಯಾಜಿಸ್ಥಿಯಿಂದು ಸಂಜ್ಞಿತಾಯಿ (ಪಾಣಿ. ೨-೨೫ ಪೃ); ಕೃಷ್ಣಿಸ್ಥಿಗ ಇಂದ್ರಿಯಿಸ್ಥಿಗಾಗಿ ಸಂಜ್ಞಿತಾಯಿಯಿಂದ ಕಾಲ್ಲಿ ಪಾಣಿ (ಭಾಷಾ. ೨೨೨). ೪. ಸಂಧಿಯೋಗ : ಇಳ್ಳಿಗಾಗಿದ ಅಲ್ಲಿಗಿಂ ಸಾಮಿಯಿಂಯಿಯಿಲ್ಲಿ ವಿಗಿಯಿಂ ಅಯಿಂ ಇಯಿಂ ಸಾಯಿಸ್ಥಿಯಿಂಯಿಂ ಸಂಜ್ಞಿತಾಯಿಯಿಂ (ಗಾಣಿ. ೨೨); ಶಿಗಿಯಿಯ ಅಯಿಂ ಪೂಗಾಯಿಂ ಪೋಗಾಯಿಂ ಪೋಗಾಯಿಸ್ಥಿಗಳಿಂ ಬಿಸ್ಥಿ

ಕರುಣಾಧಾಮಗಳೊಸಂಜ್ಞೆ... ಇಂದು ಮಾಸಿ ಬಂದಿಗೆ ಮಾಲೆಗಾಹರಂದಪ್ಪಿದಾಗಮವು ಸ್ಫುಟ ಸಂಜ್ಞೆಯೋಳ್ (ಸಂಭವ. ೧೫-೧೦). ೫. ಗಾಂಧರ್ವಾದಿ; ಶೆಣ್ಣಿಟ್ಟು. [ಸಂ.]

ಸಂಜ್ಞೆ (ನಾ). ವಿವಾಹಪೂರ್ವಕಾದ ಪ್ರೇಮ : ಭೂಮಿಜೆ ಸಂಜ್ಞೆಯಂ . . . ಕಾಮ್ಯ ಸಮಜೆ ಬಂದ ಮುಹೂರ್ತಾದಿಜ್ಞೆ ಪೇಳ್ದ (ರಘು. ೨-೧-೨). [ಸಂ.ಸಜ್ಞೆ]

ಸಂಜ್ಞೆಣ (ಗು). ಬೆಣ್ಣಾಗಿ ತರಿದಿದ; ವಿಶಾಲವಾದ : ಮಂಜಿಕ ವಿಜೃಂಭಿಸಿದ ಸಂಜ್ಞಣ ಭಕ್ತ ಮಹಿಳಾಮಹಾಪಾಪಿಷ್ಠಿ ರಾಮಾಕಾಶ ಭೂಮಿ ಮಾಮಾಜಾವಿರಂದಂ (ಕಾಸ್ಯಾ. ೬-೨೫). [ಸಂ.]

ಸಂಜ್ಞಾಜನಕ (ನಾ). (ಪೇದೊಳ್ಳ ಶ್ರೇಯಸ್ಸನ್ನು ತಿಳಿಯಪಡಿಸಲು ಬ್ಯಾಕರಣ ಶಾಸ್ತ್ರದಲ್ಲಿ ಪ್ರಯೋಗಿಸುವ ಸಂಜ್ಞೆಗಳನ್ನು) ತಿಳಿಯಪಡಿಸುವುದು; ವಿಚಾರಗೊಳಿಸುವಿಕೆ : ಈಯಮಾಯ್ಕಾಯಿಂದಾಪೋಪೋಯ್ಕಂತ್ಯಾ ಸ್ಮೃತಿ ಸಂಜ್ಞಾ [ಪಾಣಿ. ಧಾ] ಅಗಾಸಾಮಜಾಂ ಶ್ರೀಕ್ಷಣಾಯ, ಮುಂಗಂತ್ರ ವಿಜಾಪಕ (ಮೋಸಾ. ೧-೬-೨೦). [ಸಂ. ಸಂಜ್ಞಾಜನಕ]

ಸಂಜ್ಞಿಕ್ಕಂಬರ (ನಾ). ಆಕೆಗೆ; ಆಸೆ : ಸಂಜ್ಞಿಕಂಬರ ಶ್ರೀಕ್ಷಣ ಲಭ್ಯ (ಬಜ್ಜಿ. ಮಂಜು. ೧೬). [ಸಂ.]

ಸಂಜ್ಞಿತರಣ (ನಾ). ಹೊಡೆಯುವಿಕೆ; ತಾಡಿಸುವಿಕೆ : ಆಟಾಯಂತರಣಾದಿಯಿಂ ಗೃಹಮಾಟಿಂಗೆಯಂ ವಿಚಾರಿಂದಿಂ ಸಂಜ್ಞಿತರಣಾ ಪ್ರಾಯಶ್ಚಿತ್ತಂ ವಿಧಿಸಿದಂ (ಅಷ್ಟಾ. ೨೨-೨೯). [ಸಂ.]

ಸಂಜ್ಞಿತಾಖ್ಯ (ನಾ). ಪರಸ್ಪರ ಹೊಂದಿದಾಟು; ಕಲಿತ; ಯುದ್ಧ : "ಸಂಜ್ಞಿತಾ . . . ಸಂಜ್ಞಿತಾಂ, ಸಜ್ಜಿತಾ, ವಿಸ್ಫಿತ – ಈ ೩೨ ರಣೇಗಂ" (ಅಭಿಧಾ. ೮೫-೨೪೯). [ಸಂ.]

ಸಂಜ್ಞಿಸ್ಪ (ಗು). ೧. ಸಂಪೂರ್ಣವಾಗಿ ಸಾಧಿಸಿದ; ಪೂರ್ಣವಿದ್ದಿಯನ್ನು ಪಡೆದ. ೨. ನವಪೇರಿಸಿದ; ಪ್ರಸಿದ್ಧಿಪಡೆದ; ೩. ಸಂಜಾತಿಸಿದ; ಗಳಿಸಿದ. ೪. ಉಂಟಾದ; ಸಂಧಿಸಿದ. (ನಾ). ೫. ಒದಗಿದುದು; ಸಂಧಿಸಿದುದು : ಮೂಸಿದಾಣ ಸೊಬ್ಬಿ ಮೋಚಿಸಾಗಾಂಡಲು ವಿಜಾಪಿಸಿದ್ದಿ ಸಾಗಾಂಡ ಧೀವರ ಸಂಜ್ಞಿಸ್ಪಣಾನ್ನು (ಅಷ್ಟಾ. ೯-೨೦) ; ಸ್ಫುಟ ಪಡೆ ಸಂಜ್ಞಿಸ್ಪಣಾದ ಯಜ್ಞಫಲ (ಭಗವ. ೩೪-೨೭೧). ೬. ಪೆರಗೊಂಡಪರು : ಸಜಾಪಾಂಪಾಗ ಭೂಪಾಲಯಜಯಂತ ಸಂಜ್ಞಿಸ್ಪಣಾದ್ಯರ ಮುಮುಕ್ಷುಜಾಸಾಗಾಂಜಾಂಪ ಯೋ ಗಾಜ (ಬಜ್ಜಿ. ೩೬-೨೯). [ಸಂ.]

ಸಂಜ್ಞಾಪ್ಪ (ನಾ). ೧. ಸಾಧನೆ; ಸಿದ್ಧಿ. ೨. ಪಡೆಯುವಿಕೆ; ಹೊಂದುವಿಕೆ. ೩. ಪಡೆಯುವಿಕೆ; ಗಳಿಕೆ : ಅಜ್ಜಪಜ್ಞಿಸ್ಪಂದಯಿಜ ಗಾಜಜ್ಞಿಯಂ ಸಾಜಾಜ್ಞಿಯಂದಿಜ ಪಡೆಯಾಜಜ್ಞಿಸ್ಪಾಗಾಯಿಂದಿಯಾಂ ನಿಜಿಜಯಾಜಜ್ಞಿಯಂದಿ (ಬಜ್ಜಿ. ೩೬-೨೯). [ಸಂ.]

ಸಂಜ್ಞಿಸ್ಪಿಸು (ಕ್ರಿ). ಉಂಟಾಗು ; ಒದಗು : ಆಜಾಯಾಜಜ್ಞಿಯಾಜಾಂ . . . ಪಡೆಯಲ್ಪಟ್ಟಿಂಗಾ ಬಂಧಗಳ ಸಂಜ್ಞಿಸ್ಪಿಯಾದಾಗ್ಯ ಸಜ್ಞಿಸಾಗಾಜಾಂಗಾಯಿಜ (ಬಜ್ಜಿ. ೬೧-೩೦). [ಸಂಜ್ಞಿಸ್ಪ + – ಇಸು]

ಸಂಜ್ಞಿಸ್ಪಿಸಾಗ್ಯಂ (ಕ್ರಿ). ವಿಚಿತ್ರವಾಗಿ ತ್ಯಾಗಿಸಿದ : ದೇವಜಯಾಗಾ . . . ಸಂಪಜಯಾ ಸಜ್ಞಿಸ್ಪಿಸಂಯಾ ಪಂಪಯಿಸಿಗಾಯಾ ಸಂಜ್ಞಿಸ್ಪಿಸಾಗಂಯಾ (ಭಗವ. ೨-೬-೨೪). [ಸಂಜ್ಞಿಸ್ಪಿಸ್ + ಕ್ತ (< ಕ್ತೋ,)]

ಸಂಜ್ಞಿತ (ಗು). ೧. ಪರಸ್ಪರ ಒಲಪ್ಪಿಕ್ಕಿ. ೨. ಆಕರ್ಷಣೆಯಾದ ಪ್ರೀತಿಯಿಂದ್ಕಿ; ಆಸ್ಥೆಯ ಪ್ರೇಮಪಕ್ಷಿ. (ನಾ). ೩. ಆಕರ್ಷಣೆಯಾದ ಪ್ರೀತಿ; ಆಸ್ಥೆಯಿಂದಾದ ಒಲವು: ಈಯ ಸಂಜ್ಞಿತ ಸಜ್ಜಿಯಾಗಿ ರಂಗ (ಅಷ್ಟಾ. ೧೬-೨೯). ೪. ಆಸ್ಥೆಯ ಪ್ರೀತಿಯ ಮಾಲ್ಯ : (೦). [ಸಂ.]

ಸಂಜ್ಞಿತ (ಗು). ಸಂಪೂರ್ಣವಾ ಸ್ಫೃಷ್ಟಗೊಂಡ; ಪೇರಿದ : ಮಾಜಾ ಬಿಜಾಜಿ ಸಜಿಸಿಯಂಯಾ ಪ್ರಾಪಿಂದಂಗಾಂ ಮಾಜಿಂ ಕೆಜ್ಜಿಯಾ, ಭೂಪಜಿಸ್ಪಿಸ್ಪಿಯಿಂದಿಯಾ ಪಜ್ಞಿಸ್ಪಾಗಾಂಜಾಂ ಮಿಂಯಾ ಬಿಜಾಜಿಯಾಂಜಿಯಿಂ ಏಜಿ ಸಂಜ್ಞಿತ [ಪಾಣಿ. ಸಿ] ಮಾಜಿಂ (ಭಗವ. ೨-೨೦). [ಸಂ.]

ಸಂಜ್ಞೀ (ನಾ). ೧. ಆತಿಶಯವಾದ ಅಳ್ತರ. – ಒಲವು) ; ಪಾತ್ಯಲ್ಲ : ಸಜಿಯಾಯಾ ಯಾಜಾಯಾಂ ಸಮಾಜಿಯಾಯಾ ಯಾಜಿಂಜಾ ಸಂಸ್ಕೃತಾಂ ಪ್ರಾಯಿಂ ಪ್ರಾಪಿಸಿಗ್ಯಾಸ್ಯಯ ಸಂಜಾಸ್ಯಾಯಿಂ ಸಿಂಯಿಸ್ಪಾಂ (ಅಷ್ಟಾ. ೬-೧೨೬) ; ಪಾಪಾಗಾಯಿ ಪ್ರಿಸ್ಪಿಯಾ ಸಂಸ್ಕೃತಿಯಾಂ ಸಂಯಾಜ್ಞಿಯಿಂ ಸಿಂಯಿಸ್ಪಾಂ ಯಾ ಪಾಪಾಗಾಯಿ ಯಿಸ್ಪಿಯಾಯಾಯಿಂಯಿಂ ಸಂಯಾಜ್ಞಿ (ಬಜ್ಜಿ. ೬೯-೨೬); ಯಾಜ್ಞಿಸ್ಪಿಸ್ಪಿಗಳಾ ಪ್ರಿಸ್ಪಿಯಾಪಿಯಾಂಯಾ ವಿಜಾಪಾಗಾಯಿಂ ಸಂಸ್ಕೃತಿಯಾಂ ಪಡೆಗಳಾ ಸಜ್ಞಾಸ್ಯಾಸ್ಯಿಂಯಾಂ ಪ್ರಾಸ್ಪಿಯಾಂ ಪಾಜಿಸಿಂ . . . ಯೋಸ್ಪಾಯಿಂಯಾ (ಅಷ್ಟಾ. ೬-೨೦). ೨. ಸಂಜ್ಞೀಯಾ; ಒಸ್ಪಿ : ಆ ಪಾಜ್ಞಿಸ್ಪಿಯಾಸ್ಯಾಂ ಸಂಸ್ಕೃತಿಯಾಂ ಯಾಜಿಯಾಂ ಪಾಜಿಯಾ ಸಂಯಾಂ (ಬಜ್ಜಿ. ೨೯-೨೬). [ಸಂ.]

ಸಂಜ್ಞೈಸ್ಪ್ಪಗ (ನಾ). ಯಾ ಸಂಜ್ಞೈಸ್ಪ್ಪಗ : ಪಾಜಿಂ ಪ್ರಿಜಾಪಾಸ್ಪಿಯಾಂ ಯಾಸ್ಪಿ . . . ಬೆಂಡಿ ಸಂಜ್ಞೈಸ್ಪ್ಪಗಯಾ ಪಜಿಸ್ಪಿ, ಸಜಿಯಾಸ್ಪಿ, ಪಜಿಯಾಜಿಸ್ಪಿಯಾಜಿಸ್ಪಿ ಯಾಸ್ಪಿ (ಯಜ್ಞಿ. ೬೬-೧೬೬). [ಸಂ. ಸಂಜ್ಞೈಸ್ಪ್ಪಗ]

ಸಂಜ್ಞೈಸ್ಪ್ಪಿಸು (ಕ್ರಿ). (ಮುಂಜ್ಞಾಜಯಾಸ್ಯಾ) ಬಿಜಿಯಾಸು; ಸಂಪಜಿಸು : ಶಾಜಿ ಸಿಜಿ, ಪಜಿಸ್ಪಿ ಪಜ್ಞಿಸಂಯಾ ಸಿಜಿ, ಪ್ರಿಸ್ಪಿಗಳ ಬೋಸ್ ಸಜಿಸಾಯಾಂಯಾ ಸಂಜ್ಞೈಸ್ಪ್ಪಿಸಿಯಾ (ಅಷ್ಟಾ. ೧೬೬). [ಸಂಜ್ಞೈಸ್ಪ್ಪಗ + – ಇಸು]

ಸಂಜ್ಞೆ (ನಾ). ೧. ನೆರೆ; ಪ್ರವಾಹ. ೨. ಗುಂಪು; ಸಂದಣಿ. ೩. ಗಜ್ಜಲ; ಜೋಗಾಪಳ. ೪. ಸಾಪ; ಪ್ರಳಯ : ಪಡಾಯಾಸ್ಯ ಯಾಸಿಯಾಂ ಪ್ರಾಸ್ಪಿಯಾಯಾಂಯಾ ಬಿಜಿಯಾಸ್ಯ. ೫. ಆಗಾಂ ಯಾಜಿಯಾಂ ಸಂಜ್ಞೆಯಾಯಾಯಾ (ಅಷ್ಟಾ. ೫೫-೧೬). [ಸಂ.]

ಸಂಜ್ಞೆಡ (ನಾ). ಯುದ್ಧದ ಒಂದು ಹಿಮ್ಮೆ; ಯೋಧರ ನೆರೆಯ ವಿಮರ್ಶೆಯನ್ನು ತಾಳುವಿಕೆ : ಯಾಜಾಪಾಯಾಸ್ಪಿ ಯಜಿಯಾಂಜ್ಞೆಪ್ಪಿಯಾಜಾಯಾಂಯಾ . . . ಅಂಯಾಜ್ಞೆಸ್ಪ ರಂದ ವಿಪರೀತ ಗಾಪಿಯಾ ಳೌಪಿಯಾಯಾ ಸಜಿಯಾ (ಅಷ್ಟಾ. ೬-೨೦). [ಸಂ.]

ಸಂಜ್ಞೆವಿಸು (ಕ್ರಿ). ೧. ತುಂಬು; ಆವರಿಸು : ಒ "ಅಜ್ಞಾ . . . ವಿಜಿ ಮೋಳ ಮೋಡಜಜ್ಞಿ, ಆಡಂಬ ಸಂಜ್ಞೆವಿಸಾ ಮೋಡಾಯಿ, ವಿಜಿಯಾ ಬಜಿಜಿಯಾಯಾ! (ಭಗವ. ೫೮-೨೫೯). ೨. ಮುಸುಗಿಸು : ವಿಜ್ಞೆ ಪಡಾಯಾ ಬಿಜಾಯಾಯಾ ಸ್ಫುಟಾ ಯಾಯಾಜ್ಞೆಯಾಸ್ಯ ಸಂಜ್ಞೆಯಿ ವಿಜ್ಞೆ (ಸಾಯಾ ೧೬-೨). [ಸಂಜ್ಞೆಡ + – ಇಸು]

ಸಂಜ್ಞೆಳ (ನಾ). ಆತಿಶಯವಾದ ಶೆಲ; ಶ್ರೇಷ್ಠವಾದ ಅಭ್ಯೆಕ್ಷೆ : ವಿಜ್ಞೆ ಪಡಾಯಾಂ ಮೋಳಾಯಾಂ ಬಂಜಿಯಾಂ ಪ್ರಾಸ್ಪಿಯಾಂ ಯಾಜ್ಞೆಳಿಂ ಬಂಜಿಯಾಂ ಸಾಯಾಂಯಾಂ ಅಭಿಪ್ರಾಯ ಪಜ್ಞಿಸ್ಪಿಯಾಂ ಪಜ್ಞಿಸ್ಪಿಯಾಂಯಾಂ (ಭಗವ. ೬-೨೦). [ಸಂ.]

ಸಂಜ್ಞೆಳ (ಗು). ೧. ಸಂಪೂರ್ಣವಾಗಿ ಅರಳಿದ; ಪೂರ್ಣವಾಗಿ ವಿಜಿಯಾಪಾದ; ಅಭಿವೃದ್ಧಿಗೆ ದಜಿಯಾಯಾ ಸಂಜ್ಞೆಯಾಂಯಾಗಾಂ ಸಾಗ್ಯಿಸ್ಪಿಯಾ ಪ್ರಾಸ್ಪಿಯಾ ಪ್ರಾಪಿಯಾ (ಬಜ್ಜಿ. ೫೫-೨೫). ೨. ಮೇಗಾದ; ಆತಿಶಯವಾದ : ವಿಜ್ಞೆಯಾ ಯಾಜ್ಞಿಯಾಂ ಪ್ರಾಪಿಯಾ ಸಂಜ್ಞೆಳಿಸ್ಪಿಯಾಜ್ಞೆ ಪಾಪಾಯಿಂ (ಬಜ್ಜಿ. ೫೫-೨೭). [ಸಂ.]

ಸಂಜ್ಞೆಳ್ಳಿ (ನಾ). ವಿಶಾಲವಾದ ಕೆಜ್ಞಿಗಳಿಳಿದು; ಶ್ರೇಷ್ಠ : ಸಂಜ್ಞೆಳ್ಳಿಪ ಕೆಂಪು ಒಜಿಯಾ ಯಾಜಿಯಾಂಯಾ (ಬಜ್ಜಿ. ೫೬-೧). [ಸಂ.]

ಸಂಜಾಪ್ತ (ನಾ). ೧. ಒಟ್ಟಾಗಿ ಸೇರಿಸುವಿಕೆ. – ಜೋಡಿಸುವಿಕೆ. ೨. ಸಂಯೋಗ; ಸಹವರ್ತನ : ಸಂಬಂಧ ಅಸಂಬಂಧಗಳಾ ಪ್ರಸಂಬ್ಧಿಸಿಂದಾ ಪಾಪಿಂದಾ ಸಂಬಂಧಾಪಾಯಾ ಅಪಾಬಂಧಾಪಾಯಾ ಬ್ಯಾಪ್ತ ನಿಜ್ಞ ಶೋಭಾ (ಅಷ್ಟಾ. ೫೫-೧೫). ೩. ಜೋಡಣೆ; ಸಂಯೋಗ. ೪. ಹೊಂದಿಕೆ; ಹೊಂದಾಣಿಕೆ : ಜಾಯಿಂಗಿಸಿಂಯಾಯಾ ಸ್ಫೃಷ್ಟ ಸಂಬಂಧಾಂಧಿಯಾ ಪ್ರಾಸ್ಪಿಯಾಂ ಪಜ್ಞಿಸ್ಪಿಯಾಂ ಸಿಂಯಿಸ್ಪಾಂ ಸಿಂಯಿಸ್ಪಾಂ ಸಂಜ್ಞೆಯಾಂಯಾಂ (ಅಷ್ಟಾ. ೬).

ಸಂ. (ಮುಮದ ಮುಂತಾದುವುಗಳಂದ ಅಂಬಾಗುವ) ಬಾಂಧವ್ಯ; ನೆಂಟು; ಸಂಬಂಧಿ : ಆಯಾಯ ಸಂಬಂಧಾರ್ಥವು ರೂಢಿಯಾಗಿರುವ ಸಮುಚಿತದಿಂದ (ಮಾಮ. ೧೧); ಅಧಿಕಾರಿಯಾದವನಿಗೆ ನೀತಿ ಬಂಧಿಸಿದಾ ಭೂಮಿದಾನಸಂಬಂಧದಲಿ ನೀ ಕೊಂಡ ಪಾಪಂಬೋಂಡಿಯ ಪರಿ (ಅಷ್ಟಿ.೮ ೧೦-೨೨); ಒಂದಾನ ಸಾಮಂತನು ಒಳಗೆ ಪಟ್ಟಿದ ಸಂಬಂಧ ನೂಲಿಂದಂತು ಸಂಬ್ಯೆಗೆ ದೆಸವಟ್ಟಿಗೆ. ಪಾಮಿಮಾಬಗಳ್ಗೆ ಕಬ್ಬಿಲ ಪಡಿಪಾಲಿಸಲ್ಪಟ್ಟ (ಪಾಮಾ. ೧೧೧). ೬. ಸ್ನೇಹ; ಗೆಳತನ. ೬. ನೆಂಟು; ಬಂಧು. ೮. ಸ್ನೇಹಿತ; ಗೆಳಯ. ೯. ಆಪ್ತತೆ; ದೊಂಗ್ಕತೆ. ೧೦. [ಪ್ಯಾ.ಶ] ಪಷ್ಠಿ ವಿಭಕ್ತಿಯ ಅರ್ಥ : ಸಂಬಾಪರೋಮಾಂಬ ಷಷ್ಠಿಗೆ ಯೋಗಂ (ಪಾಪ. ೧೨೨); ವಿಭಕ್ತ್ಯರ್ಥಗಳು ಷ್ಠಿ , ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ ಎಂದು ಏಳುವಿಧ. ಷ್ಠಿಗಳಲ್ಲಿ ಸಂಬಂಧಕ್ಕೆ ಆದು ಮಿಕ್ಕಿವೆ, ಕಾಣಬೆಂದು ನಿಯಮ (ಕೃಪ. ೫೬). [ಸಂ.]

ಸಂಬಂಧಕ (ಗೆ). ೧. ಸಂಬಂಧವಿದ; ಸಂಬಂಧಪಟ್ಟ. (ನಾ). ೨. ಒಂದಕ್ಕೊಂದ ನೆರಂದು ಸೇರಿರುವಂಥದು; ಶಿಕಸ್ಥ ಔಂಥಿಯವಂಥದು : ಅದ ಸಂಧಿಬಂಧಗಳ್ಗೆ ದೆಸಿತ ಶ್ರಮಿಷಿಂಡಿಯನ್ನು ಎಂದು ದೃಢ, ಸಂಗಯುಂಗ್ಯಾತ್ಮ: ಇತ್ತಿ . . . ಅಸ್ಥ ಸಂಬಂಧಿಗಾಂಡ (Connective) ಒಟ್ಟುಗೂಡಿತ (ಸಾಪ. ೧೦). ೩. ಸಂಯೋಜನ ; ಒಳಕ್ಟುವಿಕ : ಜೀವ ಭಾವಜಂ ಸರ್ವಾನ್ಯಾಶಾದ ಅಭ್ಯಾಸ್ಥಿಗಳ್ಳ ಸಹಜಸಂಬಂಧವು ಮತ್ತು ಸಂಬಂಧಪಟ್ಟವಾದ ವಿಷಯಗಳನ್ನು ಒಳಕೊಂಡಂತ ಭೌತಿಕಾಸ್ತಿ ಮಿಶ್ರಲಂ ಅಥ ಸಂಪಾದಿಸಿ ಅದಂ ಪೊಸೆಸಿ ಪೋಗಿರುಂ ಸಂಬಂಧಜಾಪಾತ್ಯಾಸಿ (ಪ್ರಪ್ರ. ೬೫). ೪. ನೆಂಟು ; ಬಂಧು. ೫. ಗೆಳೆಯ; ಸ್ನೇಹಿತ. [ಸಂ.]

ಸಂಬಂಧಪಡು (ಕ್ರಿ). ಸಂಬಂಧಿಸು ; ನೆಲು : ಈ ವಿಷಯಕ್ಕೆ ಸಂಬಂಧಪಟ್ಟ ಪತ್ರಗಳಾವುವೂ ಬಂದಿಲ್ಲವಂತೆ (ಮೋಹನ. ೧೩). ಏನಾಗಲೂ ಏನಿಲ್ಲ; ಹೋಗಲಿ ಅದ್ದು ಪರಾಂ ಪಟ್ಟ ಗಂಡಸಿಗೂ ಸಂಬಂಧಪಟ್ಟಿಲ್ಲ ಅಂತಾಷ್ಟು (ಮಾಪಾ. ೬೫೫). [ಸಂಬಂಧ + ಪಡು.]

ಸಂಬಂಧಪಡಿಸು (ಕ್ರಿ). (ಮದುವೆಯ ಮೂಲಕ) ಸಂಬ್ಯೆಯನ್ನು ಪಡೆ : ಪರಂಗಿಯವರೆಗೆ ಕಮ್ಮಿಲ್ಲ ಸಂಬಂಧಪಡಿಸಿಕೊಂಡು ಪುಂಡಾ ಬಹಳವು (ಮಾಪಾ. ೧೧೦). [ಸಂಬಂಧ + ಪಡಿಸು (< ಪಡಿಪು)]

ಸಂಬಂಧಪ್ಪೆ (ನಾ). ಕ್ಷತ್ರಿಯರಂದ ಕೂಡಿದ ಭೂಮಿ : ಸಮಗಾಂ ಬಾಹುಬಲಂ ಸಂಬಂಧಪ್ಪಕ್ಕೆಯೊಳಂದಂ ಸಮಬಾಹುಪ್ಪಕ್ಕೆಯೊಳಾ ಅಪಮೃಳಾಬಲಂ (ಬಾಪು. ೧೫-೪೬). [ಸಂ.]

ಸಂಬಂಧಬಂಬಾಪ್ತ (ನಾ). [ಪ್ಯಾ.ಶ] ಒಂದಕ್ಕೊಂದು ಅಮರಿರುವ ಬಂಧುವಿನ ಪಷ್ಠಿವಿಭಕ್ತಿ : ಸಂಬಂಧಬಂಬಾಪ್ತಕ್ಕೆ : ನೊಲಂ ಅಗ್ಗ ದೇವಿಂ, ತೋಗ ಬಾಗ ಕಾಣಿ, ಅಂತಿ ಪ್ರಯೋಗ ಸಾಧು (ಅಪ. ೩.೧೧ ಪ್ರಸ್ತಾ). [ಸಂ.]

ಸಂಬಂಧಮಹೋಚ್ಚಯ (ನಾ). [ಪ್ಯಾ.ಶ] "ಪದಗಳಗಾಗಲಿ ಪದಮುಚ್ಚಯಗಳಗಾಗಲಿ ವಾಕ್ಯಗಳಗಾಗಲಿ ಸಂಬಂಧವನ್ನು ಲಿಪ್ಸುವ ಅವ್ಯಯಗಳಿಗೆ ಸಂಬಂಧಮಹೋಚ್ಚಯವೆಂದು ಹೆಸರು" (ಪ್ರಪ್ರ. ೧೧೧). [ಸಂ.]

ಸಂಬಂಧಾತ್ಮಕ (ನಾ). ಸಮಾನವಾದ ಅಸ್ತಿತ್ವ : ಸಂಬಂಧಾತ್ಮಕವೆಂಬ ಪಾತ್ರಗಳಾಂ ಶಬ್ದಮಾಗಿ ಭಾವದ ಹೊಳಾಡಲಂಬರಂ ಪಡಗಮುಖಗಾಪ್ಯಂಗಳಿಗಂ (ಪಾಪ. ೨-೬೦). [ಸಂ.]

ಸಂಬಂಧಾತ್ಮಕಪದ್ಧತಿ (ನಾ). [ಶಾಸ್ತ್ರವಿಷ] ಅತಿಪದಂಗಳ್ಳ ಎಷಲು ಅಲಂಕಾರದ ಒಂದು ಕ್ರಮಬದ್ಧ ; ಪರಸ್ಪರಸಂಬಂಧವಿಲ್ಲದಿದ್ದರೂ ಸಂಬಂಧವನ್ನು ಸೂಚಿಸುವಿಕೆ : ಒಂಟಿಸ್ಥಿತಿಗಳ್ಳ ಸಂಬಂಧವಿಲ್ಲದಿರೂ ಸಂಬಂಧವನ್ನು ದರ್ಶಿಸುವುದೇ ಸಂಬಂಧಾತ್ಮಕತೆಂದ್ಕ (ಕೃಪ. ೨೮೫). [ಸಂ.]

ಸಂಬಂಧಿ (ಗೆ). ೧. ಸೇರಿದ ; ಸಂಬಂಧಪಟ್ಟ. (ನಾ). ೨. ನೆಲು ; ಬಂಧು ; ಸಂಬಂಧಿಕ : ಸಂಬಂಧಾಷ ಪಂದು ನೀಪಿಪ್ಪಲ್ಲಿ ಸಂಬಂಧಿ ಪಾಪ್ಪಿಯ್ಯಾ (ಒಪ್ಪ. ೭೮೦); ಸಂಬಂಧ ಆಯಂಬಂಧಮಂ ಪೆಸರ್ಪುಗೊಣ್ಣು ನುಡಿದಂ . . . ಆಯಾಸಂಬಂಧದ ಪೆಸರಂಬಂಧ ಪ್ರಾಣಂಬಂಧದ ಘಾತ ಸ್ವಿಪಿಧ ಸಂಬಂಧಪರ್ಯಂತ ಭಾಸಿಸಿ (ಪಾಪ. ೧೨-೧೦೬) ; ರಾಷ್ಟ್ರರ ಶ್ರಿಯಾಪಚಿಹ್ನಾದಂ ಆಪ ಸಂಬಂಧಿಗಳಂ ಪಟ್ಟ ಕ್ಷಯಿಷ್ಣು ಭಾಗ . . . ಆಪಯಿಗೆ ಬಲಿಪ್ಪಾಕೆ (ಕೃಪಾ. ೩. ೫೧). ೩. ಹೆಣ್ಣು ಕೊಡುವುದರಿಂದ ಅಥವಾ ಹೆಣ್ಣುವುದರಿಂದ ಸಂಬಂಧ ಬೆಳೆದವನು; ವಿವಾಗ : ಅಂದ್ರ ಗತಿ ನಿಮಗ ಸಂಬಂಧಿ ಆಗಾವು ಅಂತ್ಯಾಗಿರುವಾಗ ನಿಜ ಪರಿಚಾರಿಗ ನಿಮಾಜ್ಞ ಅಪಾಜ್ಞ ಅಂತಾಗಿರುವಾಗ (ಕೃಪಾ. ೬-೧೦). [ಸಂ. ಸಂಬಂಧಿನ್]

ಸಂಬಂಧಿಕ (ನಾ). ನೆಲು : ಬಂಧು : ಜ್ಞ ಸಂಬಂಧಿಕ ಮಕ್ಕಿಲ್ಲ ಒಂದು ಮಾತ ಮಾಯಿಲೆ (ಅಭಾ. ೬೧); ಒಡಪಿಟ್ಟಿನ ಸಂಬಂಧಿಕೆ ಮಡಿಪಾಸ್ಪಿಂ (ಪಾಪ. ೬೧). [< ಸಂ. ಸಂಬಂಧಕ]

ಸಂಬಂಧಿಸು (ಕ್ರಿ). ೧. ಹೊಂದು ; ಹೊಂದಿಕೆಯಾಗು ; ಅಳವಡು : ಆಗಾಗ ಸಮಾಗಂ ಸಂಬಂಧಿಸುವುದೇ ಲೆ (ಪಾಪ. ೨೦-೬೦). ೨. ಹೊಂದಿಸು : ಜ್ಞಾನ ಬೋಧಪಡಿಸಲಾಗಿಂ ಸಂಬಂಧಿಸಲಿಯದ ಮಾರ್ಗಪ್ರದಿಯಾದ ಮಾಡಿಸು ಮೊಸ್ಸಾಬಿಸಲಾ . . . ಶೋಷ್ (ಪಾಪಾ. ೬-೫೬). ೩. ನೆಲು ; ಸಂಬಂಧಪಡು : ಆದು ಹೇಗಾಪ್ಪಕ್ಕೆ ಯಾಗಂಥದ್ದು ಮಿಶ್ರಾಗಿ ಆದಗೆ ಸಂಬಂಧಿಪಟ್ಟಿಗಳು (ಮಾಪಾ. ೧೧) : ಗಾಯಪಿಂದ ಮಿಶ್ರ ಅಥ್ಯಗಳ ಮಿಷ್ಯಯ ಇಷ್ಟಾದಿಗಳಾ ಸಂಬಂಧಿಸಿ ಆಸ್ಪಿಸಿ ಅಸ್ಥಿಯ ದೊಡ್ಡ ಸಮಸ್ಯೆಯೊಂದಕ್ಕೆ . . . ಕ್ಷಮಾಷ್ಟ ಅಣುಶಾಸನಯಸ್ಥಿಸಲಾಗಿಷ್ಟಿಸಿ (ಅಪಾಗೆ ೧೪೨). [ಸಂಬಂಧ + ಇಸು]

ಸಂಬಂಧೋಕ್ತ (ನಾ). ಸಂದರ್ಭ ನುಡಿಯುವವನು (?) : ಪಾಠಂ ಗೊಡಪಿಗೆ ಸಂಬಂಧೋಕ್ತ ದೊಂಬಿಗೆ (ಪ. VIII, ಪಠ್ಯಾ. ೧೫೪-೧೬ ; ೧೭೨).

[ಸಂಬಂ ? + ಒಕ್ತ (< ಒಕ್ತ)]

ಸಂಬಂಬಿಸು (ಕ್ರಿ). ಆತಿಯಾಗಿ ಅಪೇಕ್ಷಿಸು : ಆ ವಿಷಯದಲ್ಲಿ ಸಂಬಂಬಿಸಿ ಪಟ್ಟಿಯಾಗಿಸಿದ ಅಪಾಯ ಅಷ್ಟಕ್ಕಾಗಿ ಬೆಡಾಷಿಸಿದಂತಾಯಿತು ಸಂಬಂಬಿಸಿದ (ಮೋಹನ. ೧೬೧-೬೫). [ಸ್ಪೃ + ಬಂಬಿಸು.]

ಸಂಬಂಬ್ಯೆ (ನಾ). ಒಬ್ಬಾನನ ಹೆಸರು : ಶ್ರೀಮತ್ಪ್ರಭುವಿಂ ಅಪಾಯಷಾಣಕ್ಕಿಲ್ಲ ಕೆಲಗೆ ದಿಟ್ಟಿಯಂ ಬಿಟ್ಟು ಯಾ ಧರ್ಮಾಚರಿಯಂ ಅಷಾಷಾಷಿಸಲಿಯೊಡಂ (ಪ. X, ಯಾಪಾ. ೧೬೬-೧೬ ; ೧೬೬). [ಸಂಬಂ + ಅಬ್ಬೆ.]

ಸಂಬಜ೧ 'ಸಂಬಾರ' ನೋ.

ಸಂಬಜ೨ (ನಾ). ೧. ನೀಚತೆ ; ಸಾಧು. ೨. ಒಂದು ಬಗೆಯ ಚರ್ಮ : ಅಂಬಜ ಬಾಯಿಂ ಬಂದ : ಸಂಬಜ ; ಗಡಪ (Sambar. ಅಷಾ). ೩. ನೀರು ; ಬಾವಿ : ಸಂಬಜ – ಸಂಬರ (ಪಾಪ. ಪಾ. ಭೂಮಿ) ; ಭಗವ ಸಂಬರಮಂಗಳಿಷ್ಟಯಂ ಅಮಮಿಯ ಅಮಮ್ಯಯಾಷಾಗಿರುವ ಅಂಗಾಂಗಂ ಶ್ರಮಿಯಿಂದ ಅಷಾಂಗ ನೀರಾಷಿಂ ಮೊಗ ಭಗವ ತಿಮ್ಮ, ಜೀಂಗಳಂದ ಸಾಮಿಯಂ ಅಲಂಕರಿಸಲಿಯಾಗಿ ಪಷಿಷಿಸಲಿಂ (ಅಭಾಪ. ೧೪೨-೬೦). ೪. ಪಚಿತೊಗು ; ಅಂಗ. ೫. ಒಂದು ಪರಿಷಾದ ಹೆಸರು. [ಪ್ರಾ.]

ಸಂಬಜಂಗಾ 'ಸಂಬಾರಂಗಾ' ನೋ.

ಸಂಬಜಪಟ್ಟ (ನಾ). ಮಾಸಾಹಿಪಿಯನ್ನು ಬೆರೆಸಿದ ಅಕ್ಕಿದ ಮುದ್ದೆ – ಇಡಿ : ಅಂಗ ಸ್ಪೃಷಾಷಿಗೆ – ಪ್ರಾಷಾಷಿಂಗ್ – ಪ್ರಷಾಷಿಗೆ . . . ಸಷಾಷಿಸಿಲ್ಲ – ಸಂಬಜಪಟ್ಟ (ಪಾಪ. ಪಾ. ಭೂಮಿ). [ಸಂಬಜ (< ಸಂಬಾರ) + ಪಟ್ಟ (= ಪಟ್ಟಿ)]

ಸಂಬಜ೪ 'ಸಂಬಳ' ನೋ.

ಸಂಬಜ್ಯ, ಸಂಬಜ್ಞ (ನಾ). ೧. ಪ್ರಯಾಣಾಲಸ್ಯಕ್ಕೆ ದೇಷಾಗುವ ಹಗ, ಬಿಸಿ ಮುಂತಾದ ಪ್ರಯಾಣಾಪಾಯಗಳು; ಪಾಪತೆಯ : "ಅಷ್ಟಾಯಮಿ ಸಂಬಜಮ್ಯ" (ಮೋಪಾ. ೬೯-೧೩). ೨. ನೀರು ; ಜಲ. ಸಂಬಜ್ಞ : ೧. "ಅಷ್ಟಾಯಂ, ಸಂಬಜ್ಞ - ೫ ೨ ಸಂಬಜ್ಞಂ" (ಪಾಪಾ. ೫೯-೨೦೬); ಗಾಯಮಂ ಸಂಬಂಧಂ ಸಂಬಜ್ಞಮಂ ಪೊಷ್ಟಿ ಲಿಷಿಪಿಸಿಗಂ" (ಪಾಪ್ರ. ೧-೧೦) ; ಪಾಷಾಷಿಸ್ಥ ಪಟಾಷಿಸ್ಥ ಪಿಷ್ಟ ಮತಿ ಸಂಬಜ್ಞಮಾಷ್ಟಿ (ಪಾಪಾ. ೧-೧) ; ಆಪಾಯಮಿಷಂಲಿ ಅಂಬಂ ಗೊಜಪ ಸಾಧ್ಯಂಗೆ ಮಾಷಾಯಂ ಪಟಾಷಿಸಿಲ್ಲ" ಪೆಯೋಷ್ಟಾಧಿಗಳಿಂಲೀ ಪೆಯೋಷ ಸ್ಪಷ್ಟಾಷಿಸಿಲ್ಲ ಬಿಷಾಷ್ಟಿಸಿಲ್ಲ ಸಂಬಜ್ಞಿಷಿ (ಪಾಪ್ರ. ೧೫). [ಸಂ.]

ಸೊಲಂ, ಸೊಲಂಕಿ, ಸೊಲ್ಕಿ, ಸೊಲ್ಕೆ (ನಾ). ಸರೆಹಿಡಿತ : ಇಂಬುಲಗಿತ್ತಿ : "ಸೊಲಂ (ಸೊಲ್ಕೆ) - ಸಿಲ್ಕಿರೆ = ಇಂಬು" (ಚಿತ್ರಲಿ. ೧೬). ಸೊಲಂದಿ : ಮಡಿಸಿ ಬಾಕಿ ಮಿಕ್ಕಿದ್ದನ್ನು ಸಂದಿ ಬಡಿದಂತೆ ಮಾಡಿ ಸಂಪಿಗೆಯ ಸಣ್ಣ . . . ಅದು ಕೊಳ್ಳ ಸೊಲಂದಿಯಲ್ಲಿ (ಮಾಲ. ೬. ೨. ೫೫-೫೧). ಸೊಲ್ಲಿ, ಸೊಲ್ಲಿ : (ಕ್ಷತ್ರಿ.) ಸೊಲ್ಕೆಲ್ಲಿ, ಸೊಲ್ಕೆ : (ಅ).

[< ಸಂ. ಶೃಂಖಲ]

ಸೊಲ್ಲ, ಸೊಲು (ನಾ). ೧. (ಮಾಡಿದ ತೆಲುಕ್ಕೆ, ಕೃತಿಸಲದಮಿಸಿಗಾಗಿ ಒಡೆದಿರುವ) ಪೆಗಡ ; ಮಡಿಲಿ : ಇಂದಾಂಙ್ ಸೊಲಂಬಿಲ್ಲ ದಂಡಾಳಿಂಗ ಬಿಡೆ (ಮಲಾಳ. ೨-೬೯): ಮಿಲ್ಮಿಲಿದಿರೆಯೂ ಮೋಲಾ ಮೂಗಿಗಳ ಕಣ್ಮುಂಬಳಿ ಒಳಗೆ ಸೊಲಂಕಂದು ಸಿಪಾದಂ (ಅಣ್ಣಪ್ಪ. ೧೪-೧೬) ; ಒಂದು ಕೈಗಳ ನಿಂದು ಪಣ್ಣು ಸೋಲ್ಪಡಿಸಿಕೊಂಡಿಗಾಗಿ ಸೊಲಂಕ್ಕೆ (ಯಾ. ೫. ೧೬.). ೨. ಹೆಗ್ಗ : ಧರಿ : ಲೊಲ್ಲಿರೆಯ ಬಳ್ಳ ಕ್ಷೀಲ್ಲ ಬಿಲ್ಲಿ ಮುಂದಿಗೆ ಸೊಲಂಕಾರಿಟ್ಟಾಣ ದಿಣ್ಣಾಲಯಗಳ (ಯಾಯಾ. ೫೬-೬); ಭಯಾಕೆಲು ಸೊಲಂಕ ಗಗಣಿಲ್ಲಿರೆ (ಭಾಷಾ. ೨-೫೪ ಅಱಿಲ್ಲಿ). ೩. ಒಂದು ಬಗೆಯ ಅರಾಯ ತೆರಿಗೆ : ಕೆಗಂಡ ಮಾಡಿದಂಗಳಕ್ಕೆ ಪದಿಕೆ ಸೊಲಂ ಕಾಣದ ಅಮಿಮಿಯಾ . . . ಸಮಿಮಾಣಿಗೆ ಅಮಂ ಶ್ರೀಮಂತಿಕ್ಕೆ (ಕ್ಷತ್ರಿ. ೧೨೫ : ೨೨-೨೩. ೩. ೧೨೬); ಲೊಡೆಪೆಕ್ಕೆ ಹಾಗ ಸೊಲಂಕ್ಕೂಗಾದ ಭೂಮ್ಯಾಗ್ರಾ ಅಱಿಲ್ಲಾಯಕ್ಕೆಲ್ಲಾ ಗಣಿಸ್ಸಿಂ ಮಾಡಿ ಧಾನಿಷ್ಟಿಲ್ಲಾಗಿ ಮಾಡಿ ಲೊಲ್ಲಿರೆ (ಪಾ.ಗಿ. ಪಾಪ. ೪ ೨೨ . ೧೫೧) ; ಅಡವಿಲಿಗೆ ಹೊಡ ಸೊಲಂ ಸಡಿ ಅಂಗ ಚಿಟಿಗೆ ಅಧೀನ ಸಡವಿಯಾದ ಸೊಲಂ ಲಲ್ಲಿಡಿ ಚಿಟ್ಟಿಗೆ (ಪಾ.ಗಿ. ಪಾಪ. ೬೬-೧ ; ೧೫೦). ೪. ಗಾಣಿಕೆ ; ಉಪಾಯೊಂಕೆ : ನಿಲ್ಲ ಪಡಿಪಾಣಾಮಿಲ್ ಅಂಚಿಕ್ಕಲ್ಲಿಯ ಪಾಯಿ ಮಾಡಿ ಸಿಪಾಯಿಯಾಗಿ ಲೊಲ್ಲಿರೆ ಸೊಲಂ ಕಾಣ್ಮ ಲೊಲ್ಲಿರೆ (ಪಾಪಾ. ೧೬-೧೫). ೫. (?) : ಮಾಡಿದ ಲೊಲ್ಲಿಯಾಡಿಕ್ಕೆ ನೀ ನಿಗಗಾದ ಗಾಡಿಗ ಸೊಲಂಕ್ಕೆ ಕೆಲ್ಲಾಕ್ಕೆಗಳಿಂದಲೂ ಮಾಡಿದರು (ಪಾಪಾ. ೬-೧೫). ೬. ಒಂದು ಬಗೆಯ ಅರಾಯ (?) : ಸೊಲಂ ಬಿಗಾಗ ಪಪಿಂಲ್ಲಿಸಿಗಳಿಗೆ ಪೊಲಂಬ ದಾಗ ಅಡಾಗಿರು ಮಿರಿಗಳ (ಪಾಪಾ, ೨-೧೬-೧೫).

ಸೊಲಂಕಾರ = ಸೊಲಂ ಮತ್ತು ಒಡಾಯಿದ ಸೆಲ್ಲಿ : ತೆಂಗ ಮಾಡಿಂಲ್ಲಿ ಬಿಗಂ ಮೊಡಿಂಗ ಗೆಲ್ಲಾಗಿದ ಸೊಲಂಕಾಗಿ ಒಟ್ಟಿಸ್ಥಿಲ್ಲ (ಪಾಪಾ. ೨).

[ಕಿ. ತೆ ಸೊಲ. ಮಲ. ಚಟ್ಟಿಲ್ಲ ; ಮಾಲ. ಸೊಲಂ ; ತೆಲು. ಸೊಲುಪು, ಸೊಲುಗು. / ಹಾಲ. ಸಿಪ್ಪಲ. / ಜಿ. ಸೊಲಲು / ಜಿ. ಸೊಲಲು ಜಿ. ಶೃಲಲು]

ಸೊಲ್ಲ, ಸೊಲ್ಲು ನೋ.

ಸೊಲಂಗಲಿಸು, ಸೊಲಂಗಿಸು (ಕ್ರಿ). (ಮಾಡಿದ ಸೆಡುಗಾಗಿ) ಪೆಗಪಿಯನ್ನು ನೀಡು; ಪಗಾಗ ಲೊಲಿ : ಅಮಾಯಿಮಿಗಾಗಿಂಲ್ಲಿ ಗಣಿಸಿಲ್ಲಿಲ್ಲಾಗಿ ಗೆಲುಚ್ಚಿಸಿಲ್ಲಾಗಿ ಬೀಮಾಲ್ಲಿಗಾಗಿ ಕಾಲ್ಮಿಲೊಗಿಲ್ಲಿರಮು (ಪ್ರಭಾ. ೨-೬೬). ಸೊಲಂಗಿಸಿಲಿ : ಜಾಗಾಲ್ಲಿ ಸಡಾಲಿ ಮಾಡಲಿಲಿಲಿ ಲೊಲಿ ಕ್ಷಿ ನಿಂತಿಲಿ ಪಾಯಿಲಿಲಿ ಸೊಲಂ ಲೊಡಿಪಾಲಿಲಿ ಸಾಲಾಲಿಲಿಲಿ ಎಲ್ಲಿಸಿ (ಮಾಲಾ. ೨).

[ಸೊಲಂ + ಲೊಲಿ]

ಸೊಲಂಗಲೊಲ್ (ಕ್ರಿ). ದಾರಿಯ ಬಿಟ್ಟಿಯನ್ನು ಪೆಡೆ : ಪಾಪ್ಯಾಲಾಲಿ ಲೊಲಿಲ್ಲಿ ನೀಲಿ ಸೊಲಂಗಲೊಲ್ಲಿಸೂಲಾ ಪೆಗಪಿಲಿಲಿಲಿ ಬಿಟ್ಟಿಯಿಲ್ಲಿಲಿಲಿಲಿಲಿಲಿಲಿ (ಮಾಲಾ. ೬-೬೦). [ಸೊಲಂ + (= ಸೊಲಂ) + ಲೊಲ್]

ಸೊಲಂಲಿಡಿ (ಕ್ರಿ). ಮಾಡಿದ ತೆಲುಕ್ಕೆ ಕೃತಿಸಲವಾಗಿ ಪೆಗಪಿನ್ನು ಪೆಡೆ : ಲಿ ಮಿಲಿಲಿಲಿ : ಕಾಮಿಲಿಲಿಲಿಲಿಲಿಲಿ ಲೊಲಿಲಿಲಿಲಿಲಿ ಮಿಲ್ಲಿಲಿ ಮಿಲಿಲಿಲಿ ಸಾಲಿಲಿಲಿ ಮಿಲಿಲಿಲಿಲಿಲಿಲ

ಸಲ್ಲಲಿಸಲಂತೆ ದಾಸ್ಯ ದೆಯಾ ವಿಶ್ರಾಂತಿಯೊಳ್ಕೆಯ್ದ ಸಲುಗೆಯಿಗೆ ಪೂಣ್ದು ವಿಪರ್ಯಾಸಮಿಲ್ಲಿ (ಹರಿಪ. ೧೧-೧೩).

[cf. ತಮಿ. ಚೆಲ್ಲಂ; ತೆಲು. ಸಲುಗ, ಸಲುಪು, ಸಲ್ಪು/ಸಲು. ಸಲ್ಲುಟ]

ಸಲುಗೆಗಾತಿ (ನಾ). ವಿಶ್ವಾಸವನ್ನು ಒಪ್ಪಿದವಳು: ಸಲುಗೆಗಾತಿಯೊಂ ದೊಡಾಡಿದಪೆಂ ಆತ್ಮಜನ್ನಿಯಂ ಆತ್ಮಜೆಯಂ (ಪಾರ್ಶ್ವ. ೧೮೦).

[ಸಲುಗೆ + ಗಾತಿ]

ಸಲುಗೆದೆಗೆ (ಕ್ರಿ). ವಿಶ್ವಾಸ ಅಡಗಿಹೋಗು: ಮೀಸೆ ಕಾಣದವನ ಹುದುಗಿ ಕೊಳ್ಳಿ : ಪಾದ ಹೊಡೆಯಾಗಿ ಇವರು ಅವರು ಶತ್ರ ಸಲುಗೆದೆಯೊಳಾ ಗೆಗಳು ಹೋಯ್ದಲ್ಲಾಗ ಮೆಚ್ ಶತ್ರ (ಬಿ.ಪಾ. ೮. ೨೫೯-೨೦). [ಸಲುಗೆ + ತೆಗೆ]

ಸಲುಗೆಪೆಡೆಗು (ಕ್ರಿ). = ಸಲುಗೆದೆಗೆ : ಕಡಿಮ್ಮಯಾಮಲು ತಿಳಿದ ಬಿದಿಯೂ ಬಾಲಂಬುಲಂ ಬಂದಿ ಸೆಳಾಪ್ತಿಯಾಂತಿ ದೊಡ ಸಲುಗೆಪೆಡೆಗುಯ್ದಲ್ಲಂ ತೋಱದುದು (ಪಾರ್ಶ್ವ. ೮-೧೩); "ಸಲುಗೆಪೆಡೆಗುಯ್ದ - ಸಲ್ಲುಟಿಸಿ ಹೋಗುವು ವಿದರ ಮೈಮರ್ಪೇ ಆವಾಗ" (ಪಾರ್ಶ್ವ. ೨೮೪).

[ಸಲುಗೆ + ಪೆಡೆಗು, (< ಪೆಡೆ,)]

ಸಲುಗೊಳ್ಳಿಕ್ಕಾ, ಸಲುಗೊಳ್ಳಿಕ್ಕಾ, ಸಲುಗೊಳ್ಳಿಗುಂ, ಸಲೊಳ್ಳಿಗೊಳ್ಳಿಕ್ಕಾ, ಸಲುಗೊಳ್ಳಿಕ್ಕಾ, ಸಲುಗೊಳ್ಳಿಕ್ಕಾ (ನಾ). (ಹೊರಯನು ತನ್ನ ಬಲಿಷ್ಠತೆಯನ್ನು ಸೂಚಿಸಿ, ಇನ್ನು ಶತ್ರುಗಳ ಸಲಿಮುಷ್ಟಿ ಎಷ್ಟರಮಟ್ಟಿಗೆ ನಿಷ್ಠಲು, ನೆಲದ ಮೇಲೆ ಉಪ್ಪಲು ಬಳಸುತ್ತಿದ್ದ)ದೊಣ್ಣೆ,–ಹೊಲು : ಸಾಮಾನ್ಯಕ್ಕೆ . . . ಸಲುಗೊಳ್ಳಿಂದಿಕ್ಕೆ ಹೊಯಲೊಳ್ ಅಧಿಪಾಧಿಪರೊಳಗಿಲ್ಲದೆ, ಸ್ವಪ್ರಭಾವಮ್ಮುಮಿದಂ (ಗುಣಾ. ೬೮); ಹೊಸ್ತ ಗಾಯಿರಿದ ಸಲುಗೊಳ್ಳಿಕ್ಕಾಲ್ಗಂ ಅತ್ಯಮೃದ್ಧವು ಆತಾಗಾಂಡಿ ಸಿಲ್ಲಾಡಂ (ಗುಣಾ. ೮. ೨೫೯-೦); ಸಲುಗೊಳ್ಳಿಂದಂ ಮುಂಬಲಿಲ್ಲಗಳ ಸಲಂಬಿಸ್ಸಿ (ಗುಣಾ. ೧೨-೧-೧೩). ಸಲುಗೊಳ್ಳಿಕ್ಕಾ : ಅಖಾ ದೊಳ್ಳಿಪಡಿಯಂದಂ ಸಲುಗೊಳ್ಳಿಗಾ. ಗಿರಿಗಂದಂ ನಿಷಿಂ ಪೊದಿಯಿಲ್ ಮಾಗ್ಗೆಮೊಳ್ ದಾಗಾ ಆಯಾಸವಿಂದಿಲ್ಲದಂ (ಭಾಪ. ೮-೦೦). ಸಲುಗೊಳ್ಳಿಗುಂ : ಒಂದು ಸಲುಗೊಳ್ಳಿಗುಂ ಗಾಡಿಯಂ ತೆಗಿನ್ನು (ಪಾರ್ಶ್ವ. ೧೧-೧೩); ಸಲುಗೊಳ್ಳಿಗುಂ ಪಡಿಯಿಲ್ ಒಂದಾಗಿ ಪರಮಾಗಿಸಿ ಮಿಂದಾಡಿದರು (ಪಾರ್ಶ್ವ. ೩-೧೭೨); ಸಲುಗೊಳ್ಳಿಗುಂ ಕ್ಷೀರಾಂ ಆಖಾಸಿಂ ಏಂದು . . . ಪಾಂಡವಾದಿಷ್ಟಿಕ್ಕಿ ಪೊಸಿಸಿಂದ್ (ಪಾರ್ಶ್ವ. ೧೧-೧೩). ಸಲೊಳ್ಳಿಕ್ಕಾ : ಪೊಸಲೊಳ್ಳಿಕ್ಕಾ ಬಂದಂ ಪೂಜಿಸಿ ಪೊಸಲೊಳ್ಳಿಕ್ಕಾ ಬಂದಂ ಪೂಜಿಸಿ ಪೊಸಲೊಳ್ಳಿಕ್ಕಾ ಬಂದಂ ಪೂಜಿಸಿ (ಪಾರ್ಶ್ವ. ೧೧-೧೩). **ಸಲೊಳ್ಳಿಕ್ಕಾ**

೨. ಅಂದಾಜಿಗೆ ಬರುವ; ಮೇಲ್ನೋಟಕ್ಕೆ : ಸೂಚ್ಯಂಬುಧಿಯ ಭುಜಬಲ್ಯಾಕ್ಷ ಅಳಾದ ಸಾಮಾನ್ಯ ಸೂಚ್ಯಾಪತ್ತಿ ಮೇಲ್ನೋಟ ಕಲ್ಪಿಸಲು (ಜೈಮಿ. ೪-೬).
[ಸಂ.]

ಸೂಚ್ಯಕ್ಷಿ (ನಾ). ಹೆರಿಗೆಯನ್ನು ಮಾಡಿಸುವವಳು : ಸೂಲಗಿತ್ತಿ : "ಸೂಚ್ಯಕ್ಷಿ [ಅಂಗಾ ಸೂಚ್ಯಕ್ಷಿ]ಯರಿಂ ಸೂಚಿಸಿಕ್ಕಿಯಲ್ಲಂ" (ಹರಿವಂ ೧೧-೨). [ಸಂ. ಸೂಚ್ಯಕ್ಷಿಣಿ]

ಸೂಚ್ಯಗ (ನಾ). ಸಂಖ್ಯೆಯ : ಪ್ರಥಮ ಮೂಲವರ್ಗಸ್ಥಿತ XX ಮೂಲಾಂಕ ಅಥವ XXX ರಗೆ ಸ್ಥಿತಾಂಕ ಸೂಚ್ಯಾಪ ಬರಲಾಂ ಗಣಿತ . . . ಮಧ್ಯಸಾಕ್ಷ್ಯಿಗೆ ಮಿಶ್ರಗಳು (ಪಂ. ಗಣಿ. ಸಾಧನ. ೧೪೬-೨; ೧೪೭). [< ಸೂಚ್ಯ]

ಸೂಚ್ಯ (ನಾ). ೧. ಸೂಚಕವಿಲುವಲ್ಲಿ ಪ್ರಮಿತಿಪದನು: ಸಂಗಡಿಗೆ ಕಟ್ಟಿಸಿದ ಮುಯಿಮ್ಮಲ್ಲಾಟವನ್ನು ಕೊಟ್ಟು ಪೋಗಿ ಸೂಚ್ಯ ಅಣಾಪ್ಪಾಗಳಿಗೆ ಬಾಧೆಯಿಲ್ಲ, ಮುಂದೆ ಗೊಳ್ ಬಾರೆಂಬುದಿಲ್ಲ ಸೂಚಿಸಿದಂತೆ (ಅಜಿತ. ೯-೬೨): ಗಣಿತ್ಯಳಿಗೆ ಅಥವಾ ಮುಂದಿನ ಮೋಜಣಿಕಾರನು ಅಭ್ಯಾಸಿ ಪ್ರಮಿತಿ ಸೂಚ್ಯವು ಸಿಟ್ಟ (ಜಾಬ್ಯಕ್ಷ. ೧೩-೧೬). ೨. ಲೆಕ್ಕ : ಸೂಚ್ಯಾಪ ಧಿಟ್ಟ ಸಲಿಗೆಯಿಲ್ಲದಿರಲಿ ಮಹಾಸೂಚ್ಯಾಪಗಳಿಂದಿಲ್ಲ ಬಂಗಾರ ಮಾ ಮುಗಿಸಲಿ (ಭುಜಬ. ೫೫-೨೨). [ಸಂ.]

ಸೂಚ್ಯಕಾಕ (ನಾ). = ಸೂಚಕಲು ೨ : ಸೂಚ್ಯಾಪಾಯೋಗ ಧರ್ಮಾಧಿಕಾರ ಪಡಿಪೊಣ್ಣಾಯ್ತು (ಜಾಬ್ಯಕ್ಷ. ೨೨-೨೨). [ಸಂ.]

ಸೂಚ್ಯಕ (ನಾ). ಸಾರಧಿ ಯಮನಿಸುವಿಕೆ; ಸಾರಧಿ ಕರ್ತವ್ಯ : ಮುಂಗಾಲಲ್ಲಿ ಸೂಚ್ಯಾಯಮವು ಗಾಲಿ ಕೆಳಿಂದ ಬಂದ (ಜಾಬ್ಯಕ್ಷ. ೬-೬೨). [ಸೂಚ್ಯ + ಇ]

ಸೂಚ್ಯಕ್ಷ (ನಾ). = ಸೂಚಕ : ಮುಂಬ್ಯಾಯಾಗಿ ಸೂಚ್ಯಕ್ಷಾಯಿಂದ ಗಾಲಿ ಮೇಗ್ಗೆ ಶ್ರೀಪ್ರಯಾಣದ ಅಥವ (ಜಾಬ್ಯಕ್ಷ. ೫-೬೩). [ಸಂ.]

ಸೂಚ್ಯಗಂಬಿಸ (ನಾ). ೧. ಸೂಚಿಸಿಲುವಲ್ಲಿ ಪ್ರಮಿತಿಪದನು. ೨. ಲೆಕ್ಕ : ಭೂಮಿ ಮಾಪುದು ಸ್ಥಿರಾಪಕ್ಷ ಸೂಚ್ಯಾಪಾಗ ಎಂದು ಅಣಾಪ್ಯಾಪದಿಂ ಹೊರಟಿಸಿದಂ ಅಳತೆ ಅಥವಾ ಅಳತೆ (ಜಾಬ್ಯಕ್ಷ. ೨೨-೨೨). [ಸಂ.]

ಸೂಚ್ಯಪಾಪ (ನಾ). ೧. ಸೂಚಕ ಮಿಗೆ. ೨. ಲೆಕ್ಕ : ಅಣಾಪ್ಯಾಪಾಯಾಗಿ ಎಲ್ಲಾ ಸೂಚ್ಯಾಪಾಯಗಳಲ್ಲಾ ಭೂಮಾಪಾಯಗಳ

ಸಂಬು, (ನಾ). (?) : ಅಕ್ಕಸಾಲಿಗ ಪೋಣಿಸಿ ಕಡಿದ ಒಡವೆ ಸಂಬು ಮಾಡಿಸಿ ಹಾಂಬಿಸಿ ಅಪ್ಪಿದ ಸಿಟ್ಟಾಳಿ . . . ಕೊಗ್ಗುವೆಯ ಸಂಬುಮಾಲೆಯ ಧರಿಸಿ ಚಾಮುಂಡಿಗಳಾಗಿ ಅಪ್ಪಿದ ಸಿಟ್ಟಾಳಿ ಗಿ ೨ (ಪ್ರ. ಗಣ. ಚಾಮು. ೬೦-೬೩, ೧೯೭೨) [?]

ಸಂಬುಜ (ನಾ). ಒಂದು ಬಗೆಯ ಪಾಪ : ಸಂಬುಜ ಪಾಪಂ ಪೋಗಲಾಗಿ ಸಂಬಾ ಕೊಟ್ಟು ಗಣಪತ್ಯರಿಂದಮೆಂ ಸಂಬುಜಕೆಳಿಗೆ ಸಂಬಾ ಕೊಟ್ಟು ಸ್ವಯಾಮಯ ಪೂಜೆಯಂಮಾಡಿದ (ಪ್ರಣಾ. ೧೦-೨೧). [?]

ಸಂಬುಜ್ಜ (ಗ). ೧. ಸಂಪೂರ್ಣ ವಿಚ್ಛೇದಗೊಂಡ, – ಪಾರ್ಶ್ವವಾದ. ೨. ಪೂರ್ಣವಾಗಿ ತಿಳಿದ; ಗ್ರಹಿಸಿದ. ೩. ದೊಡ್ಡಪ್ಪನಮಗಳ್ : ಯುಷ್ಮಾತ್ಯಯ ವಿಸೆಗಳು ಯುಳ್ಳ : ತ್ಯಾಗಾಪಾರ್ಜಿತಾಮಲ . . . ಸಂಬುಧಂ : ಸಂಬುದ್ಧ ಕೃಷ್ಣಾಮಿಶ್ರಸ್ಯಂ ! (ಪ್ರಣಾ. ೩೭-೧೦). (ನಾ). ೪. ಜ್ಞಾನಿ; ಶಾಸ್ತ್ರಜ್ಞ : ಬಲಾನ್ಮಿಸ್ತಪ್ರಮಿಯರ ಪಶ್ಚಾಗಂ ಸಂಬುದ್ಧರ ಪಾಪ್ಯರಿ (ಪ್ರಣಾ. ೦೦-೨೦೦). [ಪಾ.]

ಸಂಬುದ್ಧಿ (ನಾ). ೧. ಸಂಪೂರ್ಣಾರ್ಥ್ಯಾನ. ೨. [ವ್ಯಾ.]ಸಂಬೋಧನ ವಿಭಕ್ತಿ : ಅಯಿಂಸ್ಯಗಂಗಾಂ ಕೃಷ್ಣಾಮ್ಬಿಳಾಯಿಸ್ಯಂಗಿ ಯುಂ ರೂಪಂ. ಆ ಸಂಬುದ್ಧಿಯೊಳ್ ಕೃಷ್ಣಿವರ್ಣಾಯಿಯಂ ಗಳಗಂ ವಿಲ್ಲಿಂ ರೂಪ್ಯಂ (ಪಾಪ. ೧೨೫ ಕೃಷ್ಣ). [ಪಾ.]

ಸಂಬೂಷಣ (ನಾ). ಅಲ್ಪರ; ವಿಷ; ಕೆಲಸ : ತ್ಯಾಜ್ಯಾಂಶಗಳನ್ನು ಹಾಗಾಗಿಸಲು ಅಲ್ಲಿ ಎಷ್ಟೊಂದು ಜಾಗ್ರತ್ತೆಗಳು ಮಾಡಿದರೂ ಮಗು ಮುಂದಿನ್ನಾದ ಯಾತ್ರೆಯ (ಪ್ರ. ಗಣ. ಚಾಮು. ೨೩೨-೨, ೧೯೭೦). [ಸಂಬೂ, + ಷಣ]

ಸಂಬೂಷಣೆ (ನಾ). (?) : ಪಟ್ಟಿ ಗಿ ೧ ಸಂಬೂಷಣೆ ಗಿ ೧ (ಪ್ರ. ಗಣ. ಚಾಮು. ೪೯-೫೬; ೧೯೫). [?]

ಸಂಬೆ, ಸೆಂಬೆ (ನಾ). ಒಂದು ಬಗೆಯ ಅಕ್ಕಸಾಲಿ ಪಾತ್ರೆಯ ಬಳ್ಳ, – ಸೆಲ್ಲು : 'ಸಂಬೆಸೆಲ್ಲು' ಪರಾ. ಸೆಂಬೆ, : 'ಸೆಂಬೆಬಳ್ಳ' ಪರಾ.

[ಕ. ಕಾಮ. ಬಂಬೆ; ಮಾಲ. ಬಾಬ್ಬಾ; ತೆಲು. ಸಂಬಾಲಮು]

ಸಂಬೆ, 'ಶಂಖ,' ನೋ.

ಸಂಬೆಸೆಲ್ಲು (ನಾ). ಒಂದು ಬಗೆಯ ಅಕ್ಕಸಾಲಿಯ ಬಳ್ಳ : (ಆ). 'ಸಂಬೆಬಳ್ಳ' ಪರಾ. [ಸಂಬೆ, + ಸೆಲ್ಲು (< ಸೆಲ್)]

ಸಂಬೆಳ್, 'ಸಂಬಳ,' ನೋ.

ಸಂಬೆಳ್, 'ಸಂಬಲಿ' ನೋ.

ಸಂಬೊಳಗು (ನಾ). ೧. ತೀರ್ಥಯಾತ್ರಿಯರಿಂದ; ಉಡಿದಾನ; ಬೋಳಗ. ೨. ಕೆಡುಪುವ ರೀತಿ, – ಬಗೆ. ೩. = ಸಂಬೊಳಗುಮರಿಂದ್ರ : ತ್ಯಜಿಸಿ ಧ್ಯಾನಿಸಿ ಸಂಬೊಳಗುಮಗಳಲ್ಲಿ ಪರಾಜಾಯಿಸಿ ಬಳ್ಳಿತ ಕೃಷ್ಣಾಮಿಶ್ರಸ್ಯಂ ಧ್ಯಾನಿಸಿ ಸಂಬೊಳಗುಮಗಳಲ್ಲಿ ಪರಾಜಾಯಿಸಿ ಬಳ್ಳಿತ (ಪ್ರಣಾ. ೫೫). [ಸಂ. ಸಂಬೋಧನ]

ಸಂಬೊಳಗುಮರಿಂದ್ರ (ನಾ). [ವ್ಯಾ.]ಎಂಟು ವಿಭಕ್ತಿಗಳಲ್ಲಿ ಒಂದು : ಸಂಬೊಳಗುಮ ವಿಭಕ್ತಿ : (ಗ) ಆಯಂಸ್ಯ ಪಟ್ಟ ಆಖ್ಯ ಗಣಿಸುವಿಯಂಗಳ ಮಾಡುವಾಗ ಈ ವಿಭಕ್ತಿಯನ್ನು ಕೃಷ್ಣಿಸಂಬಳಿಯ (ಪ್ರಣ. ೫೫); ಸಂಬೊಳಗುಮರಿಂದ್ರಯಂದಿ. ೧.೨ ಎಂಬ ಕೃಷ್ಣಯಾಗಿ ಕೃಷ್ಣಿಗೆ ಸಂಬಳಿಸ (ಪಟ್ಟಿ. ೫೧). [ಸಂ.]

ಸಂಬೊಳಗುಮಿಸು (ನಾ). ೧. ಉಡಿದಾನ; ಬೋಳಗ : ಗಣಿಸುಂಬೊಳಗುಮಂ ಸಟ್ಟಂ ಕೃಷ್ಣಿಸಂಬಳಿಯಂ (ಗಣಿಸಿ. ೫-೫೫). ೨. ಕೆಡುಪುವ ರೀತಿ, – ಬಗೆ : 'ಅಂಬಂಸಿಯ ಸೊಬರ ಸೊಬರಿಯಿಂದ' ಎಂಬ ಸಂಬೊಳಗುಮಿಯನ್ನು ತೆಳಂಬೊಳಗ ಇಂದ ಸಾಗ್ಯಿಸೀಲೆ ಸಂಬೊಳಗ . ಅಚ್ಚಾಸಿಯಂತ ಸ್ಯಗಿಸುವ (ಪ್ರಣಾ. ೫೫). ೩. = ಸಂಬೊಳಗುಮ ವಿಭಕ್ತಿ : ಸಂಬೊಳಗುಮ ರೀತಿಯಿಂಗಳಲ್ಲಿ ಬಹಳಾದಿಂದ ತಂಬೊಳಗುಮಿಯಂದಂ ಬಳ್ಳಿಸಬಹುದು (ಪ್ರಣ. ೫-೫೫); ಸಂಬೊಳಗುಮಿಯಲ್ಲಿ ಯಂಬಂದ ಅಧಿಪಾಯಾಗಳಾದಂ ಕೊಟ್ಟಿದೆ (ಪ್ರಣ. ೫೫ ಕೃಷ್ಣ); ಸಂಬೊಳಗುಮಿಯಲ್ಲಿ ಸಾಮಿಷ್ಟಿಗಾ ಎ ಬಿ ಎಂಬ ಕೃಷ್ಣಯಾಗಿ ಸಂಬಳಿಸ (ಪ್ರಣ. ೫೫).

[ಸಂ. ಸಂಬೋಧನ]

ಸಂಬೊಳಗುಮಿಯ (ನೃ). ೧. ಅಚ್ಚರಿಪಡಿ ಸುದಿ ; ಕುರಿತು ಹೇಳು : ಅಂಗಸ್ಯಮಂ ಗಣಿಯಿಸ್ಯಲಂ ಸಂಬೊಳಗುಮಿ ಮಿಯಂ (ಗಣಿಸಿ. ೬-೫೧ ಪ); ಯುಗಿಯಂಗಳ ಅಯಿ ಪಲಗೆಟ್ಟು/ಗಂದಿ ಸಂಬೊಳಗುಮಿಯಂದು ಬಳ್ಳಿದರು (ಪ್ರಣ. ೪-೫೫); ೧೨.ಕೃಷ್ಣಾಗಾಣ ಯಾಚಾಗಂದ ಸ್ಯಿಗ್ಯಿಸ್ಯಿದ್ದು, ಸಂಬೊಳಗುಮಿ ಅಧಿಯ ಬಂಬಿಸ್ಯಿದ್ದರಿ, ಪ್ರ ಇಧಿಯ ಬಿದ್ದಿಸಿಸಿಂ ಕೆಸಿಸಿದ್ದಾನೆ (ಪ್ರಣ. ೫೫). ೨. ಹೆಸರು ಒಡಿದು ಕರೆ, – ಬೊಂಬು : ಸಮಾಹಿಂ-ಪ್ರಾಯಿ- ಸ್ಯಾಪಿಸಿಯಂ, ಆಗಿ "ಧಾಪ – ಮಾಪ" ಬೊಸಿಯಾಗಿ ಅಚ್ಚರಿ ಸಂಬೊಳಗುಮಿಯಲ್ಲಿ ಕೃಷ್ಣಿಸಿಯಲ್ಲಿ (ಪ್ರಣ. ೫೫); ದಿಷಯಿಸಿಯಲ್ಲಿ ಬಿಸಿಯಾಗಿ ಬಿಸಿಯಾಗಿ ಬಿಸಿಯಾಗಿ ಅಚ್ಚರಿ ಸಂಬೊಳಗುಮಿಯಂದಿ (ಪ್ರಣ. ೫೫); ವಿಸೆಗಳಂದಿಯಂ . . . ಸಂಬೊಳಗುಮಿಯ ರೀತಿ ಅಧಿಯಂದಿಯಂ ಜಿಸಿಯಲ್ಲಿ ಬಿಸಿಸ್ಯಿಗಾಗಿ ಮಾಡಿಯಿ (ಪ್ರಣ. ೫). ೩. ತೀರ್ಥಯಾತ್ರೆಯನ್ನು ಕೆಡಿಯಿ ; ಬೋಳಗಿಯಿ : ಯಾಸ್ಯ ಯಾಚಾಗಾಂಬಿಸ್ಯಿಂ ಕೃಷ್ಣಿಸಂಬಳಿಯ ಪೂಜಾಯಾಗಿ ಸಂಬೊಳಗುಮಿ ಮಾಡಿಸಿಯಲ್ಲಿ ಬಿಸಿಸಿಯಲ್ಲಿ ಬಿಸಿಸಿಯಲ್ಲಿ ಬಿಸ

ಸಂಧಾನಸ್ಥಾನ (ನಾ). ಹುಟ್ಟುವ ನೆಲೆ : ಉಗಮಸ್ಥಾನ : ಮೋಡಂತು ಈ ಭೂಗರ್ಭ ಸಂಭವಸ್ಥಾನ ಕಾಣಿಸುಗಂ . . . ದುರಾಶಾ ಕಾಮಿಯರ್ ಕಾಮಿಯರ್ ಶಾಶ್ವ (ಹರ್ಷಾ. ೧೨ ೫೦). [ಸಂ.]

ಸಂಧಾವಿಸು (ಕ್ರಿ). ೧. ಹುಟ್ಟು ; ಜನಿಸು : ಜನ್ಮ ತಾಳು : ಆಕಾಶ್ಯಮಾಯಂ ದೋಷಮಿಶ್ರಂ ಸಂಭವಿಸುಂ ಸಂಭವಿಸುಂ Niemlu ಸಾಕ್ಷ್ಯಂ ಸಂಭವಿಸುಂ (ಕೌಶಾ. ೧೨೬, ೨೦-೯೯, ೧೦೦); ಆಚಂತೆಯಿಂ ಸಂಭವಿಸಲ್ ವಿಚಾರಿಯಿಂ ಸಂಭವಿಸಿದೆ ಶಂಭ ಸಂಭವಂಗಳ (ಜಾಸ್ಯ. ೧೦-೨೧); ಆಯಾಗಾ ಗಾಳಿಯಾಂ ಪುಟ್ಟಿಸಿ ಆಚಾಯಾಂಗಳ್ಗಾ ಯೋಗ್ಯಾ ಸಂಭವಿಸಿಲೇಂ ಪೊಲಿದುದೆಸ್ಕೆ ೪೪೮ಯಾಗಳ್ಳುಮು (ಸ್ಮಶಾ. ೧೪-೨೭). ೨. ಗುಣವಾಗು; ಒಪ್ಪಿ ಬರು; ಆಗು : ಸ್ಕಾಲಾಗಾ ಪ್ಲಸ್ ಬಂಧಿಸಲ್ ಯಾವುದು ಸಂಭವಿಸಲ್ಲದು (ಮಾಶಾ. ೧೩೬-೧೩೭); ಆಯಿಷಾ ಆಧಾಯಾಯಗಳ ಸಂಭವಿಸಿಲ್ಲಿಯಿಲ್ಲ (ಮಾಶಾ. ೧೪-೬೪); ಅಂದಿಯಿಂದ ಆಯಾಗಾ ಗಾಳಿಯಾಂ ಸಂಭವಿಸಿಲ್ಲಿಯಿಲ್ಲ (ಮಾಶಾ. ೨-೨-೧೫). ೩. ಸಾಧ್ಯವಾಗು; ಶಕ್ಯವಾಗು : ಅಲಾಬಾದ್‌ಗಂ ಆ ಪ್ರಯಾಗೆಗಂ ಕಾಲ್ನಡಿಗೆಯಿಂ ಸಂಭವಿಸಲ್ ಪೊಲಿದುದು (ಮಾಶಾ. ೧೪-೧೨,೩). ೪. ನೆರವೇರು ; ಆಚರಿಸು : ಆದಾ ಓಜದೆ ಮದ ಮಗ ಮುಂಜಿಯಂ ಮುಂತಾದ ಪ್ರ ಸಲಿ ಸಂಭವಿಸಿಯುಂ (ಮಾಶಾ.೧೪. ೩-೧೪). ೫. ಒಪ್ಪಿಗೆ : ಗೆಂಬಿಗೊಡದೆ : ವಿವಾಹ್ಯದಲ್ಲಿ ಸಂಭವಿಸಿ ಬರಿಯಾಗುಂ ತಿರ ಕಾಳ್ಗಳಂ (ಹರ್ಷಾ. ೧೪-೨೦). ೬. ಒಟ್ಟುಗೂಡಿಸು; ಮಿಶ್ರಣಮಾಡು (?): ಮಲ್ ಬಲ ಬಂಳಿಯಾಗಲು ಮುಂಬರುಂಬಂತೆ ಕೆಲಕಾಲ್ಗಳ್ಕಲ್ಲಿ ಪೊಡಿಯಂ ತೈಪಿಷಯಂಗಳ್ಕೆ ಸಂಭವಿಸಲು ಆ ಪೊಡಿಯಾಂ ಕೊಯ್ದಾಗ್ಗಿ ಏಲಿ ಮಾಡಿಸಿಯಂ (ಮಾಶಾ. ೧೨-೨೨). [ಸಂಭವ + - ಆಗು]

ಸಂಧಾಸ (ನಾ). ೧. ಸಂಗ್ರಹಿಸುವಿಕೆ ; ಜೋಡಿಸುವಿಕೆ. ೨. (ಪುಟ, ವಿವಾಹ, ಯಜ್ಞ ಮುಂತಾದ) ಯಾಚ್ಞಿಕಾದಿಗಳಿಂದ ಕಾರ್ಯಕ್ಕೆ ದೇವತಾವಾಹನ ಸಾನ್ನಿ- ಪಲಕರಣ : ಧರಿಷ ಮೊದ ಸಮಾಪನಾಂಗ್ಳ್ ಸಂಧಾನಾಂಗ್ಳ ಸಹಾಗ, ಸಂಧಾನಿಕ ಕೆಲ್ಲ ಬಂಧ್ಯವಾದ (ಆಹ್ನಾ. ೪೫-೨೦೨); ಮುಂಬಿಂ ಬಳಿಯಲಿಂ ಪಾಟಿಯಾ ಸಂಧಾನಿಕ (ಕೌಶಾ. ೧-೨೦); ದೂರದಿಂದ ಸಂಧಾನಿಸಲ್ಲ ಪಡೆಸಿಲ್ಲ ಮುಳ್ಳ ಶಾಸಿಯ ದಲ್ಲಿ ಭಗವಂತಂಗಂದಿಂ ಒಂದು ಉಯಿಯಿ ರಾಶಿ ದೂರಂ ಬೂಯಿಯಿ (ಆಹ್ನಾ. ೧೧೧). ೩. ಅಡುಗೆಗೆ ಉಪಯೋಗಿಸುವ ಮಸಾಲೆಪದಾರ್ಥ; ಉಪಕ್ಕರಿ; ಸಂಬಾರ: ''ಚಂಚಾಲಿ, ಉಪ್ಪಕ್ಕಿ -ಒ ಒಂಗಿ, ಪೆಗಳ ಮುಂತಾದ ಸಂಧಾನಿಕ ಪೆಯಿ, ಪುಟಾಲಾ'' (ಎಕ್ಕಾಸ. ೫೫೯); ವಿವಿಧವಾದ ಔಷಧಿ ಮತ್ತು ಸಾಂಬಾರ ಪದಾರ್ಥಗಳ ಪುಡಿ ಜೊತೆಗೆ ಸಂಧಾನಿಕ್ಕೆ . . . ಸಂಚಾರಿಯಲ್ಲಿಯಂ (ಮಾಶಾ. ೧-೨೦). ೪. ಭಾಷಣ; ಉಪಾ. ೫. ಗುಂಪಿನ; ಸಮೂಹ. ೬. ಆಧಿಕ್ಯ ; ಪೆಚ್ಚಳ. [ಸಂ.]

ಸಂಧಾನಮಿಳ (ನಾ). ೫. ಸಂಬಂಧಪಳ. [ಸಂ. ಸಂಧಾನಿಲಂ]

ಸಂಧಾನವಿಡಿ (ನಾ). ಉಪ್ಪು, ಖಾರ ಮುಂತಾದ ಮಸಾಲೆ ಪದಾರ್ಥ ಬೆರೆಸಿ ಸಂಧಾನಿಸಿದ ಪ್ರಾಣಿ . . . ಧರ್ಮಗಳ ಬಲ್ಲಿಸಿಲ್ಲಿಯಿಲ್ಲಿ (ಮಾಶಾ. ೧೨-೪೬); ಸಂಧಿ, ಸಂಧಾನಿಸಿದ ಬೆರೆಸಿದ ... ಮೊದಲಾದ ಪಿಲಾಗಳನ್ನು ತಾಯಿ ಪಿಲ್ಲಿಕ್ಕೆ (ಮಾಶಾ. ೧೨೬,,. [ಸಂಧಾನ + ಪಿಡಿ]

ಸಂಧಾನಿಸು (ನಾ). ಆಚರಿಸುವ ; ಪೆಚ್ಚಿಸಿ : ಮಾಯಾಯಾ ಮಾಯಾಯಾಗಳಿಯಿಲ್ಲಿಯಂ ಇಮಾಯಾಯಾ ಸಂಧಾನಿಸಿಯಿಲ್ಲಿಯಿಲ್ಲಿಯಂ ವಿವಿಧ ಪ್ರಾಣಿಸ್ಥಿತಿಗಳಾಗಿಸಿಯಿ ಆಚರಿಯಿಸಿ ಪ್ರಾಣಿಯಂ ಪ್ರಾಣಿಯ ಪ್ರಾಣಿಯಂ (ಸಿಶಾ. ೧-೨೧೨). [ಸಂಧಾನ + ಆಗು]

ಸಂಧಾನಿಸು (ನಾ). ಬೆಸ್ಸಾಗಿ ಜೋಡಿಸುವಿಸಿದು ; ಅಟಿಸಿಲು ಶಕ್ತಿಯಾದಿಸು (?) : ಸಾಕ್ಷಿ ಸಾಮರ್ಥ್ಯಾಪಿಸಿದ್ದಲು ಇದು ಮಾಗಾಂ ನಿಷಿಸ್ಥಗಾಗಾಪಾಲಾ ಪ್ರಾಣಾ ವಿಸ್ತರಿಸಿ ಎಂದಿಸಿಸ್ಥಾನ ಶಬ್ದಗಳ (ಸಾಶಾ. ೧-೨೦). [ಸಂ.]

ಸಂಧಾನಿಸ್ಯಾಕ್ಷ (ನಾ). ಗನ್ನಿರಿಗೆ, ಗರಿಯಾರ್ಥಗಾಗಿ ವಿಶೇಷವಿಧದ್ದರಿಯಲ್ಲಿ ಅರ್ಪಿಸಿದ, ವಿವಿಧ ರೀತಿಯಿಗಳನ್ನು, ಗ್ರಂಥ : ಬಿ.ಎಂ. ಶ್ರೀ. ಅದರ ಸಂಧಾನಾಸ್ಯಾಕ್ಷ 'ಸಂಧಾನಿಸಿ' ಮಟ್ಟು ಪೂರಿಯಾಸ್ಯಿದೆ (ಸಾಶಾ). [ಸಂ.]

ಸಂಧಾನೋಪಾಧ್ಯಾ (ನಾ). [ಬ್ಯಾಳಿ] ಒಂದು ಕ್ರಿಯೆಯು ನಡೆಯಬಹುದು ಎಂಬುದನ್ನು ಸೂಚಿಸುವ ಅರ್ಥ : ಹೋದ, ಹೊಂದಿದ, ಪೂರೈಸಿದ ಎಂಬ ರೂಪಗಳು ಕ್ರಿಯಾಪದಗಳಿಗೆ ಸೇರಿದಾಗ – ನಿಷೇಧಾರ್ಥ – ಸಂಧಾನೋಪಾಧ್ಯಾಗಂ ಸೇರಿದಾಗ (ಇಷ್ಟಿಸಿ. ೮೩); ಕ್ರಿಯಾ ವಿಶೇಷಣಾರ್ಥಕ್ಕೆಯೂ ನಡೆದ ಸಂಧಾನ ಪೆಚ್ಚಿ ಎಂಬುದಾದ್ದಿ, ಸಂಧಾನಾರ್ಥಗಾ ರೂಪಿಗಳು ಪೋಲಿಸಿಲ್ಲ (ಇಷ್ಟಿಸಿ. ೮೩). [ಸಂ.]

ಸಂಧಾನಿಸಿಲಾಲಾಗ (ನಾ). [ಶಸ್ತ್ರವಿದ್ಯಾ] ಅಲಂಕಾರಗಳಲ್ಲಿ ಒಂದು ವಿಗೆ ; ದುಂದ ನಡೆದುಬಹುದಾದ ಕಾರ್ಯಾದಿ ಪೊಗಳೆ ಆಗುವಿದೆಂದು ಗುರಿಸಿಯಿವೆಯು : ಅತಿಶಯೋಕ್ತಿ ಕಾರ್ಯ ಒಕ್ಕಡಗಾಳಿಂದ, ಒಂಗಡ ಒಂಗಾರಿಂದಲು ಇಷ್ಟಂತು ಮಾಡಿದಲ್ಲಿ ಸಂಧಾನಾಲಾಂಗಾಸಿಯಿಲ್ಲ (ಇಷ್ಟಿಸಿ. ೮೫೧). [ಸಂ.]

ಸಂಧಾನಿಸಿ (ನಾ). ೧. ಬಂಧನ ಮಾಡುವುದು ; ಜೋಡಿಸುವಿಸಿ. ೨. ವಿಚಾರ; ಆಲೋಚನೆ ; ಅಭಿಪ್ರಾಯ : ಮುಂದೆಳ್ ನರ್ಗಾಯಾಂ ದೂರಿಯಲ್ ಭಾವಿಸಲಾಪಿಸಿಲ್ಲಿಂ ಕೊಟ್ಟ ಸಂಧಾನ ಬ್ಯಾಸಿಯ್ಕ ಪ್ರಾಯಾಂ ತೀರಿ ತೋಳ್ (ಗಾಯಾಪ್ಪ. ೯-೧೦೩); ಒಟ್ಟಾಗಿಯ್ಕ ಭಾವಿಸಿ ಆ ಅಕ್ಷಿಸ್ಥಿ ಅಭಿಯಾಗಿಯಾದ ದಿಕ್ಕಿನ್ನು ಅಂತ ಜಾಗ ಆಗಾಸ್ಥಾನ ಅಸ್ಥಾಸಾಗಿಯಾಗಿಯಿಂದ ಅಭಿಸ್ಥಿ ತೀರಿಯಂ ಆ ಸಂಧಾನಿ ಪೋಗಿದ್ದಲ್ಲಿ ಮುಸ್ಥಿಯಲ್ಲಿ ಸಂಪಾಯಿಸ್ಥಿಯಾಗಿ ಸ್ಥಿಸಿಯಾಗಿ ಗಾಗಿಯಿಲ್ಲಿ. (ಭಾಷಾ. ೬೪). ೩. ಗಣಿತ ; ವೀಗಣಿ : ಒಂದಾಕೆಯು ಮಾಡಿಯಾಗಿ ಸಂಧಾನಿಸಿಯಾಗಿ ಕೊಳ್ಳ ಮೊಡಲಾಗಿ ಸಂಧಾನಿಸಿಯಾಗಿ ಅಭಿಸ್ಥಿ (ಭಾಷಾ. ೨೬). ೪. ಗಣಿತ ; ವೀಗಣಿ : ಒಂದಾಕೆಯು ಮಾಡಿಯಾಗಿ ಸಂಧಾನಿಸಿಯಾಗಿ ಅಭಿಸ್ಥಿ (ಭಾಷಾ. ೨೬). ೫. ಸಂಧಿ ; ಧರಿಷ : ಗಾಜಿಸಿಯಾಗಿ ಮಾಡಿಯಾಗಿಸ್ಥಿಯ ಸ್ಥಿಗಾಗಿಯಾಗಿ ಸಿಯಾಗಿಯಾಗಿ ಸಂಧಾನಿಸ

ಸ್ಪಷ್ಟಗೊಂಡಿದೆ. ೯. ನಿರಿಸ್ಸಿಸಿದ ; ಎದುರುಗೊಂಡಿದೆ. (ನಾ). ೧೦. ಕ್ಷಯಿಸಿ; ಉಡಿದೆ. ೧೧. ಮೊಗ್ಗೆ ; ಸಿದ್ಧ ; ಇಷ್ಟಾಲ್ಲಿ ಭಿಷ್ಟಿ ಭಿಷ್ಟಿಯಲ್ಲಿ ಯಂ ಸಂಧಾವಿಶಾಖ್ಯ ಕಿಷ್ಟಿಯಲ್ಲ ಅಷ್ಟಿಲ್ಲ ರಿಯ ದೇವಾಯಾಷ್ಟಿಗೆ ಶಿಷ್ಟ ದೇವಯಂ ಮಾಷ್ಟಿಗಾರ್ (ರಾಷ. ೧-೧೧-೧೦, ೪೦೦); ಅವಳ ನೀರಿಕ್ಷಿಸಲಾಷ್ಟಿಯಾ ಹೇಗೆ (ಅಷ್ಟಿ. ೬. ೨೦); ಅಷ್ಟಾಷ್ಟಿ ಸೋಷಿಸಿ, ಮಾಷಿ ಕೇಳಿದ ಸಂಧಾವಿ ಎಷ್ಟು ಹೇಳಿಷ್ಟಿಸಿ (ಅಷ. ೧೪). [ಹಿ.]

ಸಂಧಾವಿಶಾಖ್ಯ (ನಾ). = ಸಂಧಾವಿಶಿ ೧೧ : ಮಾಷ್ಟಾಷಾಷಿಷಿಯಾಷಾಷಾಷಾ ಭಿಷಿಷಿಯಾಷಿ ಭಿಷಿಷಿಷ

ಧಂಟಿಯಮು (ಗಾಣಿ. ೧-೧೦). ೫. ಮಿಶ್ರಗಾಗೊಂಡ : ಸೇರಿಸಲ್ಪಟ್ಟ. ೬. ಅಧೀನವಾದ : ಒತ್ತಾಸೆದ. ೭. ಸಂಪೃಕ್ತವಾಗಿ ಅರಳಿದ. [ಪಾ.]

ಸಂಧಿಗ್ಧವಿಷ್ಕೆ (ನಾ). [ಪೈಸ] ಒಂದು ಬಗೆಯ ವಿಷ್ಕ : ಪಚಾರಾಹಿಯ ಸಂಧಿಗ್ಧವಿಷ್ಕಯಾ ದಾಸಿ ಪೂಜಾಸಾಗರದೊಳ್ಸ ಪರಿವಿಷ್ಕಿ ಬಡಿಸಿರ್ಪ (ಪಾರಿಜಾ. ೧೧-೭೩). [ಪಾ. ಸಂಧಿಗ್ಧವಿಷ್ಕಾ]

ಸಂಧಿಚ್ಛೆ (ಗ). ೧. ತಿಂದ. ೨. ಆಸಿದರಿಸಿದ. (ನಾ). ೩. (?) : ಕ್ಷುಬ್ಧ ಚಿತ್ತ ಸ್ಥಿಮಿತವಿಲ್ಲದ ಜಿದ ಪಡವರು ಅತ್ಯಮಂಧಚ್ಛೆಸಂಬಂಧ (ಗಾಜಾ. ೫೮೨). [ಪಾ.]

ಸಂಧಿತ (ಗ). ೧. ಒಟ್ಟಾಗಿ ಸೇರಿದ ; ಜೊತೆಗೂಡಿದ. ೨. ಜಿಟ್ಟಿದ ; ರಾಶ್ಯೆದಾದ. ೩. ಒಡಗೊಂಡ; ಯುಕ್ತವಾದ : ಭೂಪಾಲಸಿಚ್ಚಮಂಧಚಿತ ಬ್ಲಿಷ್ಟಂ ಏಷ್ಟುಗಜಾಯಧಪಾಶ್ಚಾದಿಯುಗಂ ಬಿದಿಷ್ಟ ಪ್ರಜ್ಞಾವಂತ ಪ್ರಜ್ಞಾವಂ (ಗಾಜಾ. ೪-೧೨ ಪ). ೪. ಪಠಯುಕ್ತವಿದ ; ರಚಿತವಿದ. ೫. ಯೋಗ್ಯ ; ತಕ್ಕ. (ನಾ). ೬. ಜಿಟ್ಟಿದವನು; ಜಿಸಿವಿದವನು : ಈಚಂ ಭೂಸಾಲ್ಯಸಿಂಧಚಿತನಾ ನಿಜಮಂಧಚಿತಾಂಗಿಯಂ ಕಾಂಚಿ ವಿಶಾಸಿಸಿಂಧಚಿತನಾ ವಿಜಿಯಶ್ರೀಯಂ ಪಡೆದಂ (ಆಜಾ. ೬-೧೦). [ಪಾ.]

ಸಂಧಿತ (ಗ). ೧. ಕರೆಹಾಕಿದ; ಒಟ್ಟುಗೂಡಿದ : ಧರಣಾವಧರಂ ದಯದಂಬ್ಯಾಜಾಗಂ ಸಂಧ್ಯಪ್ರಜ್ಞಾದಗಳಂ . . . ದಾಪರಿಧಾನಧಾರಿಣಿಯ ಭಾವಿಸಲು ಪಠಿಸಿಧ್ಯ ಪಿ (ಜಾಗಾ ೬-೧೨-೨). ೩. ಸೇರಿದ ; ಜೊತೆಯಿದ : ಮಟಮಾಣಿಕ್ಯ ಸಂಧ್ಯಪಾಣಿಯಮಾಲಂಕಾರಮುಂ . . . ವಿಯಿ (ಆಜಾ. ೧೧-೧೫ ಪ); ಸಂಧ್ಯಪ ಸಿಯಾಳ್ಕಾಲುಪಾಧ್ಯಕ್ಷರ ಸ್ಥಕಾಗಮಂ . . . ಸಿಯಾಪ್ಯಾಶಿಯ ಧಜಾ ಧಾಪ ಪಾಪ್ಯಿಯಿ (ಜಾಗಾ. ೧-೧೨-೯); ಅಳ್ಳಿಳಿದ್ದುವಿಧಿಯಲಿಳ ಸಂಧ್ಯಪಾಮೀಳಾಂಗಿಯಳ್ಳಿಳ ಭುಗಿಧರ್ಮಂಧಿಯಾಗಳಾಕ್ಷಿಗಳ್ ಸಂಧಿಗಳ್ (ಗಾಜಾ. ೬-೭೦). ೩. ಆಕರೆಗೊಳಿಸಿದ; ಸಟ್ಟು ಪವಾಡಿದ : ಪಾಗಿಯಾಂಧಿಸ್ಯಂಧಿಸ್ಯಸಿಧಿಸ್ಯಸಿಯಾಧಿಯಧಿಸ್ಯಾಗ ಜಾಂಧಿಯಧಿಯಾಜಾಪಾಧಿಯೊ (ಆಜಾ. ೧-೧೨ ಪ). ೪. ಗ್ಯಾ ; ಇರಿಸಿದ. ೫. ತುಂದಿದ ; ಭೂಷಿಸಿದ : ಸಂಧಿಸ್ಯಗುರಾಪಿಧಿಸ್ಯಾಂ ಸಂಧ್ಯಾ ಜಾಳಿಯಿಧ್ಯಧಿಯಧ್ಯಸಿಧ್ಯಸಿಧ್ಯಾಂಗಳಂ ಮಿಸಿಧಿ (ಆಜಾ. ೪-೭೨ ಪ); ಸಂಧ್ಯಾಧಿಯಿಸಿಧ್ಯಸಿಧಿಯಾಜಾಪಿಸಿಧಿಯಾಗಳಿಗಂ (ಜಾಗಾ. ೧-೧೨). ೬. ಜಡಿದ; ಗಡಿಸಿದ. ೭. (ಶಬ್ದದಂತೆ) ಸ್ಫುಟವಾದ ; ದೊಡಾದ. ೮. ಒಪ್ಪಿ; ಸಾಗಿಸಿದ. ೯. ಪ್ರೋತಿಸಿದ. ೧೦. ಜೆಬ್ಬಿದ ; ಅಧಿಕಾದ : ಆ ಪಾಧಿಯಾಜಾಪಿಸಿಧಿಯಾ ಸಿಂಧಿ ಸಂಧ್ಯಪಳಾಜಾಪಿಯಂ . . . ಸಂಧಿ ಸ್ಯಾಧಿಯಿ ತಿಂಧಿಯಾಧಿಯಾಗಿ (ಆಜಾ. ೧-೧೨ ಪ). (ನಾ). ೧೧. ಸೇರಿದವರು ; ಜೊತೆಯವರು: ಅಂತು ದಯಜಕ್ಕಿದಯಜಂಜಿಸ್ಸಿರಿಯಾದ ಪಾದಿಯಂಡದಿಳಗೆ ಜಡಿದು ಸಿಂಧಿಸಿಂಧ್ಯಧಾಸಂಧ್ಯಸಿಯಾಗಿ (ಆಜಾ. ೧೫-೭೦ ಪ); ಸ್ಫಗಾದಿಂದ ಜಿಧಾಸಂಧಿಸಿಂಧ್ಯಸಿಂ . . . ಜಾಗಿ ಸ್ಫಿಸಿಂಧಿಯಾಗಿ (ಆಜಾ. ೧೦-೨). [ಪಾ.]

ಸಂಧ್ಯಜೋಗಣ (ನಾ). ಸಂಯೋಜನೆಯಿಂದ ಉಂಟಾದುದು ; ಜೋಡಿಸಿದ್ದ : ಆ ಮುಸಿಯಾಯಾಂ ಜಾಗಾಧ್ಯಮಿಂಧ್ಯಸಿಧ್ಯಂ ಸಂಧ್ಯಪೋಜನಾಂಗಂ (ಆಜಾ. ೧೫-೭೨). [ಪಾ.]

ಸಂಧ್ಯಣ (ನಾ). ೧. ಒಡೆಯುವಿಕೆ ; ಛಿದ್ರಗೊಳಿಸುವಿಕೆ; ಭಿನ್ನಗೊಳಿಸುವಿಕೆ. ೨. ಬೊರೆಕೆ ; ಸೀಳಿಕೆ. ೩. ಸಧಿಗಳು ಒಂದರೊಡನೊಂದು ಸೇರುವಿಕೆ ; ಜೊಡಿಲು;ಸಂಗವು :"ಸಂಧಣಂ ಸಂಧ್ಯಸಂ" (ಪಾಸೂ.೬.೩-೧೦). ೪. ಅರಳಿಸುವಿಕೆ. ೫. ವಿಕಸನಕ್ರಿಯೆ ; ಒಂದರ ತರುಣಾಸಿಗೆಯಿಂದ. ೬. ಮುಖ್ಯ ವಿಧಾಯಿಕೆ . ೭. ಪ್ರತಿಭಟನೆ; ದಂಗೆ. ೮. (ಧೀರೋಚಾರಾಯಿಂದ) ಗುಂಡಿಸ್ಸನ್ನು ಒಡೆಯುವವನು ; ಪ್ರತ್ಯೇಗುಯವನು : ಸಿಜ್ಞೆಗುಣಾಸಂಧ್ಯಸಿಜಾಸಂಧ್ಯಸಿಜಾಸಂಧ್ಯಾಗಿ (ಗಾಜಾ. ೫-೧೦). [ಪಾ.]

ಸಂಧ್ಯಣ (ನಾ). = ಸಂಧ್ಯಣ ೩. : "ಸಂಧ್ಯಣ, ಸಂಗಮ, ಸಂಧ್ಯಪ್ರ - ಯೋ ಒ ಡಂಡಿಗ" (ಪಾಸೂ.೬.೩-೧೦). [ಪಾ.]

ಸಂಧ್ಯಣ (ನಾ). ೧. ಅನುಸ್ಥಿಯುಪಟ್ಟುವು ; ಉಪಚಿಸ್ಥಂಗ. ೨. ಅಪಕರಯವಾದ ಭಾಗಂದ; ಪಠಯುಪಟ್ಟು : ಪಾಂಸಂಯಂಪಟ್ಟಿಸ ಸಂಧ್ಯಣಾಸ್ಯ ! ಅಸ್ಥಿಸ ಪ್ಯಿಗಾ ಜಡಂಪಟ್ಟಿ ! (ಪೂಜಾ. ೬೫ ಪ್ರಾಸ). ೩. ಕಾಮ; ಬಯಕೆ; ಅಸ್ಯಿಯೆಗ್ಳಿ : "ಅಜಯಿಂಗಂ ಭಾಸ್ಯಿಗಂಗಂ ಸಂಧ್ಯಣಾಯಾಯಿಂ" (ಪಾಪಾ. ೧೫೫-೫೧). ೪. ಗೊಂಚಿ; ಮರಕ : ಸ್ಫಗಾಂಧ್ಯಿಯ ಪಾಯಾಜ್ಞ ಜಿಂಜಾಸ್ಯಿಂಧಿಯಂ ಪಂಧಿಯಿಂ ಸಂಧ್ಯಣಾ ಸಜ್ಯಂಗಾಧಿಯಾಯಿಸ್ಯಿಯ ಧಿಯಿಂಜಾಯಿಯಾಜಾಧಿಯಂ ಸ್ಥಿಧಿಂ (ಆಜಾ. ೫-೭೦); ಅಂಧ ತಿಂಗಂಯ ಸಂಧಾಯಿಂ ಜಾಯಿ ಸಿಂಧಿಯಾಯಿಂ ಸಿಂಧಿಯಾಯಿಂ ಸಂಧ್ಯಣಾಂಜಾಯಿಂ . . . ಅಯಿಜ್ಞಾಧ್ಯಿಯಿಸ್ಯಿಂ ಧಾಯಿಂಜಾಯಿಂ (ಆಜಾ. ೧೫-೭೦). ೫. ಬೆಂಕಿ ; ಕಿಚ್ಚು. ೬. ಸಿಂಧಿಸಿ; ತಿಂಸಿಸಿ : "ಸಂಧ್ಯಣ, ಸ್ಫಗ - ಪ ಯಾಯಿಯಾಯಿಂ, ಸ್ಫಗಾಯಿಂ" (ಆಜಾ.೫೫ ೨೨೨). ೭. ಅಧಿಕ ಸಂಪತ್ತಿನ, -ಯಿಂದ : ಅಜ್ಞಗಂ ತೊಳಯಾಜಾಯಿಸ ಬಳ್ಳ ಸಾಧ್ಯಿಸ್ಯಿಯಾಯಿಂಜಾಯಿಯಾಗ ಸಿಂಧ್ಯಿಯಾಯಿಂ ಸಂಧ್ಯಣಾಯಿಂಜಾಯಿಂ ಯಿಸ್ಯಿಸಿಂ ಯಿಯಿಂಜಾಯಿಂ (ಪೂಜಾ. ೫-೧೫). ೮. ದೊಡ್ಡ ; ಭಾಗ್ಯವಿ : ಜಾಗಾ ತಿಂಜಾಯಿಸ್ಯಿಸ್ಯಿಂಜಾಯಿಂ ಜಾಯಿಂ ಜಾಯಿಂ ಜಾಯಿಂ ಸಂಧ್ಯಣಾಂಗ ಜಾಜಾ ಸಾಧಿಸ್ಯಿಸ್ಯಿಯಾಯಿಂಜಾಯಿಂ ಸಾಗಾಯಿಂ (ಆಜಾ. ೫-೧೦). ೯. ಜೆಬ್ಬಿದ ; ಭೃಯ : ಅಸ್ಯಿಂಧ್ಯಿಸ್ಯಿಯಾಯಿಂಜಾಯಿಂ ಸಿಂಧ್ಯಿಯಾಯಿಂಜಾಯಿಂ (ಆಜಾ. ೫-೧೦ ಪ). ೯. ಗೌರವ ; ಸನ್ಮಾನ : "ಸಂಧ್ಯಣ - ಆದರ" (ಪಾಸೂ. ೬.೩-೧). ೧೦. ಶಬ್ದಗಳ ; ತೆಳಿಯಿಂಗ : ಎಸ್ಸ ಬಗಿಂ ಬಗಿಯಿಂಜಾಯಿಂಜಾಯಿಂಜಾಯಿಂಜಾಯಿಂಜಾಯಿಂ ಸಂಧ್ಯಣಾಂಗ . . . ಯಿಂಜಾಯಿಂ ಸಾಯಿಂಜಾಯಿಂ (ಆಜಾ. ೫-೭ ಪ). ೯. ವಿಸ್ಮೃತಿ ; ಕಳ್ಳಾದಿಸ್ಮೃ.

೧೦. ಗೊಂದಲ; ಕ್ಷೋಭೆ. ೧೧. ಆವ್ಯಾಸ; [illegible]. ೧೨. [illegible]; [illegible]. ೧೩. ತೈವರ; [illegible]. ೧೪. [illegible]; ಉತ್ಸವ : [illegible] (ಸಿದ್ಧ. ೧೪). ೧೫. [illegible] ; [illegible]. ೧೬. [illegible] ; [illegible]. ೧೭. ಒಂದು ಬಗೆಯ ಮರ ; [illegible]; [illegible] : "[illegible]" ([illegible]). [ಸಂ.]

ಸಂಭ್ರಮಕಾರ (ನಾ). ಸಡಗರದಿಂದ ಕೂಡಿರುವವನು ; ಉತ್ಸಾಹಿ : [illegible] . . . [illegible] . . . [illegible] ([illegible]). [ಸಂಭ್ರಮ + -ಕಾರ]

ಸಂಭ್ರಮಮಾಣ್, ಸಂಭ್ರಮಮಾನ್ (ಕ್ರಿ). ಸಡಗರಿಸು ; ಉತ್ಸಾಹಗೊಳ್ಳು : [illegible] ([illegible]). ಸಂಭ್ರಮಮಾನ್ : [illegible] ([illegible]). [ಸಂಭ್ರಮ + ಆಣ್]

ಸಂಭ್ರಮವಡು (ಕ್ರಿ). ಸಡಗರಿಸು ; ಉತ್ಸಾಹಗೊಳ್ಳು : ಸಂಭ್ರಮವಡೆ [illegible] ([illegible]). [ಸಂಭ್ರಮ + ಪಡು]

ಸಂಭ್ರಮಮಾಣ್ 'ಸಂಭ್ರಮಮಾನ್' ನೋ.

ಸಂಭ್ರಮಿಸು (ಕ್ರಿ). = ಸಂಭ್ರಮವಡು : [illegible] ಸಂಭ್ರಮಿಸಿ . . . [illegible] ([illegible]). [ಸಂಭ್ರಮ + -ಇಸು]

ಸಂಭ್ರಮೋಕ್ತಿ (ಕ್ರಿ). ಸಂಭ್ರಮಿಸುವವನು ; [illegible] : [illegible] ([illegible]). [ಸಂಭ್ರಮ + ಉಕ್ತಿ]

ಸಂಭ್ರಮಿತ (ನಾ). ಆತುರದಿಂದ ಕೂಡಿದವನು : [illegible] ([illegible]). [ಸಂ. ಸಂಭ್ರಮಿತ]

ಸಂಭ್ರಮ (ನಾ). = ಸಂಭ್ರಮಿತ : [illegible] ([illegible]). [ಸಂ. ಸಂಭ್ರಮ]

ಸಂಭ್ರಮಿತ (ಗು). ಸಡಗರಗೊಂಡ ; ಉತ್ಸಾಹದಿಂದ ಕೂಡಿದ : ಸಂಭ್ರಮಿತ [illegible] . . . [illegible] ([illegible]). [ಸಂ.]

ಸಂಭ್ರಮಿಸು (ಕ್ರಿ). ೧. ಉತ್ಸಾಹಗೊಳ್ಳು ; ಸಡಗರಿಸು : [illegible] ([illegible]); [illegible] ([illegible]). ೨. ವಿಭ್ರಮಿಸು ; ತೊಳಲು : [illegible] ([illegible]). ೩. ಆತುರಗೊಳ್ಳು ; ಅವಸರಿಸು : [illegible] ([illegible]). ೪. ದಿಗಿಲುಗೊಳ್ಳು ; ಅಸ್ಥಿರಗೊಳ್ಳು : [illegible] . . . [illegible] ([illegible]). ೫. ದಿಗ್ಭ್ರಮೆಗೊಳ್ಳು; ಆಶ್ಚರ್ಯಪಡು : [illegible] . . . [illegible] ([illegible]). ೬. [illegible]; [illegible] : [illegible] ([illegible]). ೭. ಅಧಿಕವಾಗು; ಹೆಚ್ಚಾಗು : [illegible] ([illegible]). [ಸಂಭ್ರಮ + -ಇಸು]

ಸಂಭ್ರಾಂತ (ಗು). ೧. ಕ್ಷುಬ್ಧವಾದ ; ಗಲಿಬಿಲಿಗೊಂಡ. ೨. ಹೆದರಿದ ; ಭಯಪಟ್ಟ. (ನಾ). ೩. ಗಡಿಬಿಡಿ ; ಆತುರ. ೪. [ನಾಟ್ಯ] ಸಂಭ್ರಮದಿಂದ ನಡೆಯುವುದನ್ನು ಸೂಚಿಸುವ ಒಂದು ಭಂಗಿ : [illegible] ([illegible]). ೫. [ಶೈವ] ಒಂದು ನರಕದ ಹೆಸರು : [illegible] . . . [illegible] . . . [illegible] ([illegible]). [ಸಂ.]

ಸಂಭ್ರಾಂತಿ (ನಾ). ಗಾಬರಿ ; ಕಳವಳ : [illegible] ([illegible]). [ಸಂ.]

ಸಂಯತ (ಗು). ೧. ನಿಗ್ರಹಿಸಿದ ; ಹತೋಟಿಗೆ ತಂದ. ೨. ಬೇರಿಸಿದ ; ಸೇರಿಸಿದ : [illegible] ([illegible]). ೩. ಸಿದ್ಧಪಡಿಸಿದ ; [illegible]. ೪. [illegible]. (ನಾ). ೫. ಇಂದ್ರಿಯಗಳನ್ನು ಜಯಿಸಿದವನು ; ಜಿತೇಂದ್ರಿಯ. ೬. ಶಿವನ ಹೆಸರುಗಳಲ್ಲಿ ಒಂದು. ೭. ಸಿದ್ಧಪಡಿಸುವುದು ; ಬಂದಿ : "[illegible]" ([illegible]). ೮. [ಜೈನ] "ಪಂಚೇಂದ್ರಿಯಗಳನ್ನು ನಿಗ್ರಹಿಸಿ, [illegible], [illegible] ; [illegible] ; [illegible]" ([illegible]); [illegible] ([illegible]); [illegible] . . . [illegible] ([illegible]). [ಸಂ.]

ಸಂಯತ್ತು (ನಾ). ಕಾಳಗ ; ಯುದ್ಧ : "[illegible] . . . [illegible] . . . [illegible]" ([illegible]); [illegible] . . . [illegible] ([illegible]). [ಸಂ. ಸಂಯತ್]

ಸಂಯಮ (ನಾ). ೧. ನಿಗ್ರಹ ; ಹತೋಟಿ. ೨. ಮನೋನಿಗ್ರಹ : [illegible] ([illegible]). ೩. ವಿರಾಗ್ಯ : [illegible] ([illegible]). ೪. ಶಾಂತಿ ; [illegible]. ೫. ಕ್ರಮಬದ್ಧ ; ಕ್ರಮ. ೬. ಕ್ರಿಯೆ ; ನಾಶ. ೭. ಮನುಷ್ಯತ್ವ ; [illegible] : [illegible] ([illegible]). ೮. [illegible]. ೯. [ಜೈನ] ಪ್ರಮಾಣ [illegible] ; [illegible] : [illegible] ([illegible]). ೧೦. ಜ್ಞಾನಕ್ಕಾಗಿ ನಿಷ್ಠೆಯ [illegible] ; [illegible] : [illegible] ([illegible]). [ಸಂ.]

ಸಂಯಮನ (ನಾ). ೧. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು; ಮನೋನಿಗ್ರಹ : [illegible] . . .

ಸಂಜೆಮುಸುಕು ನಿಗ್ಗಿಸಿ ದಪ್ಪನು ಮಾಡಿ ಕ್ಷುತ್ಕಾರವೆಸಗುವಿಕೆ (ಅಭ್ಯಾ ೬-೬೯) ೨. ಅಂಕೆಗೊಳಪಡುವುದು. ೩. ನಿಗ್ರಹಿಸುವುದು : ದಮನ ಮಾಡುವಿಕೆಯು : ೪. ನಾಲ್ಕು ಮನೆಗಳಾದಾದ ಚೌಕ : ಚಿಮಿಟ್ಟಾಲೆ. [ಹಿ.]

ಸಂಜೆಮುಸುಕಲಾ (ನಾ). [ಶಾಮಿಖಾ]ಸಂಧ್ಯೋಗದಲ್ಲಿ ಒಂದು ಬಗೆ : ಆ ಹೊತ್ತಿಗೆ ಮಾಡಿ ಪ್ರಸಿದ್ಧವಾದ ಗಾನ ವಿಶೇಷ ಸೊಬ ಹಿಡಿದ ಪುಟದಂ ಅಜಾದ ಮುಖ್ಯರಾಗ ಪೂರ್ವಮಿಶ್ರಿತಂಗೂಡಿ ಸಂಧ್ಯಾಕಾಲ ಪ್ರಾಪ್ತಿಯಾಗುವ (ಅಜಾ. ೯-೬೦). [ಹಿ.]

ಸಂಜೆಮುಸುಕ್ಕ (ನಾ). [ಪ್ಲೈನ] ಕಿವಿ ಬಗೆಯ ಮೀನಪ್ರಭೇದಗಳಲ್ಲಿ ಒಂದು: ಸಂಜೆಮುಸುಕ್ಕಂ ಸಣ್ಣವಕ್ಕೆಗೆ ಚೆಂದ (ಅಜಾಖ. ೨೮೧). [ಹಿ.]

ಸಂಜೆಮು (ನಾ). ೧. ಇಂದ್ರಿಯಗಳನ್ನು ಬಯಾಪೇಕ್ಷಿಸು ; ಪ್ರೇರಿಸಿದ್ದಿಯು. ೨. ಮುಖ ; ಮೊಗ : ಸಂಜೆಮುದಿಂದಂ ತಪೋಜಾಜಾತಾಕಾಂತಾಜನಮನಂ ಜಯಮುಮಿಯ ಸಂಜೆಮುಮಿಯಿಂ (ಅಜಾ. ೬-೫೫); ಸಂಜೆಮುಗೊಂಡ ಬಿಲ್ಲ ಅಣ್ಣಿಗಳ. ಬಿಂಗಾರಮಾಣಿಗಾದಾ ಮೃತ್ಯಾಧಿಗಳಿಗೆ ಮಾಣಿಕ್ಯಮಾಣಿಗಳ . . . ಧಾತ್ರಿಯಿಂದ (ಭೂಪಾಲ. ೧೩-೬೬೦). [ಹಿ. ಸಂಜೆಮುಸಿ]

ಸಂಜೆಮುಸಿ (ಕೃ). ಅಂಗಿಗೆ ಒಳಪಡಿಸು ; ಹೇರೋಗುಗೆ ತೆರು : ಅಗಲಿಸ್ಪಗಳು ಮುಖ್ಯಲ್ಯಗಳಾದ ಶಾಕಲ್ಯಾಕ್ಷ ಮನ್ನು ಕಜ್ಜುಗಿಂದ ಸಂಜೆಮುಸಿಕೆಗೆ ರಿಕ್ಷಾಕ್ಷ ರೇಖಾಕ್ಷರ (ಅಜಾಖ. ೫೬೨). [ಸಂಜೆಮುಸಿ + -ಅಲ್ಲ]

ಸಂಜೆಮ್ಮೆ (ನಾ). ೧. ಅವಿರಿನ ಮೇಲೆ ಮಾಡುವ ಪ್ರಯಾಣ ; ಪಯಾಪ್ರಯಾಣ. ೨. ಜೊತೆಯಾಗಿ ಪ್ರಯಾಣ ಮಾಡುವುದು. (ಆಂ ಸಾಮಾನ್ಯ)

ಸಂಜೆಮು (ನಾ). ೧. ನಿಲ್ಲಿಸುವುದು ; ಪರಿಮಾಪುವುದು : "ಸಂಜೆಮು. ಸಂಜೆಮು - ೨ ಬಿಟ್ಟಾಗಿ ಸಾಧುವಾದ ನಿಲ್ಲಿಸಿಂದುದು" (ಎಕ್ಕಾ.ಎಪ. ೬೬೨). ೨. ನಿಗ್ರಹ; ಅಂಕೆ. [ಹಿ.]

ಸಂಜೆಮ್ಮ (ಗ). ೧. ಸೇರಿದ ; ಕೂಡಿದ. ೨. ವಿಷ್ಟವಾದ ; ದಟ್ಟಣೆಯಾದ. ೩. ಗಲಿಸಿದ ; ಜಜ್ಜಿದ. ೪. ಸಂಬಂಧಿಸಿದ. (ನಾ). ೫. ಕೂಡಿಕೆಯು ; ಸೇರಿಕೆಯು ; ಸಂಗಮಾಮಿಷಾಯಾಗ ಗಂಧರ್ವಾಗ ಧಾರ್ಮಿಕ ಮಾಡಾಯಾ ಸಂಜೆಮ್ಮಪ್ರಣಾಯಾಕ್ಷಯ್ಯಂಗ್ . . . ಎಕ್ಷ ಸಂಜೆಮ್ಮಗ್ಗೆ (ಅಜಾ.೧ ೬-೬೮). ೬. ದಟ್ಟಣೆಯಾದುದು ; ವಿಷ್ಟಣ : ಇಷ್ಟಂಯಾಲ್ಲಿ ಜಜ್ಜಿಯಂತ ನಾಲ್ಕು - ಇಂ ಸಂಜೆಮ್ಮ ಅಗಾಧದ ಸಂಜೆಮ್ಮಗಳ್ಳಿ ಸಾಜಾಮಿಸಿಂದ (ಮಾಖ್ಯ. ೫ ೬೨). ೭. ~ ಸಂಜೆಮ್ಮ ಕ್ಕೆಯಾಜದ : ಧಾಮಾಗಳ್ಳಿ ಸಾಜಾ. ಕ್ಷತ್ರಿಯಾಜದ (ಕ್ಷತ್ರಿಕ್ಷ), ಸಂಜೆಮ್ಮ (ಸಾಧ್ಯ) ಎಂದು ಮುಂದು ವಿಶ್ಲಾಗಳ (ಭೂಪಾ. ೨೨). [ಹಿ.]

ಸಂಜೆಮ್ಮಕ್ಕೆಯಾಜದ (ನಾ). [ಕ್ಸಾಗೆ] "ಎರಡು ಅಥವಾ ಹೆಚ್ಚು ಧಾತುಗಳ ದೇಗ ದೇಗ ಕ್ರಿಯಾವಿಜಯಗಳು ಒಟ್ಟು ಸೇರಿ ಆಗುವ ಕ್ರಿಯಾವಿಶೇಷಕ್ಕೆ ಸಂಜೆಮ್ಮಕ್ರಿಯಾಜದವೆಂದು ಹೆಸರು" (ಕ್ಷತ್ರಿ. ೧೫೨). [ಹಿ.]

ಸಂಜೆಮ್ಮಕ್ಕಾಜಿ (ನಾ). ದ್ಯಕ್ಕೆಗಳು ಅಥವಾ ಸಂಧಿ ಮುಂತಾದವುಗಳು ಒಟ್ಟಾಗಿ ಕೊಯಿಸ ಹೋಗಿ, - ಕ್ಷಯಿಸಿ ; ಜಂಬಿಸೋಗಿ : ಗೊಜಾಜ ಜಜಿಯಿಸ್ಸು ಅದು ಸಂಜೆಮ್ಮಕ್ಷಯಿಸಿದ್ದು ಅಜಾಖ್ಯಂ ಕೊಟ್ಟುದು (ಜಜ್ಞ).

[ಹಿ. ಸಂಜೆಮ್ಮ+ಕ್ಷಯಿಸು]

ಸಂಜೆಮ್ಮಕ್ಕೆಯಾಜ (ನಾ). [ಕ್ಸಾಗೆ] ಒಂದು ವ್ಯಯಸಂಯೋಗಿಗೆ ಸೇರಿದ ವ್ಯಕ್ಷಯ : ಜಾಜ್ಞಯಜ್ಞದ್ದು ಒಜ್ಞಕ್ಷಯಾಗ ಅಗ ಸಜಾಜದ ಸಂಜೆಮ್ಮಕ್ಷಯಾಜಗಾಜಿ : ಧಾಮಾ, ಜಜಾ . . . ಅಜ್ಞ, ಜಜ್ಞ ಈ ರೀತಿಯಾಗಿ (ಭೂಪಾ ೬) [ಹಿ.]

ಸಂಜೆಮ್ಮಾಕ್ಷಿಕ (ನಾ). [ಕ್ಸಾಗೆ] ಒಜ್ಞಿಕ್ಷ, ಅಜ್ಞಿಕ ; ಒಜ್ಞಿಕ್ಷಿಕ : ಎಜಾ ಅಥವಾ ಅಜ್ಞಿಂಗ ಹೆಜ್ಞಿಸ ಸಜ್ಞಯ ವ್ಯಯಾಗಾ ಒಟ್ಟಿಗೆ ಒಜಾಜಿಸಿಜ್ಞಿಕ ಸಂಜೆಮ್ಮಾಕ್ಷಿಕ ಅಥವಾ ಒಜ್ಞಿಕ್ಷಿಕ ಎಂದು ಹೆಸರು (ಜಜ್ಞಿಜ ೧೫). [ಹಿ.]

ಸಂಜೆಮ್ಮಗ (ನಾ). ೧. ಸೇರಿದ ; ಕೂಡಿದ. ೨. ವಿಷ್ಟಗ. ೩. ಜಾಗ; ಯಮಸ್ಥ : ನಿಜ್ಞ ಯ ಮಜ್ಞಿಕ . . . ಕೊಂಜಿಸ ರಾಜಾಗಾಜಿ ಸಂಜೆಮಾಜಿಜಾಗಿಜಾಗಿ ವಿಶ್ಲಾಕ್ಷ ಯಮದಂ ವಿಜಯಂ ಸಜಿಸಲಾಜಾಜಿದೆ (ಗಾಜಾಜ. ೪-೧೦); ಯಿಜಿಗೆ ಜಜಿಸಲಿಜಾಗಿನ ಗಾಜಾಗಾಗಿ ಸಂಜೆಜಿಯ ಸ್ಪಜಿಜಿಯಾಗಿ ಬಾಜಿಸಲ್ಪಟ್ಟ ಯಂತ್ರವಿಶೇಷಗಳಾಜಿಜಿಂದ . . . ಸಂಜೆಮಾಡಲಿ ಸಮಿಸಿದನು (ಜಜಾಜ. ೭-೨-೭೨). [ಹಿ.]

ಸಂಜೆಮಾಡ (ಗ). ೧. ಸೇರಿದ ; ಕೂಡಿಕೊಂಡ. ೨. ವಿವಸಲ್ಪಟ್ಟ ; ವಿಷ್ಟವಾದ. ೩. ಸೇರಿಸಿದ; ಕೂಡಿಸಿದ. ೪. ರಾಶಿಯಾದ. ೫. ಆಗಂಯಾದ ; ಸಜ್ಜಾಗೊಂಡ. (ನಾ). ೬. [ನಾಮ್ಸ್] ಪ್ರಶ್ನಾಧಿಗಮದಲ್ಲಿ ಒಂದು ಬಗೆ : ಸಂಜೆಮಾ ಸಂಜೆಮಾಡಲುಜಾಪ್ರಶ್ನಾದಾಲ್ಲಿ ಪ್ರಶ್ನೆ ಕೇಜಿಲಿಂ ಕೇಜಿಲಿಂದು ಮೂಡಿಬಂದಿಲ್ಲ ಮಜಿಯಾಂ (ಅಭ್ಯ ೯-೫೧). [ಹಿ.]

ಸಂಜೆಮಾಡ್ಕ (ನಾ). [ನಾಮ್ಸ್] (ಅಂಜಲಿ, ಉಪ್ಪಾಡ, ಅಳಾಲ ಮುಂತಾದ ಪ್ರಶ್ನಾಧಿಗಮದಲ್ಲಿ ಪ್ರಶ್ನೆಯನ್ನು ತೋರುವಾಗಿನ) ಜೋಡಿಸಿದ ಕೈ : ನಾಮ್ಸಾಸ್ತ್ರದಲ್ಲಿ ಹೇಳಿರುವ ಸಂಜೆಮಾಡ್ಕಗಳು ಯಾವುವೆಂದರೆ - ೧. ಅಂಜಲಿ, ೨. ಉಪ್ಪಾಡ . . . ೧೩. ಪದ್ಮಾಮಜ (ಅಭ್ಯ. ೫೨). [ಹಿ.]

ಸಂಜೆಮಡಿಕಾಯಜಗ (ನಾ). [ಶಾಮಿಖಾ] ಸಂಧ್ಯೋಗದಲ್ಲಿ ಒಂದು ಬಗೆ : ತಮಗೆ ಮುಗಿಸ್ಸಿ ಹೊಂಗಿ ಗಾನ ಪಾಗಂಯಾಯಿಸಲ್ಪಟ್ಟ ಸಜಿಸ ಪ್ರಯಾಜ್ಞಸ್ಸಾಗಿ ಧೃಜಿಜಾಗಳಿಂದ ಏಕಜ ಜೊಡಿಯಿಸಿಯಾಗಿಸಿ ಸಂಜೆಮಾಡಿಕಾಯಜಗ . . . ಸಂಜೆಮಾಡಿಕಾಯಜಗ (ಜಜಾಜ. ಸಂಜೆಮಾಡಿಕಾ, ಸಂಜ್ಞೆಗೊಂಡ ಈಗಾಗಿ (ಅಜಾ. ೯-೮). [ಹಿ.]

ಸಂಜೆಮಾಗ (ನಾ). ೧. ಒಂದಾಗುವಿಕೆ ; ಕೂಡಿಕೆ : ಅಜಾಜಂಯಾಯಿಸಿಗ ಮುಂತಾ ರಿಜಾಯ ಪಡಿಯಂ (ಗಾಜಾಜ. ೧-೫೬); ಗಾಜ ಜಜ್ಞಾಗ ಸಂಜೆಮಾಗ ವಿಜ್ಞಕ್ಷಿಯಾಯಿಸಿ ಮುಂಗ ಯಿಜಿಂ ವಿಜಿಜಿಯಾಯಿಸಿ ಅಯಾಜ್ಞ (ಅಂಜಾಜ. ೬೫೨-೫೩). ೨. ವಿಗಾಂಧಿಸ್ಸ ; ಸಂಯು : ಎಜಿಯ ಜಜಾಜಿಜಿಂಧಿಯ ಮೆಗ ಯಿಜಿಜಿಯಿಂಧಿ ಸಂಜೆಮಾಗ ಜಜಿಯಿಂಯಿಂ ಅಯಾ ಜಿಂಗಾಗ ಸ್ಪಯಾಯಿಂ ಸ್ಪಾಗಂ (ಅಜಾ. ೨-೬೫); ಅಂಜಿಜಾಯಿಂ ಜಿಜಾಗಾಂಗ ಸ್ಪಿಂ ಸ್ಪಾಜಿಜಿಯಿಂಧಿಸ್ಸಿಜಿಸ್ಸಿ ಸ್ಪಿಂಸ್ಪಿಂಗಾಗಿಂ ಯೋಗಾಜಿಜ ಜಜಿಯಿಯಾಂ ಸಂಜೆಮಾಗ ಸ್ಪಿಂಗಾಂಯಾಂ ಜ್ಞಾಸ್ಪಿಂ ಸ್ಪಿಂಜ್ಞಿಸ್ಪಿಂಗಾಂಯಾ

ಹಂಚಿಕೊಳ್ಳು (ಕ್ರಿ). ೧. ಭಾಗಿ ; ಸೇರು :(೧). ೨. ನಿಕೆ ; ಸಹಭೋಗಿಸು: (೧). (ಹಂಚಿಕೆ + - ಆಲ್)

ಹಂಚಿಕೆ (ಗು). ೧. ಭಾಗಿಸುವ ; ಸೇರಿಸುವ : ಈ ಶಬ್ದಾಲಂಕಾರವನ್ನು ಒಂದು ಸಂಚಿಕೆಗಳ ಆರಂಭದ (Consecutive) ಪ್ರತಿಪ (ಪ್ರಾಪ್ರ. ೫೯). (ನಾ). ೨. ವಿಭಜಿಸುವಿಕೆ ; ವ್ಯವಸ್ಥಾಪನೆ : ಈ ಕಾರ್ಯಾಲಯ ಸಂಚಿಕೆಯಾ ಯಾರು? (೧೮೬). [ಹಂ.]

ಹಂಚಿಕೆಯಾಡು (ನಾ). ಸೇರಿಸುವಿಕೆ ; ಭಾಗಿಸುವಿಕೆ : ಜಿಲ್ಲಾ ಹೋಳಾದ ಕಾಳಜ್ಞ ಸಂಚಿಕೆಯಾಟವಾಯಿತು (ಪ್ರಾಪ್ರ. ೬-೧). [ಹಂ.]

ಹಂಚಿಕೊಡು (ನಾ). ೧. ಒಟ್ಟಿಗೆ ಸೇರಿಸುವುದು. ೨. ವಿಭಜಿಸುವಿಕೆ; ವ್ಯವಸ್ಥೆಗೊಳಿಸುವಿಕೆ. [ಹಂ. ಸಂಚಿಕೊಡು]

ಹಂಚಿಕೊಡು (ಗು). ೧. ಭಾಗಿಸಿಕೊಂಡ ; ಜೊತೆಯಿಸಿಕೊಂಡ : ಸಾಮಾನ್ಯವಿಲ್ಲಗಳ ವಿಷಾಲ ಸಂಚಿಕೊಡಿಸಲ್ಪಟ್ಟಿರುವುದು ಅಗತ್ಯ (ಪ್ರಾಪ್ರ ೧೫೦); ವಿಚಿತ್ರ ರಾಷ್ಟ್ರದ ಸೈನ್ಯಗಳ ಆಮಿಷಂದಿಸಿಕೆಗಳ ದೃಷ್ಟಿಯಿಂದ ಸಂಚಿಕೊಂಡ ಪಟ್ಟಿ (ಪ್ರಾಪ್ರ. ೧೧). ೨. ವಿಭಜಿಸಿದ ; ವ್ಯವಸ್ಥೆಗೊಳಿಸಿದ. [ಹಂ.]

ಹಂಚಿಕೊಡುವಿಕೆ (ನಾ). [ಕ್ರಾ.ಪ್ರ] "ಸ್ವತಃತ್ವಾಗಿ ನಿನ್ನ ಬಲ್ಲ ವಿಧಾತ ಅಥವಾ ಅನೇಕ ಗಾಯಕಾಸ್ಯಗಳ ಸೇರಿ ಒಂದು ಗಾಸ್ಯಗಾನಿಸ್ಪರ್ಧೆಗೆ ಆದರೆ ಸಂಚಿಕೊಡುವಿಕೆಯೆಂದು ಹೆಸರು" (ಪ್ರಾಪ್ರ. ೧೧.). [ಹಂ.]

ಹಂಚಿಕೊಡುಸು (ಕ್ರಿ). ೧. ಭಾಗಿಸು ; ಸೇರಿಸು : ಮಂಚ ಹಾಗೂ - ಪ್ರಕೃತಿಗಳೂ ಅವು ಗ್ರಹಗಳೂ ಸಹಿತ ಒಂದು ಹೊಟ್ಟಿಯನ್ನು ಇಲ್ಲಿ ವಿಚಾರಕ್ಕೆ ಸಂಚಿಕೊಡುಸುವುದು (ಪ್ರಾ. ೧೫); ಇವೆಲ್ಲವು ಅಳ್ತಕ್ಷಯಪ್ರಮಾಣ ಚಿತ್ರಾಂಶ ಪ್ರಕಾಶವನ್ನು ಸಂಚಿಕೊಡುವುದಕ್ಕೆ ಸಾಧ್ಯವಾಗಿ ಬಳಕೆಯಲ್ಲಿದೆ (ಪ್ರಾಪ್ರ. ೧೬). ೨. ವಿಭಜಿಸು ; ವ್ಯವಸ್ಥೆಗೊಳಿಸು : ಪಾಠಾಂತರಗಳನ್ನು ಒಂದು ಪಾಠದಲ್ಲಿ ಸಂಚಿಕೊಡುವಾಗ್ಲೆ (ಪ್ರಾಪ್ರ). [ಹಂಚಿಕೊಡು + - ಆಲ್]

ಹಂಚಿಕೆ (ನಾ). ೧. ಪ್ರಾರಂಭ ; ಆರಂಭ. ೨. (ಹೆರವರ, ಸಂಚಿಕೊಡ ಮುಂತಾದುವುಗಳಿಂದಾಗುವ) ಗಲಿಬಿಲಿ ; ಗೊಂದಲ. ೩. ಸಿಟ್ಟು ; ಕೋಪ. ೪. ಶಿಕ್ಷಣ : ಗಾಯಕ. ೫. ದೃಢ; ಮಿಶ್ರಣ : ಮೂಗ್ ಕಾಸ್ ಒಡಕ್ಕಿಂ ಆದ ಪಾಪಗಳನ್ನು ಇದು ಕಾಪ್ಯಗಳ ಅಪಾಸಾಯಾಪ್ಯಕ್ಕೆ ಮಿಶ್ರ ಶುಷ್ಕವಾದ ಸಂಗಮ. ಆ ಪಮಾಣ ಎದ್ದು ಇಂದಿನ ಮಹಾಕಾವ್ಯಗಳ ಮಿಶ್ರ, ಸಮ್ಮಿಶ್ರ ಸಂಚಿಕೆಗಳು (ಪ್ರಾಪ್ರ. ೧೧). ೬. ಆವೇಶ ; ಉದ್ರೇಕ : "ಅಂತಃ, (ಸಂಚಿಕೆ), ಸಂಚಿಕೆ, ಸಂಚಿಕೆಯ, ಭಾವೋದ್ರೇಕ - ಈ ೫ ಸಂಚಿಕೆಯಂ" (ಪ್ರಾಪ್ರ ೧೫೯-೬೬); ಮುಂತಾದ ಶಬ್ದಚಿಹ್ನೆಗಳು ಅಯಿ ಮಾಗಾಂತರ ಮುಖ್ಯಳು ಸಂಚಿಕೆಯ ಬಳಿಯಲ್ಲಿ ಕಂಡಿರಲ್ಲ (ಪ್ರಾಪ್ರ. ೧೧ ಮುಂ). ೭. ಗರ್ವ ; ಸೊಕ್ಕಿ. ೮. ಹುರುಪಿ ; ಉತ್ಸಾಹ : ಇಂತಹ ಬಲವಾದ ಪರಿವರ್ತನಾಪರಿಸ್ಥಿತಿಯಲ್ಲಿ ಮಾಡಿಲೂ ಸಂಗಮಿಸಿಂ ಸಿಕ್ಕಿದು. ಸಮಾಜ ಸಂಚಿಕೆಯಾಯಿತೆಂದು (ಪ್ರಾಪ್ರ. ೧೫-೧೬ ಪ). ೯. ಸಮಾಧಿ ; ಸಂಕ್ಷಿಪ್ತ : ವಿಚಾರಗಳುಳ್ಳವನ್ನು ಕಾಂಡಿಯಂಗಳಾಗಿ ರೂಂದಿಸಿಲ್ಲಿ ಲಲಿತ ಸಂಚಿಕೆಯಿಂದ (ಪ್ರಾಪ್ರ. ೧-೧೬). ೧೦. (ಮದುವೆ ಮುಂತಾದ) ಸಮಾರಂಭ ; ಉತ್ಸವ. [ಹಂ.]

ಹಂಚಿಕೆಗಡಿ (ನಾ). ಸಭಾಗದಿಂದ ತೊಡಿಯುವವಳು ; ಸಂಚ್ಛಿಯ ದಿಂದಿಯುವವಳು : "ಪಟ್ಟಣಾಗಮಾಯುಷ್ಯಾಸ್ಯಂಚಿಕೆಯಂ ತಾಂ ತೊಡಿಯಾ ಗಾಗಮಿಯೆ . . . ಸಂ [ಪ್ರಾಪ್ರ. ೫೧] ದಿಂದಿಯಿಗೆ ಪಾಯಿ" (ಪ್ರಾಪ್ರ. ೧೫೧); ಸಾಸ್ಯಾಂ ಮುಂ ಸಂಚಿಕೆಯಾಯಿಂ ಮಳಿ ಮುಸ್ಯಾಂಗಳ ಪಲ್ಲಗಾಯಿಗೆಯಂ ಸ್ಯಾಸ್ಯಂಗಾಯಿಂ . . . ಧರಾಸ್ಪಿಸುವಂ (ಪ್ರಾಪ್ರ. ೧೫-೧೦). [ಹಂ. ಸಂಚಿಕೆಗಡಿ]

ಹಂಚಿಕಾಸ್ತಿಕ (ನಾ). ೧. ಶ್ರೇಷ್ಠ ತಾತಾಯ ಬಾಳೆಯಿಂದ ತೊಡಿಯುವಿಕೆ. ೨. ಶ್ರೇಷ್ಠಳಾದ ದಂಚಿಯಿಂದ ತೊಡಿಯುವಂಥದು. ೩. ಕ್ಲಿಷ್ಟಗುಣಲಕ್ಷಣಗಳಿಗಾಗಿ ದಂಚಿಯು. ೧. ೨. ೩ : ಆ ಪಾಂ ದಾಸಿಯಿಂದ ಬಿಟ್ಟಿಯಿಂದ ಪಾಪ್ತಿಯಾಗಿ ಪಾಂಚಿಯುಂ . . . ಸಿಟ್ಟಿಯಿಂ ಸಾಯಿಯಂ ಸಂಚಿಯ್ಯಾಸ್ಯಿಯಿಯುಮಿಯುಂ (ಪ್ರಾಪ್ರ. ೨-೧೦ ಪ). [ಹಂ.]

ಹಂಚಿಕ್ಕೆ (ಗು). ಸಲಹುವ ; ಕಾಪಾಡುವ : ಪಾಯಾಯಾಯಿಯಿಯಾಗಿ ದಯೆಯಿಯಿಂದ ಪಕಾಯಿಯಿಯಿಂದಂ ಪಾಯಾಯಿಯಿಯಿಂದಂ (ಪ್ರಾಪ್ರ ೬-೧೦). [ಹಂ.]

ಹಂಚಿಕ್ಕೆಗ (ನಾ). ಕಾಪಾಡುವವನು ; ಸಲಹುವವನು. [ಹಂ.]

ಹಂಚಿಕ್ಕೆಗ (ನಾ). ಬೆಣ್ಣಾಗಿ ಕಾಪಾಡುವುದು. - ರಕ್ಷಿಸುವುದು : ನೀನು ಮಮ್ಮ ಸ:ರಕ್ಷಣೆಯಾಡಬೇಕ್ಕಿಲ್ಲ. ಹಡಬಹಿಗಳಾದ ಶತ್ರುಸ್ಸು ಯಾವು ಕೈಗಳಿಲ್ಲದ್ದರು (ಪ್ರಾಪ್ರ. ೧-೧೫೨). [ಹಂ. ಸಂಚ್ಛಿಗ]

ಹಂಚಿಕ್ಕಿಸು (ಕ್ರಿ). ೧. ಸಲಹು ; ಕಾಪಾಡು : ಭಕ್ತಿಗೆ ಪಾಂಡವಂಗಳು ಸಂಚ್ಛಿಸಲು (ಪ್ರಾಪ್ರ ೧೬ ಪ); ಇದ್ದು ಮುಂದೆ ಪಾಲು ಅವಾಸ್ಯ ಹೆಚ್ಚಿ "ಪ್ರಗತಿ"ಪಾಗಿ ಸಂಚ್ಛಿಸಲು (ಪ್ರಾಪ್ರ. ೧-೧೫). ೨. ಬಿಚ್ಚಿರಿಯುಂದ ಸೋಂಡಿಸಿಲ್ಲ, ; ಪ್ರ.ಗಣಾಪ ಮಾಡು: ಕ್ಯಾಸಿಸಿಯಾಪ್ಯಕ್ಕೆ ಪಾಲ್ಯ ಸಂಚ್ಛಿಸಿಯಿಂದಿಯಿಂದು: : ಸಿಯಿಂದ ಪಾಪ್ಯಕ್ಕೆ ಸ್ಯಾಸಿಯಿಗೆ ಪಾಯಿಯಿಯಿಂದ (ಪ್ರಾಪ್ರ ೧೧). [ಸಂಚ್ಛಿ + - ಆಲ್]

ಹಂಚಿಕ್ಕೆ (ನಾ). ರಕ್ಷಣೆ ; ಸಂರಕ್ಷಣೆ : ಮಾಯಿಯಿಂ ಸಂಚ್ಛಿಯಿಂ . . . ಪಯಿಯಿಂ ಪಾಯಿಯಿಂ ಪಾಯಿಯಿಂ ಪಾ

ಸಂಗಾಡಿಕ (ನಾ). [ಸಂಸ್ಕೃ+ಆಡಿಕ] ಹದಿನೆಂಟು ಬಗೆಯ ಉಡುಪುಬಟ್ಟೆಗಳಲ್ಲಿ ಒಂದು : ಸಂಗ್ರಾಹಿಗಳಾದವರಿಗಾದ ಒಂದು ಬಗೆಯ ಸಾಮಗ್ರಿ : ೧. ಗಾಜಾಂ . . . ೧೮. ಆಮಿ. ೧೯. ಸಂಗಾಡಿ . . . ೨೮. ಧಾನಿಗ - ಎಂದು ಉಪಚಿಂತಾಗಾಂ ಪಡಿಯು ವಿಧ (೨೦೦೦. ೬೨). [ಪಾ.]

ಸಂಗಾಡಿ (ಗ್ರಿ). ೧. (ಸಂಘಟಿಸಿದ) ಮಾಡಿಕೊಂಡ ; ಸಂಸ್ಕರಿಸಿದ. (ನಾ). ೨. ಮಾಡಿಕೆ ; ಸಜ್ಜಾಪ್ತಿ. ೩. ಮಾಡಿಕೊಡುವವನು ; ಸಂಪಾದಿ.

[ಪಾ. ಸಂಗಾಡಿ]

ಸಂಗಿಣಿಕೆ (ನಾ). ದೆಸೆಯ ಹೊಣೆಗಾರಿಕೆ ; ಔಸವಾಗುವಿಕೆ : ೫ ಭೂಮ್ಯಾಗಿ ಪಡಿಯಿಲಿ ಎಂದು ಸಂಗಿಣಿಕೆ ಧಾಮ್ಯಕ್ಕೆ (೧೯೫೦ ೧೩-೧೦೨). [ಪಾ. ಸಂಗಿಣಿಗ]

ಸಂಗ (ಗ್ರಿ). ಸಂಪೂರ್ಣವನ್ನುಳ್ಳುವುದು ; ಪರ್ಯಾಪ್ತವಾದ : ಒಂಗ, ಒಂಗ, ಕಂಗ, ಸಂಗ (ಪ್ರಾ.ಶ. ೧೯೯ ಭೂಮಿ). [< ಪಾ. ಸಂಗ]

ಸಂಗಿಯ 'ಸಂಪ್ಯೆಗ' ನೋ.

ಸಂಗಿಸು (ಕ್ರಿ). ಮಾಡಿಸಾಗು ; ಸಂಪಾದಿಸು : ಇಂದು ಸಂಗಿಸಲ್ಪ ದೇಂ ಎಷ್ಟುಮಾಡಿ ಸಿಸ್ಟು ಕಿಟ್ಟುಗೊಳ್ಳ ಮಾಲ ಪಡಿಯಾ, (ಶ್ರೀಪಾಪ. ೧೮೬-೧೩).

[ಸಂಪ್ಯೆ + - ಇಸು]

ಸಂಪ್ಯೆಗ, ಸಂಪ್ಯೆ, ಸಂಪಿಯ, ಸಂಪ್ಯೆಗ, ಸೆಂಪ್ಯೆಗ (ನಾ). ೧. ಇಪ್ಪತ್ತರ ತಿಂಗಳುಗಳ ಕಾಲ ; ಒಂದು ವರ್ಷ. ೨. ೨೦ ಸಂಖ್ಯೆಯ ೨ : ಪ್ರಜ್ಞಪಿಯಂ ಸಂಸ್ಕೃತಿಯಿಗೆ (ಕ್ಷೀಪ. ೧೯೨೬, ೨೦-೨, ೧೨); ಶ್ರೀಮಾಲ ಸಂಪ್ಯೆಗಲು ಪಿಂಡೆಳೆದು ಪಡಿಯಲು ಗೆಡಿಗಳ ಮಾಗ . . . ಕೊಲು ಮಾಸ್ಟ ಪೊಲ (೧೯೫ ೨೦. ೧೯೫೦. ೧೪-೧೦ : ೧೮೦ ?). ಸಂಧಿಸಿ : ೨. ಪಡಿಯಲು ಕಾಲಿಸಿದ ಗಾಲು ಮಾರ್ಗ ಸಂಧಿಸಿ ಪಡಿಗಾಲಿದ ಪಡಿಸ್ಕೆ ಗಾಸ್ಟ್ಯ(ಪಿ) ೨೮ ಪ್ಲೊಸ್(೦)ಕಾಲುದಲು (೧೦. ೫೭, ೧೯೫೦. ೧೦-೨೧, ೧೯೭೦). ಸೆಂಪಿಯಿ : ೨. ಇಷ್ಟು ಮಾಡಿಸಲ್ಪಟ್ಟಿರುವ ಅಥವ ಸಂಪಾದಿಸಿಲಾಗಿ ಸಂಪಿಯಲ್ಲ . . . [ಸಂ] ಕೃಮಾಗಿ (ಪ್ಲೆ). (೧೯೫೦. ೫೭, ೧೪೬-೨; ೧೧೮೦). ಸಂಪ್ಯೆಗ : ೨. ಸ(ಪ)ಸ ಸೃಷ್ಟಿಗಾಲಿಸಿ ಸಂಪ್ಯೆ(ಪ್ಟ)ದ ಸ(ಪ) ಪಂಗಳ್ಳಾಸಿಲಾ ಪೊಲ್ಲಿಸ್ಟುಸಿಲಾಗಿ ಪೃಷ್ಟಿಸಿ ಸ [ಸ] ದಲ್ಲಿ (ಪ್ಟ)ಸಂ (ಇಂ. ೫೫, ೧೯೫೦-೨; ೧೯೭೦). ಸೆಂಪ್ಯೆಗ : ೨. ಪಡಿಯಂಗಿಸ್ಟುಸಿ ಬೃಷ್ಟಿ ಸಿ ಸಪ್ಪಲು ಪಡಿಯಲು . . . ಪಡಿಲ್ಗಳಿಗಾಲಿಸಿ ಮಾಗ (ಪ್ಲೆ. ೧೯೨೦. ೨೨-೨ : ೧೨೨೦). [< ಪಾ. ಸಂಪ್ಯೆಗ]

ಸಂಪ್ಯೆಗ 'ಸಂಪ್ಯೆಗ' ನೋ.

ಸಂಪಿಯ (ನಾ). ಕಾಳಗ ; ಯುದ್ಧ : ಅಂಗಾಲ ಮಾಗ ಬಿಪಿಯಲ್ಲ ಲಕ್ಷ್ಮಿಸ ಸಂಪಿಯಲ್ಲಿ, ಇಷ್ಟಗಾಲಿಯಲ್ಲಿ ದಿಪ್ಪ ಲಕ್ಷ್ಮಾಸಿಯಿಂದ ಮಾಗ ಪಿಂಡೆಳೆಗಾಲಿಗಾಗಿ (೨೨. ೫೫. ೧೯೫೦. ೧೨೨ ೨. ೧೪೦೦).

[ಪ್ರ ಇದು 'ಸಂಪಿಯ'ದ ಆಡಿಯಿಲ]

ಸಂಪ್ಯೆಯ (ನಾ). ಮಾಡಿಗಾರು ; ಶ್ರೇಷ್ಠ ವ್ಯಕ್ತಿ : ಪಡ್ಸಾಗಾರ ಸಾಧಿಸಂಪಿಸ್ಟಿನ ಪೂಗ್ಯಾಗಿ ಸಜ್ಜಿಸಾಲ್ಲಾ ಸ್ಥಿಸ ಸಂಪ್ಯೆಯಲ್ಲಿ ಪೂಗ್ಯಾಲಾ ಪಡ್ಸಿಟ್ಟಾಲಾ ಪಿಂಪ್ಲಿಸಾ ಧಿಸಿ ಸಪ್ಪಾ (ಕೆಳಾ. ೧೯೦೨, ೨೧-೨, ೨೧೨-೨೯ ; ೧೧೭೨).

[< ಪ್ರಾ. ಸಂಪ್ಯೆಗ/ ಪಾ. ಸಂಪ್ಯೆಗ]

ಸಂಪ್ಯೆಗ (ನಾ). ೧. ಪಡ್ಸಿದು ತಿಂಗಳುಗಳ ಅವಧಿ ; ಒಂದು ವರ್ಷ: "ಪಾಯಾಸು, . . . ಸಂಪ್ಯೆಗ, ಸಪ್ಪು - ೫ ೬ ದಿಪಿಂ" (ಪಾಪಾಸು. ೨೦-೧೧೬); ಸಾಯಿಯಾ ಮಾಗಿಲಿಯಿಲಿಯಾಯಾಂ ಪಿಲ್ಲಿಗಿಸ್ಟುಸ್ಟಾಂ ಔಷಯಾಂಸಿಯಾಗಿ ಪೂಲಿಪುದಾಂ (ಪಾಂಡಿಪಾ. ೨-೧೬ ಪ). ೨. ಒಂದು ನಿರ್ದಿಷ್ಟಕಾಲದಿಂದ ಪ್ರಾರಂಭವಾಗಿ ಕಾಲಮಾನವನ್ನಳೆಯಲು ಪಡಿಸಿದ ಸಮಯ ; ವರ್ಷ : ೫ ಇದರಲ್ಲಿ ೧೯೫೦ ಸಂಪ್ಯೆಗ ಪಡಿಸಿದ ಸಂಪ್ಯೆಗ ಪಡಿಸಿದ ಸಂಪ್ಯೆಗ (ಪಾಪಾಸು. ೨೦-೧೧೬). ಸಂಪ್ಯೆಗಳ : ಪ್ರಜ್ಞಪಿಯಂ ಸಂಪ್ಯೆಗಳಲ್ಲಿ ಸಂಪ್ಯೆಗಳಲ್ಲಿ ಸಂಪ್ಯೆಗಳಲ್ಲಿ

(ಸ್ವಾಮಿ. ೪೬); ಕಡಿದುಹೋಗಿ ಅಲ್ಲಿ ಮುಂದಕ್ಕೆ ಬೆಳೆಯದೆ ಮುಂಚಾಚಿಕೆ ಹೊಂದಿ ನಿಂತಿರುವ ಸಣ್ಣಕೊಂಬೆ ಚಾಚುಗಳನ್ನು ಬಾಯಿಂದಾಯಿಸಿ ಕಚ್ಚಿಕೊಂಡು (ಮಾಸ್ತಿ. ೬-೨೧); ಹಿಡಿದ ಬಾಯಿಯಿಂದ ಸಂಪೂರ್ಣ ಸೋಲಿಸಿದರು (ಅಭ್ಯಸ್ತ. ೪-೧೫). ೬. ಕಾಟ್ಟ ; ರಕ್ಷಣೆ: ಅಧಾನಂ ಸಂಪೂರ್ಣ ಪರಾಭ್ಯಂ ಗಣಪಾಲ ಪೊಯ್ಸಳಾನಾಮಯಂ ಬ್ರಹ್ಮಗಣಕ್ಕೆಗೆ ಬಂಧಪ್ಪ ದಾಯಪ್ಪ ವಿಚ್ಛಿಕ್ಕಿಯಾಂ (ಸಮಯ. ೧-೧೧); ಭಂಡಿಕಾರ ಸಂಪೂರ್ಣಂಗಳ ಮಾಹಾಪ್ಪ ಅಚ್ಚು ಗಂಡಂಗಳ ಕಾಪಾಂ, ಪಂಪಯಾನಿಯೆರಾ (ಮಾಸ್ತಿ. ೪೨-೧೨); ಹುಲಿಗೆ ಬೆದರಿದ ಗಜದ ದಿಗ್ಗಿನ ಮೇಲೆ ಬೀಳಲಿಲ್ಲ. ಸಂಪೂರ್ಣಂಗಳ ಅಚ್ಚಿಕ್ಕಳಿಂದ (ಮಾಸ್ತಿ. ೧೧-೧೨). ೭. ಗಿಡ; ಕೆರೆಸ್ಥಿತಿ : ಪಾಲಂ ಅಮಾಂಗಳ ಬಂದ ಸಂಖ್ಯಾಮ ಸಂಪೂರ್ಣಂಗಳಾಂದ ಪೂರಾ ಕೆಲ್ಸಂ (ಮಾಸ್ತಿ. ೧೨-೬). ಸಾಮರ್ಥ್ಯ : ಗಿ. ಪರಾಪರಾಗಿಂಗಂ ಸಂಪೂರ್ಣಂ ಮಾಡಿಸುವಂ (ಮೋಹನ. ೧೭-೬); ಹೀಗ, ನಮ್ಮ ಗಂಡು ಅಚ್ಚಿಕ್ಕಿ. ಸಾಲದು ಸಂಪೂರ್ಣ ಮಾಡಿರ್ದ! (ಅಭ್ಯ. ೧೨೦); ಬೆಳ್ಳಂಬೆಳಗ್ಗೆ, ಭೂಮಿಯಾಜ ಸಂಪೂರ್ಣಂಗಳ್ಳಂ ಅಳಿಯುವ (ಅಳಿ. ೨೨೮). ೮. ಪೂರ್ಣಕಾಲವು ; ಸಜ್ಜಾವಸ್ಥೆಯಾದುದು : ಇಷ್ಟು ಕ್ಷಣ ಮುಂದೆ ಬರಬೇಕಿದ್ದ ಸಿಡಿಲಾರ್ಭಾಟ, ಶಾಂತಪ್ಪನ ಸಂಪೂರ್ಣತೆಯಿಂದ ಅದರ ಅಪಾಯಕಾರಿತ್ವವು (ಅಭ್ಯ. ೨೦). ಸಿದ್ಧತೆ : ೯. ವಿಚ್ಛಿದೆ; ಪ್ರೋಜಾನ : ಬೆಂಬಲ್ಲ ಅಂಬಿನ ಬತ್ತಿದ್ದುಚ ಅಂಬಿನ ಸಂಪೂರ್ಣತೆಯಿಂದಲೂ ಬಿಲ್ಲಿನ ಬಲದಿಂದಲೂ (ಅಭಿಜ್ಞಾ. ೨೨-೨೩). ಸಿದ್ಧಪಡಿಸು : ಗಿ. ಸಾಮಾನುಸಾಮಾನು . . . ಈಗ ಬಜ್ಜಗಂಡು ಸಮಸ್ತವನ್ನೂ ಸಂಪೂರ್ಣ ಮಾಡಿಕೊಂಡು (ಪರ್ವ ೪೫, ಪಾಮ. ೬೬-೧; ೧೨೨). ಸಾಮರ್ಥ್ಯ : ೪. ಅಯ್ಯಾ ಸಾಪ ಸಾಮಾನ್ಯ ಸಿಗಿ ಅಂಬಿಯಾಗಿ ಅಳ್ಳ ಭೂಮ್ಯಾ ಅಂಬಿಗೆ ಸಂಪೂರ್ಣತೆ ಬಂದಿಗೆ ಸಂಬಂಧವಿತ್ತು (ಅಭಿಜ್ಞಾ. ೪೨-೨೩). ೧೧. ಅಪೂರ್ಣತೆ : ೬. ಯಾವುದು ಅಪೂರ್ಣತೆ ಬಿಟ್ಟು? (ಅಭ್ಯಸ್ತ. ೧೨). ಸಿಂಧಿಕೆ : ೫. ಪ್ರಾ ಒಬ್ಬಳೆ ಮಾಳ ಬಗ್ಗಡದ ಧೂಳ್ಳ ಅಂಚಾದ ಅಭ್ಯಂತರ ಅಭ್ಯಂತರ ಬಗ್ಗಡಮಾಳಿಂದ ಸಿಂಧಿಕೆ ಮಾಡಿಕ್ಕಿದ (ಅಭ್ಯಸ್ತ. ೨೨೦); ಅಪೂರ್ಣ ಒಳ್ಳೆಯ ಹುಡುಗನಿಂದ ಮುಚ್ಚಿದ ಸಿಂಧಿಕೆ ಸಡಿಲವಾ (ಮಾಸ್ತಿ. ೨೦). ೬. ಪ್ರಾಣ ಮಾಳ ಜೊತ್ತಾ ಕೊಲ್ಲಾ ಶಾಂತವಾಳ ಒಂದೆಯಾ ಬಗ್ಗಿ ಬಗ್ಗಿ ಜೊತೆ ಮಾಳ ಸಿಂಧಿಕೆಯಾಂದಲೆ ಮಾಳ ಮಾಡಿಸಿದ (ಅಭಿಜ್ಞಾ. ೬೬-೧೦). ೧೧. ಸಿದ್ಧ ಪಡಿಸಿದ ವಸ್ತು - ಸಾಮಗ್ರಿ : ಒಂದಾಳ ಒಳ್ಳೆಯಂದು ಅಂದಿಕ್ಕೆ ಅಂಗಿಯ ಮಾಳ ಜೊತೆ ಸಿಂಧಿಕೆಯಾಂದಲೆ ಮಾಳ ಮಾಡಿಸಿದ (ಅಭಿಜ್ಞಾ. ೨೦). ಸಿಂಧಿಕೆ : ೫. ಪ್ರಾಣಾಳ ಒಂದಾಳಾಳ ಅಚ್ಚಿಕ್ಕಿಯಾಂದ ಸಿಂಧಿಕೆಯಾಂದಲೆ ಮಾಳ ಮಾಡಿಸಿದ (ಅಭಿಜ್ಞಾ. ೨೦). ೧೧. ಸಿದ್ಧಪಡಿಸಿದ ವಸ್ತು - ಸಾಮಗ್ರಿ : ಒಂದಾಳ ಒಳ್ಳೆಯಂದು ಅಂದಿಕ್ಕೆ ಅಂಗಿಯ ಮಾಳ ಜೊತೆ

ಇಷ್ಟಿಯಿಂದಾಗಿ (ಅಪೂರ್ಣ. ೧೬೦). ೧೫. ನಿದ್ರಾಯುವು ; ಸಂಪಾದಿಸು : ದೆಯಿಂದಲ್ಲಿ ಬಾಣ ಸಾಮಾನ್ಯಂಯಂ ಎಷ್ಟು ಮಂದಿಗಾ ಯುಷ್ಮಿತಿಯಾಗಿಲಿ (ಗದಾಪ. ೨೩೮). ೧೫. ಬೇಡಿಸುಮೊಳ್ಳಿ : ಮುಷ್ಠಿಗೆ ಶರ ಪಿಯುವಿಕೆ ಧಾನಯಾಯ. ಪ್ರತ್ಯಕ್ಷ ನೋಡಿಸುಮ್ಮ ಸಾಹಿ ಒಂದಾಯಿಯಾಂ ವಿಲ್ (ಸುಭಾ. ೧೬೬). ೧೬. ಪಿಷ್ಟ (ಸಂಪಿಸಿಕೊಳ್ಳಿ); ಪ್ರೊಜಾಸಮಯದಲ್ಲಿ : ಕಾಮಿಂ ಕಾಮಿಂಗಂ . . . ಯಾಂ ಸಿಷ್ಟಿ ಪ್ರೊಜಿ ಅಳಿಯಿಲ್ಲಿ ಸಾಹಿ ಒಂದಿ (ಪಾಪ್ಪ. ೧೩); ಒಂದು ಕೈಗಾಲಿಲ್ಲಿ ಅಳಿಯ ಅಯಿ ಅಯಿಲ್ಲಿ ಪಿಷ್ಟ ಪೆಗಲ್ಲಿ ಪೊಯ್ಲಿ, ಸಾಹಿ ಒಂದಿಲ (ಪಾಪ್ಪ. ೧೦). ಕೌಶಿ : ೧. ಅಯಿಯಾಯ ಮುಗಿಯುಯ ಬಿಷಿಲ ಸೆಗಿಯಿಲ್ಲಿಯ (ಪಪ್ಪಿಲ. ೧೩-೬೨). ೩. ಅಲ ಬಿಯಿಲ ಪೆಷಿಲಾಲ ಪಾಪಿಲಾಗಿಲ್ಲಿ ಸೆಗಿಯಿಲ್ಲಿಯಾಂ. ಕೆಲಾಗ ಅಳ್ಳಿಯಿಲ ಯುಷ್ಟಿಲ್ಲಿ ಪಿಷ್ಟಿಲ ಯಾಗಿ (ಭೂಪಾ. ೨೫೫); ಪಿಲ್ಲಿಯ ಪೆಗ್ಗುಯಿಲ್ಲಿಗಾ ಈ ಪಿಗಲ್ಲಿ:ಲೈಯಿಯ ::ಲಯಿಲ್ಲಿ ಲೆಗಿಲ ಸೆಗಿಯಿಲಿಲ (ಪ್ರಭಾ. ೧೩೫). ೪. ಮಾಪಾಯಿಯ . . . ವಿಲ್ಲಿ ಸೆಗಿಲ ಪಿಲ್ಲಿಗಿಯಿಲ್ಲಿಲ್ಲಿ (ಇಷ್ಟ. ೨೫೬). ೧೧. ಪ್ರಾಲಯಿಲಾಲ್ಲಿಲ ಸೆಗಿಲ ಸಿಲಾಲ ಒಡಿಲ್ಲಿ (ಪಪ್ಪಿಲ. ೨೧-೨೩), ಧೀಸ್ಟಿಲ . . . ಯಾಗಿಲ್ಲಿ ಪಿಲಾ ಸೆಗಿಲ ಪಿಲಾ. (ಭೂಪಾ. ೧೫೦). ೧೫. ಅಪಿ ಸಾಥಿ ಪಿಯಿಲಾಂ ಪೆಗಿಲಾಂ ಅಂಗಿಲಾಲ್ಲಿ ಪೆಗಿಲಾಲ್ಲಿ ಪೆಗಿಲಾಲ ಪೆಗಿಲಾಲ ಪೆಗಿಲಾಲ

ಸಂಪರೆಕೆ, ಸಂಪರಕೆ (ಗ). ೧. ಬೆರಕೆ ; ಕೂಡಿದ. ೨. ಮಿಶ್ರವರಿದ; ಅನಾಯಪ್ಪುಟ್ಟಿ, ಸಂಪರಕೆ : ೨. ಜಾತ್ಯಾದ್ಯಂತರಂಗ ಸಮ್ಮಿಶ್ರಣಂ ಜಾತ್ಯಸ್ಯಾಸ್ಯ ಪ್ರಾಪ್ತಿಮಾಹುರ್ಯಮಿಯಾ ಶಾಸ್ತ್ರಂ ಬಾಧ್ಯಂ (ಕೌಂ. XV ೩೭ - ೧೯೮ ೧೧೦೦). [ಪೂ.]

ಸಂಪರ್ಕ (ನಾ). ಸ್ನಾನ ; ಅಭಿಷೇಕ : "ಸ್ನಾನಾದಿ ಸಂಪರ್ಕಾಭಿಷೇಕಂ ಪರ್ಯಾ" (ಶಬ್ದಾ. ೩೩೧). [ಪೂ.]

ಸಂಪರ್ಕಿಸು (ನಾ). ೧. ತಿಳಿಯಪಡಿಸುವುದು ; ನಿವೇದಿಸುವುದು. ೨. (ಭಾವ, ಅಧಿಕಾರಿ, ವಿಷಯ ಮುಂತಾದುವುಗಳನ್ನು) ಅಧಿಷ್ಠಿತಗೊಳಿಸುವುದು : 'ಸಂಪರ್ಕಿಸು' ಕರಾ. ೩. ಮಾರ್ಗದರ್ಶನ. [ಪೂ.]

ಸಂಪರ್ಕಿಸು (ಕ್ರಿ). ಅಧಿಷ್ಠಿತಗೊಳಿಸು : ಯಾವ ಅಧಿಷ್ಠಾನವನ್ನೂ . . . ತನ್ನ ಕ್ಷಮತೆಯ ಮಿತ್ರ ಸಹಾಯಿಗೆ ಸಂಪರ್ಕಿಸುವಲ್ಲಿ ಅ ಮಿತ್ರಗೆ ಇರುವಾಗಿಸುವ (ಪಾಣ, ೧ ಒಪ್ಪಿ.೦) [ಸಂಪರ್ಕ + ಇಸು]

ಸಂಪಳಿಕೆ (ನಾ). ೧. ಒಟ್ಟಿಗೆ ಸೇರುವಿಕೆ, - ಕೂಡುವಿಕೆ. ೨. ಕೂಡಿಸುವಿಕೆ; ಮಿಶ್ರಗೊಳಿಸುವಿಕೆ : 'ಸಂಪಳಿಸು' ಕರಾ. ೩. ಅನಾಯಿಸುವಿಕೆ; ಸುಖೈಸರಿಸುವಿಕೆ : ಶಿಷ್ಟ ಅಂಗಾಸಂಪಳಿಕೆಯಿಂದ ನಿನ್ನ ಜೀವ್ಯಾಸುಖವನ್ನು ಮುಂಚ್ಚಿ ಭಿಷಜ್ಯಾಮಾಸು . . . ಶೋಭಾಪತಿ (ಪ. VI ಆಖ್ಯಾ. ೫೯-೬; ೧೪೮).

ಪಾ. ಸಂಪಾದಿ

ಸಂಪಳಿಯಿಸು (ಗ). ಬಳಿಸಿದ ; ಸುಖೈಸರಿದ : ಅಜ್ಞಾತಾಸಂಪಳಿಯಿಸು ವಿಮ್ಮುಖಾಸ್ಯಾಃ ಪಿಂಗಾಸಿತಿಕಿಸಲಯಾದರಾಸಾಲಿಸಲಯಾಸಂ ಮುಖಂ ಬಲಿಸಿ ಸೊಂಪಿಸಲಯಾಸಂ ಗುಣಾಸಾಸಂ (ಪಾಣಾ. ೪-೫೫). [ಪೂ. ಸಂಪಿಸು]

ಸಂಪಳಿ (ನಾ). ಬೆಣ್ಣಾರಿ ಸಾಲು : ಭೂಸಂಪಂಗಳ್ಗೆ ದೊಟ್ಟಿಗಳುಂದ ಬಾಯಾದ ಪಳ್ಳ ಪೆರಗೆ ಸೊಂಪಾದ ಭೂಳ್ಳ ಪಂಚಿಂದ ಸಂಪಳಿ ವಿಸ್ತಾರಾದಂತೆ ಅಲ ಅಂಗಿಸಿದಾದಳು (ಪಾಣಾ. ೪-೧೩). [ಪೂ. ಸಂಪಿಸು]

ಸಂಪಳಿಕೆ 'ಸಂಪಳಿಸಿ' ನೋ.

ಸಂಪಳಿಸು (ಕ್ರಿ). ಬೆರಕೆ ಮಾಡು ; ಮಿಶ್ರಗೊಳಿಸು : ಯಾವಾ ಬಹ್ಯಾಂತ ಅಂ ಮಾಡು ಅಭ್ಯಂ ಭೂಮಿಪಡಿಸಿಗಳಾಗಿ ಸಿಂಪಡಿಸು ಸಂಪಾಂ ಪಡಿಸಿ ಸ್ಪಷ್ಟಿಸಿಸ (ಪಾಣಾ. ೧೫೦). [ಸಂಪಳಿ + ಇಸು]

ಸಂಪಾಣ (ನಾ). ೧. ಕೊಪಡಿ ; ಛಿಡಿಗೆ : ಭೂಪಂಗಂ ಬಳ್ಳಂಗಂ ಸಂಪಾಣಾದಲ್ಲಿ (ಪಂ ೩, ೨೮೮ ಪ . ೧೫೦). ೨. ಅಗ್ಗಿಷ್ಠಿಕೆ ಪಾಣ್ಯಗಳೂ ಸಂಪಾ ಭೂಪಾಣಾಸ್ಯಿಸ ಒಳ್ಳಿಯಾಗಿಯೂ ಸಂಪಾಣಾಸಾಗಿ ಪಾಗಿ ೨ ದರ್ಪಾಸ್ಯಿಗಳ ಶಿಷ್ಟಾ ಒಳ್ಳಿಯಾಗಿಯೂ ವಿಂಗಾಸಿ (ಭೃಪಾ. ೧೫೨.೨. ೧೨-೨೧. ೧೦೬); ಅಂಗಾ ಸಾಧಿಸಾ ಮಾಳಿಸಾಂ ಗೊಡಿಸಿ ಸಂಪಾಣಾಂಗಂ ಪಾಣಾಲ್ ೨ (ಭೃಪಾ. ೪-೨೧ ೫). ೩. ಬೆಲೆ ; ಬಾಡಿ : ಅಸ್ಸಾಧಿಸ ಅಗಾಧಾಂಗಂ ಸಂಪಾಣಾಲ ಪಾಣಾಲ್ (ಪಾ. VIII ಪಾಣಾ. ೧೫೨ : ೧೩೦). [ಪೂ.]

ಸಂಪಾಣಿ (ನಾ). ೧. ಮಾಣಿ ; ಸಂಧಾನಿಕೆ : ಅಳ್ಳಗೆ ಇಷ್ಟ ಸಂಪಾಣಿಂದ ಪಿಡಿ ಪೂಜಿಸಿಸಿ ಅಂಗಿ, ಮಿಶ್ರಿಕೆ . . . ಶೋಭಾಪತಿ (ಸಚಿತ್ರಾ. ೧೬): ಶಿಷ್ಟ ಭೂಸ್ಯಾಬಿಗಾಸಾಸಾಸ್ಯಾಸಾಗಿ ಭೂಪಾಣಿಸಿಗಳನ್ನು ಸಂಪಾಣಿ ಭೂಸಾಸ್ಯಿಸಿ ವಿಷಯಿಂದ ವಿಷಯಂದು ರೂಪಿಸಿಸಿದ (ಭೂಪಾ. ೧೫೪). ೨. ಬೆಲೆ ; ಶಿಷ್ಟ : ಭೂಪಿ, ಸಂಪಾಣಿ, ಸಂಪಾಣಿ, ಭೂಪಂಗಳ ಅಭ್ಯಾ ಸ ಸಿಪಿಸಿಸಂಪಿಸ (ಪಾಣಾ ೬). ೩. ವಿನಿಮಯ; ದಿನಸ್ಯಾಧಿ : ಭೂಪಾಂಭಿಂ ಪಾಣ್ಯಿಂಗಳಾಂಗ ಪಾಣ್ಯ ಪಾಣಾಲ ಪಾಲಿಂಗಳ ಪಿಗ್ಗ ಪ್ರಸಂಗಂ ಶಿಷ್ಟ ಪಾಣ್ಯಿಸುಳಿಗಳ್ ಭೂಪಾಣಾಲ ಭೂಪಾಣಾಲ ಸಂಪಾಣಾಲಂ ಪಾಣಾಲಂ (ಪಾಣಾ. ೧ ೫೫೫): ಶಿಷ್ಟಾಪಾಣಿಸಿಂಪಿಸಿಂ ನೀಂ ಬಾಳಿಸ ಸಾಪಿಸಿಸ್ಯಾ ಪಿಸಿಸ್ಯಾಸಾಸಿಸಿಸಿಸ್ಯಾ ನೀಂ ಪಾಣಾ ಪಾಣ ಸಂಪಾಣಾ ಪಾಣಾಲಂ (ಪಾಣಾ. ೧೫೫). ೪. ಹೋಲಿಕೆ ; ಸಾದೃಶ್ಯ : ಭೂಪಾಣಾಗಿಸಾಸಾಸಾಸಾಸಿಸಿಸಿ

ಸಂಜಾತ (ನಾ). ಮೈ ತಿಳ್ಳುವಿಕೆ ; ಅಂಗಮರ್ದ : "ಸಂಜಾತಂ ಮರ್ದನಂ" (ಶಬ್ದಾ. ೧೧೧·೨). ಸಂಜಾತ ಮಯ್ಸಿ ನಾಸಂ . . . ಸಮಿತಂ (ಅಜಾ. ೧·೧೧೩). [ಸಂ.]

ಸಂಜಾತಿಸು (ನಾ). ೧. ಭಾಗ ಹೊಂದುವುದು. ೨. ಮೈಯನ್ನು ತಿಳ್ಳುವಿಕೆ, - ಓರಿಸುವಿಕೆ : "ಮರ್ದನಂ, ಸಂಜಾತಂ - ೨ ಸಜ್ಜಿಕೆ, ಓರಿಸಿಕೆ" (ಜಾಬ್ರ. ೨೨೬). ೩. ಪ್ರ ಸಂವಾಸಿಸು ; ಮಲಗುವುದು ಸಂಜಾತಾಯಾಂ ಸಂಜಾತಾಯಾಂ (ಅಜಾ. ೧೫·೧ ಟಿ). ಬಂಧು ಸ್ವಾಮಿಗಳು ಮ್ಲೇಚ್ಛರು(ಪ) ಸಂಜಾತಿಸ್ಯಾದಿಂ . . . ಅಗ್ನಿಪ್ರವಿಷ್ಟರು ಮುಖರೆಯಂ ಮಾಳ್ಪರೆಂತು (ಪಾ. ಭಾ. ೨೫೫ ಗದ್ಯ ; ೧೨೨೦). ಶೌಚಂ(ದಿಗೆ ಕರಾಜಿನ ಶರೀರಸಿಗ ಮಾದಾಯ ಸಂಜಾತಿಸುವಿಂದಂ ಅಂಗೀಕರಿಸಿ ಸಂಜಾತಾಯಾ ರೂಪಾಯಾಗ ಸಂಜಾತಿ (ಪಾಶ್ವಪು. ೧೬·೧೨೨). [ಸಂ.]

ಸಂಜಾತಿಂ (ಗ). ಧಾನದನ್ನು ಹೊತ್ತ ; ಬಾಣಾಲ್ಲಿ ರಿಯನ್ನು ಹೊಂದಿದ (?) : ಅಜ್ಞಾನ್ಯದಂ ಅಜ ಸಂಜಾತಿಯಾಜ್ಞ ಬಂದ ಮುಖಬಂಧಂ . . . ಮಜ್ಞಿತ (ಗಾಸಾ. ೪·೨೫ ಟಿ). [ಸಂ.]

ಸಂಜಿಷ್ಟಿಸ್ಸ (ನಾ). ಅರಿವಿಲ್ಲದಿರು ; ತಿಳಿಗೆಡು : ಒಜ್ಞ ಮುಗುಳಿರು ಸಂಜಿಷ್ಟಿಸ್ಸ ರಿಂದ ಸಾಂಕಂದು ಹೇಳ್ಪಡಿಸಿ (ಜಾಬ್ರ. ೧೧·೧೪). [ಸಂ.]

ಸಂಜಿಷ್ಟೆಣಸ (ನಾ). ಜ್ಞಾನ ; ಬಲ್ಲಿದನು : ಎಲ್ಲ ಶಾಬ್ದಮೀಯತೆಜ್ಞಿಯಾಂಮಂ ಅಳಿದು ಸಂಜಾತಿಸುವಿಜಯಂಬಡೆದುದು ಸಜ್ಜಾಯ ಸಂಜಿಷ್ಟೆಣ ಸಂಜಾತಿಣ ಸಂಜಾತಿಣಂ ಪ್ರಭುವಾ (ಗಾಸಾ. ೧·೨೨). [ಸಂ.]

ಸಂಜಿಷ್ಟೆ (ನಾ). ಬಲ್ಲಿದನು ; ಜ್ಞಾನಿ : ಸ್ವಾತಿಶಾಸ್ತ್ರಾಗಾಜಿಷ ಭರತ್ಯಾದಿಸ ಭೂತಾಜಾಜಾಸ್ತ್ರಿಸ್ವಾತಿಸ್ವಾಯಂ ಸೋಂದಿಸದ ಸಂಜಿಷ ಸಜ್ಜಿಷ್ಟ (ಗಾಸಾ. ೧·೨).

[ಸಂ. ಸಂಜ್ಞಾ]

ಸಂಜಿಷ್ಟೆ (ನಾ). ೧. ಗ್ರಹಗತಿಜ್ಞೆ ; ಜಾತಿಧರ. ೨. ಜ್ಞಾನಿ ; ಬುದ್ಧಿಶಕ್ತಿ : "ಕೃಷ್ಣಾ, ಕೃಷ್ಣಾ . . . ಸಂಜಿಷ್ಟಿ, ಗಾಜಿಯಿಷ್ಟಿ - ೫ ೧೩ ಬಿಷ್ಟಿ" (ಜಾಜಾಸಾ. ೫೫·೧೮೯): ಬಿಷ್ಟಂ ಸ್ಯಾಯಿಷ್ಟಿಸ್ಥಂ ಪಂಚಿಜಯಂ ಬಿಷ್ಟಿಸ್ಥಿ ರಿಂತಜಿಯಂ ಸಂಜಿಷ್ಟಿಯಾಗಾದ ಭಾವಜಾಗಾದಿಯಂ (ಜಾಜಾ. ೫೫·೨೨೨). ೩. ಧಾನಯಾದಿಯಿಷ್ಟಿ. ೪. ಒಪ್ಪಿಗೆ ; ಅಂಗೀಕಾರ. [ಸಂ.]

ಸಂಜಿಷ್ಟಿ (ನಾ). ೧. ಆಯಿಧನ ; ಛಲಿಧನ : ಸ್ವಾಯಿಜಯಂ ಮಾಡಿ ಕ್ಷತ್ರಿಯ ಅಂಜಿಷ (ಜಾಜಾ. ೬. ೧೦೬). ೨. ಜ್ಞಾನ ; ಬಲ್ಲಿದ : "ಸಂಜ್ಞಾಯಂ ಮಾ ಕ್ಷತ್ರಿಯ ಮೀಗ ಸಂಜಿಷ್ಟಿ ಸಂಜಿಷ್ಟಿಯಾಜಿಷ್ಟಿಂ ಜಿಷ್ಟಿ ಕ್ಷತ್ರಿಯಾ ನಿಜ ಗೆಳ ಸಂಜಿಷ್ಟಿ, ಸಂಜಿಷ್ಟಿಯಾಜಿಷ್ಟಿಗಳ ಬಿಷ್ಟಿಯಿಷ್ಟಿ (ಜಾಜಾಸಾ. ೬೬·೨೨): ಆ ಜಿಯಿಂಜಿಷ್ಟಿಯಿಷ್ಟಿಯಾ ಜಿಷ್ಟಿ ಜಿಷ್ಟಿಯಾ ನಿಜ ಜಿಷ್ಟಿಯಾಜಿಷ್ಟಿಯಾಜಿಷ್ಟಿ ಸಂಜಿಷ್ಟಿ (ಜಾಜಾ. ೫೫·೨). ೩. ಒಪ್ಪಿದ ; ಒಡಂಬಡಿಕೆ. ೪. ಒಪ್ಪಿಗೆ ; ಅಂಗೀಕಾರ : "ಸಂಜಿಷ್ಟಿ . . . ಸ್ವಾಜಿಷ್ಟಿಸ, ಸಜಿಷ್ಟಿಂ - ೧೦ ಜಾಗಿಸಾಜಿಸ ಜಿಷ್ಟಿಸಾಗಿ" (ಜಾಜ್ಞಿ. ೧೧). ೫. ಜಿಷ್ಟಿತಿ ; ರೂಢಿ. ೬. ಶಾಸ್ತ್ರ ; ಯುಜ್ಞ. ೭. ಯುಜ್ಞದಲ್ಲಿ ಹೇಳಾದ ಎಚ್ಚರಿಕೆಯ ಮಾತು. ೮. ಜಿಷ್ಟಿಯ ; ಅಧಿಕಾರಿ. ೯. ಸಂತೋಷಗೊಳಿಸುವುದು. ೧೦. ಗುರುತು ; ಬಿಷ್ಟೆ. [ಸಂ.]

ಸಂಜಿಷ್ಟೆ (ನಾ). ಜ್ಞಾನ ; ಜಾಣತಿಕೆ : ಜಿಷ್ಟ ಸಂಜಿಷ್ಟಿಯಿಷ್ಟಿಗಳ್ಗೆ ಜಿಷ್ಟಿಯಾ ಸಂಜಿಷ್ಟಿಯಾಜಿಷ್ಟಿಯಾಜಿಷ್ಟಿ ಸಂಜಿಷ್ಟಿ (ಜಾ ೪೫ ೨೦೦೦. ೧೨. ೧೨೧೨ ೧). [< ಸಂಜ್ಞಾ + ಕ್ಷ]

ಸಂಜಿಷ್ಟಿಸ (ಗ). ೧. ಉಂಡಿಸು; ಪೋರಿಸ್ಸು. ೨. ಹೊಂದಾಣಿಕೆಯಾಗು ; ಸಾಮರಸ್ಯವಾಗು. [ಸಂ.]

ಸಂಜಿಷ (ಗ). ೧. ತಿಳಿದ ; ಗೊತ್ತಾದ. ೨. ಒಪ್ಪಿಗೆಯ ; ಸಮ್ಮತಿಸಿದ್ದು. (ನಾ). ೩. ಒಪ್ಪಿದ ; ಒಡಂಬಡಿಕೆ. [ಸಂ.]

ಸಂಜಿಷ್ಟಿಸ (ಗ). ನಾಶವಾದ ; ಕಳೆದುಹೋದ : ಕಾಲಾಯಾಜಾಜಾಗಾಜಿಜಾ ಸಂಜಿಷ್ಟಿಯಾಜಾಗಿ ಜಿಸಿ ಸಿಂಜಿಷ್ಟಿಯಾಜಿಷ್ಟಿಯಾಜಿಷ್ಟಿಯಾ (ಜಾಜಾಸಾ. ೫೫·೧೮೨). [ಸಂ.]

ಸಂಜಿಷ್ಟಿಸ (ನಾ). ಜ್ಞಾನದೇ ಲೋಜಾಗಿರುವಿಕೆಯು ; ಚಿತ್ತವಿಕ್ಷೆ : ಅಭಿಷ ಜ್ಞಾನಿಜ್ಞಿಂ ಸಿಜಿಯಾಂಜಿಷ್ಟಿಜಿಷ್ಟಿಂ ಸಂಜಿಷ್ಟಿಸ ಸಂಜಿಷ್ಟಿಸ ಸಂಜಿಷ್ಟಿಸ (ಜಾಜ್ಞಿ. ೫·೧೦೦); ಆಜಾಗಾಜಿಷ್ಟಿಯಾ ಸಿಜಿಯಂಜಿಷ್ಟಿಜಿಷ್ಟಿಂ ಸಂಜಿಷ್ಟಿಸ ಸಂಜಿಷ್ಟಿಸಾಜಿಷ್ಟಿಯಾ ಸಿಜಿಜಾಗಿ (ಜಾಜಾಸಾ. ೫·೧೦೦). [ಸಂ.]

ಸಂಜಿಷ್ಟಿಸ (ನಾ). ೧. ಯಜಿಸ ; ನಿಜಿಯಾಗಿ : ಈ ಜಿಜಿಯನ್ನು ಜಿಯಿಂ ಜಿಜ್ಞಿಯಿ ಲಿಜಿಯಾಂಜಿಷ್ಟಿಯಾಜಿಷ್ಟಿಯಾಜಿಷ್ಟಿಯಾ

ಪಿಟೀಲು, ಸಂತೂರು, ಸಜ್ಜಪಿಟೀ - ಈ ೫ ಮುಖ್ಯವಾದ" (ಕರಾಮಾ ೧೨೨-೨೮). ೬. ಬಳಸಿದವರು; ನುಡಿಸಿದವರು : "ಮೈಸೂರು, ರಂಗಾಯಣ, ಸಂಗೀತ, ಭಾಷಾ, ಆಕಾಶ, ೫ . . . ನುಡಿಸಿದ್ದಾರೆ" (ಮಯೂ ೬೫). [ಹಿಂ.]

ಸಜ್ಜಮನೆ (ನಾ). [ಸಂಗೀತ] ತಾಲಧಿಕಾರಿಗಳನ್ನಿಟ್ಟು ಒದಗಿಸಿದ : ಪ್ರಾಚೀನ . . . ರಂಗಮಂದಿರಗಳಂತೆ ಆಧುನಿಕರು ಮಾಡಿಸಿದ್ದು . . . ಸಜ್ಜಮನೆ . . . ಅಮೋಘವೆನಿಸಿತು ಮೊದಲಾದ ಸೂಚನೆಗಳು ಕಾಣಿಸಿದ್ದವು (ಮಯೂ ೨೬೦). [ಹಿಂ. ?]

ಸಜ್ಜಿಕ (ಗು). ೧. ಮುಚ್ಚಿದ; ಹೊದಿಸಿದ : ಸಜ್ಜಿಕಮ್ಮಾಜ್ಜಿಕಮಾಂ ಉಭಯಾಕಾಶಾ ಖಿಲಕಥಮಾಂ ಸಾಧುಸಂಮತಿಷಾಷಮಾಂ . . . ಪಾಯಾಸಾರ್ಥಕ್ಕೆ ಚಿಪ್ಪಕಾಂ (ಅಜ್ಜಿ ೧೨೦). ೨. ಬಚ್ಚಿಟ್ಟು ; ಅಡಗಿಸಿಟ್ಟು : ಯುದ್ಧಾಸಾಧಾಸ್ತ್ರಗಳ ಸಾಧಿಸುವ್ಯವಂ ಕೊಯಾಸ್ತ್ರಾಂಗಳ್ ಸಜ್ಜಿಕಂಗಿಯುಟ್ಟುದು ವಿಜಾಂಬರಾಂ . . . ಅಜ್ಜ ಸಜ್ಜಿಯಂಗಳ್ ವಿಸ್ತರಂ ಸ್ವಸಾಧಾರಾಕಾರಮಮಾಯ್ತು (ಅಜ್ಜ ೬೬೦). ೩. ಭದ್ರಪಡಿಸಿದ : ಜೋಕಾಲಿ ಮಾಡಿದೆ. ೪. ಸುಮ್ಮನಿದ್ದ : ಬಳಿಬ್ಬುಸ್ಸ, ಈ ಹುಂದನ ; ಭೂತಿಯಾದ. ೬. ಸೇರಿದ ; ಕೂಡಿದ. (ನಾ). ೬. ಮುಚ್ಚಿದವರು ; ಅಡಿಯಲ್ಲುಬ್ಬುವವರು : ಹಾಲ್ಗಿ ಮಾಡಿಸಿದವರಿಗೆ ಸಾಧಿಸಿಲ್ಲ" (ಮಾಮಾ. ೫೯೨). ೮. ಬಳಸಿದವರು ; ನುಡಿಸಿದವರು/ಬ್ಬುವವರು : ಸಚಿತ್ರಾ ಭಟ್ಟ ಖಿಲಕೋಣ್ಣ ವಿದ್ಯಸಂಗಾಂಭಿಸಾಂದರಿಂ ಭಜಂಭಾಂಖಿಲ್ಲ ಶ್ರಕಟಣಾ ಯೋಮುಖಂಗಳೊಂಗಾಚರ್ಯ ಖಂಡಚರ್ಯಂ ಯಾಶಿಷ್ಯಾಮಾಸಿ ದಮಿಳ ಸಂಗಾಂಖಿಲ್ಲ . . . ಮಾಖಿಲ್ಲಂಗಂ ಶ್ರುತಾಂಖಿಲ್ಲಂ (ಅಜ್ಜ ೩-೨೨ ಪ). ೯. ಹೊಂದಿದವರು ; ಸಜ್ಜುಗೊಂಡವರು : ಸಜ್ಜಿಕಾಗಿ ಬಂದವರು ಸಜ್ಜಿಕಾಗಿ ಬಂದವರು ಸಜ್ಜಿಕಾಗಿ ಬಂದವರು (ಅಜ್ಜ ೨೦೦-೦೨). ೧೦. ಆ ಸಂದರ್ಭಾನಾಗಿ: ಸಜ್ಜಿಕಂಗ ಬಂದಮ್ಮಾ ಸ್ಥಿರಾಂ ಖಿಲ್ಲಿಸಿಲಾಂಖಿಲ್ಲಂಗಂ ಸಜ್ಜಿಕಂಗಾ ಸಜ್ಜಿಕಂಗಾ (ಅಜ್ಜ ೨೦). ೧೧. [ಪ್ರಾಗ್ಜ] ಬಾಯಿತೆರೆದು ಅಚ್ಚರಿವ್ಯಕ್ತಪಡಿಸು : ಸ್ವಯಿಂ ಸಜ್ಜಿಕಂಗಾ ಆಗಾ . . . ಶ್ರವಣಗಳಾಂಬರಿಂ ಆಗಾ ಆಚ್ಚಾಖಿಲ್ಲಂಗಳ್ 'ಸಜ್ಜಿಕ' ಶ್ರಮಖಿಲ್ಲಂಬಂ ಶ್ರಕಟಣಾಂಬರ್ಯಶ್ರಮಖಿಲ್ಲಂಬಂ ಸಜ್ಜಿಕಾಗಿಯಿಂದಿರಿ ಹೋಗ (ಅಜ್ಜ. ೧೩). [ಹಿಂ.]

ಸಜ್ಜಿಕಾಗಾಲ (ನಾ). ತಿನ್ನ ಭಾವನೆಗಳನ್ನು ಹೊರಗೆ ತೋರ್ಪಡಿಸದಿರುವುದು; ತನ್ನ ನಿಜಾಂಗಗಳನ್ನು ಮನಸ್ಸಿನಲ್ಲೇ ಅಡಗಿಸಿ ಇಡುವುದು : ಅಸೂಯೆ ಸಹಜ ಮಾನ್ಯ ಸ್ವಭಾವ ಸಹಜಂ ಈಕ್ಷಿ ಮಾಯಾ ಸಜ್ಜಿಕಾಗಾಲಂ ಬಿಟ್ಟಿಕೊಳ್ಳಬಹುದು . . . ಮಿಥಿಯಾಗ್ರ (ಅಜ್ಜ. ೨-೨೧ ಪ). [ಹಿಂ.]

ಸಜ್ಜಿಕೆ (ನಾ). ಮರದಾಲಿವಿಕೆ ; ಮುಚ್ಚಿವಿಕೆ : ಅಲಮಾರ ಪಟ್ಟಿಗಳು ಸಜ್ಜಿಕೆಗೆ ಹಿಳ್ಳ ಮಾಳ್ಪಿಕ್ಷ ಚಿಚ್ಚ ಕಾಗಿ ವಿಜಾಳ್ಪಿಕಾಂಬ್ಯಾಂಶಂ ಕೃಷಿಪಡಿಸಿಗಾಗಿಯ್ತು (ಅಜ್ಜ. ೧-೨೦೦ ಪ). [ಹಿಂ.]

ಸಜ್ಜಿಸು, (ನು). ೧. ಒಪ್ಪಿಸಿದ ; ಅಂಗೀಕರಿಸಿದ. ೨. ಸೆರೆಹಿಡಿದ. [ಹಿಂ.]

ಸಜ್ಜಿಸ್ತಿ (ನಾ). ಚಿನ್ನಾದ ವೀಳ್ಯ ; ಅತಿಶಯವಾದ ಅಧಿಸ್ಥಿತ್ವಿ : ಶ್ರೀಮಂತ ಮಿಶ್ಯಾಶ್ರಯಾಗ್ಯಾಬಾಗಾದ ಸಜ್ಜಿಸ್ತಿ-ಸಜ್ಜಿಕ್ಷ ಸಜ್ಜಿಸ್ತಿಯಾಂದ ಮೂಂ ದಾಂದ (ಮಾ. ೪೬, ಖಾಂ. ೧೫೦-೨೦ : ೧೦೨೨) : ಸಿಸ್ತಿಯೆಂತಿ ಭೂಮಿ ಮುಯಾಜ್ಞಿಸ್ತಿಯಾಂ ವಿಜಾಳ್ಯಿಯಾಜ್ಞಿಸ್ತಿ ಯಾಂಸ್ತಿಯಾಸ್ತಿ (ಅಜ್ಜ ೧-೧೩-೧೦). [ಹಿಂ.]

ಸಜ್ಜಿಸು (ನಾ). ೧. (ಸಂಗೀತ, ಧರ್ಮ ಮುಂತಾದುಪಯೋಗಗಳಿಗಾಗಿ ಅಲಂಕರಿಸಿದ) ಶಾಶಿತ ; ಅಲ್ಪಿಗ್ಗ ; ಅಲ್ಪಿಗ್ಗ : ಮಾಡಿದ ಅಜ್ಜಿಸಿಸಿಸ

ಸಂಪೂರ್ಣ (ಗು). ೧. ಪ್ರಮೇಯವಿದ : ಒಳಗೊಂಡ ; ಅಭ್ಯಸ್ತ ಸಂಪೂರ್ಣಾಪವರ್ತನಾಂಕವು ಮೂರ್ ವಿಷ ಸಾಮಾನ್ಯಾಂಶವಿಲ್ಲದ ಪೂರ್ಣ (ಅಣ್ಣಾ. ೮-೨೫). (ನಾ). ೨. ಪ್ರಮೇಯವಿಲ್ಲದ; ಒಳಗೊಂಡಿರುವ. ೩. ಒಳಗೊಂಡಿರುವ ಸ್ಥಳ ; ಪ್ರಮೇಯಕ್ಕಾಗಿ : ಭೂಮಿ ಒಟಾಪರಿಮಾಣವಿಲ್ಲದ ಸಂಪೂರ್ಣವಾದ ವಿಶಾಲವಾದ ಪ್ರಮೇಯಕ್ಕಾಗಿ ಸಾಹಿತ್ಯಗಳಿಂದ (ಕಿಷ್ಕಿ. ೯-೧೨-೬೦) ೪. ನಿದ್ರೆ ; ನಿದ್ರೆ : "ಎಲ್ಲಾ ಹುಡುಗ, ಸ್ಪಷ್ಟ, ಸ್ಪಷ್ಟ, ಸಂಪೂರ್ಣ - ಇ ನಿದ್ರೆಯ ಹುಡುಗಾ" (ಅಣ್ಣಾ. ೨೦). ೫. ಕಮಿಷ; ಸ್ಪಷ್ಟ. ೬. ಅಂಗ ; ಏಳ. ೭. ಸಂಪೂರ್ಣ; ಸಂಪೂರ್ಣಾಂಗ: ಮುಂದಿರುವ: ತಾಯಿಯಾಪಿತ ವಿವಿಧಪ್ರಕಾರ ಸಮಾಗ ಸಂಪೂರ್ಣವಂ (ಪಾರಾ. ಸಂಪೂರ್ಣಾಗಳೊಟ್ಟಿಗೆ ಅವಳಿಪ್ರತಿಗಾಗಿ ಅಮಾನ್ಯಾಂಕವಿಲ್ಲಿಗೆ (ಪಾರಾ. ೧-೬-೨). (ಪಾ.)

ಸಂಪೂರ್ಣತೆ (ನಾ). ೧. ಮುಂಗಾಮಿತೆ. ೨. ಮುಂಗಾಮಿತೆ. ೩. ಸಂಪೂರ್ಣತೆ : ಸಂಪೂರ್ಣಾಪವರ್ತನೆ : ಭಾವನಾಗ ಸಂಪೂರ್ಣತೆ (ಅಭಿಧಾನ). ಅಭ್ಯಾಸ (ಪೂರ್ಣ ಬಾಹ್ಯ)- ಇದು ಬಹುಶಃ ಧರ್ಮಾತ್ಮವಲ್ಲ? (ಭಾಷ್ಯ. ೧೫೨ ಆಚಾ). ೪. ಸಮಗ್ರ : ಸಂಪೂರ್ಣಗಳ : "ಸಂಪೂರ್ಣಂ, ವಿಧಾನಂ . . . ಮೋಕ್ಷಂ - ಈ ೭ ಸಂಪೂರ್ಣ" (ಪಾರಾ. ೧೨-೨೫). (ಪಾ.)

ಸಂಪೂರ್ಣಪಿಲು (ಕ್ರಿ). ಹೊಗು ; ಪ್ರಮೇಯಿಸು : ಜ್ಞಾನ ಸ್ಥಾಯಿ ಸಂಪೂರ್ಣಿಸಿಲ್ಲ ಗುರಿಯ ಭೂಮಿಯಾಗಿಲ್ಲವೆಂದು (ಅಣ್ಣಾ. ೧೯-೨೫). (ಸಂಪೂರ್ಣ + - ಇಸು)

ಸಂಪೂರ್ಣತೆ (ನಾ). ೧. ಮುಚ್ಚಿಕೆ ; ಪರಿಮಿತಿ. ೨. ಮುಗಿಯು ; ಅಭ್ಯಾಸದ. (ಪಾ.)

ಸಂಪೂರ್ಣಾಕ (ನಾ). ೧. ಮುಚ್ಚಿಕೆ ; ಅಭ್ಯಾಸಿಯುವಿಕೆ. ೨. ಅಂಚು ; ದಿಕ್ಕು. ೩. ಮೂಲೆ ಹೊಂದಿಯುವ ಬಿಳಿ ; ಗಾತ್ರದಿಯು, ಸರಿಗ ಮುಂಗಾದುವು; ಮೇಲುಭು : ಮಂತ್ರಾಲಯಪಾಪಿಯನ್ನು ಪ್ರಮೇಯಾಭ್ಯಗಳು ಮಿಳಿ, ಅಲ ಸಂಖ್ಯಾಶಕ್ತಿಸಾಮಾನ್ಯ (ಅಣ್ಣಾ. ೧೨-೨೦೦ ಪ) . ಶೀಲಂಪಲಿಲ ಕಾಲಿಸ್ಪರ್ಶ ಸಂಖ್ಯಾಪಾಯಂ ಮೋಕ್ಷಲ್ ಶಿಲ್ಪ ಸಂಖ್ಯಾಗಳಂ . . . ಒಟ್ಟಾಪಿಯಾದ ವಿಶ್ವಸಂಖ್ಯಾ ಒಂದಾನ್ನ ಗೊಂಬಿಸಾಯಂ (ಅಣ್ಣಾ. ೬-೨೦). (ಪಾ.)

ಸಂಪೂರ್ಣಿಸಿ (ನಾ). ಮುಗ್ಧರಂಗದಿಂದ ಹೊಮ್ಮಿಬ್ಬಸಿದಿಲ್ಲವೆಂದು ಪ್ರಮೇಯಿಸಿದ ಮಾತು, ಶಬ್ದಗಳ ಹೊಂದಾಣಿಕೆ ಅಭ್ಯಾಸಿಯನ್ನು ಮಾಡುವ ಮೋಡ, -ವೀಣೆ; ೨ ಭಾವಪೂರ್ಣವಾದ ಪ್ರಮೇಯಿಸಿದ ಸಿಹಿಯೇ ಮತ್ತು ಅವನ ಹೆಸ್ಸಂದಿರಾದ ಸಪ್ತಸ್ವರ, ಸಪ್ತಸ್ವರ್ಗ, ಸಪ್ತದೇವತೆ, ಸಪ್ತವರ್ಣ - ವಿಷಯ ಬಿಡ್ಡರಿಗೆ ಈ ಶಬ್ದಗಳು ಕಲಿಯಿಯಲ್ಲಿದೆ : "ಸಂಪೂರ್ಣ: . . . ಆಗುಮ್ಮುಸ್ಥೋಸ್ಥಾಪಿಸಿರುವಿಷಂ ಸಂಗ್ರಾಮಿ" - ಶಾಗಾಂದಂಡಂ, ಅಂಬೇಗಾ - ಒಂಬತ್ತ ಪಿಲಾಪಿಯಾಯಿರುವ ಹೂಗಿ" (ಪಾ.ಗಾ. ೨೦೭) ; ಧ್ವನಿಯಾಯಿರು ಸಂಖ್ಯೆಯ ಧ್ವನ್ಯರ ಮೇಗೆ ಸಮಯಾ ಅ ಒಳಗೆ ಧ್ವನ್ಯಾಕ್ಷರ ಅಯಿರುವ . . . ಅಧಿಯಿಸ್ಪ ಉಪಾಯಸ್ಥನ್ನು ಹೊಂದಿಯಾಗಿರುವ (ಭಾಷಾ ೫೬) ; ಈ ಸಮಗ್ರ ಮಾಯಾಗಿರುವ ಸಂಖ್ಯೆಗಳು, ಶಬ್ದಿಸಿ ಯಾವ್ಯಕ್ಕೆ ಅಂಯಾಸ್ಥಿಂ ; ಜಾಲ ಹೊಂಗಾಳ್ಳಿಗೆ (ಅಣ್ಣಾ. ೨೦೦). (ಪಾ.)

ಸಂಪೂರ್ಣ (ನಾ). ೧. ಅಗುಮಾನ ; ಸಂದೇಹ : ಸಹಜ ವಿಷಯಾಯಾಸ್ಥಾನ ಪರ್ಯಾಯಾಯಾಸ್ಥಾನ ಹೊಂದಿ ಅಂಗಾಧಿಕಾರಿಯಾಗಿ ಸ್ಥಳಾಯಿಸಿಯಾಗಿ ಸಂಪೂರ್ಣ

ಸಂಪೋಷಣ (ನಾ). ೧. ಪುಷ್ಟಿಗೊಳಿಸುವಿಕೆ ; ಪುಷ್ಟಿಗೊಳಿಸುವಿಕೆ : ಜ್ಞಾನಂ ಸಂಪೋಷಕಕ್ಕೆ ಬುಲಾಗುಂಪರಿಜಾನಮುಪ್ಪಲಂ ಪೋಷಿಗಂಕಂಬಂಧಿಸಿಕೆಕಲಂ ಮಿಷ್ಟಾಯಕ್ಕಗಾಂ ಪಲಿಂ ಪೂಗಾಪ್ಪ ಪ್ರಸ್ತಾಂಗಲು (ಸಪ್ತಾಂ. ೫೬). ೨. (ಸಾಂಖ್ಯ, ಶಾಸ್ತ್ರ ಮುಂತಾದ ವಿಷಯಗಳನ್ನು ಅಭ್ಯಸಿಸಿ ಮಾಡುವ) ಸಂಸ್ಕೃತದ ಪಾಠಗಳ ಶಾಸ್ತ್ರೀಯವಾದ ಅಧ್ಯಯನ. – ಆಮೂಲಾಗ್ರವಾದ ತಪಾಸಣೆ ; ಹೊಸ ವಿಷಯಗಳ ಅರಿವಿನ್ನಾರಿಕೆಯ ಪ್ರಯತ್ನ : ಶಾಸ್ತ್ರಕ್ಷಾರದ ಸಂಸ್ಕೃತ. ವಿಚಾರದ. ಅಧ್ಯಾಪಕ ಅಥವಾ ದಿವ್ಯಜ್ಞಾನದ ಪ್ರಯತ್ನ : ಅಧ್ಯಾಪಕ ಸಂಸ್ಕೃತ. ವಿಚಾರದ. [ಸಂ.]

ಸಂಪೋಷಣೋದ್ಯೋಗ್ಯ (ನಾ). ಹೊಸ ವಿಷಯಗಳ ಅರಿವಿನ್ನಾರಿಕೆಗಾಗಿ ವಿಮರ್ಶಾತ್ಮಕ ಸ್ಥಿತಿ : ಅಭ್ಯಾಸಿಸ್ಯಾಕಾಸ್ಯಿಲ್ಲಿ ಇಸ್ಲಿಗಳ ಹೊಸಾಗಿ ಸಂಪೋಷಣೋದ್ಯೋಗ್ಯವಾದ ಕೆಲಸಗಳಾವುವು (ಮಾಲ). [ಸಂ.]

ಸಂಪೋಷಣೆ (ನಾ). = ಸಂಪೋಷಣ ೨ : ಜ್ಞಾನಂ ಬಂಜಾಪ್ಪಾ ಜ್ಞ ಸಂಪೋಷಣೆಯು ವಿಚಾರಿಕ್ಕಲ್ಲಂ ಮಾಳಿ ಅಲ್ಲಾವಿಜಾಗಿ ಪ್ರಯೋಜಿಸಲ್ಪಟ್ಟಲ್ಲಿ ಪೋಷಿಸಲಾಗಿ (ವೀಚಾ. ೧೫). [ಸಂ.]

ಸಂಪೋಷಿಸು (ಕ್ರಿ). ಪೊಷಣವನ್ನು ಕಂದುಮಿಂದಿ : ಪ್ರಾಮಾಣಿಕ್ಯಂ ಪ್ರಮಿಣ್ಣಿ ಸಂಪೋಷಿಪಿಪಟ್ಟ ಪುಂಬ ಶಾಸ್ತ್ರಿಗ್ಳ ಸೂತ್ರಂಗಳ ಶಾಮೀಗಳ್ಳಂಗಳನ್ನು ಪಿಪಿದಾಕ್ಕಾಲ್ (ಅಷ್ಟಾಂ. ೧೫೨) ; ಶಾಲಿ ಸಂಪೋಷಿಪಿ ಸಿಷ್ಟ ವಿಚಾರಣಾಗಳಿಗೆ ಕಲಿಪಡಿಸಲ್ಪಟ್ಟ ಬ್ಯಾಕರಣಪ್ರಮುಖ ಕರಿಸು (ಮಾಲ. ೧೬). [ಸಂಪೋಷಣ + ಇಸು.]

ಸಂಪೋಷಿಪು (ಕ್ರಿ). ಪುಷ್ಟಿಗಿ ತೋಧಪ್ಪು. – ಪ್ರಮಾಣಿಸು : ಒಂಟಿಯಾದ ಭಾಷೆಯೂ ಶಬ್ದದ ಅರ್ಥಾಭಿವ್ಯಕ್ತಿಯ ಪ್ರೌಢ್ಯವನ್ನು ಪಡೆಯಲಾಗಿಲ್ಲ ಸಂಪೋಷಿಪಿಸಿಕೆ (ಸಾಪ್ರ. ೪. ಪ್ರಸ್ತಾ). [ಸಂ.]

ಸಂಪೋಕ್ತಿ (ನಾ). ಅಪೇಕ್ಷಿತವಾದ ಕಾಂತಿ, – ಪ್ರಮಾಣ : ಸ್ಪೀಕಾ ಬಲ್ಲೂ ಪರಾಂ ಚಿತ್ಯಾಗಾಣಿಸಲ್ಪಡುವ ಸರ ಮಾಲ್ಯಾ ಆಂ ಅಮಲಾಸ್ಯಾಂ (ಅಷ್ಟಾಂ. ೬-೧೫). [ಸಂ. ಸಂಪೋಕ್ತಿ]

ಸಂಪೋಕ್ತಿ (ಗ). ಸಂಪೂರ್ಣವಾಗಿ ಒಗಸಿಹೊಂದುವಂತೆ ಮಾಡಿದ : ಅಲ್ಲಾಪ್ತ ಮಾಲಿಸಿಸಲ್ಪಟ್ಟಾಪ್ತಾಪ್ತಮಾಪ್ತಾಂ ಸಂಪೋಕ್ತಿ ಜಾಪ್ತಾಪ್ತಾಲ್ಲಾ (ಅಷ್ಟಾಂ. ೧-೧೫). [ಸಂ.]

ಸಂಪ್ರಯ (ನಾ). ೧. ಮನೆ ; ವಾಸ್ತವ್ಯ : ಜಾಪಾಂಗಾಂಸಂಪ್ರಯೋಗಾಂಗಾಂ ... ಸಲ್ಲಿಸಲು ಪ್ರಯತ್ನಿಸಬೇಕೆಂಬ ದೂರಪ್ರಶ್ನೆಯಾಂ (ಅಷ್ಟಾಂ. ೫-೧೨). ೨. ಆಪ್ತತೆ; ನೆರ ; ಆಶ್ರಯ : ಜಾಧಾಪ್ತ ಸಂಪ್ರಯ ಪಾಪ್ತ ಸ್ಪೃಹಾಪ್ತಾಲ್ಲಿಯಿಸಲು (ಭಜಾಂ. ೪-೨ ೩೦); ಭೀಷ್ಮಿ ನಿಜಾಲ್ಲಿ, ವಿಶ್ವಾಪ್ತಾಲ್ಲಿ ಅಲ್ಲಾಪ್ತಾಲ್ಲಿ ದಾಪ್ತ ಶಕ್ತಿಯಾಲ್ಲಿ ಸ್ಥಿತಿಗೆ ಬಿಟ್ಟಿರಾಧಿಂದ ಸಂಪ್ರಯವೇಗ? (ಅಷ್ಟಾಂ. ೧೫೦). ೩. ಗತಿ ; ದೈವಗತಿ. ೪. ಮಮತೆ; ಪ್ರೇಮ. ೫. [ಶಾಪಾಂಗ] ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ ಮತ್ತು ದ್ವೈಧೀಭಾವ ಎಂಬ ಷಡ್ಗುಣಗಳಲ್ಲಿ ಒಂದು; ತನಗಿಂತ ಕೆಳ್ಳು ಬಲಶಾಲಿಯಾದವನನ್ನು ಆಶ್ರಯಿಸುವುದು : ಸಂಶ್ರಯ - ಪಟ್ಟಿಗಳಗಳ್ಳಂಗಾ - ಮಾಗಾಪ್ಪಾಗಂ. ಮುಳ್ಳಿಲ್ಲ, ಶಾಪಾಪ್ತಾಗಂ ಪಟ್ಟಿ ಬಲಶಾಲಿಯಾಪಟ್ಟಾಪ್ತಾಗಂ ಆಶ್ರಯಿಸುವುದು (ಕೃಷ್ಣಾ. ೨೭೦). [ಸಂ.]

ಸಂಪ್ರಯೋಗ (ನಾ). ೧. ಆರಂಭ ; ಆಶ್ರಯ : "ಅಂಜಾಪ್ತಯಂ ಸಂಪ್ರಯೋಗ" (ಪಾಪ್ತಾ. ೧೫೫-೨೫). ೨. ಮಮತೆ ; ಪ್ರೇಮ. [ಸಂ.]

ಸಂಪ್ರಶ್ನ (ನಾ). ೧. ಮನಸ್ಸಿನ್ನು ಕೇಳುವುದು. ೨. ಆಗ್ರ ; ಪ್ರಶ್ನೆ : "ಅಗಾಂ. ಸಂಗಾ. ಸ್ಪೃಷ್ಟಿಯ. ಸಂಪ್ರಶ್ನ. ಪ್ರಾಪ್ತಾ - ಗಿ ೩ ಪ್ರಶ್ನೆ" (ಪಾಪ್ತಾಂ. ೧೫೫-೨೦). ೩. ಒಡಂಬಡಿಕೆ; ಒಪ್ಪಿಗೆ : "ಸಂವಿಧಾ ... ಸಂಪ್ರಶ್ನ, ಅಂಗೀಕಾರ, ಅಭ್ಯಾಪ್ತಾಲ, ಸ್ಪೃಷ್ಟಿಯ, ಪಟಾಪ್ತಾ- ಗಂ ಅಂಗೀಕಾರದ ಪೆಸರಾಗಿ" (ಸಪ್ತಾಂ. ೧೫). [ಸಂ.]

ಸಂಪ್ರಶ್ನ (ಗ). ೧. ಆಶ್ರಯುವ . ೨. ಕಾಪಾಡಲ್ಪಟ್ಟ ; ರಕ್ಷಣೆ ನೀಡಿದ. ೩. ಮೊದಿಸಲ್ಪಟ್ಟ ; ಸೇರಿದ. (ನಾ). ೧. ವಶದಲ್ಲಿ ಇರುವವನು ; ಆಧೀನ. ೨. ಆಳು; ಸೇವಕ. ೩. ಆಶ್ರಯಿಸಿದವನು ; ಶರಣಾಗತ : ಗಜಾಪ್ತಾಲ ಏಧಾಯಾ ಸಂಪ್ರಶ್ನಮಸ್ಮಿಪ್ತಂ (ರಪ್ತಾಂ. ೨-೧೧). ೪. ಒಡಂಬಡಿಸಲು ; ಸೇರಿಸಲು : "ಸಂಪ್ರಶ್ನಯಿಸಲು ... ಪೊಯಿಸಲು ಕಂಡಲ್ಲ ಗಾಜಾಂ" (ಪಾಪ್ತಾ. ೧೫೦-೧೨). [ಸಂ.]

ಸಂಪ್ರಶ್ನ (ಗ). ೧. ಗಮನವಿಟ್ಟು ಕೇಳಿದ. ೨. ವಿಚಾರ ಕೊಟ್ಟ ; ಭಾವಿ ನೀಡಿದ. ೩. ಒಪ್ಪಿಕೊಂಡ; ಅಂಗೀಕರಿಸಿದ. (ನಾ). ೪. ಒಪ್ಪಿಕೊಂಡವರು ; ಸಮ್ಮತಿಸಿದವರು : "ಅಂಗೀಕೃತಂ ... ಸಂಪ್ರಶ್ನಂ. ಪಾಪ್ತಾಲಂ. ಗಾಪಾಪ್ತಾಲಂ. ಗಾಪಾಪ್ತಾಲಂ - ೧೧ ಅಂಗೀಕಾರಪ್ಪಟ್ಟವ್ಯ" (ಪಾಪ್ತಾಂ. ೧೫೨) [ಸಂ.]

ಸಂಪ್ಲಿಷ್ಟ (ಗ). ೧. ಬೆಸ್ಸಾಗಿ ಸೇರಿದ. – ಜೊಂದಿಕೊಂಡ. ೨. ಬಲವಾಗಿ ಜೊಂಡಿದ; ಬೆಸ್ಸಾಗಿ ಸೇರಿದ : ಗಾಜಾಪಾಪ್ತಾಲ ೨೫೦ ಚಿಪ್ತಾಪ್ತಾಲಾಗ ... ಸಮಿಪ್ತಗ್ರಹಗಿಂಡಿಪಾಪ್ತಾಲ್ಲಿ ಸಂಪ್ಲಿಷ್ಟಸೌಂಗಾಪಾಪ್ತಾ ಪೂಗಾ (ಪಾಪ್ತಾಂ. ೧೨ ೧೫೭). ೩. ಆಪ್ತಿತ ; ಅರಿಂಗಿಪಟ್ಟ. ೪. ಕೊಡಗಾಗಿ ; ಗೋಸ್ಕರವಾಗಿ. ೫. ಸಂಬಂಧಪಟ್ಟ. ೬. ಪಡದ; ಗಳಿಪಟ್ಟ. (ನಾ). ೭. ಜೊಡಿಸುಗಳಿಂದ ಕೂಡಿದುದು; ಗೊಂಚಲು : ಸಿಟ್ಟಿ : ಸ್ಪೃಷ್ಟಾಪಾಪ್ತಾಲಪ್ತಾಲ್ಲಿ, ಸಂಪ್ಲಿಷ್ಟ (ಪಾಪ್ತಾಂ. ೨೬) ೮. [ಶಾಪ್ತ್ಯವಿಪ] ಶಾಪ್ತ್ಯಗಳಾಗಳಲ್ಲಿ ಒಂದು : ಆಪಿಂಜಾಪಾಪ್ತಾ ಪಾಪ್ತಾಲಾಂಪಾಪ್ತಾಲ್ಲಿ ಸಂಪ್ಲಿಷ್ಟ (ಪಾಪ್ತಾಂ. ೧೫೫). [ಸಂ.]

ಸಂಪ್ಲೀನ (ನಾ). ೧. ಆಪ್ತಿಗೆ ; ಅರಿಂಗಿಪಿಂಗೆ. ೨. ಆಪ್ತಿಗೆ ; ಅರಿಂಗಿಗ : "ಪಿಪ್ತಿಗಾ ಪಾಪ್ತಾಲಾಪ್ತಾಲ್ಲಿಪಾಪ್ತಾಲಾಪ್ತಾಲ್ಲಿ ಆಪ್ತಿಗಾಪಾಪ್ತಾಂ" (ಪಾಪ್ತಾಲ. ೧೨೨-೧೫). ೩. ಸಂಬಂಧ ; ಸಂಪರ್ಕ. ೪. ಸಂಯೋಗ ; ಮಿಲನ : ಆಪ್ತಾ ಭೂಮಾಳ್ಳಿ ಧಾಮಾಲ ಸಂಪ್ಲೀನ ಪಿಪ್ತಿಗಾ ಪಾಪ್ತಾಲಾಂ ಆಪ್ತಿಗಾಲ ಆಪ್ತಾಲಾಂ ಪಂದಾಪ್ತಾಪಿಪಿಪಾಪ್ತಾಲ್ಲಿ ಸಾಗಿದ (ಪಾಪ್ತಾಂ. ೬೨೧). ೫. [ಶಾಪ್ತ್ಯವಿಪ] ಆಪ್ತಾಲಾಂಪಾಪ್ತಾಲ್ಲಿ ಒಂದು : ಪಾಪ್ತಾಲಾಂಪಾಪ್ತಾ ಮಿಗ ಸಂಪ್ಲೀನಾಲಾಂಪಾಪ್ತಾಲ್ಲಿ ಪಾಂ ವಿಪ್ಲವಪಾಲ್ಲಿ ಪಾಪ್ತಾಲಾಂಪಾಪ್ತಾಲ್ಲಿ ಪ್ರಾಪಾಪ್ತಾಲಂ (ಪಾಪ್ತಾಂ. ೧-೧೦೦); ಪಾಪ್ತಾಲಂ ಪಾಪ್ತಾಪಾಪ್ತಾಲ್ಲಿಪಾಪ್ತಾಲ ಸಂಪ್ಲೀನಾಪಾಪ್ತಾಲ್ಲಿಪ್ತಾಲಾಂ (ಪಾಪ್ತಾಲ. ೭೭೦). [ಸಂ.]

ಸಂಪ್ಲೀನ (ನಾ). ೧. ಒಟ್ಟುಗೂಡಿಸಿದಿಕೆ ; ಸೇರಿಸಿದಿಕೆ : ರಾಪಾ ಮೂಲಪ್ತಾಲ್ಲಿ ಸಂಪ್ಲೀನಾ ಏಧಾಪಾಪ್ತಾಲಾಂ ಸಂಪ್ಲೀನಾಲಾಂಪಾಪ್ತಾಲ್ಲಿ ಪ್ರಾಪ್ತಿಗಾಪಾ ಪೋಗಿಪಾಪ್ತಾ (ಪಾಪ್ತಾಲ. ೧೨೫). ೨. ಸೇರಿಸುವ ಸಾಧನ. ೩. ಅಕ್ಕಾಲಿಪಿಪಿಕೆ : 'ದ್ಯುಪಿಪಿಪ್ತಿಗಾಂ' ಪೀಠಾ. [ಸಂ.]

ಸಂಪ್ಲೀನ (ನಾ). = ಸಂಪ್ಲೀನ ೩ : 'ದ್ಯುಪಿಪಿಪ್ತಿಗಾಂ' ಪೀಠಾ.

[ಸಂ. ಸಂಪ್ಲೀನ]

ಸಂಪ್ಲೀನ (ನಾ). ೧. ನಿಶ್ಚಿಯಂಬಂಧ ; ಅಭ್ಯಂತ ಪಪ್ತಿಕ್ಷದ ಸಂಪರ್ಕ : ಇದು ಸಮಾಪಾಲಾಂಪಾಪ್ತಾಲ್ಲಿಪಾಪ್ತಾಲ್ಲಿ ದೆಪಾಪ್ತಾಲಾಂಪಾಪ್ತಾಲ್ಲಿ

ಸಂಜ್ಞೆ (ನಾ). ೧. ಅರ್ಥಾಸ್ಫೋಟ : ತಲ್ಲಿಗಣಿ. ೨. ದಿನಮಣಿ ಸೂರಿಯೊಕ್ಕಿನಪ್ಪುದು. ೩. ಗುರ್ತಿಸುವಿ ಳಿಯುವೊಕ್ಕಿನ ಗುಣ : ಎಲ್ಲ ಭೂಮಿಗಂ ಸಾಮಾನ್ಯಂಗಳಿ ಒಂದು ಗುಣದಿಂ. ಇದನ್ನು ಸಂಜ್ಞೆ (ಕೆಸಿಪೆಂ) ಎನ್ನುತ್ತಿರ್ (ಅಪೂ. ೬ ೫೧). ೪. ಸಾಮಿಪ್ಯ. [ಸಂ.]

ಸಂಜ್ಞೆ (ನಾ). ೧. ಗೊತ್ತು; ಪದ : "ಅಜಾಜ ಸಂಜ್ಞೆ . . . ಸಜ – ಳಿ ೬ ಪದ್ಗೆ" (ಶಾಸಾಪ. ೧೨೫-೨೦); ಭೂಮ್ಯಾಕಾಶಾಭ್ಯಾಂ ಅವಯ ಮೇಲೆ ಒಂದು ವಿಲ್ಯಾಯಮಂ ಅ ಸಂಜ್ಞೆಯಿಲ್ಲಿಯ್ದಮ್ (ಮಂಗಾ. ೨೩). ೨. ಕಾಲ್ಪಕ್ಕೆ ಸಲುವಂತಿರುವ ಶಾಸನಗಳನ್ನು ದುಡಿಯಿಸಿ ಶ್ರೀಪಾದ್ಯ ತಿನಿಧಿಗಳ ಸಭೆ; ಶಾಸನಸಭೆ : ಸಂಜ್ಞೆ ವಿಧಿಸ್ಯಾಗ . . . ಸಾಮಾಜಿಕರೂ ಅಲ್ಪರ ಧೈರ್ಯದಿಂ ಪ್ರಸ್ತುವಿಸುವರು (ಅಪೂ. ೨). [ಸಂ. ಸಂಜ್ಞಾ]

ಸಂಜ್ಞೆಮನೆ (ನಾ). ಶಾಸನಸಭೆಯ ಸಭೆಸ್ಥ : ಸಂಜ್ಞೆಮನೆಯೊಳು ಬಜ್ಜ ಜೋಯಿಸು ಪ್ರಸ್ತುವಿಸಿಗಂ ಪೇಳ್ದುದು (೧೭೦) [ಸಂ.]

ಸಂಜ್ಞೆಸಭೆ (ನಾ). ೧. ಸಂಜ್ಞೆ ೨ : ಭೂಮಾಯಂದ್ರಾಕಾಶಯಿಂದಿ ದುಷ್ಟ ಸಂಜ್ಞೆಯಿಂದಿ ಕಿಯಿಯಾಯ ಸಭೆಗಳ ಮೊದಲಾದ (೧೭೦ ೫. ಮಾಸ್ಯಂ). [ಸಂ. ಸಂಜ್ಞಾ]

ಸಂಜೆಮರವು (ಗ). ಸಂಜೆಗೆ ಸರಿದ : ಶಾಸನಸಭೆಗೆ ಸಲಬಲ್ಲಿಯ್ದು : ಪ್ರಾಯಾಜ್ಞಾಸ್ಯಕ್ಕೆ ಸಂಜೆಮರವು ಭೂಮಾಸ್ಥಿಯಿಂದ್ರಾಸಿಗಳಾಗಿ . . . ವಿಸ್ತಾರವಿದ (೧೭೦ ೧೫೦). [ಸಂ.]

ಸಜ್ಜೆಕ್ಕಿ, ಸಮುಸಜ್ಜೆಕ್ಕಿ (ನಾ). ೫ ಸಂಜೆಕ್ಕಿ : "ಸಮುಸಂಗಾದಂ ಸೊಂಗಿ ಮಾಸಿಂಗೆ ಸಂಜೆಕ್ಕಿಂಗೆ" (ಶಾಸಾಪ. ೧೨-೬) : ಶಾಸ್ತ್ರಗೊಳಿಸುವ ಅಸಿಕ್ಕಿಯಲ್ಲಿ ಬಾಳಿಯೊಂ ರಾಷ್ಟ್ರಗ ಸೊಂಗಿಯ ವಿಂಧಾಯಿಂದಿಯಿಂದ ಸೊಂಗಿಯಿಂದ (ಅಪೂ. ೧೯-೧೨ ೫) ಸಂಜೆಕ್ಕಿಯಂ . . . ಭೂಮಾಯಂ ಭೂಮಿಗಾಸಿಂ ಸಂಜೆಕ್ಕಿ ಪಾಯಿಯ ಪಾಯಿಯ ಪಾಯಿಗಳಂ (ಕೆಸಿಪೆಂ. ೧೩-೨೦). ಸಿಮಸಜ್ಜೆಕ್ಕಿ : ಸಮುಸಜ್ಜೆಯಾ ಸಜ್ಜೆ ಭಾಯಿಂ ಸಜ್ಜೆಕ್ಕಿಯ ಮಾಯಿಂ ಪಾಯಿಂ ಮುಂದಿಸಿಸ್ಥಿಂ ಗೊಸುಳ್ಳಾಭಿಸ್ಥಿಯಿಂದ್ರಾಗಿ" (ಅಪೂ.ಭಾ. ೨-೧೨); ಸಾಸಿಯಿಂದ್ರಿ ಸಜ್ಜೆ ಯಿ ಪಿಂಗಿಯಿಂದ್ರಿಯಿಂ ಗೊಸುಳ್ಳಾ (ಅಪೂ.ಭಾ. ೨-೧೦). [< ಸಂ. ಸಂಜ್ಞೆ]

ಸಂಜೆಯ (ನಾ). ಆಯುಮಾನ ; ತಿಂಗ್ : ಸಜ್ಜೆಯ - ಸಂಜೆಯ (ಅಪೂ. ೫೫೫ ಭೂಮಿ).

[< ಸಂ. ಸಂಜಾ]

ಸಂಜೆಯ (ನಾ). ಬಯಸಿ ಮರಣಾಗಿ ಪರಿಂಜರ ; ಸಂಸಾರ : ಸಂಜೆಯ ಕ್ಷಕ್ಕೆ ಮಾಯಿಂ ಪಿಸ್ಥಿಂ ಸೂಯಿಯಿ ಪಾಯಿಯಿಂದ್ರಿಯಿಂ ಪಾಯಿಯಿಂದ ಕೆಂಗ್ (ಅಪೂ.ಭಾ. ೨-೧೦೫).

[< ಸಂ. ಸಂಜಾ]

ಸಂಜೆಯಂ (ನಾ). ೧. ಬೆಟಸ್; ಗೆಟ : 'ಸಂಜೆಯಂ' ಪರಾ. ೨. ರಾಷ್ಟ್ರಕ್ಕೆ ; ಮುಖ್ಯ : ಸಂಜೆಯಂಗಳಂತೆ ಶಿರಂಗಳ ಮಾಯಿಂ ಮಾಯಿಂ ಮಾಯಿಂ ಸಾಯಿಂಗಳಿಂ ಮಾಯಿಂ ಮಾಯಿಂ ಮುಖ್ಯ ಮುಖ್ಯ ಮುಖ್ಯ

ಬಂದೆನಾಮಿಗಳಿಗೆ ಪೆರಾದಂತು (ಪದ್ಮಿ. ೧೬). ೮. ಪ್ರಪಂಚ ; ಜಗತ್ತು ; ಲೌಕಿಕ : ಈಚಿ ಸಂಸಾರಸಾಗರಕ್ಕೆ ಮಿದ್ದು ಬಾವುದು ಮುಕ್ತಿಯಂ ಸಂಸಾರದೊಳ್ ಪಿರಿಯಪ್ಪಿರೊಳ್ (ಜಿನೇಂ. ೧-೨೨); ಸಂಸಾರದೊಳಗೆನ್ನಪ್ಪಿರಂದಂ ನೆಲೆಯ ಪರಿವರಿಸುಗುಂ (ಪಾರ್ಶ್ವ. ೧೦-೬೨); ಈ ಸಂಸಾರದಲ್ಲಿ ವಿಸಾವಿರಿಂ ಬಳಿಗ ದೊಡ್ಡ ಅಧಮಾಗುಣದು (ಚಿಂತಾಮ. ೧೦-೬೩). ೯. ಬೌದ್ಧ : ಗುರಿಂಪ್ಪಿ: ಮುಂದ ಹೊಂದಿ ಹೊಗಂದಿ, ಅದರ ಸಂಸಾರದ ಹೊಯ್ಯಿಸಿ ಹೊಂಬುದಕ್ಕೆ ಅಂಗಿಲ್ಲದೆ (ಧರ್ಮಾಮೃ. ೩೨). ೧೦. [ಶೈವ] ಹುಟ್ಟು, ಸಾವುಗಳ ಪರಂಪರೆ ; ಭವಸಾಗರ : ಎಚ್ಚಂ ಸಂಸಾರಾಗ್ನಿಪ್ರಪ್ತಿಗಳಪ್ಪಿಂ (ಪಾರ್ಶ್ವ. ೨೦-೨೧); ಸಂಸಾರಾಬ್ಧಿಯಂ ದಾಟಲು ಪಿಚ್ಚಳಿಸಿಲ್ಲಾಸ್ಪದಮಂ ಶ್ರೀವಿಜಯಮಿಂ ಗೈಯಲ್ಪಿದಂ (ಚಂದ್ರ. ೧೬-೧೫). ಅರ್ಹದ್ಭಾಷಿತ ನವಾಸಂಸಾರ ಪಥ್ಯ, ಸಂಸಾರಾಂಬುಜಾಖಂಡ ದೊಳ್ ಪಿಯಸ್ಸಾ ಪಿಯಮಿಗಿ ಬೃಹ್ಮ ಪಿಲಮಿಸ್ಸಿಂ (ಚಾಮು. ೨-೨ ಪ).

ಸಂಸಾರ ಕೂಡಲು = ಜೀವನವನ್ನು ಸಾಗಿಸು ; ಬದುಕನ್ನು ನಿರ್ವಹಿಸು : ಅಜ್ಜಾಯರೂ ಗುರುಪಿಕೆ ಅಕ್ಕ ಯಾಚಿ, ಪಜ್ಜೂಪಿಂದ ಬಜ್ಜಿಪ್ಪಿಸಿದೂಂ ಸಂಸಾರಮಿಗಿ ಅಂದಿಗ ಜ್ಞಿಯಿಪ್ಪ ಸಂಸಾರ ಪೊಸಿಸಿದೆ (ಭಾಷಾ. ೫೯೦). ಸುಖದ ಜೀವನ, ಸುಖದ ಜೀವನ = ೧. ಗೃಹಿಕ್ಕೆ ಸಾಗು : ಅಚ್ಚಿಯಲ್ಲಿ ಅಧಿಷ್ಠಿಸಾಗಿ ಪೃಷ್ಟಾಚಾರಂ ಮಾಡಿ : ಸುಖದ ಜೀವನ: ನಿನ್ನ ಒಳ್ಳಗಾಲ್ಲಿ ಮಾಳಿಸಿದೆನ (ಜಜ್ಜಾ. ೬.). ೨. = ಸಂಸಾರಯೊಳಿಗೆ: ಸಾಮಿ . . . ಸಂಸಾರ ಸಜ್ಜನಾದಂತು ಎಂದು ತಾನೇ ? (ಮಾಮಾ. ೪೨); ಸಂಸಾರ ಮುಕ್ತಿಯ್ಯಿಕೆ, ಅಳಲು ಗಂಧಾಯೊಳಿಗೆ ಸಂಸಾರ ಪಜ್ಜಲು ಬಾರ ಅಚಾರಿಸ್ಸಿಯ ಪ್ರಸಿದ್ಧಾಚಾರಾದುದು ಪೀರಿಯೊಳಿಗು (ಮಾಮಾ.೪೨). ಸಂಸಾರಪಾಶ = ಸಂಸಾರ ತೆಪಿಗಿಯು : ಇಚ್ಚಿ ಪರಲ್ಲಿ ? ಸ್ವಪ್ನಮುಂ ಸಂಸಾರ ಪಾಸಿಸಿರಂ (೧೮೨). ಸಂಸಾರ ಸೂಚಿ = ಮಿಸೆ ಮಾಡು ; ಸಂಸಾರವನ್ನು ಅರಂಭಿಸು : ಮುಲ್ಲಗ್ಗಿ ಹೊಂಡಿಸಂ ಅವರುಂಡಿಯ ಬಾಯಿ ಅಲ್ಲಿ ಸಂಸಾರ ಪೂಸಿದರೆ (ಅಭ್ಯ. ೯). [ಪಸಾ]

ಸಂಸಾರ (ಗು). ಪ್ರಾಪಂಚಿಕತನ : ನಿನ್ನ ಮೋಜು ಅಗಲ ಮಾಡಿಕ್ಕ ಹೋಗಿ ಸಂಸಾರ ಬಿದ್ದಿಲ್ಲಂದೇ ಮುಚ್ಚ ಹೋಗಿ ಹೊಕ್ಕಿತ ಸಂಸಾರಕ್ಕುಗಿ (ಜಜ್ಜಾ.೨. ೯-೧೦). [ಪಸಾ]

ಸಂಸಾರಕ್ಕೆ ಜಿಗಿ (ನಾ). ಸಂಸಾರಬಂಧದಲ್ಲಿ ಚಿಕ್ಕಿಯೊಂದಿದರು : ಅಮಾಯಕಾಗಿ ಪೆರಿಗಿ ಸಂಸಾರಕ್ಕೆ ಜಿಗಿದಾ ಸಪಿಪಿಕಾಯಿಪ್ಪಿಗೂ ಸಿಸಿ ಪಿಸಿಪಿಸಿಪಿಗಾಗಿ (ಅಭ್ಯ. ೨-೨೪ ಪ). [ಪಸಾ]

ಸಂಸಾರಿಸು (ನಾ). ಪಾಲನೆಮಾಡು ; ಪೋಷಿಸು ; ಪೋಷಣೆಯ ಪೊಣೆಯನ್ನು ಹೊರು : ಅಂಗಿಲ್ಲಿ ಪಿಂಗಿಸಿಯಂ ಪಿಂಗಿಸಿಯಂ ಸಂಸಾರಿಸಿ ಪೆಂಪಿಂ ಪೆಂಪಿಸಿ ಪೆಂಪಿಸಿ ಪೆಂಪಿಸಿ

ಸಂಜಾತಕ (ಗು). ೧. ಪ್ರಸವಂಬಳ್ದೆ ಸಂಬಂಧಿಪಿದ ; ಲೌಕಿಕವಾದ : ಆ ಮಾತ್ರಾ ಅ ಉಪ್ಪಗ ಸಂಜಾತಾಂ ಕಾಂ.ಬಿಂಗಳ ಮುಮೋಕ್ಷಗಳಿಂತಿದ ಅಧಾಂಗಳಾಗ ವಿಭಾಯಿಸಾಂ (ಆಚ್ಚಿ. ೨ ೧೫ ೬) (ನಿಘ). ೨. ಜಿಮಿಂಬಸ್ಸೆ : ಗೃಹಸ್ಥೆ : ಎಲುಸ್ಸಿಗ್ಗಾದ ತಾರಿ ಪಿಂಡಾಂ ಸಾಂಸಾರಾಂ ಸಂದಿಂದ ವಿಮುಖಕ್ಕಾಗಿ ಶ್ಲೋಪಿದಿಂ (ಭೃಹಾ. ೧೭-೧೩); ಗಾಯಿಗೆ ಸೋಂಕು ಬಂಬಾಗಿದ್ದರಿಂ ಸಂಜಾತದಿಂದ ನಿಮಗ ಒಂಬಿಸ್ಸಿಲ್ಲದ ವಿಷ ಪ್ರಾಣಿದ್ದಿ, ಗಾಯಿಂ ಗಿರಾಪ್ಪಾ, ಒಸ್ಪಿಸಿಲ್ಲದೆ ದೋಷ (ಆಚ್ಚಿ. ೧೪೭). [ಸಂ.]

ಸಂಜಾತಿಗ (ನಾ). ಪ್ರಾತಿಲೋಮಾದಾದ ಕರ್ಮಂದಲ್ಲಿ ಹೊಳಿಬುವ ಜಿಗಡ : ಗಾಣ್ಯಾಣಿಂ ದೋಷಾಂಗಳಾಂ ಉಂಬಿಸ್ಸಿಲ್ಲಿ ಸಂಜಾತಿಗಂ ಬಗ್ಗಿದು (ಭೃಹಾ. ೬-೨೪). ಸ್ಪಿಗಿಲಿಲೋಮಾದಾಂ ಸಂಜಾತಿಗಂ (ಆಚ್ಚಿ. ೨೦) [ಸಂಜಾತ + - ಇಗ]

ಸಂಜಾತಿದ (ನಾ). ೧ ಸಂಜಾತಿಗ : ಸಂಜಾತಿದಂ ತ್ರಿಸ್ಸಿ ಪಾಂಬಿಸ್ಸಿಲ್ಲಿಂದಿಸ್ಸಿಲ್ಲಿ ಪಿಂಬಿಸ್ಸಿಲ್ಲಿ (ಆಚ್ಚಿ. ೧೦-೬೬ ಪ); ಸಂಸ್ಕೃತಿಯಂ ಧ್ಯಾತಕಿಸಲು ಒಳಪಾದುಸ್ಸಿಲ್ಲಿಂದ ಸಂಜಾತಿದಂಗಳು ಒಳಪಾದುಸ್ಸಿಲ್ಲಿ (ಆಚ್ಚಿ. ೨೧-೨೦). [ಸಂ.]

ಸಂಜಾತಿಸು (ಕ್ರಿ). ಹುಟ್ಟುವಿಕೆಗಳ ಒಳಪಡಿಸಲ್ಲಿ, - ಒಂಬಳು : ಒಳಪಿದ್ದಿಲ್ಲಿಯಾಗ ಧ್ಯಾ. . . . ಜ್ಞ ಪ್ರೀಯ ಮಾಳ್ಪಿ ಇಷ್ಟಪಟ್ಟೊಂ ಸಂಜಾತಿಸು ಧ್ಯಾಪಿಸಾಂ ಪ್ರಿಸ್ಸಿಲ್ಲಿಂದ ಸ್ಪಿಸ್ಸಿಲ್ಲಿಯಾಗ (ಭೃಹಾ. ೫-೧೨-೬). [ಸಂಜಾತ + - ಇಸ್ಸಿ]

ಸಂಜ್ಞೆ (ನಾ). ೧. ನೀಂದಿಸ್ಸಿ ಬಿಟ್ಟಿಂಂಬಿಸ್ಸಿಲ್ಲಿ ; ಒಪ್ಪಿ ಮಾಡಿಲ್ಲಿ : ಲಂಬಿಸ್ಸಿಲ್ಲಿಯಾಂಬಿಸ್ಸಿಲ್ಲಿಂದ ಬಿಸ್ಸಿಲ್ಲಿಂಗಳ್ಳಿಂದೆಂ . . . ಬಂಬಿಸ್ಸಿಲ್ಲಿಂದ ಸಜ್ಞಾ ಪ್ರೀಯಮಾಂಬಿಸ್ಸಿಲ್ಲಿಂದ ಅಸ್ಪಿಧಿಯಿಂದಾಗಿಂ ಮಿಳಿಬಿಸ್ಸಿಲ್ಲಿಂದ ಬಿಂಗಾ ಸ್ಪಿ ಪ್ರಿಸ್ಸಿಲ್ಲಿಯಾಸ್ಪಿಸ್ಸಿಲ್ಲಿಂದಾಂ . . . ಆಗಿ (ಆಚ್ಚಿ. ೫ ೧೦-೬೬ ಪ). ೨. (ಅಲಂ) ಅರ್ಥವಾದ ; ಮೃದುವಾದ : ಅಬಿಂದ ಬಂ ಬಾಂಬಿಸ್ಸಿಲ್ಲಿಂದ ಸಿಬಿಸ್ಸಿಲ್ಲಿಂದಿಸ್ಸಿಲ್ಲಿಂದಾಂಗಳ ಸ್ಪಿಸ್ಸಿಲ್ಲಿಂದಾಂಬಿಸ್ಸಿಲ್ಲಿಂದ (ಆಚ್ಚಿ. ೧೧-೧೦) [ಸಂ.]

ಸಂಜ್ಞೆ (ಗು). ೧. ಸಂಜ್ಞಿತವಾಗಿ ಕರೆಯಲ್ಪಿಟ್ಟ. — ನಿರ್ಣಯಿಸಿದ. ೨. ಗುರಿ ಮುಟ್ಟಿದ ; ತೊಡಗಿಕೊಂಡ. ೩. ಸಾಧಿಸಿದ ; ಸಿದ್ಧಿಯನ್ನು ಪಡೆದ. (ನಾ). ೪. ಸಂಜ್ಞೆಯಾತೆಯನ್ನು ಹೊಂದಿದುದು ; ಪ್ರಾಣಗಗಂಧಿಯು : ಅಂಬಿಸ್ಸಿಲ್ಲಿಂದ ಜಾತಿ ಜಾಂಬಿಸ್ಸಿಲ್ಲಿಂದಾಂ ಬಿಸ್ಸಿಲ್ಲಿಂದಿಸ್ಸಿಲ್ಲಿಂದ (ಆಚ್ಚಿ. ೫೫-೧೧೬); ಅಧಿಪಿಸಿಲ್ಲಿಂದಾಂಗಳಂ ಸಾಲಿಸಿಲ್ಲಿಂದ ಸಾಗಿಸ್ಸಿಲ್ಲಿಂದಾಂಗಳಿಗಾಗಿ ಸಜ್ಞಿಸಿಲ್ಲಿಂದಾಂಗಳಿಂ ಬಿಸಿಸಿಲ್ಲಿಂದಾಂಗಳಿಂ

ಸಂಸ್ಕಾರ (ನಾ). ೧. ದೋಷದೂರೀಕರಣಗಳ್ಳದಂತೆ ಮಾಡುವಿಕೆ ; ಶಿದ್ಧಿಕಾರ್ಯ; ಶುದ್ಧೀಕರಣ : ಗುಣಾದಾನ ಸಂಸ್ಕಾರಕ್ರಿಯಾವಿಧಿಗಳಿಂದ ಸಂಸ್ಕೃತವಾದ ಮಣಿ (ಅಷ್ಟ. ೨-೨೬ ಪು). ದುರ್ಜನಸಂಸರ್ಗವನ್ನು ತೊಡೆಯಲು ಸಂಸ್ಕಾರವಿಧಾನಗಳನ್ನು (ಅಮೃ. ೧೨-೨೦); ಅಂಗ ಯುಮಿಷ್ಟಂ ಕರಿಷಂ ಆ ಬಲಾಗಿಂ ಮುಂದ ಮಂ ಕಾದ ರಾಷ್ಟ್ರಸ್ಯಸ್ಯ ಶರೀರಸ್ಯಂ ಸಂಸ್ಕರಿಷಂದಿಮಾಗಿಂ" (ಮಾಲ. ೬-೧೪ ಪ). ೨. ಶಿದ್ಧಪಡಿಸು ; ಸಜ್ಜುಗೊಳಿಸು. ೩. ಪವಿತ್ರಗೊಳಿಸು ; ಪಾವನಗೊಳಿಸು: ಪವಿತ್ರಗಾಯ ; ಪಾಪಿಯಾ ; ಸಂಸ್ಕರಣ (ಕೀರ್ತನೆ. ೧೦೩). ೬. ಶಿಂತ್ಯಗೊಳಿಸು ; ಸಂಸ್ಕಾರಗೊಳಿಸು. ೭. ರಚಿಸು ; ನಿರ್ಮಿಸು. ೮. ಅಲಂಕರಿಸು; ಸೊಗಸುಗೊಳಿಸು. [ಸಂಸ್ಕೃತ + -ಆಚ್ಚು]

ಸಂಸ್ಕಾರ (ನಾ). ೧. ದೋಷದೂರೀಕರಣಗೊಳ್ಳದಂತೆ ಮಾಡುವಿಕೆ ; ಶಿದ್ಧಿಕಾರ್ಯ; ಶುದ್ಧೀಕರಣ : ಗುಣಾದಾನ ಸಂಸ್ಕಾರಕ್ರಿಯಾವಿಧಿಗಳಿಂದ ಸಂಸ್ಕೃತವಾದ ಮಣಿ (ಅಷ್ಟ. ೨-೨೬ ಪ). ದುರ್ಜನಸಂಸರ್ಗವನ್ನು ತೊಡೆಯಲು ಸಂಸ್ಕಾರವಿಧಾನಗಳು (ಅಮೃ. ೧೨-೨೦); ಅಂಗ ಯುಮಿಷ್ಟಂ ಕರಿಷಂ ಆ ಬಲಾಗಿಂ ಮುಂದ ಮಂ ಕಾದ ರಾಷ್ಟ್ರಸ್ಯಸ್ಯ ಶರೀರಸ್ಯಂ ಸಂಸ್ಕರಿಷಂದಿಮಾಗಿಂ" (ಮಾಲ. ೬-೧೪ ಪ). ೨. ಶಿದ್ಧಪಡಿಸು ; ಸಜ್ಜುಗೊಳಿಸು. ೩. ಪವಿತ್ರಗೊಳಿಸು ; ಪಾವನಗೊಳಿಸು: ಪವಿತ್ರಗಾಯ ; ಪಾಪಿಯಾ ; ಸಂಸ್ಕರಣ (ಕೀರ್ತನೆ. ೧೦೩). ೪. ಶಿಂತ್ಯಗೊಳಿಸು ; ಸಂಸ್ಕಾರಗೊಳಿಸು. ೫. ರಚಿಸು ; ನಿರ್ಮಿಸು. ೬. ಅಲಂಕರಿಸು; ಸೊಗಸುಗೊಳಿಸು. [ಸಂಸ್ಕೃತ + -ಆಚ್ಚು]

ಸಂಸ್ಕಾರ (ನಾ). ೧. ದೋಷದೂರೀಕರಣಗ

ಒಂದು : 'ಸಂಖ್ಯಾ' ಪದವು ಯಾವು ಯಾವು ಪ್ರಸಂಗದ ಅರ್ಥವನ್ನು ಹೇಳ – ಬಾರದೆಂದಾಗಿ ರಾಮಯಾಯಿತೆ (ರಾಮಾ. ಸಭಾ); ದೊಡ ಬೆಟ್ಟದ ಸಂಖ್ಯೆ ಸಂಖ್ಯಾಪರ ವಿಸ್ತಾರ ಬಗಾ (ಸಿಪಾ) 'ಪಾಗಿರಿಸಿ' ಪೆ? (ಎಚ್ಚಿ. ವಿಜಯ. ಬಿ).

ಸಂಖ್ಯಾಪರಿಮಾಣ, ಸಂಖ್ಯಾಪರಿಮಾಣ = ೧. (ಹೆಚ್ಚಿ ಯಾಯುಯಾಗುವಂತೆ) ಸಂಖ್ಯಪರಿಮಾಣ; ಹರಿಹ್ಯಾರಗೀತೆ೨೪: : ವಿಂಧ್ಯಪರ್ವತಾಕಂಗಳೆಲ್ಲವಂದಾಕ್ಷಿ ಕ್ಷಿಸಂದಾಣವ್ಯಲ್ಲಗಣವಿಪ್ಪಾಯಿಗಳಿಂ ಸಂಖ್ಯಾಂಗಂ ಮಾಡಿಸಲಾರದುಮೆಂದಿನ್ನಾ ಪಾಪಾಂಗಮಾ . . . ಕೆಲ್ಲು (ಅಂಬಿ ೬, ೬-೮೬ ಪ). ೨. ಅಪ್ಪೆರತ್ತಿಯನ್ನು ನೆರವೆಸಲು ; ಅಳತೆಮಾಪಗಳನ್ನು ಮಾಡು : ಒಂದು ಕಡೆ ಇದ್ದಿದ್ದಿತು. ಹಣಾಗ್ರಗಾಳಿದ್ದ ಪಾಪ ಸಂಖ್ಯೆ ಮಾಡಿಂದೆಲ್ಲ (ರಾಮಾ. ೧೮೫). ಸಾಪ ಸಂಖ್ಯಾಪರ ಮಾಡಬಹುದೊ. ಬಾಣದೂ ವಿಷಯ ಒಕ್ಕಿಸ್ಸಗಳು (ಮಾಪ್ರ. ೬). [ಸಂ.]

ಸಂಖ್ಯಾಪರಿಣಾ (ನಾ). [ಜೈನ] "ದ್ರವ್ಯವನ್ನು ಸ್ಪೀಗಳಿಸಿ ಸಂಖ್ಯಾರೆಯನ್ನು ಹೊಂದಿ, ಮಿಶ್ರಾತ್ಮಾದಿ ದೋಷಕ್ಕಾಗದಿಂದ ಪರಿಹಾರವನ್ನು ದಿಪಿಪ್ಪಿಸಿದು" (ಧ್ವನಿ. ೨೮೧): ಅಪ್ಪಗೆ(ಪ)ಒಪ್ಪಿಸಿ, ವಿಶ್ವಾಸ್ಯಾಸ ಪರಾಪಾಸ್ಯಾಪಾಸಂಗಳು ಪ್ರಾಪ್ತಿಯು, ಅಪ್ಪಿಸಿಪಿಸಿ, ಸಪ್ಪಗೆಳಾದ ಪ್ರಾಸ ಅಂತ್ಯಾಸಂಗ ಧ್ವನಿಯಾಂತರ ಪ್ರಾಸಿಸಿ ಪಾಯಾಯಾಯಾಯ ಪ್ರಾಪ್ತಿಯು, ಪಾಪ್ತಿಯಾ ಪಾಯಾಯಾಯಾಪ್ತಿ ಸಪ್ಪಾಪ ಸಂಖ್ಯಾಪರಿಣಾ (ಅಪ್ಪಾಪ. ೨೨೨). [ಸಂ.]

ಸಂಖ್ಯಾಪರಿಪಿ (ನಾ). ಅಪ್ಪಿಸಿಪ್ಪಿಯಗೆ ಸಂಬಂಧಿಪಿದ ಪ್ಪಿಗೆ. – ಕ್ಪಿಯ : ಆಪಾಗಿಪ್ಪಿಂ ಸಂಖ್ಯಾಪರಿಪಿಂ ಪಾಪ ಪ್ಪಿಪ್ಪಿಪಿಪಾಯ ಪಾಪಿಪಿಪಿಂ (ಪಾಪಾ. ೧೫-೬ ಪ); ಪ್ಪಿಸಾಪಿಪಾಪಾ ಸಪಾಪ ಪ್ಪಿಪ್ಪಿಪಿಪಿ ಸಂಖ್ಯಾಪಾಪಾ ಪಾಪ್ತಿಪಾಪಿಪಿಪಿಪಿಂ ಪಾಪಿಪಿಪಿಪಿ

ಸ್ಮೃ. ಸಾಮಾನ್ಯವಿಷಯ ಯೋಚಿಸ್ಯಕ್ಕೂ, ತೀರ್ಮಾನಕ್ಕೆ'' (ಅಸ್ಪೃ. ೬೬೬). [ಸಂ.]

ಸಮ್ಮತ (ಗು). ೧. ಅತಿಶಯವಾಗಿ ಕೊಂದಾಡಿದ : ವಿಶೇಷವಾಗಿ ಸ್ಪುಟವಿರ. ೨. ಗುರುತಿನ ; ಹರುಷವುಳ್ಳ. ೩. ಸಲುಗೆಯ ; ಆಸ್ಥೈರ್ಯಶೌರ್ಯಮುಳ್ಳ. (ನಾ). ೪. ಶ್ರೇಷ್ಠರಿಗೆ ಪಾತ್ರನಾದವನು : ಆಚಂದ್ರಾರ್ಕಾಸ್ಥಾಯಿಯಾಗಿ ಸಮ್ಮತಮಪ್ಪಿರ್ದ ಬಂದರ (ಹಪ್ಪಿಚ. ೪-೨೦). [ಸಂ.]

ಸಮ್ಮತಿ (ನಾ). ೧. ಸ್ಪುತಿ ; ಹೊಗಳಿಕೆ : ಅವಮಾನಮುಮಸಮ್ಮತಿಯುಮೆಂಬಿವಱೊಳಂ ಸಮಾನಾಸಮಾನಂಗಳಂ ಸೋಕದಿಸಿ ಸಮಬುದ್ಧಿಯಿಂದಿರ್ಪಂ (ಧರ್ಮ. ೫-೨೦); ದೇವತಾಪದದ ಸಂಬಂಧವಾಕ್ಯಮಿದು ಬಂಬಂದ ಸಿದೆಯ ಪಶು ಮಿಗಿಲಾಗಿ ನಿನ್ನ ಬಣ್ಣಿಸದ ವಿಧಾಯವೆಸಿಪ್ಪುದು (ಸೃಷ್ಟಿಚಾ. ೧೧-೧೨೨). ೨. ಒಟ್ಟಾಗಿ ಸ್ವೀಕೃತ್ಯ ಮಾಡುವಿಕೆ. [ಸಂ.]

ಸಮ್ಮತ್ಯ (ಗು). ೧. ಅತಿಶಯವಾಗಿ ಕೊಂದಾಡಿದ ; ವಿಶೇಷವಾಗಿ ಶ್ರೇಷ್ಠವಾದ ಮೂರಿದೆ : ಸಂಗ್ರಾಮಾಂಗಣ ಮಾಕಳ ಪಂಚಸಂಖ್ಯಂಬಂಧಂ ಪೋಲ್ದಂ ಪೋಲ್ದಂ ಪೋಲ್ದಂಗಳಿಂ ಸಮ್ಮತ್ಯಂಗಳಿಂ (ಪಾ. ಭಾ. ೬-೨೨:೧೦೮). ೨. ಕೊಂದಾಡುವಿಕೆ ಶಾಶ್ವತವಾದ : ಶ್ರೀಪರ್ವತ ದುಷ್ಟಪಕ್ಷಕ್ಷಯ ಮುಖಜಾಯಂದ ಸಮ್ಮತ್ಯಸಂಭವಪ್ರಭಾವಂಗಳಿಂದಂ ದೋಷವಿರಹಿತಮಪ್ಪ ಪಾಪಾಗಮಂ (ಅಜಿತ. ೧-೧). (ನಾ). ೩. ಸ್ಪೊಕ್ತ್ಯ ; ಸ್ಪುತಿ : ಅತಿ ಸಮ್ಮತ್ಯಧಂ ಧರಾಮತ್ಯ . . . ಪ್ರೋದಿತಃ ಕ್ಷತ್ರಿಯಿತಃ (ಭಾಪು. ೨೨-೨೩). ೪. ಕೊಂದಾಡುವಿಕ್ಕೆ ಶಾಶ್ವತಾದ : ಪ್ರಸ್ತುತ ಬೆಂಬಿಡದೆ ಮಾಡುವಿಕೆ : ಪ್ರತಿಗೆ ಅತ್ಯಸಾದ ಬೆರಿದು : ಉಬ್ಬಾ ಮುಮ್ಮುಸ್ಯಸಮ್ಮತ್ಯ ಪಾಪ್ಪಿಪ್ಪಿಪ್ಪಿ

ಸಂಸ್ಕಾರಪತ್ರಿಕೆ (ನಾ). ವಿವಾಹಸಂಸ್ಕಾರಕ್ಕೆ ಪ್ರಯೋಗ ; ಸಂಸ್ಕೃತ ಸೇರಿದ ಪತ್ರಿಕೆ : ಸಂಸ್ಕಾರಪತ್ರ – ಸಂಸ್ಕೃತಿಪತ್ರ (ಮಾಹಿ. ೫೯೨ ಕೃಷ್ಣಮಾ). [ಸಂ.]

ಸಂಸ್ಕಾರಪದ್ಧತಿ (ನಾ). ೧. ಆಯಾಸಂಸ್ಕಾರಗಳಲ್ಲಿರುವ ಕ್ರಮ : ೨. ವಿಧಾನಗಳನ್ನೊಳಗೊಂಡ ಗ್ರಂಥವಿಶೇಷ. ೩. ವಿಧಿಸಂಹಿತೆಯ : ಪರಿಷ್ಕಾರ ಪದ್ಧತಿಯ. ೪. ಸಂಸ್ಕಾರಗಳ ಆಚರಣೆಯ ಪದ್ಧತಿಯನ್ನು ತಿಳಿಸುವ ಗ್ರಂಥ. ೫. ಶಾಸ್ತ್ರ : ನಿಯಮ. [ಸಂ.]

ಸಂಸ್ಕಾರಭಸ್ಮ (ನಾ). ೧ ಸಂಸ್ಕಾರಪದ ೪ : ಬಿಡಾಜ . . . ಸ್ಮಶಾನಪರಿಯಾಗ ಅಸ್ಥಿಯಾಸ್ಥಿ ಸ್ಥಾಸ್ಥಿ ಸಂಸ್ಕಾರ ಮಾಡಿಪರು (ಭಕ್ತಿ. ೧೫೫). [ಸಂ. ಸಂಸ್ಕಾರ + ಭಸ್ಮ]

ಸಂಸ್ಕಾರಮು (ತೆ). ಸಂಸ್ಕಾರಪದ ; ಸಂಸ್ಕಾರಮು : ಸುಮಿತ್ರಾಸುಮಂತ್ರಾದಿಗಳು ಬಿಡದೆಂಗಮು ಗುಣಮುಖರಾಗುವಂತಾಗಲಿ ಸಂಸ್ಕಾರಮುಲಂ ಕ್ರಮಮಲಿಗಿ ಯಮಿಯಿಂದಂ ಸಲಿಸಿದಂ (ಯಯಾ. ೧೫೫) : ರಾಜ್ಯಸಂಸ್ಕಾರಮುಲಿಂ ಬಲಮುಲಿಂದ ಕೊಡಲ ಯಾಯಿ (ಯಯಾ. ೧೫೫). [ಸಂ. ಸಂಸ್ಕಾರ + ಮು]

ಸಂಸ್ಕೃತ (ಗು). ೧. ಶೋಷಿಯಾಗಿರುವ : ಸಂಸ್ಕಾರ. ೨. ಶುದ್ಧವಿಧಿಯ : ಪವಿತ್ರ. ೩. ಸಂಸ್ಕಾರ ; ಸಂಸ್ಕಾರ. ೪. ಸಾಮಾನ್ಯ ; ಸಾಧಾರಣ. ೫. ಪ್ರಾಚೀನ ; ಪುರಾತನ. ೬. ಸಂಸ್ಕೃತ ; ಸಂಸ್ಕೃತಕ್ಕೆ ಸಂಬಂಧಿಸಿದ. ೭. ಸಂಸ್ಕೃತ ಭಾಷೆಯಲ್ಲಿ ಬರೆದಿರುವ ; ಸಂಸ್ಕೃತದಲ್ಲಿರುವ. ೮. ಸಂಸ್ಕೃತ ಭಾಷೆಯನ್ನು ಬಲ್ಲ ; ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವುಳ್ಳ. ೯. ಸಂಸ್ಕೃತ ಭಾಷೆಯಿಂದ ಬಂದ ; ಸಂಸ್ಕೃತದಿಂದ ಆಯ್ದುಕೊಂಡ. ೧೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೨೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೩೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೪೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೫೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೬೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೭೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೮೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೧. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೨. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೩. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೪. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೫. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೬. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೭. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೮. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೯೯. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. ೧೦೦. ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ; ಸಂಸ್ಕೃತದಲ್ಲಿ ಪ್ರಚಲಿತವಿರುವ. [ಸಂ. ಸಂಸ್ಕೃತ]

ಸಂಸ್ಕೃತಕ (ನಾ). ೧. ಸಂಸ್ಕೃತ ಭಾಷೆಯ ಪದ ; ಸಂಸ್ಕೃತ ಭಾಷೆಯಿಂದ ಬಂದ ಪದ : ೨. ಸಂಸ್ಕೃತ ಭಾಷೆಯ ಪದಗಳನ್ನು ಬಳಸುವ ಶೈಲಿ. [ಸಂ. ಸಂಸ್ಕೃತ + ಕ]

ಸಂಸ್ಕೃತಕವಿ (ನಾ). ಸಂಸ್ಕೃತ ಭಾಷೆಯಲ್ಲಿ ಕಾವ್ಯ ರಚಿಸಿದವನು : ಸಂಸ್ಕೃತ ಕವಿಗಳಲ್ಲಿ ಕಾಳಿದಾಸನು ಅಗ್ರಗಣ್ಯನೆಂದು ಪ್ರಸಿದ್ಧಿ. [ಸಂ. ಸಂಸ್ಕೃತ + ಕವಿ]

ಸಂಸ್ಕೃತಕಾವ್ಯ (ನಾ). ಸಂಸ್ಕೃತ ಭಾಷೆಯಲ್ಲಿ ರಚಿಸಿದ ಕಾವ್ಯ : ಸಂಸ್ಕೃತ ಕಾವ್ಯಗಳಲ್ಲಿ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಕಾವ್ಯ]

ಸಂಸ್ಕೃತಕಾಲೇಜು (ನಾ). ಸಂಸ್ಕೃತ ಭಾಷೆಯ ಅಧ್ಯಯನಕ್ಕಾಗಿ ಸ್ಥಾಪಿಸಿರುವ ಕಾಲೇಜು : ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಕಲಿಸಲಾಗುತ್ತಿದೆ. [ಸಂ. ಸಂಸ್ಕೃತ + ಕಾಲೇಜು]

ಸಂಸ್ಕೃತಕೃತಿ (ನಾ). ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಕೃತಿ : ಸಂಸ್ಕೃತ ಕೃತಿಗಳಲ್ಲಿ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಕೃತಿ]

ಸಂಸ್ಕೃತಗ್ರಂಥ (ನಾ). ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಗ್ರಂಥ : ಸಂಸ್ಕೃತ ಗ್ರಂಥಗಳಲ್ಲಿ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಗ್ರಂಥ]

ಸಂಸ್ಕೃತಚಿತ್ರ (ನಾ). ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಚಿತ್ರ : ಸಂಸ್ಕೃತ ಚಿತ್ರಗಳಲ್ಲಿ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಚಿತ್ರ]

ಸಂಸ್ಕೃತಜ್ಞ (ನಾ). ಸಂಸ್ಕೃತ ಭಾಷೆಯನ್ನು ಬಲ್ಲವನು : ಸಂಸ್ಕೃತಜ್ಞರಿಗೆ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಿಯವಾಗಿದೆ. [ಸಂ. ಸಂಸ್ಕೃತ + ಜ್ಞ]

ಸಂಸ್ಕೃತಜ್ಞತೆ (ನಾ). ಸಂಸ್ಕೃತ ಭಾಷೆಯನ್ನು ಬಲ್ಲವನ ಸ್ಥಿತಿ : ಸಂಸ್ಕೃತಜ್ಞತೆಯಿಂದ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಜ್ಞತೆ]

ಸಂಸ್ಕೃತಜ್ಞರು (ನಾ). ಸಂಸ್ಕೃತ ಭಾಷೆಯನ್ನು ಬಲ್ಲವರು : ಸಂಸ್ಕೃತಜ್ಞರಿಗೆ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಿಯವಾಗಿದೆ. [ಸಂ. ಸಂಸ್ಕೃತ + ಜ್ಞರು]

ಸಂಸ್ಕೃತಪಂಡಿತ (ನಾ). ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವುಳ್ಳವನು : ಸಂಸ್ಕೃತ ಪಂಡಿತರಿಗೆ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಿಯವಾಗಿದೆ. [ಸಂ. ಸಂಸ್ಕೃತ + ಪಂಡಿತ]

ಸಂಸ್ಕೃತಪಂಡಿತೆ (ನಾ). ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವುಳ್ಳವಳು : ಸಂಸ್ಕೃತ ಪಂಡಿತೆಯರಿಗೆ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಿಯವಾಗಿದೆ. [ಸಂ. ಸಂಸ್ಕೃತ + ಪಂಡಿತೆ]

ಸಂಸ್ಕೃತಪಾಠಶಾಲೆ (ನಾ). ಸಂಸ್ಕೃತ ಭಾಷೆಯ ಅಧ್ಯಯನಕ್ಕಾಗಿ ಸ್ಥಾಪಿಸಿರುವ ಶಾಲೆ : ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಕಲಿಸಲಾಗುತ್ತಿದೆ. [ಸಂ. ಸಂಸ್ಕೃತ + ಪಾಠಶಾಲೆ]

ಸಂಸ್ಕೃತಪ್ರಿಯ (ನಾ). ಸಂಸ್ಕೃತ ಭಾಷೆಯಲ್ಲಿ ಪ್ರೀತಿಯುಳ್ಳವನು : ಸಂಸ್ಕೃತ ಪ್ರಿಯರಿಗೆ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಿಯವಾಗಿದೆ. [ಸಂ. ಸಂಸ್ಕೃತ + ಪ್ರಿಯ]

ಸಂಸ್ಕೃತಭಾಷೆ (ನಾ). ಸಂಸ್ಕೃತ ಭಾಷೆಯಲ್ಲಿ ಪ್ರಚಲಿತವಿರುವ ಭಾಷೆ : ಸಂಸ್ಕೃತ ಭಾಷೆಯಲ್ಲಿ ಕಾಳಿದಾಸನ ಶಾಕುಂತಲ ನಾಟಕವು ಅತ್ಯಂತ ಪ್ರಸಿದ್ಧವಾಗಿದೆ. [ಸಂ. ಸಂಸ್ಕೃತ + ಭಾಷೆ]

ಸಂಸ್ಕೃತಮಯ

ಸಂಪತ್ತ (ಗು). ೧. ಒತ್ತಾಸಿ ಸೇರಿದ ; ಬಿಗಿಯಾಗಿ ಹೊಂದಿಸಿದ. ೨. ಕೂಡಿದ ; ದೆರೆತ. ೩. ಗುಟ್ಟಿಯಾದ ; ದೃಢವಾದ. ೪. ಮುಚ್ಚಿದ : ಮುಚ್ಚಲ್ಪಟ್ಟ. ೫. ಒಟ್ಟು ಸೇರಿದ ; ಗುಂಪಾದ. ೬. ಗಾಯಗೊಂಡ ; ಗಾಯ ಹೊಂದಿದ.

ಸಂಪತ್ತಿ (ನಾ). ೧. (ವಿವಿಧಾರ್ಥದಲ್ಲಿ) ಗುಟ್ಟಿಯಾಗಿ ಸೇರಿಸುವಿಕೆ : "ಧೃತಿಯಂ, ಸಂಪತ್ತಿ - ಧೃತಿಯಂ ಕೀರ್ತಿ ಸಂಪತ್ತಿ, ಚಿತ್ತಾಗಿ ಸಂಗಡಿಸಿಂತಿರಲು, ಸುಪ್ತಿಯಾಗಿ ಬೆಳಗುವಂತಿರಲು" (ಚಿತ್ತಾ. ೬.೧೧). ೨. (ಸಾಮ್ಯ) ಸಜ್ಜಾಯಾಗಿ ಮೂಳಕಾಲುಗಳನ್ನಿಟ್ಟುಕೊಳ್ಳುವ ಒಂದು ಬಗೆಯ ಧ್ಯಾನಿ : ಸಂಪತ್ತಿ, ಅಯಾಪಟ್ಟಿ, ಆಧಾರಾಯಾಪಟ್ಟಿ, ಪದ್ಮಾಸನ, ವಜ್ರಾಸನ, ವೀರಾಸನ - ಈ ಏಳು ಪ್ರಕಾರದ ಧ್ಯಾನಿಗಳ (ಶಬ್ದಮ. ೨-೧೩೩ ಪೆ). ೧೧. "ಪುಟಗಳಕಡೆಟ್ಟಿ ಸೇರಿಸುವಿಕೆ" (ಅಚ್ಚು. ಪಾಠಾಸ್ಥಾಪನೆ) : ಕ್ಯಾರೋ. ಕ್ಯಾಪ್ಸ್, ದಸ್ತ, ಸಪ್ತಪತ್ರ, ಬಾಲಪತ್ರ, ಪ್ರಿಂಟ್, ಬೋರ್ಡ್, ರೋಲ್ - ಈ ಏಳು ಚಟುವಟಿಕೆಗಳು" (ಅಚ್ಚು. ೬-೧೪ ಪೆ). ೧೨. ಸ್ಟಾಪರ್‌ಗಳನ್ನು ಒಂದು ; ಕ "ಪಾದಗಳ ಪದ್ಮರಥದ ಪಾರ್ಶ್ವಪಟ್ಟು ಸೇರಿಸಿ ಸ್ಕ್ರಿಧಾರವಾಗಿ ನಿಂತುಕೊಳ್ಳುವುದು. ಪೃಷ್ಠಾಧಾರಿ ವಿಶ್ರಿಣ ದುಡುವಾಗ ಈ ಸ್ಥಾನದಲ್ಲಿ ನಿಂತುಕೊಳ್ಳಬೇಕು" (ಅಚ್ಚು. ೬೫ ಸ್ಥಾನಗಳು) : ಸ್ಟ್ರಿಕ್ಟ್.ರಥಗಾಮಿ, ಸಂಪ್ಯಾಪಟ್ಟಿ, ಸಂಪತ್ತಿ . . . ಬಾಣವಟ್ಟಿ, ಧೃತಿಯಾಪಟ್ಟಿ - ಈ ಇಪ್ಪತ್ತೈದು ಪೀಠಾಸ್ಥಾನಗಳು" (ಅಚ್ಚು. ೭-೧೨ ಪೆ). [ಸಂ.]

ಸಂಪಟ (ನಾ). ೧. ಬಿಗಿಯಾಗಿ ಹೊಂದಿಕೊಂಡಿರುವಂಥದು ; ಒತ್ತಾಸಿ ಸೇರಿಕೊಂಡಿರುವಿಕೆ. ೨. ಪೆಟ್ಟಿಗೆ ; ಸಂದೂಕ : ಮಾಣಿಕ್ಯ ಸಮಸ್ತಾಂಶ ಧರಮಾಂ . . . ಮುಸಿಯಾಂ ಕೆಯಾಗಾಂ (ಆಚಾ. ೧೮.೫) ; ಸಿಂಹಸಂಪಟಾಸನ ಪಾಲಾಂಬರೆಯಾ" ಸಂಪಟಸಿಂಹಾಸನಾಧಿಪತಿ ಸಿಂಹಾಸನಾಧಿಪತಿಯಾದ (ಧರ್ಮಾ. ೧೦-೧೬). ೩. ಒತ್ತಾಯದಿಂ. ೪. ಬಾಯಿ ; ಮೊಗ : ಸಿಂಹಸಂಪಟ ಸಿಂಹಾಸನ ಸಿಂಹಾಸನಾಧಿಪತಿ ಸಿಂಹಾಸನಾಧಿಪತಿಯಾದ (ಧರ್ಮಾ. ೧೦-೧೬). ೫. ಬಾಯಿ ; ಮೊಗ. ೬. ಬಿಗಿಯಾಗಿ ಸೇರಿಸಿದ ; ಗಟ್ಟಿಯಾಗಿ ಕೂಡಿಸಿದ. ೭. ಗಾಯ ; ಪೆಟ್ಟು. ೮. ಗುಂಪು : ಸಮೂಹ : "ಬಾಣ, ಸಿಂಗಾಣಿ . . . ಸಂಪಟ . . . ಪೆಟ್ಟಿಗೆ - ಈ ೬೯ ಹೆಸರುಗಳು" (ಪಾಣಿ. ೧೫೯-೧) ; ಅಂತರಾಳವಪಟ್ಟಿಯ ಮಾಣಿಕ್ಯವಿಚಿತ್ರಪಟ್ಟಿಯಲ್ಲಿ ಸಿಂಹಾಸನಾಧಿಪತಿಯಾಗಿ ಮಾಣಿಕ್ಯಾಲಂಕಾರಪಟ್ಟಿಯಲ್ಲಿ . . . ಕೂರ್ತು (ಆಚಾ. ೧೮-೨ ಪೆ). [ಪ್ರಾ.]

ಸಂಪಟ (ನಾ). ದೋಣಿ ; ತರಿಗೆ : ಅಂಬಿಯಂಕಾರಪಟ್ಟಿಯಂಕಾರಪಟ್ಟಿಯಂಕಾರಪಟ್ಟಿಯಂಕಾರ ಪಟ್ಟಿಯಂಕಾರ ಸೂಚಿಯಂಕಾರ ಸಂಪಟ ಸಂಪಟಕ [ಆಚಾ. ಸಾಕ್ಷಿಯಂ, ಸಾಮಾನ್ಯ] (ಆಚ್ಚು. ೬-೧೦). [< ಸಂಪಟ. ಕ್ಕೆ ಇದು ಧಾತ್ವಿಗಾಗಿ ಮಾಡಿಕೊಂಡ ರೂಪವಿರಬಹುದು]

ಸಂಪಟಿಕೆ (ನಾ). ೧. ಶಾಲುವಿಕೆ ; ಧಾಟ್ಟಿಸುವಿಕೆ. ೨. ಸೇರುವಿಕೆ ; ಜೋಡುವಿಕೆ. ೩. ಕೊಲ್ಲುವಿಕೆ ; ಸಂಹರಿಸುವಿಕೆ. ೪. ಸಾಕಷ್ಟಾಗುವಿಕೆ ; ಹೊಂದಿಕೊಳ್ಳುವಿಕೆ. ೫. ಜಾಗ ; ನಾಡ : ಜಾಗಪಟ್ಟಿ ಪರ್ಯಾಯವು ಸಂಪಟಿಕೆಯಾಯಿತು (ಆಚ್ಚು. ೫೦-೩೬). ೬. ಸಾಕಷ್ಟಾಗುವುದು ; ಹೊಂದಿಕೊಳ್ಳುವುದು. ೭. ದೃಢತೆ; ಗಟ್ಟಿತನ. ೮. ಶಕ್ತಿ ; ಬಲವಿಕ್ಷಿ. ೯. ದೋಣಿ : ಅಂಬಿ ಮಾಸ್ಥಿಂಪಟ್ಟಿಯಂ ಪಲಿಂ ಪಲಿಂ ಪಲಿ

ಸಂಚಾರ (ನಾ). ೧. ತಿರುಗಿಬರುವುದು ; ಓಟ್ಟುಹರಿದಾಡುವುದು. ೨. ತಿರುಪು ಉಬ್ಬುವಿಕೆ; ಹಣ್ಣಯುವಿಕೆ: 'ದೇಗುಲಸಂಚಾರ' ಪರಾ. ೩. ಸಂಗ್ರಹ; ಸಂಚಯ. ೪. ಉಗ್ಗಿದುದು; ಉಚ್ಚಾರಣ. ೫. ಸಂಕ್ಷಿಪ್ತ; ಸಂಕ್ಷೇಪ. ೬. ಪ್ರವೇಶ; ಪ್ರವೇಶ. ೭. ಸಂಚಲನ; ಅಂಗ. ೮. ತಿರುಗು; ಮುಖಾಯ. ೯. ನಾಶ: ಹಾಳು: ಅಪಚಯ ಶರಣ್ಣ ಮಿಗ ಮೀಸಲು ಬಹುದೆಂಬುದು ಸಂಚಾರಂ ಹೊಯಿತು (ಬಸವ. ೫೦-೦೦). ೧೦. ಪ್ರಯೋಗಿಸಿದ ಬಾಣ ಮುಂತಾದವನ್ನು ಮಂತ್ರಶಕ್ತಿಯಿಂದ ಹಿಂದಕ್ಕೆ ಬರುವಿಸುವುದು: ಈ ಗಣ್ಯರಾಜ ಬ್ರಹ್ಮಾಸ್ತ್ರವ ಸ್ತುಂಭಾಸ್ತ್ರವ ಸಂಚಾರವ ಮಾಡಿಸಿ ಮಂತ್ರಿಯಿಂದ ಮುಂದಕ್ಕೆ ಮಾಡಿಸಿಕೊಳ್ಳಲಿ (ಗದಾ. ೧೫.)

೧೧. ಶಬ್ದಶಾಸ್ತ್ರದಲ್ಲಿ ಅಂಟುವಾದ ನಾಶ; ಪ್ರಕೃತಿ: "ಸಂಚಾರಾ . . . ಸಂಚಾರಾ, ಮುಖಾಮುಖಾ – ಈ ೯ ಪ್ರಯೋಗಂ" (ಶಬ್ದಮ. ೨೦-೧೧೮).

೧೨. ಕೆಲಮಿತ್ರನು ಮಿತ್ರ ನಿರ್ಗಮಿಸುವ ಸ್ಥಳ; ಸ್ಥಿತಿ. ಸಂಚಾರ, ವಿಹೋಪಾಯ ಮುಖ್ಯ ಅನುಭಾಷಣಾದಲು ಏದು ಬಗೆಯ ಕಾರ್ಯಗಳು : ಕಂಬಿಸ್ಥಿತಿ : ಸ್ಥಿತಿ ಸಂಚಾರ ಪ್ರಯಾಣ ಆಧ್ಯಾಯಂ ಭಯಾಪಾಯಕ್ಕೆ ಸ್ಥಿತಿ ಸಂಚಾರ ಪ್ರಯಾಣಂ ಭಯಾಪಾಯಕ್ಕೆ (ಮಿತ್ರ. ೧೨.೧ : ಇದರ ವ್ಯಾಖ್ಯಾನಗಳಲ್ಲಿ ಸ್ಥಿತಿ, ಸ್ಥಿತಿ. ಸಂಚಾರ, ಅಪಾಯಕ್ಷೇಮ. ನಿಷೇಧವಿಧಿಯಿಂದ ಬರುವ ರಾಜ ಮೊದಲಿತರು (ಮಿತ್ರಾ. ೫೫೩). ೧೩. ಓರೆ; ವಕ್ರ : ಸಂಚಾರ = ಓರೆ (ಇಷ್ಟ. ೧೫೬). [ಪಾ.]

ಸಂಚಾಳನ (ನಾ). ೧. ಕೊಲ್ಲುವಿಕೆ; ಸಂಹರಿಸುವಿಕೆ: ಖಾಂಡವ ಗಂಡ ಮುಗಿದ ಶತ್ರುಜಾತಾಮಿಷಯಾಸಂಚಾಳನಕ್ಕೆ ಏನ್ಯಾಯಕ್ಕೆ ಯಾವಾಯ್ತು (ಕುಮಾ. ೧೦-೧೧೦). ೨. ನಾಶಮಾಡುವುದನ್ನು. [ಪಾ.]

ಸಂಚಾಳಕತನ (ನಾ). ಪ್ರಭಂಜನ ನಾಶಕ್ಕೆ ಕಾರಣವಾದದನ್ನು; ಏಳ್ : ಸಂಚಾಳಕತನದಿಂ ಪರಿಹರ (ಬಸವ. ೫೬). ಸಂಚಾಳಕತನವಾಗಿ ಕಡಿಲ ತೊಂಬಾಟ್ಟಮಮಯಿಂ ಇಟ್ಟಿಸಿದಂ (ಆದಿಪು. ೭ ೧೦೦-೨೦೦). [ಪಾ.]

ಸಂಚಾಳಲು (ನಾ). ಪ್ರಭಂಜನ ನಾಶದ ಸಮಯ : ಪ್ರಳಯಕಾಲ : ಬಳ ಮಧ್ಯಾ ಸಂಚಾಳಲುಜಾಲ ಮುಖ ಸಂಚಾರಾಂಬರಾಜ ಭೃಕುಟಿ (ಆದಿಪು. ೬೧-೧೪). [ಪಾ.]

ಸಂಚಾಳನಾಸ್ತ್ರ (ನಾ). ಇದ ಪ್ರಯತ್ನ ಪ್ರಣಯ ಕಾಲಗಳಲ್ಲಿ ಮಂತ್ರಪೂರ್ವಕವಾಗಿ ದೇಹಗಳನ್ನು ಸ್ಪರ್ಶಿಸುವ ಒಂದು ವಿಧಾನ: ಕರಚಾಸಗಳಲ್ಲಿ ಒಂದು ಬಗೆ: ಕಾಣ್ಪಸ್ಪರಂಜಾಲಂಬಂ ಪರಾಂಜಾಲಂಬಂ ಪ್ರಾಣಾಂತಾಯಾಸಮಂ ಮಾಡಿಸಿಯಾಗಿ ಕ್ರಮದಿಂದ ಅಂಗಾಂಗಾದಿಯಾಗಿ ಮಮ್ಮಾಯಂ ಮಾಳ್ಪುದೇ ಸಂಚಾಳನಾಸ್ತ್ರಮೆಂಬುದು (ಮದನ. ೧೫) ; ಮಂತ್ರಪೂರ್ವಕವಾಗಿರುವ ಆಸ್ತ್ರಂ ಪ್ರಯೋಜಿಸಲಾಗಿ ಮಾಳ್ಪುದೇ ಸಂಚಾಳನಾಸ್ತ್ರಮೆಂಬುದು (ಮದನ. ೬೨). [ಪಾ.]

ಸಂಚಾರಮಿತ್ರ (ನಾ). ಪ್ರಯಾಣಾದಲ ಏವ ; ಕಾಲಜ್ಞನೆನ್ನ: ಸಂಚಾರ ಮಿತ್ರಮಿತಿಲಾಪಿಪೋಲ್ . . . ಮೀಚಿಪಂದಾಮಿತ್ರಮಿವಂ" (ಮದನ. ೬-೨೧). [ಪಾ.]

ಸಂಚಾರಿ (ನಾ). ೧ ಸಂಚಾರಿಗ ೨ : ಪರಮಾತ್ಮಾದಿ ಪ್ರಮಾಣಾದಿಗಳಾದ ಪ್ರಮೇಯಾದಿಗಳಾದ ಪ್ರಮಾಣಾದಿಗಳಾದ ಧರ್ಮಾಧರ್ಮಾದಿಗಳಾದ (ಬಸವ. ೧೪-೨) : ದುಷ್ಟಿವಿಷಯ ಸಂಚಾರಿ ಅಷ್ಟಾಪಾಯಂಗಳಿಂ (ಮದನ. ೨-೨). [ಪಾ. ಸಂಚಾರಿ]

ಸಂಚಾರಿ (ಕ್ರಿ). ೧. ಧ್ವನಿಯಾದ ; ನಾಡಿಗೊಳ್ಳು : ಒಂದೆ ಕೊಳ್ಳದಲಿ ಸಂಚಾರಿಪಂ ಮುಸಲಾಯಂ (ಪಾರ್ಶ್ವ. ೦-೨೨) : ಪ್ರಾಣಕ್ಕೆಂದಾ ಸಂಚಾರಿಯ ಚಿಂತಾಮಣಿ ಗುಮಂಡಲಾಕ್ಕೆಂದಂ ಅಂಚಿಯಾಸಿ (ಪಾರ್ಶ್ವ. ೧ ೧೨೦೦). ೨. ಕೊಲ್ಲು ; ಸಾಯಿಸು : ಪಲ್ಲಾಯಂ ಧರಾ ಸಂಚಾರಿಯಾಂತಾ ಬಹುದಿಂ ಬಹುದಿಂ ಬಹುದಿಂ

ಸಂಜ್ಞೆಮಾಡುವಂತೆ ನೀಲಿಯಮಾಡುವ ಲಂಬಾಣಿಗಾದ್ಯಪ್ರಯೋ (ಕಾಡು ೧-೨೬, ೧೯೫೦). ೬. ಸ್ಮಾರಕ ಪಡುವಿಕೆ. ೪. ನಿಗ್ರಹ ; ಹತೋಟಿ. ೫. ಸಂಜಯ ; ಸಂಗ್ರಹ. [ಸಂ.]

ಸಂಜ್ಞೆಸ್ಸ (ಗು). ೧. ದೂರದಿಂದಲಿಗೆಂದ ; ಪುಲಿತಗೊಂಡ. ೨. ಸಂತೋಷವನ್ನು ಹೊಂದಿದ ; ಪಡೆಗೊಂಡ. ೩. ನಡುಗಿದ ; ಅಂಜಿದ. (ನಾ). ೧. ಸಂತೋಷಗೊಂಡಿದವನು; ಶ್ಲಿಷ್ಟ ; ಅಥ ಅಕ್ಷಯಪಾತ್ರೆ ನಿಷ್ಕಾಮ ಶಾಮ್ಯಾಗಾಲು, ಸಂಜ್ಞಿಸ್ಸಾಗಾಲು (ಅಷ್ಟ. ೪೫); ಸಂಜಾತ ಶ್ಲಿಷ್ಟದ ಜಂಗಂಮರು ಪಡೆದರು ಸಂಜ್ಞಿಸ್ಸಾದನ್ನ ಕೊಂಡು ಏನು (ಪಾಂಡ. ೩೬-೧೦). [ಸಂ.]

ಸಂಜ್ಞಿತ (ನಾ). ಭಾಗಿಯಾದ ; ಭಾಗಾಧಾರ ಪಡೆದವ : ಸಜ್ಜ ಖಾಯಂ, ಸಂಜ್ಞಿತ, ಖಚ, ಭಕ್ಷ, ಧಿಷ್ಣ, ಟಿಜ್ಞಿಯಂ, ಕಾಜ್ಯಭಾಗಿಗಳ ಧಾರಾಳಂದಂತೆ (ಕ್ಷಣ. ೧೨-೧೩). [?]

ಸಜ (ನಾ). ಒಂದು ನಿರ್ದಿಷ್ಟವಾದ ಕಾಲದಿಂದ ಪ್ರಾರಂಭವಾಗುವ ಕಾಲಗಣನೆ ; ಯುಗಾರಂಭ ; ಶಕ : ಸ್ಪಷ್ಟ ಜಚ್ಚಚಾಲಾಂಗಾಂಜಯಪ್ರಭವ ಪಜಗಳನ್ನು (ಭೂಗ. ಗಣಿ. ೧೨-೧೯ (೧೯೦) ; ದಿನ್ಯಾಮಿಯಾಂ ಮಿಷ್ಟಿಕ್ಕಯಾಯಂ ಈಗ ಸಜಯಾಯಿಸಿದ್ದಾಗಿ ವಿಷಯಿಸಿಲ್ಲಿ (ಪಜ ಗಣಿ. ಗಣಿ-೨೪ ; ೧೯೫೯). [< ಸಂ. ಶಕ]

ಸಜಮಜ (ಗು). ಮುಳ್ಳನ್ನು ಹೊಂದಿದ ; ಅಮಟಾಮಿತವಾದ : ಜಯಾಂ ಸ್ಪಿಗಂ ಸಜಸ್ಪಯಾಂ ಧರಣಾಯಂದಾಂ ಪಜಾಯಾಮ್ಯಂ ಕೆಸ್ಸಾಂ . . . ಸಲಾಯಾಂ ಜಾಯಾಂ ಪಜ್ಞಯಿಂದ (ಪಜಾ. ೨-೧೧) ; ಸಜಯಾ ಪಜಾಯಾಗಳ ಜಾಜಯಾಂಜ ದೆಜಯಿಂದಿಂದ ಯಾಯಾಯಂದಿಜಳಗಳು . . . ಅಧಿಜಾಧಿಜಳಾಗಳಿಗೆ ಯಾಜಯಾಯಾಜಿಸ್ಸಿಜ್ಞಯಾಜಿಜಯಿಂದ ಧಾಜಾಗಾಯಿಜಿಂದಜ್ಞ (ಪಜ್ಞ. ೨-೧೨.).

ಸಜ್ಜ (ನಾ). ಬಂಡಿ ; ಗಾಡಿ : ಜಂಜಂದ ಸಜ್ಜಿ (೧೯೦) ಅಂಗಂಜಜ್ಜಿ ಸ್ಪಾಧಾಯಾಜಜ (ಪಜಾ. ೧೧೨-೧೧೨) ; ಸಜಜ್ಞಿಯಾ ಪಜ್ಞಿಸ್ಸಿಯಾ ಗಂಡಿಂದ . . . ಯಾಜಿಜ ಪಜ್ಞಿಯಾಗಾಂ ಯಾಜಿಜ ಗಂಜಿಯಾಂ (ಪಜ್ಞಿ. ೧೨-೧೨ ೫).

[< ಸಂ. ಶಾಖ]

ಸಜ್ಜ, ಸಜ್ಜಿ, ಸುಜ್ಜ, ಸುಜ್ಜಿ (ಗು). ಹೊಸ್ಸಿದ ; ವಿಜಿರಿತವಾದ : ಅಜಾಗ ಸಜ್ಜ ಯಾಜ ಯಾಜ್ಞಿ (೧೯೧). 'ಸಜ್ಜಕಾಯಾಲ' ಜಜಾ. ಸಜ್ಜಿ : 'ಸಜ್ಜಿ ಕಾಯಾಲ' ಜಜಾ. ಸುಜ್ಜ : 'ಸುಜ್ಜಕಾಯಾಲ' ಜಜಾ. ಸುಜ್ಜಿ : 'ಸುಜ್ಜಿ ಕಾಯಾಲ' ಜಜಾ. [<— ಮಾ. ಸಜ್ಜ]

ಸಜ್ಜಕಾಯಾಲ, ಸಜ್ಜಕಾಯಿಲೆ, ಸಜ್ಜಕಾಯಾಲ, ಸಜ್ಜಿಕಾಯಾಲ, ಸುಜ್ಜಕಾಯಾಲ, ಸುಜ್ಜಿಕಾಯಾಲೆ, ಸುಜ್ಜಿಕಾಯಾಲೆ (ನಾ). ಹುಣ್ಣಿದ ಕಾಯಿಲೆ ; ಉಲ್ಬಣವಾದ ವ್ಯಾಧಿ : ಅಜಾ ಅಜ್ಜಗ ಸಜ್ಜಕಾಯಾಲ (ಪಜ್ಞಿ. ೨೦). ಸಜ್ಜಕಾಯಿಲೆ : ಯಾಜಾಗ ಜಾಯಾಗ ಸಜ್ಜಕಾಯಿಲೆ (ಪಜ್ಞಾ. ೧೨೫). ಸಜ್ಜಿಕಾಯಾಲೆ : ಕಾಯಾಜಕಾಯಾಲಿಗ ಸಜ್ಜಕಾಯಾಲ (ಸ್ಪ.ಜಾ. ೨೦). ಸಜಜ್ಞಿಕಾಯಾಲೆ : ಸಜಜ್ಞಿಕಾಯಾಲೆಯಾಗಿ ಪ್ಲಾಸ್ಟ ದೆಜಲಜ್ಞಿಸಿದಿಜ್ಞಿಸಿ (ಪಜಾಗ್ಯ. ೧೨೬). ಸಜ್ಜಕಾಯಾಲೆ: ಅಜ್ಜಿಸಿಗೆ ಸಜ್ಜಕಾಯಾಲೆ (ಪಜಾಜಾ. ೧೨೧); ಸಜ್ಜಿ ಭಾಯಾಜಿಗೆ ಸಜ್ಜಕಾಯಾಲೆ ಅಂತಾ ನಿಲ್ಲ ಭರಿಸ್ತಾಂ ಬಂತು (ಪಜಾಜ. ೧೨೫). ಸುಜ್ಜಕಾಯಿಲೆ : ಜಾಜಯಾಂ ಸುಜ್ಜಕಾಯಾಲೆಯಿಜ್ಞಿ ಈ ಜಾಜಾಗ್ಯಾ ಕಾಯಿಲೆಯ ಯಾಗ ಬಂದಾಗ (ಪಜ್ಞಿ. ೧೧); ಸಜಜ್ಞಿ ಸುಜ್ಜಕಾಯಿಲೆ (ಪಜಾಗ್ಯ. ೧೨). ಸುಜ್ಜಿಕಾಯಾಲೆ : ಸಜ್ಜಿ ಕಂಜಿಗ ಸುಜ್ಜಿಕಾಯಾಲೆ (ಪಜಾಜ. ೧೨೧) : ಅಗ್ನಿಯಿಗೆ ಸುಜ್ಜಿಕಾಯಾಲೆಯಾಗಿ ಅಜ್ಜ ಯಾಯಾಜಿಸ ಇಜ್ಜ ಕಾಯಾಲೆಯ ವಿಜಂಜಾಗಿಜಿ (ಪಜಾಜ. ೧೨೧). [ಸಜ್ಜ + ಕಾಯಿಲೆ]

ಸಜ್ಜಕಾಯಿಲೆ 'ಸಜ್ಜಕಾಯಾಲೆ' ನೋ.

ಸಜ್ಜಕಾಯಾಲೆ 'ಸಜ್ಜಕಾಯಾಲೆ' ನೋ.

ಸಜ್ಜಿ 'ಶಕ್ತಿ' ನೋ.

ಸಜ್ಜಿ (ನಾ). ಉಗ್ರ ; ಶಕ್ತಿಪರೆ : ಸುಂಜಾಜಜಿಯಲು ಸುಜಿಜ ಸಜ್ಜಿ [ಜಾಜಾ. ಸುಜಿಜಿಯಾಯಿಗೆ ಸಿಜಿ ಸಿಯಾಜಿ ಯಾಜಿಜಿಗಾಜಾಜಾ (ಜಾಜಾ. ೫೨ ೧೬:೧); ಸಂಜಾಜಿಜಾಗಾಂಜ ಶಜಜಿಂ ಸಿಜಿಜಿಯಾ ಭಿಜಿಗಾಜಾ ಬಿಜಿ ಜಿಜಿ:ಜಿಗಾಜಿ) ಜಿಜಿ (ಜಾಜಾ. ೧೨-೧೨-೨). [< ಸಂ. ಸಜ್]

ಸಜ್ಜು 'ಸಜ್ಜ' ನೋ.

ಸಜ್ಜುಕಾಯಾಲೆ 'ಸಜ್ಜಕಾಯಾಲೆ' ನೋ.

ಸಜ್ಜ (ನಾ). ಒಬ್ಬ್ಯಾಪಸ ಹೆಸರು (?) : ಸ್ಪಷ್ಟ ಶ್ರೀಮಾಲ್ ಸಜಜ ಸಂಗಜ್ಞಿಯ ಯಾಗ್ಯಗಜ್ಞಿ ಯಾಜಿಯ ಸಂಜ್ಞಿ (ಜಜ ೫೫ ಜಜ್ಞಿ. ೨೫೨-೨.೫೫) [?]

ಸಜ್ಜೂ (ಗು). ೧. ಯಜ್ಞಯಾಗಾದಲ್ಲಿ ಕರ್ಮ ಆಥವಾ ಪ್ರತಿಜ್ಞೆಯನ್ನು ಆಚರಿಸುವ. ೨. ಪಶ್ಚಿಮದ ದಿಕ್ಕಾಗಿರುವ ಸಂಜ್ಞಿಯ. (ನಾ). ೧. ಶ್ರೇಷ್ಠ ಆದರ್ಶ ಕರ್ಮಗಳಿಂದ ಲೋಕಿಯರು : ಜಾಯಾಜಾಂದಿಂ ಪಜಜಿಯಾಯಿಜಿಂಜಿಜಿಜಿಜ್ಞ ಸ್ಪಿಗಳಿಂ ಯಾ ಸಾಜಾ ಜಿಜಿಂ ಶ್ಲಿಷ್ಟಿಜ್ಞಿಜಿಂಜಿಂ ಸಜಜಿಂ ನಿಜ್ಞಿಜಿಂಜಿ (ಜಜಿ. ೧೨-೫೫). 'ಅಕರ್ಮ' ಜಜಾ. [ಸಂ.]

ಸಜ್ಜೂಕ (ಗು). ೧. ಯಾಯಜ್ಞಾದಲ್ಲಿ ಕರ್ಮ ಆಥವಾ ಪ್ರತಿಜ್ಞೆಯನ್ನು ಆಚರಿಸುವ. (ನಾ). ೨. [ಜ್ಞಾಗ] ಕರ್ಮಾಚರಣೆಯನ್ನು ಅಡಚಣ್ಣವಿಲ್ಲದೆ ಒಂದು ಬಗೆಯ ಧಾನು: ಶ್ರೀಜಜಿಜಿಂ ಶ್ಲಿಷ್ಟಾಜಜಿಜಿಂಜಿಂ ಯಾಜಿಜಿಜಿಜಿಂ ಎಲ್ಲಿ ಪಜಿಜಿಜಿಜಿಜ್ಞಿಯಾ ಬಿಜಿಜಿಂ ಜಿಜಿಂ ಜಿಜಿಂ ಸಜಜಿಜಿಜಿಂಜಿಂ (ಜಜಿ. ೫. ೨೫೫ ಶ್ಲಿ.) : ಧಾಜಿಜಿಜಿಜ್ಞ ಸಜಜಿಂ ಅಜಿಜಿಂ ಸಜಜಿಂ ಧಾಜಿಜಿಂ ಬಿಜಿಜಿಜಿಜಿಂ. ಯಾಜಿಂಜಿಜ್ಞ ಅಜಿಜ್ಞಿಜಿಂಜಿಜ್ಞ ಸಜಜಿಂ, ಅಜಿಜ್ಞಿಸಿಜಿಂಜಿಜ್ಞ ಅಜಿಜಿಂ (ಪಜಿ. ೧೨.). 'ಶ್ರೀಕರ್ಮ' ಜಜಾ. [ಸಂ.]

ಸಜ್ಜೂಕಶ್ಲಿಷ್ಟಜಜಿಜಿಂ (ನಾ). = ಸಜಜಿಂ ೨ : ಅಜಿಜಿಂ ಸಜಜಿಂ ಜಿಜಿಂಜಿಂ ಯಾಜಿಜಿಂಜಿಂ ಅಜಿಜ್ಞಿಜಿಂಜಿಂ ಶ್ಲಿಷ್ಟಾಜಜಿಜಿಂ, ಸಜಜಿಂಜಿಂಜಿಜಿಂಜಿಂಜಿಜಿಂಜಿಂ . . . ಜಿಜಿಂಜಿಂ: (ಜಜಿ. ೧೨೫.). [ಸಂ.]

ಸಜ್ಜೂಕಶ್ಲಿಷ್ಟಾಜಜಿಜಿಂ (ನಾ). = ಸಜಜಿಂ ೨ : ಅಜಿಜಿಂ ಸಜಜಿಂ ಜಿಜಿಂಜಿಂ ಯಾಜಿಜಿಂಜಿಂ ಸಜಜಿಂ ಸಾಜಿಜಿಂ ಯಾಜಿಜಿಂಜಿಂಜಿಜಿಂಜಿಂ ಜಿಜಿಂಜಿಂಜಿಜಿಂಜಿಂ ಜಿಜಿಂಜಿಂಜಿಜಿಂಜಿಂ ಸಜಜಿಂಜಿಂಜಿಜಿಂಜಿಂ (ಜಜಿ. ೧೨೫) : ಜಜಿಂಜಿಂ ಅಜಿಜ್ಞಿಜಿಂ ಶ್ಲಿಷ್ಟಾಜಜಿಜಿಂಜಿಂ, ಶ್ಲಿಷ್ಟಾಜಜಿಜಿಂಜಿಂ ಜಿಜಿಂಜಿಂಜಿಜಿಂಜಿಂ ಸಜಜಿಂಜಿಂಜಿಜಿಂಜಿಂ (ಪಜಿ. ೨೫). [ಸಂ.]

ಸಜ್ಜು, ಸಜ್ಜ (ಗು). ೧. ಭಾಗಗಳನ್ನೊಳಗೊಂಡಿರುವ : ಭಾಗಸಹಿತವಾದ. ೨. ಎಲ್ಲ ; ಸರ್ವಾಗ್ರ : ಯಜಾಜಾಗಳು) ಯಾಗ ಕಂಜ್ಞಿಜಜಾಂಜಂದ) ಸಜಜಿಜ್ಞಿಜಿಜಿಜಿಂಜಿಂ ಯಾಜಿಜಿಂಜಿಂ ಶ್ಲಿಷ್ಟಾಜಜಿಜಿಂಜಿಂ (ಜಜಿ. ೧ ೧೫೫) ; ಜಜಿಯಾಜಿ ಯಾಜ ಸಜಜಿ ಜಾಗಗಳ್ಳಿಂದ್ಲಿ (ಜಜಿ. ೨೫೬) ; ಜಾಗಾಯಿಜಿಜಿಜಿಜಿಂಜಿಂ ಜಿಜಿಂಜಿಂಜಿಜಿಂಜಿಂ ಶ್ಲಿಷ್ಟಾಜಜಿಜಿಂಜಿಂ (ಜಜಿ. ೨-೧೦). ೩. ಮೊದಲಾದ ಸ್ಪರ್ಧೆಯನ್ನು ಹೊಂದಿರುವ. (ನಾ). ೧. ಭಾಗಗಳನ್ನೊಳಗೊಂಡಿರುವುದು: ಸಜಜಿಂಜಿಂಜಿಂಜಿಂ: ಉಜ್ಞಿಸಿಂಜಿಜ್ಞಿಜಿಂಜಿಂಜಿಜಿಂಜಿಂಜಿಜಿಂಜಿಂ ಸಜ

[illegible] ೪. [illegible] (ಸಂ.)

ಸಕಲಂಕ (ನಾ). ದೋಷದಿಂದ ಕೂಡಿರುವುದು ; ಕಳಂಕವನ್ನು ಹೊಂದಿರುವುದು: [illegible]

ಸಕಲಕಲಾಧರ, ಸಕಲಕಲಾಧರ (ನಾ). ೧. ಎಲ್ಲ (ಹದಿನಾರು) ಕಲೆಗಳನ್ನು ಧರಿಸಿದವನು ; ಪೂರ್ಣಚಂದ್ರ : [illegible] ೨. ಎಲ್ಲ ಕಲೆಗಳನ್ನು ಬಲ್ಲವನು ; ಒಂದು ಬಿರುದು : [illegible] (ಸಂ.)

ಸಕಲಕಲಾಧರೆ (ನಾ). ಎಲ್ಲ ಕಲೆಗಳನ್ನು ಬಲ್ಲವಳು : [illegible]

[illegible]

[illegible] (ನಾ). [illegible] : [illegible]

ಸಕಲಜ್ಞ, [illegible] (ನಾ). ಎಲ್ಲವನ್ನೂ ತಿಳಿದಿರುವವನು ; ಸರ್ವಜ್ಞ : [illegible]

[illegible] (ನಾ). ೧. ಎಲ್ಲವನ್ನೂ [illegible]: ಸರ್ವಸ್ವವನ್ನು [illegible]. ೨. [illegible] "ಯೋಗ್ಯನಾದ ತನ್ನ ಮಗನಿಗೆ ಅಥವಾ ಅವನು ಇಲ್ಲದಿದ್ದರೆ ಯೋಗ್ಯನಾದ [illegible] ಒಬ್ಬನಿಗೆ ತನ್ನ ಮನೆಯ ಪರಂಪರೆ ಮತ್ತು ಧರ್ಮವು ನಡೆಯಬೇಕೆಂದು ತನ್ನ ಸರ್ವಸ್ವವನ್ನು ಕೊಡುವುದು" [illegible]

[illegible] (ನಾ). [illegible] ಒಂದು [illegible] ; [illegible] : [illegible] (ಸಂ.)

[illegible] (ನಾ). ಎಲ್ಲಾ ಕಾಲ ; ಸರ್ವಕಾಲ : [illegible] (ಸಂ.)

[illegible] (ನಾ). = [illegible] : [illegible]

[illegible] (ಸಂ.)

[illegible] (ನಾ). ಎಲ್ಲಾ ಬಗೆಯ ಬಟ್ಟೆ (?) : [illegible]

[ಸಂ ? + ಬಟ್ಟೆ]

ಸಕಲವ್ಯಾಪಿ (ಗು). ಎಲ್ಲೆಡೆಯೂ ಹರಡಿರುವ : ಸರ್ವವ್ಯಾಪಿಯಾದ : [illegible]

ಸಕಲವ್ಯಾಪ್ತಿ (ನಾ). ಎಲ್ಲ ಕಡೆ [illegible] ; ಸರ್ವವ್ಯಾಪ್ತಿ : [illegible]

[ಸಂ. ಸಕಲವ್ಯಾಪ್ತಿ]

[illegible] (ನಾ). [ವ್ಯಾಕ] ಸ್ವರಸಹಿತವಾದ ವ್ಯಂಜನ : [illegible]

[illegible] (ನಾ). ೧. (ಉಣ್ಣೆ ಕೆಂಪು ಬಣ್ಣದ) ಉಣ್ಣೆಯ ಬಟ್ಟೆ ; [illegible] ೨. ಕೆಂಪುಬಣ್ಣ : [illegible] ನೋಡಿ. [illegible] : ೧. [illegible]

[illegible] (ಕ್ರಿ). ಉಣ್ಣೆಯ ಶಾಲನ್ನು ಹೊದೆ, — ಧರಿಸು : [illegible]

[illegible]

[illegible] (ನಾ). ಕೆಂಪುಬಣ್ಣ ; ಕೆಂಪು ಬಣ್ಣ : (ಶ). [illegible]

[illegible] (ನಾ). ಒಂದು ಬಗೆಯ ಕೆಂಪುಬಣ್ಣದ [illegible] : [illegible]

[illegible] [illegible] ನೋಡಿ.

[illegible] (ನಾ). ರೈತ ಮತ್ತು ಸರ್ಕಾರದ ನಡುವೆ [illegible] : (ಶ). [illegible]

[illegible] (ನಾ). ಮಂತ್ರದ ತಾಯಿತ ; ರಕ್ಷಾಬಂಧ : [illegible] (?)

[illegible] (ನಾ). ೧. [illegible] : [illegible] ನೋಡಿ. ೨. ಮಂತ್ರದ ತಾಯಿತವನ್ನು ಕಟ್ಟುವುದು (?) : [illegible]

ಮುಂಮಿಡಿಗಳ್ ಕೆಲಂ ದಿನ್ನ ಪಾರಿಭಾಗಾಂಬುಮಿಡಿಗಳ್ (ಪಾರಿಭಾ. ೨೦-೨೪ ಪ) ; ಸಂಬಂಧದಲಿ ದಿನ್ನ ಭಾಗದಿಂತ್ತ ಸಲು ಶೃಂಗಾಟದಿನ್ನಿರು ಪ ಪಡಿ ಸಂಬಂಧಾಪಡಿ ಮಾಡಿಮಿಡಿಗಳಿದಾಂಗ ಪೂಡು (ಭಾಷ : ೨೦-೨೬). [ಪಂ.]

ಪಲಿಕೇಶಿ (ಸ್ಥ). ಒಬ್ಬ ಗೊಂಡಿ (?) : ನಂಜಿಪಡಗೊಂಡಪಡಾಳ್ಳಿಳ ಮೊಳ್ಳಿಂದ ಸಲಿಕೇಶಿ ಕೊಳಪ್ಪಡಿ ಶ್ರೀಮಾಡಿಪಡಿಗಳಿಂದ ಸಿಸ್ಟಿಪಡಿಪಡಿಯ ಪೋಷ್ಟಿಸ ದಿಸ್ಟಿಪಡಿಸ್ಟ ಪಾರ್ಟ (ಪಲಿಕೇ. ೧ ೨೦). [ಪಲಿಕೇಶಿ + - ಅಸ್ಸಿ]

ಪಲೆ (ನಾ). [ಸಂಸ್ಕೃತ] ಚರ್ಮಸ್ಪರ್ಶದಿಂದ ಹುಟ್ಟುವ ನಾಲ್ಕನೆಯ ಪ್ರೌತಿ: ಸ್ಪರ್ಶ ವಿಷಿಳೆ ಗಂಧ ಸಂಯೋಜಿಸಲು ಸಾಲ್ಲು ಪ್ರೌತಿ (ಪಂಗ. ೧೫.) ; ಪ್ರೌತಿಯಾದ . . . ಪಲೆಗಾ (ಪಾರಿಭಾ. ೧೧.). [ಸಂ. ಪಲೆಗಾ = ತಿಳ್ಳಿಸ್ಪರ್ಶವನ್ನು ತೊಂದಿರುವುದು]

ಪಲೆಕೇಶ, ಪಲೆಕೇಶ (ನಾ). ಸಲುಮ್ಮಿ ಒಚೆಯಿಸಿದವನು: ತಲಮಿತ್ಯ : ಪಿಡ. ಪಲೆಕೇಶ : ಚಲಿಯಮಾಡಿಪಡಿಸಿಗಳಾಗಿ ಅಂಗಿಸಿದ ಪ್ರಕಾರ ನಿಜಾಸಿಸುವಂತಾ ಪಾಲಿಕ ಮಾಡಿಪಡಿಸಿ ಚಿಪ್ಪಿನ (ಭಾಷ. ೨೦-೨೧) ; ಪಲೆಕೇ ವಿದ್ಯಾ ಗಾಣ್ಯಾಭಾಷ್ಟಮಾಡಿಪಡಿಸಿ ಒಚೆಗಾ (ಭಾಷ. ೨೨-೨೦). [ಪಂ.]

ಪಲೆಪಾಟು (ಗ). ೧. ಒಸರಿನಿಂದ ತೊಳೆದ ; ಒಗೆದಾದ : ಪಲೆಪಾಟು ಮಲೆಯಾ ದಂಡಾಳ್ಳಿಯೊಳ್ ಬೋಲು ಗೆಂದಾ ದಾಲ್ಟ(ಟ್ಟಿ) ಅಪಲೆಯಾದ ಬೋಳಾಡಿಪಡಿಂ ಕೊಂಬ್ಳೊಳಾದಾ ಕಿಬ್ಬಾಳಿಂ ದಾಲ ಬಾಲಾಂ ಅಪಾಲಾ (ಪಲೆಪಾ. ೬-೬). ೨. [ಪ್ರೌತಿ] ಸುವಿದ:ಬಿಡಸ್ಸುಬ್ಬುಮಾಡಿಪಡಿ ದೋಷದಿಂದ ಕೂಡಿದ : ಇದು ಪೋಲಾಳಿಪಡಿಸ್ಟಾಪಾಲಾ ಪಾಪಾಂಪಡಿಪಾಲಿಂಗಾಲಾಂ (ಪಲೆಪಾ. ೬-೨೦). [ಪಂ.]

ಪಲೆ 'ಪಲ' ನೋ.

ಪಲೆಪ (ನಾ). ಕಳಂದಿಂದ ತೊಡಿದುದು ; ದೋಷವನ್ನು ಹೋಂದಿದುದು : ಸಲಿಪಾಪಾಲಿ ಪಾಪಿಂಪಡಿಪಾಲಿ ಸಲಿಪಾಪಾಲಿಪಾಲಿಂ ಪಾಪಾಪಾಲಿ ಪೋಷಾ ಪಾಪಾಲಿಪಾಲಿಪಾಲಿಪಾಲಿಪಾಲಿ (ಪಾಲಿ. ೬-೨೦). [ಪಂ. ಪಾಪಾಲಿ]

ಪಲೆಪಾಪಿಪಾ 'ಪಲಿಪಾಪಿಪಾ' ನೋ.

ಪಲೆಪಾಪಿಪಾ (ನಾ). = ಪಲಿಪಾಪಿಪಾ : ಪ್ರೌಪಾಪಿಪ್ಪಾಪಾ ಪಾಪಾಪಿಪಾ (ಪಾಪಾ ೨೦. ೧೨-೧೨ ೨೦೧೨). [ಪಂ. ಪಲಿಪಾಪಿಪಾ]

ಪಲೆಪ್ಪಮಾಪಿಪಾ (ನಾ). ೧. ಎಲ್ಲ ದಿಸ್ಸು ಸ್ಪಷ್ಟವಿರಿಪಿ. ೨. ಎಲ್ಲ ಭೂಮಿಗೆ ಒಡೆಯನಾಗಿರುವಿಕೆ ; ಚಕ್ರವರ್ತಿತ್ವ. ೧. ೨ : ಮುಳ್ಳ ಮಹೋದಾ ಪ್ರಪಾಪ್ಯಪಾಪಾಪ್ಪಾಪ್ಪಂ ಪೋಷಾಪಾಪಾಪಾಪ್ಪಂ ಪಾಪ್ಪಗಳ ಪಪ್ಪ ಪಿಪ್ಪಿಪಿಪಾಪಿಪಾ ಪಾಪಾಪಿಪಾಪಾಪ್ಪಾಪಾಲಾ ಪ್ರಪಾಪಾಪಾ

ಪಡಿಗ: 'ಪಡಿಗ' ನೋ.

ಪಡಿತ 'ಪಡಿತ' ನೋ.

ಪಡಿಸು, ಪಡಿಗು, ಪಡಿಸ್ (ಕ್ರಿ). ೧. ಮುಂದಾಗುವುದನ್ನು ತಿಳಿಯಪಡಿಸು ; ನಿಮಿತ್ತ : ಶಕುನ : "ಶಕುನ – ಪಡಿಸು, ಶಕುನ – ಪಡಿಗು" (ಯಾಪ. ೩೫ ಭೂಮಿ). ೨. ಭವಿಷ್ಯವನ್ನು ಹೇಳುವುದೆಂದು ನಂಬುವಾಗಿಯು ಶಕ್ತಿ; ಶಾಲಿಸ್ : ಶಕುನಪಡಿಸ್ : "ಸಕಲ (ಸಗುನ) – ಶಕುನ, ಉಪಸಕಲನ, ಶಾಲಿಸ್" (ಅಭಿ. ೨೦೫). ಪಡಿಗ : ೧. ಒಂದು ಭವಿಷ್ಯ ಹೇಳುವವನ ದೇಗ ಮೊಗ ಆ ದೇವ ನಿಂಗಪ್ಪನ ಸಾಂಗ ಬಿಗ್ಗ ಹೊಟ್ಟಿ . . . ಹೊಡಸೋಣ (ಯಾ.ಆ ೫೬). ಪಡಿಗಾ : ೧. ಆಗ ಅಳಿಗಾ: ಅಗಾ ಹುಡಿಗಾ (ಯಾಪ, ೨-೧೫). ೨. ಎಡಸೋಣ ಪಾಗಿಡದ. ಪಡಿಗಾಸಿಪ : ಭಾಪಿಪಡಿ (ಅಭಿ. ೧೯-೨೨). [< ಸಂ. ಶಕುನ]

ಪಡುಪಣಗ (ನಾ). ಶಕುನ ಹೇಳುವವನು ; ಮುಂದಾಗುವುದನ್ನು ತಿಳಿಯಪಡಿಸು : ಪಡುಪಣಗ, ಜೋಯಿಸ, ಕಟ್ಟಿ,ಪಿಸಿಪ (ಯಾಪ. ೫೯-೧೦). [ಪಡಪ + ಪಣಗ (< ಶಾಪ)]

ಪಡುಪಪ್ಪೆ (ನಾ). ಮುಂದಾಗುವುದನ್ನು ತಿಳಿಯಪಡಿಸುವ ಹಕ್ಕಿ ; ಶಕುನ ; "ಪಿಂಗಳ" (ಯಾಪ. ೬ ೧-೨೨). [ಪಡಪ + ಪಪ್ಪೆ]

ಪಡುಪಿ (ನಾ). = ಪಡುಪಪ್ಪೆ : ಶಕುನ – ಪಡುಪಿ (ಯಾಪ. ೨೫೫ ಭೂಮಿ). [< ಸಂ. ಶಕುನಿ]

ಪಡುಪಿಗ (ನಾ). = ಪಡುಪಣಗ : ಪಡುಪಣಮ್ಮಾಪ ಪೆಟ್ಟಿಗಲು . . . ಪಪ್ಪೆ ಪಪ್ಪೆಯಾ[ಪಾ ಪಡುಪಣಮ್ಮಾಪಿಪಣಮ್ಮಾಪಿಗಳಿಂದ (ಯಾಪಾಪ್ಪೆ, ೧೨-೧೩). [ಪಡಪ + ಪಿಗ]

ಪಣ್ಕೆಯ (ಅ). ಒಪೆ:ಯುಳ; ಒಂದು ಸಲವಪ್ಪ: ಅಳಿಪಿಯಲು ಜಾಗರಣ್ಣಿ ಭಕಾಲಾಭಪಡಿಸಾಗಿಪಡಿಪಿಪಿಪ

ಸಿಮಾಸಿಖ್ಖಾರಮಿತ ಸಜೀವ (ಭಾರತಾ, ೪-೨೧) ; ಮುಳ್ಳಕ ಬಣ್ಣಿಕ್ಕಿರ ಬಾಣದಿಂ ಸಜ್ಜಿಸಿದವರ್ (ಗಜಪ, ೪-೧೦) ; ಅಜೆಯಾಗಿ ಕಟ್ಟಿ ಪಿಡಿದ್ರುಡಿಸಿಗಳ ಅಳವಡಿಸುಗಿ ಸಜ್ಜಿ ಮಿನ್ನ (ಗಜಪ). ೨. ಸಿದ್ಧಮಾಡಿಕೆ ; ಸಿದ್ಧ : ಬಾಯಿಸಜ್ಜಿ ಕಾಯಿಂ ಸಜ್ಜಿಯಂತೆ ಮಾಡುಗಳ್ (ಭಾರತ, ೬೮-೨) ; ರಥಕ್ಕೆ ಭೂಮಿಗೆ ಕಾಷ್ಠಂಗಳ ಸಜ್ಜಿಯಿಪೆನಾ ದೇವಾಲ್ ಕಟ್ಟಿಯಿಂ ಬಂದಿರ್ದಂತಿರ್ದ ಬಿಟ್ಟ ಗಾಜಿನ ಬಾಧಿಯಂಗ ಚಿತ್ರ ಮೆಳೆದಿಪೆನಾ ದೇವಾಲ್ ಕಟ್ಟಿಯಿಂ ಬಂದಿರ್ದಂತಿರ್ದ ಬಿಟ್ಟ ಗಾಜಿನ ಬಾಧಿಯಂಗ ಚಿತ್ರ (ಭಾರತ, ೬-೧೦) ; ಸಜ್ಜಿ ಪಲಿಸಿಕೊಂಡು ಅವರಾಯ್ದು ಬಿಡ ಸಜ್ಜಿಯಾ ವಿಷ್ಣುಯಿ ಸಲಿಸುಜೆ (ಭಾರತ, ೬-೧೫೯). ಸಮಿತೆ : ೧. ಬಟ್ಟೆಯ ಚೆಳಿಗೆ ಪಿ ೫ ಸುಮಿಯ ಚೆಳಿಗೆ ಪಿ ೬ (ಕಾಶ ೧೮೦-೬-೨೪ ; ೧೮೦). ಸಿಟ್ಟಿಗೆ : ೧. ಬಟ್ಟೆಯ ಚೆಳಿಗೆ ಪಿಂಡಿಕ್ಕಿರ್ಂ ಹಾಗ ಸಜ್ಜಿಯಾ ಚೆಳಿಗೆ ಪಿಂಡಿಕ್ಕಿರ್ಂ ಹಾಗ (ಆಶ ೪. ೧೯೨೦೦೦ ೮೫ ೧೪ ; ೨೦೦೦). ಸಿಟ್ಟಿಗೆ : ೧. ಆಲ್ಲಾಗ್ (ಕಾಶಾ. ಭೂಮಿಯಾಜಾಜಾಜ

ಕ್ಷಣ ಸಕ್ಕ (೧೫.೩೩ ಚಕ್ಷುಷ. ೨೫-೨, ೩೦ ೧೦೦ ೧). ಸಾಕ್ಕೆ : (೨.೧೧೦೬ ದ್ವಿತ್ವತ ಅಂಶಂ - - ಅ೨.೮ – ಅ೨.೮ . . . ಸಾಕ್ಕೆ – ಸಾಕ್ಕೆ (೧೫೫೫. ೫೮೨ ಕ್ಷುಷ) ; ಶಿವಾಜಿಷಕ್ಕೆ ಸಾಕ್ಕೆ ಅಂಬಂಗಾದ ಶೌಚ ಪಾಲ್ಕಿ(ಡಿ)ಕರು (ಶಿವಾ ೧೫-೦, ೧೨೦ ೮೦ , ೧೫೫೫).

ಸಕ್ಕಡಲು = ಸಾಕ್ಕೆದವರ್ತಿ: ರಜಾವಾಸು ಪವಿತಿ: ಮೂಲಂಗಂ ಮೂಲಂಗಾಯಿಸ್ಥಿತ ಮುಟಿದುಂ ಶಾಸ್ತ್ರಂ ನೀಲಿ ಗಜಂಗಳಿರ್ದಂತಕ್ಕುಮಂದಂ ನಿಜದಿಂ ಮೆಯ್ಯಂಗಳ ಸಕ್ಕ ದಾಡಿಕ್ಕೆ (೧೫೫೫. ೯-೧೧೧). ಸಕ್ಕಡಲು = ಸಾಕ್ಕೆದವರಿ ; ರಜಾವಾಸುಗಳಿಗೆ : ಭೂಮಂಡ ಸಕ್ಕಡಲುಗಳಿಗೆ ಶಕ್ಕಳಿತನ ಪಾಲು ಅಕ್ಕರ ಮಿಟ್ಟಡೆಯೊಳ್ಳಗಾಪ್ತಿಗಳೆಂದು (೧೫. ೫೫ ೧೫೫೫, ೪೧ ೧೫ , ೧೫೫).

[<— ಕ್ಕಾ. ಸಕ್ಕ ; ತಾಂ. ಸಕ್ಕ / ಮಲ. ಸಾಕ್ಕ್ಯ]

ಸಕ್ಕಡಿ (ಕ್ರಿ). ಸಾಕ್ಕೆಯಾಗಿಸು : ನಾಳೆ ನಮಂಗೊಂದಾಲು ಸಕ್ಕುಟು ಮಾಡಿಂದಾಲ ಬಟ್ಟಿಯಾಲು ಮೊಗಾಲು ನೀಲಾಮಿಸಿ (೧೫೫೫. ೧೨-೧೫). [ಸಕ್ಕ + ಅಡಿ-]

ಸಕ್ಕಿಗು 'ಜಗ್ಗು' ನೋ.

ಸಕ್ಕಿಗು 'ಸಕ್ಕರು' ನೋ.

ಸಕ್ಕ (ಗು). ೧. ಕೊಂದಿದ ; ಸಂದಿದ. ೨. ಸವಿಯಿದ ; ತಕ್ಕಿರಿದ. ೩. ಅಸಕ್ಕೆ ಹೊಂದಿದ: ತಿಳ್ಳಿಗಾದ : ಸಾಯಸೊಯೊಳ್ಳಾಳ್ಳಾಲ್ಕೊಂಡ್ಡಂ ಬಿಲ್ಲಾಯ್ಕು ಅಂ ಸಕ್ಕಣಂ ಮಾಗಿ, ಸಜಂ, ಸಂಗ, ಸಕ್ಕಣಂ ದುಜಯೋಗಂ ಜಯಂ (೧೫೫೫. ೪ ೧೦). ೪. ಕಾರ್ಯಸಿದ್ಧಿಯಾದ ; ಶ್ರದ್ಧಾಳುವಾದ. ೫. ಸಂಬಂಧ ಹೆಚ್ಚಿ ; ಪರಿಯಿದ : ಸಿಂಹಾಂಗಂ ಶಿಕ್ಷಿರಿಸಿಗಂ ಕಂಗಳಂಗೆಂಗಳ್ ನಿಮಿಷ್ಕಕ್ಕಿಯೆ ಗಳಕಂಠಾಮಂಕಕ್ಕೆಸಲು ಸಕ್ಕ,ಚಕ್ಷಾಜಕಂಠಾಂಘಿ ಕಮಲ (೧೫೫೫. ೪೪-೧೪೨). ೬. ಪಡಯಲ್ಪಟ್ಟ ; ನಿರೂಪಿಸಲ್ಪಟ್ಟ (ನಾ). ೭. ಅಶ್ಯಸಾದಿಯು : ಮಾಂಸಕ್ಕೆ, ಸಕ್ಕಸಾಜಿಗಳ ಅ ಅಸ್ಥಿಯ ಪ್ರಾಣಿಯ ಸ್ಥಿರ ಸಂಪತ್ತಿಯಲ್ಲಿ (೧೫೫೫. ೧೪) [ಸಂ.]

ಸಕ್ಕ್ಯ (ನಾ). ೧. ಕೊಯಿಯಲ್ಪಡು; ಸೀಳಿಯಲ್ಪಡು. ೨. ಛಾಪ್ಯ; ಶ್ರಕ್ಷ್ಯ : ಭಾಷ್ಯ ಪ್ರಯೋಜನದಿಂದ ಸೂತ್ರಕರ್ತನಿಯಾಗ್ಯಾನ್ಯಾಯಾಮಿಸ್ಯಂ ವಿಷಯಿಸಿಕ್ಕಿ (೧೫೫೫. ೨೮೪ ೨೫೧); ಶಕ್ಷ್ಯಾಸ್ಯಾಶ್ಯಂಚಿಸ್ಯಾಸ್ಯಾಂಬಿಸ್ಯಾಯಾಮಿಯಾ ಬಿಚ್ಚಿಸೂಲಾಗಿ ಮುಟಿಯಿಸ್ಯಾಂಬಲ್ಲಿ ವಿಶ್ವಿಂದ ಮೂಲಾಪಿಯಾಂಗಂ ಸಿಸ್ಯಾ ಸಿಸ್ಯಾಂ ಶಿಷ್ಟಶಿಂ (೧೫೫೫ ೧೫೫) [ಸಂ.]

ಸಕ್ಕ್ಯ 'ಸಕ್ಕಿ' ನೋ.

ಸಕ್ಕ (ನಾ). ಜಿಗುಗೋದಿಯ ಹಿಟ್ಟು : ಮಾಲಗೊಲಾಟಾಂಬಿಯಾ ಸಕ್ಕ ತಂಗಾಂ ಬಟ್ಟಾಂ ಬಟಾರಾಂ (೧೫.೫೫ ೨೫೫). 'ದುಧಿಸಕ್ಕ' ನೋಡಿ. [ಸಂ.]

ಸಕ್ಕಿಸಿಕ್ಕ (ನಾ). = ಸಕ್ಕ : ಸಕ್ಕ ಸಿಕ್ಕಯಿಯಾ ಮಾಸಿ ದಿಕ್ಕಿಸಾಟಿಯಿಂದ ನಿಲ್ಲ ನಿಲ್ಲಾಯಿಂದ ಸಕ್ಕಯ ಬಟ್ಟಾಂ ಬಟಾರಂ (೧೫೫.೫ ೧-೧೫). [ಸಂ.]

ಸಕ್ಕುಳಿಲ (ನಾ). ಒಂದು ಬಗೆಯ ಮಾಲ ; ಬಿಸ್ಕಿ ; ಕವಿಯಿಕ್ಕೆಸ್ಸ.

[ಸಂ. ಸಕ್ಕುಳಿಲ]

ಸಕ್ಕುಳಿಲ (ನಾ). = ಸಕ್ಕುಳಿಲ : "ಸಂಗಿ, ಸಕ್ಕುಳಿಲಾ, ಒಂಗಾ - ೩ ಬಿಸ್ಕಿಯಾಲ ಪೇಯಾಗ್ಗಾಯಾಲ ಸಂಜಯ ಬಿಲ್ಲ ಸಂಗಿ ಬಿಸಿಯಂ (೧೫೫.೫ ೧೫೫೫). [ಸಂ. ಸಕ್ಕುಳಿಲಾ]

ಸಕ್ಕ (ನಾ). ಹೊಡೆ ; ಅಡಿ : "ಅಯ್ಯಾ, ಸಕ್ಕ, ಬಟಾಯಿ? - ಯಿ ೩ ಪಡೆಯಾಕೆ" (೧೫೫೫೫. ೫೫ ೧೫೫). [ಸಂ.]

ಸಕ್ಕಮ (ಗು). ೧. ಕ್ರಮದಿಂದ ಕೂಡಿದ ; ಸಂದಾದ ಕ್ರಮದ : ಇಷ್ಟು ಸಾ. ಚಾ. ಅಂದದ ಒಂಬ ಜೊಂಪ ಧಾರ್ಮಗಳ: ಸಕ್ಕಮಕ್ಕೂ ಸಕ್ಕಮಯಿಲ್ಲದೆ . . . ಅಕ್ಷರ ಸಕ್ಕಮಾಯಿಂದ ಸುಮಿಷ್ಟಿಯಿಷ್ಟು (೧೫೫೫. ೫೫೫). (ನಾ). ೨. ಕ್ರಮದಿಂದ ಕೂಡಿರುವುದು ; ಸಂದಾದ ಕ್ರಮವಿಕ್ಕಳು : ಅಂಜಲಂಗಂ . . . ಗಾಜನಿಂಗಂ ಬಜಾ ಸಾಧ್ಯಂಗಂ ಸಕ್ಕಮಿಸ್ಥ ಬಗಾಲಿ ಮಿಷಯಿಂದಲಂ ಸಂಗೂಳ್ಳ (೧೫೫೫. ೧ ೦) : ಸಕ್ಕಮಾಗಿ ಅರ್ಥ ಸಿದ್ಧಿಸೋಗ (೧೫೫೫. ೧೨೧). [ಸಂ.]

ಸಕ್ಕಯ (ಗು). ೧. ಕ್ರಿಯೆಯಿಂದಗೊಂಡಿದ ; ಕ್ರಿಯಾಸ್ಥ ಫಲಾದ : ಅಜಾ ಗಾಜಾಯಾಲಂ ಮಿಷಯಿಸಾಲಂ ಸಕ್ಕಮಾಷಿಯಾಲಂ (೧೫೫. ೭೫). (ನಾ). ೨. ಬಿಯಿಯಿಸಿಯಿಂದ ಕೂಡಿದುದು ; ರಜಸಾತ್ಮ ಫಲಾದುದು : ಅಭ್ಯಂತ ಗಾಂ ಅಲ್ಲ ಬೇಡುಪರ್ತಗಳಂ ಪೆಗಳ ಸಕ್ಕಯಪಟ್ಟಿಂ ಹಾಗೆಯೆ ಪರಿಣಾಂ . . . ಸಕ್ಕಯಾಧಿಕಾರಿಸ್ಥರ್ (೧೫.೫೫೫. ೧೨೪ ೧೫೫). [ಸಂ.]

ಸಕ್ಕಯ (ಗು). ಕ್ಷಯದಿಂದ ಕೂಡಿದ ; ಕ್ಷಯಾರಂಭವನ್ನು ಹೊಂದಿದ : ಸಕ್ಕಯ ಬಕ್ಕ ಸಿಕ್ಕಾಂ ಬಿಷ್ಟಾಂ ಸಕ್ಕಾಂ ಬಕ್ಕಾಂ (೧೫೫೫. ೧-೧೦) ; ಇಲ್ಲಿ ಸಕ್ಕಯದ ಸ್ಥಾನ ಅಸ್ಪಷ್ಟವಿದೆ. ಸಕ್ಕಯ ಸೆಂಬಂಧಾಯಿದೆ (೧೫೫೫. ೧೨). [ಸಂ.]

ಸಕ್ಕಿ 'ಸಕ್ಕೆ' ನೋ.

ಸಕ್ಕಿ (ನಾ). ಗಳೆಯ ; ಮಿತ್ರ : ಅಳ್ಳ ಸಮಯ ಮುಂಜಿ ಸಮಿ ಯಂಜಾ ಆಟವ (೧೫೫೫. ೭-೧೫೫) ; ನಿಜಗೆ ಸಮಂ ಆಪಾಲಯಂ (೧೫೫೫. ೧೫ ೪೫೫೫). [ಸಂ.]

ಸಕ್ಕಿಯ 'ಸಕ್ಕಿಯ' ನೋ.

ಸಕ್ಕಿಯಾಲಯ 'ಸಕ್ಕಿಯಾಲಯ' ನೋ.

ಸಕ್ಕಿಯಾಲಿಲೆ 'ಸಕ್ಕಿಯಾಲಯ' ನೋ.

ಸಕ್ಕಿಯ್ಯ 'ಸಕ್ಕಿಯ' ನೋ.

ಸಕ್ಕಿಯ್ಯಾಲಯ 'ಸಕ್ಕಿಯಾಲಯ' ನೋ.

ಸಕ್ಕಿಲೆ 'ಸಕ್ಕಿರೆ' ನೋ.

ಸಕ್ಕಿಯಾಯ (ನಾ). = ಸಕ್ಕಿ : ಬಾಲಾಯ್ಯಲಂ ಅಂಬಿ ನಿನ್ನ ಸಕ್ಕಿಯಾಯಿಯಿಂಗಳ್ ಪ್ರಭಾಗಿ ಅಕ್ಕಿಯಾಲಯಿಂಗಳ್ ಬಿಲ್ಲಾಯಿಂಗಳ್ ಅಂಬಿಯಾಲಯಿಂಗಳ್ ಸ

ಕ್ಷಮಾಧ. ಅಹಾಹಾ . . . ಹಾಸ್ಯರ. ಸಮ್ಮಂ. ಅಸ್ಮದೀಯಾಯಾ ವಿಲು ೯ ವಿಧ ಭಕ್ಷ (ಚಾಣ ೫೯ ೫೧ ಸಂಸ್ಕೃತ). [ಹಂ.]

ಹಗ 'ಹಗ್ಗ' ನೋ.

ಹಗು, 'ಹಗುವು' ನೋ.

ಹಗು, ಹಗುವು (ನಾ). ೧. ಹಿರಿ ; ಸೊಕ್ಕು ; ಅಹ್ಯತ : ಹೊಯಿಸಿ ಅಗಾಧವು ಸಾಮಾನ್ಯವು (ಕ್ಸೌಗಾ ೬-೨೦). ಹಗುವು[೨] : ವಿ. ಸಮುದ್ರ : ಭಯಗೊಳಿಸುವ ಬಾಯಿದ್ದಿಕ ಸಮ್ಮಂ ಅಯೋಧ್ಯಾ ಸಾಮಾ ಮಾಡಿದ್ದ ಭೂಗ ಹಾ ಹಾಯಿದ್ದಿಕ ಪಿಶಾಯಿಯ ಕಾಣಿಯಾಯಿ (ಭೂಪಾಲ. ೪-೩೩). [?]

ಹಗುವು (ನಾ). ಒಂಬಿ : ರಥ್ಯ : ಅಭಯಾಂದಿರಿಯಂಗಳ ಅಹಂಕಾರವನ್ನುಳಿಸಿಕೊಳ್ಳಿ ಪಾಂಡವರು ಬಾಂಧವಿಕ ಅಹಾಯಿಯ ಗಾಯಿಕ್ಕಿ ಸಮ್ಮಾಗಾ (ಅಯೋ. ೨-೬). ಬಂದು ಎಷ್ಟಿಸಿ ಅಭಿಮಾಗಳಿಗೆ ಅಂಜಿಲ ಹಿಟ್ಟಿನ, ಗಯಾಗಾ ಬಂದ ಸೌಮಾಲು ಹಾಂಡ ಸಾಮಾ ಪ್ರಭೆಂ ಸಂದಾಂಬಿ (ಅಯೋ. ೪-೧೦). [< ಸಂ. ಪಾಂಡಿ / ಸಮಾ. ಪಾಂಡಿ ; ತೆಲು. ಪಾಂಡು]

ಹಗುವು, ಸಂಪ್ರಿಗುವು, ಸಗುವು (ಗ). ೧. ಸಂಪ್ರಜ್ಞಾ: ವಿಲ್ಲ : ಅಭಿ: ಸಂಗ ಜಾ ಬಿಡಿಸಿಟಾ ಭೂಂ ಸಾಮಿನ ಭಾಯಿಸಿಯಿಂದಾಗಿ (ಚಾಣ. ೫೫-೧೦) ; ಮುಸ್ಸಿಲ್ಲಿ ಸಾಮಿಂ ಅಹಾಂಗ್ ಸುಪ್ತಿಯಾಯಿಸಿಯಾಂ (ಚಾಣ. ೫೯-೨) (ನಾ). ೨. ಒಟ್ಟು ಸೊಪ್ಪ ; ರಾಶಿ : ಜಾಪ್ಪಾಗ್ಗಾ . . . ಮಾಗಿ ಸಾಗಿಯಿಟ್ಟು, ಹಾಯಿಟ್ಟು ಹೂಯಿಟ್ಟು. ಮಟ್ಟಿಲ್ ಪಾಪಾಗಳ ಭೂಂಟ್ಟು (ಭಾಷ್ಪ. ೧೯೧). ಸಿಟ್ಟಿಗುವು : ೧. ಅಲ್ಲಿ ಮಿಲ್ಲ ಸಿಟ್ಟಿಗುವ ಒಟ್ಟು . . . ಗಾಗಿಲ ಮಿಲ್ಲಿಂ ಬ್ಲಾಸ್ಟ್ಗಳ ಹಾಲ್ಲಿಗಳ ಹಾಲ್ಲಿಂ ಸಾಂಗಾಯಿಂ ಭೂಂಟ ಮೊಲ್ ಒಟ್ಟಿಗೆ ಒಟ್ಟಾಯಿಕ್ಕೆ (ಭಾಷ್ಪ. ೧೯೦). ಸಿಟ್ಟಿಗುವು[೨] : ೧. ಸಾಗಿ ಹಾಂಗಿ ಎಲ್ಲಾ ಒಟ್ಟಾಗಿ ಪ್ರಭೂಗಿ ಹಾಂಗಿ ಹಾಯಿಸಿಯಿಂ (ಚಾಣ. ೫೫೦) : ಅಲಿ ಪಾಗಿ ಕೆಲಿಗೆ (ಭಾಷ್ಪ. ೩. ೧೫೦). ೨. ಸೊಪ್ಪಿಂ ಬಿಟ್ಟ ದೊಡ್ಡಿಕ. ಸ್ಟಾಕ್ಸಿ. ಸಿಗಾಗಿ ಹಾಲಾಂ ಮಿಲ್ಲಿ. ೫ ಸ್ಟೂಗಾಲ ಸಾಗಿಯಾಗಿ ಇಹಾಯಿಸಿ (ಭಾಷ್ಪ. ೫೫೦).

[← ಮಾಗಿ. ಸಿಟ್ಟಿ. ಸಾಗಿ]

ಹಗುವು, 'ಸಗುವು' ನೋ.

ಹಗುಜ್ಞಾಗಾರ (ನಾ). ಒಟ್ಟಿಗೆಸ್ಟಿಗೆ ಮಾಡುವ ಪ್ರಾಣಾಂಗ ; ಒಟ್ಟು ಪ್ರಾಣಾಂಗ : ಅಜಾಂ ಜಿಜಾಯಿ ಸಾಗಿಯಾಗಿಂಗಾಂ ಮಾಡಿಸಿಸ್ಟಿಂ (ಭಾಷ್ಪ). [ಹಗುವು + ಪ್ರಾಣಾಂಗ]

ಹಗುಜ್ಞಾಗಾರಿ (ನಾ). ಮಧ್ಯಗಳನ್ನು ಒಟ್ಟಿಗೆಸ್ಟಿಗೆ ಮಾಡುವ ಪ್ರಾಣಾಂಗ : ಅಜಾಂ ಜಿಜಾಯಿ ಸಾಗಿಯಾಗಿಂಗಾಂ (ಭಾಷ್ಪ). [ಹಗುವು + ಪ್ರಾಣಾಂಗ]

ಹಗುಜಾಂಗ (ನಾ). ಒಟ್ಟಿಗೆಸ್ಟಿಗೆ ಮಾಡುವ ಪೆರಾಗ್ಯ : ಪ್ರಭೆಗಳಾಗಿ ಪೆರಾಂ:ಪ ಪೆಸ್ಟಿ : ಒಟ್ಟಿಲ ಪ್ರಾಣಾಂಗಳ್ಳಿ ಪೆರಾಂ. ಅಪರಂಭಿ, ಪ್ರಾಣ ಪಾಪಾಲಿಸಿಸಿಗಾಗಿ, ಗಾಜಿಲ ಅಂಗಾಗಳಲ್ಲಿ, ಸಾಪಾಲಿಯಲ್ಲಿ ಭೂಂಟ ಸಿಟ್ಟಿ ಬಿಟ್ಟಿಲ ಸಾಪಾಲಿಯಾಗ ಅಂಗಾಗಿಗಳಲ್ಲಿ, ಅಜಾಲ್ಲಿ ಸಾಂಗ ಗಾಲ್ಲ ಪಾಪಾಲಿಯಿಸಿಸ್ಟಿಗಾಂ (ಭಾಷ್ಪ. ೫೫). [ಹಗುವು + ಸಂಜ್ಞಾ]

ಹಗುಜಿಜಾಗ (ನಾ). ಒಂಬಿ ಬಿಗುವು ಪಿಟ್ಟ : ಅಂಜಾಗ. ಸಾಪಾಲಿಯಾಗ. ಭೂಂಗಾಂ (ಭಾಷ್ಪ. ೬೯-೧೧೨). [ಹಗುವು + ಪಿಟ್ಟಾಗ]

ಹಗುಜಿಜೊಟ್ಟಿ (ನಾ). ಒಂಬಿ ಬಿಗುವು ಸೊಪ್ಪಿ : ಪಾಪಾಲ್ಲಿ. ಪಿಟ್ಟ ಒಟ್ಟಿಲ ಪೆಸಾಲ್ಲಿ, ಪಾಪಾಲ್ಲಿ ಪೆಟ್ಟಾಲ್ಲಿ ಪೆಟ್ಟಾಲ್ಲಿಸ್ಟಿಗೆ (ಭಾಷ್ಪ. ೫೫). [ಹಗುವು + ಸೊಪ್ಪಿ]

ಹಗುಂ, ಸಗುಂ, ಸಗುಳಿ, ಸಗುಂ, ಸಗುಂ (ನಾ). ದಾಸಾಳಿಗಳ ಮಲ ; ಸೊಪ್ಪಿ ; ಗೊಂಬಯಲು: ''ಗೊಂಬಾಯಂ ಅಂಬಾಯಿಯಲು ಸಗುಂ'' (ಭಾಷ್ಪ. ೫೫-೨) : ಮುಂದಿಟ್ಟಿ ಕೊಗ್ಗಿಯಂ ಶ್ವಾಸ್ಥಿಯ ಮುಂಗ ಸಗುಂ ಯಂಬಿಸಿಯಂ ಬಿಯಲು ಭಾಂಬಿಯಂಗ ಅಸ್ಥಾಗಿಯಾಯಿಯಾಯಿಯಾಯಿಯಂ ಸಗಿ ಅಸ್ಥಿಗ' (ಭಾಷ್ಪ. ೯-೨೨); ಎಷ್ಟಿಯ ಸಗುಂ ಯಾಯಿಯಂಗಿಸ್ಟಿಗೆ ಯಂ ಭೃಸಾಯಿಯಂಗ ಯಿಯಿಯಲು (ಭಾಷ್ಪ. ೫೫-೨). ಸಗುಂ : ಅಸ್ಥಾಂ ಮಿಗಾ ಹಾಯಿಯ ಸಗುಂ ಯಿಯಿ, ಬಾಂ ಪಿಯಿಂಯಿಯಿ ಹಾ ಪಿಗಾ (ಭಾಷ್ಪ. ೫ ೫) ; ಹಾಯಿಗಿಯ್ಯಾಯಿಯ ಸಗುಂಯಿಗಾಗಿ. ಸಾಯಿಯಿಯಾಯಿ (ಭಾಷ್ಪ. ೯-೨೨) : ಸಿಟ್ಟಿ ಯಾಯಿಗಾಗಿಯಂ ಸಿಟ್ಟಿ ಯಿಯಿ ಯಾಗ ಬಿಟ್ಟಿ ಯಾಯಿಯಾಯಿಯಾಯಿ

ಪುರಾಣಪುಷ್ಕರಾದಿ (ನಾ). ಪುರಾಣಪುಷ್ಕರಪ್ರಭೃತಿಯನ್ನು ಪ್ರತಿನಿಧಿಸುವವನು: ಬ್ರಹ್ಮಪುರಾಣಾದಿ ಮೇರುಪರ್ವತಾಗ್ರದಲ್ಲಿ ಕುಳಿತು ನಿತ್ಯಪುರಾಣಪುಷ್ಕರಾದಿಗಳು . . . ಕುಳಿತು ಪುರಾಣಪುಷ್ಕರಾದಿಗಳು ಸಂತೋಷದಿಂದ ಸಾಷ್ಟಾಂಗವೆರಗಿ 'ನಿರ್ಗಾಣಪುಷ್ಕರಾದಿ' ಶರಾ. [ಪುರಾಣ + ಪುಷ್ಕರ + ಆದಿ]

ಪುರಾಣಪುಷ್ಕರಾದಿ (ನಾ). ಪುರಾಣ, ರಜಸ್ಸು, ಪುಷ್ಕರ ಎಂಬ ಮೂರು ಗುಣಗಳಿಂದ ರಂಜಿತ ಪರಮಪುರುಷ : ಪುರಾಣರಾದ ಪರಮಪುರುಷ : ಉದಯದ ಪುರಾಣಪುಷ್ಕರಾದಿ ಅಂಧಾಸುರನ ಸಂಹಾರಕ್ಕೆ ಸುಳಿಯದು ನಿರಾಣಪುಷ್ಕರಾದಿ ಅಂಧಾಸುರನ ಸಂಹಾರಕ್ಕೆ ಸುಳಿಯದು (ಮಯೂ. ೧೮೬) 'ನಿರ್ಗಾಣಪುಷ್ಕರಾದಿ' ಶರಾ. [ಸಂ. ಪುರಾಣಪುಷ್ಕರಾದಿ]

ಪುರಾಣಪುಷ್ಕರಾದಿ (ನಾ). ಪುರಾಣ, ರಜಸ್ಸು, ಪುಷ್ಕರ ಎಂಬ ಮೂರು ಗುಣಗಳಿಂದ ರಂಜಿತ ಪರಮಪುರುಷ : ಪುರಾಣರಾದ ಪರಮಪುರುಷ : ಉದಯದ ಪುರಾಣಪುಷ್ಕರಾದಿ ಅಂಧಾಸುರನ ಸಂಹಾರಕ್ಕೆ ಸುಳಿಯದು ನಿರಾಣಪುಷ್ಕರಾದಿ ಅಂಧಾಸುರನ ಸಂಹಾರಕ್ಕೆ ಸುಳಿಯದು (ಮಯೂ. ೧೮೬) 'ನಿರ್ಗಾಣಪುಷ್ಕರಾದಿ' ಶರಾ. [ಸಂ.]

ಪುರಾಣ (ಗು). ಗು. ಗುಣದಿಂದ ರಂಜಿತ; ಗುಣಯುಕ್ತವಾದ. (ನಾ). ಪ. (ಸಪ್ತ. ರಜಸ್ಸು, ತಮಸ್ಸು ಎಂಬ) ಮೂರು ಗುಣಗಳಿಂದ ರಂಜಿತ ಪರಮಪುರುಷ : ಪುರಾಣರಾದ ಪರಮಪುರುಷ : ಉದಯದ . . . ಪುರಾಣರಾದ (ಮಯೂ. ೬-೧೦೮) ; ಪುರಾಣಪುರಾಣರಾದ ಪುರಾಣಪುಷ್ಕರಾದಿಗಳು ಏಳುವರು ಅಜಪುರುಷ (ಅಜ್ಞಾ. ೧೦-೨೫); ಪುಷ್ಕರ ಸಂಜೀವರಂತಿ ಪ್ರಳಯಾಂಬುಧಿ, ಪುರಾಣರಾದ ಪುರಾಣಪುಷ್ಕರಾದಿ ಪಿಂಡಾಂಡ ಪಿಂಡಾಂಡದ ಪುರಾಣಪುಷ್ಕರಾದಿಗಳು ಏಳುವರು (ಪುರಾಣ. ೬-೦) ; ಅಭೇದ ಪಿಂಡಾಂಡದ ಯಜ್ಞಾಂ ತಾಳ ಪುರಾಣಪುಷ್ಕರಾದಿಗಳಿಗಾದ ಸೊಂಪಿಕ್ಕ ದೇವಾಲಯಂ (ಪುರಾಣ. ೬-೧೦). [ಸಂ.]

ಪುರಾಣಿಸು (ನಾ). ಧೃನಿಸು : ಗಾಂಧರ್ವಮ್ : ಗಂಭೀರವು ಗಾಢವಾದ ವಿಸ್ತೀರ್ಣವು ಆದ ಸೊಗಡು ಮೊರೆಯುತ್ತಿರೆ ಸಂಗೀತಜ್ಞರ ಪ್ರಾಣಿಸುತ್ತಿರೆ ಪುರಾಣಿಸುತ್ತಿರೆ ಗಾಢವಾಗಿ (ಅಜ್ಞಾ. ೧೦-೬೯) ; ಮಿಸ್ಸಿನ ಗಂಡಾಲ್ಕ್ಕ ಪುರಾಣಿಸುವ ಧ್ವನಿಯಿಂದ ಪುರಾಣಿಸುವ ಪೊಸಗಂಪಿಂ (ಅಜ್ಞಾ. ೧೦-೬೯). [ಪುರಾಣ + ಇಸು]

ಪುರಾಣಿಸು (ಕ್ರಿ). ಧ್ವನಿಸು ; ಪ್ರತಿಧ್ವನಿಸು : ಪುರಾಣಿಸುವ ಪೊಸಗಂಪಿಂ (ಅಜ್ಞಾ. ೧೦-೬೯). [ಪುರಾಣ + ಇಸು]

ಪುರಾಣಿಸು (ಕ್ರಿ). ಪುರಾಣ ಮಾಡು : ಪೈಪಣಿಸುವ ಪೊಲಂ : ಉಡಲೊಳ್ ಬಗೆ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣ + ಇಸು]

ಪುರಾಣಿ, ಪುರಾಣಿ (ನಾ). ಗು. ಶ್ರೇಷ್ಠ ; ಅತಿಶಯ : "ಪುರಾಣಿ" ಶರಾ. ಪ. ರಭಸ ; ಒತ್ತಿಡಿ : (ಲ). ಪುರಾಣಿ : ಗು. ಪುರಾಣಿಸುವ ಧ್ವನಿ ಪುರಾಣಿಸುವ ಸೊಗಡು (ಅಜ್ಞಾ. ೧೦-೦) ; ಗಂಭೀರವು ಗಾಢವಾದ ವಿಸ್ತೀರ್ಣವು ಆದ ಸೊಗಡು ಮೊರೆಯುತ್ತಿರೆ ಪುರಾಣಿಸುತ್ತಿರೆ ಗಾಢವಾಗಿ . . . ಪುರಾಣಿಸಿ (ಅಜ್ಞಾ. ೧೦-೬೯). [< ಪು. ಪುರಾಣಿ]

ಪುರಾಣಿಸಿ, ಪುರಾಣಿಸಿ (ನಾ). ಗು. = ಪುರಾಣಿ ೧ : ಪುರಾಣಿ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣಿ + ಇಸಿ]

ಪುರಾಣಿಸಿ : ಗು. ಅತಿಶಯದ ಪುರಾಣಿಸಿಕೆ ಪೈ ಪೊಲಂಪಿಂಗಂ (ಅಜ್ಞಾ. ೧೦-೦) ; ಮಿಸಿಲ ಪೊಲಂಪಿಂಗಂ ಪುರಾಣಿಸಿಕೆ ಪೈ ಪೊಲಂಪಿಂಗಂ (ಅಜ್ಞಾ. ೧೦-೦). ಪ. ರಭಸ; ಒತ್ತಿಡಿ : (ಲ). ಪುರಾಣಿಸಿ : ಗು. ಪುರಾಣಿಸುವ ಧ್ವನಿ ಪುರಾಣಿಸುವ ಸೊಗಡು ಮೊರೆಯುತ್ತಿರೆ ಪುರಾಣಿಸುತ್ತಿರೆ ಗಾಢವಾಗಿ . . . ಪುರಾಣಿಸಿ (ಅಜ್ಞಾ. ೧೦-೬೯). [ಪುರಾಣಿ + ಇಸಿ]

ಪುರಾಣಿಸು (ಕ್ರಿ). ಪುರಾಣ ಮಾಡು : ಪೈಪಣಿಸುವ ಪೊಲಂ : ಉಡಲೊಳ್ ಬಗೆ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣ + ಇಸು]

ಪುರಾಣಿಸು (ಕ್ರಿ). ಧ್ವನಿಸು ; ಪ್ರತಿಧ್ವನಿಸು : ಪುರಾಣಿಸುವ ಪೊಸಗಂಪಿಂ (ಅಜ್ಞಾ. ೧೦-೬೯). [ಪುರಾಣ + ಇಸು]

ಪುರಾಣಿಸು (ಕ್ರಿ). ಪುರಾಣ ಮಾಡು : ಪೈಪಣಿಸುವ ಪೊಲಂ : ಉಡಲೊಳ್ ಬಗೆ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣ + ಇಸು]

ಪುರಾಣಿ, ಪುರಾಣಿ (ನಾ). ಗು. ಶ್ರೇಷ್ಠ ; ಅತಿಶಯ : "ಪುರಾಣಿ" ಶರಾ. ಪ. ರಭಸ ; ಒತ್ತಿಡಿ : (ಲ). ಪುರಾಣಿ : ಗು. ಪುರಾಣಿಸುವ ಧ್ವನಿ ಪುರಾಣಿಸುವ ಸೊಗಡು (ಅಜ್ಞಾ. ೧೦-೦) ; ಗಂಭೀರವು ಗಾಢವಾದ ವಿಸ್ತೀರ್ಣವು ಆದ ಸೊಗಡು ಮೊರೆಯುತ್ತಿರೆ ಪುರಾಣಿಸುತ್ತಿರೆ ಗಾಢವಾಗಿ . . . ಪುರಾಣಿಸಿ (ಅಜ್ಞಾ. ೧೦-೬೯). [< ಪು. ಪುರಾಣಿ]

ಪುರಾಣಿಸಿ, ಪುರಾಣಿಸಿ (ನಾ). ಗು. = ಪುರಾಣಿ ೧ : ಪುರಾಣಿ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣಿ + ಇಸಿ]

ಪುರಾಣಿಸಿ : ಗು. ಅತಿಶಯದ ಪುರಾಣಿಸಿಕೆ ಪೈ ಪೊಲಂಪಿಂಗಂ (ಅಜ್ಞಾ. ೧೦-೦) ; ಮಿಸಿಲ ಪೊಲಂಪಿಂಗಂ ಪುರಾಣಿಸಿಕೆ ಪೈ ಪೊಲಂಪಿಂಗಂ (ಅಜ್ಞಾ. ೧೦-೦). ಪ. ರಭಸ; ಒತ್ತಿಡಿ : (ಲ). ಪುರಾಣಿಸಿ : ಗು. ಪುರಾಣಿಸುವ ಧ್ವನಿ ಪುರಾಣಿಸುವ ಸೊಗಡು ಮೊರೆಯುತ್ತಿರೆ ಪುರಾಣಿಸುತ್ತಿರೆ ಗಾಢವಾಗಿ . . . ಪುರಾಣಿಸಿ (ಅಜ್ಞಾ. ೧೦-೬೯). [ಪುರಾಣಿ + ಇಸಿ]

ಪುರಾಣಿಸು (ಕ್ರಿ). ಪುರಾಣ ಮಾಡು : ಪೈಪಣಿಸುವ ಪೊಲಂ : ಉಡಲೊಳ್ ಬಗೆ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣ + ಇಸು]

ಪುರಾಣಿಸು (ಕ್ರಿ). ಧ್ವನಿಸು ; ಪ್ರತಿಧ್ವನಿಸು : ಪುರಾಣಿಸುವ ಪೊಸಗಂಪಿಂ (ಅಜ್ಞಾ. ೧೦-೬೯). [ಪುರಾಣ + ಇಸು]

ಪುರಾಣಿಸು (ಕ್ರಿ). ಪುರಾಣ ಮಾಡು : ಪೈಪಣಿಸುವ ಪೊಲಂ : ಉಡಲೊಳ್ ಬಗೆ ಪೊಲಂ(ಲ)ಮಂ ಪರಿಪಾಲಿಸಂ ಪುರಾಣಿಸಂ(ಲ)ಮಂ . . . ಪುರಾಣಿಸಲ್ ಪೈಪಣಿಸುವಂತಿರ್ದ (ಮಯೂ. ೪ ೨೨). [ಪುರಾಣ + ಇಸು]

ಪುರಾಣ (ನಾ). ಗು. ಪುರ್ಣದ ; ಅಪೂರ್ಣವಾದ. ಪ. ಬಯಸಿದ ; ಕೊರತೆಯಾದ. ಪುರಾಣ : ಅಪೂರ್ಣವಾದ. (ನಾ). ಅ. ಪೂರ್ಣ : ಅಪೂರ್ಣವಾದ. (ನಾ). ಅ. ಪೂರ್ಣ : ಅಪೂರ್ಣವಾದ. [ಪುರಾಣ + ಇಸು]

ಪುರಾಣ (ನಾ). ಗು. ಪುರ್ಣದ ; ಅಪೂರ್ಣವಾದ. ಪ. ಬಯಸಿದ ; ಕೊರತೆಯಾದ. ಪುರಾಣ : ಅಪೂರ್ಣವಾದ. (ನಾ). ಅ. ಪೂರ್ಣ : ಅಪೂರ್ಣವಾದ. [ಪುರಾಣ + ಇಸು]

ಪುರಾಣ (ನಾ). ಗು. ಪುರ್ಣದ ; ಅಪೂರ್ಣವಾದ. ಪ. ಬಯಸಿದ ; ಕೊರತೆಯಾದ. ಪುರಾಣ : ಅಪೂರ್ಣವಾದ. (ನಾ). ಅ. ಪೂರ್ಣ : ಅಪೂರ್ಣವಾದ. [ಪುರಾಣ + ಇಸು]

ಪುರಾಣ (ನಾ). ಗು. ಪುರ್ಣದ ; ಅಪೂರ್ಣವಾದ. ಪ. ಬಯಸಿದ ; ಕೊರತೆಯಾದ. ಪುರಾಣ : ಅಪೂರ್ಣವಾದ. (ನಾ). ಅ. ಪೂರ್ಣ : ಅಪೂರ್ಣವಾದ. [ಪುರಾಣ + ಇಸು]

ಹರಿಣಾಕ್ಷಿಣಿ (ನಾ). ಸಾಗರಮಟ್ಟಿಗಳು ಪ್ರಭೆ , – ಉಷಾಪತಿ : ಮೂಡಣ ದಿಕ್ಕು ಮಾಡಿದರು ವಿಧಾತನ ಶರಣಾಗತರು ಮುಟ್ಟಿಗಳಾಗಿ ವಿಸ್ತರಿಸಿದರು ವಿಶ್ವಾವಿಜಯಕ್ಕಾಗಿ (ಅಷ್ಟೂ. ೬.೨೫). 'ಸಿರಿಗಣಾಧಿಪತಿ' ಶೆಲ್ಲಾ.

[ಹಿಂ. ಹರಿಣಾಕ್ಷಿಣಿ]

ಹರಿಣೀಲೋಚನಾಯಿ (ನಾ). ಸಾಗರಮಟ್ಟಿಗಳನ್ನು ಪ್ರಭೆಪಡಿಸಿದವನು: ಶ್ರೀಮಾಧವ. ಎಂಬ ವಿಶ್ವಾಸ ಪಡೆದ ಅವಳ ಅಣುಗಳನ್ನು. ಹೊಂದಿಸಿಕೊಂಡು ಸಿರಿಗಣಾಲೋಚನಾಯಿ; ಎಂಬಿಸಿಕೊಂಡು ಹರಿಣೀಲೋಚನಾಯಿ (ಭಾರತ. ೧೦೫). [ಹಿಂ.]

ಹರಿಣೀಲೋಚನಾಯಿ (ನಾ). = ಹರಿಣಾಕ್ಷಿಣಿ : ಭಗವಂತನ ಶ್ರವಣ ಉಪಾಸಾಚಾರ್ಯನ್ನು ಪ್ರಭೆಪಡಿಸಿದ, ಸಾಗರಮಟ್ಟಿಗಳು ಮುಖ ಉಪಾಸಿಸಿ ವಿಶ್ವಾಸಾಗಿಸಿ ಭಾಷಾಪತ್ನಿಗಳನ್ನು ಉಪ್ಪಡಿಸಿದ (ಭಾಷ. ೬೦).

[ಹಿಂ. ಹರಿಣೀಲೋಚನಾ]

ಹರಿಪತ್ನಿ (ನಾ). ಒಂದು ಬಗೆಯ ಪಕ್ಷಿ : ಹಾಲುಪತ್ನಿ ಮಾಳಿಗೆ:– ಇಂಥ ದೇಗಿ ಅದಾಗಿ ಮಂದಿ ಅಯೋಧ್ಯೆಯಲ್ಲಿ, ಹೆಂದಿ ಅಂಗಿಗಳ ತೆಗಿಸಿ ಕೊಟ್ಟಿಗೆ ಸೊಪ್ಪಿನ ಹಾಗೆ ಗೆದರಿದರು (ಪದ್ಮಿ. ೭೬). [?]

ಹರಿಹತ್ತೆ (ಗ). ೧. ಒಂದೇ ದಂಡದ , —ಡಿಂಡದ : ಹರಿಹತ್ತೆ ಗೊಲ್ಲರ್ತಿ. (ನಾ). ೨. ಒಂದೇ ಗೊಲ್ಲರ್ತಿಯ ಸಂಬಂಧಿ : ಮಾಲೀಯಾಯಿಂದ ಭಾಗವಾದ ದೇಗಾಲ ಪಾಪಿಯ ಹಾಯಿಸಿದಂತೆ ಗಾಣಿಕ್ಕೆ ಸಾಮ್ರಾಜ್ಯದ ಸಂಚಾಲನ (ಭಾಷ್ಯ. ೬-೬೬) : ಸಂಸಾರ್ಥಪಾಯವು ಧರ್ಮಾಳ್ಳಿಪಿಸಿದ್ದಿಗಾಸ್ಪಿ, (ಭಾಷ. ೫೦). ೩. ಒಂದೇ ದಂಡದವನು , — ಜಿಲಾಯಿಸು : ದಾಯಾದಿ : ಮಾಜಿಸಿಕೊಟ್ಟು ಅಯೋಧ್ಯೆಯ ಅಗ್ನಿಪಾಲಿಸಿಕೊಟ್ಟಿಗಾದ ಮಾಲೀಯಾಯಿಂದ ಪಾಪಿ ನಿಂದ ಮಾಜಿಸಿಸಿಕೊಟ್ಟಿಗಾಯಿಂದ ದೇಗಾಲ (ಭಾಷ. ೧೦-೨-೧೦ ; ೪೦೦). [ಹಿಂ.]

ಹರ್ಷ, ಹರ, ಹರ್ಷ್ (ನಾ). ದೇವತೆಗಳು ದಾನವರುಗಳ ಪ್ರೇಳ ; ಸುರರೊಳಗೆ ; ನಾಥ : "ಬಿಡಿಸಾ, ಹರ್ಷ – ಈ ೨ ಪ್ರೇಳಾ ಮೇಲೆ" (ಭಾಷ. ೪೬-೧೩) : ಎಷ್ಟಿಯ್ಯರ ಮಿಡಿಸಿ ಎಷ್ಟಿಯ್ಯಾಗಿ ಪ್ರೇಳ(ಳ್ಳ)ಗಳು ಪ್ರೇಳ ಮಿಡಿಸಿದರು (ಭಾಷ. ೪೬.೬ ೨-೨, ೪೫೦); ಅಯೋಧ್ಯೆಯ ಎಷ್ಟ ಪರಿಚಾಲಿಸಿದ ಗಾಂಧಿ ಪ್ರೇಳಾಧಿಪ ಮೂಲಿಸಿ ಪ್ರೇಳ ಭೂಮಿ ಸುಖಾಂಬ್ಲ (ಭಾಷ. ೬-೧೬) : ಭಾಷಾಯಿಸಿದರು . . . ಪ್ರೇಳಿಯ್ಯ ಸಂಬಂಧಿಸಿದ ಮೂಲಿಸಿಸಿದರು! (ಭಾಷ್ಯ. ೧೧). ಹರ್ಷ : ಅಳಿದ ಪಾಪ್ಯಿಗೆ, ಬಡಿ ಪಾಪ, ಪಾಪ್ಯಾಯಿಸಿಸಿದರು, ಅಷ್ಟಿಯ್ಯ ಪಾಪಿಸಿದರು (ಭಾಷ್ಯ. ೧೫ - ೬ ೧-೧೫ ; ೧. ೪೦೦ ೨೨೧). ಅಯೋಧ್ಯಾಗಾಯಿಂದ ಪಾಪ ಒಂದಿಸಿ (೨೦ ೫೫ ಭಾಷ್ಯ. ೧೬೬-೧೧ . ೧೩೦೧). ಹರ್ಷ್ : ಪ್ರೇಳಿ ಅಲಿಸಿ ಪಿಂಡಿಸಿಸ್ಪಿಗಾ ಅಳಿಸಿದರ್ಶ ಪ್ರಭಾಪಾಲಿಸಿ ಎಷ್ಟಿಯ ಪ್ರೇಳಿಸಿಸ್ಪಿಯ್ಯ (೨೦ ೫ ೧೫. ಭಾಷಾಯಿ. ೧೦೬-೧೪ ; ೪೦೦ ೨೨೧) : ಇಷ್ಟಿ ಪಾಪಿಯಾಯಿಂದಿಸಿ ದೇಗಾಲಿಯ ದೇಗಾಲಿಯಾಯಿಸಿಸಿಯಾಯಿಂದ . . . ಪಾಳ್ಳಿಯ ಪಿಡಿಸಿಸಿಸಿಯಿಂದ ಸಿಂಡಿಸಿಸಿ ಸಿಂಡಿಸಿಸಿಯಾಯಿಂದ ಪಿಂಡಿಸಿಸಿ ಪಾಪ್ಯಿಸಿ, ಭೂಪಾಲಿಸಿಸಿಸಿಸಿ (ಭಾಷ್ಯ. ೧೧೦).

ಹರ್ಷ ೩೩ = ದೇವತೆಗಳ ಯಿಷಿ,— ಮುನಿ : ಹರಿಹರ ಹರ್ಷ ಮಾಳಿಗೆ ಪಿಂಡಿಸಿ (ಭಾಷ್ಯ. ೧೬೦). ಹರ್ಷ ಹೊಂಡ್ = ದೇವತೆಗಳ ಸ್ಥಿಯಾಯಿ : ಅಷ್ಟಿಯಿಯ : ಸೋಯಾಯಿ ಪ್ರೇಳಾ ಭಾಗಿಯಾಯಿ ಅಷ್ಟಿ . . . ಈ ವಿಷಾಯಿಷ್ಟಿಗಳಿ ದೇಗಾಲಿಯಾಯಿಸಿಸಿಸಿಸಿ ಹರ್ಷ ಪಾಪಿಸಿಸಿಸಿಸಿಸಿ (ಭಾಷ್ಯ. ೨೦೦) : ಹರ್ಷ ಪಾಪ = ದೇವತೆಗಳ ಪ್ರೇಳಿ : ಕಲ್ಪಿಪ್ಪೆಳಿ : "ಹರ್ಷ ಪಾಯಿಸಿ, ಸುರಪಾಯಿಸಿ,೦" (ಭಾಭಾ. ೧೧). ಹರ್ಷಾಯಿ = ದೇವತೆಗಳಿಯರು : ದೇವತೆಗಳ : ಯಿಂಗಿಸಿಸಿಸಿ ಪಿಂಡಿಸಿಸಿಸಿಸಿಸ

ಹಗ್ಗಕೊಡಲು (ನಾ). = ಹಗ್ಗದೊಡೆ : "ಹಗ್ಗಕೊಡಲು ಹಗ್ಗಗಾರಂಗಳು ಭಾರಂಬೀಯಾದಂತಿರಲು ಕೈಯಾರೆಂದು ಬೆಟ್ಟಾಡಿ." (ಆ.ಭಾ.ಪ. ೧೧).
[ಹಗ್ಗ + ಕೊಡಲು (< ಕೊಡಲ್)]

ಹಗ್ಗಕೊಡೆ 'ಹಗ್ಗದೊಡೆ' ನೋ.

ಹಗ್ಗಕೊಡೆ, ಹಗ್ಗದೊಡೆ (ನಾ). = ಹಗ್ಗದೊಡೆ : "ಹಗ್ಗದೊಡೆ ಕೊಲ್ಲಾಪುರ ಬಳಿ, ದೊಣಿ ಬಾಣಲೆಯಂತಿರುತ್ತದೆ" (ಆಚಾ. ೧೫) ಹಗ್ಗಕೊಡೆ : ಅಡಕೆಯ ದೀಪದ ಆಕಾರದ: ಸಣ್ಣದು ಹಗ್ಗಕೊಡೆಯಂತಹ ದೀಪವು ಪಡಸಾಲೆಯ . . . ಆಕರ್ಷಿಸಿತ್ತು (ಆಚಾ. ೧೨-೬). [ಹಗ್ಗ + ಕೊಡೆ]

ಹಗ್ಗಕೊರೆ (ನಾ). ಬಿಚ್ಚಳ ಸರಿಗೆ, — ಸಪರ : ಹಗ್ಗಕೊರೆಯಲ್ಲಿ ಕಗ್ಗಡವನ್ನು ಅಡಕ್ಕೆ . . . ಭುಜವುಂ ರಿಸ್ಟ್ರಿಂಗಿಂದಲೆ ಸಂಗಾಡಿ ಹಗ್ಗಕೊರೆಯೊಳ್ಪಮಾಗಿ ಬಿಡದೆ ಬಾಡುವಂತೆ (ಆಚಾ. ೨೨-೨೩).
[ಹಗ್ಗ + ಸರಿಗೆ (< ಸಕ್ಕೆ)]

ಹಗ್ಗಕ್ಷ, ಸುಗ್ಗಕ್ಷ (ನಾ). ವಿಜಯನಗರಾದವರು : ಸ್ಕಗ್ಗಕ್ಷ : ಬುಂಡ ರಿಚ್ಚಿ ಸ್ಕಗ್ಗಕ್ಷರ (ಎಪಿ ಇ. ಮಾಲೆ ೮-೨ : ೧೧೧೨). ಹೆಗ್ಗಕ್ಷ : ಗಜ್ಜಬಲ್ಲಾಗ್ಯಾಗ್ಗಕ್ಷಗೊಂದಾ ಪೊಳ್ ಕಾರಿ ಸಜ್ಜಿ ಸಿಗ್ಗಕ್ಷರಾದ (ಎಪಿ ಇ. ಮಾಲೆ ೧೫-೬ : ಇ. ಹಿಂ ೨೦).
[< ಸಂ. ಸ್ಕಗ್ಧ]

ಹಗ್ಗಕೋಲ್ 'ಹಗ್ಗಕೋಲ್' ನೋ.

ಹಗ್ಗಕೆ, ಬಕ್ಕೆಕೆ, ಸಗ್ಗಕೆ (ನಾ). ೧. ನೀರುತುಂಬುವ ಭರಣಿಗಳ ಜೋಲು : ಹಗ್ಗಾರಿ : ಕೊಡ ಹೊಳೆಯೊಡಯಿಂದ ಸಗ್ಗಕೆಯ ನೀರಿರಲ್ (ಆಚಾ. ೪-೧೦) ; ಸಗ್ಗಕೆಯ ನೀರಿಲ್ಲ ಇದ್ದಿರಿಯೆಲ್ಲ ಬಾಡಿ ಮೈಗಂ ಹೋಗಿರ (ಭೂಚಾ. ೫೫-೧೫) ; ಸಗ್ಗಕೆಯ ನೀರಿಲ್ಲ ಕೊಳೆಯಾಗ್ಯಾಗ (ಆಚಾ. ೬೬-೧೫). ೨. ನೀರುತುಂಬುವ ಚಾಪ್ಪೆ : ಬೊಕ್ಕಲು : "ಚಾಪ್ಪೆ ಅಥವಾಹಾಲು ಸಗ್ಗಕೆಯಲ್ಲಿ" (ಪಾಚಾ. ೮೯-೨) ; ಪಾಚಾರಿಂ ಸಜ್ಜಾಲ್ಯ ಬಾಯಿಚಾರಿಗೆ ಏಂಬಲು ಬಾಯಿಂದ ಬಾರು ಕೊಟ್ಟಿಗೆ ಸಗ್ಗಕೆಯ (ಪಾಚಾ. ೨೦-೨) ; ಬಿಸ್ಕಿ ಸಗ್ಗಕೆಯ ಏ ರಾಗದಾಯಿಂದ್ಲಿ, ಮಿಸ್ಕಿ ಕೆಳಗ ಮುಂದಾಯ (ಪಾಚಾ. ೨೦-೧೧); ಬಿಳ್ಳೆಯಂ ಪೊಲ ಬಂ ಮಿಸ್ಕಿ ಸಗ್ಗಕೆಯ ಬೂಳ್ ಬಾ ಮಿಸ್ಕಿ (ಪಾಚಾ. ೧೧೨) ಬಿಳ್ಳೆಕೆ: ೧. ೧೬). ಹಗ್ಗಕೆ : ೨. ಚಿಕ್ಕದು ಸಗ್ಗಕೆಯಲ್ಲಿ ಬಾಂಬಲು ಬೂಳ್ಳಾಯಿಂದ ಅಂಬಾಯಿಂ ಹೊಳೆಯಿಂದ ಬಿಳ್ಳಾಯಿ ಚೆಲ್ (ಪಾಚಾ. ೧೧೨) [ಪಡಿ. ೪ ಕೆಲು. ಹಗ್ಗಕೆ].

ಹಗ್ಗಕೆ (ನಾ). ಹೆಚ್ಚಾದ ಕಾಲ : ಅಲ್ಲ ಮಾಗಿ ಅಂದ ಮಾಗಿ ಬಾಡಿಗೆ ಅಂದು ಸಗ್ಗಯ ಮಿಲ್ಲ ಅಂಗ ಅಂದು ಮಾಡಿಗೆ ಸಗ್ಗಾಯಿ ಅಂದು (ಪಾಚಾ. ೬).
[< ಹಗ್ಗ ? + ಕಾಲ್]

ಹಗ್ಗಕೊಬ್ಬು (ನಾ). ಕೈಗಡ ; ಸಬ್ಬು (?) : ಸಬ್ಬು ಸಗ್ಗಾಯಿಗೆ ಅಂದಾಗಿ ಬೆಯಾಯಿಸಿಗಾದ ಒಳಗೆ ಇಟ್ಟಾಗ ಇದ್ದಿರಿ (ಆಚಾಪ್ಪ. ೧೨.) : ಇಂದು ಮಂದ ಅಂಗಿಂದ ಸಮಂದ ಬ್ಯಾಸಾಲ್ಲ ದೊಂದ ಹಗ್ಗಕೊಬ್ಬು ಅಂದಿ (ಆಚಾಪ್ಪ. ೨೨.).
[? / ಆಡು. ಸಮಾಪ್ತಿ : ಮಲಾ. ಹೊಗಾಪ್ತಿ, ಸಮಾಪ್ತಿ = ಮಿಲಾಯಿಸು]

ಹಗ್ಗಿ (ನಾ). ಸಮ್ಮತಿಯಿಲ್ಲದ ; ಸ್ಕಗ್ಗಾಪ್ತಿ : ಮಾಡಿಯಾ ಅಜ್ಜಿಯ್ಯಿಂದ ಸಗ್ಗಂಗಾ ಅಂದ ಸಬ್ಬಿ ಸಗ್ಗಾಯಿಂದ ಬಾಯಿಂದ ಸಗ್ಗಾಯಿಂದ ಅಂದ ಮಾಗಿ ಬಾಡಿಗೆ ಅಂದ ಸಗ್ಗಾಯಿಂದ (ಆಚಾ. ೫ ಕೊಲ್ಲಾ. ೧೨೨-೨ : ೧೦೦೦) ; ಸ್ಕಿಂ ಹೆಬ್ಬಿಯಾ ದೊಂ ಸಗ್ಗಿಂದ ಸೊಂಗಂಗಾಂ ಅಂದ ಸಬ್ಬಿ ಸಗ್ಗಾಯಿಂದ (ಆಚಾ. ೫೫ ಕೊಲ್ಲಾ. ೧೨೨-೨ : ೧೦೦೦).
[< ಸಂ. ಸ್ಕಗ್ಗಾ]

ಹಗ್ಗಿಗ (ನಾ). ಸ್ಕಗ್ಗದಲ್ಲಿ ರುವವನು ; ದೇವತೆ : ಮರ : "ಇಂದುಗ್ಗಾಪ್ತಿ . . . ಹಗ್ಗಿಗ ಬಾಯಾಗ್ಯಿಯಿಂದ ಬೆಟ್ಟು ಸಬ್ಬಿಯ ಸಾಲು" (ಆ.ಭಾ.ಪ. ೧೦) ; ಹಗ್ಗಿಗ ಸುಬ್ಬಿಯಂದಬ್ಬಿಗೆ" (ಆ.ಭಾ. ೬.೦೦) ; ದಾಯಾಗಾಯಿಂದ್ಲಿಗಳ ಹಗ್ಗಿಗಳ್ (ಆಚಾ. ೨-೨೧).

ಹಗ್ಗಿಗಮ = ದೇವತೆಗಳ ಅರಿಗಳಿಯನು ; ಅಗ್ನಿ : "ಅಗಿ ಬಾಂ ಗಂಬಂಬಂಗಳ್ಳಾಗ್ಗಿ ಹಗ್ಗಿಗಮಂ ಬಿಸ್ಟಿ ಬಂಗಿಂಬಂಬಂಬಂಗಳಂ . . . ಅಬಂ ಬಾಬಿಬಿ" (ಆ.ಭಾ. ೧೮). ಹಗ್ಗಿಗ ಒಂಬಿ = ದೇವತೆಗಳ ಒಂಬಿಯ ; ಬ್ರಹ್ಮ್ಮ : "ಭೂಬಂಬಂಬಂಬಂಬಿಂಬಂ ಹಗ್ಗಿಗ ಒಂಬಿಯಂ ಬೆಂಬಂಬ್ಮಗಂ . . . ಬ್ರಹ್ಮ್ಮಗಂ ಬಾಬಿಂ" (ಆ.ಭಾ. ೧). ಹಗ್ಗಿಗಂಬ = ದೇವತೆಗಳ ರಾಜ; ಇಂದ್ರ : ದಂಬಬಂಬಂಬಿಬಿ ಹಗ್ಗಿಗಂಬಬ್ಮಗಂಬಬಂಬಿಬಂಬಿಬಿ (ಪಾಚಾ. ೬೬-೨೦) ಹಗ್ಗಿಗಂಬ್ಮಾ = ಹಗ್ಗಿಗಂಬಿಂ : "ಆಂಬಿಂ . . . ಹಗ್ಗಿಗಂಬ್ಮಾ ೫ ೪ ೪ ಆಬ್ಬಿ ಬೆಬಿಂ" (ಆ.ಭಾ. ೫೫-೨೦). ಹಗ್ಗಿಂಬಿಂ = ಹಗ್ಗಿಂಬಿಂ : ಬಾಬಿಂಗಳಾಂ ಹಗ್ಗಿಂಬಿಂಗಳಿಂದಾಗಿ ಬೆಂಬಂಬಂಬಿಂ ಏಂಬಾಗಿ ಸಂಬಂಬಂಬಂಬಿಂಬಿಂಬಿ

ಸಜ್ಜಾವ 'ಸಜ್ಜಾವ' ನೋ.

ಸಜ್ಜಾವಿಕೆ 'ಸಜ್ಜಾವಿಕೆ' ನೋ.

ಸಜ್ಜಾವಿಕೆಸು (ಸಾ). ಹೆಚ್ಚಳ ; ಅತಿಶಯ : ಭಾವಾವೇಶಕ್ಕೆ ಧೀರತ ಮಹಾವಿಭಾವ ಸೂಚಾಯಿಸುವುದು, ಅಭಿವ್ಯಕ್ತಿಸಾಧಾಕತೆಯ ವೀರ್ಯ ಪಾಪಿಸುವಂಗಳ (ಕೃಷ್ಣಾ. ೨೯ ೩೩). [ಸಜ್ಜಾವಿಕೆ (< ಸಜ್ಜಾವಿ) + ~ + ಪಸು]

ಸಜ್ಜಾವಿ (ಸಾ). ೧. ಧೀರತೆ ; ಗಾಂಭೀರ್ಯ : ಭಾವಾವೇಶ ಎಲ್ಲಾಗ್ಗಿ ಅಸಾಧ್ಯವಾಗಿ ಪಾಪಿಸುವ ಮೆರ ವಿಶ್ವಿಕೆಯಾಸ ಸಜ್ಜಾವಿಯಂ ಪಾಪಿಸಿಕೊಟ್ಟಿದು (ಮಾಭಾ. ೯ ೨೦೦). : ಧೀರ ಗಂಭೀರತಾ ಮುಖ್ಯ ೬ ವಿಷಾದಯೋಗಯಾಗ ಚಿತ್ತ ಸಜ್ಜಾವಿಯಂ ನೋಡಿಯ ಗಲ್ಲಿಂದಂ ಕೆಯ್ಕೊಂದಂ (ಸಜ್ಜಾ. ೧೦-೨೨-೨೨). ೨. ಭಿಡೆಯುಳ್ಳವನು : ಗಾಂಭೀರ್ಯಾಧಿಪನು : ದಾಸರಂ ಮಾಜಿಪರೊಳ್ತು ಸಜ್ಜಾವಿಯಾಗಿರಲ್ಕಾಗಿ ಪಾಪಿಸಿಯೊಳಾಗಿಸಿಸ್ಥಿತಿ ವೀರ ಸಾಂಗಾಯಿಸ ಅಧಾರಿಂ (ಮಾಭಾ. ೬ ೨೨) 'ಸಜ್ಜಾವಿ' ಪರಾ. [< ಸಂ. ಸಜ್ಜಾ]

ಸಜ್ಜಾವಿಸು (ಸಾ). ೫ ಸಜ್ಜಾವಿ ೧ : ಮೀಲಾ ಮುಖಾಂತರ ಒಂದು ಬಿಸ್ಸ ಸಜ್ಜಾವಿಯಾಗಿರಾಲಾ ಬಿಸ್ಸ ಯೋಸಿಸಗಳಿಸಲಂಬಂ ಶಪ್ಪಂಗಳ ಕೈಕೊಟ್ಟು ವೀರ ಪಾಪಿಸ (ಮಾಭಾ. ೬-೨೧). [ಸಜ್ಜಾವಿ + ~ ಪಸು]

ಸಜ್ಜಾವಿಕೆ (ಸಾ). ೫ ಸಜ್ಜಾವಿ ೧ : ಆಒ ಅಧಿಪಾಯ ಸಜ್ಜಾವಿಯಾಯಿಸಿರಾಲಾ ಉಪ್ಪಿಸಲಾಯ ಪಾಪಿಸಿಯ (ಮಾಭಾ. ೬-೨೨) ; ಮಾಪಾಪಿಸಿಸ್ಥಿತಿ ಪಾಪಿಸಿಗೆ ಪೀರ ಬಿಸ್ಸ ಸಜ್ಜಾವಿಯಿಗೆ ಒಂದಂ ಅಂಗಿಸಿಸಿಸ

ಸುಳ್ಳಿಕ್ಕೆ (ನಾ). ಒಳ್ಳೆಯ ಬಾಣಸ್ತಿಕ್ಕಳ್ಳರು : ಸುಳಿಕಾರ : ಸುಳ್ಳಾಣ ದಾಮಣ ತಿಕಾಮಂಗಳ ಸಂಬಂಧಂ ಸಳ್ಳಿಕಮುಂಬಿಕ್ಕಳ್ಗಂ ದಿಕ್ಕ ಕಾಲು ಕಂದು (ಅಭಿ. ೩ ೫೧). [ಸಂ. ಸುಳ್ಳಿಕಾ]

ಸುಳ್ಳಿಕ್ಕ (ನಾ). = ಸುಳ್ಳಿಕ್ಕ ೧ : ಸುಳ್ಳಿಕ್ಕಿಯಾಗಿ. ಸುಳ್ಳಿಯಂಗಿಯೊಳಗೆ ಗುಣಪಕ್ಷಿಯೊಳಾಮಿಷವಿಲ್ಲದಂತೆ ಮಾಡಿದಂ ಗೊಡಿಸ್ಸಿ (ಜಾಲ. ೧೬-೧೭) : ಎಚ್ಚಳಿಸಿದಂ ಧಾತ್ರಿ ತಾಗಲ ಮಿಸ್ಸಿ ಉಮಾಸಾಲ ಸುಮಿಸಿದಂ ಸುಳ್ಳಿಕ್ಕಿಯ ಧಾತ್ರಿ (ಭಾಷ್ಯ. ೬ ೧) [ಸಂ.]

ಸುಳ್ಳಿಸಾಡಿದ (ನಾ). ೧. ಶ್ರೇಷ್ಠವಾದ ಆನಂದ : ಸುಳ್ಳಿಸಾಡಿಸ್ಸಿಳ್ಳಾಡಿಸಿದ ಸಿಂಹಾಸನಾಸ್ಥಿತ ಪರಮಾತ್ಮಂ ಪರಮಾನಂದ ಪರಿಪೂರ್ಣಂ ಪರಮಾತ್ಮಂ ಪರಮಾನಂದಮಂ ಪೊಂದುವಂತೆ ಮಾಡುವಂ (ಜಾಲ್ಗಿ. ೧ ೫೧) : ಪ್ರಭುವಿನಿಂ ಸುಳ್ಳಿಸಾಡಿದಂ ಪಡೆದು (ಭಾಷ್ಯ. ೧೦-೧೧). ೨. ಅನಂದಮೈಸಲಾದ ಪರಮಾತ್ಮ : ನಿತ್ಯ ಶುದ್ಧ ಮುಕ್ತಾನಂದಸ್ವರೂಪಾದ ಮುನಿವರ ಸುಳ್ಳಿಸಾಡಿದ ನಿಧಿ ಶಿಖಾ (ಜಾಲ. ೬೨-೧೧೨). [ಸಂ.]

ಸುಳ್ಳಿಸಿಕ್ಷಿತ (ನಾ). ೧. ಶ್ರೇಷ್ಠವಾದ ಲೋಕ; ಭಗವಂತನ ಸ್ವರೂಪ : ಪರಮಾತ್ಮನ ಪುರಂ ಸುಳ್ಳಿಸಾಂಕಿಂ. ಸುಳ್ಳಿಸಿತಮಿಂತಿಂ. ಅಜರಾಮರಾಳ್ಗಿ ಸುಳ್ಳಿಸಿತಮಂ ಪೊಂದಿಸಿಯಪ್ಪಿಂದಂ ತೀರ್ಥ ಪಾದಾಕ್ರಾಂತಮು ಗಾತ್ರಮಾಯಿತು ಪೂರ್ಣಾಕ್ಷ (ಅಷ್ಟ. ೧೫೫). ೨. ಶ್ರೇಷ್ಠವಾದ ಲೋಕವಿಂದ ತೊಡಿದವನು; ಶರಣಾತ್ಮ : ಸುಳ್ಳಿಸಿತವಾದಂ ಮುಟ್ಟಿ (ಅಷ್ಟ. ೧೫-೬) : ಕಂಡಂ ಪ್ರಾಪ್ತ ಪೊಳ್ಳಿಸಿತಂಗಳ್ ಸುಳ್ಳಿಸಿತಗಳೊಳ್ (ಜಾಲ. ೪-೧೫೨). [ಸಂ.]

ಸುಳ್ಳಿಹಣ (ನಾ). ಒಳ್ಳೆಯ ಮುಸ್ಸನ್ನು ತೊಂದಿರತಕ್ಕ : ಅಳ್ಳಿಸಿಳ್ಳಿ ಕೃಪಾಪಾತಿಸಿಳ್ಳಿಸಿಳ್ಳಿ ಸಕಲಕಳಾಕಾಂತಿಸಿಳ್ಳಿಸಿಂತಿಪಾಯ ಬುದ್ಧಿಸಿಂ ಪೊಣ್ಮಿ ಪಿರಿ (ಅಷ್ಟ. ೨೬-೧). [ಸಂ.]

ಸುಳ್ಳಿಸ್ಸ (ನಾ). ಒಳ್ಳೆಯ ವಿದ್ಯಾರ್ಥಿ : ಯೋಗ್ಯನಾದ ವಿಸ್ಸಿ : ಗುರುವರ್ಯಾಜ್ಞಾಯಂ ಸುಳ್ಳಿಸ್ಸಿಗೆ ಬಲ್ಲಿ (ಅಷ್ಟ. ೨೯-೧೨೦) : ಸಾಧಿಸ ವಿಸ್ಸಿಂಗೆ ಲಂಘನೋಪಾಯ ಮಾಯಿಪ್ಪಿಯಲ್ಲಿ ನಿಸ್ಸಿಳ ಬಲ್ಲಿ ಸುಖಿಸುಖ್ಯಾಲ್ಗಿ ಗುರುವಿಂ ಧನ್ಯತೆಯಿಂದೆ (ಮೋಕ್ಷ. ೬೮) [ಸಂ.]

ಸೂ 'ಸಕಾ' ನೋ.

ಸೂಚ (ಗು). ಬಹುಸ್ಸಿಂದ ತೊಡಿದ : ವೀಣಾಸೂಚಾವಾಯುಂಬಿಯಂತೆಯಾಗಿ ಆಯಾಗ ಗಾಯಾಯಾಂಗಾಗಿ ಮಿಸ್ಸಿಗಾಗಿ ಸೂಚ ಸ್ಥಾನಗಳ (ಅಷ್ಟ. ೧೦-೧೦). [ಸಂ.]

ಸೂಚಕತೆ (ಕ್ರಿ). ಬಯಸುವುದು, ಪೆರೆ; ಗೆಲ್ಲು : ಪಾಪಿಸಲಂ ಸೂಚಿಸಲಂ ವಿಷಾ ಜಾಯಿಸಿಯೊಯಿಸಿಯೊಯಿಸಿಯೊಳ್ ಸಿಲಿಸಿಗಳಿಂ (ಅಜಿತ. ೪-೧೫-೨೦).

{ಸೂಚಕ + ತೆ}

ಸೂಚನೆ (ನಾ). ನೀರಿನಿಂದ ತೊಡಿಯುವೆ ; ತೆಗ ; ಒದ್ದೆ : ವಿಪಿಸಿಂಳ್ ಸೂಚಾ ಸೂಚನಂ ಸ್ಥಿತಿಯಾಗಿ ಮಿಳ್ಳಿಸಿಯಂಗಳಿಂ ಮಿಳ್ಳಿಸಿಯಂಗಳಿಸ್ಸಿಳ್ಳಿಸಿಯಂಗಳಿಂ . . . ಅಂಗಿಸಿಯಂಗಳಿಂ ವಿಪಿಸಿಯಂಗಳಿಂ ಪಾಲ್ಗಿ (ಅಷ್ಟ. ೫-೧೦೦). [ಸಂ. ಸೂಚನಾ]

ಸೂಟಾ, ಸೂಟ, ಸೂಟೆ (ನಾ). ೧. ಬಿಲ್ಲ ; ದಂಡಿಗೆ : ಸುಟ್ಟಾದ ಸಂಗಾತ ಸಣಾ ಸೂಟಾ ಮಾಡಿದಂ ? (ಜಾಲ್ಗಿ. ೨) : ಯಮಂ ಸೂಟಾ ಮಾಡಿಸಿಂದಾಗಿ ಬಿಲ್ಲಿ ಒಸ್ಸಿಯಾಗಿ ಇಟ್ಟಿ. ಸೂಟಾ ಅಸ್ತಿಸಿಂ (ಜಾಲ್ಗಿ. ೧೨). ೨. ಶ್ರೇಯಾಕಾರದ ಬಿಲ್ಲಿ : ಸ್ಫಟಿಕಾದ್ರಿಯ ಒಳ್ಗಿಸಿಂದಾಲಂ ಸೂಟಾ ಆಯಿ ಮಾಡಿಸಿಟ್ಟಿ (ಸಂಗಾ ೩೦). ಸೂಟ : ೧. ಒಣ ಹೊಳ್ಳ ಸೂಟ ಮೊಳೆ (ಪಚಾಂಗ. ೧೨) : ಪ್ರಭುವಿಗೆ ಒಡಗಿನಿಂ ಮೋಗದ ಭಂಗ . . . ಹೊಸ ಹುಗೆ ವಿಧಿವಿಲ್ಲಿ ಸೂಟಾಯಿ ಸೂ (ಅಜಿತ. ೨೫-೨೦). ೨. ಸೂಟ ಬೃಂ ಮಾಗಿ (ಪಚಾಂಗ. ೧೨). ಮಾಂಸಪ್ರಸ್ಥಗಳ್ಗಿ ಅಭಿಸಿಂದಂ ಸೂಟಾ ಅಯಿ ಮಾಡಿಸಿಂದಿಟ್ಟಿಂ (ಪ್ರಾಣ. ೧೧೨). ಸೂಟೆ : ೧. ಒಣ ಹೊಳ್ಳಿ ಹೊಂದಿಸಿಂಗೆ ನಿಂಬ ಅಂಗಿಗೆ, ಈಗ ಸಂಬಂಧಿಸಿದ ಸ್ಥಿತಿಯ ಗಾಗಿಸಿ (ಪಚಾಂ. ೬೦). ೨. ಅಯಿ ಸಲ್ಲಿಸಿಗಿಂದಂ ಸಣಿಂ ಅಂಗಿ ಆಯಿಸಿಂದಾಲಂ (ಮಂಗ. ೧೦೦).

|← ಸೂಚ. ಸೂ. ಸೂಟಾ. ಸೂಟೆ|

ಸೂಟಾತಿ (ನಾ). ಒಂದೇ ಸುಲ ,– ಪರಿಣ : ಸೋಲಾ ಸಂಖ್ಯಾಯಂ ವೀಣ ಸಾಧಾಣಾ ವಿಸೇಷ ಸೂಟಾ ಸೈಸ್ಯಾಸಿಕ್ಕ ಸಾಟಿ ಮಿಸಾ ಮಿಸಾಯಿಂದ ಬಳಿಸಿಯಿಂದ ಬಂಧಿಸಿದ (ಅಜಿತ. ೫-೧). [ಸಂ.]

ಸೂಟಾತಿಸೂಟ (ನಾ). [ಸಂಗಡ] ಪದಿನೆಟು ಬಗೆಯ ಶೋಳಬುಗಳ್ಳಿ ಒಂದು : ಜಾತಿಯಾದ ಸೂಟಾತಿಯ ಸುಪಿಡಿಯಂತಿಯಾ ಪಚ್ಚಿಸಿ . . . ಭೂಮಿಸಿಂತಿಯಂದಲಿ ಪಾಯಿಯಾ ಶೆಂದ ಪಾಯಿಗಳ ಬಳ್ಳಿಸಿಗಳಿಂ (ಅಜಿತ. ೫೬). [ಸೂಟಾ + ಅತಿ]

ಸೂಟಾಳಿಯ (ಗು). ೧. ಒಂದೇ ಗುಂಟಿನ ; ಒಂದೇ ಜಾತಿಗೆ ಸೇರಿದ. (ನಾ). ೨. ಒಂದೇ ಗುಂಟಿಗೆ ಸೇರಿದುದು ; ಒಂದೇ ಜಾತಿಯದು : ವಿಜಾತೀಯಾ ದೃಷ್ಟಿಕ ಸೂಟಾಳಿಯಾಗಿ ಮಾಡಿಯಾದ ಸೊಟ್ಟಾಳ್ಗಳ್ಳ ಸಾಮಾನ್ಯ ಅರ್ಥ 'ಅಳ್ಳ' ಎಂಬ ರೂಪ ಸಾಧ್ಯ (ಅಷ್ಟಾ. ೬೬). [ಸಂ.]

ಸೂಟಿಕ (ಗು). ೧. ಪ್ರಾಣಿಯಿಂದ ತೊಡಿದ ; ಜೀವದಿಂದಿರುವ. (ನಾ). ೨. ಜೀವಂತವಾಗಿರುವುದು : ಸ್ಥಾವರಕ್ಕಿ ಇಂದು ಸೂಟಿಯಾಗಿಯೂ ಬಾಲ ಪ್ರಾಯಗ ಸಂಗಾತಿಯಂತೆ ಕೆಂಪಾಗ (ಅಷ್ಟ. ೫೬). [ಸಂ.]

ಸೂಟಿಯಿಸ್ಸ (ನಾ). ಜೀವವಿರುವಂತೆ ಭಾವಿಸುವುದು ಬಿಸ್ಸ ; ಜೀವವಿಸ್ಸಿ : ವಿಚಿಂಗಯಿಸ್ಸಿ ಸೂಟಿಯಿಸ್ಸಿಯಂ ಭೂಮಿಸಿಸ್ಸಿಯಂ ಸುಟ್ಟಿ ಬಿಸಿಂ ಭೂಗಿ ಅಭಿಸಿಂದಾ ಗಾಂಗಿಯಂ (ಅಜಿತ. ೧೦-೧೬) ; ಬಳಿ ಸೂಟಿಯಾಂ ಸಂಗಿ. ಸುಟಿಯಿಸ್ಸಿಯಾಸ್ಸಿಂ ಅಟಿಯಿಸ್ಸಿಯಾ ಬೀಯಿಸ್ಸಿಂಗಳ್ (ಅಜಿತ. ೨೯-೧೦೦). [ಸಂ.]

ಸೂಟೆ 'ಸಟಾ' ನೋ.

ಸೂಟ್ಟ (ಗು). ೧. ಮುಟ್ಟದ ; ಜೊಂದಿಸಿದ. ೨. ಆಗಿರುವ : ಸಿದ್ಧವಾದ. ೩. ತೊಂದಗೆಯಾದ ; ಅಲಂಕೃತವಾದ. ೪. ಬಲಗೊಳಿಸಿದ ; ಭದ್ರಗೊಳಿಸಿದ. (ನಾ). ೫. ಸಾಧನ ; ಸಲಕರಣೆ. ೬. ಆಯುಧ ; ಜೊಡಿಯ. ೭. ಒಂದು ಬಗೆಯ ದ್ವಿಪ್ಪ : ಪಾಲಿಸಿಕ್ಕೆ : ಒಟ್ಟ ಇಟ್ಟ ಪಾಲಂ ಪ್ರಾಯಾಪಾಯಾಂ ಪಾಲಿಸಿಂದಂ ಸುಗಾಲಂ ಸುಗ್ಗಾಲಂ ಉಂದಿಂದಂ ಸುಟ್ಟಿಯಿಸ್ಸಿಂದಿಂದಿಂದ ಬೆಳಿಸಿಂಗೆ ಸುಗಿಂದಿಂದ ದೆಸಿಯಿಂದಾಗಿ ವಿಧಿಯಂ (ಮೋಕ್ಷ. ೬-೧೦). [ಸಂ.]

ಸೂಟ್ಟಿಯಿ (ಕ್ರಿ). ಸಿದ್ಧವಾಗು ; ಸಜ್ಜಾಗು : ಸುಗಾ ಅಭ್ಯಸಿಯಿಂ ಸುಯಿಸ್ಸಿಯ ಸುಟ್ಟಿಯಿಂದ (ಅಷ್ಟಾ. ೪-೨೨). [ಸೂಟ್ಟ + ಆಯಿ]

ಸೂಟ್ಟಿ, 'ಸಟ್ಟಿಗೆ' ನೋ.

ಸೂಟ್ಟಿ, 'ಸಟ್ಟಿಗೆ' ನೋ.

ಸೂಟ್ಟಿಕ (ಗು). ೧. ಒಳ್ಳೆಯ ದಂಡೆದಲ್ಲಿ ಹುಟ್ಟಿದ ; ಸಟ್ಟುಲಿಗ. (ನಾ). ೨. ಒಳ್ಳೆಯ ದಂಡೆದಲ್ಲಿ ಹುಟ್ಟಿದವನು ; ಸಟ್ಟುಲಿಕ : ದಾಶೀಯಂ ದುಟ್ಟಿ ಸುಟ್ಟಿಯಲ್ಲಿ (ಅಷ್ಟಾ. ೧೮೦) ; ಸುಟ್ಟಿಯ ಸುಖಾಯಿ ಸುಟ್ಟಿಯಾಯಿ (ಅಷ್ಟಾ. ೪-೨೬) : ಸುಟ್ಟಿಸ ಸಂಗಾಯಿ ಕೆಲ್ಲಿಯ ಒಟಿಯಿಂದ ಯಾಯಾಸ ಸಂಗಾಯಿಯಾಗಿ ಬಟ್ಟಿಂದ ದೃಟ್ಟಿಯಾಯಿ (ಅಷ್ಟಾ. ೧೦೦). ೩. ಜೊಂಡಿ : ಪಟ್ಟಿ : ಟೆಂಟ ಸುಟ್ಟಿಯಿಂಗಳ್ ಬಟಿಯಾಗಿ ಸಿಟ್ಟಿಯಿಂದ ಸಿಟ್ಟಿಯಿಂದ ಸಿಟ್ಟಿಯಿಂದ

ಸಜ್ಜಹಿತ್ತಿ (ನಾ). ಒಳ್ಳೆಯ ನಡತೆಯುಳ್ಳವಳು : ಶೀಲವತಿ : ಅಪ್ಪಿಲಿಪ್ಪಿಗೆ ಬಂದಾ ಸಜ್ಜಹಿತ್ತಿ ತಿಳಿಲಾ ಒಟ್ಟಿ ಸಜ್ಜಿಸಿತ್ತಿಯಾಗಲಿಯಾಕ್ಕು. (ಹರಿ. ೧೪೬-೨೧೩)
[ಸಜ್ಜ + ಸ + ಸಿತ್ತಿ]

ಸಜ್ಜಸಹ (ನಾ). ಒಳ್ಳೆಯತನ ; ಸಜ್ಜನಿಕೆ : ಅತ್ತ ಕಂಡ ಮಾಣಿಕೋಂದಾ ಸಾ ಸಜ್ಜಸಹವ ಇತ್ತ ಗಾಣದ ಸೋಗಿ ಹೊದ್ದಿ ಸಾಧಿಸಿದಾಗ ಅದ್ದ ಅಂತ್ತಿ ಕೈಯಿದ್ದಿದ್ದ ದುಷ್ಟ ಸಜ್ಜಾವಾಕ್ಷಸಿ (ಮೋಹನಾ. ೨೬ ೧೧) [ಸಜ್ಜ + ಸಹ]

ಸಜ್ಜಹವಾಕ್ಕ (ನಾ). ಸಜ್ಜನರಿಂದ ಮನಸ್ಸಿಗೆ ಪರಿಪರವನು : ಸಜ್ಜನಮನಸ್ಸಂ ಸುಖಾಗಿ ಮಾಡಿಸಿ . . . ಮೃಗಪ್ಪಿಳ್ಳಿವಾ (ಮಾಹಿ.೧೬ ೧೦). [ಸಂ.]

ಸಜ್ಜಸಹಿತೆ (ನಾ). = ಸಜ್ಜನಿಕೆ ೩ : ಪಾಪಂ ನಿಮಿಂದ ಸಜ್ಜಪಮಾಮುಸಾಗಾದಿ ಜಜಾಸ್ಪದ ತಿಜಿಂದ (ಧರ್ಮಾಮೃ. ೧೪ ೧೨೩). [ಸಂ. ಸಜ್ಜನಪಾ]

ಸಜ್ಜನಪಡಿಪತಿ (ನಾ). = ಸಜ್ಜನಿಕೆ ೩.: ಸಜ್ಜನಪಾಮಾಮುಸ್ಸಾಗಿ ಗಾಗಿಸಜ್ಜ ಸೊಳಿಯಂ ಪುಟ್ಟುವಂತೆ (ಧರ್ಮಾಪೀ, ೧೦ ೬೭) : ಪ್ರಾಣಿರೀಕ್ಷಣೆಯಿಂದ ತಿಕ ಶ್ರೀಗಾಮಾಸ್ಪಾಗಿಂದಿಪಾಮಾಮುಸಾಗಿ ಒಜಪಾಗಿಂದಂ ಜಯಿಪಾತಿ ಸಜ್ಜನಪಡಿಪತಿ ಪಾಪಾಂ (ಶ್ರೀಪಾಪು. ೫-೬೨). [ಸಜ್ಜನ + ಪಡಿಪತಿ (< ಪಡಿಪತಿ)]

ಸಜ್ಜನಪೋ (ನಾ). ಒಳ್ಳೆಯ ಮನಪರಲ್ಲಿ ಹುಟ್ಟಿದ ಹೆಣ್ಣು : ಆರ್ಯಾ ಸಜ್ಜನಪೋ (ಧರ್ಮಾ ೧೨ ೪೫೫). [ಸಜ್ಜನ + ಪೋ]

ಸಜ್ಜನಪಸ (ನಾ). = ಸಜ್ಜನಿಕೆ ೩ : ಪಪಾಪಾಗಿಸಾಜ್ಜಿ ಸಪಪಾ ಒಜಪಾಪ ಸಜ್ಜನಪಸ ಯಾಪ ಒಂದಿಪಿಪಿಪಾ (ಧರ್ಮಾ. ೧೬-೧೨೨). [ಸಂ.]

ಸಜ್ಜಸ್ಸೀಲ (ನಾ). = ಸಜ್ಜನಪೋ : ಅಜ್ಜಿಯ ಸಜಿಗೆ ಸಾಗಾಜಪಿಯಾಸ್ಸಿ ಒಜಿಪಾಗಿ ಅಪಾಗಿ ಒಜಿಪಾಗಿ ಸಜ್ಜಿಸ್ಸಾಗಿ (ಧರ್ಮಾ. ೧೨೫). [ಸಂ.]

ಸಜ್ಜಸಿಕೆ (ನಾ). ೧. = ಸಜ್ಜನಪೋ : ಪಜಾಗಿಯೋಳ್ಗೆ ಸತ್ಪ ಸಜ್ಜನಿಯಾ ಪೋಗಿ (ಧರ್ಮಾ. ೧೨-೫೮) ; ಸಂಗಾಗ ಪಜ್ಜಾಗಿಪ್ಪಿದೆ ತಿಜಾ ಸಜ್ಜನಿಕೆ ಸಪಪಾಪಾಗಿ ಸಿಜ್ಜಪಾಗಿ ಪಾಪಾಜಿಯಾಗಿಸಾಗಿಪಾಗಿ (ಧರ್ಮಾ. ೧೨೫). ೨. ಸಿಪಿಯಾಗಿಸಿಪಿಪಿಪಾ ; ಶಿಪಿಲಿಪಿಪಿಸಿ ; ಪಾಸಿಪಿಸ್ಸೆ : ಧರ್ಮಾ ಪಾಪಾಗಿ ಪಾಗಿ ಸಜ್ಜನಿಕೆಯಾ ಜಜಾಸ್ಪಾಗಿ ಗಾಗಿ ಪೂಪಿಯಾಗಿ ಧರ್ಮಾ (೧೨. ೩. ೧೪೫ ೧೫ ; ೩. ೧೨೦); ವಿಪಿಪಿಪಿಪಾಗಾ ವಿಜ್ಞಾಗಿ ಪೋಸ್ಪಿಪಾಂ . . . ಸಿ ಸಜ್ಜನಿಕೆಗಾಂದಾಗಿಗೆ ವಿಗಿಂಗ್ (ಧರ್ಮಾಮೃ. ೧-೧೫). [ಸಜ್ಜನ + ಇಕೆ]

ಸಜ್ಜನಿ (ನಾ). ಒಳ್ಳೆಯ ನಡತೆಯವಳು; ಶೀಲವತಿ : ಅಂಗಿಯಮಯ್ಯಂಗ ಗಂಡಂಗಮಿಯ ಪಾಡಿಮಾಯಾ ಸಜ್ಜನಿಯಾಪಿಸಿಸಿಸಿಸಿಸಿಸಿಸಿ (ಧರ್ಮಾ. ೧೨೬); ಪಾಗಿಗಿ ಪಾಗಿಪಾಸ್ಸಿ ಗಾಂಗಿ ಸಜ್ಜನಿಪಾಗಿ ಪ್ರಾಗಿಪಾ ಒಜಗಂಪಿಪಿಸ್ಸಿಂ (ಧರ್ಮಾಮೃ. ೧೨ ೨೨). [ಸಜ್ಜನ + ಇ]

ಸಜ್ಜನಿಕೆ (ನಾ). ಒಳ್ಳೆಯ ನಡತೆ : ಪಾಪಾ ಸಜ್ಜನಿ ಪೋಗಿ . . . ಪೋಜ್ಞಾ ಪ್ರಾಪಿಯಾ ಶೀಲಾವ (ಪಾಪಾ. ೧೨೬೪). [ಸಂ. ಸಜ್ಜನಿ]

ಸಜ್ಜಪ (ನಾ). ಬಯಪಿ ; ಗೆಲುವು : ಸಜ್ಜಾಪಾಪಾ ಸಿಪಿಪಿಪಿಪಿ ಒಜಪಾಂಪಿಪಾಪಾಪಿಪಿ (ಪಾಪಾ. ೧೬ ೧೬) [ಸಂ.]

ಸಜ್ಜರ 'ಸಜ್ಜಾರ' ನೋ.

ಸಜ್ಜಪ (ನಾ). ಒಂದು ಬಗೆಯ ಅರಗಿನಂತಹ ಅಂಟು : ರಾಳ : ಅಜಾ ರೊಂಜಲಾಗ ಕ್ಷಿತ ಸಜ್ಜಪಾ ಬಲ್ಲಂ ಸಗಾಂಪಿಪಿಪಿ ಪಜ್ಜಿಪಿ ಸಪಿಪಾಂಪಿಪಿಪಿಪಾ (ಪಾಪಾ. ೬-೬೦); ಅಜಾಸಿಂ ಧಿಪಿಗ್ಗ ಪಪಾಪಾಗಿ ಗಾಪಿಪಿಪಿಪಿಂ ಸಿಪಿಪಾಪಿಪಿಪಿ ಗಾಗಿಪಿಪಿಂ . . . ಪಾಪಿಪಿಂ (ಪಾಪಾ. ೧-೧೨). [< ಸಂ. ಸಜ್ಜಾರಸ]

ಸಜ್ಜಳ (ನಾ). ಬಾಯಿ ; ಜೊಲ್ಲು : "ಅಜ್ಜಾಪಿಗಾಗ ಪೂಪಿಪಿ ಸಜ್ಜಾ ಪಾಪಾ" (ಪಾಪಾ. ೧); ಧ್ವನಿಯಂಪಿಪಾಂ (ಪಾಪಾ) ಸಜ್ಜಳಿಪಿಪಾಂ ಅಂಪಿಪಿಪಿಪಾಂ ಸಿಪಿಪಾಂಪಿಪಿಪಿಪಾಂ ಪಿಪಿಪಿಪಾಂ ಅಪಿಪಾಂ ಪ್ರಿಪಿಪಿಪಿಪಿಪಿ (ಪಾಪಾ. ೧೫-೨). [?]

ಸಜ್ಜಾತಿ (ನಾ). ೧. ಒಳ್ಳೆಯ ಪಂಕ ; ಸತ್ಕುಲ : ಸಜ್ಜಾತಿ ಸಮಪಾಪಿಪಿಪಿಪಿ ಪ್ರಾಣಿಯಾಂ ಅಜ್ಜಾಪಿಯ ಅಂಪಿಪಿಪಿ (ಪಾಪಾ. ೩-೧೮). ೨. [ವ್ಯಿ] "ಪಾಪಿಪಿಪಿ ಜನ್ಮದಲ್ಲಿ ದೀರ್ಘಾಯೋಗ್ಯವಾದ ಶ್ರೇಷ್ಠವಂಶದಲ್ಲಿ ಹುಂಪಿಪಿಪಿ ವಿಪಿಪಿದ್ಯವಾದ ಜನ್ಮ." (ಧರ್ಮಾ. ೫೫) : ಸಜ್ಜಾಪಾಪಾ. ಪ್ರಾಪಿ ಸಜ್ಜಾಪಿಪಿಪಿ ಪಾಪಿಪಿಪಾಪಿಪಿಪಿಪಿಪಿ

ಮಾಳ್ಪುದು (ಯಶೋ. ೧-೯೭). ೩. ಮುಂದಾಗಿ ಗೊತ್ತುಮಾಡಿ, ಸಿದ್ಧಪಡಿಸಿ. ರಂಭೆ, ನೀನಿಷ್ಟಪ್ರಿಯ ಬೇಗ, ಬಟ್ಟೆಮಾಲಾ ಅಭ್ಯಂಗದ ಸಜ್ಜಿಕೆ ಪ್ರಮೋದ ಮುಂಜಾನಿಂ ತಾವದು (ಪಟ್ಟಣ. ೮೮). {<— ಸಿ. ಸಂಜೆ : ಮಾಸ. ಸೊಜ್ಜಿ}

ಸಜ್ಜು (ಕ್ರಿ). ಸಜ್ಜುಗೊಳ್ಳು ; ಅಣಿಯಾದು : ಅಭ್ಯಾಸ ಮಾಸ್ಟ್ಯಾಳ್ಳಾಳ್ಳಿ ತಿರಾಹಾಸಾದೂದು ಆಪಾಯಾಪ್ಪಾಳ್ಳಿ ರಂಗಿ ಸಜ್ಜುವು (ಭೂಪಾ. ೧೮೬). {ಸಜ್ಜು + ಆಡ್ಸು}

ಸಜ್ಜೆ (ಗ). ೧. ಸಿದ್ಧವಾದ : ಅಣಿಯಾದ. (ನಾ). ೨. ಸಿದ್ಧ : ಅಣಿ : "ಹಜ್ಜಿದುದು ಸಜ್ಜಸಜ್ಜಾಯ್ತು ಸೂಳು"(ಯಶೋ. ೫೬-೪); ಅವರೆಲ್ಲ ಅಡಿಯಿಟ್ಟಲ್ಲಿ ರಥರಥಿಕಾಯೋಧ್ಯಗಳಂ ಸಜ್ಜಿತವಾಗಿ (ಚಿಕ್ಕ. ೪) : ದೇವ್ಯರು ಅಭಿಷೇಕಕ್ಕೆ ಸಜ್ಜಾಗಿದ್ದರು (ಭೂಪಾ. ೧೯೬). ೩. ಸಿದ್ಧನಾದವನು : ಅಣಿಯಾದವನು : ಅತಿಶ ಮೋಹದಾಂಧಂ . . . ಸಜ್ಜಿತಸೈನಿ ನಿರ್ಜಿತ್ಯೆ (ಪಾರ್ಶ್ವ. ೧೧೬) : ಪಟ್ಟಾಭಿಷೇಕಕ್ಕೆ ಪಟ್ಟಾಭಿಷಿಕ್ತನಾದ ಒಬ್ಬ ರಾಜಪುತ್ರನೇ ನಿಮಿತ್ತನು (ಯಶೋ. ೧೬ ೪. ಸಿದ್ಧನಾದ ಅಣಿ : ಅಣಿಯಾದವರ ಗದ್ದ : "ಸಜ್ಜಿಗ, ಅಭ್ಯಾ – ಕಾ ೨ ಹೆಗ್ಗಡೆ" (ಅಭಿಧಾ. ೬೭-೬೬). {ಸಜ್ಜು}

ಸಜ್ಜಿಸು (ಕ್ರಿ). = ಸಜ್ಜೆಮಾ : ಜಾಗಾಪಾಯಂ ಸಜ್ಜಿಸಿ ಮಿಗ ಕೋಳಿಯಂ ಕಡಿಸಲ್ಕೆ ಅಡಿಸಿದಂ . . . ವಿಷಮಾಯುಧವಿದೋಷಿಯಾ (ಭಾಷಾ. ೧೫೪). {ಸಜ್ಜು + - ಇಸು}

ಸಜ್ಜಿಕ, ಸಜ್ಜಿಕಾರ (ನಾ). ಒಂದು ಬಗೆಯ ಕ್ಷಾರ ; ಸೋಡಾಕ್ಷಾರ : ಸಜ್ಜಿಕಾಕ್ಷಾರ ವಿಷಮಿಂ ನಿಗಳ್ದಾಗ ಕುಪಿ ಸಾಹಸಿಯಿಗಿ ಅಸಿಯಿಲ್ಲಿ ಅ ನಿಲಿಸಿ ಬಿಲಿಸಲಲ್ಲಿ ಈ ಸ್ಥಳಿಂದ ಮುಟ್ಟಿಲ್ಲಿಂ ಅಡಿಸಿ ಪೃಚಿಸಾಯಾಯಾಯಿಸಲ್ಲಿ (ಜೀವಂಧ. ೬-೩೩). ಸಿಜ್ಜಿಕಾರ : ಪಾಯಾಗಂ . . . ಸಜ್ಜಿಕಾರ (ಯಶೋಧ. ೨೫). {< ಪಾ. ಸೋಜ್ಜಿಕ}

ಸಜ್ಜಿಗ (ಗ). ೧. ಸಜ್ಜುಗೊಳಿಸಿದ : ಅಣಿಮಾಡಿದ : ಹಜ್ಜಿಕ ಸಜ್ಜಿಗಾಗಿರ ಪೃಥಾಪಾಶಕಂ ಶಕಪಾಯಜ್ಞಿಂ ಪ್ರಥಸ್ಯಪಾಯಾಸಿಗಿ (ಯಶೋಧ. ೫-೧೫೨). ೨. ಸಿದ್ಧಗೊಂಡಿರುವ ; ಅಲಂಕರಿಸಲ್ಪಟ್ಟ. ೩. ಸಜ್ಜಿಸಲ್ಪಟ್ಟ. {ಪಾ.}

ಸಜ್ಜಿಗೆ (ನಾ). ಮಾಡಲಾದುದು : ಸಜ್ಜಿಗೆ ಮಾಡಿದ ಕಡಿಗಂ ಮಾಡಿಸಲ್ಪಟ್ಟ ಸಜ್ಜಿಗಾಗಿರ್ದ ಕಾಲಂ (ಯಶೋ. ೧೬೬). {ಸಜ್ಜು + -ಇಗೆ}

ಸಜ್ಜಿಗೆ (ನಾ). ಶೈತ್ಯಕಾರಿ ಬೆದರ : ಶಾಲಿ ಮಜ್ಜಿಗೆಯಾ ಪಚಿಸಲ್ಲಿ ಬಿಸಿಯಾಂ ಪಿಸಿಗಾಂ ಸಜ್ಜಿಗೆಯಾ ಸಜ್ಜಿಸಲ್ಲಿಂ (ಯಶೋ. ೧೬೬-೩೦೦). ೨. {ನಾಮ} ಸಂಜಿಕ್ಕಿದಲ್ಲಿ ಒಂದು ವಿಧ : ಮಜ್ಜಿಗೆ ಇಲ್ಲ, ಅಂಜಾಲ, ಅಂಗಾಲಾ, ಸಜ್ಜಿಗೆ ಎಂದು ಕಾಲ್ಕು ವಿಧ (ಯಶೋ. ೧೬). {ಸಂ.}

ಸಜ್ಜು (ನಾ). ತಯಾರಿ : ಸಿದ್ಧತೆ : ಸಂಗ್ರಾಮಯಾ ಮೊಗಾಯಾಯಾಯಿಯಾಗಿ ಸಜ್ಜುಮಂ ಪಡೆದು (ಪ್ರಭಾ. ೧೯೬) ; ಕಾಯಂಮೊಲ ಸಮಿಸಿ ಸಜ್ಜಿಸಿಯಾಯಿಕೆಳಿಸಿ (ಯಶೋಧ. ೧೯೦-೬೦).

ಸಜ್ಜಿಗ ೩ ೧. ತಯಾರಾಗು ; ಸಿದ್ಧವಾಗು : ಸಮಯ ಅಣಿಗ ತೊಂಗಾಯಾಯ ಸಜ್ಜಿಗಿ ಬಿಲಿಸಿಸಲ್ಲಿ (ಭೂಪಾ. ೨-೧೨-೧) ಸಜ್ಜಿಸಿಯಾ ೩ ೧. ಸಿದ್ಧವಾಯಿ ; ತಯಾರಾಯಿಸಿ : ಸ್ಪಾಧ್ಯಕ್ಷ ಭಗಾಪ ಪಾಯಿಯಾಯಾಗಿ ಸಜ್ಜಿಸಿಯಾಯಿಗಿ (ಯಶೋಧ. ೯-೨೫). ೨. ಅಲಂಕಾರ ಮಾಡು ; ಸಿಂಗರಿಸು : ಸಭಂಧ ಮಾಯಾ ಸಜ್ಜಿಯಾಯಾಯಿಕ್ಕೆ ಭೃಂಗಾಯಾಯಿ, ಅಂಗಲ ಬಿಯಿಯಾಗಿ ಪೃಥ್ವಿಗಾಗುವ (ಯಶೋ. ೧೫). {< ಸಜ್ಜು}

ಸಜ್ಜುಕ, ಸಜ್ಜಕ್ಕ, ಸಜ್ಜಿಗ (ನಾ). ೧. ಜೊಳವಾಯಿಯ ; ಸಮಿಸಿಯಾಯಿಯ : "ಕ್ಷುಗ್ಗಂ ಸಜ್ಜಿಕಂ – ಕಾ ೨ ಸಜ್ಜಿಕ" (ಯಶೋಧ. ೧೯-೬೦). ೨. ಅದೇ ಹಾಗೆ ಅಂಗಲಾಯ ; ಮೊಗ್ಗು : ಮುಗುಳು : ಅಂಗಲ ಸುಂಗಂಧಾಯಿಯಾಂಗಲ ಸಜ್ಜಿಯಾಯಿಯ ಭೃಜ್ಜಿಲೋ ಏಂಪಿಲಿಯಾ (ಯಶೋ. ೧೧೬ ೬) : ಮೊಳ್ಳಲೊಳಗೆ ಮಲಯಾ ಬೇಗ ಸಜ್ಜಿಯ ಕ್ಷುಳ್ಳಾ . . . ಸಂಜಿಯಾ (ಯಶೋ. ೧-೫೯) : ಸಜ್ಜಿಯಾಯಿಂದೊಳ ಯಶೋಂ . . . ಯಾಯಾಯಿಯ ಯಂಪಿಲಿಯಲ್ಲಿ ಮುಟ್ಟಿಂ (ಯಶೋ. ೬ ೬೯). ಸಜ್ಜಿಕ್ಕ : ಪಿ. ಸಜ್ಜಿಯಾಂ ಮಯಾಂ ಬಿಲಿಸಿಸ್ಸ್ ಅಯಾಯಿಯಲ್ಲಿ ಅಲ್ಲಿ (ಅಭ್ಯು. ೧೦-೧೨). ಸಜ್ಜಿಗೆ : ತಿ. ಸಜ್ಜಿಯಾ ಸಜ್ಜಿಗಳಿಯಾಂ ಬಿಲಿಸಿ (ಯಾಯಿ. ೧೧-೬೬). {< ಪ್ರಾ. ಸಜ್ಜಿಕ / ಸಂ. ಸಜ್ಜಿಕ}

ಸಜ್ಜಿಕಾಯಿ (ಕ್ರಿ). ಮೊಗ್ಗು ಪಿಡಿ ; ಮುಗುಳನ್ನು ಹೊಂದು : ಅಂಗಾಯಾಂ ಸಿಯಿಯಾಯಿಯಾಯಿಂಯಿ ಪೃಥ್ವಿಗಾಯಾಂಗಂ ಸಂಗ ಸಿಯಿಯಿಂ ವಿಷಾಯಿಯಲ್ಲಿ ಸಂಯಿಯಿ, ಸಜ್ಜಿಯಾಯಿಯಿಂ (ಯಾಯಿಯಾ. ೬-೨೫). {ಸಜ್ಜಿ + ಪಡ್ಸು}

ಸಜ್ಜಿಕಡೆಲೆ (ನಾ). ಮೊಗ್ಗಿನಂತೆ ಇರುವ ಮೊಲೆ : ಸಜ್ಜಿಯಾಯಿಯಂ ಪೆಣ್ಣಾ ಮುಂದೆ ಸಜಿಸಿದ (ಯಾಯಿ. ೧೨-೬೨). {ಸಜ್ಜಿಕೆ + ಮೊಲೆ}

ಸಜ್ಜಿಗಡೆ (ನಾ). ೧. ಮೊಗ್ಗಿನಂತೆ ಇರುವ ಮೊಲೆ ; ಮುಗುಳ ಮೊಲೆ : ಸಜ್ಜಿಯಾಯ ಮೊಗ ಮಾಯಾ ರಾಜಪುತ್ರಿಗೆ ಈ ಪ್ರಥಮಿಸಿಯಾಗಿರಾ ಸಿಜ್ಜಿ (ಯಾಯಿಯಾ. ೫-೨೬) : ಪೃಥ್ವಿಯಾಯಿ ಪೃಥಾಯಿ ಸೋಯಿಸಿ ಏಗ ಸಜ್ಜಿಯಾಯಿಗಾ ಮಾಯಿ . . . ಪೃಥ್ವಿಯಾಗಿ ಭೃಯಿಯಾ ಪ್ರಾಯಿಯಾಯಿಯಾಯಿ (ಯಾಯಿ. ೨೨-೨೬). ೨. ಕಾಮ ; ಮನ್ಮಥ : ಅಲ್ಲ ಯಾವಗ ಅಲ್ಲಿಸಲ್ಲಿ ಸಜ್ಜಿಯಾಯಿಯಾಯಿಯಾಯಿ ಸಿಜ್ಜಿ ಭೃಯಿಯಾಯಿಯಾಯಿಯಾಯಿ ಯಾಯಿಯಾಯಿಯಾಯಿ

ಸಜ್ಜಮುಂಪಿಗ (ನಾ). ಮೆಲುಗುವ ಮುಗಿಯ ಲೆಯ ; ಕಯ್ಮುಗ್ಗಿಪರ ಸೇವೆ : ಮುಕ್ಕಾಲ್ ಸಜ್ಜಮುಂಪಿಗಂ ಮಂದಾರಮಾಲೆ ಗಾಡಿಗೊಂಡು (ಅಣ್ಣ. ೧೨-೧೫).
[ಸಜ್ಜ + ಮುಂಪಿಗ (< ಮುಪ್ಪು) + ಆಲಾಪ]

ಸಜ್ಜಮೆ 'ಸಜ್ಜಮೆ'ಯ ನೋ.

ಸಜ್ಜಮೆಯ 'ಸಜ್ಜಮೆ'ಯ ನೋ.

ಸಜ್ಜ ೨ಬಾಹ್ಯ (ನಾ). ಭಂಡ್ರ ; ತಿಂಗಳು : ಬಾಹ್ಯಲಾಮಂ ಸಿಜ್ಜಾತ ಸಜ್ಜ ೨ಬಾಹ್ಯಮ್ಮಿಂದಮಿ ಬಾಹ್ಯಲಾಮಂದಂ ಲೃಸ್ಯಮ್ಮಿಪಂ . . . ಅಂದಂದು ಗುಬ್ಬಾಹ್ಯಲಾದ ದಿನ್ (ಅಜಿತ. ೬-೬೨). [ಸಂ.]

ಸಜ್ಜಿಗ (ನಾ). ಅಮಾವಾಸ್ಯೆಯಂದು : ಅಂದು ರಜ್ಜುದು ರಾತ್ರಿ ಸಾಲ್ದು ಮುಂದಿನ ಆಕ ಮುಗ್ಗು ಮುಮ್ಮಾಜ್ಞಿಯ್ದಾರಾಧ್ಯಾಯಿಸಿ ಸಜ್ಜಿಗಂ ಸಿಜ್ಜಿಗಂ ಸಿಜ್ಜಿಗಂ ಸಿ

ಕೆಲಸ) (ಮಾಷ್ಟ. ೧೧, ೧೩೬.) 'ಸಿಬ್ಬಿ' ಶಬ್ದ. ಸಿಬ್ಬಿ$_{೨}$: ೧. ಸಿಪ್ಪೆಯ ಮೇಲಿನ ಜಿಡುಕಿನ ಪದಾರ್ಥ. ಸಿಬ್ಬಿ$_{೩}$: ೫. ಜ್ಞಾನಾರ್ಜನೆ, ಸಾಹಿತ್ಯ ಗೊಂದಲಕ್ಕಿಲ್ಲ ಭೈಬುಗೊಂದಿದ್ದಾಕೆ - ವಿಮಲಾದಿ ಭಕ್ತರಿಗೆ ತಂದ ಸಂಗತಿ (ಅಮೋಘ. ೩೩.).

ಸಿಬಿಮರ = ಬೆಳಕೆಯೊರಿಗಾಗಿ ಮರಿಯುವುದಕ್ಕಾಗಿ ಇರಮೆಲೆಗಳಿಗೆ ರಾನ್ಸ್‌ಗಳನ್ನು ಸಂಗ್ರಹಿಸುವ ,— ಸಾಧನಗಳನ್ನು ತೆಲಿಯಿಸಿದ : ಸಾಂಪ್ರದಾಯಿಕ ಸ್ಕಾಲರ್ ಮಾಹಿತಿಯನ್ನು ಸಾಗಿಸಲು ಸಿಬಿಮರ ಬಳಸಿದ್ದಾರೆ. ಈಗಿನ ಬಳ್ಳಿಗೆ ಸ್ಕಾಲರ್‌ಗಳನ್ನು ದೊಡ್ಡದಾಗಿ ಮಾಡಿದ್ದು ಅದನ್ನು ಹೊತ್ತುಕೊಂಡು ಬರಲಾಗುತ್ತಿತ್ತು (ಅಮೋಘ. ೮). ಅಲ್ಲಿಯ ಸ್ಥಳೀಯರಿಗೆ ಸಾಮಾನ್ಯ ಬಳಕೆಯ ಅಂದರೆ ಕೃಷಿಯ ಕೆಲಸಗಳಿಗೆ ಬಳಸುವ ಸಲಕರಣೆಗಳನ್ನು ಸಿಬಿಮರ ಎಂದು ಕರೆಯುತ್ತಾರೆ (ಅಮೋಘ. ೩. ೧೧೬.).

[<– ಓಲಿ. ಮಲಾ. ಸಿಬ್ಬಿ -/ ಅಕ್ಕಾ. ಸಿಬ್ಬಿ]

ಸಿಬ್ಬಿಲು (ನಾ). ವಿವರಣೆ: ಪರಿಚಯ (?) : ಪ್ರಭಾವಳಿಯೊಳಗಿನಂತಹ ಸಿಬ್ಬಿಲುಗಳಿಗೆ ಹೋಲಿಸಿದಾಗ ಹೊಸಮಾದರಿ ಹೊಳಪಿನ ಸಿಬ್ಬಿಲುಗಳು ಮಾರುಕಟ್ಟೆಗೆ ಬಂದಿವೆ (ಪ್ರಜಾ. ೨೦-೧೦೧). ಸಿಬ್ಬಿಲಿಗಾಗಿ ಅಚ್ಚುಕಟ್ಟಾದ ಸಿಬ್ಬಿಲಿಗಾಗಿ (ಪ್ರಜಾ. ೨೦-೧೦೨). [ಸಿಬ್ಬಿ$_{೨}$ + ಇಲು]

ಸಿಬ್ಬಿಮರಿಯು (ತ್ರಿ). ಒಬ್ಬಿಗಿ ಮರಿಯಿ : ಮರಕ್ಕೆ ಮರಿಯಲ್ಪಡುವ ಧಾತ್ವಿಕ ಜೀವ ಗಳನ್ನು ಮರಿಯಲ್ಪಡುವ/ ಅಳ್ಳ, ಒಂದೆಡೆಯ ಜೀವಾಣು ಸಿಬ್ಬಿಮರಿಯುವುದು . . . ಗೆಣ್ಣಿಮರಿ (ಗಣಿಜೀವ. ೧೫೩.). [ಸಿಬ್ಬಿ + ಮರಿಯು$_{೨}$ (< ಮರಿಸು$_{೨}$)]

ಸಿಬ್ಬಿವ್ಯಕ್ತಿಪರಾಧ (ನಾ). = ಸಿಬ್ಬಿ ೨ : ಚಲಾವಣೆಯಲ್ಲಿರುವ ನೈಜವಾಗಿ ರಾಷ್ಟ್ರಗಳಿಂದ ಸಿಬ್ಬಿಸ್ವೀಕಾರಕ್ಕೆ, ರಾಷ್ಟ್ರಗಳಿಂದ, ರಾಷ್ಟ್ರಗಳಿಂದ, ಜೀವಿಸಿಕ್ಕೆ (ಪ್ರಾಚ. ೧೩೦). [ಸಿಬ್ಬಿ + ವ್ಯಕ್ತಿಪರಾಧ]

ಸಿಬ್ಬಿಸ್ವಾಕಾರ, ಸಾಮರ್ಥ್ಯಾಕಾರ (ನಾ). = ಸಿಬ್ಬಿ ೨ : ಸಿಬ್ಬಿಸ್ವಾಕಾರವು ಸ್ವಂತ ಇಷ್ಟಾಸಕ್ತಿಂದ ಸ್ವಯಂ ಬೆಲೆಯನ್ನು ಪಡೆದು ಸಿಬ್ಬಿಸ್ವಾಕಾರ ಇಷ್ಟಾಸಕ್ತಿಂದ ಸ್ವಯಂ ಬೆಲೆಯನ್ನು ಪಡೆದು (ಪ್ರಾಚ. ೧೩೧) : ಸಿಬ್ಬಿಸ್ವಾಕಾರ ಸಿಬ್ಬಿಸ್ವೀಕಾರ, ಅಭಿವೃದ್ಧಿಗಾಗಿ ಒಂದು ಭೂಮಿಗಾ ಯಾವುದೇ ಅಧಿಕಾರವಾಯಿತು (ಅಮೋಘ. ೫೦, ೧೩೦). ಸಾಮರ್ಥ್ಯಾಕಾರ : ಇಷ್ಟಾಸಕ್ತಿಂದ ಒಂದಾಗಿ . . . ಒಬ್ಬಿಗೆ ಸಾಮರ್ಥ್ಯಾಕಾರ ತೊಡಗಿದರು (ಪ್ರಾಚ. ೧೩).

[ಸಿಬ್ಬಿ + ಪ್ರಾಕಾರ]

ಸಿಬ್ಬಿ, 'ಬಿಬ್ಬಿ$_{೨}$' ನೋ.

ಸಿಬ್ಬಿಲಾ (ನಾ). ಒಂದು ಬಗೆಯ ತೆರಗೆ : ಬಾಣಂತಿಯಾ ಸಿಬ್ಬಿಲಾ ತೊಟ್ಟಿಲಾ . . . ಅಜ್ಜಿಸಾಮಾನ್ಯರಿಗೆ . . . ಯಜ್ಞಿಯಾ ರಿಯೋ (ಜ. vi. ಮಾಲಾ. ೧೫೮ ೧೭-೧೭೭). [ಸಿಬ್ಬಿ$_{೨}$ + ಲಾ$_{೨}$]

ಸಿಬ್ಬಿ, 'ಬಿಬ್ಬಿ$_{೨}$' ನೋ.

ಸಿಬ್ಬಿಗ$_{೨}$, ಸಿಬಿಕ, ಸಿಬಿಗ್, ಸಿಬ್ಬಿ$_{೨}$, ಸೆಬಿಗ, ಸೆಬಿಗ, ಸೆಬಿಗ್ಗ, ಸೆಬಿಗಿಗ, ಸೆಬಿಗಿಗ, ಸೆಬಿಗಿಗ್ಗ (ನಾ). ೧. ಸಾದು ಮೊದಲಾದ ದ್ರವಪದಾರ್ಥಗಳನ್ನು ತೊಳೆಯಲು ಉಪಯೋಗಿಸುವ ಮರ ಅಥವಾ ರೊಚಕದಿಂದ ಮಾಡಿದ ಸಾಧನ: ಸೌಟು; ದರ್ವಿ : ಸಿಬ್ಬಿಗಾಂ ಏಂದ ಕ್ಷೀರಂ ಉಷಯಿಂದು ನಿಮಿಷ ಭೃಮಿಯಲ್ಲ ಗಾಡ (ಪ್ರಾಗ. ೧೯-೮) : ಅಕ್ಕಿಗಂ ಧಾನ್ಯಗಳನ್ನು ಬೂದಿಯಲ್ಲಿಗಾಗಿ ಸಿಬ್ಬಿಗಾಂಡಿಕೊಳ್ಳಿ ಪಾಲಿಸಿದಂತೆ ಅಲ್ಲಿಂದ ಸಿಬ್ಬಿಗಾಂ ತೊಳೆಯಿಸಿ ಬಂದಿತು (ಅಮೋಘ. ೬-೧೬.೫) : ಅಲ್ಲಿಂ ಸಿಬ್ಬಿಗಾಂ ತೊಳೆಯಿಸಿ ಬೂದಿಯಿಲ್ಲ ಬಂದಿಲ್ಲ (ಅಮೋಘ. ೬-೧೬.೫) : ಅಲ್ಲಿಂದ ಬಂದಿದ ಸಿಬ್ಬಿಗಾಂ ಬಲ್ಲಿದ (ಪ್ರಾಗ. ೧೫೦). ೨. ದೋಣಿ ಸದೃಶವಾದ ಸಾಧನ : ತೆಂಬಿಲ್ಲಿ : ಸಂಗಾಲದಲ್ಲಿ ಸಾಗರದ ದಾಟುವಿಕೆಗೆ ಉಪಯೋಗಿಸಲ್ಪಡುವ ಪ್ರಾಚೀನ ಕಾಲದ ಸಾಧನಗಳಲ್ಲಿ, ಪ್ರಾಚೀನ ಅಂದಾಗ ಈ ಪಳಗುಗಳಲ್ಲಿಗಾಗಿ ಬಳಸಿದ್ದಾಗ ಬಾಳಿ ಪಡೆಯ ಸಿಬ್ಬಿಗಳ ಏಕಿದು . . . ಈ ವಿಶ್ವ ಶಾಲಾಮಟ್ಟಿಲ್ಲಿಯಲ್ಲಿ (ಪ್ರಾಚ. ೧೫೮-೧೬). ಸಿಬಿಕೆ : ೧. ಅಕ್ಕಿಗಳ ಸಮೂಹ. ಬಾಲದ ಸಾಮಾನ್ಯ ಅಂಗಾಂಗಳ ಒಂದಾಗಿರುವ (ಪ್ರಾಚ. ೧೩). ಸಿಬ್ಬಿ$_{೨}$: ೧. ಒಳಗಿನ ಮಾಂಸ ಮತ್ತು ಸಿಪ್ಪೆಯ ನಡುವಿನ ಬಿಳಿಯ ಭಾಗ (ಅಮೋಘ.). ಸಿಬ್ಬಿ$_{೩}$: ೫. ಬಿಳಿಯ ಬಣ್ಣದ ಪದಾರ್ಥ. ಸಿಬ್ಬಿ ಮರಿಯಿ ಸಿಬ್ಬಿಗಾಂ ಬಲ್ಲಿದ (ಪ್ರಾಗ. ೧೫೦). ೫. ಹಿಟ್ಟಿನ ಮೇಲಿನ ಜಿಡುಕಿನ ಪದಾರ್ಥ. ಸಿಬ್ಬಿಗಾಂ ತೊಳೆಯಿಸಿ ಬೂದಿಯಿಲ್ಲ ಬಂದಿಲ್ಲ (ಅಮೋಘ. ೬-೧೬.೫) : ಅಲ್ಲಿಂದ ಬಂದಿದ ಸಿಬ್ಬಿಗಾಂ ಬಲ್ಲಿದ (ಪ್ರಾಗ. ೧೫೦). ೫. ಹಿಟ್ಟಿನ ಮೇಲಿನ ಜಿಡುಕಿನ ಪದಾರ್ಥ. ಸಿಬ್ಬಿ ಮರಿಯಿ ಸಿಬ್ಬಿಗಾಂ ಬಲ್ಲಿದ (ಪ್ರಾಗ. ೧೫೦). [ಡಿ. ತಿಬ್ಬಿ. ಮಲ್ಲಿಗ, ಮಲ್ಲಿ]

ಸಿಬ್ಬಿಗ$_{೨}$ 'ಸಿಬ್ಬಿಗ' ನೋ.

ಸಿಬ್ಬಿಗಂಡಿ (ತ್ರಿ). ಸೌಮುಖಿ : ಬಲ್ಲಿಸಲ್ಲುವುದು ಸಿಬ್ಬಿಲಂಡಿಯ ಭೂಮಾಲೆಗಳ ಗಣಿಯಾದು (ಅಮೋಘ. ೧೫-೧೮). [ಸಿಬ್ಬಿಗ + ಮಿ.]

ಸಿಬ್ಬಿಗಡಿಗ (ನಾ). ಒಂದು ವಿಧಿಶ್ಚಿತವಾದ ಅಳತೆಯ ಡೊಳಗ : ಭೂಮಿಯಿಂದ ಸಿಬ್ಬಿಗಾಂಡಿಯಾಂದ ಹಡಿಗಳಿಂ ಸಂಚ ಸಿಂಹಗಾಗ್ರಯಾಯಂ . . . ಡಿಂಗ್ಗಿಗ ಸಾಲಿಯಿಂದ ಬಿಟ್ಟಿಯಿ (ಪ್ರಾಚ. ೧೫-೧೮-೧೫೫ (೧೮೫೦).

[ಪಿ ಇದು 'ಸಿಬ್ಬಿಗಡಿಗ' ಎಂಬುದರ ಅಪಭ್ರಂಶ]

ಸಿಬ್ಬಿಗಧಿಕ್ಕ, 'ಸಿಬ್ಬಿಗಧಿಕ್ಕ' ನೋ.

ಸಿಬ್ಬಿಗಧಿಕ್ಕ, ಸಿಬ್ಬಿಗಧಿಕ್ಕ, ಸಿಬ್ಬಿಗಧಿಕ್ಕ (ನಾ). ಒಂದು ವಿಧಿಶ್ಚಿತವಾದ ಅಳತೆಯ ಬಿಕ್ಕ : ಹಂಡಾ ಮೂರಿ ಡೊಬ್ಬುವ ಸಿಬ್ಬಿಗಧಿಕ್ಕ (ಜ. iii ಮಾಲಾ. ೩೨-೧೦೬.೧೮೫). ಸಿಬ್ಬಿಗಧಿಕ್ಕ : ಅಂಗಾಂಡಿಂಡಿಂಡಾ ಮಾಡಿ ಸಿಬ್ಬಿಗಧಿಕ್ಕ (ಗಣ. ಗಣಾ. ಭೂಗಾಣಾಂ. ೨೫೯-೨೯ : ೧೯೫೦). ಸಿಬ್ಬಿಗಧಿಕ್ಕ : ಅಂಗಾಂಡಿಂಡಿಂಡಾ ಸಿಬ್ಬಿಗಧಿಕ್ಕಯಾಂದ ಡೊಬ್ಬಿಗ್ (ಗಿಣಾ. ೧೫-೨, ೫೯-೨೧; ೧೯೫೦). [ಸಿಬ್ಬಿಗ + ಬಕ್ಕ]

ಸಿಬ್ಬಿಗಧಿಕ್ಕ, 'ಸಿಬ್ಬಿಗಧಿಕ್ಕ' ನೋ.

ಸಿಬ್ಬಿ$_{೨}$, 'ಸಿಬ್ಬಿ' ನೋ.

ಸಿಬ್ಬಿ$_{೨}$ (ನಾ). ಹೆಸರು ; ಹೊಸ (?) : ಸಿಬ್ಬಿಯಂಬಿಯಾಗಿ ದಾಸ್ಯ ಒಬ್ಬಿಗ ಬಾಲಿಯಾ (ಅಮೋಘ. ೧೫-೨೦); ಡೊಬ್ಬಿ ಸಿಬ್ಬಿಯ ಭೂಮ್ಯ ಬಾಲಿಗಾ ಸ್ಥಾಯಿಯಾ ಮೂಲಂ . . . ೫೫ ಭಾಷೆಯ ಸಂಸಾರದಿಂಗಳ (ಪ್ರಾಗ. ೧-೨೯). 'ಸಿಬ್ಬಿ' ಶಬ್ದ. (೨) ನೋಡಿ 'ಸಿಬಿಕ' ನೋ.

ಸಿಬಿಕ, ಸಿಬಿಕ, ಸಿಬಿಗ, ಸಿಬಿಕ (ನಾ). ೧. (ಅಡುಕ, ಎಣ್ಣ ಮುಂತಾದವುಗಳ) ಅಂಶಾಂಶಗಳಾಗಿ ಸಿಬ್ಬಿಯ ಭಾಬ್ಬಿ$_{೨}$ — ಗಲ್ಲಿಂದ ೧ ಅಣ ಸಂಖ ಭಾಗ (ಪ್ರಾಗ. ಸಿಬಿಕಿಯಿಂಗಿಯಾಂಗಿಯ ಮಾಲ ಮಿಗಿ ಗಂಡಿಯಾಂಗಿ ಡೊಬ್ಬಿ ಸಿಬಿಕಿಯಾಂಗಿಯಿಂ (ಪ್ರಾಗ. ೬-೨೯-೧೦); ಒಂದು ಮುಕ್ಕಿಡ ಭಾಬ್ಬಿಗ ಶತ ಸಿಬಿಕಿಯಾಂಗ . . . ಭಾಬಿಯಾಂಗಿಯಿಂಗಿಯಾಂಗ ಮಾಲ ಮಿಗಿ ಗಂಡಿಯಾಂಗಿ ಡೊಬ್ಬಿ ಸಿಬಿಕಿಯಾಂಗಿಯಿಂ (ಪ್ರಾಗ. ೬-೨೯-೧೦). ಸಿ.(ಭಾಬ್ಬಿ ಅಲ್ಲದ, ಸಿದ್ಧ ಪೆಡಿಸಿದ) ದಿಸ್ಸ ; ದಾರಿ : ಬಂಡಿಗಳು ಹೋಕಾಗಿ ಡೊಬ್ಬಿಯಾಂಗಿ ಅಂಗಾಂಗಾಂಗಿ ಸಿಬಿಕಿಯಾಂಗಿಯಿಂ ಬಾಬಿಯಾಂಗಿಯಿಂ (ಪ್ರಾಗ. ೬-೨೯-೧೦); ಸಿಬಿಕಿ ಭಾಂಗ ಎಂಬಾಂಗ ಡೊಬ್ಬಿಯಾಂಗಿ (ಪ್ರಾಗ. ೬೦). ಸಿಬಿಕಿ : ೧. ಕೆಲಾಂಗಿ ಭಾಂಗಿಯಾಂಗಿ ಇ ಡೊಬ್ಬಿಯಾಂಗಿ ಇಂಗಿಯಾಂಗಿ ಇಂಗಿಯಾಂಗಿ ಇಂಗಿಯಾಂಗಿ ಇಂಗಿಯಾಂಗಿ (ಪ್ರಾಗ. ೧೫. ೧೧೫.ಗಾಣಾ. ೨೫೯-೨೯೫ ೧೯೫೦). ಸಿಬಿಕಿ : ೧. "ಅಣುವಿನ ಮಾತ್ರಿಸ ಸಿಬಿಕಿಯಾಂಗಿ" (ಪ್ರಾಗ. ೧೫-೨೦). ಸಿಬಿಕಿಯಾ : ೧. ಅಲಾಯಿಯಾ ಮಾತ್ರಿಸ ಸಿಬಿಕಿ

ಬಂದ ಹೊಲ್ಲಾ ಹೊಂದ ಹೊಸ್ಸಿಗಂದು (ಧರ್ಮಾಮೃ. ೬-೧೦೩).

[<— ಹೋ. ಸಿ. ಸಹಾ; ಆ. ಶಹಾ]

ಸಹಜ (ನಾ). ೧. ಉತ್ಪತ್ತಿ : ಸಂಭವ : ಅಣಚಿಪಡೆಯಲಾರದೆಱೆ ಪರಾ ಮಾಡಲು ಸಹಜಮಲ್ಲಂ ಅಣಚ್ಚಿದಂ ಮಾಡಲಾರೆಂ (ಪಾರ್ಶ್ವ. ೧೬-೧೩); ಅರಿಯಲು ಸಹಜಮು ಸಹಗಳಗ ಮೊಗ ಭೂಮಿಪ (ಅಜಿತ. ೭೬-೧೩); ಭೂಮಿಪರೊಳಗಾವುದೆ ಭೂಪಿಕ್ಕಗಳು ಸಹಜವಲ್ಲದೆ ಪರಿಗಣಿಸಲ್ಕಿಲ್ಲ (ಜಾತ್ರೆ ೬-೫೦). ೨. ಆಭರಣ; ರೆಡಿಸ : ಅಂಜಲ್ಗಾ ಪಾರು ಸುಖದ ಸಹಗ ಮೊಲಿಗೆ ಮೈಸಿಲ್ಲದೆ ಮಂಗಿಲಾಗಾಯ್ತು (ವಿಜಯ. ೨೬೯). ಶುಂಭಾಂಗುಲಿಯವರೊಡ ಸಿಲು ಸಹಗಳಲ್ಲಿ (ಭೋಗ. ೫೬-೨೪); ಅಗಣ ಪಡಸಾಗಿ ಸಹಜವು ಅಧಿಪ ಸಹಗಾಲಂಕಾರಗಳ್ಗಳು (ಪಾರ್ಶ್ವ. ೬-೨೨). ೩. ಹೊಕ್ಕಳ್ವಾದುದು; ಒಳ್ಪಿಯುದು : "ಸಹಗಾದ ಭೂಭ್ರಮಿಂ ಶಾಗ" (ಧರ್ಮಾ. ೬೪). ೪. ಸೊಗಸು; ಶೋಭೆ; ಅಂದ : ಆ ಸ್ಪೃಹಾಮಿಳ್ಳಗಾಯಿಕಿ . . . ಇಂದಿನ ಭೂಭಾ ಸಿಲು ಸಹಗವಂ ಎಂದಮಿಳ್ಳಂಗಾದಂ (ಆದಿ. ೨೪ ಪ); ಮುಸಿಯಾ ಸಹಗಳ ಕೈದಿಂ ಪಾರ್ಥನ ಸಹಗಂ ಮುಖ್ಯಂ (ಪಾರ್ಶ್ವ. ೮-೨೦); ಮುಳಿದಾ ಸ್ತ್ರೀಲ್ಲ ಸಹಗಳಿಂ ಸಹಗಿಸಿಂ (ಅಜಿತ. ೧೧-೬೬). ೫. ಆಲಾಪನೆ; ಭೂಷಣ : "ಸಹಗ . . . ಆಹಾರ, ಭಾವ, ಭೂಷಣ" (ಸಂಜೀವ. ೧೫೪). ೬. ನಿಮಿತ್ತ : ರೆಡಿಸ : 'ಸಹಗಾರ್ಥ' ಪರಾ. [ಹೋ. ಕಿ ಸಹಾ. ಸಹಗ. ಸಹಗ = ಕಾರ್ಯ ; ಅಹಗಾಲಂ; ಕೋ. ಸಾಗ]

ಸಹಗ (ನಾ). ಒಂದು ಮಗಿಕಸದ ಜಿಸರು : ಸ್ಪಸ್ಪಿಸ್ಪಿ ಇಳ್ಳಂಬುಳ ಗಾಳ್ಯಂಗಮ್ಮಿಸ್ಪಿಕ ಸಹಗದ ಪಿಟ್ಟಿಸ್ಪಿಂ . . . ಬಳಿಕಕ್ಕಂಗಾಂಬಿಸ್ಪಿಸಿ) (ಧರ್ಮಾ. ೧೧. ೧೩-೧೬/೧೭). [< ಹೋ. ಪಹಗ ?/ ಸಂಪ. ಪಹಸ್ಪಿ]

ಸಹಗಂಗಳೊಳ್ (ಕ್ರಿ). ಉತ್ಪತ್ತಿಯಿಳ್ಳಿ ; ಸಂಭವಿಸು : ಎಡಪಾಪಿಂದಮಿ ಮುಂಡಿಸ್ಪಿದಂ ಉಳ್ಪಿದಾ ಸಹಗಂಗಳಿಂದಂ ಗಳಿಂ ಮುಖ್ಯಿಸಿದಿ ಪಡಿಯಾಪಿಸಿದಂಗಳಿ (ಜಾತ್ರೆ. ೬-೫೦). [ಸಹಗ + ಪೊಳ್]

ಸಹಗಂಗಳ್ (ನಾ). ೧. ಆನಂದ ; ಉಲ್ಲಾಸ : "ಸಹಗಂಗಳ . . . ಆಪಾರ, ಭಾವ, ಭೂಷಣ" (ಸಂಜೀವ. ೧೫೪). ೨. ಆಭರಣ ; ರೆಡಿಸ : ಮೂಡಿಯೋಳಿದ ಭೂಷಣ ಮಿಯಿಂದಂ ಸಹಗಂಗಳ ಸಿಲು ಸಹಗಂಗಳ (ಜಾತ್ರೆ. ೧೪-೬೪).

[ಸಹಗ + - ಅಳ್]

ಸಹಗಿಕೆ (ನಾ). ಉತ್ಪತ್ತಿ ; ಸಂಭವ : ಅಣಚಿಳಿಂದಮಿಂದೆ ಪಡಿಯಾಗಿ ಒಂದು ಸಹಗಿಕೆ (ಜಾತ. ೫೫). [ಸಹಗ + - ಇಕೆ]

ಸಹಗಿಪು (ಕ್ರಿ). ೧. ಉತ್ಪತ್ತಿಯಿಸು ; ಸಂಭವಿಪಿಸು : ಪಡಿಯಾಣಿಂದಮಿಂದೆ ಪಲಪಾಪಕ್ಕೆ ಒಂದು ಪಿಚ್ಚಿಂ ಅಚ್ಚಿಂ ಸಹಗಿಪಂ ಅದು ಸ್ಪಷ್ಟವಾಗಿಯೊಡೆಯಲ್ಕೆಳ್ಸಿಸಿ ಪಿಡಿಪಿಸಿಲ್ಲದೆ ರಾಂಗ (ಧರ್ಮಾ. ೧೪-೬೬); ಸಹಗಿಪಂಗಿಸಿ ರೋಗ ಸಹಗ ಪಡಿಪಂಗಿಸಿ ರೋಗ ಪಾಪಿ (ಧರ್ಮಾ. ೧೪-೬೬); ಎಡಪಿಂದಂ ಸಿಸಿ ಪೊಡಪಿಸಿಲ್ಲಂ ಸಹಗಿಸಿ . . . ಸಂಪಾಚಪಿಸಿಂಸಿ, ವಿಷಿಲ ಪೆಸಿಗ್ಳಂ ಕೆಲಂ (ಪಾರ್ಶ್ವ. ೬-೧೦). ೨. ಅಂಗುಲಿಪು : ಬೆಲುವಾಗು ; ಶೋಭಿಪು : ಸಹಗಿಪಂದು ಶಾಂ ಶಾಸ್ಪಿಪಡಿಪಂಗಿಂ (ಧರ್ಮಾ. ೪-೬-೧೦). ೩. ನಿರ್ಮಾಪು ; ರಚಿಪು : ಧರ್ಮ ಗಾಗಾಗಿಸಿದ ಸೊಗಸಿಸ ಪಂಚ್ಚಿಪಾದ ಸಹಗಿಪಂದಿ (ಜಾತ್ರೆ. ೪-೫೦). ೪. ಆಲಂಬಿಪು ; ಸ್ವೀಕರಿಪುದು : ಅಣಚಿಪಾದ ಅಸ ಪ್ರಭಾವ ಪಡಿಪಾಪಿಪಂದ ಶಾಸಿಪು (ಧರ್ಮಾ. ೬೪-೧೦). [ಸಹಗ + - ಇಪ್]

ಸಹಗಿಪ (ನಾ). ೧. ಬಿರುಬಾಯಿ ; ಬಡಬಿಳಿ: ಉತ್ಪತ್ತಿ : "ಸಹಗಿಪಂಗಳ್" ಪರಾ. ೩. ದೆಗ : ಶಿಕ್ಷಿತ : "ಸಹಗಿಪ" ಪರಾ. 'ಬಡಬಿಳಿ' ನೋ.

[ಕ. ೪ ಪೊಂ. ಪಹಗಿಪು = ಮಾಯಿಸಿದ ದೇವರು ಹೊಗಳು]

ಸಹಗಿಪಂಗಳ್ (ಕ್ರಿ). ಬಿರುಬಾಗಿಂಳ್ಳಿ ; ಉತ್ಪತ್ತಿಯಿಸು : ಮಿಳ್ಳಿಸ್ಪಿದ್ದ ಶಪಿಳಿಸಿಯಂ ಸಂಪಾಪಂ ಪೆಸಲಂ ಒಲಿಸಿಸ್ಪಿಸಿಗಮಿ ಪಿಸ್ಪಿಸಿಪಿಸಿಸ್ಪಿದೆಂಸಿ ಸಿಮಾಂ ಸಹಿಪಾಪಿಸಿ ಪ್ರತಿಪಿಂಗಿಸಿಲ್ಲಿಪೆಂ (ಅಜಿತ. ೬-೬೪). [ಸಹಗಿಪ + ಪೊಂ]

ಸಹಗಿಪಿ (ನಾ). ಉತ್ಪತ್ತಿ ; ಸಂಭವ : ಪಡಿಯಾಣಿಂದಮಿಂದೆ ಪಡಿಯಾಗಿ ಒಂದು ಸಹಗಿಪಿ (ಜಾತ. ೫೫). [ಸಹಗಿಪ + - ಇ]

ಸಹಗಿಪಿಪು (ಕ್ರಿ). ಉತ್ಪತ್ತಿಯಿಸು ; ಸಂಭವಿಪಿಸು : ಪಡಿಯಾಣಿಂದಮಿಂದೆ ಪಲಪಾಪಕ್ಕೆ ಒಂದು ಪಿಚ್ಚಿಂ ಅಚ್ಚಿಂ ಸಹಗಿಪಂ ಅದು ಸ್ಪಷ್ಟವಾಗಿಯೊಡೆಯಲ್ಕೆಳ್ಸಿಸಿ ಪಿಡಿಪಿಸಿಲ್ಲದೆ ರಾಂಗ (ಧರ್ಮಾ. ೧೪-೬೬); ಸಹಗಿಪಂಗಿಸಿ ರೋಗ ಸಹಗ ಪಡಿಪಂಗಿಸಿ ರೋಗ ಪಾಪಿ (ಧರ್ಮಾ. ೧೪-೬೬); ಎಡಪಿಂದಂ ಸಿಸಿ ಪೊಡಪಿಸಿಲ್ಲಂ ಸಹಗಿಸಿ . . . ಸಂಪಾಚಪಿಸಿಂಸಿ, ವಿಷಿಲ ಪೆಸಿಗ್ಳಂ ಕೆಲಂ (ಪಾರ್ಶ್ವ. ೬-೧೦). ೨. ಅಂಗುಲಿಪು : ಬೆಲುವಾಗು ; ಶೋಭಿಪು : ಸಹಗಿಪಂದು ಶಾಂ ಶಾಸ್ಪಿಪಡಿಪಂಗಿಂ (ಧರ್ಮಾ. ೪-೬-೧೦). ೩. ನಿರ್ಮಾಪು ; ರಚಿಪು : ಧರ್ಮ ಗಾಗಾಗಿಸಿದ ಸೊಗಸಿಸ ಪಂಚ್ಚಿಪಾದ ಸಹಗಿಪಂದಿ (ಜಾತ್ರೆ. ೪-೫೦). ೪. ಆಲಂಬಿಪು ; ಸ್ವೀಕರಿಪುದು : ಅಣಚಿಪಾದ ಅಸ ಪ್ರಭಾವ ಪಡಿಪಾಪಿಪಂದ ಶಾಸಿಪು (ಧರ್ಮಾ. ೬೪-೧೦). [ಸಹಗಿಪ + - ಇಪ್

(ಮಾಸ್ತಿ. ೨-೨); ಸಡಿಲಿಸು ಅಳಿಸು ಮೇಲೆ ಬಹಳ ಮಳೆಯಿಂದ ರಾಯರು, ಬಹಳ ಸಡಿಲಾಯ ಬಿಡಬಾರದು (ಭಾಷೋ. ೫). ಸಡಿಲ್ಲ್ : 'ಸಡಿಲಾಗಿಲ್ಲ್' ನೋ.

ಸಡಿಲಾಗು, ಸಡಿಲಾಗು = ಅಳ್ಳಿಸಾಗು; ದಿನದಿಂದ ದಿನಕ್ಕೆ ದಿನಾಗು; ಬಿಡಿಬಿಡಿಯಾಗು: ಕಾಯದೆ ರಟ ಹೇ ೧ ಅಲ್ಲಿ, ಮಿಟ್ಟಿಸಿ ೧೫ ೨ ಸೊಲ ಸಟ್ಟಿಕೆ ೧೫ ೩ ಸೊಲ ಸಡಿಲಾಯಿ ಸಡಿಲಿಸಿದೆ ಹಾಲ್ಲಿ ಭಗಂಡಿಲ್ಲಿ ಮುಖ್ಯ ಸಂಬಂಧಗಳುಟ್ಟಿದು (ಮಾಸ್ತಿ. ಹಾ. ೧೯೬); ಬಿಚ್ಚಲು ಪ್ರಜ್ಞಾವಾಯಿಸಿದೆ . . . ಸಡಿಲಾಗು ಸಡಿಲಾಗುತ್ತಿದೆ (ಮಾಸ್ತಿ. ೪-೧೩೦).

[< ಸಡಿಲ್,/ ಮಲ. ಸಡಿಲ್; ತೆಲು. ಸಡಲು; ತುಳು. ಸಡಿಲು, ಸಳ್ಳು, / ಪ್ರಾ. ಸಡಂ ,/ ದೂರ. ಸಡಾಲಾ ,/ ಪಂ. ಸಡಿಲ್]

ಸಡಿಲ 'ಸಡಿಲ್' ನೋ.

ಸಡಿಲಾಳ್ಕೆ (ನಾ). (ಅಲಂ) ದಿನಿಮಿಲ್ಲದ ಅಳ್ಳಿಕೆ .— ರಾಜ್ಯಭಾರ: ಈ ಬಿಡಿಯಿಂದ ಸಡಿಲಾಳ್ಕೆಯ ಅ ಸ್ಥಾನಾಧಿಪತ್ಯ ಪಡೆದುಕೊಂಡ ಸಪ್ತಸ್ವರ ಸೂಚಿಯಂತೆ ಸಂಚಿಸಿ (ಮಾಸ್ತಿ. ೧೨-೨೦). [ಸಡಿಲ (< ಸಡಿಲ್,) + ಆಳ್ಕೆ]

ಸಡಿವೆ, ಸಡಿವೆ (ನಾ). ಅಳ್ಳಿಪಾದುದು : ಶೈಥಿಲ್ಯ : ಸಾಮಾನ್ಯ ಸಡಿವೆಯ ಅವಲಂಬಿಸಿದ ಸ್ವಭಾವ ಸ.ಎಂಬುದಾಗಿಯೂ ಶಂಕರಪ್ಪನವರಿಗೆ ತೋರಿತು (ಮಾಸ್ತಿ. ೨-೪-೧೨). ಸಡಿವೆ : ಸ್ವಲ್ಪ ಕೃಷ್ಣಾಯಿ, ಕೃಷ್ಣಾಯಿಯಾ, ಕೃಷ್ಣ(ಂ- ಆ ೪ ಸಡಿವೆ" (ಗಾಣ, ಆ). [ಸಡಿಲ್ + -ಇವೆ]

ಸಡಿಸಿ, ಸಡಿಸು (ಕ್ರಿ) ೧. ಅಳ್ಳಿಸುವುದು; ವಿಶಿಲಗೊಳಿಸು : ಹಾಲು ಮುಖವಿಲಿಂದ ಕೊಂಡಿಸಿ ಕಡಿಸಿಗೆಸ್ಥಿಸಿದಾದ ಮುಖಭಂಗ ಸಡಿಸಿಲಾಗಿ ಪರಿಹಾರಂಗಳಿಂದ ದಾಸ್ಯಪಡಿಸಿಲ್ಲಿ ಬಿಳಿ ಮುಂಬಾಳ್ಳಿಗಳಾದವಿದಂತೆ (ಮಾಸ್ತಿ. ೧-೨೩). ಇದರ ಪೂರ್ಣ ಸುತ್ತ ತೋಳು ಸಡಿಲಾಗಿ ಪರಿಹಾರ ಪ್ರಾಣಾಯಿಸಿದ್ದರಿಗೆ ಪ್ರಾಣಾಯಿಸಿಲಿಸಿಗಳಿಗೆ (ಅಪಿ. ೩-೨೪). ಸಡಿಲಿಸಿದಾಗ ಮುಖಾಂತರ (ಮಾಸ್ತಿ. ೨-೧-೧೫). ೨. ಕೆಳಿಲು; ಬಿಡಿಸು : ಇಷ್ಟಾಯಿಸು ಕೆಳ್ಳಾಯಿಸಿಯಾಯಿ ಗಾಣಾಯಿಸಿಲಿಸಿಲ್ಲಿ ಸಾಮಾನ್ಯ ಸಡಿಲಾಗಿ(ಂ ಪ್ರಾಣಾಯಿಸಿಲಿಸಿಲ್ಲಿ ಮುಖ್ಯವಾ ಧರ್ಮಾಧಿಕಾರ (ಅಪ್ಪಟ. ೨-೨೦). ಸಾಧನ ಸಡಿಲಿ ಕಾಲ್ಲಿ ಮೊಣಾಳಿಗಳಾಯಿದು (ಅಪ್ಪಟ. ೫-೧೫). ೩. ಬಿಡುವಿಲು; ವಿಶ್ರಾಂತಿಲು ಸಡಿಲಿಸಿ : ಸಾಮಾನ್ಯ ಪಡಿಲಾಯ ಸಡಿಲಿ ಮುಖ್ಯವಾ ಯೋಜನೆಗಳ (ಅಪ್ಪಟ. ೧೦-೨೦). ೪. ಕೆಳೆ; ತ್ಯಜಿಸು : ಜಾಲಾಳ ನೀಚಕ್ಕ ಮುಖ್ಯಧರ್ಮವಲ್ಲಿ ಬಳಲಿಲಿಲಿ ಸಡಿಲಿಸಿ ಪಡಿಲಿಸಿ ಆಚಾಗ್ಯಾಪಾಯಿಂದು ಪಡಿಸಿದ ಪಾಯಿಂಟಿಗಳ (ಪ್ರಾಣಾ. ೧೨-೨೨). ೫. ವಿಸಾಯಿಸಿ ತೋರಿಸು : ಅಂಶಾಯಿಂದ ವಿಶಿಲಿಸಿ ಬಿಡಿಗೆ ಸ್ಥಳ ಸಡಿಲಿ ಹಾ ತೆರೆಯಿಲಿಲ್ಲಿ (ಅಪ್ಪಟ). ಸಡಿಲಿಸು : ೧. ಪರೆ ಮುಂಡಾಯಿ ಸಡಿಲಿಲಾಗಿ. ಸಡಿಲಿಸುವುದು ಲಿಲಾಯಿ ಸಡಿಲಾಗಿ ಸಿಲಾಯಿ ಮೊಣಾಳಿಯಾಯಿ (ಅಪಿ. ೨-೨೦); ಸಾಮಾನ್ಯ ಪಡಿ ಸಿಲಾಯಿಸಿ (ಮಾಸ್ತಿ. ೫೫).

[ಸಡಿಲ್,+ - ಇಸು]

ಸಡಿಲು, 'ಸಡಿಲ್,' ನೋ.

ಸಡಿಲು, 'ಸಡಿಲ್,' ನೋ.

ಸಡಿಲುಗಿಚ್ಚಿ (ನಾ). ೧. ಅಳ್ಳಿಪಾದ ಕಿಚ್ಚಿ. ೨. (ಅಲಂ) ಪ್ರಭುಪಾದದ ಸಡಿಲಿಕೆ : "ಸಡಿಲಾಳ್ಕೆಯ ಗಗಿಚ್" ಎಂದೂ ಜನ ಆಚಾರ್ಯ ಸಂಚಾರಾಧಿಪತ್ಯಿಕ್ಕಿಲ್ಲಿ (ಮಾಸ್ತಿ. ೧೦೨). [ಸಡಿಲು, (< ಸಡಿಲ್,) + ಇಚ್ಚಿ]

ಸಡಿಲುತನ (ನಾ). (ಅಲಂ) ಗಮಿಚ್ಚಿ ನಿಲ್ಲಿದೆ ಭಾವ : ಅಚಲತ ಮಲಿ ಸಡಿಲಾಯಿಸಿ (ಮಾಸ್ತಿ. ೧೬೧). [ಸಡಿಲು (< ಸಡಿಲ್,) + ತನ, (< ತಾಯ್)]

ಸಡಿಲ್ಕೆ 'ಸಡಿಲಿಕೆ' ನೋ.

ಸಡಿಲ್ಲು (ಕ್ರಿ). ೧. ಅಳ್ಳಿಪಡಿಸು ; ಸಡಿಲಿಸು : "ಮಾಲ್ಲು- ಕ್ಷಿಲ್ಕ್ಕಲ್" (ಅಪಾಂ): ಮೂರನೆಯ ಶಂಬಂಧಪೂರ್ಣಪ್ರಯೋಗ ಸಡಿಲ್ಲ ಸಡಿ ಪೂರ್ಣ ಪೂರ್ಣ ಪೂರ್ಣ

ಸಜ್ಜ : ಆಗ ಸಜ್ಜ ಸಜ್ಜ, (ಅಷ್ಟೂ. ೬೬) ; ಸಜ್ಜ, ಸಜ್ಜ, ಅಜ್ಜ, ಬಳಯಮೊಳ್ಸಜ್ಜ (ಪ್ರಭು.ಲಿ. ೪೨) ಕಿಸಜ್ಜೆ : ವಿಜಯಾವಿಜಯೋತ್ಸವಮಾಗಿ ಸಂಭವಿಸಿ ಸಜ್ಜ ಸಜ್ಜಗಳು ಪಾಲಯಮಾಮಿದಿರ್ದ್ದುವು ರಾಜಾಧಿರಾಜಂಮಂದು ಪರಮಭಟ್ಟಾರ್ದ ಪಟ್ಟಮಂ ಪಡೆದು (ಪೊನ್ನ. ೧೬೦-೧೪) ; ಸಜಗ ಪೆಣ್ಣು ಪೊಟ್ಟು, ಮುಯಿಪ ಇಚ ಅಳಮುದಿರು ಎಂದಿ ಪಜ್ಜಲ್ಲ (ಪಜ್ಜ.ಷ. ೨೦೬). ಸಜ್ಜಿಕೆ : ಸಜ್ಜ ಸಜ್ಜಳನ್ನು ಪಲಮನ್ನು ಧರಿಸಿದ ಒಬ್ಬ ಗಾಯಾಯ ಧ್ವಜಿಕೆ (ಪಜ್ಜ.ಷ. ೬.); ಸಜ್ಜಗಾಗಿ ಮಾಡಿದ್ದು, ಅಭ್ಯಗೆಯ ಚಾಮರವು (ಗಣ). ಸಜ್ಜಿಗೆ : ಮಜ್ಜ ಗುರಿಯದು ಸಾಣಿಕ್ಕಿ ಆ ಗುರಿಯನ್ನ ಸಜ್ಜಿಸಿಗಾರೆಯ? (ಧರ್ಮ. ೧೭೫) ; ಸಜ್ಜಿಗ ಮಿಲಾಮಜಿಂಕೆಗಳ ಸಜ್ಜ ಅಲಾಮಜಿಕ್ಕಿ, ಮಾಡಿ ಅಂಟಿಮಜಿಯಾಗಿ ದಿಜಿಯಾದ ಧ್ವಜವ ಕೊಟ್ಟನು (ಪಜ್ಜ.ಸಿ. ೧೫೦).

[ಹಿ. ಕ ಪಮಿ. ಪಜ್ಜಿಸ್; ಪುಳಾ. ಸಜ್ಜ್ಞ್; ಕೊಡ. ಸಜ್ಜ್ಞ್; ತೆಲು. ಸಜ್ಜಪಮು, ಸಜ್ಜಲು, ಸಜ್ಜಲು, ಸಜ್ಜಲು]

ಸಜ್ಜಿಗ 'ಸಜ್ಜಿಕ' ನೋ.

ಸಜ್ಜಿಗಸಜ (ನಾ). ಸಜ್ಜಿಕಸಾಗಿರುವಜ್ಜದು : ಧಾನ್ಯಾಗಾರದ ಎದುರಿಗಿರೂ ಧಿ. ಧಿಮಾಜಿಸಿರೂ ಶಾಲಾ ಶಾಲಾ ಸಜ್ಜಿಗಸಜಿದೆ (ರಾಜಾವ. ೧೫೭).

[ಸಜ್ಜಿಗ (< ಸಜ್ಜಿಕ) + ಸಜ]

ಸಜ್ಜಿಗಾಗ್ರ (ನಾ). ಧಾನ ಅಥವಾ ಹೊದಲನ್ನು ತುಪ್ಪು : ಒಬ್ಬಕಾಲ್ಕ ಪ್ರಸ್ಥಸಾಳ್ಕಡಲಿಲ್ಲಾ ಸಜ್ಜಿಗಾಗ್ರವು ಸಜ್ಜಿಗಾಗ್ರವು ಮಾಜಿಯಾಳ್ಕಡಲಿಲ್ಲಾ ಧಿಕ್ಕಡಲಿಲ್ಲ (ಧರ್ಮ ೨೮-೬.). [ಸಜ್ಜಿ + ಸಾಗ್ರ]

ಸಜ್ಜಿಗೆಳಸ್ಸು, 'ಸಜ್ಜಿಗಳಸ್ಸ' ನೋ.

ಸಜ್ಜಿಮಜಿಜ (ನಾ). "ಶಾಸ್ತ್ರ, ಒಲಿಮಜಿಜ" (ಪಜ್ಜಾಳ, ೬೫೫) : ಸಜ್ಜಿಜ ಸಜ್ಜಿಜಿಂಗಳಾಗ್ ಸಜ್ಜಿಗಳಂ ಮಜ್ಜಾ ನಿಲ್ಲ ಮಾಳ್ಗಳಂದಿಂ ಸಜ್ಜಿಜಿಸಾಜಂ ಪೋಪುದು ಪಜ್ಜಿಯಾಗಿರ್ಪುದು ಮಾಜಾ ಮಿಸಾಜಿಜಿಯಂ (ಪಜ್ಜಾಳ, ೬-೧೩-೧೨).

[ಸಜ್ಜಿಜಿ + ಸಜ]

ಸಜ್ಜಿಹೊಡೆ, ಸಜ್ಜಿಹೊಡೆ (ಕ್ರಿ). ೧. ಭಾಜ ಅಥವಾ ಹೊದಲನ್ನು ತುಪ್ಪು-ಬಜ್ಜಿಸಿದು: ಬಜಾಂಧಜಿಯಂ ಕೃಗಾಜಜಿಜಾಜ್ಞಾ ಎಜ್ಜಿಜ ಸಜ್ಜಿಹೊಡೆದು ಮುಂತಾ ಬಂದಂತೆ ಎಮಿಸಿದ (ಹರಿಜಾ. ೧೨). ೨. (ಆಲಂ) ಪ್ರಹಿಬಿಸಿನ ಹೊಡೆ : ವಿಡೋಧದಜ್ಜನ್ನು ಪ್ರತ್ಯಕ್ಷದಿಸಿದ : ವಿಡೋಧದಜ್ಜನ್ನು ಪ್ರತ್ಯಕ್ಷದಿಸಿದ : ಎಷ್ಟೂ ಸಜಕ್ಕಂ ಸಜಗಾಳ ಬಂದಲ್ಲ ಸಜ್ಜಿಹೊಡೆದು (ಗೃಹಾ. ೧೦೦); ಮೊದಲೆ ಪಜ್ಜಾಗಿರುವನ್ನು ಸೃಷ್ಟಿಸಿದ ಸಜ್ಜಿಹೊಡೆದು (ಪಜ್ಜಾ. ೬೯). ಸಜ್ಜಿಹೊಡೆ : ೧. ಪಜಾಜ ಹೊಡೆಯಿಂದ, ಸಜ್ಜಿಹೊಡೆಂ- ಪಜ್ಜಿಜ ಜಾಗ ಅಜ್ಜಿಜಾಜ ಧಾನಿಪಡೆಜಾಗಿದಾಜ (ಪಜಾಂ. ೧೩). ೨. ಧೂಜಾ ಪಡಿಜಿಗೆ ಬಾಗ ಜಾಜ. ಸಜ್ಜಿಹೊಡೆದು, ಸಂಗಾಜಪಡಿಂ . . . ಧಾನಿಪಜ್ಜಿಗೆ (ಗಣಾ. ೧೩) : ಜಾಜಿಗೆ ಅಜಿ ಸಜ್ಜಿಗಿ ಸಜ್ಜಿಹೊಡೆಯುಜ್ತಿ (ಪಜಾಂ, ೨೦).

[ಸಜ್ಜಿ-+ ಹೊಡೆ (< ಘೊಡ್)]

ಸಜ್ಜಿ, ಪಜ್ಜಿ, ಧಜ್ಜಿ (ನಾ). ೧. ಶ್ರದ್ಧೆ : ಆಸಕ್ತಿ ; ಆದರ : ಪಜ್ಜ ಮುಖ್ಯವಾಗಿ ಸ್ಪೃಹಾಯುಂದ ಸಜ್ಜಿಯಾಗಿ ಬಂದ ಧರ್ಮಾಧ್ಯಕ್ಷರ ವಿಶ್ವಾಧಿಪತ್ಯಕ್ಕೂ (ಧರ್ಮಾಜ, ೧೫೦ ೧೨) ; ಎಲ್ಲ ತೀರ್ಥಂ ಈಜಿ ಪ್ರಾದಾಪ್ಯಕ್ಕಿ. ಗಣಾಜಿಜಿಯಾದ ಬಜ್ಜಾ ಸಜ್ಜಿಯ (ಪಜ್ಜಾಳ ೨೦-೧೩). ೨. ಗಣಾಜಿ ಅಥವಾ ಜಿಯಂಜಾ ಒಬ್ಬಂ ಸಜ್ಜಿಯಾ (ಪಜ್ಜಾಳ, ೧೨-೧೬). ೨. ಗೌಜಾ ; ಲಜ್ಜೆ : 'ಸಜ್ಜಿಗೆ' ಪರಾ. ಪಜ್ಜೆ : ೧. ಆಜ ಪಜ್ಜಮುಂದ ಪ್ರಪ್ರಾಧಜಾಜಿಯಾಜಿಂದಂ ಪಜ್ಜಿಂದಂದಯಾಜಿಜ ಧೃಜ್ಞಿಗಂ ಸಜಿಗಂಜಿಂ ರಾಜ್ಯಭಿಷೇಜಂ (ಪಜ್ಜಾ. ೬-೨೦) : ದೊಜ್ಜಿ ವಿಜ್ಞಾಧಿಂದಂ ಬಾಂಧವಾಳಾದ ಧರ್ಮಮಂಜಿಜಿದಂ (ಪಜ್ಜಾ. ೬-೨೦) : ದೊಜ್ಜಿ ವಿಜ್ಞಾಧಿಂದಂ ಬಾಂಧವ ಧರ್ಮ[ಪಾಂ ಧರ್ಮ] ಪಾಜಿಜ ದೊಂದಜಿಜಂ (ಪಜ್ಜಾ. ೧೬-೨೬).

ಪಜ್ಜಿಜಾಂ, ಪಜ್ಜಿಜಾಂ = ಲಜ್ಜಿಸಿ ; ಗೌಜಾಗಿ ಪೇಳಿದೊಳ್ಳಿಲ್ಲ ; ಪಜ್ಜಿಜಾಜಿ ಧರ್ಮಿಜ ಧೋಗಾಧಿಗಳ ವಿಜಿಪ್ಪಿಧಿಧಿಜಂ ಪಾಲಯಿಂದಿಂ, ಅಜ್ಜಿಜಾಜಿಂದಂ ಸ್ಪಜಾಜಿಜಿಜಾಜಿಂದಂ ಒಬ್ಬಜಿಂದಂ ಮಿಂದಿಜಿ (ಪಜ್ಜಾ. ೧೦-೧೫) ; ಜಿಜಿಂದಿಂದಂಗ ಪಿಂದಿಜಿ ಪಜ್ಜಿಜಿಂ ಪಜ್ಜಿಜಾಜಿಜ ಪಜ್ಜಿಜಾಜಿಜ ಪಿಜಿಜಿಂ (ಧರ್ಮ. ೧೧); ದೊಜ್ಜಿ ದೊಜ್ಜಿಜ ಪೃಗಜ್ಯಿಜಿಜಿಜಾಂಜಿಂದಂ ಸಜ್ಜಿಂಜಿಂ ಜಿಂಜಿಂಜಿಂ ಪಜ್ಜಿಜಿಂ ಪಜ್ಜಿಜಿಂಜಿಂ ಪಜ್ಜಿಜಿಂಜಿಂ ಪಜ್ಜಿಜಿಂ

ಹೊಳಲು (ನಾ). ಬಹಳ ಶ್ರೀಮಂತವಾದದ್ದು, —ಬಹಳವಾಗಿರುವುದು : ಅಡಿಕೆ, ಹೊಳಲು (೧೯೫೦). [ಹೊಳಲು + ೦ → ೪]

ಹೊಳಲೂ (ನಾ). ಬಹಳ ಶ್ರೀಮಂತಿಕೆಯುಳ್ಳವನು, —ಬಹಳವಾಗಿರುವವನು : ಅಡಿಕೆ ತೆಕ್ಕೆಸಿ ಗಂಡ? ಹೊಳಲೂ! (೧೯೫೦, ೨೨೨). [ಹೊಳಲು + ೦ → ೪]

ಹೊಳಲು (ನಾ). ಬಹಳ ತೆಳ್ಳಗಿರುವಿಕೆ : ಶ್ರೀಮಂತಿಕೆ : ಬಡತನ : ಅಕ್ಕಿ ಹೊಳಲು ಅಡಿಕೆ ಹೊಳಲು ಅಳತೆ ಮಾಡಿದ ಅಳತೆ ಅಕ್ಕಿ ಎಂದರೆ ಹೊಳಲು ಅಡಿಕೆ ಎಂದರೆ ಅಳತೆ ಮಾಡಿದ ಅಡಿಕೆ (೧೯೫೦, ೩ ಅಂ.). [< ಹೊಳ್ಳು + ೦ಲು, (< ಅರ್.)]

ಹೊಳಲೆ (ನಾ). = ಹೊಳಲು : ಬಹಳ ತೆಳ್ಳಗಿರುವಿಕೆ ಅ ಹುಡುಗಿಯಲ್ಲಿ ಅಳತೆ ಸೈಸಲೂಬಾರದು ಇದ್ದ ಹೊಳಲೆ (೧೯೫೦). [ಹೊಳಲು + ೦ → ೪]

ಹೊಳಸಿ (ನಾ). ಒಂದು ಬಗೆಯ ಮರ : ಚಚ್ಚಿ ಬಡಿಯಲು ಬಾಯಿಬ್ಬಿಸಲು ಸೂಕ್ತವಾದ ಬಲವಾದ ಮರ ಹೊಳಸಿ ಇದು (ಅ.ಸಾ.ಪ. ೨೯-೧೯೫೦ : ೧೯೫೦). [ಪೂ. ಕೊಂಕ. ಮರಗಳು]

ಹೊಳಸ್ಕೆ (ನಾ). ಒಂದು ಬಗೆಯ ಕಬ್ಬಿ : ಸೌದೆಕಡ್ಡಿ : ಮೊದಲು ಅಡಿಕೆಯನ್ನು ಅಲ್ಲಿಂದ ಸ್ವಲ್ಪವಾಗಿ ಮುಂದುಹಾಕುವಂತೆ ಅಥವಾ ಸ್ವಲ್ಪವಾಗಿ ಅಗಲಿಸಿ ಸಣ್ಣಗಾಗಿ ಬಡಿಯುವ ಬಡಿಗೆ ಹೊಳಸ್ಕೆ ಬಡಿಗೆ (೧೯೫೦, ೧೨೦). [< ಹೊಳ್ಳು]

ಹೊಳಸ್ಕೆ (?) (ನಾ). (?) : ಬಾಯಿಯಲ್ಲಿ ಜಾಗ ಕೊಂಚ ಜಜ್ಜಿಯೋ ಕೊಚ್ಚಿಯೋ ಕೊಡಲೆಂದು ಕಬ್ಬಿಣದಿಂದ ಮಾಡಿರುವ ಸಾಧನ ಹೊಳಸ್ಕೆ ಬಡಿಗೆ ಬಡಿಯುವುದು ಸಾಮಾನ್ಯ (೧೯೫೦, ೧೨೦). [?]

ಹೊಳು 'ಹೊಳ್ಳು' ನೋ.

ಹೊಳ್ಳು 'ಹೊಳ್ಳಾಲು' ನೋ.

ಹೊಳ್ಳಿಬಾಣ (ನಾ). ಒಂದು ಬಗೆಯ ಹಸ್ತ : ಸಾಮಾನ್ಯವಾಗಿ ಕಬ್ಬಿಣದಿಂದ ಮಾಡಿದ ಅಲ್ಪ ಅಥವಾ ಅಂಬು (೧೯೫೦, ೨೦೦). 'ಹಸ್ತ್ರ'ಗಳ ಪಠಾ. [?]

ಹೊಳ್ಳು 'ಹೊಳ್ಳಾಲು' ನೋ.

ಹೊಳ್ಳೆ 'ಹೊಳ್ಳು' ನೋ.

ಹೊಳ್ಳೆಬಾಣ 'ಹೊಳ್ಳಿಬಾಣ' ನೋ.

ಹೊಳ್ಳು 'ಹೊಳ್ಳಾಲು' ನೋ.

ಹೊಳ್ಳುಳಿ 'ಹೊಳ್ಳಿಬಾಣ' ನೋ.

ಹೊಳ್ಳೆ (ನಾ). ಒಂದು ಬಗೆಯ ಹಸ್ತ್ರ : ಸಾಣೆಕಲ್ಲು, ಸಣ್ಣಕ್ಕಿರಿ, ಮಚ್ಚಾಯಾಯಾದಾಗಿ, ಕಲ್ಲಿನಲ್ಲಿ ಸಿಲುಕಿ (೧೯೫೦, ೨೯-೩೨). [?]

ಹೊಳ್ಳೆ (ನಾ). ೧. ಬಿಚ್ಚಿದ ; ತೆರೆದ : "ಸಿಪ್ಪೆದ ಕಾಯಿಂದ ಹೊಳ್ಳಾದ" (ಮಾಲಾ. ೧೦-೨೦) : ಹೊಳ್ಳಾಲು ಮಾಡಲಾದ ಬಿಚ್ಚಿದ ಬಾಣಲೆ (ಮಾಲಾ. ೨೦೦) : ಹೊಳ್ಳಾ ದಾಸಿ ಹೊಳ್ಳಾ ಕಾಯಿ ಹೊಳ್ಳಾ ಬಾಣಲೆ (ಮಾಲಾ. ೨೦೦). ೨. ವಿಶಾಲವಾದ ; ಶ್ರೇಷ್ಠವಾದುದು : "ಹೊಳ್ಳಾ ಸಾಲ್ಯ" (ಮಾಲಾ. ೨೦೦). [< ಹೊಳ್ಳು, ಹೊಳ್ಳಾಲು. ಪೂ. ಕೊಂಕ. ಹೊಳ್ಳೆ : ಮಲ. ಹೊಳ್ಳ್ / ಹೊಳ್ಳ : ಪೂ. ಹೊಳ್ಳಾ, ಹೊಳ್ಳಾ / ಹೊಳ್ಳಾ. ಹೊಳ್ಳಾ]

ಹೊಳ್ಳೆ (ನಾ). ಬಹಳ ತೆಳ್ಳಗಿರುವವನು, —ಬಹಳವಾಗಿರುವವನು : ಅಡಿಕೆ ಹೊಳ್ಳೆ (೧೯೫೦). [ಹೊಳ್ಳು + ೦ → ೪]

ಹೊಳ್ಳೆ (ನಾ). ಬಹಳ ತೆಳ್ಳಗಿರುವಿಕೆ : ಶ್ರೀಮಂತಿಕೆ : ಬಡತನ : ಅಕ್ಕಿ ಹೊಳ್ಳೆ ಅಡಿಕೆ ಹೊಳ್ಳೆ ಅಳತೆ ಮಾಡಿದ ಅಳತೆ ಅಕ್ಕಿ ಎಂದರೆ ಹೊಳ್ಳೆ ಅಡಿಕೆ ಎಂದರೆ ಅಳತೆ ಮಾಡಿದ ಅಡಿಕೆ (೧೯೫೦, ೩ ಅಂ.). [< ಹೊಳ್ಳು + ೦ಲು, (< ಅರ್.)]

ಹೊಳ್ಳೆಬಾಣ (ನಾ). ಒಂದು ಬಗೆಯ ಹಸ್ತ್ರ : ಸಾಣೆಕಲ್ಲು, ಸಣ್ಣಕ್ಕಿರಿ, ಮಚ್ಚಾಯಾಯಾದಾಗಿ, ಕಲ್ಲಿನಲ್ಲಿ ಸಿಲುಕಿ (೧೯೫೦, ೨೯-೩೨). [?]

ಹೊಳ್ಳೆ (ನಾ). ೧. ಬಿಚ್ಚಿದ ; ತೆರೆದ : "ಸಿಪ್ಪೆದ ಕಾಯಿಂದ ಹೊಳ್ಳಾದ" (ಮಾಲಾ. ೧೦-೨೦) : ಹೊಳ್ಳಾಲು ಮಾಡಲಾದ ಬಿಚ್ಚಿದ ಬಾಣಲೆ (ಮಾಲಾ. ೨೦೦) : ಹೊಳ್ಳಾ ದಾಸಿ ಹೊಳ್ಳಾ ಕಾಯಿ ಹೊಳ್ಳಾ ಬಾಣಲೆ (ಮಾಲಾ. ೨೦೦). ೨. ವಿಶಾಲವಾದ ; ಶ್ರೇಷ್ಠವಾದುದು : "ಹೊಳ್ಳಾ ಸಾಲ್ಯ" (ಮಾಲಾ. ೨೦೦). [< ಹೊಳ್ಳು, ಹೊಳ್ಳಾಲು. ಪೂ. ಕೊಂಕ. ಹೊಳ್ಳೆ : ಮಲ. ಹೊಳ್ಳ್ / ಹೊಳ್ಳ : ಪೂ. ಹೊಳ್ಳಾ, ಹೊಳ್ಳಾ / ಹೊಳ್ಳಾ. ಹೊಳ್ಳಾ

ಅಜಿತಾಂ: . . . ಮುಸುಕ್ಕಿ ಸ್ಕಾಣಾಂಧ್ರಿ ಪಾಪಿಷ್ಠಮಿಂತಾಗಿ ಮುಯಿಸ್ಕಿದ (೧೮೮೮, ೪೨೨). 'ದೊಣ್ಣೆ ಕೆದುಕು' ಪರಿಭಾ. [ಸ್ಕಾ + ಆಯುಃ (< ಆಯಸ್)]

ಸ್ಕಾಣಿ (ನಾ). (ಪಕ್ಷಿ) ಹಕ್ಕಿಪಿಕ್ಕಿಗಳ ಅಳತೆಯ ಒಂದು ಪ್ರಮಾಣ: (೧೮೮೫, ೧೮೨). [ಸ್ಕಾ + ಅಣಿ]

ಸ್ಕಾಣಿಕೆ (ನಾ). ಒಂದು ಬಗೆಯ ಪಕ್ಷಿ : ಬಿಳ್ಪಹಾತೆಯ ಕಾಗೆ : "ಅಣಿಯಾಯಿಂ, ಸ್ಕಾಣಿಕೆ, ಪಿಯಾಗ" (೧೮೭೬, ೧೧೩); ಬೆಳಂಗಾಯಿಂ, ಸ್ಕಾಣಿಕೆ (೧೮೫೫, ೭೭-೧೭೮೦). [ಸ್ಕಾ + ಅಣಿ]

ಸ್ಕಾಣಿಕೆ (ನಾ). ೧. ಸೂಕ್ಷ್ಮವಾದ ಕೆಲಸ ; ನಯವಾದ ಕೆಲಸ : ಮುಂಜಾಲ್ಕಿಯ ಗುಣ - ಇದು ಸ್ಕಾಣಿಕೆಯ ಪ್ರಸಾದವಿದು. ಮುಖಾಲ್ಕಿಗೆ ಸ್ಫುಟಾಲಂಕಾರವಿದು . . . ಇದಪ್ಪುದು (೧೮೭೬, ೬೮೬). ೨. ವಿನಯಶೀಲತೆ : ಹಿನಾಯಸ್ಥ : ಅಜಾರ ಇಜಾರ ಸ್ಕಾಣಿಕೆಯ ಮಾಡುತ್ತಾಗಲಿ ಮಾಡಿ ಸುಜನರಿಲ್ಲಿ (೧೮೭೦). [ಸ್ಕಾ + ಇಲಿ]

ಸ್ಕಾಣ್ಕೆಯ (ನಾ). ಒಂದು ಬಗೆಯ ಪಕ್ಷಿ : ಕೊಂ. ಸ್ಕಾಣ್ಕೆಯ. ತೆಲುಗಿನ (೧೮೭೫, ೨೦-೨೧). [ಸ್ಕಾ + ಕ್ಕೆಯ]

ಸ್ಕಾಣ್ಕೆ (ನಾ). = ಸ್ಕಾಣಿ ೬ : ಸ್ಕಾಣ್ಕೆಯಿಲ್ಲೊಲ್ಲ: ಮೆಚ್ಚಲಾರ ಕಲಿ. (೧೮೫೫, ೨೦೩) ; ಸ್ಕಾಣ್ಕೆಯೊಳಾಪಕ್ಕೆ ಸೊಗಸಾದ ಕಡೆಯೊಳು: ಬಾಳ್ಪಲ ಪಾಯಿಸಿ ಒಲ್ಲರಾಕ್ಕೆ, (೧೮೫೫, ೧೦೪-೧೦) ; ಮಿಕಿಸ ಸ್ಕಾಣ್ಕೆಯ ಬಾಯಿಂ . . . ಗೆಯಿಂ ಬಾಯಿಯಿಂ ಪಿಂದಾಗಿ ಸುಮಿಣ್ಕೆಯಂ ನೀಡಿದಂ (೧೮೭೮, ೬-೧೦). [ಸ್ಕಾ + ಅಣ್ಕೆ]

ಸ್ಕಾಣ್ಕೆಪಕ್ಷಿ (ನಾ). ಅಕ್ಕಪಿಕ್ಕಿನಲ್ಲಿ ಒಂದು ಬಗೆ : ಸ್ಕಾಣಿಕೆಯ ಅಣ್ಕೆಪಕ್ಷಿ : "ಗಂಡಾಳ್ಕಲ್ಲುಬಾಲ್ಕಾ, ಸ್ಕಾಣ್ಕೆಪಕ್ಷಾ, ತಲ್ಪಕಾಲ್ಕಾ, ತೊಂಬಲಾಗೆಯಾಲ್ಕಾ" (೧೮೭೨, ೪೫); ಗಂಡಾಳ್ಕಲ್ಲುಬಾಲ್ಕಾ, ತಲ್ಪಕಾಲ್ಕಾ, ತೊಂಬಲಾಗೆಯಾಲ್ಕಾ, ಸ್ಕಾಣ್ಕೆಪಕ್ಷಾ, ಗಟ್ಟಿಪಿ (೧೮೭೫, ೨೦-೨೧). [ಸ್ಕಾ + ಅಣ್ಕೆಪಕ್ಷಿ]

ಸ್ಕಾಣ್ಕೆಹೆಜ್ಜೆಯ (ನಾ). ಒಂದು ಬಗೆಯ ಔಷಧೀಯಸ್ಯ ; ಬಿಳ್ಪಹಾತೆಯ ಅಣ್ಕೆಹೆಜ್ಜೆ: "ಬಿಳಿಪ್ಪು-ಬಿಳಿಪಂಗಾಯ್ಕೆ . . . ಸ್ಕಾಣ್ಕೆಹೆಜ್ಜೆ" (೧೮೭೬, ೧೧೧). [ಸ್ಕಾ + ಅಣ್ಕೆಹೆಜ್ಜೆ (< ಅಣ್ಕೆಪಕ್ಷಿ)]

ಸ್ಕಾಣ್ಕೆಳ (ನಾ). ೧. ಸ್ಕಾಣಿಕೆಯ ಅಳತೆ : ಬಿಳ್ಪ ಅಳತೆಗ. ೨. ಮುಪ್ಪಡಿದಪ್ಪ ಬಳಿಯಿಪ ಬಿಳ್ಪ ಅಳತೆಯ ಅಳತೆಗ. ೩. ಇಂಗಿ-ಜಾಧಾಪಯಲ್ಲಿರುವ ರಾಶಿಯ ಅಥವಾ ಪರಿಮಿತ ಸೂಚಿಸಲ್ಬಡುವ ಅಳತೆ : ಸ್ಕಾಣಿಯಾಗಿ (೧ ೧೫೫, ೧೫೫); ಸ್ಕಾಣಿಕೆಯಾಗಿ, ಬಿಳಿ (೧೮೭೦). [ಸ್ಕಾ + ಅಣ್ಕೆ]

ಸ್ಕಾಣುಮೋಕ (ನಾ). ಬಿಳ್ಪಹಾತೆಯ ಒಂದು ಬಗೆಯ ಮೀನೋಕ : "ಪ್ಪೊಳಲಿಂ - ಸ್ಕಾಣುಮೋಕ, ಬಾಲಾಪ್ಪಿ" (೧೮೭೨, ೪೨) ; ಅಳಿಪ, ಸ್ಕಾಣುಮೋಕ . . . ಸಣಪೆಗಾಲಿ, ಇಂಪಿಲ್ಲಿಯ ಕ್ಷುಪ್ಪಗ ಸಣಪೆಯಾಪ ಪೊಳ್ಪ ಪಾಗ ಬಾಲಿಗಿಂ ಪಾಗ (೧೮೭೫, ೪ ೧೫೫). [ಸ್ಕಾ + ಮೋಕ]

ಸ್ಕಾಣ್ಸಿಸ್ಸ (ನಾ). ಸ್ಕಾ.ಹ್ಸ್ಸಿಯ ಒಂದು ಬಗೆಯ ವಿಷಯ : ಮೋದಲು ಗೂಡಾಗಿ ಸ್ಕಾ.ಸ್ಕಾಸಿಕೊಂಡ . . . ಹಂದಾಲಲು ವಿಷ್ಣಿಗಿದಾ ಧ್ಯಾ (೧೮೫೫, ೧೮-೨೦).

[ಸ್ಕಾ + ಆಣ್ + ಅ]

ಸ್ಕಾಣಿಗಲು (ನಾ). ಆಕಾರದಲ್ಲಿ ತಲಿದಾಗಿಯ ಉಷ್ಣಮಯಿಪ್ಪಯ ಸೆಲ್ಲು : ಸ್ಕಾ.ಗಳಪಾಯಿಂಗಳ ಪೊಗಳಿಯ ಪೊಳಂ ಬಿಳ್ಪ.ಗಾಲಿ ಪಾಪ್ಪಿಪಗಳ ಅ.ಗಾಲಿಯಿಂಗಿಯಿಂಗಳಿಂಗಳ ಪೊಗಳಿಯ ಪೊಳಂ ಬಿಳ್ಪಗಂದಿಲ್ಲ ಪೊಗಳಿ (೧೮೭೫, ೨೫ ೨೮೯).

[ಸ್ಕಾ + ಅಲ್ಲ (< ಅಲಿ)]

ಸ್ಕಾಣಿಕೆ (ನಾ). ನಯವಾದ ಗಾಲ ; ಸೂಕ್ಷ್ಮವಾದ ಗಾಲ : (೧).

[ಸ್ಕಾ + ಗಾಲ]

ಸ್ಕಾಣಿಗಾಲ (ನಾ). (ವಿಷಯ ಒಂದಿಯುವ) ಬಿಳ್ಪಕೊಡ್ಡಿ. — ಕೊಂದಿ: "ಅಪಗಾಣಿಯಾಂ ಸ್ಕಾ.ಗಾಲಿಯಿಂಗಾಲ. ಇಯಿಂ! ಬಿಳ್ಪಿಯಿಂ ಗಾಲಿಗಾಣಿಯಿಂ" (೧೮೭೫, ೧೮); ಅಪಗಾಲ, ಗಾಲಿಗಾಲ, ಸ್ಕಾ.ಗಾಲ (೧೮೭೫, ೫೧೦-೧೫೦). [ಸ್ಕಾ + ಗಾಲ]

ಸ್ಕಾಣಿಗಿ (ನಾ). ಒಂದು ಬಗೆಯ ಬಿಳ್ಪಪ ಸಣ್ಣಾ : ಬಾಲಾಲಿ ಪಾಪ್ಪಿಗಾಲ . . . ೧ ಗಾಲಿ . . . ೧ ಸ್ಕಾಣಿಗಿ (೧೮೭೫, ೧೫೧). [?]

ಸ್ಕಾಣ್ಗ (ಅ). ಶ್ವೇತವಾಗಿ : ತೆಳ್ಳಗೆ : ಸಣಪೆಗಾಲಿ ಗಾಲಿಗಾಲಿ ಅಪ್ಪಿಪಾಗಿ ಬಿಳಿಪ ಸ್ಕಾ.ಗಳ ಅಪ (೧೮೭೫, ೬-೧೧).

ಸ್ಕಾಣಾಲ = ಬಿಳಿಪಾಗಿ : ಶ್ವೇತವಾಗಿ ; ಸೊಗಸು : ಶ್ವೇತ ಶ್ವೇತಾಗಿ ಸುಸ್ಪಷ್ಟ ಪಾಲ ಬಿಳ್ಪಳ್ಳ ಪೊಳಪು ಪಾಲ ವಿಶ್ವಪಾಣಪಿದುಪ್ಪುಗಂ ಒಳಗೊಳಗೆ ಪಾಲ ಸ್ಕಾ.ಗಾಲಿಯಾಗಿ (೧೮೭೫, ೯೨) ; ಶ್ವೇತಾಗಿಯಿಂ ಪೊಳಪು ಪೊಳಪು ಸ್ಕಾ.ಗಾಲಿಯಿಂ, ಶ್ವೇತಾಗಿಯಿಂ . . . ಇಪ್ಪಾಗಿಂ (೧೮೭೫, ೬೬). ಸ್ಕಾಣಿಸು = ಬಿಳ್ಪಗಾಗಿಸು : ಶ್ವೇತವಾಗಿಸು : ಮುಂಜಾಲ್ಕಿಯ ಪೊಳಪು ಪೊಳಪು ಸ್ಕಾ.ಗಾಲಿಸಿದ ಪೊಳಪು (೧೮೭೫, ೯೯).

ಸ್ಕಾಗೊಳಿಸು (ಕ್ರಿ). ಅಲ್ಪಪ್ರಮಾಣದಲ್ಲಿ ಇರಿಸು : ಬಿಳ್ಪ ಮೊದಲಾಗಿ ಪೋಗಿ ಪೊಳಪು ಪಾಲ ಅಜಾಪಾಲಾಗಿ ಸ್ಕಾ.ಗೊಳಿಸಿ ಪಿಳ್ಪಿಯಿಂ ಪಾಲಿಸಿದಂ ಪೊಳಪು ಪೊಳಪು ಪೊಳಪು

ಸಣ್ಣ ಬಡಪ (ನಾ). ಬಡ್ಡಿಗಾತ್ರದ ಅಲ್ಪರ ; ಸಣ್ಣಲಿಪಿ ; ಈ ಈ ಬಗೆಯ ಲಿಪಿಯನ್ನು ಒಂದು ಅಲಯುವಿ ಲಿಪಿಯು ಬಳಿಸಿಕೊಂಡು ಬಂದಿರಬಹುದು: ಸಂಶೋಧನೆ: ಸಣ್ಣ ಬಡಪ ಗುರುಬಸವರಾಜರು ಸಂಪಾದಿಸಿದ ಶರಣರ ವಚನಸಾಹಿತ್ಯದ ಮಹತ್ವ (೧೯೫೫. ೧೦). [ಸಣ್ಣ + ಬಡಪ (< ಬಡಪ)]

ಸಣ್ಣಬೆಸಲು (ನಾ). ಬಡ್ಡವರು; ಅರುಬೆರಳು : ಕೋಲಂ ಮುಂಡಿಸಲು ಬಾಣಿಸಿ ಮಣಿಸಿ ಮೇಲೆ: ಸಣ್ಣಬೆಸಲು ಭೂಮಿಯಲ್ಲಿ ಬಾಣಿ (೧೯೫೫. ೧೫-೨೯). [ಸಣ್ಣ + ಬಡಪ (< ಬಡಪ)]

ಸಣ್ಣಭಕ್ತ, 'ಸಣ್ಣಬಟ್ಟ' ನೋ.

ಸಣ್ಣಮಾಣ್ಯ (ನಾ). ಬಡ್ಡಿಯಾಗಳಲ್ಲಿ ಮರಳು; ಸಣ್ಣವಾದ ಮರಳು : ಅಂಬರಿಷ ಪುರಂದರದಾಸರು ಸಣ್ಣಮಾಣ್ಯ ಮರಳು ಸಣ್ಣ ಕಲ್ಲಾಂಬಿಯು ಪೂಸಿ (೧೯೫೫. ೬-೨೦ ಚಾಗ). [ಸಣ್ಣ + ಮಾಣ್ಯ]

ಸಣ್ಣಮಡ್ಡಿಗೆ (ನಾ). ಒಂದು ಬಗೆಯ ತಿರಿದಾದ ಮಡ್ಡಿಗೆ : "ಹಾಡ ಬಳ್ಳ . . . ಸಣ್ಣಮಡ್ಡಿಗೆ, ಸೂಜಮಡ್ಡಿಗೆ . . . ಮಡಮಡ್ಡಿಗೆ" (೧೯೫೫. ೬೭): ಸಣ್ಣಮಡ್ಡಿಗೆ, ಒಣಮಡ್ಡಿಗೆ (೧೯೫೫. ೧೫-೧೬೫). [ಸಣ್ಣ + ಮಡ್ಡಿಗೆ]

ಸಣ್ಣಮಾಟ (ನಾ). ಕಳಾಪ ನುಡಿ ; ಶಿಷ್ಟವಾದ ಮಾತು : ಯಾರೂ ಸಣ್ಣಮಾಟಗಾರಿ ಬಚ್ಚಾದಾರು (೧೯೫೫). [ಸಣ್ಣ + ಮಾಟ]

ಸಣ್ಣಮಾಡಿ (ನಾ). (ಹಾ) ಒಂದು ಅಳತೆ; ಮುಡಿಯಲ್ಲಿ ಒಂದು ಭಾಗ : (೧೯೫೫. ೧೫೦). [ಸಣ್ಣ + ಮಾಡಿ]

ಸಣ್ಣಮೀನು (ನಾ). ಬಡ್ಡಜಾತಿಯ ಒಂದು ಬಗೆಯ ಮೀನು : ಕಿರಿಮೀನು: "ಇಮಿಲಿ- ಸಣ್ಣಮೀನು" (೧೯೫೫. ೨೨). [ಸಣ್ಣ + ಮೀನು (< ಮೀನು)]

ಸಣ್ಣಲಿಪಿ (ನಾ). ಒಂದು ಬಗೆಯ ಲಿಪಿ : (೧೯). [ಸಣ್ಣ + ಅಲಿಪಿ]

ಸಣ್ಣವಕ್ಕಿ, (ನಾ). ಬಡ್ಡದಾರಿ; ಸಣ್ಣದಾರಿ : ಇದ ಕೂಡಾದ ಇಂಥ ಭೂಮಿ ದೊಡ್ಡ ಭೂಸ್ವಾಮಿಯೊಬ್ಬನಲ್ಲಿ ಬಾಧಾಗಿ ಎಷ್ಟಮಾಡದ ಸಣ್ಣವಕ್ಕಿಯಾಗಿ ಬಾಳ ಕಾ ಸೂಸುವ ರೀತಿಯಲ್ಲಿ (೧೯೫೫. ೬ ೧೩). [ಸಣ್ಣ + ವಕ್ಕಿ]

ಸಣ್ಣವಡಿಸಿ (ನಾ). ಒಂದು ಬಗೆಯ ಬಟ್ಟೆ : ಬಡಿಸಾಲ ಚಟ್ಟಿ ಸಣ್ಣ ಪಡಿಸಿದಾಯ ಪೂಜಿಸಿ (೧೯೫೫. ೧೧-೧೩). [ಸಣ್ಣ + ವಡಿಸಿ]

ಸಣ್ಣವಳೆ (ನಾ). ತೆಳ:ದಾದ ಬಳೆ: ತೆಳ್ಳಗಿರುವ ಬಳೆ : ಆಳಾದಳಾದ ಸಣ್ಣವಳೆ ಪ್ರಾಯೋಜಿಯಾಗಿ ಮೂಲ್ಯದಾ ಪಿಂಜರಾಣ ದೂರಾಯ ಕಾಣಿ ಮಾಣಾಪಾಟಿದಾ ದಾಗಾಗಿಸಿಲ್ಲಾ (೧೯೫೫. ೨-೩). [ಸಣ್ಣ + ವಳೆ]

ಸಣ್ಣವಿಷಯ (ನಾ). ಬಡ್ಡಪ್ರಮ್ಖ ವಿಷಯ; ಸಾಮಾನ್ಯಸಂಗತಿ : ಲಿಂ. ಶಾಸ್ತ್ರಿ ಸಂಪಾದಿಸಿದ. ಅವರ ಮಾಜಿಸ್ಟ್ರೇಟರು ಏಂದು ಸಣ್ಣವಿಷಯಗಳ: ಮಾಜಿಸಿದ್ದಾರೆಂದು ಪಟ್ಟುಗಳು ಏನೇ ಇದ್ದರೂ (೧೯೫೫. ೧೩). [ಸಣ್ಣ + ವಿಷಯ]

ಸಣ್ಣಸಮಯಗಳ (ನಾ). ಗೊಂದಿ ಅಥವಾ ರಥಮುಂದ ಶಮಯಂಟಿಸಿದ (ಶಾಯಸಣ್ಣಿಗೆ ಉಪಯೋಗಿಸಿದ) ಸಣ್ಣಗಾತ್ರದ ಉಂಡೆ: ಸಣ್ಣದಾದ ಸರಪಳಿಗಳ : ಸಣ್ಣಂಗಳ ಸಣ್ಣಚಂಗಳ ಮಾಣಿಕಂಗಳ . . . ಸಮಿಪಡಿಸಿಂಗಳ (೧೯೫೫ ೬. ೧೩). [ಸಣ್ಣ + ಸಮಯಗಳ]

ಸಣ್ಣಸಿ (ನಾ). ಎಳಯ ಬಂದ್ರಮಾಲು; ಬಾಲಬಂದ್ರ : ಸಣ್ಣಸಿಗ ಸಾಮಾನ ಸೊಸ್ಸ . . . ಒಬ್ಬಮಾಲ ಒಂಚಿಸಿಸಿಲ್ಲಾಗಿ (೧೯೫೫. ೧೩-೧೫). [ಸಣ್ಣ + ಸಿ]

ಸಣ್ಣಸಾಮಿತಿ (ನಾ). ಬಡ್ಡಶಾಲೆಗಳಲ್ಲಿ ಒಂದು ಬಗೆಯ ಸಾಮಿತಿ : "ಸಣ್ಣ-ಶಾಲಾ - ಸಣ್ಣಸಾಮಿತಿ" (೧೯೫ ೭೮). [ಸಣ್ಣ + ಸಾಮಿತಿ]

ಸಣ್ಣಸೊಪ್ಪು (ನಾ). ಒಂದು ಬಗೆಯ ಸೊಪ್ಪು : ಅಲ್ಲಗಾಲು. ಸಣ್ಣಸೊಪ್ಪು (೧೯೫೫. ೫೫-೫೮). [ಸಣ್ಣ + ಸೊಪ್ಪು (< ಸೊಪ್ಪು)]

ಸಣ್ಣಸೊಪ್ಪಗೆ (ನಾ). ತೆಳ್ಳನೆಯ ಸೊಪ್ಪಗೆ : ಪಾಲಿಂಗಾಡಿದ ಸಣ್ಣಸೊಪ್ಪಗೆಳ್ಳಿದ್ದ (೧೯೫ ೭ ೧೨); ಸಣ್ಣಸೊಪ್ಪಗೆ ಶ್ಯಾಮಲಾ ಮಿಂಚಿಂಚಿಂಚಿಯಲ್ಲಿಯಂಚಿಲ್ಲಿಂಗಳಾಗ ಬೀಳಲ (೧೯೫೫. ೭ ೫೫); ಸಣ್ಣಸೊಪ್ಪಗೆ ತೂಬಾಂಚಿ ಚಿಂಚಿಂಚಿಂಚಿ . . . ಬೆಟಿಸಿಗ ಮಂಚ್ಚಿಸಿಸ್ಸಾಗಿಸಿಯಾಯ (೧೯೫. ೦-೧೫). [ಸಣ್ಣ + ಸೊಪ್ಪಗೆ (< ಸೊಪ್ಪಗೆ)]

ಸಣ್ಣಹಣ (ನಾ). (ದ್ರವಪದಾರ್ಥದ) ಮುಂಚಿನ : ತೊಟ್ಟು : "ಅಮಂ ಮಿಂಚಿ ಸಣ್ಣಹಣ ಬಾಯಿಯಾಕ್ಕಾ." (೧೯೫೫. ೧೬-೨). [ಸಣ್ಣ + ಹಣ (< ಹಣ್)]

ಸಣ್ಣಹೊಟ್ಟು (ನಾ). ಸೂಗಾವಾದ ಹೊಟ್ಟು ; ಸಣ್ಣವಾದ ಹೊಟ್ಟು : ದೇವಸ್ಥಾನ ಸಣ್ಣಹೊಟ್ಟು ಸೂಂಬಿ ಹುಡುಗೆಂಗಳ ದೃಷ್ಟಿ ಬಾಡಲೂ ಹಾಗ ಅಯ (೧೯೫೫. ೧ ೨೯). [ಸಣ್ಣ + ಹೊಟ್ಟು (< ಹೊಟ್ಟು)]

ಸಣ್ಣಹುಡುಗ (ನಾ). ಬಡ್ಡವಯಸ್ಸಿನ ಹುಡುಗ; ಬಾಲಕ : ಈ ಸಣ್ಣಹುಡುಗ ಬಹಳ ಬುದ್ಧಿವಂತ (೧೯೫೦). [ಸಣ್ಣ + ಹುಡುಗ]

ಸಣ್ಣಹುಡುಗಿ (ನಾ). ಬಡ್ಡವಯಸ್ಸಿನ ಹುಡುಗಿ; ಬಾಲಕಿ : ಸಣ್ಣಹುಡುಗಿಯರು ಸಂತೆಯಲ್ಲಿ ಅಲಾಡುತ್ತಿದ್ದಾರೆ (೧೯೫೦). [ಸಣ್ಣ + ಹುಡುಗಿ]

ಸಣ್ಣಹುಲಗ (ನಾ). ಕೆಸರಿನ ಮರಳಸಪ್ಪದಲ್ಲಿರುವ ಒಂದು ಬಗೆಯ ಹೆಸ್ಸೆ : (೧). [ಸಣ್ಣ + ಹುಲಗ]

ಸಣ್ಣಾಟ (ನಾ). ಯುಷ್ಮಗಾನದಲ್ಲಿ ಒಂದು ಪ್ರಕಾರ : ಈ "ಬಯಲಾಟದಲ್ಲಿ ಸಣ್ಣಾಟ, ಒಂದು ಪ್ರತ್ಯೇಕವಾದ ಸ್ವಾತಂತ್ರ್ಯ ಪಡೆದಿದೆ. ದೊಡ್ಡಾಟಕ್ಕೆ ಇದು ವಿರುದ್ಧವಲ್ಲದಿದ್ದರೂ ಕೆಲವು ಅಂಶಗಳಲ್ಲಿ ಭಿನ್ನತೆಯುದೆ. ಸ್ವಾಮಿಗಾರು ಅದಿಗೆ ಮುಖ್ಯವಿಲ್ಲವೆಂದು . . . ದೊಡ್ಡಾಟದಷ್ಟು ಸುಲಭೀಕರಿಸಿ, ಅದರದೇ ಮೂಲಅಂಶಗಳನ್ನಿಟ್ಟುಕೊಂಡು ಸಣ್ಣಾಟವನ್ನು ಅಡಲು ಪ್ರಾರಂಭಿಸಿದರು . . . ಸಣ್ಣಾಟವನ್ನು ದಾಖಲಿಸಿ, ಪರಿಚಯಿಸಿ ಏಂದು ಅಭಿಮಾನಿಸಿದೆ" (೧೯೫ ೧೨೫) : ದೊಡ್ಡಾಟಕ್ಕೆ ಮೂಲಾಧಾರವಲ್ಲ, ವಿಸ್ತಾರವಾದ ರೂಪಾಕ್ಕೆ ಸಣ್ಣಾಟ ಮೂಲವಾಗಿ. (೧೯೫. ೧೫೫). 'ದೊಡ್ಡಾಟ' ಪರಿಸಿ. [ಸಣ್ಣ + ಆಟ]

ಸಣ್ಣಿ[1] (ನಾ). (ಮಮಿಗಾಗಿ ಉಡುವ) ರೇಷ್ಮೆವಸ್ತ್ರ : ಮುಗುಳು : ಸಣ್ಣ ಮಡಿಯಾದಾಗ ಸಣ್ಣ ರಶ್ (೧೯೫೫). [<— ತಮಿ. ಸಣ್ಣಿ, ಸಣ್ಣ]

ಸಣ್ಣಿ[2] (ನಾ). ಒಂದು ಬಗೆಯ ಸಪ್ಪ : ಬಾಣಂಟು. ಸಣ್ಣಿ. ಸೊಣ್ಣಾಂಗಿ. ಚಟ್ಟಿಯೂ (೧೯೫. ೫೫೨). [?]

ಸಣ್ಣಿಂಚಿಸ (ನಾ). ಇಂಚಾದ ಧ್ವನಿ : ಅಂಗಾಣ್ಯಾಮೃಯಮಾಂಚಿಸಿಯಂ ಸಣ್ಣಿಂಚಿಸ ಬಾಯಿಕ್ಕಿಂಚಿಸಿಲ್ಲಿಂಚಿಸಿಲ್ಲಿಂಚಿಸಿಲ್ಲ

ಮುಂದೆ ನಡೆಯೆ ನಡೆದಂ ಭರತಂ (ಆದಿಪು. ೧೧-೪೭ ಹಚ್ಚಸ ಪದ್ಯ); ಹರಿಚಂದನಮಂ ಸಮಂತು ಸಣ್ಣಿಗೆಯೊಳ್ ಸಣ್ಣಿಪುದು (ಜಾಧಪು. ೬-೬೪). ೨. ನಯಗೊಳಿಸು; ನುಣ್ಣಗೆಮಾಡು : ಕುರುಬಲಮಲ್ಲಮನರೆದು ಸ[ಪಾಠಾಂ. ಪ]ಣ್ಣಿಸಿದಂತೆ ಮಾಡಿ ತವೆ ನರವಿಯನಿನಿತಂ ಕೊಂದೊಡಮೇವಂದಪುದು (ಪಂಪಭಾ. ೧೧-೧೭೭ ಪ); ಸಣ್ಣಿಗೆಯೊಳ್ ಸಣ್ಣಮಾಗರದು ಸಣ್ಣಿಸಿದೊಡೆ (ಸುಕುಮಾ. ೧೧-೪೭ ವ); ಹಸಿಯಕ್ಕಿಯುದ್ದು ಜೀರಿಗೆ ಮೆಣಸು ತೆಂಗಾಯಿ ಕುಸುರಿ ಬಿಳಿಯುಳ್ಳಿ ಸಾಸುವೆಯೆಳ್ಳುಗಳನು ಸಣ್ಣಿಸಿಯರೆದು (ಸೂಪಶಾ. ೪-೭೮). ೩. ಬಡವಾಗು; ಕೃಶವಾಗು : ಉಣ್ಣದೊಡವೆಯ ಗಳಿಸಿ ಮಣ್ಣಿನೊಳು ತಾನಿರಿಸಿ ಸಣ್ಣಿಸಿ ನೆಲನ ಸಾರಿದನ ಬಾಯೊಳಗೆ ಮಣ್ಣು ಕಾಣಯ್ಯ (ಸರ್ವಜ್ಞ. ೬೫೭); ಎರಡು ಆಳಿನ ಬದುಕನ್ನು ಒಬ್ಬನೇ ಮಾಡಿ ಸ್ವಲ್ಪ ಮಟ್ಟಿಗೆ ಸಣ್ಣಿಸಿದ್ದಾನೆ (ಜಿಳುಮು. ೪೦). ೪. ಪುಡಿಮಾಡು; ಚೂರ್ಣಗೊಳಿಸು : ಶಿವಯಂ . . . ಶಿಲಾಜತುವಂ ಲೋಹವುಮಂ ಸಣ್ಣಿಸಿ ತಿನೆ ಬೇಱೆಪೇಱೆ ನಿರ್ವ್ಯಾಜದಿಂ ಪ್ರಮೇಹಂ ಕಿಡುಗುಂ (ಲೋಕೋಪ. ೯-೧೭೬); ಬಿಳಿಯೆಳ್ಳು ಸಣ್ಣಿಸಿದ ತೆಂಗಾಯಿ ತನಿವಾಲುಗಳ ಬೆರಸಿಯುದಯದೊಳು ಗಱಿಗಳಕ ಮಾಡಿ ತುಪ್ಪದೊಳು ಗಾರಿಗೆಯಡುವುದು (ಸೂಪಶಾ. ೧-೨೪). ೫. ನಾಶವಾಡು; ಇಲ್ಲವಾಗಿಸು : ಸರೋಜದ್ಯುಸಿರಿಯನೊಯ್ಯನೆ ಸಣ್ಣಿಸಿ . . . ತೀಡಿದುದು ಮೂಡಣಗಾಳಿ ಹಿಮಪ್ರವೇಶದೊಳ್ (ಉದ್ಭಟ. ೪-೨೨). ೬. ಕ್ಷೀಣಿಸು ; ಇಲ್ಲವಾಗು : ವೃಷ್ಟಿದಿನವು ಸಣ್ಣಿಸಿದುದು (ಸಿದ್ಧೇಪು. ೨೦-೬); ಎನ್ನ ಪಂಚೇಂದ್ರಿಯ ಸಪ್ತವ್ಯಸನಂಗಳೆಲ್ಲ ಸಣ್ಣಿಸಿ ಹೋದುವಯ್ಯ (ಅಪಿಂಚ. ೧೦೩-೩೪). ೭. (ಆಲಂ) ಪರೀಕ್ಷಿಸು ; ಒರೆಹಚ್ಚು : ಇಂತಹ ಕಾಲಿಕಸಂಗತಿಗಳನ್ನು ಸಾಣಿಸಿ, ಸಣ್ಣಿಸಿ ಸಾರ್ವಕಾಲಿಕವಾಗಿ ನಿಲ್ಲುವ ವಿಚಾರಗಳನ್ನಷ್ಟೇ ಸ್ವೀಕರಿಸತಕ್ಕದ್ದು (ಯಕ್ಷಪ್ರ. ೧೩೫). [ಸಣ್ಣ + - ಇಸು]

ಸಣ್ಣೀಚಲು (ನಾ). ಚಿಕ್ಕಜಾತಿಯ ಒಂದು ಬಗೆಯ ಈಚಲುಮರ ಮತ್ತು ಅದರ ಹಣ್ಣು : (ಮೈಡಿಗ. ೬೧-೧೩೦). [ಸಣ್ಣ + ಈಚಲು, (< ಈಂಚಿಲ್)]

ಸಣ್ಣೀರ (ನಾ). ನಯವಾದುದು; ನುಣುಪಾದುದು : ಸಣ್ಣೀರಮಪ್ಪ ಸಿರಿಗಂಧಮಂ ಬೆರಸಂಬ ಹಿಮಜಲಕೆ ಸಂಪಗೆಯ ಮುಗುಳ್ಗಳಂ ಕೂಡಂಬ (ಬಸ. ೭-೪೮). [< ಸಣ್ಣ]

ಸಣ್ಣು, ಸಣು (ಗು). ಕುಳ್ಳಾದ; ಗಿಡ್ಡವಾಗಿರುವ : ಸಣು ಸಣ್ಣು ಶಬ್ದೌ ಕುಬ್ಜ ವಾಮನಾವಯವವಿಶೇಷವಚನೌ (ಶಬ್ದಾನು. ೪೪೧ ವ್ಯಾಖ್ಯಾ). **ಸಣು** : ಮೇಲಿನ ಪ್ರಯೋಗವನ್ನು ನೋಡಿ. [ಸಣ್ಣ + - ಉ]

ಸಣ್ಣುಕ, ಸಣುಕ (ನಾ). ಕುಳ್ಳಾಗಿರುವವನು; ಕುಬ್ಜ : ಉಕ ಪ್ರತ್ಯಯಕ್ಕೆ-ಕಟ್ಟುಕಂ, ತಟ್ಟುಕಂ . . . ಸಣ್ಣುಕಂ, ಬೊಂದುಕಂ (ಶಮದ. ೨೦೩ ಪ್ರಯೋ); ಸಣುಕಂ, ಸಣ್ಣುಕಂ (ಶಬ್ದಾನು. ೪೪೧ ವ್ಯಾಖ್ಯಾ). **ಸಣುಕ** : ಸಣುಕಂ, ಸಣ್ಣುಕಂ (ಶಬ್ದಾನು. ೪೪೧ ವ್ಯಾಖ್ಯಾ).

[ಸಣ್ಣು + - ಕ]

ಸಣ್ಣೆ (ನಾ). ಅರೆಯುವ ಸಾಧನ ; ನುರಿಸುವ ಸಾಧನ : ಎಣ್ಣೆಯೊಳ್ಸಾಸಿಯುಂ ಸಣ್ಣೆಯೊಳ್ ಸಣ್ಣಿಸಿಯುಂ ಇಂತನೇಕಪ್ರಕಾರಂಗಳಿಂ ಪೀಡಿಸಿ (ಪಸಾರ. ೧೪೯).

[< ಸಣ್ಣ]

ಸಣ್ಣೇಲಕ್ಕಿ (ನಾ). ಚಿಕ್ಕಜಾತಿಯ ಏಲಕ್ಕಿ ; ಕಿರಿ ಏಲಕ್ಕಿ : "ಫಲಾತಿಬಹುಳ - ಸಣ್ಣೇಲಕ್ಕಿ" (ಓಷಧಿ. ೧೦೪). [ಸಣ್ಣ + ಏಲಕ್ಕಿ]

ಸಣ್ಣೊಬ್ಬೆ (ನಾ). (?) : ಉಮೇಶನ ಸಾಚತನದಿಂದ ಮಲ್ಲಾರಿಭಟ್ಟರಿಗೆ ಸಾಮ್ರಾಜ್ಯ ಬಿದ್ದುಹೋಗಿರದಿದ್ದರೂ ಕಾಲ್ತೊಡಕಾದಂತಾಗಿ ಸಣ್ಣೊಬ್ಬೆಯ ಮೇಲೆ ತೊದರೆಯಾಗ ಹತ್ತಿತು (ದಾಕಾಮ. ೩೭). [?]

ಸತ್ (ನಾ). ಯಾವಾಗಲೂ ಇರುವುದು ; ಶಾಶ್ವತವಾದುದು : "ಸತಮೆನೆ ಶಾಶ್ವತಕ್ಕೆ ಪಸರಕ್ಕುಂ" (ಕಬ್ಬಿಕ್ಕೆ. ೫೬) ; ಭಾವಿಸೆ ಬೇಟಮೇಂ ಸತಮೆ (ಲೀಲಾವ. ೧೪ ೩೯). [< ಸಂ. ಶಾಶ್ವತ. / ತಮಿ. ಚತ ; ತೆಲು. ಸತ]

ಸತ್ (ನಾ). ಒಂದು ಸಂಖ್ಯೆ ; ನೂರು : ಸಂವತ್ಸರಸತಂಗಳೆಣ್ಬುನೂಱು ಇಪ್ಪತ್ತಅಯ್ದನೆಯ ರುಧಿರೋತ್ಗಾರಿಯಂಬ ಸಂಬತ್ಸರಂ ಪ್ರವರ್ತ್ತಿಸೆ (ಮೈಡಿ. ೧೯೨೯. ೪೬-೧; 903) ; ಸ್ಸಸ್ತಿ ಸ(ಶ)ಕನ್ರಿಪ ಕಾಲಾತೀತ ಸಂವತ್ಸರಸ(ಶ)ತಂಗಳೆಣ್ಬುನೂಱು ಇಪ್ಪತ್ತೈನ್ನಯನೆಯ ಪ್ರಭವಮೆಂಬ ವರಿಷಂ ಪ್ರವರ್ತ್ತಿಸೆ (ಎಇ. XXVI. ೭೧-೨ ; 906). 'ಸತಕ್ರತು' ಪರಾ. [< ಸಂ. ಶತ. /ಪ್ರಾ. ಸತ. / ತಮಿ. ಚತ]

ಸತ್ಕ (ನಾ). ತನ್ನ ಅಧಿಕಾರಕ್ಕೆ ಸೇರಿದ ಜಾಗ, — ಸ್ಥಳ : ಬಮ್ಮದೇವಯ್ಯನ ಮಗ ಕಾಳಿದಾಸಂ ಸನ್ಯಾದೀವಿಗೆಗೆ ತನ್ನ ಸತದಲು ಸೋವಿಮಯ್ಯ ವಸುಗಲಯ್ದು ಸುತ್ತರ್ಕೆಯೊಳಗೆ (ಪಾಇ. IX - i. ೧೦೩-೪೬ ; 1050). [< ಸಂ. ಸ್ವತಸ್]

ಸತ್, ಸೊಧೆ (ನಾ). ೧. ಕಂದಿ ಹೋಗುವುದು; ನಲುಗುವುದು. **ಸೊಧೆ** : ೨. ಗಾಯ ; ಪೆಟ್ಟು : ಅಲಸದಿರೊಯ್ಯನೆ ಪೊಯ್ವುದು ತಲೆಯೊಳ್ ಸೂಧ [ಪಾಠಾಂ. ಶತ]ಯಂ ಬಲಿಕ್ಕೆ ನೆತ್ತರ್ ಬರಲಾ ವಿಲಚಿತ್ರನಾಗದಂತಾ ವಿಲಸದ್ಯೋಗಮನೆ ಪೂಸಲಾತಂ ಬಾಲ್ಗುಂ (ಏಮದ. ೮-೧೯). 'ಸೊಧವೊಯ್' ಪರಾ.

ಸತವಾಗು = ನಲುಗು ; ಕಂದಿಹೋಗು : ಸವಿ ಸಮನಾಗ ಸುತ್ತಿಲಿದ ತೋಳ್ ಸತವಾದರ್ದಯಿಂ [ಪಾಠಾಂ. ಸರವಾರ್ದರೆಯಂ]ಪಲಂಪನಪ್ಪುವ ಬಗ . . . ಕಾಮಸೌಖ್ಯದಿಂ ಸವೆದವೊಲಿರ್ಪ್ಪವಲ್ಲಿ ಗಗನೇಚರದಂಪತಿಗಳ್ ರತಾಂತದೊಳ್ (ಲೀಲಾವ. ೯-೪೬) ; ಸತವಾದ ದೇಸೆ ಕೆಂಪಬಿದರಂ ಪಟುಂಕಿದ ತನುಚ್ಛವಿ . . . ತಳಿರ ಪಾಸುಗಳೊತ್ತ ಪೊದಲ್ದ ಬಾಸುಬಂದುಟುಗಿಸೆ ಚಿತ್ರಮಂ ವಿರಹ ವಲ್ಲಭನೊಳ್ ನೆರವಿರ್ದ ನಲ್ಲಳಂ (ಲೀಲಾವ. ೧೨-೪೮). [< ಸಂ. ಕ್ಷತ. /ತಮಿ. ಚತ್ತ = ಜಜ್ಜುಗಾಯಮಾಡು; ಮಲ. ಚತ, ಚತಯು = ಗಾಯಮಾಡು]

ಸತಕ್ರತು (ನಾ). ನೂರುಯಾಗ, — ಯಜ್ಞ : ಇನ್ತೀ ಧಮ್ಮಮಂ ತಪ್ಪದೆ ಪ್ರತಿಪಾಳಿಸಿದವರ್ಗ್ಗೆ ಕುರುಕ್ಷೇತ್ರದೊಳ್ಸತಕ್ರತುವಂ ಮಾಡಿದ ಫಲವಕ್ಕುಂ (ಕಾಇ. ೪೭-೬ - ೧೫: 1151). [< ಸಂ. ಶತಕ್ರತು]

ಸತತ (ಗು). ೧. ನಿರಂತರವಾದ ; ಅಡೆತಡೆಯಿಲ್ಲದ : ಸತತಗಣನಾಥ ಸಿದ್ಧಿಯನೀವ ಕಾರ್ಯದಲಿ ಮತಿ ಪ್ರೇರಿಸುವಳು ಪಾರ್ವತಿದೇವಿಯು (ಪುರಂದ. ೧-೪-೧). (ನಾ). ೨. ಸ್ಥಿರವಾದುದು : "ಸತತ[ಪಾಠಾಂ. ಸತ]ಮೆಂದು ಸ್ಥಿರಂ" (ಕಶಾ. ೨೪-೫೧೦). [ಸಂ.]

ಸತತಂ (ಅ). ಯಾವಾಗಲೂ ; ನಿರಂತರವಾಗಿ : ಸತತಂ ಧಂಡೋವಿದಿತ ಪ್ರತೀತಶಾಸ್ತ್ರೋಕ್ತಮಾರ್ಗದಿಂದಱೆವುದದಂ (ಕವಿಕಾ. ೧-೭೧) ; ನುತಶಬ್ದಾಲಂಕಾರದೊಳತಿ ಶಯಮದು ಕನ್ನಡಕ್ಕೆ ಸತತಂ ಪ್ರಾಸಂ (ಧಂಡೋಯು. ೧-೪೬ ಅಧಿಕಪದ್ಯ ೫). [ಸಂ.]

ಸತತಕ (ನಾ). ಒಂದು ಬಗೆಯ ಜ್ವರ ; ಏಳು, ಹತ್ತು ಅಥವಾ ಹನ್ನೆರಡು ದಿನಗಳ ಮಿತಿಯಲ್ಲಿ ಬರುವ ಜ್ವರ : ಏಳುದಿನ, ಹತ್ತುದಿನ, ಹನ್ನೆರಡುದಿನ ಒಂದೇ ಮಿತಿಯಾಗಿ ಬಂದು ಜ್ವರ ಕಾಣಿಸಿ, ತಿರುಗಿ ಏಳುದಿನ, ಹನ್ನೆರಡುದಿನಕ್ಕೊಮ್ಮೆ ತಪ್ಪದೇ ಬರುವ ಜ್ವರವನ್ನೇ ಸತತಕವೆಂದೂ . . . ಹೇಳಲ್ಪಟ್ಟಿದೆ (ಸಪ್ಪ. ೯೮). [ಸಂ.]

ಸತತಗತಿ (ನಾ). ಯಾವಾಗಲೂ ಚಲನೆಯುಳ್ಳುದು ; ಗಾಳಿ ; ವಾಯು : ಸಿಂಧುಪವನವೇದಿಕೆಯಂ ಸತತಗತಿವೇಗದಿಂದೂರ್ಜಿತಭುಜಬಲನೆಯ್ದಿ ನಗದ ವನವೇದಿಕೆಯಂ (ಆದಿಪು. ೧೩-೩೫). [ಸಂ.]

ಸತತಗತಿತನೂಜ (ನಾ). ವಾಯುವಿನ ಮಗ ; ಹನುಮಂತ : ಯತಿಪತಿಗಳ ಪಾದಾಂಭೋಜಮಂ ಭಕ್ತಿಯಿಂದಂ ಸತತಗತಿತನೂಜಂ ಪೂಜಿಸುತ್ತಿರ್ದಂ (ಪಂರಾಮಾ. ೧೧-೬೦). [ಸಂ.]

ಸತನು (ನಾ). ಶರೀರದಿಂದ ಕೂಡಿರುವವನು ; ಶರೀರಸಹಿತನಾದವನು : ಆತನು ಸತನುವಾದಂ ಕಾಮಸಾಮ್ರಾಜ್ಯಲಕ್ಷ್ಮೀಲತೆಯ ಲಲಿತಲಾಸ್ಯಪ್ರೌಢಿ ಬೆಳ್ದಾದುದೀಗಳ್ (ಮಲ್ಲಿಸ. ೭-೪೬). [ಸಂ.]

ಸತರಂಜಿ (ನಾ). (?) : ಅಲ್ಲಲ್ಲಿ ಬೀಡನು ಬಿಡುತ ಕಪ್ಪಗಳನುಲ್ಲಸದಿ ತಾ ಕೊಳುತ ಮನ್ನಣೆಯಲಿ ಮನ್ನಿಸುತ್ತೆದಿ ಕಟಕವ ನಿಲ್ಲಿಸದ ಸತರಂಜಿ ಘನತರ ಹೊಳೆಯು ತಡಿಯಲ್ಲಿ (ನಾಗಪ. ೧೫-೩೮); ಸಿಂಧುಭೂಪತಿ ಸತರಂಜಿಯೊಳೆಯೊತ್ತಿಗೈದಿದ ಚತುರಂಗಬಲಸಹಿತ ಸೇನಾಪತಿಯ ನೀ ಕಳುಹು (ನಾಗಪ. ೧೫-೪೦). [?]

ಸತಾಯಿಸು, ಸತಾಯ್ಸು (ಕ್ರಿ). ಹಿಂಸಿಸು ; ಪೀಡಿಸು : ಅವಳನ್ನು ಚೆನ್ನಾಗಿ ಸತಾಯಿಸಿ ಅವಳಿಂದ ಕೆಲಸ ತೆಗೆಯುಸಿಕೊಂಡು ಬಿಡುತ್ತೇನೆ (ಸುಂದರ. ೫೦) ; ಸತಾಯಿಸಿದವನನ್ನೇ ಮತ್ತೆ ಸತಾಯಿಸುವುದು ವಿಧಿ (ಹೂಸಕ್ಕ. ೨೭). **ಸತಾಯ್ಸು** : ನೀವೋ ಸತಾಯ್ಸಿ ಸತಾಯ್ಸಿ ಅವರ್ನೂ ಎದರ್ಹಾಕೊಂಡ್ರಿ (ರಾಜಾರ. ೨).

[ಸತ್ಯಾ (IP <— ಹಿಂ. ಸತಾನಾ, ಸತಾವನಾ; ಮರಾ. ಸತಾವಣೇ) + - ಇಸು./ ತೆಲು. ಸತಾಯಿಂಚು]

ಸತಾಯ್ಸು 'ಸತಾಯಿಸು' ನೋ.

ಸತಿ (ನಾ). ೧. ಹೆಂಗಸು ; ಸ್ತ್ರೀ : ಸತಿಗೆ ಪಾತಿವ್ರತ್ಯವೇ ಭೂಷಣಂ (ಸೋಮೇಶ. ೫); ತಾಯಿ ಜಗದಾಂಬೆಯು . . . ಸತಿಗಳಿಗೆ ಸತೀತ್ವಸ್ವರೂಪವಾಗಿರುವಳು ; ಸತಿಯರಲ್ಲಿ ಪ್ರಧಾನೆ (ಕಪಾಕುಂ. ೩೨). ೨. ಪತಿವ್ರತೆ ; ಸಾಧ್ವಿ : "ಕುಲಪಾಲಿಕಾ . . . ಸತೀ. ಸಾಧ್ವೀ - ಈ ೬ ಪತಿವ್ರತೆ" (ಹಲಾಯು. ೮೧-೩೪೧) ; ಸತಿಯರೀ ಕೃತಿಯನಾಲಿಸಿದೊಡಂದಂದಿಗೆ ಪತಿಭಕ್ತಿ ಬಣ್ಣವೇಱುವುದು (ಹದಿಬ. ೧-೫೨). ೩. ಹೆಂಡತಿ; ಪತ್ನಿ: ಹಸಿದು ಬಂದ ಗಂಡನಿಗೆ ಊಟಾಲಿಕ್ಕದೆ ಬಡವಾದನೆಂದು ಮಱುಗುವ ಸತಿಯ ಸ್ನೇಹದಂತೆ (ಬಸವ. ೨೧೮); ಮೆಚ್ಚಿತಯ್ ನಿನ್ನೀ ವ್ರತಕೆ ಋತಂ. ಪಸುಗೆ ನೀಡಂಶಂಗಳಂ ಸತಿಯರ್ಗೆ (ಶ್ರೀರಾಮಾ. ೧೪-೩೫೯). ೪. ಗಂಡ ಸತ್ತಾಗ ಅವನ ಶವದೊಡನೆ ಸಹಗಮನ ಮಾಡುವವಳು. ೫. ಸೂಳೆ ; ವೇಶ್ಯೆ : ಚೆಂದುಟಿಗೆ ಪಲ್ಮೊನೆ ನಾಂಟದ ಮಾಳ್ಕೆಯಿಂದ ಮೆಲ್ಲಗೆ ಮಿಗೆ ಚುಂಬಿಸೆಂದು ಸತಿ ಶಿಕ್ಷಿಸಿದಳ್ಪೊಸಪಾಣ್ಣನೊರ್ವನಂ (ರಾಜಶೇ. ೧೧-೩೧).

ಸತಿಪತಿಭಾವ = ಗಂಡ ಹೆಂಡತಿಯರಾಗಿರುವಿಕೆ : ಹೀಗೆ ಸಾಧಕನು ದ್ವೈತಮಾರ್ಗದಲ್ಲಿ ಸಾಧನೆಯನ್ನು ಆರಂಭಿಸಿ, ಅದರಿಂದ ಮುಂದೆ ವಿಶಿಷ್ಟಾದ್ವೈತಮಾರ್ಗದ ಸತಿಪತಿಭಾವದಲಿ ಪ್ರಸರಿಸುವನು (ಶಕ್ತಿವಿ. ೧೦೧). **ಸತಿಯಾಗು = ೧. ಹೆಂಡತಿಯಾಗು; ಪತ್ನಿಯಾಗು** : ಸುರರಾಯನಿಗೆ ಸತಿಯಾಗು ಮರ್ತ್ಯದ ರಾಯರಸ್ತ್ರಿರ ನರರ ನೆಚ್ಚಿದಿರಂದರಾ ಸತಿಗೆ (ನಳಚ. ೩-೩೦). ೨. ಗಂಡ ಸತ್ತಾಗ ಅವನ ಶವದೊಂದಿಗೆ ಸಹಗಮನಮಾಡು : ನಾನಂತೂ ಸತಿಯಾಗುವುದು ಖಂಡಿತ . . . ಎಂದು ಅತ್ತಿಮಬ್ಬೆ ಪಟ್ಟುಹಿಡಿದಳು (ದಾನಚಿಂ. ೧೫೭). **ಸತಿಹೋಗು = ಸತಿಯಾಗು ೨**: ಗಂಡನೊಡನೆ ಅವರ ಹೆಂಡಂದಿರು ಸತಿಹೋಗುವ ರೂಢಿ ಇದ್ದವು (ಕರ್ನಾಸಂ. ೨೨೬).

[ಸಂ. ಸತೀ]

ಸತಿಆಯ (ನಾ). ಒಂದು ಬಗೆಯ ಆದಾಯ (?): ಕರ್ತರಾದ ಪ್ರಸನ್ನಪೂಡೇರು ತಳವಾರಕೆ ಹಳಿನಾಯಕಿ ಕೊಟ ಸತಿಆಯ ಉಮ್ಮಳಿಹೊಲ (ಎಕ. XI, ದಾವಣ. ೬೨-೧೬ ; 1692 ?). [ಸತಿ + ಆಯ್]

ಸತಿಗೂಡು (ಕ್ರಿ). ಹೆಂಡತಿಯೊಂದಿಗೆ ಇರು; ಪತ್ನೀಸಹಿತನಾಗಿರು: ತೇಜಮನ್ನಣಯಿಂದ ಸತಿಗೂಡಿ ಕುಳಿತ ಸರೋಜಾಕ್ಷ ಮಣಿಮಂಚದೆಡೆಯ (ಮೋಹತ. ೪-೨೯); ಸತಿಗೂಡಿ ಈಸುದಿನ ಸನ್ನುತದಿಂದೀ ವೃಕ್ಷದಲ್ಲಿ ಸುಖಮಿರ್ದು (ನನ್ನಚಾ. ೬-೨೧೫). [ಸತಿ + ಕೂಡು]

ಸತಿಗೆ 'ಸತ್ತಿಗೆ' ನೋ.

ಸತಿತನ (ನಾ). ಹದಿಬದೆತನ; ಪಾತಿವ್ರತ್ಯ: ದಶಶಿರಂ ಪೂತ್ತುಯ್ದುದೊರ್ಬನ ಸತಿಯನಲ್ತು ; ಸತಿತನವನುಯ್ದಿಹನ್! (ಶ್ರೀರಾಮಾ. ೫೫೧-೨೮೪). [ಸತಿ + - ತನ]

ಸತಿಸಪ್ತಮಿ (ನಾ). [ವ್ಯಾಕ] ಸಂಸ್ಕೃತದಲ್ಲಿ ಭಿನ್ನಕರ್ತೃಕಗಳಾದ ಎರಡು ಕ್ರಿಯೆಗಳು ಒಂದನ್ನೊಂದು ಅವಲಂಬಿಸಿ ನಡೆಯುವಾಗ ಮೊದಲನೆಯ ಕರ್ತೃಪದವನ್ನು, ಕ್ರಿಯಾವಾಚಕವಾದ ಕೃದಂತವನ್ನು ಸಪ್ತಮೀ ವಿಭಕ್ತಿಯಲ್ಲಿಟ್ಟು ಮಾಡುವ ಪ್ರಯೋಗ ; ☞ ಕನ್ನಡದಲ್ಲಿ ಈ ಬಗೆಯ ಪ್ರಯೋಗವಿಲ್ಲ. ಎರಡು ಕರ್ತೃ, ಎರಡು ಕ್ರಿಯೆಗಳಿರುವ ಸದೃಶವಾಕ್ಯರಚನೆಯನ್ನು ಸಾಂಪ್ರದಾಯಿಕವಾಗಿ ಹೀಗೆ ಕರೆಯುವುದು ರೂಢಿಯಿದೆ : ನೆಗೞ್ಂ ಸಂಪ್ರತಿಗಂ ಭಾವಿಗಮಂನೆಗಮಂನಮಿನೆಗಮಿನಮಂಬಿವು ಸೂರಿಗಳೆಂದುದುಮಲೊಡಂಗಳ್ ನೆಗೞ್ಂ ಭೂತಾರ್ಥದಲ್ಲಿ ಸತಿಸಪ್ತಮಿಯೊಳ್ (ಕವಿಮ. ೨೪೭). [ಸಂ. ಸತಿಸಪ್ತಮೀ]

ಸತೀತಸ್ಕರ (ನಾ). ಪತಿವ್ರತೆಯನ್ನು ಅಪಹರಿಸಿದವನು : ಪೊಕ್ಕಸಣುವಂ ಸತೀತಸ್ಕರನ ಲೋಕಮಂ . . . ಧರ್ಮಕಾರ್ಮುಕಮೆಚ್ಚ ಮಾರ್ಗಣದ ವೋಲ್ (ಶ್ರೀರಾಮಾ. ೪೭೫-೫೨೮). [ಸಂ.]

ಸತೀತ್ವ (ನಾ). = ಸತಿತನ : ಅವಳ ಸತೀತ್ವವು ತನ್ನ ಸ್ವಾಮಿಗೆ ಮಾತ್ರ (ಸುಗುಂ. ೯೧-೩) ; ತಾಯಿ ಜಗದಾಂಬೆಯು ಜಗತ್ತಿಗೆ ಮಾತೆ, ಅವಳು ಸತಿಗಳಿಗೆ ಸತೀತ್ವಸ್ವರೂಪವಾಗಿರುವಳು ; ಸತಿಯರಲ್ಲಿ ಪ್ರಧಾನೆ (ಕಪಾಕುಂ. ೩೨). [ಸಂ.]

ಸತೀದೇವಿ (ನಾ). ದಾಕ್ಷಾಯಣಿ ; ಪಾರ್ವತಿಯ (ಪೂರ್ವಜನ್ಮದ) ಹೆಸರು: "ದಾಕ್ಷಾಯಣೀ - ಸತೀದೇವಿ" (ಕಾಶಕ್ಯ. ೧೧೭); ಜಗದೀಶ್ವರನ ರಾಣಿಯಾದ ಸತೀದೇವಿಯೀ ವೃತ್ತಾಂತಮನಱಿದು ದಕ್ಷನ ದುರ್ಬುದ್ಧಿಯಂ ನಿಲಿಸಿ ಬರ್ಪೆನೆಂದೀಶ್ವರಂಗೆ ಬಿನ್ನವಿಸಲ್ (ವೀರವಿ. ೭-೭೮ ವ). [ಸಂ. ಸತೀದೇವೀ]

ಸತೀಧರ್ಮ (ನಾ). ಪತಿವ್ರತೆಯ ಧರ್ಮ, — ಕರ್ತವ್ಯ : ಸತೀಧರ್ಮ ವಿಷಯಕವಾದ ಹೊನ್ನಮ್ಮನ ವಿಚಾರಗಳೆಲ್ಲ ಸಾಂಪ್ರದಾಯಿಕವಾಗಿಯೇ ಇವೆ! (ಕರ್ನಾಕ. ೧೯೪). [ಸಂ.]

ಸತೀನ (ನಾ). ಒಂದು ಬಗೆಯ ದ್ವಿದಳಧಾನ್ಯ ; ಬಟ್ಟಗಡಲೆ : "ಬಟಾಣಿಗಡಲೆ, ಸತೀನ, ಪಟಾಣಿ" (ಸಸ್ಯನಿ. ೧೦೭). [ಸಂ.]

ಸತೀನಕ (ನಾ). = ಸತೀನ: "ಕಲಾಯಃ, ಸತೀನ[ಪಾಠಾಂ. ಲ]ಕಃ, ಹರೇಣುಃ, ಖಂಡಿಕಃ - ೪ ಬಟ್ಟಗಡಲೆಯ ಹೆಸರುಗಳು, ನೆಲಕಡಲೆ" (ಸಿದ್ಧಾಂತಿ. ೨೭೦). [ಸಂ.]

ಸತೀರ್ಥ (ನಾ). ಒಬ್ಬ ಗುರುವಿನ ಬಳಿಯಲ್ಲಿಯೇ (ಧಾರ್ಮಿಕ) ವಿದ್ಯೆಯನ್ನು ಕಲಿತವನು ; ಸಹಾಧ್ಯಾಯಿ : ಇದೆಲ್ಲವನ್ನು ಕಂಡು ಅವನ ಸತೀರ್ಥರು ಆಶ್ಚರ್ಯಪಡುವರು (ಭೀಷ್ಮಚ. ೫೭). [ಸಂ.]

ಸತೀರ್ಥ್ಯ (ನಾ). = ಸತೀರ್ಥ : ಅವರ ಪರೋಕ್ಷದಲ್ಲಿ ಅವರ ಹೆಸರನ್ನು ಎತ್ತಿಹಿಡಿಯಲು, ಮೈಸೂರಿನ ನಮ್ಮ ಸತೀರ್ಥ್ಯವೃಂದಕ್ಕೆ ಚೈತನ್ಯ ಸಾಲದೆ ಹೋಯಿತು (ಸಂಜರು. ೬೭). [ಸಂ.]

ಸತೀಲ (ನಾ). = ಸತೀನ. [ಸಂ.]

ಸತೀಲಕ (ನಾ). = ಸತೀನ. [ಸಂ.]

ಸತ್ತು$_1$, ಸತುವು$_1$, ಸತ್ತ್ವ$_2$, ಸತ್ವ$_1$ (ನಾ). ಗಟ್ಟಿಯಾಗಿರುವ ಒಂದು ಬಗೆಯ ಲೋಹ : ಸತುವನ್ನು ಕಾಸಿದಾಗ ಬರುವ ಬಿಳಿಯ ಹೊಗೆ, ಹವೆಯಲ್ಲಿ ಇದನ್ನು (ಸತುವನ್ನು) ಕಾಸಿದರೆ, ಇದಕ್ಕೆ ಬೆಂಕಿ ಹತ್ತಿ ಬಿಳಿಜ್ವಾಲೆಯುಂಟಾಗುವುದು. ಆಗ ಬಿಳಿಹೊಗೆ (ಸತುವಿನ ಆಮ್ಲಜವಿಕಾರ) ಹೊರಡುವದು. ಅದರಿಂದುಂಟಾದ ಪದಾರ್ಥಕ್ಕೆ (ಖರ್ಪರಪುಷ್ಪ) ಸತುವಿನ ಹೂವೆಂದನ್ನುವರು (ಮುಂಬಯಿ. ೬-೨೧). **ಸತುವು$_1$** : ತಾಮ್ರದೊಡನೆ ಸತುವು ಕೂಡಿಸಿ ಹಿತ್ತಾಳೆಯೆಂಬ ಅರಿಸಿನಬಣ್ಣದ ಮಿಶ್ರಧಾತುವನ್ನು ಮಾಡುತ್ತಾರೆ (ಮುಂಬಯಿ. ೪-೧೩೭); ಭಾರತದೇಶಕ್ಕೆ ಆಮದಾಗುತ್ತಿದ್ದ ಮುಖ್ಯಪದಾರ್ಥಗಳೆಂದರೆ ಹವಳ . . . ಸತುವು, ಕಲಶಪಾತ್ರೆ ಮತ್ತು ಮದ್ಯ (ದಧಾಇ. ೫೫). **ಸತ್ತ್ವ$_2$** : ತಾಮ್ರ, ಸತ್ತು, ಪಾದರಸ ಪಶ್ಚಿಮಕಡೆ ಪರ್ವತಗಳಲ್ಲಿಯೂ . . . ದೊರಯುತ್ತದೆ (ಭೂಗೋಳ. ೧೧೮); ಇಮಾರತಿಗೆ ಹಾಕುವ ಸತ್ತುವಿನ ತಗಡುಗಳು (ಮುಂಬಪ್ರಾ. ೧೧). **ಸತ್ವ$_1$** : ಸತ್ವ ಕರಗಿಸಿ ಮುತ್ತುಗದ ಮೇಣ ಹಾಕಿ ಬೆರಸಿ ಬೆಣ್ಣೆ ಹಾಕಲು ಭಸ್ಮವಾಗುವುದು (ವಿಪ್ರವಿ. ೫೫) ; ಹಿತ್ತಾಳೆ, ಸತ್ವ, ತವರು, ಸೀಸ ಮತ್ತು ಕಂಚು (ಮುಂಬಪ್ರಾ. ೩೬ ಶ್ರಾದ್ಧವಿಧಿ) 'ಸತ್ವಭಸ್ಮ' ಪರಾ.

[ದೇ. ॥ ತಮಿ. ಚತ್ತು ; ತೆಲು. ಸತ್ತು]

ಸತ್ತು$_2$, ಸತುವು$_2$ (ನಾ). ಕಸುವು ; ಬಲ; ಶಕ್ತಿ: ತಗರ ಹಿಂಗಾಲ ಸತು ಲೇಸು ದೊರಗಳಿಗೆ ಬಿಗಿಬಂದು ಲೇಸು (ಸರ್ವಜ್ಞ. ೭೨೨). **ಸತುವು$_2$** : ಇಸು ಪ್ರತ್ಯಯವನ್ನು ಸೇರಿಸಿ ಕನ್ನಡ ಕ್ರಿಯಾಪದವನ್ನು ಸಂಘಟಿಸಿಕೊಳ್ಳುವುದಾದರೆ ಭಾಷೆಗೆ ಬಿಗುವೂ ಸತುವೂ ಒದಗುತ್ತದೆಂದು ತೋರುತ್ತದೆ (ಸುವರ್ಣ. ೨೫೩).

[< ಸಂ. ಸತ್ತ್ವ. / ತುಳು. ಸತು, ಸತುವ ; ತೆಲು. ಸತ್ತುವ]

ಸತುಕರಿಸು (ಕ್ರಿ). ಉಪಚರಿಸು ; ಆದರಿಸು : ಜಂಗಮ ಹಸಿದು ಬಿಜಯಂಗೈದೊಡಿತ್ತಣ ದೆಸೆಯ ನೋಡುವುದಿಲ್ಲ ಸತುಕರಿಸುವುದು ಮುನ್ನಿಲ್ಲ (ಪ್ರಭುಲಿಂ. ೨೩-೯) ; ಕ್ಷಿತಿಪನಾ ದೂರ್ವಾಸಮುನಿಯನು ಸತುಕರಿಸಿ ಸಂತವಿಸಿ ಕಳುಹಿದನು (ನಿಭಾಗ. ೫೯-೫ ಸೂಚನೆ).

[< ಸತ್ಕರಿಸು]

ಸತುಗುಂದು (ಕ್ರಿ). ಶಕ್ತಿಹೀನವಾಗು ; ಬಲಗುಂದು ; ಸತ್ತ್ವಗುಂದು : ಪೂಡವಿ ನೆಱೆಯದಾ ಪಡೆಗೆ ಫಣೀಶನ ಪೆಡೆ ಸತುಗುಂದಿತು (ಜಯಕಾ. ೯-೫) ; ಲಾಲಿಪ ಪದ್ಮ ಕೈರವನಾಳ ಸತುಗುಂದಿ ಮಾಲಿದುವೆಸಳ್ಗಳು ಬಾಡಿ (ಮೋಹತ. ೯-೪೩).

[ಸತ್ತು$_2$ + ಕುಂದು$_1$]

ಸತುಗೆಡು (ಕ್ರಿ). = ಸತುಗುಂದು : ಅತುಳಬಲಾಢ್ಯ ಕೃಷ್ಣನ ಕೂಡೆ ಕಂದರ್ಪಜಿತು ದೇವ ಬಲಗೂಡಿ ಕಾದಿ ಸತುಗೆಟ್ಟು ತೆಱದಿ ಕೌಳಿಕವಾಂತು ತನ್ನಯ ಋತುಪೂರ್ಣವನವ ಸಾಱೆದನು (ಮೋಹತ. ೪೦-೩). [ಸತ್ತು$_2$ + ಕೆಡು$_1$]

ಸತುವು$_1$ 'ಸತ್ತು$_1$' ನೋ.

ಸತುವು$_2$ 'ಸತ್ತು$_2$' ನೋ.

ಸತೃಣಾಭ್ಯವಹಾರಿ (ನಾ). ೧. ಹುಲ್ಲು ತಿನ್ನುವವನು. ೨. (ಆಲಂ) ಪಶು ಸಮಾನನಾದವನು : ಬಗೆಯದೆ ಸತೃಣಾಭ್ಯವಹಾರಿಗಳುಸಿರ್ವರ್ಗದ್ಯಕಾವ್ಯದೊಳ್ ನಿರ್ಬಂಧಂ ಪುಗದೆಂದರೋಚಿಗಳದಂ ತೆಗಱೆಂದಾ ಗದ್ಯಪದ್ಯಕಾವ್ಯದೊಳಿಕ್ಕರ್ (ಶಮದ. ೬೦). [ಸಂ. ಸತೃಣಾಭ್ಯವಹಾರಿನ್]

ಸತೃಷ್ಣ (ಗು). ದಾಹದಿಂದ ಕೂಡಿದ ; ತೃಷ್ಣೆಯಿಂದಿರುವ : ಆದರೆ ಮುದುಕನ ಸತೃಷ್ಣದೃಷ್ಟಿಯಿಂದ ಅದು ತಪ್ಪಿಸಿಕೊಳ್ಳಲಿಲ್ಲ (ಅಗಿ. ೬೯). [ಸಂ.]

ಸತೇಜ (ಗು). ೧. ಕಾಂತಿಯಿಂದ ಕೂಡಿದ. (ನಾ). ೨. ಕಾಂತಿಯಿಂದ ಕೂಡಿದುದು : ದಯಾವತಿಯ ಕಣ್ಣುಗಳು ಸತೇಜವಾದುವು (ಜಮೀನ್ದಾ. ೧೫೮). ೩. ಕಾಂತಿಯಿಂದ ಕೂಡಿರುವವನು; ತೇಜಸ್ವಿ : ಉದಯದಿನನಂದದಲಿ ನೃಪರಿರ್ದುದು ಸತೇಜವ್ರಜರು ಗೋವರ ಸದಗನಿಲ್ಲಿಗೆ ಶಿಷ್ಟನೇ ಸಹದೇವ ಹೇಳೆಂದ (ಕುವ್ಯಾಸ. ೮-೧೫). [ಸಂ. ಸತೇಜಸ್]

ಸತ್ಕರಣೆ (ನಾ). ಉಪಚಾರ ; ಆದರಣೆ : ಮಿಗೆ ಸತ್ಕರಣೆಯಿಂದುಪಚರಿಸುತಿರ್ದನು ತನ್ನ ಭವನದಲಿ (ಆಸಂಂಾ. ೧-೯-೨೨). [ಸಂ. ಸತ್ಕರಣಾ]

ಸತ್ಕರಿಸು (ಕ್ರಿ). ೧. ಉಪಚರಿಸು ; ಸತ್ಕಾರ ಮಾಡು : ಅರಸನು . . . ಸತ್ಕರಿಸಿದನು ಪುರಜನವ (ತೊರಾ. ೧-೭-೬೧) ; ಚಿತ್ರಹರುಷದೊಳವರ್ ನಡೆತರಲ್ಕಾಗ ಕಾಣುತ್ತ ಗಿರಿರಾಜನರ್ಘ್ಯಾಸನಾದಿಗಳನೊಲ್ದಿತ್ತು ಎವಿಧೋಪಚಾರಗಳಿಂ ಸತ್ಕರಿಸೆ (ಚಿಬಪು. ೩೬-೨೦). ೨. ಶುಶ್ರೂಷೆಮಾಡು ; ಆರೈಕೆಮಾಡು : ತಣ್ಗದಿರ್ಗಲ್ ಕನ್ನಯ್ಯಿಲ ನವನಾಳಂ ಕುಳಿರ್ವಣ್ಣಿನ ಬಾವನ್ನದಿನಾಳಿಯರೆಳಸಿ ಕರಂ ಸತ್ಕರಿಸಲು ತತ್ಕೋಮಲೆಯ ವಿರಹವೇದನೆಯಾಜ್ಯಂಬೊಯ್ಯಗ್ನಿಯ ತೆಱನಾಯ್ತು (ಜಯಕಾ. ೪-೪೦). ೩. ಗೌರವಿಸು; ಪೂಜ್ಯತೆಯಿಂದ ಕಾಣು : ಕೌರವೇಂದ್ರನ ಬರವಿದೇನೆಂದಿದಿರು ಬಂದನು ದ್ರೋಣನಿದಿರಾಗಿ ಧರಣಿಪನ ಸತ್ಕರಿಸಿ ನೆಲೆಯುಪ್ಪರಿಗಗೊಯ್ದನು (ಕುವ್ಯಾದ್ರೋ. ೮-೫೬); ಪಾವಕಂ . . . ನೀಲಧ್ವಜನ ಚಾವಡಿಗೆ ಬರಲಾತನಿದಿರೆದ್ದು ಸತ್ಕರಿಸಿ ಕೈಮುಗಿದು (ಚೈಮಿಭಾ. ೯-೬). [ಸತ್ಕರಣೆ + - ಇಸು$_3$]

ಸತ್ಕರ್ಮ (ನಾ). ಒಳ್ಳೆಯ ಕೆಲಸ ; ಸತ್ಕಾರ್ಯ : ನಿರತಸತ್ಕರ್ಮವು ನಿಜಕಾಂತಿಯು (ಪುರಂದ. ೧-೩೪-೨) ; ಮಾಡಿ ಸತ್ಕರ್ಮಗಳ ಕ್ರಮದಿಂ ರೂಢಿಯೊಳಗಾಚರಿಸುತಲ್ಲಿಂ ಬೇಡಿ ಗುರುಕರುಣವ (ಗಗಾಕಾ. ೨೧-೩). [ಸಂ. ಸತ್ಕರ್ಮನ್]

ಸತ್ಕರ್ಮಿ (ನಾ). ಒಳ್ಳೆಯ ಕೆಲಸವನ್ನು ಮಾಡುವವನು ; ಸತ್ಕಾರ್ಯವನ್ನು ಮಾಡುವವನು : ಸಂಸರದಿ ಮುಳುಗಿಯೆ ಮಿಸುಗುತಿಹ ರವಿಯಂತೆ ನಿರ್ಲೇಪದಲಿ ಸತ್ಕರ್ಮಿ (ಜ್ಞಾನಸಿಂ. ೨೨-೫೩). [ಸಂ. ಸತ್ಕರ್ಮಿನ್]

ಸತ್ಕವಿ (ನಾ). ೧. ಒಳ್ಳೆಯ ಕವಿ; ಉತ್ತಮಕವಿ: ಕವಿತಾರಹಸ್ಯಮಂ ಸತ್ಕವಿಯಱಿಗುಂ (ಆದಿಪು. ೧-೨೦) ; ಸತ್ಕವಿ ಕಮಳಭವನ ಭಾಸ್ವತ್ಕವಿತಾಕಾಮಧೇನು ತಾನಖಿಳಬುಧೋದ್ಯತ್ಕಾಮಿತಾರ್ಥಭಾವರಸೋತ್ಕರಮಂ ಕಱೆವುದಲ್ತೆ ಕಾವ್ಯಸ್ಥಳಿಯೊಳ್ (ಶಾಂತೀಶ್ವ. ೧-೫೮). ೨. ಉತ್ತಮಜಾತಿಯ ನೀರುಹಕ್ಕಿ : ಮರುತಪಥಮಂಬಿನಿಂ ಸತ್ಕವಿವಿತಾನದಿಂ . . . ಧರೆಯ ಮಂಡಲದಂತೆ ಕುವಲಯಾನ್ವಿತದಿಂದೆ ಸರಸಿ ಶೋಭಿಸುತಿರ್ದುದು (ನವಮೂ. ೮-೩೩). [ಸಂ.]

ಸತ್ಕವಿತ್ವ (ನಾ). ಉತ್ತಮವಾದ ಕವಿತ್ವ : ಚೆದುರ ಮಯ್ಯೆಯ ಸತ್ಕವಿತ್ವದ ಸನ್ನ ಪಂಪನ ತಮ್ಮನೋ[ರ್ವ್ವದೆ] ಪೂಗಱ್ತೆಯೆ ಬಾಜಿಸಲ್ಬರೆಯಲ್ಕವಿತ್ವದ ತತ್ವದೊಳ್ಪುದಿದು ನೇರ್ವ್ವಡೆ ಪೇಟಲುರ್ವ್ವಿಗಪೂರ್ವ್ವಮಾಗಿರೆ ಬಲ್ಮೊನವ್ಪುದಱಿನೊರ್ವ್ವೊನೆ ವಾಗ್ವಧೂ ವರವಲ್ಲಭಂ ಜಿನವಲ್ಲಭಂ (ಶಾಸಸಂ. ೯-೭ : ಸು. ೫೫೦) ; ಸತ್ಕವಿತ್ವ ಸುರತ್ನಮಲ್ಲದ ಚಿತ್ಕಳೆಯ ಕುಂದಣದಿ ಕೆತ್ತಲು ಸತ್ಕೀರ್ತಿ ಸಂಹಿತೆಗೆ ಬಾರದೆ ಕುಂದ ಬೀರುವುದೆ (ನಾಗಚ. ೧-೫೩). [ಸಂ.]

ಸತ್ಕಾರ (ನಾ). ೧. ಉಪಚಾರ ; ಆದರಪೂರ್ವಕವಾದ ವ್ಯವಹಾರ,-ವರ್ತನೆ : ಹರಭಕ್ತರಿಗೆ ಸತ್ಕಾರಮಸಗುತೆ ಹರುಷದೊಳಿಹನು ಸಪ್ಪೇಂದ್ರ (ಇಚಸಾಂ. ೧೭-೮೭). ೨. ಗೌರವ ; ಮನ್ನಣೆ : ಸತ್ಕಾರಚಿತ್ತ ನಿಷ್ಕರ್ಮಿಗಳು ಪುಟ್ಟಲ ವರಂ ನೋಡಿಯಜನೆಂದನು (ವೀಶೈಪು. ೬-೧-೭). ೩. ಗಮನ ; ಲಕ್ಷ್ಯ. [ಸಂ.]

ಸತ್ಕಾರ್ಯ (ನಾ). = ಸತ್ಕರ್ಮ : ಆಕೆ ಮಾಡಿದ ಸತ್ಕಾರ್ಯಗಳು ಆಕೆಯ ವೈಯಕ್ತಿಕ ಸದ್ಗುಣಗಳ ಪ್ರತೀಕ (ನೂಳಂಬ. ೪೯). [ಸಂ.]

ಸತ್ಕಾರ್ಯವಾದ (ನಾ). [ತತ್ತ್ವಶಾ] ಸಾಂಖ್ಯಮತದ ಪ್ರಕಾರ 'ರೂಪಾಂತರ' ಎಂಬ ತತ್ವದ ಮತ ; ಕಾರಣದ್ರವ್ಯವೇ ಕಾರ್ಯರೂಪವಾಗಿ ಪರಿಣಮಿಸುವಿಕೆ : "ಸತ್ಕಾರ್ಯವಾದವೆಂದರೆ ಕಾರಣಕ್ಕೂ ಕಾರ್ಯಕ್ಕೂ ಐಕ್ಯವನ್ನು ಅಭೇದವನ್ನು ಹೇಳುವುದು" (ಹಿಂದಸಾ. ೨೧೧); ಮಣ್ಣಿನಲ್ಲೇ ಮರೆಯಾಗಿದ್ದ ಗಡಿಗೆಯು ಕುಂಬಾರನ ಪ್ರಯತ್ನದಿಂದ ಹೊರಪಡುವದು ಎಂಬ ಸಾಂಖ್ಯವಾದ. ಇದನ್ನೇ ಪರಿಣಾಮವಾದವೆಂದೂ ಸತ್ಕಾರ್ಯವಾದವೆಂದೂ ಹೇಳುವರು (ಭಾರದ. ೨೩೧). [ಸಂ.]

ಸತ್ಕಾಲಕ್ಷೇಪ (ನಾ). ಒಳ್ಳೆಯ ರೀತಿಯಲ್ಲಿ ಕಾಲ ಕಳೆಯುವುದು ; ಉತ್ತಮ ರೀತಿಯ ಕಾಲಹರಣ : ಕಂಠಪಾಠ ಮಾಡಿದ ಜನರು ಕಲೆತು ಹಾಡಿದರೆ ಕೇಳಲು ರುಚಿಕರ ಮತ್ತು ಸತ್ಕಾಲಕ್ಷೇಪಕ್ಕೆ ಅನುಕೂಲ (ಮೂಗುತಿ. ಅನುಗ್ರಹವಾಣಿ). [ಸಂ.]

ಸತ್ಕಾವ್ಯ (ನಾ). ಒಳ್ಳೆಯ ಕಾವ್ಯ ; ಉತ್ತಮವಾದ ಕಾವ್ಯ : ಸತ್ಕಾವ್ಯದಲ್ಲೂ ಈ ಅಂಶಗಳಿದ್ದೇ ಇವೆ (ಕಾವ್ಯಕು. ೨). [ಸಂ.]

ಸತ್ಕೀರ್ತಿ (ನಾ). ಒಳ್ಳೆಯ ಹೆಸರು ; ಉತ್ತಮವಾದ ಯಶಸ್ಸು : ಸತ್ಕೀರ್ತಿಗೆ ನೋಂತೆವೆಂದು ದಿವದೊಳ್ ಪುನ್ನಯ್ಯನುಂ ಮಲ್ಲಪಯ್ಯನುಮಂತಾ ಜಿನಚಂದ್ರನುಂ ಪಿರಿದುಮೊಂದುತ್ಸಾಹಮಂ ತಾಳ್ದಿದರ್ (ಶಾಂತಿಪು. ಅನುಬಂಧ. ೧-೭); ಸತ್ಕೀರ್ತಿಯಂ ತಾಳ್ದು ರಾಜ್ಯಮನಾರಾಳ್ದರೊ ಪದ್ಮರಾಜನವೊಲ್ (ಪುಷ್ಪಪು. ೩-೨೧). [ಸಂ.]

ಸತ್ಕೀರ್ತಿವಡೆ (ಕ್ರಿ). ಒಳ್ಳೆಯ ಹೆಸರನ್ನು ಪಡೆ ; ಉತ್ತಮವಾದ ಯಶಸ್ಸನ್ನು ಹೊಂದು : ಸಂತಸವಡೆದುದಾ ಸೌರಾಷ್ಟ್ರ ಸಕಲದಿಗಂತಕ್ಕೆ ಸತ್ಕೀರ್ತಿವಡೆದು (ಮೋಹತ. ೨-೧೫). [ಸತ್ಕೀರ್ತಿ + ಪಡೆ$_1$]

ಸತ್ಕುಲ, ಸತ್ಕುಳ (ನಾ). ೧. ಒಳ್ಳೆಯ ವಂಶ; ಸದ್ವಂಶ: "ಶೀಲ ಸತ್ಕುಲಮಿವನೂಕಮಕ್ಕು" (ನಾನಾರ. ೧೩೦); ನೀವೆನ್ನ ಸತ್ಕುಲದೈವವೇ ಮನೆದೈವವೇ ಅಕಟ ಎನ್ನ ದಾತನೆ (ಬಸಪು. ೩೬-೩). ೨. ಒಳ್ಳೆಯ ವಂಶದಲ್ಲಿ ಹುಟ್ಟಿದವನು ; ಸದ್ವಂಶಜ : "ಸತ್ಕುಲನೊಳು ಸೌಮ್ಯನೊಳು ಚಾತ್ಯಂ" (ಮಂಗರಾ. ೧೪೨-೧೮). ಸತ್ಕುಳ : ೧. ಸತ್ಕುಳದೊಳಗಿಂದು ಮಹೀಭೃತ್ಕುಳದೊಳಗಚಳನಾಥನೆಸವಂತೆಸವಂ ತತ್ಕುಳದೊಳ್ . . . ವಿನಯಾದಿತ್ಯಂ (ಎಕ. V. ಬೇಲೂರು. ೧೨೪-೧೪; 1133). [ಸಂ.]

ಸತ್ಕುಲಜ (ನಾ). = ಸತ್ಕುಲ ೨ : ಎನ್ನ ತೊತ್ತಿನ ಮಗನಂ ಕುಮಾರನೆಂದು ಸತ್ಕುಲಜನೆಂದು ಬಗೆದು ಹೆಣ್ಣಂ ಕೊಟ್ಟು ನಿಮ್ಮ ಕುಲಮಂ ಕೆಡಿಸಿಕೊಳ್ಳದಿರಿ (ಸಂಪಿರ. ೬-೬೬ ವ); ಶಾಪದಿಂದಾದ ದುಷ್ಕುಲಂ ಸತ್ಕುಲಜ ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂಬಾಪೇಕ್ಷೆಯಿಂ ಬಂದೆವೆನಲು (ಹಚಕಾ. ೭-೨೨). [ಸಂ.]

ಸತ್ಕುಲತೆ (ನಾ). ಒಳ್ಳೆಯ ವಂಶದಲ್ಲಿ ಜನಿಸಿರುವಿಕೆ : ಹರಣದಲಿ ಕಕ್ಕುಲಿತೆ ಬೇಡುದ್ದರಿಸುವುದು ಸತ್ಕುಲತೆಯನು ಸಂವರಿಸುವುದು ಸದ್ಗತಿಯನು (ಕುವ್ಯಾದ್ರೋ. ೧೫-೨೧). [ಸಂ. ಸತ್ಕುಲತಾ]

ಸತ್ಕುಲಪ್ರಸೂತ (ನಾ). = ಸತ್ಕುಲ ೨ : ಸತ್ಕುಲಪ್ರಸೂತರು ನಿನ್ನಂತೆ ಎಷ್ಟು ದುಃಖಾರ್ಥರಾದರೂ ಧರ್ಮಮಾರ್ಗವನ್ನು ಬಿಟ್ಟುಹೋಗುವುದಿಲ್ಲ (ವಚಭಾ. ೧೦೨); ಸತ್ಕುಲಪ್ರಸೂತರಾದ ರಾಜಪುತ್ರರನ್ನೆಲ್ಲ ನಿರಾಕರಿಸಿ ಕಳುಹಿಸಿಬಿಡುತ್ತಿದ್ದನು (ಕವಿಕ. ೪೪). [ಸಂ.]

ಸತ್ಕುಲೀನ (ಗು). ೧. ಒಳ್ಳೆಯ ಕುಲದಲ್ಲಿ ಹುಟ್ಟಿದ : ಕಾಂತಭಕ್ತಿಯಂ ಬಿಡುವರ ಸತ್ಕುಲೀನಸತಿಯರ್ (ನಳಚಂ. ೭೩೭). (ನಾ). ೨. = ಸತ್ಕುಲ ೨ : ಲೇಸನಾಡಿದ ಕರ್ಣ . . . ಈಸುದಿನ ನಾವಱಿಯೆವೈ ನೀ ಸತ್ಕುಲೀನನಲ (ಕುವ್ಯಾದ್ರೋ. ೧-೩೦). [ಸಂ.]

ಸತ್ಕುವಲಯ (ನಾ). ೧. ಉತ್ತಮವಾದ ಕನ್ನೈದಿಲೆ. ೨. ಶ್ರೇಷ್ಠವಾದ ಭೂಮಂಡಲ. ೧, ೨ : ವಿಶೇಷದಸೌಖ್ಯಸಾರ್ವಭೌಮನ ತೆಱದಂತೆ ಸತ್ಕುವಲಯಾಧಿಕದಿಂದ ಕುಬೇರನಂತೆ ನೂತನ ವರಪದ್ಮದಿಂ ಸರಸಿ ರಾಜಿಕುಂ (ಹಮ್ಮೀ. ೪-೧೯).

[ಸಂ.]

ಸತ್ಕುಳ 'ಸತ್ಕುಲ' ನೋ.

ಸತ್ಕುಳವಂತೆ (ನಾ). ಒಳ್ಳೆಯ ವಂಶದಲ್ಲಿ ಹುಟ್ಟಿದವಳು ; ಉತ್ತಮಕುಲದಲ್ಲಿ ಜನಿಸಿದವಳು : ಆಚಭೂಪನ ಕಾಂತೆ ದಯಾವಂತೆ . . . ಸತ್ಕುಳವಂತೆ ಮಹಾದೇವಿಯೆಂಬ ಪೆಸರಿಂದಸೆವಳ್ (ಎಸಾ. XX, ೧೧೫-೧೫; 1167).

[ಸತ್ಕುಳ (= ಸತ್ಕುಲ) + – ವಂತ + – ಎ]

ಸತ್ಕೃತ (ಗು). ೧. ಒಳ್ಳೆಯದಾಗಿ ಜರುಗಿದ ; ಸರಿಯಾಗಿ ನಡೆದ. (ನಾ). ೨. ಮನ್ನಣೆ; ಗೌರವ. ೩. ಸತ್ಕಾರ್ಯ; ಸತ್ಕರ್ಮ : ಪಾಲಿಯನೊಕ್ಕಾಳ್ದನ ಗೆಯ್ದ ಸತ್ಕೃತಮುಮಂ ಪಿಂತಿಕ್ಕಿ ಚೋಲಕ್ಕೆ ತಪ್ಪಿಯುಮಿಂ ಬಾಟ್ಟುದ (ಪಂಪಭಾ. ೯ ೮೪). ೪. ಸತ್ಕಾರ ಹೊಂದಿದವನು ; ಸನ್ಮಾನವನ್ನು ಪಡೆದವನು : ಮಂಗಳನೃತ್ತಗೀತಂಗಳಿಸಗಿದುವು ಹರಿ ಪಾರ್ಥರಲ್ಲಿ ಸತ್ಕೃತರಾದರು (ಭೈಮಿಭಾ. ೩-೫೫).

[ಸಂ.]

ಸತ್ಕೃತಿ (ನಾ). ೧. ಒಳ್ಳೆಯ ವರ್ತನೆ ; ಉತ್ತಮವಾದ ನಡವಳಿಕೆ. ೨. ಸತ್ಕಾರ ; ಆದರ ; ಆತಿಥ್ಯ : ತನ್ಯಪನ ಸತ್ಕೃತಿಯ ಮಂಗಳತೆಯನು ಕೈಕೊಂಡು ಹಾಯ್ದನು ಹಂಸೆಯಲಿ ಮುನಿವ (ತೊರಣಾ. ೧-೫-೨೫). ೩. ಉತ್ತಮವಾದ ಕೃತಿ : ಶಾಂತಿಪುರಾಣಸತ್ಕೃತಿಗಡರ್ಪಪ್ಪನ್ನೆಗಂ ಪರ್ವಿ ದಾಂಗುಡಿವಿಟ್ಟತ್ತು ಯಶೋಲತಾಪ್ರತತಿ ಚಲ್ಪಿಂದತ್ತಮತ್ತಿಮಬ್ಬೆಯಾ (ಶಾಂತಿಪು. ಅನುಬಂಧ. ೧-೫). ಸತ್ಕೃತಿ ಸಂಸ್ಕೃತದಿಂದ ಜಗತ್ಪಾತುಕಮಾಗಿ ಮತ್ತ ಕರ್ಣಾಟದೊಳಂ ಸತ್ಕವಿನಿವಹಂ ಪೊಗಟೆ ಚಮತ್ಕೃತಿಯಂ ಪಡದು ಸೊಬಗುವಡೆದತ್ತು (ಕಾದಂಪೂ. ೫). [ಸಂ.]

ಸತ್ಕೊಳ (ನಾ). ಉತ್ತಮವಾದ ಕೊಳ,—ಪುಷ್ಕರಿಣಿ : ರಘುಮಹಾರಾಯನುಂ ಕ್ರೀಡಿಸಿದ ಸತ್ಕೊಳಗಳು (ಪರಶು. ೪೩-೮). [(ಸಂ. ಸತ್) + ಕೊಳ್]

ಸತ್ಕ್ರಿ (ನಾ). ಒಳ್ಳೆಯ ಕೆಲಸ ; ಉತ್ತಮಕಾರ್ಯ : ಪುಟ್ಟುಲಬ್ರಹ್ಮಿಯಾಗಿ ನಾನಾತತ್ಯಂಗಳಲ್ಲಿ ಕಲ್ಪಿತನಾಗಿ ಸತ್ಕ್ರಿಯಲ್ಲಿ ಭಾವಿತನಾಗಿ (ಮೋಳಮಾ. ೧೫-೫೪); ಹೊಱಗೆ ಮಾಡುತ್ತಿಹ ಸತ್ಕ್ರಿಯು ಮಂಗಳಮಯವಾಗಿ ಒಳಗೆ ಕಣ್ದೆಱೆದು ಪರಮಾನಂದದ ರಸದೊಳಗೆ ಓಕುಳಿಯಾಡುತ್ತಿಹೆನಯ್ಯ (ಶವಗೀ. ೭೭-೩೭೯). [< ಸಂ. ಸತ್ಕ್ರಿಯಾ]

ಸತ್ಕ್ರಿಯೆ (ನಾ). ೧. = ಸತ್ಕ್ರಿ : ಮಾಡುವ ಸತ್‌ಕ್ರಿಯೆಯಿಂದ ಭಕ್ತನಿನಿಸಬಾರದು (ಬಸವ. ೩೧೭); ಕಲ್ಲಿಂ ಕಾಂಚನಮಂ ತಡಮಿಲ್ಲದ ಸತ್ಕ್ರಿಯೆಯ ಬಲದ ತೆಗವಂತೆ ಕರಂ ಪೊಲ್ಲಮನಿಪ್ಪೊಡಲಿಂ ಕೇಡಿಲ್ಲದ ಪುಣ್ಯಮನುಪಾರ್ಜಿಪಾತಂ ಚತುರಂ (ಚಂದ್ರಪ್ರ. ೪-೨೮). ೨. ಆದರಸಹಿತವಾದ ಆತಿಥ್ಯ ; ಆತ್ಮೀಯವಾದ ಸತ್ಕಾರ : ಅನುನಯೋಚಿತ ಸತ್ಕ್ರಿಯೆಗಳಿಗೆ ಮನದಣಿದಮಿಳಭಕ್ತರುಂ ತಾನನವರತಮುಂ ಸುಖದೊಳಿರ್ದನು (ಬಸಪು. ೬೦-೬೨). ೩. ಕಲಾತ್ಮಕವಾದ ಕ್ರಿಯೆ ; ಉತ್ತಮವಾದ ಕ್ರಿಯಾರೂಪ : ಶೃಂಗಾರಾದಿಗಳಪ್ಪ ರಸಂಗಳ್ ವರ್ತಿಸುಗುಮಂತವೆಂಟೆ ವಲಂ ಕಾವ್ಯಾಂಗಕ್ಕೆ ಸತ್ಕ್ರಿಯಾ ರೂಪಂಗಳ್ ರತ್ಯಾದಿಭಾವಸಂಪನ್ನಂಗಳ್ (ಕಾವ್ಯಾಪ. ೭೯). ೪. ಶುದ್ಧೀಕರಣ ಸಮಾರಂಭ. ೫. ಅಂತ್ಯವಿಧಿ ; ಅಂತ್ಯಸಂಸ್ಕಾರ. [ಸಂ. ಸತ್ಕ್ರಿಯಾ]

ಸತ್ಕ್ರಿಯಂತ (ನಾ). ಒಳ್ಳೆಯ ಕೆಲಸಗಳನ್ನು ಮಾಡುವವನು : ಸತ್ಕ್ರಿಯಂತಂಗ ಭಕ್ತಿಸ್ಥಲವಿಲ್ಲ ನಿರ್ಮಲಚಿತ್ತಂಗೆ ಮಹೇಶ್ವರಸ್ಥಲವಿಲ್ಲ (ಮೋಳಮಾ. ೧೫೦-೫೭೭).

[ಸಂ. ಸತ್ಕ್ರಿಯಾವೆತ್]

ಸತ್ಕ್ಷೇತ್ರ (ನಾ). ಹದವಾದ ಭೂಮಿ ; ಉತ್ತಮವಾದ ಪ್ರದೇಶ : ಉಜ್ಜ್ವಳದಾನಂ ಕಿಱಿದುಂ ಕರಂ ಪಿ[ರಿ]ದೆ ದಲ್ ಸತ್ಕ್ಷೇತ್ರಬೀಜೋಪಮಂ (ಶಾಂತಿಪು. ೭-೨೦). [ಸಂ.]

ಸತ್ತಟಾಕ (ನಾ). = ಸತ್ಕೊಳ : ಬಾಲೇಂದುಧರ ಕರುಣಾಮೃತಂ ಭಕ್ತಜನರುಗಳ ಹೃತ್ಕಮಲದೊಳ್ ತುಂಬುವ ಚೆಂದದಿಂದಾ ಪೊಳಲೆ ಸತ್ತಟಾಕಂ ತುಂಬಿ (ವಿಕೋಪು. ೩-೩೮). [ಸಂ.]

ಸತ್ತಮ (ನಾ). ೧. ಮುಖ್ಯವಾದುದು; ಪ್ರಧಾನವಾದುದು: "ಅಗ್ಯಂ. ಪ್ರಧಾನಂ . . . ಸತ್ತಮಂ, ಉತ್ತಮಂ, ಗ್ರಾಮಣೀಃ, ಅಗ್ರಣೀ : – ಈ ೧೩ ಮುಖ್ಯಂ" (ಪಲಾಯು. ೧೧೫-೫). ೨. ಉತ್ತಮವಾದ ರೀತಿ : ನೀನೀ ಧರೆಯಂ ಸತ್ತಮ ಪಾಲಿಪುದು ಪಾಂಡ್ಯಭೂವರನಾಗುತೆ ಚಿತ್ತವಿಪುದೆಂದು ಬೇಡಿಕೊಳುತ್ತಿರಲು (ಹಾಲಾಸ್ಯ. ೧-೬೫). ೩. ಶ್ರೇಷ್ಠನಾದವನು ; ಉತ್ತಮ : ಹೇಯಕೃತ್ಯಗಳನ್ನಸಗಿಯೂ ತಾವು ಸತ್ತಮರೆಂದು ಹೇಳಿಕೊಳ್ಳುವ ಜನ ಹುಟ್ಟರೋ ಅಥವಾ ತಾನು ಹುಟ್ಟನೋ (ಪುನರು. ೫೮೯). [ಸಂ.]

ಸತ್ತವಿ, ಸತ್ತವೆ (ನಾ). ಪಕ್ಷದ ಏಳನೆಯ ದಿನ : ಗುಪ್ತ – ಗುತ್ತ ; ಸಪ್ತಮಿ – ಸತ್ತವಿ (ಶಮದ. ೨೬೪ ಪ್ರಯೋ). **ಸತ್ತವೆ** : ಅತಸಿ – ಅಗಸೆ . . . ಸಪ್ತಮಿ – ಸತ್ತವೆ (ಶಮದ. ೨೭೯ ಪ್ರಯೋ). [< ಸಂ. ಸಪ್ತಮಿ]

ಸತ್ತವೆ 'ಸತ್ತವಿ' ನೋ.

ಸತ್ತಱ (ನಾ). ಒಂದು ವಂಶದ ಹೆಸರು : ನಾಗರಖಂಡಮೆಬ್ಬತ್ತಕ್ಕಂ ಸತ್ತಱರ ನಾಗಾರ್ಜುನ ನಾಟ್ಯಾವುಣ್ಣುಗೆಯ್ಯುತ್ತ (ಎಕ. VII, ಶಕಾ. ೨೧೯-೮; 918); ಬನ್ನಣಿಕೆಯ ಸತ್ತಱರ ನಾಗಾರ್ಜುನ ನಾಗ್ಗವುಂಣ್ಣುಗೆಯೆ (ಎಕ. VIII, ಸೊರಬ. ೨೩೪-೭; 999).

[?]

ಸತ್ತಿಗ (ನಾ). ೧. ನಿಜವನ್ನು ಹೇಳುವವನು ; ಪ್ರಾಮಾಣಿಕನಾದವನು : ನಿಲ್ಲಂ ಸುಳವಟ್ಟಿಗರಿರ್ಪೆಡೆಯೊಳ್ಗಿಲ್ಲಂ ಸತ್ತಿಗರಂ ಮಱೆದೆಂದುಂ ಕೊಲ್ಲಂ ಜಱುಚಂ ಬಾಂದಲೆಯಂಗೀಯದೆ ನಲ್ಲಮರ್ದುಣಿಸಂ ಒಲ್ಲಂ (ಉಷ್ಕಡೀ. ೨-೪೫); ಸತ್ತಿಗಂ ನೀನೆಯಾದೊಡಂ ವೇಷ್ಟನವ ಕಕ್ಷೆಯೊಳಗವಚಿಕೊಳುತಂ ಓಡಿ ಬಂದಯೆಕೆ (ಪ್ರಭುಪು. ೬-೮೮ . ೨. ಸಾಮಾನ್ಯವಾಗಿ ಕಲ್ಯಾಣಿಚಾಲುಕ್ಯರ ಅರಸರಿಗೆ ಸಲ್ಲುತ್ತಿದ್ದ ಒಂದು ಬಿರುದು; ಸತ್ಯಾಶ್ರಯ: ಸತ್ತಿಗಂ ಬಸಸೆ . . . ಕೇತ ಪೆಸರಿಜೆದು ಸತ್ತೊಡೆ (ಸೌಶಾ. XI-i, ೫೧-೨; 1006); ಸಿಡಿಲೇಱ್ಪೆಯಿಂದೆಱಗಿ ಪೊಯ್ಯಾಗಳ್ ಗದಾದಂಡದಿಂ ಮುಳಿದಿಟ್ಟಂ ಕಲಿ ಸತ್ತಿಗಂ ಕುರುಕುಭ್ಪಚ್ಚಂಡೋರುದಂಡಂಗಳಂ (ಗದಾಯು. ೮-೩೭).

ಸತ್ತಿಗನ ಚಟ್ಟ = ಸತ್ಯಾಶ್ರಯನ ಬೆಂಬಲಿಗನಾದವನು ; ಒಂದು ಬಿರುದು: ಮಂಡಳಿಕಲಲಾಟಪಟ್ಟಂ ಸತ್ತಿಗನ ಚಟ್ಟಂ (ಇಆ. V, ೧೭-೨೮; 1019). [< ಸತ್ಯಾಶ್ರಯ]

ಸತ್ತಿಗೆ, ಸತಿಗೆ (ನಾ). ಕೊಡೆ ; ಛತ್ರಿ : "ಸತ್ತಿಗೆಯದಾತಪತ್ರಂ ಛತ್ರಮೆನಿಸಿಕ್ಕುಂ" (ಪುಂಗರಾ. ೭೮-೪); ನಡೆಯಲ್ಪಂದಿಱಿಯಲ್ಕೆ ತಕ್ಕ ತುರಂಗಂ ಭೋರೆಂದು ಬರ್ಪೊಂದೊಡಂಬಡು ಬಂದೆತ್ತಿಸಿದೊಂದು ಸತ್ತಿಗೆ (ಪಂಪಭಾ. ೯-೧೦೪); ಬಿದಿರಲಂದಣವಕ್ಕು ಬಿದಿರೆ ಸತ್ತಿಗೆಯಕ್ಕು . . . ಬಿದಿರಲ್ಲಿ ಸಕಲಸಂಪದವೆಲ್ಲವು (ಬಸವ. ೩೨೧); ವನಲಕ್ಷ್ಮಿಗೆತ್ತಿದ ಪೀಲಿಯ ಸತ್ತಿಗೆಯೊ (ಗಿರಿಕ. ೨-೩೪). **ಸತಿಗೆ** : ಎಲತನಾಯಕರು ಕೊಟ್ಟ ಸತಿಗೆಯ ಕೊಡಗಿ (ಎಕ. XII, ಗುಬ್ಬಿ. ೫೧-೭; 1522).

ಸತ್ತಿಗೆ ಮಾನ್ಯ, ಸತಿಗೆ ಮಾನ್ಯ = (ದೇವರ ಅಥವಾ ರಾಜನ) ಛತ್ರಿಯನ್ನು ಹೊರುವವನಿಗೆ ನೀಡುವ ಜಮೀನು ; ಛತ್ರಧಾರಕವ ಸೇವೆಗೆ ಕೊಡುವ ಮಾನ್ಯ : ಚಿಕ್ಕ ಚವುಟಿಲಿ ಸತ್ತಿಗೆ ಮಾನ್ಯ ಅಯಿದು ವರಹಾ (ಮೈಆರಿ. ೧೯೨೮, ೮೯-೧೦; 1700); ಸತಿಗೆ ಮಾನ್ಯಕೆ ಉಮ್ಬಳಿಹೊಲ (ಎಕ. XII, ಪಾವುಗ. ೩೯-೩೫; 1554).

[< ಸಂ. ಛತ್ರಿಕಾ./ ತುಳು. ಸತ್ತಿಗೆ, ಸತ್ಯ; ತೆಲು. ಸತ್ರ]

ಸತ್ತಿಗೆತ್ತಿಸು (ಕ್ರಿ). ಕೊಡೆಯನ್ನು ಹಿಡಿಯಿಸು ; ಛತ್ರಿಯನ್ನು ಹಿಡಿಯುವಂತೆ ಮಾಡು : ಕನಕಾಂಭೋಜಾತಮುದ್ದಂಡಕೋಮಳನಾಳಂ ಪಿರಿ ಸತ್ತಿಗೆತ್ತಿಸಿದ ಪೋಲಿಂಬಾಗೆ (ಶಾಂತಿಪು. ೭-೧೨೭). [ಸತ್ತಿಗೆ + ಎತ್ತಿಸು]

ಸತ್ತಿಗೆವಂತ (ನಾ). (ರಾಜಲಾಂಛನದ ಕುರುಹಾದ) ಛತ್ರಿಯನ್ನು ಹೊಂದಿದವನು ; ದೊರೆ : ದಂಡವಂತಂ, ಸತ್ತಿಗೆವಂತಂ (ಶಬ್ದಾನು. ೪೦೨ ಪ್ರಯೋ).

[ಸತ್ತಿಗೆ + – ವಂತ]

ಸತ್ತಿಯೂರ್ (ನಾ). ಒಂದು ಊರಿನ ಹೆಸರು : ಇದಕ್ಕೆ ಸಕ್ಕಿಳೆಬೆಳ್ಗನ್ನೂರುಂ ಕಿಱುವೆಳ್ಗನ್ನೂರುಂ ಸತ್ತಿಯೂರುಂ ಸಿಂಗೂರುನಗರಲ ಪನ್ನಿರ್ವ್ವರು (ಎಕ. III, ನಂಜನ. ೧೫೫-೮; ಸು. 970?). [ಸತ್ತಿ + ಊರ್]

ಸತ್ತಿವಂಗಲ (ನಾ). ಒಂದು ಊರಿನ ಹೆಸರು : ಸತ್ತಿವಂಗಲದ ಭೂಮಿಯ ಸಮ್ಮನ್ಧಂ ಮಾರಯ್ಯನುಂ ಪುಣಿಸೆಯಮ್ಮನು ವಿಜ್ಜು ತಮ್ಮ ಲೋಪಾದಿಗೊಟ್ಟರ್ (ಎಕ. IX. ಹೊಸಕೋ. ೧೧೧-೬; 997). [ಸತ್ತಿ + ಮಂಗಲ]

ಸತ್ತು$_1$ 'ಸತ್ತು$_1$' ನೋ.

ಸತ್ತು$_2$ (ನಾ). ಇರುವಿಕೆ ; ಅಸ್ತಿತ್ವ : ಸತ್ತು ಚಿತ್ತಾನಂದವೆಂಬ ಗೊತ್ತ ಹಱಿದವಂಗೆ ತಟ್ಟುಮುಟ್ಟು ಹತ್ತುವ ಭಾವವೊಂದೂ ಇಲ್ಲ (ಸರ್ವಜ್ಞ. ೧೦೮-೫೭); ನಕಾರವೇ ಸತ್ತು ಮಃಕಾರವೇ ಚಿತ್ತು ಶಿಕಾರವೇ ಆನಂದ ವಾಕಾರವೇ ನಿತ್ಯ ಯಕಾರವೇ ಪರಿಪೂರ್ಣ (ಸರ್ವಜ್ಞ. ೭೦-೨೦೦). [< ಸಂ. ಸತ್]

ಸತ್ತುಗ$_1$ (ನಾ). (ಜವಗೋದಿ ಮುಂತಾದ ಧಾನ್ಯದ) ಹುರಿದ ಹಿಟ್ಟು: "ಕರಂಭಃ, ದಧಿಸಕ್ತುಃ — ಈ ೨ ಮೊಸರೊಳ್ ಕಲಸಿದ ಸತ್ತುಗಂ" (ಹಲಾಯು. ೫೩-೧೬೬); ಪಲವು ದಿವಸಕ್ಕೊಂದು ಕೊಡಂ ತೀವಿದ ಸತ್ತುಗದ ಪುಡಿಯಂ ಪಡೆದು ಆ ಕೊಡನಂ ತನ್ನ ಪಟ್ಟಿರ್ಪೆಡೆಯೊಳ್ ಕಟ್ಟಿ (ಪಂಚತಂ. ೧೮೫-೨೨). [<— ಪ್ರಾ. ಸತ್ತುಗ, ಸತ್ತುಅ, ಸತ್ತು./ ಸಂ. ಸಕ್ತು, ಸಕ್ತುಕ./ ಮರಾ. ಸತ್ತು./ ತಮಿ. ಚತ್ತು; ತೆಲು. ಸತ್ತು]

ಸತ್ತುಗ$_2$ (ನಾ). ೧. ಸಾರ ; ತಿರುಳು : "ಸತ್ತುಗ(ಕ) — ಸತ್ಯಕ = ಸಾರ" (ತದ್ಭವಕೋ. ೪೨); ವತ್ಸಕ್ಕೆ ತತ್ವಂ — ಸತ್ಯಕ — ಸತ್ತುಗ (ಶಮದ. ೫೬೬ ಪ್ರಯೋ); ಸತ್ಯಕ, ಸತ್ತುಗ (ಶಬ್ದಾನು. ೧೬೦ ಪ್ರಯೋ). ೨. ಬಲ ; ಸತ್ವ ; ಶಕ್ತಿ : ಮುಸುಮೊಗಮಾಯ್ತು ಮೊಗಂ ಕಾಲ ಸತ್ತುಗಂ ಪೋಯ್ತು (ಅಜಿಪು. ೨-೧೦೦). [< ಸಂ. ಸತ್ಯಕ]

ಸತ್ತುತೆಗೆ (ಕ್ರಿ). [ಗಣಿತ] ಭಾಗಿಸು ; ಭಾಗಾಹಾರಮಾಡು : ಸತ್ತುತೆಗಯಂ, ಸಂಹ್ರಿತಂ, ತವ, ಭಕ್ತಿ, ಭಿನ್ನ . . . ಭಾಗಿಸೂದಂದಱಿ (ವ್ಯವಹಾ. ೧೨). [?]

ಸತ್ತೆ$_1$ 'ಸತ್ತ' ನೋ.

ಸತ್ತೆ$_2$ 'ಸಥ' ನೋ.

ಸತ್ತ್ವ (ನಾ). ೧. ಶಕ್ತಿ; ಬಲ; ಕಸುವು: ಸಮರರಸಪ್ರಿಯರೊಳ್ ಸತ್ತ್ವಮುಮಿಳೆಯೊಳ್ ರಜಮುಮೊದವೆ ರಣಗಟ್ಟಲೆಯೊಳ್ ತಮಮುಂ ಮಿಗೆ ಸತ್ತ್ವ ರಜಸ್ತಮಂಗಳುಂ ಕಾಣಲಾದುವರಡುಂ ಪಡೆಯೊಳ್ (ಪಂಪಭಾ. ೧೦-೬೯); ನಿನ್ನಯ ಸತ್ತ್ವಸಮೃದ್ಧಿಯಪ್ಪಿನಂ ಮಣಿಯದೆ ಪೊತ್ತುದಿನ್ನವರಂ . . . ತಾಳ್ಪುವುದು ಪಿಂಗದೆ ಪುತ್ರ ಸಮಸ್ತಧಾತ್ರಿಯಂ (ಚಂದ್ರಪ್ರ. ೪-೧೯); ಕ್ಷಮೆಯಲ್ಲಿ, ಸತ್ತ್ವದಲಿ, ಶಾಂತಗಾಂಭೀರ್ಯದಲಿ . . . ಮರದನಾ ಶ್ರೀರಾಮಚಂದ್ರಂ (ಶ್ರೀರಾಮಾ. ೫-೬೮೧). ೨. ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರುಗುಣಗಳಲ್ಲಿ ಒಂದು ; ಸಾತ್ವಿಕಗುಣ : ಸತ್ತ್ವವಂದರ, ಜೀವನಜ್ಞಾನ ಸುಖ ಮೊದಲಾದುವುಗಳಿಗೆ ಹೇತುವಾಗಿರುವ ಗುಣ (ಒಂದಸಾ. ೨೫೭). ೩. ಇರುವಿಕೆ ; ಅಸ್ತಿತ್ವ. ೪. ಉಸಿರು ; ಜೀವ ; ಪ್ರಾಣ. ೫. ದ್ರವ್ಯ ; ಪದಾರ್ಥ. ೬. ಕೆಚ್ಚು ; ಸಾರ. ೭. ಪ್ರಕೃತಿ ; ಗುಣ ; ಸ್ವಭಾವ. ೮. ಭೂತ ; ಪಿಶಾಚಿ. ೯. ಚಿತ್ತ ; ಮನಸ್ಸು. ೧೦. ಪ್ರಜ್ಞೆ ; ವಿವೇಕ. ೧೧. ಒಳ್ಳೆಯತನ ; ಉತ್ತಮಿಕೆ. ೧೨. (ಪ್ರಕೃತಿಯ) ಪಂಚಮಹಾಭೂತಗಳಲ್ಲಿ ಯಾವುದಾದರೂ ಒಂದು. ೧೩. ಜೀವಿ ; ಪ್ರಾಣಿ. ೧೪. ಭ್ರೂಣ. ೧೫. ಜಾಣ್ಮೆ ; ಬುದ್ಧಿ ; ಚಾತುರ್ಯ. ೧೬. [ವ್ಯಾಕ] ನಾಮಪದ. [ಸಂ.]

ಸತ್ತ್ವಗುಣ (ನಾ). = ಸತ್ತ್ವ ೨ : ತಣಿವಿಲ್ಲದ ತವಕಂ ಪೊಣ್ಮೆ ಸತ್ತ್ವಗುಣಂ ಮತ್ತಂ ವೆಗ್ಗಳಮಾಗೆ ಮಿಕ್ಕು ಮೀಱೆ (ಬಸರ. ೮-೧೦); ಬುದ್ಧಿಯ ವಿಷಯಾಕಾರವೇ ಸತ್ತ್ವಗುಣದ ಸಮುದ್ರೇಕದಿಂದ ಜ್ಞಾನವೆಂಬ ಪ್ರಮಾಣವಾಗುವುದು (ಒಂದಸಾ. ೬೧). [ಸಂ.]

ಸತ್ತ್ವನಿಧಾನ (ನಾ). ೧. ಜಗತ್ತಿನ ಜೀವಿಗಳನ್ನು ಸೃಷ್ಟಿಸುವವನು ; ಬ್ರಹ್ಮ. ೨. ಸಾತ್ವಿಕಗುಣದಿಂದ ಕೂಡಿದವನು ; ವಿಷ್ಣು. ೩. ರಜೋಗುಣದಿಂದ ಕೂಡಿದವನು ; ಬಲಾಢ್ಯ. ೧, ೨, ೩ : ರಾಜಹಂಸನಯನಂ . . . ರಜಮೊಂದಿಯೆ ಸತ್ತ್ವನಿಧಾನನೆಂಬ ಪೆಂಪನುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ (ಜಗವಿ. ೧-೨). [ಸಂ.]

ಸತ್ತ್ವಶಾಲಿ (ನಾ). ಸಮರ್ಥನಾದವನು : ಮರಣಮಂಡನೆಯನ್ನು ಧೃತಿಗೆಡದೆ ಸ್ವೀಕರಿಸಿದ ಸತ್ತ್ವಶಾಲಿಯಾದ ಈ ಅಮರನಾಯಕ್ಕನ ಸಂಕಲ್ಪವನ್ನು . . . ನೆರವೇರಿಸಿ ಕೃತಕೃತ್ಯನಾದವನು (ವೀರಯೋ. VI, ಈ ನಾಟಕವನ್ನು ಕುರಿತು). [ಸಂ. ಸತ್ತ್ವಶಾಲಿನ್]

ಸತ್ಪಥ (ನಾ). ೧. ಒಳ್ಳೆಯ ಮಾರ್ಗ ; ಸನ್ಮಾರ್ಗ : ಅವರು ಸತ್ [ಪಾಠಾಂ. ಶಿವ] ಪಥಕ್ಕೆ ಸಲ್ಲರು ಸಲ್ಲರಯ್ಯಾ (ಬಸವ. ೯೭); ಭಾವಭೇದವಿಲ್ಲದ ಶರಣನ ಸತ್ಪಥವ ನಾನೇನೆಂಬೆನು (ಶಿವಗೀ. ೮೩-೪೦೬). ೨. ನಕ್ಷತ್ರಗಳ ಮಾರ್ಗ ; ಆಕಾಶ. ೧, ೨ : ಸುಹೃಚ್ಚಕ್ರಸಮ್ಮದ ಸಂಪಾದನಹೇತು ಸತ್ಪಥಗತಂ ಪದ್ಮೋದ್ಭವೋದ್ಭಾವಕಂ ಏದಿ ತಾರ್ತ್ಹಾನುಗನಾಮನಲ್ತೆ ವಿನಯಾದಿತ್ಯಾವನೀಪಾಲಕಂ (ಎಕ. III. ಮಳವ. ೩೧-೧೧; 1117). [ಸಂ.]

ಸತ್ಪಥಕುಂತಲ (ನಾ). ಆಕಾಶವನ್ನೇ ಮುಡಿಯಾಗಿ ಉಳ್ಳವನು ; ವ್ಯೋಮಕೇಶ ; ಈಶ್ವರ : ಸತ್ಪಥಕುಂತಲ ಚಿತ್ಕಾರೀಣ . . . ಪಾಲಿಸೆನುತ್ತಂ (ಉದ್ಭಟೇ. ೭-೨೬). [ಸಂ.]

ಸತ್ಪಥಕೇಶ (ನಾ). = ಸತ್ಪಥಕುಂತಲ : ಕೇಳ್ಪುದು ಗುರ್ಜರದೇಶಾಧೀಶನ ಕಥೆಯಂ ಸತ್ಪಥಕೇಶನ ಕೃಪೆಯಿಂ ಪೇಳ್ವೆಂ (ಉದ್ಭಟೇ. ೧ ಸೂಚನೆ). [ಸಂ.]

ಸತ್ಪಥಭಾವಿ (ನಾ). ಒಳ್ಳೆಯ ಮಾರ್ಗದಲ್ಲಿ ನಡೆಯಬೇಕೆಂಬ ಭಾವನೆಯುಳ್ಳವನು ; ಸನ್ಮಾರ್ಗದಲ್ಲಿ ನಡೆಯುವ ಭಾವನೆಯನ್ನು ಹೊಂದಿದವನು : ತುಪರಸವಿದ್ದುದಕಲ್ಲದೆ ಫಲ ಫಲಿಸಲಿಲ್ಲ ಕ್ರಿಯಾಸದ್ಭಾವವಿದ್ದಲ್ಲದ ಸತ್ಪಥಭಾವಿಯಲ್ಲ (ಮೋಕಿಮಾ. ೨೭೮-೩೩). [ಸಂ. ಸತ್ಪಥಭಾವಿನ್]

ಸತ್ಪಥಾತಿಥಿ (ಕ್ರಿ). ಆಕಾಶದಲ್ಲಿ ಸಂಚರಿಸುವವನು ; ಗಗನಗಾಮಿ : ಚಾರಣ ಮುನೀಂದ್ರರ್ ಬೆಸಸಿ ಸತ್ಪಥೋನ್ನತಿಯಂ ನನ್ನಿಮಾಡುವಂತೆ ಸತ್ಪಥಾತಿಥಿಗಳಾದರ್ (ಆದಿಪು. ೫-೨೦ ಪ). [ಸಂ.]

ಸತ್ಪದ (ನಾ). ೧. ಒಳ್ಳೆಯ ಪದವಿ, —ಸ್ಥಾನ. ೨. ನಕ್ಷತ್ರಗಳ ಸ್ಥಳ ; ಆಕಾಶ : ಕರಮಂ ವಾರುಣಿಗೆಂದು ನೀಡಿ ಪಿರಿದುಂ ನಿಸ್ತೇಜಮೆಯ್ದಿರ್ದ ತನ್ನಿರವಂ ನೋಡದೆ ಸತ್ಪದಪ್ರಭುತೆಯುಂ ತಾಳ್ದಿರ್ಪ ದೋಷಾಕರಂ ದೊರೆಯೇ (ಎಕ. VII, ಶಿವಮೊ. ೪-೬೪; 1122). [ಸಂ.]

ಸತ್ಪಾತ್ರ (ನಾ). ೧. ಉತ್ತಮವಾದ ಯೋಗ್ಯತೆ, — ಅರ್ಹತೆ : ಪೇಳಿಸುವನಂದಿನ ದಿನದ ಮೊದಲ ರಾತ್ರಿಯೆ . . . ಸತ್ಪಾತ್ರದವನಿಯಮರರ್ಗನಲು (ಚಿಮಿಭಾ. ೧೦-೨೭). ೨. (ದಾನವನ್ನು ತೆಗೆದುಕೊಳ್ಳಲು) ಯೋಗ್ಯನಾದವನು, —ಅರ್ಹನಾದವನು : ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್‌ಪಾತ್ರಕ್ಕೆ ಸಲ್ಲದಯ್ಯಾ (ಬಸವ. ೨೨೩); ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ (ಸೋಮೇಶ. ೭೯). [ಸಂ.]

ಸತ್ಪಾತ್ರದಾನ (ನಾ). ಯೋಗ್ಯನಾದವನಿಗೆ ದಾನಮಾಡುವುದು ; ಅರ್ಹನಿಗೆ ದಾನಕೊಡುವುದು : ಸದ್ಭಕ್ತನಾದಾತನು ಸತ್‌ಪಾತ್ರದಾನಯುಕ್ತನಾಗಿರಬೇಕು (ಅಖಂಡೇ. ೫೭-೬).

ಸತ್ಪಾತ್ರದಾನನಿಧಿ = ಯೋಗ್ಯನಾದವನಿಗೆ ದಾನ ಮಾಡುವುದರಲ್ಲಿ ನಿಧಿಯಂತಿರುವವನು; ಒಂದು ಬಿರುದು: ನಗಟ್ಟ ಮಣಲರ ಭೀಮಂ ಸತ್ಪಾತ್ರದಾನನಿಧಿಯರ್ಹತ್ಪಾದಾಬ್ಜಾಳಿಯಿಂದ್ರಕೇಶಿನರೇಂದ್ರ (ಸೌಗಾ. XX, ೪೭-೧೬; 1074). [ಸಂ.]

ಸತ್ಪುಣ್ಯ (ನಾ). ಒಳ್ಳೆಯ ಪುಣ್ಯ; ಸುಕೃತ: ಪಾವಕಾಕ್ಷನನರ್ಚಿಸುತ ಜಡಜೀವಿಗಳಿಗೀಕ್ಷಣವನೀವುದದಾವ ಸತ್ಪುಣ್ಯವು ಶಿವಾಗಮನಿಗಮದೃಷ್ಟಿಯೊಳು (ಬಸಪು. ೬೦-೭). [ಸಂ.]

ಸತ್ಪುತ್ರ (ನಾ). ಒಳ್ಳೆಯ ಮಗ ; ಸುಪುತ್ರ : ಸತ್ಪುತ್ರನ ಯೋಗದಿಂದ ನಿಂಗಪ್ಪನ ದಾರಿದ್ರ್ಯ ವಿಚ್ಛಿನ್ನವಾಯಿತು (ಮುಂಬಯಿ. ೪-೭೯). [ಸಂ.]

ಸತ್ಪುರುಷ (ನಾ). ಒಳ್ಳೆಯವನು ; ಯೋಗ್ಯ ; ಸಜ್ಜನ : "ಸಾಧುಃ, ಸಜ್ಜನಃ, ಆರ್ಯ — ಈ ೩ ಸತ್ಪುರುಷಂ" (ಹಲಾಯು. ೬೧-೨೧೭); ಈಸು ವಿಧದೊಳಗೆ ಅಂಗವಿಲ್ಲ ಮೇಲೆ ಸತ್ಪುರುಷರ ಸಂಗವಿಲ್ಲ (ಬಸವ. ೮೮೮); ಕಪ್ಪೆಗಳು ಮೀನುಗಳು ಇಪ್ಪುದದು ತೀರ್ಥವೇ . . . ಸತ್ಪುರುಷರಿಪ್ಪುದೇ ತೀರ್ಥ (ಸರ್ವಜ್ಞ. ೭೯೯). [ಸಂ.]

ಸತ್ಪ್ರಣೇತ (ಗು). ೧. ಚೆನ್ನಾಗಿ ಹೇಳಿದ. (ನಾ). ೨. [ಜೈನ] ಕರ್ಮಗಳನ್ನು ನಾಶಪಡಿಸುವ ಎಂಟು ಬಗೆಯ ಧರ್ಮಗಳಲ್ಲಿ ಒಂದು : ಅಲ್ಲಿ ಸತ್ಪ್ರಣೇತ ಮೆಂಬುದು ಭಯರಾಗಾದಿದೋಷರಹಿತಪ್ರಣೇತಮಪ್ಪ ಧರ್ಮಂ (ಚಾವುಂಪು. ೭). [ಸಂ.]

ಸತ್ಫಲ (ನಾ). ೧. ಒಳ್ಳೆಯ ಹಣ್ಣು ; ಉತ್ತಮವಾದ ಫಲ : "ಮಾನಸೋತ್ಪತ್ತಿ ಲತಾಂತ ಸತ್ಫಲಮಸಂಖ್ಯಾತಂ ಪ್ರಸೂನಾಹ್ಯಯಂ" (ನಾನಾರ್ಥ. ೩೭). ೨. ಉತ್ತಮವಾದ ಪರಿಣಾಮ : ತ್ರಿದಶಾನಕಲಯದಿಂ ನೀರದವಥದೊಳ್ ನಾರದಂಗೆ ತಾಂಡವದ ತಗುಳ್ದೊದವಿದುದು ತನ್ನ ಮಾಡಿದ ಕದನದ ಸತ್ಫಲಮನಾಗಳನುಭವಿಸುವವೋಲ್ (ತಾಂಡವ. ೪-೫೭); ವಿವೇಕಿಪಡೆ ಸೊಗಸಾಗಿ ಮುಂತೆಯನೇಕಸತ್ಫಲಸಿದ್ಧಿಯಹುದು (ಬಸವ. ೩೫-೪೫). [ಸಂ.]

ಸತ್ಯ (ಗು). ೧. ನಿಜವಾದ ; ದಿಟವಾದ. ೨. ನಂಬಿಕೆಯ ; ಪ್ರಾಮಾಣಿಕವಾದ. ೩. ಒಳ್ಳೆಯ ; ಉತ್ತಮವಾದ. (ನಾ). ೪. ನಿಜ ; ಯಥಾರ್ಥ : "ಋತಂ, ಸತ್ಯಂ, ಸಮೀಚೀನಂ, ಸಮ್ಯಕ್, ತಥ್ಯಂ – ಈ ೫ ಸತ್ಯದ ಪೆಸರ್" (ಹಲಾಯು. ೫೩-೧೪೩); ಸತ್ಯಪೆ ನುಡಿವುದೇ ದೇವಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ (ಬಸವ. ೫೩೭); ಹರನೆಂಬುದೇ ಸತ್ಯ ಸತ್ಯವೆಂಬುದು ಹರನು (ಪಚಕಾ. ೧೪-೩೨). ೫. ನಿಯಮ; ಕಟ್ಟಳೆ : "ಸತ್ಯಂ ನಿಬದ್ಧಮೆನೆ ಕಟ್ಟಳೆ" (ಮಂಗರಾ. ೧೦೫-೧೪). ೬. ಆಣೆ ; ಪ್ರಮಾಣ; ಶಪಥ. ೭. ಏಳುಊರ್ಧ್ವಲೋಕಗಳಲ್ಲಿ ಮೇಲಿನದು ; ಬ್ರಹ್ಮಲೋಕ : "ಭೂರ್ಭುವಂ ಸ್ವರ್ಮಹಂ ಜನ ತಪಂ ಸತ್ಯಮಂದೇಳು ಮೇಲಣ ಲೋಕಮಕ್ಕುಂ" (ಮಂಗರಾ. ೧೦-೩೨). ೮. ನಾಲ್ಕುಯುಗಗಳಲ್ಲಿ ಮೊದಲನೆಯದಾದ ಕೃತಯುಗ ; ಸತ್ಯ ಮತ್ತು ಧರ್ಮವನ್ನುಳ್ಳ ಸ್ವರ್ಣಯುಗ. ೯. ಬ್ರಹ್ಮತತ್ವ : ಈಶ್ವರತ್ರಯಕ್ಕೆ ಅಧಿಷ್ಠಾತೃ ನಿರುಪದ್ರವ ಸತ್ತಾಮಾತ್ರಸತ್ಯ . . . ಎಂಬಿವು ಮೊದಲಾದವೇ ಅದ್ವೈತಬ್ರಹ್ಮಪರ್ಯಾಯನಾಮಂಗಳಕ್ಕುಂ (ಏಕೀಕ. ೨೭); ಸತ್ಯವೆಂದರೂ ಜ್ಞಾನವೆಂದರೂ ಅನಂತವೆಂದರೂ ಬ್ರಹ್ಮವೆಂದರೂ ಒಂದೇ (ಭಾರದ. ೧೧೮). ೧೦. ನಿಜವನ್ನು ಹೇಳುವವನು ; ಸತ್ಯವಂತ : ನಿನ್ನಂತ ಸತ್ಯರೀ ಕ್ಷಿತಿಯೊಳಿನ್ನಾರುಂಟು (ಪಚಕಾ. ೧೪-೧೦); ಸತ್ಯರ ನುಡಿ ತೀರ್ಥ ನಿತ್ಯರ ನಡೆ ತೀರ್ಥ (ಸರ್ವಜ್ಞ. ೪೦೦). ೧೧. [ಜೈನ] ಆತ್ಮನ ದಶಧರ್ಮಗಳಲ್ಲಿ ಒಂದು : ಉತ್ತಮಕ್ಷಮಾಮಾರ್ದವಾರ್ಜವಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ ಬ್ರಹ್ಮಚರ್ಯಾಪರ್ಯಾಪ್ತದಶಧರ್ಮಂಗಳುಮಂ ಕೈಕೊಂಡು (ಆದಿಪು. ೭-೩೦ ಪ). ೧೨. ಗೃಹಸ್ಥರು ಅನುಸರಿಸಬೇಕಾದ ಐದು ಬಗೆಯ ಅಣುವ್ರತಗಳಲ್ಲಿ ಒಂದು ; ನಿಜವನ್ನು ನುಡಿಯುವುದು ; ಸುಳ್ಳುಹೇಳದಿರುವುದು : ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಪರಿಗ್ರಹಪರಿಮಾಣ ಈ ಐದು ಅಣುವ್ರತಗಳನ್ನೂ . . . ಪಾಲಿಸುವವನು ವ್ರತಿಕಶ್ರಾವಕನೆನ್ನಿಸಿಕೊಳ್ಳುವನು (ಜೈನಪ. ೪೯೯).

ಸತ್ಯಕಾನೀನ = ನಿಜ ಹೇಳುವುದರಲ್ಲಿ ಕರ್ಣನಂತಿರುವವನು ; ಒಂದು ಬಿರುದು : ಮಹಾಪ್ರಚಣ್ಡದಣ್ಡನಾಯಕಂ ವಾಹನವಸ್ತುನಾಯಕಂ ಸತ್ಯಕಾನೀನಂ ನೀತಿನಿಧಾನಂ (ಸೌಕಾ. XX. ೬೦-೬; 1088). **ಸತ್ಯಪಕಾಶ** = ಸತ್ಯವನ್ನು ಎತ್ತಿ ಹಿಡಿಯುವವನು ; ಒಂದು ಬಿರುದು : ಪೊಸಸುಗ್ಗಿಯನಾರ್ದಿಸೆ ನಾಡು ನಾಡೆ ಸೌಖ್ಯಾಲಯವಾಗೆ ಮಾಡಿದುದು ಸತ್ಯಪಕಾಶನ ರಾಜವೈಭವಂ (ಎಕ. VII. ೨ಕಾಂ. ೨೩೬-೨೮; 1173). **ಸತ್ಯಪರ** = ನಿಜದ ಪಕ್ಷ ವಹಿಸುವವನು ; ಸತ್ಯವಂತ ; ಒಂದು ಬಿರುದು : ದಾನವಿನೋದಿ ಸತ್ಯಪರ [ಆ]ಶ್ರಿತಕಲ್ಪಮಹೀಜ (ಸೌಕಾ. XX. ೭೦-೧೦; 1108). **ಸತ್ಯರತ್ನಾಕರ** = ನಿಜದಲ್ಲಿ ಸಮುದ್ರದಂತಿರುವವನು; ಒಂದು ಬಿರುದು : ಜನಕಂ . . . ವಿಶಿಷ್ಟೇಷ್ಟನಿದಾನಂ ಸತ್ಯರತ್ನಾಕರನೆನಿಸಿದ ಗೋವಿಂದರಾಜಂ (ಸುಖಮಾ. ೧-೫೫); ಜಗದ್ವಿದಿತಾಷ್ಟಾದಸಾಶ್ವಮೇಧದೀಕ್ಷಿತ ಕುಳಪ್ರಸೂತಂ ಸತ್ಯರತ್ನಾಕರಂ (ಸೌಕಾ. XX. ೪೧-೯; 1066); ವಿಳಾಸವಲ್ಲಭಂ ಸತ್ಯರತ್ನಾಕರಂ ಗಳಗಂಡಗತ್ತರಿ . . . ಕುಮಾರ ಬೊಂಮದೇವರಸರು (ಕಾ. IV. ೪೩-೩; 1264). **ಸತ್ಯರಾಧೇಯ** = ಸತ್ಯಕಾನೀನ : ದಾನವಿನೋದ ರಿಪುಕುರುಂಗಕಂಠೀರವ X X X ಸತ್ಯರಾಧೇಯ (ಎಕ. XII. ೨ಕಾ. ೪೦-೪೮; 1040); ಸಾಹಸವೆನತೇಯಂ ಸತ್ಯರಾಧೇಯಂ (ಕಾಅ. ೧-೧ ೨; 1092). **ಸತ್ಯಾವಲೋಕ** = ಸತ್ಯದರ್ಶಿಯಾದವನು ; ಒಂದು ಬಿರುದು : ರಾಯಕುಮಾರಚಮತ್ಕಾರಂ ಕೀರ್ತ್ಯರ್ಜವಲ್ಲರೀವಳಯಿತತ್ರಿಲೋಕಂ ಸತ್ಯಾವಲೋಕಂ (ಸೌಕಾ. XX. ೪೦-೧೩; 1066). [ಸಂ.]

ಸತ್ಯಂಕಾರ (ನಾ). ೧. ಆಣೆ; ಪ್ರಮಾಣ; ಪ್ರತಿಜ್ಞೆ : "ಸತ್ಯಂಕಾರ – ಸಹಿ ಮಾಡೋಣ, ನಿಶ್ಚಯವಾಗಿ ಮಾಡುತ್ತೇನೆಂದು ಒಪ್ಪಿಕೊಳ್ಳೋಣ" (ಗಂಗಾಮ. ೬೨೦). ೨. ವ್ಯಾಪಾರದ ಒಪ್ಪಂದವಾದಾಗ ಮುಂಗಡವಾಗಿ ಕೊಡುವ ಹಣ ; ಅಗಾವು : "ಸತ್ಯಾಪನಂ, ಸತ್ಯಂಕಾರಃ, ಸತ್ಯಾಕೃತಿಃ – ೩ ವ್ಯಾಪಾರದ ಒಪ್ಪಂದಕ್ಕೂ ಸಂಚಕಾರಕ್ಕೂ ಹೆಸರುಗಳು" (ಸದ್ಗಾಂತಿ. ೨೯೦). [ಸಂ.]

ಸತ್ಯಕಾಮ (ನಾ). ೧. ನಿಜ ಹೇಳುವುದರಲ್ಲಿ ಆಸೆಯುಳ್ಳವನು ; ಸತ್ಯವಂತ : ಈತನಲೆ ಸತ್ಯಕಾಮನುಮಾತನೆ ಸತ್ಯಪ್ರತಿಜ್ಞನು (ವಸ್ತವಂ. ೬-೩೯). ೨. ಜಾಬಾಲಿಯೆಂಬ ಋಷಿಯ ಮಗ. [ಸಂ.]

ಸತ್ಯದೂರ (ನಾ). ನಿಜಕ್ಕೆ ದೂರವಾದುದು; ಸುಳ್ಳು : ವೇದಋಷಿಗಳಿಗೆ ಸೌಂದರ್ಯಪ್ರಿಯತೆ ಇರಲಿಲ್ಲವೆನ್ನುವುದಾಗಲೀ ಅವರಿಂದ ಕಲಾಕೃತಿಗಳು ರಚಿತವಾಗಲಿಲ್ಲವೆನ್ನುವುದಾಗಲೀ ಸತ್ಯದೂರವಾದ ಸಂಗತಿಗಳು (ಸೌಂದಸ. ೧೧೫). [ಸಂ.]

ಸತ್ಯದೃಷ್ಟಿ (ನಾ). ವಾಸ್ತವದೃಷ್ಟಿ ; ನಿಜವಾದ ನೋಟ : ಶರಣನದು ಸತ್ಯದೃಷ್ಟಿ (ನಪ್ರಕಾ. ೧೩); ಸೌಂದರ್ಯದ ಅನುಭವವು ಸತ್ಯದೃಷ್ಟಿ ಮತ್ತು ಏಷ್ಣೆಗಳನ್ನು ಅಪೇಕ್ಷಿಸುತ್ತದೆ (ಶತ್ರಿವಿ. ೨). [ಸಂ.]

ಸತ್ಯಪಾಠ (ನಾ). [ಗ್ರಂಥಸಂ] ಕವಿಯೇ ರಚನೆ ಮಾಡಿದ ಕೃತಿಯ ಲಿಖಿತ ಭಾಗ, – ನಿಜವಾದ ಪಾಠ ; ಮೂಲಪಾಠ : ತಿದ್ದುಪಡಿಯನ್ನು ಸತ್ಯಪಾಠವೆಂದೇ ಭಾವಿಸಲು ಸಿದ್ಧವಿಲ್ಲವಾದರೂ ಅದು ಸತ್ಯಪಾಠವಾಗಿರಬಹುದಾದ ಸಾಧ್ಯತೆಯೇನೋ ಇದೆ (ಧಾರಕ. ೮೦). [ಸಂ.]

ಸತ್ಯಪ್ರತಿಜ್ಞ (ನಾ). ಮಾಡಿದ ಪ್ರತಿಜ್ಞೆಯನ್ನು ದಿಟವಾಗಿ ಪೂರೈಸುವವನು : ಸತ್ಯಪ್ರತಿಜ್ಞನೆನೆ ಕುರುವತ್ಕೂರುಕಿರೀಟಭಂಗಮಂ ಪಡೆದು ಜಗತ್ಪುತ್ರ ಕೃತಕೃತ್ಯನೆನಿಸದ ಸತ್ಕಾಶ್ರಯವೆಸರ್ಗ ಮುಯ್ಯನಾಪನೆ ಭೀಮಂ (ಗದಾಯು. ೧-೬೪); ಈತನೆ ಸತ್ಯಪ್ರತಿಜ್ಞನಿವನೆ ಕೃತಜ್ಞಂ (ವಸ್ತವಂ. ೬-೩೯). [ಸಂ.]

ಸತ್ಯಮಂತ (ನಾ). ನಿಜವನ್ನು ಹೇಳುವವನು ; ಸತ್ಯಸಂಧ : ನಿಯೋಗಿಗಳೆಲ್ಲಂ . . . ಪ್ರತಿಕಣ್ಣಚನ್ನನಿಂ ಪಿರಿಯರೆ . . . ಸಲೆ ಸತ್ಯಮನ್ತರೆ (ಸೌಕಾ. XI-ii, ೧೪೭-೫೩; 1099).

[< ಸಂ. ಸತ್ಯವತ್]

ಸತ್ಯಯುಗ (ನಾ). = ಸತ್ಯ ೮ : ಈ ಕಲಿಯುಗದಲ್ಲೂ ಸತ್ಯಯುಗದಲ್ಲಿಯ ಅಸಾಧಾರಣವಾದಂತಹ ಪವಾಡ ನಡೆಯುವುದೆ (ಕಾಂತಲಾ. ೨೬೯). [ಸಂ.]

ಸತ್ಯರತ (ನಾ). ಸತ್ಯದಲ್ಲಿ ಆಸಕ್ತಿಹೊಂದಿದವನು : ಸತ್ಯರತಂ ಶಾಸ್ತ್ರವಿದಂ . . . ತನ್ನಾನಿವಾಸೋದ್ಯವಂ (ಜಾತಕ. ೧೭-೬). [ಸಂ.]

ಸತ್ಯರ್ಥ (ನಾ). = ಸತಿಸಪ್ತಮಿ : ಇನಗಮುದುಮಂನಮಂನೆಗಮಿನಮಲೊಡಂ ಸೊನ್ನವರಸು ಸತ್ಯರ್ಥದೆಕಾರನಿಜಸ್ಥಾನದೊಳಪ್ಪುವಿವನುಕೂಲಂ ಮತ್ತೆಕಾರದಾದಿಯೊಳಲೊಡಂ (ಶಮುದ. ೨೪೬). [ಸಂ.]

ಸತ್ಯಲೋಕ (ನಾ). = ಸತ್ಯ ೭ : ಭುವರ್ಲೋಕದ ಸ್ಥಾವರಕ್ಕೆ ಸತ್ಯಲೋಕದ ಅಗ್ರವಣೆಯಲ್ಲಿ ಮಜ್ಜನಕ್ಕೆಳೆದು (ಅವಚಂ. ೪೬-೧೯೭); ಪರಮಜಂಗಮದಲ್ಲಿ ಹದಿನಾಲ್ಕುಲೋಕಂಗಳಡಗಿರ್ಪವು ನೋಡಾ ಅದೆಂತೆಂದೊಡೆ . . . ಮೂರ್ಧ್ನಿಯಲ್ಲಿ ಸತ್ಯಲೋಕ (ಅವಿಂಡೇ. ೧೪೨-೧೩೪). [ಸಂ.]

ಸತ್ಯವಂತ (ನಾ). = ಸತ್ಯಮಂತ : ಸತ್ಯವಂತರಿಗಿದು ಕಾಲವಲ್ಲ ದುಷ್ಟಜನರಿಗೆ ಸುಭಿಕ್ಷಕಾಲ (ಪುರಂದ. ೧-೧೫೧ ಪಲ್ಲವಿ). [ಸಂ. ಸತ್ಯವತ್]

ಸತ್ಯವಾಕ್ಯ (ನಾ). ನಿಜವನ್ನು ಹೇಳುವವನು ; ಸತ್ಯವಂತ : ಧರಣೀಪುತ್ರನಿವಾಸದೊಳ್ ನಿಲೆ ಬುಧಂ . . . ಧನಿ ಸತ್ಯವಾಕ್ಯನೆನಿಕುಂ (ಜಾತಕ. ೧೭-೨೨); ಶ್ರಿಯುತ ಶಾಂತಿವರ್ಮ ಪೆಜರ್ . . . ನಿನ್ನವೊಲುದಾರರೆ ಬೀರರೆ ಸತ್ಯವಾಕ್ಯರೇ (ಪುಷ್ಪಸ. ೧-೭೮).

ಸತ್ಯವಾಕ್ಯಪೆರ್ಮ್ಮನಡಿ, ಸತ್ಯವಾಕ್ಯಪೆರ್ಮ್ಮಾಡಿ, ಸತ್ಯವಾಕ್ಯಪೆರ್ಮ್ಮನಡಿ = ಸಾಮಾನ್ಯವಾಗಿ ಗಂಗವಂಶದ ಅರಸರಿಗೆ ಸಲ್ಲುತ್ತಿದ್ದ ಒಂದು ಬಿರುದು : ಸ್ವಸ್ತಿ ಸತ್ಯವಾಕ್ಯಪೆರ್ಮ್ಮನಡಿಗಳ ಪಟ್ಟಂಗಟ್ಟಿದ ಪದಿನಯ್ದು ವರಿಶದನ್ದು (ಎಕ. II. ೩೪೪-೧; 884 ?); ಶ್ರೀ ಸತ್ಯವಾಕ್ಯ ಪೆರ್ಮ್ಮಾಡಿ (ಮೈಆ. ೧೪೩, ೨೧-೧; 896);

ಸ್ವಸ್ತಿಶ್ರೀ ಸತ್ಯವಾಕ್ಯಪೆರ್ಮ್ಮಾನಡಿಗಳೆ ಪಟ್ಟಂಗಟ್ಟಿದ ಪಂನೆರಡನೆಯ ವರ್ಷದೊಳ್ (ಮೃಕಂ. ೧೯೪೬, ೧೯-೧; ?). [ಸಂ.]

ಸತ್ಯವಾದಿ (ನಾ). = ಸತ್ಯಮಂತ : ನೀಂ ಸತ್ಯವಾದಿಯಯ್ (ಪಜ್ಜೂರಾ. ೧೬-೨೪); ಎಲ್ಲ ಸತ್ಯವಾದಿಯಾದ ತಪಸ್ವಿಯೆ . . . ಈಕೆಯನ್ನು ವಂಚಿಸಿದುದರಿಂದ ನಮಗೆ ಬರತಕ್ಕುದೇನು? (ಶಾಕುಂತ. ೭೧-೧೫). [ಸಂ. ಸತ್ಯವಾದಿನ್]

ಸತ್ಯವ್ರತ (ನಾ). ನಿಜವನ್ನು ಹೇಳುವುದೇ ನಿಯಮವಾಗುಳ್ಳ ಕಟ್ಟಳೆ,—ನೇಮ : ಸತ್ಯವ್ರತದ ಕಥೆಯಂ ಬೆಸಸುವುದು (ಧರ್ಮಾಮೃ. ೧೧-೨); ಶಂಕರ ಎರಿಂಚಾದಿಗಳು ಕರ್ಣನ ಪರಮಸತ್ಯವ್ರತವ ಕೊಂಡಾಡಿದರು ಅಕಟೆನುತ (ಕುಮಾಕ. ೨೭-೨೯). [ಸಂ.]

ಸತ್ಯಶರಣ (ನಾ). ಸತ್ಯಸಂಧನಾದ ಶರಣ : ನಿಮ್ಮಲ್ಲಿ ಸಮ್ಯಕ್ಕರಾದ ಸತ್ಯಶರಣರ ಕಂಡು ಕೂಡಲಸಂಗಮದೇವಾ ಅವರನಯ್ಯಯೆಂಬೆನು (ಬಸವ. ೮೯೮); ಚಿತ್ರಶುದ್ಧಿಯವರು ಸತ್ಯಶರಣರವರು ಬೆತ್ತ ಹಿಡಿದು ಪರಪೂತ ಏರುವದು ತಾ ಕಂಡು ಕತ್ತು ಬಾಗಿಸಿ ಸಿದ್ಧ ಶರಣೆಂದ (ಸಿದ್ಧವ. ೫-೩೦). [ಸಂ.]

ಸತ್ಯಶಾಪ (ನಾ). ನಿಜವಾದ ಶಾಪ ; ಸತ್ಯವಾದ ಶಾಪ : ಬಸವರಾಜನ ಸತ್ಯಶಾಪವು ಮಸದೊರಸಿ ಹಾಳಾಯ್ತು ಕಟಕದ ಪಸರವು (ಬಸಪು. ೬೧-೮೦). [ಸಂ.]

ಸತ್ಯಶುದ್ಧ (ಗು). ಸತ್ಯಸಂಧತೆಯಿಂದ ಕೂಡಿದ : ಸತ್ಯಶುದ್ಧದೇವರಿಗೆ ಧ್ಯಾನ ಮೌನ ಅನುಷ್ಠಾನವುಂಟು (ಬಸವ. ೯೩೪). [ಸಂ.]

ಸತ್ಯಸಂಧ (ನಾ). ನಿಜವನ್ನು ಹೇಳುವವನು ; ಸತ್ಯವಂತ : ಸತ್ಯಸಂಧಂ ದಯಾನಿಧಿ ಶಿವಜ್ಞಾನಸಂಪನ್ನಂ . . . ಅಂಜಬೇಡಂಜಬೇಡ ಎನೆ (ಬಸಂ. ೧೨-೫೧); ಸತ್ಯಸಂಧಂ ಭೀಷ್ಮನೆಂದು ಮೂಲೋಕದೊಳ್ಖ್ಯಾತನಾಗಿಹಂ (ಚಿಮಿಭಾ. ೯-೩೦). [ಸಂ.]

ಸತ್ಯಸಂಧತೆ (ನಾ). ನಿಜವನ್ನು ಹೇಳುವಿಕೆ ; ಪ್ರಾಮಾಣಿಕತೆ : ದೂರಯೇ ನಿನ್ನ ಸತ್ಯಸಂಧತೆಗೆ ಮೆಚ್ಚಿದೆವು (ನೀತಿಚಿಂ. XIV, ೨೧); ಸತ್ಯಸಂಧತೆ, ಶರಣಾಗತರಕ್ಷಣೆ . . . ಮಾನವಧರ್ಮದ ವಿವೇಚನೆಯೇ ಈ ಕಥೆಗಳ ತತ್ವವಾಗಿದೆ (ಭಾರದ. ೧೦೨).

[ಸಂ. ಸತ್ಯಸಂಧತಾ]

ಸತ್ಯಸಂಧಾನ (ನಾ). ನಿಜದೊಡನೆ ಹೊಂದಿಕೊಳ್ಳುವಿಕೆ; ಸತ್ಯಸಂಧತೆ; ಪ್ರಾಮಾಣಿಕತೆ : ಜನರ ಸತ್ಯಸಂಧಾನವಂ ನೋಡಲೆಂದುಳ್ಳುದಲ್ಲವ ಕೊಂಡಡೆನೆಂಬನೋ ಎಂದು ಕಾಡಿ ನೋಡಿದೆನ್ನೆಸೆ (ಪಚಕಾ. ೧೪-೧೩). [ಸಂ.]

ಸತ್ಯಹೀನ (ನಾ). ನಿಜವನ್ನು ಅರಿಯದವನು ; ಸತ್ಯದೂರನಾದವನು : ನಿನ್ನನೇನೆಂಬೆನಿದು ಪೂಸತನಗೆ ಮಾಣ್ಬರೇ ಸತ್ಯಹೀನಂಗೆ ನೆಜ ಮುಳಿವುದಂ (ನಂಬಿರ. ೧೫-೧೨೯). [ಸಂ.]

ಸತ್ಯಾಂಶ (ನಾ). ನಿಜವಾದ ವಿವರ,—ಸಂಗತಿ ; ವಾಸ್ತವಾಂಶ : ಇದು ಸತ್ಯಾಂಶದಿಂದ ಎಷ್ಟೇ ದೂರವಿದ್ದರೂ ಒಂದು ವಿಚಾರ ಗಮನಾರ್ಹ (ದೇವಪೂ. ೪೯); ಈಗಲಾದರೂ ನೀನು ಸತ್ಯಾಂಶವನ್ನು ತಿಳಿಸಿ . . . ಋಣದಿಂದ ಮುಕ್ತನಾಗಬೇಕಾದ್ದು ಅತ್ಯವಶ್ಯಕ (ವೀರಯೋ. ೪೯). [ಸಂ.]

ಸತ್ಯಾಗ್ರಹ (ನಾ). ೧. ಸತ್ಯಸ್ಥಾಪನೆಗಾಗಿ (ಅನ್ಯಾಯದ ವಿರುದ್ಧ) ಆತ್ಮಬಲದಿಂದ ನಡೆಸುವ ಶಾಂತಿಪೂರ್ವಕ ಸಂಘರ್ಷ : ಒಂದಾದ ಮೇಲೊಂದು ಹೋರಾಟ, ಸತ್ಯಾಗ್ರಹ (ಆತ್ಮಾರ್ಪ. ೧೦೮). ೨. ಮುಷ್ಕರ ; ಸಂಪು : ಈ ಬನವು . . . ಗೃಹಘಾತಯವರ ನಿತ್ಯಸತ್ಯಾಗ್ರಹದಲ್ಲಿ ಇನ್ನಷ್ಟು ಹಾಳಾಗಿದ್ದವು (ಚಿತಸ. ೩೫); ಅವರ ತಾಯಿ ಮಾತ್ರ ಉಪವಾಸವ್ರತ ಕೈಕೊಂಡು ಮಗ ಮೈಲಿಗೆಯಾದುದಕ್ಕೆ ಸತ್ಯಾಗ್ರಹ ಹೂಡಿದ್ದಳು (ದಂಬಿಸಾ. ೭೧). [ಸಂ.]

ಸತ್ಯಾಗ್ರಹಚಳುವಳಿ (ನಾ). = ಸತ್ಯಾಗ್ರಹ ೧ : ಸತ್ಯಾಗ್ರಹಚಳುವಳಿಯು ಅತ್ಯಂತ ಬಿರುಸಿನಿಂದ ದೇಶದ ಮೂಲೆಮೂಲೆಗಳಲ್ಲೂ ನಡೆಯುತ್ತಿತ್ತು (ಆತ್ಮಾರ್ಪ. ೧೩೮).

[ಸತ್ಯಾಗ್ರಹ + ಚಳುವಳಿ (< ಚಳವಳಿ)]

ಸತ್ಯಾಗ್ರಹಿ (ನಾ). ಸತ್ಯಸ್ಥಾಪನೆಗಾಗಿ ಆತ್ಮಬಲದಿಂದ ಹೋರಾಡುವವನು ; ಸತ್ಯಾಗ್ರಹ ಮಾಡುವವನು : ಸ್ವಾತಂತ್ರ್ಯಸಂಗ್ರಾಮದಲ್ಲಿ ತನ್ನ ಜೀವವನು ಲೆಕ್ಕಿಸದೆ ಹೋರುವನು ವೀರಸತ್ಯಾಗ್ರಹಿ (ಪಾಂಚಜ. ೨೦-೨). [ಸಂ. ಸತ್ಯಾಗ್ರಹಿನ್]

ಸತ್ಯಾಚರಣೆ (ನಾ). ನ್ಯಾಯಪರಿಪಾಲನೆ ; ಸತ್ಯವನ್ನು ಬಿಡದೆ ಇರುವುದು : ನಾವು ಸತ್ಯಾಚರಣೆಗಾಗಿ ರುಕ್ಮಾಂಗದ ಹರಿಶ್ಚಂದ್ರ ಭೂಚಕ್ರಪಾಲರಾತ್ಮಜರ ಮೂಗ ನೋಡಿದರೆ ಹೇಳೆಂದು ನುಡಿದರವರು (ಚಿಮಿಭಾ. ೧೧-೩೦). [ಸಂ. ಸತ್ಯಾಚರಣ]

ಸತ್ಯಾನಾಶ (ನಾ). ಸರ್ವನಾಶ; ವಿನಾಶ: ಅವನು ಸತ್ರರೂ ತನ್ನ ದ್ವೇಷ ಕಸಿದುಕೊಂಡಿದ್ದಾನೆ ; ಸೇಡಿನ 'ಸತ್ಯಾನಾಶ' ಮಾಡಿದ್ದಾನೆ (ಬನಸಿ. ೪೫).

[<— ಹಿಂ. ಸತ್ಯಾನಾಶ್; ಮರಾ. ಸತ್ಯಾನಾಶ್, ಸತ್ಯನಾಶ್, ಸತ್ಯನಾಸ್]

ಸತ್ಯಾನೃತ (ನಾ). ೧. ಸತ್ಯ ಮತ್ತು ಸುಳ್ಳು ; ನಿಜಸುಳ್ಳುಗಳನ್ನು ಹೊಂದಿರುವಿಕೆ : ಆತ್ಮಜ್ಞಾನಾಭ್ಯಾಸಿಯಾಗಿ ಸ್ನಾನ ಶೌಚ ಸತ್ಯಾನೃತ ಕಾಮ ಕ್ರೋಧ . . . ದರ್ಪಾದಿಗಳಂ ಬಿಟ್ಟು (ವಿವೇಕ. ೧೨೮). ೨. ವ್ಯಾಪಾರ ; ಮಾರಾಟ. [ಸಂ.]

ಸತ್ಯಾನ್ವೇಷಣೆ (ನಾ). ನಿಜವನ್ನು ಹುಡುಕುವುದು ; ಸತ್ಯದ ಪರಿಶೋಧನೆ : ಸತ್ಯಾನ್ವೇಷಣ, ಅನ್ವೇಷಣೆ ಸಾಹಸ, ಸೌಂದರ್ಯಾನುಭವ, ಕರ್ಮಕೌಶಲ ಮತ್ತು ಅಂತಃಶಾಂತಿ ಇವು ಐದೂ ಉತ್ತಮಸಂಸ್ಕೃತಿಯ ಲಕ್ಷಣಗಳು (ಋಜ್ಞಾನ. ೯೯ ಪೀಠಿಕೆ).

[ಸಂ.]

ಸತ್ಯಾಭಾಸ (ನಾ). ೧. ನಿಜದಂತೆ ತೋರುವುದು ; ಸುಳ್ಳು : ಸತ್ಯಾಭಾಸವನ್ನು ಕಂಡರ ನನಗೆ ತುಂಬ ಅಸಹನೆ (ಬಂಕಿಮ. ೪೯೯). ೨. [ಜೈನ] ಲೋಕಾಂತಿಕ ದೇವತೆಗಳಲ್ಲಿ ಒಂದು ವರ್ಗಕ್ಕೆ ಸೇರಿದವನು : ಆದಿತ್ಯವಹ್ನಿಸುಧೃದೊಳ್ ಚಂದ್ರಾಭಾಸಸತ್ಯಾಭಾಸರುಂ (ತತ್ತ್ವಪ್ರ. ೨೨೨). [ಸಂ.]

ಸತ್ಯಾರ್ಥ (ನಾ). ನಿಜವಾದುದು ; ಸತ್ಯವಾದುದು : ತೀರ್ಥಕರಂ ಭವ್ಯಜನಸ್ವಾರ್ಥಕರಂ ನಮಗೆ ಪುತ್ರನಾದಪನಿದು ಸತ್ಯಾರ್ಥಂ (ಪುಷ್ಪಪು. ೯-೧೧೦); ಸ್ವಕವೋಲಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೇ ಸಂಗ್ರಹಿಸಿ (ವಿವೇಕ. ೨).

[ಸಂ.]

ಸತ್ಯಾರ್ಥಿ (ನಾ). ನಿಜವನ್ನು ಗುರಿಯಾಗಿಟ್ಟುಕೊಂಡಿರುವವನು ; ಸತ್ಯಾನ್ವೇಷಿಯಾದವನು: ಯಾರನ್ನಾದರೂ ಅನ್ಯಾಯವಾಗಿ ಸೆರೆಹಾಕುವ ಆಡಳಿತದಲ್ಲಿ ಸತ್ಯಾರ್ಥಿಯ ನಿಜವಾದ ಸ್ಥಾನ ಸೆರೆಮನೆಯೇ ಸರಿ (ಪುನರು. ೪೦೩).

[ಸಂ. ಸತ್ಯಾರ್ಥಿನ್]

ಸತ್ಯಾಶ್ರಯ (ನಾ). ೧. ನಿಜಕ್ಕೆ ಆಕರನಾದವನು ; ಸತ್ಯಕ್ಕೆ ಆಶ್ರಯನಾದವನು : ಎರಡನೆಯ ರುದ್ರನೆನಿಸುವ ಮಸಿಷ್ಣನ ಶಿಷ್ಯನರಿದೆನಿಪ ರುದ್ರಾರ್ಚಕಂ ಗಿರಿಜೆ ಗಣಕುಲಂಬೆರಸು ರುದ್ರನನೆಳೆದು ತಂದು ಕೊಡಲಾರ್ಪ ಸತ್ಯಾಶ್ರಯಂ (ಪಚಕಾ. ೧೧-೩೯). ೨. ಸಾಮಾನ್ಯವಾಗಿ ಕಲ್ಯಾಣಿಚಾಲುಕ್ಯವಂಶದ ಅರಸರಿಗೆ ಸಲ್ಲುತ್ತಿದ್ದ ಒಂದು ಬಿರುದು : ಸಮಸ್ತಧಾತ್ರಿವಳಯಕ್ಕೆಂದುಂ ದಿಶಾದಂತಿಗಳ್ಪರೆಗಂ ತಂದೆಯ ಕೀರ್ತಿಯೇಂ ಬಳೆದುದೋ ಸತ್ಯಾಶ್ರಯಂ ಧನ್ಯನೋ (ಗದಾಯು. ೧-೧೨).

ಸತ್ಯಾಶ್ರಯಕುಲತಿಲಕ, ಸತ್ಯಾಶ್ರಯಕುಳತಿಳಕ = ಸಾಮಾನ್ಯವಾಗಿ ಕಲ್ಯಾಣಿ ಚಾಲುಕ್ಯವಂಶದ ಅರಸರಿಗೆ ಸಲ್ಲುತ್ತಿದ್ದ ಒಂದು ಬಿರುದು : ಸತ್ಯಾಶ್ರಯಕುಲತಿಲಕನುಂ ಇಱಿವಬೆಡಂಗನುಂ . . . ಸಾಹಸಾಂಕನುಮೆನಿಸಿದ ಭೀಮಸೇನನಂತು ಆರೂಢಕೋಪನುಂ ಪ್ರತಿಜ್ಞಾರೂಢನುಮಾಗಿ (ಗದಾಯು. ೨-೧ ವ); ಶ್ರೀಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟಾರಕಂ ಸತ್ಯಾಶ್ರಯ ಕುಳತಿಳಕಂ (ಸೌಇಇ. XX, ೪೬-೩; 1072); ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ (ಎಕ. II (R), ೫೩೨-೪; 12ನೆಯ ಶತ). [ಸಂ.]

ಸತ್ಕೋದಕ (ನಾ). [ವೀಶೈ] ಹತ್ತು ವಿಧವಾದ ಪಾದೋದಕಗಳಲ್ಲಿ ಒಂದು : ಆ ಜಂಗಮಕ್ಕೆ ನಮಸ್ಕರಿಸಿ ಆ ಭಾಜನವನ್ನು ತನ್ನ ಕ್ರಿಯೆಗೆ ಇಟ್ಟುಕೊಂಡಂತಹದೇ ಸತ್ಕೋದಕವೆನಿಸುವುದು (ಚೆನ್ನವ. ಕ. ೭೮-೧೭೩); ಮುಂತೆ ಪರಬ್ರಹ್ಮರಂಧ್ರದೊಳೆರ್ದ ಸತ್ಕೋದಕವ ಚರಣದಿಂದೆ ಪಡೆದು (ಮೃಲಾರ. ೧-೧೦). [ಸಂ.]

ಸತ್ರ (ನಾ). ೧. ಯಜ್ಞ ; ಯಾಗ : "ಯಾಗಃ. . . ಸಮ, ಸತ್ರಂ — ಈ ೧೨ ಯಾಗಂ" (ಹಲಾಯು. ೬೮ ೩೬೦); ಮಸುವಲಾ ಪೂರ್ವದಲಿ ನೀನರ್ಚಿಸಿದೆ ನನ್ನನು ಸತ್ರದಲಿ (ನಿಘಾಗ. ೩-೨-೫೯). 'ದೇವಸತ್ರ' ಪರಾ. ೨. ವಿಶೇಷವಾಗಿ ಹದಿಮೂರು

ದಿನಗಳಿಂದ ನೂರುದಿನಗಳವರೆಗೆ ಜರುಗುವ ಯಾಗ : 'ಸತ್ರಯಾಗ' ಪರಾ. ೩. ನೈವೇದ್ಯ ; ಏಡೆ. ೪. ಉಚಿತವಾಗಿ ಆಹಾರದಾನ ನಡೆಯುವ ಅಥವಾ ಪ್ರವಾಸಿಗರು ಇಳಿದುಕೊಳ್ಳಲು ಅನುಕೂಲವಾದ ಧರ್ಮಶಾಲೆ ; ಚತ್ರ : "ತಳಿ – ಸೇಚನೇ (ಚಮುಕಿಸು). ಸತ್ರೇಚ (ಸತ್ರ)" (ಶಮಧಾ); ಸ್ವಧರ್ಮ್ಮದಿಂ ನಡೆಯಿಸುವ ಸತ್ರಕ್ಕೆ ಬ್ರಾಹ್ಮಣಯಡುವಳ್ (ಎಇ XVI, ೬-೬೮: 978); ಎಟ್ಟೊಂಟೆ ತಪೋಧನರ ಸತ್ರಕ್ಕೆ ಮತ್ತರ್ಪನ್ನೆರಡು (ಎಇ. XX, ೬೭-೧೮; 1012); ಕಾಶಿ. ಕಂಚಿ, ಶ್ರೀರಂಗ ಮುಂತಾದ ದಿವ್ಯಕ್ಷೇತ್ರಗಳಲ್ಲಿ ಪ್ರತಿದಿನದಲ್ಲಿಯೂ ಅನ್ನದಾನ ನಡವಂತೆ ಸತ್ರಗಳನ್ನುಂಟುಮಾಡಿದರು (ಮಹಾವಂ. II. ೧೫೯). 'ಅನ್ನಸತ್ರ' ಪರಾ. ೫. ಔದಾರ್ಯ ; ಧಾರಾಳತನ ; ದಾನಶೀಲತೆ. ೬. ಸಂಪತ್ತು ; ಐಶ್ವರ್ಯ. ೭. ಆಶ್ರಯಸ್ಥಾನ ; ನೆಲೆ : ಮರಗಳ ವಡ್ಡಾಗರಂ ದವಾಗ್ನಿಯ ಸತ್ರಂ . . . ಕೇಸರಿಗಳ ಸರಿ ಪರ್ವಿದಡವಿ ಪಡೆದುದಗುರ್ವಂ (ಚಂದ್ರಪ್ರ. ೫-೪೭); ಧಾತ್ರಿಯೊಳಾವನ್ನಾಭಯಸತ್ರದ ಧೃತದೀಕ್ಷರಲ್ಲ ಪುರುಕುಲದರಸರ್ (ಶಾಕುಂತ. ೨೮-೫೧). ೮. ಆವರಣ ; ಹೊದಿಕೆ. ೯. ಕಾಡು; ಅರಣ್ಯ : "ಅರಣ್ಯಂ, ಅಟವೀ, ಸತ್ರಂ . . . ದುರ್ಗಂ – ಈ ೯ ಅಡವಿ" (ಹಲಾಯು. ೩೫-೫೭). ೧೦. ನ್ಯಾಯನಿರ್ಣಯಕ್ಕಾಗಿ ಒಂದು ಬಾರಿ ಸೇರುವ ಸಭೆ ,–ಒಂದು ಅಧಿವೇಶನ : 'ಸತ್ರನ್ಯಾಯಾಧೀಶ', 'ಸತ್ರನ್ಯಾಯಾಲಯ' ಪರಾ. [ಸಂ.]

ಸತ್ರಕಾಣಿಕೆ (ನಾ). ಧರ್ಮಶಾಲೆ ನಡೆಸಲು ಕೊಡುವ ಕಾಣಿಕೆ ,–ಕೊಡುಗೆ : ಸತ್ರಕಾಣಿಕ ಸಸೆಯಾಸೆಗಳು ಮನ್ನೆಯ ವಾಯದಾಯ ಮಾನ್ಯ ಸಲ್ಲವು (ಶಿಸಾ. XX. ೮೫-೩೧; 1124). [ಸತ್ರ + ಕಾಣಿಕೆ (< ಕಾಣ್ಕೆ)]

ಸತ್ರನಿಳಯ (ನಾ). ಧರ್ಮಶಾಲೆ ; ಚತ್ರ : ಆಶ್ರಿತಜನಕ್ಕಶೋಕನಿಳಯಮೆನಿಸಿದ ಸತ್ರನಿಳಯಂಗಳುಂ (ಪಜ್ಜಪ್ರ. ೯-೨೨ ಪ). [ಸಂ. ಸತ್ರನಿಲಯ]

ಸತ್ರನ್ಯಾಯಾಧೀಶ (ನಾ). ನ್ಯಾಯನಿರ್ಣಯಕ್ಕಾಗಿ ಒಂದು ಬಾರಿ ಸೇರುವ ಸಭೆಯ ನ್ಯಾಯಾಧಿಪತಿ : "ಜಿಲ್ಲಾನ್ಯಾಯಾಧೀಶರು" ಎಂಬ ಪದಗಳ ಅರ್ಥದಲ್ಲಿ . . . ಸತ್ರನ್ಯಾಯಾಧೀಶರೂ ಅಪರಸತ್ರನ್ಯಾಯಾಧೀಶರೂ . . . ಸೇರಿರುತ್ತಾರೆ (ಭಾದಾಸ. ೧೫೯). [ಸಂ.]

ಸತ್ರನ್ಯಾಯಾಲಯ (ನಾ). ಪ್ರಧಾನವ್ಯವಹಾರಗಳ ನ್ಯಾಯಾಸ್ಥಾನ : ಅಪರಾಧಿ ಸತ್ರನ್ಯಾಯಾಲಯಕ್ಕೆ (ಸೆಷನ್ಸ್‌ಕೋರ್ಟ್) ಒಪ್ಪಿಸಲ್ಪಟ್ಟ ಸಂದರ್ಭಗಳಲ್ಲಿ . . . ಬೇರೆ ಆರೋಪವನ್ನು ಮಾಡಬಹುದು (ಕವಿಕೋ. I. ೮೬೮). [ಸಂ.]

ಸತ್ರಯಾಗ (ನಾ). ಹದಿಮೂರರಿಂದ ನೂರುದಿನಗಳವರೆಗೂ ಜರುಗಿಸುವ ಯಾಗ,–ಯಜ್ಞ : ಸತ್ರಯಾಗಕ್ಕಾಗಿ ಏರ್ಪಾಡುಗಳು ನಡಯುತ್ತಿರಲಾಗಿ ಒಂದುದಿನ ಪರಾವಸು ತನ್ನ ಹೆಂಡತಿಯನ್ನು ನೋಡಿಬರಬೇಕೆಂದು ಬಯಸಿದನು (ವ್ಯಾಸಪ್ರ. ೧೭೩). [ಸಂ.]

ಸತ್ರಶಾಲೆ (ನಾ). ೧. ಯಜ್ಞಕಾರ್ಯಕ್ಕಾಗಿ ನಿರ್ಮಿತವಾಗಿರುವ ಪ್ರದೇಶ ; ಯಾಗಶಾಲೆ : ಮತ್ತಮೊಂದು ಪವಿತ್ರ ಸತ್ರಶಾಲೆಯಲ್ಲಿ ಹೋಮದ ಕುಂಡದಿಂ ಕಡೆಸಿಡಿಲ್ದು ಪೊದಳ್ದಿರೆ ಕಂಡು ಕೆಂಡಮಂ (ರಾಜಶೇ. ೧-೧೨೭ ಪ). ೨. ಚತ್ರ ; ಧರ್ಮಶಾಲೆ : "ಸತ್ರಶಾಲಾ, ಪ್ರತಿಶ್ರಯಃ – ಈ ೨ ಸತ್ರದ ಮನೆ" (ಹಲಾಯು. ೧೦-೧೪೨). [ಸಂ. ಸತ್ರಶಾಲಾ]

ಸತ್ರಾಣ (ನಾ). ಶಕ್ತಿಯಿಂದಿರುವುದು ; ತ್ರಾಣದಿಂದಿರುವುದು : "ಹೂಣಹೊಕ್ಕು ದುದನಲ್ ಸತ್ರಾಣದಿನೊಳಪೊಕ್ಕುದೆಂದು ತಿಳಿಗ ವಿದಗ್ಧರ್" (ಭಾರಸಿ. ೬೧); ಸಲೆ ಮಿಕ್ಕು ಸತ್ರಾಣದಲಿ ಮಿಗೆ ಸರಿಪೊಕ್ಕು ಹಿಡಿದರು ಬಿನ್ನಣದ ಚೊಕ್ಕೆಯದ ಚೋಡಿಯಲಿ (ಕುವ್ಯಾಸ. ೨-೯೬). [ಸಂ.]

ಸತ್ರಾಣ (ನಾ). ಶಕ್ತಿಯಿರುವವನು ; ಬಲಶಾಲಿ : ಛಗಯಡಗ ಮರುಬಲಗ ಗೊಡೊತ್ತುಗಳ ಬಲಿದವಯವದ ಸತ್ರಾಣಗಳ ದೇವನು ಠಾವುರಿಯಲೊದಗಿದನು ಬಾಳದಲಿ (ಕುವ್ಯಾಅ. ೧೦-೧೯). [ಸಂ. ಸತ್ರಾಣಿನ್]

ಸತ್ರಾಣಿಸು (ಕ್ರಿ).ಶಕ್ತಿ ಬರುವಂತೆ ಮಾಡು; ಬಲಗೊಳಿಸು: ಬನ್ನವಟ್ಟಿಹ ಕಪಿಕುಲಂಗಳ ಮುನ್ನ ಸತ್ರಾಣಿಸುವೆ (ಕಾಶಿರಾ. ೫೯-೨೭); ನಗಚಾಪಧರಶತ್ರು ಗರುಡಿಯೊಳ್ ಬಾಹುಮೂಲಗಳ ಸತ್ರಾಣಿಸಲೆನುತೆ ನೆಗಹುವ ಹೊಸಹೊನ್ನ ವಜ್ರಮುಷ್ಟಿಗಳಂತೆ ಜಘನದ ತಳಗಳೊಪ್ಪಿದುವು (ಮೋಷಿ. ೫೩-೧೭). [ಸತ್ರಾಣ + – ಇಸು]

ಸತ್ರಿ (ನಾ). ಯಾವಾಗಲೂ ದಾನವನ್ನು ಮಾಡುವ ಗೃಹಸ್ಥ : "ಸತ್ರೀ, ಗೃಹಪತಿಃ – ೨ ಸದಾ ದಾನವನ್ನು ಮಾಡುವವನ ಹೆಸರುಗಳು" (ಸಿದ್ಧಾಂಶಿ ೩೫೯).

[ಸಂ. ಸತ್ರಿನ್]

ಸತ್ವ$_1$ 'ಸತ್ತು' ನೋ.

ಸತ್ವ$_2$ (ನಾ). ೧. = ಸತ್ತ್ವ ೧ : ಸನ್ನೆ ಸಾವಿರ ಕಾಲಾಳಿನ ಸತ್ವಮೈ (ಸೂಮೇಶ. ೭೬); ಕೆಡಹಿ ಸತ್ವದಿ ಬಂದ ಪಡೆಯ ನೆಲೆ ತಲೆದಿ ವೀರರ ಜಜೆದು (ಪಚಕಾ. ೬-೧೫). ೨. = ಸತ್ತ್ವ ೨ : ಸತ್ವದಿಂ ಶ್ರೀವರನಾಗಿ ತೋಱುವ . . . ದೇವರ ದೇವನಾದಿಪುರುಷಂ ಜಳಶಯ್ಯೆಯೊಳಿರ್ದಪಂ (ಜಗವಿ. ೧-೩೨); ಪ್ರಕೃತಿ, ಪುರುಷ, ಜಡ, ಚೇತನ, ಸತ್ವ, ರಜಸ್ತಮೋಗುಣಗಳ ವಿಭಾಗ – ಈ ಎಲ್ಲವನ್ನು ಕುರಿತು ಸಾಂಖ್ಯದರ್ಶನ ವಿಮರ್ಶಿಸಿದೆ (ಭಾರದ. ೧೧೩). ೩. = ಸತ್ತ್ವ ೬ : "ವಿಜಿತ ಸತ್ವಾದಿಗಳು ತತ್ಪಮಕ್ಕು" (ಪುಗರಾ. ೭೭-೧೨); ಕಪ್ಪುರದ ಗಿಡದ ಹಸೀಬೇರು ಬೊಡ್ಡಿ ಟೊಂಗಿ ಎಲೆ ಇವುಗಳ ಸಣ್ಣ ಸಣ್ಣ ಚೂರು ಮಾಡಿ ಉಬ್ಬಿಗೆ ಹಾಕಿ ಸತ್ವ ತಗೆಯುವರು. ಈ ಸತ್ವವು ಬೆಳ್ಳಗೆ ಕಾಳು ಕಾಳಾಗಿರುವುದು (ಮುಜಔಯಿ. ೪-೭೧). ೪. ಜೀವಿ ; ಜಂತು : 'ಸತ್ವಬಾಧೆ' ಪರಾ. ೫. ಧೈರ್ಯ; ಸ್ಥೈರ್ಯ: "ಜೀವಚಯ ಶಕ್ತಿನಿಚಯಂ ಜೀವನ ಗಿರಿಜಾತ ತುರಗಧಾತುರ್ವಾದಂ ಗ್ರಾವಘನನವಮಸಂಖ್ಯೆಯ ತೀವಿದ ಸಲೆ ಸತ್ವಶಬ್ದಂ" (ಜಾನಾಂ. ೪೪). ೬. [ವ್ಯಾಕ] ಸಕಾರ : ಸಕಾರಂ = ಸತ್ವಂ (ಶಮದ. ೬೮ ಟೀಕೆ). [ಸಂ.]

ಸತ್ವಕ (ನಾ). ತಿರುಳು; ಸಾರ; ಕೆಚ್ಚು : ವತ್ವಕ್ಕೆ ತತ್ವಂ – ಸತ್ವಕ – ಸತ್ತುಗ (ಶಮದ. ೨೭೬ ಪೂರ್ವಾ). [ಸಂ.]

ಸತ್ವಗ (ನಾ). ಬಲವುಳ್ಳವನು ; ಸತ್ವಶಾಲಿ : "ಅಕ್ಕುಡರನೆ ಸತ್ವಗರು [ಪಾಶಾ. ಸತ್ವಮದು]" (ಭಾರಾ. ೬೦). [ಸತ್ವ$_2$ + – ಗ$_2$]

ಸತ್ವಗುಂದು (ಕ್ರಿ). ಬಲಹೀನನಾಗು ; ನಿಸ್ಸತ್ವನಾಗು : ನೀಲನ ಮೂಗಿನುಸುರನು ಬೆರಳಲಾರಯ್ದು ಸತ್ವಗುಂದಿದನಂದು ರಾಘವ (ತಾಶಿರಾ. ೨೨-೫೭). [ಸತ್ವ$_2$ + ಕುಂದು$_1$]

ಸತ್ವಗುಣ (ನಾ). ೧. ಸತ್ವ, ರಜಸ್ಸು, ತಮಸ್ಸು ಎಂಬ ಗುಣತ್ರಯಗಳಲ್ಲಿ ಒಂದು ; ಸಾತ್ವಿಕಗುಣ : ಯಾವ ಶ್ರೀಲಕ್ಷ್ಮೀದೇವಿಯು ಸತ್ವಗುಣ, ರಜೋಗುಣ, ತಮೋಗುಣಗಳೆಂಬ ಮೂರುಗುಣಗಳಿಗೆ ಅಭಿಮಾನಿಯಾಗಿ (ಹಸಾಧಾ. ೧-೨ ತಾತ್ಪರ್ಯ). ೨. ಸಂಜೆಗೆಂಪು ; ಸಂಧ್ಯಾರಾಗ. ೩. ದಾನ; ತ್ಯಾಗ. ೪. ಬಲ; ಪರಾಕ್ರಮ : "ಅಖಿಲೇಂದ್ರಿಯಮಸ್ತರಾಗಮುಂ ತ್ಯಾಗಪರಾಕ್ರಮಂ ತ್ರಿಗುಣಭೇದವು ಸತ್ವಗುಣಾಹ್ವಯಂ" (ಜಾನಾಂ. ೬೮). [ಸಂ.]

ಸತ್ವಗೆಡು (ಕ್ರಿ). ಬಲವಿಲ್ಲದಂತಾಗು; ಶಕ್ತಿಗುಂದು : ಸತ್ವಗೆಟ್ಟಲ್ಲಿ ಕಾಷ್ಠವನೂಜಿ ನಡೆಯಬೇಕು (ವೀರಮಾ. ೧೦೬-೪೨೩). [ಸತ್ವ$_2$ + ಕೆಡು$_1$]

ಸತ್ವಪರೀಕ್ಷೆ (ನಾ). ಸಾಮರ್ಥ್ಯದ ಪರೀಕ್ಷೆ : ಸ್ವಾಮಿದಾಸರ ಪೂರ್ಣಸಿದ್ಧಿಯ ಸಮಯ ಸಮಿಪಿಸಿದಂತೆ ಮೋಡಕರಿಂದ ಅವರ ಸತ್ವಪರೀಕ್ಷೆಯಾಗುತ್ತದೆ (ಸಮಜೀ. ೩೪ ಟೀಕೆ). [ಸಂ. ಸತ್ವಪರೀಕ್ಷಾ]

ಸತ್ವಪ್ರಕೃತಿ (ನಾ). [ಜೈನ] ಕರ್ಮಪ್ರಕೃತಿಗಳಲ್ಲಿ ಒಂದು : ಪಂಚಾಂತರಾಯಕರ್ಮ ಪ್ರಕೃತಿಗಳುಮೆಂದಿವಿನಿತುಂ ಸತ್ವಪ್ರಕೃತಿಗಳೆಂದುತ್ತರಪ್ರಕೃತಿಗಳು ಶ್ರೀವೀತರಾಗ ಸರ್ವಜ್ಞರಿಂದಂ ನಿರೂಪಿಸಲ್ಪಟ್ಟುವು (ಗೊಮ್ಮಸಾ. ೬-೯). [ಸಂ.]

ಸತ್ವಬಾಧೆ (ನಾ). [ಜೈನ] ಜೀವಿಗಳಿಗೆ ಉಂಟಾಗುವ ಬಾಧೆ ,–ಯಾತನೆ ; ಜೀವಹಿಂಸೆ: ಅಪಮೃತ್ಯುವಿನ ಸತ್ವಬಾಧೆಯ ಗಂಧಾಗಂಧಮುಮಿಲ್ಲಿನ್ನಾ ಭೋಗ ಭೂಮಿಗಳ್ . . . ತ್ರಿವಿಧಮಕ್ಕುಂ (ಶಾಂತಿಪು. ೬-೧೦೨ ವ). [ಸಂ. ಸತ್ವಬಾಧಾ]

ಸತ್ವಭಸ್ಮ (ನಾ). [ವೈದ್ಯಶಾ] ಸತುವನ್ನು ಕರಗಿಸಿ ಮಾಡುವ ಒಂದು ಬಗೆಯ ಭಸ್ಮ : ಸತ್ವಭಸ್ಮ :– ಸತ್ವ ಕರಗಿಸಿ ಮುತ್ತುಗದ ಮೇಣ ಹಾಕಿ ಬೆರಸಿ ಬೆಣ್ಣೆ ಹಾಕಲು ಭಸ್ಮವಾಗುವುದು (ವೈವಿ. ೨೯). [ಸತ್ವ$_1$ (< ಸತ್ತು$_1$) + ಭಸ್ಮ]

ಸತ್ವರ (ನಾ). ವೇಗ ; ಶೀಘ್ರ : "ದ್ರಾಕ್, ಚಪಳಂ . . . ಸತ್ವರಂ, ಕ್ಷಿಪ್ರಂ, ದ್ರುತಂ, ಅಂಜಸಾ, ಝಟಿತಿ – ಈ ೧೬ ಶೀಘ್ರಂ" (ಹಲಾಯು. ೧೧೬-೧೨); ಕೈಲಾಸನಾಥನು

. . . ಸತ್ವರದಿಂದ ಆ ಕಲ್ಯಾಣಮಂಡಪಕ್ಕೆ ನಡುನಡುಗುತ್ತಾ ಬಂದು (ಪುಂಪಾ. ೨೪). [ಸಂ.]

ಸತ್ವಶಾಲಿ (ನಾ). ಸತ್ವದಿಂದ ಕೂಡಿದುದು; ಸಾರವುಳ್ಳದು : ಸಾವಿರಾರುವರ್ಷ ಸುಪ್ತಸ್ಥಿತಿಯಲ್ಲಿದ್ದ ವೈಜ್ಞಾನಿಕಶೋಧನೆ ಬ್ಯೂನೋವಿನ ಆತ್ಮಾಹುತಿಯಿಂದ ಸತ್ವಶಾಲಿಯಾಯಿತು (ಋಷ್ಯಾರ. ೧೫). [ಸಂ. ಸತ್ವಶಾಲಿನ್]

ಸತ್ವಹೀನ (ನಾ). ೧. ಬಲವಿಲ್ಲದುದು ; ಶಕ್ತಿಹೀನವಾದುದು : ಸತ್ವಹೀನವಾದ ಮತ್ತ ಕಾಲೆರಡು ಕೋಲೊಂದಾಯಿತ್ತು (ಸರ್ವಜ. ೩೫-೧೭೪). ೨. ಬಲವಿಲ್ಲದವನು; ಶಕ್ತಿಹೀನ: ಏನು ನಾನು ಒಣಗಿಹೋದೆ ಎಂದುಕೊಂಡೆಯ? ಇಲ್ಲ. ಇನ್ನೂ ಸತ್ವಹೀನನಾಗಿಲ್ಲ (ಮಲನಾ. ೯೧). [ಸಂ.]

ಸತ್ವಾಢ್ಯ (ನಾ). ಸಮರ್ಥನಾದವನು; ಸತ್ವಶಾಲಿ: ಕುಲಜಂ ಸತ್ವಾಢ್ಯಂ . . . ಬಲಯುತನಱಿವುಳ್ಳನೆನಿಪನಪ್ಪುದು ಕೆಳೆಯಂ (ಪಂಚತಂ. ೨೯೬-೧). [ಸಂ.]

ಸತ್ವಾತಿಶಯ (ನಾ). ಪರಾಕ್ರಮದ ಆಧಿಕ್ಯ, — ಹೆಚ್ಚಳ : ಅರಿನೃಪರ ಸತ್ವಾತಿಶಯದುಬ್ಬರದ ಬಲುಹನು ಕಂಡು ಕಂಡೆಱಱದೆ ಮರುಳಹುದುಚಿತವೇ (ಕುವ್ಯಾಉ. ೩-೧೭); ಎಮ್ಮೊಡನೆ ಸತ್ವಾತಿಶಯಮಂ ತೋಱುವಾತುರದೊಳತಿ ಬಲವ್ರಾತಮಂ ಕೂಡಿಕೊಂಡು ಭೀತಿಯಿಲ್ಲದೆ ಪರಮಹೀತಳಕೆ ಬಂದು (ಚೈಮಿಭಾ. ೭-೩೩). [ಸಂ.]

ಸತ್ವಾಧಿಕ (ನಾ). ೧. ಸತ್ವಶಾಲಿಯಾದುದು; ಸಾರವತ್ತಾದುದು: ಸತ್ವಭುಜಬಲಗೂಡಿ ಮಂತ್ರದ ಸತ್ಯವೇ ಸತ್ವಾಧಿಕವು (ಕುವ್ಯಾಸ. ೧-೫೦). ೨. ಶಕ್ತಿಯುತನಾದವನು; ಬಲಶಾಲಿ: "ಸತ್ವಾಧಿಕಂ ಉತ್ತಮಂ ಶಕ್ತನಾಕ್ಷಮನಕ್ಕು" (ಮಂಗರಾ. ೩೩-೨೫); ಎನಿತು ಸತ್ವಾಧಿಕನೊ ಕಲಿಸುಧನ್ವಂ (ಚೈಮಿಭಾ. ೧೩-೪೬). [ಸಂ.]

ಸತ್ವಾಪನ್ನ (ನಾ). ಸತ್ವಶಾಲಿ; ಸಮರ್ಥ: ನಾಟಕಕಾರನು ಸತ್ವಾಪನ್ನನಿರದಿದ್ದರೆ ಅವನ ಪ್ರತಿಭೆಯು ಅಪ್ರತಿಹತವಾಗಿ ಕಾರ್ಯಮಾಡಲಾರದು (ಪ್ರಬಂಧ. ೨೨). [ಸಂ.]

ಸತ್ವಾವಲಂಬ (ನಾ). ಶಕ್ತಿಯನ್ನು ಅವಲಂಬಿಸಿದವನು; ಬಲವನ್ನು ಆಶ್ರಯಿಸಿದವನು : ಈ ಸ್ಥಾನಮಂ ಬಿಟ್ಟು ಪಱತೊಂದು ದುರ್ಗಸ್ಥಾನದೊಳಿರ್ದು ನೋಟ್ಟೆನೆಂದಾತ್ಮಗತಂಗೆಯ್ದು ಮತ್ತಂ ಸತ್ವಾವಲಂಬನಾಗಿ (ಪಂಚತಂ. ೪೩-೧೬). [ಸಂ.]

ಸತ್ವೆ (ನಾ). ಬಸುರಿ ; ಗರ್ಭಿಣಿ : "ವರಧುರ್ಯೆ ಸತ್ವೆಯಂತರ್ವತ್ನಿ ಗುರ್ವಿಯೆಂದರೆ ಗರ್ಭಿಣಿಯೆನಿಕ್ಕು" (ಮಂಗರಾ. ೯೧-೭). [ಸಂ. ಸತ್ವಾ]

ಸತ್ಸಂಗ (ನಾ). ಒಳ್ಳೆಯ ಸಹವಾಸ; ಉತ್ತಮವಾದ ಸಂಗ : ಋಷಿಪತ್ನಿಯರ ಸತ್ಸಂಗದೊಳ್ತನ್ನ ಬೇಸಱಂ ತವಿಸುವೆನು (ಚೈಮಿಭಾ. ೧೮-೩೯). [ಸಂ.]

ಸತ್ಸಂತಾನ (ನಾ). ಒಳ್ಳೆಯ ಮಕ್ಕಳು ; ಉತ್ತಮಸಂತಾನ : ಪರಂಪರಾನುಗತವಾದ ಸತ್ಸಂತಾನದಿಂದಲೇ ಪಿತೃಕರ್ಮಗಳು ನಡೆಯಬೇಕು (ಭಾರದ. ೧೧೨). [ಸಂ.]

ಸತ್ಸಂಪ್ರದಾಯ (ನಾ). ಉತ್ತಮವಾದ ಸಂಪ್ರದಾಯ. [ಸಂ.]

ಸತ್ಸಮಾಗಮ (ನಾ). ೧. ಉತ್ತಮವ್ಯಕ್ತಿಗಳೊಡನೆ ಬೆರೆಯುವುದು; ಸತ್ಸಂಗ : ಸಾಧುಗಳ ಕರುಣ ಸಿಕ್ಕುವುದಲ್ತೆ ಸತ್ಸಮಾಗಮದಿಂದ (ಪಂಕಾರಾ. ೨-೫-೪೧). ೨. ನಕ್ಷತ್ರಗಳೊಡನೆ ಸೇರಿರುವುದು. ೧, ೨ : ಅಮಳಶ್ರೀಕಾಂತನಾಗಿರ್ಪುದುಂ ಘನಮೇ ಪೇಟ್ ವಿಧು ಸತ್ಸಮಾಗಮದೊಳೇ ಸಂದಿರ್ಪುದಾರಯ್ಯೆ ನೂತನಮೇ ತಾಂ ದ್ವಿಜರಾಜಂ (ಚಿಕಸಿ. ೬-೨೦). [ಸಂ.]

ಸತ್ಸಹವಾಸ (ನಾ). = ಸತ್ಸಂಗ : ಯತಿವರ್ಯರ ಸತ್ಸಹವಾಸ ಅನುಗ್ರಹಗಳು ದೊರೆಯಿತು (ಸಂಗೀಚಂ. ೨೦೪). [ಸಂ.]

ಸತ್ಸಹಾಯ (ನಾ). ೧. ಒಳ್ಳೆಯ ನೆರವು ; ಉತ್ತಮ ಸಹಕಾರ. ೨. ಒಳ್ಳೆಯ ಸ್ನೇಹಿತ ; ಸನ್ಮಿತ್ರ: ದೇಶಂ ಧರ್ಮೋಪದೇಶಂ ಶ್ರುತಬಲಮೆ ಬಲಂ ಕೋಶಮುದ್ಯೋಧ ಕೋಶಂ ಸೌಶೀಲ್ಯಂ ಸತ್ಸಹಾಯಂ (ಚಂದ್ರಪ್ರ. ೧-೨೯). [ಸಂ.]

ಸತ್ಸ್ವಭಾವ (ನಾ). ಒಳ್ಳೆಯ ಸ್ವಭಾವ, — ಗುಣ : ಸತ್ಸ್ವಭಾವದ ಸ್ಥೂಲಗಾತ್ರದ ದಾದಿ ಪೋಟೋವಿನ ಮೇಲೆ ಬಾಗಿಕೊಂಡು ಪ್ರಶ್ನಿಸಿದಳು (ಪುನರು. ೩೨೩). [ಸಂ.]

ಸಥಿ 'ಸಥೆ' ನೋ.

ಸಥೆ, ಸತ್ತ್ರ, ಸಥಿ (ನಾ). ೧. ಸಲಿಗೆ ; ಸದರ: ಖತಿಗೊಳಿಸುವ ರೋಗ ಕಳೆವುದಾಶ್ಚರ್ಯವಲ್ಲ ಸಥೆಯಿಂದಲಿ ಬಿನ್ನೈಸಿದೆ ಯಾತಕ್ಕೆ ಆಲಸ್ಯ (ಮೋಕ್ಷದಿ. ೩-೫); ಸಥೆ ಮಾಡಿ ಎನಗೆ ನುಡಿದಳು ಮನಕೆ ಬಂದಂತೆ ಹಿತಮಾಡಿ ನಾನವಳ ಹತ್ತಿಲಿ ಕರದವನಲ್ಲ (ಶ್ರೀಕೃಪಾ. ೫೩); ಅವನೊಡನೆ ಸಥೆಯಿಂದ ಮಾತಾಡಿದಂತೆ ದಾಸರು ಯಾರೊಡನೆಯೂ ಆಡುತ್ತಿರಲಿಲ್ಲ (ಕಥಪಿ. ೬೪೧). ೨. ಸತ್ಯ ; ನಿಜ : ಬಲ್ಲಿದ ಯಶವುಳ್ಳ ಹರಿಯೆಂಬ ಸಥೆಯಿಂದ ಎಲ್ಲ ಮುಕ್ತರು ಸುಖಿಸುವರು (ವೃಕುಂವ. ೧-೯೨). **ಸತ್ತ್ರ** : ೧. ನಿಜಗುರುವಿಗೊರೆದನೀತಂ ಶಿಷ್ಯತೆಯ ಸತ್ತ್ರಯಿಂದೆಂದೊಡೆ ಯತಿಗಳೆಂದುದ್ಧಾರ ವಾಗಬಾರದೆ ಭಕ್ತತತಿಯು (ಮಹಾಂತೇ. ೧೧-೩೭). ೩. ಅಧಿಕಾರಬಲ ; ಹಕ್ಕು: ಸುಜ್ಞಾನಿದೇವ ಸಾಧಿಸಿದುದೂ . . . ಶಾಸ್ತ್ರದ ಸತ್ತ್ರಯಿಂದಲ್ಲ, ದಂಡದ ದಬ್ಬಾಳಿಕೆಯಿಂದಲ್ಲ (ಶರಚ. ೩೩೬); ಭೀಮರಾಯರು . . . 'ಅದ್ಯಾವದೂ ಬೇಡ ನಾ ಹೇಳಿದಂತೆ ಮಾಡಿರಿ' ಎಂದು ಸತ್ತ್ರಯಿಂದ ಒತ್ತಾಯ ಪಡಿಸಿದರು (ಕಾರುಷ. ೧೭). ೪. ಪ್ರಭುತ್ವ ; ಆಧಿಪತ್ಯ: ಅರವಿಂದರು . . . ಪ್ರಚಂಡವಾದ ಲೇಖನ ಮತ್ತು ಭಾಷಣಕಾರ್ಯದಲ್ಲಿ ನಿರತರಾದರು. ಇದರಿಂದ ಬ್ರಿಟಿಷ್ ಸತ್ತ್ರಯು ನಡುಗಿತು (ಕಪಪ್ರ. ೭-೮೪). 'ಪ್ರಜಾಸತ್ತ' ಪರಾ. ಸಥಿ : ೧. ಏನೋ ಸಥಿಯಿಂದ ಮಾವನವರಿಗೆ ಒಂದು ಮಾತು ಹೇಳಿದೆ, ತಪ್ಪಾಯಿತು (ಮಣ್ಣೆಮ. ೨೩); ಅಣ್ಣನ ಮೇಲೆ ಇಷ್ಟು ಸಥಿ ಇದ್ದವರು ನೀವು ಹೊರಗೆ ಏಕೆ ನಿಲ್ಲಬೇಕಾಗಿತ್ತು? (ಭಾರಥಿ. ೧೭). ೨. ಜಾರುತದಾಯುಷ್ಯ ದೂರದ ಮುಕುತಿಗೆ ದಾರಿ ಸಥಿಯು ಕೇಳಾತ್ಮ (ಪುರಂದ. ೫-೫೨ ಅನುಪಲ್ಲವಿ). ೩. ನಿನಗೆ ನೀನೆ ಪೂಚೆ ಮಾಡಿಕೊಂಬ ದೇವ ಎನಗಾವ ಸಥಿಯಿಲ್ಲಾ ವಿಜಯವಿಠಲ ಒಲಿಯೋ (ವಿಜ್ರೂಸು. ೪೧-೬); ಮನಸ್ಸಿನಲ್ಲಿ ಬಂದ ಮಾತನ್ನು ಸಥಿಯಿಂದ ಆಡಿ ತೋರಿಸಿದನು (ಕನ್ನಡಿ. ೩೩). [<— ಮರಾ. ಸತ್ತಾ./ ಸಂ. ಸತ್ತಾ]

ಸದಕ$_1$ (ನಾ). ಒಂದು ಬಗೆಯ ತೆರಿಗೆ : ಸದಕ, ಸಕಾತ್, ಅಥವಾ ಭಿಕ್ಷೆಯ ತೆರಿಗೆ, ಇದನ್ನು ಮುಸ್ಲಿಮರ ಮೇಲೆ ಮಾತ್ರ . . . ಹಾಕುತ್ತಿತ್ತು (ಇಸ್ಲಾಂಸಂ. ೪೨). [?./ ಮರಾ. ಸದಕಾ = ದಾನಧರ್ಮ]

ಸದಕ$_2$ (ನಾ). (?) : ಆ ಮುದ್ದೆಯ ದಂಡಾಯಕರು ಮಾಡ್ಸಿ ಕೊಟ್ಟ ಕನಕದಂಡದ ಚವಕ ಸದಕ ಹಳತಾದಡೆ ಹೊಸತ ಮಾಡಿಸುವನು (ಸೌಇ. IX-ii. ೪೧೭-೪೭; 1377). [?]

ಸದಕಿಕ್ಕು (ಕ್ರಿ). (?) : ಪಸಿದ ಚಕೋರಿಗಳ್ ದ್ವಿಜಶರೀರಗಳೆಂದಱಯಲ್ಕೆ ಸಂಜ ಭಾವಿಸೆ ಪೊಸಜೊನ್ನಮಂ ಶಶಿಯ ಕಪ್ಪಿನಿತಿಲ್ಲದ ಮಾಟ್ಕೆಯಿಂದೆ ಶೋಧಿಸಲದು ಶುದ್ಧವಾಗೆ ಬಟೆಯಂ ಸದಕಿಕ್ಕಿದ ಧಾರೆವಟ್ಟಲಂ ಸಸಿಗಿರಿಸಿಟ್ಟವೋಲ್ ಮೃದುಕಳಂಕದಿನೊಪ್ಪಿದುದಿಂದುಮಂಡಲಂ (ಸೂಕ್ತಿಸು. ೮-೨೫೩). [?]

ಸದಕೀರ್ತನ (ನಾ). [ಕಾವ್ಯಮೀ] ಕವಿಸಮಯಗಳಲ್ಲಿ ಒಂದು ; "ಸದಕೀರ್ತನವೆಂದರೆ, ಇರುವುದನ್ನು ಇಲ್ಲದಂತೆ ಹೇಳುವುದು" (ಕೃಪಿಡಿ. ೨೪೪): ಅತತ ಸತ್ಯವಿಸಮಯಂ ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾಖ್ಯಾತಿ ಸದಕೀರ್ತನಂ ನಿರ್ಣೀತಂ ನಿಯಮಾರ್ಥಮ್ಮೆಕ್ಕಮೆನೆ ನಾಲ್ಕುತೆಱಂ (ಕಾವ್ಯಾವ. ೮೪೫). [ಸಂ.]

ಸದಕು, ಚದುಕು, ತದಕು$_1$, ತದುಕು$_1$ (ಕ್ರಿ). ೧. ಹೊಡೆ ; ಬಡಿ ; ಏಟುಕೊಡು : ಸದಕಿದನು ಬಳಿಕಾತ ರಣಕೊದಗಿದ ಮಹಾರಥಮಂಡಳಿಯ ಮದರದನಿಗಳ ಮಾವುತರ ರಾವ್ತರ ಹಯವ ಕಾಲಾಳ (ತೊರರಾ. ೬-೪೩-೮); ಮಕ್ಕಿಕಂಗಳು ಜೇನ ಸಾಧಿಸಿ ರಕ್ಷೆಗೋಸುಗ ಕಾಯ್ದಿರಲು ಮಧುಭಕ್ಷಕರು ಸದಕುವವೋಲ್ (ನಿಭಾಗ. ೧೧-೧೪-೨೨); ಸ್ಮರವೀರನುಪಟಳಕಿದಿರಹರಾರು ಮಲ್ಲರು ವೇತ್ರಿಗರು ಸದಕಿದರು (ಭರಚ. ೪೮-೮೪). ೨. ಕುಟ್ಟು ; ಜಜ್ಜು : ಉದಕದೊಳಗರ್ಧ ಸಕ್ಕರೆಯಿಕ್ಕಿ ಕರಗಿಸುತ ಹದನಱಿದು ದಾಳಿಂಬ ಮಾದಲದ ಹುಳಿಯಿಕ್ಕಿ ಸದಕಿದೇಲಕ್ಕಿ ಹಸಿಯಲ್ಲಮಂ ಹಾಕಿ (ಸೂಪಶಾ. ೨-೨೫); ಸದಕಿದರು ತೇರುಗಳ . . . ಗದೆಗದೆಯೊಳಪ್ಪಳಿಸಿ (ಅಂಬಿಕಾ. ೩೮-೨೩). **ಚದುಕು** : ೧. ಚದುಕಿದರೊದರಿ ಮದಕರಿಯ (ಅಂಬಿಕಾ. ೩೮-೨೩). **ತದಕು$_1$** : ೧. ಮನುಜರಂ ಪರ್ಭೂತ ತಾಮಸದಿ ಪಿಡಿಯಲಾ ನೆವದಿ ತದ [ಪಾಠಾಂ.ದು]ಕುವನಂತೆ (ಪತಿಲ. ೧೩-೩೬); ಸಿಂಹನಾದ ಮಾಡುತ್ತ ಗಂಧರ್ವರನ್ನು ತದಕುವುದಕ್ಕೆ ಮೊದಲು ಮಾಡಿದರು (ಪಚಭಾ. ೧೭೧); ಅವನ ಹಿಡಕೊಂಡು ಬಲವಾಗಿ ತದಕಿದರೆ ಸರಿ (ಸ್ವಾಮಿಸ್ವ. ೮೬). ೨. ಕುಂಬಳದ ಬಳ್ಳಿಯಂ ಕತ್ತರಿಸಿ ತದಕಿ ಉಪ್ಪಿನಲ್ಲಿ ಅಟ್ಟ ಮಡಕೆಗೆ ಹಾಕಿ

(ಸಕಪ. ೩೭೫). **ತದುಕು**$_1$: ೧. ನಾವು ಅವರನ್ನು ಚನ್ನಾಗಿ ತದುಕಿದ ನಂತರ ಸುಮ್ಮನಾದರು (ಧಾರಾಗಿ. ೧೧೯); ಅಲ್ಲೆ ಅವನನ್ನು ತದುಕಲಿಲ್ಲ (ಮಾಮನ. ೭೧). ೩. ಹಿಂಡು ; ಕಿವುಚು ; ಹಿಸುಕು : ಆ ತರುಣಿಯ ಶೋಕವು ಕಿಟ್ಟಿಯ ಮನ. ಎದೆ. ಕರಳುಗಳನ್ನು ತದುಕಿ ಕಳವಳವನ್ನುಂಟುಮಾಡತೊಡಗಿತು (ಗಂಮಾಯಿ. ೭೬). [< ಸದ$_1$]

ಸದಕುಪ್ಪಿ 'ಸದಗುಪ್ಪೆ' ನೋ.

ಸದಗ 'ಸದೆಗ' ನೋ.

ಸದಗಪ್ಪಾಣೆ (ನಾ). ಅಲ್ಪಪ್ರಾಣೆ : ಒದರ್ದಪರು ಪಗಲಿರುಳಿಗೊಂದೊಂದು ಪರಿಯಾಗಿ ಸದಗಪ್ಪಾಣಿಗಳು ಚೇತನಮಾಗಿ ಸರ್ವಜನಹೃದಯದಾನಂದಕರಮೆನಿಸಲಾರರು (ವಂಕಾರಾ. ೫ ೪-೧೦). [ಸದಗ (< ಸದೆಗ) + ಪ್ರಾಣೆ]

ಸದಗುಟ್ಟು 'ಸದೆಗುಟ್ಟು' ನೋ.

ಸದಗುಪ್ಪೆ, ಸದಕುಪ್ಪಿ, ಸದೆಗುಪ್ಪೆ (ನಾ). ಒಂದು ಬಗೆಯ ಸಸ್ಯ ; ಸಬ್ಬಸಿಗೆ : "ಸದಗುಪ್ಪೆ, ಶತಪುಷ್ಪೆ, ಸಿತಚ್ಛತ್ರ, ಅತಿಚ್ಛತ್ರ" (ನಾಚಿರಾ. ೬); ಸದಗುಪ್ಪೆ ಬೆರೆದವಂ ಕಾಸಿದೂಡಂ ಕತ್ತುರಿಯ ಗಂಧಮಂ ಗೆಲಲಕ್ಕುಂ (ಲೋಕೋಪ. ೮-೪೦); ಹಿಪ್ಪಲಿ ಕೊತ್ತುಂಬ(ರಿ)ಲಿ ಸದಗುಪ್ಪೆ ವಿಳಂಗಾಗ್ನಿ ಲೋಧ್ರ ಸಿಂಧೂದ್ಭವಮಂ ತಪ್ಪದೆ ಸಮನಾಗಿರ ಯೋಜಿಪುದು ನುತಶಿಶಿರಋತುವಿನೊಳ್ ಪ್ರತಿಪಾನಂ (ಅಶ್ವಶಾ. ೭-೮೪). **ಸದಕುಪ್ಪಿ** : ಸಬ್ಬೀಗಸೊಪ್ಪು, ಸಬ್ಬಸಿಗಸೊಪ್ಪು, ಸದಕುಪ್ಪಿಗಿಡ (ಪ್ರಜಿಗಿ. ೭-೧೧೩). **ಸದೆಗುಪ್ಪೆ** : ತುಪ್ಪದೊಳಂ ಬೆರಸುವುದೆಸವುಪ್ಪಂ ಸದೆಗುಪ್ಪೆ [ಪಾಠಾಂ. ಸದುಗುಪ್ಪ]ಯೊಡನೆ ಪೂಸುಗೆ (ಪಿಮಾದ. ೧೩-೧೧೭). [< ಸಂ. ಶತಪುಷ್ಪಾ ./ ತಮಿ. ಚತಕುಪ್ಪಿ; ಮಲ. ಚದಕುಪ್ಪ]

ಸದನ (ನಾ). ೧. ಪೀಠ ; ಆಸನ. ೨. ಮನೆ ; ನಿವಾಸ : "ಆವಾಸಃ . . . ಸದನಂ . . . ಆಲಯಃ — ಈ ೩೧ ಮನೆ" (ಹಲಾಯು. ೪೯-೧೩೬); ಲತಾಂತದೊಳ್ಸದನಂ ಸದನಂ ಸದನಂಗಲಕ್ಕೆಗಾಗಿರೆ (ಜಗವಿ. ೪-೪೨); ಸದನವನು ಹೊಕ್ಕಂತೆ ನಿಮಿಷಾರ್ಧದಲಿ ಕುಳ್ಳಿರ್ದನಿಬರನು ಕಳುಹಿದನು ಕಾರುಣ್ಯದಲಿ (ಕುಪ್ಪಾಳು. ೭-೩೧). ೩. ನಗರ ; ಪಟ್ಟಣ: ಮಧುರೇಂದ್ರಂ ಕಡುದಿಟ್ಟನಾಗಲು ಬಟ್ಟಿಕ್ಕೀಡೇರಿತೇ ದ್ವಾರಕಾಸದನಂ ವಾರ್ಧಿಯ ಕೂಡದೇ (ಸೋಮೇಶ. ೩೭). ೪. ಸಭೆ ; ಅಧಿವೇಶನ ; ಸಮಾವೇಶ : ಸಂಸತ್ತಿನ ಯಾವ ಸದನದಲ್ಲಿಯೂ ಆ ವಿಧೇಯಕವನ್ನು ಮಂಡಿಸತಕ್ಕುದಲ್ಲ (ಭಾಧಾನ.೩). ೫. ನಾಶವಾಗುವಿಕೆ. ೬. ಬಳಲಿಕೆ ; ದಣಿವು. [ಸಂ.]

ಸದನಾಂಗಣ (ನಾ). ಮನೆಯ ಅಂಗಳ : ಪ್ರೌಢವತಿಯಂಬಿಂದುಮುಖಿ ವಾರಾಂಗನಾಮಣಿಯೊಂದುದಿನದಲಿ ತನ್ನ ಸದನಾಂಗಣದೊಳ್ ಸದು (ಬಸಪು. ೪೦-೩). [ಸದನ + ಅಂಗಣ]

ಸದನ್ಯಗ್ರಹ (ನಾ). ಪಾಪಗ್ರಹ ; ಕೆಟ್ಟಗ್ರಹ : ಅಸುರೇಂದ್ರಾರ್ಚಿತನಿಂದಮಷ್ಟಮ ಚತುರ್ಥಕ್ಷೇತ್ರದೊಳ್ ಕೂಡಿದಂದು ಸದನ್ಯಗ್ರಹಮಲ್ಲದಂದು ಭೃಗುಜಂಗಿರ್ವಕ್ಕದೊಳ್ ಕೂಡಿದಂ (ಜಾತಕ. ೨೧-೩). [ಸಂ.]

ಸದಭಿಪ್ರಾಯ (ನಾ). ಒಳ್ಳೆಯ ಅಭಿಪ್ರಾಯ ; ಉತ್ತಮವಾದ ಆಶಯ : ಪ್ರಾಯಕಲ್ಲದುದವರ ಸದಭಿಪ್ರಾಯಮರರೆ . . . ಭಾಪುಭಾಪೆನೆ ಸುಜನರಲ್ಲ ಬೆಳೆದು (ಕುಮುರಾ. ೨-೧೦೧); ಸದಭಿಪ್ರಾಯವನ್ನು ಸೂಚಿಸಿ ಓಲೆಗಳನ್ನು ಬರೆದಿದ್ದಾರೆ (ಪಿವಿ. ೪ ಅರಿಕೆ). [ಸಂ.]

ಸದಭಿಮತ (ನಾ). ಎಲ್ಲರಿಂದ ಒಪ್ಪಿದುದು,—ಅಭಿಪ್ರಾಯಪಟ್ಟುದು; ಸದಭಿಪ್ರಾಯ: ಸದಭಿಮತಮಾಗಿ ನಿಲ ಪೇಳ್ದುದು ಮಾರ್ಗ್ಗಂ ನಿತ್ಯಮಲ್ಲವಲ್ಲಭ ಮತದಿಂ (ಕವಿರಾ. ೨ ೧೧); ಸದಭಿಮತೋದಾತ್ತಕೀರ್ತಿಯುಂ ಬಯಸುವವಂ ಪದವಾಕ್ಯಾರ್ಥಂಗಳೊಳೊಂದದಂತು ಪಿಂಗಿಸುಗೆ ದೋಷಮಂ ಕೃತಿಯಿಂದಂ (ಕಾವ್ಯಾವ. ೪೨೯). [ಸಂ.]

ಸದಮದ (ನಾ). ೧. ಅತಿಯಾದ ಮದ ; ಉನ್ಮತ್ತತೆ : ಸದಮದವಾಗಿ ಮುಡಿ ನೋಡಿ ಒಡಲ ಕೆಡಿಸಿಕೊಂಬ ಜಡಮನುಜರ ನುಡಿಯ ಕೇಳಲಾಗದು (ವಚಸಂ. ೩೭೨-೫೫). ೨. ಘೋರವಾದುದು; ಭಯಂಕರವಾದುದು: ಕಲಿತ ಭಯದಿ ಸುಮಾಲಿ ಹರಿತಂದು ಸದಮದದ ಕಟ್ಟೋಲಗದ ದಶವದನನಿದಿರಿನಲಿ ಹಾಯ್ದುದನು ಬಲುಬೆದಱಿಕೆಯ ರಣಭೈರವನ ಸಂಗರಭಯಂಕರವ (ತೂರರಾ. ೫-೫-೩). ೩. ಉಲ್ಬಣವಾಗಿರುವಿಕೆ ; ತೀವ್ರತೆ : ರೋಗದ ಸದಮದದ ಬಲೆಯೊಳಗೆ ಬಿದ್ದುದ ಕೆಮ್ಮಿ ಕ್ಕಾಕರಿಸಿ (ಪ್ರಸ್ಥಾಚ. ೮-೫೫). 'ಉದುಮದ' ಹೋ.

[?./ ತೆಲು. ಸದಮದ = ನಾಶ , ನಲುಗಿದುದು]

ಸದಮದಗಜ (ನಾ). ಅತಿಯಾಗಿ ಮದಿಸಿದ ಆನೆ ; ಮದೋನ್ಮತ್ತವಾದ ಗಜ : ಅಹಂಕಾರವೆಂಬ ಸದಮದಗಜವೇಱಿ ವಿಧಿಗೆ ಗುಱಿಯಾಗಿ ನೀವು ಹೋದಿರಲ್ಕಾ (ಬಸವ. ೬೫); ಗಗನ ಪವನದ ಮೇಲೆ ಉದಯಮುಖವನುಭಾವ ಸದಮದಗಜವ ನಿಲಿಸುವ ಮಾವತಿಗ ಬಂದ (ಅವಚಂ. ೧೮೦-೮೧೦); ಜಂಬೂದ್ವೀಪದ ಹೃದಯದಲೊಂದು ಸದಮದ[ಪಾಠಾಂ. ಲ]ಗಜ ಹಯನಾಯಿತ್ತು (ಶಿವಗೀ. ೧೨೬-೬೨೬).

[ಸದಮದ + ಗಜ]

ಸದಮಲ, ಸದಮಳ (ಗು). ೧. ಪವಿತ್ರವಾದ; ನಿರ್ಮಲವಾದ : ಅವರು ಸದಮಲಸಾಧುಗಳು ಕೌರವರಸಾಧುಗಳು (ಕುಮ್ಮಅ. ೧೭-೧೨); ಸದಮಲಭಕ್ತಿಲಿ ಚಿದ್ರೂಪ ಮಲ್ಲೇಶನ ತದೇಕಧ್ಯಾನದಿ ಹೊರಟಿಹರು ನೆನೆಯೂತ (ಸಿದ್ರಪು. ೫-೩೨). (ನಾ). ೨. ನರ್ಮಲವಾದುದು ; ಶುದ್ಧವಾದುದು : "ಸದಮಲಮಂದೊಡೆ ನಿರ್ಮಲ" (ಭಾರಾ. ೨೪). **ಸದಮಳ** : ೧. ಸದಮಳ ಸಂಸ್ಕೃತ ಕರ್ಣಾಟದದಂತ ಪ್ರಕೃತಿಗಳ್ಗಿಸುಪ್ರತ್ಯಯಮಿಂತಿದಿರಾಗೆ ಯತ್ನಮನುಕೃತಿ ಪದಕಂ ಮುಂದನುಕೃತಿಸ್ವರಂ ನಿಲೆ ಯತ್ನಂ (ತಮಾದ. ೫೪); ಸದಮಳಚಾರುಚರಿತ್ರ ಇದನೋದಿ ಲಾಲಿಪ ಸಜ್ಜನಜನಕೊದವಿಪನೀಶ ಸಂಪದವ (ಇಷಾಂ. ೧೭-೯೬). ೩. ನಿರ್ಮಲನಾದವನು ; ಪರಿಶುದ್ಧನಾದವನು : ಸದಮಳಂ ನಂಬಿಯಣ್ಣ ಬರುತಿರ್ದಪಂ (ಸಂಬಿರ. ೯-೬೮); ಸದಮಳನೆ ಕೇಳೀ ಪುರಾಣದ ಹೃದಯವನು (ಶಿಭಾಗ. ೨-೪-೧೭). [ಸಂ.]

ಸದಮಲಚರಿತ, ಸದಮಳಚರಿತ (ನಾ). ೧. ನಿರ್ಮಲವಾದ ಚಾರಿತ್ರ್ಯ; ಪರಿಶುದ್ಧವಾದ ಚಾರಿತ್ರ್ಯ : ಸದಮಲ[ಪಾಠಾಂ. ಳ]ಚರಿತಂ ತಮ್ಮಿಂದುದಿತೋದಿತ ಮಾದುದನಿಸಿ ಸಂನ್ಯಸನದೆ ಸತ್ತುದಿತಾನುದಿತಮುನೀಶ್ವರರುದಾತ್ತರುತ್ಕೃಷ್ಟದೇವಗತಿಯಂ ಪಡೆದರ್ (ಪಂರಾಮಾ. ೮-೫೫). **ಸದಮಳಚರಿತ** : ೨. ನಿರ್ಮಲವಾದ ಚಾರಿತ್ರ್ಯವುಳ್ಳವನು : ಸದಮಳಚರಿತರನುದ್ಭೂತರೋಷರಂ ವಿಗತರೋಷರಂ . . . ಮಲಧಾರಿದೇವರಂ ದೇವರೆಂದು ಬಣ್ಣಿಪುದು ಜಗಂ (ಸುಕುಮಾ. ೧-೨೦). [ಸಂ.]

ಸದಮಲಚಿತ್ತ (ನಾ). ನಿರ್ಮಲವಾದ ಮನಸ್ಸಿನವನು ; ಶುದ್ಧವಾದ ಚಿತ್ತವುಳ್ಳವನು : ಸದಮಲಚಿತ್ತನುದ್ಭಟಮಹೀಪತಿ ತುಱ್ಱುವ ಕುಂಕುಮಾಂಬು ಪತ್ತಿದ ಮೃಗಶಾಬಕಾಂಬಕೆಯದೊರ್ವಳ ಶುಂಭದುರೋಜಯುಗ್ಮವೊಪ್ಪಿದುದು (ಉದ್ಭಟ. ೯-೧೧೧). [ಸಂ.]

ಸದಮಲಜ್ಞಾನಿ (ನಾ). ನಿರ್ಮಲನಾದ ಜ್ಞಾನಿ ; ಶುದ್ಧಜ್ಞಾನಿ : ಸದಮಲಜ್ಞಾನಿಯಿಂತಂದನಾ ನೃಪಗೆ (ಸ್ಯಾಕೃ. ೭-೪೪). [ಸಂ. ಸದಮಲಜ್ಞಾನಿನ್]

ಸದಮಲಬೋಧ, ಸದಮಳಬೋಧ (ನಾ). ೧. ನಿರ್ಮಲವಾದ ಉಪದೇಶ; ಶುದ್ಧವಾದ ಬೋಧನೆ. ೨. ನಿರ್ಮಲವಾದ ಉಪದೇಶವನ್ನು ಮಾಡುವವನು; ಶುದ್ಧವಾದ ಬೋಧನೆ ಮಾಡುವವನು : ಸದಮಲಬೋಧನಾ ಶಿಲೆಯನೇಱಿ ದೊಡಂಗಜನಂಜಿ ಪುತ್ತನೇಱಿದಂ (ಪುಪ್ರಪು. ೧೩-೧೦೭). **ಸದಮಳಬೋಧ** : ೧. ಸದಮಳಬೋಧದಿಂದೆಸವ ಸಾಧುಜನಾಶಯದಂತೆ ಪದ್ಮಪಂದದ ವರವಾರಿ ನಿರ್ಮಲತೆ ವೆತ್ತುದು (ಕುಸುಮಾ. ೫-೪೫); ಸದಮಳಬೋಧಭಾನುವಿನ ಬಂಧುರಬಂಧು ಸುಧರ್ಮ ಸೂತ್ರಕಾಂಡದ ಕಣಿ (ಪುಪ್ರಪು. ೭-೧೬). [ಸಂ.]

ಸದಮಲಾತ್ಮ (ನಾ). ಪರಿಶುದ್ಧವಾದ ಆತ್ಮವನ್ನು ಉಳ್ಳವನು : ನೀವು ಶಿಕ್ಷಿಸುವುದಱ ನೆವದಿಂ ಮಲಿನವಳಿಯಿತು ಸದಮಲಾತ್ಮ ನಿಮ್ಮ ಸತ್ಕೀರ್ತಿಪ್ರಭಾವದಲಿ (ಬಸಪು. ೩೬-೪೭). [ಸಂ. ಸದಮಲಾತ್ಮನ್]

ಸದಮಲಾತ್ಮಕ (ನಾ). = ಸದಮಲಾತ್ಮ : ಸದಮಲಾತ್ಮಕ ನಿನ್ನ ಪಿತನ ಬಲದ ಭುಜಂ ಬಿಡದೊಡನೆ ಕೆತ್ತುತಮಿದೆ (ಬಸಪು. ೨೪-೪೨); ಅವ ತೆಱದಿನಾದೊಡೆ ನಲಿದು ಸದಮಲಾತ್ಮಕ ಜಂಗಮವ ಭಜಿಸುವಂ ತಾನೆ (ರಾಘಚ. ೮-೧೦). [ಸಂ.]

ಸದಮಳ 'ಸದಮಲ' ನೋ.

ಸದಮಳಚರಿತ 'ಸದಮಲಚರಿತ' ನೋ.

ಸದಮಳಚರಿತ್ರ (ನಾ). = ಸದಮಲಚರಿತ ೨ : ಸದಮಳಚರಿತ್ರರಾವಾಸದವೋಲ್ ಮಧುಪಾವಳೀವಿವರ್ಜಿತಮಾಗಿರ್ದುದು ಮಧುಮಯಪ್ರಸೂನಾಸ್ಪದಮಾಗಿಯುಮೀ ನವೀನ ಚಂಪಕವೃಕ್ಷಂ (ಕುಸುಮಾ. ೯-೨೦); (ಶಾಂತೀಶ್ವ. ೧೦-೮೫ ನೋ).

[ಸಂ. ಸದಮಲಚರಿತ್ರ]

ಸದಮಳಧರ್ಮ (ನಾ). ನಿರ್ಮಲವಾದ ಧರ್ಮ; ಶುದ್ಧವಾದ ಧರ್ಮ : ಸದಮಳಧರ್ಮಂ ದೊರೆಕೊಳಲದನೊಲ್ಲದೆ ಮತ್ತೆ ಬಿಡುವ ಜಡಮತಿ ಪೋಲ್ಕುಂ ಮುದದಿಂದೋಲಗದೊಳ್ಪಡೆದುದನಿಂಬನೊಳಿರಿಸುವಲ್ಲಿ ಕಿಡಿಸುವ ಮರುಳಂ (ಧರ್ಮಾಮೃ. ೩-೨೬೨); ಸದಮಳಧರ್ಮದ ಕಣ್ಣುಂ ಪದಯುಗಳದಿನೆಸವ ಗತಿಯುಮೋಳ್ಪೆವೆಸರ್ಗೂಪ್ಪಿದರ್ (ಅನಂಪು. ೧-೧೪). [ಸಂ. ಸದಮಲಧರ್ಮ]

ಸದಮಳಬೋಧ 'ಸದಮಲಬೋಧ' ನೋ.

ಸದಯ (ಗು). ೧. ಕರುಣೆಯಿಂದ ಕೂಡಿದ; ದಯಾಶೀಲ : ಅವರು ಸದಯ ಹೃದಯರಾಗಿ ಭಾವಂದರವರೊಂದಿಗೆ ಸಾಕ್ಷಾತ್ತಾಗಿ ರಾಜಕೀಯವಿಷಯಗಳನ್ನು ಕುರಿತು ಮಾತನಾಡಿ (ಮಹಾವಂ. II. ೧೦೩). (ನಾ). ೨. ದಯೆ ; ಕರುಣೆ : ಸದಯವಿಲ್ಲದ ಜಾಗಿ ಸೂಡರಿಲ್ಲದ ನಿವಾಸಂ . . . ಪ್ರವರ್ಧನವಹುದೆ ಲೋಕದೊಳು (ಬಸಪು. ೩೭-೩೪). ೩. ಕರುಣೆಯಿಂದ ಕೂಡಿರುವವನು : ಸದಯಂ ತ್ರಿವಿಷ್ಟರಪ್ರಾಗ್ರದೊಳೆಸವ ಗಜಾರಿಪೀಠದೊಳ್ ತ್ರೈಲೋಕ್ಯಾಗ್ರದೊಳೆಸವೀಷತ್ಪ್ರಾಗ್ಭಾರದೊಳೆರ್ಪುದನಂದೆ ಸೂಚಿಪಂದದಿನಿರ್ದಂ (ಚಂದ್ರಪು. ೧೫-೯೯); ಸದಯರ್ ನೀವೆಲ್ಲರಾತನಂ ಬೆಸಗೊಳ್ಳಿಂ (ಹಾಲಾಸ್ಯ. ೧-೧-೫೦); ಅದರಿಂದಲೇ ಏನೋ ಭಗವಾನರು ಇವರ ವಿಚಾರದಲ್ಲಿ ಅಷ್ಟು ಸದಯರಾಗಿರುವುದು (ಮಹಾಗ. ೫೮೮). [ಸಂ.]

ಸದರ್, ಸದರು$_1$ (ನಾ). ೧. ಉಚ್ಚತಮ ನ್ಯಾಯಾಲಯ; ಶ್ರೇಷ್ಠನ್ಯಾಯಾಲಯ : (ಕ). ೨. ಅಧಿಕಾರ ನಡೆಸಲು ಕುಳಿತುಕೊಳ್ಳುವ ಗದ್ದುಗೆ ; ಸಿಂಹಾಸನ : ಪಾತುಶಾಹಂ . . . ಸಭೆಯಂ ನೆರಹಿಸಿ ಸದರೊಳ್ ಕುಳ್ಳಿರ್ಪನಿತರೊಳಂ (ಕೆಳನ್ರ. ೩-೨೪). ೩. ರಾಜಸಭೆ; ದರ್ಬಾರು : (ಕ). ೪. ಮುಖ್ಯಸ್ಥ; ಯಜಮಾನ : (ಕ). ೫. (ಕಾಗದ ಪತ್ರಗಳ) ತಲೆಬರಹ ; ಶೀರ್ಷಿಕೆ : (ಕ). **ಸದರು**$_1$: ೨. ಇದಿರಿನಲ್ಲಿ ಜಂಗಮವು ಬರುವುದ ಕಂಡು ಸದರನಿಳಿದು ನಡೆದು ಹೋಗಿ ಚರಣಕ್ಕೆಱಗುವುದೆ ಉತ್ತಮಭಕ್ತಿ (ಅಖಂಡೇ. ೬೬-೨೮); ಕಲಿ ಕಾರ್ತವೀರ್ಯ ತಾಂ ಸದರಿಳಿದನು (ಪರಶು. ೨೧-೧೧). ೩. ಶರಣ ಹೊನ್ನಯ್ಯನನ್ನು ಸದರಿಗೆ ಕರಸಿ ಮಾತನಾಡಿಸಲು ಬಿಜ್ಜಳನು (ಶರಲೀ. ೨೮೬-೭); ಸದರಿಗೈತರಲೊಡನೆ ಚಳಕದಿಂ ವರಪಥಂ ಕಾಣುತಂದಿರಿದ್ದು . . . ವಂದಿಸಿದನು (ಪರಶು. ೨-೨೧). ೪. ಸದರು ಆಗಿಹನವನ ಸದರು ಯೇರೋನವನೆ (ಚಿದಾವ. ೯೦-೬). ೫. ಲಿಂಗವಂತರುಯೆಂಬ ಸದರಿನ ಕೆಳಗೆ ವಿವರಿಸಿದ್ದೇವೆ (ಕಛಾಗ. ೧೦೪). ೬. ಅಧಿಕೃತವಾದುದು : ಹಲಿಗೆ ಮೇಲಣ ಸದರು ಮೊಹರು (ಎಕ. XIV. ನಂಜನ. ೨೯೩-೧೪೩; 1847). [<— ಅರ. ಸದ್ರ್; ಹಿಂ. ಮರಾ. ಸದರ್./ ತುಳು. ಸದರ್, ಸದರು]

ಸದರ, ಸದರು$_2$ (ನಾ). ೧. ಸಲಿಗೆ ; ಸಸಾರ : ಸಾಪತ್ನರಲಿ ಸದರವ ಕಾಣೆ ತಾನೆಂದ (ಕುಮಾಭ. ೮-೬); ಅದರ ಸದರ ನನ್ನ ಅರಿವಿಗೆ ಮಂಕನ್ನು ಕವಿಸಿತು (ಕಪಪು. ೭-೯೦). ೨. ಸುಲಭ ; ಸರಾಗ ; ಸಲೀಸು : ಆಸೆ ಎಂಬುದು ಭವದ ಬೀಜ ನಿರಾಸೆಯೆಂಬುದು ನಿತ್ಯಮುಕ್ತಿ ಉರಿವೆದ್ದಿಗಳರಸನಲ್ಲಿ ಸದರವಲ್ಲ ಕಾಣಪ್ಪ (ಸರ್ವಜ. ೧೮೫-೮೫೩); ಬಳಿಯಲಿ ಬಂದ ಸದರವೆಯೆನ್ನಯ ಕೈಚಳಕವನಿಂದು ತೋಱುವೆನು (ಸೂಬಸೋ. ೫-೨೮); ಪೈನತೇಯನ ವಿಗಡಿಸಿದ ವಿಷವೇನು ಸದರವೊ ಹಾವಡಿಗರಿಗೆ (ಕುಮಾಭ. ೧೫-೧೦); ಸದರವಲ್ಲವೊ ನಿಜಭಕುತಿ (ಪುರಂದ. ೧-೪೭ ಪಲ್ಲವಿ). ೩. ಅಸಡ್ಡೆ; ತಿರಸ್ಕಾರ : ನಿಮ್ಮಡಿಯ ಪೂರ್ವದ ಡಿಂಗರಿಗನೆಂದು ಘನಮಾಡಿ ಬಳಿಕಿಂತು ಸದರಮಂ ಮಾಳ್ಪರೇ (ಸೋಮಪು. ೧೪-೧೭). **ಸದರು**$_2$: ೧. ಶಾಲೆಯಲ್ಲಿಯೂ ಮಕ್ಕಳನ್ನು ಹಿಂದಿನ ಸದರಿನಿಂದ ಮುಟ್ಟಿ ಮುದ್ದಾಡಲು ಹಿಂಜರಿಯುತ್ತಿದ್ದಳು (ಮುನಿಮಾ. ೧೫೯).

[ದೇ. ॥ ತಮಿ. ಚತಿರ್; ಮಲ. ಚದಿರ್]

ಸದರಂಗಿ (ನಾ). ಒಂದು ಬಗೆಯ ಅಂಗಿ ; ಕುಡತಾ : ಸದರಂಗಿ ತೊಟ್ಟಿಹನು ಪದಕ ನವರತ್ನದ ಮದುಮಕ್ಕಳ ಅಣ್ಣ ಬಸವಣ್ಣ (ಸಿದ್ಧಪು. ೨೦-೧೦).

[< ಸದರಾ + ಅಂಗಿ$_2$]

ಸದರಗೊಡು (ಕ್ರಿ). ಸಲಿಗೆಯನ್ನು ಕೊಡು : ಒಡಲೀಯದ ಸದರಗೊಡುತ ವಿಘಾಡಿಸುತ ಮೇಲಿಕ್ಕಿದರೆ ಕೈಮಾಡಿದರೆ ಶರಹತಿಗೆ ದೇಹವ ಕೊಟ್ಟು ಸೈರಿಸುತ . . . ಕಾದಿದನು (ಕುಮಾದ್ರೋ. ೧೫-೬೨). [ಸದರ + ಕೊಡು$_1$]

ಸದರನಿದರ (ನಾ). ಅನುಕೂಲ ಮತ್ತು ಅನನುಕೂಲ (?) ; ಸೌಕರ್ಯ ಮತ್ತು ಅಸೌಕರ್ಯ (?) : ಅಂತು ಮೂವಳಸುವಳಸಿ ಬೀದಂ ಬಿಟ್ಟು ಮಱುದಿವಸಂ ಲಗ್ನೆಯ ದೆಸೆಯ ದಿವಸ ಸದರನಿದರಮುಮಂ ಜಂತ್ರದೊಡ್ಡವಣೆಗಳುಮಂ . . . ನೋಡುತ್ತುಂ (ಅನಂಪು. ೧೧-೮೨ ಪ); ವಸುಷೇಣರಾಜನು, ಕೋಟೆಯ 'ಸದರನಿದರ'ಮುಮಂ (ಅನುಕೂಲ-ಪ್ರತಿಕೂಲ ಸ್ಥಳಗಳನ್ನು) . . . ಸುತ್ತಿ ಸುತ್ತಿ ನೋಡುತ್ತ (ಕರ್ಣಾಜ. ೧೮). [?]

ಸದರಹು (ಗು). ಮೇಲಿನ ; ಮೇಲೆ ಹೇಳಿದ : ಈ ಕೊಡಗಿನ ದೊರೆಗಳು ಸದರಹು ಆ ಶೀಮೆ ಬಿಡದೆ ಹಾಕಿಕೊಂಡು ಬರುವುದರಿಂದ (ರಾಚೇಂದ್ರ. ೬); ಅಂಗಡಿಗೆ ಬದುಕು ಕಳುಹಿಸಿ ಸದರಹು ಅಂಗಡಿಯಲ್ಲಿ ರಕಮು ತಕ್ಕೊಂಡು (ಮುಂಬಾ. ೫ ಪ್ರಸ್ತಾವನೆ).

[<— ಮರಾ. ಸದರಹೂ]

ಸದರಾ (ನಾ). = ಸದರಂಗಿ : ಮೈಮೇಲೆ ಬಾದಾಮಿಬಣ್ಣದ ಒಂದು ಖಾದೀ ಸದರಾ (ಪುನರ್ಮ. ೪೭). [<— ಹಿಂ. ಸದರೀ; ಮರಾ. ಸದರಾ]

ಸದರಿ, ಸದ್ರಿ (ಗು). ಈ ಮೊದಲು ಹೇಳಿದ ; ಮೇಲೆ ಕಾಣಿಸಿದ : ಸದರೀ ಐದು ದೇವರ ಪೂಜೆ . . . ವಗೈರೆ ಬಗ್ಗೆ ಬತಾರೀಕು ಯಿನಾಮು (ಎಕ. VI. ಕೊಪ್ಪ. ೪೮-೩೫; 1811); ಸದರಿಕೆಲಸಕ್ಕೆ ಹಂಗಾಮಿಯಾಗಿಯಾದರೂ ನೇಮಿಸಿಕೊಳ್ಳಬಹುದು (ಗ್ರಾಮಾಕ. ೧೧). **ಸದ್ರಿ** : ಸದ್ರಿ ಸೇತುವೆಕೆಲಸವನ್ನು ಕಂಟ್ರಾಕ್ಟು ಪಡೆದು (ಮೈಅರಿ. ೧೯೪೬. ೩-೮; 1894).

[<— ಅರ. ಮರಾ. ಸದರ./ ತುಳು. ಸದರಿ, ಸದ್ರಿ]

ಸದರು$_1$ 'ಸದರ್' ನೋ.

ಸದರು$_2$ 'ಸದರ' ನೋ.

ಸದರುಕಟ್ಟೆ (ನಾ). ಜಗುಲಿಯ ಕಟ್ಟೆ ; ಚಾವಡಿ ಕಟ್ಟೆ : ಗೌಡರ ಮನೆಯ ಪಡಸಾಲೆ ಎರಡಂಕಣದ ಸದರುಕಟ್ಟೆಯ ಮೇಲೆ . . . ಒಂದೆರಡು ಹಳೆಯ ದಿಂಬುಗಳನ್ನಿಡಲಾಗಿದೆ (ಸಡಾ. I. ೨೫೯). [ಸದರು$_1$ (< ಸದರ್) + ಕಟ್ಟೆ$_1$]

ಸದರ್ಥ (ನಾ). ನಿಜವಾದ ಅರ್ಥ ; ಸರಿಯಾದ ಅರ್ಥ : ಸೂಗಯಿಪ ಧಾತು ಧಾತುಗಳವಟ್ಟ ಸದರ್ಥದ ಮಾತು ಮಾತಿನೊಳ್ ಮಿಗೆ ಪುದಿದಿರ್ಪ ರೀತಿ ನೆಱೆ ರೀತಿ ರಸಂಬಡೆಯಲ್ (ಶಾಂತೀಶ್ವ. ೨-೮೧); ಜಡಪ್ರಾಸ ಸೇರದೆ ಸದರ್ಥಕ್ಕೆ ಪೋರದೆ . . . ತಿರ್ದುಗೆ ಕೃಪೆಯೊಳು (ಮಂಗರಾ. ೧-೨). [ಸಂ.]

ಸದರ್ಥವಾದಿತ್ವ (ನಾ). ಸಮರ್ಥವಾಗಿ ವಾದಿಸುವುದು ; ಸರಿಯಾದ ತರ್ಕ : ಸದರ್ಥವಾದಿತ್ವಮನಿಂದ್ರನಂದಿಮುನಿಯಿಂ ಪಡೆದೊಂ (ಶಾಂತಿಪು. ೧೨-೮೦). [ಸಂ.]

ಸದಲಂಕಾರ, ಸದಳಂಕಾರ (ನಾ). [ಕಾವ್ಯಮೀ] ಉತ್ತಮವಾದ ಅಲಂಕಾರ ; ಒಳ್ಳೆಯ ಅಲಂಕಾರ : ಸದಲಂಕಾರೋದಾರಂ ವದನೇಂದುಸುಧಾಚ್ಛಟಾಂಬು ಪಸರಿಸ . . . ಮುನಿ ನುಡಿದಂ (ಶಾಂತಿಪು. ೭-೩); ಇತರೇತರಕಾರಕಸಂಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸವೊಂದತಿಶಯಗುಣದಿಂ ನಿರ್ಧಾರಿತಮಪ್ಪುದು ಸಾರಮೆಂಬ ಸದಲಂಕಾರಂ (ಕಾವ್ಯಾವ. ೬೫೮). **ಸದಳಂಕಾರ** : ಗುಣಜಾತ್ಯಾದಿಗಳೊಳಗನುಗುಣಮಾಗಿರ ಪೇಱದವಱ ವಿಕಳತೆಯಂ ಸಯ್ತೆಣಿಸಿ ವಿಶೇಷಮನಱಿಪುವ ಗಣನೆ ವಿಶೇಷಾನುಭಾವಸದಳಂಕಾರಂ (ಕವಿರಾ. ೩-೧೨೦); ಸದಳಂಕಾರೋಕ್ತಿಯುಂ ಸೂಕ್ತಿಯುಮೆಸೆಯಲುಪನ್ಯಾಸವಿನ್ಯಾಸಮಂ ತೋರ್ಪುದುಂ (ಸುಕುಮಾ. ೨-೭೫). [ಸಂ.]

ಸದವಕಾಶ (ನಾ). ಒಳ್ಳೆಯ ಸಮಯ ; ತಕ್ಕ ಸಂದರ್ಭ,—ವೇಳೆ : ತಮ್ಮ ಹೇಳಿಕೆಗಳನ್ನು ನಿರ್ಭೀತಿಯಿಂದ ಮುಂದಿರಿಸಲು ಹಗಲಿಗಿಂತ ರಾತ್ರಿಯೇ ಸದವಕಾಶ (ಕುಡಿಕೂ. ೪೯). [ಸಂ.]

ಸದವು 'ಸದುವು' ನೋ.

ಸದಸತ್ತು (ನಾ). ಇರುವುದು ಮತ್ತು ಇಲ್ಲದಿರುವುದು ; ಅಸ್ತಿತ್ವದಲ್ಲಿರುವುದು ಮತ್ತು ಅಸ್ತಿತ್ವದಲ್ಲಿಲ್ಲದಿರುವುದು : ಸದಸತ್ತುಗಳ ಭೇದವನು ನೀತಿಮುಖದಿಂ ದಱಿಪುದು (ಕುಮಾಭಾ. ೩-೧೨೪); ಈ ಅವ್ಯಾಕೃತವು ಸತ್ತೂ ಅಲ್ಲ ಅಸತ್ತೂ ಅಲ್ಲ ಸದಸತ್ತೂ ಅಲ್ಲ (ಉತ್ತಟೀ. ೫-೧೦). [ಸಂ. ಸದಸತ್]

ಸದಸದ್ವಿವೇಕ (ನಾ). ಒಳ್ಳೆಯದು ಮತ್ತು ಕೆಟ್ಟದ್ದನ್ನು ವಿಶ್ಲೇಷಿಸುವ ಅರಿವು; ವಿವೇಚನಾಶಕ್ತಿ : ಸದಸದ್ವಿವೇಕಮನ್ ನೇರಿತಾರಯ್ಯಮಯನ್ ಪಿಡಿಯಲ್ಕೆವೇಱ್ಕುಂ (ಬಿಜ್ಜಪ್ರ. ೫೫-೧೨೦೬). [ಸಂ.]

ಸದಸನ್ಮತಿ (ನಾ). ಒಳ್ಳೆಯ ಬುದ್ಧಿಯುಳ್ಳವನು ಮತ್ತು ಕೆಟ್ಟಬುದ್ಧಿಯುಳ್ಳವನು : ಸದಸನ್ಮತಿಗಳ್ ಪಿಡಿವಂದದಿನೇಕಾನೇಕ ಪದಮುಮಂ ಸಿರಿ ಮೈಸೋಂಕಿದರಂ ಪಿಡಿವುವು ಮುಂ ಮಿಡುಕದಂತು ತಡನಡವ ವಜ್ರಲೇಪದ ಶಿಲೆಗಳ್ (ಜಗನ್ನಾ. ೧೭-೪೨).

[ಸಂ.]

ಸದಸು 'ಸದೆಯಿಸು' ನೋ.

ಸದಸ್ಯ (ನಾ). ೧. ಸಂಘ, ಸಮಿತಿ ಮುಂತಾದ ಘಟಕಗಳಲ್ಲಿ ಕಾನೂನು ಬದ್ಧವಾದ ಸಂಬಂಧವನ್ನು ಹೊಂದಿರುವವನು : ಗೂಢಚಾರರು ಪ್ರತ್ಯಕ್ಷವಾಗಿಯೇ ಪಾರ್ಟಿಸದಸ್ಯರ ಹಿಂದೆ ಸುಳಿಯಲಾರಂಭಿಸಿದರು (ಅಕ್ಕಾಕ್ಕ. ೧೪೮); ನಮ್ಮ ತಂದೆಯೇ ರಾಜ್ಯಾಂಗಸಭೆಯ ಒಬ್ಬ ಸದಸ್ಯನಾಗಿದ್ದನು (ಮಲನಾ. ೬೮). ೨. ಯಜ್ಞ, ಯಾಗಾದಿಗಳಲ್ಲಿ ಸಹಾಯ ಮಾಡುವವನು, – ಸಹಾಯಕ. ೩. (ನ್ಯೂನಾತಿರೇಕಗಳನ್ನು ಸರಿಪಡಿಸಿ ವಿಧಿಪೂರ್ವಕವಾಗಿ) ಯಜ್ಞವನ್ನು ನಡೆಸುವವನು; ಋತ್ವಿಕ್ಕು. [ಸಂ.]

ಸದಸ್ಯತ್ವ (ನಾ). ಸಂಘ, ಸಮಿತಿ ಮುಂತಾದ ಘಟಕಗಳಲ್ಲಿ ಕಾನೂನು ಮೂಲಕವಾದ ಸಂಬಂಧವನ್ನು ಹೊಂದಿರುವುದು ; ಸದಸ್ಯತನ : ಸದಸ್ಯತ್ವಕ್ಕೆ ಅನರ್ಹತೆಗಳು (ಭಾಪಾಸ. ೪೯); ಸದಸ್ಯತ್ವವಷ್ಟೇ ನನಗೆ ಸಾಲದು (ಅಕ್ಕಾಕ್ಕ. ೬೫). 'ಆಜೀವಸದಸ್ಯತ್ವ' ಪರಾ. [ಸಂ.]

ಸದಸ್ಯೆ (ನಾ). ಸಂಘ, ಸಮಿತಿ ಮುಂತಾದ ಘಟಕಗಳಲ್ಲಿ ಕಾನೂನು ಬದ್ಧವಾದ ಸಂಬಂಧವನ್ನು ಹೊಂದಿರುವವಳು : ದಾಸಿಯನ್ನಿಡಲು ಸದಸ್ಯೆಯರೆಲ್ಲರಿಗೂ ಆರ್ಥಿಕಸಂಪತ್ತು ಅನುವಾಗದು (ಸಾಮಿ. ೫೫).

[ಸದಸ್ಯ + - ಎ]

ಸದಸ್ಸು (ನಾ). ಸಭೆ ; ಸಮಾವೇಶ : ಗಂಗರಾಜರು . . . ಸಭೆಗೆ ವಂದಿಸಿ, ಸದಸ್ಸನ್ನುದ್ದೇಶಿಸಿ . . . ಎಂದರು (ಶಾಂತಲಾ. ೩೭). [ಸಂ. ಸದಸ್]

ಸದಳ (ನಾ). ೧. (ಏಕ ಅಥವಾ ದ್ವಿ)ದಳವನ್ನು ಹೊಂದಿರುವ ಧಾನ್ಯ, – ದವಸ : ಸರಕುಗಳ ಸದಳದ ಭಂಡಿಗಳು ಭಾರಿಸದವಿಳಿ ಝಡಿಯೆ (ತೊರಾ. ೧-೧೬-೧೦). 'ಸದಳಿಗ' ಪರಾ. ೨. ಪಡೆಯಿಂದ ಕೂಡಿರುವುದು ; ಸೈನ್ಯಸಹಿತವಾದುದು. ೩. ಸೈನ್ಯ; ಸೇನೆ: ಮಂತ್ರಿಯ ಮಾತ ಕೈಕೊಂಡು ಸದಳವೆಲ್ಲವ ನಿಜನಿವಾಸಕ್ಕೆ ಬೀಳ್ಕೊಟ್ಟು (ತಚಕಾ. ೪-೧); ಬಿದುರೆಯೊಳುಪ್ಪಯಣವನೆಂಟುದಿನ ಮಾಡಿ ಸದಳವ ತೆರಳಿ ಮುಂದೆ ಕದನಲಂಪಟರೊಡನೆಯ್ತರೆ (ಕುರಾಸಾಂ. ೪೨-೪೩). [ಸಂ. ಸದಲ]

ಸದಳಿಗ (ನಾ). ಧಾನ್ಯವನ್ನು ಮಾರುವವನು ; ದಿನಸಿವ್ಯಾಪಾರಿ : ಸದಳಿಗರ ಸಾಧನಸಮಗ್ರಮುಂ ತರತರದೊಳಿಳಿದುವತಿಚೆಲ್ವಾಗಿ (ಚಟಪು. ೪೧-೫೭).

[ಸದಳ + - ಇಗ]

ಸದಾ (ಅ). ೧. ಯಾವಾಗಲೂ ; ಸರ್ವದಾ : ಸದಾ ಸನ್ನಿಹಿತನಾಗಿ ಶರಣೆಂಬುವುದು (ಬಸವ. ೧೭೭); ಬಾ ಎಂದಾಗ ನಾನು ಸದಾ ಸಿದ್ಧ (ನಡದಾ. II. ೧೬೯). ೨. ಶಾಶ್ವತವಾಗಿ; ಖಾಯಂ ಆಗಿ : ''ಸತತಂ ನಿತ್ಯಮನಿಶಮನವರತಮಶ್ರಾಂತಮಸ್ತೋಕಮಜಸ್ರಂ ಶಾಶ್ವತಮನೆ ಸದಾ ನಾಮಮಕ್ಕುಂ'' (ಮಂಗರಾ. ೧೨೬-೭). [ಸಂ.]

ಸದಾಕಾಲ (ನಾ). ಎಲ್ಲಾ ಸಮಯ ; ಎಲ್ಲಾಕಾಲ : ಇದು ಸದಾಕಾಲದಲ್ಲಿಯೂ ಹಿಮ ಮತ್ತು ಮಂಜುಗಡ್ಡೆಯಿಂದ ಮುಚ್ಚಲ್ಪಟ್ಟಿರುವ ಇಕ್ಕಟ್ಟಾದ ಕಣಿವೆ (ನನದಿ. ೧೧).

[ಸಂ.]

ಸದಾಕಾಲಂ (ಅ). ಎಲ್ಲಾ ಸಮಯದಲ್ಲಿಯೂ : ದುರಾತ್ಮನಾತ್ಮೀಯಭವನದೊಳ್ ಸದಾಕಾಲಂ ಮಹಾಜನಕ್ಕೆ ಸಹಸ್ರಭೋಜನಮನಿಕ್ಕುವಂ (ಸುಮಾ. ೨-೬೯ ವ).

[< ಸದಾಕಾಲ]

ಸದಾಗತ (ನಾ). ಯಾವಾಗಲೂ ಚಲಿಸುವಂತಹುದು ; ಗಾಳಿ ; ವಾಯು : ಅತಿಥಿರೂಪಿಂದ ಸಂಚರಿಸಲಂಜುವನಾಶ್ರಮದಲ್ಲಿಯಾ ಸದಾಗತ (ನಚ್ಚಾ. ೪-೧೩೨). [ಸಂ.]

ಸದಾಗತಿ (ನಾ). = ಸದಾಗತ : ಕಾಮನ ಬಾಣದಿರ್ಕೆವನೆಯೋ . . . ವಿಲಸತ್ ಸದಾಗತಿಪ್ರೇಮದೆ ಸೌರಭಂದಳಿದ ತಾಣಮೊ (ಗಿರಿ. ೨-೬೦) ; ಸದಾಗತಿ ಕಂಪನಾಂತು ತಾಂ ಮೆಲ್ಲನೆ ತೀಡೆ (ಹಾಲಾಸ್ಯ. ೧-೩-೨೯). [ಸಂ.]

ಸದಾಗತಿಸಖ (ನಾ). ವಾಯುವಿನ ಗೆಳೆಯ ; ಅಗ್ನಿ : ಸದಾಗತಿಸಖನ ಝಳವಡಗಿತೆ (ತೊರಾ. ೬-೫೧-೭೯). [ಸಂ.]

ಸದಾಚಾರ (ನಾ). ೧. ಒಳ್ಳೆಯ ನಡತೆ, – ಆಚಾರ : ವಿಸ್ತಾರದ ಜೈನಧರ್ಮದ ಮೊದಲ್ ಪರಮೇಶ್ವರರೆಂಬಿನಂ ಸದಾಚಾರಸಮೇತರಾದರಮಗೀಗೆ ಶಿವಾಸ್ಪದ ಮುಖ್ಯಿ ಸೌಖ್ಯಮಂ (ಶಾಂತಿಪು. ೧-೩) ; ಸಕಳಸದಾಚಾರಪರಿಪಾಳನೈಕರಸಿಕರ್ (ಸೌಗಾ. XX. ೪೭-೧೮ : 1072) ; ಭಕ್ತನು ಭಕ್ತನ ಕಾಣ್ಬುದು ಸದಾಚಾರ (ಬಸವ. ೨೪೬). ೨. [ವೀಶೈ] ಪಂಚಾಚಾರಗಳಲ್ಲಿ ಒಂದು ; ಸತ್ಯಶುದ್ಧ ಕಾಯಕವನ್ನು ಮಾಡುತ್ತ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವನ್ನು ತಿಳಿದು ಪರಹಿತಾರ್ಥ ಮಾಡುವುದು : ಲಿಂಗ ಜಂಗಮವ ಪೂಜಿಸಿ ಭಕ್ತನಾದನೆಂದರೆ ಭೃತ್ಯಾಚಾರ ಸದಾಚಾರವ ಮೊದಲು ನೋಡಾ (ಅವಚಂ. ೨೨೫-೧೦೨೦) ; ಸಕಲ ಶರಣರ್ಗೆ ಸಂತೋಷವಹುದೇ ಸದಾಚಾರವೆನಿಸುವುದು (ವೀಚಿ. ೧೧೧). [ಸಂ.]

ಸದಾಚಾರವರ್ತಿನಿ (ನಾ). ಒಳ್ಳೆಯ ನಡತೆಯುಳ್ಳವಳು : ಜನಕಂ ವಿಪ್ರಕುಳಾಂಬರದ್ಯುಮಣಿಚಂದ್ರಂ ತಾಯ್ತದಾಚಾರವರ್ತ್ಯಿನಿ ಚಾವಮಾಂಬಿಕೆ (ಸೌಗಾ. XX. ೪೭-೬೮ : 1084). [ಸಂ. ಸದಾಚಾರವರ್ತಿನೀ]

ಸದಾಚಾರಿ (ನಾ). ಒಳ್ಳೆಯ ನಡತೆಯುಳ್ಳವನು : ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತಿಪ್ಪನಾ ಭಕ್ತನು . . . ಇಂತಪ್ಪ ಸದಾಚಾರಿಗಳನೆನಗೆ ತೋಱಾ (ಬಸವ. ೬೯೯) ; ಧನವಂತನಂ ಸದ್ಧರ್ಮಿಯುಂ ಸದಾಚಾರಿಯಪ್ಪೆನ್ನ ಪ್ರಾಣೇಶ್ವರನಂ ಬಿಟ್ಟು ದುರ್ಬುದ್ಧಿಯಿಂದ . . . ಪಾಪಸ್ಥರೂಪಂಗಳಸಿ ಕೆಟ್ಪೆಂ (ನಚ್ಚಾ. ೩-೯೭ ವ). [ಸಂ. ಸದಾಚಾರಿನ್]

ಸದಾನಂದ (ನಾ). ೧. ಯಾವಾಗಲೂ ಇರುವ ಸಂತೋಷ ; ನಿತ್ಯಾನಂದ : ಪರಮಭಟ್ಟಾರಕ ಪರಾಪರ ಪರಮಪರ ಪರಮಸ್ವತಂತ್ರನ ಪರಿಮಿತ ಸದಾನಂದಪರ ಪರಮಾತ್ಮ ಪರಮೇಶ (ಬಸಪು. ೨-೧೬). ೨. ಯಾವಾಗಲೂ ಆನಂದದಿಂದಿರುವವನು : ಸದಾನಂದನ ಇರವು ಹೇಗಿರಬೇಕೆಂದರೆ . . . ಉಣಬಂದವರಿಗಿಕ್ಕಿ ಬೇಡಬಂದವರಿಗೆ ಕೊಟ್ಟು ಆರೂಢನಜೀವುದು (ಮೋಮಾ. ೬೭-೧೫೬). ೩. ಶಿವ; ಪರಮೇಶ್ವರ: ಜೋ ಸಗುಣ ನಿರ್ಗುಣ ಸದಾನಂದ ನಿತ್ಯ ಜೋ ಜೋ (ರಾಘಚ. ೨-೪೩). [ಸಂ.]

ಸದಾನಂದಿ (ನಾ). ೧. ಯಾವಾಗಲೂ ನಂದಿಯಿಂದ ಕೂಡಿರುವುದು. ೨. ಯಾವಾಗಲೂ ಸಂತೋಷದಿಂದ ಇರುವುದು : ೧, ೨ : ಬಾಹ್ಯಕರ್ಮ ಪರಿತ್ಯಾಗದಿಂ ಸದಾನಂದಿಯಾಗಿಹುದೇ ಸ್ವಯಂಲಿಂಗನೆನಿಸುವುದು (ವೀಚಿ. ೧೧೨); ಶಿವಸಭೆಯಂತೆ ಸದಾನಂದಿಬಂಧುರಮೆನಿಸಿ (ರಾಜಶೇ. ೫-೧೯ ವ). ೩. ಯಾವಾಗಲೂ ಆನಂದದಿಂದಿರುವವನು: ತನ್ನ ಉಪೋಷಣಾದಿಗಳಿಂದ ನೋಡುವವರಿಗೂ ಸಂಕಟವನ್ನುಂಟುಮಾಡುವವನಿಗಿಂತ ಕಂಡವರೆಲ್ಲರೂ ಹಿರಿಹಿರಿಹಿಗ್ಗುವಂತೆ ಮಾಡುವ ಉಂಡಾಡುವ ಸದಾನಂದಿಯು ಲೇಸು (ಎಚಾಮಂ. ೪೯).

[ಸಂ. ಸದಾನಂದಿನ್ (ಸದಾ + ನಂದಿನ್ ; ಸದಾ + ಆನಂದಿನ್)]

ಸದಾನಭೋಗ (ನಾ). ೧. ಯಾವಾಗಲೂ ಆಕಾಶದಲ್ಲಿ ಚಲಿಸುವವನು ; ಚಂದ್ರ. ೨. ದಾನವನ್ನು ಮಾಡುವುದರಲ್ಲಿ ಆಸಕ್ತಿಯುಳ್ಳವನು; ಚಂದ್ರಹಾಸ. ೧, ೨ : ಮಂಜುಮಹಿಮಾಸ್ಪದಂ ಚಾರುವೃತ್ತಂ ಕಲಾಪುಂಜಂ ಸದಾನಭೋಗಂ ಕುವಲಯಪ್ರಿಯಂ . . . ಅಮೃತಾರ್ಚಿಯಂ ಜಜಿದು ನಗುವನದಱಿಂ ಚಂದ್ರಹಾಸಂ (ಚೈಮಿಭಾ. ೨೮-೬೨). [ಸಂ. (ಸದಾ + ನಭೋಗ ; ಸದಾನ + ಭೋಗ)]

ಸದಾನವ (ನಾ). ೧. ಯಾವಾಗಲೂ ಹೊಸತಾದುದು ; ನವನವೀನವಾದುದು. ೨. ರಾಕ್ಷಸರಿಂದ ಕೂಡಿದುದು. ೧, ೨ : ಅಭಿಲಾಷೆಯಂತಿರ ಸದಾನವಂ ಸಿರಿಯಂತೆ ವಿಭವಾಸ್ಪದಂ ಕಲಾನಿಧಿಯಂತೆ ಮೃಗಧರಂ . . . ಆಗಿ ತಚ್ಛೈಲಮೆಸೆದಿರ್ದುದು (ಚೈಮಿಭಾ. ೧೦-೫). [ಸಂ. (ಸದಾ + ನವ ; ಸ + ದಾನವ)]

ಸದಾನಿಕೇತನ (ನಾ). ದಾನಿಗಳಿಂದ ಕೂಡಿದ ಮನೆ: ಸದಾನಿಕೇತನಂಗಳಿಂ ಧನದ ಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ (ಪಂಪಭಾ. ೧-೫೮). [ಸಂ.]

ಸದಾನುವರ್ತಿ (ನಾ). ೧. ಸತ್ಪರಂಪರೆಯನ್ನು ಅನುಸರಿಸುವುದು. ೨. ಯಾವಾಗಲೂ ಬೆನ್ನು ಹಿಂದೆ ಇದ್ದು ಕಾಯುವವನು. ೧, ೨ : ಪರಿಕಿ ಪೊಡತಿವ್ರದ್ರಂ ನಿಷ್ಠುರವೃತ್ತಿ ಸದಾನುವರ್ತಿ ನೀತಿಯುತಂ ಭಾಸುರತೇಜಂ (ಚಂದ್ರಪ್ರ. ೩-೨೩). [ಸಂ. ಸದಾನುವರ್ತಿನ್ (ಸದ್ + ಅನುವರ್ತಿನ್ ; ಸದಾ + ಅನುವರ್ತಿನ್)]

ಸದಾಪ, ಸದಾಬು (ನಾ). ೧. ಒಂದು ಬಗೆಯ ಗಿಡ ; ಸಬ್ಬಸಿಗೆ ಗಿಡ : ಜಟಾಮಾಂಸಿ, ಸದಾಪ, ಕರಿಸಿನ, ದ್ರಾಕ್ಷೆ (ಸಕವ್ಯ. ಪರಿ. ೪೩೮). ಸದಾಬು : ೨. ಕಟುವಾಸನೆಯುಳ್ಳ ಒಂದು ಬಗೆಯ ಗಿಡ ; ನಾಗದಾಳಿ : (ಕ). 'ಸದಗುಪ್ಪೆ' ಪರಾ. [← ಮರಾ. ಸತಾಪ ; ಹಿಂ. ಸದಾಬ್. / ತಮಿ. ಚತಾಪ್ಪು ; ಮಲ. ಸುದಾಬ್ ; ತುಳು. ಸದಾಪು, ಸದಾಬು; ತೆಲು. ಸದಾಪ]

ಸದಾಪುಷ್ಪ (ಗು). ೧. ಯಾವಾಗಲೂ ಹೂವುಗಳನ್ನು ಬಿಡುವ. (ನಾ). ೨. ಯಾವಾಗಲೂ ಹೂವುಗಳನ್ನು ಬಿಡುವ ಗಿಡ ; ಮುಚುಕುಂದ : "ಸದಾಪುಷ್ಪ ಮೆನಲು ಮುಚುಕುಂದಮಕ್ಕುಂ" (ಮಂಗರಾ. ೩೮-೨೫). ೩. ತೆಂಗಿನ ಮರ. [ಸಂ.]

ಸದಾಬರ್ತ್ 'ಸದಾವರ್ತು' ನೋ.

ಸದಾಬು 'ಸದಾಪ' ನೋ.

ಸದಾರವಿಭವೋಪೇತ (ನಾ). ೧. ಹೆಂಡತಿಯೊಡನಿರುವ ವೈಭವದಿಂದ ಕೂಡಿದುದು. ೨. ಸದಾಕಾಲವೂ ಸೂರ್ಯನಿಂದ ಹುಟ್ಟಿದ ಯಮುನಾನದಿಯೊಡನೆ ಕೂಡಿದುದು. ೧, ೨ : ಆ ಜನಪದಂ ಸಮುದ್ರದಂತೆ ಸದಾರ ವಿಭವೋಪೇತ ಮುಮನಾಂತು (ರಾಜಶೇ. ೨-೨೮ ವ).

[ಸಂ. (ಸದಾರ + ವಿಭವೋಪೇತ ; ಸದಾ + ರವಿಭವೋಪೇತ]

ಸದಾರುಣ (ನಾ). ೧. ಯಾವಾಗಲೂ ಕೆಂಪಾಗಿರುವುದು. ೨. ಕ್ರೂರತನದಿಂದ ಕೂಡಿರುವುದು. ೧, ೨ : ಚಾರುಪ್ರವಾಳಮಣಿರುಚಿಯೊಳ್ ಸದಾರುಣಂ . . . ಉಂಟಲ್ಲದಿಲ್ಲಮಿವು ಮತ್ತೆಲ್ಲಿಯುಂ (ಚ್ಯಮಿಭಾ. ೨-೮).

[ಸಂ. (ಸದಾ + ಅರುಣ ; ಸ + ದಾರುಣ)]

ಸದಾವರ್ತು, ಸದಾಬರ್ತ್ (ನಾ). ಬಡಬಗ್ಗರಿಗೆ ಆಹಾರಕ್ಕಾಗಿ ಪ್ರತಿದಿನವೂ ಕೊಡುವ ದವಸಧಾನ್ಯ : ಪ್ರತಿದಿನದಲ್ಲಿಯೂ ಸದಾವರ್ತು ಕೊಡುವಂತೆಯೂ . . . ಕಟ್ಟಳೆ ಮಾಡಿಸಿದರು (ಮಹಾಪಂ. II, ೧೬೧). ಸದಾಬರ್ತ್: ಫಕೀರನು ಭಿಕ್ಷುಕರಿಗೆ ಸದಾಬರ್ತ್ ಕೊಡುತ್ತಿದ್ದನು (ದೌಲತ್. ೨೯೫).

[← ಹಿಂ. ಸದಾಬರತ್, ಸದಾವರ್ತ್ ; ಮರಾ. ಸದಾವರ್ತ್]

ಸದಾವ್ರತ (ನಾ). ಯಾವಾಗಲೂ ಧ್ಯಾನದಲ್ಲಿ ತೊಡಗಿರುವವನು : ಸೂರದತ್ತಂ . . . ಕ್ಷಿತಿತಳದಂತೆ ರಸಾಶ್ರಯನತರ್ಕಸುಕವೀಂದ್ರಬೃಂದದಂತೆ ವಿಶೇಷಾನ್ವಿತನಂಬರದಂತೆ ಸದಾವ್ರತಂ (ಸುಕುಮಾ. ೯-೮೨). [ಸಂ.]

ಸದಾಶಯ (ನಾ). ೧. ಒಳ್ಳೆಯ ಅಭಿಪ್ರಾಯ. ೨. ಒಳ್ಳೆಯ ಅಭಿಪ್ರಾಯವುಳ್ಳವನು : ಮಹಾಶಯ! ತಮ್ಮಂತಹ ಸದಾಶಯರಾದ ದೇಶಹಿತೈಷಿಗಳ ವಿಷಯದಲ್ಲಿ ಸುಳ್ಳಿನ ಸುದ್ದಿಯನ್ನು ಹರಡುವಷ್ಟು ನರಾಧಮನು ನಾನಾಗಿಲ್ಲ (ಚನ್ನಬೇ. ೨೧). [ಸಂ.]

ಸದಾಶಿವ (ನಾ). ೧. ಯಾವಾಗಲೂ ಒಳ್ಳೆಯದನ್ನು ಮಾಡುವವನು; ಪರಮಾತ್ಮ; ಪರಶಿವ: ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ (ಬಸವ. ೧೭) ; ಕಲೆಗಶೀತಂ ಸದಾಶಿವನೆಂದು ಷಡ್ಗುಣದ ಬಲುಸಿರಿಯನುಳ್ಳ ನಿನ್ನಂ ಕೀರ್ತಿಸುವರು (ವೀಶೃಪು. ೩-೬-೩೩). ೨. [ಶೈವ] ಶೈವಾಗಮದ ಮೂವತ್ತಾರು ತತ್ವಗಳಲ್ಲಿ ಒಂದು : ಶಿವ ಶಕ್ತಿ ಸದಾಶಿವ ಈಶ್ವರ . . . ಜಲ ಭೂಮಿಗಳೆಂಬ ಮೂವತ್ತಾಱು ತತ್ತ್ವಂಗಳು (ವಿವೇಕ. ೧೪೫). [ಸಂ.]

ಸದಾಶಿವತತ್ವ (ನಾ). = ಸದಾಶಿವ ೨ : ಈಶ್ವರತತ್ವ ವಾಯುಭೇದವಾಗಿ ಸದಾಶಿವತತ್ವ ಆಕಾಶಭೇದವಾಗಿ . . . ಪೃಥ್ವಿತತ್ವವ ಕೂಡಲಾಗಿ ಉತ್ಪತ್ತಿ ಎಲ್ಲಿ ಅಡಗಿತ್ತು (ಮೋಳಿಮಾ. ೭-೨೫) ; ಶುದ್ಧಸೃಷ್ಟಿಯಲ್ಲಿ ಉತ್ತರದಿಕ್ಕಿನ ಮನೆಯ ಗೋಮುಖ ಅಲ್ಲಿ ನ್ಯಾಸವಾದ ಮಕಾರವೆ ಸದಾಶಿವತತ್ವ ಅದರ ಕೆಳಗಣ ಮನೆಗಳೆ ವರ್ತುಳದಂಡ (ಉದ್ಭವಾ. ೮-೬). [ಸಂ.]

ಸದಾಶಿವಲೋಕ (ನಾ). ಶಿವನ ಲೋಕ ; ಕೈಲಾಸ : ಬ್ರಹ್ಮಲೋಕವನೇಱಿ ವಿಷ್ಣುಲೋಕವ ಸಾರಿ ಗಮ್ಮನೆ ರುದ್ರರೀಶ್ವರಸೀಮೆಯ ನೆಮ್ಮಿ ಸದಾಶಿವಲೋಕದ ಮೇಲೆ ಬ್ರಹ್ಮದ ಸೀಮೆಯ ಬಯಲೊಳಗೆ (ಶಿವಗೀ. ೧೫೨-೭೭೯). [ಸಂ.]

ಸದಿಯಣ್ಣನಾಚಾರಿ (ನಾ). ಒಬ್ಬಾತನ ಹೆಸರು : ಸಯಾರ ಸದಿಯಣ್ಣನಾಚಾರಿ ದೇXXXವಗ್ಗಡೆ ಸಂಧಿವಿಗ್ರ[ಹಿ] ಐಚಯ್ಯನುಂ . . . ಕೆಱೆಯ ಕಟ್ಟಿ (ಮೃಅರಿ ೧೧-೨; 889). [ಸದಿಯಣ್ಣ + < ಆಚಾರಿ]

ಸದಿವಾಳ (ನಾ). ಒಂದು ಸ್ಥಳದ ಹೆಸರು (?) : ಕಮ್ಮಱ ಕೇತೋಜಗ ಸದಿ (?ಬೆ)ವಾಳ ಕೆಯಿ ಮತ್ತರೆರಡು (ಎಇ. IV ೩೫೪-೪೮ ; 975). [?]

ಸದುಂಬು (ನಾ). ಜವುಗುನೆಲ.

ಸದುಂಬಾಗು = (ನೆಲವು) ಒದ್ದೆಯಾಗು ; ತೇವವಾಗು : ಜಳಕೇಳೀದ್ರವದಿಂದೆ ನಾಂದ ತೆಱದಿಂದೋಲಾಡಿ ಪೂಗೊಯ್ದು ಪೂಗೊಳದಿಂದಂ ಪೊಱಮಟ್ಟು ನಿಂದು ಶಬರೀಸಂದೋಹದಾವೋದಿಯಪ್ಪಳಕನೀಕದಿನೊಕ್ಕ ನೀರ್ವನಿಗಳಿಂ ತೀರಂ ಸದುಂ [ಪಾಠಾಂ. ಮಂ, ಡುಂ]ಬಾಗೆ ಪೊಯ್ದಳಿಜಾಳಂಗಳಿನಿಂದ್ರ ನೀಲಮಣಿಯಂ ಕಟ್ಟರ್ದವೋಲೊಪ್ಪುಗುಂ (ಲೀಲಾವ. ೬-೬೬).

[? ./ ತಮಿ. ಚತುಪ್ಪು]

ಸದುಕ (ನಾ). ಒಂದು ಬಗೆಯ ಕಾಳು ; ಬಾರ್ಲಿ : ಸದುಕವೆಂಬ ಕಾಳುಗಳನ್ನು ಅವರಿಗಳನ್ನು ತಿಂದು ಕಾಲಕಳೆಯುವುವು (ಮುಂಬಯಿ. ೩-೬೬).

[?./ ಮರಾ. ಸತ್ತು, ಸಾತೂ/ ಸಂ. ಸಕ್ತು]

ಸದುಕಾರಣ (ನಾ). ಒಳ್ಳೆಯ ಕಾರಣ, -ನಿಮಿತ್ತ : ಪುಂಡರೀಕದೇವನ ಪತಿಯಪ್ಪನೆಂಬ ನುಡಿಯಂ ಸದುಕಾರಣಮಾಗೆ ತಾಳ್ದು (ಕಾದಂಉ. ೫೯೭). [< ಸಂ. ಸತ್ಕಾರಣ]

ಸದುಗತಿ (ನಾ). ಒಳ್ಳೆಯ ಗತಿ ; ಮೋಕ್ಷ : ನಾವು ನಮ್ಮಯ ಸದುಗತಿಯ ಸಂಭಾವಿಸುವೆವು (ಪ್ರಭುಲೀ. ೬-೩೮) ; ಉದಕ ತಿಲ ಶ್ರಾದ್ಧಾದಿಕಂಗಳ ವಿದಿತವೆನೆ ನಡೆಸಿದನು ನಾಕದಿ ಸದುಗತಿಯು ಸಲುವಂತೆ (ಕೌಶಿಾ. ೪೨-೩೪). [< ಸಂ. ಸದ್ಗತಿ]

ಸದುಗಿರಿ (ನಾ). ಒಳ್ಳೆಯ ಬೆಟ್ಟ ; ಪರ್ವತ : ಧರಣೀಂದ್ರಂ(ಣೀಧ್ರಂ) ಕಂಬವಂತಾ . . . ಸದುಗಿರಿವರ್ಗ್ಗಂ ಕೂಟವರ್ಗ್ಗಂ (ಕಾ. IV, ೧-೬ ; 1204).

[< ಸಂ. ಸದ್ಗಿರಿ]

ಸದುಗುಣ (ನಾ). ಒಳ್ಳೆಯ ಗುಣ, – ಸ್ವಭಾವ : ಈವುದಾ ಪರಿಚಯದಡೆಗೆ . . . ಸದುಗುಣಾಭರಣಿಯಂ (ಇಹರ. ದೇ ೩೪-೧೯). [< ಸಂ. ಸದ್ಗುಣ]

ಸದುಗುಣಿ (ನಾ). ಒಳ್ಳೆಯ ಗುಣವುಳ್ಳವನು ; ಸದ್ಗುಣಿ : ಸಮತೆ ಶಾಂತಿ ಸದುಗುಣಿಯಾಗಿ ಕ್ರಮವನಱಿದು (ಶಿವಗೀ. ೮೩-೪೦೪) ; ಇನ್ನು ಸುಖಿ ತಾನೆಂದ ಹರಿ ಸಂಪನ್ನ ಸದುಗುಣಿ ಮಾಯ ಮೂರುತಿ ನೋಡಿ ಮನದಣಿಯೆ (ಕೌಶಿಾ. ೨೨-೬೭).

[< ಸಂ. ಸದ್ಗುಣಿನ್]

ಸದುಗುರು (ನಾ). ಒಳ್ಳೆಯ ಗುರು ; ಸದ್ಗುರು : ಜಂಗಮದೊಳಗಿರ್ದು ಭೋಗವ ಮಾಡುವುದೆಂದು ಸದುಗುರು [ಪಾಠಾಂ. ಸದ್ಗುರು] ಶಂಭು ಸೋಮೇಶ್ವರನ ವಚನವ ಕೇಳಿ (ಶಿವಗೀ. ೨೩-೧೦೨). [< ಸಂ. ಸದ್ಗುರು]

ಸದುಗೋಷ್ಠಿ (ನಾ). ಒಳ್ಳೆಯ ಸಭೆ, – ಗೋಷ್ಠಿ : ನಂಬಿಯಣ್ಣಂ ಗದುಗಾಟದ ಸದುಗೋಷ್ಠಿಯೊಳಿರೆಯಿರೆ (ನಂಬಿರ. ೧೬-೧೪೮). [< ಸಂ. ಸದ್ಗೋಷ್ಠಿ]

ಸದುಬಕುತಿ, ಸದುಭಕ್ತಿ (ನಾ). ನಿರ್ಮಲವಾದ ಭಕ್ತಿ; ಸದ್ಭಕ್ತಿ : ಯದುಕುಲೋತ್ತುಂಗರಂಗನ ಕೂರ್ತು ಕೃತಿವೇಳು ಸದುಬಕುತಿಯಲಿ ಕೇಳುವೆನು (ಮೋಹತ. ೩೮-೧). ಸದುಭಕ್ತಿ : ಘನಶಿವನ ಸದುಭಕ್ತಿಯಂ ಬೇಳ್ಪನುವಹುದೆ (ಬಸಪು. ೪೩-೬೦); ನಯದಿಂ ಗೃಹವನೊಂದುವಂ ರಚಿಸಿ ಸದುಭಕ್ತಿಯಿಂದ (ರಾಘಚ. ೬-೭).

[< ಸಂ. ಸದ್ಭಕ್ತಿ]

ಸದುಬೀಟ್ (ಕ್ರಿ). ನೆನೆ ; ತೋಯು ; ತೇವಗೊಳ್ಳು : ಮಿಡಿಯಂ ಶುಕಾನನಂ ತಾಗೆ ತಗುಳ್ದು ಸೋರ್ವ ಸೊನೆಯಿಂ ಸದುಬೀಟೆ ಮನೋಜರಾಜಧಾರಾಗೃಹದಂತದೆ ನೆಸೆದುದೋ ಮಧುಮಾಸದೊಳಾಮ್ರಭೂರುಹಂ (ಲೀಲಾವ. ೧೩-೪೦).

[< ಸದುಂಬು + ಬೀಟ್]

ಸದುಭಕ್ತ (ನಾ). ಒಳ್ಳೆಯ ಭಕ್ತ ; ಸದ್ಭಕ್ತ : ನಿಮ್ಮ ತನುಮನಧನವನೆಲ್ಲಿಯದಿರ್ದಡೆ ಸದುಭಕ್ತರಹರೇಂ ರಾಮನಾಥ (ದೇದಾವ. ೨೧-೩೫) ; ಚಿಕ್ಕಮಾದಯ್ಯನೆಂಬ ಸದುಭಕ್ತ ಹರನತಿಪ್ರಿಯಭಕ್ತಿಯುಕ್ತಿಯೊಳಿರಲು (ಬಸಪು. ೪೭-೪). [< ಸಂ. ಸದ್ಭಕ್ತ]

ಸದುಭಕ್ತಿ 'ಸದುಬಕುತಿ' ನೋ.

ಸದುಮ (ನಾ). ಮನೆ ; ನಿವಾಸ : ಸದ್ಮಂ, ಸದುಮಂ (ಶಬ್ದಾನು. ೧೪೭ ವ್ಯಾಖ್ಯಾ). [< ಸಂ. ಸದ್ಮನ್]

ಸದುವಿನಯ (ನಾ). ಒಳ್ಳೆಯ ನಮ್ರತೆ ; ಸದ್ವಿನಯ : ಸದುವಿನಯವೇ ಸದಾಶಿವನೊಲುಮೆ (ಬಸವ. ೨೪೪) ; ಸದುವಿನಯ ಸಂಪನ್ನವೆನಿಸುವ ಪದುಮನಾಭನ ಸೂಕ್ತಿ (ನಿಭಾಗ. ೩-೭-೨೧). [< ಸಂ. ಸದ್ವಿನಯ]

ಸದುವು, ಸದವು (ನಾ). ಅವಕಾಶ ; ಅಸ್ಪದ : ಭೂಮಿಯೊಳು ಪದ ಹೊದ್ದಿಸಲು ಸದುವೀವನಲ್ಲೆಂದಾಡಿ ತೋರಿಸುವ (ಜಿನಭಾ. ೬೩-೪೦). **ಸದವು** : ಇದೇನ ಅದಕ್ಕ ಸದವು ಕೊಡಲಿಲ್ಲ ನೋಡು (ಬೆಳಭಾ. ೧೬೬). [?]

ಸದುಹೃದಯ (ನಾ). ೧. ನಿರ್ಮಲವಾದ ಹೃದಯ, — ಮನಸ್ಸು : ಶ್ರೀಮದನಂತಚರಿತವ ಬಲ್ಲಂದದೊಳು ಸದುಹೃದಯದಿ ಸತ್ಪುರುಷರಾಲಿಸಿ (ಅನಂಚ. ೧-೪೪). ೨. ನಿರ್ಮಲವಾದ ಮನಸ್ಸುಳ್ಳವನು : ಸದುಹೃದಯನೈತಂದನಧಿಕಮನೋನುರಾಗದಲಿ (ನಿಭಾಗ. ೨-೪-೧೭). [< ಸಂ. ಸದ್ಹೃದಯ]

ಸದೃಕ್ಷ (ನಾ). ೧. ಹೋಲುವಂತಹುದು ; ಸಮಾನವಾದುದು : ಅಕ್ಷರ ಬಿಂದುಚ್ಯುತ . . . ನಿಜನಾಮಸದೃಕ್ಷಂ ಲಕ್ಷಣಮದಾಗೆ ನೆಗಟ್ಟುಂ ಪಲವುಂ (ಕಾವ್ಯಾವ. ೫೭೦) ; ಸುರುಚಿರಮಪ್ಪ ಮುತ್ತಿನಿಪ ದನ್ಯಚಯಂಗಳದೊನ್ದು ಕಾನ್ತಿಯಿನ್ದುರಗಸದೃಕ್ಷವಪ್ಪ ಕಚದಿಂ . . . ಒಪ್ಪೆ (ಎಇ. XII. ಚಿಕ್ಕನಾ. ೪೩-೧೯ : 1171). ೨. ಸರಿಸಮನಾದವನು ; ಸಮಾನನಾದವನು : ಶಂಕರಸದೃಕ್ಷನನುರುಕೃಪಾಕಟಾಕ್ಷನನೀಕ್ಷಿಪಳ್ಳಿಂ ಗೃಹಮನೆಯ್ದಿ (ಪದ್ಮರಾ. ೩-೩೭). [ಸಂ.]

ಸದೃಶ (ಗು). ೧. ಒಂದಕ್ಕೊಂದು ಹೋಲಿಕೆಯಿರುವ ; ಸಮಾನವಾದ : ಪಾಂಥರ್ಗೆ ಗೋಚರಿಸಿತೊಂದು ಋಷಿವನಸದೃಶಕಾನನಂ (ಶ್ರೀರಾಮಾ. ೩೭-೨೧೩). (ನಾ). ೨. ಹೋಲಿಕೆಯುಳ್ಳುದು ; ಸಮಾನವಾದುದು : ಸ್ತುತಿನಿಂದೆಗಳಂ ಸವಿವಕ್ಷಿತ ಗುಣದೊಳ್ ಸದೃಶಮಾಗಿ ಪೇಟ್ಪುದು ಪೆಜತಂ (ಕವಿರಾ. ೩-೯೫). ೩. ಸಮಾನನಾದವನು ; ಸಾಟಿಯಾದವನು : ಭಾಳನೇತ್ರಂಗೆ ತಾಂ ಸದೃಶನೀ ಕೌಶಿಕಂ (ಶ್ರೀರಾಮಾ. ೩೦-೭೨). [ಸಂ.]

ಸದೃಶತೆ (ನಾ). = ಸದೃಶ ೨ : ಲಿಂಗವಚೋವಿಹಿತವಿಭೇದಂಗಳ್ ನ್ಯೂನಾಧಿಕಂಗಳುಂ . ಸದೃಶತೆಯಿಂ ಸಂಗತಮಲ್ಲದುವುಂ ದೋಷಂಗಳವುಪಮೆಗೆ ಯಥಾ ಜನೋದ್ವೇಜನದಿಂ (ಕಾವ್ಯಾವ. ೬೭೯). [ಸಂ. ಸದೃಶತಾ]

ಸದೃಶತ್ವ (ನಾ). = ಸದೃಶ ೨ : ಇನನುದ್ಯಾನಪಯೋವಿನೋದ ಸದೃಶತ್ವಕ್ಕಂ ಮನಂದಂದವೋಲ್ ವನಮಾಲಾಕುಲತೀರಮಪ್ಪ ಪರಪಾರಾವಾರಮಂ ಪೊರ್ದಿದಂ (ಚಂದ್ರಪ್ರ. ೮-೨). [ಸಂ.]

ಸದೃಶಯೋಗಿತಾಲಂಕಾರ (ನಾ). [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ : ಸದೃಶಯೋಗಿತಾಲಂಕಾರಲಕ್ಷಣಂ. ಸ್ತುತಿನಿಂದೆಗಳಿಂ ಸವಿವಕ್ಷಿತಗುಣದೊಳ್ ಸದೃಶಮಾಗಿ ಪೇಳ್ವುದು ಪೆಜತಂ ನುತಸದೃಶಯೋಗಿತಾಲಂಕೃತಿ ಲಕ್ಷಣಮಕ್ಕುಮಿಂತು ತದುದಾಹರಣಂ (ಕವಿರಾ. ೩-೯೬). [ಸಂ.]

ಸದೃಶವೃತ್ತಿ (ನಾ). ಸಮಾನವಾದ ನಡವಳಿಕೆ, — ವರ್ತನೆ : ಪ್ರವಿದಿತಹೇತುವಿನೊಳ್ ಸಂದವನತಿಯೊಳ್ . . . ಸದೃಶವೃತ್ತಿಯೊಳ್ ಪ್ರತಿನಿಧಾನದೊಳಮಿಷ್ಟದೊಳಂ (ಶಮದ. ೧೩೦). [ಸಂ.]

ಸದೃಶಾಕ್ಷರ (ನಾ). ಹೋಲುವ ಅಕ್ಷರ ; ಸಮಾನವರ್ಣ : ಸದೃಶಾಕ್ಷರವಿನ್ಯಾಸಂ ಪದದೊಳ್ ಪಾದಂಗಳೊಳ್ ಪೊದಟ್ಟುಸೆದಿರೆ ಪೇಟ್ಪುದನುಪ್ರಾಸಂ (ಕಾವ್ಯಾವ. ೫೫೫); ಸದೃಶಾಕ್ಷರಗಳಾಗಲಿ ಅಂಥ ಅಕ್ಷರಸಮೂಹಗಳಾಗಲಿ ಒಂದರ ಮಗ್ಗುಲಲ್ಲಿ ಇನ್ನೊಂದು ಇದ್ದಾಗ ಅವುಗಳಲ್ಲಿ ಒಂದು ಬರೆಯುವಾಗ ನಷ್ಟವಾಗಬಹುದು (ಕಸ್ಸಂ. ೧೦೧). [ಸಂ.]

ಸದೆ₁, **ತದೆ**₁ (ಕ್ರಿ). ೧. ಕುಟ್ಟು ; ಪುಡಿಮಾಡು : "ಸದ - ಈಷಚ್ಚೂರ್ಣೇ (ಜಜ್ಜು)" (ಶಮಧಾ). ೨. ಹೊಸಕು ; ಉಜ್ಜು ; ತೀಡು : ಇಂದ್ರಾದಿ ನಿರ್ಜರ ನೂರಜುಗಳ ನೀವೆ ಸದೆಯಿ ಹೋಗೆಂದು (ಕುವ್ಯಾಕ. ೬-೮). ೩. ಮೆಟ್ಟು ; ತುಳಿ : ಮರಗಾಲಲಟ್ಟಿ ಸದದು ನೋಡಯ್ಯಾ (ಬಸವ. ೭೨೦) ; ಮುನಿದು ಕುಜಿಗಳ ಹಿಂಡ ಹೊಕ್ಕಾ ವನಮದೋದ್ಧ ಜದಂತೆ ಸದೆವುತ (ಶಾಕಾ. ೩-೧೪). ೪. ಹೊಡೆ ; ಬಡಿ : ತುಜುವಂ ಮಗುಟ್ಟಿ ಮಗುಬದೆ ತನಗಿದಿರೊಡ್ಡಿ ನಿಂದರಿನೃಪಬಲಮನರೆದು ಸದೆದು (ಪಂಪಭಾ. ೮-೧೦೪ವ) ; ಕಾರೆಯ ಮುಳ್ಳೆದ್ದು ಕಲಿಗಳನಟ್ಟಿ ಸದೆವಾಗ ಸೋರುಮುಡಿಯಾಕೆ ಗೊರವನ ನೆರೆದಳು (ಅವಚಂ. ೨೬-೧೧೧) ; ಕೆಲರನು ಸದೆದು ಕೊಂದನು (ಉತ್ತರಾ. ೮-೭೩). ೫. ಗಟ್ಟಿಯಾಗಿ ಶಬ್ದಮಾಡು ; ಭೋರಿಡು : ಕುದುರೆಗಳತ್ತ ಲಾಯಕೆ ಸಾರಲೊಡನಿತ್ತ ಸದೆವ ವಾದ್ಯದ ಗಲಭೆಯೊಳು ಮದದಾನೆಯೊಡ್ಡು ಸಾರ್ತರುತಿದ್ದುದು (ಭರಡ. ೨೦-೫೮). **ತದೆ**₁ : ೧. ತೋರಮುಡಿವಿಡಿದು ಕುಡಿಯಂ ನಾರಂ ಸದೆವಂತೆ ತ[ಪಾಕಾಂ. ಸ]ದೆದು ಬೀಟೆಯ ಕಾಲಿಂ ಬಾರೇಟ್ ಬದಿಗಸ್ಸದೊಡೆ (ಯಶೋಚ. ೨-೫೦). ೪. "ತದೆ = ತಾಡನೇ" (ಶಮಧಾ); ಅಂಬು ಕೊಂಡ ಮೞಿವುಲ್ಲೆವೊಲಾಕೆ ನೆಲಕ್ಕೆ ಬಿಲ್ದು ಬಾಯುಂ ಬಸಿಱುಂಬವಂ ತದೆ [ಪಾಕಾಂ. ಬಡಿ]ದು ಕೊಂಡು (ಅರ್ಧನೇ. ೭-೧೨) ; ಬಾಯಂ ಬಸಿಱುವ ತದೆದು ಕೊಳುತ್ತಿರ್ದಾಗಳು ಶಂಭುಕ ಸತ್ತುದ ಕಂಡು (ಕುಮುರಾ. ೮-೮). [ದೇ. ॥ ತಮಿ. ಚಟ, ಚಟ್ಟೆ ; ಮಲ. ಚಟೆ ; ತುಳು. ಚದೆ, ಸದೆ ; ತೆಲು. ಚದಿಯು, ಚದುಪು, ಚದುಮು]

ಸದ್ದೆ 'ಸೆತ್ತೆ' ನೋ.

ಸದೆಕೂಡಿಸು 'ಸದೆಗೂಡಿಸು' ನೋ.

ಸದೆಗ, ಸದಗ (ನಾ). (ಆಲಂ) ಕೆಲಸಕ್ಕೆ ಬಾರದವನು ; ಅಲ್ಪ ; ತುಚ್ಛ : ಇದು ಮಹಾಧ್ವರವಿಲ್ಲಿ ನೆರೆದಿದ್ದುದು ಮಹಾಕ್ಷತ್ರಿಯರು ಗೋವರ ಸದೆಗನಿಲ್ಲಿಗೆ ಶ್ರೇಷ್ಠನೇ (ಕುವ್ಯಾಸ. ೮-೧೪) ; ಎರ್ದೆಗಿಚ್ಚನಿಕ್ಕಿ ಪೋದಾತನಲ್ಲದೆ ಮಿಕ್ಕ ಸದೆಗರ ತಂದಡೊಪ್ಪುವೆನೆ (ಮೋಷ. ೩೦-೨೧) ; ಲೋಕವಮ್ಮನು ಸದೆಗರೆಂದಾಡುವುದು (ಕೋಗಯ. ೨೨-೮೮). **ಸದಗ** : ಉದರಪೋಷಣೆಗೈದುಮುಚಿತಕರ್ಮಗಳುಳಿದು ಸದಗರಂತಾನಿರ್ದನೊಂದ ನೆನೆಯದೆ ರಾಮ ಲಾಲಿಪುದು (ಪಂಕಾರಾ. ೪-೪-೪೪). [ಸದ್ದೆ (< ಸೆತ್ತೆ) + - ಗ್ಗ]

ಸದೆಗುಟ್ಟು, ಸದಗುಟ್ಟು (ಕ್ರಿ). ೧. ಪುಡಿಯಾಗುವಂತೆ ಕುಟ್ಟು ; ಪುಡಿಮಾಡು : ಪೊಸತಾದ ಹೊನ್ನಗನ್ನೆಯ ಬೇರ ಸದೆಗುಟ್ಟಿ ಹಸಿಯ ಹಾಲೊಳಗಿಕ್ಕಿ ಕಡಗೋಲಿನಿಂದ ಮರ್ದಿಸಲು ಕಡುಹಸನಾಗಿ ಬೆಣ್ಣೆ ಬಹುದು (ಸೂಪಶಾ. ೨-೪); ತೊಂಡೆಬಳ್ಳಿಯ ಸದಗುಟ್ಟಿ ಹನ್ನೆರಡು ಅಳಲೆಕಾಯಿ ಪುಡಿಹಾಕಿ . . . ತೆಗೆದುಕೊಳ್ಳಲು ಸನ್ನಿಪಾತ ಮುಂತಾಗಿ . . . ಮಾಣ್ಗುಂ (ಸಚ್ಚ. ೧೩೪). ೨. ನಾಶಮಾಡು ; ಸದೆಬಡಿ : ನೆಟ್ಟನೆ ಲಗ್ಗೆಗೆಯ್ದ ಖಳರನು ಸದೆಗುಟ್ಟುವ ಪರಿಯನೇವೇಳ್ವೆ (ಕಂನವಿ. ೧೪-೫೭). **ಸದಗುಟ್ಟು** : ೧. ನಾಲ್ಕೆರಳು ಏಲಕ್ಕಿ, ನಾಲ್ಕೆರಳು ಸಕ್ಕರೆ, ಇದಂ ಸದಗುಟ್ಟಿ ಕಾಯೊಳಗೆ ತುಂಬಿ ಅದಱ ಬಾಯಿಗೆ ಬೆಣ್ಣೆಯ ಹಚ್ಚಿ (ವಿಷ್ಣವಿ. ೪೧). [ಸದೆ₁ + ಕುಟ್ಟು₁]

ಸದೆಗುಪ್ಪೆ 'ಸದಗುಪ್ಪೆ' ನೋ.

ಸದೆಗೂಡಿಸು, ಸದೆಕೂಡಿಸು (ಕ್ರಿ). ಕಸವನ್ನು ಕೂಡಿಸು , — ರಾಶಿಹಾಕು : ಬುಧವಾರವಾದರೆ ಸದೆಗೂಡಿಸಬಾರದೆ ? (ಗಾದ). **ಸದೆಕೂಡಿಸು** : ಪದೇಪದೇ ಹೇಳಿದರೂ ಸದೆಕೂಡಿಸೋದು ಬಿಡ (ಗಾದ). [ಸದ್ದೆ (< ಸೆತ್ತೆ) + ಕೂಡಿಸು]

ಸದೆಬಡಿ (ಕ್ರಿ). ಚೆನ್ನಾಗಿ ಹೊಡೆ ; ಥಳಿಸು : ತನ್ನ ಹೆಂಡತಿ ಜೋಡಯೆಂದು . . . ಸಾಯೆ ಸದೆಬಡಿದು ನಿಡುಗಂಭದೊಳಡಸಿ ಕಟ್ಟಿ (ಪಂಚತಂ. ೭೪-೨೧); ರಾಯನೆದ್ದು ಕಯ್ಯಾಳೆ ಸದೆಬಡಿದನೆಮ್ಮಂ ನಿರಪರಾಧಿಗಳನು (ಹಚಕಾ. ೭-೨೭). [ಸದೆ₁ + ಬಡಿ₁]

ಸದೆಬಡಿಗ (ನಾ). ಬಲವಾಗಿ ಏಟು ತಿಂದವನು ; ಚೆನ್ನಾಗಿ ಬಡಿಸಿಕೊಂಡವನು : ಮಾಯೆ ತಾನೇ ಸುದತಿಯಾಕಾರದಲಿ ವೋಹಿಸಿ ಸಕಲಜೀವರನು ಸದೆಬಡಿಗರನು ಮಾಡಿ ಪಾದದಲೊದೆದು ಹೇಳಿದ ತೆಱದಲೆಲ್ಲರು ಬದಿಗರಾಗಿರೆ ಮಾಡುತಿರ್ಪುದು ಬಂಟರಂದದಲಿ (ಅಪ್ಪಸ್ವ. ೨-೯೫). [ಸದೆಬಡಿ + - ಗ್ಗ]

ಸದೆಮೆಣಸು (ನಾ). ಪುಡಿಮಾಡಿದ ಮೆಣಸು; ಮೆಣಸಿನ ಪುಡಿ : ಮೊಸರುಪ್ಪು ಸದೆಮೆಣಸು ನೀರುಳ್ಳಿಯೇಲಕ್ಕಿ ಹಸಿಯಲ್ಲವಿಕ್ಕಿ (ಸೂಪಶಾ. ೩-೧೫೫).

[ಸದೆ₁ + ಮೆಣಸು (< ಮೆಟಸು)]

ಸದೆಯನೂರ್ (ನಾ). ಒಂದು ಊರಿನ ಹೆಸರು : ಕೇಶಿಭಟ್ಟರು ಸದೆಯನೂರ ನದಿಗವ್ವುನ್ನು ತಿರ್ಬೂರ ಮಾರಗವ್ವುನ್ನ (ಮೈಆರ. ೧೯೧೯, ೧೦-೧೭ : 900).

[ಸದೆಯ? + ಊರ್]

ಸದೆಯಿಸು, ಸದಸು (ಕ್ರಿ). ೧. ಬಲವಾಗಿ ಹೊಡೆಯಿಸು ; ಚೆನ್ನಾಗಿ ಥಳಿಸು: ಶಿವನ ಕಿಂಕರರಿಂದ ಸದೆಯಿಸಿಕೊಳುತ್ತೋಡಿ ಬರ್ಪ (ವೀಶ್ಯಪು. ೨-೭-೪೨). ೨. ನಾಶಮಾಡಿಸು; ಹಾಳುಮಾಡಿಸು : ಮುದದಿಂದ ಪಟ್ಟಣವನು ಸೆಳೆಯಂದೊಡೆ ಸದೆಯಿಸಿದನು ನಮ್ಮ ಬಲವ (ಕಂಪವಿ. ೧೭-೫). **ಸದಸು** : ೧. ನಿನ್ನ ಕೂಟಕ್ಕೆ ಬಂದವರು ಸದಸಿಕೊಳ್ಳಲಿ (ವೀಶ್ಯಪು. ೩-೨-೩೭). [ಸದೆ + -ಇಸು]

ಸದೇಶ (ಗು).೧. ನಾಡನ್ನು ಹೊಂದಿರುವ. ೨. ಒಂದೇ ನಾಡಿಗೆ ಸೇರಿದ. ೩. ಹತ್ತಿರದ ; ನೆರಹೊರೆಯ. (ನಾ). ೪. ಸಮೀಪ ; ಹತ್ತಿರ : "ಸಮೀಪಂ . . . ಸದೇಶಂ . . . ಅಪದಾಂತರಂ - ಈ ೧೮ ಸಮೀಪಂ" (ಹಲಾಯು. ೧೧೫-೮). [ಸಂ.]

ಸದೇಹ (ಗು). ೧. ದೇಹಸಹಿತವಾದ. (ನಾ). ೨. ದೇಹವನ್ನು ಹೊಂದಿದುದು; ಮೂರ್ತಿವತ್ತಾದುದು: ವಿಕ್ರಮೈಕರಸನನಪರಾಜತಂ ಸದೇಹಮಾದ ತನ್ನ ಪರಾಕ್ರಮಮನೆ ಕಾಣ್ಬಂತೆ ಕಂಡು (ಶಾಂತಿಪು. ೪-೩೨ ವ). [ಸಂ.]

ಸದೈವ$_1$ (ನಾ). ಅದೃಷ್ಟವಂತ ; ದೈವಬಲವುಳ್ಳವನು : ನಳನನಾಹ್ವನ ಮಂತ್ರಶಕ್ತಿಯ ಬಲುಹು ನೀವೆ ನಿರ್ದೈವರವರಗ್ಗಳ ಸದೈವರು ಕೆಟ್ಟರಿನ್ನೇನೆಂದನಾ ದ್ರೋಣ (ಕುವಾಭೀ. ೧-೧೨). [ಸಂ.]

ಸದೈವ$_2$ (ಅ). ಯಾವಾಗಲೂ ; ಸದಾ : ಸ್ತ್ರೀಯು ಸದೈವ ಪುರುಷನ ಅಂಕಿತದಲ್ಲಿಯೇ ಉಳಿಯಬೇಕು (ಪ್ರಬಂಧ. ೧೧೪) ; ತಾಗಿದವ ಬಾಗಿಯಾನೆಂಬ ನಾಣ್ಣುಡಿಯ 'ಧ್ವನಿ' ಯನ್ನು ಅವನ ಕೈ ಸದೈವ ನಿಮಗೆ ತಿಳಿಸುತ್ತಲಿ ಇರುವುದು (ದೇಸ್ಯ. ೬೩). [← ಮರಾ. ಸದೈವ, ಸದೇವ, ಸದೇವಾ]

ಸದೋದಿತ$_1$ (ಗು). ಸಂತತವಾಗಿರುವ ; ಶಾಶ್ವತವಾಗಿರುವ : ಪವಿಕಾಲಭಂಜನಂ ದ್ಯೋದ್ಯಸ್ವಭಾವ ನಿರ್ಮಲ ಸದೋದಿತ ಶಾಂತ ಜಗದೇಕ ಬೀಜಾಕ್ಷಯಂ (ವಿತೋಪು. ೨-೧). [ಸಂ.]

ಸದೋದಿತ$_2$ (ಅ). ನಿತ್ಯವೂ ; ಸತತ : ಸದೋದಿತ ದೇವರ ಧ್ಯಾನದಲ್ಲಿ ಕಾಲ ಕಳೆಯತೊಡಗಿದಳು (ಗಂಮಾಯಿ. ೧೯೯). [< ಸದೋದಿತ$_1$./ ಮರಾ. ಸದೋದಿತ]

ಸದೋಷ (ಗು). ೧. ಕಳಂಕದಿಂದ ಕೂಡಿದ ; ದೋಷಯುಕ್ತವಾದ: ಅಗಣ್ಯಪುಣ್ಯಜನನಿವೇಶವಾಗಿಯುಂ ಸದೋಷಾಚಾರಪ್ರಚಾರಮಲ್ತು (ಚಂದ್ರಪು. ೧-೧೩೬ ವ). (ನಾ). ೨. ತಪ್ಪಾದುದು ; ದೋಷಯುಕ್ತವಾದುದು : ಅವರ ಅಭಿಪ್ರಾಯವು ಅನೇಕ ಎಡಗಳಲ್ಲಿ ಸದೋಷವಾಗಿರುತ್ತದೆಂದು ಸ್ಪಷ್ಟವಾಗುತ್ತದೆ (ಕರ್ನಾಅ. ೧೯೫೫). ೩. ಕಳಂಕದಿಂದ ಕೂಡಿರುವವನು; ದೋಷಯುಕ್ತನಾದವನು : ಸಾಧಿಸಿ ವಿದ್ಯೆಯಂ ತನಗ ಮಾಡಿ ಸದೋಷನಿವಂ ದಲಸ್ಮದಾರಾಧನ ವಿಘ್ನಕಾರಿ ರಿಪುವೆಂದಸಿಬೇಟಕಹಸ್ತ ತೂಳ್ದಿದಳ್ (ಶಾಂತಿಪು. ೯-೬). [ಸಂ.]

ಸದ್ಗಂಧಿ (ನಾ). ಒಳ್ಳೆಯ ವಾಸನೆಯುಳ್ಳುದು ; ಸುಗಂಧಿ : ವನಸಾಯಂತನ ಮಲ್ಲಿಕಾಮುಕುಳಕೋಟ್ಯಗ್ರಂಗಳೊಳ್ ಕೂಡೆ ನೂತನಸದ್ಗಂಧಿಗಳೊಳ್ ಮದಾಂಧ ಮಧುಪಂ . . . ಪಾಯ್ದು ಪಾಯ್ದು (ಶಾಂತಿಪು. ೭-೧೨೮). [ಸಂ.]

ಸದ್ಗಂಭೀರ (ನಾ). ಒಳ್ಳೆಯ ಗಾಂಭೀರ್ಯ : ಸದ್ಗಂಭೀರಾವೃತ ವಿಳಸದ್ಗಮಕದೆ ನಿಂದು ಶಿವನ ಮೆಲ್ಲಡಿಗಳಿಗುದ್ದುದ್ದುಣಭೂಷಣೆ ಸುರಿದಳ್ ಗದ್ಗದಿಸುತೆ ಪುಳಕಿಸತ್ತೆ ಸರಸಿಜದಲರಂ (ಗಿಸಂ. ೫ ೮೦). [ಸಂ.]

ಸದ್ಗತಿ (ನಾ). ಒಳ್ಳೆಯ ಸ್ಥಿತಿ; ಮೋಕ್ಷ: ನಿರ್ಮಲಕರ್ಮವದು ಸದ್ಗತಿಗೆ ಸಾಧ್ಯ ನೋಡಾ (ಸದ್ವಪ. ೮೮ ೫೭೭); ಗೋತ್ರಸಂಹರಣಪಾತಕವನೊರಸುವ ಮಖವನಾವಿಪ್ರರೂಪವಯಿಂ ಮಾಡಲೆನಗಿಹಪರಮೊಳು ಪ್ರಕಟಮೆನಿಪುವೆ ಕೀರ್ತಿ ಸದ್ಗತಿಗಳು (ಜೈಮಿಭಾ. ೨-೩೩); ಪತಿಯೇ ಸದ್ಗತಿಯೆಂದು ಪತಿಯ ಪಾದಾಂಬುಜದೊಳು ಭಕ್ತಿಗೈವುದು ಸತಿಯರ ಧರ್ಮದ ಸಾರ (ಪದಿಪು. ೩-೪). [ಸಂ.]

ಸದ್ಗರುಡಿ (ನಾ) ಒಳ್ಳೆಯ ಗರುಡಿ ; ಶ್ರೇಷ್ಠವಾದ ಮಲ್ಲಶಾಲೆ : ಸಾಧನೆಗೈವ ಸದ್ಗರುಡಿಯೊಳ್ ಭೇತಾಳನಾದಂಗೆ ನೃಪಕುಮಾರರಿಗೆ (ವೀಪತ. ೧೭-೭೮) ; ಬಿಲುವಿದ್ಯೆ ಸಾಧನೆಯಚಿಂತ್ಯನಹ ಶಂಕರನ ಸದ್ಗರುಡಿಯಲ್ಲೆದೆ (ಪರಶು. ೨೦-೨೩).

[(ಸಂ.ಸತ್) + ಗರುಡಿ]

ಸದ್ಗುಣ (ನಾ). ಒಳ್ಳೆಯ ನಡತೆ,—ಸ್ವಭಾವ : ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದ ಹೋದಿರಲ್ಲಾ (ಬುಪವ. ೬೩೯). [ಸಂ.]

ಸದ್ಗುಣಂದಳೆ (ಕ್ರಿ). ಒಳ್ಳೆಯ ನಡತೆಯನ್ನು ಹೊಂದು,— ತಾಳು : ಸಮಾನ ಸದ್ಗುಣಂದಳೆದ ವಧೂವರರ್ಕಳನೆ ಯೋಚಿಸು (ಶಾಕುಂತ. ೬೬-೧೧೫).

[ಸದ್ಗುಣ + ತಳೆ$_1$]

ಸದ್ಗುಣವೆಱು (ಕ್ರಿ). = ಸದ್ಗುಣಂದಳೆ : ಸದ್ಭಕ್ತಿ ಸದ್ಗುಣವೆತ್ತನುರುತರಕೀರ್ತಿ ಭಕ್ತಿ ಜನೋತ್ತಮಂ ಶಿವನಾಗಮಯ್ಯಂ (ಬುಪವ. ೫೫೫-೨). [ಸದ್ಗುಣ + ಪೆಱು$_1$]

ಸದ್ಗುಣಿ (ನಾ). ಒಳ್ಳೆಯ ಗುಣವುಳ್ಳವನು: ಸದ್ಗುಣಿಯ ಪಾಪಾಸ್ಪದದ ಪೊತ್ತಾಕ್ಷಣದೊಳಗೆ ಬೆಳಗಾದವೋಲ್ (ಬುಪವ. ೪೧-೨೩) ; ಅವಳ ಕಣ್ಣಿನ ಕೊಕ್ಕೆಗ . . . ಸದ್ಗುಣಿಯಾದ ಚಲುವ ಸಿಕ್ಕಿಬಿಡುತ್ತಾನೆ (ಮೂಕಜ್ಜ. ೧೪). [ಸಂ. ಸದ್ಗುಣಿನ್]

ಸದ್ಗುಣ್ಯೈಕ್ಯ (ನಾ). ಸದ್ಗುಣಗಳಿಂದ ಕೂಡಿದವನು ; ಶ್ರೇಷ್ಠ : ಪರಹಿತಚರಿತೋದಾತ್ತ ಕೀರ್ತಿಪ್ರಭಾವಂ ಮಿತವಾಕ್ಯಂ ಸದ್ಗುಣ್ಯೈಕ್ಯಂ (ಸುಕುಮಾ. ೨-೫೧). [ಸಂ.]

ಸದ್ಗುರು (ನಾ). ಒಳ್ಳೆಯ ಗುರು ; ಶ್ರೇಷ್ಠ ಶಿಕ್ಷಕ : ಚಿತ್ತವೇದ್ಯವಾಗದು ಸದ್ಗುರುವಿನಿಕರಣಕ್ಕಲ್ಲದೆ (ಬುಪವ. ೮೦೬) ; ಶಿವಯೋಗನಿಷ್ಠಾಸೀಮೆಯಲ್ಲಿ ಮದೀಯ ಸದ್ಗುರು ಸ್ವಾಮಿಯಿರುತಿರ್ದ (ಬುಪವ. ೬೫-೨೭). [ಸಂ.]

ಸದ್ಗ್ರಹತ್ವ (ನಾ). [ಜೈನ] ಏಳು ಬಗೆಯ ಪರಮಸ್ಥಾನಗಳಲ್ಲಿ ಒಂದು ; ಶ್ರಾವಕನು ಪ್ರಾಣಿಹಿಂಸೆ ಮಾಡದೆ ಮರಣಕಾಲದಲ್ಲಿ ದೇಹಕ್ಕೆ ಇಷ್ಟವಾದ ಆಹಾರ ಮತ್ತು ಕ್ರಿಯೆಗಳನ್ನು ತ್ಯಜಿಸಿ ಧ್ಯಾನಶುದ್ಧಿಯಿಂದ ಆತ್ಮಶುದ್ಧಿಮಾಡಿಕೊಳ್ಳುವುದು : ಸದ್ಗಾತಿ ಸದ್ಗ್ರಹ [ಪಾಕಾಂ. ಹೀ]ತ್ಯ ಪಾರಿವ್ರಾಜ್ಯ ಸುರೇಂದ್ರತ್ವ . . . ಎಂಬೀಯುಂ ಪರಮಸ್ಥಾನ ನಾಮಕರ್ತೃನ್ಯಯ ಕ್ರಿಯೆಗಳಂ (ಆದಿಪು. ೧೫-೧೭೮) ; ಸದ್ಗ್ರಹತ್ವಮುಂ . . . ಅರ್ಹಂತ್ಯಮುಂ ನಿರ್ವಾಣಮುಮೆಂಬ (ಪದವಿಯ::::) ಸಪ್ತಪರಮಸ್ಥಾನಂಗಳ್ (ಚಾವುಂಪು. ೨೧೩). [ಸಂ.]

ಸದ್ಗ್ರಹಸ್ಥ (ನಾ). ಒಳ್ಳೆಯ ಕುಟುಂಬಸ್ಥ, — ಸಂಸಾರಿಗ : ರೋಹಿಣೇಕುಮಾರರು . . . ಬಹಳ ಒಳ್ಳೆಯ ಸದ್ಗ್ರಹಸ್ಥರು (ಪಪಾಂತ. ೩೧೧) ; ನೀವು ಒಬ್ಬ ಸದ್ಗ್ರಹಸ್ಥರ ಕೂಡ ಮಾತನಾಡುತ್ತಿದ್ದೀರೆಂಬುದನ್ನು ಮರೆಯಬೇಡಿರಿ (ಕಮನೆ. ೨೧೫). [ಸಂ.]

ಸದ್ದ, ಸದ್ದು (ನಾ). ಶಬ್ದ ; ಗಲಾಟೆ ; ಗದ್ದಲ : 'ಸದ್ದಂಗಿಡು' ಪರಾ. **ಸದ್ದು**: ಸದ್ದು ಮಾಡಲು ಬೇಡವೊ (ಪುರಂದ. ೩-೫೨ ಪಲ್ಲವಿ) ; ಕತ್ತಳಿಂ ; ಸದ್ದು (ಶಬ್ದಾನು. ೧೦೬ ಪ್ರಭೋ); ಸಾಂತಣ್ಣ ಜನರ ಸದ್ದನ್ನು ಕೇಳಿ "ಅದೇನು ಗಲಭೆ?" ಎಂದು ಹುಬ್ಬುಗಂಟಿಕ್ಕಿಕೊಂಡು ಪ್ರಶ್ನಿಸಿದ (ಹಾಪುತ್ರ. ೪೯). [< ಪ್ರಾ. ಪಾಲಿ. ಸದ್ದ. / ಸಂ. ಶಬ್ದ]

ಸದ್ದಂಗಿಡು, ಸದ್ದುಗಿಡು (ಕ್ರಿ). ಕವಿಯು ಶಬ್ದವನ್ನು ಆಲಿಸುವ ಶಕ್ತಿಯನ್ನು ಕಳೆದುಕೊಳ್ಳು; ಕವಿಯಾಗು : ಬದ್ಧವಣದ ಪಲಗೆಗಳ ಕವಿ ಸದ್ದಂಗಿಡ ಮೊಲಗ (ಪಂಪಭಾ. ೧೨-೨೧೮). **ಸದ್ದುಗಿಡು** : ಕೋಲಾಹಲದೊಸಗೆಯ ವಾದ್ಯ ಮೊಳಗಿತು ಮೂರೋಕ ಕವಿ ಸದ್ದುಗಿಡಲು (ಮೋಪತ. ೪೨-೧೯). [ಸದ್ದ + ಕಿಡು (< ಕೆಡು$_1$)]

ಸದ್ದಡಗು (ಕ್ರಿ). ೧. ಶಬ್ದವಿಲ್ಲದಾಗು ; ನಿಶ್ಶಬ್ದವಾಗು : ಸದ್ದಡಗಿತು ವೇಳೆ ಗಂಟೆ ಸಾರಿತು (ಪುರಂದ. ೩-೧೩೧-೩) ; ಎಲ್ಲ ಸದ್ದಡಗಿತೆಂದರೆ ಗಂಗಾಪುರದಲ್ಲಿ ನಡೆದ ನಾಟಕದ ಗದ್ದಲ ಜಲಾಲಪುರಕ್ಕೆ ಕೇಳಿಬರುವುದು (ಸ್ವಚಿಚ. ೨೬). ೨. ಮಾತಿನ ಆರ್ಭಟವು ಅಡಗು ; ಮಾತು ಕಡಮೆಯಾಗು : ಜೋರಾಗಿ ಒಂದು ಕೂಗು ಹಾಕಿದರೆ ಅವರುಗಳ ಸದ್ದಡಗುತ್ತದೆ (ರೂಢಿ). [ಸದ್ದು (< ಸದ್ದ) + ಅಡಗು$_1$ (< ಅಡಂಗು$_1$)]

ಸದ್ದಮುದ್ದು, ಸದ್ದುಮುದ್ದು (ನಾ). ಏನೂ ತಿಳಿಯದುದು ; ಮುಗ್ಧವಾದುದು: ಸದ್ದಮುದ್ದಾಗಿದ್ದ ಮೋಹ ಮಮತೆಯ ಮೂರ್ತಿ (ನಾಡಲೀ. ೮೩-೧). **ಸದ್ದುಮುದ್ದು** : ಸದ್ದುಮುದ್ದಾಗಿದ್ದ ನನ್ನ ರೂಪಿನ ನೆರವಿಗೆ ಬಣ್ಣ ಬರದೆ . . . ಮದುವೆಯ ಮಾರ್ಕೆಟ್ಟಿನಲ್ಲಿ ನನ್ನ ಭಾವ ತಗ್ಗಿ (ದೀಪನ. ೮). [?]

ಸದ್ದಾಮುದ್ದಾ (ಅ). ಯದ್ವಾತದ್ವಾ : ಸೌಂದರ್ಯ, ನಿಲುವು, ಈ ದೇವರುಗಳಿಗೆ ಇಲ್ಲ. ಸದ್ದಾಮುದ್ದಾ ಇವೆ (ದಿಲ್ಲಿಪ. ೬೫). [< ಸದ್ದಮುದ್ದು]

ಸದ್ದಿಲಿ (ಗು). ೧. ಶಬ್ದವಿಲ್ಲದ ; ಪ್ರಶಾಂತವಾದ : ಆಲಿಸು ಸದ್ದಿಲಿ.ಕಣವೆಯ ಪೆಂಪು ಹೆಚ್ಚಲು ಹರಿವುದು ಗಾನದ ಇಂಪು (ಕೊಳಲು. ೨೨-೭). (ನಾ). ೨. ಶಬ್ದವಿಲ್ಲದಿರುವುದು; ನಿಶ್ಶಬ್ದವಾದುದು: ಹೂವಳ್ಳಿಮನೆ 'ಗಾಳ್' ಎಂದು ಸುಡುಗಾಡಿನಂತೆ ಸದ್ದಿಲಿಯಾಗಿತ್ತು (ಮಲಮ. ೭೩೧). [ಸದ್ದು (< ಸದ್ದ) + - ಇಲಿ]

ಸದ್ದಿಲಿತನ (ನಾ). ನಿಶ್ಶಬ್ದವಾಗಿರುವ ಸ್ಥಿತಿ; ಮೌನ : ಮುಂದುಮುಂದಕೆ ಪರಿಯಲೀಕನಾದತೆಯಾಯ್ತು ಕಿವಿಗೆ ಸದ್ದಿಲಿತನಂ ಮಸಣದಾ (ಶ್ರೀರಾಮಾ ೩೭೬-೩೯೩). [ಸದ್ದಿಲಿ + - ತನ]

ಸದ್ದಿವಾಲ, ಸದ್ದೀವಾಲ (ನಾ).೧. ಪಟ್ಟಣದ ನ್ಯಾಯಾಧೀಶ ; ಮ್ಯಾಜಿಸ್ಟ್ರೇಟು: (ಕ). ೨. ಮೇಲಧಿಕಾರಿ ; ಮೇಲ್ವಿಚಾರಕ : ಕಾಮಾಟಿ ಚಿಂಗುಲಿಗಳು ಸಹಾ ಅವರವರ ಸದ್ದಿವಾಲರ ಸಮೇತ ಸಮಯ ಬಿದ್ದ ಹಾಗೆ ಕೆಲಸಮಾಡಲು ಬರುತಿರಲಿ (ಪೆಟಮಾ. ೩). **ಸದ್ದೀವಾಲ** : ೨. ಮೇಲುವಿಚಾರಣೆಗೆ ಸದ್ದೀವಾಲರು ಎಂದು ನೇಮಕವಾಗಿದ್ದರು (ಮೂಮರಾ. ೧೭).

[← ಆರ. ಮರಾ. ಸಂದೀವಾಲ = ಒಂದು ಹುದ್ದೆ,-ಅಧಿಕಾರ]

ಸದ್ದಿಸು (ಕ್ರಿ). ಶಬ್ದಮಾಡು ; ಗಲಾಟೆಮಾಡು : ತಲ್ಲಣವೇತಕೆ ಪ್ರೇಯಸಿ ? ಝಲ್ಲನೆ ನೂಪುರ ಸದ್ದಿಸೀ ಸದ್ದಿಸೀ . . . ಇರುವೆಡೆ ಸೂಚಿಸು ರೂಪಸೀ (ನಡದಾ. I, ೪೨೭).

[ಸದ್ದು (< ಸದ್ದ) + - ಇಸು]

ಸದ್ದೀವಾಲ 'ಸದ್ದಿವಾಲ' ನೋ.

ಸದ್ದು 'ಸದ್ದ' ನೋ.

ಸದ್ದುಗಿಡು 'ಸದ್ದಂಗಿಡು' ನೋ.

ಸದ್ದುಮುದ್ದು 'ಸದ್ದಮುದ್ದು' ನೋ.

ಸದ್ದೇಹಿ (ನಾ). ನಿರ್ಮಲವಾದ ದೇಹವುಳ್ಳವನು : ಪ್ರಾಣಲಿಂಗ ಲಿಂಗವಾಗಬಾರದು ಲಿಂಗ ಪ್ರಾಣವಾಗಬಾರದು ಇದಱ ದ್ವಂದ್ವನಳಿದ ಸದ್ದೇಹಿಗೆ ನಮೋ ನಮೋ ಎಂಬೆ (ಷಣ್ಮಮಾ. ೮೪-೩೩೧). [ಸಂ. ಸದ್ದೇಹಿನ್]

ಸದ್ಧಮ್ಮಗುರು (ನಾ). ಒಳ್ಳೆಯ ಆಚಾರವನ್ನು ಬೋಧಿಸುವ ಗುರು : ಸದ್ಧಮ್ಮಗುರುಸಂತಾನಾನ್ ಸಂದ್ರಿಗ ಗಣತಾನಯಾನ್ (ಎಕ. II, ೨೯-೨ ; 700). [< ಸಂ. ಸದ್ಧರ್ಮಗುರು]

ಸದ್ಧರ್ಮ (ನಾ). ೧. ಒಳ್ಳೆಯ ನಡವಳಿಕೆ , – ಆಚಾರ : ಸದ್ಧರ್ಮವತ್ಸಳರ್ ಮತಿಶುದ್ಧತೆ ನಿಲೆ ನಂದಗುಪ್ರರಿತ್ತೊಡೆ ಸುಖಸಂವೃದ್ಧಿ . . . ಸದ್ಧಾಚಳದೊಳ್ (ಶಾಂಪು. ೪-೧೫) ; ತಿಳಿಪಿ ಭವ್ಯರ್ಗೆ ಸದ್ಧರ್ಮ ಕರ್ಮಾಶ್ರಯ ತತ್ತ್ವಾತತ್ತ್ವಭೇದಂಗಳನೊಡರಿಸಿ (ಚಂದ್ರಪು. ೧-೪); ಸದ್ಧರ್ಮವಾಂಛೆಯಿಂ ತನ್ನ ಬಡತನದೊಂದು ದುರ್ಧರಂ ಹಿಂಗಿ (ಸಮ್ಯಕ್ತಾ. ೧೧-೩೬). ೨. ಒಳ್ಳೆಯ ನಡವಳಿಕೆಯುಳ್ಳವನು : ಸಂಶುದ್ಧರೀದುಸ್ತರಸಂಸಾರಾಬ್ಧಿಯಿಂದಂ ಪೊಜಮಡಿಸುಗೆ ಸದ್ಧರ್ಮರಾಚಾರ್ಯರೆಂದುಂ (ಪುಷ್ಪದಾ. ೧-೩) ; ಪತಿಯಂ ಸಕಲಕಲಾಸಂಯುತನಂ ಸದ್ಧರ್ಮನಂ ವಿವೇಕಿಯ ನಾನೀಗತಿಗಳದಜ್ಞನೊಳ್ ದುರ್ಮತಿಯಂ ಕೂಡಿದೆನೆನುತ್ತ ದುಃಖಿತೆಯಾದಳ್ (ನನ್ನಚಾ. ೪-೧೯). [ಸಂ.]

ಸದ್ಧರ್ಮಚಾರಿಣಿ (ನಾ). ಗಂಡನೊಂದಿಗೆ ಧಾರ್ಮಿಕವಿಧಿಗಳಲ್ಲಿ ಸಹಭಾಗಿಯಾಗುವವಳು; ಧರ್ಮಪತ್ನಿ; ಹೆಂಡತಿ: ''ದಾರಂ ಕಳತ್ರಂ ಗೃಹಂ ಗೃಹಿಣಿ ಸದ್ಧರ್ಮಚಾರಿಣಿ ವಧು . . . ಕುಟುಂಬಿನಿ ಪತ್ನಿ ಮಹಿಳೆಯೆನೆ ಹೆಂಡತಿಗೆ ನಾಮಮಕ್ಕುಂ'' (ಮಂಗರಾ. ೯೦-೬). 'ಸಧರ್ಮಚಾರಿಣಿ' ಪರಾ.

[< ಸಂ. ಸಧರ್ಮಚಾರಿಣೀ]

ಸದ್ಧರ್ಮತೆ (ನಾ). = ಸದ್ಧರ್ಮ ೧ : ಭರತನ ನೀತಿ ಧರ್ಮಜನ ಸದ್ಧರ್ಮತೆ ವರಮನುಗಳ ಸನ್ಮಾರ್ಗ (ಇಷೂಾ. ೪-೩೪). [ಸಂ. ಸದ್ಧರ್ಮತಾ]

ಸದ್ಧಾತುಜ್ಞ (ನಾ). ಒಳ್ಳೆಯ ಧಾತುಗಳ ಬಗ್ಗೆ ತಿಳಿದವನು : ಧಾತುಜ್ಞರ್ ಸಂತತ ತನುಧಾತುಜ್ಞರ್ ಭೂರಿಸಾರಧಾತುಜ್ಞರ್ ಸದ್ಧಾತುಜ್ಞರ್ ನೆರೆದಿರ್ದರ್ ಕೌತುಕ ಹಮ್ಮೀರವೀರರಾಜನ ಸಭೆಯೊಳ್ (ಹಮ್ಮೀರ. ೨-೧೧೩). 'ತನುಧಾತುಜ್ಞ' ಪರಾ. [ಸಂ.]

ಸದ್ಧಾರ್ಮಿಕ (ನಾ). ಒಳ್ಳೆಯ ಧರ್ಮದಲ್ಲಿ ನಿಷ್ಠೆಯುಳ್ಳವನು. [ಸಂ.]

ಸದ್ಬಗೆವೆಱು (ಕ್ರಿ). ಒಳ್ಳೆಯ ಮನಸ್ಸನ್ನು ಹೊಂದು: ನಗೆಮೊಗದಬಲೆಯರಂದೆತ್ತಿದರು ಸದ್ಬಗೆವೆತ್ತ ಮುತ್ತಿನಾರತಿಯ (ಮೋಹತ. ೭೬-೧೫). [ಸದ್ಬಗೆ + ಪೆಱು]

ಸದ್ಬುದ್ಧಿ (ನಾ). ಒಳ್ಳೆಯ ಬುದ್ಧಿ , – ಜ್ಞಾನ : ನೀಂ ಹರನ ಕೃಪೆಯಿಂದಲಖಿಲ ಸಂಪದಂಗಳ ಗಳಿಸಿ ಸದ್ಬುದ್ಧಿಯಂ ಬಯಸದೆ ಮರುಳಾದೆ (ವಂಕಾರಾ. ೫-೧೭-೩೦) ; ಬಹುಕಾಲಮರಮನೆಯ ಸುಖಸೋಮಪಾನಮಂಗೈದು ಪಲ್ಲಟವಾಯ್ತೆ ಸದ್ಬುದ್ಧಿ ? (ಶ್ರೀರಾಮಾ. ೬೨-೨೨೭). [ಸಂ.]

ಸದ್ಬೋಧ (ನಾ). ಒಳ್ಳೆಯ ತಿಳಿವಳಿಕೆ,– ಅರಿವು : ನೀಂ ಭುವನತ್ರಯತಿಳಕರಮಳ ಸದ್ಬೋಧ ಸುಧಾರ್ಣವಪೂರ್ಣಚಂದ್ರರವನತದಿವಿಜನರೋರಗರನನ್ಯಸಾಮಾನ್ಯಗುಣಾರ್ (ಯಶೋಚ. ೪-೪೪). [ಸಂ.]

ಸದ್ಭಕ್ತ (ನಾ). ಒಳ್ಳೆಯ ಭಕ್ತ,– ಆರಾಧಕ : ಒಡಯರಾಡುವ ಮಾತ ಕಡೆ ಪರಿಯಂತರ ಕೇಳಿ ಇದಿರುಹೋಗಿ ಕಿಂಕರನಾಗಿ ಬಿನ್ನಹವ ಮಾಡುವ ಸದ್ಭಕ್ತರ ತೋಱಯ್ಯಾ (ಬಸವ. ೪೪೯) ; ಅರಸನಾಕ್ಷಣದೊಳಾ ವಂದನಾಂತಕನ ಸದ್ಭಕ್ತ [ಪಾಠಾಂ. ಸದುಭಕ್ತ] ನಂ ಕರೆತರಿಸಿಯಿಂತೆಂದ (ಬಸಪು. ೫೩-೪೨). [ಸಂ.]

ಸದ್ಭಕ್ತಿ (ನಾ). ಪರಿಶುದ್ಧವಾದ ಭಕ್ತಿ; ನಿರ್ಮಲ ಭಕ್ತಿ: ಆನಂದದಿಂದಂ ದಿವಿಜಪರಿವೃತಂ ಬಂದು ಸದ್ಭಕ್ತಿಯಿಂದಂ ರಾಗಂ ಕೈಗಣ್ಮೆ ಪೊಣ್ಮುತ್ತಿರೆ (ಸುಚರಿತ. ೯-೩) ; ಭಕ್ತರಂದು ತಪಂಗಳಂ ಸದ್ಭಕ್ತಿ ರತಿಯಲಿ ಮಾಡಿ (ಬಸಪು. ೪೩-೫೪). [ಸಂ.]

ಸದ್ಭವ್ಯ (ನಾ). [ಜೈನ] ಒಳ್ಳೆಯ ಶ್ರಾವಕ : ಭಾಸುರ ಸುರನರ ಸದ್ಭವ್ಯಸೇವ್ಯಂ . . . ರಕ್ಷಿಕ್ಕೆ ಶಾಂತೀಶನೆಮ್ಮಂ (ಶಾಂಪು. ೧-೧) ; ಅನುಪಮ ಚಾರುಚರಿತದ ನಿವಹದನುಭವದಿಂದ ಸದ್ಭವ್ಯರಿಗೆ ಬೋಧಿಸುವನವನೆ ಆಚಾರಿಯನು (ಜಠಾಮಾ. ೨-೭). [ಸಂ.]

ಸದ್ಭಾವ (ನಾ). ೧. ಇರುವಿಕೆ ; ಅಸ್ತಿತ್ವ : ಸದ್ಭಾವ = ಅಸ್ತಿತ್ವ, ಶೋಭನತ್ವ ಮತ್ತು ಪ್ರಾಧಾನ್ಯ (ಧ್ವನ್ಯಾಲೋ. ೨೫ ಅಡಿಟಿ). ೨. ಒಳ್ಳೆಯ ಮನಸ್ಸು , – ಚಿತ್ತ : ಮೂವತ್ತಾಱುಂ ಗುಣಂಗಳ್ತಮಗಮರ್ದಿರೆ ಸಂದ್ಯದುಮಾಚಾರದೊಳ್ಸದ್ಭಾವಂ ಕೈಗಣ್ಮೆ ಶಿಷ್ಯಾಚರಣ ವಿಧಿಗಳಂ ತಿರ್ದಿ (ಆದಿಪು. ೧-೩) ; ಗುರುವಿಗಾನಂದದಿಂ ಸುವಿವೇಕನಿಂದು ಮೈಯಿಕ್ಕಿ ಸದ್ಭಾವದಿಂದೆ (ಮನೋವಿ. ೨-೨೧). ೩. ಒಳ್ಳೆಯತನ; ಸುಗುಣ : ಬಸವನಿಹ ಸ[ಪಾಠಾಂ.ತ]ದ್ಭಾವಂ ವೀಕ್ಷಿಸುತ ನಲಿದು (ಬಸಪು. ೩೫-೮). ೪. ಒಳ್ಳೆಯ ಅರಿವು,– ಜ್ಞಾನ : ಶ್ರೀಗುರುವೇ ಸಾಕ್ಷಾಚ್ಛಿವನೆಂಬ ವಿಶ್ವಾಸವೇ ಸದ್ಭಾವಮಕ್ಕುಂ (ವಿವೇಕ. ೧೮). ೫. ಒಳ್ಳೆಯ ಜ್ಞಾನವುಳ್ಳವನು ; ಜ್ಞಾನಿ : ಭಕ್ತಿಸ್ಥಲದ ಮರ್ಮವನು ಲೋಕಕ್ಕೆ ನಿಶ್ಚಿಂತವ ಮಾಡಿ ತೋಱಿದ ತನ್ನ ಪದದುನ್ನತವ ಏಕೈಕ ಸದ್ಭಾವರಿಗಿತ್ತ ಎನ್ನ ಗುರು (ಷಡ್ವ. ೪. ೫೪-೧೭೩). [ಸಂ.]

ಸದ್ಭಾವಂಬೆಱು (ಕ್ರಿ). ಒಳ್ಳೆಯ ಭಾವನೆಯನ್ನು ಹೊಂದು : ಅಂತಲ್ಲದಿನ್ನಾವಂ ಪೊಲ್ಲದಿದೊಳ್ಳಿತೆಂದಱಿವನಾತಂ ಕೇಳ್ದಪಂ ನಿನ್ನ ಸದ್ಭಾವಂಬೆತ್ತುಪದೇಶಮಂ ಕಳೆಯ ಪೇಳೆನ್ನಂದಿಗಂ ಕೇಳ್ಯನೇ (ಕಾದಂಪು. ೮೫೦). [ಸದ್ಭಾವ + ಪೆಱು]

ಸದ್ಭಾವನ (ನಾ). ಒಳ್ಳೆಯ ಮನಸ್ಸುಳ್ಳವನು : ಆವ ವರ್ಣದಲುದಿಸಿರಲು ಸದ್ಭಾವನನೆ ಪಾವನನು (ಗಗಾ. ೧೪-೩೮). [ಸಂ. ಸದ್ಭಾವನಾ]

ಸದ್ಭಾವನೆ (ನಾ). ಒಳ್ಳೆಯ ವಿಚಾರ ; ಸದಭಿಪ್ರಾಯ : ಅವರಲ್ಲಿಯೂ ಒಮ್ಮೊಮ್ಮೆ ಸದ್ಭಾವನೆಗಳು ಮೂಡಿ ಮಿನುಗುತ್ತವೆ (ಗುರುಚ. ೪೫). [ಸಂ. ಸದ್ಭಾವನಾ]

ಸದ್ಭಾವಪ್ರಸಾದ (ನಾ). [ವೀಶೈ] ಹನ್ನೊಂದು ಬಗೆಯ ಪ್ರಸಾದಗಳಲ್ಲಿ ಒಂದು; ಪ್ರಸಾದವನ್ನು ಒಳ್ಳೆಯ ಭಾವನೆಯಿಂದ ಸೇವಿಸುವುದು : ಅನಾದಿಕುಳ ಸನ್ಮತವಾದ ಏಕಾದಶ ಪ್ರಸಾದದ ಕುಳವ ತಿಳಿವಡೆ . . . ನವಮದಲ್ಲಿ ಸದ್ಭಾವಪ್ರಸಾದ (ಚನ್ನವ. ೪. ೩೮೭-೯೧೯); ಪ್ರಸಾದವನ್ನು ಸದ್ಭಾವದಿಂದ ಸೇವಿಸುವುದೇ ಸದ್ಭಾವಪ್ರಸಾದವು (ಶಿವಾತೋ. ೧೧೭). [ಸಂ.]

ಸದ್ಭೀತಿ (ನಾ). ಅತಿಯಾದ ಅಂಜಿಕೆ : ಮಲಪರ್ಸ್ವದ್ಭೀತಿಯಿಂ ಕಣ್ಣವಯವದೊಳು . . . ವೇಳೆಗೊಣ್ಮಾರ್ (ಸೌಾ. XX, ೪೯-೨೪ ; 1078 7). [ಸಂ.]

ಸದ್ಭ್ರಾಂತ (ಗು). ಚೆನ್ನಾಗಿ ಬೀಸುತ್ತಿರುವ : ಸದ್ಭ್ರಾಂತಸಮೀರಣೋತ್ಥಿತ ವಿಶಾಳವಿಳೋಳತರಂಗರೇಖೆ (ಪಂಪಭಾ. ೩-೫೭). [ಸಂ.]

ಸದ್ಮ (ನಾ). ೧. ಮನೆ ; ನಿವಾಸ : ಪ್ರಕಾಶಪ್ರದೀಪಸುಧಾಸದ್ಮವಿಚಿತ್ರಭಾಜನ ವಿಭೂಷಾನೀಕಮಂ ಕೊಟ್ಟು (ಪಂಠಾಮಾ. ೧-೬೬) ; ಸುರಗಂಧರ್ವ . . . ಸ್ತ್ರೀಸದ್ಮದೊಳ್ . . . ಜಸಂಬಡೆದಳೋ (ಸುಕುಮಾ. ೫-೫೮). ೨. ಪೀಠ : ಆಸನ : ಪದ್ಮಸದ್ಮಸ್ಥಿತ ಸರ್ವಗ ಸಕಲೇಶ ಪದ್ಮಾವತಿ ಪಾಲಿಸೆನ್ನ (ಶತಸಾಂ. ೬೩-೧೨). ೩. ಗುಡಿ ; ದೇಗುಲ. ೪. ನಿಲ್ದಾಣ ; ನೆಲೆ. [ಸಂ. ಸದ್ಮನ್]

ಸದ್ಮಿ (ನಾ). ಗೆಡ್ಡೆ ; ಗೆಣಸು : "ಕಂದಂ ಸದ್ಮಿ ಸೂರಣಮೆನಿಕ್ಕು" (ಮಂಗರಾ. ೪೧-೭೫). [ಸಂ.]

ಸದ್ಯ (ಅ). ೧. ಕೂಡಲೆ, ತಕ್ಷಣ ಎಂಬರ್ಥದಲ್ಲಿ ಬಳಸುವ ಒಂದು ಅವ್ಯಯ: ಘಟಿಯಿಕ್ಕುಂ ಜಲಧೀಶಮಂಡಲದ ದೋಷಂ ಸದ್ಯಮತ್ತಿಂದ್ರಮಂಡಳದೋಷಂ ದಿನಸಪ್ತಮಕ್ಕೊಗೆಗುಂ (ಲೋಕೋಪ. ೪-೮೯): ನೆಲಬೇವು ಹಿಪ್ಪಲಿ ಕಟುಕರೋಹಿಣಿ . . . ಸಮಭಾಗವಾಗಿ ಕಷಾಯವಿಕ್ಕಿ ಕೊಡಲು ಸದ್ಯದಲ್ಲಿ ಬರುವ ಜ್ವರಂ ಗುಣಮಕ್ಕುಂ (ಸಕವೈ. ೧೧೦). P ಇದು ಕನ್ನಡದಲ್ಲಿ ನಾಮಪದದ ಅರ್ಥದಲ್ಲೂ ಬಳಕೆಯಲ್ಲಿದೆ. ೨. ಅಂತೂ ಎಂಬರ್ಥದಲ್ಲಿ ಬಳಸುವ ಸಮಾಧಾನಸೂಚಕ ಅವ್ಯಯ : ಸದ್ಯ-ದೇವರು ದೊಡ್ಡವನು ಎಂದು ತಾಯ್ತನದ ಉದ್ವೇಗದಿಂದ ಚೀಣಿತಾಯಿ ಬಡಬಡಿಸಿದಳು (ಆತ್ಮಾರ್ಪ. ೨೨) ; ಸದ್ಯ ಬಂದೆಯಲ್ಲ ಮಗು ಒಳ್ಳೆಯದಾಯ್ತು (ಪುನರು. ೬೪). [ಸಂ. ಸದ್ಯಸ್]

ಸದ್ಯಃಫಲ (ನಾ). ಕೂಡಲೆ ದೊರಕುವ ಫಲ,– ಪ್ರಯೋಜನ : "ಸಾಂದದೃಷ್ಟಿಕಂ, ಸದ್ಯಃಫಲಂ - ಈ ೨ ಆಗಳಂತೆಯಪ್ಪ ಫಲಂ" (ಹಲಾಯು. ೨೦-೧೧೭); ಕೆಲವು ಪಾಪಗಳಿಗೆ ಸದ್ಯಃಫಲವಾಗುವುದು (ಆರ್ಯಧ. ೧೧೮). [ಸಂ.]

ಸದ್ಯಕ್ಷಾರ 'ಸರ್ಜಕ್ಷಾರ' ನೋ.

ಸದ್ಯಸ್ಕ (ಗು). ೧. ಈಗಿನ ; ತಕ್ಷಣದ. ೨. ಹೊಸತಾದ ; ಇತ್ತೀಚಿನ. (ನಾ). ೩. ಹೊಸದು ; ನವೀನವಾದುದು : "ಪ್ರತ್ಯಗ್ರಂ, ಸದ್ಯಸ್ಕಂ - ಈ ೨ ಸಜ್ಜುಕಂ" (ಹಲಾಯು. ೧೨೬-೭೮). [ಸಂ.]

ಸದ್ಯಸ್ತನ (ಗು). = ಸದ್ಯಸ್ಕ ೧ : ಸ್ತನಸಂಗಮಿರಲ್ ಸದ್ಯಸ್ತನಸಂಗಂ ನೆಗಟ್ಟು ಮೆಮ್ಮೊಳಧಿಪತಿಗೆ . . . ಎನುತುಂ ಕಿನಿಸುವವೋಲ್ ನಿಮಿರ್ದು ಕನ್ನೆಯಂಗುಳಿಯೆಸೆಗುಂ (ಜಗವಿ. ೧೦-೨೦). [ಸಂ.]

ಸದ್ಯಾಜಮಾನ (ನಾ). ಉತ್ತಮನಾದ ಯಜಮಾನ ; ಶ್ರೇಷ್ಠನಾದ ಒಡೆಯ: ತದ್ಯಾಗಮೊಂದುಬರಿಸಕೆ ಮುಗಿವುದನ್ನೆಗಂ ಸದ್ಯಾಜಮಾನದೀಕ್ಷೆಯನವನಿಪಂ ತಾಳ್ದನು (ಚೈಮಿಭಾ. ೮-೧೦). [ಸಂ.]

ಸದ್ಯಾನುಭವ (ನಾ). ಆ ಕ್ಷಣದಲ್ಲಿ ಆಗುವ ಅನುಭವ : ಕವಿ ಚಂದ್ರೋದಯವನ್ನು ನೋಡುವಾಗ ಅವನ ಅಂತರಂಗದಲ್ಲಿ ಚಂದ್ರನನ್ನು ಕುರಿತ ಅನೇಕ ಭಾವನೆಗಳು ಸದ್ಯಾನುಭವದಲ್ಲಿ ಸೇರ್ಕೆಗೊಳ್ಳಬಹುದು (ಸೌಂದಸ. ೧೩). [ಸಂ.]

ಸದ್ಯೋಘೃತ (ನಾ). ಆಗತಾನೆ ಕಡೆದ ಬೆಣ್ಣೆಯನ್ನು ಕಾಯಿಸಿದ ತುಪ್ಪ ; ತಾಜಾತುಪ್ಪ : ಶಾಲ್ಯಾನ್ನ ಸದ್ಯೋಘೃತ ಹಸನಾದ ದೋಸೆಯುಂಡಲಿಗೆ . . . ಅರ್ಪಿಸಿದರಂಬಿಕೆಗೆ (ಕಂನವಿ. ೨೨-೨೯). [ಸಂ.]

ಸದ್ಯೋಜಾತ (ಗು). ೧. ಆಗತಾನೆ ಹುಟ್ಟಿದ ; ನವಜಾತ : ಸದ್ಯೋಜಾತಶಿಶುವಿನ ಲಲಾಟಪಟ್ಟದಂತೆ ನೀನು ನಿರ್ಮಲರಹಸ್ಯಮಯ (ಇಪ್ಪಕ. ೨೩೨). (ನಾ). ೨. ಅದೇ ತಾನೆ ಹುಟ್ಟಿದ ಕರು. ೩. ಆಗತಾನೆ ಕಡೆದ ಬೆಣ್ಣೆ; ತಾಜಾಬೆಣ್ಣೆ. ೪. ಈಶ್ವರನ ಐದುಮುಖಗಳಲ್ಲಿ ಒಂದು : ಮಣ್ಣೆಲ್ಲಾ ಮಹಾದೇವನ ಸದ್ಯೋಜಾತಮುಖ ನೋಡಾ (ಸಿದ್ಧವ. ಕ. ೯೮-೫೮೫) ; ಪರಶಿವನ ಸದ್ಯೋಜಾತಮುಖದಿಂದೆ ಪೃಥ್ವಿತತ್ವ ಹುಟ್ಟಿತ್ತು (ಅಖಂಡೇ. ೩೯-೮). ೫. ಶಿವ; ಈಶ್ವರ: ಉಪ್ಪರಗುಡಿ ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ ಸಾರುತ್ತೈದಾವೆ ನೋಡಾ (ಬಸವ. ೫೩೦). ೬. ಉಪಾಸನೆಗೆ ಯೋಗ್ಯವಾದ ನಾಲ್ಕು ವಿಧವಾದ ಬ್ರಹ್ಮಮೂರ್ತಿಗಳಲ್ಲಿ ಒಂದು : ತತ್ಪುರುಷ ಅಘೋರ ವಾಮದೇವ ಸದ್ಯೋಜಾತವೆಂಬ ಚತುರ್ವಿಧ ಬ್ರಹ್ಮಮೂರ್ತ್ಯುಪಾಸನೆಗಳು (ವಿವೇಕ. ೬೨). 'ವಾಮದೇವ' ಪರಾ. ೭. ಐದು ಬಗೆಯ ಬ್ರಹ್ಮಮಂತ್ರಗಳಲ್ಲಿ ಒಂದು: ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನವೆಂಬ ಪಂಚಬ್ರಹ್ಮಮಂತ್ರಂಗಳಂ (ವಿವೇಕ. ೭೫); ಆ ಮಂತ್ರಂಗಳೊಳಗೆ ಸದ್ಯೋಜಾತಾದಿ ಪಂಚಬ್ರಹ್ಮಮಂತ್ರಂಗಳಿಂ ಯಥಾಕ್ರಮದಿಂದ ಕಾಮಿಕ ಮೊದಲಾದ ೨೮ ತಂತ್ರಗಳು ಪುಟ್ಟಿದವು (ದಶಟೀ. ೩೦-೯). [ಸಂ.]

ಸದ್ಯೋನ್ಮುಕ್ತ (ನಾ). ಯಾವ ಬಂಧನವೂ ಇಲ್ಲದೆ ಬಿಡುಗಡೆಯಾಗಿರುವವನು; ವಿಮುಕ್ತ: ಲಿಂಗಸುಖಪ್ರಸನ್ನ ಪ್ರಸಾದವ ಸ್ವೀಕರಿಸಿದ ಶರಣನೇ ಸದ್ಯೋನ್ಮುಕ್ತ ನೆಂಬುದು (ಮೋಳಿಮಾ. ೨೬೩-೮೧೫) ; ಮುಟ್ಟಿತೆಲ್ಲ ಪರುಷದ ಸೋಂಕು ಒಡನೆ ನುಡಿದವರೆಲ್ಲರೂ ಸದ್ಯೋನ್ಮುಕ್ತರು (ಅವಚಂ. ೧೭೬-೭೮೫). [ಸಂ.]

ಸದ್ಯೋನ್ಮುಕ್ತಿ (ನಾ). ಯಾವ ಬಂಧನವೂ ಇಲ್ಲದೆ ಬಿಡುಗಡೆಯಾಗಿರುವುದು; ವಿಮುಕ್ತಿ : ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೊಯ್ದರೆ ಸದ್ಯೋನ್ಮುಕ್ತಿಯ ತೋಱಲೆಂದು ಮರ್ತ್ಯಕ್ಕೆ ಮರಳಿ ತಂದ ಸಂಗನ ಬಸವಣ್ಣನೆ ಗುರುವೆನಗೆ (ವಚಸಂ. ೫೭೭-೮) ; ಶರಣಜನ ಸುರತರುವೆ ಗುರುವೆ ಸದ್ಯೋನ್ಮುಕ್ತಿಯಿರವೆ . . . ಸಲಹು (ರಾಘಚ. ೪-೩೫). [ಸಂ.]

ಸದ್ಯೋನ್ಮುಕ್ತೆ (ನಾ). ಯಾವ ಬಂಧನವೂ ಇಲ್ಲದೆ ಬಿಡುಗಡೆಯಾಗಿರುವವಳು; ವಿಮುಕ್ತೆ : ಆಕೆ ಸದ್ಯೋನ್ಮುಕ್ತೆಯಾಗಿ ಹಿಂತಿರುಗಿದಳು (ಶರಚ. ೨೨೯). [ಸಂ. ಸದ್ಯೋನ್ಮುಕ್ತಾ]

ಸದ್ಯೋಪಾಯ (ನಾ). ಕೂಡಲೆ ಹೊಳೆಯುವ ಉಪಾಯ ; ತಕ್ಷಣದ ಉಪಾಯ: ತಂದೆ ಜಗಲಿಯಿಂದ ತನ್ನ ಹೆಸರು ಕೂಗಿದ್ದು ಕೇಳಿಸಿ, ದೇವಯ್ಯ ಸದ್ಯೋಪಾಯವೊಂದನ್ನು ನಿರ್ಣಯಿಸಿ (ಮಲಮ. ೭೮೬). [ಸಂ.]

ಸದ್ಯೋಮುಕ್ತಿ (ನಾ). = ಸದ್ಯೋನ್ಮುಕ್ತಿ: ಪರಮ ವೈದಿಕ ವೈದಿಕಗಳಿಂದ ವೇದಪುರುಷನಿಗೆ ಪ್ರಯೋಜನಮೇನೆನಲು ಸದ್ಯೋಮುಕ್ತಿ, ಕ್ರಮಮುಕ್ತಿಗಳೆಂದಱಿಯ ಬೇಕು (ಸಾತ್ವಿವಿ. ೪೮); ಅರ್ವಾಚೀನವೇದಾಂತದಲ್ಲಿ ಮೋಕ್ಷದ ಈ ಭಾವನೆಯು ಸದ್ಯೋಮುಕ್ತಿಯೆಂದೂ ಜೀವನ್ಮುಕ್ತಿಯೆಂದೂ ಎನಿಸಿತು (ತತ್ವಪ್ರಾ. ೬೩). [ಸಂ.]

ಸದ್ಯೋವಧು (ನಾ). ವಿವಾಹದ ಸಮಯದಲ್ಲಿ ಉಪನಯನವಿಧಿಯನ್ನು ಪಡೆದವಳು : ಸ್ತ್ರೀಯರು ಬ್ರಹ್ಮವಾದಿನಿಗಳು, ಸದ್ಯೋವಧುಗಳು ಎಂದು ಎರಡು ಬಗೆ . . . ಸದ್ಯೋವಧುಗಳಿಗೆ ವಿವಾಹಸಮಯ ಪ್ರಾಪ್ತವಾದರೆ ಯಥೋಚಿತ ಉಪನಯನಮಾತ್ರವನ್ನು ಮಾಡಬೇಕೆಂದು ವಿಧಿಸಿರುವರು (ಹಿಂದಸಾ. ೧೫೯). [ಸಂ. ಸದ್ಯೋವಧೂ]

ಸದ್ರತಿ (ನಾ). ಒಳ್ಳೆಯ ಪ್ರೀತಿ, – ಅನುರಾಗ : ಸಲೆ ಸದ್ರತಿಯೊಳ್ ನೆರೆದಿಂತು ನೂತನಂ ಮನಸಿಜನೆಂಬವೋಲ್ . . . ಅನುರಾಗಮನಾವಗಮುಂಟುಮಾಡುವಂ (ಚಂದ್ರಪು. ೭-೩೬). [ಸಂ.]

ಸದ್ರಿ 'ಸದರಿ' ನೋ.

ಸದ್ರುಚಿ (ನಾ). ಒಳ್ಳೆಯ ರುಚಿ : ಕುಸುಮದೊಳಿರ್ಪ ಸೌರಭದ ವೋಲ್ . . . ಶಶಿಯೊಳಗಿರ್ಪ ಚಂದ್ರಿಕೆಯವೋಲ್ ಫಲದೊಳ್ ನೆಲಸಿರ್ಪ ಸ[ಪಾಠಾಂ. ತ]ದ್ರುಚಿ ಪ್ರಸರದವೋಲ್ (ನಂಬಿರ. ೧೨ ಸೂಚನೆ). [ಸಂ.]

ಸದ್ರುತ (ನಾ). ವೇಗವನ್ನು ಹೊಂದಿರುವುದು ; ವೇಗಸಹಿತವಾದುದು : ರೌದ್ರವಹ್ನಿಸುರ ಪಾವಕಂ ಕ್ಷುದ್ರಮಲ್ಲದಿರೆ ನಾಮದಿಂ ಭದ್ರಕಂ ಸರಸಿಜಾನನೇ ಸದ್ರುತಂ [ಪಾಠಾಂ. ಸದ್ರಸಂ] ಲಯಪದಕ್ರಮಂ (ಛಂದೋಂಬು. ೨-೧೦೩). [ಸಂ.]

ಸದ್ರೂಪ (ನಾ). ೧. ಒಳ್ಳೆಯ ಆಕಾರ,– ರೂಪ : ಸುದತೀ ಸದ್ರೂಪಮಂ ತಾಳ್ದಿದ ವನಜಭವಪ್ರೇಯಸೀನಾಮಮಂ ತಾಳ್ದಿದ . . . ವಾಕ್ಸುಂದರಿ (ಸುಕುಮಾ. ೧-೭). ೨. ಒಳ್ಳೆಯ ಆಕಾರವುಳ್ಳವನು; ಸುರೂಪಿ: ಶಿವನು ಸಮಸ್ತಪ್ರಪಂಚಕ್ಕೆ ಕಾರಣನಾಗಿ ತನಗೆ ಅನ್ಯಕಾರಣವಿಲ್ಲದುದರಿಂದ ಸದ್ರೂಪನಾಗಿರುವನು (ಶಿವಾಸೂ. ೧೮ ವಿಚಾರ) ; ಆತ್ಮನು ಸದ್ರೂಪನು. ಜೀವನು ಚಿದ್ರೂಪನು (ಭಾರದ. ೨೩೬). [ಸಂ.]

ಸದ್ವಂಶ (ನಾ). ೧. ಒಳ್ಳೆಯ ಕುಲ,– ವಂಶ : ಸದ್ವಂಶದತ್ತಣಿಂ ಪುಟ್ಟಿದಂ (ಶಮದ. ೧೩೧ ಪ್ರಯೋ); ಸದ್ವಂಶದಲಿ ಜನಿಸಿದ ಮಹಿಮನಿರೆ ಲೋಕಾಂತರದ ಸುಖವಹುದು

(ಕವ್ಯಾಉ. ೪-೯೦). ೨. ಒಳ್ಳೆಯ ಬಿದಿರು : ಸದ್ವಂಶದೊಳು ಬಂದ ಬಿಲ್ಲಿಗೆ ಹೇಗಿದೆ ಪರರೆದೆ ಸೀಳುವ ಗುಣವು ಸದ್ವಂಶದೊಳು ಬಂದ ಬಳನಿಗೆ ಹಾಗಿದೆ ಪರರೆದೆ ಸೀಳುವ ಗುಣವು (ಇಂಚಾಪ. ೨೧೭-೭೪). [ಸಂ.]

ಸದ್ವನಜವನ (ನಾ). ಒಳ್ಳೆಯ ತಾವರೆಗಳಿಂದ ಕೂಡಿದ ಕೊಳ : ಅನುಯೋಗ ಕುಸುಮಪಾದಪಮನೇಕನಯಲತಿಕಮಂಗಫಲಮಹಿಜಂ ಸದ್ವನಜವನಂ (ಆದಿಪು. ೧-೧೦). [ಸಂ.]

ಸದ್ವಸ್ತು (ನಾ). ಒಳ್ಳೆಯ ವಸ್ತು, – ಪದಾರ್ಥ : ಸದ್ವಸ್ತುಭಾಜನನವ್ವನ್ನೊಳ ಮಾಟ್ಟುದಾಕೆಗೆ ವಿವಾಹೋದ್ಯೋಗಮಂ ರಾಗದಿಂ (ಚಂದ್ರಪ್ರ. ೬-೨೧). [ಸಂ.]

ಸದ್ವಾಜಿ (ನಾ). ಒಳ್ಳೆಯ ಜಾತಿಯ ಕುದುರೆ : ರಣಪ್ರೋದ್ಭವ ಶೌರ್ಯಟೋಪದಿಂದಂ ಬಗೆಯೆ ನಿಜದ ಸದ್ವಾಜಿಯಾಗಿಟ್ಟು (ಎಕ. VI. ೫೬೨೦ ; ೧೨೨೮). [ಸಂ.ಸದ್ವಾಜಿನ್]

ಸದ್ವಾದ (ನಾ). [ಬೌದ್ಧ] ಒಳ್ಳೆಯ ತರ್ಕ ; ಉಚಿತವಾದ ವಾದ : ಶೂನ್ಯಂ ತತ್ತ್ವಂ ಏಂದರೆ ತತ್ತ್ವವಿಲ್ಲವೇ ಇಲ್ಲವೆಂದರ್ಥವು. ಈ ವಾದಕ್ಕೆ ಅಸದ್ವಾದವೆಂದು ಹೆಸರು. ಬಾಕಿ ದರ್ಶನಗಳಿಗೆಲ್ಲಾ ಸದ್ವಾದಗಳೆಂದು ಹೆಸರು (ಪಂದಾಸಾ. ೪೬). 'ಅಸದ್ವಾದ' ಪರಾ. [ಸಂ.]

ಸದ್ವಾಸನೆ (ನಾ). ಒಳ್ಳೆಯ ಕೆಲಸ ಮಾಡಬೇಕೆಂಬ ಆಸೆ : ಸಲ್ಲಲಿತ ಸದ್ವಾಸನೆಗಳನು ಮೆಲ್ಲನಭ್ಯಾಸವನು ಮಾಡುವನೊಳ್ಳಿತಹ ಮಾರ್ಗದಲಿ ನಡೆದು ಮುಮುಕ್ಷುವೆನಿಸುವನು (ಅಮೃತ. ೧-೨೫). [ಸಂ. ಸದ್ವಾಸನಾ]

ಸದ್ವಿಜ (ನಾ). ೧. ಒಳ್ಳೆಯ ಬ್ರಾಹ್ಮಣ, – ದ್ವಿಜ : ಲೋಕದೊಳ್ಪೆಗಟ್ಟ ಪಟ್ಟಲ ಸದ್ವಿಜರಂ ಕೃತಾರ್ಥರೋ (ಪೊಗಾ. XX, ೫೭-೧೪ ; 1084) ; ಶ್ರುತಿವೆತ್ತ ಸದ್ವಿಜರೊಂದುಕೋಟಿ ಜಗತ್ತಿನಲಿ ಮಾಹೇಶ್ವರಂಗೆ ಸಮಾನವಲ್ಲ (ಬಸಪು. ೫೫-೫೫). ೨. ಒಳ್ಳೆಯ ಹಲ್ಲು : 'ಸದ್ವಿಜಕುಳೋಪಶೋಭಿ' ಪರಾ. [ಸಂ.]

ಸದ್ವಿಜಕುಳೋಪಶೋಭ (ನಾ). ೧. ಒಳ್ಳೆಯ ಬ್ರಾಹ್ಮಣರ ವಂಶದಿಂದ ಶೋಭಿಸುವವನು. ೨. ಒಳ್ಳೆಯ ಹಲ್ಲುಗಳಿಂದ ಶೋಭಿಸುವವನು. ೧, ೨: ಮುಖಕಮಳದಂತೆ ಸದ್ವಿಜಕುಳೋಪಶೋಭಿಯುಂ . . . ಯಾಮ್ಯದಿಶೆಯಂತೆ ಧರ್ಮಪ್ರಭಾವವಿಭಾವಿತಮುಮೆಂಬ ಮಹನೀಯಮಹಿಮೆಯಂ ತಳೆದು (ಪಪ್ರಪು. ೯-೩೦೮). [ಸಂ. ಸದ್ವಿಜಕುಳೋಪಶೋಭಿನ್]

ಸದ್ವಿದ್ಯೆ (ನಾ). ಒಳ್ಳೆಯ ಅರಿವು, – ಜ್ಞಾನ : ಇದು ಮುನ್ನಂ ನಿನ್ನ ಕೆಟ್ಟುಂಗುರದಡೆಯನದಂ ಪೇಟ್ಟ ಸದ್ವಿದ್ಯೆ ತಾನಿಂತಿದು ಮುನ್ನಂ (ಸುಕುಮಾ. ೪-೨) ; ನೀಡಿದನು ಕುಶಿಕತನಯಂ ರಾಮಚಂದ್ರಂಗೆ . . . ಮಂತ್ರ ಸದ್ವಿದ್ಯೆಯಂ (ಶ್ರೀರಾಮಾ. ೩೧-೯೧). [ಸಂ.]

ಸದ್ವಿಧಿ (ನಾ). ಒಳ್ಳೆಯ ನೇಮ, – ಕಟ್ಟುಪಾಡು : ಬಹುವಿಧ ಪದಪದಾರ್ಥಂಗಳಂ ಸದ್ವಿಧಿಯೊಳಾ ವೈಜವ್ವ . . . ಗಡಣಿಸಿ ವಿಧುಧರಾಕೃತಿಯಂ ತಪೋಧನನಿಧಿಯನರ್ಚಿಸಿ (ಬಸಪು. ೫೨-೫). [ಸಂ.]

ಸದ್ವಿನಯ (ನಾ). ೧. ವಿನಯದಿಂದ ಕೂಡಿದ ಒಳ್ಳೆಯ ನಡವಳಿಕೆ : ಇವರ ಸದ್ವಿನಯ, ಗುಣ, ವಿದ್ವತ್ತು, ಹಿರಿಮೆಯನ್ನು . . . ವರ್ಣಿಸಿದ್ದಾನೆ (ನೊಳಂಬ. ೬೩). ೨. ಒಳ್ಳೆಯ ನಡವಳಿಕೆಯವನು ; ವಿನಯವಂತ : ಪ್ರಯುತಯುತಂ ಸದ್ವಿನಯಂ ನಯವಾಕ್ಪ್ರಸರಂ . . . ನೆಗಟ್ಟಂ ಧಾತ್ರಿಯೊಳ್ ಶಾಂತಿನಾಥಂ (ಸುಕುಮಾ. ೧-೫೧) ; ಕಾಳಿಮಯ್ಯನಾಯಕತನಯಂ ಸದ್ವಿ[ನ]ಯಂ ಧೈರ್ಯಮಹೀಭೃದ್ವರ್ಯ (ಕಾಆ. ೭೪-೧೨-೮೧ ; 1170). [ಸಂ.]

ಸದ್ವಿನಿಯೋಗ (ನಾ). ಒಳ್ಳೆಯ ಬಳಕೆ, – ಉಪಯೋಗ : ವಿರಾಮಕಾಲವನ್ನು ಸದ್ವಿನಿಯೋಗಪಡಿಸಿಕೊಳ್ಳುವುದು (ಶಕ್ತದ. ೧೫೫). [ಸಂ.]

ಸದ್ವಿವೇಕ (ನಾ). ಒಳ್ಳೆಯ ವಿವೇಚನೆ, – ವಿವೇಕ : ಎನ್ನ ಸದ್ವಿವೇಕವೇ ವಸ್ತ್ರ ಎನ್ನ ಸತ್ಯವೇ ದಿವ್ಯಾಭರಣ (ಅವಚಂ. ೨೦೬-೯೨) ; ಕ್ಷಾತ್ರದುಸ್ತಾಮಸಮಡಸಿದವಂಗಕ್ಕುಮೇ ಸದ್ವಿವೇಕಂ (ಶಬಿತಂ. ೪ ೫೫). [ಸಂ.]

ಸದ್ವೃತ್ತ (ನಾ). ೧. ಶ್ರೇಷ್ಠವಾದ ವೃತ್ತ, – ವರ್ತುಲ. ೨. ಒಳ್ಳೆಯ ನಡತೆ, – ಆಚಾರ : ಸದ್ವೃತ್ತಮಂ ಬಟ್ಟೊಡಣ್ಣನುಮಂ ಬಟ್ಟು ವಿಭೀಷಣಂ ತೊಲಗಿ ಪೋದಂ (ಪಂರಾಮಾ. ೧೨-೭೬). ೧, ೨ : ಕಳಂಕರಹಿತಂ ಸದ್ವೃತ್ತದಿಂದಂ ತಿರಸ್ಕರಿಪಂ ಚಂದ್ರನನೊಳ್ಪುವೆತ್ತ ಬುಧಚಂದ್ರಂ ಸಂತತೋತ್ಸಾಹದಿಂ (ಎಕ VII. ಶಿವಮೊ. ೪; 1122). ೩. ಒಳ್ಳೆಯ ನಡತೆಯುಳ್ಳವನು : ತಕ್ಕನುದ್ವೃತ್ತನಪ್ಪನ ಸಂಸರ್ಗದಿನಪ್ಪ ಸಂಪದಮುಮಂ ಸದ್ವೃತ್ತರೇಗೆಯ್ವರೋ (ಪಂರಾಮಾ. ೧೨-೭೬). [ಸಂ.]

ಸದ್ವೃತ್ತಿ (ನಾ). ೧. ಒಳ್ಳೆಯ ನಡತೆ, – ಆಚಾರ : ನುತ ಜಾತಿ ನೀತಿ ಲಕ್ಷಣ ಗುಣರಸವಲಂಕೃತಿ ಸರಸೋಕ್ತಿ ಸದ್ವೃತ್ತಿ (ಇಚಿಕಾಂ. ೧೭-೯೫). ೨. [ಕಾವ್ಯಮೀ] (ಅಕ್ಷರಗಳ) ಒಳ್ಳೆಯ ರಚನೆ, – ಬಂಧ : ಪದ್ಯಂ ಸಮಸ್ತಜನತಾಹೃದ್ಯಂ ಪದವಿದಿತ ಪಾದನಿಯಮನಿವೇದ್ಯಂ ವಿದ್ಯಾಪಾರಪರಾಯಣಮಾದ್ಯಂ ಸದ್ವೃತ್ತಿವೃತ್ತ ಜಾತ್ಯಾಯತ್ತಂ (ಕವಿರಾ. ೧-೩೧). [ಸಂ.]

ಸದ್ವೃಷ್ಟಿ (ನಾ). ಒಳ್ಳೆಯ ಮಳೆ ; ಹದವಾದ ಮಳೆ : ಧರಣೀನಾಥನೆ ನಿನ್ನ ದೇಶಗಳೊಳಿಂದ್ರಂ ಮಾಳ್ಕೆ ಸದ್ವೃಷ್ಟಿಯಂ (ಶಾಕುಂತ. ೧೧೫-೧೯೭) ; ಸದ್ವೃಷ್ಟಿಯನ್ನು ಕೊಡುವ ಇಂದ್ರನೇ . . . ಹತ್ತುಜನ ಪುತ್ರರನ್ನು ಕೊಡು (ಅರ್ಜುನ. ೧೩೮). [ಸಂ.]

ಸದ್ವೇದ್ಯ (ನಾ). [ಜೈನ] ಇಂದ್ರಿಯಸುಖವನ್ನು ಒದಗಿಸುವುದು : ಕ್ಷಮೆಯುಂ . . . ಸದ್ವೇದ್ಯದಾಸ್ರವಂ ತಾನಕ್ಕುಂ (ಸುಕುಮಾ. ೮-೧೭). [ಸಂ.]

ಸದ್ವ್ಯಯ (ನಾ). ಒಳ್ಳೆಯ ಕೆಲಸಗಳಿಗಾಗಿ ಹಣವನ್ನು ಖರ್ಚುಮಾಡುವುದು : ಅವರು ಸಾರ್ವಜನಿಕಹಣವನ್ನು ಸದ್ವ್ಯಯ ಮಾಡಿದರು (ರೂಢಿ). [ಸಂ.]

ಸದ್ವ್ಯವಹಾರ (ನಾ). ಒಳ್ಳೆಯ ವ್ಯವಹಾರ ; ಉತ್ತಮವಾದ ವ್ಯಾಪಾರ. [ಸಂ.]

ಸದ್ವ್ಯಾಪಾರ (ನಾ). = ಸದ್ವ್ಯವಹಾರ. [ಸಂ.]

ಸದ್ವ್ರತಿ (ನಾ). ಶ್ರೇಷ್ಠವ್ರತಿ : ಏಕೃತಿವುಳಿದು ಸಂಪ್ರತಿಬಲದ ಸದ್ವ್ರತಿಯ ಸಮತೆಗೆ ಪುರಜನಂ ವಿಸ್ಮಯವಿದೆನುತಿಹರು (ಬಸಪು. ೩೮-೩೧). [ಸಂ.ಸದ್ವ್ರತಿನ್]

ಸದ್ವ್ರತೆ (ನಾ). ಒಳ್ಳೆಯ ವ್ರತಗಳನ್ನು ಪಾಲಿಸುವವಳು : ಸುದತಿಯನಮಳ ಬೋಧಾನಂದಮತಿಯನೂನಧೃತಿಯನಮಂದಸಮತಿಯನಸಮಶ್ಶೈವಾಚಾರ ಸದ್ವ್ರತೆ[ಪಾಠಾಂ. ತಿ]ಯ . . . ತನ್ನ ಸತಿಯಂ ಕಾಣುತ (ಬಸಪು. ೧೧-೩೨).

[(ಸಂ. ಸದ್ವ್ರತ) + - ಎ೨]

ಸಧರ್ಮ$_1$ (ಗು). ೧. ಧರ್ಮದಿಂದ ಕೂಡಿದ ; ಧರ್ಮಸಹಿತವಾದ. (ನಾ). ೨. ಧರ್ಮದಿಂದ ಕೂಡಿರುವುದು ; ಧರ್ಮಸಹಿತವಾದುದು. [ಸಂ. ಸಧರ್ಮನ್]

ಸಧರ್ಮ$_2$ (ನಾ). ೧. ಸಮಾನಗುಣ ; ಸಮಾನಧರ್ಮ : "ಸಧರ್ಮ - ವಿಧರ್ಮಗಳೆಂದರೆ ಸಮಾನಗುಣದವು ವಿರುದ್ಧಗುಣದವು, ಎಂದರ್ಥ" (ಅರ್ಜುನ. ೧೨). ೨. ಸಮಾನ ಆಚರಣೆಗಳಿಂದ ಕೂಡಿರುವ ವ್ಯಕ್ತಿ ; ಸಂಗಾತಿ : ಕಾಮುಕೀ ಕಾಮುಕರ ಸಧರ್ಮರಾಗೆ (ಶಾಂತಿಪು. ೭-೧೦೨) ; ವೀರಣಂದಿಸಿದ್ಧಾನ್ತಚಕ್ರವರ್ತಿಗಳ ಸಧರ್ಮ್ಮರಪ್ಪ ಬಾಹುಬಲಿಸಿದ್ಧಾನ್ತಿದೇವರ್ (ಮೃಅರಿ. ೧೯೨, ೧೪-೨೦ ; 1236). [ಸಂ.]

ಸಧರ್ಮಚಾರಿಣಿ (ನಾ). ಗಂಡನೊಂದಿಗೆ ಧಾರ್ಮಿಕವಿಧಿಗಳಲ್ಲಿ ಸಹಭಾಗಿಯಾಗುವವಳು ; ಸಹಧರ್ಮಿಣಿ ; ಹೆಂಡತಿ : "ದಾರಾಃ . . . ಸಧರ್ಮಚಾರಿಣೀ . . . ಗೃಹಾ – ಈ ೧೩ ಹೆಂಡತಿ" (ಹಲಾಯು. ೮೧-೩೪೦). [ಸಂ.ಸಧರ್ಮಚಾರಿಣೀ]

ಸಧರ್ಮಿ (ನಾ). = ಸಧರ್ಮ$_2$ ೨ : ನೀನುಮಾನುಂ ಸಧರ್ಮಿಗಳ್ [ಪಾಠಾಂ. ಸದ್ಧರ್ಮಿಗಳ್, ಸಧರ್ಮರೆಂದು] ಎಂದಱಿಯೆ (ಜೀವಸಂ. ೫೬-೧೪) ; ಪಾತಕವೈದುಮಂ ಬಿಡು ಸಧರ್ಮಿಗಳಲ್ಲಿ ದಯಾಪರರ್ಕಳೊಳ್ (ನನ್ನಚಾ. ೬-೨೭೩). [ಸಂ.ಸಧರ್ಮಿನ್]

ಸಧವೆ (ನಾ). ಗಂಡನಿರುವವಳು ; ಮುತ್ತೈದೆ : ಗಜಮುಖನೇ ನಿನಗೆಂದಿಗೆ ಮದುವೆ ನಿನ್ನಿಂದಾವಪ್ಪರಸಿಯು ಸಧವೆ (ಗಣೇಶ. ೫-೧೧೬) ; ತಾನು ವಿಧವೆ : ಇಷ್ಟು ದಿನ ಬಳಿಯ ಬಟ್ಟೆ ಉಟ್ಟವಳು ಈಗ ಸಧವೆಯ ಸೋಗನ್ನು ಹಾಕಬೇಕಾಗಿದೆ (ಎರಸ. ೬೯). 'ವಿಧವೆ' ಪರಾ. [ಸಂ.ಸಧವಾ]

ಸಧಾರ (ನಾ). ಬಲಯುತ ; ಶೂರ : ಫಡಫಡೆಲವೋ ಪಾರ್ಥ ರಾಯನ ತುಡುಕಲಹುದೇ ಕೂಟ ಗಿರಿಯಲಿ ಕಡಲು ಹೂಳುವುದೇ ಸಧಾರನಲಾ ಮಹಾದೇವ (ಕವ್ಯಾಕ. ೨೪-೨೬). [?/ ಮರಾ. ಸಧರ = ಸ್ಥಿರ]

ಸಧಾರತನ (ನಾ). ಶೂರತನ ; ವೀರತ್ವ : ಆರು ಪೊಗಳುವರನಿಲಸುತನ ಸಧಾರತನವನು (ಕುವ್ಯಾಕ. ೨೦-೫). [ಸಧಾರ + - ತನ]

ಸನ್ (ನಾ). ವರ್ಷ ; ಶಕ ; ಸಾಲು : ತಾರೀಖು ೩೧ನೆಯ ಮಾರ್ಚ್ ಮಾಸ ಸನ್ ೧೭೯೩ ಉ ಬರೆಸಿಕೊಟ್ಟದ್ದು (ರಾಜೇಂದ್ರ. ೫೪) ; ಶತ - ೧೮೧೬, ಸನ್ ೧೮೯೪ (ಮುಂಬಪ್ಪಾ. ಮುಖಪತ್ರ). [← ಪಾರ. ಆರ. ಹಿಂ. ಮರಾ. ಸನ್]

ಸನ 'ಸೊನ' ನೋ.

ಸನಂದ (ನಾ). ೧. ಆನಂದಸಹಿತವಾದುದು; ಸಂತೋಷದಿಂದ ಕೂಡಿದುದು. ೨. ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬ; ಒಬ್ಬ ಋಷಿಯ ಹೆಸರು: ಸನಕ ಸನಂದಾದಿ ಮುನಿಜನಂಗಳೆಲ್ಲರೂ . . . ಸತ್ಯರೆಂಬುದು ಹುಸಿ (ಅವಚಂ. ೧೧೨-೫೦೫) ; ಏಕಾದಶೀರುದ್ರರು ಸನಂದ ಶುಕಾದಿ ಮುನಿವರರು . . . ಬಂದರು (ಬಸಪು. ೧-೪೨). [ಸಂ.]

ಸನಂದನ (ನಾ). ೧. ಆನಂದದಿಂದ ಕೂಡಿರುವವನು. ೨. = ಸನಂದ ೨ : ಜಮದಗ್ನಿ ಭೃಗು ಸನಂದನ ಕುತ್ಸ . . . ಮುನಿಮುಖ್ಯರಿರ್ದರು (ಹಚಕಾ. ೨-೪) ; ಸನಕ ಸನಂದನ ಸನತ್ಸುಜಾತರು ಬಂದು . . . ಓಲೈಪರು (ಪುರಂದ. ಧಾ. ೧-೧೭೩-೨); ಗಗನ ಗುರುವೆ ಸನಂದನಾಖ್ಯನು (ಗಗತಾ. ೧-೧೧). [ಸಂ.]

ಸನಕಿಸೊಪ್ಪು (ನಾ). ಒಂದು ಬಗೆಯ ಸಸ್ಯ : (ಮೈಡಿಗಿ. ೫೫-೧೧೦೧).

[ಸನಕ್ಕಿ + ಸೊಪ್ಪು]

ಸನಗು, ಸಣಗು (ನಾ). ೧. ಸಾಮಾನು; ಸರಂಜಾಮು: ಸಾಹುಕಾರ ವಾಸಪ್ಪಯ್ಯನವರು ದಿಂಬಿಗೆ ಒರಗಿ ಕುಳಿತರೆ ಎದ್ದೇಳುವವರಲ್ಲ. ಸನಗುಗಳನ್ನು ತಂದು ತೋರಿಸಲು ಆಳುಗಳಿದ್ದಾರೆ (ಜಾರುದಾ. ೨೬). ೨. ಬಟ್ಟೆ ; ವಸ್ತ್ರ : ನಮ್ಮ ನಮ್ಮ ಮನೆಗಳಲ್ಲಿ ನೇಮ ಮಾಡುವ ಸನಗು ೧ಕ್ಕೆ ೧ ಕಾಸು ಪ್ರಕಾರ ಶ್ರೀಸ್ವಾಮಿಗಳವರಿಗೆ ಕೊಡಲುಳ್ಳವರು (ಎಕ. IX.(S) ಆನೇಕ. ೧೦೭-೬ ; 1802) ; ಸನಗು ತೀರದ ಮೇಲೆ ತಡವೇ? ಕುಯ್ದು ಕೂಡಲೆ ತಡೆವುದು (ಹಾಡುಪಾ. ೫೧-೪). ೩. ಒಡವೆ; ಆಭರಣ: ಒಬ್ಬ ಪತ್ತಾರನಿಗೆ ಒಂದು ಸನಗು ಮಾಡಿಕೊಡೆಂದು ಕೊಟ್ಟರೆ ಅವರು ಮಾಡಿಕೊಟ್ಟ ಸನಗು ತಮಗೆ ಪರಿಣಾಮವಪ್ಪಿದರೆ ಇಟ್ಟುಕೊಂಬುವರು (ವಚಸಂ. ೧೨೬-೧೦೭). **ಸಣಗು** : ೨. ಬೀತಾಂಬರ, ಶೀರಖಣ, ಧೋತರ ಮುಂತಾದ ಸಣಗುಗಳೂ ಹುಟ್ಟುತ್ತವೆ (ಧಾರಜ. ೨೦). [←ಮರಾ. ಸಣಗ, ಸಣಂಗ, ಸನಗ. ಸನಂಗ]

ಸನತ್ಕುಮಾರ (ನಾ). ೧. ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬ ; ಒಬ್ಬ ಋಷಿಯ ಹೆಸರು : ಸನತ್ಕುಮಾರ ನಳಕೂಬರ ಕಂತುನಿಭಂ ನೃ[illegible] (ಪುಪುಪು. ೪-೭೦) ; ಸನಕ ಸನಂದನ ಸನಾತನ ಸನತ್ಸುಜಾತ ಸನತ್ಕುಮಾರ (ಎವೇಕ. ೨೭೪). ೨. [ಜೈನ] ಹದಿನಾರು ಬಗೆಯ ಸ್ವರ್ಗಗಳಲ್ಲಿ ಒಂದು : ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಅನತ ಪ್ರಾಣತಾರಣಾಚ್ಯುತಮೆಂಬ ಪದಿನಾಱುಂ ಕಲ್ಪಂಗಳು (ವಡ್ಡಾರಾ. ೯೭-೨೫).

[ಸಂ.]

ಸನತ್ಕುಮಾರಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು : ಸನತ್ಕುಮಾರಪುರಾಣ ನಾರಸಿಂಹಪುರಾಣ . . . ಭಾರ್ಗವಪುರಾಣವೆಂಬವೇ ಆಯಾಯ ನಾಮಧೇಯಮುಳ್ಳವರಿಂ ನಿರೂಪಿತಮಾದ ಹದಿನೆಂಟು ಉಪಪುರಾಣಂಗಳು (ವಿವೇಕ. ೯).

[ಸಂ.]

ಸನದಿ (ನಾ). ಅಧಿಕಾರವನ್ನು ಹೊಂದಿರುವವನು ; ಅಧಿಕಾರಿ : ಕಲೆಕ್ಟರನ ಕೈಕೆಳಗೆ ಸನದೀ ಯೂರೋಪಿಯನ್ ಅಸಿಸ್ಟೆಂಟ್ ಕಲೆಕ್ಟರರ ಡಿಸ್ಟ್ರಿಕ್ಟ್ ಡೆಪ್ಯುಟಿ ಎಂಬ ಇಬ್ಬರು ದೇಶೀಯ ಅಧಿಕಾರಸ್ಥರೂ ಇರುವರು (ವಿಚಾಭೂ. ೫೩). [← ಮರಾ. ಸನದೀ]

ಸನದು, ಸನ್ನದು, ಸನ್ನದ್ದು (ನಾ). ಅಧಿಕಾರಪತ್ರ ; ರಾಯಸ ; ನಿರೂಪ : ಯಿದೇ ಪ್ರಕಾರ ಸನದು ಬರೆದು ಕೊಟ್ಟು (ಎಕ. VIII. ಸಾಗರ. ೪೬-೪೮ ; 1646 ?) : ಈ ಬಗ್ಗೆ ಭಾಷಾಪತ್ರಿಕೆ ಬರೆಸಿ ಉಭಯ ಕಡೆಯಲ್ಲು ಸನದಾಗಿ ಮಡಗಿ ಇರುವ ಕ್ರಮ (ರಾಜೇಂದ್ರ. ೫೩). **ಸನ್ನದು**: ನಂಮ ಆಳಿದ ಮಹಾಸ್ವಾಮಿಯವರ ಬುದ್ಧಿ ಸನ್ನದು ಅಪ್ಪಣೆ ಮಾಡಿಸಿ (ಎಕ. III. ಶ್ರೀರಂಗ. ೨-೨೧ ; 1822) ; ಇನಾಂ ಭೂಮಿಗಳನ್ನೂ ಅವುಗಳಿಗೆ ಆಧಾರವಾದ ಸನ್ನದು ಮುಂತಾದ ದಾಖಲೆಗಳನ್ನೂ (ಮಹಾವಂ. II. ೧೦೧). **ಸನ್ನದ್ದು** : ಅಸಲು ಸಂನದ್ದಂನ್ನುಯಿವರ ವಶಕೆ ಹಿಂದಕೆ ಕೊಡುವುದು (ಮೈಅರಿ. ೧೯೩೮, ೧೯-೨೦ ; 1811) : ನೊಳಂಬರು . . . ಮಧುಗಿರಿನಗರ ಮತ್ತು ಕೋಟೆಯನ್ನು ಕಟ್ಟಿದ್ದಲ್ಲದೆ, ವಿಜಯನಗರ ಅರಸರಿಂದ ಸನ್ನದ್ದನ್ನು ಪಡೆದಿದ್ದರು (ನೊಳಂಬ. ೬೧).

[←ಪಾರ. ಆರ. ಹಿಂ. ಮರಾ. ಸನದ್]

ಸನದುಪತ್ರ (ನಾ). ಅಧಿಕಾರಪತ್ರವನ್ನು ಬರೆದಿರುವ ಕಾಗದ ; ನಿರೂಪದ ಓಲೆ : (ಮುಂಬಯಿ. ೬. ೫-೨೩೨). [ಸನದು + ಪತ್ರ]

ಸನಮಂತ 'ಸನುಮತ' ನೋ.

ಸನಯ (ನಾ). ನಯದಿಂದ ಕೂಡಿರುವಿಕೆ ; ವಿನಮ್ರತೆ : "ಸಮೂಹಂ ಸನಯಂ . . . ಚಾದಿಯುಂ ಜಾತಿಯಕ್ಕುಂ" (ನಾನಾರ. ೭೭) ; ಅರಿದೆನಿಪ ನಿಮ್ಮ ಮಹಾವ್ರತೋದ್ಯಾಪನವನೊಲಿದಿಂದು ಸನಯದಿಂ ಮಾಳ್ಪೆಂ (ಬಸಪು. ೨೪-೯). [ಸಂ.]

ಸನವಡಿಯ (ನಾ). ಒಬ್ಬಾತನ ಹೆಸರು : ತೊರೆಯರಾಳ ಪಡಿಯನುಂ ಮುಡಿಯನುಂ ಎರೆಯನುಂ ಸನವಡಿಯನುಂ (ಎಕ. III. ನಂಜನ. ೧೩೯-೧೦ ; 915?). [?]

ಸನಾ (ಅ). ಯಾವಾಗಲೂ; ಸದಾ : "ನಿತ್ಯದಲ್ಲಿ ಸಾದಾ ಸನಾಖ್ಯಂ" (ಮಂಗರಾ. ೧೫೬-೭೪). [ಸಂ.]

ಸನಾದಿಕಾಗಿಡ (ನಾ). ಒಂದು ಬಗೆಯ ಸಸ್ಯ : (ಕೆ). [? + ಗಿಡ (< ಗಿಡು)]

ಸನಾತನ (ಗು). ೧. ಯಾವಾಗಲೂ ಇರುವ ; ಶಾಶ್ವತವಾದ : ಸುರತಾಸವ ಸೇವನಾಸನಾತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ (ಕವಿರಾ. ೨-೧೦೬). ೨. ಹಳೆಯದಾದ ; ಪುರಾತನವಾದ. (ನಾ). ೩. ಬಹಳ ಕಾಲದಿಂದಲೂ ಇರುವುದು ; ಶಾಶ್ವತವಾದುದು : "ನಿತ್ಯಂ ಧ್ರುವಂ ಶಾಶ್ವತಮದು ಸನಾತನಂ" (ಮಂಗರಾ. ೮-೨೫) ; ಹಿಂದೂಧರ್ಮ ಸನಾತನವಾದ ತತ್ವಗಳ ತಳಹದಿಯ ಮೇಲೆ ನಿಂತಿದೆ (ಭಾರದ. ೩೨೪). ೪. ಹಳೆಯದಾದುದು ; ಪುರಾತನವಾದುದು : ಭಾರತೀಯ ಸಂಸ್ಕೃತಿಯು ಸನಾತನವಾದುದು (ರೂಢಿ). ೫. ಪರಮಾತ್ಮ; ನಾರಾಯಣ: "ಸನಾತನಃ . . . ಪುರುಷೋತ್ತಮಃ - ಈ ೧೧ ನಾರಾಯಣನ ಪೆಸರ್" (ಹಲಾಯು. ೬-೨೬); 'ವಾಸುದೇವ' ಎಂಬ ಪದಕ್ಕೆ ಕೊಟ್ಟಿರುವ 'ಸನಾತನ' ಎಂಬ ವಿಶೇಷಣವೂ ಈ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ (ಧ್ವನ್ಯಾಲೋ. ೨೪೯). ೬. ಬ್ರಹ್ಮ. [ಸಂ.]

ಸನಾತನಧರ್ಮ (ನಾ). ಪರಂಪರಾಗತವಾಗಿರುವ ಧರ್ಮ : ಭಾರತದ ಎಲ್ಲ ಸನಾತನಧರ್ಮಗಳ ಮಠಗಳ ಶಾಖೆಗಳೂ ಇಲ್ಲಿ ಇವೆ (ದಿಲ್ಲಿಪ. ೫೪); ಸನಾತನ ಧರ್ಮವನ್ನು ಒಪ್ಪದವರೂ ವಿರೋಧಿಸುವವರೂ ಸನಾತನಿಗಳೇ ಆದರೂ ಅಂಥಾ ವರಿಗೂ ನಿಬಂಧವಿಲ್ಲ (ಅರ್ಥಧ. ೩೧). [ಸಂ.]

ಸನಾತನಿ (ನಾ). ಹಿಂದಿನದನ್ನು ಆಚರಿಸುವವನು ; ಸಂಪ್ರದಾಯಸ್ಥ : ಗುರುಚರಣರು ಸನಾತನಿಗಳು (ಪರಿಗೀ. ೩೦) : ಪ್ರತಿ ಭಾರತೀಯಯುವಕನೂ ಮನೆಯಲ್ಲಿ ಸನಾತನಿ, ಮನೆಯ ಹೊರಗೆ ಕ್ರಾಂತಿಜೀವಿ (ಹೊಸಕ್ರಿ. ೨೧೯). [ಸನಾತನ + - ಇ]

ಸನಾಥ (ಗು). ೧. ಒಡೆಯನನ್ನುಳ್ಳ ; ಯಜಮಾನನಿರುವ. (ನಾ). ೨. ಒಡೆಯ ಅಥವಾ ಯಜಮಾನನನ್ನು ಹೊಂದಿರುವುದು : ಮಹೋತ್ಸವಮಪ್ಪ ಮುಹೂರ್ತದಿಂ ಸನಾಥವಾದ ನಿಶಾಮಧ್ಯಸಮಯದೊಳ್ . . . ಅವತರಿಸಿರ್ದಂ (ಜಗವಿ. ೨-೧೮ ವ) ; ನೀನು ಆಯುಧಪಾಣಿಯಾಗಿ ಆಶ್ರಮವನ್ನು ಸನಾಥವನ್ನಾಗಿ ಮಾಡಬೇಕು (ಶಾಕುಂತ. ೨೮-೧). ೩. ಒಡೆತನವನ್ನು ಹೊಂದಿರುವವನು: ಜಲಧಿಯವೋಲ್ ಗಂಭೀರಂ ಬಲವೈರಿಯವೋಲ್ ಸಮಗ್ರ ವಿಭವಸನಾಥಂ . . . ಬಲಿಯಂತೆವೊಲಧಿಕದಾನಿ ದಾನವಿನೋದಂ (ಶಮದ. ೨೧೪ ಪ್ರಯೋ). [ಸಂ.]

ಸನಾಥತೆ (ನಾ). ಒಡೆಯ ಅಥವಾ ಪತಿಯನ್ನು ಪಡೆದಿರುವುದು,— ಹೊಂದಿರುವುದು : ಭಾರತಿಗನ್ನು ಸನಾಥತೋದಯಂ ಪುಟ್ಟಿದುದೆಂದೊಡಾರ್ ದೊರೆಗೆ ವರ್ಷ ನೃಪಾಳಕರಾ ನೃಪಾಳನೊಳ್ (ಎಕ. VII. ಶಿಕಾರಿ. ೧೦೦-೧೭ ; 1129). [ಸಂ.ಸನಾಥತಾ]

ಸನಾಥತ್ವ (ನಾ). = ಸನಾಥತೆ : ಎಲೌ ಪೂಜ್ಯಳೆ, ಭಾಗ್ಯಹೀನಳಾದ ನನಗೆ ಸನಾಥತ್ವವೆಂಬುದು ಎಂಥದು ? (ಕಗವಿ. ೧೧೪ ಉತ್ತರರಾಮಚರಿತ್ರಕಥ). [ಸಂ.]

ಸನಾದಿ 'ಸೊನಯಿ' ನೋ.

ಸನಾಭಿ (ಗು). ೧. ಒಂದೇ ವಂಶಕ್ಕೆ ಸೇರಿದ, — ಸಂಬಂಧಿಸಿದ : ಇಂದು ಪಯೋಜಜಂಗೆ ಕೃತಕೃತ್ಯತೆ ಸಾರ್ದುದು ಪುಷ್ಪಸಾಯಕಂಗಿಂದೊಳಸೋರ್ದು ದೇಸುವಸನಿಂದು ಸನಾಭಿಜನಕ್ಕೊಡರ್ಚಿತಾನಂದಪರಂಪರಾಜನನಂ (ಚಂದ್ರಪ್ರ. ೬-೭೯). (ನಾ). ೨. ಸಂಬಂಧವುಳ್ಳುದು ; ಸಮಾನವಾದುದು : ಬೊಮ್ಮಂ ಪೂವೊರ್ಬುಲನ ಗಂಗಾವರ್ತ ಸನಾಭಿಯೊಳ್ ಪುಟ್ಟಿಯುಂ ಸತ್ಯಲೋಕಕ್ಕೊಡೆಯನಾದಂ (ರಾಮಾಶ್ವ. ೧೪೦-೨). ೩. ರಕ್ತಸಂಬಂಧವುಳ್ಳವನು ; ನಂಟ ; ಬಂಧು : ವೃಷಭನಾಥನು ಬೆದಪತ್ಯವರ್ಗಕ್ಕೆಲ್ಲಮಿಳಾತಳವಿಭವಮಂ ಪಚ್ಚುಗೊಟ್ಟು . . . ಸನಾಭಿಗಳಂ ಬೀಟ್ಟೊಂಡು (ಆದಿಪು. ೯-೭೨ವ); ಮತಿಶ್ರುತಾವಧಿಬೋಧಂ ತನ್ನೊಡನೆ ಪುಟ್ಟಿ ಪುಟ್ಟಿದನೇನ್ನಾಭಿಯಶಸ್ವನಾಭಿಯೋ ಕುಲಧರದೊಳ್ (ಪಂರಾಮಾ. ೧-೯೦). [ಸಂ.]

ಸನಾಮ (ನಾ). ೧. ಒಂದೇ ಹೆಸರು; ಸಮಾನವಾದ ನಾಮ : ಗಾಹುಗತಕವನುಳಿದು ಚೂಣಿಯ ಸಾಹಸಿಗರು ಸನಾಮಕೊದಗಿದರೆರಡು ಧಟ್ಟಿನಲಿ (ಕುಮಾಕ. ೨-೩). ೨. ಹೆಸರುಳ್ಳವನು : ಆ ಮಹೋತ್ಸವದೊಳಗೆ ಕಂಸಸನಾಮನಾ ತಂಗಿಯನು ಮನ್ನಿಸಿ (ನಿಘಾಗ. ೧೦-೨-೭). [ಸಂ. ಸನಾಮನ್]

ಸನಾಮಕ (ನಾ). ೧. ಒಂದೇ ಹೆಸರನ್ನು ಹೊಂದಿರುವುದು; ಸಮಾನ ನಾಮವುಳ್ಳುದು. ೨. ಒಂದು ಬಗೆಯ ಮರ ; ನುಗ್ಗೆ ಮರ. [ಸಂ.]

ಸನಾಮಿ (ನಾ). ಸಮಾನ ಹೆಸರುಳ್ಳವನು; ಒಂದೇ ಹೆಸರಿನವನು: ಶಾಲೆಯಲ್ಲಿದ್ದ ನನ್ನ ಮೂವರು ಸನಾಮಿಗಳಲ್ಲದೆ ಪತ್ರಿಕೆಗಳಲ್ಲಿ ಲೇಖ ಬರೆವ ಇನ್ನೂ ಮೂವರೂ ನನ್ನ ಸಂಪೂರ್ಣ ಹೆಸರಿನಿಂದ ಅಲಂಕೃತರಾಗಿದ್ದಾರೆಂದು ಈಚೆಗೆ ನಾನು ಕಂಡಿದ್ದೇನೆ (ಗಾಳಿಪ. ೮೫). [< ಸಂ. ಸನಾಮನ್]

ಸನಾಯಿ 'ಸೊನಯಿ' ನೋ.

ಸನಿ$_1$, **ಸಣಿ** (ನಾ). ನವಗ್ರಹಗಳಲ್ಲಿ ಒಂದು; ಶನಿ : ಕನಲ್ಬುದರ್ಕಳವಿಯುಮಂತುಮಿಲ್ಲ ಸನಿಯನ್ನಳಿ ಕುಂಟಣಿ (ಪಂಪಭಾ. ೪-೯೮); ಸನಿಯನ್ನ ನಾದಿನಿ ಸಾಯಲಿ (ಶಿವಗೀ. ೧೩೩-೬೬೭). **ಸಣಿ** : 'ಸಣಿವಾರ' ಪರಾ. [< ಸಂ.ಶನಿ]

ಸನಿ$_2$ (ನಾ). ೧. ಪ್ರಾರ್ಥನೆ ; ಬಿನ್ನಹ. ೨. ನೀಡುವಿಕೆ ; ಕೊಡುವಿಕೆ. ೩. ಸೇವೆ; ಪೂಜೆ. [ಸಂ.]

ಸನಿಕೆ 'ಸಲಿಕೆ$_2$' ನೋ.

ಸನಿಗೊಳ್ (ಕ್ರಿ). ಶನಿಯು ವಕ್ರಿಸು : ಗಂಡನಪ್ಪ ಷಂಡಂ ನಿಚ್ಛಂ ಮನೆ ಸನಿಗೊಂಡಿರೆ ಬರಿಸಲ್ಕೆನಗಿಂಬಿಲ್ಲ (ಪಂಚತಂ. ೨೭೧-೧೭). [ಸನಿ$_1$ + ಕೊಳ್$_1$]

ಸನಿಯ 'ಸನಿಹ' ನೋ.

ಸನಿಯಂಬೋಗು (ಕ್ರಿ). ಹತ್ತಿರಹೋಗು; ಸಮೀಪಿಸು : ಬಗೆಯಂ ಹಯಕೆ ಸನಿಯಂ ಬೋಪುದುಂ (ರಾಮಾಶ್ವ. ೧೫೪-೧೮). [ಸನಿಯ (< ಸನಿಹ) + ಪೋಗು$_1$ (< ಪೋ$_1$)]

ಸನಿವಾರ, ಸಣಿವಾರ (ನಾ). ವಾರಗಳಲ್ಲಿ ಒಂದು ; ಶನಿವಾರ : ಸನಿವಾರದನ್ನು ಸ್ವಸ್ತಿ (ಮೈಅರಿ. ೧೯೨೯, ೮೬-೩ ; 903) ; ಮಾರ್ಗ್ಗಸಿರ ಸುದ್ಧ ತೇರಸ ಸನಿವಾರದನ್ನು (ಎಕ. VIII. ಸೊರಬ. ೬೦-೧೬ ; 1032). **ಸಣಿವಾರ** : ಶನಿವಾರ-ಸೆಣವಾರ (ಶಮದ. ೨೮೯ ಪ್ರಯೋ); ಯಾವಾಗ ಬಂದರೂ ಸಣಿವಾರಕ್ಕೊಮ್ಮೆ ಬರುವರು (ಜಾಜಿ. ೩).

ಸನಿವಾರಸಿದ್ಧಿ, ಸಣಿವಾರಸಿದ್ಧಿ = ಶನಿವಾರವನ್ನು ಶುಭಸೂಚಕವೆಂದು ಭಾವಿಸುವವನು; ಒಂದು ಬಿರುದು : ಕಾತ್ಯಾಯನೀಲಬ್ಧವರಪ್ರಸಾದಂ ದಾನವಿನೋದಂ ಸನಿವಾರಸಿದ್ಧಿ (ಸೌಇ. XX. ೭೧-೪೬ ; 1109) ; ಸಣಿವಾರಸಿದ್ಧಿಯ ಕೋಲಲು ಗಟ್ಟಿ ಮತ್ತರು ೨ (ಕಇ. ೩೩-೪೬-೨೩ ; 1097). [< ಸಂ. ಶನಿವಾರ]

ಸನಿಹ, ಸನಿಯ (ನಾ). ಸಮೀಪ ; ಹತ್ತಿರ : "ಪೊರ್ದುಗೆ, ಪೊರೆ, ಪಕ್ಕಂ, ಸನಿಹಂ, ಕೆಲಂ - ಈ ೫ ಸಮೀಪಂ" (ಶಶಾ. ೭೪-೪೩೪) : ಉಗ್ರಮುನಿಗಿತ್ತವಧಿ ಸನಿಹವಾಯ್ತು (ತಚಕಾ. ೧೦-೨೭) : ಊರು ಸನಿಹದಲಿಲ್ಲ ನೀರೊಂದು ಗಾವುದವು (ಸರ್ವಜ್ಞ. ೧೬೧). **ಸನಿಯ** : ಸ್ವಾಂತದಿಂ ಬಂದೆಱಗಿ ಸನಿಯದೊಳ್ ನಿಂದು (ಕುಸುಮಾ. ೧೧-೧೮೭) ; ನೀವು ರಾಮನ ಸನಿಯವಿರೆ ಮಾಯಾವಿಗಳು ಬರಲರಿದು (ಕೌಶಿರಾ. ೩೯-೩೫).

ಸನಿಸನಿಯ (ದ್ವಿರುಕ್ತಿ) : ಹೀಗಾಗಿ ಸನಿಸನಿಯ ಒಂದು ವರ್ಷದ ಖಾಡಾ ಬಿದ್ದಿತ್ತು (ದೀಪಹ. II. ೩೫೬). [< ಪ್ರಾ.ಸಮೀವ./ ಸಂ. ಸಮೀಪ]

ಸನೀಡ (ನಾ). ೧. = ಸನಿಹ : "ಸಮೀಪಂ ಸನೀಡಂ, ಸಮರ್ಯಾದಂ . . . ಉಪಾಂತಂ ಅಪದಾಂತರಂ - ಈ ೧೮ ಸಮೀಪಂ" (ಹಲಾಯು. ೧೧೫-೭). ೨. ಸಮಾನವಾದ ಗೂಡನ್ನು ಹೊಂದಿರುವುದು ; ಒಂದೇ ಗೂಡಿನಲ್ಲಿ ವಾಸಿಸುವುದು. [ಸಂ.]

ಸನೀನು (ನಾ). (ಬಂದೂಕಿನ ತುದಿಗೆ ಸಿಕ್ಕಿಸುವ) ಅಲಗು ; ಸಣ್ಣಕತ್ತಿ : ಬಂದೂಕಿನ ಕೋವಿಗೆ ತೊಡಿಸುವ ತಿವಿಯುವ ಅಲಗು ; ಸನೀನು (Bayonet. ಇಂಕಿನ); ಬಂದೂಕಗಳೂ, ಸನೀನುಗಳೂ ನಿನ್ನ ಹೊಡೆತಕ್ಕೆ ತಾಳಲಾರದೆ ಯೋಧರ ಕೈಯಿಂದ ಸರಿದು ಬಿದ್ದುಹೋಗಿಲ್ಲ (ದೇವೀಚಾ. ೧೨೦). [<— ಪಾರ. ಹಿಂ. ಸಂಗೀನ್; ಮರಾ. ಸನೀನ್]

ಸನುನಯ (ನಾ). ಒಳ್ಳೆಯ ರೀತಿ, — ಮಾರ್ಗ : ನಂದಿಯೆನಿಸುವ ಮುನಿ ಬಂದನಂತವಿನಲಿ ಸನುನಯದೊಳ್ಕೆನೂರ್ವರಿಗೆ ಸಾಧನವೆನಿಪ ಚೌಷಟ್ಟಿವಿದ್ಯೆಯನನಿತವನು ಕಲಿಸಿದನು (ಜೀವಂಧ. ೫-೫೫) ; ಗುಣಿ ಸದ್ಗುಣಮಣಿ . . . ಸನುನಯ ಮಾರ್ಗಾಭಿಮಾನಿ (ಗೊಮ್ಮಟ. ೭-೧೬೬). [< ಸಂ. ಸಾನುನಯ]

ಸನುಮಂತ 'ಸನುಮತ' ನೋ.

ಸನುಮಂತಗೊಳಿಸು (ಕ್ರಿ). ಒಪ್ಪಿಸು ; ಸಮ್ಮತಿಗೊಳಿಸು : ಎಲ್ಲರನ್ನೂ ಸನುಮಂತಗೊಳಿಸುವ ಹೊಸ ಉಪಾಯವನ್ನು ಕಂಡುಹಿಡಿದು ಎಲ್ಲರನ್ನೂ ಒಂದಾಗಿಸ ಬೇಕೆಂದು ಯೋಚಿಸುತ್ತಿದ್ದಾನೆ (ಬಸಪ. ೮೨). [ಸನುಮಂತ (<ಸನುಮತ) + ಕೊಳಿಸು]

ಸನುಮತ, ಸನಮಂತ, ಸನುಮಂತ, ಸನ್ನುಮತ, ಸನ್ಮಂತ (ನಾ). ಒಪ್ಪಿಗೆ ; ಸಮ್ಮತ : ಅಸಂಬಂಧ ಸಂಬಂಧವಾಯ್ತು ಲಿಂಗಸಾರಾಯರ ಸನುಮತದಿಂದ (ಬಸವ. ೮೪೩) ; ಕೊಲ್ಲದಿಪ್ಪಾ ಧರ್ಮವೆಲ್ಲರಿಗೆ ಸನುಮತವು ಅಲ್ಲದನು ಮಾಱೆ ಮಾಡುವನು ನರಕಕ್ಕೆ ನಿಲ್ಲದೇ ಹೋಹ (ಸರ್ವಜ್ಞ. ೧೦೨೧). **ಸನಮಂತ**: ಸುಮ್ಮಾಕ ಸನಮಂತ ಮಾಡಿ ಮುಗಿಸಿ ಬಿಡೂದು ಪಾಡ (ನಡದಾ. I. ೨೯೨); ಮನಸ್ಸಿಗೆ ಸನಮಂತ ಆಗೂ ಮಾತು ಆಚಾರೆಪ್ಪ (ಗ್ರಾಮಾಯ. ೧೭೩). **ಸನುಮಂತ** : ಗೆಳತನದಿಂದ ಒಗತಾನ ಮಾಡೋ ಅದು ಅವಗ ಸನುಮಂತ (ಅರಳು. ೨೭೯). **ಸನ್ನುಮತ** : ಸೀಮೆ ಗೌಉಡಿಕಿ ಸಂನುಮತದಿಂದ ಬರಕೊಟಂತ ಭರಹು (ಎಕ.VII. ಶಿವಮೊ. ೧೦೬-೫೩ ; 1576). **ಸನ್ಮಂತ**: ನಿಮಗರೆ ಸನ್ಮಂತ ಆತು ಸಾಕು ಕಾಕಾ (ಗ್ರಾಮಾಯ ೩೨೩). [< ಸಂ. ಸನ್ಮತ]

ಸನುಮಾನ (ನಾ). ಗೌರವಿಸುವುದು ; ಸನ್ಮಾನ : ಸೂನಶರ ಕೊಡು ಬೆಸನನೆನೆ ಸನುಮಾನ ಬಹುಮಾನಗಳನಿತ್ತವಧಾನದಿಂ ನಡಸಿದನು ತನ್ನಯ ರಾಯಭಾರಿಯನು (ಆನಂರಾ. ೧-೧೯-೧೩). [< ಸಂ. ಸನ್ಮಾನ]

ಸನುಮಾನಿಸು (ಕ್ರಿ). ಗೌರವಿಸು ; ಸನ್ಮಾನ ಮಾಡು : ಅಮರಮುನಿ ಸನುಮಾನಿಸುತಲೆಲೆ ಮಗನೆ ನಿನಗೆ ಸಮಾನರಾರು (ಆನಂರಾ. ೧-೪-೯). [ಸನುಮಾನ + - ಇಸು$_3$]

ಸನುರುಚಿ (ನಾ). ಒಳ್ಳೆಯ ಅಭಿರುಚಿ, — ಆಸಕ್ತಿ : ಘನಭಕುತಿಯ ನೇಣನೆ ಮಾಡಿ ನಿನ್ನಾ ಚರಣಕೆನ್ನ ಕೊರಳಿಗೆ ಸನುರುಚಿಯಿಂದ ಗಂಟನೆ ಹಾಕಿಕೊಂಡು ತೊನಗದೆ ಬಿಡೆನೊ ನಿನ್ನನು ಎಂದೆಂದಿಗೆ (ಮೋಕ್ಷದೀ. ೨೧-೪) ; ಸನುರುಚಿಯಾದ ಜನರ ಇದರಂತೆ ಪಾಲಿಸುವ ಅನುಮೈಸುವದು ಹರಿಯ ಪದಭಕುತಿ ಬಲ್ಲವರಾರು (ಎಪ್ರಸು. ೧೬-೫). [< ಸಂ. ಸದ್ರುಚಿ]

ಸನೆ 'ಸೊನ್ನೆ$_3$' ನೋ.

ಸನೆಗಾರ 'ಸೊನ್ನೆಗಾಱ' ನೋ.

ಸನೆಯ 'ಸನ್ನೆ$_2$' ನೋ.

ಸನೆಯಗ್ಗೆ 'ಸನ್ನೆಗೆಯ್' ನೋ.

ಸನ್ನ (ಗು). ೧. ಮುಳುಗಿದ ; ತಳಕ್ಕೆ ಹೋದ. ೨. ತಳ ಹಿಡಿದ. ೩. ನಿಂತ; ಚಲನೆಯಿಲ್ಲದ. ೪. ಮಂದಸ್ವರದ ; ಕ್ಷೀಣಧ್ವನಿಯ : ಕನ್ನರಾತಂಕದ ನುಡಿಯ ಕೇಳಿದರಿನ್ನೇನು ಪ್ರಿಯನ ಪ್ರಿಯಕರವಾಕ್ಯವನ್ನು ನುಡಿದಾನೆಂದು ರೋದಿಸಿ ಶಿಷ್ಯರು ಸನ್ನಗದ್ಗದನುಡಿಯಲಿಂತೆಂದರು (ಪ್ರಭಾ. ೩೮-೧೨). ೫. ಕುಗ್ಗಿದ; ಸಂಕುಚಿತವಾದ. ೬. ಸಣ್ಣದಾದ ; ಚಿಕ್ಕದಾದ. ೭. ಉತ್ಸಾಹವಿಲ್ಲದ; ಲವಲವಿಕೆಯಿಲ್ಲದ.

೮. ದುರ್ಬಲವಾದ ; ಸೊರಗಿದ. ೯. ಕೆಟ್ಟುಹೋದ; ಹಾಳಾದ. (ನಾ). ೧೦. ಚಿಕ್ಕದು; ಸಣ್ಣದು: ''ಸನ್ನಂ, ಸಾತಂ-ಈ ೨ ಸಣ್ಣವಾದುದು'' (ಹಲಾಯು. ೧೩-೮೨). ೧೧. ಒಂದು ಬಗೆಯ ಸಸ್ಯ : ''ಸನ್ನಃ- ಪುರಾಣೆ, ನಿತ್ಯ'' (ಓಷಧಿ. ೧೭೪). [ಸಂ.]

ಸನ್ನಡತೆ (ನಾ). ಒಳ್ಳೆಯ ನಡವಳಿಕೆ ,– ಆಚರಣೆ : ಸಾಂಪ್ರದಾಯಿಕ ಶ್ರದ್ಧಾಭಕ್ತಿಗಳಿಗೆ ತಕ್ಕಂತೆ ಕೆಲವು ಮೂಲಭೂತವಾದ ಸನ್ನಡತೆಗಳೂ ದುರ್ನಡತೆಗಳೂ ಉಕ್ತವಾಗಿವೆ (ತತ್ತ್ವಪ್ರಾ. ೮೬). 'ದುರ್ನಡತೆ' ಪರಾ. [(ಸಂ. ಸತ್) + ನಡತೆ]

ಸನ್ನಣ (ನಾ). ೧. ಕವಚ ; ಜೋಡು: ಪಿಡಿದುದಿರ್ವ ಬಾಳ ಕಿಡಿಗ[ಳ]ನೊಡನೊಡನರೆವೊತ್ತಿ ತೊಟ್ಟ ಸನ್ನಣವುರಿಯಲ್ಕೊಡರಿಸಿದೊಡೆ (ಪಂಪಭಾ. ೧೦-೭೯); ಬೆನ್ನೊಳೆ ಶಸ್ತ್ರಾಸ್ತ್ರ ಸನ್ನಣಂಗಳ ರುಚಿಯಿಂ ನೂರ್ಮಡಿಸೆ (ಮಹಾಸೇ. ೧೧-೪೬). ೨. ಅಣಿಗೊಳಿಸುವುದು; ಸಿದ್ಧತೆ : ಪಲರುಂ ಮಂಡಳಿಕರ್ಗಂ ಕುಱುಂಬ ನಿಕರಕ್ಕವಮಾಟವಿಕರ ಬಲಕ್ಕಂ ಬಟೆಯಟ್ಟಿ ಬರಿಸಿ ಸನ್ನಣಂಗಳನೋಸರಿಸಿ ನಿಜತಂತ್ರಕೆಲ್ಸಂ ಪೇಳ್ದಲ್ಲಿ ಯುದ್ಧಮಂ ಸವಕಟ್ಟ (ಬಂಪಂ. ೧೧-೫೩ ವ); ಗಾಡಿಕಾತಿಯರಿರ್ವರ ಲಾವಣ್ಯವ ನೋಡಿ ರಕ್ಷೆಯ ಬೊಟ್ಟನಿಟ್ಟು ಜೋಡಿಸಿ ಸಕಲಸನ್ನಣದಿಂದ ಪಯಣವ ಮಾಡಿ ಹರ್ಮ್ಯವನಿಳಿಸಿದರು (ಮೋಹತ. ೨೩-೫೫); ಸಕಲಸನ್ನಣಗಳೊಡನೆ ನಾಲ್ಕು ಫಿರಂಗಿಗಳನ್ನು . . . ಕಳಿಹಿರಿ (ಚಿಟ್ಟಿಲ. ೪೫-೪). [< ಸಂ. ಸನ್ನಹನ. P ಕೇಶಿರಾಜನ ಶಬ್ದಮಣಿದರ್ಪಣದಲ್ಲಿ (ಶಮದ. ೨೭೩ ಪ್ರಯೋ) ಇದನ್ನು 'ಸನ್ನಾಹ'ದ ತದ್ಭವವೆಂದು ಹೇಳಿದೆ.]

ಸನ್ನಣಂಗೆಯ್ (ಕ್ರಿ). ಸಿದ್ಧಪಡಿಸು; ಸಜ್ಜುಗೊಳಿಸು: ಯುದ್ಧಸನ್ನದ್ಧರಾಗಿ ತಮ್ಮ ಬಲಮಂ ಸನ್ನಣಂಗಯ್ಯಲ್ಕೀಟ್ಟು (ಬಂಪಂ. ೫-೧೮ ವ). [ಸನ್ನಣ + ಕೆಯ್]

ಸನ್ನಣಂಗೊಳ್ (ಕ್ರಿ). ಸಿದ್ಧವಾಗು; ಸಜ್ಜಾಗು: ಸನ್ನಣಂಗೊಂಡ ಚತುರಂಗ ಬಲದೊಡನೆ ವನಪಥದೊಳು ತೀವಿದುತ್ಸಾಹದಿಂ ನಡೆತಂದು (ಶೇಷರಾ. ೨೮-೩). [ಸನ್ನಣ + ಕೊಳ್]

ಸನ್ನಣಂದುಡು 'ಸನ್ನಣಂದೊಡು' ನೋ.

ಸನ್ನಣಂದೊಡು, ಸನ್ನಣಂದುಡು (ಕ್ರಿ). (ವೀರೋಚಿತವಾದ) ಕವಚವನ್ನು ಧರಿಸು , – ಜೋಡನ್ನು ತೊಡು : ಬಲ್ಲಿತ್ತಾಗಿ ಸನ್ನಣಂದೊಟ್ಟುವನಂ ಕೆಯ್ದುಗಳ್ ಮುಟ್ಟುದಂತೆ (ಜೀವಸಂ. ೧೬೫-೩೩೮). **ಸನ್ನಣಂದುಡು** : ಸನ್ನಣಂದುಡುವ [ಪಾಠಾಂ. ಸನ್ನೆಗೊಂಡು] ಪಣ್ಣುವ ಬಾಟ್ಕೆಯವಂದಿರಂ (ಪಂಪಭಾ. ೧೦-೪೯). [ಸನ್ನಣ + ತೊಡು]

ಸನ್ನಣಂಬೊಗು (ಕ್ರಿ). ಸಿದ್ಧವಾಗು ; ಸಜ್ಜಾಗು : ಚಕ್ರಧಾರಿಯ ನರಪನಿಕರಮಿ ಕ್ಕೆಕ್ಕೆಯಿಂ ಸನ್ನಣಂಬೊಕ್ಕು (ನೇಮಿಪು. ೧೧-೧೪೮); ಪಣ್ಣಿದ ದಂತಿಘಟಾಳಿ ಸನ್ನಣಂಬೊಕ್ಕ ಪದಾತಿ (ಜಗವಿ. ೯-೩೧). [ಸನ್ನಣ + ಪೊಗು]

ಸನ್ನತ (ನಾ). ೧. ಬಾಗುವಿಕೆ ; ವಶವಾಗುವಿಕೆ : ಸನ್ನತ[ಪಾಠಾಂ. ವೈಶಿಕ]ದಿಂ ರತಕ್ಕೆಳಸಿ ನಲ್ಲಳೊಳೋತೊಡಗೂಡಿದೆನ್ನನಿಂತನ್ನೆಯಮೆಚ್ಚುದರ್ಕ ಪೆಜತಿಲ್ಲದು ದಂಡಂ (ಪಂಪಭಾ. ೧-೧೧೨). ೨. ಬಾಗಿದವನು ; ನಮಸ್ಕರಿಸಿದವನು : ಸನ್ನತನಾಗಿ ದೇವರಡಿದಾವರೆಗಳ್ಗೆ ಪಲರ್ಮೆ ಭಕ್ತಿಯಿಂ ಬಿನ್ನತಿಗೆಯ್ವೆಂ (ಚಿಪ. ೫-೭೮). [ಸಂ.]

ಸನ್ನತಕರಣ (ನಾ). [ನಾಟ್ಯ]ಒಂದು ಬಗೆಯ ನೃತ್ಯಭಂಗಿ ; ನೂರೆಂಟು ಕರಣಗಳಲ್ಲಿ ಒಂದು ; IP ''ಹರಿಣಪ್ಲುತಚಾರಿಯನ್ನು ಮಾಡಿ ಕಾಲನ್ನು ಸ್ವಸ್ತಿಕದಂತೆ ಮುಂದಿರಿಸಿ ದೋಲಹಸ್ತವನ್ನು ಮಾಡುವುದು'' (ಲಾಸ್ಯರಂ. ೬೧೧ ಗದ್ಯಾನುವಾದ): ಪ್ಲುತಚಾರಿಯನಡಿಗಳಿನೊಲ್ಪತಿಶಯ[ದಿಂ] ಮಾಡಿ ಮಗುಳ್ದು ಸ್ವಸ್ತಿಕಪದದಿಂ ಗತಿವಡದು ಮುಂತೆ ಡೋಲದ ನುತಹಸ್ತಮವೆಯ್ದೆ [ಮಾಡೆ] ಸನ್ನತಕರಣಂ (ಲಾಸ್ಯರಂ. ೪-೧೪೨). [ಸಂ.]

ಸನ್ನತಿ (ನಾ). ನಮಸ್ಕಾರ ; ಮಣಿಹ : ನಿಮಗೆಲ್ಲರ್ಗಿದೊ ಸನ್ನತಿ (ವಸ್ತವಂ. ೬೯೫). [ಸಂ.]

ಸನ್ನದು 'ಸನದು' ನೋ.

ಸನ್ನದುಕೊಡು (ಕ್ರಿ). ಅಧಿಕಾರಪತ್ರ ಕೊಡು ; ನಿರೂಪಣೆಕೊಡು : ಮೈಸೂರಿನ ಮಹಾರಾಜರು ಅವರಿಗೆ ಸನ್ನದು ಕೊಟ್ಟು ಸನ್ಮಾನಿಸಿದರು (ರೂಢಿ). [ಸನ್ನದು (< ಸನದು) + ಕೊಡು]

ಸನ್ನದ್ದು 'ಸನದು' ನೋ.

ಸನ್ನದ್ಧ (ಗು). ೧. ಕಟ್ಟಿದ ; ಬಿಗಿದ. ೨. ಸಜ್ಜಾದ ; ಸಿದ್ಧವಾದ: ಸನ್ನದ್ಧತುರಂಗದ ತೆಱದಿನ್ನೆಱೆ ಮಿಱುಗುವ ಖಿಲೀನ ಶಾಖಾಮುಖದಿಂ ಮುನ್ನೀರವೊಲ್ ಪ್ರವಾಳಸಮನ್ವಿತದಿಂ ಶೋಭಿಸಿತ್ತು ಚೂತಕುಜಾತಂ (ಶಾಂತೀಶ್ವ. ೧೦-೧೧೫) ; ನಿಂತಿಹರು ಕಾಣಲ್ಲಿ ದೀರ್ಘಾಸಿ ಕಟಿಬದ್ಧಸನ್ನದ್ಧರೋದ್ಧರುಂ (ಶ್ರೀರಾಮಾ. ೭೦-೧೭೦). (ನಾ). ೩. ಸಜ್ಜು ; ಸಿದ್ಧತೆ : ಪ್ರಾಣಲಿಂಗಿಯ ಪರಮಸುಖ ಅದು ಶರಣನ ಸನ್ನದ್ಧ ಅದು ಐಕ್ಯನ ಅದೃಶ್ಯ (ಮೋಳಮಾ. ೧೫೧-೫೭೦) ; ಪಗೆಯೆನ್ನ ಕಣ್ಗ ಮುಂದಕೆ ಸುಳಿದು ಜೀವಿಪನೆ ಸೇನೆ ಸನ್ನದ್ಧಮಾಗಿರಲೆಂದನು (ಜೈಮಿಭಾ. ೭-೨೯). ೪. ಸಜ್ಜಾಗಿರುವವನು ; ಸಿದ್ಧನಾಗಿರುವವನು : ನಾ ತಪ್ಪಿ ನುಡಿದಡೆ ಒಪ್ಪವಿಟ್ಟುಕೊಳ್ಳರಣ್ಣಾ ಕಣ್ಣಿನಲ್ಲಿ ಕಸ ಹೊಕ್ಕರೆ ಕೈ ಹಗೆಯೆ ಅಯ್ಯಾ ಇದು ಬಣ್ಣಗಾಱಿಕೆಯಲ್ಲ ಸನ್ನದ್ಧರಿರವು (ಮೋಳಮಾ. ೩೫-೧೪೬); ಸುಪ್ರಭಾತಸಮಯದೊಳ್ ಶಿವಾರ್ಚನೆಯಂ ಮಾಡಿ ಸಂಗ್ರಾಮಕ್ಕೆ ಸನ್ನದ್ಧನಾಗಿ ನಡೆಯಲ್ (ಹಮ್ಮೀರ. ೩-೨೬ವ). ೫. ಕವಚವನ್ನು ಧರಿಸಿದವನು ; ಜೋಡನ್ನು ತೊಟ್ಟವನು : ''ವರ್ಮಿತಃ, ಕವಚಿತಃ , ಸನ್ನದ್ಧಃ, ದಂಶಿತಃ - ಈ ೪ ಕವಚದೊಟ್ಟವಂ'' (ಪಲಾಯು. ೭೭-೩೦೬). [ಸಂ.]

ಸನ್ನದ್ಧತ (ನಾ). = ಸನ್ನದ್ಧ ೩ : ತನಗೇೞೀ ಯುದ್ಧಸನ್ನದ್ಧತೆಯ ಗಸಣ (ಚಂದ್ರಪ್ರ. ೬-೨೫ ವ). [ಸಂ. ಸನ್ನದ್ಧತಾ]

ಸನ್ನಯ (ನಾ). ೧. ಸೈನ್ಯದ ಹಿಂದುಗಡೆ ಸಿದ್ಧವಾಗಿರುವ ಪಡೆ ; ಕುಮ್ಮಕ್ಕಾಗಿರುವ ಫೌಜು : ''ಸನ್ನಯಃ-೧ ಸೈನ್ಯಕ್ಕೆ ಹಿಂದುಗಡೆ ಕುಮ್ಮಕ್ಕಾಗಿರುವ ಹಿಮ್ಮತ್ ಫೌಜು'' (ಸಿದ್ಧಾಂತ. ೪೦೯). ೨. ಗುಂಪು ; ಸಮೂಹ. [ಸಂ.]

ಸನ್ನಯಿಸು (ಕ್ರಿ). ಸಿದ್ಧವಾಗು ; ಅಣಿಯಾಗು : ಎನ್ನೊಳು ಜಯಿಸಲಾಜಿದೆ ಮತ್ತಿತ ನೊಳು ಸನ್ನಯಿಸುವರೆ ಕಾಳೆಗವ (ಮೋಹತ. ೩೮-೨೩). [ಸನ್ನಯ + - ಇಸು]

ಸನ್ನಲಿಗೆ 'ಸೊನ್ನಲಿಗೆ' ನೋ.

ಸನ್ನಹ (ನಾ). ಅಣಿಗೊಳಿಸುವುದು ; ಸಿದ್ಧತೆ : ''ಸನ್ನಹಮೆಂದು ಸನ್ನಾಹಂ'' (ಕಶಾ. ೬೪-೪೪೮) ; ಓತು ಕೊಡಿಸಿದ ಸಕಲ ಸನ್ನಹವ (ಮೋಹತ. ೧೭-೧೩); ರಾಘವನ ಪಟ್ಟಾಭಿಷೇಚನಕೆ ಸನ್ನಹ [ಪಾಠಾಂ. ಯ]ಮಂ . . . ಅಣಿಗೈಯುತಿರಲು (ಶ್ರೀರಾಮ. ೫-೩೦). ಮುನ್ನೀರು ಮೇರೆದಪ್ಪಿದವೊಲು ನಡೆತಂದ ಸನ್ನಹಗಳ ಪೇೞಲಳವೆ (ಕರ್ಣಾ. ೨೧೮). 'ಸನ್ನಣ' ಪರಾ. [<ಸಂ. ಸನ್ನಾಹ]

ಸನ್ನಹನ (ನಾ). ೧. ಸಿದ್ಧಪಡಿಸುವುದು ; ಸಜ್ಜುಗೊಳಿಸುವುದು. ೨. ಭದ್ರವಾಗಿ ಕಟ್ಟುವುದು. [ಸಂ.]

ಸನ್ನಹಿತ (ಗು). ೧. ಕಟ್ಟಿದ ; ಬಂಧಿಸಿದ. ೨. ಸಮೀಪದ ; ಹತ್ತಿರದ: ಲಿಂಗಬಾಹಿರನಾದಡಾತನು ಲಿಂಗಸನ್ನಹಿತಾತ್ಮನಾದನು (ಬಸವ. ೩೮-೫೪). (ನಾ). ೩. ಅಲಂಕೃತವಾದುದು; ಸಿಂಗರಿಸಲ್ಪಟ್ಟುದು : ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಟ್ಟು ಸನ್ನಹಿತವೆನಿಪ್ಪಪೂರ್ವ ಶುಭಲಕ್ಷಣ ದೇಹದೊಳೊಳ್ಪನಾಳ್ದು (ಪಂಪಭಾ. ೧-೪). ೪. ಸಂಬಂಧ ; ಸಂಪರ್ಕ : ಬೀಜ ಆಯತ ಸ್ಯಾಯತ ಸನ್ನಹಿತವೆಂಬುದಿಲ್ಲ ನೋಡಾ ಶಿವಶಕ್ತಿಸಂಬಂಧವೆ ದೇಹ (ಅವಚಂ. ೩೩೮-೧೦೦೨). ೫. ಸಂಪರ್ಕವುಳ್ಳವನು ; ಸಂಬಂಧವುಳ್ಳವನು : ಸದಾ ಸನ್ನಹಿತನಾಗಿ ಶರಣೆಂಬುವುದು ನಂಬುವುದು (ಬಸವ. ೧೧೬) ; ಶರಣನು ಸನ್ನಹಿತನು ಅಲ್ಲಲ್ಲಿಗೆ ನಡುಕಡೆಯಿಲ್ಲವಯ್ಯ ಅಚ್ಚ ಶರಣನು (ಶಿವಗೀ. ೧೦೬-೫೧೩). [< ಸಂ.ಸನ್ನಿಹಿತ?]

ಸನ್ನಹಿಸು (ಕ್ರಿ). ಸಜ್ಜಾಗು ; ಸಿದ್ಧವಾಗು : ಪಯಶರಧಿನಿವಾಸಂ ಬಲುದಯದಿಂ ಸೈನಿಕವ ಸನ್ನಹಿಸಿದಂ ನರಗಂ (ನೀಲಧ್ವ. ೯); ಮತ್ತೊಮ್ಮೆ ಹೊಸ ಸಾಹಸಗಳಿಂ ಸನ್ನಹಿಸುವಂ (ಮಂಕುಶ. ೧೨೩). [ಸನ್ನಹ + - ಇಸು]

ಸನ್ನಾದ (ನಾ). ಗದ್ದಲ; ಗಲಾಟೆ : ಮೌನಮಪ್ಪುದುದಬ್ಧಿ ಶಬ್ದಮಂ, ಮೇಣ್ ಸೈನ್ಯಸನ್ನಾದಮಂ (ಶ್ರೀರಾಮಾ. ೫೪೫-೧೩೭). [ಸಂ.]

ಸನ್ನಾಮ (ನಾ). ೧. ಒಳ್ಳೆಯ ಹೆಸರು : ಸೋಮಧರಭಕ್ತಾಂಭ್ರನಿಹಿತಾರಾಮ ... ಸನ್ನಾಮಗುಣಯೋಗನನು (ಬಸವ. ೪೬-೬೮) ; ದಕ್ಷಿಣಾಚಾರ್ಯನೆಂದೆಂಬ ಸನ್ನಾಮವ ಲಕ್ಷಿಸಿ (ಗೊಮ್ಮಟ. ೭-೬). ೨. ಮತ್ತೊಬ್ಬರೆದುರಿನಲ್ಲಿ ತಲೆಬಾಗುವುದು ,— ನಮ್ರತೆ ತೋರುವುದು : (ಪ). [ಸಂ. ಸನ್ನಾಮನ್]

ಸನ್ನಾಮಿ (ನಾ). ೧. ಒಳ್ಳೆಯ ಹೆಸರನ್ನು ಹೊಂದಿದವನು; ಖ್ಯಾತಿವಂತ: ಮಂಡಗೆ ಮಾದಿರಾಜನೆನಲ್ಕೆ ಸನ್ನಾಮಿ (ಬಸವ. ೨-೪೬). ೨. ಭಕ್ತ; ಆರಾಧಕ.

[< ಸಂ. ಸನ್ನಾಮನ್]

ಸನ್ನಾಯಿ 'ಸೊನಯಿ' ನೋ.

ಸನ್ನಾಯ್ಯ (ನಾ). ಯಜ್ಞದಲ್ಲಿ ಅಗ್ನಿಗೆ ತುಪ್ಪದ ಜೊತೆಯಲ್ಲಿ ಅರ್ಪಿಸುವ ಪದಾರ್ಥ; ಹವಿಸ್ಸು : (ಪ). [< ಸಂ. ಸಾನ್ನಾಯ್ಯ]

ಸನ್ನಾಹ (ನಾ). ೧. ಕಟ್ಟಿರುವುದು; ಬಂಧನ: "ಸನ್ನಾಹಮನಲು ಭದ್ರಂ" (ಪಂಗರಾ. ೮೬-೩೧). ೨. (ಯುದ್ಧಕ್ಕೆ) ಅಣಿಮಾಡಿಕೊಳ್ಳುವುದು ; ಸಿದ್ಧತೆ; ಸಜ್ಜು : ಸನ್ನಾಹಮಂ ತಾಳ್ದಿ ಸೈನ್ಯಪ್ರಕರಂ ಬರ್ಕೆ (ಜಗಪ. ೩-೧೩) ; ಸಕಲಸನ್ನಾಹದಲಿ ಯುದ್ಧೋದ್ಯುಕ್ತರಾದರು ಚರಿತ ಚಾಪರು ಮುಕುತ ಶಸ್ತ್ರಾವಳಿಯ ಮಳೆಗಾಲವನು ನಿರ್ಮಿಸುತ (ಕವ್ಯಾಭೀ. ೮-೨೪); ಪ್ರತಿರಕ್ಷೆಯ ಸನ್ನಾಹವನ್ನು ಪೂರೈಸಿ ಹಾಸಿಗೆಯನ್ನು ಆಶ್ರಯಿಸಿದನು (ಸಂಬರು. ೪೮). ೩. ಕವಚ; ಜೋಡು; ರಕ್ಷೆ: ಪರಿವಾರ ವಜ್ರಸಂನಾಹಂ (ಮೃಚ್ಛ. ೧೫೩೭, ೩೬-೪೩ : 1196). ೪. ಗುಂಪು; ಸಮೂಹ: ನಿನ್ನಡಿಸೋಂಕಿನೊಳಖಿಲದುರಿತಗಳ ಸನ್ನಾಹವ ಪದದಟ್ಟ (ಹರಿಚ. ೧-೩೫). ೫. ವಿಶೇಷವಾದ ಉಡಿಗೆ ತೊಡಿಗೆ ; ಹೆಚ್ಚಿನ ವೇಷಭೂಷಣ. ೬. ಸನ್ನೆ; ಸುಳಿವು; ಜಾಡು: ಕಲಿತ ಸನ್ನಾಹದಲಿ ಸಾರಥಿ ಸುಳಿಸಿದನು ಹೊಂದೇರನಭ್ರಕೆ (ಕವ್ಯಾಖ್ಯಾ. ೭-೪). ೭. ಯುದ್ಧಕ್ಕೆ ಸನ್ನದ್ಧವಾದ ಸೈನ್ಯ : "ಒಡ್ಡವಣೆ ಸನ್ನಾಹಂ" (ಭಾರನಿ. ೧೩). ೮. ವಿದ್ಯಾಂಸ. ೯. ಪರಮಾತ್ಮ. "ಮೋಹರಿಸಿರ್ದ ಸೇನೆ ಬಹುಭಾವಕರುಂ ಪರಮಾತ್ಮನಿಂತು ಸನ್ನಾಹಮೆನಿಕ್ಕುಂ" (ನಾನಾರ್ಥ. ೧೦೬). [ಸಂ.]

ಸನ್ನಾಹಗೆಯ್ (ಕ್ರಿ). ಸಿದ್ಧತೆಮಾಡು ; ಅಣಿಮಾಡು : ಭಿನ್ನವಿಲ್ಲದ ಸಂಭಾರಾನುಕೂಲತೆ ಸನ್ನಾಹಗೆಯ್ದು ದೀಪ್ತಿಗಳ ಹೊನ್ನ ಪುತ್ತಳಿಯ ಕೈಲಿಡಿಗೊಟ್ಟು ಬೀಳ್ಕೊಂಡು ಚೆನ್ನೆಯರ್ ಪೊಱಮಟ್ಟರಾಗ (ಮೋಹತ. ೧೬-೨೯). [ಸನ್ನಾಹ + ಕೆಯ್]

ಸನ್ನಾಹಗೊಳಿಸು (ಕ್ರಿ). = ಸನ್ನಾಹಗೆಯ್ : ಪನ್ನೀರ ಚಳಿಯ ಕತ್ತುರಿಯ ಸಾರಣೆ ಮುತ್ತಿನುನ್ನತ ರಂಗವಲ್ಲಿಗಳ ಸನ್ನಾಹಗೊಳಿಸಿ (ಹಂಸವಿ. ೨೨-೩). [ಸನ್ನಾಹ + ಕೊಳಿಸು]

ಸನ್ನಾಹಭೇರಿ (ನಾ). (ಯುದ್ಧಕ್ಕೆ) ಸೈನ್ಯವು ಸಿದ್ಧವಾಗಲೆಂದು ಹೊಡೆಸುವ ಭೇರಿ : ರಾವಣನೆಂದನವಂದಿರನಗ ಕಾಳಿಗದೊಳ್ ನಿಲ್ಲ ಗಂಡರಲ್ಲರದರ್ಕೆ ನೀನಂಜದಿರೆಂದು ನುಡಿದು ಸನ್ನಾಹಭೇರಿಯಿಂ ಪೊಯಿಸುವುದುಂ (ಪಂರಾಮಾ. ೧೪-೧೨೪ವ); ತ್ಯರಿತದಿಂ ಸನ್ನಾಹಭೇರಿಯನರಸು ಪೊಯ್ಯಲು (ನಾಗಚ. ೧೯-೧೧೬). [ಸಂ. ಸನ್ನಾಹಭೇರೀ]

ಸನ್ನಾಹ್ಯ (ನಾ). ಯುದ್ಧಕ್ಕೆ ಯೋಗ್ಯವಾದ ಆನೆ , — ಗಜ : "ಸನ್ನಾಹ್ಯಃ, ಸಮರೋಚಿತಃ,- ಈ ೨ ಕಾದುವಾನೆ" (ಹಲಾಯು. ೩೮-೭೧). [ಸಂ.]

ಸನ್ನಿ (ನಾ). ೧. ಅತಿಶೀತದಿಂದ ಉಂಟಾಗುವ ಜ್ವರ; ಶೀತಜ್ವರ: "ಶೀತಳಮೆನಲು ಸನ್ನಿ" (ಮಂಗರಾ. ೧೧೪-೪); ವಾತವಿಕಾರ, ಸನ್ನಿ, ಧನುರ್ವಾತ ಮುಂತಾದುವುಗಳಿಗೆ ಕಲ್ಕ ಬಸಿ ಮೊದಲಾದುವುಗಳನ್ನು ಹಾಕಲು ಬಲ್ಲವಳಾಗಿದ್ದಳು (ಶಾಂತಲಾ. ೩೨೬); ಸನ್ನಿಯಲ್ಲ ಜ್ವರ ಇಲ್ಲ, ಆದರೂ ಹೀಗೆ ಸುಸ್ತು ಬಡಿದುಹೋಗಿದ್ದೀ (ಮಾನೋನಂ. ೧೫೧). ೨. ಮೂರ್ಛೆಯ ಅವಸ್ಥೆ; ಪ್ರಜ್ಞೆ ತಪ್ಪುವುದು: ನಿನ್ನಲ್ಲಿವುದಕ್ಕೆ ಹಣ್ಣು ಹೊನ್ನು ಮಣ್ಣೆಂಬ ಸನ್ನಿಯ ತೊಲೆಯ ಹಾಯಬೇಕು (ಮಲೇವ. ೨೭೯-೩೭) ; ಸನ್ನಿಯಿಂದ ಮೈಮರೆತಿದ್ದವರಿಗೆ ಆಪಾದಮಸ್ತಕದಲ್ಲಿ ಸುಶಸ್ತ್ರದಿಂ ಹೊಯ್ದು ರಕ್ತ ಬಂದ ಶಾವಿಗೆ ಮಂಜಿಷ್ಠೆ . . . ತೇದು ಹಚ್ಚುವುದು (ವಿಷವಿ. ೪೪). ೩. ಬಾಯಿಗೆ ಬಂದ ಹಾಗೆ ಮಾತನಾಡುವಿಕೆ ; ಮತಿಭ್ರಮೆ : ಕೊಡಗದ ಅರಸು ವೀರರಾಜೇಂದ್ರನು ಸನ್ನಿಯಾಗಿ ಕ್ರೂರತನದಿಂದ ಬಹುಜನರನ್ನು ಕೊಲ್ಲಿಸಿ (ಕಪಾಗ. ೩೭೧). ೪. ವಿಷ ; ಗರಲ : "ಕ್ಷ್ವೇಳಃ, ಗರಳಂ, ವಿಷಂ- ೩ ಸಾಮಾನ್ಯವಾಗಿ ಸಕಲವಿಷಗಳಿಗೂ ಹೆಸರುಗಳು. ಅಂದರೆ ಪ್ರಾಣಹರವಾದ ಪಿತ್ತ, ನಂಜು - ಸನ್ನಿ" (ಸಿದ್ಧಾಂಜ. ೭೩). ೫. ಮೂರ್ಛಿತನಾದವನು; ಎಚ್ಚರವಿಲ್ಲದವನು : ವಹ್ನಿಯಿರೆ ಆಹುತಿಯ ನುನ್ನಿಸುತ ಬೂದಿಯಿಂದ ಹಾಕುವ ಸನ್ನಿಗಳನೇನೆಂಬೆ (ಪ್ರಾನಟಂ. ೧೭-೬೦). [ಸಂ.]

ಸನ್ನಿಕಟ (ನಾ). ಬಹಳ ಹತ್ತಿರ ; ಅತಿಸಮೀಪ : ಇಂದು ತನ್ನ ಅಧೀಕ್ಷಸಿದ್ಧಿಯು ಅತ್ಯಂತ ಸನ್ನಿಕಟದಲ್ಲಿಯೇ ಬಂದಿದೆ (ಇಷ್ಟಸಿ. ೩೩೯); ಸಾಕ್ಷಾತ್ಕಾರಕ್ಕೆ ಸನ್ನಿಕಟವಾಗಿಯೇ ಬಿಟ್ಟಿತೆಂಬಂತೆ ಉತ್ತರ ಕೊಟ್ಟಿದ್ದನು (ಮಲೆಮ. ೭೦೬). [< ಸಂ. ಸನ್ನಿಕೃಷ್ಟ]

ಸನ್ನಿಕರ್ಷ (ನಾ). ಹತ್ತಿರ; ಸಮೀಪ. [ಸಂ.]

ಸನ್ನಿಕರ್ಷಣ (ನಾ). ೧. ಹತ್ತಿರಕ್ಕೆ ತರುವಿಕೆ. ೨. ಹತ್ತಿರ; ಸಮೀಪ: "ಸನ್ನಿಧಿಃ, ಸನ್ನಿಕರ್ಷಣಂ-೨ ಸಮೀಪವಾಗಿರುವಿಕೆ, ಹತ್ತಿರವಾದ ಸ್ಥಳ " (ಸಿದ್ಧಾಂಜ. ೩೭) [ಸಂ.]

ಸನ್ನಿಕಾಶ (ನಾ). ಸಮಾನ, ಹೋಲುವವನು ಎಂಬರ್ಥದಲ್ಲಿ ಸಮಾಸಗಳ ಕಡೆಗೆ ಸೇರುವ ಶಬ್ದ: ಪ್ರಭುಪಿತವ್ಯಗವತಿಶಿಶುಸನ್ನಿಕಾಶರತಿವಿಕಟಭೀಷಣ ಭ್ರೂಭಂಗರ್ (ಪಂಪಭಾ. ೭-೮). [ಸಂ.]

ಸನ್ನಿಕೃಷ್ಟ (ಗು). ೧. ಸಮೀಪಕ್ಕೆ ಆಕರ್ಷಿಸಿದ. (ನಾ). ೨. ಹತ್ತಿರಕ್ಕೆ ಸೆಳೆದುದು; ಸಮೀಪಕ್ಕೆ ಆಕರ್ಷಿಸಿದುದು. ೩. ಹತ್ತಿರ; ಸಮೀಪ : "ಸಮೀಪಂ . . . ಸನ್ನಿಕೃಷ್ಟಂ . . . ಅವದಾಂತರಂ - ಈ ೧೮ ಸಮೀಪಂ" (ಹಲಾಯು. ೧೧೫-೭); ಅತ್ಯಂತ ಸನ್ನಿಕೃಷ್ಟವಾದ ಸಂಬಂಧವಿರುವುದರಿಂದ ವಿಶೇಷದ ಪ್ರಾಧಾನ್ಯವೇ ಸಾಮಾನ್ಯಕ್ಕು ಬರುತ್ತದೆ (ಧ್ವನ್ಯಾಲೋ. ೩೬). [ಸಂ.]

ಸನ್ನಿಗಿಡ (ನಾ). ಒಂದು ಬಗೆಯ ಸಸ್ಯ : (ಹುಡಿಗಿ. ೩೦-೫೮೨).

[ಸನ್ನಿ ? + ಗಿಡ (< ಗಿಡು)]

ಸನ್ನಿಕ್ಕೃಷ್ಟ (ಗು). ೧. ಚೆನ್ನಾಗಿ ತಿಕ್ಕಿದ; ಬಹಳವಾಗಿ ಉಜ್ಜಿದ. (ನಾ). ೨. ಚೆನ್ನಾಗಿ ತಿಕ್ಕುವುದು,— ಉಜ್ಜುವುದು : "ಸನ್ನಿಕ್ಕೃಷ್ಟಂ ಪಸರಪ್ಪ ಮಾಮಗಳೊಳುರ್ದು" (ತಲ್ಪಮಂ. ೧೦೮). [ಸಂ.]

ಸನ್ನಿತಲೆನೋವು (ನಾ). ಸನ್ನಿಯಿಂದ ಬರುವ ತಲೆನೋವು : ಸನ್ನಿತಲೆನೋವಿಗೆ ನಸ್ಯ-ಸುಟ್ಟಬೆಲ್ಲ . . . ನಸ್ಯಮಂ ಮಾಡಲು ಮಾಣ್ಸುಂ (ವಿಷವಿ. ೧೦೧).

[ಸನ್ನಿ + ತಲೆನೋವು]

ಸನ್ನಿದ (ನಾ). ೧. ಹತ್ತಿರ; ಸಮೀಪ : ಬೇಱೆ ಪರಭಾಗಂಬೆತ್ತು ಲೋಕಕ್ಕೆ ಸನ್ನಿದ ಮಾಗಿರ್ದುವು ಕೌರವಧ್ವಜಿನಿಯೊಳ್ ಕಾಳಿಂದಿಯುಂ ಗಂಗೆಯುಂ (ಪಂಪಭಾ. ೧೦-೩೧); ಆ ಕನ್ನೆಯ ರೂಪನ್ನಿದಿರೊಳ್ ಸನ್ನಿದಮಾದಂತೆ ತೋಱುತಿರ್ದಪುದು (ಕಾದಂಬಿ. ೩೨೫); ಜವನ ಸನ್ನಿದಮಂ ಪೊರ್ದಿಸಲಿ ಪೇಳ್ಕುಮೆಂದು (ಮಂರಾಚ. ೨-೪೦). ೨. ಹತ್ತಿರದವನು; ಸಮೀಪದಲ್ಲಿರುವವನು: ಅನ್ನಗಮನಗೀ ಮನೋಹರಂ ಸನ್ನಿದನಪ್ಪಂ (ಕಾದಂಬಿ. ೬೩೧). [< ಸಂ. ಸನ್ನಿಧ]

ಸನ್ನಿದೋಷ (ನಾ). ಶೀತದಿಂದುಂಟಾಗುವ ದೋಷ : ಎರಡು ಧಾತುಗಳ ಮಧ್ಯಮಮಾಂದ್ಯಗಳ ವ್ಯತ್ಯಾಸಗಳಿಂದಲೂ ಪುಟ್ಟುವ ಸನ್ನಿದೋಷ (ಸಹವ್ಯ. ೧೫೧).

[ಸಂ.]

ಸನ್ನಿಧಾನ (ನಾ). ೧. ಹತ್ತಿರ ; ಸಮೀಪ : ಅಂತು ಮರಣಪ್ರಾಪ್ತನಾದ ಕುಮಾರನಂ ಸನ್ನಿಧಾನಸ್ಥಿತನಾಗಿರ್ದನ್ನುಮನಾತನ ತಂದೆ ಕಂಡು (ಪಂಚತಂ. ೬೬೯-೧೬). ೨. ಒಂದರ ಪಕ್ಕದಲ್ಲೊಂದರಂತೆ, ಒಟ್ಟಿಗೆ ಸೇರಿಸಿ ಇಡುವುದು. ೩. ಕಾರ್ಯ ವಹಿಸಿಕೊಳ್ಳುವುದು. ೪. ಎದುರು; ಸಮ್ಮುಖ : ಸಜ್ಜನರ ಸನ್ನಿಧಾನದಲ್ಲಿ ಇದ್ದವರನ್ನು ಕೆಣಕಲು ದೇವೇಂದ್ರನು ಸಮರ್ಥನಲ್ಲ (ಕವ್ಯಾಆ. ೧೩೭). ೫. ಹಿರಿಯ ವ್ಯಕ್ತಿ ಮತ್ತು ರಾಜರನ್ನು ಸಂಬೋಧಿಸುವಾಗ ಬಳಸುವ ಪದ : ಸನ್ನಿಧಾನವು ಏನು ಬೇಕಾದರೂ ಮಾಡಬಹುದು (ಸಡದಾ. III. ೧೪೩೧). ೬. ರಾಜ್ಯಭಾರ; ಆಡಳಿತ : ಆಗ ಬಾಳಾಜಿರಾಯರು . . . ದೊರೆಗಳವರ ಸನ್ನಿಧಾನದಲ್ಲಿ ಮುಖ್ಯಾಧಿಕಾರಿಗಳಾಗಿದ್ದರು (ಮಪಾವಂ. II. ೩೯). ೭. ಉಪಾಸನೆಯಲ್ಲಿ ಒಂದು ವಿಧ; ವಿಗ್ರಹದಲ್ಲಿ ಅಥವಾ ಬೇರೆಯ ಪ್ರತೀಕದಲ್ಲಿ ಇಷ್ಟದೇವತೆಯು ನೆಲೆಗೊಳ್ಳುವಂತೆ ಮಂತ್ರಪೂರ್ವಕವಾಗಿ ಪ್ರಾರ್ಥಿಸಿ ಪೂಜಿಸುವುದು : ಶ್ರದ್ಧಾ ಭಕ್ತಿಧ್ಯಾನ ಧ್ಯಾನಸಮೇತನಾಗಿ ಶಿವನಂ ಭಜಿಸುತ ಆವಾಹನ ಸ್ಥಾಪನ ಸನ್ನಿಧಾನ ಸನ್ನಿರೋಧನ

ಸಮ್ಮುಖೀಕರಣಾದಿ ಮುಖ್ಯಕ್ರಿಯೆಗಳಿಂದೊಡಗೂಡಿ (ವೀಕ್ಷ. ೧೦೪). ೮. [ವ್ಯಾಕ] ಷಷ್ಠೀವಿಭಕ್ತಿಯ ವಿವಿಧ ಸಂಬಂಧಾರ್ಥಗಳಲ್ಲಿ ಒಂದು; ಸಾಮಾಪ್ಯದ ಸಂಬಂಧ: ಸಂಬಂಧದೊಳ್ ಷಷ್ಠಿಯಕ್ಕುಂ ಅದು ಸ್ವಾಮಿಸಂಬಂಧ . . . ಸನ್ನಿಧಾನಸಂಬಂಧ ಸಂಸ್ಪರ್ಶಸಂಬಂಧ ಸಂಬಂಧಸಂಬಂಧವೆಂಬಿನತೊಳಮಕ್ಕುಂ (ಶಮಪ. ೧೩೨ ವೃತ್ತಿ); ಸನ್ನಿಧಾನಕ್ಕೆ- ಕೆಲೆಯ ಕೋಡಿ; ಊರಮುಂದು; ಅದಱ ಕೆಲಂ (ಶಮಪ. ೧೩೨ ಪ್ರಯೋ). [ಸಂ.]

ಸನ್ನಿಧಿ1 (ನಾ). ೧. ಹತ್ತಿರ; ಸಮೀಪ : ಶ್ರೀಧರತಪೋನಿಧಿಯ ಸನ್ನಿಧಿಯೊಳ್ ಪರಿಹರಿಸಿ ಜಾತರೂಪೋತ್ಕರಮಂ ಮತ್ತೊಂದು ಜಾತರೂಪಮನರಸಂ ಧರಿಯಿಸಿದಂ (ಚಂದ್ರಪು. ೨-೫೭ ಪ). ೨. = ಸನ್ನಿಧಾನ ೨. ೩. = ಸನ್ನಿಧಾನ ೩. ೪. ಎದುರು; ಸಮ್ಮುಖ : ಶ್ರೀಮದಜಾಖ ವೀರಜಿನಸನ್ನಿಧಿಯೊಳ್ . . . ಪೇಟ್ಮೆಂ . . . ಸುಕುಮಾರಕಥಾಪ್ರಬಂಧಮಂ (ಸುಕುಮಾ. ೧-೬೪). ೫. ರಾಜರನ್ನು ಮತ್ತು ಹಿರಿಯ ವ್ಯಕ್ತಿಗಳನ್ನು ಸಂಬೋಧಿಸುವಾಗ ಗೌರವಸೂಚಕವಾಗಿ ಬಳಸುವ ಒಂದು ಪದ: ಸನ್ನಿಧಿಯವರು ದಯಮಾಡಿಸುತಿದ್ದಾರೆ. ದಾರಿ ಬಿಡಿ (ರೂಢಿ). [ಸಂ.]

ಸನ್ನಿಧಿ2 (ನಾ). ಒಳ್ಳೆಯ ನೆಲೆ , – ಆಶ್ರಯಸ್ಥಾನ : ಬೇಱದೊಂದು ರೂಪಿನ ನಿಧಿ ಬೇಱದೊಂದು ಕಡುಗಾಡಿಯ ಸನ್ನಿಧಿ ಬೇಱದೊಂದು ನುಣ್ಪಿನ ಕಣೆ . . . ಎನ್ನ ನಲ್ಲಳಾ (ಶಾಂತಿಪು. ೩-೭೯). [ಸಂ.(ಸತ್ + ನಿಧಿ)]

ಸನ್ನಿಪಾತ (ನಾ). ೧. ಕೂಡುವುದು; ಸಂಯೋಗ : ಭೂತಚತುಷ್ಟಯ ಸನ್ನಿಪಾತಮಂ ಶರೀರಮೆಂಬುದು (ಶಾಂತಿಪು. ೮-೧೩೨ವ). ೨. ಯುದ್ಧ; ಸಮರ. ೩.= ಸನ್ನಿದೋಷ: ಜಿಹ್ವೆಯು . . . ಸನ್ನಿಪಾತದಲ್ಲಿ ಕವ್ಗಾಗಿ ಮುಳ್ಮುಳ್ಳಾಗಿ ಒಣಗಿ ದ್ರವವಿಲ್ಲದ ಇರುವುದು .(ಸಹ್ಯ. ೧೪). ೪. ವಿಪರೀತಜ್ವರದಿಂದ ಉಂಟಾಗುವ ಬುದ್ಧಿಭ್ರಮಣೆ : ಅರುವಾಳ :- ಈ ಬೀಜ ಮೆಣಸು ಸಹ ನಿಂಬೇಹುಳಿಯಲ್ಲಿ ತೇದು ಹಚ್ಚಲು ಸನ್ನಿಪಾತಹರ (ವೈದ್ಯ. ೧). [ಸಂ.]

ಸನ್ನಿಪಾತಕ (ನಾ).= ಸನ್ನಿಪಾತ ೪ : ಬಹುಮೂತ್ರದವರಿಗೆ . . . ನಾಲ್ಕನೆಯ ಅವಸ್ಥೆಯಲ್ಲಿ ಸನ್ನಿಪಾತಕವು ತೋಱುವುದು (ವೈದ್ಯ. ೧೫೭). [ಸಂ.]

ಸನ್ನಿಪಾತಕಜ್ವರ (ನಾ). ಸನ್ನಿಪಾತದಿಂದುಂಟಾಗುವ ಜ್ವರ. [ಸಂ.]

ಸನ್ನಿಪಾತಗುಲ್ಮ (ನಾ). ಒಂದು ಬಗೆಯ ಗುಲ್ಮರೋಗ : ಮಣಸು ಬೆಳ್ಳುಳ್ಳಿ . . . ಗುಳಿಗೆ ಮಾಡಿ ಏಳು ದಿನ ನುಂಗೆ . . . ಸನ್ನಿಪಾತಗುಲ್ಮ ಇವು ಎಲ್ಲಾ ಮಾಣುವುವು (ವೈದ್ಯ. ೧೭೭) . [ಸಂ.]

ಸನ್ನಿಪಾತಜ್ವರ (ನಾ). = ಸನ್ನಿಪಾತಕಜ್ವರ : ಸನ್ನಿಪಾತಜ್ವರಂ ದೂರಕೊಂಡಂತ ವಿವೇಕದಿಂದಭಿಜನಂ . . . ಅದೇಂ ಮಾರ್ಕೊಳ್ವದಂತಿರ್ಕುಮೇ (ಪಂಡಾಮಾ. ೬-೧೬೮); ತಂದ್ರ, ನಿದ್ರಾಭಂಗ, ಗಂಟಲಲಿ ಗೊರಕು, ಬಾಯಾರಿಕೆ, ಕ್ಷಣಕ್ಕೆ ಶೀತ, ಕ್ಷಣಕ್ಕೆ ಉಷ್ಣ . . . ಇವಿಷ್ಟೂ ಉಂಟಾಗಿರುವುದೇ ಸನ್ನಿಪಾತಜ್ವರಲಕ್ಷಣವೆಂದರಿವುದು (ಸಹ್ಯ. ೯೭). [ಸಂ.]

ಸನ್ನಿಬಂಧ (ಗು). ೧. ಕಟ್ಟಿದ; ಬಂಧಿಸಿದ. (ನಾ). ೨. ಒಳ್ಳೆಯ ಕಾವ್ಯಬಂಧ; ಸತ್ಪ್ರಬಂಧ : ಈ ಪೇಟ್ಟ ಮಾಟ್ಕಿಯಿಂ ದೋಷಾಲೇಪಂ ಪೊರ್ದದಂತಿರೆ ಸನ್ನಿಬಂಧ ವ್ಯಾಪೃತನಕ್ಕೆ ಗುಣವದರ್ಥಂ ವ್ಯಾಪಕಮಾಗೆ ಕವಿತ್ವತತ್ವದೊಳ್ (ಕಾವ್ಯಾಪ. ೪೯೫). [ಸಂ.]

ಸನ್ನಿಭ (ಗು). ಸಮಾನವಾದ; ಸದೃಶವಾದ : ಅಮರಸನ್ನಿಭಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು (ವಡ್ಡಾರಾ. ೨೬-೧೫); ಅಭವಸನ್ನಿಭ ವೀರನಾಗೆಂದು . . . ಹರಸಿದರು ಹರುಷದಲಿ (ಋಷ್ಯಾ. ೧೦-೭೮); ಮಾರಸನ್ನಿಭ ರೂಪನ ಧೀರ ಮಲುಹಣ (ಪ್ರಸಾರಾ. ೯-೨೦). [ಸಂ.]

ಸನ್ನಿರೋಧನ (ನಾ). ಮೂರ್ತಿಪೂಜಾವಿಧಿಕ್ರಿಯೆಗಳಲ್ಲಿ ಒಂದು ; ಇಷ್ಟದೇವತಾ ಮೂರ್ತಿಯನ್ನು ಮಂತ್ರಪೂರ್ವಕವಾಗಿ ನೆಲೆಸುವಂತೆ ಪ್ರಾರ್ಥಿಸುವ ಒಂದು ಕ್ರಿಯೆ : ಶಿವಲಿಂಗಕ್ಕಾವಾಹನ ಸ್ಥಾಪನ ಸನ್ನಿಧಾನ ಸನ್ನಿರೋಧನ ಸಮ್ಮುಖೀಕರಣಮೆಂಬ ಕ್ರಿಯೆಗಳಂ ಮಾಡಿ (ವೀಕ್ಷ. ೯೪). [?]

ಸನ್ನಿವಡು (ಕ್ರಿ). ಸನ್ನಿಪಾತರೋಗಕ್ಕೊಳಗಾಗು : ಹರನೆಂದು ದುಗ್ಧವಾರಿಧಿ ವಿಚಾರಿಸದ ಶಂಕರನೆಂದು ತನ್ನ ತಿಂಗಳ ಶಿಶುವ ಕೊಡಲದಂ ಹರಿವ ನೀರ್ ಮೊಲೆವ ಹಾವುರಿವ ಕಿಚ್ಚಿನ ಹೊಡೆಯೊಳಿರಿಸಲದ್ ಸನ್ನಿವಟ್ಟು ಶರೀರವೆಲ್ಲಂ ಕಂದಿ ಕುಂದಿ (ಭಾವಚಂ. ೬-೧); ನೀರೊಳೊಣಗಿದುದು ಮೈನಾಕ ಸನ್ನಿವಟ್ಟುದು ಕುಳಿರ್ವೆಟ್ಟು ಚಲಿಸಿತು ಮಂದರಂ (ಸಂದಿಮಾ. ೧೧-೨೬). [ಸನ್ನಿ + ಪಡು1]

ಸನ್ನಿವಹ (ನಾ). ಒಳ್ಳೆಯ ಪರಿವಾರವುಳ್ಳವನು : ವೃತಗೋಮಂ ಸಕಳಕಳಾನ್ವಿತ ನಮ್ಯತಮಯಂ ವಿಶುದ್ಧವೃದ್ಧಂ ಪರಿವೇಷ್ಟಿತ ಸನ್ನಿವಹಂ ಕುವಳಯಹಿತನೆನೆ ಸಂಪೂರ್ಣಂ ಚಂದ್ರನೊಳ್ಳೊರೆ ಚಂದ್ರಂ (ಮದಕ. ೧-೪೮). [ಸಂ.]

ಸನ್ನಿವಾಸ (ನಾ). ಒಳ್ಳೆಯ ಮನೆ , – ನಿವಾಸ : ಸೌರಾಷ್ಟ್ರಪತಿ ರತಿಪೊಂದಿ ಬಿಡದಿರವೇಳ್ಕು ನಿನ್ನಯ ಸನ್ನಿವಾಸದಲೆ (ಬಾಹು. ೫೩-೧೭). [ಸಂ.]

ಸನ್ನಿವಿಷ್ಟ (ನಾ). ೧. ಜೊತೆಗೂಡಿ ಪ್ರವೇಶಿಸುವುದು. ೨. ಬೀಡುಬಿಡುವುದು; ನೆಲೆಗೊಳ್ಳುವುದು. ೩. ಹತ್ತಿರ; ಸಮೀಪ. [ಸಂ.]

ಸನ್ನಿವೇಶ (ನಾ). ೧. ಜೊತೆಗೂಡಿ ಪ್ರವೇಶಿಸುವುದು. ೨. ಸಮೂಹ; ಗುಂಪು. ೩. ಸಮ್ಮಿಲನ; ಕೂಟ. ೪. ನೆರೆಹೊರೆ; ಪರಿಸರ; ಸುತ್ತುಮುತ್ತು. ೫. ನೆಲೆ; ಸ್ಥಾನ; ಸ್ಥಳ : "ಸಂಸ್ಥಾನಂ, ಸನ್ನಿವೇಶಃ - ಈ ೨ ನಿಲವು" (ಹಲಾಯು. ೧೨೮-೯೩). ೬. ಇರವು; ಪರಿಸ್ಥಿತಿ : ಆರ್ಥಿಕದೃಷ್ಟಿಯಿಂದ ಸನ್ನಿವೇಶಗಳು ಅಮ್ಮ ಅನುಕೂಲಕರವಾಗಿರಲಿಲ್ಲ (ಸಸ್ಮೃ. ೯೫). ೭. ರೂಪ; ರಚನೆ. ೮. ಘಟನೆ; ಸಂದರ್ಭ : ನಾಟಕದ ಮೂಲೋದ್ದೇಶದ ನಿರೂಪಕವಾಗಿರುವಂತೆ ಈ ಸನ್ನಿವೇಶಗಳನ್ನು ನಿರ್ದೇಶಕನು ಯೋಜಿಸಿಕೊಳ್ಳಬಹುದು (ಕಮ್ಮಟ. ೬೦). [ಸಂ.]

ಸನ್ನಿಹಿತ (ಗು). ೧. ಹತ್ತಿರದಲ್ಲಿರುವ; ಸಮೀಪದ: ಸಹಜವಿಭೂಷಣ ಪ್ರತತಿವಲ್ಲವಮಿಲ್ಲದ ದಿವ್ಯದೇಹಸನ್ನಿಹಿತಪಹಾಸ್ಯಮಂಬ ಪಸರಿಲ್ಲದೆಯಾಡುವ ಕೋಟೆ (ಶಾಂತಿಪು. ೯-೩೪); ನೃಪಕುಮಾರರೆ ಸತತ ಸನ್ನಿಹಿತ ಪರಿವಾರಮಾಗೆ (ಶುಷ್ಪಪು. ೪-೬೪). ೨. ಸಿದ್ಧವಾದ; ಸಜ್ಜಾದ. (ನಾ). ೩. ಹತ್ತಿರ; ಸಮೀಪ: ಸನ್ನಿಹಿತಮಾದೀ ವಿಪತ್ತನರಿತುಂ ಬರಿದೆ ಕುಳಿತಿಹರೆ (ಶ್ರೀರಾಮಾ. ೬೧-೨೦೨). ೪. ಹತ್ತಿರಕ್ಕೆ ಬಂದವನು; ಸಮೀಪಸ್ಥ : ತಡವಿಲ್ಲ ಸನ್ನಿಹಿತನಾದಪನಲ್ತೆ ಭವತ್ಪನೂಭವಂ (ಕಾದಂಬಾ. ೧೦೧); ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿರ್ಪ (ಬಸವ. ೧೪೭). [ಸಂ.]

ಸನ್ನಿಹಿತೆ (ನಾ). ಹತ್ತಿರದವಳು; ಸಮೀಪಸ್ಥೆ : ವಾಕ್ಸುಂದರಿ ಬಂದು ಸನ್ನಿಹಿತೆಯಕ್ಕೆನ್ನೀ ಮುಖಾಂಭೋಜದೊಳ್ (ಗದಾಯು. ೧-೭); ದೇವತೆ ಸನ್ನಿಹಿತೆಯಾಗಿ ಎನಗೆ ಪೊಡವಟ್ಟು ಪಡೆದಾ ತನೂಜನಂ . . . ಕಾವೆಂ (ಜೀವಸಂ. ೨-೨೮ ವ). [ಸಂ. ಸನ್ನಿಹಿತಾ]

ಸನ್ನೀರು (ನಾ). ಇರುವ ನೀರು : ಸನ್ನೀರ ಜರಿದು ಬಿಸಿಲ ದೊರಗೆ ಓಡಿ ಬನ್ನಬಡುವ ಭವಾಟವಿಯೊಳಗೆ (ಪ್ರಸಭಾ. ೫೭-೩೪). [? + ನೀರು1 (< ನೀರ್)]

ಸನ್ನೀಲಪಟ (ನಾ). ಮನ್ಮಥನನ್ನು ಆರಾಧ್ಯದೇವತೆಯಾಗುಳ್ಳ ಒಂದು ತಾಂತ್ರಿಕ ಪಂಥದ ಹೆಸರು ಮತ್ತು ಆ ಪಂಥಕ್ಕೆ ಸೇರಿದ ವ್ಯಕ್ತಿ ; IP ಇವರನ್ನು ಕಾಶ್ಮೀರದಲ್ಲಿ ನೀಲಾಂಬರರೆಂದು ಕರೆಯುತ್ತಾರೆ : ಪೂರ್ವಶ್ಯವರುಂ ಮಾಸಿದಱಿವಿನ ನಿರೀಶವಾದಿಗಳ್ ಮಿಮಾಂಸಕರು ಸನ್ನೀಲಪಟರು (ವಿಕೋಪ್ರ. ೯-೩೯). [ಸಂ. ?]

ಸನ್ನುಗ (ನಾ). ಅನುಭಾವ: ಇನ್ನೆಲ್ಲ ಕೇಳಿ ಸಂಪನ್ನ ಸುವಿವೇಕನೆಂಬುನ್ನತಜ್ಞಾನಿ ಸಂಸಾರಕಲಸಿ ನನ್ನಿಯಿಂ ಗುರುವಿಡಿದು ತನ್ನ ನಿಜ ತಾನಾದ ಸನ್ನುಗವ ಪೇಳ್ವೆನು (ಮನೋವಿ. ೧-೬); "ಮಾರ್ಗ" (ಮನೋವಿ. ೧-೬ ಟೀಕು); ಗಗನಾಂಶ ಜೀವವಾಶುಗವೆರಸಿ ಮನವನಲನಿಗೆ ಬೆರಸಿ ಬುದ್ಧಿಜಲವೆರಸಿ ಚಿತ್ತ ಮಿಗೆ ಪೃಥ್ವಿವೆರಸಿ ಹಮ್ಮೊಗೆದುದಾಗಸದ ಸನ್ನುಗವೆ ಪಂಚೀಕರಣವೆಂದಱಿವುದು (ಮನೋವಿ. ೩-೧೩); "ಐದು" (ಮನೋವಿ. ೩-೧೩ ಟೀಕು); ಎನ್ನೊಳೊಳವಱಿಶಕ್ತಿಗಳುನ್ನತಮಾದೆನ್ನ ನಾಮಮಾಜ್ಞಾ ಸಿದ್ಧಂ ನುನ್ನಮದೆನ್ನಿಂದಾಗುವೆ ಸನ್ನುಗಮಂ ಕೇಳ್ ಮಹೀಧವಾಗ್ರಣಿ ಮುದದಿಂ (ಹಾಲಾಸ್ಯ. ೨-೫೫-೧೯). [ಸಂ.?]

ಸನ್ನುತ (ಗು). ೧. ಚೆನ್ನಾಗಿ ಹೊಗಳಿದ; ವಿಶೇಷವಾಗಿ ಸ್ತುತಿಸಿದ. (ನಾ). ೨. ಚೆನ್ನಾಗಿ ಹೊಗಳಿದುದು; ವಿಶೇಷವಾದ ಸ್ತುತಿ : ಸನ್ನುತಮಪರಾರ್ಧಂ ಸಂಪನ್ನಶಿಷ್ಯಾಕ್ಷರೋಪರಚಿತಮದೋಷಂ (ಕವಿರಾ. ೧-೯೬). ೩. ಚೆನ್ನಾಗಿ

ಹೊಗಳುವವನು; ವಿಶೇಷವಾಗಿ ಸ್ತುತಿಸುವವನು: "ಸನ್ನುತಂ ವಿಚಕ್ಷಣನಿನಿದ ನುಡಿವವನಕ್ಕುಂ" (ಮಂಗರಾ. ೭೦-೧೬); ಗಜಮುಖನ್ನೆತಂದನೊ ಎನ್ನುತ ನಾ ಸಂಭ್ರಮಿಸುತ ಕಂಡನು ಸನ್ನುತನ (ಗಣೇಶ. ೧-೨೦). [ಸಂ.]

ಸನ್ನುತಿ (ನಾ). ವಿಶೇಷವಾದ ಹೊಗಳಿಕೆ ,— ಸ್ತುತಿ : 'ಸನ್ನುತಿಗೆಯ್' ಪರಾ. [ಸಂ.]

ಸನ್ನುತಿಗೆಯ್ (ಕ್ರಿ). ವಿಶೇಷವಾಗಿ ಹೊಗಳು; ಸ್ತುತಿಸು : ಸನ್ನುತಿಗೆಯ್ದಾರಾಧಿಸೆ ತನ್ನಂ ಬ್ರಹ್ಮಾದಿದೇವರೊಳಗೆತ್ತಾನುಂ ಮುನ್ನುಡಿದ ದಿವ್ಯವಚನಮನೆನ್ನೊಳ್ ನುಡಿಗುಮೆ ನೃಕೇಟದೊಳ್ ನರಸಿಂಹಂ (ಜಗವಿ. ೫-೭೪). [ಸನ್ನುತಿ + ಕೆಯ್$_1$]

ಸನ್ನುತಿವಡೆ (ಕ್ರಿ). ವಿಶೇಷವಾದ ಕೀರ್ತಿಯನ್ನು ಪಡೆ, — ಹೊಂದು: ಕರ್ಬೊನ್ನು ಚಂಬೊನ್ನಾದಂತೆ ಸನ್ನುತಿವಡೆದೊಳ್ಪುವೆತ್ತು ಸಕಲಭಾಗ್ಯೋನ್ನತಿಯೊಡಗೂಡಿಹೆನು (ಹದಿಬ. ೧-೩೫). [ಸನ್ನುತಿ + ಪಡೆ$_1$]

ಸನ್ನುತಿಸು (ಕ್ರಿ). ವಿಶೇಷವಾಗಿ ಹೊಗಳು ,— ಸ್ತುತಿಸು : ಇಂಗಡಲೆಡೆಯ ಪರ್ಬಾವಿನ ಹೆಡೆಯ ರತ್ನಂಗಳ ಮೆಯ್ಯೊಳಗಿನಲಿ ಕಂಗೊಳಿಸುವ ವಾಸುದೇವನ ಶ್ರೀಚರಣಾಂಗಳ ಸನ್ನುತಿಸಿದನು (ಪೋಪಶ. ೫-೪); ಪತಿಯನೆ ಪರದೇವತೆಯೆಂದು ಭಜಿಸುವ ಸತಿಯರ ಸನ್ನುತಿಸುವೆನು (ಹದಿಬ. ೨-೩). [ಸನ್ನುತಿ + - ಇಸು$_3$]

ಸನ್ನುಮತ 'ಸನುಮತ' ನೋ.

ಸನ್ನೆ$_1$, ಸೊನ್ನೆ$_1$ (ನಾ). ಭಾರವಾದ ಅಥವಾ ಹೂತಿರುವ ವಸ್ತುವನ್ನು ಮೀಟಿ ಎತ್ತುವ ಒಂದು ಸಾಧನ ; ಮೀಟುಗೋಲು; ಸನ್ನೆಗೋಲು : ಸನ್ನೆ ಸಾವಿರಕಾಲಾಳಿನ ಸತ್ವಮೈ (ಸೋಮೇಶ. ೭೬); ಬೆಟ್ಟಕ್ಕೆ ಸನ್ನೆ ಹಾಕಿರುವ ಮಹದಾಶಿಗನೆ ಗಟ್ಟಿಯೇ ಸೊಟ್ಟಾಗದೇ ಸನ್ನೆಗೋಲು ರಟ್ಟಿಯೇ ಮುರಿದೀತು ಮೈಮರೆತ ಸಾಹಸದಿ ಎಷ್ಟುಚಿತವೋ ನೋಡು (ಮಂಜಕ. ೫೭೮). **ಸೊನ್ನೆ$_1$**: ಬಂಧಿಸಿದ ಕದವ ನೂಂಕುತ್ತ ಮಿರಲು ಅದು ಚಲಿಸದಿರೆ ಪುರದ ಜೈನರೆಲ್ಲರೂ ನೆರೆದು ವೊಱಗಿ ಸೊನ್ನೆಗಳಿಂದ ನೂಂಕಿದೊಡೆ ಮಿಸುಕದಿರೆ (ರಾಘಚ. ೧೩-೬೫). [ದೇ. ॥ ತಮಿ. ಚನ್ನೆ; ತುಳು. ಸನ್ನೆ]

ಸನ್ನೆ$_2$, ಸನೆಯ, ಸವುಜ್ಞೆ, ಸೊನ್ನೆ$_2$, ಸೌಜ್ಞೆ (ನಾ). ಗುರುತು; ಸಂಕೇತ: ಕಾಣ್ಬರಂಕುಸನಾ ಪಾಣ್ಬೆಯರ ಗೆಯ್ಯ ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಟ್ಟುಗೊಡ್ಡಂಗಳುಮಂ ಕಂಡು (ಪಂಪಭಾ. ೪-೮೩ ವ); ಮೌನವ್ರತಿಯೆಂದಡೆ ಸನ್ನೆಯಲ್ಲಿ ಭೇದಿಸುವೆ (ಸಮಾಸ. ಕ. ೫೮೯-೩); ವೀರಸೇನಾಪತಿಯ ಸನ್ನೆಗೆ ಭೂರಿಬಲ ಹಬ್ಬಿದುದು ದಿಕ್ಕುಗಳೋರೆ ಹಿಗ್ಗಿದವಮಮ ತಗ್ಗಿದರಹಿಪಕೂರುಮರು (ಕುವ್ಯಾಭೀ. ೮-೧೧); ಸನ್ನೆ ತಿಳಿಯದಿದ್ದರೆ ಮನ್ನಣೆಯೂ ತಿಳಿಯದೆ (ಗಾದ). **ಸನೆಯ**: 'ಸನೆಯಗ್ಗೆ' ಪರಾ. **ಸವುಜ್ಞೆ** : ಈ ಮೇರೆಗೆ ಸೂರ್ಯಾದಿಯೇಳು ಗ್ರಹಗಳಿಗು ಮೂಲತ್ರಿಕೋಣದಿಂದ ಯಾ ಸವುಜ್ಞೆಯೊಳು . . . ಬಂದರೆ ಸಮ (ಭಾಸ್ಕರ. ೫೪-೭). **ಸೊನ್ನೆ$_2$** : ಹಿಂಗಾಲು ಊರಿಕೊಂಡು ತಲೆಯನ್ನು ಒರೆಮಾಡಿ, ಕೋಡಿನಿಂದ ಸೊನ್ನೆ ಕೊಡುತ್ತವೆ (ಮುಂಬಯಿ. ೩-೧೧). **ಸೌಜ್ಞೆ**: ಹಸುವಿಂಗೆ ಸೌಜ್ಞೆ ಎತ್ತಿಗೆ ಮುಟ್ಟು ಕಱುವಿಂಗೆ ಲಲ್ಲೆ ಇಂತೀ ತ್ರಿಗುಣದ ಇರವ . . . ಅಱಿತು (ತುಱುಗಾ ೩-೬). [< ಸಂ. ಸಂಜ್ಞಾ]

ಸನ್ನೆ$_3$ (ನಾ). ಒಂದು ಬಗೆಯ ವಾದ್ಯ : ಚಿನ್ನ ತಿತ್ತಿರಿ ಬೊಗ್ಗಿನ ಹಱೆ ಕಹಳೆಗಳುನ್ನತ ಡೌಡ ನಿಸ್ಸಾಳ ಸನ್ನ ಡೋಳು ನಾಗಸರ ರಾಯ ಸನ್ನುತಮೆನಲೊದಱಿದವು (ಅಂಜಚ. ೬-೭೫); ಸನ್ನೆಯ ದುಂದುಭಿರವದಿಂದ ನೆಱೆಯುರ್ಬೇಱಿ ಸಬ್ಬಲಗ್ಗೆಗೊಳಲ್ (ಚಿಕವಿ. ೬-೧೫೩) 'ಸೊನಯಿ' ಪರಾ. [?]

ಸನ್ನೆಗಟ್ಟಿಗೆ (ನಾ). = ಸನ್ನೆ$_1$: ತೋಱಿಕೆ ನಷ್ಟವಾಗಿ ನಿಂದವಂಗಲ್ಲದೆ ನಿನ್ನ ಚರಣದ ಬಾಗಿಲ ಬಾದಣವನೇಱಬಾರದು ಅದಕ್ಕೆ ಸನ್ನೆಗಟ್ಟಿಗೆಯೇ ಚೆನ್ನ (ಮದೇವ. ೨೭೯-೩೬). [ಸನ್ನೆ$_1$ + ಕಟ್ಟಿಗೆ$_1$]

ಸನ್ನೆಗಣ್ (ನಾ). ಸಂಕೇತವನ್ನು ಸೂಚಿಸುವ ಕಣ್ಣು : ತಮ್ಮೊರೆದನು ಸನ್ನೆಗಣ್ಣಾಡಿ (ಶ್ರೀರಾಮಾ. ೨೫೩-೬೮೧). [ಸನ್ನೆ$_2$ + ಕಣ್]

ಸನ್ನೆಗರೆ (ಕ್ರಿ). ಸಂಕೇತದಿಂದ ಬರಮಾಡು; ಸೊಜ್ಞೆಮಾಡು : ಸೀತೆ ಸನ್ನೆಗರೆ ದನಲಗಾಡಿದಳವಳ್ ತಂದೆಯಂ ಕುರಿತು (ಶ್ರೀರಾಮಾ. ೮೨೪-೨೧೦). [ಸನ್ನೆ$_2$ + ಕರೆ$_1$]

ಸನ್ನೆಗಹಳೆ, ಸನ್ನೆಗಾಳೆ (ನಾ). (ಯುದ್ಧ ಮೊದಲಾದುವುಗಳ ಪ್ರಾರಂಭದಲ್ಲಿ) ಸಂಕೇತಸೂಚಕವಾಗಿ ಊದುವ ಕಹಳೆ; ಸಂಜ್ಞೆಯ ಕಹಳೆ : ತಿರುಗಿದರು ಕೌರವರು ದ್ರೋಣನ ಬೆರಳ ಸನ್ನೆಗಹಳೆ [ಪಾಂಡಾ. ಗಾಳೆ] ಗಳುರವಣಿಸಿತೆನೆ ತಂಬಟದ ನಿಸ್ಸಾಳ ರಭಸ (ಕುವ್ಯಾದೋ. ೩-೮೦). **ಸನ್ನೆಗಾಳೆ** : ಒತ್ತುವ ಸನ್ನೆಗಾಳೆಗಳಿಂ ಪೂರಿಸುವ ಶಂಖಂಗಳುಂ (ಕಾದಂಪೂ. ೪೭೪); ಮನೋಜರಾಜದಿಗ್ವಿಜಯಪ್ರಮಾಣದೊಳೊದುವ ಸನ್ನೆಗಾಳೆಗಳ್ (ಪಾಧಪು. ೧-೧೦೯ ವ); ಸನ್ನೆಗಾಳೆ ತಿತ್ತಿರಿ ಪಟಹ ಭೇರಿ ಫಿರಂಗಿಗಳು ಸೂಳಯ್ಸುವುವು (ಚಿಟ್ಟಲಿ. ೩೧-೧). [ಸನ್ನೆ$_2$ + ಕಹಳೆ]

ಸನ್ನೆಗಾಳೆ 'ಸನ್ನೆಗಹಳೆ' ನೋ.

ಸನ್ನೆಗೂಗು (ನಾ). ಸಂಕೇತ ಸೂಚಕವಾದ ಕೂಗು : ಕಂಡು ಬಟ್ಟೆಗರ ಕೊಂಬೇಱಿ ಕುಸುಮಕೋದಂಡಗೆ ಸನ್ನೆಗೂಗಿಡುವ ಗಂಡುಗೋಗಿಲೆಗಳ್ (ಕುರಾಸಾಂ. ೩-೨೧). [ಸನ್ನೆ$_2$ + ಕೂಗು$_2$]

ಸನ್ನೆಗೆಡು (ಕ್ರಿ). ಗುರುತು ತಪ್ಪು; ದಿಕ್ಕುತೋಚದಾಗು : ನಿನ್ನ ಹೆಂಡತಿ ಬಾವಿಯೊಳ್ ಬರ್ದಳೇಳ್ದು ಬಾಯೆನ್ನುತಾರ್ತಸ್ವರದಿನೋರ್ವನ್ನತಂದುಸಿರೆ ಸನ್ನೆಗಟ್ಟೋಹೊ ಕೆಟ್ಟೇಂ ಕೆಟ್ಟೆನೆಂದು ಬಾಯ್ಬಿಟ್ಟು ಹೌಹಾರಿ ಭರದೆ (ಮಹಾಂತೇ. ೯-೩೩). [ಸನ್ನೆ$_2$ + ಕೆಡು$_1$]

ಸನ್ನೆಗೆಯ್, ಸನೆಯಗ್ಗೆ, ಸನ್ನೆಗ್ಗೆ, ಸೌಜ್ಞೆಗೆಯ್ (ಕ್ರಿ). ಸಂಕೇತದ ಮೂಲಕ ಸೂಚಿಸು : ಪೆಂಪುವಡೆದಾ ಹೇಮಾಚಳೇಂದ್ರಕ್ಕೆ ಕಲ್ಪಜರಂ ಪೋಗಲೆ ಸನ್ನೆಗೆಯ್ದೆ ಭಗವಜ್ಜನ್ಮಾಭಿಷೇಕೋತ್ಸವಧ್ವಜಮಂ ಪೋಲ್ತುದು ರತ್ನರಂಜಿತಭುಜಾದಂಡಂ ಸುರಾಧೀಶನಾ (ಆದಿಪು. ೭-೪೯); ಸಂಬಳಿಗೋಲಿಂ ಸನ್ನೆಗೆಯ್ದೆ (ಕಾದಂಪೂ. ೩೪); ನಾಣ್ಬೆ ನಿಲುತ್ತೆ ಪದೆದ ನಲ್ಲನಂ ಕಣ್ಮುಚ್ಚಿ ನೆನೆದು ಮನದ ಕಣ್ಣೊಳ್ ಸನ್ನೆಗಯ್ದು (ಗಿರಿಕ. [illegible] ವ). **ಸನೆಯಗ್ಗೆ** : ಉಭಯದಂತದೊಳಗೌಂಕೆ ಮುಂಗುರುಳಲವನಿಗೆ ನಾಟಲು ಸನೆಯಗ್ಗೆದು (ಜಿನಮು. ೫-೩೬). **ಸನ್ನೆಗ್ಗೆ** : ಮುದದಾಪ್ತಗೆ ಸನ್ನೆಗ್ಗೆವನು (ಮಲೆದೇ. ೫೧-೧೦); ಬಿಡದೆ ಬೇಂಟೆಗೆ ಸನ್ನೆಗ್ಗೆದು (ಇಚಿಸಾಂ. ೬-೫೫). **ಸೌಜ್ಞೆಗೆಯ್**: ನಿದ್ರೆ ಬರಲೊಲ್ಲದೆನುತ ಸೌಜ್ಞೆಗೆಯೆ ಜಾರನು ಬಂದು ಉಲ್ಲಾಸದಿಂದಪ್ಪಿ (ನವಮೋ. ೧೭-೨೭). [ಸನ್ನೆ$_2$+ ಕೆಯ್$_1$]

ಸನ್ನೆಗ್ಗೆ 'ಸನ್ನೆಗೆಯ್' ನೋ.

ಸನ್ನೆಗೋಲು, ಸೊನ್ನೆಕೋಲು (ನಾ). = ಸನ್ನೆ$_1$: ಚನ್ನಾಗಿ ತೆರೆಯ ಹಿಡಿಯಯ್ಯ ನಾರಂದ ಸನ್ನೆಗೋಲಿಕ್ಕಿ ತಡಹಿದ (ಗುಂಡುಸು. ೩-೩); ಕನ್ನಡನಾಡಿನ ಹಳಮೆಯು ಕನ್ನಡ ನಾಡಿನಲ್ಲಿ ಹೆಮ್ಮೆಯನ್ನು ಹುಟ್ಟಿಸಲು ಸನ್ನೆಗೋಲಿನಂತೆ ಆಗಿದೆ (ಪ್ರವಾಗ. I. ೧೦೬). **ಸೊನ್ನೆಕೋಲು** : (ಕ). [ಸನ್ನೆ$_1$ + ಕೋಲು$_1$ (< ಕೋಲ್$_1$)]

ಸನ್ನೆದಗರ್ (ನಾ). (ಹೋರಾಟಕ್ಕೆ) ಸನ್ನೆಯನ್ನು ಸೂಚಿಸಿ ಬಿಟ್ಟ ಪಳಗಿದ ಟಗರು : ಪರಿವಡಿಯಂಕದಂತೆ ಪೊಜಮಟ್ಟದ ಸೂಱಿಱಿವೊಳ್ಮಿದುಳ್ ಸಿಡಿಲ್ತರೆ ಪೊಱಸಾರ್ದು ಸನ್ನೆದ [ಪಾಂಡಾ.ಶ]ಗರಂದದೆ ತಾಗುವ ಝಟ್ಟಿಮಲ್ಲರಂತಿರೆ . . . ಪೋರ್ದುವಾನೆಗಳ್ (ವರ್ಧಪು. ೮-೫೩). 'ಸನ್ನೆಯಾನೆ' ಪರಾ. [ಸನ್ನೆ$_2$ + ತಗರ್$_2$]

ಸನ್ನೆದೆಗೆ (ಕ್ರಿ). ಸನ್ನೆಕೋಲನ್ನು ತೆಗೆದುಕೊಳ್ಳು : ಮೇಕಲಾಸುರ ಕೇಳಿ ಸನ್ನೆದೆಗದು ರಜತಾದ್ರಿಯ ಹಾಯಲು ಪರ್ವತ ಗದಗದನೆ ನಡುಗಲು (ಭೈರಪಾ. I, ೧೧೨). [ಸನ್ನೆ$_1$ + ತೆಗೆ$_1$]

ಸನ್ನೆದೋಱು (ಕ್ರಿ). ಸಂಕೇತಕೊಡು; ಸಂಜ್ಞೆಮಾಡು : ಕೊರಲಂ ನೀಡಿ ಕಯ್ಯಂ ಪಿಡಿದು ತಲೆಯಂ ತೂಗುತ್ತುಂ ಸನ್ನೆದೋಱುತ್ತುಂ (ಧರ್ಮಾಮೃ. ೫-೧೩೭); ಕೇಕರಿಸಿ ಕೆಮ್ಮಿ ಸೀತುಂ ಪೆರರ ಕರೆದು ಮೊದಲಾಕೆಗೀ ಪರಿ ಸನ್ನೆದೋಱಿದುಪಪತಿಗೆ ನಾನಾ ಕುಶಲಮಪ್ಪ ಸಂಜ್ಞೆಗಳಿಂದಮರ್ದೆಗೆ ತರಹರವಿತ್ತು (ಜಿಬುಪು. ೯-೧೩); ಕಂಗಳೊಳಗೆ ನುಡಿ ಕರದಭಿನಯದ ಬೆಡಂಗಿನೊಳಗೆ ಸನ್ನೆದೋಱಿ (ಕಂನವಿ. ೬-೧೨೭). [ಸನ್ನೆ$_2$ + ತೋಱು]

ಸನ್ನೆನೋಟ (ನಾ). ಸಂಕೇತಸೂಚಕವಾದ ನೋಟ : ಸನ್ನೆನೋಟಗಳ ತಿರುಹು ಮುರುಹಿಂದ ಎಟನೆದೆಗಱಿಗಿಪ ತರುಣಿಯೊರ್ವಳು ರಾಜಿಪಳು (ಕಂನವಿ. ೨-೯೪); ಸನ್ನೆನೋಟ [ಪಾಂಡಾ. ಸನ್ನೆಯ ನೋಟ, ನೋಟವು] ಸನ್ಮಾನದ ಸವಿನೋಟ ಮನ್ಮಥ

ಕೀಳಿಯ ನೋಟ ಬಿನ್ನಣದ ತೇಲ್ವ ನೋಟವ ನೋಡುತಲಾಗ ಚೆನ್ನೆಯರಿರ್ದರೊಂದೆಸೆಯ (ಅಭಿಮ. ೩-೧೦೯). [ಸನ್ನೆ + ನೋಟ]

ಸನ್ನೆಮಾತು 'ಸನ್ನೆವಾತು' ನೋ.

ಸನ್ನೆಯ (ನಾ). ಸೈನ್ಯದ ಹಿಂದುಗಡೆ ಸಿದ್ಧವಾಗಿರುವ ಪಡೆಯವನು; ಕುಮ್ಮಕ್ಕಾಗಿರುವ ಫೌಜಿನವನು : ವೀರಾರಿಗಳುಬದದಟಮ್ಮರ್ನ್ನೆಯರ್ಸ್ಸಂನ್ನೆಯ ಬ್ಯಾರ್ದ್ದಲೆಯಂ ಸರ್ವಸ್ವಮಂ ಕೊಟ್ಟಡಿಗೆಱಗಿ (ಮುಂಬರಾ. XI. ೨೪೮-೧೪ : 1121).

[< ಸಂ. ಸನ್ನಯ]

ಸನ್ನೆಯಗಾರ (ನಾ). ಅಣಿಮಾಡುವವನು : ಪಿನ್ನಯ್ಯನು ಬಹು ಸನ್ನೆಯಗಾರನುಗುನ್ನನ ಕೈಯೊಳಗನ್ನವ ತಾನುಂಡು ನನ್ನಿಸಿ ಬರುತಿಹನೆನ್ನುತ ಜರಿದಾ ಕನ್ನನ ಕರೆಯುತ ಹೊನ್ನನ ಬರಹೇಳೆನುತ ಶಬರರು ಮನ್ನಿಸಿ ವನದೊಳು ಬಿನ್ನಣವಾಡುತಲಿ (ಹಮಚ. ೧೭). [ಸನ್ನೆಯ + - ಗಾರ (< - ಕಾಱ)]

ಸನ್ನೆಯಾನೆ (ನಾ). (ಹೋರಾಟಕ್ಕೆ) ಸನ್ನೆಯನ್ನು ಸೂಚಿಸಿ ಬಿಟ್ಟು ಪಳಗಿದ ಆನೆ : ಮದವಿಳಿಯದ ಕೂರಾನೆಗಳೊತ್ತಿದೊಡೊದಗುವ ಸನ್ನೆಯಾನೆಗಳು (ಕುರಾಸಾಂ. ೧೧-೨೯). [ಸನ್ನೆ$_2$ + ಆನೆ$_1$]

ಸನ್ನೆವಱಿ (ನಾ). ಸಂಕೇತಸೂಚಕವಾಗಿ ಬಾರಿಸುವ ಹರೆ ,— ತಮಟೆ: ಅನ್ನೆಗಮುತ್ತಮಲಗ್ನದ ಬರವಿನ ಸನ್ನೆವಱಿಯನೋಸರಿಸುವ ಜವನಿಕೆಯನ್ನೋಡುವ ಜನಜಾಲದಿನಂಗಜನ್ಯಪವರನನುಮತದಿ . . . ಮದವಕ್ಕಳ್ಯಾಸಾಳಂದದಿನೊಪ್ಪಿದರು (ಜಯಕಾ. ೮-೩೦); ಪುರಮಂ ಮುತ್ತಿ ಬೊಬ್ಬಿಱಿದು ಸನ್ನೆವಱಿಗಳಿಂ ಕಾಳಿಗಕರಿರಾಜರಂ ಕರೆದರ್ (ರಾಮಾಶ್ವ. ೧೨೭-೧೯). [ಸನ್ನೆ$_2$ + ಪಱೆ$_1$]

ಸನ್ನೆವಾತು, ಸನ್ನೆಮಾತು (ನಾ). ಸಂಕೇತದ ಮೂಲಕ ಹೇಳುವ ಮಾತು: ನಗೆಯ ನಯನದ ಸನ್ನೆವಾತಿನ ಸೊಗಸಿನಬಲಾಜನದ ಕೈಗಳಲಗಿವ ಚಾಮರ ವಸೆದವಿದ್ದಸೆಯಲಿ ದಶಾನನನ (ತೊರಾ. ೬-೧೦-೧೨). **ಸನ್ನೆಮಾತು:** ಧರ್ಮರಾಯನು . . . ತಮ್ಮವರೆಂದು ತಿಳಿಯುವುದಕ್ಕಾಗಿ ತಕ್ಕಂತಾ ಗುರುತುಗಳನ್ನು ಸನ್ನೆಮಾತುಗಳನ್ನು ಏರ್ಪಾಡುಮಾಡಿದನು (ಕೃವಾಭೀ. ೭). [ಸನ್ನೆ$_2$ + ಮಾತು$_1$]

ಸನ್ನೆವೇಂಟೆ (ನಾ). ಸಂಕೇತದ ಮೂಲಕ ಮಾಡುವ ಪ್ರಾಣಿಗಳ ಬೇಟೆ; ಸಂಜ್ಞೆಯಲ್ಲಿಯೇ ಸೂಚನೆ ಮಾಡಿ ಆಡುವ ಬೇಟೆ : ಪಂದಿಗೊಪ್ಪುವ ಮೊಳಕೈಯ ತೋರ್ಪರರೆಬರ್ ಬಿಯದರ್ ಸಲೆ ಸನ್ನೆ ವೇಂ [ಪಾಕಾಂ. ವೇ]ಟೆಯೊಳ್ (ರಾಜಶೇ. ೫-೮೫); ವರಾಹಯೂಥಮೇಟ್ರರ ಮಣಿಕಾಲ್ಗಳಂ ಮಡಿದು ತೋಱಿದ ರೊಯ್ಯನೆ ಸನ್ನೆವೇಂಟೆಯೊಳ್ (ಶಬಶಂ. ೩-೪೭). [ಸನ್ನೆ$_2$ + ಬೇಂಟೆ]

ಸನ್ನೆವೇಂಟೆಗೆಯ್ (ಕ್ರಿ). ಸಂಕೇತದ ಮೂಲಕ ಪ್ರಾಣಿಗಳನ್ನು ಬೇಟೆಯಾಡು : ಸೊಪ್ಪುಳಾಗದಂತು ಸನ್ನೆವೇಂಟೆಗೆಯ್ಯುತ್ತುಮಳವಿಗೆಟ್ಟು ಕೂಟ್ಮೈಗಂಗಳಂ ಸಂಹರಿಸಿದರ್ (ರಾಮಾಶ್ವ. ೮೪-೧೫). [ಸನ್ನೆವೇಂಟೆ + ಕೆಯ್$_1$]

ಸನ್ನೊಸಗೆ (ನಾ). ಮಂಗಳಕಾರ್ಯ : ವಿರಹಿಗೆತ್ತಿದ ಸಬಳ ಯೋಗಿಗಳುರದ ಶೂಲ ವಿಯೋಗಿ ಕೊಂಗಿದ ಸುರಗಿ ಸನ್ನೊಸಗೆದೆದಲ್ಲಣ ವರತಪಸ್ಸಿಗಳ ಶರದಲುಡಿದತಿ ಸತಿಯರಿಗೆ ದಳ್ಳುರಿ ಸುಭೋಗಿಗಳಾಶ್ರಯವು ಶಂಬರವಿರೋಧಿಯ ಸೈನ್ಯವೆನೆ ವನವೆಸೆದುದೊಗ್ಗಿನಲಿ (ಜಗಚ. ೧೭-೨೪). [(ಸಂ. ಸತ್) + ಒಸಗೆ]

ಸನ್ಮಂತ 'ಸನುಮತ' ನೋ.

ಸನ್ಮಂತ್ರ (ನಾ). ೧. ಶ್ರೇಷ್ಠವಾದ ಮಂತ್ರ. ೨. ಪಂಚಾಕ್ಷರೀ ಮಂತ್ರ ; ನಮಃ ಶಿವಾಯ : 'ಸನ್ಮಂತ್ರಲಕ್ಷ' ಪರಾ. ೩. (ಆಲಂ) ಉಚಿತವಾದ ಮಂತ್ರಾಲೋಚನೆ ; ಯೋಗ್ಯವಾದ ಗುಪ್ತಾಲೋಚನೆ : ತಂತ್ರ ನಿಯಂತ್ರಣಂ ಬಿನದವೋಲಗವುಕ್ಕರಗೊಟ್ಟ ಕಾರ್ಯಸನ್ಮಂತ್ರಮುದಾತ್ತವೃತ್ತಿ . . . ಎಂಬವನಾಗಳುಂ . . . ಒಡರ್ಚುವಂ (ಶಾಂಪು. ೭-೧೧೦). [ಸಂ.]

ಸನ್ಮಂತ್ರಲಕ್ಷ (ನಾ). ಪಂಚಾಕ್ಷರೀಮಂತ್ರದಲ್ಲಿ ಗಮನವಿರುವವನು: ಇವನೇ ಸತ್ಯೇಂದ್ರನಪ್ಪಂ ಬಗವೊಡಮಮ ಸತ್ಯೇಂದ್ರಚೊಳೋರ್ವಿಪಂ ಮತ್ತಿವನೇ ಸನ್ಮಂತ್ರಲಕ್ಷಂ ನಿಜದಿನರರೆ ಸನ್ಮಂತ್ರಲಕ್ಷಂ ಬಳಿಕ್ಕಿಂತಿವನೇ ನೋಳ್ಪಾಗಳಾಹಾ ಮಿತವಚನಂ (ರಾಜಶೇ. ೧೪-೧೦೩). [ಸಂ.]

ಸನ್ಮಡದಿ (ನಾ). ಒಳ್ಳೆಯ ಹೆಂಡತಿ ; ಉತ್ತಮಸತಿ : ಕಾರ್ತವೀರ್ಯಾರ್ಜುನನ ಸನ್ಮಡದಿ ಚಳಕದಿಂದಾಗೆನುತೆ (ಪರಾಶ. ೮-೧೪). [(ಸಂ. ಸತ್) + ಮಡದಿ]

ಸನ್ಮತ (ನಾ). ೧. ಒಳ್ಳೆಯ ಭಾವನೆ ; ಸದ್ಭಾವ. ೨. ಒಪ್ಪಿಗೆ ; ಸಮ್ಮತಿ : ಶರಣಸನ್ಮತ [ಪಾಕಾಂ. ಸನ್ನಿಹತ]ವಪ್ಪ ನಿಜಗುಣಭರಿತನಪ್ಪಡೆ ಸತ್ಪ್ರಜತಮಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಯದೊ (ಬಸವ. ೮೫೫) ; ನಿಮಗೆ ತರಣೇಂದುಧರನಿರೆ ಅನ್ಯದೈವದ ಸೇವೆ ಸನ್ಮತವೆ (ಬಸಪು. ೩-೭೬). ೩. ಒಳ್ಳೆಯ ಅಭಿಪ್ರಾಯ; ಸದಭಿಪ್ರಾಯ: ಪೂರಾಯ ಸನ್ಮತವಾಗಿ ಮುಳುಗಿ ಕೂಡಲಸಂಗನ ಕೃಪೆಯಿಂದುಳಿದೆ (ಶಿವಗೀ. ೧೦೮-೫೩೦). [ಸಂ.]

ಸನ್ಮತಿ (ನಾ). ಒಳ್ಳೆಯ ಬುದ್ಧಿ,— ಜ್ಞಾನ : ಆತನೂರ್ಜಿತಭಕ್ತಿಸನ್ಮತಿಗೆ . . . ಮೆಚ್ಚಿ ತಮ್ಮೊಳು ಸಂಭ್ರಮಿಸುತಿರಲು (ಬಸಪು. ೨೫-೫೦). [ಸಂ.]

ಸನ್ಮತಿವೆಱು (ಕ್ರಿ). ಒಳ್ಳೆಯ ಬುದ್ಧಿಯನ್ನು ಪಡೆ ,— ಹೊಂದು : ಕುವಲಯದಳನೇತ್ರೆ ಕೇಳು ಕೇವಲ ವೈಷ್ಣವರಾಯರುಗಳಿರ್ದಸೆಯ ಪವನ ಬಂದೆಱಗೆ ಸನ್ಮತಿವೆತ್ತು ಪೇಳುವೆ ಶ್ರವಣಕಾನಂದವೆನಿಸಿ (ಮೋಪತ. ೮-೨). [ಸನ್ಮತಿ + ಪೆಱು$_1$]

ಸನ್ಮಥನ (ನಾ). ಚನ್ನಾಗಿ ಕಡೆಯುವುದು : ಲೋಲಮನದೊಳು ಲಿಂಗಭಕ್ತ ಸಮ್ಮೇಳ ದೆರಡಱ ಸನ್ಮಥನದಿಂ ಬಾಳಿನಿರವುಂ ಪ್ರಾಣಪದವಾಗಿಪ್ಪುದು (ಬಸಪು. ೫೧-೨೬). [ಸಂ.]

ಸನ್ಮಹಿತ (ನಾ). ಒಳ್ಳೆಯ ಗೌರವವನ್ನು ಹೊಂದಿರುವವನು : ಸನ್ಮಹಿತ ಮಹಿಮರೆನಿಸಿದ ತನ್ನುನಿಪನ ಪಾರ್ಶ್ವದಲಿ ಜಿನದೀಕ್ಷೆಯನುದ್ಯನ್ನುದಿಂ ತಳೆದಂ ಮಹಿಭ್ಯನ್ನುಕುರಸ್ತಿಮಿತಸಾಗರಕ್ಷಿತಿನಾಥಂ (ಶಾಂತೀಶ್ವ. ೭-೪೮). [ಸಂ.]

ಸನ್ಮಾನ (ನಾ). ೧. ವಿಶೇಷವಾದ ಗೌರವ,— ಮಾನ್ಯತೆ : ಸನ್ಮಾನದಾನಾದಿಗಳೊಳ್ ಸಂತಸಂಬಡಿಸಿ (ಆದಿಪು. ೧೩-೪೧ ವ) ; ಅನಂತಕೋಟ ಸನ್ಮಾನವ ಮಾಡಿದರೇನು ನಿಮಿಷದುದಾಶೀನ ಕೆಡಿಸಿತ್ತು (ಬಸವ. ೩೮೨). ೨. ಪುರಸ್ಕಾರ; ಬಕ್ಷೀಸು: ನಾವು ಪಟ್ಟ ಶ್ರಮಕ್ಕಾಗಿ ತಕ್ಕ ಸನ್ಮಾನವನ್ನು ಕೊಡಿ ಎಂದು ಕೇಳಿಕೊಂಡರು (ಪ್ರತಾಪ. ೩೫).

ಸನ್ಮಾನಮಾಡು = (ತುಂಬಿದ ಸಭೆಯಲ್ಲಿ) ವಿಶೇಷವಾದ ಗೌರವವನ್ನು ತೋರು,— ವ್ಯಕ್ತಪಡಿಸು: ಹಲವಾರು ಸಂಘಸಂಸ್ಥೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅವರಿಗೆ ಸನ್ಮಾನ ಮಾಡಲಾಯಿತು (ಇಂಫಿ). [ಸಂ.]

ಸನ್ಮಾನಂಬೆಱು (ಕ್ರಿ). ವಿಶೇಷವಾದ ಗೌರವವನ್ನು ಪಡೆ,— ಮಾನ್ಯತೆಯನ್ನು ಹೊಂದು : ನಿರ್ವಿಕಲ್ಪಂ ಶಿವಂ ಸನ್ಮಾನಂಬೆತ್ತೋವುಗೆನ್ನಂ ಪರಮಗುರು ವಿರೂಪಾಕ್ಷಲಿಂಗಂ ಸಿತಾಂಗಂ (ಉದ್ಭಟ. ೧-೧). [ಸನ್ಮಾನ + ಪೆಱು$_1$]

ಸನ್ಮಾನಕ್ರಿಯೆ (ನಾ). ವಿಶೇಷವಾದ ಮಾನ್ಯತೆಯನ್ನು ತೋರಿಸುವ ಕೆಲಸ: ಮೃಗರಾಜಂ ಕೈನೀಡಿ ಸಂಜೀವಕನನೇಕಪ್ರಕಾರ ಸನ್ಮಾನಕ್ರಿಯೆಗಳಿಂ ತಣಪಿ (ಪಂಚತಂ. ೫೭-೧೯). [ಸಂ. ಸನ್ಮಾನಕ್ರಿಯಾ]

ಸನ್ಮಾನತೆ (ನಾ). ವಿಶೇಷವಾದ ಮಾನ್ಯತೆಯನ್ನು ಪಡೆಯುವಿಕೆ: ಈ ವಿನುತಸಿತಕೀರ್ತಿಯಾ ಸದ್ಭಾವಶುದ್ಧತೆಯಾ ಪ್ರಸಿದ್ಧತೆಯಾ ವಿಬುಧಸನ್ಮಾನತೆಯು ನಿಮಗೀಯಹಂಕೃತಿಯೆ (ಬಸಪು. ೪೬-೧೧). [ಸಂ. ಸನ್ಮಾನತಾ]

ಸನ್ಮಾನಿ (ನಾ). ವಿಶೇಷವಾದ ಗೌರವವನ್ನು ಪಡೆದ ವ್ಯಕ್ತಿ; ಮಾನ್ಯ ವ್ಯಕ್ತಿ: ಈ ನಗರಿಯೊಳಗೆನ್ನ ಮಗಳಿಗಣೆಯಿಲ್ಲ ಸುಮ್ಮಾನಿ ಸನ್ಮಾನಿಯಭಿಮಾನಿ ಕಡುನೀಚೆ ಕಮಲಾನನೆಯ ರೂಪಿಂಗೆ ಸರಿಯಪ್ಪ ವಿಟರ ನಾನಾರುವಂ ಕಂಡುದಿಲ್ಲ (ಪಚಕಾ. ೪-೨೦)ಃ [ಸಂ. ಸನ್ಮಾನಿನ್]

ಸನ್ಮಾನಿತ (ಗೆ). ೧. ವಿಶೇಷವಾಗಿ ಗೌರವಿಸಲ್ಪಟ್ಟ,— ಮಾನ್ಯತೆ ಪಡೆದ. (ನಾ). ೨. ವಿಶೇಷವಾದ ಗೌರವವನ್ನು ಪಡೆದವನು : ರಾಜಶೇಖರ ಪ್ರೇಷಿತನಲ್ಲಿಗೇಳ್ದಂದು ನಿಜವಿನಯಮಂ ಮೆಱೆದು ತನ್ನರೇಂದ್ರಸನ್ಮಾನಿತನುಚಿತ ವಚನದಿನಿತೆಂದಂ (ರಾಜಶೇ. ೭-೯೭ ವ). [ಸಂ.]

ಸನ್ಮಾನಿಸು (ಕ್ರಿ). ವಿಶೇಷವಾಗಿ ಗೌರವಿಸು,— ಮಾನ್ಯತೆ ಕೊಡು : ಉನ್ಮುಖಂ ಕಂಡಿದಿರ್ಗೊಂಡಗ್ರಜಾತೆಯಂ ಸನ್ಮಾನಿಸಿದಂ (ಜೈಮಿಭಾ. ೯-೨೧) ; ಜನತೆಯು ಇವರನ್ನು ಸನ್ಮಾನಿಸುತ್ತಿತ್ತು (ರಾಜವ. ೭). [ಸನ್ಮಾನ + - ಇಸು]

ಸನ್ಮಾನ್ಯೆ (ನಾ). ವಿಶೇಷವಾದ ಗೌರವವನ್ನು ಪಡೆದವಳು; ಮಾನ್ಯೆ: ಕೀರ್ತಿಯಂ ಮೇಣ್ ಜನಪ್ರೀತಿಯಂ ತೆತ್ತಾಕೆ ತಾಂ ಧನ್ಯೆ ದೇವಸನ್ಮಾನ್ಯೆ (ಶ್ರೀರಾಮಾ. ೧೭೧-೫೨೭). [ಸನ್ಮಾನ್ಯ + - ಎ]

ಸನ್ಮಾರ್ಗ (ನಾ). ೧. ಒಳ್ಳೆಯ ದಾರಿ ; ಸರಿಯಾದ ಮಾರ್ಗ. ೨. ನಕ್ಷತ್ರಗಳ ದಾರಿ; ಆಕಾಶ. ೧, ೨ : ಉತ್ಸಾಹಮಂ ಮಾಡದಿರ್ಪುದೆ ಸನ್ಮಾರ್ಗದೊಳಂ ಕ್ರಮಾಧಿತರೊಳುದ್ಯದ್ಧಾನಸಂಪ್ರೀತಿಯುಂ (ಪುಷ್ಪಪು. ೧೦-೧೧) ; ಸನ್ಮಾರ್ಗದಿಂ ನಡೆದು ದೋಷಾಕರಂ ಮಲಿನನುನ್ಮಾರ್ಗನತಿಜಡಂ ಪಕ್ಷಕಂ ಗರಳಸಹಜನ್ನೆನಿಸಿದನಂತೆ ಗಡ ಚಂದ್ರನಂ ತನ್ನ ಕೊಂಕಿಂದಮೆಂದು ಕದಳಂ (ಉದ್ಧದೇ. ೨-೨೩). ೩. ಮೋಕ್ಷ ಸಾಧನೆಯ ಮೂರು ಮುಖ್ಯಮಾರ್ಗಗಳಲ್ಲಿ ಒಂದು ; ಅರಿವಿನಿಂದ ಮೋಕ್ಷವನ್ನು ಸಾಧಿಸುವ ಮಾರ್ಗ : ಜ್ಞಾನಮಾರ್ಗ ಅಥವಾ ಸನ್ಮಾರ್ಗ ವನ್ನನುಸರಿಸಿ ಧ್ಯಾನಪೂರ್ವಕ ಸಮಾಧಿಸ್ಥಿತಿಯನ್ನು ಹೊಂದಿ ಶಿವಸಾಯುಜ್ಯವನ್ನು ಹೊಂದುವನು (ಧಾರದ. ೨೧೭). ೪. [ಕಾವ್ಯಮೀ] ದೇಸಿಯಲ್ಲದ ಸಾಂಪ್ರದಾಯಿಕ ಮಾರ್ಗಪದ್ಧತಿ : ಸನ್ಮಾರ್ಗನಾಟಕಾರಂಭಪ್ರಸ್ತುತಪವಿತ್ರಸೂತ್ರಧಾರನೆ ಮುಂದೆ ನಿಂದು ಪುಷ್ಪಾಂಜಳಿಯಂ ಕೆದಱಿ (ಶಾಂತಿಪು. ೧೦-೬೦ ವ). [ಸಂ.]

ಸನ್ಮಾರ್ಗಪಾಂಥ (ನಾ). ಮೋಕ್ಷಸಾಧನೆಯ ಮಾರ್ಗದಲ್ಲಿ ನಡೆಯುವವನು : ಅನಘನೇ ಪ್ರಾಣಲಿಂಗಿಯ ಭಕ್ತನಪ್ಪನ್ನೆ ನಿನಗೆ ತಿಳಿಪಿದೆವಲಾ ಮಗನೆ ಕೇಳೆಂದು ಚಿದ್ವನಜಾರ್ಕ ಗುರುನಾಥನೊರೆದನಂತಾ ಶರಣಯೂಥ ಸನ್ಮಾರ್ಗಪಾಂಥ (ವೀಶೈಪು. ೮-೧೪-೨೮). [ಸಂ.]

ಸನ್ಮಾರ್ಗವರ್ತನ (ನಾ). ಒಳ್ಳೆಯ ರೀತಿಯ ನಡವಳಿಕೆ : ನಮಿಸೆ ಲೇಸಾಗಲಿ ಎಂದು ಹರಸಲೊಲ್ಲದೆ ಸುಮ್ಮನಿಹುದಿದು . . . ಸನ್ಮಾರ್ಗವರ್ತನವೆ (ಬಸಪು. ೪೫-೧೦). [ಸಂ.]

ಸನ್ಮಾರ್ಗವಿಡಿ (ಕ್ರಿ). ಒಳ್ಳೆಯ ದಾರಿಯನ್ನು ಹಿಡಿ; ಉತ್ತಮಮಾರ್ಗದಲ್ಲಿ ಪ್ರವರ್ತಿಸು: ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣ ಸನ್ಮಾರ್ಗವಿಡಿದು (ಶಬ್ದಮಂ. ೧೨೦). [ಸನ್ಮಾರ್ಗ + ಪಿಡಿ]

ಸನ್ಮಾರ್ಗಸಾರ (ನಾ). ಮೋಕ್ಷಸಾಧನೆಯ ಸತ್ವವನ್ನು ಅರಿತವನು: ವಿವಿಧದೇಶಂಗಳೊಳ್ ಕೂಡೆ ವಿಭ್ರಾಜಿಸಿದಂ ಸನ್ಮಾರ್ಗಸಾರಂ ಪರಮಜಿನ ಮತಾಂಭೋಜಿನೀರಾಜಹಂಸಂ (ಸುಕುಮಾ. ೮-೭೧). [ಸಂ.]

ಸನ್ಮಾರ್ಗಿ (ನಾ). = ಸನ್ಮಾರ್ಗಸಾರ : ವೀರಸಿರಿಯ ಕಟಾಕ್ಷವಾರಿಗೆ ಸೇರುವುದು ಸನ್ಮಾರ್ಗಿಗಲ್ಲದೆ ತೀರಿತವನಾಯುಷ್ಯ ಪರಸತಿಗಳುಪಿ ಖಳ ಕೆಟ್ಟ (ಕೌಶಿರಾ. ೨೨-೫). [ಸಂ. ಸನ್ಮಾರ್ಗಿನ್]

ಸನ್ಮುದ (ನಾ). ಒಳ್ಳೆಯ ಸಂತೋಷ ; ಮಹದಾನಂದ: ಸನ್ಮುದದಿಂ ಪೊಕ್ಕಾಗಳೆ ತನ್ಮಂದಿರದೊಳಗೆ ರೋಹಣಾಚಳಮೆನಿಪುದ್ಯನ್ಮಣಿಮಯವಿಷ್ಟರವಿಳಸನ್ಮಸ್ತಕರತ್ನ ವಾದನಾ ಖಚರೇಂದ್ರಂ (ಶಾಂತೀಶ್ವ. ೨-೫೧); ಅಕ್ಕಱಂ ಮೈದಡಹಿ ತಕ್ಕರಿಸಿ ತನ್ನ ಪ್ರಸಾದವನಿಕ್ಕಿ ಸನ್ಮುದವುಕ್ಕಿ ಸಂಗಮದೇವನಾ ಗೃಹವ ಹೊಕ್ಕನು (ಬಸಪು. ೪-೭೦). [ಸಂ. ಸನ್ಮುದಾ]

ಸನ್ಮೋಹನ (ನಾ). ಆಕರ್ಷಣೆ; ಮೋಹ: ಮನಸಿಜ ಶಶಾಂಕ ಕರ್ಕಟಕ ಚೇಳಂಗುಡುವ ತನಿಸೊಬಗುವಡೆದ ಸನ್ಮೋಹನದ ಕಣಿಯೆ ಬಾ (ಚೈಮಿಭಾ. ೬-೨೫). [< ಸಂ. ಸಮ್ಮೋಹನ]

ಸನ್ಮೋಹನಾಸ್ತ್ರ (ನಾ). ಮೋಹವನ್ನುಂಟುಮಾಡಿ ಮಂಕುಕವಿಸುವ ಬಾಣ : ಅನುವರದೊಳಿರ್ವರಂ ಘಾತಿಸದೆ ಸನ್ಮೋ[ಪಾಂ. ಮ್ಮೋ]ಹನಾಸ್ತ್ರದೊಳ್ಕರವೆಗೊಳಿಸಿ (ಚೈಮಿಭಾ. ೨೧-೨); ನೆರೆದ ರಾವಣ ಮೂಲಸೈನ್ಯವನೊರಸಲಾ ಸನ್ಮೋಹನಾಸ್ತ್ರವ ತಿರುವಿಗೇರಿಸಿಯೆ ಹರಿಸಲು ಆ ಬಲಿ ಮುರಿದು ನೆರೆ ನುಗ್ಗಾಯಿತು (ಗಗಾ. ೧೯-೩೭). [< ಸಂ. ಸಮ್ಮೋಹನಾಸ್ತ್ರ]

ಸನ್ಮೋಹಿಸು (ಕ್ರಿ). ಮೋಹವನ್ನು ಉಂಟುಮಾಡು; ಮರುಳಾಗುವಂತೆ ಮಾಡು: ಚಿನ್ಮಾರ್ಗಚಕ್ರಿಯ ಸಖ ಬಂದವನವಧಾನ ಸನ್ಮೋಹಿಸಲೆ ಪರಾಕಿಂದ (ಧರಚಿ. ೪೭-೭೯). [ಸನ್ಮೋಹನ + - ಇಸು]

ಸನ್ಯಂಗ, ಸನ್ಯಾಂಗ (ನಾ). ಕಳ್ಳತನಮಾಡಿದ ವಸ್ತು ; ಕದ್ದ ಮಾಲು (?): ಅರಸನಾ ಕೃತಕ ತಪೋಧಾರಿಯ ಗುಹೆಯಂ ಶೋಧಿಸೆ ಮುನ್ನ ತನ್ನ ಪೊಟಲೊಳ್ ಪೋದ ಪಲವು ವಸ್ತುಗಳಂ ಸನ್ಯಂಗವೆರಸಿ ಕಂಡು (ಪಂಚತಂ. ೨೬೨-೨೧); ಎಲೆ ರಕ್ಕಸಿಯಾಗದಿರಳಿವಳು ನಾವಿಲ್ಲಿ ಕೊಲಬೇಡ ಸನ್ಯಂ [ಪಾಂಡಾ. ವೀಯಂ]ಗವೆರಸಿ ಕೊಂಡೊಯ್ದು ಭೂತಲಪತಿಗೆ ಕೊಡುವೆ (ಪಚಕಾ. ೧೩-೩). ಸನ್ಯಾಂಗ : ಚರಮಾಂಗ ಪ್ರಮ ಚಿದ್ಧನಾಕೃತಿಯೆ ಪೆರ್ಚಂ ಕಂಡು ಸನ್ಯಾಂಗದೊಳ್ ಪರೆವೆಲ್ಲಿಪ್ಪುದೆಂದೊಂದಮಿಂತು ಮುಚಿತಸೌಖ್ಯಪ್ರದೇಶಪ್ರಬಂಧುರನಷ್ಟಾಷ್ಟಕಳಂಕ (ನಿರ್ವಾಮಾ. ೨೪). [?]

ಸನ್ಯಸನ (ನಾ). ೧. ಬಿಡುವುದು; ತೊರೆಯುವುದು. ೨. [ಜೈನ] ಆಹಾರ, ಪಾನೀಯಗಳೇನನ್ನೂ ತೆಗೆದುಕೊಳ್ಳದೆ ಉಪವಾಸ ಮಾಡುವ ವ್ರತ; ಸಲ್ಲೇಖನ ವ್ರತ: ಸ್ವಸ್ತಿಶ್ರೀ ಮಹಾವೀರ xx ಆಟ್ಟುಱ ತಮ್ಮಡಿಗಳ ಸನ್ಯಸನದಿನಿತಮ್ಮಜ್ಜಯ ನಿಸಿಧಿಗೆ (ಎಕ. II. ೧೫-೨ ; 800) ; ನಾಮಲ್ಲಿ ಧೈರ್ಯಮನೆ ಮನದೊಳವಳಂಬಿಸಿ ಚತುರ್ವಿಧಾಹಾರ ಶರೀರ ಪ್ರತ್ಯಾಖ್ಯಾನಪೂರ್ವಕಂ ಸನ್ಯಸನದಿಂ ಮುಡಿಪಿ (ಶಾಂತಿಪು. ೪-೯೭ ವ) ; ಆ ಶಾಂತಿಮತಿ ಕಡೆಯೊಳು ಸನ್ಯಸನದಿಂದ ತಾ ಶರೀರವ ಬಿಟ್ಟು (ಶಾಂತೀಚ. ೪-೫೪). [ಸಂ. ಸಂನ ಸನ]

ಸನ್ಯಸನಂಗೆಯ್ (ಕ್ರಿ). [ಜೈನ] ಆಹಾರ, ಪಾನೀಯಗಳೇನನ್ನೂ ತೆಗೆದುಕೊಳ್ಳದಿರು ; ಸಲ್ಲೇಖನವ್ರತಮಾಡು : ಜಕ್ಕಿಯಬ್ಬೆ ಸನ್ಯಸನಂಗೆಯ್ದು ಮುಡಿಪಿದಳ್ (ಎಕ. IX. ಕೊಡಗು. ೩೧-೧೧ ; 1050). [ಸನ್ಯಸನ + ಕೆಯ್]

ಸನ್ಯಸನವಿಧಾನ (ನಾ). [ಜೈನ]"ಕಷಾಯಗಳನ್ನು ಕಡಿಮೆಮಾಡಿ ಆಹಾರಾದಿಗಳನ್ನು ಕಡಿಮೆಮಾಡಿ ಪಂಚಪರಮೇಷ್ಠಿಗಳ ಧ್ಯಾನದಲ್ಲಿ ತತ್ಪರನಾಗಿ ಪ್ರಾಣತ್ಯಾಗ ಮಾಡುವುದು" (ಜೈನಸೋ. ೨೫೯): ಆಯುರವಸಾನದೊಳ್ ಸಂಸಾರಕ್ಷಪಕನಾಗಿ ಸಮಾಧಾನಪುರಸ್ಸರಂ ಸನ್ಯಸನವಿಧಾನದಿಂ ಪರಿತ್ಯಕ್ತಜೀವಿತನಾಗಿ (ಆದಿಪು. ೨-೧೯ ವ). [ಸಂ. ಸಂನ್ಯಸನವಿಧಾನ]

ಸನ್ಯಸನವಿಧಿ (ನಾ). = ಸನ್ಯಸನವಿಧಾನ : ಚಂದ್ರಸೇನಾಚಾರ್ಯ್ಯರ ಶ್ರೀಪಾದಪದ್ಮಪಾರ್ಶ್ವದೊಳ್ ಸನ್ಯಸನವಿಧಿಯೊಳ್ ಪರಿತ್ಯಕ್ತಾಹಾರಶರೀರನೆಂ ಸಮಾಧಿವಡೆದು (ಆದಿಪು. ೩-೫೦ ವ); ಬುಧವಾರದನ್ದು ಸನ್ಯಸನವಿಧಿಯಿಂ ಶ್ರೀಮತಿ ಗನ್ತಿಯಮ್ಮುಡಿಪಿ ದೇವಲೋಕಕ್ಕೆ ಸನ್ದರ್ (ಎಕ. II. ೩೫೧-೪೦ ; 1119). [ಸಂ. ಸಂನ್ಯಸನವಿಧಿ]

ಸನ್ಯಾಂಗ 'ಸನ್ಯಂಗ' ನೋ.

ಸನ್ಯಾಯ (ನಾ). ಸರಿಯಾದುದು; ವಿಹಿತವಾದುದು: ಸುನಿರ್ಧಾರಣಂ ತದುಪಾಸನಾನುಸಂಧಾನನಿಮಿತ್ತವೆಂಬ ಸನ್ಯಾಯದಿನವಂಗಳಿಂ ಮನನೀಯವೈ (ವೀಶೈಪು. ೫-೧೪-೭) ; ಕಣ್ಣೆವೆ ಇಕ್ಕುವುದು ಜೀವರ ಸ್ವತಂತ್ರವೆ ಸನ್ಯಾಯವಲ್ಲ ಎವೆ ಇಡದಿರಲಿ ಕಾಲ ಮೀರಿ (ವಿದಾಕ್ಷ. ೪೪-೧). [ಸಂ.]

ಸನ್ಯಾಸ (ನಾ). ೧. ತೊರೆಯುವಿಕೆ ; ತ್ಯಜಿಸುವಿಕೆ. ೨. ನಾಲ್ಕು ಆಶ್ರಮಗಳಲ್ಲಿ ಒಂದು; ವಿರಕ್ತಿ; ವೈರಾಗ್ಯ: ಸನ್ಯಾಸ ಎಂಬುದು ಒಂದು ಆಶ್ರಮವಿಶೇಷ. ಆಶ್ರಮವೆಂದರೆ ಶ್ರಮಪೂರ್ವಕವಾಗಿ ಹೊಂದಿದ ಯೋಗ್ಯತೆ ಎಂದರ್ಥ (ಭಾತತ್ತ್ವ. ೬೮). ೩. ಭೋಜನವನ್ನು ಬಿಡುವ ವ್ರತ ; ಅನಶನ ವ್ರತ : "ಪ್ರಾಯಃ, ಭೋಜನತ್ಯಾಗಃ, ಸನ್ಯಾಸಃ, ಅನಶನಂ - ಈ ೪ ಕಡೆಗಾಲದ ಅನಶನಂ" (ಹಲಾಯು. ೧೨೫-೭೫). ೪. ಒಂದು ಬಗೆಯ ರೋಗ : ರಕ್ತಧಾತುವೆಂಬ ನಾಡೀನಿರೋಧದಿಂದ ಸನ್ಯಾಸವೆಂಬ ರೋಗಂ ಸಂಜನಿಸುವುದು . . . ವಾತಾದಿದೋಷಾದಿಗಳು ವಾಕ್ಕು, ದೇಹ, ಮನಸ್ಸುಗಳಂ ನಿರೋಧಿಸಿ . . . ಪ್ರಾಣಸ್ಥಾನವಾದ ಹೃದಯವನ್ನಾಶ್ರಯಿಸಿ ಸನ್ಯಾಸವೆಂಬ ರೋಗವನ್ನುಂಟು ಮಾಡುವುದು (ಸಕಸೃ. ೨೦೦). ೫. [ಸಂಗೀತ] ರಾಗದ ಲಕ್ಷಣಗಳಲ್ಲಿ ಒಂದು : ೧. ಗ್ರಹ - ರಾಗವನ್ನು ಪ್ರಾರಂಭಿಸುವ ಸ್ವರ . . . ೭. ಸನ್ಯಾಸ - ಅಂದ ಕೆಡದಂತೆ ರಾಗವನ್ನು ವಿಂಗಡಿಸಿ ಹಾಡುವುದು (ಸಂಗೀಚಂ. ೨೩). [ಸಂ. ಸಂನ್ಯಾಸ]

ಸನ್ಯಾಸನ (ನಾ). = ಸನ್ಯಸನ ೨: ಧನಮುಚಿತದಾನದೊಳ್ ಜವ್ವನಂ ತಪೋನಿಯಮದೊಳ್ ಸ್ವಜೀವಂ ಸನ್ಯಾಸನದೊಳ್ ಪೋದಂಗೇವೋಯ್ತೆನೆ ಸುಜನರ್ ನೃಪತಿ

ಪಾತ್ರದಾನಮನಿತ್ತಂ (ಶಾಂತಿಪು. ೬-೭೩); ಪಲಕಾಲನ್ತಪಂಗೆಯ್ದು ಸನ್ಯಾಸನ ನೋನ್ತು ಮುಡಿಪಿದರ್ (ಕಾಆ. ೭೧-೩-೪:೭). [ಸಂ. ಸಂನ್ಯಾಸನ]

ಸನ್ಯಾಸನಂಗೆಯ್ (ಕ್ರಿ). = ಸನ್ಯಸನಂಗೆಯ್ : ಸನ್ಯಾಸನಂಗೆಯ್ದುರುಸತ್ವನ್ ನಂದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸಂನ್ಯಾನ್ (ಎಕ. II, ೮೮-೨; ಸು. 700).

[ಸನ್ಯಾಸನ + ಕೆಯ್]

ಸನ್ಯಾಸವ್ರಜನ (ನಾ). [ಜೈನ] ನಾಲ್ಕು ಬಗೆಯ ಶಿಕ್ಷಾವ್ರತಗಳಲ್ಲಿ ಒಂದು; ಸನ್ಯಾಸದೀಕ್ಷೆಯನ್ನು ಸ್ವೀಕಾರಮಾಡುವಿಕೆ : ತೀವ್ರೋಪವಾಸವುಂ ದಾನವ್ರತಮುಂ ನಿಖಿಲಸಮತೆಯುಂ ಸನ್ಯಾಸವ್ರಜನಮುಮೆಂಬಿವು ಶಿಕ್ಷಾವ್ರತಮಿದು ನಾಲ್ಕುತೆಱನನೂನಾಗಮದೊಳ್ (ಶಾಂತಿಪು. ೧-೯೦). [ಸಂ. ಸಂನ್ಯಾಸವ್ರಜನ]

ಸನ್ಯಾಸಿ (ನಾ). ಸನ್ಯಾಸದೀಕ್ಷೆಯನ್ನು ಸ್ವೀಕರಿಸಿದವನು ; ಯತಿ : ವಿವೇಕಾನಂದರು ಸನ್ಯಾಸಿಯಾದರೂ ಜೀವನವನ್ನು ತುಚ್ಛವೆಂದು ಎಣಿಸಿಪವರಲ್ಲ (ಧರ್ಮಸಾ. ೫೨); ಸನ್ಯಾಸಿಗೇಕೆ ಸಂಸಾರ ? (ಗಾದ). [ಸಂ. ಸಂನ್ಯಾಸಿನ್]

ಸಪಂತಿ (ನಾ). ಒಂದೇ ಸಾಲಿನಲ್ಲಿರುವುದು; ಸಹಪಂಕ್ತಿ: ಲಿಂಗಾರ್ಚನಂಗೆಯ್ದಾರೋಗಿಸಲಿತ್ತು ಸಪಂತಿಯೊಳ್ ಪ್ರಸಾದಮಂ ಕೈಕೊಂಬಲ್ಲಿ (ಬಸರ. ೧೨-೪೪).

[< ಸಹ್ಯ + ಪಂತಿ]

ಸಪಕ್ಷ (ಗು). ೧. ರೆಕ್ಕೆಗಳನ್ನು ಹೊಂದಿರುವ; ರೆಕ್ಕೆಗಳುಳ್ಳ: ಪತಂಗ (ಪಾತರಗಿತ್ತಿ) ಮುಂತಾದ ಸಪಕ್ಷಕೀಟಗಳ ಮೊದಲಿನ ರೂಪವು ಕಂಬಳಿಹುಳದ ಹಾಗಿರುತ್ತವೆ (ಮುಂಬಯಿ. ೫-೨೨೦). (ನಾ). ೨. ಒಂದು ಪಕ್ಷಕ್ಕೆ ಸೇರಿದವನು; ಸಹಭಾಗಿ ; ಸಹಚರಿ : ಪಕ್ಷವೆರಡೇ ಲೋಕದೊಳ್ ಪಿತೃಪಕ್ಷ ಮೇಣಾ ಮಾತೃಪಕ್ಷ ವಿಪಕ್ಷ ತಂದೆಯ ದೆಸೆ ಸಪಕ್ಷವು ತಾಯ ದೆಸೆಯವರು (ಕುವಾಲ. ೮-೧೭). [ಸಂ.]

ಸಪತ್ನ (ನಾ). ಹಗೆ; ಶತ್ರು: ಕೋಪದಿನೊದೆಯಲ್ಕೆ ಸಾರ್ತರಿ ಸಪತ್ನ ಹಠೋರು ಕಿರೀಟಭಂಗಿತಂ (ಗದಾಯು. ೮-೩೮) ; ಅಂತು ರತ್ನಜಟಿಯ ಸಪತ್ನರಂ ಪೊಲಮಡಿಸಿ ಕಳೆದು (ಪಂರಾಮಾ. ೧೦-೭೦ ವ). [ಸಂ.]

ಸಪತ್ನಿ (ನಾ). ತನ್ನ ಗಂಡನ ಇನ್ನೊಬ್ಬಳು ಹೆಂಡತಿ; ಸವತಿ: ತಕ್ಕಟಿದೆನಗೆ ಸಪತ್ನಿಯರಿಕ್ಕುಂಗೂಬೆಂಗೆ ಬಯಸಿ ಪಾರ್ದಿರ್ಪ ವಿಷಾದಕ್ಕೆ ಗುಱಿಯಪ್ಪ ದುರ್ಯಶ ಮಕ್ಕುಂ (ಪಂರಾಮಾ. ೬-೯೧); ಶಶಿಕಾಂತದೊಡ್ಡುಂಗಲ್ಲೊಳ್ ತನ್ನ ಪಡಿನೆಳಲಂ ಕಂಡು ಮೆಯ್ಯಾರ್ದು ನಿಂದು ಸಪತ್ನಿಯೆಂದು ಬಗೆದು (ಶಬಿಶಂ. ೩-೩೫ ಪ). [ಸಂ. ಸಪತ್ನೀ]

ಸಪತ್ನೀಕ (ನಾ). ಹೆಂಡತಿ ಸಮೇತನಾದವನು; ಪತ್ನೀಸಹಿತನಾದವನು: ಗೃಹಸ್ಥ ಸಪತ್ನೀಕನಾಗಿ . . . ಉಪವನದಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ಋಷಿಯಂತೆ ವಾಸಮಾಡುವುದು ಆಶ್ರಮವಾಸ ಎನಿಸಿಕೊಳ್ಳುತ್ತದೆ (ಕವಿಕೋ. II, ೯೫). [ಸಂ.]

ಸಪತ್ನೋತ್ಕರ (ನಾ). ಶತ್ರುಗಳ ಗುಂಪು,—ಸಮೂಹ : ಹರಿಯಂಶೋದ್ಭೂತನೀತಂ ಶುಭಗುಣನಿಧಿ ಮತ್ತಾದಭಕ್ತಂ ಸಪತ್ನೋತ್ಕರ ಸಂಹಾರಾರ್ಥಮೆನ್ನೊಳ್ ಪಡೆಯಲೆಳಸಿ ದಿವ್ಯಾಸ್ತ್ರಮಂ ದಲ್ ತಪಸ್ಸಂಚರಣಂಬೆತ್ತಿಲ್ಲಿ ನಿಂದಂ (ಶಬಿಶಂ. ೪-೬೯). [ಸಂ.]

ಸಪತ್ರಾಕರಣ (ನಾ). ಚೂಪಾದ ಬಾಣದಿಂದ ಘಾತಿಗೊಳಿಸುವುದು,—ಹೆಚ್ಚಾದ ನೋವುಂಟುಮಾಡುವುದು : ''ಪರಪೀಡನಂ ಸಪತ್ರಾಕರಣಮನಲು ಲೋಗರನು ಬಂಧಿಸಲು ನಾಮಂ'' (ಮಂಗರಾ. ೧೩೪-೬೨). [ಸಂ.]

ಸಪದಿ (ಅ). ಆ ಕ್ಷಣ ; ಕೂಡಲೇ ; ತಕ್ಷಣ : ಅಂತಾ ದೇವನಾಕಾರಮಂ ಸಪದಿ ಧ್ಯಾನಿಸೆ (ಪಮರ. ೪-೨೬) ; ವಿಪುಲಶಸ್ತ್ರಾಸ್ತ್ರಪ್ರಯೋಗಂಗಳುಜುಟಿಯಂ ಸಪದಿ ಪ್ರಹಾರದಾಯುಧಸಮೂಹಂಗಳಂ ಕಂಡು (ಜೈಮಿಭಾ. ೨೨-೩೭). [ಸಂ.]

ಸಪರ್ಯ (ನಾ). ಸೇವೆ; ಪೂಜೆ: ಕಾರ್ಯಮಿವೆ ಸತತಮೆಮಗೆ ಸಪರ್ಯಮಿದೇ ಮುಕ್ತಿಪದಮನೆಯ್ದುವಿನಂ (ಸುಕುಮಾ. ೧-೨೭) ; ವಿನಯಭಾವದಲಿ ಹಿಂಗದಾಗಳು ತದ್ಗುರು ಸಪರ್ಯಂಗಳಂ ಮಾಡುತ್ತ (ಬಸಪು. ೩೯-೨೭). [ಸಂ. ಸಪರ್ಯಾ]

ಸಪರ್ಯೆ (ನಾ). = ಸಪರ್ಯ್ : ನಿನ್ನ ಪುಣ್ಯದ ಫಲಮಾ ಫಲಂ ಜಿನಪದಾಂಬುಜ ವರ್ಯಸಪರ್ಯೆಯಿಂದಮಾಯ್ತುದನದೆಂದು (ಚಂದ್ರಪ್ರ. ೬-೧೦೦) ; ಈ ಶೈತ್ಯೋಪಚಾರ ಸಪರ್ಯೆಗೆ ಪ್ರಸನ್ನೆಯಾದಳು (ರಾಮಾಶ್ವ. ೩೫-೧೩). [ಸಂ. ಸಪರ್ಯಾ]

ಸಪಾಟ 'ಸಪಾಟು' ನೋ.

ಸಪಾಟು, ಸಪಾಟ, ಸಪಾಟೆ (ಗು). ೧. ಮಟ್ಟಸವಾದ ; ಚಪ್ಪಟೆಯಾದ: ಗುಡ್ಡವು ಸಪಾಟು ಬಂಡೆಗಳುಳ್ಳದ್ದಾದ್ದರಿಂದ ಕಾಲಿಡಲಿಕ್ಕೆ ಸಹ ಸ್ಥಳವಿರಲಿಲ್ಲ (ಮೀದಿಮ. ೧೨೩); ಕಡಲುಗಳ್ಳರು ತಮ್ಮ ಸಪಾಟು ತಳವುಳ್ಳ ದೊಡ್ಡದೊಡ್ಡ ದೋಣಿಗಳಲ್ಲಿ ಕುಳಿತು . . . ನಿವಾಸಿಗಳನ್ನು ಸುಲಿಯುತ್ತಿದ್ದರು (ಇಂಗ್ಲಂಡ. ೭). (ನಾ). ೨. ಸಮತಲ; ಚಪ್ಪಟೆ ; ಮಟ್ಟ : ಕೋಣೆಯೊಳಗೆ ಕಂಬಗಳೂ ಅಡ್ಡಕಮಾನುಗಳೂ ಏನೂ ಇರದೆ ಸಪಾಟಾದ ಛಾವಣಿಯನ್ನು ಕಲ್ಲಿನಿಂದ ಹಾಕಿದ್ದಾರೆ (ಕಭಾಗ. ೫೩೩); ಇದರಿಂದ ಘಟ್ಟವು ಸಮುದ್ರದ ಸಪಾಟಿಗಿಂತ ೨೦೦೦ ಘೂಟು ಎತ್ತರವಾಗಿರುತ್ತದೆಂದು ತಿಳಿಯುತ್ತದೆ (ಮುಂಬಯಿ. ೫-೮೦); ಹಿಂದೆ ಹೊರಳಿ ನೋಡಿದಾಗ ದಿನ್ನೆಯು ಸಪಾಟಾಗಿ ಗಚ್ಚಿನ ಮಾಳಿಗೆಯಂತೆ ಹೊಳೆಯುತ್ತಿತ್ತು (ಕಾಲಚ. ೧೪). ಸಪಾಟೆ : (ತ). ಸಪಾಟೆ: ೨. ಸಮುದ್ರದ ಸಪಾಟೆಯ ಕೆಳಗೆ ದೊಡ್ಡ ದೊಡ್ಡ ಪ್ರವಾಹಗಳು ಹರಿಯುತ್ತಿರುತ್ತವೆ (ಮುಂಬಯಿ. ೬-೧೯೯). [← ಮರಾ. ಸಪಾಟ, ಸಪಾಟೀ]

ಸಪಾಟುಗೊಳಿಸು (ಕ್ರಿ). ಮಟ್ಟಸಮಾಡು ; ಸಮಗೊಳಿಸು : ಉಸುಕನ್ನು ಅಂಗೈಯಿಂದ ಸಪಾಟುಗೊಳಿಸಿ ಅದರ ಮೇಲೆ ಕೈಬೆರಳಿನಿಂದ ಕೈಗೆ ಬಂದ ಶಬ್ದಗಳನ್ನು ಒಂದೊಂದಾಗಿ ಗೀರುತ್ತಿದ್ದರು (ಮೂರುದಾ. ೬೬). [ಸಪಾಟು + ಕೊಳಿಸು]

ಸಪಾಯಿ 'ಸಫಾಯಿ' ನೋ.

ಸಪಿಂಡ (ಗು). ೧. ಒಂದೇ ಗೋತ್ರಕ್ಕೆ ಸೇರಿದ; ಜ್ಞಾತಿಯಾದ: ಸಪಿಂಡಸಂಬಂಧದ ಮೂಲಕವಾಗಿ ವಿವಾಹಸಂಬಂಧದ ಕ್ಷೇತ್ರ ಸೀಮಿತವಾಯ್ತು (ಕರ್ನಾಕ. ೨೦). (ನಾ). ೨. ಒಂದೇ ಗೋತ್ರಕ್ಕೆ ಸೇರಿದವನು ; ಜ್ಞಾತಿ ; ಗೋತ್ರಜ : ''ಸನ ಛಃ, ಸಗೋತ್ರಃ, ಸಪಿಂಡಃ – ಈ ೩ ಗೋತ್ರಜರ್ '' (ಹಲಾಯು. ೮೪-೩೫೫). [ಸಂ.]

ಸಪೀತಿ (ನಾ). ಒಟ್ಟಿಗೆ ಸೇರಿ ಮದ್ಯಪಾನಮಾಡುವುದು: ''ಸಸೀತಿಃ, ಸಹಪಾನಕಂ – ಈ ೨ ಗೊಟ್ಟಿಗಳ್ನುಡಿವುದು'' (ಹಲಾಯು. ೫೪-೧೭೩). [ಸಂ.]

ಸಪುಣ್ಯ (ನಾ). ಪುಣ್ಯವಂತ ; ಭಾಗ್ಯಶಾಲಿ : ಧನೇಶ್ವರಂ ವಿನೂತನಧನದಾನದಿಂ ನೆರೆದರೇಂ ಸಲೆ ಮೇಘರಥಂ ಸಪುಣ್ಯನೋ (ಶಾಂತಿಪು. ೯-೪೩). [ಸಂ.]

ಸಪುತ (ನಾ). ಏಳು ; ಸಪ್ತ : ಪ್ರಾತಃಕಾಲದಲ್ಲದ್ದು ಸಪುತ ಸಾರಿ ನಾಲಿಗೆಯಲ್ಲಿ ನುಡಿದ ಮಾನವನಿಗೆ (ಪಾರ್ಶ್ವ. ೧೪-೪). [< ಸಂ. ಸಪ್ತನ್]

ಸಪುತಮಿ (ನಾ). ಮಾಸದ ಶುಕ್ಲ ಮತ್ತು ಕೃಷ್ಣಪಕ್ಷಗಳ ಏಳನೆಯ ದಿನ; ಸಪ್ತಮಿ: ವಿರೋಧಿಸೌವತ್ಸರದ ಚೈತ್ರ ಸು ಸಪುತಮಿ ವಡವಾರದಂದು (ಮೈಆರ. ೧೯೬೨, ೨೨-೫ ; 1229). [< ಸಂ. ಸಪ್ತಮಿ]

ಸಪುರ, ಸಪೂರ (ಗು). ೧. ತೆಳ್ಳಗಿನ ; ನವುರಾದ : ವಾಲಗದ ಸಪುರ ತುದಿಯನ್ನು ತುಟಿ ಬಿಗಿದ ಬಾಯಿಗಿಟ್ಟು ಊದುತ್ತಾ (ಮಲಮ. ೬೩೬). ೨. ನಯವಾದ ; ನಾಜೂಕಾದ : ಮಿಗೆ ಸಪುರಸೀರೆಯಂ ಮಲ್ಲಗಂಟಿನಿಂದುಟ್ಟು (ದಶಕು. ೪-೧೦೯); ರಮಣೀಯ ಸಪುರ ನಿಡುಗೇಸ ದೇಹಂ ಗೌರ (ಪ್ರಭುಪು. ೪-೪೪). (ನಾ). ೩. ತೆಳುವು ; ನವುರು: ತೆಂಗಿನ ಕಡ್ಡಿಯ ಸಪುರವಾದ ತುದಿಯನ್ನು ಉರುಟಾಗಿ ಹಣೆದು ಒಂದು ಉಂಗುರವನ್ನು ಮಾಡಿದನು (ಈಆಥ. ೫೨); ಬರೆದ ಗೆರೆಯ ದಪ್ಪ, ಸಪುರಗಳಿಂದ ವಸ್ತುಗಳ ಆಕಾರ ರೂಪಗಳನ್ನು . . . ತೋರಿಸುವುದಕ್ಕೂ ಬರುತ್ತದೆ (ಕಲಿದ. ೭೩). ೪. ನಯ; ನಾಜೂಕು: ಏರಿದುಂ ಸಪುರಮಾದ ಬೆಳುದಿಂಗಳ ಧಾವಲ್ಯಮನಿಳಕೆಯ್ಯುತ್ತಿರ್ದ ಪ್ರಶಸ್ತ ವಸ್ತ್ರಾಂಚಳಂ (ಬಾಧಪು. ೬-೧೫೫ ವ). ೫. ಸಣ್ಣಗಿರುವುದು; ಬಡಕಲು: ''ಸಪುರಮೆಂದು ಸಣ್ಣಂ'' (ಕಶಸಾ. ೭೧-೭೧೩); ಅಮ್ಮು ಸಪುರಾಗಿದ್ದ ಹುಡುಗ ನೀರು ಕುಡಿದು ಊದಿಬಿಟ್ಟಿದ್ದ (ದೂರಸ. ೨೬೮). ೬. ನವುರಾದ ಒಂದು ಬಗೆಯ ಬಟ್ಟೆ,—ವಸ್ತ್ರ : ಮೆಯ್ಗೆ ಮಯ್ಯಂತಪ್ಪ ಸಪುರವನುಟ್ಟು (ನಂಬಿರ. ೧೪-೨೫); ತಾವರೆಯ ನೂಲ ಸಪುರವನುಟ್ಟು (ವೀಶೈಪು. ೨-೪-೧೫೫); ಬಿಳಿಯ ಸಪುರವನುಟ್ಟು ಪೂಳಿವಂದುಗೆಯನಿಟ್ಟು (ರಾಜಶೇ. ೨-೧೧೭ ವ). ಸಪೂರ : ೫. ಈಗಿನ ಜೀವನದ ಸಂಕೇತಗಳೇನೋ ಎನ್ನಿಸುವಂತಹ ಆ ಸಪೂರ ಕಾಲುಗಳು (ಮೂರುದಾ. ೧೭೯).

[← ಮರಾ. ಸಪುರ, ಸಪೂರ]

ಸಪೂರ 'ಸಪುರ' ನೋ.

ಸಪೋಟ (ನಾ). ಒಂದು ಬಗೆಯ ಮರ ಮತ್ತು ಅದರ ಸಿಹಿಯಾದ ಹಣ್ಣು : (ಮೈಡಿಗ. ೨-೨೬). [← ಇಂ. Sapodilla]

ಸಪ್ತ (ನಾ). ಏಳು : 'ಸಪ್ತಋಷಿ', 'ಸಪ್ತಲೋಕ' ಪರಾ. [ಸಂ. ಸಪ್ತನ್]

ಸಪ್ತಋಷಿ (ನಾ). ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಸಿಷ್ಠರೆಂಬ ಪ್ರಖ್ಯಾತರಾದ ಏಳುಜನ ಋಷಿಗಳು: ಸಪ್ತಋಷಿಗಳುಮೇಕಾದಶೀರುದ್ರರು ಸನಂದ ಶುಕಾದಿ ಮುನಿವರರು . . . ಬಂದರು (ಬಸಪು. ೧-೪೨). [ಸಂ.]

ಸಪ್ತಕ (ನಾ). ೧. ಏಳರಿಂದ ಕೂಡಿದುದು ; ಏಳರ ಗುಂಪು : ಸಂಖ್ಯಾವಾಚಿಪ್ರತ್ಯಯಾಂತಕ್ಕೆ ದ್ವಿತಯ, ತ್ರಿತಯ, ಚತುಷ್ಕ, ಪಂಚಕ, ಷಟ್ಕ, ಸಪ್ತಕ (ಶಮದ. ೮೨ ಪ್ರಯೋ). ೨. ಏಳುದಿನ ; ಒಂದು ವಾರ : ಕಾಮ್ಯಾರ್ಥಿಗಳು ಅಲ್ಲಿ ಒಂದು ಸಪ್ತಕ ಸೇವಾಮಾಡುವುದರಲ್ಲಿ ತಮ್ಮ ಇಷ್ಟಾರ್ಥವನ್ನು ಪಡೆಯುತ್ತಿದ್ದಾರೆ (ಕಭವಿ. ೮೩). [ಸಂ.]

ಸಪ್ತಕಿ (ನಾ). ಉಡಿದಾರ ; ಕಟಿಸೂತ್ರ ; ಒಡ್ಯಾಣ : "ರಸನೆ ಮೇಖಲೆ ಕಾಂಚಿ ಸಪ್ತಕಿ ಕಳಾಪಿ ಸಾರಸನಮೆನಲುಡಿದಾರಮಕ್ಕು" (ಮಂಗರಾ. ೧೦೧-೩೦). [ಸಂ. ಸಪ್ತಕೀ]

ಸಪ್ತಕುಲಶೈಲ (ನಾ). ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ, ವಿಂಧ್ಯ ಮತ್ತು ಪಾರಿಯಾತ್ರಗಳೆಂಬ ಏಳು ಮುಖ್ಯಪರ್ವತಗಳು, — ಕುಲಗಿರಿಗಳು : ಮಹೇಂದ್ರ ಮಲಯ . . . ಪಾರಿಯಾತ್ರವೆಂಬ ಸಪ್ತಕುಲಶೈಲಂಗಳುಂಟು (ವಿವೇಕ. ೨೪೦). [ಸಂ.]

ಸಪ್ತಕೂಪಾರ (ನಾ). ಲವಣ, ಇಕ್ಷು, ಸುರೆ, ಸರ್ಪಿಸ್ಸು, ದಧಿ, ಕ್ಷೀರ ಮತ್ತು ಜಲ ಎಂಬ ಏಳು ಸಮುದ್ರಗಳು : ಮೌರ್ವಿಯನ್ನು ಬಿಗಿಬಿಗಿದು ಜೀವೊಡೆಯ ಭೂಮಿ ಕಂಪಿಸೆ ಸಪ್ತಕೂಪಾರಮುರ್ವಿವೊಂದಾಗಿ (ನವಮೋ. ೩೩-೧೨). [ಸಂ.]

ಸಪ್ತಕೊಂಕಣ (ನಾ). ಪಶ್ಚಿಮಸಮುದ್ರತೀರದಲ್ಲಿನ ಏಳು ಭಾಗಗಳು: ಪಶ್ಚಿಮ ಕರಾವಳಿಯನ್ನು ಸಪ್ತಕೊಂಕಣವಾಗಿ ವಿಭಾಗಿಸಿದ ದೃಷ್ಟಾಂತಕ್ಕೂ ಪಂಚಗೌಡರನ್ನು ಗೋವಾದಲ್ಲಿ ಸ್ಥಾಪಿಸಿದುದಕ್ಕೂ ಉತ್ತರ ಸಪ್ತ ಪ್ರಿಯನ್ನು ಆಧಾರಗಳಲ್ಲಿ ಒಂದಾಗಿ ಎತ್ತಿ ಹೇಳುತ್ತಾರೆ (ತುಳುನಾ. ೧೬೧). [ಸಂ.]

ಸಪ್ತಗುಣ (ನಾ). ಶ್ರದ್ಧೆ, ಶಕ್ತಿ, ಭಕ್ತಿ, ವಿಜ್ಞಾನ, ಅಲುಬ್ಧತ, ಕ್ಷಮೆ, ತ್ಯಾಗಗಳೆಂಬ ಏಳು ಗುಣಗಳು : ಶ್ರದ್ಧಾಶಕ್ತಿರಲುಬ್ಧತ್ವಂ ಭಕ್ತಿಜ್ಞಾನಂದಯಾ ಕ್ಷಮಾ ಇತಿ ಶ್ರದ್ಧಾದಯಃ ಸಪ್ತಗುಣಾಸ್ಯುರ್ಗೃಹಮೇಧಿನಾಂ ಎಂಬ ಸಪ್ತಗುಣಾನ್ವಿತನುಂ (ಭಾವುಂಪು. ೬೯); ಪ್ರತಿಗ್ರಹಾದಿ ನವವಿಧಪುಣ್ಯಪಣ್ಯನುಂ ಶ್ರದ್ಧಾದಿಸಪ್ತಗುಣಮಣಿ ವಿಭೂಷಣನುಮಾಗಿ (ಚಂದ್ರಪ್ರ. ೧೪-೯ ವ). [ಸಂ.]

ಸಪ್ತಗುಪ್ತಿ (ನಾ). (ಶತ್ರುಗಳನ್ನು ಪ್ರವೇಶಿಸದಂತೆ ತಡೆಯುವ) ಏಳು ಸುತ್ತಿನ ಕೋಟೆ : ಸೌಮಿತ್ರಿಯ ಸುತ್ತಣ ರಣಭೂಮಿಯನಿಂಬಾಗೆ ಸಮಱೆ ಕಪಿಕೇತು ಕುಲಗ್ರಾಮಣಿ ಸುಗ್ರೀವಂ ವಿದ್ಯಾಮಯಮಂ ಸಪ್ತಗುಪ್ತಿಯಂ ನಿರ್ಮಿಸಿದಂ (ಪಂರಾಮಾ. ೧೪-೭೫). [ಸಂ.]

ಸಪ್ತಚ್ಛದ (ನಾ). ೧. ಏಳೆಲೆಗಳುಳ್ಳ, ಬಾಳಿಗಿಡ : ಕದಳೀ ಸಪ್ತಚ್ಛದ ಪುನ್ನಾಗಂ (ಪಾಶ್ವನಾ. ೧೦-೫೬); ತೆಂಗುಂ ಕೌಂಗು ಸಪ್ತಚ್ಛದಕದಳಿ ತಮಾಲಂ ಲಸಚ್ಚಂಪಕಂ (ರಾಜಶೇ. ೨-೩೬). ೨. ಪಚ್ಚಕರ್ಪೂರದ ಗಿಡ : ನೆಗಟ್ಟುದದಱೊಳ್ ಸಪ್ತಚ್ಛದ ಗಂಧ ಸುರಭಿ ಪದುಳಂ (ಕವಿದಾ. ೩-೧೦೪); ಮದಗಂಧಸಾರ ಸಪ್ತಚ್ಛದಂಗಳಿಂ ಪುದಿದು (ಚಂದ್ರಪ್ರ. ೫-೫೦). [ಸಂ.]

ಸಪ್ತತಂತು (ನಾ). ಯಜ್ಞ ; ಯಾಗ : ಅಧಿಗತಧರ್ಮಶಾಸ್ತ್ರನುಮನೇಕಸಪ್ತತಂತು ಪೂತಮೂರ್ತಿಯುಂ . . . ಎನಿಸಿ (ಕಾದಂಪು. ೩೦೭) ; ಸಾಂಗದಿ ಸಪ್ತತಂತುವ ಮಾಡಿ (ಅಮೃತ. ೨-೯೮); ಸಪ್ತತಂತುವಿಂ ಪಂಚಪಾತಕಂಗಳುಮೊರ್ಮೊದಲೊಳ್ ಪಡಲಿಡುಗುಂ (ರಾಮಾಶ್ವ. ೧೪-೨೮). [ಸಂ.]

ಸಪ್ತತಂತ್ರಿ (ನಾ). ಏಳುತಂತಿಗಳನ್ನುಳ್ಳ ವಾದ್ಯ ; ವೀಣೆ : ದನಿಯ ಕೂಡಿಸಿ ಸಪ್ತತಂತ್ರಿಯ . . . ಸಪ್ತಸ್ವರವನಾಳಾಪಿಸಲು ಕ್ರಮದಿಂದ (ಕೌತಿರಾ. ೨೪-೧೧).

[ಸಂ. ಸಪ್ತತಂತ್ರೀ]

ಸಪ್ತತತ್ತ್ವ (ನಾ). [ಜೈನ]ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ ಎಂಬ ಏಳು ತತ್ತ್ವಗಳು : ಅವರ್ . . . ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ತ್ವ ನವಪದಾರ್ಥಸ್ವರೂಪಮಂ ನಿರೂಪಿಸುವುದು (ಪುಷ್ಪಪು. ೯-೬ ವ); ಜೈನಸಿದ್ಧಾಂತವು ಜೀವ ಮತ್ತು ಕರ್ಮಗಳ ಸಂಬಂಧ . . . ಇವುಗಳನ್ನು ತನ್ನ ಸಪ್ತತತ್ತ್ವಗಳಲ್ಲಿ ವಿವರಿಸುತ್ತದೆ (ಭಾರದ. ೧೮೭). [ಸಂ.]

ಸಪ್ತತಿ (ನಾ). ಏಳು ಹತ್ತುಗಳ ಮೊತ್ತ ; ಎಪ್ಪತ್ತು : ಸಪ್ತತಿ ಲಕ್ಷಪೂರ್ವ ಪರಮಾಯುಷ್ಯನುಂ (ಜೀವಸಂ. ೧೭-೩೨ ವ). [ಸಂ.]

ಸಪ್ತದ (ನಾ). [ಸಂಗೀತ] ಏಳು ದೇಶೀಗಮಕಗಳಲ್ಲಿ ಒಂದು: ಕಂಪಿತ . . . ಸಪ್ತದ . . . ಅಹತವೆಂಬೇಳು ದೇಶೀಗಮಕಗಳೆಂದು (ವಿವೇಕ. ೧೪೭). [< ಸಂ. ಸಪ್ತಧಾ]

ಸಪ್ತದ್ವೀಪ (ನಾ). ೧. ಭೂಮಂಡಲದ ಜಂಬೂ, ಪ್ಲಕ್ಷ, ಶಾಲ್ಮಲೀ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರಗಳೆಂಬ ಏಳು ದ್ವೀಪಗಳು : ಸಪ್ತದ್ವೀಪಂಗಳ ಆನಂದದಿಂದಿತ್ತಂ (ಪಚಕಾ. ೮-೪೭) ; ಕೆದಱೆ ಸಪ್ತದ್ವೀಪಪತಿಗಳ ಸದೆದು ರಚಿಸುವ ರಾಜಸೂಯದ ಹದನನಂಗೈಸುವನದಾರೀ ವರ್ತಮಾನದಲಿ (ಕುವ್ಯಾಸ. ೨-೧೫೫). ೨. ಏಳು ದ್ವೀಪಗಳಿಂದ ಕೂಡಿದುದು ; ಭೂಮಿ ; ಪೃಥ್ವಿ. [ಸಂ. ಸಪ್ತದ್ವೀಪಾ]

ಸಪ್ತಧಾತು (ನಾ). ಶರೀರದಲ್ಲಿರುವ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ ಮತ್ತು ಶುಕ್ರಗಳೆಂಬ ಏಳು ಧಾತುಗಳು : ಆರಯೆ ಮೂತ್ರಪುರೀಷಾಗಾರಂ ಸಂಪ್ರಾಪ್ತಸಪ್ತಧಾತುವಿಕಾರಂ (ಅಜಪು. ೨-೫೦); ಪಂಚೇಂದ್ರಿಯ ಸಪ್ತಧಾತು ಹಂಚುಹಱಿಮಾಡಿ ಕಾಡಿಹುವಯ್ಯಾ (ಬಸವ. ೪೭); ಸಪ್ತಧಾತು ಸಪ್ತ ವ್ಯಸನಂಗಳ ಸಣ್ಣಿಸಿ (ಆಖಂಡೇ. ೧೯೩-೧೪). [ಸಂ.]

ಸಪ್ತನಯ (ನಾ). [ಜೈನ] ನೈಗಮ, ಸಂಗ್ರಹ, ವ್ಯವಹಾರ, ಋಜು, ಸೂತ್ರ, ಶಬ್ದ, ಸಮಭಿರೂಢ ಮತ್ತು ಏವಂಭೂತಗಳೆಂಬ ಏಳು ನಯಗಳು: ನೈಗಮ ಸಂಗ್ರಹಾದಿ ಸಪ್ತನಯಭಾವನೆಯುಂ . . . ತನ್ನೊಳುಂ ಸಚ್ಚನ್ನಮಾಗಿ (ಪುಷ್ಪಪು. ೧೪-೧೬ ವ). [ಸಂ.]

ಸಪ್ತನಾದ (ನಾ). [ಸಂಗೀತ] ಸರಿಗಮಪದನಿ ಎಂಬ ಏಳು ಸ್ವರಗಳು : "ಆ ಸಪ್ತನಾದಕಿಪ್ಪತ್ತೆರಡು ಶ್ರುತಿಯೆನಿಕು" (ಮಂಗರಾ. ೨೩-೫). [ಸಂ.]

ಸಪ್ತಪದಾರ್ಥ (ನಾ). ೧. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವಗಳೆಂಬ ಏಳು ಪದಾರ್ಥಗಳು : ಈ ಸಪ್ತಪದಾರ್ಥಗಳು ಪ್ರತ್ಯಕ್ಷ ಅನುಮಾನ, ಉಪಮಾನ ಮತ್ತು ಶಬ್ದವೆಂಬ ಪ್ರಮಾಣಗಳಿಗೆ ಗೋಚರಿಸುವುವು (ಭಾರದ. ೧೩೪). ೨. = ಸಪ್ತತತ್ತ್ವ : ಜೀವ ಸಜೀವ ನಿರ್ಜೀವ . . . ಸಪ್ತಪದಾರ್ಥಗಳಂ ಪ್ರತಿಪಾದಿಸುವುದು (ವಿವೇಕ. ೧೦). [ಸಂ.]

ಸಪ್ತಪದಿ (ನಾ). ವಿವಾಹಸಮಯದಲ್ಲಿ ವಧೂವರರು ಜೊತೆಯಲ್ಲಿ ಇಡುವ ಏಳುಹೆಜ್ಜೆಗಳು: ಹೋಮಸಮಾಪ್ತಿಯೊಳಾಪ್ತನಪ್ಪ ಕಮಳಜಂ ಸಪ್ತಪದಿಯಂ ಕಟ್ಟುಳ್ಕಱಿಂ ಮೆಟ್ಟಿಸಿ (ಗಿರಿಕ. ೧೦-೯೮ ವ); ಕನ್ಯಾಸ್ಯಾತಂತ್ರ್ಯವು ಪರಾಕಾಷ್ಠವನ್ನು ಮುಟ್ಟುವುದು ಸಪ್ತಪದಿಯಲ್ಲಿ (ಆರ್ಯಧ. ೧೩೬). [ಸಂ. ಸಪ್ತಪದೀ]

ಸಪ್ತಪರಮಸ್ಥಾನ (ನಾ). [ಜೈನ] ಮೋಕ್ಷಪದವಿಯನ್ನು ಪಡೆಯಲು ಇರುವ ಸಜ್ಜಾತಿತ್ವ, ಸದ್ಗೃಹತ್ವ, ಪಾರಿವ್ರಾಜ್ಯ, ಸುರೇಂದ್ರತ್ವ, ಸಾಮ್ರಾಜ್ಯ, ಆರ್ಹಂತ್ಯ ಮತ್ತು ನಿರ್ವಾಣಗಳೆಂಬ ಏಳು ಹಂತಗಳು : ದೂರವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುವೈ (ಆದಿಪು. ೫-೭೩); ಸಂಶೋಭಿಪಾಚಾರ್ಯರ್ ತಾಮೆಮಗೀಗ ಸಪ್ತಪರಮಸ್ಥಾನೋದಯೋಪಾಯಮಂ (ಚಂದ್ರಪ್ರ. ೧-೩). [ಸಂ.]

ಸಪ್ತಪರ್ಣ (ನಾ). = ಸಪ್ತಚ್ಛದ ೧ : "ಸಪ್ತಪರ್ಣಮೆನಲೇಱಲೆಯ ಬಾಬೆ" (ಮಂಗರಾ. ೩೪-೯); ವನಕರಿ ಕಪೋಲಕಂಡೂಯನದಿಂದಂ ಪಾಯೆ ಮದಜಲಾಸವ ರಸವಾಸನೆಯಿಂದಿತರವನಂಗಳುಮನನುಕರಿಪುವು ಸಪ್ತಪರ್ಣಪಾದಪವನಮಂ (ಆದಿಪು. ೯-೩೧). [ಸಂ.]

ಸಪ್ತಪರ್ಣಿ (ನಾ). = ಸಪ್ತಚ್ಛದ ೧ : ಎಲೆಗಳನ್ನು ನೋಡಿ : ಏಳು ಎಲೆಗಳಿಂದಾದ ಸಂಯುಕ್ತಪರ್ಣದಂತೆ ಕಾಣುತ್ತದೆ. ಸಂಸ್ಕೃತದಲ್ಲಿಯೂ ಸಪ್ತಪರ್ಣ ಎಂದೇ ಈ ಮರಕ್ಕೆ ಹೆಸರು (ಪಸುಹೂ. ೮೪). [ಸಂ. ಸಪ್ತಪರ್ಣೀ]

ಸಪ್ತಪಾತಾಲ (ನಾ). ಅತಳ ವಿತಳ ಸುತಳ ತಲಾತಲ ರಸಾತಲ ಮಹಾತಲ ಮತ್ತು ಪಾತಾಳಗಳೆಂಬ ಏಳು ಅಧೋಲೋಕಗಳು : ಲೋಕಾಲೋಕ ಪರ್ವತಕಥನ- ಸಪ್ತಪಾತಾಲ ಮತ್ತು ಅನಂತಗುಣವರ್ಣನ (ಭಾಗ. ೧೪೦). [ಸಂ.]

ಸಪ್ತಪುರಿ (ನಾ). ಅಯೋಧ್ಯೆ, ಮಧುರ, ಮಾಯಾ, ಕಾಶಿ, ಕಾಂಚಿ, ಅವಂತಿ ಮತ್ತು ದ್ವಾರಾವತಿಗಳೆಂಬ ಏಳು ಪ್ರಸಿದ್ಧ ತೀರ್ಥಕ್ಷೇತ್ರಗಳು : ನಾನು ಮುಕ್ತಿಸಾಧನವಾದಂಥಾ ಸಪ್ತಪುರಿಗಳನ್ನು ಸೇವಿಸಿದೆನು (ಕಾಶೀಮ. ೪೦-೫). [ಸಂ.]

ಸಪ್ತಪ್ರಕೃತಿ (ನಾ). [ಜೈನ] ಕಷಾಯಚತುಷ್ಕ ಮತ್ತು ತ್ರಿವಿಧದರ್ಶನ ಮೋಹನೀಯಗಳೆಂಬ ಏಳು ಪ್ರಕೃತಿಗಳು : ತ್ರಿಕರಣ ದಿವ್ಯಾಂಜನದಿಂ ಸಕಳ ಪ್ರತ್ಯಕ್ಷಹೇತು ಸಮನಿಸೆ ಸಪ್ತಪ್ರಕೃತಿಪಟಳ ಕ್ಷಯಂ (ಪಂಪಭಾ. ೧೪-೭೮); ಅನಂತಾನು ಬಂಧಿ ಕ್ರೋಧಮಾನಮಾಯಾ ಲೋಭಾಭಿಧಾನ ಕಷಾಯಚತುಷ್ಕಮುಂ ತ್ರಿವಿಧ ದರ್ಶನಮೋಹನೀಯಮುಂ ಎಂಬೀ ಸಪ್ತಪ್ರಕೃತಿಗಳ ಉಪಶಮದಿಂದ (ತತ್ತ್ವಪ್ರ. ೭೯). [ಸಂ.]

ಸಪ್ತಭಂಗಿ (ನಾ). [ಜೈನ] ''ಒಂದು ಗುಣವನ್ನು ಒಂದು ಪದಾರ್ಥದಲ್ಲಿ ಆರೋಪಿಸಲು ಆ ಪದಾರ್ಥವನ್ನು ನಿರೂಪಿಸಬಹುದಾದ ಏಳು ಪ್ರಕಾರಗಳು'' (ತ್ಯಸಕೋ. ೨೮೩): ಎರಡನೆಯ ಆಗಮವೆಂಬುದು . . . ಸಪ್ತಭಂಗಿ ಸಮಾಲಿಂಗಿತಮುಂ . . . ಅಪ್ಪುದು (ಜಾವುಪು. ೫); ಅಪಹಿಂಸಂ ಸಪ್ತಭಂಗ್ಯನ್ವಿತ ಮಪವನರೋದೋದ್ಗತಂ (ಚಂದ್ರಪು. ೧-೧೧).

ಸಪ್ತಭಂಗೀನ್ಯಾಯ = ವಾದ ಮಾಡುವಾಗ ಎಲ್ಲ ವಾದಿಗಳನ್ನು ಸುಧಾರಿಸುವುದು : ಸಪ್ತಭಂಗೀನ್ಯಾಯವೆಂದರೆ ವಾದಕಾಲದಲ್ಲಿ ಸಕಲವಾದಿಗಳನ್ನು ಸುಧಾರಿಸುವುದೆಂದು ಅಭಿಪ್ರಾಯ (ಹಿಂದುಸಾ. ೭೫). ಸಪ್ತಭಂಗೀರಹಸ್ಯ = ಪ್ರಮಾಣ ನಯಗಳ ಮೂಲಕ ಉತ್ತರ ಹೇಳಿ ವಾದಿಗಳಿಗೆ ವಾದಿಸಲು ಅವಕಾಶ ಕೊಡದಿರುವುದು : ಪ್ರಮಾಣನಯಗಳಿಂದ ಉತ್ತರ ಹೇಳಿದರೆ ಮುಂದೆ ಅವಕಾಶವೇ ಇಲ್ಲ . . . ಇದೇ ಸಪ್ತಭಂಗೀರಹಸ್ಯ (ಹಿಂದುಸಾ. ೭೬). [ಸಂ.]

ಸಪ್ತಭಯ (ನಾ). ೧. [ಜೈನ]ಇಹಲೋಕಭೀತಿ, ಪರಲೋಕಭೀತಿ, ಮೃತ್ಯುಭೀತಿ, ವೇದನಾಭೀತಿ, ಅಗುಪ್ತಿಭೀತಿ, ಅರಕ್ಷಾಭೀತಿ ಮತ್ತು ಅಕಸ್ಮಾತ್‌ಭೀತಿ ಗಳೆಂಬ ಏಳು ಬಗೆಯ ಭೀತಿಗಳು. ೨. ಏಳು ಬಗೆಯ ಭೀತಿಗಳಿಂದ ಕೂಡಿದವನು : ಅಪಗತಸಪ್ತಭಯನುಂ ಅಷ್ಟಮದಮಪೇತನುಂ ನವವಿಧಬ್ರಹ್ಮ ಚರ್ಯಾರ್ಜಿತನುಂ . . . ಅಕ್ಕುಂ (ಜಾವುಪು. ೬). [ಸಂ.]

ಸಪ್ತಭೂಮಿಕ (ನಾ). ಏಳು ಅಂತಸ್ತುಗಳು : ಮಾಣಿಕ್ಯಹರ್ಮ್ಯವಲೀವೃತಮು ದ್ಯೋತಿತ ಸಪ್ತಭೂಮಿಕಮನೇಕೋದಗ್ರಕೂಟಂ . . . ಚಿಲ್ಕಾಯ್ತು ರಾಜಾಲಯಂ (ಆದಿಪು. ೬-೧೦೬). [ಸಂ.]

ಸಪ್ತಭೂಮಿಕೆ (ನಾ). [ಅದ್ವೈತ] ಶುಭೇಚ್ಛಾ, ವಿಚಾರಣಾ, ತನುಮಾನಸೀ, ಸತ್ತ್ವಾಪತ್ತಿ, ಅಸಂಸಕ್ತಿ, ಪದಾರ್ಥಭಾವನಾ ಮತ್ತು ತುರ್ಯಗಾ ಎಂಬ ಏಳು ಭೂಮಿಕೆಗಳು : ಸಪ್ತಭೂಮಿಕೆಗಳನು ತಿಳಿ ಪರವಸ್ತುವನ್ನು ಹೊಂದುವೊಡೆ ಮನಸ್ಸಿಗೆ ಸ್ವಸ್ಥವಹ ಸೋಪಾನವಾಗಿರ್ಪವನುಕ್ರಮದಿಂದ (ಅಮೃತ. ೬-೫); ಅವರ ಬಳಿ ನಿರಲಂಬವದು ಕೇಳದರ ಬಳಿ ಸಾಧನಚತುಷ್ಟಯವದರ ಬಳಿಯಲಿ ಸಪ್ತ ಭೂಮಿಕೆಯೆನಿಪ ವಿವರವನು (ಜ್ಞಾಸೂಂ. ೨-೧೩). [ಸಂ. ಸಪ್ತಭೂಮಿಕ]

ಸಪ್ತಮ (ಗು). ಏಳನೆಯ : ಕಟ್ಟಿದು ಸಪ್ತಮಾವನಿಗಿಟ್ಟಿದೋಂ (ಶಾಂತಿಪು. ೫-೭೧). [ಸಂ.]

ಸಪ್ತಮತಾನ (ನಾ). ಏಳನೆಯ ಸ್ವರ; ಉಚ್ಚಸ್ವರ: ಹಾಲಹಕ್ಕಿಯು . . . ಉಚ್ಚಕಂಠದಿಂದ ಸಪ್ತಮತಾನದಲ್ಲಿ ಮಾತನಾಡಿಸುತ್ತಿದ್ದಿತು (ಕೋಪಿನೂ. ೩). [ಸಂ.]

ಸಪ್ತಮದ (ನಾ). ೧. ಯೌವನ, ಕುಲ, ಸ್ತ್ರೀ, ಅನ್ನ, ದಾನ, ವಿದ್ಯಾ ಮತ್ತು ಉದ್ಯೋಗವೆಂಬ ಏಳು ಮದಗಳು. ೨. [ಗಜಶಾ]ಆನೆಯ ಏಳು ಮದಾವಸ್ಥೆಗಳು ; IP ''ಗಜಮದಾವಸ್ಥಾನುಗತ ಗಜನಾಮಗಳು – ೭ : (ಅ) ಕಟಪೂರ್ಣಾ (ಪೂರ್ಣಕಟತಾ), ಆರ್ದ್ರಕಪೋಲಿತಾ (ಆರ್ದ್ರ ಕಪೋಲತಾ), ಭೂರಿದಾನ (ಅಧೋನಿಬಂಧಾ), ಗಂಧಚರಾ, ಕ್ರೋಧನೀ, ಅತಿಕ್ರಾಂತಾ, ಹ್ಯಸನಾ (ಮಾತಂಗ. ೯-೧೨-೧೮). (ಆ) ಸಂಜಾತತಿಲಕಾ, ಆರ್ದ್ರಕಪೋಲಿಕಾ, ಅಧೋನಿಬಂಧಿನೀ (ಅಧೋನಿಬದ್ಧಾ), ಗಂಧ ಚಾರಿಣೀ, ಕ್ರೋಧಧೀ (ಕ್ರೋಧನೀ), ಅತಿವರ್ತಿನೀ (ಪ್ರವರ್ತಿಕಾ), ಸಂಭಿನ್ನಮದಮರ್ಯಾದಾ (ಸಂಭಿನ್ನಕಪೋಲಾ, ಸರ್ವಕಾಲಿಕಾ) (ಯಶಸ್ತಿಲಕ–ಟಿ.ಜೆ.ವಿ. I, ೮೧)'' (ಶ್ರೀವಿಜ. ೧೩೬). ೩. ಆನೆಯ ಏಳನೆಯ ಮದ : 'ಸಪ್ತಮದಾವಸ್ಥೆ' ಪರಾ. [ಸಂ.]

ಸಪ್ತಮದಾವಸ್ಥೆ (ನಾ). [ಗಜಶಾ]ಆನೆಯ ಏಳನೆಯ ಮದದ ಸ್ಥಿತಿ,–ಇರವು : ಆ ಮಹಾಮದೇಭಂ . . . ಒಂದು ದಿವಸಂ ಕ್ರೋಧಿನಿಯೆಂಬ ಸಪ್ತಮದಾ ವಸ್ಥೆಯಿಂದಾದ ಮನದ ಮಸಕದಿನಸವಸದೆ ನೆಲದ ನಾಲಗೆಯಂ ಕೀಲ್ಪಂತೆ ಬಾಲ್ಗಂಬಮಂ ಕಿಲ್ತು (ಚಂದ್ರಪು. ೯-೧೦೧ ವ). [ಸಂ. ಸಪ್ತಮದಾವಸ್ಥಾ]

ಸಪ್ತಮಮದಾವಸ್ಥೆ (ನಾ). = ಸಪ್ತಮದಾವಸ್ಥೆ : ಬಿರುದಿನ ತೊಡರ್ಗುಣ ಋಣಿಸಲೇಳ್ದು ಸಪ್ತಮಮದಾವಸ್ಥೆಯಿಂ ಮುಂದುಗಾಣದೆ ಬಲ್ಗಂಬಮಂ ಮುರಿದು . . . ಸಿಲ್ಕಿದರಂ ಸೀಳ್ದು (ರಾಜಶೇ. ೬-೧೧ ವ). [ಸಂ. ಸಪ್ತಮಮದಾವಸ್ಥಾ]

ಸಪ್ತಮಲ (ನಾ). [ವೀಶೈ]ಮೋಹ, ಮದ, ರಾಗ, ವಿಷಾದ, ತಾಪ, ಶೋಕ ಮತ್ತು ವೈಚಿಂತ್ಯಗಳೆಂಬ ಏಳು ಮಲಗಳು : ಮೋಹಮದರಾಗ ವಿಷಾದ ತಾಪಶೋಕ ವೈಚಿಂತ್ಯವೆಂಬ ಸಪ್ತಮಲವಾವರಿಸಿ ಮತ್ತರಾಗಿ (ಪದಗೋ. ೨೩). [ಸಂ.]

ಸಪ್ತಮಾತೃಕೆ (ನಾ). ೧. ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ ಮತ್ತು ಚಾಮುಂಡಾ ಎಂಬ ಏಳುಜನ ತಾಯಿಯರು: ಅಗ್ನಿಕನ್ನಿಕೆಯರಾದ ಬ್ರಾಹ್ಮಿ . . . ಚಾಮುಂಡಿಯರೆಂಬ ಸಪ್ತಮಾತೃಕೆಯರುಂ (ಎವೇಶ. ೨೧೩); ನಿರುತ ಚೌಷಟ್ಟಿಕಳಿಗಳು ಸಪ್ತಮಾತೃಕೆಯರು . . . ಅಗಜೆಯನು ವಾಲ್ಮೆಸರ್ದರು (ಸವಮೋ. ೨೪-೬೯). ೨. ಒಂದು ಮಂತ್ರದ ಹೆಸರು : ಸಪ್ತಮಾತೃಕಾ . . . ಇತ್ಯಾದಿ ಮಹಾಮಂತ್ರಂಗಳಂ (ಎವೇಶ. ೪೧). [ಸಂ. ಸಪ್ತಮಾತೃಕಾ]

ಸಪ್ತಮಿ (ನಾ). ೧. ಮಾಸದ ಶುಕ್ಲ ಮತ್ತು ಕೃಷ್ಣಪಕ್ಷಗಳ ಏಳನೆಯ ದಿನ: ಆ ಪಕ್ಷಂಗಳೊಳಗೆ . . . ರವಿಯಧಿದೇವತೆಯಾದ ಸಪ್ತಮಿ (ಎವೇಶ. ೨೬೨). ೨. [ವ್ಯಾಕ] ಒಂದು ವಿಭಕ್ತಿಯ ಹೆಸರು ; ಏಳನೆಯ ವಿಭಕ್ತಿ : ಪ್ರಥಮಗಂ . . . ಸಪ್ತಮಿಗಂ ಏಟುಗಾಗಿ ಕಾರಕವಶದಿಂ ಪತ್ತುಗುಂ (ಶಮದ. ೯೩ ವೃತ್ತಿ); ವಿಷಯಾರ್ಥದಲ್ಲಿಯೂ ಸಪ್ತಮಿ ಬರುವುದು (ಕೃವಿದಿ. ೫೭). [ಸಂ. ಸಪ್ತಮೀ]

ಸಪ್ತಮೀವಿಭಕ್ತಿ (ನಾ). = ಸಪ್ತಮಿ ೨ : ದಿಕ್ಕುಗಳನ್ನು ಹೇಳುವ ನಾಮವಾಚಕಗಳಿಗೆ ಸಪ್ತಮೀವಿಭಕ್ತಿಯಲ್ಲಿ ಎ ಎಂಬ ಪ್ರತ್ಯಯವು ಸೇರುತ್ತದೆ (ಮುಧ್ಧಪ್ರ. ೬೨). [ಸಂ.]

ಸಪ್ತಮುಖ (ನಾ). ೧. ಏಳು ಮುಖಗಳು. ೨. ಏಳು ಕವಲುಗಳು. ೧, ೨ : ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ತುಜುಗಿರವಿಂದೆ ಪೋಲ್ದುದು ಮಹಾನದಿ ರುಂದ್ರಫಣೀಂದ್ರರಾಜನಂ (ಕಾವ್ಯಸಾ. ೭೪೭ ಪೂರ್ವಕ). [ಸಂ.]

ಸಪ್ತರಸನ (ನಾ). ಕಾಳಿ, ಕರಾಳಿ, ಮನೋಜವೆ, ಸುಧೂಮ್ರವರ್ಣೆ, ಸುಲೋಹಿತೆ, ಉಗ್ರೆ, ಪ್ರದೀಪ್ತೆ ಎಂಬ ಬೆಂಕಿಯ ಏಳು ನಾಲಗೆಗಳಿಂದ ಕೂಡಿದವನು; ಅಗ್ನಿ : ''ವಸುಸಿತೇತರಗತಿ ಸ್ಯಾಹಾಪ್ರಿಯಂ ಸಪ್ತರಸನನಪ್ಪಿತ್ತಂ [ಪಾಠಾಂ. ಷ್ಟೀಕಂ]. . . ವಿರೋಚನನೆನಿಕ್ಕುಂ'' (ಮಂಗರಾ. ೧೪-೬); ಸಪ್ತರಸನಾಶಾರ್ವರೀವರ ಸಪ್ತಸಪ್ತಿ ವಿಲೋಚನಂಗಂ . . . ಅರ್ಪಿಸುವೆನಿಂದುಗ್ರಗರಳವ (ಬುಸಪು. ೫೮-೪೦). [ಸಂ. ಸಪ್ತರಸನಾ]

ಸಪ್ತರಾಶಿಕ (ನಾ). [ಗಣಿತ] ಗಣಿತದ ಒಂದು ವಿಧಾನ ; ಏಳು ಅಂಶಗಳಿಂದ ಲೆಕ್ಕ ಮಾಡುವುದು : ರಾಜಾದಿತ್ಯನ ಗಣಿತದಲ್ಲಿ ತ್ರಯಿರಾಶಿಕ . . . ಸಪ್ತರಾಶಿಕ, ಬೆಸ್ಸಸಪ್ತರಾಶಿಕ (ವ್ಯಮಹಾ. ಅನುಬಂಧ. I, ೧೧). [ಸಂ.]

ಸಪ್ತರ್ಧಿ (ನಾ). [ಜೈನ] ಬುದ್ಧಿ, ತಪಸ್ಸು, ವಿಕ್ರಿಯೆ, ಔಷಧಿ, ರಸ, ಬಲ ಮತ್ತು ಅಕ್ಷೀಣಗಳೆಂಬ ಏಳು ಋದ್ಧಿಗಳು : ಭಾವನೆಯೊಳಾದ ಬುದ್ಧಿತಪೋ ವಿಕ್ರಿಯೌಷಧಿರಸ ಬಲಾಕ್ಷೀಣಾಭಿಧಾನ ಸಪ್ತರ್ಧಿಗಳೊಳಂ ನೆಱೆದು (ಆದಿಪು. ೬-೩೩ ವ); ಕ್ರಮದಿಂ ಸಪ್ತರ್ಧಿವೆತ್ತ ಶ್ರಮದಿನುಪಶಮಶ್ರೇಣಿಯಂ ಸಾರ್ದು (ಮಲ್ಲಿಪು. ೧೧-೫೭). [ಸಂ.]

ಸಪ್ತರ್ಧಿಜ್ಞಾನ (ನಾ). ಏಳು ಋದ್ಧಿಗಳಿಂದ ಉಂಟಾದ ಜ್ಞಾನ : ಅಂತು ದೀಕ್ಷಾಗ್ರಹಣಾನಂತರ ಸಮಯಸಮುತ್ಪನ್ನ ಸಪ್ತರ್ಧಿಜ್ಞಾನಚತುಷ್ಟಯಂ ಪ್ರಥಮಗಣ ಧರನಾದಂ (ಆದಿಪು. ೧೦-೪೮ ವ). [ಸಂ.]

ಸಪ್ತರ್ಷಿ (ನಾ). = ಸಪ್ತಋಷಿ : ಸಪ್ತರ್ಷಿಗಳು ಯಾರೆಂದರೆ ಮರೀಚಿ, ಅತ್ರಿ, ಆಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ (ಜ್ಯೋತಿರ್ವಿ. ೨೪); ಸಪ್ತರ್ಷಿಗಳ ಪತ್ನಿಯರಲ್ಲಿ . . . ಆರು ಋಷಿಪತ್ನಿಯರೂ ಅಗ್ನಿದೇವನಿಗೆ ಮನಸೋತರು (ನಕ್ಷತ್ರ. ೮). [ಸಂ.]

ಸಪ್ತರ್ಷಿಮಂಡಲ (ನಾ). [ಜ್ಯೋತಿ] ಪ್ರಸಿದ್ಧರಾದ ಏಳುಋಷಿಗಳ ಹೆಸರಿನಲ್ಲಿ ಕರೆಯುವ ಏಳುನಕ್ಷತ್ರಗಳ ಸಮುದಾಯ : ಶಶಿತಾರೆ ಸಪ್ತರ್ಷಿಮಂಡಲಂ ಶ್ರುತಿಚಯಂ . . . ಎಲ್ಲರುಂ ರಕ್ಷಿಸಲಿ (ಶ್ರೀರಾಮಾ. ೧೫-೧೯೮). [ಸಂ.]

ಸಪ್ತರ್ಷಿಸಮಾಜ (ನಾ). = ಸಪ್ತರ್ಷಿಮಂಡಲ : ಮಿಳಿರ್ದು ಪೊಳೆವ ಸಪ್ತರ್ಷಿ ಸಮಾಜದಂತೆ ಸಂಚರಿಸಿ ಮಿಂಚುವಲಗುಗಳಿಂ (ಪುಷ್ಪಪು. ೫-೧೩ ವ). [ಸಂ.]

ಸಪ್ತಲೆ, ಸಪ್ತಳೆ (ನಾ). ೧. ಒಂದು ಬಗೆಯ ಮಲ್ಲಿಗೆ ; ಏಳು ಸುತ್ತಿನ ಮಲ್ಲಿಗೆ; ಇರುವಂತಿಗೆ: ಸಪ್ತಾಶ್ವಘನತೇಜ ಸಪ್ತ ಸೋಪಾನ ವರ ಸಪ್ತಲಾಸಿತಹಸನ ಸಪ್ತಯುಗಜಗದಧಿಪ . . . ಜಯ ಗುರುವೆ (ವೀಶೃಪು. ೪-೨೦-೨); ತರುವಿಲಾಸಿನಿಯಾದ ಸಪ್ತಲೆ ನಿರುಕಿಸುತ್ತಿಹ ಜನರ ಮನವನು ಭರದೆ ಸೆಳೆಯುತ್ತದಕೆ ಮತ್ತತೆಯುಂಟು ಮಾಡಿದುದು (ಶ್ರೀರಾಚ. ೬-೪೨). ೨. ಸೀಗೆಯ ಪೊದರು. ಸಪ್ತಳೆ : ೧. "ಸಪ್ತಳಾ, ನವಮಾಲಿಕಾ - ಈ ೨ ಇರುವಂತಿ" (ಹಲಾಯು. ೩೫-೫೪). [ಸಂ. ಸಪ್ತಲಾ]

ಸಪ್ತಲೋಕ (ನಾ). ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕವೆಂಬ ಏಳು ಊರ್ಧ್ವಲೋಕಗಳು: ಸೂರ್ಯಾದಿಗ್ರಹಗಳ ಮತ್ತು ಸಪ್ತಲೋಕಗಳ ಸಂಸ್ಥಾನ (ಭಾರದ. ೧೪೦). [ಸಂ.]

ಸಪ್ತವಾರಿಧಿ (ನಾ). = ಸಪ್ತಕೂಪಾರ : ಬೇಗದಲಿ ಮನವೊದಗಲಾಜಿದತಿ ನಿರ್ಗಮದ ಲಾಗಿಂಗೆ ಸಪ್ತವಾರಿಧಿ ನೆರೆಯವವ ನಿಲಿಸುವಾಗ ವಸುಧೆಯ ಮೇಲೆ ನಿಲಲೊಲ್ಲೆವೆಂಬ ಸಂಪ್ರಹಕೊಳಗಾದ ತುರಗ (ಹಚಕಾ. ೫-೧೨). [ಸಂ.]

ಸಪ್ತವಾರುವ (ನಾ). ಅಮೃತಸಂಭವ, ಬಾಷ್ಪಸಂಭವ, ವಹ್ನಿಸಮುದ್ಭವ, ದೇವಸಂಭವ, ಅಂಬುಸಮುದ್ಭವ, ಗರ್ಭಸಮುದ್ಭವ ಮತ್ತು ಸಾಮ್ನಾ ಎಂಬ ಏಳು ವಿಧದ ಕುದುರೆಗಳನ್ನುಳ್ಳವನು; ಸೂರ್ಯ : ಪ್ರಮಥಗಣಮುಖ ಪಂಕರುಹ ಸಪ್ತವಾರುವಂ ಪ್ರಮಥಗಣಮಾನಸಸರೋವರಸ್ಥಿತ ಹಂಸ . . . ಪ್ರಮಥಗಣರಾಪ್ತರೆಂದಾ ಪ್ರಮಥರಗಲದಿಹ ಸಿದ್ಧನಂಚೇಶ ಜಯತು (ಗುರುಚಾ. ೯-೧). [ಸಪ್ತ + ವಾರುವ]

ಸಪ್ತವಾಸರ (ನಾ). ಸೂರ್ಯ : ಶಾಂತ್ಯಭಿಷೇಕಪುರಸ್ಸರಂ ಪೂಜಾವಿಧಾನಮಂ ಸಪ್ತವಾಸರಾವಸಾನಂಬರಂ ಮಾಡಲ್ಪಗುಳ್ಳುದುಂ (ಶಾಂತಿಪು. ೬-೨೮ವ). [ಸಂ.]

ಸಪ್ತವಿಭಕ್ತಿ (ನಾ). [ವ್ಯಾಕ] ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮೀ, ಷಷ್ಠಿ ಮತ್ತು ಸಪ್ತಮಿಗಳೆಂಬ ಏಳು ವಿಭಕ್ತಿಗಳು: ಅವ್ಯಯಲಿಂಗಮೆಂಬುದು ಸಪ್ತವಿಭಕ್ತಿಗಂ ಪುಂಸ್ತ್ರೀನಪುಂಸಕಲಿಂಗಕ್ಕಂ ಏಕವಚನ ದ್ವಿವಚನ ಬಹುವಚನವೆಂಬ ವಚನಕ್ಕಂ ಸರಿಯಾಗಿ ಇರ್ದ ತೆಱದೆ ಅರ್ಥಮಂ ಕುಡುಗುಂ (ಶಮದ. ನ. ೧೦೦ ವೃತ್ತಿ). [ಸಂ.]

ಸಪ್ತವ್ಯಸನ (ನಾ). ೧. ಸ್ತ್ರೀ, ದ್ಯೂತ, ಬೇಟೆ, ಕುಡಿತ, ವಾಕ್ಪಾರುಷ್ಯ, ದಂಡಪಾರುಷ್ಯ ಮತ್ತು ಅರ್ಥದೂಷಣ ಎಂಬ ಏಳುವ್ಯಸನಗಳು: ತಂದೆ ಪಡೆದ ಕಡವರಮಂ ಬಿಯಂಗೆಯ್ಯುತ್ತುಂ ಸಪ್ತವ್ಯಸನಾಭಿಭೂತರಾಗಿ ನೆಗಱುತ್ತಿರೆಯಿರೆ (ಪಡ್ಡಾರಾ. ೨-೧೬); ಸಪ್ತವ್ಯಸನಕ್ಕೆಱಗಿರೆ ರಾಜ್ಯಾಂತಮಾಗದಿರ್ಕುಮೆ ನರಕಂ (ಅಜಿಪು. ೨-೧೦೭); ಇಳೆಯೊಡೆಯ ಜೂಜೆಂಬುದೀಗ ಸಪ್ತವ್ಯಸನದೊಳಗಣದು ಮುನಿಗಳಿಗಯೋಗ್ಯವೆನೆ (ವೀಶೃಪು. ೨-೧೩-೧೬). ೨. ತನು, ಮನ, ಧನ, ರಾಜ್ಯ, ವಿಶ್ವ, ಉತ್ಸಾಹ ಮತ್ತು ಸೇವಕವೆಂಬ ಏಳು ವ್ಯಸನಗಳು : ತನುವ್ಯಸನ ಮನವ್ಯಸನ ಧನವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಉತ್ಸಾಹವ್ಯಸನ ಸೇವಕವ್ಯಸನ ಇಂತಿವು ಸಪ್ತವ್ಯಸನಂಗಳ ವಿವರ (ಚನ್ನವ. ಕ. ೪೧೨-೫೭); ಸಪ್ತಧಾತು ಸಪ್ತ ವ್ಯಸನಂಗಳ ಸಣ್ಣಿಸಿ (ಅಖಂಡೇ. ೧೯೩-೧೪). [ಸಂ.]

ಸಪ್ತವ್ಯಸನಿ (ನಾ). ಏಳು ವ್ಯಸನಗಳನ್ನುಳ್ಳವನು: ಕರಣಾದಿ ಗುಣಂಗಳ ಮಱೆದರು . . . ಶರಣರು ಸಪ್ತವ್ಯಸನಿಗಳಲ್ಲಾಗಿ (ಬಸವ. ೮೦೯). [ಸಂ. ಸಪ್ತವ್ಯಸನಿನ್]

ಸಪ್ತಶರಧಿ (ನಾ). = ಸಪ್ತಕೂಪಾರ : ಸಪ್ತಶರಧಿಪರಿವೃತಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆ (ಹಚಕಾ. ೯-೧೦). [ಸಂ.]

ಸಪ್ತಶೈವ (ನಾ). ಅನಾದಿ, ಆದಿ, ಮಹಾ, ಅನು, ಅವಾಂತರ, ಪ್ರವರ ಮತ್ತು ಅಂತರಶೈವಗಳೆಂಬ ಏಳು ಶೈವಗಳು : ತರುಣ ಕೇಳಾ ಸಪ್ತಶೈವಪ್ರಕಾರಮಂ ಪರಿವಿಡಿಯೊಳಂದು ಬಿತ್ತರಿಸುತಿರ್ದಂ (ವೀಶೃಪು. ೬-೨-೩೫). [ಸಂ.]

ಸಪ್ತಶ್ರುತಿ (ನಾ). = ಸಪ್ತನಾದ : ಷಡ್ಜಾದಿ ಸಪ್ತಶ್ರುತಿಗಳಿಂಪುಗೆ ಮಂದ್ರ ಮಧ್ಯಮತಾರ ವಿಶ್ರಮದ ಅತಿ ಮಧುರ ಮೃದುಗೀತಜಾತೋನ್ನತ ರಸದೊಳೊಡಗೂಡಿ (ಬಸಪು. ೧-೪೮). [ಸಂ.]

ಸಪ್ತಸಪ್ತಿ (ನಾ). = ಸಪ್ತವಾರುವ ೨ : ಸಪ್ತಸಪ್ತಿಯನಿಳಾಭಾಗಕ್ಕೆ ತರ್ಪೊಂದು ತೋಳ್ಬಲಮುಂ ಗರ್ವಮುಂ (ಪಂಪಭಾ. ೬-೭); ಸಪ್ತರಸನಾ ಶಾರ್ವರೀರವರ ಸಪ್ತಸಪ್ತಿವಿಲೋಚನಂಗಂ (ಬಸಪು. ೫೮-೪೦). [ಸಂ.]

ಸಪ್ತಸಮುದ್ರ (ನಾ). = ಸಪ್ತಕೂಪಾರ : ಸಪ್ತಸಮುದ್ರಮುದ್ರಿತ ಧರಾತಳಮಂ ಬೆಸಕೆಯ್ಯೆ (ಪಂಪಭಾ. ೧-೧೪೯) ; ಸಪ್ತಸಮುದ್ರ ದಾಟಿ ಹೋಗುವುದು ? (ಇಷ್ಟಕ. ೨೬೦). [ಸಂ.]

ಸಪ್ತಸಾಗರದಾನ (ನಾ). ಷೋಡಶಮಹಾದಾನಗಳಲ್ಲಿ ಒಂದು : ಷೋಡಶ ಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ . . . (೧೪) ಸಪ್ತಸಾಗರದಾನ (೧೫) ರತ್ನಧೇನುದಾನ . . . ಮಾಡಿ ಸತ್ಕೀರ್ತಿಯಂ ಪಡೆದರು (ಮಹಾವಂ. I, ೧೦೧). [ಸಂ.]

ಸಪ್ತಸಾಧಾರಣ (ನಾ). [ಸಂಗೀತ] ರಾಗಜಾತಿಗಳಲ್ಲಿ ಒಂದು : ಶುದ್ಧ ಭಿನ್ನ ಗೌಡ ಅಷ್ಟಸಾಧಾರಣ ಸಪ್ತಸಾಧಾರಣ ಷಟ್ಸ್ವರವೆಂಬಾಱು ಜಾತಿಗಳು (ವಿವಿಕ. ೧೮೭). [ಸಂ.]

ಸಪ್ತಸೂತ್ರ (ನಾ). ಯಜ್ಞ ; ಯಾಗ : " ಸತ್ರಂ ಸವಂ ಯಜ್ಞಮಧ್ವರಂ ಕ್ರತು ಸಪ್ತಸೂತ್ರಂ ಮಖಂ . . . ಯಾಗಕೃತ್ಯಮೆನಿಸಿಕ್ಕು" (ಮಂಗರಾ. ೭೭-೧೩). [ಸಂ.]

ಸಪ್ತಸೋಪಾನ (ನಾ). [ವೀಶೈ]ಜಂಗಮರ ಸೇವೆಯ ಏಳು ಹಂತಗಳು; IP ಜಂಗಮರನ್ನು ಕಂಡೊಡನೆ ವಿನಯದಿಂದ ಎದುರುಗೊಳ್ಳುವುದು, ಸಾಷ್ಟಾಂಗನಮಸ್ಕರಿಸುವುದು, ಗದ್ದುಗೆಯಲ್ಲಿ ಕುಳ್ಳಿರಿಸಿ ಪಾದಪ್ರಕ್ಷಾಲನ ಮಾಡುವುದು, ಪಾದತೀರ್ಥವನ್ನು ತೆಗೆದುಕೊಳ್ಳುವುದು, ಅವರನ್ನು ಅನ್ನಪಾನಾದಿಗಳಿಂದ ಸತ್ಕರಿಸುವುದು, ಮಿಕ್ಕ ಪ್ರಸಾದವನ್ನು ತೆಗೆದು ಕೊಳ್ಳುವುದು, ಅವರಲ್ಲಿ ಅನುಭಾವವನ್ನು ಬೆಸಗೊಳ್ಳುವುದು: ಸಪ್ತಾಶ್ವ ಘನತೇಜ ಸಪ್ತಸೋಪಾನವರ . . . ಶಿವಾಪ್ತ ಜಯಗುರುವೇ ಪರವೇ (ವೀಶೃಪು. ೪-೨೦-೨); ಇಂತೀ ಸಪ್ತಸೋಪಾನಂಗಳ ಬಲ್ಲ ಸದ್ಭಕ್ತಂಗೆ ಕೈಲಾಸ ಕರತಳಾಮಳಕವು (ಅಖಂಡೇ. ೭೪-೪೬). [ಸಂ.]

ಸಪ್ತಸೋಮಸಂಸ್ಥೆ (ನಾ). ವೈದಿಕಪರಂಪರೆಯ ಸೋಮಯಜ್ಞದ ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ವಾಜಪೇಯ, ಅತಿರಾತ್ರ, ಅಪ್ತೋರ್ಯಾಮಗಳೆಂಬ ಏಳು ಅಂಗಗಳು: ದ್ವಿಜಕುಳ ತಿಳಕರ್ಸ್ಸಪ್ತಸೋಮಸಂಸ್ಥಾವಭೃತಾವಗಾಹನ ಪವಿತ್ರೀಕೃತಶರೀರರ್ (ಸೌಇಗ. XX. ೫೭-೪; 1084); ಸಪ್ತಸೋಮಸಂಸ್ಥಾವಭೃತಾವಗಾಹನ ಪವಿತ್ರೋತ್ತಮಾಂಗರ್ (ಸೌಇಗ. XX. ೭೦-೮; 1108). [ಸಂ. ಸಪ್ತಸೋಮಸಂಸ್ಥಾ]

ಸಪ್ತಸ್ವರ (ನಾ). [ಸಂಗೀತ] ಷಡ್ಜ, ವೃಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾಧಗಳೆಂಬ ಏಳು ಸ್ವರಗಳು : ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾಧಂಗಳೆಂಬ ಸಪ್ತಸ್ವರಮುಮಂ (ಅಜಿಪು. ೪-೩೦ ವ); ದನಿಯ ಕೂಡಿಸಿ ಸಪ್ತತಂತ್ರಿಯ ಮುಗಿಪ ಮಧ್ಯಮ ಷಡ್ಜ ಪಂಚಮವೆನಿಪ ಸಪ್ತಸ್ವರವನಾಳಾಪಿಸಲು ಕ್ರಮದಿಂದ (ಕೌಶಿಶಾ. ೨೪-೧೧). [ಸಂ.]

ಸಪ್ತಳೆ 'ಸಪ್ತಲೆ' ನೋ.

ಸಪ್ತಾಂಗ (ನಾ). [ರಾಜನೀ] ಸ್ವಾಮಿ, ಅಮಾತ್ಯ, ಸುಹೃತ್ತು, ಕೋಶ, ಬಲ, ರಾಷ್ಟ್ರ ಮತ್ತು ದುರ್ಗ ಎಂಬ ರಾಜನ ಏಳು ಬಗೆಯ ರಾಜ್ಯಾಂಗಗಳು: ಅಟ್ಟು ಕಿಡುಗುಂ ಸಪ್ತಾಂಗಂ (ಪಂಪಭಾ. ೪-೮) ; ರಕ್ಷಿಸಿದನಿನ್ತೀ ಗಂಡಭೇರುಂಡ ಸೈನ್ಯ ಬಲಂಬೆತ್ತಿರೆ ನಾರಸಿಂಹನೃಪನಾತ್ಮಾವಾಪ್ತ ಸಪ್ತಾಂಗವಂ (ಎಕ. ೪. ಬೇಲೂರು. ೧೯೩-೪೭ ; 1160); ಲವಲವಿಕೆ ಮಿಗಲಿತ್ತು ಸಪ್ತಾಂಗವನು ಸಲಹುತ್ತಿರಲುಬೇಹುದು (ಕುವ್ಯಾಲಾ. ೩-೧೨೫). [ಸಂ.]

ಸಪ್ತಾನೀಕ (ನಾ). ಆನೆ, ಕುದುರೆ, ರಥ, ಪದಾತಿ, ವೃಷಭ, ಗಂಧರ್ವ ಮತ್ತು ನರ್ತಕಿಯರೆಂಬ ಏಳು ಬಗೆಯ ಅಂಗಗಳಿಂದ ಕೂಡಿದ ಸೈನ್ಯ : ಹಸ್ತ್ಯಶ್ವ ರಥಪದಾತಿವೃಷಭಗಂಧರ್ವನರ್ತಕೀಪ್ರಮುಖಸಪ್ತಾನೀಕಸಮೇತನುಂ (ಆದಿಪು. ೬-೧೩ ವ); ಹಸ್ತ್ಯಶ್ವರಥ . . . ಪ್ರಭೃತಿ ಸಪ್ತಾನೀಕಸಮೇತರಾಗಿ (ಸುಕುಮಾ. ೮-೬೬ ವ). [ಸಂ.]

ಸಪ್ತಾನೀಕಿನಿ (ನಾ). = ಸಪ್ತಾನೀಕ : ಸಪ್ತಾನೀಕಿನಿಯಾಗಿ ಬಂದು ಬೆಸಕೆಯ್ಯತ್ಯಂತ ದೈನ್ಯಂ ಮಹಾಸುಪ್ತಿಜ್ಞಾನದಿನಾದ ಮೆಯ್ಯ ಮಱುಕಂ . . . ಜ್ಯಾಯಂಗುಪಾದೇಯಮೇ (ಮಲ್ಲಿಪು. ೧೩-೧೨೩). [ಸಂ.]

ಸಪ್ತಾನ್ನ (ನಾ). ಏಳು ಬಗೆಯ ಅನ್ನ : ಸಪ್ತಾನ್ನಗಳ ದೈನಂದಿನ ಮರೆಯದೆ ಸದಾ ಗೋವಿಂದಗರ್ಪಿಸು ನಿರ್ಭಯದಿ ಮಹಯಜ್ಞವಿದೆಂದು (ಹಸಾರ. ೧೪-೧೫). [ಸಂ.]

ಸಪ್ತಾಬ್ಧಿ (ನಾ). = ಸಪ್ತಕೂಪಾರ : ಸಪ್ತಾಬ್ಧಿಗಳನೊಂದಿನಂ ದಾಂಟಿ (ಚಿಬಪು. ೪೭-೧೧); ಕಿರೀಟಿ ಪಿಡಿದಂ ದೇವದತ್ತಮಂ ಸಪ್ತಾಬ್ಧಿರಭಸಮೊಬ್ಬುಳಿಸುವಂತೆ ಮೀಟಾಡಿಸಿತು ಭೂಮಿಯಂ (ಚೈಮಿಭಾ. ೧೩-೪೩). [ಸಂ.]

ಸಪ್ತಾರ್ಚಿ (ನಾ). ೧. = ಸಪ್ತರಸನ: ದಂಪತಿಗಳ್ ಸಪ್ತಾರ್ಚಿಯಂ ಮೂಱುಸೂಱ್ ಬಲವಂದು (ಪಂಪಭಾ. ೩-೭೫ವ); ಅಚ್ಚರಿಯನೇನೆಂಬೆನೈ ಸಪ್ತಾರ್ಚಿಯಿತ್ತನು ವನವನಿಂದ್ರನ (ಕುವ್ಯಾಅ. ೨೦-೧೯); ಸರ್ವಶುಚಿ ಸಪ್ತಾರ್ಚಿ ಸೂಡನದೂ ಪೊತ್ತಿದಂ ಪೊಗೆ ಸೂಸಿ (ಚಿತ್ರಾಂಗ. ೮೯-೨೪೭೦). ೨. ಸಪ್ತಋಷಿಗಳನ್ನು ಪೂಜಿಸುವವನು. ೧, ೨ ; ಈ ಮಹಾಪುರುಷಂ . . . ಸಪ್ತಾರ್ಚಿಯಾಗಿಯುಂ ಹುತವಹನಲ್ತು (ಜಗವಿ. ೮-೧೦ ವ). [ಸಂ.ಸಪ್ತಾರ್ಚಿನ್]

ಸಪ್ತಾರ್ಚಿಲೋಚನ (ನಾ). ಅಗ್ನಿನೇತ್ರ; ಶಿವ: ಭೇಶಾರ್ಕ ಸಪ್ತಾರ್ಚಿ ಲೋಚನಂ ಸರ್ವೇಶ (ಗುರುಚಾ. ೫-೬೯) ; ಸಪ್ತಾರ್ಚಿಲೋಚನನಂಘ್ರಿಕಮಲಗಳ ನೆನೆವುತೆ (ನಮೋ. ೯-೩೧). [ಸಂ.]

ಸಪ್ತಾವರಣ (ನಾ). ಭೂಮಿ, ಜಲ, ಅಗ್ನಿ, ವಾಯು , ಆಕಾಶ, ಅಹಂಕಾರ ಮತ್ತು ಮಹತ್ತತ್ವ ಎಂಬ ಏಳು ಆವರಣಗಳು : ತನುಮನೋಬುದ್ಧಿಯ ಹಮುಚಿತ್ತವಿಜ್ಞಾತೃ ಘನಮಾಯೆಯೆಂಬವೀ ಕ್ರಮದಿಂದೆ ವನಿತೆ ಸಪ್ತಾವರಣಂ ಗಳೆನಿಪವು (ಪರಮೋ. ೫-೧೭-೨); ಏಸೆವ ಹಮ್ಮಿಂದಂ ಮಹತ್ತಿಂ ಪಸರಿಸಿದ ಸಪ್ತಾವರಣದಿಂದಾಯ್ತು ಮೂಲೋಕಂ (ಅಮೃತ. ೪-೧೫). [ಸಂ.]

ಸಪ್ತಾವಸ್ಥೆ (ನಾ). ೧. [ಗಜಶಾ]ಆನೆಯ ಸಂಚಿತ, ತಿಲಕಿತ, ಆರ್ದ್ರಕಪೋಳಿತ, ಅತಿವರ್ತಿತ, ಅಧೋನಿಬಂಧನಿ, ಕ್ರೋಧಿನಿ ಮತ್ತು ಗಂಧಚಾರಿಣಿಗಳೆಂಬ ಏಳು ಮದಾವಸ್ಥೆಗಳು : ಆ ಪಟ್ಟಣದ ನರಸಿಂಗಮೊನೆಯರ ಪಟ್ಟದಾನೆ ಸಂಚಿತ . . . ಗಂಧಚಾರಿಣಿಯೆಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ (ನಂಬರಿ. ೨-೨೨). ೨. ಮಾನವನ ಕಾಮವಿಷಯಕವಾದ ದಶಾವಸ್ಥೆಗಳಲ್ಲಿ ಏಳನೆಯದು; ಲಜ್ಜಾತ್ಯಾಗ ; ನಾಚಿಕೆಯಳಿಯುವುದು : ಸಪ್ತಾವಸ್ಥೆಯಡಸಿರ್ದರಂತೆ ತಬ್ಬಿಬ್ಬ ನಾಡುತ್ತ ಮಧುಪಾನದಬಲೆಯರೆಸೆದರು (ಚೇರಮ. ೮-೫೫). [ಸಂ. ಸಪ್ತಾವಸ್ಥಾ]

ಸಪ್ತಾಶ್ವ (ನಾ). = ಸಪ್ತವಾರುವ : ಚೈತ್ಯಾಲಯಂ ಮತ್ತಮಿತ್ತುದು ಸಪ್ತಾಶ್ವನ ಸಪ್ತಸಪ್ತಿಗೆ ಸಮಗ್ರ ಪ್ರಗ್ರಹಾಶಂಕೆಯಂ (ಪಂಠಾಮಾ. ೪-೧೨೯); ಸಪ್ತಾಶ್ವನುದಯಮಾದಡೆ ರಾಮಗಭಿಷೇಕಮಪ್ಪುದು (ವಂಕಾರಾ. ೨-೩-೨೮). [ಸಂ.]

ಸಪ್ತಾಹ (ನಾ). ಏಳುದಿನಗಳ ಅವಧಿ ; ವಾರ : ಗಾಯನಸಮಾಜದಲ್ಲಿ ಸಂಗೀತ ಸಪ್ತಾಹ ನಡೆಯುತ್ತಿದೆ (ರೂಢಿ). [ಸಂ.]

ಸಪ್ತಾಹತ (ನಾ). ಒಂದು ಸಂಖ್ಯೆಯನ್ನು ಏಳರಿಂದ ಗುಣಿಸಿದಾಗ ಬರುವ ಸಂಖ್ಯೆ : ಸಪ್ತಾಹತಮಂ ದ್ವಿತಿಯಾವಾಪ್ತಂಗೆಯ್ದುಟಿದುವಱೆ ದಿವಾರಾತ್ರಿಗಳಾ ಸಪ್ತಾಹ ತಮಂ ಭಾಗಿಸೆ ಸಪ್ತಾವಿಂಶತಿಯನಲ್ಲಿ ನಿಂದುದು ಭಗಣಂ (ಜಾತಕ. ೨೪-೩೦). [ಸಂ.]

ಸಪ್ತಾಹುತಿ (ನಾ). ಯಜ್ಞಯಾಗಾದಿಗಳಲ್ಲಿ ದೇವತೆಗಳಿಗಾಗಿ ಅಗ್ನಿಯಲ್ಲಿ ಅರ್ಪಿಸುವ ಸಮಿತ್ತು, ಸಾಸುವೆ, ಅರಳು, ತುಪ್ಪ, ಹಾಲು, ಅನ್ನ ಮತ್ತು ಎಳ್ಳುಗಳೆಂಬ ಏಳು ಬಗೆಯ ಹವಿಸ್ಸು ,– ದ್ರವ್ಯಗಳು : ಸಮಿತ್ತು ಸಾಸುವೆ ಅರಳು ತುಪ್ಪ ಹಾಲು ಅನ್ನ ಎಳ್ಳು ಎಂಬ ಸಪ್ತಾಹುತಿಗಳಂ (ವಿವೇಕ. ೧೩೭). [ಸಂ.]

ಸಪ್ತಿ (ನಾ). ಕುದುರೆ; ಅಶ್ವ : "ಅರ್ವಾ, ಗಂಧರ್ವಃ, ಅಶ್ವಃ, ಸಪ್ತಿಃ . . . ವಾಹಃ.- ಈ ೧೪ ಕುದಿರೆ" (ಹಲಾಯು. ೭೨-೨೮೨). [ಸಂ.]

ಸಪ್ತೋಪಾಯ (ನಾ). (ಶತ್ರುಗಳನ್ನು ಜಯಿಸಲು ಅನುಸರಿಸುವ) ಸಾಮ, ದಾನ, ಭೇದ, ದಂಡ, ಮಂತ್ರ , ಔಷಧಿ , ಇಂದ್ರಜಾಲಗಳೆಂಬ ಏಳು ಉಪಾಯಗಳು. [ಸಂ.]

ಸಪ್ತೋರ್ವಿ (ನಾ). = ಸಪ್ತಲೋಕ : ಬಿಲ್ಲುಂ ಮೂಱುಂ ಮೊಳನರೆಗೇಱ್ ಸಪ್ತೋರ್ವೀವಳಯಂಬರಂ (ಶಾಂತಿಪು. ೭-೮೮). [ಸಂ. ಸಪ್ತೋರ್ವೀ]

ಸಪ್ಪ$_1$ 'ಸಪ್ಪೆ' ನೋ.

ಸಪ್ಪ$_2$ 'ಸರುಪ' ನೋ.

ಸಪ್ಪಂಗ (ನಾ). ಒಂದು ಬಗೆಯ ಸಸ್ಯ : "ಪತಂಗ, ಸಪ್ಪಂಗ" (ಮೃಡಿಗಿ. ೧೫-೨೭೩). [?]

ಸಪ್ಪಗೆ (ಅ). ೧. ಉಪ್ಪು ಅಥವಾ ಕಾರವಿಲ್ಲದೆ ; ರುಚಿಯಿಲ್ಲದೆ : ಈ ದಿನ ಸಾರು ಸಪ್ಪಗಿದೆ (ರೂಢಿ). ೨. (ಆಲಂ) ಉತ್ಸಾಹವಿಲ್ಲದೆ : ಕಳಾಹೀನವಾಗಿ : ಅಕ್ಕ ಹೇಳಿದಳು, ನೀನೇನೋ ಸಪ್ಪಗಿದೀ ಅಂತ (ನಡೆದಾ. I, [illegible]); ಮುಖ ಸಪ್ಪಗೆ ಮಾಡಿಕೊಂಡು . . . ನೋಡತೊಡಗಿದ (ಹೊಸಕ್ಷ. ೧೨೨).

ಸಪ್ಪಗಾಗು = ಉತ್ಸಾಹವಿಲ್ಲವಾಗು ; ಕಳಾಹೀನವಾಗು : ರಾಜಮ್ಮೆದ್ದೆನ ಮೋರೆ ಸಪ್ಪಗಾಯಿತು (ಮಚಸ. ೧೯) ; ಮದುವೆಯ ಸಾಲವೆಂದೊಡನೆ ಪದ್ಮಾವತಿಯ ಮುಖ ಸಪ್ಪಗಾಗುವುದು (ಅಶೋಕ. ೧೯). [ಸಪ್ಪ$_1$ (<ಸಪ್ಪೆ) + - ಅಗ್ಗೆ$_3$]

ಸಪ್ಪಟೆ, ಸಪ್ಪಡಿ (ನಾ). ರುಚಿಯಿಲ್ಲದುದು : ಸಪ್ಪಟೆಯನುಂಡರೇನೋ ಸ್ತ್ರೀಯರ ಅಪ್ಪುಗೆ ಬಿಡದನ್ನಕ್ಕರ (ವಚಶಾ. I. ೩೧೭). ಸಪ್ಪಡಿ : ಸಪ್ಪಡಿ ಮೆಲುವಾಗ ಉಪ್ಪಿನ ಯೋಚನೆ ಉಪ್ಪು ದೊರೆತಾಗ ಸೊಪ್ಪಿನ ಯೋಚನೆ (ಮೋಕ್ಷದೀ. ೪೯-೪).

[ದೇ ॥ ಮಲ. ಚಪ್ಪಟ್ಟ ; ತುಳು . ಚಪ್ಪಟು ; ತೆಲು. ಚಪ್ಪಿಡಿ ; ಗಡಬ. ಸಪ್ಪೇಟೆ]

ಸಪ್ಪಡಿ 'ಸಪ್ಪಟೆ' ನೋ.

ಸಪ್ಪದ (ನಾ). ದುಂಬಿ ; ಭ್ರಮರ : ಸಿಪ್ಪಿಟ್ಟು ಕರೆದುಕೊಂಡುವು ಸಪ್ಪದಮು [ಪಾಶಾಂ. ಸಪ್ಪಾದು, ಉಪ್ಪಾದು] ಪ್ಪಳದಿನೊಜೆವ ನಱುವಂಡುಗಳಂ (ಲೀಲಾವ. ೯-೮೬).

[< ಸಂ. ಷಟ್ಪದ]

ಸಪ್ಪನೆ, ಸಪ್ಪಾನೆ (ಅ). = ಸಪ್ಪಗೆ ೧: ಉಪ್ಪು ಸಪ್ಪನೆಯಕ್ಕು ಕರ್ಪುರವು ಕರಿದಕ್ಕು . . . ಶ್ರವಣ ತಾ ತಪ್ಪಾಡಿದಂದು (ಸರ್ವಜ್ಞ. ೧೦೧೭). ಸಪ್ಪಾನೆ : ಉಪ್ಪಿಲ್ಲದ ಪಾರಕ್ಕಿನ ಸಪ್ಪಾನೋಗರದೊಳಾಮ್ಮವೇಱೊದ ಕಳಿಯಂ ತಪ್ಪದೆ ಕಲಸಿಕ್ಕೆ (ಪ್ರಣ್ಯಾಸ್ರ. ೩-೯೬).

ಸಪ್ಪಸಪ್ಪನೆ (ದ್ವಿರುಕ್ತಿ) : ಸಪ್ಪಸಪ್ಪನೆ ರಸಂ (ಶಮದ. ೧೯೩ ಪ್ರಯೋ).

[ಸಪ್ಪ$_1$ (< ಸಪ್ಪೆ) + - ಅನೆ$_1$]

ಸಪ್ಪಳ್ 'ಸಪ್ಪುಳ್' ನೋ.

ಸಪ್ಪಳ$_1$ 'ಸಪ್ಪುಳ್' ನೋ.

ಸಪ್ಪಳ$_2$ 'ಸಪ್ಪಳ' ನೋ.

ಸಪ್ಪಳಿಗ (ನಾ). ಓಲಗ ಊದಿ ಶಬ್ದವನ್ನುಂಟುಮಾಡುವವನು : ಸಪ್ಪಳಿಗರು: ಇವರು ಕಾನಡಾಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ . . . ಇವರ ಮುಖ್ಯ ಹೋರೆಯು ಬಜಂತ್ರೀ ಊದುವುದೆ (ಕಭಾಗ. ೧೯೭); ಈ ಮೋಗೇರರು ಎಣ್ಣೆ ತೆಗೆಯುವ ವೃತ್ತಿಯಿಂದ ಗಾಣಗರೆಂಬುದಾಗಿಯೂ, ಸಂಗೀತದ ಕಸುಬಿನಿಂದ ಸಪ್ಪಳಿಗರೆಂಬುದಾಗಿಯೂ . . . ಕರೆಯಲ್ಪಡುತ್ತಾರೆ (ತುಳುನಾ. ೨೨೪). [ಸಪ್ಪಳು (< ಸಪ್ಪುಳ್) + - ಇಗ]

ಸಪ್ಪಳು 'ಸಪ್ಪುಳ್' ನೋ.

ಸಪ್ಪಾನೆ 'ಸಪ್ಪನೆ' ನೋ.

ಸಪ್ಪುರಿ (ನಾ). ಗಟ್ಟಿಯಾಗಿರದ ದಾರ ; ಸಪ್ಪೆದಾರ ; ಸಪ್ಪೆನೂಲು : ಆ ಮನೆಯ ದ್ವಾರಮಂ ಪೊಕ್ಕು . . . ಸಪ್ಪುರಿಯ ದಾರವಂ ಮುಪ್ಪುರಿಯಂ ಮಾಡಿ (ಕರಚಾ. ೨-೨೧ ವ). [< ಸಪ್ಪೆ + ಹುರಿ$_2$ (< ಪುರಿ)]

ಸಪ್ಪುಳ್, ಸಪ್ಪಳ್, ಸಪ್ಪಳ$_1$, ಸಪ್ಪಳು, ಸಪ್ಪುಳ, ಸಪ್ಪುಳು, ಸೊಪ್ಪುಳ್, ಸೊಪ್ಪುಳ (ನಾ). ಶಬ್ದ; ಸದ್ದು; ದನಿ : ನಸುಮುಚ್ಚಿದ ವಿಲೋಚನದಿನಿಳಿದು ಪೆರ್ಮೊಲೆಯ ಕೆಲದೊಳ್ಪಿನಿವ ಕಣ್ಪನಿಯ ಸಪ್ಪುಳ್ಗೆ ಪೆರ್ವಳಿಸಿ ಬೞಿದೆ ಕಂಪಿಸುವಳ್ (ವರ್ಧಪು. ೪-೫೮ ವ) ; ಬಂದನೊ ಬಭ್ರುವಾಹನಂ ಸಪ್ಪುಳಿದು ಪೊಸತೆತ್ತಣದೊ ಸೈನ್ಯಮೆನೆ (ಜೈಮಿಭಾ. ೨೫-೧೨). **ಸಪ್ಪಳ್** : ''ಸಪ್ಪಳುಲಿಯು ಗಾವಳಿ ಮಿಗೆಯಬ್ಬರಮುಂ ಧ್ವನಿ ವಿವರರಿಂ'' (ಕವಿಕಂ. ೧೧೭). **ಸಪ್ಪಳ$_1$** : ಬೀಸುವ ಕಲ್ಲ ಸಪ್ಪಳಕ್ಕೆ ಕೈಬಳೆಗಳ ಝಣತ್ಕಾರ ಕೂಡಿಸಿ (ಕನ್ನಕಾ. ೭೫); ಅದರ ಸಪ್ಪಳ ಮಾರ್ದನಿಸುತ್ತಿತ್ತು ಸುಂದರಿಯ ಕಿವಿಯಲ್ಲಿ (ಹಳ್ಳಹಾ. ೧೧೮). **ಸಪ್ಪಳು** : 'ಸಪ್ಪಳಿಗೆ' ಪರಾ. **ಸಪ್ಪುಳ** : ಮುಂದೆ ಬರ್ಪ ವಿಕ್ರಮಾರ್ಜುನನ ಪಾದಾಭಿಘಾತದೊಳುಚ್ಚಳಿಸುವ ನೀರ ಸಪ್ಪುಳಮಂ ಕೇಳ್ದು (ವಂಪಭಾ. ೩-೩೩ ವ); ಝಣಝಣಸಪ್ಪುಳದೊಂದಿಗೆ ಹಣವೆಲ್ಲ ಗೌಡರುಡಿಯನ್ನು ಸೇರಿತು (ಹಬ್ಬಬ. ೫೩). **ಸಪ್ಪುಳು** : ಓತು ಪದಗಳ ಸಪ್ಪುಳಾಗದ ರೀತಿಯಲಿ ನಡತಂದು ಕಂಡನು (ಉತ್ತಕ. ೩೩-೩೪); ಕಂಠದುಲಿ ಸಪ್ಪುಳಾಗದಂತೆ ಮಾರನುರುಬೆಯ ತೀರ್ಚಿ ಮನೆಗೆ ಕಳುಪುವುದು (ವಂಕಾರಾ. ೫-೨-೪೧). **ಸೊಪ್ಪುಳ್** : ಎನ್ನ ಪಾಪಕರ್ಮನ ಕತದಿಂದಮಿಾ ನಿಮಗಮಿಾಯಿರವಾದುದೆ ಸಿಂಧುನಂದನಾ ಎಂದು ಪಶ್ಚಾತ್ತಾಪಂಗೆಯ್ಯುತುಂ ಮುಂಬರ್ಪ ತನ್ನ ಮೊಮ್ಮನ ಕಾಲ ಸೊಪ್ಪುಳಂ ಕೇಳ್ದು (ಗದಾಯು. ೫-೪೦ ವ); ನೆಲಗಟ್ಟಿನ ಪಲಗೆಯನಪ್ಪಳಿಸಿದ ಸೊಪ್ಪುಳಂ ಕೇಳುತ್ತೆ (ಚಿಕವಂ. ೭೪-೬). **ಸೊಪ್ಪುಳ** : (೫).

[ದೇ ॥ ತೆಲು. ಚಪ್ಪುಡು.]

ಸಪ್ಪುಳ$_1$ 'ಸಪ್ಪುಳ್' ನೋ.

ಸಪ್ಪುಳು 'ಸಪ್ಪುಳ್' ನೋ.

ಸಪ್ಪೆ, ಚಪ್ಪೆ, ಸಪ್ಪ$_1$ (ನಾ). ೧. ರುಚಿಯಿಲ್ಲದುದು : ಉಪ್ಪು ಬಿಟ್ಟು ಸಪ್ಪೆಯನುಂಡರೆ ಅದು ಮನದ ಹೇಸಿಕೆಯಲ್ಲದೆ ದೃಢವ್ರತವಲ್ಲ (ಮಡಿಮಾ. ೧೮-೩೩); ನಿಸ್ಪೃಹದ ಸಪ್ಪೆಯೇ ಹೆದಿಮೂಱನೆಯ ಶೀಲವ್ರ (ವೀಶತ. ೭-೧೭-೩೭) ; ಉಪ್ಪು ಸಪ್ಪೆಯಾದರೂ ಖಾರ ಬಿಡದು (ಗಾಡ). ೨. (ಆಲಂ) ಉತ್ಸಾಹವಿಲ್ಲದುದು ; ನೀರಸವಾದುದು: ರಾಜಕುಮಾರಿಯು ಸಪ್ಪೆಯ ಮುಖ ಹಾಕಿಕೊಂಡು ಕುಳಿತಿದ್ದಳು (ಪಂಚಾಮೃ. ೧೦೧); ಸಾತ್ಯಕನನ್ನೂ ಉಪಶಾಂತನನ್ನೂ ಕಂಡರೆ ಅವನು 'ಸಪ್ಪೆ'ಯೆಂದು ಅವರಿಗೆ ತಿರಸ್ಕಾರ (ಬಂಮ. ೨೦೯). (ಗು). ೩. ಕಟುವಲ್ಲದ ; ತೀಕ್ಷ್ಣವಲ್ಲದ : ಸಪ್ಪೆಔಷಧವನ್ನು ಕೊಟ್ಟು (ಡೀವೀಚಾ. ೫೬). ೪. (ಆಲಂ) ನೀರಸವಾದ; ಶುಷ್ಕ: ಸಪ್ಪೆಕವಿ ರಸಭರಿತ ಕವಿರಾಜನಪ್ಪನೇಂ (ಪರಶು. ೧-೧೮); ಸಪ್ಪೆ-ಬಾಳುವೆಗಿಂತ ಉಪ್ಪು ನೀರೂ ಲೇಸು (ಸಪೀಗೀ. ೧-೧೭). **ಚಪ್ಪೆ$_2$** : (೫). **ಸಪ್ಪ$_1$** : ೧. 'ಸಪ್ಪಗೆ', 'ಸಪ್ಪನೆ' ಪರಾ.

ಸಪ್ಪೆಜೀವನ = (ಆಲಂ) ನೀರಸವಾದ ಬಾಳು ; ಶುಷ್ಕಜೀವನ: ಏನುದುಡಿಯದ ಸಪ್ಪೇಜೀವನ ತೀರ ವ್ಯರ್ಥದ ಜೀವನ (ಎಜದ. ೧೭-೧). **ಸಪ್ಪೆಮುಖ** = (ಆಲಂ) ಗೆಲುವಿಲ್ಲದ ಮುಖ ; ಪೆಚ್ಚುಮುಖ : ರಮಾ ಸದಾ ಸಪ್ಪೆಮುಖವನ್ನು ಹಾಕಿಕೊಂಡಿರುವವಳಲ್ಲ (ದೂರಸ. ೪೩). **ಸಪ್ಪೆಮೋರೆ** = ಸಪ್ಪೆಮುಖ : ಸಂಕಪೂಜಾರಿಯೂ . . . ಮಂಗಳದಾಸನೂ ಸಪ್ಪೆಮೋರೆ ಹಾಕಿಕೊಂಡು ಜನಸಮೂಹದ ಮಧ್ಯೆ ನುಣುಚಿಕೊಂಡು ಹೋಗುತ್ತಿದ್ದರು (ಪಂಜಪಂ. ೨೨೭).

[ದೇ. ॥ತಮಿ. ಚಪ್ಪೈ ; ಕೊಡ. ತುಳು. ಚಪ್ಪೆ; ತೆಲು. ಚಪ್ಪ ; ನಾಯ್ಕಿ. ಸಪ್ಪೆ ; ಪರ್ಜ. ಚಪ್ಪೆ; ಗದಬ, ಸಪ್ತಾ, ಸಪ್ಪೆ]

ಸಪ್ಪೆಗರೆ (ಕ್ರಿ). ರುಚಿಯಿಲ್ಲದಾಗು ; ಸಪ್ಪೆಯಾಗು : ಕೈಗೆ ಕಾಫಿ ತಿಂಡಿ ಬರಲಿಲ್ಲ. ಬಾಯಿ ಸಪ್ಪೆಗರೆಯುತ್ತಿತ್ತು (ಗಂಗಾಳ. ೮). [ಸಪ್ಪೆ + ಕರ್]

ಸಪ್ಪೆತನ (ನಾ). ನಿರುತ್ಸಾಹ; ಬೇಸರ: ತನಗೆ ಈ ಸಪ್ಪೆತನದ ಕಾರಣ ತಿಳಿದವನಂತೆ ಅವನೇ ಸಮಾಧಾನ ಹೇಳಲಾರಂಭಿಸಿದ (ಆಲಹೂ. ೮೨). [ಸಪ್ಪೆ + - ತನ]

ಸಪ್ಪೆತುಪ್ಪ 'ಸಪ್ಪೆದುಪ್ಪ' ನೋ.

ಸಪ್ಪೆದಾರ (ನಾ). ಹೂವು ಕಟ್ಟುವುದು ಮೊದಲಾದುವಕ್ಕೆ ಉಪಯೋಗಿಸುವ ಗಟ್ಟಿಯಾಗಿರದ ದಾರ ; ಟೊಳ್ಳುದಾರ : ಅಂಗಡಿಯಲ್ಲಿ ಒಂದು ಉಂಡೆ ಸಪ್ಪೆದಾರ ತೆಗೆದುಕೊಂಡು ಬಾ (ಠೂಫಿ). [ಸಪ್ಪೆ + ದಾರ]

ಸಪ್ಪೆದುಪ್ಪ, ಸಪ್ಪೆತುಪ್ಪ (ನಾ). ಉಪ್ಪು, ಅರಿಸಿನ, ಮೆಂತ್ಯದ ಪುಡಿ ಇತ್ಯಾದಿ ಸಂಭಾರ ಹಾಕದೆ ಕಾಯಿಸಿದ ತುಪ್ಪ : ವಡವಾರದ ಸೊಪ್ಪು ೧ ಹಿಡಿ . . . ಸಪ್ಪದುಪ್ಪದಿಂ ಮೆಲ್ಲಲು ಹೊಟ್ಟೆರಕ್ತಂ ಮಾಣ್ಗುಂ (ಸಕವ್ಯ. ೩೧೧). **ಸಪ್ಪೆತುಪ್ಪ**: ದೇಹಾನುಗುಣವಾಗಿ ಸಪ್ಪೆತುಪ್ಪ ತೆಗೆದುಕೊಳ್ಳಿ, ಶರೀರವು ಪುಷ್ಟಿಯಹುದು (ಸಕವ್ಯ. ೧೧೭). [ಸಪ್ಪೆ + ತುಪ್ಪ]

ಸಪ್ಪೆನಗೆ (ನಾ). (ಆಲಂ) ನೀರಸವಾದ ನಗೆ ; ಶುಷ್ಕನಗೆ: ನೀರ್ಗಂಪು ತುಟಿಯಲ್ಲಿ ಸಪ್ಪೆನಗೆ ಹರವುತಿದೆ (ಗಂಗಾವ. ೬೧-೧೩) ; ಸವೆದು ಸಣಕಲಾಗಿ ಬಳಿಬಿಕೊಂಡಿದ್ದ ಸಪ್ಪೆನಗೆಯ ಮಗುವನ್ನೆತ್ತಿಕೊಂಡಿದ್ದ ಹೆಂಗಸೊಬ್ಬಳು ಮಕ್ಕಳ ಹಿಂದೆ ನಿಂತಿದ್ದಳು (ಪುಸರು. ೨೮೨). [ಸಪ್ಪೆ + ನಗೆ]

ಸಪ್ಪೆನೂಲು (ನಾ). = ಸಪ್ಪೆದಾರ : ಸಪ್ಪೆನೂಲು ಮುಗಿದು ಹೋಗಿದೆ (ಠೂಫಿ).

[ಸಪ್ಪೆ + ನೂಲು$_2$ (< ನೂಲ್$_2$)]

ಸಪ್ಪಳ, ಸಪ್ಪಳ್$_2$ (ನಾ). ಒಳ್ಳೆಯ ಫಲ ; ಸತ್ಫಲ : ಮೇಲಣ ತತ್ಕಕ್ಕೆ ಫತ್ಯಂ - ಸತ್ಫಲ -ಸಪ್ಪಳ (ಶಮದ. ೨೬೫ ಪ್ರಯೋ) ; **ಸಪ್ಪಳ್$_2$** : ಸಪ್ಪಳಮಾದುದು ಕೆಳೆಯೆಂದುಪ್ಪಳಮಂ ಚಂದ್ರನಬ್ಜಮಂ ರವಿಬಿಂಬಂ ಒಪ್ಪಿರೆ ಪರಾಗಪರಿಮಳವೊಪ್ಪುಗುಮಾ ನಗದ ನೆತ್ತಿಯಬ್ಜಾಕರದೊಳ್ (ಲೀಲಾವ. ೭-೧೦೬); ಸತ್ಫಲ, ಸಪ್ಪಳ; ವೃಷಭ, ಬಸವ (ಶಬ್ದಾನು. ೧೭೦ ವ್ಯಾಖ್ಯಾ). [< ಸಂ. ಸತ್ಫಲ]

ಸಪ್ರಪಂಚಂ (ಅ). ಸವಿವರವಾಗಿ : ಖಚರಪತಿಯನೆಯ್ದೆ ತತ್ಪ್ರಪಂಚಮಂ ಸಪ್ರಪಂಚಮಱಿಪಿ (ಆದಿಪು. ೨-೪೫ ವ) ; ಕಂಡ ಕನಸುಗಳೆಲ್ಲಮಂ ಸಪ್ರಪಂಚಮಱಿಪಿ (ಚಾವುಂಪು. ೧೬). [ಸಂ.]

ಸಪ್ರಮಾಣ (ನಾ). ಆಧಾರಸಹಿತವಾದುದು ; ಪ್ರಮಾಣದಿಂದ ಕೂಡಿದುದು : ಇವಕ್ಕೆ ಏನು ಆಧಾರವೋ ಇವು ಎಷ್ಟು ಸಪ್ರಮಾಣವೋ ತಿಳಿಯದು (ಬಂಮ. ೧೬ ಮುನ್ನುಡಿ); ನಾನು ಪ್ರತ್ಯಕ್ಷವಾಗಿ ಕಂಡಿಲ್ಲವಾದರೂ ಹೇಗಿರಬೇಕೆಂದು ಸಪ್ರಮಾಣವಾಗಿ ಊಹಿಸಿದ್ದೇನೆ (ದೀಪ್ಯ. ೩೩). [ಸಂ.]

ಸಪ್ರಯಾಸ (ಅ). ೧. ಆಯಾಸದಿಂದ ಕೂಡಿ; ದಣಿವು ಹೊಂದಿ. ೨. ಪ್ರಯತ್ನಪೂರ್ವಕವಾಗಿ: ಅವಳು ಸಪ್ರಯಾಸವಾಗಿ ಕೋಪಾಶ್ರುಗಳನ್ನು ನುಂಗಿಕೊಂಡು . . . ಓಡಿಹೋದಳು (ಪುಸರು. ೩೨೪). [ಸಂ.]

ಸಪ್ರಯಾಸಂ (ಅ). = ಸಪ್ರಯಾಸ ೧ : ನರರ ಮೇಲುರ್ಬಿ ಕಬ್ಬಂಗಳಂ ಬಿತ್ತರಿಸುತ್ತಂ ಸಪ್ರಯಾಸಂ ಕಬ್ಬಿಕೆಲರಕಟಾ ಕಬ್ಬಿಗರ್ ಕೆಟ್ಟುಪೋದರ್ (ರಾಜಶೇ. ೧-೧೯).

[< ಸಪ್ರಯಾಸ]

ಸಪ್ರವೀಚಾರ (ನಾ). [ಜೈನ] ಇಂದ್ರಿಯಜನ್ಯವಾದ ಸೌಖ್ಯ : ಸಮಧಿಗತಮಾನ ಸಾಮ್ಯತಾಹಾರರುಂ ಸಪ್ರವೀಚಾರಾನಂತಗುಣನಿಷ್ಪ್ರವೀಚಾರಸುಖರುಂ . . . ಸುಖಮಿರ್ಪಿನಂ (ಚಾವುಂಪು. ೩೧). 'ನಿಷ್ಪ್ರವೀಚಾರ' ಪರಾ. [< ಸಂ. ಸಪ್ರವಿಚಾರ]

ಸಪ್ರಸಾದವಚನ (ನಾ). ಅನುಗ್ರಹಪೂರ್ವಕವಾದ ಮಾತು : ದವನಕನಂ ಸಪ್ರಸಾದವಚನಂಗಳಿಂ ಸಂತಸಂಬಡೆ ನುಡಿದು (ಪಂಚತಂ. ೫೮-೨). [ಸಂ.]

ಸಪ್ರಾಣ (ನಾ). ಪ್ರಾಣಸಹಿತವಾದುದು ; ಜೀವಸಮೇತವಾದುದು : ಶ್ರದ್ಧೆ ತಾಂ ಸಪ್ರಾಣವಾಗುವೋಲಮೃತತರ್ಪಣವಿತ್ತು (ಶ್ರೀರಾಮಾ. ೧೭೭-೪೨೪). [ಸಂ.]

ಸಪ್ರಾಣಿಸು (ಕ್ರಿ). ೧. ಜೀವೋತ್ಕರ್ಷವನ್ನು ಹೊಂದು ; ಚೈತನ್ಯವನ್ನು ಪಡೆ : ಕಂದ ಬಳಲಿದೆ ಜೀವವಿದು ನಿನ್ನಿಂದ ಸಪ್ರಾಣಿಸಿತು (ತೊರರಾ. ೫-೩-೯೫) ; ಪ್ರಾಣವೈತರಲೊಡಲು ಸಲೆ ಸಪ್ರಾಣಿಸುವವೋಲ್ (ನಭಾಗ. ೩-೧-೩೭); ಒಂದು ಕಣೆವೂಡಿ ಕರ್ಣಪ್ರದೇಶಕೆ ತೆಗೆದವಂ ಬಿಡಲ್ಕಿವನುರವನುಗಿಯೆ ಮೈಮಱೆದು ಕೂಡೆ ಸಪ್ರಾಣಿಸುತೆ ಕೆರಳ್ದನ್ನು ನೋಡೀ ಸಾಯಕಪ್ರಭಾವವನೆನುತೆ . . . ಸರಳಂ ತೊಟ್ಟು ಕೆನ್ನೆಗೆಳೆದಾರ್ದೆಚ್ಚನಾ ನೃಪನನು (ಜೈಮಿಭಾ. ೪-೪೨). ೨. ಜೀವ ಪಡೆಯುವಂತೆ

ಮಾಡು ; ಬದುಕಿಸು : ಪಿಡಲದಕ್ಕೆಗೆ ಸಪ್ರಾಣ(ಸಿ)ಸ [ಪಾಠಾಂ. ಸತಾಣಿಸ]ದೊಡೆ ತುಳಿಸಿ ಗುಡ ಸಿತಂ ಹಿತಮಕ್ಕುಂ (ಪಮದ. ೨-೧೪೯). [ಸಪ್ರಾಣ + - ಇಸ್ಕು]

ಸಫಲ (ಗು). ೧. ಫಲಕಾರಿಯಾದ ; ಸಾರ್ಥಕವಾದ : ದೂರದಲ್ಲಿ ನೀರಿದೆಯೆಂದು ತಿಳಿದು ಅಲ್ಲಿಗೆ ಹೋಗಿ ನೀರಿದ್ದರೆ ಸಫಲಪ್ರತಿಯೆಂದೂ . . . ತಿಳಿಯುತ್ತೇವ (ಹಿಂದಸಾ. ೧೩೭). **(ನಾ).** ೨. ಫಲವನ್ನು ಹೊಂದಿದುದು; ಸಾರ್ಥಕವಾದುದು: ಸಫಲಮೆನೆ ನೃಪನ ಲೋಚನಶಫರಕ್ಕೊದವಿಸಿದುದುತ್ಸುಕಾಮೃತಮಂ (ಲೀಲಾವ. ೧೪-೯೧) ; ಅಂಗನೆ ನಿನ್ನ ಜನ್ಮ ಸಫಲವಾಯ್ತು (ಬಾಪು. ೫-೩೫); ಕೌಸಲೆ ಕುಮಾರರ ಪದೆದು ಹಡೆದುದೆ ಸಫಲ (ಕುವ್ಯಾಉ. ೮-೨೨). [ಸಂ.]

ಸಫಲಗೊಳಿಸು (ಕ್ರಿ). ಫಲಪ್ರದವಾಗುವಂತೆ ಮಾಡು ; ಫಲಕಾರಿಯಾಗಿಸು : ಜೀವನವು ದೊರತಿಹುದು . . . ಸಫಲಗೊಳಿಸದ ಚೆನ್ನೆ ವಿಫಲವಾಗುವ ಮುನ್ನ (ಕಲ್ಕೋಲ. ೯-೧೧). [ಸಫಲ + ಕೊಳ್, + - ಇಸ್ಕು]

ಸಫಲಿತ (ಗು). ಫಲಕಾರಿಯಾದ ; ಸಾರ್ಥಕವಾದ : ಕುಸುಮವಿಶಿಖವಿಕಾರ ವಿದೂರನನುಭವಸುಖಿ ಸಫಲಿ[ಪಾಠಾಂ. ಲ]ತಾಮೋಘಸಮಧುರ ಸತ್ಯಸಲ್ಲಾಪಿ (ಬಾಪು. ೩೨-೨). [ಸಂ.]

ಸಫಲೀಕೃತ (ಗು). ಸಾರ್ಥಕಗೊಳಿಸಿದ : ಅವನತರಿಪುಸಮಾಜನುಂ ಸಫಲೀಕೃತಾರ್ಥಿ ನಿಚಯಾಶನುಂ ವಿಶದಯಶಃಕಬಳಿತಾಶನುಮೆನಿಸಿ (ಚಂದ್ರಪ್ರ. ೨-೬೫). [ಸಂ.]

ಸಫಾಯಿ, ಸಪಾಯಿ (ನಾ). ೧. ಸ್ವಚ್ಛಗೊಳಿಸುವುದು; ನೈರ್ಮಲ್ಯ ; ಅಚ್ಚುಕಟ್ಟು: ಮರಗಳನ್ನೆಲ್ಲಾ ಕಡಿದು ಸ್ವಲ್ಪ ಕಾಡು ಸಫಾಯಿ ಮಾಡಿದ್ದೇನೆ (ಬಾಳಿ. ೪೩) ; ಹೀಗೆ ಸಾಗಿತು ಸಫಾಯಿ ಯಜ್ಞ (ಅಪನಾ. ೧೪೪). **ಸಪಾಯಿ : ೨. (ಆಲಂ)** ತೀರಿಸುವುದು; ಮುಗಿಸುವುದು : ಇವನನ್ನು ಅಲ್ಲಿ ಕೆಲಸಕ್ಕಿಟ್ಟರೆ . . . ಒಂದೇ ಸಾರಿ ಸಾಲ ಪೂರಾ ಸಪಾಯಿ ಮಾಡಿಬಿಡಬಹುದು (ಮೂಮಗು. ೧೫೦). [← ಅರ. ಹಿಂ. ಮರಾ. ಸಫಾಈ]

ಸಬ್‌ರಿಜಿಸ್ಟ್ರಾರ್ (ನಾ). ನೋಂದಣಿ ಅಧಿಕಾರಿ : ಸಬ್‌ರಿಜಿಸ್ಟ್ರಾರರ ಕಡೆ ಹೋಗಿಬಿಡೋಣ (ತಿರುಗು. ೫೩). [← ಇಂ. Sub-registrar]

ಸಬ, ಶಬ, ಶ್ರವ್, ಸವ್ (ನಾ). ಜೀವವಿಲ್ಲದ ಶರೀರ ; ಹೆಣ ; ಶವ : ''ಸಬವನೆ ಕುಣಪ'' (ಶಬ್ದಮಂ. ೪೫) ; ಅದಟರ ಚೆನ್ನಪೊಂಗರ ಸಬಂಗಳ ತೊಬ್ಬುಲಿಯೊಳ್ ತೊಡಂಕಿ ನಿಲ್ದ ಪೊ[ಅವುಟ್ಟ]. . . ಕರ್ಬಸುಗಳ್ ಪರಿಗೊಂಡುವಾಜಿಯೊಳ್ (ಪಂಪಭಾ. ೮-೧೦೪) ; ದುಷ್ಟದಕ್ಷನ ಸಭೆಗೆ ಬಂದ ವಾಣಿಯ ಮೂಗು ಮೊಟ್ಟಾಯ್ತು ಹರಿಯ ಸಬ ಬಿದ್ದಿತ್ತು (ರಾಘಚ. ೪-೨೦). **ಶಬ :** ಮಹಾಕಾಳ ಶ್ಮಶಾನದೊಳಗೆ . . . ನಿಷ್ಕಂದಶರೀರನಾಗಿ ಮೆಲ್ಲನಡಕಂಬೆರಸು ಪಟ್ಟರ್ದ ಋಷಿರೂಪಕಮಂ ಕಂಡು ಶಬಮೆಂದೆ ಸಾರ್ದು (ಸುಜಮಾ. ೧೨-೨೪ ವ); ಯೋಗಿಯ ಶಬಂ ಬಯಲ ನೆಮ್ಮಿ ನಿಲೆ ಕಂಡು ಬೆಜಗಾಗುತ್ತ (ಷಡ್ಗರಾ. ೪-೩೮) . **ಶ್ರವ್ :** ಇದದಿರು ಮಗನು ನೊಂದಾನು ಶಿವಶಿವ ಎಂದು ಒಡನೆ ಬಿದ್ದಳು ಶ್ರವಗೂಡಿ (ಪದಿಸಾ. ೮೧-೫೪) ; ಶ್ರವವ ಹೊತ್ತವ ಮಸಣದೊಳು ಹಾಯ್ಕುವೊಲು . . . ಕಡಗಾಲದೊಳು ಬಿಸುಡುವುದೆ ಸಂತಾನಫಲವುಂ (ಶಂಕದಾ. ೧೭-೧೨). **ಸವ್ :** ''ಸವವೆಂದು ಶಬಂ'' (ಕಶಾ. ೫೮-೨೭೫).

[< ಸಂ. ಶವ]

ಸಬಕ 'ಚಬುಕು' ನೋ.

ಸಬಕಾರ 'ಚಬುಕಾರ' ನೋ.

ಸಬತಿಗೆ (ನಾ). (ಉಕ) ನೊಗ ಮತ್ತು ಎತ್ತಿನ ಕುತ್ತಿಗೆಗೆ ಸೇರಿಸಿ ಕಟ್ಟುವ ನಾರಿನ ಅಥವಾ ಚರ್ಮದ ಹಗ್ಗ ; ಜೊತ್ತಗೆ : ಸಬತಿಗೆ ಬಿಚ್ಚಿ ನೊಗ ಇಳಿಸಿದನು (ರೂಢಿ). [?]

ಸಬನಿ (ನಾ). ಒಂದು ಪ್ರದೇಶದ ಹೆಸರು : ತತ್ಪಶ್ಚಿಮತಃ ಸಬನಿಯ ತಟಾಕದ ದಕ್ಷಿಣದ ಕೊಂಡಿ (ಸೌಣಾ. XX. ೬-೨೨ ; 730). [?]

ಸಬನೀಸು, ಸಬ್ಬನಿಸ (ನಾ). ಸೈನ್ಯದಲ್ಲಿನ ಲೆಕ್ಕಪತ್ರಾಧಿಕಾರಿ : ಕೇಳ್ದು ಸಬನೀಸು ಕೋಳಿವಾಡದ ಬೊಮ್ಮಯ್ಯ (ಕಳವ್ಯ. ೯-೮೨). **ಸಬ್ಬನಿಸ :** ಬೊಮ್ಮ ಬರಪಮೆನೆ ಬ್ರಹ್ಮಲಿಖಿತವಂದು ಸಬ್ಬನಿಸ ಬೊಮ್ಮಯ್ಯನ ಕಳ್ಯೋಲೆಯೆಂದುಮೆರಡು ಮರ್ಧಂಗಳ್ (ಅಪ್ರಾ. ೧೨೫-೧೩). [← ಮರಾ. ಸಬನೀಸ ; ಪಾರ. ಸ್ಯನ್ವೀಸ್]

ಸಬಬು 'ಸಬೂಬು' ನೋ.

ಸಬರ$_1$ (ನಾ). ಬೇಡ ; ಶಬರ : 'ಸಬರವಡೆ' ಪರಾ. [< ಸಂ. ಶಬರ]

ಸಬರ$_2$, ಸಬರು, ಸಬರೆ (ನಾ). ೧. ಎತ್ತು, ಕುದುರೆ ಮೊದಲಾದವುಗಳ ಬೆನ್ನಿನ ಮೇಲೆ ಹಾಕುವ ಹೂದಿಕೆ ; ಕವುದಿ : ''ಬಲುಗೋಣ ಕಂದಳಿಕೆ ಕವುದಿಗಳೆಯ್ದೆ ಸಬರಮಕ್ಕುಂ'' (ಮಂಗರಾ. ೧೦೨-೩); ತೋಱುವ ತೋಲ್ಕೆ ಸಬರ[ಪಾಠಾಂ. ರೆ] ಮುಟ್ಟಾಗಿ . . . ಚಿತ್ರವನಲ್ಕೆಯದ ಭಾವ ಎತ್ತಾಗಿ (ಸಚವ ಕ. II. ೬೫೪-೨೬); ಸಬರ ಮಾಟ್ಟದಳ ಮೋಳ ಮುಂತಾದ ವೆಚ್ಚವಿರಾಡವನು (ಸೌಣಾ. IX - ii. ೪೩೩-೫೦; 1408); ಸಾಧು ಎತ್ತಿಗೆ ಜೋಡು ಸಬರ (ಗಾಡ). ೨. ಜೀನು; ತಡಿ; ಹಲ್ಲಣ : ಕಳಚು ತೇರ್ ತೇಜಿಗಳ ಕೊರಳ ನೊಗಗಳನೆತ್ತುಗಳ ವೇರ್ಗಳಂ ನೂಂಕಿ ಬಿಡು ಸಬರಮಂ ಜೀವಧನಕೆ ನೀರ್ಗಳನೀಂಟಿಸು (ಚಬುಪು. ೪೮-೩೦). **ಸಬರು:** ೩. ಕುದುರೆಯ ಬಸಿರು, — ಗಬ್ಬ : ಕುದುರೆಯ ಸಬರು ನಿಲ್ಲುವುದಕ್ಕೆ ಬೆಳಗಾರವಂ ಹಸಿ ಹಾಲಲ್ಲೆರೆವುದು (ಅಶ್ವಚೀ. ೧೦೯-೪). **ಸಬರೆ:** ೪. ಗಬ್ಬವಾದುದು; ಬಸಿರಾದುದು: ಸಬರೆಯಾದ ಗೋಳಿಗೆಗೆ ಹಾಲ ಕುಡಿಸಲು ಲೇಸು (ಅಶ್ವಚೀ. ೪೬-೯). [← ಮರಾ. ಸಬರ, ಸಭರ./ ಸಂ. ಸಭರ ?]

ಸಬರವಡೆ (ನಾ). ಬೇಡರ ಸೈನ್ಯ ; ಶಬರರ ಪಡೆ : ಇಂತಪ್ಪ ಸಬರವಡೆಯ ಕಳಕಳಕ್ಕೆ ನಡುನಡುಗಿ ಕೆಲವು ಮೃಗಂಗಳ್ ತಾರುಂತಟ್ಟುವೀಱುತ್ತ (ಕುಸುಮಾ. ೧೪-೬೦ ವ). [ಸಬರ$_1$ + ಪಡೆ]

ಸಬರಿ (ನಾ). ಬೇಡರ ಹೆಂಗಸು ; ಬೇಡಿತಿ ; ಶಬರಿ : ಬನದೊಳಿಡೆಯಾಡುವ ಸಬರಿಯರ ನಡೆಯನೇಡಿಸುವಂತೆ (ಕಬ್ಬಕಾ. ೧೪). [< ಸಂ. ಶಬರೀ]

ಸಬರು 'ಸಬರ$_2$' ನೋ.

ಸಬರೆ 'ಸಬರ$_2$' ನೋ.

ಸಬಲ (ಗು). ೧. ಶಕ್ತಿಯಿಂದ ಕೂಡಿದ; ಬಲಶಾಲಿಯಾದ : ಸಬಲ ಕಾರಣಗಳಿಂದ . . . ಸ್ವಲ್ಪ ಹಿಂಚುಮುಂಚು ಇರಬಹುದೆಂದು ತಿಳಿಯಬಹುದು (ದ್ರಾವಿ. ೫೬). ೨. ಸೈನ್ಯದಿಂದ ಕೂಡಿದ. **(ನಾ).** ೩. ಬಲಶಾಲಿ ; ಶಕ್ತಿವಂತ : ಸಬಲರೆಂಬ ಹೆಸರಿಗೆ ಯೋಗ್ಯರೆಂದುಕೊಂಡಿದ್ದ ಗಂಡಸರೇ . . . ಬಡಿಸುವ ಹೊರ ಹೊತ್ತರು (ಪುಸು. ೬೪೩); ದುರ್ಬಲವು ಸಬಲಕ್ಕೆ ಆಹಾರ (ವಚಭಾ. ೩೨೯). [ಸಂ.]

ಸಬಲೆ$_1$ (ನಾ). ಬಲಿಷ್ಠಳಾದ ಹೆಂಗಸು; ಸಶಕ್ತಳಾದವಳು: ಹೆಂಗಸರು ದೇಹದಲ್ಲಿ ಅಬಲೆಯರಾಗಿರಬಹುದು, ಮನಸ್ಸಿನಲ್ಲಿ ಸಬಲೆಯರೇ (ಬಂಟಮ. ೧೨೭). [ಸಬಲ + - ಎ$_3$]

ಸಬಲೆ$_2$ (ನಾ). ಒಂದು ಬಗೆಯ ಸಸ್ಯ : (ಮೃಡಿಗಿ. ೬೬-೧೩೪೯). [ಸಂ. ಸಬಲಾ]

ಸಬಸಿ (ನಾ). ಒಂದು ಬಗೆಯ ತರಕಾರಿ ಸೊಪ್ಪು : ಅರಿಸೀಣ ಬಳ್ಳೊಳ್ಳಿ ಸಬಸಿ ಬಿತ್ತುವ ಬಾಳಾ (ಗಜಪ್ರ. ೬೩). [< ಸಬ್ಬಸಿಗೆ]

ಸಬಳ (ನಾ). ೧. ಈಟಿ ; ಭರ್ಜಿ ; ಕೊಂತ : ''ಕುಂತಮನಲು ಸಬಳಂ'' (ಪುಂಗರಾ. ೮೮-೩೭); ಸಬಳದ ತುದಿಯಲ್ಲಿ ಬಿರಿದ ಕಟ್ಟಿ ಅದರ ತಲೆವಿಡಿಯ ತೊಡಗಿದಡೆ ನಾನಲ್ಲ (ಸರ್ವಜ್ಞ. ೨೬-೧೧೫); ದುರಾತ್ಮಕ ಸಾಕಿದೊಡೆಯನನಿಜೆದ ಸಬಳವಲೆ (ಕುವ್ಯಾಸ. ೧೦-೧೮); ಸಾಧಿಸಿದರೆ ಸಬಳ ನುಂಗಬಹುದು (ಗಾಡ). ೨. ಈಟಿಯ ಮುದ್ರೆಯಿರುವ ಒಂದು ಬಗೆಯ ನಾಣ್ಯ : 'ಸಬಳದೆಲೆ' ಪರಾ.

ಸಬಳತ್ರಿಣೇತ್ರ = ಶಿವನ ಮೂರನೆಯ ಕಣ್ಣಿನಂತೆ ತೀಕ್ಷ್ಣದೃಷ್ಟಿಯುಳ್ಳವನು; ಒಂದು ಬಿರುದು (?): ''ಸಬಳಸಹಸ್ರಬಾಹು ಸಬಳ ತ್ರಿಣೇತ್ರರುಮೆಂದು ಮಾಜಿಂಕವಂ'' (ಕಬ್ಬಿಕೃ. ೯೬); ಸಬಳಕ್ಕೆ - ಸಬಳಗದ್ಯಾಣ, ಸಬಳತ್ರಿಣೇತ್ರ, ಸಬಳದೆಲೆ, ಸಬಳವಿನ್ನಣಿ (ಶಮದ. ೨೯೮ ಪ್ರಯೋ).

[< ಸಂ. ಸರ್ವಲಾ. / ತೆಲು. ಸಬಡಿ, ಸಬಳ]

ಸಬಳಗದ್ಯಾಣ (ನಾ). = ಸಬಳ ೨ : ಸಬಳಗದ್ಯಾಣ, ಸಬಳತ್ರಿಣೇತ್ರ (ಶಮದ. ೨೯೮ ಪ್ರಯೋ). [ಸಬಳ + ಗದ್ಯಾಣ]

ಸಬಳಗದ್ಯಾಣದೆಲೆ (ನಾ). ಸಬಳಗದ್ಯಾಣದ ತೆರಿಗೆ : ಪೂಮಾಲೆದುಱುಂಬು, ಸಬಳಗದ್ಯಾಣದೆಲೆ (ಶಮದ. ೨೯೮ ಪ್ರಯೋ). [ಸಬಳಗದ್ಯಾಣ + ತೆಲೆ$_3$]

ಸಬಳಗೆಜ್ಜೆ (ನಾ). ಭರ್ಜಿಗೆ ಕಟ್ಟುವ ಗೆಜ್ಜೆ (?) : ಏರುತ್ತಿರುವ ಬೊಂಬುಳಿಯ ಝುಲ್ಲಳಿಯ ಸಬಳಗೆಜ್ಜೆಗಳ, ತಳಾರಗೋಲ ಗಗ್ಗರಿಗಳ ಬಾಜಣೆ (ಮಂತ್ರಶ. ೩೦-೫).
[ಸಬಳ + ಗೆಜ್ಜೆ]

ಸಬಳಗೋಲು (ನಾ). ಈಟಿಯ ಕೋಲು ; ಭರ್ಜಿಯ ಕೋಲು ; ತನ್ನ ಕೆಯ್ಯ ಸಬಳಗೋಲ ತುದಿಯನ್ನೊತ್ತಿ ಆತನನ್ನು ಹಿಮ್ಮೆಟ್ಟಿಸಿ (ಬಿಜಗಂ. ೩೫-೧೬).
[ಸಬಳ + ಕೋಲು$_1$ (< ಕೋಲ್$_1$)]

ಸಬಳದೆಜೆ (ನಾ). = ಸಬಳಗದ್ಯಾಣದೆಜೆ : ಸಬಳದೆಜೆ, ಸಬಳವಿನ್ನಣಿ (ಶಮದ. ೨೯೮ ಪ್ರಯೋ). [ಸಬಳ + ತೆಜ್ಜೆ$_3$]

ಸಬಳವಿನ್ನಣಿ (ನಾ). ಈಟಿಯ ಪ್ರಯೋಗದಲ್ಲಿ ನಿಪುಣ : "ಸಬಳವಿನ್ನಣಿ ಸಬಳಗದ್ಯಾಣ . . . ಸಬಳತ್ರಿಣೇತ್ರರುಮೆಂದು ಮಾಱಂಕವಂ" (ಕಬ್ಬಿಕ್ಕ. ೯೬); ಸಬಳವಿನ್ನಣಿ, ಸಬಳಸಹಸ್ರಬಾಹು (ಶಮದ. ೨೯೮ ಪ್ರಯೋ).
[ಸಬಳ + ಬಿನ್ನಣಿ (< ಬಿನ್ನಾಣ್ಣಿ$_2$)]

ಸಬಳಿಕೆ (ನಾ). ಈಟಿಯ ಪ್ರಯೋಗದಲ್ಲಿರುವ ಕೌಶಲ, – ನೈಪುಣ್ಯ (?): ಸಬಳಿಕೆಯಿಂ ಪಾಟಿಯನೊಕ್ಕು ಬೇರನಂತಾ ಕುಬೇರನಾಯಕನತಿವಿಕ್ಲಬಚಿತ್ತಂ ತೊಟ್ಟಗೆ ತಾಗಿ ಬಾಗಿದಂತಾಗಿ ಬಾಗಿದಂ ನರನಡಿಯೊಳ್ (ಕಾವ್ಯಾವ. ೫೪೪).
[ಸಬಳ + - ಇಕೆ]

ಸಬಳಿಗ (ನಾ). ಈಟಿಯನ್ನು ಆಯುಧವಾಗುಳ್ಳವನು ; ಕೊಂತವನ್ನು ಹಿಡಿದು ಯುದ್ಧ ಮಾಡುವವನು : ಕೊರ್ಬಿದ ಬಿಲ್ಬಡೆಗೆ ಪಡಲ್ತೆರ್ಬಿದರೆಟ್ಟಂದು ಸಬಳಿಗರ್ಸುರರಿಪುವಂ (ಉದ್ಭಟ. ೪-೭೨); ಅವಘಟಿಸಿದರು ರಥಿಕರುರವಣಿಸಿದರು ಸಬಳಿಗರು (ಕುವ್ಯಾಕ. ೧೨-೨೨); ಜೋಡುಸೀಸಕವಾಂತ ಸಬಳಿಗರು (ಮೋಹತ. ೨೦-೫೪).
[ಸಬಳ + - ಇಗ]

ಸಬಿಂದುಕ (ನಾ). [ವ್ಯಾಕ] ಬಿಂದುಸಹಿತವಾದ ಶಬ್ದರೂಪ : ಕೆಲವು ಪದಂಗಳ್ ವಿಕಲ್ಪದಿಂ ಸಬಿಂದುಕಮಬಿಂದುಕಮಾಗಿರ್ಪುವು (ಶಮದ. ೩೬ ವೃತ್ತಿ). 'ಅಬಿಂದುಕ' ಪರಾ. [ಸಂ.]

ಸಬು (ನಾ). ದೇವರು; ಭಗವಂತ : ಕೇಶವ ಸಬು ಜಗನ್ನಾಥ ಕೇಳ್ ನಿನ್ನಯ ದಾಸರ ದಾಸ ನಾನೆಸೆ (ಮೋಹತ. ೩೬-೯); ಸ್ವಯಂಬೂ- ಸಯಂಬು; ಸ್ವಭೂ-ಸಬು (ಶಬ್ದಾನು. ೧೫೧ ಪ್ರಯೋ). [< ಸಂ. ಸ್ವಭೂ]

ಸಬುಕಾರ (ನಾ). ಒಂದು ಬಗೆಯ ಕ್ಷಾರ, – ಉಪ್ಪು (?): ಕ್ಷಾರತ್ರಯ ಕಟುಕತ್ರಯಮಾರಯ್ಯಲ್ ಕಿಡಿಸುಗುಂ ಮರುದ್ವಹ್ನಿಗಳಂತೋರಂತಿರುರಿಪುಗುಂ ಸಬುಕಾರದ ಮದಮೆಂಬವನಮನಿದು ಕೇವಳಮೇ (ಖಮದ. ೨-೭೨). [?]

ಸಬುದ, ಶಬುದ (ನಾ). ಸದ್ದು ; ಉಲಿ ; ಶಬ್ದ : ಸುರಗಿ ಚಕ್ರಂ ಮುದ್ಗರಂಗಳಾ ಸಬುದದಿಂದೊಗೆದ ಕಿಡಿ ಗಜಗಲಿಸೆ (ಹಚಕಾ. ೫-೧೩); ಶಬ್ದ - ಸಬುದ, ಸರ್ಪಪ - ಸರುಸಪ (ಶಮದ. ೨೫೪ ಪ್ರಯೋ); ಸೋ ಅನ್ನು ಸಬುದವ ಯಾರು ಮಾಡ್ಯಾರ ಗುರುವೆ (ಲೋಕಗೀ. ೧). ಶಬುದ : ಎನ್ನ ತನುವಪ್ಪದಿರಲಾಱದಯ್ಯ ಎನ್ನ ಶಬುದ ಹೊಗಳಿದಲ್ಲದೆ ಸ್ಥಿರಿಸದಯ್ಯ (ಅನಚಂ. ೨೧೭-೯೩೩) . [< ಸಂ. ಶಬ್ದ]

ಸಬೂಬು, ಸಬಬು (ನಾ). ಕಾರಣ ; ನೆವ ; ನೆಪ : ವೆಂಕಟಣ್ಣ ಏನೇನೂ ಸಬೂಬು ಹೇಳಿ ನುಣುಚಿಕೊಂಡಿದ್ದನು (ಮಲಮ. ೪೧೫); ಸೊಂಟನೋವು ಅಂತ ಸಬೂಬು ಹೇಳಿದ (ಚಂಗೂಲಿ. ೩೫). ಸಬಬು : ಮಹಂಮದುಪತ್ತಾಹುಲ್ಲಾಸಾಬರು ಪ್ಯಾದೇರ ಭರ್ತಿಮಾಡಿಯಿದ್ದ ಸಬಬೂ ಪತ್ತೆನಾಯಕರೆಂಬ ಹೆಸರು ವಾಡಿಕೆ ಆಯಿತು (ಹೈದರ. ೨೯); ಯಾವನೊಬ್ಬನೂ ಸರಿಯಾದ ಸಬಬು ಇಲ್ಲದೆ ಕೆಲಸ ಮಾಡುವದಕ್ಕೆ ನಿರಾಕರಿಸಿದರೆ (ಗ್ರಾಮಾಕ. ೧೮). [← ಅರ. ಹಿಂ. ಸಬಬ್ ; ಮರಾ. ಸಬಬ]

ಸಬ್ಬಾಗಿಡ (ನಾ). ಒಂದು ಬಗೆಯ ಸಸ್ಯ : ಕಮಗಗ್ಗರೆ, ಕಾಮಕಸ್ತೂರಿ, ಸಬ್ಬಾಗಿಡ (ಮೃಚಿಗಿ. ೫೭-೧೧೪೫). [< ಸಬ್ಬೆ + ಗಿಡ (< ಗಿಡು)]

ಸಬ್ಬೆ (ನಾ). = ಸಬ್ಬಾಗಿಡ : ಅಂಗಳದಿ ಬೆಳೆಸಿದ್ದ ಬಂಗಾರಗೊಂಡೆ ಹೂ, ಸಬ್ಬೆ, ದಾಸಾಳ, ಕರಿತುಳಸಿ, ಬಿಳಿನಿತ್ಯಪುಷ್ಪ ಎಲ್ಲ ದಿಕ್ಪಾಲು (ಸಮ್ಯಧ್ಯ. ೫-೨೫).
[?/ ಹಿಂ. ಸಬ್ಬಾ = ತರಕಾರಿ, ಹಸಿರು ಸೊಪ್ಪು]

ಸಬ್ಬ$_1$, ಸರ್ಬ$_1$ (ನಾ). ಶಿವ ; ಶರ್ವ : "ಎಣ್ಮೆಯ್ಯಂ . . . ಸಬ್ಬಂ . . . ಅಯ್ಮೊಗಂ – ಈ ೩೩ ಈಶ್ವರಂಗೆ ಪೆಸರ್" (ಕಶಾ. ೪೭-೧); ಸಬ್ಬ ಶಬರನ ಮಂಡೆಯಲಿರಲ್ ಕುಱುಹು (ಚತುಪು. ೪-೩-೨೬); ಸಬ್ಬನಬ್ಬರಂ ಕಡಿದಾಯ್ತು (ರಾಮಾಶ್ವ. ೧೩೧-೨೭). ಸರ್ಬ$_1$: ಇರ್ಬರೊಂದಾಗಿ ನಲಿನಲಿದು ತಕ್ಕೈಸುತಂ ಸರ್ಬನ ಗಣಂಗಳೊಳು ಪರಮಸುಖವೊಂದುತಂ (ಬಸರ. ೧೧-೨೨); ಸರ್ಬಂಗೆ ಭಿಕ್ಷಾನ್ನಮಂ ನೀಡಲೆಂದು ಮತ್ತೊರ್ಬಳಾಲಸ್ಯಗಮನೆ ನಡೆದುಬರುತಿರೆ (ಭಿಕ್ಷಾಚ. ೩-೨೬). [< ಸಂ. ಶರ್ವ, ಸರ್ವ]

ಸಬ್ಬ$_2$, ಸರುವ, ಸರ್ಬ$_2$ (ಸ). ಎಲ್ಲ ; ಸಮಸ್ತ ; ಸರ್ವ : "ಸಬ್ಬಂ ಸರ್ವಂ" (ಕರ್ಣಾನಿ. ೫೨); ಗಬ್ಬಿದಾನವನ ಪಟ್ಟಣದ ಸಬ್ಬ ಜನರು ತಬ್ಬಿಬ್ಬುಗೊಳಲು ಊರಬ್ಬರ ಪಿರಿದಾಯ್ತು (ತ್ರಿಪುಸಾಂ. ೧೬-೧೮೩); ಸಬ್ಬಲೋಕದೊಳೆ ಜಾನಿಸುವರಿಂ ನಸಿವರಿಂ ಪೇಳಲದ್ಭುತಮಾದುದು (ಚಿಪು. ೪೬-೨೦). ಸರುವ : ಇವಱಲೋಗರವ ಮಾಡಿ ಸರುವ ತೃಪ್ತಿಯ ಕೊಟ್ಟು ಭರಿತರಾಗಿರ್ಪರಿನ್ನಾರು ಹೇಳಾ (ಚೆನ್ನವ.ಕ. ೪೪೬-೯೪೩); ಸರುವ ಶ್ರುತಿಸ್ಮೃತಿವಾಕ್ಯಗಳ ಕ್ರೋಡಿಸಿ ಉರುತರದ ಗ್ರಂಥಗಳ ರಚಿಸಿ ಶಿಷ್ಯರಿಗೊರೆದ ಪರಮಾಂತಃಕರುಣೆಯ (ವಾದಿಕೀ. ೧೬-೨೬). ಸರ್ಬ$_2$: ಸರ್ಬಕಳಾಕುಶಲೆಯರೀ ಬರ್ಬರೆಯ ಕಿರಾತೆಯನ್ನರಾರ್ (ಶಾಂತಿಪು. ೩-೫೬); ತುಬ್ಬಿನವದಿರು ತಂದು ಬಿಸುಟರು ನಿಮ್ಮ ಪಾಳೆಯದ ಸರ್ಬವೃತ್ತಾಂತವನು (ಕುವ್ಯಾಶ. ೧-೨೮).

ಸಬ್ಬರು, ಸರುವರು, ಸರ್ಬರು = ಎಲ್ಲರೂ ; ಸಮಸ್ತಜನರೂ : ನೋಡಿ ಸಬ್ಬರಾನಂದಿಸಿದರು (ಚತುಪು. ೨-೫-೩೫); ಸಬ್ಬರಂ ಮನವಾರೆ ತಣಿಸಿದುದರಿಂದ (ಮಹಾಂತೇ. ೩೧-೨೮); ಒಂದು ವರಶಕ್ತಿ ಸರುವರಿಗನುಗ್ರಹಂ ಮಾಡುವಂತಾಗಿ ಶಿವರೂಪಮಾದುದು (ವೀಶೈಪು. ೬-೨-೩೨); ಹಿರಿಯರು ಬನ್ನಿ ಕಿರಿಯರು ಬನ್ನಿ ಸರುವರು ಐತನ್ನಿ (ಅಗ್ನಿಹಂ. ೨೪); ಮನದೊಳನುರಾಗಿಸಲು ಸರ್ಬರು [ಪಾಣಾಂ. ಸರ್ವರು] ಮುಂದೆ ನಲವೇಱೆ ಮುನಿವರೇಣ್ಯರು ನಡೆಯಲು (ಬಸಪು. ೩೨-೩೧); ಹಚ್ಚಿದಾ ಜ್ವಲನಕೀಲಾಳಿ ಕರ್ಕಶಳಾಗಿ ಸರ್ಬರಕ್ಷಿಗಳಿಗೆಸೆದಳ್ (ಮಲ್ಲಾರಿ. ೬-೧೭).
[< ಪ್ರಾ. ಸಬ್ಬ./ ಸಂ.ಸರ್ವ. / IP ಸಂಸ್ಕೃತದಲ್ಲಿ ವಕಾರ, ಬಕಾರಗಳ ಅಭೇದದಿಂದ 'ಸರ್ಬ' ಎಂಬ ರೂಪವನ್ನೂ ಸಂಸ್ಕೃತವೆನ್ನುವ ಸಾಧ್ಯತೆ ಇದೆ]

ಸಬ್ಬಂಗೆಯ್ (ಕ್ರಿ). ಹಾಸ್ಯಮಾಡು ; ಅಣಕಿಸು (?) : ಭಂಗಂ ಪೋಗದವಂಗೆನುತ್ತ ಸಲೆ ಸಬ್ಬಂಗೆಯ್ದನಾ ತಾಣದೊಳ್ (ವೀರವಿ. ೬-೧೩೫). [< ಸಬ್ಬವ + ಕೆಯ್$_1$]

ಸಬ್ಬಕ್ಕಿ 'ಸಾಬುಅಕ್ಕಿ' ನೋ.

ಸಬ್ಬಗತ (ನಾ). ಸರ್ವವನ್ನೂ ವ್ಯಾಪಿಸಿರುವವನು ; ಸರ್ವಾಂತರ್ಯಾಮಿ : ಸಬ್ಬಗತನೆ ಶಿವಶಿವಾ . . . ಎನುತಡಿಗಡಿಗೆ ಬೆಱಗಾದ (ಕುವ್ಯಾಭೀ. ೩-೬೭).
[< ಸಂ. ಸರ್ವಗತ]

ಸಬ್ಬನಿಸ 'ಸಬನೀಸು' ನೋ.

ಸಬ್ಬಮಂಗಳೆ (ನಾ). ಪಾರ್ವತಿ ; ಶರ್ವಾಣಿ ; ಸರ್ವಮಂಗಳೆ : "ಸಬ್ಬಮಂಗಳೆಯೆನಲ್ಕೆ ಪೆಸರಪ್ಪುದು ಶರ್ವಾಣಿಗೆ" (ಕಶರ. ೧೦೧).

ಸಬ್ಬಮಂಗಳೆಯಣುಗ = ಸರ್ವಮಂಗಳೆಯ ಮಗ ; ಷಣ್ಮುಖ : "ಸಬ್ಬಮಂಗಳೆಯಣುಗನು ಸಲೆ ನವಿಲ್ದೇರನಿಂಗಳ ಮಗಂ . . . ಅಱುಮೊಗನೆನಲು ಗುಹನ ಪೆಸರಪ್ಪುದು" (ಶಬ್ದಮಂ. ೫). [< ಸಂ. ಸರ್ವಮಂಗಲಾ]

ಸಬ್ಬಲಗ್ಗೆ, ಸರ್ಬಲಗ್ಗೆ (ನಾ). ೧. ಸಕಲಬಲದೊಡನೆ ಮಾಡುವ ದಾಳಿ; ಸಾಮೂಹಿಕ ಮುತ್ತಿಗೆ : ಒಬ್ಬರಿಬ್ಬರೆ ನಿನಗೇನು ಕಡಮೆಯಾಯ್ತು ಸಬ್ಬಲಗ್ಗೆಯೊಳಿದ ಹೆಣ್ಣು (ಭರಚ. ೯-೧೧೧); ಸನ್ನೆಯ ದುಂದುಭಿರವದಿಂದನ್ನೆಱೆಯುರ್ಬೇಱೆ ಸಬ್ಬಲಗ್ಗೆಗೊಳಲ್ಕಿಂದೆನ್ನ ಬಿಡು ತನ್ನ ಬಿಡೆನುತ್ತೇನ್ನೆರೆದುದೊ ಬೀರರಂಬಿನಂ ಬೆಲೆವೆಣ್ಗಳ್ (ಚಕವಿ. ೬-೧೫೩). ಸರ್ಬಲಗ್ಗೆ : ೧. ಕೌರವೇಂದ್ರನು ಸರ್ಬಲಗ್ಗೆಯ ಹರುಷದಲಿ ಹೊಱವಂಟನರಮನೆಯ (ಕುವ್ಯಾಕ. ೫-೧೧); ಚತುರ್ಬಲ ಸರ್ಬಲಗ್ಗೆಯೊಳೆಂಬ ಕಯ್ಸನ್ನೆಯೊಳ್ ಮನ್ನೆಯರ್ . . . ವೇಡಯ್ಸಿ ಬರಲು (ಚಿಪು. ೪೭-೩೦). ೨. ಸಕಲವಾದ್ಯಗಳ ಘೋಷ : ಬೊಬ್ಬೆಗಳ ಪಟಹದ ಮೃದಂಗದ ಸರ್ಬಲಗ್ಗೆಯ ಸೋಹನಲಿ ಸುಳಿವಬ್ಬರಕೆ ಹಿಂಡೊಡೆದು ಹಾಯ್ದವು (ಕುವ್ಯಾಅ. ೧೩-೨೫).
[ಸಬ್ಬ$_2$ + ಲಗ್ಗೆ]

ಸಬ್ಬಲು (ನಾ). ಹಾರೆ ; ಸಲಾಕಿ : ಸಬ್ಬಲುಹಾಕಿ ಮೀಂಟದ ಕುರುಹು ಕಾಣಬರುತ್ತಿತ್ತು (ಮಣ್ಣಿನಂ. ೭೭) ; ಅವನ ಹಿಂದೆ ವೆಂಕಪ್ಪಯ್ಯನವರೂ ಒಂದು ಸಬ್ಬಲು ತೆಗೆದುಕೊಂಡು ಸಾಗುತ್ತಿದ್ದರು (ಪರಾವ. ೬೧). [← ತುಳು. ಸಬ್ಬಲ್]

ಸಬ್ಬವ, ಸರ್ಬವ (ನಾ). ೧. ಕೂಟ ; ಮೇಳ ; ಸಾಹಚರ್ಯ : "ಸಬ್ಬವವೆಂದು ಮೇಳಂ" (ಶಮದ. ಪರಿ. ೧); ತನ್ನ ಬೇಸಱಂ ತನ್ನ ಸಬ್ಬವದಾಕೆಗಿಂತೆಂದಳ್ (ಪಂಪಭಾ. ೪-೯೯ ವ); ಪರಿವೆಸದಾಳ್ಗಳ್ ದೇವಿಯರ ಮೆಚ್ಚಿ ನಿಚ್ಚಯ ದಾವಣಿಯೊಳಗೆನಿಸಿ ನೆಗೞ್ದ ಸಬ್ಬವದವರ್ಗಳ್ (ವರ್ಧಮಾ. ೬-೪೯). ೨. ಹಾಸ್ಯ; ಚೇಷ್ಟೆ: "ಸಬ್ಬವಂ ಹಾಸ್ಯನಾಮಂ" (ಕರ್ಣಾಟ. ೫೨); ನಗೆ ಸಬ್ಬವಂ ಬಿನದಮೆಂಬಿವಱಿಂ ಲಲಿತಾಂಗನಂ ಮನಂಗೊಳಿಸುವರ್ . . . ಸಗ್ಗದ ದೇಸಕಾರ್ತಿಯರ್ (ಆದಿಪು. ೨-೭೧); ಸಬ್ಬವ ನಗೆನುಡಿಗಾಱರ ಕಳುಪುತೆ (ಉದ್ಯದೇ. ೪-೪೫); ಕಬ್ಬದ ಪವಣಂತುಟವನ ಸಬ್ಬವ ನುಡಿಗಳ್ (ಚಿಕವಿ. ೬-೧೦೯). Δ ಸರ್ಬವ : ೨. ಆ ವಿದೂಷಕಂ ಸರ್ಬವದೊಳೆಲ್ಲರಂ ನಗಿಸುತ (ಚಿಬಪು. ೧೦-೨೫).

ಸಬ್ಬವಕಾರ 'ಸಬ್ಬವಗಾಱ' ನೋ

ಸಬ್ಬವಕಾರ್ತಿ 'ಸಬ್ಬವಗಾರ್ತಿ' ನೋ.

ಸಬ್ಬವಕಾಱ 'ಸಬ್ಬವಗಾಱ' ನೋ.

ಸಬ್ಬವಗಾಱ, ಸಬ್ಬವಕಾರ, ಸಬ್ಬವಕಾಱ (ನಾ). ಹಾಸ್ಯಗಾರ ; ವಿದೂಷಕ: ಆಸ್ಥಾನವಲ್ಲಭನ ಮನಮನಱಿದು ನಗಿಸುವ ಕುಬ್ಜ ವಾಮನ ಬಧಿರ ಮೂಕರ್ ಮೊದಲಾದ ಪಲಕೆಱದ ಸಬ್ಬವಗಾ[ಱಾರಂ. ಕಾ]ಱರಿಂ (ಜಗವಿ. ೨-೩೯ ವ). **ಸಬ್ಬವಕಾರ** : "ಸಬ್ಬವಕಾರನೆಂದೆನೆ ವಿದೂಷಕನ ನಾಮ" (ಕಶರ. ೧೦೧); ಅವನ ಮಗನಾದ ಸಬ್ಬವಕಾರನನ್ನು ಕರೆದುಕೊಂಡು ಬಾ (ನಗಗ. ೭೦). **ಸಬ್ಬವಕಾಱ**: "ಸಬ್ಬವಕಾಱನೆಂದು ಪರಿಹಾಸಕಂ" (ಕಶಸಾ. ೬೯-೩೫೯); ದೇವನ ಬೇಂಟೆಯುಱ್ಬುಗದ ಸಬ್ಬವಕಾಱರ ಡಿಂಡಿಮಾರವಂ ತೀವಿದುದಾ ಮಹಾಕಟಕದೊಳ್ (ಶಬಶಂ. ೩-೨); ನೀಂ ಕಬ್ಬಿಗನೋ, ಸಬ್ಬವಕಾಱನೋ (ರಾಮಾಶ್ವ. ೧೧೮-೨೪). [ಸಬ್ಬವ + - ಕಾಱ]

ಸಬ್ಬವಗಾರ್ತಿ, ಸಬ್ಬವಕಾರ್ತಿ (ನಾ). ಮೇಳದ ಹೆಂಗಸು; ಜೊತೆಯವಳು: "ಸಬ್ಬವಗಾರ್ತಿಯೆನೆ ಮೇಳದಾಕೆ" (ಕಬ್ಬಿಕೃ. ೨೭). **ಸಬ್ಬವಕಾರ್ತಿ** : "ಸಬ್ಬವಕಾರ್ತಿಯೆಂದು ಮೇಳಗಾರ್ತಿ" (ಕಶಸಾ. ೬೨-೩೭೮) ; ನಾಟ್ಯಮಂ ರಚಿಸೆ ಸಬ್ಬವಕಾರ್ತಿಯರ್ (ಕಮಮಾ. ೩-೨೧); ಓರ್ವ ಸಬ್ಬವಕಾರ್ತಿ ತನ್ನೆಡೆ ಸಂದಿರ್ದ ಪೆಣ್ಮಾಣಗಳಂ ನೋಡಿ (ಮರಾಚ. ೫-೧೦೭). [ಸಬ್ಬವಗಾಱ + - ತ್ತಿ$_1$ (< - ಇತ್ತಿ)]

ಸಬ್ಬಸ 'ಸರ್ಬಸ್ವ' ನೋ.

ಸಬ್ಬಸಗಿ 'ಸಬ್ಬಸಿಗೆ' ನೋ.

ಸಬ್ಬಸಗೆ 'ಸಬ್ಬಸಿಗೆ' ನೋ.

ಸಬ್ಬಸಿಕೆ 'ಸಬ್ಬಸಿಗೆ' ನೋ.

ಸಬ್ಬಸಿಗೆ, ಸಬ್ಬಸಗಿ, ಸಬ್ಬಸಗೆ, ಸಬ್ಬಸಿಕೆ, ಸಬ್ಬಸೀಗೆ (ನಾ). ಒಂದು ಬಗೆಯ ತರಕಾರಿ ಸೊಪ್ಪು: "ಮಂಜುಪತ್ರಿ . . . ಕಾರವಿ - ಈ ೭ ಸಬ್ಬಸಿಗೆ" (ನಾಚರಾ. ೧೧೧); "ಶತಪುಷ್ಪಿಯನೆ ಸಬ್ಬಸಿಗೆ" (ಮಂಗರಾ. ೪೦-೩೭); ಸಬ್ಬಸಿಗೆಯನರೆದಿಕ್ಕೆ ಮರನ ಮೊದಲೊಳದಂ ಸೇಕಿಸುವುದು (ಲೋಕೋಪ. ೬-೧೪); ಸಬ್ಬಸಿಗೆ ಸಾಸವೆ ಮುಂತಾದ ಪ್ರತಿಹೇಱೊಂದಕ್ಕಂ (ಎಕ. V. ಬೇಲೂರು. ೭೫-೧೦೨: 1382); ಅರಿಸಿನ ಕಟುಕರೋಹಿಣಿ ಸಬ್ಬಸಿಗೆ . . . ಸೊಗದೆ ಇವಿಷ್ಟನೂ . . . ಚೂರ್ಣಿಸಿ (ವೃದ್ಧಸಾ. I. ೧೨೩). **ಸಬ್ಬಸಗಿ**: ಇಂಥ ತಂಪು ಎರಿಗಳಲ್ಲಿ . . . ಸಬ್ಬಸಗಿ ಸೋಪು ಗಜರಿ ಬೀಜಗಳನ್ನಾದರೂ ಬಿತ್ತಿದರೂ ಬರುತ್ತದೆ (ಕೃಷಿಪ್ರ. ೭೩); ಮೆಂತೆ ಸಬ್ಬಸಗಿ ಕೋತಂಬರಿ ಕರಿಬೇವ ಸಂತೆಯಲಿ ಸಿಕ್ಕಿದ ಪಲ್ಲೆಗಳ (ಸಿದ್ಧಪು. ೧೭-೪೯) . **ಸಬ್ಬಸಗೆ** : ಮೆಂಥೆಯ ಜೀರಗೆ ಸಬ್ಬಸಗೆ ಕೊತ್ತಂಬರಿ ಅರಿಸಿನ ಉಳ್ಳಿ (ಎಕ. XII. ಪಾವಗ. ೫೦-೫೫; 1248). **ಸಬ್ಬಸಿಕೆ** : "ಶಾಲೇಯಃ . . . ಮಿಶ್ರೇಯಾ - ೬ ಸಬ್ಬಸಿಕೇ ಹೆಸರುಗಳು" (ಸಿದ್ಧಾಂತಿ. ೧೩೭). **ಸಬ್ಬಸೀಗೆ** : "ಅಮರ ಪುಷ್ಪಿಕ - ಸಬ್ಬಸೀಗೆ" (ಅಕಾನಿ. ೧-೩೪); ಕೀರೆ ನಱುವಲು ಚಕ್ಕವತ್ತ ಸೊಲೆ ಸಬ್ಬಸೀಗೆ ಮೊದಲಾದ ಸೊಪ್ಪುಗಳ ಬೇಱೆ ಬೇಱುಕ್ಕರಿಸಿ (ಸೂಪಶಾ. ೪-೧೬) ; ಸಬ್ಬಸೀಗೆಬೀಜಮಂ ರುದ್ರಜಟೆಯಂ ಕೃತಾಂಜಲಿ ಎಂದು ಮುಟ್ಟಿದರೆ ಮುರುಟುವನು (ಕಾಮಶಾ. ೨೬೨). [?]

ಸಬ್ಬಸಿಗೆಘೃತ (ನಾ). ಒಂದು ಬಗೆಯ ಔಷಧಿದ್ರವ್ಯ : ಸಬ್ಬಸಿಗೆಘೃತ . . . ಸೇವಿಸೆ ಹಳೆಯಜ್ವರಂ ಪರಿಹಾರಮಾಗಿ ದೇಹಪುಷ್ಟಿಯಹುದು (ಸಕವೈ. ೧೨೫).

[ಸಬ್ಬಸಿಗೆ + ಘೃತ]

ಸಬ್ಬಸಿಗೆಮಾವು (ನಾ). ಒಂದು ಬಗೆಯ ಮಾವು : (ಮುಂಬಯಿ.ಕ. ೨-೬೪).

[ಸಬ್ಬಸಿಗೆ + ಮಾವು]

ಸಬ್ಬಸೀಗೆ 'ಸಬ್ಬಸಿಗೆ' ನೋ.

ಸಬ್ಬಾಣಿ (ನಾ). ಪಾರ್ವತಿ ; ಶಿವೆ; ಶರ್ವಾಣಿ : "ಮಾಕಾಳಿ, ಮಾದೇವಿ, ಸಬ್ಬಾಣಿ . . . ಸಿಂಗದೇರಳ್ - ಈ ೫ ಪಾರ್ವತಿಯ ಪೆಸರ್" (ಕಶಸಾ. ೪೭-೩); ಲೇಸಿನಲಿ ಕಡಲಣಿಗೆ ಸಬ್ಬಾಣಿಯರು ಪಾಡಿಪರು (ಕುವಲ. ೧೬೬-೨).

ಸಬ್ಬಾಣಿಯಾಣ್ಮ = ಪಾರ್ವತಿಯ ಗಂಡ ; ಶಿವ : ನರನಲ್ಲವೆಂದು ಸಬ್ಬಾಣಿಯಾಣ್ಮನಹುದಕಟಕಟ ಕೆಟ್ಟೆ ನಾಂ . . . ಎನುತೆ (ಚತುಪು. ೪-೩-೨೬).

[< ಸಂ. ಶರ್ವಾಣೀ]

ಸಬ್ಬಿನಾಡು (ನಾ). ಒಂದು ನಾಡಿನ ಹೆಸರು: ಭಟಾರರ ಗುಡ್ಡಂ ಜಿನವಲ್ಲಭಂ ಸಬ್ಬಿನಾಡ ನಟ್ಟ ನಡುವಣ ಧರ್ಮವುರದುತ್ತರ ದಿಗ್ಭಾಗದ ವೃಷಭಗಿರಿ (ಶಾಸಸಂ. ೯-೯; ಸು. 950). [ಸಬ್ಬಿ$_0$ + ನಾಡು]

ಸಬ್ಬು$_1$ (ನಾ). ಸಾಬೂನು : ಬೆಳಗುವ ಸಬ್ಬಿನ ಗುಳ್ಳೆಯಂತೆಯೋ, ವಾಯುಮಂಡಲವನ್ನು ಬೇಗನೆ ಸೀಳಿ ದಾರಿಬಿಡಿಸಿಕೊಂಡು . . . ಒಂಟಿಯಾಗಿಯೂ ಇರುವುದು (ಚ್ಯೋತಿರ್ವಿ. ೧೮೬). [< ಸಬಕಾರ. / ತೆಲು. ಸಬ್ಬು]

ಸಬ್ಬು$_2$ (ನಾ). ಸ್ತಬ್ಧ ; ಪ್ರಶಾಂತ : ನಿದ್ದೆ ಬರಲೊಲ್ಲದು ಹನ್ನೆರಡು ಬಡಿದು ಹೋಯಿತು ಎಲ್ಲ ಕಡೆ ಸಬ್ಬಾಗಿದೆ (ಅನ್ನ. ೩೦೧). [< ಸಂ. ಸ್ತಬ್ಧ?]

ಸಬ್ಬುತಿರುಗು (ಕ್ರಿ). (?) : ಬರೆಪದೊಳರ್ಥದೊಳಿಮ್ಮಡಿ ಪರಿವಂತಿರೆ ಪರವನೊಡನೆ ಕೈತವದಿಂದಂ ದೊರೆಕೊಂಡು ತಿಂದು ಲೆಕ್ಕಂ ಪಿರಿದಾದೊಡೆ ಸಬ್ಬುತಿರುಗೆ ತಾಂ ತೆತ್ತಪನೆ (ಮದಕಿ. ೧೦-೭೪). [ಸಬ್ಬು? + ತಿರುಗು$_1$]

ಸಬ್ಬೆ, ಚಬ್ಬೆ, ಚೆಬ್ಬೆ (ನಾ). ಮರದ ಸಣ್ಣಕೊಂಬೆ,— ಕಡ್ಡಿ : (ಕಿ). **ಚಬ್ಬೆ** : ಬರ್ಷ್ ಚಬ್ಬೆಯಿಂದ ತೀಡಿಯಾಯಿತು (ಪುನರು. ೨೩೬). **ಚೆಬ್ಬೆ**: ಬಿಟ್ಟ ಕುದುರೆ ಆರರ್ಕ ಚೆಬ್ಬೆ (ಹುಚ್ಚಪ್ಪ. ೧೪೪). [?. / ತಮಿ. ಚಪ್ಪೈ = ಮರದ ಚಕ್ಕೆ, - ಚೂರು]

ಸಬ್ಬೆಱೆಯ (ನಾ). ಸರ್ವೇಶ ; ಶಿವ : ಸಬ್ಬಱೆಬ್ಬೆಱೆಯ ನಂಜೇಶ ಪೊರೆ ಭಕ್ತರ (ಗುರುಚಾ. ೧೬-೫೬); ಆಱುಮೊಗನೈಯ್ಯ ಸಬ್ಬೆಱೆಯ . . . ರಕ್ಷಿಸುಗೆ ಬಿಡದೆಮ್ಮನು (ರಾಘಚ. ೧-೪). [ಸಬ್ಬು$_2$ (< ಸರ್ಬ) + ಎಱೆಯ]

ಸಭಯ (ಗು). ಭಯಸಹಿತವಾದ ; ಹೆದರಿಕೆಯಿಂದ ಕೂಡಿದ : ಅಭಯವಂ ಬೇಡುತ್ತ ಮತ್ತಂ ಸಭಯಮಾನಸನಾಗಿ ಭಕ್ತಿ ಪ್ರಭವಿಸಲು ತನ್ನಡಿಗಳಿಗೆ ಕೆಡದಿರ್ದವನನೆತ್ತಿ (ಬಸಪು. ೩೦-೩೦). [ಸಂ.]

ಸಭರಿತ (ಗು). ತುಂಬಿರುವ ; ಒಳಗೊಂಡಿರುವ : ನಿಮಗಭಿಮತಾರೋಗಣೆಯನೆಯ್ದಿಸಿ ಸಭರಿತಾರ್ಥದಿ ಮಾಡುವಂತಹ ಭಕ್ತನೇ ನಾನು (ಬಸಪು. ೮-೨೮). [ಸಂ.]

ಸಭರ್ತೃಕೆ (ನಾ). ಗಂಡನನ್ನುಳ್ಳವಳು ; ಸುಮಂಗಲಿ. [ಸಂ. ಸಭರ್ತೃಕಾ]

ಸಭವ (ನಾ). ಜನ್ಮತಳೆದವನು ; ಹುಟ್ಟಿದವನು : ಜೀವಂ ಸಭವನೀ ಶಿವನಭವನಹನು (ಬಸಪು. ೫೧-೨೮). [ಸಂ.]

ಸಭಾಕಂಪ (ನಾ). ಸಭೆಯ ಮುಂದೆ ನಿಂತಾಗ ಉಂಟಾಗುವ ನಡುಕ : ನನಗೆ ಸಭಾಕಂಪ ತಪ್ಪಿಸಿದವರೆಂದರೆ ಕ್ರಿಸ್ತೀಯ ಶ್ರೋತೃಗಳೆ (ಸ್ಮೃತಿಚಿ. ೨೯೧). [ಸಂ.]

ಸಭಾಗೃಹ (ನಾ). ೧. ಸಭೆ, ಸಮಾರಂಭಗಳು ನಡೆಯುವ ಭವನ : ನೋಡಿ ಪೃಥಾತನೂಜರ ಸಭಾಗೃಹದಂದಮನಂತುಟಪ್ಪುದಂ ಮಾಡಿಪೆನೆಂದು ಮಾಡಿಸಿ ಸಭಾಲಯಮಂ (ಪಂಪಭಾ. ೬-೬೮); ಖಗೇಂದ್ರ ಕನ್ನಿಕೆ ನೃಪೇಶ್ವರನಿರ್ದ ಸಭಾಗೃಹಂಬರಂ ಬಂದು (ಶಾಂತಿಪು. ೪-೮೦). ೨. ನಾಟಕ ಮಂದಿರದಲ್ಲಿ ಪ್ರೇಕ್ಷಕರು ಕುಳಿತುಕೊಳ್ಳುವ ಭಾಗ ; ರಂಗಮಂದಿರದ ಎದುರಿನ ಸ್ಥಳ : ರಂಗಮಂಟಪ, ಸಭಾಗೃಹ ನೇಪಥ್ಯಸಂಬಂಧವಾದ ಎಲ್ಲ ವಿಷಯಗಳಲ್ಲೂ ಆಗಿನ ದಿವಸಗಳಲ್ಲಿ ಪಕ್ವವಾದ ಅಭಿಪ್ರಾಯಗಳಿದ್ದಂತೆ ಕಾಣುವುದು (ಚಾಲಪ್ರ. III. ೧೨೯೯). [ಸಂ.]

ಸಭಾಗೇಹ (ನಾ). = ಸಭಾಗೃಹ ೧: ಆ ಸಭಾಗೇಹದೊಳ್ ಉತ್ತಮ ಮಹತ್ತರದೇವರೆರಡುಂ ಕೆಲದೊಳಂ . . . ಸಂದಣಿಸೆ (ಶಾಂತಿಪು. ೭-೧೬ ವ). [ಸಂ.]

ಸಭಾಜನ (ನಾ). ೧. ಸಭೆಯಲ್ಲಿರುವ ಜನ ; ಸಭೆಯ ಸದಸ್ಯರು : ಸಭಾಪತಿಯಾಗಿರ್ದ ಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ (ಆದಿಪು. ೨-೧೦ ವ); ಚತುರವಚನರಚನಾಪ್ರಪಂಚಕಂಚುಕಿತ ರೋಮಾಂಚ ಚುಂಚು ಸಭಾಜನಶರೀರನುಮಪ್ಪ ದೂತಮುಖ್ಯನನಟ್ಟಿ (ಶಾಂತಿಪು. ೨-೫೧ ವ). ೨. ಗೆಳೆತನ ; ಸ್ನೇಹ : "ಸಖ್ಯಂ, ಸಾಪ್ತಪದೀನಂ, ಸೌಹಾರ್ದಂ, ಸೌಹೃದಂ . . . ಸಭಾಜನಂ - ಈ ೯ ಕೆಳೆ" (ಹಲಾಯು. ೧೧೭-೨೧). [ಸಂ.]

ಸಭಾತಾಂಬೂಲ (ನಾ). ಮದುವೆ ಮೊದಲಾದ ಸಮಾರಂಭಗಳಲ್ಲಿ ನೆರೆದಿದ್ದ ಜನರಿಗೆ ಹಂಚುವ ತಾಂಬೂಲ: ಸಭಾತಾಂಬೂಲವಾದನಂತರ ವಧೂವರರಿಗೆ ಆರತಿ ಮಾಡಿದರು (ರೂಢಿ). [ಸಂ.]

ಸಭಾತ್ಯಾಗ (ನಾ). (ಪ್ರತಿಭಟನೆಯನ್ನು ಸೂಚಿಸಲು) ಸಭೆಯಿಂದ ಹೊರಬರುವುದು: ಶಿಶುಪಾಲನು . . . ರಾಜರೊಡನೆ ಸಭಾತ್ಯಾಗ ಮಾಡಿ ಹೊರಟುಹೋದನು (ವಚಭಾ. ೮೨). [ಸಂ.]

ಸಭಾಧ್ಯಕ್ಷ (ನಾ). ಸಭೆಯ ಮುಖಂಡ ; ಸಭಾಪತಿ : ಸಭಾಧ್ಯಕ್ಷರು ಬಹುಮಾನ ವಿತರಣೆ ಮಾಡಿದರು (ರೂಢಿ). [ಸಂ.]

ಸಭಾನಿಳಯ (ನಾ). = ಸಭಾಗೃಹ ೧ : ಮಣಿಕನಕರಚಿತಮಂಡಿತ ಸಭಾನಿಳಯದೊಳು (ನಂಬಿರ. ೩-೭೧). [ಸಂ. ಸಭಾನಿಲಯ]

ಸಭಾನುರಾಗ (ನಾ). ೧. ಸಭ್ಯರ ಪ್ರೀತಿ ,— ವಿಶ್ವಾಸ ; ಸಜ್ಜನರ ಅನುರಾಗ. ೨. ಸೂರ್ಯನ ಅರುಣವರ್ಣ; ರವಿಯ ಕೆಂಪುವರ್ಣ. ೧ , ೨ : ಆ ಮಂಟಪಂ ಮಧುಸಮಯದಂತೆವೋಲ್ ಪ್ರಮದಾಳಿ ಸಮನೋಮನೋಜ್ಞಮಂ . . . ಸಂಧ್ಯಾಸಮಯದಂತೆ ಸಭಾನುರಾಗರಂಜಿತಮುಂ (ರಾಜಶೇ. ೮-೮ ವ). [ಸಂ.]

ಸಭಾಪತಿ (ನಾ). ೧. = ಸಭಾಧ್ಯಕ್ಷ: ಸಭಾಪತಿಯಾಗಿರ್ದ ಮಹಾಬಳನುಮಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ . . . ತಿಳಿಪಿ (ಆದಿಪು. ೨-೧೦ ವ) ; ತತ್ಸಭಾಪತಿಯ ನರ್ಮಸಚಿವರೊಳಟಿಮನುಕಾರ ನೈಮಿತ್ತಿಕನಂ ಕಣ್ಣಂ ಕಿಡೆ ಜಡಿದು (ಶಾಂತಿಪು. ೬-೨೪ ವ). ೨. ವಿಧಾನಮಂಡಲದ ಅಧ್ಯಕ್ಷ ; ರಾಜ್ಯಪರಿಷತ್ತಿನ ಅಧ್ಯಕ್ಷ: ಭಾರತದ ಉಪರಾಷ್ಟ್ರಪತಿಯವರು ತಮ್ಮ ಪದನಿಮಿತ್ತ ರಾಜ್ಯಪರಿಷತ್ತಿನ ಸಭಾಪತಿಯವರಾಗಿರತಕ್ಕುದು (ಭಾಧಾನ. ೩೨). [ಸಂ.]

ಸಭಾಪರ್ವ (ನಾ). ೧. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಎರಡನೆಯದು. ೨. (ಆಲಂ) (ಸಭೆಗೆ) ಅಭಿವೃದ್ಧಿಯ ಕಾಲ, — ಪುಣ್ಯಕಾಲ; ಆದಿರುದ್ರ ಗಣಾದಿಪರ್ವಂ ವಾದಿಗಳ ಹೃತ್‌ಶಲ್ಯಪರ್ವಂ ಮೋದಭಕ್ತಿಗೆ ಬಸವ ಸಿಂಹಾಸನ ಸಭಾಪರ್ವಂ ವೇದವಿದರುದ್ಯೋಗಪರ್ವಂ (ಬಸಪು. ೫-೨). [ಸಂ.]

ಸಭಾಪೂಜೆ (ನಾ). (ನಾಟಕಾರಂಭದಲ್ಲಿ) ನೆರೆದಿರುವ ಪ್ರೇಕ್ಷಕರಿಗೆ ಸಲ್ಲಿಸುವ ಗೌರವ ಪೂಜೆ : ಗಣೇಶಪ್ರಾರ್ಥನೆಯಾದ ತರುವಾಯ ಸಭಾಪೂಜೆ ನಡೆಯುತ್ತದೆ (ಭಾರದ. ೫೫೬). 'ಸಭಾವಂದನೆ' ಪರಾ.

[ಸಂ. ಸಭಾಪೂಜಾ]

ಸಭಾಭವನ (ನಾ). = ಸಭಾಗೃಹ ೧ : ಮಂತ್ರಶಾಲೆಯಂ ಪೊಱಮಟ್ಟು ಬಂದು ಸಭಾಭವನಮಂ ಪೊಕ್ಕು (ಶಾಂತಿಪು. ೨-೭೦ ವ). [ಸಂ.]

ಸಭಾಭೂಮಿ (ನಾ). ಸಭೆಯು ನಡೆಯುವ ಸ್ಥಳ: ವೈಜಯಂತಿಯೆಂಬ ದಿವ್ಯಪ್ರಾಸಾದಮುಂ ದಿಕ್ಸ್ವಸ್ತಿಕಮೆಂಬ ಸಭಾಭೂಮಿಯುಂ (ಆದಿಪು. ೧೫-೩ ವ). [ಸಂ.]

ಸಭಾಭ್ಯಂತರ (ನಾ). ಸಭೆಯ ಅಂತರಂಗ,— ಒಳಭಾಗ: ಊರ್ವರಾಮರ ಸಭಾಭ್ಯಂತರಲೋಹಾಸನಸ್ಥಿತಂ ತದಾಸನದಿನಿಟಿದು ಮುಳಿದು (ಸುಕುಮಾ. ೫-೭ ವ).

[ಸಂ.]

ಸಭಾಮಂಟಪ (ನಾ). = ಸಭಾಗೃಹ ೧ : ಸಭಾಮಂಟಪದೊಳ್ ಬ್ರಹ್ಮಋಷಿಯರು ಮನರಸುಮಕ್ಕಳುಮನೆಡೆಯಱಿದಿರಿಸಿ (ಪಂಪಭಾ. ೬-೩೩ ವ); ಸಭಾಮಂಟಪದಲ್ ಮಹಾಸಭೆಯಾಗಿ ನೆರೆದಿರ್ದು (ಸೌಇಇ. XX. ೨೧೨-೩; ?). [< ಸಂ. ಸಭಾಮಂಡಪ]

ಸಭಾಮಂಡಲ, ಸಭಾಮಂಡಳ (ನಾ). ಸಭೆಯಲ್ಲಿ ನೆರೆದ ಜನ ; ಸಭಾಸದರು: ನುಡಿದನು ತತ್ಸಭಾಮಂಡಲ ಮಹಾಂಬುಧಿ ನುಡಿದೆರೆಯ ತನಿಗಡಣವಡಗಿರಲು (ಕುವ್ಯಾಉ. ೮-೭೨); ರಾಜ್ಯ ಸಭಾಮಂಡಲದಲ್ಲಿ ಅಗ್ರಪದವಿಯನ್ನು ಪಡೆದನು (ಮಣಿಸ. ೪೯). **ಸಭಾಮಂಡಳ** : ವಿದ್ಯಾಧರರಾಜನ ಸಭಾಮಂಡಳಂ ಕ್ಷೋಭ ಕ್ಕೊಡರ್ಚಿದಾ ಪ್ರಸ್ತಾವದೊಳ್ (ಶಾಂತಿಪು. ೩-೬೬ ವ). [ಸಂ.]

ಸಭಾಮಂಡಳ 'ಸಭಾಮಂಡಲ' ನೋ.

ಸಭಾಮರ್ಯಾದೆ (ನಾ). ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿ ,— ನೀತಿ: ಯಾರೂ ಸಭಾಮರ್ಯಾದೆ ಮೀರಬಾರದು (ರೂಢಿ). [ಸಂ. ಸಭಾಮರ್ಯಾದಾ]

ಸಭಾವಂದನೆ (ನಾ). ಯಕ್ಷಗಾನ ಆಟದ ಆರಂಭದಲ್ಲಿ ನೆರೆದ ಪ್ರೇಕ್ಷಕರಿಗೆ ವಂದನೆ ಸಲ್ಲಿಸುವ ಒಂದು ವಿಧಿ : ಮೊದಮೊದಲಿನ ಆಟಗಳಲ್ಲಿ ಗಣಪತಿಯ ಪೂಜೆಗಿಂತ ವಿಶೇಷದ ಸಭಾವಂದನೆಯಂಥ ಪೀಠಿಕೆ ಇತ್ತೋ ಇಲ್ಲವೋ (ಯಕ್ಷಬ. ೫೧). 'ಸಭಾಪೂಜೆ' ಪರಾ. [ಸಂ. ಸಭಾವಂದನಾ]

ಸಭಾವಿಷ್ಟ (ನಾ). ಸಭೆಯಲ್ಲಿ ಕುಳಿತಿರುವವನು : ಆರುರ್ವೀಚಕ್ರಮನಿಂತು ಕೊಟ್ಟರನುಜಂಗೆಂದಾ ಸಭಾವಿಷ್ಟರೋರೊರ್ವರ್ ಬಣ್ಣಿಸಿದರ್ (ಪಂರಾಮಾ. ೬-೧೩೩).

[ಸಂ.]

ಸಭಾಸದ (ನಾ). = ಸಭಾವಿಷ್ಟ : ಅತಿಶಯಧವಳನ ಸಭಾಸದರ್ಮನ್ನಿಸುವರ್ (ಕವಿರಾ. ೧-೫); ಗೆಲವಿದೆಂತುಟೊ ತನ್ನ ಸೋಲಿದು ಬಳಿಕ ಸೋತರೆ ಧರ್ಮಗತಿಯನು ತಿಳಿದು ಹೇಳಲಿ ತತ್ಸಭಾಸದರೆಂದಳಿಂದುಮುಖಿ (ಕುವ್ಯಾಸ. ೧೪-೮೦); ಪುಷ್ಪಾಂಜಲಿಯಂ ಕೆದರ್ದು ಮೊದಲೊಳ್ಮೋಹಿಸಿ ಸಭಾಸದರಂಗರಂಗದೊಳಪಾಂಗಪ್ರಭೆ ನರ್ತಿಸುತ್ತಿರೆ (ರಾಜಶೇ. ೫-೧೯ ವ). [ಸಂ. ಸಭಾಸದ್]

ಸಭಾಸದನ (ನಾ). = ಸಭಾಗೃಹ ೧ : ಸಭಾಸದನದೊಳ್ ಪಿರಿದು ಪೊಲ್ಪು ಪೋಗೆಯುಂ (ಶಾಂತಿಪು. ೧೨-೨೩ ವ); ನೃಪಾತ್ಮಜಂ . . . ಸಭಾಸದನಮಂ ಪೊಕ್ಕು (ಪುಷ್ಪಪು. ೪-೭೦ ವ). [ಸಂ.]

ಸಭಾಸದ್ಮ (ನಾ). = ಸಭಾಗೃಹ ೧ : ತನ್ನಂಗಿ ನಿನ್ನ ಸಭಾಸದ್ಮದೊಳೇಕೆ ದಳ್ಳಿಸಿದುದಿಲ್ಲುತ್ತಾನವಂಶಸ್ಯನಂ (ಮಲ್ಲಿಪು. ೪-೯). [ಸಂ.]

ಸಭಾಸೂರ (ನಾ). ಸಭೆಯಲ್ಲಿ ಮಾತ್ರ ಶೌರ್ಯ ತೋರಿಸುವವನು ; ಬರೀ ಬಡಾಯಿಕೊಚ್ಚುವವನು : ವನಿತಾನೀಕದ ಮುನ್ನೆ ಪೊಟ್ಟಳಿಸಿ . . . ಸಿಂಹಧ್ವನಿಯಿನ್ನೆ ಗರ್ಜ್ಜಿಪ ಸಭಾಸೂರರ್ಬರಂಗೆಯ್ದುದಯಾದಿತ್ಯಂಗೆ ಬಯಲ್ಗೆವರ್ಪ್ಪರೊಳರೇ (ಏಕ. XI, ಚತ್ರದು. ೩೪-೨೦ ; 1123). [< ಸಂ. ಸಭಾಶೂರ]

ಸಭಾಸ್ತಾರ (ನಾ). ೧. ಸಭೆಯಲ್ಲಿ ಸಹಾಯಕನಾಗಿರುವವನು. ೨. (ಆಟದಲ್ಲಿ) ಸಹಭಾಗಿಯಾಗುವವನು : ನಾನು ಆ ರಾಜನಲ್ಲಿ ಸಭಾಸ್ತಾರನಾಗಿರೋಣವೆಂದು ಮಾಡಿದ್ದೇನೆ (ವಚಭಾ. ೧೮೪). [ಸಂ.]

ಸಭಾಸ್ಥಳ (ನಾ). ಸಭೆಯು ಸೇರುವ ಸ್ಥಳ : ಗಂಡಸಿಯ ಶ್ರೀಮದಶೇಷಮಹಾಜನಂಗಳು ಸಭಾಸ್ಥಳದಲ್ಲಿ ಕುಳಿತು (ಏಕ. V, ಅರಸೀ, ೧೫೮-೧೧ ; 1324). [ಸಂ. ಸಭಾಸ್ಥಲ]

ಸಭಿಕ (ನಾ). ೧. ಜೂಜಿನ ಮನೆಯ ವ್ಯವಸ್ಥಾಪಕ : "ಸಭಿಕಃ, ದ್ಯೂತಕಾರಕಃ - ಈ ೨ ಜೂಜುಗಾಱಂ" (ಹಲಾಯು. ೬೪-೨೭೪). ೨. = ಸಭಾವಿಷ್ಟ: ಸಪ್ತಋಷಿಗಳೇ ಇವನ ಸಭಿಕರು (ನೀತಿಚಂ. IV, ೮). [ಸಂ.]

ಸಭಿಸು (ಕ್ರಿ). ಗುಂಪಾಗು (?) : ಜಾವಜಾವಕೆ ಗಸ್ತಿ ಸಭಿಸಿ ತಿರುಗುವಂತೆ ರಾಯಕಟ್ಟಳೆಯ ಮಾಡಿಸಿದ (ಸೌಂದಕಾ. ೭-೧೭); ಬತ್ತೀಸಾಯುಧಗಳ ಪಿಡಿದು ಸಭಿಸಿ ಕಾಯಿವ ಮೊತ್ತಮೊತ್ತದಿ ಪಟುಭಟರು (ಸೌಂದಕಾ. ೭-೨೦). [ಸಭೆ? + - ಇಸ್ಸು]

ಸಭೆ (ನಾ). (ಒಂದು ಉದ್ದೇಶ ಅಥವಾ ಕಾರ್ಯಕ್ರಮಕ್ಕಾಗಿ ಕಲೆತ) ಜನಗಳ ಸಮುದಾಯ ,— ಸಮೂಹ ; ಪರಿಷತ್ತು ; ಗೋಷ್ಠಿ : ಕಳವಳಿಸಿ ಪಾತ್ರೆ ಪಾತ್ರೇಯೆಂದು ಕರೆವುತಂ ಇರೆ ಕಂಡು ಸಭೆ ನಡುಗಿ (ತಿರುರ. ದೇ. ೧೯-೭); ಕೆಲವು ಮುದುಕರು ಹೊರತು ಸಭೆಯಲ್ಲಿ ಇನ್ನಾರೂ ಇರಲಿಲ್ಲ (ರಾಯಕ. ೬೧). ೨. ಓಲಗ; ದರ್ಬಾರು : ಸಭೆಗೀಶಾನೇಂದ್ರನೊಂದಂದದಿನಱಿಯನೆನಲ್ ಬಣ್ಣಿಸಲ್ (ಶಾಂತಿಪು. ೯-೯೩) ; ಸಭೆಯೆಲ್ಲಂ ಪೊನ್ನ ನೀರಿಂದರೆಬಳಿದವೊಲಿರ್ದಪ್ಪುದು

(ಅನಂಪು. ೧೦-೩೬). ೩. ನ್ಯಾಯಾಸ್ಥಾನ ; ನ್ಯಾಯಾಲಯ . ೪. ಜೂಜಿನ ಮನೆ. ೫. [ಜೈನ] ಪರಿವ್ರಾಜ್ಯ ಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರ ಪದಗಳಲ್ಲಿ ಒಂದು : ಸಭೆಯೆಂಬುದು ಪರಮಸಂಪತ್ಸಮೇತನಪ್ಪ ಜಿನನಾಥನಂ ಪೊರ್ದಿ ನಿಜೇಷ್ಟಬಂಧುಭೃತ್ಯಸಭಾಸಮುತ್ಸರ್ಜನಂಗೆಯ್ದು ತಪದೊಳ್ ನೆಗೆಲ್ದೊಡೆ (ಚಾವುಂಪು. ೨೩೦). [ಸಂ. ಸಭಾ]

ಸಭೆಗೊಡು (ಕ್ರಿ). ಸಭೆಯನ್ನು ಏರ್ಪಡಿಸು ; ಓಲಗ ನೀಡು : ನಿಸ್ತಾರಕರ್ಕ ಳೋಳಿಯ ಸಭೆಗೊಟ್ಟೋರಂತೆ ನಾಲ್ವರಿರ್ದು (ಅಜಿಪು. ೧-೮೭). [ಸಭೆ + ಕೊಡು]

ಸಭೆವೆರಸು (ಕ್ರಿ). ಗುಂಪುಕೂಡಿಸು ; ಸಭೆಯನ್ನು ನಡೆಸು : ವಾರಣಾಸಿಯೊಳು ಗದಾಧರ ದೇಗುಲದೊತ್ತಿನಲಿ ಸಭೆವರಸಿ ಕುಳಿತು (ಬಸವ. ೫೩-೫೮).

[ಸಭೆ + ಬೆರಸು (< ಬೆರಯಿಸು)]

ಸಭೆಸೇರಿಸು (ಕ್ರಿ). ಗುಂಪುಕೂಡಿಸು ; ಸಭೆಯನ್ನು ಏರ್ಪಡಿಸು : ಆಗಾಗ್ಗೆ ಅವಳು ತನ್ನ ಮನೆಯಲ್ಲಿ ನಿಷ್ಠಾವಂತರಾದ ಭಕ್ತರನ್ನು ಸಭೆಸೇರಿಸುತ್ತಿದ್ದಳು (ಪುನರು. ೬೨೯).

[ಸಭೆ + ಸೇರಿಸು]

ಸಭೇಂದುಮತಿ (ನಾ). ನಕ್ಷತ್ರಸಹಿತವಾದ ಚಂದ್ರನಿಂದ ಕೂಡಿದುದು: ಕಲ್ಯಾಣಿಯರಾಗಳಾರತಿಯ ಪೊಂಬರಿಯಣಮನಾಂತು ನಿಂದು ಮೇಣ್ಕಾಣಿಸಿದ ರ್ಸಭೇಂದುಮತಿಸಂಜೆ ಬಹುತ್ವಮನಾಂತು ನಿಂದವೋಲ್ (ರಾಜಶೇ. ೮-೭೩). [ಸಂ.]

ಸಭೇಂದ್ರ (ನಾ). = ಸಭಾಪತಿ : ವರಕಾರುಣ್ಯಂ ಶರಣ್ಯಂ ಬುಧಜನ ಕುಮುದಾನಂದಚಂದ್ರಂ ಸಭೇಂದ್ರಂ (ಲಾಸ್ಯರಂ. ೧-೩೩). [ಸಂ.]

ಸಭ್ಯ (ಗು). ೧. ಶಿಷ್ಟತೆಯಿಂದ ಕೂಡಿದ ; ಸೌಜನ್ಯವುಳ್ಳ : ನೀವಾದರೂ ಸಭ್ಯ ಗೃಹಸ್ಥರು (ಪುನರು. ೫೧೭). (ನಾ). ೨. ಶಿಷ್ಟತೆ ; ಸೌಜನ್ಯ : ಇಲ್ಲಿ ಎಲ್ಲರ ಕೂಡಾನು ಬಹಳ ಸಭ್ಯವಾಗಿ ನಡದುಕೊಂಡಿದ್ದೀಯೆ (ಎಂಠಯೋ. ೩೫). ೩. ಸಭಿಕ; ಸಭಾಸದ : ಓಲಗಶಾಲೆಯಲ್ಲಿ ನೆರಹಿದನು ಸಭ್ಯರನಾಪ್ತಮಂತ್ರಿಗಳ (ಕುವಾಉ. ೫-೧). ೪. ಸುಸಂಸ್ಕೃತವ್ಯಕ್ತಿ ; ಶಿಷ್ಟ ; ನಾಗರಿಕ : ಏನಾದರಾಗಲಿ ಜಗದೊಳು ಸಭ್ಯರು ಕೊಟ್ಟ ಮಾತನು ನಡಸುವರು (ಇಂಚಾಪ. ೧೨೩-೫); ತಾವು ಬಹಳ ದೊಡ್ಡಮನುಷ್ಯರು. ಸಭ್ಯರು ಎಂಬುದನ್ನು ಕೇಳಿ ತಿಳಿದಿದ್ದೇನೆ (ಮಹಾಗ. ೧೮೩). [ಸಂ.]

ಸಭ್ಯತನ (ನಾ). ಸೌಜನ್ಯತೆ ; ಸದಾಚಾರ : ಕೋರ್ಟಿನಲ್ಲಿಯೇ ಆದೀತು ಈ ನಿಮ್ಮ ಸಭ್ಯತನದ ಪ್ರದರ್ಶನ! (ಕಮನಿ. ೨೧೬). [ಸಭ್ಯ + - ತನ]

ಸಭ್ಯತೆ (ನಾ). ೧. ಶಿಷ್ಟಾಚಾರ; ಸನ್ನಡತೆ: ಸಭ್ಯತೆಗೆ ಹತ್ತಿದ ತೊನ್ನು (ಆರಳು. ೪೨೭-೨) ; ಹಣ್ಣನ್ನು ಕೊಯ್ಯದೆ ಇಡೀ ಹಣ್ಣನ್ನು ತಿನ್ನುವವರ ಮುಂದಿಡುತ್ತಿದ್ದುದು ಹಿಂದಿನ ಕಾಲದ ಹಳ್ಳಿಗರ ಸಭ್ಯತೆಯಾಗಿತ್ತು (ನನ್ನೂರು. ೧೩ ಪೀಠಿಕೆ). ೨. ನಾಗರಿಕತೆ: ನದಿಗಳ ಸಮಾಗಮವಾಗುವಲ್ಲಿ ಸುಮೇರಿಯನರ ಸಭ್ಯತೆಯು ತಲೆದೋರಿತು (ಚಾಲಪ್ರ. ೧, ೨೨೩) ; ಪಾಶ್ಚಾತ್ಯರ ಸಭ್ಯತೆಯು ನಮ್ಮನ್ನಾಕರ್ಷಿಸಿತು (ಜೀವಾತ್ಮ. VII, ಮುನ್ನುಡಿ).

[ಸಂ. ಸಭ್ಯತಾ]

ಸಭ್ಯತ್ವ (ನಾ). = ಸಭ್ಯತೆ ೧. [ಸಂ.]

ಸಭ್ಯಸ್ಥ (ನಾ). ಸುಸಂಸ್ಕೃತ; ಶಿಷ್ಟ: ಅವನು ಸಭ್ಯಸ್ಥನೆಂದು ಕೇಳಿದ್ದೇನೆ (ಪುನರು. ೫೦೯). [< ಸಂ. ಸಭ್ಯಸ್ಥ]

ಸಭ್ಯಾಂಗಭಾಷಿತ (ನಾ). ಸುಸಂಸ್ಕೃತವಾದ ಮಾತು : ಮುರಮಥನ ಚಿತ್ತೈಸಿದೈ ತರುವರಿಯ . . . ಸಭ್ಯಾಂಗಭಾಷಿತಭಾವನಿಷ್ಠುರವ (ಕುವಾಕೃ. ೨೦-೨೮). [ಸಂ.]

ಸಮ್ಮ[1] 'ಚಮ್ಮ' ನೋ.

ಸಮ್ಮ[2] (ನಾ). ವರ್ಷ ; ಸಂವತ್ಸರ : "ಹಾಯನಃ . . . ಸಂವತ್ಸರಃ, ಸಮಃ - ಈ ೬ ವರ್ಷಂ" (ಹಲಾಯು. ೨೦-೧೦೬) ; ಭ್ರಮವಿದೂರನು ಹಲವು ಸಾವಿರ ಸಮಗಳನು ನೂಕಿದನು (ನಿಘಾಗ. ೯-೧೧-೩೯). [ಸಂ. ಸಮಾ]

ಸಮ್ಮ (ಗು). ೧. ಮಟ್ಟಸವಾದ ; ಚಪ್ಪಟೆಯಾದ. ೨. ಸಮಾನವಾದ; ಓರಗೆಯ. ೩. ಸದೃಶವಾದ ; ಹೋಲುವ. ೪. ನಿಶ್ಚಲವಾದ; ತಟಸ್ಥವಾದ. ೫. ನಿಷ್ಪಕ್ಷಪಾತವಾದ. ೬. ನೇರವಾದ ; ಸರಿಯಾದ. ೭. ಸದಾಚಾರ ಸಂಪನ್ನವಾದ ; ಸುಸಂಸ್ಕೃತವಾದ. ೮. ಎಲ್ಲರಿಗೂ ಇರುವ ; ಸಾರ್ವತ್ರಿಕವಾದ. ೯. ಸಂಪೂರ್ಣವಾದ ; ಸಮಸ್ತ. (ನಾ). ೧೦. ಸರಿಸಮಾನವಾದುದು; ಸದೃಶವಾದುದು : ಎನ್ನ ಕೊಟ್ಟುದನೆ ಕೊಂಡು ಮನೋಮುದದಿಂದ ಬಾಟ್ಟುದಂತ ವರಿವರೆಲ್ಲರುಂ ಸಮಂ (ಪಂಪಭಾ. ೪-೭); ತೊಟ್ಟಿನ ಬಳಿಯೊಳು ಬದನೆಯ ಹಸಿಯ ಕಾಯ್ಗಳಂ ಬೊಟ್ಟಿನ ಸಮದೊಳು ಛಿದ್ರಿಸಿ ತೋಡಿ (ಸೂಪಶಾ. ೪-೧೯). ೧೧. ಆರಾಮ; ಕ್ಷೇಮ : ಅದೊಂದು ಪರಿ ಗಂಟಲಂ ಮುಱಿದರಿಷ್ಟನಂ ಕೊಂದಗುರ್ವದೊಂದು ಪರಿ ಕೇಶಿಯಂ ಸಮದೆ ಸೀಳ್ದು ಕೊಂದಂದವೆಂದದೇಂ . . . ನಕ್ಕನಾ ನಾರದಂ (ಜಗವಿ. ೫-೪೭); 'ಏನಾಗಿದೆ ಮಗಾ, ಒಂದು ಥರಾ ಇದ್ದೀ' ಎಂದು ಕೇಳಿದ್ದಕ್ಕೆ - ಏನಾಗಿಲ್ಲವಮ್ಮ ಸಮ ಇದ್ದೇನೆ' ಎಂದ (ಹೊಸಕ್ಕ. ೬೨). ೧೨. [ಗಣಿತ] ಒಂದು ಸಂಖ್ಯೆ ; ಎರಡು: "ಸಮ, ಉಭಯಂ . . . ಎರಡಱ ನಾಮಂ" (ವ್ಯವಹಾ. ೯-೨). ೧೩. ಎರಡರಿಂದ ಭಾಗಿಸಲ್ಪಡಬಹುದಾದ ಸಂಖ್ಯೆ ; ಬೆಸವಲ್ಲದ ಸಂಖ್ಯೆ : ಆದಿ ಅನಾದಿ ಸಮ ವಿಷಮಗ್ರಹವಱಿತು (ದಶಾವ. ೨-೧೦ ವ). ೧೪. [ಕಾವ್ಯಮೀ]ಒಂದು ಕಾವ್ಯಾಲಂಕಾರದ ಹೆಸರು ; ಅನುರೂಪಪದಾರ್ಥಗಳ ಘಟನೆಯ ವರ್ಣನೆ ಹಾಗೂ ಕಾರ್ಯಕಾರಣಗಳಿಗೆ ಸಮಾನಗುಣವಿರುವ ವರ್ಣನೆ ಇರುವ ಅಲಂಕಾರ : 'ಸಮಾಲಂಕಾರ' ಪರಾ. ೧೫. ದಕ್ಷಿಣಮಾರ್ಗದ ಕಾವ್ಯದ ಹತ್ತು ಗುಣಗಳಲ್ಲಿ ಒಂದು : ಸಮ ಮಧುರ ನಿಬಿಡ . . . ಗ್ರಾಮ್ಯೋಜಸ್ಸು ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ (ಕವಿಪಾ. ೨-೫೪); ಆ ವಿಷಮವಲ್ಲದುದು ಸಮಮೀ ವನದೊಳ್ ಮಲಯಪವನನೆಂದಿತಾವಗಂ ಅಗ್ರಾಮ್ಯತೆಯೊಳ್ ತೀವಿದ ನುಡಿ (ಉದಯಾ. ೪-೧೬). ೧೬. [ಛಂದ] ಸಮ, ಅರ್ಧಸಮ ಮತ್ತು ವಿಷಮವೆಂಬ ಮೂರು ಬಗೆಯ ವೃತ್ತಗಳಲ್ಲಿ ಒಂದು ; ನಾಲ್ಕುಪಾದಗಳಲ್ಲೂ ಸಮಾನವಾದ ವರ್ಣಗಳುಳ್ಳ ವೃತ್ತ : ಅಲ್ಲಿ ಸಮಂ ಅರ್ಧಸಮಂ ವಿಷಮಮೆಂದು ವೃತ್ತಂ ಮೂಱು ತೆಱನಕ್ಕುಂ (ಛಂದೋಂಬು. ೧-೪೬ವ); ವರ್ಣವೃತ್ತವು ಸಮ, ಅರ್ಧಸಮ, ವಿಷಮ ಎಂದು ಸಾಮಾನ್ಯವಾಗಿ ಮೂರು ವಿಧವು (ಕೃಪಿ. ೭೮). ೧೭.. [ನಾಟ್ಯ] ನೃತ್ಯದಲ್ಲಿ ಕೊರಳಿನ ಒಂದು ಭಂಗಿ ; ಕೊಂಕಿಲ್ಲದೆ ನೀಟಾಗಿರುವ ಕೊರಳ ಭಂಗಿ : ಸಮ, ನಿವೃತ್ತ . . . ಉನ್ನತ - ಈ ಒಂಭತ್ತು ಕೊರಲ ಭೇದಂಗಳ್ (ಲಾಸ್ಯರಂ. ೨-೧೧೪ ವ). ೧೭ ನೃತ್ಯದಲ್ಲಿ ಮಲಗಿರುವ ಭಂಗಿ : ಸಮ . . . ನತ, ಈ ಆಱು ಮಲಗಿರ್ದ ಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). ೧೮. ನೃತ್ಯದಲ್ಲಿ ಕಣ್ಣಿನ ಆಲಿಗಳ ಚಲನೆಯ ಒಂದು ಬಗೆ : ಕಣ್ಣು ಆಲಿಗಳ ಎಂಟು ಚಲನೆಗಳಿವೆ. ಅವು ಯಾವುವೆಂದರೆ - ೧. ಸಮ, ೨. ಸಾಚಿ . . . ೮. ಅವಲೋಕಿತ (ಅಭಾಸ್ಯ. ೪೬).

ಸಮಸಮ (ದ್ವಿರುಕ್ತಿ) : ೧. ಎಲ್ಲರೀತಿಯಲ್ಲೂ ಸಮಾನವಾಗಿರುವುದು; ಸರಿಸಮವಾದುದು : ಸಮಸಮನಾಗಿ ಒಂಟಿಕಾಳಗಕ್ಕೆ ನಿಂತರೆ ಅವನನ್ನು ಯಾರು ಗೆಲ್ಲಬಲ್ಲರು? (ಮಚಭಾ. ೩೬೨). ೨. ಹತ್ತಿರ ; ಸಮೀಪ : ಅವರೆಲ್ಲಾ . . . ಅರ್ಕಾಳಬೆಟ್ಟಿನ ಸಮಸಮಕ್ಕೆ ಈಗ ಮುಟ್ಟಿರಬಹುದು (ಹೊಸಕ್ಕ. ೧೧೯). ೩. ಸರಿಸಮನಾದ ವ್ಯಕ್ತಿ : ಮದುವೆಯೊಳ್ ಸಮಸಮರ ಕೂಟಮೇ ಒಳ್ಳಿತ್ತು (ಬದ್ಧಪ್ರ. ೪೭-೧೦೧೭).

ಸಕ್ಕಸಮಂ = ಸಮಸಮನಾಗಿ; ಸರಿಸಮಾನವಾಗಿ : ಸಕ್ಕದಮುಂ ಕನ್ನಡಮುಂ ಸಕ್ಕಸಮಂ ಕೇಳ್ವೊಡೆನಿಸಿ ಪೇಳ್ವುದು ಕೃತಿಯಂ (ಲೀಲಾವ. ೧-೬೩); ಘೋರದಾನವನ ತನು ಬಿರಿವುತಿರೆ ಱಿರದಿಂ ಪ್ರಹಾರಿಸಲ್ ಸೀಳ್ದುದದು ಸಕ್ಕಸಮಮಾಗಿ (ಚಬಪ್ರ. ೪೪-೨೫).

ಸಕ್ಕಸಮನೆ, ಸಕ್ಕಸವನೆ = ಸಕ್ಕಸಮಂ: ಸಿಕ್ಕಿವೊಂದೊಂದಕ್ಕೆ ತಾನಿವು ತಕ್ಕವೆಂದೊರೆದೊಂದಲೊಂದಲೊಳುಕ್ಕಿ ಸಕ್ಕಸಮನೆಯೆನಿಸಿ ಕೊನೆ ಕೊನರಿ ತವ ಬೆರಸಿ (ಬಸವ. ೧೮-೮೩) ; ನೇತ್ರಕ್ಕಂ ಸೂತ್ರಕ್ಕಂ ಸಕ್ಕಸವನೆಯಾಗಿ (ಜಯಕಾ. ೩-೫೫). [ಸಂ.]

ಸಮಂಗಾಣ್ (ಕ್ರಿ). ಸಮಾನವಾಗಿ ಕಾಣು ; ಒಂದೇ ರೀತಿಯಲ್ಲಿ ನೋಡು : ಪಶು ಮೃಗಪಕ್ಷಿ ಸರೀಸೃಪಂಗಳುಮಂ ಸಮಂಗಾಣ್ಬ ಧರ್ಮಂ (ಚಾವುಂಪು. ೭).

[ಸಮ್ಮ + ಕಾಣ್]

ಸಮಂಚಿತ (ಗು). ೧. ಕೂಡಿದ ; ಸೇರಿದ : ಉಟಿಯಲೆನಸುಂ ಲಜ್ಜಾಭಾರಂ ಸಮಂಚಿತ ಸಾಧ್ವಸಂ ಕಲಿಯಲ್ . . . ಮೇಲ್ಯಾಯ್ದು ತಳ್ತಿರದಪ್ಪಿದಳ್ (ಕಾದಂಬಿ. ೭೮೭); ಪಳಂಚುಪ ಸಮಂಚಿತ ಭ್ರೂಲತೆ ತಳ್ತೆಮೆದುಱುಗಲ ನೆಳಲೊಳ್ಮುಖಕಮಳ ಮಯೂಖಾಂಬುವೀಚಿ ಚಲಿಪವೊಲೆಸಗುಂ (ರಾಜಶೇ. ೧೨-೭೭). ೨. ಬಹುವಾಗಿ

ಗೌರವಿಸಲ್ಪಟ್ಟ : ಪಾಶಮೋಚನನಂ ಕೃಪಾಮಯ ಕಾಶಲೋಚನನಂ ಸಮಂಚಿತ ಪಾಶುಪತಸುವ್ರತನಿರತನಂ ಪುಣ್ಯಚರಿತನನು (ಬಸವ. ೪೭-೭೨). (ನಾ). ೩. ಬಹಳವಾಗಿ ಗೌರವಿಸಲ್ಪಡುವವನು : ಪಂಚಜನಶಮನಾಂತಕನು ಸರ್ವಭೂಷಣಸಮಂಚಿತನು ದಿವ್ಯಗಂಧಾನುಲೇಪನು ಕುಸುಮಸಂಛನ್ನದಿವ್ಯದೇಹನು (ಚಾಮು. ೧-೨-೪೭). [ಸಂ.]

ಸಮಂಜಸ (ಗು). ೧. ಸರಿಯಾದ; ಸೂಕ್ತವಾದ: ಸಮಂಜಸವಾದ ಉತ್ತರ ಹೇಳುವ ಹತ್ತಾರು ಪ್ರಯತ್ನಗಳು ನಡೆದಿವೆ (ದ್ರಾವಿ. ೫೧). ೨. ನ್ಯಾಯವಾದ ; ಪ್ರಾಮಾಣಿಕವಾದ. ೩. ನಿಜವಾದ ; ಸತ್ಯವಾದ : ಒಂದು ಸಮಂಜಸ ಮಾತು ಹೇಳಬೇಕೆಂದು ಬಹಳ ಹವಣಿಸಿದಳು (ಇಪ್ಪಕ. ೨೭೭). ೪. ಸದ್ಗುಣಿಯಾದ ; ಸಭ್ಯವಾದ. ೫. ಆಚರಣೆಯಲ್ಲಿ ತಂದ ; ಪ್ರಯೋಗಿಸಿದ. ೬. ಅನುಭವಿಸಿದ; ಕಂಡುಕೊಂಡ: ನಾನು ಎಲ್ಲಿದ್ದರು ನಿನ್ನ ಸಮಂಜಸ ಸ್ವಭಾವವನ್ನೇ ಮಾರ್ಗದರ್ಶಿಯಾಗಿ ತಿಳಿದು ದಾಸನಂತೆ ಅನುಸರಿಸುವೆ (ಜಹುಂತ. ೧೧೭). (ನಾ). ೭. ಯೋಗ್ಯವಾದುದು; ಸಮರ್ಪಕವಾದುದು: ಸನಾತನತತ್ವ ಇಂತಹ ಕಾಲದಲ್ಲಿ ಇಂತಹವರಿದಲೇ ಹೊರಪಟ್ಟಿತೆಂದು ಹೇಳುವುದು ಸಮಂಜಸವಲ್ಲ (ಶಕ್ತಿ. ೭೮). ೮. ಯೋಗ್ಯವ್ಯಕ್ತಿ; ಸಭ್ಯ : ಸಂಜೀವಕಂ ಸಾಧುಸಮಂಜಸನಂ ಮಾಡಿ (ಪಂಚತಂ. ೧೨೨-೯); ಆ ಸುಯೋಧನ ನಿನ್ನ ಮಗನಲ್ಲೀ ಸಮಂಜಸ ಧರ್ಮಜನ ಹಿದಿದಿಸುವುದು ಭವಜಲಧಿಯನೆಂದ ಮಳಮುನಿ ನುಡಿದ (ಕುವಾಗ. ೧೧-೩೩). ೯. ಶಿವನ ಹೆಸರು : ನಿಸ್ಸೀಮ ಮೃತ್ಯುಂಜಯ ಸಮಂಜಸ ಸರ್ವತೋಭದ್ರ . . . ಕರುಣಿಸುವುದು (ಕುವಾಳ. ೬-೯೦). [ಸಂ.]

ಸಮಂಜಸತನ (ನಾ). ಔಚಿತ್ಯತೆ; ಸೂಕ್ತತೆ: ಇದರ ಆಲೋಚನೆಯನ್ನು ಸಮಾಧಾನದಿಂದಲೂ ಸಮಂಜಸತನದಿಂದಲೂ . . . ನಾವು ಮಾಡಬೇಕಾಗಿದೆ (ಪ್ರಬುದ್ಧ. ೧೯). [ಸಮಂಜಸ + - ತನ]

ಸಮಂಜಸತ್ವ (ನಾ). = ಸಮಂಜಸತನ : ಸಮಂಜಸತ್ವಮೆಂಬುದು ಪ್ರಜಾಪಾಲನದೊಳ್ ಸಮದರ್ಶನವಾಗಿ ನೆಗಳ್ದುದು (ಜಾವಂಪು. ೨೨೦). [ಸಂ.]

ಸಮಂಜಸಿಕೆ (ನಾ). = ಸಮಂಜಸತನ : ಕರಂ ಸಮಂಜಸಿಕೆಯನೆ ಪಾಟವಂ (ಮದಕ. ೧೦-೩೬); ಕಡುದೂರ್ತಿನಿಂ ಪಲವು ಟಕ್ಕುಗಳಂ ಸಮೆದನ್ನಮಂ ಸಮಂಜಸಿಕೆಯ ನೊಕ್ಕು ಬೇಗಮೆನಗಿಕ್ಕಿ (ಧರ್ಮಾಮೃ. ೧೧-೧೩೧). [ಸಮಂಜಸ + - ಇಕೆ]

ಸಮಂತ (ಗು). ೧. ಎಲ್ಲ ಕಡೆಯಲ್ಲೂ ಇರುವ. ೨. ಸಂಪೂರ್ಣವಾದ; ಸಮಗ್ರ. (ನಾ). ೩. ಸೀಮೆ ; ಎಲ್ಲೆ. [ಸಂ.]

ಸಮಂತದುಗ್ಧೆ (ನಾ). ಒಂದು ಬಗೆಯ ಸಸ್ಯ ; ಮುಂಡುಗಳ್ಳಿ: "ಸಿಂಹುಂಡಿ, ವಜ್ರದ್ರುಃ, ಸುಕ್, ಸ್ನುಹೀ, ಗುಡಾ, ಸಮಂತದುಗ್ಧಾ - ೬ ಕಳ್ಳಿ ಹೆಸರುಗಳು, ಬೊಂತೇಕಳ್ಳಿ" (ಸಿದ್ಧಾಂತಿ. ೧೫೭). [ಸಂ. ಸಮಂತದುಗ್ಧಾ]

ಸಮಂತಾಗಿಸು (ಕ್ರಿ). ಚೆಲುವುಗೊಳಿಸು ; ಸುಂದರವಾಗಿಸು : ಮಲ್ಲಿಗೆ ಮಾವು ತೆಂಬರಲ್ ಕೋಗಿಲೆ . . . ಸುಗ್ಗಿಯನಿಪ್ಪವೆಲ್ಲಮೊದಾಗಿಯೆ ದರ್ಪಕಂಗೆ ಸಮನಿಪ್ಪ ಜಗದ್ಭಯದರ್ಪಮಂ ಸಮಂತಾಗಿಸಲೊಂದೆ ಸಾಲ್ಗುಂ (ಚಂದ್ರಪ್ರ. ೬-೬೬).

[ಸಮಂತು₂ + ಆಗಿಸು]

ಸಮಂತಿಡು (ಕ್ರಿ). ಓರಣವಾಗಿಡು ; ಚೆನ್ನಾಗಿ ಇರಿಸು : ಸಂಬಳಿಗೋಲ ಸೂರೊಳ್ ಸಮಂತಿಟ್ಟು (ಪಾಸೋಪು. ೭-೨೧). [ಸಮಂತು₂ + ಇಡು₁]

ಸಮಂತು₁ (ನಾ). ೧. ಸೊಬಗು; ಅಂದ: ತಾನೀ ವಿಮಾನಂ ಸಮಂತಿದು ಬೃಂದಾರಕಬೃಂದಮಂಗಜಪತಾಕಾನೀಕದಂತೊಪ್ಪಿ ತೋರ್ಪುದುಂ (ಸುಕುಮಾ. ೯-೨೪). ೨. ಓರಣ; ಅಚ್ಚುಕಟ್ಟು: ಈಶಾಧ್ಯಯಂ ಬಲ್ಲನಾರ್ಮುಂದೆ ಸಮಂತಂತಾಗೆ ತೋರ್ಪಂ ವಿಪುಲ ಮಹಿಮೆಯಂ ಮುಕ್ತಿಯಂ ಸೂಚೆಗೊಂಬೆಂ (ರಾಜಶೇ. ೧೩-೨೫).

ಸಮಂತು₂ (ಅ). ೧. ಚೆನ್ನಾಗಿ ; ಸೊಗಸಾಗಿ : ಇದಹೊಳ್ ಮೂರ್ಧಾಭಿಷೇಕಂ ತನಗೆ ಗಡ ಸಮಂತಾಯ್ತು (ಪಂಪಭಾ. ೧೩-೯೮); ಆರೊಡನೆ ಸಮಂತಾರೋಗಿಪೆಂ (ಗದಾಯು. ೫-೩೦) ; ತೆಂಕಣಲಂಕೆ ಸಮಂತು ಮೇರೆಯಾಗಿರೆ ಬನವಸೆನಾಡನೊಸೆದಾಳ್ದು (ಎಕ. VII(S). ೨೫೧. ೩೩೪-೧೪; ಸು.1100); ತನುವೊಳ್ ದಾರ್ಢ್ಯಂ ಸಮಂತೊಪ್ಪುವಾ ಪೂರ್ವಾರ್ಜಿತಪುಣ್ಯಮೈ (ಸೋಮೇಶ. ೩೭); ವ್ರತವ . . . ಉದ್ಯಾಪಿಸಿದೆ ನೀ ಸಮಂತು (ಗಿಇಎಂ. ೫೭-೨೦). ೨. ಹಾಗೆ ; ಅಂತೆ : ಬಂದರ್ತಿಯಿಂ ಸೇಸೆಗೊಣ್ಮು ಬಲಂಗೊಣ್ಮು ಸಮನ್ದು ಪೋದನೆಸವೀ ಗ್ರಾಮಾಧಿಪಂ (ಸೌಇ.XI-i, ೫೨-೬೫; 1077); ಅತಿಪೀಡನದಿಂ ರೇಫಾಶ್ರಿತಮಾದ ಐಕಾರಮುಂ ಸಮಂತು ಡಕಾರಾಶ್ರಿತಮಾದ ಐಬನುಂ . . . ವರ್ಣಾವೃತ್ತಿಗೆ ಸಲ್ವುವು (ಶಮದ. ೧೮); ರಾಘವನ ಶಾಸನಂ ನಾಡಂ ಸಮಂತು ಕಾಡಂ ಕೊಱತಿಲ್ಲದಾಳ್ಗುಮಲ್ತೆ (ರಾಮಾಶ್ವ. ೬೭-೧೬). [< ಸಮಂತು₁]

ಸಮಂದರ್ (ಕ್ರಿ). ಸರಿದೂಗಿಸು; ಸಮನಾಗಿಸು: ನಟಲಂ ಲಲಾಮದಿಂ ನಟಲದಿವಾ ಲಲಾಮಮುಮಲಂಕರಿಸಿರ್ದುವೆನುತ್ತೆ ನೋಡಿದರ್ ಘಟಕುಚೆಯರ್ ಸಮಂದರುತುಮಾಕೆಯ ಭೂಷ್ಯವಿಭೂಷಣಂಗಳಂ (ಚಂದ್ರಪ್ರ. ೬-೬೭). [ಸಮ್ + ತರ್]

ಸಮಂನುಡಿ (ಕ್ರಿ). ಸರಿಯಾಗಿ ಹೇಳು: ಸಮಂನುಡಿವೊಡವಂ ಪಿಡಿಯಂ (ಶಮದ. ೨೫೦ ಪ್ರಯೋ). [ಸಮ್ + ನುಡಿ₁]

ಸಮಂಬಡೆ (ಕ್ರಿ). ಹೋಲಿಕೆಯನ್ನು ಹೊಂದು; ಸಾದೃಶ್ಯವನ್ನು ಪಡೆ: ಚಕಿತತರಂಗ ಸಂಘಹತಿಯಿಂ ಪೊಱಪೊಣ್ಮುವ ಮುತ್ತು ದಿಗ್ಮಧೂನಿಕರದ ತೊಟ್ಟಿ ಮುತ್ತಿನೊಳೊಡಂಬಡೆ ಸೂಸುವ ಶೀಕರಾಳಿ ತಾರಕಗಣದೊಳ್ ಸಮಂಬಡೆಯೆ (ಜಗವಿ. ೧-೪೪). [ಸಮ್ + ಪಡೆ₁]

ಸಮಕಕ್ಷ (ಗು). ೧. ಸರಿಸಮನಾದ; ಸಮತೂಕವಾದ. (ನಾ). ೨. ಸರಿಸಮ; ಸಮಾನ : ಮಸುಳೆ ನಿಜಾನ್ವಯಮಹಿಮೋನ್ನತಿ ನಾಲ್ಕುಡೆವೋಗೆ ಪಾಲಿಯುಂ ಪಸುಗೆಯುಮೆನ್ನ ಮನ್ನಣೆಯನಿಂದಗಿಯೊಳ್ ಸಮಕಕ್ಷಮಾಗೆ[ಹಾಹಾಂ. ಸಮಕಕ್ಷ ೬ನಾಗೆ] ರಕ್ಷಿಸಿದುದನೇನುಮಂ ಬಗೆಗೆ ತಾರದೆ ಲಕ್ಷ್ಯನೊಕ್ಕುದಿಟ್ಟು (ಪಂಪಾಮಾ. ೧೧-೧೩೬). ೩. [ಕಾವ್ಯಮಿ] ಸ್ವತಂತ್ರವಾಗಿರುವ ಎರಡು ಅಲಂಕಾರಗಳ ಸಂಯೋಗ : ಯೋಗಂ ಪಲವುಮಲಂಕೃತಿಗಾಗಿರೆ ಸಂಶ್ಲೇಷಮೆಂಬುದನ್ಯರ್ಥಗತಂ ಯೋಗಮು ಮಂಗಾಂಗಿ ಪ್ರವಿಭಾಗಂ ಸಮಕಕ್ಷಮೆಂದೆರಟ್ಟಿಅನಕ್ಕುಂ (ಕಾವ್ಯಾವ. ೬೭೦); ತೇಜಂ ಪ್ರತಾಪಮುಮಂ ಮಿಕ್ಕುದೆಂಬುದು ಕೀರ್ತಿಚಂದ್ರಿಕೆ ವಿಲಾಸಂಬೆತ್ತುದೆಂಬುದು ಸಮಕಕ್ಷಂ (ಉದಯಾ. ೧೫೫). [ಸಂ.]

ಸಮಕಟ್ಟು₁, ಸವಕಟ್ಟು (ಕ್ರಿ). ೧. ವಿರ್ಪಡಿಸು ; ಸಿದ್ಧಗೊಳಿಸು : "ಸಮಕಟ್ಟು - ವಿಧಾನೇ" (ಶಮಧಾ. ೫); ವಾರಣಾವತಮನೊಂದೇ ದಿವಸದೊಳೆಯ್ದುವಂತಾಗ ರಥಮಂ ಸಮಕಟ್ಟಿ ನಾಲ್ಕುಲಕ್ಷಬಲಮಂ ನೆರಂಬೇಟ್ಟು ಕಳಿಪಿದನಾಗಳ್ (ಪಂಪಭಾ. ೨-೯೨ ವ); ಅರಸನೊಡನೆ ಪೋಗಲ್ವೇಳ್ಕೆನಗಿಂಧನಸಂದೋಹಮಂ ಸಮಕಟ್ಟಿ ಮೆಂಬುದುಂ ಸಚಿವರ್ ಸನ್ಮಾನಿಸಿ (ದಶಕು. ೨-೩೪ ವ); ಬಸಂತಂ ಪೊಲ್ದು ಸಮಕಟ್ಟಿದ ಮಲಂಗೆಂಬಂತಿರಡಿವಿಡಿದು ಮುಡಿವರೆಗಂ ಬಲ್ಪಣ್ಗಳಿಂ ತುಱುಗಿ ತೋರ್ಪ ಬಕ್ಕೆವಲಸಿಂ (ರಾಮಾಶ್ವ. ೫೩-೬). ೨. ಸಿದ್ಧವಾಗು ; ಅಣಿಯಾಗು : ನಿನ್ನ ರಾಜ್ಯಕ್ಕಾಸೆವಟ್ಟು ನಿನ್ನಂ ಕೊಂದಪೆನೆಂದು ಸಮಕಟ್ಟುತ್ರಿರ್ದಪನ್ (ಪಂಚತಂ. ೯೨-೧೪). ೩. ನಿಶ್ಚಯಿಸು; ನಿರ್ಧರಿಸು : ಅನಿಬರುಮೊಂದಾಗಿ ಭೀಷ್ಮರೊಳ್ ಕಾದುವಮೆಂದು ಸಮಕಟ್ಟಿ ಧರ್ಮಪುತ್ರಂ ಕದನತ್ರಿಸೇತ್ರನ ಮುಂದಿಟ್ಟು (ಪಂಪಭಾ. ೧೧-೩೬ ವ); ಪಜೆಕಾಲರ್ಗ್ಗಂ ಪಾತ್ರಕ್ಕಂ ದೇಸಿಗ ಭಾತ್ರ ಭೋಜನಕ್ಕಮೆಂದು ಸಮಕಟ್ಟಿ ತ್ರಿಕಾಳಭೋಗಂ ನಡೆವಂತಾಗಿ . . . ಕುಡೆ (ಸೌಇ. IX-i, ೮೦-೧೬; 1018); ಪುಳಿಂದಬಲಂ ಬೇಂಟೆಗೆಂದೊರ್ಬುಳಿಗೊಂಡು ಮರ್ಬು ಮಸಗಿದಂತೆ ಸಡಗರಿಸಿ ಸಮಕಟ್ಟಿ (ಗಿಂಶಿ. ೧-೭೮ ವ). ೪. ನೇಮಿಸು; ವಿಧಿಸು: ಮಂತ್ರಿ ಕಜ್ಜಮಂ ಸಮಕಟ್ಟಿ (ವಡ್ಡಾರಾ. ೧೭೭-೧೬); ಬಿದಿ ಸಮಕಟ್ಟಿ ಕೊಟ್ಟೊಡೆಡೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್ (ಪಂಪಭಾ. ೧೨-೧೩೨); ನಮಗೆ ಶಿವಂ ಸಮಕಟ್ಟಿದ ಪಡಿವೊನ್ನಳಂ ಕುಡದ ದೇವಾಲಯಂಗಳೆಲ್ಲಿಯುಂಟು (ನಂಬಿರ. ೧೨-೬). ೫. ರಚಿಸು ; ನಿರ್ಮಿಸು ; ತಯಾರಿಸು : ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಂ . . . ಎಸೆವುಗ್ರರಣಾನಕರೌದ್ರಘೋಷಮೇರ್ವ್ಯಸನಮನುಂಟು ಮಾಡಿದುದು ಪಂದೆಗಮಂದಿನ ವೀರಗೋಷ್ಠಿಯೊಳ್ (ಆದಿಪು. ೧೪-೧೦); ನವತಾರಕಾ ಸಮುದ್ಗಮಮನಲರ್ಚಿ ತಮ್ಮ ನಯನಪ್ರಭೆಯಿಂ ಸಮಕಟ್ಟಿ ರುಕ್ಮಿಣೀರಮಣನ ಕೋಮಳಾಂಘ್ರಿಯುಗಳಕ್ಕೆ ನಿವೇದಿಸುವಂದದಿಂ . . . ಪೊಚ್ಚ ಪೊಸಮಾಲೆಯ ನೆತ್ತುವರಲ್ಲಿ ಬಾಲೆಯರ್ (ದಶಕು. ೧೪-೧೬); ಮನಂಬಂದ ಪದಾರ್ಥಮಂ ಮಿಗೆ ಎದರ್ಚನ್ಯಪಂ ಸಮಕಟ್ಟಿ ಕಲ್ಪಭೂಜಂ ದೊರೆಯೆಂಬಿನಂ . . . ಮೆಱೆದಂ ನಿರಂತರಂ (ನಳಚಂ. ೨೪೧). ೬. ಆಲೋಚಿಸು; ಚಿಂತಿಸು: ಜನಾರ್ದನನೊಡನೆ

ರಿಪುಬಳಮರ್ದನೋಪಾಯಮಂ ಸಮಕಟ್ಟುತಿರ್ಪನ್ನೆಗಂ (ಪಂಪಭಾ. ೧೧-೫೪ ವ); **ಸವಕಟ್ಟು** : ೧. ಮರುತ ಮಿತ್ರಕಾರ್ಯದ ಪರಿಕರಂಗಳಂ ಸವಕಟ್ಟುತಿರಲು ಭೂಪತಿ ಕಂದನು (ಹಚಕಾ. ೫-೫೪). [ಸಮ್ + ಕಟ್ಟು$_1$]

ಸಮಕಟ್ಟು$_2$ (ನಾ). ೧. ಏರ್ಪಾಡು ; ಸಿದ್ಧತೆ : ಸಮಸ್ತಬಲಂಬೆರಸು ಕಾದುವ ಸಮಕಟ್ಟಂ ದುರ್ಯೋಧನನಱಿದು (ಪಂಪಭಾ. ೧೧-೩೬ ವ); ತನ್ನನೆಂತುಂ ಕೊಂಡು ಪೋದಪೆಂ ಸಮಕಟ್ಟನೊಳರ್ಪುದೆಂದು ಪೇಳ್ದು ಬನ್ನಿಂ (ಜೀವಸಂ. ೨೨೭-೧೦); ಗುಡಿಗೂಡಾರ . . . ಮಂಚಗಳ ಗಡಣವೆಯ್ದಿತು ರಾಯನ ನಿಯಮದೊಳಂದು ತಡವೇಂಟೆಯ ಸಮಕಟ್ಟು (ಕುರಾಸಾಂ. ೨೭-೪೬). ೨. ಔಚಿತ್ಯ ; ಯುಕ್ತತೆ : ಭಿನ್ನರಸಂಗಳ ಸಮಕಟ್ಟು ನ್ನೆಟ್ಟನ ಮೆಱೆಗುಮಱಿಯೆ ಶಾಂತಿಪುರಾಣಂ (ಶಾಂತಿಪು. ೧೨-೬೮). ೩. ನಿರ್ಣಯ; ನಿರ್ಧಾರ : ಪಗಲೆರ್ದೆಗೊಂಡ ತನ್ನ ಸಮಕಟ್ಟನಿರುಳ್ ಮೆಱೆದಂತೆಗೆಯ್ದು (ಶಾಂತಿಪು. ೮-೯೨); ದಂಡಾಧಿಪಂ ಕೋಂಟೆಯಂ ಬಲಿದು ಕಾದುವ ಸಮಕಟ್ಟಂದಿರ್ಪುದುಂ (ಧರ್ಮಾಮೃ. ೪-೨೪೦); ವಿವಾಹಕಲ್ಯಾಣಮನಲ್ಲಿಯೆ ಮಾಟ್ಪ ಸಮಕಟ್ಟಂದಟ್ಟಿದಂ (ವರ್ಧಪು. ೬-೫೬ ವ). ೪. ಹೋಲಿಕೆ ; ಸಾದೃಶ್ಯ : ಸಮಕಟ್ಟಿಂಗೊರೆಗಾರುಮಿಲ್ಲರಿಗ ಕೇಳ್ (ಪಂಪಭಾ. ೫-೭೬) ; ನಿನಗೂ ಅರ್ಜುನನಿಗೂ ಯಾವ ಸಮಕಟ್ಟು? (ಭಾಮಿಣಿ. ೮). ೫. ವಿಧಾನ ; ಕ್ರಮ ; ನಿಯಮ : ಭಯದೂರರನೀ ನೃಪರಂ ಸ್ವಯಂವರಕ್ಕಾರೋಕರೆದರಾ ಸಮಕಟ್ಟಾ ಬಿಯವ ವಿಭೂತಿಯೆಂತೆನ್ನಯ ಗೇಹದೊಳಾಯ್ತು ದಿಟದಿ ನಾನಿದನಱಿಯೆಂ (ಜಗಿವಿ. ೯-೭); ಇರಲ್ಬಟ್ಟರ್ ದಿಕ್ಪತಿಗಳ್ ಸಮಕಟ್ಟುಗಳಿಂ ಕೂಡಿ (ಶಬ್ದಾನು. ೪೪೩ ಪ್ರಯೋ). ೬. ಸಮಾನವಾದ ಭಾಗ : ಎಮಗಮೆಮಗಪ್ಪ ಭಾಗದ ಸಮಕಟ್ಟಂ ದೇವ ಕುಡಲೆವೇಟ್ಟುದು (ಆದಿಪು. ೯-೯೯); ಸಾಸಿರ ದೀನಾರದ ಸಮಕಟ್ಟಿನ ನಾಲ್ಕು ಪೊಟ್ಟಳಿಗೆಯನೊಂದೆಮಾಡಿ (ಸುಕುಮಾ. ೭-೮ ವ); ಪೊಸ ಸಮಕಟ್ಟಿನ ಝಲ್ಲಿಗಳಿಂದ ರಾಜಿಸುವ ದಿವ್ಯಾಶ್ವವೈದಿದುವು (ಕಂನವಿ. ೨೩-೯೧).

[< ಸಮಕಟ್ಟು$_1$]

ಸಮಕಟ್ಟುಗೆಡು (ಕ್ರಿ). ವ್ಯವಸ್ಥೆ ತಪ್ಪಿಹೋಗು; ಕ್ರಮತಪ್ಪು : ಚಾತುರ್ವರ್ಣಂಗಳ್ ಮೊದಲ ಸಮಕಟ್ಟುಗೆಟ್ಟು ತಡವರಿಸಿ ತಟ್ಟುಪೊಟ್ಟೆಂದಟ್ಟುಂ . . . ಕಾದೆ (ಪಂಪಭಾ. ೧೦-೭೦ ವ). [ಸಮಕಟ್ಟು$_2$ + ಕೆಡು$_1$]

ಸಮಕರಣ (ನಾ). ಸಮಮಾಡುವಿಕೆ ; ಮಟ್ಟಗೊಳಿಸುವಿಕೆ : ಘಾತಿಕ್ಷಯಜಾತಾನಂತ ಚತುಷ್ಟಯಸ್ವರೂಪನಾಗಿ ಶೇಷಾಘಾತಿಸ್ಥಿತಿ ಸಮಕರಣಾರ್ಥಂ ಅನೀಹಿತವೃತ್ತಿಯಿಂ ಲೋಕಪೂರಣ ಸಮುದ್ಘಾತಮಂ ಮಾಟ್ಟುಂ (ತತ್ತ್ವಪ್ರ. ೨೩೪). [ಸಂ.]

ಸಮಕಲು, ಸವಕಲು (ಗು). ೧. ಸವೆದುಹೋದ; ನವೆದ : 'ನುಟಂಬ' ನೊಟಂಬ' ಆಗಿ ಈಗಿನ 'ನೊಣಬ' ಎನ್ನುವ ಸಮಕಲು ರೂಪವನ್ನು ಹೊಂದಿದೆ (ನೊಳಂಬ. ೩). **ಸವಕಲು** : ೧. ಸವಕಲು ಕಬ್ಬಿಣದ ಲಾಳ . . . ಇಟ್ಟುಕೊಂಡಿದ್ದನು ಚಂದ್ರ (ಮುಂಗಾಮು. ೨೭). (ನಾ). ೨. ಸವೆದುಹೋದುದು : ಮತ್ತೆ ಅದೇ ಹಳಸಲು ಸಮಕಲುಗಳೆ! (ತುಂಗಭ. ೬೦); ಭಿಕ್ಷುಕನೊಬ್ಬನಿಗೆ ಒಂದು ಪಾವಾಣೆ ಸವಕಲು ಕೊಟ್ಟಿದ್ದೆಯಲ್ಲ (ಮುಂಗಾಮು. ೩).

ಸವಕಲಾಗು = ೧. ಸವೆದು ಹೋಗು ; ಸಮೆ : ಕಾಲಕ್ರಮೇಣ ನಾಣ್ಯಗಳಂತೆ ಸವಕಲಾಗಿ ತಮ್ಮ ಅರ್ಥವನ್ನು ಪರಿಮಿತಗೊಳಿಸಿಕೊಳ್ಳಬಹುದು (ಸೌಂದಸ. ೪೨). ೨. ಹಳೆಯದಾಗು : ಎಷ್ಟೋ ಬಗೆಯ ಆಟಗಳು ಚಲಾವಣೆಗೆ ಬಂದು ಸವಕಲಾಗಿ ಹೋಗಿರಬಹುದು (ಕವಿಕೋ. I.೭೧೧). [ಸಮ್$_1$ + - ಕಲ್$_2$ (< - ಕಲ್$_4$)]

ಸಮಕಾಣು (ಕ್ರಿ). ಒಂದೇ ರೀತಿಯಾಗಿ ಕಾಣು : ಯಾರ ದುಃಖಕೊ ಯಾರೆ ಅತ್ತರು ಎಲ್ಲರಿಗೂ ಸಮಕಂಡಿದೆ (ಹಾಡುವಾ. ೫೪-೩೫). [ಸಮ್ + ಕಾಣು (< ಕಾಣ್)]

ಸಮಕಾಲ (ನಾ). ಒಂದೇ ಸಮಯ ; ಏಕಕಾಲ : ಸಮಕಾಲಮಪ್ಪುವೆರಡರ್ಥಮನೊಡನೆಯೆ ಪೇಳ್ವುದದು ಸಹೋಕ್ತಿವಿತರ್ಕಕ್ರಮದಿಂದರ್ಥಾಂತರಮಂ ಸಮನಿಸುವೊಂದುಕ್ತಿಭಾವಮನೆ ಪೆಸರ್ವಡೆಗುಂ (ಕಾವ್ಯಾವ. ೭೧೩). [ಸಂ.]

ಸಮಕಾಲಿಕ (ಗು). ೧. ಒಂದೇ ಕಾಲದಲ್ಲಿರುವ ; ಏಕಕಾಲದಲ್ಲಿ ಇರುವ : ಸಮಕಾಲಿಕಭಾಷೆಗೆ ಪೂರ್ವವ್ಯಾಕರಣಗಳನ್ನು ಅನ್ವಯಿಸುವವರು . . . ಭಾಷಾಧರ್ಮವನ್ನು ತಿಳಿದಿರಲೇಬೇಕು (ಸಂಶೋಧ. ೮೬). (ನಾ). ೨. ಒಂದೇ ಕಾಲಕ್ಕೆ ಸೇರಿದುದು : ಈ ನಾಗರಿಕತೆಯು . . . ವೇದಗಳ ಸಮಕಾಲಿಕವೆ (ಹಸುಹೂ. ೩೭೦). ೩. ಒಂದೇ ಕಾಲಕ್ಕೆ ಸೇರಿದ ವ್ಯಕ್ತಿ ; ಸಮಕಾಲೀನ : ಆತನು ನಂಜುಂಡನ ಸಮಕಾಲಿಕನೆಂದು ತಿಳಿದುಬರುತ್ತದೆ (ರೂಫಿ). [ಸಂ.]

ಸಮಕಾಲೀನ (ಗು). ೧. ಒಂದೇ ಕಾಲದ ; ಏಕಕಾಲದ : ಅನುಭವಶ್ರೇಣಿಯ ನಿರ್ಮಾಣದಲ್ಲಿ ಸಮಕಾಲೀನವ್ಯಕ್ತಿಗಳ ವಯಸ್ಸಿನ ಭಿನ್ನತೆ ಬಹುವಾಗಿ ನೆರವಾಗುತ್ತದೆ (ಶಿಕ್ಷದ. ೩) ; ಸಂಸ್ಕೃತ ಪೂರ್ವ ಇಲ್ಲವೇ ಸಮಕಾಲೀನ ಭಾಷೆಗಳಿಗೆ ಸೇರಿರುವ ಪದಗಳೆಂದು ತೋರುತ್ತದೆ (ದ್ರಾವಿವಿ. ೨೬೩). (ನಾ). ೨. ಒಂದೇ ಕಾಲಕ್ಕೆ ಸೇರಿದ ವ್ಯಕ್ತಿ : ಆತನೂ ರನ್ನನ ಸಮಕಾಲೀನನೆಂದು . . . ಸ್ಪಷ್ಟವಿದೆ (ಮೂಯಲು. ೩೩); ತನ್ನ ಎಷ್ಟೋ ಸಮಕಾಲೀನರ ಈರ್ಷ್ಯೆಗೆ ಗುರಿಯಾದುದರ ಸಾಮ್ಯವನ್ನು ಇಲ್ಲಿ ನೆನೆಯಬಹುದು (ಸಂಗೀತ. ೨). [ಸಂ.]

ಸಮಕೂಟಗೊಳಿಸು (ಕ್ರಿ). ಸರಿಯಾಗಿ ಬೆರಸು ; ಸಮನಾಗಿ ಮಿಶ್ರಣಮಾಡು : ಕೂಟಗೈದು ಸಿಯಾತ್ಮನಾ ಶಿವನಾಟವೆಂದಜ್ಞಾನಿಗಳ ಸಮಕೂಟಗೊಳಿಸಿನ್ನಾತ್ಮ ಹಂಸನ ಕೆಡಿಸಿದೆನಲರಸು (ಬಿಜ್ಜಪು. ೭೩-೪೫). [ಸಮಕೂಟ$_0$ + ಕೊಳ್$_1$ + - ಇಸು$_3$]

ಸಮಕೂಡು (ಕ್ರಿ). ಸಮನಾಗಿ ಒದಗು ; ನೆರವೇರು ; ಕೈಗೂಡು : ಅರಸಿನ ಮನಸ್ಸಿಗೆ ಪ್ರೀತಿಯನ್ನುಂಟುಮಾಡುವವನಿಗೆ ಸಕಲಮನೋರಥಂಗಳೂ ಸಮಕೂಡುವುದರಿಂದ (ಕೃವಾವಿ. ೮). [ಸಮ್ + ಕೂಡು$_1$]

ಸಮಕೃಷ್ಟ (ನಾ). ಎಳೆಯಲ್ಪಟ್ಟುದು : ಸಮಕೃಷ್ಟಂ ಸಮವೇಧನಂ ಸಮಭವತ್ಸಂಧಾನಮಂದಿರ್ವರೇಸುಮನಾಗಳ್ ನಡೆ ನೋಡಿ (ಶಾಂತಿಪು. ೪-೪೮). [< ಸಂ. ಸಮಾಕೃಷ್ಟ]

ಸಮಕೊಳ್ 'ಸಮಗೊಳ್' ನೋ.

ಸಮಕೊಳಿಸು 'ಸಮಗೊಳಿಸು' ನೋ.

ಸಮಕ್ಷ (ಗು). ೧. ಮುಂದುಗಡೆಯಲ್ಲಿರುವ. (ನಾ). ೨. ಕಣ್ಣೆದುರು; ಪ್ರತ್ಯಕ್ಷ; ಮುಂದುಗಡೆ : ಹುತವಹಸಮಕ್ಷದೊಳ್ ಕೆಯ್ಯೂರೆಱೆದು ಪಾಣಿಗ್ರಹಣಂಗೆಯ್ಯೆ (ಪಂಪಭಾ. ೩-೭೪ ವ); ನಡೆ ರಥವನೇಱೆಂದು ಮೃಡಸಮಕ್ಷದೊಳು ಕೌಶಿಕನೆನಲು (ಹಚಕಾ. ೧೪-೧೨). [ಸಂ.]

ಸಮಕ್ಷಮ (ನಾ). = ಸಮಕ್ಷ ೨ : ವಹಿಲದಲಿ ಹತ್ತಿರಕೆ ನಡೆತರಲು ಸಮಕ್ಷಮದಲಿ ಕುಳ್ಳಿರಿಸಿದನು (ಜಿನಭಾ. ೧೨-೭); ದುರ್ಯೋಧನನ ಸಮಕ್ಷಮದಲ್ಲಿ ಹೇಳಿದನು (ಕೃವಾಉ. ೧೩೬). [< ಸಂ. ಸಮಕ್ಷ]

ಸಮಗದ್ದುಗೆ (ನಾ). ೧. ಸಮಾನವಾದ ಪೀಠ : ಶಿವನ ಸರಿಮಂಚದಲಿ ಸರಿಸಿಜಭವನ ಸಮಗದ್ದುಗೆಗಳಲಿ ವಾಸವನ ತೊಡೆಸೋಂಕಿನಲಿ ಕುಳ್ಳಿಹರೀ ಮಹೇಶ್ವರರು (ಕುವ್ಯಾಸ. ೮-೧೮). [ಸಮ್ + ಗದ್ದುಗೆ$_2$ (< ಗರ್ದುಗೆ$_2$)]

ಸಮಗಾಣಿಸು (ಕ್ರಿ). ಸಮಾನವಾಗಿ ಮಾಡು : ಅರಿದರಿದು ಸಮಗಾಣಿಸಬಾರದು ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದರೆ ಈಶ್ವರನೊಡೆಯಿಕ್ಕದೆ ಮಾಣುವನೆ (ಬಸವ. ೮೦೪). [ಸಮ್ + ಕಾಣಿಸು]

ಸಮಗಾರ 'ಚಮಗಾರ' ನೋ.

ಸಮಗಿ (ನಾ). ಧರ್ಮಾನುಯಾಯಿ (?) : ಚೋಳ ಚಪ್ಪರದ ಸಮಗಿಗಳು ಬಲುವಾದ್ಯ ತಾಳ ಚಾಗಟೆಯ ಮೇಳದಲಿ ತೂಳುವ ಹರುಷದೆ ವರಗಜೇಂದ್ರನ ತಿರುನಾಳ ನಿಟ್ಟಿಸ ಬಂದರಾಗ (ಕಂನವಿ. ೨೩-೪೦). [?/ತಮಿ. ಚಮಯಕ್ಕಾರನ್./ಸಂ. ಸಮಯಿನ್]

ಸಮಗೈ$_1$ (ಕ್ರಿ). ಸಮಗೊಳಿಸು : ಸುಮಸುಶರನರಸಿಮವನ ನಿಶ್ಚಲದ ಸದ್ಭಾಷೆಯನ್ನೆರೆ ಕೇಳಿ ತಿಳಿದು ತನ್ನಂ ಪಡೆದ ವಟಿಯ ಸಮಗೈದುವಲಿದು (ನವಮೋ. ೮-೫೪). [ಸಮ್ + ಕೈ$_1$ (< ಕೆಯ್$_1$)]

ಸಮಗೈ$_2$ (ನಾ). ಸರಿಜೋಡಿ ; ಸಾಟಿ : ಮುರಹರನ ಸಮಜೋಳಿ ನೀವಾ ನರನ ಸಮಗೈ (ಕುವ್ಯಾಕ. ೫-೩೨); ತರಣಿಬಂಬವ ತುಡುಕಲಭ್ರಕೆ ಚರಿಸಿದನು ಸಮಗೈಯಲನುಜನ (ತೊರಾ. ೪-೧೧-೧೮). [ಸಮ್ + ಕೈ$_2$ (< ಕೆಯ್$_2$)]

ಸಮಗೊಳ್, ಸಮಕೊಳ್ (ಕ್ರಿ). ೧. ಉಂಟಾಗು ; ಒದಗು : ಸಮಗೊಂಡರ್ಥ ಪದಾವೃತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ (ಕಾವ್ಯಾವ. ೬೫೨). ೨. ಸಮವೆಂದು ಭಾವಿಸು ; ಸಮಾನವಾಗಿ ಕಾಣು : ನೀಚರನು ನಿನ್ನ

ಸಮಗೊಂಡು ಕುಳ್ಳಿರಿಸಿದ್ಧೆ (ಬಿಜ್ಜಪು. ೭೧-೩೬). **ಸಮಕೊಳ್:** ೧. ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲದೊಡಾಳ್ದನಾಳ್ ಸರೋಗನರೋಗಂ . . . ಎಂಬೀ ಲೋಕಯಾತ್ರೆ ಕಿಡದೆ (ಶಾಂತಿಪು. ೮-೧೪೦). [ಸಮ್ + ಕೊಳ್]

ಸಮಗೊಳಿಸು, ಸಮಕೊಳಿಸು (ಕ್ರಿ). ೧. ಏರ್ಪಡಿಸು ; ಸಜ್ಜುಗೊಳಿಸು: ಸಾಮಂತಚೂಡಾಮಣಿಯ ಪಟ್ಟಬಂಧನ ಮಹೋತ್ಸವಮಂ ಸಮಗೊ[ಪಾಠಾಂ. ಕೊ]ಳಿಸಿ (ಪಂಪಭಾ. ೧೪-೧೬ ವ); ಎಮಗಿನ್ನುಮೊಡಂಬಡು ಕಂದ ಸಂಧಿಯಂ ಸಮಗೊಳಿಸಲ್ಕೆ ಸಂಜಯನನಟ್ಟುವೆ (ಗದಾಯು. ೩-೮೫). **ಸಮಕೊಳಿಸು:** ೧. ಕುರುಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತೆ . . . ಅಟ್ಟಿ (ಪಂಪಭಾ. ೧೩-೭೦ ವ); ಅಮೃತವತಿಯೆಂಬಳಾರೋಗಣೆಯ ಬೋನಮಂ ಕ್ರಮದೆ ಸಮಕೊಳಿಸಿಯುಂ (ಶಾಂತೀಶ್ವ. ೧೩-೨೨೯ ವ). ೨. ತಿದ್ದು ; ಸರಿಪಡಿಸು : ಸೂರಿಯನ ಸುತ ಮರಳೆ ಮರಳಿದು ಸೈರಣೆಯ ಸಮಕೊಳಿಸಿ ಪದಿನೆಣ್ಬಾರಿ ಭೀಮನ ತಾಗಿದನು (ಕುವ್ಯಾದ್ಯೋ. ಒರಿಗ. ೧೩-೫೯ ಅಡಿಟಿ). ೩. ಸರಿಗಟ್ಟು; ಹೋಲು: ಮಂದಾರ ಮಾಲಿಕಾಮ್ಲಾನತೆಯುಂ ಸಮಕೊಳಿಸಲಾರ್ತುದಿಲ್ಲ ದಲಮರೇಂದ್ರನದೊಂದು ಮುಖಪರಿಮ್ಲಾನತೆಯಂ (ಆದಿಪು. ೬-೧೯). [ಸಮಕೊಳ್ + - ಇಸ್ಸು]

ಸಮಗೋಷ್ಠಿ (ನಾ). ಜೊತೆಗೂಡಿ ಮಾತಾಡುವುದು ; ಸರಸಸಲ್ಲಾಪ: ಮಂತ್ರಿಯ ಹಗೆ ನೃಪನ ಕಾಂತೆಯ ಸಮಗೋಷ್ಠಿ . . . ಇವು ತನ್ನ ಅಂತ್ಯಕಾಲಕ್ಕೆ (ಸರ್ವಜ್ಞ. ೭೩೯). [ಸಂ.]

ಸಮಗ್ರ (ಗು). ೧. ಸಕಲ ; ಎಲ್ಲ : ಆಯತ ಸಮಗ್ರೋರಸ್ಕಳಂ ದೀರ್ಘಬಾಹಾಲಂಬಂ ಭುಜವೀರ್ಯ ವಿಕ್ರಮಯುತಂ ಗಂಗಾತ್ಮಜನ್ಮಂ (ಪಂಪಭಾ. ೧-೬೮); ಬಲವೈರಿಯ ವೋಲ್ ಸಮಗ್ರವಿಭವ ಸನಾಥಂ (ಶಮದ. ೨೧೪ ವ್ಯಯೋ.). (ನಾ). ೨. ಸಂಪೂರ್ಣವಾದುದು; ಪರಿಪೂರ್ಣವಾದುದು: ಇಂತು ಸಮಗ್ರಂ ಪೆಜತಾವುದು (ಜಾತಕ. ೨೪-೪೧); ಉಗ್ರವಾವುದು ದೈವದೊಳಗೆ ಸಮಗ್ರವಾವುದು ಧರ್ಮದೊಳಗೆ (ಕುವ್ಯಾಉ. ೪-೩೯). ೩. ಪರಿಪೂರ್ಣನಾದವನು : ವಿಜ್ಞಾನವಿದ್ಯಾವಿಶೇಷಕಳಾಳಾಪದೊಳಾಂ ಸಮಗ್ರಂ (ಸುಕುಮಾ. ೩-೨೧). [ಸಂ.]

ಸಮಗ್ರತೆ (ನಾ). ಸಂಪೂರ್ಣತೆ; ಪರಿಪೂರ್ಣತೆ: ಅವರ ಶಿವತತ್ವಾನುಭವಸಂಭವ ಮಹತ್ವಸಮಗ್ರತೆಯುಮಂ ಶಿವಗಣಂಗಳು ನುತಿಸುತಿರಲು (ಬಸಪು. ೧೯-೨೧); ಜೀವನದ ಸಮಗ್ರತೆಯನ್ನು ಚಿತ್ರಿಸುವ ಚಿರಂತನಕಾವ್ಯಗಳಲ್ಲಿ ಶೃಂಗಾರವೇ ಸರ್ವಸ್ವವಾಗಲಾರದು (ಸಾಹಿಸ. ೯). [ಸಂ. ಸಮಗ್ರತಾ]

ಸಮಗ್ರಾಹಕ (ನಾ). ಹಿರಿದು, ಕಿರಿದೆಂಬ ಭೇದಭಾವವಿಲ್ಲದವನು ; ಸಮದರ್ಶಿ: ವೀರಧೀರ ಸಮಗ್ರಾಹಕನಾಗಿ ನಿಮಗಾನಂಜೆ (ಬಸವ. ೭೨೯); ಒಡೆಯರ ಸಮಪಂತಿಯಲ್ಲಿ . . . ಸಮಗ್ರಾಹಕ ನಾನಲ್ಲಯ್ಯ (ಪದಗೋ. ೧೮೦-೧). [ಸಂ.]

ಸಮಚಡಿಸು (ಕ್ರಿ). ಎದುರಾಳಿಯೊಡನೆ ಸಮಸಮವಾಗಿಯೇ ಸೆಟೆದು ನಿಲ್ಲು : ತುಡುಕಲೀಯದೆ ತಿರುಗಿದರು ಗಡಬಡಿಸಿ ದಂಡೆಯೊಳೊತ್ತಿದರು ಸಮಚಡಿಸಿ [ಪಾಠಾಂ. ಸಂಗಡಿಸಿ] ನಿಂದರು (ಕುವ್ಯಾಸ. ೨-೯೫). [ಸಮ್ + ಚಡಿಸ್ಸು]

ಸಮಚತುರಸ್ರ (ನಾ). ನಾಲ್ಕು ಸಮಕೋನಗಳನ್ನುಳ್ಳುದು; ಚಚ್ಚೌಕ: ದಿಶಾಭಾಗದೊಳ್ ಸಮಚತುರಸ್ರಮಾಗೆ ನೆಲನನಳೆದು (ಪಂಪಭಾ. ೨-೬೫ ವ). [ಸಂ.]

ಸಮಚತುರಸ್ರಸಂಸ್ಥಾನ (ನಾ). ೧. [ಜೈನ] "ಇದು ಒಂದು ಶರೀರಾಕೃತಿ ವಿಶೇಷ ; ನಾಮಕರ್ಮಪ್ರಕೃತಿಗಳಲ್ಲೊಂದು; ಈ ಕರ್ಮದ ಉದಯದಿಂದ ಮೇಲೆ ಕೆಳಗೆ ಹಾಗೂ ಮಗ್ಗುಲುಗಳಲ್ಲಿ ದೇಹದ ಆಕಾರ ಸಮಾನವಾಗಿರುವುದು" (ಚೈನಧ. ೩೭೩). ೨. ದೇಹದ ಆಕಾರದಲ್ಲಿ ಏರುಪೇರಿಲ್ಲದೆ ಸಮವಾಗಿ ಇರುವವನು : ಅಹಮಿಂದ್ರನಾಗಿ ಪುಟ್ಟಿ ಸಮಚತುರಸ್ರಸಂಸ್ಥಾನನುಂ . . . ಸುಖಾನುಭವನಿರತನುಮಾಗಿ (ಅಜಿಪು. ೩-೨ ವ). [ಸಂ.]

ಸಮಚತುರ್ಭುಜ (ನಾ). [ರೇಖಾಗ] ನಾಲ್ಕು ಕೋಣ ಮತ್ತು ನಾಲ್ಕುಬಾಹುಗಳು ಸಮನಾಗಿರುವ ಚತುರ್ಭುಜ : ಸಮಚತುರ್ಭುಜವೆಂದರೆ? ನಾಲ್ಕುಕೋಣಗಳು ಸಮನಾಗಿಯೂ ನಾಲ್ಕುಭುಜಗಳು ಸಮವಾಗಿಯೂ ಉಳ್ಳದ್ದು. ವರ್ಗಕ್ಷೇತ್ರ ಅಥವಾ ಚಚ್ಚೌಕವೆಂದು ಹೇಳಲ್ಪಡುವುದು (ಭೂಮಿಅ. ೧೦). [ಸಂ.]

ಸಮಚಿತ್ತ (ನಾ). ೧. ಸಮಸ್ಥಿತಿಯಲ್ಲಿರುವ ಮನಸ್ಸು ; ವಿಕಾರವಿಲ್ಲದ ಚಿತ್ತ: ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು . . . ಶರಣಾರ್ಥಿಯೆಂಬ ಶ್ರವವ ಕಲಿತರೆ ಆಳುತನಕ್ಕೆ ದೇಸಿಯಪ್ಪೆ (ಬಸವ. ೭೨೫); ನಾನುಸಿರಾಡುತಲಿಹುದೆ ಪವಾದವು ಸಮಚಿತ್ತ ದೈವದ ಬಲವು (ಇಂಚಾಪ. ೨೪೨-೯೭). ೨. ಒಂದೇ ವಸ್ತುವಿನ ಬಗ್ಗೆ ಮಾಡುವ ಚಿಂತನೆ : (ಕ). [ಸಂ.]

ಸಮಚ್ಛಾಯೆ (ನಾ). (ಆಲಂ) ಏಕಾಭಿಪ್ರಾಯ : ಅಯಿವತೊಕ್ಕಲುಂ ಸಮಚ್ಛಾಯೆಯೊಳಿರ್ದ್ದು ದೇವರ ದೀವಿಗೆಗೆ ಸೊಟಗೆ ಎಣ್ಣೆಯಂ ಬಿಟ್ಟರು (ಎಇ. XVII, ೧೮೬-೫೩; 1097). [ಸಂ. ಸಮಚ್ಛಾಯಾ]

ಸಮಚ್ಛಿದುರ (ಗು). ಸಮವಾಗಿ ಭಾಗವಾದ; ಸಮಭಾಗವಾಗಿರುವ: ಮೃದುತಾಂಬೂಲ ಲತಾಪಿನದ್ಧವಿಲಸತ್ಪೂಗದ್ರುಮೌಘಂ ಸಮಚ್ಛಿದುರೇಲಾವ್ರತತೀಪರೀತ ವಿಪುಲ ಶ್ರೀಖಂಡಭೂಜಂ . . . ಮಳಯಕ್ರೀಡಾಚಳಂ (ಶಾಂತಿಪು. ೫-೧೪೨). [< ಸಂ. ಸಮಚ್ಛಿದ್ರ]

ಸಮಜ (ನಾ). ಪ್ರಾಣಿಗಳ ಗುಂಪು ; ಪಶುಪಕ್ಷಿಗಳ ಸಮೂಹ : "ಪಶುಗಳ ಸಮೂಹವು ಸಮಜಯೆನಿಸುಗುಂ" (ನಾಚಿರಾ. ೧೧೫). [ಸಂ.]

ಸಮಜಾತಿ (ಗು). ಒಂದೇ ತರದ; ಒಂದೇ ಜಾತಿಗೆ ಸೇರಿದ. [ಸಂ.]

ಸಮಜಾಯಿಷಿ (ನಾ). ಸಮರ್ಪಕವಾದ ಉತ್ತರ, — ವಿವರಣೆ : ಕ್ರಮವಾದ ಸಮಜಾಯಿಷಿ ತೋರಿಸದೆ ಇರುವ . . . ಡಿಕ್ರಿಯ ವಿಷಯದಲ್ಲಿ ಜವಾಬ್ದಾರನಾಗುವುದಿಲ್ಲ (ಗ್ರಾಮಾಕ. ೪೧); ಖಾವಂದರು ನ್ಯಾಯಾಧಿಪತಿಗಳಿಂದ ಸಮಜಾಯಿಷಿ ಕೇಳುತ್ತಿದ್ದರು (ಮಹಾವಂ. II, ೪೬); ಅಲ್ಲಿ ಆತನು ಯಾವ ಅಧಿಕಾರಿಗಳಿಗೆ ಏನು ಸಮಜಾಯಿಷಿ ಹೇಳಬೇಕಾಯಿತೊ (ಸಂಟಪು. ೧೧೩).

[← ಮರಾ. ಸಮಜಾವಶೀ, ಸಮಜಾವಿಶೀ, ಸಮಜಾವೀಸ]

ಸಮಾಜಾಯಿಸು (ಕ್ರಿ). ಸಮಾಧಾನಪಡಿಸು; ಸಾಂತ್ವನಗೊಳಿಸು: ನನ್ನ ದುಃಖವನ್ನು ಸಮಜಾಯಿಸುವವರು ಯಾರು? (ಮಸಕೂ. ೩೧); ಜೊತೆಯಲ್ಲಿದ್ದ ಮುಂದರಿಯು ಅವಳನ್ನು ಸಮಜಾಯಿಸಿದಳು (ಝಾರಾಗ. ೪೦೦).

[< ಸಮಜಾಯಿಷಿ + - ಇಸ್ಸು]

ಸಮಜೀವಿ (ನಾ). ಗಂಡನ ಇನ್ನೊಬ್ಬ ಹೆಂಡತಿ; ಸವತಿ: "ಸವತಿ ಸಮಜೀವಿಯಕ್ಕುಂ" (ಮಂಗರಾ. ೯೨-೧೨). [ಸಂ. ಸಮಜೀವಿನ್]

ಸಮಜೂತಿ 'ಸಮಜೂತು' ನೋ.

ಸಮಜೂತು, ಸಮಜೂತಿ (ನಾ). (ಉಕ) ೧. ತಿಳಿವಳಿಕೆ ; ಅರಿವು ; ಗ್ರಹಿಕೆ: ನನ್ನದು ತಪ್ಪು 'ಸಮಜೂತು' ಆಗಿತ್ತು (ರಾಯಚಾ. ೧೪೯) ; ಇದನ್ನೆಲ್ಲ ಸಮಜೂತು ಮಾಡಿಕೊಳ್ಳಾಕ ಬ್ಯಾಡ (ನಡದಾ. I, ೨೭೮). ೨. ಸಮಾಧಾನ ; ಸಾಂತ್ವನ : ಏನೋ ಸಮಜೂತು ಹೇಳಿ ಅಣ್ಣನನ್ನು ತೃಪ್ತಿಪಡಿಸುವುದಕ್ಕಾಗಿ ಎನ್ನುವಂತೆ ಹೇಳಿದ (ಬನಸಿ. ೨೭). **ಸಮಜೂತಿ** : ೧. ಸಮಜೂತೀಲೆ ಮಾಡಿದರೆ ಕೆಲಸ ಆದೀತ (ನಡದಾ. I, ೨೮೯). ೨. ಏನಾದರೂ ಸಮಜೂತಿ ಮಾಡಿ ಕಳಿಸಿಕೊಡಬೇಕಲ್ಲ (ಅಶೋಕ. ೧೯).

[← ಮರಾ. ಸಮಜೂತ್; ಹಿಂ. ಸಮಝೌತಿ]

ಸಮಜೋಡಿ (ನಾ). ಸರಿಯಾದ ಜೊತೆ ; ಸರಿಸಮಾನ : ಅಂಬುಜದ ಸಖಿಸೂನು ನೋಡೆ ತ್ರಿಯಂಬಕನ ಸಮಜೋಡಿಯಲ್ಲಾ ಬಾಹುವಿಕ್ರಮದಿ (ಸಂಭಪ. ೧೯-೪೦); ಅದಕ್ಕೆ ಸಮಜೋಡಿಯಾಗಿ ಪಕ್ಕದಲ್ಲೊಂದು ಕಪಾಟವನ್ನಿಟ್ಟಿತ್ತು (ಪುನರು. ೧೫).

[ಸಮ್ + ಜೋಡಿ]

ಸಮಜೋಡಿಸು (ಕ್ರಿ). ಜೊತೆಯಾಗು; ಸಾಟಿಯಾಗು: ನಿಟಿಲನೇತ್ರನ ನಯನಶಿಖಿಯುಬ್ಬಟೆಗೆ ಸಮಜೋಡಿಸಿತು ಕರ್ಣನ ಚಟುಳವಿಕ್ರಮಪವನಪರಿಗತ ಬಾಣಶಿಖಿನಿಕರ (ಕುವ್ಯಾಕ. ೧೩-೩೯). [ಸಮ್ + ಜೋಡಿಸು]

ಸಮಜೋಳಿ (ನಾ). = ಸಮಜೋಡಿ : ಗೂಳಿಗೆ ವರ್ತಕವೇ ಸಮಜೋಳಿಯೆನಗ ಮರತತಿಯೊಳೆಣೆಯಗಾಣೆಂ (ಉದ್ಭಟ. ೪-೮೮); ಮುರಹರನ ಸಮಜೋಳಿ ನೀನಾ ನರನ ಸಮಗೈ ಕರ್ಣಂ (ಕುವ್ಯಾಕ. ೫-೩೨); ಸಮಜೋಳಿ ಜೋಕಿಯಿಂ ಕಾದಿದರ್ ಬಿಲ್ಲ ಬಿನ್ನಾಣಿಗಳ್ (ಚಟುಪು. ೩೯-೧೦). [ಸಮ್ + ಜೋಳಿ]

ಸಮಜ್ವರ (ನಾ). ಏರಿಳಿತವಿಲ್ಲದ ಜ್ವರ; ಏಕರೀತಿಯಾಗಿರುವ ಜ್ವರ: ಪ್ರತಾಪ ಲಂಕೇಶ್ವರ . . . ಗುಳಿಗಯಂ ಮಾಡಿ ಸಮಜ್ವರಕ್ಕೆ ಜೀರಿಗೆ ಸಕ್ಕರೆಯಲ್ಲಿ ಕೊಡುವುದು (ವ್ಯವಿ. ೬೯). [ಸಂ.]

ಸಮಟಗೆ 'ಚಮ್ಮಟಗೆ' ನೋ.

ಸಮಡೇರಾ (ನಾ). ಒಂದು ಬಗೆಯ ಹೂವಿನ ಗಿಡ : ಸಮಡೇರಾ, ನೇಪಾ (ಮೈಡಿಗ. ೬೭-೧೩೦). [? + ಡೇರ್ಸಾ (< ಡೇಲಿಯಾ)]

ಸಮಣ 'ಸವಣ$_2$' ನೋ.

ಸಮಣ್ಣಾಟ್ (ನಾ). ಸವಣನಿಗೆ ದಾನವಾಗಿ ಕೊಟ್ಟ ಭೂಮಿ : ವೆಲ್ಲಸಮ್ಮಜ್ಗೆ ಕೊಟ್ಟೋದು ಕಣ್ಣುಗದಯ್ಲುಳ ಕಳನಿಯುಂ ಚನ್ನಕಳನಿವೆಲತೋಟ್ಟಪಟ್ಟು ಸವಣ್ಣಾಟ್ಗೆನ್ಮೇಲೆ ಎಣ್ಣುಣ್ಣುಗಂ ಅಪೂರ್ವಪರಿಹಾರವಾಗಿ ಕೊಟ್ಟೋದು (ಎಕ. X,ಮುಳಬಾ. ೮೦-೭ : 767). [< ಸಮಣ + ಪಾಟ್]

ಸಮತಟ್ಟು (ನಾ). ತಗ್ಗುದಿಣ್ಣೆಗಳಿಲ್ಲದಿರುವುದು; ಸಮತಳವಾದುದು: ಉತ್ತರಕ್ಕೆ ಬರಬರುತ್ತ ಭೂಮಿಯು ಸಮತಟ್ಟಾಗುತ್ತ ಬರುವುದು (ಪಾಲಪ್ರ. II. ೧೧೫೫) ; ಗುಡ್ಡದ ಕಡಿಪು ಕಡಿಪುಯಾಗತೊಡಗಿ, ಕಡೆಗೆ ಸಮತಟ್ಟಾಗುತ್ತಾ ಬಂದಿತು (ಮಲಮ. ೨೫೧). [ಸಮ್ಯ + ತಟ್ಟು (< ತಟ್ಟಿ)]

ಸಮತಲ, ಸಮತಳ (ಗು). ೧. ತಗ್ಗು, ದಿಣ್ಣೆಗಳಿಲ್ಲದ ; ಮಟ್ಟಸವಾದ: ಖುರವಂ ಸೋದಿಸುವುದು . . . ಸಮತಲನಲದೊಳ್ ಪೊರಳಿಸುವುದು (ಅಶ್ವಶಾ. ೭-೯) ; ಭಾವಲೋಕವೂ ಸಮತಲಪ್ರಾಂತ್ಯವಲ್ಲ ; ಅದೊಂದು ಶ್ರೇಣಿ (ಸೌಂದ. ೧೯). **ಸಮತಳ:** (ನಾ). ೨. ಮಟ್ಟಸವಾದ ಪ್ರದೇಶ ; ಸಮತಟ್ಟಾದ ಭೂಮಿ : ಸಮತಳ ಸಮತೇಜಮಯಂ . . . ಸಿದ್ಧಕ್ಷೇತ್ರಂ (ಚಂದ್ರಪ್ರ. ೧೭-೭೩ ಅಡಿಪದ್ಯ). [ಸಂ.]

ಸಮತಳ 'ಸಮತಲ' ನೋ.

ಸಮತಳಗಾಣ್ (ಕ್ರಿ). ಮಟ್ಟಸವಾದ ಭೂಮಿಯನ್ನು ಕಾಣು ; ಸಮತಟ್ಟಾದ ಜಾಗವನ್ನು ನೋಡು : ಬೆಂಬಿಡದೆ ಪೋಗಿ ಸಮತಳಗಂಡು ಕುಳಿಗಳ ಮೇಗಣಂದಿಳಿದೊಂದು ತಣ್ಪೆಂಬಾಗಲಲ್ಲಿಯೆ ಚಾರುದತ್ತನು ಮೆಲ್ಲನೊಱಗಿದನು (ಸಾಳ್ವಭಾ. ೧೭-೪೦). [ಸಮತಳ (= ಸಮತಲ) + ಕಾಣ್]

ಸಮತಳಿಸು (ಕ್ರಿ). ೧. ಸರಿಸಮವಾಗಿರು ; ಸಮತೋಲವಾಗಿರು : ತಮದೊಳು ಪಾಪಬೀಜಾ ಪುಣ್ಯ ತರುವಾಯಾ ಸಮತಳಿಸಿ ಇಪ್ಪದು ಪುಣ್ಯಬೀಜ ಪಾಪಾ (ವಿಪ್ರಸಾ. ೭೭-೩). ೨. ಸಮವಾಗಿಡು : ರೂಢಿಯಲಿ ಸಮತಳಿಸದಂಪ್ಪಿಯ [ಪಾಠಾಂ. ಸಮತಳದಲಂಪ್ಪಿಯ] ಜೋಡಿಗಳ ಮೆಲುದಳವದೊಪ್ಪಿರೆ ನೋಡುತಿರ್ದನು (ನಭಾಗ. ೪-೧೩-೪೦). ೩. ಒಗ್ಗೂಡು; ಸೇರು: ಧರ್ಮಜನನೀ ಕಂಟಕಕೆ ಕೈವರ್ತಿಸಿದರೀ ಪಾತಕರು ಪಾಂಡವರೆನುತ ಕುರುಬಲವೆಲ್ಲ ಸಮತಳಿಸ(ಕುವ್ಯಾಶ. ೩-೫೯); ಸಮತಳಿಸಿ ಫಲುಗುಣನ ಸೇನೆ ಬಹುದಂ ಕಂಡು ಸಮರಕಭಿಮುಖಿನಾಗಿ . . . ಚಂದ್ರಹಾಸನ್ಯೆ ತರಲು (ಚ್ಯಮಭಾ. ೩೨-೪). ೪. ಒದಗು; ಸಂಘಟಿಸು: ಇಬ್ಬರಿಗೆ ಸಮಬಲವಾಗಿ ಸಮತಳಿಸಿತ್ತು ರಣಕೇಳಿ (ಕುವ್ಯಾವಿ. ೮-೪೪); ವೀರಮಣಿಗಂ ಶತ್ರುಹಂಗಂ ತುಮುಲ ಯುದ್ಧಂ ಸಮತಳಿಸಲೊದಂ . . . ಮಸಗಿ ಪೊಣರುತುಮಿರ್ದರ್ (ರಾಮಾಶ್ವ. ೧೩-೨೭). ೫. ತೊಲಗಿಸು ; ನಿವಾರಿಸು : ನಿಖಿಲರಾಕ್ಷಸರಾಯರುಗಳಿಚ್ಛವರ ಶಿಳೀಮುಖ ಬರೆ ಕಂಡು ಖಾತಿಯಲಿ ವಿಕಸಿತ ಕೆಂಡಸಂಪಿಗೆಯ ಸುವರ್ಣಸಾಯಕದಿಂದೆ ಸಮತಳಿಸಿದನು (ಪೋಹತ. ೩೫-೨೦). ೬. ಅಣಿಗೊಳಿಸು ; ಸಿದ್ಧಮಾಡು: ಉಟ್ಟಿದ ಚತುರಂಗಬಲಮಂ ಗಟ್ಟಿಲನೆ ಸಮತಳಿಸಿಕೊಂಡು ದಮಿತಾರಿಸುತರ್ ಮುಳಿದೆತ್ತಿ ಬಂದು ಮುತ್ತಿದರ್ . . . ಪ್ರಭಂಕರೀಪುರವರಮಂ (ಶಾಂತೀಶ್ವ. ೮-೧೩೬); ಮೇಲು ಮುತ್ತಿನ ಸೂಸಕದ ನೇಪಾಳ ಚಮರಿಯ ದಾಳಿಗಳ ಸಮ್ಮೇಳದಲಿ ಸಮತಳಿಸಿದರು ವೈವಾಹಮಂಟಪವ (ಕುವ್ಯಾಆ. ೧೨-೧೩). ೭. (ಆಲಂ) ಸಮಾಧಾನಗೊಳಿಸು; ಸಾಂತ್ವನಗೊಳಿಸು : ಅಮಿತಕರುಣಾಸಿಂಧು ಬ್ರಾಹ್ಮರ ಸಮತಳಿಸಿ ಮಗುಳವನಿಯೆಲ್ಲವ ಕ್ರಮಕೆ ಸಾಧನಮಾಡಿ ನೀಡಿದನವರಿಗತಿ ಮುದವ (ಸಂಭಶ. ೨೬-೯೧).

[ಸಮತಳ (= ಸಮತಲ) + - ಇಸು]

ಸಮತಾಭಾವ (ನಾ). ೧. ಸಮಾನತೆಯ ಭಾವನೆ. ೨. ಯೋಗಿಯ ಮನಸ್ಥಿತಿ: ಸಮತಾಭಾವದಿಂ ಸರ್ವಸಂಗತ್ಯಾಗಕ್ಕುದ್ಯುಕ್ತನಾದಂ (ಸುಕುಮಾ. ೮-೩೫); ಸಮತಾಭಾವ ತುಳಾತುಲೀಕೃತಮನಂ (ಅಸಂವ. ೯-೮೩). [ಸಂ.]

ಸಮತಾಭಾವನೆ (ನಾ). = ಸಮತಾಭಾವ ೨ : ಸಮತಾಭಾವನೆ ವರ್ಧಮಾನ ಮುಚಿತಧ್ಯಾನಕ್ರಮಂ ವರ್ಧಮಾನಮೆ (ಸುಕುಮಾ. ೧-೨೫); ಸಮತಾಭಾವನೆ ತನ್ನೊಳೊಪ್ಪೆ, ಪರಮಧ್ಯಾನಾರ್ಥಿಯಪ್ಪೋಪವಾಸಮುಮಂ . . . ಮಾಡಿಯುಂ (ಪಾರ್ಶ್ವಪು. ೧-೪೦). [ಸಂ. ಸಮತಾಭಾವನಾ]

ಸಮತಾವಾದ (ನಾ). ಎಲ್ಲರೂ, ಎಲ್ಲವೂ ಸಮಾನ ಎಂಬ ವಾದ; ಸಮಾನತೆಯನ್ನು ಎತ್ತಿ ಹಿಡಿಯುವ ವಾದ : ಸಮತಾವಾದದ ಬುಲ್‌ಡೋಜರಿನಡಿ ಅಳಿದಿವೆ ಅಶಾಂಕುರ ನೂರು (ನಲಮು. ೪೬-೫) ; ಕಮ್ಯೂನಿಸ್ಟ್ ಪಕ್ಷವು . . . ಸಮತಾವಾದದ ಮೂಲತತ್ವಗಳಿಗನುಸಾರವಾಗಿ ಅವುಗಳನ್ನು ರೂಪಿಸುತ್ತಲಿದೆ (ರಾಜಪ್ರ. ೫೯). [ಸಂ.]

ಸಮತಿ (ನಾ). ಹಬ್ಬ ; ಪರ್ವ : ಶಿಷ್ಟಪೂರ್ವದೋಪಂಗಳಂ ಶಮನಮಂ ಮಾಡಬೇಕೆಂದು ಗಣಪರ್ವದೊಳು ಸಮತಿಗಳ ಮಾಡಿಸುವ (ವಿಷ್ಣುಪು. ೪-೨೨-೨); ಸಂಕರಾತರಿ ಸಮತಿ ದಿನಾ ಸಂದಿಕೋಲಾ ಮೆರವ ದಿನಾ (ಮಲ್ಲಿಗ. ೪). [?]

ಸಮತಿಕ್ರಾಂತ (ಗು). ದಾಟಿದ ; ಮೀರಿದ : ಅಲ್ಲಿ ಪ್ರವಯಸ್ಯನೆಂಬೊಂ . . . ಸಮತಿಕ್ರಾಂತದಶವರ್ಷನುಮನತಿಕ್ರಾಂತಸಪ್ತತಿಸಂವತ್ಸರನುಮಕ್ಕುಂ (ಚಾಪುಪು. ೫). [ಸಂ.]

ಸಮತೂಕ (ನಾ). ಏರುಪೇರಿಲ್ಲದ ತೂಕ; ಸಮಾನಪ್ರಮಾಣ: ನಿತ್ಯ ಉಪಯೋಗಿಸುವ ಆಹಾರದಲ್ಲಿರುವ ವಿವಿಧಆಹಾರಾಂಶಗಳ ಪ್ರಮಾಣಗಳು ಸಮತೂಕವಾಗಿರಬೇಕು (ಆಯುಸಾ. ೭೦). [ಸಮ್ಯ + ತೂಕ]

ಸಮತೆ (ನಾ). ೧. ಏರುಪೇರಿಲ್ಲದುದು; ಸಮತಟ್ಟು . ೨. ವಿಕಲೀತಿಯಲ್ಲಿರುವುದು; ವೈವಿಧ್ಯವಿಲ್ಲದಿರುವುದು. ೩. ಹೋಲಿಕೆ ; ಸಾದೃಶ್ಯ . ೪. ಸಮಾನವಾದುದು; ಸರಿಸಮವಾದುದು. ೫. ಯುಕ್ತವಾದುದು; ಸರಿಯಾದುದು : ಆರೇನೆಂದಡೂ ಓರಂತಿಪ್ಪುದೆ ಸಮತೆ (ಸಿದ್ಧವ. ೪. ೩೦-೯೦); ಸಾವುದಲ್ಲದೆ ತನಗೆ ಬೇಱನ್ನಾವ ಪರಿಯಲಿ ಸಮತೆ ಸೇರದು (ಕುವ್ಯಾಸ. ೧೨-೧೭). ೬. ಭೇದಭಾವವಿಲ್ಲದಿರುವಿಕೆ ; ನಿಷ್ಪಕ್ಷಪಾತ : ಮಟ್ಟಪ್ಪುದಾಸೆಯನು . . . ತೊಟ್ಟಪ್ಪುದುಳ್ಳ ಸಮತೆಯನು ಶಿವಪದವು ಮುಟ್ಟಪ್ಪುದಯ್ಯ (ಸರ್ವಜ್ಞ. ೩೧೬). ೭. ಚಿತ್ತಸ್ವಾಸ್ಥ್ಯ ; ನೆಮ್ಮದಿ : ಸುಭಕ್ತಿಯ ಸಮತೆಯಲ್ಲಿಹುದಲ್ಲಿ ತಾನಿಹನು (ಬಸಪು. ೧೦-೧೫೫); ಶೌರಿ ಸಮೀರಸುತನಲಿ ಸಮತೆಯನು ಸೇರಿಸಿದನಂದು ಸಮಗ್ರ ಸೂಕ್ತಿಯಲಿ (ಕುವ್ಯಾಉ. ೬ ಸೂಚನೆ). ೮. = ಸಮತಾಭಾವ ೧ : ಸಮತೆ ಸಮಸ್ತ ಭೂತದೊಳೊದಂಬಡೆ . . . ಕಿಲ್ಪಿದಂ ಕುಟಿಲಾಳಕಜಾಳಕಂಗಳಂ (ಅಸಂವ. ೯-೭೨). ೯. [ಕಾವ್ಯಮಿ] ಹತ್ತು ಬಗೆಯ ಶಬ್ದಗುಣಗಳಲ್ಲಿ ಒಂದು; "ಸಮತೆ – ಮೊದಲಿನಿಂದ ಕೊನೆಯವರೆಗೆ ಒಂದೇ 'ರೀತಿ'ಯನ್ನು ಅನುಸರಿಸಿರುವುದು" (ಕೃವಿ. ೨೩೩): ಶ್ಲೇಷ, ಪ್ರಸಾದ, ಸಮತೆ . . . ಕಾಂತಿ, ಸಮಾಧಿ - ಈ ಹತ್ತುಗುಣಗಳೇ ವೈದರ್ಭಮಾರ್ಗದ ಪ್ರಾಣ (ಭಾರಮಿ. ೨೯). [ಸಂ. ಸಮತಾ]

ಸಮತೆಗಟ್ಟು (ಕ್ರಿ). ಒಂದಾಗು; ಒಂದುಗೂಡು: ನಾನಾಪ್ರಮಥನಿಚಯ ಪುರಾತನಾರ್ಯಪ್ರಮುಖರೆಲ್ಲರು ಮಾಚದೇವನು ಹೊಯ್ದ ನಾದಕ್ಕೆ ಸಮುಖರಾಗುತ್ತಾಗಳೊಂದೆಸೆ ಸಮತೆಗಟ್ಟಿ . . . ನುಡಿದರು (ಬಸಪು. ೩೭-೪೫).

[ಸಮತೆ + ಕಟ್ಟು]

ಸಮತೆಗೆಡು (ಕ್ರಿ). ಸಮತೋಲನವಿಲ್ಲದಾಗು ; ಏರುಪೇರಾಗು : ಕರಗಿತೆರ್ದೆ ಸ್ಮರಣೆ ಸಮತೆಗೆಟ್ಟುದು (ಚ್ಯಮಭಾ. ೧೯-೧೪). [ಸಮತೆ + ಕೆಡು]

ಸಮತೆವೆಱು (ಕ್ರಿ). ತಕ್ಕುದಾಗಿರು ; ಸರಿಯಾಗಿರು : ಸತ್ಯವಿತೆಯುಂ ಯುವತಿಯುಂ ಚರಣಗತಿ ಸಮತೆವೆ[ಪಾಠಾಂ. ವೊ]ತ್ತಿರದೊಡೆ . . . ಉನ್ನತಿಯಪ್ಪುದಿ (ಚ್ಯಮಭಾ. ೫-೫೩). [ಸಮತೆ + ಪಱು]

ಸಮತೋಲ (ಗು). ೧. ಏರಿಳಿತವಿಲ್ಲದ; ಸಮತೂಕದ: ಸತ್ಯವನ್ನು ತೂಗುವ ಕೊಳ್ಳುವ ಸಮತೋಲಬುದ್ಧಿ ಶ್ರೀಪತಿಯಲ್ಲಿ ಇಲ್ಲವಾಗಿತ್ತು (ಭಾರಥಿ. ೮). (ನಾ). ೨. ಸಮನಾದ ಪ್ರಮಾಣ, – ತೂಕ : ಅದು ಯಾವ ಸ್ಥಳದಲ್ಲಿ ಸಮತೋಲವಾಗಿ

ನಿಲ್ಲುವುದೋ ಅಲ್ಲಿ ಗುರುತುಮಾಡಿ (ಮುಂಬಯಿ. ೫-೫೨). ೩. ಸಮಚಿತ್ತ ; ಸಮತೆ : ಸಮತೋಲವನ್ನು ಕಾಯ್ದುಕೊಂಡು ಸ್ಥಿರತೆಯನ್ನು ಕಳೆದುಕೊಳ್ಳದೆ ಇರುವುದು ಧೀರರ ಸತ್ವದ ಲಕ್ಷಣವಾಗಿದೆ (ಪ್ರಬಂಧ. ೨೧). [ಸಂ.]

ಸಮತೋಲನ (ಗು). = ಸಮತೋಲ ೧ : ಈ ಸೃಷ್ಟಿಯ ಸಮತೋಲನವ್ಯಾಪಾರದಲ್ಲಿ . . . ಹಲವು ಸ್ವಭಾವಸಿದ್ಧವಾದ ಗುಣಗಳು ರೂಪುಗೊಂಡಿವೆ (ಸಾಂದ. ೨). [ಸಂ.]

ಸಮತೋಲನೆ (ನಾ). = ಸಮತೋಲ ೩ : ಜನಾಂಗದ ದೈಹಿಕಯೋಗ್ಯತೆ, ಮಾನಸಿಕ ಶಕ್ತಿ ಹಾಗೂ ಪಾರಮಾರ್ಥಿಕ ಸಮತೋಲನೆಯು ಇದೇ ಹೆಣ್ಣುಮಕ್ಕಳ ಆರೋಗ್ಯ ಮತ್ತು ಸುಖಸಂತೋಷಗಳನ್ನು ಹೊಂದಿಕೊಂಡಿದೆ (ಅಡುಸಾ. ೨೧). [ಸಂ. ಸಮತೋಲನ]

ಸಮತ್ತ (ಗು). ಎಲ್ಲಾ; ಸಮಸ್ತ : ರಾಮಯರಸಮ್ ನೆಱುನ್ನಿ ಆಳಿ ಮಹಾರಜರಾ ಸಮತ್ತವಲಮುಂ ನೆರೆದು ವನ್ನು ಱೂರಲಿಎಱಿದಲ್ಲಿ (ಎಕ. X (S). ಱಂತಾಮ. ೧೭-೪ ; ಸು. ೫೦೦). [< ಸಮಸ್ತ]

ಸಮತ್ವ (ನಾ). = ಸಮತಾಭಾವ ೨ : ಅಂತಾ ಸಮತ್ವಮುಂ ವರ್ತಿಸುಗುಂ . . . ತಮಮಂ ರಾಗಮುಮನಳೆದು ತೊಲಗಿಸೆ ಮನದಿಂ (ಕಾವ್ಯಾವ. ೮೨೪); ತೊಲೆದು ಪರಿಗ್ರಹಮಂ ಸಲೆ ನಿಱಿಸೆ ಸಮತ್ವಪ್ರಭಾವಮಂ [ಪಾಠಾಂ. ತ್ವಭಾವಮುಮಂ] (ಜೀವಸಂ. ೧೭೮-೫). [ಸಂ.]

ಸಮತ್ವೀಭಾವ (ನಾ). = ಸಮತಾಭಾವ ೧: ಅನುಪ್ರೇಕ್ಷೆಗೆಯ್ಯುತ್ತುಮಾರ್ತಗ್ಗೆ ಸಮತ್ವೀಭಾವದಿಂದಂ ಬಿಡುವುದೊಡಲನವ್ಯಾಕುಲಂ ಭವ್ಯಜೀವಂ (ಪಾಶ್ವಪು. ೬-೪೮). [< ಸಂ. ಸಮತ್ವಭಾವ]

ಸಮತ್ಸರತ್ವ (ನಾ). ದ್ವೇಷ ಅಥವಾ ಹೊಟ್ಟೆಕಿಚ್ಚಿನಿಂದ ಕೂಡಿರುವುದು : ಕ್ರಮದ ಪರವ್ಯಪದೇಶಂ ಸಮತ್ಸರತ್ವಂ . . . ಅತಿಕ್ರಮಮಮಕ್ಕುಂ ಪಾತ್ರದಾನಮಂ ಕುಡುವೆಡೆಯೊಳ್ (ಪಾಶ್ವಪು. ೬-೨೨). [ಸಂ.]

ಸಮತ್ಸರಮಾನಿಸ (ನಾ). ಮತ್ಸರವುಳ್ಳ ಮನುಷ್ಯ ; ಹೊಟ್ಟೆಕಿಚ್ಚಿನ ವ್ಯಕ್ತಿ : ಆ ನಿರೂಢಿಯ ದೊರೆಗಳಿವನ ಸಮಾನರೇ ಗುಣದಲಿ ಸಮತ್ಸರಮಾನಿಸನ ನಿನ್ನಾಣ (ಕವ್ಯಾಕ. ೨೨-೩೮). [ಸಮತ್ಸರ್ + ಮಾನಿಸ (< ಮಾನುಷ)]

ಸಮದ (ಗು). ೧. ಸೊಕ್ಕಿನಿಂದ ಕೂಡಿದ ; ಮತ್ತೇರಿದ : ಸಮದಗಜಗಮನೆಯರ್ . . . ನಡೆಯಲಾಱದೆ ಸುಱಿದರ್ (ಪಂಪಭಾ. ೭-೮೪); ಕಿರಾತರ್ವರಸು ಬೇಂಟೆ ವೋಗಲೆಂದು ಸಮದ ಸಮುತ್ಸುಕಚಿತ್ತನಾಗಿ . . . ಬಂದಂ ಪುಳಿಂದಂ (ರಾಜಶೇ. ೫-೫೧ ವ). ೨. ಸಂತೋಷಗೊಂಡ. (ನಾ). ೩. ಮತ್ತಿನಿಂದ ಕೂಡಿದವನು; ಸೊಕ್ಕೇರಿದವನು: ಸಮದಂ ಚಾಪಧರಂ ತನ್ನಮಿತಬಲಂಬೆರಸು . . . ನೆಲೆದಿರ್ದಂ (ಪಂಗಾಮಾ. ೧೪-೬೯). ೪. ಸಮಾನವಾಗಿ ಕೊಡುವವನು; ಪಕ್ಷಪಾತವಿಲ್ಲದೆ ದಾನಮಾಡುವವನು : ಆ ನೃಪಂ . . . ಸಮದನಾಗಿಯುಂ ಸಮದನಲ್ತು (ಪಾಪ್ರಪು. ೯-೩೯ ವ). [ಸಂ. (ಸ + ಮದ; ಸಮ + ದ)]

ಸಮದಂಡಿ$_1$ (ನಾ). ೧. ಸಮಾನವಾದ ಶಕ್ತಿ , – ಬಲ : 'ಸಮದಂಡಿಗೆಯ್' ಪರಾ. ೨. ಸರಿಸಮಾನ; ಸರಿಜೋಡಿ: ಶಿಶುಪಾಲ ಪೌಂಡ್ರಕರಂಬರಿಗೆ ಸಮದಂಡಿಯವ್ಮೊಡನೆ (ಕವ್ಯಾಸ. ೨-೧೭); ಲಂಡತನದಿ ಹೋರುವ ತನುಜನ ಸಮದಂಡಿಯೊಳಿರ್ದನಾ ರಾಮ (ಕುರಾಸಾಂ. ೬೩-೧೬); ಈ ತೆಱದ ಸಮದಂಡಿಯ ಯುದ್ಧಂಗಳ್ದು ಸಾಯಕಂಗಳೆಲ್ಲಂ ಸಮೆಯೆ (ಅಜಿತ. ೪೫-೨೧). [ಸಮ್ + ದಂಡಿ$_1$]

ಸಮದಂಡಿ$_2$ (ನಾ). ತಕ್ಕಡಿಯ ಕೋಲು ; ತುಲಾದಂಡ : "ಸಮದಂಡಿ ತೂಗುವ ಕೋಲು" (ಮಂಗರಾ. ೧೦೫-೧೪). [ಸಮ್ + ದಂಡಿ]

ಸಮದಂಡಿಗೆ (ನಾ). = ಸಮದಂಡಿ$_2$: ತೂಗುವದು ಮನದ ತಕ್ಕನಿವರಡಿ . . . ಸಮದಂಡಿಗೆಯ ತೂಕ ಬರೆ ತೆರಬೇಕು ತಕ್ಕ ಬೆಲೆ (ನಲಮು. ೬೬-೩). [ಸಮ್ + ದಂಡಿಗೆ]

ಸಮದಂಡಿಗೆಯ್ (ಕ್ರಿ). ಸಮಾನವಾದ ಶಕ್ತಿಯನ್ನು ತೋರಿಸು: ಸಮದಂಡಿಗೆಯ್ದನಿವನೆಂದು ಸಮುನ್ನತರೋಷದಿಂದೆ ತಿವಿದಂ (ಶಬಶಂ. ೪-೮೧). [ಸಮದಂಡಿ$_1$ + ಕೆಯ್$_1$]

ಸಮದತ್ತಿ (ನಾ). [ಜೈನ] ತನ್ನ ಸಮಾನನಾದವನಿಗೆ ಕೊಡುವ ದಾನ: ಆತ್ಮಸಮಾನಶ್ರಾವಕಾಗ್ರಣಿಗಳ್ಗೆ ಕನ್ಯಾಭೂಮಿಸುವರ್ಣಹಸ್ತ್ಯಶ್ವರಥರತ್ನಾದಿಗಳಂ ಕುಡುವ ಸಮದತ್ತಿಯುಂ (ಆದಿಪು. ೧೫-೧೩ ವ) ; ತನ್ನ ಸಮಾನಮಪ್ಪ ಕುಲಶೀಲಂಗಳ ವ್ರತಸಂಪನ್ನರ್ಗೆ ಕರಿತುರಗಮಣಿಭೂಷಣಹಿರಣ್ಯಭೂಮಿಕನ್ಯಾದಿವಸ್ತುಗಳಂ ಕುಡುವ ಸಮದತ್ತಿಯುಂ (ಪಾಶ್ವಪು. ೬-೨೫ ವ). [ಸಂ.]

ಸಮದರ್ಶನ (ನಾ). ಎಲ್ಲರನ್ನು ಹಾಗೂ ಎಲ್ಲವನ್ನು ಒಂದೇ ರೀತಿಯಾಗಿ ಕಾಣುವುದು ; ಸಮಭಾವದಿಂದ ನೋಡುವುದು : ಸಮಂಜಸತ್ವಮೆಂಬುದು ಪ್ರಜಾಪಾಲನದೊಳ್ ಸಮದರ್ಶನವಾಗಿ ನೆಗಟ್ಟುದು (ಚಾವುಂಪು. ೨೩೦); ಸರ್ವ ಪ್ರಜಾಮತಕೆ ತಾನು ಪ್ರತಿನಿಧಿಯೆಂಬ ಮೇಣವರ ಹಿತಕೆ ಹೊಣೆಯೆಂದೆಂಬ ಬುಧರೊಲಿದ ಸಮದರ್ಶನವನೊಪ್ಪಿ (ಶ್ರೀರಾಮಾ. ೭-೧೪೭). [ಸಂ.]

ಸಮದರ್ಶಿ (ನಾ). ಸಮಾನವಾದ ದೃಷ್ಟಿಯುಳ್ಳವನು ; ನಿಷ್ಪಕ್ಷಪಾತನಾಗಿರುವವನು: ಸೆಣಸಿನಲಿ ಸಮದರ್ಶಿಗಳು ಧಾರುಣಿಯ ಪತಿಗಳು (ಕವ್ಯಾಭ. ೭-೧೦); ರಾಜರ್ಷಿಯಾ ದೀರ್ಘದರ್ಶಿಯಾ ಸಮದರ್ಶಿ ತಾಂ . . . ಪಾಲಿಸಿರ್ದನು ತನ್ನ ರಾಜ್ಯಮಂ (ಶ್ರೀರಾಮಾ. ೭-೧೭೯). [ಸಂ. ಸಮದರ್ಶಿನ್]

ಸಮದರ್ಶಿತ್ವ (ನಾ). ೧. ಸರಿಯಾಗಿ ನೋಡುವ ದೃಷ್ಟಿ ; ಸರಿಯಾದ ನೋಟ: ಸಮದರ್ಶಿತ್ವವುಳ್ಳ ಕಣ್ಣು ೨೦ ಅಡಿ ಅಥವಾ ಹೆಚ್ಚುದೂರದಲ್ಲಿರುವ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲದು (ನಿಮ್ಮಾಧ್ಯ. ೬೪). ೨. ಸಮವೆಂದು ಭಾವಿಸುವಿಕೆ; ನಿಷ್ಪಕ್ಷಪಾತದೃಷ್ಟಿ : ಭಯಂಕರವಾದ ಆಪತ್ಕಾಲದಲ್ಲೂ ಧೃತಿಯಿಂದ ಪಾಲಿಸ ಬೇಕಾದ ಸಮಚಿತ್ತತೆಯನ್ನೂ ಸಮದರ್ಶಿತ್ವವನ್ನೂ ವ್ಯಾಸರು ಗೀತೆಯ ಮೂಲಕ ತಿಳಿಸಿದರು (ಋಕ್ಸಾರ. ೧೨೪ ಟೀಠಿ). [ಸಂ.]

ಸಮದವಿರೋಧಿ (ನಾ). ಮದೋನ್ಮತ್ತನಾದ ಶತ್ರು : ಸಮದವಿರೋಧಿ ಹತ್ಯದೊಳೆ . . . ಅತಿರೌದ್ರಮಾಯ್ತು . . . ಸಮರಂ ಕುಮರಂಕರಾಮನಾ (ಗದಾಯು. ೧೦-೩). [ಸಂ. ಸಮದವಿರೋಧಿನ್]

ಸಮದಿಟ್ಟಿ (ನಾ). ಒಂದಕ್ಕೊಂದು ಸಮಾನವಾದ ನೋಟ ; ಸಮದೃಷ್ಟಿ : ಅನ್ಯೋನ್ಯಮೊಲ್ದು ನೋಡುತ್ತಿರ್ಪನ್ನೆಗಮೊರ್ಮೆ ದಲಿರ್ವರ ದಿಟ್ಟಿಗಳುಂ ಸಮದಿಟ್ಟಿ ಯಾದುವಂತಾ ಕ್ಷಣದೊಳ್ (ಕಾದಂಬ. ೩೩). [ಸಮ್ + ದಿಟ್ಟಿ]

ಸಮದೂಗು (ಕ್ರಿ). ಸಮವಾಗಿರು ; ಹೊಂದಿಕೆಯಾಗು : ಇಂದಿನ ಕಾಲದ ರಾಜ್ಯಾ ಡಳಿತ ಸಮದೂಗುವಂಥದು (ತತ್ತ್ವಪ್ರಾ. ೧೧೩). [ಸಮ್ + ತೂಗು$_1$ (< ತೂಂಕು$_1$)]

ಸಮದೃಷ್ಟಿ (ನಾ). ೧. ನೆಟ್ಟ ದೃಷ್ಟಿ ; ನೇರವಾದ ನೋಟ : ಸದ್ಧರ್ಮಮ ಮೂರ್ತಿವೆತ್ತು ಸಮದೃಷ್ಟಿಯೊಳ್ ನಿಂದ ವೃಷೇಂದ್ರನಿಂ . . . ಸಭೆ ಕಣ್ಗೊಳಿಸಿರ್ದುದು (ಶಬಶಂ. ೧-೭೯ ವ). ೨. ಒಂದಕ್ಕೊಂದು ಸಮಾನವಾದ ನೋಟ ; ಸಮಾನ ದೃಷ್ಟಿ: ಸಂಭ್ರಮದಿಂ ಸಮದೃಷ್ಟಿಯಾಗಿ ಸಿಲ್ಕಿದುವೆಮೆಯಿಕ್ಕಲ್ಕಱೆದುವವಳ ಧವಳಕಟಾಕ್ಷಂ (ಶಮದ. ೨೨೫ ಪ್ರಯೋ). ೩. ಸಮಭಾವದಿಂದ ಕಾಣುವಿಕೆ ; ನಿಷ್ಪಕ್ಷಪಾತದೃಷ್ಟಿ : ಸರ್ವಮನುಜರಿಗಾಗಿ ಸೃಷ್ಟಿ ಎಂಬ ಸಮದೃಷ್ಟಿ (ಕೋಗಿಚ. ೧-೧೨). [ಸಂ.]

ಸಮದೇಭ (ನಾ). ಮದದಿಂದ ಕೂಡಿದ ಆನೆ ; ಮದಗಜ : ಸಮದೇಭಕುಂಭ ಭೇದನಸಮಯೋಗ್ರನಖಂಗೆ ಹರಿಗೆ ಮೃಗರಿಪುವೆಸರುತ್ತಮಿಕೆಯೆ (ಗದಾಯು. ೨-೨); ಸಮದೇಭಾಳಿಗೆ ತೋರ್ಪ ತನ್ನ ಮುಳಿಸಂ ಬಾಳೇಭಸಂಘಕ್ಕೆ ತೋರ್ಕುಮೆ ಸಿಂಹಂ (ಶೃಂಗಾರ. ೧-೬೫). [ಸಂ.]

ಸಮದೋಷ (ನಾ). ತ್ರಿದೋಷಗಳು ಸಮಪ್ರಮಾಣದಲ್ಲಿರುವ ವ್ಯಕ್ತಿ: ವೈದ್ಯಶಾಸ್ತ್ರಸಾಮಗ್ರಿಯುಂ ಸಮದೋಷಿಯುಂ ಸಮಧಾತುವಪ್ಪ ನೀರೋಗನುಂ ಕ್ರಮಕರ್ತವ್ಯದಿಂ ನಯಮುಮನಾಪ್ತವರ್ತಿಯುಮನಾಸೆವಡುವರಲ್ಲರ್ (ಕಾಂಬಪು. ೨-೬೫ ವ). [ಸಂ. ಸಮದೋಷಿನ್]

ಸಮಧಾತು (ನಾ). ಧಾತುಗಳ ಸಮಸ್ಥಿತಿ : ಸಮದೋಷಿಯುಂ ಸಮಧಾತುವಪ್ಪ ನೀರೋಗನುಂ ಕ್ರಮಕರ್ತವ್ಯದಿಂ ನಯಮುಮನಾಪ್ತವರ್ತಿಯುಮನಾಸೆವಡುವರಲ್ಲರ್ (ಕಾಂಬಪು. ೨-೬೫ ವ); ಕಾಸಿಕವೇಕೆ ವಾಸಿಸಬೇಡ ಎಂದಡೆ ಮಾನವು . . . ಈ ಭೇದವನಱಿದು ಸುಡಿಸಲು ಸಮಧಾತುವಾಯಿತ್ತು (ಅಜಪು. ೨೪-೮೪). [ಸಂ.]

ಸಮಧಿಕ (ಗು). ೧. ಹೆಚ್ಚಾದ; ಅತ್ಯಧಿಕವಾದ : ಸಮಧಿಕವಿದ್ಯಾಬಳನಶ್ರಮದಿಂ . . . ಕಾಡುತ್ತಿರೆ (ನೇಮಿಪು. ೧೨-೨೦೦); ಸಮಧಿಕಚಿಂತೆಯಿಂ ನುಡಿಯಲುಂ . . . ಒಲ್ಲದೆ (ಜಗಿ. ೧೧-೧೧). (ನಾ). ೨. ಬಹಳ ಹೆಚ್ಚು; ಅತ್ಯಧಿಕ : ಆ ಇಬ್ಬರು ಪೋಲೀಸಿನವರಿಗೆ ಸಮಧಿಕವಾಗಿ ಅನುಭವಕ್ಕೆ ಬರುತ್ತಿತ್ತು (ಮಲೆಮ. ೫೩೫). ೩. ಶ್ರೇಷ್ಠನಾದವನು; ಮಿಗಿಲಾದವನು : ಸಮಧಿಕರಾರ್ ಜಗತ್ಕ್ರಯದೊಳ್ನೆನಗೆ (ಪಂರಾಮಾ. ೧೪-೧೦೭). [ಸಂ.]

ಸಮಧಿಕೃತ (ನಾ). ಅಧಿಕಾರ ಹೊಂದಿದವನು; ನಿಯುಕ್ತನಾದವನು : ತೂರ್ಯ ತ್ರಯಸಮಧಿಕೃತಂ ತಾನೆ ನಾನಾಪ್ರಕಾರಸ್ತುತಿಕಾರಂ ತಾನೆ (ಚಂದ್ರಪ್ರ. ೧೫-೧೨೨). [ಸಂ.]

ಸಮಧಿಗತ (ಗು). ಪಡೆದ; ಹೊಂದಿದ : ಸ್ವಸ್ತಿಸಮಧಿಗತ ಪಞ್ಚಮಹಾಸಬ್ದ ಮಹಾಸಾಮನ್ತಅಗ್ರಗಣ್ಯ (ಎಕ. II,೫೬-೧ ; ಸು. 1100). [ಸಂ.]

ಸಮಧ್ಯಾಸಿತ (ಗು). ಒಟ್ಟಿಗೆ ಕುಳಿತುಕೊಂಡ; ಜೊತೆಯಾಗಿ ಕುಳಿತ : ಪತ್ರಲೇಖಾ ಸಮಧ್ಯಾಸಿತಾಂತರಾಸನೆಯುಂ ಪ್ರಸ್ಥಾನೋಚಿತಮಂಗಳಾಲಂಕಾರೆಯುಮಪ್ಪ ಪಿಡಿಯಂ ಚಂದ್ರಾಪೀಡನೇಱಿದಾಗಳ್ (ಕಾದಂಬ. ೫೯೦). [ಸಂ.]

ಸಮನಂತರ (ನಾ). ಆಮೇಲಿನ ಕಾಲ; ತರುವಾಯ : ವೀರಕುಂತೀತನುಜರು . . . ಬಕಾಸುರಮರಣಸಮನಂತರದೊಳಾ ಪುರವರದೊಳರ್ದರು (ಕುವ್ಯಾಆ. ೧೧-೧); ಪಿಂತೆ ಕೌರವಜಯಂ ತಮಗೆ ಕೈಸಾರ್ದ ಸಮನಂತರದೊಳಾದ ಸಾಮ್ರಾಜ್ಯದೊಳ್ಕಾಂಡವರ ದೆಂತಿಳೆಯನೋವಿದರು (ಚೈಮಿಭಾ. ೨-೩). [ಸಂ.]

ಸಮನಂತರಂ (ಅ). ಬಳಿಕ ; ಆಮೇಲೆ : ಅಂತು ವಿಶ್ರುತಶ್ರವಣ ಶ್ರೀಸಮಾಶ್ರಯಣನಾಗಿ ಸಮನಂತರಂ (ಚಂದ್ರಪ್ರ. ೧೧-೨ ವ). [ಸಂ.]

ಸಮನಖಕರಣ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು; ಉಗುರುಗಳನ್ನು ಸಮನಾಗಿರಿಸುವಿಕೆ : ತನುವಂ ಸಾಜದೆ ನಿಂದಿರ್ದನುನಯದಿಂ ಪಾದಮೊಂದೆ ನಖಪೋರಣದಿಂ ವಿನುತಲತಾಕರದುಗುರ್ಗಳ್ ವನಿತೇ ಸಮನಾಗಿ ನಿಲ್ಲೆ ಸಮನಖಕರಣಂ (ಲಾಸ್ಯರಂ. ೪-೫೬). [ಸಂ.]

ಸಮನಸ್ಕ (ನಾ). [ಜೈನ] ಮನಸ್ಸುಳ್ಳ ಜೀವಿ : ತನ್ನಃಸಂಪ್ರಯುಕ್ತರ್ ಸಮನಸ್ಕರ್ (ತತ್ತ್ವಪ್ರ. ೯೨) ; ಸಂಜ್ಞಿಗಳಿಗೆ ಉಪಯೋಗಮಾಡಲಿಕ್ಕೆ ಬರುವ ಮನಸ್ಸು ಇರುತ್ತದೆ. ಅಸಂಜ್ಞಿಗಳಿಗೆ ಮನಸ್ಸಿಲ್ಲ . . . ಇವುಗಳಿಗೇ ಸಮನಸ್ಕ - ಅಮನಸ್ಕಗಳೆಂದೂ ಹೆಸರು (ಜೈನಪ. ೩೦೦). 'ಅಮನಸ್ಕ' ಪರಾ. [ಸಂ.]

ಸಮನಾಹ (ಗು). (?) : ಸುಸ್ನಿಗ್ಧಸಮಪೂರ್ವವೃತ್ತಸಮನಾಹಪರಿಪೂರ್ಣಸಿತವೃತ್ತದಂತ ಪರಿವೇಷಿತನುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ಲುದುಂ (ಆದಿಪು. ೧೨-೫೬ ವ). [?]

ಸಮನಿ (ನಾ). [ಯೋಗ] ಯೋಗದ ಮೂರು ಅವಸ್ಥೆಗಳಲ್ಲಿ ಒಂದು : ಸಮನಿಯೊಳು ವಿಷ್ಣು ಮತ್ತುನ್ಮನಿಯೊಳುಂ ನೀನೆ ವಿಮಲನಿರಂಜನಂ (ವಂಶಾರಾ. ೬-೫೯-೨೬). 'ಉನ್ಮನಿ' ಪರಾ. [ಸಂ. ಸಮನೀ]

ಸಮನಿಕೆ (ನಾ). ಕೂಡಿರುವಂಥದು; ಹೊಂದಿರುವಂಥದು : ಪಂಚಮಹಾಸರಿತ್ತುಗಳ ಸಮನಿಕೆಯ ಸೌರಾಷ್ಟ್ರಗುರ್ಜರವಿಮಲಕಾಶ್ಮೀರಾಂಧ್ರಗೌಳಪ್ರಮುಖ ದೇಶಂಗಳಲಿ ನೋಡುತ ತಿರುಗಿತು ಸೇನೆ (ತೂರರಾ. ೪-೧೦-೨) ; ಕ್ರಮದಿಂದಂ ಪ್ರಾತಸ್ಸಂಗಮ ಮಧ್ಯಾಹ್ನಾಪರಾಹ್ನ ಸಾಯಾಹ್ನಂಗಳ್ ತ್ರಿಮುಹೂರ್ತ ತ್ರಿಮೂರ್ತದ ಸಮನಿಕೆಯಿಂದ್ಯೆದಿವಕ್ಕುಮೊಂದೇ ತೆಱದಿಂ (ವಿಷ್ಣುಪು. ೨-೨-೯೧). [< ಸಮನಿಸು + - ಕೆ]

ಸಮನಿಸು, ಸಮ್ಮನಿಸು$_2$, ಸವಣಿಸು, ಸವನಿಸು (ಕ್ರಿ). ೧. ಘಟಿಸು ; ಒದಗು; ಸಂಭವಿಸು : "ಸಮನಿಸು-ಪ್ರಾಪ್ತೌ" (ಶಮಧಾ); ದೊರೆಕೊಂಡ ಮಾಘಮಾಸಂ ಬರೆ ಕೃಷ್ಣಚತುರ್ದಶೀದಿನಂ ಸಮನಿಸೆ (ಆದಿಪು. ೧೬-೫೧). ೨. ದೊರಕು; ಸಿಕ್ಕು : ಒಂದು ಮಿಗಮಪ್ಪೊಡಂ ಬೇಂಟೆ ಸಮನಿಸದ ಪೊಬಲ್ಗೆಯೋದರ್ (ಪಡ್ಡಾರಾ. ೯೫-೨೩); ಧರಣೀನಾಥಪ್ರಸಾದಂ ಸಮನಿಸಿರೆ ಮಹಾಯಜ್ಞಮಂ ಮಾಡಿ (ಎಗಾ XIII, ೩೩೦-೧೬; ೩೨೨); ಕಾಲಗತಿಯಿಂದೆಮಗೆ ಕಾನನದಾಲಯವು ಸಮನಿಸಿತು (ತೂರರಾ. ೪-೧-೧೧). ೩. ಒದಗಿಸು; ಉಂಟುಮಾಡು; ಆಗಿಸು : ಸಮುದಾಯಾರ್ಥಮನಾರಯ ಸಮನಿಸುವರ್ಥಪ್ರತೀತಿ ತೋಱದೊಡೆಲ್ಲಂ ಕ್ರಮಮಕ್ಕುಮರ್ಥಶೂನ್ಯಂ (ಕವಿರಾ. ೧-೭೮); ಇವೆಲ್ಲಮೊಂದಾಗಿಯೆ ದರ್ಪಕಂಗೆ ಸಮನಿಪ್ಪ ಜಗಜ್ಜಯದರ್ಪಮಂ ಸಮಂತಾಗಿಸಲೊಂದೆ ಸಾಲ್ಗುಮೆನಿಸಿತ್ತು ಕುಮಾರಕೃತ ಪ್ರಸಾಧನಂ (ಚಂದ್ರಪ್ರ. ೬-೬೩) ; ಎಲ್ಲವ ಸಾನಂದದೊಳು ಸಮನಿಪುದು (ಹದಿಬ. ೪-೧೯). ೪. ಪಡೆ; ಹೊಂದು : ಸಮನಿಪ ಧರ್ಮಕ್ಕವಿರುದ್ಧಮರ್ಥಮರ್ಥಕ್ಕೆ ಕಾಮಮವಿರುದ್ಧಂ (ಅಜಿಪು. ೨-೪೭) ; ಸಮನಿಸುಗುಮಾ ವಿಭಕ್ತಿಗಳ ಮೊದಲೊಳಾದಂ ಗಳಾಗಮಂ (ಶಮಬ. ೯೫). ೫. ಸೇರು; ಕೂಡು : ರಮಣಿಯೊಡನೇಕಾಂತವರಸನ ಸಮನಿಸಿಹುದು (ಸಂಭಪ. ೩೬-೪); ತಿಮಿರ ತರಣಿಗಳೇಕದೇಶದಿ ಸಮನಿಸಿಪ್ಪವೆ ಎಂದಿಗಾದರು (ಜಗದಾ. ೩೩೧). ೬. ಹೊಂದಿಕೆಯಾಗು; ಅಳವಡು; ಒಪ್ಪು : ಭಾವಂ ಸಮನಿಸಿದಂತಿರ್ದುದು ನೃಪಸಮಿತಿ ಜಗತ್ರಿತಯತಿಲಕನಾಸ್ಥಾಯಿಕೆಯೊಳ್ (ಅಜಿಪು. ೫-೩೭); ಲಿಂಗಾಂಗಿಗಳಲ್ಲದವರ ಶರಣರ ಸಂಗವಿಲ್ಲದವರ ಕಂಡರೆ ನಾಚುವೆ ಅವರ ನುಡಿಯೆನಗೆ ಸಮನಿಸದಯ್ಯ (ಬಸವ. ೪೫೩). ೭. ಬಳಿ; ಸವರು; ಲೇಪಿಸು : ಕಲ್ಪದ್ರುಮಶಾಖಾನ್ವಿತೆಗೆ ಹಂದ್ರಾಪರಿಮಳಮನಂಗದೊಳ್ ಸಮನಿಸಿದರ್ (ಗಿರಿಕ. ೧೦-೩೦). ೮. ರಚಿಸು; ನಿರ್ಮಿಸು : ಹಿಮಕರಬಿಂಬದಿಂ ಕಡೆದುದೋ . . . ಮೌಕ್ತಿಕಂಗಳಿಂ ಸಮನಿಸಿದತ್ತೊ (ಪಂರಾಮಾ. ೩-೧೫೨). ೯. ಸಿದ್ಧಪಡಿಸು ; ಅಣಿಮಾಡು : (ಕ). ಸಮ್ಮನಿಸ್ಸು$_2$: ೧. ಒಗೆದಂ ಲೋಕದ ಸಯ್ಯ ಸಮ್ಮನಿಸೆ ಸರ್ವೋರ್ವೀತಳಾಳಂಕರಿಷ್ಣುಗೆ (ಎಕ. V, ಅರಸೀ, ೧೨೬-೧೩ ; 1185); ತತ್ತರುಣೀಗಾತ್ರದ ಸೋಂಕು ಸಮ್ಮನಿಸೆ ಮೂರ್ಛಾಪನ್ನನಾದಂ ಖಳಂ (ಅನಂಪು. ೧೨-೬); ಜಿನುಂಗುವುದು ಸುಯ್ಯುದು ಜಾಡ್ಯಂ ಮೊಳೆವುದೆಂಬ ಬಗೆಗಳ್ ಸಮ್ಮನಿಸವು ಬಸವನಲ್ಲಿ ಶೈಶವದಸೆಯೊಳ್ (ವೃಷಪಾ. ೩-೨೮). ಸವಣಿಸು : ೩. ಅನ್ಯಾರ್ಥಮಂ ಸವಣಿಸುವ ಶಬ್ದಾದಿಕವೆ ಲಾಕ್ಷಣಿಕವೆನಿಪುವಸ್ತಮಯಕಾಲದಲ್ಲಿ (ಪಾಸೋಪು. ೧೦-೧೭೫). ಸವನಿಸು : ೧. [ಸವನಿ]ಸೆ ವೈಶಾಖಂ ಕೂಡೆ ವಳಕ್ಷರದಶಮಿ ಹಸ್ತಭಕ್ಷಮದುಂ ತಾಂ ಸವನಿಸಿರೆ (ವರ್ಧಮಾ. ೧೩-೩೪); ಅಂತರಾಯಂ ಸವನಿಸುಗುಂ ಪುಣ್ಯಹೀನನಪ್ಪಂಗೆಂತುಂ (ಸಮಾಪ. ೪-೪೧); ಪೊಸಜವ್ವನಂ ಸವನಿಸಲು ಮಂದರಾದ್ರಿಯೊಳುಗ್ರತಪವನೊಡರಿಚಿ (ಸೌಂದಪು. ೧೫-೬೨). ೨. ಅವಳ ಮೊಗದಂತೆ ಮೆಯ್ಗಿರಿ ಸವನಿಸ ದೆನಗೆಂದು ಕಂದನೆರ್ದೆಯೊಳ್ ತಾಳ್ದಂ ಹಿವಗದಿರಂ (ಕಬ್ಬಿಗಾ. ೧೨೨); ಇವರಿರ್ವರೊಳೇಳ್ಗೆ ವಡೆದವರಿಂದ ಸವನಿಪುದಿಹಪರಸೌಖ್ಯ (ಹದಿಬ. ೫-೮). ೩. ನೆವಮೊಂದುಮಿಲ್ಲದೆ ನಿಮ್ಮೊಳು ವೈರವ ಸವನಿಸಿ (ಕರ್ಣಾವ. ೩-೧೦). ೪. ಬೇಗಂ ದುಃಖಂ ಸವನಿಸ ಸಲ್ಲಂ ಈಗಳ್ ಮಾವಯ್ಯನ ನಗರಕ್ಕಂ ಸಾಗಲ್‌ವೇಳ್ಕುಂ (ಹಾಲಾಸ್ಯ. ೪-೧೬-೬); ತನ್ನ ಅಡಕೆಯನ್ನೆಲ್ಲ ಸವನಿಸಿಕೊಂಡು ಕರ್ಮಿನ್ ಸಾಬರು ಹಿಂತಿರುಗಿಸಿದ್ದ ಖಾಲಿಚೀಲವನ್ನೆ ! (ಮಲೆಮ. ೪೩೯). ೮. ನಗರದೊಳೊಂದು ಮಂದಿರವ ಸವನಿಸಿಯೆ ಸಿಂಗರಿಸಿ ಬೇಗದೊಳವರ ಬಿಜಯಂಗೈಸಿ ತಂದು (ಶಂಕರಾ. ೯-೩೩). ೧೦. ಮಾಡು; ನೆರವೇರಿಸು : ಯುವತಿ ಮಿತ್ರಾವಳಿಯನೆಮ್ಮಾ ಕುವರನೊಳು ಪಾಣಿಗ್ರಹಣವನು ಸವನಿಸಲಿಬೇಕೆಂದು ಸುಮುಹೂರ್ತದಲಿ ಪೇಳಿದನು (ಸಾಳ್ವಭಾ. ೧೭-೨೪). ೧೧. ನೀಡು; ಒಪ್ಪಿಸು : ನವವಯಮೆಯ್ದೆ ಲಜ್ಜೆ ನವಕಾಮಮಿವುಂ ಸುಸಿಲಲ್ಲೆ ವಕ್ತ್ರಮಂ ಸವನಿಸದಾಕೆ ಮುಗ್ಧೆ (ರಸಕ. ೩-೧೫೭).

[? + - ಇಸ್ಸು ./ ತೆಲು. ಸವರಿಂಚು]

ಸಮನ್ನು (ನಾ). ಪ್ರತಿವಾದಿಯು ಹಾಜರಾಗಬೇಕೆಂದು ನ್ಯಾಯಾಲಯದಿಂದ ಕಳಿಸುವ ಆದೇಶ : ಸಮನ್ನು ಆಗಲೇ ಹುಟ್ಟಿದೆ (ದಿನಾರಿ. ೧೦೦). [← ಇಂ. Summon]

ಸಮನ್ವಯ (ನಾ). ೧. ಹೊಂದಿಕೆ ; ಹೊಂದಾಣಿಕೆ : ಕರ್ಮಯೋಗದಲ್ಲಿ ಜ್ಞಾನ, ಭಕ್ತಿ, ಕರ್ಮಗಳ ಸುಮಧುರಸಮನ್ವಯವಿದೆ (ಧರ್ಮಸಾ. ೧೩೯) ; 'ಒಳ್ಳೆಯ ದೇಹದಲ್ಲಿ ಒಳ್ಳೆಯ ಮನಸ್ಸು' ಎನ್ನುವಂತೆ ಅವೆರಡೂ ಸಮನ್ವಯವಾಗಿಯೇ ಬೆಳೆಯಬೇಕು (ಶಿಕ್ಷಪ. ೩೮೬). ೨. ಕುಲ ; ವಂಶ : ನೊಸಲೊಳ್ಮಿಸುಗುವ ಮಿಸುನಿಯ ಪೊಸಗನ್ನಡಿ ಕಣ್ಗೆವಂದುದಿನಬಿಂಬಂ ಬಂದೆಸೆವಂತೆ ನಿಜಸಮನ್ವಯವಸುಧೇಶ್ವರವಿಹರಣೇಕ್ಷಣಾಪೇಕ್ಷತೆಯಿಂ (ರಾಜಶೇ. ೧೩-೬೩). [ಸಂ.]

ಸಮನ್ವಯಗೊಳಿಸು (ಕ್ರಿ). ಹೊಂದಿಸು; ಅಳವಡಿಸು : ಸಮಾಜದ ಅವಶ್ಯಕತೆಯನ್ನು ಸಮನ್ವಯಗೊಳಿಸಿಕೊಂಡು (ಶಿಕ್ಷಪ. ೧೫೬) ; ಪ್ರಸ್ಥಾನತ್ರಯಿಗೆ ಆಚಾರ್ಯರು ಭಾಷ್ಯ ಬರೆದು ಹದಿಮೂರನೆಯ ಶತಮಾನದ ಹೊಸದನ್ನೂ ವೇದೋಪನಿಷತ್ತುಗಳ

ಪುರಾಣಜ್ಞಾನವನ್ನೂ ಸಮನ್ವಯಗೊಳಿಸಿದರು (ಕರ್ನಾಕ. ೩೭).

[ಸಮನ್ವಯ + ಕೊಳ್$_1$ + - ಇಸ್ಸು]

ಸಮನ್ವಿತ (ಗು). ೧. ಕೂಡಿಕೊಂಡ ; ಬೆರೆತ : ಅಮಳಚಾರಿತ್ರಸಮನ್ವಿತಗುಪ್ತಿಗುಪ್ತರ್ . . . ಕೊಂಡಕುಂದಾಚಾರ್ಯರ್ (ಸುಕುಮಾ. ೧-೧೫); ಅತಿಬಲಸಮನ್ವಿತಕುಮಾರನಂ ಸೇನೆಯೊಳ್ಕಾಣದೆ ಕೆರಳ್ದಂ ಮರಾಳಕೇತು (ಜೈಮಿಭಾ. ೧೧-೩೭). (ನಾ). ೨. ಕೂಡಿ ಕೊಂಡುದು; ಸೇರಿದುದು : "ಯುತಮನ್ವಿತಂ ಸಂಹಿತಂ ಸಮನ್ವಿತಂ . . . ಸಹಿತಮೆನಲು ಕೂಡಲ್ಕೆ ನಾಮಂ" (ಮಂಗರಾ. ೧೩೦-೧೮). ೩. ಕೂಡಿರುವವನು; ಸಹಿತವಾಗಿರುವವನು : ನಾನೆ ಬಹುನತಿಬಲಸಮನ್ವಿತಂ ನಿರ್ವಿಘ್ನಮೆಸಗೆ (ಶ್ರೀರಾಮಾ. ೨೯-೪೩). [ಸಂ.]

ಸಮನ್ವೀತ (ಗು). ಕೂಡಿಕೊಂಡ : ಮಯ್ಯೊಳ್ ಮಿಡುಕುಳ್ಳ ತಾಣಮಣಮಿಲ್ಲೆಂಬಂತು ನಿಷ್ಪಂದನಾಗಿ ಸಮನ್ವೀತಮನಂ [ಪಾಶಾಂ. ಗುಣಂ] ಗುಣಂಗೊಳಿಸಿದಂ ಯೋಗೀಂದ್ರ ವೃಂದಂಗಳಂ (ಆದಿಪು. ೬-೩೪). [< ಸಮನ್ವಿತ]

ಸಮಪಾತಳಿ (ನಾ). ಏರುಪೇರಿಲ್ಲದುದು; ಸಮನಾದ ಮಟ್ಟ : ನೀರಿನ ಸಮಪಾತಳಿಯ ಸಹಾಯದಿಂದ ಪದಾರ್ಥಗಳ ಎತ್ತರವನ್ನು ಅಳೆಯಬಹುದು (ಮುಯುಯು. ೫-೫೯); ನೀಲನು . . . ರಾತ್ರಿಯಾದ ಕೂಡಲೆ ಸಮಪಾತಳಿಯ ನೆಲ ನೋಡಿ ಅಲ್ಲಿ ಬಿಡಾರಮಾಡುತ್ತಿದ್ದನು (ಬಂಗಾಜ. ೫೫). [ಸಮ$_3$ + ಪಾತಳಿ]

ಸಮಪಾದ (ನಾ). ೧. ಒಟ್ಟಿಗೆ ಸೇರಿಸಿರುವ ಕಾಲು; ಒಂದೇ ಸಮವಾಗಿಟ್ಟ ಕಾಲು : ಗೋಪಾಲರೂಡನೆ ಗೆಡೆಯಾಗಿ ಲಘುಕ್ರಮದೆ ಸಮಪಾದದಿಂ ಲಂಘಿಸಿ ಗೆಲ್ಲಂಗೊಂಡು (ಜಗಿಪ. ೪-೫೨ ವ); ಸಮಪಾದಂ ಕಟಿಪಾರ್ಶ್ವದಲ್ಲಿ ನಿಲೆ ಬೆನ್ನಂ ಮೋದೆ ಕೇಶಾಳಿ (ಕಾವ್ಯಸಾ. ೬೫೬); ಸರಸ್ವತಿಯನ್ನು ಸೋಮವದನೆಯಾಗಿಯೂ ಸಮಪಾದಗಳಿಂದ ನಿಂತಿರುವಂತೆಯೂ ಚಿತ್ರಿಸಬೇಕು (ಭಾರದ. ೫೧೨ ಅಡಿಟಿ). ೨. ಬಿಲ್ಲು, ಗದೆ ಮುಂತಾದುವುಗಳನ್ನು ಹಿಡಿದು ಯುದ್ಧಮಾಡುವಾಗ ನಿಲ್ಲುವ ಐದು ಭಂಗಿಗಳಲ್ಲಿ ಒಂದು; ಸಮಾನಾಂತರದಲ್ಲಿ ಪಾದಗಳನ್ನಿಡುವುದು : ವಿಕ್ರಮಾರ್ಜುನನಶ್ವತ್ಥಾಮನೊಳ್ ಪೆಣೆದು . . . ಆಲೀಢ ಪ್ರತ್ಯಾಲೀಢ ಸಮಪಾದಂ ಗಳೆಂಬಾಸನಂಗಳೊಳಂ . . . ಕಾದಿದರ್ (ಪಂಪಭಾ. ೧೩-೩೮ ವ); ಆಲೀಢ ಪ್ರತ್ಯಾಲೀಢ ಸಮಪಾದ ವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧಸ್ಥಾನಕೃತಂ ಗಳೊಳಂ . . . ನಿಂದು (ಗದಾಯು. ೮-೧ ವ). ೩. [ಛಂದ] ಸಮಸಂಖ್ಯೆಯ ಪಂಕ್ತಿ,— ಸಾಲು : ಪ್ರತಿಪಾದದ ಮೊದಲನೆಯಕ್ಷರದ ಮುಂದೆ ನಗಣ ಸಗಣಗಳು ಬರಕೂಡದು. ಸಮಪಾದಗಳಲ್ಲಿ ಏಳನೆಯಕ್ಷರವು ಲಘುವಾಗಿರಬೇಕು (ಕೃಷಿಚಿ. ೧೦೩). 'ವಿಷಮಪಾದ' ಹೋ. ೪. [ನಾಟ್ಯ] ಇಪ್ಪತ್ತುಮೂರು ದೇಶೀಯ ಸ್ಥಾನಕಗಳಲ್ಲಿ ಒಂದು; ಪಾದಗಳ ನಡುವೆ ಒಂದು ಗೇಣು ಅಂತರ ವಿರುವಂತೆ ನಿಂತುಕೊಳ್ಳುವುದು : ಒದವರ್ದ ಸ್ವಸ್ತಿಕಂ . . . ಸಮಪಾದಂ . . . ವೃಷಭಂ ಸುಲಲಿತಮಿಪ್ಪತ್ತಮೂಱು ದೇಶೀಸ್ಥಾನಂ (ಲಾಸ್ಯರಂ. ೭-೮). [ಸಂ.]

ಸಮಪಾದಚಾರಿ (ನಾ). = ಸಮಪಾದ ೪ : ನಚ್ಚಣ . . . ಸಮಪಾದಚಾರಿಯಂ ತಳೆದೆಸೆದಳ್ (ರಾಜಶೇ. ೧೨-೯೨). [ಸಂ. ಸಮಪಾದಚಾರೀ]

ಸಮಪಾಳಿ 'ಸಮಪಾಟಿ' ನೋ.

ಸಮಪಾಟಿ, ಸಮಪಾಳಿ (ನಾ). ೧. ಸರಿಸಮಾನ ; ಸಾಟಿ : "ಸಮಪಾಟಿಯೆನಲ್ ಸದೃಶಮೆಂಬುದು" (ಚತುನಿ. ೧೫೮). ಸಮಪಾಳಿ : ೧. ಕಾದಿದನು ಸಮಪಾಳಿಯಲಿ ಹದಿನೈದುದಿನ ಪರಿಯಂತ (ತೂರರಾ. ೧-೮-೩೯); ಸುನಂದನೆಗೆ ಸಮಪಾಳಿ ನೀನು (ಸಳಚ. ೭-೩೨). ೨. ಕ್ರಮ ; ಓರಣ : ಸಾಲ ಝಲ್ಲರಿ ಮುಸುಕಿದವು ಸಮಪಾಳಿಯಲಿ (ಕುವ್ಯಾಅ. ೧೩-೨೯); ಪೇಳುತಲಿ ಶ್ರುತಿಮಂತ್ರಗಳ ಸಮಪಾಳಿಯಲಿ ನಡೆತಂದರಾಗ (ಉತ್ತಕ. ೬-೨೧). [ಸಮ$_3$ + ಪಾಟಿ$_2$]

ಸಮಬಂಧ (ನಾ). [ಕಾವ್ಯಮಿಾ] ಕಾವ್ಯರಚನೆಯ ಒಂದು ಪ್ರಕಾರ ; ಕೇಳುವುದಕ್ಕೆ ಅಹಿತವಾಗದಂಥ ಪದಬಂಧವುಳ್ಳುದು : ಸಮಬಂಧಮೆಂಬುದಕ್ಕುಂ. ಸಮನಿಸಿ ಕಿವಿಗಡಱೆ ಬಾರ[ದಂದಂಬಟ್ಟಂ] ಸಮೆದ ಪದದಾ ವಿಭೇದಕ್ರಮಮೆರಡಕ್ಕುಂ ಮೃದುಸ್ಫುಟೋಕ್ತಿಯಿನದಱಿಂ (ಕವಿರಾ. ೨-೫೬). [ಸಂ.]

ಸಮಬಂಧು (ನಾ). ೧. ಸರಿಸಮಾನನಾದ ನಂಟ,— ಬಂಧು : (ಕ). ೨. ಸಮವಯಸ್ಕ ; ಓರಗೆಯವನು : ಸಮಬಂಧುಗಳನಪ್ಪಿ ಸಂದರ್ಶನೋತ್ಸವದೊಳನ್ಯೋನ್ಯಸಂಭಾಷಣೆಗಳಿಂದ ಮುದಿತರಾಗಿ ವಂದಿಸಿದರೆಲ್ಲರುಂ ಬಕದಾಲ್ಭ್ಯ ಮುನಿಗೆ (ಜೈಮಿಭಾ. ೩೩-೨೫). [ಸಂ.]

ಸಮಭರವಿಭಾಗ (ನಾ). ಸಂಧಿವಿಭಜನೆ (?) : ನಿಯತಸ್ಥಾನಂ ಪದವಿಸೃತಿಯೊಳಾದ ವಿರಾಮಮಱಿಗೆ ಯತಿಯಕ್ಕುಮದರ್ಕಯಥಾಗತಿ ಯತಿಭಂಗಂ ಪ್ರಯುಕ್ತಸಮಭರ ವಿಭಾಗದೊಳ್ ನಿರ್ದೋಷಂ (ಕಾವ್ಯಾವ. ೪೭೯). [ಸಂ.]

ಸಮಭಾಗ (ನಾ). ಸಮಾನವಾದ ಭಾಗ,— ಪಾಲು : "ಪಂಪಮೆನಲ್ ಸಮಭಾಗಂ" (ಚತುನಿ. ೯); ಸಿಂಗತಲೆಪಣ್ಣಾರನ್ನೆ ಕಾಸಂಪಳ್ಳಿಯಾ ಸಮಭಾಗಮಾನ್ . . . ಕೊಟ್ಟರ್ (ಎಇ. XXI, ೧೭೮-೯ ; ಸು. ೫೧೫ ಶತ). [ಸಂ.]

ಸಮಭಾಜಕ (ಗು). ಅರ್ಧಕ್ಕೆ ಸರಿಯಾಗಿ ಭಾಗಮಾಡುವ : ಭೂಮಿಯ ಸಮಭಾಜಕವೃತ್ತತಲವನ್ನು ವೃದ್ಧಿಸಿದರೆ ಖಗೋಳವನ್ನು . . . ಸಂಧಿಸುವ ವೃತ್ತವೇ ಈ ಖಗೋಳೀಯ ವಿಷುವದ್ವೃತ್ತ (ನಕ್ಷತ್ರ. ೩೪). [ಸಂ.]

ಸಮಭಾಜಕರೇಖೆ (ನಾ). ಭೂಗೋಳವನ್ನು ಎರಡು ಸಮಭಾಗಗಳಾಗುವಂತೆ ಕಲ್ಪಿಸಲಾದ ರೇಖೆ ; ಭೂಮಧ್ಯರೇಖೆ : ಭೂಮಧ್ಯರೇಖೆ, ನಿರಕ್ಷ ರೇಖೆ, ಸಮಭಾಜಕರೇಖೆ (ಭೂಗೋಳ. ೫). [ಸಂ. ಸಮಭಾಜಕರೇಖಾ]

ಸಮಭಾಜಕವೃತ್ತ (ನಾ). "ಭೂಮಿಯ ಎರಡುಧ್ರುವಗಳಿಗೂ ಸಮಾನ ದೂರದಲ್ಲಿರುವ ಭೂಮಿಯ ದೊಡ್ಡವೃತ್ತ : ವಿಷುವದ್ವೃತ್ತ ; ನಿರಕ್ಷ ರೇಖೆ ; ಭೂಮಧ್ಯರೇಖೆ" (Equator. ೧೦೫೩). [ಸಂ.]

ಸಮಭಾವ (ನಾ). ಒಂದೇ ಬಗೆಯಾಗಿರುವಿಕೆ ; ಸಮತೆ : ಸಮಭಾವಪ್ರಭವಂ ಶಾಂತಮಕ್ಕುಮಂತಾ ಸಮತ್ವಮುಂ ವರ್ತಿಸುಗುಂ (ಕಾವ್ಯಾವ. ೮೨೮). [ಸಂ.]

ಸಮಭಿಮತ (ಗು). ಚೆನ್ನಾಗಿ ಒಪ್ಪಲ್ಪಟ್ಟ,— ಮನ್ನಿಸಲ್ಪಟ್ಟ : ಸುಕುಮಾರೋಜಸ್ಸ ಮಭಿಮತೋದಾರಾಹ್ವಯಸಮಾಧಿಗಳ್ ಕೃತಿಗುಣಂಗಳೀರಯ್ದಕ್ಕುಂ (ಕಾವ್ಯಾವ. ೫೦೦). [ಸಂ.]

ಸಮಭ್ಯರ್ಥಿಸು (ಕ್ರಿ). ಸಮರ್ಥಿಸು ; ಅನುಮೋದಿಸು : ಎನ್ನೆಂಬುದನಿಂಬು ಕೆಯ್ಯುದೆಂದ ಧೃತರಾಷ್ಟ್ರನ ನುಡಿಯಂ ಗಾಂಧಾರಿ ಸಮಭ್ಯರ್ಥಿಸಿ ತಾನುಂ ಪ್ರಾರ್ಥಿಸಿ (ಗದಾಯು. ೪-೧ ವ). [ಸಮಭ್ಯರ್ಥನ್ + - ಇಸ್ಸು]

ಸಮಯ$_1$ (ನಾ). ೧. ಕಾಲ ; ವೇಳೆ : ಜಿನಪತಿಮುನಿಪತಿಗುಣವರ್ಣನಸಮಯಾನಂತರಂ ಕವೀಶ್ವರಗುಣವರ್ಣನಮುಚಿತಂ (ಪಲ್ಲಿಪು. ೧-೨೨); ಹರನಾಣೆಯಂ ತಾಳ್ದು ಬಾಳ್ದಿಪ್ಪ ಸಮಯದೊಳು (ತಿರುರ. ದೇ. ೧೦-೬). ೨. ಸರಿಯಾದ ಕಾಲ ; ಸಕಾಲ : ಸಮಯದೊಳೆ ಬಿತ್ತಿ ಬೀಜವನಮಿತಫಲಂಗುಡುವ ಪೊಲನನುಳಿಯುವ ತೆರದಿಂದ (ಶಾಕುಂತ. ೯೪-೧೫೫); ಸಮಯಕ್ಕಾಗದ ಅರ್ಥ ಸಹಸ್ರವಿದ್ದರೂ ವ್ಯರ್ಥ (ಗಾದೆ). ೩. ಆಸ್ಪದ; ಅವಕಾಶ : ಕುಡು ಸಮಯಮಂ (ಅನಂಪು. ೨-೩೦); ತನಗಾದ ಅಪಮಾನಕ್ಕೆ ಪ್ರತೀಕಾರವನ್ನು ಮಾಡಬೇಕೆಂದು . . . ಸಮಯವನ್ನು ಹೊಂಚಲು ಮೊದಲಿಟ್ಟನು (ಒಡಕ. ೧೫). ೪. ಒಡಂಬಡಿಕೆ ; ಒಪ್ಪಂದ : ಶ್ರೀಲಕ್ಷ್ಮೀನರಸಿಂಹಪುರ ದಶೇಷಮಹಾ(ಸ)ಜನಂಗಳು ಹಿರಿಯವಕ್ಕೆಯ್ದಲ್ಲಿ ಮಹಾಸಭೆಯಾಗಿ ನೆರದು ಮಾಡಿದ ಸಮಯವೆಂತೆಂದಡೆ (ಕ್ಷುಆರಿ. ೧೯೩೧, ೫೯-೨; 1226). ೫. ಸಂಪ್ರದಾಯ ; ಪದ್ಧತಿ; ರೂಢಿ : ಬಹುಶಃ ಆ ಕಾಲದ ವರ್ಣಕಕವಿಗಳದಿದೊಂದು ಸಮಯ ವಾಗಿರಬೇಕು (ಕರ್ಣಾಜ. ೭೨); 'ಧರ್ಮಿ' ಎಂದರೆ ನಟರು ಆಚರಣೆಯಲ್ಲಿಟ್ಟುಕೊಂಡಿರ ತಕ್ಕ "ಸಮಯ" ಅಥವಾ ಸಂಪ್ರದಾಯ (ಸಂನಾಟ. ೧೩). ೬. ಧರ್ಮ; ಮತ : ಸಮಯಸಮುದ್ಧರಣಂ ವಿಕ್ರಮತುಂಗಂ ನಾಚಿಸೆಟ್ಟಿ (ಕೊಲ್ಹಾಶಾ. ೮-೫೯; 1147); ಗುರುದೀಕ್ಷೆಯಿಲ್ಲದ ನರನು ಶರಣರ ಸಮಯಕ್ಕೆ ಸಲ್ಲ (ಅಖಂಡೇ. ೨೭೦-೧೩). ೭. ಕುಲ ; ಸಮಾಜ : ಸಮಸ್ತಸೆಟ್ಟಿಕಾಱರ ಸಮಯದ ಸಮೀಪದಲು . . . ದೇವರಿಗೆ ಧಾರಾಪೂರ್ವಕಂ ಮಾಡಿ (ಕಾಅ. ೩೬-೪೯-೧೨ ; 1134); ವಿರೋಧಿಸಂವತ್ಸರ ದಲ್ಲಿ ಆರುದರುಶನ ಹದಿನೆಂಟುಸಮಯಕ್ಕೆ ವಿರೋಧ ಹುಟ್ಟೀತು (ಕಾಲಸಂ. ೪೨); ಹದಿನೆಣ್ಮುಸಮಯವು ಅಱುವತಮೂವರು ಬಣಜು ಭಕುತಿಭೇದವಿಲ್ಲ

(ಎಗ., XXI, ೧೪-೭೮: 1260). ೮. ಸಂಕೇತ ; ಸಂಜ್ಞೆ : "ಕಾಲದಲಿ ಸಿದ್ಧಾಂತದಲಿ ವಿಶೇಷದಲಿ ಸಂಕೇತದಲಿ ಸಮಯಾಖ್ಯಮೆನಿಸಿರ್ಕು" (ಮಂಗರಾ. ೧೫೪-೬೬). ೯. [ಕಾವ್ಯಮೀ] ಕವಿಯ ಸಂಪ್ರದಾಯ ; ಕಾವ್ಯಭಾಷೆ: ಶಬ್ದವತ್ತಿಯು ಮುಖ್ಯ ಮತ್ತು ಅಮುಖ್ಯ ಎಂದು ಎರಡುವಿಧ . . . ಅರ್ಥವನ್ನು ಸ್ಮರಣಕ್ಕೆ ತರಲು ಅನುಕೂಲವಾದ ಪದಾರ್ಥದ ಸಂಬಂಧಕ್ಕೆ ಶಕ್ತಿ ಎಂದು ಹೆಸರು. ಇದಕ್ಕೆ ಸಮಯ, ಸಂಗತಿ, ಸಂಕೇತ, ವಾಚಕತ್ವ ಎಂಬೀ ಮುಂತಾಗಿ ನಾಮಾಂತರಗಳು (ಭಾತತ್ತ. ೮೪೬). 'ಕವಿಸಮಯ' ಪರಾ. ೧೦.[ತರ್ಕಶಾ] ವಾದವಿವಾದಗಳ ನಿರ್ಣಯ; ಸಿದ್ಧಾಂತ : ಆ ಕಪಿಲ ಸುಗತ ಕಣಚರ ಲೋಕಾಯತಿಕಾದಿ ಮಾರ್ಗಭೇದಂ ಸಮಯಂ (ಕವಿರಾ. ೧-೧೦೫). ೧೧. [ಜೈನ] ಪರಮಾಣುವು ಲೋಕಾಕಾಶದಲ್ಲಿ ಒಂದು ಪ್ರದೇಶದಿಂದ ಅದಕ್ಕೆ ಹೊಂದಿದ ಇನ್ನೊಂದು ಪ್ರದೇಶಕ್ಕೆ ಮಂದಗತಿಯಿಂದ ಹೋಗುವಷ್ಟು ಕಾಲಾವಧಿ : ಅಣುವನಣು ದಾಂಟುವ ಪೊೞ್ತಂ ಸಮಯಮೆಂದು ಪೇೞ್ವುವನಾವಂ (ಪಂರಾಮಾ. ೧-೪೮). [ಸಂ.]

ಸಮಯ್ಯ₂ 'ಸಮಯ್ಯಿ₂' ನೋ.

ಸಮಯಂದಪ್ಪು (ಕ್ರಿ). ವೇಳೆ ಮೀರು; ಅವಧಿ ಮೀರು: ಅಂಗಳಂಗಳ ಕಸವಂ ಸಮಯಂದಪ್ಪದೆ ತೊಡೆವುವು ಚಮರೀಮೃಗವಾತ್ಮವಾಳಸಮ್ಮಾರ್ಜನಿಯಿಂ (ಜಗವಿ. ೧೬-೪೬). [ಸಮಯ₂ + ತಪ್ಪು₂]

ಸಮಯಚತುರ (ಗು). ೧. ಸಂದರ್ಭಕ್ಕೆ ತಕ್ಕಂತೆ ವ್ಯವಹರಿಸುವ ಚಾತುರ್ಯವುಳ್ಳ : ಜೋನ್ಸ್‌ಳಂಥ ಶಕ್ತಿಸಂಪನ್ನ, ಸಮಯಚತುರ, ಕ್ರೂರಸ್ತ್ರೀಯನ್ನು ಅವನು ಇದುವರೆಗೆಂದೂ ನೋಡಿರಲಿಲ್ಲ (ಅಂಬಿಕ. ೯೫). (ನಾ). ೨. ಸಂದರ್ಭಕ್ಕೆ ತಕ್ಕಂತೆ ವ್ಯವಹರಿಸುವವನು : ಅವನಂಥ ಸಮಯಚತುರನನ್ನು ನಾನು ನೋಡಿಯೇ ಇರಲಿಲ್ಲ (ರೂಢಿ). [ಸಂ.]

ಸಮಯತಿ (ನಾ). [ಸಂಗೀತ] ಆರುಬಗೆಯ ಯತಿಗಳಲ್ಲಿ ಒಂದು: ಯತಿಯಲ್ಲಿ ಆರುವಿಧ. ಕ್ರಮವಾಗಿ ಅವು - (೧) ಸಮಯತಿ, (೨)ಗೋಪುಚ್ಛಯತಿ . . . (೬) ವಿಷಮಯತಿ (ಸಂಗೀಚಂ. ೫೭). [ಸಂ.]

ಸಮಯಬಾಹ್ಯ (ನಾ). ಜಾತಿಯಿಂದ ಹೊರತಾದವನು : ಇದಂ ಮಹಾಜನಂಗಳ್ ಕಂಡರಪ್ಪೊಡೆ ಸಭಾಜನಕ್ಕಂ ಸಹಪಂಕ್ತಿಗಂ ಪೊಱಗೆಂದು ಸಮಯಬಾಹ್ಯನಂ ಮಾಟ್ಬರ್ (ಪಂಚತಂ. ಅ. ೧೧೦-೯). [ಸಂ.]

ಸಮಯಸಾಧಕ (ನಾ). ಕಾಲಕ್ಕೆ ತಕ್ಕ ರೀತಿಯನ್ನುನುಸರಿಸಿ ಲಾಭ ಪಡೆಯುವವನು : ಆತ ಒಳ್ಳೆ ಸಮಯಸಾಧಕ. ಯಾವ ಅಧಿಕಾರಿ ಬಂದರೂ ಆಪ್ತನಾಗಿ ಬಿಡುತ್ತಾನೆ (ರೂಢಿ). [ಸಂ.]

ಸಮಯಸ್ಫೂರ್ತಿ (ನಾ). ಸಂದರ್ಭಕ್ಕೆ ತಕ್ಕ ಹಾಗೆ ಆಗಿಂದಾಗಲೇ ಹೊಳೆಯುವ ವಿಚಾರ : ಕಲಾವಿದನ ಸಮಯಸ್ಫೂರ್ತಿ ಮತ್ತು ಕಲ್ಪನಾ ಸ್ವಾತಂತ್ರ್ಯಗಳು ಕುಂಠಿತವಾಗಿ ಸಂಗೀತವು ಒಂದು ಮೂರು ಕಾಲಿನ ಓಟದಂತೆ . . . ಆಗಿದೆ (ಭಾರದ. ೫೩೬); ಅಲ್ಲಿಯೇ ಸಮಯಸ್ಫೂರ್ತಿಯಿಂದ ಸಂಗೀತಗಾರನು ರಚಿಸುವ ಸಂಗೀತವನ್ನು ಕೇಳುತ್ತೇವೆ (ಸಂಗೀತ. ೧). [ಸಂ.]

ಸಮಯಾಚಾರ (ನಾ). ೧. (ಒಂದು ಧರ್ಮಕ್ಕೆ ಅಥವಾ ಮತಕ್ಕೆ ತಕ್ಕ) ಸಂಪ್ರದಾಯ ; ಪದ್ಧತಿ : ಎನಗೆಯೂ ನಿನಗೆಯೂ ಸಮಯಾಚಾರ ಸರಿ (ಬಸವ. ೯೦೪); ಎನ್ನ ಸಮಯಾಚಾರಕ್ಕೆ ಶ್ಮಶಾನಮಂಟಪದಲ್ಲಿ ಗುರುವ ತಡೆದೆ (ಘನವ. ೬೮-೫೫). ೨. ಒಂದು ಬಗೆಯ ತೆರಿಗೆ : (೧) ಮನೆದೆರಿಗೆ . . . (೫) ಸಮಯಾಚಾರ . . . (೧೯) ಕೌದಿಯ ತೆರಿಗೆ. - ಈ ಮೇರೆಗೆ ಹತ್ತೊಂಬತ್ತು ಬಾಬುಗಳನ್ನು ರೈತರಿಗೆ ನಿಷ್ಕರ್ಷೆ ಮಾಡಿಸಿ (ಮಹಾವಂ. I, ೧೨೪); ಈ ವೃತ್ತಿಗೆ ಸಲ್ಲುವ . . . ಸುಂಕ ಪೊಮ್ಮು ಜಾತೀಕೂಟ ಸಮಯಾಚಾರ ಹುಲ್ಲುಹಣ ಚರಾದಾಯ (ಹುಚ್ಚಿಹ. ೩). [ಸಂ.]

ಸಮಯಾಚಾರತ್ವ (ನಾ). ಆರು ವಿಧವಾದ ಸದ್ಗುಣಗಳಲ್ಲಿ ಒಂದು : ದಾಸತ್ವ ವೀರದಾಸತ್ವ ಭೃತ್ಯತ್ವ ವೀರಭೃತ್ಯತ್ವ ಸಮಯಾಚಾರತ್ವ ಸಕಲಾವಸ್ಥಾತ್ವಂಗಳೆಂಬ ಷಡ್ವಿಧಸಜ್ಜನತ್ವಯುಕ್ತನಾಗಿ (ವೀಸಂ. ೯೭). [ಸಂ.]

ಸಮಯಾಚಾರಿ (ನಾ). "ಒಂದು ಧರ್ಮದ ಆಚಾರ ಮುಂತಾದ ಕಟ್ಟುಗಳನ್ನು ವಿಧಿಸುವವ; ಆಚಾರ್ಯಪುರುಷ" (ಬಸವ. ಕೋಶ): ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ ಎನ್ನ ಭಕ್ತನೆಂಬರು ಎನ್ನ ಸಮಯಾಚಾರಿಯೆಂಬರು (ಬಸವ. ೩೮೫) ; ಜಂಗಮದಲ್ಲಿ ಸಮಯಾಚಾರಿಯಾಗಿಪ್ಪನ್ನಕ್ಕರ ಮಾಡುವ ಭಕ್ತಿಗೆ ಭಿನ್ನವದೆ (ಅಪಚಂ. ೨೫೪-೧೦೫೯). [ಸಂ. ಸಮಯಾಚಾರಿನ್]

ಸಮಯಾಚಾರ್ಯ (ನಾ). = ಸಮಯಾಚಾರಿ : ಮಹಿಳೇಶ್ವರಿಯು . . . ಸಮಯಾಚಾರ್ಯರಾದ ಶ್ರೀಜ್ಞಾನಸಂಬಂಧಮೂರ್ತಿಗಳವರ ಕೃಪೆಯಿಂದ . . . ಪತಿಯನ್ನು ಶೈವಮತದಲ್ಲಿ ಪ್ರವರ್ತಿಸುವಂತೆ ಮಾಡಿ (ಪುರಾವಿ. ೨೫೧). [ಸಂ.]

ಸಮಯಿ₁ (ನಾ). ಒಂದು ಮತ ಅಥವಾ ಸಿದ್ಧಾಂತಕ್ಕೆ ಸೇರಿದ ವ್ಯಕ್ತಿ: ಸಮಯಿಗಳೊಳ್ . . . ಅವರ ಸಿದ್ಧಾಂತಮುಮವರ ಚರಿತ್ರಮುಂ ಸ್ವವಚನವಿರೋಧಂ (ಶಾಂತಿಪು. ೮-೧೪೭); ಆತನ ಮಹೋನ್ನತಿವಡೆದ ಪೆಂಪಂ ನೋಡಲಾಱದೆ ಜಡಮತಿಗಳಾಗಿತರಸಮಯಿಗಳತಿಕುಟಿಲದಿಂದ . . . ಇದನಱಿಯಬೇಕೆನುತ (ಬಸವು. ೩೨-೪೯). [ಸಂ. ಸಮಯಿನ್]

ಸಮಯಿ₂, ಸಮಯ್ಯ₂, ಸಮೈ₃ (ನಾ). ದೀಪಮಾಲೆಯ ಕಂಬ; ದೀಪಾಲೆಕಂಬ : ತೇರದಾಳದ ತಾಮ್ರದ ಪಾತ್ರೆಗಳೂ ಸಮಯಿಗಳೂ ಪ್ರಸಿದ್ಧ (ಕಪಾಗೆ. ೬೩೨). **ಸಮಯ್ಯ₂** : ಪುರುಷಪ್ರಮಾಣ ಎತ್ತರವಾಗಿರುವ ಬೆಳ್ಳಿಯ ಸಮಯಗಳಲ್ಲಿ ಸುಗಂಧದೆಣ್ಣೆಗಳ ದೀಪಗಳನ್ನು ಹಚ್ಚಿದ್ದರು (ಮಂಜುಕ. ೭೦). **ಸಮೈ₃**: ಸುಶೀಲೆಯು ಏನೋ ಆಲೋಚಿಸುತ್ತ ಸಮೆಯೆದುರು ಕುಳಿತುದಿಟ್ಟಳು (ಅನಂತ. ೮); ದೇವರೆದುರು ಸಮೆಯಲ್ಲಿ ದೀಪವಿತ್ತು (ಸ್ವತಿಚಿ. ೨೫೯).

[← ಅರ. ಶಮೂಅ ; ಮರಾ. ಸಮಈ, ಸಮಯ]

ಸಮಯಿಸು₁ 'ಸಮೆಯಿಸು₁' ನೋ.

ಸಮಯಿಸು₂ 'ಸಮೆಯಿಸು₂' ನೋ.

ಸಮಯೋಗ (ನಾ). ಅನೇಕವರ್ಣ್ಯಗಳಿಗೆ ಏಕಧರ್ಮವನ್ನು ಹೇಳುವ ಒಂದು ಬಗೆಯ ಅಲಂಕಾರ : ಸಮಗುಣಗಣನದೆ ಪೇಳ್ವುದು ಸಮಯೋಗಂ (ಉದಯಾ. ೧೨-೫೬); ಅನೇಕವರ್ಣ್ಯಗಳಿಗೆ (ಅಥವಾ ಅವರ್ಣ್ಯಗಳಿಗೆ) ಹೇಳಿರುವ ಧರ್ಮೈಕ್ಯವು ಸಮಯೋಗಾಲಂಕಾರವೆನ್ನಿಸಿಕೊಳ್ಳುವುದು (ಕೃಕಿ. ೨೬೧). [ಸಂ.]

ಸಮಯೋಚಿತ (ಗು). ೧. ಆಯಾಕಾಲಕ್ಕೆ ತಕ್ಕುದಾದ : ತತ್ಸಮಯೋಚಿತ ಶಾಂತಿಯನುತ್ಸವದಿಂ ಮಾಡಿ (ಜಗವಿ. ೩-೨೬). (ನಾ). ೨. ಆಯಾ ಸಂದರ್ಭಕ್ಕೆ ತಕ್ಕುದು : ಇಂಥ ಕಡೆಗಳಲ್ಲಿ ಬೇರೆ ಬೇರೆ ಕ್ರಿಯಾಪದಗಳನ್ನು ಸಮಯೋಚಿತವಾಗಿ ಅಧ್ಯಾಹಾರ ಮಾಡಬೇಕು (ಮಧ್ಯಮ. ೧೯೦). ೩. ಧರ್ಮಕ್ಕೆ ಉಚಿತವಾದುದು,- ತಕ್ಕುದು : ಬಂದ ಸಮಯೋಚಿತವನಱಿಯದಿದ್ದರೆ ನಿಂದಿರಲೊಲ್ಲ ಕೂಡಲ ಸಂಗಮದೇವ (ಬಸವ. ೧೯೦); ಸದ್ಭಕ್ತಂಗೆ ಸಮಯೋಚಿತವ ಮಾಡುವವನ ಸದ್ಭಕ್ತರಿಗೆ ನೀಡಿ ತನ್ನ ಹಸಿವ ಮಱೆದಿಪ್ಪವನ . . . ಅಱಸಿ ಕಾಣೆನು (ಸಮಾವ. ೬-೨೦). [ಸಂ.]

ಸಮರ (ನಾ). ಕಾಳಗ ; ಯುದ್ಧ : ಸಮರರಸಟ್ರಿಯರೊಳ್ ಸತ್ತ್ವಮುಮಿಳೆಯೊಳ್ ರಜಮುಮೊದವೆ ರಣಗಟ್ಟಲೆಯೊಳ್ ತಮಮುಂ ಮಿಗೆ (ಪಂಪಭಾ. ೧೦-೬೯); ಸಾವೆವು ನಿಮ್ಮ ಸಮರದಲಿ (ಕುವ್ಯಾಅ. ೨೧-೬೫).

ಸಮರೈಕಭೈರವ = ಯುದ್ಧದಲ್ಲಿ ಒಬ್ಬನೇ ಪ್ರಳಯಕಾಲದ ಶಿವನಂತಿರುವವನು ; ಒಂದು ಬಿರುದು : [ಅರಿತಟ್ಟೆಕ]ಣ್ಗೇರವಂ ಸಮರೈಕಭೈರವಂ (ಸೌಗಾ. XX,೩೯-೧೮: 1064). **ಸಮರೈಕವೀರ** = ಯುದ್ಧದಲ್ಲಿ ಹೋರಾಡುವ ಏಕಾಂಗಶೂರ : ಸುಭಟಶಿರಶ್ಶೇಖರಂ ಸಮರೈಕವೀರಂ ವೀರಚೂಡಾಮಣಿ (ಸೌಗಾ. XX, ೨೧-೪೫ ; 1019). [ಸಂ.]

ಸಮರಂಗ (ನಾ). ಕಾಳಗದ ಕಣ ; ಯುದ್ಧಭೂಮಿ : ಕಾಲನ ಲೀಲೆಯಾದುದು ವಿಷಮ ಸಮರಂಗ (ಕುವ್ಯಾದ್ರೋ. ೫-೪). [< ಸಂ. ಸಮರರಂಗ. / ಮರಾ. ಸಮರಂಗ]

ಸಮರಂಗಾಱ (ನಾ). ಕಲಿ; ವೀರ : ತುಮುಲಯುದ್ಧದೊಳ್ ಪಟುಭಟರಂ ನೂಂಕುವ ಸಮರಂಗಾಱನ ಮಾಂಕರಣೆಯ ಗಂಡುತನದ ತಿರುಳೆನವೇಟ್ಟುಂ (ಶಬ್ದಾಮ. ೩೮೪ ಪ್ರಯೋ). [ಸಮರ + - ಕಾಱ]

ಸಮರಕರ (ನಾ). ಯುದ್ಧಮಾಡುವವನು : ಅಮರೇಜ್ಯಾಂಶದೊಳರೆ ಚಂದ್ರಮ ನರ್ಕಾದಿಗಳೆ ವೀಕ್ಷಿಪಂದಧಿಕಬಲಂ ಸಮರಕರಂ . . . ಎನಿಕ್ಕುಂ (ಜಾತಕ. ೨೦-೨೦). [ಸಂ.]

ಸಮರಕರಾಳ (ಗು). ಯುದ್ಧಮಾಡುವುದರಲ್ಲಿ ಭಯಂಕರನಾದ: ಸಮರಕರಾಳ ಧೃಷ್ಟದ್ಯುಮ್ನ ಕೀರ್ತಿವಿಶಾಲ ಧೀರಶಿಖಂಡಿಸಹಿತಾ ದ್ರುಪದನೈತಂದ (ಕುಮಾವಿ. ೧೦-೪೫). [ಸಂ. ಸಮರಕರಾಲ]

ಸಮರಜಯ (ನಾ). ಯುದ್ಧದ ಗೆಲವು ; ಕಾಳಗದ ವಿಜಯ : ಸಮರಜಯಂ ದೈವಾಯತ್ತಮದಱಿನಾ ಪುರುಷಾಕಾರಮೆಮಗಾಯ್ತಾಗಳ್ (ಗದಾಯು. ೩-೪೬).

ಸಮರಜಯಘೋಷಾರವಂ = ಯುದ್ಧದಲ್ಲಿ ಗೆಲವು ಹೊಂದಿದ ಬಗ್ಗೆ ಜಯ ಘೋಷವನ್ನು ಪಡೆದವನು ; ಒಂದು ಬಿರುದು : ಮಾರ್ಕೊಲ ಭೈರವಂ ಸಮರಜಯಘೋಷಾರವಂ (ಸೌಕ್ಷ. XX,೪೧-೧೦ ; 1068). [< ಸಂ. ಸಮರಂಜಯ]

ಸಮರತ (ಗು). [ಕಾಮಶಾ] ಸಮಾನವಾದ ರತಿಯುಳ್ಳ: ಚೆಲ್ಲುವೆತ್ತೊಪ್ಪುವ ಶಯ್ಯೋದ್ದೇಶದೊಳ್ ಪೆರ್ಚಿದ ಸಮರತಲೀಲಾವಿನೋದಂಗಳಿಂದುತ್ಸವಮಂ ತಾಳ್ದುತ್ತುಂ (ಚಂದ್ರಪ್ರ. ೩-೩೭). [ಸಂ.]

ಸಮರತಸೌಖ್ಯ (ನಾ). [ಕಾಮಶಾ] ಸಮಾನವಾದ ರತಿಯಿಂದ ಉಂಟಾದ ಸುಖ: ಸಮರತಸೌಖ್ಯದೊಳ್ ಸತಿ ದಿಗಂಬರವೇಷಮನಾಂತು . . . ಯೋಗಿನಿಯಂತಿ ರೊಪ್ಪಿದಳ್ (ಕಾಸ್ಮಸಾ. ೬೬೫). [ಸಂ.]

ಸಮರತಿ (ನಾ). ೧. [ವೀಶೈ] ಐಕ್ಯಸ್ಥಲದ ಅನುಭವ: ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಹಿರಿದು (ಬಸವ. ೯೨೬); ಮತ್ ಕರದಿಷ್ಟಲಿಂಗವಂದನವರತ ಸರಸಸಂಯೋಗಸಮರತಿಯಿಂದಮಿರ್ಪುದೈಕ್ಯಂಗೆ ಧರ್ಮಾಚಾರವು (ಮೃಲಾರ. ೩-೭). ೨. [ಕಾಮಶಾ] ಸಮಸುಖದ ರತಿ : ಮಾನಿನಿಗೆ ಮದನಕಲೆಗಳಂ ತೋಱಿಸಿದ ನವನಂದು ಸಮರತಿಯೊಳು (ಹೃಮಿಭಾ. ೧೧-೨೨); ಸಮರತಿ ಸೊಗಸಿನಿಂದಲುಪರತಿಯು ಮೊದಲಾದ ಚೌಷಷ್ಟಿಬಂಧಂಗಳಿಂ ಕಳೆಯ ನೆಲೆಯರಿದು (ನಜಮೋ. ೧೦-೭). [ಸಂ.]

ಸಮರಥ (ನಾ). ಮಹಾವೀರ; ಶ್ರೇಷ್ಠಯೋಧ: ಮಡಿದರಂತಿರಥಸಮರಥರಾ ಮಹಾರಥಾರ್ಧರಥರ್ಕಳ್ (ಶಾಂತಿಪ. ೪-೧೨); ಮಾದ್ರೇಯ ರವಿಸುತರೊಡಲೊಳಂಬನು ಹೂಳಿದನು ಸೀಳಿದನು ಸಮರಥರ (ಕುಮಾದ್ರೋ. ೬-೧೬) . [ಸಂ. / ತೆಲು. ಸಮರಥುಂಡು = ಒಬ್ಬ ಬಿಲ್ಲುಗಾರನೊಂದಿಗೆ ಸಮವಾಗಿ ನಿಂತು ಹೋರಾಡುವ ಯೋಧ]

ಸಮರದ್ವಿರದ (ನಾ). ಯುದ್ಧಕ್ಕಾಗಿ ಪಳಗಿಸಿದ ಆನೆ : ತುರಗ ಹಲ್ಲಣಿಸಿದವು ಸಮರದ್ವಿರದ ಸಜ್ಜಂಬಡೆದವು (ಕುಮಾದ್ರೋ. ೪-೨೨). [ಸಂ.]

ಸಮರಮಂಡಲ (ನಾ). = ಸಮರಂಗ : ಆಳುಗಳ ಬಲ್ಲಹರು ಹೊಕ್ಕರು ಸಮರ ಮಂಡಲವ (ಕೌಶಿರಾ. ೩೨-೧೮). [ಸಂ.]

ಸಮರರಂಗ (ನಾ). = ಸಮರಂಗ : ತಾಂ ತರಹರಿಸಿ ಸಮರರಂಗದೊಳ್ ನಿಲಲಾಱದಧಿಕಪ್ರಯಾಸದಿಂದ ಚಿಂತಿಸಿ ಬಳಲ್ದನಮರಾಧೀಶಂ (ಚಿಪಪು. ೭ ೨೨). [ಸಂ.]

ಸಮರಸ (ನಾ). ೧. ಸಮಾನವಾದ ಭಾವನೆ : ಹರುಷ ವಿಷಾದದಲಿ ಮುಳುಗುತ್ತಿರದೆ ಸಮರಸದೊಳಿಹುದು (ಕುಮಾಭಾ. ೪-೫); ಸಮರಸದ ಭಾವಮೇಂ ರಂಜಿಸಿತೋ (ಶಬಶಂ. ೨-೧೦೪). ೨. ಹೊಂದಾಣಿಕೆ; ಸಾಮರಸ್ಯ : ರಸವೆ ಜನನ ವಿರಸ ಮರಣ ಸಮರಸವೇ ಜೀವನ (ಗಂ. ೧೧೪-೬). ೩. [ವೀಶೈ] ಆರು ವಿಧವಾದ ಭಕ್ತಿಗಳಲ್ಲಿ ಒಂದು : ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ, ಸಮರಸ (ಇವು ಆರು ಷಡ್ವಿಧಭಕ್ತಿಗಳು) (ಶಿವಾಸೂ. ೨ ಅಡಿಟಿ). [ಸಂ.]

ಸಮರಸಚಿತ್ತ (ನಾ). ೧. ಸಾಮರಸ್ಯದಿಂದ ಕೂಡಿದ ಮನಸ್ಸು. ೨. ಹೊಂದಾಣಿಕೆ ಯುಳ್ಳ ಮನಸ್ಸುಳ್ಳವನು ; ಸಮಾಧಾನಿ : ಶಿವಭಕ್ತಸಂಗಸಮರಸಚಿತ್ತಂ ಸಂಗಪ್ರಸಾದಹೃದಯಕಾಯ ಸಂತುಷ್ಟನಾಗಿರುತ್ತಮಿರೆ (ಬಸರ. ೧೦-೧೨೪). [ಸಂ.]

ಸಮರಸನಾಡಿ (ನಾ). ಶರೀರದಲ್ಲಿರುವ ನಾಡಿಗಳಲ್ಲಿ ಒಂದು: ಮಯೂರ ನಾಡಿ ಮಂಡೂಕನಾಡಿ . . . ದೌಷ್ಟನಾಡಿ ಕರ್ಕೋಟಕನಾಡಿ ಸಮರಸನಾಡಿ ಸಂತೋಷನಾಡಿ ಇಂತೀ ಪ್ರಥಮನಾಡಿಯೊಳಗಾದ ಶರೀರದಲ್ಲಿ (ಸಕಸ. ಕ. III, ೨೮೮-೫೧೩). [ಸಂ.]

ಸಮರಸನ್ನರ್ದ (ಗು). ಯುದ್ಧಕ್ಕೆ ಸಿದ್ಧವಾಗಿರುವ: ಆ ರಾಜಚಂದ್ರ ಸಮರಸನ್ನರ್ದ ನೃಪರ ನಡುವೆಸೆದನು (ಕುರಾಸಾಂ. ೧೧-೭೨). [< ಸಂ. ಸಮರಸನ್ನದ್ಧ]

ಸಮರಸನ್ನಾಹ (ಗು). ೧. ಯುದ್ಧಸಿದ್ಧತೆಯನ್ನು ಸೂಚಿಸುವ : ಸಮರಸನ್ನಾಹ ಭೇರಿಯಂ ಪೊಂಗುಡುಪಂ ಪಿಡಿದಡಸಿ ಪೊಡೆಯಲ್ (ರಾಜಶೇ. ೬-೩೦ ವ). (ನಾ). ೨. ಯುದ್ಧದ ಏರ್ಪಾಡು,– ಸಿದ್ಧತೆ : ಬಿಗುಹಾಯ್ತು ದ್ರೋಣನ ಸಮರಸನ್ನಾಹ (ಕುಮಾದ್ರೋ. ೧೫-೨೨). [ಸಂ.]

ಸಮರಸರ್ವಜ್ಞ (ನಾ). ಯುದ್ಧಮಾಡುವುದರಲ್ಲಿ ನಿಷ್ಣಾತನಾದವನು : ರಥವ ನಿಳಿದನು ದಾನವಾರಾತಿ ಸಮರಸರ್ವಜ್ಞರುಗಳಂಘ್ರಿಗೆ ನಮಿಸಿದರು (ಕುಮಾಭಾ. ೮-೫೮). [ಸಂ.]

ಸಮರಾಂಕಣ (ನಾ). = ಸಮರಂಗ : ತೆಂಕ ಮುಂತಾಗಿ ನಡೆದನವನಿಪ ಸಮರಾಂ ಕಣಕಂದು ಲೀಲೆಯೊಳು (ಕುರಾಸಾಂ. ೧೧-೮೧). [ಸಮರ + ಅಂಕಣ]

ಸಮರಾಂಗಣ (ನಾ). = ಸಮರಂಗ : ಮಿಂಚಿನೊಳ್ ಮುಸುಕಿದ ಮಾಳ್ಕೆಯಾಯ್ತು ಸಮರಾಂಗಣಮುಳ್ಳುವ ಬಾಳ್ಗಳುಳ್ಕದಿಂ (ಪಂಪಭಾ. ೧೦-೭೭); ಜಯಮಂ ಪಡೆ ನೀಂ ಕಂದ ಸಮರಾಂಗಣದೊಳ್ (ಶಬಶಂ. ೫-೫೨). [ಸಮರ + ಅಂಗಣ]

ಸಮರಾಕರ (ನಾ). = ಸಮರಂಗ : ಸಮರಾಕರಮಂ ಬಿಸುಟ್ಟು ಕಮಲಾಕರಮಂ ಪೊಕ್ಕೆಲವೊ ಮರುಳೆ ಬರ್ದುಕಲ್ ಬಗೆವಾ (ಗದಾಯು. ೭-೧೨). [ಸಂ.]

ಸಮರಾನಕ (ನಾ). ಯುದ್ಧದಲ್ಲಿ ಬಾರಿಸುವ ನಗಾರಿ : ಎಸೆವ ಸಮರಾನಕಂ ಸೊಗಯಿಸುವುತ್ಸವತೂರ್ಯಮೊಗೆಯೆ (ಶಾಂತಿಪ. ೪-೭೩). [ಸಂ.]

ಸಮರಾಭೀಳ (ನಾ). ಯುದ್ಧದಲ್ಲಿ ಭಯಂಕರನಾದವನು : ಸಮರಾಭೀಳ ಗದೆಯನು ತಿರುಹಿದನು ಪಯಪಾಡನಾರ್ಕೆದು (ಕುಮಾಗ. ೫-೪೨). [ಸಂ. ಸಮರಾಭೀಲ]

ಸಮರಾಯತ (ನಾ). ಅತಿಶಯವಾದ ಯುದ್ಧ,– ಕಾಳಗ : ಬಾಯ ಬಡುಕನದೆಂದಿರದೆ ಸಮರಾಯತದಿ ನೋಡೆನ್ನ ಭುಜಬಲದಾಯತದ ರಣಕೌಶಲವ (ಕೋಗಯ. ೧೮-೨೦). [ಸಂ.]

ಸಮರು, ಸವರ್ಪು (ನಾ). ೧. ಅಲಂಕಾರ ; ಶೃಂಗಾರ : ಪದಪಿನಂ ಬಿದ್ದಿನರ್ ಹಂದರದ ಬಳಿಗೆ ಒದಗುವರ್ ಪರಿಪಟ್ಟು ಉಡುಗೆತೊಡುಗೆಗಳಿಂದ ಪುದಿದು ಸಮರಿಂ ಚೆಲ್ಲು ಬಪ್ಪುದೆನೆ ಮನೆಗೆ (ಕಾಲೂರ. ೧೪೬-೩೧೯) ; ಸಮರು ಮೀರಿದ ಹೆಣ್ಣು, ಸಂಭಾರ ಮೀರಿದ ಮೇಲೋಗರ (ಗಾಡ). ಸವರ್ಪು$_2$: ೨. ಕೊಲೆ ; ವಧೆ : 'ತಲೆಸವರ್ಪು$_2$' ಪರಾ. [< ಸಮಱು./ ತೆಲು. ಸವರು = ಅಂದ]

ಸಮರೋಚಿತ (ಗು). ೧. ಯುದ್ಧಕ್ಕೆ ತಕ್ಕುದಾದ: ಸಮರೋಚಿತಪ್ರಸಂಗ ಪ್ರಮೋದದಿಂದಿರ್ದನಂತರಂ ನಿಜನಿಲಯಕ್ಕಮಲಯಶೋಧಿಪರೆಟ್ಟರ್ (ಶಾಂತೀಶ್ವ. ೮-೪೫). (ನಾ). ೨. ಕಾದಾಡಲು ತಕ್ಕುದಾದ ಆನೆ ; ಯುದ್ಧದ ಆನೆ : "ಸನ್ನಾಹ್ಯಃ, ಸಮರೋಚಿತಃ - ಈ ೨ ಕಾದುವಾನೆ" (ಹಲಾಯು. ೩೮-೭೧). [ಸಂ.]

ಸಮರೋದ್ಧಾರ (ನಾ). ಯುದ್ಧದಲ್ಲಿ ಗೆಲವನ್ನು ತರುವವನು: ವೃಂಭಟ ಸಂವರ್ತನೂತನಭೈರವನು ಕಲಿಪಾರ್ಥ ಸಮರೋದ್ಧಾರ ಸಾರಥಿಯಾದನಂದು ವಿರಾಟನಂದನಗೆ (ಕುಮಾವಿ. ೫ ಸೂಚನೆ). [ಸಂ.]

ಸಮರೋದ್ಯೋಗ (ನಾ). ಯುದ್ಧದ ಸಿದ್ಧತೆ,– ಸನ್ನಾಹ : ಕಡುಗೋಪದಲಿ ಕೌರವರಾಯ ಸಮರೋದ್ಯೋಗಪರನಾದ (ಕುಮಾದ್ರೋ. ೧೦-೪೦). [ಸಂ.]

ಸಮರೋದ್ಯೋಗಂಗೆಯ್ (ಕ್ರಿ). ಯುದ್ಧಕ್ಕೆ ಸಿದ್ಧವಾಗು; ಕಾದಲು ಮುನ್ನುಗ್ಗು : ದುರ್ಯೋಧನಂ . . . ಸಮರೋದ್ಯೋಗಂಗೆಯ್ದೆ ಸಂಜಯನಂಜದೆ ಮಾರ್ಕೊಂಡು (ಗದಾಯು. ೩-೪೪ ವ). [ಸಮರೋದ್ಯೋಗ + ಕೆಯ್$_1$]

ಸಮರ್ಕೆ (ನಾ). ಸೊಗಸು; ಚೆನ್ನು : ಕೋಟಿಚಂದ್ರಾರ್ಕಪ್ರಕಾಶವುಜ್ಜಳಿಸೆ ಅರ್ಕ ಕೀರ್ತ್ಯಾದಿಜನರು ಶಿಲೆಯಿಂದ ಸಮರ್ಕೆಯೊಳ್ಳೆಗೆದರಂಬರಕೆ (ಭರಚ. ೮೦-೪೭). [< ಸಮಱು + - ಕೆ]

ಸಮರ್ಚನ (ನಾ). ಪೂಜೆ ; ಆರಾಧನೆ : ಮೃಡಸಮರ್ಚನಫಲವಲಾ ಕೈಯೊಡನೆ ತೋಱುತ್ತು (ಬಸಪು. ೨೯-೨೮); ಶುದ್ಧಭಕ್ತನ ಧ್ಯಾನ ನೋಟ ಸಮರ್ಚನ ಸ್ತುತಿ ಗಾವಗಂ ಸಿದ್ಧವಾಗಿ (ಮೃಲಾರ. ೧೮೬-೭). [ಸಂ.]

ಸಮರ್ಚನೆ (ನಾ). = ಸಮರ್ಚನ : ನಿಜಶಿವಸಮರ್ಚನೆವೇಳೆಯೊಳು ತನ್ನಂ ಮಱೆದು (ಬಸವ. ೬೪-೩); ನಿರಘೇಂದ್ರಿಯಾಕಾರವಾಗಿ ತೋಱುವ ತಾನು ನೆರೆದ ವಿಷಯಾಕಾರದಿಂ ತೋರ್ಪ ತನ್ನೊಳಾಚರಿಪುದೆಲ್ಲಂ ಸಮರ್ಚನೆಯೆಂದ ದೇಶಿಕನ ಚರಣಾಂಬುಜಕ್ಕೆ ಶರಣು (ಲಿಂಚಿಂ. ೫೪-೬೯). [ಸಂ. ಸಮರ್ಚನ]

ಸಮರ್ಚನೆಗೈ (ಕ್ರಿ). ಪೂಜೆಮಾಡು; ಆರಾಧಿಸು: ಶಿವಭಕ್ತ ಸಮರ್ಚನೆಗೈವ . . . ಶೈವವರ್ಯರವರಿಂ ಮೆಱೆದತ್ತು ಪುರಂ (ರಾಜಶೇ. ೨-೧೩).

[ಸಮರ್ಚನೆ + ಕೈ$_1$ (< ಕೆಯ್$_1$)]

ಸಮರ್ಚಿಸು (ಕ್ರಿ). = ಸಮರ್ಚನೆಗೈ : ಮುರಾರಿ ಪುರಾರಿಪದಾರವಿಂದಮಂ . . . ಸಮರ್ಚಿಪ ವೇಳೆಯೊಳ್ (ರಾಜಶೇ. ೩-೧೦೪). [ಸಮರ್ಚನ + - ಇಸ್ಕು]

ಸಮರ್ಥ (ಗು). ೧. ಶಕ್ತಿಯಿಂದ ಕೂಡಿದ. ೨. ದಕ್ಷತೆಯಿಂದ ಕೂಡಿದ; ಸಾಮರ್ಥ್ಯವುಳ್ಳ. ೩. ಒಂದೇ ಬಗೆಯ ಅರ್ಥವಿರುವ. ೪. ಯೋಗ್ಯವಾದ; ತಕ್ಕ. (ನಾ). ೫. ಬಲಶಾಲಿ; ಗಟ್ಟಿಗ: ನೋಂತೆನಾಂ . . . ಕಂಸನ ವಿಜೃಂಭಣಮಂ ಜಯಿಸಲ್ ಸಮರ್ಥನಂ . . . ಸುತನಂ ಪಡೆವೊಂದು ನೋಂಪಿಯಂ (ಜಗವಿ. ೨-೮೮). ೬. ಸಾಮರ್ಥ್ಯವಿರುವವನು ; ಶಕ್ತ : ಪುಟ್ಟಿಸುವಂ ಬದಿ . . . ಬದಿ ಸಮಕಟ್ಟಿ ಕೊಟ್ಟೊಡೆಡೆಯೊಳ್ ಕಡಿಸಲ್ ಸಮರ್ಥರಾರ್ (ಪಂಪಭಾ. ೧೨-೧೮೨); ಭಕ್ತರೆ ಸಮರ್ಥರು ಅಸಮರ್ಥರೆನಲುಂಟೆ (ಬಸವ. ೬೮೨). ೭. ಐಶ್ವರ್ಯವಂತ; ಶ್ರೀಮಂತ: ''ಸಿರಿವಂತನಾಥ್ಮನಿನನಿಭ್ಯಂ ಸಮರ್ಥನೈಶ್ವರಿಯಮುಳ್ಳವನಕ್ಕು'' (ಮಂಗರಾ. ೬೯-೧೨). ೮. ಶಕ್ತಿಶಾಲಿಯಾದುದು; ಸಾಮರ್ಥ್ಯವುಳ್ಳುದು : ಪನ್ನಗಂ ಪುಗೆ ಪುತ್ತಂ ಪುಗಲೀಯವೆಂದೊಲಿಗಳ್ ಕಾಯಲ್ ಸಮರ್ಥಂಗಳೇ (ಕಾವ್ಯಸಾ. ೪೬೬). ೯. [ವ್ಯಾಕ] ಒಂದೇ ಬಗೆಯ ಅರ್ಥವುಳ್ಳುದು : ತೃತೀಯೋಕ್ತಾರ್ಥದೊಳಾ ಸಪ್ತಮಿಯೆ ಸಮರ್ಥಂ ಪಂಚಮಿಯೊಳಂ ತೃತೀಯೆ ಸಮರ್ಥಂ (ಶಮದ. ೧೩೫). [ಸಂ.]

ಸಮರ್ಥಕ (ನಾ). ಸಾಮರ್ಥ್ಯವಿರುವವನು ; ಶಕ್ತ : ಕಣ್ಣ ಕಸಮಂ ಸೈರಿಸದಂತೆ ತಾನೊಂದುಪಚಾರಧರನಾಗಿಯುಮಸ್ಮದ್ಭಗ್ನಚ್ಛೇದಕಸಮರ್ಥಕನಾಗಿ ಬಂದು (ಶಾಂತಿಪು. ೯-೧೧ ವ). [ಸಂ.]

ಸಮರ್ಥತೆ (ನಾ). ೧. ಶಕ್ತಿ; ಸಾಮರ್ಥ್ಯ: ಅವನಾವ ತತ್ತ್ವದೊಳೇನಂ ಬೆಸಗೊಂಡೊಡಮಾಗಳೆ ನಿರವಿಸುವ ಸಮರ್ಥತೆಯನಾಂತನಾ ಮುನಿಮುಖ್ಯಂ (ಚಂದ್ರಪ್ರ. ೧೪-೩೧); ಪೊರೆವ ಸಮರ್ಥತೆಯದಾರ್ಗುಂಟು (ಬಸವ. ೪೭-೬೮). ೨. ಅರ್ಥದ ಏಕರೂಪತೆ. [ಸಂ. ಸಮರ್ಥತಾ]

ಸಮರ್ಥನ (ನಾ). ೧. ಯೋಗ್ಯವೆಂದು ನಿಶ್ಚಯಿಸುವುದು. ೨. ದೃಢನಿರ್ಧಾರ; ಖಚಿತವಾದ ತೀರ್ಮಾನ. ೩. ವಿವಾದ ಅಥವಾ ಅಭಿಪ್ರಾಯಭೇದಗಳನ್ನು ಬಗೆಹರಿಸುವುದು. [ಸಂ.]

ಸಮರ್ಥನೆ (ನಾ). ೧. ಪ್ರಮಾಣ; ಸಾಕ್ಷಿ; ರುಜುವಾತು : ಸರಿಯಾದ ಸಮರ್ಥನೆಗಳಿಂದ ಮೊದಲು ಉಂಟಾಗಿದ್ದ ತಪ್ಪು ಅಭಿಪ್ರಾಯವು ಇಲ್ಲವಾಯಿತು (ಡೂಫ). ೨. (ತನ್ನ ಕಾರ್ಯ ಅಥವಾ ಮಾತು) ಸರಿಯೆಂದು ವಾದಿಸುವುದು: ಸತ್ತವರನ್ನು ಹೊಗಳುವದು . . . ಲೋಕದ ಸಹಜಗುಣವೇ ಅದು-ಎಂದು ಸಮರ್ಥನೆ ಮಾಡಿಕೊಂಡಳು (ಕನ್ನಕ. ೬೨). [ಸಂ. ಸಮರ್ಥನ]

ಸಮರ್ಥಿಕೆ (ನಾ). ಸಾಮರ್ಥ್ಯ ; ಶಕ್ತಿ : ಅಷ್ಟಷಷ್ಟಿತೀರ್ಥತತಿಯಂ ಮಿಱಲಾಪ ಸಮರ್ಥಿಕೆಯನುಳ್ಳಷ್ಟಷಷ್ಟಾವೃಕ್ಷಸಂತತಿಯ (ಬಸವ. ೧೯-೫೬); ಕರಣಚರಣಂಗಳು ಮೂಡಿರ್ದ ಕೈಲಾಸವರ ನೀಲಗಿರಿಯ ಕಿಲ್ಪಡಿಸಿ ದೊರೆ ಸಮರ್ಥಿಕೆಯೊಳೆರ್ವರು ಬಂದು ತಲೆಪಟ್ಟು ಹರ ಮುರಧ್ವಂಸಿ ಕಾದಿದರು (ಮೋಹತ. ೬೯-೨೪).

[ಸಮರ್ಥ + - ಇಕೆ]

ಸಮರ್ಥಿಸು (ಕ್ರಿ). ೧. ಪುಷ್ಟಿಕೊಡು; ಬೆಂಬಲಿಸು; ಅನುಮೋದಿಸು: ನಾಡಾಡಿಯಲ್ಲದ ತೀರ್ಥಸಾಮರ್ಥ್ಯಮಂ ಸಮರ್ಥಿಸುತುಂ (ರೀಲಾವ. ೮-೬೨ ವ); ಈ ವಚನಗಳು . . . ಹರಿಹರನ ಕಥೆಯನ್ನು ಸಮರ್ಥಿಸುತ್ತವೆ (ಕನ್ನಕ. ೮೧). ೨. ದೃಢಪಡಿಸು; ಖಚಿತಗೊಳಿಸು: ರೋಗ ಜೀವಾಣುಗಳಿಂದ ಸಂಭವಿಸುವುವೆಂಬ ತತ್ತ್ವವನ್ನು ಸಮರ್ಥಿಸಿತು (ಎಕಾಸ. ೪೬); ಯಶೋದೆಯ ಮಾತನ್ನು ಆಕೆಯ ಪ್ರತಿಯೊಂದು ಕೆಲಸವೂ ಸಮರ್ಥಿಸುವಂತಿತ್ತು (ವಾತ್ಸಲ್ಯ. ೨೪೧).

ಸಮರ್ಥಿಸಿಕೊಳ್ಳು = ತನ್ನ ನಿಲುವು ಸರಿಯೆಂದು ಸಾಧಿಸು : ಅನುಭವ ಮಂಟಪದಲ್ಲಿ ನ್ಯಾಯಾಲಯದ ಮುಂದೆ ನಿರಪರಾಧಿ ನಿಂತಂತೆ ನಿಂತಳು. ತನ್ನನ್ನು ತಾನು ಸಮರ್ಥಿಸಿಕೊಂಡಳು (ಶೂನ್ಯಕು. ೧೨೩). [ಸಮರ್ಥನ + - ಇಸ್ಕು]

ಸಮರ್ಪಕ (ಗು). ೧. ಸೂಕ್ತವಾದ ; ಸರಿಯಾದ : ಇದಕ್ಕೆ ಕೇಶಿರಾಜನಲ್ಲಿ ಸಮರ್ಪಕ ವಿವರಣೆ ಇಲ್ಲ (ಡ್ರಾವಿವಿ. ೨೧೩). (ನಾ). ೨. ಸರಿಯಾದ ರೀತಿ, ಕ್ರಮ : ಕೆಲಸವು ಸಮರ್ಪಕವಾಗಿ ನಡೆಯಬೇಕಾದರೆ . . . ಉಕ್ಕಿನ ನೇಗಿಲುಗಳನ್ನು ಉಪಯೋಗಿಸಬೇಕು (ಪ್ರಪಮ. ೧೯); ಸಮಂಜಸವಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು (ಶೂನ್ಯಕು. ೧೧೩). [ಸಂ.]

ಸಮರ್ಪಕತೆ (ನಾ). ಯೋಗ್ಯತೆ ; ಅರ್ಹತೆ : ಒಂದು ಕ್ಷೇತ್ರದ ಕಾರ್ಯವನ್ನು ಅಳೆದು ಅದರ ಸಮರ್ಪಕತೆಯ ಮಟ್ಟವನ್ನು ನಿಷ್ಕರ್ಷಿಸು (ಶಿಕ್ಷಣ. ೩೨೬).

[ಸಂ. ಸಮರ್ಪಕತಾ]

ಸಮರ್ಪಣ (ನಾ). ೧. ನೀಡುವಿಕೆ ; ಅರ್ಪಿಸುವಿಕೆ : ವರಗಂಧ ಪುಷ್ಪ ಮೊದಲಾದ ಸದ್ಯಸ್ತುಗಳ ಪರಿಮಳಗ್ರಹಣವೇಯರ್ಚನೆಯೆನಿಪುದು ತತ್ಪರಿಯಾಯದೊಳು ಷಡ್ರಸ ದ್ರವ್ಯದಾಸ್ವಾದನವೆ ಸಮರ್ಪಣವೆನಿಪುದು (ಲಿಂಚಿಂ. ೫೪-೬೯). ೨. [ಕಾವ್ಯಮೀ] ನಾಟಕದ ಏಳು ಅಂಗಗಳಲ್ಲಿ ಒಂದು : ಭಾಣಕಾ - ಇದರಲ್ಲಿಯೂ ಒಂದೇ ಅಂಕ . . . ಉಪನ್ಯಾಸ, ವಿನ್ಯಾಸ, ವಿಬೋಧ, ಸಾಧ್ವಸ, ಸಮರ್ಪಣ, ನಿವೃತ್ತಿ, ಸಂಹಾರ ಎಂಬ ಏಳು ಅಂಗಗಳು (ಸಂನಾಟ. ೩೭). [ಸಂ.]

ಸಮರ್ಪಣಂಗೆಯ್ (ಕ್ರಿ). ಒಪ್ಪಿಸು ; ಅರ್ಪಣೆಮಾಡು : ಅಗ್ನಿಭೂತಿ ಸಂಯತಂಗೆ ಸಮರ್ಪಣಂಗೆಯ್ದು (ಸುಕುಮಾ. ೮-೫೮ ವ); ಖಂಡಪರಶುಗೆ ನಿಸಿತವಿಷವನಖಂಡಸದ್ಭಕ್ತಿಯೊಳಲರ್ದು ಸಮರ್ಪಣಂಗೆಯ್ದು (ಬಸವ. ೫೮-೬೭). [ಸಮರ್ಪಣ + ಕೆಯ್$_1$]

ಸಮರ್ಪಣಭಾವ (ನಾ). ಅರ್ಪಿಸುವ ಮನೋಭಾವ ; ತ್ಯಾಗಬುದ್ಧಿ : ಅವಳ ಮುಖದಲ್ಲಿ ಆ ಸಮರ್ಪಣಭಾವ ತುಂಬಿಕೊಂಡಿದೆ (ಕುಸುಂ. ೨೨೬). [ಸಂ.]

ಸಮರ್ಪಣೆ (ನಾ). = ಸಮರ್ಪಣ ೧ : ದೇವರಿಗೆ ನೈವೇದ್ಯ ಸಮರ್ಪಣೆಯಾಗಿ . . . ಉಳಿದಿರುವ ಭಕ್ಷ್ಯಗಳನ್ನು ಇತರರಿಗೆ ಕೊಡುತ್ತಿದ್ದರು (ಶಾಸಗಿ. ೫೯) ; ಅನೇಕ ರಜತಪಾತ್ರೆಗಳ ಸಮರ್ಪಣೆಯೂ ಆಯಿತು (ಪಕ್ಕಳ. ೪೧). [ಸಂ. ಸಮರ್ಪಣ]

ಸಮರ್ಪಿತ (ಗು). ೧. ಒಪ್ಪಿಸಿದ ; ನೀಡಿದ : ಮೃಡಸಮರ್ಪಿತ ಕುಸುಮವಿಸರಕೆ ವಾಡಗಿಯರ್ಧವನು ಜೆಡೆಗಳಂ ನಾಂ ತಳೆದೆ (ಬಸವ. ೧೨-೧೮). (ನಾ). ೨. = ಸಮರ್ಪಣ ೧ : ವಿದಿತಸುರಾಧಿರಾಜಮಕುಟಾಗ್ರಸಮರ್ಪಿತದೊಳ್ ಮುನೀಂದ್ರನಾ ಪದಯುಗದೊಳ್ ಮನೋಮುದದೆ ಬಾಗುವೆಂ (ಕವಿರಾ. ೨-೧೦೯).

[ಸಂ.]

ಸಮರ್ಪಿಸು (ಕ್ರಿ). ನೀಡು ; ಅರ್ಪಿಸು : ಸಮಸ್ತಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ (ವಡ್ಡಾರಾ. ೪೪-೨೪); ವಿಕ್ರಮಾರ್ಜುನನಂ ಕುಬೇರನಿಂ ಕಪ್ಪಂಗೊಳಲ್ ಸಮರ್ಪಿಸುವಂತೆ . . . ವೇಟ್ಟುಗಳ್ (ಪಂಪಭಾ. ೬-೨೮ ವ); ತನ್ನ ಬಲಗಣ್ಣನಂದತುಳ ಲಿಂಗಕೆ ಸಮರ್ಪಿಸೆ (ಚಿಬಪ್ರ. ೨೭-೭). [ಸಮರ್ಪಣ + - ಇಸ್ಕು]

ಸಮವಕಾರ (ನಾ). [ಕಾವ್ಯಮೀ] ಹತ್ತು ಬಗೆಯ ರೂಪಕಗಳಲ್ಲಿ ಒಂದು; IP ಮೂರು ಅಂಕಗಳಿಂದ ಕೂಡಿರುವ ಇದರಲ್ಲಿ ದೇವಾಸುರರಿಗೆ ಸಂಬಂಧಪಟ್ಟ ವಸ್ತುವಿರುತ್ತದೆ : ಭಗವಜ್ಜನ್ಮಾಭಿಷೇಕಸಂಬಂಧಿಯಾಗಿ ತನ್ನ ಪೊಸತೆ ಸಮೆದ ಸಮವಕಾರರೂಪಕಮುಮಂ . . . ಸುರಾಸುರಸಭೆಗಂ ಮೆಚ್ಚೆಯಲೆಂದು (ಆದಿಪು. ೭-೧೧೫ ವ); ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ - ಎಂದು ರೂಪಕಗಳು ಹತ್ತು ವಿಧ (ಸಂನಾಟ. ೨೯). [ಸಂ.]

ಸಮವತೀರ್ಣ (ಗು). ತಲೆದೋರಿದ ; ಕಾಣಿಸಿಕೊಂಡ : ಆ ತ್ರಿಲೋಕತಿಲಕನ ಜನ್ಮೋತ್ಸವದೊಳೀಕಸಮಯಸಮವತೀರ್ಣಸರ್ವರ್ತುಕನಂದನವಿಕಸದಶೋಕ . . . ವಿಕಸಿತ ಸಿಂಧುವಾರ ಪ್ರಬುದ್ಧ ಲೋಧ್ರಂಗಳಿಂ (ಆದಿಪು. ೭-೩೬ ವ). [ಸಂ.]

ಸಮವಯ (ನಾ). ಸಮಾನವಯಸ್ಸು ; ಓರಗೆ : ಅಂತು ನಿರ್ವರ್ತಿತತ್ರಿಭುವನಪತಿ ಭಪೋತ್ಸವನಾಗಿ ಸಮವಯಾದಿ ವಿಜಯವಯಸ್ಕರುಮನಮರಧಾತ್ರೀಜನಮುಮಂ ನಿಯೋಜಿಸಿ (ಶಾಂತಿಪು. ೧೦-೮೦ ವ). [ಸಂ. ಸಮವಯಸ್]

ಸಮವಯಸ (ಗು). ೧. ಸಮಾನವಯಸ್ಸಿನ ; ಓರಗೆಯ : ಸಮವಯಸದಿವಿಜಶೇಟಕ ನವಪೇಟಕನಿಕರಮಗಲದಿರಲ್ (ಶಾಂತಿಪು. ೧೦-೮೧). (ನಾ). ೨. ಸಮಾನ ವಯಸ್ಸಿನವನು ; ಓರಗೆಯವನು : ಸಮವಯಸರ್ ಕೆಲದೊಳ್ ಮುನಿಕುಮಾರ ರಿರ್ವರ್ ಬರುತಮಿರೆ (ಕಾದಂಬಾ. ೨೦೧). [ಸಂ. ಸಮವಯಸ್]

ಸಮವಯಸ್ಕ (ನಾ). = ಸಮವಯಸ ೨ : ರಾಜಕುಮಾರನು ಆ ರಾಜ್ಯವನ್ನು ಸೇರಲು, ಸಮವಯಸ್ಕರು ಅವನ ಸುತ್ತ ನೆರೆದು ಅವನ ವೃತ್ತಾಂತವನ್ನು ಕೇಳಿದರು (ಮಗಸ. ೪೬). [ಸಂ.]

ಸಮವರ್ತಿ (ನಾ). ೧. ಎಲ್ಲರಲ್ಲೂ ಸಮಾನವಾಗಿರುವವನು ; ತಾರತಮ್ಯ ಭಾವವಿಲ್ಲದವನು ; ಸಮದರ್ಶಿ : ಭುವಿಯ ಪರಿಣಾಮದಲಿ ಸಿರಿ ಬಡತನ ಗಳೊಂದೆ ಜವರಾಯ ಸಮವರ್ತಿ (ಮಂಟಕ. ೬೩೨). ೨. ಯಮ : ಸಮವರ್ತಿ ಮರ್ದನಪುಣ್ಯಮೂರ್ತಿ . . . ಎಂದಿರದೆ ಪೊಗಳಿದ (ಭೃಂಗಾ. ೩-೧೦೫); ಜಾತಕರಿವರೆಂದೊಸೆದು ಮುನಿಪತಿಗೆ ತೋಱಿದನೆಸೆವಾ ಸಮವರ್ತಿಯಂದು (ಸನ್ಮಂಗಾ. ೫-೧೪೩). ೧,೨ : ಈ ಮಹಾಪುರುಷಂ . . . ಸಮವರ್ತಿಯಾಗಿಯುಂ ದಕ್ಷಿಣದಿಕ್ಪಾಲಕನಲ್ತು (ಜಗಿ. ೮-೧೦ ವ). [ಸಂ. ಸಮವರ್ತಿನ್]

ಸಮವಸರಣ (ನಾ). [ಜೈನ] ಕೇವಲಜ್ಞಾನಿಯಾದ ನಂತರ, ತೀರ್ಥಂಕರನ ಉಪದೇಶಕ್ಕಾಗಿ ಇಂದ್ರನ ಅಪ್ಪಣೆಯಂತೆ ಕುಬೇರನಿಂದ ರಚಿತವಾದ ಮಂಟಪ : ಅಂತು ಸೌಧರ್ಮೇಂದ್ರಂ ಬಂದು ತನ್ನ ಬೆಸದೊಳ್ ಮುನ್ನಮೆ ಧನದ ವಿನಿರ್ಮಿತಮಾಗಿರ್ದ ಸಮವಸರಣಮಂ ಕಂಡಂ (ಆದಿಪು. ೧೦-೨೨ ವ); ಸಮವಸರಣ ವಧಿನಾಥನೆ ಜಯಜಯ (ನಾಗಕು. ೧೯-೩೪). [ಸಂ.]

ಸಮವಸರಣಭೂಮಿ (ನಾ). [ಜೈನ] ಸಮವಸರಣವಿರುವ ಪ್ರದೇಶ : ಪಜ್ರಾಯುಧಂ ಪೋಗಿ ಸಮವಸರಣಭೂಮಿಯನೆಯ್ದಿ ಪಟ್ಟವರ್ಧನದಿಂದಮಿಱಿಯೆ (ಶಾಂತಿಪು. ೮-೧೫೫ ವ); ಅಂತಪಗತಕಲುಷರಿರ್ವರುಂ ಭಗವದಜಿತಭಟ್ಟಾರಕರ ಸಮವಸರಣಭೂಮಿಯಂ ಪೊಕ್ಕು (ಪಂರಾಮಾ. ೧೦-೯೨ ವ). [ಸಂ.]

ಸಮವಸೃತಿ (ನಾ). = ಸಮವಸರಣ : ಕೈಳಾಸಗಿರೀಂದ್ರಸ್ಥಿತಸಮವಸೃತಿಯಂ ಸಂಸೃತಿ ಲತಾವಿಷ್ಟೀವಿಯಂ ಪೊಕ್ಕು (ಆದಿಪು. ೧೫-೨೧ ವ); ಸೌಧರ್ಮೇಂದ್ರಂ . . . ಧನದಂಗೆ ಸಮವಸೃತಿಯಂ ನಿರ್ಮಿಸಲ್ಕೇಡಿ (ಪುಷ್ಪಸು. ೧೪-೪೮). [ಸಂ.]

ಸಮವಸ್ತ್ರ (ನಾ). ಶಾಲೆಯ ವಿದ್ಯಾರ್ಥಿಗಳೂ ಕಾರ್ಖಾನೆ ಮುಂತಾದುವುಗಳ ನೌಕರರೂ (ಕಡ್ಡಾಯವಾಗಿ) ಹಾಕಿಕೊಳ್ಳಬೇಕಾದ ಏಕರೂಪದ ಉಡುಪು : ಸಮವಸ್ತ್ರವೇತಕೆ ಶಸ್ತ್ರಾಸ್ತ್ರವೇತಕೆ . . . ಯುದ್ಧವಿಲ್ಲದೆ ಗೆಲುವೆ ಧೀರೆ (ಇಂಬಾಪ. ೮೯-೩೧); ಅವರು ಸಮವಸ್ತ್ರ ಧರಿಸದೆ ಮಫ್ತಿಯಾಗಿ ಇದ್ದುಕೊಂಡು, ಒಂದೆರಡು ದಿನ ಹಳ್ಳಿಯಲ್ಲಿ ಬಿಡಾರ ಮಾಡಿದರು (ಉಂರುಕ. ೧೫೩). [ಸಂ.]

ಸಮವಸ್ತ್ರಧಾರಿ (ನಾ). ಒಂದೇ ತರದ ಉಡುಪನ್ನು ಹಾಕಿಕೊಂಡಿರುವವನು : ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಮವಸ್ತ್ರಧಾರಿಗಳಾಗಿ ನಿಂತಿದ್ದಾರೆ (ಚತಸ. ೧೩೨). [ಸಂ. ಸಮವಸ್ತ್ರಧಾರಿನ್]

ಸಮವಾಕ್ಯ (ನಾ). ಏಕಾಭಿಪ್ರಾಯ : "ಸಮವಾಕ್ಯಮುಂ ಸರ್ವಸತ್ಯವಿಶ್ವತೆಯನು ಕ್ರಮದಿಂದ ಸರ್ವಥಾ ಶಬ್ದದೊಳು ಸಲ್ಗು" (ಮಂಗರಾ. ೧೫೫-೭೦). [ಸಂ.]

ಸಮವಾಯ (ನಾ). ೧. (ಅನೇಕವಸ್ತುಗಳು) ಕೂಡಿರುವುದು ; ಸೇರಿಕೆ : ಸಮವಾಯಮಪ್ಪುದಲ್ತೆಂದು ಮನಂ ಬಸಮಾಡಿ (ಆದಿಪು. ೫-೫೪); ಪದದೊಳೆರಡೆಂಬ ಸಂಖ್ಯೆಯೊಳಾಜಜೊಳಜಗಣಂ ಸಮವಾಯಮಪ್ಪೊಡಕ್ಕುಂ . . . ಪಿರಿಯಕ್ಕರಂ (ಛಂದೋಂಬು. ೧ ೨೨೨). ೨. ಬೇರ್ಪಡಿಸಲಾಗದ ಸಂಬಂಧ ; ಅವಿನಾಸಂಬಂಧ : ಸಮವಾಯಮುಳ್ಳೊಡೆಲ್ಲಂ ಸಮನಿಸುಗುಂ (ಕವಿರಾ. ೩-೬೫). ೩. ಗುಂಪು ; ಸಮೂಹ : ದಪಘೋಷಸೂನುಬಳದುರ್ದಮಘೋಷಮದೆತ್ತದನ್ನ ನಡೆವಂ ಮುನ್ನಂ ಸಮವಾಯವೆತ್ತಿ ಬರೆ ರಿಪುಸಮವಾಯವದಲ್ಲವಾಯವಾತನೊಳಧಿಕಂ (ಜಗಿ. ೧೫-೫೪); ಕಾದಿದರು ಸಮವಾಯದಲಿ (ಉತ್ತರಾ. ೭-೪೩). ೪. [ತತ್ವಶಾ] ಸಪ್ತಪದಾರ್ಥಗಳಲ್ಲಿ ಒಂದು : ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ಸಮವಾಯ ಅಭಾವ ಎಂಬ ಪದಾರ್ಥಸಪ್ತಕಮಂ ಪ್ರತಿಪಾದಿಸುವುದರಿಂದ ಪ್ರಪಂಚಸ್ವರೂಪಮಂ ವಿವರಿಸಿ ವಿಭಾಗಿಸುತಿಕ್ಕುಂ (ವಿವೇಕ. ೧೦); ವೈಶೇಷಿಕದರ್ಶನದಲ್ಲಿ ಸಾಮಾನ್ಯವಾಗಿ ಪ್ರಪಂಚವನ್ನು ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ಸಮವಾಯ ಮತ್ತು ಅಭಾವವೆಂದು ಏಳು ಪದಾರ್ಥಗಳಾಗಿ ವಿಭಾಗಮಾಡಿರುವರು (ಜಿಯಾ. ೧೧೨). ೫. [ಜೈನ] ಜೈನಶಾಸ್ತ್ರದ ಹನ್ನೆರಡು ಅಂಗಗಳಲ್ಲಿ ಒಂದು ; "ದ್ರವ್ಯ ಮತ್ತು ಗುಣ ಜೊತೆಜೊತೆಯಾಗಿ ಬಾಳುವುದು" (ಜೈನಕೋ. ೨೬೨) : ಜೈನಶಾಸ್ತ್ರವು ೧೨ ಅಂಗ, ೧೪ ಪೂರ್ವಗಳೆಂದು ಎರಡು ವಿಧ . . . ಸ್ಥಾನ, ಸಮವಾಯ . . . ದೃಷ್ಟಿವಾದ ಎಂಬುವು ಹನ್ನೆರಡು ಅಂಗಗಳು (ಭಾತತ್ವ. ೨೨೮). [ಸಂ.]

ಸಮವಾಯಿಕಾರಣ (ನಾ). [ತತ್ವಶಾ] ಒಂದನ್ನೊಂದು ಅಗಲದೆ ಇರುವುದು ; ಅವಿನಾಭಾವ : ಕಾರ್ಯವು ಯಾವ ವಸ್ತುವಿನಿಂದ ಸಮವಾಯ ಎಂಬ ಸಂಬಂಧವನ್ನು ಹೊಂದಿ ಹುಟ್ಟುವುದೋ ಆ ವಸ್ತುವಿಗೆ ಸಮವಾಯಿಕಾರಣ ಎಂದು ಹೆಸರು (ಭಾತತ್ವ. ೨೮೫). [ಸಂ.]

ಸಮವಿಡು (ಕ್ರಿ). (ಮನಸ್ಸನ್ನು) ಸಮವಾಗಿಟ್ಟುಕೊಳ್ಳು ; ಸ್ತಿಮಿತದಲ್ಲಿಟ್ಟು ಕೊಳ್ಳು : ಎರಡುಚಿಂತೆಯನುಗಿದು ಸಮವಿಟ್ಟೆರಡುಕೈತೂಕದಲಿ ತೂಗಿದು ಗುರುಲಘು ವನಱಿದಿದುವೆ ಬಲವತ್ತರವಲಾ (ತೊರಾ. ೩-೯-೧೪). [ಸಮ್ + ಇಡು]

ಸಮವೃತ್ತ (ನಾ). ೧. ಸಮವೂ ವೃತ್ತಾಕಾರವೂ ಆಗಿರುವುದು : ಅದು ಭೂಭಾಗದಿಂದಮೈಸಾಸಿರದಂಡಂ ಮೇಗೆ ನೆಗದಲ್ಲಿ ಪನ್ನೆರಡುಯೋಜನ ಸಮವೃತ್ತಮುಂ . . . ಆಗಿ (ಆದಿಪು. ೧೦-೨೨ ವ); ಸಮವೃತ್ತೋದರಕೋಶಂ . . . ಸಮನಿಸೆ ತಾಂ ತುರಗಿ ನೋಡಲುತ್ತಮಮಕ್ಕುಂ (ಅಶ್ವಶಾ. ೧-೩೯). ೨. [ಛಂದ] ನಾಲ್ಕುಪಾದಗಳಲ್ಲೂ ಅಕ್ಷರ ಸಂಖ್ಯೆಗಳು ಮತ್ತು ಗಣವಿನ್ಯಾಸಗಳು ಒಂದೇ ರೀತಿಯಲ್ಲಿರುವ ಅಕ್ಷರವೃತ್ತ : ಸಮವೃತ್ತಮುಮಂ ವ್ಯಕ್ತತರಮಾಗೆ ಮೃದುಮಧುರೋಕ್ತಿಗಳಿಂ ತಿಳಿಯೆ ಪೇೞ್ದೆಂ (ಛಂದೋಂಬು. ೨-೨೦೦); ಕಂದಕ್ಕಿಂತ ಕಠಿಣವೆನಿಸುವ ರಚನೆ ಸಮವೃತ್ತದ ಪದ್ಯಗಳದು (ಸಂಶೋಧ. ೧೩೫). ೧, ೨ : ಸಮವೃತ್ತ [ಪಾಶಾಂ. ತ್ರಿ]ಸಂಧಿಲಕ್ಷಣ ಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮುತ್ತಮಕಾವ್ಯ ಬಂಧದಂತಾ ದಮಿತಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್ (ಶಾಂತಿಪು. ೩-೪೬). [ಸಂ.]

ಸಮವೃತ್ತಿ (ನಾ). ಸಮಾನವಾಗಿ ಕಾಣುವುದು ; ತರತಮಭಾವವಿಲ್ಲದಿರುವಿಕೆ : ಗುಣಮಿದುದೋಷಮಿದೆಂಬೀ ಗಣದಮನೆತ್ತಱಿಗುಮಶ್ರುತಪ್ರಕೃತಿಜನಂ ತೃಣಸಸ್ಯ ಘಾಸವಿಷಯಪ್ರಣಯಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ (ಕವಿರಾ. ೧-೮). [ಸಂ.]

ಸಮವೆಱು (ಕ್ರಿ). ಸಮಾನವಾಗು ; ಸಮತೆಯನ್ನು ಪಡೆ : "ಹೊತ್ತು ಕ್ರಿಯಾ ಪ್ರಮಾಣಂ ತಾಳಮೆನಿಕ್ಕು ಸಮವೆತ್ತಲ್ಲಿ ಲಯಮೆನಿಕ್ಕು" (ಮಂಗರಾ. ೨೪-೬). [ಸಮ್ + ಪೆಱು]

ಸಮವೇತ (ಗು). ೧. ಜೊತೆಗೂಡಿರುವ ; ಒಟ್ಟಾಗಿ ಸೇರಿದ. ೨. ನಿಕಟ ವಾಗಿರುವ. [ಸಂ.]

ಸಮವೇದನೆ (ನಾ). ಸಮಾನವಾದ ಅರಿವು,— ತಿಳಿವಳಿಕೆ : ಅವರ ನಡುವೆ ಸಮವೇದನೆ ಇಲ್ಲ (ಬಂಕಿಮ. ೪೭೮). [ಸಂ. ಸಮವೇದನ]

ಸಮವೇದಿಸು (ಕ್ರಿ). ಸಮರಸವಾಗು ; ಐಕ್ಯಗೊಳ್ಳು : ಜೀವ ಜೀವಾತ್ಮ ಸರಿಯೆಂದು ಕಂಡರೆ ಸಮವೇದಿಸದಿಪ್ಪನೆ ಶಿವನು (ಬಸವ. ೮೦೪); ತೆಱನಱಿದಱಿವೆಂಬ ದಿವ್ಯ ಭಾಜನದಲ್ಲಿ ಪರಮಾನಂದಪದಾರ್ಥವನು ಸಲಿಸಿ ಕೂಡಲಚೆನ್ನಸಂಗನಲ್ಲಿ ಸಮವೇದಿಸಿ ಎರಡಱಿಯದಿಪ್ಪ ಲಿಂಗಸಂಗಿ (ಶಿವಗೀ. ೬೧-೨೯೧). [ಸಮ್ + ವೇದಿಸು]

ಸಮವೇಧನ (ನಾ). ಸಮಾನವಾಗಿ ಇರಿಯುವಿಕೆ,— ಚುಚ್ಚುವಿಕೆ : ಸಮಕೃಷ್ಟಂ ಸಮವೇಧನಂ ಸಮಭವತ್ಸಂಧಾನಮೆಂದಿರ್ವರೇಸುಮನಾಗಳ್ ನಡೆ ನೋಡಿ ನೋಡಿ ವಿಭು . . . ಕೆಮ್ಮಗಿರ್ಪುದುಂ (ಶಾಂತಿಪು. ೪-೪೮). [ಸಂ.]

ಸಮಶೀತೋಷ್ಣ (ಗು). ಶೀತ ಮತ್ತು ಉಷ್ಣವು ಸರಿಸಮವಾಗಿರುವ: ಅಯನವೃತ್ತಗಳಿಂದ ಧ್ರುವವೃತ್ತಗಳವರೆಗೆ ಶಕೆಯೂ ಚಳಿಯೂ ಸಾಧಾರಣವಾಗಿ ಸಮಾನವಿರುವ ಕಾರಣ ಅವೆರಡು ಪಟ್ಟಿಗಳಿಗೆ ಸಮಶೀತೋಷ್ಣ ಕಟಿಬಂಧಗಳೆನ್ನುವರು (ಮುಂಬಯಿ. ೬-೬೫); ಕರ್ಕಾಟಕ ಸಂಕ್ರಾಂತಿವೃತ್ತಕ್ಕೂ ಉತ್ತರಮೇರುವೃತ್ತಕ್ಕೂ ನಡುವೆ ಇರುವ ಭಾಗವು ಉತ್ತರಸಮಶೀತೋಷ್ಣವಲಯ (ಭೂವಿವ. ೧೯). [ಸಂ.]

ಸಮಷ್ಟಿ (ನಾ). ೧. ಸಂಪೂರ್ಣವಾದುದು ; ಸಮಗ್ರವಾದುದು : ಗುಣವ ಝಾಢಿಸಿದರೆ ಸಮಷ್ಟಿಯ ಹಣಿತದಲಿ ಮುರಿದಿದಿರನಗಲಕೆ ಕುಣಿವ ಚೌಪಟ ಬೊಮ್ಮಗಜವಿದನಱಿವರಾರೆಂದ (ಕುವ್ಯಾಸ. ೧-೧೫). ೨. ಒಟ್ಟುಗೂಡಿರುವಂಥದು; ಒಟ್ಟಾದುದು : ಆ ಶಕ್ತಿ ಮೂರ್ತಿಗೊಳೆ ನಾಮದನ್ನವತಾರಮೆಂದು ಪೂಜಿಪೆವಲ್ತೆ ಪೇಳ್ ವ್ಯಷ್ಟಿರೂಪದಿನಿಳಿವ ಸೃಷ್ಟಿಯ ಸಮಷ್ಟಿಯಂ? (ಶ್ರೀರಾಮಾ. ೧೧-೨೯೬); ವ್ಯಷ್ಟಿಯಲ್ಲಿ ಸಮಷ್ಟಿ, ಸಮಷ್ಟಿಯಲ್ಲಿ ವ್ಯಷ್ಟಿ ಕಂಡುಬಂದಂತೆ ಅಕ್ಕನ ಜೀವನದಲ್ಲಿ ಹತ್ತಾರು ಮುಖಗಳನ್ನೂ ಕಾಣಬಹುದು (ಕರ್ನಾಕ. ೭೪). 'ವ್ಯಷ್ಟಿ' ಪರಾ. [ಸಂ.]

ಸಮಷ್ಟಿಪ್ರಜ್ಞೆ (ನಾ). ಸಾಮಾಜಿಕ ಅರಿವು : ಜ್ಞಾನವಾಹಿನಿ ನಾಡಿನ ಮೂಲೆ ಮೂಲೆಗಲ್ಲ ಹರಿದು ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ (ಪರಜೀ. IV. ಮುನ್ನುಡಿ). [ಸಂ. ಸಮಷ್ಟಿಪ್ರಜ್ಞಾ]

ಸಮಷ್ಟಿಹಿತ (ನಾ). ಸಮುದಾಯದ ರಕ್ಷಣೆ ,— ಕ್ಷೇಮ : ಸಮಷ್ಟಿಹಿತದಲ್ಲಿ ವ್ಯಷ್ಟಿಹಿತವನ್ನು ಕಾಣುವ ಆಧ್ಯಾತ್ಮಕಪ್ರವೃತ್ತಿಯೊಂದು . . . ಮೃಗೀಯಪ್ರವೃತ್ತಿ ಮತ್ತೊಂದು (ಪುನರು. ೬೭). [ಸಂ.]

ಸಮಸಂಸ್ಕೃತ (ನಾ). ಅಲ್ಪ ವ್ಯತ್ಯಾಸದೊಂದಿಗೆ ಅಥವಾ ಯಾವ ವ್ಯತ್ಯಾಸವೂ ಇಲ್ಲದೆ, ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತಶಬ್ದ : ಸಮಸಂಸ್ಕೃತಂಗಳೊಳ್ ಸಯ್ತುಮರ್ದಿರ್ ಕನ್ನಡಮನಱಿದು ಪೇಳ್ಗೆಂಬುದಿದಾಗಮಕೋವಿದನಿಗದಿತ ಮಾರ್ಗಂ (ಕವಿರಾ. ೧-೫೧); ಬೆರಸಿ ಸಮಸಂಸ್ಕೃತಂಗಳ್ ಬರೆ ಕನ್ನಡದೊಳಗೆ ಸಮತೆಯಿಂದಂ ಸಲ್ಗುಂ (ಕಾವ್ಯಾವ. ೨೮೨) ; ನಾಮಪದೋತ್ತಮವರ್ಣಪ್ರಕೃತಿಗಳಂ ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಟ್ಪರ್ (ಶಮಪ. ೮೦). [ಸಂ.]

ಸಮಸತ್ತ್ವ (ನಾ). ಸರಿಸಮಾನವಾದ ಸಾಮರ್ಥ್ಯ : 'ಸಮಸತ್ತ್ವಂಬಡು' ಪರಾ. [ಸಂ.]

ಸಮಸತ್ತ್ವಂಬಡು (ಕ್ರಿ). ಸಮಾನವಾದ ಸಾಮರ್ಥ್ಯವನ್ನು ಹೊಂದು: ಸಂಭೋಗಿನೀಪ್ರಾಂತದೊಳ್ ಸಮಸತ್ತ್ವಂಬಡುವಂತಿರಾಯ್ತು ಸುರತಪ್ರಾರಂಭಕೋಳಾಹಳಂ (ಕಾವ್ಯಸಾ. ೬೫೭). 'ಸಮಹಸ್ತಂಬಿಡಿ' ಪರಾ. [ಸಮಸತ್ತ್ವ + ಪಡು$_1$]

ಸಮಸತ್ವ (ನಾ). ೧. = ಸಮಸತ್ತ್ವ : ಸಮವಂಶದೆ . . . ಸಮಸತ್ವಮನದೆ ಸಮಾನುರಾಗದೆ ಸಮಸಂದತ್ತವರ್ಗ ಸಮವಯೋಯೋಗಸುಖಂ (ಕಾದಂಪೂ. ೭೧೬). ೨. ಸಮಾನವಾದ ಶಕ್ತಿಯುಳ್ಳವನು; ಸರಿಸಮನಾದವನು: ಸೆಣಸರು ನೀಚರೊಳಧಿಕಸಮರ್ಥರು ಸಮಸತ್ವರೊಳು ಸೆಣಸುವರು (ಇಂಚಾಪ. ೧೬೯-೮೨). [ಸಂ.]

ಸಮಸಪ್ತಕ 'ಸಂಸಪ್ತಕ' ನೋ.

ಸಮಸಮಾಯೋಗ (ನಾ). ವಯಸ್ಸು, ಸ್ವಭಾವ ಮುಂತಾದುವುಗಳಲ್ಲಿರುವ ಹೊಂದಾಣಿಕೆ : ಸದೃಶಾಕಾರರನಿವರಂ ಕೂಡಿ ಪಯೋರುಹಜಂಗಕ್ಕೆ ಸಮಸಮಾಯೋಗಯಶಂ (ಆದಿಪು. ೪-೨೯); ಆ ಕಂದರ್ಪಕಲ್ಪಲತೆಯ ಸಮಸಮಾಯೋಗ ಸಮುಪಕ್ರಮಿತ ಕಾಲಧಾತುವಯೋನುರೂಪಕರಣ ಪರಿರಂಭಚುಂಬನಕಳಾ ಸಾಮಗ್ರಿಯಿಂ . . . ಕಾಲಮಂ ಸಲಿಸುತ್ತುಮಿರೆ (ಚಂದ್ರಪ್ರ. ೨-೧೭). [ಸಂ.]

ಸಮಸಲ್ (ಕ್ರಿ.) ೧. ಸರಿಸಮವಾಗಿರು ; ಸಮಾನವಾಗಿ ಸೇರು : ಬೇಡ ಎರೋಧ ಮಂತುಮರಿಕೇಸರಿಯೊಳ್ ಸಮಸಂದು ಸಂಧಿಯಂ ಮಾಡು (ಪಂಪಭಾ. ೧೩-೫೪); ತತ್ತ್ವಮುಂ ಕವಿತ್ವಮುಮೆತ್ತಂ ಸಮಸಂದಿರೆ ಪೇಟ್ಟೋಜೆಗೆ ಧನಂಜಯಂಗ ಕವಿತಾಗಮಿಕರ್ (ಸುಜನಾ. ೧-೩೬). ೨. ಉಂಟಾಗು; ಪ್ರಕಟವಾಗು : ಸಮಾನುರಾಗದೆ ಸಮಸಂದತ್ತವರ್ಗ ಸಮವಯೋಯೋಗಸುಖಂ (ಕಾದಂಪೂ. ೭೧೬); ಎನ್ನ ಸರಿದೊರೆಯನೊಡನೆ ಸಮಸಲ್ಲ ಮದುವೆಯೆನೆ ಸಲ್ಲದಂಜಿಕೆಪಟ್ಟು ಸಡೆಯೆ ನಾನ್ (ಬದ್ಧಪ್ರ. ೪೭-೧೦೩೨). [ಸಮ್ $_3$ + ಸಲ್ $_1$]

ಸಮಸಾಮಯಿಕ (ಗು). ೧. ಒಂದೇ ಕಾಲಕ್ಕೆ ಸೇರಿದ ; ಸಮಕಾಲೀನವಾದ: ನಿನ್ನೆಗಳು ಇಂದಿನಲ್ಲಿ ಮಾರ್ಪಡುತ್ತ ಬಂದುದನ್ನು ಸಮಸಾಮಯಿಕ ಕಾರ್ಯಕಾರಣಸಂಬಂಧದಲ್ಲಿ ವಿವರಿಸುವುದು ಇತಿಹಾಸದ ಕಾರ್ಯ (ಕರ್ಣಾಬ. XIV. ಮುನ್ನುಡಿ); ನಿರ್ಧಾರಕ ಸಮಸಾಮಯಿಕ ಪ್ರಮಾಣಗಳು ಸಿಕ್ಕುವವರೆಗೆ ಸಮಂಜಸವಾಗುವುದಿಲ್ಲ (ಕರ್ಣಾಅ. ೧೦೮). (ನಾ). ೨. ಒಂದೇ ಕಾಲಕ್ಕೆ ಸಂಬಂಧಿಸಿದುದು; ಸಮಕಾಲೀನವಾದುದು : ಸಮಸಾಮಯಿಕವಾದ ಸಾಹಿತ್ಯಸಮೀಕ್ಷೆ ಸುಲಭವಲ್ಲ (ಚಿತ್ರಸ್ಯ. ೩); ಆ ಸಾಹಿತ್ಯವೂ ಆವನ ಸಮಸಾಮಯಿಕವಾಗಿರದೆ, ಅವನ ಐತಿಹಾಸಿಕತೆಯನ್ನು ಕುರಿತು . . . ಬಸವರಾಜದೇವರ ರಗಳೆಯಿಂದಲೂ ಈ ಕೆಲವು ಶಾಸನಗಳಿಂದಲೂ ಆ ತೊಡಕು ಸಾಕಲ್ಯವಾಗಿ ನೀಗುತ್ತದೆ (ಮೂರುಉ. ೫೯). ೩. ಒಂದೇ ಕಾಲದಲ್ಲಿದ್ದವನು; ಸಮಕಾಲೀನ ವ್ಯಕ್ತಿ : ಅಲ್ಲಮ ಗೋರಕ್ಷಕರು ಸಮಸಾಮಯಿಕರೆಂದ ಮೇಲೆ ಅವರ ಗುರುಗಳು . . . ಒಬ್ಬರೇ ಆಗಿರುವ ಸಂಭವವಿದೆ (ಸಾಹಿಸಂ. ೧೪೭); ಪುರಂದರದಾಸರೂ ಕನಕದಾಸರೂ ಸಮಸಾಮಯಿಕರೂ ಸಮವಯಸ್ಕರೂ ಇದ್ದಿರಬಹುದು (ಕರ್ಣಾಜ. ೮೧). [ಸಂ.]

ಸಮಸೀಳು (ನಾ). ಸಮಾನವಾಗಿ ಕತ್ತರಿಸಿದ ಭಾಗ ,— ಪಾಲು : ಗದೆಗೊಂಡು ತಿರುಗಿ ಹೊಯ್ದನು . . . ಕರಿಯೊಡಲು ಸಮಸೀಳ ಸೀಳಲು (ಕುವ್ಯಾಕ. ೧೦-೭); ನಿಳಿನಿಳಿಲುನಿಟಲೆಂದು ಬದಿಯೆಲು ಕಳಚೆ ಸಮಸೀಳಾಗಿ ಸೀಳಿದು (ತೊರರಾ. ೫-೧-೨೧).

[ಸಮ್ $_3$ + ಸೀಳ್ $_2$ (< ಸೀಳ್ $_2$)]

ಸಮಸು 'ಸಮೆಯಿಸು $_2$' ನೋ.

ಸಮಸೂಚಿ (ನಾ). [ನಾಟ್ಯ] ಇಪ್ಪತ್ತುಮೂರು ದೇಶೀಯಸ್ಥಾನಕಗಳಲ್ಲಿ ಒಂದು ; IP ಹಿಮ್ಮಡಿ, ಕಣಕಾಲು ಮತ್ತು ತೊಡೆ — ಈ ಮೂರೂ ನೆಲಕ್ಕೆ ತಾಗುವಂತೆ ಎರಡುಕಾಲುಗಳನ್ನೂ ಅಡ್ಡಲಾಗಿ ಚಾಚುವುದು : ಸ್ವಸ್ತಿಕ . . . ಸಮಸೂಚೀ . . . ವೃಷಭಾಸನ - ಈ ಇಪ್ಪತ್ತಮೂಱು ದೇಶೀಯಸ್ಥಾನಕಂಗಳ್ (ಲಾಸ್ಯರಂ. ೭-೧೨ ವ). [ಸಂ.]

ಸಮಸ್ಕಂಧ (ನಾ). ಸರಿಸಮಾನನಾದ ವ್ಯಕ್ತಿ ; ಸರಿಜೋಡಿಯಾದವನು: ರಾಮಲಕ್ಷ್ಮಣರ್ ಬಾಂಧವರಪ್ಪುದಂ ಬಗೆವುದೇಳಿಸುವಂತವರ್ಗಾರುಮೇಂ ಸಮಸ್ಕಂಧರ ಯುದ್ಧದೊಳ್ (ಪಂರಾಮಾ. ೧೨-೭೦); ಸಂಗ್ರಾಮದೊಳು ನಿರ್ಜ್ಜಿತಮದನನೆನಿಪಂ . . . ಸಮಸ್ಕಂಧನೇ ಮಾಯಿದೇವ (ಎಶ. VII. ಶಿಕಾರಿ. ೧೦೪-೨೬ ; 1156). [ಸಂ.]

ಸಮಸ್ಖಲಿತ (ನಾ). [ನಾಟ್ಯ] ದೇಶೀಯ ಭೌಮಚಾರಿಗಳಲ್ಲಿ ಒಂದು: ಪಿಂತಣ್ಣಂ ಮುಂತಣ್ಣಂ ಕಾಂತೇ ಕೇಳಡ್ಡಮಾಗುತೆರಡುಂ ಪಾದಂ ಸಂತತಮಗಲದೆ ಸಮದಿಂದಂ ತವೆ ಚರಿಸಲ್ಕೆ ಮೇ[ಣ್] ಸಮಸ್ಖಲಿತಾಖ್ಯಂ (ಲಾಸ್ಯರಂ. ೬-೮೯). [ಸಂ.]

ಸಮಸ್ತ (ಗು). ೧. ಸಕಲ ; ಸಂಪೂರ್ಣ ; ಎಲ್ಲ : ಶ್ರೀಗಂ ವಿಜಯಕ್ಕಂ ಮೊತ್ತ ಮೊದಲಿಗನಾಗಿಯೆ ಸಮಸ್ತರಾಜಿಕಮನೆಱಗಿಸಿ (ಶಾಂತಿಪು. ೫-೭೩ ವ). ೨. ಒಟ್ಟುಗೂಡಿದ ; ಸಂಯುಕ್ತ. (ನಾ). ೩. ಒಟ್ಟಾದುದು ; ಸೇರಿದುದು : ಯುದ್ಧದಲ್ಲಿ ಮಡಿದು ಪೋದ ಸಮಸ್ತವಾದ ಪುತ್ರಮಿತ್ರಜ್ಞಾತಿಬಂಧುವರ್ಗಂಗಳ್ಗೆ ತಿಲೋದಕ ಪಿಂಡಬಲಿಪ್ರದಾನಂಗಳನೆಸಗಿ (ಭಾರಶಾಂ. ೧). ೪. [ವ್ಯಾಕ] ಅನೇಕ ಪದಗಳನ್ನು ಸೇರಿಸಿ ಮಾಡಿರುವ ಪದ ; ಸಮಾಸ : ಸಮಸ್ತಾಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ (ಕವಿರಾ. ೩-೧೩).

ಸಮಸ್ತಭುವನಾಶ್ರಯ = ಸಕಲಲೋಕಕ್ಕೇ ಆಶ್ರಯನಾದವನು ; ಒಂದು ಬಿರುದು : ಸ್ವಸ್ತಿಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜ ಪರಮೇಶ್ವರಪರಮಭಟಾರಕಂ (ಸೌಇ, XX, ೪೬-೩; 1072). ಸಮಸ್ತರು = ಮುಖ್ಯಸ್ಥರು ; ಮುಖಂಡರು : ಹಾಱುನಾಡುಸಮಸ್ತರ ವೊಪ ಬೆಲತೂರ ಜಂನಿಗಳ ವೊಪ (ಸೌಇ. IX-ii, ೪೭-೧೫; 1510); ಸಾಯಂಕಾಲ ಚಾವಡಿಯಲ್ಲಿ ಹಳ್ಳಿಯ ಸಮಸ್ತರೆಲ್ಲ ಕೂಡಿದರು (ಚಿವಿ. ೮೪). [ಸಂ.]

ಸಮಸ್ತಪದ (ನಾ). [ವ್ಯಾಕ] ಬೇರೆ ಮಾಡಲಾಗದ ಪದಪುಂಜ; ಸಮಾಸ ಪದ: ಬಾಹುಶಾಖೆ (ತೋಳ್‌ಗವಲು), ಕಾಂತಾಲತೆ (ಪೆಣ್‌ಬಳ್ಳಿ)- ಇವೆಲ್ಲ ಸಮಸ್ತಪದ ಘಟಿತ ರೂಪಕಗಳು (ಕವಿರಾ. ೩-೧೩ ಟಿಪ್ಪಣಿ). [ಸಂ.]

ಸಮಸ್ತಭಾರತ (ನಾ). ೧. ಸಮಗ್ರವಾದ ಭಾರತದ ಕಥೆ. ೨. ಐತಿಹಾಸಿಕ, ಪೌರಾಣಿಕ ಹಾಗೂ ಸಮಕಾಲಿಕ ಸಂಗತಿಗಳನ್ನು ಸಂಕ್ಷೇಪಿಸಿ ಒಂದು ಚೌಕಟ್ಟಿನೊಳಗೆ ಸಮಾವೇಶಗೊಳಿಸಿರುವ ಕಾವ್ಯ : ಕತೆ ಪಿರಿದಾದೊಡಂ ಕತೆಯ ಮೆಯ್ಗೆಡಲೀಯದೆ ಮುಂ ಸಮಸ್ತಭಾರತಮನಪೂರ್ವಮಾಗೆ ಸಲೆ ಪೇೞ್ದ [ಕವೀಶ್ವರರಿ]ಲ್ಲ . . . ಪೇೞ್ವೊಡೆ ಪಂಪನೆ ಪೇೞ್ಗುಂ (ಪಂಪಭಾ. ೧-೧೧); ಸಮಸ್ತಭಾರತಕಥಾಸಂಬಂಧಮಂ ಬಾಜಿಸಲ್ . . . ಅಕ್ಕುಂ . . . ಭದ್ರಂ ಶುಭಂ ಮಂಗಳಂ (ಪಂಪಭಾ. ೧೪-೬೫). [ಸಂ.]

ಸಮಸ್ತರೂಪಕ (ನಾ). [ಕಾವ್ಯಮಿಾ] ರೂಪಕಾಲಂಕಾರದ ಒಂದು ಪ್ರಭೇದ; ಸಮಾಸಪದಘಟಿತವಾದ ರೂಪಕ : ಬಾಹುಶಾಖಂ ಕಾಂತಾಲತೆಯೆಂದಿಂತು ಸಮಸ್ತಾಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ (ಕವಿರಾ. ೩-೧೩). [ಸಂ.]

ಸಮಸ್ಪರ್ಧಿ (ನಾ). ಸರಿಸಮನಾದ ಎದುರಾಳಿ : ಸ್ಕೂಸ್ಗೆ ಸಮಸ್ಪರ್ಧಿಯಾಗಿ ಸೆಟೆದು ನಿಲ್ಲುವ ಧೀರ ಅವನು (ಬದ್ಧಪ್ರ. XXX, ನಾಟಕದ ಸಮಸ್ಯೆ). [ಸಂ. ಸಮಸ್ಪರ್ಧಿನ್]

ಸಮಸ್ಯ (ಗು). ೧. ಜೊತೆಗೂಡಿಸಬೇಕಾದ ; ಸೇರಿಸಬೇಕಾದ. ೨. ಪೂರ್ಣಗೊಳಿಸಬೇಕಾದ. (ನಾ). ೩.= ಸಮಸ್ಯೆ ೨ : ಸಲೆ ಸಮಸ್ಯದನಂತಪದ್ಯವ ಪೞಲನನ್ನೈಸುವ . . . ಕವಿಗೊಪ್ಪಿದರು (ಕಾವ್ಯಾಲಂ. ೮-೩೭). [ಸಂ.]

ಸಮಸ್ಯಾತ್ಮಕ (ನಾ). ಸಮಸ್ಯೆಗಳಿಂದ ಕೂಡಿದುದು ; ಬಗೆಹರಿಸಲಾಗದುದು: ಅವರ ಚಲನವಲನಗಳು ಅನೇಕರಿಗೆ ಸಮಸ್ಯಾತ್ಮಕವಾಗುತ್ತಿದ್ದುವು (ಭೃಮಾಸ. ೬೬). [ಸಂ.]

ಸಮಸ್ಯೆ (ನಾ). ೧. ಅಪೂರ್ಣವಾದುದನ್ನು ಪೂರ್ಣಗೊಳಿಸುವುದು ,– ಪೂರ್ತಿಮಾಡುವುದು. ೨. [ಕಾವ್ಯಮಿಾ] ಪದ್ಯದ ಒಂದು ಪಾದ ಅಥವಾ ಶ್ಲೋಕದ ಅರ್ಧಭಾಗವನ್ನು ಬರೆದು, ಉಳಿದ ಭಾಗವನ್ನು ಪೂರ್ತಿಮಾಡಲು ಇತರರಿಗೆ ಕೊಡುವುದು; ಕವಿಶಕ್ತಿಪರಿಜ್ಞಾನಾರ್ಥವಾಗಿ ಪೂರೈಸುವುದಕ್ಕೆ ಕೊಡುವ ಪದ್ಯದ ಕೆಲವು ಭಾಗ : ಲಲಿತಮಾನಸಸಮಸ್ಯೆಯ ಪೇಳುವಪಿಳಗವಿಗಳ ಬೆನ್ನ ಚಮ್ಮುಟಿಗೆ ವಿಷಮದ ಸಮಸ್ಯೆಯಿತ್ತಳುಕಿಸುವೆನೆಂಬ ಕವಿಯ ತಲೆಗೆಱಪ ಬಱಸಿಡಿಲು (ರಾಘಚ. ೧೪-೩೯); ಸಮವಿಷಮಂಗಳೆಂಬಿನ ಮರಟ್ಟೆಱದಿಂ ಪಲವುಂ ಸಮಸ್ಯೆಯಂ ಸಮನಿಸುತೆ ಬಿನದಿಕುಂ ಚಕದೇವಂ (ಚಕದೆ. ೫-೧೫೯); 'ಕಂತಿ - ಪಂಪರ ಸಮಸ್ಯೆಗಳು' ಎಂದು ಪ್ರಕಟವಾದ ಪದ್ಯಗಳ ಶೈಲಿಯನ್ನು ನೋಡಿದರೆ, ಅದು ನಾಗಚಂದ್ರನ ಕಾಲದ ಹಳೆಗನ್ನಡದಂತೆ ತೋರದು (ಕರ್ನಾಕ. ೭೩). ೩. (ಆಲಂ) ತೊಡಕು; ತೊಂದರೆ : ಅರ್ಥಸಂಪತ್ತು ಜೀವನದ ಇತರ ಸಮಸ್ಯೆಗಳನ್ನು ದೂರಮಾಡಿತು (ಖಾಸ್ಪಾರ. ೧೦೯ ಪೀಠಿಕೆ); ಇದು ಗಂಭೀರವಾದ ಸಮಸ್ಯೆಗಳಿಗೆ ಮುನ್ನುಡಿಯಾಗುವುದರಲ್ಲಿ ಸಂಶಯವಿಲ್ಲ (ದೇಕಸ್ಯ. ೩೯). [ಸಂ. ಸಮಸ್ಯಾ]

ಸಮಹಸ್ತ (ನಾ). [ಸಂಗೀತ] (ನರ್ತನದ ಲಯಕ್ಕನುಗುಣವಾದ) ವಾದ್ಯವಾದನದ ಒಂದು ಪ್ರಕಾರ : ವಿತತಘನಾವನದ್ಧಸುಷಿರಂಗಳನೊರ್ಮೆಯೆ ಕೂಡೆ ಕೂಡಿಕೊಂಡತಿದ್ರುತವಾದಕರ್ತಗುಳೆ ಬಾಜಿಸೆ . . . ನರ್ತನಪೂರ್ವರಂಗಸಂಗತ ಸಮಹಸ್ತವಿಸ್ತೃತರವಂ ಪುದಿದತ್ತು ನಭೋವಿಭಾಗಮಂ (ಮಲ್ಲಿಪು. ೮-೨೭). [ಸಂ.]

ಸಮಹಸ್ತಂಬಿಡಿ (ಕ್ರಿ). ಸಮಾನವಾಗಿರು (?) : ಸಮಸಂದಟ್ಟಱಲಂಪನೀಯೆ . . . ತಚ್ಛಯ್ಯಯೊಳ್ ಸಮಹಸ್ತಂಬಿಡಿವಂತುಟಾಯ್ತು ಸುರತಪ್ರಾರಂಭಕೋಳಾಹಳಂ (ಪಂಪಭಾ. ೪-೧೦೯); ಸಮಹಸ್ತಂಬಿಡಿವಂತುಟಾಯ್ತು = ಸಮಾನಪ್ರಮಾಣವುಳ್ಳದ್ದಾಯಿತು (?) (ಪಂಪದೇ. ೧೭೭). 'ಸಮಸತ್ತ್ವಂಬಡು' ಪರಾ. [ಸಮಹಸ್ತ + ಪಿಡಿ]

ಸಮಹುದ್ದರಿ (ನಾ). ೧. ಸರಿಯಾದ ಜೋಡಿ : ಸಮಹುದ್ದರಿಯ ಕುಸ್ತಿಯೇ ಜನರು ಮೆಚ್ಚುವಂತಹ ಕುಸ್ತಿಯಲ್ಲವೆ? (ಮಾಧವ. ೩೧೭) . ೨. ಸರಿಸಮನಾದ ಎದುರಾಳಿ: ಇಬ್ಬರೂ ಸಮಹುದ್ದರಿಗಳಾದುದರಿಂದ . . . ಯಾರ ಸೀಮೆಯನ್ನೂ ಯಾರೂ ಅತಿಕ್ರಮಿಸದಂತೆ ಮಾಡಿತ್ತು (ಮಾಶಾನಾ. ೬೬). [ಸಮ್ + ಹುದ್ದರಿ]

ಸಮಳ್ತಡೆ 'ಸವಳದೆ' ನೋ.

ಸಮಱಿಸು, ಸವರಿಸು$_1$, ಸವಱಿಸು (ಕ್ರಿ). ೧. ಓರಣಗೊಳಿಸು ; ಸ್ವಚ್ಛಮಾಡು: ಕಂಸಂ . . . ಈ ಮಲ್ಲಯುದ್ಧಭೂಮಿಯಂ ಸಮಱಿಸಲ್ (ನೇಮಿಪು. ೬-೧೩೧ ವ). **ಸವರಿಸು$_1$** : ೨. ಮರಗಿಡಗಳ ಕೊಂಬೆಯ ಕವಲುಗಳನ್ನು ಕತ್ತರಿಸುವಂತೆ ಮಾಡು : ಅಲ್ಲಿ ಹುಟ್ಟಿದ ಗಿಡ, ಬಳ್ಳಿಗಳನ್ನು ಸವರಿಸಿ, ಚೊಕ್ಕಟ ಮಾಡಿಸಿದ್ದ (ಮೂಕಜ್ಜಿ. ೧೪೯). **ಸವಱಿಸು** : ೩. ನಾಶಮಾಡು; ನಿರ್ಮೂಲಗೊಳಿಸು: ದಶಾನನಂಗೆ ದಾಯಮಂ ಪೇಳ್ವವನ ವಂಶಮಂ ಸವಱಿಸಿದ ಮಾಯಕಾರ್ತಿ (ಚೈಮಿಭಾ. ೯-೨೨). [ಸಮಱು + -ಇಸ್ತು./ತೆಲು. ಸವರಣಿಂಚು, ಸವರಿಂಚು, ಸವರುಚು]

ಸಮಱು, ಸವರು$_1$, ಸವಱು (ಕ್ರಿ). ೧. (ಗುಡಿಸಿ) ಸ್ವಚ್ಛಮಾಡು; ಓರಣಗೊಳಿಸು : ಮರುತ್ಸೂನು ಸಮಱಿದಂ ಕೊಳುಗುಳಮಂ (ಪಂಪಭಾ. ೧೩-೯೨); ಸಮೆಱೆ ಕಸಗಳೆದ ತೆಱದಿಂದಮೆ ಸತ್ತರ್ ಮತ್ತೆ ತಂದೆಯುಂ ತಾಯುಮನಾಯಮರಕ್ಷಂ ನುಂಗಿದನೆನೆ (ನೇಮಿಪು. ೧೪-೧೨೭); ಪರ್ಣಶಾಲೆಯೊಳ್ ಪರೆದ ಪುಷ್ಪರಜಮಂ ಸಮಱಿ ತೊಡೆವ ಚಮರೀಮೃಗಂಗಳಿಂ (ದಶಕು. ೪-೭೦ ವ). ೨. ತಿದ್ದು; ಸರಿಪ ಇದಱಿಂ ಛಂದೋಭಂಗಂ ಪದನಱಿದದನಿಂತು ಸಮಱಿ ಪೇೞ್ದೊಡೆ ಚೆಲ್ವಂ (ಕವಿರಾ. ೧-೯೪). ೩. ಅಂದಗೊಳಿಸು ; ಅಲಂಕರಿಸು : "ಸಮಱು - ಚಾರುಕರಣೇ (ನಯಿಮಾಡು)" (ಶಬಧಾ); ಸುಲಿಪಲ್ಲ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು ನಱೆದು ಸಮಱಿದ ಮದನನೊಡ್ಡಣದಂತೆ ಸಮಱಿದ ಪುರ್ವುಂ . . . ಎಸೆಯೆ (ಆದಿಪು. ೪-೪೧ ವ); ಕರ್ವುವಿಲ್ಲಂ ಗೊಲೆಗೊತ್ತುವಂತೆ ನಿಡುವುರ್ವುಂ ಕುಡುವುರ್ವಾಗೆ ಸಮಱಿಯುಂ (ಚಂದ್ರಪ್ರ. ೬-೬೩ ವ). ೪. ಅಂದವಾಗು; ಶೋಭಿಸು: ನವರಸ ರೀತಿವಡೆದ ಸಕ್ಕದದೊಳು ಕನ್ನಡವಾತಂ ಸಮಱಿ ಬೆರಸಿ . . . ಉಸಿರ್ದಂ (ಜಯಕಾ. ೧-೨೩). ೫. ಬಾಚು ; ಹಿಕ್ಕು : ಜಿನಜನನಿಯರೊಳ್ಗುರುಳಂ ಸಮಱುವ ಕನ್ಯಕೆ ಕರಮೆಸೆದಳ್ ತಳಿರೊಳಳಿಗಳಂ ಮುಚ್ಚುವವೋಲ್ (ಆದಿಪು. ೭-೮); ಪರಿದ ಕುರುಳ್ಗಳೊಳ್ ತಳೆದ ಕತ್ತುರಿಗಾಡುವ ಚಂಚರೀಕಮೋಸರಿಸೆ ನಖಾಗ್ರದಿಂ ಸಮಱಿ ತಿರ್ದಿ (ಅನಂಪು. ೩-೮೩). ೬. ನಾಲಗೆಯ ತುದಿಯಿಂದ ನೇವರಿಸು ; ನೆಕ್ಕು : ಪುಲಿ ಸಮಱಿದುವು ಕಟವಾಯ ಸವಿಗಳಂ (ಅನಂಪು. ೯-೧೬ ರಗಳೆ). ೭. ತಿದ್ದಿಕೊಳ್ಳು; ಸರಿಪಡಿಸಿಕೊಳ್ಳು : ಮಿಥ್ಯಾದೃಷ್ಟಿಗಳುಮಭವ್ಯರುಂ ತಮ್ಮನೆನಿತು ಸಮಱಿದೊಡಂ ನಡೆದೊಡಂ ಪ್ರಸಿದ್ಧರಾದೊಡಂ ನಿರಂತರಂ ಸುಖಪ್ರಾಪ್ತರಲ್ಲ (ಧರ್ಮಾಮೃ. ೫-೧೭೨). ೮. ಕಡಿ; ಕತ್ತರಿಸು: ಭುಜಾದಂಡ ಕೃಪಾಣದಿಂ ಸಮಱಿ ಕಂಟಕಮಂ (ಪಂರಾಮಾ. ೩-೧೪). ೯. ನಾಶಗೊಳಿಸು ; ಧ್ವಂಸಮಾಡು : ಇದಾನಱಿಪ್ಪೊನ್ನಱ್ಪ ಮಹಾಪಾತಕನ್ತನ್ ಒಕ್ಕಲ್ಮುಲನಾ ಸಮಱುವೊನ್ (ಎಕ. XIV,ತಿರುಮ. ೨೫೨-೭; 750?); ನಿನಗರಸ ಬಹಿರ್ಮಂಡಲಮನೆ ಸಮಱಲ್ಕಿನಿತು ಬರಿಸಮುಂ ಪೋದುವು (ಆದಿಪು. ೧೪-೧೫); ನೀಂ ಸಹಜಬುದ್ಧಿಯೈ ನಿನ್ನಂ ಸಮಱುವೆನೆಂಬನಾವನ್ (ಲೀಲಾವ. ೪-೩೪). **ಸವರು$_1$** : ೯. ದುಂದುಭಿ ಶಂಬರಾಸುರಾದಿಯಾದ ನಿಶಾಚರರ ಸವರಿದನು (ಅನಂರಾ. ೧-೧೧-೧೯); ನನ್ನ ಮಕ್ಕಳನ್ನೆಲ್ಲಾ ಕೊಲೆಮಾಡಿ ನನ್ನ ಸಂತಾನ ಸವರಿದ್ದು ನಿನಗ ಒಪ್ಪಿಗೆ ಇದ್ದರೆ ನಿನ್ನ ಸಂಗಡ ನನ್ನ ಮಾತು ಇಲ್ಲ (ಮನೆಬಿ. ೨೩). ೧೦. ನೇವರಿಸು ; ತಡವು : ಕರಿಯ ಅಜ್ಜನ ಹಸ್ತವನ್ನು ತೊಡೆಯ ಮೇಲಿರಿಸಿಕೊಂಡು ಸವರುತ್ತಿದ್ದ (ಕುದಿಕೂ. ೧೨೧); ನನ್ನ ಕೈಗಳು ನಿನ್ನ ಮೃದುವಾದ ಕೇಶಪಾಶವನ್ನು ಸವರುವುದಕ್ಕಾಗಿ ತವಕಿಸುತ್ತಿವೆ (ಸೀತಾರ. ೧). ೧೧. ಬಳಿ; ಲೇಪಿಸು; ಹಚ್ಚು: ಮಂಚದ ಸಂದುಗಳಿಗೆ ಸೀಮೆಯೆಣ್ಣೆಯನ್ನು ಸವರಬೇಕು (ಗೃಹಪ್ರ. ೧೮೭); ಕಾವಲಿಯನ್ನು ಒಲೆಯ ಮೇಲಿರಿಸಿ, ಒಂದು ಚಾ ಚಮಚದಷ್ಟು ತುಪ್ಪ . . . ಸವರುವುದು (ಅಡುಸೌ. ೯೪). **ಸವಱು** : ೧. ಕುರುಕ್ಷೇತ್ರದೊಳ್ . . . ಶವಶತದಿಂ ತೆಕ್ಕನೆ ತೀವೆ ರಣೋತ್ಸವದಿಂದನಿಲಸುತಂ ತಾನೆ ಸವ[ಪಾಶಾಂ. ಮ]ಱಿದಂ ಕೊಳ್ಗುಳಮಂ (ಗದಾಯು. ೭-೬೫); ಬ್ರಹ್ಮಪಾಶವೆಂಬ ಕಳನನೆ ಸವಱಿ . . . ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯ ತಲೆದೂಗಲಿಕಾಡುವೆ ನಾನು (ಮಹಾದೇ. ಬ. ೯-೧); ಹಾದಿಯನು ಸವಱಿದರು ಯಮಪುರದತ್ತ ಪಯಣಕ್ಕೆ (ಕೌಶಿರಾ. ೨೦-೧೭). ೭. ಆಗುಳಿಸುತ ಬಾಯ ಸವಱಿಯೊಗ್ಗಿಸುತ . . . ಚತುಷ್ಪದಿ ವೇಗದಿ ನಡೆದು ವಾಕ್ಷಣದಿ (ಮೋಹತ. ೧೯-೧೩); ದಳ್ಳುರಿ ಕೃಷ್ಣರಾಯನ ಬಲವ ನಾಲಗೆಯಿಂದ

ಸವಱುತಾಹವದಿ (ಮೋಹತ. ೩೭-೫೬). ೮. ಹೆಮ್ಮರನ ಹೆಗ್ಗೊಂಬ ಮುಱಿದನು ಸವಱಿದನು ಶಾಖೋಪಶಾಖೆಗಳ (ಕುಮಾಸ. ೧-೩೦). ೯. ಅತಿಕೌತುಕಮೆನೆ ಸವಱತೊಡಗಿದಂ ತದ್ಬಲಮಂ (ಉದ್ಯಟ. ೪-೭೬); ವಿಗಡನಕ್ರನ ಚಕ್ರದಿ ಸವಱಿದ ಹಗರಣದಾಟವನೆಲ್ಲಿ ಕಲಿತೆಯ್ಯ (ಪುರಂದ. ೧-೯೬-೭). ೧೦. ಸೈರಿಸುವುದೆನುತವೆ ಸವಱಿದನು ತಲೆಯ (ನಿಭಾಗ. ೬-೧೬-೨೮). ೧೧. ಎಳೆಯ ಮನಕೆ ಸವಱುವೆ ಪೊಲೆಯಾ (ಅನಂಪು. ೧೧-೪೮).

ಸಮಱಿಕೊಳ್, ಸವರಿಕೊಳ್ಳು = ೧. ನಯವಾಗು; ನಾಜೂಕಾಗು: ಇದೇನ್ನುಡಿಗಳೊ ಸಮಱಿಕೊಂಡ ನುಡಿಗಳೊ ನಿನ್ನಾ (ಆದಿಪು. ೧೪-೬೪). ೨. ನೀವಿಕೊಳ್ಳು; ನೇವರಿಸಿಕೊಳ್ಳು: ತನ್ನ ಬಳುಪಾದ ಗಡ್ಡವನ್ನು ಸ್ವಲ್ಪ ಸವರಿಕೊಳ್ಳುತ್ತಾ . . . ಧೂಮಪಾನಾಸಕ್ತನಾದನು (ದೌಲತ್. ೭).

[ದೇ. ॥ ತೆಲು. ಚಮುರು, ಚೆಮರು, ಜವರು; ಕೋಕ. ಚವ್ರ್]

ಸಮಱುಗೆ (ನಾ). ಅಲಂಕಾರ ; ಶೃಂಗಾರ : ಸಮಱುಗೆಯಿಲ್ಲದ [ಮುಱ]ಕಮುಮ ಮರ್ದಿರೆ ಕೆಯ್ಗೆಯ್ಯದೊಪ್ಪುವಂದಮುಂ . . . ಸೊಗಯಿಸುಗುಂ (ಕವಿರಾ. ೩-೧೬೯).

[ಸಮಱು + - ಗೆ]

ಸಮಾಂತರ (ನಾ). ಸಮವಾಗಿರುವ ದೂರ,— ಅಂತರ : ವಿಷುವದ್ವೃತ್ತದ ಸಮತಳಕ್ಕೆ ಸಮಾಂತರವಾಗಿ ಸುತ್ತುವಂತೆ ಅಳವಡಿಸಿರುವ ದೂರದರ್ಶಿಗಳು (ಶಿಲ್ಪನಾ. ೧೦೦); ಹಲಗೆಗಳೆರಡೂ ಎಲ್ಲ ಕಡೆಯಲ್ಲಿಯೂ ಸಮಾಂತರದಲ್ಲಿರಬೇಕು (ಹಸುಹೂ. ೩೨೮). [ಸಂ.]

ಸಮಾಂಸಮಿಾನೆ (ನಾ). ಪ್ರತಿವರ್ಷವೂ ಕರುಹಾಕುವ ಹಸು; ವರ್ಷಗಂದಿ: "ಅನುವರ್ಷಂ ತಪ್ಪದೆ [ತಾಂ] ತೆನೆಯಪ್ಪುದೆ ದಲ್ ಸಮಾಂಸಮಿಾನೆಯೆನಿಕ್ಕುಂ" (ಪಾರ್ಶ್ವಕೋ. ೯೦-೮). [ಸಂ. ಸಮಾಂಸಮಿಾನಾ]

ಸಮಾಕರ್ಣಿತ (ಗು). ಚೆನ್ನಾಗಿ ಕೇಳಿದ : ಭರತೇಶ್ವರಂ ತಾನುಂ ಮುನ್ನೆ ಭಟ್ಟಾರಕರ ಸಮಕ್ಷದೊಳ್ ಸಮಾಕರ್ಣಿತೋಪಾಸಕಾಧ್ಯಯನನಪ್ಪುದಱಿಂದಂ (ಆದಿಪು. ೧೫-೧೩ ವ). [ಸಂ.]

ಸಮಾಕಲಿತ (ಗು). ೧. ಬಂಧಿಸಿದ ; ಕಟ್ಟಿದ: ಶಿವಶರಣಯುಗಸಮಾಕಲಿತಾಂತರಂಗಂ (ಕಬ್ಬಿಕೃ. ೨). (ನಾ). ೨. ಆಕ್ರಮಿಸಲ್ಪಟ್ಟುದು; ಆಕ್ರಮಣಗೊಂಡುದು: ಲಲಿತಲಾವಣ್ಯದುರಗಾಂಗನೆಯರಿಂ ಸಮಾಕ [ಪಾಕಾಂ. ಕು]ಲಿತಮಾಗಿಹ ಭೋಗವತಿಯ ನದಿಯಿಂದೆ . . . ಪಾತಾಳಕ್ಕೆ ಪುಂಡರೀಕಂ ಬಂದನು (ಕ್ಷತ್ರಿಯಾ. ೨೪-೧೩). [ಸಂ.]

ಸಮಾಕಾರ (ನಾ). ಒಂದೇ ಹೋಲಿಕೆಯುಳ್ಳ ರೂಪ; ಸಮಾನವಾದ ಆಕಾರ: ಆ ಕನ್ನೆಯಂ ಮಾಡಿದನೀಗಳ್ ಸ್ವೇಚ್ಛೆಯಿಂದಿರ್ದವನಿಪತಿಗಳೊಳ್ ಕಾಮಸಂತಾಪಮಂ ಕೂಡಿದನಾದಂ ತತ್ಪಿತೃದ್ವಂದ್ವದ ಮನಕೆ ಸಮಾಕಾರಸಂಪದ್ವರಾಲಾಭದುರಂತೋದ್ವೇಗಮಂ ನೀಡಿದಂ . . . ಪದ್ಮಸದ್ಮಂ (ಚಂದ್ರಪ್ರ. ೫-೯೭).

[ಸಂ.]

ಸಮಾಕೀರ್ಣ (ನಾ). ತುಂಬಿದುದು; ಹರಡಿದುದು : ಈ ಉತ್ಸವಕಾಲದಲ್ಲಿ ವಾರಣಾವತವು ವಿವಿಧರತ್ನಗಳಿಂದ ಸಮಾಕೀರ್ಣವಾಗಿ . . . ಮೆರೆಯುತ್ತಿರುವುದು (ಭೀಷ್ಮಚ. ೭೧). [ಸಂ.]

ಸಮಾಕೃಷ್ಟ (ಗು). ಎಳೆಯಲ್ಪಟ್ಟ ; ಆಕರ್ಷಿಸಿದ : ನಿಜವದನತನುಸಹಜಸೌರಭ್ಯ ಸಮಾಕೃಷ್ಟ ಮದವದಳಿಪರಿಸರಣಕರಣಚರಣಚರಕರಪರಿವೀಜ್ಯಮಾನಧವಳ ಚಾಮರ ಜನಿತ ಪವನ (ರಾಜಶೇ. ೧೦-೧೫ ವ). [ಸಂ.]

ಸಮಾಖ್ಯೆ (ನಾ). ೧. ಹೆಸರು; ಅಭಿಧಾನ : ಮನ್ಮಥಂ ಸ್ತುತಿಯಿಸಿ ಮಾಮರಕ್ಕೆ ಕುಜರಾಜ ಸಮಾಖ್ಯೆಯನಿತ್ತನಟ್ಟಿಯಿಂ (ಚಂದ್ರಪ್ರ. ೭-೪೬); ಮಧುಮಿತ್ರತೆ ವಚನದೊಳಿರೆ ಕಾಂತಾತತಿ ಪಡೆಯದೆ ಕಾಮಿನೀಸಮಾಖ್ಯೆಯನಿಳೆಯೊಳ್ (ರಾಜಶೇ. ೧೨-೫೪). ೨. ಕೀರ್ತಿ ; ಯಶಸ್ಸು. [ಸಂ. ಸಮಾಖ್ಯಾ]

ಸಮಾಗತ (ಗು). ೧. ಒಟ್ಟಾಗಿ ಬಂದ,— ಸೇರಿದ. ೨. ಉಂಟಾದ; ಪ್ರಾಪ್ತವಾದ: ನಿಮನಿಮಗೆ ಮುಂಕೊಂಡು ವಂಶಕ್ರಮಸಮಾಗತಕೀರ್ತಿಸತಿಯಲಿ ಮಮತೆಗಳ ನೆಱೆ ಮಾಡಿ (ಕುಮಾದ್ರೋ. ೧೫-೩೫). [ಸಂ.]

ಸಮಾಗಮ (ನಾ). ೧. ಸೇರಿಕೆ; ಸಂಯೋಗ : ವ್ಯಾಸಮುನಿಪ್ರಣೂತಕೃತಿಯಂ ಸಲೆ ಪೇಳ್ದು ಪೊದ[ಱ್ದ] ಸತ್ಕವಿವ್ಯಾಸಸಮಾಗಮಾನ್ವಿತಮನಾದಿಪುರಾಣಮನೆಯ್ದೆ ಪೇಳ್ದು ವಾಕ್ಪ್ರೇಸುಭಗಂ (ಪಂಪಭಾ. ೧೪-೬೨); ಆವ ಭವದಲಿ ನಿಮ್ಮ ರಾಜ್ಯವದಾವ ಭವದಲಿ ಪುತ್ರಮಿತ್ರರದಾವ ಜನ್ಮಂಗಳ ಸಮಾಗಮ ನಿಮ್ಮ ರಾಣಿಯರು (ಕುಮಾಗ. . ೧-೨೨). ೨. ಒಬ್ಬರನ್ನೊಬ್ಬರು ಸಂಧಿಸುವುದು; ಭೇಟಿ ; ಮಿಲನ: ಅವರಿಬ್ಬರ ಸಮಾಗಮವಾಗಿ ಎಷ್ಟೋ ವರ್ಷಗಳಾಗಿವೆ (ರೂಢಿ). ೩. [ಕಾಮಶಾ] ಕೂಟ; ಸಂಭೋಗ : ಅಂತು ಬಂದ ಮಟ್ಗಾಲಮಂ ಬಗೆಯದೆ . . . ಕಾದಂಬರೀಸಮಾಗಮೌತ್ಸುಕ್ಯದೊಳಮೆಲ್ಲಿಯುಂ ತಡೆಯದೆ . . . ಬರ್ಪಿನಂ (ಕಾದಂಉ . ೫೩೫); ಬಗೆಯೊಳ್ ಪೊಣ್ಮುವಲಂಪು ಕಾತರತೆಯಂ ತಂದೀಯೆ . . . ನೆರೆದರ್ ಮನಂ ತಣಿವಿನಂ ನಾನಾರತಪ್ರೌಢಿಯಿಂ - ಇದು ಮಧ್ಯ ಸಮಾಗಮಂ (ಕಾವ್ಯಾವ. ೮೦೧). ೪. [ಜ್ಯೋತಿ] ಗ್ರಹಗಳು ಒಂದೆಡೆ ಸೇರುವುದು; ಗ್ರಹಕೂಟ. [ಸಂ.]

ಸಮಾಗಮನ (ನಾ). = ಸಮಾಗಮ ೩: ಮದೀಯ ಸಮೀಹಿತಮುಂ ಕಾದಂಬರಿಯ ಮನಃಪ್ರಿಯಸಮಾಗಮನನಿರ್ವೃತ್ತಿಯುಂ ಸಮನಿಸಿತಿಲ್ಲೆಂದು ಮನಂ ನೊಂದು (ಕಾದಂಉ. ೫೪೬). [ಸಂ.]

ಸಮಾಗ್ನಿ (ನಾ). ಜಠರಾಗ್ನಿಯ ನಾಲ್ಕು ಸ್ಥಿತಿಗಳಲ್ಲಿ ಒಂದು; ವಾತ, ಪಿತ್ತ, ಶ್ಲೇಷ್ಮಗಳಿಂದ ಉಂಟಾಗುವ ದೋಷ,— ವಿಕಾರ: ದೇಹದಲ್ಲಿ ಜಠರಾಗ್ನಿಯು ನಾಲ್ಕುತೆರನಾಗಿರುವುದೆಂತೆಂದೊಡೆ - ಮಂದಾಗ್ನಿ, ತೀಕ್ಷ್ಣಾಗ್ನಿ, ವಿಷಮಾಗ್ನಿ, ಸಮಾಗ್ನಿಯೆಂಬ ನಾಲ್ಕುವಿಧವಾದ ಅಗ್ನಿಗಳಲ್ಲಿ . . . ವಾತಪಿತ್ತಶ್ಲೇಷ್ಮಗಳಿಂದ ಸಮಾಗ್ನಿಯು ಉಂಟಾಗಿರುವುದು (ಸಕವೃ. ೧೬). [ಸಂ.]

ಸಮಾಘಾತ (ನಾ). ೧. ಕೊಲ್ಲುವುದು ; ವಧಿಸುವುದು. ೨. ಯುದ್ಧ; ಕದನ: "ಸಂಗ್ರಾಮಃ . . . ಸಮಾಘಾತಃ . . . ವಿಗ್ರಹಃ - ಈ ೩೫ ಕಾಳೆಗಂ" (ಹಲಾಯು. ೭೫-೩೦೦). [ಸಂ.]

ಸಮಾಚರಣ (ನಾ). ಅನುಸರಿಸುವಿಕೆ; ಆಚರಣೆ : ಭವಿಜನಸಮಾಚರಣ ಸಂಭಾಷಣಸದಾಸಂಸರ್ಗದೂರಕರು (ಬಸಪು. ೬-೧೬). [ಸಂ.]

ಸಮಾಚರಿಸು (ಕ್ರಿ). ಚೆನ್ನಾಗಿ ಆಚರಿಸು: ಇಂತಭ್ಯಂತರತಪದೊಳಂತರಂಗ ಸಂಶುದ್ಧನಾಗಿ ಸಮಾಚರಿಸಿ (ಸುಕುಮಾ. ೪-೨೦ ವ). [ಸಮಾಚರಣ + - ಇಸ್ಸು]

ಸಮಾಚಾರ (ನಾ). ೧. ವಿಷಯ; ಸಂಗತಿ; ಸುದ್ದಿ : ಈ ನಾಯಿಯ ಸಮಾಚಾರವನ್ನೆಲ್ಲಾ ಮುಂದಿನ ಬೇಸಿಗೆಗೆ ಇಟ್ಟುಕೊಳ್ಳೋಣ (ಶಾಲಮ. ೨೦೦); ಮಹಾದೇವಯ್ಯನವರು ಬೇನೆಯಿಂದ ಪೀಡಿತರಾಗಿ ಹಾಸಿಗೆಹಿಡಿದಿರುವರೆಂಬ ಸಮಾಚಾರವನ್ನು ಕೇಳಿದ ಬಳಿಕಂತೂ ಅನೇಕ ವಿದ್ಯಾರ್ಥಿಗಳು ದುಗುಡ ತುಂಬಿದರು (ರಂಗರೋ. ೧೬೬). ೨. ಸರಿಯಾದ ನಡವಳಿಕೆ ; ಸದ್ವರ್ತನೆ.

[ಸಂ. (ಸಂ + ಆಚಾರ; ಸಮ + ಆಚಾರ)]

ಸಮಾಜ (ನಾ). ೧. ಗುಂಪು ; ಸಮೂಹ : ಪರಿಮಿತಾಮರೇಂದ್ರಸಮಾಜಂಬೆರಸು ರಾಜಭವನಮಂ ಪೊಕ್ಕು (ಆದಿಪು. ೭-೧೦೯ ವ). ೨. ರಾಶಿ; ಒಟ್ಟೆಲು : ಪುಣ್ಯಶೈಲಪುಣ್ಯಹ್ರದಸಮಾಜವಿಭ್ರಾಜಿತಮುಂ . . . ಎನಿಸಿದ ಭರತಕ್ಷೇತ್ರದ ಮಧ್ಯದೊಳ್ ಮಧ್ಯದೇಶಮುಂಟು (ಜಗವಿ. ೨-೧ ವ); ಸಮುಲ್ಲಸಿತ ನವಾಂಕುರವ್ರಜವೊ ಚಂಚುಸಮಾಜಮೊ ಪೇಟ್ (ಕುಸುಮಾ. ೯-೫೭). ೩. ಸಭೆ; ಗೋಷ್ಠಿ. ೪. ಸಂಘ; ಸಂಸ್ಥೆ : ಪ್ರಾರಂಭೋತ್ಸವದ ದಿನ ಸಮಾಜದ ಎಲ್ಲ ಸದಸ್ಯರಿಗೆ ಒಂದೊಂದು ಪ್ಲೇಟು ಆಯಿಸ್ಕ್ರೀಮು ಪುಕ್ಕಟೆಯಾಗಿ ದೊರೆಯಬೇಕೆಂದು ಗೊತ್ತಾಗಿದ್ದಿತು (ಸಮಜೇ. ೭೬೩). ೫. ಕೂಡಿ ಬಾಳುವುದು; ಸಾಂಘಿಕಜೀವನ : ಸಮಾಜಬಲವೇ ಬಲವಲ್ಲದೆ ಧರ್ಮಬಲವೆಲ್ಲಿಯದು! (ಭಕ್ತಿಬ. ೪೮); ಮನುಷ್ಯಸಮಾಜವು ಎಲ್ಲಿಯೋ ಒಂದಲ್ಲ ಒಂದು ಕಡೆ ತಪ್ಪು ಮಾಡಿರಲೇಬೇಕೆಂದು ಅನಿಸುತ್ತದೆ (ಬಾಣಅ. ೨೭). [ಸಂ.]

ಸಮಾಜಕಂಟಕ (ನಾ). ೧. ಸಮಾಜಕ್ಕೆ ಅಹಿತವಾದುದು; ಸಮಾಜಕ್ಕೆ ಕೇಡುಂಟುಮಾಡುವಂಥದು: ಸಮಾಜಕಂಟಕವಾದ ಇಂಥ ಅಪರಾಧಗಳ ಅಪಾಯವನ್ನು ನೀವೀಗ ಗ್ರಹಿಸಬೇಕಾಗಿದೆ (ಪುನರು. ೯೪). ೨. ಸಮಾಜಕ್ಕೆ ಕೇಡು

ಬಗೆಯುವವನು : ಸಮಾಜಕಂಟಕರಿಂದ ದೇಶದ ಪರಿಸ್ಥಿತಿ ಹದಗೆಡುತ್ತಿದೆ (ರೂಢಿ). [ಸಂ.]

ಸಮಾಜಕಲ್ಯಾಣ (ನಾ). ಸಮೂಹಜೀವನದ ಏಳಿಗೆ, — ಅಭಿವೃದ್ಧಿ: ಸಮಾಜಕಲ್ಯಾಣವು ಅರ್ಥಶಾಸ್ತ್ರಕ್ಕೆ ಮುಖ್ಯಲಕ್ಷ್ಯವೇ ಹೊರತು ಅರ್ಥಕಲ್ಪನೆಯಲ್ಲ (ಭಾರದ. ೩೫೦). [ಸಂ.]

ಸಮಾಜಘಾತುಕ (ನಾ). = ಸಮಾಜಕಂಟಕ ೨ : ಸಮಾಜಘಾತುಕರಿಗೆ ತಕ್ಕ ಶಿಕ್ಷೆಯಾಗಲೇಬೇಕು (ರೂಢಿ). [ಸಂ.]

ಸಮಾಜಜೀವಿ (ನಾ). ಸಮಾಜದಲ್ಲಿ ವಾಸಮಾಡುವವನು; ಸಾಮಾಜಿಕ: ವಯೋಧರ್ಮಕ್ಕನುಗುಣವಾಗಿ ನಡೆಯುವುದು ಪ್ರತಿಯೊಬ್ಬ ಸಮಾಜಜೀವಿಯ ಆದ್ಯಕರ್ತವ್ಯ (ಪುನರು. ೬೧). [ಸಂ. ಸಮಾಜಜೀವಿನ್]

ಸಮಾಜದ್ರೋಹಿ (ನಾ). ಸಮಾಜವನ್ನು ವಂಚಿಸುವ ವ್ಯಕ್ತಿ: ಅವನು ವಿಶ್ವಾಸ ಘಾತಕಿ. ಸಮಾಜದ್ರೋಹಿಯಾದಂತಾಯಿತು (ನವನೀ. ೯೯). [ಸಂ. ಸಮಾಜದ್ರೋಹಿನ್]

ಸಮಾಜವಾದ (ನಾ). ಒಂದು ಬಗೆಯ ರಾಜಕೀಯಸಿದ್ಧಾಂತ; ವ್ಯಕ್ತಿ ಸ್ವಾತಂತ್ರ್ಯವು ಸಮಾಜಹಿತಕ್ಕೆ ಸಂಪೂರ್ಣವಾಗಿ ಅಧೀನವಾಗಿರಬೇಕೆಂಬ ವಾದ : ಅಲ್ಲಿ ಕೆಲವೆಡೆ ಪ್ರಜಾಪ್ರಭುತ್ವದ ಗರ್ಭವನ್ನು ಸೀಳಿ ಸಮಾಜವಾದವು ತಲೆಯೆತ್ತಿದೆ (ಸವ್ಯಕಾ. ೧೮). [ಸಂ.]

ಸಮಾಜವಾದಿ (ನಾ). ಸಮಾಜವಾದದಲ್ಲಿ ನಂಬಿಕೆಯಿರುವವನು : ನೆಕ್ಲುದೋವ್ ಸಮಾಜವಾದಿಯೆಂಬ . . . ಸಂಗತಿ ಆ ಹೊತ್ತಿಗಾಗಲೆ ಅವನಿಗೆ ಮನವರಿಕೆಯಾಗಿತ್ತು (ಪುನರು. ೪೨೫). [ಸಂ. ಸಮಾಜವಾದಿನ್]

ಸಮಾಜವೀಳ್ಯ (ನಾ). ಸಮೂಹಕ್ಕೆ ಕೊಡುವ ತಾಂಬೂಲ : ಭೋಜನಾಂತರದ ಕೈತೊಳೆದು ಕರ್ಪೂರದ ಸಮಾಜವೀಳ್ಯವನಿತ್ತು . . . ಅವರ ಬೀಳ್ಕೊಟ್ಟಾಗ ಸಜ್ಜೆಯ ರಾಜಮಂದಿರಕ್ಕೆತಂದ (ಕಂನಿವಿ. ೮-೯೩). [ಸಮಾಜ + ವೀಳ್ಯ (< ವೀಳೆಯ)]

ಸಮಾಜಶಾಸ್ತ್ರ (ನಾ). ಮನುಷ್ಯಸಮಾಜದ ಬೆಳವಣಿಗೆ ಹಾಗೂ ರೀತಿ ನೀತಿಗಳನ್ನು ತಿಳಿಸುವ ಶಾಸ್ತ್ರ : ಅರ್ಥಶಾಸ್ತ್ರಕ್ಕೆ ರಾಷ್ಟ್ರಶಾಸ್ತ್ರವೂ ಅಂಗ ವಾಗುವುವು (ಭಾರದ. ೩೫೦). [ಸಂ.]

ಸಮಾಜಸುಧಾರಕ (ನಾ). ಸುತ್ತಲ ಪರಿಸರ ಹಾಗೂ ಅದರ ರೀತಿನೀತಿಗಳನ್ನು ಸುಧಾರಿಸುವವನು : ರಾಜಾರಾಮಮೋಹನರಾಯ, ದಯಾನಂದಸರಸ್ವತಿಯಂಥ ಸಮಾಜಸುಧಾರಕರು . . . ಭಗವದ್ಗೀತೆಯಿಂದ ಸ್ಫೂರ್ತಿ ಪಡೆದಿದ್ದಾರೆ (ಧರ್ಮಸಾ. ೧೨೭). [ಸಂ.]

ಸಮಾಜಸುಧಾರಣೆ (ನಾ). ಸುತ್ತಲ ಪರಿಸರ ಹಾಗೂ ಅದರ ರೀತಿನೀತಿಗಳನ್ನು ಸುಧಾರಿಸುವುದು : ರಾಮಾನುಜರು ಹಾಗೂ ಏಕನಾಥರು ಸಮಾಜಸುಧಾರಣೆ ಯನ್ನು ಕೈಕೊಂಡರು (ಧರ್ಮಸಾ. ೧೫೧). [ಸಂ. ಸಮಾಜಸುಧಾರಣ]

ಸಮಾಧಾನ (ನಾ). ೧. ಮನಸ್ಸಿನ ಶಾಂತಿ; ನೆಮ್ಮದಿ : ಕಾಮಕ್ರೋಧಾದಿ ಕಲುಷಮಾಗದೆ ಸಾತ್ವಿಕಮಾದ ಚಿತ್ತಸ್ಥೈರ್ಯವೇ ಸಮಾಧಾನವಾಗಿರುವುದು (ವಿವೇಕ. ೧೫); ತಿಂಗಳಾರಕೆ ಬಹನೆಂಬ ಭಾಷೆಯಂ ಭಾವಿಸುತೆ ಭಾಮಿನಿ ಸಮಾಧಾನಬುದ್ಧಿಯಿಂ ಮೇಲೇಳುತಲ್ಲಿಂ ನಡೆದು (ಚತ್ರಾಂಗ. ೫೬-೧೫೩೪). ೨. ತೃಪ್ತಿ; ತಣಿವು : ಸತ್ಯವಿದೆ ಸಮಾಧಾನವಿದೆ ಮನಕೆ ಬಾರದಿದೇನಯ್ಯಾ (ಬಸವ. ೯೧೩); ವರಸಮಾಧಾನದಲಿ ಕೈತೊಳೆದುರವಣೆಪ ತೇಗಿನ ತರಂಗದ ಪರಬಲಾಂತಕನೆದ್ದು ನಿಂದನು ಸಿಂಹನಾದದಲಿ (ಕುವಾಅ. ೧೦-೩೪). ೩. ತಾಳ್ಮೆ; ಸಹನೆ : ಈ ಪ್ರಾಣಿಗೆ ಸಮಾಧಾನವೆಂಬುದೇ ಇರಲಿಲ್ಲ (ದೀಪಹ. ೫, ೧೧೭). ೪. ಯಾವುದಾದರೂ ಒಂದೇ ವಿಷಯದ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸುವುದು; ಚಿತ್ತೈಕಾಗ್ರತೆ; ಸಮಾಧಿಸ್ಥಿತಿ : ಸಮಾಧಾನವೆಂದರೆ ವೇದಾಂತಶ್ರವಣದಲ್ಲಿಯ ಮನಸ್ಸು ನಿಲ್ಲಿಸೋಣ (ಈಶಸ್ಯ. ೯-೧೦). 'ಯೋಗಸಮಾಧಾನ' ಪರಾ. ೫. (ಆಕ್ಷೇಪಣೆಗೆ ಕೊಡುವ) ಉತ್ತರ ; ವಿವರಣೆ.

ಸಮಾಧಾನ ಕೇಳು = ವಿವರಣೆಯನ್ನು ಕೇಳು : ಅವನಿಂದಾಗಿರುವ ತಪ್ಪಿಗೆ ಸಮಾಧಾನ ಕೇಳಬೇಕು (ರೂಢಿ). ಸಮಾಧಾನ ಹೇಳು = ೧. ದುಃಖ, ಕೋಪ ಮುಂತಾದುವುಗಳನ್ನು ಉಪಶಮನಮಾಡು : ಅವರ ದುಃಖಕ್ಕೆ ಸಮಾಧಾನ ಹೇಳುವುದಕ್ಕೂ ತೋರುತ್ತಿಲ್ಲ (ರೂಢಿ). ೨. ವಿವರಣೆ ನೀಡು ; ಸ್ಪಷ್ಟೀಕರಿಸು: ನೀನು ಮಾಡಿರುವ ತಪ್ಪಿಗೆ ಒಂದು ವಾರದೊಳಗೆ ಸಮಾಧಾನ ಹೇಳಬೇಕು (ರೂಢಿ). [ಸಂ.]

ಸಮಾಧಾನಕರ (ಗು). ತೃಪ್ತಿಯನ್ನುಂಟುಮಾಡುವ: ಕೆಲವೊಮ್ಮೆ ನಿಮಗೆ ಸಮಾಧಾನಕರ ಫಲಿತಾಂಶ ದೊರಕದಿರಬಹುದು (ಅಮಸಾ ೯೧). [ಸಂ.]

ಸಮಾಧಾನಿ (ನಾ). ಶಾಂತಮನಸ್ಸುಳ್ಳವನು: ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು (ಮಹಾದೇ. ಬ. ೪೫-೧೦೬). [ಸಂ. ಸಮಾಧಾನಿನ್]

ಸಮಾಧಾನಿಸು (ಕ್ರಿ). ಸಂತೈಸು : ಸುಂದರಿಯನ್ನು ಸಮಾಧಾನಿಸಲು ಪ್ರಯತ್ನಿಸಿದರು (ಹಳ್ಳಿಹಾ. ೯೪); 'ಮುಂದೆ ಭಗವಂತನ ಅನುಗ್ರಹದಿಂದ ಎಲ್ಲವೂ ಸುಗಮವಾಗುತ್ತದೆ' ಎಂದು ತಂತ್ರಿಯವರು ಗಣಪತಿಯನ್ನು ಸಮಾಧಾನಿಸಿದರು (ಪದ್ಮಸ. ೧೩೮). [ಸಮಾಧಾನ + - ಇಸ್ಸು]

ಸಮಾಧಿ (ನಾ). ೧. ಯಾವುದಾದರೊಂದು ವಿಷಯವನ್ನು ಕುರಿತಂತೆ ಇರುವ ತನ್ಮಯತೆ; ಏಕಾಗ್ರತೆ : ಕೂಡಲಸಂಗಮದೇವನ ಬಸಿಱ ಮಧ್ಯದ ಬಯಲ ಸಮಾಧಿಯಲಿಕ್ಕದೆ ಕೆಟ್ಟರು (ಬಸವ. ೯೧೯)ನ್ನೋಡಿದನು ಕಣ್ಣೆಯಾಡದೆ ಸೌಂದರ್ಯಸುಖದಿಂ ಸಮಾಧಿ ದೊರೆಕೊಂಡನೋಲ್! (ಶ್ರೀರಾಮಾ. ೫೫-೩೯). ೨. ತಪಸ್ಸು. ೩. ಹೆಣವನ್ನು ಹೂಳುವ ಸ್ಥಳ ಮತ್ತು ಆ ಸ್ಥಳದ ಮೇಲೆ ಕಟ್ಟುವ ಸ್ಮಾರಕ : ರಣಪಾರರಾ ಮಣಲೆಯರಸರಾ ಸಮಾಧಿಯೆ ಸಮಾಧಿ (ಎಕ. XIV. ಕಿರುಮಾ. ೨೫೩-೪; ಸು. ೫೦೦); ನನ್ನ ಸಮಾಧಿ ವೀರನಂದಿಯ ಪಕ್ಕದಲ್ಲಿಯೇ ಆಗಬೇಕು (ಚಳುಮ. ೨೮೪). ೪. ಕೆಲವು ಯತಿಗಳನ್ನು, ಜೀವಂತವಿರುವಾಗಲೇ ಕುಳಿತಿರುವ ಭಂಗಿಯಲ್ಲಿರುವಂತೆ ಹೂಳುವ ಒಂದು ಸಂಸ್ಕಾರ ಮತ್ತು ಹಾಗೆ ಹೂಳಿದ ನಂತರ ಆ ಸ್ಥಳದಲ್ಲಿ ಕಟ್ಟುವ ಬೃಂದಾವನ : ಅವರೋ ಸಮಾಧಿಯಲ್ಲಿರುವ ಯತಿಗಳು? (ಕಭಪ. ೩೬೫). ೫. [ಕಾವ್ಯಮೀಮಾ] ಹತ್ತುಬಗೆಯ ಕಾವ್ಯಗುಣಗಳಲ್ಲಿ ಒಂದು; ಒಂದರ ಧರ್ಮವನ್ನು ಇನ್ನೊಂದರಲ್ಲಿ ಆರೋಪಿಸಿಕೊಂಡು ಹೇಳುವುದು: ಪೆಱವಱ ಧರ್ಮಂಗಳನೇತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕಣ್ಣೆಱೆಯ ಚತುರೋಕ್ತಿ ಕೃತಿಯೊಳ್ ನೆಱೆದಿರ ಪೇಳ್ವುದು ಸಮಾಧಿಯೆನೆ ಪೆಸರ್ವಡೆಗುಂ (ಕಾವ್ಯಾವ. ೫೧೯); ಒಂದಱ ಧರ್ಮ ಮನೊಂದಕ್ಕಂದಂಬಡಿಪುದೆ ಸಮಾಧಿ (ಉದಯಾ. ೫); ಶ್ಲೇಷ . . . ಓಜಸ್ಸು, ಕಾಂತಿ, ಸಮಾಧಿ - ಈ ಹತ್ತುಗುಣಗಳೇ ವೈದರ್ಭಮಾರ್ಗದ "ಪ್ರಾಣ" (ಭಾರಮಾ. ೨೯). ೬. [ಯೋಗ] ಯೋಗದ ಎಂಟನೆಯ ಹಾಗೂ ಕಡೆಯ ಅವಸ್ಥೆ ; ಮನಸ್ಸನ್ನು ಪರಬ್ರಹ್ಮದಲ್ಲಿ ಐಕ್ಯಗೊಳಿಸುವುದು: ಸಮುಪಾತ್ತಸತ್ತಪೋವಿಘ್ನಸಂರೋಧಿ ಯಪ್ಪ ಸಮಾಧಿಯುಂ (ಚಂದ್ರಪ್ರ. ೧೧-೨೨ ವ); ಶ್ರುತಿಗಳ ಸರಾಗದ ಬಳಕೆಯಿವು ಮುನಿಗಳ ಸಮಾಧಿಗಳಾದಿಯಿವು . . . ಶಿವಯೆನುತ ಪದನಳಿನಯುಗಳದಲೊಡಲ ನೀಡಾಡಿದನು (ಕುವ್ಯಾಉ. ೮-೧೦). ೭. [ಜೈನ] ಷೋಡಶಭಾವನೆಗಳಲ್ಲಿ ಒಂದು; ಸಲ್ಲೇಖನವಿಧಿಯಿಂದ ಶರೀರತ್ಯಾಗಮಾಡುವುದು: ಸಮಾಧಿ ವೈಯಾವೃತ್ಯಕರಣಂ . . . ಪ್ರವಚನವತ್ಸಲತ್ವಮೆಂಬ ಷೋಡಶಭಾವನೆಗಳೊಳ್ (ಚಾಮುಂಪು. ೨೪೧); ಜಕ್ಕಲೆ ಮಹಾಸತಿ ಚಿತ್ತಮನಾಪ್ತತತ್ವದೊಳ್ ನಿಱೆಸಿ ಸಮಾಧಿಯಿಂ ನೆಱೆಯೆ ಸಾಧಿಸಿದಳ್ ಸುರಲೋಕಸೌಖ್ಯಮಂ (ಎಕ. VII, ಶಿಕಾ. ೧೯೬-೮ ; 1212). [ಸಂ.]

ಸಮಾಧಿಧ್ಯಾನ (ನಾ). ಏಕಾಗ್ರಚಿತ್ತದಿಂದ ಮಾಡುವ ಧ್ಯಾನ : ಜಪಾನುಷ್ಠಾನ ಬಿಡೆ ಬೆವರಿತು ಸಮಾಧಿಧ್ಯಾನ ಸೀಕರಿಯಾಯ್ತು ಸಾರವಿಚಾರಶಮಸಹಿತ (ಕುವ್ಯಾಅ. ೫-೧೨). [ಸಂ.]

ಸಮಾಧಿನಿಷ್ಠ (ನಾ). [ಯೋಗ] ಮನಸ್ಸನ್ನು ಪರಬ್ರಹ್ಮದಲ್ಲಿ ಐಕ್ಯಗೊಳಿಸಿ ದವನು : ಬ್ರಹ್ಮಸ್ವರೂಪವ ತಿಳಿದಂಥಾವನು ಸಮಾಧಿನಿಷ್ಠ (ಉತ್ತಟೀ. ೯-೧೩). [ಸಂ.]

ಸಮಾಧಿಮರಣ (ನಾ). [ಜೈನ] ಮನಶ್ಶಾಂತಿಯಿಂದ ಶರೀರತ್ಯಾಗ ಮಾಡುವುದು: ಸಮಾಧಿಮರಣದಿಂದೀಶಾನಕಲ್ಪದೊಳ್ ಕನಕಪ್ರಭನೆಂಬೊ ದೇವನಾಗಿ ಬಂದಿಲ್ಲಿ ಪುಟ್ಟಿ (ಶಾಂತಿಪು. ೯-೧೪ ಪ); ದೊರೆಕೊಳಿ ಸಮಾಧಿಮರಣಂ ಚರಣಾಯುಧಯುಗಳಮಟಿದು (ಯಶೋಚ. ೪-೬೯). [ಸಂ.]

ಸಮಾಧಿಯೋಗ (ನಾ). ಇಹಲೋಕದ ವ್ಯಾಪಾರವನ್ನು ತ್ಯಜಿಸಿ ಮೋಕ್ಷ ಮಾರ್ಗವನ್ನು ಪಡೆಯುವುದು : ಈ ದುರಾಗ್ರಹ ನಿಲಲಿ ಹಾಯಿಕು ಕೈದುವನು ಸುಸಮಾಧಿಯೋಗದಲ್ಕೈದು ನಿಜವನು (ಕುಮಾರ್ಯಾ. ೧೮-೫೮). [ಸಂ.]

ಸಮಾಧಿವಿಧಿ (ನಾ). = ಸಮಾಧಿಮರಣ : ಏಂ ಸಮಾಧಿವಿಧಿಯಂ ನೆಱೆ ತಾಳ್ದಿದನೋ ಮಹಾಬಲಂ (ಆದಿಪು. ೨-೬೦); ತಪಶ್ಚರಣನಿರತರಾಗಿ ಸಮಾಧಿವಿಧಿಯಿಂ ಎಗ್ರಹಮನುಬೆದು (ಪಂಡಾಮಾ. ೬-೫೭ ವ). [ಸಂ.]

ಸಮಾಧಿಸ್ಥ (ಗು). ೧. ಧ್ಯಾನದಲ್ಲಿ ನಿರತವಾದ. (ನಾ). ೨. ಧ್ಯಾನದಲ್ಲಿ ನಿರತನಾಗಿರುವವನು : ಒಬ್ಬಯ್ಯಂ . . . ಶ್ರೀಶೈಲವಿಪಿನೋದಾತ್ತಭೂಮಿಯೊಳ ವಿರಳಸಮಾಧಿಸ್ಥನಾಗಿರಲು (ಬಾಪು. ೩೪-೪). ೩. ಬೃಂದಾವನಪ್ರವೇಶ ಮಾಡಿದ ಯತಿ : ಶ್ವಾಸಗತಿಯನ್ನು ನಿರೋಧಿಸಿ, ಅರದರೆದ ಕಣ್ಣುಳ್ಳವರಾಗಿ, ಶ್ರೀರಾಘವೇಂದ್ರ ತೀರ್ಥಶ್ರೀಪಾದಂಗಳವರು ಸಮಾಧಿಸ್ಥರಾದರು (ಕಭಪ. ೬೭). [ಸಂ.]

ಸಮಾಧಿಸ್ಥಿತಿ (ನಾ). ಚಿತ್ತೈಕಾಗ್ರತೆ ; ತನ್ಮಯಸ್ಥಿತಿ : ಸಾಧಕನು . . . ಜ್ಞಾನಮಾರ್ಗ ಅಥವಾ ಸನ್ಮಾರ್ಗವನ್ನನುಸರಿಸಿ ಧ್ಯಾನಪೂರ್ವಕ ಸಮಾಧಿಸ್ಥಿತಿಯನ್ನು ಹೊಂದಿ ಶಿವಸಾಯುಜ್ಯವನ್ನು ಹೊಂದುವನು (ಭಾರದ. ೫೮); ಪರಮಾತ್ಮನ ಅರಿವಾದ ಬಳಿಕ ಎಲ್ಲಲ್ಲಿ ಮನಸ್ಸು ಹರಿದರೆ ಅಲ್ಲಲ್ಲಿ ಸಮಾಧಿಸ್ಥಿತಿಯೊದಗುತ್ತದೆ (ಭಾವಗೀ. ೧೫). [ಸಂ.]

ಸಮಾನ (ಗು). ೧. ಯೋಗ್ಯ ; ತಕ್ಕ. ೨. ಒಂದೇ ಬಗೆಯ ; ಒಂದೇ ರೀತಿಯ: ಅಲ್ಲಿ ಮೊದಲ ಪತ್ತಕ್ಕರಂ ಸಮಾನಸಂಖ್ಯೆಯಂ ಪಡೆಗುಂ (ಶಮದ. ೬ ವೃತ್ತಿ). ೩. ಎಲ್ಲರಿಗೂ ಅನ್ವಯಿಸತಕ್ಕ; ಸಮವಾದ : ಕಚೇರಿಯಲ್ಲಿ ಸಮಾನ ನಿಯಮಗಳನ್ನು ಪಾಲಿಸಬೇಕು (ರೂಢಿ). (ನಾ). ೪. ಎಣೆ; ಸಾಟಿ; ಸಮ: ಜಯ ಜಯ ದೇವದೇವ ಪುರಶಾಸನಶಾಸನಶಾಸನೈಕಚಿನ್ಮಯಮಯನುತ್ಕಸಂಪದಸಮಾನ ಸಮಾನಸಮಾನತಾಂಘ್ರಿ ಸನ್ನಯ (ರಾಜಶೇ. ೧೩-೫೨); ಎನ್ನ ನುಡಿಸ ನಿನಗಿಲ್ಲ ಸಮಾನ (ಗಣೇಶ. ೬-೧೪೪). ೫. ಎಲ್ಲರನ್ನೂ ಎಲ್ಲವನ್ನೂ ಒಂದೇ ಭಾವದಿಂದ ಕಾಣುವಿಕೆ ; ಸಮಭಾವ : ಸಮಾನಮೆಂಬುದು ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರ ಪಶುವ್ಯಗಪಕ್ಷಿಸರೀಸೃಪಗಳುವಂ ಸಮಂಗಾಣ್ಪ ಧರ್ಮಂ (ಜಾಪುಂಪು. ೬). ೬. ಶರೀರದ ಪಂಚಪ್ರಾಣವಾಯುಗಳಲ್ಲಿ ಒಂದು; ನಾಭಿಪ್ರದೇಶದಲ್ಲಿರುವ ಪ್ರಾಣವಾಯು : ಸಮಾನವಾಯುವು ನಾಭಿಸ್ಥಾನದಲ್ಲಿರ್ದು ಉಂಡುದಂ ನಮ್ಮ ಸ್ಥಾಂಗಗಳಿಗೆ ಹಂಚುತ್ತಿಹುದು (ವಜ್ರೇ. ೬೨); ಪಂಚಭೂತಗಳಿಂದ ಹಸ್ತಾದಿ ಪಂಚಕರ್ಮೇಂದ್ರಿಯಗಳು ಸಮುದಾಯದಿಂದ ಪ್ರಾಣಾಪಾನ ವ್ಯಾನೋದಾನ ಸಮಾನಗಳೆಂಬ ಪಂಚಪ್ರಾಣಗಳು ಹುಟ್ಟುವುವು (ಹಿಂದುಸಾ. ೧೯೬). [ಸಂ.]

ಸಮಾನತಳ (ನಾ). [ಚಿತ್ರಶಾ] ಚಿತ್ರವನ್ನು ಬರೆಯತಕ್ಕ ಸಮತಳವಾದ ಪ್ರದೇಶ : ಕೃಶಕೋಮಳ ನಿಮ್ನಘನೋನ್ನತಪ್ರದೇಶಂಗಳನಾ ಸಮಾನತಳದಲ್ಲಿಯೆ ಚಿತ್ರಕನೆಯ್ದೆ ತೋರ್ಪವೋಲ್ (ಪಂಪಭಾ. ೧೩-೨೧). [ಸಂ. ಸಮಾನತಲ]

ಸಮಾನತೆ (ನಾ). ಸರಿಸಮವಾಗಿರುವಿಕೆ : ಲಿಂಗಾಕೃತಿಯಿಂ ಸಮಾನತೆಯದಾಗಲ್ ಸ್ವೇಷ್ಟಲಿಂಗಕ್ಕೆ ಪಾಮರಲಿಂಗಂಗಳನಾಹ ಕಾಣ್ಬನೆ ಸಮಭಕ್ತಂ (ಶತಕ. ೯೨-೩೧).

[ಸಂ. ಸಮಾನತಾ]

ಸಮಾನತ್ವ (ನಾ). = ಸಮಾನತೆ : ಸಮಾಜದಲ್ಲಿ ಹೆಣ್ಣಿಗೂ ಸಮಾನತ್ವವಿರಬೇಕು (ರೂಢಿ). [ಸಂ.]

ಸಮಾನವಾಯು (ನಾ). = ಸಮಾನ ೬ : ಸಮಧಾತುಗಳನಱಿತು ಅನ್ನಪಾನಾದಿಗಳ ಪರಿಹರಿಸುವದೊಂದು ಸಮಾನವಾಯು (ಚನ್ನವ. ೬೬-೧೩); ಸಮಾನವಾಯುವೆಂದರೆ ನಾಭಿಪ್ರದೇಶದಲ್ಲಿ ಇದ್ದುಕೊಂಡು ಅನ್ನಪಾನಾದಿಗಳನು ಶರೀರ ಎಲ್ಲಕ್ಕೂ ಸಮನಾಗಿ ವ್ಯಾಪಿಸುವ ಹಾಗೆ ಮಾಡುವ ವಾಯುವು (ತತ್ತ್ವಸ್ಯ. ೧೪-೧೪). [ಸಂ.]

ಸಮಾನಸ್ಕಂಧ (ನಾ). ಸರಿಸಮಾನವಾದ ವ್ಯಕ್ತಿ : ಅಧಿಕಾರಿಗಳೊಡನೆಯಾಗಲಿ ಅಥವಾ ತನ್ನ ಸಮಾನಸ್ಕಂಧರೊಡನೆಯಾಗಲಿ ಅವನಿಗೆ ಹೆಚ್ಚು ಬಳಕೆ ಇರಲಿಲ್ಲ (ಮಲಸಾ. ೧೨೭). [ಸಂ.]

ಸಮಾನಸ್ಥ (ನಾ). ಸರಿಸಮಾನವಾದವನು; ಸರೀಕ : ಸಮಾನಸ್ಥರಲ್ಲಿ ವೈಮನಸ್ಯ ಏರಬಾರದು (ರೂಢಿ). [ಸಂ.]

ಸಮಾನಾಂತರ (ನಾ). ಒಂದೇ ಸಮವಾಗಿರುವ ದೂರ ,— ಅಂತರ: ಪ್ರತಿಯೊಂದು ಹಜಾರವನ್ನೂ ಮೂರು ಸಮಾನಾಂತರವುಳ್ಳ ಗೋಡೆಗಳಿಂದ ನಾಲ್ಕು ಸಣ್ಣಭಾಗಗಳನ್ನಾಗಿ ವಿಂಗಡಿಸಲಾಗಿದೆ (ಭಾರದ. ೪೯೩). [ಸಂ.]

ಸಮಾನಾಧಿಕರಣ (ನಾ). [ವ್ಯಾಕ] ಒಂದೇ ವಿಭಕ್ತಿಯಲ್ಲಿ ಪದಗಳು ಇರುವಿಕೆ; ಲಿಂಗ, ವಚನ, ವಿಭಕ್ತಿ ಮೊದಲಾದುವುಗಳಲ್ಲಿ ಪದಗಳಿಗೆ ಇರುವ ಹೊಂದಿಕೆ. [ಸಂ.]

ಸಮಾನೋದರ್ಯ (ನಾ). ಒಡಹುಟ್ಟಿದವನು ; ಸಹೋದರ : ''ಸಮಾನೋದರ್ಯಃ, ಸೋದರ್ಯಃ, ಸಗರ್ಭ್ಯಃ, ಸೋದರಃ - ಈ ೪ ಒಡಹುಟ್ಟಿದಂ'' (ಹಲಾಯು. ೮೪-೩೫೪). [ಸಂ.]

ಸಮಾಪದಿಸು (ಕ್ರಿ). [ಬೌದ್ಧ] ಸಿದ್ಧಿಯನ್ನು ಪಡೆ : ಸಂಜ್ಞಾನಿರೋಧವ ಸಮಾಪದಿಸಲಾನಂದನನುರುದ್ಧನೊಡನಿದೂ ಭದಂತ, ಪರಿನಿರ್ವಾಣವಯ್ದುದಂ (ಪ್ರಶಾಪ್ರ. ೮೮-೬೬೪). [ಸಮಾಪದ್ + -ಇಸು]

ಸಮಾಪನ (ನಾ). ೧. ಮುಕ್ತಾಯಗೊಳಿಸುವುದು. ೨. ಗ್ರಂಥದ ಒಂದು ಭಾಗ ; ಅಧ್ಯಾಯ. [ಸಂ.]

ಸಮಾಪ್ತ (ಗು). ೧. ಕೊನೆಗೊಂಡ ; ಮುಕ್ತಾಯವಾದ. ೨. ಪೂರ್ಣಗೊಂಡ; ಭರ್ತಿಯಾದ. ೩. ಮುಗಿಸಿದ ; ತೀರಿಸಿದ.

ಸಮಾಪ್ತವಾಗು = ಕೊನೆಗೊಳ್ಳು ; ತೀರು : ಎನ್ನ ಒಡಲು ಸಮಾಪ್ತವಾಗದ ಮುನ್ನ ಸವೆದಡೆ . . . ಪ್ರಮಥರುಗಳಾಣೆ (ಬಾಪು. ೪೪-೨೯). [ಸಂ.]

ಸಮಾಪ್ತಿ (ನಾ). ೧. ಕೊನೆ ; ಮುಕ್ತಾಯ : ವೃಷಭೇಂದ್ರಾವತಾರದ ಬಸವಚರಿತ ಸಮಾಪ್ತಿಯಾ[ಶಾಕಾ. ಪ್ರವಾ]ಯಿತ್ತು (ಬಾಪು. ೭೧-೯೨). ೨. ಕೊನೆಗೊಂಡುದು ; ಮುಗಿದುದು : ವರುಷವೊಂದು ಸಮಾಪ್ತಿ ಬಳಿಕನೊಳರಸನಂಘ್ರಿಪರೋಕನಾ ವಿಸ್ತರಣವಹುದು (ಕುಮಾಅ. ೧೯-೨೨). ೩. ಗ್ರಂಥದ ಕೊನೆಯ ಭಾಗ : ರುದ್ರ ನಾಟಕವು ಮುಂದೆ ಹೇಳುವ ಭಾಗಗಳಿಂದ ಕೂಡಿದೆ - ಪ್ರಸ್ತಾವನೆ (Prologue), ಪ್ರಸಂಗ (Episode), ಸಮಾಪ್ತಿ (Exode) (ಅಂಕಾ. ೯೦). [ಸಂ.]

ಸಮಾಪ್ತಿವಾಕ್ಯ (ನಾ). (ಪ್ರಾಚೀನ) ಗ್ರಂಥದ ಮುಕ್ತಾಯದ ಸಾಲು: ಸಮಾಪ್ತಿವಾಕ್ಯಂಗಳ್ (ಶಮದ. ಪುಟ. ೨೯೫); ಗ್ರಂಥಾಂತ್ಯದ ಸಮಾಪ್ತಿವಾಕ್ಯವು ಒಮ್ಮೊಮ್ಮೆ ಸಂಗ್ರಹವಾಗಿರುವುದುಂಟು (ಕುಮಾಸಾಂ. ೬೨). [ಸಂ.]

ಸಮಾಪ್ತಿಸು (ಕ್ರಿ). ಮುಗಿಸು ; ಕೊನೆಗಾಣಿಸು : ಅವನನ್ನು ೩೦ರಿಂದ ಳಂರೊಳಗ ತಮ್ಮ ಅವತಾರವನ್ನು ಸಮಾಪ್ತಿಸಿದ ಶಂಕರಾಚಾರ್ಯ, ಯೇಸುಕ್ರಿಸ್ತ ಮೊದಲಾದ ಅಲ್ಪಸಂಖ್ಯಕರಾದ ಮಹಾಪುರುಷರೊಂದಿಗೆ ಸೇರಿಸಬಹುದು (ಮೂರುಳು. ೯೨).

[ಸಮಾಪ್ತ + -ಇಸು]

ಸಮಾಮ್ನಾಯ (ನಾ). ೧. ಸಂಪ್ರದಾಯ; ಪದ್ಧತಿ. ೨. ಕಂಠಪಾಠ; ಉರು; ಸಂತೆಹೇಳುವುದು : ಈಶ್ವರಪ್ರಣೀತಗಳೂ ಸಮಾನಾರ್ಥಕಬೋಧಕಗಳೂ ಆದ ವೇದಾಗಮಗಳು ಸಮಾಮ್ನಾಯರೂಪವಾದ ಶ್ರುತಿಗಳೆಂಬ ಹೆಸರಿನಿಂದ ಸ್ಮೃತಿ ಪ್ರಮಾಣಗಳಾಗಿರುವುವು (ಭಾರದ. ೭೧). ೩. ಒಟ್ಟು ; ಮೊತ್ತ : ಅಕ್ಷರಸಮಾಮ್ನಾಯವೆಂದರೆ ವರ್ಣಸಮಾಮ್ನಾಯವೆಂದೇ ಅರ್ಥ (ದ್ರಾವಿ. ೯೩). [ಸಂ.]

ಸಮಾಯೋಗ (ನಾ). ೧. ಸೇರಿಕೆ ; ಸಂಯೋಗ. ೨. ಸಿದ್ಧತೆ; ಸಜ್ಜು. ೩. ಧನುಸ್ಸಿಗೆ ಬಾಣವನ್ನು ಹೂಡುವಿಕೆ. ೪. ಆಭರಣಗಳನ್ನು ಧರಿಸಿದವನು; ಸಾಲಂಕೃತನಾದವನು : ಸಕಲರಾಜಲೋಕಮುಂ ಬೀಡುದಾಣಂಗಳ್ಗೆ ಪೋಗಲ್ವೇೞ್ದು ವಿನೀತಸಮಾಯೋಗನಾಗಿ ಶಯ್ಯಾತಳದೊಳ್ ಮೆಯ್ಯನೀಡಾಡಿ (ಕಾದಂಬ. ೪೫೪).

[ಸಂ.]

ಸಮಾರಂಭ (ನಾ). ೧. ಮೊದಲುಮಾಡುವಿಕೆ; ಉಪಕ್ರಮ; ಆರಂಭ. ೨. ಏರ್ಪಾಡು ; ವ್ಯವಸ್ಥೆ. ೩. ಉತ್ಸಾಹ ; ಸಂಭ್ರಮ: ಆ ರತ್ನದ ಮಟೆ . . . ಭೋರ್‌ಭೋರೆನೆ ಪಂಚಾಶ್ಚರ್ಯ ಸಮಾರಂಭಯುತಂ ತಗುಳ್ಳು ಕಳೆದುದು ನಭದಿಂ (ಶಾಂತಿಪು. ೯-೧೬೩). ೪. ಹಬ್ಬ; ಪರ್ವದಿನ : (ಕ). ೫. ಧಾರ್ಮಿಕ, ಸಾಂಸ್ಕೃತಿಕ ಅಥವಾ ಸಾಹಿತ್ಯಕ ಸಂಬಂಧವಾದ ಕಾರ್ಯಕ್ರಮ ; ಸಮಾವೇಶ: ಇವನಿಲ್ಲದೆಯೆ ಯಾವ ಸಭೆ ಸಮಾರಂಭಕ್ಕು ಶೋಭೆಯಿಲ್ಲ (ನಲಮು. ೨೯-೨); ಕೊನೆಯಲ್ಲಿ ಅಲ್ಪೋಪ ಹಾರವೂ ಇದ್ದುದರಿಂದ ಸಮಾರಂಭಕ್ಕೆ ಜನರು ಕಲೆಯುವುದರಲ್ಲಿ ಸಂಶಯವಿರಲಿಲ್ಲ (ಹೇಮಂತ. ೩೫೩). ೬. ನಿವಾರಿಸುವುದು; ತ್ಯಜಿಸುವುದು : ಕೊಲೆಗೆ ಕಾರಣಮಪ್ಪ ಕೈದುಗಳಂ ಸಂಹರಿಸುವುದು ಸಮಾರಂಭಮೆಂಬುದು (ಶ್ರಾವಕಾ. ೮೧-೧೩). [ಸಂ.]

ಸಮಾರಾಧನೆ (ನಾ). ೧. ತೃಪ್ತಿಗೊಳಿಸುವ ಸಾಧನೆ. ೨. ಸೇವೆ ; ಶುಶ್ರೂಷೆ: ಪದುಳದಿಂ ಕಂಬಳಿಯನಿಕ್ಕಿಸಿ ಅದಱ ಮೇಲೀಶ್ವರಸಮಾರಾಧನೆಗೆ ಕುಳ್ಳಿರ್ದು (ಬಸವಪು. ೧೨-೧೬). ೩. ದೇವರು, ಪಿತೃಗಳು ಮುಂತಾದವರ ಪ್ರೀತ್ಯರ್ಥವಾಗಿ ಮಾಡುವ ಒಂದು ಧಾರ್ಮಿಕವಿಧಿ ಮತ್ತು ಅದರ ಅಂಗವಾಗಿ ಮಾಡುವ ಅನ್ನಸಂತರ್ಪಣೆ : ಕಾಶೀಯಾತ್ರೆ ಮಾಡಿ ಬಂದ ನಂತರ ಸಮಾರಾಧನೆ ಮಾಡುವುದು ಸಂಪ್ರದಾಯ (ರೂಢಿ). ೪. (ಆಲಂ) ಸ್ವಾರ್ಥಸಾಧನೆ: ಸಂಧಿಯಲ್ಲಿ ಸಮಾರಾಧನೆ ಮಾಡಿದ ಹಾಗೆ (ಗಾದೆ). ೫. ಪುಷ್ಕಳವಾದ ಭೋಜನ : ಶಿವು . . . ಲಾಡುಸಮಾರಾಧನೆಗೆ ಒಂದು ದಿನವಾದರೂ ತಪ್ಪಿಸಿಕೊಳ್ಳುವ ಮನುಷ್ಯನಲ್ಲ (ರಾಮಾನ. ೧೦೫). [ಸಂ. ಸಮಾರಾಧನ]

ಸಮಾರೂಢ (ಗು). ೧. ಏರಿದ; ಹತ್ತಿದ. (ನಾ). ೨. ಏರಿದವನು; ಹತ್ತಿದವನು : ಹಯವರಸಮಾರೂಢನಾಗಿ . . . ಕುಂತಳಪುರದ ಬಾಹ್ಯೋಪವನಕೆ ಬರಲು (ಕೃಷ್ಣಭಾ. ೨೯-೪೪). [ಸಂ.]

ಸಮಾರೋಪ (ನಾ). ಮುಕ್ತಾಯ; ಕೊನೆ : ಕಾರ್ಯಕ್ರಮದ ಸಮಾರೋಪ ಚೆನ್ನಾಗಿ ನಡೆಯಿತು (ರೂಢಿ). [ಸಂ.]

ಸಮಾರೋಪಭಾಷಣ (ನಾ). ಯಾವುದಾದರೊಂದು ಕಾರ್ಯಕ್ರಮದ ಕೊನೆಯಲ್ಲಿ ಮಾಡುವ ಉಪನ್ಯಾಸ: ಮುಖ್ಯಾಧ್ಯಾಪಕರು ಸಮಾರೋಪಭಾಷಣ ಮಾಡಿ ಎಳ್ಳುಬೆಲ್ಲವನ್ನು ಹಂಚಲು ಆಸ್ಪದಮಾಡಿಕೊಟ್ಟರು (ರಂಗರೂ. ೧೧೪). [ಸಂ.]

ಸಮಾರೋಪಿತ (ಗು). ಎತ್ತಿ ಹಿಡಿದ ; ಏರಿಸಿದ : ಆ ಪೂಬಲನಾಳ್ದನಖಿಳಮಹೀಪತಿ ಮದದಂತಿದಂತಖಂಡನೆಗೆ ಸಮಾರೋಪಿತಕೃಪಾಣಧಾರಾವ್ಯಾಪಾರಂ ಸ್ತಿಮಿತಸಾಗರಂ ಮಂಡಳಿಕಂ (ಶಾಂತಿಪು. ೧-೬೬). [ಸಂ.]

ಸಮಾರೋಹ (ನಾ). ಹಬ್ಬ ; ಪರ್ವ : ಇಷ್ಟು ವಾದ್ಯ ಓಲಗ ಬಾಜಿಸಿ, ಇಷ್ಟು ದೊಡ್ಡ ಸಮಾರೋಹ ಮಾಡಿ ಯಾವ ನಷ್ಟಗ್ರಹ ಯಾಕೆ ತೊಡೆದುಬಿಟ್ಟತೋ ಕಾಣೆ (ಇಪ್ಪ. ೪೫೫). [ಸಂ.]

ಸಮಾರ್ಚನ (ನಾ). ಪೂಜೆಮಾಡಿದವನು ; ವಿರಚಿತದೇವವಿಪ್ರಾನಳಸಮಾರ್ಚನನು ಕನಕಕವಚವ ತೊಟ್ಟು . . . ರಥವೇಱಿದನು (ಕುಮಾರ್ಯೂ. ೯-೧೪). [ಸಂ.]

ಸಮಾಲಂಕಾರ (ನಾ). [ಕಾವ್ಯಮೀ] ಒಂದು ಅಲಂಕಾರದ ಹೆಸರು; ಅನುರೂಪಪದಾರ್ಥಗಳ ಘಟನೆಯ ವರ್ಣನೆ ಮಾಡುವ ಒಂದು ಬಗೆಯ ಅಲಂಕಾರ: ಆವ ವಸ್ತುವಿಗೆ ತನ್ನ ರೂಪಕ್ಕೆ ತಕ್ಕಂತಹುದರಲ್ಲಿ ತಾನಿರಲು ಇವೆರಡರ ಸಂಬಂಧವಂ ವರ್ಣಿಸಲ್ಕೆ ಸಮಾಲಂಕಾರವೆನಿಪುದು (ಕವಲ. ೮೦); ಅನುರೂಪ ಪದಾರ್ಥಗಳ ಘಟನೆಯ ವರ್ಣನೆ ಸಮಾಲಂಕಾರವೆನ್ನಿಸಿಕೊಳ್ಳುವುದು (ಕೃಪಿ. ೨೮೦). [ಸಂ.]

ಸಮಾಲಂಭ (ನಾ). ಶರೀರಕ್ಕೆ ಸುಗಂಧಲೇಪನವನ್ನು ಬಳಿದುಕೊಳ್ಳುವುದು. [ಸಂ.]

ಸಮಾಲಂಭನ (ನಾ). = ಸಮಾಲಂಭ : "ಸಮಾಲಂಭನಂ, ಚರ್ಚಾ, ಮಾರ್ಷ್ಟಿಃ - ಈ ೩ ಚರ್ಚೆ" (ಹಲಾಯು. ೮೯-೩೮೬). [ಸಂ.]

ಸಮಾಲಕ್ಷಿತ (ಗು). ಸರಿಯಾಗಿ ಲಕ್ಷಿಸಲ್ಪಟ್ಟ ,— ಗ್ರಹಿಸಿದ : ಕಾಳಸ್ವಭಾವದೇಶ ಸಮಾಳಕ್ಷಿತವಸ್ತುರೂಪವಿಪರೀತಮದಂತಾಳೋಕವಿರುದ್ಧಂ ಗುಣದೋಳಿಗೆ ವಂದಿರ್ಕುಮರಮ ಕವಿಕೌಶಲದಿಂ (ಕಾವ್ಯಾವ. ೪೭೧). [ಸಂ.]

ಸಮಾಲಿಂಗಿತ (ಗು). ೧. ದೃಢವಾಗಿ ಬೆರೆತ ,— ಸೇರಿದ : ಸುಮಿತ್ರಂ . . . ರಾಜ್ಯಲಕ್ಷ್ಮೀಸಮಾಲಿಂಗಿತವ್ಯಾ[ಹ]ತದಕ್ಷಲಕ್ಷಣಶಕ್ತಿತ್ರಯಪ್ರಭಾವನಾಗಿ . . . ಅರಸುಗೆಯ್ಯುತ್ತಮಿರೆಯಿರೆ (ವರ್ಧಮಾ. ೮-೧ ವ). (ನಾ). ೨. ದೃಢವಾಗಿ ಸೇರಿದುದು ,— ಬೆರೆತುದು : ಎರಡನೆಯಾಗಮಮೆಂಬುದು ಆಪ್ತಮುಖ ವಿನಿರ್ಗತಮುಂ ಪೂರ್ವಾಪರವಿರೋಧರಹಿತಮುಂ ಸಪ್ತಭಂಗಿಸಮಾಲಿಂಗಿತಮುಂ . . . ಅಪ್ಪುದು (ಚಾವುಂಪು. ೫). [ಸಂ.]

ಸಮಾಲೋಕ (ನಾ). ನೋಟ; ದೃಷ್ಟಿ: ಶೂನ್ಯಸಮಾಲೋಕಂ ತನುತ್ಪಂಬಡೆದ ತನು ವೃಥಾನಲ್ಪಸಂಕಲ್ಪಚಿತ್ತಂ . . . ನೆಗಳ್ದಿರೆ ವಿರಹಾಕ್ರಾಂತೆ ತತ್ಕಾಂತೆಯಿರ್ದಳ್ (ರಾಜಶೇ. ೭-೭೬). [ಸಂ.]

ಸಮಾಲೋಚಕ (ಗು). ೧. ಸರಿಯಾಗಿ ಪರಿಶೀಲಿಸುವ ,— ವಿಮರ್ಶಿಸುವ: ಅಂದಿನ ಸಮಾಲೋಚಕಸಮಿತಿಯಲ್ಲಿ ಒಂದೆರಡು ಮುಖ್ಯವಿಷಯಗಳು ತೀರ್ಮಾನವಾದುವು (ರೂಢಿ). (ನಾ). ೨. ಪರಿಶೀಲಿಸುವವನು; ವಿಮರ್ಶಕ: ಮನ್ಮಥ ದತ್ತನ ಲೇಖನಪದ್ಧತಿಗೆ ಸಮಾಲೋಚಕನು ತೀಕ್ಷ್ಣಉಪಹಾಸ ವ್ಯಕ್ತಪಡಿಸಿದ್ದಾನೆ (ಇಪ್ಪ. ೨೫೩). [ಸಂ.]

ಸಮಾಲೋಚನೆ (ನಾ). ಆಲೋಚನೆ; ಪರಾಮರ್ಶೆ: ಸಚಿವಶಾಖೆ ಸೆನೆಟ್ ಒಡನೆ ಸಮಾಲೋಚನೆ ನಡೆಸುತ್ತದೆ (ಪುನರು. ೪೨೩). [ಸಂ. ಸಮಾಲೋಚನ]

ಸಮಾಲೋಚಿಸು, ಸಮಾಳೋಚಿಸು (ಕ್ರಿ). ಆಲೋಚಿಸು ; ಪರಾಮರ್ಶಿಸು: ರಾಜ್ಯದ ಅಧಿಕಾರೀವರ್ಗದವರೂ ಸೇರಿ ಸಮಾಲೋಚಿಸಿ ಮಹಾರಾಜರೆಡೆಗೆ ಹೋದರು (ಕುಂಕುಮ. ೩೮). ಸಮಾಳೋಚಿಸು : ಈ ಸ್ವಯಂಪ್ರಭೆಗೆ ಪಾಟಿಯೆನಿಪ್ಪನನಿಂ[ತಿದಂ] ಸಮಾಳೋಚಿಸಿ ಪೇಳ್ಬುದು (ವರ್ಧಮಾ. ೩-೪೮). [ಸಮಾಲೋಚನೆ + - ಇಸ್ಕು]

ಸಮಾವರ್ತನ (ನಾ). ೧. ಹಿಂದಿರುಗುವಿಕೆ ; ವಾಪಸ್ಸಾಗುವಿಕೆ. ೨. ಷೋಡಶ ಸಂಸ್ಕಾರಗಳಲ್ಲಿ ಒಂದು; ಬ್ರಹ್ಮಚಾರಿಯು ವೇದಾಧ್ಯಯನವನ್ನು ಮುಗಿಸಿ ಗುರುಕುಲದಿಂದ ಹಿಂದಿರುಗಿದಾಗ ಮಾಡುವ ಒಂದು ವಿಧಿ: ಉಪನಯನವೆಂದರೆ ಗುರುಕುಲಕ್ಕೆ ಹೋಗುವುದು, ಸಮಾವರ್ತನವೆಂದರೆ ಅಲ್ಲಿಂದ ಹಿಂತಿರುಗುವುದು (ಆರ್ಯಧ. ೧೨೭). [ಸಂ.]

ಸಮಾವರ್ತನೆ (ನಾ). = ಸಮಾವರ್ತನ ೨ : ಮದುವೆ ನಾಲ್ಕು ದಿನಗಳದ್ದಿದ್ದು, ಮುಂಚೊಂದುದಿನ ಸಮಾವರ್ತನೆ ಅಥವಾ ನಾಂಗಿ (ಜಾನಗೀ. ೭೮). [ಸಂ. ಸಮಾವರ್ತನ]

ಸಮಾವಾಸ (ನಾ). ಬೀಡು ; ಪಾಳೆಯ : ಆ ವಿಜಿಗೀಷುವ ಸೈನ್ಯಸಮಾವಾಸದಿನಧಿಕ ಮೊಪ್ಪಿ ತೋಱೆದುದು . . . ಮಲಯಪರ್ವತಕಟಕಂ (ಶಾಂತಿಪು. ೧೧-೧೧). [ಸಂ.]

ಸಮಾವಿಷ್ಟ (ಗು). ೧. ಒಳಸೇರಿದ; ಒಳಗೆ ಪ್ರವೇಶಿಸಿದ. (ನಾ). ೨. ಸೇರಿದುದು; ಕೂಡಿದುದು : ನೊಳಂಬರಾಜ್ಯವು ೧೦ನೆಯ ಶತಮಾನದ ಅಂತ್ಯದಲ್ಲಿ ಚಾಳುಕ್ಯ ಚೋಳರಾಜ್ಯಗಳಲ್ಲಿ ಸಮಾವಿಷ್ಟವಾಗಿ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡಿತ್ತು (ಕರ್ನಾಅ. ೨೨೨). [ಸಂ.]

ಸಮಾವೇಶ (ನಾ). ೧. ಸೇರಿಕೆ ; ಕೂಡಿಕೆ : ಯಾವ ತೂಕದಲ್ಲಿ ಎಷ್ಟು ಜೀನಸುಗಳು ಸಮಾವೇಶವಾಗುತ್ತವೆ? (ಮುಂಬಪ್ರಾ. ೧೯ ಪ್ರಸ್ತಾವನೆ). ೨. ಸೇರ್ಪಡೆ ; ವಿಲೀನ : ಆಗಿನ ಶಿವನಸಮುದ್ರದ ಸೀಮೆಯಲ್ಲಿ ಈಗಿನ ಬೆಂಗಳೂರುಜಿಲ್ಲೆಯ ಬಹುಭಾಗವು ಸಮಾವೇಶಗೊಂಡಿತ್ತು (ಕೃದೇವ. ೨೦). ೩. ಕೂಟ ; ಸಮಾಗಮ : ಲೋಕದೃಷ್ಟಿಯಿಂದ ದಂಪತಿಗಳ ಸಮಾವೇಶದಿಂದ ಸಂತಾನವು ಬೆಳೆಯುವ ಹಾಗೆ . . . ಶಿವಶಕ್ತಿಸಂಯೋಗದಿಂದ . . . ಈ ಸಮಸ್ತವಿಶ್ವದ ಉತ್ಪತ್ತಿಯಾಗುತ್ತದೆ (ಭಾರದ. ೨೨೪). ೪. ಬೃಹತ್‌ಗಾತ್ರದಲ್ಲಿ ನಡೆಯುವ ಸಾಮಾಜಿಕ, ರಾಜಕೀಯ ಅಥವಾ ಸಾಂಸ್ಕೃತಿಕ ಸಭೆ : ನಾಳಿನ ಸಮಾವೇಶಕ್ಕೆ ಅಗತ್ಯವಾದ ಏರ್ಪಾಡುಗಳೆಲ್ಲವೂ ಆಗಿವೆ (ರೂಢಿ). [ಸಂ.]

ಸಮಾಶ್ರಿತ (ಗು). ಸಂಪೂರ್ಣವಾಗಿ ರಕ್ಷಿಸಲ್ಪಟ್ಟ ,— ಆಶ್ರಯ ನೀಡಿದ : ಸಮಾಶ್ರಿತ ಜನಕಳ್ಪವೃಕ್ಷನ್ನಾಮಾದಿ ಸಮಸ್ತಪ್ರಶಸ್ತಿಸಹಿತಂ (ಸೌಇಇ. XX, ೪೬-೧೮; 1073); ಆ ಸೈನ್ಯಂ . . . ಅಯೋಧ್ಯಾನಗರದಂತೆ ಸಮಾಶ್ರಿತ ಮಹಾದಶರಥ ಸಮಂಚಿತಮಂ . . . ಎನಿಸಿ (ರಾಜಶೇ. ೬-೧೬ ವ). [ಸಂ.]

ಸಮಾಶ್ವಾಸಿಸು (ಕ್ರಿ). ಸಮಾಧಾನಪಡಿಸು; ಸಂತೈಸು: ತಿಳಿಯವೇಟ್ಟು ಮಹಾಶ್ವೇತೆಯಂ ಸಮಾಶ್ವಾಸಿಸಿದ ಕಪಿಂಜಲನಂ . . . ಕಾದಂಬರಿಯಿಂತೆಂದಳ್ (ಕಾದಂಬ. ೬೫). [ಸಂ. ಸಮಾಶ್ವಾಸನ + - ಇಸ್ಕು]

ಸಮಾಸ (ನಾ). ೧. ಒಟ್ಟುಗೂಡಿಸುವುದು ; ಒಂದಾಗಿ ಸೇರಿಸುವುದು. ೨. ಸಮುದಾಯ ; ಸಮೂಹ. ೩. ಸಂಕ್ಷೇಪಗೊಳಿಸುವುದು : ''ಸಮಾಸಃ, ಸಮಾಹಾರಃ, ಸಂಕ್ಷೇಪಃ, ಸಂಗ್ರಹಃ - ಈ ೪ ಕಿಲಿದು ಮಾಡುಹ'' (ಹಲಾಯು. ೧೨೬-೪೧); ಆ ಸಮರವೃತ್ತಾಂತ ನಿನಗೆ ಸಮಾಸವಿಸ್ತಾರವಾಗಿರಲಿ ಭೂಮೀಶತಿಲಕಂ ಗಱುಹುವುದು ನೀನು (ಕವಿಮಾ. ೧-೫೫). ೪. ಒಟ್ಟು; ಮೊತ್ತ. ೫. [ವ್ಯಾಕ] ಎರಡು ಅಥವಾ ಹಲವು ಪದಗಳು ಕೂಡಿ ಏಕಪದವಾಗಿ ಪರಿವರ್ತನೆಗೊಳ್ಳುವ ಕ್ರಿಯೆ ಮತ್ತು ಹಾಗೆ ಪರಿವರ್ತನೆಗೊಂಡ ಪದಸಮೂಹ: ಸಂಗತಿಯಿಂದಂ ನಾಮಪದಂಗಳವೇಕಾರ್ಥಗತಿಯೊಳಾಗೆ ಸಮಾಸಂ ಸಂಗಳಿಸುಗುಂ ವಿಭಕ್ತಿಗಣಂಗಳ್ಗಂತರದೊಳಲ್ಲಿ ಲೋಪಮದಕ್ಕುಂ (ಕಾವ್ಯಾವ. ೧೯೯) ; ನಾಮಪದಮದರ್ಥಾನುಗಮಾಗೆಱುಗೆ ಸಮಾಸಂ ನೆಗಟ್ಕುಂ (ಶಮಿದ. ೧೬೨); ಎರಡು ಅಥವಾ ಹಲವು ಪದಗಳು ಒಟ್ಟುಗೂಡಿ ಒಂದು ಶಬ್ದವಾಗುವುದಕ್ಕೆ ಸಮಾಸವೆಂದು ಹೆಸರು (ಮಧ್ವಮು. ೧೨೨). ೬. [ಕಾವ್ಯಮಿಮಾ] ಒಂದು ಅಲಂಕಾರದ ಹೆಸರು ; ಮನಸ್ಸಿನಲ್ಲಿ ಒಂದು ವಸ್ತುವನ್ನು ನಿಶ್ಚಯಿಸಿಕೊಂಡು, ಅದನ್ನೇ ಹೋಲುವ ಮತ್ತೊಂದು ವಸ್ತುವನ್ನು ಕುರುಹುಗಳ ಮುಖಾಂತರ ತಿಳಿಸುವುದು ; ಸಮಾಸೋಕ್ತಿ: ಶ್ಲೇಷೋತ್ಪ್ರೇಕ್ಷಾ ಸೂಕ್ಷ್ಮವಿಶೇಷಸಮಾಹಿತಸಮಾಸಪರ್ಯಾಯೋಕ್ತಾನ್ಯೇಷವಿರೋಧಾ ಪ್ರಸ್ತುತಶೇಷನಿದರ್ಶನಸಹೋಕ್ತಿಸಂಕೀರ್ಣಂಗಳ್ (ಕವಿಪ್ರ. ೩-೩). [ಸಂ.]

ಸಮಾಸಲಿಂಗ (ನಾ). [ವ್ಯಾಕ] ಸಮಾಸಪದವಾಗಲು ವಿಭಕ್ತಿಸ್ವೀಕಾರಕ್ಕೆ ಸಿದ್ಧವಾದ ರೂಪ : ಆ ಲಿಂಗಂ . . . ಕೃಲ್ಲಿಂಗಮೆಂಬ, ತದ್ಧಿತಲಿಂಗಮೆಂಬ, ಸಮಾಸಲಿಂಗಮೆಂಬ, ನಾಮಲಿಂಗಮೆಂಬ ಸ್ಥಿತಿಯಿಂ . . . ಚತುರ್ಭೇದಂ (ಶಮಿದ. ೭೨ ಟೀಗೆ). [ಸಂ.]

ಸಮಾಸಾದಿತ (ಗು). ೧. ಹತ್ತಿರಕ್ಕೆ ಬಂದ ; ಸಮೀಪಿಸಿದ. ೨. ಹೊಂದಿದ ; ಪಡೆದ : ಆ ಶಾಂತಿನಾಥಂ ಆ ಸಮ್ಮೇದಗಿರೀಂದ್ರದ ಭಾಸುರಮಣಿಕನಕರಜತ ಸಿಕತಿಳತಳದೊಳ್ ಮಾಸಾವಧಿಯೆನೆ ಯೋಗಸಮಾಸಾದಿತವಿಧಿಯನಮರೆ ಕಾಯೋತ್ಸರ್ಗಂ (ಶಾಂತಿಪು. ೧೨-೩೧) ; ಮೇದಿನಿಯಂ . . . ಸಾಧಿಸಿ ಬಾಹುಪರಾಕ್ರಮಂ ಸಮಾಸಾದಿತ ಚಕ್ರಭೃತ್ಕ್ರಮಮನಾದಮೆ ಪೆರ್ಚಿಸೆ (ಚಂದ್ರಪ್ರ. ೬-೨೮). ೩. ಪೂರೈಸಿದ ; ಮುಗಿಸಿದ. [ಸಂ.]

ಸಮಾಸಿಸು (ಕ್ರಿ). [ವ್ಯಾಕ] ಸಮಾಸಕ್ರಿಯೆಯು ನಡೆಯುವಂತೆ ಮಾಡು ; ಸಮಾಸ ಮಾಡು : ಇದಱೊಡನೆ ಕನ್ನಡದ ದೇಶೀಯಪದಮಂ ಸಮಾಸಿಸಲಪ್ಪುದು (ಶಮಿದ. ೨೯೯ ವೃತ್ತಿ). [ಸಮಾಸ + - ಇಸ್ಕು]

ಸಮಾಸೋಕ್ತಿ (ನಾ). = ಸಮಾಸ ೬ : ತಱಿಸಂದು ಮನದೊಳೊಂದಂ ಪೆಱತಂ ಮತ್ತದನೆ ಪೋಲ್ವುದಂ ಕುಱಿಪುಗಳಂ ಕುಱಿ ಮಾಡಿ ಮಾಡಿ ಪೇಳ್ವುದು ನೆಱೆಯೆ ಸಮಾಸೋಕ್ತಿಯೆಂಬುದು (ಕವಿಪ್ರ. ೩-೧೨೬); ಉಪಮಾನಕಥನಮೊಂದಱಿನುಪಮೇಯ ಮನಱಿವುದದು ಸಮಾಸೋಕ್ತಿ (ಕಾವ್ಯಾವ. ೬೯೭). [ಸಂ.]

ಸಮಾಹಾರ (ನಾ). ೧. ಗುಂಪು; ಸಮೂಹ. ೨. ಸಂಗ್ರಹ ; ಸಂಕ್ಷೇಪ : ''ಸಮಾಸಃ, ಸಮಾಹಾರಃ, ಸಂಕ್ಷೇಪಃ, ಸಂಗ್ರಹಃ - ಈ ೪ ಕಿಲಿದು ಮಾಡುಹ'' (ಹಲಾಯು. ೧೨೬-೪೧). ೩. ಸಮುಚ್ಚಯಾವ್ಯಯಗಳಿಂದ ಕೂಡಿದ ಪದಗಳ ಗುಂಪು. [ಸಂ.]

ಸಮಾಹಿತ (ಗು). ೧. ಒಟ್ಟುಗೂಡಿಸಿದ ; ಕಲೆಹಾಕಿದ : ಲವಣಾಂತಕಂ . . . ಕಾಕ್ಕೆಯಂ ಕೈಕೊಂಡು ಸಸೈನ್ಯಂ ಸಮಾಹಿತಸರ್ವಸ್ವಭವಂ ಪೊಱಮಟ್ಟಂ (ರಾವಣಾಖ್ಯ. ೧೦೯-೬). ೨. ಕ್ರಮವಾಗಿ ಇರಿಸಿದ ; ವ್ಯವಸ್ಥೆಗೊಳಿಸಿದ. ೩. ಸಂಕ್ಷಿಪ್ತಗೊಳಿಸಿದ ; ಸಂಗ್ರಹ ಮಾಡಿದ. ೪. ಪೂರ್ತಿಮಾಡಿದ ; ನೆರವೇರಿಸಿದ. ೫. ತಣಿದ ; ಪ್ರಸನ್ನವಾದ ; ಸಮಾಧಾನಗೊಂಡ: ಅಂತು ರಾಮಲಕ್ಷ್ಮಣರಾ ಯಕ್ಷನ ವಿನಯೋಪಚಾರದಿಂ ಸಮಾಹಿತಮನಸ್ಕರಲ್ಲಿರ್ಪುದುಂ (ಪಂರಾಮಾ. ೭-೧೩೪ ವ). ೬. ಇರಿಸಿದ ; ಇಡಲ್ಪಟ್ಟ : ಜಿತಶತ್ರು ಪ್ರಕರಸಮಾಹಿತ ಹಿತೋದ್ಯೋಗಂ (ರಾಜಶೇ. ೪-೧೨೬). ೭. ಅಚಲವಾದ ; ದೃಢವಾದ. (ನಾ). ೮. ಶ್ರದ್ಧೆ ; ತೀವ್ರಾಸಕ್ತಿ. ೯. ಸಮಾಧಾನಿ ; ಪ್ರಸನ್ನಚಿತ್ತ : ಮೊದಲ ಶುಕ್ಲಧ್ಯಾನದೊಳ್ ಸಮಾಹಿತನುಪಶಾಂತಗುಣಸ್ಥಾನದೊಳ್ ಪ್ರಾಣಪರಿತ್ಯಾಗಂಗೆಯ್ದುಂ (ಆದಿಪು. ೬-೩೪ ವ); ಇದು ಸಮಾಹಿತವಿದು ಶುಭೋದಯ (ಕುವ್ಯಾಉ. ೩-೭೨). ೧೦. [ಕಾವ್ಯಮಿಮಾ] ಒಂದು ಅಲಂಕಾರದ ಹೆಸರು ; ಒಂದು ವಸ್ತುವಿನ ಧರ್ಮವನ್ನು ಇನ್ನೊಂದರಲ್ಲಿ ಆರೋಪಿಸಿ ಹೊಂದುವಂತೆ ಹೇಳುವುದು : ಒಂದಱ ಮಾತುಗಳಂ ಪೆಱತೊಂದಱೊಳಱಿದಿಟ್ಟು ಕೂಡೆ ಪೇಳ್ದೊಡದಕ್ಕುಂ ಸುಂದರತರಂ ಸಮಾಹಿತಂ (ಕವಿಪ್ರ. ೨-೭೩); ಸಮನಿಸಿ ಬಿದಿವಸದಿಂದಂ ಸಮಾಹಿತಂ ಬರ್ಪೊಡದು ಸಮಾಹಿತ ಮೆನಿಕುಂ (ಕಾವ್ಯಾವ. ೬೫೨) ; ತೊಡಗಿದ ಕಾರ್ಯಂ ದೈವದ ಗಡಣಿಸಲದು ತಾಂ ಸಮಾಹಿತಂ (ಉದಯಾ. ೫೧). [ಸಂ.]

ಸಮಾಹಿತಚಿತ್ತ (ನಾ). ಪ್ರಸನ್ನನಾದವನು ; ಸಮಾಧಾನ ಹೊಂದಿದವನು : ದುಃಪೋಪಶಮನಂಮಾಡಿದೊಡೆ ಸಮಾಹಿತಚಿತ್ತರಾಗಿ ಕೊಳುಗುಳನಂ ವಿಧಿವಿಧಾನದಿಂ ಬಳಸಿ (ಪಂಪಭಾ. ೧೪-೧೦ ವ) ; ರಾಜಸರ್ವಜ್ಞಂ ಶುಚಿರ್ಭೂತನುಮತಿ ಸಮಾಹಿತಚಿತ್ತನುಮಾಗಿ . . . ಜೈನಗೃಹಮಂ ಪೊಕ್ಕಂ (ಮಲ್ಲಿಪು. ೭-೧೦೭). [ಸಂ.]

ಸಮಾಹಿತವೃತ್ತಿ (ನಾ). ನೆಮ್ಮದಿ ; ಸುಸ್ಥಿತಿ : ಪರಿಜನಜೀವನಂ ಸಕಲದೇಶ ಸಮಾಹಿತವೃತ್ತಿ ಭೂತಳೇಶ್ವರಧನವೃದ್ಧಿ . . . ಸಲ್ಲುದೆಂಬಿನಂ (ಅನಂಪು. ೨-೨೪). [ಸಂ.]

ಸಮಾಹಿತಾಂತಃಕರಣ (ನಾ). = ಸಮಾಹಿತಚಿತ್ತ : ವಿಪ್ರಲಾಪಮನುಪಸಂಹರಿಪುದೆನೆ ಸಮಾಹಿತಾಂತಃಕರಣರುಮಾಗಿ (ಗದಾಯು. ೩-೮೩ ವ). [ಸಂ.]

ಸಮಾಹೃತ (ಗು). ೧. ಒಗ್ಗೂಡಿಸಿದ ; ಕಲೆಹಾಕಿದ ; ಸೇರಿಸಿದ. ೨. ಅಪಾರವಾದ; ಅಧಿಕವಾದ. ೩. ಸಂಕುಚಿತಗೊಳಿಸಿದ; ಸಂಕ್ಷೇಪಿಸಿದ. ೪. ಸ್ವೀಕರಿಸಿದ ; ಪಡೆದುಕೊಂಡ : ಯಾನಸೌಮ್ಯದೊಲವಿಂ ನೆಲನುಗ್ಗಡಿಪಂತೆ ಮುಂದೆ ಸಂಧಿಸಿದುದು ನೂಪುರಸ್ವನಸಮಾಹೃತಗೇಹವರಾಳಮಂಡಲಂ (ಚಂದ್ರಪ್ರ. ೧೦-೯). [ಸಂ.]

ಸಮಾಹೃತಿ (ನಾ). ಸೇರಿಕೆ ; ಸಂಯೋಗ : ಆ ವ್ಯತಿಪತಿ ಶಶಿಸೂರ್ಯಸಮಾಹೃತಿಯಿಂ ನಿಷ್ಪನ್ನನಾದ ತೆಱದಿಂದಿರ್ದಂ (ಚಂದ್ರಪ್ರ. ೨-೧೩). [ಸಂ.]

ಸಮಾಹ್ವಯ (ನಾ). ೧. ಯುದ್ಧಕ್ಕೆ ಕರೆಯುವುದು,– ಆಹ್ವಾನಿಸುವುದು. ೨. ಕಾಳಗ; ಯುದ್ಧ. ೩. ಕೋಳಿ, ಟಗರು ಮೊದಲಾದುವುಗಳ ಕಾಳಗವನ್ನು ನಡೆಸುವುದು. ೪. ಹೆಸರು ; ಅಭಿಧಾನ : ಸುರಪುರಸಮಾಹ್ವಯಂ ಪುರಮಸೆಗುಂ (ಚಂದ್ರಪ್ರ. ೩-೧೩); ಬಲವಿರೋಧಿ ಸಮಾಹ್ವಯಮಾಂತನಾಗನೇ (ರಾಜಶೇ. ೬-೪೨). [ಸಂ.]

ಸಮಾಳಿಸು 'ಸಂಬಾಳಿಸು' ನೋ.

ಸಮಾಳೋಚನ (ನಾ). ಆಲೋಚನೆ ; ಪರಾಮರ್ಶೆ : 'ಸಮಾಳೋಚನಂಗೆಯ್' ಪರಾ. [ಸಂ. ಸಮಾಲೋಚನ]

ಸಮಾಳೋಚನಂಗೆಯ್ (ಕ್ರಿ). ಆಲೋಚಿಸು ; ಪರಾಮರ್ಶಿಸು : ಸಚಿವರೊಳ್ ಸಮಾಳೋಚನಂಗೆಯ್ದು (ಜಗಪ. ೩-೨೦ ವ). [ಸಮಾಳೋಚನ + ಕೆಯ್]

ಸಮಾಳೋಚಿಸು 'ಸಮಾಲೋಚಿಸು' ನೋ.

ಸಮಿಂಧನ (ನಾ). ೧. ಉರಿ ಹೊತ್ತಿಸುವಿಕೆ. ೨. ಉರುವಲು ; ಸೌದೆ. [ಸಂ.]

ಸಮಿತಿ (ನಾ). ೧. ಸಂಘ ; ಮಂಡಲಿ : ''ಸಂಗತಿಃ, ಸಭಾ - ಈ ೨ ಸಮಿತಿಯೆಂಬುದು'' (ಹಲಾಯು. ೧೩೭-೩೫). ೨. ಗುಂಪು ; ಸಮೂಹ : ಧರ್ಮನಂಶದೊಳೀತಂ ಪುಟ್ಟಿದನೆಂದಾ ಶಿಶುಗೊಸೆದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರಂ (ಪಂಪಭಾ. ೧-೧೨೨) ; ಅಂತು ಸಮುಚಿತಾದುರೇಂದ್ರಸಮಿತಿವೆರಸು ಬಂದು (ಪುಷ್ಪಪು. ೧೦-೧೪ ವ). ೩. ಒಂದು ನಿರ್ದಿಷ್ಟಕಾರ್ಯಕ್ಕಾಗಿ ರಚಿತವಾದ, ಸದಸ್ಯರನ್ನೊಳಗೊಂಡಿರುವ ಮಂಡಲಿ: ನೇಮಕವಾಗಿದ್ದ ಸಮಿತಿಯವರು ಪರಿಶೀಲಿಸಿ ಸಮ್ಮತಿಸಿದ ತರುವಾಯ ಈ ಪುಸ್ತಕವು

ಮುದ್ರಿತವಾಗಿದೆ (ಛಕ್ಷಿಣಾ. ೬೯೬೯). ೪. ಕಾಳಗ; ಯುದ್ಧ : ''ಸಂಗ್ರಾಮಃ, ಸಮಿತಿಃ . . . ವಿಗ್ರಹಃ- ಈ ೩೫ ಕಾಳಿಗಂ'' (ಹಲಾಯು. ೭೫-೩೦೦). ೫. [ಜೈನ] ''ಮುನಿಗಳು ಆಚರಿಸಬೇಕಾದ ವ್ರತರೂಪದ ಪ್ರತಿಜ್ಞೆ.'' (ಜೈನಕೋ. ೨೬೩) : ಸಮಿತಿಯಂ ಗುಪ್ತಿಗಳಂ ಪಾಲಿಸಿ . . . ಎಸೆದಂ (ಪಂಂಪಾಮಾ. ೧೬-೫೦) ; ಸಮಿತಿತ್ರಿಗುಪ್ತಿಯನುಪ್ರೇಕ್ಷೆಗಳ ಸಂಯಮಚಾರಿತ್ರಾದಿಗಳ ಕ್ರಮದಪ್ರದಾಚರಿಸಲು (ನಾಗಕು. ೩೨-೯೫). [ಸಂ.]

ಸಮಿತೆ 'ಸಮಿತ್ತು' ನೋ.

ಸಮಿತ್ತು, ಸಮಿತೆ (ನಾ). ಹೋಮಕ್ಕೆ ಉಪಯೋಗಿಸುವ ಅತ್ತಿ, ಅರಳಿ ಮೊದಲಾದ ಮರಗಳ ಸಣ್ಣ ಕಡ್ಡಿ,—ಪುರಳೆ : ಮಿದುಳೆ ಚರು ಸಮಿತ್ತೀ ಬೆರಳಾಜ್ಯ ರಕ್ತವೆಂದು ಬೇಳಿದಂ ಒಡಲ ಪೂರ್ಣಾಹುತಿಗೆ (ತುರಂಗ. ೭೭-೪೧); ಪ್ರಭುಗಳ ಕೈಯಿಂದ ಯಜ್ಞೇಶ್ವರನಿಗೆ ಸಮಿತ್ತು, ಹವಿಸ್ಸು, ಆಜ್ಯಾಹುತಿಗಳನ್ನು ಮಾಡಿಸಿ (ಶಾಂತರಾ. ೧೦೭). **ಸಮಿತೆ** : ಎಲುಗಳಂ ತಲೆತಲೆದು ಮಿಕ್ಕಡೆ ಸಮಿತೆ[ಪಾಶಾಂ. ವಿಧಿ]ಯಂ ಮಾಡಿ ಹರವಹ್ನಿಗೆ ಹವಿಯನೀವ (ಬಸವ. ೩೯-೩೩). 'ಸವುದೆ' ಪರಾ. [< ಸಂ. ಸಮಿಧ್]

ಸಮಿದೆ (ನಾ). ಹುರಿದ ಹಿಟ್ಟು: ''ತರ್ಪಣಃ - ಸಮಿದೆ, ಹುರಿಹಿಟ್ಟು'' (ಓಷಧಿ. ೬೫). [< ಸಂ. ಸಮಿತಾ]

ಸಮಿಧೆ (ನಾ). = ಸಮಿತ್ತು : ಅವನಿಪತಿ ತುಪ್ಪದಿಂ ಸಾಸಿವೆಯಿಂ ಪಾಲ್ಮರನ ಸಮಿಧೆಯಿಂ ಹುತವಹಮಂತ್ರವಿಧಾನದೆ ಬೇಳಿಸಿ (ಹೋಕೋಪ. ೪-೪೭); ಸೆರೆನರದ ದರ್ಭೆಗಳ ಮಿದುಳಿನ ಚರುವಿನೆಲುವಿನ ಸಮಿಧೆಗಳ . . . ವೈರಿಪಶುಬಂಧುರದ ಸಂಗರಯಜ್ಞದೀಕ್ಷೆಯ ಮಜ್ಜಿರಕಟ (ಹವ್ಯಾಗ. ೧-೨೦) ; ಸಮಿಧೆಗಳನಾಂತು ಪೊಣ್ಮುವ ಹವ್ಯಾಮೋದದಿನಘ ಪರಿಹಾರಕಮಾದೀ ವೈತಾನವಹ್ನಿ ಸಲಹುಗೆ ನಿನ್ನಂ (ಶಾಕುಂತ. ೫೨-೩೬). [ಸಂ.ಸಮಿಧ್]

ಸಮಿಕ (ನಾ). ಕದನ ; ಯುದ್ಧ ; ಕಾಳಗ : ''ಸಂಗರಂ ಸಮಿಕಂ . . . ಕಾಳಿಗಕೆ ನಾಮಮಕ್ಕುಂ'' (ಮಂಗರಾ. ೫೫-೨೮) ; ಇವರಂ ಕೊಲ್ಲ ಸಮಿಕದೊಳ್ . . . ಭೂಮಿ ಭಾರವನಮೋಘಂ ಪಿಂಗಿಸಲ್ಬೇಟ್ಟುದು (ಜಗವಿ. ೧-೭೪) ; ಅಳಿಬಲರು ನರರೆಂದು ಸಮ್ಮುಖದಲಿ ಸಮಿಕವನೆಸಗಿದರು (ಪಂಕಾರಾ. ೩-೧೨-೨೩). [ಸಂ.]

ಸಮಿಕರಣ (ನಾ). ೧. ಸಮಗೊಳಿಸುವುದು ; ಮಟ್ಟಮಾಡುವುದು. ೨. ಒಂದುಗೂಡುವುದು ; ಸಮಾಗಮ: ಸೌಂದರ್ಯವೆಂದರೆ ಅಹಂ - ತತ್ ಇವರಡರ ಸಂಪೂರ್ಣಸಮಿಕರಣ (ಸೌಂದ. ೧೭). ೩. [ಗಣಿತ] '=' ಎಂಬ ಗುರುತಿನಿಂದ ಕೂಡಿದ ಎರಡು ರಾಶಿಗಳನ್ನು ಸಮವೆಂದು ದೃಢೀಕರಿಸುವ ಸೂತ್ರ : ಬೀಜಗಣಿತದ ಸಮಿಕರಣವನ್ನು ತಿಳಿಸಿಕೊಡಲು ಕೂಡ ಎಂಥದೋ ಒಂದು ಕಥೆ (ಕಥಕ. ೧೧). [ಸಂ.]

ಸಮಿಕರಿಸು (ಕ್ರಿ). ೧. ಸೇರಿಸು; ಒಟ್ಟುಗೂಡಿಸು: ಅರಿಷಡ್ವರ್ಗಮನದರ್ಪಿಯುಂ ತ್ರಿವರ್ಗಮಂ ಸಮಿಕರಿಸಿಯುಂ (ಚಂದ್ರಪ್ರ. ೨-೬೧). ೨. ಸಮವೆಂದು ಭಾವಿಸು, — ಎಣಿಸು : ಈ ಬಿಜ್ಜಣನನ್ನು . . . ಸಿಂದಬಿಜ್ಜಳನೊಂದಿಗೆ ಸಮಿಕರಿಸಬಹುದು ಎನಿಸುತ್ತದೆ (ಮುಂಡಿಳು. ೬೮). [ಸಮಿಕರಣ + - ಇಸು]

ಸಮಿಕೃತ (ಗು). ೧. ಸಮಗೊಳಿಸಿದ ; ಮಟ್ಟಮಾಡಿದ. ೨. ಒಂದೇ ರೀತಿಯಾಗಿ ಮಾಡಿದ ; ಅನುಕರಿಸಲ್ಪಟ್ಟ. ೩. ಸೇರಿಸಿದ ; ಕೂಡಿಸಿದ : ಸಮಿಕೃತತ್ರಿವರ್ಗನುಂ ದೃಢೀಕೃತತಳವರ್ಗನುಂ . . . ಆಗಿ . . . ಅರಸುಗೆಯುತ್ತುಮಿರೆ (ಚಂದ್ರಪ್ರ. ೪-೨೪ ವ). [ಸಂ.]

ಸಮಿಕ್ಷಕ (ನಾ). ಸೂಕ್ಷ್ಮವಾಗಿ ಪರಿಶೀಲಿಸುವವನು : ಆ ಕಚೇರಿಯ ಮೇಲ್ವಿಚಾರಣೆಗಾಗಿ ಸರ್ಕಾರವು ಸಮಿಕ್ಷಕರೊಬ್ಬರನ್ನು ನೇಮಿಸಿದೆ (ರೂಢಿ). [ಸಂ.]

ಸಮಿಕ್ಷಣ (ಗು). ಸೂಕ್ಷ್ಮವಾಗಿ ಪರಿಶೀಲಿಸುವ : ಇದನ್ನು ಓದಿದ ತರುವಾಯ ಕವಿ ಒಳ್ಳೆ ಸಮಿಕ್ಷಣಚತುರ ಎನ್ನುತ್ತೇವೆ (ಕಾವ್ಯಾ. ೬೮). [ಸಂ.]

ಸಮಿಕ್ಷಣೆ (ನಾ). ಸೂಕ್ಷ್ಮವಾದ ಪರಿಶೀಲನೆ : ಅನೇಕರು ಖಗೋಳಶಾಸ್ತ್ರ ಸಂಬಂಧವುಳ್ಳ ಸಮಿಕ್ಷಣೆಗಳನ್ನು ಮಾಡಿದ್ದರು (ವಿಜ್ಞಾ. ೪೭). [ಸಂ. ಸಮಿಕ್ಷಣ]

ಸಮಿಕ್ಷಿಸು (ಕ್ರಿ). ಸೂಕ್ಷ್ಮವಾಗಿ ನೋಡು ; ಪರೀಕ್ಷಿಸು : ಕದ್ದು ಕದ್ದು ನೋಡುತ್ತಿದ್ದನು . . . ಏನಾದರೂ ಸಾಕ್ಷಿ ದೊರೆಯುತ್ತದೆಯೋ ಎಂದು ಸಮಿಕ್ಷಿಸುವಂತೆ (ಮಲಮ. ೪೭೪). [ಸಮಿಕ್ಷಣ + - ಇಸು]

ಸಮಿಕ್ಷೆ (ನಾ). ಸೂಕ್ಷ್ಮವಾದ ಪರಿಶೀಲನೆ, — ಅವಲೋಕನ : ಈವರೆಗೆ ಕನ್ನಡಸಾಹಿತ್ಯದ ಚಾರಿತ್ರಿಕಸಮಿಕ್ಷೆಯನ್ನು ಮಾಡಿದ್ದಾಯಿತು (ಕಸಾಚ. ೩೮೫) ; ಇಲ್ಲಿಗೆ ದಕ್ಷಿಣಾಕಾಶದ ನಮ್ಮ ಸಮಿಕ್ಷೆ ಮುಗಿಯಿತು (ನಕ್ಷತ್ರ. ೨೩). [ಸಂ. ಸಮೀಕ್ಷಾ]

ಸಮಿಚೀನ (ಗು). ೧. ಅರ್ಹವಾದ ; ತಕ್ಕ ; ಯೋಗ್ಯವಾದ : ಅಚ್ಯುತೇಂದ್ರಂ ಮೂನೂಱಯ್ವತ್ತು ಸಮಿಚೀನವಿಮಾನಂಗಳುಂ . . . ತನಗೆ ಪ್ರಸಿದ್ಧಮಾಗೆ (ಶಾಂತಿಪು. ೪-೧೧೧ ವ) ; ಉಚಿತ ಸಮಿಚೀನಚೀನಧ್ವಜವಿತಾನವಿರಾಜಿತಮುಂ . . . ಅಪ್ಪ ನಗರಿಯಂ ಪುಗುವಾಗಳ್ (ಚಂದ್ರಪ್ರ. ೬-೯೪ ವ). (ನಾ). ೨. ತಕ್ಕುದು ; ಯೋಗ್ಯವಾದುದು: ಕುಮಾರರಿಗೆ ಸಮಿಚೀನವಾಗಿ ಶಿಕ್ಷೆಯಾಗಿದೆ ಎಂಬುದಕ್ಕೆ ಸಂದೇಹವಿಲ್ಲ (ಭೀಷ್ಮಚ. ೫೯). [ಸಂ.]

ಸಮಿಚೀನತೆ (ನಾ). ಯೋಗ್ಯತೆ; ಅರ್ಹತೆ: ದೃಷ್ಟಾಂತ - ನಿದರ್ಶನಗಳ ಸಮಿಚೀನತೆಯಿಂದ . . . ಕೀರ್ತಿಯುಳ್ಳ ಲೇಖಕರೆಂದರೆ ಶಿವರಾಮಮಹಾದೇವ ಪರಾಂಜಪೇಯವರು (ಮುನಾಹಿ. ೩೭). [ಸಂ. ಸಮಿಚೀನತಾ]

ಸಮಿಚೀನತ್ವ (ನಾ). = ಸಮಿಚೀನತೆ : ಈ ಸುಗುಣಗಣವೀ ನಿರಂತರ ದಾಸ ಭಾವನೆಯಾ ವಿಶದಯಶಮಿಾ ಸಮಿಚೀನತ್ವವೀ [ಪಾಶಾಂ. ಸಮುಚಿತತ್ವಂಗಳೀ] ಸುಚರಿತ್ರವೀ ಘನತೆ ಆರಿಗುಂಟು (ಬಸವ. ೨-೩೧). [ಸಂ.]

ಸಮಿನೆ (ನಾ). ವರ್ಷಕ್ಕೊಮ್ಮೆ ಈಯುವ ಹಸು: ''ಬಬ್ಬಿವಿಡಿದು ವರ್ಷಕೀನುವುದು ಸಮಿನಯೆನಿಕ್ಕುಂ'' (ಮಂಗರಾ. ೫೪-೪). [ಸಂ. ಸಮಿನಾ]

ಸಮಿಪ (ಗು). ೧. ಹತ್ತಿರದ ; ಬಳಿಯ ; ಸನಿಹದ. (ನಾ). ೨. ಹತ್ತಿರ ; ಸನಿಹ: ''ಸನಿಹಂ ಕೆಲಂ ಪಕ್ಕಮುಂ ಪೊರೆಯು ಪೊರ್ದುಗೆಯುಮೆನೆ ಸಮಿಪಕೆ ಪೆಸರ್'' (ಕವ್ಯಿ. ೩.೨) ; ಸಮಿಪಕ್ಕೆ - ಇದೆ ಇದೆ ಸಾರ್ಕೆ ಸಾರ್ಕೆ ಗಣಕಾವಳಿ ಪೇಳ್ದ ಮುಹೂರ್ತಂ (ಕಮಲ. ೧೯೫ ಪ್ರಯೋ) ; ಸುತ್ತೆಲ್ಲ ಕತ್ತಲಾ ಒಳಗ ಬೆಳಗತದ ದೀಪಾ ಬಾ ಸಮಿಪಾ (ನಾದಲೀ. ೪೭-೯). [ಸಂ.]

ಸಮಿಪಗ (ನಾ). ಹತ್ತಿರದಲ್ಲಿರುವವನು; ಬಳಿಯಲ್ಲಿರುವವನು : ''ಆಸನ್ನಃ-ಸಮಿಪಗಂ'' (ಕಾಶಿಕ್ಯ. ೧೪೯). [ಸಂ.]

ಸಮಿಪಗತ (ನಾ). ೧. ಹತ್ತಿರವಾದುದು; ಸಮಿಪದಲ್ಲಿರುವಂಥದು. ೨. [ಛಂದ] ಆರುಬಗೆಯ ಪ್ರಾಸಗಳಲ್ಲಿ ಒಂದು ; ಉಚ್ಚಾರಣೆಯಲ್ಲಿ ಸಾಮಿಪ್ಯವಿರುವ ಶ, ಷ, ಸ ಎಂಬ ಮೂರುವರ್ಣಗಳು ಕ್ರಮವಾಗಿ ಪ್ರಾಸಸ್ಥಾನದಲ್ಲಿರುವುದು: ವಿನುತಪ್ರಾಸಂ . . . ಸಮಿಪಗತಂ . . . ಅಂತಗತಂ ಸಂಜನಿತ ವಿಭೇದೋಕ್ತಿಯಿಂದಮಿಂತಾಱುತೆಱಂ (ಕವಿಕಾ. ೨-೩೧) ; ವಿನುತಪ್ರಾಸಂ ಶಾಂತೋಪನತಂ ವರ್ಗೋದಿತಂ ಸಮಿಪಗತಂ ಮತ್ತನುಗತಮಂತಗತಂ ಸಂಜನಿತಂ ವಿಭವೋಕ್ತಿಯಿಂದಿವಂತಾಱುತೆಱಂ (ಛಂದೋಬು. ೧-೪೬ ಅಧಿಕಪದ್ಯ ೬). [ಸಂ.]

ಸಮಿಪಪ್ರಾಸ (ನಾ). = ಸಮಿಪಗತ ೨: ಷಷಸವರ್ಣತ್ರಯಮಂ ವಿದಿತ ಪ್ರಾಸವಿಕ್ರಾಸ್ಯದೊಳ್ ನಿಲೆಪೇಳ್ದೊಡದು ಸಮಿಪಪ್ರಾಸಂ (ಕವಿಕಾ. ೨-೩೯). [ಸಂ.]

ಸಮಿಪವರ್ತಿ (ಗು). ೧. ಹತ್ತಿರದಲ್ಲಿರುವ ; ನಿಕಟವರ್ತಿಯಾದ : ವನಧಿದ್ವೀಪ ಸಮಿಪವರ್ತಿ ವಸುಧಾಂತರ್ವರ್ತಿಯಾಗಿರ್ದರಾತಿನಿಕಾಯಕ್ಕಿದು ಯಾಮಿನೀಸಮುದಿತಂ ದೇವೇಂದ್ರಚಾಪಂ (ಆದಿಪು. ೧೪-೯೯). (ನಾ). ೨. ಹತ್ತಿರ; ಸನಿಹ : ಬಿಹಾರ ಪ್ರಾಂತ್ಯವು ಮಾನವಶಾಸ್ತ್ರದ ರೀತ್ಯ ಮತ್ತು ಸಾಂಸ್ಕೃತಿಕವಾಗಿಯೂ ಈ ಎರಡು ಪ್ರಾಂತ್ಯಗಳಿಗೆ ಅತ್ಯಂತ ಸಮಿಪವರ್ತಿಯಾಗಿ ನಿಲ್ಲುತ್ತದೆ (ಭಾರಚಾ. ೭೪). [ಸಂ. ಸಮಿಪವರ್ತಿನ್]

ಸಮಿಪಸ್ಥ (ನಾ). ೧. ಹತ್ತಿರದಲ್ಲಿರುವಂಥದು; ಸನಿಹದಲ್ಲಿರುವಂಥದು : ಈ ಭೂಮಿಯ ಸಮಿಪಸ್ಥವಾದ ಬೇರೆ ಭೂಮಿಯಿಂದಾದರೂ ಲಾಂಬಿ ಕಟ್ಟಿ ಕೊಳ್ಳಬಹುದು (ಭೂಮಿಆ. ೧೭). ೨. ಹತ್ತಿರದಲ್ಲಿರುವ ವ್ಯಕ್ತಿ : ಕಷ್ಟಸುಖಗಳಲ್ಲಿ ಸಮಿಪಸ್ಥರಲ್ಲದೆ ಯಾರು ಸಹಾಯ ಮಾಡುತ್ತಾರೆ? (ರೂಢಿ). [ಸಂ.]

ಸಮಿಪಸ್ಥಿತ (ಗು). ಹತ್ತಿರದಲ್ಲಿರುವ ; ಸನಿಹದ : ತತ್ಸಮಿಪಸ್ಥಿತ ರಕ್ತಾಶೋಕ ಮಹೀರುಹತಳವಿಶಾಳಶಿಳಾಪಟ್ಟಕದೊಳ್ ಉತ್ತರಾಭಿಮುಖನಾಗಿ ಕುಳ್ಳಿರ್ದು (ಶಾಂತಿಪು. ೮-೧೨೨ ವ). [ಸಂ.]

ಸಮೀಪಿಸು (ಕ್ರಿ). ಹತ್ತಿರ ಬರು ; ಬಳಿಸಾರು : ವಾಹಿನಿ ಸಮುದ್ರಲಗ್ನಕೆ ಸಮೀಪಿಸುವಂತೆ (ಚಿತ್ರಾಂಗ. ೫೬-೧೫೮); ಮಳೆಗಾಲ ಸಮೀಪಿಸಿತು (ಮುಂಗಾಮು. ೬೧). [ಸಮೀಪ + - ಇಸ್ಸು]

ಸಮೀರ (ನಾ). ೧. ಗಾಳಿ ; ವಾಯು : ಪೆಣ್ಣುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ (ಪಂಪಭಾ. ೧೨-೧೦೫) : ಆ ಕುಮಾರವಿಯೋಗ ವಹ್ನಿಗೆಯೊಕೆಯಳಲು ಸಮೀರನಾಯ್ತು (ಕುವ್ಯಾದ್ರೋ. ೭-೧೮). ೨. ಗಾಳಿಯ ಅಧಿದೇವತೆ : 'ಸಮೀರಕುಮಾರ' ಪರಾ. ೩. ಶಮೀವೃಕ್ಷ. [ಸಂ.]

ಸಮೀರಕುಮಾರ (ನಾ). ೧. ವಾಯುವಿನ ಮಗ ; ಭೀಮ : ಎಲೆ ಸಮೀರಕುಮಾರ ಸಂಪ್ರತಿಗಳಸಿದ್ಧ ಕಲಿತನವ ನೀರೊಳು ಕಲಕಿದ್ಧೆ (ಕುವ್ಯಾಉ. ೬-೧೯). ೨. ಹನುಮಂತ : ಆ ಸಮೀರಕುಮಾರ ಬಳಿಕಿಂತೆಂದನರಸಂಗೆ (ತೊರಾ. ೪-೧-೧೭). [ಸಂ.]

ಸಮೀರಜ (ನಾ). = ಸಮೀರಕುಮಾರ ೧: ಎಲೆ ಸಮೀರಜನನುಜ ರಿಪುಬಲ ವಿಲಯ ಮೇಘನಿಕಾಯವಿದೆ ಭುಜಬಲವ ತೋಜ್ಯೆ (ಕುವ್ಯಾಭೀ. ೩-೨೫). [ಸಂ.]

ಸಮೀರಣ (ನಾ). ೧. = ಸಮೀರ ೧ : ರಾಜಸುತೆಯಂ ನಯದಿಂದವಳುಯ್ದಳ್ . . . ಸಮೀರಣೋತ್ಥಿತವಿಶಾಳವಿಳೋಳತರಂಗರೇಖೆ ಪದ್ಮಾಂತರದಿಂದಮಿಂಬಲೆದು ಮಾನಸಹಂಸಿಯನುಯ್ಯಮಾರ್ಗದಿಂ (ಪಂಪಭಾ. ೩-೫೭); ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ ಆದಿಯಾಧಾರದ ಪರಮಾತ್ಮಲಿಂಗದಲ್ಲಿ (ಬಸವ. ೯೪೯). ೨. ಒಂದು ಬಗೆಯ ಸಸ್ಯ ; ಮರುಗ : "ಸಮೀರಣಃ, ಮರುವಕಃ . . . ಜಂಬೀರಃ - ಈ ೫ ಅಜ್ಜಿಗೆ, ಕೆಲಂಬರು ಮರುಗವೆಂಬರು" (ನಾಚಿಂಗಾ. ೧೦೯). ೩. [ಛಂದ] ಒಂದು ಗಣದ ಹೆಸರು; ಸಗಣ (UU —): ಸುರರ ಪಡೆ ನೆರೆದಿರಲು ಕರಿಗಳಿನತಿನತಱೊಳೆ ಖರಕರಸಮೀರಣಪದಾಂತಂ ಪುರಮಥನನಿದೆ ಬಳೆಕ ನೆರೆದು ಯತಿ ದಶಮದೊಳೆ ತರತರದಿನೊಪ್ಪಿ ನಿಲೆ (ಛಂದೋಂಬು. ೩-೨೦೫). [ಸಂ.]

ಸಮೀರಭವ (ನಾ) = ಸಮೀರಕುಮಾರ ೨ : ಸೇನೆಯೆಲ್ಲವನೊರಸಿ ಕಮಲಜಶಕ್ತಿ ಗೊಳಗಾದನು ಸಮೀರಭವ (ಕೌಶಿಂಗಾ. ೧೧ ಸೂಚನೆ). [ಸಂ.]

ಸಮೀರಭುಗ್ವರ (ನಾ). ಹಾವುಗಳಲ್ಲಿ ಶ್ರೇಷ್ಠವಾದುದು ; ಆದಿಶೇಷ : ಸಮೀರಭುಗ್ವರೋದ್ಗೌರಯಶಂ ವಿರಾಜಿಸಿದುದೆಕ್ಷೆಸೆಯೊಳ್ (ರಾಜಶೇ. ೧-೬೬). [ಸಂ.]

ಸಮೀರಸುತ (ನಾ). = ಸಮೀರಕುಮಾರ ೧ : ಸಮರದನುಸಂಧಾನದಲಿ ಸಂಭ್ರಮಿಸಿ ಶೌರಿ ಸಮೀರಸುತನಲಿ ಸಮತೆಯನು ಸೇರಿಸಿದನಂದು ಸಮಗ್ರಸೂಕ್ತಿಯಲಿ (ಕುವ್ಯಾಉ. ೬ ಸೂಚನೆ). [ಸಂ.]

ಸಮೀರಾತ್ಮಜ (ನಾ). = ಸಮೀರಕುಮಾರ ೨ : ಸಮೀರಾತ್ಮಜಂ ತಾನುಮಂತೆಯ ನೋಡುತಿರ್ದನ್ ಸಮುದ್ರಸಮಗಂಭೀರನಂ . . . ರಾಮಚಂದ್ರನಂ! (ಶ್ರೀರಾಮಾ. ೨೮೯-೧೨೬). [ಸಂ.]

ಸಮೀರಿತ (ಗು). ೧. ಅಲುಗಾಡಿಸಲ್ಪಟ್ಟ; ಅಲ್ಲಾಡಿದ. (ನಾ). ೨. ಅಲುಗಾಡಿಸಲ್ಪಟ್ಟುದು; ಅಲ್ಲಾಡಿದುದು : ಮುಯ್ಯನೊಳ್ ಪುದಿದ ಕುರುಳ್ ಸಮೀರಣಸಮೀರಿತಮಳ್ಳೆಯ ಪೂತ ಕಿಂಕಿರಾತದೊಳೆಱಗುತ್ತುಮಿರ್ಪಳಿಯ ಗಾವಳಿಯಂದದಿನೊಪ್ಪಿ ತೋಱುಗುಂ (ಶಾಂತಿಪು. ೧೧-೧೦೯). [ಸಂ.]

ಸಮೀಹಿತ (ನಾ). ಅಪೇಕ್ಷೆ ; ಬಯಕೆ ; ಇಚ್ಛೆ : ಮದಿರಾದೇವಿಯ ಮನೋಭಿಲಷಿತಮುಂ ಮದೀಯ ಸಮೀಹಿತಮುಂ . . . ಸಮನಿಸಿತಿಲ್ಲೆಂದು ಮನಂ ನೊಂದು (ಕಾದಂಉ. ೫೪೬) ; ಸಯ್ಯನಿಂ ಸಮನಿಕ್ಕುಮಲ್ತೆ ಸಮೀಹಿತಂ (ಕಾವ್ಯಾವ. ೯೫). [ಸಂ.]

ಸಮುಖ$_1$ (ನಾ). ೧. ಎದುರು; ಅಭಿಮುಖ : ಪೌರಜನರು ಆ ಮಹಾರಾಯನ ಸಮುಖಕ್ಕೆ ಬಂದು (ಕ್ರಿಯಾಅ. ೧೩೩). ೨. ಸನ್ನಿಧಾನ; ಸನ್ನಿಧಿ : ಇಂತಹ ಗಿಣಿಯು ದೇವರ ಸಮುಖಕ್ಕೆ ಸಲುವುದು (ವಚಕಾ. ೧). [< ಸಂ. ಸಮ್ಮುಖ]

ಸಮುಖ$_2$ (ಗು). ೧. ಹೆಚ್ಚು ಮಾತನಾಡುವ; ವಾಚಾಳತನವುಳ್ಳ. ೨. ಒಳ್ಳೆಯ ಮಾತುಗಾರಿಕೆಯಿಂದ ಕೂಡಿದ ; ವಾಕ್ಪಟುತ್ವವುಳ್ಳ. [ಸಂ.]

ಸಮುಖಾದೇಶ (ನಾ). ನೇರವಾದ ಆಜ್ಞೆ , — ನಿರೂಪ : ದಂಡನಾಯಕಂ ಅಡವದ ಬಂಮ್ಮಣಯ್ಯನ ಸಮುಖಾದೇಶದಿಂ ಕಾರುಣ್ಯಂಗೆಯ್ದು (ಕಇಅ. ೧೮-೧-೬೮ ; 1127). [< ಸಂ. ಸಮುಖಾದೇಶ]

ಸಮುಚಿತ (ಗು). ೧. ಉಚಿತವಾದ ; ತಕ್ಕ : ಸಮುಚಿತನೃಪತುಂಗದೇವಮಾರ್ಗ ಕ್ರಮಗಮನಾಭಿಮುಖರ್ಕಳಪ್ಪ ಧೀರರ್ . . . ಕಾವ್ಯಾಶ್ರಮಪದಮಂ ನಿರಪಾಯ ಮೆಯ್ದಲಾರ್ಪರ್ (ಕಇಗಾ. ೧-೧೪೭) ; ಜಾತಕರ್ಮನಾಮಕರಣಾನ್ನಪ್ರಾಶನಚೌಲೋಪ ನಯನಾದಿ ಸಮುಚಿತಕ್ರಿಯೆಗಳಿಂ ಕ್ರಿಯೆವಡೆದು (ಸುಕುಮಾ. ೫-೫೦ ವ). (ನಾ). ೨. ಯೋಗ್ಯವಾದುದು; ತಕ್ಕುದು: ಅಮಳಲಿಂಗಾರ್ಚನಸಮಯದಲಿ ಸಮುಚಿತದ ನೈವೇದ್ಯವೇಳೆಯೊಳ್ (ಬಸಪು. ೩೩-೧೦). [ಸಂ.]

ಸಮುಚಿತಾಸನ (ನಾ). ಉಚಿತವಾದ ಪೀಠ , — ಗದ್ದುಗೆ : ದವನಕಂ ಸಮುಚಿತಾಸನದೊಳ್ ಕುಳ್ಳಿರ್ದು (ಪಂಚತಂ. ೪೫-೧೩ ವ) : ಸಮುಚಿತಾಸನದೊಳ್ ಕುಳ್ಳಿರ್ದ ತನಯನಾನನಮನವನೀವಲ್ಲಭಂ . . . ನೋಡಿ (ಚಂದ್ರಪ್ರ. ೪-೧೪ ವ). [ಸಂ.]

ಸಮುಚ್ಚಯ (ನಾ). ೧. ಗುಂಪು; ಸಮೂಹ : ಠಾಕೂರರ ಪ್ರೇಮಗೀತೆಗಳ ಸಮುಚ್ಚಯ 'ತೋಟಗಾರ' (ಧರ್ಮಸಾ. ೫೯) ; ಭಾಷೆ ಮೊದಲಲ್ಲಿ . . . ಮೂಲಭಾವಗಳನ್ನು ವ್ಯಕ್ತಪಡಿಸುವ ಕೆಲವೇ ಸಂಖ್ಯೆಯ ಸ್ವರಗಳ ಸಮುಚ್ಚಯ ಆಗಿದ್ದಿರಬೇಕು (ನಮ್ಮನು. ೨೯). ೨. ರಾಶಿ ; ಒಟ್ಟಿಲು : ನಾನಾ ಸಮಸ್ಯಾಭರಣನವವಸ್ತ್ರಸಮುಚ್ಚಯವಂ ಸಮರ್ಪಿಸಿ (ಬಸಪು. ೫೯-೫೭). ೩. ಜೋಡಣೆ ; ಸೇರಿಕೆ. ೪. [ಕಾವ್ಯಮೀ] ಅರ್ಥಾಲಂಕಾರ ಗಳಲ್ಲಿ ಒಂದು ; ಸುಖಕರವಾದ ಅಥವಾ ದುಃಖಕರವಾದ ಫಲವನ್ನುಂಟು ಮಾಡುವ ಅನೇಕ ಗುಣ ಕ್ರಿಯೆ ಮುಂತಾದುವು ಒಂದೇ ಕಡೆಯಲ್ಲಿರು ವುದು: ಬಹುಸಂಕಥನಂ ಜಾತಿದ್ರವ್ಯಾದಿಕಂ ಸಮುಚ್ಚಯಮಕ್ಕುಂ (ಕಾವ್ಯಾವ. ೬೨೫). ೫. [ವ್ಯಾಕ] (ಸಮೂಹದ ಅರ್ಥವ್ಯಾಪ್ತಿಗಾಗಿ) ವಿಭಕ್ತಿ ಪ್ರತ್ಯಯಗಳ ಪದಾಂತದಲ್ಲಿಯೂ ಸಂಬಂಧಸೂಚಕವಾಗಿ ವಾಕ್ಯಗಳ ನಡುವೆಯೂ ಬಳಸುವ 'ಅಂ', 'ಉಂ', 'ಮತ್ತು', 'ಅಥವಾ' ಮುಂತಾದ ಅವ್ಯಯ : ಲಘೂಚ್ಚಾರಿತ ಶಬ್ದದೋಷ ಮುಮದಂತೆ ಸಮುಚ್ಚಯಜಾತದೋಷಮುಂ . . . ವಿಶಂಕಾರಚಿತೋರುದೋಷಮುಮನೀ ತೆಱದಿಂ ತಱಿಸಲ್ಗೆ ಪಂಡಿತರ್ (ಕವಿರಾ. ೧-೧೧೩) ; ಷಷ್ಠಿಯೊಳ್ ಸಮುಚ್ಚಯಂ ಪತ್ರದು (ಶಮದ. ೧೨೨ ವೃತ್ತಿ). [ಸಂ.]

ಸಮುಚ್ಚಯವಚನ (ನಾ). ೧. ಸಮುಚ್ಚಯಸಹಿತವಾದ ಮಾತು. ೨. ಕರ್ಮ ಮತ್ತು ಜ್ಞಾನವು ಸೇರಿ ಮೋಕ್ಷಕ್ಕೆ ಸಾಧನವಾಗುವುದೆಂಬ ವಾದ : ಮುಕ್ತಜೀವನಪ್ಪೂಡೇಕಪ್ರಕಾರನುಂ . . . ಅಪುನರ್ಜಾತನುಮಕ್ಷಯನುಮಕ್ಕುಮೆಂದು ಜೀವತತ್ತಮಂ ಸಮುಚ್ಚಯವಚನದಿಂ ಸವಿಸ್ತರಂ ಬೆಸಸಿ (ಸುಕುಮಾ. ೮-೧೪ ವ). [ಸಂ.]

ಸಮುಚ್ಚಯಾಲಂಕಾರ (ನಾ). [ಕಾವ್ಯಮೀ] ಒಂದು ಅರ್ಥಾಲಂಕಾರದ ಹೆಸರು; "ಏಕಕಾಲಿಕವಾದ ಅನೇಕಕ್ರಿಯೆಗಳ ವರ್ಣನೆ ಸಮುಚ್ಚಯಾಲಂಕಾರ" (ಕೈಪಿಡಿ. ೨೮೪). [ಸಂ.]

ಸಮುಚ್ಛಳಿತ (ಗು). ಮೇಲೆದ್ದ; ಹಾರಿದ; ಚಿಮ್ಮಿದ: ಧನಂಜಯರಥ ಚಟುಳ ಚಕ್ರನೇಮಿಧಾರಾಪರಿವೃತ ಸಂಘಟ್ಟನಸಮುಚ್ಛಳಿತಪಾಂಸು ಪಟಳಾಂಧಕಾರ ದುರ್ಲಕ್ಷಾಂತರಿಕ್ಷಕ್ಷಿತಿದಿಗಂತರಾಳಾಂತರಮುಂ (ಪಂಪಭಾ. ೧೩-೫೧ ವ); ಅನಂತ ಸಂತೋಷಪೀಯೂಷಾಂಬರಶಿಲೆಯೊಳಾ ಸಮುಚ್ಛಳಿತೋದಾರಪೂರಪ್ಲವಮಾನ ಮಾನಸನಾಗಿ . . . ಅರ್ಚಿಸಿದಂ (ವರ್ಧಮಾ. ೬-೪೩ ವ). [ಸಂ.ಸಮುಚ್ಛಲಿತ]

ಸಮುಚ್ಚಾಮರ (ನಾ). ೧. ಶ್ರೇಷ್ಠನಾದ ದೇವತೆ. ೨. ಮೇಲಕ್ಕೆ ಬೀಸಲ್ಪಟ್ಟ ಚಾಮರ. ೧ , ೨ : ಆ ಸೈನ್ಯಂ . . . ನಭಸ್ಥಳದಂತೆ ಸಮುಚ್ಚಾಮರಸಮಂಚಿತಮುಂ ಪೃಥುಳಪುರದಂತೆ ಮಿಳಿತ ಘಂಟಾಧ್ವನಿಕೇತನಾಲಂಬಿತಮುಂ . . . ಎನಿಸಿ (ರಾಜಶೇ. ೬-೧೭ ವ). [ಸಂ.(ಸಮುಚ್ಚ + ಅಮರ ; ಸಮುತ್ + ಚಾಮರ)]

ಸಮುಚ್ಛಿನ್ನ (ಗು). ಸಂಪೂರ್ಣವಾಗಿ ನಾಶವಾದ : ಸಮುಚ್ಛಿನ್ನಕ್ರಿಯಾನಿವೃತ್ತಿ ಧ್ಯಾನ ಪರಿಣತೆಯಿನಘಾತಿಚತುಷ್ಕಶುಷ್ಕೇಂಧನಪಾವಕನಾಗಲೊಡಂ (ಸುಕುಮಾ. ೯-೧ ವ); ಸಮುಚ್ಛಿನ್ನಪ್ರಾಣಾಪಾನಪ್ರಚಾರಂ ಸಮುಚ್ಛಿನ್ನಕ್ರಿಯಾವೃತ್ತಿಧ್ಯಾನಪ್ರವರ್ತನಾ ಪರನಾಗಿ (ಪಂರಾಮಾ. ೧೬-೭೯ ವ). [ಸಂ.]

ಸಮುಚ್ಛ್ರಯ (ನಾ). ೧. ಎತ್ತರ ; ಔನ್ನತ್ಯ. ೨. ಉದ್ದ ; ನೀಳ : ಆರೋಹಃ, ಸಮುಚ್ಛ್ರಯಃ - ಈ ೨ ಮರದ ಉದ್ದಂ" (ಹಲಾಯು. ೩೦-೨೭). ೩. ವಿರೋಧ ; ಹಗೆತನ. [ಸಂ.]

ಸಮುಚ್ಛ್ರಿತ (ಗು). ಎತ್ತರವಾದ; ಉನ್ನತವಾದ : ಪಂಚಾಶದುಪೇತಧನುಃ ಪಂಚಶತ ಸಮುಚ್ಛ್ರಿತದೇಹಂ (ಆದಿಪು. ೬-೬೪) ; ಸಮುಚ್ಛ್ರಿತಾನೇಕಮೇಘಡಂಬರ ಚಾರುತಾವಳಂಬಿಯಾಗಿಯುಂ ಪ್ರಕಟೀಕೃತರಾಜಲೀಲೋದಯಮಲ್ತು (ಚಂದ್ರಪು. ೪-೬೨ ವ). [ಸಂ.]

ಸಮುಜ್ಜ್ವಲ, ಸಮುಜ್ಜ್ವಳ (ಗು). ೧. ಹೊಳೆಯುವ; ಪ್ರಕಾಶಮಾನವಾದ. ೨. ಶ್ರೇಷ್ಠವಾದ; ಅತಿಶಯವಾದ : ಅಕ್ಕುಂ ನಿಷ್ಕುರವಾಕ್ಪ್ರಾಣಪರಿಸ್ಫುರಿತಂ ಕ್ಕಿರತ್ನದೊಳ್ ಸಮುಜ್ಜ್ವಲಭಾವಂ (ಚಂದ್ರಪು. ೧-೪೪). **ಸಮುಜ್ಜ್ವಳ**: ೩. ಶುಭ್ರವಾದ: ಸಮುಜ್ಜ್ವಳಶಯ್ಯೆಯಿಂದಮೆದ್ದರಸಿ ಬಟ್ಟಿಕ್ಕಲಂಕರಿಸಿದಳ್ ನವಹಾಟಕಪೀಠಿಕಾಗ್ರಮಂ (ಚಂದ್ರಪು. ೭-೬೯). [ಸಂ.]

ಸಮುಜ್ಜ್ವಳ 'ಸಮುಜ್ಜ್ವಲ' ನೋ.

ಸಮುಜ್ಝಿತ (ಗಿ). ೧. ಬಿಟ್ಟ ; ವರ್ಜಿಸಿದ ; ಪರಿತ್ಯಜಿಸಿದ. ೨. ಉಳಿದ ; ಮಿಕ್ಕ: ಸಮುಜ್ಝಿತ ಧನರಾಶಿ ಶಕ್ತಿ ಜನಿತಂ (ಜಾತಕ. ೧೩-೧೮). [ಸಂ.]

ಸಮುಜ್ವಲ, ಸಮುಜ್ವಳ (ಗು). ಹೊಳೆಯುವ; ಕಾಂತಿಯುತವಾದ: ಅಳಿಯಾಸೆಯಲಿ ನೆನೆವಂ ಸಮುಜ್ವಲದಂತಪಂತಿಯನು ಆ ಸತಿಯ ನವಕಂಬುಕಂಠದ ಭಾಸವಂ ನೆನೆವಂ (ಬಸವ. ೪೨-೩೬) ; ಶಂಕರಾಭರಣಸಮುಜ್ವಲವೇಣರಾಗರಂಜಿತೆ (ರಾಜಶೇ. ೧೧-೪೮). **ಸಮುಜ್ವಳ** : 'ಸಮುಜ್ವಳಿಸು' ಪರಾ. [ಸಂ.]

ಸಮುಜ್ವಳ 'ಸಮುಜ್ವಲ' ನೋ.

ಸಮುಜ್ವಳಿಸು (ಕ್ರಿ). ಹೊಳೆ; ಮಿರುಗು: ಕರ್ಣದ್ವಯಾಪೂರ್ಣಾಕಲಿತ ಸೌವರ್ಣಪತ್ರಂಗಳು ಸಮುಜ್ವಳಿಸೆ (ಬಸವ. ೪-೩೮).

[ಸಮುಜ್ವಳ (= ಸಮುಜ್ವಲ) + - ಇಸ್ಕು]

ಸಮುತ್ಕಂಟಕ (ಗು). ದೊಡ್ಡ ದೊಡ್ಡ ಮುಳ್ಳುಗಳಿಂದ ಕೂಡಿದ: ಸಮುತ್ಕಂಟಕ ವಿಟಪಿಲತಾ ವೀರುದತ್ಕಂತವೃತ್ಕುತ್ಕರದುರ್ವೇಶಂ ಮನಕ್ಕದ್ಭುತರಸದೊದವಂ ತಂದುದಂದೊಂದಗೇಂದ್ರಂ (ಚಂದ್ರಪು. ೫-೬೬). [ಸಂ.]

ಸಮುತ್ಕಟ (ಗು). ೧. ಅತಿಶಯವಾದ: ಪಟಹನಿಸ್ಸಾಣತಮ್ಮಟಭೇರಿಗಳ ಸಮುತ್ಕಟನಾದಂ . . . ಪಟುಭಟರ ಬೊಬ್ಬೆಯಾರ್ಭಟೆಗಳೊಂದಾಗಿ ಸಂಘಟಿಸಿತು (ಜೈಮಿಭಾ. ೪-೧೪). (ನಾ). ೨. ಅತಿಶಯವಾದುದು; ಅಧಿಕವಾದುದು: ವ್ಯೋಮಮನೆಯ್ದಿದತ್ತು ಪಟಹಸ್ಫುಟಪಾಟರವಂ ಸಮುತ್ಕಟಂ (ಚಂದ್ರಪು. ೬-೬೯). [ಸಂ.]

ಸಮುತ್ಕೀರ್ಣ (ಗು). ಮೇಲೆ ಏರಿದ ; ಎತ್ತರಕ್ಕೆ ನೆಗೆದ : ಸಮುತ್ಕೀರ್ಣರುಚಕಾರ್ಣ [ವಂ ಸೌ]ವರ್ಣಾಂಡಂಗಳಿನಗುರ್ವಿ[ಸಿಯ] ಪದುಳಿಸಿದಂ (ವರ್ಧಮಾ. ೧೨-೬೮); ಆ ಸೈನ್ಯಂ . . . ಸಾಮ್ರಾಜ್ಯದಂತೆ ಸಮುತ್ಕೀರ್ಣಧರಾಪರಾಗಮುಂ ಶರಧಿತಟದಂತೆ ಮಹಾ ಪ್ರಭಾವನೀಪಾಲಂಕೃತಮುಮೆನಿಸಿ (ರಾಜಶೇ. ೬-೧೭ ವ). [ಸಂ.]

ಸಮುತ್ಪಾತ (ಗು). ಬುಡಸಮೇತ ಕಿತ್ತ: ಪ್ರಳಯಕಾಲದಂತೆ ಮಹಾವರಾಹ ಸಮುತ್ಪಾತಧರಣೀಮಂಡಲಮುಂ . . . ಆಗಿಯುಂ (ಕಾದಂಪು. ೧೦೦). [ಸಂ.]

ಸಮುತ್ತರಣ (ನಾ). ನದಿ ಮುಂತಾದುವನ್ನು ದಾಟುವಿಕೆ: ಅಂತವರಂ ಶಾಸನೋಪನತರ್ಮಾಡಿ ಕಾವೇರೀ ಸ್ರವಂತೀ ಸಮುತ್ತರಣಾನಂತರಂ ಬರೆವರೆ (ಶಾಂತಿಪು. ೧೧-೬ ವ). [ಸಂ.]

ಸಮುತ್ಥಾನಿತ (ನಾ). ಆಗಲವಾಗಿ ತೆರೆದಿರುವಂಥದು : ಜನಪಂ ಪಾಯಸಮಂ . . . ಇಕ್ಕಿದನಾ ಮುನಿಪತಿಯ ಸಮುತ್ಥಾನಿತಮೆನಿಸಿರ್ದ ವಿಶಾಳಪಾಣಿಪಲ್ಲವ ಪುಟದೊಳ್ (ಮಲ್ಲಿಪು. ೧೪-೯). [ಸಂ.]

ಸಮುತ್ತಾರಕ (ನಾ). ದಾಟಿಸುವವನು ; ಪಾರುಮಾಡುವವನು : ಪುರಹರ ಸಮಯ ವಿಸ್ತಾರಕರು ನತನರವಿಪದ್ಜಲನಿಧಿಸಮುತ್ತಾರಕನೆನಲು ಮೆಱೆದು (ಬಸವ. ೪೮-೫೨). [ಸಂ.]

ಸಮುತ್ತಾರಿಸು (ಕ್ರಿ). ದಾಟಿಸು ; ಪಾರುಮಾಡು: ಎನ್ನಂ ಸಮುತ್ತಾರಿಸಲ್ ಲೀಲಾಲೋಕನಮಾತ್ರದಿಂದೆ ನೆಱೆಗುಂ (ಮಪ್ರವಂ. ೧-೧೨).

[< ಸಮುತ್ತರಣ + - ಇಸ್ಕು]

ಸಮುತ್ತಾಳ (ನಾ). ಶೀಘ್ರ; ತ್ವರೆ: ಅರೆಬರ್ ನವರತ್ನರಥಂಗಳಂ ಸಮುತ್ತಾಳ ದೊಳೇಱಿ ಶೀಘ್ರಗತಿಯಿಂ ಪೆಸರ್ವೆತ್ತ ವಿದರ್ಭದೇಶಭೂಪಾಳಯನಿಪ್ಪ ಕುಂಡಿನ ಪುರಾಂತರದೊಳ್ ನೆಲಸಿರ್ದರುರ್ವಿಪರ್ (ನಳಚಂ. ೨೪೩). [ಸಂ. ಸಮುತ್ತಾಲ]

ಸಮುತ್ತುಂಗ (ಗು). ೧. ಎತ್ತರವಾದ; ಉನ್ನತವಾದ : ಸಮುತ್ತುಂಗಾಸನದೊಳಿರಿಸಿ ಧರ್ಮಮಂ ಬೆಸಗೊಳೆ (ಶಾಂತಿಪು. ೭-೨ ವ) ; ಸೊಗಯಿಸುವುದು ಪೌದನಪುರಂ ಸಮುತ್ತುಂಗರಮ್ಯಹರ್ಮ್ಯಪ್ರಕರಂ (ವರ್ಧಮಾ. ೩-೨). ೨. ಅತಿಶಯವಾದ : ಅವಿರತಸಮುತ್ತುಂಗವಿಳಸದಗಣ್ಯಪುಣ್ಯ ಸಮುದಯಕರವಾಗಿ (ಬಸವ. ೩೮-೪೪).

[ಸಂ.]

ಸಮುತ್ಥಾಂಶು (ನಾ). ಸೂಸಿದ ಕಿರಣ ; ಹೊಮ್ಮಿದ ಕಿರಣ : ಶರದೊಳ್ ರತ್ನಾವಳೀಶಖರಶಿಖರಸಮುತ್ಥಾಂಶುಗಳ್ ಮೊತ್ತಮಂ ಬಿತ್ತರಿಪನ್ನಂ (ಚಂದ್ರಪು. ೬-೭೦). [ಸಂ.]

ಸಮುತ್ಥಾನ (ನಾ). ೧. ಮೇಲಕ್ಕೆ ಏಳುವುದು , — ಮೂಡುವುದು : ರತ್ನದ ಮೇಳಾಪಕದಿಂದ ವೀಕ್ಷಣಸಮುತ್ಥಾನೇಕಸಮ್ಮರ್ದಸಮ್ಮದಕೋಲಾಹಲದಿಂದಮಾ ನಗರಿ . . . ಏನೊಪ್ಪಿತೋ (ಕಾದಂಪು. ೪೭೬). ೨. ರೋಗದಿಂದ ಚೇತರಿಸಿಕೊಳ್ಳುವಿಕೆ. ೩. ಹೆಚ್ಚಳ ; ಅಧಿಕ್ಯ. [ಸಂ.]

ಸಮುತ್ಥಾಪಿತ (ನಾ). ಎತ್ತರದಲ್ಲಿ ಸ್ಥಾಪಿಸಿದುದು : ಆಗಳ್ ನಿರಂತರ ಸಮುತ್ಥಾಪಿತಂಗಳುಂ . . . ಅಪ್ಪ ತೋರಣಂಗಳನೆ ನುಗುಳುತ್ತುಂ (ಆದಿಪು. ೪-೫೮ ವ).

[ಸಂ.]

ಸಮುತ್ಥಿತ (ಗು). ೧. ಮೇಲೆದ್ದ; ಮೇಲೇರಿದ : ತುರಂಗಖರಖುರ ಸಮುತ್ಥಿತ ಧರಾರಜಂ ನೆಗೆದು ತೀವೆ (ರಾಜಶೇ. ೧೩-೪೦). ೨. ರೋಗದಿಂದ ಚೇತರಿಸಿಕೊಂಡ. ೩. ಒದಗಿದ; ಉಂಟಾದ. (ನಾ). ೪. ಮೇಲೇರಿದುದು; ಮೇಲಕ್ಕೆ ಎದ್ದುದು: ಅಮಿತ ಚತುರಂಗಸೇನಾಗಮನದೊಳುತ್ಪುಂಗಜಂಗಮ ಪ್ರಾಕಾರ ಭ್ರಮಮಂ ಪಡೆದುದು ತತ್ಪದಸಮುತ್ಥಿತಂ ಬಳಸಿ ಬಹಳ ಧೂಳೀಪಟಲಂ (ಚಂದ್ರಪು. ೧೦-೨೬). ೫. ಎದ್ದು ನಿಂತವನು: "ಊರ್ಧ್ವಜಾನುಃ, ಸಮುತ್ಥಿತಃ - ಈ ೨ ನಿಂದಿರ್ದವಂ" (ತಲಾಯು. ೬೪-೨೬೧). [ಸಂ.]

ಸಮುತ್ಪತ್ತಿ (ನಾ). ಹುಟ್ಟುವಿಕೆ ; ಜನನ : ಸೌಧರ್ಮಕಲ್ಪಸಮುತ್ಪತ್ತಿವರಮಲ್ಲಿಂದತ್ತಣ ಭವಪ್ರಾದುರ್ಭಾವಮುಮಂ . . . ಬೆಸಸಿದಂ (ಶಾಂತಿಪು. ೬-೮೫ ವ). [ಸಂ.]

ಸಮುತ್ಪನ್ನ (ಗು). ೧. ಹುಟ್ಟಿದ ; ಮೂಡಿದ : ಅನ್ನೆಗಮದಱೊಳಗೆ ಸಮುತ್ಪನ್ನ ಪ್ರಾಧಾನ್ಯಮನ್ಯಮರ್ಥಾಧಾರಂ ಮುನ್ನಂ ಶಬ್ದಾಳಂಕಾರಂ ನಿಶ್ಚಿತಮಕ್ಕೆ ಪೇಳ್ವ ಮಾಟ್ಕೆಯೊಳೆನ್ನಾ (ಚಿಪಾ. ೨-೩) ; ದಶಾನನಂ . . . ತನ್ನಂ ತಾನೆ ಪಟ್ಟಿದುಟ್ಟಿದು ಕರ್ಮಾಧೀನಸಮುತ್ಪನ್ನದುರಭಿದುಪ್ಪರಿಣತಿಯಂ (ಪಂಚಾಮೃ. ೧೪-೧೧೧). (ನಾ). ೨. ಹುಟ್ಟಿದುದು; ಉಂಟಾದುದು: ನಿನ್ನ ನೀನಱಿಯದೆ ಮದಸಮುತ್ಪನ್ನದಿಂ . . . ಬಯಸಿ (ಬಸವ. ೨೪-೪೧). ೩. ಹುಟ್ಟಿದವನು; ಜನಿಸಿದವನು: ಭರತಾನ್ವಯಸಮುತ್ಪನ್ನರಾಗಿ ಫಲವೇನು (ಜೈಮಿಭಾ. ೨-೫೬). [ಸಂ.]

ಸಮುತ್ಪಾಟನ (ನಾ). ಬುಡಸಹಿತ ಕೀಳುವುದು : ಆತಂ . . . ವಿದ್ವಿಷದಿಭರದನಸ್ತಂಭಲೀಲಾಸಮುತ್ಪಾಟನಕಾಂಕ್ಷಾದುರ್ಮದಂ (ಆದಿಪು. ೧೪-೧೯). [ಸಂ.]

ಸಮುತ್ಪಾದಿಸು (ಕ್ರಿ). ದೊರಕಿಸಿ ಕೊಡು ; ಒದಗಿಸು : ಪುಷ್ಪದಂತ ಶ್ರೀಪಾದಂಗಳ್ ಸಮುತ್ಪಾದಿಸುಗೆಮಗೆ ಹೃದಿಂದೀವರಾನಂದದೊಳ್ಪಂ (ಪುಷ್ಪಸ್ತು. ೧-೧).

[ಸಂ. ಸಮುತ್ಪಾದನ + - ಇಸ್ಕು]

ಸಮುತ್ಫುಲ್ಲ (ನಾ). ನೆಗೆತ; ಹಾರಿಕೆ : ಒದವಿದ ಬೆಟ್ಟುಬೇಸಗೆಯ ಕೂರ್ವಿಸಿಲರ್ವಿಸೆ ಬೆರ್ಚಿ ವಾಯುವೇಱಿದ ಹರಿಣಂ ಸಮುತ್ಫುಲ್ಲತದಿನಿಂದುವ ಬಿಂಬವ ನೋಡಿ ಪೊಕ್ಕು . . . ನೆಲಸಿರ್ದುದು (ಚಂದ್ರಪು. ೯-೭೮). [ಸಂ.]

ಸಮುತ್ಫುಲ್ಲ (ಗು). ಚೆನ್ನಾಗಿ ಅರಳಿದ ; ಪೂರ್ಣವಿಕಾಸವಾದ : ಮಲ್ಲಪಯ್ಯನುದಗ್ರಬೋಧಸಮಗ್ರನಗ್ರಜನುಂ ಸಮುತ್ಫುಲ್ಲಪಂಕಜಲೋಚನಂ ಗುಣಿ (ಶಾಂತಿಪು. ೧-೪೦) ; ತಳ್ತಗಲವೆಂದುಂ . . . ಸಮುತ್ಫುಲ್ಲ ಮಲ್ಲೀಪುನ್ನಾಗಯುಗಂ (ಚಂದ್ರಪು. ೧೧-೭೩). [ಸಂ.]

ಸಮುತ್ಸಾರಿತ (ನಾ). ಹೊರಡಿಸಿದುದು ; ಹೊರದೂಡಿದುದು : ಪರಸ್ಪರ ಸಮರರಭಸ [ಸಮುತ್ಸಾ]ರಿತಮುಂ ಸಕಲಸಾಮಂತಮಕುಟಬದ್ಧಮೌಳಿಮಾಳಾವಿಗಳಿತ ಮಕುಟಕೋಟಿಸಂಘಟ್ಟನೋಚ್ಚಳಿತಮಣಿಶಲಾಕಾಸಂಕುಳಮುಂ (ಪಂಪಭಾ. ೧೩-೫೧ ವ). [ಸಂ.]

ಸಮುತ್ಸುಕ (ಗು). ೧. ಉತ್ಸಾಹದಿಂದ ಕೂಡಿದ : ಸಮುತ್ಸುಕಭಾವದಿಂದಮೆಯ್ತಂದು ನೃಪೇಶ್ವರಪ್ರಿಯತನೂಭವನಂ ಪೆಜತೊರ್ವಳ್ . . . ನೋಡಿದಳ್ (ವರ್ಧಮಾ. ೩-೭೮); ಕಾಲಮೇಘಂ . . . ಕಿರಾತರ್ವೆರಸು ಬೇಂಟೆವೋಗಲೆಂದು ಸಮದ ಸಮುತ್ಸುಕಚಿತ್ತನಾಗಿ (ರಾಜಶೇ. ೫-೫೦ ವ). ೨. ಚಿಂತೆಯಿಂದ ಕೂಡಿದ. (ನಾ). ೩. ಚಿಂತೆಯಿಂದ ಕೂಡಿದವನು ; ದುಃಖಿ : ಅದಱಿಂ ಭೂಭುಜಂ ಸಮುತ್ಸುಕನಾಗಲಾಗದು (ಪಂಚತಂ. ೨೧೪-೯). [ಸಂ.]

ಸಮುತ್ಸುಕತೆ (ನಾ). ತೀವ್ರವಾದ ಬಯಕೆ ; ಉತ್ಕಟವಾದ ಹಂಬಲ : ಸತ್ಕೃತಿ ಚಂದ್ರಿಕೆ . . . ಸಕಳರಸಜ್ಞಹೃತ್ಕುಮುದಸಮ್ಮುದಮಂ ನೆಗಳ್ದಿರ್ದಿನಂ ಸಮುತ್ಸುಕತೆಯನೇಕೆ ತಾಳ್ದುಮದಱೊಳ್ ಖಳಚಕ್ರಚಯಂ (ಶಬಶಂ. ೧-೧೧೧). [ಸಂ. ಸಮುತ್ಸುಕತಾ]

ಸಮುದಗ್ರ (ನಾ). ಬಹಳ ಎತ್ತರದಲ್ಲಿರುವ, – ಮೇಲಿರುವ : ದಿವಿಜರ್ ಮೊಗದೀವಮೃತಜಲಭರಿತಕಾಂಚನಸಮುದಗ್ರಘಟಾಳಿಯಸೆದುವಿಂದ್ರನ ತೋಳೊಳ್ (ಅಜಪು. ೪-೪೩). [ಸಂ.]

ಸಮುದಯ (ನಾ). ೧. (ಸೂರ್ಯನು) ಮೇಲೆ ಬರುವಿಕೆ ; ಮೇಲಕ್ಕೇರುವುದು. ೨. ಜೊತೆಗೂಡುವುದು ; ಸೇರುವುದು. ೩. ಗುಂಪು ; ಸಮೂಹ : ಒರ್ವರೆ ವಿಹರಿಪುದಂ ಬಿಸುಟುಂಬರಾಂಬರರ್ ತಮ್ಮ ಸಮುದಯಂ ಬೆರಸಿರ್ಪರ್ (ಅದಿಪು. ೧೫-೬೨); ಯಕ್ಷಸಮುದಯಂ ಕಿನ್ನರವ್ಯೂಹಮುಂ ಗಂಧರ್ವಸಮಿತಿ . . . ಮಾನವಚಯಂ ರಾಗದಿಂದೀಶನೋಲಗಕೆ ಬರುತಿರ್ದುದು (ಚಿಬಪು. ೨-೧೬); ಗುಬ್ಬಳಿಸಿ ಪಟಪಟನೆ ಹಾರಿ ಬಹ ಹೊರಸುಗಳ ಸಮುದಯಂ (ಚಾತ್ರಾಗ. ೫೩-೧೪೪೭). ೪. ಒಟ್ಟು; ಮೊತ್ತ. ೫. ಪ್ರಯತ್ನ ; ಪರಿಶ್ರಮ. ೬. ಸಂಯೋಗ ; ಮಿಶ್ರಣ. ೭. ಕಲಹ; ಯುದ್ಧ : ''ಸಂಗ್ರಾಮಃ . . . ಸಮುದಯಃ . . .ವಿಗ್ರಹಃ - ಈ ೩೫ ಕಾಳೆಗಂ'' (ಹಲಾಯು. ೭೫-೨೯೯). ೮. ಸೈನ್ಯದ ಹಿಂಭಾಗ. ೯. [ಬೌದ್ಧ] ನಾಲ್ಕು ಬಗೆಯ ಧರ್ಮಸಾಧನೆಯ ತತ್ತ್ವಗಳಲ್ಲಿ ಒಂದು : 'ದುಃಖ, ಸಮುದಯ, ನಿರೋಧ, ಮಾರ್ಗ' ಎಂಬ ಧರ್ಮದೇಶನವನ್ನು ಭಗವಂತನು ಪ್ರಕಾಶಪಡಿಸಿದನು (ಬುದ್ಧಪ. ೧೧೧). [ಸಂ.]

ಸಮುದಾಚಾರ (ನಾ). ೧. ಸರಿಯಾದ ರೀತಿನೀತಿ ; ಶಿಷ್ಟಾಚಾರ : ಸುದರ್ಶನ, ರೋಷದಿಂದ ಸಮುದಾಚಾರವನ್ನು ನೋಡಲಿಲ್ಲ (ಧಾಪಸಾ. ೪೯). ೨. ಉದ್ದೇಶ ; ಸಂಕಲ್ಪ. [ಸಂ.]

ಸಮುದಾಯ (ನಾ). ೧. ಗುಂಪು ; ಸಮೂಹ : ಶ್ರಾವಕಸಮುದಾಯದ ತೇಜವನೇನ ಪೇಳುವೆನು (ಧನ್ಯಕು. ೨೩); ಪುರುಲೆಗಳ ಪೆರ್ಮಂದೆ ; ಬರ್ಹಿಗಳ ರಮಣೀಯ ಸಮುದಾಯಮಿತ್ಯಾದಿ ನಾನಾಶಕುಂತವ್ರಜಂ (ಚಾತ್ರಾಗ. ೫೩-೧೪೪೭). ೨. ಒಟ್ಟು; ಮೊತ್ತ : ಸಮುದಾಯಾರ್ಥಮನಾರಯ ಸಮನಿಸುವರ್ಥಪ್ರತೀತಿ ತೋಱದೊಡೆಲ್ಲಂ ಕ್ರಮಮಕ್ಕುಮರ್ಥಶೂನ್ಯಂ (ಕವಿಪ. ೧-೭೮). ೩. (ಆಲಂ) ಸಂಪೂರ್ಣವಾದ ಸೊಗಸು; ಒಟ್ಟಿಂದ : ಸಮುದಾಯಂ ಮೆಱೆಯಲ್ಕೆವೇಡ್ಕುದು ಕಥಾವಿಸ್ತಾರದೊಳ್ (ಅನಂಪು. ೧-೬೭). [ಸಂ.]

ಸಮುದಾಯವಾಸಿ (ನಾ). ಗುಂಪಿನ ಮಧ್ಯೆ ಬದುಕುವವನು ; ಗುಂಪಿನಲ್ಲಿ ವಾಸಿಸುವವನು : ಏಕವಿಹಾರಮಂ ಪತ್ತುವಿಟ್ಟು ಮುನಿಗಳ್ ಸಮುದಾಯವಾಸಿಗಳಪ್ಪರ್ (ಚಾವುಂಪು. ೫೩). [ಸಂ. ಸಮುದಾಯವಾಸಿನ್]

ಸಮುದಾಯಶೋಭೆ (ನಾ). ಸಮಗ್ರ ಆಕೃತಿಯ ಚೆಲುವು ; ಒಟ್ಟಿಂದ : ಅವರ . . . ಅವಯವದ ಶೋಭೆಗೆ ಬೆಂಬಲಮಾದ ಸಮುದಾಯಶೋಭೆಗಂ . . . ಬೆಕ್ಕಸಂಬಟ್ಟು (ಶಾಂಪು. ೩-೫೩ ವ). [ಸಂ. ಸಮುದಾಯಶೋಭಾ]

ಸಮುದಿತ (ಗು). ೧. ಒಟ್ಟುಗೂಡಿದ ; ಒಟ್ಟಿಗೆ ಸೇರಿದ. ೨. ಮೇಲಕ್ಕೆ ಬಂದಿರುವ ,– ಮೂಡಿರುವ : ಸ್ವಸಮಯಸಮುದಿತಸರಶ್ಚಂದ್ರಚಂದ್ರಿಕಾಚಕೋರರುಂ (ಸೌಂದಾ. V, ೮೪೮-೨೭ ; 1087). ೩. ಮೇಲೆತ್ತಿ ಹಿಡಿದಿರುವ : ಸಮುದಿತಧವಳಾತ ಪತ್ರಸುಮಾಗಿ . . . ನಡೆತಂದು (ನಂಬರ. ೧೭-೧೨೭). ೪. ಉಂಟಾದ ; ಉತ್ಪತ್ತಿಯಾದ : ಸಮುದಿತಕುಸುಮಾವಮೋದೋದಯೋದ್ಯಾನಲೀಲಾಕ್ರಮ ವಿಹಿತಜಲಕ್ರೀಡಾವಿನೋದಾದಿನೀತಂ (ಕವಿಕಾ. ೩-೨೧೧) ; ಇದುವಲಾ ನಿಜಪದವಿ ಗಳಿಗಾಸ್ಪದವೆನುತ್ತಂ ತತ್‌ಪ್ರಸಾದಸಮುದಿತಭೋಗಿತನಾಗಿ (ಬಸಪು. ೬೦-೧೨). (ನಾ). ೫. ಒಟ್ಟುಗೂಡಿದುದು ; ಸೇರಿದುದು : ಎರಡುಬಲಮುಂ ಭೋರೆಂದಾರ್ದಾರ್ದು ಪೇಚರಭೂಮಿಗೋಚರಸಮುದಿತಂ ಬಾನೊಳ್ ಭೂಭಾಗದೊಳ್ ಕಿಡಿಗುಟ್ಟಿದಂತಿರೆ (ಶಾಂತಿಪು. ೫-೫೩). [ಸಂ.]

ಸಮುದ್ಗ (ನಾ). ೧. ಮುಚ್ಚಳವಿರುವ ಸಂಪುಟ,– ಕರಡಿಗೆ : ''ಸಮುದ್ಗಃ, ಸಂಪುಟಃ - ಈ ೨ ಕರಂಡಗೆ'' (ಹಲಾಯು. ೧೨೬-೭೯). ೨. [ಛಂದ] ಯಮಕಾಲಂಕಾರದ ಒಂದು ಪ್ರಭೇದ ; ನಾಲ್ಕು ಪಾದಗಳಲ್ಲಿ ಯಾವುದೇ ಎರಡು ಪಾದಗಳು ಪುನರಾವೃತ್ತಿಯಾಗುವುದು : ಪರಿವೃತ್ತಂ . . . ಸಮುದ್ಗಮೆಂಬವು ಮೊದಲಾಗಿರೆ ಯಮಕಭೇದಂ (ಕಾವ್ಯಾನ. ೫೫೬). ೩. [ನಾಟ್ಯ] ತುಟಿಯ ಒಂದು ಭಂಗಿ ; ತೆರೆದಿರುವ ಎರಡುತುಟಿಗಳನ್ನು ಸೇರಿಸಿ ಉಬ್ಬಿಸುವುದು : ಪೊಳೆವರಡಧರಂ ಮಿಗೆ ಸಂಗೊಳಿಸಲ್ ಪೂರಿಸುವ ತೆಱದಿನೊಂದೆ ಸಮುದ್ಗಂ (ಲಾಸ್ಯರಂ. ೩-೮೪). [ಸಂ.]

ಸಮುದ್ಗಕ (ನಾ). ೧. ಸಂಪುಟ ; ಭರಣಿ. ೨. [ಕಾಮಶಾ] ಒಂದು ಬಗೆಯ ರತಿಬಂಧ : ಮಗ್ಗುಲಾಗೆ ಮಲಗಿದವಳ ತೊಡೆಯ ನಡುವೆ ನಲಿದು ತನ್ನ ತೊಡೆಯನಿಟ್ಟು, ಕೂರ್ತು ಚುಂಬಿಸಿ . . . ಒಲಿದು ನೆರೆವ ಪುರುಷನಿಂದದೇ ಸಮು[ದ್ಗ]ಕ (ಜಸವ. ೯-೪೦). [ಸಂ.]

ಸಮುದ್ಗತ (ಗು). ೧. ಮೇಲೆದ್ದ ; ಮೇಲೇರಿದ : ಮಯ್ಯೊಳ್ ಸಮುದ್ಗತರೋಮಂ . . . ಎಸೆಯುತ್ತಿರ್ಪನ್ನಂ (ಜಗಪ. ೩-೫). ೨. ಉಂಟಾದ ; ಹುಟ್ಟಿದ : ಜನಿತಗದ್ಗದಗಳ ಸಮುದ್ಗತನಿನದ ಸಂಕಲಿತಾತ್ಮನಾಗುತ . . . ಬಿಗಿಯಪ್ಪಿ (ಬಸಪು. ೨೫-೪೯). [ಸಂ.]

ಸಮುದ್ಘೋಷಣ (ನಾ). ಗಟ್ಟಿಯಾದ ಧ್ವನಿ , – ಕೂಗು : ತುರಂಗಸಂಘಹೇಷಾ ಸಮುದ್ಘೋಷಣಂಬೆರಸಿ ನಭೋಮಂಡಳಮನಳ್ಳಿಱಿದಳುರ್ಕಿಗೊಳೆ (ರಾಜಶೇ. ೬-೧೧ ವ). [ಸಂ.]

ಸಮುದ್ದಂಡ (ನಾ). ಅತ್ಯಂತಸಮರ್ಥನಾದವನು; ಮಹಾಶಕ್ತಿಶಾಲಿ : ಖಂಡಿತ ಮದನಕೋದಂಡನಂ ದಂಡಿತಯಮಸಮುದ್ದಂಡನಂ ನೋಡಿ (ಬಸಪು. ೩೯-೫೬). [ಸಂ.]

ಸಮುದ್ಧತ (ಗು). ೧. ಚೆನ್ನಾಗಿ ಮೇಲೇರಿಸಿದ. ೨. ಕೊಬ್ಬಿದ ; ಸೊಕ್ಕಿದ. ೩. ಶಿಷ್ಟಾಚಾರವಿಲ್ಲದ. (ನಾ). ೪. ಕೊಬ್ಬಿದವನು; ದುರಹಂಕಾರಿ : ''ಗರ್ವದಿಂ ಮಲೆದವಂ ಸಮುದ್ಧತನಕ್ಕುಂ'' (ಮಂಗರಾ. ೭೨-೨೧). [ಸಂ.]

ಸಮುದ್ಧರಣ (ಗು). ೧. ಮೇಲಕ್ಕೆ ಎತ್ತುವ ; ಉದ್ಧರಿಸುವ : ಸಿದ್ಧರಾಮಂ ಸರ್ವಲೋಕಸಮುದ್ಧರಣಗುಣಸಾರ್ವಭೌಮಂ (ಬಸಪು. ೧೦-೧೧). (ನಾ). ೨. ಎತ್ತಿ ಹಿಡಿಯುವಿಕೆ ; ಮೇಲೆತ್ತುವಿಕೆ. ೩. ಹೊರತೆಗೆಯುವಿಕೆ. ೪. ತೊಂದರೆಯಿಂದ ಬಿಡುಗಡೆ ಮಾಡುವಿಕೆ ; ಉದ್ಧರಿಸುವಿಕೆ. ೫. ಉದ್ಧಾರಮಾಡುವವನು : ಶರಣಾಗತವ್ರಜಪಂಜ[ರರುಂ ಚ]ತುಸ್ಸಮಯಸಮುದ್ಧರಣರುಂ (ಸೌಂದಾ. V, ೮೪೯-೩೦ ; 1044) ; ಸಮಯಸಮುದ್ಧರಣನಖಿನ್ನತಪ್ರತಾಪ (ಎಕ. VIII, ಸೊರಬ. ೨೭೬-೧೧ ; 1070). [ಸಂ.]

ಸಮುದ್ಧರಿಸು (ಕ್ರಿ). ಉದ್ಧಾರಮಾಡು ; ರಕ್ಷಿಸು : ಕಂಚರಸರ್ಸ್ಯೆಗೊಟ್ಟಗಂಗನಿಂ ಬಂದ ಧರ್ಮ್ಮಮಂ ಸಮುದ್ಧರಿಸಿದಂ (ಆಆ. XVIII, ೩೧೨-೨೬; 11ನೆಯ ಶತ) ; ಒಳಗಿರ್ದ ಬದ್ಧಜಲಮಂ ಚಿಲ್ಲಿಚಿಲ್ಲಿ ತದುದ್ಧರಾಗ್ನಿಯನಂತು ಕೆಡಿಸಿ ಸಮುದ್ಧರಿಸಿ (ಬಸಪು. ೩-೫೫). [ಸಮುದ್ಧರಣ + - ಇಸು]

ಸಮುದ್ಧೃತ (ಗು). ಮೇಲಕ್ಕೆ ಎತ್ತಿದ , – ಚಾಚಿದ : ಉರ್ವರೆಯೊಳೆ ತಳ್ಕ ಕಾಲ್ದುದಿ ಸಮುದ್ಧೃತ ಬಾಹುಗೆ ಬದ್ಧಚಾವ ಭಾಸುರತರಖಡ್ಗಂ . . . ಒಪ್ಪೆ ಪೊಸವೇಷದ ತಾಪಸನೊಪ್ಪಿ ತೋಱಿದಂ (ಶಬಶಂ. ೨-೭೯). [ಸಂ.]

ಸಮುದ್ಭಟ (ಗು). ಉತ್ಕೃಷ್ಟವಾದ ; ಶ್ರೇಷ್ಠವಾದ : ಸಾಹಸೋತ್ಕೀರ್ಣ ಮಹಾಹವಾರ್ಣವ ಪ್ರವೀರಪ್ಪಾರಬ್ಭಾರಭಟೀಸಮುದ್ಭಟಕಥೆಗಳನೆ ಕೇಳಲುಂ (ಅದಿಪು. ೮-೩೨ ವ). [ಸಂ.]

ಸಮುದ್ಭವ (ನಾ). ೧. ಹುಟ್ಟು ; ಉತ್ಪತ್ತಿ : ರೂಪದ ಸತ್ವರಜಸ್ತಮೋಗುಣಾಧಾರತೆಯಿಂ ಜಗಸ್ಸೃಷ್ಟಿ ಸಮುದ್ಭವಸಂಹೃತಿಹೇತುವದ ನೀರೇರುಹನಾಭ ನೀರಜ ಸಮುದ್ಭವ ಶಂಕರರೀಗಧೀಷ್ಟಮಂ (ಕಇಅ. ೧-೨-೩ ; 1058). ೨. ಹುಟ್ಟಿರುವಂಥದು; ಉತ್ಪನ್ನವಾದುದು: ಶಿವನಲ್ಲಿಯದುಕಾರಣಂ ಜಂಗಮದ ರೂಪೊಳವಿರತಂ ಲಿಂಗರೂಪಂ ಸಮುದ್ಭವವಲಾ (ವೀಶೃಪು. ೧-೪-೩೪). [ಸಂ.]

ಸಮುದ್ಭವಿಸು (ಕ್ರಿ). ಹುಟ್ಟು; ಉಂಟಾಗು : ಮುಂದ ಜನಿಸಲೊಡನೆ ಮದೀಯಾನಂದಭಕ್ತಿ ಸಮುದ್ಭವಿಸಿತೊಲವೊಂದ ಜನಿಸಿದ ಮುನ್ನವೇ ಜನಿಸಿತ್ತು ಮಚ್ಚಿಂತೆ (ಬಸಪು. ೨-೧೦). [ಸಮುದ್ಭವ + - ಇಸ್ಸು]

ಸಮುದ್ಧೂತ (ಗು). ಉಂಟಾದ ; ಒದಗಿದ : ಪೂರ್ಣೊತ್ತಲ್ಲಿ ಮಧ್ಯಂದಿನಸಮಯ ಸಮುದ್ಧೂತ ಶಂಖಪ್ರಣಾದಂ (ಕಾದಂಪು. ೬೬) ; ಕಂಡನಮಿತದಲಪದದಲನಮಂ ಸಮುದ್ಧೂತರೇಣುಪ್ರವಾಹಮಂ (ಶ್ರೀರಾಮಾ. ೧೫೬-೧೫೧). [ಸಂ.]

ಸಮುದ್ಯೋಗ (ನಾ). ಕಾರ್ಯಾಚರಣೆ ; ಚಟುವಟಿಕೆ : ತದ್ಗಣಾಡಂಬರ ಸಮುದ್ಯೋಗಪ್ರಕಾರವು ಕಾಣಬರುತಿರಲು (ಬಸಪು. ೫೮-೬೩). [ಸಂ.]

ಸಮುದ್ರ (ಗು). ೧. ಮುದ್ರೆಯಿಂದ ಕೂಡಿದ ; ಅಂಕಿತವುಳ್ಳ. (ನಾ). ೨. ಕಡಲು ; ಸಾಗರ : "ರತ್ನಾಕರಃ . . . ಸಾಗರಃ, ಸಮುದ್ರಃ - ಈ ೧೨ ಸಮುದ್ರಂ" (ಹಲಾಯು. ೧೦೭-೩೦); ಪಾಂಡವರೇಟಕ್ಕೋಹಿಣೀಬಲಂಬೆರಸೇಟುಂ ಸಮುದ್ರಂಗಳುಂ ಮೇರೆದಪ್ಪಿ ಬರ್ಪಂತಿರೆ ಬಂದು (ಪಂಪಭಾ. ೯-೧೦೪ ವ) ; ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ (ಅವಚಂ. ೧೫-೧೯) ; ಆ ಮಹಾರ್ಣವಂ ಸಮುದ್ರಮಾಗಿಯುಂ ಅಪಾರವಿಸ್ತಾರಿಯುಂ . . . ಎನಿಸಿದುದು (ಜಗವಿ. ೧-೪೪ ವ) ; ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದದ ನೀರು (ಗಾದೆ). ೩. ಕೆಲವು ಊರುಗಳ ಹೆಸರಿನ ಕೊನೆಯಲ್ಲಿ ಸೇರುವ ಶಬ್ದ : 'ದೋರಸಮುದ್ರ' ಪರಾ. ೪. ಒಂದು ಬಹುದೊಡ್ಡ ಸಂಖ್ಯೆ : 'ಸಮುದ್ರಾಯುಷ್ಯ' ಪರಾ. ೫. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ: ಸಮುದ್ರ . . . ಎಂದು ನಾಲ್ಕಱ ನಾಮಂ (ಕೃವಹಾ. ೯-೪). ೬. [ಜ್ಯೋತಿ] ಆಕೃತಿಯೋಗಗಳಲ್ಲಿ ಒಂದು; ಲಗ್ನದಿಂದ ಎರಡು, ನಾಲ್ಕು, ಆರು, ಎಂಟು, ಹತ್ತು ಮತ್ತು ಹನ್ನೆರಡನೆಯ ಸ್ಥಾನಗಳಲ್ಲಿ ಏಳುಗ್ರಹಗಳೂ ಇರುವುದು : ಏತ್ತಂ ಮೊದಲಾಗೇಕಾಂತರ ಮೊಂದಿದೊಡಾ ಗ್ರಹಮೇಱ್ ಸಮುದ್ರಮೆಂದೀ ಯೋಗಂ (ಜಾತಕ. ೧೩-೪).

ಸಮುದ್ರದ ಕಿಚ್ಚು = ಕಡಲಿನಲ್ಲಿರುವುದೆಂದು ನಂಬಲಾಗುವ ಬೆಂಕಿ ; ಬಡಬಾನಲ: "ಔರ್ವಃ, ಸಮುದ್ರವಹ್ನಿಃ, ಬಾಡಬಃ, ಬಡಬಾಮುಖಃ - ಈ ೪ ಸಮುದ್ರದ ಕಿಚ್ಚು" (ಹಲಾಯು. ೧೩-೭೦). ಸಮುದ್ರದ ನೊರೆ = (ಔಷಧಿಯಂತೆ ಬಳಸುವ, ಸಮುದ್ರಜನ್ಯವಾದ ಒಂದು ವಸ್ತು ; ಕಡಲ ನಾಲಗೆ : ಲಾಮಂಚ, ಸಮುದ್ರದ ನೊರೆ, ಕಟುಕರೋಹಿಣಿ, ಮುಧಿವಾಳ ಇವುಗಳನ್ನು . . . ಚೂರ್ಣಿಸಿ (ಸಕವೃ. ೭೦): ಶುಚಿಮಾಡುವ ಪದಾರ್ಥಗಳು: ಹುಣಿಸೆಹಣ್ಣು, ಬೂದಿ . . . ಸಮುದ್ರದ ನೊರೆ (ಗೃಪವಿ. ೧೭೧). [ಸಂ.]

ಸಮುದ್ರಕಳ್ಳ (ನಾ). ಸಾಗರದ ಮೇಲೆಯೇ ಅಲೆಯುತ್ತಿದ್ದು, ಹಡಗುಗಳನ್ನು ಕೊಳ್ಳೆ ಹೊಡೆಯುವವನು ; ಕಡಲುಗಳ್ಳ : ಪೋರ್ಚುಗೀಸ ಸಮುದ್ರಕಳ್ಳರು ಅವಳನ್ನು ಕದ್ದುಕೊಂಡುಹೋಗಿ . . . ಸಮುದ್ರತೀರದಲ್ಲಿ ಬಿಟ್ಟುಹೋಗಲು, ಕಾಪಾಲಿಕನು ಕರೆದುಕೊಂಡುಬಂದು ಸಾಕಿದನಂತೆ (ಬಂಕಿಮ. ೧೬೫). [ಸಮುದ್ರ + ಕಳ್ಳ]

ಸಮುದ್ರಕಾಂತೆ (ನಾ). ನದಿ; ಹೊಳೆ: "ಸಿಂಧುಃ, ಸ್ರವಂತೀ . . . ಸಮುದ್ರಕಾಂತಾ . . . ರೋಧೋವಕ್ತ್ರಾ - ಈ ೨೧ ತೊಱೆ" (ಹಲಾಯು. ೧೧೦-೪೩).

[ಸಂ. ಸಮುದ್ರಕಾಂತಾ]

ಸಮುದ್ರಘೋಷ (ನಾ). ಒಂದು ಬಗೆಯ ವಾದ್ಯ : ನಂದಿಪೋತವರ್ಮನನ್ನು ಹೊಡೆದಟ್ಟಿ ಕಟುಮುಖವಾದಿತ್ರ, ಸಮುದ್ರಘೋಷ ಮೊದಲಾದ ವಾದ್ಯವಿಶೇಷಗಳನ್ನೂ . . . ಸ್ವಾಧೀನಪಡಿಸಿಕೊಂಡನು (ಕರ್ಣಾಅ. ೯೦). [ಸಂ.]

ಸಮುದ್ರಜ (ನಾ). ೧. ಕಡಲಿನಲ್ಲಿ ಹುಟ್ಟಿದುದು. ೨. ಉಪ್ಪು : "ಲವಣಂ ಸಮುದ್ರಜಂ ಕಲ್ಲುಪ್ಪೆನಿಕ್ಕು" (ಮಂಗರಾ. ೪೩-೪೧). [ಸಂ.]

ಸಮುದ್ರಪಾಲ, ಸಮುದ್ರಪಾಳ (ನಾ). ಒಂದು ಬಗೆಯ ಔಷಧೀಸಸ್ಯ : ನಂಜನ ಕೊರಡು, ಸಮುದ್ರಪಾಲ, ಕಾಚಿ, ಬದನೆ (ನಮ್ಮನು. ೨೩೮). ಸಮುದ್ರಪಾಳ : ಸಮುದ್ರಪಾಳದ ಬೀಜ, ಹಿಪ್ಪಲಿ ಈ ಎರಡನ್ನೂ ಅಂಬಲದಲ್ಲಿ ಅರೆದು ಕಲಸಿ . . . ಇಕ್ಕಲು ಎಂತಪ್ಪ ಶೂಲೆ ಗುಣ (ಎಪ್ಪಸಿ. ೧೦೬). [ಸಂ.]

ಸಮುದ್ರಪಾಳ 'ಸಮುದ್ರಪಾಲ' ನೋ.

ಸಮುದ್ರಫಲ (ನಾ). ೧. ಗುಲಾಬಿಬಣ್ಣದ ಹೂವುಗಳನ್ನು ಬಿಡುವ, ಸದಾ ಹಸುರಾಗಿರುವ ಒಂದು ಬಗೆಯ ಮರ : (ಮೃಔಗಿ. ೧೨-೨೦೨). ೨. ಒಂದು ಬಗೆಯ ಔಷಧ. [ಸಂ.]

ಸಮುದ್ರಫೇನ (ನಾ). (ಒಣಗಿ ಗಟ್ಟಿಯಾದನಂತರ ಔಷಧೀವಸ್ತುವಿನಂತೆ ಬಳಸುವ) ಸಮುದ್ರದ ನೊರೆ , – ಬುರುಗು : ಜೀನಸುಗಳು . . . ಸಮುದ್ರ ಬುರುಗು (ಸಮುದ್ರಫೇನ) (ಮುಂಬಪ್ರಾ. ೧೨೮). [ಸಂ.]

ಸಮುದ್ರಬಳ್ಳಿ (ನಾ). ವಿಸ್ತಾರವಾಗಿ ಹಬ್ಬುವ ಒಂದು ಬಗೆಯ ಹೊದರು : ಸಮುದ್ರಬಳ್ಳಿ , ಸಮುದ್ರಹಾಲೆ, ಚಂದ್ರಪಾದ (ಮೃಔಗಿ. ೯-೧೪೫). [ಸಮುದ್ರ + ಬಳ್ಳಿ]

ಸಮುದ್ರಬಾಳೆ (ನಾ). ಒಂದು ಬಗೆಯ ಮೀನು: (ಕ). [ಸಮುದ್ರ + ಬಾಳೆ$_2$]

ಸಮುದ್ರಮಥನ (ನಾ). (ಹಿಂದೆ ದೇವಾಸುರರು ಅಮೃತವನ್ನು ಪಡೆಯುವುದಕ್ಕಾಗಿ ಮೇರುಗಿರಿಯನ್ನು ಕಡೆಗೋಲಿನಂತೆ ಮಾಡಿ) ಕ್ಷೀರಸಮುದ್ರವನ್ನು ಕಡೆದುದು : ಸಮುದ್ರಮಥನಕಥಾನಕದಲ್ಲಿ ಮಂದರಗಿರಿಯನ್ನು ಹೊತ್ತುನಿಂತ ಪುರಾಣಕೂರ್ಮನ ವರ್ಣನೆಯಿದೆ (ಭಾರದ. ೧೪೪). [ಸಂ.]

ಸಮುದ್ರಯಾನ (ನಾ). ದೇಶಾಂತರಗಳಿಗೆ ಹೋಗಲು ಕಡಲಿನ ಮೂಲಕ ಮಾಡುವ ಪ್ರಯಾಣ : ಸ್ಮೃತಿಗಳ ಕಾಲದಲ್ಲಿ ಸಮುದ್ರಯಾನವು ನಿಷಿದ್ಧವಾಗಿದೆ (ಭಾರದ. ೫೬). [ಸಂ.]

ಸಮುದ್ರಯೋಗ (ನಾ). [ಜ್ಯೋತಿ] ಆಕೃತಿಯೋಗಗಳಲ್ಲಿ ಒಂದು; ಜನನಲಗ್ನದ ದ್ವಿತೀಯಸ್ಥಾನದಿಂದ ಮೊದಲು ಮಾಡಿ, ಒಂದು ಬಿಟ್ಟು ಒಂದು ರಾಶಿಯಲ್ಲಿ ಏಳುಗ್ರಹಗಳೂ ಇರುವುದು: ೨, ೪, ೬, ೮, ೧೦, ೧೨ - ಈ ಆರು ಸ್ಥಾನಗಳಲ್ಲಿ ಏಳು ಗ್ರಹಗಳೂ ಇದ್ದರೆ ಸಮುದ್ರಯೋಗ (ಜಾತಕ. ೧೩-೪ ಅಡಿಟಿ). 'ಚಕ್ರಯೋಗ' ಪರಾ. [ಸಂ.]

ಸಮುದ್ರಲವಣ (ನಾ). ಒಂದು ಬಗೆಯ ರಾಸಾಯನಿಕಪದಾರ್ಥ; ಸೈಂಧವ ಲವಣ : "ಲವಣೋದ್ಭಿಜಂ - ಸಮುದ್ರಲವಣ" (ಓಷಧಿ. ೧೪೨); ಕಾಚುಲವಣ, ಸಮುದ್ರಲವಣ . . . ಗಂಧಕ ಇವಂ . . . ಮರ್ದಿಸಿ . . . ಕಲ್ಕದಿಂದನುಪಾನವಿಕ್ಕಿ ಕೊಡಲು ಜಿಹ್ವಕಸನ್ನಿ ಗುಣಮಹುದು (ಸಕವೃ. ೧೬೭). [ಸಂ.]

ಸಮುದ್ರವಹ್ನಿ (ನಾ). ಸಾಗರದ ತಳದಲ್ಲಿ ಹುಟ್ಟುವುದೆಂದು ನಂಬಲಾದ ಬೆಂಕಿ; ಕಡಲ್ಗಿಚ್ಚು ; ಬಡಬಾಗ್ನಿ : "ಔರ್ವಃ, ಸಮುದ್ರವಹ್ನಿಃ, ಬಾಡಬಃ, ಬಡಬಾಮುಖಃ - ಈ ೪ ಸಮುದ್ರದ ಕಿಚ್ಚು" (ಹಲಾಯು. ೧೩-೭೦). [ಸಂ.]

ಸಮುದ್ರಶೋಕೆ 'ಸಮುದ್ರಸೋಗೆ' ನೋ.

ಸಮುದ್ರಸೋಗೆ, ಸಮುದ್ರಶೋಕೆ (ನಾ). ಒಂದು ಬಗೆಯ ಔಷಧೀಸಸ್ಯ : "ಅರ್ಧಚಂದ್ರಾ-ಹಿಡಿಹಿಡಿಕೆ, ಕರಿಯ ತಿಗಡೆ, ಸಮುದ್ರಸೋಗೆ, ಕಟ್ಟವತ್ತಿಗೆ, ಬಾವುಜಿಗೆ" (ಓಷಧಿ. ೫) ; ಚಾಕಾಯಿ, ಹಿಪ್ಪಲಿ . . . ಸಮುದ್ರಸೋಗೆಯ ಬೀಜ ಇವಂ ಸಮಭಾಗವಾಗಿ ಭಂಗಿಸೊಪ್ಪಿನ ರಸದಿಂ ಒಂದುಚಾವ ಮರ್ದಿಸಿ (ಸಕವೃ. ೩೩೦). ಸಮುದ್ರಶೋಕೆ : ಜಾಯಿಕಾಯಿ . . . ಏಲಕ್ಕಿ, ಸಮುದ್ರಶೋಕೆಬೀಜ, ಇಪ್ಪನೂ ಸಮಾಂಶವಾಗಿ ಭಂಗಿಸೊಪ್ಪಿನ ರಸದಲ್ಲಿ ಒಂದು ಚಾವ ಮರ್ದಿಸಿ (ವೃದ್ಧಸಾ. ೨, ೨೧೫). [← ಮರಾ. ಸಮುದ್ರಸೋಕ್, ಸಮುದ್ರಸೋಖ್, ಸಮುದ್ರಶೋಕ್./ ಸಂ. ಸಮುದ್ರಶೋಷ]

ಸಮುದ್ರಸೌತೆ (ನಾ). ಸಮುದ್ರದಲ್ಲಿ ವಾಸಿಸುವ ಕಂಟಕಚರ್ಮವರ್ಗಕ್ಕೆ ಸೇರಿದ ಒಂದು ಬಗೆಯ ಪ್ರಾಣಿ : ಸಮುದ್ರಸೌತೆಗಳಲ್ಲಿ ಇತರ ಕಂಟಕಚರ್ಮಿಗಳಲ್ಲಿ ರೂಪುಗೊಂಡಿರುವ ಸುಣ್ಣದ ತಟ್ಟೆಗಳಿರುವುದಿಲ್ಲ (ಪ್ರಾಣಿಶಾ. ೨೬೮). [ಸಮುದ್ರ + ಸೌತೆ$_2$]

ಸಮುದ್ರಹಾಲೆ (ನಾ). ಒಂದು ಬಗೆಯ ಸಸ್ಯ : ಸಮುದ್ರಬಳ್ಳಿ, ಸಮುದ್ರಹಾಲೆ, ಚಂದ್ರಪಾದ (ಮೃಔಗಿ. ೯-೧೪೫). [ಸಮುದ್ರ + ಹಾಲೆ$_2$ (< ಪಾಲೆ$_2$)]

ಸಮುದ್ರಾಂತ (ಗು). ೧. ಕಡಲೇ ಅಂತ್ಯವಾಗುಳ್ಳ ; ಸಾಗರಪರ್ಯಂತವಾದ: ಸಮುದ್ರಾಂತಧರಿತ್ರೀಕಾಂತ . . . ವಿಧಿವಶದೆ ನಿನಗಮಿಾ ಪರಿಯಾಯ್ತೇ (ಗದಾಯು. ೯-೨೨). (ನಾ). ೨. ಜಾಯಿಕಾಯಿ. [ಸಂ.]

ಸಮುದ್ರಾಂತೆ (ನಾ). ೧. ಸಮುದ್ರದಿಂದ ಸುತ್ತುವರಿಯಲ್ಪಟ್ಟುದು ; ಭೂಮಿ. ೨. ಹತ್ತಿಯ ಗಿಡ : "ತುಂಡಿಕೇರೀ. ಸಮುದ್ರಾಂತಾ. ಕಾರ್ಪಾಸೀ. ಬದರಾ - ೪ ಹತ್ತೀಗಿಡದ ಹೆಸರು" (ಸಿದ್ಧಾಂತ. ೧೩೮) [ಸಂ. ಸಮುದ್ರಾಂತಾ]

ಸಮುದ್ರಾತ್ಮಜೆ (ನಾ). ಸಾಗರದಲ್ಲಿ ಹುಟ್ಟಿದವಳು; ಲಕ್ಷ್ಮಿ: ವಿಲಸತ್ಸಮುದ್ರಾತ್ಮಜೆ ಸರಾಗದಿಂದಲ್ಲಿ ಸುಸ್ಥಿರೆಯಾಗಿ ನೆಲಸಿರ್ಪಳು (ಚೈಮಿಭಾ. ೫-೬೫).

[ಸಂ. ಸಮುದ್ರಾತ್ಮಜಾ]

ಸಮುದ್ರಾಯುಷ್ಯ (ನಾ). ಒಂದು ಅತ್ಯಧಿಕವಾದ ಸಂಖ್ಯೆಯಷ್ಟು ವರ್ಷಗಳ ಆಯಸ್ಸು : ಮುನಿರಾಜಂ . . . ದಶಸಾಗರೋಪಮಸಮುದ್ರಾಯುಷ್ಯಮಂ ತಾಳ್ದಿದಂ (ಶಾಂತಿಪು. ೯-೮೪). [ಸಂ.]

ಸಮುದ್ರೋಪಕಂಠ (ನಾ). ಸಮುದ್ರತೀರ : ಬಳದ ವೇಳಾವನಸ್ಥಾಳಶಾಳಂಗಳೊಳಾದಿಬ್ರಹ್ಮಪುತ್ರಂ ನಿಜವಿಜಯಗಜೇಂದ್ರಂಗಳಂ ಕಟ್ಟಿ ನೀಲಾಚಳಸಂಘಾತಂಗಳಿಂ ಸುತ್ತಿಱಿದವೊಲೆಸೆದತ್ತಾ ಸಮುದ್ರೋಪಕಂಠಂ (ಆದಿಪು. ೧೪-೫೩). [ಸಂ.]

ಸಮುದ್ವರ್ತನ (ನಾ). ಚಿಮ್ಮಿ ಬೀಳುವಿಕೆ ; ಎಗರಿ ಬೀಳುವಿಕೆ : ತೋಳ್ತರಗಳಾಗಕ್ಷಿವಿಭ್ರಮಂ ಮಿಾನವೃಂದಸಮುದ್ವರ್ತನಮಾಗೆ ನಿರ್ಭರರತೋದೀರ್ಣಾರ್ಣವಂ ಘೂರ್ಣಸಲ್ (ಶಾಂತಿಪು. ೮-೧೦೨). [ಸಂ.]

ಸಮುದ್ವೃತ್ತ (ನಾ). [ನಾಟ್ಯ] ಕಣ್ಣುಗುಡ್ಡೆಯ ಚಲನೆಗಳಲ್ಲಿ ಒಂದು ಬಗೆ : ಭ್ರಮಣಂ . . . ಸಮುದ್ವೃತ್ತಂ ನಿಷ್ಕ್ರಾಮಂ ಅಮಿತಪ್ರಾಕೃತಗಳಾಲಿಯೊಂಬತ್ತಕ್ಕುಂ (ಲಾಸ್ಯರಂ. ೩-೫೪). [ಸಂ.]

ಸಮುನ್ನತ (ಗು). ೧. ಬಹು ಎತ್ತರವಾದ ; ಅತ್ಯುನ್ನತವಾದ : ಸಮುನ್ನತಾಕ್ಷಯ ಪದಪ್ರಾಸಾದ ನಿಶ್ರೇಣಿ (ಚಂದ್ರಪ್ರ. ೧-೧೨). ೨. ಮೇಲಕ್ಕೆ ಎತ್ತಿದ; ಎತ್ತರಿಸಿದ. ೩. ಅತಿಶಯವಾದ ; ಶ್ರೇಷ್ಠವಾದ : ಕನ್ನೆಯನೀಯದ ಪೃಥುವಂ ಬನ್ನಮನೆಯ್ದಿಸಲೊಡರ್ಚಿ ಮುನಿಸನುವಿಸ ತೋರ್ಪಂ ನಮ್ಮ ಕೂರ್ಪನೆಂದು ಸಮುನ್ನತವೀರ್ಯರ್ ಲವಾಂಕುಶರ್ ತಱಿಸಂದರ್ (ಪಂಪಾಮಾ. ೧೬-೫೫) ; ಸನ್ನುತಾಗಮ ನಿಗಮವೆನುತ ಸಮುನ್ನತ ಪ್ರಮಥೇಂದ್ರಪದವಿಗೆ ಚೆನ್ನಪಟ್ಟಂಗಟ್ಟಿ ಸರ್ವಜ್ಞತ್ವಮಂ ಕುಡಲು (ಬಸವಪು. ೨-೨೫). [ಸಂ.]

ಸಮುನ್ನತಿ (ನಾ). ೧. ಎತ್ತರ ; ಔನ್ನತ್ಯ. ೨. ಹಿರಿಮೆ ; ಶ್ರೇಷ್ಠತೆ : ಹನ್ನೆರಡು ಗಾವುದದಳತೆಯ ಸಮುನ್ನತಿಯ ಕಲ್ಯಾಣಪುರವಂ ಮುನ್ನವೇ ಸಿಂಗರಿಸವೇಳ್ದು (ಬಸವಪು. ೫-೧೩). ೩. ಗೌರವ ; ಅಭಿಮಾನ. [ಸಂ.]

ಸಮುನ್ನತಿಕೆ (ನಾ). = ಸಮುನ್ನತಿ ೨ : ಇಂತಹ ವೀರಭಕ್ತಿಸಮುನ್ನತಿಕೆ ಇಂತಹ ಮಹತ್ವಮದುಂಟೆ ಲೋಕದೊಳು (ಬಸವಪು. ೧೮-೮೦). [ಸಮುನ್ನತ + - ಇಕೆ]

ಸಮುನ್ನದ್ಧ (ಗು). ೧. ಮೇಲೇರಿದ ; ಮೇಲಕ್ಕೆ ಬಂದ. ೨. ಕಟ್ಟಲ್ಪಟ್ಟ. ೩. ಉಬ್ಬಿದ ; ಊದಿದ. ೪. ತುಂಬಿದ ; ಪೂರ್ಣವಾದ. ೫. ಅಹಂಕಾರದ; ಸೊಕ್ಕಿನಿಂದ ಕೂಡಿದ. ೬. ಶ್ರೇಷ್ಠವಾದ ; ಘನವಾದ. ೭. ಉತ್ಪನ್ನವಾದ ; ಹುಟ್ಟಿದ. (ನಾ). ೮. ಗರ್ವವುಳ್ಳವನು ; ಅಹಂಕಾರಿ : "ಸಮುನ್ನದ್ಧಃ, ಅತಿಗರ್ವಿತಃ - ಈ ೨ ಗರ್ವವನ್ನುಳ್ಳವಂ" (ಹಲಾಯು. ೬೩-೨೨೮). [ಸಂ.]

ಸಮುನ್ಮಿಲಿತ (ಗು). ಚೆನ್ನಾಗಿ ಬೆರೆತ ; ಸರಿಯಾಗಿ ಕೂಡಿಕೊಂಡ : ಪರಿವೃತಮಾದ ತದ್ವನಧಿವಾರಿ ಸಮುನ್ಮಿಲಿ[ಪಾಶಾಂ. ೪]ತಾಲವಾಲದಂತಿರೆ (ಶಬಶಂ. ೧-೩೫). [ಸಂ.]

ಸಮುಪಚಿತ (ನಾ). ಚೆನ್ನಾಗಿ ರಾಶಿಯಾದುದು , — ಒಟ್ಟಾದುದು : ಕಂಡರಿಸಿ ಪಳುಕಿನಿಂದಮಖಂಡಿತಶೌಚಗುಣ ಸುರನದೀಸಮುಪಚಿತಂ ಡಿಂಡೀರಪಿಂಡಮೆನಿಸಿ ಕಮಂಡಲು ಸೊಗಯಿಪುದು ಬಾಲಚಂದ್ರವ್ರತಿಯ (ಪಲ್ಲಿಪು. ೧೦-೧೩೬). [ಸಂ.]

ಸಮುಪಜನಿತ (ಗು). ಪೂರ್ಣವಾಗಿ ಸಂಭವಿಸಿದ , — ಉಂಟಾದ : ಆಗಳ್ ಸುತಮುಖನಿರೀಕ್ಷಣಸಮಯಸಮುಪಜನಿತಪುಲಕಕಲಿಕಾಕಲಿತಕಲ್ಪವೃಕ್ಷನಪ್ಪ ನಾಭಿರಾಜಮಹೀಜಂ . . . ನಿಜತನೂಜವದನವನಜಮನಟ್ಟರ್ತು ನೋಡಿ (ಆದಿಪು. ೭-೧೧೦ ವ). [ಸಂ.]

ಸಮುಪಜಾತ (ಗು). ಹುಟ್ಟಿದ ; ಜನಿಸಿದ : ಧರ್ಮಮಂ ಕೇಳ್ದು ಸಮುಪಜಾತ ನಿರ್ವೇಗಪರಂ ಪರಮೇಶ್ವರದೀಕ್ಷೆಯಂ ಸ್ತಿಮಿತಸಾಗರಂ ಕೆಯ್ಕೊಂಡು (ಶಾಂತಿಪು. ೧-೮೫ ವ). [ಸಂ.]

ಸಮುಪಸ್ಥಿತ (ಗು). ಹತ್ತಿರವಿರುವ ; ಸಮೀಪದ : ಅಮಳಿನ ಗುಣವೃತ್ತಿಗಳಂ ಸಮುಪಸ್ಥಿತ ಸಕಳಜನಗತೋಚಿತಗುಣಮಂ ಸಮನಾಗಿಸುವರ್ (ಕವಿರಾ. ೩-೧೪೨). [ಸಂ.]

ಸಮುಪಹಿತ (ಗು). ಒಡಗೂಡಿರುವ ; ಸಹಿತವಾದ : ದೇವತೂರ್ಯಾನುಗ ವೇವೀಗೀತಜ್ಯೆನಸ್ತವ ಸಮುಪಹಿತಾತ್ಮೀಯಚಿತ್ತಂ . . . ಬಂದಂ (ಆದಿಪು. ೭-೪೩). [ಸಂ.]

ಸಮುಪಾತ್ತ (ಗು). ೧. ಸ್ವೀಕರಿಸಿದ; ಒಳಗೊಂಡ : ಜಿತಕರ್ಮಂ ಸಮುಪಾತ್ತ ತತ್ತ್ವಚಯಮರ್ಮಂ ಶುದ್ಧರತ್ನತ್ರಯಾಧ್ಯತಭರ್ಮಂ (ಚಂದ್ರಪ್ರ. ೧-೮). ೨. ಅಪಹರಿಸಿದ. ೩. ಸಂಗ್ರಹಿಸಿದ; ಕಲೆಹಾಕಿದ. [ಸಂ.]

ಸಮುಪಾತ್ತಕ್ರಿಯೆ (ನಾ). ನಡೆದ ಕ್ರಿಯೆ : ಸಮುಪಾತ್ತಕ್ರಿಯೆಯುಂ ವಾಕ್ಯಮಾಲೆಯುಂ ಸುಕವಿರಚಿತನಾಮಮದಾದಂದಮರ್ಗುಂ ಲಿಂಗಂ (ಶಮದ. ೭೫).

[ಸಂ. ಸಮುಪಾತ್ತಕ್ರಿಯಾ]

ಸಮುಪಾಹೃತ (ಗು). ತ್ಯಜಿಸಿದ; ಅಗಲಿದ: ಮಹಾಶ್ವೇತೆಯುಂ ಸಮುಪಾಹೃತಾನುಬಂಧೆಯಾಗಿಯುಂ ನಿನ್ನ ಕೆಯ್ಯೊಳೇನುಮಂ ಪೇಳ್ದಿಟ್ಟಿದಳಿಲ್ಲ (ಕಾದಂಬ. ೩೭೧). [ಸಂ.]

ಸಮುಪೇತ (ಗು). ೧. ಜೊತೆಗೂಡಿ ಬಂದ ; ಒಟ್ಟಾಗಿ ಬಂದ. ೨. ಕೂಡಿದ ; ಹೊಂದಿದ: ರಾಗಾರ್ತಿರೋಗಸಂತಾಪದೂರ ಸಮುಪೇತನಿಖಿಳಸದ್ವಿಚಾರ (ವರ್ಧಮಾ. ೧೪-೬). (ನಾ). ೩. ಹೊಂದಿದುದು ; ಕೂಡಿದುದು: ದ್ವಿತ್ರಿಪದರಚಿತ ವೃತ್ತಿವಿಚಿತ್ರೋಪಮ್ಯಾದ್ಯಲಂಕ್ರಿಯಾಸಮುಪೇತಂ (ಕಾವ್ಯಾದ. ೭೮೪). [ಸಂ.]

ಸಮುಲ್ಬಣಾಂಬು (ನಾ). ಬಗ್ಗಡವಾದ ನೀರು ; ಕದಡಿದ ನೀರು: ಒಕ್ಕಮಳಮಳಯಜಾಂಬುವನಕ್ಕಟ ಪಲ್ವಲಸಮುಲ್ಬಣಾಂಬುವನೀಂಟಲ್ಕಕ್ಕುಮೆ (ಚಂದ್ರಪ್ರ. ೪-೫೫). [ಸಂ.]

ಸಮುಲ್ಲಸಿತ (ಗು). ಸೊಗಸಾದ : ಸಮುಲ್ಲಸಿತವಲ್ಲರೀ ಶಾಖಾಸದೃಶಬಾಹುಲತಿಕೆ ಸಲ್ಲಲಿತ ಲತಾಭವನಂಗಳಂ . . . ನೋಡುತ್ತ (ಸುಕುಮಾ. ೯-೧೦೭ ವ). [ಸಂ.]

ಸಮುಲ್ಲಾಸ (ನಾ). ೧. ಅತಿಯಾದ ಆನಂದ ; ಅಧಿಕವಾದ ಸಂತೋಷ : ಜಾನಕಿ ವಿರಾಜಿಸಿದಳ್ಸಮುಲ್ಲಾಸದಿಂ ಪುಷ್ಪವತಿಯಾಗಿ ವಿಕಸಿತವಸಂತಲಕ್ಷ್ಮಿಯ ತೆಱದೊಳು (ಚೈಮಿಭಾ. ೧೮-೨೪) ; ಸುಮಿತ್ರಾದೇವಿ ಕಂಗೊಳಿಸಿದಳ್ ಸಮುಲ್ಲಾಸದಿಂ (ಶ್ರೀರಾಮಾ. ೧೫-೩೮೬). ೨. ಅತಿಯಾಗಿ ಸಂತೋಷಗೊಂಡವನು : ಮಂದಮಾರುತಾಂದೋಳಿತ ಲುಳಿತಾಳಕವಲ್ಲರೀಸಮುಲ್ಲಾಸನುಂ . . . ವಿಜಯಶ್ರಮಮನಾಱಿಸುತ್ತುಮಿರೆ (ಶಾಂತಿಪು. ೪-೧೭ ವ). [ಸಂ.]

ಸಮುಲ್ಲಾಸಿತ (ನಾ). ೧. = ಸಮುಲ್ಲಾಸ ೧ : ಅನುಪ [ಮಪವ]ಮಾನವಶಲುಳಿತ ಕೇತುಮಾಳಾಸಮುಲ್ಲಾಸಿತದೊಳ್ . . . ಪೊರೆದು (ಸುಕುಮಾ. ೯-೧೭ ವ). ೨. [ಸಂಗೀತ] ಗಮಕದ ಒಂದು ಪ್ರಕಾರ : ಸಮುಲ್ಲಾಸಿತ . . . ಕೋಮಲವೆಂಬಯಿಪ್ತತ್ತರಡೆ ಶ್ರುತಿ ಗಮಕಗಳೆಂತಲುಂ (ವಿವೇಕ. ೨೩೨). [ಸಂ.]

ಸಮೂಲ (ನಾ). ಬೇರುಸಹಿತವಾದುದು : ಆದಿತ್ಯಭಕ್ತ: ಈ ಸಮೂಲವನ್ನು ಅಕ್ಕಿಗಚ್ಚಿನಲ್ಲಿ ಕುಡಿಯಲು ಹೊಟ್ಟೆಗಟ್ಟು ಮಾಣ್ಗುಂ (ವಿಷ್ಣುವಿ. ೧). [ಸಂ.]

ಸಮೂಹ (ನಾ). ೧. ಗುಂಪು ; ಸಮುದಾಯ : "ನಿಕರಃ . . . ಸ್ತೋಮಃ - ಈ ೩೯ ಸಮೂಹಂ" (ಹಲಾಯು. ೧೧೪-೨) ; ಸತ್ಕದ ಅನ್ವೇಷಣೆಯಲ್ಲಿ ನಿರತರಾದ ವಿದ್ವಾಂಸರ ಸಮೂಹ ಸಾಲಾಗಿ ನಿಲ್ಲುತ್ತದೆ (ದ್ರಾವಿವಿ. ೧೫). ೨. ರಾಶಿ ; ಒಟ್ಟಿಲು : ಅವಳ ಮೆಯ್ಯನುಚ್ಛ್ವಸಿತಹರ್ಷೋರ್ಮಿಮಾಲಾಸಮೂಹದಿಂದವ್ಯಳಿಸಿ ಮುಚ್ಚಿ (ಶ್ರೀರಾಮಾ. ೨೭-೭೦೬). [ಸಂ.]

ಸಮೂಹಮಾಧ್ಯಮ (ನಾ). ಯಾವುದಾದರೊಂದು ವಿಷಯವನ್ನು ಸಮುದಾಯಕ್ಕೆ ತಿಳಿಸಲು ಸಹಾಯಕವಾದ (ಬಾನುಲಿ, ದೂರದರ್ಶನ, ವೃತ್ತಪತ್ರಿಕೆ ಮುಂತಾದ) ಸಾಧನ : ಈಚೆಗೆ ಸಮೂಹಮಾಧ್ಯಮಗಳ ಮೂಲಕ ಜಾಹಿರಾತು ಕೊಡುವುದರಲ್ಲಿ ಪೈಪೋಟಿಯೇ ನಡೆಯುತ್ತಿದೆ (ರೂಢಿ). [ಸಂ.]

ಸಮೂಹಸನ್ನಿ (ನಾ). ಸಮುದಾಯದ ಮನೋಭಾವ ; ಸಾಮೂಹಿಕವಾದ ಮನೋವೃತ್ತಿ : ಇಂದಿನ ರಾಜಕೀಯಪಕ್ಷಗಳ ಚುನಾವಣೆಯ ಸಮಯದಲ್ಲಿ ಸಮೂಹಸನ್ನಿ ಯಾವ ಕಡೆ ತಿರುಗುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ (ರೂಢಿ).

[ಸಮೂಹ + ಸನ್ನಿ]

ಸಮೂಹ್ಯ (ಗು). ೧. ಒಟ್ಟಿಗೆ ತಂದ ; ಸೇರಿಸಿದ. (ನಾ). ೨. ಒಂದು ಬಗೆಯ ಯಾಗಾಗ್ನಿ. [ಸಂ.]

ಸಮೃದ್ಧ (ಗು). ೧. ವೃದ್ಧಿಹೊಂದಿದ ; ಏಳಿಗೆ ಪಡೆದ. ೨. ಹುಲುಸಾಗಿ ಬೆಳೆದ. ೩. ಅಧಿಕವಾದ ; ಹೆಚ್ಚಾದ. (ನಾ). ೪. ಯಥೇಚ್ಛ ; ಅಧಿಕ್ಯ : ಸದಾಕಾಲದಲ್ಲಿಯೂ ಸಮೃದ್ಧವಾದ ನೀರಿನಿಂದ ವಿಶಾಲವಾಗಿ ಹರಿಯುವ ಉತ್ತರದ ನದಿಗಳು (ನಸದಿ. ೧೭) : ಪೊನ್ನನ ಕಾಲವು . . . ಸಂಸ್ಕೃತ ಹಾಗೂ ಪ್ರಾಕೃತಸಾಹಿತ್ಯಗಳ ದೃಷ್ಟಿಯಿಂದ ಸಮೃದ್ಧವಾಗಿದೆ (ಸಾಹಿಸ. ೨೫). ೫. ಶ್ರೀಮಂತ ; ಧನಿಕ : ವಚನರಚನಾಪ್ರಭಾವ ಮನವ್ಯಗ್ರಕುಶಾಗ್ರೀಯಬುದ್ಧಿಸಮೃದ್ಧಂ ಸ್ವಯಂಬುದ್ಧನವಧಾರಿಸಿ (ಆದಿವಿ. ೨-೯ ವ). [ಸಂ.]

ಸಮೃದ್ಧಿ (ನಾ). ೧. ಅಭಿವೃದ್ಧಿ ; ಏಳಿಗೆ ; ಉತ್ಕರ್ಷ. ೨. ಐಶ್ವರ್ಯ; ಸಂಪತ್ತು: ಮಹಿಯಲ್ಲಿ ಸಮೃದ್ಧಿ ಸ್ಥಿರವಾಗಲಿ (ಕಾವ್ಯಾ. ೧೭-೧). ೩. ವಿಪುಲತೆ; ಆಧಿಕ್ಯ : ಮಧುಮಾಸಕುಸುಮಸಮೃದ್ಧಿಯಂತೆ ವಿಜಾತಿಯುಂ . . . ಎನಿಸಿ ದೇಜುಂದವ್ಯನೆಯ ರೂಪಾತಿಶಯಮನೆವಯಿಕ್ಕದೆ ನೋಡುತ್ತಂ (ಕಾದಂಪೂ. ೪೯).

[ಸಂ.]

ಸಮೈ, ಸವೈ (ಕ್ರಿ). ೧. ಕಟ್ಟು ; ನಿರ್ಮಿಸು ; ಮಾಡು : "ಸಮ - ನಿರ್ವಹಣೇ, ನಿಶ್ಶೇಷೇ ಚ (ಸಮೆದುಹೋಗು)" (ಶಬ್ದಧಾ); ಅಱುದಿಂಗಳೊಳಾ ಅಯ್ನೂಱುರಥಮಂ ಸಮೆದು (ವಡ್ಡಾರಾ. ೧೪೭-೮) ; ತಿರ್ದಿ ಪೇಟ್ಟುದು ಪೂಮಾಲೆಯನಿಂಬಿನಿಂ ಸಮವವೊಲ್ ಸತ್ಕಾವ್ಯಮಂ ಕಬ್ಬಿಗಂ (ಕಾವ್ಯಾವ. ೪೯೮); ಗುರುಗಂಜೆಯಿಂ ಸಮೆದ ದಂಡೆ ಮಂಡೆಯೊಳೊಪ್ಪೆ (ಬಸರ. ೯-೯೯). ೨. ಸಜ್ಜುಮಾಡು ; ಅಣಿಗೊಳಿಸು : ಅಯ್ವರುಮಂ . . . ಪೊಟಲಂ ಪುಗಿಸಿ ಮುನ್ನಮೆ ಸಮೆದ ಬೀಡುಗಳೊಳ್ ಬೀಡಂ ಬಿಡಿಸಿ (ಪಂಪಭಾ. ೪-೫೫ ವ); ಸಮೆದ ಮಖಮಂ ಸುಡುವ ವೀರಭದ್ರನ ತೆಱದೆ . . . ಉರವಣಿಸಿ ನಡೆದು (ಗಿಹರ ದೀ ೪೦-೨೧); ಹಂದರವೆತ್ತಿ ತೋಟ್ಕಾರಮಂ ಸಮೆದು ವೇದಿಯಂ ಸಮಕಟ್ಟಿ (ರಾಮಾಶ್ವ. ೧೬-೫೩). ೩. ಕೆತ್ತು ; ಕಂಡರಿಸು : ೧(೫೫) ಕಲ್ಲಂ ದುರ್ಗದ[ದ್ರಾ]ಸಂ ಸಮೆದೊ(೦) (ಎಇ. VII. ೨೧೩-೧೯ ; 874). ೪. ರಚಿತವಾಗು ; ನಿರ್ಮಾಣವಾಗು: ಜಗಮಿದು ಮೌಕ್ತಿಕದಿಂದಂ ತೆಗದುದೊ ದಂತದೊಳ್ ಸಮೆದುದೊ (ಕಾದಂಬ. ೧೪೫) ; ಚಂದ್ರನಿಂದಂ ಸಮೆದುದೆನಿಸಿದಂತಿರ್ಪ ದಿಕ್‌ಸಂಕುಳಂ (ರಕ್ಕಾಶ. ೯೪); ನಿಂತು ನೋಡುವಳ್ . . . ಬಯಲ ನಡು ನಿಡು ಪರಿದು ಸಮೆದ ಕಾಲ್ದರಿಕೆಳ್ಪಟ್ಟೆಯಂ (ಶ್ರೀರಾಮಾ. ೨೬೮-೧೪೫). ೫. ಬರೆ ; ರಚಿಸು : ಪುರಾಣಕವಿಪ್ರಭುಪ್ರಯೋಗಾವಳಿಸದ್ಗುಣೋದಯ ಮನಾಯ್ದವಱಿಂ ಸಮೆದೊಂದು ಕಾವ್ಯದಿಂ . . . ಮುದಮಂ ತನಗಾಗಿಸಿದೊಂ ಕವೀಶ್ವರಂ (ಕವಿರಾ. ೨-೧೫೫). ೬. ಅಡುಗೆ ಮಾಡು ; ಪಾಕ ಮಾಡು: ಮುನಿಸಂಸ್ತುತಿಗೆ ಬೋನಮಂ ಸಮೆದು ಕೆಲಕೆಲರ್ (ವರ್ಧಪು. ೧೩-೫೨). ಸವೈ : ೧. ಪಚ್ಚೆಯಿಂ ಸವೆದ ಕಂಬದ ಪದ್ಮರಾಗವಳವಟ್ಟ ಮಣಿಯ ಘನಮಹಿಮವಡೆದುಯ್ಯಲಂ ಹರುಷದಿಂದ ಜವ್ವನೆಯರೇಱಿದರ್ (ಹಚಕಾ. ೪-೧೪) ; ಮಿಗೆ ಗಿರಿದುರ್ಗದ ನೆಲಗೋಂಟೆಗೆ ಸವೆಯೆ ಬಳಿಕ್ಕೆ ಸುರಂಗಂಗಳನೆರಡಂ (ಹಮ್ಮಿರ. ೩-೨೭). ೨. ವಹ್ನಿಕುಂಡಮಂ ಸವೆ ಬೇಗಂ (ದಶಕು. ೧೧-೯೩) ; ಕಾಕುಜ್ಜೆನರ ಕೊಲ್ಮ ಪದದೊಳವದಿರಿಗೆ ಶೂಲಂಗಳಂ ಸವೆದಿರಿಸಿದ (ಭಾವಚಂ. ೧-೪೪). ೩. ಹೊನ್ನಿಂ ವಿವಾಹವೇದಿಕೆ ಸವೆದುದಂತಲ್ಲಿ (ಮಾನಸ. ದೇ. ೧೭-೧೯) ; ವಿಪ್ರರಿಗೆ ಮಣಿಮಯದಾಲ್ಯಯಂಗಳು ಸವದವ್ಮೆಗಾವುದದಱಿತೆಯಲಿ (ತೊರರಾ. ೧-೧೩-೧). ೪. ಬಸವಣ್ಣನಲ್ಲಿ ತಮ್ಮರಸಿಯರ ನೋಡುತಂ ಬೋನಮಂ ಸವವುದೊಡೆಯರ್ಗೆಂದು ಪೇಳುತಿರೆ (ಬಸರ. ೭-೫) ; ಎತ್ತಿದಳು ಮಗನ ಚಂಗಳೆ ಒತ್ತಿದಳ ಲಗಿಂದ ಕೊರಳೆ ಚೀಲಾಳ್ವನನಂದುತ್ತರಿಸಿ ಬೋನಮಂ ಸವೆದು (ನನ್ನಚಾ. ೭-೧೨೫). ೫. ಹಾಕು ; ಇಕ್ಕು : ಕನ್ನವ ಸವೆದ ಕತ್ತಿ ಕಳಬಲ್ಲುದೆ (ಸರ್ವಜ್ಞ. ೭೯-೪೪೨) ; ನವರಂಧ್ರ ಮೆಂಬ ಕನ್ನಂ ಸವೆದಿರಲೊಡಲೆಂಬ ಮನೆಯನೊಯ್ಯನೆ ಪೊಕ್ಕು (ಧರ್ಮನಾ. ೫-೮೭). ೬. ಉಂಟಾಗು; ಒದಗು : ಸ್ವಾನುಭವದಿಂ ಸವೆದ ನಿಜತತ್ವದ ಗಂಧವನಿತ್ತು . . . ಅಷ್ಟವಿಧಾರ್ಚನೆಯಿಂದರ್ಚಿಸಿ (ಅದವ. ೨೮-೮೪) ; ಪಡೆಯ ಪದಹತಧೂಳಿ ಸವೆಯಲು ಪೊಡವಿಪಾತಾಳದ ಫಣೀಂದ್ರವಡರಿದವೊ ರವಿಬಿಂಬಕೆನಲು (ಕುವಾಭೀ. ೪-೪೧).

[ದೇ. ॥ ತಮಿ. ಚಮ್ಮೆ ; ಮಲ. ಚಮೆ]

ಸಮ್ಮೆ, ಸವ್ವೆ (ಕ್ರಿ). ೧. ತೀರು ; ಮುಗಿ : ತೀವಿ ಬಡ್ಡಿಸಿದೊಡೆ . . . ನೀಡುಂ ಬೇಗಮುಂಡು ಸಮೆದ ಬಲ್ಕೊಳ್ಕೆ ತಳಿಗೆಯನೆತ್ತಿದೊಡೆ (ವಡ್ಡಾರಾ. ೭೪-೨೭) ; ಮತ್ಸ್ಯ ಮಾಂಸಂ ಸಮೆದತ್ತಿನ್ನೇನಂ ತಿಂಬೆಂ (ಪಂಚತಂ. ೫೪-೨೧) ; ಶೀತಳಜಲಮೆಲ್ಲಮುಂ ಸಮೆಯೆ (ದಶಕು. ೬-೬). ೨. ಅಳಿ ; ನಾಶವಾಗು : "ಸಮ - ನಿರ್ವಹಣೇ, ನಿಶ್ಶೇಷೇ ಚ (ಸಮೆದುಹೋಗು)" (ಶಮಧಾ) ; ಸುಡುಸುಡು ನಾರಕರ ನಮವ ಸಮೆಯದ ಸಾವಂ (ಅಸಂಪು. ೯-೩೯) ; ಕಮಲನಾಭನ ಕರುಣಕವಚವು ಸಮೆದರಾರೇಗುವರು (ನಳಚ. ೪-೩೪); ಬಳಾನುಜನಾದ ಹಲಾಯುಧನು ಘಟೋತ್ಕಚನಿಂದ ಸಮೆದನು (ಕೃವಾಕ. ೭). ೩. ಹೆಚ್ಚುಬಳಕೆಯಿಂದ ತೇದು ಹೋಗು, – ಉಜ್ಜಿಹೋಗು : ಕ್ಷುದ್ರಜನರುಗಳ ಸಂಚಾರದಿಂದ ಸಮೆ[ಪಾಕಾಂ. ವೆ]ದ ದಾರಿಯಿದು (ಮಚಗಾ. ೨೦) ; ಅದು ಎಂಬುದರ ಸಮೆದ ರೂಪವೇ 'ಅ' ಎಂಬ ಷಷ್ಠಿಯ ರೂಪವಾಗಿದೆ (ದ್ರಾವಿಭಾ. ೨೩೦). 'ಸಮೆಗಲ್ಲು' ಪರಾ. ೪. ಶಕ್ತಿಗುಂದು ; ಬಲಹೀನವಾಗು : ಕೃತವಿದ್ಯರ ಭೀಕರಶರತತಿ ಮೊಳೆ ತೇವಂತೆ ಸಮೆದು ಬಿಟೆ ಸಂಗರದೊಳ್ (ಗದಾಯು. ೪-೩೩). ೫. ಕಳೆ ; ನೀಗು : ಪಾರಣೆಯ ದಿವಸಮಲ್ಲದಱುವತ್ತುಮೂಱುದಿವಸದಿಂದುಪವಾಸದಿಂ ಸಮೆಯೆ (ಆದಿಪು. ೬-೧೦೨). ೬. ಸೊರಗು ; ಬಡವಾಗು : (೫). ಸಮ್ಮೆ : ೧. ಭಂಡಾರಂ ಸವೆದೊಡೆ ಪ್ರಜೆ ಕೆಟ್ಟೆಡೆ ಹಗೆ ಸಮಿಪವಾದಡೆಯಲ್ಲಿರಲಾಗದು (ಪಂಚತಂ. ೩೯-೨೨) ; ಫಳಮ್ಯಗಾವಳಿ ಸವೆದುದಿನ್ನೀ ಹಳುವು ಸಾಕು (ಕುವಾಳ. ೪-೨). ೨. ನೆರೆದ ಸಾಮಂತಾದಿ ಭಟಪರಿಕರನಿಕರವುದ್ರಮಿಸಿ ಸವೆದರು ಕಾದಿ ತಮ್ಮೊಳಗೆ (ಬಸಪು. ೭೧-೩೯) ; ಸವಱಿದರು ಕುರುವಂಶವನು ಪಾಂಡವರು ಸಕಲಮಹಾರಥರು ಸಲೆ ಸವೆದುದಿಲ್ಲಿ ನದೀಸುತ ದ್ರೋಣಾದಿಗಳು ಸಹಿತ (ಕುವಾದ್ರೋ. ೫-೨೬). ೩. ಸುರಗಿ ಸವೆದುವು ಶೂಲ ಮುಱಿದುವು (ಕಾಶಿಕಾ. ೬೨-೨೬) ; ತಗೆಬಗೆಯೊಳೋಡಾಡಿ ಕೆರವೊಂದು ಸವೆಯದಿರೆ (ಕಾಲೂರ. ೭೩-೧೩೨). ೪. ಸರಳ ಸರಳಲಿ ಕಡಿದು ಸವೆಯದೆ ಸರಿಮಿಗಿಲ ಕಾದಿದರೆ ಶಲ್ಯನ ಧರಧುರದ ದೆಖ್ಖಾಳತನವನು ಕಂಡು ಖಾತಿಯಲಿ . . . ಬಾಣದೊಳುರವ ತೋಡಿದನು (ಕುವಾದ್ರೋ. ೫-೬೨). ೫. ಭಾವವಳಿದು ಬಯಕೆ ಸವೆದು ಮಹಾದೇವನಾದ ಶರಣರ ಜಗದ ಮಾನವರತ್ನ ಬಲ್ಲರು (ಲಿಂಗಪ. ೪. ೪೯-೧೯); ವಿವಿಧರತ್ನಾಭರಣಕಿರಣದ ಲಲಿತಲಹರಿಯಲಿ ಸವೆದುದಗ್ಗದ ತಿಮಿರ (ಕುವಾಳ. ೧೧-೨೯). ೬. ಮಾಡಿ ತನು ಸವೆಯದನ್ನಕ್ಕ . . . ಅಪ್ಪುದೆ ಭಕ್ತಿ (ಬಪವ. ೨೧೦); ತನಗಾಗಿಯೇ ಸವದು ಸುಣ್ಣವಾಗಿ ತಿರುಗಿದ ತಾಯಿಯನ್ನು . . . ಅಳಿಸಹತ್ತಿದುದು ಮಹಾಪರಾಧ (ಜಯಾತ. ೯). ೭. ಕುಗ್ಗು ; ಕಡಮೆಯಾಗು : ನಿತ್ಯನಿಯತವ್ರತನೇಮಂಗಳ ಸವೆಯಲೀಯದೆ ಪೂರವಿಸಿ (ಶಪಗೀ. ೨೦-೬೯); ಸವೆಯದ ತವರಾಜಂ ಜೇನ ಸೋನೆ ತಾನೆಂದಿನಂ . . . ಸುಕಂಠೆ ಕೇಳಸುತಿರ್ದಳ್ (ಜಸುಚಾ. ೧-೩೮); ಪೊತುರೇ ಕುರುಸೈನಿಕವಸಂಖ್ಯಾತವೆಂದಿಗೆ ಸವೆವುದೋ (ಕುವಾದ್ರೋ. ೧೭-೭). ೮. ಬಳಕೆಯಾಗು; ವಿನಿಯೋಗವಾಗು : ಧನ ದಾಸೋಹಕ್ಕೆ ಸವೆದು . . . ಪರಿಣಾಮಿಸುವಂತೆ ಮಾಡು (ಬಪವ. ೪೫೦). ೯. ಕೊರಗು ; ಪರಿತಪಿಸು : ನವೆದಂ ರೋಗಂಗಳಿಂದಂ ಸೆಡೆದೆನನುದಿನಂ ಸೇವೆಯಿಂದಂ ನಿರರ್ಥಂ ಸವೆದೆಂ ಕಾಮಂಗಳಿಂದಂ (ರಕ್ಕಾಶ. ೨೪) ; ಭವಭವಂಗಳೊಳಗೆ ಬಂದು ಸವೆದೆನಯ್ಯ ಹಂಪೆಯರಸ (ಹಂಪೆರ. ೭-೭). ೧೦. ಇಲ್ಲವಾಗಿಸು; ನಾಶಮಾಡು: ಕಾವೇರಿ . . . ಮಜ್ಜನವ ಮಾಳ್ಪ ಜನರ ಸಂತತಿಯ ಪಾಪಂಗಳನು ಸವೆದು ಸರ್ವಾಭೀಷ್ಟಮಂ ಸಲಿಸಿ ಸಲಹುತ್ತಲಿರುವಳ್ (ಅರ್ಜಾವಿ. ೧-೭).

[ದೇ. ॥ ತಮಿ. ಚಮ್ಮೆ ; ತುಳು. ಸವಿ ; ತೆಲು. ಸಮಯು]

ಸಮ್ಮೆ 'ಸಮಯ್ಯೆ' ನೋ.

ಸಮೆಗಲ್ಲು (ನಾ). ತೇದುಹೋಗಿ ನಯವಾದ ಕಲ್ಲು : ಒಂದು ಮುಷ್ಯಯಷ್ಟು ಗಾತ್ರದ ಕಲ್ಲದು. ನನಗೂ ವಿಶೇಷ ಏನೂ ಕಾಣಿಸಲಿಲ್ಲ. ನಮ್ಮ ಊರಿನ ಹೊಳೆ ತೋಡುಗಳಲ್ಲಿ ಸಿಗಬಹುದಾದ ಸಮೆಗಲ್ಲು (ಮೂಕ್ಷಿ. ೧೦೩).

[ಸಮ್ಮೆ + ಕಲ್ಲು (< ಕಲ್ಲ್)]

ಸಮಿಗೋಲು , ಸವೆಗೋಲು (ನಾ). ಗಡಾರಿ ; ಹಾರೆ : ಬೈರನೊಂದು ಕಡೆ ಸಿದ್ದನಿನ್ನೊಂದು ಕಡೆ ಸಮೆಗೋಲು (ಹಾರೆ)ಗಳಿಂದ ಅಗೆಯುತ್ತಿದ್ದರು (ಕಾನೂರು. ೩೮೦). **ಸವೆಗೋಲು** : ದೇವಯ್ಯ ತುಳಸಿಕಟ್ಟೆಯನ್ನು ಎಾಟ ತೆಗೆಯಲು ಸವೆಗೋಲು ತೆಗೆದು ಕೊಂಡು ಅಂಗಳಕ್ಕಿಳಿದಾಗ (ಮಲೆಮ. ೪೦೨). [ಸಮ್ಮೆ + ಕೋಲು, (< ಕೋಲ್,)]

ಸಮೆತ, ಸವೆತ (ನಾ). ತೇದುಹೋಗುವಿಕೆ : ಸಮತ ; ತೇಯ್ತ ; ಘರ್ಷಣಕ್ರಿಯ (Friction. ಇಂದಾ). **ಸವೆತ** : ಪ್ರವಾಹದಿಂದ ಒದಗಬಹುದಾದ ಭೂಮಿಯ ಸವೆತವನ್ನು ತಡೆಗಟ್ಟಲು ಒಡ್ಡುಗಳನ್ನು ಹಾಕುವರು (ರೂಢಿ). [ಸಮ್ಮೆ + - ತ್ಮ]

ಸಮೆತರ್ (ಕ್ರಿ). ತೀರು; ಮುಗಿ: ಸಮೆತಂದುಪುದು ಸಮುದ್ರೋಪಮಮೆನೆ ಮಂದಾರಮಾಲಿಕಾಮ್ಲಾನತೆಯುಂ ಸಮಕೊಳಿಸಲಾರ್ತುದಿಲ್ಲ ದಲಮರೇಂದ್ರನದೊಂದು ಮುಖಪರಿಮ್ಲಾನತೆಯಂ (ಆದಿಪು. ೬-೧೪). [ಸಮ್ಮೆ+ ತರ್]

ಸಮೆಯ, ಸಮೆಹ (ನಾ). ೧. ಕಟ್ಟಳೆ: ಕೇರಿಯ ಮಹಾಜನಕ್ಕೆ ಮಾಡಿದ್ದ ಸಮೆಯಮೆನ್ತನೆ (ಶಿಶಾ. XI-i, ೭೪-೩೩ ; 1028). ೨. ಯಾವುದೇ ಪಂಥಗಳ ಸಂಘ: ಸೌಧರೆ ಕೂಚೆಯನಾಯಕನುಂ ಅಶೇಷನಕರಂಗಳುಂ ಸಮೆಯಂಗಳುಂ ಪಂಚಮಠ ಸ್ಥಾನಂಗಳುಂ ಇನ್ತೀ ಧರ್ಮ್ಮಮಂ ಬ್ರತಿಪಾಳಿಸುವರು (ಕಾಇ. ೪೩-೭೧-೧೯ ; 11ನೆಯ ಶತ). **ಸಮೆಹ** : ೨. ವಾಣರಾಸಿಯಲಿ ತಮ್ಮ ತಂದೆಯ ಕೊಂದ ಪಾಪಕೆ ಹೋಹರು ಸುಂಕದವರು ಸಮೆಹದವರು ಆರೊಬ್ಬರು ಯಿ ಧರ್ಮಕೆ ತಪ್ಪಿದರೆ (ಎಇ. XIV. ಹಗ್ಗಡ. ೧೪೨-೧೯ ; ಸು. 1497). [IP ಇದು 'ಸಮಯ' ಎಂಬುದರ ಅಪಲಿಖಿತ]

ಸಮೆಯಿಸು,, ಸಮಯಿಸು,, ಸವಸು,, ಸವೆಯಿಸು,, ಸವೆಸು, (ಕ್ರಿ). ೧. ಕಟ್ಟಿಸು; ನಿರ್ಮಿಸು : ಲಾಕ್ಷಾದ್ರವಾದಿಕಾರಿತಮಾಯಾರುಣಜಲಪರಿಪೂರ್ಣವಾಟಿಯಂ ಸಮೆಯಿಸಿದೊಡೆ (ಆದಿಪು. ೨-೧೪೨); ಚಂದ್ರಕಾಂತದ ಚಂದ್ರಶಾಲೆಯೊಳಮೊಪ್ಪುವ ವಿವಾಹಗೇಹಮಂ ಸಮೆಯಿಸಿ (ಪಂಪಭಾ. ೩-೭೪೨). ೨. ಅನೆಗೊಳಿಸು; ಸಿದ್ಧಪಡಿಸು: ನಿಂದು ವಸುದೇವನನುಚರರಿಂದಂ ಸಮೆಯಿಸಿ ಸಮಂತು ಕೊಂಡಮಂ (ನೇಮಿಪು. ೩-೧೫೮); ನಡಪೂವಿನ ಪಂದರುಮಂ ವಿವಾಹವೇದಿಕೆಯುಮಂ ಸಮೆಯಿಸಿ (ಅರ್ಧನೇ. ೩-೧೦೪). ೩. ಕೆತ್ತಿಸು ; ಕಂಡರಿಸುವಂತೆ ಮಾಡು : ಮೂಢಭಕ್ತಿಯ ಕೆಲಜನರ ಹೇಳಿಕೆಯಂತೆ ಅವನು ಖಾಜಾಆಹರಾನೆಂಬ ಸಾವಿನ ಸ್ತುತಿವರಶ್ಲೋಕಗಳನ್ನು ಸಮೆಯಿಸಿದನು (ಮೋಚಾದ. ೩೧). **ಸಮಯಿಸು,** : ೧. ಲಿಙ್ಗಶಿವಜೀಯರ್ಬ್ಬಿಕ್ಕಾವೃತ್ತಿಯಿನ್ನಂ ಕಲ್ಲ ದೇಗುಲಮುಂ ದೇಗುಲಂಗಳುಮಂ ಸಮಯಿಸಿ ಕೊಣ್ಮಂಗಳುಮಂ ಕಟ್ಟಿಸಿದರ್ (ಎಇ. XI. ಮೊಳಕಾ. ೨೭-೪ ; 962) ; ಸಮಯಕ್ಕೆ ಪಂಚಶತವಧಿಕಮಾಗೆ ಸಮಯಿಸಿ ಸಹಸ್ರ ಕೂಟಸಹಸ್ರಾಸ್ರಮುಮಂ ಸಮಯಿಸಲಾರ್ಗಂ ಸಮಯಿಸಿದಳ್ ಸಮನೆ ದಾನಚಿಂತಾಮಣಿಯೊಳ್ (ಅಜಪು. ೧-೫೯) ; ಆ ಕಂಸಂ ಮಲ್ಲಯುದ್ಧರಂಗಮಂ ತುಂಗತರಂಗಳಪ್ಪ ಟೊಪಗೆಗಳಂ ಸಮಯಿಸೆ (ನೇಮಿಪು. ೬-೧೩೨ ವ). **ಸವಸು,** : ೧. ಕೆಲೆಯಂ ಕಟ್ಟಿಸು ಭಾವಿಯಂ ಸವಸು (ಶಿಶಾ. IV. ೨೬೭-೪೪ ; 1380?); ವಿರಹಿಜನದ ಮೇಲಿರದೆ ಮಾರನು . . . ಸವಸಿದ ಸಬಳಗಳಿನೆ ವರ ಮೊಲ್ಲೆಯ ನನೆಯಿಹವು (ಅಂಜಚ. ೨-೮೯). ೪. ಪಾಕಮಾಡು ; ಬೇಯಿಸು : ಹದ್ದು ಕಾಗೆಗೆ ನಿನ್ನವರು ಸಾಲಿದ್ದು ಬೋನವ ಸವಸಿದರು (ಕುವ್ಯಾಕ. ೩-೫೩). **ಸವೆಯಿಸು,** : ೧. ವ್ಯಾಳವನಗಜದ ಪೋರ್ತದ ಕೇಳಿಗೆ ವಿಜಯಾರ್ಧ್ಯಶೈಲಪತಿ ಸವೆಯಿಸಿ ತಂದೋಳಿಯೆ ನಿಜಿಸಿದ ಬೆಳ್ಳಿಯ ಲಾಳವಿಂಡಿಗೆವೊಲಿರ್ಪುವಿದಱ ಮಡಲ್ಗಳ್ (ಕಾಂಚಿಪು. ೨-೧೦೪) ; ಬಾಲಕಿಗೆ . . . ನವರತ್ನಖಚಿತ ವಿಶಾಲಸೂತಿಗೃಹವ ಸವೆಯಿಸಿ ಕರೆಸಿಯಿರಿಸಿದನು (ಶಾಶ್ವಭಾ. ೨೧-೧). **ಸವೆಸು,** : ೧. ವಿದುರನಟ್ಟಿದ ಖನಕ ಬಂದನುಯಿವರ ಸಚ್ಚೆಯ ಮನೆಯಲತಿಗುಪ್ಪದಲಿ ನೆಲದೊಳು ಸವೆಸಿದನು ಪಥವ (ಕುವ್ಯಾಕ. ೮-೮೬); ಜಿನಭವನವನು ರುದ್ರತರದೆ ಸವೆಸಿದ ವಾದಿವಿದ್ಯಾನಂದಯೋಗಿಗೆ ನಮಿಸುವೆನು (ಅಂಜಚ. ೧-೫೧). [ಸಮ್ಮೆ + - ಇಸ್ತು]

ಸಮೆಯಿಸು,, ಸಮಯಿಸು,, ಸಮಸು, ಸಮೆಸು, ಸವಸು,, ಸವೆಯಿಸು,, ಸವೆಸು, (ಕ್ರಿ). ೧. ಮುಗಿಸು; ತೀರಿಸು : ಮಹಾಮಹಿಮೆಯಭಿಷೇಕಮುಮಂ ಮಾಡಿ ಸಮೆಯಿಸಿದ ಬಬ್ಬೆಕ್ಕೆ (ವಡ್ಡಾರಾ. ೧೦೭-೮) ; ತನ್ನನೊರ್ವನಂ ತಾಗಿದೊಡನಿಬರುಮಂ ವಿರಥರ್ಮಾಡಿ ಭಾರತಮನಿಂದೆ ಸಮೆಯಿಸುವೆನೆಂದು ಕೋದಂಡಮಂ ಬಿಸುಟು ಗದಾದಂಡಮಂ ಭುಜಾದಂಡದೊಳಿಳವಡಿಸಿಕೊಂಡು (ಪಂಪಭಾ . ೧೦-೧೦೦ ವ) ; ೨. ನೀಗಿಸು ; ಹೋಗಲಾಡಿಸು : [ಕರ್ಣನ ವ]ಕ್ಷಮನೆಚ್ಚು ಗರ್ವಮಂ ಸಮೆಯಿಸಿ (ಪಂಪಭಾ. ೮-೧೦೬). **ಸಮಯಿಸು,** : ೩. ನಾಶಮಾಡು ; ''ಕೊಲ್ಲು'' (ಗಣಿತಾಮ. ೫). **ಸಮಸು** : ೪. ಕುಗ್ಗಿಸು ; ಕಡಮೆಮಾಡು : ಕ್ರಮವಿವರವೇನಿರಲಿ ಸೃಷ್ಟಿಯ ವಿಧಾನದಲಿ ಸಮಸದದು ಸತ್ತ್ವವನು (ಮಂಜುಕ. ೧೧೫). **ಸಮೆಸು** : ೫. ನವೆಯುವಂತೆ ಮಾಡು ; ಸೊರಗಿಸು : ಯಾವ ಕಗ್ಗಲ್ಲ ಮೂರ್ತಿಯನ್ನು ಪ್ರಸನ್ನಗೊಳಿಸಲು ನಿನ್ನ ಜೀವನವನ್ನೇ ಸಮೆಸಿದೆಯೋ ಅದಿನ್ನೂ ಕಗ್ಗಲ್ಲಾಗಿಯೇ ಉಳಿದಿದೆ (ಬಾಗಾಶ. ೪೦೧); ನಿನ್ನ ದೊರೆತನಕಾಗಿ ಜೀವವನೆ ಸಮೆಸಿದೆನು (ಚಂದ್ರಸ. ೯೨-೪). **ಸವಸು,** : ೬. ಖರ್ಚುಮಾಡು ; ವಿನಿಯೋಗಿಸು : ಧನವನಿರಿಸದಿರಾ ಇರಿಸಿದರೆ ಭವ ಬಪ್ಪುದು ತಪ್ಪದು ಕೂಡಲಸಂಗನ ಶರಣರಿಗೆ ಸವ[ವಾಕಾಂ. ವಿ]ಸಲಿಬೇಕು (ಬಸವ. ೧೯೯); ಪರಹಿತಾರ್ಥದಿ ತಮ್ಮ ತನುಧನಹರಣ ವಸ್ತುಗಳಂ ಸವ[ವಾಕಾಂ. ವೆ]ಸಿ ಸುರು ಚಿರಯಶೋಧಿಕರಾದರಲ್ಲದೆ ದಿವ್ಯಲಿಂಗಕ್ಕೆ ಪರಮಭಾಜನರಾಗರು (ಬಸಪು. ೧೮-೨೦). **ಸವೆಯಿಸು,** : ೫. ನಾನು ನನ್ನ ದೇಹವನ್ನಿಡೀ ನಿಮ್ಮ ಸೇವಗಾಗಿ ಸವೆಯಿಸಿದರೂ ಹೆಚ್ಚಾಗಲಾರದು (ರೇಣಧು. ೨). ೬. ತೇದುಹೋಗುವಂತೆ ಮಾಡು : ರೋಗಾಣುಗಳು . . . ಶ್ವಾಸನಾಳವನ್ನು ಸವೆಯಿಸಿ (Erosion), ಶ್ವಾಸನಾಳದ ಒಳಗಡೆ ರೋಗವನ್ನು ಹರಡಬಹುದು (ಕೆಲೂೂ. ೮೯). **ಸವೆಸು,** : ೧. ವಿವರಗಳ ಜೋಡಿಸುವ ಯಜಮಾನ ಬೇರಿಹನು ಸವೆಸು ನೀಂ ಜನುಮವನು (ಮಂಜುಕ. ೬೭); ೫. ತ್ಯಾಗ ಸೇವೆಗಳಲ್ಲಿಇಡೀ ಜೀವನವನ್ನು ಸವೆಸಿ ಅಧಿಕಾರಕ್ಕಾಗಿ ನಾನು ಬಂದೆ (ಹುಚ್ಚುಹು. ೪೦). ೬. ಆಯುಷ್ಯವು ತೀರಿ ಪ್ರಳಯವು ಬಂದರೆ ಅರ್ಥವನುಂಬವರಿಲ್ಲಾ . . . ಕೂಡಲಸಂಗನ ಶರಣರಿಗೊಡನೆ ಸವೆಸುವುದು (ಬಸವ. ೨೦೧). ೭. ಅಳು ಹಂಗೇ ಗಟ್ಟಿಯಾಗಿದ್ದರು, ವರ್ಷಕ್ಕೊಂದು ಗುದ್ದಲಿ ಸವೆಸೋರು (ಸಸ್ನೂರು. ೩೧೬). [ಸಮ್ಮೆ + - ಇಸ್ತು]

ಸಮೆಸು 'ಸಮೆಯಿಸು,' ನೋ.

ಸಮೆಹ 'ಸಮೆಯ' ನೋ.

ಸಮೇತ, (ಗು). ೧. ಒಟ್ಟುಗೂಡಿರುವ ; ಸಹಿತವಾದ ; ಸೇರಿದ : ಜಾತಿಗೋತ್ರಾತೀತಸದ್ಗುರುಜಾತನಂ ಬಹುಜಾತಿಗೋತ್ರಸಮೇತ ದುಃಕ್ರಿಯದಾಶ್ರಯನ ನೀನೆಂದು ಮಾಡಿದಪ್ಪೆ (ಬಸಪು. ೩-೫೦). ೨. ಪ್ರಾಪ್ತವಾದ ; ಪಡೆದ. (ನಾ). ೩. ಸಹಿತವಾದುದು ; ಕೂಡಿರುವಂಥದು : ತೋಳ್ಬಲ್ಲುಂ ಕರಮಸೆದಿರ್ಪಂ ಪದ್ಮೋದರಂಗೆ ಚಕ್ರಾಸಿ ಶಂಖ ಶಾರ್ಙ್ಗಸಮೇತಂ (ಕಾವ್ಯಾವ. ೧೪). ೪. ಕೂಡಿಕೊಂಡಿರುವ ವ್ಯಕ್ತಿ ; ಸಹಿತನಾದವನು : ಅನುಜಸಮೇತನೊಳಂತಕತನಯನೊಳನುಜವ್ಯಪೇತನೀಗಳ್ ದುರ್ಯೋಧನನಳುಪಿ ಸಂಧಿಗೆಯ್ದೊಡೆ (ಗದಾಯು. ೫-೪೮) ; ಹೊಂಗಿ ಶಸ್ತ್ರಸಮೇತನಾಗಿ . . . ನಡೆವುತ್ತ (ಬಸಪು. ೨೧-೯). [ಸಂ.]

ಸಮೇತ, (ಅ). ಸಂಗಡ ; ಜೊತೆಯಲ್ಲಿ ; ಸಹಿತವಾಗಿ : ಎಲ್ಲಾ ಸಾಮಾನು ಸಮೇತ ನೀನು ಮೊದಲು ಹೋಗು (ರೂಢಿ). [< ಸಮೇತ,]

ಸಮೇಲ , ಸಮೇಳ (ನಾ). ೧. ಜೊತೆಯಾಗಿರುವಂಥದು ; ಬೆರೆತುಕೊಂಡುದು. ೨. ಬೆರೆತುಕೊಂಡಿರುವ ವ್ಯಕ್ತಿ : ತನುಮನಂ ಧನವೆಂಬವಂ ವಂಚನೆಗಳಿಲ್ಲದೆ ಕೊಟ್ಟು ರಸಿಕದಿ ಮನಸು ಕರಗಿ ಸಮೇಲರಾಗಿ (ಬಸಪು. ೧೨-೩೦). **ಸಮೇಳ** : ೩. ಹೊಂದಾನೆಕೆ ; ಹೊಂದಿಕೆ : ಲೋಲಲೋಚನವಲುಹುಕುಲುಹು ಸಮೇಳವಾಗಿಹ ಗಿರಿಜೆ ಮೆಚ್ದಿದಳು ಶಂಕರಾಂಕದಲಿ (ಪ್ರಭುಲೀ. ೨-೧೧).೪. ಸಾನ್ನಿಧ್ಯ; ಸಖ್ಯ : ವೇಮ ಪ್ರಭುವನಾ ಶಿವಗಣಶ್ರೇಣಿ . . . ಲಾಲಿತನ್ಯೋನ್ಯಪ್ರಿಯವಿನಯಲೋಲನಾಲಿಂಗನ ಸಮೇಳಕ್ರಿಯೆಗಳಿಂ ತಣಿಸಿ (ಬಸಪು. ೪೬-೭೫). ೫. ಖಿಡ್ಡಯುದ್ಧದ ಒಂದು ಭರಸೆ: ಒಬ್ಬನು ಮತ್ತೊಬ್ಬನ ಪೆಟ್ಟನ್ನು ಮಾಡುವನು. ಈ ಪ್ರಕಾರದಲ್ಲಿಯೇ ಅನ್ಯೋನ್ಯವಾಗಿ ಆವದು ಮಾಡಲ್ಪಡುವದು ಅದು ಸಮೇಳಾಯೆಂದು ನುಡಿಯಲ್ಪಡುವದು (ಖಡ್ಗಲೀ. ೫-೭೩). [ಸಂ.]

ಸಮೇಳ 'ಸಮೇಲ' ನೋ.

ಸಮೋತ್ಸರಿತ (ನಾ). [ಸಾಟ್ಯ] ಹತ್ತು ಭೌಮಮಂಡಲಗಳಲ್ಲಿ ಒಂದು : ಭ್ರಮರ . . . ಸಮೋಸEತ್ಸರಿತ [ಮತ್ತಲ್ಲಿ] . . . ಚಾಷಗತಿ - ಈ ಹತ್ತು ಭೌಮಮಂಡಲಂಗಳ್ (ಲಾಸ್ಮರಂ. ೮-೪ ವ). [ಸಂ.]

ಸಮೌರ್ವಿ (ನಾ). ಹೆದೆಯೇರಿಸಿದವನು : ಸಮೌರ್ವಿಯಾದಿವನ ಬಿಲ್ಲೊಳಮಿಂದ್ರನ ವಜ್ರದಲ್ಲಿಯುಂ . . . ಅಭಿಕಾಂಕ್ಷಿಸುವರ್ ಜಯಮಂ (ಶಾಶಾಂತ. ೨೭-೧೫).

[ಸಂ. ಸಮೌರ್ವಿ]

ಸಮ್ಮ$_1$, **ಶಮ್ಮ** (ನಾ). ೧. ರಕ್ಷಣೆ ; ಆಶ್ರಯ : 'ಸಮ್ಮಂಗೊಡು' ಪರಾ. ೨. ಶುಭ ; ಮಂಗಳ : ಈ ಅಷ್ಟಾಕ್ಷರಕನಂತಾನಂತ ಸಮ್ಮಂಗಳೊಳವು (ಕಮುಮಾ. ೧೫-೪೪ ವ). **ಶಮ್ಮ** : ೩. ಸಂತೋಷ : ಶಮ್ಮದಿಂದಾತನುಂ ನನ್ನ ನಿಮಗಿತ್ತ ಗದ (ಶ್ರಭಪು. ೩-೧೧೫). [< ಸಂ. ಶರ್ಮನ್]

ಸಮ್ಮ$_2$ 'ಚಮ್ಮ' ನೋ.

ಸಮ್ಮಂಗುಂದು (ಕ್ರಿ). (ಮುಪ್ಪಿನಿಂದ) ಚರ್ಮವು ಸುಕ್ಕಾಗು, – ನೆರಿಗೆಗಟ್ಟು : ಎಲೆಲ ಸಮ್ಮಂಗುಂದಿದ ಪುಚ್ಚಲಿಯ ಬಾಲ್ಪಬಮ! (ರಾಮಾಶ್ವ. ೧೦೨-೧೧೫).

[ಸಮ್ಮ$_2$ (< ಚಮ್ಮ) + ಕುಂದು$_1$]

ಸಮ್ಮಂಗೊಡು (ಕ್ರಿ). ಆಶ್ರಯ ನೀಡು; ರಕ್ಷಣೆ ಕೊಡು : ಹಸರಸಕದ ಹೆಮ್ಮೆಯ ದೇವರು ಬಂದೊಸದು ತುಳಿಲ್ವೆವಡಿದಾವರೆಯಂ ಸಸಿವಚ್ಚಂ ಸಮ್ಮಂಗೊಟ್ಟುಮ್ಮಹದಿಂದೆಮ್ಮಂ ಪೊರೆಗೆ (ಅಧ್ಯರೇ. ೧-೨). [ಸಮ್ಮ$_1$ + ಕೊಡು$_1$]

ಸಮ್ಮಂದ 'ಸಮ್ಮದ$_1$' ನೋ.

ಸಮ್ಮಂದಿಸು (ಕ್ರಿ). ೧. ಸಂಬಂಧಿಸಿದಂತಿರು : ಆತ್ಮಂ . . . ಸಮ್ಮಂದಿಸಿಹನು ಪ್ರಾಣಗಳಾ (ಧರಚ. ೬೭-೬೩). ೨. ಸಂಬಂಧವನ್ನು ಕಲ್ಪಿಸು; ಹೊಂದಾಣಿಕೆ ಮಾಡು: ನಿಮ್ಮಯ ಲಕ್ಷಣದಿರವಂ ಸಮ್ಮಂದಿಸಿ ನೋಡಲೆಂದು ಕಳುಪಿದನೆನ್ನಂ (ಬೀಳಪ. ೨-೪೪). [ಸಮ್ಮಂದ (< ಸಮ್ಮದ$_1$) + - ಇಸು$_3$]

ಸಮ್ಮಂಧ$_1$ 'ಸಮ್ಮದ$_1$' ನೋ.

ಸಮ್ಮಂಧ$_2$ (ಅ). ಸಲುವಾಗಿ ; ನಿಮಿತ್ತವಾಗಿ : ತೋಟವನಿಕ್ಕುವ ಸಂಮಂಧ ಎಂಟುಹೊನು (ಎಸ. VII. ಶಿವಮೊ. ೭೧-೩೨ ; 1431). [< ಸಮ್ಮಂಧ$_1$]

ಸಮ್ಮಂಧಿ (ನಾ). ೧. ಸೇರಿದುದು; ಸಂಬಂಧಿಸಿದುದು : ಜಜಾಪತಿ ಶ್ರೀಶಾಂತಿನಾಥಸಮ್ಮನ್ನಿಯಪ್ಪ ಬಳಕಾಜಗಣದ ಮೇಷನನ್ನಿಭಟ್ಟಾರಕರ ಶಿಷ್ಯರಪ್ಪ ಕೇಶವನನ್ನಿ . . . ಕೊಟ್ಟ ಗಟ್ಟೆ (ಇಆ. IV. ೧೪೦-೧೩ : 1048). ೨. ಬಂಧು ; ನಂಟಿ : ನಿಮ್ಮ ದಾಸರು ಅವರ ಸಮ್ಮಂಧಿಗಳ ಪಾದ ನೆಮ್ಮಿಕೊಂಡಿಪ್ಪಂಥ ಧಮ್ಮನು ನಾ (ವಿದಾಕ್ಕ. ೭೩-೩). [< ಸಂ. ಸಂಬಂಧಿನ್]

ಸಮ್ಮಂಧಿಗ (ನಾ). = ಸಮ್ಮಂಧಿ ೨ : ಕರುಳ ಸಮ್ಮಂಧಿಗನಯ್ಯ ವರನರಕೇಸರಿಕಾಯ . . . ಕಾಯೊ ಮುರಾರಿ (ಪೋಕ್ಷದೀ. ೭೯-೧). [ಸಮ್ಮಂಧ$_1$ (< ಸಮ್ಮದ$_1$) + - ಇಗ]

ಸಮ್ಮಕಂಕರಿ (ನಾ). ಚರ್ಮದ ಚಾಟಿ ; ಬಾರುಕೋಲು : ಈತಂ ಪಗಲ್ಗಳ್ಗನೀತನಂ ಸಮ್ಮಕಂಕರಿಯಿಂ ಬಿಡಿವರ್ (ರಾಮಾಶ್ವ. ೧೦೬-೨೯). [ಸಮ್ಮ$_2$ (< ಚಮ್ಮ) + ಕಂಕರಿ]

ಸಮ್ಮಕಾರ 'ಚಮಗಾರ' ನೋ.

ಸಮ್ಮಗಾತಿ (ನಾ). ಚಮ್ಮಾರ ಜಾತಿಯ ಹೆಂಗಸು : (ಕ).

[ಸಮ್ಮ$_2$ (< ಚಮ್ಮ) + - ಕಾತಿ$_3$]

ಸಮ್ಮಗಾತಿಯಗಿಡು (ನಾ). ಒಂದು ಬಗೆಯ ಸಸ್ಯ : ''ಸಮ್ಮಗಾತಿಯ ಗಿಡು – ಸಪ್ಪಲ, ಏಮಲೆ, ಸಾತಲೆ, ಭೂರಿಫೇನ, ಚರ್ಮಕಷೆ'' (ನಾಚಿಕಾ. ೬).

[ಸಮ್ಮಗಾತಿ$_2$ + ಗಿಡು]

ಸಮ್ಮಗಾಱ 'ಚಮಗಾರ' ನೋ.

ಸಮ್ಮಟಿಗೆ 'ಚಮ್ಮಟಿಗೆ' ನೋ.

ಸಮ್ಮಣ 'ಸಮ್ಮನ' ನೋ.

ಸಮ್ಮಣಂಬಡೆ (ಕ್ರಿ). ಸನ್ಮಾನವನ್ನು ಹೊಂದು ; ಗೌರವಕ್ಕೆ ಪಾತ್ರವಾಗು : ಆ ನಾರದಂ . . . ತ್ರಿಲೋಕದೊಳಂ ತ್ರಿಮೂರ್ತಿಗಳೊಳಂ ಸಮ್ಮಣಂಬಡದಿರ್ಪಂ (ಅಜಿತ. ೨೮-೧೮). [ಸಮ್ಮಣ (< ಸಮ್ಮನ) + ಪಡೆ$_1$]

ಸಮ್ಮತ (ಗು). ೧. ಅಂಗೀಕಾರಾರ್ಹವಾದ ; ಒಪ್ಪಬಹುದಾದ : ಇಂತಾಚಾರ್ಯರ ಅನುಮತಿ ಇಲ್ಲದ ಸಮ್ಮತ ವಿಶ್ವೇಶ್ವರನೊಲ್ಲದ ಚೌತಿಯ ದಿನದೊಳು ಬೆನಕನ ಭಾವಿಸೆ (ಗಣೇಪ. ೧-೧೬). (ನಾ). ೨. ಅಂಗೀಕೃತವಾದುದು ; ಒಪ್ಪಿಗೆಯಾದುದು : ಪ್ರಕಟತರಂ ಶಬ್ದಂ ಶಾಬ್ದಿಕಸಮ್ಮತಮರ್ಥಂ (ಚಂದ್ರಪ್ರ. ೧-೫೮) ; ಸಮ್ಮತಮಿದಹುದೆಂದರಲ್ಲರುಂ ಭೂವರಂ ಸುಮ್ಮನಿರೆ (ಜೈಮಿಭಾ. ೨೬-೫೭) ; ಹಿತವಿದು ಶಾಸ್ತ್ರವಿಹಿತವಿದು ಪುನಕೆ ಸಮ್ಮತವಿದೆಂದೆಂಬ ಮರ್ಮವನು ಮತಿಯೊಳಿಗಿಸಿ (ಹರಿಬ. ೩-೧೯). ೩. ಹೊಂದಾಣಿಕೆ ; ಅನ್ಯೋನ್ಯ : ಇನ್ನು ನಾವಿಬ್ಬರೂ ಒಮ್ಮತ ಸಮ್ಮತವಾಗಿರೋಣ (ಅರ್ಜು. ೪). ೪. ಅಭಿಪ್ರಾಯ ; ವಿಚಾರ : ನಿಮ್ಮ ದಯೆಯಿಂದಮನುಪಮ ಸಮ್ಮತಮಂ ಹಿತಮನಖಿಳಶಾಸ್ತ್ರಾಗಮಮಂ ನಿಮ್ಮಿಂದಮಱಿದೆವು (ಸಣಮಾ. ೨-೫೮).

ಸಮ್ಮತಹೊಡೆ = ಒಪ್ಪಿಕೊಳ್ಳು; ತಲೆಬಾಗು; ಶರಣಾಗು : ಉಳಿದ ಜನ ಪೇಪರಿಗಾಗಿ ಚಾತಕಪಕ್ಷಿಯಂತೆ ಕಾದು ಸುಸ್ತಾಗಿ ಸಮ್ಮತಹೊಡೆದು, ನಿಟ್ಟುಸಿರುಬಿಟ್ಟು ಹೋಗುತ್ತಾರೆ (ನಾಡಗೇ. ೬೫) ; ಸಮ್ಮತಹೊಡೆದು ಬಿಟ್ಟಾನು ನಿನಗೆ (ಎಳಜೀ. ೮೩).

[ಸಂ.]

ಸಮ್ಮತಿ (ನಾ). ೧. ಒಪ್ಪಿಗೆ; ಅನುಮೋದನೆ : ಪತಿದೇವನಂ ಬಿಡುವ ಮನಸಿಲ್ಲದೆಯೆ ಬಿಡಲ್ ಸಮ್ಮತಿಯಿತ್ತಳಾಕೆ (ಚಿತ್ರಾಂಗ. ೪೯-೧೩೫) ; ಗೋವಿಂದಲಾಲನೂ ತಮ್ಮ ಸಮ್ಮತಿಯನ್ನು ಹಾಕಿದರು (ಬಂಗಮ. ೭೧). ೨. ಘನತೆ ; ಗೌರವ. ೩. ಪ್ರೀತಿ ; ಒಲವು. ೪. ಆಜ್ಞೆ ; ಅಪ್ಪಣೆ. [ಸಂ.]

ಸಮ್ಮತಿಸು (ಕ್ರಿ). ಒಪ್ಪು; ಒಡಂಬಡು : ಸತತಮುಂ ನಿಮ್ಮಲ್ಲಿರಲು ಸಮ್ಮತಿಸಿ ಕರುಣಿಸು (ಬಿಷಪು. ೭೧-೫೯) ; ಮಾಡಿಕೊಳ್ಳುವವರು ಒಪ್ಪಿಕೊಂಡರೂ ಹೆಣ್ಣೊಂದು ಸಮ್ಮತಿಸಬೇಕಲ್ಲ? (ತೇಪೋಡ. ೧೦೩). [ಸಮ್ಮತ + - ಇಸು$_3$]

ಸಮ್ಮಥಿಸು (ಕ್ರಿ). ಕಡೆ; ಮಥನಮಾಡು : ಲಂಕಾಜನದ ಮನದ ವಾರ್ಧಿಯಂ ಸಮ್ಮಥಿಸುತ್ಮೆತಂದುದಾ ಬೂತು ಮಯನಂದನೆಯ ದೇವಮಂದಿರಕೆ (ಶ್ರೀರಾಮಾ. ೩೨-೧೯೯). [ಸಂ. (ಸಮ್ಮಥನ) + - ಇಸು$_3$]

ಸಮ್ಮದ$_1$, **ಸಮ್ಮಂದ, ಸಮ್ಮಂಧ**$_1$ (ನಾ). ೧. ನಂಟು ; ಬಾಂಧವ್ಯ : ಸ್ವಯಂಬುದ್ಧನೆಂಬುದನಾನೆಂದೆನದಲ್ಲದಂದೆನಗಮಾ ಲೋಕಕ್ಕಮೇಂ ಸಮ್ಮದಂ (ಆದಿಪು. ೨-೬೭) ; ನಾಡ ನಂದನವನಂ ಸಗ್ಗಕ್ಕೆ ಪೋದಂತೆ ಕಣ್ಗೊಳಿಕುಂ ನಂದನಮಲ್ಲದಂದು ಬನಕಂ ಸಗ್ಗಕ್ಕಮೇಂ ಸಮ್ಮದಂ (ಆರ್ಧನೇ. ೧೧-೬೭) . ೨. ಕಾರಣ ; ನಿಮಿತ್ತ : ಭೂವಗವುನ್ನಾ ಹೊಲದ ಬದರ ಸಂಮ್ಮದದಿ ಕೊನ್ನಡೆ ಬಾಸಗವುನ್ನಾ ಬೂವೆಗವುನ್ನಾನ ಕೊನ್ನ (ಮೃಆರಿ. ೧೫೩, ೩೧-೧೧ : 1012?) ; ಅಂಟೆಗಳ್ ಮೃದುಯಾನಕ್ಕೆ ಪಿಕಂ ರವಕ್ಕೆಳಸೆ ತಂತಮ್ಮ ಸ್ವಜಾತೀಯ ಸಮ್ಮದದಿಂ ಪಾಮರಿಯರ್ . . . ಇರ್ಪರ್ ಕಾದು ಕೇದಾರಮಂ (ಮಲ್ಲಿಪು. ೨-೨೦). **ಸಮ್ಮಂದ** : ೩. ಮದುವೆಯಿಂದುಂಟಾಗುವ ನಂಟಿಸ್ತಿಕೆ ; ವೈವಾಹಿಕ ಸಂಬಂಧ : ನಮ್ಮ ಪುತ್ರರ ನಮ್ಮ ಕೇಳದೆ ಕೊಂಡೊಯ್ದು ನಿಮ್ಮ ಪುತ್ರಿಯರ ನೀವವರ್ಗೆ ಸಂಬಂಧಮಾಳ್ಪಾಗ ಬಡವರೆ (ಭರಚ. ೫೮-೬೭). **ಸಮ್ಮಂಧ**$_1$: ೩. ಗಣಪತಿಯಂಧವನಿಗೆ ಸರಿಯಾದ ಸಮ್ಮಂಧ ಮತ್ತೆ ಯಾವುದು? (ಹೊಸಕ್ರಿ. ೪೨).

[< ಸಂ. ಸಂಬಂಧ]

ಸಮ್ಮದ$_2$ (ನಾ). ೧. ಅಧಿಕವಾದ ಸಂತೋಷ : ಆನುಮಂತಯ್ಯ ಸಮ್ಮದ ಸಂದೋಹಮನಾನ ಪೆತ್ತೆನಿದನೆಂಬಂತೆ . . . ಆದೆಂ (ಕಾದಂಪು. ೮೬೪) ; ಎಲ್ಲರ ಸುಖ ದುಃಖದ ಹದನಂ ಪರಿಕಿಸಿದೊಡೆ ಸಮ್ಮದಂ ಧರಿತ್ರೀತಳದೊಳ್ (ದಶಕು. ೬-೧೧೫). ೨. ಉತ್ಸಾಹ ; ಸಂಭ್ರಮ : ಅಚ್ಯುತಂ ಯುದ್ಧಸಮ್ಮದದಿಂ ಪೂರಿಸೆ ಪಾಂಚ ಜನ್ಯಮಂ (ಜಗವಿ. ೧೪-೬). ೩. ಅತಿಶಯವಾದ ಮದ : ನವಾಮ್ರಕೋಮಲ ಕಳಿಕಾರಸಪ್ರಸರಸೇವೆಯ ಸಮ್ಮದದಿಂ ಕುಕಿಲ್ವ ಕೋಕಿಲಕುಳಮಾ ಪುರೋಪವನ ದೊಳ್ ಪರಿದೊಪ್ಪುವುದು (ಕುಸುಮಾ. ೨-೭೦). [ಸಂ.]

ಸಮ್ಮದಿಸು (ಕ್ರಿ). ಅತಿಯಾಗಿ ಸಂತೋಷಿಸು : ಜಲಂ ಮುರಿದು ವಿತಳಕ್ಕಿಳಿಯಿತೆನೆ . . . ತಾಯ್ಗಳಲುಗಾಣಿಸಲು ಘಮ್ಮನಲು ನೀರ್ನಡುವೆ ಹೊಯ್ದೆ ಸಮ್ಮದಿಸಲೆಂದಾಗ ದಂಬರ ಪೆರ್ಮೆಯಂ ಮಾಣಿಸಿದನಲ್ಲಾ (ಬಿಷಪು. ೩.೨ ೨೬). [ಸಮ್ಮದ$_2$ + - ಇಸು$_3$]

ಸಮ್ಮನ, ಸಮ್ಮಣ (ನಾ). ಸನ್ಮಾನ ; ಗೌರವ : ಭೂಮಿಪರು ಸುಖಮುವಿರಾದರು ನಮಿರಾಜ ತವಗೆ ಸಮುಖವೆತ್ತು ಮಾಳ್ಪ ಸಮ್ಮನಕೆ (ಧರಚ. ೩೮-೫೯). **ಸಮ್ಮಣ** : ನಾನು ಮಹಾಸನ್ನಿಧಾನಕ್ಕೆ ದಕ್ಷಿಣಭುಜದಂಡನಾಗಿರುವೆನೆಂಬ ಒಳ್ಪಿನ ಸಮ್ಮಣದ ತೇಜಸ್ವಿತೆಯ ಬಿರುದು ಆದಿಯಿಂದ ನನ್ನ ಪರಮಸೌಭಾಗ್ಯವದಾಗಿದೆ (ಮಂತ್ರಶ. ೧೭೫-೨೪). [< ಸಂ. ಸಮ್ಮಾನ]

ಸಮ್ಮನಿಸು₁ (ಕ್ರಿ). ೧. ಆದರಿಸು: ಗೌರವಿಸು : ಎನಿತು ಗುಣಮುಳ್ಳೊಡಂ ಸಮ್ಮನಿಸದಣಂ ತಜ್ಜನಂ ಕೃತಘ್ನನೆಂದುಂ (ಚಂದ್ರಪ್ರ. ೪-೨೩) : ಪೆತ್ತ ಮಗಂ ಸಮ್ಮನಿಸಿ ಕೊಳುತ್ತಿರೆ ಪೊಸತಲ್ತೆ ತಂದೆ ಮಕ್ಕಳ ಮೋಹಂ (ಅನಂಪು. ೩-೯೯) : ಇನಿವಿಂದು ಪಡೆಗರಣ್ಮಕಂ ಕೂಲ್ಪೇರಿತ್ತು ಸಮ್ಮನಿಸಿದನೆ? (ರಾಮಾಶ್ವ. ೧೧೫-೨೪). ೨. ಸೈರಿಸು ; ಸಹಿಸು : ತಾಮ್ಮುನ್ನಮ ಮುಗ್ಗೆಯದಱ ಮೇಗುದಯಿಸ ಕೋಪಮ್ಮಿಗ ತನ್ನ ನೆಬಲ್ಗಂ ಸಮ್ಮನಿಸಳೆ ಕೂರ್ತು ಕಣ್ಣ ಕಾಣ್ಗವರೊಳರೆ (ಲೀಲಾವ. ೧೪-೩೧). [ಸಮ್ಮನ + - ಇಸು]

ಸಮ್ಮನಿಸು₂ 'ಸಮನಿಸು' ನೋ.

ಸಮ್ಮರ್ದ (ನಾ). ೧. ತಿಕ್ಕಾಟ ; ಘರ್ಷಣೆ : ಸಂದೇಶವಾಹಕಮಾರ್ಗದಲ್ಲಿ ಹೆಚ್ಚಿನ ಸಮ್ಮರ್ದ ಹುಟ್ಟಿಸಿ ಸಂದೇಶಗಳು ಸಾಗದಂತೆ ಅಡಚಣೆಯುಂಟುಮಾಡುತ್ತವೆ (ಶಿಷ್ಟರ. ೪೫೩). ೨. ಒತ್ತಡ ; ಒತ್ತರ : ಒಂದರ ಮೇಲೆ ಇನ್ನೊಂದು ವಸ್ತು ಉಂಟುಮಾಡುವ ಬಲದ ಹೆಸರು ಸಮ್ಮರ್ದ (ಪ್ರೆಷರ್) (ಕವಿಕೋ. I. ೨೮೦). ೩. ಸಂದಣಿ ; ದಟ್ಟಣೆ : ಮಾಹೇಶ್ವರಾರಾಧನೆಯ ಸಮ್ಮರ್ದದಲ್ಲಿ . . . ಮತಾಚಾರಗಳನ್ನು ಗುಟ್ಟಾಗಿ ಹಾಳೆರಿಸಿದ ಸೇನಾಪತಿ ಬಸವಲಿಂಗಣ್ಣನೂ ಉಂಟು (ಬೆಟ್ಟಳ. ೪೮-೧೪). ೪. ಸುಗಂಧದ್ರವ್ಯವನ್ನು ತೀಡುವುದು : "ಸಮ್ಮರ್ದವೆನೆ ಪರಿಮಳವನಲು ಮಿದಿವುದಕ್ಕು" (ಮಂಗರಾ. ೧೩೪-೩೪). [ಸಂ.]

ಸಮ್ಮರ್ದನ (ಗು). ತುಳಿದಿಕ್ಕಿದ ; ಮೆಟ್ಟಿದ : ಅದನಾಳ್ದಂ . . . ಅನೇಕಸಮರ ಸಮ್ಮರ್ದನ ನಿರ್ಜಿತೋರ್ಜಿತಾರಾತಿಬಲನತಿಬಲನೆಂಬಂ (ಆದಿಪು. ೧-೭೧ ವ). [ಸಂ.]

ಸಮ್ಮಾವಾವುಗೆ 'ಚಮ್ಮಾವಾವುಗೆ' ನೋ.

ಸಮ್ಮಾನ (ನಾ). ೧. ಸನ್ಮಾನ ; ಮನ್ನಣೆ : ಭೀಷ್ಮದ್ರೋಣಕೃಪಾದಿಗಳೂ . . . ಕ್ಷತ್ರ ಸಮ್ಮಾನಾರ್ಥವಾಗಿ ಅಲಂಕರಿಸಿದ್ದ ನಗರಕ್ಕೆ ವಿಜಯಮಾಡಿಸಿದರು (ಭೀಷ್ಮ. ೧೭೭); ನಿನಗೆ ಸಮ್ಮಾನ ಮಾಡಲೆಂದು ಕೊಬ್ಬಿದ ಕೋಳಿಯನ್ನು ಕೊಂದು ಕೋಳಿಕರಿ, ರೊಟ್ಟಿಗಳನ್ನು ತಯಾರಿಸಿದೆವು (ನಡರಾ. II. ೧೧೩೧). ೨. ಸುಖ ; ಸಂತೋಷ : ಮುದಿ ತುಂಬುರಂಗ ಸಮ್ಮಾನಮಪ್ಪಡೆಯೊಳೆನಗೆ ದುಮ್ಮಾನಮಾದುದು ಗಡ! (ಅದ್ಭುತ ೨೦-೫೮). ೩. ಒಂದು ಬಗೆಯ ಅಳತೆ. ೪. ಹೋಲಿಕೆ; ತುಲನೆ. [ಸಂ.]

ಸಮ್ಮಾನಗೆಯ್ (ಕ್ರಿ). ಆದರಿಸು; ಪುರಸ್ಕರಿಸು: ಅಮ್ಮಿ ನೀನೊಸಗ ಮಾಡಿದೆ ನಮ್ಮಲ್ಲರ್ಗೆ ಸಮ್ಮಾನಗೆಯ್ದೆ (ಭರಚ. ೩೫-೯೧). [ಸಮ್ಮಾನ + ಕೆಯ್₂]

ಸಮ್ಮಾನಿಸು (ಕ್ರಿ). = ಸಮ್ಮಾನಗೆಯ್ : ಆನುಂ ಕತೆಯಂ ಕೇಳ್ದು ಸೊಗಸಾಗ ಬಲ್ಲಂತೆ ಸಮ್ಮಾನಿಸುವೆಂ (ರಾಮಾಶ್ವ. ೫-೨೫). [ಸಮ್ಮಾನ + - ಇಸು]

ಸಮ್ಮಾರ್ಜನ (ಗು). ೧. ಗುಡಿಸುವ ; ಉಡುಗುವ : ಪ್ರಾತಃಕಾಲದಲ್ಲಿ ಎದ್ದು ಸನ್ನಿಧಿಯ ಸಮ್ಮಾರ್ಜನಕ್ಕಿಂಕರ್ಯಕ್ಕೆ ಪೋಗುವಾಗ್ಗೆ (ಪುರಾವಿ. ೧೧೪). (ನಾ). ೨. ಗುಡಿಸುವುದು. ೩. ತೊಳೆಯುವುದು ; ಶುದ್ಧಿಮಾಡುವುದು. ೪. ಶುದ್ಧಿ; ಸ್ವಚ್ಛ ; ಚೊಕ್ಕಟ : ನಗವ ತೆರಯಿಂದ ಸಮ್ಮಾರ್ಜನೆಯ ಮಾಡಿ ಮಲ್ಲಿಗೆಯ ಪೂವಲಿಯ ಕೆದಲಿ (ಪಚಾ. ೩-೮೧). ೫. ಉಜ್ಜುವುದು; ತಿಕ್ಕುವುದು. ೬. ಸಾರಿಸುವುದು; ಸಾರಣೆ. ೭. ಪ್ರತಿಮೆ ಮೊದಲಾದುವುಗಳಿಗೆ ಬಣ್ಣ ಬಳಿಯುವುದು. [ಸಂ.]

ಸಮ್ಮಾರ್ಜನಂಗೆಯ್ಯು 'ಸಮ್ಮಾರ್ಜನಂಗ್ಗೆ' ನೋ.

ಸಮ್ಮಾರ್ಜನಂಗ್ಗೆ, ಸಮ್ಮಾರ್ಜನಂಗೆಯ್ಯು (ಕ್ರಿ). ೧. ಸಾರಿಸು; ಸಾರಣೆಮಾಡು: ರಜಮನಾ ತಾಣದೊಳ್ ಹಸ್ತಿ ಕೈನೀರಿಡುತಂ ಸಮ್ಮಾರ್ಜನಂಗ್ಗೆವು [ಪಾಠಾಂ.ಗೆಯ್ಯು]ದು (ರಾಜಶೇ. ೧೦೧೩). **ಸಮ್ಮಾರ್ಜನಂಗೆಯ್ಯು** : ೨. ತಿಕ್ಕು ; ಉಜ್ಜು : ತಿರಸ್ಕೃತಿಯ ಕೈದುವಂ ಸಮ್ಮಾರ್ಜನಂಗೆಯ್ಯುತಿರ್ದೊಡಂ ನಡನಡನೆ ನಡುಗುತಿರ್ದಾ ಬೆರ್ಚುಗಣ್ಣುಬಲೆಯಂ ಹಬ್ಬುಗಂಟಿಕ್ಕಿ ನೋಡಿದನ್ . . . ನಿಶಾಚರೇಂದ್ರಂ (ಶ್ರೀರಾಮಾ. ೨೪೬-೪೦೮). [ಸಮ್ಮಾರ್ಜನ + ಕ್ಕೆ (< ಕೆಯ್₂)]

ಸಮ್ಮಾರ್ಜನಿ (ನಾ). ಪೊರಕೆ ; ಕಸಬರಿಗೆ : "ಸಮ್ಮಾರ್ಜನಿ ಪರಿಶೋಧಿನಿಯೆನಲ್ ಕಸಕಿಲನಿಸಿಕ್ಕು" (ಮಂಗರಾ. ೬೦-೧೫); ಲೋಕಪಾಲಕರ ನೊಸಲಕ್ಕರಮಂ ತೊಡೆವ ಸಮ್ಮಾರ್ಜನಿಯಿದೆಂಬಂತೆ ದಸೆದಸೆಗೆ ಬೀಸುವುದ್ದಂಡಬಾಳದಂಡಮುಂ (ಜಗದ. ೪-೪೦ ವ): ಇರುಳವೆಣ್ ಕೈಲಾಂತು ನಿಡುನೀಳ್ದ ಕೆಂಗಂಡದುರಿಯ ಸಮ್ಮಾರ್ಜನಿಯೊ (ಶ್ರೀರಾಮಾ. ೩೭-೬೯). [ಸಂ. ಸಮ್ಮಾರ್ಜನೀ]

ಸಮ್ಮಾರ್ಜನೆ (ನಾ). ೧. = ಸಮ್ಮಾರ್ಜನ ೩ : ಹವ್ಯಕವ್ಯಗಳೆಲ್ಲ ಗೋವಿಂದ ಪ್ರಪಂಗವ್ಯಸಮ್ಮಾರ್ಜನೆ ಗೋವಿಂದ (ಮೃಗಾ. ೧೪೨-೨). ೨. = ಸಮ್ಮಾರ್ಜನ ೬ : ಹೋಮಶಾಲೆಯ ಹೊಸಲು ಹೊಸದಾಗಿ ಮಾಡಿರುವ ಸಮ್ಮಾರ್ಜನೆಯಿಂದ ಶೋಭಿಸುತ್ತಿರುವುದು (ಶಾಕುಂತ. ೬೩-೧೭). [ಸಂ. ಸಮ್ಮಾರ್ಜನ]

ಸಮ್ಮಾರ್ಜನೆಗೆಯ್ (ಕ್ರಿ). = ಸಮ್ಮಾರ್ಜನಂಗ್ಗೆ ೧ : ಕಸ್ತುರಿಯಿಂದ ಸಮ್ಮಾರ್ಜನೆಗೆಯ್ದು . . . ರಂಗವಾಲಿಯ ಬಿತ್ತರಿಸಿದರು (ಮೋಹತ. ೨೮-೫).

[ಸಮ್ಮಾರ್ಜನೆ + ಕೆಯ್₂]

ಸಮ್ಮಾರ್ಜಿತ (ಗು). ೧. ಗುಡಿಸಿದ ; ಉಡುಗಿದ : ಮರುತ್ಕುಮಾರ ಸಮ್ಮಾರ್ಜಿತ ಯೋಜನಾಂತರಿತ ರಮ್ಯಭೂಮಿಭಾಗನುಂ . . . ಆಗಿ (ಅನಂಪು. ೧೦-೬೭ ವ). ೨. ತೊಳೆದ : ಸಮ್ಮಾರ್ಜತೋಜ್ವಲದಶನನಿಚಯ ತಾಂಬೂಲಚರ್ವಣಭರಿತಕಪೋಲರುಂ . . . ಆಗಿ (ಜಗವಿ. ೪-೮೦ ವ). [ಸಂ.]

ಸಮ್ಮಾರ್ಜಿಸು (ಕ್ರಿ). = ಸಮ್ಮಾರ್ಜನಂಗ್ಗೆ ೧ : ಎಸವ ಲಿಂಗಾಂಗಣಕೆ ಸಮ್ಮಾರ್ಜಿಸುವ . . . ರಂಗವಾಲಿಯನಿಕ್ಕಿ ನಡೆತಪ್ಪ (ಬಿಷ್ಣು. ೧೪-೬೯). [ಸಮ್ಮಾರ್ಜನ + - ಇಸು]

ಸಮ್ಮಾವಣೆ (ನಾ). (?) : ಸುಘೋಷಯೆಂಬ ವೀಣೆಯಂ ಕೊಂಡು ಕಳೆಯನಳವಡಿಸಿ . . . ಸಮವಿಷಮಪ್ರಹರಣಂಗಳ ಸಮ್ಮಾವಣೆಯಱಿದು ತಾಳಾನುಗತವಾಗೆ (ಮಹಾನೇ. ೫-೧೪ ವ). [?]

ಸಮ್ಮಾವುಗೆ 'ಚಮ್ಮಾವಾವುಗೆ' ನೋ.

ಸಮ್ಮಾಳಿಗೆ (ನಾ). ಹಿಂದಿನ ಕಾಲದಲ್ಲಿ ರೂಢಿಯಲ್ಲಿದ್ದ ಒಂದು ಬಗೆಯ ಉಗ್ರ ಶಿಕ್ಷೆ (?) : ಕಸ್ತೂರಿ ರಂಗಪ್ಪನಾಯಕನು ಈ ಕೋಟೆಯನ್ನು ಲಗ್ಗೆಮಾಡಿ ತಗೆದುಕೊಂಡು, ನೀಲಯ್ಯನನ್ನು ಹಿಡತರಿಸಿ ಅವನ ಹಲ್ಲನ್ನು ಕೀಳಿಸಿ ತಲೆಯನ್ನು ಒಡೆಯಿಸಿ ಸಮ್ಮಾಳಿಗಗ ಹಾಕಿಸಿ, ಆ ವೂರಿಗೆ ಠಾಣ್ಯ ಇಟ್ಟು ದುರ್ಗಕ್ಕೆ ಬಂದನು (ಚಿತ್ರಪಾ. ೨೦). [?]

ಸಮ್ಮಿತ (ಗು). ೧. ಅಳತೆಮಾಡಿದ. ೨. ಒಂದೇ ಅಳತೆಯ ; ಸಮತೂಕದ. (ನಾ). ೩. ಸಮಾನವಾದುದು : 'ಕಾಂತಾಸಮ್ಮಿತ', 'ಪ್ರಭುಸಮ್ಮಿತ' ಪರಾ. ೪. [ಸಂಗೀತ] ತಾಳಭೇದಗಳಲ್ಲಿ ಒಂದು: ಧ್ರುವ . . . ಸಮ್ಮಿತ . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳ್ (ವಿವೇ. ೧೪೨). [ಸಂ.]

ಸಮ್ಮಿಲನ, ಸಮ್ಮಿಳನ (ನಾ). ಒಂದುಗೂಡುವಿಕೆ; ಒಟ್ಟಾಗುವಿಕೆ: ಕೃಷ್ಣಾರ್ಜುನರ ಸಖ್ಯವೂ ಸಾಂಖ್ಯಯೋಗಗಳ ಸಮ್ಮಿಲನವೂ ಭಕ್ತಿಯ ಬಿಸಿರಂಗಗಳು (ಧರ್ಮಸಾ. ೧೦೭). **ಸಮ್ಮಿಳನ**: ಎರಡು ರಾಷ್ಟ್ರಗಳ ಸಮ್ಮಿಳನದಿಂದ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ (ರೂಢಿ). [ಸಂ.]

ಸಮ್ಮಿಲಿತ, ಸಮ್ಮಿಳಿತ (ಗು). ೧. ಒಟ್ಟುಗೂಡಿದ ; ಕಲೆತ : ಬೌದ್ಧವಿಹಾರಗಳಲ್ಲಿ ಕಂಡುಬಂದ ಸಮ್ಮಿಲಿತವಾತಾವರಣವು ಇಂದ್ರಿಯನಿಗ್ರಹಕ್ಕೆ ಪೋಷಕವಾಗಲಿಲ್ಲ (ಕರ್ನಾಕ. ೧೨). (ನಾ). ೨. ಚೆನ್ನಾಗಿ ಕೂಡಿಸಿದುದು; ಮಿಶ್ರಣ : ಈ ಎಳ್ಳೆ, ತುಪ್ಪಗಳ ಕಾಸಿ . . . ಚೂರ್ಣವಂ ಹಾಕಿ ಚೆನ್ನಾಗಿ ಕಾಸಿ ಎಲ್ಲವನ್ನೂ ಸಮ್ಮಿಲಿತವಂ ಮಾಡಿ (ವಿವಿವಿ. ೬೮). **ಸಮ್ಮಿಳಿತ** : ೧. ಭೂರಿತರಪಂಚಭೂತಸಮ್ಮಿಳಿತಕಾಯಂಗಳೊಳು ತರಣಿಯಂದದಿ ತನ್ನ ತಾನೆಯಾಕ್ಷಿಪನೊಡನೆ (ತತ್ಪಪ. ೬೪-೪). ೨. ತನುವಿನೊಳಗಂ ಕೋಟಿಕೋಟಿಯ ಗಣನೆಯಿಂ ಸಮ್ಮಿಳಿತವಾಗಿಹವನುದಿನಂ (ಕಾವೇಮಾ. ೭-೨೪). [ಸಂ.]

ಸಮ್ಮಿಶ್ರ (ಗು). ೧. ಬೆರೆತ ; ಮಿಶ್ರವಾದ : ಅತಿಸುರಭಿಸಪಕಾರಕಸ್ತೂರಿಕರ್ಪೂರಪಾಲಿ ಸಮ್ಮಿಶ್ರ ತಾಂಬೂಲರಾಗರಕ್ತಾಧರಪ್ರವಾಲಪ್ರಭಾಪ್ರಕಟಪೂರ್ವಸಂಧ್ಯಾರಾಗಮಂ . . . ಆಗಿ (ಆದಿಪು. ೩-೯೦ ವ). (ನಾ). ೨. ಬೆರಕೆ ; ಮಿಶ್ರಣ : ಭಕ್ತಹಸ್ತಾರ್ಪಿತ ಭಿಷಿತಮಂ ಭಕ್ತ ತತ್ಪಾದೋದಕದಿ ಸಮ್ಮಿಶ್ರಮಂ ಮಾಡಿ (ಬಿಷ್ಣು. ೪೭-೬೧). ೩. [ಗಣಿತ] ಕೂಡುವುದು; ಸಂಕಲನ : ಯುತಂ, ಯುಕ್ತಂ, ಮಿಶ್ರಂ, ಸಮ್ಮಿಶ್ರಂ . . . ಬತಂ - ಇಂತಿನಿತುಂ ಕೂಡೂವಕ್ಕೆ ಹೆಸರು (ವ್ಯವಹಾ. ೧೧-೧೯). [ಸಂ.]

ಸಮ್ಮಿಶ್ರಣ (ನಾ). ೧. ಸರಿಯಾದ ಬೆರಕೆ,– ಮಿಶ್ರಣ : ಹಾಲು – ಜೇನುಗಳ ಸಮ್ಮಿಶ್ರಣದಿಂದ ಮಧುರವಾದ ಪೇಯ ಸಿದ್ಧವಾಗುತ್ತದೆ (ರೂಢಿ). ೨. ಮಿಲನ ; ಸಮಾಗಮ : ಒಂದೂ ಮತ್ತು ಕ್ರಿಶ್ಚಿಯನರ ಸಮ್ಮಿಶ್ರಣದಿಂದ ಜನಿಸಿದ ಆ ಮಗುವಿನ ಗತಿಯೇನು? (ಕಾವೇಂ. ೧೬೬). [ಸಂ.]

ಸಮ್ಮಿಳನ 'ಸಮ್ಮಿಲನ' ನೋ.

ಸಮ್ಮಿಳಿತ 'ಸಮ್ಮಿಲಿತ' ನೋ.

ಸಮ್ಮು (ನಾ). ಸುಳಿವು ; ಸೂಚನೆ : ಒಂದು ಕಾಲಕ್ಕೆ ಭತ್ತ ಕೊಳೆತುಹೋಗುವಷ್ಟು ಮಳೆಯಾಗುತ್ತಿದ್ದರೂ ಈಗ ರೋಹಿಣಿ ಪ್ರವೇಶವಾಗಿ ಐದಾರು ದಿನಗಳಾಗಿದ್ದರೂ ಮಳೆಯ ಸಮ್ಮು ಇರಲಿಲ್ಲ (ರಕ್ತಧ್ವ. ೧೩೧). [?]

ಸಮ್ಮುಖ (ನಾ). ೧. ಎದುರುಗಡೆ ; ಮುಂಭಾಗ : ಹರಲಿಖಿತವಪ್ಪೋಲೆಯೊಂದು . . . ಭೂವರನ ಸಮ್ಮುಖದಲ್ಲಿ ಬೀಳಲು (ಬಸವ. ೫-೫೨) ; ನಿರ್ಮಲವಾಜಿಯಂ ಸುವೇಗಂ ತಂದು ನಿಲಿಸಿದಂ ಧರ್ಮಜನ ಸಮ್ಮುಖದೊಳು (ಜೈಮಿಭಾ. ೫-೧೧). ೨. ಎದುರು; ಅಭಿಮುಖ ; ಮುಖಾಮುಖಿ : ಸಮ್ಮುಖಸಮರನೀತಿಯಿಂದಾತನಂ ಜಯಿಸೆ ಶತಮಾನಗಳಿ ವೇಳ್ಮುಮಯ್ (ಶ್ರೀರಾಮಾ. ೨೪-೩೦೮). ೩. ದೇವರು ಮತ್ತು ರಾಜ, ರಾಣಿ, ಗುರುಹಿರಿಯರು ಮುಂತಾದವರ ಸನ್ನಿಧಿ,—ಸನ್ನಿಧಾನ : ದ್ವಾರಪಾಲಕನು ಶೀಘ್ರವಾಗಿ ಸಮ್ಮುಖಕ್ಕೆ ಬಂದು ಸಂಜಯನು ಬಾಗಿಲಲ್ಲಿ ಬಂದಿರುವನೆಂದು ಬಿನ್ನವಿಸಿದನು (ಕೃವಾಮ. ೮೫) ; ದೇವನ ಸಮ್ಮುಖದಲ್ಲಿ ಭಕ್ತಿಯ ಆವೇಶದಲ್ಲಿ ಶಾಂತಲೆ ಆನಂದ ನೃತ್ಯವನ್ನು ಮಾಡುತ್ತಿದ್ದಾಳೆ. (ಶಾಂತಲಾ. ೧೩೧). ೪. [ನಾಟ್ಯ] ಕರಭೇದಗಳಲ್ಲಿ ಒಂದು ಪ್ರಕಾರ: ಉತ್ತಾನಂ . . . ಸಮ್ಮುಖ . . . ಸಮ್ಮುಖಾಗತಂ ಪದಿನೈದುಂ ಬಗೆಯಿಂದಂ ನೃತ್ತದೊಳಂಮಿಗೆ ರಂಜಿಸಿ ತೋರ್ಪುವಿಂತು ಕರಭೇದಂಗಳ್ (ಲಾಸ್ಯರಂ. ೪-೪).

ಸಮ್ಮುಖದಾಕೆ = ರಾಜ, ರಾಣಿಯರ ಖಾಸಾ ಸೇವಕಿ : ಗುರುಗಳು ಹಸನ್ಮುಖಿಗಳಾಗಿ "ರಾಣಿಯ ಸಮ್ಮುಖದಾಕೆ ಅಲ್ಲವೇನವ್ವ?" ಎಂದರು (ಸಮತಿ. ೧೩). [ಸಂ.]

ಸಮ್ಮುಖಿಂಗೆಯ್ (ಕ್ರಿ). ಎದುರಿಗೆ ನಿಲ್ಲಿಸು; ಅಭಿಮುಖವಾಗಿಸು : ಬೆಸನಂ ಸಾರ್ದು ನಿಂದ ಯೋಗಿನಿಯರಿಂ ಕರೆಕರೆದು ಸಮ್ಮುಖಿಂಗೆಯ್ದು ಮಂತ್ರಶಕ್ತಿಯರಿಂ . . . ಪರಮನ ಸಭೆ ಕಣ್ಗೊಳಿಸಿರ್ದುದು (ಶಬಶಂ. ೧-೭೯ ವ). [ಸಮ್ಮುಖ + ಕೆಯ್[1]]

ಸಮ್ಮುಖಿಗೊಳಿಸು (ಕ್ರಿ). (ದೇವರನ್ನು) ಆವಾಹನೆ ಮಾಡು; ಬರಮಾಡು : ಜಿನವರರ ಪೂಜಕದಿಂ ಕರೆದು ಕುಂಭಕದ ಪೀಠದೊಳು ಇರಿಸಿ ಸಮ್ಮುಖಿಗೊಳಿಸಿ ನೀರಸದುರುವಿಮಲತರುರಸದಿ . . . ಅಭಿಷೇಕಗಳ ಮುಂ ಮಾಡಿಸಿದ ಬಳಿಕ (ಸಾಳ್ವಭಾ. ೩-೨೫). [ಸಮ್ಮುಖ + ಕೊಳ್[1] + ಇಸು]

ಸಮ್ಮುಖಿವೆಱು (ಕ್ರಿ). ಎದುರಿಗಿರು : ಭೂಮಿಪರು ಸುಖಮುಖರಾದರು ನಮಿರಾಜ ತವಗೆ ಸಮ್ಮುಖವೆತ್ತು ಮಾಳ್ಪ ಸಮ್ಮನಕೆ (ಭರಚ. ೩೮-೫೯). [ಸಮ್ಮುಖ + ಪೆಱು[1]]

ಸಮ್ಮುಖಾಗತ (ನಾ). [ನಾಟ್ಯ] ಕರತಳಭೇದಗಳಲ್ಲಿ ಒಂದು : ಉತ್ತಾನಂ . . . ಸಮ್ಮುಖಾಗತಂ ಪದಿನೈದುಂ . . . ಕರಭೇದಂಗಳ್ (ಲಾಸ್ಯರಂ. ೪-೪). [ಸಂ.]

ಸಮ್ಮುಖೀಕರಣ (ನಾ). ಸನ್ನಿಧಿಯಲ್ಲಿರುವಂತೆ ಮಾಡುವುದು; ಸಾನ್ನಿಧ್ಯವನ್ನು ಹೊಂದುವಂತೆ ಮಾಡುವುದು : ಶ್ರದ್ಧಾಭಕ್ತಿ ಧ್ಯಾನಜ್ಞಾನಸಮೇತನಾಗಿ ಶಿವನಂ ಭಜಿಸುತ ಆವಾಹನ ಸ್ಥಾಪನ . . . ಸಮ್ಮುಖೀಕರಣಾದಿ ಮುಖ್ಯಕ್ರಿಯೆಗಳಿಂದೊಡಗೂಡಿ (ಏವಣ. ೧೦೪). [ಸಂ.]

ಸಮ್ಮುದ (ನಾ). ಅತಿಯಾದ ಆನಂದ ; ಅತಿಶಯವಾದ ಸಂತೋಷ : ಒಪ್ಪಿದುದಲ್ಲಿಗಲ್ಲಿಗುರು ಸಮ್ಮುದದಿಂ ಕುಲಟಾಂಗನಾಜನಂ (ಉದ್ಭಟ. ೧೦-೧೧೨). [ಸಂ. ಸಮ್ಮುದಾ]

ಸಮ್ಮುದವೆಱು (ಕ್ರಿ). ಅತಿಯಾದ ಆನಂದವನ್ನು ಹೊಂದು : ಬಸವಣ್ಣ ಇತ್ತ ಶಿವಗಣಸಹಿತ ಸಮ್ಮುದವೆತ್ತು ತಾನೈತಂದು (ಬಸವ. ೫-೭೦). [ಸಮ್ಮುದ + ಪೆಱು[1]]

ಸಮ್ಮುದಿತ (ಗು). ಅತಿಯಾಗಿ ಆನಂದಗೊಂಡ : ಸಮ್ಮುದಿತ ಸದುಭಕ್ತಿಯುಕ್ತರು ಹಮ್ಮಿನಿಂದಿರುತಿಹರು (ಬಸವ. ೧-೫೮). [ಸಂ.]

ಸಮ್ಮೂಢ (ಗು). ೧. ಮೂರ್ಖತನದಿಂದ ಕೂಡಿದ . ೨. ಸಂಪೂರ್ಣವಾಗಿ ಮೈಮರೆಯುವಂಥ : ಸ್ಫೂರ್ತಿಸಮ್ಮೂಢ ಬೀಡವನಡಕಿ ಬಾಯಲ್ಲಿ ಚಿಟಕೆಯಲಿ ಮದ್ರಾಸುನಶ್ಯ ಮಿಡಿದು (ನಡಬೂ. ೭೪-೧೨). ೩. ದಿಗ್ಭ್ರಮೆಗೊಂಡ ; ತಬ್ಬಿಬ್ಬಾದ. ೪. ಗುಂಪಾದ ; ರಾಶಿಯಾದ. [ಸಂ.]

ಸಮ್ಮೂರ್ಚ್ಛನೆ (ನಾ). [ಜೈನ] ಶರೀರಕ್ಕೆ ತಕ್ಕ ಪುದ್ಗಲಗಳನ್ನು ತೆಗೆದು ಕೊಳ್ಳುವುದು : ಶೀತೋಷ್ಣವಿವೃತಸಂವೃತಜೀತಾಜೀತಪ್ರಮಿಶ್ರಭೇದದೆ ನವ ಸಂಖ್ಯಾತಂ ತದ್ಯೋನಿ ಸಮುದ್ಭೂತಂ ಗರ್ಭೋಪಪಾದಸಮ್ಮೂರ್ಚ್ಛನೆಗಳ್ (ಸುಜಮಾ. ೮-೮). [ಸಂ. ಸಮ್ಮೂರ್ಚ್ಛನ]

ಸಮ್ಮೂರ್ಛನ (ನಾ). = ಸಮ್ಮೂರ್ಚ್ಛನೆ : ಮೂಜುಲೋಕದೊಳ್ ಊರ್ಧ್ವ ಧಸ್ಥಿರ್ಯಗ್ಗಾಗದಿಂ ಶರೀರಕ್ಕೆ ತಕ್ಕ ಪುದ್ಗಲಂಗಳಂ ಕೊಳ್ವುದು ಸಮ್ಮೂರ್ಛನಂ (ತತ್ತ್ವಪ್ರ. ೧೦೨). [ಸಂ.]

ಸಮ್ಮೇಲನ, ಸಮ್ಮೇಳನ (ನಾ). ೧. ಸಮಾಗಮ ; ಮಿಲನ : ವಸಂತಕಾಲದಲ್ಲಿ ಎರಡು ಭಿನ್ನ ಪ್ರಕಾರದ ಸ್ತ್ರೀಪುರುಷಪ್ರಕೃತಿಗಳ ಸಮ್ಮೇಲನವನ್ನು ಹೊಂದಿಸಲು ಕಾಮನು ಉದ್ಯುಕ್ತನಾಗಿದ್ದನು (ಸಾಹಿಸ. ೧೫೮). ೨. ಗೋಷ್ಠಿ; ಚರ್ಚೆ: ಅನೇಕ ಸಭೆ ಸಮ್ಮೇಲನಗಳಲ್ಲಿ ಭಾಗವಹಿಸಿ (ಪಕ್ಕನೋ ೪೩). **ಸಮ್ಮೇಳನ**: ೩. ಗುಂಪು ; ಸಮೂಹ: ಮುನಿಪನಿದ್ದನು . . . ಸಮ್ಮೇಳನದ ಪುಣ್ಯಮ್ಯಗಾವಳಿಯ ಸೋಂಕಿನಲಿ (ತೂರರಾ. ೧-೫೫-೪೬). ೪. ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ಮುಂತಾದ ಉದ್ದೇಶಗಳಿಗಾಗಿ, ದೊಡ್ಡ ಪ್ರಮಾಣದಲ್ಲಿ ಸೇರುವ ಸಭೆ ; ಸಮಾವೇಶ : ಮೊಟ್ಟಮೊದಲನೆಯ ರಾಷ್ಟ್ರೀಯ ಶಿಕ್ಷಣಸಮ್ಮೇಳನವು ವರ್ಧಾದಲ್ಲಿ ೧೯೩೭ನೆಯ ಇಸವಿಯಲ್ಲಿ ನಡೆಯಿತು (ಕ್ರಿಯಾಶಾ. ೧೫೫); ಅವರು ಮುಂದಿನ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ (ರೂಢಿ). ೫. ಬೆರಕೆ; ಮಿಶ್ರಣ: ಶ್ರೀಗಂಧ, ಅಗರು, ಪನ್ನೀರು . . . ಇವುಗಳ ಪರಸ್ಪರ ಸಮ್ಮೇಳನದಿಂದ ತಯಾರಾಗುವ 'ಕದಂಬ'ಗಳನ್ನು ಹಲವು ತೆರವಾಗಿ ಉಪಯೋಗಿಸುತ್ತಿದ್ದರು (ಸಾಹಿಜೀ. ೫೨). [ಸಂ.]

ಸಮ್ಮೇಲನಂಬೆಱು (ಕ್ರಿ). ಸೇರು; ಕೂಡು : ಒಸರ್ವ ಪೊಸರಸಾಸಾರಮಂ ದೂರದಿಂ ಭೋಂಕೆನೆ ಕಂಡ್ಕೆತಂದು ಕಂಠಂ ನಿಮಿರ್ದಮರ್ದಿರೆ ಪಕ್ಷದ್ವಯಂ ಜೋಲೆ ಕಣ್ಮೀಲನದೊಳ್ ಸಮ್ಮೇಲ[ಪಾಠಾಂ. ೪]ನಂಬೆತ್ತಿರೆ ತಣಿವಿನೆಗಂ ಪೀರ್ದು (ಚಂದ್ರಪ್ರ. ೭-೮೮). [ಸಮ್ಮೇಲನ + ಪೆಱು[1]]

ಸಮ್ಮೇಳ (ನಾ). ಸಹವಾಸ; ಸಖ್ಯ : ದಿವೌಕಸರ ಸಮ್ಮೇಳವೇ ಪುರುಷಾರ್ಥ ತನಗೆ (ಕುವಾದ್ಯೋ. ೭-೧೮); ಸಾಗರಸುತೆ ಸಮ್ಮೇಳದಿಂದಲಿ ಅತಿಭೋಗವ ಪಡುತ ಓಲಾಡುತಿರು (ಪುರಂದ. ೩-೧೩೧-೨). [ಸಂ. ಸಮ್ಮೇಲ]

ಸಮ್ಮೇಳನ 'ಸಮ್ಮೇಲನ' ನೋ.

ಸಮ್ಮೇಳವ (ನಾ). ಸಂದಣಿ ; ಸಮೂಹ : ಕವಿದುದು ಕೂಡೆ ಯಕ್ಷೇಶ್ವರನ ಪರಿವಾರ ಶೂಲ ಮುದ್ಗರ ಖಡುಗ ಚಾಪ ಶರಾಳಿ ಸಮ್ಮೇಳವದಲೆತ್ತಿದ ತೋಳುಗಳ ಬಲುತೋಟಿಗಾಜಿರು ತೊಡಗಿದರು ರಣವ (ನಿಭಾಗ. ೪-೯-೧೨). [< ಸಮ್ಮೇಲನ]

ಸಮ್ಮೇಳವಿಸು (ಕ್ರಿ). ಕೂಡು ; ಸೇರು : ನಾಲುವರು ನಂದನರಿಗವನೀಪಾಲತೇಜೋರಾಶಿ ಮಿಗೆ ಸಮ್ಮೇಳವಿಸಿದುದು ಮೆಱೆದುದವರಭ್ಯುದಯ ದಿನದಿನಕೆ (ತೂರರಾ. ೧-೮-೮೨). 'ಮೇಳವಿಸು' ಪರಾ. [ಸಮ್ಮೇಳವ + - ಇಸು]

ಸಮ್ಮೇಳಿಸು (ಕ್ರಿ). ನೆರೆ; ಕೂಡು : ಚುಂಬಿಸುವೆನಿಂತು ಸಮ್ಮೇಳಿ [ಪಾಠಾಂ. ಲಿ] ಸುವೆನಿಂತು ಪೊಯ್ದಪೆನಿಂತು ಬಯ್ದಪೆಂ ಮುನಿಸಿದೊಡೆ ತಿಳಿಪ . . . ನೆರೆದಪೆ ನವನೊಳ್ (ಚಿಬಪ್ರ. ೧೯-೪೧). 'ಸಮ್ಮೇಳವಿಸು' ಪರಾ. [ಸಮ್ಮೇಳ + - ಇಸು]

ಸಮ್ಮೋಗ (ನಾ). ೧. = ಸಮ್ಮುಖ ೨ : ಹರಿಗೆ ಸಮ್ಮೋಗವಾಗಿ ಅಟ್ಟಹಾಸದಿ ನಿಂದಿರದೆ ನಿಂದಲ್ಲಿ ನಾಟ್ಯವಾಡಿದ ಚರಣ (ಎದಾಕ್ಕ. ೧೨೭-೩). ೨. = ಸಮ್ಮುಖ ೩ : 'ಏಪೊಟ್ಟು ಮಿವಂ ರಾಯರ ಸಮ್ಮೋಗಮಿರ್ದವಿನೇಯರನನುಗೆಡಿಪ ಗಬ್ಬಿ ಸಬ್ಬವಕಾಱಂ (ಚಿಪ. ೭-೧೨೬). [< ಸಂ. ಸಮ್ಮುಖ]

ಸಮ್ಮೋದ (ನಾ). = ಸಮ್ಮುದ : ನಿನಗೆ ಸಮ್ಮೋದದಿಂ ಹೇಳಿದವು (ಬಸವ. ೩-೨೦); "ಶ್ರೀ"ಯವರು ಸಮ್ಮೋದದಿಂದ ಕಂಡ ಸವಿಗನಸುಗಳು . . . ನೆನಸಾಗಬಲ್ಲ ಅಭಿಮತಗಳು (ತಿಒಸಾ. vii, ಪೀಠಿಕೆ). [ಸಂ.]

ಸಮ್ಮೋದಗೊಳ್ (ಕ್ರಿ). ಆನಂದಪಡು; ಸಂತೋಷಿಸು : ಕಂದಗಳಿಗೂ ವೃತ್ತಗಳಿಗೂ ಪ್ರಸ್ತಾರಹಾಕಿ ಪಾದಪಾದಗಳನ್ನು ಬಿಡಿಸಿ ಓದಿ ಸಮ್ಮೋದಗೊಂಡಿದ್ದೇನೆ (ಸಮತಿ. IV. ಪ್ರಸ್ತಾವನೆ). [ಸಮ್ಮೋದ + ಕೊಳ್[1]]

ಸಮ್ಮೋಹ (ನಾ). ೧. ಅತಿಶಯವಾದ ಮೋಹ,– ಆಕರ್ಷಣೆ : ನಲಿದಾಡ ನರ್ತಿಪ ನವಿಲ್ ಬಂಡುಂಬ ಪೆಣ್ಣುಂಬಿ ಸುಸ್ವರದಿಂದೋದುವ ಕೀರಮಾರ ಬಗೆಗಂ ಸಮ್ಮೋಹಮಂ ಮಾಡವೇ (ಸುಕುಮಾ. ೧-೭೩) ; ಕರಂ ಕಾಂತೌಘಸಮ್ಮೋಹಮನೊದವಿ ಹಿಮಸಮಯ ಮಹಾಸಿದ್ಧನೊಪ್ಪಿರ್ದನಾಗಳ್ (ರಾಜಶೇ. ೯-೮). ೨. [ಜೈನ] ಪಿಶಾಚಿಗಳಲ್ಲಿಯ ಒಂದುವರ್ಗ ಮತ್ತು ಆ ವರ್ಗಕ್ಕೆ ಸೇರಿದವನು : ರಾಕ್ಷಸರುಂ ಯಕ್ಷರುಂ ಸಮ್ಮೋಹರುಂ . . . ಪವನರುಂ ಎಂದು ಪಿಶಾಚರ್ ಚತುರ್ದಶವಿಧಂ (ತತ್ತ್ವಾಪ್ರ. ೩೯೩). [ಸಂ.]

ಸಮ್ಮೋಹಕ (ನಾ). ಮನಸೆಳೆಯುವಂಥದು ; ಆಕರ್ಷಕವಾದುದು : ಸೌಂದರ್ಯವನ್ನು ಕುರಿತ ವಿಚಾರ ಅತ್ಯಂತ ಸಮ್ಮೋಹಕವಾದುದು (ಸೌಂದಸ. i, ಮೊದಲ ಮಾತು). [ಸಂ.]

ಸಮ್ಮೋಹನ (ನಾ). ೧. ಮರುಳು; ಮೈಮರೆವು : ಎಮಗಂ ಸಮ್ಮೋಹನ ಮಾದುದಕ್ಕುಮಂದಣ್ಣನ ಸೂನೃತವಚನಮೆಂಬ ಮಂತ್ರಾಕ್ಷರದಿಂ (ಗದಾಯು. ೧-೬೨). ೨. ಆಕರ್ಷಣೆ ; ಮೋಹ ; ಸೆಳೆತ : ಆ ಸುಧನ್ವಂ . . . ಕಾಂತೆಯ ಕೂಡೆ ರಮಿಸಿದಂ ಪ್ರೀತಿಯಿಂದುಗುರೊತ್ತು ಸರಸ ಚುಂಬನ ಲಲ್ಲೆವಾತುಗಳ ರವ ನೇಮಗಲೆ ತಾಡನಪ್ರೌಢಿ ಬಂಧ ಸಮ್ಮೋಹನದೊಳು (ಚೈಮಿಭಾ. ೧೧-೨೧). ೩. ಮೋಹವನ್ನುಂಟುಮಾಡಿ ಮಂಕುಕವಿಸುವ ಅಸ್ತ್ರ ; ಸಮ್ಮೋಹನಾಸ್ತ್ರ : ತೊಟ್ಟಂ ಸಮ್ಮೋಹನ ಮನ ಭಯಂ ಪಾಂಡವಂ (ಶಮದ. ೨೮೧ ಪ್ರಯೋ). ೪. ಮನ್ಮಥನ ಪಂಚಬಾಣಗಳಲ್ಲಿ ಒಂದು : ಘನಸಮ್ಮೋಹನ ಸಂತಾಪನ ಸಂದೀಪನವತೀವ ಸಂಶೋಷಣಸಂಜನಿತ ದ್ರಾವಣಮೆನೆ ಕಾಮನ ಸಮ್ಯಙ್ಮಂತ್ರ ಪಂಚಬಾಣಾಖ್ಯಂಗಳ್ (ಮನ್ಮಮಿ ೩-೭). [ಸಂ.]

ಸಮ್ಮೋಹನವಿಡಿ (ಕ್ರಿ). ಪರವಶಗೊಳ್ಳು ; ಸೆಳೆತಕ್ಕೊಳಗಾಗು : ಒಡನೈತಂದ ರೋಲಗಕೆ ಸಮ್ಮೋಹನವಿಡಿದ ಗಾಯಕರು ಕವಿಗಳು (ಕಂನವಿ. ೮-೨೫).

[ಸಮ್ಮೋಹನ + ಪಿಡಿ$_1$]

ಸಮ್ಮೋಹನವಿದ್ಯೆ (ನಾ). ತನ್ನ ಶಕ್ತಿಯಿಂದ ಬೇರೆಯವರ ಬುದ್ಧಿಯ ಮೇಲೆ ಪ್ರಭಾವ ಬೀರಿ ಮರುಳುಮಾಡುವುದು; ಕಣ್ಕಟ್ಟುಮಾಡುವುದು ಮುಂತಾದ ಕೌಶಲ : ಅವರ ಸಮ್ಮೋಹನವಿದ್ಯೆಗೆ ಒಳಗಾದ ರೋಗಿಯು ತನ್ನ ಮನಸ್ಸಿನಲ್ಲಿದ್ದ ವಿಷಯವನ್ನೆಲ್ಲಾ ಹೊರಗೆಡಹಿದನು (ರೂಢಿ). [ಸಂ. ಸಮ್ಮೋಹನವಿದ್ಯಾ]

ಸಮ್ಮೋಹನಾಸ್ತ್ರ (ನಾ). ೧. ಮೋಹವನ್ನುಂಟುಮಾಡಿ ಮಂಕು ಕವಿಸುವ ಬಾಣ : ಇನಸುತ ಗಾಂಡಿವಿ ಸಮ್ಮೋಹನಾಸ್ತ್ರದಿಂದೆಚ್ಚು ನಿದ್ರೆಯಂ ಮಾಡಿದನಂದಿನ ಗೋಗ್ರಹಣದೊಳ್ (ಗದಾಯು. ೫-೨೧) ; ಬಲುಸಮ್ಮೋಹನಾಸ್ತ್ರವನೊಲಿದು ಕೊಟ್ಟಳು . . . ದೇವಿ (ಕೌಶಿಂಗ. ೨೮-೨೯). ೨. ಮನಸ್ಸನ್ನು ಸೆಳೆಯುವ ಅಸ್ತ್ರ : ಮೋಹಕವಾಗಿದ್ದ ಅವರ ವಿಶಾಲನಯನಗಳಿಗೆ ಕಪ್ಪನ್ನಿಟ್ಟು, ಅದನ್ನು ಸಮ್ಮೋಹನಾಸ್ತ್ರವನ್ನಾಗಿ ಮಾಡಿದರು (ಶಾಂತಲಾ. ೧೦೪). [ಸಂ.]

ಸಮ್ಮೋಹಿನಿ (ನಾ). ಪ್ರಜ್ಞೆಯನ್ನು ತಪ್ಪಿಸುವ ವಸ್ತು,– ದ್ರವ್ಯ : ಶಸ್ತ್ರ ಚಿಕಿತ್ಸೆಯ ಕಾಲದಲ್ಲಿ ರೋಗಿಯ ಪ್ರಜ್ಞೆಯನ್ನು ತಪ್ಪಿಸಲು ಪ್ರಯೋಗಿಸುತ್ತಿದ್ದ ಸಮ್ಮೋಹಿನಿಯೆಂಬುದು ಇಂದಿನ ಕ್ಲೋರೋಫಾರಂಗಿಂತ ಉತ್ತಮವಾಗಿದ್ದಿತು (ಭಾರದ. ೩೦೭). [ಸಂ. ಸಮ್ಮೋಹಿನೀ]

ಸಮ್ಮೋಹಿಸು (ಕ್ರಿ). ೧. ಅತಿಶಯವಾದ ಮೋಹವನ್ನು ಹೊಂದು ; ಮರುಳಾಗು : ಹೇಯಮಿದೆಂದಱಿಯದಾತ್ಮವಸ್ತುಗಳೊಳ್ ಸಮ್ಮೋಹಿಸುವುದು ಹೇಯೋಪಾದೇಯಂಗಳ್ ಪಾಪಧರ್ಮವಲ್ಲದೆ ಪೆಱತೇಂ (ಅಜಿಪು. ೨-೬೫). ೨. ಮೋಹಗೊಳಿಸು; ಮರುಳುಮಾಡು : ಐಹಿಕಾಮುಷ್ಮಿಕದ ಗತಿ ಸಮ್ಮೋಹಿಸುವುದು ಶರೀರದಲಿ (ಕುವ್ಯಾಉ. ೪-೪೨) : ಅಂಬುಜದಳನೇತ್ರೆಯ ಮಧ್ಯಂ ಇನಿವಿರಿದುಂ ತಾಂ ಪಳಯುತ್ತಿರ್ಪುದತನುವಾಗಿಯೆ ಜನಮಂ ಸಮ್ಮೋಹಿಪ ಮನಸಿಜನಂ (ಜಯಕಾ. ೩-೩೨).

[ಸಮ್ಮೋಹನ + - ಇಸು$_3$]

ಸಮ್ಯಕ್ಕರುಣ (ನಾ). ಯೋಗ್ಯವಾದ ದಯೆ : ಅಕ್ಕಱಿಂ ಬಂದನ್ನ ದೇವನ ಮಿಕ್ಕ ತನುವಂ ತೂಪಿಱಿದು ಸಮ್ಯಕ್ಕರುಣದಿಂ ಮಾಣಿಸನುತ (ಬಸಪು. ೧೩-೨೪). [ಸಂ.]

ಸಮ್ಯಕ್ಕು (ನಾ). ಯೋಗ್ಯವಾದುದು : ಮಹದಾದಿಗಣಕ್ಕೆ ನಪುಂಸಕಲಿಂಗದಲ್ಲಿ ಪ್ರಥಮೈಕವಚನದ ಮೇಲೆ ದ್ವಿತ್ವದಿಂ ಉತ್ತಮಕ್ಕುಂ . . . ಅವಾಕ್ಕು, ಸಮ್ಯಕ್ಕು – ಎಂಬಂತೆ (ಶಮದ. ೮೬ ವಿಚಾರಂ). [ಸಂ. ಸಮ್ಯಕ್]

ಸಮ್ಯಕ್ಚರಿತ್ರ (ನಾ). [ಜೈನ] ರತ್ನತ್ರಯಗಳಲ್ಲಿ ಒಂದು ; ಒಳ್ಳೆಯ ನಡತೆ; ಸದಾಚಾರ : ಅದುವೆ ಸಮ್ಯಗ್ಜ್ಞಾನಕ್ಕವಕಾಶಮಕ್ಕುಮಂತದು ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ (ಆದಿಪು. ೫-೫೯) ; ಆ ಬೋಧದಿಂ ಸತ್ಯಂಗಳ್ಕಿಡದಂತುಟೋವಿ ನಡೆಯಲ್ ಸಮ್ಯಕ್ಚರಿತ್ರಂ (ರತ್ನಾಕ. ೨). [ಸಂ.]

ಸಮ್ಯಕ್ಚಾರಿತ್ರ (ನಾ). = ಸಮ್ಯಕ್ಚರಿತ್ರ : ಸಮ್ಯಗ್‌ಜ್ಞಾನೋಪೇತಭವ್ಯಜೀವನ ಬಾಹ್ಯಾಭ್ಯಂತರಕ್ರಿಯಾನಿವೃತ್ತಿ ಸಮ್ಯಕ್ಚಾರಿತ್ರಮೆಂಬುದು (ಆದಿಪು. ೧೦-೬೩ ವ) ; ಸಂಸಾರಕಾರಣಂಗಳ ನಿವೃತ್ತಿಯೊಳುದ್ಯೋಗಮನುಳ್ಳ ಜ್ಞಾನಿಯ ಕರ್ಮಾಸ್ರವಕ್ಕೆ ಕಾರಣಮಪ್ಪ ಹಿಂಸಾದಿಗಳ ನಿವೃತ್ತಿ ಸಮ್ಯಕ್ಚಾರಿತ್ರ (ತಸೂವ್ಯ. ೨). [ಸಂ.]

ಸಮ್ಯಕ್ಶೀಲತೆ (ನಾ). = ಸಮ್ಯಕ್ಚರಿತ್ರ : ಸಮ್ಯಕ್ತ್ವಶುದ್ಧಿ ವಿನಯತೆ ಸಮ್ಯಕ್ಶೀಲತೆ (ಶಾಂತಿಪು. ೯-೧೧೫). [ಸಂ. ಸಮ್ಯಕ್ಶೀಲತಾ]

ಸಮ್ಯಕ್ತ್ವ (ನಾ). ೧. ಸಮಗ್ರತೆ ; ಸಂಪೂರ್ಣತೆ. ೨. [ಜೈನ] ಜಿನಮತದ ಬಗೆಗಿರುವ ಸಂಪೂರ್ಣವಿಶ್ವಾಸ ; ಸಮ್ಯಗ್ದರ್ಶನ : ಇಂತು ಇಷ್ಟತ್ರೈದುಂ ದೋಷಂಗಳಿಂದಗಲ್ದ ಸಮ್ಯಕ್ತ್ವಮನೊಡೆಯನಾಗಿ (ವರ್ಧಾರಾ. ೬-೨೩) ; ನಿನಗೆ . . . ಮನದೊಳ್ ಸಮ್ಯಕ್ತ್ವದ ದೆಸೆಯಿನಿಲ್ಲ ದಲಮ್ಮ ಕೈಕೊಳಲ್ಕಿದು ಕಾಲಂ (ಆದಿಪು. ೫-೫೧); ಜೀವದಯೆ ಧರ್ಮಮೆಂದೀ ಭಾವನೆಯಂ ನೆಱೆಯೆ ನಂಬುವುದು ಸಮ್ಯಕ್ತ್ವಂ (ಯಶೋಧ. ೪-೩೦).

ಸಮ್ಯಕ್ತ್ವರತ್ನಾಕರ = ಸಮುದ್ರದಂತೆ ಗಾಂಭೀರ್ಯವುಳ್ಳವನು ; ಒಂದು ಬಿರುದು: ಇಂತೆನಿಸಿ ನೆಗೞ್ದ ಸಮ್ಯಕ್ತ್ವರತ್ನಾಕರಂ ಶ್ರೀಮಚ್ಚಾವುಂಡರಾಜಂ (ಚಾವುಂಪು. ೫); ಮನುಮಾರ್ಗ್ಗಂ ಸುಜನಯ್ಯಮಿತ್ರನನಘಂ ಸಮ್ಯಕ್ತ್ವರತ್ನಾಕರಂ (ಪೌಇಇ. XX, ೫೫-೩೯ ; 1082). ಸಮ್ಯಕ್ತ್ವವಾರಾಸಿ = ಸಮ್ಯಕ್ತ್ವರತ್ನಾಕರ : ವಿಶದಯಶೋನಿದಾನಂ ಸಮ್ಯಕ್ತ್ವವಾರಾಸಿಯುಮಪ್ಪ ಶ್ರೀಮತ್ಪುಟ್ಟಣಸ್ವಾಮಿ ನೊಕ್ಕಯ್ಯಸೆಟ್ಟಿಯರ್ (ಎಕ. VIII, ನಗರ. ೫೭-೨೯ ; 1077). [ಸಂ.]

ಸಮ್ಯಕ್ತ್ವಪ್ರಕೃತಿ (ನಾ). [ಜೈನ] ದರ್ಶನಮೋಹನೀಯಕರ್ಮದ ಮೂರು ಭೇದಗಳಲ್ಲಿ ಒಂದು : ಮಿಥ್ಯಾತ್ವಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ ಕ್ಷಾಯಿಕಸಮ್ಯಗ್ದೃಷ್ಟಿಯಾಗಿ (ಆದಿಪು. ೧೦-೧೪ ವ). [ಸಂ.]

ಸಮ್ಯಕ್ತ್ವಶುದ್ಧಿ (ನಾ). [ಜೈನ] ಸಮ್ಯಗ್ದರ್ಶನದ ಸಾಧನೆಯಲ್ಲಿ ಇರಬೇಕಾದ ತ್ರಿಕರಣಶುದ್ಧಿ : ಸಮ್ಯಕ್ತ್ವಶುದ್ಧಿ ವಿನಯತೆ ಸಮ್ಯಕ್ಶೀಲತೆ ನಿರಂತರಧ್ಯಾಯ ಮನಃಸಮ್ಯಧಿಗಮ್ಯತೆ ಪತಿಗತಗಮ್ಯವಜೇಯತ್ವಮಮಲಜಿನಪತಿಮತದೊಳ್ (ಶಾಂತಿಪು. ೯-೧೧೫). [ಸಂ.]

ಸಮ್ಯಗ್ಜ್ಞಾನ (ನಾ). ೧. ಸರಿಯಾದ ತಿಳುವಳಿಕೆ ; ಸಮರ್ಪಕವಾದ ಜ್ಞಾನ: ನಿನ್ನ ಲೀಲೆ ಕಾರಣವಾಗಿ ಸಂದೇಹಗಳಿಗೆ ಸಂಕಲ್ಪಿಯಾಗಿ . . . ಸಮ್ಯಗ್ಜ್ಞಾನಮುಕುರದಂತೆ ಸಂಬಂಧಿಸಿದೆಯಲ್ಲಾ (ವೋಳಿಮಾ. ೧೩೩-೫೧೪); ವಿಮಳಕ್ರಿಯಾವಿಶ್ರಾಂತಿಯೆನಿಪುದೇ ಸಲ್ಲಲಿತವಾದ ಸಮ್ಯಗ್ಜ್ಞಾನ (ಲಕಿಂಂ. ೫೪-೨) ; ಮನಸ್ಸಿನೊಳಗಿನ ತಮವನ್ನೂ ರಾಗವನ್ನೂ ಸಮ್ಯಗ್ಜ್ಞಾನದಿಂದ ತೊಲಗಿಸಿದ ಮೇಲೆ ಆ ಸಮಭಾವವು ವರ್ತಿಸುವುದು (ಸಾಹಿ. ೯೫). ೨. [ಜೈನ] ಸಮ್ಯಗ್ಜ್ಞಾನ, ಸಮ್ಯಕ್ ಚಾರಿತ್ರ ಮತ್ತು ಸಮ್ಯಕ್‌ದರ್ಶನ ಎಂಬ ರತ್ನತ್ರಯಗಳಲ್ಲಿ ಒಂದು; "ಸಮ್ಯಗ್ದರ್ಶನದಿಂದ ಕಂಡು ಗ್ರಹಿಸಿದ್ದನ್ನು ಸ್ವಲ್ಪವೂ ಸಂಶಯ ಉಳಿಯದಂತೆ ಬುದ್ಧಿಯಿಂದ ಚೆನ್ನಾಗಿ ತಿಳಿದು ಜೀವಾದಿಪದಾರ್ಥಗಳ ಸ್ವರೂಪವನ್ನು ಯಥಾವತ್ತಾಗಿ ಅರಿತುಕೊಳ್ಳುವುದು" (ಜೈನಕೋ. ೨೬೪): ಇವಱಿಂ ಸಮ್ಯಗ್ದರ್ಶನಮವಶ್ಯಮುಜ್ಜ್ವಲಿಕುಮದುವೆ ಸಮ್ಯಗ್ಜ್ಞಾನಕ್ಕವಕಾಶಮಕ್ಕುಂ (ಆದಿಪು. ೫-೫೯). ☞ ಸಾಮಾನ್ಯವಾಗಿ ಈ ಶಬ್ದವನ್ನು 'ಸಮ್ಯಕ್‌ಜ್ಞಾನ', 'ಸಮ್ಯಗ್‌ಜ್ಞಾನ' ಎಂದೂ ಬರೆಯುವುದುಂಟು. [ಸಂ.]

ಸಮ್ಯಗ್ಜ್ಞಾನಿ (ನಾ). ಸರಿಯಾದ ತಿಳಿವಳಿಕೆಯುಳ್ಳವನು : ಅನುಪಮ ಶಿವೈಕ ಸಮ್ಯಗ್ಜ್ಞಾನಿ ಕಡುಮಾನಿ (ಬಸರ. ೫-೧೦). [ಸಂ. ಸಮ್ಯಗ್ಜ್ಞಾನಿನ್]

ಸಮ್ಯಗ್ದರ್ಶನ (ನಾ). ೧. = ಸಮ್ಯಕ್ತ್ವ ೧: ಬುದ್ಧಿಗಿಂತಲೂ ಅತೀತವಾದ ಆತ್ಮಸಿದ್ಧಿಯ ದ್ರಷ್ಟಾರಶಕ್ತಿ ಆ ಧರ್ಮದ ಸಮ್ಯಗ್ದರ್ಶನಕ್ಕೆ ಅಗತ್ಯ (ಭಾರದ. ೧೧೦). ೨. [ಜೈನ] ರತ್ನತ್ರಯಗಳಲ್ಲಿ ಒಂದು; ಜೈನಧರ್ಮದಲ್ಲಿ ಶ್ರದ್ಧೆ ಹಾಗೂ ಅದರ ತತ್ತ್ವಗಳಲ್ಲಿ ನಂಬಿಕೆ ಇರುವುದು: ಇವಱಂ ಸಮ್ಯಗ್ದರ್ಶನಮವಶ್ಯ ಮುಜ್ಜ್ವಲಿಕುಂ (ಆದಿಪು. ೫-೫೯) ; ಅಸದೃಶಸಮ್ಯಗ್ದರ್ಶನಮೆಸೆಯೆ ಮನೋವಚನ ಕಾಯಶುದ್ಧಿಯಿನಾ ಆರಾಧಿಸುವಂ ನೆಗೞ್ದರ್ಹತ್ಸಿದ್ಧಸಾಧುಧರ್ಮಂಗಳಂ (ಅಜಿಪು. ೧-೮). [ಸಂ.]

ಸಮ್ಯಗ್ದೃಷ್ಟಿ (ನಾ). ೧. = ಸಮ್ಯಕ್ತ್ವ ೨ : ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ ಕ್ಷಾಯಿಕಸಮ್ಯಗ್ದೃಷ್ಟಿಯಾಗಿ (ಆದಿಪು. ೧೦-೧೪ ವ). ೨. ಜೈನಮತದಲ್ಲಿ ಸಂಪೂರ್ಣ ವಿಶ್ವಾಸವುಳ್ಳವನು : ನೀಂ ಸೆಱೆಗೆಯ್ದ ಸಮ್ಯಗ್ದೃಷ್ಟಿಯಪ್ಪ ಸಹಸ್ರಬಾಹುವಂ ಬಿಡುವುದು (ಪಂಚಾಮೃ. ೧೦-೧೮೧ ವ). [ಸಂ.]

ಸಮ್ಯಗ್ಭಕ್ತಿ (ನಾ). ಅತಿಶಯವಾದ ಭಕ್ತಿ; ಶ್ರೇಷ್ಠವಾದಭಕ್ತಿ : ಪೂಗೊಂಚಲಂ ತಂದು ಸೂಡಿದನಾ ಲಿಂಗದ ಮಸ್ತಕಾಗ್ರದೊಳೆ ಸಮ್ಯಗ್ಭಕ್ತಿಯಿಂದೆ (ಶಬಸಂ. ೪-೧೦೯). [ಸಂ.]

ಸಮ್ಯಗ್ಭವನ (ನಾ). ಉತ್ತಮವಾದ ಮನೆ; ಶ್ರೇಷ್ಠವಾದ ಗೃಹ : ಸಮ್ಯಗ್ಭವನರುಚಿರಮುತ್ತರ ದಿಗ್ಭಾಗದೊಳುಂಟು ಮಧುರೆಯೆಂಬುದು ನಗರಂ (ಪಂಚತಂ. ೨೪೩-೧). [ಸಂ.]

ಸಮ್ಯಜ್ಮಂತ್ರ (ನಾ). ಶ್ರೇಷ್ಠವಾದ ಮಂತ್ರ : ನಿಯತಂ ಸಮ್ಯಜ್ಮಂತ್ರಪ್ರಯೋಗ ಪಟುವೆನಿಪ ಭೂತಳಾಧೀಶ್ವರನ ಪ್ರಿಯರಂ ಮರ್ದಿಸಿ (ಪಂಚತಂ. ೩೧೩-೧೫). [ಸಂ.]

ಸಮ್ಯಙ್ಮಿಥ್ಯಾತ್ವ (ನಾ). [ಜೈನ] ದರ್ಶನಮೋಹನೀಯಗಳಲ್ಲಿ ಒಂದು; ರತ್ನತ್ರಯಸಾಧನೆಗೆ ಉಂಟಾಗುವ ಅಡ್ಡಿ : ಅನುಕ್ರಮದಿಂ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಯೆಂಬ ದರ್ಶನಮೋಹನೀಯತ್ರಿಕದ ನಿರ್ಮೂಲನದಿಂ ಕ್ಷಾಯಿಕ ಸಮ್ಯಗ್ದೃಷ್ಟಿಯಾಗಿ (ಆದಿಪು. ೧೦-೧೪ ವ) ; ಮಿಥ್ಯಾತ್ವ ಸಮ್ಯಕ್ಪ್ರಕೃತಿ ಸಮ್ಯಙ್ಮಿಥ್ಯಾತ್ವಮೆಂದು ತ್ರಿವಿಧಮಪ್ಪ ದರ್ಶನಮೋಹನೀಯಮಂ ನಿರ್ಮೂಲಿಸಿ (ಶಾಂತಿಪು. ೧೧-೧೧೧ ವ). [ಸಂ.]

ಸಮ್ಯಧಿಗಮ್ಯತೆ (ನಾ). ಪರಿಪೂರ್ಣಜ್ಞಾನವನ್ನು ಹೊಂದಿರುವಿಕೆ : ಸಮ್ಯಕ್ತ್ವ ಶುದ್ಧಿ ವಿನಯತೆ ಸಮ್ಯಕ್ಕ್ರೀಲತೆ ನಿರಂತರಧ್ಯಾಯಮನಃಸಮ್ಯಧಿಗಮ್ಯತೆ ಪತಿಗತಶಗಮ್ಯ ಮಚೇಯತ್ವಮಮಲಜಿನಪತಿಮತದೊಳ್ (ಶಾಂತಿಪು. ೯-೧೧೫). [ಸಂ. ಸಮ್ಯಧಿಗಮ್ಯತಾ]

ಸಮ್ರಾಜ (ನಾ). ೧. ಚಕ್ರವರ್ತಿ ; ಸಮ್ರಾಟ : ಒಂದಾನೊಂದು ದಿನ ಸಮ್ರಾಜನಾದ ಅಕಬರನು ಮಂತ್ರಿಗಳೊಡನೆ ಮಾತನಾಡುತ್ತಿದ್ದ (ಕೋಟಿನಾ. ೫) ; ನೀವು . . . ಸಮ್ರಾಜನಿಂದ ಸೇವಕನ ವರೆಗೆ ಪೂಜ್ಯಳು (ಸವತಿ. ೩೩). ೨. ವಿಶೇಷವಾಗಿ ರಂಜಿಸುವವನು; ತೇಜಸ್ವಿ : ಪೂಜ್ಯಪಾದನ ಪೂಜ್ಯಪಾದುಕಾಕೋಟೀರತೇಜದಿಂ ಸಮ್ರಾಜನಾಗಿ (ಶ್ರೀರಾಮಾ. ೧೭೪-೫೯೨). [ಸಂ. ಸಮ್ರಾಜ್]

ಸಮ್ರಾಟ (ನಾ). ಅಧಿರಾಜ; ಚಕ್ರವರ್ತಿ : ನಾನೀಗ ರಾಜ! ಸಮ್ರಾಟ! (ರಾಜಯೋ. ೧೩೪) : ಸಣ್ಣಕತೆಗಳ ಸಮ್ರಾಟನೆನಿಸಿದ 'ಮೊಪಾಸಾ' ಶ್ರೇಷ್ಠತರಗತಿಯ ಕತೆಗಳನ್ನು ಬರೆದಿದ್ದಾನೆ (ಧರ್ಮಸಾ. ೮೦). [< ಸಂ. ಸಮ್ರಾಜ್]

ಸಯ್$_1$ 'ಸಾ' ನೋ.

ಸಯ್$_2$, ಚೆಯ್$_2$, ಸಯಿ, ಸೈ$_1$ (ಗು). ೧. ನೇರವಾದ; ನೆಟ್ಟಗಿರುವ: 'ಸಯ್ಗೋಡು' ಪರಾ. ೨. ಸರಿಯಾದ ; ತಕ್ಕ; ಒಳ್ಳೆಯ : 'ಸಯ್ವಳಿ$_1$' ಪರಾ. (ನಾ). ೩. ನೇರವಾದುದು ; ನೆಟ್ಟಗಿರುವುದು : (ಕ). ೪. ಸರಿಯಾದುದು ; ತಕ್ಕುದು. ೫. ಪ್ರಾಮಾಣಿಕತೆ ; ಋಜುಸ್ವಭಾವ : (ಕ). ೬. ಔಚಿತ್ಯ ; ಉಚಿತತೆ : (ಕ). ೭. ಚೆಲುವು ; ಸೊಬಗು : (ಕ). ಚೆಯ್$_2$: (ಕ). ಸಯಿ : ೧. 'ಸಯಿಗೋಲ್' ಪರಾ. ಸೈ$_1$: ೧. 'ಸೈಗೋಡು' ಪರಾ. ೨. 'ಸೈದಾರಿ' ಪರಾ. ೪. ನಾನು ಸೈ ಅಂತ ಒಂದು ಕೈ ನೋಡುತಾ ಇದ್ದೆ (ಮುನಿಮಾ. ೧೦೮) ; ಮನೆಯ ದೇವರನು ಬಿಟ್ಟು ಒಯ್ಯಾರದಿಂದನ್ಯದೇವರಂ ಪೂಜಿಪುದು ಸೈಯೆ (ಮಲ್ಲಚ. ೬-೧೭).

ಸಯ್ದಂ$_1$, ಸಯ್ದವಂ = ಋಜುವಾದ ನಡತೆಯುಳ್ಳವನು; ಪ್ರಾಮಾಣಿಕ : ಏಂ ಸಯ್ದನೊ ಸತ್ಯದೊಳ್ ಶರದೊಳಾ ಪಾಪೇಭಕಂಠೀರವಂ (ಶಾಂತಿಪು. ೪-೨೧) ; ನಿನ್ನೊಳೇಂ ಸಯ್ದವನಲ್ಲನೆ ಧರ್ಮತನೂಜಂ (ಪಂಪಭಾ. ೧೩-೫೬). ಸಯ್ದರ್, ಸಯ್ದವರ್, ಸೈದರ್ (ಬಹುವ) = ೧. ಋಜುಸ್ವಭಾವದವರು; ಪ್ರಾಮಾಣಿಕರು : ಪುಸಿಯೆನೆ ಸಾಮಮಂ ನುಡಿದು ಭೇದಮನುಂಟೊಡತಾಗೆ ಮಾಡಿ . . . ಬಂಚಿಸಿ ಪೊಱಗಣ್ಣ ಸಯ್ದರೆನೆ ತಾವೊಳಗಂ ತವೆ ತೋಡಿ ತಿಂದು ರಕ್ಕಸಿಯರ ಕಂಡ ಕುಂಬಳದ ಮಾಟ್ಕವೊಲಾಗಿರೆ ಮಾಡದಿರ್ಪಿರೇ (ಪಂಪಭಾ. ೯-೪೮) ; "ಸೈದರೆಂದುಂ ಗಮ್ಮನೆ ನೇರಿದರೆನಲ್ಕೆ ಪಿರಿಯರ್" (ಕವಿಶಾಂ. ೧೫೪) ; ಆ ಪಾಂಡುನಂದನರುಂ ಸೈದರೆ ನಿನ್ನೊಳ್ (ಪಂಪಭಾ. ೧೩-೯). ೨. ಬ್ರಾಹ್ಮಣರು : "ಇಳೆಯ ಪಿರಿಯರ್ ನೇರಿದರ್ ದಿಮ್ಮಿದರ್ ಗನಹರುಜೆ ಸೈದರೆನಿಸಿಕೊಳ್ಳುಂ" (ಕಬ್ಬಿಕೃ. ೩೩). ೩. ಸುಮ್ಮನಿರುವವರು; ತಟಸ್ಥರು: ಅಯ್ಯೋ ಶಿವನೇ ಭವನೇ ಮೆಯ್ಯಱಿಯದೆ ಜನನಮರಣಝರಿಯೊಳು ಬಿದ್ದಂ ಸಯ್ದವರಂತಿರದೆ ತೆಗೆಯಯ್ಯಾ (ಶಂಕಕಂ. ೧೦-೩೮). ಸೈ ಮಾಡು = ಸರಿಮಾಡು; ತಿದ್ದು : ನೋಡಿಯುಚಿತಾಯುಚಿತಗಳ ಸೈಮಾಡುವನೆ ಶಾಸ್ತ್ರಜ್ಞ (ಬಿಜ್ಜಳ. ೭೨-೪೧). ಸೈಯಿಕ್ಕು = ಒಪ್ಪು; ಸರಿಯೆನ್ನು : ಕಾವ್ಯಸೃಷ್ಟಿಯ ಅದ್ಭುತಚಮತ್ಕಾರವು ಸತ್ಯವೆಂದು ಸೈಯಿಕ್ಕದಿರಲಾರದು (ಚಿತ್ರಸ. ೩೩ ಮುನ್ನುಡಿ). ಸೈಯೆನ್ನು = ಸಮರ್ಪಕವೆಂದು ಹೇಳು; ಸರಿಎನ್ನು : ಹೇಳಿದನೀ ಮಾತನೊಬ್ಬ ಕಂಡಕ್ಕರೆ ಸೈಯೆಂದರಾಗ ಬಸ್ಸಿನವರು (ಇಂಚಾಪ. ೧೯-೩೨).

[ದೇ. ॥ ತಮಿ. ಚೆಮ್ಮೈ, ಚೆವ್ವು, ಚೆವ್ವೈ; ಮಲ. ಚೆಮ್ಮು, ಚೆವ್ವ, ಚೆವ್ವು ; ತುಳು; ಸೈ, ಸಹಿ./ ಅರ.ಪಾರ. ಸಹೀಹ್; ಹಿಂ. ಸಹೀ ; ಮರಾ. ಸಈ]

ಸಯ್$_3$, ಸೈ$_3$ (ಅ). ೧. ನೇರವಾಗಿ ; ನೆಟ್ಟಗೆ : 'ಸಯ್ವರಿ' ಪರಾ. ೨. ಸರಿಯಾಗಿ; ತಕ್ಕುದಾಗಿ : 'ಸಯ್ಗಱೆ' ಪರಾ. ಸೈ$_3$: ೧. 'ಸೈನಡೆ', 'ಸೈನಿಮಿರು' ಪರಾ. ೨. 'ಸೈನೆಗಳ್' ಪರಾ. ೩. ಮೆಚ್ಚುಗೆಯನ್ನು ಸೂಚಿಸುವ ಒಂದು ಪದ : ಕಪೀ ಕುಣಿಯುತ್ತದೆ ಸೈ ಅನ್ನಿ, ಮೇಲೆ ಬೀಳುತ್ತದೆ ಛೆ ಅನ್ನಿ (ಹುಟ್ಟಸ. ೧೩೦).

ಸೈಯೆನಿಸಿಕೊಳ್ಳು = ಮೆಚ್ಚುಗೆಯನ್ನು ಪಡೆ ; ಹೊಗಳಿಸಿಕೊಳ್ಳು : ಪ್ರತಿಪಕ್ಷದವರು . . . ಊರವರಿಂದಲೂ ನೆರೆಹಳ್ಳಿಯವರಿಂದಲೂ ಸೈಯೆನಿಸಿಕೊಂಡರು (ಚಟ್ಟಸೂ. ೫).

ಸಯ$_1$, ಸೊಯ (ನಾ). ೧. ವಶ; ಅಧೀನ : ಸತ್ಯಸಂಬಂಧಸಯವಾದ ಭೃತ್ಯಾಚಾರವೆನಗಿಲ್ಲವಯ್ಯಾ (ಬಸವ. ೨೮೮) ; ನೆಳಲ ರೂಹಿಂಗೆ ಬಯಲು ಸಯವ (ಅವಚಂ. ೭೭-೩೩೭). ೨. ಯೋಗ್ಯ; ಅರ್ಹ : ಎನ್ನ ವಿವಾಹವ ಮಾಡಿದಿರಿ ಸಯವಪ್ಪ ಗಂಡಂಗೆ ಕೊಟ್ಟರಿ (ಮಹಾದೇ. ಬ. ೫೯-೧೪೮) ; ತನ್ನ ಪಾದಸ್ಪರುಶನಕೆ ಸಯವಾದ ಸಚರಾಚರರನೆಲ್ಲರ ಪಾವನವ ಮಾಡುತೆ (ಪ್ರಭುಲಿಂ. ೧೪-೭). ೩. ಐಕ್ಯ ; ಲೀನ : ಎಲ್ಲವು ನಿಮ್ಮಲ್ಲಿ ಸಯವಾದ ಬಳಿಕ ಗಜಭುಕ್ತಕಪಿತ್ಥನಂತಿರ್ದೆನಯ್ಯಾ (ಅಖಂಡೇ. ೩೩೩-೩೩). ೪. ಸ್ಥಿರವಾದುದು ; ಶಾಶ್ವತ : ಬಿಡಿ ದೇಹದಭಿಮಾನ ಪಿಡಿಯದಿರು ಸಯವೆಂದು (ವಿಸಾಪು. ೫೧-೧). ೫. ತನಗೆ ಸೇರಿದುದು; ಸ್ವಂತ : ಈ ಸಕಲದೊಳಗೆ ಒಂದು ಸಯವಿಲ್ಲದೆ ನಾವು ಹಿರಿಯರು ನಾವು ಲಿಂಗವಂತರೆಂಬರು (ಸರ್ವಜ. ೭೧-೩೯೧) ; ಬಯಲ ಮಾತಿಗೆ ಮತ್ತೊಬ್ಬನ ಪಿಂತೆ ಪೋದಳೆನೆ ಸತಿ ಸಯಮೆ [ಪಾಠಾಂ. ಶಾಶ್ವತಮೇ] (ಸನ್ನಬಾ. ೫-೪೩). ೬. ನಿಜವಾದುದು ; ಸತ್ಯ : ಸಯವಲ್ಲವಂತು ಸಂಶಯರೂಪ ಮನವೆಂದು ನಯವಿದರ್ ಪೇಳ್ವರ್ (ಮನೋವಿ. ೪-೫). ಸೊಯ : ೩. ಭವವಳ್ಳು ಬಸವನು ಸಂಗಮೇಶನೊಳೆಯ್ದಿ ಸೊ[ಪಾಠಾಂ.ಸ]ಯವಾದ (ಬಸಪು. ೬೧ ಸೂಚನೆ). 'ಸೊಯಂದಪ್ಪು' ಪರಾ. [< ಪ್ರಾ. ಸಯ./ ಸಂ. ಸ್ವಯಂ]

ಸಯ$_2$ (ನಾ). ಶ್ರೇಯಸ್ಸು : ಶ್ರೇಯ - ಸಯ (ಶಬ್ದಾನು. ೧೬೦ ಪ್ರಯೋ). [< ಸಂ. ಶ್ರೇಯಸ್]

ಸಯಂಬರ 'ಸೊಯಂಬರ' ನೋ.

ಸಯಂಬರಸಾಲೆ 'ಸೊಯಂಬರಸಾಲೆ' ನೋ.

ಸಯಂಬು (ನಾ). ಬ್ರಹ್ಮ; ವಿಧಾತ : ಸ್ವಯಂಭು - ಸಯಂಬು (ಶಮದ. ೨೮೧ ಪ್ರಯೋ). [< ಸಂ. ಸ್ವಯಂಭೂ]

ಸಯದಾನ, ಸಯಧಾನ, ಸಯಿದಾನ, ಸಯಿಧಾನ, ಸೈದಾನ್ಯ, ಸೈಧನ, ಸೈಧಾನ (ನಾ). [ವೀಶೈ] ಗುರು, ಲಿಂಗ, ಜಂಗಮರಿಗೆ ಅರ್ಪಿಸುವ ನೈವೇದ್ಯ; ಅಕ್ಕಿ, ಬೇಳೆ, ತುಪ್ಪ, ಬೆಲ್ಲ, ಸಕ್ಕರೆ, ಕಾಯಿ, ಸೊಪ್ಪು ಮುಂತಾದ ಹದಿನೆಂಟು ಬಗೆಯ ದ್ರವ್ಯಗಳನ್ನು ದಾನಮಾಡುವಿಕೆ : ಸಕಲಭುವನಾದಿ ಭುವನಂಗಳಿ ಸಯದಾನ (ಅವಚಂ. ೩೩-೩೭೪). **ಸಯಧಾನ** : ಎನ್ನಭಿಮಾನದ ಕರ್ತ್ಯ ನಿರಾಳದಲ್ಲಿ ನಿಂದ ಬಳಿಕ ಸಯಧಾನ ಸುಯಿಧಾನವಾಯಿತ್ಯಾ ಸಂಗಯ್ಯಾ (ಮಚಸಂ. ೫೦೯-೫೭). **ಸಯಿದಾನ** : ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು ವರ್ಮವನಱಿಯದ ಮಾಟ ಸಯದಾನದ ಕೇಡು (ಬಸವ. ೧೯೦). **ಸಯಿಧಾನ** : ಸಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರಯ್ಯಾ (ಅವಚಂ. ೨೯-೧೧೯): ಆರೋಗಣೆಯ ಸಯಿಧಾನಕ್ಕೆ ಸಮರ್ಪಿಸಿಕೊಟ್ಟಂಥ ಭೂಮಿಯ ಸಿಂಹಾಸನದ ವಿವರ (ಮೈಆರಿ. ೧೯೪೬. ೨೫-೪ : 1495). **ಸೈದಾನ್ಯ** : ಒದಗಿದ ಸೈದಾನಮೆ ಸಾಲ್ದುದಱೊಳ್ ಸದ್ಭಕ್ತಿ ಮುಖಮನಸಹಿತಂ ಸನ್ಮುದದಿಂ ಮಾಳ್ಪುದು ತತ್ಕಾಲದಲುದ್ಯಾಪನೆಯ ಸೋಮವಾರದ ವ್ರತಮಂ (ನನ್ನಚಾ. ೬-೨೮೯); ಏನ ಹೇಳುವೆ ವಕ್ಕಪದ ಸೈದಾನಮಂ ಶರಣರ ಮನೆಯಲ್ಕೆ ಮಾನದಿಂ ಮಿಗಿಲಾಗದಂದದಿ ನಿಚ್ಚ ತರುತಿಹನು (ಶಂಕದಾ. ೬-೧೯). **ಸೈಧನ** : ಭಾಳಾಕ್ಷ ಗಣಪರ್ವತೀಗ ಹೇರಿಸು ಹೇರಳ ಸೈಧನಗಳನು ಬೇಗ (ಕರಲೀ. ೫೧೬-೧). **ಸೈಧಾನ** : ಪ್ರಭುದೇವರು ಅಸಂಖ್ಯಾತಂಗೆ ಮಾಡಿದ ಸೈಧಾನವನು ಗುಹೇಶ್ವರ ಶರಣನಾರೋಗಿಸಿ ಕೊಟ್ಟಡೆ (ಏಂಗಿರಾ. ೪-೩೪ ವ). [?]

ಸಯಧಾನ 'ಸಯದಾನ' ನೋ.

ಸಯಸಂಭ್ರಮ (ನಾ). ಆತ್ಮಸಂತೋಷ : ಗಗನದ ಮೇಲೊಂದಭಿನವ ಗಿಳಿ ಹುಟ್ಟಿ ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು (ಅವಚಂ. ೫-೧೫೧). [ಸಯ + ಸಂಭ್ರಮ]

ಸಯಿ 'ಸಯ್' ನೋ.

ಸಯಿಗೊಟ್ಟ 'ಸೈಗೊಟ್ಟ' ನೋ.

ಸಯಿಗೋಲ್, ಸೈಗೋಲ್ (ನಾ). ಗುರಿತಪ್ಪದ ಬಾಣ ; ನೇರವಾದ ಬಾಣ. **ಸೈಗೋಲ್** : ಎಸುವರಾದಿತ್ಯರುಂ ಸೈಗೋಲ . . . ವಿದ್ದ ಸಹಿತ (ಎಕ. VIII. ಸೊರಬ. ೫೮೯-೬೨ ; 1201).

ಸಯಿಗೋಲಪಾರ್ಥ = ಒಂದು ಬಿರುದು : ಕಣ್ಣಂಬಿನಾತಯೆಸುವರಾದಿತ್ಯ ಸಯಿಗೋಲ ಪಾರ್ತ್ಥ ಹರಿಯರಸಂಗಂ (ಎಇ. XI. ಹೂಳ್ಕ. ೫೬-೭೧; 1220).

[ಸಯಿ (< ಸಯ್) + ಕೋಲ್]

ಸಯಿತ (ನಾ). ಕೂಡಿಕೊಂಡುದು ; ಸಹಿತವಾದುದು : ಅಷ್ಟಭೋಗ ತೇಜಸ್ಯಮ್ಮ ಸಯಿತವಾಗಿ . . . ಧಾರೆಯನೆರೆದು (ಶಾಸಾ. IX-ii. ೬೦೫-೭ : 1543). 'ಸೈತ' ಪರಾ.

[< ಸಂ. ಸಹಿತ]

ಸಯಿದಾನ 'ಸಯದಾನ' ನೋ.

ಸಯಿಧಾನ 'ಸಯದಾನ' ನೋ.

ಸಯಿಸು, ಸೈಸು (ಕ್ರಿ). ತಾಳು; ಸೈರಿಸು: ಕವಿ ಲೋಕದಿಂದಪೇಕ್ಷಿಪ ಕೊಳ್ಳ ಭೋಗಿಪಲ್ಪವುಮೆ ಲಾಭಂ ಜಸಂ ಪೂಜೆಯಾ ಪಗರಣದ ಪವಣ ವೆರ್ವೆಸರ್ಗಳಿಂ ಮೆರೆದವುದಿದಂ ಸಯಿಸಿ ತನಗೆ ತಾನಾತನೊಪ್ಪಿ . . . ತಣಿದು ನಲಿವಂ (ಸಂಪಪ. ೧೧-೨೬). **ಸೈಸು**: ಖಿಳರ ಬಾಧೆಗಳನು ಭರದಿ ಸೈಸಲಾರೆವಯ್ಯ (ಯಾಗಿಕ. ೨೪): ನಮ್ಮಿಂ ಮಂಡೆ ತುಂಬಿದ ಬಳಗವನು ತಾಂ ಕಂಡು ಸೈಸದ ಕಿಚ್ಚನಿಕ್ಕಿದಳಂದು ಪಾತಕಿನಿ (ರಾಮಾಸಂ. ೨-೨-೩೫): ಬಳಲಿದನೆನಿತೊ ಸೈಸೆನಿನ್ನು (ಮೋಗೀ. ೨೭-೨೦). [< ಸಹಿಸು]

ಸಯುಕ್ತಿಕ (ನಾ). ಸರಿಯಾದುದು ; ಸೂಕ್ತವಾದುದು : ಸದ್ಗುರುರಹಸ್ಯಕಾರನ ವರ್ಚಸ್ಸು ಕರಿಬಸವನ ಮೇಲೆ ಬಿದ್ದಿದ ಎಂದು ಹೇಳುವುದು ಸಯುಕ್ತಿಕವಾಗುವುದು (ಕಸಂಸ್ಕೃ. ೧೭೩). [ಸಂ.]

ಸಯೋಗಿಕೇವಲಿ (ನಾ). [ಜೈನ] ಕೇವಲಜ್ಞಾನದಿಂದ ಕೂಡಿ, ಹದಿಮೂರನೆಯ ಗುಣಸ್ಥಾನವನ್ನು ಮುಟ್ಟಿದವನು : ಸಯೋಗಿಕೇವಲಿಗಳ್ ಸಂಖ್ಯೇಯಪ್ರಮಾಣಂ ಅಯೋಗಿಕೇವಲಿಗಳ್ ಸಾಮಾನ್ಯೋಕ್ತಿಪ್ರಮಾಣಂ (ಶತ್ರ್ಯಪ್ರ. ೨೫) : ಸಕಲವಿಮಲಕೇವಲ ಜ್ಞಾನದರ್ಶನಂಗಳಿಂ . . . ಭುವನತ್ರಯಸ್ವಾಮಿಯಾಗಿರ್ಪ ಪರಮಜಿನೇಶ್ವರಂ ಪದಿಮೂಱನೆಯ ಗುಣಸ್ಥಾನವರ್ತಿ ಸಯೋಗಿಕೇವಲಿ (ಶ್ರಾವಕಾ. ೭೦-೩). 'ಅಯೋಗಿಕೇವಲಿ' ಪರಾ. [ಸಂ. ಸಯೋಗಿಕೇವಲಿನ್]

ಸಯ್ಯ, ಸೈಕ (ನಾ). ೧. ನೇರವಾದುದು ; ಋಜುವಾದುದು : 'ಸಯ್ಯನೆ' ಪರಾ. **ಸೈಕ** : ೨. ಹದ ; ಹಾಳತೆ : ಹಿಟ್ಟನ್ನು ಸೈಕವಾಗಿ ಮಾಡಿ ತೊಳಿಸುವ ಅಭ್ಯಾಸವೂ . . . ಶ್ರಮವಾಗಿ ಇವಳಿಗೆ ಕಾಣಲಿಲ್ಲ (ಪಚಮಾ. ೧೭).

[ಸಯ್ + - ಕ ./ತೆಲು. ಸಯಿಕ, ಸೈಕ = ಸೂಕ್ಷ್ಮತ್ವ]

ಸಯ್ಯನೆ, ಸೈಕನೆ (ಅ). ನೆಟ್ಟಗೆ ; ನೇರವಾಗಿ : ಕೋಡಿಯಾಲಿ ಬೆಳಗ ಸಯ್ಯನೆ ಬನ್ನ ಪೊಲಪುಣುಸೆ ಎವಕಿಲ ಅನ್ತೆ ಪೋಯಿವಿ . . . ಅನ್ತೆ ಸಯ್ಯನೆ ಪೋಗಿ (ಎಕ. XII. ಗುಬ್ಬಿ. ೬೧-೯೦ : 812). **ಸೈಕನೆ**: ಬಾಗದೆ ತೂಗದೋರೆಪುಗದೊಯ್ಯನೆ ಸೈಕನೆ ಕುಳ್ಳಿತಕ್ಕೆ ನಿಂದಾಗಲೆ ದೇಹ ಮೂಪೆಯನುಪಾಯದೊಳಾಂತು (ಅಕಶ. ೮೩).

[ಸಯ್ಯ + - ಅನೆ]

ಸಯ್ಯಱಿ, ಸೈಗರೆ, ಸೈಗಱಿ (ಕ್ರಿ). ೧. ಸತತವಾಗಿ ಸುರಿ ; ಎಡೆಬಿಡದೆ ವರ್ಷಿಸು : ಸಭದೊಳಸಹಾಯಶೂರನ ಮಾರ್ಗಮಂ ಕಟ್ಟಿ . . . ಸಯ್ಯ [ಪಾಠಾಂ. ಸೈಗ] ಜೆದರಂಬಿನ ಮಳೆಯನು (ಚೆಮಭಾ. ೪-೨೪). ೨. ಎಡೆಬಿಡದೆ ಸೂಸು, – ಹೊಮ್ಮಿಸು : ಕಯ್ಗೆಯ್ದ ಬನದುರ್ಗದೊಳಗೊಮ್ಮೆಯುಂ ಸೊಗಸ ಸಯ್ಯಱಿವ ತಂಬೆಲರ ಮಾಂದಳಿರ . . . ಬನ್ನಿಸುತೆ ಚದುರರೆಯ್ತರ ಪೆಂಡಿರೆಳ್ತಂದರು (ಉದ್ಭಟೇ. ೫-೨೩). **ಸೈಗರೆ** : ೨. ಇದೆ ಬೆತೆ ದಳ್ಳುರಿಯನು ತಮಿಸುವ ಸರಿ ಎನ್ನುತಲೆದೆ ಸೈಗರೆಯುವುದು! (ಕವಿಕಾ. ೪೧-೬). **ಸೈಗಱಿ**: ೧. ಅರಲಂದಿನ ಸೋನೆ ಸುತ್ತಲುಂ ಭೋರೆನುತೊರ್ಮೆ ಸೈಗಱಿಯೆ (ಕಬ್ಬಕಾ. ೨೭೬) : ಸೈಗಱಿವುದ್ಕೆ ಕಾರುಣ್ಯವರುಷವನೆನ್ನ ಮೇಲೆ (ಕುವ್ಯಾಭೀ. ೩-೮೩).

[ಸಯ್ + ಕಱಿ]

ಸಯ್ಸೆ, ಸೈಗೆ (ನಾ). ಸೂಚನೆ ; ಸಂಕೇತ ; ಸನ್ನೆ : 'ಕಣ್ಸಯ್ಸೆ' ಪರಾ. **ಸೈಗೆ** : ದಿಟ್ಟಿಸಲು ಸೇವಾತರುಣಿಯರು ಸೈಗೆಯನು ತಿಳಿದಚ್ಚರಿಕೆಯಿಂದುರುವಜ್ರಪಾದುಕೆಗಳನು ಮುಂದಿಡಲು (ಆಸಂಂ. ೬-೭-೬) ; ಮೊಗದ ಸೈಗೆಯಿಂದ ಬೆದರಿಸಿ (ಸೌಗಂಧಿ. ೧೬೭-೩).

[< ಸಂ. ಸಂಜ್ಞಾ]

ಸಯ್ಸೆಡಪು, ಸಯ್ಸೆಡಹು, ಸೈಗೆಡಪು, ಸೈಗೆಡಹು (ಕ್ರಿ). ಪೂರ್ತಿಯಾಗಿ ಕೆಳಕ್ಕೆ ಬೀಳಿಸು; ಕೆಳಗುರುಳಿಸು (ಕ). **ಸಯ್ಸೆಡಹು** : (ಕ). **ಸೈಗೆಡಪು** : ಎಳವೆಣ್ಗಳಿಸೆದಿರ್ದರ್ಗೆಗಣೆಗಳಿಸುಗೆಗಳುಕದ ಯೋಗಿನಿಕರಮಂ ಸೈಗೆಡಪಲೆಂದಂಗಜಂ ಪೂಜೆಗೈವ ಸಮ್ಮೋಹನಾಸ್ತ್ರಂಗಳೆನಲು (ಚೆಮಭಾ. ೬-೩೨). **ಸೈಗೆಡಹು** : ಕರ್ಣಶರ ಸೈಗೆಡಹಿದವು ಕಿಂಪುರುಷಗುಹ್ಯಕಯಕ್ಷರಾಕ್ಷಸರ (ಕುವ್ಯಾಅ. ೧೯-೨೨).

[ಸಯ್ + ಕೆಡಪು]

ಸಯ್ಸೆಡಹು 'ಸಯ್ಸೆಡಪು' ನೋ.

ಸಯ್ಸೆಡೆ, ಸೈಗೆಡೆ (ಕ್ರಿ). (ಭಕ್ತಿ, ಗೌರವಪೂರ್ವಕವಾಗಿ) ಅಡ್ಡಬೀಳು ; ನಮಸ್ಕರಿಸು : ಇನಿತು ಬೇಗಂ ತಡವರೇಯೆಂದು ಸಯ್ಸೆಡದು . . . ಕೂಗಿಡುವ ನಂಬಿಯಂ ಸಂತವಿಡುತಿರಲು (ಮಹಿಸ.ದೇ. ೭೫-೧೧). **ಸೈಗೆಡೆ** : ಅಭವನಂಘ್ರಿಯಲಿ ಸೈಗೆಡೆದನು (ಪಚಕಾ. ೧೪-೫) ; ಅಡಿಗಡಿಗೆ ತಾನೆಱಗುವಂ ಸೈಗೆಡೆದು ಗದ್ದದವೆರಸಿ ಯೇಳ್ವನು (ಬಸಪು. ೪೭-೪೬) : ಉರುತರದ ಭಕ್ತಿಯಲಂದು ಸೈಗೆಡೆದಿರ್ದನಾ ಪಾರ್ಥ (ಕುವ್ಯಾಅ. ೬-೯೩). [ಸಯ್ + ಕೆಡೆ]

ಸಯ್ಸೋಡು, ಸೈಗೋಡು (ನಾ). ನೇರವಾದ ಕೊಂಬು ; ನೆಟ್ಟಗಿರುವ ಕೋಡು : ಕಾಬ್ರುಡುಗಳಿಂ ಸಮಱೆದಡವಿಯಡಿಯೆತ್ತಿದಂತೆಯುಂ ಸಯ್ಸೋಡುಗಳಿಂ ಲೋಯಿಸರದ ಕಾಡಂ ಕಾಲೆತ್ತಿದಂತೆಯುಂ . . . ಬರ್ಪ ಗೋಕುಲಮಂ ಮನಂಗೊಂಡು (ಲೀಲಾವ. ೫-೮೫ ವ). **ಸೈಗೋಡು** : ಒಂದೀಂದ ಪಸು ತನ್ನುನಿಪತಿಯನಿಱೆವುದುಮದಱ ಬಸಿದು ಪೊಸಯಿಸಿದನ್ನವಪ್ಪ ಸೈಗೋಡುಗಳುರ್ಚಿ (ಶಾಂತಿಪು. ೭-೫೯ ವ). [ಸಯ್ + ಕೋಡು]

ಸಯ್ತನೆ, ಸೈತನೆ (ಅ). ನೇರವಾಗಿ ; ನೆಟ್ಟನೆ : ಬರೆದೆಯ್ದಱ ಲಕ್ಷಮನಾದರದಿಂ ಗುರುಲಘುವಿಭೇದಮಂ ಭಾವಿಸು ನೀಂ ಗುರು ಮುಂತೆ ಕೊಂಕಿ ತೋಱುವ ಬರೆ ಪೆಂತಣ ಸಯ್ತ [ಪಾಠಾಂ. ಸೈತ] ನಪ್ಪ ಬರೆ ಲಘು (ಛಂದೋಂಬು. ೧-೩೩). **ಸೈತನೆ** : ಸೈತನೆ ಚೆಂಬೊನ್ನ ರಥಂ ಜವಂ ಮಿಗುವಿನಂ ಪೋಗುತ್ತಿರಲ್ (ನಳಚಂ. ೬೮೮). [ಸಯ್ತು + - ಅನೆ]

ಸಯ್ತಿಡು, ಸೈತಿಡು (ಕ್ರಿ). ೧. ಓರಣವಾಗಿ ಇರಿಸು ; ಒಪ್ಪವಾಗಿ ಇಡು : ಅಡಕಿಲ ಮಡಕೆಗಳಂ ಸಯ್ತಿಡಲಱಿವುವೆ ನಾಯ್ಗಳೊಡೆವುವು (ಧರ್ಮಾಮೃ. ೧-೪೮) ; ಪೀನಪಯೋಧರೆಯರ್ ಶೈಳತನೂಜೆಗೆ ವರರತ್ನದ ದಂಡೆದೊಂಡಿಲಂ ಸಯ್ತಿಟ್ಟರ್ (ಗಿರಿಕ. ೧೦-೪೪). ೨. ಸಮಾಧಾನಗೊಳಿಸು; ಸಂತೈಸು : ಕಾಯಕವ ಚರಿಸುತ್ತ ಮಾನಸವ ಸಯ್ತಿಡುತ . . . ಆಯುವನು ಸಾಗಿಸೆಲೊ (ಮಂಚಕ. ೭೩೬). **ಸೈತಿಡು** : ೧. ಅಂತು ಸಂಕ್ರಂದನಂ . . . ಸ್ವಕೀಯ ಪಾಣಿಪಲ್ಲವಂಗಳಿನೆತ್ತಿ ನೆತ್ತಿಯೊಳ್ ಸೈತಿಟ್ಟು ಕೊಂಡು (ವರ್ಧಮಾ. ೧೨-೧೧ ವ) ; ಪರಸ್ಮಲದ ಲಿಂಗಮಂ ಕರಸ್ಮಲದೊಳು ಸೈತಿಟ್ಟು (ಶೂನ್ಯಸಂ. ೨೨-೧೨). ೨. ಕಂಪಿಸುವ ಭಕ್ತನಂ ಸೈತಿಡುತೆ (ಸೇದಿರ. ದೇ. ೬೫-೧); ಅನುವಱಿತು ನಾಮರ್ದೆಯ ಸೈತಿಟ್ಟೊಡಕ್ಕುಂ (ಬಡ್ಡಪ್ರ. ೨೧-೪೩೫). ೩. ಅಂಕೆಯಲ್ಲಿಡು; ನಿಗ್ರಹಿಸು: ಮನಸಂ ಸೈತಿಟ್ಟು ಬಾಟ್ಪೂಸೆಯಿಂ ಬಂದಂಬಿಟ್ಟು ವಿಮೋಹಮಂ ಬಿಸುಟು (ಧರ್ಮಾಮೃ. ೪-೮೨); ನಿದ್ರೆತಿಳಿದೆದ್ದು ಸಾಲ್ಗೊಂಡ ಪುಳಕಂಗಳಂ ಸಂತೈಸಿಕೊಂಡಾನಂದಾಶ್ರುಗಳಂ ಮುಂದುಗೊಳಿಸಿ ಸಂತಸಮಂ ಸೈತಿಟ್ಟು ಪರಿಕಿಸಿ ನೋಡಿ (ಬಸರ. ೪-೫೯). [ಸಯ್ತ್ + ಇಡು$_1$]

ಸಯ್ತಿರ್, ಸೈತಿರ್, ಸೈತಿರು (ಕ್ರಿ). ೧. ಸುಮ್ಮನಿರು ; ಮೌನವಾಗಿರು : (ಕ). ೨. ನೆಮ್ಮದಿಯಿಂದಿರು; ಸಮಾಧಾನವಾಗಿರು : ನರರರೆಬರ್ ವೈರಾಗ್ಯಂ ದೊರೆಕೊಂಡೊಡೆ ತೊಱೆವೆವೆಂಬರನ್ನೆವರಂ ಸಯ್ತಿರಲೀಯದಂತಕಂ ಗೋಣ್ಮುರಿಗೊಂಡೆಟೆದೊಯ್ದೊಡಡ್ಡಬರ್ಪರುವೊಳರೆ (ಅಜಿಪು. ೨-೮೫) ; ಇನನೆನ್ನಾಸೆಯನೊಲ್ಲದೀಗಳ್ . . . ಎನ್ನ ಪಕ್ಕದೊಳಗಿರ್ದುಂ ಸಯ್ತಿರಂ (ಪುಷ್ಪಪು. ೮-೯೯). **ಸೈತಿರ್** : ೧. ಆ ದುಶ್ಶಾಸನೋರಸ್ಕಳೋಷ್ಣಸೃತಾಸ್ಯಗ್ಧಲಪಾನಮಂ ಬಯಸಿ ಬಾಯ್ ತೇರೈಸೆ ಸೈತಿರ್ಪೆ[ಪಾಶಾಂ. ರಿಪ್ಪೆ]ನೇ (ಪಂಪಭಾ. ೭-೫೮) ; ನೀಂ ಪುರಮಂ ಬೇಗಂ ಪುಗಲ್ ಪೋದೊಡೆ ತಲೆ ಪೊಱೆಯೇ ನಿನ್ನ ಮೆಯ್ಗಕ್ಕಟಾ ಸೈತಿರು ನೀನಾರ್ಗೆ (ಚಂದ್ರಪ್ರ. ೫-೧೦೭); ಬಂದೊಡೆ ನೋಡೆ ಬಾರದೊಡೆ ದೂದವಿಯಟ್ಟುವೆ . . . ಸೈತಿರೆ ಸುರ್ಕಿ ಸುಯ್ಯೆ (ರಾಜಶೇ. ೧೧-೧೨೫). ೨. ಪರಮಾಚಾರ್ಯರವೋಲ್ ಸೈತಿರಲಱಿಯರ್ ಕನ್ನಡಕ್ಕೆ ನಾಡವರೋಜರ್ (ಕವಿರಾ. ೧-೪೨) ; ಪುರಜನಮುಮಾಪ್ತಜನಮುಂ . . . ಅಗಲದೊಂದೆಡೆಯೊಳ್ ಸೈತಿರಲಕ್ಕುಂ (ಪಂರಾಮಾ. ೧೨-೬೨) ; ತಪದುಬ್ಬೆಗದುದ್‌ಭ್ರಮೆ ನೆತ್ತಿವತ್ತೆ ಸೈತಿರದೆ ಮರುಳ್ತನಂದಳೆದಿದಿರ್ಚಿದೆಂ (ಶಬಕಂ. ೪-೧೧೧). **ಸೈತಿರು** : ೧. ಸೈತಿರು ಕಿವಿಗಳ್ಗೆ ಕರ್ಣಪೂರಮನಿಡುವೆಂ (ಶಮದ. ೧೧೩ ಪ್ರಯೋ) ; ಕಿನ್ನರಯ್ಯನು ಭಾಳನೇತ್ರಪ್ರತಿಮನಾತನು ಬಾಲಕನೆ ಸೈತಿರ್ದವನನಂತೆಯ್ದು ಕೊಲುವುದಕ್ (ಬಸಪು. ೨೮-೩೫). [ಸಯ್ತ್ + ಇರ್$_1$]

ಸಯ್ತಿರಿಸು, ಸೈತಿರಿಸು (ಕ್ರಿ). ೧. ಸಂತೋಷಪಡಿಸು ; ಹರ್ಷಗೊಳಿಸು : ಬರಿಸಿ ಕ್ಷಿತಿಪತಿಯಂ ಸಯ್ತಿರಿಸಿ ಪ್ರಿಯಕುಶಲವಾರ್ತೆಯಂ ಬೆಸಗೊಂಡು (ಕವಿರಾ. ೨-೭). ೨. ಸಂತೈಸು ; ಸಮಾಧಾನಗೊಳಿಸು : ಅವರ ಸಯ್ತಿರಿಸೆ ದೊಡ್ಡನೇ ಮಾತಾಡೆ ಸತ್ತು ಬದುಕಿದರವರ್ ಮಗನಿರವ ನೋಡಿ (ಕಾಲೂರ. ೧೦೩-೨೦೮). **ಸೈತಿರಿಸು** : ೧. ಸಂದ ಪನ್ನಿಚ್ಚಾಸಿರೊಡೆಯರಂ ಸೈತಿರಿಸಿ ನಡುವೆ ಸಂಗಮದೇವರರ್ಚನೆಗೆ ತಾನಿರ್ದು (ಬಸರ. ೯-೧೮೮). ೩. ನೇರ್ಪಡಿಸು; ತಿದ್ದು : ಕರುಳ್ಗಳಂ ಸರಿಸು ಸ್ವೇದಮನೊರಸು ಹಾರಮಂ ಸೈತಿರಿಸು (ಚಿಬಪು. ೧೦-೩೦). ೪. ಒಪ್ಪವಾಗಿಡು ; ಓರಣವಾಗಿಡು : ಸಂಪಗೆಯ ಕುಸುಮಮಂ ತಂದು ಸೈತಿರಿಸೆಂಬ ಕಂಪುಳ್ಳ ಸೇವಂತಿಯಂ ತಂದು ತುಱುಗೆಂಬ (ಬಸರ. ೭-೩೯) ; ಬೂದಿಯನೊಂದುಪಾತ್ರೆಯೊಳು ಸೈತಿರಿಸಿ (ವೀಶೃಪು. ೩-೧೧-೨೦) ; ಕಾಟಕೋಟನೆನಿಪ್ಪೊರ್ವಂ ಗೊಲ್ಲನೇಳ್ತಂದು ಸಾದರಮೆಂದಾಡಿನ ಪಿಳ್ಳೆಯಂ ಮಿಸುಪ ಲಿಂಗಂ ತಾನಿದಿಂತೆಂದು ಸೈತಿರಿಸುತ್ತಂ . . . ಕೂರ್ತೊಪ್ಪುತಿರ್ಪನ್ನೆಗಂ (ವೃಷವಿ. ೬-೧೫). ೫. ನಿಗ್ರಹಿಸು; ಅಂಕೆಗೆ ತರು : ವರಮೂರ್ತಿಯಂ ಕಂಡು ಹಿಗ್ಗಿ ಹಾರೈಸಿ ಸೈತಿರಿಸಲಱಿಯದೆ ಕುಣಿದು ಕುಕಿಲಿಱಿದು ಕುಂಬಿಕ್ಕಿ ಚರಣದಲಿ ಬಿದ್ದ ಬಾಲಕನ ತೊದಳಂತುವಂ . . . ಕಂಡು ಬೆಱಗಾದರಾ ಪುಣ್ಯದಂಪತಿಗಳು (ಸಿದ್ಧರಾ. ೨-೭೦). ೬. ವ್ಯವಸ್ಥೆಗೊಳಿಸು ; ಅಣಿಮಾಡು : ಬಲವ ಸೈತಿರಿಸಿದನು ತನ್ನಯ ಕೆಲಬಲದಲಿಹ ಮದನ ಸಾತ್ಯಕಿ ಹಲನ . . . ಜಲರುಹಾಕ್ಷನು ನಿಲಿಸಿ (ಕೋಗಯ. ೨೨-೩). [ಸಯ್ತಿರ್ + - ಇಸ್ಸು$_3$]

ಸಯ್ತ್$_1$, ಸಯ್ತೆ, ಸೈತು$_1$ (ನಾ). ೧. ವಕ್ರತೆಯಿಲ್ಲದುದು ; ನೇರವಾದುದು : ಒರ್ವಂ ಕುಂಟವೆರಲಾತಂ ತನ್ನ ಬೆರಲುಂ ಸಯ್ತಾದೊಡೆ ಕೃತಾಂಜಲಿಯಾದಂ (ಚಾವುಂಪು. ೭೭). ೨. ದಿಟ ; ನಿಜ ; ಸತ್ಯ : ಸಯ್ತಾಯ್ತಜ್ಜನ ಮಾತು (ಪಂಪಭಾ. ೧೧-೫೨). ೩. ಸುಲಭ ; ಸರಾಗ : ನಿಲ್ತೋಳಂ ಬರ್ಪುದು ಸಯ್ತಲ್ಪೂರುಂ ದೂರಮೋಡಲಾಱೆರ್ (ಕವಿರಾ. ೧-೬೩) ; ಬಲ್ಲಾಳ್ಗೆ ಬಟ್ಟೆ ಸಯ್ತೆಂದೆಲ್ಲಿಲ್ಲದಿತ ಮತಂಗಳಂ ಪುಸಿವುದಿದಂ ಸಲ್ಲೆಮ್ಮೊಳೆಂದು ಬಾರಿಸಬಲ್ಲರೆ ಪೇಱ್ ಜೈನದ ವರ್ಗಳಲ್ಲದದೆಂತುಂ (ಸಮಪ. ೧೧-೧೫೩). ೪. ಲೇಸು ; ಒಳ್ಳಿತು : ಸೈತಾಗಿ ಒಪ್ಪುವ ಕುಮಾರಂಗೆ ಮಂಗಳಾರತಿಯೆತ್ತಿ (ನಂದಿರ. ೩-೪೦) ; ಸಯ್ತಾಗಲೆಡೆಮಾಡಿ ಬೋನಂಗಳಂ (ತಿರುರ. ದೇ. ೭-೧೩). ೫. ಸಮಾಧಾನ ; ತಾಳ್ಮೆ : 'ಸಯ್ತಿಡು' ಪರಾ. ಸಯ್ತ್ : ೫. 'ಸಯ್ತೆಗಿಡು' ಪರಾ. ಸೈತು$_1$: ೧. "ಸೈತನೆ ನೇರ್ಪುಂ" (ಕವಿಕಂ. ೧೭೬). ೨. ವಿಲಸತ್ ಸ್ವಪ್ನಾದಿಗಳ್ ಸೈತಕ್ಕು (ಕಮಾಮಾ. ೬-೨೦). ೬. ಸರಿ ; ಸಮರ್ಪಕ : ಆ ಕ್ರಿಯೆ ಸಾರ್ದಿರೆ ಪತ್ರಿ ಮುಂದೆ ಸೈತ[ಪಾಶಾಂ. ಸಯ್ತ್]ಲ್ಲಂ (ಕವಿರಾ. ೧-೧೧೭); ನರೇಂದ್ರನ ಚಿತ್ತವೃತ್ತಿಗದು ಸೈತಲ್ಲ (ಕುಸುಮಾ. ೮-೧೦೩

ಸಯ್ತುಮಾಡು, ಸೈತುಮಾಡು = ಸರಿಪಡಿಸು; ನೇರ್ಪುಗೊಳಿಸು: ಚಿನ್ನಪೂಗಳನವಯವದೊಳೆ ಸಯ್ತುಮಾಡುವ ಕೆಯ್ತುಮುಮಂ (ಆದಿಪು. ೪-೯ ವ) ; ಸದಿಲ್ಲುಡುಗೆಯ ಸೈತುಮಾಡಿ (ಚಿಬಪು. ೯-೧೬). [< ಸಯ್ತ್$_1$]

ಸಯ್ತ್$_2$, ಸೈತ್ತು$_2$ (ಅ). ೧. ನೇರವಾಗಿ ; ಸೀದಾ ; ನೆಟ್ಟಗೆ : ತದ್ಗಿರೀಂದ್ರಮಧ್ಯಮ ಕೂಟದಿಂದಂ ಸಯ್ತು ತೆಂಕಮೊಗದೆ ಬಂದು (ಆದಿಪು. ೧೩-೬೯ ವ) ; ಕಪ್ಪೆಯಿಂ ಸಯ್ತು ಬಡಗಲಪ್ಪೆಯನ ಕಟ್ಟೆ (ಮೃಅರಿ. ೧೯೩೫, ೪೯-೯೮ ; 10ನೆಯ ಶತ); ಮನಂ ಭ್ರಮಧ್ಯದೊಳ್ ಸಯ್ತು ತಳ್ತರೆ (ಪುಷ್ಪಪು. ೧೪-೩೧). ೨. ಸರಿಯಾಗಿ; ಸಮರ್ಪಕವಾಗಿ: ಅರ್ಧಗಪ್ಪಡಮಂ ಬಿಸುಟ್ಟು ಪಯಂ ಸಯ್ತುಟ್ಟುಕೊಂಡಿರಿಂ (ಷಡ್ಗಾರಾ. ೧೩-೧೬) ; ಪುರುಷಸ್ತ್ರೀವಾಚಕಮಾಗಿರೆಯುಂ ಮತ್ತಲ್ಲಿ ಸರ್ವನಾಮಂ ಸಯ್ತೊಂದಿರೆಯುಮಿರರ್ ದಿರ್ ಎರ್ ಕಳ್ ದೊರೆಕೊಂಡನುಸರಿಸುಗುಂ (ಕಾವ್ಯಾವ. ೯೨). ೩. ಚೆನ್ನಾಗಿ; ಲೇಸಾಗಿ : ಮಾತಿನೊಳುದಾರತೆವೆತ್ತಿರೆ ಸಯ್ತು ಪೇಟ್ಟುದಿಂಪೆನಿಸೆ ಕವೀಶ್ವರಂ (ಪುಷ್ಪಪು. ೧-೫೯) ; ಕೆಯ್ತುಂಬಿದಪರಂಜಿಪೂಗಳನಡಿಗಳ್ಗೆ ಸಯ್ತು ಪುಷ್ಪಾಂಜಲಿಮಾಡಿ (ಭರಚಿ. ೬೭-೪೨). ೪. ಸುಮ್ಮನೆ ; ಮೌನವಾಗಿ : ಈ ಪೊಸಪೊಟ್ಟಱೊಳಾದ ಕಿರ್ಚು ಕೌರವರ್ಗಿದು ನಾಡೆಯುಂ ತಿಣುಕನಾಗಿಸದೇಗಳ ಸಯ್ತು ಪೋಕುಮೇ (ಪಂಪಭಾ. ೨-೮೭); ಪೊಱಮಾಱದೆ ಸಯ್ತೆ ಪೋಕುಮಾ ಪರಸೈನ್ಯಂ (ಶಮದ. ೨೪೩ ಪ್ರಯೋ). **ಸೈತ್ತು** : ೧. ಉರಗನ ಪುತ್ತುವರಂ ಸೈತಿರೆ ಸಾಲಿಟ್ಟಂತೆ ಮಾಂಸಖಂಡಮನಿಡೆ ಮುಂಗುರಿಗಳ್ . . . ಉರಗನುಮಂ ತಿಂಗುಂ (ಪಂಚತಂ. ಅ. ೧೨೮-೨೪೯) ; ಆ ವೀರಾಂಬಿಕೆಗಿಂದ್ರನ ದೇವಿಯುರ್ಮೆಯೆಱಕದಿಂದಮೆಱಗಿದಳಂತರ್ಭಾವಿತನಿಧಿಗವನೀವಧುಗಾ ವಿಸ್ಮೃತ ದೀಪವರ್ತಿ ಸೈತೆಱಗುವವೋಲ್ (ವರ್ಧಮಾ. ೧೧-೬೧). ೨. ಉರ್ವರೇಶನಂ ಮೆಲ್ಲನೆ ಸೈತು ಕುಳ್ಳಿರಿಸಿ (ದಶಕು. ೬-೧೦೭); ನೃಪನಂ ಭೋಂಕನೆ ಕಂಡು ಕಾಂತೆ ಕುಚದೊಳ್ ಸಂವ್ಯಾನಮಂ ಸೈತು ಸಾರ್ಚಿ (ನಳಚಂ. ೨೭೩). ೩. ಸೋರ್ಮುಡಿಯಂ ಸೈತೊತ್ತುತುಂ . . . ಮೆಲ್ಲಡಿಗೆಂಪಿಂ ಧಾತ್ರಿಯಂ ಚಿತ್ರಿಸುತುಮಸತಿಯರ್ ಪೋದರ್ (ಕುಸುಮಾ. ೪-೩೪); ಎಲ್ಲಾ ಕಾರ್ಯವಂ ಸೈತೆಸಗಿದನವಂ (ದಶಕು. ೮-೨೪೦). ೪. ಜಾನಪದಾಂಗನಾಜನದ ಗಾಡಿಗೆ ಸೋಲ್ತಳಿನೇ ನಿನಾದಮಂ ಜಾನಿಸಿ ಕೇಳ್ದು . . . ಪಥಿಕರ್ ಮಱೆದಿಲ್ಲೆನಲ್ ಪರಿಮ್ಲಾನತೆ ಸೈತು ಬಟ್ಟೆನಡೆಯಲ್ಪಡೆಯರ್ ವಿಷಯಾಂತರಾಳದೊಳ್ (ಮಲ್ಲಿಪು. ೨-೨೮); ರಾಗರಸ ಮಿಗಲು ಸಭೆ ತಲೆದೂಗಲು ತಾ ನುಡಿಯಬಲ್ಲೊಡದ ನುಡಿಯಿನಿಸೊಂದಾಗದಿರೆ ಸೈತು ಮಾಗಿಯ ಕೋಗಿಲೆಯಂತಿಹುದು ನೋಡು (ನೀತಿಸಾ. ೧೨೫). [< ಸಯ್ತ್$_1$]

ಸಯ್ತುನುಡಿ (ನಾ). ನೇರವಾದ ಮಾತು ; ಸಹಜವಾದ ಮಾತು : ಸಯ್ತುನುಡಿಯು ವಕ್ರವಾದರೆ, ಕೊಂಕಾದರೆ ಸೌಂದರ್ಯ ಹೆಚ್ಚಾಗುವುದು (ಸಾಹಿವಿ. ೭೮).

[ಸಯ್ತು + ನುಡಿ$_2$]

ಸಯ್ತುವರಿಯಿಸು (ಕ್ರಿ). ನೇರವಾಗಿ ಓಡಿಸು, — ಹರಿಯಿಸು : ರಥಮಂ ನಳನ ವರೂಥಕ್ಕೆ ಸಯ್ತು [ಪಾಶಾಂ. ಸೈತು] ವರಿಯಿಸಿ (ಪಂರಾಮಾ. ೧೩-೮೫).

[ಸಯ್ತ್$_2$ + ಪರಿಯಿಸು]

ಸಯ್ತೆ 'ಸಯ್ತು$_1$' ನೋ.

ಸಯ್ತೆಗಿಡು (ಕ್ರಿ). ಸಮಾಧಾನವಿಲ್ಲದಿರು; ತಾಳ್ಮೆಗೆಡು: ಅವರ ಕುಟಲೋ ಪಾಯಗಳ ವಕ್ರನೀತಿಯ ಅವಸರವು, ಸಯ್ತೆಗಿಡದ ತಡವರಿಯದ ಸನ್ದರ್ಭೋಪಾಸನವು . . . ಓರೊರ್ಮೆ ನನಗೇ ಅಳರನುಂಟುಮಾಡಿ ಕಲುಂಬಿತು (ಚಟ್ಟಿಅ. ೨೧೨-೨೧). [ಸಯ್ತೆ (< ಸಯ್ತು$_1$) + ಕಿಡು (< ಕೆಡು$_1$)]

ಸಯ್ತೆಣಿಸು (ಕ್ರಿ). ಚೆನ್ನಾಗಿ ಗಮನಿಸು : ಗುಣಜಾತ್ಯಾದಿಗಳೊಳಗನುಗುಣಮಾಗಿರೆ ಪೇಲದವಱ ವಿಕಳತೆಯಂ ಸಯ್ತೆಣಿಸಿ ವಿಶೇಷಮನಱಿಪುವ ಗಣನೆ ವಿಶೇಷಾನುಭಾವ ಸದಳಂಕಾರಂ (ಕವಿರಾ. ೩-೧೨೦). [ಸಯ್ತು$_2$ + ಎಣಿಸು]

ಸಯ್ದಂ$_1$ 'ಸಯ್$_2$' ಪರಾ.

ಸಯ್ದಂ$_2$ (ಅ). ೧. ಸರಿಯಾಗಿ : ಸಯ್ದಮೆ ಮೂವತ್ತಿರ್ಪತ್ತಯ್ದುಂ ಪದಿನಯ್ದು ಪತ್ತು ಮೂಱಲ್ಲಿಂತ್ತಯ್ದೂನಮೊಂದು ಲಕ್ಕೆಯಮೆಯ್ದೆ ಬಱಿಕ್ಕೆಣೆಪೊಡವಱ ನರಕ ಬಿಲಂಗಳ್ (ಪಾರ್ಶ್ವಪು. ೬-೭೩). ೨. ಚೆನ್ನಾಗಿ ; ಸುಖವಾಗಿ : ಪೆಂಡಿರ್ಕಳೊಳೆಲ್ಲಮೆನ್ನ ಮೆಚ್ಚಿದಂತೆ ಸಯ್ದುಂ ಬಾೞ್ದುಂ (ವಡ್ಡಾರಾ. ೧೬೬-೬). [< ಸಯ್ತು$_2$]

ಸಯ್ದವಂ 'ಸಯ್$_2$' ಪರಾ.

ಸಯ್ದು, ಸೈಪು (ನಾ). ೧. ಪುಣ್ಯ ; ಸುಕೃತ : ತೋಳಂ ಸಡಿಲಿಸದಾ ಪ್ರಾಣವಲ್ಲಭ [ರ್] ಪ್ರಾಣಮನಂದೊಡಗಳೆದರೋಪರೋಪರೊಳೊಡಸಾಯಲ್ ಪಡೆದರಿನ್ನವುಂ ಸಯ್ದೊಳವೇ (ಪಂಪಭಾ. ೫-೯೩) ; ಇಂದು ಪಿಂಗಿದುವೆಮ್ಮ ಪೀಡೆಗಳಿಂದು ಸಾರ್ದುವು ಸಯ್ದು (ಕಾವ್ಯಾವ. ೩೬೫). ೨. ಅದೃಷ್ಟ ; ಸೌಭಾಗ್ಯ : ಮುಂ ಸರಸ್ವತಿಯಂ ಸಾಧಿಸೆ ಸಂದ ಸಯ್ದು ಸವಣಂಗಕ್ಕುಂ ಪೆಜಂಗಕ್ಕುಮೇ (ಶಾಂತಿಪು. ೧-೮). ೩. ಒಳ್ಳೆಯದು ; ಲೇಸು : ಸಯ್ದಾದುದೀ ಕಾರ್ಯವೇಂ ಬಗೆಯಲ್ ಬೇಡಿದಕಾಡೊಳಾಯ್ತು ಮಱೆ (ನೇಮಿಪು. ೧೧-೬೩) ; ಸಯ್ದು ನೀನ್ ಬಂದುದು (ಅಶ್ವತ್ಥಾ. ೫-೭೯). ೪. ಹಿತವಾದುದು; ಶ್ರೇಯಸ್ಕರವಾದುದು : ಅಭಯರುಚಿಕುಮಾರಂ ಮಾರಿದತ್ತಂಗೆ ಹಿಂಸಾರಭಸಮತಿಗೆ ಸಯ್ದಂ [ಪಾಠಾಂ. ಸೈಪಂ] ಪೇಳ್ದು ಧರ್ಮಕ್ಕೆ ತಂದು (ಯಶೋಚ. ೧-೭೨). ೫. ಒಳ್ಳೆಯ ಕೆಲಸ ; ಸತ್ಕಾರ್ಯ : ಆಶಿಸದ ಸಂಕಲ್ಪಯತ್ನಗಳನಿನಿತುಮಂ ಸಾಜವಾಗಲಿ ಸಯ್ದು (ಮಂಜಿಕ. ೭೧೨). ೬. ಸಮೃದ್ಧಿಯ ನೆಲೆ,— ಆವಾಸಸ್ಥಾನ : ಜಸದ ಸಯ್ದು ನೆಗೞ್ತೆಯ ಲೋಕದೇಳ್ಗೆಯೌನ್ನತ್ಯದ ಗೊತ್ತನುತ್ತ ಧರೆ ಬಣ್ಣಿಪುದೀ ಕಲಿದೇವಸೆಟ್ಟಿಯಂ (ಸೌಂದಾ. IX-i,೨೯೬-೩೮; 1176). ಸೈಪು : ೧. ಆನೆರೆಯೆ ಕೇಳ್ದನಿಳಾಧರ ನೀನದರ್ಕೆ ಮಾತರ ಡಣಮಾಡಲಾಗದಿದು ಸೈಪಿನೊಳೆಲ್ಲದೆ ಕೂಡಿ ಬರ್ಕುಮೇ (ಪಂಪಭಾ. ೫-೭೩); ದೊರೆಗಳೆಲ್ಲರ ತೊಱೆದೊಬ್ಬನೊತ್ತಿಲಿ ನಿಂದಳರರೆ ನೋಡವನ ಸೈಪಂತೊ (ಭರಚಿ. ೫೫-೯೮). ೨. ಸುಯೋಧನಂಗೆ ಸೈಪು ಬರ್ಪಂತೆಯುಂ . . . ಸಂಕರ್ಷಣಂ ಜಂಗಮಹಿಮಾಚಲಮೆ ಬರ್ಪಂತೆಯುಂ ಬಂದು (ಗದಾಯು. ೭-೫೬ ವ) ; ಪ್ರತ್ಯುಪಕಾರಮಂ ನಿಮಗೆ ಮಾಡುವ ಸೈಪೆನಗಿಲ್ಲ (ಪುಷ್ಪಪು. ೬-೩೩) ; ಚಂಡಭಂಡನಕೆಂದರಿರಾಜರೊಳೆತ್ತಿ ನಡೆವ ಗಂಡುಗಲಿಯಂ ಕುಳ್ಳಿರಿಸಿ ಕೊಂಡುಯ್ಯ ಸೈಪುಳ್ಳಂಗೆ ನಿನಗಿಂದು ಪೆಣ್ಣಂ ಪೆಣ್ಣೊಲೆಗೆಂತಂತು ವನಕೆ ಕೊಂಡುಯ್ಯುದಾಯ್ತೇ? (ರಾಮಾಶ್ವ. ೨೯-೧). ೭. ಆಧಿಕ್ಯ ; ಅತಿಶಯ : ಕವಿವ ಕುರುಳ ಕಟ್ಟು ಸಡಿಲಿದ ಚೊಲ್ಲೆಹದೆವೆಯಿಕ್ಕದೆಸಳುಕಣ್ಣುಗಳ ಸವೆಯದ ನೆನಹಿನ ಸೈಪಿಂದ ಕೆಳದಿಗೆ ಸವನಿಸುವಳು ಸಂಕಟವನು (ಹದಿಬ. ೭-೧೮). ೮. ಸುಖ ; ಸಂತೋಷ : ಮದ್ವಲ್ಲಭೆಯ ಸುಸಿಲ ಸೈಪಿಂ ಕೃತಾರ್ಥಾತ್ಮನಪ್ಪೆಂ (ಕಾದಂಬಾ. ೨೪೫) ; ಭೋಂಕೆನೆ ಕೈಗೂಡಿಸವಕ್ಕೆ ಸೈಪನೆಲೆ ಕಂದರ್ಪ ಕ್ಷಮಾವಲ್ಲಭಾ (ಕುಸುಮಾ. ೮-೪) ; ಬಾಲಂಗೆ ಮೋಹದಿಂದೆ . . . ತೊಟ್ಟಿಲೊಳಿಟ್ಟು ಸಾಲ್ದ ಸೈಪಿಂದೆ ಜೋಗುಳವಾಡಿ ತೂಗುವಳದೇಂ ಸುಕೃತಿಯೋ (ಜೈಮಿಭಾ. ೧೮-೨೧). ೯. ವೈಭವ ; ಸಂಪತ್ತು : ಧರ್ಮಮೆ ದೇಹಿಗಾಶ್ರಯಂ ಧರ್ಮಮೆ ಸೈಪು ಧರ್ಮಮೆ ಮಹಾಮಣಿ (ವರ್ಧಮಾ. ೬-೬) ; ಈ ಶಶಿಮುಖಿ ದಿಟದಿಂ ವ್ಯಾಘ್ರಾಸುರಹರ ನರಸಿಯೆಂಬುದರ್ಕಿದೆ ಕುಱುಪೆಂಬಾ ಸೈಪನಱಿಪುವಂತಿರೆ ಭಾಸುರಮಾಯ್ತರರ ಪುಲಿಯುಗುರ್ ನಗಸುತೆಯೊಳ್ (ಗಿರಿಕ. ೩-೮೭) ; ವರಮುನಿಯ ಸಭೆಯಂತೆ ತದ್ಬ್ರಾಹ್ಮಸಭೆಯಂತೆ ಸುರಪತಿಯ ಸಭೆಯಂತೆ ಮೆಱೆದುದಾ ರಾಯನೊಡ್ಡೋಲಗಂ ಸೈಪಿನಿಂದೆ (ಭಾವಚಿಂ. ೭-೫). [ಸಯ್$_2$ + - ಪು$_2$. / ತಮಿ. ಚೆಪ್ಪಮ್]

ಸಯ್ಯಡಿ 'ಸೈಯಡಿ' ನೋ.

ಸಯ್ಯನೆ (ಅ). ಸರಿಯಾಗಿ ; ಸಮರ್ಪಕವಾಗಿ : ಮೈಯ ಸುಖಕೆ ಮರುಳಾಗಿ ತಮ್ಮಾತ್ಮನ ಸಯ್ಯನಱಿಯದೆ ಭೋಗಿಪುದು ಉಯ್ಯ ಕೈವಿಡಿದು ತಂಡುಲವ ಬಿಸುಟ ಮರುಳಯ್ಯರ ಮಾರ್ಗವೇನಲ್ತೆ (ಭರಚಿ. ೫-೮೧). [ಸಯ್$_2$ + - ಅನೆ$_1$]

ಸಯ್ಯಮಿ (ನಾ). ಇಂದ್ರಿಯಗಳ ವಿಷಯದಲ್ಲಿ ಸಂಯಮವುಳ್ಳವನು ; ಮುನಿ: ಬೋಧಿ ಕೂಡಿದಾ ಸಯ್ಯಮಿಗೆಲ್ಲಿ ಕಾಂಕ್ಷೆ (ಅಪಶ. ೯೭) ; ಸಯ್ಯಮಿ ತಾನೆ ಸಾಹಸಿ ತಾನೆ ಧ್ಯಾನದಿ ಕೊಯ್ಯನೆ ಕರ್ಮದ ಬೇರ (ಭರಚಿ. ೬೦-೬೫). [< ಸಂ. ಸಂಯಮಿನ್]

ಸಯ್ಯಱಿ (ಕ್ರಿ). ಸಮರ್ಪಕವಾಗಿ ತಿಳಿ ; ಸರಿಯಾಗಿ ಗ್ರಹಿಸು : ಸಯ್ಯಱಿದುತ್ತಮ ರೋದಿಕೊಳಲು ತಪ್ಪ ಕೈಯೊಳುದಯರಾಗದೊಡನೆ ಮೆಯ್ಯೊಳಿದ್ದಾತ್ಮಕಲೆಯ ಹಾಡುತಿರೆ ಕೇಳುತೊಯ್ಯನೆಯ್ದುದನಾತ್ಮರಸಿಕ (ಭರಚಿ. ೨೩-೬). [ಸಯ್$_3$ + ಅಱಿ]

ಸಯ್ಯುಗ (ನಾ). ಕಾಳಗ ; ಯುದ್ಧ : ವಾನರರು ತನತನಗೆ ಮರಮರಡಿಗಳ ಪಿಡಿದು ಸಯ್ಯುಗಕ್ಕನುವಾಗಿ ಬಿನ್ನಪಂಗೈದರ್ (ವಂಕಾರಾ. ೬-೫-೩). [< ಸಂ. ಸಂಯುಗ]

ಸಯ್ವರಿ, ಸೈವರಿ (ಕ್ರಿ). ನೇರವಾಗಿ ಸಾಗು ; ಮುಂದಕ್ಕೆ ಹೋಗು : ಸರಳಿಸುವೇಣ ನೋಡುವ ಮೊಲಂ . . . ಪಾಱಿ ಸಯ್ವರಿವ ಖಗಾಳಿಯೊಪ್ಪೆ ಪಿರಿದಾದುದು ಬೇಂಟೆಯ ವಾದ್ಯದಬ್ಬರಂ (ಶಬಶಂ. ೩-೪೮). ಸೈವರಿ : ಹರಿಣವನಿಕ್ಕಿದರು ನಾರಾಚದಲಿ ಸೈವರಿದು ಸೈರಿಭನ ಸೊಕ್ಕಿದರು ಸುರಗಿಯಲಿ (ಕುಮಾಪ. ೧೩-೨೬) ; ಅಟವೀಸಂಗದಲಿ ಸೈವರಿದು ಸೈರಣೆಗುಂದಿದನು ರಾಮ (ತೊರರಾ. ೩-೮-೬೮) ; ಮೇಘನಾದನ ವಿಭಾಡಿಸಿ ಚತುರ್ಬಲಂ ಕವಿಯೆ ಲೆಕ್ಕಿಸದವಂ ಸೈವರಿದನಾಗಸದೊಳು (ಜೈಮಿಭಾ. ೪-೧೪). [ಸಯ್$_3$ + ಪರ್ವಿ]

ಸಯ್ವಳಿ, ಸೈವಳಿ (ನಾ). ೧. ಒಳ್ಳೆಯ ದಾರಿ ; ಸನ್ಮಾರ್ಗ : ಬಲ್ಲಾಳಂ ಸಯ್ವಳಿಯ ನಡದು ಲೋಗರ ಬಾಯ್ಗಾಯೊಳು ಬರ್ಪ್ಪ ಕೀರ್ತ್ತಿವನಿತೆಗೆ ಕೂರ್ಪ್ಪಂ (ಎಕ. XI. ಚತ್ರದು. ೭೯-೨೦ ; 1214 ?). ಸೈವಳಿ : ೨. ನೇರವಾದ ಮಾರ್ಗ, — ಹಾದಿ : ಹಿಮವದ್ಗಿರಿಯ ದಕ್ಷಿಣವಿಜಯಾರ್ಧಶಿಖರಿಶೈಲದುತ್ತರವಿಜಯಾರ್ಧದಿಗ್ಗೆಸೆಯ ಸೈವಳಿಯೊಳ್ (ತತ್ತ್ವಪ್ರ. ೧೪೮) ; ಕಳನೊಳುದಕದ ಸೈವಳಿ Eಳಿ ಯ ಸೆಲೆಯಱಿದು ಚೌಕಕೆ ಸೀಳಿದನು ನೆಲನ (ಕುಮಾದ್ರೋ. ೧೦-೨೮) ; ಸಮರದ ಸೈವಳಿಯಲೇ ಸಾವುದೇ ಕರ್ತವ್ಯ (ತೊರರಾ. ೬-೨೬-೧೨). [ಸಯ್$_2$ + ಬಳಿ$_2$ (< ಬಱಿ$_3$)]

ಸಯ್ವೆರಗು 'ಸಯ್ವೆಱಗು' ನೋ.

ಸಯ್ವೆಱಗು, ಸಯ್ವೆರಗು, ಸೈವೆರಗು, ಸೈವೆಱಗು (ನಾ). ೧. ಅತಿಯಾದ ನಿಶ್ಚಲತೆ, — ಸ್ಥಿರತೆ : ಕಣ್ಣೆಱೆಯದ ನಿದ್ರಿಸದ ಬೆರೆಯದಗಲದ ಕಣ್ಣಂ ಪೊಱಸೂಸ ದೊಳಗಿರದ ಸಯ್ವೆಱಗಿನ ಸಮರಸದ ಭಾವಮೇಂ ರಂಜಿಸಿತೋ (ಶಬಶಂ. ೨-೧೦೪). ಸಯ್ವೆರಗು : ೨. ಅಧಿಕವಾದ ಹೆದರಿಕೆ, — ಗಾಬರಿ : ಸಯ್ವೆರಗಿನಿಂ ಬೋಳನೆಳೆದು ಕಯ್ಸುಗಿದಂ (ಕಾಲೂರ ೧೩೦-೨೬೮). ಸೈವೆರಗು: ೩. ಅತಿಯಾದ ತಳಮಳ : ವಿರಹದಲಿ ಕಂಗೆಟ್ಟು ಸೈವೆರಗಾಗಿ ನಿಂದು (ಸೌಂದಾ. ೩-೯೬). ಸೈವೆಱಗು : ೩. ಶೈವ ಸೈವೆಱಗಾದ ಪಾಶುಪತಿ ಪಥವಱಿಯ (ಚನ್ನವ. ೫. ೨೫೧-೫೪೫) ; ನೊಂದಳಕಟಾ ಸತಿಯೆನುತ ಮನನೊಂದು ಸೈವೆಱಗಾಗಿ ಖತಿಯಲಿ ಕಂದಿ . . . ಮೆಲ್ಲನೆ ಬಾಗಿ ನೋಡಿದನಂದು ರಾಜಾಲಯದ ಮುಂದಣ ಮರನನಾ ಭೀಮ (ಕುಮಾವಿ. ೩-೨೧). ೪. ಅತ್ಯಾಶ್ಚರ್ಯ : ಫಲುಗುಣನ ವಾಜಿ ಪೊಱಮಟ್ಟು ಬಂದಾಗಲದು ಪೆಣ್ಗುದುರೆಯಾಗಿರ್ದುದೇವೇಳ್ಪೆನು ಸೋಜಿಗಮಿದೆಂದು ಸೈವೆಱಗಾಗುತಿರ್ದುದೆಲ್ಲಾ ಜನಂ (ಜೈಮಿಭಾ. ೧೫-೨೯). [ಸಯ್$_2$ + ಬೆಱಗು]

ಸರ್$_1$ 'ಸಱ್' ನೋ.

ಸರ್$_2$, ಸಾರ್$_3$ (ನಾ). ೧. ಅಧಿಕಾರಿಗಳು, ಹಿರಿಯರು ಮುಂತಾದವರನ್ನು ಸಂಬೋಧಿಸುವಾಗ ಬಳಸುವ ಒಂದು ಗೌರವಸೂಚಕ ಶಬ್ದ : ಸರ್, ಧರ್ಮಸಮ್ಮೇಳನಕ್ಕಾಗಿ ಬಂದ ಪ್ರತಿನಿಧಿಗಳೇನು ತಾವು? (ಧರ್ಮಾಸಾ. ೪೯). ೨. ಬ್ರಿಟಿಷರ ಕಾಲದಲ್ಲಿ ಗಣ್ಯವ್ಯಕ್ತಿಗಳಿಗೆ ನೀಡುತ್ತಿದ್ದ ಒಂದು ಬಿರುದು : ಸರ್ ಎಂ. ವಿಶ್ವೇಶ್ವರಯ್ಯನವರು ೧೮೬೧ನೆಯ ಇಸವಿ ಸೆಪ್ಟೆಂಬರ್ ಹದಿನೈದನೆಯ ದಿನಾಂಕ . . . ಜನಿಸಿದರು (ಕಪಪು. ೬-೧೨೦). ೩. ಉಪಾಧ್ಯಾಯ ; ಮಾಸ್ತರು : ಒಳಗೆ ಬರಲೆ ಸರ್? (ರೂಢಿ). ಸಾರ್$_3$: ೧. ಏನು ಕೊಡಲಿ ಸಾರ್, ಜಾಮೂನ್, ಜಿಲೇಬಿ (ಮಹಾಲ. ೪೬). 'ಸ್ವಾಮಿ' ಹೋ. [← ಇಂ. Sir]

ಸರ್‌ಖಾಜಿ (ನಾ). ಮುಖ್ಯನ್ಯಾಯಾಧೀಶ : ಆಯಾ ಮ [illegible]ಗಳಲ್ಲಿ ಸರ್‌ಖಾಜಿಗಳಿದ್ದರು (ಮಹಾವಂ. II.೩೬). [← ಮರಾ. ಸರ್‌ಖಾಜಿ]

ಸರ್‌ದೇಶಪಾಂಡೆ (ನಾ). ದೇಶಪಾಂಡೆಯರಲ್ಲಿ ಪ್ರಮುಖ [illegible]ನು : ದೇಶಕ್ಕಿಂತಲೂ ದೊಡ್ಡದಾದ ಪ್ರದೇಶಕ್ಕೆ ಮುಖಂಡನಾದವನಿಗೆ [illegible]ಮುಖ ಎಂತಲೂ ಆ ಸ್ಥಳಕ್ಕೆ ಕರಣೀಕನಾದವನಿಗೆ ಸರ್‌ದೇಶಪಾಂಡೆ [illegible]ಸರು (ಪಾಳಗಾ. ೧೧): [← ಮರಾ. ಸರ್‌ದೇಶಪಾಂಡೇ]

ಸರ್‌ದೇಶಮುಖ (ನಾ). ದೇಶಮುಖರಲ್ಲಿ ಪ್ರಮುಖನಾದವನು ; IP ಮೊಗಲರ ಆಳ್ವಿಕೆಯಲ್ಲಿದ್ದ ಪ್ರಾಂತಗಳ ಮೇಲೆ ಉತ್ಪನ್ನದ ದಶಾಂಶ ಅಥವಾ ನೂರಕ್ಕೆ ಹನ್ನೆರಡೂವರೆ ಪ್ರಮಾಣದಲ್ಲಿ ಮರಾಠರು ಹೇರುತ್ತಿದ್ದ 'ಸರ್‌ದೇಶಮುಖಿ' ಎಂಬ ಕರವನ್ನು ಪಡೆಯುವ ಹಕ್ಕುಳ್ಳವನು: ದೇಶಕ್ಕಿಂತಲೂ ದೊಡ್ಡದಾದ ಪ್ರದೇಶಕ್ಕೆ ಮುಖಂಡನಾದವನಿಗೆ ಸರ್‌ದೇಶಮುಖ ಎಂತಲೂ . . . ಹೆಸರು (ಪಾಳಗಾ. ೧೧). [← ಮರಾ. ಸರ್‌ದೇಶಮುಖ]

ಸರ್‌ಭಕ್ಷಗಿರಿ (ನಾ). ಮುಖ್ಯಕೋಶಾಧ್ಯಕ್ಷನ ಪದವಿ : ಅನೇಕಕಾರಣಗಳಿಂದ ಮರಾಟೆ ಜನರು ಮೈಸೂರ ಸೀಮೆಯಲ್ಲಿ ಜವಾನಿ ಮತ್ತು ಸಿಪಾಯಿಕೆಲಸದಿಂದ ದಿವಾನಗಿರಿ ದಂಡಿನ ಸರ್‌ಭಕ್ಷಗಿರಿ ಪದವಿಯವರೆಗೂ ವ್ಯಾಪಿಸಿದರು (ಮುಸುಗ. ೧೫).

[← ಮರಾ. ಸರ್‌ಬಖ್ಶೀಗಿರೀ]

ಸರ್‌ಸುಭ (ನಾ). ೧. ಸುಭೇದಾರರ ಮುಖ್ಯಸ್ಥ. ೨. ಮುಖ್ಯವಾದ ಪ್ರದೇಶ : ಒಂದು ದೊಡ್ಡ ಪ್ರದೇಶಕ್ಕೆ ಸರ್‌ಸುಭ ಎಂದು ಹೆಸರು. ಅಂಥಾ ಕಡೆ ಸರ್ವಾಧಿಕಾರ ಮಾಡತಕ್ಕ ಅಧಿಕಾರಿಯೇ ಸುಭದಾರ್ (ಪಾಳಗಾ. ೧೨). [← ಮರಾ. ಸರ್‌ಸುಭಾ]

ಸರ್ರ (ನಾ). ೧. ಉಲಿ ; ಧ್ವನಿ : "ಗಾವರಂ, ದನಿ, ಸೊಪ್ಪುಳ್, ಅಬ್ಬರಂ, ಸರಂ, ಉಲಿ, ಗಾವಳಿ - ಈ ೭ ಧ್ವನಿ" (ಶಶಾ. ೫೭-೫೮) : ಮಿಗೆ ನುಣ್ಣನಪ್ಪ ಕೇಕಿಗಳ ಸರಂಗಳುಂ ಪೊಳೆವ ಮಿಂಚುಗಳುಂ . . . ಅಂಜಿಸುವಂತಿರೆ (ಕವಿಕಾ. ೧-೧೨೪) ; ಪಳಯಿಸುವ ಮಾದ್ರಿಯ ಸರಮಂ ಕುಂತಿ ಕೇಳ್ದು ಭೋಂಕನೆರ್ದೆದಲ್ಲೆದು (ಪಂಪಭಾ. ೨-೨೨ ವ) ; ತಿರುನೀಲಕಂಠಾ ಎಂದ ಸ[ಪಾಠಾಂ. ಸ್ವ]ರವನೊಳಗಿರ್ದ ನಾಯಕಿ ಕೇಳಿ (ತಿರುರ. ದೇ. ೬-೧೪). ೨. (ಆಲಂ) ಉಸಿರು : ಕಾಲೇ ಕಂಭಗಳಾದವೆನ್ನ ದೇಹವೇ ದೇಗುಲವಾಯಿತ್ತಯ್ಯ . . . ಸ[ಪಾಠಾಂ. ಸ್ವ]ರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯ (ಅವಚಂ. ೪೬-೧೫೫); ಸರವು ಬಂದು ಸುಸರವಾಗಿ ಎನ್ನಿರವು ಲಿಂಗದೊಳಗೆ ಲೀಯವಾಗಿ (ತಿವಗೀ. ೬೯-೬೩೪).

[< ಪ್ರಾ. ಸರ. /ಸಂ. ಸ್ವರ]

ಸರ್ರ (ನಾ). ೧. ಅಂಬು; ಬಾಣ: ನೆರೆದಿನಿಬರುಮಾ ಲಕ್ಷ್ಮಮನಿರದಕ್ಕಟ ಸರದೆ ತೆಗೆಯಲಾರ್ತಿರುಮಿಲ್ಲಾ (ಪಂಪಭಾ. ೨-೩೨) : ಕೆಂಗಜಿಯಂ ಸರಂಗಳೊಳ್ ಮೇಳಿಸಿ (ಕುಸುಮಾ. ೧೮-೧೫೬). ೨. ಕೊಳ ; ಸರೋವರ : ಕಿಸಲಯಂ ಮಿಳಿಮಿಳಿರುತ್ತಿರೆ ಸರದೊಳ್ತೋಱಲ್ಕೇಂ ಕರವವೊಲಾಯ್ತನಿಲಜಂಗೆ ದುರ್ಯೋಧನನಂ (ಗದಾಯು. ೬-೪೩); ದಳಕಾಬ್ಜಪ್ರಸರಂ ಸರಂ ಕುಸುಮಮಾಳಾರಾಮಮಾರಾಮಂ (ಜಗಮ. ೨-೨). ೩. ಹಾರ; ಮಾಲೆ : ಎರಡೋಳೆಯ ಮಣಿದೀಪದ ಸರಮೊಪ್ಪಿದುದಂದು ಪಾದಪೀಠದ ಮೊದಲೊಳ್ (ಆದಿಪು. ೬-೫) ; ಆಂದುತಂದುತ ಬಾಲೆ ಬಂದೊರ್ವಳರಸಗೆ ಕೆಂಜಾಜಿಸರಗೊಡುವಾಗ (ಭರಟ. ೫-೬೭). ೪. ಸಾಲು ; ಶ್ರೇಣಿ : 'ಸರಂಗೊಳ್', 'ಸರಗತೆ' ಪರಾ.

[ಸಂ.]

ಸರ್ರ (ನಾ). ಮೇಲ್ಛಾವಣಿಗೆ ಆಧಾರವಾಗಿ ಹಾಕುವ ಉದ್ದನೆಯ ಮರದ ದಿಮ್ಮಿ : ಅರುಣಮಣಿಯ ಕೆಲಸದ ಬೋದಿಗೆ ಹೊಸಹಳದಿಯ ಮಾಣಿಕದ ಸರಮುಜ್ವಲವಜ್ರದ ಪಡಿವಟ್ಟಿಗೆ (ಜಯಕಾ. ೮-೩) ; ಚದುರ ಚೌಕಟ್ಟುಗಳ ಮೇಣಾ ಕದಗಳುಂ ತೊಲೆ ಸರಂಗಳುಂ ಬಲುಪದಪಿನಿಂ ಮರಕತಗಳಿಂ ಕೆತ್ತಿರ್ಪವೊಲ್ಮೆರೆಗುಂ (ಆರ್ಜಾ. ೨೮-೧೪). [?]

ಸರಂಗ (ನಾ). (?) : ನಂಜಿನ ಭೂಮಿಯ ಮೇಲೆ ಸಂದೇಹದ ಕವರ ನೆಟ್ಟು ಮಂಜುಳದ ಮೂಜಂಗದ ಮುಂಡಿಗೆಯ ನಟ್ಟು ಸರಂಗದ ಸುಮನದ ಡೊಂಕಜತ ಬೆಮ್ಮರನಹಾಕಿ . . . ಎಱಿಸಿದಗಳು ಚಿತ್ರಶುದ್ಧವೆಂಬ ಮೂಗುತಿ ಕೋಲಿನಲ್ಲಿ ನಿಂದಿತ್ತು (ಸಹ. ಕ.I.೧೩೬-೧೧೯).

[?]

ಸರಂಗುಡು, ಸರಗೊಡು (ಕ್ರಿ). ಧ್ವನಿಮಾಡು ; ಉಲಿ : ನಯದಿಂದಂ ಸಾರ್ದು ಸರಂಗುಡೆ ಶಾಂತದೊಳ್ ಮಾಗೆ ಗೊಂಕಜುಕಪ್ಪೆ ಪಸುಂಬಂ ತತ್ಕ್ರಮದಿಂದಮೆ ದೀಪ್ತದಿಗ್ಭಾಗದೊಳ್ ದನಿಗಯ್ಮೆ ಮನಸ್ಸಿದ್ಧಿಯನಾಗಳೆ ಉಂಟುಮಾಡುಗುಂ (ಲೋಕೋಪ. ೧೨-೧೫). **ಸರಗೊಡು** : ಇಕ್ಷುಧನ್ವಗಳು ಒಡೆಯಗೆ ಕೊಡುವ ಹುಯ್ಯಲರಸಗೂಗೆನೆ ಸರಗೊಡುವಿಕ್ಷುಯಂತ್ರಮೊಪ್ಪಿದುದು (ಶ್ರೀಪಾಲ. ೧-೬೦).

[ಸರ್ + ಕುಡು (< ಕೊಡು)]

ಸರಂಗೆಯ್, ಸರಗೆಯ್ಯು, ಸರಗ್ಗೆ (ಕ್ರಿ). ೧. ಧ್ವನಿಮಾಡು; ಕೂಗು: ದಿವಿಜಾಶ್ವತ್ಥಾಮದೊಳೀ ಭುವನಂಗಳ್ ನಡುಗೆ ಶಿಶು ಸರಂಗೆಯ್ದೊಡೆ ನಕ್ಕವಯವದೆ ಕುಂಭಸಂಭವನಿವನಶ್ವತ್ಥಾಮನೆಂದು ಪೆಸರಿಡೆ ನೆಗಟ್ಟಂ (ಪಂಪಭಾ. ೨-೪೪); ಅಸುವಿಯೋಗ ಸಂಕಟದಿಂ ಸರಂಗೆಯ್ದ ಜಟಾಯುವಂ ಕಂಡು (ಪಂರಾಮಾ. ೯-೧೧೭ ವ) ; ಕಂದರ್ಪನಂ ಪುಗರ್ಪುಗಲೆಂಬಂದದಿಂ ಸರಂಗೆಯ್ದ ಗಂಡುಗೋಗಿಲೆದನಿಗಳುಂ (ಚಂದ್ರಪ್ರ. ೨-೧೧೪ ವ). **ಸರಗೆಯ್ಮು** : ೧. ಸರಗೆಯ್ಮುತಿರೆ ಕೋಗಿಲೆ (ಹಚಕಾ. ಪಂ. ೪-೬). **ಸರಗ್ಗೆ** : ೨. [ಸಂಗೀತ] ವಾದ್ಯವನ್ನು ಶ್ರುತಿಮಾಡು : ಸರಗ್ಗೆದು ಪೇರುರದೊಳಿಟ್ಟು ತರುಣಾಂಗುಳಿಗಳುರುಚಲನೆಯಿಂದ . . . ವಲ್ಲಕಿಯ ಬಾಜಿಸುವ ಮೋಹನ ಕಣಿಯಳೊರ್ವನೀಕ್ಷಿಸಿದನು (ಪಂಕಾರಾ. ೫-೬-೪೧). [ಸರ್ + ಕೆಯ್]

ಸರಂಗೇಳ್ (ಕ್ರಿ). ಧ್ವನಿಯನ್ನು ಕೇಳು : ಎನ್ನ ಸರಂಗೇಳ್ದಲ್ಲದೀ ಬೂತು ಪೊಱಮಡುವನಲ್ಲಂ (ಪಂಪಭಾ. ೧೩-೭೬ ವ) ; ಈ ಬೂತೆನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲ ನಿವಂಗಾನೆ ಸಾಲ್ವಂ (ಗದಾಯು. ೬-೯ ವ). [ಸರ್ + ಕೇಳ್]

ಸರಂಗೊಳ್, ಸರಗೊಳು (ಕ್ರಿ). ೧. ಹಾರವನ್ನಾಗಿ ಮಾಡು ; ಮಾಲೆಗಟ್ಟು : ಉರುಳಿ ಮಾಡಿ ಸರಂಗೊಳೆ ತಾರಹಾರವಪ್ಪ . . . ಕಲ್ಲಿ ಕೂಡೆ ಕಪ್ಪುರವಳುಕಪ್ಪಗುರ್ವ ಸೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ (ಜಗಮ. ೧೭-೧೧೯). **ಸರಗೊಳು** : ೨. ಸಾಲುಗಟ್ಟು ; ಸಾಲಾಗು : ಪರಮನ ದರುಶನಕೆ ಸುರಮುನಿ ಶಿವಗಣ ಭರದಿಂದ ಬಕುತಿಲಿ ಸರಗೊಂಡು ಬರುವಾಗ (ಷಡ್ಪ. ೧-೨೩). [ಸರ್ + ಕೊಳ್]

ಸರಂಗೊಳಿಸು, ಸರಗೊಳಿಸು (ಕ್ರಿ). [illegible]ಮಾಲೆಗಟ್ಟು ; ಹಾರವನ್ನಾಗಿ ಮಾಡು: ಮುನ್ನುಳ್ಳ ಮಣಿಪುಂಜಮಂ ರಂಜಿ[illegible]ಮು . . . ಸರಂಗೊಳಿಸಿ ನವೀನಕಂಠಾಭರಣ ಮೆನಿಸುವಂತೆ (ವೀಕೇ. ೧) ; ಧನುವಂ ಕೊಂಡು ಸಿಡಿಲಂ ಸರಂಗೊಳಿಸಿದಂತೆ ತಿಱ್ನಿನಬ್ಬರಂ . . . ದಿಗಂತಮಂ ನೀಡಿರಿವುತ್ತಿರೆ (ಸಚಮ. ೨). **ಸರಗೊಳಿಸು** : ೧. ಮಳೆವನಿಯೊಳಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೇ (ಮಚರ. ೦೮-೩೦೧); ಸರಗೊಳಿಸಿ ಬಳಿಕೀತನಾತನ ಸರಳ ಸಾರದಲಿ . . . ಎಚ್ಚಾಡಿದರು ಸರಿಸದಲಿ (ತೂಕಾ. ೬-೪೪-೧೬) ; ಪರೀಕ್ಷಿಸಿ ರಂಧ್ರಂಗೈದು ಸರಗೊಳಿಸುತ್ತಲವನು ಬೆಲೆವಡಿಸರೆ (ನವಮೋ. ೧-೧೬). ೨. ಹೆಣೆ; ಪೋಣಿಸು : ಕಲ್ಲಿಬಲಿಗಳಂ ಸರಗೊಳಿಸುತುಂ ಹಾಸಮಂ ಹಸಂಗೆಯ್ಯುತುಂ . . . ಎಸವ ಲುಬ್ಧಾಶ್ರಯದೆ ವನಮೆಸೆದುದು (ಚಿಬಸ. ೫೩-೫೧). [ಸರಂಗೊಳ್ + - ಇಸ್ಕು]

ಸರಂಜಾನಿಸು (ಕ್ರಿ). ಸರಂಜಾಮು ಸಹಿತವಾಗಿರು; ಸರಕುಗಳಿಂದ ಕೂಡಿರು: ಸವಣೂರ ಹಾಕಿಂಪಾನ, ರಾಯದುರ್ಗದವರು . . . ಬಾಣ ವಗ್ಗೆರೆ ಭಾರಿ ಸರಂಜಾನಿಸಿ ಬಂದು ಇಳಿದಿದಾರೆ (ಚಿತ್ರಪಾ. ೬೩).

[< ಸರಂಜಾಮು + - ಇಸ್ಕು]

ಸರಂಜಾಮ 'ಸರಂಜಾಮು' ನೋ.

ಸರಂಜಾಮದಾರ (ನಾ). ಸೈನ್ಯದ ಸರಂಜಾಮಿಗಾಗಿ ಜಹಗೀರು ಪಡೆದವನು: ಆಶ್ರಿತರಿಗೆ ವ್ಯಾಸಲ್ಲರು ಅಥವಾ ಸರಂಜಾಮದಾರರೆಂತಲೂ ಈ ಮೇರೆಗೆ ಭೂಮಿಯನ್ನು ಹಂಚಿ ಕೊಟ್ಟು ಒಡೆಯನಿಗೆ ಲಾರ್ಡನೆಂತಲೂ ಹೆಸರುಗಳುಂಟಾದವು (ಇಂಗ್ಲಂಡ. ೨೫).

[← ಮರಾ. ಸರಂಜಾಮದಾರ್]

ಸರಂಜಾಮಾಪದ್ಧತಿ (ನಾ). ೧. ಸೈನ್ಯಾಧಿಕಾರಿಗಳಿಗೆ ಸಂಬಳ ಮುಂತಾದುವನ್ನು ಕೊಡದೆ, ಸೈನ್ಯದ ವೆಚ್ಚಕ್ಕಾಗಿ ಜಹಗೀರನ್ನು ಕೊಡುವ ಪದ್ಧತಿ. ೨. ಹಿಂದೆ ಬ್ರಿಟಿಷ್ ಸರಕಾರದವರು ಆಳುತ್ತಿದ್ದಾಗ ದೇಶೀಯರಾಜರಿಗೆ ಕೆಲವೊಂದು ಪ್ರದೇಶದ ಆಡಳಿತವನ್ನು ಬಿಟ್ಟುಕೊಟ್ಟು, ಅಗತ್ಯಬಿದ್ದಾಗ ಸೈನ್ಯವನ್ನು

ಪೂರೈಸಬೇಕೆಂದು ವಿಧಿಸಿದ್ದ ಪದ್ಧತಿ ; ಊಳಿಗಮಾನ್ಯಪದ್ಧತಿ : ಸರಂಜಾಮಿ ಪದ್ಧತಿಯನ್ನು ಆಧರಿಸಿ ನಿಂತ ಸಮಾಜದ ಅದರ ಪರಮಇಷ್ಟಾರ್ಥವೆನಿಸಿದ ಸಾಮ್ರಾಜ್ಯಶಾಹಿಯ ಸುಗ್ಗಿಯ ಕಾಲವಾದ ಹತ್ತೊಂಬತ್ತನೆಯ ಶತಮಾನ ಗತಿಸಿ ಹೊಸ ಶತಮಾನ ಇನ್ನೇನು ಹೊಸಧ್ಯೇಯಗಳನ್ನು ತೋರುವುದೋ (ಗ್ರಾಮಾಯ. ೧).

[← ಮರಾ. ಸರಂಜಾಮಿಪದ್ಧತಿ]

ಸರಂಜಾಮು, ಸರಂಜಾಮ (ನಾ). ಸಾಮಗ್ರಿ ; ಪರಿಕರ ; ಸಲಕರಣೆ : ಜನರು ತಮಗೆ . . . ಅರಬಿಕುದುರೆ ಖಿಲ್ಲತ ವಗೈರೆ ಬಾಹಳ ಸರಂಜಾಮು ಪತ್ರ ಹಾಕಿದ್ದು XXX ತಮ್ಮ ಸನ್ನಿಧಾನಕ್ಕೆ ಬಂದು ಇಧಾರೆ (ಮದಚ. ೩-೧೨) ; ನಮಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಸ್ಥಳದ ಜನರು ಒದಗಿಸಿದರು (ಪ್ರವಾಇ. II. ೨೦). **ಸರಂಜಾಮ** : ಚನ್ನ ಸರಂಜಾಮ ಸಹಿತ ಹೊರಟಾನು (ಚಾಬಲ. ೩೫) ; ನೀಲಾಸಾನಿ ತನ್ನ ಸರಂಜಾಮದೊಂದಿಗೆ . . . ಸಂಗೀತ ನೃತ್ಯವನ್ನೆಸಗುತ್ತಿದ್ದುದೇ ಮುಖ್ಯಕಾರಣವಾಗಿತ್ತು (ಮಣ್ಣೆಮ. ೧೩). [← ಪಾರ. ಹಿಂ. ಮರಾ. ಸರಂಜಾಮ್ / ತುಳು. ಸರಂಜಾಮ್]

ಸರಂದೆಗೆ (ಕ್ರಿ). ಧ್ವನಿ ಹೊರಡಿಸು; ಕೂಗು : ಬರೆ ಮಧುವುಂ ಸರಂದೆಗೆಯದಿರ್ಪುವು ಕೋಗಿಲೆಗಳ್ (ಶಾಕುಂತ. ೮೧-೧೩೫). [ಸರ$_1$ + ತೆಗೆ$_1$]

ಸರಂದೋಱು, ಸರದೋಱು (ಕ್ರಿ). ಧ್ವನಿಮಾಡು : ನೀಂ ಮೆಲ್ಲಮೆಲ್ಲನೆ ಮಂದಾನಿಳ ತೀಡು ಕೋಗಿಲೆ ಸರಂದೋಱು (ಆದಿಪು. ೧೨-೪೩) ; ಕರೆದೊಡಂ ಮೊದಲಾಗಿ ಸರಂದೋಱೆದಪೆಯಲ್ಲ (ಪಂಚತಂ. ೩೮-೧೧). **ಸರದೋಱು** : ಮಗುಟ್ಟಂದಮೆಂತೊ ಮೇಣ್ಮಱೆದುವರ್ಣ್ಯದೊಳ್ ಸುಟೀವನಿಲ್ಲ ನರಂ ಸರದೋಱುವನ್ನನೇತೆಱದೊಳಮೆಂತು ಪ್ಪೊಪೆನೊ (ಕಾದಂಪು. ೬೨೬) ; ಕುಮಾರನಾ ಮದದಾನೆಯನು ಬೆಂಬರಿದು ಮಿಗೆ ಸರದೋಱೆ (ಸಾಳ್ವಭಾ. ೧೬-೧೩). [ಸರ$_1$ + ತೋಱು]

ಸರಕ್ 'ಸಱಕ್' ನೋ.

ಸರಕ (ನಾ). ೧. ಅವಿಚ್ಛಿನ್ನವಾದ ಮಾರ್ಗ. ೨. ಸಂಚಾರ ; ಚಲನೆ. ೩. ಕೊಳ; ಸರೋವರ. ೪. ಮದ್ಯ ; ಹೆಂಡ. ೫. ಮದ್ಯಪಾನ. ೬. ಮದ್ಯದೆ ಬಟ್ಟಲು; ಚಷಕ : "ಗರ್ಹಕಃ, ಅನುತರ್ಷಃ, ಚಷಕಃ, ಸರಕಃ - ಈ ೪ ತಿಳಿವಟ್ಟಲ್" (ಹಲಾಯು. ೫೪-೧೭೨). ೭. ಮದ್ಯವನ್ನು ಹಂಚುವುದು. ೮. ಸ್ವರ್ಗ. [ಸಂ.]

ಸರಕಂಗಟ್ಟು 'ಸರಕುಗಟ್ಟು' ನೋ.

ಸರಕಟಿಸು (ಕ್ರಿ). ರಭಸವಾಗಿ ಮುನ್ನುಗ್ಗು, – ದಾಳಿಯಿಡು : ರಾವುತ ಕಕ್ಕಲದೇವನುಂ ಸರಕಟಿಸಿ ಏಱೆದನ್ (ಎಕ. VIII, ನಗರ. ೧೯-೧೨ ; 1320) ; ಬಹುವಿಧದ ವಾದ್ಯವಿಡಾಯಿ ರಭಸದಲಿ ಸರಕಟಿಸಿ ನೂಕಿತು ಚತುರ್ಬಲ (ಕುವಾಕ್ರೋ. ೧೮-೧೩) ; ಸಮರವಿಲಾಸಿಗಳು ಸರಕಟಿಸಿ ಕಾದಿದರಳುಕಿ ಭುವನಚಯ (ತೂರಾ. ೬-೧೧-೨೦).

[ಸರಕಟ್ಟ (P←ಮರಾ. ಸರಕಟಣೇ) + ಇಸು$_3$]

ಸರಕರಣ (ನಾ). ಸ್ವರ ಹೊರಡಿಸುವುದು ; ಧ್ವನಿ ಮಾಡುವುದು : ಸ್ವರಕರಣ - ಸರಕರಣ (ಶಮದ. ೨೯೯ ಪ್ರಯೋ). [< ಸಂ.ಸ್ವರಕರಣ]

ಸರಕಲು (ನಾ). (ಮಣ್ಣು ಸರಿದುಹೋಗಿ ಉಂಟಾದ) ತಗ್ಗು ; ಗುಂಡಿ : ಹಳ್ಳದ ಸರಕಲನ್ನು ಮಣ್ಣಿನಿಂದ ತುಂಬುವದಕ್ಕೆ . . . ಹರಗಿದ ಹಾಗೆ ಮಣ್ಣು ಏಳಿಸಿ ಹಳ್ಳಗಳನ್ನು ತುಂಬಿಕೊಳ್ಳಬೇಕು (ಕೃಷಿಪ್ರ. ೩೯). 'ಕೊರಕಲು' ಪರಾ.

[ಸರಕು$_1$ + - ಅಲು (< - ಅಲ್$_2$)]

ಸರಕಾರ 'ಸರ್ಕಾರ' ನೋ.

ಸರಕಾರಿ 'ಸರ್ಕಾರಿ' ನೋ.

ಸರಕಾರಿನೌಕರಿ 'ಸರ್ಕಾರಿನೌಕರಿ' ನೋ.

ಸರಕಿಸು, ಸರಿಕಿಸು, ಸರುಕಿಸು (ಕ್ರಿ). ತಳ್ಳು ; ಜರುಗುವಂತೆ ಮಾಡು : (ಕ). **ಸರಿಕಿಸು** : ಪರಿಕಿಸಿ ನೋಡುತ ಮುರಿಕಿಸಿ ನುಡಿಯುತ ಸರಿಕಿಸಿ ತಡೆಯುತ . . . ಬರಲು ಮಾಯದ ಮೃಗವದು (ಹಮಚಿ. ೨೨). **ಸರುಕಿಸು** : (ಕ)

[ಸರಕು$_1$ + - ಇಸು$_3$, ಮರಾ. ಸರಕಣೇ]

ಸರಕು$_1$ ಸರಗು, ಸರುಕು$_1$ (ಕ್ರಿ). ೧. ಪಕ್ಕಕ್ಕೆ ಸರಿ; ಜರುಗು: ಇನ್ನೊಬ್ಬ ಮುದುಕ ಬಂದು ಮೊದಲು ಕುಳಿತವನಿಗೆ "ಸ್ವಲ್ಪ ಸರಕೋ" ಎಂದು ಹೇಳಿ ತಾನೂ ಕುಂಡೆಯೂರಿದನು (ಮೂಯದಾ. ೧೭೬). **ಸರಗು**: ೧. ಕೊಂಚ ಸರಗು, ನನಗೂ ಜಾಗ ವಾಗುತ್ತದೆ (ರೂಢಿ). ೨. (ಸಾಮಾನ್ಯವಾಗಿ ಎಮ್ಮೆಗಳು ತೊಂಡುಮೇಯಲು) ಅತ್ತಿತ್ತ ಓಡಾಡು; ತಿರುಗಾಡು : ಮನೆಯಿಂದ ಸರಗಾಡಲು ಬಿಟ್ಟ ಎಮ್ಮೆ ತನ್ನ ಮಣಕದೊಂದಿಗೆ ಸಾಹೇಬರ ಹತ್ತಿರವೇ ಬಂದಿತು (ಗ್ರಾಮಾಯ. ೧೧೯). **ಸರುಕು** : (ಕ). 'ಜರುಗು' ಪರಾ. [< ಸರ$_1$]

ಸರಕ್ಕು$_2$, ಸರುಕ್ಕು$_2$ (ನಾ). ೧. (ವ್ಯಾಪಾರದ) ಸಾಮಾನು; ಸಾಮಗ್ರಿ; ಪದಾರ್ಥ: ದಾರಿಯಲ್ಲಿ ಸರಕು ಮಱೆಯಲ್ಲದೆ ಮಾಱುವಲ್ಲಿ ಮಱೆ ಉಂಟೆ (ಸಕವ.ಕ. I, ೩೯೪-೬೫) ; ಉರಿಯ ಪೇಟೆಗಳಲಿ ಪತಂಗದ ಸರಕು ಮಾಱದೆ ಮರುಳುವುದೆ (ಕುವಾಕ. ೧೦-೨೮) ; ಒಟ್ಟೆಗಳ ವೇಸರದ ಪೊಱೆಯಾಳ ಕಂಬಿಗಳ ಕೊಟ್ಟಿಗೆಯ ಕೊಲ್ಲೂರ ಬಂಡಿಗಳ ಮೇಲೆ ಸರಕಿಟ್ಟಣಿಸಿ (ಜೈಮಿಭಾ. ೭-೫) ; ನೂರಾರು ಸರಕುಗಳು ಜೀವಿತದ ಸಂತೆಯಲಿ . . . ಬೇರೆ ಬೇರೆ ಪುರುಳ್ಗೆ ಬೇರೆ ನೆಲೆ, ಬೇರೆ ಬೆಲೆ (ಮಂಕುಕ. ೬೬೬). ೨. (ಆಲಂ) ಲಕ್ಷ್ಯ; ಗಮನ: 'ಸರಕುಗೊಳ್' ಪರಾ. **ಸರುಕ್ಕು$_2$** : ೧. ಉರಿದವರರೇ ತೇರುಗಳು ಕಾಲ್ಕಂದಿಗಳ್ಳೆಂದು ಧರೆಯೊಳ್ಬೇಗುದಿಗೊಂಡು ಬಿದ್ದುವು ಸರುಕುಗಳು ಭಸ್ಮಂಗಳಾದುವು (ಅರ್ಜುನವಿ. ೧೦-೧೯).

ಸರಕುಮಾಡು = (ಆಲಂ) ಲೆಕ್ಕಿಸು; ಗಣನೆಗೆ ತರು: ಬೊಮ್ಮರಂ ಬೆಳ್ಮಾಡುವರೆಂದಡೆ ಸ್ವಾಮಿಗಳಂ ಸರಕುಮಾಡುವರಾರು (ಬಸರ. ೮-೯೪); ಸಿರಿಯನುಳ್ಳವನೇ ಸುಶೀಲನು ಸಿರಿರಹಿತ ಶಿವನಾದೊಡಾಗಲಿ ಸರಕುಮಾಡದು ಲೋಕವು (ಕುವಾಉ. ೩-೩೮); ಭಕುತಿಸುಖಕೆಱಗಿದವರು . . . ಮುಕುತಿಸುಖವನು ಸರಕುಮಾಡರು (ನಿಭಾಗ. ೩-೬-೪೫).

[ದೇ. ∥ ತಮಿ. ಮಲ. ಚರಕ್ಕು; ತುಳು. ಸರಕ್, ಚರಕ್, ಚರಕು ; ತೆಲು. ಸರಕು]

ಸರಕುಗಟ್ಟು, ಸರಕಂಗಟ್ಟು (ಕ್ರಿ). (ಆಲಂ) ಸ್ಥಳ ಬಿಟ್ಟು ಹೋಗಲು ಅಣಿಯಾಗು; ಪಲಾಯನ ಮಾಡು : ಪುಣ್ಯದ ಫಲಂ ಪೆರ್ಗೊನೆಗಟ್ಟೆ ಪರಸಮಯಂ ಸರಕುಗಟ್ಟೆ ಪುರಮಂ ಪೊಱಮಟ್ಟು ಕಿಱೆದಂತರಂ ನಡೆತಂದು (ನಂಬರ. ೮-೫೯) ; ಪೋಯ್ತು ಪೋಯ್ತು ದುರ್ಗಮಿನ್ನೇನೆಂದೊಳಗೆಲ್ಲಮೆಯ್ದೆ ಸರಕುಗಟ್ಟೆ ಪೊಱಗೆಲ್ಲಮೆಯ್ದೆ ಗುಡಿಗಟ್ಟೆ ಸೀರೆಯಂ ಬೀಸಿ ಬೊಬ್ಬಿಱೆದಾಱೆ (ಅನಂಪು. ೧೧-೮೩ ವ). **ಸರಕಂಗಟ್ಟು** : ಪುಟ್ಟಲ್ ಮೆಲ್ಸರ ಕೇಳ್ವರ ಕಿವಿಯಂ ಮುಟ್ಟಲ್ಕಿದು ಕಿನ್ನರಿಯರ್ ಸರಕಂಗಟ್ಟಲ್ಗೇಯಂಗೆಯ್ವರ್ ಗಾಯಕಿ ಯರ್ಗಧಿನಾಯಕಿಯರ್ (ಉದ್ಭವೇ. ೬-೯). [ಸರಕ್ಕು$_2$ + ಕಟ್ಟು$_1$]

ಸರಕುಗೊಳ್, ಸರಕುಗೊಳ್ಳು (ಕ್ರಿ). ಲೆಕ್ಕಿಸು; ಗಮನಿಸು : ಪೊರೆವ ತಾಯಿಗಳಿಲ್ಲದವರಂ ಸರಕುಗೊಂಬರೆ ತಾಯಿಯುಳ್ಳಡೆ ದುರುಳ ಗರಳವನೇಕೆ ಸುತನಂ ಕುಡಿಯಲೀಸುವಳು (ಬಸಪು. ೧೩-೮). **ಸರಕುಗೊಳ್ಳು**: ಭರದ ಗುಡುಗು ಮಿಂಚು ಉರವಣೆ ಇರಲವ ಸರಕುಗೊಳ್ಳದೆ ಭೈರವಾಂಕ ಗುರುಪಾದಸ್ಮರಣೆಯಂ ಬರುತಿರೆ (ಭೈರವೇ. ೩-೧೭೫) ; ಪಿಂಗದೈಸಿರಿಯೊಳಾರಂ ಸರಕುಗೊಳ್ಳಂ (ಕೊಟ್ಟೂಬ. ೫-೬೬).

[ಸರಕ್ಕು$_2$ + ಕೊಳ್$_1$]

ಸರಕುಗೊಳ್ಳು 'ಸರಕುಗೊಳ್' ನೋ.

ಸರಕುಟವಕ್ಕಿ 'ಸರಕೂಟವಕ್ಕಿ' ನೋ.

ಸರಕುದೆಗಸು (ಕ್ರಿ). (ಆಲಂ) ಜಾಗ ಬಿಡಿಸಿ ಓಡಿಸು; ಗುಳೆಯೆತ್ತಿಸು: ಗಿರಿಗಿರಿಯ ಹೋರಟೆಯೊಳುಬ್ಬಿದ ಹೊರಳಿಗಿಡಿ ಹೊದಱೆದ್ದು ದಿಕ್ಪಾಲರ ಪುರಂಗಳ ಸರಕುದೆಗಸಿದವೇನನುಸುರುವೆನು (ತೂರಾ. ೪-೪-೧೯).

[ಸರಕ್ಕು$_2$ + ತೆಗಸು (< ತೆಗೆಯಿಸು)]

ಸರಕುದೆಗೆ (ಕ್ರಿ). (ಆಲಂ) ಜಾಗ ಬಿಟ್ಟು ಹೋಗು ; ಗುಳೆಯೆತ್ತು : ಯಮನ ಪಟ್ಟಣ ಸರಕುದೆಗೆಯಿತು ಮೃತ್ಯು ಮಱೆಹೊಕ್ಕಳು ಮಹೇಶ್ವರನ (ಕುವಾಕ್ರೋ. ೮-೧೧); ನಿರ್ಜರಪುರಂ ಸರಕುದೆಗೆದುಳಿದ ಲೋಕತತಿ ವರ್ಜಿತಸಮಸ್ತಜನಮಾಯ್ತು (ಚಿಬಪು. ೨೮-೧೧). [ಸರಕ್ಕು$_2$ + ತೆಗೆ$_1$]

ಸರಕೂಟವಕ್ಕಿ, ಸರಕುಟವಕ್ಕಿ (ನಾ). ಒಂದು ಬಗೆಯ ಹಕ್ಕಿ : "ಆಟಿಃ, ಶರಾರಿಃ, ಆತಿಃ - ಈ ೩ ಸರಕೂಟವಕ್ಕಿ" (ಹಲಾಯು. ೪೨-೯೬). **ಸರಕುಟವಕ್ಕಿ** : "ಶರಾರಿಃ, ಆಟ, ಆತಿಃ - ಈ ೩ ಸರಕುಟವಕ್ಕಿ" (ನಾಚರಾ. ೧೧೪). [ಸರಕೂಟ್ಟ$_0$ + ಪಕ್ಕಿ]

ಸರಕ್ಕನೆ 'ಸಱಕನೆ' ನೋ.

ಸರಕ್ತ (ಗು). ಕೆಂಪಾದ; ರಕ್ತವರ್ಣವುಳ್ಳ: ರಣಕ್ರೀಡಾಸಕ್ತಂ ಸರಕ್ತಲೋಚನಂ . . . ಚಕ್ರಮನಿಟ್ಟಂ (ಪಂರಾಮಾ. ೧೬-೧೫೫). [ಸಂ.]

ಸರಕ್ಷ (ಗು). ವಿಭೂತಿಯನ್ನು ಲೇಪಿಸಿಕೊಂಡ; ಭಸ್ಮಸಹಿತವಾದ: ವಳಕ್ಷ ಸರಕ್ಷದೇಹ ಮೋಹಕ್ಷಯ ದಕ್ಷ ರಕ್ಷಿಪುದು (ರಾಜಶೇ. ೧-೧೦). [ಸಂ.]

ಸರಗಂಟು (ನಾ). ಒಂದಾದ ಮೇಲೊಂದರಂತೆ ಬರುವ ತೊಡಕು ; ಸಾಲುಸಾಲಾಗಿ ಬರುವ ತೊಂದರೆ : ಇಂಥಾ ಸರಗಂಟ ಅದು? (ಹೊಸಂಸಾ. ೧೬೭). [ಸರ$_2$ + ಗಂಟು]

ಸರಗಂಟೆ (ನಾ). (ಸಾಮಾನ್ಯವಾಗಿ ಆನೆ, ಎತ್ತು ಮುಂತಾದವುಗಳ ಕೊರಳಿಗೆ) ಸಾಲಾಗಿರುವಂತೆ ಕಟ್ಟುವ ಗಂಟೆ ; ಗಂಟೆಗಳ ಸರ : ಕೊರಳ ಹೊರಜ ಕುಂಭಸ್ಥಳ ಕೋಹಾಳೆ ಸರಗಂಟೆ ಪಕ್ಕಗಂಟೆಗಳು ಬಿರುದಿನ ಪಟ ಪಲ್ಲವಸಕ್ತಿಗೆ ಮದಕರಿಯ ಮೇಲೊಡನೆ ಮೆಱೆದುವು (ಕಂಪಾ. ೨೩-೧೦೨). [ಸರ$_2$ + ಗಂಟೆ$_1$]

ಸರಗಟ್ಟು (ಕ್ರಿ). ೧. ಮಾಲೆಗಟ್ಟು ; ಹಾರವನ್ನಾಗಿ ಮಾಡು: ಮೊರವಳಿಯ ಸರಗಟ್ಟು ಮರುಗ ಮಲ್ಲಿಗೆಯ ಸೋಹರಗಿಳಿಯ ತುಱುಬು ಸುರಗಿಗೆ ಕುಟುಕನಿಕ್ಕು (ಪಚಕಾ. ೪-೫೦) : ಪರಿಮಳವೆರೆದಿಂಪಿನ ದಿವ್ಯಪುಷ್ಪವ ಪರಿಕೊಂಡತಿಹರುಷದಲಿ ಸರಗಟ್ಟಿ ಬೆಲೆಗೆ ಮಾಱುವ ಮಾಲೆಗಾತಿಯರಿರವ ನಾನೇನ ಬಣ್ಣಿಪೆನು (ಕಂಪಾ. ೨-೮೩) ; ಅರವಿಂದಪತ್ರದೊಳ್ ಜಲಬಿಂದು ಸನ್ಮಣಿವೊಲಿರೆ ಕಂಡು ಸರಿಗಟ್ಟಿದಪೆನೆಂದು ತೆಗೆಯಲೆಳೆ ಮುರುಟಿ ಬೀಳ್ಕುಕಟ ಮುತ್ತುದುರ್ದುವೆಂದೊಡನೆ ಕೈಯಿಕ್ಕೆ (ನಂದಿಮಾ. ೬ ೩೩). ೨. ಸಾಲಾಗಿ ಕಟ್ಟು: ಉರವಣಿಸುವ ತುರುಕರನು ಮುರಿಯಲಿಱಿದು ಮೂಗರಿದು ತಂದಾಕ್ಷಣ ಸರಗಟ್ಟಿ ಮೆಱೆಸಿದರಾಗ (ಕಂಪಾ. ೧೫-೩೯). [ಸರ$_2$ + ಕಟ್ಟು$_1$]

ಸರಗಡಲು (ನಾ). ದೀರ್ಘವಾದ ಸಮುದ್ರ; ವಿಶಾಲವಾದ ಸಾಗರ: ಮಡದಿಗಾಗಿ ಸರಗಡಲನೆ ಕಟ್ಟಿ ಹಿಡಿದು ರಾವಣನ ಕೊಂದ (ಪುರಂದ. ೩-೨೪-೭). [ಸರ$_2$ + ಕಡಲು (< ಕಡಲ್$_2$)]

ಸರಗತೆ (ನಾ). ಒಂದಾದ ಮೇಲೊಂದರಂತೆ ಹೇಳುವ ಕತೆ : ಬೇಸರ ಪರಿಹಾರಕ್ಕಾಗಿ ಯಾರಾದರೊಬ್ಬರು ಸರದಿಯ ಮೇಲೆ ಹೇಳುತ್ತಿದ್ದ ಸರಗತೆಯನ್ನು ತಾನು ಕೇಳಿದ್ದು (ಮಲಮ. ೬೭೭). [ಸರ$_2$ + ಕತೆ]

ಸರಗರಂ 'ಸರಗರಮು' ನೋ.

ಸರಗರಮು, ಸರಗರಂ (ನಾ). ಆಸಕ್ತಿ : ಬಹಳ ಸರಗರಮಿನಿಂದಾ ಮಾಡಿದ್ದು ಯಾವತ್ತು ನಾವು ಕೇಳಿ . . . ಸುಖದಿಂದಾ ಇರಬೇಕು ಎಂತಾ ಬೇಡಿಕೊಳ್ಳುತ್ತಾ ಇದ್ದೇವೆ (ರಾಜೇಂದ್ರ. ೧೩೬). **ಸರಗರಂ** : ೨. ನಿರತನಾದವನು ; ಆಸಕ್ತ : ಸರಹದ್ದಿನಲ್ಲಿ ಕಲ್ಲುಗಳ ನೆಡುವ ಚಾಕ್ರಿ ಮೇಲೆ ಸರಗರಂ ಆಗಿ ಇದ್ದಾನು (ರಾಜೇಂದ್ರ. ೧೩೯). [← ಪಾರ. ಮರಾ. ಸರಗರಮ್]

ಸರಗಸ್ತು (ನಾ). ರಾತ್ರಿಯಲ್ಲಿ ಮಾಡುವ ಮದುವೆ ಮುಂತಾದುವುಗಳ ಮೆರವಣಿಗೆ: (ಪ). [← ಪಾರ. ಮರಾ. ಸರಗಶ್ತ್]

ಸರಗಾಣ್ (ಕ್ರಿ). ಧ್ವನಿಯನ್ನು ಪರೀಕ್ಷಿಸು : ವೀಣೆಯನರಸಿ ತೆಗೆಕೊಂಡಾ ಶ್ರುತಿಯ ಕಿಱುವೆರಳಿನಲಿ ಮಿಡಿದೊಡನೆ ಟೀಪಿಯನೆತ್ತಿ ಸರಗಂಡು ಹೊರೆಯ ಮಧುರದ ಷಡ್ಜಪಂಚಮದೆರಡುತಂತಿಯನಾರಯಿದು . . . ಬಾಜಿಸಿದಳಾ ಚದುರೆ (ಸಾಳ್ವಭಾ. ೧೪-೭). [ಸರ$_1$ + ಕಾಣ್]

ಸರಗು 'ಸರಕು$_1$' ನೋ.

ಸರಗುಣಿಕೆ (ನಾ). ಎಳೆದರೆ ಬಿಗಿದುಕೊಳ್ಳುವಂಥ ಗಂಟು ; ಜೀರುಗುಣಿಕೆ : ಬಿಳಿಯ ಕನ್ನಡಕ . . . ದಾರಕಟ್ಟಿ ಹಿಂದೆ ಸರಗುಣಿಕೆ ಹಾಕುವಂಥದು (ನಾಡಿಗೇ. ೧೦೬) ; ಮೊದಲನೆಯ ಮುದುಕನು ಉದ್ದವಾಗಿ ಹಗ್ಗವನ್ನು ಹೊಸೆಯುತ್ತ ಅದರ ಸರಗುಣಿಕೆಯನ್ನು ಹೊಸಬನ ಕೊರಳಿಗೆ ಸಿಕ್ಕಿಸಿದನು (ಮಾಗಜ. ೩). [ಸರ$_2$ + ಕುಣಿಕೆ$_2$ (< ಕುಳಿಕೆ$_1$)]

ಸರಗುದ್ದು (ನಾ). ಉದ್ದವಾಗಿ ಇರುವ ಬಿಲ : ಗುದ್ದುಗಳಲ್ಲಿ ಕೆಲವು ಬಹಳ ಉದ್ದವಾಗಿರುತ್ತವೆ. ಅವುಗಳನ್ನು ಸರಗುದ್ದು ಎಂದು ಕರೆಯುತ್ತಾರೆ (ಕಾಸೂಯ. ೩೯೦). [ಸರ$_2$ + ಗುದ್ದು$_2$]

ಸರಗೆಯ್ (ನಾ). ಹಾರದಂತೆ ಮಾಡು ; ಮಾಲೆಗಟ್ಟು : ಬಲಿದ ಬಾಳೆಯ ಕಾಯ . . . ಚಿಕ್ಕಡಕೆಯಂದದೊಳು ಕತ್ತರಿಸಿ ಬಲಿಯಿಸಿದ ಹಾಲಂ ಮತ್ತದಱ ತೆಱದಿ ಕುಯ್ದು ಬಾಳೆಯ ಕಾಯನು ಬೆರಸಿ ಸರ [ಪಾಕಾಂ. ೮]ಗೆಯ್ದು ತುಪ್ಪದೊಳಿದ್ದಿ (ಸೂಪಶಾ. ೪-೮೪). [ಸರ$_2$ + ಕೆಯ್$_1$]

ಸರಗೆಯ್ಯು 'ಸರಂಗೆಯ್' ನೋ.

ಸರಗ್ಗೆ 'ಸರಂಗೆಯ್' ನೋ.

ಸರಗೊಡು 'ಸರಂಗುಡು' ನೋ.

ಸರಗೊಳಿಸು 'ಸರಂಗೊಳಿಸು' ನೋ.

ಸರಗೊಳು 'ಸರಂಗೊಳ್' ನೋ.

ಸರಗೋಲು (ನಾ). (?). ಎಮ್ಮೆ ತಿಂದು ಕುಡಿದಿದ್ದನೆಂದರೆ, ಕಡುಬು ತುಂಡು ಕಳ್ಳು. ಹೆಂಡ ತುಂಬಿದ ಸರಗೋಲಾಗಿ ಹೋಗಿದ್ದನು! (ಮಲಮ. ೨೪). [?]

ಸರಗೋವಿ (ನಾ). ನಿಡಿದಾದ ಕೋವಿ, — ಬಂದೂಕು : ಆನೆಗಳ ನೀಡುಗೋಡುಗಳಂ ಕಂಭಂಗಳಂ ಗಂಡುಗಲಿಗಳ ಗುಂಡುಗೋವಿ ಸರಗೋವಿಗಳಂ ಬೋದಿಗೆ ತೊಲೆಗಳಂ . . . ಅಳವಡಿಸಿ (ಚಿಕವಂ. ೫೪-೧೪). [ಸರ$_2$ + ಕೋವಿ$_1$]

ಸರಜಂಗು (ನಾ). (ಎತ್ತು, ಕುದುರೆಗಳ ಕಾಲಿಗೆ ಕಟ್ಟುವ) ಸಣ್ಣಗೆಜ್ಜೆ: ಬಸವಣ್ಣ ಬೋರಂಗಿ ಪಕ್ಕ ಸರಜಂಗು ಕಟಗೊಂಡು ಏರಿ ಮೇದಾನೂ ಎಳೆಹುಲ್ಲೂ (ಜನಗೀ. ೧೬) : ಕರಿಯೆತ್ತಿಗೆ ಕಮಳದ್ದೂ ಬಿಳಿಯೆತ್ತಿಗೆ ಗೆಜ್ಜೆಸರ ಸಾರಂಗೆಂಬುಯೆತ್ತಿಗೆ ಸರಜಂಗ ಕಟ್ಟಿತ್ತ (ಲೋಕಗೀ. ೧೬೭). [ಸರ$_2$ + ಜಂಗು$_2$]

ಸರಜ್ಯಾ (ನಾ). ಕರವಸೂಲಿ ಮಾಡುವ ಮುಖ್ಯಾಧಿಕಾರಿ; ಜಕಾತಿದಾರ : ನಿಚ್ಚಮದವನಿಗ ಹನುಮಪ್ಪನಾಯಕರ ಪುತ್ರರಾದ ಸರಜ್ಯಾಹನುಮಪ್ಪನಾಯಕರು (ಎಕ. VI, ತೀಕೆ. ೨೧-೧೩ ; 1655). 'ಸರ್ಜ$_2$' ಪರಾ. [IP ಇದು 'ಸರ್ಜಾ' ಎಂಬುದರ ಅಪಲಿಖಿತ]

ಸರಟ (ನಾ). ೧. ಓತಿಕೇತ ; ಊಸರವಳ್ಳಿ : "ಸರಟಃ, ಕೈಕಲಾಸಃ - ಈ ೨ ವೋತಿ" (ಪಲಾಮು. ೬೯-೬೧) ; ನರಿ ಶಶಕಂ ವ್ಯಕಂ ಸರಟನೆಯ್ದಮಿಗಂ ಮರೆವಿಂಡು ಬೆಕ್ಕು (ಗಿಂಕ. ೧-೭೩) ; ಹರಿಣ ಭಾರದ್ವಾಜನುಡಿಕೆಯ ಸರಟ ನಕುಲನ . . . ಶಕುನವನು ಕೈಕೊಳುತ ನಡೆತಂದ (ಕುವಾಳ. ೪-೭೩). ೨. ಗಾಳಿ. ೩. (ಆಲಂ) ಅನಿಶ್ಚಯಬುದ್ಧಿಯವನು: ಸರಟನ ಮುಂದೆ ಸತ್ಯವಿದ್ದಡೆ ನಿಶ್ಚಯಿಸಲಱಿಯ (ವೀಳಮಾ. ೨೫-೧೦೧). [ಸಂ.]

ಸರಟಪುರ 'ಸರಟವುರ' ನೋ.

ಸರಟವುರ, ಸರಟಪುರ (ನಾ). ಒಂದು ಊರಿನ ಹೆಸರು : IP ಧಾರವಾಡಜಿಲ್ಲೆಯಲ್ಲಿರುವ ಈಗಿನ ಗದಗತಾಲ್ಲೂಕಿನ ಸೊರಟೂರು : ಪುರಿಗೆಱೆನಾಡ ಸರಟವುರದಾ(ದ)ಯ್ಯದಿಮ್ಮರುಮಿಟ್ಟು ನಾಡಯಿಸೆ ಮಾನಸಿಗರ ಚಿದಾ(ದ)ಣ್ಣ(೦) ಗೋಸಾಸಮಿಟ್ಟೊಡೆ(೦) (ಎಇ. XXI. ೨೦೪-೫ ; 883); ಸರಟವುರಮನಂಗರಕಂ ಶ್ರೀರುದ್ರಪಯ್ಯನಾಳುತ್ತಿರೆ (ಇಆ. XII, ೨೫೭-೭ ;951). **ಸರಟಪುರ**: ಸರಟಪುರದ ಅಯ್ಯದಿಮ್ಮಗ್ಗಾ x ಯಾನುಪುರ್ಬ್ಬದಿನ್ದ ತುಪ್ಪದೆ[ಱಿ]ನುಟಿದೋನ್ (ಸೌಇ. XI-i, ೧೨-೧೨; 867). [? + ಪುರ$_2$]

ಸರಡ 'ಸರಾಡ$_1$' ನೋ.

ಸರಡು$_1$ (ನಾ). ಮೋಸ; ಕಪಟ : ಬರೆದಾತನ ಸಾಕ್ಷಿಗಳಳಿದರು ಗಡ ನೆರವಿ ನೀವಪ್ಪುದೆಂಬರಿ ಗಡ ಸರಡಿನೋಲೆಯ ತೋಱಿ ನಮ್ಮನಾಳ್ದಪ ಗಡ ದುರುಳ ಹಾರುವ ಲೇಸುಲೇಸೆಂದ (ತ್ರಿಭುತಿ. ೧೦-೧೬) ; ಸರಡುಂ ಬರಡುಂ ನುಡಿಗಳ ಪರಿಹರಿಸಿ ನಿಜಾತ್ಮಗುಣ ಪೆರ್ಚಿಸುವಂತಾಯರಡೆರಡುಂ ಮಾತಿನಿಂದಲಿ ನಿರಂತರಂ ತತ್ಪದಲ್ಲಿಯಭ್ಯಾಸಿಸು ನೀಂ (ಭವ್ಯಾಪ್ಯ. ೧೪). [← ತಮಿ. ಚರಟು = ಯುಕ್ತಿ]

ಸರಡು$_2$ (ನಾ). ಎಳೆಯದಾದ ಹಣ್ಣು : ಪರಡಿಗವಿಲೆಯ ಪಾಯಸಂಗಳ ಬಡಿಸುತಂ ಸರಡುಸವಿಗಳ ಪಳಿವ ತಿಳಿದುವ್ಯಮಂ ನೆಱೆದು (ಲಿಂಗಪು. ೧೪-೩೬). [< ಪ್ರಾ. ಸರಡು. / ಸಂ. ಶಾಲಾಟು]

ಸರಡು$_3$ (ನಾ). ಒಂದು ಬಗೆಯ ಜರತಾರಿಬಟ್ಟೆ : ಸಾವಳಿ ಸರಡು . . . ಚಂದ್ರಾಭರಣ ಮೊದಲಾದ ನಾನಾವಸ್ತ್ರಗಳಂ ಕುಡುವ ವದ್ಮನಿಧಿಯುಂ (ಶಾಸ್ತ್ರೋ. ೧೪-೬). [?/ ತಮಿ. ಚರಟು]

ಸರಡುವೀಟ್ (ಕ್ರಿ). ಒಣಗು ; ಬಾಡು (?) : ಬೇಸಗೆಯ ಬಿಸಿಲ ಸೋಂಕಿಂ ವಾಸಂತೀವಲ್ಲಿ ಸರಡುವಿರ್ದಂತಿರೆ ನಿನ್ನೀ ಸುಕುಮಾರಲತಾತಿವಿಳಾಸಮಿದೇಕಾರಣಂ ನಯಂಗುಂದಿದುದೋ (ಮಲ್ಲಿಪು. ೪-೭). [ಸರಡು$_7$ + ಬೀಟ್$_1$]

ಸರಡೆ 'ಸಱಡು' ನೋ.

ಸರಣ್ 'ಶರಣ್' ನೋ.

ಸರಣ$_1$ (ನಾ). ೧. ಚಲನೆ ; ಗತಿ. ೨. ಪ್ರವಾಹ. ೩. ಕಬ್ಬಿಣದ ತುಕ್ಕು,— ಜಂಗು. [ಸಂ.]

ಸರಣ$_2$ (ನಾ). ಚಿತೆ : ಒಂದ ಸರಣದಾಗ ನಾಲ್ಕ ನಾಲ್ಕಹೆಣ (ನಿಸರ್ಗ. ೧೫೯) ; ಸರಣದಾಗ ಹಾಕಿದರೂ ಅವ ತನ್ನ ಗುಣ ಬಿಡುವುದಿಲ್ಲ (ಸುವರ್ಣ. ೩೨೭). [← ಮರಾ. ಸರಣ]

ಸರಣವೃತ್ತಿ (ನಾ). ಶರಣರ ಭೋಜನಕ್ಕಾಗಿ ಬಿಟ್ಟ ದತ್ತಿ : ಅಳ್ಳಿಯನ ಮಗಂ ನಾದಯ್ಯನ ಬಮ್ಮಂ ದಳಱಂ ಕೊ[ಣ್ಡು] ಬಿಟ್ಟ ಸರಣವೃತ್ತಿ (ಮೈಅರಿ. ೧೯೩೦, ೭೫-೨೯ ; 1082). [< ಸಂ. ಶರಣವೃತ್ತಿ]

ಸರಣಾಗತ (ನಾ). ಮೊರೆಹೊಕ್ಕವನು ; ಶರಣಾದವನು : ಸಾಹಸೋತ್ತುಂಗಂ ಸರಣಾಗತವಜ್ರಪಂಜರಂ ವೈರಿಮದಭಂಜನಂ (ಸೌಇ. XI, ೮೧ ೧೨ : 1068). [< ಸಂ. ಶರಣಾಗತ]

ಸರಣಿ (ನಾ). ೧. ದಾರಿ; ಹಾದಿ; ಮಾರ್ಗ: ಗುರುವೆ ನಿಮ್ಮಲಿ ನಾವು ವೀರರೆ ಸರಣಿಯನು ಬೆಸಸುವುದು ತನಗೆ (ಕೌಶಿಂ. ೯-೬೩) ; ಉಪಾಯಮಂ ಸಾಧಿಸುವ ಸರಣಿಯನೊರೆಯಬೇಕು (ಗಗತಾ. ೧೩-೧೧). ೨. ಕ್ರಮ ; ರೀತಿ ; ವಿಧಾನ : ಲೋಹಕ್ಕೆ ಪರುಷದ ಸರಣಿಯಿಂ ಗತಪೂರ್ವವರ್ಣಾಂತಪ್ರಯುತಮಾಗಿ (ಬಸವು. ೩೮-೪೫) ; ಮುನಿಪತಿಯರಣಿಯನು ಕೊಂಡೊಯ್ದ ಹುಲುಮೃಗಸರಣಿಯಲಿ ಸೈವರಿದರಂದಾರ್ಕಣ್ ಮಾರ್ಗಣರು (ಕುವ್ಯಾಅ. ೨೩-೯) ; ನಾನು ಬರೆಯುತ್ತಿರುವ ವಾಕ್ಯಗಳಲ್ಲಿ ಸರಣಿಯಿಲ್ಲ (ಹೊಸಕ್ತಿ. ೩). ೩. ಶೈಲಿ ; ಧಾಟಿ ; ಗತಿ : ಸರಳತೆಗೆ ಮನವೊಲಿದಿದ್ದ ವೀರಶೈವಕವಿಗಳ ರಚನೆಗೆ ಸಾಂಗತ್ಯದ ಸರಣಿ ತುಂಬ ಅನುಕೂಲವಾಯಿತು (ಕುಮಾಸಾಂ. ೪) ; ಅವಳ ಮಾತಿನ ಸರಣಿ ತನ್ನ ಸರಳಮನಸ್ಸಿಗೆ ಸಮನಾದ ಅರ್ಥ ಕೊಡದೆ ಹೋಯಿತು (ಮೂಕಜ್ಜಿ. ೩೪). ೪. ನೇರವಾದ ಸಾಲು ; ಅವಿಚ್ಛಿನ್ನವಾದ ಶ್ರೇಣಿ. ೫. ಒಂದು ಬಗೆಯ ಗಂಟಲುಬೇನೆ. [ಸಂ. ಸರಣಿ, ಸರಣೀ]

ಸರಣಿಗೆಡು (ಕ್ರಿ). ಹಾದಿತಪ್ಪು ; ದಾರಿತಪ್ಪು : ಕಲಕಲುಂ ಸಕಲಸಿಂಧುಗಳ್ ತರಣಿಶಶಿಗಳ್ ಸರಣಿಗೆಡೆ ಜಗದೊಳಂಧಕಾಸುರನ ಭೀರೀರವಂ ಪೊಣ್ಮೆದುದು (ಚಿಬಪು. ೪೭-೩೧). [ಸರಣಿ + ಕೆಡು$_1$]

ಸರಣಿದೋಱು (ಕ್ರಿ). ಮಾರ್ಗವನ್ನು ಕಾಣಿಸು ; ಹಾದಿಯನ್ನು ತೋರು : ತೊಱೆವೆಣ್ಣಬ್ಬಗೆಯಾಗಿ ಸರಣಿದೋಱಲು ವರಗುರುಶಿಷ್ಯರೊಂದಾಗಿ ನಡೆಯೆ (ಕರಚಾ. ೪-೪೦). [ಸರಣಿ + ತೋಱು]

ಸರಣು 'ಶರಣ್' ನೋ.

ಸರಣ್ಬುಗು 'ಶರಣ್ಬೊಗು' ನೋ.

ಸರಣ್ಬೊಗು 'ಶರಣ್ಬೊಗು' ನೋ.

ಸರತಪ್ಪು 'ಸರದಪ್ಪು' ನೋ.

ಸರತಾತಿ (ನಾ). ತೋಳಿಗೆ ಧರಿಸುವ ಒಂದು ಬಗೆಯ ಆಭರಣ : ತೋಳೊಳೊಪ್ಪುವ ಸರತಾತಿ ಹೊಂಬಳಿಗಳ ಬಾಲೆವೆಣ್ಣುಗಳ್ಕೆದಿದರು (ಕಂನವಿ. ೨೧-೧೬). 'ಸರದಾಳಿ$_1$' ಪರಾ. [ಸರ$_2$ + ತಾತಿ$_2$ (< ತಾಯಿತಿ)]

ಸರತಿ$_1$ 'ಸರದಿ$_3$' ನೋ.

ಸರತಿ$_2$ 'ಸರದಿ$_4$' ನೋ.

ಸರತ್ತಿ (ನಾ). ಮೊಳಕೈಯಿಂದ ಮುಷ್ಟಿಯ ತುದಿವರೆಗಿನ ಅಳತೆ ; ಒಂದು ಗುದ್ದುಮೊಳ : "ಸರತ್ತಿ - ಹಿಡಿಕೆಯ ಹಿಡಿದು ಅಳೆದ ಮೊಟಂ" (ನಾಚರಾ. ೬). [ಸಂ.]

ಸರಥ (ಗು). ೧. ರಥಸಹಿತವಾದ ; ರಥವನ್ನುಳ್ಳ. ೨. ಒಂದೇ ರಥದಲ್ಲಿ ಏರಿರುವ. (ನಾ). ೩. ರಥದಲ್ಲಿದ್ದುಕೊಂಡು ಯುದ್ಧಮಾಡುವವನು; ರಥಿಕ : ಸರಥನದೊರ್ವಂ ದೂರದೆ ಬರುತಿರ್ದಪನವನೊಳಱಿವೆನಾಹವ ವಾರ್ತಾಂತರಮಂ (ಕುಸುಮಾ. ೧೧-೧೬). [ಸಂ.]

ಸರದ (ನಾ). ಶರತ್ಕಾಲ ; ಶರದೃತು : ಸರದದ ಮುಗಿಲನೆ ಬಿಡದನುಕರಿಸುವ ಧವಳಾಶ್ವದಿಂದಮೆಸದೊಪ್ಪುವ ಲೋಹರಥಂ (ಪಂಪಭಾ. ೧೦-೫೬) ; ಸರದದ ಮುಗಿಲ್ಗಳೆಱಗಿದ ತರಳಸ್ಫಟಿಕಾದ್ರಿನಿಕರಮೆನೆ . . . ಪೆರ್ದೆರೆವಿಂಡುಗಳೆಸೆವುವಾ ಮಹಾವಾಹಿನಿಯೊಳ್ (ಚಂದ್ರಪ್ರ. ೧೦-೫೦) ; ಸರದದ ನವಚಂದ್ರಿಕೆಯಂ ಪೊರೆಯೆತ್ತಿದ ತೆಱದೆ ಮಿಱುಪ ಬೆಳ್ಗಂ ತಳ್ಗಂ ಪಿರಿದೆಸೆವ ಮಂಡಕಾಪರಿಕರಮಂ ಬಡ್ಡಿಸಿದರಸದಳಂ ಸುರಸತಿಯರ್ (ಶಾಂತೀಶ್ವ. ೧೫-೬೧). [< ಪ್ರಾ. ಸರದ. /ಸಂ. ಶರದ್]

ಸರದಪ್ಪು, ಸರತಪ್ಪು (ನಾ). ಒಂದಾದ ಮೇಲೊಂದರಂತೆ ಆಗುವ ತಪ್ಪು; ತಪ್ಪುಗಳ ಸರಣಿ : ಸಾಕ್ಷಾತ್ ವಿರೂಪಾಕ್ಷನ ಸನ್ನಿಧಿಯಲ್ಲಿ ಹೇಳಿಸುವುದು ನಾಲ್ಕನೆಯ ಸರದಪ್ಪು (ತುಂಗಭ. ೯೭). **ಸರತಪ್ಪು** : ಬರೆದ ಉತ್ತರದಲ್ಲೆಲ್ಲಾ ಸರತಪ್ಪುಗಳೇ ತುಂಬಿವೆ (ರೂಢಿ). [ಸರ$_2$ + ತಪ್ಪು$_2$]

ಸರದಾಗಮ (ನಾ). ಶರತ್ಕಾಲದ ಆಗಮನ,— ಪ್ರಾರಂಭ : ಸರದಾಶಯಕ್ಕೆ ವಿಶದತೆ ಸರದಾಗಮದಿಂದಮಪ್ಪ ತೆಱದಿಂದೆ ಮುನೀಶ್ವರರಾಗಮದಿಂದವನೀಶ್ವರಾಶಯ ಕ್ಕಾದುದತಿಶಯಂ ವಿಶದತ್ವಂ (ಪಾರ್ಶ್ವಪು. ೧೨-೩೪). [< ಸಂ. ಶರದಾಗಮ]

ಸರದಾರ, ಸರ್ದಾರ್, ಸರ್ದಾರ (ನಾ). ೧. ದೊಡ್ಡ ಅಧಿಕಾರಸ್ಥ; ಮುಖ್ಯ ಅಧಿಕಾರಿ : (ಕ). ೨. ದಕ್ಷ ; ಸಮರ್ಥ : "ಸರದಾರನೆನಲ್ ಸಲೆ ಸಮರ್ಥನೆಂದಱಿಗೆ ಬುಧರ್" (ಭಾರಾ. ೩೪) ; ದಾರಿಯಿಂದ ಹೋಗುವ ಕಳ್ಳನು ಸಹ ಇಂಥಾ ಶೂರ ಸರದಾರನಿಗೆ ಇಷ್ಟು ಕಮ್ಮತ್ತು ನಗುನಗುತ್ತಾ ಕೊಟ್ಟಾನು ! (ಮೋಹನೀ ೬೭). ೩. ಒಡೆಯ; ಯಜಮಾನ : ಸರದಾರ ಬರುವಾಗ ಸುರಿದಾವ ಮಲ್ಲೀಗಿ ದೊರೆ ನನ್ನ ತಮ್ಮ ಬರುವಾಗ ಯಾಲಕ್ಕಿಗೊನಿ ಬಾಗಿ ಹಾಲ ಸುರಿದಾವ (ಗರತಿ. ೫೮) ; ಸರದಾರ ನಿಮ್ಮಿಂದ ಸರುವೆಲ್ಲ ಮರತೇನ ಸರದಾಗ ಇರುವ ಗುಳದಾಳಿ ನಿಮ್ಮಿಂದ ಸರುವಬಳಗೆಲ್ಲ ಮರತೇನ (ಕನ್ನಡಾ. ೧೧೯). ೪. ಸೇನಾಧಿಕಾರಿ ; ಪಡೆವಳ : ಕೊಡಗಿನ ಮಂದಿಯು . . . ಅವರ ಕಡೆಯ ಸುಮಾರು ೧೫೦೦ ಜನ ಪರಿಯಂತರ ಮೃತವಾಗಿ, ೭೭ ಅಂದಳದ ಸರದಾರರ ಸಹ ಕಡಿದು ಹಾಕಿದರು (ರಾಜೇಂದ್ರ. ೫) ; ಸಾಹಸವ ತೋರ್ಪೆವೆಂದಾವರಿಸಿ ಜರ್ನಲ್ಲು ಕರ್ನಲ್ಲು ಮೊದಲಾದ ಸರದಾರರೈತಂದರು (ವರ್ಷವ. ೩-೫೪) ; ಸಾವಿರಕುದುರೆ ಸರದಾರ ಮನೆಹೆಂಡತಿಗೆ ಕಾಸ್ತಾರ (ಗಾದೆ). **ಸರ್ದಾರ್** : ೧. (ರೈಸ್‌ಗೆ. II, ೫೭೧). **ಸರ್ದಾರ** : ೧. ನೌಕರರಿಗೆಲ್ಲ ಅವನೇ ಸರ್ದಾರ (ಸಾಹೇಬ್. ೧೩) ; ಬೀದಿಪೋಲಿಯಾಗಿ ತಿರ್ಗಾಡ್ತಿದ್ದ ಆ ಭುಜಂಗ ದೊಡ್ಡ ಸರ್ದಾರ ಆಗಿ ಸೂಟುಬೂಟು ಹಾಕಾಕೆ ಸುರುಮಾಡ್ದ ! (ಡೇಶಭು. ೭೫). [← ಪಾರ. ಹಿಂ. ಮರಾ. ಸರ್ದಾರ್]

ಸರದಾಲಿ, ಸರದಾಳಿ$_2$ (ನಾ). ಒಂದು ಬಗೆಯ ಔಷಧೀಸಸ್ಯ : "ಕೌಡಿಲ್ಯ:- ಕಂಬಳಿಹುಳ, ತುಂಬಿ, ಸರದಾಲಿ" (ಓಷಧಿ. ೪೨) ; ಗುಹಾ = ಸರದಾಲೀ (ಎಸ್ಕೆವಿ. ೬೦). **ಸರದಾಳಿ$_2$** : ಬಹುಮೂತ್ರಕ್ಕೆ - ಸರದಾಳಿಯ ಸಮೂಲವಂ ತಂದು ನಿಂಬೇಹುಳಿಯಲ್ಲಿ ಕೊಳ್ಳಲು ಗುಣ (ಎಸ್ಕೆವಿ. ೧೨೧). [?]

ಸರದಾವಣಿ (ನಾ). ದನಗಳನ್ನು ಸಾಲಾಗಿ ಕಟ್ಟುವ ಹಗ್ಗ, — ಹಂತಿ ಕಟ್ಟುವ ಹಗ್ಗ : ಸರದಾವಣಿಗೆ ದನವನು ಮಾಡಿ ಕಟ್ಟಿಯೆ ಹರುಷದಿಂದಾಳುತಾಳಿಹಳು (ದೇವಾಂಪು. ೨-೨೫೨). [ಸರ$_2$ + ದಾವಣಿ$_1$]

ಸರದಾಳಿ$_1$ (ನಾ). ಒಂದು ಬಗೆಯ ಕಂಠಾಭರಣ : ಕೊರಳಿನಲ್ಲಿ ಗಟ್ಟಿಮುಟ್ಟಿಯಾದ ಐವತ್ತು ಪುತ್ಥಳಿಗಳ ಸರವೊಂದು, ಗೆಜ್ಜೆಟೀಕೆ, ಸರಿಗೆ, ಸರದಾಳಿ ಸಾಮಾನೊಂದಚ್ಚೇರಿನದು (ಹೂಬಿಸಿ. ೭೨). [ಸರ$_2$ + ತಾಳಿ$_1$ (< ತಾಲಿ$_1$). /ತಮಿ. ಚರಟ್ಟುತ್ತಾಲಿ]

ಸರದಾಳಿ$_2$ 'ಸರದಾಲಿ' ನೋ.

ಸರದಿ$_1$ (ನಾ). ಕಡಲು ; ಸಮುದ್ರ : ಸೊರೆಯೊಳಗೆ ತೀವಿ ಮಣ್ಣಂ ಸರದಿಯೊಳಿಕ್ಕಿದೊಡೆ ನೆಗೆಯಲಾರ್ಪುದೆ (ಧರ್ಮಾಮೃ. ೯-೧೨೧). [< ಸಂ. ಶರಧಿ]

ಸರದಿ$_2$, ಸರ್ದಿ (ಗು). ೧. ತಂಪಾದ ; ಶೀತಲವಾದ. (ನಾ). ೨. ತಂಪು ; ಶೈತ್ಯ : (ಕ). ೩. ನೆಗಡಿ : (ಕ). **ಸರ್ದಿ** : ೧. ಮಳೆಗಾಲದಲ್ಲಿ ಉಪ್ಪಿನ (ಉತಾರ) ಅಳತೆ ಮತ್ತು ತೂಕ ಬಹಳೇ ಕಡಿಮೆ ಬರುತ್ತದೆ . . . ಸರ್ದಿಹವೆಯಿಂದ ಹಶಿಆಗಿ ಉತಾರನಕಾ ಬಹಳೇ

ಕಡಿಮೆ ಬರುತ್ತದೆ (ಮುಂಬಪ್ಪಾ . ೨೬೬). ೩. ಮಳೆಯಲ್ಲಿ ನೆನೆದು ಮಗುವಿಗೆ ಸರ್ದಿ ಆಗಿದೆ (ರೂಢಿ). 'ಶಲದ್ಧಿ' ಪರಾ.

[← ಪಾರ. ಹಿಂ. ಸರ್ದೀ ; ಮರಾ. ಸರದೀ, ಸರ್ದೀ]

ಸರದ್ಧಿ, ಸರತ್ತಿ, ಸರ್ತಿ, ಸರ್ತು (ನಾ). ೧. ಪಾಳಿ ; ಅನುಕ್ರಮ : ಶ್ರೀಕಳಶನಾಥ ದೇವರಿಗೆ ಸಲುದು ಗ ೨ ಒಸಗೆ ಹೋರಿನಾಡ ಸೀಮೆಗೆ ಸಲಗೆಗೆ ಒಂದು ಹಣವಿನ ಸರದಿ ಬಂದಾಗ ಯೀ ಗ್ರಾಮಕ್ಕೆ ತೆತ್ತು ಬಹುದು (ಮೈಅರಿ. ೧೯೪೦, ೨೮-೨೯ ; 1507) ; ಈ ಸರದೀ ಪ್ರಕಾರ ಒಂದು ದಿನ ಒಬ್ಬ ಬ್ರಾಹ್ಮಣನು ತನ್ನ ಮಗನನ್ನು ಅಸುರನಿಗೆ ಆಹುತಿ ಕೊಡಬೇಕಾಗಿತ್ತು (ನೀತಿಚಂ. XIII. ೧೯) ; ನಾವು ಪರದೆಯ ಹಿಂದಕ್ಕೆ ಹೋಗಿ ನಮ್ಮ ಸರದಿಯನ್ನು ಕಾಯುತ್ತಿದ್ದೆವು (ಶಾಲಿಮ. ೨೦೪). **ಸರತ್ತಿ** : ೧. ನೋಡ ಬನ್ನಿರೆ . . . ಪರಿಪರಿ ವಿನಿಯೋಗದವರೆಲ್ಲ ತಾವ್ ತಮ್ಮ ಸರತಿ ತಪ್ಪದೆ ಬಂದು ಇರುತಿಪ್ಪ ಸೊಬಗನು (ಪುರಂದ. ೨-೪೨-೨) ; ಇಂದಿನಿಂದಲೇ ಸರತಿಯಿಂದ ರೋಗಿಯ ಶುಶ್ರೂಷೆ ಆರಂಭವಾಗಬೇಕು (ಎರಸ. ೨೦). ೨. ಸಲ; ಬಾರಿ: ಆಡುಗಳು ಸರತಿಗೆ ಎರಡು ಮೂರು ಮರಿಗಳನ್ನು ಈಯುತ್ತವೆ (ಮುಂಬಯಿ. ೩-೧೧) ; ತಲೆಗೊಂದು ಬುದ್ಧಿ, ಸರತಿಗೊಂದು ಮಾತು (ಸಾಹಿವಿ. ೩). **ಸರ್ತಿ**: ೨. ಉಳಿಕೆ ಅಕ್ಕಿ ಸಾಗಿಸಿಕೊಂಡು ಹೋಗುವ ಬಗ್ಗೆ ಯೆರಡನೆ ಸರ್ತಿ ಬರುತ್ತೇವೆ (ರಾಜೇಂದ್ರ. ೪೨) ; ಇಪ್ಪತ್ತುದಿನ ಹಾಕಿಬಿಟ್ಟು ಸರ್ಕೀಟು ಈ ಸರ್ತಿ (ನಡದಾ. I. ೫೫೫) ; ಚೇಳಿಗೆ ಪಾರುಪತ್ಯ ಕೊಟ್ಟರೆ ಜಾವಕ್ಕೊಂದು ಸರ್ತಿ ಮುಟ್ಟಿಸಿತು (ಗಾದೆ). **ಸರ್ತು** : ೧. ಲಕ್ಷ್ಮೀದೇವರ ಸೇವೆ ಮಾಡಿ ಬಾನ ವಗ್ಗೆರೆಯರಡು ಯಿಸೆ ಪ್ರಕಾರ ದೇವತಾಸೇವೆಗಳು ನಡಶಿಕೊಂಡು ೧೦೦ ಮನೆಯ ಸರ್ತಿನ ಮ್ಯಾಲೆ ಯರಡು ಯಿಸೆ ಪ್ರಕಾರ ವರುಷವರುಷ ನಡಶಿಕೊಂಡು (ಮೈಅರಿ. ೧೯೨೯, ೯೭-೨೫ ; 1593?).

ಸರತಿಯ ಮೇಲೆ = ಒಬ್ಬರಾದ ಮೇಲೆ ಒಬ್ಬರಂತೆ ಅಥವಾ ಒಂದಾದ ಮೇಲೆ ಒಂದರಂತೆ : ನಾವು ಸರತಿಯ ಮೇಲೆ ಆ ಕೆಲಸವನ್ನು ಮಾಡಿ ಮುಗಿಸುವುದಾಗಿ ಒಪ್ಪಿಕೊಂಡೆವು (ರೂಢಿ). ಸರತಿಯ ಸಾಲು = ಪಾಳಿಗಾಗಿ ಕಾದು ನಿಂತಿರುವವರ ಸಾಲು; ಕ್ರೂ: ಶಂಕರನ ತಂದೆ ಸರತಿಯ ಸಾಲಿನಲ್ಲಿ ಟಿಕೆಟ್ಟು ಕೊಂಡನು (ಕಪಪು. ೨-೧೮). [? . / ತುಳು. ಸರ್ತಿ]

ಸರದ್ಧಿ, ಸರತ್ತಿ, ಸರದೆ (ನಾ). ೧. ಒಂದು ಬಗೆಯ ತೆರಿಗೆ (?) : ಗ್ರಾಮಸರದಿಯಲೂ ಸಿಂಗೆರಿಯ (ಸೌಇ. ೧೯೭೭. ಉಡುಪಿ. ೨೮೩-೨೯ ; 1328?) **ಸರತ್ತಿ** : ೧. ಅರಮನೆಗೆ ತೆಱುವ ಸಮ್ಮುಳ ಸರತಿ ಕುಡಿಕೆ ಬೆಟ್ಟೆಗೆ . . . ಎಲ್ಲವನು ಬಟ್ಟೆಗಂ (ಎಕ. III, ಮಳವ. ೬೬-೫ ; 1550?). ೨. (?) : XXX ಬೆಳ್ಳೆಯ ದೇವರ ಸರತಿಯ ಮಠಂ (ಸೌಇ. XI-i, ೯೭-೪೧ ; 1062). **ಸರದೆ** : ೧. ನೀವು ಕೊಡುವ ಕಾಣಿಕೆ ಹಡಪಗಾಣಿಕೆ ಬಿಟ್ಟಿ ಬಿಡಾರ ಸೊಲ್ಲಗೆ ನಾಡ ಸರದೆಯ ಮಳವೆಯ ವರ್ತ್ತನೆ ಉಡುಗೊಱೆ ವುಲುಪೆ ಮುನ್ತಾಗಿ ಎಲ್ಲವನೂ ಸರ್ವ್ವಮಾನ್ಯವಾಗಿ ನಿಮಗೆ ಮಾಡಿದೆ (ಎಕ. VIII, ಶಿಕಗೆಹ. ೧೯-೮೨ ; 1404). [?]

ಸರದಿಪಟ್ಟಿ (ನಾ). ಕೆಲಸಗಾರರ ಕೆಲಸದ ಪಾಳಿಯನ್ನು ತಿಳಿಸುವ ಪಟ್ಟಿ : (ಮು. ಸೈನ್ಯದಲ್ಲಿ) ವ್ಯಕ್ತಿಗಳ ಅಥವಾ ದಳಗಳ ಕೆಲಸದ ಸರದಿಯನ್ನು ತೋರಿಸುವ ಪಟ್ಟಿ; ಸರದಿಪಟ್ಟಿ (Roster. ಇಂಕಾ). [ಸರದ್ಧಿ + ಪಟ್ಟಿ]

ಸರದೀನಿ (ನಾ). ನೀರಿನಲ್ಲಿಯೆ ಆಹಾರವನ್ನು ತಿಂದು ಬದುಕುವ ಜಲಚರ : ಸರಧೊಳ್(ದೊಳ್) ಸರದೀನಿಗಳಂಬರದೊಳ್ ನಕ್ಷತ್ರಪಂಕ್ತಿಗಳ್ ಪೂರ್ಣಕಳಾಧರನೊಳ್ ಕಳೆಗಳ್ ಬೆಳಪನ್ತಿರ ಬೆಳಗಿದವಖಿಳವಿದ್ದೆಗಳ್ ತ್ರ್ಯಂ(ತ್ರ್ಯಂ)ಬಕನೊಳ್ (ಇಅ. X, ೧೨೯-೪೯ ; 1074). [ಸರ್ದ + ತೀನ್ಗಿ (< – ತಿನ್ಗಿ)]

ಸರದೀಪ (ನಾ). ಸಾಲುದೀಪ : ಗುಡ್ಡದ ಮಲ್ಲಯ್ಯ ಗರುಡಗಂಬದ ಮೇಲೆ ಯಾರ ಹಚ್ಚಾರ ಸರದೀಪ ನಮ್ಮನೆಯ ಬಾಲ ಹಚ್ಚಾನ ನಿಜದೀಪ (ಕನ್ನಡಾ. ೮). [ಸಂ.]

ಸರದುಂಬಿ (ನಾ). ಒಂದು ಬಗೆಯ ತುಂಬೆಗಿಡ ; ಬಿಳಿತುಂಬೆ : (ಕ).

[ಸರ್ದ + ತುಂಬಿ (< ತುಂಬೆ)]

ಸರದೂಳಿ (ನಾ). ಹೆಣ್ಣು ಹುಲಿ : ಅಡವ್ಯಾಗ ಇರುವಂಥ ಸಾರಂಗ ಸರದೂಳಿ ಹೆಬ್ಬುಲಿ ಹುಲಿ ಕರಡಿ ಎಡಬಲ ಹಾಂವು ತೇಳೋ ದೇವಾ (ಮಲ್ಲಿಗೆ. ೨೧).

[< ಸಂ. ಶಾರ್ದೂಲೀ]

ಸರದೆ 'ಸರದ್ಧಿ' ನೋ.

ಸರದೇಶಮುಖಿ, ಸರ್ದೇಶಮುಖಿ (ನಾ). ಮೊಗಲರ ಆಳ್ವಿಕೆಯಲ್ಲಿದ್ದ ಪ್ರಾಂತಗಳ ಮೇಲೆ ಮರಾಠರು ಹೇರುತ್ತಿದ್ದ ಒಂದು ಬಗೆಯ ಕರ : ಬಾಳಾಜಿಯು . . . ಮೊಗಲರ ರಾಜ್ಯದೊಳಗೆ ಚೌಥಾಯಿ (ವಸೂಲಿನ ನಾಲ್ಕನೇ ಪಾಲು), ಸರದೇಶಮುಖಿ (ವಸೂಲಿನ ಹತ್ತನೇ ಪಾಲು) ಎಂಬ ಬಾಬುಗಳನ್ನು ಇವನು ಶಾಹೂ ರಾಜನಿಗೆ ಸಂಪಾದಿಸಿಕೊಟ್ಟನು (ಕರ್ನಾಇ. ೬೭). **ಸರ್ದೇಶಮುಖಿ** : ಶಿವಾಜಿ ತನ್ನ ಮಗನಿಗಾಗಿ ಬಿಜಾಪುರ ಸಂಸ್ಥಾನದಿಂದ ಚೌತ್ಥಾಯಿಯನ್ನೂ ಸರ್ದೇಶಮುಖಿಯನೂ ಸಂಗ್ರಹಿಸಲಧಿಕಾರಿಯಾದನು (ಛತ್ರಶಾ. ೮೧). 'ಸರ್‌ದೇಶಮುಖ' ಪರಾ.

[← ಮರಾ. ಸರ್‌ದೇಶಮುಖೀ]

ಸರದೋಱು 'ಸರಂದೋಱು' ನೋ.

ಸರನಿಧಿ (ನಾ). ಕಡಲು ; ಸಮುದ್ರ : ಶರಣಾಗತಪ್ರತತಿಗಾ ಹರಿನಂದನನಿಂದ್ರನಂದನಂ ಸರನಿಧಿಯೆಂದು ಬಣ್ಣಿಪುದು ಸಜ್ಜನಸಂತತಿ . . . ಕಾಮಿಸೆಟ್ಟಿಯನ್ (ಕಾಇ. IV, ೧-೫೦ ; 1204) ; ಸೋರೆಯಿಂದಂ ದಾಂಟಲೇನಕ್ಕುಮೇ ಸರನಿಧಿಯಂ (ಪಾಪ್ರಾಶ. ೪೧). [ಸಂ.]

ಸರನೇಜ 'ಸರನೇಜೆ' ನೋ.

ಸರನೇಜೆ, ಸರನೇಜ (ನಾ). ೧. ಒಂದು ಬಗೆಯ ಈಟಿ : ಅರಿರಾಯ ಲಪನದಿ ತಿವಿದು ಸರನೇಜೆಯ ಹೆಡತಲೆಯೊಳು ತೆಗೆದನೊ (ಹ್ಮಾನಚ. ೧೯-೯೫). **ಸರನೇಜ**: ೨. ಬಿರುದು ಬಾವಲಿಗಳನ್ನು ಸೂಚಿಸುವ ಒಂದು ಬಗೆಯ ಸಾಧನ : ಅರಿದಲೆ ಸುಶಂಖಚಕ್ರಂ ಕರಮೊಪ್ಪುವ ಕನಕಚೌರಿ ಸೀಗುರಿ . . . ಚಮರಂ ಸರನೇಜಮೆನಿಪ್ಪ ಬಿರುದುಗಳನೊಸೆದಿತ್ತಂ (ಕಳಿಸ. ೧-೧೦೧). [ಸರ್ದ + ನೇಜೆ (< ನೇಜಯ)]

ಸರಪಂಚ (ನಾ). ಪಂಚರಲ್ಲಿ ಪ್ರಮುಖನಾದವನು ; ಪಂಚಾಯತಿಯ ಅಧ್ಯಕ್ಷ : ದೇವಾಲಯಗಳಲ್ಲಿ . . . ಪೂಜಾ ನೈವೇದ್ಯ ಮೊದಲಾದ ಕೆಲಸಗಳು ನಡಿಯುವಂತೆ ಸರಪಂಚರನ್ನು ನೇಮಿಸಿ ತಾನೂ ಮೇಲಿಂದ ಮೇಲೆ ಹೋಗಿ ವಿಚಾರ ಮಾಡುತ್ತಿರುತ್ತಾನೆ (ಮಂಜಾಕ. ೧೩) ; ಅಲಗುಬಾಬುಗಳು ಸರಪಂಚರಾದರು (ಗೃಹದಾ. ೩೧).

[← ಹಿಂ. ಸರಪಂಚ ; ಮರಾ. ಸರಪಂತ]

ಸರಪಣಿ 'ಸರಪಳಿ' ನೋ.

ಸರಪರಾಜು 'ಸರಬರಾಜು' ನೋ.

ಸರಪಳಿ, ಸರಪಣಿ, ಸರ್ಪಣಿ, ಸರ್ಪಳಿ (ನಾ). ೧. ಲೋಹದ ಬಳೆಗಳನ್ನು ಜೋಡಿಸಿ ಮಾಡಿದ ಹಗ್ಗದಂತಹ ಸಾಧನ; ಶೃಂಖಲೆ : ಅರಸು ಪವಡಿಪ ತೊಗುಮಂಚದ ಸರಪಳಿಯ ಬಳಿವಿಡಿದು ಪಟುಭೀಕರವಿಷೋರಗವಾಗಳೊಂದುರವಣಿಸಿ ಹರಿತಂದು (ಬಸಪು. ೪೬-೨೧) ; ತೊಟ್ಟಿಲ ಪೂಜಿಸಿ . . . ಮೇಲ್ಬಲಗೆಯ ಕೊಂಡಿಗೆ ಸರಪಳಿಯನು ತೊಡಚಿದರು (ಮೋಹತ. ೧೭-೪೯). ೨. ಶೃಂಖಲೆಯಾಕಾರದಲ್ಲಿ ಮಾಡಿದ ಒಂದು ಬಗೆಯ ಆಭರಣ : ವಜ್ರಧಾರೆಯ ಚೆನ್ನಸರಪಳಿಯುಮಂ . . . ನವರತ್ನದುಂಗುರಗಳುಮಂ ಮಾಡಿಸಿಕೊಂಡು (ಪಂಚತಂ. ೧೮೬-೧೩) ; ಬಿಲ್ಲ ಹೊರೆಗೈದಿನು ಚೌಪಟಮಲ್ಲ . . . ಮೇಲ್ದಿರುಹಿದನು ಮುಂಗೈಯ ಸರಪಳಿ[ಪಾಠಾಂ. ಣಿ]ಯ (ಕುವ್ಯಾಅ. ೧೪-೯) ; ವರನಾರಾಯಣನ ರಾಣಿಯರ ಪಾದದ ಹೊನ್ನ ಸರಪಳಿಯೆಳೆಯುತ್ತ ಬರಲು ವರನೀಲದ ನೆಲಗಟ್ಟಲ್ಲಿ ಪೊಂಬಳ್ಳಿವೆರೆದಂತೆ ರೇಖೆದೋಱುದುವು (ಮೋಹತ. ೧೪-೨೬). **ಸರಪಣಿ** : ೧. ನೊಸಲ ಸೀಸಕ ನುಗ್ಗುನುಸಿ ಬಂಧಿಸಿದ ಸರಪಣಿ ಹಿಳಿದವು (ಕುವ್ಯಾದ್ರೋ. ೧೦-೩) ; ಮಾವುತರು ಅತಿಪ್ರಯಾಸದಿಂದ ಆನೆಯನ್ನು ಹಿಡಿದು ತಂದು ಸರಪಣಿಗಳಿಂದ ಬಂಧಿಸಿದ್ದರು (ಶ್ರೀರಾಯಿ. ೨೧). ೨. ಖಡೆಯ ಸರಪಣಿ ತೋಳ ಬಂದಿಗೆ ಪಡೆವಣಿಯ ಮಱೊವಾವುಗಳನಳವಡಿಸಿದನು (ಕುವ್ಯಾಕ. ೭-೧೨) ; ಗಂಟೆ ಸರಪಣಿ ಸುರಹಾಹೆದೊಡರು ಮಾಣಿಕ್ಯದಿನೆಸೆವ ಕಡೆಯ ಪೆಂಡೆಯವಿಟ್ಟು ಕಾದುವ ರಣಧರೆಯೆಡೆಗೈತಂದು (ಮೋಹತ. ೧೨-೪೭). ೩. ನೂರುಕೊಂಡಿಗಳುಳ್ಳ ಹಾಗೂ ಸಾಮಾನ್ಯವಾಗಿ ಅರುವತ್ತಾರು ಅಡಿಗಳಷ್ಟು ಉದ್ದವಾದ ಒಂದು ಅಳತೆಯ ಪರಿಮಾಣ : ಸರಪಣಿಯು ೩೩, ೬೬, ೯೯ ಅಡಿಗಳು ಇರುತ್ತವೆ (ಭೂಮಿಅ. ೪) ; ಸರಪಣಿಯಿಂದ ಸರಪಣಿಯನ್ನು ಗುಣಿಸಿದರೆ ಯೆಲ್ಲವೂ ಸರಪಣಿಯೇ ಆಗುವುದು (ಭೂಮಿಅ. ೬೭). ೪. (ಆಲಂ) ಸಂಕೋಲೆ ; ಬಂಧನ : ಜನನಮರಣಗಳ ಸರಪಣಿಯಿಂದ ಮುಕ್ತನಾಗುವುದು ಆವಶ್ಯಕವೆಂದು ಎಲ್ಲಿಯೂ ಹೇಳುವುದಿಲ್ಲ (ತತ್ವಸ್ತ್ರಾ. ೭೧).

ಸರ್ಪಣಿ: ೧. ಒಂದು ಕಟ್ಟಿಣದ್ದಾಗಲಿ, ಹಿತ್ತಾಳೆಯದಾಗಲಿ ಸರ್ಪಣಿಯನ್ನು ಜೋಡಿಸಿ ನೆಲದ ಮೇಲೆ ಚಲ್ಲಿರುತ್ತಾರೆ (ಮುಂಬಯಿ. ೫-೨೦೬). ೩. ಎರಡೂ ಬದಿಗಳಲ್ಲಿ ಒಂದು ಸರ್ಪಣಿ, ಅಂದರೆ ೩೩ ಫೂಟು ಹುಲ್ಲು ಕೊಯ್ದು (ಮುಂಬಯಿ. ೫-೪). **ಸರ್ಪಳಿ** : ೧. ಅವನು ಅವನ್ನು ಅಡವಿಗೆ ಒಯ್ದು ಬಿಡಬೇಕೆಂದು ನಿಶ್ಚಯಿಸಿ ಅದರ ಸರ್ಪಳೀ ಬಿಚ್ಚಹೋದನು (ಮುಂಬಯಿ. ೨-೨೦).

[ದೇ. ill ತಮಿ. ಚಗಪ್ಪಳಿ, ಚರಪ್ಪಣಿ ; ಮಲ. ಸರಪ್ಪಳಿ; ತುಳು. ಸರಪಳಿ, ಸರಪಣಿ, ಸರಪ್ಪುಳಿ, ಸರ್ಪಳಿ · ತೆಲು. ಸರಪಣಿ, ಸರಪುಣಿ, ಸರಪೆಣ, ಸರಪಣ]

ಸರಫರಾಜ 'ಸರಫರಾಜು' ನೋ.

ಸರಫರಾಜಿ (ನಾ). ಉತ್ತೇಜನ ; ಪ್ರೋತ್ಸಾಹ : ಒಳ್ಳೇ ಕಾಲದಲ್ಲಿ ತಾವು ಸರಫರಾಜಿ ಮಾಡಿ ಶ್ರೀರಂಗಪಟ್ಟಣದ ಅರಸಿಗೆ ವಿವಾಹ ಮಾಡಿಸಿದ್ದು, ಆ ಖುಷಿವರ್ತಮಾನ ಈ ಯಾವತ್ತು ದುನಿಯಾದ ಜನರು ಕೇಳಿ ಇದ್ದಾರೆ (ರಾಜೇಂದ್ರ. ೨೧೨).

[← ಪಾರ. ಹಿಂ. ಮರಾ. ಸರಫರಾಜೀ]

ಸರಫರಾಜು, ಸರಫರಾಜ, ಸರ್ಫರಾಜು (ನಾ). ಪ್ರಶಂಸೆ ; ಶ್ಲಾಘನೆ : ಈ ದೌಲತ್ತು ಕೊಡುವಂಥಾದ್ದು ಸರಫರಾಜು ಮಾಡುವಂಥಾದ್ದು ಯಾವತ್ತು ತಮ್ಮ ಪರವರ್ಮ ಮೆಹರ್ಬಾನಗಿಯಿಂದಾ ಎಂಬುದು ನಮಗೆ ನಿಶ್ಚಯವಿದೆ (ರಾಜೇಂದ್ರ. ೨೬೫); ಹೈದರಲ್ಲಿ ಖಾನರ ಕೈಯಿಂದಾ ಬಂದೂಬಿನ ಗುರಿ ತಗಲಿದ ಕಾರಣ ಅರಶಿನವರು ಬಹಳ ಸಂತೋಷಪಟ್ಟು ಪಸಂದು ಮಾಡಿ ಸರಫರಾಜು ಮಾಡಿದರು (ಸ್ವದೇ. ೨೩). **ಸರಫರಾಜ** : ಅವರ ಕೈಫಿಯತ್ತಿನಿಂದ ಬಹಳ ಸಂತೋಷ ಸರಫರಾಜು ಹಾಸಲಾಯಿತು (ರಾಜೇಂದ್ರ. ೨೬೬). **ಸರ್ಫರಾಜು**: ಆವಾಗ್ಗೆ ನಿನಗೆ ಸರ್ಫರಾಜು ಮಾಡಿಯೇವು (ರಾಜೇಂದ್ರ. ೫೪).

[← ಪಾರ. ಹಿಂ. ಮರಾ. ಸರಫರಾಜ್]

ಸರಬ$_1$ (ನಾ). ಒಂದು ಬಗೆಯ ಪ್ರಾಣಿ ; ಶರಭ : ಸಿಂಗದ ಜಂಗುಳಿ ಸರಬದ ಸಂಗಡಮಾ ನೃಪನ ತೇಜಮಂ ಮಱೆವೊಕ್ಕಂತೇಂ ಗಡಣಿಸಿ ಮೆಱವುವೊ ಚಿಂಬೊಂಗಳ ಮಂದಿರದ ತೇಜವಾಜಿಸಮಾಜಂ (ಅನಂಪು. ೧೦-೧೧೯). [< ಸಂ. ಶರಭ]

ಸರಬ$_2$ 'ಸರಬು' ನೋ.

ಸರಬರ (ನಾ). ಒಂದು ಅನುಕರಣಪದ : ಆಕೆಯ ಸೀರೆಯ ಸರಬರ ಸದ್ದಿಗೆ ಕೃಷ್ಣಪ್ಪನ ಮೈ ಪುಲಕಿತಗೊಂಡಿತು (ಚಿಂದುಬ. ೬೧).

ಸರಬರಾಜು, ಸರಪರಾಜು (ನಾ). (ಅಗತ್ಯ ವಸ್ತುಗಳನ್ನು) ಒದಗಿಸುವಿಕೆ ; ಪೂರೈಸುವಿಕೆ : ತೃಪ್ತಿಕರವಾದ ಸರಬರಾಜು ನಮ್ಮ ಫೌಜದಾರರದು (ನಾಪೋಲೀ. ೧೦೨); ಅವರು ರಾಯನಿಗೆ ಕುದುರೆಗಳನ್ನು ಸರಬರಾಜು ಮಾಡುವುದಾಗಿ ಒಪ್ಪಿಕೊಂಡರು (ಕ್ಲೈವ. ೧೯). **ಸರಪರಾಜು** : ತಂಜಾವೂರುಮಹಾರಾಜರಿಂಗೆ ಯಾವ ರೀತಿ ನಡುಸಿಕೊಂಡು ಬರುತ್ತಾರೋ ಅದೇ ಮೇರೆಗೆ ಇಂಗ್ಲಿಷ್‌ಜನಗಳ ಸರಪರಾಜು ಮಾಡುವುದಕ್ಕೆ ಬದ್ಧರಾಗಬೇಕು (ಟಾಮುವಂ. ೨೧೩); ಈ ಬಾರಿ ರಾಣಿಯವರು ಸ್ವಲ್ಪ ಹಣವನ್ನು ಸರಪರಾಜು ಮಾಡಿದ್ದಾರೆ (ದೌಲತ್. ೩೧೪).

[← ಪಾರ. ಹಿಂ. ಸರಬರಾಹ್ ; ಮರಾ.ಸರಬರಾ, ಸರಭರಾ]

ಸರಬರಾಯ 'ಸರಬರಾಯಿ' ನೋ.

ಸರಬರಾಯಿ, ಸರಬರಾಯ, ಸರ್ಪರಾಯಿ (ನಾ). ೧. (ಅಗತ್ಯವಸ್ತುಗಳನ್ನು) ಒದಗಿಸುವಿಕೆ ; ಪೂರೈಸುವಿಕೆ : ಬಳ್ಳಾರಿಲಷ್ಕರಸರಬರಾಯಿಯಂ ತುಸ ಪುಕಾರಿಲ್ಲದಂತೆ ಸಗಪೇಳು (ಆರ್ಚಾಎ. ೩೧-೩೯) ; ಶುದ್ಧವಾದ ನೀರಿನ ಸರಬರಾಯಿಯು ಅತ್ಯಂತ ಮುಖ್ಯ (ಅಆಸಾ. ೭೪). ೨. ಅತಿಥಿಸತ್ಕಾರ ; ಆತಿಥ್ಯ : ಅತಿಥಿಗಳಿಗೆ ಒಳ್ಳೆಯ ಪರಿಮಳದ 'ಸರಬರಾಯಿ' ಆಯಿತು (ಮುಂಗಾಪ್ರ. ೨೭); ಯಾರು ಯಾರಲ್ಲಿಗೇ ಹೋಗಲಿ . . . ಸಾಮಾನ್ಯವಾಗಿ ಎಳನೀರು, ಬಾಳೆಹಣ್ಣು, ಸಕ್ಕರೆಯ ಸರಬರಾಯಿ ಆಗುತ್ತಿತ್ತು (ಕಂಬಹು. ೨). **ಸರಬರಾಯ** : ೨. ಉಡುಪಿಪರ್ಯಾಯದಲ್ಲಿ ಮಾಡುವಂಥ ಸರಬರಾಯವೂ ಬೇಕಾದೀತು. ಗಾಡಿಗಟ್ಟಲೆ ಹಸುರುವಾಣಿ, ದೋಣಿಗಟ್ಟಲೆ ಸಾರು, ಹುಳಿ, ಗುಡ್ಡೆ ಗುಡ್ಡೆ ಅನ್ನ ! (ಸ್ಮೃಷ್ಟಿಹೂ. ೫೮). **ಸರ್ಪರಾಯಿ**: ೨. ನಂಮ ಸ್ಥಳದಲಿ ನಿಮಗೆ ಸರ್ಪರಾಯಿ ಮಾಡಿ ಮುಂದಕೆ ರವಾನೆ ಮಾಡಿ ಕಳುಹಿಸಿಕೊಡಲುಳವರು (ಮೈಅರಿ. ೧೯೩೦, ೧೯-೨೬; 1704). [← ಹಿಂ. ಸರಬರಾಹ್, ಸರಬರಾಹೀ; ಮರಾ. ಸರಬರಾಈ]

ಸರಬಲು (ನಾ). ಒಣಗಿದ ಎಲೆ ; ತರಗು : ಏನೂ ಇಲ್ಲಯ್ಯಾ, ಬಾಳೆ ಸರಬಲಿಗೆ ಬಂದಿದ್ದೆ (ಕಾಸೂರು. ೧೯೮). [ಸರಬು + - ಅಲು (< - ಅಲ್$_2$)]

ಸರಬಿ 'ಸರವಿ$_1$' ನೋ.

ಸರಬು, ಸರಬ್ಬು (ನಾ). ೧. ಕಟ್ಟು ; ಹೊರೆ : ನಾ ಹೊತ್ತ ಕಟ್ಟಗೆಯ ಸರಬು ಮತ್ತ **ಸುವರ್ಣದಂಡವಾಹಾಗ ಆದಾರ ನಿಶ್ಚಯದ ವಿಶ್ವಾಸ** (ಕೋಳಿಪಾ. ೫೮-೨೪೨). ೨. ಒಣಗಿದ ಎಲೆ ; ತರಗು : 'ಸರಬಲು' ಪರಾ. **ಸರಬ್ಬು** : ೧. ತಾವು ತಂದ ಕಟ್ಟಗೆಯ ಸರಬ[ಖಾತಾಂ ಬು]ಗಳ ಮೇಲೆ ಪಾದಾರ್ಚನೆಯುಡಕಮಂ ತಳೆದು ಸುವರ್ಣದಂಡಂಗಳಂ ಮಾಡಿ (ಜೂನ್ಸಂ. ೩೬೭-೬). [?]

ಸರಬೊಂಬೆ (ನಾ). ಸಾಲಾಗಿರುವ ಗೊಂಬೆಗಳಿಂದ ಕೂಡಿದ ಒಂದು ಬಗೆಯ ಅಭರಣ : ಪರವೆಣ್ಣ ಪರಮಗುರುವಿನಂಗನೆಯೆನ್ನದಿರದ ಮನದೊಳಾಸಗೆಯ್ದ ನರಪತಿಗಳ ಗಂಡನೆಂದೆಂಬ ಬಿರಿದಿನ ಸ[ಖಾಕಾಂ. ಶ]ರಬೊಂಬೆ ಮೆಱೆದುದವನಿಗೆ (ಖರಾಖಾಂ. ೧೯-೩೫). [ಸರ$_2$ + ಬೊಂಬೆ]

ಸರಭರ (ನಾ). ಒಂದು ಅನುಕರಣಶಬ್ದ : 'ಸರಭರಾಟ' ಪರಾ.

ಸರಭರಾಟ (ನಾ). ಸರಭರ ಎನ್ನುವ ಕ್ರಿಯೆ : ಮಳೆಯ ಸರಭರಾಟ ಗಾಳಿಯ ಭೋರಾಟ (ನಿಶಾಭ. ೧೦ ಮುನ್ನುಡಿ). [ಸರಭರ + ಆಟ]

ಸರಭಸ (ಗು). ೧. ವೇಗಗೊಂಡ ; ತ್ವರಿತವಾದ : ಆಗಳ್ ಸರಭಸಪ್ರಚಾರಿತ ಪರಿಜನಪದಕ್ಕೋಭವಿಚಲಿತಮಹೀತಳಮುಂ . . . ಆಗಿ (ಆದಿಪು. ೮-೩೫ ವ). (ನಾ). ೨. ವೇಗ; ತ್ವರೆ: ಸರಭಸದೆ . . . ಅಖಿಲಾಸುರಚಕ್ರಂ ನಿನ್ನ ವಿಭಾಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ (ಕಾವ್ಯಾವ. ೫೩೦); ಸರಭಸದೆ ನರ್ತಿಪಾ ಹರಕಿರೀಟ ಗಂಗಾಂಬುಶೀಕರಂ ಸೂಸೆ ನಭೋಂತರಮಂ ತಳ್ಪುದು (ಕುಸುಮಾ. ೧೧-೧೫೯). [ಸಂ.]

ಸರಭಸಂ (ಅ). ವೇಗವಾಗಿ ; ತ್ವರೆಯಿಂದ ಕೂಡಿ : ಅಬ್ಬರಿಸಿ ಬೊಬ್ಬಿಗೊಟ್ಟೇಱಿ ಸರಭಸಂ ಪರಿಯಿಪಾಗಳ್ (ರಾಜಶೇ. ೬-೧೧ ವ). [ಸಂ.]

ಸರಮ$_1$ 'ಸವ$_3$' ನೋ.

ಸರಮ$_2$ (ನಾ). ಹೆಣ್ಣುನಾಯಿ : ಗೋವಂ ಕಱೆದು ಸರಮಗಳ್‌ವಂತೆ (ಹೂಲ. ೧೩-೩೦). [ಸಂ. ಸರಮಾ]

ಸರಮಂಡಲ (ನಾ). ಒಂದು ಬಗೆಯ ತಂತೀವಾದ್ಯ : ದಂಡಿಗೆ ವೇಣು ವೀಣಾ ಕಿನ್ನರಿ ಸರಮಂಡಲ ಜಂತ್ರತಾಳಗಳನು ಮಂಡೆಗಡೆಯೊಳ್ಳು, ಮಱೆದೊಱಗಿದರನು ಕಂಡೆನಿಕ್ಕೆಲದಾಳಿಯರೊಳು (ಸೂಬಸೋ. ೨೩-೨೮) ; ಮುರಳಿ ಸರಮಂಡಲದ ಕಿನ್ನರಿ (ಯಾದವ. ೧೧-೪೪). [< ಸಂ. ಸ್ವರಮಂಡಲ. / ಹಿಂ. ಸರಮಂಡಲ್]

ಸರಮನೆ (ನಾ). ತಿಳ್ಳಿಯಾಟದಲ್ಲಿ ಪ್ರತಿಪಕ್ಷದವರನ್ನು ಅಡ್ಡಗಟ್ಟುವ ಒಂದು ಘಟ್ಟ (?) : ರಾಮನು ನಡುವಿನಿಂದ ಹಾಯ್ದು ಹೋಗಬೇಕೆಂದು ಹವಣಿಸುತ್ತಿರಲು ಸರಮನೆಯನ್ನು ಕಟ್ಟುತ್ತಿರುವ ಶೇನನು ತನ್ನ ಉದ್ವಕ್ಕೆಗಳಿಂದ ಅವನಿಗೆ ಹೊಡೆದು . . . ಎಂದು ಕುನೆದಾಡಹತ್ತಿದನು (ನಿಶಾಭ. ೯೭). [ಸರ$_2$ + ಮನೆ]

ಸರಮಾಲೆ (ನಾ). ೧. ದೊಡ್ಡ ಹಾರ : ಇಱಿದು ಬಲ್ಲೆಹದಿಂದ ಖಾನರ ಕರುಳ್ಗಳ ಸರಮಾಲೆಗಳ ಬೇಗ ತೆಗೆದು . . . ಭೂತಗಳ ಕೊರಳೊಳಗಿಕ್ಕಿ (ಕಂನವಿ. ೧೪-೬೧). ೨. ಉದ್ದವಾದ ಸಾಲು ; ನಿರಂತರವಾದ ಸರಣಿ : ಎರಡಂಬತ್ತುಕೋಟ ಪ್ರಮಥಗಣಂಗಳು . . . ನಂದಿವಾಹನರುದ್ರರು ಇವರೆಲ್ಲರು ಮಾಯೆಯ ಕಾಲಗಾಹಿನ ಸರಮಾಲೆ ಕಾಣಾ (ಅವಚಂ. ೭-೨೬) ; ಸಂಸಾರವೆಂದರೆ ಕಷ್ಟಗಳ ಸರಮಾಲೆ (ಶಾಸಂ. ೫೫೫). [ಸಂ. ಸರಮಾಲಾ]

ಸರಮಾನ (ನಾ). ಉಪನ್ಯಾಯಾಧೀಶ : ಅಲ್ಲಿ ಕಂದಾಚಾರದವರೂ ಸರಮಾನ ಮೊದಲಾದ ಅಧಿಕಾರಿಗಳೆಲ್ಲಾ ಇದ್ದರು (ಮುಸಗ. ೧೦೫). [← ಮರಾ. ಸರಮಾನ್]

ಸರಮುತ್ತು (ನಾ). ಮುತ್ತಿನ ಹಾರ : ಹಾಲೂ ಅನ್ನ ಉಣ್ಣು ಸರಮುತ್ತ ನೀ ಕಟ್ಟು ಸಾಲುಮಾಳಿಗೆಯಲ್ಲಿ ಇರುವಂಥ ಗಿರಿಜೇ (ಪುಟ್ಟಹ. ೫೪). [ಸರ$_2$ + ಮುತ್ತು]

ಸರಮೆ (ನಾ). ೧. ಹೆಣ್ಣುನಾಯಿ : "ಶುನಕೀ, ಸರಮಾ - ಈ ೨ ಪೆಣ್ಣಾಯ್ (ಹೆಣ್ಣುನಾಯಿ)" (ಹಲಾಯು. ೪೭-೧೨೭). ೨. ದೇವಲೋಕದ ನಾಯಿ. ೩. ವಿಭೀಷಣನ ಹೆಂಡತಿಯ ಹೆಸರು. [ಸಂ. ಸರಮಾ]

ಸರಮೊಖ್ತೇಸರ (ನಾ). ಮುಖ್ಯಾಧಿಕಾರಿ : ದಾಸಪ್ಪಾಜಿಯು ಅರಮನೆಯಲ್ಲಿ ಸರಮೊಖ್ತೇಸರನಾಗಿದ್ದನು (ಕರಾಬಾ. ೪೨).

[← ಹಿಂ. ಸರಮೊಖ್ತೇಸರ್ ; ಮರಾ. ಸರಮೋಖ್ತಸರ್]

ಸರರಾಸು (ಅ). ನಿರಾತಂಕವಾಗಿ : ಅಡಿಸಡಿಗಳ ಮಾಡಬಂತೆ . . . ಪ್ರಕಾರಕ್ಕೆ ಸರರಾಸು ನಡ್ಸಿಕೊಂಡು ಬರ್ಪುವದು (ಮೈಅರಿ. ೧೯೩೦, ೪೩-೨೮ ; 1812).

[← ಮರಾ. ಸರರಾಸ್, ಸರಿರಾಸ್]

ಸರರುಹ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ : ಸರರುಹ ಕೊಳದೊಳು ಧುಮುಕುವ ನದಿತಟದೊಳು ಶಶಿಶಿಲೆಯೊಳಗೆ . . . ಘನಲಿಂಗಕೆ ಹರುಷದಿ ಪೂಜೆಯ ಮಾಡುವ ಶಿವಸುಖವೆಂದಿಗೆ ದೊರಕುವದು (ಸುಸಾರ. ೧೦೪-೨). [< ಸಂ. ಸರೋರುಹ]

ಸರಲ್$_1$, **ಸರಲು**$_1$, **ಸರಳ್**, **ಸರಳು**$_1$ (ನಾ). ೧. ಕಣೆ; ಅಂಬು ; ಬಾಣ : ಸುರಿವ ಸರಲ್ ನರಲ್ವ ಭಟರೆತ್ತಮುರುಳ್ವ ದಟಂ (ಪಂಪಭಾ. ೯-೫೭) ; ಅರಲ ಸರಲ್ಗೆದೆಂಬರ್ ಕಾಮಂಗೆ ಲೋಕದ ಮಾನಿಸರ್ (ಧರ್ಮಾಮೃ. ೩-೩೩). **ಸರಲು**$_1$: ೧. ಅರಲಂಬಗರಸ ನಿಮ್ಮಡಿ ಚೆಲ್ವನವನ್ನೆದು ಸರಲನಾಂತೊಡೆ ಹತ್ತುಸರಲಾ ದೊರೆ ಪಿಡಿವುದು ಮೋಡಿ (ಭರಚ. ೬-೫೮). **ಸರಳ್** : ೧. ಸರಳ ಪೊದಲ್ದು ಬಲ್ಸುರಿಯ ಕೋಳ್ಗಿರಲಾಱದೆ ಬಿಲ್ ತೆರಳ್ದು ದುರ್ಧರ [ಹಯ] ಮಟ್ಟಿ . . . ತಳರ್ದತ್ತರಾಶಿಬಲಂ (ಪಂಪಭಾ. ೩-೭೦) ; ಎರಡೆರಡೆ ಸರಳಿನುಱದೆರಡೆರಲೆಗಳನೆ ಕೊಲ್ವ ತೆಱದಿನಿರ್ವರುಮಂ ಕೊಂದು (ಶಾಂತಿಪು. ೪-೭೧). IP ಈ ಎರಡುಪ್ರಯೋಗಗಳಲ್ಲಿ 'ಸರಲ್' ಎಂದಿರಬೇಕಾದುದು ಹೆಚ್ಚು ಸಂಭವನೀಯ. ಸರಳಂ ಮಿಱುತೆ ಹರಿಣಂ ಸರಳಿಸಿತು (ಗಿರಿಕ. ೧-೯೧) ; ಕರ್ಣಾಜಂ ಕಣಿಗಳಂ ಕಱೆಯುತಿರೆ ನಡುವೆ ಖಂಡಿಸಿದಂ ಸುಧನ್ವನಾತನ ಸರಳ್ಗಳ (ಕೃಷ್ಣಮಿಭಾ. ೧೨-೨೦). **ಸರಳು**$_1$: ೧. ಭರದೊಳಿಸುವಾ ಬೇಂಟೆಕಾಱದ ಸರಳುಗಳಿಗುಲ್ಲಂಘಿಸುತ ರಭಸದೊಳಗೆಯ್ತರಲು (ಬಸಪು. ೩೪-೨೪) ; ಶರಮಯವು ಸರ್ವಾಂಗವಿನ್ನೀ ಸರಳು ನೆಡಲಿಂಬಿಲ್ಲ (ಕುಮಾರ್ಯೂ. ೬-೫೩) ; ಸರಳು ತುಂಬಿದ ತರಕಸ ಸಿಂಗಾಡಿಗಳಿರದೆ ಸಾಸಿರಬಂಡಿಗಳಲಿ ಪರಿಪೂರ್ಣದಲಿ ಬರುತಿರ್ದುವು (ಕಂಸವಿ. ೧೧-೩೬) ೨. ಕಬ್ಬಿಣ ಮೊದಲಾದ ಲೋಹದ ಕಂಬಿ ; ಸಲಾಕೆ : ಒಂದು ಕೋಣೆ ತುಂಬ ಸರಳು, ಒಂದರ ತುಂಬ ತಗಡು (ಚಿಂಗೂಲಿ. ೧೨೨). ೩. ಉದ್ದನೆಯ ಪಟ್ಟಿ, — ತುಂಡು : ಭಿಕ್ಷುಕರು ಅಡಿಗೆ ಮಾಡಲು ಕಿಟಕಿಯ ಮರದ ಸರಳುಗಳನ್ನೇ ಮುರಿದು ಉಪಯೋಗಿಸುತ್ತಾರೆ (ರೂಪಸಂ. ೬೧). [ದೇ. ॥ ತುಳು. ಸರಲ್, ಸರಳ್ ; ತೆಲು. ಸರುಡು]

ಸರಲ್$_2$, **ಸರಲು**$_2$ (ನಾ). ಮುಂಗೈಯಲ್ಲಿ ಧರಿಸುವ ಸರಪಳಿಯಾಕಾರದ ಒಂದು ಬಗೆಯ ಆಭರಣ : 'ಮುಂಗೆಯ್ಸರಲ್' ಪರಾ. **ಸರಲು**$_2$: (ಕ).

[← ಮರಾ. ಸರಳ್]

ಸರಲ, ಸರಳ (ಗು). ೧. ಸಹಜವಾದ ; ನೇರವಾದ : ಸರಲಲತಾಂಗಭಂಗಿ ನೆಱೆ ಕಣ್ಮೊಳಿಸುತ್ತಿರೆ ನಿಂದು . . . ಮನಸಿಜಾತನ ಶಾರಿಕೆಯಾಧಿದೇವತಾಪರಿಕರದಂತಿರ್ದರಲ ಮಾಲೆಯನೆತ್ತಿದ ಮಾಲೆಗಾರ್ತಿಯರ್ (ಶಾಂತೀಶ್ವ. ೧-೧೨೬). ೨. ಪ್ರಾಮಾಣಿಕವಾದ; ನಿಷ್ಕಪಟವಾದ. ೩. ಆಡಂಬರವಿಲ್ಲದ ; ನಿರಾಡಂಬರವಾದ. ೪. ಸುಲಭವಾದ; ಸಲೀಸಾದ. (ನಾ). ೫. ಒಂದು ಬಗೆಯ ಮರ ; ಧೂಪದ ಮರ : ಸರಲಾಸಕ್ತಮದೇಭಸ್ಫುರಿತಗ್ಭೈವಾವಲಗ್ಗರುಚಿಗಳ್ ಧರಣೀಶ್ವರ ಗಜನಿಷಾದಿಗಳನನು ಕರಿಸಿದುವೋಷಧಿಗಳೆಣ್ಣೆಯಿಲ್ಲದ ಸೊಡರಂ (ಶಾಂತಿಪು. ೧೧-೭೬); ಸರಲತಮಾಲತಾಲಕದಲೀ ಸಹಕಾರಮಹೀರುಹಂಗಳಂ . . . ಕಿಟ್ಟನಾ ಸುರಗಿರಿಯಂ ಕಿಟಲ್ಕೆಱೆವ ಮಾರುತಸೂನುಗಿದಾವ ಸಾಹಸಂ (ಪಂರಾಮಾ. ೧೧-೧೨೩). ೬. ಚಮರೀಮೃಗ. ೭. ರೋಗ : "ಸರೋಗಂ ಚಮರೀಮೃಗಂ ಸರಿಸ ಭೂಜಮಿವು ಸರಲಾ [ಪಾಠಾಂ. ಳಾ] ಖ್ಯ ಸಂತತಂ" (ನಾನಾರ. ೬೪). ೮. ಒಂದು ಬಗೆಯ ಪಕ್ಷಿ. ೯. ಋಜುತ್ವ ; ಸರಳತೆ. ೧೦. ಸೋಗಿಲ್ಲದಿರುವಿಕೆ ; ಸಹಜತೆ : ಅರಳೆಯಲಿ ರಸವಿಲ್ಲ ಕರುಳಿಗೆ ನಾಣ್ಬೆಲ್ಲ . . . ಸೂಳೆಯಲಿ ಸರಲವೆಯಿಲ್ಲ (ಸರ್ವಜ್ಞ. ೧೮೭೬); ಬಿಂದುವಿಸರಗಳನುವು, ವಂಕು ಸರಲಗಳನುವು . . . ದ್ವಂದ್ವದನುವುಗಳಂದ (ಮಂಕಿಪ. ೪೪೮). ೧೧. ಅಗ್ನಿ. ೧೨. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಬಗೆಯ ಛಂದಸ್ಸುಗಳಲ್ಲಿ ಏಳನೆಯದಾದ ಉಷ್ಣಿಕ್ ಎಂಬ ಛಂದಸ್ಸಿನ ಒಂದು ವೃತ್ತ : ಮರುತಂ ಜಾತವೇದಂ ಹರನಂ ಕೂಡಿ ಬಂದಂದರವಿಂದಾಯತಾಕ್ಷೀ ಸರಲಂ [ಪಾಶಾಂ. ೪೦] ವೃತ್ತನಾಮಂ (ಛಂದೋಂಬು. ೨-೯೮). **ಸರಳ** : ೫. ಸರಳತಮಾಳತಾಳಹರಿಚಂದನನಂದನಭೂಜರಾಜಿಯಿಂ ಸುರಿವಲರೋಳ ತದ್ವನಲತಾಂಗಿಯ ಸೂಸುವ ಸೇಸೆಯಾಯ್ತು (ಪಂಪಭಾ. ೫-೫೨) ; ವರನೇಂಪಿಲಂಬಟೆ ಸರಳು ತಟೆ ತಾಜೆಯತ್ತಿ ಮುತ್ತುಂ ಬೆಗ್ಗಂ (ಮಾಸಾಸೆ. ೪-೯೯) ೧೩. ವಕ್ರವಿಲ್ಲದುದು; ನೇರವಾದುದು : ಸರಳಂ ವಕ್ರಂ ತರಳಂ ಸ್ಥಿರಮುಚ್ಚಂ ನೀಚಮೀಕ್ಷಣಕ್ಕೊದವೆ ತಮಂ ಸರಿಯಾದುವು (ಚಂದ್ರಪ್ರ. ೮-೨೧) ; ಭರದಿಂದ ಶ್ವಾಸನ ಬಾಲವ ತಿದ್ದಲು ಸರಳವಾಗಬಲ್ಲುದೇ (ಪುರಂದ. ೧-೧೫೬-೨). ೧೪. ಸುಲಭವಾದುದು; ಸರಾಗ : ಸಮಸ್ಯೆಯ ಪರಿಹಾರ ಸರಳವಲ್ಲ (ಶಿಕ್ಷದ. ೩೦೯). ೧೫. [ನಾಟ್ಯ] ತೋಳುಗಳನ್ನು ಬಾಗಿಸದೆ ನೀಳವಾಗಿರಿಸುವ ಒಂದು ಭಂಗಿ : ತೋಳದು . . . ನೇರಿತ್ತಾಗಲ್ ವನಜಾನನೆ ಸರಳಮೆಂಬ ತೋಳೆನಿಸಿರ್ಕುಂ (ಲಾಸ್ಯರಂ. ೨-೧೨೯). [ಸಂ.]

ಸರಲತೆ, ಸರಳತೆ (ನಾ). ೧. ಕೊಂಕಿಲ್ಲದಿರುವಿಕೆ ; ಸಹಜತೆ : ಮಾರ್ದವದು ಕಣ್ಣ ಸರಲತೆ ಸಾರ್ದವದು ನವೀನಯೌವನೋದಯಮಿವಳು (ಚಂದ್ರಪ್ರ. ೮-೫೦). **ಸರಳತೆ** : ೧. ಸರಳತೆಯುಂ ಬಡತನಮುಮಬಳಾಮಧ್ಯದೊಳ್ (ಎಇ. XIII, ೩೩೨-೪೨; 929). ೨. ಪ್ರಾಮಾಣಿಕತೆ ; ನಿಷ್ಕಪಟತೆ : ಸರಳತೆ ಬೆಳಗುವುದು ಇತರರಲ್ಲೂ ಸರಳತೆಯಿದ್ದಾಗ (ನಿಶಉ. ೧೨೦). ೩. ಸುಲಭ ; ಸರಾಗ : ನಾವು ಹಿಡಿದ ಮಾರ್ಗ ಒಂದು ವೇಳೆ ಸರಿಯಾದರೂ ಅದು ಫಲಾಕಾಂಕ್ಷೆಯಿಂದ ಕೂಡಿದ್ದಾದರೆ ನಮ್ಮ ದಾರಿಯ ಸರಳತೆಯಲ್ಲಿ ಅಡ್ಡಆತಂಕಗಳನ್ನು ತಂದೊಡ್ಡುತ್ತದೆ (ಧರ್ಮಕಾ. ೧೧೬). [ಸಂ. ಸರಲತಾ]

ಸರಲತ್ವ (ನಾ). = ಸರಲತೆ. [ಸಂ.]

ಸರಲಷ್ಕರ (ನಾ). ಸೈನ್ಯವನ್ನು ನೋಡಿಕೊಳ್ಳುವವನು ; ಸೇನಾಪತಿ : ಮಹಾರಾಜನು . . . ತನ್ನ ಸರಲಷ್ಕರನಾದ ನಿಂಬಾಳಕರ ಹಯಪತರಾಯನನ್ನು ಚಂದ್ರಸೇನರಾಯ ನಿಗಿದುರಾಗಲಿಕ್ಕೆ ಕಳುಹಿದನು (ಚರಿಸಂ. ೬೫). [← ಮರಾ. ಸರಲಷ್ಕರ್]

ಸರಲು$_1$ 'ಸರಲ್$_1$' ನೋ.

ಸರಲು$_2$ 'ಸರಲ್$_2$' ನೋ.

ಸರಲು$_3$, **ಸರಳು**$_2$ (ನಾ). ೧. ತಗ್ಗುಪ್ರದೇಶ ; ಹಳ್ಳ : ದಾರಿಯಲ್ಲಿ ಅಡ್ಡಲಾಗಿದ್ದ ಕಾಡಿನ ಒಂದು ಸರಲಿನಲ್ಲಿ ತಾನು ಒಡ್ಡಿದ್ದ ಉರುಳನ್ನು ನೋಡಿಕೊಂಡು ಬರುವ ಸಲುವಾಗಿಯೆ ಮುಕುಂದಯ್ಯ ಗುಡ್ಡ ಹತ್ತಿದ್ದನು (ಮಲೆಮ. ೧೪೬). **ಸರಳು**$_3$: ೨. ನೀರಿನ ಸಣ್ಣ ಸೀಳು ; ಝರಿ : ಈ ನಾಲ್ಕೂ ಸರಳುಗಳು ಬೀಳುವ ತಗ್ಗಿನಲ್ಲಿ ದೊಡ್ಡದೊಂದು ಮಡುವಾಗಿದೆ (ಕಭಾಗೌ. ೧೫); ಹೊಳೆಯ ಸರಳುಗಳು ಕೂಡುವ ಸ್ಥಳದಲ್ಲಿ ಬಹುತರವಾಗಿ ಉಸುಬಿನ ರಾಶಿಯು ಜಮೆಯಾಗುತ್ತದೆ (ಮುಂಬಯಿ. ೬-೨೦೫). [?]

ಸರಲೆ (ನಾ). ೧. ಒಂದು ಬಗೆಯ ಮರ ; ಪೀತದಾರು : ಸರಲೆಯಿಂ ಹೊರಲೆಯಿಂ ಹಾಲೆಯಿಂ ಹೀಲೆಯಿಂ . . . ನುಗ್ಗಿಯಿಂ ಕೊಗ್ಗಿಯಿಂತೊಗ್ಗಿನಿಂ ಕಾಡೆಸೆದುದು (ನಂದಿಮಾ ೧೩-೧೨). ೨. ಒಂದು ಬಗೆಯ ಪಕ್ಷಿ : ಸಿಲುಕಿದವು ಪಿಕ್ಕುಳಿಗ . . . ಲಾವುಗೆ ಸರಲೆ ಬುಱುಲೆಗಳೆಚ್ಚ ಮಿಂಟೆಯಲಿ (ತೊರಾ. ೩-೩-೧೮) ; ಶುಕ ಪಿಕ ಸರಲೆ ಕಬ್ಬಕ್ಕಿ ಕಳವಿಂಕ ಪಿಂಗಳಿಕ ಸಾಳ್ವನರಳಗನಸಗವಕ್ಕಿಗಳ ಸಂಘಮೊಪ್ಪಿರ್ದುವಲ್ಲಿ (ರುಕ್ಮಾಂಗ. ೧೦-೫). [ಸಂ. ಸರಲ]

ಸರಲೆಕ್ಕ (ನಾ). ದೀರ್ಘವಾದ ಲೆಕ್ಕ ; ಜಟಿಲವಾದ ಲೆಕ್ಕ : ಜಲದೊಳಗಳ ಮತ್ಸ್ಯದ ನೆಲೆಯ ಮುಗಿಲೊಳಗಳ ಮಿಂಚಿನ ನೆಲೆಯ ವಾರಿಯ ಸರಲೆಕ್ಕವ ಭೇದಿಸಬಹುದೆ (ಸಕವ. ೯ I. ೧೭೪-೨೨೫). [ಸರ್ದ + ಲೆಕ್ಕ]

ಸರವಂದ (ನಾ). ಬಾಣಗಳನ್ನು ಕಟ್ಟುವುದು : "ಶರಬಂಧ - ಸರವಂದ" (ಶಮದ. ೨೯೨ ಪ್ರಯೋ.). [< ಸಂ. ಶರಬಂಧ]

ಸರವಂದಿಗ (ನಾ). ಬಾಣಗಳನ್ನು ಕಟ್ಟುವವನು : ಸರವಂದಿಗಂ, ಪಟ್ಟಸಾಲಿಗಂ, ಚಿಪ್ಪಿಗಂ (ಭಾಷಾಭೂ. ೧೬೬ ಉಪಾ); ಸರವ ತಿದ್ದಿಡುವ ಸರವಂದಿಗರ ಗಂದಿಗರ ಪಿರಿದು ತೈಲವ ತೆಗೆವ ಗಾಣಿಗರ ಶ್ರೇಣಿಗರ . . . ಪಸರಮೆಸೆಗುಂ (ಗುರುಚಾ. ೧-೩೪).

[ಸರವಂದ + - ಇಗ]

ಸರವಂದಿಗಿತಿ (ನಾ). ಬಾಣಗಳನ್ನು ಕಟ್ಟುವವಳು : ಸರವಂದಿಗಿತಿ, ಪಟ್ಟಸಾಲಿಗಿತಿ (ಶಬ್ದಾನು. ೧೯೨ ಪ್ರಯೋ.). [ಸರವಂದಿಗ + - ಇತ್ತಿ$_1$ (< - ಇತ್ತಿ)]

ಸರವಕ್ಕಿ (ನಾ). ಇಂಪಾದ ಸ್ವರವುಳ್ಳ ಹಕ್ಕಿ ; ಕೋಗಿಲೆ : ಸರವಕ್ಕಿಯೊಡನೆ ಸೊಗಸೂಡಿ ನಲಿದಾಡಿ ಪಾಡಿ . . . ಸಱಿಮಿಂಡಿಯರ್ ಮಿಂಡೆಳ್ದು ವನದೊಳ್ . . . ವಿಹರಿಸಿದರು (ನಂದಿಮಾ. ೪-೨೨). [ಸರ$_1$ + ಪಕ್ಕಿ]

ಸರವಟ್ಟಿ (ನಾ). ಬಾಣದ ಕೋಲು, - ದಂಡ : ಆ ಸುಕೋಮಳಾಂಗಮೆ ಸರವಟ್ಟಿ ತೊಟ್ಟಲರ ಪಚ್ಚಮ ಬಿಳ್ಗಱಿಯಾಗೆ ಕಾಮಿನೀಸಮಿತಿ ವಿರಾಜಿಸಿರ್ದುದು . . . ಮೋಹನಬಾಣದ ಮೊತ್ತಮೆಂಬಿನಂ (ಶಾಂತೀಶ್ವ. ೧೦-೧೪೯). [ಸರ$_2$ + ಪಟ್ಟಿ$_2$]

ಸರವಣ, ಸರವಣೆ (ನಾ). ಜೊಂಡಿನ ಮೆಳೆ, – ಪೊದರು : ಭಾರತವರುಷ ವೆಂಬುದಱೊಳಗೊಪ್ಪುವಂಬುಜ ಹರಿಯಂಚೆ ತುಂಬಿದ ಸರವಣವಿಹುದು (ಭೈರವೇ. ೧-೩೫); ಈಶ್ವರನ ವೀರ್ಯವೆ ಸರವಣದೊಲೆಸೆವ ಷಣ್ಮುಖನಾಗುತ ಇರದೆ ಪೊಱಮಡುವಂತೆ ಕೊಳದಿಂ ಹೊಱಂಟು (ಚೀರಮ. ೭-೨೬). **ಸರವಣೆ** : ನೀವು ಬಿಸಿದ ಸರವಣೆಯುಂಟುವಸಮಾನವೀ ಮಹಾಹಿಮಗಿರಿಯೊಳಿಹುದೆನಲು (ಪ್ರಭುಪು. ೮-೧೦೬).

[< ಸಂ. ಶರವಣ]

ಸರವಣೆ 'ಸರವಣ' ನೋ.

ಸರವಣಿಗ (ನಾ). ಇಂಪಾದ ಸ್ವರಮಾಡುವಂತಹುದು ; ಕೋಗಿಲೆ : ಸರವಣಿಗನುಸಿಲ್ ಕರ್ದುಂಕದ ತಳಿರದಲರ್ದಿನಿಗನುರವಣಿಸಿ ಪಿಡಿಯದಿಹ ಜೊನ್ನೊಡಲ್ (ಚೀರಮ. ೫-೭). [ಸರ$_1$ + - ವಣಿಗ]

ಸರವತಿ 'ಸರವತ್ತಿಗೆ' ನೋ.

ಸರವತಿಗೆ 'ಸರವತ್ತಿಗೆ' ನೋ.

ಸರವತ್ತಿಗೆ, ಸರವತಿ, ಸರವತಿಗೆ, ಸರವತ್ತು, ಸರಾತಿ (ನಾ). ೧. ಡೇರೆಯ ಹೊರಆವರಣದಲ್ಲಿ ಕಟ್ಟುವ ಬಟ್ಟೆ ; ಗುಡಾರದ ಸುತ್ತಲೂ ಇಳಿಬಿಡುವ ಬಟ್ಟೆ : ಗುಡಿ ಸರವತ್ತಿಗೆ ಹುರುಳಿ ಹುಲ್ಲ ಕಂಪಣ ಕಡಲೆ ಕವಳ ಹಕ್ಕರಿಕೆಯ ಹಿಡಿದ ಹೇಱಿನ ಕೊಟ್ಟಗೆಯತ್ತುಗಳೆಡೆವಿಡದೆ ನಡೆದವಂದಲ್ಲಿ (ಶ್ರೀಕಾಲ. ೧೩-೮೯) ; ದೊರೆ ದೊರೆಗಳಿಗೆ . . . ಸರವತ್ತಿಗೆಯು ಚಪ್ಪರಗಳು ಇರದನುಮಾಡಿಸಿ (ಅಮುಸಾಂ. ೨-೪೨). ೨. ಸುತ್ತುಬೇಲಿ ; ಆವರಣ : ಹೊಲದ ಸುತ್ತ ಸರವತ್ತಿಗೆ ಬಿಡಿಸಿ ಮಂಚಿಕೆಯ ಕೀಲಿಸಿ ಶೋಧಿಸಲಾಗಿ (ಬ್ರಚಸ. ೯). **ಸರವತಿ** : ೧. ಗುಡಿಯಂ ಪೊಯ್ದಾನೆಯ ಪಂದೊವಲಿಂ ದುಡಿದ ಪತಾಕಾಪಟಸಂತತಿಯಿಂದೆಡೆವಱಿಯದ ಸರವತಿಯಂ ಬಿಟ್ಟು (ಜಯಿಕಾ. ೭-೨೪). **ಸರವತಿಗೆ** : ೧. ಅರುಣಜಲವೆಡೆಬಿಡದೆ ಪೊರೆಯೆ . . . ತನ್ನರಮನೆಗೆ ಬಳಸಿ ಕೆಂಬಣ್ಣಾದಪರಸ್ಥಲದ ಪರಿರಂಜಿಸುವ ಚಿತ್ರಪಟದ ಸರವತಿಗೆಯಂ ಬಿಟ್ಟಂತಿರೊಪ್ಪಿತಾಗ (ಸಮ್ಮೇ. ೮-೩೪); ಗುಡಿ ಗೂಡಾರ ನೀಟಿನ ಸರವತಿಗೆಗಳಿಡೆವಿಡದಾ ದಂಡಿನೊಳಗೆ ಕಡುಗಲಿ ಖಾನಖಾನರಿಗೆ ರಾಜಿಸಿದುವು (ಕಂಸವಿ. ೧೯-೨೦). **ಸರವತ್ತು** : ೩. ಒಂದು ಬಗೆಯ ಗುಡಾರ : ತಂಬು ಗುಡಾರ ಗುಮ್ಮಟಿ ಡೆರ್ಯ ಸರವತ್ತು . . . ರಂಬಾಣದೋರಿ ಮೆರೆದರು (ಸಾಂದಕಾ. ೫-೨೪). **ಸರಾತಿ** : ೧. ಗುಡಿಗೂಡಾರ ಸರಾ [ಪಾಠಾಂ. ರ]ತಿ ಪೆಟ್ಟಿಗೆ ಲಾಯದೊಡಕಿನ ಕುದುರೆ ಕರಿಗಳ ಗಡಣ ಸಿಕ್ಕಿತು (ಕುರಾಸಾಂ. ೨೦-೭೬) ; ಗುಡಿಗೂಡಾರ ಸರಾ [ಪಾಠಾಂ. ರು]ತಿ ಪೆಟ್ಟಿಗೆ ಬೋನಗುಡಿಕೆ ನೂತನವಸ್ತ್ರಗಳ ತಡಗಗಳಾದಿ ನಾನಾಹೊಱೆ ಕಾಱುರ ಗಡಣಮೆಸೆದುದು (ರಾಮಪ. ೭-೧೩). [?/ತೆಲು. ಸರಾತಿ. / ಹಿಂ. ಸರವಾನ = ಗುಡಾರ]

ಸರವತ್ತು 'ಸರವತ್ತಿಗೆ' ನೋ.

ಸರವರ (ನಾ). ಕೊಳ ; ಸರೋವರ : ಶರದಂಬರಮುಂ ಮತ್ತೀ ಸರವರಮುಂ ವಿಳಸದತನುಧವಳಚ್ಛವಿಗಳ್ (ಕವಿರಾ. ೩-೪೬) ; ಸರವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ (ಮಹಾದೇ. ಬ. ೩೩-೭೩). [< ಸಂ. ಸರೋವರ]

ಸರವಲಿ (ನಾ). ಸರಗುಣಿಕೆಯುಳ್ಳ ಬಲೆ : ಸರವಲಿ ಹಾಸುವಲಿಗಳಿಂದ ಬೇಡನು ತರುಗಳ ಮರೆಯಲ್ಲಿ ಬರುತ (ಕಪೋತ. ೨೩). [ಸರ$_2$ + ಬಲೆ$_1$]

ಸರವಳಿಗೆ, ಸರಳಿಗೆ$_1$ (ನಾ). ಗೋದಿಹಿಟ್ಟು ಅಥವಾ ರವೆಯನ್ನು ಕಲಸಿ ಮಾಡಿದ ಉರುಳೆ ಮತ್ತು ಅದರಿಂದ ಮಾಡಿದ ಪಾಯಸ : ಹಾಲೋಗರೊಡೆ ಸಣ್ಣಸೇವಗೆಗಳಲ್ಲುಲ್ಲಿ ಸರವಳಿಗೆ ಸಣ್ಣಸರವಳಿಗೆ ಮಣಿಸರವಳಿಗೆ ವರಮಧುರ ಪೂಸಣಂಬಂ ಸಮೆದವಂತೊಳಗೆ (ಬಸರ. ೭-೧೩) ; ಪರಡಿ ಕಿಱುಗೋದಿಸೇವಗೆ ಸರವಳಿಗೆ ಸುಗಂಧಕಲವೆಯಕ್ಕಿಯ ಪಾಕಂ ಪರಿವಡೆಯಲಣ್ಣೆವಾಲಿಂ ಬೆರಸಿದ ಸಕ್ಕರೆಯ ತುಯ್ಯಲಿಕ್ಕಿದರ್ (ನಳಚಂ. ೪೪೧) ; ಎಣ್ಣೆಯೂರಿಗೆಯಿಡ್ದಲಿಗೆ ಕಡುಸಣ್ಣಸೇವಗೆ ಸರವಳಿಗೆ ಮಿಗೆ ಕಣ್ಣಗಾರಿಗೆಯೊಟ್ಟುತಿರ್ದುವು ದೇವನಿದಿರಿನಲಿ (ಪ್ರಭುಲೀ. ೨೩-೧೭). 'ಮಣಿಸರವಳಿಗೆ' ಪರಾ. **ಸರಳಿಗೆ$_1$** : ಸರಳಿಗೆಪಾಯಸ ಸಜ್ಜಿಗೆ ಪಾಯಸ ಪರಿಪರಿ ಪಾಯಸ (ಶರಲೀ. ೮೭-೧೮). [?]

ಸರವಾದಿ (ನಾ). ಸ್ವರಗಳನ್ನು ಹಾಡುವವನು ; ಗಾಯಕ ; ಸಂಗೀತಗಾರ : ಸ್ವರವಾದಿ-ಸರವಾದಿ (ಶಮದ. ೨೮೯ ಪ್ರಯೋ) ; ಅಹಿಯ ಶರಮಾನದ ಸುತಾಳಗ್ರಹಮುಖದ ಸರವಾದಿಗಳು ಸರವಹಿಯ ನಾಯಕವಾಡಿಗಳೆ (ಕುವ್ಯಾಕ. ೨೩-೬). [< ಸಂ. ಸ್ವರವಾದಿನ್]

ಸರವಿ$_1$, ಸರಬಿ, ಸರವೆ$_2$ (ನಾ). (ಸಾಮಾನ್ಯವಾಗಿ ಹುಲ್ಲನ್ನು ಹೊಸೆದು ಮಾಡಿದ) ಹಗ್ಗ ; ಹುರಿ : ಕಟ್ಟಿದ ಪಟ್ಟಿಮ ಸರವಿಗೆ ನೆಟ್ಟನೆ ದೊರೆ (ಪಂಪಭಾ. ೧೦-೧೭) ; ಮಳಲ ಹೊಸೆದರೆ ಹೊಸೆದಂತಲ್ಲದೆ ಸರವಿಯ ಹಡೆಯಲು ಬಾರದು (ಬಸವ. ೪೫೪) ; ಪರಿವ ಭಂಡಿಯಂ ಕಾಲಿಂ ಕೋವರು ಮಣಲಂ ಸರವಿ ಪೊಸೆವರು (ಸೌಗಾ. IX-I. ೨೮೭-೧೪ ; 12ನೆಯ ಶತ) ; ಉರಗನಿಕ್ಕಡಿಗಾಜಿ ಹುಲ್ಲಿನ ಸರವಿಗಂಜುವುದುಂಟೆ (ಕುವ್ಯಾಧ್ಯೋ. ೫-೭೮). **ಸರಬಿ** : ಮಣಲ ಸರಬಿಯ ಹೊಸೆವರುಂ ಬಹ ಮಾರಿಯ ಮುದ್ದಾಡುವರುಂ (ಎಕ. VIII. ಸೊರಬ. ೫೮೬-೫೭ ; 1201) ; ರಾಮಣ್ಣನ ಎತ್ತು ಸರಬಿ ಕಟ್ಟಿ ಮೆರಿಸುವ ಸಂದರ್ಭ ಏನು ಬಂದಿತ್ತು? (ಮನಚಿ. ೧೯). **ಸರವೆ$_2$** : ಉರಗನ ಹರಣವ ತೆಗೆವವನಿಗೆ ಹುತ್ತದರಗಿನ ಹುಲ್ಲ ಸರವೆಯ ಪರಿಹರಿಸುವುದರಿಂದಲ್ಲ (ರಾಮವಿ. ೧೮-೩೪); ಅನುಭಾವಿಯಾದಡೆ ಸುಟ್ಟ ಸರವೆಯಂತಿರಬೇಕು (ಆಖಂಡೇ. ೧೯೨-೧೨). [?]

ಸರವಿ$_2$ 'ಸರುವು$_2$' ನೋ.

ಸರವಿಡು$_1$ (ಕ್ರಿ). ಧ್ವನಿಮಾಡು ; ಕೂಗು : ಬ್ಯಂಹತದಬ್ಬರಕ್ಕೆ ದಿಙ್ಮಾದಕರಿ ಭೀತಿಯಿಂದೆ ಸರವಿ [ಪಾಠಾಂ. ಸೆರಗಿ]ಟ್ಟುನವು (ಸೂಕ್ತಿಸು. ೧-೪) ; ಸರವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲಕೆ (ಪ್ರಭುಲೀ. ೩-೩೨). [ಸರ$_1$ + ಇಡು$_1$]

ಸರವಿಡು$_2$ (ಕ್ರಿ). ಮಾಲೆಯನ್ನು ಹಾಕಿಕೊಳ್ಳು ; ಹಾರವನ್ನು ಧರಿಸು : ಮರುಳುಗಳು ಕರುಳ ಮಾಲೆಯ ಕೊರಳೊಳು ಸರವಿಟ್ಟು ರುಧಿರತಿಳಕಮನಿಟ್ಟುಂ ಹರಸುತಿದ್ದರು (ಎಕ. VIII. ನಗರ. ೧೯-೧೫ ; 1320). [ಸರ$_2$ + ಇಡು$_1$]

ಸರವಿವೋಗು (ಕ್ರಿ). (ಬೇಟೆಗಾಗಿ) ಪ್ರಾಣಿಗಳ ಜಾಡಿನಲ್ಲಿ ಹೋಗು : ಬಳಗಂಬೆರಸೀ ಅಂಜನಗಿರಿಯೆಡೆಯ ಕಿಬ್ಬರಿಯ ಪಟುವೊಳ್ ಸರವಿವೋಪುದುಂ (ರಾಮಾಶ್ವ. ೭೭-೨೪).

[ಸರವಿ$_2$ (< ಸರುವು$_2$) + ಪೋಗು$_1$ (< ಪೋ$_1$)]

ಸರವು 'ಸರಿವು' ನೋ.

ಸರವುಗಟ್ಟು$_1$, ಸರುವುಗಟ್ಟು (ಕ್ರಿ). ೧. ಧಾರಾಕಾರವಾಗು ; ಧಾರೆಯಾಗಿ ಸುರಿ : ಮಾಸ್ತರರು . . . ಮತ್ತೊಂದು ಸುದ್ದಿಯನ್ನು ತಿಳಿಸಿದರು - ಬೆಳಗುಮುಂಜಾನೆ ಸರವುಗಟ್ಟಿ ಹೊಡೆದ ಮಳೆಯ ಹೊಡೆತಕ್ಕೆ ಅವರ ಮನೆಯ ಗೋಡೆಯೊಂದು ಬಿದ್ದಿರುವದಾಗಿ (ಗಂಗಾಸಾ. ೮೯). **ಸರುವುಗಟ್ಟು** : ೧. ಸರುವುಗಟ್ಟಿ ಮಳೆಯು ಬೀಳುತ್ತಿದೆ (ಅಂದಿ. ೪೧). ೨. (ಆಲಂ) ಮೇಲಿಂದ ಮೇಲೆ ಬರು ; ಓತಪ್ರೋತವಾಗು : ಎಲ್ಲರಿಗೂ ನಗೆಯು ಸರುವುಗಟ್ಟಿ ಬಂದಿತು (ಗಂಗಾಸಾ. ೩೧). [ಸರವು (< ಸರಿವು) + ಕಟ್ಟು$_1$]

ಸರವೆ$_1$ 'ಶ್ರಾವೆ' ನೋ.

ಸರವೆ$_2$ 'ಸರವಿ$_1$' ನೋ.

ಸರವೆತ್ತು (ಕ್ರಿ). ಧ್ವನಿಯನ್ನು ಏರಿಸು : ಅಡಿಯಿಡುವ ಕಾಂತೆಯರಂದುಗೆಯ ನಿನಾದಂ ಸರವೆತ್ತಿ ಪಾಡುವೈದೆಯರ ಗಾನಂ ದಿಗೀಶ್ವರರ ಕವಿಗಾನಂದವಂ ಕಜ್ಜೆಯ (ಚಿಲಪು. ೬-೫೪). [ಸರ$_1$ + ಎತ್ತು$_1$]

ಸರವೇಱಿಸು (ಕ್ರಿ). ೧. ಮಾಲೆಕಟ್ಟು ; ಸರವನ್ನಾಗಿ ಮಾಡು : ಚರಿತಪುರಾಣ ದೊಳ್ಕಣಿಗಳಂ ಸರ[ಪಾಠಾಂ. ರಸ]ವೇಱಿಪವೋಲ್ ಭವಾವಳೀಸ್ಮರಣಕಥಾ ಭವಂಗಳನದಾರ್ ಬರೆವರ್ (ಅರ್ಧನೇ. ೧-೩೯) ; ವಿನೂತನಾಕ್ಷಮಣಿಯಂ ಸರವೇಱಿಪ ನಾರ ಸೀರೆಯಂ ಪಸರಿಪ . . . ಮುನಿಮುಖ್ಯಕುಮಾರಸಮೂಹಮೊಪ್ಪುಗುಂ (ಗಿಂಕ. ೧-೭೪). ೨. ಒಂದಾದ ಮೇಲೊಂದರಂತಿರು ; ಅನುಸ್ಯೂತವಾಗಿರು : ಸರವೇಱಿಪಂದದಿಂ ಸಿರಿಗಳನೀ ಮಹಾಕಥೆಗಳಂ ಪ್ರಥಿತಂಗಳನೊಂದೆ ಕಾವ್ಯದೊಳ್ ಬರೆದನಿದೇಂ ಕವೀಶ್ವರರೊಳ್ ಕವಿರಾಜಕುಂಜರಂ (ಅರ್ಧನೇ. ೧-೩೯). [ಸರ$_2$ + ಏಱಿಸು]

ಸರಸ (ಗು). ೧. (ಹಣ್ಣು ಮುಂತಾದುವುಗಳಂತೆ) ರಸದಿಂದ ತುಂಬಿದ ; ರಸಭರಿತವಾದ : ತಾಮರೆಯರಲೊಳ್ ಸರಸನಿಜಾಮೋದದೊಳೊಂದಿ ನಲಿದು . . . ಸುಲಿವುದಳ ಕೆಲಕೆಲದೊಳ್ (ಕವಿರಾ. ೩-೧೨೭) ; ಸ[ಶಾಕಾಂ. ಸು]ರಸ ಪಲಾಶಪುಷ್ಪಚಯದೊಳ್ ವನಲಕ್ಷ್ಮ್ಯಾಯ ರತ್ನನೂಪುರಸ್ವನಮೆನೆ . . . ಪೊನ್ಮದತ್ತು ಮಧುರಂ ಮಧುಮತ್ತಮಧುವ್ರತಸ್ವನಂ (ಚಗಪ. ೧೪-೪೦). ೨. ಅಚ್ಚ ಹೊಸದಾದ ; ನವನವೀನವಾದ : ಉನ್ಮುಖವಾಗಿರ್ದುವು ನೀಳ್ದ ಸರಸಬಿಸವಲ್ಲರಿಗಳ್ (ಮಲ್ಲಿಪು. ೬-೧೦೨). ೩. ರುಚಿಕರವಾದ ; ಸವಿಯಾದ : ಸರಸಾನ್ನಪಾನ . . . ಅತುಳಪಾತ್ರಮಿವುವು ನಿರಂತರಂ ದಶವಿಧಂಗಳಮರಕುಜಂಗಳ್ (ಶಾಂತೀಶ್ವ. ೬-೮೬) ; ವಿಪ್ರರಾದರೆ ಸರಸನವಭೋಜನದ ಕಥೆ ಮೇಣ್ ನಿರತಿಶಯವೇದಾಂಗವೇದ ತದರ್ಥ ತರ್ಕಗಳು (ಕುವ್ಯಾಲಿ. ೧೬-೨೩). ೪. ಪ್ರೀತಿಯಿಂದ ಕೂಡಿದ : ಸರಸ ಹಾಸ್ಯದ ಹಾಸಕದ ವಹಣಿಗಳ ವೈಸಿಕದ . . ನವಶಾಬರಿಯರ್ಕೆದಿರು (ತೊರಾ. ೧-೫-೪೦) ; ಅವಗಂ ಸರಸಕರುಣಾಮೃತದ ಕಳಿಗಳಿಂ ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುವ ದೇವಪುರ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ (ಜೈಮಿಭಾ. ೧-೧). ೫. ಸೊಗಸಾದ ; ಚೆಲುವಾದ : ಸರಸರವದಿಂ ಸಾರ್ದು ಸಂಕೀರ್ತನಂಗೆಯ್ಯೆ ಶ್ರುತಿಸತಿಯರಿ (ಕಬಶಂ. ೧-೭೯ ವ) ; ಸರಸಸಂಗೀತದ ಝರುಹುಗಳರಿಯದೆ ಬರಿದ ಬಾರಿಸದಿರು ತಂಬೂರಿ (ಶಂಭಾ. ೨೬-೩). ೬. (ಬೆವರಿನಿಂದ) ಒದ್ದೆಯಾದ ; ತೊಯ್ದ. ೭. ಅಗ್ಗವಾದ ; ಸೋವಿಯಾದ : (೩). ೮. [ಕಾವ್ಯಮಿಶ್ರ] (ಶೃಂಗಾರ ಮುಂತಾದ) ಕಾವ್ಯರಸಗಳಿಂದ ಕೂಡಿದ : ಸರಸಕವಿಕಾವ್ಯಮಧುಮತ್ತೆ ರಾಗದೊಳ್ ಪೊರದು . . . ನುನ್ನಾನಿಯಿಂದೋದುವ ಸುರವಾಚೆ ಸತಿಗೆ ಪುಳಕಮಂ ಪುಟ್ಟಿಸಿದಳ್ (ಚಂದ್ರಪ್ರ. ೧೧-೧೪೪) ; ಅರಸಿಯರನಿಬರುಮಾದರದಿಂದೆನ್ನ ಸರಸಕಾವ್ಯವ ಸವಿವಂತೆ ಪರಮಪತಿವ್ರತೆಯರ ನಡತೆಯನಿಲ್ಲಿ ಮರುಳ್ಗುಳಿಸಿ ಪೊಗಳುವೆನು (ಹದಿಬ. ೧-೪೭). (ನಾ). ೯. ಚೆಲ್ಲಾಟ ; ವಿನೋದ : ಅರಸರೊಳೆಲೆ ನೀಂ ಸರಸಮನರಸಿಯವೋಲಾಡುತಿರ್ಪೆ ನಿನಗಿದು ಗುಣಮೇ ಅರಸರ್ ಸರಸಮನಱಿವರೆ ಸರಸಮನಾದರಸರಲ್ಲದವರೊಳ್ ಮಗಳೇ (ಕವಿರಾ. ೩-೨೩೩) ; ಎಳೆಯ ಬಾಳೆಯ ಸುಳಿಗ ಸೀಗೆಯ ಮೆಳೆಯೊಡನೆ ಸರಸವೆ (ಕುವ್ಯಾದ್ರೋ. ೧೨-೩೯). ೧೦. ಚೆಲುವು ; ಸೊಬಗು: 'ಸರಸಂಬೆಱು' ಪರಾ. ೧೧. ಶೃಂಗಾರವಿಷಯದಲ್ಲಿರುವ ಆಸಕ್ತಿ ; ರಸಿಕತೆ: 'ಸರಸಗಾಱಿ', 'ಸರಸಾಶ್ರಯ' ಪರಾ. ೧೨. ಸರಾಗ ; ಸುಲಭತೆ : ಅರಸ ಫಡ ಹೋಗದಿರು ಸಾಮದ ಸರಸಕೊಳ್ಳದು ಬಿಲ್ಲ ಹಿಡಿ ಹಿಡಿ (ಕುವ್ಯಾದ್ರೋ. ೧-೬೧) ; ಸನ್ಮಿತ್ರನಾದ ನಿನ್ನ ದೆಸೆಯಿಂದ ನನ್ನ ಮನೋರಥವು ಸರಸವಾಗಿ ಸಫಲವಾಯಿತು (ಶಾಕುಂತ. ೧೧೧-೧೨). ೧೩. ಸದರ ; ಸಲಿಗೆ : ಹುಲುಕಪಿಗಳೆಮ್ಮೊಡನೆ ಕಾದಲು ಸರಸ ವಿರಸವಲ (ಕಾಶಿಕಾ. ೩೪-೨೦) ; ಅದರೊಡನೆ ನೀನು ಎಷ್ಟು ಸರಸವಾಗಿ, ಎಷ್ಟು ಅಂತರ್ಯಕವಾಗಿ ಮುಗುಳುನಗೆಯಿಂದ ಮಾತನಾಡುತ್ತಿದ್ದೆ (ಹೂಕ್ಷಿ. ೮). ೧೪. ಸ್ವಚ್ಛ; ನಿರ್ಮಲ : ಸರಸವಾಯತು ಗಗನತಳ ತಾವರೆಯ ಸಖ ನಿಜರಥವ ನೂಕಿದನುದಯ ಪರ್ವತಕೆ (ಕುವ್ಯಾದ್ರೋ. ೪-೧೨). ೧೫. ರಸಿಕ : ಸರಸನೆನಿಸಿರ್ದ ಸಖ ನಾಗರಿಕಂ . . . ಅವನಿಪಂಗಿಂತೆಂದಂ (ಗಿಂಕ. ೪-೧೦೩).

ಸರಸವಾಡು = ೧. ಚೆನ್ನಾಟವಾಡು ; ಚೆಲ್ಲಾಟವಾಡು : ಗಿರಿಯ ಮಕ್ಕಳು ನೆರೆದು ವಜ್ರವ ಸರಸವಾಡುವ ಕಾಲವಾಯಿತೆ (ಕುವ್ಯಾದ್ರೋ. ೨-೫೫). ೨. ಚಕ್ಕಂದವಾಡು; ಲಲ್ಲೆಹೊಡೆ : ಚಂದ್ರಿಗೆ ತಾನು ಗೋವಿಂದನೊಡನೆ ಸರಸವಾಡುತ್ತಿದ್ದುದೆಲ್ಲ ಜ್ಞಾಪಕಕ್ಕೆ ಬಂತು (ನಿಕಲು. ೪೫). ೩. ಅಪಹಾಸ್ಯ ಮಾಡು ; ಗೇಲಿಮಾಡು : ಬಿರುದ ಬಟ್ಟೋಡಿತ್ತು ರಾವುತನೆರವಿ ಬಜೆಗುದುರೆಗಳ ಕಂಡಾ ತರುಚರಂಗಳು ಸರಸವಾಡಿತ್ತು (ಕಾಶಿಕಾ. ೨೦-೨೫). [ಸಂ.]

ಸರಸಂಬೆಱು (ಕ್ರಿ). ೧. ನಾವೀನ್ಯವನ್ನು ಹೊಂದು : ಸರಸಂಬೆತ್ತ ಬಹುಪ್ರಕಾರದ ಕಳಾಪ್ರಾಗಲ್ಭ್ಯದಿಂ ಭೂವರಸ್ಮರನಂ ಮೋಹಿಪೆವೆಂದು ಸಾರ್ದು ಸಮಯಂಬಾರುತ್ತುಂ . . . ಇರ್ದುದು ರತ್ನಮಾಲೆವೆರಸಂತಾ ವಾರನಾರೀಜನಂ (ಕುಸುಪಾ. ೧೦-೧೦೧). ೨. ಚೆಲುವನ್ನು ಪಡೆ ; ಮನೋಹರವಾಗು : ಸರಸಂಬೆತ್ತೆಳಗೊಬು ಸಾರ್ದ ಪದವಿಲ್ಲುನ್ಮತ್ತಭೃಂಗವ್ರಜಂ ತಿರಿ ತಳ್ತೊಪ್ಪುವ ನುನ್ದಳಿರ್ದೋಣಿ ಲಸತ್ಪುಷ್ಪಾಳಿ ಬಾಣಂಗಳಾಗೆ ರತೀಶಂ ಪರಿಪಂಥಿರೂಪನಿಸುತಿರ್ಪಂ . . . ಪಾಂಥರಂ (ಕುಸುಪಾ. ೨-೫೨). [ಸರಸ + ಪೆಱು]

ಸರಸಗಾತಿ (ನಾ). ಸರಸವಾಡುವ ಸ್ವಭಾವದವಳು ; ರಸಿಕಳಾದ ಹೆಣ್ಣು : (೬).

[ಸರಸ + - ಕಾತಿ]

ಸರಸಗಾಱಿ (ನಾ). ಸರಸ ಸ್ವಭಾವದವನು ; ರಸಿಕ : ಅರಸಿಯರಸನ ಮದುವೆಯಾಗಲದನೆಲ್ಲರರಮನೆಯೊಳು ಕಾಣಲರಿದು ಕಂಗಳ ಮಾದುವದು ಕಣ್ಣಾರ ಕಂಡರೇಂ ಸರಸಗಾಱನೊ ಸಾರ್ವಿಭೌಮ (ಭರಚ. ೪೦-೧೦೫).

[ಸರಸ + - ಗಾಱಿ (< -- ಕಾಱಿ)]

ಸರಸತಿ (ನಾ). ವಾಗ್ದೇವತೆ ; ಶಾರದೆ : ಸರಸತಿ ಸಿರಿ ತನ್ನಾನನದೊಳುರದೊಳಿರೆ ಚತುರಾನನನುಂ ಕೃಷ್ಣನೆನಿಪನಿಱಿವೆಬೆಡಂಗಂ (ಗದಾಯು. ೨-೪೫) ; ಸಿರಿ ವರವಕ್ಷದೊಳ್ ನೆಲಸಿ ಸದ್ಭಿಭವಕ್ಕೆ ನಿವಾಸವಾದಳಂಬುರುಹಮುಖಪ್ರದೇಶದೊಳನಾರತವಿಱ್ದು ವಿವೇಕಿಯಾದಳಾ ಸರಸತಿ (ಎಸ. VI. ಕಡೂರು. ೬೬-೪೯ ; 1172) ; ನೆರವಾಗು ಗಾನ ಕೇಳೇಳೆಂದು ಮಲಗಿದ್ದ ಸರಸತಿಯನು ಜಾಣೆ ತನ್ನ ಬೆರಳಿಂದೆ ಮಿಡಿವಂತೆ ಭಾರಿದಂಡಿಗೆಗೊರ್ವ ತರಳಾಕ್ಷಿ ಮಿಡಿದಳಂಗುಲಿಯ (ಭರಚ. ೫-೬೭).

ಸರಸತಿಯೆಱೆಯ = ಸರಸ್ವತಿಯ ಗಂಡ ; ಬ್ರಹ್ಮ : ಸಿರಿಯರಸಂ ಮಾದೇವಂ ಸರಸತಿಯೆಱೆಯರ್ಕಳಡಿಗಳೆಂಬೀ ಕೆಂದಾವರೆಗಳ್ ಪೊರೆಗೆಮ್ಮಂ (ಕಬ್ಬಕಾ. ೨).

[< ಸಂ. ಸರಸ್ವತೀ]

ಸರಸತಿವರ (ನಾ). ಸರಸ್ವತಿಯ ಗಂಡ ; ಬ್ರಹ್ಮ : ಬಂದಿರ್ದಂ ಸರಸತಿವರಂ (ಕಬ್ಬಕಾ. ೨೯). [< ಸಂ. ಸರಸ್ವತೀವರ]

ಸರಸತೆ (ನಾ). ೧. ಆನಂದ ; ಸಂತೋಷ : ಗ್ರಂಥವಾಚನದಿಂದ ಮಾನಸಿಕವಾದ ಸರಸತೆಯಂತೆ ಆಯಾಫಲಗಳು . . . ದೊರೆವವೆಂಬುದಕ್ಕೆ ಅನುಮಾನವಿಲ್ಲ (ಕಾಲೂಲ. ೮ ಪರಿ). ೨. ಹೊಂದಾಣಿಕೆ ; ಸಾಹಚರ್ಯ: ಈ ಸಂಗೀತ-ಭಾವಗೀತೆಗಳು ಅಪೂರ್ವವಾದ ಸರಸತೆಯಿಂದ ವಿಜೃಂಭಿಸಿದ ದಿನಗಳಿಂದ . . . ದೂರ ಸರಿಯುತ್ತಾ ಹೋದುವು (ಭಾವಗೀ. ೨೦). [ಸಂ. ಸರಸತಾ]

ಸರಸನ್ನೆ (ನಾ). ಧ್ವನಿಯ ಮೂಲಕ ಕೊಡುವ ಸೂಚನೆ : ಲಾಗುಬೇಗಂಗಳ ಸಘಾಟಿಕೆಗಳ ಸರಸನ್ನೆ [ಶಾಕಾಂ. ನ್ನ] ತೊಡೆಮಡಂ ಕಸ ಕಬ್ಬಿ ಕಡಿಯಾಣ ಸರಸಮಂ ಸ್ಫೆರಿಸದ ಚಳಬಳಕೆಗಳ ಚಾರು ತುರಗಕುಲವನುವಾಗಿ ನಿಂದವು (ಸೋಮಚ. ೫-೨೮).

[< ಸಂ. ಸ್ವರಸಂಜ್ಞಾ]

ಸರಸಫಲ, ಸರಸಫಳ (ನಾ). ರಸ ತುಂಬಿದ ಹಣ್ಣು : ಸರಸಫಲ ಸ್ಫುರಿತೌದುಂಬರಮಂ . . . ಮುದದೆ ಕಪೀಂದ್ರಂ ಕಂಡಂ (ಜಂಚಂ. ೨೭೬-೧೨). **ಸರಸಫಳ**: ಸರಸಫಳಾಳಿಭಾರಂ . . . ಮನೋಹರಮನಿಕುಂ ವಿಶಾಲಸಹಕಾರ ಮಹೀರುಹಂ (ವರ್ಧಪು. ೧-೫೫). [ಸಂ.]

ಸರಸಫಲಂದೋಱು (ಕ್ರಿ). ರಸತುಂಬಿದ ಹಣ್ಣು ಬಿಡು : ಸತಿ ಸೌಂದರಿ ಮಾತಾಡುವ ವಕ್ರತೆಯಂ ಕೇಳ್ದು ಭರದಿಂದಲರೇಱಿದ ಮಾಕಂದಂ ಸರಸಫಲಂದೋಱ್ಪುದು (ಜಯಕಾ. ೨-೩೨). [ಸರಸಫಲ + ತೋಱು]

ಸರಸಫಳ 'ಸರಸಫಲ' ನೋ.

ಸರಸರ 'ಸಱಸಱ' ನೋ.

ಸರಸರನೆ 'ಸಱಸಱನೆ' ನೋ.

ಸರಸರಿಸು 'ಸಱಸಱಿಸು' ನೋ.

ಸರಸವತಿ (ನಾ). = ಸರಸಗಾತಿ : ''ಸರಸವತಿ ಚಲ್ಲಗಾರ್ತಿಯು'' (ಕವಿಕಂ. ೧೬೪).

[ಸಂ. ಸರಸವತೀ]

ಸರಸಸಲ್ಲಾಪ (ನಾ). ಸಂತೋಷವಾದ ಮಾತುಕಥೆ ; ಸುಖಸಂಕಥಾಲಾಪ : ಪ್ರಿಯ ಪ್ರೇಯಸಿಯರು . . . ಬೆಳುದಿಂಗಳಲ್ಲಿ ಸರಸಸಲ್ಲಾಪದಲ್ಲಿ ತೊಡಗಿದ್ದಾರೆ (ಭಾರದ. ೫೩೦) ; ಬೇಚರದಂಪತಿಗಳ ಸರಸಸಲ್ಲಾಪ ಇವನ ಕಿವಿಗೆ ಕೇಳುತ್ತಾ ಇದೆ (ದಾನಚಿಂ. ೧೩). [< ಸಂ. ಸರಸಸಂಲಾಪ]

ಸರಸಸಾಹಿತ್ಯ (ನಾ). ರಸಮಯವಾದ ಸಾಹಿತ್ಯ : ಈ ಹೊನ್ನಿ ಸರಸಸಾಹಿತ್ಯದ ವರದೇವತೆ (ಹದಿಬ. ೧-೨೩). [ಸಂ.]

ಸರಸಾತಲಡಿ (ನಾ). ಏಳುಎಳೆಗಳ (ಮುತ್ತಿನ) ಹಾರ : ಮಕರಕಂಠಿ, ನಾಗಾಭರಣ ಸಹಿತವಾದ ಜಡೆ, ಸರಸಾತಲಡಿ, ಅನೇಕಪದಕಗಳಿಂದ ಯುಕ್ತವಾದ ಬಗೆಬಗೆಯಾದ ಮುಕ್ತಾಹಾರಗಳು (ಮಹಾವಂ. II, ೧೨೬).

[ಸರ್ವ + ಸಾತ್ಮ (IP ← ಮರಾ. ಸಾತ್) + ಲಡಿ]

ಸರಸಾತ್ಮ (ನಾ). ಪ್ರೇಮಮಯನಾದವನು: ಭೃಶೋತ್ಕಳಿಕೆಯರಂತು ಸೈರಿಸುವರೋ ಸರಸಾತ್ಮನಿನಾದಗಲ್ಮೆಯಂ (ಪುಷ್ಪಪು. ೪-೮೯). [ಸಂ. ಸರಸಾತ್ಮನ್]

ಸರಸಾಲಂಕೃತಿ (ನಾ). [ಕಾವ್ಯಮಿ] ಶೃಂಗಾರಾದಿ ನವರಸಗಳಿಂದ ಕೂಡಿದ ಉಪಮಾದಿ ಅಲಂಕಾರ : ಸರಸಾಲಂಕೃತಿ ಜಾತಿ ರೀತಿ ಗಮಕಂ ಸೊಂಪಿಂಪು ನುಣ್ಪೊಳ್ಪು ಭಾಸುರಭಾವಂ ನೆಲೆಗೊಂಡು ತೋಱೆ ರಸಗಾನಂಬೋಲ್ ಮನಂಗೊಳ್ವ ವಿಸ್ತುರದಸ್ಮತ್‌ಕೃತಿಯಂ . . . ಖಳಭುಜಂಗಂ ಕೇಳದೇಂ ಪೋಕುಮೇ (ರಾಜಶೇ. ೧೪-೧೬೭). [ಸಂ.]

ಸರಸಾಲಾಪ (ನಾ). ಸರಸವಾದ ಮಾತು ; ವಿನೋದವಾದ ಸಲ್ಲಾಪ : ಜಗದೊಳು ಚಾರುಸರಸಾಲಾಪಚತುರರು ಕವಿವರರಿರುವುದು ವಿರಳ (ಗಂಚಾಪ. ೮೧-೯೨). [ಸಂ.]

ಸರಸಾಲೋಕನ (ನಾ). ಪ್ರೇಮಮಯವಾದ ದೃಷ್ಟಿ, — ನೋಟ : ಸರಸಾಲೋಕನದಿಂ ವಚನರಚನೆಯಿಂ ಹಸ್ತಕಮಳಸಂಸ್ಪರ್ಶನದಿನಂಬುರುಹೇಕ್ಷಣಂ ಪ್ರಸನ್ನಾಚರಿತೆಯರಪ್ಪಂತು ಮಾಡಿದಂ ಗೋಪಿಯರಂ (ಜಗವಿ. ೫-೩೩) ; ಅತಿಶಯ ಪ್ರಮೋದದಿನಾ ಕುವರಿಯನಾ ಯುವರಾಜನ ಕೆಲದೊಳ್ಕುಳ್ಳಿರಿಸಿ ಸರಸಾಲೋಕನದಿಂದವಲೋಕಿಸಿ (ರಾಜಶೇ. ೮-೮೨ ಪ). [ಸಂ.]

ಸರಸಾಶ್ರಯ (ನಾ). ರಸಿಕತೆಗೆ ನೆಲೆಯಾದವನು ; ರಸಿಕ : ಸರಸಾಶ್ರಯ ಪ್ರವರಮೂರ್ತಿ . . . ಗುಣೋದಯನಕಾರಣಧುರ್ಯಮಿತ್ರಂ (ಕವಿರಾ. ೩-೨೨೮). [ಸಂ.]

ಸರಸಿ$_1$ (ನಾ). ಸರಸವಾಗಿರುವ ವ್ಯಕ್ತಿ : ಸೀತಾರಾಮರಾಯನಂಥಾ ಸರಸಿಯಲ್ಲದ ಮನುಷ್ಯನಿಗೆ ಅಸುಖ, ಅತೃಪ್ತಿ, ಅಸಮಾಧಾನ ತುಂಬಿಕೊಳ್ಳುತ್ತವೆ (ಮಹಾಗ. ೨೦); ಪಕ್ಕದ ಮನೆಯಲ್ಲಿ ಸರಸಿಯಾದ ತರುಣವ್ಯಾಪಾರಿಯೊಬ್ಬ ವಾಸಿಸುತ್ತಿದ್ದನು (ಪುನರು. ೧೦).

[ಸರಸ + -ಇ$_3$]

ಸರಸಿ$_2$ (ನಾ). ಕೊಳ ; ಸರೋವರ : ಸರಸಿಯ ನೀರಜಂಗಳ ರಜಂಗಳ ಪೊಂಪುಟಿವೆತ್ತು . . . ಸಂಚರಿಸಿದುದೊಪ್ಪುವಂತುಪವನಂ ಪವನಂ (ಜಗವಿ. ೧೪-೯೦) ; ಜಲನಿಧಿಗೆ ಸರಿಸರಸಿಯಾವುದು (ಕುವ್ಯಾಖ. ೨೩-೩೬). [ಸಂ. ಸರಸೀ]

ಸರಸಿಜ (ನಾ). ಸರೋವರದಲ್ಲಿ ಹುಟ್ಟಿದುದು ; ತಾವರೆ : ಸರಸಿಜದಿಂ ಮಕರಂದಸ್ಫುರಿತಂ ಪುದಿದೊದವಿದಪ್ಪುದೆಂಬಿನಂ . . . ದರಹಸಿತಂ ನೆಗಟ್ಟಿನಂ ತೊದಳ್ನುಡಿ ನುಡಿದಂ (ಆದಿಪು. ೮-೩) ; ಸರಸಿಜದ ಸಿರಿಯನಾನಪಹರಿಸಂ ಮನ್ಮುಖದಿನದುವೆ ನಿಜಂ (ಚಂದ್ರಪ್ರ. ೭-೧೩೭).

ಸರಸಿಜಾಮೋದ = ತಾವರೆಗೆ ಆಮೋದವನ್ನುಂಟು ಮಾಡುವವನು ; ಸೂರ್ಯ; ಒಂದು ಬಿರುದು : ಸರಸಿಜಾಮೋದಂ ಮಾರ್ಕೊಲ ಭೈರವಂ ಸಮರಜಯಘಂಟಾನವಂ . . . ಮೂವಡಿಗಣ್ಣರ ಜಾಜು ನಾಮಾದಿ ಸಮಸ್ತಪ್ರಸಸ್ತಿಸಹಿತಂ (ಸೌಕಾ. XX, ೪೧-೯ ; 1068). [ಸಂ.]

ಸರಸಿಜಗರ್ಭ (ನಾ). ತಾವರೆಯಲ್ಲಿ ಹುಟ್ಟಿದವನು ; ಬ್ರಹ್ಮ : ಸರಸಿಜಗರ್ಭಂ ಗಡಮಿಂ ಪುರಕ್ಕೆ ಬಂದಿರ್ದನೆಂದೊಡಿನ್ನಮೆಮ್ಮಿಂದಂ ಪಿರಿಯರ್ ಪೆಱರಾರ್ (ಧರ್ಮಾಮೃ. ೫-೨೧೦).

ಸರಸಿಜಗರ್ಭತನೂಜ = ಬ್ರಹ್ಮನ ಮಗ ; ನಾರದ : ಸರಸಿಜಗರ್ಭತನೂಜಂ ಸರಸಿಜನಾಭಂಗೆ ನುಡಿದಂ (ನೇಮಿಪು. ೭-೨೦೧). [ಸಂ.]

ಸರಸಿಜನಾಭ (ನಾ). ಹೊಕ್ಕುಳಲ್ಲಿ ಕಮಲವುಳ್ಳವನು ; ವಿಷ್ಣು : ಸರಸಿಜನಾಭನಾ ಭುವನಮಾನ್ಯೆಯನಿಪ್ಪಳನಂದು ಕನ್ಯೆಯಂ ತರಲನುರಾಗದಿಂ ಪೊಱಮಡಲ್ (ನೇಮಿಪು. ೭-೪೦) ; ಸರಸಿಜನಾಭನಂ ಸಿರಿ ಮನೋಭವನಂ ರತಿಯಿಂದುಮೌಳಿಯಂ ಗಿರಿಜೆ . . . ಪಾರ್ಶ್ವದೊಳಿಟ್ಟು ಕಾವರಾ ಪುರದ ವಿಳಾಸಿನೀಜನದ ಗಾಡಿಗೆ ಮಚ್ಚು ತ್ಮನಾಥರಂ (ಸೂಕ್ತಿಸು. ೪-೧೩೪). [ಸಂ.]

ಸರಸಿಜನೇತ್ರ (ನಾ). ತಾವರೆಯಂತೆ ಕಣ್ಣುಗಳುಳ್ಳವನು ; ವಿಷ್ಣು : ಸರಸಿಜನೇತ್ರನಿಂದ್ರನಜನಷ್ಟದಿಶಾಧಿಪರಾದಿಯಾದ ದೇವರ ಗಡಣಕ್ಕೆ ಭೀತಿಯನೊಡರ್ಚುವ ದುರ್ದಮಕಾಳಕೂಟಮಂ ಕರಕಮಳಂಗಳಿಂ ಪೊಸೆದು (ದಶಕು. ೯-೧೦೯). [ಸಂ.]

ಸರಸಿಜಬಂಧ (ನಾ). ತಾವರೆಯಾಕಾರವ ರಚನೆ : ಸರಸಿಜಬಂಧಂ ಕಮಲಾಕರಬಂಧಂ . . . ವರಬಂಧಂ ಲಿಂಗಬುಧಮಂ ವಿರಚಿಸಿದಳ್ (ಗಿಂಕ. ೫-೭೬). [ಸಂ.]

ಸರಸಿಜಬಾಂಧವ (ನಾ). ತಾವರೆಯ ಗೆಳೆಯ ; ಸೂರ್ಯ : ಸರಸಿಜ ಬಾಂಧವನಸ್ತಾಂತರಗತನಾಗಿರೆ ಸರೋಜಿನೀವನಮಾದಂ ಕೊರಗುತ್ತೆ, ಮುಗಿಗುಂ (ಕವಿರಾ. ೩-೩೧). [ಸಂ.]

ಸರಸಿಜಭವ (ನಾ). ೧. = ಸರಸಿಜಗರ್ಭ : ಸರಸಿಜಭವ ಸಾರಥಿಯಾದ ಧರೆಯೆಂಬ ವರರಥವನು ಮೇಘ ತಾಗಿ ಸರಿಸವ ಮಾಡಿ ತ್ರಿಪುರವನು ಸುಟ್ಟ ಪರಿಯನದಾರು ಮೆಚ್ಚುವರು (ತ್ರಿಪುಸಾಂ. ೩-೨೮). ೨. [ಛಂದ] ಅಂಶಗಣಗಳಲ್ಲಿ ಒಂದು ; ಬ್ರಹ್ಮಗಣ: ಎರಡುಂ ಮೂಱುಂ ನಾಲ್ಕುಂ ಗುರುವಿಂ ಪ್ರಸ್ತರಿಸಲಂಬುನಿಧಿಗಜ ಧರಣೀಶ್ವರಗಣ ಮೊಗೆಗುಮವರ್ಕಂ ಸರಸಿಜಭವವಿಷ್ಣುರುದ್ರಸಂಜ್ಞೆಗಳಕ್ಕುಂ (ಛಂದೋಂಬು. ೫-೨೪೦). [ಸಂ.]

ಸರಸಿಜಮಿತ್ರ (ನಾ). = ಸರಸಿಜಬಾಂಧವ : ಸರಸಿಜಮಿತ್ರನಂತೆ ತಮ ಶೋಭಿಸೆ . . . ಅಂತರಿಕ್ಷದೊಳಗುರ್ವಿಸಿ ಪೋಪರನೊಳ್ಳಿತಾಗೆ ಭಾಸುರಗುಣ ತೋಱೆ (ಧರ್ಮಾಮೃ. ೧೧-೧೭೮) ; ಸರಸಿಜಮಿತ್ರ ಕೂ ತಮವಿದಾರಣ ಕೂ . . . ಎನುತ ಕೂಗುತಲಿರ್ದುದು ತಾಮ್ರಚೂಡನುಂ (ಸೂಕ್ತಿಸು. ೯-೨೯). [ಸಂ.]

ಸರಸಿಜಯೋನಿ (ನಾ). = ಸರಸಿಜಗರ್ಭ : ಪಿಂದು ಸಮಸ್ತವಿಷ್ಟಪವದಂ ಪಡೆದಂ ಪಿರಿಯಂ ವಿರಿಂಚನಾ ಸರಸಿಜಯೋನಿಯಂ ಜಠರಹೇಮಪಯೋರುಹದಲ್ಲಿ ಪುಟ್ಟಿಪಂಬುರುಹವಿಲೋಚನಂ ಪಿರಿಯಂ (ಜಗವಿ. ೨-೯೬). [ಸಂ.]

ಸರಸಿಜವಾಸ (ನಾ). ತಾವರೆಯಲ್ಲಿ ನೆಲಸಿದವನು ; ಬ್ರಹ್ಮ : ''ಸರಸಿಜವಾಸ ಪಂಚಪರಮೇಷ್ಠಿಗಳು ಪರಮೇಷ್ಠಿಯೆಂದನಿಕ್ಕು'' (ನಾನಾದ. ೧೫೧). [ಸಂ.]

ಸರಸಿಜವಿರೋಧಿ (ನಾ). ತಾವರೆಯ ಶತ್ರು ; ಚಂದ್ರ : ಸರಸಿಜವಿರೋಧಿ ಕಾಂತ್ಯಾಕರಮಮೃತಮಯಂ ತ್ವದೀಯಮುಖಶಶಿಯುಂಟಾಗಿರೆ ಶಶಿಯದೇವುದು (ಕವಿರಾ. ೩-೧೦೨). [ಸಂ. ಸರಸಿಜವಿರೋಧಿನ್]

ಸರಸಿಜಸಂಭವ (ನಾ). = ಸರಸಿಜಗರ್ಭ : ಸರಸಿಜಸಂಭವಂ ಕುಸುಮಸಾಯಕನಾಗಿ . . . ಆತ್ಮಮನಃಸುಕುಮಾರಹಸ್ತದಿಂ ವಿರಚಿಸಿದಂ ನಿಜೇಶಮುಖಸೌರಭಭೃಂಗಿಯನಾ ಲತಾಂಗಿಯಂ (ಅರ್ಧನೇ. ೬-೭೯). [ಸಂ.]

ಸರಸಿಜಸಖ (ನಾ). ೧. = ಸರಸಿಜಬಾಂಧವ : ಸರಸಿಜಸಖನಾ ನರಪತಿಯರಿಗಳ ಸೌಧಾಗ್ರದಲ್ಲಿ ಮೊಳೆತಳೆವುಲ್ಲಾತುರಿಪ ತುರಂಗಮನರುಣಂ ಬರಸೆಳೆದು ಮರಳ್ಚ ನಡವನೆಡದೊಳ್ ಬಲದೊಳ್ (ರಾಜಶೇ. ೫-೧೧). ೨. [ಛಂದ] ಮೂರು ಲಘುಗಳ ಗಣ : ಪುರುಹೂತಗಣಂಗಳಾಜುಂ ಸರಸಿಜಸಖಿಗಣಗಳೆರಡು ಸಂಧಿಸಿ ಬರ್ಕುಂ ಚರಣಕ್ಕೆ (ಛಂದೋಂಬು. ೩-೨೨೨ ಅಡಿಪದ್ಯ). [ಸಂ.]

ಸರಸಿಜಾಂಬಕ (ನಾ). = ಸರಸಿಜನೇತ್ರ : ಸರಸಿಜಾಂಬಕಪದ್ಮಭವರಾಖಿರಥ ಗುಹರಪ್ಪವಸುಗಳು . . . ನೆರೆದು ಭಜಿಸಲು (ಬಾಪು. ೧೦-೩೧). [ಸಂ.]

ಸರಸಿಜಾಕ್ಷ (ನಾ). = ಸರಸಿಜನೇತ್ರ : ಸರಸಿಜಾಕ್ಷನ ವಿಷ್ಣುನಾಮಸ್ಮರಣೆಯಲಿ . . . ಭೂತಕ್ಕೆ ಹಿತವಹ ನಡವಳಿಯನಱಿದು (ಕುವ್ಯಾಖ. ೪-೯೯). [ಸಂ.]

ಸರಸಿಜಾಕ್ಷಿ (ನಾ). ತಾವರೆಯಂತಹ ಕಣ್ಣುಗಳುಳ್ಳವಳು ; ಚೆಲುವೆ : ಸರಸಿಜಾಕ್ಷಿ ವಿಶಾಖೆ ಗಂಡನ ಮಾತನೇಳಿಸಲಾಗದೆಂದು . . . ಲದ್ದುಗೆಯಲ್ಲಿ ತೀವ್ರದ ನಂಜ ನೋಸರಿಸದಿಕ್ಕಿ (ಧರ್ಮಾಮೃ. ೧೦-೧೪೮); ತರುಣಿಯರು ಕಂಡಂಜಿ ಹೊಕ್ಕರು ಸರಸಿಜಾಕ್ಷಿಯ ಮಜೆಯನು (ಕುವ್ಯಾಸ. ೧೪-೬೨). [ಸಂ. ಸರಸಿಜಾಕ್ಷೀ]

ಸರಸಿಜಾತ (ನಾ). = ಸರಸಿಜ : ಸಪ್ತರಸನಾ ಶಾರ್ವರೀವರ ಸಪ್ತಸಪ್ತವಿಲೋಚನಂಗಂ ಸಪ್ತಲಾಸಿತ ಸಸ್ಮಿತಾನನಸರಸಿಜಾತಂಗೆ . . . ಅರ್ಪಿಸುವೆನಿಂದುಗ್ರಗರಳವನು (ಬಾಪು. ೫೮-೪೦). [ಸಂ.]

ಸರಸಿಜಾತೋದ್ಭವ (ನಾ). = ಸರಸಿಜಗರ್ಭ : ಸರಸಿಜಾತೋದ್ಭವನ ನಾಲ್ಕುಂ ಗಿರಿಜೆಯಾತ್ಮಜನಾಮು ದಶಕಂಧರನ ಹತ್ತಹಿಪತಿಯ ಸಾವಿರತಲೆಗಳಿಣಸಲ್ಕೆ ಸರಿಯೆ ನಿನ್ನಯ ತಲೆಯೊಡನೆ (ಬಸವ. ೩೮-೬೩). [ಸಂ.]

ಸರಸಿಜಾರಿ (ನಾ). = ಸರಸಿಜವಿರೋಧಿ : ಸರಸಿಜಾರಿಯ ಕಿರಣದೋಳಿಯ ವಿರಚಿಸಿದ ಸಿಂಧೂರಭಾಳದಿ ಕುಣಿವ ಕುಂತಳದ . . . ಗಣಪತಿ ಮಾಡೆಮಗೆ ನಿರ್ವಿಘ್ನದಾಯಕವ (ಕುವಾಳ. ೧-೩). [ಸಂ.]

ಸರಸಿಜಾಲಯೆ (ನಾ). ಕಮಲವನ್ನೇ ಮನೆಯಾಗುಳ್ಳವಳು ; ಲಕ್ಷ್ಮಿ : ''ಶ್ರೀ ಕಮಳೆಯಮಳೆ ರಮೆ ಸರಸಿಜಾಲಯೆ ಲೋಕಮಾತೆ ಮನ್ಮಥಮಾತೆಯೆನಲು ಸಿರಿಗಕ್ಕು ನಾಮಂ'' (ಮಂಗರಾ. ೬-೧೪). [ಸಂ. ಸರಸಿಜಾಲಯಾ]

ಸರಸಿಜಾಸನ (ನಾ). ಕಮಲವೇ ಪೀಠವಾಗಿರುವವನು ; ಬ್ರಹ್ಮ : ಹರಿಯ ಮದವಂ ಹರಿಸುವಂ ಗಡ ಸರಸಿಜಾಸನಮುಖ್ಯದೇವರನೊರಸುವಂ ಗಡ (ಬಸವ. ೨೩-೨೨) ; ಸರಸಿಜಾಸನ ಕೊಟ್ಟ ಶಾಪದಿಯರಸಿಯಾದಳು ಗಂಗೆ (ಕುವಾಳ. ೨-೨೧). [ಸಂ.]

ಸರಸಿಜೋದರ (ನಾ). ೧. = ಸರಸಿಜನಾಭ. ೨. [ಛಂದ] ಅಂಶಗಣಗಳಲ್ಲಿ ಒಂದು ; ವಿಷ್ಣುಗಣ : ಸರಸಿಜೋದರಗಣಮೆರಡಜನುಮಲ್ಲಿ ನೆರೆದಿರ್ಕ ಮತ್ತಂ ಸರಸಿಜೋದರಗಣಮುಮೆರಡಜನಕ್ಕೆ ಗಣಮುಮಾಱಕ್ಕುಂ (ಛಂದೋಂಬು. ೫-೨೪೩). [ಸಂ.]

ಸರಸಿಜೋದ್ಭವ (ನಾ). = ಸರಸಿಜಗರ್ಭ : ಸರಸಿಜೋದ್ಭವ ಯಮ ಮುನಿವಿಕೃತಿಯಿಂ ದ್ವಿಜರ್ಗೆ . . . ಎಂಟುತಿಂಗಳೊಳಗಮಪಾಯಮುಮಕ್ಕುಗುಂ (ಲೋಕೋಪ. ೪-೬); ಸರಸಿಜೋದ್ಭವ ಸೃಜಿಸಿದಿರ್ದರೆ ಧರಿಸಲಾಪುದೆ ಧರಣಿಯೆನೆ ಕುರುಧರೆಗೆ ಬಂದುದು ಸೇನೆ ಪಯಣದ ಮೇಲೆ ಪಯಣದಲಿ (ಕುವಾಭೀ. ೧-೫೦). [ಸಂ.]

ಸರಸಿರುಹ (ನಾ). ೧. = ಸರಸಿಜ : ಸರಸಿರುಹದ ಮೇಗಾಡುವ ಸುರಸುದತಿಯರಾಟ ದಂದಮೆಂತೆನೆ ಸಿರಿಯಂ ಪರಿಭವಿಸಿ ತಂದು ಪೊಸಯಿಪ ಸಿರಿವಂತಿಕೆಯಿಂದ ಕಾಲೊಳೊದೆದಪರೆನಿಕುಂ (ಶಾಂತಿಪು. ೧೦-೧೭) ; ಸರಸಿರುಹಂ ದ್ವಿರೇಫತತಿಯಂ ವಿಪಿನಂ ಮದದಂತಿಯೂಥಮಂ ಸ್ಮರಿಯಿಸವು (ನೇಮಿಪು. ೪-೯೫). ೨. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದದಲ್ಲಿ ಐದು ಅಕ್ಷರಗಳುಳ್ಳ ಸುಪ್ರತಿಷ್ಠೆಯೆಂಬ ಛಂದಸ್ಸಿನ ಒಂದು ವೃತ್ತ : ಸುರಗಣಮುಂ ಹರಿಹರರುಂ ಬರೆ ಕೆಳದೀ ಸರಸಿರುಹಂ (ಛಂದೋಂಬು. ೨-೨೩). [ಸಂ.]

ಸರಸಿರುಹಸಂಭವ (ನಾ). = ಸರಸಿಜಗರ್ಭ : ಸರಸಿರುಹಸಂಭವಕೃತದುರಾಕ್ಷರ ವಿನಿಯತನಿರಾಸಕಮಹಾನಿರುಪಮಿತಮಹಿಮಾಢ್ಯನಂ . . . ಭವದೂರನಂ ಕೊಂಡಾಡಿ (ಬಸವ. ೪೬-೭೧) ; ನಾರದಾದ್ಯರು ಸರಸಿರುಹಸಂಭವನ ಸಭೆಯೊಳು ವರಮಹಾಭಾರತವ ಕೊಂಡಾಡಿದರು ಭಕ್ತಿಯಲಿ (ಕುವಾಳ. ೨-೧೨). [ಸಂ.]

ಸರಸಿರುಹಾಕರ (ನಾ). ತಾವರೆಗಳಿಂದ ತುಂಬಿರುವ ಕೊಳ : ಸರಸಿರುಹಾಕರದಿಂ ಸಚ್ಚರಿತಾಕರಂ . . . ನಂದನನಕ್ಕುಂ (ಚಂದ್ರಪ್ರ. ೧೨-೧೯). [ಸಂ.]

ಸರಸೀಜ (ನಾ). = ಸರಸಿಜ : ಸರಸೀಜಂ ಸರಜ ಶಶಧರಬಿಂಬಮದತಿಕಳಂಕಿತಂ ನಿನ್ನ ಮೊಗಂ ನಿರುಪಮಮಾಗಿಯುಮವಱೊಳ್ ದೊರೆ (ಕವಿರಾ. ೩-೭೩). [ಸಂ.]

ಸರಸೀಜಜಾತ (ನಾ). = ಸರಸಿಜಗರ್ಭ : ಗುಣಗಣಾಗ್ರಗಣಿಗಳ್ಪರಸಿ [ಲ] ಜಜಾತನೊಳ್ಪೊರೆಯೆನೆ ಲೋಕದೊಳ್ಪಿಗಟ್ಟು ಪಟ್ಟಲ ಸದ್ವಿಜರೇಂ ಕೃತಾರ್ಥರೋ (ಸೌಂ. XX. ೪೭-೧೪ ; 1084). [ಸಂ.]

ಸರಸೀಜಾಕರ (ನಾ). = ಸರಸಿರುಹಾಕರ : ಸರಸೀಜಾಕರಮೆಯ್ದೆ ಕೊಂಡಮುರು ಪಂಕೇಜವ್ರಜಂ ಕೆಂಡದುತ್ಕರಂ . . . ಎನಲಾ ಕಾಮಪ್ರತಾಪಾಗ್ನಿಯೆಬ್ಬುರಿವಂತಿರ್ದುದು ನೋಟ್ಪು ಕಾಮುಕಜನಕ್ಕಾ ವಾರಿಕೇಳೀಹ್ರದಂ (ನೇಮಿಪು. ೧೩-೩೩). [ಸಂ.]

ಸರಸೀಜಾಕ್ಷ (ನಾ). = ಸರಸಿಜನೇತ್ರ : ಸರಸೀಜಾಕ್ಷನೊಳಿತ್ತುದಾ ಸತಿಯ ಸಂಭೋಗಂ . . . ಸೌಖ್ಯಸಂಪತ್ತಿಯಂ (ಜಗವಿ. ೧೧-೫೯). [ಸಂ.]

ಸರಸೀಜಾತ (ನಾ). = ಸರಸಿಜ : ಪುನೀತಶರಣನ ಚರಣಸರಸೀಜಾತಕಭವಂದಿಸುತ ಸಮ್ಮುದವೆತ್ತು ಕೀರ್ತಿಸುತ (ಬಸವ. ೩೪-೨೫). [ಸಂ.]

ಸರಸೀಜಾತಭವ (ನಾ). = ಸರಸಿಜಗರ್ಭ : ಸರಸೀಜಾತಭವಾದ್ಯಮರ್ತ್ಯಮುನಿಪ ಧ್ಯಾನಪ್ರಭಾವಕ್ಕಗೋಚರಮಪ್ಪ . . . ವಿಭು ವಿಶ್ವನಾಥನೆಸವಂ ತದ್ದೇವತಾವಾಸದೊಳ್ (ಕುಸುಮಾ. ೧-೧೦೯). [ಸಂ.]

ಸರಸೀಜಾತೋದ್ಭವ (ನಾ). = ಸರಸಿಜಗರ್ಭ : ಸರಸೀಜಾತೋದ್ಭವಂ ಕಂಡರಿಸಿ ಕಡೆದು ತಂದಿಟ್ಟನೋ ರೋಹಕೋರ್ವೀಧರಮಂ ತಾಂ (ಶಾಂತೀಶ್ವ. ೧೦-೧೦). [ಸಂ.]

ಸರಸೀಜೋದರ (ನಾ). = ಸರಸಿಜನಾಭ : ಸರಸೀಜೋದರ ಕೇಳೀ ಗಿರಿನಗರದ ರಾಷ್ಟ್ರವರ್ಧನಂಗಂ ಜ್ಯೇಷ್ಠಾವರತತ್ಕಾಂತೆಗಮೊಗೆದಳ್ . . . ಸುಸೀಮೆ (ನೇಮಿಪು. ೭-೧೯). [ಸಂ.]

ಸರಸೀಜೋದ್ಭವ (ನಾ). = ಸರಸಿಜಗರ್ಭ : ಸರಸೀಜೋದ್ಭವ . . . ಮನಸ್ಸಂಜಾತ ನಾರಾಯಣಾಮರಸಿಂಹಾದಿಗಳಿಂ ನೆಗಳ್ತ್ವದೀ ಶೃಂಗಾರಮಿಗಳ್ಕರಂ ದೊರವೆತ್ತತ್ತೆನೆ ಬೇಱೆ ವಿಸ್ತರಿಸಿದಂ ಶೃಂಗಾರರತ್ನಾಕರಂ (ಶೃಂಗಾರ. ೧-೧೫). [ಸಂ.]

ಸರಸೀಜೋದ್ಭೂತ (ನಾ). = ಸರಸಿಜಗರ್ಭ : ಸರಸೀಜೋದ್ಭೂತನಂ ತನ್ನಯ ನಿಖಿಳಕಳಾಪ್ರೌಢಿಯಿಂ . . . ಗೆಲ್ದು ಶೌರ್ಯಾಕರನಿರ್ದಂ ತತ್ಕುಮಾರಂ (ನೇಮಿಪು. ೧-೧೩೮). [ಸಂ.]

ಸರಸೀರುಹ (ನಾ). = ಸರಸಿಜ : ಸರಸೀರುಹನಾಳಮನಾವರಿಸಿದ ಶ್ವೇವಾಲಮೆನೆ ಹರಿದ್ರತ್ನಮಯಸ್ಫುರಿತಕಟಕಂ ಪ್ರಕೋಷ್ಠದೊಳಿರುಣಾಧರೆ ತೊಳಗಿ ಬೆಳಗದಿರ್ಪುದಿದೇನೋ (ಚಂದ್ರಪ್ರ. ೩-೫೮) ; ಸರಸೀರುಹಂಗಳಿಂದಿಲಿವ ಮತ್ತಮರಾಳಿಗಳಂತೆ . . . ತೇರ್ಗಳಿಂ ಕರಿಣಿಗಳಿಂದಮಂದಣದಿನೇನಿಬೆತಂದರೊ ವಾರನಾರಿಯರ್ (ಅಸಂಪು. ೭-೩). [ಸಂ.]

ಸರಸೀಸಂಜಾತ (ನಾ). = ಸರಸಿಜ : ಸರಸೀಸಂಜಾತಜಾತೋನ್ನಿಶಿತನಿಶಿತಸೌರಂಭ ಸಂಪಾದನಾದಂ . . . ಪರೆದತ್ತಾದಂ ಪ್ರಮೋದಂ ಶಿವನಿಳಯಕುಳೋತ್ಪಾದಮಾ ಶಂಖನಾದಂ (ಗಿರಿಕ. ೫-೨). [ಸಂ.]

ಸರಸು (ನಾ). ೧. ಸೊಗಸು ; ಅಂದ : ಸಿರಿಸಲದ ಮರದರಳುಗಳ ಸರಸಾದ ಹಾರಗಳು ಹರಿದು ನೀರೊಳು ಹರಿಯೆ (ರಘುವಂ. ೧೪೨-೬೧) ; ಅಗಟುಂಬರಿನಿಂದ ದಶಂಬರಿನ ವರೆಗೆ ಈ ತಡಸಲು ಬಹು ಸರಸಾಗಿ ಕಾಣಿಸುತ್ತದೆ (ಕಥಾಗೆ. ೧೯). ೨. ಸುಲಭ ; ಸಲೀಸು : ಈ ಬಗೆಯ ರೂಪಾಂತರಗಳು ರಾಸಾಯನಶಾಸ್ತ್ರದ ಅಭ್ಯಾಸದಿಂದ ಸರಸಾಗಿ ತಿಳಿಯುತ್ತವೆ (ಮುಂಬಯಿ. ೫-೩೬) ; ಹಿಂದೀ ಆಡಲಿಕ್ಕೆ ಬಲು ಸರಸು (ಶಾಹಸಂ. ೧೭೨). [< ಸಂ. ಸರಸ]

ಸರಸೋಕ್ತಿ (ನಾ). ರಸಯುಕ್ತವಾದ ಮಾತು ; ಇಂಪಾದ ನುಡಿ : ಸರಸೋಕ್ತಿ ಪ್ರೌಢಿಯಿಂದಂ ನಿಲಿಸಿ ಪಡಿಯಱಂ ಬಂದು . . . ಉಘೇ ಬನ್ನಪಂ ದೇವ ದೇವೇಶ್ವರ ನೆಟ್ಟಂದಿರ್ದಪಂ ಬಾಗಿಲೊಳಿನೆ (ಜಗವಿ. ೧೧-೬೮); ಶೃಂಗಾರಸರಸೋಕ್ತಿಗಳ ವಿನುತಾಷ್ಟ ಮಹಿಷಿಯರ್ ಚಾರುಚಾಮರತಾಲವೃಂತಮಂ ಪಿಡಿದಿರ್ದರಚ್ಯುತನ ಕೆಲಬಲದೊಳು (ಚೈಮಿಭಾ. ೬-೪೬). [ಸಂ.]

ಸರಸ್ವತಿ (ನಾ). ೧. ವಿದ್ಯೆಯ ಅಧಿದೇವತೆಯೂ ಬ್ರಹ್ಮನ ಹೆಂಡತಿಯೂ ಆಗಿರುವವಳು; ವಾಗ್ದೇವತೆ ; ಶಾರದೆ : ಫರಮಜಿನೇಂದ್ರವಾಣಿಯೆ ಸರಸ್ವತಿ ಬೇಜದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು . . . ಆನದರ್ಕೆರೆದಪೆನಾ ಸರಸ್ವತಿಯೆ ಮಾಟ್ಕೆಮಗಿಲ್ಲಿಯೆ ವಾಗ್ವಿಳಾಸಮಂ (ಆದಿಪು. ೧-೯). ೨. ಪ್ರಯಾಗದಲ್ಲಿ, ಗಂಗಾನದಿಯೊಡನೆ ಸೇರುವ ಒಂದು ಗುಪ್ತನದಿ ; ಗಂಗಾಯಮುನಾ ನದಿಗಳೊಂದಿಗೆ ತ್ರಿವೇಣೀಸಂಗಮದಲ್ಲಿರುವ ಒಂದು ಗುಪ್ತನದಿ. ೩. ಹೊಳೆ; ನದಿ : ''ನದಿ ತರಂಗಿಣಿ . . . ಸರಸ್ವತಿ ದ್ವೀಪವತಿಯಾಪಗೆಯೆನೆ ತೊಱೆಗೆ ನಾಮಂ'' (ಮಂಗರಾ. ೧೨೨-೧೦). ೧, ೩ : ಕಮಲಸಂಭವನಂತವೋಲ್ ಸರಸ್ವತಿಯರಸನೆಂಬ ಪೆಸರಂ ಪಡೆದು . . . ಅರ್ಣವಂ ಕಣ್ಗೊಳಿಪುದು (ಶ್ರೀರಾಪ. ೩-೨೬). ೪. ಶರೀರದ ನಾಡಿಗಳಲ್ಲಿ ಒಂದು : ತರಳ ತಿಳಿ ನಾಡಿಗಳ ಚೌದಶಗಳಿಗೆ ನಾಮಗಳ ಯುರು ಸುಷುಮ್ನೆಯು ಪಿಂಗಳೆಯು ಯಿಡಾಸರಸ್ವತಿ (ಗಗತಾ. ೯-೧೧). ೫. ಭಾಷೆ ; ಮಾತು. ೬. ಹಸು. ೭. ಶ್ರೇಷ್ಠಳಾದ ಹೆಂಗಸು. ೮. ದುರ್ಗೆಯ ಹೆಸರುಗಳಲ್ಲಿ ಒಂದು. ೯. ಒಂದು ಬಗೆಯ ಬಳ್ಳಿ ; ಸೋಮಲತೆ. ೧೦. ಒಂದು ಬಗೆಯ ಸಸ್ಯ ; ಜ್ಯೋತಿಷ್ಮತಿ. ೧೧. ಕೆಲವು ಯತಿಗಳ ಹೆಸರಿನ ಕಡೆಯಲ್ಲಿ ಸೇರುವ ಪದ.

೧೨. [ಬೌದ್ಧ] ಒಬ್ಬ ದೇವತೆಯ ಹೆಸರು. ೧೩. [ಜೈನ] ಮುನಿಗಳ ಸಂಘಗಳಲ್ಲಿ ಒಂದು : ಗಚ್ಛಗಳು: ಪೂಗರಿ, ಪುಸ್ತಕ, ತಗರಿಗಲ್, ಸರಸ್ವತಿ . . . ಮೇಘಪಾಷಾಣ (ಕಶಾಅ. ೮೬). [ಸಂ. ಸರಸ್ವತೀ]

ಸರಸ್ವತೀಗಣ (ನಾ). [ಜೈನ] ಜೈನಮುನಿಗಳ ಗುಂಪಿನ ಒಂದು ಹೆಸರು: ಪುರಿಕರನಗರದ ಬಮ್ಮಂ ಸರಸ್ವತೀಗಣದ ದಾಸಿ ಕ[ಣ್ಣ] XXX ನಿರುತಯತಿ [ಸಟಂ] ಖಣ್ಡರಿಸಿದಂ (ಶಾಇಾ. XI-i.೯೭ ೪೮ ; 1062). [ಸಂ.]

ಸರಸ್ವತೀದ್ರೋಹ (ನಾ). ಸರಸ್ವತಿಗೆ ಕೇಡು ಬಗೆಯುವವನು ; ಭಾಷಾದ್ರೋಹಿ: ಸರಸತಿಯನಬಲೆಯಂ ಗೋಣ್ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವ ನಕ್ಕರಿಗನೆ ಪಾತಕನಾತನೆ ಸರಸ್ವತೀದ್ರೋಹನವನನಾರ್ ಮುಟ್ಟುವರೋ (ಅಜಿಪು. ೧-೮೯). [ಸಂ.]

ಸರಸ್ವತೀಪತಿ (ನಾ). ೧. ಸರಸ್ವತಿಯ ಗಂಡ ; ಬ್ರಹ್ಮ. ೨. ನದಿಗಳ ಒಡೆಯ ; ಸಮುದ್ರ. ೧ , ೨ : ಆ ಮಹಾರ್ಣವಂ . . . ಚತುರ್ಮುಖನಂತೆ ಸರಸ್ವತೀಪತಿಯು ಮೆನಿಸಿದುದು (ಜಗವಿ. ೧-೪೪ ವ). [ಸಂ.]

ಸರಸ್ವತೀಪೂಜೆ (ನಾ). ೧. ಸಾಮಾನ್ಯವಾಗಿ ಶಿಕ್ಷಣದ ಆರಂಭದಲ್ಲಿ ಅಥವಾ ಪರೀಕ್ಷೆಗೆ ಮುಂಚೆ ಮಾಡುವ ಶಾರದಾಪೂಜೆ : ಪರೀಕ್ಷೆ ಹತ್ತಿರ ಬಂದಿರುವುದರಿಂದ ಸರಸ್ವತೀಪೂಜೆ ಮಾಡಿದ್ದರು ಹುಡುಗರು (ನಿಂದನ. ೧೨೩). ೨. ನವರಾತ್ರಿಯ ಒಂಬತ್ತನೆಯ ದಿನದಂದು ಸರಸ್ವತಿಯ ಸಂಕೇತವೆಂದು ಭಾವಿಸಲಾದ ಪುಸ್ತಕಗಳನ್ನೂ ವಾದ್ಯಗಳನ್ನೂ ಇಟ್ಟು ಮಾಡುವ ಪೂಜೆ : ಮೂಲಾನಕ್ಷತ್ರದಲ್ಲಿ ಸರಸ್ವತೀಪೂಜೆಯಂ ಮಾಡಿ (ಮಹಾವಂ. I. ೨೫೮). [ಸಂ. ಸರಸ್ವತೀಪೂಜಾ]

ಸರಸ್ವತೀಭಂಡಾರ (ನಾ). ವಿದ್ಯೆಯನ್ನು ಅಭ್ಯಸಿಸುವ ಸ್ಥಳ ; ಗ್ರಂಥಾಲಯ : ತಂಜಾವೂರಿನ ಸರಸ್ವತೀಭಂಡಾರದ ಇತಿಹಾಸಗ್ರಂಥಗಳ ಅವಲೋಕನದಿಂದ . . . ವಿಷಯಗಳನ್ನು ಸಂಗ್ರಹಿಸಿಕೊಂಡು (ಶಾಂತಲಾ. ೪ ಅರಿಕೆ). [< ಸಂ. ಸರಸ್ವತೀಭಾಂಡಾರ]

ಸರಸ್ವತೀಭಂಡಾರಿಗ (ನಾ). ಗ್ರಂಥಾಲಯದ ಮೇಲ್ವಿಚಾರಕ : ವೇದಮನೋದಿಸುವು ಪಾಧ್ಯಾಯರ್ಮ್ಮೂರ್ವರ್ಗ್ಗಂ ಶಾಲೆಯ ಸರಸ್ವತೀಭಣ್ಡಾರಿಗರಾರ್ವ್ವರ್ಗ್ಗಂ . . . ಕೊಟ್ಟ ಕೆಯ್ (ಕಶಾಅ. ೬-೨-೧೫೫ ; 1058). [ಸರಸ್ವತೀಭಂಡಾರ + - ಇಗ]

ಸರಸ್ವತೀಸೊಪ್ಪು (ನಾ). ಒಂದು ಬಗೆಯ ಸಸ್ಯ : ಒಂದೆಲಗ, ಇಲಿಕಿವಿಗಿಡ, ಸರಸ್ವತೀಸೊಪ್ಪು, ಬ್ರಾಹ್ಮೀಸೊಪ್ಪು, ಗದ್ದೆವರಗ (ಮೃಚಿಗಿ. ೨೦-೩೫೬).

[ಸರಸ್ವತಿ + ಸೊಪ್ಪು$_2$]

ಸರಹದಿ 'ಸರಹದ್ದು' ನೋ.

ಸರಹದ್ದು, ಸರಹದಿ (ನಾ). ಮೇರೆ ; ಗಡಿ : ಅಸಮಸಾಹಸಿ ಖಾನ ಸರಹದ್ದಲಿರುವಾಗ ಮುಸುಕಿ ಬಾಗೂರ ಸೆಳೆದರೆ ಪಸರಿಸುವುದು ಬಲುಕೀರ್ತಿ ನಮಗೆ (ಕಂನವಿ. ೧೬-೫೯) ; ಕೊಡಗಿನ ಶೀಮೇ ಸರಹದ್ದು ಮೈಸೂರುಶೀಮೇ ಸರಹದ್ದು ಕೂಡಿದ ಪೆರಿಯಾಪಟ್ಟಣದ ತಾಲೂಕು (ರಾಜೇಂದ್ರ. ೨) ; ನಮ್ಮೂರು ಮಲೆನಾಡಿನ ಸರಹದ್ದಿಗೆ ಸೇರಿದ್ದು (ಚಂಗಾಳ್ವ. ೨೨). **ಸರಹದಿ** : ಬಿಡದೆಲ್ಲರು ನಿಮ್ಮಯ ಸರಹದಿಗಳ ಗಡಿಗಳನುದುರಿಪುದು (ಇಚಿಸಾ. ೧೨-೬೯). [← ಪಾರ. ಹಿಂ. ಸರಹದ್ ; ಮರಾ. ಸರದ್, ಸರಹದ್]

ಸರಹಸ್ಯ (ಗು). ೧. ಗೌಪ್ಯವಾದ ; ರಹಸ್ಯದಿಂದ ಕೂಡಿದ : ಕಲಿತರು ನಿಮ್ಮ ಪೂರ್ವನೃಪಾಲಕರು ಸರಹಸ್ಯಸಾಂಗೋಪಾಂಗವಿದ್ಯೆಗಳ (ಕುವಾಅ. ೭-೧). (ನಾ). ೨. ಗುಟ್ಟು ; ಗೌಪ್ಯ : ಅಖಿಳಸಚಿವರ ಕರಸಿದನು ಸರಹಸ್ಯವನು ವಿಸ್ತರಿಸಿದನು (ಕುವಾಗ. ೪-೧೦). [ಸಂ.]

ಸರಹು 'ಸರಿವು' ನೋ.

ಸರಳ್ 'ಸರಲ್$_1$' ನೋ.

ಸರಳ 'ಸರಲ' ನೋ.

ಸರಳಂಬು (ನಾ). ಒಂದು ಬಗೆಯ ಬಾಣ : ಆತನ ಆಯುಧಗಳ ಗಣನೆ ಎಷ್ಟೆಂತೆಂದಡೆ . . . ಸರಳಂ[ಪಾಠಾಂ. ಕವಲಂ]ಬು ಹನ್ನೆರಡುಸಾವಿರ ಮೊನೆಯಂಬುಗಳು ಬೋಳಂಬುಗಳು ನಾಲ್ಕುಸಾವಿರ (ಭೃರಸೂ. I. ೮೫) ; ಅಣ್ಣಯ್ಯ ಹಿಡಿವ ಸರಳಂಬು ತಕ್ಕೊಂಡು ಶರಣ ಶರಣೇರು ನಯನೇರೂನೂ ಬನ್ನಿರೆ (ಲೋಕಗೀ. ೪೨).

[ಸರಳು$_1$ (< ಸರಲ್$_1$) + ಅಂಬು$_2$]

ಸರಳತೆ 'ಸರಲತೆ' ನೋ.

ಸರಳದಾರು (ನಾ). ಧೂಪದ ಮರ : "ಪೂತಿದಾರುಃ - ಸರಳದಾರು" (ಓಷಧಿ. ೧೦೨).

[ಸಂ. ಸರಲದಾರು]

ಸರಳದೇವದಾರು (ನಾ). = ಸರಳದಾರು : "ಪೂತಿಕಾಷ್ಠಃ - ಸರಳದೇವದಾರು" (ಓಷಧಿ. ೧೦೧) ; ದೇವದಾರು, ಭೂಜಪತ್ರ, ರಾಸ್ನೆ, ಸರಳದೇವದಾರು, ಕಳ್ಳಂಗಡಲೆ ಇವುಗಳ ಕಷಾಯವನಿಕ್ಕಿ ತೆಗೆದುಕೊಳ್ಳಲು ವಾತಜ್ವರಂ ಕೆಡುಗುಂ (ಸಕವೈ. ೬೫).

[ಸಂ. ಸರಲದೇವದಾರು]

ಸರಳಬಡ್ಡಿ (ನಾ). ಸಾಲದ ಹಣದ ಮೊತ್ತದ ಮೇಲೆ ಮಾತ್ರ ಹಾಕುವ (ಕಡಮೆದರದ) ಬಡ್ಡಿ : ಸರಳಬಡ್ಡಿ, ಚಕ್ರಬಡ್ಡಿಗಳನ್ನು ತೆರುವುದರಲ್ಲೇ ಅವರ ಹೆಣ ಬಿದ್ದುಹೋಗಿತ್ತು (ಹೇಮಕೂ. ೩೪) ; ಒಂದು ಬಗೆಯ ಲೆಕ್ಕಗಳಿಗೆ 'ಸರಳಬಡ್ಡಿ' ಎಂಬ ಹೆಸರು ಏಕೆ ಬಂತೊ ನನಗೆ ತಿಳಿಯದಾಗಿದೆ (ಗಾಳಿ. ೧೮೬).

[ಸರಳ (= ಸರಲ) + ಬಡ್ಡಿ$_2$]

ಸರಳರಗಳೆ (ನಾ). [ಛಂದ] ಸಾಮಾನ್ಯವಾಗಿ ಐದುಮಾತ್ರೆಗಳ ನಾಲ್ಕು ಗಣಗಳಿರುವ ಪ್ರಾಸರಹಿತವಾದ ರಗಳೆ : ಈಗಿನ ಕಾಲದವರು ಇಂಗ್ಲೀಷಿನ ಬ್ಲ್ಯಾಂಕ್‌ವರ್ಸನ್ನು ಅನುಕರಣಮಾಡಿ ಸರಳರಗಳೆಯೆಂದು ಕರೆಯುವ ರಗಳೆಗೆ ಹರೀಶ್ವರನೇ . . . ಮಾರ್ಗದರ್ಶಕ (ಕೃಪಿ. ೧೮೧); ಆದಿ ಮತ್ತು ಅಂತ್ಯಪ್ರಾಸರಹಿತವಾದ 'ಸರಳರಗಳೆ' ಮಾತ್ರ ಆಧುನಿಕ ಕಥನಕವನಗಳಲ್ಲಿ ಮತ್ತು ಗೀತರೂಪಕ, ಗೀತನಾಟಕಗಳಲ್ಲಿ ಸಾಕಷ್ಟು ಪ್ರಯೋಗವಾಗಿದೆ (ಛಂದೋವಿ. ೨೬೦). [ಸರಳ (= ಸರಲ) + ರಗಳೆ]

ಸರಳರೇಖೆ (ನಾ). ವಕ್ರವಲ್ಲದ ಗೀಟು ; ನೇರವಾದ ಗೆರೆ : ವಕ್ರವಿಲ್ಲದ ದೀರ್ಘವಾದ ಮೊಂದು ರೇಖೆಯನ್ನು ಸರಳರೇಖೆಯೆಂದೂ ಋಜುರೇಖೆಯೆಂದೂ ಹೇಳಲ್ಪಡುವುದು (ಭೂಮಿಅ. ೮). [ಸಂ. ಸರಲರೇಖಾ]

ಸರಳಸ್ವಭಾವ (ನಾ). ನಿರಾಡಂಬರವಾದ ಗುಣ : ಸರಳಸ್ವಭಾವನಂದಿತ ದುರಾಗ್ರಹಗ್ರಾಹ ಸೂಕ್ತಿಮಣಿಮಯಕರ್ಣಾಭರಣ ಭವದೀಯಬುದ್ಧಿಗೆ ಬರಲಱಿಗುಮೆ ಮಾನದುರ್ವ್ವ ಮಾನಿತಸುಜನಾ (ಲೀಲಾವ. ೪-೪೧). [ಸಂ. ಸರಲಸ್ವಭಾವ]

ಸರಳಾಂಗ (ನಾ). ನೆಟ್ಟನೆಯ ದೇಹ ; ನೀಳಶರೀರ : ಸರಳಾಂಗಂ ಮಿಗೆ ಕುಂದಿ ತೋಱೆ ಕಿವಿಗಳ್ ತಣ್ಪೇಱೆ . . . ಮಂ(ಕುಂ)ದಾಯ್ತು (ಲೋಕೋಪ. ೯-೨೧೨) ; ಸರಳಾಂಗಾವಯವಂಗಳಿಂದೊಗವ ಲಾವಣ್ಯಾಂಶುವಂ ಮಿಕ್ಕು ಮುಂಬರಿವನ್ನಂ . . . ಕಣ್ಣೊಳ್ಳ ವಿಳಾಸಿನೀನಿವಹದಿಂ ಚೆಲ್ವಾದುದೊಡ್ಡೋಲಗಂ (ಶಾಂತೀಶ್ವ. ೨-೮೨).

[ಸಂ. ಸರಲಾಂಗ]

ಸರಳಾಂಗುಳಿ (ನಾ). ಸರಾಗವಾಗಿ ಚಲಿಸುವ ಬೆರಳು : ಸರಳಾಂಗುಳಿಗಳ ಸಾರಣೆ ಸುರಾಗಸುವ್ಯಕ್ತಿಯಂ ಕುದುತ್ತಿರೆ . . . ದಿವಿಜವಧು ಜನವರಜನನಿಯ ಮುಂದೆ ಬೀಣೆಯಂ ಬಾಜಿಸಿದಳ್ (ಶಾಂತೀಶ್ವ. ೧೩-೨೨೪). [ಸಂ. ಸರಲಾಂಗುಲಿ]

ಸರಳಾನುವಾದ (ನಾ). ಮೂಲಗ್ರಂಥಗಳು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಮಾಡಿದ ಅನುವಾದ : ಅವರಾಡುತ್ತಿದ್ದ ಆಶುಭಾಷಣ ಭಾಗವತನು ಹಾಡುವ ಪದ್ಯಗಳ ಸರಳಾನುವಾದವಾಗಿತ್ತು (ಯಕ್ಷಬ. ೧೦). [ಸಂ. ಸರಲಾನುವಾದ]

ಸರಳಾರ (ನಾ). ಒಂದು ಬಗೆಯ ಹಾಡು : ಸರಳಾರ - ಹೆಂಗುಸರು ಹಾಡುವ ಶೋಭಾನೆಗಳ ಮಟ್ಟನಲ್ಲಿರುವ ಹಾಡಿದು. ಇದು ವಿಷ್ಣುಗಣಗಳಿಂದ ಆಗುತ್ತದೆ (ಸಂಶೋಧ. ೧೩೨). 'ಧವಳಾರ$_2$' ಪರಾ. [?]

ಸರಳಾಳಾಪ (ನಾ). ಸಹಜವಾದ ಮಾತು ; ನಿರಾಡಂಬರವಾದ ನುಡಿ : ಸರಳಾಳಾಪಂಗಳಿಂ ಜತ್ತಿಸುವ ಬಗೆ ಗೆಲಲ್ಕೆಂದು ಕೂರ್ತಿಚ್ಛೆ ಬೆಚ್ಚಂತಿರೆ ಮಚ್ಚಂ ಮೆಚ್ಚದಂದದೊಳೆ ಸಲಿಪ ನಾನಾವಿನೋದಂಗಳಂ . . . ಮೆಱೆವ ಕೂಟಂಗಳಿಂ ಕೂಡಿ ಲಾವಣ್ಯರಸಂ ತಳ್ಪಂಕುಗುಟ್ಟುತ್ತಿರೆ ಕರಮೆಸೆಗುಂ ವಾರನಾರೀಕದಂಬಂ (ಸುಕುಮಾ. ೯-೬೩). [ಸಂ. ಸರಲಾಲಾಪ]

ಸರಳಿ$_1$ 'ಸರಳಿ$_1$' ನೋ.

ಸರಳಿ$_2$ 'ಸರಲಿ' ನೋ.

ಸರಳಿಗೆ$_1$ 'ಸರವಳಿಗೆ' ನೋ.

ಸರಳಿಗೆ$_2$ (ನಾ). (?) : ಪಡವಿನೆಡೆಯೊಳ್ ಕೊರಳಿಗಳುಂ ನಾಂದುವ ಬೇವಿನ ಸರಳಿಗೆ [ಪಾಠಾಂ. ಪಲಗೆ, ಸಲಿಗೆ]ಗಳುಂ ಕೂಲೊಳ್ ಪಾಂಗುನೂಲಂ ಸುತ್ತುವ ಕುಡುಗೋಲ್ಗಳುಂ . . . ಎಸೆಯೆ (ಲೀಲಾವ. ೭-೬೮ ವ). [?]

ಸರಳಿವರಸೆ 'ಸರಳಿವರಸೆ' ನೋ.

ಸರಳಿಸು (ಕ್ರಿ). ೧. ಜಿಗಿ ; ಲಂಘಿಸು ; ಹಾರು : ಬೆಳ್ಳಯಲೊಳ್ ಸರಳಿಸಿದುವು ಮರುಮರೀಚಿಕಾವಾಹಂಗಳ್ (ಪಂಪಾಮಾ. ೭-೮೬) ; ಎರಳೆ ಸರಳಿಸಿ ಹೋದುದಿಲ್ಲಿ ಹಿಂಗಾಲೊದದು ತೆರಳ್ಚ ಮಣ್ಣದೆ (ಹಚಣಾ. ೫-೨೬). ೨. ಮುನ್ನುಗ್ಗು ; ಏರಿಹೋಗು : ಸಮರಥವಿಷಮರಾಪ್ತರು ನೋಡುತಿರಿ ಸರಳಸಲಿ ನಿಮ್ಮಯ ದೊರೆಗಳು (ಕುಮಾಕ. ೧೯-೧೦). ೩. ಜಗ್ಗು ; ಎಳೆ : ತುರಗವ ಕೆಣಕಿ ಸರಳಿಸಿ ಹಿಡಿವ ತೇರಿನ ಸೂತರೋಜೆಗಳ . . . ಭಟರೊಡ್ಡಣೆ ಸಘಾಡಿಸಿತೆರಡುಬಲದಲಿ (ಕುಮಾಧೀ. ೨-೫). ೪. ಚಿಮ್ಮಿಸು : ನಭಮಿಾದುದನೆ ಸರಳ್ಗಳಂ ಸರಳಿಸುತ್ತಿಂತೆಂದನು (ಭೋರಾಸು. ೨೭-೫೫).

[ಸರಳ್? (IP ← ಮರಾ. ಸರಳಣೆ) + - ಇಸು$_3$]

ಸರಳು$_1$ 'ಸರಲ್$_1$' ನೋ.

ಸರಳು$_2$ 'ಸರಲು$_3$' ನೋ.

ಸರಳೆ$_1$, ಸರಳಿ$_1$ (ನಾ). [ಸಂಗೀತ] ಸಂಗೀತಾಭ್ಯಾಸದ ಪ್ರಾರಂಭದಲ್ಲಿ ಕಲಿಯುವ, ಸುಲಭಗ್ರಾಹ್ಯವಾದ, ಸಪ್ತಸ್ವರಗಳಿಂದಾದ ಒಂದು ಗೀತಪ್ರಕಾರ : ದಾಸರಾಯರು . . . ಅವ್ಯವಸ್ಥಿತರೀತಿಯಲ್ಲಿದ್ದ ಸಂಗೀತಾಭ್ಯಾಸಕ್ರಮವನ್ನು ಪುನರುದ್ಧಾರ ಮಾಡಲು, ಸರಳೆ, ಸ್ವರಾವಳಿ, ಜಂಟಿವರಸೆಗಳು . . . ಅಲಂಕಾರಗಳು ಇವನ್ನು ರಚಿಸಿ, ಸಂಗೀತಾಭ್ಯಾಸಕ್ರಮವನ್ನು ಸುವ್ಯವಸ್ಥೆಗೊಳಿಸಿದರು (ಸಂಗೀಚಂ. ೨೧೭) ; ಕೊರೆಯುವ ನೀರಿನಲ್ಲಿ ಮುಳುಗಿ ಇವರು ಹೇಳಿಕೊಡುವ ಸರಳೆಯನ್ನು ಕಿರಿಚುವುದು (ರಾಮಾನ. ೯೩). ಸರಳಿ$_1$: 'ಸರಳಿವರಸೆ' ಪರಾ.

[ದೇ. ॥ ತಮಿ. ಚರಳಿ ; ಮಲ. ತೆಲು. ಸರಳಿ. / ಸಂ. ಸ್ವರಾವಳಿ]

ಸರಳೆ$_2$ (ನಾ). ಋಜುಸ್ವಭಾವದವಳು ; ಮುಗ್ಧೆ : ಮೊದಲು ಅಷ್ಟು ಸರಳೆಯೂ, ಸ್ನೇಹಮಯಿಯೂ ಆಗಿದ್ದ ಕೈಕೆಗೆ ಮಂಥರೆಯ ದುರ್ಬೋಧನೆಯಿಂದ ಹೆಬ್ಬಯಕೆ ಹುಟ್ಟಿ ಎಂಥ ಅನರ್ಥದಲ್ಲಿ ಫಲಿಸಿತು? (ಕಾವ್ಯಸ. ೩). [ಸಂ. ಸರಲಾ]

ಸರಳೆವರಸೆ, ಸರಳಿವರಸೆ (ನಾ). = ಸರಳೆ$_1$: ಸರಳೆವರಸೆ, ಜಂಟಿವರಸೆ, ಅಲಂಕಾರ ಇವು ಸಂಗೀತಾಭ್ಯಾಸದಲ್ಲಿ ಹೇಳಿಕೊಡುವ ಪ್ರಾರಂಭದ ಪಾಠಗಳು (ರೂಢಿ). ಸರಳಿವರಸೆ : ವಾರಕ್ಕೆ ಒಂದೆರಡು ಗಂಟೆಯ ಕಾಲ ವಿದ್ಯಾರ್ಥಿಗಳಿಗೆ ಸರಳವರಸೆಯನ್ನು ಹೇಳುವುದರಿಂದ ಅವರಿಗೆ ಲಭಿಸುವುದೇನು? (ಗಾನಕ. ೧೯). [ಸರಳೆ$_1$ + ವರಸೆ (< ವರಿಸೆ)]

ಸರಳೆಸುಗೆ (ನಾ). ಬಾಣ ಬಿಡುವಿಕೆ ; ಬಾಣಪ್ರಯೋಗ : ನೂಕಿದನು ಕೈಯೊಡನೆ ರಥವ ಸಮಾಕಸಾಹಸಮಲ್ಲನಾ ನರಲೋಕನಾಥನ ಸರಿಸದಲಿ ಸರಳೆಸುಗೆಯಲಿ ತ್ರಿಶಿರ (ತೂರರಾ. ೩-೬-೨೦). [ಸರಳು$_1$ (< ಸರಲ್$_1$) + ಎಸುಗೆ]

ಸರಳೇಱು (ನಾ). ಬಾಣಪ್ರಹಾರದಿಂದಾದ ಗಾಯ : ತೆತ್ತಿಸಿದ ಸರಳೇ [ಪಾಠಾಂ. ಶರದೇ]ಱ ಸುರಿಗರುಳೊತ್ತುಗೈಗಳ ತಾಳಿಗೆಯ ತಲೆಹೊತ್ತು ರಕ್ತದ ರಹಿಯಲೋಡಿತು ಸೇನೆ ಸುರಪುರಕೆ (ಕುಮಾಆ. ೧೯-೫).

[ಸರಳು$_1$ (< ಸರಲ್$_1$) + ಏಱು$_4$ (< ಏಱ್$_4$)]

ಸರಳ್ಗಱೆ (ಕ್ರಿ). (ಮಳೆಯಂತೆ) ಬಾಣಗಳನ್ನು ಸುರಿಸು,– ಸೂಸು : ಸುವರ್ಣ ಪುಂಖದ ಸರಳ್ಗಱೆದನನುಸಾಲ್ವನು (ಕ್ಷಮಿಭಾ. ೭-೬೧).

[ಸರಳ್ (< ಸರಲ್$_1$) + ಕಱೆ$_1$]

ಸರಳ್ಮಳೆ (ನಾ). ಬಾಣದ ಮಳೆ ; ಶರವೃಷ್ಟಿ : ದಿವಿಜರಿಟ್ಟಣೆಸಿ ನೂಕಿದರ್ . . . ವಜ್ರನಾಭನಿದಿರೊಳ್ ನಿಂದು ಸರಳ್ಮಳೆಗಳಂ ಕಱೆವುತೆ (ಚಿಬಪು. ೩೯-೩).

[ಸರಳ್ (< ಸರಲ್$_1$) + ಮಳೆ (< ಮಱೆ)]

ಸರಳ್ಮಳೆಗಱೆ (ಕ್ರಿ). ಮಳೆಯಂತೆ ಒಂದೇಸಮನೆ ಬಾಣಗಳನ್ನು ಬಿಡು : ಇದಿರಾಗಿ ಸರಳ್ಮಳೆಗಱೆವ ಬೇಡರ ಗಂಡದೆವಿಡಿದಾಲಿ ಬೊಬ್ಬಱಿದು ಕುದುರೆಯನೇಱಿ ರಾವುತರೊಳಪೊಕ್ಕು ತಿವಿದು ಕಂಗೆಡಿಸಿದರವರ (ಜೀವಂಸಾಂ. ೮-೩೭).[ಸರಳ್ಮಳೆ + ಕಱೆ$_1$]

ಸರಳ್ಬೆಜ್ಜ (ನಾ). ಬಾಣ ನಾಟುವುದರಿಂದಾದ ತೂತು : ನರ್ಜರಗಣಪತಿಯಮಲ ಮಸ್ತಕ ಸರಳ್ಬೆಜ್ಜದೊಳರುಣಾಂಬು ಸುರಿಯೆ ಮಜ್ಜನಗೆಯ್ದು ಕುಂಕುಮರಸಧಾರೆಯಿಂ ತೊಜ್ಜಲಾದುದು ನಿಂದೆಡೆಯ (ಮೋಪತ. ೩೮-೫೭). [ಸರಳ್ (< ಸರಲ್$_1$) + ವೆಜ್ಜ]

ಸರಾಗ$_1$ (ಗು). ೧. ಅಡ್ಡಿಯಿಲ್ಲದ ; ಅನಿರ್ಬಂಧವಾದ : "ಸರಾಗ - ಸರಕ = ನಿರಾತಂಕ ; ಸುಗಮ" (ತದ್ಭವಕೋ. ೪೩). ೨. ಸುಲಭವಾದ ; ಸಲೀಸಾದ : (ಕಿ). (ನಾ). ೩. ಸುಲಭ ; ಸಲೀಸು : ಆಗುಹೋಗುಗಳು ನೆಱೆ ರಾಗಭೋಗಗಳು ಸರಾಗವಾಗಿಕ್ಕು ಶಿವನೊಲಿದೆಡೆ (ಸರ್ವಜ್ಞ. ೨೪೬). ೪. ಅನುಕೂಲ ; ಸೌಕರ್ಯ : ಇನ್ನು ಮೇಲೆ ರೈತರಿಗೆ ಸರಾಗಮಾಡಿಕೊಟ್ಟರೆ ಅರಮನೆಯ ಕೆಲಸ ಕೆಟ್ಟುಹೋಗುವುದು (ಮಹಾವಂ. I, ೧೨೪).

ಸರಾಗವಾಗಿ = ನಿರಾತಂಕವಾಗಿ ; ಸುಸೂತ್ರವಾಗಿ : ಸ್ಥಳದಲ್ಲಿ ಬದುಕುಮಾಡುವನಿಗೆ ತಾಕೀತಿಯಂನ್ನು ಬರೆಸಿಕೊಟ್ಟು ಸರಾಗವಾಗಿ ನಡಸಿಕೊಣ್ಡು ಬರುವದು (ಮೃಅರಿ. ೧೯೨೮, ೧೬-೨೧ ; 1762) ; ಮಕ್ಕಳು ಸರಾಗವಾಗಿ ಶಿಕ್ಷಣಾಭಿವೃದ್ಧಿಯಲ್ಲಿ ಮುಂದುವರಿಯುವರೆಂದು ಆಶಿಸಲಾಗಿತ್ತು (ಶಿಕ್ಷದ. ೩೬೩).

[ದೇ. ॥ ತಮಿ. ಚರಾಕ, ಚರಾಙ್ಕಮ್ ; ತುಳು. ಸರಾಗ್, ಸರಾಗ ; ತೆಲು. ಸರಾಗಮು]

ಸರಾಗ$_2$ (ಗು). ೧. ಬಣ್ಣದಿಂದ ಕೂಡಿದ. ೨. ಕೆಂಪಾದ ; ಕೆಂಪುಬಣ್ಣವುಳ್ಳ. ೩. ರಾಗಸಹಿತವಾದ ; ಪ್ರೀತಿಯುಳ್ಳ. (ನಾ). ೪. ಪ್ರೇಮ ; ಅನುರಾಗ : ಸುರನಾರಿಯರು ನಗುತವನ ಕೊಂಡೊಯ್ದರು ಸರಾಗ[ಪಾಠಾಂ. ವಿಮಾನ]ದಲಿ (ತೂರರಾ. ೬-೧೭-೨೫). ೫. ಪ್ರೀತಿಯಿಂದ ಕೂಡಿದುದು : ಬಾ ಭೃಂಗವೆ . . . ಕಂಪಿನ ಕರೆಯಿದು ಸರಾಗವಾಗಿರೆ ಬೇರೆಯ ಕರೆ ಬೇಕೆ? (ಸಬೋಗೀ. ೭೫-೩). ೬. ಸಂತೋಷ : 'ಸರಾಗಿಸು' ಪರಾ. [ಸಂ.]

ಸರಾಗಿಸು (ಕ್ರಿ). ಸಂತೋಷಪಡು ; ಹಿಗ್ಗು : ಸರಾಗಿಸುತ ವನಭರಿತಮಾಗಿಹವಲ್ಲಿ ಬಗನಿವಹ (ನಾಗಚ. ೨-೨೭). [ಸರಾಗ$_2$ + - ಇಸು$_3$]

ಸರಾಜಾನ (ನಾ). ಒಂದು ಬಗೆಯ ಉತ್ತಮವಾದ ಭತ್ತ (?) : ಬೆಳಸೆಲ್ಲವಲ್ಲವರಿಸನ ಮೆಣಸು ಸರಾಜಾನವಿಕ್ಷುವ್ರಿಕ್ಷಮವೆಲ್ಲಂ ಹಲಸಿಳೆ ಮಾಮರಂ (ಸೌಇಇ. XV, ೫೭೦-೩ ; ಸು. 12ನೆಯ ಶತ). 'ರಾಜಾನ್ನ' ಪರಾ.

[IP ಇದು 'ಸರಾಜಾನ್ನ' ಎಂಬುದರ ಅಪಲಿಖಿತವಿರಬಹುದು]

ಸರಾಡ$_1$, ಸರಡ, ಸಾರಡೆ (ನಾ). ಒಂದು ಬಗೆಯ ತೆರಿಗೆ : ಬರಾ[ಡ] ಸರಾಡಗಳು ಯಿಲ್ಲ ಸೀಮೆಯಲು (ಸೌಇಇ. IX-ii, ೫೫೪-೩೪ ; 1533). ಸರಡ : ವರಡ ಸರಡ ಸರ್ವಬಾಧಾಪರಿಹಾರವಾಗಿ . . . ಧರ್ಮ್ಮವನು ಮಾಡಿ (ಕಇ. IIII-4, ೯-೬೨ ; 1538) ; ತುಳುವ ಶಾಸನಗಳಲ್ಲಿ ಬರುವ ತೆರುವಣಗಳು :– ತೆರು . . . ವರಡ, ಸರಡ (ತುಳುನಾ. ೨೭೧). ಸಾರಡೆ : ಕುಳವಡೆ ಸಾರಡೆ ದುಳಿರವಟ ಕಟಳೆವಟ ಏರಿ ಮಾನ ಬೆಲೆ ಸಂತೆ ಉಂಟಾದ ಹಲಉಪಾಧಿಗಳೂ ಸಹ ಸೇರ್ಸಿ ಕೊಟ್ಟೆವಾಗಿ (ಸೌಇಇ. IX-ii, ೪೬೩-೮ ; 1470). [?]

ಸರಾಡ$_2$ (ನಾ). ಸ್ಥಳ ; ಪ್ರದೇಶ : ಎರಡೂ ಊರಿನ ಬೇಟೆಯ ಪಡೆಯವರು, ಊರ ಸೀಮೆ-ಸರಾಡ ವಿಚಾರಿಸದೆ ಬೇಕಾದಲ್ಲಿ ಆಡ್ಡಾಡಿ ಬೇಟೆಯಾಡಬಾರದೇಕೆಂಬ ವಿಷಯವನ್ನು ಚರ್ಚಿಸತೊಡಗಿದರು (ಗ್ರಾಮಾಯ. ೨೩೯). [?]

ಸರಾತಿ 'ಸರವತ್ತಿಗೆ' ನೋ.

ಸರಾಪ 'ಸರಾಫ' ನೋ.

ಸರಾಫ, ಶರಾಫ, ಸರಾಪ (ನಾ). ೧. ಚಿನ್ನ, ಬೆಳ್ಳಿ ಮುಂತಾದವುಗಳ ವ್ಯಾಪಾರ, ಲೇವಾದೇವಿ ಮುಂತಾದುವನ್ನು ಮಾಡುವವನು ; ಚಿನಿವಾರ : ಮಗಲಯಿ ಸರಾಫಗೆ ಗ ॥ ೧೧೦೦೦ (ಎಕ. VIII. ಸೊರಬ. ೨೬೬-೨೩ ; 1629) ; ವೇಶ್ಯೆಯ ಕೈಯಲ್ಲಿದ್ದ ಆ ಒಂದೇ ಕಂಕಣವನ್ನು ನೋಡಿ ದೇವಸ್ಥಾನದ ಸರಾಫನಿಗೆ ಅನುಮಾನ ಹುಟ್ಟಿತು (ಕಥಾ. ೨೧೬). ೨. ಸರ್ಕಾರದ ಖಜಾನೆಯ ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳುವವನು : ಖಜಾನೆಗೆ ಇರ್ಸಾಲಾಗಿ ಬಂದ ಹಣವನ್ನೆಲ್ಲಾ ಖಜಾನೆಯ ಸರಾಫನು ಝಡ್ತಿ ಮಾಡಿ ನೋಡಿ ಚೀಲಗಳಿಗೆ ತುಂಬಿ ತನ್ನ ಮೊಹರುಮಾಡುತ್ತಿದ್ದನು. ಪೋಟಾನಾಣ್ಯವೇನಾದರೂ ಕಂಡುಬಂದರೆ ಅದಕ್ಕೆ ಸರಾಫನು ಜವಾಬ್ದಾರನಾಗಿದ್ದನು (ಮಹಾವಂ. II. ೩೨) ; ಗುಮಾಸ್ತನು ಸರಾಫನು ಕೂಡುವ ಸ್ಥಳದ ಮಗ್ಗುಲಿಗಿದ್ದ ಬಾಗಿಲಿಂದ ಹೊರಬಿದ್ದನು (ತೊಳಮು. ೧೪೪). ಶರಾಫ : ೨. ಜನಗಳಿಂದ ಸರ್ಕಾರಕ್ಕೆ

ತೆಗೆದುಕೊಳ್ಳುವ ಶರಾಫನಂತೆ ಸುಬ್ಬು ಆ ಹಣವನ್ನು ತೆಗೆದುಕೊಂಡನು (ಅವಶಂ. ೧೧೬). **ಸರಾಪ** : ೨. ಖಾಸ್‌ಬೊಕ್ಕಸದ ಸರಾಪ ಚಂಗಶೆಟ್ಟಿ ರಾಮಶೆಟ್ಟಿ ಸಹ ಮಾಡಿಶಿ ವಪ್ಪಿಶಿದ ಹಿತ್ತಾಳೆ ಚೌಕಟ್ಟು (ಎಕ. XIV, ಚಾಮರಾ. ೨೪೪-೩ ; ಸು 1668).

[← ಅರ. ಸರ್ರಾಫ್; ಹಿಂ. ಸರಾಫ್, ಸರ್ರಾಫ್ ; ಮರಾ. ಸರಾಫ್]

ಸರಾಫಗಟ್ಟೆ, ಸರಾಪುಕಟ್ಟೆ (ನಾ). ಅಂಗಡಿಯಲ್ಲಿ ಸರಾಫನು ಕುಳಿತುಕೊಳ್ಳುವ ಜಾಗ ; ಗಲ್ಲೆ : ಸರಾಫಗಟ್ಟೆಯಲ್ಲಿ ಅವನನ್ನು ಯಾರೂ ಕಂಡಿರಲಿಲ್ಲ (ರತ್ನಧ್ವ. ೮೪). **ಸರಾಪುಕಟ್ಟೆ** : ಬಲಗಡೆಯ ಕೋಣೆಯ ಸರಾಪುಕಟ್ಟೆ (ಸಾಹೇಬ್. ೧೭೬).

[← ಮರಾ. ಸರಾಫಕಟ್ಟಾ, ಸರಾಫಕಾಟಾ]

ಸರಾಫಿ (ಗು). ಸರಾಫವೃತ್ತಿಗೆ ಸಂಬಂಧಿಸಿದ : ಇನ್ನೊಬ್ಬ ಸರಾಫಿ ಅಂಗಡಿಯ ವರ ಸಿಕ್ಕಾಗ ರಾಘಪ್ಪ ತನ್ನನ್ನು ಗ್ರಹಿಸಿಯಾನೆ? (ಗಂಮಾಯಿ. ೨೬೮) ; ಪುರಂದರದಾಸರು . . . ಸರಾಫಿ ಧಂದೆ ಮಾಡುವ ನಾಯಕಮನೆತನದವರಾಗಿದ್ದರು (ಕರ್ನಾಸಂ. ೨೮೫). (ನಾ). ೨. ಚಿನಿವಾಲನ ಕಸಬು ; ಸರಾಫವೃತ್ತಿ.

[← ಹಿಂ. ಸರ್ರಾಫಾ, ಸರ್ರಾಫೀ ; ಮರಾ. ಸರಾಫೀ]

ಸರಾಪುಕಟ್ಟೆ 'ಸರಾಫಗಟ್ಟೆ' ನೋ.

ಸರಾಯ 'ಸಾರಾಯ$_1$' ನೋ.

ಸರಾಯಿ 'ಸಾರಾಯ$_1$' ನೋ.

ಸರಾಯಿಗಾರ (ನಾ). ಮದ್ಯವನ್ನು ತಯಾರಿಸುವವನು : ಅಂಥ ರಾಡಿಬೆಲ್ಲವನ್ನು ಹರಿವೆಗಳಲ್ಲಿ ಗಡಿಗೆಗಳಲ್ಲಿ ತುಂಬಿಟ್ಟು ಸರಾಯಿಗಾರರಿಗೆ ಬೇಡಿದ ಹಾಗೆ ಕೊಡಬೇಕಾಗುತ್ತದೆ (ಕೃಷಿಪ್ರ. ೧೦೫).

[ಸರಾಯಿ (< ಸಾರಾಯ$_1$) + - ಕಾರ$_1$ (< - ಕಾಱ)]

ಸರಾಯೀ 'ಸಾರಾಯ$_1$' ನೋ.

ಸರಾವೆ (ನಾ). ಮಣ್ಣಿನ ಹಣತೆ ; ಪ್ರಣತಿ : ತಲೆಯ ಮೇಲೆ ಎಣ್ಣೆಯನ್ನೂ ದೊಡ್ಡದಾಗಿ ಬತ್ತಿಯನ್ನೂ ಹಾಕಿ ದೀಪಾ ಹತ್ತಿಸಿರುವ ಸರಾವೆಯನ್ನು ಹೊತ್ತುಕೊಂಡು (ಮುಸುಗ. ೮೨). [ಸಂ. ಸರಾವ]

ಸರಾಸರಿ (ನಾ). ೧. ಅಂದಾಜು ; ಸುಮಾರು : ಚಂದ್ರನು ನಕ್ಷತ್ರಮಂಡಲಕ್ಕೆ ಸಾಪೇಕ್ಷವಾಗಿ ಒಂದುದಿನದಲ್ಲಿ ಚಲಿಸುವ ಸರಾಸರಿ ದೂರವು ೧೩ $^{೧}/_{೨}$ ಅಡಿಗಳು (ನಕ್ಷತ್ರ. ೧೭) ; ಸ್ಥೂಲವಾಗಿ ಹಣದ ಬೆಲೆ ಸರಾಸರಿ ಇಷ್ಟು ಎಂದು ಗೊತ್ತುಮಾಡ ಬೇಕಾಗುತ್ತದೆ (ಹಣಪ್ರ. ೪೨). ೨. ಅನೇಕ ಸಜಾತೀಯ ಮೊತ್ತಗಳನ್ನು ಕೂಡಿಸಿ, ಅದಕ್ಕೆ ಆ ಮೊತ್ತಗಳ ಸಂಖ್ಯೆಯಿಂದ ಭಾಗಿಸಿದರೆ ಬರುವ ಸಂಖ್ಯೆ ; ತಲಾ ಇಷ್ಟು ಎಂಬ ಲೆಕ್ಕ : ತರಗತಿಯ ಸರಾಸರಿಯನ್ನು ಒಳಗೊಂಡ ಫಲಿತಾಂಶದ ಪಟ್ಟಿ (ಶಿಕ್ಷದ. ೩೫೧). [← ಪಾರ. ಹಿಂ. ಸರಾಸರೀ ; ಮರಾ. ಸರಾಸರೀ, ಸರಾನ್‌ಸರೀ./ ತಮಿ. ಚರಾಚರಿ; ತುಳು. ತೆಲು. ಸರಾಸರಿ]

ಸರಿ$_1$, ಜರಿ$_1$, ಜರೆ$_2$ (ಕ್ರಿ). ೧. ಹೋಗು ; ಗಮಿಸು : ಗೊರವನೆಲ್ಲಿಗೆ ಸರಿದನೋ ಆಕರಿಸಿಕೊಳ್ಳದೆ ತೋಱು (ಬಸವು. ೫೨-೭) ; ಮುತ್ತಯನ ಬೀಳ್ಕೊಂಡು ಕೌರವರಿತ್ತ ಸರಿದರು (ಕುವ್ಯಾಧ್ರೋ. ೧-೧೧). ೨. ಓಡಿಹೋಗು ; ಪಲಾಯನ ಮಾಡು : "ಸರಿ - ಪಲಾಯನೇ, ಸಾಮ್ಯೇ ಚ" (ಶಮಧಾ) ; ರಣದೊಳಿದಿರ್ಚಿ ಗಣ್ಣಳಿದು . . . ಸರಿದ ಚೋಳನೆ ಪೇಳನೆ ಬೀರದೇಳ್ಗೆಯಂ (ಕಾಆ. ೨-೨-೩೩ ; 1058) ; ಪಟುಭಟರಟ್ಟಿದರರಸಂ ನಿಟಲದ ಗಾಯಕ್ಕೆ ತೇಂಕಿ ಮೈಮಱೆದಂ ದುರ್ಘಟಮುಟಿಪುದೆಂಬವೋಲ್ ಸಂಕಟದಿಂ ರತ್ನಾಚಲಕ್ಕೆ ಸರಿದರ್ ಸಚಿವರ್ (ದಶಕು. ೨-೩೦) ; ರುದ್ರಗಣಾಖ್ಯನು ಸರಿದನು ರಣ ಭೀತಿಯಲಿ (ಕಂಸವಿ. ೩-೮೮). ೩. ಕಳೆದುಹೋಗು ; ನಷ್ಟವಾಗು : ಧುರಕೆ ಹೆಜತೆಗೆದೆಮ್ಮ ನಾಲ್ವರ ಸರಿದುಹೋದಭಿಮಾನವನು ಕಾಯ್ದುರವಣಿಸಿ ಮಗನೇಱಿದನು ವಾಸವನ ಗದ್ದುಗೆಯ (ಕುವ್ಯಾಧ್ರೋ. ೮-೨೩) ; ತೆರಳುತಿದೆ ಮಜ್ಜೀವರತ್ನಾಭರಣವೆನ್ನ ಮನೋರಥದ ಸಿರಿ ಸರಿವುತಿದೆ (ತೊರರಾ. ೨-೩-೫೪) ; ಸೆಱೆಛಿದ್ರ ಕುಂಭದುದಕದಂತಾಯುಷ್ಯ ಸರಿವುದು ಎಚ್ಚಱೊಕೆ (ಪುರಂದ. ೨-೪೫-೨೫). ೪. ಪಕ್ಕಕ್ಕೆ ಹೋಗು ; ಜರುಗು : ಜನನಮರಣಂಗಳೆಂಬ ತೆರೆಯರ್ ಪಿಡಿದ ಸಂಸಾರದ ತೆರೆ ಸರಿಯೆ (ಬಸರ. ೪-೧೦೨) : ಮುಸುಕು ಸರಿ[ಪಾಠಾಂ. ತೆಗೆ]ಯಲು ಮೋಡವೋಡಿದಿನಬಿಂಬದಂತೆಸೆವ ಮೆಯ್ಯೊಳಗದ್ದು ಬೀದಿವರಿದೊಳಗೆ ಧವಳಿಸೆ (ಸಿದ್ಧರಾ. ೨-೩). ೫. ಜಗುಳು ; ಜಾರು : ಜೋಡನೊಡೆಹಾಯ್ದಂಬು ಧರಣಿಯೊಳಾಡಿದವು ಗುಳ ಸರಿದ ಕರಿಗಳ ತೋಡಿ ನೆಟ್ಟವು (ಕುವ್ಯಾಭೀ. ೮-೪೭) ; ಉಟ್ಟುದು ಸರಿದು ಮದನಜಲ ನೆಟೆ ಪೊಱಮಟ್ಟುದು ನಾಣೆಡೆಯಿಂದ (ಕಂಸವಿ. ೯-೧೯೬). ೬. ಸಡಿಲಿಸು ; ಬಿಚ್ಚು : ಕಳಚಿ ನೊಗನನು ತೆಗೆದು ಕಬ್ಬಿಯನಿಳುಹಿ ಪಡಿವಾಳೆಗಳ ಸರಿದನುಕೊಳಿಸಿ ಪಿಡಿಯಲು ಪಾಡಿಗೈದವು ಮರಳಿದೆಡಬಲಕೆ (ಕುವ್ಯಾಧ್ರೋ. ೧೦-೩೩). ೭. ಬಿಗಿಗೊಳಿಸು : "ಬಲೆಯಂ ಸರಿವ ಕುಣಿಕೆ ಗೊಣಸೆನಿಸಿಕ್ಕು" (ಮಂಗರಾ. ೧೧೨-೫) ; ಹಗ್ಗದ ಕುಣಿಕೆಗಳ ಸರಿದೆರಡುಮೈಗಳಲುಬ್ಬಿ ಬೊಬ್ಬಿಱಿದು ಕುಣಿಸಿ . . . ಅನಿಲಜನ ತಂದರು ರಾಜಬೀದಿಯಲಿ (ತೊರರಾ. ೫-೮-೩೦). ೮. ಸೆಕ್ಕಿಸು ; ತೊರಿಸು : ಎರಡುಕರಗಳನೊಡ್ಡಿ ಬೇಡಿಕೊಂಬುವೆ ನಿನ್ನಾ . . . ಬಾಯೊಳಗಲಗ ಸರಿವ ಕರಗಸದಿಂ ಕೊಱೆವ . . . ಯಮಗೊಲೆಗಳುಕಿ ಸಾಯಲಾಱದಲೆ (ಕೃಕವ. ೧-೧೯-೪) ; ಬೆಟ್ಟಕ್ಕೆ ಹೋಗುವವನ ಸೊಂಟದಲ್ಲಿ ಕೊಡ್ಲೆಯನ್ನು ಸರಿದ ಹಾಗೆ (ಗಾದೆ). ೯. ಅಳವಡಿಸು; ಹೊಂದಿಸು : ಕರ್ಣಪತ್ರವನಮರ್ಚುತೆ ಹಾರಮಂ ಸರಿಯುತೆ ಕಟಿಗೆ ನಿಱಿಯಂ ಸೇರಿಸುತೆ . . . ಚಾರೆಯರ್ಕೈದಿ ಬರುತಿರ್ದರು (ಚೈಮಿಭಾ. ೨೬-೧೨). ೧೦. ತೀರು ; ಮುಗಿ; ವ್ಯತೀತವಾಗು : ಅವನಿಜಾಸುತ ಕೇಳು ಸರಿದುವು ದಿವಸ ನಾಲುಕು (ತೊರರಾ. ೬-೪-೨೮) ; ಜುಲ್ಕತಿಂಗಳು ಸರಿದುಹೋಯಿತು (ಹೊಸಕ್ರಿ. ೬). ೧೧. (ಆಲಂ) ಸಾಯು; ಗತಿಸು : ಭಾನುಸನ್ನಿಭ ಸರಿದನೇ ತಪ್ಪೇನು ಪಾರ್ಥನ ಬಸುಱಲೆನ್ನ ನಿಧಾನವಿದ್ದುದು ತೆಗೆವೆನ್ನೆಸಲೆ (ಕುವ್ಯಾಶ. ೧-೧೨). **ಜರಿ$_1$** : ೨. ಜರಿದುದತಿರಥರಾಜಿ . . . ಸಮೀರಕುಮಾರನುರವಣಿಗೆ (ಕುವ್ಯಾಧ್ರೋ. ೧೩-೧೯). ೫. "ಜರಿ-ತೀರ ಪತನೇ (ಜಾಱು)" (ಶಮಧಾ); ಮಳಲೇರಿಯಂತೆ ಜಱ್ಜನೆ ಜರಿದು (ಧರ್ಮಾಮೃ. ೧-೧೫೬) ; ಅಖಿಲಕುಲಗಿರಿ ಜರಿದು ಬೀಳುವಡಾನಲಾವೆನು ನಖದ ಕೊನೆಗಳಲಿ (ಕುವ್ಯಾಭೀ. ೧೦-೭) ; ಜಗದಡಕಿಲು ಜರಿದು ಗಿರಿ ಕೆಡೆದುರುಳಿದುವು (ಸಾಳ್ವಭಾ. ೧೮-೬೯). ೧೨. ಅಳುಕು ; ಹಿಂಜರಿ : ತೊದಳಿಲ್ಲದೆರಡುಗೇಳದೆ ಮನದೊಳ್ ಜರಿಯದೆ ಕೊಂಡೊಡೆ (ಧರ್ಮಾಮೃ. ೧೩-೭೨). ೧೩. ಪತನವಾಗು ; ಬೀಳು : ರಟ್ಟನ್ರ(ನೃ)ಪ ಪ್ರಳಟ್ಟದಿಂ ಜರಿದ ಚಳುಕ್ಯರಾಜ್ಯಮಂ . . . ಉದ್ಧರಿಸಿದಂ (ಎಇ. V, ೧೬-೧೪ ; 1142). ೧೪. ಜೋಲುಬೀಳು ; ಇಳಿಬೀಳು: ನೀ ಮಕ್ಕಳ ಪಡೆದ ಮಾತ್ರದಲಿ ಕಕ್ಕಸಮೊಲೆ ಜರಿದಪುದು (ಮೋಹತ. ೪-೨೨). ೧೫. ಉದುರಿಬೀಳು; ಕಳಚಿಬೀಳು : ಈದುಂಬರಕುಷ್ಠಮಾಗಿ ಸರ್ವಾಂಗೋಪಾಂಗಾವಯವ ಪ್ರದೇಶಂಗಳೆಲ್ಲಂ ರೂಪಱಿಯಲಾಗದಂತು ಜರ್ಜರಮಾಗಿ ಜರಿಯೆ (ಸುಕುಮಾ. ೫-೧೧ ವ). **ಜರೆ$_2$** : ೫. ನಡುಮನೆಯ ಜಂತಿ ಜರೆದ್ಹಾಂಗ ಜರದೇನ (ಕನ್ನಡಾ. ೧೧೦); ಸಾವಕಾಶ ಬಾರಮ್ಮ. ಕಲ್ಲು ಹಾವಸೆಗಟ್ಟಿರುತ್ತದೆ. ಕಾಲು ಜರದೀತು (ಹೊಸಕ್ರಿ. ೧೯೦).

[ದೇ. ॥ ತಮಿ. ಮಲ. ಚರಿ; ತುಳು. ಜರಿ]

ಸರಿ$_2$ (ನಾ). ೧. ಓಡಿಹೋಗುವಿಕೆ ; ಪಲಾಯನ : (ಚಕುನಿ. ಕಿ. I. ೪೮). ೨. ಜಾರುವಿಕೆ ; ಜಗುಳುವಿಕೆ : (ಕ). ೩. ಕಳೆದುಹೋಗುವಿಕೆ ; ಮುಗಿದುಹೋಗುವಿಕೆ : (ಕ). [< ಸರಿ$_1$./ ತುಳು. ಸರಿ]

ಸರಿ$_3$ 'ಸಱಿ$_1$' ನೋ.

ಸರಿ$_4$ 'ಸಱಿ$_2$' ನೋ.

ಸರಿ$_5$ (ಗು). ೧. ಸಮಾನವಾದ ; ಸಾಟಿಯಾದ : ಜಲನಿಧಿಗೆ ಸರಿಸರಸಿ ಯಾವುದು (ಕುವ್ಯಾಅ. ೨೬-೪೫). ೨. ಯೋಗ್ಯವಾದ ; ತಕ್ಕ : (ಕ). (ನಾ). ೩. ಸಮಾನ ; ಸದೃಶ ; ಸಾಟಿ : "ಸರಿ ದೊರೆ . . . ಸಂಗಡಂ - ಈ ೧೮ ಸಮಾನಕೆ ಪೆಸರ್" (ಕಶಸಾ. ೫೯-೨೯೧) ; ಸರಿ ಸತ್ಯಭಾವೆ . . . ದೊರೆ ಸಂದರುನ್ದತಿ ಪೆಱ್ದೊರೆಯೇ ಗುಣದಂಕಕಾರ್ತ್ತಿಯೊಳ್ (ಸೌಇ. XI-i, ೫೨-೨೯ ; 1007) ; ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು (ಹಚಕಾ. ೧-೧೬). ೪. ಯೋಗ್ಯವಾದುದು ; ತಕ್ಕುದು : ನೀ ಮುನ್ನಳುಕಿ ಕೈದುವ ಹಾಯ್ದೆಡೆ ಸರಿಯಲ್ಲ ನಿನಗೆ (ಕುವ್ಯಾಭೀ. ೩-೩೫) ; ನಾನು ಕೂಡ ನೀನು ಹೇಳುವುದನ್ನೆಲ್ಲಾ ಸರಿಯೆಂದು ತಿಳಿದುಕೊಳ್ಳುತ್ತೇನೆ (ಆರ್ಯಕ. ೭೮). ೫. ತಪ್ಪಲ್ಲದುದು; ದೋಷಪೂರ್ಣವಾಗಿಲ್ಲದಿರುವುದು : ಈ ಎರಡರಲ್ಲಿ ಯಾವುದು ಸರಿ, ಯಾವುದು ತಪ್ಪು ? (ರೂಢಿ). ೬. ಸಮಭಾಗ ; ಸರಿಪಾಲು : ನೀವಖಿಳರಾಜ್ಯದಲಿ ಸರಿಯ ಕೊಂಬುದು ನೇರುವಡೆ ಗಜಪುರದೊಳಿಹುದಲ್ಲದೊಡೆ

ನಿಮ್ಮಯ ಪುರದಲಿರಿ (ಕುವ್ಯಾಆ. ೧೭-೨೭) ; ಪೂರ್ವದಲಿ ಪಿಂಡವ ಸರಿಯನಿತ್ತನು . . . ಆ ಪ್ರಕಾರದಲೂರ್ವಿಯೊಡೆತನಕೆ ಸರಿಕುಮಾರಕರಿಬ್ಬರು (ತೊರರಾ. ೨-೧-೩೪) ; ಸರಿನೀರು ಸರಿಮೊಸರು ಶುಂಠಿ ನೀರುಳ್ಳಿಗಳ ತುರುವಲೇಲಕ್ಕಿ ತದುಕಿನ ಚಿಗುರ ಕಿಱುಗಟ್ಟುವೆರಸಿ ನೀರೋಗರವ ಹಾಕಲದು ತ್ರೈಲೋಕ್ಯಪೂಜ್ಯ ತಕ್ರೋದನ (ಸೂಪಶಾ. ೩-೨೭). ೭. ಎರಡರಿಂದ ಭಾಗವಾಗುವ ಸಂಖ್ಯೆ ; ಸಮಸಂಖ್ಯೆ : ಒಂದೆಂದೆ ಬೆಸ ಎರಡೆಂದೆ ಸರಿ (ಸಕವ. ಶ. II. ೫೧೦-೭೯). ೮. ಒಪ್ಪಿಗೆ, ಸಾಕು ಎಂಬುದನ್ನು ಸೂಚಿಸಲು ಬಳಸುವ ಒಂದು ಶಬ್ದ : ನೀವಾದರೇನು? ನಾವಾದರೇನು? ಬಾವೀಲಿ ನೀರು ಬಂದರೆ ಸರಿ (ಗಾದೆ). ೯. ದಿಟ ; ನಿಜ : ಜೀನನ ಮನಸ್ಸು ಹೀನವೇ ಸರಿ (ಗಾದೆ); ಮಳೆ ಬಂದದ್ದೇನೋ ಸರಿ ಆದರೆ ಸಕಾಲಕ್ಕೆ ಬರಲಿಲ್ಲ (ರೂಢಿ).

ಸರಿಸರಿ = (ದ್ವಿರುಕ್ತಿ) : ನೆರೆದು ನಿಮ್ಮೊಳು ನೀವು ಸೆಣಸುತ ಸರಿಸರಿಗೆ ಹೊಯ್ದಾಡುವುದು ನೃಪನೀತಿ (ಕೋಗಯ. ೧೭-೧೦); ಇವರ್ಗವರ್ಗೆ ಸರಿಸರಿ ಜುದ್ಧಮಾಗಲ್ (ಅಚ್ಯುತ. ೪೫-೧೩). ಸಕ್ಕಸರಿ = ಸರಿಸಮಾನವಾದುದು : ಉಱಿದ ಘಾತಿಗಳು ಸ್ಥಿತಿಕರ್ಮಕ್ಕೆ ಸಕ್ಕಸರಿ ಮಾಡಿ (ಅನಂಪು. ೧೪-೫೧ ವ). ಸಕ್ಕಟಸರಿ = ಸಕ್ಕಸರಿ: ಅರಲಸರಿ ಸುರಿದೊಡಂ ಪೊಸಸರಳ್ಗಳ ಸರಿ ಸುರಿದೊಡಂ ಹಿತಾಹಿತಜನದಿಂ ಸರಿಗಳೆವೆರಡುಂ ಸಕ್ಕಟಸರಿಯೆನಿಸಿದ ಮುನಿವರಂಗೆ ಸರಿಗಿರಿಯಲ್ತೇ (ಉಸಾರ. ೨೫೭). ಸರಿಗೆವರ್ = ಸಾಟಿಯಾಗಿರು ; ಎಣೆಯಾಗಿರು : ಸರಿಗೆಗೆ ಕೊರಲ್ ಕೊರಲ್ಗಂ ಸರಿಗೆಯಲಂಕರಿಸೆ ಸರಿಗೆ ವಂದುದು ಮುಯ್ಯುಟ್ಟೆರಡಱ ಬೆಡಂಗುಮೆಂಬಂತಿರೆ ಕರಮೊಪ್ಪಿದುದು ಕೊರಲಗೇಂದ್ರಾತ್ಮಜೆಯಾ (ಕಾವ್ಯಾವ. ೬೫೯) ; ಪೊಳೆವ ಮುತ್ತಿನ ಬೆಳ್ದಿಂಗಳ ಸಿರಿಗೆ ಸರಿಗೆ ವರ್ಪುವು ಪಳಚನೆ ಕವಿಭಾಳನೇತ್ರನಿಡುವ ಪದಂಗಳ್ (ಅನಂಪು. ೧-೫೦). ಸರಿಗೆ ಸಲ್ = ಸರಿಗೆ ವರ್ : ಹರಿಮಹೇಶ್ವರರಾಳುತನಕಿಬ್ಬರಳು ಮಿಗಿಲರ್ಜುನನ ಬಲುಹೀ ಧರೆಯಜಿಯಲೀ ಹೊತ್ತಿನಲಿ ನಿನ್ನಾತನಗ್ಗಳಿಕೆ ಸರಿಗೆ ಸಂದುದೆ ಸಾಕು ತೂಗಿದಡರಸ ರವ ಕುಂದದು (ಕುವ್ಯಾಕ. ೨೨-೩೯). ಸರಿಗೇಱು = ೧. (ಆಲಂ) ಮುತ್ತು ; ಲಗ್ಗೆಯಿಡು: ಸಂಕೆಯ ಸಾಹಣಿ . . . ಕುಂದುಗೊಳದ ಕೋಟೆಯನು ಸೆರಗುಬೆರಗಿಲ್ಲದೆ ಸರಿಗೇಱಿ ಕಾದಿ ಸುರಲೋಕಪ್ರಾಪ್ತನಾದಂ (ಸೊಸಾ. XX, ೧೩೬-೧೭ ; 1186) ; ತೋಳ್ಗಡಿಯರಿಱಿಯೆ ಬೆಡಬಿಲ್ಲಾಳ್ಗಳ್ ಸರಿಗೇಱಿ ಮಟ್ಟಿದರ್ ಕಡುಪಿಂದಂ (ಪಾರ್ಶ್ವಪು. ೩-೧೪೬). ೨. ಧಾವಿಸು ; ನುಗ್ಗು : ಉರಿಯ ಸರಿಗೇಱಿದ [ಪಾಠಾಂ. ಸಿರಿಗೆಱಿಗಿದ] ಪತಂಗಕೆ ಮರಳುದಲೆಯೇ ಮತ್ತೆ (ಕುವ್ಯಾಕ. ೨೦-೩೯). ಸರಿಮಾಡು = ೧. ಸಮಾನವೆಂದು ಎಣಿಸು ; ಸರಿಜೋಡಿಯೆಂದು ಪರಿಗಣಿಸು : ಭವಿಯೊಡನೆ ಸುಬ್ರತಶೈವನಂ ಸರಿಮಾಡುವುದು ದುರ್ಭಾವ (ಬಸಪು. ೫೩-೪೫) ; ಖೂಳನನು ಹಿಡಿತಂದು ಧರಣೀಪಾಲರಲಿ ಸರಿಮಾಡಿ ರಾಜ್ಯದ ಮೇಲೆ ನಿಲಿಸಿದೆ (ಕುವ್ಯಾಕ. ೫-೨೩). ೨. ಸರಿಯಾದ ರೂಪವನ್ನು ಕೊಡು ; ಸರಿ ಹೊಂದಿಸು ; ಅನ್ವಯಿಸು : ಸಂಖ್ಯಾವ್ಯಯಂಗಳಂ ಕಳೆದುಱಿದ ನಿಘಂಟುವಿನ ಸುಲಲಿತಾಕ್ಷರಂಗಳಪ್ಪ ನಾಮಪ್ರಕೃತಿಗಳಂ ಕನ್ನಡಕ್ಕೆ ಸರಿಮಾಡಿ ಸಮಸಂಸ್ಕೃತಮೆಂಬ ಪೆಸರನಿಟ್ಟು ಶಬ್ದಜ್ಞರ್ ಲಿಂಗಮಂ ಮಾಟ್ಟರ್ (ಶಮದ. ೮೦ ವೃತ್ತಿ). ೩. ಸಮಗೊಳಿಸು ; ಮಟ್ಟಮಾಡು : ಕೊಱಡುಗಳನೊಟ್ಟಿದರ್ ಕಲ್ಗುಂಡುಮಣ್ಗಳಂ ಸುರಿದು ನೆಲ ಸರಿಮಾಡಿದರ್ ಖಿಳರ್ (ಚೆಬಪು. ೪೨-೩೦). ಸರಿಯಾಗಿ = ೧. ಸಮಾನವಾಗಿ ; ಸರಿಸಾಟಿಯಾಗಿ : ಸಂಸ್ಕೃತಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ಪುದಂ ಕ್ಷಳನೆಂಬರ್ (ಶಮದ. ೧೬) ; ವೃಷಕೇತು ಬರಲಾತನೊಳ್ ಸರಿಯಾಗಿ ಕಾದುತಿರಲು (ಕೃಷ್ಣಭಾ. ೮-೩೬). ೨. ಹೆಚ್ಚುಕಡಮೆಯಾಗದೆ ; ತಪ್ಪಿಲ್ಲದಂತೆ : ಲೆಕ್ಕವನ್ನು ಸರಿಯಾಗಿ ಮಾಡು (ರೂಢಿ). ೩. ತಕ್ಕ ರೀತಿಯಲ್ಲಿ ; ಚೆನ್ನಾಗಿ : ಪದ್ಯವನ್ನು ಸರಿಯಾಗಿ ಪದವಿಭಾಗ ಮಾಡು, ಅರ್ಥವಾಗುತ್ತದೆ (ರೂಢಿ). ಸರಿಸಮಾನ = ಸರಿಜೋಡಿ ; ಸಾಟಿ: ನಾನೊಬ್ಬನಿರೆ ಕರಗುತಿದ್ದೆನಾಗಲೆ ಸರಿಸಮಾನವಿಲ್ಲದ ಹಿಮಾಲಯವಾಗುವಂತೆ (ಕವಪು. ೫೩). ಸರಿಸಮಾನೆ = ಸರಿಜೋಡಿಯಾದವಳು ; ಸಾಟಿಯಾದವಳು : ಕಾಮನ ರತಿಯಲು ತಾನೆಣತೊಣೆ ಸರಿಸಮಾನೆ ಶಾಂತಲದೇವಿ (ಎಕ. II, ೧೪೩-೭೫ ; 1131). ಸರಿಸುಮಾರು = ಹೆಚ್ಚುಕಡಮೆ; ಅಜಮಾಸು: ಸರಿಸಮಾರು ಒಬ್ಬ ಮನುಷ್ಯನಿಗೆ ೪ ಟೆನ್ಸುಗಳಷ್ಟು ತರಕಾರಿ ನಿತ್ಯದ ಊಟದಲ್ಲಿರಬೇಕು (ಗೃಪಮ. ೪೫).

[< ಪ್ರಾ. ಸರಿ./ಸಂ. ಸದೃಶ. /ತಮಿ. ಚರಿ ; ತುಳು. ತೆಲು. ಸರಿ]

ಸರಿ$_6$ (ನಾ). ಒಟ್ಟಿಲು ; ರಾಶಿ : ಒಪ್ಪುವ ಸುಲಲಿತಶಂಖದ ಸರಿಗಳಲ್ಲದಿವು ಬೆಳ್ನೊರೆಗಳೊಟ್ಟಿಲಿಲ್ಲ (ಕೃಮಿಭಾ. ೬-೬) ; ತಾಂಬೂಲಪ್ರಸಾದಮಂ ಕುಡಲು . . . ಭರದಿ ಹೊಜದೆಸೆಗೆಯ್ದಸಹ್ಯಭಾವದಿ ಕಲ್ಲ ಸರಿಯಲ್ಲಿ ಬೈಚಿಟ್ಟು (ಗುರುಚಾ. ೧೪-೭೫).

[?. /ತಮಿ. ಚರಿ]

ಸರಿ$_7$ (ನಾ). ಮಳೆ ; ವೃಷ್ಟಿ : "ಸರಿಯೆಂದೆನೆ ಮಟೆಯಕ್ಕುಂ" (ಕವಿಕಂ. ೯೨) ; ಚಿತ್ತೆಯ ಸರಿಯಂತೆಱಗಿ ಪೋದುದಮರಸಮಾಜಂ (ಆದಿಪು. ೧೪-೧೪೭) ; ಅರಳಿದೆಂಬುದವನಕೆ ಮಂಜಿನ ಸರಿಯು ಸುರಿವಂದದಲಿ . . . ಚರನ ಬಿನ್ನಹಕರಸಿ ಮೊದಲಾಗಿರೆ ಸಮಸ್ತಸಖೀಜನದ ಮುಖಸರಸಿರುಹ ಬಾಡಿದವು (ಕುವ್ಯಾಸ. ೧೪-೫೧). 'ಸರಿವಟೆ', 'ಸರಿಸೋನೆ' ಪರಾ. [?]

ಸರಿಕ, ಸರೀಕ (ನಾ). ೧. ಸಮಾನದರ್ಜೆಯವನು ; ಸಮಾನ ಯೋಗ್ಯತೆಯುಳ್ಳವನು : ನಾನು ನನ್ನ ಸರಿಕರೊಡನೆ ಬೆರೆಯುವೆ (ರತ್ನಧ್ವ. ೨೪೯) ; ಕೊನೆಯ ಪಕ್ಷ ನಮ್ಮ ಹಳ್ಳಿಯಲ್ಲಾದರೂ ಇದ್ದಿದ್ದರೆ ಸರಿಕರಲ್ಲಿ ನಗೆಗೀಡಾಗುವುದು ತಪ್ಪುತ್ತಿತ್ತಲ್ಲ (ಕಾಗೀ. ೫೪). ೨. ಓರಗೆಯವನು ; ಸಮಪ್ರಾಯದವನು : ಸರಿಕರೊಡನೆ ಆಟ ವಿನೋದಗಳಿಲ್ಲ. ಏನೋ ಯೋಚನೆ ಕಟ್ಟಿಕೊಂಡ ಹಾಗಿದೆ (ಹಾಹುತ್ರ. ೬೫); ವಯಸ್ಸಿನಿಂದ ಈ ನಾಲ್ಕು ಜನರು ಕಾಮಿಯ "ಸರಿಕ"ರೆಂದು ಹೇಳಬಹುದು (ವೃದ್ಧರಾ. ೪೫). ಸರೀಕ : ೧. ತಮ್ಮ ಸರೀಕರ ಕೂಡಲೂ ತಮಗಿಂತ ಹೆಚ್ಚಿನ ಯೋಗ್ಯತೆಯವರ ಕೂಡಲೂ ವಿನಯದಿಂದ ನಡೆಯಬೇಕೆಂಬುದಂತೂ ಸಹಜವೇ (ಮುಂಬಯಿ. ೪-೭೩) ; ಸತ್ಯಸಂಗತಿ ಹೊರಬಿದ್ದರೆ ತಮ್ಮ ಘನತೆ ಸರೀಕರ ಎದುರಿನಲ್ಲಿ ಹೋಗುವುದೆಂದು ಹೆದರಿದ ತಿಮ್ಮೇಗೌಡ (ಉರುಕ. ೯೮). ೨. ಚೇಷ್ಟೆ ಮಾಡುವುದಿದ್ದರೆ ಸರೀಕರೊಡನೆ ಮಾಡಬೇಕು (ಸ್ವತಿಚಿ. ೩೮೪) ; ನಿನ್ನ ಸರೀಕರು ಹೀಯಾಳಿಸುವುದನ್ನಾದರೂ ನೋಡಬಾರದೆ? (ಮಲ್ಲಮ್ಮ. ೧೮).

[ಸರಿ$_5$ + - ಕ್ಯ. /ಪ್ರಾ. ಸರಿಕ್ಯ. / ಸಂ. ಸದೃಕ್ಷ./ಹಿಂ. ಸರೀಖಾ ; ಮರಾ. ಸರೀಕ್]

ಸರಿಕತನ, ಸರೀಕತನ (ನಾ). ಸರಿಸಮಾನತೆ : ಈ ಜಗತ್ತಿನಲ್ಲಿ ತಮಗಿಂತ ಬಲಿಷ್ಠರಾದವರ ಕೂಡ ಸರಿಕತನದ ಸಂಬಂಧಮಾಡುವ ಭರಕ್ಕೆ ಯಾರೂ ಬೀಳಬಾರದು (ಮುಂಬಯಿ. ಕಿ. ೪-೧೨). ಸರೀಕತನ : ಸರೀಕತನದಲ್ಲಿ ಅವರಿಬ್ಬರೂ ಸಮವಾಗಿದ್ದಾರೆ (ರೂಢಿ). [ಸರಿಕ + - ತನ]

ಸರಿಕಾಣು 'ಸರಿಗಾಣ್' ನೋ.

ಸರಿಕಿಸು 'ಸರಕಿಸು' ನೋ.

ಸರಿಕೆ (ನಾ). ೧. ಸರಿಯುವಿಕೆ ; ಚಲನೆ : ಮಿದುನೆಲದ ಮಮತೆಯನ್ನು ಪದಕೆರೆವ ಗರಿಕೆ ಬಗೆಯನುಲ್ಲಸಗೊಳಿಪ ಕಮ್ಮಲರ ಸರಿಕೆ (ಹಂಸದ. ೨೦). ೨. [ನಾಟ್ಯಶಾ] ಮೂವತ್ತೈದು ದೇಶೀಯಭೌಮಚಾರಿಗಳಲ್ಲಿ ಒಂದು ; ಒಂದು ಕಾಲನ್ನು ಮುಂದಕ್ಕೆ ಚಾಚುವುದು : ಇರದೊಂದುಪದಂ ಮುಂದಕೆ ಚರಿಸಲೆ ಸರಿಕಾಖ್ಯಂ (ಲಾಸ್ಯರಂ. ೬-೮೬). [ಸಂ. ಸರಿಕಾ./ ತಮಿ. ಚರಿಕೈ]

ಸರಿಗ (ನಾ). = ಸರಿಕ ೧ : ನನ್ನ ಹಣವನ್ನೂ ನನ್ನನ್ನೂ ಸರಿಗರ ಮುಂದೆ ನಿಂದಿಸುತ್ತಿರುವನು (ಕವಿಕ. ೩). [< ಸರಿಕ]

ಸರಿಗಂಜಿ (ನಾ). ಕಂಬಳಿಯನ್ನು ನೇಯುವಾಗ ಅದಕ್ಕೆ ಲೇಪಿಸುವ ಅಂಟುದ್ರವ: ಕುರುಬರಿಗೆ ಕೊಡಲೇನೆ ಗೌರಮ್ಮ ನಿನ್ನ ಕುರುಬರ ಕುರಿಬಣ್ಣ ನಾನುಡಲಾರೆ ಕಂಬ್ಳಿಗೆ ಸರಿಗಂಜಿ ನಾ ಕಾಸಲಾರೆ (ನಾಪದ. ೧೧೧). [ಸರಿ$_4$ (< ಸಱ್ಪಿ) + ಗಂಜಿ$_1$]

ಸರಿಗಟ್ಟಿಸು (ಕ್ರಿ). ಸರಿದೂಗಿಸು ; ಸರಿಸಮವಾಗುವಂತೆ ಮಾಡು : ಬಡದೊರೆಯ ಮಗಳು ಬಲುದೊರೆಯ ಕೈಹಿಡಿದರೆ . . . ಸರಿಯಾಗಿ ನಡೆಸಬೇಕು. ಹುಟ್ಟಿದ ಮನೆ, ಹೊಕ್ಕ ಮನೆ ಎರಡನ್ನೂ ಸರಿಗಟ್ಟಿಸಬೇಕು (ಮಾಮಲ್ಲಿ. ೪೫).

[ಸರಿಗಟ್ಟು + - ಇಸ್ಸು]

ಸರಿಗಟ್ಟು (ಕ್ರಿ). ೧. ಸಮಾನವಾಗು ; ಎಣೆಯಾಗು : ಇಟ್ಟಣಿಸಿಕೊಂಡೆನ್ನೊಡನೆ ಸರಿಗಟ್ಟಿ ಕಾದಿದ ರವಿಸುತನ ಹುಡಿಗುಟ್ಟಿದೆನು (ಕುವ್ಯಾಕ. ೧೭-೨೯) ; ಈಜುವುದರಲ್ಲಿ ಇವರನ್ನು ಸರಿಗಟ್ಟುವುದು ಅಸಾಧ್ಯ (ಮೀದಿಮ. ೧೧೧). ೨. ಸಮಾನಗೊಳಿಸು ; ಭೇದವಿಲ್ಲದಂತೆ ಮಾಡು : ಹುಟ್ಟಿ ಬ್ರಾಹ್ಮಣಜಾತಿಯನೆ ಕಡೆಗಟ್ಟಿ ಚಾತುರ್ವರ್ಣ

ಗಳ ಸರಿಗಟ್ಟಿದಿನ್ನೀ ಜಾತಿ ಯಾವುದು ಲಿಂಗಧಾರಿಗಳೇ (ಬಿಜ್ಜಪ್ಪ. ೬೧-೫೦). ೩. ಸಮಾನವೆಂದು ಭಾವಿಸು : ಇಂತಪ್ಪ ಪಾಪಕರ್ಮರೊಳೆಂತುಂ ಸರಿಗಟ್ಟಲಕ್ಕುಮೇ ಶಿವದೀಕ್ಷಾವಂತರೆನಿಸಿರ್ದ ಸುಚರಿತವಂತರಂ (ವೃಷವಿ. ೬೮-೧೯). [ಸರಿ$_5$ + ಕಟ್ಟು$_1$]

ಸರಿಗಣೆ (ನಾ). ಮಳೆಯಂತೆ ಸುರಿಯುವ ಬಾಣ ; ಧಾರಾಕಾರವಾಗಿ ಬರುವ ಬಾಣ : ಸರಲುಗಿಯಲು ಸರಿಗಣೆಯಂ ಮುಱಿಯುತ ಮರಳಿಮರಳಿಯಾಳಾಳೊಳೊಡ ರ್ಚುತ್ತುರವಣೆಯಿಂ ಪಡಲಿಟ್ಟಂದದಿನುರುಳ್ದುದು ಭಟತತಿ ಭರದಿಂ (ಜಯಕಾ. ೬-೩೨).

[ಸರಿ$_5$ + ಕಣೆ$_1$]

ಸರಿಗದ್ದುಗೆ (ನಾ). ಸರಿಸಮನಾದ ಗದ್ದುಗೆ ; ಸಮಾನದರ್ಜೆಯ ಪೀಠ : ಒಡೆಯನ ನಿರೀಕ್ಷಣದಲ್ಲಿ ಸರಿಗದ್ದುಗೆಯನೊಲ್ಲದೆ ಒಡೆಯಂಗೆ ಮನೋಹರವಾಗಿ ಸಡಗರಿಸಿ ಸಮರ್ಪಿಸಿದ ಮತ್ತೆ ತನ್ನೊಳಗಿಪ್ಪ ಆತ್ಮಂಗೆ ತೃಪ್ತಿ ಕೂರ್ಮಶಿಶುವಿನ ಸ್ನೇಹದಂತೆ (ಮೋಳಮಾ. ೫೧-೭೪) ; ಪುರಂದರನ ಸರಿ[ಪಾಠಾಂ. ಮ]ಗದ್ದುಗೆಗೆ ಮನಸಂದವರು ಹೊಗಿರಣವನು (ಕುವ್ಯಾಕ. ೮-೩೧). [ಸರಿ$_5$ + ಗದ್ದುಗೆ$_2$ (< ಗರ್ದುಗೆ$_2$)]

ಸರಿಗಳೆ (ಕ್ರಿ). ೧. ಗುರುತಿಸು (?) : ಬರೆದು ಕುಂಡಲಿಚಕ್ರಮಂ . . . ಪೇೞ್ದೊಡೆಗಳಂ ಬಂದಿಸಿ ಪೇೞಡೆ ತರದಿ ರೇಖೆಯನಂತವು ಸರಿಯಾಗಿ ಸರಿಗಳೆವುದು (ಜಾತಕ. ೧೦-೨). ೨. (ಆಲಂ) ಸಂಪೂರ್ಣವಾಗಿ ಅಳಿದುಹೋಗು (?) : ನೀನಿಂದಿಱಿದು ಮೆಱಿವವಸರವಲಾ ಜವ್ವನದ ಧುರಭರವು ಸರಿಗಳೆಯದಪಕೀರ್ತಿ ರವಿಶಶಿ ಮುರಿದುಬೀೞ್ವನ್ನಬರ (ಕುವ್ಯಾವಿ. ೬-೨೧). [ಸರಿ$_5$ + ಕಳೆ$_1$]

ಸರಿಗಾಣ್, ಸರಿಕಾಣು (ಕ್ರಿ). ೧. ಸಮವೆಂದು ಭಾವಿಸು ; ಸಮಾನವೆಂದು ಪರಿಗಣಿಸು : ಮಱುವಕ್ಕದ ನಾಯಕರನಾಜಿಯೊಳ್ಕಂಡು . . . ಬೆಳ್ಕಯ್ಕಿಯ ಪಿಂಡಿಂಗವಂದಿರಂ ಸರಿಗಂಡಂ (ಪಂಂಪಾಮಾ. ೯-೫೮) ; ಘಡಘಡಲವೋ ಭೀಮ ಬಾಣಗುಗ ಳೊಡನೆ ಸರಿಗಂಡೆನ್ನ ಬಗೆಯದೆ ಕಡುಗುವೈ (ಕುವ್ಯಾದ್ರೋ. ೧೨-೧೬) ; ಪೆಂಡಿರೊಳ್ ಸರಿಗಂಡೀಕೆಯ ನೀಂ ಬರ್ದುಂಕಿಪುದು (ಶಾಖಾಂತ. ೬೫-೯೫). ೨. ಸದೃಶವಾದುದನ್ನು ಕಾಣು ; ಸರಿಸಾಟಿಯಾದುದನ್ನು ಕಾಣು : ನಿನ್ನ ರೂಪಿಗೆ ಸಲುವುದೌ ನಳನುನ್ನತದ ಸೌಂದರ್ಯ ಜಗದೊಳಗಿನ್ನು ನಾ ಸರಿಗಾಣೆ (ನಳಚ. ೨-೩೭) ; ಭಳಿರೇ ಪೃಥಿಂದಂಗೆ ಸರಿಗಾಣಂ (ಚಿಬಪ್ಪ. ೫೩-೪೪) ; ನೆಱೆ ತನ್ನ ಶುಭ್ರಕೆ ಸರಿಗಾಣೆನೆಂದಾಗ ಪರಿದಾಡುತಿಹಳು ಕಾವೇರಿ (ಕಂಸವಿ. ೫-೪೨). ೩. ದೃಷ್ಟಿ ಸರಿಯಾಗಿರು : ತನ್ನ ತಾನಱಿದ ಎಚ್ಚಱಿಕೆಯಲ್ಲಿ ಅಹುದು ಅಲ್ಲವೆಂಬುದ ಕುಱುಹುದೋಱಿ ದಿವರಾತ್ರಿಯಲ್ಲಿ ಉಭಯಕ್ಕೂ ದೃಕ್ಕು ಸರಿಗಾಬುದಾಗಿ ಲಕ್ಷವ ಬಿಟ್ಟು ನಿರ್ಲಕ್ಷವ ಕಂಡು ನಿಶ್ಚಯವಾಯಿತ್ತು (ಮೋಳಮಾ. ೧೪೮-೭೧). ೪. ಯೋಗ್ಯವೆಂದು ತೋರು ; ಸರಿಯೆನಿಸು : ನಿನಗೆ ಸರಿಗಾಣ್ಮಂತೆ, ನೀನ್ ನಿನ್ನ ಒಳ್ಳಿತ್ತನಾರಯ್ (ಬಡ್ಡಪ್ಪ. ೨೦-೪೩). ೫. ಒರೆ ಹಚ್ಚಿನೋಡು; ಪರೀಕ್ಷಿಸು : ನಾರದಮುನೀಶ್ವರನ ವಾಕ್ಕಕ್ಕೆ ಸರಿಗಾಣ್ಕೆನೆಂದೋರ್ವ ಚರನ ಕರದಂ ರತಿಯು ಪರಿಪಾಲಿಸುವ ಪುಟ್ಟನನ್ನು ಕರತರ್ಪುದೆಂದಟ್ಟಿ (ನಪಮೋ. ೧೨-೩೧). **ಸರಿಕಾಣು:** ೪. ತನ್ನಾತನಿಗೆ ಸರಿಕಂಡದ್ದು ತನಗೂ ಸರಿ (ತೀಮೋಡ. ೭೦). [ಸರಿ$_5$ + ಕಾಣ್]

ಸರಿಗಾದು (ಕ್ರಿ). ಸರಿಸಮನಾಗಿ ಹೋರಾಡು : ಗೆಲ್ದರ್ ಸರಿಗಾದಿದರ್ ಪಗವರಂಬೀ ವಾರ್ತೆಯಂ ಕೇಳಲಾಗದು (ಪಂಂರಾಮಾ. ೧೦-೨೨). [ಸರಿ$_5$ + ಕಾದು$_1$]

ಸರಿಗಾಳಿಗ (ನಾ). ಸರಿಸಮವಾದ ಯುದ್ಧ : ಎಱಿದ ಕರಿಯನನ್ನನ ಹಸ್ತಿ ಕೊಲೆ ಕೋಪವೇಱಿಯಾ ಗಜದ ಮಸ್ತಕಕೆ ಪಾಱಿ ನಿಂದಲ್ಲಿಯವನ ಕೊಂದು ಮಾವಟ ತೋಱಿದ ಸರಿಗಾಳಿಗವ (ವರ್ಧಚ. ೬-೧೧೨). [ಸರಿ$_5$ + ಕಾಳಿಗ]

ಸರಿಗೂಡು (ಕ್ರಿ). ೧. ಚೆನ್ನಾಗಿ ಬೆರೆ, – ಹೊಂದಿಕೊಳ್ಳು : ಕೊನೆವನಿ ಸೂಸೆ ಸಣ್ಣವನಿ ಕೆಂದಳದೊಳ್ ಸರಿಗೂಡೆ . . . ಸುಜ್ಜಿಸುಜ್ಜಿನೆ ಪಥಿಕಾಳಿ ಪೀರ್ದು ಪಡೆಗುಂ ಪರಿತೃಪ್ತಿಗಳಂ ನಿರಂತರಂ (ಸೂಕ್ತಿಸು. ೪-೮೨). ೨. ಚೆನ್ನಾಗಿ ಬೆರಸು, – ಕಲಸು : ಬಳಿಯ ಸೊಜ್ಜಿಗೆಯ ಹುಡಿ ಬೀಸಿದಕ್ಕಿಯ ಹಿಟ್ಟುಗಳನು ಸೋದಿಸಿಯವಂ ಸರಿಗೂ [ಪಾಠಾಂ. ಮಾ]ಡಿ ಬಿಸಿಯುದಕದೊಳು ಕದಡಿ (ಸೂಪಶಾ. ೧-೪೨). [ಸರಿ$_5$ + ಕೂಡು$_1$]

ಸರಿಗೆ (ನಾ). ೧. ಚಿನ್ನ, ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿದ ತೆಳುವಾದ ತಂತಿ ; ಕಂಬಿ : ಸರಿಗೆಯೊಳ್ ಸಮದಕ್ಷಮಾಲಿಕೆ ಪೊನ್ನ ಮುಂಜಿ . . . ಕರಮೊಡಂಬಡೆ ನೋಟಕರ್ಕಳನಾ ತಪಸ್ಸಿ ಮರುಳ್ಮಿದಂ (ಪಂಂಚಭಾ. ೬-೮) ; ಒಂದು ತಂಬೂರಿಯಲ್ಲಿ ಎಳೆದು ಕಟ್ಟಿರುವ ಸರಿಗೆಯನ್ನು ಮಿಟಿದೊಡನೆ ಸ್ವರ ಉಂಟಾಗುವುದಿಲ್ಲವೆ? (ಎಜ್ಞಾವಿ. ೨). ೨. ಚಿನ್ನ ಅಥವಾ ಬೆಳ್ಳಿಯ ದಾರ ; ಜರಿ ; ಜರತಾರಿ : ಸರಿಗೆಯ ಪಟ್ಟೆಯ ಮಡಿಯನುಟ್ಟು (ಸಾಗಂಧಿ. ೧೯೯-೧೬) ; ಸರಿಗೆಪಂಚೆಯನುಟ್ಟು ಬೆರಳಿಗುಂಗುರವಿಟ್ಟು ಸರಿಯವರ ಕೂಡೆ ಬರುವಾಗ (ಪಮಪ. ೨೩). ೩. ನೂಲು ; ಎಳೆ ; ದಾರ : ಕರಗಿರ್ದಪುವೋ ತರದಿಂದರಗಿನ ಸರಿಗೆಗಳಿವಲ್ಲವಾನೆಯ ನೆತ್ರರ್ ಪೊರೆದಿರ್ಪುವೊ ಸಿಂಹದ ಕೇಸರಂಗಳೆನಲೊಗೆದವರುಣತರಣಿಕರಂಗಳ್ (ಕಾದಂಪೂ. ೧೪೦); ಉಂಕಿಯ ನಿಗುಚಿ ಸರಿಗೆಯ ಸಮಗೊಳಿಸಿ ಸಮಗಾಲನಿಕ್ಕಿ ಅಣಿಯೊಳು ಎಳ ಮೆಟ್ಟಿದೆ (ಡೀದಾವ. ೭೦-೧೪೭). ೪. ಒಂದು ಬಗೆಯ ಕಂಠಾಭರಣ : ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ ಭೂಷಾನಿಕರಮನಾ ಭೂಷಣಾಂಗತರು ಕುಡುತಿರ್ದುಂ (ಆದಿಪು. ೫-೩೩); ವಾಗ್ದೇವಿಗೆ ಬಿತ್ತರದಿಂದ ಸಮೆದ ಮುತ್ತಿನ ಸರಿಗೆಯನನುಕರಿಪುವಲ್ತೆ ಬಲ್ಲಿಯ ಲಿಪಿತಂ (ಕ್ಷಾ. V. ೮-೩೧ : 1072) ; ಸರಿಗೆಗ ಕೊರಲ್ ಕೊರಲ್ಗುಂ ಸರಿಗೆಯಲಂಕರಿಸೆ ಸರಿಗೆವಂದುದು (ಕಾವ್ಯಾವ. ೬೫೯). ೫. ತೋಳಿಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ ; ತೋಳುಬಂದಿ : ಬಳ ತುಡಿಗೆಯಾಗಿಯುಂ ಸರಿಗೆಯಲ್ಲದಂತೆ (ಧರ್ಮಾಮೃ. ೧೧-೧೪೬); ನಳತೋಳ್ಗಳ್ ಮುತ್ತಿನ ಸರಿಗೆಯನಾಂತೆಸೆಯೆ ಕಾಂತೆ ಬಿಂಕಮನಾಂತಳ್ (ಜಗವಿ. ೧೦-೧೧೬). ೬. ಕಾಲಿನಲ್ಲಿ ಹಾಕಿಕೊಳ್ಳುವ ಒಂದು ಬಗೆಯ ಆಭರಣ : ಬಲಕಾಲಿನಲ್ಲಿ ಚಿನ್ನದ ಸರಿಗೆಯಿದ್ದಿತು (ಶ್ರೀರಾಮಾ. ೨೩೨); ಕಿವಿಯಲ್ಲಿಯೂ ಒಂಟಿ ಹೊಳೆಯುತ್ತಿದ್ದವು. ಒಂದು ಕಾಲಿನಲ್ಲಿ ಬೆಳ್ಳಿಯ ಸರಿಗೆಯೂ ಇತ್ತು (ಮಲಮ. ೧೩೮). [ದೇ. ತಮಿ. ಚರಿಕೆ; ತುಳು. ಸರಿಗೆ, ಸರಿಯ. ../ತೆಲು. ಸರಿಕ, ಸರಿಗ, ಸರಿಗೆ./ ಮರಾ. ಸರೀ]

ಸರಿಗೆಗಂಕಣ (ನಾ). (ಚಿನ್ನದ) ತಂತಿಯಿಂದ ಮಾಡಿದ ಮುಂಗೈಕಡಗ : ಮೃಣಾಳನಾಳದೊಳ್ ಸಮದ ಸರಿಗೆಗಂಕಣಂಗಳುಮಂ (ಪಂಪಭಾ. ೫-೬ ವ).

[ಸರಿಗೆ + ಕಂಕಣ]

ಸರಿಗೆದೆಗೆ (ಕ್ರಿ). ಎಳೆಯನ್ನು ತೆಗೆ ; ನೂಲುತೆಗೆ : ಮನದೊಳಗೆ ಕಾಂತಿಯಂ ಸರಿಗೆದೆಗೆವಂದದಿಂ ಕೊನೆಮಿಂಚಿನೋಳ್ಕಾಂತಿಲತೆ ಹುಟ್ಟಿದಂದದಿಂ (ವೀರಶ. ಪ. ೪೭೩-೨೨) : ಹದಂಬಿತ್ತ ಕತ್ತುರಿಯನೆ ಸರಿಗೆದೆಗೆದಂತೆಸವ ಕೇಶಪಾಶದ ಪರಿಮಳದಿನವಂ ಪೊರೆದಪನೆಂಬಂತೆ . . . ತೋರದುಱುಂಬಿನೊಳ್ ತುಱುಂಬಿ (ಪಾರ್ಶ್ವಪು. ೧೨-೬ ವ); ಮಂಜುಲನೇತ್ರವಟ್ಟೆಯ ಸೀಳಿದಂತಪರಂಜಿ ಸರಿಗೆದೆಗೆದಂತೆ ಕಂದದ ಕಂಪನುಂಡೇೞ್ದ ತುಂಬಿಯ ಗಾನರಂಜನೆಯೆನೆ ರಾಗಿಸಿದರು (ಭರಚ. ೧೩-೩೭). [ಸರಿಗೆ + ತೆಗೆ$_1$]

ಸರಿಗೆಯ್ (ಕ್ರಿ). ಸರಿಗೊಳಿಸು ; ಸರಿಪಡಿಸು : ತಂದು ಕೋವಿಯ ತುಂಬಿ ಸರಿಗೆಯ್ದನೆಲ್ಲಂ (ಕಾಲೂರ. ೮೪-೧೬೦). [ಸರಿ$_5$ + ಕೆಯ್$_1$]

ಸರಿಗೆವಳ್ಳ (ನಾ). (?) : ಪೃಥುವಿಯೇ ಕಳನಾಗೆ ಸಮುದ್ರಮೇ ನೀರ್ಗ್ಗಾಡಿಗೆಯಾಗೆ ಜವಗ ಸರಿಗೆವಳ್ಳನಾಗೆ ಆದಿತ್ಯದ ಬಲಮೇ ಮಾಬಲಮಾಗೆ (ಎಕ. X. ಕೋಲಾರ. ೧೭೦-೧೩; 1180). [?]

ಸರಿಗೆವಾಳ (ನಾ). ಸುವರ್ಣಸೂತ್ರವುಳ್ಳವನು (?) : ವಿಚಿತ್ರಚಿತ್ರರಥದುನ್ನತಿಯಂ ಸಮಕಟ್ಟಿಕೊಂಡು ಸಾಧಿಸುವತಿದಕ್ಷಣಂ ಸರಿಗೆವಾಳಮೆನಿಪ್ಪ ನೆಗರ್ತೆ ಕೂಡೆ ಮಾಡಿಸಿದನ ದೊಂದುನಂದನಮನಾ ಸ್ಫಪನಂದನನೊಂದಿದಟ್ಕಱಿಂ (ವರ್ಧಮಾ. ೨-೧೩).

[ಸರಿಗೆ + - ವಾಳ್$_5$ (< – ವಳ)]

ಸರಿಗೆಳತಿ (ನಾ). ಸಮಪ್ರಾಯದ ಗೆಳತಿ ; ಓರಗೆಯವಳು : ಹರೆಯದ ಗಂಡನು ಸರದಾರನಾಗಿ ಹೋಗುತ್ತಿರುವ ಠೀವಿಯನ್ನು ನೋಡಿ ತನ್ನ ಸರಿಗೆಳತಿಯರಿಗೆ ಅವನನ್ನು ತೋರಿಸಿ ಹೆಮ್ಮೆಪಡುತ್ತ ನಡುಯೌವನದ ಮದದಿಯರು ನಿಂತಿದ್ದರು (ಚದನ. ೧೭೩).

[ಸರಿ$_5$ + ಗೆಳತಿ]

ಸರಿಗೊಳ್ (ಕ್ರಿ). ಅಳವಡು ; ಹೊಂದಿಕೆಯಾಗು : ಪಾವಿನ ಪೆಡೆಯಂತೆ ಸರಿಗೊಂಡ ಜಡೆಯುಂ . . . ಕೆಂದಾವರೆಯಂತೆ ಬಣ್ಣಮೊಂದಿದಡಿಯುಂ ಒಂದಱಮೇಲೊಂದ ಬ್ಜಮಂ ಪುಟ್ಟಿಪುವು (ಅದ್ಭುತ. ೮-೧೩). [ಸರಿ$_5$ + ಕೊಳ್$_1$]

ಸರಿಗೊಳಿಸು (ಕ್ರಿ). ೧. ಸರಿಪಡಿಸು ; ನೇರ್ಪಡಿಸು : ರಕ್ತದಲ್ಲಿ ಕಬ್ಬಿಣದ ಧಾತು ಕಡಿಮೆಯಾದರೆ ಅದನ್ನು ಸರಿಗೊಳಿಸಲು ಜರದಾಲುಹಣ್ಣು ಉತ್ತಮ (ಆಯುಸಾ. ೬೦).

೨. ಅಣಿಗೊಳಿಸು ; ಸಂವರಿಸು : ಸಾಯಕವ ಸರಿಗೊಳಿಸಿದರು ವಜ್ರಾಯುಧನ ಮೊಮ್ಮನ ರಥವ ನಿರ್ದಾಯದಲಿ ಮುತ್ತಿದರು ಕುರುಸೇನಾಮಹಾರಥರು (ಕುವ್ಯಾದ್ರೋ. ೫-೨೪). [ಸರಿಗೊಳ್ + - ಇಸು$_3$]

ಸರಿಜೀರು (ನಾ). [ಸಂಗೀತ] ಶುದ್ಧವಾದ ಶ್ರುತಿ : ತಂತಂತಿಯಾಗಿ ಸರಿಜೀರು ಹಿಡಿದಿಹುದು ನಿಮ್ಮ ಜೀವತಂತು (ಹೃದಸ. ೭೩-೧೫). [ಸರಿ$_5$ + ಜೀರು$_4$]

ಸರಿಜೋಡಿ (ನಾ). ಸರಿಸಮಾನ : ತಮ್ಮಸರಿಜೋಡಿ ಕೂಡುವ ಯೋಗ್ಯತೆ ಇಲ್ಲದವನು (ಮನಚಿ. ೧೦೪). [ಸರಿ$_5$ + ಜೊಡಿ$_1$]

ಸರಿತ$_1$ (ನಾ). ೧. ಸಮತಳ ; ಸಮತಟ್ಟು : ಅರಳಿಯ ಅಣೆಯೆಮ್ಮುದು ಅನಾದಿಕಾಲ ತೊಡಗಿ ಒಡದು ನೆಲಸರಿತವಾಗಿ ಹಾಳಾಗಿಯಿದ ಸಮ್ಮನ್ದ . . . ಕೆಜೆಯಾಗಿ ಕಟಿಸಿ (ಎಕ. X. ಮುಳಬಾ. ೭-೫ ; 1417) ; ಧೂಳ್ಗೋಂಟೆಯಂ ಕೊಂಡು ನೆಲಸರಿತಮಂ ಮಾಡುತಿರಲು (ಚಿಬಪು. ೪೮-೮). ೨. ಸನಿಹ ; ಸಮೀಪ : ಸರಿತದಲು ದಾರಿಯಲು ನಟ್ಟ ಕಲ್ಲು (ಎಕ. VIII. ತೀರ್ಥಹ. ೧೭೬-೨೬ ; 1415) ; ದೇವಾಲ್ಯದ ಮೂಡಲ ಬಾಗಿಲ ಸರಿತಕ್ಕೆ . . . [ತಂ]ಕಣ ಮಡಿಲ ಸರಿತದಿಂದ ಬಡಗಣ ಅಗಳನೂ ಪಡುವ ಕೇರ್ಕಿ ಹಲರು ತುಂಬಿಸಿಕೊಡುವರು (ಸೌಇ. IX-ii. ೪೫೭-೩೬ ; 1455) ; ಸರಿತದೊಳಿದ್ದ ಕಟಕದತ್ತ ನೋಡುತೆಲ್ಲರು ನುಡಿವುತ ಬರುತಿಹರು (ಭರಚಿ. ೪೫-೪೩). ೩. ನೀಳ ; ನೇರ : ಗುರುಹಂಸನಾಥಾಯ ಸ್ವಾಹಾಯೆಂದನು ಕೂಡೆ ಸರಿತವಾಗಿದ್ದುದಾ ಬೆರಳು (ಭರಚಿ. ೪೯-೧೨೮). [ಸರಿ$_5$ + - ತ$_2$/ತುಳು. ಸರುತ, ಸರೂತ = ನೇರವಾದ]

ಸರಿತ$_2$ (ನಾ). ಚುರುಕು ; ವೇಗ : ಸರಿತ ಮಾಡಿದನು ತಾನೇಱಿದ ಮರುತಮಾವೆರಳೆಯ ನಗುತ ಸಾಗಿದುದು (ಭರಚಿ. ೪೯-೨೪) ; ಅವನೀಶ ನೂಂಕಿದ ಸರಿತದೊಳಲ್ಪದೂರವ ಸಾಗಿ ನಿಂದಿತಾ ಚಕ್ರ (ಭರಚಿ. ೫೧-೧೧೪). [< ಪ್ರಾ. ಸರತ್ತಿ]

ಸರಿತರ್ (ಕ್ರಿ). ಸರಿಯೆಂದು ಒಪ್ಪಿಕೊಳ್ಳು, — ಸ್ವೀಕರಿಸು : ಈ ಕಾರ್ಯಾರ್ಥದಿರವ ಬಿನ್ನವಿಸಿದೆಂ ಚಿತ್ತಕ್ಕೆ ಸರಿತಂದುಕೊಳ್ಳಿಂ (ಚಿಬಪು. ೭-೨೩). [ಸರಿ$_5$ + ತರ್]

ಸರಿತುಪತಿ (ನಾ). ನದಿಗಳ ಒಡೆಯ ; ಸಮುದ್ರ : ಆ ಹರಿಯ ಮೈದುನ . . . ಸರಿತುಪತಿತಡವಿಡಿದು ಗೋವೆಯ ಪರಿಹರಿಸಿ ಬರಲಾಯ್ತು ಮೇಳದ ವರಸಮೂಹದ ಮೇಳವನು ನೋಡುತ್ತ ನಡೆತಂದ (ಸಂಭಪ. ೩೬-೪೦). [< ಸಂ. ಸರಿತ್ಪತಿ]

ಸರಿತೂಕ 'ಸರಿದೂಕ' ನೋ.

ಸರಿತೂಗಿಸು 'ಸರಿದೂಗಿಸು' ನೋ.

ಸರಿತೂಗು 'ಸರಿದೂಗು' ನೋ.

ಸರಿತ್ಕುಲ (ನಾ). ನದಿಗಳ ಸಮೂಹ : ಅಚ್ಚು ಮಹಾಸಮುದ್ರವೆ ಆಯ್ತು ಗಾಲಿಗೆ ಬೇಱೆ ತರಲೇಕೆ ಆ ಸಸಿಯ ಸೂರಿಯನ ಮಂಡಲವೈಸಲೇ ಗಂಗಾದಿ ಸಕಲ ಮಹಾಸರಿತ್ಕುಲವಾಯ್ತು ಚಮರಗ್ರಾಹಿಣಿಯರಲ್ಲಿ (ಕುವ್ಯಾಕ. ೭-೩). [ಸಂ.]

ಸರಿತ್ಪತಿ (ನಾ). ನದಿಗಳ ಒಡೆಯ ; ಕಡಲು ; ಸಮುದ್ರ : ಆಯತ್ತಸರಿತ್ಪತಿ ಮಹಿಮೆಗಂ ಏಕೀಕೃತಧರಾಧಿಪಾಭಿರಾಮತೆಗಂ . . . ತಾನೊರ್ವನೆ ನಿರುಪಮ ಜನ್ಮಭೂಮಿಯಾಗಿ (ಶಾಂತಿಪು. ೩-೪೯ ವ) ; ಶ್ರೀಪತಿಗೆ ಸೊಬಗಂ . . . ಸರಿತ್ಪ [ಪಾಠಾಂ. ಸರಸ್ಸ, ಶರಧಿಪ]ತಿಗೆ ಗಂಭೀರತೆಯನು ಸ್ವಾಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ (ಪಚಕಾ. ೧-೧).

[ಸಂ.]

ಸರಿತ್ಸುತ (ನಾ). ಗಂಗೆಯ ಮಗ ; ಭೀಷ್ಮ : ಬಂಡಣದೊಳೆನ್ನನೋಡಿಸಿಕೊಂಡುಯ್ದಂ ನಿನ್ನನಾ ಸರಿತ್ಸುತಂ (ಪಂಪಭಾ. ೧-೬೬). [ಸಂ.]

ಸರಿದಟ್ಟ (ನಾ). ಸಮಾನವಾದ ದಪ್ಪ, — ಮಂದ : ಆ ನುಣ್ಣನೆಯ ಹಿಟ್ಟನಂಗಯ್ಯ ಸರಿದಟ್ಟದೊಳು ತಣ್ಣಱಿದು ಮಡಗಿಯೆಮ್ಮೆಯ ಬೆಣ್ಣೆಯಂ ಕಾಸಿ ಬೇಯಿಸೆ ಸಮುದ್ರ ಫೇನ (ಸೂಪಶಾ. ೧-೨೩). [ಸರಿ$_5$ + ದಟ್ಟ$_1$]

ಸರಿದಧಿಪತಿ (ನಾ). = ಸರಿತ್ಪತಿ : ಸರಿದಧಿಪತಿಯಂ ದೋಷಾಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ (ಕವಿಗಾ. ೩-೩೫) ; ಸರಿದಧಿಪತಿ ಮೊಟಕಾಲ್ಬರಮುರಂಬರಂ ಮೇರು ಮುಯ್ಯುವರೆಗಮಚಾಂಡಂ ಬರೆ ತಲೆಯ ನೆಲೆಗೆ ಲೋಕಾಂತರಮೆಡೆಯಲ್ಲೆನಿಸೆ ಪೆರ್ಚಿದಂ ದನುತನಯಂ (ಪಂಪಭಾ. ೧೨-೧೧). [ಸಂ.]

ಸರಿದಲೆ (ನಾ). ತಲೆಗೆ ಸರಿಯಾಗಿ ಹೊಂದಿಕೊಳ್ಳುವಂತಹುದು : ಅರದಲೆಯು ಮೂಡಲೊಳು ಹೊಱೆದಲೆಯು ಬಡಗಲೊಳು ಸರಿದಲೆಯುದ್ದ ಪಡುವಲೊಳು ತೆಂಕಲಲಿ ಬಱೆದಲೆಯಲಿಹರು (ಸರ್ವಜ್ಞ. ೧೭೧೬). [ಸರಿ$_5$ + ತಲೆ$_1$]

ಸರಿದೂಕ, ಸರಿತೂಕ (ನಾ). ೧. ಸಮದರ್ಜೆ ; ಸಮಾನವಾದ ಯೋಗ್ಯತೆ : ಅವರು ಅರಿಕೇಸರಿಯ ಸರಿದೂಕದವರಲ್ಲವೆಂಬುದು ತಾನಾಗಿ ತಿಳಿದುಬರುತ್ತಿದೆ (ನಾಡೋಜ. ೩೫). **ಸರಿತೂಕ** : ೧. ತ್ರಿದಶರಿಗೆ ಸರಿತೂಕ ಸಾಮರ್ಥ್ಯದಲಿ (ಕುವ್ಯಾಸ. ೮-೧೫) ; ಹುಡುಗ . . . ಈಗಲೇ ಪ್ರಸಿದ್ಧ ಅರ್ಥಧಾರಿಗಳಾದ ನಾರಾಯಣ ಶಾಸ್ತ್ರಿಗಳ ಸರಿತೂಕಕ್ಕೆ ಬರುತ್ತಾ ಇದ್ದಾನೆ (ತ್ರಾಗಮ. ೫). ೨. ಸಮವಾದ ತೂಕ, — ಭಾರ : ಶ್ರೀಕೃಷ್ಣನ ಸರಿತೂಕ ಬಂಗಾರ ಕೊಡುವುದಾಗಿ ಹೇಳಿ (ಕರ್ನಾಕ. ೨೮೮).

[ಸರಿ$_5$ + ತೂಕ]

ಸರಿದೂಗಿಸು, ಸರಿತೂಗಿಸು (ಕ್ರಿ). ೧. ಸಮತೋಲವಾಗಿಡು ; ಸಮತೂಕವಾಗಿಡು : ಕೀಟಗಳು . . . ಮೂರುಕಾಲುಗಳ ಮೇಲೆ ಶರೀರವನ್ನು ಸರಿದೂಗಿಸಿ ನಡೆಯುತ್ತವೆ (ಕೀಟಜೆ. ೧೬). ೨. ಕಡಮೆಯಾದುದನ್ನು ಭರ್ತಿಮಾಡು; ಸಮಗೊಳಿಸು : ಕೊನೆಯ ಅಕ್ಷರಗಳನ್ನು ಎಳೆದು ಹೇಳುವುದಕ್ಕಿಂತ ಅವುಗಳ ಮುಂದೆ ಸ್ವಲ್ಪ ಮೌನವನ್ನು ತಂದು ೫ ಮಾತ್ರೆಯ ಕಾಲಕ್ಕೆ ಸರಿದೂಗಿಸುವುದೇ ಉತ್ತಮ (ಸಮಾಲೋ. ೨೧೪). **ಸರಿತೂಗಿಸು** : ೩. ಸರಿಯಾಗಿ ಹೊಂದಿಸು ; ನಿಭಾಯಿಸು : ಆ ವೆಚ್ಚವನ್ನು ಸರಿತೂಗಿಸುವಷ್ಟು ಆಸ್ತಿ ಅವಳ ಬಳಿ ಇಲ್ಲದಿದ್ದ ಪಕ್ಷಕ್ಕೆ, ಅದನ್ನೆಲ್ಲ ಸರಕಾರದ ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು (ಪುನರು. ೧೧೧). [ಸರಿದೂಗು + - ಇಸು$_3$]

ಸರಿದೂಗು, ಸರಿತೂಗು (ಕ್ರಿ). ೧. ಸಮಾನವೆಂದು ಭಾವಿಸು : ಎಲವೊ ಕರ್ಣದುರಾತ್ಮ ನಿನ್ನೊಡನೆ ನರನ ಸರಿದೂಗುವರೆ (ಕುವ್ಯಾಕ. ೯-೨೫). ೨. ಸರಿಯಾಗಿ ಹೊಂದು ; ಅಳವಡು : ನಮ್ಮ ನಮ್ಮ ಜಮ-ಖರ್ಚಿನ ಪುಸ್ತಕದಲ್ಲಿ ಲೆಕ್ಕಾಚಾರ ಸರಿದೂಗಿರುತ್ತದೆ! (ವೀರಯೋ. ೫೭). **ಸರಿತೂಗು** : ೩. ಸಮಾನವಾಗು ; ಸಾಟಿಯಾಗು : ಏನು ಮಾಡಿದರೂ ಅವರು ಭೀಮಸೇನನೊಡನೆ ಸರಿತೂಗಲಾರದೆ ಹೋದರು (ವಚಭಾ. ೧೬) ; ದಟ್ಟವಾದ ಕಾಡಾದರೂ . . . ನಾವು ಹಿಂದಿನ ದಿನ ಹೊಕ್ಕಿದ್ದ ಕಾಡಿಗೆ ಸರಿತೂಗುವುದಲ್ಲ (ಹಸುಹೊ. ೧೯೮). [ಸರಿ$_5$ + ತೂಗು$_1$ (< ತೂಂಕು$_1$)]

ಸರಿದೆ (ನಾ). ಪ್ರವಾಹ (?) : ಕೊಟಗೆ ನೀರುಸರಿದೆಯಲೂ (ಸೌಇ. ೧೯೩೪. ಪುಂಗನೂರು. ೧೫೬-೧೮ ; 1419). [< ಸಂ. ಸರಿತ್?]

ಸರಿದೊರೆ (ನಾ). ೧. ಸರಿಜೋಡಿ ; ಸರಿಸಮಾನ : ಅರಿಕೇಸರಿಯನೆ ನೆಗಟ್ಟುಮರಾತಿಯ ಸರಿದೊರೆಗಂ ಬಂದೆನಪ್ಪೊಡಾಗಳ್ ನಗಿರೇ (ಪಂಪಭಾ. ೧೨-೧೩೨) ; ಭೂವಳಯದೊಳದಟರೊಳರೆ ಸರಿದೊರೆಗೆ ವರಲ್ (ನೇಮಿಪು. ೧೧-೧೧೯) ; ಅದಾವ ಋಷಿ ಧರ್ಮಜಗೆ ಸರಿದೊರೆ (ಕುವ್ಯಾಅ. ೬ರಾ. ೩-೧೪). ೨. ಸಮಾನವಾದ ವ್ಯಕ್ತಿ ; ಸರಿಕ : ಧರೆಯೊಳಾತನ ಮಾತೇಕೆಂದು ನಮ್ಮನು ಸರಿದೊರೆ ನಗುವಂತಾಯ್ತು (ಕಂನವಿ. ೧೭-೬೭). [ಸರಿ$_5$ + ದೊರೆ$_2$]

ಸರಿದೊರೆಯ (ನಾ). = ಸರಿದೊರೆ ೨ : ಎನ್ನ ಸರಿದೊರೆಯನೊಡನೆ ಸಮಸಲ್ಪ ಮದುವೆಯೆನೆ ಸಲ್ಲದಂಜಿಕೆಪಟ್ಟು ಸೆಡೆಯೆ ನಾನೆ (ಬದ್ಧಪ್ರ. ೪೭-೧೦೩೨).

[ಸರಿ$_5$ + ದೊರೆಯ]

ಸರಿದೋರು (ಕ್ರಿ). ಸರಿಯೆನಿಸು ; ಯೋಗ್ಯವೆಂದು ತೋರು : ಜಾನಕಮ್ಮನಿಗೆ ತಂದೆ ಮಗನ ಅಪೇಕ್ಷೆ ಸರಿದೋರಲಿಲ್ಲ (ದೂಚಿಟ್ಟು. ೨೪).

[ಸರಿ$_5$ + ತೋರು (< ತೋಱು)]

ಸರಿದ್ವರ (ನಾ). = ಸರಿತ್ಪತಿ : ಸರಿದ್ವರನಂತೆ ರತ್ನಾಕರಂ ದಿವಾಕರನಂತೆ ನಿರ್ದೋಷಂ . . . ಎಂದು ಧರ್ಮಜನ ಧರೆ ಪೊಗಳುತಿರೆ (ಚೈಮಿಭಾ. ೨-೧೩). [ಸಂ. ಸರಿದ್ವರಾ]

ಸರಿನೂಲು (ನಾ). ಚಿನ್ನದ ಸೂತ್ರ, — ಎಳೆ : ದೃಢಭಾವವೇ ತಕ್ಕವೆಡೆಗುಡದೆ ಬಲಿತವನ ನಡೆನುಡಿಯ ಬಗೆದ ಸರಿನೂಲಿನಂತೆ ಮೃಡನೊಳು ತೊಡಂಕಿ ಬಿಡದಡರ್ದುದು (ಸಾನಂಚ. ೧-೬೯). [ಸರಿ$_5$ + ನೂಲು$_2$ (< ನೂಲ್$_2$)]

ಸರಿನೇಣು (ನಾ). (ಎಳೆದರೆ ಬಿಗಿದುಕೊಳ್ಳುವ) ಸರಗಂಟಿರುವ ಹಗ್ಗ ; ಸರಿಗುಣಿಕೆಯ ಹಗ್ಗ : ಉಗಿವ ಸರಿನೇಣುಗಳ ಕೈಗುಂಡುಗಳ ಕವಣಯ ಲೌಡಿ

ಕರವಾಳುಗಳ ಜೋಡಿಸಿ ಜೋದರಡರಿದರಂದು ಬೊಬ್ಬಿಱಿದು (ಕುವ್ಯಾದ್ರೋ. ೩-೫).

[ಸರಿ$_1$ + ನೇಣು (< ನೇಣ್$_1$)]

ಸರಿನೋಡು (ಕ್ರಿ). ೧. ಪರೀಕ್ಷಿಸಿ ನೋಡು ; ಒರೆಹಚ್ಚಿ ನೋಡು : ಅಮರ್ದಿನಿದನಿದಱಿನಿದನೆಲೆಯಮರರೆ ಸರಿನೋಳ್ಪುದು (ರಾಜಶೇ. ೨-೪೮). ೨. ಮೇಲ್ವಿಚಾರಣೆ ಮಾಡು ; ಪರಿಶೀಲಿಸು : (ಕ). [ಸರಿ$_5$ + ನೋಡು]

ಸರಿನ್ನಾಥ (ನಾ). ೧. = ಸರಿತ್ಪತಿ : ಅಕೃತ್ರಿಮಚೈತ್ಯಾಲಯಂಗಳನಖಿಲಜಗತ್ಪಾವನ ಸರಸ್ವರಸೀಸರಿನ್ನಾಥತೀರ್ಥಜಲಂಗಳಿಂದಂ . . . ಅರ್ಚಿಸಿ (ಆದಿಪು. ೨-೩೨ ವ). ೨. ವರುಣ: ಅಮರನಾಥ ಮಹಿಷನಾಥ ಸರಿನ್ನಾಥ ಧನನಾಥಸನಾಥಮಪ್ಪ ದಿಕ್ಪಾಲರ ಕೇಳೀಪ್ರಾಸಾದಂಗಳಿಂದಂ (ಅಜಿಪು. ೭-೨೦ ವ). [ಸಂ.]

ಸರಿಪಡಿಸು (ಕ್ರಿ). ತಿದ್ದು ; ನೇರ್ಪಡಿಸು : ಈ ನ್ಯೂನತೆಯನ್ನು ಸರಿಪಡಿಸಲು ಊಟಮಾಡುವವರೇ ಇಕ್ಕಿಕೊಳ್ಳುವುದು ಒಳ್ಳೆಯ ದಾರಿ (ಅಡುಸಾ. ೧೨೦) ; ತಪ್ಪನ್ನು ಸರಿಪಡಿಸುವುದಕ್ಕಾಗಿ ನಾನು ಹಿಂದಿನದೆಲ್ಲ ನೆನಸಿಕೊಳ್ಳುತ್ತಿದ್ದೇನೆ (ಪುನರು. ೧೯೬).

[ಸರಿ$_5$ + ಪಡು$_1$ + - ಇಸು$_3$]

ಸರಿಪಾಲು (ನಾ). ಸಮವಾದ ಭಾಗ : ಅಱುತಂಗೆ ಅಱುವತ್ತು ಮಱುತಂಗೆ ಮೂವತ್ತು ಬರೆವಂಗೆ ರಾಜ್ಯ ಸರಿಪಾಲು (ಸರ್ವಜ್ಞ. ೯೮೫) ; ಇಬ್ಬರಿಗೂ ತೆನೆಯಲ್ಲಿ ಸರಿಪಾಲು ಬರಬೇಕಲ್ಲವೆ? (ಕಪಪು. ೨-೫೪). [ಸರಿ$_5$ + ಪಾಲು$_2$ (< ಪಾಲ್$_2$)]

ಸರಿಬರ್ 'ಸರಿವರ್' ನೋ.

ಸರಿಬರಿ, ಸರಿವರಿ (ನಾ). ಸಮಾನ ; ಸರಿಜೋಡಿ : ಮಹಾಹವವೀಗ ಸರಿಬರಿಯಾಯ್ತು ಬಂದುದು ವಾಸಿಯೆಂದಿರೆಲೆ (ಕುಮಾಕ. ೨೨-೪೨) ; ಒಂದೆರಡಾಟವ ರಾಯಗೆಲಿದ ಮತ್ತೊಂದಾಟ ಸರಿಬರಿಯಾಯ್ತು (ನಾಗಚಂ. ೯-೧೦೮) ; ತಗುಳುಮಗುಳಾಗಿ ತಾಗುವರೊಮ್ಮೆ ಸರಿಬರಿಯೊಳು ತಿದ್ದಿ ತುಡುಕುವರೊಮ್ಮೆ (ಚೈಮಿಭಾ. ೨೨-೨೯). ಸರಿವರಿ : ಹರಿಣಾಕ್ಷಿ ಕೇಳಾ ಮಗಳ ಯೋಗಕ್ಷೇಮವು ಸರಿವರಿಯಾಗಿಹುದು (ಜಿನಾ. ೮-೯೬).

[< ಪ್ರಾ. ಸರಿಭರೀ]

ಸರಿಬರು 'ಸರಿವರ್' ನೋ.

ಸರಿಬಿತ್ತರಿ (ನಾ). ಮಲ್ಲಯುದ್ಧದ ಒಂದು ಪಟ್ಟು, – ವರಸೆ : ಭುಜದಂಡಗಳಿಂದ ಒಬ್ಬರಿಗೊಬ್ಬರು ಸುತ್ತಿಕೊಂಡು ಸರಿಬಿತ್ತರಿಗಳಿಗೆ ಹೊಕ್ಕು ಮತ್ಸರದಿಂದ ಭೂಮಿಯಲ್ಲಿ ಕೆಡಹಿಸಿ (ಕ್ರಿವಾಸ. ೩೯). [← ತೆಲು. ಸರಿಬಿತ್ತರಮು]

ಸರಿಬೀಳು (ಕ್ರಿ). ೧. ಯೋಗ್ಯವಾಗು ; ಉಚಿತವಾಗು : (ಕ). ೨. ಏಕಕಾಲದಲ್ಲಿ ನಡೆ, – ಸಂಭವಿಸು : (ಕ). ೩. ಒಪ್ಪಿಗೆಯಾಗು ; ಸರಿಯೆಂದು ತೋರು : ಅವರ ಕಾಲದ ನಡತೆಗಳೆಲ್ಲ ಈಗ ನಮಗೆ ಸರಿಬೀಳವು (ಮುಂಬಯಿ. ೪-೧೯೦); ಪದ್ಮಕ್ಕನನ್ನು . . . ಕೋಣೆಯಲ್ಲೆ ಇರುವಂತೆ ಒತ್ತಾಯಿಸಿದೆ. ಆಕೆಗದು ಸರಿಬೀಳಲಿಲ್ಲ (ದೇವಹೊ. ೮೬).

[ಸರಿ$_5$ + ಬೀಳು$_1$ (< ಬೀಟ್ಟು$_1$)]

ಸರಿಬೆಸ$_1$ (ನಾ). ಸಮಸಂಖ್ಯೆಯ ಹಾಗೂ ಅಸಮಸಂಖ್ಯೆಯ ಹುಣಿಸೆಬೀಜ, ಅಡಿಕೆ ಅಥವಾ ಹಣವನ್ನು ಇಟ್ಟುಕೊಂಡು ಆಡುವ ಒಂದು ಬಗೆಯ ಜೂಜಾಟ : ಲೆತ್ತ ಪಗಡೆ ರಾಯಬೊಗರಿ ಸೊಲ್ಲೆಹ ಬಾರುಗುತ್ತದೊಪ್ಪಿಯ ಸರಿಬೆಸದಿ ವಿತ್ತನಾಶವ ಮಾಡುವ ಜೂಜುಗಾಱರ ಮೊತ್ತವಿರ್ದುದು ಮನೆಮನೆಗೆ (ಮೋಹತ. ೨೦-೨೫) ; ಸರಿಬೆಸದಾಟಮನೇಂ ಕೇಸರಿಯೊಡನಾಡಿದರುಮೊಳದೆ (ವೃಷವಿ. ೧೩-೩೨); ಜೀವರತ್ನಗಳಿಂದ ಸರಿಬೆಸಗಳಾಡುವರು (ಮಲ್ಲಾರಿ. ೪-೧೩).

[ಸರಿ$_5$ + ಬೆಸ$_2$. / ತೆಲು. ಸರಿಬೇಸುಲು = ಒಂದು ಬಗೆಯ ಮಕ್ಕಳ ಆಟ]

ಸರಿಬೆಸ$_2$ (ನಾ). (?) : ತುರಗದುರವಣೆಯ . . . ಹರಿದು ಸರಿಬೆಸನಾಗಿ ಖಂಡಿಸುತೆ (ಇಹರ. ದೇ. ೪೨-೧೭) ; ಕೂರಸಿಯಿಂ ತಲೆ ಪಾಱಿ ಬೀಳ್ವೆನಂ ಸರಿಬೆಸನಾಗಿ ಪೊಯ್ದೆ (ಗಿರಿಕ. ೬-೭೧) ; ಕಮ್ಮಕಮ್ಮಗೆ ಕಂಪು ಸರಿಬೆಸನಾಗಿ ತೆಗೆದ ಕಂಗಳ ಸುರರಾಲಿಸಿದರೆ ದೃಷ್ಟಿ ಮುಗುಳ್ವಂತೆ ರಾಗದೋಱಿದರು (ಭರಚ. ೧೩-೩೨). [?]

ಸರಿಭಾಗ (ನಾ). = ಸರಿಪಾಲ್ : ಆ ಗಿರೀಂದ್ರನಿವಾಸಿಗಳ ಸರಿಭಾಗಧನವನು ಕೊಂಡು ಬಳಿಕ ಮಹಾಗಜಾಶ್ವನ ಸೂಱೆಗೊಂಡನು (ಕುವ್ಯಾಸ. ೩-೨೪) ; ಆಯಗಳ ತಿದ್ದಿ ರಾಯರಿಗೆ ಸರಿಭಾಗ ಗೂಡೆಯಿಂದಳೆದಿತ್ತು (ನವಮೋ. ೨-೪೨). [ಸರಿ$_5$ + ಭಾಗ]

ಸರಿಮಳೆ 'ಸರಿವಟೆ' ನೋ.

ಸರಿಮಳೆಗಱೆ 'ಸರಿವಳೆಗಱೆ' ನೋ.

ಸರಿಮಾತು (ನಾ). ನೇರವಾದ ಮಾತು : ಅಱಿಯದೂರೊಳಗೆ ಇರ ಹೊಲ್ಲ ದೊರೆಗಳಿಗೆ ಸರಿಮಾತು ಹೊಲ್ಲ (ಸರ್ವಜ್ಞ. ೭೨೩). [ಸರಿ$_5$ + ಮಾತು$_1$]

ಸರಿಮಿಗಿಲ್, ಸರಿಮಿಗಿಲು (ನಾ). ೧. ಒಂದು ವಸ್ತುವಿಗಿಂತ ಮತ್ತೊಂದು ವಸ್ತು ಅಥವಾ ಒಬ್ಬ ವ್ಯಕ್ತಿಗಿಂತ ಮತ್ತೊಬ್ಬನು ಮೇಲಾಗಿರುವುದು : ನಾನಾವಿಧಾನದಲೊದಗಿ ಸರಿಮಿಗಿಲೆನಿಸಿದನು ಭೀಷ್ಮ (ಕುವ್ಯಾಧೀ. ೯-೪೫) ; ಆರು ಹೀನೋತ್ತಮರು ಸರಿಮಿಗಿಲಾರು ಸತ್ವದೊಳು (ತೊರರಾ. ೧-೧೩-೧೪) ; ಚಳಚಳಿಕೆಯಿಂದ ಸಲೆಸಂದು ಕಾದಿದರೊಮ್ಮೆ ಸಾತ್ಯಕಿ ಸುಧನ್ವರೋರೊರ್ವರ್ಗೆ ಸರಿಮಿಗಿಲೆನೆ (ಚೈಮಿಭಾ. ೧೨-೪೮). ಸರಿಮಿಗಿಲು : ೧. ಜಗದೊಳಪಾಂಸುಲೆಯರ ಚರಿತಕೆ ಸರಿಮಿಗಿಲಿಲ್ಲ ಮಿಕ್ಕ ಧರ್ಮದೊಳು (ಹರಿಪಾ. ೨-೨೦). ೨. ಅತಿಶಯ ; ಹೆಚ್ಚುಗಾರಿಕೆ : ರತಿಗಲಗಣಸುರಂಭೆಗೆ ಸರಿಮಿಗಿಲು ಭಾರತಿಗೆಕ್ಕತಕ್ಕೆ ಸುರಪನ ಸತಿಗೆ ಹೊಯ್ಯಯ್ಯೆನಲಾ ಸುರುತಾಳನ ಸುತೆ ಮೆಱೆದಳು ಚೆಲ್ವಿನಿಂದ (ಕುರಾಸಾಂ. ೧೭-೩೭). [ಸರಿ$_5$ + ಮಿಗಿಲ್]

ಸರಿಮಿಗಿಲು 'ಸರಿಮಿಗಿಲ್' ನೋ.

ಸರಿಯಾಳು (ನಾ). ಸಮಾನಯೋಗ್ಯತೆಯುಳ್ಳ ವೀರ ; ಸರಿಬಂಟ : ಅಳುತನದ ದೊಂಬರತನ ಸರಿಯಾಳಿನಲಿ ಸೆಣಸಾಡೊಳ್ಳಿತು (ಕುವ್ಯಾದ್ರೋ. ೧-೨೬).

[ಸರಿ$_5$ + ಆಳು$_3$ (< ಆಳ್$_3$)]

ಸರಿಯಿಕ್ಕು (ಕ್ರಿ). ಸಮಾನವೆಂದು ಪರಿಗಣಿಸು ; ಸರಿಗಟ್ಟು : ಲೆಕ್ಕಿಸಲು ಗಂಗಾಂಬಿಕೆಯ ವಸ್ತ್ರಕ್ಕೆ ಮೇಣಾವಂಬರಂ ಸರಿಯಿಕ್ಕಬಾರದು ಮೂಜಗದೊಳು (ಬಸಪು. ೧೧-೨೨).

[ಸರಿ$_5$ + ಇಕ್ಕು]

ಸರಿಯಿಡು (ಕ್ರಿ). = ಸರಿಯಿಕ್ಕು : ಧರೆಯೊಳಿಂತಪನ್ನದಾತರ ಸರಿಯಿಡುವರಾರಯ್ಯ (ಬಸಪು. ೨೪-೨೬). [ಸರಿ$_5$ + ಇಡು$_1$]

ಸರಿಯಿದಿರು (ನಾ). ಸಮಾನವಾದ ಪ್ರತಿಶಕ್ತಿ ; ಸರಿಜೋಡಿಯಾದ ವಿರೋಧಿ : ಹೊಗೆಯ ಹೊಯ್ಲಿನ ಚಂಡತರದೈನಕ್ಕೆ ಸರಿಯಿದಿರಿಲ್ಲವೆಂದನಲು . . . ಉದ್ದಂಡ ಭೂತ ವಿಪಿನಕೆ ನಡೆದುದು ಪಾಂಡವಾಶ್ರಮಕೆ (ಕುವ್ಯಾಅ. ೬ರಾ. ೨೫-೧೯).

[ಸರಿ$_5$ + ಇದಿರು (< ಇದಿರ್)]

ಸರಿಯಿಸು, ಜರಿಯಿಸು, ಜರಿಸು, ಸರಿಸು (ಕ್ರಿ). ೧. ಜರುಗಿಸು ; ಸರಿಯುವಂತೆ ಮಾಡು ; ಕದಲಿಸು : ಹಿಂಭಾಗಕ್ಕೆ ಕೋಲನ್ನು ಸರಿಯಿಸಿದರೆ ಭೂತಕಾಲದೆಡೆಗೆ ತೆರಳುವುದು (ಶಾಲಯಾ. ೧೧). ಜರಿಯಿಸು : ೨. ಕುಸಿಯುವಂತೆ ಮಾಡು ; ಕೆಡಹು : ನೆಲಗನ್ನದಿಂ ನೆಲವಕ್ಕೆ ಲಕ್ಕೆತೆಱದಿಂ ಕಾದುವರೆರ್ದೆ ಬಿಕ್ಕನೆ ಬಿರಿಯ ಕೋಂಟೆಯಂ ಜರಿಯಿಸಿಯುಂ (ಪಾರ್ಶ್ವಪು. ೩-೧೪೧ ವ). ಜರಿಸು : ೨. ಆನೆಯ ಹಿಂಡು . . . ಕುಣಿಯ ಮಗ್ಗುಲಿನ ಮಣ್ಣನ್ನು ತುಳಿದು, ಜರಿಸಿ, ಬಿದ್ದ ಆನೆಗೆ ಸೊಂಡಿಲು ಕೊಟ್ಟು, ಎಳೆದು, ಪಾರುಮಾಡಿಯೂ ಹೋಗಿದ್ದುವು (ಕುಡಿಕೂ. ೧೧೭). ೩. ಹೀಯಾಳಿಸು; ನಿಂದಿಸು : ಹೆತ್ತ ಮಾತಾಪಿತೃಗಳನು ಜರಿಸದಿರಿ (ಜಿನಾ. ೧೦-೨೮). ಸರಿಸು : ೧. ಲಕ್ಷ್ಯಣ ತೆರೆ ಸರಿಸುತ್ತಲಿದ್ದಾನೆ (ಸ್ವದರ್ಶ. ೩೩) ; ಸುರೇಶ . . . ಕಿಡಿಕಿಯ ಪಗದೆಯನ್ನು ಸರಿಸಿ ಹೊರಗೆ ನೋಡಿದ (ಆಚೋರೀ. ೮೭). ೪. ತಳ್ಳು ; ನೂಕು : ಕುರುಳ್ಗಳಂ ಸರಿಸು ಸ್ವೇದಮನೊರಸು (ಚಿಬಪು. ೧೦-೩೦). ೫. ಸೆಕ್ಕಿಸು ; ಅಳವಡಿಸು : ದಂತಿಗಳ ಹೆಗಲಲಿ ನಿಡುನೊಗನ ಕಟ್ಟಿದರು ಕಿವಿಯಲಿ ಕೀಲುಗಳ ಸರಿಸಿ ಜಡಿವ ಗುಳನನು ಹಾಯ್ಕಿ ಬೀಸಿದರು (ಕುವ್ಯಾದ್ರೋ. ೮-೪೫). [ಸರಿ$_1$ + - ಇಸು$_3$]

ಸರಿರ 'ಶರಿರ' ನೋ.

ಸರಿರಾಜ್ಯ (ನಾ). ಸಮಪಾಲು ರಾಜ್ಯ : ಅಱಿಯದವರೊಡನಾಡಿ ಸರಿರಾಜ್ಯವಾಳ್ವದಕಿಂದ [ಪಾಠಾಂ. ಸರಿಯಾಳುವದಕಿಂದ] ಆಟೋಕಿಯುಳ್ಳವರ ಒಡನಾಡಿ ಆಗಲು ಸೆಱೆಯಿಹುದೆ ಲೇಸು (ಸರ್ವಜ್ಞ. ೮೦೪). [ಸರಿ$_5$ + ರಾಜ್ಯ]

ಸರಿರಾತ್ರಿ (ನಾ). ನಟ್ಟಿರುಳು ; ಮಧ್ಯರಾತ್ರಿ : ಸರಿರಾತ್ರಿಯಾಗಿದ್ದರೂ . . . ಒಂದು ಪತ್ರವನ್ನು ಬರೆದಳು (ಹೂಬಸಿ. ೧೩) ; ಭಟ್ಟರು . . . ಮನೆ ತಲುಪಿದಾಗ ಸರಿರಾತ್ರಿಯಾಗಿ ಹೋಗಿತ್ತು (ಜೀವರಂ. ೪೦). [ಸರಿ$_5$ + ರಾತ್ರಿ]

ಸರಿಲ್ (ನಾ). ಒಂದು ಬಗೆಯ ಮಿಾನು : ಕೆಂಕಲ ಸರಿಲ್ [ಪಾಕಾಂ. ತ್]ಕೊಱವಂ . . . ಬನ್ನಮಿನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೫-೧೧೫). 'ನಿಲಿಲ್ಲು₂' ಪರಾ. [?]

ಸರಿಲ (ನಾ). ನೀರು ; ಸಲಿಲ : ಗಂಗಾಸರಿಲಶೀಕರದಿಂದ ಕೂಡಿರ್ದಂಥ ಮಾರುತನು . . . ಬೆಮರಿನ ಪರಿಕರವ ಪರಿಹರಿಸಿ (ರಘುವಂ. ೧೩-೨೦). [ಸಂ.]

ಸರಿಲಸುಕರಿತನ (ನಾ). ಸೇನಾಧಿಪತ್ಯ : ಪಿರಿದು ಸಂತೋಷದೆ ಪಾತ್ಸ್ಯವ್ವು ಖಾನಗೆ ಸರಿಲಸುಕರಿತನವಿತ್ತು ತುರಗದಳವ ಕೂಡಿ ಕೊಟ್ಟು ಕರ್ಣಾಟವನಿರದೆ ಸಾಧಿಸು ಹೋಗೆಂದ (ಕಂನವಿ. ೧೧-೬). [< ಸರಲಷ್ಕರ + - ತನ]

ಸರಿವದ್ದಿ (ನಾ). ಒಂದು ಬಗೆಯ ಆಟ : ಸರಿವದ್ದೀ ಚಿಣಿ ಚಂಡುಗಳಾಡುವ (ಶ್ರೀಕೃಪಾ. ೫೯). [?]

ಸರಿವರ್, ಸರಿಬರ್, ಸರಿಬರು (ಕ್ರಿ). ೧. ಸಮಾನವಾಗು ; ಸರಿಜೋಡಿಯಾಗು : ಯುವರಾಜಂ ಕಣ್ಗೊಳಿಸಿದನಿಂದ್ರನೊಳುಪೇಂದ್ರನೊಳ್ ಸರಿವರುತುಂ (ಚಂದ್ರಪ್ರ. ೪-೮೧) ; ಆಳಿಗಬ್ಬಗನೊರ್ವಂ ಮಂಜುಳಯುಕ್ತಿಯನೊಂದನೊಂದಿ ಸರಿವರ್ಪನೆಯರ್ಗಳ ಕವಿಗೆ ರನ್ನಮೊಂದಂ ತಳೆದಹಿ ರತ್ನಾಕರಕ್ಕೆ ಸರಿವಂದಪುದೇ (ರಾಜಶೇ. ೧-೨೪). **ಸರಿಬರ್** : ೧. ಭೂಗಗನಪಾತಾಳದರಮನೆಗಳದಱೊಡನೆ ತೂಗೆ ಸರಿಬಾರವು (ಚಿಬಪ್ರ. ೫-೩೨) ; ಕಂಡು ಬಲ್ಲವು ಕಾವನರಸಿಗೆ ಸರಿಬಪ್ಪ ಪುಂಡರೀಕಾಕ್ಷಿಯರುಗಳ (ಕಂನವಿ. ೧೦-೧೫) ; ಕಱುತ್ತೆಜಗಿದ ವಜ್ರಿಯ ವಜ್ರದ ಬಿಜುವೊಯ್ನ ರವಕ್ಕೆ ಬಜಸಿಡಿಲ್ ಸರಿಬರ್ಕುಂ (ರಾಜಶೇ. ೮-೧೦೫). ೨. ಒಪ್ಪಿಗೆಯಾಗು ; ಸರಿಬೀಳು : ಸರಿಬಂದವನ ಕಂಡೊಡೆ . . . ನೆಲೆಯಂತ ರಂಗವಿಡಿದು ಕೂಡಿದಲ್ಲದೆ ಪಿರಿದು ಸ್ಮೆರಿಸರು (ಕಂನವಿ. ೧೦-೨೮). **ಸರಿಬರು** : ೨. ನಿನಗೆ ಸರಿಬಂದದ್ದು ಮಾಡು (ಮುಂಬಾಯಿ. ೪-೨೦೦) ; ಇವನ ನಡೆಯು ಸತ್ಕೀರ್ತಿಯೆಂಬ ಒಬ್ಬ ವರ್ತಕನಿಗೆ ಸ್ವಲ್ಪವೂ ಸರಿಬಾರದಿದ್ದಿತು (ಕವಿಕ. ೧). ೩. (ಲೆಕ್ಕ ಮುಂತಾದವುಗಳಂತೆ) ತಪ್ಪಿಲ್ಲದಿರು ; ಸರಿಯಾಗು : ಈ ಲೆಕ್ಕ ಸರಿಬರುವವರೆಗೂ ಮಾಡು (ರೂಢಿ).

[ಸರಿ$_5$ + ಬರ್ (< ವರ್)]

ಸರಿವರಯ 'ಸರಿವರೆಯ' ನೋ.

ಸರಿವರಿ 'ಸರಿಬರಿ' ನೋ.

ಸರಿವರೆಯ, ಸರಿವರಯ, ಸರಿಹರೆಯ (ನಾ). ೧. ಸಮವಾದ ಪ್ರಾಯ ; ಓರಗೆ : ತನ್ನೊಡವೆರಸಿ ಧೂಳಾಟಗಳನಾಡುವ ಸರಿವರೆಯದಾ ಗೋಪಕುವರರ ಕೂಡಿಕೊಂಡು (ಸಾಳ್ವಭಾ. ೫೧-೪೭). ೨. ಪ್ರೌಢವಯಸ್ಸು : ಓದುಗರ ಇನ್ನೊಂದು ವರ್ಗ ಸರಿವರೆಯದವರದು ಹಾಗೂ ಕಿರಿಯರದು (ಸಂಶೋಧ. v, ೧೦೫). **ಸರಿವರಯ** : ೧. ಸ್ವಲ್ಪ ಗುಣ ಕಡಿಮೆ ಬಿದ್ದು ನಪಾಸಾಗಬೇಕು . . . ಸರಿವರಯದವರಲ್ಲಿ ನಾಚಿಕೆಗೇಡು (ಭೂಮಿತಾ. ೧೧). **ಸರಿಹರೆಯ** : ೧. ನನ್ನ ಸರಿಹರೆಯದ ರಮಣಿಯರು . . . ಚಿನ್ನ ಕನ್ನಡಿಯೆನಿಪ ಮಕ್ಕಳ ನೋಡಿ ಪಾಡುವರು (ಸಾಳ್ವಭಾ. ೩-೧೦).

[ಸರಿ$_5$ + ಪರಯ್$_2$ (< ಪರಯ)]

ಸರಿವಳೆ 'ಸರಿವಟ^3' ನೋ.

ಸರಿವಳೆಗಱೆ, ಸರಿಮಳೆಗಱೆ (ಕ್ರಿ). ಧಾರಾಕಾರವಾದ ಮಳೆಯನ್ನು ಸುರಿಸು : ವರಮಹಾರಥರಿರದೆ ತಾಗಿದರ್ ಕೂಗಿದರ್ ಸರಳ ಸರಿವಳೆಗಱೆವುತೆ (ಚಿಬಪ್ರ. ೪೦-೨೨). **ಸರಿಮಳೆಗಱೆ** : ಸುರದುಂದುಭಿಯ ಮೊಳಪಲರಲ ಸರಿಮಳೆಗಱೆಯಲುಜ್ಜುಗಿಸುವಮರರಿಂ (ಭಾವಚಿಂ. ೯-೨೯). [ಸರಿವಳೆ (< ಸರಿವಟ) + ಕಱೆ$_1$]

ಸರಿವಟ^3, ಸರಿಮಳೆ, ಸರಿವಳೆ (ನಾ). ಧಾರಾಕಾರವಾದ ಮಳೆ ; ಎಡೆಬಿಡದ ಮಳೆ : ಎಡೆಯುಡುಗದೆ ಖಿಚರರ ಬಿಲ್ವಡೆ ಕಡುಕೆಯ್ದಿಸುವ ಕಣ್ಗಳರ್ಕನ ತೇಜಂ ಕಿಡೆ ಹರಿಯ ಮೇಲೆ ಸುರಿದುವು ಬಡಬಾಗ್ನಿಯ ಮೇಲೆ ಸುರಿವ ಸರಿವಟೆಗಳವೋಲ್ (ಪಂರಾಮಾ. ೯-೬೧) ; ಪಯೋಧಾರಾರುತಿಯಿಂ ಪೊದಲ್ದು ಬೀಸುವ ಜಂಝಾಮಾರುತ ರುಚಿಯಿಂ ಭುವನಮದೋರಂತಿರೆ ಕಿವಿದುವಟ್ಟುದಾ ಸರಿವಟೆಯೊಳ್ (ಕುಸುಮಾ. ೬-೨೯) ; ಬೇಱೆಬೇಱೆ ಭಾವರಸದ ಸಿರಿಯ ಸರಿವಟೆಯ ಕುಡಿಮಿಂಚಿನ ಕುಡಿಗಳಂತೆ ನರ್ತಿಸುವ ಮೂವತ್ತಿರ್ದರ್ದೇವನರ್ತಕಿಯರೊಳು (ಅನಂಪು. ೧೦-೨೩ ವ). **ಸರಿಮಳೆ** : 'ಸರಿಮಳೆಗಱೆ' ಪರಾ. **ಸರಿವಳೆ** : ಮಳೆಗಾಲದೊಳಾಗಳುಮುಳಿಯದು ಬೆಟ್ಟದ ಸರಿವಳೆ (ಎಕ. VIII, ಸಾಗರ. ೧೦೯-೪೯ ; 1042) ; ಇದೆ ಸಮಯವೆಂದನಂಗನರಲ ಸರಲ ಸರಿವಳೆಯಂ ಕಲೆಯೆ (ನಂಬರ. ೧೨-೫೫) ; ಸಾಯಕದ ಸರಿವಳೆಯ ಸುರಿದನು ಭಾನುಸುತ ಮುಳಿದು (ಕುವ್ಮಾಕ. ೧೧-೫). [ಸರಿ$_7$ + ಮಳೆ]

ಸರಿವು, ಸರವು, ಸರಹು, ಸರು$_1$, ಸರುವ್ವು, ಸರುಹು$_1$ (ನಾ). ೧. (ಮಳೆಯ) ಧಾರೆ ; ಸುರಿತ : ಸುರಿವ ರಕುತದ ಸರಿವಿನಲಿ ನೆಲೆ ನನೆದು ಭೂರಿಶ್ರವನು . . . ಪಾರ್ಥನ ನೋಡಿ (ಕುವ್ಮಾದ್ರೋ. ೧೪-೧೪). ೨. ಹಳ್ಳ ಮೊದಲಾದುವುಗಳ ಪ್ರವಾಹವು ಹರಿದು ಉಂಟಾದ ಕೊರಕಲುಜಾಡು,— ದಾರಿ : ಆ ಕಟ್ಟನ ಸರಿವು ಮೊದಲಾಗಿ (ಎಕ. VIII, ಸೊರಬ. ೧೪೦-೬೮ ; 1198) ; ಶ್ವೇತಪರ್ವತದ ಪಾದತಟದ ಸರಿವು ದರಿವಿನ ಹಾಲೊಡತೆ ಸುರಿತಪ್ಪಂತೆ ಹಾಲ ಹಳ್ಳವೋಲಗದ ನಡುವೆ ಮಡುಗಟ್ಟಿ ಪರಿದು ಪೊಜಸೂಸೆ (ಬಾಹ. ೧೦-೭೨). **ಸರವು** : ೨. 'ಸರವುಗಟ್ಟು' ಪರಾ. ೩. ನೀರಿನ ಹರಿವು , — ಪ್ರವಾಹ : ಮಳೆನೀರಿನ ಸಣ್ಣ ಸಣ್ಣ ಸರವುಗಳಲ್ಲಿ ಸಹ ಸೂಸುಮಣ್ಣು ಬೆರೆತು ಆ ನೀರು ರಾಡಿಯಾಗಿರುತ್ತದೆ (ಮುಂಬಯಿ. ೬-೧೭೮) ; ಕೊಳ್ಳಗಳ ಸರವುಗಳ ದಾಟ ಗಿರಿಯೇರಿ (ಕನ್ನಜಾ. ೩೩೦). **ಸರಹು** : ೨. ಆ ಮಧ್ಯದಲ್ಲಿ ಹಳ್ಳ ಸರಹು (ಎಕ. XII, ತಿಪಟೂ. ೯-೭೧ ; 1388). **ಸರು$_1$** : ೧. ಒಂದು ದೊಡ್ಡ ಸರುವೇ ಬಂದದ್ದರಿಂದ 'ಪ್ಯಾಶೆಂಜರ್' ಜನರೆಲ್ಲ ಸಿಕ್ಕತ್ತ ಚದರಿಬಿಟ್ಟರು (ಮುಗಿಮ. ೬) ; ಮಂಜಲ್ಲ ಮಳೆಯ ಸರುವಂದೆ (ಕನ್ನಡಾ. ೬). ೨. ತರತರದಿಂದೆ ತೋರ್ಪ ಸರುವಿಂ [ಪಾಕಾಂ. ಸರಿಯಿಂ] ದರುವಿಂ ಪರಿವೊಜ್ಜರಂಗಳಿಂ (ಗಿರಿಕ. ೧-೭೦); ಸರು[ಪಾಕಾಂ. ರಿ]ಗಳಿಂ ದರಿಗಳಿಂ ಹಳ್ಳದಿಂ ಕೊಳ್ಳದಿಂ (ಚಿಬಪ್ರ. ೫೭-೨೩) ; ನಾನು ಒಂದು ಸರು(ಸಣ್ಣಕಣವೆ)ವನ್ನು ಇಳಿದು ಮತ್ತೊಂದು ದಿಬ್ಬವನ್ನು ಏರಿದೆನು (ಮಲಚಿ. ೭). **ಸರುವ್ವು$_1$** : ೧. ಇಂಥಾ ಮಳೆಯಿಂದೇನಾಗುವದು? ಬಂದರ ಒಂದು ಸರುವು ಮಾತ್ರ ಬಂದೀತು (ಮುಂಬಯಿ. ೫-೫೦); ಇನ್ನೊಂದು ಸರುವು ಚಲೋ ಮಳೆಯಾಗದೆ ಇರದು (ಅಂದಿ. ೧೪). ೨. ತೆಂಕಣ ಸರುವಿನೊಳಗೆ ೨೧ ಮಾರು ಗಳೆಯಲ್ಲಿ ಕಂಬ ೨೫ನು ಬ್ರಂಮ್ಮಪುರಿಯಾಗಿ ಧಾರಾಪೂರ್ವ್ವಕವಾಗಿ ಕೊಟರು (ಎಕ. VII(S), ಶಿಕಾರಿ. ೬೭೦-೫ ; ಸಂ. 1300) ; ಬೇಡಂ ತುಟ್ಟಿಸಿ ನೀರಂ ನೆಳಲಂ ಬೆಟ್ಟದ ಸರುವಿನೊಳು ನೋಡುತಿರಲೆಲ್ಲೆಡೆಯೊಳ್ (ನನ್ನಜಾ. ೫-೯೭). ೩. ಭೀಮಗೆ ಕೂಡುವ ಸರುವುಗಳು, ಹನ್ನೆರಡು ತಿಂಗಳೂ ಹರಿಯುತ್ತವೆ (ಕಭಾಗ. ೪೩೫); ಮಳೆಯಿಂದುಂಟಾದ ಸರುವುಗಳು ಹರಿಯುವ ಸಪ್ಪಳ ಮಾತ್ರ ಈಗ ಕೇಳತೊಡಗಿತು (ಗ್ರಾಮಾಯ. ೨೮೬). **ಸರುಹು$_1$** : ೨. ವಿಶಪಂಗಳಿಗೆ ನಿಂಮ ವೂರ ಮದಿಕಕೆ ಸಲುವ ಹರಯದ ಹಂದಿಮುನಿಯ ಸರುಹಿನ ಭೂಮಿಯನು ಸರ್ವಮಾನ್ಯವಾಗಿ ಧಾರೆಯನ್ನೆಱೆದು ಕೊಂಡ ವುಡುಗೊಜೆ ಗ ೨ ಎರಡುಹೊನ್ನು (ಮ್ಯಸಂ. ೧೯೩೧, ೬೪-೧೧ ; 1396). ೪. ಮೊರಡಿ : ಕಲು ಸರುಹ ಸಹ ಬಿಟ್ಟರು (ಎಕ. VII, ಶಿಕಾರಿ. ೧೧೪-೩೦; 950 ?); ಪಡುವಲು ಕರಿಯ ಕಲ್ಲ ಸರುಹಿನೊಳಗಣ ದೀಪಮಾಲೆಕಂಭ (ಎಕ. XI, ಹೊಳ್ಳೆ. ೯೪-೧೦೪ ; 1511).

[ದೇ. || ತಮಿ. ಚರಿವು. ಚರುವು ; ಮಲ. ಚರಿವು ; ತೆಲು. ಚಱಿ, ಚಱಿಯ]

ಸರಿವೊಗು (ಕ್ರಿ). ಸರಿಸಮವಾಗು : ಇಕ್ಕಿದರು ಗಳಪತ್ತದಲಿ ಸಲೆ ಮಿಕ್ಕು ಸತ್ರಾಣದಲಿ ಮಿಗೆ ಸರಿವೊಕ್ಕು ಓಡಿದರು ಬಿನ್ನಣದ ಚೊಕ್ಕೆಯದ ಜೋಡಿಯಲಿ (ಕುವ್ಮಾಸ. ೨-೯೬).

[ಸರಿ$_5$ + ಪೊಗು]

ಸರಿವೋಗು, ಸರಿಹೋಗು (ಕ್ರಿ). ೧. ಸರಿಜೋಡಿಯಾಗು ; ಸಮವಾಗು : ಕದನ ಕ್ಷೇತ್ರದೊಳ್ . . . ತಳ್ತು ಕಾದಿದನಾದಂ ಸರಿವೋದನೆಂಬ ನುಡಿ ತಾನಿಲ್ಲೆಂದೊಡೆ (ಪುಪ್ರಸ್ಪ. ೩-೧೮). **ಸರಿಹೋಗು** : ೨. ಹೊಂದಿಕೆಯಾಗು ; **ಸರಿದೂಗು** : ಬಣ್ಣಗಳು ಒಂದಕ್ಕೊಂದು ಸರಿಹೋಗುವುದಿಲ್ಲ (ರೂಢಿ). ೩. ಒಪ್ಪಿಗೆಯಾಗು ; ಮನಸ್ಸಿಗೆ ಬರು : ಮುತ್ಸರದ ಪ್ರಸ್ತಾಪ ಅವಳಿಗೆ ಸರಿಹೋಗಲಿಲ್ಲ (ರೂಢಿ).

[ಸರಿ$_5$ + ಪೋಗು$_1$ (< ಪೋ$_1$)]

ಸರಿಸ್$_1$ (ನಾ). ೧. ಅಂಕುಡೊಂಕಿಲ್ಲದುದು ; ನೇರವಾದುದು : (೫). ೨. ತಪ್ಪಿಲ್ಲದುದು ; ಸರಿಯಾದುದು : (೫). ೩. ಸರಳತೆ ; ನೇರ ; ಋಜು : ಆಕಾರ ಇರವಿನ ತೆಱನ ಪರಿಹರಿಸಿ ತಾ ಸರಿಸವಾಗಿ ನಿರುತಿಗಳ ನಿಜವನಱಿದು . . . ಇಪ್ಪಾತ ತ್ರಿವಿಧದವನಲ್ಲ (ಸರ್ವಜ್ಞ. ೧೨೨-೬೨). ೪. ಮುಂಭಾಗ ; ಸಮ್ಮುಖ: ಪಾರ್ಥನ ಸರಿಸದಲಿ ನಿಲುವೆದೆಯ ಬಲುಹುಳ್ಳರನು ದೇವಾಸುರರೊಳಱಿಯೆನು

ಮನುಜರೇನಹರು (ಕುವ್ಯಾಭೀ. ೯-೨) ; ಇಳಿದನು ನಾಕದಿಂ ನಾರದನು ತನ್ನಿನಿವರನ ಸರಿಸದಲಿ (ತೊರಕಾ. ೧-೨-೧೬) ; ಆ ಚಕ್ರಮಂ ರುದ್ರನು ಕರದೊಳಗೆ ಪಿಡಿದಾ ಜಲಂಧರನ ಕಂಧರದ ಸರಿಸಕಿಡಲರಿದುದು (ಚಿಬಿಪು. ೨೬-೪೦). ೫. ಹತ್ತಿರ ; ಸಮೀಪ : ಅಸುರದ ಗಿರಿಜೆಯುಗ್ರವಿಭಾಸುರತಪಕಂಜಿ ನಭದ ತಪನಂ ನಡೆಯುತ್ತಾ ಸರಿಸಮಂ ಕರಂ ಬಟ್ಟೋಸರಿಸಿಯೆ ನಡೆವಂ (ಗಿರಿಕ. ೯-೧೫೫) ; ದನಿಕರ್ಣಕ್ಕೆಯ್ದಲದಱ ಸರಿಸಕೆ ನಡೆದೆಂ (ದಶಕು. ೧೩-೬) ; ಸಾವು ಸರಿಸಕೆ ಬಂದ ಮನುಜರಿಗಾವುದ್ಕೆ ಕರ್ತವ್ಯ (ನಿಘಾಗ. ೨-೧-೨). ೬. ಸಮ ; ಸಾಟಿ ; ಸಮಾನತೆ : ''ಜೋಡು, ಸರಿಸ, ತೋಡು, ಓರಗೆ . . . ಸಂಗಡಂ – ಈ ೧೮ ಸಮಾನಕ್ಕೆ ಪೆಸರ್'' (ಕಶಾ. ೫೯-೨೯೧) ; ಪರ್ವತದ ವಜ್ರದ ಸರಿಸ ಹೋರಟೆ ಕಾಣಲಾದುದು (ಕುವ್ಯಾಕ. ೧೦-೧೫೫) ; ಹೊಗಳಲೆಕೆಗಾಣೆನು ಪುರಾತನಯುಗದ ವೀರರೊಳಿವರ ಸರಿಸಕೆ (ತೊರಕಾ. ೬-೨೫-೧೮). ೭. ಸಮವಾ ಯಾದುದು : ಧಾರಿಣಿ ಸರಿಸಮೆನಲು ಬಪ್ಪುದೇ ಬಿಣ್ಪೆನ್ನ (ಎಕ. VII. ಶಿಕಾರಿ. ೧೧೪-೨೩ ; 1096) ; ಮಂತ್ರಾಸ್ತ್ರದಲಿ ಮೋಹಿಸಿದ ಸರಿಸಕೆ ಸರಿಸ ವಿಷಮಕೆ ವಿಷಮಗತಿ ಶರಸಾರ ಸಾಳಂಗದಲಿ ರಂಜಿಸಿದ (ಕುವ್ಯಾಕ. ೨೦-೬೪). ೮. ಸಮಾನನಾದವನು; ಸರಿಜೋಡಿಯಾದವನು : ನಿಮ್ಮೊಡನೆ ಸಂಗರಕೆ ಸರಿಸರೆ ನಾವು (ಕುವ್ಯಾಕ. ೪-೬೨) ; ಸರಿಸದವರಿಲ್ಲೆಂದು ಈ ತನಕ ನಾಂ ಭಟರನರಸಿದೆನು ಸಮರಕಂ (ತುರಂಗ. ೬೬-೨೬). ೯. ಯೋಗ್ಯವಾದುದು ; ಉಚಿತವಾದುದು: ಅರಿದೆನಿಸದತಿಬಲನ ಧರ್ಮೋತ್ಕರುಷ ದುರ್ಬಲಯುತನ ಸೈರಣೆ ಸರಿಸವೆನಿಸದು (ಕುವ್ಯಾಅ. ೬-೨೧). ೧೦. ಓರಣ ; ಅಚ್ಚುಕಟ್ಟು : ಗರುಡನಾಕಾರದಲಿ ಬಲವನು ಸರಿಸ ಮಿಗೆ ಮೋಹಿದನು (ಕುವ್ಯಾಭೀ. ೨-೨೧). ೧೧. ಲಗುಬಗೆ ; ವೇಗ ; ರಭಸ : ಜಱದು ಸರಿಸದಲೀಱಿದರೆ ಸಿಡಿಲುಬುದಂತಾಯಿತ್ತು (ಕುವ್ಯಾಭೀ. ೪-೬೦) ; ಬಿಡೆ ಸರಿಸದಿಂದೋಡಿ ಚಾರಿವರಿ ದಾಡಿಸುತೆ ಹರಿಣವಾಯುಗಳ . . . ಪೊಡವಿಪಾಲಕನಣುಗರೇಱುತ್ತೆ ವೈಹಾಳಿಯುತ್ಸಾಹಮಂ ತಳೆದರಾಗ (ಭಾವಚಿ. ೮-೧೩). ೧೨. ನಿಯಮ ; ಕಟ್ಟುಪಾಡು : ತಾಳಮಾನ ಸರಿಸವನಱಿಯೆ ಓಜೆಬಜಾವಣೆಯ ಲೆಕ್ಕವನಱಿಯೆ (ಬಿಹವ. ೪೯೪). ೧೩. ಸಾಲು ; ಶ್ರೇಣಿ : ಸರಲ ಸಂಗಡಿಸಿ ತಿರುವಿಗೆ ಸರಿಸದೊಳಿರ್ದ ಕೊಪ್ಪರಿಗೆಗಳೇಳನಂದಿರದೆ ನೋಡಿದನು ಬಾದುರನು (ಕುರಾಸಾಂ. ೧೮-೬೪). ೧೪. ಸದರ ; ಸಲುಗೆ : ಸರಿಸದ ಮೇಲೆ ಹಿಡಿಯಹೋದರೆ ಚದುರಂಗದ ಮೇಲೆ ಮಸಿಯ ತೋಱಿದ ಕೂಡಲಸಂಗಮದೇವ (ಬಿಹವ. ೬೫೪) ; ಕರೆದಪಳೆಂದೊಡಾ ಸುಲಿದಳೆಂದೊಡೆ ಮಾಲೆಯನಿತ್ತಳೆಂದೊಡಾ ಸರಿಸದೆ ಬಾಯ ತಂಬುಲಮನಟ್ಟಿದಳೆಂದೊಡೆ ಮೆಲ್ಲ ಬಾಯ್ಗಳ್ . . . ಅಲಿಪ ಕರ್ಣದೊಳ್ಕಗುಳ್ದುರಿಪುವಯಶ್ಕರಾಳೆಯನೆ ತೆತ್ತಿಸುವರ್ ಪರವೆಣ್ಗ್ ಕೂರ್ಪರಂ (ಅನಂಪು. ೯-೬೭). [< ಪ್ರಾ. ಸರಿಸ./ ಸಂ. ಸದೃಶ./ ಮರಾ. ಸರಸಾ, ಸರಿಸಾ]

ಸರಿಸ್₂ (ನಾ). ಗೋಂದು ; ಅಂಟು ; ಸರಿ : (ಪ).

[← ಪಾರ. ಸರೇಶ್ ; ಹಿಂ. ಸರೇಸ್ ; ಮರಾ. ಸರಸ]

ಸರಿಸ್₃ 'ಸರಿಸಂ' ನೋ.

ಸರಿಸಂ, ಸರಿಸ್₃ (ಅ). ೧. ಚೆನ್ನಾಗಿ ; ಅಂದವಾಗಿ : ಸರಿಸಂ ಪಸರಿಸುಗುಮಲ್ಲೆ ತನುರೋಮಂಗಳ್ (ಆಶ್ವಕಾ. ೫-೧೭). **ಸರಿಸ್₃** : ೨. ನೇರವಾಗಿ ; ಸರಳವಾಗಿ : ಕಳೆ ತಪ್ಪದೆ ನಿಂದಿರಾದಡೆ ಬಟ್ಟೆ ಸರಿಸ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿಗೆ ಹೋಯಿತ್ತು (ಸಕವ.ಕ. III. ೩೨೧-೫೯೨). [< ಸರಿಸ್₁]

ಸರಿಸಂಗಾತಿ (ನಾ). ಸಮವಯಸ್ಸಿನ ಸ್ನೇಹಿತ ; ಓರಗೆಯವನು : ''ಸ್ನಿಗ್ಧಃ, ವಯಸ್ಯಃ, ಸವಯಾಃ – ೩ ಸಮಾನವಯಸ್ಸುಳ್ಳ ಸ್ನೇಹಿತನ ಹೆಸರುಗಳು, ಸರಿಸಂಗಾತಿ'' (ಸಿಕ್ಕಾಂತಿ. ೨೩೮). [ಸರಿ₆ + ಸಂಗಾತಿ₁]

ಸರಿಸಂಗೊಳ್ (ಕ್ರಿ). ವೇಗದಿಂದ ಕೂಡಿರು ; ಲಗುಬಗೆಯಿಂದಿರು : ವಾಳೆಯೊಳ್ಪರಿಸಂಗೊಂಡೊಂದೆ ಮೆಯ್ಯೊಳ್ ಸೂಳಱಿದೇಱುವ . . . ಫೋಳಾಯಿಲರ್ (ರಾಜಚೇ. ೬-೧೧ ವ). [ಸರಿ₁ + ಕೊಳ್₁]

ಸರಿಸಂಬರಿ (ಕ್ರಿ). ಚೆನ್ನಾಗಿ ಹರಿ, – ಸೂಸು : ಸರಿಸಂಬರಿದುದು ಜೀರಿಗೆ ಬೆಲ್ಲದ ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯವೋಲ್ (ಗಿಂಕ. ೯-೧೨೦).

[ಸರಿಸಂ + ಪರ್₃]

ಸರಿಸಪ 'ಸರುಸಪ' ನೋ.

ಸರಿಸಮ (ನಾ). ೧. ಸಮಾನತೆ ; ಸಮತೆ : ಪೊಣರ್ವರ್ . . . ಸರಿಸಮದೊಳಾ [ನಾಕಾಂ. ಒರ್ವರಿರ್ದಾ] ಕಲಿಗಳು (ಚೈಮಧಾ. ೨೩-೨೩). ೨. ಸಮಾನನಾದವನು: ಆಕೆಯ ಕಾಣದ ಕಂಡವರಿಬ್ಬರು ಭಾಮೆ ಸರಿಸಮರಹರು (ಇಂಚಾಚ. ೧೫೦-೩೦).

[ಸರಿ₆ + ಸಮ₃]

ಸರಿಸಾಟಿ (ನಾ). ಸರಿಸಮಾನ ; ಸರಿಜೋಡಿ : ಪರಾಕ್ರಮದಲ್ಲಿ ಇವರಿಗೆ ಸರಿಸಾಟಿಯಲ್ಲ (ಮಹಾವಂ. I. ೮೭) ; ಈ ಮೂವರೂ ನಿಮಗೆ ಸರಿಸಾಟಿಯಿಲ್ಲದಿರಬಹುದು (ಬಿಭಗೀ. ೧೮-೨). [ಸರಿ₆ + ಸಾಟಿ₁]

ಸರಿಸು 'ಸರಿಯಿಸು' ನೋ.

ಸರಿಸೃಪ (ನಾ). ಹಾವು ಮುಂತಾದ ಹರಿದಾಡುವ ಪ್ರಾಣಿ : ಕುಪಿತಮತಿ ಸಂಜ್ಞಿಯುಂ ಸರಿಸೃಪಮುಂ ವಿಹಗಮುಂ . . . ಪುರುಷನುಂ ನೆಲಸನುಕ್ರಮಕ್ರಮದಿಂದಂ (ಕಾಂಪು. ೭-೧೦೧). [< ಸಂ. ಸರೀಸೃಪ]

ಸರಿಸೋನೆ (ನಾ). = ಸರಿವಟೆ : ಸರಳ ಸರಿಸೋನೆಯನು ಪವನಜಗಿರಿಗೆ ಕಳುಹಿದುದು ಕರ್ಣಮೇಳದ ಹೊರಳಿ (ಕುವ್ಯಾದ್ರೋ. ೧೩-೪೩). [ಸರಿ₆ + ಸೋನೆ₁]

ಸರಿಸೋಲ (ನಾ). ಸಮವಾದ ಅನುರಾಗ, – ಪ್ರೇಮ : ಗಂಡರೊಳು ಸರಿಸೋಲ ಲೇಸು ಪೆಂಡಿರಿಗೆ (ನೇಮಿಸಂ. ೧೦-೬೦). [ಸರಿ₆ + ಸೋಲ]

ಸರಿಹರೆಯ 'ಸರಿವರೆಯ' ನೋ.

ಸರಿಹಸುಗೆ (ನಾ). ಸಮವಾದ ಭಾಗ : ಪುಷ್ಕರದ ಸರಿಹಸುಗೆಯಲಿ ಮಾನಸೋತ್ತರ ಗಿರಿಯಿಹುದು (ನಿಘಾಗ. ೫-೧೦-೨) ; ಧರೆಯ ಸರಿಹಸುಗೆಯನ್ನಪಹರಿಸಿ ವಿಟಿನದೋಳ್ ನೂಕುವುದಿದಾವ ಧರ್ಮ (ತುರಂಗ. ೭೭-೬೫). [ಸರಿ₆ + ಹಸುಗೆ (< ಪಸುಗೆ)]

ಸರಿಹುದುಗು (ನಾ). ಸರಿಯಾದ ಹೊಂದಿಕೆ, – ಹೊಂದಾಣಿಕೆ : ಕಾಯವು ಆ ಜೀವನಿಗೂ ನಿನಗೂ ಸರಿಹುದುಗು (ಕೋಅಮಾ. ೬೦-೨೪೭) ; ನಿನ್ನ ಅಱಿವು ಎನ್ನ ಆತ್ಮದಲ್ಲಿ ನಿಂದು ಅಱಿವಹನ್ನಕ್ಕ ನನಗೂ ನಿನಗೂ ತತ್ಪುಗೊತ್ತು ಗೋರಕ್ಷಪಾಲಕ ಮಹಾಪ್ರಭುಸಿದ್ಧ ಸೋಮನಾಥಲಿಂಗವು ಸರಿಹುದುಗು (ಸಚಾ. ಕ. III. ೧೧೯-೩೦೦).

[ಸರಿ₆ + ಹುದುಗು₃ (< ಪುದುಗು₂)]

ಸರಿಹೊಂದು (ಕ್ರಿ). ೧. ಯೋಗ್ಯವಾಗು ; ತಕ್ಕುದಾಗು : ನಿನಗೆ ಸರಿಹೊಂದದ ಕೆಲಸವನ್ನು ಮಾಡಲು ಪ್ರಯತ್ನಿಸಬೇಡ (ಜೂಪ್ರ). ೨. ಸಮವಾಗು ; ಸಮಾನವಾಗು: ವಧೂವರರ ಮನೆತನಗಳು ಸರಿಹೊಂದಿದ ನಂತರ ಮದುವೆ ನಿಶ್ಚಯವಾಯಿತು (ಜೂಪ್ರ).

[ಸರಿ₆ + ಹೊಂದು₁ (< ಪೊರ್ದು)]

ಸರಿಹೊತ್ತು (ನಾ). ಅಪರಾತ್ರಿ : ಒಂದುದಿನ ರಾತ್ರಿ ಸರಿಹೊತ್ತಿನಲ್ಲಿ ವಾರಿ ಎಂಬ ಆಳು ಓಡಿಬಂದು . . . ಹೇಳಿದನು (ನೀಚಿಚಿ. XV. ೫೫). [ಸರಿ₆ + ಹೊತ್ತು₃ (< ಪೊಱ್ತು)]

ಸರಿಹೋಗು 'ಸರಿವೋಗು' ನೋ.

ಸರಿಹೋಲಿಸು (ಕ್ರಿ). ಸಮಾನವೆಂದು ಭಾವಿಸು : ಹೊಱಗ ಮೆಚ್ಚಿದ ಕುಜುಬರಿಗೆ ಕುಜುಬರ ತಂದುಱಿ ಸರಿಹೋಲಿಸಬಹುದು ಅಱಿದೊಳಗಾತ್ಮತತ್ವವ ಮೆಚ್ಚಿ ಸುಖಿಸುವೆಮ್ಮಱಿಯಗಾರೆಣೆಯನಬಹುದು (ಭರಚ. ೯-೯೪).

[ಸರಿ₆ + ಹೋಲಿಸು (< ಪೋಲಿಸು)]

ಸರೀಕ 'ಸರಿಕ' ನೋ.

ಸರೀಕತನ 'ಸರಿಕತನ' ನೋ.

ಸರೀಸೃಪ (ನಾ). ಹಾವು ಮುಂತಾದ ಹರಿದಾಡುವ ಪ್ರಾಣಿ : ಆ ಸರೀಸೃಪಮುಂ ವಿಹಗಮುಂ . . . ಪುರುಷನುಮುದಯಿಸುಗುಮೇಬುನರಕಂಗಳೊಳಂ (ಸಾಕುಮಾ. ೧೧-೫೦) ; ದನುಜನೋ ಗಂಧರ್ವನೋ ಯಕ್ಷನೊ ಸರೀಸೃಪರೂಪ ದಿವಿಚೇಂದ್ರನೊ ನಿಧಾನಿಸಲಱಿಯೆ ನೀನಾರು (ಕುವ್ಯಾಅ. ೧೩-೪೨). [ಸಂ.]

ಸರು₁ 'ಸರಿವು' ನೋ.

ಸರು₂ (ಗು). ೧. ತೆಳುವಾದ ; ಸೂಕ್ಷ್ಮವಾದ. (ನಾ). ೨. ಕತ್ತಿಯ ಹಿಡಿಕೆ. ೩. ಬಾಣ. [ಸಂ.]

ಸರು₃ 'ಸರುವು₂' ನೋ.

ಸರುಕಿಸು 'ಸರಕಿಸು' ನೋ.

ಸರುಕ್ಕು₁ 'ಸರಕ್ಕು₁' ನೋ.

ಸರುಕ್ಕು₂ 'ಸರಕ್ಕು₂' ನೋ.

ಸರುಗ 'ಚರುಗ' ನೋ.

ಸರುಗು 'ಚರುಗ' ನೋ.

ಸರುಜ (ಗು). ೧. ರೋಗವನ್ನು ಹೊಂದಿರುವ. (ನಾ). ೨. ರೋಗವುಳ್ಳವನು; ರೋಗಿ : ಪಾಪರತಂ ಸ್ವಭೃತ್ಯಕಲಹಂ ಸರುಜಂ ಹೃದ್ರೋಗಿ ದಿನಪನವರೋಹಿಣಿಯೊಳ್ (ಜಾತಕ. ೯-೧೮), ಅರುಚಿಯದಱಲ್ಲಿ ಸಮನಿಸೆ ಸರುಜಂಗೌಷಧವಿರಕ್ತಿಯಾದಂತಕ್ಕುಂ (ಚಂದ್ರಪ್ರ. ೨-೩೯). [ಸಂ.]

ಸರುಪ, ಸಪ್ಪ₂, ಸರ್ಪು (ನಾ). ಹಾವು ; ಸರ್ಪ : ಸರುಪ ಸುತ್ತಿದರೆ ಸರ್ವೋತ್ತಮನೆ ನೀ ಕಾಯೊ (ಪುರಂದ. ಧಾ. ೨-೬೬-೨) ; ಹೆಣ್ಣುಮಕ್ಕಳ ದುಃಖ ಹೆತ್ತವ್ಯ ಬಲ್ಲಳು ಹುತ್ತದ ಒಳಗಿರೋ ಸರುಪನ ಬೇಗೆಯ ನೆತ್ತೀ ಮೇಲಿರುವೂ ಶಿವ ಬಲ್ಲ (ನಾಪದ. ೭೦). ಸಪ್ಪ₂ : ಸಪ್ಪಂಬೊಲೊಲ್ದಾಲಿಸಿ ಕೋಪಾಟೋಪದಿಂದಂ ಮೊಱೆಯುತೆ ಪೊಣರ್ದರ್ ಪೊಂಗಿ ನೀರಾಗ್ರಗಣ್ಯರ್ (ಉದ್ಯಟ. ೪-೧೦೪). ಸರ್ಪು : ಅದನ್ನು ತಿಂದರೆ ಸರ್ಪನ ವಿಷದಂತೆ ಅಮಲಾಗುತ್ತದೆ (ಕೃಪಿಪ್ರ. ೧೯೭). [< ಸಂ. ಸರ್ಪ]

ಸರುವ 'ಸಬ್ಬ₂' ನೋ.

ಸರುವದಾ (ಅ). ಯಾವಾಗಲೂ ; ಸತತವಾಗಿ : ಸರುವದಾ ಒದಱುವರು ಅರಣ್ಯವಾಸಿಗಳು ಮರದಡಿಗೆ ಬಿದ್ದ ಎಲೆಗಳ ತಿನ್ನುತ (ಪುರಂದ. ೪-೮೦-೩).

[< ಸಂ. ಸರ್ವದಾ]

ಸರುವಿಗೋಸಾಸಿಗ (ನಾ). ಒಬ್ಬಾತನ ಹೆಸರು : ಮುತ್ತವುರೆರ ಸರುವಿಗೋಸಾಸಿಗ ಕೊಡಲಸಟ್ಟಿಯರಾ ಮದಾಮ್ಮನ್ (ಎಇ. IX, ೨೩-೧೧ ; ಸು. 800). 'ಗೋಸಾಸಿಗ' ಪರಾ. [?]

ಸರುವಿಡಿ (ಕ್ರಿ). (ಬೇಟೆಯಲ್ಲಿ) ಮೃಗವು ಹೋದ ಜಾಡನ್ನು ಅನುಸರಿಸು : ಬಿಯದರ್ ಬೇಂಟೆಯಾಡಲೆಂದು ಸಂಭ್ರಮಂ ಮಿಗೆ ಸರುವಿಡಿದು ಪಣಿಯರ್ಪೆಡೆಗೆಯ್ತಂದು ನಿಂದು (ಶಬಕಂ. ೩-೧೪ ವ). [ಸರ್ವು₃ (< ಸರುವ್ವು₂) + ಪಿಡಿ₁]

ಸರುವು₁ 'ಸರಿವು' ನೋ.

ಸರವ್ವು₃, ಸರವಿ₂, ಸರ್ವು₃, ಸರುಹು₂ (ನಾ). ೧. (ಬೇಟೆಯ ಸಮಯದಲ್ಲಿ) ಕಾಡುಮೃಗಗಳು ಓಡಾಡುವ ಹಾದಿ, — ಜಾಡು : "ಸರುವೆಂದು ಮಿಗವಟ್ಟೆ" (ಕಶಸಾ. ೫೧-೮೪) ; ಪುಲ್ಗಾನೊಳಾ ಪೋಪ ಪೇರುಡುವಂ ಸೋವುವಡಂಗಿಯೆಯ್ದು ಸರುವಂ ಕಟ್ಟಿಟ್ಟು ಸಾರಂಗಮಂ (ಸೂತ್ರಿಸು. ೩-೧೧೫). ೨. ಸುಳಿಯುವಿಕೆ ; ಸುಳಿದಾಟ : ಹಸುಬನ ಸರುವು ವಾಮದಿ ಗರ್ದಭನ ಬಲ ಕರಿಯ ಹಕ್ಕಿಯ ತಡೆಯ ಮನ್ನಿಸದೈದಿದನು ಭೂಪ (ಕುಮಾಭ. ೧೭-೩೩). ಸರವಿ₂ : ೧. 'ಸರವಿವ್ವೋಗು' ಪರಾ. ಸರ್ವು₃ : ೧. ಸರುವ ಕಟ್ಟಿಸಿ ಬರಿಸಿ ಮಿಗವ ಬೆಂಬಡದೆ ಮುಂಬರಿ ನೂಂಕು ನಡೆ (ರುಕ್ಮಾಂಗ. ೧೦-೨೧) ; ಸರುವೊಳ್ ಹುದುಗಿಯುಂ ನೀರ್ದಾಣದೊಳ್ ಕತ್ತರಿಗಂಡಿಯನೆತ್ತಿಯುಂ (ರಾಮಾಶ್ವ. ೮೪-೫) . ಸರುಹ್ವು₂ : ೧. ಕಾಡಾನೆಗಳ ತದಿಕಿನಡವಿಯ ತೊವಲ ತಿನಹೋದ ಸರುಹುಗಳೊಳಂ . . . ನಡೆದು (ಸಮ್ಮಕೌ. ೧೦-೪೧). [?]

ಸರುವುಗಟ್ಟು 'ಸರವುಗಟ್ಟು' ನೋ.

ಸರುಷಪ 'ಸರುಸಪ' ನೋ.

ಸರುಸಪ, ಸರಿಸಪ, ಸರುಷಪ (ನಾ). ಸಾಸವೆ : ಸೇಸೆಯಿಕ್ಕಿದ ಸರುಸಪಂ [ಪಾಠಾಂ. ಸರ್ಷಪಂ]ಗಳೊತ್ತೆ ಸೈರಿಸಲಾಱಂ (ವಡ್ಡಾರಾ. ೨-೫) ; ಸರ್ಷಪ – ಸರುಸಪ (ಶಮರ. ೨೫೪ ಪ್ರಯೋ) . ಸರಿಸಪ : ವರ್ಷಂ, ವರಿಸಂ; ಸರ್ಷಪಂ, ಸರಿಸಪಂ (ಭಾಷಾಭೂ. ೧೨೪ ಪ್ರಯೋ) ; ಸರ್ಷಪಂ– ಸರಿಸಪಂ, ಸರ್ಷುಸಪಂ (ಶಬ್ದಾನು. ೧೪೭ ವ್ಯಾಖ್ಯಾ). ಸರುಷಪ: ಸರುಷಪಮಂ ಘೃತಮಂ . . . ತ್ರಿಫಲಾರಸದೊಳ್ ನಿರೂಹಣಕ್ರಿಯೆಗೆ ಯೋಜಿಪುದು ಧುರದಡೆಯೊಳ್ (ಅಶ್ವಶಾ. ೧೦-೧೬).

[< ಪ್ರಾ. ಪರಿಸವ./ಸಂ. ಸರಿಷಪ, ಸರ್ಷಪ]

ಸರುಹು₁ 'ಸರಿವು' ನೋ.

ಸರುಹ್ವು₂ 'ಸರುವ್ವು₂' ನೋ.

ಸರೂಪ₁, ಸೊರೂಪ (ನಾ). ಆಕೃತಿ ; ಸ್ವರೂಪ : "ಸ್ವರೂಪ-ಸರೂಪ" (ಶಮರ. ೨೮೧ ಪ್ರಯೋ). ಸೊರೂಪ : ಬಾವಜಿಯರ ಸೊರೂಪ (ಮೃಆರಿ. ೧೯೩೭, ೪೬-೧೧; 1122). [< ಸಂ. ಸ್ವರೂಪ]

ಸರೂಪ₂ (ಗು). ೧. ಸಮಾನವಾದ ರೂಪವುಳ್ಳ ; ಸದೃಶವಾದ. (ನಾ). ೨. ರೂಪಸಹಿತವಾದುದು ; ಸಾಕಾರವಾದುದು : ಆ ಮೋಡಗಳು . . . ನೀರೂಪವನ್ನು ಸರೂಪವಾಗಿ ಮಾಡುತ್ತವೆ (ರಾಮಾನ. ೧೦೬). [ಸಂ.]

ಸರೇಫ (ಗು). ೧. ರೇಫದಿಂದ ಕೂಡಿದ ; ರಕಾರಸಹಿತವಾದ : ಉರ್ದುಂ ಬಿರ್ದುಂ . . . ಗುರ್ದೆಯುಂ ಸರೇಫಪದಂಗಳ್ (ಶಮದ. ೩೭). (ನಾ). ೨. ರೇಫಸಹಿತವಾದ ಅಕ್ಷರ : ಅತ್ಯಂತಂ ಸರೇಫಸಂಯೋಗಾಂತರಮಮರ್ದೋದವ ಮಧುರೆಯೆಂಬುದದಕ್ಕುಂ (ಕಾವ್ಯಾವ. ೫೬೨). [ಸಂ.]

ಸರೋಂಬು (ನಾ). ಸರೋವರದ ನೀರು : ಬಿರಯಿಗಳನೆಚ್ಚು ರಕ್ತಂಬೊರೆದರಲಂಬಂ ಸರೋಂಬುವೋಳ್ಪೊಳೆಯಲ್ಕೆಂದರಲಂಬನಿಳಿಪಿದಂತಿರೆ ತರುಣಿಯರ ಸರಕ್ತಕೇಕರಂ ಮಾರ್ಪೊಳೆಗುಂ (ರಾಜಶೇ. ೧೦-೬೭). [ಸಂ.]

ಸರೋಗ (ನಾ). ೧. ಬೇನೆ ; ರೋಗ : "ಸರೋಗಂ ಚಮರೀಮೃಗಂ ಸರಿಸ ಭೂಜಮಿವು ಸರಳಾಖ್ಯ" (ನಾನಾರ. ೬೪). ೨. ರೋಗವುಳ್ಳವನು; ರೋಗಿ : ಸಮಕೊಂಡ ಪುಣ್ಯಮುಂ ಪಾಪಮುಮಿಲ್ಲದಾದೊಡಾಳ್ದನಾಳ್ ಸರೋಗನರೋಗಂ . . . ಎಂಬೀ ಲೋಕಯಾತ್ರೆ ಕಿಡದೆ (ಶಾಂತಿಪು. ೮-೧೪೦); ಶಕಟಭವಂ . . . ಸರೋಗಂ (ಜಾತಕ ೧೩-೧೩). [ಸಂ.]

ಸರೋಚಕ (ನಾ). ಮನೋಹರವಾದುದು : ಮೂವತ್ತೆರಡಂಗಹಾರಮೆಸೆದುವು ಸರೋಚಕಂಗಳ್ ಸುಚಾರಿಗಳ್ ಸುರಪತಿಯಾ (ಅಜಿಪು. ೫-೮). [ಸಂ.]

ಸರೋಜ (ನಾ). ನೀರಿನಲ್ಲಿ ಹುಟ್ಟಿದುದು ; ತಾವರೆ : ಗಂಧರ್ವಲೋಕದ ಸರೋಜಂಗಳಿವೆ ದೇವ (ನಂಬಿರ. ೯-೫೫). [ಸಂ.]

ಸರೋಜನಿಲಯ (ನಾ). ತಾವರೆಯೇ ನೆಲೆಯಾಗಿರುವವನು ; ಬ್ರಹ್ಮ : ಕುಳಗಿರಿಯಂ ಸರೋಜನಿಲಯಂ ಮನುಜಾಕೃತಿಯಾಗಿ ಮಾಡಿದಂತೊಳವೆನಿಪಂತುಟಪ್ಪ ಪೊಸ ಬಣ್ಣದೊಳೊಂದಿದ ಪಾರಿಜಾತಮಗ್ಗಳಮೆಸೆದೊಪ್ಪುವಂತೆ . . . ಕರಮೊಪ್ಪಿದಂ ದಶಸಹಸ್ರಮದೇಭಬಳಂ ವೃಕೋದರಂ (ಪಂಪಭಾ. ೨-೩೮). [ಸಂ.]

ಸರೋಜಪ್ರಭವ (ನಾ). ತಾವರೆಯಲ್ಲಿ ಹುಟ್ಟಿದವನು ; ಬ್ರಹ್ಮ : ಬ್ರಹ್ಮ ವಿಷ್ಣು ಜಿನ ಪ್ರಮುಖರಾದ ವಿಭುಗಳಾರಾರಿಂಗೆ ನಿಜಪದವಿಭವಮಂ ಕೊಟ್ಟರು ಸರೋಜಪ್ರಭವಹರಿಮುಖ್ಯಾಮರಾಸುರನರಮುನೀಂದ್ರರಿಗೆ (ಬಸಪು. ೫೪-೬೬). [ಸಂ.]

ಸರೋಜಮಿತ್ರ (ನಾ). ತಾವರೆಯ ಗೆಳೆಯ ; ಸೂರ್ಯ : ನಿಳಿಂಪವಧೂವಕ್ತ್ರ ಸರೋಜಮಿತ್ರನೆನೆ . . . ಅದೇಂ ನಲಿದನೋ ಕಲ್ಪಾಮರಂ ಕಲ್ಪದೊಳ್ (ಸುಕುಮಾ. ೯೯-೩೫). [ಸಂ.]

ಸರೋಜರಿಪು (ನಾ). ೧. ತಾವರೆಯ ವೈರಿ ; ಚಂದ್ರ : ಸರೋಜಸಖನಿಲ್ಲದಂಬರ ಮನಾದಮುದ್ಯೋತಿಸಲ್ ಸರೋಜರಿಪು . . . ನೆಱೆಗುಂ (ಚಂದ್ರಪ್ರ. ೬-೬೩). ೨. [ಛಂದ] ಒಂದು ಅಕ್ಷರಗಣದ ಹೆಸರು ; ಭಗಣ : ಒಂದಿರೆ ಸರೋಜರಿಪು ಭಾನು [ಪಾಠಾಂ. ಶಶಾಂಕದಿವಸೇಶ] ಮರುದಿಂದ್ರರ್ . . . ಕೇಳ್ ಪೆಸರಿಂ ವನಮಯೂರಂ (ಛಂದೋಂಬು. ೨-೧೪೯). [ಸಂ.]

ಸರೋಜಷಂಡ (ನಾ). ತಾವರೆಗಳ ಸಮೂಹದಿಂದ ಕೂಡಿದುದು; ಕಮಲ ಸರೋವರ : ಕಾಣ್ಬೆರಾ ಬಳಯುತನಂ ಪುರೋಪವನಷಂಡಸಮೀಪ ಸರೋಜಷಂಡದೊಳ್ (ವಂರಾಮಾ. ೭-೧೧೦). [ಸಂ.]

ಸರೋಜಸಂಭವ (ನಾ). = ಸರೋಜಪ್ರಭವ : ಲೋಕಮನೆಯ್ದೆ ಸರೋಜಸಂಭವಂ ಪೊದಿಸಿದ ಪಾಂಡುಕಂಬಳಮಿದೆಂಬವೊಲಾದುದು ಮಂಜಿನುರ್ವರಂ (ಪುಷ್ಪಪು. ೬-೩೮).

[ಸಂ.]

ಸರೋಜಸಖ (ನಾ). = ಸರೋಜಮಿತ್ರ : ಸರೋಜಸಖನೊಯ್ಯನೆ ಪೊರ್ದಿದನಸ್ತ ಶೈಲಮಂ (ಕಾದಂಪು. ೨೭೧) ; ಸರೋಜಸಖನಿಲ್ಲದಂಬರಮನಾದಮುದ್ಯೋತಿಸಲ್ ಸರೋಜರಿಪು . . . ನೆಱೆಗುಂ (ಚಂದ್ರಪ್ರ. ೬-೬೩). [ಸಂ.]

ಸರೋಜಾಂಬಕ (ನಾ). ತಾವರೆಯಂಥ ಕಣ್ಣುಗಳುಳ್ಳವನು ; ಕಮಲಾಕ್ಷ ; ವಿಷ್ಣು : ಬೌದ್ಧಾಕೃತಿಯಿಂದೆ ಯೋಗದೊಳೆ ಕೂಡರ್ದ್ಯ ಸರೋಜಾಂಬಕಾ (ಜಗವಿ. ೧-೬೩). [ಸಂ.]

ಸರೋಜಾಕರ (ನಾ). = ಸರೋಜಷಂಡ : ತತ್ಸರೋಜಾಕರಹೇಮಾಂಭೋಜಿನೀ ಉತ್ಪಲವಿಲಸದಲಂಕಾರಮಾಗಿರ್ದುದಂ . . . ನೋಡಿ ಕಂಡಂ (ಹುಲುಮಾ. ೩-೧೯). [ಸಂ.]

ಸರೋಜಾತ (ನಾ). = ಸರೋಜ : ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪ್ರೌಢಿಸುವ ತತ್ತುಲೀ ಮದುಳನಿ: ಲಾಸೆಲಿ ಬಿಳ್ದಾಗಿಸಲು (ಅಮಿ. ೬-೫೫ ; ೨೨೯೦ ಶ್ರೀಜ್ಞೆನಭಾಸ್ಕತ್ಪ್ರಮಯುಗಲಸರೋಜಾತಭೃಂಗಂ (ಸುಕುಮಾ. ೧-೫೫). [ಸಂ.]

ಸರೋಜಾತಜಾಂಡ (ನಾ). ಬ್ರಹ್ಮಾಂಡ : ಬಳಸುತ್ತಂ ಕೀರ್ತ್ತಿಸುತ್ತುಂ ಸುಳಿದು ಸುಳಿದು ತರ್ಕ್ಕಿಸಿರಲ್ ಕೂಡೆ ಶೇಷೋಜ್ಜ್ವಳಕಾಯಂ ತೀವಿದಾ ವೇಳಿಗವೊಲಿರೆ ಸರೋಜಾತಜಾಂಡಂ (ಎಕ. V, ಹಾಸನ. ೫೩-೧೬ ; 1170). [ಸಂ.]

ಸರೋಜಾಸನ (ನಾ). ಕಮಲವೇ ಪೀಠವಾಗಿರುವವನು ; ಬ್ರಹ್ಮ : ಗತಿಮಾರ್ಗಂ . . . ಧಂದಮಾಣತಿ ಶಾರೀರಮೆನಿಪ್ಪ ಗೀತದೆಡೆಯೊಳ್ ರೇಚಂ ಸರೋಜಾಸನಂ (ಮುಪ್ರ. ೧-೨೪) ; ನರಕನಾತಂ ಲೋಕಸಂಹಾರಮೂರ್ತಿ ದಶಾಸ್ಯಾದಿಗಳಿಂ ಬಲಾಧಿಕನದಂ ಬಲ್ಲಂ ಸರೋಜಾಸನಾ (ಜಗವಿ. ೧-೬೯). [ಸಂ.]

ಸರೋಜಿನಿ (ನಾ). ೧. ಕಮಲದ ಬಳ್ಳಿ. ೨. ಕಮಲಗಳ ಸಮೂಹ. ೩. ಕಮಲಗಳಿಂದ ತುಂಬಿದ ಸರೋವರ : ಇದು ಸಕಳಸುಕವಿಜನಮನಸ್ಸರೋಜಿನೀ ರಾಜಹಂಸಾಯಮಾನಾನೂನಕವಿತಾಗುಣೋದಯಂ (ಕಾವ್ಯಾವ. ೪೭೭ ಗದ್ಯ). ೪. ಕಮಲ. [ಸಂ. ಸರೋಜಿನೀ]

ಸರೋಜಿನೀಪತಿ (ನಾ). ಕಮಲಗಳ ಒಡೆಯ ; ಸೂರ್ಯ. [ಸಂ.]

ಸರೋಜಿನೀವನ (ನಾ). ಕಮಲಗಳ ಗುಂಪು : ಸರಸಿಜಬಾಂಧವನಸ್ತಾಂತರಗತನಾಗಿರೆ ಸರೋಜಿನೀವನಮೂದಂ ಕೊರಗುತ್ತೆ ಮುಗಿಗುಂ (ಕವಿಪಾ. ೩-೬೧). [ಸಂ.]

ಸರೋಜೇಕ್ಷಣ (ನಾ). = ಸರೋಜಾಲಬಕ : ಸರೋಜೇಕ್ಷಣನತ್ತಲೊಂದೆಡೆಯೊಳಾಯಿರ್ದಪ್ಪನೆಮ್ಮಗ್ರಜಂ (ಜಗವಿ. ೩-೧೪). [ಸಂ.]

ಸರೋದ್ (ನಾ). ಒಂದು ಬಗೆಯ ತಂತೀವಾದ್ಯ : ಅವರು ಹಸಲಾಂತ ಸರೋದ್ ವಾದಕರು (ರೂಢಿ). [← ಹಿಂ. ಸರೋದ್ ; ಮರಾ. ಸರೋದ್, ಸರೋದಾ]

ಸರೋಧಿ (ನಾ). ಕಡಲು ; ಸಮುದ್ರ : ಬೆಳಗು ಹಳಪಳನೆ ಮೊಳೆತುದು . . . ಅಳಿಯ ಸಆಬಿಟ್ಟುದು ಧರಾಜನದ ಕಣ್ಣ ಬಲಿ ತಿಳಿದುವು ಸರೋಧಿ [ಪಾಠಾಂ. ಸರೋಜ. ಸಿರೋಧಿ] ಮೈದಗೆದುದು (ಸಿದ್ಧರಾ. ೭-೪೫) ; ವಿತತಚತುರಂಗಬಳಸಂಯುತನತಿಸಾಹಸಿ ಸರೋಧಿಮಧ್ಯಸ್ಥನುದ್ಧತನಾ ಸಿಂಹಳಂ (ರಾಜಶೇ. ೫-೧೫೧). [ಸಂ.]

ಸರೋನಿಧಿ (ನಾ). = ಸರೋಧಿ : ಎಮಗಿಲ್ಲ ಭೇದಮಿನ್ನೆನ್ನ ಮಗಂಗ ಕಾಯದಿರನುತ್ತ ಸರೋನಿಧಿ ಬಂದ ಭಾನುವಂ ಮನ್ನಿಸುತಿತ್ತ ಪೀತವಸನಂ ನಿಜಮೆಂದೆನ ಸಂಜೆ ರಂಜಿಕುಂ (ರಾಜಶೇ. ೧೧-೯). [ಸಂ.]

ಸರೋಭವ (ನಾ). = ಸರೋಜ : ಶಿವಲಿಂಗಾಂಘ್ರಿಯನೊಲ್ದು ಪೂಜಿಸಿದಂ . . . ಸರೋಭವಮುಖ್ಯಪ್ರಸವಾತಿಶೋಭಿತಸುಗಂಧಾಚ್ಛಾಕ್ಷತ . . . ಗೀತವಾದ್ಯರವದಿಂ ಭೂಭಾಮಿನೀಭೂಷಣಂ (ರಾಜಶೇ. ೧೦-೫೮). [ಸಂ.]

ಸರೋರುಹ (ಗು). ೧. ಸರೋವರದಲ್ಲಿರುವ : ಅತಿಥಗಳಿಂದ ಸಕಲಸರೋರುಹಾಂಬುವನೊಂದ ಶ್ವಾಸದಲೀಂಟದನು ಶಂಕಿಸದು ಕೋಪಾಗ್ನಿ (ಕಾವ್ಯಾಕ. ೧೯-೧೧). (ನಾ). ೨. = ಸರೋಜ : ಕವಿಚಿತ್ತ ಸರೋರುಹಾಕರಾವಸ್ಥಿತಹಂಸನೆಂಬುದು ಸಮಸ್ತಮಹೀಜನಮಿನ್ನರಾಜನಂ (ಎಕ. 11,೧೩೬-೪೨ :982) ; ನೀರ ತಾರ್ಕೆ ಹೋಗು ನಕುಲ ಸರೋರುಹದ ಪತ್ರದಲಿ (ಕಾವ್ಯಾಳ. ೨೩-೨). [ಸಂ.]

ಸರೋರುಹಾಕರ (ನಾ). = ಸರೋಜಷಂಡ : ನೀಮಾ ಸರೋರುಹಾಕರದೊಳ್ ಮಿಂದಾದಿತ್ಯಂಗರ್ಘ್ಯಮನೆತ್ತುವಾಗಳ್ ಬೆರಲಿಂ ಸಡಿಲ್ದು ಬೀಳ್ದು ತತ್ಸರೋರುಹಾಕರದೊಳಗಣ ಸರೋಜಕುಟ್ಮಲದೊಳ್ ಸಿಲ್ಕಿರ್ದುದು (ಪಕುಮಾ. ೩-೧೪ ವ). [ಸಂ.]

ಸರೋರುಹಿಣೀವನ (ನಾ). = ಸರೋಜಿನೀವನ : ಸರೋರುಹಿಣೀವನಂಗಳೊಳ್ ವಲಿ ತಲೆದೋಱದಂತು . . . ಎಲರೊಲವುಣ್ಮೆ ತೀಡಿದುದು (ಚಂದ್ರಪ್ರ. ೨-೧೦೫). [ಸಂ.]

ಸರೋವನ (ನಾ). ಸರೋವರದ ನೀರು : ತೋಡಿದನ್ ತನ್ನೆದೆಯ ಭಾವಾಭಿಲಾಷೆಯು ಸರೋವನಂ ಕೋಡಿವರಿಯಲ್ಕೆ (ಶ್ರೀರಾಮಾ. ೧೬-೪೬೫). [ಸಂ.]

ಸರೋವರ (ನಾ). ಕೊಳ ; ಸರಸ್ಸು : ದೀನಜನತಾಕಲ್ಪಾಂಭ್ರಿಪಂ ವನಕರಿ ಕದಡಿ ತಿಳಿದ ಸರೋವರದಂತೆ ಪ್ರಸನ್ನಾಂತರಂಗನಾಗಿರ್ಪನ್ನೆಗಂ (ಶಾಂತಿವ್ರ. ೫-೧೪೮ ಪ) ; ನೀರಿಸೆವಂತಗುಬಿಸುವುದು ಕೂಪ ಸರೋವರ ದೀರ್ಘಿಕಾ ತಟಾಕಂಗಳುಮಂ (ಲೋಕೋಪ. ೫-೩). [ಸಂ.]

ಸರೋವಾಪಿ (ನಾ). = ಸರೋವನ : ನಿಯಮದಲಿ ಕಾಮಿನಿ ಸರೋಜಾಲಿಯಲಿ ಮಿಂದಳು (ಕುಮ್ಮಟ. ೪-೧೭). [ಸಂ.]

ಸರೋಷ (ಗು). ೧. ಕೋಪದಿಂದ ಕೂಡಿದ ; ಕುಪಿತಗೊಂಡ : 'ಸರೋಷಮತಿ' ಪರಾ. (ನಾ). ೨. ಕೋಪ ; ರೋಷ : ತೆಗೆದಚ್ಚನು ಸರೋಷದಲಿ (ಕೃಕರ್ಣಾ. ೧೧-೬೪). [ಸಂ.]

ಸರೋಷಮತಿ (ನಾ). ಕುಪಿತನಾದವನು : ಇಡೆ ಪಣಯನಡಸಿ ಕಂದಮು ನೊಡದುಚ್ಚಳಿಸಿರೆ ಸರೋಷಮತಿ ಮಗುಳ್ದಿದಿರಂ ನಡದದಱಿನಿಸ ಮೊನಯಿಂದೂಡ ನಿಕ್ಕಿತು ಪಾಯ್ದು ಪಂದಿಯವನಂ (ರಾಜಶೇ. ೫-೯೧). [ಸಂ.]

ಸರ್ಕರೆ 'ಸಕ್ಕರೆ' ನೋ.

ಸರ್ಕಸ್ 'ಸರ್ಕಸ್ಸು' ನೋ.

ಸರ್ಕಸ್ಸು, ಸರ್ಕಸ್ (ನಾ). ಮನುಷ್ಯರ ನಾನಾಬಗೆಯ ಕಸರತ್ತುಗಳ ಹಾಗೂ ತರಬೇತು ನೀಡಿದ ಪ್ರಾಣಿಗಳ ವಿವಿಧಬಗೆಯ ಆಟಗಳ ಪ್ರದರ್ಶನ ಮತ್ತು ಅವುಗಳನ್ನು ಪ್ರದರ್ಶಿಸುವ ಸ್ಥಳ : ನಾಟಕದವರು, ಸರ್ಕಸ್ಸಿನವರು, ಚಿತ್ರದರ್ಶಕರು. ಮತಬೋಧಕರು ಇತ್ಯಾದಿಗಳಿಗೊಂದು ಸುಗ್ಗಿಯ ಕಾಲ (ಹುಟ್ಟಿಹ. ೭೪) ; ಈ ಹೆಣ್ಣಿನೂಂತಾಸಿ ನನಗೆ ಭಯಂಕರ, ನಾನು ಸರ್ಕಸ್ಸಿನ ಮೇಕೆ (ಇಂಚಾಪ. ೧೫೭-೭೧). **ಸರ್ಕಸ್** : ಸಿಂಹ ಸರ್ಕಸ್‌ನಲ್ಲಿ ಕಸರತ್ತನ್ನು ಮಾಡಬಲ್ಲುದು (ಜೀಚಾಮ್ಮ. ೨೦೯) ; ಮಳೆಯ ಪಂಜರದಲ್ಲಿ ಸೆರೆಯಾಗಿಹವು ಸರ್ಕಸ್ ಹುಲಿಗಳು (ನಲಮು. ೧೨-೨೧). [← ಇಂ. Circus]

ಸರ್ಕಾರ, ಸರಕಾರ (ನಾ). ೧. ಒಂಬು ದೇಶ ಅಥವಾ ರಾಜ್ಯದ ಆಡಳಿತವನ್ನು ನಡೆಸುವ ಸಂಸ್ಥೆ : ನಮ್ಮೂರಿನ ವ್ಯಾಜ್ಯಗಳು ಸರ್ಕಾರದವರೆಗೆ ಹೋದದ್ದೇ ಅಪರೂಪ (ಹುಟ್ಟಿಹ. ೧೪) ; ಜಗದೀಶನಿಗೇನೋ . . . ಸರ್ಕಾರದಲ್ಲಿ ಉಚ್ಚ ಅಧಿಕಾರಿಯಾಗ ಬೇಕಂಬ ಹಂಬಲ (ಸಸ್ಮ. ೯೫). **ಸರಕಾರ** : ೧. ತಳ್ಳಿ ತಗಾದಿ ಮಾಡಿ ಸರಕಾರಕ್ಕೆ ಹೊನ್ನ ಕೊಟ್ಟವರು (ಪಚಶಾ. ೩೩೧-೧೦) ; ಭೂಮಿಯಂನ್ನು ಅನುಭವಿಸಿಕೊಂಡು ಸರಕಾರದ ಹಣವಂನ್ನು ತೆತ್ತುಕೊಂಡುಬಹುದು (ಎಕ. VIII, ಸಾಗರ. ೪೬-೨೮ ; 1648) ; ದೇಶದಲ್ಲಿ ಎಲ್ಲರನ್ನೂ ಆಳುವ ಮತ್ತು ಕಾಪಾಡುವ ಏರ್ಪಾಟೇ ಸರಕಾರ (ರಾಜ್ಯಶಾ. ೭೩). ೨. ಒಡೆಯ; ಮುಖ್ಯಸ್ಥ; ಪ್ರಭು : ಸರಕಾರ, ಈಗ ನನ್ನಲ್ಲಿ ಕಸರಾದರೂ ಏನು ಉಳಿದಿದೆ? (ಜಪಾಸ್ವಾ. ೧೩೫). [← ಪಾರ. ಸರಕಾರ್, ಸರ್ಕಾರ್ ; ಹಿಂ. ಮರಾ. ಸರಕಾರ್]

ಸರ್ಕಾರಿ, ಸರಕಾರಿ (ಗು). ಸರಕಾರಕ್ಕೆ ಸಂಬಂಧಪಟ್ಟ ; ಸರ್ಕಾರದ ವ್ಯವಸ್ಥೆಗೆ ಒಳಪಟ್ಟ : ಸರ್ಕಾರಿ ಕೆಲಸದಲ್ಲಿದ್ದಾಗ ಉದ್ದಕ್ಕೂ ನನ್ನ ಮೇಲಿನ ಅಧಿಕಾರಿಗಳು ಸ್ವಲ್ಪ ಜನರ ಸಂಗಡ ಭಿನ್ನಾಭಿಪ್ರಾಯಕ್ಕೋಸ್ಕರ ಮನೋವಿಕಾಸಕ್ಕೊಳಗಾದೆ (ಚಿಂಗಾಳ್ಳ, ii, ಮುನ್ನುಡಿ). **ಸರಕಾರಿ** : ಸದಾಶಿವರಾಯರು . . . ಸರಕಾರಿ ಶಾಲೆಯ ಶಿಕ್ಷಕರಾದರು (ಇಂಚಾಪ. ೬-೧೯) ; ಆ ಊರಿಗೆ ಒಬ್ಬ ಹೊಸ ಸರಕಾರಿ ಡಾಕ್ಟರರು ಆಗಮಿಸಿದ್ದರು (ಫಲಸಂ. ೩೩). [← ಪಾರ. ಸರಕಾರೀ, ಸರ್ಕಾರೀ; ಹಿಂ. ಮರಾ. ಸರಕಾರೀ]

ಸರ್ಕಾರಿನೌಕರಿ, ಸರಕಾರಿನೌಕರಿ (ನಾ). ಸರಕಾರದ ಉದ್ಯೋಗ, – ಕೆಲಸ : ಅವರು ಇದುವರೆಗೂ ಸರ್ಕಾರಿನೌಕರಿಯಲ್ಲಿದ್ದು ನಿವೃತ್ತರಾದವರು (ರೂಢಿ). **ಸರಕಾರಿನೌಕರಿ** : ಆದರೂ ಎಲ್ಕಾರ ಸರಕಾರಿನೌಕರಿ ನೋಡಿದ್ದರ ಆಗತಿತ್ತು (ಮೃನಿ. ೧೩). [ಸರ್ಕಾರಿ + ನೌಕರಿ. / ಮರಾ. ಸರಕಾರೀನೋಕರೀ]

ಸರ್ಕಿಟ್ 'ಸರ್ಕೀಟು' ನೋ.

ಸರ್ಕೀಟು, ಸರ್ಕಿಟ್, ಸರ್ಕ್ಯೂಟ್ (ನಾ). ಆಡಳಿತ ನಿಮಿತ್ತವಾಗಿ ಅಧಿಕಾರಿಗಳು ಕೈಗೊಳ್ಳುವ ಸಂಚಾರ : ಅಮಲ್ದಾರರು ಸರ್ಕೀಟಿನಿಂದ ಹಿಂದಕ್ಕೆ ಬಂದ ಮೇಲೆ ನಿಮ್ಮ

ಅರ್ಜಿಯನ್ನು ನೋಡುತ್ತಾರೆ (ಮಧ್ಯಮ. ೧೬೫) ; ಸಾಹೇಬರ ಸರ್ಕೀಟು ಜೂನ್ ತಿಂಗಳಲ್ಲಿ (ಮಗಮಾಂ. ೬೨). **ಸರ್ಕಿಟ್** : ಅಮಲ್ದಾರರಿಗೆ ತಿಂಗಳಿಗೆ ಒಂದು ಬಾರಿ ಸರ್ಕಿಟ್ ತಿರುಗುವ ಸಂಪ್ರದಾಯವಿತ್ತು (ಪಂಚನಿ. ೧೦೪). **ಸರ್ಕ್ಯೂಟ್** : ರಾಜಾರಾಯರು ಜಮಾಬಂದಿ ಕೆಲಸಕ್ಕೋಸ್ಕರ ಸರ್ಕ್ಯೂಟ್ ಹೋಗಿದ್ದಾರೆ (ಇಬದು. ೨೩). [← ಇಂ. Circuit]

ಸರ್ಕ್ಯೂಟ್ 'ಸರ್ಕೀಟು' ನೋ.

ಸರ್ಗ$_1$ 'ಸಗ್ಗ' ನೋ.

ಸರ್ಗ$_2$ (ನಾ). ೧. ಬಿಡುವಿಕೆ ; ತ್ಯಾಗ. ೨. (ಮಲಮೂತ್ರಗಳ) ವಿಸರ್ಜನೆ. ೩. ಸೃಷ್ಟಿ ; ನಿರ್ಮಾಣ. ೪. ಜಗತ್ತಿನ ಸೃಷ್ಟಿ, — ಉತ್ಪತ್ತಿ ; ☞ ಇದರ ವರ್ಣನೆ ಪುರಾಣದ ಪಂಚಲಕ್ಷಣಗಳಲ್ಲಿ ಒಂದು : 'ಪ್ರತಿಸರ್ಗ' ಪರಾ. ೫. ವಿಶ್ವ ; ಬ್ರಹ್ಮಾಂಡ. ೬. ಸ್ವಭಾವ ; ನೈಸರ್ಗಿಕಗುಣ, — ಪ್ರವೃತ್ತಿ. ೭. ಮುನ್ನುಗ್ಗುವಿಕೆ ; ದಾಳಿ ; ಆಕ್ರಮಣ. ೮. ನಿರ್ಧಾರ ; ನಿಶ್ಚಯ. ೯. ಒಪ್ಪಿಗೆ ; ಸಮ್ಮತಿ. ೧೦. ಗುಂಪು ; ಸಮೂಹ : ಶಲ್ಯ ಪಾರ್ಥರ . . . ನಿರುಪಮಾಸ್ತ್ರಪ್ರೌಢಿಯನು ದುರ್ಧರ ಶಿಳೀಮುಖ ಸರ್ಗಬಂಧಸ್ಫುರಣವನು ಹಿಂದೀಸುದಿನ ಕಾಣೆನು ರಣಾಗ್ರದಲಿ (ಕುಮಾಶ. ೨-೪೮). ೧೧. ಬಾಣ. ೧೨. ಕಾವ್ಯ ಮೊದಲಾದುವುಗಳ ಒಂದು ಭಾಗ ; ಅಧ್ಯಾಯ ; ಪ್ರಕರಣ : ಒಂದು ಸರ್ಗಮನೊಂದು ಪದ್ಯಮನಲ್ಲದೊಡೊಂದು ಪಾದವನೋದಿದೊಡೆ ಅಂದಂದಿನೊಳೆಸಗಿದ ಪಾಪಂಗಳಂದಂದಿಗೆ ಪರಿಹರಿಸುವುವು (ಹದಿಬ. ೯-೪೨). ೧೩. ಶಿವನ ಒಂದು ಹೆಸರು. ೧೪. ಮೂರ್ಛೆ ; ಮೋಹ.

[ಸಂ.]

ಸರ್ಗಬಂಧ (ನಾ). [ಕಾವ್ಯಮಿಾ] ಎಂಟಕ್ಕಿಂತಲೂ ಹೆಚ್ಚು ಸರ್ಗಗಳನ್ನುಳ್ಳ, ಮಹಾಕಾವ್ಯಲಕ್ಷಣಗಳಿಂದ ಕೂಡಿದ ಕಾವ್ಯ ; ಮಹಾಕಾವ್ಯ : ದೊರೆವತ್ತ ಪದ್ಯದಿಂದಂ ವಿರಚಿಸಿದುದು ಸರ್ಗಬಂಧಮಕ್ಕುಂ ಕಾವ್ಯಂ (ಕಾವ್ಯಾವ. ೯೫೦). 'ಮಹಾಕಾವ್ಯ' ಪರಾ. [ಸಂ.]

ಸರ್ಗಸ್ತ 'ಸಗ್ಗಸ್ತ' ನೋ.

ಸರ್ಜ$_1$ (ನಾ). ೧. ಒಂದು ಬಗೆಯ ಮರ ; ರಾಳದ ಮರ ; ಸಾಲವೃಕ್ಷ : "ಶಾ(ಸಾ)ಲಃ, ಸರ್ಜಃ - ಈ ೨ ಸಾಲವೃಕ್ಷಂ" (ಹಲಾಯು. ೩೨-೪೨). ೨. ರಾಳ. [ಸಂ.]

ಸರ್ಜ$_2$, ಶರಜಾ (ನಾ). ೧. ಸಿಂಹ : 'ಸರ್ಜಪಾರ್ಕೆ' ಪರಾ. ಶರಜಾ : ೨. ಒಂದು ಪದವಿ, — ಹುದ್ದೆ.

ಶರಜಾರಾಯ = ಒಂದು ನಿರ್ದಷ್ಟಪದವಿಯನ್ನು ಹೊಂದಿದವನು, — ಬಿರುದನ್ನು ಪಡೆದವನು : ರಾಯಸದ ಶಂಕರನಾರಣಯ್ಯಂಗೆ ಶರಜಾರಾಯನೆಂದು ಪೆಸರಿತ್ತುಚಿತಮಾದುದುಗೊರೆ ವೀಳ್ಯಂಗಳನಿತ್ತು . . . ಕಳುಪಲ್ (ಕೆಳನೃ. ೬-೨೯).

[← ಪಾರ. ಸರಜಾ, ಶರ್ಝಾ ; ಹಿಂ. ಸರಜಾ ; ಮರಾ. ಸರಜಾ, ಸರ್ಜಾ ; ಸರ್ಜಾರಾವ್, ಸರ್ಜೀರಾವ್ = ಒಂದು ಪದವಿ]

ಸರ್ಜಕ (ನಾ). = **ಸರ್ಜ$_1$** ೧. [ಸಂ.]

ಸರ್ಜಕ್ಷಾರ, ಸದ್ಯಕ್ಷಾರ (ನಾ). (ಅಶುದ್ಧವಾದ) ಸೋಡಿಯಂ ಕಾರ್ಬೋನೇಟು ಎಂಬ ಖನಿಜದ್ರವ್ಯ ; **ಸರ್ಜಿಕಾಕ್ಷಾರ** : ಯವಕ್ಷಾರ, ಸರ್ಜಕ್ಷಾರ, ಜಟಾಮಾಂಸಿ ಇವನ್ನು ಬಗೆಯೊಂದಕ್ಕೆ ೧ ಪಲದಂತೆ ಹಾಕಿ (ಸಕಸೃ. ೪೪೧ ಪರಿ). **ಸದ್ಯಕ್ಷಾರ** : "ದ್ವಿಕ್ಷಾರ,- ಸದ್ಯಕ್ಷಾರ, ಯವಕ್ಷಾರ" (ಓಷಧಿ. ೭೫) ; ಸದ್ಯಕ್ಷಾರ, ಯವಕ್ಷಾರ, ಲೋಳಿಸರ . . . ಓಮ ಇವೆಲ್ಲವನ್ನು ಪ್ರತ್ಯೇಕ ಒಂದೊಂದು ಚೂರ್ಣಮಾಡಿ (ವೈದ್ಯವಿ. ೫೦) ; ಶುಂಠಿ, ಹಿಪ್ಪಲಿ, ಮೆಣಸು . . . ಸದ್ಯಕ್ಷಾರ ಸಹ ಸಮಾನಚೂರ್ಣಂ ಮಾಡಿ (ಸಕಸೃ. ೧೮೦). 'ಸಜ್ಜೀಕಾರ' ಪರಾ. [< ಸಂ. ಸರ್ಜಿಕ್ಷಾರ]

ಸರ್ಜನ (ನಾ). ಸೃಷ್ಟಿಸುವಿಕೆ ; ಸೃಜನ : ಋಷಿಯ ವರ್ಣನೆಯಂತೆ ಜಡಪ್ರಾಣಿಕ್ಕೆ ಈ ವಿಶ್ವಬ್ರಹ್ಮಾಂಡದ ಸರ್ಜನ ಧಾರಣಶಕ್ತಿಯಿಲ್ಲ (ಭಾರದ. ೪೩). [ಸಂ.]

ಸರ್ಜಪಾರ್ಕೆ (ನಾ). ಸಿಂಹದ ವೇಗ, — ಗತಿ : ತುರಂಗವೇಗದಿಂದಮಿಾ ತುರಂಗ ಸರ್ಜಪಾರ್ಕೆಯಂ ತುರಂಗದಂತೆ ನಿಲ್ಲಲಾ ಕರೀಂದ್ರ ಪೊದ್ದ ವಸ್ತ್ರದಾ ಸೆರಂಗನೌಕೆ ರಾವುತರ್ಕರಂಗಳೆತ್ತಿ ಭಾಪೆನಲ್ ವರಾಂಗನಾಕ್ಷಣಕ್ಕೆ ಪಿಂತಿರುಂಗಿಸಿರ್ದನಶ್ವಮಂ (ಬೀಳವಂ. ೧-೧೪೯). [**ಸರ್ಜ$_2$** + ಪಾರ್ಕೆ]

ಸರ್ಜರಸ (ನಾ). ಸಾಲವೃಕ್ಷದ ಅಂಟು ; ಸಜ್ಜರಸ ; ಲೋಬಾನ : ಸರ್ಜರಸ ಕರ್ಪೂರವೆಂಬ ದಶಾಂಗಗಳಂ (ವೈದ್ಯಕ. ೧೦೫). [ಸಂ.]

ಸರ್ಜಾಂಗ (ನಾ). ಸಿದ್ಧವಾದ ಅಂಗ ; ಸಜ್ಜಾದ ದೇಹ (?) : ಈಟಿಯ ಸುರಗಿಯ ಕುಂತದ ಕಟ್ಟಿದ ಕೈವಲಗೆ ನಂಕಿಸಿದಸಿದಡೆ ಸಬಳಂ ತೊಟ್ಟು ಸರ್ಜಾಂಗದಿಂದಂ ಕಟ್ಟಾಳುಗಳ್ಕೆದೆವಂದರತಿಧರದಿಂದಂ (ಬೀಳವಂ. ೧-೩೦). [< ಸಜ್ಜು + ಅಂಗ$_2$]

ಸರ್ಜಿಕಾಕ್ಷಾರ (ನಾ). = **ಸರ್ಜಕ್ಷಾರ**. [ಸಂ.]

ಸರ್ಜಿಕೆ (ನಾ). = **ಸರ್ಜಕ್ಷಾರ**. [ಸಂ. ಸರ್ಜಿಕಾ]

ಸರ್ಟಿಫಿಕೇಟ್ 'ಸರ್ಟಿಫಿಕೇಟು' ನೋ.

ಸರ್ಟಿಫಿಕೇಟು, ಸರ್ಟಿಫಿಕೇಟ್ (ನಾ). ಅರ್ಹತಾಪತ್ರ ; ಪ್ರಮಾಣಪತ್ರ : ಇವನು ಪಾಸಾಗಿದ್ದಾನೆ ಒಳ್ಳೆಯ ಹುಡುಗ ಎಂದು . . . ಸರ್ಟಿಫಿಕೇಟನ್ನೂ ಕೊಡಬೇಕು (ಮುಂಗಾಮು. ೩೪). **ಸರ್ಟಿಫಿಕೇಟ್** : ತೇರ್ಗಡೆಯಾಗಿ ಸರ್ಟಿಫಿಕೇಟ್ ಕೈಗೆ ಬಂದರೆ ಸಾಕಪ್ಪ (ಜೀವಾತ್ಮ. ೨೧೬). [← ಇಂ. Certificate]

ಸರ್ತಿ 'ಸರದಿ$_3$' ನೋ.

ಸರ್ತು 'ಸರದಿ$_3$' ನೋ.

ಸರ್ದಾರ್ 'ಸರದಾರ' ನೋ.

ಸರ್ದಾರ 'ಸರದಾರ' ನೋ.

ಸರ್ದಿ 'ಸರದಿ$_2$' ನೋ.

ಸರ್ದೇಶಮುಖಿ 'ಸರದೇಶಮುಖಿ' ನೋ.

ಸರ್ಪ (ನಾ). ೧. ಹಾವಿನಂತೆ ಅಂಕುಡೊಂಕಾಗಿ ಚಲಿಸುವಿಕೆ ; ವಕ್ರಗಮನ. ೨. ಹರಿಯುವಿಕೆ ; ಚಲನೆ. ೩. ಹಾವು ; ಫಣಿ : "ಉರಗಂ ಭೋಗಿ ಸರೀಸೃಪಂ . . . ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ" (ಪಪ್ರಕೋ. ೧೯-೬) ; ಶ್ರೀ ಬಾಳಾ ಮೇಲ್ ಸಿಖಿ ಮೇಲೆ ಸರ್ಪದ ಮಹಾದನ್ತಾಗ್ರದುಳ್ ಸಲ್ಪವೋಲ್ ಸಾಮಾಮ್ಬಾಲ ತಪೋಗ್ರದಿನ್ತು ನಡೆದೊಂ ನೂಱೆಂಟು ಸಂವತ್ಸರಂ . . . ಕಳನ್ದೂರನಂ ಬಾಲೇ ಪೆರ್ಗ್ಗೋರವಂ ಸಮಾಧಿ ನೆಱೆದೊನ್ (ಎಕ. II. ೨೨-೧ ; 700) ; ಹುತ್ತಕ್ಕೆ ಏಸು ಬಾಯಾದರೇನು ಸರ್ಪನಿರ್ಪುದು ಒಂದೇ ಸ್ಥಾನ (ಬಸವ. ೯೫೧) ; ಶಪಿಸದನಂದಗಸ್ತ್ಯಮುನಿ ಸರ್ಪಗತಿ ಸರ್ಪತ್ವವೆನೆ ಫಡ ಸರ್ಪ ನೀನಾಗೆಂದರು (ಕುಮಾಶ. ೧೩-೬೮) ; ಸರ್ಪನ ಕೂಡ ಸರಸವೇ? (ಗಾದೆ). 'ಕಾಲಸರ್ಪ', 'ಸರ್ಪದಷ್ಟ' ಪರಾ. ೪. ನಾಗಕೇಸರ ವೃಕ್ಷ. ೫. ಐದು ಮಂತ್ರಿನರಕಗಳಲ್ಲಿ ಒಂದು : ಸರ್ಪ ಕೂರ್ಮ ವಾಯಸ ಗೃಧ್ರ ಉಲೂಕವೆಂಬೈದು ಮಂತ್ರಿನರಕಂಗಳಂ ಸಂಯೋಜಿಸಿ ಪದ್ಮವೆಂಬರಸುನರಕವಿಹುದು (ವೈದ್ಯಕ. ೧೮೦). ೬. [ಜ್ಯೋತಿ] ಆಶ್ಲೇಷಾನಕ್ಷತ್ರ : 'ಸರ್ಪನಕ್ಷತ್ರ' ಪರಾ. [ಸಂ.]

ಸರ್ಪಕಂಕಣ (ನಾ). ಹಾವನ್ನು ಕೈಕಡಗವಾಗಿ ಧರಿಸಿಕೊಂಡವನು ; ಶಿವ : ಬೊಮ್ಮಿದೇವನು ಸರ್ಪಕಂಕಣ [ಪಾಠಾಂ. ಕಟಕನ] ಭಕ್ತಿಯುಕ್ತನು (ಬಸಪು. ೩೧-೧).

[ಸಂ.]

ಸರ್ಪಕಾವಲು 'ಸರ್ಪಗಾವಲು' ನೋ.

ಸರ್ಪಗಂಧಿ (ನಾ). ಒಂದು ಬಗೆಯ ಸಸ್ಯ : ಸೂತ್ರನಾಭಿ, ಸರ್ಪಗಂಧಿ, ಪಾತಾಳಗಂಧಿ, ಶಿವನಾಭಿವಳ್ಳಿ (ಮೃಚಿಗಿ. ೬೬-೧೩೪೧) ; ಇಲ್ಲಿ ಸರ್ಪಗಂಧಿ . . . ಎಂಬ ಗಿಡ ಬೆಳೆಯುತ್ತದೆ (ಹಸುಹೊ. ೧೬೪). [< ಸಂ. ಸರ್ಪಗಂಧಾ]

ಸರ್ಪಗಮನ (ನಾ). ಹಾವಿನಂತೆ ಅಂಕುಡೊಂಕಾದ ಗತಿ : ಎಲ್ಲೆಲ್ಲಿಂದಲೋ ಸರ್ಪಗಮನದಿಂದ ಕಣ್ಣು ಕೋರೈಸುವಂತೆ ಹೊಳೆದು ಬಂದು ಅದರ ಪ್ರವಾಹಕ್ಕೆ ಸೇರುತ್ತಿದ್ದ ಝರಿಗಳ ದಡಗಳನ್ನೂ . . . ಗರಿಕೆಯ ಹಾಸು ಅಲಂಕರಿಸಿತ್ತು (ಯೋಧವು. ೪೩). [ಸಂ.]

ಸರ್ಪಗಾವಲು, ಸರ್ಪಕಾವಲು (ನಾ). (ಆಲಂ) (ಸರ್ಪವು ಕಾಯುವಂತೆ) ಬಿಗಿಯಾದ ಕಾವಲು ; ವಿಶೇಷವಾದ ಕಾವಲು : ನನ್ನ ಮೇಲೆ ಸರ್ಪಗಾವಲಿಡುತ್ತಾಳೆ (ಹೂಹಣ್ಣು. ೭೬). **ಸರ್ಪಕಾವಲು** : ಸುಂದರಿ ಮಾತ್ರ ಅವಳನ್ನು ಗೋದಿಯ ಹಿಂದೆ ಸರ್ಪಕಾವಲಾಗಿ ಇರುವಂತೆ ಕೇಳಿಕೊಂಡಿದ್ದಳು (ಹಳ್ಳಿಹಾ. ೯೯).

[**ಸರ್ಪ** + ಕಾವಲು (< ಕಾವಲ್$_1$)]

ಸರ್ಪಣ (ನಾ). ೧. ತೆವಳುವಿಕೆ ; ಜಾರುವಿಕೆ. ೨. ಅಂಕುಡೊಂಕಾದ ಚಲನೆ ; ವಕ್ರಗಮನ : ''ಸರ್ಪಣ - ಡೊಂಕುನಡೆ'' (ಕಾಶ್ಯ. ೭೭). ೩. ನೆಲಕ್ಕೆ ಸಮಾನಾಂತರವಾಗಿ ಹೋಗುವ ಬಾಣದ ಗತಿ. [ಸಂ.]

ಸರ್ಪಣಿ 'ಸರಪಳಿ' ನೋ.

ಸರ್ಪತನ (ನಾ). ಸರ್ಪವಾಗಿರುವಿಕೆ ; ಹಾವಾಗಿರುವುದು : ಸರ್ಪತನದನುಭವಕೆ ಕಡೆಯೆಂದಪ್ಪುದೆನೆ ಧರ್ಮಜನ ವರವಾಗ್ಮರ್ಪಣದಲಹುದೆಂದನು (ಕುವ್ಯಾಖ. ೧೩-೭೮).

[ಸರ್ಪ + - ತನ]

ಸರ್ಪತುಂಡಿಕ (ನಾ). ಹಾವಾಡಿಗ : ''ಸರ್ಪತುಂಡಿಕನೆನಲು ಹಾವಾಡಿಗನೆನಿಸಿಕ್ಕು'' (ಮಂಗರಾ. ೧೧೫-೫೮). 'ಅಹಿತುಂಡಿಕ' ಹೋ. [ಸಂ.]

ಸರ್ಪದಷ್ಟ (ನಾ). ೧. ಹಾವು ಕಚ್ಚುವಿಕೆ ; ಹಾವಿನ ಕಡಿತ : ವಸುಮಿತ್ರನೆಂಬೊಂಗೆ ಸರ್ಪದಷ್ಟಮಾದೊಡೆ (ವಡ್ಡಾರಾ. ೧೪-೨೨) ; ಹುತ್ತದ ಮೇಲಣ ರಜ್ಜು ಮುಟ್ಟಿದರೆಯೂ ಸಾವರು ಶಂಕಿತರಾದವರು ಸರ್ಪದಷ್ಟವಾದರೆಯೂ ಸಾಯರು ನಿಶ್ಶಂಕಿತರಾದವರು (ಬಸವ. ೬೭೧) ; ತಂದೆಗೆ ಸರ್ಪದಷ್ಟಮಿದಾದುದು (ಕಱಿಕಂ. ೨೮). ೨. ಹಾವಿನಿಂದ ಕಚ್ಚಿಸಿಕೊಂಡವನು : ಮಾಡದಿಂದಿಟ್ಟೆದು ಬರುತ್ತುಂ ಸರ್ಪದಷ್ಟನಾಗಿ ಸತ್ತು (ಪಂರಾಮಾ. ೧೫-೪೨ ವ). ೩. [ಕಾಮಶಾ] ಉಪರತಿಯ ಪ್ರಕಾರಗಳಲ್ಲಿ ಒಂದು: ಸ್ತ್ರೀ ತನ್ನ ತಿಗಮಂ ತಿರುವುತ್ತಾ ಉಪರತಿಯ ಮಾಡುವುದು ಮದನಯುದ್ಧಂ . . . ಅಚೇತನಮಪ್ಪ ತರುವಾಯದೊಳು ಸುವರ್ಣಸಲಾಕೆಯನೊತ್ತುವಂತೆ ಮಾಡುವುದು ಇದು ಸರ್ಪದಷ್ಟ (ಕಾಮಶಾ. ೨೫೯). [ಸಂ.]

ಸರ್ಪದಷ್ಟೆ (ನಾ). ಹಾವಿನಿಂದ ಕಚ್ಚಿಸಿಕೊಂಡವಳು : ಈ ಬಿಂಬೋಷ್ಠಯಂ ಸರ್ಪದಷ್ಟೆಯನೆನಗೆ ಮದುವೆ ಮಾಲ್ಪಿರಪ್ಪೊಡೆ ನಾಳೆ ನೇಸರ್ಮೂಡದ ಮುನ್ನಮೆ ವಿಷಾಪಹಾರಂ ಮಾಡಿದಪ್ಪೆಂ (ಸುಕುಮಾ. ೭-೮ ವ). [ಸಂ. ಸರ್ಪದಷ್ಟಾ]

ಸರ್ಪನಕ್ಷತ್ರ (ನಾ). [ಜ್ಯೋತಿ] ಆಶ್ಲೇಷಾನಕ್ಷತ್ರ : ಸರ್ಪನಕ್ಷತ್ರಸಂಯುತದ ಗುರುವಾರಮಾಗಿರ್ಪುದಿಂದು (ಕ್ಷಮಿಭಾ. ೩೪-೨೧). [ಸಂ.]

ಸರ್ಪಪರ್ಯಂಕ (ನಾ). ಹಾವಿನ ಹಾಸಿಗೆ : ''ಸರ್ಪಪರ್ಯಂಕಮನೆ ಹೇಳಿಗೆ'' (ಮಂಗರಾ. ೧೧೫-೬). [ಸಂ.]

ಸರ್ಪಪ್ರಸವನರ (ನಾ). [ಜ್ಯೋತಿ] ಸರ್ಪಯೋಗದಲ್ಲಿ ಹುಟ್ಟಿದವನು : ಅಸುಖಿಯೆನಿಕ್ಕುಂ ಸರ್ಪಪ್ರಸವನರಂ (ಜಾತಕ. ೧೩-೧೯). [ಸಂ.]

ಸರ್ಪಬಾಣ (ನಾ). ಸರ್ಪಗಳನ್ನು ಉತ್ಪತ್ತಿ ಮಾಡುವ ಮಂತ್ರಾಸ್ತ್ರ ; ಸರ್ಪಾಸ್ತ್ರ : ಕಲಿ ರಾಧೇಯನೆಚ್ಚನು ರೌದ್ರದರ್ಪದ ಸರ್ಪಬಾಣದಲಿ (ಕುವ್ಯಾಕ. ೨೫ ಸೂಚನೆ).

[ಸಂ.]

ಸರ್ಪಭುಕ್ಕು (ನಾ). ೧. ಹಾವನ್ನು ತಿನ್ನುವ ದೊಡ್ಡ ಹಾವು ; ರಾಜಸರ್ಪ : ''ರಾಜಸರ್ಪಃ, ಸರ್ಪಭುಕ್ - ಈ ೨ ಅರವಾ(ಹಾ)ವು'' (ಪಲಾಯು. ೧೦೬-೨೧). ೨. ನವಿಲು. [ಸಂ. ಸರ್ಪಭುಜ್]

ಸರ್ಪಭೂಷಣ (ನಾ). ಹಾವುಗಳನ್ನು ಅಲಂಕಾರವಾಗಿ ಉಳ್ಳವನು ; ನಾಗಭೂಷಣ; ಶಿವ : ಸರ್ಪಭೂಷಣನೊಪ್ಪದಿಂದೊಪ್ಪಿ ಕುಳ್ಳಿರಲು (ಬಸರ. ೧-೪). [ಸಂ.]

ಸರ್ಪಮತ್ಸರ (ನಾ). ೧. ಹಾವಿನ ದ್ವೇಷ ; ಹಾವಿನ ಹಗೆ. ೨. (ಆಲಂ) ತಪ್ಪದೇ ಸಾಧಿಸುವ ದ್ವೇಷ : ಅಧಿಕಾರಶಾಹಿಯ ಸರ್ಪಮತ್ಸರದ ನೀತಿ ಇದು (ಆತ್ಮಾವ. ೧೩೦). [ಸಂ.]

ಸರ್ಪಯಜ್ಞ (ನಾ). ಹಾವುಗಳನ್ನು ಬಲಿಕೊಡುವ ಯಾಗ ; ಮಹಾಭಾರತದಲ್ಲಿ ತನ್ನ ತಂದೆಯಾದ ಪರೀಕ್ಷಿತರಾಜನನ್ನು ಹಾವು ಕಚ್ಚಿ ಕೊಂದುದಕ್ಕೆ ಪ್ರತಿಯಾಗಿ ಅವುಗಳ ವಂಶವನ್ನು ನಾಶಮಾಡಲೆಂದು ಜನಮೇಜಯನು ಕೈಕೊಂಡ ಯಜ್ಞ: ಸರ್ಪಯಜ್ಞದಲಾದ ದುರಿತದರ್ಪವನು ಕೆಡಬೀಳಲೊಡೆಯಲು ತರ್ಪಣಾದಿ ಕ್ರಿಯೆಗಳಲಿ ಸಾಮರ್ಥ್ಯವಿಲ್ಲ (ಕುವ್ಯಾಖ. ೨-೭). [ಸಂ.]

ಸರ್ಪಯೋಗ (ನಾ). [ಜ್ಯೋತಿ] ಮೂರು ಪಾಪಗ್ರಹಗಳು ಮೂರು ಕೇಂದ್ರ ಸ್ಥಾನದಲ್ಲಿರುವ ಯೋಗ : ಕ್ರೂರತ್ರಯಮಿರೆ ಕೇಂದ್ರಾಗಾರತ್ರಿತಯದೊಳೆ ಸರ್ಪಯೋಗಂ (ಜಾತಕ. ೧೩-೯). [ಸಂ.]

ಸರ್ಪರಾಜ (ನಾ). ಹಾವುಗಳ ಒಡೆಯ ; ಆದಿಶೇಷ ; ವಾಸುಕಿ : ''ವಾಸುಕಿಃ, ಸರ್ಪರಾಜಃ - ೨ ವಾಸುಕಿ ಎಂಬ ದೊಡ್ಡಹಾವಿನ ಹೆಸರು'' (ಸಿದ್ಧಾಂಶಿ. ೭೨). [ಸಂ.]

ಸರ್ಪರಾಯಿ 'ಸರಬರಾಯಿ' ನೋ.

ಸರ್ಪರೋಗ (ನಾ). ಹಾವಿನ ಆಕಾರದಲ್ಲಿ ಚರ್ಮದ ಮೇಲೆ ಕಾಣಿಸಿಕೊಳ್ಳುವ, ಚರ್ಮ ಮತ್ತು ನರಮಂಡಲಗಳಿಗೆ ಸಂಬಂಧಿಸಿದ ಒಂದು ಬಗೆಯ ರೋಗ; ಸರ್ಪಸುತ್ತು ; ವಿಸರ್ಪಿ ; ಹರ್ಪಿಸ್ : ಅವರು ಸರ್ಪರೋಗದಿಂದ ನರಳುತ್ತಿದ್ದಾರೆ (ರೂಢಿ). [ಸಂ.]

ಸರ್ಪರೋಗಿ (ನಾ). ಚರ್ಮ ಮತ್ತು ನರಮಂಡಲಗಳಿಗೆ ಸಂಬಂಧಿಸಿದ ವಿಸರ್ಪಿ ಎಂಬ ರೋಗವುಳ್ಳವನು ; ಸರ್ಪಸುತ್ತುಳ್ಳವನು : ನಡನಾರಾಚದ ನೋವಿನ ನಡುಕಂ ಏರಿದಾಯ್ತು ಸರ್ಪರೋಗಿ [ಪಾತಾಂ. ಸರ್ಪಯೋನಿ, ಸರ್ವಯೋಗಿ, ಸರ್ವರೋಗಿ]ಯ ಸೆರೆಯಂ ಬಿಡಿಸಿದವೊಲೆಚ್ಚು ಪಾಯ್ದತ್ತೊಡನೊಡನೆ ಕದುಷ್ಕಕೃಷ್ಣರುಧಿರಜಲೌಘಂ (ಪಂಪಭಾ. ೧೨-೭). [ಸಂ. ಸರ್ಪರೋಗಿನ್]

ಸರ್ಪಶರ (ನಾ). = ಸರ್ಪಬಾಣ : ಆಗಳಳಿದುದು ಸರ್ಪಶರ (ಕುವ್ಯಾಕ. ೩೭-೩). [ಸಂ.]

ಸರ್ಪಶೀರ್ಷ (ನಾ). [ನಾಟ್ಯ] ಅಸಂಯುತ ಹಸ್ತಗಳಲ್ಲಿ ಒಂದು: ಅಸಂಯುತ ಹಸ್ತಗಳು ಯಾವುದೆಂದರೆ -೧. ಪತಾಕ, ೨. ತ್ರಿಪತಾಕ . . . ೧೩. ಸರ್ಪಶೀರ್ಷ . . . ೨೪. ತಾಮ್ರಚೂಡ (ಅಭಾಸ್ತ. ೪೮). [ಸಂ.]

ಸರ್ಪಸುತ್ತು (ನಾ). = ಸರ್ಪರೋಗ : ಸರ್ಪಸುತ್ತು ಬಂದವರು ತಿಂಗಳುಗಟ್ಟಲೆ ಬಾಧೆಯನ್ನು ಅನುಭವಿಸಬೇಕಾಗುತ್ತದೆ (ರೂಢಿ). [ಸರ್ಪ + ಸುತ್ತು]

ಸರ್ಪಸೂರಣ (ನಾ). ಒಂದು ಬಗೆಯ ಸಸ್ಯ : ''ಧಾತ್ರಿ-ಸರ್ಪಸೂರಣ'' (ಓಷಧಿ. ೫೮). [ಸಂ.]

ಸರ್ಪಳಿ 'ಸರಪಳಿ' ನೋ.

ಸರ್ಪಾಕ್ಷಿ (ನಾ). ಹಾವುಕಣ್ಣಿನ ಗಿಡ ; ನಂಜಾರೆಗಿಡ ; ಈಶ್ವರಿಹಂಬು : ''ನಾಕುಲೀ, ಸುರಸಾ . . . ಧಾತ್ರೀ, ಸುವಹಾ - ೮ ಸರ್ಪಾಕ್ಷಿಗಿಡದ ಹೆಸರುಗಳು'' (ಸಿದ್ಧಾಂಶಿ. ೧೩೮). [ಸಂ.ಸರ್ಪಾಕ್ಷೀ]

ಸರ್ಪಾಧ್ವರ (ನಾ) = ಸರ್ಪಯಜ್ಞ : ಹೇಳಿದನು ಮುನಿಗಳಿಗೆ ಸರ್ಪಾಧ್ವರದ ಸಂಗತಿಯ (ಕುವ್ಯಾಆ. ೨-೧೩). [ಸಂ.]

ಸರ್ಪಾಭರಣ (ನಾ). ಹಾವಿನ ಆಭರಣ : ಪೇರುರದೊಳೊಪ್ಪುವ ಹೀರಾವಳಿಯ ಪದಕಪ್ರಕರಂ ಸರ್ಪಾಭರಣದಂತೆ ತೋಱುತ್ತಿರ್ದಪುದು (ನಂಬರ. ೪-೬೫). [ಸಂ.]

ಸರ್ಪಾರಿ (ನಾ). ೧. ಹಾವಿನ ವೈರಿ - ಶತ್ರು. ೨. ಮುಂಗುಸಿ. ೩. ನವಿಲು. ೪. ಗರುಡ. ೫. ಒಂದು ಬಗೆಯ ಸಸ್ಯ : ''ಮುಂಗುಸಿಗಿಡ, ಪಾತಾಳಗರುಡ, ಸರ್ಪಾರಿ'' (ಮೃಕಿಗಿ. ೫೮-೧೧೫೯). [ಸಂ.]

ಸರ್ಪಾಶನ (ನಾ). ೧. ಹಾವನ್ನು ತಿನ್ನುವಂತಹುದು. ೨. ನವಿಲು : ''ಕೇಕೀ, ಶಿಖೀ . . . ಸರ್ಪಾಶನಃ, ಮಯೂರಃ, ಶಿಖಾವಳಃ, ಶ್ಯಾಮಕಂಠ(ಃ) - ಈ ೧೦ ನವಿಲ್'' (ಪಲಾಯು. ೪೦-೦೮). [ಸಂ.]

ಸರ್ಪಾಸ್ತ್ರ (ನಾ). = ಸರ್ಪಬಾಣ : ಬಲಮೈದಿಜಿತು ಘನಘೋರಸರ್ಪಾಸ್ತ್ರದಲಿ ಗೆಲಿದನು ಸಕಲ ಕಪಿಬಲವ (ತೊರಾ. ೬-೧೫೫ ಸೂಚನೆ) ; ಆಗ ಕರ್ಣನು ಅರ್ಜುನನಿಗೋಸ್ಕರವೇ ಬಹುದಿನದಿಂದ ಕಾದಿಟ್ಟಿದ್ದ ಸರ್ಪಾಸ್ತ್ರವನ್ನು ತೆಗೆದು ಬಿಲ್ಲಿನಲ್ಲಿ ಹೂಡಿದನು (ವಚಭಾ. ೨೯೮). [ಸಂ.]

ಸರ್ಪಿ (ನಾ). ತುಪ್ಪ ; ಘೃತ: ''ತುಪ್ಪಮಾಜ್ಯಂ ಘೃತಂ ಸರ್ಪಿಯಕ್ಕುಂ'' (ಮಂಗರಾ. ೫೪-೬) ; ಸುರಾಶರಧಿಯಾ ಪ್ರಮಾಣಮದೆಂಬುಲಕ್ಷಂ ಕುಶದ್ವೀಪಮಂತೆಸವ ಸರ್ಪಿ ಮಿಗೆ ಲಕ್ಷಮಿರೆಂಟು ಕ್ರೌಂಚದ್ವೀಪಮಾ ಗಣನೆ ದಧಿಶರಧಿ (ಚಿಬಪ್ರ. ೧೫-೧೧).

[< ಸಂ. ಸರ್ಪಿಸ್]

ಸರ್ಪಿಣಿ (ನಾ). ಹೆಣ್ಣುಹಾವು ; ನಾಗಿಣಿ : ''ಪನ್ನಗೀ - ಸರ್ಪಿಣಿ'' (ಓಷಧಿ. ೯೦) ; ಮುರಿದೊಲ್ಮೈಯವಮಾನದಿಂದೆ ಕಣ್ಣಾನ ಚಿಮ್ಮಿ ನಿಲ್ಲದಲ್ಲಿಂ ನಡೆದಳಯ್ ಭರತನಂ ಬಗಿದಪ್ಪಿ, ತುಳಿದ ಸರ್ಪಿಣಿಯಂತೆ ಮುಳಿಸಿನುರಿಯಿಂ ಪೊಗೆದು, ಸುಯ್ದು, ಹೆಡೆಯೆತ್ತಿ (ಶ್ರೀರಾಮಾ. ೨೨-೫೭೧). [ಸಂ. ಸರ್ಪಿಣೀ]

ಸರ್ಪಿತ (ನಾ). [ನಾಟ್ಯ] ಮೂವತ್ತೆರಡು ಅಂಗಹಾರಗಳಲ್ಲಿ ಒಂದು: ಸ್ಫಿರಹಸ್ತ, ಪರ್ಯಸ್ತ . . . ಸರ್ಪಿತ . . . ಸ್ವಸ್ತಿಕರೇಚಿತ – ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಲಾಸ್ಯರಂ. ೫-೭ ವ). [ಸಂ.]

ಸರ್ಪಿತಕರಣ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : ಅಂಚಿತ ಪದಮಂ ಪಸರಿಸಿ ಕುಂಚಿತಶಿರಮಾಗಿ ಹಸ್ತಮಾ ಕಡೆಯಿಂದಂ ಮಿಂಚುತ ರೇಚಿತಮಾಗಲ್ ವಂಚಿಸದಿಮ್ಮೈಯ್ಯೊಳೆಸಗೆ ಸರ್ಪಿತಕರಣಂ (ಲಾಸ್ಯರಂ. ೪-೧೪೩). [ಸಂ.]

ಸರ್ಪು 'ಸರುಪ' ನೋ.

ಸರ್ಪೋಪಜೀವಿ (ನಾ). ಹಾವಿನಿಂದ ಉಪಜೀವನ ನಡೆಸುವವನು ; ಹಾವಾಡಿಗ: ಸರ್ಪೋಪಜೀವಿಯಂದದಿ ಕೌಶಿಕಾಧಿಷ್ಠಿತಂ . . . ಅರಿದನಿಸಿತತಿ ಭೀಕರಾಕಾರದಿಂದ ಘೋರಾರಣ್ಯವು (ಪಚಶಾ. ೫-೧೯). [ಸಂ. ಸರ್ಪೋಪಜೀವಿನ್]

ಸರ್ಪರಾಜು 'ಸರಪರಾಜು' ನೋ.

ಸರ್ಬ$_1$ 'ಸಬ್ಬ$_1$' ನೋ.

ಸರ್ಬ$_2$ 'ಸಬ್ಬ$_2$' ನೋ.

ಸರ್ಬಕೊಡಗಿ 'ಸರ್ಬಗೊಡಗೆ' ನೋ.

ಸರ್ಬಗೊಡಗೆ, ಸರ್ಬಕೊಡಗಿ (ನಾ). ಸರ್ವಮಾನ್ಯವಾದ ದತ್ತಿ : ಹೊನ್ನಪ್ಪನವರು ಸರ್ಬಗೊಡಗೆ ಆಗಿ ಕೊಟ್ಟ ಯಿಾ ಕೊಡಗಿ (ಎಕ. IX, ಬೆಂಗಳೂ. ೯೭-೧೨ ; 1347). **ಸರ್ಬಕೊಡಗಿ** : ನಾಗಗವುಡಂಗೆ ಕೆಂಡನ ಕೆಱೆಯ ಚತುಸೀಮೆವೊಳಗಾಗಿ ಕೊಟ್ಟ ಸರ್ಬ್ಬಕೊಡಗಿ (ಎಕ. XI, ಹಿರಿಯೂ. ೧೮-೧೧ ; 1208).

[ಸರ್ಬ$_2$ + ಕೊಡಗೆ (< ಕೊಡಂಗೆಯ್$_2$)]

ಸರ್ಬಜ್ಞ (ನಾ). ಎಲ್ಲವನ್ನೂ ತಿಳಿದವನು; ಸರ್ವಜ್ಞ : ಕಾವ್ಯಜ್ಞಂ ದೈವಜ್ಞಂ ಸರ್ಬ್ಬಜ್ಞಂ ಶ್ರೀರಾಜಗುರು ಕಳೇಶ್ವರದೇವಂ (ಶಾಸಪ. ೯೨). [ಸಂ.]

ಸರ್ಬಜ್ಞಚೂಡಾಮಣಿ = ಶ್ರೇಷ್ಠನಾದ ಜ್ಞಾನಿ; ಒಂದು ಬಿರುದು: ಯಾದವ ಕುಳಾಂಬರದ್ಯುಮಣಿ ಸರ್ಬಜ್ಞಚೂಡಾಮಣಿ ಮಲೆರಾಜರಾಜಂ (ಎಕ. XI, ದಾವಣ. ೨೫-೪೪ ; 1224) ; ಯಾದವಕುಲಾಂಬರದ್ಯುಮಣಿ ಸರ್ಬ್ಬಜ್ಞಚೂಡಾಮಣಿ ಮಲೆರಾಜರಾಜ . . . ಹೊಯ್ಸಳ ಭುಜಬಳ ಶ್ರೀ ವೀರಬಲ್ಲಾಳದೇವರಸರು (ಎಕ. VI, ಕಡೂರು. ೪೯-೩ ; 1291). [< ಸಂ. ಸರ್ವಜ್ಞ]

ಸರ್ಬಣಂದಿ (ನಾ). ಒಬ್ಬ ಜೈನಮುನಿಯ ಹೆಸರು : ಶ್ರೀ ಚಿಕುರಾ ಪರವಿಯ ಗುರವರ ಶಿಷ್ಯರ್ ಸರ್ಬಣ್ಣಿ (ಎಕ. II, ೩೬-೧ ; ಸು 750). [< ಸಂ. ಸರ್ವನಂದಿನ್]

ಸರ್ಬಧಾರಿ (ನಾ). ಅರವತ್ತು ಸಂವತ್ಸರಗಳಲ್ಲಿ ಇಪ್ಪತ್ತೆರಡನೆಯ ಸಂವತ್ಸರದ ಹೆಸರು; ಸರ್ವಧಾರಿ ಸಂವತ್ಸರ : ಅಲ್ಲಿಂ ಬಳಿಕ ಸರ್ಬ್ಬಧಾರಿ ಸಂವತ್ಸರದ ಮಾಘ ಬ ೩ ಬು ವೀರಯ್ಯಗೆ ಬರೆದಿದ್ದಲ್ಲಿ (ಎಕ. VI, ಕಡೂರು. ೪೯-೧೦ ; 1291).

[< ಸಂ. ಸರ್ವಧಾರಿನ್]

ಸರ್ಬನಮಸ್ಯ (ನಾ). ತೆರಿಗೆಗಳಿಂದ ಮುಕ್ತಗೊಳಿಸಿ, ಸರ್ವಮಾನ್ಯವಾದುದು; ಸರ್ವಬಾಧಾರಹಿತವಾದುದು : ಧಾರಾಪೂರ್ವ್ವಕಂ ಸರ್ಬ್ಬನಮಸ್ಯಮಾಗೆ ಬಿಟ್ಟ ಬಸವಸೆನಾಡ ಕಂಪಣಂ ಮುಗುನ್ದ ಪನ್ನೆರಡಱ ಬಳಿಯ ಬಾಡ ಕುನ್ದವಿಗೆ ೧ (ಇಅ. IV, ೭೦೯-೩೩ ; 1075). [< ಸಂ. ಸರ್ವನಮಸ್ಯ]

ಸರ್ಬಮಾನ್ಯ (ನಾ). = ಸರ್ಬನಮಸ್ಯ : ಪೊಡವ ತಲೆವೊಕ್ಕ ಬರಣ ಹಾದರ XX ದಣ್ಡವುಣ್ಡಿಗೆ ಮುನ್ನಾಗಿ ಆವುದೂ ಇಲ್ಲದ ಸರ್ಬಮಾನ್ಯವಾಗಿ . . . ನಟ್ಟು ಕೊಟ್ಟ ಶಿಲಾಶಾಸನ (ಎಕ. IX, ಚನ್ನಪ. ೭೩-೩೯ ; 1318). [< ಸಂ. ಸರ್ವಮಾನ್ಯ]

ಸರ್ಬರಸ (ನಾ). ಒಬ್ಬಾತನ ಹೆಸರು ; ಈ ಇದು ಅಮೋಘವರ್ಷ ನೃಪತುಂಗನ ಹೆಸರಿರಬಹುದು : ಕನ್ನವಾಡ ಗಙ್ಗವಾಡ . . . ಸಾಮಿ ಸರ್ಬರಸ ಕೊಟೋರ್ (ಮೈಆರಿ. ೧೯೨೯, ೧೧೮-೨ ; ಸು. 820). [ಸರ್ಬ$_1$ + ಅರಸ$_1$]

ಸರ್ಬಲಗ್ಗೆ 'ಸಬ್ಬಲಗ್ಗೆ' ನೋ.

ಸರ್ಬವ 'ಸಬ್ಬವ' ನೋ.

ಸರ್ಬವಿದ (ನಾ). = ಸರ್ಬಜ್ಞ : ಕೇಳುವೆನು ನೀ ಸರ್ಬವಿದನೆಂದರಸ (ನಿಘಾಗ. ೧೧-೧೩-೧೦). [< ಸಂ. ಸರ್ವವಿದ್]

ಸರ್ಬಸ್ವ, ಸಬ್ಬಸ (ನಾ). ಎಲ್ಲ ಸ್ವತ್ತು ; ಸಮಸ್ತ ಆಸ್ತಿ ; ಸರ್ವಸ್ವ : ಬಗೆದೊಂ ಪೇಳದೊಡೇನೊ ವೈರಿನೃಪಸರ್ಬಸ್ವಂಗಳಂ ತಂದು ಚಕ್ರಿಗೆಗೊಟ್ಟಂಕದ ನಾಗವರ್ಮನಳವಂ . . . ಗನ್ಧಸಿಂಧೂರಘಟಾನೀಕಂಗಳೇಂ ಪೇಳವೇ (ನಾಂದೆಡೆ. ೩-೧೬ ; 1047). **ಸಬ್ಬಸ** : ಚಲಮಂ ಬಿಡು ನೀನವನೊಳಗೆ . . . ಪಲರಾಯರ ಸಬ್ಬಸಮಂ ಕವರ್ದುಚ್ಚಲಿಸುವವರ ತಲೆವಣಿಯಂ ಮಣಿಯಿಸಿದಲಘುಭುಜಂ ವಿಕ್ರಮಕೌರವ ಜಯರಾಜಶಶಾಂಕನೊಳು (ಜಯಕಾ. ೬-೫). [< ಸಂ. ಸರ್ವಸ್ವ]

ಸರ್ಬಾಂಗ (ನಾ). ಪೂರ್ಣದೇಹ; ಸಮಸ್ತಶರೀರ : ಕರ್ಬೊನ್ನಿಂದಂ ವಿಧಾತ್ರಂ ಸಮದನಿವನನೆಂಬೊಂದು ಕಾರ್ಕಶ್ಯದಿಂದಂ ಸರ್ಬಾಂಗಂ ಕಣ್ಗುರ್ವಂ ಪಡೆಯಲ್ . . . ಒರ್ವಂ ಬಂದಂ (ಕಾದಂಪು. ೧೬೬). [< ಸಂ. ಸರ್ವಾಂಗ]

ಸರ್ಬಾಪದ (ನಾ). ತೆರಿಗೆ ಮುಂತಾದ ಎಲ್ಲ ಬಗೆಯ ನಿರ್ಬಂಧ; ಸರ್ವಬಾಧೆ: ತಿರುಪೆರಿಭಟ್ಟರ್ಗ್ಗೆ ಸೆಟ್ಟಿ ಕೊಟ್ಟ ಸರ್ಬ್ಬಾಪದ ಪರಿಹಾರ (ಎಕ. IX (s), ಬಾಗೇಪ. ೧೦೨-೧; 10ನಯ ಶತ). [ಸರ್ಬ$_2$ + ಆಪದ. /ಸಂ. ಸರ್ವಾಪದ್]

ಸರ್ಬಾಯ (ನಾ). ಎಲ್ಲ ಬಗೆಯ ಆದಾಯ; ಸಮಸ್ತ ಉತ್ಪತ್ತಿ: ಸರ್ಬಾಯಸಹಿತವಾಗಿ ಕೊಟ್ಟ ಕೊಡಗಿ (ಎಕ. IX, ಬೆಂಗಳೂ. ೯೭-೧೫; 1347).

[< ಸಂ. ಸರ್ವಾಯ]

ಸರ್ರನೆ 'ಸಱ್ಣನೆ' ನೋ.

ಸರ್ಲೆ, ಸಲ್ಲೆ$_2$, ಸಳ್ಳೆ (ನಾ). ೧. ಒಂದು ಬಗೆಯ ಹಕ್ಕಿ : 'ದೊಡ್ಡಸರ್ಲೆಹಕ್ಕಿ' ಪರಾ. **ಸಲ್ಲೆ$_2$** : ೨. ಒಂದು ಬಗೆಯ ಸಸ್ಯ : ಸಲ್ಲೆ, ಸರಲಿ (ಮೃಡಿಗಿ. ೮-೧೩೫). **ಸಳ್ಳೆ** : ೨. "ಸಲ್ಲೆ, ಸಳ್ಳೇಗಿಡ, ಸರಳೆ" (ಸಸ್ಯನಿ. ೧೩). [< ಸಂ. ಸರಲ]

ಸರ್ವ$_1$ (ನಾ). ಶಿವ; ಶರ್ವ : ಸತ್ಯಂಗಳುಕ್ಕಡಂ ಸರ್ವನರಮನೆಯೊಳಗೆ (ತಿರುಪ. ದೇ. ೩-೬) ; ಮೂಡೆಯನಿಳುಪುತೆ ಸರ್ವನ ಬೆಸದಿಂ ಕೈವಿಡಿದೊಡಗೊಂಡೊಲವಿಂ ಬಂದಂ ಐವಡಿಸುಖದಿಂ ಭಕ್ತಂ ನಿಂದಂ (ತಿರುನಾ. ದೇ. ೨೨೮-೪). [ಸಂ.]

ಸರ್ವ$_2$ (ಸ). ಎಲ್ಲ; ಸಕಲ; ಸಮಸ್ತ: [ವಿ]ಶ್ವಾಮಿತ್ರಗೋತ್ರದವಂಗೆ ಸರ್ವ ಕೆ[ಲ]ಸದಲು ಸ್ವಥ(ತ)ಂತ್ರನಾಗಿ ಗಾವಕಾರಿಕೆ ಬಿಜೋರ ಮರ್ಯಾದೆ . . . ಆ ರಾಜರು ಕೊಟ್ಟರು (ಎಇ. XXVII, ೧೬೨-೮೨ ; 1256) ; ಸರ್ವಂ ಬ್ರಹ್ಮ ಶ್ರುತಿಮತದಿ (ಗಗಶಾ. ೧೭-೨೩).

ಸರ್ವರು = ಎಲ್ಲರೂ; ಸಮಸ್ತಜನ : ಸರ್ವರೊಳೊಂದೊಂದು ನುಡಿಗಲಿತು ವಿದ್ಯದ ಪರ್ವತವೆ ಆದ ಸರ್ವಜ್ಞ (ಸರ್ವಜ್ಞ. ೨೫). ಸರ್ವಸದಸ್ಯರ ಸಭೆ = ಒಂದು ಸಂಘ ಅಥವಾ ಸಂಸ್ಥೆಯ ಎಲ್ಲ ಸದಸ್ಯರನ್ನೂ ಒಳಗೊಂಡ ಸಭೆ; ಮಹಾಧಿವೇಶನ : ಎಲ್ಲ ಸಂಘಸಂಸ್ಥೆಗಳವರೂ ಆಗಾಗ ಸರ್ವಸದಸ್ಯರ ಸಭೆಯನ್ನು ನಡೆಸಿ ಪರಸ್ಪರ ಅಭಿಪ್ರಾಯಗಳನ್ನು ವಿನಿಮಯಮಾಡಿಕೊಳ್ಳುವುದು ಒಳ್ಳೆಯದು (ರೂಢಿ). [ಸಂ.]

ಸರ್ವಂಕಷ (ಗು). ಎಲ್ಲವನ್ನೂ ಒಳಗೊಳ್ಳುವ; ಸರ್ವಶಕ್ತವಾದ: ತಾರಸಪ್ತಕದಲ್ಲಿ ರೌದ್ರಆಕ್ರಂದನವನ್ನು ಮಾಡಿದ ಕವಿ ಮರುಕ್ಷಣದಲ್ಲಿಯೆ ಕೆಳಗಿನ ಸಪ್ತಕಕ್ಕೆ ಸರ್ರನೆ ಇಳಿದು ಪುರಜನದ ಸರಳಶೋಕವನ್ನು ಹಾಡಿದ ಬಗೆ ಅವನ ಸರ್ವಂಕಷಪ್ರತಿಭೆಗೆ ನಿದರ್ಶನವಾಗಿದೆ (ಕಸಾಚ. ೯೭). [ಸಂ.]

ಸರ್ವಂಗೋಡು 'ಸರ್ವಾಂಗೋಡು' ನೋ.

ಸರ್ವಂಸಹೆ (ನಾ). ಎಲ್ಲವನ್ನೂ ಸಹಿಸುವವಳು; ಭೂದೇವಿ; ಭೂಮಿ: ಒರ್ವರೂರ್ವರನೊಡಬಡದೊಡಬಡಿಸದ ಗರ್ವಿತದಂಪತಿಗಳನು ಇರ್ವರನಿಳೆ ನುಂಗದೆ ಪೊಱುವುದಱಿಂದ ಸರ್ವಂಸಹೆಯೆನಿಸುವುದು (ಹದಿಬ. ೬-೧೦) ; ತನುಮವದೀ ಸರ್ವಂಸಹೆಯ ಶಾಂತಿ ನೋಡ! (ಗಿಳಿಂ. ೧೦೯-೨). [ಸಂ. ಸರ್ವಂಸಹಾ]

ಸರ್ವಕರ್ತೃತ್ವ (ನಾ). ಎಲ್ಲವನ್ನೂ ನಿರ್ಮಿಸುವ ಶಕ್ತಿ ; ಸರ್ವನಿರ್ಮಾಣಶಕ್ತಿ: ಶಿವನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು ಕ್ರಮೇಣ ಪಂಚಕಂಚುಕಗಳಾಗುತ್ತವೆ (ಭಾರದ. ೨೧೪). [ಸಂ.]

ಸರ್ವಕುಷ್ಠ (ನಾ). ಒಂದು ಬಗೆಯ ಕುಷ್ಠರೋಗ : ಅಳಲೆ, ಎಳ್ಳು, ಗೇರು . . . ಭಾವನೆಯಂ ಕೊಟ್ಟು ಜೇನುತುಪ್ಪದಿ ಮೆಲ್ಲಲು ಸರ್ವಕುಷ್ಠ ಮಾಣ್ಗುಂ (ವೈದ್ಯವಿ. ೮೭).

[ಸಂ.]

ಸರ್ವಕ್ಷಾರ (ನಾ). ೧. = ಸರ್ಜಕ್ಷಾರ. ೨. ಯವಕ್ಷಾರ ; ಪೆಟ್ಟುಪ್ಪು : ''ಯವಕ್ಷಾರಃ - ಸರ್ವಕ್ಷಾರ'' (ಓಷಧಿ. ೧೩೧). [ಸಂ.]

ಸರ್ವಗ (ನಾ). ೧. ಎಲ್ಲ ಕಡೆಯಲ್ಲಿಯೂ ಸಂಚರಿಸುವವನು; ಸರ್ವಾಂತರ್ಯಾಮಿ; ಪರಮಾತ್ಮ : ಸರ್ವೇಶ್ವರ ಸರ್ವಗ ದೇವದೇವ ಸರ್ವಜ್ಞ ನಮಸ್ತೇ (ಪಂಚತಂ. ೧೭೩-೧). ೨. ಶಿವ : ಸರ್ವಜ್ಞ ಸರ್ವಗ ಸರ್ವಸರ್ವೇಶ . . . ಶಿವ ಅವಧಾರು (ಬಸಪು. ೧-೬೬). ೩. ಬ್ರಹ್ಮ : ತನ್ನ ವರ್ಮವಱಿವನೆ ಮಿತ್ರನು ರಂಗ ನಿನ್ನಯ ಕೂರ್ಮೆತ್ತವನೆ ಸರ್ವಗನು (ಶತಸಾ. ೪೫-೨೫). ೪. ವಿಷ್ಣು. [ಸಂ.]

ಸರ್ವಗತ (ನಾ). = ಸರ್ವಗ ೧ : ಉಮಾವಲ್ಲಭಂ ಗುರು ರಾಮನಾಥನು ಸರ್ವಗತನು (ಬಸಪು. ೫೧-೩೪) ; ಹರಿ ಸರ್ವಗತನಹುದು (ಕುವ್ಯಾಗ. ೪-೫೭). [ಸಂ.]

ಸರ್ವಗವತೆ (ನಾ). ಎಲ್ಲವನ್ನೂ ಕಿತ್ತುಕೊಳ್ಳುವುದು; ಸರ್ವಸ್ವವನ್ನೂ ಅಪಹರಿಸುವುದು : ಮೂಡಲು ಹರಿದು ಮುಱಿದು ಸಮುದ್ರಸೇನನ ಸರ್ವಗವತೆಯಲಿ ತೆರಳಿಯಲ್ಲಿಂದ (ಕುವ್ಯಾಸ. ೪-೯) ; ಎಲ್ಲಿಹವೊ, ಕಾಲ, ನೀನೆಲ್ಲಿಗವನವಿತೆ? ಇಂತಿಳೆಯ ಬದುಕಿನೇತರ ಸರ್ವಗವತೆ? (ಗಿಳಿವಿಂ. ೧೧೨-೨). [ಸರ್ವ$_{2}$ + ಕವತೆ$_{1}$ (< ಕವರ್ತೆ$_{1}$)]

ಸರ್ವಗ್ರಹಣ (ನಾ). ಒಂದು ಬಗೆಯ ಅತಿಸಾರರೋಗ : ಅಜಾಮೋದ ಎಲವದ ಹಗಿನು . . . ಚೂರ್ಣವ ಮಾಡಿ ಮೊಸರಿಂ ಕಲಸಿಕೊಡಲು ಜ್ವರಾತಿಸಾರ ಸರ್ವ ಗ್ರಹEಹತೆಗೆ ಸರ್ವಾತಿಸಾರ ಸಹ ಪರಿಹರಮಕ್ಕುಂ (ಸಚಿತ್ರ. ೩೦೭). [ಸಂ.]

ಸರ್ವಗ್ರಾಸ (ಗು). ೧. ಸಂಪೂರ್ಣವಾಗಿ ನುಂಗುವ ; ಸಮಗ್ರವಾಗಿ ಆವರಿಸುವ: ಭಾದ್ರಪದ ಪೌರ್ಣಮಿ ಸರ್ವಗ್ರಾಸ ಚಂದ್ರಗ್ರಹಣಸಮಯದಲ್ಲಿ (ಕರ್ಣಾಲ. ೧೮೮). (ನಾ). ೨. ಎಲ್ಲವನ್ನೂ ನುಂಗುವಿಕೆ ; ಸಂಪೂರ್ಣವಾಗಿ ಆವರಿಸುವಿಕೆ. ೩. [ಜ್ಯೋತಿ] ಸೂರ್ಯ ಅಥವಾ ಚಂದ್ರನ ಪೂರ್ಣಗ್ರಹಣ: 'ಸರ್ವಗ್ರಾಸಂಗೊಳ್' ಪರಾ. [ಸಂ.]

ಸರ್ವಗ್ರಾಸಂಗೊಳ್ (ಕ್ರಿ). ೧. ಸಂಪೂರ್ಣವಾಗಿ ನುಂಗು,— ಆಕ್ರಮಿಸು. ೨. ಪೂರ್ಣಗ್ರಹಣವಾಗುವಂತೆ ಮಾಡು. ೧, ೨ : ಕಂಡೆಂ ಗ್ರಹಣಮನದ ನಾಖಂಡಲದಿಙ್ಮುಖದ ಬಂದು ಸರ್ವಗ್ರಾಸಂಗೊಂಡತ್ತಪರಾದಿತ್ಯನ ಮಂಡಲಮಂ ಬಾಹುರಾಹು ಸತ್ಯಾಶ್ರಯನಾ (ಗದಾಯು. ೧-೨೬). [ಸರ್ವಗ್ರಾಸ + ಕೊಳ್$_{1}$]

ಸರ್ವಗ್ರಾಸಿ (ಗು). ೧. = ಸರ್ವಗ್ರಾಸ ೧ : ಧರ್ಮಪೋತಚ್ಯುತರ್ . . . ಸರ್ವಗ್ರಾಸಿ ಭೀಮಾಂತಕವದನಮಹಾಗರ್ತದೊಳ್ ಮಗ್ನರಾದರ್ (ಆದಿಪು. ೯-೫೮) ; ಆಷಾಢದಮವಾಸೆ ಸೋಮವಾರದಂದಿನ ಸರ್ವ್ಯಗ್ರಾಸಿಸೂರ್ಯ್ಯಗ್ರಹಣದುತ್ತಮ ತಿಥಿಯೊಳ್ (ಸೌಶಾ. XX. ೨೪೯-೬೫ ; 1228). (ನಾ). ೨. ಎಲ್ಲವನ್ನೂ ನುಂಗುವಂತಹುದು,— ಕಬಳಿಸುವಂತಹುದು : ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ (ಬಸವ. ೯). [ಸಂ. ಸರ್ವಗ್ರಾಸಿನ್]

ಸರ್ವಜಯ (ನಾ). ಒಂದು ಬಗೆಯ ಸಸ್ಯ : ಕ್ಯಾನ್ನಾಗಿಡ, ಚಿರಗುಂಡಿನ ಗಿಡ, ಸರ್ವಜಯ, ಹೂದಿಂಗಣ (ಮೈಪಿಗಿ. ೧೭-೨೯೯). [ಸಂ. ಸರ್ವಜಯಾ]

ಸರ್ವಜಿತ (ನಾ). ಎಲ್ಲವನ್ನೂ ಗೆದ್ದವನು : ವಿಶ್ವಜಿತನು ಧನುಜಿತನು ಸರ್ವಜಿತನು . . . ಕೂಡಲಸಂಗಯ್ಯನು (ಬಸವ. ೯೫೪). [ಸಂ. ಸರ್ವಜಿತ್]

ಸರ್ವಜಿತು (ಗು). ೧. ಎಲ್ಲವನ್ನೂ ಗೆದ್ದ; ಸಕಲವಿಜಯಿಯಾದ. ೨. ಅಸಮಾನವಾದ; ಅತ್ಯಂತ ಶ್ರೇಷ್ಠವಾದ. (ನಾ). ೩. ಅರವತ್ತು ಸಂವತ್ಸರಗಳಲ್ಲಿ ಇಪ್ಪತ್ತೊಂದನೆಯ ಸಂವತ್ಸರದ ಹೆಸರು : ಆ ವರುಷವೇ ಪ್ರಭವ . . . ಸರ್ವಜಿತು . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೩೨೧). [ಸಂ. ಸರ್ವಜಿತ್]

ಸರ್ವಜ್ಞ (ನಾ). ೧. ಎಲ್ಲವನ್ನೂ ಬಲ್ಲವನು; ಸರ್ವಜ್ಞಾನಿ : ಅಜ್ಞರವದಿರು ನೀವು ನಱಿ ಸರ್ವಜ್ಞರು (ಕುವ್ಯಾಸ. ೧೧-೩೨); ಸರ್ವಮಯ ಸರ್ವಜ್ಞ ಸರ್ವನಿಯಾಮಕಾಚ್ಯುತನು (ಗಗಕಾ. ೧೨-೭೭). ೨. ಪರಮಾತ್ಮ; ಪರಬ್ರಹ್ಮ: ಮೂಲಾವಿದ್ಯೆಗ ಗೋಚರವಾಗಿಯೂ ಆಶ್ರಯವಾಗಿಯೂ ಇರುವ ಶುದ್ಧಚೈತನ್ಯವೇ ಈಶ್ವರನು, ಸರ್ವಜ್ಞನು, ಸರ್ವೇಶ್ವರನು . . . ಎಂದು ಹೇಳಲ್ಪಡುವನು (ಹಿಂದುಸಾ. ೨೦೦). ೩. ಶಿವ ; ಈಶ್ವರ : ''ಈಶಾನಃ. . . . ಹರಃ, ಸರ್ವಜ್ಞಃ, ನೀಲಲೋಹಿತಃ - ಈ ೪೫ ಮಹಾದೇವರ ಪೆಸರ್'' (ಹಲಾಯು. ೩-೧೧); ಸರ್ವಜ್ಞನೆಂಬುವನು ಒರ್ವನೇ ಜಗತ್ತಿಲ್ಲ (ಸರ್ವಜ್ಞ. ೨೩). ೪. ಬುದ್ಧ : ''ಸರ್ವಜ್ಞಃ, ಸುಗತಃ . . . ಮುನಿಃ - ೧೮ ಬುದ್ಧದೇವರ ಹೆಸರುಗಳು'' (ಸದ್ಧಾಂತಿ. ೧೬). ೫. ಜಿನ; ಅರ್ಹಂತ: ''ಆ ನಿರ್ವಾಣನಾಥನರುಹಂ ಶೌದ್ಧಂ ತ್ರಿಕಾಲವಿದ್ವೀತರಾಗಂ ಜ್ಞಾನವರ್ಧನಂ ಸರ್ವಜ್ಞನೆನೆ ಜಿನೇಂದ್ರಂ'' (ಮಂಗರಾ. ೭-೨೩) ; ಪ್ರಥಮಾದ್ವಿತೀಯಕಲ್ಪಾಮರೇಂದ್ರರಿರ್ವರುಂ ಸರ್ವಜ್ಞನುಭಯಪಾರ್ಶ್ವದೊಳುತ್ತರದಕ್ಷಿಣಾಭಿಮುಖರಾಗಿ . . . ಮಜ್ಜನಕುದ್ಯುಗಂಗೆಯ್ದು (ಪುಷ್ಪಪು. ೧೧-೧ ವ). ೬. ಹದಿನೇಳನೆಯ ಶತಮಾನದ ಕನ್ನಡದ ಒಬ್ಬ ಪ್ರಸಿದ್ಧ ಕವಿಯ ಹೆಸರು ಮತ್ತು ಅವನ ಕಾವ್ಯದ ಅಂಕಿತ : ಸರ್ವಜ್ಞನೆಂಬವನು ಗರ್ವದಿಂದಾದವನೆ ಸರ್ವರೊಳೊಂದೊಂದು ನುಡಿಗಲಿತು ವಿದ್ಯದ ಪರ್ವತವೆ ಆದ ಸರ್ವಜ್ಞ (ಸರ್ವಜ್ಞ. ೨೬) ; ಸರ್ವಜ್ಞನ ತ್ರಿಪದಿಗಳಲ್ಲಿ ಕಥೆಯಿಲ್ಲ, ವರ್ಣನೆಯಿಲ್ಲ. ಆದರೆ ಸಮಗ್ರಜೀವನಕಥೆ ಇಲ್ಲವೆ ಜೀವನಧರ್ಮ ಅವುಗಳಲ್ಲಿ ರೂಪಗೊಂಡಿದೆ (ಕಸಾಚ. ೩೮೫).

ಸರ್ವಜ್ಞಚೂಡಾಮಣಿ = ಶ್ರೇಷ್ಠನಾದ ಜ್ಞಾನಿ; ಒಂದು ಬಿರುದು: ಸರ್ವಜ್ಞಚೂಡಾಮಣಿ ಮಲೆರಾಜರಾಜ ಮಲಪರೊಳು ಗಣ್ಣ ಗಣ್ಣಭೇರುಣ್ಣ (ಎಕ. XI, ಹೊಳ್ಕೆ. ೧೩೬-೨೧ ; 1307). [ಸಂ.]

ಸರ್ವಜ್ಞತೆ (ನಾ). ಎಲ್ಲವನ್ನೂ ತಿಳಿದಿರುವಿಕೆ; ಸರ್ವಜ್ಞತ್ವ: ಹರನ ಘನ ಶೌರ್ಯತೆಯು ನಂದೀಶ್ವರನ ಸರ್ವಜ್ಞತೆಯು ಭೃಂಗೀಶ್ವರನ ಶಿವಲಿಂಗೈಕಭಾವನ (ಬಸಪು. ೫೩-೫) ; ದೇವ ಕೇಳ್ನಿನ್ನ ಸರ್ವಜ್ಞತೆಯನೆನಗೆ ತೋಱಿಸಿದೆ ಲೇಸಾಯ್ತು ನಿನ್ನ ಕೃಪೆ (ಕೃಮಿಭಾ. ೧೩-೨೯). [ಸಂ. ಸರ್ವಜ್ಞತಾ]

ಸರ್ವಜ್ಞತ್ವ (ನಾ). = ಸರ್ವಜ್ಞತೆ : ಸರ್ವಜ್ಞತ್ವ ಸರ್ವತೃಪ್ತತ್ವ . . . ಅಲುಪ್ತಶಕ್ತಿತ್ವ ಎಂಬ ಬಿದಂಗ ಷಟ್‌ಸ್ಥಲವ (ಉದ್ಭವಾ. ೪-೧೨) ; ತಾರತಮ್ಯ ವಿಶ್ರಾಂತಿಯೇ ಪರ್ಯವಸಾನವೇ ಸರ್ವಜ್ಞತ್ವ (ಓಂಡಸಾ. ೮೭). [ಸಂ.]

ಸರ್ವಜ್ಞಭಟ್ಟಾರಕ (ನಾ). ಒಬ್ಬ ಜೈನಮುನಿಯ ಹೆಸರು : ವೀಗೂರಾ ವರಮಪ್ರಭವರಿಷಿಯರ್ಸರ್ವಜ್ಞಭಟ್ಟಾರಕರ್ (ಎಕ. II. ೧೩-೨ ; 700). [ಸಂ.]

ಸರ್ವತಂತ್ರಸ್ವತಂತ್ರ (ನಾ). ಸಮಸ್ತಶಾಸ್ತ್ರಗಳಲ್ಲಿ ನಿಷ್ಣಾತನಾದವನು ; ಒಂದು ಬಿರುದು : ಈತನಿಗೆ ಕವಿತಾರ್ಕಿಕಸಿಂಹ, ಸರ್ವತಂತ್ರಸ್ವತಂತ್ರ, ವೇದಾಂತಾಚಾರ್ಯ ಎಂಬ ಬಿರುದುಗಳಿವೆ (ಭಾರದ. ೩೧೦). [ಸಂ.]

ಸರ್ವತಃಶ್ರೋತ್ರ (ನಾ). ಎಲ್ಲವನ್ನೂ ಕೇಳಬಲ್ಲವನು; ಸಮಸ್ತವನ್ನೂ ಆಲಿಸುವವನು : ನಾನಿಹೆನು ಇಹನೆಂಬ ನಿರ್ವಿಷಯದರಿವಿನೊಳು ಏಕನಾಗಿ ಸರ್ವತಶ್ಚಕ್ಷುವೆನೆ ಸರ್ವತಃಶ್ರೋತ್ರನೆನೆ ಮೂಕನಾಗಿ (ಮಲದೇ. ೫೨-೧೦). [ಸಂ.]

ಸರ್ವತಶ್ಚಕ್ಷು (ನಾ). ಎಲ್ಲ ಕಡೆಗೂ ದೃಷ್ಟಿಯುಳ್ಳವನು; ಸಮಸ್ತವನ್ನೂ ನೋಡಬಲ್ಲವನು : ನಾನಿಹೆನು ಇಹನೆಂಬ ನಿರ್ವಿಷಯದರಿವಿನೊಳು ಏಕನಾಗಿ ಸರ್ವತಶ್ಚಕ್ಷುವೆನೆ ಸರ್ವತಃಶ್ರೋತ್ರನೆನೆ ಮೂಕನಾಗಿ (ಮಲದೇ. ೫೨-೧೦).

[ಸಂ. ಸರ್ವತಶ್ಚಕ್ಷುಸ್]

ಸರ್ವತೋಭದ್ರ (ನಾ). ೧. ಎಲ್ಲ ಕಡೆಯಲ್ಲಿಯೂ ಎಲ್ಲ ದೃಷ್ಟಿಯಿಂದಲೂ ಪ್ರಶಸ್ತವಾದುದು, — ಮಂಗಳಕರವಾದುದು : ಈ ವರ್ಧಮಾನಂ ನಯನಾನಂದವರ್ಧಮಾನಮಾದುದೀ ಸರ್ವತೋಭದ್ರಂ ಸರ್ವತೋಭದ್ರಮೆಂಬ ವಾಕ್ಯಾರ್ಥಮನನ್ವರ್ಥಂ ಮಾಡಿದುದು (ಮಲ್ಲಿಪು. ೫-೪೨). ೨. ಸರ್ವಮಂಗಳಮಯನಾದವನು; ಶಿವ: ಮೃತ್ಯುಂಜಯ ಸಮಂಜಸ ಸರ್ವತೋಭದ್ರ ಭೀಮ ಭರ್ಗ ಕಪರ್ದಿ . . . ಕರುಣಿಸುವುದು (ಕುವ್ಯಾಆ. ೬-೯೦). ೩. ಬೇವಿನ ಮರ; ನಿಂಬವೃಕ್ಷ. ೪. ಒಂದು ಬಗೆಯ ಸೇನಾವ್ಯೂಹ : ಅವನು ಮರುದಿನ ಕೌರವಸೇನೆಯನ್ನು ಸರ್ವತೋಭದ್ರವ್ಯೂಹವಾಗಿ ರಚಿಸಿ ತಾನು ಅದರ ಮುಖದಲ್ಲಿ ನಿಂತನು (ವಚಭಾ. ೩೦೨). ೫. ಐದು ಬಗೆಯ ವಾಸ್ತುರಚನೆಗಳಲ್ಲಿ ಒಂದು; ನಾಲ್ಕುದಿಕ್ಕಿಗೂ ಒಂದೊಂದು ಬಾಗಿಲುಳ್ಳ, ಚೆಚ್ಚೌಕವಾದ ಅರಮನೆ, ದೇವಾಲಯ ಮುಂತಾದುದು : ಸುತ್ರಾಮನೆ ಸೂತ್ರಧಾರನಾಗಿಯುಂ ಕಲ್ಪಜರೆ ಶಿಲ್ಪಿಗಳಾಗಿಯುಂ ಸಮೆದ ಚೆಲ್ವಿಂಗೆ ಸರ್ವತೋಭದ್ರಮೆನಿಸಿದ ಸರ್ವತೋಭದ್ರಂಗಳೊಳಂ (ಆದಿಪು. ೬-೧೦೬ ವ); ಈ ಸರ್ವತೋಭದ್ರಂ ಸರ್ವತೋಭದ್ರಮೆಂಬ ವಾಕ್ಯಾರ್ಥಮನನ್ವರ್ಥಂ

ಮಾಡಿದುದನುತ್ತುಂ (ಮಲ್ಲಿಪು. ೫-೪೨). ೬. ಎಂಟು ಬಗೆಯ ಚಿತ್ರರಚನೆಗಳಲ್ಲಿ ಒಂದು; ಚಚ್ಚೌಕವಾದ ಚಿತ್ರಪತ್ರ : ಶಿಶು ಸಕಲಂ ಸ್ವಸ್ತಿಕಂ ವರ್ಧಮಾನಂ ಸರ್ವತೋಭದ್ರಂ ಕಾಂತ್ರಂ ಮಹಾಕಾಂತಂ ಚಿತ್ರೋತ್ಸವಮೆಂಬೆಂಟುಂ ಪತ್ರಂಗಳೊಳಂ . . . ಅಪೂರ್ವಭಿತ್ತಿಯಂ ತಳೆದು (ಚಂದ್ರಪ್ರ. ೧೫-೭೦). ೭. [ಕಾವ್ಯಮೀ] ಚಿತ್ರಕಾವ್ಯದ ಗತಿಚಿತ್ರಗಳ ಪ್ರಭೇದಗಳಲ್ಲಿ ಒಂದು; ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ, ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಹೀಗೆ ಯಾವ ರೀತಿಯಿಂದ ಓದಿದರೂ ಒಂದೇ ತೆರನಾದ ಪಾಠವನ್ನು ಹೊಂದಿರುವ ಒಂದು ಗತಿಚಿತ್ರ; IP ಇದು ಚೌಕಾಕಾರದ ರಚನೆಯಾಗಿದ್ದು ಅಡ್ಡಲಾಗಿ ಎಂಟು ಮನೆ ಮತ್ತು ಮೇಲಿನಿಂದ ಕೆಳಕ್ಕೆ ಎಂಟು ಮನೆಗಳಿರುತ್ತವೆ. ಒಂದು ಮನೆಗೆ ಒಂದು ಅಕ್ಷರದಂತೆ ಬರೆದಿರುತ್ತದೆ : ಶರಶೂಲಚಾಪ . . . ಮುರಜಂ ಗೋಮೂತ್ರಿಕೆ ಪುಷ್ಕರಮರ್ಧಭ್ರಮಣ ಸರ್ವತೋಭದ್ರಂಗಳ್ . . . ನೆಗಟ್ಟುಂ ಪಲವುಂ (ಕಾವ್ಯಾವ. ೧೫೯). ೮. ಸರ್ವತೋಭದ್ರ ಎಂಬ ಚಿತ್ರಕಾವ್ಯದ ಗತಿಚಿತ್ರದ ರೀತಿಯ ಚೆಂಡಿನಾಟ: ನೆಗಟ್ಟು ಮಣ್ಣಳಮಾಳ . . . ಬಗೆವೊಡರಿದಪ್ಪ ಸರ್ವತೋಭದ್ರಮುದ್ದವಟಂ ಚಕ್ರವ್ಯೂಹಂ ಬಲ್ಮೆಗಳಂ ಪೂಗಟೆ ಸಲ್ತಕ್ಕ ಪೆಱವು ದುಷ್ಕರದೆಟೆಪಂಗಳನಶ್ರಮದಿನೆಟೆಯೊಳ್ ಜಗದೊಳೆಟೆವಬೆಡಂಗನೊರ್ವನೆ ಬಲ್ಲ XXX (ಎಕ. II (R), ೧೬೩-೧೧೨ ; 982). ೯. [ನಾಟ್ಯ] ಹತ್ತು ಬಗೆಯ ನೃತ್ಯಬಂಧಗಳಲ್ಲಿ ಒಂದು : ತಾಂಡವ ನಾಂಟ್ಯ ನೃತ್ಯ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರಯೆಂಬ ದಶಪಾತ್ರಂಗಳ ತೋಱೆ (ಪೃಥಪು. ೧-೭೧ ವ). ೧೦. [ಜೈನ] ಮಕುಟಬದ್ಧರಾದ ರಾಜರು ಜಿನನಿಗೆ ಮಾಡುವ ಮಹಾಪೂಜೆ; ಚತುರ್ಮುಖಪೂಜೆ : ಸಮಸ್ತಧಾರ್ಮಿಕಜನಂಗಳಂ ಬರಿಸಿ ಸರ್ವತೋಭದ್ರಮೆಂಬ ಮಹಾಮಹಿಮೆಯಂ ಮಹೋತ್ಸವದಿಂದೆಂಟುದಿವಸಂಬರಂ ಮಾಡಿ (ಆದಿಪು. ೧೬-೬೨ ವ). ೧೧. ಒಂದು ಬಗೆಯ ಉಪವಾಸವ್ರತ: ಸರ್ವತೋಭದ್ರ ಸಿಂಹವಿಕ್ರೀಡಿತಂಗಳೆಂಬ ತಪದೊಳ್ ನೆಗಟ್ಟು (ಆದಿಪು. ೩-೫೭ ವ). [ಸಂ.]

ಸರ್ವತೋಭದ್ರಾಸನ (ನಾ). ೧. ಸರ್ವಮಂಗಳಮಯವಾದ ಪೀಠ: ಪುರೋಹಿತನು ಧರ್ಮರಾಜನನ್ನೂ ದ್ರೌಪದಿಯನ್ನೂ ಹುಲಿಯ ಚರ್ಮ ಹಾಸಿದ್ದ ಸರ್ವತೋಭದ್ರಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಕ್ಕೆ ಮುಂಚೆ ಮಾಡಬೇಕಾದ ಕರ್ಮಗಳನ್ನು ನೆರವೇರಿಸಿದನು (ವಚಭಾ. ೩೩೧). ೨. [ಯೋಗ] ಒಂದು ಬಗೆಯ ಆಸನ: ಯೋಗಯೋಗ್ಯಾಸನಗಳಲ್ಲಿ ಸರ್ವತೋಭದ್ರಾಸನ . . . ಅರ್ಧಾಸನಾದಿಯೆಂಭತ್ನಾಲ್ಕಾಸನಭೇದಗಳಂ (ವೀರೇ. ೧೯೯). [ಸಂ.]

ಸರ್ವತೋಭದ್ರೆ (ನಾ). ೧. ಮಧುಪರ್ಣಿಕೆ; ಶಿವನೀಮರ : "ಗಂಭಾರೀ, ಸರ್ವತೋಭದ್ರಾ . . . ಕಾಶ್ಮರ್ಯಃ — ೭ ಶೀವನಿಯ ಮರದ ಹೆಸರು" (ಸಿದ್ಧಾಂತಿ. ೧೨೦). ೨. ನಟಿ ; ನರ್ತಕಿ. [ಸಂ. ಸರ್ವತೋಭದ್ರಾ]

ಸರ್ವತೋಮುಖ (ಗು). ೧. ಎಲ್ಲ ಬಗೆಯ; ಸಮಗ್ರವಾದ : ಮಡದಿಯರೊಳಿಣಸ ಪತಿಗೊಡಬಡುವುದು ಗಡ ಸರ್ವತೋಮುಖಸ್ವಾತಂತ್ರ್ಯಂ (ಶಾಕುಂತ. ೭೨-೧೨೬). (ನಾ). ೨. ಎಲ್ಲಕಡೆ; ಎಲ್ಲ ಮಗ್ಗುಲು, —ಪಾರ್ಶ್ವ : ತುರಗದೆಡೆಬಲ ಗಜದ ಸಮ್ಮುಖ ತರುಣಿಯರುಗಳ ಸರ್ವತೋಮುಖ ಹಿರಿದು ದುರ್ಜನನಿದ್ದ ದೇಶವದೆಯ್ದೆ ವ್ಯಾಘ್ರಮುಖ . . . ಅಲ್ಲಿಹುದುಚಿತವಲ್ಲ (ಕುಮಾಉ. ೩-೬೬). ೩. ಸಮಗ್ರವಾದುದು; ಸಂಪೂರ್ಣವಾದುದು : ಸರ್ವತೋಮುಖವಾಗಿ ಈ ದೇಶದ ಪ್ರಗತಿಯನ್ನು ಸಾಧಿಸಿದ ಕೀರ್ತಿ ಈ ಸಂಸ್ಥೆಗೆ ಸೇರತಕ್ಕದ್ದು (ಪಂಜಪಂ. ೧೮೨). ೪. ಎಲ್ಲ ಕಡೆಗೂ ಮುಖಗಳುಳ್ಳವನು; ಸರ್ವವ್ಯಾಪಿಯಾದವನು; ಪರಮಾತ್ಮ: ಸರ್ವತೋಮುಖ ಸರ್ವಪೂಜಿತ ಸರ್ವಸಾಧಕ ಸರ್ವಗುಣನಿಲಯ . . . ಸರ್ವದುಃಖಾಪಹ ಮಹೇಶ್ವರ ಕರುಣಿಸುವುದು (ಕುಮಾಅ. ೬-೮೪). ೫. ನೀರು. ೬. ಬ್ರಹ್ಮ. ೭. ಶಿವ. ೮. ಆತ್ಮ. ೯. ಅಗ್ನಿ. ೧೦. ಸ್ವರ್ಗ. ೧೧. ಆಕಾಶ. [ಸಂ.]

ಸರ್ವತ್ರ (ಅ). ೧. ಎಲ್ಲ ಕಡೆಯಲ್ಲಿಯೂ; ಎಲ್ಲ ಸ್ಥಳಗಳಲ್ಲಿಯೂ : ಮೌನಂ ಸರ್ವತ್ರಸಾಧನಂ (ಗಾಡ). ೨. ಯಾವಾಗಲೂ; ಎಲ್ಲ ಕಾಲದಲ್ಲಿಯೂ. [ಸಂ.]

ಸರ್ವತ್ರಗಾಮಿ (ನಾ). ಎಲ್ಲ ಕಡೆಗೂ ಹೋಗುವಂತಹುದು; ಸರ್ವವ್ಯಾಪಿಯಾದುದು : ಮುಖದ ಕಾಂತಿಯಲ್ಲಿ ಎರಡು ಭಾವಗಳು ಅನಿರ್ವಚನೀಯವಾಗಿ ಶೋಭಿಸುತ್ತಿದ್ದುವು. ಮೊದಲನೆಯದು, ಸರ್ವತ್ರಗಾಮಿಯಾದ ಬುದ್ಧಿಯ ಪ್ರಭಾವ; ಎರಡನೆಯದು ಅತ್ಯಂತವಾದ ಆತ್ಮಗರಿವೆ (ಕಪಾಕು. ೪೫). [ಸಂ. ಸರ್ವತ್ರಗಾಮಿನ್]

ಸರ್ವಥಾ (ಅ). ೧. ಎಲ್ಲ ರೀತಿಯಿಂದಲೂ; ಸಂಪೂರ್ಣವಾಗಿ; ಸಮಗ್ರವಾಗಿ: ಪ್ರಭುಗಳು ಆಗ ಕುಶಾಲಿಗೆಂದ ಮಾತು ಸರ್ವಥಾ ನಿಜವಾಯಿತು (ಶಾಂತಲಾ. ೧೨೩). ೨. ಎಲ್ಲ ಕಾಲದಲ್ಲಿಯೂ; ಯಾವಾಗಲೂ. ೩. ಎಷ್ಟುಮಾತ್ರಕ್ಕೂ; ಸ್ವಲ್ಪವಾದರೂ ಕೂಡ; ಕಿಂಚಿತ್ತೂ : ಅಲ್ಲಾಡೋಣವು ಆಕಾಶದೊಳಗಿನ ಚಂದ್ರನಿಗೆ ಸರ್ವಥಾ ಇರುವುದಿಲ್ಲ (ಭಾಮಿನಿ. ೬೨). ೪. ಖಂಡಿತವಾಗಿಯೂ, ನಿಶ್ಚಯವಾಗಿಯೂ : ದೇವರನ್ನು ಯಾರೂ ನೋಡಿಲ್ಲ ; ಆದರೆ ಇಷ್ಟರ ಮೇಲಿಂದಲೇ ಆತನು ಇಲ್ಲ ಎಂದು ಸರ್ವಥಾ ಊಹಿಸಲಾಗದು (ಮುಂಬಯಿ. ೪-೫೮). "ಸಮವಾಕ್ಯಮುಂ ಸರ್ವಸತ್ಯ ವಿಶ್ವತೆಯನುಕ್ರಮದಿಂದ ಸರ್ವಥಾ ಶಬ್ದದೊಳು ಸಲ್ಗು" (ಮಂಗರಾ. ೧೫೫-೭೦). [ಸಂ.]

ಸರ್ವದ (ನಾ). ಎಲ್ಲವನ್ನೂ ಕೊಡುವವನು; ಪರಮಾತ್ಮ : ಆಮಲ್ಲರುಂ ಪಾಲ್ಗಡಲ ತಡಿಗೆ ಪೋಗೀಗಳಾ ವಿಷ್ಣುವಂ ಸರ್ವದನಂ ಪೆಂಪಿಂದಮಾರಾಧಿಸಿ ಧರಣಯ ವೃತ್ತಾಂತಮಂ ಬಿನ್ನವಿಪ್ಪುಂ (ವಿಷ್ಣುಪು. ೫-೧-೩೭). [ಸಂ.]

ಸರ್ವದಮನ (ನಾ). ೧. ಎಲ್ಲವನ್ನೂ ನಿಗ್ರಹಿಸುವವನು. ೨. ಶಕುಂತಲೆ ಮತ್ತು ದುಷ್ಯಂತರ ಮಗನಾದ ಭರತಚಕ್ರವರ್ತಿಗೆ ಬಾಲ್ಯದಲ್ಲಿದ್ದ ಹೆಸರು: ನಿನಗೆ ಋಷಿಗಳು ಸರ್ವದಮನನೆಂದು ಹೆಸರಿಟ್ಟದ್ದು ಯುಕ್ತವಾದದ್ದೇ (ಶಾಕುಂತ.೧೦೪-೧೦). [ಸಂ.]

ಸರ್ವದಾ (ಅ). ಯಾವಾಗಲೂ; ಸದಾಕಾಲದಲ್ಲಿಯೂ : ನೀನು ಸರ್ವದಾ ಇದೇ ಯೋಚನೆಯಲ್ಲಿದ್ದರೆ ಯಾವ ಕೆಲಸವೂ ಆಗುವುದಿಲ್ಲ (ರೂಫಿ). [ಸಂ.]

ಸರ್ವಧಾರಿ (ನಾ). ೧. ಅರುವತ್ತುಸಂವತ್ಸರಗಳಲ್ಲಿ ಇಪ್ಪತ್ತೆರಡನೆಯದು: ಶ್ರೀಮಚ್ಚಾಳುಕ್ಯವಿಕ್ರಮವರ್ಷದ ೨೩ನೇ ಸರ್ವ್ವಧಾರಿಸಂವತ್ಸರದ ಆಶ್ವೀಜ ಬಹುಳ[೪] ಆದಿವಾರದಂದು . . . ಬಿಟ ಕರಿಯ ಕೆಯ (ಸೌಇಇ. VIII, ೩೭೨-೧೦ ; 1099). ೨. ಶಿವ. [ಸಂ. ಸರ್ವಧಾರಿನ್]

ಸರ್ವನಮಶ್ಯ (ನಾ). ಸರ್ವಮಾನ್ಯವಾದುದು; ಎಲ್ಲ ತೆರಿಗೆಗಳಿಂದ ಮುಕ್ತವಾದುದು : ಶ್ರೀಮದಗ್ರಹಾರ ಪಟ್ಟಲ ನಾಲ್ಕೂಱೆರ್ಪ್ಪದಿಂಬರ ಕೈಯ್ಯೊಳ್ ನ್ಯಾನಶಕ್ತಿಪಣ್ಣೆತರ್ ದ್ರವ್ಯಪೂರ್ವ್ವಕದಿಂ ಸರ್ವ್ವನಮಶ್ಯಮಾಗೆ . . . ಪಾಳಕೆಯ್ಯಂ ಕೊಣ್ಬುಗವಡೇಶ್ವರದೇವರ್ಗ್ಗೆ ಬಿಟ್ಟ ಮತ್ತ ೫ ಅಯ್ದು (ಸೌಇಇ. XX, ೫೭-೨೭ ; 1084); ಪುಲಿಗೆಱೆಯ ರಾಮೇಸ್ವರದೇವರ್ಗ್ಗೆ ಪುರದ [ಸಾ]ದದೆ[ಱೆ] ಹಂದರುವಣವೆಂಬಿವಂ ಸರ್ವನಮಶ್ಯವಾಗಿ ಬಿಡೆಂದು ಬೇXವುದುಂ (ಸೌಇಇ. XX, ೭೮-೧೪; 1118).

[IP ಇದು 'ಸರ್ವನಮಸ್ಯ' ಎಂಬುದರ ಅಪಲಿಖಿತ]

ಸರ್ವನಮಸ್ಯ (ನಾ). = ಸರ್ವನಮಶ್ಯ : ನರೆಯಂಗಲ್ಲನ್ನೆರಡಱೊಳಗಣ ಉಮ್ಮಚಿ[ಗೆ]ಯಂ ಸರ್ವ್ವಾಭ್ಯಂತರಸಿದ್ಧಿಯಾಗಿ ಸರ್ವ್ವನಮಸ್ಯದಗ್ರಹಾರಂ ಮಾಡಿ (ಎಇ. XX. ೭೭-೧೨; 1012); ಪುರಂಗಳುಮಂ ಭೂಸುರಪುರವರ್ಯಂಗಳಪ್ಪ ಸರ್ವನಮಸ್ಯಂಗಳುಮಂ . . . ನೋಡುತ್ತುಂ (ಲೀಲಾವ. ೫-೧೯ ವ). [ಸಂ.]

ಸರ್ವನಾಮ (ನಾ). [ವ್ಯಾಕ] "ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ ಒಂದು ವಸ್ತುವಿನ (ಅಥವಾ ವಿಷಯದ) ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಸರ್ವನಾಮವು ನಾಮಪದದಲ್ಲೇ ಒಂದು ಬಗೆ" (ಮಧ್ಯಮ. ೨೯): ಸ್ವವಿಧಕ್ತ್ರಾದ್ಯಕ್ಷರಮಾಗಿ ವರ್ತಿಕುಂ ಸರ್ವನಾಮದೊಳ್ ಮತ್ತದುವುಂ (ಕಾವ್ಯಾವ. ೧೦೧) ; ಅದುವಿದುವುದುವಾವುದು ವೆಲ್ಲದು ಪೆಱತೇನ್ನೆಱದೆನಿಪ್ಪ ಶಬ್ದಂಗಳ್ ತಪ್ಪದೆ ಸರ್ವನಾಮಮಕ್ಕುಂ (ಶಮಪ. ೭೮). [ಸಂ. ಸರ್ವನಾಮನ್]

ಸರ್ವನಾಶ (ನಾ). ೧. ಸಂಪೂರ್ಣವಾದ ನಾಶ ; ಎಲ್ಲ ಹಾಳಾಗಿ ಹೋಗುವಿಕೆ: ತನ್ನ ಸರ್ವನಾಶವಾದರೂ ವಚನಭ್ರಷ್ಟನಾಗಬಾರದು (ಭಾರಪ. ೧೦೩). ೨. ಎಲ್ಲವನ್ನೂ ಹಾಳುಮಾಡುವ ವ್ಯಕ್ತಿ; ಮೃತ್ಯುಸ್ವರೂಪಿ : ಕೈಕೆ, ನಿನ್ನಂ ನೆಯ್ದನಾ ಪುಲಿದರಿಗಳೆರಡುಮಂ ಕೂಡಿಸಿ ವಿಧಾತಂ! ನೀನೆನ್ನ ಸರ್ವನಾಶಂ! (ಶ್ರೀ ರಾಮಾ. ೭೨-೪೯೯). [ಸಂ.]

ಸರ್ವನಿಯಾಮಕ (ನಾ). ಎಲ್ಲವನ್ನೂ ನಿಯಂತ್ರಿಸುವವನು; ಪರಮಾತ್ಮ: ಸರ್ವಮಯ ಸರ್ವಜ್ಞ ಸರ್ವನಿಯಾಮಕಾಚ್ಯುತನು (ಗಗತಾ. ೧೨–೭೭) ; ದೇವರು ಸರ್ವಶಕ್ತನು ಸರ್ವನಿಯಾಮಕನು (ಮುಂಬಯಿ. ೪-೧೪೧). [ಸಂ.]

ಸರ್ವನಿರ್ವಾಣಿ (ನಾ). ಸಂಪೂರ್ಣನಿರ್ವಾಣವನ್ನು ಪಡೆದವನು : ಭಕ್ತಂಗೆ ಸೊಪ್ಪಡಗಿ ವಿರಕ್ತಂಗೆ ಹೆಚ್ಚು ಕುಂದೆಂಬ ಉಭಯ ನಿಶ್ಚಯವಾದಲ್ಲಿ ಆತ ನಿಃಕಳಂಕನಿರತ ಸರ್ವನಿರ್ವಾಣಿ ನಿಃಕಳಂಕಮಲ್ಲಿಕಾರ್ಜುನಾ (ಮೋಳಿಮಾ. ೪೭-೧೯೫).

[ಸಂ. ಸರ್ವನಿರ್ವಾಣಿನ್]

ಸರ್ವನಿವಾಸಿ (ನಾ). ಎಲ್ಲ ಕಡೆಯಲ್ಲಿಯೂ ಇರುವವನು; ಸರ್ವವ್ಯಾಪಿಯಾದವನು : ಭವದಲ್ಲಿ ವ್ರತಗೆಟ್ಟುದಾಗಿ ಆ ಭಾವದಲ್ಲಿ ಜೀವಸಂಹಾರಿ ಕೂಡಲಸಂಗಮದೇವ ಸರ್ವನಿವಾಸಿಯಾಗಿ (ಬಸವ. ೯೪೫). [ಸಂ. ಸರ್ವನಿವಾಸಿನ್]

ಸರ್ವನಿವೇದಕ (ನಾ). ಒಂದು ಬಗೆಯ ಯಜ್ಞ : ಸರ್ವನಿವೇದಕಮೆಂಬ ಯಜ್ಞದೊಳ್ ಕ್ಷಿತಿ ಪೊಗೆಟ್ಟನ್ನಮಿತ್ತು (ಪಂಪಭಾ. ೨-೪೫). [ಸಂ.]

ಸರ್ವಪೃಷ್ಠ (ನಾ). ಒಂದು ಬಗೆಯ ಯಾಗ : ಅಗ್ನಿಷ್ಟೋಮ . . . ಸರ್ವಪೃಷ್ಠ . . . ಅಶ್ವಮೇಧಾದಿ ಕ್ರತುಗಳಿಂ ಪುನೀತರಾಗಿ (ವಿವೇ. ೨೭೩). [ಸಂ. ಸರ್ವಪೃಷ್ಠಾ]

ಸರ್ವಭಾಷಾಸಾಮಾನ್ಯ (ನಾ). ಎಲ್ಲ ಭಾಷೆಗಳಿಗೂ ಸಮಾನವಾದುದು; ಎಲ್ಲ ಭಾಷೆಯವರಿಗೂ ಏಕಕಾಲದಲ್ಲಿ ಅವರವರ ಭಾಷೆಯಲ್ಲಿ ಅರ್ಥವಾಗುವಂತಹುದು : ಶ್ರೀಮತ್ತೀರ್ಥಾಧಿಪನ ವದನಾಂಭೋಜದಿಂ ಸರ್ವಭಾಷಾಸಾಮಾನ್ಯಂ ಶ್ರೀವಚನಮೊಗೆದತ್ತು (ಯಶೋಚ. ೧-೭೧). [ಸಂ.]

ಸರ್ವಮಂಗಲೆ, ಸರ್ವಮಂಗಳೆ (ನಾ). ಎಲ್ಲರಿಗೂ ಶುಭವನ್ನುಂಟುಮಾಡುವವಳು; ಪಾರ್ವತಿ; ಭವಾನಿ: "ಉಮಾ, ಕಾತ್ಯಾಯನೀ . . . ಸರ್ವಮಂಗಳಾ . . . ಅಂಬಿಕಾ —೧೭ ಶಿವಪತ್ನಿಯಾದ ಪಾರ್ವತೀದೇವಿಯ ಹೆಸರುಗಳು" (ಸಿದ್ಧಾಂತಿ. ೨೦). **ಸರ್ವಮಂಗಳೆ** : 'ಸರ್ವಮಂಗಳಾಶ್ರಯ' ಪರಾ.

[ಸಂ. ಸರ್ವಮಂಗಲಾ]

ಸರ್ವಮಂಗಳಾಶ್ರಯ (ನಾ). ೧. ಎಲ್ಲ ಬಗೆಯ ಶುಭಗಳಿಗೆ ಆಶ್ರಯವಾಗಿರುವಂತಹುದು. ೨. ಪಾರ್ವತಿಯ ನಿವಾಸ. ೧, ೨ : ಆತನಾಳ್ವ ನಾಡು ಕೈಲಾಸಮಲ್ಲದೊಡಂ ಸರ್ವಮಂಗಳಾಶ್ರಯಂ ವೈಕುಂಠಮಲ್ಲದೊಡಂ ಲಕ್ಷ್ಮೀಮನೋಹರಂ (ರಾಮಾಶ್ವ. ೭-೨೦).

[ಸಂ. ಸರ್ವಮಂಗಲಾಶ್ರಯ (ಸರ್ವಮಂಗಲ+ಆಶ್ರಯ; ಸರ್ವಮಂಗಲಾ+ಆಶ್ರಯ)]

ಸರ್ವಮಂಗಳೆ 'ಸರ್ವಮಂಗಲೆ' ನೋ.

ಸರ್ವಮಾನ್ಯ (ನಾ). ೧. ಎಲ್ಲರಿಗೂ ಒಪ್ಪಿಗೆಯಾದುದು; ಸರ್ವಸಮ್ಮತವಾದುದು : ಕ್ರಮೇಣ ಗೆಯ್ ಎಂಬ ರೂಪವೇ ಎಲ್ಲೆಡೆಯಲ್ಲೂ ಸರ್ವಮಾನ್ಯವಾಯಿತು (ದ್ರಾವಿವಿ. ೨೭೧). ೨. ಎಲ್ಲ ವಿಧವಾದ ತೆರಿಗೆಗಳಿಂದ ಮುಕ್ತವಾದ ಭೂಮಿ; ಸರ್ವನಮಸ್ಯವಾದ ಭೂಮಿ : ಸರ್ವ್ವಮಾನ್ಯವಾಗಿ ಯಾ ದೇವರಿಗೆ ಕೊಟ್ಟ ಧರ್ಮ್ಮ (ಎಕ. VII. ಶಿಕಾರಿ. ೧೯-೧೭; 1309) ; ಆವನಿತು ಹೊಲವಿತ್ತಡೀವೆನು ಸರ್ವಮಾನ್ಯವನು (ಬಸವು. ೨೭-೫೩). [ಸಂ.]

ಸರ್ವಮ್ಮ (ನಾ). ಒಬ್ಬಾತನ ಹೆಸರು : ಸರ್ವಮ್ಮನ ಮಗ ಅಕ್ಕ XXX ಅಗ್ಗಸಂಗೋಸಾಸಮಿಟ್ಟು (ಎಕ. VIII, ಸೊರಬ. ೨೭-೬; 940). [ಸರ್ವ$_1$ + ಅಮ್ಮ$_1$]

ಸರ್ವರತ್ನ (ನಾ). ೧. ಎಲ್ಲ ಬಗೆಯ ರತ್ನ ಮೊದಲಾದ ಶ್ರೇಷ್ಠವಾದ ಸಂಪತ್ತು, — ಐಶ್ವರ್ಯ : ಕಾಲಕಾಲಕ್ಕೆ ಮಳೆಬೆಳೆಗಳಾಗುತ್ತಿದ್ದುವು. ದೇಶವು ಸರ್ವರತ್ನ ಸಮೃದ್ಧವಾಗಿತ್ತು (ವಚಭಾ. ೩೯೩). ೨. [ಜೈನ] ನವನಿಧಿಗಳಲ್ಲಿ ಒಂದು: ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಆದಿಪು. ೧೫-೩ ವ). [ಸಂ.]

ಸರ್ವರಸ (ನಾ). ೧. ಎಲ್ಲ ಬಗೆಯ ರಸದ್ರವ್ಯಗಳು : ಸಾಲ್ಕನೆಯ ಸರ್ವರಸ ವರ್ಜನಾವ್ಯವಹಾರರೂಪರಸ ಪರಿತ್ಯಾಗತಪದೊಳಂ . . . ನೆಱೆಯೆ ನೆಗೆದ್ದು (ಶಾಂತಿಪು. ೯-೧೦೫ ವ). ೨. ಉಪ್ಪು; ಲವಣ. ೩. ಸಜ್ಜರಸ : "ಯಕ್ಷಧೂಪಃ . . . ಸರ್ವರಸಃ, ಬಹುರೂಪಃ — ೫ ಸಜ್ಜರಸದ ಹೆಸರುಗಳು" (ಸಿದ್ಧಾಂತಿ. ೨೦೭). [ಸಂ.]

ಸರ್ವರ್ತುಕ (ಗು). ಎಲ್ಲ ಋತುಗಳಲ್ಲಿಯೂ ಚಿಗುರು, ಹೂವು, ಹಣ್ಣುಗಳನ್ನು ಬಿಡುವ; ಎಲ್ಲ ಋತುಗಳ ಪ್ರಭಾವವನ್ನೂ ಏಕಕಾಲದಲ್ಲಿ ಹೊಂದಿರುವ: ಸರ್ವರ್ತುಕಮೆ ಬನಂ ನೆಲನುರ್ವರೆಯೆ ಕೊಳಂ ಸಮಂತು ಪೂಗೊಳನೆ ಬಱೊಕ್ಕೂರ್ವೀಧ್ರಂ ರೋಹಣಮೆ ಗಡಾರ್ವಣ್ಣಿಸಲಱೊವರಣ್ಣ ತಜ್ಜಗಪದಮಂ (ಚಂದ್ರಪ್ರ. ೩-೧೦). [ಸಂ.]

ಸರ್ವರ್ತುಕನಂದನ (ನಾ). ಎಲ್ಲ ಋತುಗಳಲ್ಲಿಯೂ ಹೂವು ಹಣ್ಣುಗಳಿಂದ ಸಮೃದ್ಧವಾಗಿರುವ ತೋಟ : ತ್ರಿಲೋಕತಿಲಕನ ಜನ್ಮೋತ್ಸವದೊಳೇಕಸಮಯ ಸಮವತೀರ್ಣ ಸರ್ವರ್ತುಕನಂದನ ವಿಕಸದಶೋಕ ವಿಕಚ ಮಲ್ಲಿಕಾಬದ್ಧ ಕುಟ್ಮಲಾಡಂಬರ . . . ಲೋಧ್ರಂಗಳಿಂ ರಾಗಮಂ ಬೀಱುವಂತೆ . . . ಮಹೀಕಾಂತೆ ಸೊಗಯಿಸೆ (ಆದಿಪು. ೭-೩೬ ವ). [ಸಂ.]

ಸರ್ವರ್ತುಕೋದ್ಯಾನ (ನಾ). = ಸರ್ವರ್ತುಕನಂದನ: ಉದಗ್ರದೇವನಿವಾಸಾವಳಿಯಿನುದ್ಗಶಾಳಿವನದಿಂ ಸರ್ವರ್ತುಕೋದ್ಯಾನನಂದನದಿಂ . . . ತನಗನ್ಯರ್ಥಮೆನಿಪ್ಪುದಾ ಪುರವರಂ ಶೋಭಾವತೀನಾಮದಿಂ (ಪಂಚತಂ. ೧೮೪-೨) ; ಸರ್ವರ್ತುಕೋದ್ಯಾನವೆನಿಸಿದ ಬನಂಗಳಿಂ (ತಿರುರ. ದೇ. ೨-೮). [ಸಂ.]

ಸರ್ವಲಗ್ಗೆ (ನಾ). = ಸಬ್ಬಲಗ್ಗೆ ೧ : ಸರಕಟಿಸಿ ದಳ ಸರ್ವಲಗ್ಗೆಯಲುರವಣಿಸೆ ಯಮಸೂನು ಕಂಡನು ನರನ (ಕುವ್ಯಾಕ. ೪-೨೮); ಬಲವೆಲ್ಲ ಸರ್ವಲಗ್ಗೆಯೊಳೇಱಿದೊಡೆ ರಾಮನಳವುಗೆಟ್ಟನೆ ಮನದೊಳಗೆ ತಳೆದನೆ ಚಿಂತೆಯ ಕುಲಗಿರಿಯಂತೆ ನಿಶ್ಚಳನಾಗಿರ್ದನಾಜಿಯೊಳು (ಕುರಾಸಾಂ. ೨೦-೨೯). [ಸರ್ವ$_2$ + ಲಗ್ಗೆ]

ಸರ್ವಲೆ (ನಾ). ೧. ಕಬ್ಬಿಣದ ದೊಣ್ಣೆ. ೨. ಒಂದು ಬಗೆಯ ಆಯುಧ ; ಈಟಿ ; ಸಬಳ. [ಸಂ. ಸರ್ವಲಾ]

ಸರ್ವವಿತ್ತು (ನಾ). ಎಲ್ಲವನ್ನೂ ಬಲ್ಲವನು; ಸರ್ವಜ್ಞ : ಭಗವಾನೆನಿಪ ಸರ್ವವಿತ್ತು ನೀಂ ಮೋದದಿಂದೆನ್ನ ಸಂಶಯವನಪಹರಿಸು (ಪದ್ಮರಾ. ೧೦-೮).

[< ಸಂ. ಸರ್ವವಿದ್]

ಸರ್ವವಿದ (ನಾ). = ಸರ್ವವಿತ್ತು : ನೀಂ ಚಿರ ಪೇಚೆಂತು ಸರ್ವವಿದನ್ನೆ (ಜಿನಾಲ. ೧೮). [ಸಂ. ಸರ್ವವಿದ್]

ಸರ್ವವೇದ (ನಾ). 'ವಿಶ್ವಜಿತ್' ಎಂಬ ಯಾಗವನ್ನು ಮಾಡಿ ತನ್ನ ಸರ್ವಸ್ವವನ್ನೂ ದಾನಮಾಡಿದವನು : "ಸರ್ವಸ್ವಮಂ ಕೊಟ್ಟವಂ ಸರ್ವವೇದನಕ್ಕುಂ" (ಮಂಗರಾ. ೭೭-೧೪). [ಸಂ. ಸರ್ವವೇದಸ್]

ಸರ್ವವೇದ್ಯ (ನಾ). ಎಲ್ಲರಿಗೂ ತಿಳಿದಿರುವಂತಹುದು ; ಸರ್ವವಿದಿತವಾದುದು: ಒಂದು ಗುರಿಯನ್ನು ಸಾಧಿಸಬೇಕಾದರೆ ಪ್ರಾಮಾಣಿಕತೆಯಿಂದ ದುಡಿಯಬೇಕೆಂಬುದು ಸರ್ವವೇದ್ಯವಾದ ವಿಚಾರ (ರೂಢಿ). [ಸಂ.]

ಸರ್ವವ್ಯಾಪಕ (ಗು). ೧. ಎಲ್ಲ ಕಡೆಯಲ್ಲಿಯೂ ವ್ಯಾಪಿಸಿರುವ ; ಎಲ್ಲವನ್ನೂ ಆವರಿಸಿರುವ : ಇಂದ್ರನ ಸರ್ವವ್ಯಾಪಕಶಕ್ತಿಯನ್ನು . . . ಪೃಥಿವ್ಯಂತರಿಕ್ಷಗಳೆರಡೂ ಹೊಂದಲಸಮರ್ಥವಾದವು (ಋಗ್ವಾರ. ೬೯). (ನಾ). ೨. ಎಲ್ಲ ಕಡೆಯಲ್ಲಿಯೂ ವ್ಯಾಪಿಸಿರುವವನು : ಪರಮಾತ್ಮನು ಸರ್ವಜ್ಞನೂ ಸರ್ವಶಕ್ತನೂ ಸರ್ವವ್ಯಾಪಕನೂ ಆಗಿದ್ದರೆ, ಜೀವಾತ್ಮನು ಅಲ್ಪಜ್ಞನೂ ಅಲ್ಪಶಕ್ತನೂ ಅಲ್ಪವ್ಯಾಪಕನೂ ಆಗಿರುವನು (ಶಕ್ತಿವಿ. ೭). [ಸಂ.]

ಸರ್ವಶಕ್ತ (ನಾ). ಎಲ್ಲ ಶಕ್ತಿಗಳನ್ನೂ ಹೊಂದಿದವನು : "ಸರ್ವಶಕ್ತನಲ್ಲಿಯುಂ ಸರ್ವಸನ್ನಾಹಮೆಂಬುದು" (ಹಲಾಯು. ೧೩೩-೧೫) ; ಪರಮಾತ್ಮನು ಸರ್ವಜ್ಞನೂ ಸರ್ವಶಕ್ತನೂ ಸರ್ವವ್ಯಾಪಕನೂ ಆಗಿದ್ದರೆ, ಜೀವಾತ್ಮನು ಅಲ್ಪಜ್ಞನೂ ಅಲ್ಪಶಕ್ತನೂ ಅಲ್ಪವ್ಯಾಪಕನೂ ಆಗಿರುವನು (ಶಕ್ತಿವಿ. ೭). [ಸಂ.]

ಸರ್ವಶ್ರೀ (ನಾ). ಅನೇಕ ಹೆಸರುಗಳನ್ನು ಹೇಳುವಾಗ, ಪ್ರತಿಯೊಂದರ ಆರಂಭದಲ್ಲೂ 'ಶ್ರೀ' ಕಾರವನ್ನು ಸೇರಿಸುವುದಕ್ಕೆ ಬದಲಾಗಿ ಎಲ್ಲ ಹೆಸರುಗಳಿಗೂ ಅನ್ವಯಿಸುವಂತೆ ಆರಂಭದಲ್ಲಿ ಸೇರಿಸುವ ಅದೇ ಅರ್ಥದ ಪದ : ಇಂದಿನ ಸಭೆಗೆ ಸಂಘದ ಸದಸ್ಯರುಗಳಾದ ಸರ್ವಶ್ರೀ ರಾಮಣ್ಣ, ಭೀಮಯ್ಯ, ಪುಟ್ಟಪ್ಪ ಎಲ್ಲರೂ ಆಗಮಿಸಿದ್ದರು (ರೂಢಿ). [ಸಂ.]

ಸರ್ವಸನ್ನಾಹ (ನಾ). ೧. ಸಕಲ ಸೇನಾಬಲವು ಸಜ್ಜಾಗಿರುವಿಕೆ : "ವೀರಬಲಮಂ ಸರ್ವಸನ್ನಾಹಯೆಂಬುದು" (ಮಂಗರಾ. ೧೪೦-೮). ೨. ಎಲ್ಲರಲ್ಲಿಯೂ ಇರುವವನು; ಸರ್ವಾತ್ಮಕ; ಪರಮಾತ್ಮ : "ಸರ್ವಶಕ್ತನಲ್ಲಿಯುಂ ಸರ್ವಸನ್ನಾಹಮೆಂಬುದು" (ಹಲಾಯು. ೧೩೨-೧೫). [ಸಂ.]

ಸರ್ವಸಮ್ಮತ (ನಾ). ಎಲ್ಲರಿಗೂ ಒಪ್ಪಿಗೆಯಾದುದು: ಬುದ್ಧಿನು . . . ತನ್ನ ಬುದ್ಧಿವಾದವನ್ನೇ ಸರ್ವಸಮ್ಮತವಾಗುವಂತೆ ಮಂಡಿಸತೊಡಗಿದನು (ಭಾರದ. ೧೨೦). [ಸಂ.]

ಸರ್ವಸಾಕ್ಷಿ (ನಾ). ೧. ಎಲ್ಲ ಘಟನೆಗಳಿಗೂ ಸಾಕ್ಷಿಯಾದವನು; ಎಲ್ಲವನ್ನೂ ಪ್ರತ್ಯಕ್ಷವಾಗಿ ಕಂಡವನು; ಪರಮಾತ್ಮ : ತಾ ಸರ್ವಸಾಕ್ಷಿಪ್ರಮಾಣಕ್ಕೆವೊಂದಿನಿತು ಬೇಸರಾಗದೆ ಬಾಳ್ವುದೆಂದು . . . ಪರಸುತ್ತ (ನವಮೋ. ೧೩-೫೭); ಸರ್ವಸಾಕ್ಷಿಯಾದ ಭಗವಂತನೊಬ್ಬನಿದ್ದಾನೆ (ನಿಶಉ. ೧೨೧). ೨. ವಾಯು. ೩. ಅಗ್ನಿ. [ಸಂ. ಸರ್ವಸಾಕ್ಷಿನ್]

ಸರ್ವಸಾಧನಿ (ನಾ). [ವ್ಯಾಕ] ಭೂತ, ವರ್ತಮಾನ, ಭವಿಷ್ಯತ್ ಮತ್ತು ಸರ್ವಸಾಧನಿ ಎಂಬ ಆಖ್ಯಾತವಿಭಕ್ತಿಯ ನಾಲ್ಕು ಬಗೆಗಳಲ್ಲಿ ಒಂದು; ವಿಧ್ಯರ್ಥದಲ್ಲಿ ಹತ್ತುವ ಆಖ್ಯಾತವಿಭಕ್ತಿ: ಭೂತವತಿ ವರ್ತಮಾನಂ ಖ್ಯಾತ ಭವಿಷ್ಯಂತಿ ಸರ್ವಸಾಧನಿಯೆಂಬಾಖ್ಯಾತವಿಭಕ್ತಿಗಳಕ್ಕುಮತೀತಭವದ್ಭಾವಿಕಾಲ ವಿಧ್ಯಾದಿಗಳೊಳ್ (ಕಾವ್ಯಾವ. ೩೭೪). [ಸಂ. ಸರ್ವಸಾಧನೀ]

ಸರ್ವಸಾಧು (ನಾ). [ಜೈನ] ಮೂಲಗುಣಾದಿಕ ತಪಶ್ಚರಣವನ್ನು ಆತ್ಮೀಕರಿಸಿಕೊಂಡು ಸರ್ವಜೀವಗಳಲ್ಲಿ ಸಮಭಾವವನ್ನು ಹೊಂದಿರುವ ಸಾಧು: ಉದ್ಧರಿಸುಗೆ ತಾತ್ಪರ್ಯದಿನರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸರ್ವಸಾಧುಗಳೆಮ್ಮಂ (ಆದಿಪು. ೧-೬). [ಸಂ.]

ಸರ್ವಸಾಮಾನ್ಯ (ನಾ). ೧. ತೀರ ಸಾಮಾನ್ಯವಾದುದು ; ವಾಡಿಕೆಯಾದುದು: ಒಬ್ಬರಿಗೆ ತಿನ್ನಲು ಸಾಧ್ಯವಿರುವುದಕ್ಕಿಂತ ಹೆಚ್ಚು ಒತ್ತಾಯದಿಂದ ಬಡಿಸುವುದು ನಮ್ಮಲ್ಲಿ ಸರ್ವಸಾಮಾನ್ಯವಾಗಿ ಒಂದು ಪದ್ಧತಿಯೇ ಆಗಿಹೋಗಿದೆ (ಅಡುಸೌ. ೮೬). ೨. ಎಲ್ಲರಿಗೂ ಸಮಾನವಾದುದು ,— ಅನ್ವಯಿಸುವಂತಹುದು: ಇದು ಸರ್ವಸಾಮಾನ್ಯವಾದ ಸಮಸ್ಯೆಯಾದುದರಿಂದ ಎಲ್ಲರೂ ಇದರ ಬಗ್ಗೆ ಗಮನ ಹರಿಸಬೇಕು (ರೂಢಿ). ೩. ಸಾಧಾರಣಜನ; ಜನಸಾಮಾನ್ಯ: ಕಾವ್ಯವು ಜನ್ಮಾಂತರೀಯ ಪುಣ್ಯದಿಂದ ಪ್ರತಿಭಾವಂತರಾದ ಕವಿಗಳಿಗೆ ಮಾತ್ರ ಗೋಚರವಾಗುವುದೇ ಹೊರತು ಸರ್ವಸಾಮಾನ್ಯರಿಗಲ್ಲ (ಭಾರದ. ೪೪೪). [ಸಂ.]

ಸರ್ವಸಿದ್ಧಿ (ನಾ). ೧. ಎಲ್ಲದರಲ್ಲೂ ಸಫಲತೆಯನ್ನು ಹೊಂದುವಿಕೆ,— ಸಿದ್ಧಿಯನ್ನು ಪಡೆಯುವಿಕೆ. ೨. ಎಲ್ಲ ಬಗೆಯ ಸಿದ್ಧಿಗಳನ್ನು ದೊರಕಿಸಿಕೊಡುವಂತಹುದು: ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ (ಬಸವ. ೯೫೯). ೩. ಬಿಲ್ವವೃಕ್ಷ. [ಸಂ.]

ಸರ್ವಸಿದ್ಧಿಆಚಾರ್ಯ (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀ ಶಿಲೇಮುದ್ದರ ಮರ್ಮ್ಮಾನ್ ಸರ್ವ್ವಸಿದ್ಧಿಆಚಾರ್ಜ್ಯ(ರ್ಯ್ಯ)ರ ಚಟ್ಟರ ರೇವಡಿ ಒವಜ್ಜರ್ ತೆಜ್ಯಣದಿಶೆ ಮಾಡಿದೊರ್ (ಇಆ. X, ೧೭೦-೨; 8 ನಯ ಶತ). [ಸಂ.]

ಸರ್ವಸ್ವ (ನಾ). ೧. ಸಮಸ್ತ ಸ್ವತ್ತು ; ಸಕಲೈಶ್ವರ್ಯ : ಆ ಮ್ಲೇಚ್ಛರಾಜರಂ ಕಾಣಿಸಿಯುಮಾಳ್ತನಮಂ ಪೂಣಿಸಿಯುಂ ಚಕ್ರವರ್ತಿಗೆ ಸರ್ವಸ್ವಮಂ ಕುಡಿಸಿಯುಂ (ಶಾಂತಿಪು. ೧೧-೬೭ ವ); ಪ್ರಾಣೇಶ, ಸೂರೆಗೊಳ್ಳೆನ್ನ ಸರ್ವಸ್ವಮಂ (ಚಿತ್ರಾಂಗ. ೪೧-೧೧೧೦). ೨. ಅತ್ಯಂತಮಹತ್ವದಿಂದ ಕೂಡಿದುದು; ಸಾರಭೂತವಾದುದು: ಆವಲರುಂ ಪಣ್ಣುಂ ಬೀತೋವವು ಗಡ ಬೀಯವಲ್ಲಿ ಮಲ್ಲಿಗೆಗಳುಮಿಮ್ಮಾವುಗಳುಮೆಂದೊಡಿನ್ ಪೆಱತಾವುದು ಸಂಸಾರಸಾರಸರ್ವಸ್ವಫಲಂ (ಪಂಪಭಾ. ೧-೫೫). [ಸಂ.]

ಸರ್ವಸ್ವತಂತ್ರ (ನಾ). ಎಲ್ಲ ರೀತಿಯಿಂದಲೂ ಸ್ವತಂತ್ರನಾದವನು ; ತನ್ನ ಇಚ್ಛೆಯಂತೆ ಎಲ್ಲವನ್ನೂ ನೆರವೇರಿಸಲು ಸಮರ್ಥನಾದವನು : ಲಕ್ಷ್ಮೀಲೋಲ ಜೀಯ ಸರ್ವಸ್ವತಂತ್ರನೆ ಬಿಡಿಸು ಸಂಸಾರಪಾಶದಿಂದೆನ್ನನು (ಜೈಮಿಭಾ. ೧೩-೨೮). [ಸಂ.]

ಸರ್ವಸ್ವಹರಣ (ನಾ). ಸರ್ವೈಶ್ವರ್ಯವನ್ನೂ ಕಿತ್ತುಕೊಳ್ಳುವಿಕೆ; ಎಲ್ಲ ಸಂಪತ್ತನ್ನೂ ಅಪಹರಿಸುವಿಕೆ : ಅಹಿತರ್ ಸಂಧಿಯುಮಂ ವಿಗ್ರಹಮುಮನಾತನೊಳೊಡರ್ಚರೇಕೆನೆ ಸರ್ವಸ್ವಹರಣಮಂ ಸಂಧಿ ಶಿರಃಪ್ರಕರಣಮಂ ತಮಗೆ ವಿಗ್ರಹಂ ಮಾಟ್ಟುದಱಿಂ (ಶಾಂತಿಪು. ೧೦-೧೧೪). [ಸಂ.]

ಸರ್ವಸ್ವಾಪಹರಣ (ನಾ). = ಸರ್ವಸ್ವಹರಣ : ಮುಳಿದು ಸರ್ವಸ್ವಾಪಹರಣಮಂ ಮಾಳ್ಪ ಕಡುಗಲಿತನವಿದಾವ ಪುಣ್ಯವ ಪಡವ ಶಿಷ್ಯತನದೊಳಗು (ಪಚಕಾ. ೮-೬). [ಸಂ.]

ಸರ್ವಸ್ವಾಪಹಾರ (ನಾ). = ಸರ್ವಸ್ವಹರಣ : ಕಾಪಥವನಾಶ್ರಯಿಸಿ ಕೋಪಾಟೋಪದಿಂದುತ್ತಮರ ಸರ್ವಸ್ವಾಪಹಾರವ ಮಾಡಿ ಬದುಕುವುದಾವ ಗುಣ (ಕುವ್ಯಾಉ. ೩-೧೦). [ಸಂ.]

ಸರ್ವಸ್ವಾಮ್ಯ (ನಾ). ಸಂಪೂರ್ಣ ಒಡೆತನದ ಹಕ್ಕು: ಪ್ರಭುತ್ವಾಧಿಕಾರದ ಸರ್ವಸ್ವಾಮ್ಯ ಪಕ್ಷಕ್ಕೆ ಸೇರಿದ್ದು (ರಾಜಪ. ೬೦). [ಸಂ.]

ಸರ್ವಾಂಗ (ನಾ). ಎಲ್ಲ ಅವಯವಗಳು; ಸಮಸ್ತ ಅಂಗಗಳು; ಇಡಿಯ ದೇಹ : ಇಳಿದ ಬೆಳುಗಡ್ಡದಿಂ ನಡುಗುವ ನರೆದಲೆಯಿಂ ನರೆತು ಸಡಿಲ್ವ ಸರ್ವಾಂಗದಿಂ . . . ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ (ನಂಬಿರ. ೬-೨೬); ಶರಮಯವು ಸರ್ವಾಂಗವಿನ್ನೀ ಸರಳು ನೆಡಲಿಂಬಿಲ್ಲ (ಕುವ್ಯಾದ್ರೋ. ೬-೫೩). [ಸಂ.]

ಸರ್ವಾಂಗಜ್ವರ (ನಾ). ಎಲ್ಲ ರೀತಿಯ ಜ್ವರ : ನಾಭಿಯನ್ನು ಕಿರುಕುಸಾಲೆಯ ರಸದಲ್ಲಿ ಮರ್ದಿಸಿ ಸಹದೇವಿ ಮೊಲೆಹಾಲಲ್ಲಿ ನಸ್ಯವಂ ಮಾಡಲು ಒಂದು ಭಾಗ ಜ್ವರ, ನಾಸಾರಂಧ್ರವುಳ್ಳೆಡೆಗೆ ನಸ್ಯವಂ ಮಾಡಲು ಸರ್ವಾಂಗಜ್ವರ ಹರ (ವಿವೈವಿ. ೧೯೩); ಜ್ವರಕ್ಕೆ . . . ನೆಳಲಲ್ಲಾರಿಸಿ ಹಾಲುಬೆಲ್ಲದಲ್ಲನುಪಾನದಿಂದ ಕೊಡಲು ಒಂದು ಬಗೆಯ ಜ್ವರ ಹರ. ಬಿಸಿನೀರಿಂ ಸರ್ವಾಂಗಜ್ವರಹರ (ವಿವೈವಿ. ೧೯೯). [ಸಂ.]

ಸರ್ವಾಂಗಪಾವಡೆ (ನಾ). [ವೀಶೈ] ಭವಿಗಳಿಗೆ ಕಾಣಬಾರದೆಂದು ಶಾಕಪಾಕಗಳಿಗೆ ಸಂಪೂರ್ಣವಾಗಿ ಹೊದಿಸುವ ವಸ್ತ್ರ : ಸರ್ವಾಂಗಪಾವಡೆಯಾದಲ್ಲಿ ಹೊಳೆ ತಟಾಕ ಮಿಕ್ಕಾದ ಬಹುಜಲಂಗಳ ಮೆಟ್ಟಲಾಗದು (ಏಲೇಶ್ವ. ೫೮); ಪಾಕಶುದ್ಧಿಗಳನ್ನು ಸರ್ವಾಂಗಪಾವಡೆಯ ಕಟ್ಟುವುದು ಭವಿ ನೋಡಲು ಸೋಕೆ ಭಾಂಡದೊಳಿರ್ದ ತೈಲಾದಿಗಳ ಬಿಡುವುದ್ಕೆ ಕಂದ ಬಿಡದಿರ್ದವಂ ವ್ರತಭ್ರಷ್ಟನು (ವೀಶೈಪು. ೭-೧೫-೧೦).

[ಸರ್ವಾಂಗ + ಪಾವಡೆ (< ಪಾವುಡ್)]

ಸರ್ವಾಂಗಪ್ರಣತ (ನಾ). ಸಾಷ್ಟಾಂಗನಮಸ್ಕಾರ ಮಾಡಿದವನು : ಗಂಧಕುಟಿಯಂ ತ್ರಿಃಪ್ರದಕ್ಷಿಣಂಗೆಯ್ದು ಸರ್ವಾಂಗಪ್ರಣತನಾಗಿ (ಆದಿಪು. ೧೦-೪೫ ವ). [ಸಂ.]

ಸರ್ವಾಂಗಮಲಧಾರಿ (ನಾ). [ಜೈನ] ಸ್ನಾನಶೌಚವರ್ಜನದಿಂದಾಗಿ ಮೈಯೆಲ್ಲ ಕೊಳೆ ತುಂಬಿದ ಸಂನ್ಯಾಸಿ : ಸರ್ವಾಂಗಮಲಧಾರಿಗಳೊಂದು ಶಿಲಾತಳದ ಮೇಗಿರ್ದಾಗಮಮಂ ಪರಿವಿಡಿಗೆಯ್ಯುತ್ತುಮರ್ಥಮಂ ಭಾವಿಸುತ್ತುಂ ಸ್ವಾಧ್ಯಾಯದೊಳ್ ತಗುಳ್ದಿರ್ದೊರಂ . . . ಲಲಿತಘಟೆ ಕಂಡು (ವಡ್ಡಾರಾ. ೯೬-೨). [ಸಂ. ಸರ್ವಾಂಗಮಲಧಾರಿನ್]

ಸರ್ವಾಂಗಯಜ್ಞ (ನಾ). ದೇಹಸಹಿತವಾಗಿ ಸಮಸ್ತವನ್ನೂ ಬಲಿಕೊಡುವ ಯಜ್ಞ; ಸರ್ವಾಹುತಿಯ ಯಾಗ: ಪಿನಾಕಿಯ ಪದವ ಹಿಡಿದೋಲೈಸುವೆನು ಸರ್ವಾಂಗಯಜ್ಞದಲಿ (ಕುವ್ಯಾಗ. ೯-೨೧). [ಸಂ.]

ಸರ್ವಾಂಗರೋಮ (ನಾ). ಮೈಯಲ್ಲಿ ಪೂರ್ತಿಯಾಗಿ ಕೂದಲಿರುವ ಪ್ರಾಣಿ; ಕರಡಿ: ಕೊಂಗ ಹಂಗ ಸರ್ವಾಂಗರೋಮ ತುಂಗಶರಭ . . . ತುಂಬಿರೆ (ವಿದಾಕ್ಯ. ೪೩-೪). [ಸಂ. ಸರ್ವಾಂಗರೋಮನ್]

ಸರ್ವಾಂಗಸುಂದರ (ನಾ). ೧. ಎಲ್ಲ ರೀತಿಯಿಂದಲೂ ಚೆಲುವಾದುದು; ಸಮಗ್ರಸೌಂದರ್ಯವುಳ್ಳುದು : ಪ್ರಾಂತೀಯಭಾಷೆಗಳ ಉತ್ಕೃಷ್ಟಗ್ರಂಥಗಳ ಭಾಷಾಂತರದಿಂದ ಹಿಂದಿ ಪರಿಪುಷ್ಟವಾಗಿ; ಸರ್ವಾಂಗಸುಂದರವಾಗಿ ಬೆಳೆಯುತ್ತಿದೆ (ಭಾರದ. ೪೭೪). ೨. ಎಲ್ಲ ರೀತಿಯಿಂದಲೂ ಚೆಲುವಾದವನು; ಪೂರ್ಣಸೌಂದರ್ಯವನ್ನುಳ್ಳ ವ್ಯಕ್ತಿ: ಆ ಸರ್ವಾಂಗಸುಂದರನಾದ ಬಾಲಕನನ್ನು ಕಂಡು ಮನಸ್ಸಿಗೆ ಹರ್ಷವಾಯಿತು (ರೂಢಿ). [ಸಂ.]

ಸರ್ವಾಂಗಸುಂದರಿ (ನಾ). ಪೂರ್ಣಸೌಂದರ್ಯವುಳ್ಳವಳು: ಈ ಹುಡುಗಿ ಸರ್ವಾಂಗಸುಂದರಿಯಾಗಿದ್ದಳು (ಪುನರು. ೨೩೭). [ಸಂ. ಸರ್ವಾಂಗಸುಂದರೀ]

ಸರ್ವಾಂಗಾಸನ (ನಾ). [ಯೋಗ] ಆಸನಗಳಲ್ಲಿ ಒಂದು : ಸರ್ವಾಂಗಾಸನದ ಪ್ರಭೇದವೇ "ವಿಪರೀತಕರಣಿ" ಎಂದು ಪ್ರಸಿದ್ಧವಾಗಿದೆ (ಭಾರದ. ೧೫೭). [ಸಂ.]

ಸರ್ವಾಂಗೀಣ (ಗು). ೧. ಎಲ್ಲ ಅವಯವಗಳಿಗೂ ವ್ಯಾಪಿಸಿದ ; ಸರ್ವಾಂಗಕ್ಕೂ ಆವರಿಸಿದ : ಮರುದೇವಿಮಹಾದೇವಿ . . . ಸರ್ವಾಂಗೀಣಮೌಕ್ತಿಕಾಭರಣಕಿರಣಕೀರ್ಣ ಸುವರ್ಣದುರ್ಲಕ್ಷಹರಿಚಂದನಾಂಗರಾಗೆಯುಂ . . ಆಗಿ (ಆದಿಪು. ೭-೨೬ ವ). ೨. ಸಮಸ್ತ; ಸಮಗ್ರವಾದ : ಅನಂತವೀರ್ಯಕುಮಾರಂಗೆ ಚಕ್ರವರ್ತಿಸುತಾ ಪರಂಪರೆಯೊಳೊರ್ವನಪೂರ್ವಸರ್ವಾಂಗೀಣವಸ್ತುತ್ಪಭಾಜನೆಯಂ ಕುಡಿಸುವುದುಂ (ಶಾಂತಿಪು. ೨-೭೭ ವ). (ನಾ). ೩. ಸಮಗ್ರವಾದುದು ; ಸಂಪೂರ್ಣವಾದುದು : ಕತೆ ಸರ್ವಾಂಗೀಣವಾದ ಬೆಳವಣಿಗೆಯನ್ನು ಪಡೆದುಕೊಂಡಿದೆ (ಕೊಕ್ಕಿ. ೨೯). [ಸಂ.]

ಸರ್ವಾಂಗೋಡು, ಸರ್ವಂಗೋಡು (ನಾ). ಎಲ್ಲವನ್ನೂ ಒಳಗೊಂಡುದು (?): ಆ ಗಡಿಯಿಂದೊಳಗುಳ ಮನೆ ಮನೆತಾಣ ಅಂಗೋಡು ಅಂಗ ಸಸಿ ನೆಲ ಹೊಲ ಮರ ಫಲ ಬೆ[ಣ] ಬಿಳರು ಬಟ ಬಿಟ ಮುಂತ್ಕಾಗಿ ಸರ್ವಾಂಗೋಡು ಸಹಿತವಾದಯಿಂತಿವೆಲಱು (ಕ್ರಾ. III- i, ೭- ೨೦ ; 1527) ; ಕಿರುಕುಳ ಸುವರ್ಣಾದಾಯ ಸರ್ವಾಂಗೋಡು ಸಹವಾದ ಭೂಮಿ ಮನೆಯನ್ನು ಗೈಸಿ ರೂಪ ಮಾಡಿಕ್ಕೊಣ್ಣು (ಎಕ. VIII, ತೀರ್ಥಸ. ೯೮-೬೨; 1668).

ಸರ್ವಂಗೋಡು : ಬೇಣ ಬಿಳರು ಬೆಟು ಬಿಟ ನಿಧಿ ನಿಕ್ಷೇಪ ಜಲ ಪಾಶಾಣ . . . ಅಷ್ಟಭೋಗ ಸರ್ವಂಗೋಡು ಸಹವಾದ ಸಮಸ್ತೋತ್ಪತ್ತಿ (ಕ್ರಾ. III- i, ೯- ೫೫ ; 1538). 'ಅಂಗೋಡು' ಪರಾ. [ಸರ್ವ$_2$ + ಅಂಗ$_2$ + ಕೋಡು$_2$]

ಸರ್ವಾಂಗೋಪನತ (ನಾ). = ಸರ್ವಾಂಗಪ್ರಣತ : ಭಗವತ್‌ಪಾದಪೀಠೋಪ ಕಂಠದೊಳ್ ಸರ್ವಾಂಗೋಪನತನಾಗಿ ನಿಂದಾಗಳ್ (ಆದಿಪು. ೧೪-೧೩೬ ವ). [ಸಂ.]

ಸರ್ವಾಂತರ್ಯಾಮಿ (ನಾ). ಯಾವಾಗಲೂ ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಇರುವವನು ; ಪರಮಾತ್ಮ : ಸರ್ವಾಂತರ್ಯಾಮಿ ನೀನೆ ಅಯ್ಯಾ (ಅಖಂಡೇ. ೧೯- ೧೭) ; ಸರ್ವಾಂತರ್ಯಾಮಿ ಒರ್ವನೆಂಬುವ ತತ್ವ ನಿರ್ದಿಷ್ಟವಾಗಿ ಇರುತಿರಲು ಮೋಕ್ಷವದು ಸರ್ವರಿಗೆ ಸುಲಭ (ಸರ್ವಜ್ಞ. ೩೩೭). [ಸಂ. ಸರ್ವಾಂತರ್ಯಾಮಿನ್]

ಸರ್ವಾತಿಸಾರ (ನಾ). ಅತಿಸಾರರೋಗದಲ್ಲಿ ಒಂದು ಬಗೆ : ಅಜಾಮೋದ . . . ಶುಂಠಿ ಇವಂ ಕ್ರಮದಿಂ ವೃದ್ಧಿಯಾಗಿ ಹೆಚ್ಚಿಸಿ ಚೂರ್ಣವ ಮಾಡಿ ಮೊಸರಿಂ ಕಲಸಿ ಕೊಡಲು ಜ್ವರಾತಿಸಾರ, ಸರ್ವಗ್ರಹಣಿ, ಸರ್ವಾತಿಸಾರ ಸಹ ಪರಿಹಾರಮಕ್ಕುಂ (ಸಕಪ್ಯ. ೩೦೭). [ಸಂ.]

ಸರ್ವಾತೀತ (ನಾ). ಎಲ್ಲವನ್ನೂ ದಾಟಿ ಆಚೆಗೆ ಇರುವವನು ; ಎಲ್ಲವನ್ನೂ ಮೀರಿದವನು ; ಪರಮಾತ್ಮ : ಸರ್ವಾತೀತನಾದಾರೂಢಮೂರ್ತಿಯ ಭೂತಭೌತಿಕ ಜಾತಪ್ರಾಣಿಗಳಿಂತರಿವರು (ಗಗತಾ. ೧೮-೧). [ಸಂ.]

ಸರ್ವಾತ್ಮ (ನಾ). ೧. ಸರ್ವರಲ್ಲಿಯೂ ಇರುವವನು ; ಪರಮಾತ್ಮ. ೨. ಶಿವ : ಸರ್ವಾತ್ಮನಂ ಭಕ್ತಾತ್ಮನಂ ಮಾಡಿ ಸೂಕ್ತಿ, ಹೋಗಳಲು (ಬಸಪು. ೬೯-೧೨) ; ಘನ ಜಗನ್ನಯನಾಗಿ ಸರ್ವಾತ್ಮನು ಮಹೇಶ್ವರನೆನಿಪನೀತನ ನೆನಹನೀತನ ನಿಜವನಜೆವ ಮಹಾತ್ಮರಾರು (ಕುಮಾಸ. ೯-೩). [ಸಂ. ಸರ್ವಾತ್ಮನ್]

ಸರ್ವಾಧಿಕಾರ (ನಾ). ೧. ಎಲ್ಲ ಬಗೆಯ ಅಧಿಕಾರ ; ಪರಮೋಚ್ಚವಾದ ಅಧಿಕಾರ. ೨. ಎಲ್ಲ ಒಡೆತನವೂ ಒಬ್ಬನಿಗೇ ಮೀಸಲಾಗಿರುವುದು ; ಏಕಸ್ವಾಮಿತ್ವ : ಪ್ರಜಾಪ್ರಭುತ್ವದಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಅದು ಸರ್ವಾಧಿಕಾರಪ್ರಭುತ್ವಕ್ಕಿಂತ ಸಾವಿರವಾಲು ಮೇಲು (ಪಂಜಪಂ. ೧೮೫). [ಸಂ.]

ಸರ್ವಾಧಿಕಾರತ್ವ (ನಾ). = ಸರ್ವಾಧಿಕಾರ ೨ : ಆಚರಣೆಯಲ್ಲಿ ಪಕ್ಷವು ಕಾರ್ಯದರ್ಶಿಗಳ ಸರ್ವಾಧಿಕಾರತ್ವವನ್ನು ಒಪ್ಪಿ ನಡೆಯುತ್ತದೆ (ರಾಜಶ. ೬೫). [ಸಂ.]

ಸರ್ವಾಧಿಕಾರಿ (ನಾ). ೧. ಅರಸನ ಕೈಕೆಳಗಿರುವ ಒಂದು ಪ್ರದೇಶದಲ್ಲಿ ಪರಮಾಧಿಕಾರವುಳ್ಳ ಹುದ್ದೆದಾರ : ಸರ್ವಾಧಿಕಾರಿ ಕಮ್ಮಟದ ಶ್ರೀಮಲ್ಲಯ್ಯಂಗಳು . . . ಹರಿಹರೇಶ್ವರದೇವರ ಧರ್ಮ್ಮಪ್ರಸಂಗವಂ ಬಿನಪಂಗೆಯ್ದು (ಕ್ರಾ. IV, ೧-೯೯ ; 1204) ; ನಂಜರಾಜಯ್ಯನು ಇಮ್ಮಡಿಕೃಷ್ಣರಾಜನ ಕಾಲದಲ್ಲಿ . . . ಸರ್ವಾಧಿಕಾರಿಯಾಗಿದ್ದನು (ಸಕಪ್ಯ. vi . ಪ್ರಸ್ತಾವನೆ). ೨. ಮಠಗಳಲ್ಲಿ, ಸ್ವಾಮಿಗಳ ಕೈಕೆಳಗಿರುವ ಸರ್ವೋಚ್ಚ ಅಧಿಕಾರಿ : ದೊಡ್ಡ ಮಠಗಳಲ್ಲಿ ಸಾಮಾನ್ಯವಾಗಿ ಒಬ್ಬ ಸರ್ವಾಧಿಕಾರಿ ಇರುತ್ತಾನೆ (ರೂಢಿ). ೩. ದೇಶದ ಸಮಸ್ತ ಅಧಿಕಾರವನ್ನು ತನ್ನ ಕೈಯಲ್ಲಿಯೇ ಇಟ್ಟುಕೊಂಡವನು ; ನಿರಂಕುಶಪ್ರಭು : "ಯಾವ ಕ್ಷೇತ್ರದಲ್ಲಿಯೆ ಆಗಲಿ ನಿರಂಕುಶಾಧಿಕಾರ ಪಡೆದಿರುವವನು ; ಸರ್ವಾಧಿಕಾರಿ" (ಇಂಈ Dictator). [ಸಂ. ಸರ್ವಾಧಿಕಾರಿನ್]

ಸರ್ವಾನುಮತ (ನಾ). ಎಲ್ಲರ ಒಪ್ಪಿಗೆ ; ಸರ್ವರಿಂದಲೂ ಅಂಗೀಕಾರ : ಸರ್ವಾನುಮತದಿಂದ ನಾನು ಹೋಗುವುದು ನಿಶ್ಚಯವಾಯಿತು (ಸ್ವಚಿ. ೨೪೪). [ಸಂ.]

ಸರ್ವಾನುಮತಿ (ನಾ). = ಸರ್ವಾನುಮತ : ಅಂತು ಇಂತು ಮೂರನೆಯ ದಿನ ಸರ್ವಾನುಮತಿ ದೊರೆಯಿತು (ಪುಸಗು. ೩೦೭). [ಸಂ.]

ಸರ್ವಾಪರಾಧ (ನಾ). ಎಲ್ಲ ಬಗೆಯ ತಪ್ಪು; ಸಂಪೂರ್ಣ ಅಪರಾಧ : ಸರ್ವಾಪರಾಧವ ಕ್ಷಮಿಸಯ್ಯ ಎನ್ನ (ಪುರಂದ. ೨-೯ ವಲ್ಲಿಎ). [ಸಂ.]

ಸರ್ವಾಪರಾಧಿ (ನಾ). ಎಲ್ಲ ಬಗೆಯ ಅಪರಾಧಗಳನ್ನೂ ಮಾಡಿದವನು; ಎಲ್ಲ ದೃಷ್ಟಿಯಿಂದಲೂ ಅಪರಾಧಿಯಾದವನು : ಸರ್ವಾಪರಾಧಿಯಾನು ಎನ್ನ ಮನದ ಕೊನೆಯ ಸೂತಕ ಹಿಂಗದು (ಬಸವ. ೩೨೬); ನಾವು ನೆಱೆ ಸರ್ವಾಪರಾಧಿಗಳಾವ ಗುಣದೋಷವನು ನಮ್ಮಲ್ಲಿ ಭಾವಿಸುವ (ಕುಮ್ಮಾ. ೧೭-೨೪). [ಸಂ. ಸರ್ವಾಪರಾಧಿನ್]

ಸರ್ವಾಪಹಾರ (ನಾ). ಎಲ್ಲವನ್ನೂ ಅಪಹರಿಸುವಿಕೆ ; ಎಲ್ಲ ವಸ್ತುಗಳನ್ನೂ ಕದಿಯುವಿಕೆ : ವಿಸ್ತರಿಸಿದನು ಸರ್ವಾಪಹಾರವ ನೃಪಪಲಾಯನವ (ಕುಮ್ಮಾಗ. ೪-೧೦). [ಸಂ.]

ಸರ್ವಾಭ್ಯಂತರ (ನಾ). ಭೂಮಿಯ ಉತ್ಪನ್ನವನ್ನೂ ಗ್ರಾಮಕ್ಕೆ ಸಲ್ಲುವ ಕರ ಕಂದಾಯ ಮೊದಲಾದ ಎಲ್ಲ ಬಗೆಯ ಆದಾಯಗಳನ್ನೂ ಅನುಭೋಗಿಸುವ ಹಕ್ಕು : ಶ್ರೀಮದನಂತಕೋಟಿನಾಥಂಗೆಯಾ ಪುರಮಂ ಸ್ಥಳವೃತ್ತಿಯುಮಂ ಸರ್ವಾಭ್ಯಂತರವಾಗಿ . . . ಆದಿತ್ಯದಂಡನಾಯ್ಕನು ಕೊಟ್ಟ (ಎಕ. VIII (S), ಸೊರಬ. ೨೭೬-೨೫ ; 1070). [ಸಂ.]

ಸರ್ವಾಭ್ಯಂತರಸಿದ್ಧಿ (ನಾ). = ಸರ್ವಾಭ್ಯಂತರ : ನರಿಯಂಗಲ್ ಪನ್ನೆರಡಱೊಳಗಣ ಉಮ್ಮಚಿ[ಗೆ]ಯಂ ಸರ್ವಾಭ್ಯಂತರಸಿದ್ಧಿಯಾಗಿ ಸರ್ವ್ವನಮಸ್ಯವಗ್ರಹಾರಂ ಮಾಡಿ (ಎಕ್ರಾ. XX, ೬೭-೧೨; 1012) ; ಉಭಯಸಾಮ್ಯಮುಮಂ ಸರ್ವಾಭ್ಯಸ್ತರಸಿದ್ಧಿಯಿಂ ಕೊಟ್ಟ ೩೬ಬಾಡದ ಬಳಿಯ ಮಾರಸಿಂಗನ ಪಳ್ಳಿ, (ಪೌಶಾ. XX, ೪೦-೨೬ ; 1066). [ಸಂ.]

ಸರ್ವಾರ್ಥ (ನಾ). ೧. ಎಲ್ಲ ಬಗೆಯ ವಸ್ತು, ವಿಷಯ, ಉದ್ದೇಶ, ಐಶ್ವರ್ಯ ಮುಂತಾದುವು : ಎನ್ನೊಳ್ ಪುಟ್ಟಿದ ವಸ್ತುವಿಂದೆ ಪಡೆದಂ ಸರ್ವಾರ್ಥಮಂ ದಿಟ್ಟು (ರಾಜಶೇ. ೧-೧೦೧). ೨. ಎಲ್ಲಕ್ಕಿಂತ ಮುಖ್ಯವಾದುದು ; ಸಾರಸರ್ವಸ್ವ : ಎಮಗೆ ಸಂಪ್ರತಿಗಿಲ್ಲ ಮನ ಘನಸಮರವೇ ಸರ್ವಾರ್ಥ (ಕುಮ್ಮಾಉ. ೬-೨೯). [ಸಂ.]

ಸರ್ವಾರ್ಥಸಾಧಕ (ನಾ). ಎಲ್ಲ ಬಗೆಯ ಪುರುಷಾರ್ಥಗಳನ್ನೂ ಸಾಧಿಸಿದವನು : ಸರ್ವಾರ್ಥಸಾಧಕಂ ತುಂಗಮಹಿಮಾಧಿಕಂ ಸಕಲದೇಶಿಕನಿಕರಪುಂಗವಂ ಬಿತ್ತರಿಸಿದಂ ತತ್‌ಪ್ರಸಂಗಮಂ (ವೀಶಿಪು. ೬-೧-೫). [ಸಂ.]

ಸರ್ವಾರ್ಥಸಿದ್ಧ (ನಾ). ೧. ಎಲ್ಲವನ್ನೂ ಸಾಧಿಸಿಕೊಂಡವನು ; ಸರ್ವಸಿದ್ಧಿಗಳನ್ನೂ ಪಡೆದವನು. ೨. ಶಾಕ್ಯಮುನಿ ; ಬುದ್ಧ. [ಸಂ.]

ಸರ್ವಾರ್ಥಸಿದ್ಧಿ (ನಾ). ೧. ಎಲ್ಲ ಬಗೆಯ ಇಷ್ಟಗಳು ಸಿದ್ಧಿಸುವುದು , – ಪೂರ್ಣಗೊಳ್ಳುವುದು. ೨. [ಜೈನ] ಐದು ಅನೂತ್ತರಗಳೆಂಬ ವಿಮಾನಗಳಲ್ಲಿ , ಮಧ್ಯದಲ್ಲಿರುವ ಶ್ರೇಷ್ಠವಾದ ವಿಮಾನ ; ಇದು ಪುಣ್ಯವಂತರ ವಾಸಸ್ಥಾನ: ಶುಕ್ಲಧ್ಯಾನದೊಳ್ ಸಮಾಹಿತಂ . . . ಸರ್ವಾರ್ಥಸಿದ್ಧಿಯೊಳ ಹಮಿಂದ್ರನಾದಂ (ಆದಿಪು. ೬-೩೪ ವ). [ಸಂ.]

ಸರ್ವಾರ್ಪಿತ (ನಾ). ಎಲ್ಲವನ್ನೂ (ದೇವರಿಗೆ) ಒಪ್ಪಿಸಿರುವುದು : ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ ತನುವು ಸರ್ವಾರ್ಪಿತದಲ್ಲಿ ನಿಯತಪ್ರಸಾದಭೋಗಿಯಾಗಿ (ಬಸವ. ೬೨೯). [ಸಂ.]

ಸರ್ವಾವಧಿ (ನಾ). [ಜೈನ] ಪರಮಾವಧಿ, ದೇಶಾವಧಿ ಮತ್ತು ಸರ್ವಾವಧಿ ಎಂಬ ಮೂರು ಬಗೆಯ ಅವಧಿಜ್ಞಾನಗಳಲ್ಲಿ ಒಂದು; ಕೇವಲಜ್ಞಾನ:

ಕೇವಲಬೋಧೋದಯಮೆಂದೀ ವಿಭವಂಬೆತ್ತು ಸಕಲರೂಪವ್ಯಾಪಾರಾವಗಮಸಂಪದಂ ಸರ್ವಾವಧಿ ಪುಟ್ಟಿತ್ತು ರಾಘವವ್ರತಿಪತಿಯೊಳ್ (ಪಂಂಪಾ. ೧೬-೬೨). [ಸಂ.]

ಸರ್ವಾವಧಿಜ್ಞಾನ (ನಾ). = ಸರ್ವಾವಧಿ : ದೇಶಾವಧಿಜ್ಞಾನಿಯಪ್ಪ ಸೂರ್ಯಮಿತ್ರಮುನಿನಾಥನತಿವಿಶುದ್ಧಪರಿಣಾಮದಿಂ ಸರ್ವಾವಧಿಜ್ಞಾನಲೋಚನನಾಗಿ (ಸುಖುಮಾ. ೪-೫೪ ವ). [ಸಂ.]

ಸರ್ವಾವಧಿಬೋಧ (ನಾ). [ಜೈನ] ಸರ್ವಾವಧಿಜ್ಞಾನವನ್ನು ಹೊಂದಿದವನು; ಕೇವಲಜ್ಞಾನಿ : ನಿರುಪಮದೇಹಪ್ರಭಾದಿವ್ಯಸರ್ವಾವಧಿಬೋಧಂ ಕುಷ್ಮನಾದಂ (ಸುಖುಮಾ. ೩-೪೬). [ಸಂ.]

ಸರ್ವೆ (ನಾ). ಪ್ರದೇಶ, ಜಮೀನು ಮುಂತಾದುವುಗಳ ಆಕಾರ, ವಿಸ್ತಾರ, ಪರಿಮಿತಿ ಮೊದಲಾದುವುಗಳನ್ನು ನಿರ್ಧರಿಸಲು ಮಾಡುವ ಅಳತೆ ಮತ್ತು ಅದರ ನಕ್ಷೆ ; ಮೋಜಣಿ : ನೆಲವನ್ನು ವಾಸ್ತವವಾಗಿ ಅಳತೆಮಾಡಿ ವಿವರವಾದ ನಕ್ಷೆ ಬರೆಯುವುದನ್ನು ಸರ್ವೆ ಎನ್ನುತ್ತಾರೆ (ಅಳೆಯುವಿಕೆ ಅಥವಾ ಕ್ಷೇತ್ರಮಾಪನ) (ಭೂವಿವ. ೩೧); ಅದನ್ನು ಸರ್ವೆ ಮಾಡಿಸಿಯಾದರೂ ಕ್ರಮಪಡಿಸೋಣ (ಚಿಸರ್ವ. ೧೩).

[<— ಇಂ. Survey]

ಸರ್ವೆಮರ (ನಾ). (ಭೂಮಿಯನ್ನು ಅಳತೆ ಮಾಡಲು ಬಳಸುತ್ತಿದ್ದ)ನೇರವಾಗಿ ಎತ್ತರಕ್ಕೆ ಬೆಳೆಯುವ ಒಂದು ಬಗೆಯ ಮರ : ಸರ್ವೆಮರ, ಕ್ಯಾಸುರಿನ (ಮೃಜಿ. ೧೯-೩೪೪). [ಸರ್ವೆ + ಮರ]

ಸರ್ವೇಂದ್ರಿಯ (ನಾ). ಎಲ್ಲ ಇಂದ್ರಿಯಗಳು : ಇಂತು ಸರ್ವೇಂದ್ರಿಯಂ ಸಂದಣಿಸಿ ಕಣ್ಣಿಱೆಯೆ (ನಂಬಿರ. ೩-೧೫) ; ಸರ್ವೇಂದ್ರಿಯಕೆ ಮೋಹದ ಶಿಶುವದೊಂದೆ ಮುದ್ದಿನ ವಿಷಯಮಾಯ್ತು (ಶ್ರೀರಾಮಾ. ೧೭-೪೪೩). [ಸಂ.]

ಸರ್ವೇಶ (ನಾ). ಸಕಲಕ್ಕೂ ಒಡೆಯನಾದವನು; ಪರಮಾತ್ಮ : ಸರ್ವಜ್ಞ ಸರ್ವಗ ಸರ್ವ ಸರ್ವೇಶ . . . ಶಿವ ಅವಧಾರು (ಬಸವ. ೧-೬೬); ಪರಮವಿಲಾಸ ಹರಿ ಸರ್ವೇಶ ದೇವೇಶ . . . ರಕ್ಷಿಸು ನಮ್ಮನನವರತ (ಹರಿಸಾ. ೧೧). [ಸಂ.]

ಸರ್ವೇಸಾಧಾರಣ (ನಾ). ಎಲ್ಲಕ್ಕೂ ಎಲ್ಲರಿಗೂ ಸಮಾನವಾಗಿರುವುದು; ಹೆಚ್ಚುಗಾರಿಕೆಯಿಲ್ಲದಿರುವುದು : ಯಾವ ವಿಷಯದಲ್ಲೂ ಅವನು ಪ್ರಚಂಡನಲ್ಲ, ಸರ್ವೇಸಾಧಾರಣವಾಗಿದ್ದ (ಸ್ವಾಮಿಕೃ. ೧೦). [< ಸರ್ವ + ಸಾಧಾರಣ]

ಸರ್ವೇಸಾಮಾನ್ಯ (ನಾ). ತೀರ ಸಾಮಾನ್ಯವಾದುದು; ತುಂಬ ಸಹಜವಾದುದು: ಹೊಗೆಸೊಪ್ಪಿನ ರೂಢಿ ಇದ್ದವರಿಗೆ ಈ ಬಗೆಯ ವೈಚಿತ್ರ್ಯ ಸರ್ವೇಸಾಮಾನ್ಯವಾಗಿತ್ತು (ವಿಜೀ. ೧೧). [< ಸಂ. ಸರ್ವಸಾಮಾನ್ಯ]

ಸರ್ವೈಕವಾಕ್ಯ (ನಾ). ಸರ್ವಸಮ್ಮತವಾದ ಮಾತು; ಒಮ್ಮತದ ನುಡಿ: ಸಾಸಿರ್ವರುಂ ಗೊಸಱಮೊಲ ನೆರದು ಸರ್ವೈಕವಾಕ್ಯದಿನೊದಂಬಟ್ಟು . . . ಬಿಟ್ಟ ಧರ್ಮಾ (ಕಾ. IV, ೬೨-೧೯: 1088). [ಸಂ.]

ಸರ್ವೋಚ್ಚ (ಗು). ೧. ಎಲ್ಲಕ್ಕೂ ಮೇಲಿನ ; ಅತ್ಯುನ್ನತ ಸ್ಥಾನದಲ್ಲಿರುವ; ಶ್ರೇಷ್ಠವಾದ : ಪರಮಗೌರವಮೂರ್ತಿ, ಸರ್ವೋಚ್ಚಸೇನಾನಿ . . . ನೀಲಂಗೆ ಬೆಸಸಿದನ್ ಭಾಸ್ಕರಭವಂ (ಶ್ರೀರಾವಾ. ೬೪೭-೨೦೫). (ನಾ). ೨. ಶ್ರೇಷ್ಠವಾದುದು; ಅತ್ಯುತ್ತಮವಾದುದು : ಸರ್ವೋಚ್ಚವೆನಿಪಲಂಕಾರ ಕ್ಷಯಿಸಿ ಹೋದರೆ ಮತ್ತೆ ವೃದ್ಧಿಯ ಪಡೆಯದ ಯೌವನಕರಲಿ ಧಿಕ್ಕಾರ (ಇಂಚಾಪ. ೧೯೫-೬೨). [ಸಂ.]

ಸರ್ವೋಚ್ಚನ್ಯಾಯಾಲಯ (ನಾ). ದೇಶದ ಉಚ್ಚತಮನ್ಯಾಯಾಲಯ; ಸುಪ್ರೀಂಕೋರ್ಟು : ನಮ್ಮ ದೇಶದ ಸರ್ವೋಚ್ಚನ್ಯಾಯಾಲಯವು ರಾಜಧಾನಿಯಾದ ದೆಹಲಿಯಲ್ಲಿದೆ (ರೂಢಿ). [ಸಂ.]

ಸರ್ವೋತ್ತಮ (ಗು). ೧. ಅತ್ಯುತ್ತಮವಾದ; ಸರ್ವಶ್ರೇಷ್ಠವಾದ. (ನಾ). ೨. ಸರ್ವಶ್ರೇಷ್ಠನಾದವನು; ಪರಮಗುರು: ದಂದುಗವೆಂದುಂ ತಮಗಾಗದಂತೆಸಗುವರ್ ಸರ್ವೋತ್ತಮರ್ ಸರ್ವಸಾಧುಗಳ್ (ಆದಿಪು. ೧-೫೫). [ಸಂ.]

ಸರ್ಷಪ (ನಾ). ೧. ಒಂದು ಬಗೆಯ ಧಾನ್ಯ; ಸಾಸಿವೆ: ಅಂತು ಕೊಂಡ ಪದವಲಿಗಳೊಳ್ ಕಳಮಷಪ್ಪಿಕಾವ್ರೀಹಿ . . . ಕುಸುಂಭ ಕಾರ್ಪಾಸ ಸರ್ಷಪ ಜೀರಕ ಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ (ಆದಿಪು. ೬-೬೨ ವ); ಅತಿಸಿತಸರ್ಷಪ ಶೇಷಾಕ್ಷತಂಗಳಂ ಮಂಗಳಾರ್ಥದಿಂ ವೆರ್ಮಂಡಿರ್ ಸತತೋತ್ಸವದಿಂದಂ ಪರಸಿ ತಳಿದರ್ (ಸುಖುಮಾ. ೧೧-೬). ೨. ಒಂದು ಸಾಸಿವೆಕಾಳಿನಷ್ಟು ಪ್ರಮಾಣ : ಹೂಡಕರಿಸಿ ಸತ್ಯಾತಿಶಯವಿಮ್ಮಡಿಸೆ ಸರ್ಷಪಮಾತ್ರ ತಿರುವನು ತೂಡಿಸಲಱಿಯದೆ ಹಿಂಗಿ ಮೌನದೊಳಿರ್ದನಾ ಕರ್ಣ (ಕುವ್ಯಾಳ. ೧೪-೨೪). ೩. (ಮುತ್ತು,ರತ್ನಗಳನ್ನು ತೂಗುವ) ಒಂದು ಸಣ್ಣ ತೂಕದ ಪ್ರಮಾಣ: ಇನ್ನು ಪೇಳುವೆನದರ ತೂಕ ಪ್ರಮಾಣಮಂ ಭಿನ್ನಿಸದೆ ಪೇಳ್ವೆನದಕೆಂಟುಸರ್ಷಪಗೂಡಲನ್ನಿಯಿಂ ತಂಡುಲಮದಕ್ಕು (ರತ್ನಶಾ. ೪-೧೫). [ಸಂ.]

ಸಲ್, ಚಲ್, ಸಲು, ಸಲ್ಲು (ಕ್ರಿ). ಸಂದ (ಭೂತಕೃ), ಸಂದು (ಭೂತನ್ನೂ), ಸಲ್ವ (ಭವಿಕೃ). ೧. ಒಳಹೊಗು; ಪ್ರವೇಶಿಸು : "ಸಲ್-ಸ್ಥಾನಪ್ರವೇಶೇ, ಸಮಾಖ್ಯಾತೋಚ (ಪ್ರಸಿದ್ಧಿಪಡೆ)" (ಶಮಧಾ) ; ಸನ್ಯಾಸನಂಗೆಯ್ದುರುಸತ್ಯನ್ ನನ್ದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸನ್ದಾನ್ (ಎಕ II, ೮೮-೪; ಸು. 700); ಯಮಭಟ್ಟಾರಕನಂತರ್ಧಾನಕ್ಕೆ ಸಂದಂ (ಪಂಪಭಾ. ೧-೧೧೫ ವ). ೨. ಹೋಗು; ಸೇರು: ಸಂದನಜಪುರಿಗತ್ರಲಾ ಮುನಿ (ತೊರಾ. ೧-೨-೧೮). ೩. ಚಲಿಸು; ಪರಿ: ಕಣ್ಮಂತೆ ಸಂದಪ್ಪುದೊಂದನೆ ಕೇಳ್ದೊಂಪಳೆ ಕೂರ್ಮೆಗೆಟ್ಟೆನಗೆ ನೀನೇನಾನುವೊಂದೇವಮಂ ಮನದೊಳ್ ಮಾಡಿದೊಡಂದೆ ದೀವಳಿಗೆಯಂ ಮಾನಾಮಿಯಂ ಮಾಡನೇ (ಪಂಪಭಾ. ೪-೧೩). ೪. ಕ್ರಮಿಸು; ಗಮಿಸು; ಮುನ್ನಡೆ : ಶ್ರೀಬಾಳಾ ಮೇಲ್ ಶಿವಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ ಸಲ್ವವೋಲ್ ಸಾರಾಮ್ಬಾಲ ತವೋಗ್ರದಿನ್ತು ನಡದೊಂ ನೂಱೆನ್ಬುಸಂವತ್ಸರಂ (ಎಕ. II,೨೨-೧ ; ಸು. 700). ೫. ಬರು; ಆಗಮಿಸು: ಧವಳಾತಪತ್ರಮದ್ದಂ ದಿವಸಕೆ ಸಲಲೀಯದಂತಿರ್ಪುದು (ಗದಾಯು. ೯-೧೧); ಹೊಯ್ದು ಮುಗ್ಗಿತು ಭಟರು ವೆಗ್ಗಳ ಕೈದುಕಾಱರು ತಲೆಗೆ ಸಂದರು ಮೈದೆಗೆಯದೊಡವೆರಸಿ ಹೊಕ್ಕರು ಬೇಹಬೇಹವರು (ಕುವ್ಯಾಕ. ೨-೪); ನಿನ್ನಾಣತಿಗೇಳಿ ನಿನ್ನ ಬಳಿಗೆ ಸಂದು . . . ನಿನ್ನೆಡವಿಡದಿರ್ಪೆನು (ಹರಿಬ. ೧-೩೭). 'ಬಲಿಸಲ್' ಪರಾ. ೬. (ಕಾಲದಂತೆ) ಕಳೆ; ಮುಗಿ; ತೀರು: ಇಂತು ದಿವಸಂಗಳ್ ಸಲೆ (ವಡ್ಡಾರಾ. ೭೭-೯); ಅನೇಕ ಸಂವತ್ಸರಂಗಳ್ ಸಲ್ವಿನೆಗಂ (ಆದಿಪು. ೫-೨೨ ವ); ಅಮ್ಮೋಪವಾಸದಿಂ . . . ನೆಗಳ್ದು ತಿಂಗಳ್ ಸನ್ದಡೆ ಪಾರಿಸಿ ಚತುರ್ಮುಖಾಖ್ಯೆಯನಾಳ್ದರು (ಎಕ. II, ೬೯-೧೬ ; ಸು. 1100); ಸಂದವ್ಕೆ ಹದಿನೇಳು ರಾತ್ರಿಗಳು (ಕುವ್ಯಾಕ. ೧-೩೪). ೭. (ಘಟನೆಯಂತೆ) ಆಗಿಹೋಗು; ಘಟಿಸು; ಜರುಗು: ಅದು ಪರಿದುಂ ಪ್ರಮಾದಮದುವುಂ ಕುರುರಾಜನಿನಾಯ್ತು ಪೋಯ್ತು ಸಂದುದು ಮಱೆಯಲ್ಕೆವೇಱ್ಪುದದಂ (ಪಂಪಭಾ. ೪-೪); ಸಂದುದಂ ನಿಂದುದಂ ಪೊಳ್ತು ಹೊಸೆಯುವುದು (ಕಾಲೂರ. ೧೧೫-೨೬೯). ೮. ಮಡಿ; ಅಳಿ; ಸಾಯು: ಭೀಷ್ಮರು ಸಂದ ಬಳಿಕಮಗಾಪ್ತ ನೀನೇ ತಂದೆ ನೀನೇ (ಕುವ್ಯಾದ್ರೋ. ೮-೫೯); ಕಂದರ್ಪನ ದೇಹ ಹತವಾಗೆ ಮರುತ ಸುಗಂಧವಾಸನೆಯ ಕಂಡಱಿದು ಸಂದುದು ನಿಶ್ಚಯವಹುದೆಂದು ರತಿ ದುಃಖದಿಂದೆ ಪ್ರಳಾಪಿಸುತಿರಲು (ಮೋಹತ. ೮-೩). ೯. ಪ್ರಯೋಜನಕ್ಕೆ ಬರು; ಕೆಲಸಕ್ಕೆ ಒದಗು: ಓದದೋದಱಿಯದ ವಿದ್ವೆ ಸಲ್ಲದ ಚದುರ್ ನೆಱೆ ಕಲ್ಲದ ಕಲ್ವಿ . . . ತಮ್ಮ ಬಜುವಾತುಗಳೊಳ್ ಪುದಿದೆಗ್ಗರೆಯ್ದೆ ಕಣ್ಣಱೆವಿನಮಾರ್ ಪಟಿಯದೇನೆಳೆಯಂ ಕಿಡಿಸಲ್ಕೆ ಬಲ್ಲರೋ (ಪಂಪಭಾ. ೪-೯೫). ೧೦. ಸಾಧ್ಯವಾಗು; ಶಕ್ತವಾಗು: ಮದನಮದೇಭಂ ಕಡಿಕೆಯ್ದದನ್ನೆಗಂ ಸಲ್ಗುಮಾರ ಬೀರಂಗಳುಂ (ಅಜಪು. ೨-೮೭) ; ಅಲ್ಲಿಯ ಸಾರಮಪ್ಪ ಬೆಳಸಂ ಸಲೆ ಕೊಯ್ದುಱೆ ತೀರ್ಚಲಾಱರ್ . . . ಒಕ್ಕಿ ಸುರಾಶಿಗಳಂ ವಿನಿರ್ಮಿಸಲ್ ಸಲ್ಲರುಂ (ಬಾಧಪು. ೪-೧೮); ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತಱ ಕಾಮದೇವಂ! (ರಾಮಾಶ್ವ. ೮೭-೨೦). ೧೧. (ಮಾತು, ಪಂಥ, ಆಜ್ಞೆ ಮೊದಲಾದುವು) ನೆರವೇರು; ಈಡೇರು: ಎನ್ನ ಛಲವಿಂದು ಸಂದತ್ತೆನ್ನ ಮನೋರಥಫಲಂ ಕರಂ ಸಾರ್ದುದು (ದಶಕು. ೫-೮೭); ನುಡಿದ ನುಡಿವಳಿ ಸಂದುದೇ (ಕುವ್ಯಾದ್ರೋ. ೧೩-೬೨). ೧೨. ತಕ್ಕುದಾಗಿರು; ಯೋಗ್ಯವಾಗಿರು; ಅರ್ಹವಾಗು: ಹಿರಿಯಣ್ಣನೇಂ ಜನಕನೇನೆಂಬೊಂದು ಕೊಡಾಟದಿಂ ವಿನಯಂ ಸಲ್ಗುದು (ಆದಿಪು. ೧೪-೩೧); ಇವು ಸುಜ್ಞಾನದ ಸಲ್ವ ಬಟ್ಟೆಗಳ್ (ಅಜಪು. ೧-೪) ; ಮೋಕ್ಷಮಾರ್ಗದ ಮಾತಂ ನಿರುತಂ ಮಿಥಲ್ ಸಲ್ಲದು (ಸಮಪ. ೩-೪೧). ೧೩. ಚಲಾವಣೆಯಲ್ಲಿರು; ಜಾರಿಯಲ್ಲಿರು: ಶತ್ರಕ್ಕಂ ಮೂವತ್ತು ಗದ್ಯಾಣ ಮೊನ್ನಂ ಕೊಟ್ಟಂ ಇದು ಎಲ್ಲಾ

ಕಾಲಮುಂ ಸಲ್ಲು (ಪೈಠಿ. ೧೯೩೫, ೧೫-೯ ; ೨ನೆಯ ಶತ). ೧೪. ಒಪ್ಪಿಗೆಯಾಗು ; ಸಮ್ಮತವಾಗು : ಎಮ್ಮೊಳು ಸಲ್ಲದೀ ಸುಡಿಯೇತಕಿದು ಶಬವಲ್ಲಭನ ಮಾತೇನು ಸಾಕಂತಿರಲಿ (ನಳಚ. ೩-೩೮) ; ನಾರಾಯಣನೆ ಕುಡು ಸುಮತಿಯ ಸಜ್ಜನರ ಸನ್ಮತಿಗೆ ಕೃತಿ ಸಲ್ಮಂದದಿ (ನೀದಿಮಾ. ೧-೪). ೧೫. ಒಪ್ಪು ; ಶೋಭಿಸು: ಕವಡಿಕೆಯುಂ ಕಾಜುಂ ಸಲ್ಲುಮೆ ಹೊನ್ನವೊಲೆಲ್ಲಿಯಾದೊಡಂ (ಸಮಪ. ೩-೧೨); ಪೊನ್ನೆಲ್ಲಿಗಮಸೆವಂತಿರೆ ತಾಂ ನೆಜೆ ಸಂದವುದೆ ಮದ್ದುಗುಣಿಕೆಯುಮಿಳೆಯೊಳ್ (ಧರ್ಮಾಮೃ. ೧-೧೯೧); ಆಕೆವಾಳರು ಹೊಱೆಗೆಯುಳ್ಳ ವಿವೇಕಿಗಳು ನಿಮ್ಮಲ್ಲಿ ಸಲ್ಲರು (ಕುವ್ಯಾದ್ಭೂ. ೧-೫). ೧೬. ವಶವಾಗು; ಅಧೀನವಾಗು : ಅಮಿತಮತಿ ಗುಣದಿನತಿವಿಕ್ರಮಗುಣದಿಂ ಶಾಸ್ತ್ರಪಾರಮುಂ ರಿಪುಬಳಪಾರಮುಮೊಡನೆ ಸಂದುವೆನಿಸಿದನಮೇಯಬಲಶಾಲಿ ಮನುಜ ಮಾರ್ತಾಂಡನೃಪಂ (ಪಂಪಭಾ. ೧-೪೫) ; ಕೊಲ್ಲದ ಪುಸಿಯದ ಕಳವಿನಿಸಿಲ್ಲದ ಪರವನಿತೆಯರ್ಗೆ ಪದಪಿಂ ಚಿತ್ತಂ ಸಲ್ಲದ ಪರಿಗ್ರಹಕ್ಕಳಿಪಿಲ್ಲದ ಸುವ್ರತಮಿವೈದುಮಲ್ಲವೆ ರತ್ನಂ (ಧರ್ಮಾಮೃ. ೧-೪೧). ೧೭. ಈಡಾಗು; ಗುರಿಯಾಗು; ಪಕ್ಕಾಗು: ಕೊಳ್ಳೋರುಂ ಕೊಣ್ಮು ಉಣ್ಕೋರುಂ ಪಂಚಮಹಾಪಾತಕಸಂಯುಕ್ತನಾಗಿ ಪೂತಿ ಎನ್ನ ನರಗಕ್ಕೆ ಸಲ್ಲೆ (ಎಕ. VI, ಕೊಪ್ಪ. ೩೭-೮ ; ಸು. 675?) ; ಈ ಕುಮಾರಿಕೆ . . . ಅವನಂ ಕಂಡು ಮೂರ್ಛೆಗೆ ಸಲ್ದುಮಾತನೆ ವರನಕ್ಕುಂ (ನೇಮಿಪು. ೫-೩೮ ಪ) ; ಬಸವಳಿದಿರನುಗಟ್ಟಿರಖಿಳಾಯಸಕೆ ಸಂದಿರಿ (ತೂರರಾ. ೧-೪-೭೪). ೧೮. ಉಂಟಾಗು ; ಒದಗು; ಸಂಭವಿಸು : ಇವರ್ಗಾತ್ಮೋಚಿತಮಾಗಿ ಮುನ್ನಮೆ ವಿವಾಹಂ ಸಂದುದು (ಕಾದಂಬ. ೧೦೫); ತೊದಳಿಂದ ನುಡಿವುತಂ ಸಂದ ಗದುಗದಿಕೆಯಿಂದಾನಂದವೇಱುತಂ (ಬಸರ. ೩-೧೦೨) ; ಕೊಳುಗುಳಕೆ ಕಂದನ ಕಳುಹಿದವರಿಗೆ ಸಂದುದೇ ಪರಿಣಾಮ (ಕುವ್ಯಾದ್ಭೂ. ೭-೧೩). ೧೯. ಹೆಸರಾಗು ; ಪ್ರಸಿದ್ಧವಾಗು ; ಪ್ರಖ್ಯಾತವಾಗು : ಎನ್ನ ಸನ್ನಿಯ ಪೆಂವು ನಿನ್ನ ಮಹತ್ತ್ವದಿಂದಮೆ ಸಂದುದು (ಪಂಪಭಾ. ೯-೧೭) ; ಸಂದಿರ್ದದಟರೊಳಿಱಿದಱಿಯಂ ತಪ್ಪದೆ ಕಮ್ಮಱಿಯೋದನೆನಿಸಿದಂ ಬಿಲ್ಲೋೞಂ (ಗದಾಯು. ೨-೧೩); ನಿಮ್ಮೆಲ್ಲರುಂ ಪೋಗಿ ಮರ್ತ್ಯದೊಳ್ ಸಲೆ ಸಂದು ಸಕಲಭೋಗಂಗಳಂ ಸವಿಗಂದು ಬರ್ಪುದೆನೆ (ನಂಬರ. ೧-೫೨). ೨೦. ನಡೆಸು; ಆಚರಿಸು ; ಪಾಲಿಸು: ಇದಾನ್ಯಾದು ಸಲ್ವೊನ್ನರಮಕಲ್ಯಾಣಭಾಗಿಗಳಾರ್ವೋರ್ (ಎಕ. VII, ೨ಕಾರಿ. ೧೫೪-೧೭; 685). ೨೧. ಸರಿಹೊಂದು ; ಅನ್ವಯಿಸು : ಸತ್ಯತಿಗೇಳ್ದು ದುರ್ಜನಂ ಪಲಬಿದು ವೃಥೋಕ್ತಿ ಸಲ್ಲದೊಡೆ ಸಾಯದೆ (ಅನಂಪು. ೧-೪೦). ೨೨. ಮುಳುಗು; ಲೀನವಾಗು; ಮಗ್ನವಾಗು: ವ್ಯಸನದೊಳ್ ಸಂದಿರ್ದನೋ ರಾಗಮಿರ್ದನೋ ವೇಟು (ಕಾದಂಪು. ೭೮೫). ೨೩. ಸೇರು; ಕೂಡು: ಕುಂದದಲಸದೆ ಬಿಟ್ಟಗಲಸಕೆ ಸಂದು ಮಾಯತಿರ್ದಡದು ನಿನಗಂದವಲ್ಲಾ ದೇವ (ಬಸಪು. ೭೧-೫೭); ಭಾನು ಸಂದನು ಪಡುಗಡಲೊಳಗೆ (ವೋಹತ. ೪-೭೨). ೨೪. ಸಿಕ್ಕು; ದೊರಕು; ಲಭಿಸು: ಕಷ್ಮಮತಿಗಳ್ ದುಃಖಿಂಗಳನನುಭವಿಸುತ್ತಿರ್ಪರ್ ತಳವಱಿರ ವಶಕ್ಕೆ ಸಂದ ಕಳ್ಳರ ತೆಱದಿಂ (ಪಾಧಪು. ೫-೪೧) ; ಧರಣಿಯಮರರ ದಕ್ಷಿಣೆಯ ವಿಸ್ತರಣದೊಡೆತನ ಸಂದುದಧ್ವರದಲಿ ಸುಮಂತ್ರಂಗೆ (ತೂರರಾ. ೧-೭-೨೪). ೨೫. ನಡೆದು ಬರು; ಮುಂದುವರಿ; ಪ್ರವರ್ತಿಸು: ಪರಮಭಟ್ಟೇರಕೋ ರಾಜ್ಯಾಭಿವೃದ್ಧಿಯುತ್ತರೋತ್ತರಂ ಸಲುತ್ತಿರೆ (ಸೌಇ. XI-i, ೭-೧೧ ; 837) ; ಈ ಶಾಸನಮಾಚನ್ದ್ರಾರ್ಕ್ಕತಾರಂಬರಂ ಸಲ್ಲೆ (ಎಕ. XI, ಚಿತ್ರದು. ೭೭-೭೭ ; 937) ; ಆಕೆಗಮಾತಂಗಂ ಅತಿಸ್ನೇಹಂ ಸಲುತ್ತಿರಲ್ . . . ಉದಯಿಸಿದಂ ತನಯನವಳ್ಗೆ (ದಶಕು. ೫-೫೪ ವ). ೨೬. ಹೊಂದಿಕೆಯಾಗು; ಅಳವಡು; ಸಂಗತವಾಗು: ಕೈಗಂಗುಲಿಯೆಂತುಟಂತುಟೆ ಲಸದ್ದೀಪಕ್ಕೆ ಸಂದರ್ಕ್ಕೆಯೆಂತುಟು ತಾನಂತುಟೆ ದರ್ಶನಂ ಸಕಲಧರ್ಮಕ್ಕಂ ಧರಾಚಕ್ರದೊಳ್ (ಧರ್ಮಾಮೃ. ೧-೭೨) ; ಜೇನುತುಪ್ಪಕ್ಕೆ ಸಕ್ಕರೆ ಸಲ್ವುದು (ಶಮದ. ೧೩೦ ಪ್ರಯೋ); ಅತಿಪೀಡನದಿಂ ರೇಫಾಶ್ರಿತಮಾದ ಉಕಾರಮುಂ ಸಮಂತು ಡಕಾರಾಶ್ರಿತಮಾದ ಉಬನುಮಂಗೀಕೃತಪದಲತ್ವಕ್ಕೆ ಸಮನೆ ಸಲ್ಲದ ಕುಳನುಂ (ಶಬ್ದಾನು. ೧೪೦ ವ್ಯಾಖ್ಯಾ). ೨೭. (ಹಕ್ಕು, ಅಧಿಕಾರ, ಕ್ರಮ, ಯೋಗ್ಯತೆ ಮೊದಲಾದುವುಗಳ ಮೇರೆಗೆ ಮುಟ್ಟಬೇಕಾದುದು) ಬಂದು ತಲಪು ; ಸೇರು; ಸಂದಾಯವಾಗು : ಧರಿತ್ರೀ ಜೀಯ ಬಿಸನೇನೆನೆ ಸನ್ನವು ಸನ್ನವಲ್ಲೆವಿನ್ನರಸು ದಲೆನ್ನು ಪಾಂಬಬೆಗಳನ್ನು ತವೋನಿಯಮಸ್ತರಾದೊರಾರ್ (ಎಕ. VI, ಕಡೂರು. ೧-೨೭ ; 971). ೨೮. ಯುಕ್ತವಾಗು; ಸಹಜವಾಗಿರು: ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀಗಡಿನ ನೆಗಟ್ಟೆಯ ಕಬ್ಬದೊಳೊಡಂಬಡಂ ಮಾಡಿದರ್ ಪುರಾತನಕವಿಗಳ್ (ಕವಿರಾ. ೧-೩೩). ಚೆಲ್ಲ್ : ೨೫. ಚಿಕೊಡೆಯರ ಕಾಲ ತೊಡಗಿಉ ಆ ದೇವರ ಕಾಣಿಕೆ ಆ ದೇವರಿಗೆ ಚಂದುಬಹುದು (ಸೌಇ. IX- ii, ೪೫೯-೨೩ ; 1405). ಸಲು : ೧೦. ಸಲುವೆನೆಂದಂತಃಪುರಕೆ ಸಂಚಲಿಸುವವನು . . . ಇಳೆಯೊಳಗೆ ಮೂಢಾತ್ಮನೆ (ಕುವ್ಯಾಉ. ೩-೫೨). ೧೧. ಆನು ಮಾಡಿದುದಲ್ಲದೆ ಬಯಸಿದ ಬಯಕೆ ಸಲುವುದೆ (ಬಸವ. ೭೨೨) ; ಒಳಗೊಳಗೆ ತನ್ನಾಣೆ ಘೋಷಣೆ ಸಲುವುದಲ್ಲದೆ ಸೊಡರು ಬೀದಿಗೆ ಸುಳಿಯಲೆಲ್ಲಿಯ ಬೆಳಗು (ಕುವ್ಯಾದ್ಭೂ. ೧೩-೪೭). ೧೨. ಅವಯವಹೀನನು ರಾಯಪಟ್ಟಕ್ಕೆ ಸಲುವನೆ (ಶೂನ್ಯಸಂ. ೨೮೧-೪೭). ೧೩. ವ್ಯಾಧನೊಂದು ಮೊಲವ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ (ಬಸವ. ೧೫೮). ೧೫. ಪೂತು ಫಲುಗುಣ ನಿನ್ನ ಕುಲಕಭಜಾತಶೌರ್ಯಕೆ ಗರುವಿಕೆಗೆ ಸರಿಮಾತನಾಡಿದೆ ಸಲುವುದೆ ನಿನಗೆ (ಕುವ್ಯಾಸ. ೩-೧೨). ೨೫. ಸಲುವುದಷ್ಟಾದಶವಿವರ ವರ್ಣಂಗಳಾದಿಯಲಿ (ಬಸಪು. ೫೫-೧೨). ೨೬. ಪಲವಗೆಯ ಪಕ್ಷಿಗಳ ತರಿಸೀಯ್ಕುಲವ ಕೊರದು ಸಲುವ ಸಂಬಾರದೊಡನವನು ಪಾಕಂಗೈದು (ನವಮೋ. ೯-೬). ೨೭. ಈ ನಗರದಧಿಪತಿ ದಶರಥನ ದಾಯಿಗನು ಧರೆಯಿದು ನಿಮಗೆ ಸಲುವುದು (ತೂರರಾ. ೧-೧೨-೧೫೫). ಸಲ್ಲು : ೬. ಪ್ರಶ್ನೆ ಕೇಳಿದವಳು ಪ್ರಾಯ ಸಂದ ಮುದುಕಿ (ನಡದಾ. II, ೯೭೩) ; ವರ್ಷಗಳು ಸಂದುವು (ಮಾಪ. ೪೨). ೮. ಆ ಶಾಖೆಯ ಬೆಂಬಳಿಗೊಂಡು ಆಡುವರೆಲ್ಲ ಮುಂದುಗಾಣದೆ ಸಂದು ಹೋದರು (ಲಿಂಗವ. ೪. ೮೩-೯೫). ೧೧. ಆಸೆಯೆನಗೀ ರಾಜ್ಯದಲಿ ಮೇಣೀ ಶರೀರದಲಿಲ್ಲ ಪಾರ್ಥನ ಭಾಷೆ ಸಂದರೆ ಸಾಕು (ಕುವ್ಯಾಶ. ೧೭-೧೦) ; ಸಲ್ಲಿದವು ಕಾಮನೆಗಳೆಂದುರೆ ಬಲ್ಲ ಮುನಿಗಳು ಬಂದು ತ್ಸರೆಯಲಿ ಪುಲ್ಲಲೋಚನನೆಡೆಗೆ ಪರಮಾನಂದದಿಂ ಕೂಡಿ ಸಲ್ಲಲಿತನುಡಿಯಿಂದ ತುತಿಸಲು (ರಘುವಂ. ೧೭೯). ೧೨. ಅಸಮಾನರಲಿ ಸಂಗ್ರಾಮ ಸಲ್ಲದು (ತೂರರಾ. ೧-೧೭-೯) ; ಸಲ್ಲದ ಮಾತನಾಡಿದನೆಂದು ಕೋಪಿಸಿ ಕಲ್ಲ ಗಾಣದೊಳಿಕ್ಕಿಸೆನ್ನ (ಮೋಹತ. ೩೭-೨೧). ೧೩. ಕಳ್ಳನಾಣ್ಮ ಸಲಿಕೆಗೆ ಸಲ್ಲದು ಕಳ್ಳನಾಣ್ಮವ ಸಲ್ಲಲೀಯರಯ್ಯಾ (ಬಸವ. ೧೯೮). ೧೪. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ (ಬಸವ. ೧೫೫) ; ಬಲ್ಲವರು ಬಲ್ಲಂತೆ ಯುಕ್ತಿಗಳಲ್ಲಿ ಪೇಳಲು ಸಲ್ಲುವುದೆ (ಗಗತಾ. ೧೮-೨೦). ೧೫. ಆದಿಕಾವ್ಯವೆಂಬ ಹೆಸರು ರಾಮಾಯಣಕ್ಕೆ ಸಲ್ಲುತ್ತದೆ (ಭಾರದ. ೮೩). ೧೯. ಎಲೆ ಕೌಂತೇಯ ನೀ . . . ಸಂದ ಭರತ ಭಗೀರಥಾದಿಗಳಿಂದ ಮಿಗಿಲು (ಕುವ್ಯಾಶ. ೧೫-೧೦). ೨೧. ಆಯಿತಿದು ಸಮರದಲಿ ಗುರು ಗಾಂಗೇಯ ಕರ್ಣ ದ್ರೋಣಗಳ ತಱುವಾಯ ಲೆಕ್ಕಕೆ ಸಂದನ್ಮೆ . . . ಚಿಗಿದಂಬು ಕಡಿದುದು ಕರ್ಣನಂದನನ (ಕುವ್ಯಾಶ. ೨೦-೩೫) ; ಶಾ. ೧೪೦೨ಕ್ಕೆ ಸಲ್ಲುವ ಶಾರ್ವರೀ ಸಂವತ್ಸರದಲ್ಲಿ ಒಬ್ಬ ಮಗನ ಜನನವಾಯಿತು (ಜಗದಾ. ೧೬). ೨೨. ಸಲ್ಲುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ (ಮಹಾದೇ. ಬ. ೬೬-೩೧). ೨೬. ಚನ್ನದ ಜೊತೆಯೊಳು ತೂಗುವೊಂದನಿತಕೆ ಗುಲಗಂಜಿ ಬಿಗುಮಾನವೇಕೆ, ಅದು ಸಲ್ಲುವುದು ಮುಂದೆ ರಾಜನ ಮಕುಟಕೆ (ಇಂಚಾಪ. ೧೫೯-೮೫). ೨೭. ಹಳಗನ್ನಡಸಾಹಿತ್ಯದೊಳಗಿನ ದುರಂತವಸ್ತುವಿನ್ಯಾಸದ ವಿಲಾಸವನ್ನು ಎತ್ತಿ ತೋರಿಸಿದ ಶ್ರೇಯಸ್ಸು ದಿವಂಗತ ಶ್ರೀಮಾನ್ ಶ್ರೀಕಂಠಯ್ಯನವರಿಗೆ ಸಲ್ಲುವುದು (ಸಾಹಿಸ. ೧೦೭) ; ಚಕ್ರಾಧೀಶರಿಗೆ ಸಲ್ಲತಕ್ಕದ್ದು ಸಲ್ಲಲೇಬೇಕು (ಶ್ರೀರಾಮ. ೧೭೯). ೨೯. (ಆಲಂ) ನಿಭಾಯಿಸು; ನಿರ್ವಹಿಸು: ಹಿಂದಣ ಹಳ್ಳ ಮುಂದಣ ತೊಜೆ ಸಲ್ಲುವ ಪರಿಯೆಂತು ಹೇಳಾ (ಮಹಾದೇ. ಬ. ೧೬-೨೩).

ಸಂತು = ೧. ದೊರಕಿತು; ಲಭಿಸಿತು: ಉನ್ನತಿಕೆಯು ಸಂತು ಎನಗೆ (ಬಿಜ್ಜರಾ. ೨-೭). ೨. ಕಳೆಯಿತು; ಮುಗಿಯಿತು: ಪೋದಿರುಳು ಯುಗವಾಗಿ ಸಂತು (ತುರಂಗ. ೩೫-೪೭). ೩. ನೆರವೇರಿತು: ನಿನ್ನಯ ಪಂಥ ಸಂತೇ ? (ಸಾರಂಗ. ೨೯). ಸಲ್ಲ = ಯೋಗ್ಯವಲ್ಲ; ಸರಿಯಲ್ಲ; ಕೂಡದು: ಶಿವಗುಪ್ತಭಟ್ಟಾರಕರ್ಗ್ಗಾಂ ಪಾರಣೆಯಂ ಮಾಡುವೆಂ ವೆಱರಾರುಂ ನಿಜಿಸಲ್ ಸಲ್ಲ (ವಡ್ಡಾರಾ. ೭೮-೪) ; ಮಿಡುಕಲ್ ಸಲ್ಲಿಲ್ಲಿಂದೊಂದಡಿಯಂ ನಿನಗೆಂದು ಲವಣವಾರಾಶಿಯೆ ಬಿಲ್ವಿಡಿವಿಡಿದಂತೆ ವರೂಥಂ ಮಿಡುಕದೆ ನಿಂದತ್ತು (ಆದಿಪು. ೧೨-೮೫) ; ಈ ಸ್ಥಿತಿಯನಾರು ತಪ್ಪಲ್ಸಲ್ಲ (ಎಕ. IV, ಚಾಮರಾ. ೪೮-೧೪ ; 965); ಮುತ್ತಿನ ಹಾರ ಕಪಿಗೆ ಹಾಕಸಲ್ಲ (ಪುರಂದ. ೨-೫೮-೮); ಇದ್ದೂರ ಹಗೆ

ಸಲ್ಲ. ಕದ್ದುಕೊಂಬವರ ನೆರೆ ಸಲ್ಲ (ಗಾಧ). **ಸಲ್ಲಗಳೆ** = ಸಲ್ಲದು ಎಂದು ತಿರಸ್ಕರಿಸು; ಕೂಡದು ಎಂದು ತ್ಯಜಿಸು ,- ಬಿಡು : ಪಲ್ಲ ಕೆಂಪಳವಂತೆ ಸುಲಿದಿದ್ದನವು ಮೊಗ್ಗ ಮಲ್ಲಿಗೆಯಂತಿದ್ದುವಾಗ ಸಲ್ಲಗಳೆದನು ವೀಳೆಯವ ಸಂಯಮಿತನ ಪಲ್ಲವಿಸುತ ಪಚ್ಚೆಯಿಟ್ಟ (ಭರಚ. ೧೬-೧೪). **ಸಲ್ಲವಿಡು , ಸಲ್ಲಿಡು** = ಸಲ್ಲಗಳೆ: ನೀನಿನ್ನಲ್ಲಿಗಲ್ಲಿಗೆ ಹೋಹ ಬುದ್ಧಿಯ ಸಲ್ಲವಿಡು ಸುಖದಿಂದವೆಮ್ಮೊಡತಿಯ ಸಮಾಪದಲಿ . . . ಮನಬಂದಲ್ಲಿ ನೀನಿಹುದು (ಪ್ರಭುಲೀ. ೫-೧೪) ; ಅಲ್ಲಿಗಲ್ಲಿಗೆ ಹರಿವ ಬುದ್ಧಿಯ ಸಲ್ಲವಿಡು ನೀ ನಿತ್ಯ ವೂಜಿಸು ಇಲ್ಲಿರುವ ಷಡಕ್ಷರಿಯ (ಸುಶಾರ. ೯೦-೧೧) ; ಇಲ್ಲದೀ ಮನ ತಿಳಿಯಲಲ್ಲಿಯೇ ಬಯಲಪ್ಪುದಲ್ಲದೀ ಬರಿಯ ಬೊಬ್ಬಾಟದಿಂದ ಸಲ್ಲಿಟ್ಟು ಪೋಗದಿದು (ಮನೋವಿ. ೧-೪೩). **ಸಲ್ಲಿದ** =. ಒಪ್ಪಿತವಾದ; ಸಮ್ಮತವಾದ; ಪ್ರಿಯವಾದ: ಕಲ್ಲಾಗಬೇಕು ಹರಿಗೆ ಸಲ್ಲದ ಮಾನವರಿಗೆ ಬಿಲ್ಲಾಗಬೇಕು ಹರಿಗೆ ಸಲ್ಲಿದ ಸುಜನರಿಗೆ ಬೆಲ್ಲದಂತಿರಬೇಕು ಸಲ್ಲುವ ಬಾಂಧವರಿಗೆ (ವಿಪಾಸು. ೭೪-೧). **ಸಲ್ಲಿದವರು** = ಒಪ್ಪಿಗೆಯಾದವರು; ಪ್ರಿಯರಾದವರು: ಎಲ್ಲ ಭಕ್ತರು ನಿನಗೆ ಸಲ್ಲಿದವರಾದರು ಸಲ್ಲದವ ನಾನಾದೆ ಸರಸಿಜನಾಭನೆ (ಮೋಗ್ಗದೀ. ೩೭-೩). IP 'ಬರ್' ಎಂಬುದಕ್ಕೆ 'ಬನ್ನಿ' ಎಂಬ ವಿಧ್ಯರ್ಥರೂಪವಿರುವಂತೆ (ಹೋಗು ಎಂಬರ್ಥದಲ್ಲಿ) 'ಸಲ್' ಎಂಬುದಕ್ಕೆ 'ಸನ್ನಿ' ಎಂಬ ವಿಧ್ಯರ್ಥರೂಪವು ಬಳಕೆಯಾಗಿರುವುದುಂಟು : ಬಡಭಕ್ತರು ಬಂದರೆ ಎಡೆಯಲ್ಲ ಅತ್ತ ಸನ್ನಿ ಎಂಬರು (ಬಸವ. ೪೧೩); ಇನ್ನು ಬರ್ಪರ್ಗಿಂಬುಗೊಟ್ಟರಿ ಸನ್ನಿ ಸನ್ನಿ ಕೆಲಕ್ಕೆ ಭಕ್ತರು ತನ್ನಿ ತನ್ನಿ ವಿಭೂತಿಯಂ ವೀಳೆಯವನಳವಡಿಸಿ (ಬಸಪು. ೪-೪); ಸನ್ನಿ ತೆಱಪುಗೊಡಿ ಸಾಗಿ ಮೆಲ್ಲಗೆಯೆಂದು ಚೆನ್ನಚೆನ್ನನೆ ಸೊಲ್ಲಿಸಿದರು (ಭರಚ. ೮-೯೫). [ದೇ. ॥ ತಮಿ. ಮಲ. ಚೆಲ್ ; ಕೋತ. ಚೆಲ್ ; ತೊದ. ಸಲ್ ; ತುಳು. ಸಲ್ಲು ; ತೆಲು. ಚೆಲ್ಲು]

ಸಲ₁ (ನಾ). ಬಾರಿ; ಸರದಿ; ಪಾಳಿ: ಒಂದು ಸಲ ಪೇಟೆಯನ್ನು ಸುತ್ತಿ ಬರಬೇಕು (ಭಾರತಿ. ೧೦); ಎಷ್ಟೋ ಸಲ ಶಾಲೆಗೆ ಹೋಗುವಾಗ . . . ಕುದುರೆಸವಾರಿ ಮಾಡುತ್ತಿದ್ದುದುಂಟು (ಸಸ್ಮಕ. ೯೪).

ಸಲಸಲ (ದ್ವಿರುಕ್ತಿ) : ಬಹು ಸಾವಕಾಶವು ದೈವಸಹಾಯವು ಪರಿಪಿಪುದದು ಸಲಸಲವು (ಇಂಚಾಪ. ೧೯೮-೭೬).

ಸಲ₂ 'ಸಲವು' ನೋ.

ಸಲ₃ (ನಾ). ಒಂದು ಬಗೆಯ ಅಳತೆ (?) : ಹಿರಿಯ ಕೆಜಿಯ ಕೆಳಗೆ ಸಲ ೩ ಬೆವ್ವಲೆ (ಎಕ. VI, ಕಡೂರು. ೧೭-೩೭ ; 1171). [?]

ಸಲಂಗೊಳ್ (ಕ್ರಿ). ಆಕ್ರಮಿಸಿಕೊಳ್ಳು; ಆವರಿಸು: "ಸಲಂಗೊಂಡುದನಲ್ಕೆಯಾ ಕ್ರಮಿಸಿಕೊಂಡುದಕ್ಕುಂ" (ಕಬ್ಬಿಗ. ೮೭). [ಸಲ್ಲ (< ಸಲವು) + ಕೊಳ್₁]

ಸಲಂಡುಗೊಳ್ (ಕ್ರಿ). = ಸಲಂಗೊಳ್ : "ಸಲಂಡುಗೊಂಡುದೇದು ಆಕ್ರಮಿಸಿ ಕೊಂಡುದು" (ಶಮದ. ನ. ೨೪೩ ಪ್ರಯೋಗಸಾರ). [ಸಲಂಡು + ಕೊಳ್₁]

ಸಲಕಡೆ (ನಾ). ಗಂಡಸರು ಮುಂಗೈಯಲ್ಲಿ ಧರಿಸುವ ಚಿನ್ನದ ಒಂದು ಬಗೆಯ ಕಡಗ,— ಕಡೆಯ: ಎಡಗೈಯಾಗಿನ ಬಂಗಾರದ ಸಲಕಡೆ . . . ಇವನ್ನೆಲ್ಲಾ ಬರಗಾಲದ ಬಡಜನರು ಬೆರಗಾಗೇ ನೋಡುತ್ತಿದ್ದರು (ಜನಜೀ. ೧೨). [<— ಮರಾ. ಸಲಕಡೇ]

ಸಲಕರಣೆ (ನಾ). ೧. ಉಪಕರಣ; ಸಾಧನಸಾಮಗ್ರಿ: ಅಂದು ಉಪಯೋಗದಲ್ಲಿದ್ದ ಸಲಕರಣೆಗಳೇ ಹೆಚ್ಚಾದ ಮಾರ್ಪಾಡುಗಳೇನೂ ಇಲ್ಲದೆ ಇಂದೂ ಬಳಕೆಯಲ್ಲಿವೆ (ಶಾಸಗಿ. ೨ ಮುನ್ನುಡಿ) ; ಉಪಯೋಗಕ್ಕೆ ಅವಶ್ಯವಾದ ಪಾತ್ರೆಗಳ ಮತ್ತು ಇತರ ಸಲಕರಣೆಗಳ ಕಡೆಗೆ ಗಮನ ಹರಿಯಿಸಬೇಕು (ಆಡುಸಾ. ೩೨). ೨. ತಯಾರಿ; ಸಿದ್ಧತೆ: ದಾನಕ್ಕೆ ಸಲಕರಣೆ ಮಾಡುವ ಕೆಲಸವನ್ನು ವಹಿಸಿಕೊಂಡು ನಡುಕಟ್ಟಿ ನಿಂತರು (ಚಂಗಾಳ್ವ. ೧೩೦).

[?. / ತಮಿ. ಚಲಕ್ಕರಣ್ಕ್]

ಸಲಕು 'ಸಲಗ₂' ನೋ.

ಸಲಕ್ಷಣ (ಗು). ೧. ಉತ್ತಮವಾದ ಲಕ್ಷಣಗಳುಳ್ಳ; ಒಳ್ಳೆಯ ಚಿಹ್ನೆಗಳುಳ್ಳ. ೨. ಸಮಾನವಾದ ಲಕ್ಷಣಗಳುಳ್ಳ; ಒಂದೇ ರೀತಿಯ ಚಿಹ್ನೆಗಳುಳ್ಳ. (ನಾ). ೩. ಒಳ್ಳೆಯ ಲಕ್ಷಣ; ಶುಭಚಿಹ್ನೆ: ಆಜಾನುಬಾಹುಗಳೆರಡುಮೊಪ್ಪಿದವತಿ ಸಲಕ್ಷಣವಂತಮಾಗುತ್ತ (ಬಸಪು. ೩೮-೪೨). [ಸಂ.]

ಸಲಗ (ನಾ). ೧. ಬಲಿಷ್ಠವಾದ ಗಂಡಾನೆ; ಪುದ್ದಾನೆ: ಎಲೆಲೆ ಸಲಗಂ ನೋಡಿದೆಲೆಲೆ ಶಲ್ಯಾಂಕವಿದೆಯೆಲೆಲೆ ಸಿಂಹಾಖ್ಯಂ (ಪಾನಂಚ. ೫-೪೮) ; ಮುಳ್ಳಿನ ಮರವಾದರೇನಂತೆ ಹತ್ತಲಿ ಸಲಗವೆ ಬೆನ್ನಟ್ಟಿ ಬರಲು (ಇಂಚಾವ. ೨೧೯-೮೨). ೨. ಬಲಿಷ್ಠವಾದ ಹೋರಿ; ಗೂಳಿ: "ಸಲಗನೆ ತಾಂ ಗೂಳಿ" (ಭಾರಸಾ. ೩೩) ; ಬಲುಸಲಗ ನೀಡಿಜಿದಾಡುತಿರ್ದುದು ಹಿಂಡುಹಿಂಡಿನಲಿ (ಕುವ್ಯಾಪ. ೭-೫೧) ; ಬಸಿದ ಕೋಡಿನ ಸಲಗನೆಸೆವ ಕೋಣಂಗಳಂ ಮಸಗಿ ವಿಸಟಂಬರಿದು ಕರ್ಬುವುಪ್ಪಂಗಳಿಂ (ಪಾನಂಚ. ೪-೧೫೯).

[ದೇ. ॥ ತೆಲು. ಸಲುಗು = ಹಂದಿ]

ಸಲಗು 'ಸಲಗ₂' ನೋ.

ಸಲಗೆ₁ 'ಸೊಲ್ಲಗೆ' ನೋ.

ಸಲಗೆ₂, ಸಲಕು, ಸಲಗು, ಸಲಾಕಿ,ಸಲಾಕೆ, ಸಲಾಪೆ, ಸಲಿಗ್ಗೆ, ಸೆಳಕಿ, ಸೆಳಕೆ, ಸೆಳಿಕೆ (ನಾ). ೧. ಚೂಪಾಗಿಯೂ ಉದ್ದವಾಗಿಯೂ ಇರುವ ಒಂದು ಬಗೆಯ ಆಯುಧ; ಈಟಿ; ಭಲ್ಲೆ: ಕವಿಯುಂ ಕೀಲ್ ಕೊಳ್ಳಿನಂ ಕರ್ಬುನದ ಸಲಗೆಯೊಳ್ ಬಿಟ್ಟ . . . ಕೊಲ್ಲುದಂ ಕನ್ನೆ ಕಂಡಳ್ (ಪುಟುಮಾ. ೭-೩೫); ಶಲಾಕಾ - ಸಲಗೆ, ಶ್ಮಶಾನ-ಮಸಣ (ಶಮದ. ೨೭೩ ಪ್ರಯೋ). ೨. ಲೋಹ, ಮರ, ಬಿದಿರು ಮುಂತಾದುವುಗಳ ಉದ್ದವಾದ ತೆಳುಕಂಬಿ, — ಸರಳು,— ಪಟ್ಟಿ: ಬಂಡಿಯನು ಚಾವಡಿಯ ಮುಂದಿರಿಸಿ ಬೀಯಗದ ಕೊಂಡಿಯಂ ಕಳಚಿ ಸಲಗೆಯ ತೆಗೆದು . . . ಮುಚ್ಚಳ ತೆಗೆದು ನೋಡಲು (ಸಿದ್ಧರಾ. ೯-೧೪); ಕಲ್ಮದೊಳಗಾ ಕಾಯನು ಅಗುಳಿಸಿದ ಬಳಿಕ ಕರ್ಬೊನ್ನ ಸಲ[ಪಾಕಾಂ. ವರಿ, ವಲ]ಗೆಯೊಳು ಕೆಂಪೊಗವಂತೆ ಕೆಂಡದೊಳು ತಿರಿತಿರಿಹಿ ಕಾಸಿ (ಸೂಪಶಾ. ೪-೮೩.). ೩. ಸಣ್ಣಕಡ್ಡಿ, — ಕೋಲು : ಮುತ್ತಿನ ಸಲ[ಪಾಕಾಂ. ತ್ರಿ]ಗೆಯಂತೆ ನವಮಾಳಿಕೆಯ ನನೆಗಳಂತೆ ನಿಡಿಯವುಂ ಕಮ್ಮಿದುವುಮಪ್ಪ ಕಳಮಾಕ್ಷತಂಗಳುಮಂ ತುಱುಬಿ ತಿಳಕಮಿಕ್ಕಿ (ಅರ್ಧನೇ. ೩-೧೫ ವ); ಇದಿರೊಳ್ ನಿಂದಿರ್ದೊಡಂಗಕ್ಕಡರೆ ತೊಡೆದ ಬಾವನ್ನದಂತಾವಗಂ ನೋಡಿದ ಕಣ್ಗಳ್ಗಿಟ್ಟ ತೆಳ್ಗಪ್ಪುರದ ಸಲಗೆಯಂತೆ . . . ಸೇರ್ವಟ್ಟ ನಿನ್ನಗ್ಗಳ ದೇಹಚ್ಛಾಯೆಯಿಂ ತಣ್ಣನೆ ತನಿಯದೆ ಲೋಕತ್ರಯಂ ಚಂದ್ರನಾಥಾ (ಕಾಪ್ಯಶಾ. ೯). **ಸಲಕು**: ೨. ಪಾಟಿ ಬಿದಿರು ಚಿತ್ರ ಇವುಗಳ ಸಲಕು ಕೆತ್ತುವುದು . . . ಎತ್ತು ದನ ಕಟ್ಟುವ ದಾವಣೆ ತಿರುಪುವುದು ಇತ್ಯಾದಿ (ಮಲಮ. ೭೦) ; ಹುಲ್ಲೆಲೆಗಳಂ ಹೊದಿಸಿ, ಹೆಡಗೆವಳ್ಳಿಯ ಸೀಳಿ ಸಲಕಂ ಬಿಗಿದು ಕಟ್ಟಿ . . . ವಿರಚಿಸಿದರಾಶ್ರಮವನು (ಶ್ರೀರಾಮಾ. ೧೫-೭೧). **ಸಲಗು** : ೨. ಒಂದು ಪೊನ್ನ ಸಲಗಿರ್ಪವೊರಿರ್ದುದು ಮೆಯ್ ಸುಭದ್ರೆಯಾ (ಪಂಪಭಾ. ೫-೮). ೪. ಮೊನಚಾದುದು; ಚೂಪಾದುದು: ಮನ್ಮಥಂ ಬಿರಯಿಗಳಂ ತೀವಿ ತೆಗೆನೆಱೆದ ಕೇದಗೆವೂವಿನ ಕೊನೆಗಱೆಯ ಸಲಗಿನಂಬಿನೊಳಿಸುವಂ (ಪಾರಾಮಾ. ೭-೧೬೨). **ಸಲಾಕೆ** : ೨. ಬಾಳಿಗಿಡದ ಬೇರಿನಲ್ಲಿ ಕಬ್ಬಿಣದ ಸಲಾಕೆಯನ್ನಡ್ಡಲಾಗಿ ತಿಕ್ಕಿ (ಸೌಗಂಧಿ. ೪೭೭-೨೦) ; ಗಿಡಗನನ್ನು ಪಂಜರದಲ್ಲಿ ಕೂಡಿದರೆ . . . ಸಲಾಕೆಗಳನ್ನು ಕಡಿಯದೆ ಬಿಟ್ಟೀತೆ ? (ಆರ್ಯಕ. ೪೧). **ಸಲಾಕೆ** : ೧. ಎದೆಯಲ್ಲಿ ಕಾದ ಕಬ್ಬಿಣದ ಸಲಾಕೆಯನ್ನು ನೆಟ್ಟಂತಾಗಿ . . . ಬೀರಿದಳು (ಕಾವೀ. ೧೭೪) ; ಬಿಳಿಯ ತೆಂಗುಗರಿ ಸಲಾಕೆ ಹೊಳೆವುದು, ಇರಿವುದು ನನ್ನೆದೆಯ (ನಡಬಾ. ೨೮-೯). ೨. ಸುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ಸುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು (ಬಸವ. ೪೦೨); ರೇಣು ಹತ್ತಿದ ಡವಿಯ ಮಸೆಯಲು ಸಾಣಿಗಿಕ್ಕಿತೊ ಭಗಣರತ್ನವ ನಾಣಿಗಳೆಯಲು ಕಮಲಭವ ಸೃಜಿಸಿದ ಸಲಾಕೆಗಳೊ ಕಾಣೆನಭ್ರವನಮಮ ದಿಕ್ಕುಗಳೇಣು ಮುಱಿಯಲು ಹೊಕ್ಕೆಸುವ ಬಿಲುಜಾಣರುರವಣೆ ಲಜ್ಜಿಸಿತು ತೋಕದ ಧನುರ್ಧರರ (ಕುವ್ಯಾಭೀ. ೪-೧೬); ಆ ಸೆರೆಮನೆಯು ಭದ್ರವಾದ ಕಬ್ಬಿಣದ ಬಾಗಿಲುಗಳಿಂದಲೂ ಸಲಾಕೆಗಳಿಂದಲೂ ಮುಚ್ಚಿತ್ತು (ಸಿರ್ದೋಷಿ. ೩). ೫. ಉಕ್ಕಿನ ಉದ್ದನೆಯ ಲೇಖನಿ: ಕಂಟಕ್ಕೆ ಸಲಾಕೆ (ಶಲಾಕಾ) ಎಂದು ಮತ್ತೊಂದು ಹೆಸರು (ಕನ್ನಸಂ. ೪೫೫). ೬. ಸರಿಗೆ ; ಎಳೆ ; ತಂತಿ : ಕಾಕೇಂದ್ರಿಯ ಶಬ್ದಗಳಲ್ಲ ಗರುಡಪತಾಕೇಶ್ವರನ ಸತ್ಯತಿಯ ನೀ ಕೇಳಲುಸಿರುವೆ ಸ್ವರ್ಣಕಂಬಿಯೊಳು ಸಲಾಕೆಯು ತೆಗೆದಂತೆ (ಮೋಹತ. ೨೭-೨). **ಸಲಾಪೆ** : ೭. ದಪ್ಪವಾದ ಕೋಲು; ದಂಡ: 'ಸಲಾಪೆವಿಡಿ' ಪರಾ. **ಸಲಿಗ್ಗೆ** : ೨. ನೀಲದ ಸಲಿಗೆಯ ನಿಲುವೆನಿಪುದು ರೋಮರಾಜಿ ರಾಜಾಂಗನೆಯಾ (ಧರ್ಮನಾ. ೩-೭೦) ; ನೀಲದ ಸಲಿಗೆ[ಪಾಕಾಂ. ಲಕೆ]ಯಂತೆಸೆದುದಾ ಲಲನೆಯಂಗದ ರೋಮರಾಜಿ (ರಾಮವಿ. ೧೨-೩೮) ; ಕಡುಹಿನ ಸಿಡಿಲ್ಮುಡುಹಿನ ಸಲಿಗೆಗಳಾಗಳೊಡ

ನಂಬರಕೇಳ್ವಂತೆ ಬಿಡದೆ ಸುಭಟರೆಚ್ಚ ಸಿಂಗಾಡಿಯಂಬುಗಳಾ ನಿಡುರಭಸದೊಳ್ಳೆದಿದುವು (ಕಂನವಿ. ೧೨-೨೨). **ಸೆಳಕಿ : ೨.** ಬಳಲಿ ಮಿಡುಕುತಲೆತ್ತಲೆಱಗಿದರುಳುಹಿಕೊಳ್ಳೆಯೆನಲು ಸಿದ್ದನು ಸೆಳಕಿಯಲಿ ಹೊಡೆದೆಬ್ಬಿಸಿದರದು ಯದ್ದು ನಡೆಗೊಂಡು (ರೇವಕಾ. ೨-೨೪). **ಸೆಳಕೆ: ೨.** ಕಯ್ಯಲ್ಲಿ ಬೆತ್ತದ ಸೆಳಕೆಯನ್ನು ತಿರುವುತ್ತಾ . . . ಯುದ್ಧವ್ಯಾಪಾರಗಳನ್ನು ನಿಲ್ಲಿಸಿ ರೆನ್ನುತ್ತಾ ಈ ಕುಮಾರರಿಬ್ಬರ ನಡುವೆ ವಿಮಾನವನ್ನು ಇಳಿಸುತ್ತಲಿದ್ದಾರೆ (ಉರಾಚ. ೧೫೧). **ಸೆಳಕೆ : ೨.** ಸಣ್ಣ ಹುಡುಗರನ್ನು ಸೆಳಕೆಯಿಂದ ಹೊಡೆಯುವದು (ಮುಂಬಯಿ. ೫-೪೫); ಬೆತ್ತದ ಸೆಳಕೆಯನು ನೆಲಕ್ಕೆ ಅಪ್ಪಳಿಸಿದಳು (ಮುಂಬಯಿ. ೫-೨೦೦). **'ಸೆಳ್$_4$' ಪರಾ.**

[< ಸಂ. ಶಲಾಕಾ. / ತುಳು. ಸಲಕೆ, ತಲಕೆ ; ತೆಲು. ಸಲಗ]

ಸಲಗೆವಳೆ (ನಾ). ಲೋಹದ ಕಂಬಿಗೆ ಅಳವಡಿಸಿರುವ ಬಳೆ : ಕೆಂದೆರೆಯನ್ನು ಸಲಗೆವಳೆಗಳ ಬಿರುಗಾವರದಿಂದ ಒರ್ಕೆಲಕ್ಕೆಳೆದೋಸರಿಸಿ (ಮಂತ್ರಶ. ೧೦೯-೬).

[ಸಲಗ್$_2$ + ಬಳ್$_2$]

ಸಲತರಿಸಲ (ನಾ). ಅವಕಾಶ ಮತ್ತು ನಿರ್ಧಾರ : ತಮ್ಮ ಶ್ರೀವಂಶದಲ್ಲಿ ಪರಂಪರಾಗತವಾಗಿರುವುದರಿಂದ ಮಾತ್ರವೇ ತಮಗೆ ಬಂದಿರುವ ಏನಾವುದನ್ನೂ ಕಾರಣಪ್ರಮಾಣಗಳ ಸಲತರಿಸಲಗಳಿಲ್ಲದೆ ಹಾಗೆ ಬೀಳ್ಗುಡುವ ಅಧಿಕಾರವು ತಮಗಿಲ್ಲ (ಮಂತ್ರಶ. ೧೬೯-೧೬). [ಸಲ$_2$ (< ಸಲವು) + ತರಿಸಲ (< ತಱಿಸಲ)]

ಸಲಪು, ಸಲಹು$_1$, ಸಲುವು$_1$ (ಕ್ರಿ). ೧. ಕಾಪಾಡು; ಕಾಯು; ರಕ್ಷಿಸು: "ಸಲಪು — ರಕ್ಷಣೇ" (ಶಮಧಾ); ಒಲವೊಳಗಾಗೆ ದೈವದಿನದಂ ಬಡವಂ ನಿಧಿಗಂಡ ಮಾಟ್ಕೆಯಿಂ ಸಲಪಲುಮೋವಲುಂ ಸುಖಮನಾರ್ಜಿಸಲುಂ ಬಗೆದು (ಚಂದ್ರಪು. ೮-೮೦); ಇವನ ತಪ್ಪಂ ಮನದೊಳ್ ತಾರದೆ ಪೆಱಸಾರದೆ ಮನವಾಱೆ ದಯಾಸಾರದಿಂದೆ ಸಲಪಲ್ಪೇಟ್ಕುಂ (ಚಿಕವಿ. ೨-೧೧೯). **೨.** ಬೆಳಸು; ಸಾಕು; ಪೋಷಿಸು : ಭೂದೇವತೆ ಷಡೃತುಗಳನಾದರದಿಂ ಸಲಪುವಂತೆ ವಸುಮತಿ ಚಿತ್ತಾಮೋದದಿನಱುವರ್ ಕುವರರನೋದಿಸುತುಂ ಸಲಪುತಿರ್ದಳ್ (ದಶಕು. ೨-೮೮); ಜಲದ ಜಲದಕ್ಕೆ ಜಲವತ್ಪಲಮಿಾವುದು ತೆಂಗಿದರ್ಕೆ ಕುಡದಾಯ್ತೇನಂ ಸಲಪಿದಿಳೆಗೆಂದೆಱಗಿ ನವಫಲಂಗಳೀವಂತೆ ಬಾಗಿ ಬಾಳೆಗಳೆಸೆಗುಂ (ರಾಜಶೇ. ೨-೫೦); ಸಲೆ ಪೆತ್ತು ಪೊತ್ತು ಸಂತಸದಿಂದೆ ತನ್ನನು ಸಲಪಿದ ಭೂಮಾತೆಗೊಲಿದು (ಇಚಿಸಾಂ. ೨-೩೯). **ಸಲಹು$_1$: ೧.** ಎಲ್ಲ ಬಯಕೆಯಱತ ಬಟ್ಟೆಯ ತೋಱಯ್ಯ ಸಹಜಸಮ್ಯಕ್ತ್ವವನಿತ್ತು ಸಲಹಯ್ಯ (ಆದವ. ೧೩-೨೭); ಅಂಜದಿರಂಜದಿರ್ ಮಗನೆ ಭವದ ಮಾಲೆಯಂ ಹೊದ್ದಲೀಯದೆ ಸಲಹಿದಪೆಂ (ಬಸರ. ೨-೬೧); ಪೀತಾಂಬರಾವರಣ ವರ ಕೌಸ್ತುಭಾಭರಣ ಸಲಹು (ಜೈಮಿಭಾ. ೨-೫೦). **೨.** ಲೋಗರ ಕೈಯಲ್ಲಿ ಕೊಂಡು ಸಲಹಿದ ಬೆಕ್ಕು ಹಿತಂ ಮಾಡುವ ಕಾರಣದಿಂ ರಕ್ಷಿಸಿಕೊಳಲ್ಪಟ್ಟುದು (ಪಂಚತಂ. ೧೦೬-೧೪); ಅಱಿಯನೇನುವನೆಂದು ಸಲಹಲು ಮಱೆವಳೇ ಬಾಲಕನ ತಾಯ್ (ಕುವ್ಯಾಭೀ. ೭-೧೯); ಚಿತ್ರವಾಹನಗಾಕೆಯೊಬ್ಬಳೆ ಕುವರಿಯಾಗಿ ಜನಿಸ, ಮಗಳಂ ಮಗನೆಯೆಂದೊಲಿದು ಸಲಹಿದನು (ಚಿತ್ರಾಂಗ. ೭೩-೧೯೯೩). **ಸಲುವು$_1$: ೨.** ಮಕ್ಕಳಿಗೆ ನುಚ್ಚಂಬಲಿ ಮಾಡಿ ಸಲುವೇನ (ಗರತಿ. ೧೨೬); ಅತ್ತಿಯ ಮನಿಯಾಗ ಅರವತ್ತುಗಂಗಾಳ ಬೆಳಗೂತಿನಿ ಅತ್ತೆ ಬೈಬ್ಯಾಡ ನಮ್ಮವರು ಸರಮುತ್ತು ಮಾಡಿ ಸಲುವ್ಯಾರ (ಕಜಾಗೀ. ೧). [ದೇ. ॥ ತುಳು. ಸಲಗು]

ಸಲವಿಡು (ಕ್ರಿ). ವಿನಿಯೋಗಿಸು : ವಿಶ್ವನಾಥಪುರದ ಮಹಾಜನಂಗಳಿಗೆ ಉಡುಂಬಳಿ ಉತಾರ ಬಂದಿದ್ದ ಬಗೆಲು ವಿರೋಧಿಸಂವತ್ಸರದಲು ಸಲವಿಟ್ಟು ಸಿಸ್ತಿಗೆ ಕೂಡಿದಲ್ಲಿ (ಎಕ. VIII, ತೀರ್ಥಹ. ೭-೧೮೯ ; 1665). [ಸಲವು + ಇಡು$_1$]

ಸಲವು, ಚಲವು, ಶಲವು, ಸಲ$_2$, ಸಲುವು$_2$, ಸೆಲವು$_1$ (ನಾ). ೧. ಒಳಹೊಗುವಿಕೆ; ಪ್ರವೇಶ : ಸೂರ್ಯಕಿರಣಾನೀಕಕ್ಕಮೆಂದಪ್ಪೊಡಂ ಸಲವಿಲ್ಲುದ್ಧತಸಿದ್ಧಪೇಚರರೆ ತಾಮಾಳ್ವೇಲಿಯಾಗಿಂತು ನಿಚ್ಚಲುಮೋರಂತಿರೆ ಕಾವರೀ ದೊರೆತು ಕಾಪೀ ನಂದನಕ್ಕಿಂದ್ರನಾ (ಪಂಪಭಾ. ೫-೮೧); ಮನುಷ್ಯಕ್ಷೇತ್ರದಿಂದತ್ತಲ್ ತನಗೆ ಸಲವಿಲ್ಲದೊಡದುವೆ ವೈರಾಗ್ಯಕಾರಣಮಾಗೆ (ಪಂರಾಮಾ. ೧೦-೧೧೬ ವ); ಸತಿಯರೊಳೆ ಯೌವನಕ್ಕಾಶ್ರಿತಬುಧರೊಳೆ ನೆರಪಿದೊಡಮೆಗೆಂತಾಯ್ತು ಯಥೋಚಿತಮಂತೀ ತನುಗಮಣುವ್ರತದೊಳ್ ಸಲವಾಗೆ ಸಫಳಮಾದಪುದೆಸಕಂ (ವರ್ಧಪು. ೯-೧೦). **೨.** ಗತಿ; ಅವಸ್ಥೆ; ಸ್ಥಿತಿ: ಗತಿ: - ಜೀವಪುದ್ಗಲಂಗಳ್ಗೆ ಕಾಲದೇಶನಿಯಮದಿಂ ಸಲವಕ್ಕುಂ (ತಸೂವ್ಯ. ೪೪); ಮುನೀಂದ್ರನನಶನತಪದೊಳ್ ತಱಿಸಂದ ಸಲವದೊಂದಾಶ್ಚರ್ಯಂ (ಸುಕುಮಾ. ೪ **೩.** ತಕ್ಕ ಕಾರಣ; ಸಮಂಜಸವಾದ ಕಾರಣ: (ಕ). **ಚಲವು : ೪.** ಅಗ... ಅವಶ್ಯಕತೆ: ನಾಡಮಲೆ ರೈತರ ಆರಂಬದ ಬಗ್ಗೆಯೂ ತಮ್ಮ ತಮ್ಮ ಚಲವಿಗೆ ಗಟ್ಟ... ಕೆಳಗೆ ಹೋಗಿ, ಉಪ್ಪು ಮುಂತಾದ್ದು ತಂದುಕೊಳ್ಳುವ ಬಗ್ಗೆಯೂ (ರಾಜೇಂದ್ರ. ೧... **೫.** ಬದುಕು; ಸಂಸಾರನಿರ್ವಹಣೆ: ಅಲ್ಲಿ ಚಲವಿಗೆ ಚೂಕರವಾದ್ದರಿಂದ ಕೆ... ಕುಟುಂಬ, ತಮ್ಮ ಅಣ್ಣನ ಮಗನ ಸಹಾ . . . ಇಟ್ಟು ಇರುತ್ತಿದ್ದರು (ರಾಜೇಂದ್ರ. . . **ಶಲವು : ೬.** ಖರ್ಚು; ವೆಚ್ಚ: ಆ ತೆಱಿಂಗೆ ಶಲವಾಗಿ ಮಾಕಬ... (ಸೌಇಎ. ೧೯೩೨, ಉಡುಪಿ. ೩೧೮-೧೮ ; 1293). **೭.** ಅಗತ್ಯವಸ್ತುವಿನ ಪೂರೈಕೆ : ನರಸಿಂಹದೇವರಿಗೆ . . . ಶಲವಾಗಿ ಒನ್ದು ಎಲೆಯ ಹೇರು ಮಾನ್ಯ ಆಚನ್ದ್ರಾ... ಸ್ಥಾಯಿಯಾಗಿ ಮಾಡಿದ ಧರ್ಮ್ಮಾ (ಎಕ. VI, ಕೊಪ್ಪ. ೧೧-೨೦; 1327) ; ಭತ್ರ... ಶಲವಾಗಿ ತಿಪ್ಪಗಂಡಿಕೋಡೂರಿಂದ ಭತ್ರದ ಕೊಳಗದಲಿ ನೂಱಿಪ್ಪತ್ತ ಒಂದು ಸ... (ಎಕ. VIII, ತೀರ್ಥಹ. ೩೩-೪೫ ; ಸು. 1430); ಭತ್ರಕ್ಕೆ ಶಲವಾಗಿ ಜನಾರ್ಧನದೇವರ ಸನ್ನಿಧಿ... ಧಾರೆಯನೆಱದು ಬಿಟ್ಟೆವಾಗಿ (ಎಕ. XIV, ಶ್ರೀರಂಗ. ೧೯೮-೨೧ ; 1598). **ಸಲ$_2$: ೧.** "ಸ... = ಪ್ರವೇಶಂ" (ಶಮದ. ಪರಿ. ೨) ; "ಪ್ರವೇಶಂ ಸಲಂ" (ಕರ್ಣಾನಿ. ೬೨). **೮.** ಆಕ್ರಮಣ : **'ಸಲಂಗೊಳ್' ಪರಾ. ಸಲುವು$_2$: ೯.** ಉದ್ದೇಶ ; ಕಾರಣ : ದುಡ್ಡುಕಾಸನ... ನನ್ನ ಸಲುವೇ ಕೂಡಿಹಾಕಲು ಹೋದನು (ಇಂಗೀತ. ೫೨-೮). **ಸೆಲವು$_1$: ೬.** ಆ ಗವುಡುಗ... ತಾವು ಕೆಱೆಯ ಬಣ್ಣಿಗೆ ತೆಱುವ ಹೊನ್ನಿಂಗೆ ಸೆಲವಾಗಿ . . . ಕೊಣ್ಣ ಗದ್ಯಾ... (ಎಕ. VI, ಕಡೂರು. ೧೨-೫೮ ; 1233); ಉಂಬಳಿತಕೆ ಸೆಲವಾಗಿ ಪಾಲಿಸಿದ ಹಳ... ಚತುಸೀಮೆಯ ವಿವರ (ಎಕ. XIV, ಎಳಂದೂ. ೧೮೭-೧೦ ; 1530). **೧೦.** ಪ್ರಯೋಜ... ಸಾರ್ಥಕ್ಯ: ಕುಲಮಂ ವಿಚಾರಿಪಡೆ ಸೆಲವಿಲ್ಲ ಫಲವಿಲ್ಲ (ದೀಕ್ಷಾಮೋ. ೪೨-೮... **೧೧.** (ಬೀಳ್ಕೊಳ್ಳಲು ಪಡೆಯುವ) ಅಪ್ಪಣೆ ; ಅನುಮತಿ : ಮಾಧವ ನ... ವಾಕ್ಯವ ಕೇಳ್ದು ಜೀಯ ಹಸಾದವೆಂದವನೀಶ್ವರರು ಆದಡೆ ತಮಗಿಂದು ಸೆಲವ... ಬೀಳ್ಕೊಂಡು ಹೋದರು ಮುಂದೆ ಚೂಣಿಯಲಿ (ಮೋಹತ. ೩೭-೪). **೧೨.** ಕಾ... ಸಿದುದು; ಮೀಸಲು: ಈತಗಳನೆಲ್ಲರಂ ತೆಗಸೆನಗೆ ಸೆಲವಿಂದಿನಾಹ... (ಜೈಮಿಭಾ. ೧೨-೧೪).

ಸಲವಾಗಿ, ಸಲುವಾಗಿ = ಕಾರಣಕ್ಕಾಗಿ; ಉದ್ದೇಶಕ್ಕಾಗಿ: ಇದರ ಸಲವಾಗಿ (ಮುಂಬಯಿ. ಕಿ. ೫-೧೦೬) ; ಕೊತವಾಲನು . . . ಕಳ್ಳರನ್ನು ಗೊತ್ತುಹಚ್ಚುವ ಸಲುವಾಗಿ ವಿಶ್ವಪ್ರಯತ್ನ ಮಾಡಿದಾಗ್ಯೂ ಅವರು ಸಿಗಲಿಲ್ಲ (ಮುಂಬಯಿ. ೪-೨೦) ; ನನ್ನ ಸಲುವಾಗಿ ನೀನೇನು ಚಿಂತಿಸುವುದು ಬೇಡ (ಹಳ್ಳಹಾ. ೧೦೦).

[< ಸಲ್ + - ವು. /ತೆಮಿ. ಚೆಲವು ; ಮಲ. ತೆಲು. ಸೆಲವು]

ಸಲಹಾ 'ಸಲಹೆ' ನೋ.

ಸಲಹಾಕಾರ 'ಸಲಹೆಗಾರ' ನೋ.

ಸಲಹಾಸಮಿತಿ (ನಾ). ಯಾವುದಾದರೊಂದು ಕಾರ್ಯಾಚರಣೆಗೆ ತನ್ನ ಸೂಕ್ತವಾದ ಸಲಹೆ, ಸೂಚನೆಗಳನ್ನು ನೀಡುವ (ತಜ್ಞರ) ಗುಂಪು, ಮಂಡಲಿ: ಇಂದಿನ ಶಿಕ್ಷಣಕ್ರಮವನ್ನು ಉತ್ತಮಗೊಳಿಸಲು ತಜ್ಞರ ಒಂದು ಸಲಹಾಸಮಿತಿಯನ್ನು ರಚಿಸುವುದು ಒಳ್ಳೆಯದು (ರೂಢಿ).

[ಸಲಹಾ (< ಸಲಹೆ) + ಸಮಿತಿ]

ಸಲಹಿಸು$_1$ (ಕ್ರಿ). ಕಾಪಾಡುವಂತೆ ಮಾಡು; ರಕ್ಷಿಸುವಂತೆ ಮಾಡು : ಐಸಲೇ ಮುನಿನಾಥ ರಾಮನದೈಸರವನತ್ತುಂಬ ಹರೆಯದ ಶೈಶವನ ಕೈಯಿಂದ ಸಲಹಿಸಿಕೊಂಬುದೇ ಯಜನ (ತೊರರಾ. ೧-೯-೨೯).

[ಸಲಹು$_1$ (< ಸಲಪು) + - ಇಸು$_3$]

ಸಲಹಿಸು$_2$ (ಕ್ರಿ). ಅಭಿಪ್ರಾಯಪಡು; ಸೂಚನೆಕೊಡು; ಸಲಹೆಮಾಡು: "ಆದರೆ ಅವಳಿಗೆ ಕ್ಷಮಾಭಿಕ್ಷೆ ನೀಡಬೇಕೆಂದು ಶಿಫಾರಸ್ ಮಾಡಬೇಕು" ಎಂದು ವರ್ತಕ ಸಲಹಿಸಿದನು (ಪುನರು. ೧೦೫). [ಸಲಹೆ + -ಇಸು$_3$]

ಸಲಹು$_1$ 'ಸಲಪು' ನೋ.

ಸಲಹು$_2$ (ನಾ). ರಕ್ಷಣೆ ; ಕಾಪು : ಕೋಟೆಯ ಕಾವಲ್ಗೆ , ಸಲಹಿಗೆ , ಅಗಳನ್ನು ಬಳಸಿ

ನಮ್ಮ ಸೈನ್ಯಗಳನ್ನೆಲ್ಲ – ಫಿರಂಗಿಗಳನ್ನೂ ಅನ್ವಯಿಸಿಕೊಂಡು ಸನ್ನದ್ಧವಾಗಿರಬೇಕು (ಬ್ಯುಆ. ೪೫-೨೨). [< ಸಲವು]

ಸಲಹೆ, ಸಲಹಾ, ಸಲಾಹ, ಸಲ್ಲಾ, ಸಲ್ಲ್ಯೆ (ನಾ). ೧. ಸೂಚನೆ; ಅಭಿಪ್ರಾಯ : ರಾಜ್ಯದ ವರಮಾನಕ್ಕಿಂತ ಖರ್ಚು ಹೆಚ್ಚಾಗುತ್ತಿದ್ದುದರಿಂದ ಪ್ರಜೆಗಳಿಂದ ಹೆಚ್ಚು ತೆರಿಗೆ ವಸೂಲುಮಾಡಬೇಕೆಂಬುದು ನನ್ನ ಸಲಹೆ (ಪ್ರಕಾಪ. ೯೧); ಹೊಲ ಧರ್ಮಪ್ಪನಿಗೆ ದಕ್ಕದಂತೆ ಮಾಡಲು ಏನು ಮಾಡಬೇಕೆಂದು ವಕೀಲರ ಸಲಹೆ ತೀರ್ಮಾನವಾಯಿತು (ಮನಚ. ೭). ೨. ತಿಳಿವಳಿಕೆ ನೀಡುವಿಕೆ : ಈ ಊರು ಬಿಟ್ಟು ಒಳ್ಳೇ ಹವೆಯುಳ್ಳ ಊರಿಗೆ ಅವರನ್ನು ಕಳುಹಿಸಬೇಕೆಂದು ಡಾಕ್ಟರ್ ಸಲಹೆಯನ್ನಿತ್ತಿದ್ದಾರೆ (ಪರಿಣೀ. ೪೦); ಆ ವಿಷಯದಲ್ಲಿ ನಿನ್ನ ಸಲಹೆ ನನಗೆ ಬೇಕಾಗಿಲ್ಲ (ಹಾಹುತ್ರ. ೪೨). **ಸಲಹಾ:** ೨. 'ಸಲಹಾಕಾರ' ಪರಾ. **ಸಲಾಹ** : ೩. ಶಾಂತಿ ; ಸಮಾಧಾನ. **ಸಲ್ಲಾ** : ೧. ನನ್ನ ಸಲ್ಲಾ ಬೇಕಾಗೇದ ಅಂತ ಕರಿಸ್ಕಾರ ನನ್ನ (ಕುಮಾಕಾ. ೧೫೦). ೨. ನೀವು ಅವ್ವನ ಜೋಡಿ ಮಾತಾಡತೇನಿ, ಅಕ್ಕನ ಸಲ್ಲಾ ತೊಗೋತೇನಿ . . . ಅಂತ ಕೂತರ ಬಂದ ಕೆಲಸ ಅಲ್ಲೇ ಉಳೀತದ (ಗಂಮಾಯಿ. ೨೩೩). ೪. ಸಂಧಿ ; ರಾಜಿ ; ಕೌಲು : ನವಾಬ ಹೈದರಲ್ಲಿಖಾನರು ತ್ರಿಯಂಬಕಮಾಮನ ಸಂಗಡ ಸಲ್ಲಾದ ಸವಾಲು ಜವಾಬು ಮಾಡಿಕೊಂಡು (ರಾಜೇಂದ್ರ. ೨೨). **ಸಲ್ಲ್ಯೆ** : ೧. ಫ್ರೆಂಚ್‌ಕೌನ್ಸಿಲದವರ ಸಲ್ಲೆಯ ಮೇರೆಗೆ ರಾಜ್ಯಭಾರ ಮಾಡುತ್ತಿದ್ದುದರಿಂದ ಅರಸನಿಗೆ ಕೊಟ್ಟ ಸಲ್ಲೆಯ ದೆಸೆಯಿಂದ ಇವರನ್ನು ಜವಾಬದಾರರೆಂದು ಕರೆಯತಕ್ಕದ್ದು (ಇಂಗ್ಲೀ. ೧೫೫).

ಸಲಹೆಕೊಡು, ಸಲ್ಲೆಕೊಡು = ಅಭಿಪ್ರಾಯವನ್ನು ಸೂಚಿಸು ; ಸೂಚನೆಕೊಡು : ಎಲ್ಲ ಕಾರ್ಯಗಳಲ್ಲಿಯೂ ವಿದ್ಯಾರಣ್ಯರು ಸಲಹೆಕೊಡುತ್ತಿದ್ದರು (ಶ್ರೀವಿದ್ಯಾ. ೧೪೮); ಮಾನ್ಸೀರೇಟ ಪಾದರಿಯಾದರೂ ಮಿರ್ಜಾಹಕೀಮನನ್ನು ಪೂರ್ಣವಾಗಿ ನಾಶಮಾಡ ಕೂಡದೆಂದು ಸಲ್ಲೆಕೊಟ್ಟನು (ಅಕ್ಬರ. ೬೫). **ಸಲಹೆಮಾಡು, ಸಲ್ಲಾಮಾಡು** = ೧. ಅಭಿಪ್ರಾಯವನ್ನು ಸೂಚಿಸು ; ಸೂಚನೆಕೊಡು : ಅವರು, ತಮ್ಮ ಮನೆಗೆ ಬಂದು ಹೋಗಬೇಕೆಂದು ನನಗೆ ಸಲಹೆಮಾಡಿದರು (ರೂಢಿ). ೨. ತಿಳಿವಳಿಕೆಯನ್ನು ನೀಡು: ಅವರಿಗೆ ವೈದ್ಯರು ಒಂದು ತಿಂಗಳು ವಿಶ್ರಾಂತಿಯಲ್ಲಿರಬೇಕೆಂದು ಸಲಹೆ ಮಾಡಿದ್ದಾರೆ (ರೂಢಿ). ೩. ರಾಜಿಮಾಡಿಕೊಳ್ಳು; ಒಪ್ಪಂದಕ್ಕೆ ಬರು: ಈ ಲಡಾಯದಲ್ಲಿ . . . ದಂಡಿನ ಖರ್ಚು ಬಹಳ ಮುಟ್ಟಿಯಿದೆ. ಆದ್ದರಿಂದ ನಾವು ಸಲ್ಲಾಮಾಡಿ ಅವರ ಸೀಮೆ ಬಿಟ್ಟುಕೊಡಲಿಕ್ಕೆ ಇಲ್ಲ (ರಾಜೇಂದ್ರ. ೧೦). **ಸಲಾಹವಾಗು, ಸಲ್ಲಾಆಗು, ಸಲ್ಲಾಗು** = ೧. ಸಮಾಧಾನಗೊಳ್ಳು ; ಶಾಂತವಾಗು : ಪಾದಶಾಹರು ಬರಲಾಕ್ಷಣಕ್ಕವರ ದರ್ಶನದಿಂದ ಸಲಾಹವಾಗುತೀ ಧರೆಯನು ಪಾಲಿಸುತ್ತ ಸುಖಿ ಮಿರ್ದನು ಮೌನಸುಘಂಟೆಭೂವರಂ (ಬೀಳವಂ. ೨೫-೧೬೯). ೨. ರಾಜಿಯಾಗು; ಒಪ್ಪಂದವಾಗು : ಮೆದಕೆರೆನಾಯಕನ ಜೊತೇಯಲ್ಲಿ ಚಂದಾಸಾಬರ ಹಿರೀಮಗನು ಹತವಾಗಿ ಅವರವರಿಗೆಲ್ಲಾ ಸಲ್ಲಾ ಆಗಿ ಕಸ್ತೂರಿರಂಗಪ್ಪನಾಯಕರಿಗೆ ಚಿತ್ರಕಲ್ಲು ದೊರೆತನವಾದ ಬಳಿಕ (ಹೈದರ. ೨೫). ೩. ಬಾಗು ; ಮಣಿ : ಸೊಲ್ಲಿದ್ದರೂ ನುಡಿಯ ಸೊಗಸು ಸಿಗದೆಂದಿಗೂ ಬಲ್ಲಿದ್ದರೂ ಬಲ್ಲತನಕೆ ಸಲ್ಲಾಗುವದು (ಸಭೀಗೀ. ೬೨-೧೦). **ಸಲ್ಲಾಚುಕಾಯಿಸು** = ಕರಾರಿನಂತೆ ಕೊಡಬೇಕಾದುದನ್ನು ಸಲ್ಲಿಸು: ೫೬,೦೦,೦೦೦ ರೂಪಾಯಿ ಮೇಲೆ ಸಲಾಬತ್ತು ಜಂಗರಿಗೆ ಸಲ್ಲಾ ಚುಕಾಯಿಸಿ (ಹೈದರ. ೩೪). [< ಅರ. ಸಲಾಹ್; ಹಿಂ. ಸಲಾಹ್, ಸಲ್ಲಾಹ್; ಮರಾ. ಸಲಹ್, ಸಲಾಹ್, ಸಲಾ, ಸಲ್ಲಾ]

ಸಲಹೆಗಾರ, ಸಲಹಾಕಾರ, ಸಲ್ಲಾಗಾರ (ನಾ). ೧. ಅಭಿಪ್ರಾಯವನ್ನು ತಿಳಿಸುವವನು; ಸೂಚನೆಯನ್ನು ಕೊಡುವವನು. ೨. ಬುದ್ಧಿವಾದವನ್ನು ಹೇಳುವವನು; ಸೂಕ್ತ ತಿಳಿವಳಿಕೆಯನ್ನು ಕೊಡುವವನು : "ಸಲಹೆಗಾರ ; ಮಂತ್ರಿ" (Adviser. ಇಂಕಸ). **ಸಲಹಾಕಾರ** : ೨. ಸಲಹಾಕಾರರನ್ನು ಕರೆಯಿಸಲಾಯ್ತು . . . ಈತ ಊರಿನ ಮಂತ್ರಣದಾತ ಸಲಹಾಕಾರ (ಇಪ್ರಕ. ೩೫೭). **ಸಲ್ಲಾಗಾರ** : ೨. ಅವರ ಮೊಕದ್ದಮೆಯ ಸಲ್ಲಾಗಾರರು ಲಂಚದ ನೆವ ಹೇಳಿಹೇಳಿ . . .ಧನ ದೋಚಹತ್ತಿದರು (ಇಪ್ರಕ. ೪೧೧); ಕುಲಕರ್ಣಿ ರಾಮಾಚಾರಿ ಅವನಿಗೆ ಸಲ್ಲಾಗಾರ (ಪ್ರಭಾ. ೬೫). ೩. ಜಾನ್ ಮಾರ್ಟಿನ್ ರಿಚಾರ್ಡಫಾಕ್ಸ್ ಇವರನ್ನು ತನಗೆ ರಾಜ್ಯಭಾರದಲ್ಲಿ ಸಲ್ಲಾಗಾರನ್ನಾಗಿ ನಿಯಮಿಸಿಕೊಂಡನು (ಇಂಗ್ಲೀ. ೧೦). [ಸಲಹೆ + -ಗಾರ (< -ಕಾಱ)./ ಮರಾ. ಸಲಹಕಾರ್, ಸಲಹಗಾರ್, ಸಲಾಕಾರ್, ಸಲಾಗಾರ್, ಸಲ್ಲಾಕಾರ್, ಸಲ್ಲಾಗಾರ್]

ಸಲಾಂ 'ಸಲಾಮು' ನೋ.

ಸಲಾಕಿ 'ಸಲಗ್ಗೆ$_2$' ನೋ.

ಸಲಾಕೆ 'ಸಲಗ್ಗೆ$_2$' ನೋ.

ಸಲಾಖಿ (ನಾ). ಗುಂಡುಹಾರಿಸುವುದು : ರೈಫಲ್, ಜಂಜಾಲು ,ಮುತಾರ್‌ನಲ್, ಹತ್ಯಾರದಲ್, ಬಂದೂಖ್ ವಗ್ಗೆರೆ ಸಲಾಖಿ ಒಂದೇ ಆವರ್ತಿ ಆಯಿತು (ಚಿತ್ರಪಾ. ೬೪). [< ಪಾರ. ಶಲ್ಕ್; ಮರಾ. ಸಲಖ್, ಸಲಕ್]

ಸಲಾಖೆ 'ಸಲಗ್ಗೆ$_2$' ನೋ.

ಸಲಾಖೆವಿಡಿ (ಕ್ರಿ). ಯೋಗದಂಡವನ್ನು ಹಿಡಿ (?) : ಯೋಗಾದಿಸಂಪನ್ನ ಖಿಲೆಯಗಳೆಲ್ಲವಂ ಸಂಪಾದಿಸಿ ಯೋಗರಮಣಿಯ ಕ್ಷೇತ್ರಮನೆ ತಳವಿಟ್ಟು ಸಲಾಖೆವಿಡಿದು ಅಭಿನವಶ್ರೀಶೈಳವನೆ ಮಾಡಿ ಕಪಿಲಸಿದ್ಧವುಲ್ಲೇಶ್ವರದೇವನೆ ನೆಲಸಿ ನಿಂದು (ಸೌಾ. XX, ೧೭೭-೭; 1190). [ಸಲಾಖೆ (< ಸಲಗ್ಗೆ$_2$) + ಪಿಡಿ]

ಸಲಾದಿಸೊಪ್ಪು (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಎಲೆ: ಸಲಾದಿಸೊಪ್ಪು, ಲೆಟ್ಟೂಸು (ಮೈಫಿಗಿ. ೪೯-೯೭೧). [ಸಲಾದ್ + ಸೊಪ್ಪು]

ಸಲಾಮ್ 'ಸಲಾಮು' ನೋ.

ಸಲಾಮತು 'ಸಲಾಮತ್ತು' ನೋ.

ಸಲಾಮತ್ತು, ಸಲಾಮತು (ನಾ). ಸುರಕ್ಷಿತ ; ಕ್ಷೇಮ ; ಸೌಖ್ಯ : ಮಹಾದೇವನ ಕಟಾಕ್ಷದಿಂದ ತಾವು ಆ ದುಷ್ಟಾನರ ಕೈಯಿಂದ ಸಲಾಮತ್ತು ಆಗಿ ಇದ್ದೀರಿ (ರಾಜೇಂದ್ರ. ೧೧೦). **ಸಲಾಮತು** : ಹೋಯಿತು ಒಂದು ಮಲಾಮತು, ಇದ್ದವರು ಸಲಾಮತು (ಎಭಿವ್ಯ. ೧೫೮). [< ಅರ. ಹಿಂ. ಮರಾ. ಸಲಾಮತ್]

ಸಲಾಮಿ 'ಸಲಾಮು' ನೋ.

ಸಲಾಮು, ಸಲಾಂ, ಸಲಾಮ್, ಸಲಾಮಿ, ಸಲ್ಲಾಮ್, ಸಲ್ಲಾಮು (ನಾ). ೧. ಮುಸಲ್ಮಾನರಲ್ಲಿ (ಪರಸ್ಪರ) ಗೌರವಪೂರ್ವಕವಾಗಿ ಕೈಯನ್ನು ಹಣೆಗೆ ತಾಗಿಸಿ ಮಾಡುವ ನಮಸ್ಕಾರ ಮತ್ತು ಆಗ ಹೇಳುವ ಶಬ್ದ : ಸುರುತಾಳಂಗ ಸಲಾಮನೊಲಿದು ಮಾಡಿ ಶಿರದೊಳಾಂತವನಾಜ್ಞೆಯನು . . . ಪೊಐಮಟ್ಟಿಳು (ಕುರಾಸಾ. ೪೧-೪೫); ಸಚ್ಚಿದಾನಂದಭಾರತಿಸ್ವಾಮಿಶ್ರೀಪಾದಂಗಳಿಗೆ ರಣದುಲ್ಲಾಖಾನರ ಸಲಾಮು (ಮೈಅರ. ೧೫೩೪; ೩೩-೩; 1640); ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಸಲಾಮು (ಗಾಡ). ೨. ಗೌರವಸೂಚನೆಯಾಗಿ ವಂದನೆಯನ್ನು ಸಲ್ಲಿಸುವಿಕೆ: ನಾವು ಆ ಧೋರಿಯಂ ಕಾಣಿಸಿಕೊಳ್ಳುವುದಕ್ಕೆ ಇಲ್ಲದೆ, ನಮ್ಮ ಕಡೆಯವರಂ ಸಲಾಮಿಗೆ ಕಳುಹಿಸಿ . . . ನಾವು ಹೋಗದೇ ಇರಲು ; ಚಾಣಕ್ಯನು . . . ಇನ್ನೂ ಸಲಾಮಿಗೆ ಬಾರದೆ ಇರುವದಕ್ಕೆ ಕಾರಣವೇನು? ಎಂದು ದೂತರಂ ಕೇಳಲು (ಮುದ್ರಾಮಂ. ೨೮೧). **ಸಲಾಂ** : ೧. ಸಲಾಂ, ಸೆಟ್ಟರೇ! (ಮುಂಬಯಿ. ಕ. ೪-೧೬೮). **ಸಲಾಮ್** : ೧. ಹಲ್ಲು ಕಿರಿದು ಸಲಾಮೆಂದು ಬಾಯ ಬಿಡುವ ಹಂದೆಗಳಿರ (ಕಂಸಪ. ೧೫-೩೪); 'ಸಲಾಮ್ ಹುಜೂರ್' ಎನ್ನುತ್ತಾ ಪಕ್ಕಕ್ಕೆ ಸರಿದು ನಿಂತ ಬೈಜೂ (ಸಾಹೇಬ್. ೧೪). **ಸಲಾಮಿ** : ೩. (ಅಲಂ) ಕಾಣಿಕೆ; ಉಡುಗೊರೆ: ವಿಶ್ವಾ-ಸುರ್ಯಾರ ನಿಶ್ಚತವಾದಂತಿದ್ದ ಸಂಬಂಧಗಳನ್ನೇ ಬುಡಮೂಲ ಕಿತ್ತೆಸೆಯುತ್ತೇನೆ ಎಂದು ಪಣ ಪುಕಾರಿಸಿ ಹೊರಬಿದ್ದ. ಆ ಪಣದ ಪ್ರಥಮ ಸಲಾಮಾಯೆಂದು ಶಂಕರಕಾಕಾ ಅವರಿಗೆ ಸ್ವದಸ್ತೂರ ಖುದ್ದ ಕಾಗದ ಬರೆದಿದ್ದ (ದೀಪಹ. II, ೩೭೮). ೪. [ನಾಟ್ಯ] ನಮಸ್ಕಾರ ಮಾಡುವ ಒಂದು ಭಂಗಿ : ಮೊದಲು ನೃತ್ಯಗಾರನು ನಮಸ್ಕಾರದಂತಿರುವ 'ಸಲಾಮಿ' ಅಥವಾ 'ಶುರುಕೆ ಅಹಮದ್' ಎಂಬುದನ್ನು ಮಾಡಿ ಕೈಗಳನ್ನು ಎದೆಯ ಹತ್ತಿರ ಅಚಲವಾಗಿ ಹಿಡಿದಿರುತ್ತಾನೆ (ಅಭಾನೃ. ೮೯). **ಸಲ್ಲಾಮ್**: ೧. ಕ್ರಮದಿಂ ಪರಾಕು ಸಲ್ಲಾಮೆನಲ್ಕಂಚುಕಿಗಳಮರೇಶ ನಂತೆ ಪುಷ್ಪಕದಿ ಮಂಡಿಸಲು (ವಂಕಾರಾ. ೧-೭-೧೭). **ಸಲ್ಲಾಮು** : ೧. ಬಲಸಹಿತಾ ಗಂಭೀರದೊರೆಗಳು ತೊಟ್ಟು ಭೂಷಣದೊಳು ನಿಂದು ಸಲ್ಲಾಮ ಕೊಡುವರು (ಸೌಂದಕಾ. ೫-೪೮); ತೆಕ್ಕೊ ಸಲ್ಲಾಮು ಬಿರ್ರನೆ ಕುರುರಾಯಭೂಪಾ ತೆಕ್ಕೊ ಸಲ್ಲಾಮು ಭಿರ್ರನೆ (ಕರ್ಣಾಕಾ. ೧೭).

ಸಲಾಮಿ ಕೊಡು, ಸಲಾಮು ಕೊಡು = ನಮಸ್ಕಾರಮಾಡು; ವಂದಿಸು: ದಾದಾ . . . ಕುಸ್ತಿಯ ಸಂಪ್ರದಾಯದಂತೆ, ಲಾಮಾನ ಕೈ ಜಗ್ಗಿ, ಜೋಲಿ ಹೊಡೆದು ಸಲಾಮಿ ಕೊಟ್ಟನು (ಗ್ರಾಮಾಯ. ೫೨); 'ಸಲಾಮು ಕೊಡು' ಎಂದು ಕೋತಿಯಾಡಿಸುವವನು ಕೋತಿಗೆ ಹೇಳುತ್ತಿದ್ದನು (ರೂಢಿ). ಸಲಾಮುಹಾಕು = ಸಲಾಮಿಕೊಡು: ನ್ಯಾಯಾಧೀಶನಿಗೆ ಸಲಾಮು ಹಾಕಿ . . . ಎಂದನು (ಕಮಕ. ೧೭೦). ಸಲಾಮುಹೊಡೆ = ೧. ಸಲಾಮಿಕೊಡು : ನನ್ನನ್ನು ಯಾರೂ ಗುರುತು ಹಿಡಿಯಬಾರದು, ನನಗೆ ಸಲಾಮು ಹೊಡೆಯಬಾರದು (ನಾಪೋಲೀ. ೧೬೩). ೨. (ಆಲಂ) ಬಗ್ಗಿ ನಡೆ; ಅನುಸರಿಸು: ಇಂಥದನ್ನು ಕಲಿತು ಕನ್ನಡದ ವಿದ್ಯಾರ್ಥಿಗಳು ಅಧಿಕಾರಿಗಳಿಗೆ ಸಲಾಮುಹೊಡೆಯುವುದಕ್ಕೆ ಸಿದ್ಧರಾಗುತ್ತಿದ್ದರು (ಸುವರ್ಣ. ೩೦೧). [← ಅರ. ಹಿಂ. ಮರಾ. ಸಲಾಮ್, ಸಲಾಮಿ]

ಸಲಾಮುಫಿರಂಗಿ (ನಾ). (ಅಧಿಕಾರಿ ಅಥವಾ ಗೌರವಾನ್ವಿತವ್ಯಕ್ತಿಯ ಸಲುವಾಗಿ) ತೋಪು ಹಾರಿಸುವುದರ ಮೂಲಕ ತೋರಿಸುವ ಗೌರವ; ಫಿರಂಗಿಮರ್ಯಾದೆ : ಈ ಸರದಾರರನ್ನು ಮಹಾಉತ್ಸಾಹದಿಂದ ಇದುರುಗೊಂಡು . . . ಸಲಾಮುಫಿರಂಗಿಗಳ ಹಾರಿಸಿ (ರಾಜೇಂದ್ರ. ೧೦೯). [ಸಲಾಮು + ಫಿರಂಗಿ]

ಸಲಾಯಿಸು 'ಸಲಿಸು' ನೋ.

ಸಲಾಹ 'ಸಲಹೆ' ನೋ.

ಸಲಿಂಗ (ಗು). ೧. ಒಂದೇ ಬಗೆಯ ಚಿಹ್ನೆ ಅಥವಾ ಲಿಂಗದಿಂದ ಕೂಡಿದ. (ನಾ). ೨. [ದ್ವೈತ] "ಸಲಿಂಗರೆಂದರೆ ಲಿಂಗದೇಹದಿಂದ ಸಹಿತರಾಗಿ ಇರುವರು" (ಹಸಾರ. ೧೪-೨೩ ತಾತ್ಪರ್ಯ): ಎರಡುವಿಧದಲಿ ಲೋಕದೊಳು ಜೀವರುಗಳಿಪ್ಪರು ಸಂತತ ಕ್ಷರಾಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯಭೇದದಲಿ (ಹಸಾರ. ೧೪-೨೩). [ಸಂ.]

ಸಲಿಂಗರತಿ (ನಾ). ಸಮಾನಲಿಂಗದವರೊಂದಿಗೆ ನಡೆಸುವ ರತಿಕೇಳಿ : ಈಚಿನ ದಿನಗಳಲ್ಲಿ ಸಲಿಂಗರತಿಯಲ್ಲಿ ಆಸಕ್ತರಾದವರು ಅನೇಕರಿದ್ದಾರೆ (ರೂಢಿ). [ಸಂ.]

ಸಲಿಕೆ$_1$, ಸಲ್ಲಿಕೆ (ನಾ). ೧. (ಹಣ ಮುಂತಾದುವನ್ನು) ಸಲ್ಲಿಸುವಿಕೆ ; ಸಂದಾಯ; ಪಾವತಿ: ಕೊಟದು ವರದಪಯನ XX ಅಯಿಗುಳಿ ದೇವನಾಯ್ಕರ ಸಲಿಕೆ ಮಾಡಿ ಕೊಳಗಗದೆ ಗುಡಿ ಸೇನಬೋವ ತಿಂಮರಸಗೆ ಧಾರೆನೆಱದು (ಎಕ. X (S), ಮಾಲೂರು. ೨೧೯-೬; 1530). ೨. ಹಣ, ವಸ್ತು ಮುಂತಾದುವುಗಳನ್ನು ಸಲ್ಲಿಸಿದಾಗ ಅವುಗಳನ್ನು ಪಡೆದವರು ಕೊಡುವ ಪತ್ರ; ಪಾವತಿಪತ್ರ; ರಶೀತಿ: ವಿನಿಮಯ ಪತ್ರಗಳು, ಚೆಕ್ಕುಗಳು . . . ಸಲಿಕೆಗಳು – ಇವುಗಳ ವಿಷಯದಲ್ಲಿ ಮುದ್ರಾಂಕಶುಲ್ಕದ ದರಗಳು (ಭಾಧಾನ. ೨೮೬). ೩. ಸಮರ್ಪಿಸುವುದು; ಅರ್ಪಣೆ: ಪಟ್ಟಾವಳಿಗಳೆಮ್ಮ ಬಸವಿದೇವನ ಮುಂದೆ ಪಟ್ಟಣಂಗಳ ಸಲಿಕೆ ಬಸವಿದೇವನ ಮುಂದೆ (ಬಸರ. ೫-೧೨೨). ೪. ಕೊಡುಗೆ; ದತ್ತಿ: ಬನ್ದುದತ್ತನು ಸೆಟ್ಟಿತ್ತಿದೆವಿಯಬ್ಬೆಯು ನಿಱಿಸಿ XXX ಕಾಲುರ ಭತ್ತ ಸಲಿಕೆ ಪತ್ತು ಗದ್ಯಾಣ (ಎಕ. VI, ಮೂಡಿಗೆ. ೧೯-೧೧; ಸು. 1025?); ಸುಪಾರ್ಶ್ವದೇವರ ಬಸದಿಗೆ ಆ ಗಳೆಯೊಳ್ ಮತ್ತರ ಸಲಿಕೆ ಆರುವಣದ ಲೆಕ್ಕದ ಬಿಟ್ಟ ನೆಲಂ ಮತ್ತ[ರ್] ೩೫೫ (ಇಆ. XIX, ೨೭೩-೪೨; 1054). ೫. ಈಡೇರಿಕೆ; ನೆರವೇರಿಕೆ: ಗಿರಿಯ ಗಿರಿಯ ದರಿಯ ದರಿಯ ಹಗುರಡಿಯೊಳು ಹಾರುತ ದಣಿವ ಗಣಿಸದೆನ್ನಾಸೆಯ ಸಲಿಕೆಯನ್ನೇ ಕೋರುತ (ಹಂಸದ. ೭೭). ೬. ಚಲಾವಣೆ; ಬಳಕೆ: ಕಳ್ಳನಾಣ್ಯ ಸಲಿಕೆ [ಪಾಠಾಂ. ಸಲುಗೆ]ಗೆ ಸಲ್ಲದು ಕಳ್ಳನಾಣ್ಯವ ಸಲ್ಲಲೀಯರಯ್ಯಾ(ಬಸವ. ೧೯೮). ಸಲ್ಲಿಕೆ : ೧. ಸಲ್ಲದ ನಾಣ್ಯ ಸಲ್ಲಿಕೆ ಮಾಡಿದರೆ ಅಲ್ಲಿಗೇ ಹೋಯಿತು (ಗಾದೆ). ೨. ಅವರ ಕಚೇರಿಗೆ ಈ ಪತ್ರವನ್ನು ತಲುಪಿಸಿ ಸಲ್ಲಿಕೆಯನ್ನು ತೆಗೆದುಕೊಂಡು ಬಾ (ರೂಢಿ). [ಸಲ್ + -ಇಕೆ]

ಸಲಿಕೆ$_2$, ಸನಿಕೆ (ನಾ). ಅಗಲವಾದ ಹಲ್ಲೆಯುಳ್ಳ ಒಂದು ಬಗೆಯ ಗುದ್ದಲಿ; ಎಲೆಗುದ್ದಲಿ: ಹಾರೆ ಗುದ್ದಲಿ ಸಲಿಕೆಯ ಸಂತಸದಿ ಕೊಟ್ಟು (ಸಿದ್ಧಕಾ. ೧೪-೬); ಮಣ್ಣನ್ನು . . . ಸಲಿಕೆಯಿಂದ ಪುಟ್ಟಿಯಲ್ಲಿ ತುಂಬಿ ತಲೆಯ ಮೇಲೆ ಹೊತ್ತುಹಾಕಬೇಕು (ಕೃಷಿಪ್ರ. ೩೩); ವಿಮಲೆಯ ತಂದೆ ಮಡಿಗಳಿಗೆ ಸಲಿಕೆಯಿಂದ ನೀರು ಹಾಯಿಸುತ್ತಿದ್ದನು (ಕಪಪು. ೩-೧೫). ಸನಿಕೆ : ಬಟ್ಟೆಬರೆಗಳನ್ನೂ ಸನಿಕೆಗಳನ್ನೂ ತೋಟಗಾರರಿಗೆ ವಿನಿಮಯಮಾಡಿದ ಸಂಗತಿ ಶಾಸನೋಕ್ತವಾಗಿದೆ (ಶಾಸಗಿ. ೩೬). [ದೇ. ॥ ತೆಲು. ಸಲಗ]

ಸಲಿಕೆವಲ್ (ನಾ). (ಆಲಂ) ಅಗಲವಾಗಿರುವ ಹಲ್ಲು : ಕೆರಸೆವಾಯಿಂ ನೇಲ್ವ ದೊಂಡೆಗರುಳುಗಳ ನೆತ್ತರ ಜೋರ್ಗಳಿಂ ನಾಂದದ ಮೈ ಸಲಿಕೆವಲ್ಲ ಗುದ್ದಲಿವಲ್ಲ ಭೂತ ನಮಿಸಿದವಕ್ಕಗೆ (ಮದೇಪು. ೩೩-೧೧). [ಸಲಿಕೆ$_2$ + ಪಲ್]

ಸಲಿಗೆ$_1$ 'ಸಲ್ಗೆ' ನೋ.

ಸಲಿಗೆ$_2$ 'ಸೊಲ್ಲಗೆ$_1$' ನೋ.

ಸಲಿಗೆ$_3$ 'ಸಲಗೆ$_2$' ನೋ.

ಸಲಿಗೆಯೊಪ್ಪಿಸು (ಕ್ರಿ). ಸಂದಾಯಮಾಡಬೇಕಾದುದನ್ನು ಕೊಡು , – ಸಲ್ಲಿಸು: ಶ್ರೀನಂಜುಂಡೇಶ್ವರಸ್ವಾಮಿಯವರ ಮಹಾಸನ್ನಿಧಾನಕ್ಕೆ . . . ವರ್ಷವರ್ಷವೂ ಸಲಿಗೆಯೊಪ್ಪಿಸುವ ದೇವದಾಯದ ಕಾಣ್ಕೆ (ಬಿರುಗಂ. ೨೭-೯).

[ಸಲಿಗೆ$_1$ (< ಸಲ್ಗೆ) + ಒಪ್ಪಿಸು]

ಸಲಿಗೆವಂತ 'ಸಲ್ಗೆವಂತ' ನೋ.

ಸಲಿಗೆವಾಳ 'ಸಲುಗೆವಾಳ' ನೋ.

ಸಲಿಗೆವಾಳತ್ವ (ನಾ). ಸಲುಗೆ; ಸದರ: ಸಲಿಗೆವಾಳತ್ವದಿಂ ನಸುನಗುತಲಿಂತೆಂದು (ನವಮೋ. ೨೭-೩೧). [ಸಲಿಗೆವಾಳ (< ಸಲುಗೆವಾಳ) + -ತ್ವ]

ಸಲಿಪು (ಕ್ರಿ). ಸಲ್ಲುವಂತೆ ಮಾಡು; ತೊಡಗಿಸು; ವಿನಿಯೋಗಿಸು: ಪಶುಗಳನೋವಿಯೊಲ್ಲು ಕೃಷಿಯೊಳ್ ವ್ಯವಹಾರಮನೊಲ್ಲು ಮಾಡಿಯಾರ್ಜಿಸುವುದು ವಿತ್ತಮಂ ಪಡೆದು ಸದ್ವ್ಯಯದೊಳ್ ಸಲಿಪಿಟ್ಟು ಕೂರ್ತು ಸಾಧಿಸುವುದು ಧರ್ಮಮಂ (ದಶಕು. ೮-೪೯); ಮಲಮೂತ್ರವಿಲ್ಲದ ಮೈಗೆ ಕಮಂಡಲಜಲವೇಕೆ ಜೀವರಕ್ಷಾರ್ಥ ಸಲಿಪಿ ಪೇಲಿಯನಾತ್ಮಸಾರಪುಸ್ತಕವ ಸಂಗಲಿಸಿದರರುಹನಾಜ್ಞೆಯೊಳು (ಭರಚ. ೫೯-೪೭).

[< ಸಲಿಸು]

ಸಲಿಲ, ಸಳಿಳ (ನಾ). ೧. ನೀರು; ಉದಕ; ಜಲ: ಸೊಕ್ಕಿದಾನೆಗಳ ಸಿಂದುರಂಬೊರೆದ ಸಲಿಲಂಗಳೊಳಮಿಂಚರದಂಚೆವಿಂಡುಗಳಿಂ ಸೊಗಯಿಸುವಿರ್ತಡಿ ಗಳೊಳಮೊಪ್ಪಂಬೆತ್ತ ವೇತ್ರವತಿ (ಕಾದಂಪೂ. ೧೬); ಎನಗುತ್ತರವ ರಚಿಸಿ ಬಳಿಕ ಸಲಿಲವನೀಂಟು (ಕುವ್ಯಾಅ. ೨೩-೧೮); ತರಣಿ ಕಿರಣದ ನಂಟು ಗಗನ ಸಲಿಲದ ನಂಟು (ಮಂಕುಕ. ೭೧). ೨. [ಛಂದ] ಎಂಟು ಬಗೆಯ ಗಣಗಳಲ್ಲಿ ಒಂದು ; ಯಗಣ (U - -) : ತ್ರಿದಶಮರುದಿಂದ್ರಪುರ ಚಂದ್ರ ಸಲಿಲಂಗಳ್ ತುದಿಯೊಳಿರೆ ತಳ್ತು ಹರರಲ್ಲಿ ಯತಿ ನಿಲ್ಕುಂ (ಛಂದೋಂಬು. ೨-೧೫೮). ಸಳಿಳ : ೧. ಸಳಿಳದೊಳೆ ನಾಂದ ವಲ್ಕಂದಳೆದು (ಶಾಕುಂತ. ೧೭-೩೨). [ಸಂ.]

ಸಲಿಲಕ್ರೀಡೆ (ನಾ). ನೀರಿನಲ್ಲಿ ಕ್ರೀಡಿಸುವುದು ; ನೀರಾಟ ; ಜಲಕೇಳಿ : ಸಲಿಲ ಕ್ರೀಡಾಭವೋದ್ಯಜ್ಜಲಕಣನಿಕರಾಕಾರಮತ್ತದ್ವಿಪೇಂದ್ರಾವಲಿತಹಸ್ತಾಗ್ರೋಚ್ಚಲಚ್ಛೀಕರ ಸಮುದಯಂ (ಆದಿಪು. ೧೩-೮); ವಿನೋದಕೆ ಬಂದಿರೈ ನಾರಾಚ ಸಲಿಲಕ್ರೀಡೆಯಿದೆಯೆನುತ ಮುಱಿಯೆಸುತ ಗಂಧರ್ವಬಲ ಮುಕ್ಕುಱಿಕಿ ಕೌರವಬಲವ ತತ್ತಱಿದಱಿದು ತರಹರವಿಲ್ಲೆನಿಸಿ ಹೊಗಿಸಿದರು ಪಾಳಯವ (ಕುವ್ಯಾಅ. ೧೮-೩೪); ಸಲಿಲಕ್ರೀಡೆಯೊಳೆಯ್ದೆ ನಾಂದು ದುಗುಲಂ ನೈತಂಬಮಂ ಪತ್ತೆ (ತ್ರಿಪುವಿ. ೨೪-೯೯). [ಸಂ. ಸಲಿಲಕ್ರೀಡಾ]

ಸಲಿಲಖಾತಿ (ನಾ). ನೀರಿನಿಂದ ತುಂಬಿರುವ ತೋಡು , – ಅಗಳು , – ಕಂದಕ: ನಗರವನು ಸುತ್ತಾಗಿ ಶೋಭಿಪ ಸಲಿಲಖಾತಿಯು ಮುಟ್ಟುತಿಹುದಡಿಯಾ (ಬಿಜ್ಜಪು. ೨-೧೯). [< ಸಂ. ಸಲಿಲಖಾತ]

ಸಲಿಲಜ (ನಾ). ೧. ನೀರಿನಲ್ಲಿ ಹುಟ್ಟಿದುದು; ತಾವರೆ; ಕಮಲ: 'ಸಲಿಲಜಸಖ' ಪರಾ. ೨. ನೀರಿನಲ್ಲಿ ಹುಟ್ಟಿದುದು ; ಜಲಚರಪ್ರಾಣಿ.

[ಸಂ.]

ಸಲಿಲಜಸಖ (ನಾ). ಕಮಲದ ಸ್ನೇಹಿತ; ಸೂರ್ಯ: ವಿಲಸಿತಪದಾಂಬುವಂ ಪಡೆದು ಕುಷ್ಠಂ ನೀಗಿ ನಲಿದು ಮುನ್ನಿನ ತೇಜದಿಂ ವಿರಾಜಿಸುತಿರ್ದ ಸಲಿಲಜಸಖಂ ನೋಡಿಮೆಂದು ತತ್ಪಂಡಿತೇಂದ್ರಂ ಮತ್ತಮಿಂತೆಂದನು (ಆರಾಚ. ೧-೬-೮). [ಸಂ.]

ಸಲಿಲಪೂರ (ನಾ). ನೀರಿನ ಪ್ರವಾಹ; ಜಲಪ್ರವಾಹ : ಏಂ ಕಱೆದುದೊ ಪೆರ್ಮಱೆ ಜಗಮೆಲ್ಲಂ ಸಲಿಲಪೂರದಿಂ ತೇಂಕುವಿನಂ (ಜಗವಿ. ೩-೮). [ಸಂ.]

ಸಲಿಲಪ್ರವೇಶ (ನಾ). ನೀರನ್ನು ಹೊಗುವುದು; ಜಲಪ್ರವೇಶ: ಸಲಿಲ

ಪ್ರವೇಶಮಂ ಪತ್ರಲೇಖೆಯುಂ ನೀವುಮಲ್ತೆ ಮಾಡಿದಿರಂತಾ ಲಲನೆಯದೇನಾದಳ್ (ಕಾದಂಉ. ೬೨೬); ಧೃಷ್ಟದ್ಯುಮ್ನ ಸೃಂಜಯ ಸೋಮಕಾದಿಗಳು ಅನುಚಿತವು ಸಲಿಲಪ್ರವೇಶವು . . . ಎಂದುಲಿದುದು (ಕುವ್ಯಾಗ. ೫-೩೧). [ಸಂ.]

ಸಲಿಲಬಾಣ (ನಾ). ನೀರನ್ನು ಸುರಿಸುವ ಬಾಣ; ವರುಣಾಸ್ತ್ರ: ಸಲಿಲವ ಬೀಱು ಬೇಗದಿನೆನಲು ಬಿಲುಗೊಂಡೆದ್ದನಾ ಪಾರ್ಥ ಸಲಿಲಬಾಣದಲಮಲಗಂಗಾಜಲವ ತೆಗೆದನು (ಕುವ್ಯಾಭೀ. ೧೦-೨೭). [ಸಂ.]

ಸಲಿಲವಾಸ (ನಾ). ನೀರಿನಲ್ಲಿರುವುದು; ಜಲವಾಸ: ತಪ್ಪಿದುದನೀ ಸಲಿಲ ವಾಸದೊಳೊಪ್ಪವಿಡುವೆನು (ಕುವ್ಯಾಗ. ೪-೩೫). [ಸಂ.]

ಸಲಿಲವಿನೋದ (ನಾ). = ಸಲಿಲಕ್ರೀಡೆ : ಸಲಿಲವಿನೋದದೊಳ್ ಹರಿ ತುಳುಂಕಿದ ಕುಂಕುಮವಾಃಕಣೋತ್ಕರಂ . . . ಪೋಗದೆ ನಿಂದುವೆನಲ್ ವರಾಂಗನಾವಲಿಗೆಸೆದತ್ತು ಮಾಣಿಕದ ಮುತ್ತಿನ ನೀಲದನರ್ಘ್ಯಮಂಡನಂ (ಜಗವಿ. ೧೪-೧೧೪). [ಸಂ.]

ಸಲಿಲವ್ಯಾಳ (ನಾ). ನೀರುಹಾವು; ಒಳ್ಳೆ: ಏಳು ಕೌರವರಾಯ ಸಲಿಲವ್ಯಾಳನೇ ನೀನಕಟ ಜಲದೊಳಗಾಳುವರೆ (ಕುವ್ಯಾಗ. ೫-೧೪). [ಸಂ. ಸಲಿಲವ್ಯಾಲ]

ಸಲಿಲಸ್ತಂಭ (ನಾ). ೧. ನೀರನ್ನು ತಡೆಯುವುದು. ೨. ನೀರಿನಲ್ಲಿದ್ದೂ ನೀರಿನ ಬಾಧೆ ತಟ್ಟದಂತೆ ತಡೆಯುವ ಮಂತ್ರವಿದ್ಯೆ; ಜಲಸ್ತಂಭ: ವಿನುತ ಸಲಿಲಸ್ತಂಭವಿದ್ಯೆಯೊಳೆನಗಿರವು ಪಾತಾಳದಲಿ (ಕುವ್ಯಾಗ. ೪-೫೮). [ಸಂ.]

ಸಲಿಲಸ್ತಂಭನ (ನಾ). ೧. = ಸಲಿಲಸ್ತಂಭ ೧. ೨. = ಸಲಿಲಸ್ತಂಭ ೨ : ಸಲಿಲಸ್ತಂಭನವಿದ್ಯಾಬಲಮನಪೇಕ್ಷಿಸಿದನೆನ್ನದುರಗಪತಾಕಂ ಬಲಹಾನಿಯಾಗೆ ಕೊಳದೊಳ್ ಮುಳುಗಿರ್ದವನೆಂದು ನಗರೆ ಕೂರದರೆನ್ನಂ (ಗದಾಯು. ೭-೨೩); ವರುಣಮಂತ್ರಾಕ್ಷರದ ಜಪಪರಿಕರಣದಲಿ ನಿರ್ಣಿಕ್ತಚೇತಃಸ್ಫುರಣ ಸಲಿಲಸ್ತಂಭನ ವನವನೀಶ ಮಂತ್ರಿಸಿದ (ಕುವ್ಯಾಗ. ೩-೪೨). [ಸಂ.]

ಸಲಿಲಾಂಜಲಿ (ನಾ). ೧. ಬೊಗಸೆಯಲ್ಲಿ ತುಂಬಿದ ನೀರು. ೨. ಸತ್ತವರ ಸದ್ಗತಿಗಾಗಿ ಅವರ ಹೆಸರಿನಲ್ಲಿ ಮಂತ್ರಪೂರ್ವಕವಾಗಿ ಬೊಗಸೆಯಲ್ಲಿ ನೀರು ಬಿಡುವುದು ; ಜಲತರ್ಪಣ : ಆತ್ಮಜರನಿಲ್ಲಿಂ ಮೇಲೆ ಸಲಿಲಾಂಜಲಿಗಳನು ವೈದಿಕವಿಧಾನದಲಿ ಪಾಲಿಸುವುದು (ಕುವ್ಯಾಗ. ೧೧-೧೩). [ಸಂ.]

ಸಲಿಲಾಂಜುಳಿ (ನಾ). = ಸಲಿಲಾಂಜಲಿ ೧ : ಮೃಡನ ಚರಣಕ್ಕೆ ಸಲಿಲಾಂಜುಳಿಯ ನಿಡುವಂತೆ . . . ಜಲವನಭಿಮಂತ್ರಿಸುತ್ತಿಟ್ಟನಾತನ ಮೇಲೆ (ರುದ್ರರ. ದೇ. ೨೧೧-೧೬).

[ಸಲಿಲ + ಅಂಜುಳಿ (< ಅಂಜುಲಿ)]

ಸಲಿಲಾಶಯ (ನಾ). ನೀರು ಶೇಖರವಾಗುವ ಕೊಳ, ಕೆರೆ, ಕಟ್ಟೆ ಮುಂತಾದುವು : ಸಲಿಲಾಶಯಂ ಪಯಃಪೂರಮನಾಂತುದೋ ದಿಟಕೆ ತಾನೆನಿಸಿ ತ್ತಮೃತಾಂಶುರಶ್ಮಿಯಿಂ (ಚಂದ್ರಪು. ೮-೩೯). [ಸಂ.]

ಸಲಿಲಾಶ್ರಯ (ನಾ). ನೀರಿನ ಆಶ್ರಯ, — ಆಸರೆ : ಸುಹವಿಷ್ಯದಿಂ ಸೇವ್ಯನಾಗದ ವಹ್ನಿಯಂತೆ ಸಲಿಲಾಶ್ರಯವನಾಶ್ರಯಿಸದ ಕೃಷ್ಯದಂತಖಿಳಬಾಂಧವರೊಡನೆ ಬದುಕದ ಮನುಷ್ಯಸಂಸಾರದಿಂದೇನು (ಜೈಮಿಧಾ. ೨-೧೮). [ಸಂ.]

ಸಲಿಲಾಸ್ತ್ರ (ನಾ). ನೀರನ್ನು ಸುರಿಸುವ ಅಸ್ತ್ರ; ಜಲಾಸ್ತ್ರ: ಸಲಿಲಾಸ್ತ್ರಂ ಜ್ವಲನಾಸ್ತ್ರಮಂ ಗೆಲೆ . . . ಗೆಲ್ವಾಸೆಯಿನಂದು ಕೇಶವ ನಿಕುಂಭರ್ ತಮ್ಮೊಳೆಚ್ಚಾಡಿದರ್ (ಜಗವಿ. ೧೫-೩೦). [ಸಂ.]

ಸಲಿಸು , ಸಲಾಯಿಸು , ಸಲ್ಲಿಸು , ಸಲ್ಸು (ಕ್ರಿ). ೧. ಹೊಗಿಸು ; ಪ್ರವೇಶಿಸುವಂತೆ ಮಾಡು: ಅತಿನಿಶಿತದರ್ಭಸೂಚೀಹತಿಗಳ್ಕಿದ ತೆಱದಿನುಗ್ರಕರನತುಳವನಸ್ಪತಿ ಸಂಕೀರ್ಣವೆನಿಪ್ಪೀ ವಿತತಾಟವಿಯಲ್ಲಿ ಸಲಿಸನೆಂದುಂ ಕರಮಂ (ಚಂದ್ರಪು. ೫-೫೧). ೨. ಸೇರುವಂತೆ ಮಾಡು; ಕೂಡುವಂತೆ ಮಾಡು: ಬಸವಾದ್ಯಸಂಖ್ಯಾತರಂ ವಿನುತಮುಕ್ತಿಗೆ ಸಲಿಸಿ (ಪದ್ಮರಾ. ೨-೨೬). ೩. ಕೊಡು; ನೀಡು: ಗಙ್ಗರ ನೊಟಮ್ಬಾರಾ ಒಕ್ಕಲಾಚನ್ದ್ರತಾರಕಮರ್ಸುಗೆಯ್ವನ್ನೆಗಮಿಾ ದತ್ತಿಯಮ್ಪೊಮ್ಪಲ್ಲ ವೆಙ್ಗದರ ಒಕ್ಕಲ್ಗೆ ಸಲಿಪೋ ಸತ್ಯಮನ್ತ ಇದನಟಿಪೋ ಬಾರಣಾಸಿ ಅಳಿದ ಪಞ್ಚಮಹಾಪಾತಕನಕ್ಕುಂ (ಎಕ. X, ಕೋಲಾರ. ೭೯-೧೬; ಸು. 880). ೪. ಸಂದಾಯ ಮಾಡು; ಪಾವತಿಮಾಡು: ಇಂದು ನಾಳೆನ್ನದೆ ದಿನಂಪ್ರತಿಯಿಂದೆ ಧನವಂ ಸಲಿಸಲು (ಬಸಪು. ೨೭-೧೦). ೫. ಅರ್ಪಿಸು ; ಒಪ್ಪಿಸು : ಅಱಿದು ಸಲಿಸುವೊಡಿದನು ತನ್ನಯ ವರಕುಮಾರಿಗೆ ರಾಜ್ಯವಿತ್ತಿದ ನಿರುತ ಮಾಡುವುದಾದರಾಕೆಯು ನಿನಗೆ ತಾಯಹಳು (ಸಂಭವ. ೧೩-೨೫); ಮಲೆಯ ಕಡವಳ ಬಂದು ಹುಲಿಯಾಗಿ ಕಾಡುವಂ ಸಲಿಸದಿರೆ ಕೋಲವಂ (ಕಾಲೂರ. ೭೯-೧೪೮). ೬. ಉಂಟುಮಾಡು; ಒದಗಿಸು : ಪಣ್ ಫಲಾದಿಗಳನಿತ್ತು ಬಳಸಿದ ಬಳಲ್ಕೆಯಂ ತೆವಱಿ ಪರಿಣಾಮಮಂ ಸಲಿಸಿ [ಪಾಠಾಂ. ಬೆಳೆಸಿ] ಸುಖವಿರಿಸಿ (ಸೋಮಚ. ೨-೮೭). ೭. ಮಾಡು; ನಡೆಸು: ತಾಂ ಚೆಲ್ವಿಂ ಜಲಕೇಳಿಯಂ ಸಲಿಪ ಕಾಂತಾಕೇಶಮಂ ಮೇಘಮೆಂದು . . . ನೋಡಿ ಶಿಖಿಗಳ್ ನರ್ತಿಪ್ಪುವು (ಉದ್ಭಟ. ೯-೧೨೩); ಲಲನೆಯಿಾಪರಿಯಿಂದ ನೃತ್ಯವ ಸಲಿಸೆ ಶಿವಲಿಂಗಾರ್ಚನೆಯನೊಲವುಣ್ಮೆ ಮಾಡುತಿರೆ (ಬಸಪು. ೧೨-೪೫). ೮. ಪಾಲಿಸು; ಆಚರಿಸು : ಪಲಕಾಲಂ ಸಂಯಮಮೆಂಬ ಬ್ರತಮಂ ಸಲಿ[ಪಾಠಾಂ. ಸಾದಿ]ಸುತ್ತ ಮಿರ್ಪನ್ನೆಗಂ (ವಡ್ಡಾರಾ. ೧೫೬-೨೫); ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರಂತು ನೋನದೆ ಗುಣಾರ್ಣವನಂ ಪಡೆಯಲ್ಕೆ ತೀರ್ಗುಮೇ (ಪಂಪಭಾ. ೧-೧೩೬); ಆಳವಱಿಯದೆ ನುಡಿದೆನು ಕಡೆಮುಟ್ಟ ಸಲಿಸದಿದ್ದರೆ ತಲೆದಂಡ (ಬಸವ. ೭೮೫). ೯. ಜಾರಿಗೆ ತರು; ಅನುಸರಿಸು: ಒಡೆಯನಾಜ್ಞೆಯ ಸಲಿಸಿ ಪೊಡವಿಪಂ ನಡೆಯುತ್ತ . . . ದಿನವ ಕಳಿಯುತ್ತಿರ್ದನು (ಹಚಕಾ. ೧೨-೧). ೧೦. ಈಡೇರಿಸು; ಆಗುಮಾಡು; ಪೂರ್ತಿಗೊಳಿಸು : ಬಗೆದಾಗಳೆ ವಾಹನ ದೇವರುಯ್ವರಚ್ಚರಸಿಯರಿಚ್ಚೆಯಂ ಸಲಿಪರೊಲ್ದು (ಆದಿಪು. ೩-೨); ಒಲುಮೆ ಯೊಡಹುಟ್ಟಿದರ ಬಯಕೆಯ ಸಲಿಸುವರೆ ಸಾವಲ್ಲವೇ (ಕುವ್ಯಾದ್ರೋ. ೧೩-೩೯); ಇನಿತೊಂದೆನ್ನೀ ಕಡೆಗಾಲದೆ ಪುಟ್ಟಿದ ಬಯಕೆಯಂ ಸಲಿಸ (ರಾಮಾತ್ವ. ೩೮-೨೭). ೧೧. ನಡೆಸು; ಸಾಗಿಸಿಕೊಂಡು ಹೋಗು; ಮುಂದುವರಿಸು : ಇದಾನಾರಾರ್ ಸಲಿಪ್ಪೋರ[ವ]ರ್ತ್ತೇ ಧರ್ಮ್ಮಂ (ಇಆ. XI, ೭೦-೧೯; 567); ಕ್ಷತ್ರಿಯರ್ಗೆ ಪೂರ್ವ ಕ್ರಮಾಗತಂ ಕಿಡಿಸದೆ ಸಲಿಪುದೆ ಧರ್ಮಂ (ವಡ್ಡಾರಾ. ೧೮೫-೨೩); ಯಿಾ ಧರ್ಮ್ಮವನಿವರ ಮಕ್ಕಳ ಮ(ಂ)ಮ್ಮಕ್ಕಳುಥನಕವಾಚಂದ್ರಾರ್ಕ್ಕತಾರಂಬರಂ ಸಲಿಸುವರು (ಸೌಇಇ. IX-i, ೨೭೬-೫೨; 1183). ೧೨. ಅನುಗ್ರಹಿಸು; ದಯಪಾಲಿಸು : ಸತ್ಯದಿಂದ ನಡೆವಂಗೆ ನಿತ್ಯನೇಮವಾಗಿ ಸಲಿಸುವನಲ್ಲದೆ ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ (ಬಸವ. ೬೪೯); ಅಗ್ಗಳೆಯ ಮುನಿಪತಿ ದಿವ್ಯದೃಷ್ಟಿಯ ಸಲಿಸದಡೆ ನೋಡಿದನು ದ್ರುಪದನು ಪಾಂಡು ನಂದನರ (ಕುವ್ಯಾಆ. ೧೬-೬೦); ಪರಮಗೌತಮನ ಸ್ಥಿತಿಗೆ ಮೆಚ್ಚಿ ಮುನ್ನಿತ್ತ ವರವ ಸಲಿಪೆನು (ಕಂನವಿ. ೫-೩೦). ೧೩. ಅರ್ಹವಾಗಿಸು; ಯೋಗ್ಯವಾಗುವಂತೆ ಮಾಡು: ಶಿವತತ್ತ್ವಷಟ್ಸ್ಥಲವನು ಅಳ್ಕಱಿಂದುಪದೇಶವಿತ್ತು ಮುಕ್ತಿಗೆ ಸಲಿಸ ವೇಳ್ಕುಮೆನಲು (ಚಿಬಪು. ೩-೪). ೧೪. ಅರ್ಹತೆಯನ್ನು ಹೊಂದು; ಯೋಗ್ಯ ವಾಗಿರು: ಒಲಿಸಿವೊಲ್ಲದಿರ್ಪರುಂಟೆ ಸಲಿಸಿ ಸಲ್ಲದಿರ್ಪರುಂಟೆ (ಹಂಪರ. ೮-೬). ೧೫. ಎಡೆಮಾಡು; ಬಡಿಸು: ತೆಱನಱಿದಱಿವೆಂಬ ದಿವ್ಯಭಾಜನದಲ್ಲಿ ಪರಮಾನಂದಪದಾರ್ಥವನು ಸಲಿಸಿ (ಶಿವಗೀ. ೬೧-೨೯೧); ಕಾಮಾಕ್ಷಿ ಚಾಮುಂಡಿ ಗಳಿಗೆಱಗಿ ಮಿಾಸಲಂ ಸಲಿಸಿ ಚೌಕದ ಭೂತವೇತಾಳರುಂಡರೇವಣ್ಣಿಸುವೆನು (ಸೋಮಚ. ೫-೫೫). ೧೬. ತಿನ್ನು; ಊಟಮಾಡು: ನಾನು ಕರಪಾತ್ರೆಯಲ್ಲಿ ಸಂದೇಹವಿಲ್ಲದೆ ಸಲಿಸುತಿಪ್ಪೆನು ಆ ಸಮಯದಲ್ಲಿ ಕೊಂಡುದೇ ಪ್ರಸಾದ ಒಕ್ಕುದೇ ಪದಾರ್ಥ (ಘನವ. ೧೯-೧೬); ಪರಿಪರಿಯ ಪರಿಕರಂಗಳನಿರದೆ ತರಿಸಿ ಕೂಡೆ ಉಕ್ಕುವತಿ ಹರುಷದಿಂ ನೀಡಿಸುವನನಿತುಮಂ ಮುಕ್ಕಣ್ಣನಪರಾವತಾರನಲ್ಲಮನಾಗ ಲೆಕ್ಕಿಸದೆ ಸಲಿಸುವಂ ಗಗನವೇ ಬಾಯ್ದೆಱೆದೊಲ್ (ಚಿಬಪು. ೬೨-೧೧). ೧೭. ಅನುಭವಿಸು; ಭೋಗಿಸು: ದೊರೆವೆತ್ತನ್ಯೋನ್ಯಸಂಪ್ರೀತಿಯಂ ರತಿಯುಂ ಕಾಮನುಮೆಂಬಿನಂ ಸಲಿಸಿದರ್ ನಾನಾವಿನೋದಂಗಳಂ (ಮಲ್ಲಿಪು. ೩-೮೯); ಇರ್ವರುಂ . . . ಪರದೇಶಂಗಳೊಳ್ ಕಳ್ದು ತಂದು ವಿಷಯಸುಖಂಗಳಂ ಸಲಿಸುತ್ತುಮಿರ್ದು (ಧರ್ಮಾಮೃ. ೨-೧೬೭). ೧೮. ಒಪ್ಪು; ಸಮ್ಮತಿಸು: ನಗಪತಿಯೆಂದುದಂ ಸಲಿಸಿ ನಾರದನಾತನ ಕೂಡೆ ರುದ್ರನಂ ಮೃಗಧರಚೂಡನಂ ಶಿವನನರ್ಚಿಸಿ (ಗಿರಿಕ. ೪-೬೪); ಅಂಜಲಿಸು ನಾ ಸಲಿಸುವೆನು . . . ಎನೆ ಭೀಮ ನಗುತ ಧನಂಜಯನ ಟೆಕ್ಕೆಯಕೆ ಬಿಜಯಂಗೈಯಬೇಕೆಂದ ಐಸೆ ಸಲಿಸಿದೆನೆನುತಲಾ ಕಪಿಯಾ ಸಮಯದಲದೃಶ್ಯವಾಗೆ

(ಕುಮಾಖ. ೧೦-೪೧). ೧೯. ತೋರಿಸು; ಪ್ರಕಟಿಸು . ಸದ್ಗುಣಂಗಳಂ ಸಲಿಸುವುದೀ ಮನುಷ್ಯಭವಮಂ ಪಡೆದುಂ (ಕವಿಚ. I. ೨೪೭). ೨೦. ಪ್ರಸಿದ್ಧವಾಗು; ಹೆಸರುವಾಸಿಯಾಗು: ಪುಲಿಕರನಗರಿ . . . ಸೌರಾಷ್ಟ್ರಪುರದ ಕೂಡೆ ಸರಿದೊರೆ ಶ್ರೀ ವಿರೂಪಾಕ್ಷನೋಪಾದಿಯಾಗಿರೆ ಸಲಿಸಿ ಮೇದಿನಿಯೊಳತುಳಕ್ಕೆಲಾಸವಾಗಿರುತಿಹಂ (ಸೋಮೇಶ. ೧-೪೭). ತಾಳು; ಸೈರಿಸು : ನಿನ್ನಯ ತಾಯ್ . . . ಈ ಕಿಲ್ಬಿಯವನಱಿಯದೆ ಕೆಡೆನುಡಿದನಬ್ಬೊಡಂ ನೂಱುವರಂ ನೆಱೆ ಸಲಿಸುವುದೆಂದುದನಾಂ ಮಱೆವನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ (ತಂಪಭಾ. ೬-೬೧); ವಾಗ್ಬಲದ ಪೊಡಪ್ಪುರ್ವ ವೇಡ ಗಡ ಚಾರ್ವ್ಯಕ ಚಾರ್ವ್ಯಕ ನಿಮ್ಮ ದರ್ಪಮಂ ಸಲಿವನೆ ಗೋಪಣನ್ದಿಮುನಿಪುಂಗವನ್ (ಎಕ. II, ೭೯-೪೦:ಸು. 1100). ೨೨. (ಆಸರೆಯನ್ನಾಗಿ) ಇಡು; ಇರಿಸು: ನೆಲಮೊಲೆಯೆರಡಱ ಸಂದಂ ಸಲೆ ಭೇದಿವೆನೆಂದು ಪುದನನತಿ ಸಾಹಸದಿಂ ಸಲಿಸಿದ ನೀಲದ ಸಲಿಗೆಯ ನಿಲುವಿನಿಪುದು ರೋಮರಾಜಿ ರಾಜಾಂಗನೆಯಾ (ಧರ್ಮನಾ. ೩-೭೦); ಭರದ ಬವರದಲಚ್ಚು ನೆಗ್ಗಲು ಕರವ ಸಲಿಸಿಮೆ ತೇರ ನಡಸಿದಳರಸಿ (ಶಾಂಪು. ೧-೨೬). ೨೩. ಬಳಸು; ಉಪಯೋಗಿಸು: ಪಿರಿಯರ್ ಸಲಿವರ್ ದಡ್ಡಕ್ಕರದ ಱಬಕ್ಕೆ ದೆ ರೇಫೆವೆರಸಿದ ದಡ್ಡಕ್ಕರಮಂ (ಶಪುದ. ೨೪). **ಸಲಾಯಿಸು** : ೪. ಈ ಸಂಸ್ಥಾನದಿಂದ ಆ ಬಾಕಿ ದ್ರವ್ಯವನ್ನು ಸಲಾಯಿಸಿ ಕೊಟ್ಟಲ್ಲಿ (ರಾಚೇಂದ್ರ. ೧೧೭); ಅಸಲಿಗಿಂತಲೂ ಎಷ್ಟೋ ಹೆಚ್ಚು ಬಡ್ಡಿ ಸಂದಾಯವಾಗಿ ಹೋಗಿದ್ದರಿಂದ ಕೇಶವರಾಯರ ಋಣಭಾರ ಚಿಕ್ಕಾಸೂ ಸಲಾಯಿಸದೆ ತೀರಿಹೋಯಿತು (ಕುರುಕಾ. ೧೩೬). **ಸಲ್ಲಿಸು** : ೩. ಎಲ್ಲಿ ನಾಡೀಜಾಲವುಂಟಲ್ಲಲ್ಲಿ ಸಮನಾಗನ್ನರಸವಂ ಸಲ್ಲಿಪುದು ಗುಣವಿದು ಸಮಾನಂಗೆ (ಗಗತಾ. ೯-೭೯). ೫. ದೇಶಪಾಂಡೆ ಕೇಶವರಾಯ ಮೊದಲಾದವರು ಭಟ್ಟರಿಗೆ ಕೊನೆಯ ಪ್ರಣಾಮವನ್ನು ಸಲ್ಲಿಸಿದರು (ಹಬ್ಬಿಬ. ೩). ೭. ಅವರನ್ನೇ ಧನಿಗಳು ಎಂದು ಒಪ್ಪಿ, ಸಲ್ಲಿಸುವ ಸೇವೆ ಸಲ್ಲಿಸಿ . . . ಬದುಕಿ ಬಂದವರು ಅವರು (ಕುಡಿಕೂ. ೧೩೬); ದ್ರಾವಿಡಭಾಷೆಗಳಿಗೆ . . . ವಾಶ್ಚಾತ್ಯ ಪಂಡಿತಪಂಕ್ತಿಯೊಂದು ನಿರ್ವ್ಯಾಜಸೇವೆಯನ್ನು ಸಲ್ಲಿಸಿತು (ದ್ರಾವಿವಿ. ೧೭ ಒನ್ನೆಲೆ). ೧೦. ಕುಱಿಯಲ್ಲನೆ ಕಣ್ಣಂ ಸೋಲವಂ ಸಲ್ಲಿಸುವಂ (ಧರ್ಮಾಮೃ. ೫-೨೨). **ಸಲ್ಲು** : ೩. ನೆಕ್ಕುನ್ನಿನಾಡ ಊರಾಳಿಯ ದೇವಭೋಗ XXX ಎಲ್ಲ ಸಲ್ಲುದು (ಎಕ. IX, ಹೊಸಕೋ. ೩೭-೧೬; ಸು. 950); ಮೂನೂರು ಹೊನ್ನನು ಸಾಕಲ್ಯವಾಗಿ ಸಲ್ಲಿಕೊಂಡು (ಎಕ. VIII, ತೀರ್ಥಹ. ೧೩೪-೮; 1404).

[ಸಲ್ + - ಇಸ್ಯ್‌./ ತುಳು. ಸಲಾಯಿಸು, ಸಲ್ಕಿಸು]

ಸಲೀಲ₁, ಸಳೀಲ (ಗು). ೧. ಸರಸದ; ವಿನೋದದಿಂದ ಕೂಡಿದ. ೨. ಸ್ವೇಚ್ಛೆಯಿಂದ ಕೂಡಿದ; ಸ್ವೈರವೃತ್ತಿಯ. (ನಾ). ೩. ವಿನೋದದಿಂದ ಕೂಡಿದುದು; ಸಲೀಸು; ಲೀಲಾಜಾಲ: ಉಗಿಯಂತ್ರದಂತೆ ಬಟ್ಟೆಯ ಈ ತುದಿಯಿಂದ ಆ ತುದಿಯವರೆಗೆ ಅದು ಸಲೀಲವಾಗಿ ಈಸಾಡೇನು ಎನ್ನುತ್ತಿದ್ದರೆ (ದೇಸ್ಥ. ೩೨). **ಸಳೀಲ** : ೪. ಚೆಲುವಾದ; ಸೊಗಸಾದ: ಸಳೀಲವಿಶದೋದ ಬಿಂದುನವಹಾರಮಂ ತಮ್ಮುರಸ್ಥಳಂಗಳೊಳುದಗ್ರಲೀಲೆ ಪೊಸಮುತ್ತಿನೆಕ್ಕಾವಳೀ ವಿಳಾಸಮಂ . . . ಪೋಲ್ದಿರ್ಪಿನಂ (ಶಾಂತಿವು ೯-೩೨). [ಸಂ.]

ಸಲೀಲ₂ (ಅ). ಲೀಲಾಜಾಲವಾಗಿ; ಸರಾಗವಾಗಿ: ಸುಸಿಲಾಡುವವು ಹೂವು ಹೊಳಿನೀರ ಬಳಿಗೆ : ಪಡಿನೆಳಲನೆದೆಯೊಳಗಿರಿಸಿ ಮಧುರಸಲಿಲ ಸಲೀಲ ನಲಿದಾಡುವದು (ಉಯ್ಯಾಶ. ೯-೩). [ಸಂ. ಸಲೀಲಂ]

ಸಲೀಸು₁ (ಗು). ೧. ಸರಾಗವಾದ; ನೇರವಾದ; ನಿರಾತಂಕವಾದ: ಆಮದು – ರಫ್ತು ವ್ಯಾಪಾರ ಅಡಳಿತಕ್ಕೆ ಸಂಬಂಧಿಸಿದ ಕಾನೂನುಗಳೂ ಅನೇಕವೇಳೆ ಸಲೀಸುವ್ಯಾಪಾರಕ್ಕೆ ಅಡ್ಡಿ ಆತಂಕಗಳನ್ನು ಒಡ್ಡಬಹುದು (ಅಂತಸಂ. ೧೭೭). (ನಾ). ೨. ಸುಲಭ; ಸರಾಗ; ನಿರಾತಂಕ: ಕುದಿದ ತಕ್ಷಣ ಆನಾಮತ್ತು ಮಲಗಿದ ಧ್ಯಾನಯೋಗದಲ್ಲಿ ಈಗ ಎಲ್ಲ ಸಲೀಸು (ಚಂಡಮ. ೩೫-೪). ೩. ಸುಖವಾದುದು; ಸೌಕರ್ಯದಿಂದ ಕೂಡಿದುದು: ಬೆಟ್ಟ ಅಂದರೆ ಅವರಿಗೆ ಊರಿಗಿಂತ ಸಲೀಸು (ಹಂಗೀತ. ೧೯).

ಸಲೀಸಾಗಿ = ಸರಾಗವಾಗಿ; ಸುಲಭವಾಗಿ; ನಿರಾತಂಕವಾಗಿ: ಬಾಡಿಗೆಯ ಹಣಕ್ಕೆ ತಾವು ಜವಾಬ್ದಾರರೆಂದು ಹೇಳಿದ ಮೇಲೆ . . . ಬಾಡಿಗೆ ಸಲೀಸಾಗಿ ಬರುತ್ತಿತ್ತು (ಮಹಾಗ. ೧೯೨); ಕುಕ್ಕೆಯನ್ನು ಸಲೀಸಾಗಿ ಮೇಲೆತ್ತಿ ಮಂಪೆಯಲ್ಲಿಟ್ಟು ಕೊಳ್ಳುವುದು ಇಂದು ಸಾಧ್ಯವಿರಲಿಲ್ಲ (ಪೂಸ್ಮೃ. ೫೧). [← ಆರ. ಹಿಂ. ಮರಾ. ಸಲೀಸ್]

ಸಲೀಸು₂ (ಅ). ಸರಾಗವಾಗಿ; ಕಷ್ಟವಿಲ್ಲದೆ; ಸುಲಭವಾಗಿ: ಎಮ್ಮೆಗಳ ಮೊತೆಯಲ್ಲಿ ರಾಡಿನೀರೊಳು ಸಲೀಸು ಈಜಾಡಬಲ್ಲ (ನೆಲಮು. ೨೮-೧೭).

[< ಸಲೀಸು₁]

ಸಲು 'ಸಲ್' ನೋ.

ಸಲುಕೆ 'ಸೊಲ್ಲಗೆ₁' ನೋ.

ಸಲುಗೆ 'ಸಲ್ಗೆ' ನೋ.

ಸಲುಗೆದೊತ್ತು (ನಾ). ಆಪ್ತಳಾದ ಸಖಿ: ಸಲುಗೆದೊತ್ತೊರ್ವಳೀ ನೆಲ್ಲನೊಂದೇ ದಿನಕೆಯಲಸಿಕಿಲ್ಲದ ಮಸಣಕವ್ವೆ ಕುಟ್ಟಲಿಯೆಂದೆನಲು (ಒಡ್ಡೀವು. ೭-೬೦).

[ಸಲುಗೆ (< ಸಲ್ಗೆ) + ತೊತ್ತು (< ತೊಟ್ಟು)]

ಸಲುಗೆಯಾಳ್ (ನಾ). ತೀರ ಹತ್ತಿರದವನು; ಆಪ್ತನಾಗಿರುವವನು: ರಾಜಪುತ್ರರ ಸಾವಂತರ ಸಲುಗೆಯಾಳ್ಗಳ ರಾಯನಾಯಕರ ಸಂದಣಿಯೊಳ್ . . . ನಡತಂದು (ನಂದಿ. ೨-೪೫). [ಸಲುಗೆ (< ಸಲ್ಗೆ) + ಆಳ್₂]

ಸಲುಗೆವಂತ 'ಸಲ್ಗೆವಂತ' ನೋ.

ಸಲುಗೆವಡೆ 'ಸಲ್ಗೆವಡೆ' ನೋ.

ಸಲುಗೆವಾಳ, ಸಲಿಗೆವಾಳ (ನಾ). = ಸಲುಗೆಯಾಳ್: ಪೇಳು ಶಿವನೋಲಗದ ವಿಸ್ತರವನಾರಾರಿಹರು ಸಲುಗೆವಾಳರಾರಿಹರವರ ಪೆಸರೇನು (ಲಶಚಂ. ೨೭-೨೧); ಚಂಗಳೆಯ ಒಳಬಾಗಿಲನು ಕಾಯ್ವ ಸಲುಗೆವಾಳರು ನಮಗೆ ಸರಿಯಡಾರು (ಸುಸಾರ. ೩೫-೧೧). **ಸಲಿಗೆವಾಳ** : 'ಸಲಿಗೆವಾಳತ್ವ' ಪರಾ.

[ಸಲುಗೆ (< ಸಲ್ಗೆ) + - ವಾಳ್₂ (< - ವಳ)]

ಸಲುಗೆವೆಗ್ಗಡತಿ (ನಾ). ಅತಿ ಸ್ನೇಹವುಳ್ಳ ಹೆಗ್ಗಡಿತಿ: ಸಂತಸವಡೆಮೊರ್ವೆ ಸಲುಗೆವೆಗ್ಗಡತಿ ಕಾರ್ಯಂತಳೆಯರಿಗೆ ಪೇಳಿದಳು (ಮೋಹಶ. ೪-೬೪).

[ಸಲುಗೆ (< ಸಲ್ಗೆ) + ವೆಗ್ಗಡತ್ತಿ (< ವೆರ್ಗಡಿತಿ)]

ಸಲುಷ (ನಾ). ಒಂದು ಬಗೆಯ ಸೊಪ್ಪು ; ಸಬ್ಬಸಿಗೆ : (೫). [?]

ಸಲುವಳಿ 'ಸಲ್ವಳಿ' ನೋ.

ಸಲುವಳಿಕೆ (ನಾ). ಸಾಫಲ್ಯ ; ಸಿದ್ಧಿ : ಎಲ್ಲಿಹುದು ತಿಳಿವಳಿಕೆ ಜೀವನದ ಸಲುವಳಿಕೆ (ಸಾದರೀ. ೬೩-೭). [ಸಲುವಳಿ (< ಸಲ್ವಳಿ) + - ಕೆ]

ಸಲುವಳಿಗಾರ (ನಾ). ಸಂದಾಯವನ್ನು ಪಡೆಯುವವನು : ಯಾ ಗ್ರಾಮದ ಸಲುವಳಿಗಾರರಿಗೆ ಸಲುವ ಚತುಸ್ಸೀಮೆಯ ಭೂಮಿಯನು ಆಗುಮಾಡಿಕೊಂಬ್ಬು ಸುಖದಲಿ ನಿನ್ನ ಸನ್ತಾನಪರಮ್ಪರೆಯಾಗಿ ಭೋಗಿಸಿ ಬಹೆಯೆನ್ನು ಕೊಟ್ಟ ಉಮ್ಮಳಿಗ್ರಾಮಶಾಸನ (ಎಕ. VI, ಚಿಕ್ಕಮ. ೫೭-೮; 1514). [ಸಲುವಳಿ (< ಸಲ್ವಳಿ) + - ಗಾರ (< - ಕಾಱ)]

ಸಲುವು₁ 'ಸಲಪು' ನೋ.

ಸಲುವು₂ 'ಸಲವು' ನೋ.

ಸಲೆ₁ (ನಾ). ೧. ಹಣ ಮುಂತಾದುವನ್ನು ಸಲ್ಲಿಸಿದುದು; ಸಂದಾಯ ಮಾಡಿದುದು; ಪಾವತಿ: (೫). ೨. ಎರಡು ಅಥವಾ ಹೆಚ್ಚು ಸಂಖ್ಯೆಗಳನ್ನು ಗುಣಿಸುವುದರಿಂದ ಬರುವ ಮೊತ್ತ ; ಗುಣಲಬ್ಧ : (೫). ೩. ಆಯ; ವಿಸ್ತೀರ್ಣ; ಕ್ಷೇತ್ರಫಲ : ಒಂದು ಪದಾರ್ಥದ ಮೇಲ್ಮೈಯ ಅಳತೆಯನ್ನು ಅದರ ಸಲೆ ಅಥವಾ ಕ್ಷೇತ್ರಫಲ ಎನ್ನುತ್ತೇವೆ (ಕವಿಕೋ. I. ೫); ಆ ದೊಡ್ಡ ಸ್ಥಾನದ ಕೊಳವನ್ನು ೧೮೦" x ೧೦೮" ಚದರಡಿ ಸಲೆಯುಳ್ಳ ಕಟ್ಟಡವೊಂದು ಒಳಗೊಂಡಿದೆ (ಭಾರದ. ೪೯೩).

[ದೇ. ॥ ತಮಿ. ಚೆಲ್; ತೆಲು. ಚೆಲ್ಲು]

ಸಲೆ₂ (ಅ). ೧. ಒಂದೇ ಸಮನೆ; ವಿಕಪ್ರಕಾರವಾಗಿ: ಸುಬಿವುಳಿದಳಸ ಭಯಂ ಬಬಿವಬಿಯನಣಂ ಬಿಡದೆ ಯೂಥಮಂ ಸಲೆ ಕಾದುಂ ಕಬಿಪಿಯುಮಿಭರಿಪುವಂ ತಕ್ಕಬಿವಿನೆಗಂ ನೊಂದು ನಿಂದು ಕೊಂದುದಿಭೇಂದ್ರಂ (ಶಾಂತಿವು. ೨-೧೦೬); ಸಮಸಪ್ತಕರು ಸಲೆ ಮುಟ್ಟಿ ಬಂದರು ಕೌರವೇಶ್ವರ ಸಕಲಬಲಸಹಿತ (ಕುಮ್ಮಾ. ೧೪-೨೨). ೨. ಸದಾ;

ಯಾವಾಗಲೂ; ನಿರಂತರವಾಗಿ: ಸಲೆ ತೀವುತಿರ್ದೊಡಂ ಜೇಬ್ ಏಲಲರಿಗುಮೆ ಭಿನ್ನಭಾಂಡದೊಳ್ ನೀರಿನಿತುಂ (ಕಾದಂಪೂ. ೫೪೩); ಆಯೆಡೆಯೊಳ್ ಸಂಗತಿಯಿಂ ಶ್ರೀಯೊಡೆಯರ್ ಸಲೆಯಿರ್ಪರ್ (ಭಾಷಾಭೂ. ೨೨ ಉದಾ); ಸಲೆಯಂಬುದು ನಿತ್ಯಾರ್ಥಾವಲಂಬ (ಶಮದ. ೩೧೩). ೩. ಅತಿಶಯವಾಗಿ; ಚೆನ್ನಾಗಿ; ವಿಶೇಷವಾಗಿ: ಗಟಿಯಿಸಿದರ್ಥಂ ಸಲೆ ಪಾಂಗಟಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ ಮೆಟಸುಂ ಕೋದಂತಿರ್ಕುಂ (ಕವಿರಾ. ೨-೫); ಮಕ್ಕಳ್ಗಂ ಕೂಡೆ ಪೆಸರಿಟ್ಟು ಸಲೆ ಕೊಂಡಾಡಿದಪರ್ ವ್ಯಂತರರರ್ಕಳಂ ಜಡಮತಿಗಳ್ (ಆದಿಪು. ೧೫-೩೯); ಕಳವೆಯ ಮಡಿಯ ಸಾಲುಗಳು ಸಲೆ ಮೆಚ್ಚಿದುವು (ಭಾವಚಿಂ. ೨-೮). ೪. ಉತ್ತಮವಾಗಿ; ಯೋಗ್ಯವಾಗಿ: ಎನಗೀಗಳೊಂದಿ ಚಂದ್ರನ ಬಲಮೊಳ್ಳಿತಾಗಿ ಸಲೆಯಿಲ್ಲದೊಡಾವುದು ಮೊಳ್ಳಿಕೆಯ್ಗುಮೇ (ಪಂಪಭಾ. ೪-೬೮). ೫. ಸರಿಯಾಗಿ; ತಕ್ಕಂತೆ: ಪವಮಾನಂ ದಹನಂ ವಾಸವ ತೋಯಾಧೀಶರೆಂಬಿವರ್ ಸಲೆ ರಾತ್ರಿಂದಿವಗಳೊಳೊಂದೊಂ (ದರೆ?)ದುಂ ಜಾವವನಾಳ್ವರ್(ಲೋಕೋಪ. ೪-೭೮); ಈ ವಿಶೇಷವ್ಯವಹರಣೆ ಲೋಕಾವಳಿಯ ಸುಜನರನು ಸಲೆ ಸಂಭಾವನೋಚಿತದಿಂದ ಸಲಹಲಿಕಾಯ್ತಲೇ (ತೊರಗಾ. ೧-೮-೧೩). ೬. ಸಂಪೂರ್ಣವಾಗಿ; ಪೂರ್ತಿಯಾಗಿ: ಸೌಗತಸಾಂಖ್ಯ ಶಿವಾಗಮಂಗಳಂ ನ್ಯಾಯ ನಯ ಪ್ರಮಾಣಸುವಚಃಕ್ರಮದಿಂ ಸಲೆ ಸೋಲೆ ಗೆಲ್ದುಪಾಧ್ಯಾಯರಚೇಯರ್ (ಶಾಂತಿಪು. ೧-೪); ಮೊಲನಿಂದ ಕರಕಷ್ಟ ನರನ ಬಾಳುವೆ ಸಲೆ ನಂಬೋ ನಮ್ಮ ಕೂಡಲಸಂಗಮದೇವನ (ಬಸವ. ೧೫೮). ೭. ಅತಿಯಾಗಿ; ಬಹಳವಾಗಿ: ಉಜ್ಜ್ವಲಜಿನೇಂದ್ರಪದದ್ವಯಭಕ್ತನಪ್ಪುದಿನ್ನಾರುಮನುರ್ಕಿ ಸೊರ್ಕಿ ಸಲೆ ನೋಯಿಸದಿರ್ಪುದು (ಧರ್ಮಾಮೃ. ೫-೪೧); ಅವನಿಪತಿ . . . ಹೊರಳಿದನು ಹುಡಿಯೊಳಗೆ ಸಲೆ ಕಾತರಿಸಿದನು (ಕುಮಾರ್ಯೂ. ೭-೯); ಪಲವು ಸುಕೃತಮಿಂತು ಪರಿಣತಿವೆತ್ತುದೊ . . . ಸಲೆ ಪರಿಶುದ್ಧಿ ಸಾಕಾರಮಾದುದೊ (ಹದಿಬ. ೨-೧೮). ೮. ನಿಜವಾಗಿ ; ನಿಶ್ಚಯವಾಗಿ: ನಿನ್ನ ಮುಂದೀಗಳಾನುಸಿರ್ದಪ್ಪೆಂ ಸಲೆ ಮೆಲ್ಲು ಬಲ್ಸನಟಿಗುಂ (ಪಂಪಭಾ. ೯-೧೯); ಸಲೆಯಿವಳು ಮೂಜಗದ ಮೋಹಿಪ ತಿಲಕವೋ (ಕುಮಾವಿ ೨-೮). ೯. ಮೆಚ್ಚುಗೆ, ಕೊಂಡಾಟ ಮುಂತಾದುವುಗಳನ್ನು ಸೂಚಿಸುವ ಒಂದು ಮಾತು: "ಅರರ ಧಣಿ ಭಾಪು . . . ಸಲೆ ಸುಂಪುರಿಯೆನೆ ಕೊಂಡಾಟದ ನುಡಿ" (ಭಾರಸಿ. ೪೬). ೧೦. ಪಾದಪೂರಣಾರ್ಥವಾಗಿ ಬಳಸುವ ಒಂದು ಅವ್ಯಯ: "ನೆಱೆ ಸಲೆ ತವೆ ಮಿಗೆ ಯೊಗುಮಿಗೆಯುಱೆಯೆಂಬವು ಪಾದಪೂರಣಾರ್ಥಂ" (ಚತುನಿ. ೩೪); ತರುಣಂ ಸಲೆ ವೃದ್ಧನೆಂದು ಬಗೆಯದೆ ನೆಲಸುವೆ ನಿನ್ನಿಂ ನಿಶ್ಚಯರೆಂಬರುಮೊಳರೇ (ಗದಾಯು. ೯-೬); ತನ್ನೊಡನಿರ್ದ ಧೂರ್ತಜನಾಳಿಯುಂ ಸಲೆ ತಾನುಮೊಪ್ಪಿರೆ (ಧರ್ಮಾಮೃ. ೨-೨೪). 'ಸಲ್' ಪರಾ.

ಸಲೆಅಡಿ 'ಸಲೆಯಡಿ' ನೋ.

ಸಲೆಗದ್ದೆ (ನಾ). (?) : XXX ಕೊಟ್ಟ ಸಲೆಗದ್ದೆ ಕೊನೆವಾಳೆ ಸೇವ XXX (ಎಕ. VI, ಕಡೂರು. ೪-೬೯; 1173). [ಸಲ್ + ಗದ್ದೆ (< ಗಟ್ಟೆ)]

ಸಲೆಗೂಟ? (?). (?) : ಆ ನಾಲ್ಕುಖಂಡು(ಗ) ಗದ್ದೆಯಲ್ಲಿ ಆೇಪ್ರಕಾರ ಹುಟ್ಟುವದು ಹಳತು ಐದುವರಹಕ್ಕೆ ಸಲೆಗೂಟಯೇಳುವಱೆ ವರಹಕ್ಕೆ ವಿವರ (ಎಕ. V, ಬೇಲೂರು. ೨೯-೧೩; 1717). [?]

ಸಲೆಗೆ 'ಸೊಲ್ಲಗೆ' ನೋ.

ಸಲೆದೊಳ್ತು (ನಾ). ನಿರಂತರವಾಗಿ ಸೇವೆಮಾಡುವವನು; ಪೂರ್ಣವಾಗಿ ಎಲ್ಲ ರೀತಿಯಿಂದಲೂ ಸೇವೆ ಮಾಡುವವನು.

ಸಲೆದೊಳ್ತಿರ್ (ಬಹುವ): ನಾವೆಲ್ಲರುಂ ನೆಲೆದೊಳ್ತಿರ್ ಬಳಿದೊಳ್ತಿರ್ ಸಲೆದೊಳ್ತಿರ್ ನಿಮಗೆ (ಸಿರಿಕ. ೧೦-೯೫). [ಸಲ್ + ತೊಳ್ತು (< ತೊಳ್ತು)]

ಸಲೆಅಡಿ, ಸಲೆಅಡಿ (ನಾ). ಒಂದು ಅಡಿ ಉದ್ದ ಮತ್ತು ಒಂದು ಅಡಿ ಅಗಲವಿರುವ ಕ್ಷೇತ್ರ; ಚದರಡಿ: (ಕಿ). ಸಲೆಅಡಿ : ಸಿರೂರಿನ ಸರೋವರದವರೆಗೂ ೧೧೯೨ ಸಲೆಅಡಿಗಳನ್ನು ಸೆಕೆಂಡಿಗೆ ಸಾಗಿಸುವ ನಾಲೆಯ ಅಗಲ ೧೩ ಅಡಿ (ಶಿಲ್ಪಾ. ೨೪೬); ನಾವು ಏರ್ಪಾಡು ಮಾಡಿರುವಂತೆ ಕಟ್ಟಿದರೆ ಸಲೆಅಡಿ ಒಂದಕ್ಕೆ ೫೦ ಸೆಂಟು ಖರ್ಚಾಗುತ್ತೆ (ಯೋಧಪು. ೨೮). [ಸಲ್ + ಅಡಿ]

ಸಲೆವುಗೆ (ನಾ). ಒಂದು ಸ್ಥಳದ ಹೆಸರು: ಬಸನ್ತಕುಮರಯೆಡವೊಟಲನಾಡ ಸಲೆವುಗೆಯ ಕೊಟ್ಟ ಶಾಸನಮ ಪಡೆದು ಶನ್ತಪನ ಮಗ ದೇವೆಱೆಯಗೆ ನಪ್ಪಪ್ಪಗೊಣ್ಡು ಕೊಟ್ಟನ್ (ಎಕ. VIII, ಸೊರಬ. ೫೭-೨೮; 692). [?]

ಸಲ್ಗತಿ (ನಾ). ಸಲ್ಲುವ ಗತಿ; ಸೇರುವ ನೆಲೆ: ಪೂನ್ನಾನ್ನೊಳ್ಳೆನೆನ್ನೋನುಂ ಕೊಳ್ಗೆನ್ದೊಡೆ ಕೋಳ್ಳೋನುಂ ವಾರಣಸಿಯ ಸಾಸಿರಕವಿಲೆಯುಂ ಸಾಸಿರ್ವರ್ಪ್ಪಾರ್ವರ್ಪ್ಪ[ರು] ಮನ್ನೊನ್ನೋನ್ ಸಲ್ಗತಿಗೆ ಸಲ್ಲೋನಕ್ಕೆ (ಮೃಅರಿ. ೧೯೩೩, ೫೯-೫; ಸು. ೩ನೆಯ ಶತ).

[ಸಲ್ + ಗತಿ]

ಸಲ್ಗೆ, ಸಲಿಗೆ$_1$, ಸಲುಗೆ (ನಾ). ೧. ನಿಕಟಸಂಪರ್ಕದಿಂದ ಉಂಟಾಗುವ ಅತಿ ಪರಿಚಯ; ಸದರ; ಹೊಕ್ಕುಬಳಕೆ : ಸೋಮದತ್ತೆಯಂಬೊಳ್ ತನ್ನೊಂದು ಸಲ್ಗೆ[ಪಾಠಾಂ. ಲುಗೆ]ಯಿಂದಮಟಲಿಂದಂ ವಾಯುಭೂತಿಯನಿಂತೆಂದಳ್ (ವಡ್ಡಾರಾ. ೮-೮); ಕನಲ್ಗೆಯಂ ಕೊನರಲೀಯದೆ ಸಲ್ಗೆಯಂ ಸೊಪ್ಪಾಗಲೀಯದೆ (ಲೀಲಾವ. ೧೪-೯೭ ವ); ಊಟಿಗಕ್ಕೆ ನಡೆವಾತಂ ಸಲ್ಗೆಯಂ ಪೇಟಂ (ಸೂತ್ರಸು. ೮-೩೬೯). ೨. ಸ್ನೇಹ; ಗೆಳೆತನ: ಸಲ್ಗೆಯೊಳಲ್ಲಿಯ ಕೋಡುಂಗಲ್ಗಳ ಪೇಚರತೆವಡೆದು ಪಾಱುವ ತೆಱದಿಂ ಮೆಲ್ಲಾಳಿಯಲೆಯೆ ಬಿಳಿಯ ಮುಗಿಲ್ಗಳ್ ಪಾಱುವುವು ಖಚರಗಿರಿವನತಟದೊಳ್ (ಅರ್ಧನೇ. ೨-೭೩). ೩. ಪ್ರೀತಿ; ಮೆಚ್ಚುಗೆ: ಸ್ಮರಚಕ್ರೇಶನ ಸಲ್ಗೆಯ ಮದವತ್ಯಾಯತೆಯೆಯ್ದಿದಳು (ಜಯಶಾ. ೫-೫೧); ಕಟ್ಟಕಡೆಯೊಳ್ ಸಲ್ಗೆಯ ಸುರಭಿ ರಾಯನ ಭಕ್ತಿಗೊಲ್ದು . . . ಪರಸಿ (ರಾಮಾಶ್ವ. ೧೦೭-೨೭). ೪. ನಡವಳಿಕೆ; ವರ್ತನೆ: ತನ್ನ ತಮ್ಮನ ಸೈರಣೆಯ ಸಲ್ಗೆಯಂ ಜವಲೆಯೊಲವಿನ ಗುಣಂಗಳಂ ನೆನೆನೆನೆದು (ಪರ್ಧಪು. ೯-೬೬ ವ). ಸಲಿಗೆ$_1$: ೧. ಬಲ್ಲಿದನಾದನು ಬಾದುರ ನಮಗಿನ್ನಿಲ್ಲ ಸಲಿಗೆ ರಾಯನೊಳು (ಕುರಾಸಾಂ. ೧೮-೧೦೩); ದೇವಯಾನೆಯು ಆ ಬಾಲಕರಿಗೆ ಅರಸನಲ್ಲಿರುವ ಸಲಿಗೆಯನ್ನು ಕಂಡು ಅವರು ಆತನ ಮಕ್ಕಳೇ ಎಂದು ನಿಶ್ಚೈಸಿದಳು (ಕೃಪಾಅ. ೧೩೦); ಸಲಿಗೆ ಕೊಟ್ಟ ನಾಯಿ ಸಟ್ಟುಗ ನೆಕ್ಕಿತು (ಗಾದೆ). ೨. ಅವನು ದೇವರೊಡನೆ ಸಲಿಗೆ ಸಲ್ಲಾಪಗಳನ್ನೂ ಆಡುವನು (ಕನ್ನಡಾ. ೫). ೩. ಸಲಿ[ಪಾಠಾಂ. ಲು]ಗೆಯಂ ಪಾರ್ಶ್ವೇಶ್ವರಂ ಬಂದಂ' (ಪಾರ್ಶ್ವಪು. ೧೬-೧೬೬); ವಠಾರದ ಎಲ್ಲ ಮಕ್ಕಳಿಗೂ ರಾಯರ ಮೇಲೆ ಅಪಾರ ಸಲಿಗೆ (ಕಂಬಹು. ೧೨೧). ೪. ಹರನ ಸಾಹಸಕ್ಕಂಜದೆ ಪಲವಗಲು ಮುಪ್ಪುರ ಪಡಿಬರಿಸಿ ಪೋರಿದುದು ಪುರದೊಳಗಿರ್ಪ ಪುಣ್ಯಾಂಗನೆಯರ ಸಚ್ಚರಿತದ ಸಲಿಗೆಯಿಂದ್ಯೆಸೆ (ಹದಿಬ. ೨-೪೮). ೫. ಅತಿಸ್ನೇಹದಿಂದುಂಟಾಗುವ ಧಾಷ್ಟ್ಯ, – ದಿಟ್ಟತನ: ಖಿಲ್ಲನಾಗಿತ ನವಸರವಾದಲ್ಲಿ ಗುಡಿಯೊಳು ಹೊಗುವ ಸಲಿಗೆಯದೆಲ್ಲಿಯದು (ಬಸಪು. ೪೩-೪೦); ಅಂಜನಾಸುತ ತನ್ನ ಸಲಿ[ಪಾಠಾಂ. ಲು]ಗೆಯ ಮಾತ ಸಲಿಸುವೊಡೆ ಅಂಜದೆಂಬೆನು (ಕುಮಾಅ. ೧೦-೩೧). ೬. ಯೋಗ್ಯತೆ; ಅರ್ಹತೆ: ಅವರವರ ಸಲಿಗೆ ಸಾಮಿಪ್ಯವನಱೆತವರವರ ತಾರತಮ್ಯವನಱಿದುತ್ಸವದಿಂ ಬೀಳ್ಕೊಟ್ಟಂ ದಿವಿಜಾದಿಗಳಂ ಬಳಿಕ್ಕೆ ಗುರುವಿಶ್ವೇಶಂ (ವೀರವಿ. ೯-೮೬). ೭. ಬೇಡಿಕೆ; ಕೋರಿಕೆ; ಅಪೇಕ್ಷೆ: ಛಲವನಿಳಿಯದ ಭಾಷೆ ಭಕ್ತರ ಸಲಿಗೆಯಂ ಸಲಿಸುವುದು ಭಾಷೆ . . . ಭಕ್ತರುಗಳಿಗೆ ಗೆಲವಂ ಕೊಟ್ಟು ತಾ ಶರಣೆಂಬುದದು ಭಾಷೆ (ಬಸಪು. ೬-೩); ಸಲಿಗೆಯೊಂದನು ಸಲಿಸಬೇಕೆಂದಲಘು ಭುಜಬಲ ಭೀಮಸೇನಂಗೊಲಿದು ವರವನು ಕೊಟ್ಟರಿ (ಕೋಗಯ. ೧೮-೩೩). ಸಲುಗೆ : ೧. ಸೇವಕಂ ಮೊದಲೊಳರಸಂಗಂ ತದನಂತರಂ ಪ್ರಧಾನರ್ಗಂ ಅರಸಿನ ಮಿತ್ರರ್ಗಂ ಸಲುಗೆಯನುಳ್ಳವರ್ಗಂ ಧೂರ್ತಜನಕ್ಕಂ ಭೀತನಾಗಿರಲ್ವೇಟ್ಟುಂ (ಪಂಚತಂ. ೫೨-೧೭); ಸುರೇಂದ್ರನ ಸೆಱಗು ಸೋಂಕುವ ಸಲುಗೆಯುಂಟೇ ಮರ್ತ್ಯಜಾತಿಯಲಿ (ಕುಮಾಅ. ೧೧-೧೭); ನನಗೆ ಇವನ ಪರಿಚಯವಿದ್ದಿತಾದ್ದರಿಂದ ಸಲುಗೆಯೊಂದಿಗೆ ಮಾತುಕತೆ ಆರಂಭವಾಯಿತು (ಹಸುಹೊ. ೨೨೫). ೨. ಗಾಡಿಕಾತಿಯರಾಗಿ ವಿಟಲಕ್ಷಣಂ ಮನದ ಪಾಡಱಿಯ ಲೆಂದೆವದಱಿಂ ಸಲುಗೆ ಶಂಕಿಸದೆ ನೀಡಿದೊಡೆ ಕೀರ್ತಿ (ಹಚಕಾ. ೭-೧೨); ಕುಬೇರಪ್ರಿಯನಾ ಪ್ರಭುಶಕ್ತಿಯುಮನರಸನೊಳಾದ ಸಲುಗೆಯುಮಂ ಕಂಡು ಮತ್ಸರಂ ಪುಟ್ಟಿ (ಪುಣ್ಯಾಶ್ರ. ೭-೮ ವ); ಪರರ ಒಳಗುಹೊಱಗನಱಿದೊಯ್ಯನೆ ಕೆಲಬರು ಸಲುಗೆವುಳ್ಳವರು ನುಡಿವರು (ಭರಚ. ೧-೬೨). ೩. ಸಲುಗೆಗೆ ಸಾಮ್ಯಕ್ಕೆಕ್ಕೆಗೆ

ಪಲರಕ್ಕೆಮ ಸತಿಯರ್ (ಎಕ. VIII, ನಗರ. ೪೭-೩೩: 1062); ಆ ಜಂಗಮವೆ ದಿಟಕ್ಕೆನ್ನ ಮನೆಗೆ ಬಂದಡೆ ಕೂಡಲಸಂಗಮದೇವರಲ್ಲಿ ಸಲುಗೆಯ ವರವ ಹಡೆವೆನು ಕಾಣಾ (ಶೂನ್ಯಸಂ. ೮೨-೩೭); ಎನ್ನ ದೇಹದಲಿ ಒಲಿದು ನೀನಿರೆ ನಿನ್ನ ಸಲುಗೆಯ ಬಲುಮೆಯಲಿ ಬರಸೆಳೆವೆ ಮುಕುತಿಯ ಲಲನೆಯನು (ಪರಿಸಾ. ೫೯). ೪. ಗಳಹದಿರು ರಾಧೇಯ ನಿನ್ನಯ ಕುಲವ ನೋಡದೆ ಮೇರೆದಪ್ಪುವ ಸಲುಗೆಯದಲೇ (ಕುವಾಭೀ. ೧-೩೯). ೫. ಸಲುಗೆಯೊಳೆಂದೆನ್ನೆಸ ಬಲ್ಲಿದಲ್ಲದುದೆಲ್ಲಮನುಂಟುಮಾಡಿ ನೀಂ ಸುಲಭತೆಯಿಂ ತೊದಲ್ನುಡಿಯನಾಲಿಸುವಲ್ಲಿ ವಿನೋದಶೀಲನೆಂದಲಸದೆ (ಶತಕ. ೧೬೪-೩೨). ೬. ಅವರವರ ಸ್ವಸ್ಥಾನಂಗಳ ಸಲುಗೆಯನಱಿದು ಬಿಡುತ್ತಿದ್ದೆ ಕೂಡಲಸಂಗಮದೇವರಲ್ಲಿ ಬಸವಣ್ಣನ ಕಾಲ ವೇಳೆಯನಱಿದು (ಸರ್ವಜ್ಞ. ೪೧-೪೫೩). ೭. ಸಲಿಸಿದವನೋ ಮುನ್ನ ನೀನೆನ್ನವರ ಸಲು[ಪಾಠಾಂ. ಲಿ]ಗೆಗಳ (ಬಸಪು. ೪೦-೪೦); ಕೊಂದನಿಬ್ಬರ ಸೌಬಲರ ನೃಪನಂದನರ ಗಾಂಧಾರರೊಂದೆರಡೆಂದು ಸಲುಗೆಗೆ ಸಲಿಸಿ ಬಂದೈನೂಱ ಬಱಿಕ್ಕೈದು (ಕುವಾಪ್ರೋ. ೩-೭೪). ೮. ಚಲನೆ; ಗತಿ: ಕಲಿಯ ರಾಜ್ಯದಲೊಂದು ಪಾದದ ಸಲುಗೆ ಧರ್ಮಕ್ಕಹುದು (ಕುವಾಳ. ೧೪-೩೮).

ಸಲುಗೆಗಳ ಸಾವಂತ = ಅತಿಯಾದ ಹೊಕ್ಕುಬಳಕೆಯ ವ್ಯಕ್ತಿ; ಅತಿಶಯವಾದ ಸಲಿಗೆಯ ಮನುಷ್ಯ; ''ನಾರದಋಷಿ'' (ಪ್ರಭಣ್ಣ) : ಸಮಯಾಸಮಯ ನಟ್ಟಿರುಳು ಹಗಲೆಂಬ ನೇಮವಿಲ್ಲದೆ ಭವನ ಕಟ್ಟಿದಿರೊಳ್ಕಿತಂದು ನಿಂದನಪ್ರತಿಮಮುನಿ ಸಲು[ಪಾಠಾಂ. ಲಿ]ಗೆಗಳ ಸಾವಂತನು (ಸೋಮಚ. ೧-೩೪).

[ಸಲ್ + -ಗೆ./ ತಮಿ. ಚಲಿಕ್ಕೆ; ತುಳು. ಸಲಿಗೆ./ ಮರಾ. ಸಲಗೀ]

ಸಲ್ಲೆದೋಱು (ಕ್ರಿ). ಪ್ರೀತಿಯನ್ನು ತೋರಿಸು ; ವಿಶ್ವಾಸವನ್ನು ಪ್ರಕಟಿಸು: ಈಱೆಯುಮನಗೆರಡಱಿಯದ ನಲ್ಲಮನಂದೋಱುವುದು ಸಲ್ಲೆದೋಱುವುದುಮಾವುದು ದೋಸಂ (ಪಂಪಭಾ. ೫-೧೭ ವ). [ಸಲ್ಲೆ + ತೋಱು]

ಸಲ್ಲೆನುಡಿ (ಕ್ರಿ). ಸದರದಿಂದ ಮಾತನ್ನಾಡು; ಸಲಿಗೆಯಿಂದ ಹೇಳು: ಸಲ್ಲೆ[ಪಾಠಾಂ. ಲೈ]ನುಡಿಯಲ್ವೇಱ್ಪತ್ತಿದಂ ವಿಶ್ವಲೋಕದಯಾವಲ್ಲಭ ಕೇಳ್ದು ಮನ್ನಿಸು ಮದೀಯಸ್ಖಾಂತಿಕೋದಂತಮಂ (ಅನಂಪು. ೭-೩೨). [ಸಲ್ಲೆ + ನುಡಿ]

ಸಲ್ಲೆವಂತ , ಸಲಿಗೆವಂತ , ಸಲುಗೆವಂತ (ನಾ). ಹೊಕ್ಕುಬಳಕೆಯ ವ್ಯಕ್ತಿ; ಸಲಿಗೆಯುಳ್ಳವನು: ತಂದೆತಾಯಿಗಳರಸಿಗತಿಸಲ್ಲೆ[ಪಾಠಾಂ. ಲಿಗೆ]ವಂತರೆಂಬೊಂದು ದಲ್ಲಾಳಿತನದಿಂ . . . ಎಮ್ಮ ತಲೆಗೆ ಹಜಲೆಯ ತರ್ಪುದುಚಿತವೇ (ಸಮ್ಮೇ. ೧೦-೩). **ಸಲಿಗೆವಂತ** : ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೆ ಐದಾರೆ ವಿಕಾಂತಸಂಬಂಧರು ಹೋಗಿ (ಬಸವ. ೯೩೩); ಬಹುಜನರುಗಳೆಲ್ಲಾ ಓಲಗವಿಲ್ಲ ಹೋಗಿ ಸಲಿಗೆವಂತರೆಲ್ಲಿಲ್ಲಿ ನಿಲ್ಲಿ (ಸರ್ವಜ್ಞ. ೪೧-೪೫೩). **ಸಲುಗೆವಂತ** : ಹೊಗುವಡನಿಲಜ ಸಲುಗೆವಂತನು ಮಗನ ಸೇರುವುದವನ ಹೊಗಳಿದು (ಕೌಶಿಕಾ. ೧೪-೪೦); ನಿನಗೆಯರ್ಹದ್ದಾಸ ಕದುಸಲುಗೆವಂತನದಱಿಂದವಳಿನಿತು ಮೊಗಗೆಡಿಸುವುದು ಮತವಲ್ಲ (ಸಮ್ಮೇ. ೧೨-೧೨). [ಸಲ್ಲೆ + -ವಂತ]

ಸಲ್ಲೆವಡೆ , ಸಲುಗೆವಡೆ (ಕ್ರಿ). ೧. ಸಲಿಗೆಯನ್ನು ಹೊಂದು; ಸದರವನ್ನು ಪಡೆ: ಕರ್ಪೂರ . . . ಕ್ಷೋಭಮಂಬಿವಱಿಂ ಭೂಭುಜನೊಪ್ಪಿದಂ ಮೆಱೆವ ಪೌರಶ್ರೀಯನಿಂತೆಂದು ಬಿನ್ನವಿಸಲ್ ಚಂದ್ರಿಕೆ ಬಂದು ಸಲ್ಲೆವಡೆದೊಲ್ದಾಲಿಂಗನಂ ಗೈದವೊಲ್ (ಅನಂಪು. ೭-೯೦). **ಸಲುಗೆವಡೆ** : ೨. ದಯೆಯಿಂದ ಕೂಡು; ಕರುಣೆಯನ್ನು ಹೊಂದು: ಇಳಿದುದವನಿಯ ಭಾರವು . . . ದೇವರು ಸಲುಗವಡೆದಿಚ್ಛಾಕೃತಿಯಲವತರಿಸಿದುದಱಿಂದ (ನಿಘಾಗ. ೧೦-೩-೨೪). [ಸಲ್ಲೆ + ಪಡೆ]

ಸಲ್ಲೆವೆರಸು$_1$ (ಕ್ರಿ). ಸಲಿಗೆಯಿಂದ ಕೂಡಿರು; ಸ್ನೇಹದಿಂದ ಕೂಡಿರು: ಸಲ್ಲೆವರಸಿದ ತನ್ನ ನನ್ನನೊಟ್ಟಜೆಯಂ ತೋಱಿ ವಜ್ರದಂತಚಕ್ರವರ್ತಿ ವಜ್ರಬಾಹು ಮಹೀಪತಿಯಂ ಕರೆದು (ಆದಿಪು. ೪-೫೨ ವ).

[ಸಲ್ಲೆ + ಬೆರಸು$_1$ (< ಬೆರೆಯಿಸು)]

ಸಲ್ಲೆವೆರಸು$_2$ (ಅ). ಸಲಿಗೆಯಿಂದ ಕೂಡಿ; ಸ್ನೇಹದೊಡನೆ : ವಿನಯದಿನಮಿಂ ಭುವನೈಕನಾಥನಂ ಸಲ್ಲೆ[ಪಾಠಾಂ. ಲುಗೆ]ವೆರಸು ಬೇಡುತ್ತಿರೆ (ಆದಿಪು. ೯-೧೧೬).

[ಸಲ್ಲೆ + ಬೆರಸು$_2$]

ಸಲ್ಲೆ (ನಾ). ಸಂದಾಯ; ಸಲ್ಲುವುದು; ಸಲ್ಲಿಕೆ: ಜೊನ್ನದ ಸೊದೆಯನು ಕರೆಯಲಿ ಪೆರೆಯು ಇಂದು ಮಹೇಂದ್ರಂಗಪ್ಪ ನಲ್ಮೆಗೆ ಜಗಮೆ ನಗಲಿ ನನಗಪ್ಪ ಸಲ್ಮೆಗೆ! (ಅಪಶ್ಲೋ. ೩೯-೨೩). [ಸಲ್ + -ಮೆ$_1$]

ಸಲ್ಲ 'ಸಲ್' ಪರಾ.

ಸಲ್ಲಕಿ (ನಾ). ಒಂದು ಬಗೆಯ ಮರ; ತದಕು; ಆನೆಬೇಲ: ಸೈನ್ಯದಂತಿ ಕರೋಚ್ಚಾಟಿತ ಸಲ್ಲಕೀಕಿಸಲಯಂ (ಆದಿಪು. ೧೩-೫೫); ತವೆ ಮುಂ ತಿಂದು ನಿದಾಘಸಲ್ಲಕಿಯಂ . . . ಗರ್ಜಿಸಿದತ್ತಗಲ್ದಿನಿಯರಂ ಕಾರಂಬ ಮಾರದ್ವಿಪಂ (ಜಗವಿ. ೪-೨೨). [ಸಂ. ಸಲ್ಲಕಿ , ಸಲ್ಲಕೀ]

ಸಲ್ಲಕ್ಷಣ (ನಾ). ಒಳ್ಳೆಯ ಲಕ್ಷಣ: ಸಲ್ಲಕ್ಷಣಗುಣನಿಧಿಗಳ್ ಪಲ್ಲಣಂಗಟ್ಟಿ ಬಂದಿರ್ದುವು (ಪುಷ್ಪಸ. ೫-೧೦). [ಸಂ.]

ಸಲ್ಲಗಳೆ 'ಸಲ್' ಪರಾ.

ಸಲ್ಲಗೆ 'ಸೊಲ್ಲಗೆ$_1$' ನೋ.

ಸಲ್ಲಗೆಡ್ಡೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಗಡ್ಡೆ: (ಮೃಡಿಗಾ. ೧೦-೧೬೭). [< ಸಲ್ಲ$_1$? + ಗಡ್ಡೆ (< ಗಡ್ಡ)]

ಸಲ್ಲಣೆ (ನಾ). (?) : ಕಾಂಚನಾEನಾಂತಿಬರನೆಂದ ಸರ್ವಮೋಹಿನಿಮಾರ ಪಂಚ ಸಲ್ಲಣೆಗಳ ಪ್ರಯೋಗಮಂ ಗೈದೊಡೆ (ನವಮೋ. ೪-೧೬). [?]

ಸಲ್ಲಪನ (ನಾ). ೧. ಸರಸವಾದ ಮಾತುಕತೆ; ಸಲ್ಲಾಪ: 'ಸಲ್ಲಪಿಸು' ಪರಾ. ೨. (?) : ಚಿತ್ತದಿಂದಾದ ವಿಷಯವನು ಸಲ್ಲಪನನೇ ಕೂಡಿತಂದು ನಿಜತೇಜಸ್ಸಹಸ್ರ ಪದಿಯೇ ಬ್ರಹ್ಮಾಗ್ನಿಯಲ್ಲಿಕ್ಕುವುದು (ವೀಶಪು. ೫-೧೮-೧೯). [< ಸಂ. ಸಂಲಪನ]

ಸಲ್ಲಪಿಸು (ಕ್ರಿ). ಸರಸವಾಗಿ ಮಾತುಕತೆಯಾಡು; ಸರಸಸಂಭಾಷಣೆ ನಡೆಸು: ನೀವೆಲ್ಲ ಮೆಲ್ಲುತ್ತ ಸಲ್ಲಪಿಸುವಿರಾದರೆ ನಮಗದೇ ನೆಮ್ಮದಿ (ಸವಚಿ. ೨೯೦).

[ಸಲ್ಲಪನ + -ಇಸ್ಕು]

ಸಲ್ಲಲಿತ (ಗು). ೧. ಚೆಲುವಾದ; ಸುಂದರವಾದ: ಎಲ್ಲಿತ್ತೊ ಗೀತವಾದ್ಯ ಸಲ್ಲಲಿತವಧೂಜನಪ್ರವೃತ್ತಂ ನೃತ್ತಂ (ಗದಾಯು. ೫-೪೩). ೨. ಹಿತವಾದ; ಇಂಪಾದ: ಕುಸುಮಗಂಧಿ ಸಲ್ಲಲಿತಕೋಕಿಲಾಲಾಪೆ (ಚೈಮಿಭಾ. ೧೮-೨೪). ೩. ಶ್ರೇಷ್ಠವಾದ; ಒಳ್ಳೆಯ : ಪದವಿಡುವೆಡೆಯೊಳ್ ಪಲ್ಲವದೊಳ್ ಪದದೊಳುಭಯಗಣ ಸಮನಾಗಲ್ ಸಲ್ಲಲಿತಕೀರ್ತಿಯಾದಪುದು (ಛಂದೋಂಬು. ೧-೪೬ ಅಡಿಪದ್ಯ); ಬಸವಂ ಸಲ್ಲಲಿತ ಕಾಮಿತಫಲಂಗಳನಿತ್ತು (ಬಸಪು. ೯-೧೯). (ನಾ). ೪. ಅಂದ; ಚೆಲುವು: ಶಿವತತ್ವಾದಿಗುಣನಿಚಯಸಲ್ಲಲಿತವಾದವಯವಂಗಳವಿಲ್ಲದಿರವಂ ಮಾಡಿ (ಬಸಪು. ೩೯-೧೩); ತಲ್ಲಕ್ಷಣಂಗಳಂ ಸಲ್ಲಲಿತಮಾದ ಹಯಮಿಲ್ಲಿ ವಿಧಿವಶದಿಂದಮಿಲ್ಲದಿರ್ದೊಡೆ ಧರಾವಲ್ಲಭನ ರಂಜಿಸುವ ಮೆಲ್ಲಡಿಗಳಂ ಕಾಣಬಲ್ಲೆನೆ (ಚೈಮಿಭಾ. ೪-೫).

[< ಸಂ. ಸಂಲಲಿತ]

ಸಲ್ಲಲಿತಾಂಗ (ನಾ). ಚೆಲುವಾದ ಅವಯವ; ಸುಂದರವಾದ ಅಂಗ: ಮಲ್ಲಿಗೆಯಂ ನಗೆಯಿಂ . . . ತೋರ್ವರ್ ಸಲ್ಲಲಿತಾಂಗದ ಲತಾಂಗಿಯರ್ ಮಾನಿನಿಯರ್ (ಜಗವಿ. ೨-೨೮). [ಸಲ್ಲಲಿತ + ಅಂಗ]

ಸಲ್ಲಲಿತಾಂಗಿ (ನಾ). ಚೆಲುವಾದ ಅಂಗಗಳನ್ನುಳ್ಳವಳು; ಸುಂದರಿ: ಸಲ್ಲಲಿತಾಂಗಿಯ . . . ತಳ್ವಿಲ್ಲದೆ ನೋಟ್ಟೊಡೆ ಚೋದ್ಯಂ ಚೆಲ್ವಂ ಬೀಱುವ ವೊಲಿರ್ದುವವಯವವನಿತುಂ (ಧರ್ಮಾಮೃ. ೧೩-೧೧೨); ಸಲ್ಲಲಿತಾಂಗಿ ಭೂಷಣಮಣಿ ದ್ಯುತಿಯಿಂ . . . ನಡೆತಂದಳ್ (ಜಗವಿ. ೧೦-೪೩). [ಸಲ್ಲಲಿತಾಂಗ + -ಇ$_1$]

ಸಲ್ಲವಿಡು 'ಸಲ್' ಪರಾ.

ಸಲ್ಲಾ 'ಸಲಹೆ' ನೋ.

ಸಲ್ಲಾಗಾರ 'ಸಲಹೆಗಾರ' ನೋ.

ಸಲ್ಲಾಪ (ನಾ). ಪರಸ್ಪರ ಸರಸವಾಗಿ ಆಡುವ ಮಾತುಕತೆ; ಸರಸಸಂಭಾಷಣೆ: ''ಪರಸ್ಪರಾಲಾಪಮಕ್ಕುಮದು ಸಲ್ಲಾಪಂ'' (ಮಪ್ರತೋ. ೭೯-೨೪); ಶಶಿವದನೆಯೊರೆವುತ್ತಿಪ್ಪ ಸಲ್ಲಾಪಂಗಳಾತಂಗೆ ಉರಿಯೊಳಾಜ್ಯವನೆಱೆದೊಡಂತುಬ್ಬರಿಸಿ (ಬಸಪು. ೪೫-೧); ಹೆಂಡತಿಯೊಡನೆ ಸರಸವಿಲ್ಲ; ಸಲ್ಲಾಪವಿಲ್ಲ (ಬಿಟ್ಟುಹೂ. ೧೦೩). [< ಸಂ. ಸಂಲಾಪ]

ಸಲ್ಲಾಪಿಸು (ಕ್ರಿ). ಸ್ನೇಹದಿಂದ ಮಾತುಕತೆಯಾಡು ,— ಸಂಭಾಷಿಸು: ಮಾಚಕಬ್ಬೆ . . . ಒಂದುದಿನ ಮಗಳೊಡನೆ ಸಂತೋಷದಿಂದ ಸಲ್ಲಾಪಿಸುತ್ತ 'ನೀನ್ಯಾರನ್ನು ಮದುವೆಯಾಗಲಿಚ್ಛಿಸುವೆ ?' ಎಂದು ಕೇಳಿದರು (ಶಾಂತಲಾ. ೧೧).

[ಸಲ್ಲಾಪ + -ಇಸು]

ಸಲ್ಲಾಮ್ 'ಸಲಾಮು' ನೋ.

ಸಲ್ಲಾಮು 'ಸಲಾಮು' ನೋ.

ಸಲ್ಲಾಮುಗ್ಗೈ (ಕ್ರಿ). ನಮಸ್ಕರಿಸು; ಸಲಾಮುಮಾಡು: ಸುರಶಾಳನೋಲಗ ಶಾಲೆಗೈತಂದರು ದೊರೆಗಳು ಸಲ್ಲಾಮುಗ್ಗೆದು (ಕರ್ನಾಕ. ೨೨೮).

[ಸಲ್ಲಾಮು (< ಸಲಾಮು) + ಕೈ$_1$ (< ಕೆಯ್$_1$)]

ಸಲ್ಲಿಕೆ 'ಸಲಿಕೆ$_1$' ನೋ.

ಸಲ್ಲಿಕೆಚೀಟಿ (ನಾ). ಪಾವತಿಪತ್ರ; ರಶೀದಿ : ಅವರಿಗೆ ಹಣವನ್ನು ಕೊಟ್ಟು ಸಲ್ಲಿಕೆಚೀಟಿಯನ್ನು ತೆಗೆದುಕೊ (ಡೂಢಿ). [ಸಲ್ಲಿಕೆ (< ಸಲಿಕೆ$_1$) + ಚೀಟಿ$_2$ (< ಚೀಟು$_1$)]

ಸಲ್ಲಿಡು 'ಸಲ್' ಪರಾ.

ಸಲ್ಲಿಸು 'ಸಲಿಸು' ನೋ.

ಸಲ್ಲೀಲೆ (ನಾ). ೧. ಸರಸ; ವಿನೋದ : ಅಲ್ಲಿ ಮುನ್ನವೆ ಪುಗದೆ ಎಲ್ಲ ಭೋಗಂಗಳಂ ಸಲ್ಲೀಲೆಯಿಂ ತೀರ್ಚಿ ಸುಖದ ಸಂದಣಿಗಳಂ ಬಳಿಕ ಬಂದಲ್ಲಿ ಪುಗೆ (ಸಂಬರ. ೧-೬೪); ಪ್ರೌಢವತಿ ಸಲ್ಲೀಲೆಯಿಂ ಗುರುಭಕ್ತಿಯಾಂಡಾರಿಯನಹಗೆ ನೋಡಿ (ಬಾಪು. ೪೦-೬೭). ೨. ಸಂತೋಷ ; ಹಿಗ್ಗು; ಆನಂದ : ಶಿಶುವಿರ ನೋಡಿ ಕೂಡು ಸಲ್ಲೀಲೆಯಿಂದಾ ಖಳಂಗೀವೆನೆನುತಗಚಿಯಂ ಕೂಡಿ ನಡತರುತಿರ್ದನು (ಚಬಪು. ೪೭-೨); ಇಳಾಧಿನಾಯಕಂ . . . ಮೃಗೇಂದ್ರವಿಷ್ಟರೋಪವಿಷ್ಟನಾಗಿ ಸಲ್ಲೀಲೆಯಿಂ ಮೆಲ್ಲನೆ ಕುಳ್ಳಿರ್ದು (ರಾಜಶ�ೇ. ೧೨-೪೧ ಪ). ೩. ಸೊಗಸು; ಚೆಲುವು : ನಲ್ಲಂದಿಂದಿಸೆ ಪುಷ್ಪಬಾಣನರ್ದಯಂ ಬೆಂಬಟ್ಟು ಬೆಳ್ಳಾಗಿ ತಕ್ಕೆಲ್ಲಂ ಕಿಟ್ಟಿರ್ದಗಟ್ಟು ಜಂಗಮಲತಾಸಲ್ಲೀಲೆಯರ್ ಬಾಲೆಯರ್ ಚೆಲ್ಲಂ ಬೇಂಟದ ತೋಟಯೊಳ್ ತೊಡರೆ (ಕಾವ್ಯಸಾ. ೫೫೧ ಪದ್ಯ). [< ಸಂ. ಸಂಲೀಲಾ]

ಸಲ್ಲು 'ಸಲ್' ನೋ.

ಸಲ್ಲುವಳಿ 'ಸಲ್ವಳಿ' ನೋ.

ಸಲ್ಲೆ$_1$ 'ಶಲ್ಯ$_1$' ನೋ.

ಸಲ್ಲೆ$_2$ 'ಸರ್ಲೆ' ನೋ.

ಸಲ್ಲೆ$_3$ 'ಸಲಹೆ' ನೋ.

ಸಲ್ಲೆಯ 'ಸಲ್ಲೆಹ' ನೋ.

ಸಲ್ಲವಿಕ್ಕು (ಕ್ರಿ). (ಯುದ್ಧಕ್ಕೆ ಹೊರಡುವ ಸೂಚನೆಯಾಗಿ) ವಸ್ತ್ರವನ್ನು ಬೀಸಿ ಬೀಳ್ಕೊಡು : ಸಲ್ಲವಿಕ್ಕಿ ಬರುದಿನ ಭಟರ್ಕನೂರ್ವರ ಬೀಳ್ಕೊಟ್ಟು ತ್ವರಿತದೊಳಾ ನಾಗತನಯ (ನಾಗಕು. ೧೮-೯೬). [ಸಲ್ಲಿ$_1$ (< ಶಲ್ಯ$_1$) + ಇಕ್ಕು]

ಸಲ್ಲೆಹ 'ಸೆಲ್ಲೆಹ' ನೋ.

ಸಲ್ಲೇಖ (ನಾ). [ಜೈನ] ಸಾಯುವವರೆಗೆ ಉಪವಾಸವನ್ನು ಕೈಗೊಳ್ಳುವ ಒಂದು ಬಗೆಯ ವ್ರತ; ಅನಶನವ್ರತದಿಂದ ದೇಹತ್ಯಾಗ ಮಾಡುವ ಒಂದು ವಿಧಿ : ಧರ್ಮದ ಚಾರುಮಹಿಮೆಯ ಪೇಳ್ದ ಮುನಿಗಳ ಕಾರುಣದಿ ಕೈಕೊಂಡು ದೀಕ್ಷೆಯ ಗೈದು ಸಲ್ಲೇಖ (ಬಜ್ಜಪ್ಪ. ೯೦-೬೪). [ಸಂ. ಸಲ್ಲೇಖಾ./ ಪ್ರಾ. ಸಂಲೇಹಾ]

ಸಲ್ಲೇಖನ (ನಾ). = ಸಲ್ಲೇಖ : ಗಂಗರಾಜರು ಸಲ್ಲೇಖನವನ್ನು ಕೈಗೊಂಡು . . . ಪಂಚಪದಗಳನ್ನು ಧ್ಯಾನಿಸುತ್ತ ಆಹವನ್ನು ಮರೆತರು (ಶಾಂತಲಾ. ೧೪೮); ಸಲ್ಲೇಖನವೆಂದರೆ ಸಾಯುವವರೆಗೆ ನಿರಶನವ್ರತವನ್ನು ಕೈಕೊಳ್ಳುವುದು (ಭಾರದ. ೧೮೫).

[ಸಂ./ ಪ್ರಾ. ಸಂಲೇಹಣಾ]

ಸಲ್ಲೇಖನವಿಧಿ (ನಾ). [ಜೈನ] ಸಲ್ಲೇಖನವೆಂಬ ವ್ರತ, — ಕಟ್ಟಳೆ : ಸಲ್ಲೇಖನ ವಿಧಿಯಿಂ ಸಮಾಧಿಯ ಪಡೆದು ಸ್ವರ್ಗಪ್ರಾಪ್ತೆಯಾದಳು (ಎಕ. II. ೬೮೯-೧೬; 1213); ಸಲ್ಲೇಖನವಿಧಿಯಿಂದ ಮುಡಿಪಿದವರ ಸ್ಮಾರಕಗಳಿಗೆ ನಿಸಿದಿಗಲ್ಲುಗಳೆನ್ನುವರು (ಸಾಹಿಸ. ೧೨). [ಸಂ.]

ಸಲ್ಲೇಖಸವ್ರತ (ನಾ). = ಸಲ್ಲೇಖನವಿಧಿ : ಅತ್ತಯವರು ಶ್ರವಣಬೆಳುಗೊಳಕ್ಕೆ ಹೋದನಂತರ ಸಲ್ಲೇಖನವ್ರತವನ್ನು ಆರಂಭಿಸಿದುದೂ . . . ತಿಳಿಯಿತು (ಶಾಂತಲಾ. ೩೮೩). [ಸಂ.]

ಸಲ್ಲೇಖನೆ (ನಾ). = ಸಲ್ಲೇಖ : ಕೃತಮಿತ್ರಪ್ರಣಯಂ ಜೀವಿತಮರಣಾಶಂಸ ವಿಭವಸೌಖ್ಯನಿದಾನಂ ವ್ಯತಿಪಾತಮಕ್ಕುಮತ್ಯುರ್ಜಿತಮಾಗುತ್ತಿರ್ದ ಚರಮಸಲ್ಲೇಖನೆಯೊಳ್ (ಸುಕುಮಾ. ೬-೩೯); ಸಲ್ಲೇಖನಾಸಮ್ಮದದಿನ್ದಂ ದೇಗಿ ಪೋಚಾಮ್ಮಿಕೆ ಸುರಪದಮಂ ಲೀಲೆಯಿಂ ಸೂಳೆಗೊಂಡಳ್ (ಎಕ. II, ೧೧೪-೩೨; 1120); ಸರ್ನ್ಯಾವಸಾನದೊಳ್ ಉಪವಾಸಮಂ ಮಾಡಿ . . . ಶರೀರತ್ಯಾಗಂಗೆಯ್ದುದು ಸಲ್ಲೇಖನೆಯೆಂಬುದು (ಶಕ್ರಪ್ರ. ೨೮೯). [ಸಂ. ಸಲ್ಲೇಖನ]

ಸಲ್ವ 'ಸಲ್' ಪರಾ.

ಸಲ್ವಳಿ, ಸಲುವಳಿ, ಸಲ್ಲುವಳಿ (ನಾ). ೧. ಸಲ್ಲುವುದು; ಸಂದಾಯ: ನಡವಳಿ, ನುಡಿವಳಿ, ಸಲ್ವಳಿ (ಶಮದ. ೨೧೫ ಪ್ರಯೋ). ೨. ಹೊಂದಿಕೆ; ಸೇರಿಕೆ: ಸೇನಬೋವ ಆಚಯಸಿವಯನ್ಗಳು ಹಿಲಿಯ ಕೆಲೆಯ ಕಲ್ಲ ತುಮ್ಮನಿಕ್ಷಿದರು ಅದಕೆ ಸಲ್ವಳಿಯಾಗಿ . . . ಬಿಟ್ಟು ಗದ್ದ ಸಲಗೆವೊನ್ನು (ಎಕ. XVI, ಚಕ್ಕನಾ. ೭೦-೧೬; 1235). **ಸಲುವಳಿ**: ೧. ತರದ ರೂಪದಲ್ಲಿ ಸಂಬಳ, ಕಂದಾಯ, ಬಡ್ಡಿ ಮುಂತಾದ ಸಲುವಳಿಗಳ ರೂಪದಲ್ಲಿ ಹಣವು ಬಳಕೆಯಲ್ಲಿ ಬರುವುದು (ಮಾವಾದ. ೧೧೭). ೨. ಒಂಟಿಯಾಗಿದ್ದರೂ ಇರುವ ತನಕ ತನ್ನ ಸುತ್ತಿನೊಡನೆ ಸಲುವಳಿಯಾಗಿ ನಡೆದುಕೊಳ್ಳಬೇಕು (ಬಂಟವಂ. ೨೯೯). ೩. ಅನ್ವಯಿಸುವಂತಹುದು; ಅನ್ವಯ : ಸಾಮಾನ್ಯರಿಗೆ ಸಾಮಾನ್ಯವಾಗಿ ಸಲ್ಲುವ ಈ ಸತ್ಯವು ಮಹಾಜನರಿಗೆ ವಿಶೇಷವಾಗಿ ಸಲುವಳಿಯಾಗುವುದು (ಕಮಿಂಚ. ೪೧); ವೇದಾದಿಗಳಲ್ಲುಕ್ತವಾದುದು; ವಿಶೇಷವಾದ ಕೆಲವು ವಂಗಡಕ್ಕೆ ಮಾತ್ರವೆ ಸಲುವಳಿಯಾಗುವುದು (ನಾಡೋಜ. ೩೫೭). ೪. ಅರ್ಪಿತವಾಗುವುದು; ಅರ್ಪಣೆ : ಆ ಪ್ರಸನ್ನಪ್ರಸಾದವನೊಳಕೊಂಡು ಉತ್ತಮೋತ್ತಮವಾಗಿ ನಿಮಗೆ ಸಲುವಳಿಯಾದುದನು ಆರು ಬಲ್ಲರಯ್ಯ (ಷಡ್ಗುವ. ೧೦೩-೨೦); ಮಹಾಬೆಳಗಾದ ನಿರಾಳಲಿಂಗವನ್ನು ಈ ಪೂಜೆ ಮುಟ್ಟಲಾರದು ಅದಕ್ಕೆ ಸಲುವಳಿಯಾಗುವುದು ನಿಷ್ಕಳದ ಪೂಜೆ (ಮೋಳಮಾ. ೧೦೬ ಪ್ರಸ್ತಾವನೆ). ೫. ಬಳಕೆ; ಚಲಾವಣೆ; ರೂಢಿ : ಶ್ರೀಭಂಡಾರದ ಸಲುವಳಿಯ ಪಡಿಯ ಕೊಳಗದಲೂ ದಿನ ೧ ಕಂ ತಳಿಗೆ ನಾಲ್ಕಕೆ ಅಮೃತಪಡಿ (ಎಕ. XIV. ಶ್ರೀರಂಗ. ೨೬೬-೮; 1534); ಇವು ಸಲುವಳಿಯ ಭಾಷೆಯ ಸಾಮಾನ್ಯ ನಿಯಮಗಳಿಂದ ಸಿದ್ಧಿಸುವುದಿಲ್ಲ (ಕಒಸಾ. ೧೨೨); ಪಂಡಿತರಲ್ಲಿ ಸಂಸ್ಕೃತ – ಪ್ರಾಕೃತ ಎರಡನ್ನೂ ಬಲ್ಲವರ ಸಂಖ್ಯೆ ಹೆಚ್ಚಾಗುತ್ತಿರಬೇಕು. ಅಂತೇ ಎರಡೂ ಭಾಷೆಗಳಲ್ಲಿ ಶಾಸನಗಳನ್ನು ಬರೆಯುವ ಸಲುವಳಿ ಉಂಟಾಗಿರಬೇಕು (ಕಸಾಚ. ೬೧). ೬. ಅನುಷ್ಠಾನ; ಆಚರಣೆ: ಸಲ್ಲದುದುEದತಿ ಸಲುವಳಿಯ ನಡಿಸಿದರಿಲ್ಲಿ ಬಿಡೆವು (ಕಪ್ರಾಕಾ. ೧೦-೫೦); ಆ ವಿಧಿಯು . . . ಯಾವ ನ್ಯಾಯಾಲಯದಲ್ಲಿಯೂ ಅದರ ಸಲುವಳಿಯ ವಿಷಯದಲ್ಲಿ ಯಾವ ಬಗೆಯ ಸಂದೇಹದ ಪ್ರಶ್ನೆಗೂ ಅವಕಾಶವಿರತಕ್ಕುದಲ್ಲ (ಭಾಧಾನ. ೧೪). ೭. ತಕ್ಕುದು; ಉಚಿತವಾದುದು: ಕೇತಕಿಯು ಶಿವಗೆ ಸಲುವಳಿಯಿಲ್ಲ (ಗುರುಚಾ. ೮-೬೧); ಪುರುಷನಡವಳಿ ನ್ಯಾಯವಾಗಲಿ ವಿವರಿಸಲು ಅನ್ಯಾಯವಾಗಲಿ ಸಲವುದದು ಸತಿಯರಿಗೆ ಸಲುವಳಿಯೆ (ಉತ್ತಪ. ೫೩-೨೯); ಅವನು ನಮ್ಮಲ್ಲಿ ಸಲುವಳಿಯಿಂದ ನಡೆದುಕೊಳ್ಳುತ್ತಾನೆ ಎಂದು ನಾನೇನೂ ತಿಳಿದುಕೊಂಡಿಲ್ಲ (ವಚಭಾ. ೨೪೪). ೮. ಪರಂಪರಾಗತವಾದುದು; ರೂಢಿಯಿಂದ ಬಂದುದು: ಎಸೆವ ವೇತಂಡ ಕರ್ಣರು . . . ಒಸಗೆಯಿಂದಾಸನಸ್ಥಿತರಾಗಿ ಪಂಚಾರ್ಣದೆಸಕದಿಂ ಸಲುವಳಿಯ ವೇದಮಂತ್ರಗಳಿಂ ದೇಶಿಕನುಭಯಭಾಗದಿ ಪರಮಸುಜ್ಞಾನಸಂತೋಷದಿಂ ಮಿಗೆ ಕುಳಿತು (ವಿಕೋಪು. ೮-೬೯); ಓಲೆ ಚಿನ್ನದ ನೀತಿಯಿಂದವೆ ಮೇಲೆ ಜನಿಸುವ ಭಾಗ ಭೇದಕೆ ಕಾಲಹರನೊಳಭೇದವನು ಪೇಳುವುದು ಸಲುವಳಿಯ (ಪಂಚಾಶೀ. ೫-೧೦); ಮಾರಿ ನಿಮ್ಮಾಜ್ಞೆಗಳ ನಡೆದರೆ ಧಾರುಣೇಶರ ಕಯ್ಯ ಕಪ್ಪವ ಕೌರಿಯದಿ ತಂದೊಡನೆ ಸವನನ ಮಾಡೆ ಸಲುವಳಿಯ (ಉತ್ತಕ. ೫೧-೭). **ಸಲ್ಲುವಳಿ** : ೨. ಸಲ್ಲುವಳಿ ವಧುವರರ್ ಸರಿಯಾದರೆಂದು . . . ನಲಿದರು (ನಂದಿಮಾ. ೨೦-೪). [ಸಲ್ + -ವಳಿ$_3$]

ಸಲ್ಸು 'ಸಲಿಸು' ನೋ.

ಸವ$_1$ (ಗು). ೧. ಜೊತೆಯ; ಜೋಡಿಯ: 'ಸವಗಾಣ', 'ಸವಗಾಣಿಕೆ' ಪರಾ. (ನಾ). ೨. ಎಣೆ; ಸಮ; ಸಮಾನ: ಮೀಯದಿರ್ದಹಿತನಂ ಕಡಿದಾಗಳೆ ಮಿಂದನಾ ಚಲಂ ಸಂದುದಱಿಂ ಸವಂ ಪರಶುರಾಮನಿನಾ ಕುವರಂಕರಾಮನಿಂ (ಗದಾಯು. ೧-೧೯); ಸವನೆನಗದಾರೆನುತಲತ್ಯುತ್ಸವದಿ ನರಸಯ ಕೃಷ್ಣರಾಯನ ಧವಳ ಕೀರ್ತಿಸುಧಾಂಶು ಗರ್ವಿಸುತಿರ್ಪುದನವರತ (ಶಿಮ್ಮಶಾಂ. ೧-೨೦ ಪೀಠಿಕಾಸಂಧಿ); ಸವನಿಲ್ಲ ಮುಲ್ಲೋಕದಲ್ಲಗಜೆ ಶ್ರೀರಾಮನಾಮ ಸರ್ವೋತ್ಕೃಷ್ಟವು (ವೆಂಕಾರಾ. ೨-೨೨-೬). ೩. ಒಂದೇ ಬಗೆಯಾದುದು; ಸಮಾನರೀತಿಯದು : ಹಸಿವು ತೃಷೆ ನಿದ್ರೆಗಳು . . . ಪಶು ಪಕ್ಷಿ ನರಗೆ ಸವನಿರಲು ಕುಲವೆಂಬ ಘಸಣೆಯೆತ್ತಣದು (ಸರ್ವಜ್ಞ. ೯೭೦).

ಸವಸವ (ದ್ವಿರುಕ್ತಿ) : ಜವಮುಱಿದೊಂದು ಸೋಗೆನವಿಲೊಯ್ಯನೆ ಕರ್ಕಡೆಗಾಸಿಯಾಗಿ ಪಾಱುವುದುಮಿದೆನ್ನ ನಲ್ಲಳ ರತಿಶ್ರಮವಿಶ್ಲಥಕೇಶಪಾಶದೊಳ್ ಸವಸವನಾಗಿ ತೋಱಿದಪುದೆಂಬುದೆ ಕಾರಣದಿಂದದಂ ಗುಣಾರ್ಣವನಿಡಲೊಲ್ದನಿಲ್ಲ (ಪಂಪಭಾ.೫-೫೧). ಸವಬೆಸ$_2$ = ಸರಿ ಮತ್ತು ಬೆಸ; ಸಮ ಮತ್ತು ಅಸಮ : ಎವಗೆ ತವಗೆಂದೀ ಹವಿರ್ಭಾಗವನು ಮುತ್ತಿತು ದೇವತತಿ . . . ದಿವಿಜರೊಳಹಸುಗೆಗಳ ಲೆಕ್ಕದ ಸವಬೆಸನ [ಪಾಠಾಂ. ಸವರಣೆಯ] ಸವಿವಾಯ ತುತ್ತಿನ ತವಕಿಗರು ಹೊಯ್ದಾಡಿದರು ಸಭೆಯಲಿ ಸುರೇಶ್ವರನ (ಕುವ್ಯಾಸ. ೭-೩೯). ಸವಸೋದರರ್ = ಒಡಹುಟ್ಟಿದವರಿಗೆ ಸಮಾನರಾದವರು; ಸಹೋದರ ಸಮಾನರು : ಕಿವಿಸವಿ ದನಿ ಕಣ್ಸವಿ ರೂಪವ ಧರಿಸೆಲೆ ಗಜವೆಡಂಗ ನೀನುಱಿದೊಡೆ ಸಾವವಳೆನಗೆ ಮಿಕ್ಕ ಗಂಡರ್ ಸವಸೋದರರೆಂದು ತಿಳಿಪಿದಳ್ ನಂಬುಗೆಯಂ (ಯಶೋಚ. ೨-೫೨). [< ಸಂ. ಸಮ]

ಸವ$_2$ 'ಸಬ' ನೋ.

ಸವ$_3$, ಶ್ರವ$_1$, ಸರಮ$_1$, ಸ್ರಮ (ನಾ). ೧. ದಣಿವು ; ಆಯಾಸ; ಶ್ರಮ: ಮಕಾರಕ್ಕೆ ವಕಾರಂ . . . ರೋಮ - ರೋವ ; ಶ್ರಮ - ಸವ (ಶಮದ. ೨೬೩ ಪ್ರಯೋ). ಶ್ರವ$_1$: ೧. ಅಭಿಮಾನಿ ಸಜ್ಜನರು ಆವವಸ್ಥೆಯನ್ನೆದಲದು ನಿನ್ನ ತಾಗುವುದು ಸಾವನ್ನ ಶ್ರವ[ಪಾಠಾಂ. ಮೃಡ]ಬೇಡ ನಿಜರೂಪ ತೋಱು (ಸಿದ್ಧರಾ. ೨-೬೦). ೨. ಶಸ್ತ್ರಾಭ್ಯಾಸ: ಶ್ರವವ ಮಾಡಬಹುದಲ್ಲದೆ ಕಳನೇಱಿ ಕಾದುವುದರಿದು ನೋಡಾ (ಬಸವ. ೨೧೫); ಮುನ್ನೂರಾ ಅರವತ್ತುದಿನ ಶ್ರವವ ಮಾಡಿ ದಿನ ಒಂದು ಕಳನೇರಿ ಕೈಮರೆದಂತೆ ಆಯ್ತು (ಸಿದ್ಧಪು. ೩೦-೨೪). ಸರಮ$_1$: ೧. ಶ್ರಮ — ಸರಮ (ಶಬ್ದಾನು. ೧೪೭ ಪ್ರಯೋ). ಸ್ರಮ : ೧. ಮುತ್ತುವೋಲ್ ಬೀಳುತಿರ್ದಾ ಸ್ರಮದುದಕವನೊತ್ತಿ ಬೇಗದೆ ಸೆಱಗಿಂದ (ಕಂನವಿ. ೧೦-೫೦). [< ಸಂ. ಶ್ರಮ]

ಸವ$_4$ (ನಾ). ೧. ಸೋಮಲತೆಯಿಂದ ರಸವನ್ನು ತೆಗೆಯುವುದು; ಸೋಮರಸವನ್ನು ಹೊರಹೊಮ್ಮಿಸುವಿಕೆ. ೨. ಹೂವಿನ ರಸ; ಮಕರಂದ. ೩. ದೇವರಿಗೆ ಸೋಮರಸವನ್ನು ಅರ್ಪಿಸುವುದು; ಯಜ್ಞ; ಯಾಗ: "ಯಾಗಃ, ಯಜ್ಞಃ . . . ಸವಃ, ಸತ್ರಂ — ಈ ೧೨ ಯಾಗಂ" (ಪಲಾಯು. ೬೮-೨೬೦). ೪. ಸಂತಾನ; ಸಂತತಿ. ೫. ತಂದೆ ; ಜನಕ. [ಸಂ.]

ಸವಂಗ, ಸವಗ$_1$ (ನಾ). ೧. ಮೈಗೆ ತೊಡುವ ಒಳಅಂಗಿ : ನವನಖಪದ ರೇಖೆಗಳಂ ಸವತಿಯರಿದಿರೊಳ್ ವಿಲಾಸವತಿಯರ್ ಮೆಱೆಯಲ್ ಅವಯವದಿಂ ಕುಪ್ಪಸಮಂ ಸವಂಗಮಂ ಕಳೆದು ಕಳೆದರಲ್ಲಿಂದವರಂ (ಆದಿಪು. ೧೧-೭೩); ಚಿನ್ನದ ಸವಂಗಮಪೂರ್ವದ ಮೊಚ್ಚೆಯಂ ಪವಣ್ಣಡೆದ ಸುವರ್ಣಪಾರಿವದ ಕುಪ್ಪಸಮೊಪ್ಪೆ ಬೆಡಂಗನಾಳ್ದು ಕಣ್ಗೆಡಱದೆ ಪೆಂಡವಾಸದ ವಿಳಾಸದ ಸೂಳೆಯರೊಪ್ಪಿ ತೋಱಿದರ್ (ಪಂಪಭಾ. ೯-೧೦೩); ಒಂದು ಬಗೆಯ ಆಭರಣ (ಕಿ); "ಕವಚ" (ಪಂಪದೀ. ೧೪೦); "ತೊಟ್ಟುಕೊಳ್ಳುವ ಸಾಮಗ್ರಿ" (ಪಂಪಭಾ. ಕೋಶ); ತಳಿರ ಸವಂಗ [ಪಾಠಾಂ. ತರಂಗ] ಪೂತ ಸೆಳೆಗೊಂಬಿನ ಬಿಲ್ . . . ಒಪ್ಪೆ ತನು ನೀಲಶಲಾಕೆ ವೊಲಾಗೆ ಕಾಮನಂತಳವಡೆ ಬಂದಳಂದು ಮೊಲೆ ಬಾರದ ಬಾಲೆ ಪುಳಿಂದಲೀಲೆಯಿಂ (ಲೀಲಾವ. ೮-೨೮). ೨. ಯುದ್ಧದ ಸಮಯದಲ್ಲಿ ಶರೀರದ ರಕ್ಷಣೆಗಾಗಿ ತೊಟ್ಟುಕೊಳ್ಳುವ ಸಾಮಗ್ರಿ; ಕವಚ : ಕರ್ಮರಾಜನೆಂಬ ವ್ಯಾಧರಾಜಂ . . . ಲೋಭಮೆಂಬ ಸವಂಗಮಂ ತೊಟ್ಟು . . . ಋಷಿದೂಷಣಮೆಂಬ ಬಡಿಗಳಿಂ ಕೆಡೆಯ ಮೋದುತ್ತುಂ (ಧರ್ಮಾಮೃ. ೧೦-೮೭); ಗುಡಿ ನೇಣ್ . . . ದಂಡಿಗೆ ಸವಂಗಂ ಮೊಚ್ಚೆಯಂ . . . ತಾಮ್ರಸಭಾಂಡಮೆಂಬಿವಿನಿತುಂ ದಂಡಿಂಗೆ ಸಾಮಗ್ರಿಗಳ್ (ಸೂಕ್ತಿಸು. ೧೮-೨೩). ಸವಗ$_1$: ೨. "ಸವಗಮೆಂದು ಕವಚಂ" (ಕಶಸಾ. ೫೮-೨೭೧); ತೊಡೆಗಳೊಳಮರ್ಚಿದ ಸೌವರ್ಣದ ಸವಗಂಗಳ ಸುಚ್ಛವಿಯ ಮೊಚ್ಚೆಯಂಗಳಪ್ಪ ಪ್ರಭೆಗಳ್ ಪಲವುಂ ಬಣ್ಣದ ಪರಿವೇಷಮಂ ಪಡೆಯೆ (ಮಹಾನೇ. ೧೨-೩೨ ವ); ಹೋಳಾದ ಕವಚವ ಹೊಲಿಸಿದರು ಬಾಹುರಕೆ ಸವಗದ ಬಿರುಕ ಬೆಸಸಿದರು (ಕುವ್ಯಾಭೀ. ೫-೩೬); ತೆಗೆದು ತೇಜಿಗಳ ಹಲ್ಲಣಿಸಿ ಹಕ್ಕರಿಕೆಯ ಪುಗಿಸಿ ಸವಗ ಜೋಡುಗಳನು ಬಿಗಿದು ಬಿರಿದನಿಕ್ಕಿ ಪೊಱಮಟ್ಟರೊಸೆದು ಕಾಳೆಗಕಾ ರಾಯರಾವುತರು (ಕುರಾಸಾಂ. ೧೧-೧೬). ೩. ಬಟ್ಟೆ; ವಸ್ತ್ರ : ಬಣ್ಣದ ಸವಗವನುಟ್ಟರೆ ಕಣ್ಣುಟ್ಕಿಪ ಮಿಂಚುಸೊಡರ ಕೋಲಂ ಪಿಡಿದುಂ ಪಣ್ಣನೆ ನೆಗೆವ ಕುದುರೆಗಳ ಪಣ್ಣಿಸಿ ಘೋಱಾಯ್ತರೇಱಿ ಮೆಱೆಯುವರೊಟ್ಗಿಂ (ಮೃಸೂಮ. ೫-೮೨).

[?./ ಸಂ. ಕವಚ, ಯಮಕ]

ಸವಂಗಂಬುಗು (ಕ್ರಿ). ಕವಚವನ್ನು ತೊಡು : ತೆಗೆ ವಾರುವಮಂ ಹಾರುವ ಬಗೆಯಂ ತನಗಿರುಳ ಬವರಮೆನುತ ಸವಂಗಂಬುಗುವ ಕಟಕಿಗರನಳಿಱಂ ಪುಗಿಸಿದುದು ಭುಜಾಸಿ ಗಂಗದಣ್ಣಾಧಿಪನ (ಎಕ. II, ೭೩-೨೩; 1118). [ಸವಂಗ + ಪುಗು (< ಪೊಗು)]

ಸವಕಟ್ಟು 'ಸಮಕಟ್ಟು$_1$' ನೋ.

ಸವಕರಿಸು (ಕ್ರಿ). ಕೂಡಿಸು ; ಹೊಂದಿಸು : ಕುಳಿತವನ ಕಿವಿಹಿಂಡಿ ಮೇಲಕೆಚ್ಚರಿಸಿ ಲೆಕ್ಕ ಕೇಳುವಿ ಪೈಗೆ ಪೈಯ ಸವಕರಿಸಿ (ನವ್ಯಧ್ವ. ೮-೨). [< ಸವ$_1$ + -ಇಸು$_3$]

ಸವಕಲು 'ಸಮಕಲು' ನೋ.

ಸವಕಲುಕಾಸು (ನಾ). ತೇದುಹೋದ ಕಾಸು; ಸವೆದು ಚಲಾವಣೆಯಾಗದ ನಾಣ್ಯ : ಬಿಟ್ಟೀ ಬಾಡಿನ ಊಟಕ್ಕೆ ಬಂದ ಸಾಹುಕಾರ್ ಆಸ್ತಿಗೌಡರು ಮಾತ್ರ ಮೂರುಕಾಸಿಗಿಂತ ಹೆಚ್ಚಾಗಿ ಹಾಕುವುದಿಲ್ಲ. ಅದೂ ಹಳೆಯ ಸವಕಲುಕಾಸು (ನನ್ನೂರು. ೬೫). [ಸವಕಲು (< ಸಮಕಲು) + ಕಾಸು$_2$]

ಸವಕಲುನಾಣ್ಯ (ನಾ). = ಸವಕಲುಕಾಸು : ಅದರಲ್ಲಿ ಹತ್ತೊಂಬತ್ತುರೂಪಾಯಿ ಚಲಾವಣೆಯಾಗದ ಸವಕಲುನಾಣ್ಯ ಮತ್ತು ಹರಿದ ನೋಟು (ಚಿತಸ. ೧೨೬).

[ಸವಕಲು (< ಸಮಕಲು) + ನಾಣ್ಯ (< ನಾಣಯ)]

ಸವಕಳಿ (ನಾ). ೧. ತೇದು ಹೋದುದು ; ಸವೆದುದು ; ಸವಕಲು : ಸವಕಳಿಯದುದ್ದು ದೆವ್ವಂ ಸೇರಿದ ಸದನಂಗಳಂ ದಾನಮೆನೆ ಕೊಟ್ಟು (ಮಹಾಂತೇ. ೨೯-೧೩); ಹಳೆ ಇಮಾರತುಗಳಲ್ಲಿ ಈ ಪ್ರಕಾರದ ಸವಕಳಿಯ ಕುರುಹುಗಳು ಇರಲಿಕ್ಕೇ ಬೇಕು (ಮುಂಬಯಿ. ೬-೧೭೧). ೨. ಅರಕೆ; ಕೊರತೆ; ನಮೆತ : ಮೈಕೈ ಕಡೆಗೆ ನೋಡಿದರೆ ಸವಕಳಿಯಲ್ಲದೇ ಮತ್ತೇನೂ ಕಾಣದು (ಇಪ್ಪಕ. ೪೦೮); ದುಡಿಮೆಯಿಂದುಂಟಾದ ದಿನದ ಸವಕಳಿಯನ್ನು ತುಂಬಿಕೊಳ್ಳಲಿಕ್ಕೂ ಅನ್ನವೇ ಮುಖ್ಯ (ಗೋಗ್ರಾಸ. ೩೩). 'ಸಮಕಲು' ಪರಾ. [< ಸವೆ$_1$ (< ಸಮೆ$_1$) + ಕಳೆ$_1$ (< ಕಟೆ$_1$)]

ಸವಕಳಿನಾಣ್ಯ (ನಾ). = ಸವಕಲುಕಾಸು : ಆ ಸವಕಳಿನಾಣ್ಯಗಳಂತೆಯೇ ಅವನ ಗ್ರಾಮೊಫೋನ್ ರೆಕಾರ್ಡುಗಳು! (ಮುಂಗಾಪು. ೫೫); ಸವಕಳಿನಾಣ್ಯಕ್ಕಿಂತಲೂ ಸ್ವಾಮಿನಿಷ್ಠವಾಗಿ ಅವು ನನ್ನಲ್ಲಿ ಉಳಿದಿವೆ (ದೇಕನ್ಯೆ. ೧೪೯). 'ಸವಕಲುನಾಣ್ಯ' ಪರಾ.

[ಸವಕಳಿ + ನಾಣ್ಯ (< ನಾಣಯ)]

ಸವಕಳಿರೂಪ (ನಾ). ಸವೆದುಹೋದ ರೂಪ ; (ಒಂದು ಪದದಲ್ಲಿ ಕೆಲವು ಅಕ್ಷರಗಳು) ಲೋಪವಾಗಿ ಉಳಿಯುವ ರೂಪ : ಷಷ್ಠಿಯ 'ಅ' ಪ್ರತ್ಯಯವು ಕೂಡ 'ಅದು' - ಎಂಬುದರ ಸವಕಳಿರೂಪವೆಂದು ಹೇಳುತ್ತಾರೆ (ಭಾಷಾಶಾ. ೩೫).

[ಸವಕಳಿ + ರೂಪ]

ಸವಖಂಡ (ನಾ). ಸಮವಾದ ಭಾಗ : ಸವಖಂಡಂ ಬಿಟ್ಟ ತಂತಮ್ಮಿನಿಯರನಮಿತಂ ಗೆಲ್ದ ಸಂಗ್ರಾಮದೊಳ್ ವೈರಿವಧೂಸಂತಾನಮೋಱಂತಱಸುವುದು ಪತತ್ಕುಂಡಳಾಂ ದೋಳಿತೈಕಶ್ರವಣಂ . . . ಗದ್ದದೋತ್ಕಂಠಕಂಠಂ (ಎಕ. V, ಚನ್ನರಾ. ೧೯೭; 1223; ಶಾಪಮಂ. ೧೨೭೨ ನೋ). [ಸವ$_1$ + ಖಂಡ]

ಸವಗ$_1$ 'ಸವಂಗ' ನೋ.

ಸವಗ$_2$ (ನಾ). ಚರ್ಮದ ಕೆಲಸ ಮಾಡುವವನು; ಮೋಚಿ; ಚಮಗಾರ :

ಸವಗರ್ ಪೊಲೆಯರ್ ಕೀಲಿಗರವಂದಿರೊಳಗಾಗಿ ತಾಯೊಳನುಭವಿಸುವ ಚಿತ್ತವಿಕಾರ ಮನಾನರೆನಲ್ಕೆ ವಿವೇಕವಿದರ್ಕಳಾಂಪರೇ ಪಾತಕಮಂ (ಮಹಾನಂ. ೭-೧೧೯).

[< ಸಮಗಾರ?]

ಸವಗ್ಗ₃ (ನಾ). ಒಂದು ಬಗೆಯ ಮರ : ಸವಗ (ಸಾರ್ಡಾ) – ಕಟ್ಟಿಗೆ ಕೆಲಸಕ್ಕೆ ಬಾರದ್ದು (ಕಭಾಗ. ೪೮). [?]

ಸವಗಡೆ (ನಾ). (?) : ಮುಡಿವಕ್ಕಿಯೊಳ್ ಮುಡಿಯ ಮುಱುಕಮಂ ಮಾಡಿ ಸವಗ[ಪಾಠಾಂ. ಗ]ಡೆಯ ಸಱುಮಿಂಡಿಯರ್ ಮಿಂದೆಳ್ದು . . . ವಿಹರಿಸಿದರು (ನಂದಿಮಾ. ೪-೨೨). [?]

ಸವಗಸನ್ನಣ (ನಾ). ಕವಚ ಮತ್ತು ಅಂಗಿ : ಸಮೋಳಸನ್ನಾಹ – ಸವಗಸನ್ನಣ (ಶಮದ. ೨೮೯ ಪ್ರಯೋ). [ಸವಗ₁ (< ಸವಂಗ) + ಸನ್ನಣ]

ಸವಗಾಣ (ನಾ). ಜೊತೆಯಲ್ಲಿ ಹಾಡುವವನು; ಸಹಗಾಯಕ : ಸವಗಾಣಂ ಗಾಯಕಿಯರ್ಗ ವೀಣೆ ಸಮವಾದಕಂ ಸುವಾದಕರ್ಗೆ ಮನೋಭವಚಾಪಜ್ಯಾರವಮೆನೆ ವಿವೇಕಿಗಳ್ ಗೀತವಾದ್ಯಮೊಗೆವುವು ಹೃದ್ಯಂ (ಜಾಶ್ವಪು. ೧೬-೬೨). [ಸವ₁ + ಗಾಣ₃]

ಸವಗಾಣಕೆ (ನಾ). ಜೊತೆಗಾತಿಯಾದ ವೇಶ್ಯೆ; ಸಹವೇಶ್ಯೆ (?): ಮಂಜುಘೋಷೆಯೆಂಬಚ್ಚರಸೆಯೊರ್ಮೆ . . . ತಂನ ಸವಗಾಣಕೆಯರ ಸಾರಂಗ್ಗ ವೋಪ ತವಕದಿನಾ ಶೃಂಗಿಯಂ ಶ್ರಿಂಗಿಯಂ ಸೋಂಕುವಂತೆ ಸೋಂಕಿ ಪೋಪಾಗಳ್ (ಕೊಲ್ಹಾಶಾ. ೧೫-೨೩; 1186). [ಸವ₁ + < ಗಣಿಕೆ₃?]

ಸವಟು₁ (ಕ್ರಿ). ೧. ನಾಶಮಾಡು; ಹತಗೊಳಿಸು : ಇದಿರಾದ ರಾಜಕುಮಾರರ ಸವಟುತ ಕದನಲಂಪಟ ಕೋಪದಿಂದ (ಜ್ಞಾನಚಿ. ೩೦-೫೦); ಧರೆಗಧಿಪ ನರಹುಳವ ಸವಟುವದರಿದ (ಆದಿಪ. ೬೦-೬). ೨. ಹೊಸಕು ; ತುಳಿ : ಶರಭನು ಸಂಹೃತಮಾಗಿ ನೆಲದಲ್ಲಿ ಸವಟಿಯಿರುವದಂ ನೋಡಿ (ಸೌಗಂಧಿ. ೨೪೪-೧೭); ಐರಾವತವು ಆ ಮಾಲೆಯನ್ನು ಸೊಂಡಿಲಿನಿಂದ ಎಳೆದುಕೊಂಡು ಕಿತ್ತು ಕೆಳಗೆ ಹಾಕಿ ಕಾಲಿನಲ್ಲಿ ಸವಟಿತು (ನೀತಿಚಂ. ೪-೯). [ಪ್ರ. ॥ ತಮಿ. ಚಮಟ್ಟು, ಚವಟ್ಟು; ಮಲ. ಚವಿಟ್ಟು]

ಸವಟು₂ 'ಸೌಟು' ನೋ.

ಸವಟೆಗಾರ (ನಾ). (?) : ಮುದ್ದಗೌಡ ಸವಟೆಗಾರ ನೀಲಕಂಠ . . . ಮುಖ್ಯರಾದ ಸಮಸ್ತಗೌಡುಪ್ರಜೆಗಳು . . . ಕೊಟ್ಟ ಭೂದಾನ (ಎಕ. VIII,ತೀರ್ಥಹ. ೧೨೬-೧೦; 1405).

[ಸವಟೆ₂ + -ಗಾರ (< -ಕಾಱ)]

ಸವಟೆವಾಯ (ನಾ). ಸೊಟ್ಟಗಿರುವ ಬಾಯುಳ್ಳವನು (?) : ಅರ್ಥಾನು ರೂಪಾನ್ವರ್ಥಕ್ಕೆ – ಹೆಟ್ಟಗಾಲಂ . . . ಸವಟೆವಾಯಂ ಗುಳ್ಳಿಗಣ್ಣಂ (ಶಮದ. ೭೬ ಪ್ರಯೋ).

[ಸವಟ್ಟೆ (< ಸೊಟ್ಟ) + ಬಾಯ್ + -ಅ₇]

ಸವಡಿ₁, ಸವಡು₂, ಸವಳಿ (ನಾ). ೧. ಜೊತೆ; ಜೋಡಿ; ಅವಳಿ ಜವಳಿ : ಅವಯವದ ಕುಣಿದು ಮೆಟ್ಟುವ ಸವಡಿಯ ಬಿಜ್ಜಣಿಗೆ ಪಿಡಿದ ಸತ್ತಿಗೆಯ ವಿಳಾಸವಮಮರ್ದ ಲೀಲೆಯಿಂ ಪೆಂಡವಾಸದೊಳ್ ಪೆಂಡಿರೊಯ್ಯನೊಯ್ಯನೆ ನಡೆದರ್ (ಆದಿಪು. ೧೧-೪೧); ಸವಡಿಮಂದರದಂತೆ ಕೀಚಕ ಪವನಸುತರೊಪ್ಪಿದರು (ಕುಮಾಸಿ. ೩-೮೯); ಮೋಹನದ ಬಲ್ಮೊನಲ ಸವಡಿಯೋ ಸೊಗಸಿನವಳಿಯ ಫಲವೊ . . . ಎನಲ್ಕುಶಲವರ್ಕುಶಲದಿಂ ಕಣ್ಗೆಸೆದರಾಶ್ರಮದೊಳು (ಜೈಮಿಭಾ. ೧೯-೪೯). 'ಮುಚ್ಚವಡಿ' ಪರಾ. ೨. ಪದರ; ಮಡಿಕೆ : "ಪೊರೆ ಸವಡಿ" (ಕರ್ಣಾಸಿ. ೮೧-೩೨); ಮೂಱು ಸವಡಿಯ ಹಸುಬೆಯ ಚೀಲದವೊಲು ಮೂಱು ಘಾಳಿಗಳಿಹುವಲ್ಲಿ (ಭರಚಿ. ೧೭-೩೪). 'ಇರ್ಚವಡಿ' ಪರಾ. ೩. ಸೇರುವ ಸ್ಥಳ; ಸಂಗಮ : ಶಿವನು ತನ್ನಯ ನಿರೀಕ್ಷಾಮಾತ್ರದಿಂ ತ್ರಿಪುರದವಗಡದ ಚಕ್ರದಿರುಪಡಗಲದಱೊಳಗೆಸಲು ಸವಡಿ ಹಱಿದವು ಮೂಱು ಪುರವನುರುಪಿದನಮಲಚರಣಾಂಬುಜಕ್ಕೆ ಶರಣು (ಲಶಿಚಂ. ೧೭-೨೦). ೪. ಭಿನ್ನಾಭಿಪ್ರಾಯ; ದ್ವಂದ್ವ: ಪೊಲ್ಲಮೆವೊಲೊಳ್ಳಿತೊಳ ಸೋರ್ದಳಿದು ಪೋ! ತನ್ನುಳ್ಳುವನಿತುಂ ಸವಡಿಗಳ್ ಕಳಿದು – ಲೋಕಂ ಒಲ್ಲ ಪರಿಶುದ್ಧಪರಮಸ್ಥಿತಿಯ ಸೌನ್ದರ್ಯೋಲ್ಲಸನಮದ್ವಯಿತಮಾಗೆ ಕವಿ ಮಾಳ್ಪಂ (ಸಂಸವ. ೪೧-೭೨). 'ಜಮಳ', 'ಜವತ್ಸವಡಿ', 'ಜೋಡಿ₁' ಪರಾ. **ಸವಡು₂** : ೨. ತಿಳಿ ಮೂಱು ಸವಡಿನ ಚೀಲದೊಳಿಹ ಮೂಱು ನೆಲೆಯ ಕರಂಡಕದಂತೆ ಬಳಸಿ ಹೊಱಗೆ ಮೂಱು ಗಾಳಿಗಳಿಹುವು (ಭರಚಿ. ೬೭-೭೪). ೫. (ಆಲಂ) ಎರಡು ಮಾತು; ಸುಳ್ಳು; ಸಟೆ: ಇಮ್ಮಡಿಚಿಕ್ಕಭೂಮಿಪನಣುಗನ ನಾಲಗೆಯೊಳು ಸವಡುಂಟೆ (ಇಚಸಾಂ. ೪-೬೭).

ಸವಳಿ : ೧. 'ಜವಳಿ'₃, 'ಸವಳಿಕೆಯ್' ಪರಾ.

[?./ ಪ್ರಾ. ಜಮಲ./ ಸಂ. ಯಮಲ]

ಸವಡಿ₂ (ನಾ). ಹೆಣ್ಣಾನೆ: "ಪಿಡಿ ಸವಡಿಯನಲ್ ಪೆಣ್ಗಜ" (ಭಾರನಿ. ೬೬).

[IP 'ಸವಡಿಯಾನೆ' ಶಬ್ದದಿಂದ ಈ ಅರ್ಥವನ್ನು ತಪ್ಪಾಗಿ ಗ್ರಹಿಸಿದಂತಿದೆ]

ಸವಡಿ₃ 'ಸೌಡಿ' ನೋ.

ಸವಡಿಗಕ್ಕಡ (ನಾ). ಕಕ್ಕಡವೆಂಬ ಎರಡು ಆಯುಧ; ಜೋಡಿಕರ್ಕಡೆ: ಎಲ್ಲ ವೀರರುಂ ಸಾಟಿಸಿ ಬೊಬ್ಬಿಡಲ್ಸವಡಿಗಕ್ಕಡಯೆಂದಿಱೆದೆಚ್ಚಿ ತಾಱುವರ್ (ಎಕ. VII, ಶಿಕಾರಿ. ೨೪೮-೧೫; 1224). [ಸವಡಿ₁ + ಕಕ್ಕಡ₁ (< ಕರ್ಕಡೆ)]

ಸವಡಿಗಟ್ಟು (ಕ್ರಿ). ಜೋಡಿಸಿ ಕಟ್ಟು; ಒಟ್ಟುಮಾಡು: ಪಂಚವಟ್ಯಾರಣ್ಯದೊಳ್ ಸಂಗ್ರಹಂಗೈದಿರ್ದ ಪುಲಿಯ ಪಲ್ಲಂ . . . ವಿಪಿನಜೀವನವಿಶೇಷಂಗಳಂ, ಮೂವರುಂ, ತಂತಮಗೆ ಸವಡಿಗಟ್ಟಿದರರ್ತ್ರಿಯಿಂ ತನಗೆ ಬೇಳ್ಪನಿತುಮಂ (ಶ್ರೀರಾಮಾ. ೨೨೯-೪೦).

[ಸವಡಿ₁ + ಕಟ್ಟು₁]

ಸವಡಿಗತ್ತಲೆ (ನಾ). (ಆಲಂ) ದಟ್ಟವಾದ ಕತ್ತಲು; ಗಾಢಾಂಧಕಾರ: ಇವರು ಬಂದರು ದಕ್ಷಿಣದ ದೆಸೆಗವರ ಪಾಳೆಯಕಾಗಿ ಸುತ್ತಲು ಸವಡಿಗತ್ತಲೆಯಾಯ್ತು (ಕುಮಾಗ. ೮-೬೪). [ಸವಡಿ₁ + ಕತ್ತಲೆ₁ (< ಕಟ್ಟಲೆ)]

ಸವಡಿಗರ (ನಾ). ಎರಡು ಕೈ; ಉಭಯಹಸ್ತ: ಸವಡಿಗರವಂ ಮುಗಿದು ಸಾಷ್ಟಾಂಗವೆಱಗುತಂ ಶಿವನ ಸಮವೆನಿಪ ಸದ್ಭಕ್ತ ನೀವೆಯ್ತಂದು ಭವಭವಂಗಳ ಪುಣ್ಯಮೈದೋಱುತಱಿವವರ ಚರಣಾಂಬುಜಕ್ಕೆ ಶರಣು (ಲಶಿಚಂ. ೪೦-೨೯).

[ಸವಡಿ₁ + ಕರ₃]

ಸವಡಿಗಾಲ್ (ನಾ). ಜೊತೆಯಾದ ಎರಡು ಕಾಲು; ಜೋಡಿ ಕಾಲು: ಬಂಡಿಯ ಸವಡಿ[ಪಾಠಾಂ. ಜವಳಿ]ಗಾಲಲಿ ಮುರಿದನ್ನೆ ಮಾಮಾ ಸಮರ್ಥನಲೆ (ಕುಮಾಸ. ೧೦-೧೩).

[ಸವಡಿ₁ + ಕಾಲ್₁]

ಸವಡಿಗೆಯ್, ಸವಡಿಗ್ಗೆ, ಸವಳಿಕೆಯ್ (ನಾ). ೧. = ಸವಡಿಗರ: ಕೌರವನ ಹೊರೆಗ್ಗೆತಂದು ನಿಂದನು ಸವಡಿಗೆಯ್[ಪಾಠಾಂ. ಗ್ಗೆ] ಗದೆಯಣಸುಗಲ್ಲದ ಗಾಢ ಗರ್ವದಲಿ ಪವನಸುತ (ಕುಮಾಗ. ೮-೭); ಸವಡಿಗಯ್ಯಿಂದೆಱಗಿದನು ಗದೆಗೊಂಡು ಖಾತಿಯಲಿ (ಉತ್ತರಾ. ೫-೩೨). **ಸವಡಿಗ್ಗೆ** : ೧. ಸವಡಿಗ್ಗೆಗಳ ನಂಬುಗೆಯ ಮನಮನದ ಬೆಸುಗೆಗಳ ಅವಸರದ ಮೈತ್ರಿಗಳ ಮಂತ್ರಿಪ್ರವರವಚನೋಪೇಕ್ಷೆಗಳ ರಣದವಕದಲಿ ಕಳವಳಿಸುತಿರ್ದುದು ಕೂಡೆ ನೃಪಕಟಕ (ಕುಮಾಸ. ೧೦-೨). ೨. (ನಮಸ್ಕರಿಸಲು) ಜೋಡಿಸಿದ ಕೈ; ಮುಗಿದ ಕೈ: ಅವನಿಜೆಯ ಸಂದರುಶನವು ಸಂಭವಿಸಲಮರರು ಭಕ್ತಿಭಾವದ ಸವಡಿಗ್ಗೆಗಳಲಿರ್ದರಾನತರಾಗಿ ಗಗನದಲಿ (ತೊರಾ. ೧-೧೪-೨೮). **ಸವಳಿಕೆಯ್** : ೧. ಅನುರಕ್ತೆ ನಚ್ಚಿನಸಿಯವಳನುಪಮ ವಿಗ್ರಹವಿಳಾಸೆ ತೋಳ್ಪತ್ತುಗೆಯಂದೆನಗೆ ಸವಳಿಕೆಯ್ಯಂದದಿವನೀಯೆ ಜಯರಾಮ ವೆಸರನಾ ಸತಿ ತಳಿದಳ್ (ಪುಷ್ಪಪು. ೯-೪೨). [ಸವಡಿ₁ + ಕೆಯ್₂]

ಸವಡಿಗ್ಗೆ 'ಸವಡಿಗೆಯ್' ನೋ.

ಸವಡಿಗೊಡೆ (ನಾ). ಜೋಡಿ ಕೊಡೆ; ಎರಡು ಛತ್ರಿ: ಮಧುಮಹೀಪಾಲನ ವಕುಲಮುಕುಲದ ಕಂಠಿಕೆಯುಮೆತ್ತಿದ ಪೊಂಗೇದಗೆಯ ಸವಡಿಗೊಡೆಯುಮತುಚ್ಛ ಪರಿಚ್ಛದಮಾಧವೀಲಕ್ಷ್ಮಿಯುಂ ತನಗಮಱೆ (ಶಾಂತಿಪು. ೮-೨೩ ವ); ಬಿದಿ ಪಚ್ಚೆಯ ಕಾವಿನ ನೀಲದ ಕಳಸದ ಸವಡಿಗೊಡೆಯನಾ ವನಿತೆಯ ಗರ್ಭದ ಬಾಲಂಗೆತ್ತಿದ ನೆನಿಸಿದುದು ಸರೋಮಾಳಿ ಕುಚಯುಗಂ ಕೃಷ್ಣಮುಖಂ (ಅರ್ಧನೇ. ೨-೨೪).

[ಸವಡಿ₁ + ಕೊಡೆ₂]

ಸವಡಿಗೊನೆ (ನಾ). ಎರಡು ಗೊನೆ; ಜೋಡಿಗೊನೆ: ಸವಡಿಗೊನೆಗಳ ಕದಳಿ ಖರ್ಜೂರಾದಿ ಪಣ್ಣಲವ . . . ಕೊಂಡೈದಿದರು ಶ್ರೀಹರಿಗೆ (ಕೋಗಯ. ೩-೫೦).

[ಸವಡಿ₁ + ಗೊನ್ನೆ₃ (< ಗೊಲ್ಲೆ₂)]

ಸವಡಿಗೋಲ್ (ನಾ). ಎರಡು ಬಾಣ; ಜೋಡುಬಾಣ: ಯುವತಿಯನು

ಕಂಡರು ಕಟಾಕ್ಷದ ಸವಡಿಗೋಲಿಂದೊಡೆದುದೆದೆ (ಕುವ್ಯಾಚ. ೧೮-೨೯); ಕವಿವರಂ ಬರಸೆಳೆದು ಮುಳಿದಿಸುವ ಕಂತುವಿನ ಸವಡಿಗೋಲ್ಗಳೊ (ಸೌಂದಪು. ೭-೩೩); ಸವಡಿಗೋಲ್ಗಳ ಸುರಿದು ಗಜಸ್ಕಂಧವ ಪದಾತಿಯ ತಂಡತಂಡವ ಜವನ ಮನೆಗಟ್ಟಿದನು ನಿಮಿಷಾರ್ಧದಲಿ ರಘುನಾಥ (ಅನಂರಾ. ೩-೪-೮). [ಸವಡಿ + ಕೋಲ್]

ಸವಡಿಚೀಲ (ನಾ). ಎರಡು ಪದರಗಳುಳ್ಳ ಚೀಲ: ಆನಂದಮಯಕೋಶ ಮಿಂತಲ್ಲಿಯ್ಯದಂ ಸವಡಿಚೀಲದೊಳಗಿರ್ದ ರತ್ನದ ತೆಱದೆ ರಾಜಿಸಿರ್ಪ . . . ಸರ್ವತೋಬ್ರಹ್ಮ ವಾಕ್ಯಿಂಗಗೋಚರವು (ಎಜ್ಞಪ್ರ. ೫-೧೦-೨೫). [ಸವಡಿ + ಚೀಲ]

ಸವಡಿಡು (ಕ್ರ). ಒಟ್ಟಿಗೆ ಇಡು; ಜೊತೆಯಾಗಿಡು: ಇಕಾರಕ್ಕೆ – ದಾಬಿಟ್ಟುಂ, ಹಂದಿಟ್ಟುಂ, ಸವಡಿಟ್ಟುಂ (ಶಮದ. ೫೨ ಪ್ರಯೋ). [ಸವಡಿ + ಇಡು]

ಸವಡಿದಾರ (ನಾ). ಎರಡು ಎಳೆ; ಜೋಡುದಾರ: ಕವಿಯೊಳೊಪ್ಪುವ ನಾಗರಪಣೆ ಹೊಸಹೊನ್ನ ಸವಡಿದಾರದ ಕೊರಳುಗಳ ನವರತ್ನಭೂಷಣದಾಳ್ಗಳ ಮೇಳದೆ ಭುವನೇಶ್ವರನ್ನೆತಂದ (ಕಂನಪ. ೧೨-೩೫). [ಸವಡಿ + ದಾರ]

ಸವಡಿನುಡಿ (ನಾ). ೧. ಎರಡು ಮಾತು; ಎರಡು ಶಬ್ದ. ೨. (ಅಲಂ) ಇಬ್ಬಗೆಯಾದ ಮಾತು; ಮೊದಲು ಆಡಿದುದಕ್ಕೆ ವಿರುದ್ಧವಾಗಿ ಆಡುವ ಮಾತು; ಸುಳ್ಳು: ಸವಡಿನುಡಿಯುಂಟೇ ಚತುರ್ದಶಭುವನದಾಹವದಳ್ಳವೀ ಬಾಣವನು ಕೊಟ್ಟೆನು ಮಗನೆ ಬೊಮ್ಮ ಶಿರೋಮಹಾಶರವ (ಕುವ್ಯಾಳ. ೬-೯೮); ಅವನಿಪತಿ ಕೇಳ್ನಿಮ್ಮ ಪದಕಮಲವನು ಭಜಿಸುವೆ ಜೀಯ ಚಿತ್ತದಿ ಸವಡಿನುಡಿ ತನಗಿಲ್ಲ (ನಳಚ. ೬-೩). [ಸವಡಿ + ನುಡಿ]

ಸವಡಿಮರ (ನಾ). ಜೋಡಿ ಮರ : ಸವಡಿಮರ ನೆಗ್ಗಿದವು ಗಡ ಮೈಯವುಚಿದರೆ ಬಲುಗತ್ತ ಗೂಳಿಯನಿವ ವಿಭಾಡಿಸಿದನೆ (ಕುವ್ಯಾಸ. ೧೦-೧೩). [ಸವಡಿ + ಮರ]

ಸವಡಿಯಾನೆ (ನಾ). ಜೋಡಿ ಆನೆ : ಸವಡಿಯಾನೆಯ ಮೇಲೆ ಗಣಕಾನಿವಹ ದಂಡಿಗೆಗಳಲಿ ಕೆಲಬರು . . . ಕವಿದುದಗಲದಲಿ (ಕುವ್ಯಾಳ. ೧೭-೩೦).

[ಸವಡಿ + ಆನೆ]

ಸವಡಿರಥ (ನಾ). ಎರಡು ತೇರು; ಜೋಡುರಥ: ಸಹದೇವ ನಕುಲರ ಸವಡಿರಥ ಸಮ್ಮುಖಕೆ ಬಟ್ಟುವು ಮಾದ್ರಭೂಪತಿಯ (ಕುವ್ಯಾಶ. ೨-೨೧).

[ಸವಡಿ + ರಥ]

ಸವಡಿವಲೆ (ನಾ). ಜೋಡಿಯಾಗಿ ಹೆಣೆದ ಒಂದು ಬಗೆಯ ಬಲೆ; ಜೋಡುವಲೆ (?) : ಬೀಸುವಲೆ ಸವಡಿವಲೆ ತೊಡರುವಲೆ ಹಾಸುವಲೆ (ಚತುಪು. ೨-೧-೧೪). [ಸವಡಿ + ಬಲೆ]

ಸವಡಿವೆರಳು (ನಾ). ಜೊತೆಗೂಡಿದ ಬೆರಳು; ಜೋಡಿ ಬೆರಳು : ಸವಡಿವೆರಳಲಿ ಸೇದುವಂಬಿನ ತವಕಿಗರು ತಱುಬಿದರು (ಕುವ್ಯಾಗ. ೧-೬); ಸೇದಿ ತಾಂ ಸವಡಿವೆರಳಿನೊಳಂಬ ಕರ್ಣಾಂತಕ್ಕೆದಿಸಿ ನುಡಿದಂ (ಚಿಬಪು. ೧೬-೨೫).

[ಸವಡಿ + ಬೆರಳು (< ಬೆರಲ್)]

ಸವಡಿಸತಿ (ನಾ). ಸರಿಸಮಾನಳಾದ ಸ್ತ್ರೀ; ಎಣೆಯಾದ ಸತಿ : ನವದಶ್ಮಕಾದಶದ ಸಂಖ್ಯೆಯ ಧವರ ನೆಲೆ ವರಿಸಿರ್ದ ವಾಙ್ಮಾಶಿವೆಯರೆಣೆಯೇ ನಾಗಮಾಂಬಾ ಸತ್ಪತಿವ್ರತೆಗೆ ಸವಡಿಸತಿಯರ ಕಾಣೆವು (ತಿಮ್ಮಕ್ಕೀ. ಟೀಕಿಕಾ ಸಂಧಿ. ೧೨). [ಸವಡಿ + ಸತಿ]

ಸವಡಿಸರ (ನಾ). ಜೋಡೆಳೆ ಹಾರ; ಎರಡೆಳೆ ಸರ : ಕಡದ ಪವಳದ ಸವಡಿಸರಗಳನು ಕಟ್ಟಿ . . . ಸಿಂಗರಿಸಿ ಕಳಿಪುವೆನು (ಗೀತಗೋ. ೮-೫).

[ಸವಡಿ + ಸರ]

ಸವಡಿಸೀರೆ (ನಾ). ಒಂದರ ಜೊತೆಯ ಮತ್ತೊಂದು ಸೀರೆ; ಜೊತೆಜೊತೆಯಾದ ಸೀರೆ : ಅವಳ ದೈವೋದಯವದ್ಯಸಲೆ ಸವಡಿಸೀರೆಯ ಸುತ್ತು ಸಡಿಲದು ನಿವಗದಾಗಳೆ ಮಳೆದು ಹಿಂಗಿದುದೆಂದನಾ ಕರ್ಣ (ಕುವ್ಯಾಸ. ೧೬-೫).

[ಸವಡಿ + ಸೀರೆ]

ಸವಡಿಸು (ಕ್ರ). ೧. ಎರಡರಷ್ಟಾಗು ; ದ್ವಿಗುಣಗೊಳ್ಳು : ಪಾರ್ಶ್ವಂಗಳಿಂ ನೂಲ್ದೆಗೆದತ್ತೆಂಬಂತೆ ಪಾ[ಶ್ಚಾತ್ಯದ] ಸವಡಿಸಿತೆಂಬಂತಿರೆ . . . ಬಂದುದಿಂದ್ರಾ ಯುಧಾಶ್ವಂ (ಕಾದಂಪೂ. ೪೫೬). ೨. ಜೊತೆಗೂಡು; ಒಂದೆಡೆ ಸೇರು: ದಾದಿಯರಿಕ್ಕೆಲಂಗಳೊಳ್ ಸವಡಿಸಿ ಸಾರ್ಚಿ ದಟ್ಟಿಡಿಯೊಳಿಟ್ಟರುತಿರ್ದನಸನಾರ ಬೊಪ್ಪನೀ ಕವಡೆಯ ಬೊಪ್ಪನೆಂದು ನಡೆ ನೋಡಿದರ್ (ಸೂಕ್ತಿಸು. ೭-೬೬). ೩. ಕೂಡಿಸು; ಸೇರಿಸು; ಜೋಡಿಸು : ಬಲುವಿಡಿಯ ಬಿಲು ವಾಮದಲಿ ಬೆರಳೊಳಗೆ ಸವಡಿಸಿ ತೆಗೆವ ತಿರುವಿನ ಹಿಳುಕು ನಿಮಿರಿದ ತೋಳ ತೋಜೆಳೆ ಬಲದ ಭಾಗದಲಿ (ಕುವ್ಯಾಕ. ೨೬-೨೩); ಪೂವಿನ ಬಿಲ್ಲೆ ಸವಡಿಸಿದ ತುಂಬಿ ಮುಡಿವಾಳಗಳ ಸಿಂಜಿನಿಯ ಮಂಜುಳಾಂಗಂ ಮೆಱೆದನು (ಚಿಬಪು. ೬೫-೫); ಸವಡಿಸಿ ಬಿದು ಬಲೆಗಳನಾಗವಿಯೊಳಗಿಹ ಚಿತ್ರಕಾಯಗಂ ಸೂಕರಗಂ (ನನ್ನಚಾ. ೪-೨೭). ೪. ಹೊಂದಾಣಿಕೆ ಮಾಡು; ಸಮನ್ವಯಗೊಳಿಸು : ಹಾಲು ಕಾಸಲಿಕ್ಕೂ ಹುರುಳಿ ಹುರಿಯಲಿಕ್ಕೂ ಸರಿಯಾಗದೆ, ಅವನ್ನು ಸವಡಿಸಲಿಕ್ಕೆ ಯತ್ನಿಸುವಲ್ಲಿ, ಒಂದು ಒರೆಯಲ್ಲಿ ಎರಡು ಕತ್ತಿಗಳನ್ನು ಸಿಕ್ಕಿಸಿಡಲಿಕ್ಕೆ ಪೇಚಾಡುತ್ತೇನೆ (ಕಂನಾಹಾ. ೧೨). ೫. (ಧ್ವನಿಯನ್ನು) ಎರಡೆರಡು ಸಲ ಮಾಡು : ಫಿಲ್ಲನೆ ತೆಂಗಿನ ಪತ್ರದಂದದಿಂ ಸವಡಿಸಿ ಚಚ್ಚಲಚ್ಚಲಲ ಚಚ್ಚಲ ಚಚ್ಚಲಲೆಂದು ಬೈದು ಪಾಟವದೊಳ್ ಪಕ್ಕಿ ಸೋದು ಬೆಳಿಗಾಯ್ದುದು ಪಾಮರಕಾಮಿನೀಜನಂ (ಸೂಕ್ತಿಸು. ೪-೭೩). 'ಜವಳಿಸು' ಪರಾ.

[ಸವಡಿ + -ಇಸ್ಕು]

ಸವಡು[1] 'ಸೊವಡು' ನೋ.

ಸವಡು[2] 'ಸವಡಿ' ನೋ.

ಸವಡ್ಕು, ಸವಣು, ಸವುಡು, ಸೌಡು (ನಾ). ೧. ಪುರಸತ್ತು; ಬಿಡುವು : ಸಾಹೇಬರಿಗೆ ಗೃಹಕೃತ್ಯದ ವಿಷಯದಲ್ಲಿ ತಲೆ ಖರ್ಚು ಮಾಡಲು ಸವಡರಲಿಲ್ಲ (ದೀಪಹ. II, ೩೭೪); ನನಗಾದರೂ ಸವಡು ಎಲ್ಲದ ಹೇಳಿರಿ (ಭಾರತಿ. ೧೧೫). ೨. ಅವಕಾಶ; ಸಂಧಿ : ಆಗ ನಾಲ್ವರನ್ನೂ ಒಂದೇ ಗುಡಿಸಲಲ್ಲಿ ಹಾಕಿದ್ದರಿಂದ ನಮಗೆ ಮಾತನಾಡಲಿಕ್ಕೆ ಸವಡು ದೊರೆಯಿತು (ಮೀದಮು. ೧೧೫); ನಾಳೆ ಗೀಳೆ ಸವಡು ನೋಡಿಕೊಂಡು ನಿಮ್ಮ ಮನೇಕಡೇನೂ ಬರತಿದ್ದೆ! (ಮುನಿ. ೧೪೨). ೩. ಸೂಚನೆ; ತಿಳಿವಳಿಕೆ : ವರ್ಣನ ಬರಿಯುವದಕ್ಕೆ ಅಡಚಣೆ ಇದ್ದ ಪಕ್ಷದಲ್ಲಿ, ಅಮೂಕಭಾವಿನ ಅಥವಾ ಅಂಥಾದರದ್ದು ಹೀಗೆ ಸವಡು ನಮಗೆ ಕೊಟ್ಟು ಪಕ್ಷದಲ್ಲಿ ಫಾಯಿದೆಯಾಗಿ ಸೊಯಿ ಉಳಿಯುವುದು (ಮುಂಬಾ. ೬೪). **ಸವಣು** : ೪. ಖಾಲಿ ; ತೆರವು: ಕದವನು ತೆಗೆಯಲು ಕೈಯೊಂದು ಸವಣಿಲ್ಲ ಈರಯ್ಯ ಮಗ ತೊಡೆ ಮೇಲೆ ಮಲಗವ್ನೇ (ನಾಪದ. ೧೦೬). ೫. ಸಾಧನ ; ಮಾರ್ಗ : ಅದನ್ನು ತಪ್ಪಿಸಲೂ ಚಿಕಿತ್ಸೆಮಾಡಲೂ ರೋಗಿಯನ್ನು ಚೆನ್ನಾಗಿ ಚೇತರಿಸುವ ಸವಣುಗಳಿವೆ (ಕವಿಲೋ. I, ೪೭೫). **ಸವುಡು** : ೧. ಬಾನುಲಿ ಅಧಿಉಪಅಧಿಕಾರಿಗಳಿಗೆ ಮಾತಿಗೊಮ್ಮೆ ಕೈಮುಗಿದು ನಗಲು ಸಹ ಸವುಡಿಲ್ಲ, ವಾಯಿತು (ಹುಟ್ಟುಹು. ೧೯); ನಿನಗೂ ಸವುಡಿಲ್ಲ ಶಾಂತಿಗೂ ಸವುಡಿಲ್ಲ (ಜನಾವಾ. ೧೮). **ಸೌಡು** : ೩. ಮುನಿಸಿವಾಲ್ಮಿಯ ಕೆಲಸಗಳಾದರೂ ಬೌದಪ್ಪನವರ ಸೌಡಿಗೆ ಸರಿಯಾಗಿ ನಡೆಯುತ್ತಿದ್ದವು (ಹಳ್ಳಹಾ. ೧೭). [← ಮರಾ. ಸವದ, ಸಂವಡ]

ಸವಡುಮರ (ನಾ). ಒಂದು ಬಗೆಯ ಮರ : "ಮಹಾಶರಃ – ಸವಡುಮರ" (ಓಷಧಿ. ೧೧೭). [ಸವಡು + ಮರ]

ಸವಡುಮ್ಮತ್ತ, ಸವುಡುಮ್ಮತ್ತ (ನಾ). ಒಂದು ಬಗೆಯ ದತ್ತೂರ: "ರಾಜದುತ್ತೂರಃ – ಸವಡುಮ್ಮತ್ತ" (ಓಷಧಿ. ೧೩೮). **ಸವುಡುಮ್ಮತ್ತ** : "ರಾಜಸ್ಯರ್ಣಾಃ - ಸವುಡುಮ್ಮತ್ತ" (ಓಷಧಿ. ೧೩೭). [ಸವಡು + ಉಮ್ಮತ್ತ]

ಸವಡುರೊಟ್ಟಿ (ನಾ). ಪದರಗಳನ್ನುಳ್ಳ ಒಂದು ಬಗೆಯ ಭಕ್ಷ್ಯ : ನವನೀತಮಂ ಕೆನೆಯುಮಂ ಕಣಕಮಂ ಸವೆವಂತೆ ಕುಟ್ಟಿ . . . ಸಕ್ಕರೆದುಪ್ಪಮಿಕ್ಕಿಲವು ತಾಂ ಸವಡುರೊಟ್ಟಿ ಪೆಸರಂ ಪಡೆದವು (ಸೂಪಶಾ. ೧-೧೨).

[ಸವಡು + (< ಸವಡಿ) + ರೊಟ್ಟಿ]

ಸವಡೋಲು (ನಾ). ಆನೆಯ ಮೇಲೆ ಕುಳಿತುಕೊಳ್ಳಲು ಹಾಕುವ ಅಂಬಾರಿ; ಹೌದಾ: ರಾಜಭೂವರರು ಖಾಸಾಆನೆಗಳಿಗೆ ಶರಬಖ್ತರ ಅಂಬಾರಿಗಳು ಸವಡೋಲು ಹಾಕಿಸಿ, ತರಕಷಿ ಕಮಾನುಗಳನ್ನು ಆ ಸವಡೋಲಿನಲ್ಲಿಡಿಸಿ . . . ಪೇಷಖಾನೆಯನ್ನು ಹೊರಗೆ ಹಾಕಿಸಿದರು (ಬಷುರಾ. ೧೩).

[?./ ತಮಿ. ಚವುಟೋಲ್; ತೆಲು. ಚವುಡೋಲು, ಚೌಡೋಲು]

ಸವಣ₁ 'ಶ್ರವಣ₁' ನೋ.

ಸವಣ₂, ಸಮಣ (ನಾ). ೧. ಸಂನ್ಯಾಸಿ; ಮುನಿ; ಯತಿ. ೨. ಜೈನಸಂನ್ಯಾಸಿ; ಕ್ಷಪಣಕ : ಆನಸಿಯೊರ್ವ ಸ[ಪಾಠಾಂ. ಶ್ರ]ವಣಂ ಬಂದೊಡಾತನಂ ಕಂಡು ಕರುಮಾಡದಿಂದಿಬೆರ್ದು ಪರಿದು ಬಲಿಯಂ ತಗುಳ್ದು . . . ಪೋರುತ್ತಿರ್ಪೊಳ್ (ವಡ್ಡಾರಾ. ೧೧೭-೨೨); ಸಾಲ್ವರ್ ಸವಣ [ಪಾಠಾಂ. ವಿಗಂಬರ]ರ್ ಸ್ಥೆತೆ ತನ್ನ ಮನೆಗಾಗಿ ಬರ್ಪುದಂ ಕಂಡು (ಪಂಚತಂ. ೧೪೧-೧೨); ನಮೋಸ್ತುಗಳಂದು ಸವಣರ್ಗ ಪೆಸರಾಯ್ತು (ತಮಿದ. ೬೫ ಪ್ರಯೋ). ೩. ಬೌದ್ಧಸಂನ್ಯಾಸಿ; ಬೌದ್ಧಭಿಕ್ಷು : ಮನೆಯುತ್ತಲ್ ಪಾರುವುದರ್ಕೆ ಕಡಂಗಿದನಂ ಚಿತ್ತದೆ ತಿಳಿದಂ ಸವಣನದೊರ್ವಂ (ಶಾನಂದ. ೮-೧). ೪. ಜೈನಮತಕ್ಕೆ ಸೇರಿದವನು; ಜೈನ: ಸವಣರಾ ಪೇಟೆಯೊಳು ದಿವಸ ಸಂತೆಯ ಶಬ್ದನಿವಹ ಪೂರ್ಕೆಸಿದೇಕಾಂತದೊಳಗೆನ್ನನವಧರಿಸು ಗುರುವೆ (ಮೃಲಾರ. ೪೬-೬೬). **ಸಮಣ** : ೨. ತಿಪ್ಪೆಯೂರೊಳ್ಸಮಣರ ಕಯ್ಯೊಳಿಗ್ಗೆXX (ಎಕ. III, ಸಂಜನ. ೧೩೯-೨೮; 915?).

ಸವಣಗೆಯ್, ಸವಣನ ಕೆಯ್ = ಜೈನಸಂನ್ಯಾಸಿಗಳಿಗೆ ದಾನವಾಗಿ ಕೊಟ್ಟ ಭೂಮಿ ; ಸಂನ್ಯಾಸಿಹೊಲ (?) : ಬಡಗಣ ಸೀಮೆ ಪಿರಿಯ ವಟ್ಟ ಪಡುವಣಸೀಮೆ XXXಸವಣಗೆಯ್ಯ ಮೇಲೆ (ಪೌಣಾ. XX, ೨೪೭-೪೪; 1087); ತೆಂಕಲಾದಿಯ ಬಟ್ಟಿಯ ಮೇರೆ ಪಡುವ ಸವಣನ ಕೆಯ್ಯ ಮೇರೆ (ಎಕ. VII, ಶಿಕಾ. ೩೦-೨೯; 1031). **ಸವಣನ ಕೆಱೆ, ಸವಣುಗೆಱೆ, ಸವಕ್ಕೆಱೆ** = ಜೈನಸಂನ್ಯಾಸಿಗಳಿಗಾಗಿ ನಿರ್ಮಿಸಿದ ಕೆರೆ (?) : ಊರಿನ್ದಂ ಮೂಡಣದೆಸೆಯಿಂ ಸವಣನ ಕೆಱೆಯ ಕೆಳಗೆ ಗಳ್ಚೆ ಗಳೆಯಲು ಮತ್ತರು ೨ (ಎಕ. VII, ಶಿಕಾ. ೪೭-೬೬; 1115); ಬಸದಿಗೆ ಬಿಟ್ಟ ಸವಣುಗೆಱೆಯ ಸೀಮಾಸಮ್ಮಂಧವೆನ್ತೊಡೆ (ಎಕ. XII, ಚಿಕ್ಕನಾ. ೨೧-೬೫; 1160); ನಡುಮುಗುನ್ದದ ವಾಯವ್ಯದ ಮೊದಲ ಸವಕ್ಕೆಱೆಯುಮದಱ ಬಡಗಣ ಗರ್ದ್ದೆಯುಮವರ್ಕ್ಕೆ ಸೀಮೆ (ಪೌಣಾ. XI-i, ೭೮-೪೯; 1045). **ಸವಣನ ಬಿಲಿಲ್** = ಸವಣಗೆಯ್ : ಸವಣನ ಬಿಳಿಲೊಳ್ ಬಿಟ್ಟಳ್ ಭುವನಸ್ತುತ ಮತ್ತಮೊಪ್ಪೆ ಸಲೆ ಪನ್ನೆರಡಂ (ಎಕ. VIII, ಸೊರಬ. ೨೩೭-೩೪; 1139); ಸುಗ್ಗಿಯಬ್ಬೆ ಎಂಬ ರಾಣಿಯು 'ಸವಣನ ಬಳಿಲಲ್ಲಿ' (ಬಿಳಿಲು – ಬೀಳಿಲು = ಗೋಮಾಳ) ಹನ್ನೆರಡುಮತ್ತರನ್ನು ಬಿಟ್ಟುಕೊಟ್ಟಿರುವುದು ಮೇಲಿನ ಅಭಿಪ್ರಾಯಕ್ಕೆ ಪೋಷಕವಾಗಿದೆ (ಕಶಾಲ. ೩೭೭). **ಸವಣ್ಣಲ್ಲರ ದೇವ** = ಶ್ರೇಷ್ಠನಾದ ಜೈನಮುನಿ : ಭೂವಿನುತಂ ರೂವಾರಕಳಾವಿದ ಜಿನ್ನೋಜನಗ್ರಪುತ್ರಂ ಚಾವಂ ಕೇವಳಮೆ ಸವಣ್ಣಲ್ಲರ ದೇವಂ ರಾಜೋಜನಿವರ್ಗಳಿಸೆದರ್ದ್ದರೆಯೊಳ್ (ಎಇ. XVI, ೪೦-೭೦; 1153).

[< ಪ್ರಾ. ಸವಣ, ಸಮಣ./ ಸಂ. ಶ್ರವಣ, ಶ್ರಮಣ]

ಸವಣ₃ (ನಾ). ೧. ಕೇಳುವುದು ; ಶ್ರವಣ : "ಶ್ರವಣಂ ಸವಣಂ" (ಕರ್ಣಾ. ೬೧); "ಸವಣ – ೧ ಶ್ರವಣ (= ಕ್ಷವಣ)" (ತದ್ಭವೋ. ೪೩). ೨. "ಕಿವಿ" (ಪ್ರಭಗ್ಗಾ): ಅದವರ ತಪ್ಪಲ್ತು . . . ಸವಣದೊಳೀಳ್ದ ಪೊಸಮಿಸುನಿಯ ಸಲಿಗೆಯಂತೆಯುಂ . . . ಆದ್ಯಂತ ದೊಳಕನಾದಮೆನಿಸುವ ತಾನದ ಸವಿಯ ಬಲ್ಲಿನ ತಪ್ಪೆಂದು ತಿಳಿಯವೇಱ್ಪುದು (ಚಿಪಮಂ. ೧೭೯-೧೬). [< ಪ್ರಾ. ಸವಣ./ ಸಂ. ಶ್ರವಣ]

ಸವಣಱೆ (ನಾ). ಒಂದು ಸ್ಥಳದ ಹೆಸರು (?) : ತಸ್ಯ ಸೀಮಾನ್ತರಂ . . . ಪಡುವಾಯ್ವಸವಣಱೆಯುಂ ಪುಲ್ಪದಿಯುಂ ಬಡಗಾಯ್ವಾಮೆ ತೆಂಕಾಕೆಱೆಯ ಕಡೆಗೋಡು ಕಿಱುವಡಿಯೂರ ಪಾಲನೂರ ಪೇರೊಟ್ಟೆ (ಎಕ. IX. ನೆಲಮಂ. ೬೧-೭೧; 802). [?]

ಸವಣೆ (ನಾ). (ಜೈನ ಅಥವಾ ಬೌದ್ಧ) ಸಂನ್ಯಾಸಿನಿ ; ವಿರಕ್ತೆ : ಸವಣಂಗೆ ಸವಣೆಯಾಯಿತ್ತು ಮಾಯೆ (ಮಹಾದೇ. ಬ. ೧೪-೨೭).

[ಸವಣ₂ + -ಇ₂./ ಪ್ರಾ. ಸಮಣೀ./ ಸಂ. ಶ್ರಮಣೀ]

ಸವಣಿಸು 'ಸಮನಿಸು' ನೋ.

ಸವಣು 'ಸವಡು₃' ನೋ.

ಸವಣೂರಿ (ನಾ). ಒಂದು ಬಗೆಯ ನಾಣ್ಯ ; ಹದಿನೆಂಟು ಬಗೆಯ ವರಹಗಳಲ್ಲೊಂದು : ಬ್ರಿಟಿಷ ಸರಕಾರದ ಅಮಲಿನ ಆರಂಭದಲ್ಲಿ . . . ೧೪ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದುವು. ಅವುಗಳ ವಿವರ – ೧ ಗಜವತಿ . . . ೧೪ ಸವಣೂರಿ, ರೂ-೩ (ಕಭಾಗ. ೨೦೦). [?]

ಸವಣ್ಣ (ನಾ). ಜೈನಸಂನ್ಯಾಸಿನಿ ; ಕಂತಿ : ನೋಡ ವಿಧಾತ್ರನ ಗೊಡ್ಡಮನಾಡಿದುದಂ ಮುದುಸವಣ್ಣ[ಪಾಠಾಂ. ಮುದುಕಿಸವಣೆ, ಮುದುಪಸವಣ]ಯೊಳ್ ಕತ್ತಯ್ಯಂ ಕೂಡಿದನೆಳಯಬ್ಬೆಯೊಳಂ ಕೂಡಿದನಾ ಮುತ್ತಸವಣನುಂ ತಾನೆನುತುಂ ಅಂತಾ ಮೂವರುಮೇಡಿಸಿ ನಗುತ್ತುಂ ಪೋಗೆ (ಜೀವಸಂ. ೯೧-೩೬).

[< ಸವಣ₂ + -ತ್ತಿ₁ (< ಇತ್ತಿ.)]

ಸವಣ್ಣಟ್ಟಿ (ನಾ). [ಜೈನ] ಸಂನ್ಯಾಸಿಗಳಿಗೆ ಮಾಡುವ ಉಚಿತಸೇವೆ; ಶ್ರವಣರಿಗಾಗಿ ಮಾಡುವ ಬಿಟ್ಟಿಚಾಕರಿ : ದೀಪಕಾಸ್ತವನಂಗಳ್ಗೆ ಮುಪಚಕ್ರರದು ದೋಷಂಗಳಕ್ಕುಮೆಂತೆನೆ ಅರ್ಥಿಯಿಲ್ಲದುದುಂ . . . ಸವಣ್ಣಟ್ಟಿಯಂ ಕಳಪುವೆನೆಂದು ಮಾಡ್ಪುದುಂ . . . ಹಾಡುತ್ತಂ ಮಾಡ್ಪುದುಮೆಂದಿವು ಮೂವತ್ತೆರಡು ದೋಷಂಗಳಪ್ಪುವು (ಪಪಾರ. ೩೪೧). [< ಸವಣ₂ + ಬಿಟ್ಟಿ₁]

ಸವಣ್ಣನೆ (ನಾ). ಜೈನದೇವಾಲಯ ; ಚೈತ್ಯಾಲಯ; ಬಸದಿ: "ಸವಣ್ಣನೆ ಬಸದಿಯೆನಿಕ್ಕುಂ" (ಚತುಪಾ. ೯೯); ಆರಮನೆಗಳ್ತು ಸೂಳೆಮನೆಗಳ್ತು ಸವಣ್ಣಸೆಗಳ್ತು ಕೂಡೆ ಬಲ್ಲರ ಬಗೆಗಳ್ತು ವಸ್ತುಕೃತಿಯಂ ಸಲೆ ಪೇಳ್ದುದು ಕಲ್ತು ಪೇಬದಂದರ ಮನೆಗಳ್ತು ಸವಣ್ಣನೆಗಳ್ತು ಕೂಡೆ ಬಲ್ಲರ ಬಗೆಗಲ್ತದಾವೆಡೆಗಮಲ್ತದು ಕಲ್ಪಿ ವಲಂ ಕವೀಂದ್ರರಾ (ಕಾವ್ಯಾವ. ೨೦೫). [< ಸವಣ₂ + ಮನೆ]

ಸವತಳಿಸು 'ಸವದಳಿಸು' ನೋ.

ಸವತಿ, ಸೌತಿ (ನಾ). ೧. ತನ್ನ ಗಂಡನ ಇನ್ನೊಬ್ಬಳು ಹೆಂಡತಿ; ಸಪತ್ನಿ : "ಕೃತ ಸಾಪತ್ನಿಕಾ ಅಧ್ಯೂಢಾ ಅಧಿವಿನ್ನಾ – ಈ ೩ ಸವತಿ" (ನಾಚರಾ. ೧೧೬); ನಿನ್ನ ರತ್ನಕಂಬಳಮಂ ಪೊದೆದು ಮನೆಗೆ ವಂದೊಡೆ ಸವತಿಯೊಳಪ್ಪ ಶಂಕೆಯಿಂದೆನ್ನ ಭಾರ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಟ್ಟು ಸತ್ತಳ್ (ವಡ್ಡಾರಾ. ೬೯-೧೭); ಶ್ರೀವನಿತೆಗೆ ನಿಜವಿಜಯಶ್ರೀವನಿತೆಯೆ ಸವತಿಯಾಗೆ (ಗದಾಯು. ೪-೧); ಎನ್ನ ಆಪತ್ತು ಸುಖದುಃಖವನಿನ್ನಾರಿಗೆ ಹೇಳುವೆ ಶರಣಸ್ಥಳದವರೆಗೆ ಹೇಳಿದರೆ ಮಚ್ಚರ ಸವತಿ ಸಕ್ಕರೆ ಬೇವು ಬೆಲ್ಲ ಉಂಟೆ ಇನ್ನಾರಿಗೆ ಹೇಳುವೆ (ಬಸವ. ೬೮೯). ೨. (ಆಲಂ) ವಿರೋಧಿಯಾದವಳು; ಹಗೆ : ಅಂಗಸೆಯರ್ಕಳ ಸವತಿ ಜರಾಂಗನೆ ತಾನವಳ ಸವತಿ ಸಂದಿರ್ದ ನಿಯತ್ಯಂಗನೆಯಾ ಸಪತಿಯುಮಂ ಪಿಂಗಿಸಿ ಪುದುವಾಲ್ಪೈನಕ್ಕೆ ಮುಕ್ತ್ಯಂಗನೆಯೊಳ್ (ಅಜಿಪು. ೨-೭೫); ಬವರ ಮುಱಿದುದು ವಿಜಯಲಕ್ಷ್ಮಿಯ ಸವತಿ ಸೇರಿತು ಸುಭಟರಿಗೆ (ಭುವ್ಯಾಕ. ೧೧-೪೧). **ಸೌತಿ.**

ಸವತಿಕಣ್ಣು = (ಆಲಂ) ಮತ್ಸರದ ನೋಟ ; ಮಾತ್ಸರ್ಯದ ದೃಷ್ಟಿ : ಅದರ ಮೇಲೂ ಸರ್ಕಾರದ ಸವತಿಕಣ್ಣು (ಕನ್ನನು. ೧-೨೬, ೧೯೩೪-೩೯). **ಸವತಿಕೈ** = (ಆಲಂ) ಬೇರೆಯ ಬೀಗದ ಕೈ ; ಮತ್ತೊಂದು ಬೀಗದ ಕೈ : ಒಟ್ಟಿಗೆ ನಿಮ್ಮ ಮನೆಯ ಎಲ್ಲ ಕೀಲಿಗಳ ಸವತಿಕೈಗಳು ನನ್ನ ಬಳಿಯಲ್ಲಿವೆ (ಕಳ್ಳಕಾ. ೬೧). **ಸವತಿಗಂಧವಾರಣಜಿನಾಲಯ** = ಹೊಯ್ಸಳವಿಷ್ಣುವರ್ಧನನ ಮಹಾರಾಣಿ ಶಾಂತಲೆಯು ಶ್ರವಣ ಬೆಳುಗೊಳದ ಚಿಕ್ಕಬೆಟ್ಟದಲ್ಲಿ ಶಾಂತಿಜಿನನಿಗಾಗಿ ಕಟ್ಟಿಸಿದ, ಆಕೆಯ ಬಿರುದುಸೂಚಿತವಾಗಿರುವ ಒಂದು ಬಸದಿ ,- ಚೈತ್ಯಾಲಯ : ಶಾಂತಲಾದೇವಿ . . . ಶ್ರೀ ಬೆಳ್ಗೊಳದ ತೀರ್ಥದೊಳ್ ಸವತಿಗಂಧವಾರಣಜಿನಾಲಯಮಂ ಮಾಡಿಸಿ . . . ಬಿಟ್ಟು ದತ್ತಿ (ಎಕ. II, ೧೩೨-೪೩; 1123). **ಸವತಿಗಂಧವಾರಣದ ಬಸದಿ** = ಸವತಿಗಂಧವಾರಣಜಿನಾಲಯ : ಶಾಂತಲಾದೇವಿಯರು ತಾವು ಮಾಡಿಸಿದ ಸವತಿಗನ್ಧವಾರಣದ ಬಸದಿಗೆ . . . ಬಿಟ್ಟ ದತ್ತಿ (ಎಕ. II, ೧೩೨-೫೦; 1123). **ಸವತಿಗಂಧವಾರಣೆ** = ಸವತಿಯರ ಅಹಂಕಾರವನ್ನು ಆನೆಯ ಹಾಗೆ ನಿಯಂತ್ರಿಸುವವಳು, – ಹೋಗಲಾಡಿಸುವವಳು ; ಹೊಯ್ಸಳ ವಿಷ್ಣುವರ್ಧನನ ಹೆಂಡತಿ ಶಾಂತಲೆಯ ಒಂದು ಬಿರುದು : ಸಮ್ಯಕ್ತ್ವಚೂಡಾಮಣಿಯುಂ ಉದ್ಯತ್ತ ಸವತಿಗಂಧವಾರಣೆಯುಂ . . . ಅಪ್ಪ . . . ಪಟ್ಟಮಹಾದೇವಿ ಶಾಂತಲಾದೇವಿ (ಎಕ. II, ೧೩೨-೩೯; 1123); ಹೊಯ್ಸಳ ಪಟ್ಟದರಸಿ ಶಾಂತಲಾದೇವಿ ಉದ್ಯತ್ತ ಸವತಿಗಂಧವಾರಣೆಯಂತೆ (ಸವತಿ. ೨೨೬). **ಸವತಿಗಂಧಹಸ್ತಿಬಸದಿ** = ಸವತಿಗಂಧವಾರಣಜಿನಾಲಯ : ಎಳಸನ ಕಟ್ಟುವ ಕೆಲೆಯಾಗಿ ಕಟ್ಟಿಸಿ ಸವತಿಗಂಧಹಸ್ತಿ ಬಸದಿಗೆ ಸರುಗಿಗೆ ದೇವಿಯರು ಜಿನಾಲಯಕ್ಕೆ ಬಿಟ್ಟರು (ಎಕ. II, ೧೩೨-೪೯; 1123).

ಸವತಿಮದಭಂಜನ = ಸವತಿಯ ಗರ್ವವನ್ನು ಭಂಗಿಸುವವಳು ; ಸವತಿಯ ಸೊಕ್ಕನ್ನು ಮುರಿಯುವವಳು ; ಒಂದು ಬಿರುದು : ದ್ವಿತೀಯಲಕ್ಷ್ಮೀವಿಳಾಸ ವಿದ್ಯಾಧರಿ ದಾನಚಿನ್ತಾಮಣಿ ಸವತಿಮದಭಂಜನಿ . . . ಶ್ರೀಮತ್ಪಿರಿಯರಸಿ ಮ್ಮೆಳಲಮಹಾದೇವಿಯ[ರು]ಮಂ (ಸೌಾ. XI-i. ೧೦೩-೧೬; ಸು. 1070). ಸವತಿಯ ತನಯ = ಗಂಡನ ಬೇರೆ ಹೆಂಡತಿಯ ಮಗ ; ಬಲಮಗ : ''ಸವತಿಯ ತನಯಂ ಸಾಪತ್ನ್ಯನಂತವಂ ದಾಯಾದ್ಯಂ'' (ವಸ್ತುಕೋ. ೫೫-೧೯). ಸವತಿಯ ಮಗ, ಸವತಿಮಗ = ಸವತಿಯ ತನಯ : ಸವತಿಯ ಮಗನಂ ಬೇಡಿಕೊಳ್ವಂತೆ (ಧರ್ಮಾಮೃ. ೭-೯೭); ಗಾಂಗೇಯಂ ಜ್ಯೇಷ್ಠನುಂ ಸಮರ್ಥನುಮಾಗಿಯುನ್ನತನಾಗೆ ರಾಜ್ಯಮನೊಪ್ಪಿಸಿದುಪಕಾರಕ್ಕಂ ಸವತಿಯ ಮಗನಾಗಿಯುಂ ಸ್ತ್ರೀಸಂಪರ್ಕವಿದೂರನಾಗಿ ಭವಮಂ ಕಳೆವುದಕ್ಕಂ ಕೊಕ್ಕರಿಸಿ (ಬಂಹರಿ. ೧೦-೭ ವ); ಮೈರಿ ಬೇರುಂಟೆ ಲೋಕದಿ ಸವತಿಮಗನಿಗಿಂ? (ಶ್ರೀರಾಮಾ. ೬-೨೩೦); ಸಾವು ತನಕ ಬಿಡದು ಸವತಿಮಕ್ಕಳ ಜಗಳ (ಜನಗೀ. ೬೩). ಸವತೀಮದಭಂಜನೆ = ಸವತಿಮದಭಂಜನಿ : ರಾಯಜಗದಳಮ[ನೋಜ][ರತಿ] ಮಚ್ಚರಿಪ ಸವತೀಮದಭಂಜನೆ (ಎಾ. XXVIII. ೩೫-೩೮; 1082). ಸೌತಿಭಂಗಾರ = ಉಪ್ಪಾರರ ಮತ್ತು ಕುರುಬರ ಕುಲಗಳಲ್ಲಿ ವಿಧುರನಾದವನು ಮರುಮದುವೆ ಮಾಡಿಕೊಳ್ಳುವಾಗ ಕೊಡಬೇಕಾದ ಹಣ (ಎಸಮ್ಯ. XXI, ೬). ಸೌತಿಹೊನ್ನು = ಸೌತಿಭಂಗಾರ: (ಎಸಮ್ಯ. I, ೧೫). [< ಸಂ. ಸಪತ್ನೀ./ ಪ್ರಾ. ಸವತ್ತೀ./ ತಮಿ. ಚವತ್ತಿ; ತುಳು. ಸವತಿ; ತೆಲು. ಸವತಿ, ಸವತಾಲು./ ಹಿಂ. ಸವತ್, ಸೌತ್; ಮರಾ. ಸವತ್, ಸವತೀ]

ಸವತಿಮಚ್ಚರ (ನಾ). ಸಪತ್ನಿಯರಲ್ಲಿ ಪರಸ್ಪರವಿರುವ ಮಾತ್ಸರ್ಯ ,— ಹೊಟ್ಟೈಕಿಚ್ಚು : ಸವತಿಮಚ್ಚರದಿಂ ತನಗಾತ್ಮಜಾತರಿಲ್ಲದ ಘನಕೋಪದಿಂ . . . ಕಾಳೆ ನೂಂಕಿದಳೊಡನಂದು ಬಂದ ತೊಱೆಯೊಳ್ ಮಗನಂ ಪಗೆಯೆಂಬ ಮಾಟ್ಕೆಯಿಂ (ದಶಕು. ೫-೫೯); ಸವತಿಮಚ್ಚರ ಸಖಿಯು ಬಾಧೆಯ ಪವನನುರುವಣೆಯಿಂದ ಪೆರ್ಚಿಯು (ನಾಗಚ. ೪-೧೯). [ಸವತಿ + ಮಚ್ಚರ]

ಸವತಿಮತ್ಸರ (ನಾ). = ಸವತಿಮಚ್ಚರ : ಸವತಿಮತ್ಸರ ಎಂತಹ ಕೆಳೆತನವನ್ನಾದರೂ ಮುರಿದೀತು (ಶಾಂತಲಾ. ೪೮); ಸಣ್ಣ ಸೀರೆಯೋಳ್ ಸವತಿಮತ್ಸರದೋಳ್ . . . ನನ ಕಂದರ್ಯಾಕೆ ಮುಖಮುನಿಸು (ಪಕ್ಷಿಹ. ೧೦೫). [ಸವತಿ + ಮತ್ಸರ]

ಸವತಿಮಾತ್ಸರ್ಯ (ನಾ). = ಸವತಿಮಚ್ಚರ : ಚಂಪಕೆಯು ತನ್ನ ಸವತಿಮಾತ್ಸರ್ಯದಿಂದ ಮಾತಂಗಿನಿಯನ್ನು ಹೊರದೂಡಬೇಕೆಂದು ಗಂಡನಲ್ಲಿ ಹಟಮಾಡಿದಳು (ಬಂಚಮ. ೪೦). [ಸವತಿ + ಮಾತ್ಸರ್ಯ]

ಸವತಿವಾಟ್ (ನಾ) ಸಪತ್ನಿಯರ ಜೊತೆಯಲ್ಲಿ ನಡೆಸುವ ಸಹಜೀವನ ; ಸವತಿಯರ ಜೊತೆಯ ಸಹಬಾಳ್ವೆ: ಚದುರೊಳ್ ಜವ್ವನದೊಳ್ ವಿಳಾಸದೆಡೆಯೊಳ್ ಮತ್ತೊರ್ವಳಿನ್ನಿಳಲ್ಲದಲೇನಿಂದ್ರನೊಳಾದ ಬಾಟ್ ಸವತಿವಾಟೀ ಪೊಲ್ಲದಾನೊಲ್ಲೆ (ಬಂಪರಿ. ೩-೩೪). [ಸವತಿ + ಬಾಟ್]

ಸವತುರಂಗಮ (ನಾ). ಯಜ್ಞದ ಕುದುರೆ ; ಯಾಗದ ಅಶ್ವ : ಸವತುರಂಗಮ ದೊಡನೆ ನೀನೇ ಬಂದೆಯಾಯೆಡೆಗೆ (ತಿಮ್ಮಅ. ೬-೧೧೬). [ಸಂ.]

ಸವತೆ[1] 'ಸವುಂತೆ' ನೋ.

ಸವತೆ[2] (ನಾ). ಸಮ ; ಮಟ್ಟಸ : ಅಟ್ಟ ನೋಡಿಸು ಮನುಜರ ನಮ್ಮ ದೊರೆ ಬಂದ ಬಟ್ಟೆಯ ಕಾನನಂಗಳನು ಕುಟ್ಟಿಸಿ ಬಂದನೆ ಸವತೆ ಮಾಡದ ನುಗ್ಗುಗುಟ್ಟಿ ಬಂದನೊಯೆಂಬುದನು (ನಾಗಚ. ೧೮-೪೫). [ಸವ[1] + -ತೆ]

ಸವತೆಕಾಯಿ 'ಸವುತೆಕಾಯಿ' ನೋ.

ಸವತ್ಸ (ಗು). ೧. ಕರುವಿನಿಂದ ಕೂಡಿದ : 'ಸವತ್ಸಸುರಭಿ' ಪರಾ. (ನಾ). ೨. ಕರುಗಳೊಡಗೂಡಿದವನು ; ಕೃಷ್ಣ : ಭವದೀಯಮನೋಹರಬಾಲ್ಯ ವಿನೋದಾಮೃತದೊಳೆಯ್ದೆ ತೀವಿದ ಮತ್ಪ್ರಾಂತವನಿಂತೀ ವಿಷದಿಂ ತೀವುವುದೇ ಶ್ರೀವತ್ಸ ವತ್ಸ ವತ್ಸ ಸವತ್ಸಾ (ಜಗವಿ. ೩-೯೩). [ಸಂ.]

ಸವತ್ಸನಿವಹ (ನಾ). ೧. ಕರುಗಳ ಗುಂಪು , — ಸಂದಣಿ. ೨. ಕರುಗಳೊಡಗೂಡಿದವನು; ಕೃಷ್ಣ: ಪೊಕ್ಕಂ ವ್ರಜಮಂ ಸವತ್ಸನಿವಹಂ ವಿಕ್ರಾಂತಚಕ್ರಾಯುಧಂ (ಜಗವಿ. ೩-೧೧೫). [ಸಂ.]

ಸವತ್ಸಸುರಭಿ (ನಾ). ಕರುವಿನಿಂದ ಕೂಡಿದ ಹಸು : ಆಗಳಂಗರಾಜಂ ತನ್ನಂ ಪರಿಚ್ಛೇದಿಸಿ ನೇಸಜ್ ಮೂಡೆಯಾಜ್ಞಾಪೇಕ್ಷಣಂಗೆಯ್ದು ಸವತ್ಸಸುರಭಿಯನಭವಂದಿಸಿ (ವಂಪಭಾ. ೧೨-೧೦೬ ವ). [ಸಂ.]

ಸವದಳಿಸು, ಸವತಳಿಸು (ಕ್ರಿ). ಸವರು ; ತೀಡು (?) : ಮರುತನಲವಿರಳತ್ವನೇನ ಹೇಳುವೆ ಸವದಳಿಸಿ ಮದ್ದಳಿಯ ಲೆಕ್ಕದೆ ಕೊರಳಿಗಿಕ್ಕಿಹುದು (ಸಂಭಪ. ೫-೧೦). ಸವತಳಿಸು: ಸವತಳಿಸಿ ಮಾರ್ತಿರುವಿನಲ್ಲಿ ಸಂತವಿಸಿಕೊಂಡರ್ಜುನನು ದ್ರೋಣನ ನವನಿಶಿತಬಾಣೌಘದಲಿ ಹೂಳಿದನು ನಿಮಿಷದಲಿ (ಕುವಾರ್ದ್ರೋ. ೯-೪೬). [< ಸಮತಳಿಸು]

ಸವದೆ[1] 'ಸೌದೆ[1]' ನೋ.

ಸವದೆ[2] 'ಸೌದೆ[2]' ನೋ.

ಸವನ[1] (ನಾ). ಯಮ; ಪಿತೃಪತಿ : ''ಸವನ — ಶಮನ = ಯಮ (೨ ಸ್ಮಪನ)'' (ತದ್ಭವಕೋ. ೪೩). [< ಸಂ. ಶಮನ]

ಸವನ[2] (ನಾ). ೧. ಸೋಮಲತೆಯಿಂದ ರಸವನ್ನು ತೆಗೆಯುವಿಕೆ : ''ಸುತ್ಯಾ, ಅಭಿಷವಃ, ಸವನಂ — ೩ ಸ್ನಾನಕ್ಕೂ ಸೋಮಲತೆಯನ್ನು ಕುಟ್ಟಿ ರಸ ಹಿಂಡುವದಕ್ಕೂ ಹೆಸರು'' (ಸ್ಕಾಂತ. ೨೨೯). ೨. ಯಜ್ಞ ; ಯಾಗ : ಅಂಗಜಮರ್ದನಾರ್ಚನೋತ್ಸವ ಸವನಪ್ರದೀಕ್ಷಿತನಂ . . . ಈಗಳೆನ್ನ ಬಗೆಯುಂ ಬಯಸಿರ್ದಪುದು (ರಾಜಶೇ. ೬-೭೧). ೩. ಹವಿಸ್ಸು ; ಆಹುತಿ : 'ಪ್ರಾತಃಸವನ' ಪರಾ. ೪. ಸ್ನಾನ ; ಮಜ್ಜನ : ಸವನಂ ಸವನಂ ಕೃತಕಂಜವನಂ ಜವನಂತೆ ವನಿತೆಗಾಯ್ತು (ಲೀಲಾವ. ೯-೧೩೩); ಸವನದಿನಂಗರಾಗ ಮುಮಲಕ್ಕಕರಾಗಮುಮೆಯ್ದೆ ಪೋಗಲ್ (ಜಗವಿ. ೧೪-೧೧೦). ೫. ಹೋಮದ ಅಗ್ನಿ : ಸವನಂ ಸವನಂ ಕೃತಕಂಜವನಂ ಜವನಂತೆ ವನಿತೆಗಾಯ್ತು (ಲೀಲಾವ. ೯-೧೩೩). ೬. ಮಂಗಳಕರವಾದ ಜಲ, ಹಾಲು ಮುಂತಾದ ದ್ರವವನ್ನು ದೇವರಿಗೆ ಎರೆಯುವುದು ; ಅಭಿಷೇಕ : ಘೃತಕ್ಷೀರದಧಿ ನಾಳಿಕೇರತೋಯಾಮ್ರರಸೇಕ್ಷುರಸ ಗಂಧೋದಕಾದಿಗಳಿಂ ಮಾಡುವ ಸವನಮುಂ (ಆದಿಪು. ೧೫-೧೫ ವ); ತ್ರಿದಶಪತಿ ಪಾರಿಜಾತಪ್ರದನಾಗದೊಡಾಧಿಪತ್ಯಸವನಮದಿನ್ನಾಗದು ತನ್ನಗಾರಿಗಾಗಿಪ್ಪುದು ಧಾರಾಖಡ್ಗಸವನಮಂ ಮತ್ಪಡ್ಗಂ (ಜಗವಿ. ೧೩-೩೧); ಸವನಗಂಧಾಂಬುಪ್ರವಾಹದಿ ದಿವಿಜಗಜ ನೀರಾಟವಾಡಿಯೆ ದಿವಿಜರಜಿಕೆಯ ಗಂಧವಂ ಧರವೆನಿಸಿದುದು (ಪಾಶ್ವಭಾ. ೩೩-೭೦). ೭. ಅಭಿಷೇಕ : 'ಸವನೋದಕ' ಪರಾ. [ಸಂ.]

ಸವನಕರ್ತು (ನಾ). ಯಾಗವನ್ನು ನಡೆಸುವವನು ; ಯಾಗದ ಮುಖಂಡ : ಶಿವಶಿವಾ ತಪ್ಪಾಯ್ತು ಮಿಗಿಲಾ ಸವನಕರ್ತುವಿಗಿಂತ ನಿಜನಾಮವನು ಕೀರ್ತಿಸುವಾ ಶ್ವಪಚನತ್ಯುತ್ತಮೋತ್ತಮನು (ನಭಾಗ. ೩-೧೫೫-೨೪). [< ಸಂ. ಸವನಕರ್ತೃ]

ಸವನಸಾಪೇಕ್ಷ (ನಾ). ಯಜ್ಞಕಾಲದಲ್ಲಿ ಹೋಮಕ್ಕೆ ಉಪಯೋಗಿಸುವ ವಸ್ತು : ಇವೆ ಮಹಾಮಂತ್ರಾಸ್ತ್ರಸಂತತಿಯಿವೆ ಮಹಾಧನುರಾಜ್ಯಸತ್ಕೃತಿಸವನ ಸಾಪೇಕ್ಷಂಗಳಿವೆ (ಕುವಾಗ. ೪-೩೬). [ಸಂ.]

ಸವನಸ್ಥಾನ (ನಾ). [ಜೈನ] ಜನ್ಮಾಭಿಷೇಕದ ಸ್ಥಳ : ಭಾರತಾಪರವಿದೇಹೈರಾವತ ಪ್ರಾಗ್ವಿದೇಹಲಸದ್ಭೂತಜಿನವ್ರಜಕ್ಕೆ ಸವನಸ್ಥಾನಂಗಳೀ ಶೈಲದೊಳ್ (ಪುಪ್ರಸ. ೧೦-೫೮). [ಸಂ.]

ಸವನಿಸು 'ಸಮನಿಸು' ನೋ.

ಸವನೆಲ (ನಾ). ಸಮತಟ್ಟಾಗಿರುವ ಭೂಮಿ ; ಸಪಾಟಾದ ನೆಲ ,— ಪ್ರದೇಶ : ಭೂಮಿಯು ಸವನೆಲವುಳ್ಳದ್ದು, ಇಲ್ಲವೆ ತೆರೆಗಳ ಹಾಗೆ ಏರಿಳಿತಗಳುಳ್ಳದ್ದು (ಕಭಾಗೆ. ೬). [ಸವ[1] + ನೆಲ]

ಸವನೋತ್ಸವ (ನಾ). ೧. [ಜೈನ] (ಮದುವೆ ಮುಂತಾದ ಸಂದರ್ಭಗಳಲ್ಲಿ ಮಾಡಿಸುವ) ಮಂಗಳಸ್ನಾನದ ಸಮಾರಂಭ : ಮೃಗನೇತ್ರೆ ಮನಂಗೊಂಡಳ್ ಮಲಯಜಹಿಮಕರ್ದಮಕಲಿತಸಲಿಲಸವನೋತ್ಸವದೊಳ್ (ಪಂಶಾಮಾ. ೫-೪೦). ೨. ಮಂಗಳಕರವಾದ ಜಲ, ಹಾಲು ಮುಂತಾದುವುಗಳನ್ನು ದೇವರಿಗೆ ಎರೆಯುವ ಸಮಾರಂಭ ; ಅಭಿಷೇಕ ಮಾಡುವ ಉತ್ಸವ : ಅರಮನೆಯೊಳಗಣ ಜಿನಮಂದಿರಕ್ಕೆ ನಡೆತಂದು . . . ಶಾಂತೀಶ್ವರಂಗೆ ಪದಪೊದವೆ ಮಾಡಿ ಸವನೋತ್ಸವಮಂ (ಪಂಶಾಮಾ. ೧೪-೮೩); ಎಸೆವ ಜಿನೇಂದ್ರಬಿಂಬಮನಳುಂಬಮಿದೆಂಬಿನಮಲ್ತ್ತಿಯಿಂ ಪ್ರತಿಷ್ಠಿಸಿ

ಮನವಾರೆ ಮಾಡಿ ಸವನೋತ್ಸವಮಂ (ಚಂದ್ರಪ್ರ. ೪-೬೯). ೩. (ಜಿನಶಿಶುವಿನ) ಜನ್ಮಾಭಿಷೇಕದ ಸಮಾರಂಭ ; ಜನ್ಮಸವನ : ಪಾಲ್ಗಡಲ ನೀರ ಪರಿವ ಪೊನಲ್ಗಳ್ . . . ಎಱಗಿದುವಾ ಜಿನೇಂದ್ರಸವನೋತ್ಸವದೊಳ್ (ಶಾಂತಿಪು. ೧೦-೫೧); ಗಂಧರ್ವ ದೇವದೇವೀಬಂಧುರಸಂಗೀತತುಂಗಮಂಗಳರವಸಂಬಂಧಂ ತೀವಿರ್ದುದು ದಿಕ್ಸಂಧಿಗಳೊಳ್ ಜಿನನ ಜನನಸವನೋತ್ಸವದೊಳ್ (ಚಾಂಪು. ೪-೧೦೬). [ಸಂ.]

ಸವನೋದಕ (ನಾ). (ಜಿನನ) ಅಭಿಷೇಕದ ಜಲ,— ನೀರು : ಭುವನಂ ಪವಿತ್ರಮಾದುದು ಸವನೋದಕದಿಂ ದ್ವಿತೀಯತೀರ್ಥೇಶ್ವರನಾ (ಅಜಿಪು. ೪-೭೫); ಇದು ಭುವನಾಧಿತ್ಯ ಸವನೋದಕದಿಂ ಗಡ ಪೂತಮಾದುದು (ಗದಾಯು. ೭-೭೮). [ಸಂ.]

ಸವಬೆಸ$_1$ (ನಾ). ಸಮಾನವಾದ ಕಾರ್ಯ : ಎವಗೆ ತವಗೆಂದೀ ಹವಿರ್ಭಾಗವನು ಮುತ್ತಿತು ದೇವತತಿ . . . ದಿವಿಜರೊಳಹಸುಗೆಗಳ ಲೆಕ್ಕದ ಸವಬೆಸನ ಸವಿವಾಯ ತುತ್ತಿನ ತವಕಿಗರು ಹೊಯ್ದಾಡಿದರು ಸಭೆಯಲಿ ಸುರೇಶ್ವರನ (ಕುವಾ.ಸ. ೭-೬೯).

[ಸವ$_1$ + ಬೆಸ$_1$]

ಸವಬೆಸ$_2$ 'ಸವ$_1$' ಪರಾ.

ಸವರಣೆ 'ಸಂವರಣೆ$_1$' ನೋ.

ಸವರನ್ 'ಸವರನ್ನು' ನೋ.

ಸವರನ್ನು, ಸವರನ್ (ನಾ). ೧. ''ಇಂಗ್ಲೆಂಡಿನ ಒಂದು ಪೌಂಡು ಚಿನ್ನದ ನಾಣ್ಯ ; ಸವರನ್ನು'' (Sovereign. ಇಂಕಾ). ೨. ಸುಮಾರು ಎಂಟು ಗ್ರಾಂಗಳಷ್ಟು ಚಿನ್ನದ ಒಂದು ತೂಕ ಮತ್ತು ಆ ತೂಕದ ಚಿನ್ನದ ಬಿಲ್ಲೆ; ಪವನು: ಒಂದು ಬೊಗಸ ಸವರನ್ನಾದರೂ ನಿಮ್ಮ ಕೈಯಿಗೆ ಬೀಳೋ ಹಾಗೆ ಮಾಡುತ್ತೇನೆ (ಅಮಾಪ್ರ. ೩). **ಸವರನ್** : ೨. ಸವರನ್ ಬೆಲೆ ಹೇಗಿದೆ ವಿಚಾರಿಸಿ ಬರಯಿರಿ (ಕೊಷ್ಪ್ರ. ೧೭); ಈ ಕಾಸಿನಿಂದಲೇ ಬಂಗಾರದ ಸವರನ್ ಬೇಕಾದರೂ ಮಾಡಬಹುದು (ಸ್ವಾಮಿಕೇ. ೭೯). [<— ಇಂ. Sovereign]

ಸವರಿಸು$_1$ 'ಸಮಜೆಸು' ನೋ.

ಸವರಿಸು$_2$ 'ಸಂವರಿಸು$_1$' ನೋ.

ಸವರು$_1$ 'ಸಮಜು' ನೋ.

ಸವರು$_2$ 'ಸಮರು' ನೋ.

ಸವರ್ಣ (ಗು). ೧. ಒಂದೇ ಬಣ್ಣದ ; ಸಮಾನವರ್ಣದ. ೨. ಒಂದೇ ಜಾತಿ ಅಥವಾ ವರ್ಗಕ್ಕೆ ಸೇರಿದ. (ನಾ). ೩. 'ಸ' ಎಂಬ ಅಕ್ಷರ. ೪. ಹೋಲಿಕೆ ; ಸಾದೃಶ್ಯ. ೫. ಸಮರೂಪವಪ್ಪುದು ; ಏಕರೂಪತೆಯನ್ನು ಹೊಂದಿರುವುದು. ೬. [ವ್ಯಾಕ] ಒಂದೇ ಗುಂಪಿಗೆ ಸೇರಿದ ಸ್ವರ : ತರದಿನಕಾರಂ ಮೊದಲಾಗಿರೆ ಪದಿನಾಲ್ಕುಂ ಸ್ವರಂಗಳಾದಿಯ ಪತ್ತಕ್ಕರಮುಂ ಸಮಾನಮೆನಿಸುಗುಮರಡೆರಡವಱೊಳ್ ಸವರ್ಣಮೆಂತೋದಿದೊಡಂ (ಶಮದ. ೬). [ಸಂ.]

ಸವರ್ಣದೀರ್ಘಸಂಧಿ (ನಾ). [ವ್ಯಾಕ] ''ಸವರ್ಣಸ್ವರಗಳಿಗೆ ಸಂಧಿಯಾದಾಗ ಎರಡಕ್ಕೂ ಒಂದೇ ದೀರ್ಘಸ್ವರವು ಆದೇಶವಾಗುತ್ತದೆ. ಇದಕ್ಕೆ ಸವರ್ಣ ದೀರ್ಘಸಂಧಿಯೆಂದು ಹೆಸರು'' (ಮಧ್ಯಮ. ೧೭೧). [ಸಂ.]

ಸವರ್ಣವಿಧಾನ (ನಾ). [ವ್ಯಾಕ] ಸಂಧಿಯಾಗುವಾಗ ಘಟಿಸುವ ಸವರ್ಣ ಸಂಜ್ಞೆಯ ಕ್ರಮ : ಕ್ರಮದಿಂ ಹ್ರಸ್ವಕ್ಕಂ ಹ್ರಸ್ವಮೊದವೆ ದೀರ್ಘಕ್ಕೆ ದೀರ್ಘಮೊದವೆ ತಗುಳ್ಗುಂ ಸಮಸಂದಾ ಯುಗಳಂಗಳೊಳಮಿಳನಮಾಗೆಲ್ಲಿಯುಂ ಸವರ್ಣವಿಧಾನಂ (ಶಮದ. ೬). [ಸಂ.]

ಸವರ್ಣಸಂಜ್ಞೆ (ನಾ). [ವ್ಯಾಕ] ಸವರ್ಣ ಎಂಬ ಹೆಸರು : ಆ ಪತ್ತಕ್ಷರಂಗಳ್ ಅನುಲೋಮದೊಳಿರ್ದೊಡಂ ಸವರ್ಣಸಂಜ್ಞೆಯಂ ಪಡೆಗುಂ (ಶಮದ. ೬ ವೃತ್ತಿ).

[ಸಂ. ಸವರ್ಣಸಂಜ್ಞಾ]

ಸವರ್ಣಸ್ವರ (ನಾ). [ವ್ಯಾಕ] ಒಂದೇ ಗುಂಪಿಗೆ ಸೇರಿದ ಸ್ವರ : ಅಕಾರಕ್ಕೆ ಆಕಾರವಾಗಲಿ ಆಕಾರವಾಗಲಿ ಸವರ್ಣಸ್ವರ ; ಆಕಾರಕ್ಕೂ ಹಾಗೆಯೇ. ಇದರಂತೆಯೇ ಇ ಈ ಉ ಊ ಋ ೠ ಇವು ಸವರ್ಣಸ್ವರಗಳ ಜೋಡಿಗಳು (ಮಧ್ಯಮ. ೧೭೧ ಆಡಿಟಿ.).

[ಸಂ.]

ಸವರ್ಣೀಯ (ನಾ). ೧. ಬಿಳಿಯನಲ್ಲದ (ಮುಖ್ಯವಾಗಿ) ನೀಗ್ರೋಜನಾಂಗಕ್ಕೆ ಸೇರಿದ ವ್ಯಕ್ತಿ ; ಕಪ್ಪುಜನಾಂಗಕ್ಕೆ ಸೇರಿದವನು : ದಾರಿಗಳ ಮೇಲೆ ಸಿಕ್ಕುವ ಬಿಳಿಯರಂತೂ ತಾನೊಬ್ಬ ಸವರ್ಣೀಯನೆಂದು ಅನುಮಾನದ, ಅಸಡ್ಡೆಯ ದೃಷ್ಟಿಯಿಂದ ಕಾಣುವರು (ಹೂಸ್ಪ್ರ. ೨೨೮). ೨. (ಭಾರತೀಯಸಂದರ್ಭದಲ್ಲಿ) ಚತುರ್ವರ್ಣಗಳಲ್ಲಿ ಯಾವುದಾದರೂ ಒಂದು ವರ್ಣಕ್ಕೆ ಸೇರಿದ ವ್ಯಕ್ತಿ. ೩. ಒಂದೇ ವರ್ಣಕ್ಕೆ ಸೇರಿದ ವ್ಯಕ್ತಿ; ಸಮಾನವರ್ಗಕ್ಕೆ ಸೇರಿದವನು: ಅವರಿಬ್ಬರೂ ಸವರ್ಣೀಯರು (ರೂಢಿ). [ಸಂ.]

ಸವಲಕ್ಕಿ 'ಸೋಗಿಲಕ್ಕಿ' ನೋ.

ಸವಲಕ್ಕೆ 'ಸವಾಲಕ್ಷ' ನೋ.

ಸವಲತ್ತು, ಸೌಲತ್ತು (ನಾ). ೧. ಸೌಕರ್ಯ ; ಅನುಕೂಲತೆ : ಜಮೀನ್ದಾರರ ಮಕ್ಕಳಿಗಿರುವ ವಿಶೇಷ ಸವಲತ್ತು ತಮಗೆ ಯಾಕಿಲ್ಲ? (ಚರಸ್ಮ. ೧೦೬); ಭಾರತೀಯ ಹಾಗೂ ಐರೋಪ್ಯ ಪೈದಿಗಳ ಸವಲತ್ತುಗಳಲ್ಲಿ ಅಜಗಜಾಂತರ ಇತ್ತು (ಆತ್ಮಾಪ್ರ. ೧೨೬). ೨. ಅವಕಾಶ; ಆಸ್ಪದ: ಸಮಾವದ ಸ್ಥಳಗಳಿಗೆ ಕಾವಲಿನೊಡನೆ ಹೋಗುವ ಸವಲತ್ತು ಇತ್ತು (ಮೇದಿಮ. ೧೭೪). ೩. ರಿಯಾಯಿತಿ : ಯುದ್ಧ ಮುಗಿದ ನಂತರ ಸರಕಾರೀನೌಕರರಿಗಾಗಿ ಈ ಸವಲತ್ತನ್ನು ಕೊಡಮಾಡಿದೆ (ಸಮಸೌ. ೧೨೪). **ಸೌಲತ್ತು** : ೧. ಏನೋ ಅವರಿದ್ದಾರಂತ ನಮ್ಮ ಜನಕ್ಕೆ ಸ್ವಲ್ಪಿಲ್ಲ ಸ್ವಲ್ಪ ಸೌಲತ್ತು ಸಿಕ್ಕಾವೆ (ನೀನಮು. ೧೯೧); ಬೀದೀರಾಣಿಯು . . . ತನ್ನ ರಾಜ್ಯದಲ್ಲಿ ಸೇಟರ ವ್ಯಾಪಾರಕ್ಕೆ ಏನಾದರೂ ಸೌಲತ್ತುಗಳು ಬೇಕಾದಲ್ಲಿ ಒದಗಿಸುವುದಾಗಿ ವಚನವಿತ್ತಳು (ದೌಲ್ತ. ೨೦೯). [<— ಅರ. ಸುಹಲತ್; ಪಾರ. ಸೋಹಲತ್; ಮರಾ. ಸವಲತ್, ಸೋಹಲತ್, ಸೋಹೋಲತ್, ಸೌಲತ್]

ಸವಲತ್ತುಕೊಡು (ಕ್ರಿ). ೧. ಅನುಕೂಲ ಮಾಡಿಕೊಡು : ಇಂಥಾ ಪುಂಡರಿಗೆಲ್ಲಾ ಅವರು ಸವಲತ್ತು ಕೊಡುತ್ತಿರೂದು ಇನ್ಯಾತಕ್ಕಂತ ತಿಳಿದೀ? (ಪುಣ್ಯುಪ. ೬೬). ೨. ಅವಕಾಶಕೊಡು ; ಆಸ್ಪದ ನೀಡು : ಭಟ್ಟರು ಗಂಗೊಳ್ಳಿಯವರಿಗೆ ಪ್ರತಿಯೊಂದು ಮಾತಿನಲ್ಲಿ ಇಷ್ಟು ಸವಲತ್ತು ಕೊಟ್ಟಿದ್ದೇ ಆಶ್ಚರ್ಯ (ಅಬೋಲೀ. ೧೪೮); ನನಗೆ ಬಿಡುವಾದಾಗ ನೀರು ತಂದು ಹಾಕುವುದಕ್ಕೆ ಮಾತ್ರ ನೀವು ಸವಲತ್ತು ಕೊಡಬೇಕು (ಸ್ಪೃಚಿ. ೩೦೩). ೩. ರಿಯಾಯಿತಿ ತೋರಿಸು : ನನಗ ಏನು ಸವಲತ್ತ ಕೊಟ್ಟಾಂಗ ಆತು ನೀನು (ರಶ್ಮಿ. ೨೧೩). [ಸವಲತ್ತು + ಕೊಡು$_1$]

ಸವಲೆಕ್ಕ (ನಾ). ಒಂದೂಕಾಲುಲಕ್ಷ ; ಸವಾಲಕ್ಷ : ರಕ್ಕಸವೊಯ್ಸುಳನೆಮ್ಮಾಱ್ಕ್ಕರವಂ ಬರೆದು ಪಟುಮನೆತ್ತಿದಡಿದಿರೊಳ್ ಲಕ್ಕದ ಸವಲೆಕ್ಕದ ಮಱುವಕ್ಕಂ ನಿನ್ನಪುವೆ ಸಮರಸಂಘಟ್ಟನದೊಳ್ (ಎಕ. VI. ಮೂಡಗ. ೧೩-೬೬; 1063).

[IP ಇದು 'ಸವಲಕ್ಕ' ಎಂಬುದರ ಅಪಲಿಖಿತವಿರಬಹುದು]

ಸವವಯಸ (ಗು). ಒಂದೇ ಪ್ರಾಯದ : ಸವವಯಸ ದಿವಿಜಪೇಟಕ ನವಪೇಟಕನಿಕರಮಗಲದಿರಲಬ್ಧಿಯ ಮೇರುವ ಕೆಲದ ಗಿರಿಕದಂಬಕದವಜ್ಜೆಯಂ ಪೋಲ್ತುದಾ ಕುಮಾರನ ಕೆಲದೊಳ್ (ಶಾಂಪು. ೧೦-೭೧).

[ಸವ$_1$ + ವಯಸ$_1$]

ಸವಸಮಾಪ್ತಿ (ನಾ). ಯಜ್ಞದ ಕೊನೆ ; ಯಾಗದ ಮುಕ್ತಾಯ: ಸವಸಮಾಪ್ತಿಯೊಳಖಿಳಸಂಯಮಿನಿವಹಕರ್ಚನ ಮಾಡಿ ಕಲಶೋದ್ಭವನು ಕಳುಹಿದರವರು ಹಿಂಸಾರಹಿತಯಜ್ಞದಲಿ (ತಿಮ್ಮಾ. ೯-೬೦). [ಸಂ.]

ಸವಸರಿ (ನಾ). ಸರಿಸಮವಾದುದು; ಸಮಾನವಾದುದು: ಹವಣಿಸಿದ ವಾಘೆಗಳ ರಾಘೆಯ ಸವಸರಿಯ ಭಾರಾಂಕಲವುಡಿಯ ಗವಿಯ ಗರುವರು ನೂಕಿದರು ತೇಜಿಗಳ ನೋಡೆಯಲಿ (ಕುವಾಭೀ. ೪-೫೦). [ಸವ$_1$ + ಸರಿ$_1$]

ಸವಸಲ್ (ಕ್ರಿ). ಚೆನ್ನಾಗಿ ಪ್ರಸಿದ್ಧವಾಗು; ವಿಶೇಷವಾಗಿ ಪ್ರಚಾರದಲ್ಲಿರು: ಸವಸಂದಾಯದೊಡಂ ಸಂಭವಮಾದುದು ಚಾಗಂ (ಎಕ. IV, ಹೆಗ್ಗಡ. ೧೮-೬; 1057); ಸವಸಂದ ಮುಖಂ ಪ್ರತಿಮುಖಿಮವಮರ್ಶಂ ಗರ್ಭಮಂತೆ ನಿರ್ವಹಣಮೆನಿಪ್ಪುವವೆಯ್ದೆ ಸಂಧಿಯಕ್ಕುಂ (ಕಾವ್ಯಾವ. ೧೫೭); ಸವಸಂದ ಕಾಲವಾಚಕಮಿವು ನಾಡಿದು ನಾಳೆ ನಿನ್ನೆ ಮೊನ್ನೆಗಳ್ (ಶಮದ. ೬೨೨). [< ಸಮಸಲ್]

ಸವಸಿ (ನಾ). ಒಂದು ಸ್ಥಳದ ಹೆಸರು : ಸವಸಿ ಗುಡಿಗೆಜೆಯುಮನಣುಂಗ XXX ಳಿತಮಾಳುತ್ತಿರೆ (ಎಕ. VII,೨ಕಾರಿ. ೧೭೯-೯: 997). [?]

ಸವಸು$_1$ 'ಸಮೆಯಿಸು$_1$' ನೋ.

ಸವಸು$_2$ 'ಸಮೆಯಿಸು$_2$' ನೋ.

ಸವಸುತಿ (ನಾ). ಒಂದೇ ಸ್ವರಸ್ಥಾಯಿ ; ಸಮಶ್ರುತಿ : ಗಾಣರ್ ಸವಸುತಿಯಿಂ ರತಿ ಎಣೆಯನೆಟ್ಟಲಿಸಿದಂತೆ ಪಾಡಿದರಾಗಳ್ (ಪಾರ್ಶ್ವಪು. ೧೨-೨೩). [< ಸಂ. ಸಮಶ್ರುತಿ]

ಸವಹರೆಯ (ನಾ). ಸಮಪ್ರಾಯ ; ಒಂದೇ ವಯಸ್ಸು : ವೀರಸೇನಾನಿವಹದೊಳು ಸಹದೇವನಾತನ ಸವಹರೆಯ ನಕುಲಾಂಕನಿವರಾಹವಧುರಂಧರರು (ಕುವ್ಯಾಭ. ೨-೧೫).

[ಸವ$_1$ + ಹರೆಯ (< ಪರಯ)]

ಸವಳ 'ಸಬಳ$_2$' ನೋ.

ಸವಳದೆ, ಸಮಳ್ತಡೆ, ಸವಳ್ತಡ, ಸವಳ್ತಡೆ (ನಾ). ಪ್ರಾತಃಕಾಲ; ಪ್ರಭಾತ: ''ಉದಯಮನುಸಿರ್ವುವು ತಿಳಿ ಸವಳದೆ ಪೊಟ್ತಡೆನೆ ಸವಳ್ತಡೆಯೆನೆಯುಂ'' (ಶಮದ. ೬೫); ಸವಳದೆ ದುಗ್ಧಾಮಯ ರುಧಿರವಸಾನ್ವಿತಮಾಗಿ ಪಂಚಪಲ್ಲವಜಲಮಂ ಪವಣಿಂದೆಱೆದೊಡೆ . . . ಕುಸುಮಿಸುಗುಂ (ಶೋಕೋಪ. ೬-೪೪); ಮೃಗಯೇನನ ಪೆಣಂ ತೊಟ್ಟಗೆ ಸವಳದೆ ಘಂಟೆ ಕಂಡು ದುಃಖಿಸಿ (ಧರ್ಮಾಮೃ. ೧೦-೨೭); ಅರುವರುಂ ಪಾಳಿಯಿಂದೋರೊರ್ವರೆಯ್ತಂದು ತಂತಮ್ಮ ಸೂಳಾಳ್ಕೆಗಮರ್ದ ಸವಳದೆ ಪಗಲ್ ಬಯ್ಲು ಚೆಂದವಂ . . . ತೋರ್ಕೊಳಿಸುತ್ತೆ ಋತುಹೃದಯಮಂ ತಾಂ ಗಳುಪದೇಶಮಿತ್ತಿತ್ತು (ಸಂಪವ. ೨೮-೧೫). **ಸಮಳ್ತಡೆ** : ''ಕಾಲ್ಯಂ, ಉಷಃ . . . ಪ್ರಾತಃ, ವ್ಯಷ್ಯಂ – ಈ ೧೦ ಸಮಳ್ತ(ಡೆ)ಲ್'' (ಹಲಾಯು. ೧೯-೧೧೧). **ಸವಳ್ತಡ**: ಹೇಮಂತನೃಪನ ಬೆಳ್ಳಸದವೋಲಾಗಳ್ಪವಳ್ತಡಂ ಮಂಜು ದೆಸೆದೆಸೆಯನಾವರಿಸಿರ್ದುದು (ಶೇಪರಾ. ೨೫-೧೦); ಪೊಟ್ತಡಂ , ಸವಳ್ತಡಂ (ಶಬ್ದಾನು. ೨೦ ಪ್ರಯೋ). **ಸವಳ್ತಡೆ** : ಸವಳ್ತಡಿಂಗೆ , ಪೊಟ್ತಡಿಂಗೆ , ಸವಳ್ತಡಿನ , ಪೊಟ್ತಡಿನ (ಶಮದ. ೬೨೧ವೃತ್ತಿ). 'ಪೊಟ್ತಡು' ಪರಾ. [ದೇ. ॥ ?./ ಮರಾ. ಸವಳ; ಹಿಂ. ಸವೇರಾ]

ಸವಳಿ 'ಸವಡಿ$_1$' ನೋ.

ಸವಳಿಕೆಯ್ 'ಸವಡಿಗೆಯ್' ನೋ.

ಸವಳು 'ಸವುಳು$_1$' ನೋ.

ಸವಳುನೀರು 'ಸವುಳುನೀರು' ನೋ.

ಸವಳ್ತಡ 'ಸವಳದೆ' ನೋ.

ಸವಳ್ತಡೆ 'ಸವಳದೆ' ನೋ.

ಸವಱಿಸು 'ಸಮಱಿಸು' ನೋ.

ಸವಱು 'ಸಮಱು' ನೋ.

ಸವಾ, ಸವ್ವಾ (ನಾ). ಒಂದು ನಿರ್ದಿಷ್ಟವಾದ ಪ್ರಮಾಣ ; ಒಂದೂಕಾಲು: 'ಸವಾಸೇರು' ಪರಾ. **ಸವ್ವಾ** : ಎಂಟು ಆಣೆ ಹಿಡಿದು ಸವ್ವಾ ಇಂಚಿದವರಿಗೆ ಎರಡು ಆಣೆಯ ಅಂತರವಿರುವುದು (ಮುಂಬವ್ಯಾ. ೧೦೩). 'ಸವ್ವಾಸೇರು' ಪರಾ. [<— ಹಿಂ. ಸವಾ; ಮರಾ. ಸವಾ, ಸವಾವ್, ಸವ್ವಾ./ ಪ್ರಾ. ಸವಾಯ./ ಸಂ. ಸಪಾದ]

ಸವಾಯಿ (ಗು). (ಅಲಂ) ಶ್ರೇಷ್ಠವಾದ ಹುದ್ದೆಯ : ಸ್ವಾದಸಂಸ್ಥಾನದ ಸವಾಯಿ ಬಸವಲಿಂಗರಾಜರು ಕೊಡಗಿನ ಸಂಸ್ಥಾನದ ವೀರರಾಜೇಂದ್ರ ಒಡೆಯರವರ ಕ್ಷೇಮಕುಶಲವನ್ನು ಕೇಳಿದರಿಂದ (ರಾಜೇಂದ್ರ ೨೦೮).

[<— ಹಿಂ. ಸವಾಈ, ಸವಾಯ; ಮರಾ. ಸವಾಈ, ಸವಾಯ್, ಸವಾಯಾ]

ಸವಾರ್‌ಕಚೇರಿ 'ಸವಾರಕಚೇರಿ' ನೋ.

ಸವಾರ, ಸುವಾರ್$_2$, ಸ್ವಾರ (ನಾ). ೧. ಕುದುರೆಯ ಮೇಲೆ ಕುಳಿತು ಪ್ರಯಾಣ ಮಾಡುವವನು ; ಅಶ್ವಾರೋಹಿ : ಗುಂಡಪ್ಪ ಸವಾರನನ್ನು ಕೆಡವಿದ ಕುದುರೆಯಂತೆ ತಾನೂ ತನ್ನ ಮನೆಯ ಒಳಭಾಗಕ್ಕೆ ಹೋದ (ಕೊನಭೇ. ೪೧); ನಿಜವಾಗಿ ಆ ಕುದುರೆಯ ಮೇಲೆ ಮತ್ತೊಬ್ಬ ಸವಾರನಿದ್ದನು (ಕಳಹು. ೨). ೨. ಕುದುರೆಯ ಮೇಲೆ ಕುಳಿತು ಯುದ್ಧಮಾಡುವ ಸೈನಿಕ ; ರಾವುತ ; ಅಶ್ವಾರೋಹಿಯಾದ ಸೈನಿಕ : ಕುದುರೆಗಳ ವೇಗದಿಂದೇರಿರುವ ತುರುಪಿನ ಸವಾರರಂ . . . ನೀ ನೋಡು (ಆರ್ಜುವಿ. ೨೪-೪೮); ಇವನು ಮುದುಕನಾದರೂ ಒಳ್ಳೆ ಸವಾರ (ಪ್ರವಾಸ. II, ೩೬). ೩. ಪ್ರಾಣಿ, ವಾಹನ ಮುಂತಾದುವನ್ನು ಏರಿದವನು ; ಆರೋಹಿ : ಇಲ್ಲಿರುವ ನಾಲ್ಕು ಶಿಲ್ಪದಲ್ಲಿ ವಿವಿಧ ಪ್ರಾಣಿಗಳೆಲ್ಲದೆ ಅವುಗಳ ಮೇಲೆ ಸವಾರರ ಚಿತ್ರಗಳನ್ನು ಸಹ ನಾವು ಕಾಣಬಹುದು (ನೂಳಂಬ. ೧೨೬); ಸೈಕಲ್ ಸವಾರನ ಮುಖ ನೋಡಿದೆ (ನಾಪೋಲೀ. ೯೨). **ಸುವಾರ್$_2$** : ೨. ಹಡಪಿಗರು ಚಾಮರಿಗರೆಡೆಯಾಡುವವರು ಹೂವಾಡಿಗರು ಸುವಾರರರಸಾಳುಗಳು ಹಾವುಗೆಯ ಹಿಡಿದವರು . . . ಸೊಗಯಿಸಿದರಾ ಸೌಂದರೇಂದ್ರನಿಂಪಡರಿದೊಡ್ಡೋಲಗದೊಳು (ಸ್ಕಾಂದಪು. ೬-೫೯). **ಸ್ವಾರ** : ೧. ಇದು ಅಲ್ಲಿಯ ಕುದುರೆ ಮತ್ತು ಸ್ವಾರನಿಗೂ ತಿಳಿದ ಮಾತು (ಬಂಗಾಹ. ೨). ೨. ಸರದಾರ , ಸ್ವಾರ , ಶಿಬಂದೀಜನರಿಗೆ ಹೊತ್ತುಹೊತ್ತಿಗೆ ವೇತನವು ದೊರೆಯುತ್ತಿದ್ದು . . . ಪರಚಕ್ರದ ಭಯವಿಲ್ಲದೆ ನಿರಂಕುಶಪ್ರಭುತ್ವವನ್ನು ನಡೆಯಿಸುತ್ತಾನೆ (ಮುಂಜಾ. ೧೩).

[<— ಪಾರ. ಸವಾರ್, ಸುವಾರ್; ಹಿಂ. ಸವಾರ್; ಮರಾ. ಸವಾರ್, ಸ್ವಾರ್]

ಸವಾರಕಚೇರಿ, ಸವಾರ್‌ಕಚೇರಿ, ಸ್ವಾರಕಚೇರಿ (ನಾ). ಅಶ್ವದಳಕ್ಕೆ ಸಂಬಂಧಪಟ್ಟ ಕಾರ್ಯಾಲಯ : ಕಂದಾಚಾರ ಸವಾರಕಚೇರಿ ಭಕ್ಷಿ ದೇವರಾಜೈರಸಿನವರು ಶ್ರೀಗೋಮಟೇಶ್ವರಸ್ವಾಮಿಯವರ ಮಸ್ತಕಾಭಿಷೇಕಪೂಜೋತ್ಸವದಿವಸ ಸ್ವರ್ಗಸ್ಥ ರಾದ್ದಕ್ಕೆ (ಎಕ. II(R), ೬೨೪-೧೪; 1827). **ಸವಾರ್‌ಕಚೇರಿ** : ಕಛೇರಿಗಳು. ೧ ದಿವಾನ್‌ಕಚೇರಿ . . . ೬ ಸವಾರ್‌ಕಚೇರಿ. ೭ ತೋಷೇಖಾನೆ (ಮಹಾವಂ. II, ೩೮). **ಸ್ವಾರಕಚೇರಿ**: ಸ್ವಾರಕಚೇರಿ ಬಕ್ಷಿ ಭೀಮರಾಯರಿಗೆ ದಯಪಾಲ್ಸಿ ಯಿನಾಮು ಕೊಡಿಗೆ ಹತ್ತವಾಲು ಗ್ರಾಮ XXX (ಮೈಆ. ೧೪೪೦, ೪೯-೪; 1818). [ಸವಾರ + ಕಚೇರಿ]

ಸವಾರಿ, ಸಾರ್ಯ, ಸ್ವಾರಿ (ನಾ). ೧. ಪ್ರಾಣಿ, ವಾಹನ ಇತ್ಯಾದಿಗಳ ಮೇಲೆ ಕುಳಿತು ಸಂಚರಿಸುವುದು : ಊರ ಒಳಗೆ ಅವಳು ಕುದುರೆ ಹತ್ತುತ್ತಿರಲಿಲ್ಲ. ಸವಾರಿ ಯಾವಾಗಲೂ ಊರ ಹೊರಗೆ (ಪುಟ್ಟರ. ೨೯); ಚೆನ್ನಾಗಿ ಸವಾರಿಯನ್ನು ಬಲ್ಲವನು ಸೊಗಸಾದ ಕುದುರೆಯನ್ನು ನೋಡಿ ಇದನ್ನೇರಿ ವಿಹರಿಸದಿದ್ದರೆ ನಾನು ಸವಾರಿಯನ್ನು ಕಲಿತೇನು ಫಲ? ಎಂಬಂತೆ (ನಡದಾ. II, ೧೪೫೫). ೨. ಸಂಚಾರ; ತಿರುಗಾಟ; ವಿಹಾರ: ಭೂವಕುಲದೀಪ ಕೃಷ್ಣೇಂದ್ರನ ಸವಾರಿಯೊಳ್ ಆ ಫಣಪನಾ ದಿನಪನಾ ಸುರಪನುಂ . . . ಕಾವುರುವರಂತೆ ತಲೆ ಕುಗ್ಗಿ ಕಾಣಿಸದಯುಂ (ಆರ್ಜುವಿ. ೨೪-೫೨); ವಿದೂಷಕನಿಲ್ಲದೆ ರಾಜಾಧಿರಾಜನ ಸವಾರಿ ಹೇಗೆ ಪ್ರವಾಸರತವಾಗಬೇಕು? (ದೀಪಕ. II, ೨೩೪). ೩. ರಾಜರು ಮುಂತಾದ ಹಿರಿಯ ವ್ಯಕ್ತಿಗಳನ್ನು ಉದ್ದೇಶಿಸುವಾಗ ಬಳಸುವ ಮಾತು; ಗಣ್ಯವ್ಯಕ್ತಿಗಳನ್ನು ಗೌರವಾರ್ಥವಾಗಿ ಸಂಬೋಧಿಸುವಾಗ ಬಳಸುವ ನುಡಿ : ಪರಸ್ಥಳದ ವಿದ್ವಾಂಸರುಗಳ ಪರಿಚಯವನ್ನು ಸವಾರಿಗೆ ಮಾಡಿಕೊಡಲಾಯಿತು (ನಾಳಾ. ೧೦). ೪. ರಾಜರು ಮುಂತಾದ ಹಿರಿಯ ವ್ಯಕ್ತಿಗಳ ಆಗಮನವನ್ನು ಸೂಚಿಸಲು ಬಳಸುವ ಮಾತು : ಮಹಾರಾಣಿಯವರ ಸವಾರಿ ಬೇರೆ ದಯಮಾಡಿಸಿತ್ತು (ಚಿಕ್ಕದ�ೇ. ೧೪೯). ೫. ಮೆರವಣಿಗೆ: 'ಜಂಬೂಸವಾರಿ' ಪರಾ. ೬. ಗಾಡಿಗೆ ಕಟ್ಟುವ ಕಮಾನಿನಾಕಾರದ ಬಿದಿರಿನ ರಚನೆ : ಬಂಡಿಗೆ ಸವಾರೀ ಕಟ್ಟಿದ್ದರು. ಸವಾರಿಯ ಮೇಲೆ ಕೆಂಪುಪಟ್ಟಿಯ ಒಂದು ತೆಳುವಾದ ಗುಡಾರವನ್ನು ಬಿಗಿದಿದ್ದರು (ರತ್ನಧ. ೧೩). **ಸಾರ್ಯ** : ೨. ''ಸಾರಿಯೆನಲು ವಿಹಾರದೊಳ್'' (ಕಶಕ. ೧೦೬); ನೋಟಕಜನ . . . ಇಳೆಯಾಣ್ಮನ ಸಾರಿಯತುಲ ಸಂಭ್ರಮವ ನೋಡಲವಟ್ಟು ಸಂದಣಿಸಿದರು (ಕಂಪವಿ. ೨೨-೬೬); ಪರಮನಿತ್ಯಲವಾರ ಮೋದದೆ ವೇದವಾಟಿಯ ಸಾರಿಯಂ ಭರದೆ ಮಾಡಲ್ (ಪಾಲಾಸ್ಮ. ೪-೧೧-೬೨). **ಸ್ವಾರಿ** : ೨. ರಾಜನು ಸ್ವಾರಿಯ ಹೋಗಿಬರುವಾಗ (ಧ್ವನ್ಯಾ. ೬. ೪೯); ದಂಡಿನೊಳು ನೀಲಗಳ ಚಕ್ರವರ್ತಿ ಪಟ್ಟದ ಆನೆ ಮೇಲೆ ಕುಳಿತು ವಿನೋದದಲಿ ಸ್ವಾರಿ ಹೊರಟಿರಲು (ಕೊಲ್ಲಿಮಾ. ೫೬-೬); ಭೇರಿ ನೌಬತ್ತು ನಗಾರಿವಾದ್ಯವು ಭಾರಿವೈಭವದಿಂದ ಕಂಸನ ಸ್ವಾರಿ ತೆರಳಿತು (ಕರ್ನಾಕ. ೨೩೫). ೩. ಅಲ್ಲಮಪ್ರಭು ಪ್ರಾಣ ಅತಿಸುಪ್ರವೀಣ ಉಲ್ಲಾಸದಿಂ ಸ್ವಾರಿ ಅಲ್ಲಾಡುತಿರ್ದ (ಶರಲೀ. ೧೦೦-೧೪). ೪. ಬಹುದಿವಸದಿಂದ ಸ್ವಾಮಿಯವರು ಮೃಗಯಾವಿಹಾರಕ್ಕೆ ಸ್ವಾರಿಯಂ ಬೆಳಿಯಸಲಿಲ್ಲ (ಸೌಗಂಧಿ. ೪೭-೧೧); ಭೂಪರೊಡನೆ ಸಾರಿದರು ಚಾರಕರು ಮಿತಪರಿವಾರದೊಡವಾ ದ್ಯಾರದಲಿ ನೃಪವೀರನೆನಿಪ ಪಲಾಂತರಾಯನ ಸ್ವಾರಿ ನಿಂದಿಹುದೆನ್ನುತ (ಪಲಾಂಡು ೧೦).

ಸವಾರಿಮಾಡು = ೧. ಪ್ರಾಣಿ, ವಾಹನ ಮುಂತಾದುವುಗಳ ಮೇಲೆ ಕುಳಿತು ಸಂಚರಿಸು : ಓಡುವ ಕುದುರೆಯನ್ನು ಕಂಡಾಗ ನಾನೂ ಸವಾರಿ ಮಾಡಬೇಕೆಂಬ ಚಪಲ ಮನಸ್ಸಿಗೆ (ಹುಚ್ಚುಹು. ೧೬); ಕುದುರೆ ಹಿಡಿದು ಸವಾರಿ ಮಾಡಲಾಗದೆ ರಾಜಾಧಿರಾಜರೆಲ್ಲ ಸತ್ತುಹೋದರು (ಕಜಕಾ. ೨೮೭). ೨. (ಆಲಂ) ಅಧಿಕಾರವನ್ನು ಚಲಾಯಿಸು ; ದಬ್ಬಾಳಿಕೆ ನಡೆಸು : ಅವನು ತನಗೆ ಖುಷಿ ಬಂದಂತೆ ನಮ್ಮ ಮೇಲೆ ಸವಾರಿ ಮಾಡುತ್ತಿದ್ದಾನೆ (ಪುನರು. ೩೧೯). ಸ್ವಾರಿಮಾರ್ಗ = ಸಂಚಾರದ ಮಾರ್ಗ ; ವಿಹಾರದ ದಾರಿ : ಆ ಅರಣ್ಯದಲ್ಲಿ ಅನಿಮಿಷಯ್ಯಗಳೆಂಬ ಅರಸು ಸ್ವಾರಿಮಾರ್ಗವಾಗಿ ಬರಲು (ಶರಲೀ. ೧೦೦-೧೮ ವ). [<— ಪಾರ. ಸವಾರೀ, ಸುವಾರೀ; ಹಿಂ. ಸವಾರೀ, ಸ್ವಾರೀ; ಮರಾ. ಸವಾರೀ, ಸುವಾರೀ, ಸ್ವಾರೀ./ ತಮಿ. ಚಾರಿ]

ಸವಾರಿಗಾಡಿ (ನಾ). ೧. ಊರಿಂದ ಊರಿಗೆ ಪ್ರಯಾಣಕ್ಕಾಗಿ ಉಪಯೋಗಿಸುವ ಗಾಡಿ ; ಕಮಾನುಗಾಡಿ : ತಿಪಟೂರು ಕುಣಿಗಲ್ಲುಗಳಿಗೆ ಈಗ ಸವಾರಿಗಾಡಿಗಳು ಹೋಗುತ್ತಿಲ್ಲ. ಸವಾರಿಗಾಡಿಗಳೇ ಊರಲ್ಲಿಲ್ಲ (ನನ್ನೂರು. ೩೧೩). ೨. ಒಂದು ಕುದುರೆಯ ಅಥವಾ ಒಂಟೆತ್ತಿನ ಗಾಡಿ; ಎಕ್ಕ: ಆ ಜಮೀನಿನಿಂದ ಬಂದ ಫಸಲನ್ನು ಮಾಲೀಕರು ದೂರದೇಶಗಳಲ್ಲಿ ಮಾರಿ ತಮಗೆ ಬೇಕಾದ ಟೋಪಿ, ನಡಗೋಲು, ಸವಾರಿಗಾಡಿ, ಕಂಚಿನ ಪ್ರತಿಮೆ ಮೊದಲಾದ ವಸ್ತುಗಳನ್ನು ಕೊಳ್ಳುತ್ತಿದ್ದರು (ಪುನರು. ೨೮೯). [ಸವಾರಿ + ಗಾಡ್ಡಿ]

ಸವಾರಿಲಾಖೆ (ನಾ). = ಸವಾರಕಚೇರಿ : ಬ್ರಿಟಿಷ್ ಸರ್ಕಾರಕ್ಕೆ ಸಲ್ಲುವ ಪೊಗದಿ, ಕ್ಯಾವಲ್ರಿ ಎಂದರೆ ಸವಾರಿಲಾಖೆ, ಈ ಬಾಬುಗಳ ಖರ್ಚು ಹೊರತು . . . ೩ ೧/೨ ಲಕ್ಷ ರೂಪಾಯಿ ಸಹ ಸಂದಾಯವಾಗಬೇಕೆಂದು ತೀರ್ಮಾನವಾಯಿತು (ಮಹಾಪಂ. II, ೯೮).

[ಸವಾರಿ + ಇಲಾಖೆ]

ಸವಾರುಜನ (ನಾ). ಅಶ್ವಾರೋಹಿಗಳಾದ ಸೈನಿಕರ ಸಮೂಹ ; ರಾವುತರ ಗುಂಪು : ಹೈದರಲ್ಲಿಖಾನರಿಗೆ . . . ಸವಾರುಜನ ೫೦ ಅಹಪಾಂ ಪ್ರಾದಿ ಜನ ೨೦೦ ಸಹಾ ನೇಮಕವಾಗಿ ಪ್ರಾಬಲ್ಯಕ್ಕೆ ಪ್ರಾರಂಭವಾಯಿತು (ಹೈದರ. ೨೩).

[< ಸವಾರ + ಜನ]

ಸವಾಲ್ 'ಸವಾಲು' ನೋ.

ಸವಾಲ್‌ಲಾವಣಿ 'ಸವಾಲುಲಾವಣಿ' ನೋ.

ಸವಾಲ್‌ಹಾಕು 'ಸವಾಲು' ಪರಾ.

ಸವಾಲಕ್ಷ, ಸವಲಕ್ಕೆ, ಸವಲಕ್ಷ (ನಾ). ೧. ಒಂದು ಲಕ್ಷ ಮತ್ತು ಇಪ್ಪತ್ತೈದು ಸಾವಿರ ; ಒಂದೂಕಾಲು ಲಕ್ಷ : ಆಕೆಯೆಂದಂತೆ ಧಾರಾಪುರವೆಂಬ ಹೆಸರ ಕರೆದು ನಡಸುತ್ತ, ಆಕೆಗೆ ಸವಾಲಕ್ಷದ್ರವ್ಯವಂ ಕೊಟ್ಟು ಸುಖದಲ್ಲಿರುತ್ತ (ಭೃಗುಸೂ. I. ೯೯). ೨. (ಆಲಂ) ಅಪಾರವಾದ ಧನ, — ಸಂಪತ್ತು : ಈ ಪ್ರಬಂಧಮಂ ತಿದ್ದಿ ಮುದ್ದಿಸಿ ಕೇಳ್ದರದು ಸವಾಲಕ್ಷಮೆನಗೆ (ನಂದಿಮಾ. ೧-೧೮). ೩. ಒಂದು ಲಕ್ಷ ಇಪ್ಪತ್ತೈದು ಸಾವಿರ ಗ್ರಾಮಗಳಿಂದ ಕೂಡಿರುವ ಪ್ರದೇಶ : ಸವಾಲಕ್ಷದಲ್ಲಿ ಹುಟ್ಟಿ ಸಕಲಕ್ರಮಂಗಳಲ್ಲಿದ್ದು ಭೋಗಿಸಿ . . . ವೃಥಾ ವೈಭವಕ್ಕೆ ಕೆಡುತ್ತಿದ್ದೆಯಲ್ಲಾ (ಮದೇವ. ೨೮೫-೬೧); ಹಿಮಗಿರಿಯ ದಾಂಟಿ ತಾಂ ತಿರುಗಿ ಬರುವಂ ಸವಾಲಕ್ಷ ಪರ್ವತದಲ್ಲಿ ಪರಮಮುನಿಗಳ ನೋಡಿ ತತ್ತ್ವಮಂ ಪೇಳ್ದು ಮುಕ್ತಿಯನೊಲಿದು ಕೊಟ್ಟು ಬಳಿಕೆ (ಚಿಬಪು. ೬೨-೭). **ಸವಲಕ್ಕೆ** : ೩. ನಾಗವರ್ಮವಿಭು ಸಾಧಿಸಿದಂ ಸವಲಕ್ಕೆವಿಂಧ್ಯಮಂ (ನಾಂದೇಡ್. ೩-೧೪; 1047). **ಸವಲಕ್ಷ** : ೨. ಆಸೆಯನು ಅಱಿದಿತ್ತ ವೀಸವದು ಸವಲಕ್ಷ ಆಸೆ ತಾ ತೀರ್ದ ಬಳಿಕಿತ್ತ ಲಕ್ಷವದು ವೀಸದಿಂ ಕಷ್ಟ (ಸರ್ವಜ್ಞ. ೭೪೧). [< ಸಂ. ಸಪಾದಲಕ್ಷ]

ಸವಾಲಕ್ಷದೇಶ (ನಾ). = ಸವಾಲಕ್ಷ೩: ಕ್ಷೋಣಿಪ ಸವಾಲಕ್ಷದೇಶಪತಿ ಮಹಾದೇವ ರಾಣಿಯರು ಬಸವಂಗೆ ಮುಳಿದರಿದು ಬಂದು ಕಲ್ಯಾಣದೊಳು ಕಟ್ಟಿಗೆಯ ಹೊತ್ತು ಶರಣರ ಸೇವೆಯಂ ಮಾಡುತಿರೆ (ಎಕ್ಕೆಪು. ೯-೨-೬೧).

[< ಸಂ. ಸಪಾದಲಕ್ಷದೇಶ]

ಸವಾಲು, ಸವಾಲ್ (ನಾ). ೧. ಕೇಳುವಿಕೆ ; ಪ್ರಶ್ನೆ ; ವಿಚಾರಣೆ : ಹಿಂದಿನ ಮನೆ ರಿಂದಮ್ಮ ಆಚೆಮನೆ ಅಕ್ಕಮ್ಮ ಎಲ್ಲರೂ ಮಾಡೋಲ್ಲವೇ ಅಂತಾ ತಾನೆ ನಿಮ್ಮ ಸವಾಲು? (ಹನ್ನೊಂದ. ೫೮); ಹೀಗೆ ಸವಾಲು ಮುಗಿದುಹೋಗಿತ್ತು. ಅವಳಿಂದ ನಿಟ್ಟುಸಿರನ್ನು ತಂದಿತ್ತು — ತುಂಬಿದ ಬಲೂನಿನಿಂದ ಗಾಳಿ ಹೋದಂತೆ (ರಂಗನಾ. ೨೧೦). ೨. ಹೇಳಿಕೆ; ನಿರೂಪಣೆ: ಬರವಣಿಗೆಯ ಮೂಲಕ ಸವಾಲುಗಳನ್ನು ತಯಾರಿಸಿಕೊಡಬೇಕೆಂದು ಕೋರ್ಟಿನವರು ಆಜ್ಞಾಪಿಸಬಹುದು (ಗ್ರಾಮಾಕ. ೩೦). ೩. ಸ್ಪರ್ಧೆ, ವಿವಾದಗಳಿಗೆ ನೀಡಿದ ಕರೆ, — ಆಹ್ವಾನ : ಇದು ನಿನ್ನ ಮನಃಶಕ್ತಿಗೆ ಹಾಕಿದ ಸವಾಲು ಅಂತ ತಿಳಿದುಕೊಂಡು ಅದನ್ನು ಕಾರ್ಯತತ್ಪರತೆಯಿಂದ ಎದುರಿಸಬೇಕು (ದೂರಸ. ೨೪೮); ಈ ಸಮಸ್ಯೆ ಅವನ ನಿಲವಿಗೊಂದು ಸವಾಲಾಗಿತ್ತೆಂಬ ವಿಷಯ ಸುಸ್ಪಷ್ಟವಾಗಿತ್ತು (ಪುನರು. ೪೨೬). ೪. ಸಾಧ್ಯ; ಶಕ್ಯ : ನೋಡಲಿಕೆ ಯಂತ್ರವಿದೆ. ಮನುಜನೆದೆ ತಳಪಾಯ ಭಾವಶುದ್ಧಿಯನಳೆಯಲಾವ ಮಂತ್ರ-ಸವಾಲು? (ನೆಲಮು. ೬೭-೧೧). ೫. (ಹರಾಜಿನಲ್ಲಿ ಏಠಾಟದ) ಬೇಡಿಕೆ; ಮನವಿ: 'ಸವಾಲುದಾರ' ಪರಾ. ೬. "ಕೊಡಲು ಒಪ್ಪಿ ಹೇಳಿದ ಬೆಲೆ, ಸವಾಲು" (offer. ಪತ್ರಿನಿ. ೫೮). **ಸವಾಲ್**: ೩. ಸವಾಲ್‌ಗೆ ಛಡಸವಾಲ್ ಹಾಕೋಕೆ ತಕ್ಕ ಗೈರತ್ ಇದ್ದೆ ಹಾಕ್ತಾರಾ (ಭೀಮಕಾ. ೨).

ಸವಾಲುಮಾಡು, ಸವಾಲ್‌ಮಾಡು = ೧. "ಆಕ್ಷೇಪವೆತ್ತು, ವಿವಾದಕ್ಕೆ ಕರೆ, ಸವಾಲು ಮಾಡು ; ಆಹ್ವಾನಿಸು (ಉಕ)" (challenge. ಪತ್ರಿನಿ. ೧೪). ೨. ಹರಾಜಿನಲ್ಲಿ ಏರಾಟದ ಬೇಡಿಕೆಮಾಡು : "ಇಷ್ಟು ಬೆಲೆ ಕೊಡುವೆನೆಂದು ಹೇಳು; ಸವಾಲುಮಾಡು ; (ಹರಾಜಿನಲ್ಲಿ) ಬೆಲೆ ಕೂಗು" (Bid. ಇಂಕಿ); ಈ ದಿನ ಮಧ್ಯಾಹ್ನ ಪಂಚಾಯ್ತರ ಇದ್ರು ಬಹಿರಂಗ ಹರಾಜು ಮಾಡ್ತವ್ರೆ. ಯಾರ್ಯೇನಾದ್ರೂ ಸವಾಲ್ ಮಾಡಬೈದು (ಅನ್ನಾವ. ೧೨). **ಸವಾಲುಹಾಕು, ಸವಾಲ್‌ಹಾಕು** = ೧. ಪ್ರಶ್ನೆಮಾಡು ; ವಿಚಾರಿಸು; ಕೇಳು: ದಿನದ ಬದುಕೇ ಭಾರವಾದ ಜನಕ್ಕೆ ಇದೆಲ್ಲಾ ಏಕೆ ಬೇಕು ಎಂದು ಮತ್ತೊಂದು ಧ್ವನಿ ನನ್ನೊಳಗೇ ಸವಾಲು ಹಾಕಿತು (ಹಂಸಗೀ. ೧೭); ಯಾವನೋ ರಾಜಂ ವಿಷಯ ಮಾತಾಡೋವನು? ಎಂದು ಸವಾಲ್ ಹಾಕಿದ (ಸ್ವಾಮಿಸ್ವೇ. ೪೮). ೨. ಸ್ಪರ್ಧೆ, ವಿವಾದಗಳಿಗೆ ಕರೆ, — ಆಹ್ವಾನಿಸು : ಶಿವನಿಗೂ ಸವಾಲು ಹಾಕುವ ಸತ್ಕೋತ್ಕರ್ಷ ಉರಿಲಿಂಗಪೆದ್ದಿಯದು (ಶರಚ. ೫೦೦); ಆಗಾಗ್ಗೆ ಒಂದು ಗರಡಿಯವರು ಮತ್ತೊಂದು ಗರಡಿಯವರ ಮೇಲೆ . . . ಸವಾಲ್‌ಹಾಕುವುದು ಇವೆಲ್ಲ ಸರ್ವೇಸಾಮಾನ್ಯವಾಗಿತ್ತು (ಭೀಮಕಾ. ೮). **ಸವಾಲೆಸೆ** = ಸವಾಲುಹಾಕು೧: ಖಾಯಿಲೆಯ ಖೈದಿಯೊಬ್ಬ ಸವಾಲೆಸೆದನು (ಪುನರು. ೫೮೪). [<— ಅರ. ಸವಾಲ್, ಸುಆಲ್; ಪಾರ. ಸುವಾಲ್, ಸುಆಲ್; ಹಿಂ. ಸವಾಲ್, ಸುವಾಲ್; ಮರಾ. ಸವಾಲ್]

ಸವಾಲುಜವಾಬು (ನಾ). ೧. ಪ್ರಶ್ನೆ ಮತ್ತು ಉತ್ತರ ; ವಾದವಿವಾದ : ಇಬ್ಬರೂ ಕೂಡಿದಾಗ ಸವಾಲು-ಜವಾಬಿನ ಏರಾಟ ನಡೆದು ಮಜಲು ಬಹಳೇ ರಂಗಾಗುವುದು (ದಾಸಹು. ೫೨). 'ಜವಾಬ್‌ಸವಾಲ್' ಪರಾ. ೨. ಲಾವಣಿಯ ಒಂದು ಪ್ರಭೇದ; ಪ್ರಶ್ನೋತ್ತರಗಳನ್ನೊಳಗೊಂಡ ಒಂದು ಬಗೆಯ ಹಾಡು: 'ಸವಾಲು ಪದ', 'ಸವಾಲುಲಾವಣಿ' ಪರಾ. [ಸವಾಲು + ಜವಾಬು./ ಅರ. ಹಿಂ. ಸವಾಲ್‌ಜವಾಬ್; ಪಾರ. ಸುಆಲ್‌ಜವಾಬ್, ಸುವಾಲ್‌ಜವಾಬ್]

ಸವಾಲುದಾರ (ನಾ). ಹರಾಜಿನಲ್ಲಿ ಬೆಲೆ ಏರಿಸಿ ಕೂಗುವ ವ್ಯಕ್ತಿ: ಮಾದಕದ್ರವ್ಯಗಳನ್ನು ಮಾರಾಟ ಮಾಡುವ ವಿಷಯದಲ್ಲಿ ಅತ್ಯಂತ ಹೆಚ್ಚಿನ 'ಸವಾಲು'ದಾರರುಗಳಿಗೆ 'ಲೈಸೆನ್ಸು'ಗಳನ್ನು ಕೊಡುವುದು ಒಂದು ಪಾಪವೆಂದು ಭಾವಿಸಿದ್ದರು (ಭಾಗ್ಯಶ್ರಿ. ೮೮). [ಸವಾಲು + -ದಾರ$_4$]

ಸವಾಲುಪದ (ನಾ). ಪ್ರಶ್ನೆಹಾಕುವ ಹಾಡು; ಸವಾಲು ಜವಾಬಿನ ಪದ, — ಹಾಡು: ಅವರು ಹಾಡುತ್ತಿದ್ದ ಸವಾಲುಪದಗಳಿಗೆ ಇವನೂ ದನಿಗೂಡಿಸುವನು (ಬೆಳುಮ. ೩). 'ಸವಾಲುಜವಾಬು', 'ಸವಾಲುಲಾವಣಿ' ಪರಾ.

[ಸವಾಲು + ಪದ$_2$]

ಸವಾಲುಲಾವಣಿ, ಸವಾಲ್‌ಲಾವಣಿ (ನಾ). = ಸವಾಲುಜವಾಬು ೨: ಸವಾಲುಲಾವಣಿಗಳಲ್ಲಿ ಅಲ್ಲಲ್ಲಿ ವೀರವಾದಗಳು ಮುಂದುವರಿದು ಆಣಿಗಳನ್ನು ಇಡುವುದೂ ಉಂಟು (ಕರ್ಣಾಸಂ. ೩೩). **ಸವಾಲ್‌ಲಾವಣಿ** : ಮೂರನೆಯದು ಸವಾಲ್‌ಲಾವಣಿಗಳು — ಪ್ರಶ್ನೋತ್ತರರೂಪವಾದವು (ಕರ್ಣಾಸಂ. ೩೧).

[ಸವಾಲು + ಲಾವಣಿ$_1$]

ಸವಾಸೇರು, ಸವ್ವಾಸೇರು (ನಾ). ೧. ಒಂದು ನಿರ್ದಿಷ್ಟ ಪ್ರಮಾಣದ ಅಳತೆ; ಒಂದೂಕಾಲು ಸೇರು: ಮುಂದೆ ಸವಾಸೇರು ಮೂವತ್ತೆರಡು ಚತುಃಷಷ್ಟಿಯರ್ಧ ಸೇರರ್ಧಪಾವು ಸಂಧಿಸಿದ ಸೇರು ನಾಲ್ವತ್ತು ಗದ್ಯಾಣಮಂ ಬಾದಿಹುದು (ಭಾಸ್ಕರ. ೭೫-೮); ಶೆಟ್ಟಿ ಸವಾಸೇರು; ಲಿಂಗ ಅಡಿಸೇರು (ಗಾದೆ). **ಸವ್ವಾಸೇರು** : ೧. ಯಾಚಕಸಮುದಾಯಕ್ಕೆ ಪ್ರತಿದಿನ ಸವ್ವಾಸೇರು ಅಕ್ಕಿ ಬೇಳೆ ಹಿಟ್ಟು ಮೊದಲಾದ ಪಾಕನಿಷ್ಪತ್ತಿಗೆ ಬೇಕಾಗುವ ಸಾಮಾನುಗಳು ಸಿಗುವಂತೆ ವ್ಯವಸ್ಥೆ ಮಾಡಿದ್ದಾನೆ (ಮಂಜುಳ. ೧೩). ೨. (ಆಲಂ) ದಾಷ್ಟೀಕಸ್ವಭಾವದ ವ್ಯಕ್ತಿ (?) : ನೀ ಸೇರ ಆದರೆ ಆಕೀ ಸವ್ವಾಸೇರು ..:ಪಹ. II, ೨೨೪). [ಸವಾ + ಸೇರು$_3$]

ಸವಿ$_1$ (ಕ್ರಿ). ೧. ರುಚಿಯನ್ನು ನೋಡು, — ಪರೀಕ್ಷಿಸು; ಆಸ್ವಾದಿಸು: "ಸವಿ — ಖಾದನಪರೀಕ್ಷಾಯಾಂ" (ಶಮಧಾ); ತುತ್ತು ತುತ್ತಿಗೆ ಸವಿದು ತಣಿಯದೆ ಕಾರಿಕಾಲಮ್ಮೆ ಮುತ್ತ ಮಾವಿನ ಹಣ್ಣನೀಯಲು (ಬಸವು. ೧೫-೨೫). ೨. ತಿನ್ನು; ಉಣ್ಣು; ಮೆಲ್ಲು : ದರಿದ್ರತಾದ್ರುಮದ ಪಣ್ಣಲಮಂ ಪಲಕಾಲಂ ಪಲರೊಳಂ ಸವಿದು (ಶಾಂತಿಪು. ೪-೬೬ ವ); ರಸಂದೆಗವ ದನಿ ನಿಮಿರೆ ನಾಲಿಗೆ ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ (ಗಿರಿಕ. ೨-೩೯); ಕ್ಷುಧೆ ಇಲ್ಲದ ಮನುಜ ಅಮೃತಾನ್ನ ಸವಿದಪನೆ (ಪುರಂದ. ೨-೪೪-೨). ೩. (ರುಚಿಕರವಾದ ರಸವನ್ನು) ಕುಡಿ ; ಪಾನಮಾಡು; ಈಂಟು : ಸವಿವೊಡೆ ಮಧುರರಸಂಬೋಲ್ ಕಿವಿಗಿನಿದಾಗಿರ್ಪ ವಚನವಿರಚನೆ ಮಧುರಂ (ಕವಿರಾ. ೨-೬೦); ಒಂದೆ ಪಣ್ಣ ರಸಮಂ ಸವಿದಾಱದೆ ಚಂಚುವಂ ಕೆಲಕ್ಕುಯ್ಯುದುಂ (ಶಾಂತಿಪು. ೧-೬೩); ನಂಬಿ ಗುರುದೈವವನಗಸ್ತ್ಯಮುನಿಯು ತಾನಂಬುಧಿಯ ಸವಿದ (ಸರ್ವಜ್ಞ. ೪೭). ೪. (ಸುಖ, ಸಂತೋಷ ಮುಂತಾದುವನ್ನು) ಅನುಭವಿಸು ; ಭೋಗಿಸು: ನೆನಹು ನಿಲುಕದ ಸುಖದ ಸುಗ್ಗಿಯಂ ಸವಿದನೀಶನ ಕುಮಾರಂ (ಸಿದ್ಧರಾ. ೨-೧೭); ಪ್ರಿಯನ ಪರಿಹಾಸಕ್ಕೆ ಈ ಮುಗ್ಧೆ ಯಾವ ಉತ್ತರವನ್ನೂ ಕೊಡದೆ, ಅದರ ಸೊಗಸನ್ನು ಮೌನವಾಗಿ ಸವಿದಿದ್ದಳು (ಕಾವ್ಯಸ. ೪೯); ಇಂತಹ ಸುಂದರವಾದ ದೃಶ್ಯವನ್ನು ಸವಿಯಬೇಕಾದರೆ ಕವಿಹೃದಯ ಇರಬೇಕು (ಅಲಹಾ. ೯೬). ೫. ಸೇವಿಸು; ಸೇವನೆಮಾಡು; ಸ್ವೀಕರಿಸು: ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು (ಬಸವ. ೬೦೯); ನಿಜಜಂಗಮಪ್ರತತಿ ಸವಿದು ಮಿಕ್ಕಮಿತಪ್ರಸಾದವ ಸವಿದು ಸವಿದೋಲಾಡುತಿಪ್ಪಾ ಸವಿ ದೊರಕಿದಡೆ ಸಾಕು (ಬಸವು. ೧೦-೪೯). ೬. ಸಂತೋಷ ಪಡು; ನಲಿ: ಸವಿದು ನೋಡುತ್ತಿರಲು ಕಣ್ಣ ಪೊಣ್ಮುವ ಪುಳಕ ಬೆವರೊಗಲುವುಕ್ಕುವಾ ನಂದಾಶ್ರು ತಂಬೆಲರು ಕವಿವ ಪರಿಣಾಮವಂ ಕಂಡು (ಪಚಕಾ. ೫-೫೯).

ಸವಿಸವಿ$_1$ (ದ್ವಿರುಕ್ತಿ) : ಸವಿಸವಿದು ಬಿಕ್ಕಬಿಕ್ಕನೆ ಸವಿನೋಡೆನ್ನಾಣೆಯೆಂದು ರಕ್ಕಸಿಗಮದಂ ಸವಿದೋಱೆ (ಪಂಪಭಾ. ೧೨-೧೫೬); ಗುರುವಿಂಗೆ ಕೊಡುವುದು ಅರ್ಪಿತವೆ ಸವಿಸವಿದು ಕೊಡಬೇಕಲ್ಲದೆ (ಬಸವ. ೭೭೬); ಮಱವೆಯ ಮಬ್ಬು ಕವಿದುದು ಕರ್ಣನಾಡಿದ ಮಾತ ಸವಿಸವಿದು (ಕುಮಾಕ. ೫-೧೧). [ದೇ. ॥ತಮಿ. ಚುವ್ವೆ; ಮಲ. ಚುವೆ; ತುಳು. ಸವಿಪು]

ಸವ್ವಿ (ನಾ). ೧. ರುಚಿ ; ಸ್ವಾದ : ಪಗೆ ಪೊಲ್ಲ ಪಾಂಡುನಂದನರೊಳಹೀಂದ್ರಕೇತನನ ಜೂದಿನ ಗೆಲ್ಲಮದೆಂತುಟೆನ್ನ ನಂಜಿನ ಸವಿಯೆಂತುಟೆಂದೊಡಿನಿಸಂತದೊಳಂತಕನಲ್ಲಿ ಗಟ್ಟುಗುಂ (ಪಂಪಭಾ. ೬-೭೫); ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ (ಬಸವ. ೯೮). ೨. (ಸಂಗೀತ, ಸಾಹಿತ್ಯ ಇತ್ಯಾದಿಗಳ) ಮಾಧುರ್ಯ; ಮಧುರತೆ; ಇಂಪು: ಸವಿಗಿಂಬಾಗಿ ರತರಾಗದುರುಳಿವೊಲಾಗೆ ಕರಂ ಬೀಗಿ ಬಾಯ್ಗಳಂ ಚುಂಬಿಸಿದರ್ (ಕಾವ್ಯಸಾ. ೬೭೭ ಶಾಪ್ರಕ); ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಂ (ಕವಿರಾ. ೨-೧೪೭); ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ (ಬಸವ. ೩೫). ೩. ಸಿಹಿ; ಸ್ವಾದು : "ಮಧುರಮೆನೆ ಸವಿಯಕ್ಕು" (ಮಂಗರಾ. ೬೫-೫); ಬೆಲ್ಲದ ಸವಿಯ ಸಿಂಹದ ಕೇಸರದ . . . ಕೂಟದಂತೆ ಮಹಾಪುರುಷರ ಸಮ್ಯಕ್ತ್ವದೊಳಾದ ಕೂಟಮುಮತಿಶಯಂ (ಧರ್ಮಾಮೃ. ೫-೧೯೯); ಸಂದುಸಂದನು ಕಡಿದು ತಂದು ಗಾಣದಲಿಕ್ಕಿ ಅರೆದಡೆ ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ (ಮಹಾದೇ. ೮. ೨೮-೫೮); ಸವಿಯು ಸಕ್ಕರೆಯೊಳಗೂ ಸಕ್ಕರೆಯು ಸವಿಯೊಳಗೂ ಸವಿಯು ಸಕ್ಕರೆ ಎರಡು ಜಿಹ್ವೆಯೊಳಗೂ (ಕನಕ. ೬೮-೨); ಕಬ್ಬು ಡೊಂಕಾದರೆ ಸವಿ ಡೊಂಕೇ? (ಗಾದೆ). ೪. ಮಧುರವಾದುದು ; ಇನಿದಾದುದು ; ರಸವತ್ತಾದುದು : ಅಗಲವೋದ ಹಂಸನನಱಸಲ್ ಪದೆದೆಳಸುವ ಪೆಣ್ಣಂಚೆಯ ಪದ ಕೊರಲಿಂಚರದ ಸರಮೆ ಸವಿ ಕಿವಿಗಿದಱೊಳ್ (ಪಂಪಭಾ. ೫-೫೬); ನುಡಿ ಸವಿ ನೋಟವೊಂದು ಸವಿ ಸೋಂಕು ದಿಟಂ ಸವಿ (ಚಂದ್ರಪ್ರ. ೮-೫೫); ಕಿವಿಸವಿ ದನಿ ಕಣ್ಪವಿ ರೂಪವಧರಿಸೆಲೆ ಗಜವೆಡಂಗ (ಯಶೋಚ. ೨-೫೨); ಹಣ್ಣು ಸವಿ ಎಂದಡೆ ವೃಕ್ಷದ ಶಾಖೆಯ ಸಂಗದಿಂದಲ್ಲದೆ ಬೆಳೆಯದು (ಶೂನ್ಯಸಂ. ೨೭೦-೪೪); ತಾಯಿಗಿಂತ ಹಿತವರಿಲ್ಲ ಸಕ್ಕರೆಗಿಂತ ಸವಿ ಇಲ್ಲ (ಗಾದೆ). ೫. ಹಿತವಾದುದು ; ಪ್ರಿಯವಾದುದು ; ಆಪ್ಯಾಯಮಾನವಾದುದು : ವಿವಿಧ ಮೋಕ್ಷಾನುಭವಸುಖದಿಂ ಸವಿಯೆನಗೆ ಖಗಮೃಗಭುಜಗಮುಖಭವಭವಂಗಳೊಳಾದೊಡಂ (ಬಸಪು. ೧೦-೪೯); ಎರಡನೆಯವರ ನಾಶದ ತಳಹದಿಯ ಮೇಲೆಯೇ ನನ್ನ ಅಸ್ತಿತ್ವದ ನೆಲೆಯಿದ್ದರೆ, ಅದಕ್ಕಿಂತ ಸಾವೇ ಸವಿಯೆಂದು ನಾನು ತಿಳಿಯುವೆ (ಪ್ರವಾತೋ. ೧೨೮). ೬. ಮಧುರವಾದ ಪದಾರ್ಥ ; ಇನಿದಾದ ಪದಾರ್ಥ : ಕುಮಾರನಂ ಕಣ್ಣಿಂದೆ ನೋಡಿ ತೆಗೆದಪ್ಪಿ ಮುಂಡಾಡಿ ಕೊಂಡಾಡಿ ಸವಿಗಳನೂಡಿ ಸುಕುಮಾರತೆಯನುಡಿಸಿ (ನಂಬರ. ೨-೧೦೦). ೭. ಸಾರ; ಸತ್ತ್ವ: ಬಿರಿಯಲ್ ಪೊಂಗಿದ ಪಣ್ಗಳ ಸಿರೆಯರಿದಲ್ಲಿರಿಸಿ ಚಂಚುಪುಟದಿಂ ಸವಿಯಂ ಬರೆತೆಗೆದು ತಣಿದು ತವಕಮನರಳ್ಚುತ್ತಿರೆ ಮೆಱೆದುದಾಮ್ರದೊಳ್ ಶುಕನಿಕರಂ (ಗಿರಿಕ. ೨-೩೮); ನಮಗಿಂತ ಹೇಳಲಾಗದಷ್ಟು, ತಾಳಲಾಗದಷ್ಟು ಹೆಚ್ಚು ಸವಿಯನ್ನು ಹೀರುತ್ತಿರುವಿರಿ ನೀವು ನಿಂತ ನೆಲದಿಂದ! (ಕಲ್ಲೋಲ. ೬೨-೬). ೮. ಹಾಲು; ಕ್ಷೀರ : 'ಸವಿಗಡಲ್' ಪರಾ. ೯. ಸೊಗಸು ; ಸೊಬಗು : ಇರ್ವರುಂ ಸಮಸುಖಸರೋನಿಧಿಯೊಳೊಪ್ಪಿರಲು ಶರ್ವನಂ ಸುಖದ ಸವಿ ಹತ್ತಸಾರುತ್ತಿರಲು (ನಂಬರ. ೧೧-೧೩೮); ನಾನು ಪಾರ್ವತಿಯನ್ನೂ ಮದುವೆ ಮಾಡಿಕೊಳ್ಳಕೂಡದೇಕೆ? ಮಾಡಿಕೊಂಡು ಜೀವನದ ಸವಿಯನ್ನು ಕಾಣಕೂಡದೇಕೆ? (ನಿರಾತ. ೪೧). ೧೦. ಸೊಗಸಾದುದು ; ಸೊಬಗಿನಿಂದ ಕೂಡಿದುದು : ಅಸಿಯ ಜವ್ವನೆಯರ ಸಂಗಸುಖ ಬಹುಸವಿಯೆಂದು ತಲೆದೂಗುತಿಪ್ಪುವು ನೋಡಾ ಸಕಲ ಪ್ರಾಣಿಗಳು (ಅಖಂಡೇ. ೬-೫). ೧೧. ಆಸೆ ; ಚಪಲ ; ಬಯಕೆ : ಗಾಂಗೇಯನಿರ್ದಂತೆ ನೋಡ ಮರುಳ್ ಶಂತನು ತನ್ನದೊಂದು ಸವಿಗಂ ಸೋಲಕ್ಕಮಿತ್ತಂ ನಿಜಕ್ರಮಮಂ ತನ್ನಯ ಬೇಟದಾಕೆಯ ಮಗಂಗಂಬೊಂದಪಖ್ಯಾತಿ ಲೋಕಮನಾವರ್ತಿಸೆ ಬಱ್ಪೊಡೆನ್ನ ಕುಲಮುಂ ತಕ್ಕೂರ್ಮೆಯುಂ ಮಾಸದೇ (ಪಂಪಭಾ. ೧-೭೧); ಒಡಲ ಕಳವಳಕ್ಕೆ ಬಾಯ ಸವಿಗೆ ಬಯಸಿ ಉಂಡೆನಾದರೆ ನಿಮ್ಮ ತೊತ್ತಿನ ಮಗನಲ್ಲಾ (ಬಸವ. ೭೮೪); ಸವಿಗಳಿಂ ದೃಷ್ಟವಾಗದವಂ ಸವಿಗಳಂ ಬಿಟ್ಟಡೊಲಿವವನು (ಬಸಪು. ೫೧-೪೯). ೧೨. ಆನಂದ ; ನಲಿವು : ನಿಜಜಂಗಮಪ್ರತತಿ ಸವಿದು ಮಿಕ್ಕಮಿತಪ್ರಸಾದವ ಸವಿದು ಸವಿದೋಲಾಡುತಿಪ್ಪಾ ಸವಿ ದೊರಕಿದಡೆ ಸಾಕು (ಬಸಪು. ೧೦-೪೯). ೧೩. ಪ್ರಿಯನಾದ ವ್ಯಕ್ತಿ; ಹಿತಕರನಾದವನು: ಸವಿಯೆ ಸುಖವೆ ಕಣ್ಣೆ ಗತಿಯೆ ಮತಿಯೆ ಕರುಣಿಸೆಂದನುತ್ತ ತವರೆ ತಾಯೆ ತಂದೆ ಬಂಧು ಕುಲವೆ ಕರುಣಿಸೆಂದನುತ್ತ (ನಮರ. ದೇ. ೧೯೯-೯). ೧೪. (ಆಲಂ) ಆಯುಧ ಮುಂತಾದುವುಗಳ ಹೊಡೆತದ ಪ್ರಭಾವ, — ಪರಿಣಾಮ : ಕೊಳನಂ ಪೊಱಮಡು ತೋಱಿದಪೆನೆನ್ನ ಕೊಂತದ ಸವಿಯಂ (ಗದಾಯು. ೭-೩); ಸಾಱು ನೀ ಬರಹೇಳು ಕೀಚಕವೈರಿಯನು ಪಡಿಸಣವ ನೋಡಲಿ ಭೂರಿಬಾಣದ ಸವಿಯನು (ಕುಮಾದ್ರೋ. ೧೦-೫೨).

ಸವಿಸವಿ$_2$ (ದ್ವಿರುಕ್ತಿ): ಸವಿಷಮಿದೆಂಬುದನಱಿಯದೆ ಸವಿಸವಿಯೆಂದನುಭವಿಪ್ಪ ಜೀವಕ್ಕಿಂತೀ ಭವಸುಖಮಸುಖಮೆ ನಿಖಿಳಮನವಟಯ್ಸುಗುಮಲ್ತೆ ಬಳವದಳವಿಳಸಿತಮಂ (ವರ್ಧಪು. ೧೪-೮೯); ತಾನು ಹಸಿದು ಬರುವೆನೆಂದು ತಿಳಿದು ಸವಿಸವಿಯಾದ ಅಡುಗೆ ಮಾಡಿಕೊಂಡು . . . ಕುಳಿತದ್ದು ಶ್ಯಾಮರಾಯನನ್ನು ಮೂಕವಿಸ್ಮಿತನನ್ನಾಗಿ ಮಾಡಿದವು (ದೀಪಹ. II. ೧೩೭). **ಸವಿತಕ್ಕೊಳ್ಳು** = ಸ್ವಾದವನ್ನು ಪಡೆ; ರುಚಿಯನ್ನು ಹೊಂದು: ಬಾಯೊಳಗೆ ತಿನ್ನುವ ವಸ್ತು ಇರುವಾಗ ನಾಲಿಗೆಯೂ ಅಂಗಳೂ ಅದರ ಸವಿ ತಕ್ಕೊಳ್ಳುತ್ತವೆ (ಮುಂಬಯಿ. ೪-೮೫). **ಸವಿಮಾಡು** = ೧. ರುಚಿಕರವಾಗುವಂತೆ ಮಾಡು; ರಸವತ್ತಾಗುವಂತೆ ಮಾಡು: ವರಕುಮಾರನ ಶಿರವನರಿದಟ್ಟಿ ಸವಿಮಾಡಿ ಹರನಿಗುಣಲಿತ್ತು (ಅಜಿತ್ರಿ. ೧೪). ೨. ಹಿತವಾಗುವಂತೆ ಮಾಡು ; ಆಪ್ಯಾಯಮಾನಗೊಳಿಸು : ಸವಿಮಾಡಿ ತಂದೆಯ ಕೂಡದ ನುಡಿವರು ತವಗಯ್ಯ ಹೇಳೆ ಲಾಲಿಪರು (ಭರತೇ. ೪೫-೩೭). **ಸವಿಯಾಗು** = ೧. ರಸಭರಿತವಾಗು; ರುಚಿಕಟ್ಟಾಗು:

ಸವಿಯಾದಡುಗೆಗಳಿಂತಿವ ಸವಿಯಾದವೆನುತ್ತಮುಣ್ಬನಿತರ ಬ್ರತಿಗಳ್ (ಸಮಪ. ೬-೧೪); ಶಲ್ಯನ ಬಲದಡಗು ಸವಿಯಾಯ್ತು ಜಂಬುಕ ಕಾಕಸಂತತಿಗೆ (ಕುಪ್ಯಾರ್ಜು. ೬-೫); ಕಂಡದ್ದು ಕನಸಾಗಿ ಉಂಡದ್ದು ಸವಿಯಾಗಿ . . . ಕಂದಯ್ಯ ಮಾಡೊ ನಿದ್ದೀಯೆ (ಹಳ್ಳಿಯ. ೭೮). ೨. ಇಂಪಾಗು ; ಇನಿದಾಗು : ಆಗ ಧರೆ ಕಾನೇತು ಬಲು ಚಿಕ್ಕದಾಗಿ ಆ ಗಲಭೆ ಗುಲ್ಲು ಕೇಳಿಸಿತು ಸವಿಯಾಗಿ (ಕವಪು. ೯-೩). ೩. ಪ್ರಿಯವಾಗು; ಹಿತವಾಗು: ಬಲ್ಮೆಗಂ ಬುಸನಕ್ಕಂ ಸವಿಯಪ್ಪ ಕಿಱುವೇಂಟೆಯುಂ ಪೆರ್ವೇಂಟೆಯುಮಲ್ಲದುಬಿದ ಬೇಂಟೆಯಂ ಬೇಂಟೆಯೆನ್ಪಂ (ಪಜಪಭಾ. ೫-೪೬ ವ); ಬೆಳಗು ಬಿದ್ದ ಸ್ವಪ್ನದ ಮಧುರ ಸ್ಮೃತಿಯಂತೆ ಎಲ್ಲವೂ ಸವಿಯಾಗಿ ತೋರಿತು (ನಿರಾಭ. ೫೫). ಸವಿಹತ್ತು = ೧. ರುಚಿಕರವಾಗು; ಸ್ವಾದುವಾಗು: ಅದು ಗೋದಿರೊಟ್ಟಿಯ ಹಾಗೆ ಸವಿಹತ್ತುತ್ತದೆ (ಮುಂಬಯಿ. ೬. ೩-೭೮). ೨. ರುಚಿಹತ್ತು ; ಅತ್ಯಾಸಕ್ತಿಯುಂಟಾಗು : ಒಮ್ಮೆ ತುಡುಗುದಕ್ಕಿದರೆ ಮುಂದೆ ಅದರ ಸವಿಹತ್ತುತ್ತದೆ (ಮುಂಬಯಿ. ೬. ೩-೩೭೮). ಸವಿಹೀರು = ಸಾರವನ್ನು ಹೀರು ; ಸತ್ತ್ವವನ್ನು ಆಸ್ವಾದಿಸು : ನಿಮಗೆ ಸವಿಹೀರಲು ಬೇಡವೆಂದವರಾರು? ಮುಳ್ಳುಬಳ್ಳಿಗಳೆ, ನೀವು ನಮಗಿಂತ ಹೆಚ್ಚಾಗಿಯೇ ಸವಿಹೀರಿರಿ (ಕಲ್ಲೋಲ. ೬೨-೧೫). [< ಸವಿ೧/ ತಮಿ. ಚುವೈ; ಮಲ. ಚುವ; ತುಳು. ಸವಿ, ಸಬಿ, ತಬಿ; ತೆಲು. ಚವಿ; ಕೋತ. ಚಯ್ಸ್; ಕೋಲಾ. ಸವ್ಯಿ; ನಾಯ್ಕಿ. ಸವದ್]

ಸವಿಕಲ್ಪ (ನಾ). [ಯೋಗ] ಸಮಾಧಿಯ ಎರಡು ಬಗೆಗಳಲ್ಲಿ ಒಂದು : ಸವಿಕಲ್ಪವೆರಡು ಮತ್ತವಿಕಲ್ಪಮೊಂದಿಂತು ತ್ರಿವಿಧರೂಪಾಗಿ ವಿರಾಜಿಪಾ ಪ್ರವಿಮಲಮಾದ ಸಮಾಧಿ ಪಡ್ಪಿಧವಾದ ವಿವರವನರಿಯಬ್ಗಲೋಚನೇ (ವೇದಾಂಜ. ೩-೧೩-೫); ಸಮಾಧಿಯೆಂಬ ಯೋಗವು ಸಂಪ್ರಜ್ಞಾತ, ಅಸಂಪ್ರಜ್ಞಾತ . . . ಅಥವಾ ಸವಿಕಲ್ಪ ನಿರ್ವಿಕಲ್ಪವೆಂದು ಎರಡು ಪ್ರಕಾರವು (ಹಿಂದಪಾ. ೧೦೬). [ಸಂ.]

ಸವಿಕಲ್ಪಕ (ನಾ). = ಸವಿಕಲ್ಪ. : ಧ್ಯಾನನಿಶ್ಚಲವೇ ಸಮಾಧಿಯದೇ ನಿದಾನಿಸಲಾಱು ಭೇದವು ಮಾನನಿಧಿ ಸವಿಕಲ್ಪಕವು ಸಿಳಿ ನಿರ್ವಿಕಲ್ಪಕವು (ಅಮೃತ. ೬-೨೫೫); ಪ್ರತ್ಯಕ್ಷಜ್ಞಾನವು ನಿರ್ವಿಕಲ್ಪಕ. ಸವಿಕಲ್ಪಕವೆಂದು ಎರಡು ಪ್ರಕಾರವಾಗಿರುವುದು . . . ವಿಶೇಷ್ಯವಿದು, ವಿಶೇಷಣವಿದು, ಸಂಬಂಧವಿದು ಎಂದು ತಿಳಿಯುವ ಜ್ಞಾನ ಸವಿಕಲ್ಪಕ (ಹಿಂದಪಾ. ೧೩೮). [ಸಂ.]

ಸವಿಕಲ್ಪಸಮಾಧಿ (ನಾ). = ಸವಿಕಲ್ಪ. : ಸವಿಕಲ್ಪಸಮಾಧಿಯೆಂದರೆ ಜ್ಞಾತೃ ಜ್ಞಾನ ಜ್ಞೇಯಯುಂಬ ತ್ರಿಪುಟಿಯಲ್ಲಿ ಕೂಡಿಕ್ಕೊಂಡುಬಿರುವಹುದು (ಈಶ್ಯಸ್ವ. ೨೧-೧೩). 'ನಿರ್ವಿಕಲ್ಪಸಮಾಧಿ' ಪರಾ. [ಸಂ.]

ಸವಿಕೂಟ 'ಸವಿಗೂಟ' ನೋ.

ಸವಿಗಂಪು (ನಾ). ಸುವಾಸನೆ ; ಪರಿಮಳ : ಪೂಮಾಲೆಯ ಪರಿಮಳದೆ ಸುಯ್ಯ ಸವಿಗಂಪನೊಡಗಲಿಸಿ ಮಧುಕರರುಗಳಂ ಮರುಳ್ಮೊಳಿಸಿಯುಂ (ಕುಸುಮಾ. ೪-೫೯ ವ); ವರವೆಯರ ನಱುಸುಯ್ಯ ಸವಿಗಂಪುಮಂ ಎಮ್ಮ ಪ್ರಸಾದದ ಪರಿಮಳಮುಮಂ ಕೊಂಡುಬಂದು (ಸಂಬರ. ೧೪-೭೨). [ಸವಿ೨ + ಕಂಪು]

ಸವಿಗಡಲ್, ಸವಿಗಡಲು (ನಾ). ಹಾಲಿನ ಸಮುದ್ರ ; ಕ್ಷೀರಸಾಗರ: ''ಸವಿಗಡಲೆಸಲ್ ಕ್ಷೀರಸಾಗರಂ'' (ಕಶಾ. ೧೦೪). ಸವಿಗಡಲು : ನಾಲ್ವೆಱದ ದಿವಿಜರ ಚಾತ್ರೆಯೆಲ್ಲವು ಮುದದಿಂ ಪೊಱಗಿ ಸವಿಗಡಲೊಳು ಬಿಟ್ಟುದಾಗ (ಶ್ರೀಕಾಲ. ೧೪-೧೦೧); ಚಂದ್ರನಿದು ಸವಿಗಡಲಿಂ ಹಾರ ಇದು ಹಿಮವೆಂದು ತಿಳಿಯಬಾರದಾ ರಾಯನುದಿತಕೀರ್ತಿಯ ಬಳ್ಸಿನಿಂದ (ಕುರಾಸಾಂ. ೫-೧೮).

ಸವಿಗಡಲ ಕುವರ = ಕ್ಷೀರಸಮುದ್ರದಲ್ಲಿ ಉದಯಿಸಿದವನು; ಚಂದ್ರ: ''ಚಂದಿರಂ . . . ಸವಿಗಡಲ ಕುವರ ಮಿಗಲಚ್ಚಣನೆಂದಿಂದುವಿಗಭಿಧಾನಂಗಳ್'' (ಕವಿಂ. ೪೪). ಸವಿಗಡಲ ಕುವರಿ = ಕ್ಷೀರಸಮುದ್ರದಲ್ಲಿ ಉದಯಿಸಿದವಳು; ಲಕ್ಷ್ಮಿ : ಅಂಬುರುಹೋದರನಂ ಸವಿಗಡಲ ಕುವರಿಯಂಗಜನಂ ರತಿ . . . ಕಯ್ವಿಡಿದಂದದಿ ನೃಪತಿಯ ತೋಳ್ಬಾಳಂ ಪಿಡಿದಾ ಪಿಡಿನಡುವಿನ ಸೌಂದರಿ ಸುಖಮಿರೆ (ಜಯಾಕಾ. ೨-೧೦). ಸವಿಗಡಲಣುಗ = ಸವಿಗಡಲ ಕುವರ : ''ಜೊನ್ನೊಡಲಂ ಸವಿಗಡಲಣುಗಂ . . . ತಿಂಗಳ್ – ಈ ೨೦ ಚಂದ್ರನ ಪೆಸರ್'' (ಕಶಾ. ೪೮-೨೩). ಸವಿಗಡಲಣುಗಿ = ''ಲಕ್ಷ್ಮಿ'' (ಪ್ರಭಾಗ್ಗ). [ಸವಿ೨ + ಕಡಲ್೨]

ಸವಿಗಡಲು 'ಸವಿಗಡಲ್' ನೋ.

ಸವಿಗತೆ (ನಾ). ಪ್ರಿಯವಾದ ಕತೆ; ಆಪ್ಯಾಯಮಾನವಾದ ಕತೆ: ಅವನ ನೇಹಿಗರೊಡನನುಗಳೆವಳಿಯಿಸಿ ಸವಿಗತೆ ಸಂದಣಿಯಲ್ಲಿ ಅವನಂದಚೆಂದವನವನ ಚಾತುರ್ಯವನವರ ಮೊಗದೊಳಾಲಿಪುದು (ಚಚಿವಿ. ೬-೧೫೭ ಸಾಂಗತ್ಯ ೫). [ಸವಿ೨ + ಕತೆ]

ಸವಿಗದಿರ್ (ನಾ). ಅಮೃತಮಯವಾದ ಕಿರಣ ; ಇನಿದಾದ ಕಿರಣ : ಮುಸುಕುವ ಮುಂದಿಂಗಳ ಸವಿಗದಿರ್ಗಳಿಂದೊಸರ್ವಿಂದೂವಲದಂತೆ ರಸಿಕರೆನ್ನಯ ಸತ್ಕೃತಿಯನೆ ಕೇಳಿ ಸಂತಸವನೆದೆಗೆ ತಾರದಿಹರೆ (ಶ್ರೀಪಾಲ. ೧-೨೩). [ಸವಿ೨ + ಕದಿರ್೨]

ಸವಿಗನಸು (ನಾ). ಮನಸ್ಸಿಗೆ ಸುಖ ಸಂತೋಷಗಳನ್ನು ಕೊಡುವ ಕನಸು, —ಸ್ಪಷ್ಟ : ಸ್ಕೂಲತೆಯನುಳಿದ ಬಳಿದಂತದಿಂ ಕಯ್ಸುಳ್ದು ಸವಿಗನಸೆ ಸಂಚರಿಸಲೆಳಸಿದುದೂ (ಚಿತ್ರಾಂಗ. ೩೨-೮೬೪); ಆತನ ಸವಿಗನಸು . . . ನನಸಾದಂತೆ ಕಂಡಿತು (ಸಸ್ಕೃ. ೧೩೦). [ಸವಿ೨ + ಕನಸು]

ಸವಿಗಪ್ಪುರ (ನಾ). ಸೊಗಸಾದ ಕರ್ಪೂರ : ಲಿಂಗ ಭೋಗೋಪಭೋಗಿಗಳಾಗಿ ಸವಿಗಪ್ಪುರಗೂಡಿ ಮೆಱೆವ ತಾಂಬೂಲಮಂ ಗ್ರಹಿಸಿ (ಪದ್ಮರಾ. ೫-೫೬). [ಸವಿ೨ + ಕಪ್ಪುರ]

ಸವಿಗಬ್ಬ (ನಾ). ರಸಭರಿತವಾದ ಕಾವ್ಯ : ಚೀರಮಭೂಪನ ಸವಿಗಬ್ಬದೊಳಗಕ್ಕರವೊಂದ ಭುವನದೊಳಾರೋದಿದರವರಿಗೆ ಕಾಮ್ಯಾರ್ಥವನೀವ ಶಾಂತಮಲ್ಲಿಕಾರ್ಜುನ (ತ್ರಿಪುಪು. ೨೭-೭೩); ಅಕ್ಕರಿಂ ಕೇಳೆನ್ನ ಸವಿಗಬ್ಬ (ನವಮೋ. ೩-೪). [ಸವಿ೨ + ಕಬ್ಬ೧]

ಸವಿಗರೆ (ಕ್ರಿ). ೧. ಹಿತವನ್ನುಂಟು ಮಾಡು ; ಪ್ರೀತಿಯನ್ನು ಸೂಸು : ಪಾವನದ ಮುತ್ತೈದೆ ಸವಿಗರೆದು ಸುದಿದಳಾ ಮೈಸೂರ ಸಿರಿಯ (ಹೊಂಗಳು. ೧೩-೨). ೨. ಇಂಪನ್ನು ಹೊರಹೊಮ್ಮಿಸು : ಸಜ್ಜಾದ ಮತ್ತಿನವರ್ಗೆ ಸನ್ನೆದೂಗಿ, ಬಣ್ಣವಾಡಿನ ರಸಗೇಯದ ರಾಗಮಾಲಿಕೆಯನ್ನು ಸವಿಗರೆಯುವಳು (ಮಂತ್ರಶ. ೫೭-೧೫). [ಸವಿ೨ + ಕರೆ೨ (< ಕಱೆ೧)]

ಸವಿಗರ್ಚು (ಕ್ರಿ). ಹಿತವಾಗಿ ಕಚ್ಚು, — ಕಡಿ : ಸೋರ್ವ ತೆಂಗಿನ ಪೆರ್ಗಾಯೆಳನೀರ ಧಾರೆಗಳನಂಭೋಜಾತನಾಳಂಗಳಿಂದು ನಿತಾಂತಂ ಸವಿಗರ್ಚಲುಜ್ಜುಗಿಪ ಹಂಸಾನೀಕಮುದ್ಯಾನದೊಳ್ (ಕುಸುಪಾ. ೨-೬೭). [ಸವಿ೨ + ಕರ್ಚು೧]

ಸವಿಗಲೆ೧ (ನಾ). ಮೋಹಕವಾದ ಗುರುತು, — ಚಿಹ್ನೆ : ಆನು ನಿಮ್ಮ ನೆನೆದು . . . ಎನ್ನ ಭಾವ ತುಂಬಿ ಮತ್ತಿಲ್ಲದೆ ನಿನ್ನ ಕೂಟದ ಸವಿಗಲೆಯನೆಂತು ಕಾಣುವೆನಯ್ಯ (ಮಹಾದೇ. ಬ. ೧೫೧-೨೮೦); ಕೂಡೆ ಕದಪು ತುಟಿ ನಿಟಿಲವ ಚುಂಬಿಸಿ ಮೂಡು ಮೋಹದ ಸವಿಗಲೆಯ (ಕಂನಮ. ೯-೧೯೨). [ಸವಿ೨ + ಕಲೆ೨]

ಸವಿಗಲೆ೨ (ನಾ). ಶೃಂಗಾರಕಲೆ : ಒಂದರಳ್ಮೂಱು ನಾಲ್ಕೆದಾಱವಸ್ಥೆಗಳೊಂದೊಂದಾಗಿ ಬಂದವಳ ಬಂದಿವಿಡಿದು ಬೆದೆ ಬೇಟಗೊಳಿಸಿ ಬಗೆಗೊಂದಿಸಿದವು ಸವಿಗಲೆಯ (ಕರಾಸಾಂ. ೩೨ ೧೮); ಲಲ್ಲೆಯೊಳ್ಮೊಂಕು ಬಗೆಯೊಳ್ಳಳಂಕು ಸವಿಗಲೆಗಳೊಳ್ಪಲೆ ವಂಚನೆ . . . ನೆಲೆಗೊಂಡ ಗಣಕೆಯರ ತಂಡಮಿಾ ತೆಱದೆ ಚೆಲ್ವಂ ಪಡೆದುದು (ಚೃಮಿಭಾ. ೬-೩೪). [ಸವಿ೨ + ಕಲೆ೨]

ಸವಿಗಳ್ಳು (ನಾ). ಮಧುರವಾದ ರುಚಿಯಿಂದ ಕೂಡಿದ ಮಧು ; ರುಚಿಕಟ್ಟಾದ ಮದ್ಯ : ಜೇನಿನ ಹುಳುಗಳು ಜೋಲಿಯ ಹೊಡೆಯಲಿ ಕುಡಿಯುತ ಹೂವಿನ ಸವಿಗಳ್ಳ! (ಕರುಶ್ರಾ. ೬೫-೪). [ಸವಿ೨ + ಕಳ್ಳು (< ಕಳ್೨)]

ಸವಿಗಾಣ್, ಸವಿಗಾಣು (ಕ್ರಿ). ೧. ರುಚಿಯನ್ನು ನೋಡು ; ಸ್ವಾದವನ್ನು ಅನುಭವಿಸು : ಕುಮಾರಿಯ ಕಣ್ ಮಜ್ಜಿದುಂಬಿಯಾಗಿ ಸೊರ್ಕಿಂಗೆ ಸರೋಜದೊಂದು ಸವಿಗಂಡುವು (ತರ್ಥನೇ. ೨-೬೫). ೨. ಆಸ್ವಾದನೆ ಮಾಡು ; ಮಾಧುರ್ಯವನ್ನು ಕಾಣು : ಪ್ರಸಾದಮಂ ಕೈಕೊಂಡು ಹಾರ್ಯೆಸಿ ಪಕ್ವಾನ್ನದೊಳು ನಲಿದು ಸವಿಗಂಡು (ಸಾಹರ. ದೇ. ೩೦-೧೦); ನೋಡಯ್ಯ ನಂದೀಶ ಎನ್ನ ಸದುಭಕ್ತನಂ . . . ಹರವರಿಯ ಭಕ್ತಿಯಂ ಸವಿಗಂಡ ಭಕ್ತನಂ (ಒಲರ. ದೇ. ೧೯೩-೧೧). ೩. (ಸುಖಸಂತೋಷಗಳನ್ನು) ಅನುಭವಿಸು ; ಭೋಗಿಸು : ಸಕಲಭೋಗಂಗಳಂ ಸವಿಗಂಡು ಬರ್ಪುದೆನೆ (ನಂಬರ. ೧-೨೩); ಶಿವರಾತ್ರಿಯ ಸುಖಮಂ ಸವಿಗಂಡೆಂ (ಬಸರ. ೬-೫೧). ೪. ಸಂತೋಷವನ್ನು

ಹೊಂದು; ಆನಂದವನ್ನು ಪಡೆ : ಮುನ್ನೆ ಬೇಟದ ಸವಿಗಂಡನಲ್ಲದಱಿಯಂ ಶ್ರಮಮಂ ಕಡುವೇಟಕಾಱಿರಾ (ಆದಿಪು. ೧೨-೨೨). ೫. ಆಯುಧ ಮುಂತಾದುವುಗಳ ಹೊಡೆತದ ಪ್ರಭಾವವನ್ನು ಅನುಭವಿಸು : ದ್ರೋಣಾಸ್ಮ್ರವನು ಸವಿಗಂಡನೋ ಸಾತ್ಯಕಿಯೆನುತ ಗರ್ಜಿಸಿದನಾ ಭೀಮ (ಕುಮಾರ್ಯೋ. ೧೮-೨೩). **ಸವಿಗಾಣು** : ೪. ಬೀಗಿ ಬೆಳೆದು ನಭಕಡರ್ದೊಡೆ ದೇವರ್ಕಳಾರೋಗಿಪ ಸವಿಗಾಣರ್ ಪೋಗಿ ಮಾಡುವುದೇನೆನುತ ಲಜ್ಜೆಸಿ ತಲೆವಾಗಿದಂತಿಹುದು ರಾಜಾನ್ನ (ಮೋಹತ. ೨-೪೧); ಆ ಚಿನಿವಾರನು ಮೊದಲು ಒಮ್ಮೆ ಒಂದಕ್ಕೆ ಹತ್ತು ಪಾತ್ರೆಗಳನ್ನು ತಕ್ಕೊಂಡು ಸವಿಗಂಡದ್ದರಿಂದ ಈ ಸಾರಿಯಾದರೂ ಅದರಂತೆ ಲಾಭವಾಗುವುದೆಂದು ತಿಳಿದನು (ಮುಂಬಯಿ. ೪-೨೩). [ಸವಿ$_2$ + ಕಾಣ್]

ಸವಿಗಾಣಿಸು (ಕ್ರಿ). ೧. ರುಚಿಯನ್ನು ತೋರಿಸು ; ಆಸ್ವಾದಿಸುವಂತೆ ಮಾಡು : (೪). ೨. ಆಮೋದಗೊಳಿಸು ; ಹಿತವಾದುದನ್ನು ಅನುಭವಿಸುವಂತೆ ಮಾಡು : ಕ್ಷೋಣೀಶನ ಕಿವಿಯಂ ಸವಿಗಾಣಿಸಿದುದು ಬಾಲರೋದನೋದಿತನಾದಂ (ಚಂದ್ರಪ್ರ. ೩-೧೦೧). ೩. ಆಯುಧ ಮುಂತಾದುವುಗಳ ಹೊಡೆತದ ಪ್ರಭಾವವನ್ನು ತೋರಿಸು : ಬಮಕಿ ಬಂದರೆ ಭೀಮ ನಿಮ್ಮನು ಗದೆಯ ಸವಿಗಾಣಿಸನಲಾ (ಕುವ್ಯಾಗ. ೪-೩೧). [ಸವಿಗಾಣ್ + -ಇಸು$_5$]

ಸವಿಗಾಣು 'ಸವಿಗಾಣ್' ನೋ.

ಸವಿಗಾರ 'ಸವಿಗಾಱಿ' ನೋ.

ಸವಿಗಾರಿಕೆ (ನಾ). ರಸಿಕತನ ; ಸೊಗಸುಗಾರಿಕೆ : ರಾಘವನ ಈ ಎಲ್ಲ ಸವಿಗಾರಿಕೆಗೆ ಇದೀಗ ಇನ್ನೊಂದು ಆಂತರಿಕಪ್ರೇರಣೆ ಕಾರಣವಾಯಿತು (ಗಂಪಾಯಿ. ೨೧೪); ಆಟಕ್ಕೂ ನಗೆಗೂ ಒಂದು ಹುಟ್ಟುಸಂಬಂಧವಿದೆ. ಎರಡೂ ಸವಿಗಾರಿಕೆಯ ಉತ್ಸಾಹದ ಫಲಗಳು (ಸಾಸಂ. ೧೧೪). [ಸವಿಗಾರ (< ಸವಿಗಾಱಿ) + -ಇಕೆ]

ಸವಿಗಾರ್ತಿ (ನಾ). ರಸಿಕತನವುಳ್ಳವಳು ; ಸೊಗಸುಗಾತಿ : ಸೊಬಗನಂ ಕಣ್ಣಿಱದು ನೋಡೆಂದು ಸವಿಗಾರ್ತಿ ಸವಿಗುಸಿರ್ದಳು (ಚಿಬಪ್ರ. ೧೯-೪೦).

[ಸವಿಗಾಱಿ + -ತಿ$_1$ (< -ಇತ್ತಿ)]

ಸವಿಗಾಱಿ, ಸವಿಗಾರ (ನಾ). ರಸಿಕ; ಸೊಗಸುಗಾರ : ಸೊಗಸುವ ಬವರಿಯ ಸವಿಗಾಱಿನಿವನಾರು (ಕಂಪಾ. ೯-೧೧೪). **ಸವಿಗಾರ** : ನೀನು . . . ಹಾವಿನೊಡ್ಡಾಣದ ಸುನ್ದರನಾ ಸವಿಗಾರನ ತಂದೆಗೆ ಇಪ್ಪತ್ತೊಂದನೆಯ ಹೆಂಡತಿ (ಮಂತ್ರಶ. ೫೫-೯); ಬಲು ಸವಿಗಾರ! ಇರಲಿ ಅವ್ವನಿಗೆ ಹೇಳಿದರೆ ಆಕೆ ಎಲ್ಲಾ ಮಾಡುವಳು (ನಿಶಾಛ. ೮೩).

[ಸವಿ$_2$ + -ಕಾಱಿ]

ಸವಿಗುಂಬಳ (ನಾ). ಒಂದು ಬಗೆಯ ಕುಂಬಳಕಾಯಿ ; ಸಿಹಿಗುಂಬಳ : ಬದನೆ ಪಡವಲ ಮಣಿಹಾಗಲ ಸವಿಗುಂಬಳ (ಪೌಗಂಧಿ. ೩೭-೧೪). [ಸವಿ$_2$ + ಕುಂಬಳ]

ಸವಿಗುಟಕು 'ಸವಿಗುಟುಕು' ನೋ.

ಸವಿಗುಟುಕು, ಸವಿಗುಟಕು (ನಾ). ಇನಿದಾದ ತುತ್ತು : ಸವಿಗುಟುಕಾಂತು ದನಿಯ ನಾಲಿಸುತೆ . . . ಇನಿಯನೆಂದು ಪೆಣ್ಗಳಿಯಱಿದುದು (ಚಿಬಪ್ರ. ೪೭-೯). **ಸವಿಗುಟಕು** : ಬಿಕ್ಕಿದೆ ನೇಹಂ ನೋಡುತ್ತಕ್ಕಾ ಪೊಂಗೊಲವಿಯ ಸವಿಗುಟಕಂ ನೀಂ ತಂದಿಕ್ಕೆಂದುಲಿವಾ ಕನ್ನಡ ವಕ್ಕಿಯನೋದಿಸುತಲಿಸದಳಿಳವೆಣ್ಗೊರ್ವಳ್ (ಉಷ್ಪರಿ. ೧೧ ೫೧). [ಸವಿ$_2$ + ಕುಟುಕು$_3$]

ಸವಿಗೂಟ, ಸವಿಕೂಟ (ನಾ). ಮಧುರವಾದ ಸಂಗಮ ; ಮನೋಹರವಾದ ಕೂಟ, — ಸಂಭೋಗ : ಸವಿಗೂಟಕೆಡನಂ ಕಾಣದೆ ಕೊಂಡಯ್ವುವ ಹವಣನೆಣಿಸಿ ಮುಟ್ಟುವಂದ (ಶ್ರೀಪಾಲ. ೫-೭೨); ಅವನ ಸವಿಗೂಟವ ನಿನಗಾನು ಕಾಣಿಸದೊಡೆಯುವತಿ ನಾ ಹೊತ್ತವು ಪೊಲೆಯೆ (ಕರಾಸಾಂ. ೨೫-೪೭); ಸವಿಗೂಟದಾನಂದ ತಲೆಗೇಱಿದಂತೆ ಕಣ್ಗವಿದು ನಿದ್ರೆಗೆ ಸಂದರವರು (ಭರಚ. ೭೧-೧೩೭). **ಸವಿಕೂಟ** : ಕುವರನ ಸವಿಕೂಟಕೆಱಗಿದ ಮನದ ದೀಪನವ ನಲಿಯಾತನ ಸುರತದೆ ತೃಪ್ತಪಡಿಸಂದಱಗಿದಳವಳಡಿಗಳಿಗೆ (ಕಂಪಾ. ೯-೧೨೬). [ಸವಿ$_2$ + ಕೂಟ$_1$]

ಸವಿಗೂಡು (ಕ್ರಿ). ಆನಂದವನ್ನು ಹೊಂದು ; ನಲಿವನ್ನು ಪಡೆ (?) : ಹಾಡಿ ನಡನೋಡಿ ಮುಂಡಾಡಿ ಕೊಂಡಾಡುತುಂ ಬೇಡಿ ಕೊಱಚಾಡಿ ಮಿಗೆ ಕಾಡಿ ಸವಿಗೂಡುತುಂ (ನಂಬಿರ. ೯-೧೩೪). [ಸವಿ$_2$ + ಕೂಡು$_1$]

ಸವಿಗೆಡು (ಕ್ರಿ). ೧. ರುಚಿಯು ಕೆಟ್ಟುಹೋಗು : ಬೈವಾಕೆ ತಾಂ ಪಕ್ಷಿಯೇ ಸವಿಗೆಟ್ಟನ್ನವದೂಟವೇ (ಸೋಮೇಶ. ೨೨). ೨. ಅರುಚಿಯುಂಟಾಗು : ವಳಿ ಕಿಡುವಂತ ತಂಬುಲದ ಬಾಯ್ಸವಿಗೆಟ್ಟುದು (ಆನಂಪು. ೧೨-೭೭). [ಸವಿ$_2$ + ಕೆಡು$_1$]

ಸವಿಗೆಯ್ (ಕ್ರಿ). ಸ್ವಾದವನ್ನು ಹೊಂದುವಂತೆ ಮಾಡು ; ರುಚಿ ಮಾಡಿಕೊಳ್ಳು : ತಮ್ಮ ಸವಿನಾಲಗೆಯಂ ಸವಿಗೆಯ್ಯಲಾಱರೇ (ಸಮಪ. ೯-೧೧೨). [ಸವಿ$_2$ + ಕೆಯ್$_1$]

ಸವಿಗೆಯ್ತ (ನಾ). ಹಿತವಾದ ಕೆಲಸ : ಸವಿಗೆಯ್ತಂಗಳಿನೊಲ್ದು ಸಾಣೆವಿಡಿದೊಪ್ಪಂಗೆಯ್ದು ಮೆಲ್ಲಾತಿನಿಂ ಪವಣುದಂಗೊಳೆ ಕೋದು (ಚಿಪ್ರ. ೭-೭೪).

[ಸವಿ$_1$ + ಕೆಯ್ತ$_1$]

ಸವಿಗೆಯ್ಮೆ (ನಾ). ಹಿತವಾದ ಲೀಲೆ ,-- ಕ್ರೀಡೆ : ಈಗಳೀಗಳೆ ಪಾಡುವ ಶೃಂಗಾರದ ದಶಪದಿಗಳಂ ಬಿಡಲಾಜದೆ ತೊಡರ್ವೆಮ್ಮ ಬಗೆಯಂತೀ ಸವಿಗೆಯ್ಮೆಯ ದಶಪದಿಯಂ ಮೇಲ್ಗೆಯ್ಮೆಯ ದಶಪದಿಯಂ ತೊಡಂಕಿದುದು (ಚಿಪ್ರ. ೭ ೧೩೭ ಪ. ಪುಟ ೧೮೨).

[ಸವಿ$_2$ + ಗೆಯ್ಮೆ (< ಕೈಮೆ$_1$)]

ಸವಿಗೆಯ್ಮೆವಾಡು (ನಾ). ಹಿತವಾದ ಕ್ರೀಡೆಯನ್ನು ಕುರಿತ ಹಾಡು ; ಮನೋಹರವಾದ ಲೀಲೆಗೆ ಸಂಬಂಧಿಸಿದ ಪದ : ಈ ಪೊಜಗೆಯ್ಮೆವಾಡು ಪೊಸತಾದುದು, ಬಲ್ಲಿಯಿಂ ಸವಿಗೆಯ್ಮೆವಾಡಂ ಸವಿವಮೆಂಬಿನಂ (ಚಿಪ್ರ. ೭-೧೫೭ ಪ. ಪುಟ ೧೭೯).

[ಸವಿಗೆಯ್ಮೆ + ಪಾಡು$_2$]

ಸವಿಗೇಳ್ (ಕ್ರಿ). (ಮಾತಿನ) ಇಂಪನ್ನು ಆಲಿಸು ; ಮಧುರತೆಯನ್ನು ಕೇಳು: ನಡದಡೆ ನಡೆದ ಹೆಜ್ಜೆಯಂ ಸೋಂಕಿ ಹಿಗ್ಗುತ್ತೆ ನುಡಿಯಲಾ ಸವಿಗೇಳ್ದ ಕಿವಿಗೆ ಮಾಜುಗುತ್ತೆ (ಇಷಾ. ದೇ. ೩೩-೧೪). [ಸವಿ$_2$ + ಕೇಳ್]

ಸವಿಗೊಡು (ಕ್ರಿ). ೧. ಮಾಧುರ್ಯವನ್ನು ಕೊಡು ; ಇಂಪನ್ನು ನೀಡು : ಗೇಯದ ಸವಿಗೆ ಸವಿಗೊಡೆ ವಾದ್ಯ . . . ಸಭೆಯು ಬೆಜಗಾಗೆ ನರ್ತಿಸಿದ (ಸಾಕ್ಷಿಭಾ. ೩೩-೯೯); ಕೇಳಿರೆ ರೂಪಜಯಂತ ನಿನ್ನಯ ಮೋಹದೇಳಿಗೆಗುಳಿ ಸವಿಗೊಡುವ ಬಾಲಕಿಯೊರ್ವಳು ಮದನಮೋಹಿನಿಯೆಂಬ ನೀಲಕುಂತಳೆಯೊಪ್ಪುತಿಹಳು (ಕಂಪಾ. ೧೦-೧೧). ೨. ಇಷ್ಟಪಟ್ಟು ನೀಡು ; ಮನಸಾರೆ ಕೊಡು : ಅವನನೀಕ್ಷಿಸಿ ಪೂಗಣೆಗೆ ಚಿತ್ತವನೆ ಸವಿಗೊಟ್ಟರಲು (ಸಾಕ್ಷಿಭಾ. ೨೯-೩). [ಸವಿ$_2$ + ಕೊಡು$_1$]

ಸವಿಗೊರಳು (ನಾ). ಇಂಪಾದ ಧ್ವನಿ ; ಮಧುರವಾದ ಕಂಠ : ಇನಿದನಿ: ಹಿಂದಿನ ಸವಿಗೊರಳು ಕುದುರಿದ ಕೋಗಿಲೆಯದು ಚದುರೇರಿ ಹಾಡತೊಡಗಿದುದು (ಸಾಮೋಪ. ೧೭೪). [ಸವಿ$_2$ + ಕೊರಳು (< ಕೊರಲ್)]

ಸವಿಗೊಳ್, ಸವಿಗೊಳು (ಕ್ರಿ). ೧. ರುಚಿಕರವಾಗು ; ರಸವತ್ತಾಗು: 'ಸವಿಗೊಳಿಸು' ಪರಾ. **ಸವಿಗೊಳು** : ೨. ರುಚಿನೋಡು ; ಆಸ್ವಾದಿಸು: ಮೃದುತರವನಿಪ ಪರಿಮಳಿಪ ಹೊಸಖಂಡಂಗಳಂ ಸವಿಗೊಳುತ (ಬಸಪು. ೧೪-೩೯).

[ಸವಿ$_2$ + ಕೊಳ್$_1$]

ಸವಿಗೊಳಿಸು (ಕ್ರಿ). ೧. ರುಚಿಕಟ್ಟಾಗುವಂತೆ ಮಾಡು ; ರಸವತ್ತಾಗಿಸು : ಪಾಕದಿ ಸವಿಗೊಳಿಪ ವರವಿದ್ಯೆ ತನಗುಂಟು (ನಳಚ. ೭-೩). ೨. ತೃಪ್ತಿಗೊಳಿಸು; ತುಷ್ಟಿಯಾಗುವಂತೆ ಮಾಡು : ಆ ಮುನಿವರನ ನಾನಾಫಲಸುಭೋಜನಭಕ್ಷ್ಯದಲಿ ಸವಿಗೊಳಿಸಿದರು (ತೊರಣಾ. ೧-೫-೫೩); ಜನನಿಯರುಣಸನಿಕ್ಕಿ ಸವಿಗೊಳಿಸೆ ಚಮರ ವ್ಯಜನಮಂ ಪಿಡಿದು ರಾಣಿಯರ್ಕಲದೊಳೆರೆ (ಚೈಮಿಭಾ. ೭-೪೩). ೩. ಅನುಭವಿಸುವಂತೆ ಮಾಡು : ಚರಣಸೇವಾಮೃತವನನಿಶವು ನಮಗೆ ಸವಿಗೊಳಿಸಿ ಇರದೆ ಬಿಡಯಂ ಗೈವುದುಚಿತವೇ (ಪಮ್ಮಳ. ೩-೧೩). [ಸವಿಗೊಳ್ + -ಇಸು$_5$]

ಸವಿಗೊಳು 'ಸವಿಗೊಳ್' ನೋ.

ಸವಿಗೋಲ್ (ನಾ). ೧. ಕಬ್ಬು ; ಇಂಗೋಲು : 'ಸವಿಗೋಲ್ವಿಲ್' ಪರಾ. ೨. ಕಬ್ಬಿನ ಬಿಲ್ಲು ; ಮನ್ಮಥನ ಚಾಪ : 'ಸವಿಗೋಲ' ಪರಾ.

[ಸವಿ$_2$ + ಕೋಲ್$_1$]

ಸವಿಗೋಲ (ನಾ). ಕಬ್ಬಿನ ಬಿಲ್ಲನ್ನು ಉಳ್ಳವನು ; ಮನ್ಮಥ : ಸಿಂಹಾಸನಾಗ್ರದಿ ಸಮಗ್ರಶುಭದಿ ಸವಿಗೋಲ ರತಿಸಹಿತ ಸನ್ಮೂರ್ತಿಗೊಂದಿರಲು (ಸವಮೋ. ೪-೬೭).

[ಸವಿಗೋಲ್ + -ಅ$_7$]

ಸವಿಗೋಲ್ವಿಲ್ (ನಾ). = ಸವಿಗೋಲ್ ೨ : ನವಲತಿಕಾದೇಹದ ನಳಿನಾಂಘ್ರಿಯ

ಸವಿಗೋಲ್ವಿಲ್ಲ ಸಮರದ ಕುಡುವುರ್ವಿನ ಯುವತೀರೂಪದ ಚಿತ್ರಮನಾ ಸುಕುಮಾರಂ ನೋಡಿದನು (ಜಯಕಾ. ೩-೧೦). [ಸವಿಗೋಲ್ + ಬಿಲ್$_2$]

ಸವಿಜೇನು (ನಾ). ಸಿಹಿಯಾದ ಜೇನುತುಪ್ಪ: ಜೇಂಗೊಡದ ಸವಿಜೇನಿನಾಸ್ವಾದ ಬಯಸುವೊಡೆ ಜೇನುಹುಳುಗಳ ಕಡಿತಕಂಜಬೇಡ (ಶಿಶ್ಲೋಲ. ೪೩-೫).

[ಸವಿ$_2$ + ಜೇನು$_1$ (< ಜೇನ್$_1$)]

ಸವಿಜೇವಣ (ನಾ). ರುಚಿಕರವಾದ ಭೋಜನ ; ರಸವತ್ತಾದ ಊಟ : ಸವಿಜೇವಣಂಗಳನೆ ಆಯ್ಕುಳಿಗೊಂಡು ಕೊರ್ವಿ ಬೇಳಾರ್ಗಿರ್ಪೆ? (ಸಂಸಪ. ೨೨-೩೧).

[ಸವಿ$_2$ + ಜೇವಣ]

ಸವಿತ್ರ$_1$ (ನಾ). "ಊಟ" (ಮೋಳಿಮಾ. ಕೋಶ): ನಾನೊಡೆಯ ಇವನಡಿಗನೆಂದು ಪುಡಿಪುಚ್ಚವ ಮಾಡುವನ್ನಕ್ಕ ಅದು ತುಡುಗುಣಿಯ ಸವಿತ (ಮೋಳಿಮಾ. ೧೮-೬೮).

[ಸವಿ$_1$ + -ತ್ರ$_2$]

ಸವಿತ್ರ$_2$ (ನಾ). ಸೂರ್ಯ ; ಭಾನು : "ಆದಿತ್ಯಃ, ಸವಿತಾ . . . ತ್ರಯೀತನುಃ — ಈ ೪೭ ಆದಿತ್ಯನ ಪೆಸರ್" (ಹಲಾಯು. ೨. ೩೫); ಅಯ್ಯಾ ನಿಶೆಯ ಮೊತ್ತ ಸವಿತನ ಕಣ್ಗೆ ತಮವನೀಯಬಲ್ಲುದೆ (ಸಕವ. ಕ. II, ೧೦೫-೧೬೨). [< ಸಂ. ಸವಿತೃ]

ಸವಿತಾರ (ನಾ). ಸೂರ್ಯ ; ಭಾನು : "ರವಿ ಮಾರ್ತಂಡಂ . . . ಸವಿತಾರಂ ಸೂರನರ್ಕಂ ದ್ಯುಮಣಿ ತರಣಿ ಸಪ್ತಾಶ್ವನಾದಿತ್ಯನಕ್ಕುಂ" (ವಸ್ತುಕೋ. ೧೧-೬೪); ಸುವರ್ಣರಥಾರೂಢನಾದ ಸವಿತಾರ (ಸೌಂದಸ. ೯೯). [< ಸಂ. ಸವಿತೃ]

ಸವಿತಿನಸು (ನಾ). ಸಿಹಿತಿಂಡಿ ; ರುಚಿಕರವಾದ ಖಾದ್ಯ : ತರತರದ ಸವಿತಿನಸುಗಳನ್ನು ನನಗೆ ತಂದುಕೊಟ್ಟರು (ಅನ್ನ. ೮೪). [ಸವಿ$_2$ + ತಿನಸು (< ತಿನಿಸ್ಸು$_2$)]

ಸವಿತೃ (ನಾ). ೧. ಉತ್ಪತ್ತಿ ಮಾಡುವುದು ; ಹುಟ್ಟಿಸುವುದು. ೨. ಸೂರ್ಯ ; ಭಾನು : ಆತನನ್ನು . . . ಸವಿತೃವೆಂದು ಆರ್ಯರು ಪೂಜಿಸಿದರು (ಮಹಾಗಾ. ೩೦೪); ನದಿಯ ಜಲ ವೃಕ್ಷದೇವತೆಗಳು ಸವಿತೃವಿಗೆ ಅರ್ಪಿಸಿದ ಪುಷ್ಪಾರ್ಘ್ಯವನ್ನು ಹೊತ್ತು . . . ಹರಿಯುತ್ತಿದೆ (ಚಿತಂಬಾ. ೧). [ಸಂ.]

ಸವಿತೃಮಂಡಲ (ನಾ). ಸೂರ್ಯಮಂಡಲ ; ಸೂರ್ಯಬಿಂಬ : ಆ ಸಮಯದೊಳ್ ಸವಿತೃಮಂಡಲಮುದಯಾಚಲಶಿಖಂಡಮಾಣಿಕ್ಯಮಂಡನಮೆನಿಸೆ (ಪಂರಾಮಾ. ೯-೧೯೦ ವ). [ಸಂ.]

ಸವಿತ್ರಿ (ನಾ). ೧. ತಾಯಿ ; ಜನನಿ : ಎಣ್ಬರುಮಂ ನಾಕನಾಯಕಂ ತ್ರಿಲೋಕಗುರು ಸವಿತ್ರಿಗೆ ಸೀಯನಪ್ಪ ಗೇಯದಿಂ ಪೊಟ್ಟುಗಳೆಯಲ್ ನಿಯಮಿಸಿದಂ (ಶಾಂತಿಪು. ೯-೧೬೮ ವ); ಧರೆಯೊಳು ಪುಟ್ಟುತಂ ನಿಜಸವಿತ್ರಿಗೆ ಮೋಕ್ಷಮನಿತ್ತು ಮಾಯೆಯಂ ಹರಿಯಿಸಿ ತನ್ನ ತಂದೆಗಱಿವಂ ದಯೆಗೆಯ್ದು (ತ್ರಿಪುಪು. ೩೨-೨೨). ೨. ಆಕಳು ; ಗೋವು.

[ಸಂ. ಸವಿತ್ರೀ]

ಸವಿದಂಟು (ನಾ). ಇನಿದಾದ ಕಾಂಡ ; ದೇಟು ; ಸಿಹಿಯಾದ ದಂಟು, — ನಾಳ : ಹೊಡೆಯನೆರಳೆಗಳು ಸವಿದಂಟುಗಳನು ಮರಗಳಂ ತೆನೆಗಳಂ ಗಿಳಿ ನವಿಲು ಕೊಂಚೆ ಮೊದಲಾದ ಖಗತತಿಗಳು . . . ತಿಂದು ತಳಪಟಂಮಾಡಿ ನಾಡೆಲ್ಲಮಂ ಗೋಳಿಡಿಸುತಿರ್ದುವು (ಪಚಕಾ. ೩-೬೩). [ಸವಿ$_2$ + ದಂಟು]

ಸವಿದಂಬುಲ (ನಾ). ರುಚಿಕರವಾದ ತಾಂಬೂಲ : ಸವಿದಂಬುಲವೇನ ಮಾಡುವುದು ಕೆಂಬಲ್ಲ ಕಿಡಿಯೇನ ಸುಡುವುದು ಮನಕೆಲ್ಲಿ ನಂಬುಗೆಯೆಂದು ಪಾಡಿದಳು (ಭರಚಿ. ೧೧-೨೮). [ಸವಿ$_2$ + ತಂಬುಲ]

ಸವಿದಕ್ಕೆ (ನಾ). ಆಪ್ಯಾಯಮಾನವಾದ ಅಪ್ಪುಗೆ ; ಹಿತಕರವಾದ ತೆಕ್ಕೆ: ಸವಿದಕ್ಕೆಯಂ ಸಡಿಲದ ನೇಹಗಳಿಂದಲವರಿರ್ವರೊಪ್ಪಿದರಂದು (ಕಂನವಿ. ೧೦-೪೬).

[ಸವಿ$_2$ + ತಕ್ಕೆ$_1$ (< ತಟ್ಕೆ)]

ಸವಿದಳೆ (ನಾ). ಮಾಧುರ್ಯವನ್ನು ತಳೆ : ಮಧುರತೆಯನ್ನು ಹೊಂದು: ಸವಿದಳೆದು ತಣ್ಬುಗಳ್ಮೆಗೆ ಸವನಿಸಿ ರಸಭರಿತಮೆನಿಪ ಕವಿಮಾನಸದೊಳ್ (ಚಕವಿ. ೧-೧೯).

[ಸವಿ$_2$ + ತಳೆ$_1$]

ಸವಿದುಟಿ (ನಾ). ಇನಿದಾದ ಅಧರ ; ಮಾಧುರ್ಯ ತುಂಬಿದ ತುಟಿ : ನೀಜನ ಚೆಲ್ವೂರೆದ ಸವಿದುಟಿಯನೊಲವಿಂ ಬರೆಪೀರ್ದುವು ನೋಡುವಿಚ್ಛೆಗಾರ್ತಿಯ ಕಣ್ಗಳ್ (ಕಬ್ಬಿಕಾ. ೩೨೯); ಸವಿದುಟಿಯೊಳ್ ಸಲೆ ಶೋಣೆ ಹೃದಯದೊಳಗವಿರತ ನರ್ಮದೆ ನೆಲಸಿರ್ಪುದಱಿಂ ಯುವತಿ ನಿರೀಕ್ಷಿಸುವರ ಕಣ್ಗೆರದೆ ಕೃತಾರ್ಥತೆ ಮಾಡುವಳು (ಜಯಕಾ. ೩-೫೬). [ಸವಿ$_2$ + ತುಟಿ]

ಸವಿದುತ್ತು (ನಾ). ರುಚಿಕರವಾದ ಕಬಳ; ರಸವತ್ತಾದ ಆಹಾರ: ಈ ಪರಿಯಲುರಗಂಗೆ ಸವಿದುತ್ತಾಗಿ ಹೋಹರೇ ಸುಕುಮಾರ (ಪಚಕಾ. ೧೨-೧೯); ವನದ ಚಕೋರಿಯ ಸವಿದುತ್ತಿದಾವುದು ಹರಿಣವಿಲ್ಲದ ಶೀತಕಿರಣ (ಇಂಚಾಪ. ೧೬೯-೩೧).

[ಸವಿ$_2$ + ತುತ್ತು$_2$]

ಸವಿದೆ 'ಸೌದೆ$_1$' ನೋ.

ಸವಿದೋಱಿಸು (ಕ್ರಿ). ಇಂಪನ್ನು ಉಂಟುಮಾಡು; ಮಾಧುರ್ಯವನ್ನು ಗ್ರಹಿಸುವಂತೆ ಮಾಡು: ತುಂಬುರವಿಡಿದು ಗಾನಾಮೃತವನು ಕಿವಿಗಿಂಬಾಗಿ ಸವಿದೋಱಿಸುತ ಮುಂಬರಿದೆಸೆವ ಗಾಯಕರು ಪಾಡುವ ಸಂರಂಭವನೇನ ಬಣ್ಣಿಪೆನು (ಕಂನವಿ. ೮-೩೩). [ಸವಿದೋಱು + -ಇಸ್ಸು$_2$]

ಸವಿದೋಱು (ಕ್ರಿ). ೧. ರುಚಿಕರವಾಗಿ ಕಾಣು; ಇನಿದಾಗು : ಕೊಂಡವಗೆ ಸವಿದೋಱಿತು ಇಂತಪ್ಪ ಕಾಯಿ (ಪಡಗುಚೌಪದಿ. ೫). ೨. ರುಚಿಯನ್ನು ತೋರಿಸು; ಸ್ವಾದವನ್ನು ಗ್ರಹಿಸುವಂತೆ ಮಾಡು : ಸವಿಸವಿದು ಬಿಕ್ಕಬಿಕ್ಕನೆ ಸವಿನೋಡೆನ್ನಾಣೆಯೆಂದು ರಕ್ಕಸಿಗಮದಂ ಸವಿದೋಱಿ (ಪಂಪಭಾ. ೧೨-೧೫೮); ತೆಳುದೊಗಲ ಚಕ್ಕಳದ ಕೈಚಪ್ಪಳೆಯವರು ಹಂತಿಯಲಿ ಕುಡಿದರು ಕೆಳೆಯರಿಗೆ ಸವಿದೋಱಿ (ಕುಮಾಭೀ. ೫-೩೧). ೩. (ಆಲಂ) ಆಯುಧಗಳ ಹೊಡೆತ ಮುಂತಾದುವುಗಳ ಪ್ರಭಾವ, ಪರಿಣಾಮಗಳನ್ನು ಅನುಭವಿಸುವಂತೆ ಮಾಡು : ದಳದ ನಾಯಕರೆಲ್ಲರಿಗೆ ಸವಿದೋಱಿದನು ಬಲುಗದೆಯ ಹೊಯ್ಗುಗಳ (ಕುಮಾಕ. ೧೫-೩೪). [ಸವಿ$_2$ + ತೋಱು]

ಸವಿಧ (ಗು). ೧. ಒಂದೇ ಬಗೆಯ ; ಒಂದೇ ರೀತಿಯ. (ನಾ). ೨. ಹತ್ತಿರ ; ಸಮೀಪ ; ನಿಕಟ : ಸವಿಧಂ ದೂರಂ ಪ್ರತ್ಯಂತವಿದೆನ್ನದೆ . . . ನೆಗೞ್ದತ್ತಗಾಧಬೋಧಂ ಜಿನನೊಳ್ (ಪುಷ್ಪಪು. ೧೪-೪೦); ಮುನಿ ತನ್ನೃಪಾಲನ ಸವಿಧವನು ತಾನೈದಿ ತದ್ವಾಕ್ಯವನು ಹೇಳಿದನು (ತಿಮ್ಮಅ. ೩-೯೧); ರವಿ ಬಿಸುಗದಿರಂ ಕಱಿಯಂ ದವಾಗ್ನಿ ಸವಿಧಸ್ಥಳಂಗಳೊಳ್ ಮೆಯ್ದೋಱಂ ಪವನಂ ಬಿಱುಬಿಂ ಬೀಸಂ ಜವನವರೆಡೆಯಾಡಲಣ್ಮಾರಾ ಮುನಿವನದೊಳ್ (ಶಬಶಂ. ೨-೬೬). [ಸಂ.]

ಸವಿಧೆ 'ಸೌದೆ$_1$' ನೋ.

ಸವಿನಗೆ (ನಾ). ಮೋಹಕವಾದ ನಗು ; ಮನೋಹರವಾದ ನಗೆ : ಸವಿನಗೆಯಿಂದೆ ಮೆಲ್ನುಡಿಯ ಬಿನ್ನಾಣಿಂ . . . ಬಗೆಗೆ ಸೋಲಮನುರ್ವಿಸಿ (ವೃಪವಿ. ೨೯-೧೪); ಸವಿನಗೆಯೆಂಬಮರ್ದಿನ ಸೊನೆ ಕವಿತರ್ಪವೊಲಾಗೆ ಸುರಿವ ಲಾಲಾಜಳಂ (ರಾಜಶೇ. ೪-೬೮).

[ಸವಿ$_2$ + ನಗೆ]

ಸವಿನಯ (ಗು). ೧. ವಿನಯದಿಂದ ಕೂಡಿದ; ಸೌಜನ್ಯಪೂರಿತವಾದ: ಸವಿನಯಹಾಸಿಯರ್ . . . ನವನವಕೌತುಕಾಹವಮನೋಹರಶೀಲೆಯರಲ್ತೆ ಸೂಳೆಯರ್ (ಚಕವಿ. ೬-೬೯); ಸವಿನಯರಾಜಶೇಖರತನೂಭವ ನೀನುಱೆಯರ್ಧರಾತ್ರಿಯೊಳ್ ತವೆ ನಗರೀವಿಶೋಧನನಿಮಿತ್ತದೆ . . . ಸಂಚರಿಸು (ಹಾಲಾಸ್ಯ. ೨-೯-೩೦). (ನಾ). ೨. ಸೌಜನ್ಯ; ಒಳ್ಳೆಯತನ : ಸವಿನಯದೊಳಂದು ಸಾಮ್ರಾಜ್ಯವನೆನ್ನಯ ಜನಕನಂಪ್ರಿಗೊಪ್ಪಿಸಿ ತತ್ಪಾದವನೋಲಗಿಸುತ್ತುಂ ನಾಂ ದಿವಸಂಗಳ್ ಕೆಲವುಮಂ ಸುಖಂ ಮಿಗೆ ಕಱಿದೆಂ (ದಶಕು. ೧೦-೧೨೯); ನಂದನನವರ ಪಶುಗಳನಾರಯಿದು ಕಾಯ್ತಪ್ಪ ನನುದಿನವು ಸವಿನಯದೊಳು (ಬಸವು. ೨೪-೨). [ಸಂ.]

ಸವಿನಯಸ್ಥ (ನಾ). ವಿನಯಶೀಲನಾದವನು; ಸೌಜನ್ಯದಿಂದ ಕೂಡಿದ ವ್ಯಕ್ತಿ: ಲವವಿನಿತುವುಂ ಕೋಪವಿಲ್ಲದ ಸವಿನಯಸ್ಥರು (ಬಸವು. ೩೮-೬). [ಸಂ.]

ಸವಿನೀತ (ನಾ). = ಸವಿನಯಸ್ಥ : ಅವರಿರ್ವರ್ಗ್ಗಂ ಪುಟ್ಟಿದಂ . . . ಭುವನೋಂನತಧವಳಯಶಂ ಸವಿನೀತಂ ಪ್ರಿಥ್ವಿಸೆಟ್ಟಿಯೆನ್ನಿ(ನಿಸಿ)ದ ಬೊಮ್ಮನು (ಕಾಇ. IV, ೧-೭೫; 1204). [ಸಂ.]

ಸವಿನೀರು (ನಾ). ಸಿಹಿಯಾದ ನೀರು : ನಂಜಮ್ಮನ ಒಡನಾಟ ಮರುಭೂಮಿಯಲ್ಲಿ ಅಲೆಯುತ್ತಿದ್ದ ಯಾತ್ರಿಕನಿಗೆ ದೊರೆತ ಸವಿನೀರ ಚಿಲುಮೆಯಂತೆ ರಾಣಿಗೆ

ಆಪ್ಯಾಯಮಾನವಾಗಿದ್ದಿತು (ಹಾಹುತ್ರ. ೩೮); ಅಲ್ಲಿ ಭಾವಿ ಅಗಿಯಲು ಸವಿನೀರಿನ ಸೆಲೆ ಬಿಮ್ಮಿತು (ಶರಚ. ೭೫). [ಸವಿ₂ + ನೀರು₁ (< ನೀರ್)]

ಸವಿನುಡಿ₁ (ಕ್ರಿ). ಮಧುರವಾಗಿ ಹೇಳು ; — ನುಡಿ : ತಾನೇ ರಚಿಸಿದ ಹೆಸರು ಅವನ ಕಿವಿಯಲ್ಲಿ ಸವಿನುಡಿಯುತ್ತಿತ್ತು (ಗಂಮಾಹಿ. ೧೩). [ಸವಿ₂ + ನುಡಿ₁]

ಸವಿನುಡಿ₂ (ನಾ). ಮಧುರವಾದ ಮಾತು; ಇಂಪಾದ ನುಡಿ : ಸುರತ ಸಮಯದೊಳಿನಿಯನಾಡಿದ ಸವಿನುಡಿಗಳನುಸಿರ್ದು (ಗಿರಿ. ೨-೧೦೫ ವ); ಕಾಯುತ್ತಾದೇಳ್ಗೆಯಿ ಸವಿನುಡಿಯೊಳಿರ್ತಂಬನು (ಭಾವಚು ೯ ೪೭); ನಿಗ ಸವಿನುಡಿ ಸ್ವರಗೊಗಿಲೆ ತನುವಲ್ಲಿ . . . ನೆಲೆಮೂಲ ಚಕ್ರ ಕಾವನ ಬೆಳೆ ವನವೆನೆ ಹಂಗಳಿಹರು (ಕಂಸವಿ. ೬-೯೭).

[ಸವಿ₂ + ನುಡಿ₂]

ಸವಿನುಡಿಗಾತಿ (ನಾ). ಮಧುರವಾದ ಮಾತನ್ನಾಡುವವಳು : ಸಕ್ಕರೆದುಟಿಯಳ ಸವಿನುಡಿಗಾತಿಯ . . . ತಕ್ಕೆಯದೆಂದು ಘಟಿಪುದೊ (ಶಕಸಾಂ. ೨೬-೩೧).

[ಸವಿನುಡಿ₂ + -ಕಾತಿ]

ಸವಿನೆನಪು, ಸವಿನೆನಹು (ನಾ). ಹಿತಕರವಾದ ಸ್ಮರಣೆ ; ಪ್ರಿಯವಾದ ನೆನಪು : ಎರಡು ವಾರದಲ್ಲಿ ಆ ಸವಿನೆನವು ಮರೆತುಹೋಗುವಂತಹ ರುದ್ರಪಾತಾವರಣ ನಡೆದಿದೆ (ಪದ್ಮಸ. ೨೦೬); ಕೆಲವರು ಪರಿಚಯವನ್ನು ಹೇಳಿಕೊಂಡರೂ ಅರೆಮರೆತ ಹಿಂದಿನ ಜೀವನದ ಸವಿನೆನಪುಗಳ ತಂತಿಯನ್ನು ಮಿಡಿಯಲಾರದ ಹೋದರು (ನಿಶಾ. ೫೫೫). **ಸವಿನೆನಹು** : ಆಗವಳೆದುರಿಗೆ ಗೆಳತಿಯರ ಸವಿನೆನಹುಗಳ ಚಿತ್ರಗಳೇ ಚಿತ್ರಗಳು (ಕನ್ನಜಾ. ೧೪೬). [ಸವಿ₂ + ನೆನಪು]

ಸವಿನೆನಹು 'ಸವಿನೆನಪು' ನೋ.

ಸವಿನೋಟ (ನಾ). ೧. ಮಧುರವಾದ ದೃಷ್ಟಿ ; ಮೋಹಕವಾದ ನೋಟ : ಸವಿ ನೋಟದೊಳ್ಸಂಚು ನಗೆಯೊಳ್ಪ್ರಪಂಚು (ಚೈಮಿಭಾ. ೬-೩೪);ಸವಿನೋಟಂ ಪೊಸವೇಟಮಂ ನಗಯನಂಗಾವೇಶಮಂ . . . ಪುಟ್ಟಿಸದಿರ್ದೊಡೇಕೆ ನೆರೆವಾಯಾಸಂ ವಿಟಂಗಂಗನೇ (ವೃಷವಿ. ೨೮-೩೦); ತವಕವಾಡುವ ತತ್ಕರಿಪ ತಲ್ಲಣಿಸುವ . . . ಸವಿನೋಟಗಳ ಸಮನಿಪುದು (ಬಕವಿ. ೬-೧೫೭ ಸಾಂಗತ್ಯ). ೨. ಹಿತಕರವಾದ ದೃಶ್ಯ ; ಆಪ್ಯಾಯ ಮಾನವಾದ ನೋಟ : ತಕ್ಕು ಕಡಂಗಿದಚ್ಚಿ ಸವಿನೋಟಕೆ ಸಿಲ್ಕಿದ ದಿಟ್ಟಿ . . . ಒಪ್ಪೆ ಶಿವೆಯಂ ನಲಿದರ್ಚಿಸುತೊಪ್ಪಿದಂ ನೃಪಂ (ಉದ್ಭಟ. ೪-೩); ಎವೆಹೊತ್ತಿನಾ ನೋಟ, ಸವಿನೋಟ, ಸವೆಯದೆದೆಚಿಮ್ಮುತಿಹುದಿನ್ನೂ! ನಾಲ್ಮಡಿ ಕೃಷ್ಣನ ಸವಿಸೊಲ್ಲು (ಹೂಗಳು. ೧೭-೨೪). [ಸವಿ₂ + ನೋಟ]

ಸವಿನೋಡು (ಕ್ರಿ). ೧. ರುಚಿಯನ್ನು ನೋಡು ; ಆಸ್ವಾದಿಸು : ಸವಿಸವಿದು ಬಿಕ್ಕಬಿಕ್ಕನೆ ಸವಿನೋಡೆನ್ನಾಣೆಯೆಂದು ರಕ್ಕಸಿಗಮದಂ ಸವಿದೋಜೆ (ಪಂಪಭಾ. ೧೨-೧೫೫). ೨. ತಿನ್ನು ; ಮೆಲ್ಲು : ಇವಱಿಂದವು ಸವಿಯೆನುತುಂ ಸವಿನೋಪ್ಪಿ ಪಲವುತೆಱದ ಮೃಗದಡಗಂ (ವರ್ಧಪು. ೧೧-೨೦). ೩. (ಆಲಂ) ಆಯುಧದ ಪ್ರಯೋಗ ಮುಂತಾದುವುಗಳ ಪ್ರಭಾವ, ಪರಿಣಾಮಗಳನ್ನು ಅನುಭವಿಸು : ಎನ್ನ ಬಾಳ ಸವಿಯಂ ಸವಿನೋಡಿ ಬಟ್ಟಿಕ ನೀರ ಸವಿಯಂ ನೋಡಾ (ಗದಾಯು. ೬-೫); ಪರಶುಧರಸಾಯಕದ ಸವಿನೋಡಾದಡೆನುತೆಚ್ಚನು ಮಹೀಪತಿಯ (ಕುವ್ಯಾಕ. ೧೧-೪೯). ೪. ಕೊಲ್ಲು ; ಮುಗಿಸು : ಅವರುಮನಂತಕನೊಯ್ಯನೆ ಸವಿನೋಟ್ಟುದುಮಾನುಮೆನ್ನ ಪಾಪದ ಫಲಮಂ ಸವಿನೋಡೆ ಪೊಕ್ಕೆನೊಡನೊಗೆದ ವಿಚಾರಣಚರಿತಮೆಂಬ ಗಹನಾಂತರಮಂ (ಆದಿಪು. ೩-೩೫); ಸವಿನೋಟ್ಟಂ ಸಾಗರಾಂತಕ್ಕಸುರರ ನೆರಿಗೊಳ್ಳಂ ತ್ರಿಪಲ್ಕಕ್ಕೆ ನಾಗಾನ್ಯಯಮಂ ಸಾರ್ಧದ್ವಿಪಲ್ಕಕ್ಕಳವಳಲುಜೆ ಮಾಟ್ಟಂ . . . ಕೃತಾಂತಂ (ಮಲ್ಲಿಪು. ೧೩-೧೦೩). [ಸವಿ₂ + ನೋಡು]

ಸವಿಪಾಕ (ನಾ). [ಜೈನ] ನಿರ್ಜರೆಯ ಅವಿಪಾಕ ಮತ್ತು ಸವಿಪಾಕಗಳೆಂಬ ಎರಡು ಪ್ರಕಾರಗಳಲ್ಲಿ ಒಂದು ; IP "ಕರ್ಮವು ಫಲೋನ್ಮುಖವಾಗಿ ಸುಖದುಃಖಗಳನ್ನು ಕೊಟ್ಟು ತುಸುತುಸು ಉದುರಿ ಹೋಗುತ್ತಿರುವ ಸ್ಥಿತಿ" (ಆದಿಪು. ಜೈನಪಾರಿಭಾಷಿಕಶಬ್ದಕೋಶ ೯೯): ಯಥಾಕಾಲಾನುಭವನ ತಪೋನಿಮಿತ್ತಮಾಗಿ ಸವಿಪಾಕಾವಿಪಾಕರೂಪದಿಂ ಪೂರ್ವಾರ್ಜಿತಕರ್ಮನಿರ್ಜರಣಂ ನಿರ್ಜರೆಯೆಂಬುದು (ಆದಿಪು. ೧೦-೬೩ ವ). [ಸಂ.]

ಸವಿಪಾಕನಿರ್ಜರೆ (ನಾ). "ನಿರ್ದಿಷ್ಟಫಲಭೋಗಾನಂತರದಲ್ಲಿ ಕರ್ಮದ ಸ್ವಾಭಾವಿಕ ಕ್ಷಯವಾಗುವುದು ಸವಿಪಾಕನಿರ್ಜರೆಯು" (ಜೈನಧ. ೬): ಅಂತೆತ್ತಾನುಂ ಸ[ಪಾಠಾಂ. ಸಂ]ವಿಪಾಕನಿರ್ಜರೆಯಿಂ ದುಷ್ಕರ್ಮಫಲಮಂ ತವಿಸಿ (ಪಂರಾಮಾ. ೬-೫೬ ವ); ಅವಿಪಾಕನಿರ್ಜರೆ ಸವಿಪಾಕನಿರ್ಜರೆಯೆಂಬೆರಡುಂ ತೆಱದ ನಿರ್ಜರೋಪಾಯಮಂ ಪೇೞ್ದು (ಜೀಪಸಂ. ೧೦-೨೬ ವ); ತಾನಾಗಿ ಫಲವನ್ನು ಕೊಟ್ಟು ಅಳಿದುಹೋಗುವ ಕರ್ಮಕ್ರಮಕ್ಕೆ ಸವಿಪಾಕನಿರ್ಜರೆ ಎನ್ನುತ್ತಾರೆ (ಭಾರದ. ೧೪೭). 'ಅವಿಪಾಕನಿರ್ಜರೆ' ಪರಾ. [ಸಂ. ಸವಿಪಾಕನಿರ್ಜರಾ]

ಸವಿಭವಂ (ಅ). ವೈಭವವನ್ನು ಹೊಂದಿ; ಆಡಂಬರದಿಂದ ಕೂಡಿ : ಪುರು ಹೂತಂ ಪ್ರೀತಿಯಿಂ ನಂದನವನಕೆ . . . ಬರ್ಪವೋಲ್ ತದ್ಧರಣೀಚಕ್ರೇಶನಂತಾ ಬನಕೆ ಸವಿಭವಂ ಬಂದು ಯೋಗೀಂದ್ರಪೂಜಾತುರಚಿತ್ತಂ ಪೊಕ್ಕನುದ್ಯತ್ಪುಳಕತನುಲತಂ ಕಾವ್ಯನೌರ್ಣಧಾರಂ (ಚಂದ್ರಪ್ರ. ೨-೧೧೬). [ಸಂ.]

ಸವಿಮಾತು 'ಸವಿವಾತು' ನೋ.

ಸವಿಮಾವು (ನಾ). ಸಿಹಿಯಾದ ಮಾವು ; ಇಮ್ಮಾವು : ಸವಿಮಾವು ಪೂವು ಬಕುಳಂ ಮುಕುಳಮೊಪ್ಪುವ ಕೊಳಂ . . . ಸೊಂಪು ಪೆಂಪಿಂದೀ ಪುರೋಪವನಮಸದಿರ್ದುದು (ಚಿಬಪು. ೧೧-೨೧). [ಸವಿ₂ + ಮಾವು]

ಸವಿಮುತ್ತು (ನಾ). ಮಧುರವಾದ ಚುಂಬನ : ಸವಿಮುತ್ತನಿವಗೀವ ಪುಣ್ಯವ ಪಡೆವುದೆಂದಿಗೆ ನಾನಬಲೆ (ಕಂಸವಿ. ೯-೧೨೫). [ಸವಿ₂ + ಮುತ್ತು (< ಮುದ್ದು)]

ಸವಿಮುನಿಸು (ನಾ). ಪ್ರಣಯಕೋಪ; ಹುಸಿಮುನಿಸು: ಎಳೆನಗೆ ಸವಿ ಮುನಿಸು ನೋಟ ಬೇಟವು ನೆಱೆಸೊಬಗಿಯಾ ಸೂಳವಿನ್ನಣದೋಱೆ ಸಿಲುಕಿದನು (ಸಾಳ್ವಭಾ. ೧೭-೨೬). [ಸವಿ₂ + ಮುನಿಸು₂]

ಸವಿಯಿಸು, ಸವಿಸು (ಕ್ರಿ). ೧. ಆಸ್ವಾದಿಸುವಂತೆ ಮಾಡು ; ಉಣಿಸು : ಕವಿತೆಯ ರಸವನು ಕರ್ಣಾಟದ ಭಾಷೆಯೊಳುಱೆ ಮೊಗೆಮೊಗದು ಕವಿರಸಿಕರ ಕರ್ಣಾಸ್ಯ ದೊಳಿಱದಾಂ ಸವಿಯಿಸಿ ಸಂತೋಷದಿ ತೇಗಿಸುವೆನು (ಮುಡಿಗ್ಕಾ. V, ೧೧೯೨-೯೭೦-೧೭). **ಸವಿಸು** : ೧. ಸಕ್ಕರೆ ತುಪ್ಪವ ಸವಿಸೋದು ರೊಕ್ಕ (ಪುರಂದ. ೨-೪೮-೧); ಶೋಭಿಸುವ ಪಣ್ಣಿಡಿದು ತಂದೆ ಸವಿಸಡೊಡೆ ತಾನೇ ಭುಂಜಿಪನೆ ಪಸುಳೆ (ಚೈಮಿಭಾ. ೬-೪೨); ಅಮೃತಫಲಗಳನು ಬಾಯಿಗಿನಿದಪ್ಪಂತೆ ಸವಿಸುತಲಾಯಸವ ನೀಗುತ್ತ ಪಥಿಕರ ಕಾಯಜರಪ್ರಪೆಯಂತೆ ಶೋಭಿಪವಲ್ಲಿ ಮಾಮರಗಳ್ (ಅರ್ಜಾವಿ. ೧೩-೧೧). ೨. ಆಸ್ವಾದಿಸು ; ಸೇವಿಸು : ತುದಿಮೊದಲ್ಗನಕ ಹೇಱಿಪ ನವ್ಯಫಳರಸಂಗಳನು ಸವಿಸುವುದು ಲೋಕದ ಶಿವಪದಾರ್ಚಕರು ಮಾನಿಗಳು (ಹಚಣಾ. ೧-೧೪); ತಾವೆಲ್ಲರುಂ ಸವಿಸಿ ಬಳಿಕಾಗಲಾ ಬಾಲಲಿಂಗಣ್ಣನಂ ಕರೆಯೆನಲ್ (ಚಿಬಪು. ೬೩-೨೯).

[ಸವಿ₁ + -ಇಸು]

ಸವಿಯೂಟ (ನಾ). ರುಚಿಕರವಾದ ಆಹಾರ ; ರಸಕವಳ : ಆಟವೇ ಮೃಗಗಣ ದೊಡನೆ ಸವಿಯೂ[ಪಾಠಾಂ. ದೂ]ಟವೇ ವನಕಂದಫಲ (ತೊರರಾ. ೧-೫-೪೪); ದಿನರಾತ್ರಿಯೆನ್ನದ ವಿಷಯಲಂಪಟನಾಗಿ ಸವಿಯೂಟಗಳನುಂಡು ಭ್ರಮಿಸಬೇಡ (ಪುರಂದ. ೨-೬೧-೧). [ಸವಿ₂ + ಊಟ]

ಸವಿಯೇಱು (ಕ್ರಿ). ಸೊಗಸು ಹೆಚ್ಚಾಗು ; ಚೆಲುವು ಅಧಿಕವಾಗು : ಸೌಕುಮಾರ್ಯಕ್ಕೆ ಸವಿಯೇಱಿದಂತೆ ಆಲಿಂಗನಕ್ಕೆ ಅವಯವಂ ಬಂದಂತೆ (ಗಿರಿ. ೨-೧೦೫ ವ); ಕಠಿನತೆಯಂ ಕಳೆದು ಮಿಸುಪ ಮಾಣಿಕ್ಯಂ ಕೆಂಪಂ ತಳೆದಮೃತಂ ಸವಿಯೇಱಿದ ಹೊಸಹವಳಂ . . . ಎನೆಯಿನಿದುಟಿ ಸೊಗಯಿಸಿತಾ ನೃಪಸುತೆಗೆ (ಜಯಕಾ. ೩-೪೧).

[ಸವಿ₂ + ಏಱು₁ (< ಏಱ್₁)]

ಸವಿರಾಗ (ನಾ). ೧. ಒಳ್ಳೆಯ ಅನುರಾಗ ; — ಪ್ರೀತಿ : ಸವಿರಾಗ ಬೆರಸಿದ ಉಸಿರು ಇದಕ ಯಾ ಹೆಸರು (ನಾದಲೀ. ೭೭-೫೧). ೨. ಒಳ್ಳೆಯ ಅನುರಾಗವುಳ್ಳದು. ೩. ವೈರಾಗ್ಯದಿಂದ ಕೂಡಿದವನು ; ವಿರಕ್ತ. ೨, ೩ : ಸವಿರಾಗಂ ಸುಮನೋ ವೈಭವಂ ಸನಿರ್ಮಳದಿಗಂಬರಂ ಸಫಳಭವಂ ಭುವನೋತ್ತಮಂ ವಸಂತೋತ್ಸವಸದೃಶಂ ವ್ಯೋಷ್ಮಿಲಂ ಮುನೀಂದ್ರಶ್ರೇಷ್ಠಂ (ವರ್ಧಪು. ೧೩-೧೧).

[ಸವಿ₂ + ರಾಗ₂; ಸಂ. (ಸ + ವಿರಾಗ)]

ಸವಿಲಾಸಂ (ಅ). ಉಲ್ಲಾಸದಿಂದ ಕೂಡಿ ; ವಿಲಾಸದಿಂದ ತುಂಬಿ : ಸವಿಲಾಸಂ ಮೆಱೆದತ್ತು ಬಾಜಿಸುವ ಮಾಂಗಲ್ಯಾನಕಂ (ಅನಂಪು. ೬-೬೩). [ಸಂ.]

ಸವಿವಕ್ಷಿತ (ಗು). ಮಾತಿನಲ್ಲಿ ಹೇಳಲು ಇಚ್ಛಿಸುವ ; ಪ್ರಕಟಗೊಳಿಸುವ ಬಯಕೆಯುಳ್ಳ : ಸ್ತುತಿನಿಂದೆಗಳಂ ಸವಿವಕ್ಷಿತಗುಣದೊಳ್ ಸದೃಶಮಾಗಿ ಪೇಳ್ವುದು (ಕವಿರಾ. ೩-೯೫). [ಸಂ.]

ಸವಿವಡೆ (ಕ್ರಿ). ಮಾಧುರ್ಯವನ್ನು ಹೊಂದು : ಇಂಪನ್ನು ಪಡೆ : ಎಡೆಬಿಡದೆ ಸನ್ನುತಿಗಳಿಂದಾತ್ಮಸುಖಕೆಸಲಿದು ಸವಿವಡೆದು ಪಾಡುಗ ಗಾನ (ಚಿಟಪು. ೧-೨೫); ಸವಿವಡೆವ ಶೃಂಗಾರರಸವರ್ಣವು ಮನೋಜನ ದೇಹಕಾಂತಿಯೊಳವಗಹಿಸಿ . . . ನರ್ತಿಪುದೊ (ಸಾಳ್ವಧಾ. ೧೮-೪೧). [ಸವಿ$_2$ + ಪಡೆ$_1$]

ಸವಿವಣ್ (ನಾ). ರುಚಿಕರವಾದ ಹಣ್ಣು ; ರಸಭರಿತವಾದ ಫಲ : ಸವಿವಣ್ಣಲ್ಲಿನಿ ಮಾವು ಸರ್ವರಸದೊಳ್ ಶೃಂಗಾರ (ಸೋಮೇಶ್ವ. ೧೩). [ಸವಿ$_2$ + ಪಣ್$_3$]

ಸವಿವಾಡು (ನಾ). ಮಧುರವಾದ ಗಾನ ; ಇಂಪಾದ ಹಾಡು : ಸರಸಪಿಕಾಲಾಪಿಯ ಸವಿವಾಡುಗೇಳ್ವರಲೇಱಿದುದು ನವಮೇರು (ಶ್ರೀಪಾಲ. ೫-೪೬). [ಸವಿ$_2$ + ಪಾಡ್ಯು$_1$]

ಸವಿವಾತು, ಸವಿಮಾತು (ನಾ). = ಸವಿನುಡಿ$_2$: ಪೊಸಲತೆಯಕ್ಕುಮಲ್ಲ ಲತೆಗತ್ತಣದೀ ಸವಿವಾತು . . . ಎಂದೊಸೆದು ಸಖೀಜನಂ ಪೊಗಱ್ದುದಾ ಸತಿಯಂ ನಡೆನೋಡಿ ರಾಗದಿಂ (ಉದ್ಭಟ. ೮-೪೧); ಸವಿವಾತುಗಳ ಸೋನೆಯ ಸೊಗಸುಕಾಱರು ನಿಂದ ನಿಲವನು ಕರ್ಣ ನೋಡು (ಕುಮಾರ್ಯ. ೧೬-೨೪); ಕಟ್ಟುಬೀಳದ ಸಕ್ಕರೆಯಿಂದೆ ಸವಿವಾತ ನೆಟ್ಟನೆ ಪೇಳ್ವುದೆನ್ನೊಡನೆ (ಮೋಹತ. ೨೩-೧). **ಸವಿಮಾತು** : ಸವಿಮಾತಿನರಗಿಣಿಗೆ ಹಸುರು ಬರೆದವರಾರು (ಪುರಂದ. ೨-೪೭-೨); ಸವಿಮಾತುಗಳ ವಿಸ್ತರಿಸುವೆ ಕೇಳ್ವರ ಕಿವಿಗೆ ಭೂಷಣವಪ್ಪ ತೆಱದಿ (ಮೋಹತ. ೧-೧೮); ಶೀನಪ್ಪನಿಗೆ ಅಡ್ಡತಿಡ್ಡ ಸವಿಮಾತುಗಳಲ್ಲಿ ರುಚಿಯಿರಲಿಲ್ಲ (ಗಂಮಾಯಿ. ೯೭). [ಸವಿ$_2$ + ಮಾತ್ಯು$_1$]

ಸವಿವಾಯ್ (ನಾ). ರುಚಿಯನ್ನು ಬಯಸುವ ಬಾಯಿ : ಮಾರಿಮೃತ್ಯುಗಳ ಸವಿವಾಯ ಬಱಪನಾಱಿಸಿ ಭೂತವೇತಾಳರಂ ಕುಣಿಸಿ ರಣಧೀರರೆಂಬ ಹೆಸರ ಹೊಱುವೆವು (ಸೋಮಚಿ. ೫-೧೭); ಏವಗೆ ತವಗೆಂದೀ ಹವಿರ್ಭಾಗವನು ಮುತ್ತಿತ್ತು ದೇವತತಿ . . . ದಿವಿಜರೊಳಹಸುಗೆಗಳ ಲೆಕ್ಕದ ಸವಚೆಸನ ಸವಿವಾಯ ತುತ್ತಿನ ತವಕಿಗರು ಹೊಯ್ದಾಡಿದರು ಸಭೆಯಲಿ ಸುರೇಶ್ವರನ (ಕುಮಾಸ. ೭-೩೯). [ಸವಿ$_2$ + ಬಾಯ್]

ಸವಿವಾಯ (ನಾ). ಒಂದು ಬಗೆಯ ಬಾಣ (?) : ಬಿಸುಗದಿರು ಸವಿವಾಯನೆಂಬ ನಾನಾಸರಳನು ಸೆಳೆದು ನೀಡಡಿಯಿಟ್ಟು . . . ನಿಂದರು (ಸೋಮಚಿ. ೫-೨೬). [?]

ಸವಿವಿಲ್ (ನಾ). ಕಬ್ಬಿನ ಬಿಲ್ಲು : 'ಸವಿವಿಲ್ಲ' ಪರಾ. [ಸವಿ$_2$ + ಬಿಲ್$_2$]

ಸವಿವಿಲ್ಲ (ನಾ). ೧. ಕಬ್ಬಿನ ಬಿಲ್ಲನ್ನು ಹೊಂದಿದವನು ; ಮನ್ಮಥ. ೨. [ಜೈನ] ಬಾಹುಬಲಿ : ಸವಿವಿಲ್ಲನಣ್ಣ ಮನ್ನಣೆಯಿತ್ತನೆಂದವ ಸವಿಸವಿಯಾಗಿ ನುಡಿದನು (ಭರಚಿ. ೪೭-೯೭); ರವಿಶಶಿಕೋಟಿಪ್ರಕಾಶದ ಕಾಯನೆ ಸವಿವಿಲ್ಲನ ಜಯಿಸಿದನೆ (ಜಿನರಾ. ೫-೦೭). [ಸವಿವಿಲ್ + -ಅ$_2$]

ಸವಿವೆರಸು (ಕ್ರಿ). ರುಚಿಯಿಂದ ಕೂಡಿರು ; ರುಚಿಯಾಗಿರು : ಪರಿಪರಿಯುಪ್ಪಿನ ಕಾಯಿ ಹಪ್ಪಳ ಸವಿವೆರಸಿದ ಶುಭ್ರಭಾಳಕವ . . . ತರುಣಿಯರೆಡೆಮಾಡಿದರು (ಕಂನವಿ. ೧-೮೪). [ಸವಿ$_2$ + ಬೆರಸು$_1$ (< ಬೆರೆಯಿಸು)]

ಸವಿವೇಟ (ನಾ). ಇನಿದಾದ ಕಾಮಲಾಲಸೆ .— ಕಾಮಾತುರತೆ : ಕೇಳಿದ ಕಿವಿವೇಟ ನೋಡಿದ ಕಣ್ಬೇಟ ಸೂಳುನುಡಿಯ ಸವಿವೇಟ ಪೇಳಲೇನವಳೆರ್ದೆ ಗೊಳಲವಳೆದೆಗೊಂಚೆ ಕೋಳುವೋದುದು ಕಾನುಬಲಕೆ (ಕುರಾಸಾಂ. ೩೨-೮೩); ಲಲಿತಾಂಗಿಯರ್ಚೆಲ್ಲೆಗಂಗಳ ನೋಟವುಂ ಬೀಱಿ ಸವಿವೇಟಮಂ ತೋಱಿ . . . ಪುಲ್ಲಶರ ಕೇಳಿಯೊಳ್ಮದವೇಱಿಸುವರ್ (ಚೈಮಿಭಾ. ೧೫-೪೩). [ಸವಿ$_2$ + ಬೇಟ (< ಬೇಂಟ)]

ಸವಿವೊನಲು (ನಾ). ಸಿಹಿಯಾದ ಧಾರೆ ,— ರಸಪ್ರವಾಹ : ರಸತುಂಬ ಬಿರಿಯು ತಿಹ ಕರಿಯ ಕಬ್ಬನು ಬರಿದೆ ಬೇಡಿದೊಡೆ ತನ್ನೆದೆಯ ಸವಿವೊನಲ ನೀಡುವುದೇ? ಹಿಂಡಿದರೆ ತಾನೆ ದೊರಕುವುದು ರಸ? (ಚಂದ್ರಸ. ೭೪-೧೫). [ಸವಿ$_2$ + ಪೊನಲು (< ಪೊನಲ್)]

ಸವಿಶೇಷ (ಗು). ವಿಶಿಷ್ಟತೆಯಿಂದ ಕೂಡಿದ ; ವಿಶೇಷವಾದ : ತಿರಿತರ್ಕುಮಮಳ ಜಳನಿಧಿಪರಿಪಾವೃತಭೂಮಿಭಾಗಮಂಬರದೆ ಜಳಾಕರವಿಕ್ಷೇಪಕಕಕುದಂತರಮಂ ಸವಿಶೇಷರುಚಿರಸಂಭವವಿಧಿಯಂ (ಕವಿರಾ. ೩-೫೫); ಸವಿಶೇಷಾಗಮವಾಕ್ಸುಧೌಷಧಮ ನೀಂಟಲ್ (ಎಕ. V, ಚೇಲೂರು. ೧೩೩-೩೩; 1279). [ಸಂ.]

ಸವಿಶೇಷಂ (ಅ). ವಿಶೇಷವಾಗಿ : ಭವದೀಯವದನಮಾಲೋಲವಿಲೋಚನಮುದಿತ ರಾಗಮಣಿವಿಳಸಿತಮಂ ಪ್ರವಿಕಸಿತಾಂಬುಜವನಮಂ ಸವಿಶೇಷಂ ಪೋಲ್ಗುಮೆನ್ನ ವಾಕ್ಯೋಪಮೆಯಂ (ಕವಿರಾ. ೩-೮೨). [ಸಂ.]

ಸವಿಶೇಷಗುಣ (ನಾ). ವಿಶಿಷ್ಟವಾದ ಗುಣ : ಅವಱ ವಿಪರ್ಯಯವೃತ್ತಿ ಪ್ರವಿಭಕ್ತಪಕಲ್ಪಮಕ್ಕುಮುತ್ತರಮಾರ್ಗಂ ಸವಿಶೇಷಗುಣಮನತಿಶಯಧವಳೋಕ್ತಿ ಕ್ರಮದಿನಱಿಪುವೆಂ ತದ್ಭವದೊಳ್ (ಕವಿರಾ. ೨-೫೫). [ಸಂ.]

ಸವಿಶೇಷವಿವರ್ತಿ (ನಾ). ವಿಶಿಷ್ಟರೀತಿಯ ಪ್ರಯೋಗ : ಇವು ದುಷ್ಕರಕಾವ್ಯಂಗಳ್ ಸವಿಶೇಷವಿವರ್ತಿಗಳ್ ಸುವಿಚಾರಿತಮಿಾ ತೋರ್ಪೆ[ನಿ]ವಱಾ ಲಕ್ಷ್ಯಭೇದಮಂ (ಕವಿರಾ. ೨-೧೧೩). IP ಡಾ. ಕೆ. ಕೃಷ್ಣಮೂರ್ತಿಯವರ ಸಂಪಾದಿತ 'ಕವಿರಾಜ ಮಾರ್ಗ' ಕೃತಿಯಲ್ಲಿ 'ಸವಿಶೇಷವರ್ತಿ' ಎಂಬಲ್ಲಿ ಶ್ಲೋಕಾಕ್ಷರ ಒಂದು ಕಡಿಮೆಯಾಗುವುದರಿಂದ 'ಸವಿಶೇಷವಿವರ್ತಿ' ಎಂದು ತಿದ್ದಿಕೊಳ್ಳಲಾಗಿದೆ.

[ಸಂ. ಸವಿಶೇಷವಿವರ್ತಿನ್]

ಸವಿಷ (ನಾ). ವಿಷದಿಂದ ಕೂಡಿದುದು : ಸವಿಷಮಿದೆಂಬುದನಱಿಯದೆ ಸವಿಸವಿ ಯೆಂದನುಭವಿಪ್ಪ ಜೀವಕ್ಕಿಂತೀ ಭವಸುಖಮಸುಖಮೆ ನಿಖಿಳಮನವಟಯ್ಯುಗುಮಲ್ತೆ ಬಳವದಳಿವಿಳಸಿತಮಂ (ವರ್ಧಪು. ೧೪-೮೯). [ಸಂ.]

ಸವಿಸವಿ$_1$ 'ಸವಿ$_1$' ಪರಾ.

ಸವಿಸವಿ$_2$ 'ಸವಿ$_2$' ಪರಾ.

ಸವಿಸು 'ಸವಿಯಿಸು' ನೋ.

ಸವಿಸ್ತರ (ನಾ). ವ್ಯಾಪ್ತವಾದುದು ; ವಿವರಣಾತ್ಮಕವಾದುದು : ಸವಿಸ್ತರದೊಳ್ ವರ್ಧಮಾನಜಿನಸನ್ನಿಧಿಯೊಳ್ ವಿಪುಳಾದ್ರಿಯೊಳ್ ನಿಜಾದರದೊಳ್ ಗೌತಮರ್ ಮಗಧನಾಯಕನುಂ ತಿಳಿವಂತು ಪೇಳ್ದುದಂ . . . ವಿರಚಿಸುವೆಂ (ಆದಿಪು. ೧-೪೦). [ಸಂ.]

ಸವಿಸ್ತರಂ (ಅ). ವ್ಯಾಪ್ತವಾಗಿ ; ವಿಸ್ತಾರವಾಗಿ ; ವಿವರವಾಗಿ : ಸವಿಸ್ತರಂ ನಿರಮಿಸಿದೆನಲ್ತೆ (ರಾಮಾಶ್ವ. ೯೯-೧೬). [ಸಂ.]

ಸವಿಸ್ತಾರ (ಗು). ೧. ವಿಸ್ತಾರವಾದ ; ವ್ಯಾಪ್ತಿಯಿಂದ ಕೂಡಿದ. (ನಾ). ೨. = ಸವಿಸ್ತರ : ಅವರ ಕಡೆಯಿಂದಾ ಸವಿಸ್ತಾರವಾಗಿ ತಮಗೆ ತಿಳಿಯಬಂದೀತು (ರಾಜೇಂದ್ರ. ೨೦೯); ಮೋತೀಬಾಯಿಯು ಆದಿಯಿಂದ ಅಂತ್ಯದವರೆಗೆ ಸವಿಸ್ತಾರವಾಗಿ ನಡೆದ ಸಂಗತಿಯನ್ನೆಲ್ಲಾ ವಿವರಿಸಿದಳು (ಯಾಶಾಗ. ೧೯೪). [ಸಂ.]

ಸವಿಹ (ನಾ). ರುಚಿನೋಡುವಿಕೆ : ಕಾಣಬಹುದು, ಕೇಳುಹ, ಪರಿಮಳಿಸುಹ, ನಾಲಿಗೆಯಲ್ಲಿ ಸವಿಹ, ಮುಟ್ಟುಹ ಎಂಬವು ವಿಷಯಂಗಳು — ರೂಪ ಶಬ್ದ ಗಂಧ ರಸ ಸ್ಪರ್ಶ (ನಾಚಿರಾ. ೬). [ಸವಿ$_2$ + -ಹ$_2$ (< -ಪ$_2$)]

ಸವೀಕ (ನಾ). ಅಗ್ಗ ; ಸೋವಿ : ರೂಪಾಯಿಗೆ ಹದಿನಾರು ಸೇರು ರಾಗಿ . . . ಒಳ್ಳೇ ಸವೀಕದ ಕಾಲ ಅದು (ಚಿಂಗೂಲಿ. ೩೯). 'ಚೌಕ$_1$' ಪರಾ.

[ದೇ. ॥ ತಮಿ. ಚವುಕ್ಕೈ ; ತೆಲು. ಚವುಕ, ಚೌಕ]

ಸವೀರಪಾಷಾಣ, ಸವ್ವೀರಪಾಷಾಣ (ನಾ). ಒಂದು ಬಗೆಯ ವಿಷ : ಸವೀರಪಾಷಾಣವನ್ನು ತಿನ್ನುತ್ತಾನೆ (ಕಾಂಪೂಚ. ೨೫). ಸವ್ವೀರಪಾಷಾಣ : ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಸಿಕ್ಕುವ ಪಾಷಾಣಗಳು ಯಾವುವೆಂದರೆ :— ಇಲಿವಾಷಾಣ, ಸವ್ವೀರಪಾಷಾಣ, ಮೈಲುತುತ್ತ (ಗ್ರಾಮಾಕ. ೧೫೪). [< ಸಂ. ಸೌವೀರಪಾಷಾಣ]

ಸವುಂತೆ, ಸವತೆ$_1$, ಸವುತೆ, ಸೌಂತೆ, ಸೌತೆ (ನಾ). ಒಂದು ಬಗೆಯ ಬಳ್ಳಿ ಮತ್ತು ತರಕಾರಿಯಾಗಿ ಉಪಯೋಗಿಸುವ ಅದರ ಕಾಯಿ : "ವಾಳುಕೀ , ಕರ್ಕಟೀ — ಈ ೨ ಸವುಂ[ಪಾಠಾಂ. ಸೌಂ]ತೆ" (ಹಲಾಯು. ೩೫-೫೬); ಅಳಿಯೊಳರೆದು . . . ಕುಂಬಳದ ಸವುಂ[ಪಾಠಾಂ. ಸೌಂ]ತೆಯನಿತರ ಬೀಜಂಗಳೊಳೊಂದಱ ಬಿತ್ತಂ ಕುಡಿಗಳುಂಬಮಾಗಿರ್ದ ಮೂತ್ರಕೃಚ್ಛ್ರಂ ಕಿಡುಗುಂ (ಲೋಕೋಪ. ೯-೧೩೪). ಸವತೆ$_1$: ನೆಲ್ಲವರೆ ಸವತೆ ಗೋವರ್ಧನ . . . ಮೊದಲಾದ ವ್ಯಂಜನ (ಸೌಗಂಧಿ. ೩೭-೧೮); ಒಂದೇ ಸವತೆಯ ಬಳ್ಳಿಗೆ ಸೀಕಾಯಿ ಬಿಡುವಂತೆ , ಕಹಿ ಬಿಡಗಾಯಿಯೂ ಬಿಡುತ್ತವೆ

(ದೀಪಹ. II, ೩೭೦). **ಸವುತೆ**: "ಉರ್ವಾರುಃ, ಕರ್ಕಟೀ — ಈ ೨ ಸವು[ಪಾಠಾಂ. ಸೌ]ತೆ" (ನಾಚಿರಾ. ೧೧೨); ಸವುತೆ ಕುಂಬಳ ತೊಂಡೆ . . . ಮೊದಲಾದ ಕಾಯ್ . . . ಬಾಳೆ ಮೊದಲಾದ ಪೂಗಳನು ಉಕ್ಕರಿಸಿ (ಸೂಪಶಾ. ೪-೩೩). **ಸೌಂತೆ** : ತವರ್ಮನೆಯಿರವಿನಂತೆ ಸೌಂತೆಯ ತೋಂಟದಂತೆ ಕಡೆಯೊಳ್ ಪೇಸುವಪಥಮುಮಶೋಭೆಯುಮಾಗದೆ ಪೋಗದು (ಧರ್ಮಾಮೃ. ೭-೧೨೨). **ಸೌತೆ** : "ವಾಳುಕಮೆನಲ್ ಸೌತೆ" (ಮಂಗರಾ. ೪೪-೪೭); ಸೌ[ಪಾಠಾಂ. ಸೋ]ತೆಯೊಳ್ಮಣ್ಣವೊಲುಬ್ಬರಂ ಬಿರಿಯೆ ರತ್ನಶಿಳಾಳಿ ನೆಟಲ್ಗೆ ವಾಯ್ವ ಪೆರ್ಬೂಣ್ಮೊಟ್ಟೆಯುತ್ತುಮಿರ್ಪ ಪಣೆಯದ್ಭುತಮಾದುದುರಭ್ರಯುಃಗ್ಮದಾ (ಅರ್ಧನೇ. ೪-೧೧೯); ನೀರೊಳಗರೆವುದು ಸೌ[ಪಾಠಾಂ. ಸವು]ತೆಯ ಬೇರಂ (ಅಶ್ವಶಾ. ೧೧-೨೬); ಕಳೆದ ವರ್ಷ ಸೌತೆ ನಟ್ಟಲ್ಲಿ ಈ ವರ್ಷ ಬತ್ತ ಹಾಕುವ (ಮರಮ. ೫೧).

[ದೇ. ॥ ತುಳು. ತವುತೆ, ತೌತೆ, ಸವುತೆ, ಸೌತೆ; ಕೊಡ. ಚೌತೆ]

ಸವುಚ 'ಸೌಚ' ನೋ.

ಸವುಚಿಗೆ (ನಾ). ಒಂದು ಬಗೆಯ ಭೂಮಿ (?): ನಖರ ಮುಂಮುರಿದಂಡ ಮುಖ್ಯಬಣಂಜಿಗರುಂ ಕೊಟದು ಸವುಚಿಗೆ ಯಂಭತ್ತು (ಸೌಇ. IX-i, ೩೮೦-೨೯; 1282).

[?]

ಸವುಜ್ಜೆ 'ಸನ್ನೆ$_2$' ನೋ.

ಸವುಟು 'ಸೌಟು' ನೋ.

ಸವುಡಿದೊತ್ತು (ನಾ). ಅಪ್ರಯೋಜಕಳಾದ ದಾಸಿ, — ಸೇವಕಿ (?): ಏಳೆಲಗೆ ಸವುಡಿದೊತ್ತೆ ಮನೆಯ ಕೆಲಸಕ್ಕೆ ನಡೆ (ಹಚಕಾ. ೧೧-೧೦).

[ಸವುಡಿ$_0$ + ತೊತ್ತು (< ತೊಟ್ಟು)./ ತಮಿ. ಚವಟನ್ = ನಿಷ್ಪ್ರಯೋಜಕನಾದವನು]

ಸವುಡು 'ಸವಡ್ಡು$_3$' ನೋ.

ಸವುಡುಮ್ಮತ್ತ 'ಸವಡುಮ್ಮತ್ತ' ನೋ.

ಸವುತೆ 'ಸವುಂತೆ' ನೋ.

ಸವುತೆಕಾಯಿ, ಸವತೆಕಾಯಿ, ಸೌತೆಕಾಯಿ (ನಾ). (ಬಳ್ಳಿಯಲ್ಲಿ ಬಿಡುವ) ತರಕಾರಿಯಾಗಿ ಉಪಯೋಗಿಸುವ ಒಂದು ಬಗೆಯ ಕಾಯಿ; ವಾಳುಕ: (ಕ). **ಸವತೆಕಾಯಿ** : ನಾಗಣ್ಣನ ಹೊಲದಲ್ಲಿ ಸವತೇಕಾಯಿ ಏನು ಶೆವಿಯದಾವಂದಿ! (ಮೇದಿಮ. ೫); ಸವತೇಕಾಯಿ ಕಹಿಯಾದರೆ ಸವತಿ ಏನು ಮಾಡುವಳು? (ಗಾದೆ). **ಸೌತೆಕಾಯಿ** : ಚಿಕ್ಕ ಚಿಕ್ಕ ಸೌತೇಕಾಯ ಚಿಕ್ಕ ಮೂಟೇ ಕಟ್ಟಿ ಚಿಕ್ಕೇರೀ ಮೇಲೆ ಬರುವೋರೆ (ನಾಪದ. ೫೩); ಈ ಹುರುಳಿಸಾರು, ಹಲಸಿನಬೇಳೆ, ಸೌತೆಕಾಯಿ ಹುಳಿ — ತಿಂದು ಹೀಕರಣೆ ಬಂದಿತು (ಮರಮ. ೧೨೪).

[ಸವುತೆ (< ಸವುಂತೆ) + ಕಾಯ್ಯ$_4$ (< ಕಾಯ್$_4$)]

ಸವುದೆ 'ಸೌದೆ$_1$' ನೋ.

ಸವುಭಾಗ್ಯ 'ಸೌವಾಗ್ಯ' ನೋ.

ಸವುಮ್ಯಸಂವತ್ಸರ (ನಾ). ಅರುವತ್ತುಸಂವತ್ಸರಗಳಲ್ಲಿ ಒಂದು ; ಸೌಮ್ಯ ಸಂವತ್ಸರ: ಸಖವರುಷ ೧೨೯೨ನೆಯ ಸವುಮ್ಯಸಂವತ್ಸರದ (ಎಕ. IX (S), ಕನಕ. ೧೨೬-೮: 1370). [< ಸಂ. ಸೌಮ್ಯಸಂವತ್ಸರ]

ಸವುರಣೆ 'ಸಂವರಣೆ$_1$' ನೋ.

ಸವುರಿಸು 'ಸಂವರಿಸು$_1$' ನೋ.

ಸವುಸವ 'ಸೌಸವ' ನೋ.

ಸವುಳಂಗ (ನಾ). ಒಂದು ಊರಿನ ಹೆಸರು : ಬಾಗೆಯೂರ ಕಮ್ಮೂಱಗಾವುಣ್ಣನು ಸವುಳಙ್ಗದ ಮೆಣ್ಣೆಗಾವುಣ್ಣನು (ಎಕ. V, ಚನ್ನರಾ. ೨೫೧-೧೩; ಸು. 925). 'ಸಟ್ಟಂಗ' ಹೋ.

[?]

ಸವುಳು$_1$, ಚವುಳು, ಚೌಳು, ಸವಳು, ಸೌಳು (ನಾ). ೧. ಉಪ್ಪಿನ ರುಚಿಯಿಂದ ಕೂಡಿದುದು; ಉಪ್ಪುಪ್ಪಾಗಿರುವುದು : (ಕ). ೨. ಉಪ್ಪು ; ಲವಣ ; ಕ್ಷಾರ: "ಸವುಳು, ಉಪ್ಪು" (ಕಂಸುಹು. ೯೧). ೩. ಉಪ್ಪಿನ ಅಂಶದಿಂದ ಕೂಡಿರುವ ನೆಲ ; ಕ್ಷಾರಭೂಮಿ : ತಿಳಿದು ನೋಡಲು ಮಿತ್ರದತ್ತವು ಸಲೆ ಸವುಳಿನೊಳಗಿಟ್ಟು ಬೀಜಂಗಳಿಗೆ ಭಸ್ಮಾಹುತಿಗೆ ಸರಿಯೆನಿಸುವುದು ಸತ್ಯವಿದು (ತಿಮ್ಮಅ. ೭-೫೪). **ಚವುಳು** : ೩. "ಊಷರಃ — ಚವುಳು" (ಕಾಶಕ್ಯ. ೫೭). 'ಚವುಳಪ್ರಪ್ತ' ಪರಾ. **ಚೌಳು** : ೧. ಅತಿಚೌಳಾದ ಭಾವಿಗಳ ನೀರಿನೊಳೆ ಸವಿಯಾದ ಸಕ್ಕರೆಯ ಸೇರಿಸಲು (ಅರ್ಥಾಮೃ. ಪೀಠಿಕಾಸಂಧಿ. ೯). ೪. ಉಪ್ಪಾಗಿರುವ ನೆಲದ ಮಣ್ಣು ; ಲವಣಭೂಮಿಯ ಮಣ್ಣು : ಸೋಪನ್ನು ಅವರಿನ್ನೂ ಉಪಯೋಗಿಸುತ್ತಿರಲೇ ಇಲ್ಲ. ಅವರಿಗೆ 'ಚೌಳೇ' ಗತಿ (ನನ್ನೂರು. ೨೮೨). **ಸವಳು** : ೨. "ಕಷಾಯ - ಕಾಡೆ ೨. ಚಂದನ. ೩. ಅಪ್ಪಗಂಧ . . . ಸವಳು" (ಗಂಗಾಮಾ. ೭೭). ೫. ಉಪ್ಪಿನ ರುಚಿಯನ್ನು ಹೊಂದಿರುವ ನೀರು; ಉಪ್ಪುನೀರು : ಅವರ ಬಾವಿಗೆ ಮೊದಲು ಸವಳು ನೆಲೆಹತ್ತಿತು (ಹಕ್ಕನೂ. ೧೬). **ಸೌಳು**: ೨. ಸೌಳಪ್ಪ ಭೂಮಿಯನುತ್ತು . . . ಪಿರಿದುಂ ಪ್ರಯತ್ನಮುಂ ಮಾಡಿದೊಡಂ ಕರಿಯ ಭೂಮಿಯ ಬೆಳಸಿನಂತಕ್ಕುಮೆ (ಧರ್ಮಾಮೃ. ೭-೭೫); ಈರಿಣಮೂಪರಂ ಸೌಳನುಳ್ಳ ನೆಲನಕ್ಕು (ಮಂಗರಾ. ೨೮-೨). ೩. ಮೋಪೂರ ಭೈರವನಿಂ ತೆಂಕ ಸೌಳು ಪು ೨ (ಸೌಇ. IV, ೭೯೮-೫೫; 1208). ೫. ಶ್ರೀಸಿದ್ಧೇಶ್ವರದೇವರ ನಿವೇದ್ಯಕಂ ತ್ರಿಕಾಲದ ಪೂಜೆಗಂ ಸೌಳ ಹಳ್ಳದಿಂ ಬಡಗ ಸರ್ಬ್ಬನಮಸ್ಯವಾಗಿ ಬಿಟ್ಟ ಗದ್ದೆಯ ಕಮ್ಮ ಮೂವತ್ತು (ಕಇ. ೧೩-೪-೧೨೦; 1093).

ಸವುಳ ಕಾರ, ಸೌಳ ಕಾರ = ಒಂದು ಬಗೆಯ ಉಪ್ಪು, — ಕ್ಷಾರ ; ಸಸ್ಯಕ್ಷಾರ: (ಕ); ಗುಳಾಪು ಮಾಡುವ ಕಾಚನಲ್ಲಿ . . . "ಪೊಟಾಶ್" ಅಂದರೆ ಸೌಳಕಾರ ಎಂಬ ಕ್ಷಾರವನ್ನು ಹಾಕುತ್ತಾರೆ (ಮುಂಬಯಿ. ೪-೨೨೧). **ಸೌಳ ಹವೆ** = (ಉಪ್ಪುನೀರಿನ ಸಂಪರ್ಕದಿಂದುಂಟಾದ) ಉಪ್ಪಿನ ಅಂಶದಿಂದ ಕೂಡಿರುವ ಹವಾಗುಣ, - ವಾತಾವರಣ : ಸೌಳ ಹವೆಯು ಇಂಥಾ ಜೀನಸುಗಳಿಗೆ ವಿಶೇಷ ಬಾಧಕವಾದದ್ದು (ಮುಂಬಪ್ರಾ. ೨೭೨). [ದೇ. ॥ ತಮಿ. ಚವಟು, ಚವರ್; ಮಲ. ಚವರ್; ತುಳು. ಚವುಳ್, ಚವುಳು, ಚೌಳು, ಸೌಳು; ತೆಲು. ಚವುಡು, ಚೌಡು./ ಮರಾ. ಸಊಳ್]

ಸವುಳ್ಳು$_2$ (ನಾ). ಜೊತೆ ; ಜೋಡಿ ; ಎರಡು : ಪಚ್ಚಕಡಗಮನೊಲವಿಂ ಸವುಳು ಜಾಗಟೆ[ಯ] ಸಹಿತಂ ಭುವನೇಶ್ವರ ಘಂಟೆನೃಪತಿಗಂದೊಲಿದಿತ್ತರ್ (ಬೀಳವಂ. ೧-೧೦೭).

[< ಜಮಳ]

ಸವುಳುನೀರು, ಚೌಳುನೀರು, ಸವಳುನೀರು, ಸೌಳುನೀರು (ನಾ). ಉಪ್ಪು ನೀರು ; ಕ್ಷಾರದ ಗುಣವುಳ್ಳ ನೀರು : (ಕ). **ಚೌಳುನೀರು** : ಕಪಿಲವರ್ಣವಾದ ಭೂಮಿಯಲ್ಲಿ ಚೌಳುನೀರು ಬೀಳುವದು (ಸೌಗಂಧಿ. ೪೩೩-೪). **ಸವಳುನೀರು** : ಸವಳುನೀರಿನ ಭಾವಿಗಳಾದರೇನು ಊರೊಳಗಿನವೆಲ್ಲ ಬಡಬಗ್ಗರಿಗೆ ಉಪಯೋಗ (ನಿರಾಭ. ೧೪೩). **ಸೌಳುನೀರು** : ಕೆಲವು ಕಡೆಗೆ ಸೌಳುನೀರಿನ ಸರೋವರಗಳಲ್ಲಿಯೂ . . . ಉಪ್ಪು ಹುಟ್ಟುತ್ತದೆ (ಮುಂಬಯಿ. ೪-೧೯೮). [ಸವುಳು$_1$ + ನೀರು$_1$ (< ನೀರ್)]

ಸವುಳುನೆಲ, ಚೌಳುನೆಲ, ಸೌಳುನೆಲ, ಸೌಳ್ನೆಲ (ನಾ). ಉಪ್ಪಿನ ಅಂಶವಿರುವ ಭೂಮಿ ; ಕ್ಷಾರಭೂಮಿ : ಸವುಳುನೆಲದಲ್ಲಿ ಅಮೃತದ ಮಚೆಗಱೆದಂತೆ ಆಯಿತು (ಪಚಕಾ. ೦೮). **ಚೌಳುನೆಲ** : "ಊಷರಾ — ಚೌಳುನೆಲಂ" (ಕಾಶಕ್ಯ. ೬೧); ಚೌಳು ನೆಲದಲ್ಲಿ ಉಪ್ಪು ತಯಾರಿಸುವರು (ಕಳಹು. ೧೩). **ಸೌಳುನೆಲ** : ಊಷರೇ — ಸೌಳು ನೆಲದೊಳು (ನೀತಿವಾ. ೧೦-೪೬); ಸೌಳುನೆಲದಲ್ಲಿ ಹುಲ್ಲು ಕೂಡ ಹುಟ್ಟದಾಯಿತು (ತುಳಿಸೀ. ೨೫೪). **ಸೌಳ್ನೆಲ** : ಸೌಳ್ನೆಲದೊಳು ಬಿತ್ತಿಕ್ಕುವಂತೆಯುಂ ಕಲಕಬ್ಬುನದ ದೋಣಿಯಿಂ ಜಲಧಿಯಂ ದಾಂಟುವಂತೆ ನಿಷ್ಫಲಕ್ಲೇಶಮಲ್ಲದೆ ಪುಣ್ಯಮಿಲ್ಲ (ಪಸಾರ. ೩೨೧).

[ಸವುಳು$_1$ + ನೆಲ./ ತಮಿ. ಚವಟ್ಟುನಿಲಮ್]

ಸವುಳುಪ್ಪು, ಚವುಳುಪ್ಪು, ಚೌಳುಪ್ಪು, ಸೌಳುಪ್ಪು (ನಾ). ಒಂದು ಬಗೆಯ ಉಪ್ಪು; ಸವುಳಕಾರ : (ಕ). **ಚವುಳುಪ್ಪು** : (ಕ). **ಚೌಳುಪ್ಪು** : ಬೊಂಕಿಯೊಳ್ ಪುರಿದು ಚೌಳುಪ್ಪಿನೊಳ್ ಪೊರಳಿಪ ನರಕಂ ಲವಣಮೆನಿಕ್ಕುಂ (ಚಕಬಿ. ೩೭). **ಸೌಳುಪ್ಪು** : "ಷಂಡದ — ಸೌಳುಪ್ಪು" (ಓಪಧಿ. ೧೭೩). [ಸವುಳು$_1$ + ಉಪ್ಪು$_1$./ ತಮಿ. ಚವಟ್ಟುಪ್ಪು; ತುಳು. ಚವುಳುಪ್ಪು; ತೆಲು. ಚವುಟುಪ್ಪು, ಚೌಟುಪ್ಪು]

ಸವುಳುಭೂಮಿ, ಚವುಳುಭೂಮಿ, ಚೌಳುಭೂಮಿ (ನಾ). = ಸವುಳುನೆಲ : ಅಲ್ಲಿ ಸುತ್ತಲೂ ಸವುಳುಭೂಮಿ (ಶರಚ. ೭೯೫). **ಚವುಳುಭೂಮಿ** : ಮಾನ್ಯ ಕೊಟದು ವೂರು ಮುಂದಣ ಚವುಳುಭೂಮಿ (ಎಕ XII, ಪಾವಗ. ೬೦-೭; 1705?). **ಚೌಳುಭೂಮಿ** : "ಊಷರಕ್ಷೇತ್ರ" ಅಂದರೆ ಚೌಳುಭೂಮಿ (ಭೂಗೋಳ. ೧೧). [ಸವುಳು$_1$ + ಭೂಮಿ]

ಸವುಳುಮಣ್ಣು, ಚವುಳುಮಣ್ಣು, ಚೌಳುಮಣ್ಣು, ಸೌಳುಮಣ್ಣು, ಸೌಳುವಣ್ಣು (ನಾ). ಉಪ್ಪುಮಣ್ಣು ; ಕ್ಷಾರಮೃತ್ತಿಕೆ : ಸವುಳುಮಣ್ಣುಳ್ಳ ಠಾವು – ಊಷ, ಕ್ಷಾರಮೃತ್ತಿಕೆ (ನಾಚಿರಾ. ೬). ಚವುಳುಮಣ್ಣು : (ಕಿ). ಚೌಳುಮಣ್ಣು : "ಊಷಃ, ಕ್ಷಾರಮೃತ್ತಿಕಾ – ಈ ೨ ಚೌಳುಮಣ್ಣಿನ ಪೆಸರು" (ನಾಚಿರಾ. ೧೦೨); ಇವನಿಗೆ ಮಾಡುವ ಸಹಾಯ ಚೌಳುಮಣ್ಣಿಗೆ ನೀರು ಹಾಕಿದ ಹಾಗೆ (ಮುನಿಮಾ. ೯೮). ಸೌಳುಮಣ್ಣು : "ಈರಿಣಂ, ಊಷರಃ – ಈ ೨ ಸೌಳುಮಣ್ಣು(ಳ್ಳ ಭೂಮಿ)ಯೆಂಬುದು" (ಹಲಾಯು. ೨೬-೩); ಒಬ್ಬ ಅಗಸರವನು ಸೌಳುಮಣ್ಣನ್ನು ಹೊತ್ತುಕೊಂಡು ಬರುತ್ತಿದ್ದನು (ಪುರಾವಿ. ೨೦೪). ಸೌಳುವಣ್ಣು : ಸೌಳುವಣ್ಣಿನಲ್ಲಿ ಮಟೆ ಬರುಹವುಂ ಕುರುಡಂಗೆ ಕನ್ನಡಿಯಂ ತೋಱುಹವುಂ (ಪಂಚಶಂ. ೧೩೬-೧೦). [ಸವುಳು$_1$ + ಮಣ್ಣು (< ಮಣ್)]

ಸವುಳುಮಾಳೆ (ನಾ). ಚೌಳುಮಣ್ಣಿನ ದಿಬ್ಬ : ಸವುಳುಮಾಳೆಗಳಂತಹ ಎದೆಗಳು (ಶ್ರೀರಾಪ. ೭೭). [ಸವುಳು$_1$ + ಮಾಳೆ$_1$ (< ಮಾಳ್$_2$)]

ಸವೂವರಣೆ (ನಾ). ಒಂದು ಬಗೆಯ ತೆರಿಗೆ (?) : ಆ ಮಾದೆಯನಾಯ್ಕನ ಸವೂವರಣೆಯ ಕಂದಾಯಕೆ ಕುಪ್ಪನಾಡೊಳಗೆ ಕೋಟೆಯ ಕುಪ್ಪೆ (ಎಕ. IV (R). ಪಿರಿಯಾ. ೧೧೮-೭; 1174). [?]

ಸವೆ$_1$ 'ಸಮೆ$_1$' ನೋ.

ಸವೆ$_2$ 'ಸಮೆ$_2$' ನೋ.

ಸವೆಗ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀಕೊಳತ್ತೂರ ತೊಱುಗೊಳೆ ಸವೆಗ ಮುದದ ತೊಱುವ ಇಕ್ಕಿಸಿ ಸತ್ತನ್ (ಎಕ. X, ಚಿಂತಾಮ. ೧೦೯-೨; ಸು. 800). [?]

ಸವೆಗಳೆ (ಕ್ರಿ). ಅಲ್ಲಗಳೆ ; ತಿರಸ್ಕರಿಸು : ಕವಿತಾದಿ ಲಕ್ಷಣಂ ಶಬ್ದಭೇದಮನೆಣಿಸಿ ಸವೆಗಳೆಯಬ್ಯಾಡಿ (ನವಮೋ. ೧-೧೬). [ಸವೆ$_2$ + ಕಳೆ$_1$]

ಸವೆಗೋಲು 'ಸಮೆಗೋಲು' ನೋ.

ಸವೆತ 'ಸಮೆತ' ನೋ.

ಸವೆಯಿಸು$_1$ 'ಸಮೆಯಿಸು$_1$' ನೋ.

ಸವೆಯಿಸು$_2$ 'ಸಮೆಯಿಸು$_2$' ನೋ.

ಸವೆಸು$_1$ 'ಸಮೆಯಿಸು$_1$' ನೋ.

ಸವೆಸು$_2$ 'ಸಮೆಯಿಸು$_2$' ನೋ.

ಸವೇಶ (ಗು). ೧. ಅಲಂಕಾರಗೊಂಡ ; ಸಾಲಂಕೃತವಾದ. (ನಾ). ೨. ಹತ್ತಿರ; ಸಮೀಪ : "ಸಮೀಪಂ, ಸನೀಡಂ, ಸಮರ್ಯಾದಂ, ಆರಾತ್, ಸದೇಶಂ, ಸವೇಶಂ, ಸವೇದಃ . . . ಉಪಾಂತಂ, ಅಪದಾಂತರಂ – ಈ ೧೮ ಸಮೀಪಂ" (ಹಲಾಯು. ೧೧೫-೭). [ಸಂ.]

ಸವ್ಯ (ಗು). ೧. ಎಡಗಡೆಯ ; ಎಡಪಕ್ಕದ : ನಿಡುಗರುಳ ಸವ್ಯಪವಿತ್ರಸೂತ್ರದ . . . ಅಭಿಜಾರಾಧ್ವರದ ದೀಕ್ಷಿತತನವ ಕೈಕೊಂಡನು ದಶಗ್ರೀವ (ತೊರರಾ. ೬-೪೮-೧೩); ಸವ್ಯಪಾರ್ಶ್ವಗ ಸರ್ವಮಂಗಳಾಪಾಂಗಸಂಗತನುಂ . . . ಆಗಿ ನಡೆತರ್ಪಾಗಳ್ (ರಾಜಶೇ. ೧೦-೧೫ ವ). ೨. ದಕ್ಷಿಣಭಾಗದ ; ತೆಂಕಣಕಡೆಯ. ೩. ವಿರುದ್ಧವಾದ ; ಪ್ರತಿಕೂಲವಾದ. ೪. ಬಲಗಡೆಯ ; ಬಲಪಾರ್ಶ್ವದ : ನರ್ಮಸಚಿವಪ್ರಕೋಷ್ಠ ನಿವೇಶಿತಸವ್ಯಪಾಣಿಪಲ್ಲವನುಂ (ಚಂದ್ರಪು. ೭-೮೩ ವ). (ನಾ). ೫. ಎಡಭಾಗ ; ವಾಮಪಾರ್ಶ್ವ : "ವಾಮಂ, ಸವ್ಯಂ – ಈ ೨ ಎಡಂ" (ಹಲಾಯು. ೧೨೪-೭೧); ವೈನತೇಯಂ ಸವ್ಯದಿಂದ ಬಲಕ್ಕೆದುತಿರಲ್ (ವೆಂಕಾರಾ. ೬-೧-೩೩). ೬. ಎಡಗಡೆಯ ಶರೀರ ; ವಾಮಾಂಗ : "ಸವ್ಯಂ ವಾಮಶರೀರಂ" (ವಸ್ತುಕೋ. ೧೧೩-೧೫). ೭. ಬಲಗಡೆ ; ಬಲಪಾರ್ಶ್ವ. ೮. ದಕ್ಷಿಣಭಾಗ ; ತೆಂಕಣದಿಕ್ಕು : "ಸವ್ಯಂ ತಾಂ ದಕ್ಷಿಣದೊಳ್" (ವಸ್ತುಕೋ. ೧೩೮-೧೨೩). ೯. (ಕಾಳಗದಲ್ಲಿ) ಒಂದು ಬಗೆಯ ಸಂಚಾರಕ್ರಮ : ವಿಲಸದಪಸವ್ಯದಲಿ ರಿಪು ಮಂಡಳಿಸಿ ಹೊಯ್ದನು ಸವ್ಯಮಂಡಲವಲಯದಿಂದಾ ಭೀಮಸೇನನ ಹೊಯ್ಲ ಹೊಱಬೀಸಿ (ಕುವ್ಯಾಗ. ೬-೩೧). 'ಅಪಸವ್ಯ' ಪರಾ. [ಸಂ.]

ಸವ್ಯಪೇಕ್ಷ (ನಾ). ಒಂದನ್ನೊಂದು ಬಯಸುವಂತಹುದು ; ಪರಸ್ಪರಾವಲಂಬಿಯಾದುದು : ಸ್ವಪರಮನೋವ್ಯಾಪಾರಂ ಸವ್ಯಪೇಕ್ಷಮಪ್ಪುದಱಿಂ ಮನಃಪರ್ಯಯ ಜ್ಞಾನಂ ಮತಿಜ್ಞಾನಮನೆಯ್ದುಗುಮೆನವೇಡ (ಶತ್ವ್ರಪ್ರ. ೫೪); ನವ್ಯಸಂಪದವಾರ್ಷ ಸಂಪದುದ್ಧೃತವಿಂತು ಸವ್ಯಪೇಕ್ಷಂಗಳುಭಯ (ಮಂಕುಕ. ೮೬೧). [ಸಂ.]

ಸವ್ಯಸಾಚಿ (ನಾ). ೧. ಎರಡು ಕೈಗಳಿಂದಲೂ ಬಾಣವನ್ನು ಬಿಡಲು ಶಕ್ತನಾದವನು ; ಅರ್ಜುನನ ಒಂದು ಹೆಸರು : ತಾಂ ಸವ್ಯಸಾಚಿಯೊಳೆ ತೊಡರ್ದಿಱಿಯರ್ (ಶಮದ. ೨೨೪ ಪ್ರಯೋ.); ಸವ್ಯಸಾಚಿಯ ಮಿತ್ರನಲ್ಲಿಲ್ಲ (ಜೃಮಿಭಾ. ೨-೫೦). ೨. (ಆಲಂ) (ಎರಡು ಕೆಲಸವನ್ನು ಒಟ್ಟಿಗೆ ನಿರ್ವಹಿಸಬಲ್ಲ) ಸಮರ್ಥ ; ನಿಪುಣ ; ಚತುರ : ಈ ಸಮಯದಲ್ಲಿ ಸವ್ಯಸಾಚಿಯಾದ ಬಂಕಿಮನು ಒಂದು ಕೈಯನ್ನು ರಚನೆಗೂ ಇನ್ನೊಂದು ಕೈಯನ್ನು ನಿವಾರಣೆಗೂ ಉಪಯೋಗಿಸಿದನು (ಬಂಕಿಮ. XXI, ಬಿನ್ನಹ); ತಾನಾಗಿ ಹೇಳಿದ ತನ್ನ ಚರಿತ್ರೆಯಿಂದ ಪಂಪನು . . . ಸಮನ್ವಯಶೀಲನೂ ಸವ್ಯಸಾಚಿಯೂ ಆದ ವ್ಯಕ್ತಿಯಾಗಿದ್ದನೆಂದು ತಿಳಿಯುತ್ತದೆ (ಕಸಾಚ. ೮೭). ೩. ಬಹಳ ಶೂರ; ಕಡುಗಲಿ: ಪೊಗಳ್ವುದು ಜನಂ ಸುಭಟಭೀಕರವಿಕ್ರಮಸವ್ಯಸಾಚಿಯಂ (ಎಕ. II, ೧೨೬-೩೦; 1113). [ಸಂ. ಸವ್ಯಸಾಚಿನ್]

ಸವ್ಯಸಾಚಿಸು (ಕ್ರಿ). ೧. ಎರಡು ಕೈಗಳಿಂದಲೂ ಬಾಣಪ್ರಯೋಗ ಮಾಡು ; ಸವ್ಯಸಾಚಿತ್ವವನ್ನು ತೋರು : ಕೆಯ್ಯೆರಡರಿಂದೆಸೆದು ಸವ್ಯಸಾಚಿಪನವಂ (ಹೆಬ್ಬೆರ. ೧೬-೨೩). ೨. (ಆಲಂ) ಎರಡು ಕೆಲಸಗಳನ್ನು ಒಟ್ಟಿಗೆ ನಿರ್ವಹಿಸು: ಕವಿತಾಮಾರ್ಗ ಬೇರೆ, ಸಂಶೋಧನಮಾರ್ಗ ಬೇರೆ . . . ಅವೆರಡನ್ನೂ ಕೆಯ್ಯೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಸಬಹುದಾದರೂ ನನ್ನ ಬಗೆಗಾದರೂ ಅವು ಮುಳುವಾಗಿವೆ (ಕಂನಾಸಾ. ೧೨). [ಸವ್ಯಸಾಚಿ + – ಇಸ್ಸು$_3$]

ಸವ್ಯಾಕುಲ (ನಾ). ವಿಹ್ವಲಗೊಂಡವನು ; ವ್ಯಾಕುಲಗೊಂಡವನು : ತೋಕಿದವು ನಾರಾಚ ದೆಸೆದೆಸೆಯೋಕರಿಸಿದವೊ ಸರಳನೆನೆ ಸವ್ಯಾಕುಲ[ಪಾಠಾಂ. ೪]ರ ಹಿಂದಿಕ್ಕಿ ಹಿಂಡಿದವಸುವನತಿಬಲರ (ಕುವ್ಯಾಅ. ೧೯-೧೩). [ಸಂ.]

ಸವ್ಯಾಪ ? (ನಾ). (?) : ಗೋಪಿತಾರ್ಥವ ಕೊಟ್ಟು ಜನ ಸವ್ಯಾಪರಾಹೋಲ್ ರಚಿಸುವದಕುಪಮಾಪದವ ಕೊಡು ಚಂದ್ರನಾಥನೆ ಕೋಮಲಾಕೃತಿಯಾ (ಬಿಜ್ಜಪು. ೪-೧೫). [?]

ಸವ್ಯಾಪಸವ್ಯ (ನಾ). ೧. (ಚಲನೆಯ ಕ್ರಮ, ಬಾಣಪ್ರಯೋಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ) ಎಡಭಾಗ ಮತ್ತು ಬಲಭಾಗ : ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ ರಥಕಲ್ಪ ವಿಶೇಷವಿನ್ಯಾಸಂಗಳನಱಿದು ಸಾರಥಿಗಳ್ ಚೋದಿಸುವಾಗಳ್ (ಪಂಪಭಾ. ೧೨-೭೫ ವ); ನೀಡಿ ನಿಜಸವ್ಯಾಪಸವ್ಯದ [ಪಾಠಾಂ. ಸರ್ವಾಂಗಸತ್ವದ] ಮೋಡಿಯಲಿ ಬಿಡದೆಱಗುತಿರಲೀಸಾಡಿತವನಸಿಯಮಮ ಪ್ರಭುವಿನ ಬಯಲ ದೇಹದಲಿ (ಪ್ರಭುಲೀ. ೧೯-೩೪). ೨. ಎಡಭಾಗವು ಬಲಭಾಗದಂತೆಯೂ ಬಲಭಾಗವು ಎಡಭಾಗದಂತೆಯೂ ಕಾಣುವಿಕೆ ; ಎಡ ಮತ್ತು ಬಲ ವ್ಯತ್ಯಾಸವಾಗಿ ತೋರುವಿಕೆ ; ತಿರುವುಮುರುವು : ಕನ್ನಡಿಯ ಕೈವಿಡಿದು ನೋಡಲು ತನ್ನಿರವು ಸವ್ಯಾಪಸವ್ಯದಿ ಕಣ್ಣಿಗೊಪ್ಪುವ ತೆಱದಲನಿರುದ್ಧನಿಗೆ ಈ ಜಗವು ಭಿನ್ನಭಿನ್ನವೆ ತೋಱುತಿಪ್ಪುದು (ಹಸಾರ. ೫-೩೪). ೩. ಬಲಭಾಗದಿಂದ ಎಡಭಾಗಕ್ಕೆ ಚಲಿಸುವುದು : ವೇದಂ ಬಿಡದೆ ಸವ್ಯಾಪಸವ್ಯದಿಂ ಬಲವಂದು ಪೊಗಳುತಿರ್ಪುದ ನಱಿಯೆಯಾ (ವೀಶೈಪು. ೩-೬-೭); ಉರಿವ ಜ್ಯೋತಿಯ ಮಂಗಳಾರತಿಯ . . . ಪಿಡಿದು ಸವ್ಯಾಪಸವ್ಯದಿಂ ಬೆಳಗಲೊಡನೆ (ನವಮೋ. ೨೧-೨೮). ೪. ನೇರವಾದುದು ಮತ್ತು ವ್ಯತಿರಿಕ್ತವಾದುದು. ೫. ಶ್ರಾದ್ಧದ ಸಮಯದಲ್ಲಿ ಜನಿವಾರವನ್ನು ಎಡಗಡೆಯಿಂದ ಬಲಗಡೆಗೆ ಬದಲಾಯಿಸುವುದು : ಜನಿವರವ ಸವ್ಯಾಪಸವ್ಯಗಳನೆಯ ಹಾಕುತ ಪಿತರುಯಿಂದೇ ದಿನದಿ ಸತ್ತವರುಂಬರ್ಕೆ ಬಂದೀಗಯೆಂತೆಂದು . . . ತಾವುಂಡು ಪಿತರೇ ದಣಿದರೆಂಬರು (ಜ್ಞಾನಸಿಂ. ೨೨-೧೪). ೬. ತಪ್ಪು ಮತ್ತು ಸರಿ. ೭. (ಆಲಂ) ಉಪದ್ವ್ಯಾಪ ; ಅಧಿಕಪ್ರಸಂಗಿತನ : ಈ ಪುಕಟ ಫೌಜದಾರನ ಕೆಲಸ ನಮಗ್ಯಾಕ? ಯಿಲ್ಲದ ಸವ್ಯಾಪಸವ್ಯ (ಹೊಸಂಸಾ. ೧೦). [ಸಂ.]

ಸವ್ಯಾಶೆ 'ಸಾವಾಸಿ' ನೋ.

ಸವ್ಯಾಸನ (ನಾ). [ಯೋಗ] ಒಂದು ಬಗೆಯ ಆಸನ : ಸ್ವಸ್ತಿಕಾಸನ, ಸವ್ಯಾಸನ . . . ಅರ್ಧಾಸನಾದಿ ಎಂಭತ್ತುನಾಲ್ಕು ಆಸನಭೇದಂಗಳು (ವಿವೇಕ. ೧೩೧). [ಸಂ.]

ಸವ್ವಡಿ (ನಾ). ಖಡ್ಗಯುದ್ಧದಲ್ಲಿ ಒಂದು ವರಸೆ : ನುತಚೌಪಟಂ ಗೋಮುಖಂ . . . ದುಸ್ಸರ ಸ[ಪಾಶಾಂ. ಚ, ಚೊ]ವ್ವಡಿ . . . ಚಟಯೆಂಬ ಚತುರಠಾಣದ ತರಹರದೊಳು ಹಲಗೆಯ ಮಗ್ಗುಲೊಳು ಖಡ್ಗವಂ ಜಡಿದರು (ಸೋಮಚ. ೫-೧೪). 'ಚೌವಟ್ಟೆ' ಪರಾ.

[?./ ತೆಲು. ಸವಡಿ = ಒಂದು ಬಗೆಯ ಆಯುಧ]

ಸವ್ವರಣೆ 'ಸಂವರಣೆ₁' ನೋ.

ಸವ್ವರಿಸು 'ಸಂವರಿಸು₁' ನೋ.

ಸವ್ವಳಿ (ನಾ). ೧. ಮಾರ್ಗ ; ಜಾಡು : 'ಸವ್ವಳಿವಿಡಿ' ಪರಾ. ೨. ತುದಿ ; ಕೊನೆ : ಮೃಡಲೋಚನಂಗಳಿಂದೊಗೆದ ಪರುಷಾಶ್ರುಜಲಮೊಡನೆ ಗಿರಿಜೆಯ ಕುಡಿತೆಯೊಳ್ ತುಂಬಿ ಬರಲದಂ ಕೊಡಹಲ್ ದಶಾಂಗುಲಿಯ ಸವ್ವಳಿಯೊಳಿಳಿದ ನೀರ್ ದಶನದಿಗಳಾಗಿ ಪರಿದು (ಚಿಬಪು. ೪೬-೨೮); ಸುಳಿಸುಳಿಯ ಸವ್ವಳಿಯ ಬೊಬ್ಬುಳಿಯ ಕಡುಲುಳಿಯ ಜಳಚರದ ತರತರದ ಸೀಕರದ ಭೀಕರದತುಳಗಂಗೆ . . . ಕಣ್ಗೆಸೆದಳು (ಷಟ್ಪದಿಭಾ. ೯-೨೪). [ದೇ. || ತೆಲು. ಸವ್ವಡಿ, ಸವಡಿ]

ಸವ್ವಳಿವಿಡಿ (ಕ್ರಿ). ಮಾರ್ಗವನ್ನು ಹಿಡಿ ; ಜಾಡು ಹಿಡಿ : ಇಂತಖಿಳೇಂದ್ರಿಯಂಗಳ್ಗಾ ನಂದಮಂ ಮಾಟ್ಪತುಳಪರಿಮಳಪರಿಕಲಿತತರಳಪವನನುರುತರಮಾದಿಂಪು ಗುಂಪಿನ ಸವ್ವಳಿವಿಡಿದಾಂ ಬರೆವರೆ (ಉದ್ಯಬ. ೫-೧೬ ವ). [ಸವ್ವಳಿ + ಪಿಡಿ₁]

ಸವ್ವಾ 'ಸವಾ' ನೋ.

ಸವ್ವಾರಿ (ನಾ). ಗಡುವು ; ಅವಧಿ : ಸುಗ್ಗಿಯ ತಲೆಯ ಮೇಲೆ ಸವ್ವಾರಿ ಹಾಕಿ ಕಾಳು ಮರಳಿ ಕೊಡುವದಾಗಿ ಜಾಮೀನು ಕೊಟ್ಟು ಒಯ್ಯಬೇಕಾಗಿತ್ತು (ಗ್ರಾಮಾಯ. ೧೦೪). [?]

ಸವ್ವಾಶೆ 'ಸಾವಾಸಿ' ನೋ.

ಸವ್ವಾಸೇರು 'ಸವಾಸೇರು' ನೋ.

ಸವ್ವೀರಪಾಷಾಣ 'ಸವೀರಪಾಷಾಣ' ನೋ.

ಸಶಂಕ (ಗು). ೧. ಶಂಕೆಯಿಂದ ಕೂಡಿದ ; ಅನುಮಾನಾಸ್ಪದವಾದ. ೨. ಅಂಜಿಕೆಯಿಂದ ಕೂಡಿದ ; ಭಯದಿಂದ ತುಂಬಿದ. [ಸಂ. ಸಶಂಕಾ]

ಸಶಂಕಿತ (ಗು). ೧. ಅನುಮಾನ ಪಟ್ಟ. (ನಾ). ೨. ಹೆದರಿಕೊಂಡ ವ್ಯಕ್ತಿ ; ಅಂಜುಕುಳಿ : ಅಸತಿಯರಳ್ಕುತಂ ನಡೆದರಂತೆ ಸಶಂಕಿತರಲ್ತೆ ದೋಷಿಗಳ್ (ಪಾರ್ಶ್ವಪು. ೧೦-೧೯). [ಸಂ.]

ಸಶರೀರ (ಗು). ೧. ದೇಹದಿಂದ ಕೂಡಿದ ; ಶರೀರಸಹಿತವಾದ. (ನಾ). ೨. ದೇಹದಿಂದ ಕೂಡಿರುವುದು ; ಶರೀರಸಮೇತವಾಗಿರುವುದು : ಸಶರೀರವಾಗಿ ಸ್ವರ್ಗಕ್ಕೆ ಕಳುಹಿಸಬಲ್ಲ ಮಹಾತಪಸ್ವಿಯು ನನ್ನ ಚಾಂಡಾಲ್ಯವನ್ನು ನಿರ್ಮೂಲ ಮಾಡಲಾರನೇ (ಮಹಾಭಾ. ೮೭). ೩. ಶರೀರಸಮೇತನಾಗಿರುವವನು ; ದೇಹದಿಂದ ಕೂಡಿರುವವನು : ನಾನು ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕು (ಮಹಾಭಾ. ೮೬); ನೀನು ಪಾಪರಹಿತನಾದುದರಿಂದ ಸಶರೀರನಾಗಿ ಸ್ವರ್ಗಕ್ಕೆ ಬಾ (ಭಾರದ. ೧೦೩). [ಸಂ.]

ಸಶಾಸ್ತ್ರೀಯ (ಗು). ಶಾಸ್ತ್ರಬದ್ಧವಾದ ; ನಿಯಮಕ್ಕೊಳಪಟ್ಟ : ಸಪ್ತಣ್ಣನು . . . ಸಶಾಸ್ತ್ರೀಯಸಂಗೀತಕಲೆಯಲ್ಲೂ ಉದ್ದಾಮಪಂಡಿತನಾದನು (ಸಂಗೀಚಂ. ೨೫೪).

[ಸಂ.]

ಸಶಿವ (ನಾ). ಶಿವಸ್ವರೂಪನಾದವನು : ಅಸಮಸಾರೂಪ್ಯದ ಪದದಿ ವರ್ತಿಸಬಹುದು ಸಾಯುಜ್ಯದಿಂದೆ ಬೆರಸಿ ಸುಖದೊಳಿರಲಪ್ಪುದಲ್ಲದೆ ಸಶಿವನೆಂದೆನಿಪ ಬಸವನಾಗಲುಬಹುದೆ (ಬಸವಪು. ೧-೩೧). [ಸಂ.]

ಸಶೋಕ (ಗು). ೧. ದುಃಖದಿಂದ ಕೂಡಿರುವ : ಅಶೋಕವೃಕ್ಷದ ನೆರಳಿನಲಿ ಸಶೋಕ ಸೀತೆಯ ಕಂಡಿದ್ದೆ (ಮುತ್ರಕಂ. ೩೯-೨). (ನಾ). ೨. ದುಃಖದಿಂದ ಕೂಡಿರುವವನು ; ವ್ಯಥೆಯಿಂದ ತುಂಬಿರುವವನು : ನಮ್ಮಿಬ್ಬರಾ ಸಾಮ್ಯವಿಹುದೆಲ್ಲ ವಿಷಯದೊಳು ನೋಡಶೋಕನೆ ವಿಧಿಯ - ನಾ ಸಶೋಕ! (ಧ್ವನ್ಯಾಲೋ. ೮೪).

[ಸಂ.]

ಸಶ್ರೀಕ (ನಾ). ೧. ಬಹಳ ಸೊಗಸನ್ನು ಹೊಂದಿದುದು; ಚೆಲುವಾದುದು: ಅವನ ಅರಮನೆ "ಕೈಲಾಸಶಿಖರಸಶ್ರೀಕ"ವಾಗಿ ಗಂಗಾನದಿಯಲ್ಲಿ ಪ್ರತಿಬಿಂಬಿಸುತ್ತ ತನ್ನನ್ನು ತಾನು ಕನ್ನಡಿಯಲ್ಲಿ ನೋಡಿಕೊಳ್ಳುವಂತಿದೆ (ಸಂನಾಟ. ೧೪೫). ೨. ಬಹಳ ಅಭ್ಯುದಯವನ್ನು ಹೊಂದಿದವನು ; ಅದೃಷ್ಟಶಾಲಿ : ಅನುಪಮ ಸಶ್ರೀಕಂ ಮತ್ಸ್ಯನೆಂಬ ಪರದಂಗೆ ಜೈನೆಯೆಂಬಳ್ ಕುಲಮಾನಿನಿ (ಸುಕುಮಾ. ೭ ೩೦). [ಸಂ.]

ಸಶ್ರುತ (ನಾ). ವೇದಕ್ಕೆ ಸಂಬಂಧಪಟ್ಟುದು : ಧರ್ಮಂ ವಿಶ್ರುತಸಶ್ರುತಾತಿಶಯಮಂ . . . ಧರ್ಮಂ ಧಾರ್ಮಿಕನಪ್ಪವಂಗೆ ಕುಡುಗುಂ ನಿರ್ವಾಣಕಲ್ಯಾಣಮಂ (ಸುಕುಮಾ. ೭ ೪೨).

[ಸಂ.]

ಸಸಂಭ್ರಮ (ಗು). ೧. ಗಲಿಬಿಲಿಯಾದ ; ಗೊಂದಲಗೊಂಡ. ೨. ಉತ್ಸಾಹದಿಂದ ಕೂಡಿದ; ಸಂಭ್ರಮಪಟ್ಟ. (ನಾ). ೩. ಸಡಗರದಿಂದ ಕೂಡಿರುವಿಕೆ: ಪಂಡಿತೆಯುಂ . . . ಸಸಂಭ್ರಮದಿಂ ವಿಭ್ರಮವಿಲಾಸವತಿಯುಂ ಶ್ರೀಮತಿಯುಂ ಕಂಡು (ಆದಿಪು. ೩-೮೪ ವ). [ಸಂ.]

ಸಸಂಭ್ರಮಂ (ಅ). ಸಡಗರದಿಂದ ಕೂಡಿ; ಸಂಭ್ರಮವನ್ನು ಹೊಂದಿ: ಅಂತೆಸೆದು ಬಂದಾ ಸಗರ್ವಂ ಗಂಧರ್ವಗಳಂ ಸಸಂಭ್ರಮಂ ನಿರೀಕ್ಷಿಸಿ ಸಂತಸಂಬಟ್ಟು (ರಾಜಶೇ. ೧೩-೬೪ ವ). [ಸಂ.]

ಸಸಾರ (ನಾ). ೧. ಸುಲಭ ; ಸಲೀಸು : ಅಪಾರಸಂಸಾರದಾಗ ಸಸಾರ ಅಲ್ಲೂ ತಮ್ಮ ಅಂತಪಾರ! (ಅರಳು. ೨೮೧-೧೨); ಆದರೆ ಇದರೊಳಗಿನ ಪ್ರತಿಯೊಂದು ಉಲ್ಲೇಖಪತ್ರವನ್ನು ಸಸಾರವಾಗಿ ತೆಗೆಯಲು ಬರುತ್ತದೆ (ಗ್ರಂಥಾಲ. ೪೪). ೨. ಸಲಿಗೆ ; ಸದರ : ಅಜ್ಜಿ ಸುಮ್ಮನಿರ್ತಾರಂತ ನಿನಗೆ ಭಾರೀ ಸಸಾರ ಆಗಿದೆ ಅಲ್ಲವಾ? (ಹೊಸಕ್ಷಿ. ೧೧೬); ಇನ್ನೊಬ್ಬ ಯುವಕ ಲಲಿತಳನ್ನು ಅಷ್ಟು ಸಸಾರವಾಗಿ ಕೂಗಬೇಕಾದರೆ . . . ಪ್ರಣಯಸಂಬಂಧ ಬೆಳೆದಿರಬೇಕು (ಬಾಳೆವೃ. ೨೨೩). ೩. ಅಲಕ್ಷ್ಯ ; ತಿರಸ್ಕಾರ : ಕೈ ಹಿಡಿದ ಹೆಂಡತಿಯೆಂದರೆ ತನ್ನ ವಸ್ತುವಿದು ಎಂದು ಸಸಾರ (ಪ್ರಶ್ನ. ೧೩೭). [<— ತುಳು. ಸಸಾರ]

ಸಸಾರಜನಕ (ಗು). ೧. [ವಿಜ್ಞಾ] ಸಾರಜನಕವೆಂಬ ಅನಿಲಕ್ಕೆ ಸಂಬಂಧಪಟ್ಟ. ೨. ಜೀವಿಗಳ ಅಂಗ ಮತ್ತು ಅಂಗರಚನಾಸಾಮಗ್ರಿಯಲ್ಲಿರುವ ಜೈವಿಕಸಂಯುಕ್ತಪದಾರ್ಥಕ್ಕೆ ಸಂಬಂಧಪಟ್ಟ : ಈ ಗಟ್ಟಿಚೌಕಟ್ಟನಲ್ಲಿ ನೀರಿನಲ್ಲಿ ಕರಗುವ ಸಸಾರಜನಕ ಅರ್ಥ್ರೋಪೋಡಿನ್ (Arthropodin) ಲೀನವಾಗಿದೆ (ಕೀಟಚಿ. ೯). (ನಾ). ೩. ಜೀವಿಗಳ ಅಂಗಗಳಲ್ಲಿಯೂ ಅಂಗರಚನಾಸಾಮಗ್ರಿಯಲ್ಲಿಯೂ ಹೆಚ್ಚುಭಾಗವಾಗಿರುವ ಜೈವಿಕಸಂಯುಕ್ತಪದಾರ್ಥ : ಸಸಾರಜನಕ ಮತ್ತು ಕೊಬ್ಬುಗಳೂ ಶಕ್ತಿಯುತ್ಪಾದಕಗಳು (ಅಡುಪಾ. ೫೬); ಪ್ರೋಟೀನುಗಳು ಸಸಾರಜನಕಯುಕ್ತವಾದ ಸಾವಯವಆಹಾರಾಂಶಗಳು (ಗೃಹವಿ. ೯). [ಸಂ.]

ಸಸಿ₁ (ಕ್ರಿ). ೧. ಕೀಳು ; ಉತ್ಪಾಟಿಸು : "ಸಸಿ — ಸಸ್ಯಾದ್ಯುತ್ಪಾಟನೇ, ಸಸ್ಯೇ ಚ (ಸೊಪ್ಪು ಮೊದಲಾದುವನ್ನು ಕೀಳು)" (ಶಮಧಾ). ೨. ಕತ್ತರಿಸು ; ಕಡಿ : ನಡುಬೆನ್ನ ಮೂಳೆಯಂ ಸಸಿದು ಕದಿಕಡಿದಗಿದು ಕರುಳ ಹೊಲಂ ಹಿಕ್ಕಿ ತಿಂದು (ಪಚಕಾ. ೬-೧೬); ಹೊಸ ಹೆಣಗಳ ಹೊಱೆಗಳ ನೆಱೆ ತೀವಿದ ಬಿಸಿರಕುತದ ತಲೆಯೋಡ್ಗಳ ಸಸಿದ ಸುಂಟಗೆಯ ಪಕ್ಕಲೆ ತುಂಬಿದ ಮಧುರಸವಾಂತ ಮರುಳ್ಗಳೆಯಿತಂದವು (ಸೊಬಸೂ. ೯-೭೫); ಸಲೆ ಸಸಿದ ತಲೆಗಳಲ[ಪಾಶಾಂ. ರಳೆಯಂತೆ, ರಳೆಯಿಂದ] ಡಗಿತಭ್ರದ್ಯೋತಮಂಡಲವ (ತೊರರಾ. ೧-೧೧-೧೪). ೩. (ಅರಳೆಯಲ್ಲಿರುವ ಬೀಜ, ಕಸ, ಕಡ್ಡಿಗಳನ್ನು) ತೆಗೆ,— ಸೋಸು ; (ಹತ್ತಿಯನ್ನು) ಹಿಂಜು ; ಎಕ್ಕು: ಸಸಿದಂದೊಂದೆಡೆಯೊಳಗೊಟ್ಟಿರ್ದರಳೆಯನೊಡನಳುರ್ವಂತಳುರ್ದನನಲನರಗಿನ ಮನೆಯಂ (ಪಂಪಭಾ. ೩-೫). ೪. ಬಿದ್ದುಹೋಗು ; ಕಳಚಿಕೊಳ್ಳು : ಸಸಿದ ಹಲುಗಳ ಕೆತ್ತ ಕಿವಿಗಳ ಮಸುಳಿದಂಗದ ಮುಪ್ಪಿನಲಿ ಲಂಬಿಸಿದ ಶಬರಿಯ ಸುಪ್ರಸಿದ್ಧಯ ಸಾರ್ದರೊಲವಿನಲಿ (ತೊರರಾ. ೩-೧೨-೨೯). ೫. ಚದುರು ; ಚಲ್ಲಾಪಿಲ್ಲಿಯಾಗು : ಸ[ಪಾಶಾಂ. ನ]ಸಿದು ಕೊಬ್ಬಿದ ಮಿದುಳ ರಾಸಿಗೂಳೆಸೆಯ . . . ಭೂತ ಭೇತಾಳ ರಾಡಿದರು (ಪಚಕಾ. ೧೨-೩೩); ಕೊಡಹಿದ ಚೀಲದವೊಲೆಲು ಸಸಿದು ಬಿದ್ದವು (ತೊರರಾ. ೬-೨೪-೩೧); ಹಸಿದ ಹೆಬ್ಬುಲಿ ರೋಷ ಮಸಗಿ ಪಾಯಲು ಕೆಟ್ಟು ಪಶುಸಂಕುಲ ಪೋಪಂತೆ ಸಸಿದು ಪೋಪುದು ಪರಬಲವು (ರಾಮವಿ. ೧೮-೬೬). ೬. ಜಿಗುಟು; ಚಿವುಟು: ಸುರವಿರೋಧಿಯ ಬಸಿರ ಬಿಗಿದೆಳಗುರಳನುಗುರಲಿ ಸ[ಪಾಶಾಂ. ನ]ಸಿದು ಕೊರಳಲಿ ಹಾಯ್ದುದನು (ತೊರರಾ. ೬-೨-೩೧). 'ನಸಿ₂' ಪರಾ.

ಸಸಿದರಳೆ = (ಕಸಕಡ್ಡಿ ಬೀಜಗಳನ್ನು ತೆಗೆದು) ಶುದ್ಧಿಮಾಡಿದ ಹತ್ತಿ ;

ಹಿಂಜೆದ ಅರಳೆ : ಗಿರಿಗಳೆ ಜಂಗಮವಪುಗಳ್ ಸಿರದೊಳ್ ಸಸಿದರಳೆ[ಪಾಠಾಂ. ಲೆ] ಯಂತೆ ಮುಸುಱೆದ ಮಂಜಿಂ ನರೆಯಂ ಪೊತ್ತವೊಲಿರ್ದುವು (ಲೀಲಾವ. ೯-೨೪; ಸೂಕ್ತಿಸು. ೩-೨೨ ನೋ); ಸಸಿದರಳೆ ಸಿಡಿಲೆಱಗಿದರೆ ಜೀವಿಸುವುದೇ (ಕುವ್ಯಾಭೀ. ೩-೮೪).

[ದೇ. II / ಸಂ. ಶಸ್ = ಕತ್ತರಿಸು, ಕೊಲ್ಲು, ನಾಶಮಾಡು]

ಸಸಿ$_2$ (ನಾ). ೧. ಚಂದ್ರ : "ಎರಳೆಗುಱುಪಂ . . . ಸಸಿ ಪಿದುವೆನಲ್ ಚಂದ್ರನಾಮವು" (ಶಬ್ದಮಂ. ೧೭); ತನ್ನೊಳಾದ ಬೇಟದೊಳ್ ಬಡವಟ್ಟುಮೇಟ್ಗೆವಾಡಿವದ ಸಸಿಯಂತೆ ಸೊಗಯಿಸುವಸಿಯಳಂ ಕಂಡು (ಪಂಪಭಾ. ೫-೧೫ ಪ); ಸಸಿ[ಪಾಠಾಂ. ಶಶಿ]ಯೊಳಗಣ ರಸದ ರುಚಿಯಂತಿದ್ದಿತು (ಬಸವ. ೧); ವಿರಹದೊಳೇಕೆಗೆ ಬೆಳ್ದಿಂಗಳ್ ಬಿಳಿಯ ಕಿರ್ಬು ಸಸಿ ಬಿಸಿ (ಗಿರಿಕ. ೪-೧೧೭). ೨. ಕರ್ಪೂರ : ಬಿಸರುಹದ ಕಿಂಜಲ್ಕಪುಂಜದಿ ಸಸಿಯ ಪುಡಿಯುಂಬಿಯಂತೆ ಅರ್ಚಿಸಿದಳರುಹನನು (ಸಾಳ್ವಭಾ. ೩-೨೬).

ಸಸಿಯಂ ಸೂಡಿದಂ = ಚಂದ್ರನನ್ನು ಧರಿಸಿದವನು ; ಶಿವ : ಇಸೆ ಬಂದು ವಶೀಕರಣಂ ಸಸಿಯಂ ಸೂಡಿದನ ಕಮಲವಿಮಲಜ್ಞಾನಾವಸಥಪರಂಜ್ಯೋತಿಯ ಕಾಲ್ದೆಸೆಯಂ ಕಾಣದ ಮರಳ್ದು ಬರೆ ಬೆಜಗಾದಂ (ಗಿರಿಕ. ೮-೩೪). ಸಸಿಯ ಬಟ್ಟು = ಚಂದ್ರಮಂಡಲ ; ಚಂದ್ರಬಿಂಬ : ಹುಣ್ಣಿಮೆಯ ಸಸಿಯ ಬಟ್ಟೊಸರ್ದು ಪರಿತರ್ಪ ದಿವ್ಯಾಮೃತದ ತೊಱೆಯೊ (ಪದ್ಮರಾ. ೧-೩೦). ಸಸಿಯ ಬಿಂಬ = ಸಸಿಯ ಬಟ್ಟು: ಸಸಿಯ ಬಿಂಬವ ಬಗೆಯದೆಸೆವ ಸುಮ್ಮಾನತೆಯ ಪಸರಿಸಿತು ಕಮಲ (ಹಚಕಾ. ಪರಿ. ೨೧೯); ಸಸಿಯ ಬಿಂಬವ ಬಗೆಯದದಟನ ಮುಸುಡು ಕಂದದು ಮೆಯ್ಯ ದೀಧಿತಿ ಮಸುಳಿಸದು (ಕುವ್ಯಾದ್ರೋ. ೬೧೩. ೬-೬೧ ಅಡಿಪದ್ಯ). [< ಪ್ರಾ. ಸಸಿ./ ಸಂ. ಶಶಿನ್]

ಸಸಿ$_3$ (ನಾ). ೧. ಎಳೆಯ ಗಿಡ ; ಸಸ್ಯ, ಧಾನ್ಯ ಮುಂತಾದುವುಗಳ ಪಯಿರು : "ಲತೆಯೊಳಾ ಮೃಗಾಂಕನೊಳು ಕಾರ್ಪಾಸಶೋಧನದೊಳಂ ಭೂಮಿ ಯಱೆಯಲ್ಕೆ ಸಸಿ" (ಶಬ್ದಮಂ. ೧೧೨); ಶರೀರದೊಳಱೆವಂ ಸಸಿಯೊಳ್ ಬೆಳಸಂ ಕೊಳ್ವವೊಲಸಾರದೊಳ್ ಸಾರವಂ ಮಹೀಪತಿ ಕೊಂಡಂ (ಶಾಂತಿಪು. ೮-೧೨೫); ವಸಂತ ರಾಜನ ಕಯ್ಯೊಳು ಕಲ್ಪತರುವಿನ ಸಸಿಯಂ ಕೈಲೆಡೆಗೊಡುವಂತೆ ನರಸಿಂಗಮೊನೆಯರ ಕಯ್ಯೊಳು ನಂಬಿಯಣ್ಣನಂ ಕೊಡಲೊಡಂ (ನಂಬಿರ. ೨-೮೩); ತಳಿತ ಚೂತದ ಸಸಿಗಳವನಿಗೆ ಮಲಗುವಂತಿರೆ ರಾಜಪುತ್ರರು . . . ಎಸೆದರು ಸಾಲಶಯನದಲಿ (ಕುವ್ಯಾದ್ರೋ. ೫-೭೯). ೨. (ಆಲಂ) ಅಂಕುರ ; ಮೊಳಕೆ : ನರ್ಮಗೋಷ್ಠೀಪ್ರಸಂಗಾನಂದದಿಂ ಪೊಣ್ಮುವಾ ಪುಳಕಂಗಳೇ ಸಸಿಗಳಾಗೆ ರತಿಸುಖಮೆಂಬ ಫಲಮಂ ಎಲಾಸಿ ಯುವಜನಕಿತ್ತು . . . ಕಳಮವನವಾಲಿಕೆಯರೊಪ್ಪುಗುಂ (ಪದ್ಮರಾ. ೮-೧೭); ಸಲ್ವ ಕುಲದೇಳ್ಗೆಯ ಸಸಿಯ ಕೋಡೊ . . . ಎನಲ್ ಕುಶಲವರ್ಕುಶಲದಿಂ ಕಣ್ಗೆಸೆದರ್ (ಚೈಮಿಭಾ. ೧೯-೪೯). [< ಸಂ. ಸಸ್ಯ./ ತುಳು. ತೆಲು. ಸಸಿ]

ಸಸಿಕಲೆ 'ಸಸಿಗಲೆ' ನೋ.

ಸಸಿಕು, ಸಸಿಕ್ಕು (ನಾ). ಮಲ್ಲಯುದ್ಧದ ಒಂದು ವರಸೆ : ಕಮ್ಮರಿ ಕತ್ತರಿ ಪೋಡ ವಂಕುಶಂ ಸಸಿಕುವೆನಿಪ್ಪ ಚೆಟ್ಟಿಗನ ನಚ್ಚಿನ ಬಿನ್ನಣಮೊಪ್ಪೆ ಕಾದಿದರ್ (ಚಂದ್ರಪ್ರ. ೫-೭೮). ಸಸಿಕ್ಕು : ಸಸಿಕ್ಕು ಮುಹಪೋವುದ ಚಲ್ಲಣವಟ್ಟ ಪಟ್ಟಿಕತ್ತರಗಳೆನಿಪ್ಪ ಜಟ್ಟಿಗರ ಬಿನ್ನಣ ಮೊಪ್ಪೆ ಕಡಂಗಿ ಕಾದಿದರ್ (ತ್ರಿಪುವಿ. ೨೬-೧೮). [?]

ಸಸಿಕುಪ್ಪಿ, ಸಸಿಗುಪ್ಪೆ (ನಾ). ಒಂದು ಬಗೆಯ ಸಸ್ಯ : ಸಸಿಕುಪ್ಪಿ [ಪಾಠಾಂ. ತುಪ್ಪೆ] . . . ನಱುವಲು ಹಱುಹೆ ಮೊದಲಾದ ಹಸುರುಸೊಪ್ಪ ಕರಮೆಸೆವ ಬಾಳೆ ಮೊದಲಾದ ಪೂಗಳನು ಉಕ್ಕರಿಸಿ (ಸೂಪಶಾ. ೪-೩೩). ಸಸಿಗುಪ್ಪೆ : ಹೆತ್ತ ತುಪ್ಪವ . . . ಕಾಸಿ ಹಂಬಿನ ತುಱುಚನಾ ಬೇರು ಸಸಿಗುಪ್ಪೆ [ಪಾಠಾಂ. ಸಿಗುಪ್ಪೆ, ಗುದಪ್ಪೆ] ಕೊತ್ತಂಬರಿಯ ಬೀಜ ವೂಣಕಾರಗೆಣಸರಿಸಿನಂ ಹತ್ತಿ ಹರಳ ರಸಮಂ ಪೂರೈಸಿ ಕಾಸಿ (ಸೂಪಶಾ. ೨-೧೯). 'ಗುಪ್ಪೆ$_2$' ಪರಾ. [ಸಸಿ$_2$ + ಕುಪ್ಪಿ$_3$]

ಸಸಿಕ್ಕು 'ಸಸಿಕು' ನೋ.

ಸಸಿಗದಿರ್ (ನಾ). ಚಂದ್ರನ ಕಿರಣ : ಸಸಿಗದಿರ್ಸಕಲಾಚಲಂಗಳೊಳುರ್ವಿ ಪರ್ವಿ ಭರಾಟ್ಟಿಲಾವಿಸರಮಂ ಸಲೆ ತುಳ್ಳುವಂತೆ (ಉದ್ಯಟ. ೩-೧೦೭); ಸಸಿಗದಿರಂ ಬಳಲ್ದಿ ಶಶಿಕಾಂತದ ಕಾಂತಿಯನೀಳ್ದುಕೊಂಡು . . . ಬೊಮ್ಮನೊಲ್ದೆಸಗಿದ ಶೈಲಮೋಯೆನಿಸಿ ಪಜ್ಜಳಿಸಿರ್ದುದು ತಾರಭೂಧರಂ (ವೃಪವಿ. ೧-೭೨). [ಸಸಿ$_2$ + ಕದಿರ್$_2$]

ಸಸಿಗಲ್ (ನಾ). ಚಂದ್ರನ ಪ್ರಕಾಶದಿಂದ ದ್ರವಿಸುವುದೆಂದು ಭಾವಿಸಲಾದ ಒಂದು ಬಗೆಯ ಬಿಳಿಯ ಕಲ್ಲು ; ಚಂದ್ರಕಾಂತಶಿಲೆ : "ಸಸಿಗಲ್, ತಣ್ಣಲ್– ಈ ೨ ಚಂದ್ರಕಾಂತಂ" (ಕಶಸಾ. ೫೦-೫೩); ಸಸಿಗಲ್ಲಟ್ಟಳೆಗಳಿನಾಗಸದೊರೆಯಂ ಚುಂಬಿಪಖಿಳಕೇತನದಿಂ . . . ಎಸೆದುದು ಪೊಸಲಂಪಿನಿಂಪಿನಿಂದಾ ನಗರಂ (ಉದ್ಯಟ. ೧-೪೮), ಬಱೆಯ ಸಸಿಗಲ್ಲ ತೋರ ಕರಗಪನಣಕದಿಂದೆ ತಂದಿತ್ತು ನೋಡುತಿರೆ ತನ್ನ ಮುಖೇಂದುವಾಸಾರಕದು ಕಟ್ಟನೆ ಕರಗೆ (ಪದ್ಮರಾ. ೮-೧೦). [ಸಸಿ$_2$ + ಕಲ್$_3$]

ಸಸಿಗಲೆ, ಸಸಿಕಲೆ (ನಾ). ಚಂದ್ರನ ಹದಿನಾರುಕಲೆ ; ಚಂದ್ರಕಲೆ: ಸಸಿಗಲೆಯಕ್ಕುಮಲ್ಲ ಕಲೆಗೆತ್ತಣದೀ ಪರಿಪೂರ್ಣಶೋಭೆ (ಉದ್ಯಟ. ೮-೪೧); ತಲೆಯ ಸಸಿಗಲೆಯಾ ಮೆರೆವ ಪದ್ಮಾಸನದಿ ರಾಜಿಪ . . . ಭಾರತಿ ಪರಮವಿದ್ಯಾಶರಧಿ ನೆಲಸಿಹುದೆನ್ನ ಜಿಹ್ವೆಯಲಿ (ಅನಂತಾ. ೧-೧-೫). ಸಸಿಕಲೆ : ಸಸಿಕಲೆಗಳ ಖಂಡಗಳೊ . . . ಎನಲೆಸೆದವು ಕರ್ಪೂರವಸರಗಳಾ ಪುರದೊಳಗೆ (ಕುರಾಸಾಂ. ೩-೮೨). [ಸಸಿ$_2$ + ಕಲೆ$_2$]

ಸಸಿಗಾಣೆ (ನಾ). ಒಂದು ಬಗೆಯ ನಾಣ್ಯ : ಟಂಕೆಗ ಪೋಡಶದುಡ್ಯಂ ಬಿಂಕದಿ ಸಸಿಗಾಣೆ ನಾಲ್ಕು ಪೈಸಗಳೆಂಟಂ ಪಂಕಜಮಿತ್ರನ ಗಣನೆಗೆ ಭೋಂಕನೆ ತಾಂ ಒರಗಾಣ ದುಗ್ಗಾಣೆರಡಂ (ಭಾಸ್ಕರ. ೭೬-೯). [ಸಸಿ$_2$ + ಕಾಣೆ$_1$./ ತೆಲು. ಸಸ್ಯಾನಿ./ ಮರಾ. ಸಸಗಣೇ, ಸಸಗಾಣೇ, ಸಜಗಣೇ, ಸಜಗಾಣೇ]

ಸಸಿಗುಪ್ಪೆ 'ಸಸಿಕುಪ್ಪಿ' ನೋ.

ಸಸಿಗೆಱೆ (ನಾ). ಬಾಲಚಂದ್ರನ ಬಾಗುಗೆರೆ ; ಅರ್ಧಚಂದ್ರಾಕೃತಿ : ಮೊಗವೆಂಬ ಪೂರ್ಣಚಂದ್ರನೊಳೊಗೆದಳಿಕಾರ್ಧೇಂದು ಪೆತ್ತುದೆನೆ ಸಸಿಗೆಱೆಯಂ ಮಿಗೆ ಮೆಱೆವ ಭಸಿತತಿಲಕಮನುಗುರ್ಗೂನೆಯಿಂ ತಿರ್ದಿ ರಚಿಸಿದಳ್ (ರಾಜಶೇ. ೮-೩೨). [ಸಸಿ$_2$ + ಗೆಱೆ]

ಸಸಿಗೆಱೆದುಟಿ (ನಾ). ಅರ್ಧಚಂದ್ರಾಕೃತಿಯಲ್ಲಿರುವ ತುಟಿ ; ಸುಂದರವಾದ ತುಟಿ : ಪೊಳೆವ ಸಸಿಗೆಱೆದುಟಿಯ . . . ಪೊಸ ಪವಳದುಟಿಯೊಳುರನ್ನದುಟಿ ರಂಗುದುಟಿಗಳವರು . . . ಬರುತಿರ್ದರು (ಚಿಬಪು. ೩೭-೪೫). [ಸಸಿಗೆಱೆ + ತುಟಿ]

ಸಸಿತಪಕ್ಷ (ನಾ). ೧. ಬಿಳಿಯ ಗರಿಗಳನ್ನು ಹೊಂದಿರುವುದು; ಹಂಸ. ೨. ಶುಕ್ಲಪಕ್ಷದಿಂದ ಕೂಡಿರುವವನು; ಚಂದ್ರ. ೧, ೨ : ದ್ವಿಜರಾಜಾಭಿಧೆಯೊಪ್ಪದೇ ಸಸಿತಪಕ್ಷಂಗೆ (ರಾಜಶೇ. ೧೧-೭೪). [ಸಂ.]

ಸಸಿದರ (ನಾ). ಚಂದ್ರನನ್ನು (ತಲೆಯಲ್ಲಿ) ಧರಿಸಿದವನು; ಶಿವ: "ಶೂಲಿಯೊಳೆ ಸಸಿದರಂ" (ಕರ್ಣಾನಿ. ೮೬). [< ಸಂ. ಶಶಿಧರ]

ಸಸಿದಲೆಯ (ನಾ). = ಸಸಿದರ : "ಎಣ್ಮೆಯ್ಯಂ . . . ಸಸಿದಲೆಯಂ, ಗನಹಂ, ಅಯ್ಮೊಗಂ – ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೪೭-೧); ಸಸಿದಲೆಯಂಗೆ ತೆತ್ತು ಧನವಂ ಮನವಂ ತನುವಂ . . . ನಾಡೆ ರಂಜಿಸುವ ಚಿದಂಬುರಾಶಿ ಬಸವೇಶ್ವರ ಮುಖ್ಯಮಹೇಶಪೂಜಕಪ್ರಸರಪದಂಗಳೆನ್ನ ಬಗೆದಾವರೆಯೊಳ್ಪೆಲಸಿರ್ಕೆ ಸಂತತಂ (ಉದ್ಯಟ. ೧-೮); ಸಸಿದಲೆಯನಣುಗನೆಂಬುದ ತೋಱುವಂತೆ ರಾಜಿಸಲುರದೊಳೆ ಳವೆಱೆಯ ಮಾಳ್ಕೆಯಿಂ ಪುಲಿಯುಗುರ್ ಬಾಲಕಂ ಕಣ್ಗೆಸೆದನು (ಚಿಬಪು. ೫-೩೭).

[ಸಸಿ$_2$ + ತಲೆ$_1$ + -ಅ$_7$]

ಸಸಿನ 'ಸಸಿನೆ$_1$' ನೋ.

ಸಸಿನಂ 'ಸಸಿನೆ$_2$' ನೋ.

ಸಸಿನಂಗೆಯ್ 'ಸಸಿನೆಗೆಯ್' ನೋ.

ಸಸಿನಂಬಡು (ಕ್ರಿ). ಬಡವಾಗು (?) : ಅಸಿದೊಡಲ ಬಾಲೆ! ನೀಂ ಪಸಿದು ಸಸಿನಂಬಡದಂತಾರಯ್ಯರಾರ್! (ರಾಮಾಶ್ವ. ೬೭-೨೧). [ಸಸಿನ$_2$ + ಪಡು$_1$]

ಸಸಿನಗೆಯ್ 'ಸಸಿನೆಗೆಯ್' ನೋ.

ಸಸಿನಿಡು (ಕ್ರಿ). ೧. ಸರಿಯಾಗಿಡು ; ಸರಿಯಾಗಿರಿಸು : ಕಡುಪಿಂ ತೀಕ್ಷ್ಣಮಪ್ಪ ತನ್ನ ಕುಡುಗೋಲಂ ಕೊಂಡು ಕಂಠಾಗ್ರಮಂ ಪೊಡೆಯಲ್ ಜೋಲ್ವರಿವಾಳತಾಂಡ ಶಿರಮಂ ಕೈಯಾಂತು ಕಾರುಣ್ಯದಿಂ ಪಿಡಿದಾಗಳ್ ಸಸಿ[ಪಾಠಾಂ. ಸೆ]ನಿಟ್ಟು (ತ್ರಿಪುವಿ. ೧೪-೨೬). ೨. ಚೆನ್ನಾಗಿರಿಸು ; ಶೋಭಿಸುವಂತೆ ಇಡು : ಮಿಸುನಿಯ ಕೋಂಟೆ ಕೊತ್ತಳ ದಿವ್ಯರತ್ನ ತತ್ತಿಸಿದ ಹೊಂಗಳಸವೆ ತನಗೆ ಸಸಿನಿಟ್ಟ ಹಣತೆ ಜ್ಯೋತಿಶ್ಚಕ್ರದಂತೆ ರಂಜಿಸಿತು ರಕ್ಕಸನ ಕಣ್ಮನಕೆ (ಮೋಹಶ. ೧೧-೧೯). [ಸಸಿನ$_2$ + ಇಡು$_1$]

ಸಸಿನಿರಿಸು (ಕ್ರಿ). ಸರಿಯಾಗಿರಿಸು ; ನೆಟ್ಟಗಿರಿಸು : ಬಡಗತೊಲೆದಿರ್ದ ಶಿವಲಿಂಗಮಂ ಸಿನಿರಿಸೆ ಕೊಡುವೆವೀ ಹೊನ್ನನೆಂದಲ್ಲಲ್ಲಿ ದಂಗುರಿಸೆ (ಕೊಂಗುರ. ದೀ ೧೫೫-೯); ರೂಢಿಯನು ಸಸಿನಿರಿಸಿ ನಿಂದನು ನೋಡಿದನು ಕಾರುಣ್ಯದೃಷ್ಟಿಯಲೋಡುಕುಳಿಗಳನು (ನಭಾಗ. ೩-೮-೪೬). [ಸಸಿನ್ + ಇರಿಸು]

ಸಸಿನಿರು (ಕ್ರಿ) ಸುಮ್ಮನಿರು; ತೆಪ್ಪಗಿರು : ಸಸಿನಿರು ಮಹಾತ್ಮರು ನಿನ್ನೊಡನೆ ಉತ್ತರವ ಕೊಡುವರೆ (ಕುಮಾವಿ. ೭-೧೪); ಒಕ್ಕಮದವುಂಬ ತುಂಬಿಯನಕ್ಕಟ ಸಸಿನಿರದೆ ಪಿಡಿಯೆ ಪುಷ್ಕರದೊಳಗದು ಪೊಕ್ಕು ಮೊಲೆಯಲ್ಕೆ ಗನ್ನಿಗದಕ್ಕಾಡುವ ಕಳಭವಿಭಕದೇಂ ಸಂತಸಮೋ (ಮಲ್ಲಕಾ. ೩-೧೮೮); ಹಸಿದ ಮುನಿಪತಿ ಬರಲದೇತಕೆ ಸಸಿನಿರದ ನಾನಾ ಮಹಾವ್ರತಿಗಳ ಕೆಣಕಲೇಕೆ (ಸಾಳ್ವಭಾ. ೨೦-೧೩).

[ಸಸಿನ್ + ಇರು (< ಇರ್)]

ಸಸಿನ್, ಸಸಿನ (ನಾ). ೧. ಸೊಗಸಾಗಿರುವುದು : ಮುಪ್ಪಿನ ಷಡಕ್ಕರಿಯ ಅನುಭಾವದಲೆಯೊಂದು ಜಂಗಮನ ತಂಬೂರಿಯಲ್ಲಿ ಸಸಿನೆ (ಭಾವಜೀ. ೮-೧೫೨). ೨. ನೇರವಾದುದು ; ಓರೆಯಾಗಿಲ್ಲದಿರುವುದು : 'ಸಸಿನೆಗೆಯ್' ಪರಾ. ೩. ದೃಢತೆ ; ನಿಶ್ಚಲತೆ : ಮಿಸುಪ ಸಗುಣಾನಂದವಹಶೇಷಲಿಂಗವನು ಸಸಿನೆಯಿಂದನವರತ ಮುಖಸಚ್ಚಿಯೊಳ್ ಧರಿಸುತಿರ್ಪ ಕ್ರಮವಂತೆಂದೊಡೆ (ಮೃಲಾಶ. ೨-೬). ೪. ನಿಶ್ಚಲವಾದುದು; ಸ್ತಬ್ಧವಾದುದು : (೫). **ಸಸಿನ** : ೨. ಉರಿವ ಅನಲಂಗೆ ಶತಡೊಂಕು ಸಸಿನವೆಂಬುದುಂಟೆ (ಅವಚಂ. ೨೬೩-೧೨೦೨); ಕರ್ಕಂಡು ಮರಕ್ಕೆನಿತು ಮುಳ್ಕೆಂಬುದು ಡೊಂಕನೋ ಸಸಿನಮೋ ಎಂಬಂದಮೆಂದು ನಂದಶ್ರೀಯವಅಭಿಪ್ರಾಯಮಂ ತಮ್ಮ ತಂದೆಗೆ ತಿಳಿಯ ಪೇಳೆ (ಪುಣ್ಯಾಸ್ರ. ೩-೧೪ ವ). ೫. ಎದುರು ; ಅಭಿಮುಖ; ನೇರ: ನಮ್ಮೂರ ಮುಂದಣ ವಿಪುಲಗಿರಿಯ ಶಿವಿರದ ಸಸಿನಕಾ ಮಹಾವೀರಜಿನವರನ ರಂಜಿಪ ಸಮವಸರಣಂ . . . ಬರಲು (ಸಮ್ಮಕಾ. ೧-೧೩); ಭರದಿಂದ ಬಡಗಣ ದಿಗಧೀಶನಾನೃಪವರನು ನಡೆವ ಸಸಿನದೊಳು ಮರುತಮಾರ್ಗದೊಳೊಂದು ಸಮವಸರಣವನು ಕರಮೆಸೆವಂದದಿ ರಚಿಸಿ (ನೇಮಿಜಿ. ೨-೧೯). ೬. ಸರಿಯಾದುದು ; ನೇರ್ಪಾದುದು: ಪೊಡವಿಗತಿಶಯವೀ ಮುನಿಸು ನಿಮ್ಮಡಿಗಳಿಂದವೆ ಸಸಿನವಾದವುದೊಡೆಯ ಬಿಜಯಂಗೆಯ್ದು ಪೊರೆ (ಬಸಪು. ೪೭-೪೫); ದಕ್ಷನಸುವನು ಕರುಣಿಸಮರರುವಕ್ಷಯದ ತನು ಸಸಿನವಾಗಲಿ (ನಭಾಗ. ೪-೩-೫೩). ೭. ಸುಮ್ಮಗಿರುವುದು ; ತೆಪ್ಪಗಿರುವುದು: "ಸಸಿನಂ ಸೈತೆಂದು" (ಕರ್ಣಾನಿ. ೨೩). ೮. ಯುಕ್ತವಾದುದು ; ಉಚಿತವಾದುದು: ಹಾವಿನ ಡೊಂಕು ಹುತ್ತಕ್ಕೆ ಸಸಿನ ನದಿಯ ಡೊಂಕು ಸಮುದ್ರಕ್ಕೆ ಸಸಿನ ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ (ಬಸವ. ೧೪೪); ಕುಸುಮಫಲತಾಂಬೂಲ . . . ಅನಿತುವನೊಬ್ಬನೇ ಭೋಗಿಸುವಡವನೀಪಾಲರಿಗೆ ತಾ ಸಸಿನವೆನಿಸದು (ಕುಮಾಉ. ೩-೫೪). ೯. ಸರಿಯಾದ ನಡತೆ ; ಋಜುತನ : ಸಸಿನಮಾದುದು — ಋಜು, ಅಜಿಹ್ಮ, ಪ್ರಗುಣ (ನಾಚಿರಾ. ೩). ೧೦. ಶೋಭೆ ; ರಂಜನೆ : ಬಸವ ಮೊದಲಾಗೆಲ್ಲರೆದ್ದೊಂದಿಸುವ ಸಮಯದೊಳರಸುಪೀಠದಿ ಸಸಿನವಾದಿನನಾದಿಗಿಂ ಏರಿದನೊ ಎಂಬಂತೆ ಮಸಗಲು (ಬಿಜ್ಜಪು. ೮೦-೨೦). ೧೧. ಕ್ಷೇಮ ; ಸೌಖ್ಯ : ವಿಷಯದ ಬೇರನ್ನು ಬಿಸಿಮಾಡಿ ಕುಡಿದಾತ ಪಶುಪತಿಯಕ್ಕು ಸಸಿನಕ್ಕು (ಸರ್ವಜ್ಞ. ೩೦೯). ೧೨. ನಿಜ ; ದಿಟ ; ಸತ್ಯ : ಮುಸುಕಿದಾ ಕರ್ಮದ ಫಲಮೊ ಬಂಧಿಸಿಕೊಳುವನೋ ತಾನೆ ಕರ್ತನು ಸಸಿನವಿದಕಿಂತಾಗಿ ದಂಡಿಪ ಕರ್ತನುಂಟೊರ್ಬ (ಬಸಪು. ೫೪-೧೫); ಸಸಿನ ಕೇಳ್ಕೆ ವೀರಭೋಜ್ಯಾ ವಸುಧೆಯೆಂಬುದು (ಸಾಳ್ವಭಾ. ೪೨-೨೫). ೧೩. ಸಿದ್ಧತೆ ; ಸಜ್ಜು : ಬಲಿದು ಸಸಿನವ ಮಾಡಿ ಖಾತಿಯ ತಳೆದು ಕೂರಂಬಿನಲಿ ಹೂಳಿದನಳವಿಯಲಿ ರಿಪುಗಜವನಾ ಭಗದತ್ತನವಯವವ (ಕುಪ್ಪಾದ್ರೋ. ೩-೫೧). ೧೪. ಸುಲಭ ; ಸಲೀಸು : ಎನ್ನಂತಿರುತ್ತಮಮಪ್ಪಾ ಮನುಜಂಗೆ ಮುಕ್ತಿ ಸಸಿನಂ ತಾನಕ್ಕುಂ (ಬಾಧಪ್ರ. ೧-೬೮). ೧೫. ಲಘು ; ಹಗುರ: ಹಸಿಯದಿರೆ ಕಡುಗಾಯ್ದು ಬಿಸಿನೀರ ಕುಡಿಯುವದು . . . ಸಸಿನವಾಗಿಹುದು (ಸರ್ವಜ್ಞ. ೨೦೧೦). ೧೬. ಒಂದು ಬಗೆಯ ಸಸ್ಯ ; ಭದ್ರಮುಸ್ತೆ : "ಸಸಿನ — ಮುಸ್ತೆ" (ಲಿಪಧಿ. ೧೭೪).

ಸಸಿನ್, ಸಸಿನಂ (ಅ). ೧. ನೇರವಾಗಿ ; ಸೀದಾ ; ನೆಟ್ಟಗೆ : ಸಸಿನೆ ತನ್ನಾಶ್ರಮಕೆ ಕೊಂಬೊಯ್ದಸಮಲಿಂಗಾವಸರಮಂ ಮಾಡಿಸಿ ನಯದಿ ತನ್ನ ಪ್ರಸಾದವನಿಕ್ಕಿ (ಬಸಪು. ೨೦-೭); ಇದಿರಾಗುವರು ಬೆನ್ನು ಬೆನ್ನುಗಾಣಿಸಿ ತೇಲ್ಪರದ ಬಟ್ಟು ಸಸಿನೆ ಹರಿವರು (ಭರಚ. ೧೨-೬೮). 'ಸಸಿನೆವರಿ' ಪರಾ. ೨. ಬೆನ್ನಾಗಿ ; ಸೊಗಸಾಗಿ : ಇಂದು ಗುಹೇಶ್ವರನ ಸಮವರ್ತಿ ಬಸವಣ್ಣ ನಿಂದಿರಿಸಿ ಸಸಿನೆ ಮಾತನಾಡಿಸಿದನು (ಅವಚಂ. ೩೮೨-೧೯೧೯); ಬಿದ್ದ ಪೆರ್ಮೊಲೆಗಳಿಗೆ ಜವಕೆಯಂ ಸಸಿನೆ ಬಿಗಿದಿವೆಯುದಿರ್ದ ಕಣ್ಣ ಕಾಡಿಗೆಯಚ್ಚ . . . ಮುದುಪಾಱಿರ್ದಳೊಂವೆಸೆಯೊಳು (ಹಚಂಪ್ರ. ೪-೨೭). ೩. ಸರಿಯಾಗಿ ; ತಕ್ಕುದಾಗಿ : ಕಾವ್ಯದೊಳು ತಪ್ಪುಳ್ಳದಿದಜೊಳಗೆ ಪರರು ಕೈಯಿಕ್ಕದಂತೆ ಸಸಿನೆ ಮಾಡುವುದು (ಹಚಕಾ. ೧-೨೦); ಎಸೆವ ಮುತ್ತಿನ ಹಾರಗಳನೊದಿಸುತ ಪದಕವನೊಱಗದಂದದಿ ಸಸಿನೆ ಮಾಡುತ (ಜಿದಚಂ. ೮-೫೧); ಕಳೆದುಡುಗೆಗಳನೋಸರಿಸಿ ಸಸಿನೆ ಮಾಡುತ್ತೈದಿ ಬರಲ್ (ಕಾಶಿಕಾ. ೧೦-೪). ೪. ದೃಢವಾಗಿ; ನಿಶ್ಚಲವಾಗಿ : ಪಸರಿಸಿದಾಜ್ಞೆಯೆಂಬ ಮೊಲೆವಾಲೆಱೆದುತ್ತಮಧರ್ಮಮಾರ್ಗದೊಳ್ ಸಸಿನಡಿಯಿಕ್ಕುವಂತೆಸಗಿ ತೋಳ್ಗಳ ತೊಟ್ಟಿಲೊಳಿಟ್ಟು ಮೇದಿನೀಶಿಶುವಂ . . . ಕೂರ್ತು ಪಾಲಿಸಲ್ (ನಳಚಂ. ೩೪); ಕಡುಪಿನುರಿ ನದಿಯಡ್ಡ ಬಿದ್ದಡೆ ಅಡಗಿಸುತ್ತಂ ಸಸಿನೆ ಪಥದೊಳು ನಡೆವ ಭಾಷೆ (ಬಸಪು. ೩೨-೪); ಅಸಮಪರಾಕ್ಷರಿಯ ಉಸಿರ ಕೊನೆಯಲ್ಲಿರಿಸಿ ಸಸಿನೆ ಕುಳ್ಳಿರ್ದು ಜಪಿಸದಾ ಶಿವಯೋಗಿ ಕಿಸವಾಯಿಯಕ್ಕು (ಸರ್ವಜ್ಞ. ೫೬೬). ೫. ಸುಮ್ಮನೆ ; ತೆಪ್ಪಗೆ ; ಮೌನವಾಗಿ : ಸಸಿನೆ ಬಟ್ಟೆಯ ಹೋಗಿ ವಸ್ತ್ರದ ಗಸಣಿ ನಿಮಗೇಕೆ (ಸಾಳ್ವಭಾ. ೩೨-೬೧); ಸೋದರರು ಸಸಿನೆನ್ನ ಮಾತ ಕೇಳ್ವರೆ (ಭರಚ. ೪೫-೧೩೩); ಸಸಿನೆ ಕುಳ್ಳಿರು ಸಖಿಯೆ (ಸುದಾಮ. ೧೬-೨೮). ೬. ದಿಟವಾಗಿ ; ನಿಜವಾಗಿ: ಸಸಿನೆ ಸಗ್ಗದ ಸೌಧಮುಕ್ಕಾಕಲಶಮಿದುವೊ . . . ಎನಲ್ಕೆರದುದ್ಯೆಂದವದಿಂಬವು (ವಂಕಾಶಾ. ೫-೬-೧೪). ೭. ಸಂಪೂರ್ಣವಾಗಿ : ಪಶುತನಂ ಪತಿತನಂ ಮಾಯಾವಿಮೋಹಿತಂ ಸಸಿನೆಯದು ಪ್ರಳಯಮಾಗಲ್ಕೆ ಪಶುವುಂ ಪತಿಯುಮೊಸೆದು ನೋಡಲ್ಕಿಲ್ಲವಾಗಲಿದುಮ್ಮಿಕ್ಕಸ್ಥಲಂ (ಮಹಾವಿ. ೧೦-೯೧). **ಸಸಿನಲಿ** : ೧. ಮುಸುಕಿನೊಳಗಿರ್ದ ಪಾವಂ ಸಸಿನಂ ಮತ್ರಿತನ ಮೇಲೆ ಬಿಸುಡಲ್ . . . ಕಾಳೋರಗಂ ಕರ್ಚಲ್ (ದಶಕು. ೯-೯೮).

[< ಸಸಿನೆ./ ತೆಲು. ಸಸಿಗಾ]

ಸಸಿನೆಕೂಟ (ನಾ). [ಕಾಶಾ] ಒಂದು ಬಗೆಯ ರತಿಬಂಧ : ಸಸಿನೆಕೂಟಮೆಂದು ಮರ್ಕಟಕರಣಂ (ಕಾಮಶಾ. ೨೩೭). [ಸಸಿನ್ + ಕೂಟ]

ಸಸಿನೆಗೆಯ್, ಸಸಿನಂಗೆಯ್, ಸಸಿನಗೆಯ್, ಸಸಿನೆಗ್ಗೆ (ಕ್ರಿ). ೧. ನೇರಗೊಳ್ಳುವಂತೆ ಮಾಡಿಸು ; ನೇರಗೊಳಿಸು : ಭಕ್ತರೆ ಸಮರ್ಥರವರ್ಗಳ ಕೈಗಳಿಂದಮಿಾ ವರಶಿವಲಿಂಗಮಂ ಸಸಿನೆಗೆಯ್ಯುವೆನೆಂದೆನುತಿರ್ದನಾ ನೃಪಂ (ತ್ರಿಪುವಿ. ೨೦-೧೩); ತಾಂಡವಮೂರ್ತಿಯ ತನುವಂ ಸಸಿನ[ಪಾಕಾಂ. ನ]ಗೆಯ್ವವಂಗೊಲವಿತ್ತಂ (ವೃಷವಿ. ೧೦-೩೨). ೨. ಸರಿಪಡಿಸು ; ಓರಣಗೊಳಿಸು ; ಸರಿಮಾಡು : ಕುರುಳಂ ನುಣ್ಗಪ ವೇಣಿಯಂ ಸಸಿನೆಗೆಯ್ಯ . . . ಉಜ್ಜುಗದೊಳಾಂ ಮೆಯ್ಯೋಂಕಿ ತತ್ಕಾಮಿನೀಕರುಣಾಲೋಕನಸಿದ್ಧಿಯಂ ಪಡೆದು (ದಶಕು. ೯-೨೨); ಬಲಲ್ಕೆಯಂ ತಳೆದ ಹಂಸೆಯ ಹೆಚ್ಚಿದ ಹೊನ್ನ ಪಕ್ಕವಂ ಮಿಸುಪ ಕರಾಗ್ರದಿಂ ಸಸಿನೆಗೆಯ್ದು (ನಳಚಂ. ೧೦೧). ೩. ಉಜ್ಜ್ವಲಗೊಳಿಸು ; ಹೆಚ್ಚು ಪ್ರಕಟಗೊಳ್ಳುವಂತೆ ಮಾಡು : ಅವಯವ ಶೋಭೆಯಂ ಸಸಿನೆಗೆಯ್ಯ . . . ಬಲ್ಲುಗೆ ಸೂಳೆಯರಭ್ಯಗೊವ್ವುಗುಂ (ದಶಕು. ೯-೧೬). **ಸಸಿನಂಗೆಯ್** : ೨. ಮಿಸುನಿಯ ಕಡಗದ ಕೀಲಂ ಸಸಿನಂಗೆಯ್ಯಂತೆ . . . ಹಸ್ತಮಂ ಪಿಡಿದು ಸಮಾಪಕ್ಕೊಲ್ದು ಕರೆದನಬಲೆಯನರಸಂ (ದಶಕು. ೧-೬೩); ಹಸ್ತಾಗ್ರದಿಂ ಮೇಲುದಂ ಸಸಿನಂಗೆಯ್ಯುತಂ ಸತಿಯೆಯ್ತುಂದಳ್ (ನಳಚಂ. ೬೨೬). **ಸಸಿನಗೆಯ್** : ೨. ಮದ್ಯಾಕುಳಚಿತ್ತಮಂ ಸಸಿನೆಗೆಯ್ಯೆ ಗುಣಪ್ರಕರಕ್ಕೆ ತಕ್ಕುದೇ (ನಳಚಂ. ೨೦೨). **ಸಸಿನೆಗ್ಗೆ** : ೨. ಜಗುಳ್ದ ಕಚಾಗ್ರಮಂ ಸಸಿನೆಗ್ಗೆದು . . . ಚಿತಾಗ್ನಿಯಂ ಪುಗುವಳಂ ಮಿಗೆ ಕಂಡೆಂ (ದಶಕು. ೪-೫೧). [ಸಸಿನ್ + ಕೆಯ್]

ಸಸಿನೆಗ್ಗೆ 'ಸಸಿನೆಗೆಯ್' ನೋ.

ಸಸಿನೆವರಿ (ಕ್ರಿ). ನೇರವಾಗಿ ಹೋಗು ; ಎದುರಿಗೆ ಚಲಿಸು : ತಾನುಂ ಹಿಡಿಂಬೆಯುಂ . . . ಸಸಿನೆ[ಪಾಕಾಂ. ಪಸಿಗೆ]ವರಿದುಂ ಬವಳಿವರಿದುಂ ಬಾನಂಗುಬಿಗೆವರಿದುಂ ಸೂಟ್ಪರಿದುಮಾಡುವಾಗಳುಭಯಬಲಂಗಳ್ ಬೆಕ್ಕಸಂಬಟ್ಟು ನೋಡಿ (ಪಂಪಭಾ. ೧೨-೧೫೪ ವ). [ಸಸಿನ್ + ಪರ್]

ಸಸಿನೆಳಲು (ನಾ). ಚಂದ್ರನ ಛಾಯೆ ; ಬೆಳುದಿಂಗಳು : ಬಿಸಿಲ ಛಡಾಳದಿ ಬೆಂದರ್ಗೆ ಮಡುನೀರು ಸಸಿನೆಳಲಿದಿರ್ವಂದಂತೆ ಅಸಿಯಳ ಮದನನುತಾಪಕೆ ಬಂದು ಸಂಧಿಸಿತೀಶ್ವರಿಯ ನಿರೂಪ (ಮೋಹತ. ೨೭-೧೭). [ಸಸಿ$_2$ + ನೆಳಲು$_1$ (< ನೆಟಲ್$_1$)]

ಸಸಿಬಟ್ಟು 'ಸಸಿವಟ್ಟು' ನೋ.

ಸಸಿಮಣಿ 'ಸಸಿವಣಿ' ನೋ.

ಸಸಿಮತಿ (ನಾ). ಒಬ್ಬಾಕೆಯ ಹೆಸರು : ಸಸಿಮತಿಶ್ರೀಗನ್ನಿಯರ್ . . . ಸ್ವರ್ಗ್ಗಾಲಯ ಕೈಜಿಬಾರ್ (ಏಕ. I., ೭೭ ೨; ಸು. ೫೫). [< ಸಂ. ಶಶಿಮತಿ]

ಸಸಿಮೊಗ (ನಾ). ಚಂದ್ರನಂತಿರುವ ಮುಖ ; ಚಂದ್ರವದನ : ಸಸಿಮೊಗದೊಳ್ ನಕ್ಷತ್ರಂ ಮಿಸುಪುದು ಮರ್ಯಾದೆಯೆಂದು ಸಕಲಜನಂ ಭಾವಿಸುತಿರೆ ನುಣ್ಬೆಳಗಿಂ ರಂಜಿಸುಗುಂ ನಾಸಾಗ್ರದಲ್ಲಿ ಮೂಕುತಿಯವಳಾ (ದಶಕು. ೬-೬೧); ಹುಣ್ಣಿಮೆಯ ಸಸಿಮೊಗದೊಳುದಿಸೆ ಬೆಮರ್ವನಿ (ಚಿಬಪು. ೧೯-೨೬); ಸಸಿಮೊಗದ ಕಿಸುವಾಯ ಪುಸಿನಡುವಿನರಸಿ (ರಾಮಾಶ್ವ. ೮೭-೨೩). [ಸಸಿ$_2$ + ಮೊಗ]

ಸಸಿಯೊಡಲ್ (ನಾ). ಚಂದ್ರಬಿಂಬ ; ಚಂದ್ರಮಂಡಲ.

ಸಸಿಯೊಡಲಡಗು = (ಚಂದ್ರನಲ್ಲಿರುವುದೆಂದು ಭಾವಿಸಲಾದ) ಸುಧೆ; ಅಮೃತ : ಸಸಿಯೊಡಲಡಗ ಭಕ್ಷಿಪರಿಂಗೆ ಲೇಸ ಸೂಚಿಸೆ ಬೃಹಸ್ಪತಿ (ಮೋಹತ. ೬-೩).

[ಸಸಿ$_2$ + ಒಡಲ್]

ಸಸಿಲ್ 'ಸಿಸಿಲ್' ನೋ.

ಸಸಿವಚ್ಚ (ನಾ). ಚಂದ್ರನನ್ನು ಆಭರಣವಾಗಿ ಧರಿಸಿದವನು ; ಶಿವ : ನಾಡ ರಂಜಿಸಿದಂ . . . ಸಸಿವಚ್ಚಂ ಕರುಣಾಕರಂ ನಿರುಪಮಂ ಸರ್ವಾಂತಕಂ ಶಂಕರಂ (ಉದ್ಭಟ. ೧೨-೧೪೧); ಸಸಿವಚ್ಚಂ ಸಮ್ಮಂಗೊಟ್ಟ ಮಹಾದೇವೆಮ್ಮಂ ಪೊರೆಗೆ (ಉದ್ಭಟ. ೧-೨). [ಸಸಿ$_2$ + ಪಚ್ಚ$_2$]

ಸಸಿವಟ್ಟು, ಸಸಿಬಟ್ಟು (ನಾ). ಚಂದ್ರಬಿಂಬ ; ಶಶಿಮಂಡಲ : ಸಸಿವಟ್ಟಂ ಕೋಟಿಯಂ ಕೀಟ್ಟಡಿಸುವಮಳಿನಾಂಗಪ್ರಭಾಸಂಚಯಂ ಚುಂಬಿಸೆ ಸರ್ವಾಶಾಂತಮಾಂ . . . ತೋಱಿದಂ ವಿಶ್ವರೂಪಂ (ಉದ್ಭಟ. ೧೧-೧೨೮). **ಸಸಿಬಟ್ಟು** : ಸಸಿಬಟ್ಟುಗಾಗಜ ದೊಳತನು ಕತ್ತುರಿಮಸಿಯೊಳೊಸೆದು ಬರೆದರ್ದ ಮೋಹಾಗಮೋಂಕಾರಮೋ . . . ಎನಲ್ ಪೊಸತಾಯ್ತು ವಿಧುಬಿಂಬಮಧ್ಯದಂಕಂ ಪಳಕುವಸೆಯರ್ದ ಕಾಳಿಯಂತೆ (ಚಿಬಪು. ೯-೨೫). [ಸಸಿ$_2$ + ಬಟ್ಟು]

ಸಸಿವಣಿ, ಸಸಿಮಣಿ (ನಾ). = ಸಸಿಗಲ್ : ಮತ್ತಮೆಂತಪ್ಪ ದುರ್ದಾಂತರಾದೊಡಂ ದುರುಳರಾದೊಡಮವರ ಕಲ್ಲೆರ್ದಗಳುಂ ಸಸಿಯಂ ಕಂಡ ಸಸಿವಣಿಯಂತೆ ತಣ್ಬೇಱಿ ಕಱಂಗುಗುಂ (ಚಕವಾ. ೭೮-೧೯). **ಸಸಿಮಣಿ** : "ಸಸಿಮಣಿಯೊಸರ್ಗಲ್" (ಚತುನಿ. ೧೧೪); ಸಸಿಮಣಿವೇದಿಕೆಗಳ ಕಡುಸೊಂಪಿಂ ಮಾಣಿಕ್ಯದ ಸೋಪಾನಾವಳಿಯಿಂ . . . ಕಣ್ಣತಿಮಂಗಳಮಂ ಮಾಡುತ್ತುಂ (ಉದ್ಭಟ. ೫-೧೮). [ಸಸಿ$_2$ + ಮಣಿ$_3$]

ಸಸಿವದನ (ನಾ). = ಸಸಿಮೊಗ : ಮೊಳಿಮೊಲೆಯೊಳೆಸವ ಸಸಿವದನದೊಳ್ಕುಡಿ ನೋಟದೊಳ್ . . . ಸಲೆ ರಾಜಿಸುವ ತನುಲತೆಯೊಳೊಪ್ಪಿರ್ದರೆಳವೆಣ್ಗಳಚ್ಚ ಪೊಸಜವ್ವನದೊಳಾವಗಂ ಮಿಟಪೀವರಾಶ್ರಯದೊಳು (ಕೃಷ್ಣಿಭಾ. ೬-೨೭).

[ಸಸಿ$_2$ + ವದನ]

ಸಸಿವದನೆ (ನಾ). ಚಂದ್ರನನ್ನು ಹೋಲುವ ಮುಖವುಳ್ಳವಳು ; ಸುಂದರಿ: ಸಸಿವದನೆಯ ತೆಳ್ಬಸಿರ್ಗಾ ಸರಸಿಜಗರ್ಭನೀಯೆ ತಮ್ಮೊಳ್ಪುಮನಿಂ ಬೇಸತ್ತು ಪುಯ್ಯಲಿಡುವುವು ದೇಸಿಗರಂತೇಗಳುಂ ಸುರಂಭಾದಳಗಳ್ (ಧರ್ಮಾಮೃ. ೩-೧೫೦); ಸಸಿವದನೆಯಂ ನೋಡದಿಂತು ಮಾಡಿದರುಂಟೆ (ಮಾನರ. ದೇ. ೧೭೦-೨).

[ಸಸಿವದನ + – ಎ$_2$]

ಸಸಿವಾರ (ನಾ). ಒಂದು ಬಗೆಯ ಮರ : ಮುಳ್ತುಗ ಸಸಿವಾರೊಡವಾರ ಕಂಚಿ . . . ಹುಲಗಿಲ್ಲೂರವಿ (ಹಮ್ಮೀರ. ೪-೬೮). [?]

ಸಸಿವೆಳಗು (ನಾ). ಚಂದ್ರನ ಕಾಂತಿ ; ತಿಂಗಳ ಬೆಳಕು ; ಬೆಳುದಿಂಗಳು : ಸಸಿ [ಪಾಠಾಂ. ಶಶಿ]ವೆಳಗೊಸೆದು ಪಸರಿಪಂತೆ ಕಾಂತಿಯೊಳೆಸೆವ ಧವಳಪುಣ್ಯಕಾಯ . . . ಸಲಹಿಳೆಯ (ಮೋಳಿಪು. ೧-೨). [ಸಸಿ$_2$ + ಬೆಳಗು$_2$]

ಸಸಿವೆಱೆ (ನಾ). ಚಂದ್ರಬಿಂಬ ; ಚಂದ್ರಮಂಡಲ : ಸಸಿವೆಱೆ [ಪಾಠಾಂ. ಶಶಿವೆಱೆ, ಸಸಿಗೆರೆ] ಬಂದು ಬೆಳ್ಮುಗಿಲೊಳಪೊಗುವಂತೆ ಬಿಸಜವದನೆ ಬಿಂಕದೊಳು ಒಸೆದೆಯ್ತಂದೆಳ ಪೊಕ್ಕಳು ಮಿಸುನಿಯ ಕುಸುರಿವೆಸದ ಸೆಜ್ಜೆವನೆಯ (ಕುರಾಸಾಂ. ೮-೪).

[ಸಸಿ$_2$ + ಪೆಱೆ]

ಸಸಿಸೂಡಿ (ನಾ). ತಲೆಯಲ್ಲಿ ಚಂದ್ರನನ್ನು ಧರಿಸಿದವನು; ಶಶಿಚೂಡ; ಶಿವ : ಪತಿಯಾದ ಸಸಿಸೂಡಿಯೆಂತು ಪಶುಪತ್ಯನಾಶ್ಚರ್ಯಂ (ಪಾಸೋಪ. ೯-೫೦).

[ಸಸಿ$_2$ + ಸೂಡು$_1$ + – ಇ$_3$]

ಸಸಿಸೇಖರ (ನಾ). = ಸಸಿಸೂಡಿ: ಕುಲುವಂದವಂಶದೊಳ್ ಜನಿಯಿಸಿದಂ ಪಯೋನಿಧಿಯೊಳುಜ್ವಳ ರತ್ನವಿನಂಗೆ ತೇಜವಾರ್ಪಿನ ಸಸಿಸೇಖರನಿಟಳಾಂಬಕದಂತೆನೆ . . . ಪೊಗಳದಿರ್ಪ್ಪವರಾರು ಕುಮಾರಮೇರುವಂ (ಏಕ. VII (R). ನಾಗಮಂ. ೮೧-೪೫; 1224).

[< ಸಂ. ಶಶಿಶೇಖರ]

ಸಸುನ (ನಾ). ರತ್ನದ ಒಂದು ಬಗೆಯ ದೋಷ (?) : ಅಕ್ಕರಿಂ ಧರಿಸಿದವರಿಗೆ ಫಲವಂ ಪೇಳುವೆಂ ಕರ್ಕರಕೆ ಭಿನ್ನವೆಂದೊಡದು ಹುಟ್ಟಿಹುದೆಂದು ಅಕ್ಕಜದ ಮೊರಬು ಲುಳಿಯಾಣ ಸಸುನಗಳೆಂದು ಪುಟದೋಷಮಂದಿರ್ಪುದು (ರತ್ನಶಾ. ೯-೫೫). [?]

ಸಸೇಮಿರ 'ಸಸೇಮಿರಾ' ನೋ.

ಸಸೇಮಿರಾ 'ಸಸೇಮಿರ' ನೋ.

ಸಸೇಮಿರ, ಸಸೇಮಿರ, ಸಸೇಮಿರಾ (ನಾ). ಹುಚ್ಚುತನ, ದಡ್ಡತನ, ಮೊಂಡುತನ ಮುಂತಾದುವನ್ನು ಮತ್ತು ಅವುಗಳನ್ನು ಹೊಂದಿರುವ ವ್ಯಕ್ತಿಯನ್ನು ಸೂಚಿಸುವ ಒಂದು ಪದ : ಜಗತ್ತನ್ನೇ ನಿರ್ಲಕ್ಷಿಸಿ ಸಸೇಮಿರನಂತೆ ವರ್ತಿಸು (ಕಾಮಿಕಾಂ. ೧೩). **ಸಸೇಮಿರ** : ನಾ ಕಾಣೆ, ನಾನರಿಯೆ ಎಂಬ ಸಸೇಮಿರವನ್ನು ನುಡಿಯುತ್ತಲೇ ಬಂದರು (ಮಾಮರಾ. ೧೭೧). **ಸಸೇಮಿರಾ** : ನರಸಿಂಹಯ್ಯನವರು ಸಸೇಮಿರಾ. ಅವರು ಮತ್ತಷ್ಟು ರೇಗಿ . . . ಎಂದರು (ತುರಾಯಿ. ೨೧).

[<— ಮರಾ. ಸಸೇಮಿರಾ./ ತೆಲು. ಸಸೇಮಿರಾ]

ಸಸ್ತನಿ (ನಾ). ಸ್ತನವುಳ್ಳ ಪ್ರಾಣಿ : ಅಳಿಲು : ಸಾಮಾನ್ಯವಾಗಿ ಗಿಡಮರಗಳಲ್ಲಿ ವಾಸಿಸುವ ಸಸ್ತನಿ (ಕವಿಕೋ. I, ೬೩೪). [IP 'ಸ್ತನಿ' ಎಂಬುದು ಸಂಸ್ಕೃತದಲ್ಲಿ ಸರಿಯಾದ ರೂಪ. ಆದರೆ ಅದಕ್ಕೆ 'ಸ' ಸೇರಿದ ಈ ತಪ್ಪುರೂಪ ಬಳಕೆಯಲ್ಲಿ ಬಂದಿದೆ]

ಸಸ್ತಾ, ಸಸ್ತು (ನಾ). ಅಗ್ಗ ; ಕಡಿಮೆದರ : ನೀಟಾಗಿರಬೇಕು . . . ಸಸ್ತಾ ದಲ್ಲಿರಬೇಕು (ರುಕ್ಮಿಮಾ. ೮೩). **ಸಸ್ತು** : ಇದಲ್ಲದ ನಿನಗ ಮಾಲು ಸಸ್ತು ಸಿಗಬೇಕು (ರತ್ನಧ್ವ. ೨೨೦). [<— ಹಿಂ. ಸಸ್ತಾ, ಸಸ್ತೇ; ಮರಾ. ಸಸ್ತ, ಸಸ್ತಾ]

ಸಸ್ತು 'ಸಸ್ತಾ' ನೋ.

ಸಸ್ನೇಹ (ಗು). ೧. ಗೆಳೆತನದಿಂದ ಕೂಡಿದ; ಮೈತ್ರಿಯಿಂದ ಕೂಡಿದ: ಸೂರಾರು ಜನರ ಆ ಸ್ನೇಹಪರಿಚಯದಿಂದಲಂದಾಮೋದಗೊಂಡೆ (ಇಂಜಾಪ. ೩೬-೫೨). (ನಾ). ೨. ಸ್ನೇಹಪೂರಿತವಾಗಿರುವಿಕೆ; ಗೆಳೆತನದಿಂದ ಕೂಡಿರುವಿಕೆ: ಗಂಗರಾಜನು ಸ್ನೇಹದಿಂದ ಭರಮಹೆಗ್ಗಡೆಯ ಎರಡೂ ಕೈಗಳನ್ನು ಹಿಡಿದು . . . ಆದರದಿಂದ ವಿಚಾರಿಸಿದನು (ಸವತಿ. ೬೫). [ಸಂ.]

ಸಸ್ಪೃಹ (ಗು). ಆಸೆಯಿಂದ ಕೂಡಿದ; ಬಯಕೆಯಿಂದ ತುಂಬಿದ: ಸಸ್ಪೃಹ ಸಾನಂದಸಲೀಲಸಸ್ಮಿತಮುಖವ್ಯಾಭಾಸಿ ನೋಡಿಂತು ಸನ್ನಿಹಿತಂ ಸೌಂದರರೂಪಮಿನ್ನು ಮರ್ದೆಯೊಳ್ ಮಜ್ಜೀವಿತಾಧೀಶನಾ (ಆದಿಪು. ೫-೪೨). [ಸಂ.]

ಸಸ್ಪೃಹತೆ (ನಾ). ಬಯಕೆಯಿಂದ ಕೂಡಿರುವುದು ; ಆಸೆಯಿಂದ ತುಂಬಿ ರುವುದು : ನೀವು ನಿಮ್ಮತುಳಿತ ದಯಾದೃಷ್ಟಿಗಳನೆನ್ನಲ್ಲಿ ಕೀವಿ ಪಸರಿಸಲೆನ್ನ ಸಸ್ಪೃಹತಾವಲೋಕನವಿಂತು ನಿಮ್ಮ ಸದಾವಿಲೋಕನದೊಳು ನಿಲಿಸಿ ಪೊರೆ ಮಿಕ್ಕಿನವ ನೊಲ್ಲೆ (ಬಸಪು. ೧೮-೧೦೨). [ಸಂ. ಸಸ್ಪೃಹತಾ]

ಸಸ್ಫುಟ (ಗು). ಸ್ಪಷ್ಟತೆಯಿಂದ ಕೂಡಿದ ; ಸ್ಫುಟವಾದ : 'ಸಸ್ಫುಟವೃತ್ತಿ' ಪರಾ.

[< ಸಂ. ಸ್ಫುಟ]

ಸಸ್ಫುಟತೆ (ನಾ). ಸ್ಪಷ್ಟವಾಗಿರುವಿಕೆ; ಸ್ಫುಟತೆಯಿಂದ ಕೂಡಿರುವಿಕೆ: ದನಿ ಕುಗ್ಗಿದುದು ನಾಲಗೆಗೆ ಸವನಿಸದು ಸಸ್ಫುಟತೆ (ತಿಮ್ಮಶಾಂ. ೧-೪೫). [ಸಸ್ಫುಟ + – ತ್ವ$_3$]

ಸಸ್ಫುಟವೃತ್ತಿ (ನಾ). ಸ್ಫುಟವಾದ ರೀತಿ ; ಸ್ಪಷ್ಟವಾದ ಮಾರ್ಗ : ಸಸ್ಫುಟವೃತ್ತಿ ಜಿಹ್ಮಗ ಜನಿಯಿಸಲಿ ಸಂತಾಪವಡಗಲಿ (ತಿಮ್ಮ.ಶಾಂ. ೧-೪೬). [ಸಸ್ಫುಟ + ವೃತ್ತಿ]

ಸಸ್ಮಿತ (ಗು). ೧. ಮುಗುಳುನಗೆಯಿಂದ ಕೂಡಿದ; ಮಂದಹಾಸದಿಂದ ಕೂಡಿದ: ಸಸ್ಪೃಹಸಾನಂದ ಸಲೀಲಸಸ್ಮಿತಮುಖವ್ಯಾಭಾಸಿ ನೋಡಿಂತು ಸನ್ನಿಹತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತೇಶನಾ (ಆದಿಪು. ೩-೪೨); ಮಹಿತ ಮಹೋದಯಂ ಕಮಳಬಂಧುರಸಸ್ಮಿತವಕ್ತ್ರಭಾಸುರಂ (ರಾಜಶೇ. ೧-೮). ೨. ಚೆನ್ನಾಗಿ ಅರಳಿದ ; ವಿಕಸಿತವಾದ : ಸಸ್ಮಿತಚಂಪಕಮಳಿಯನಪಸ್ಮಾರಿಯನತುಳವಾದ್ಯ ರುತಿಯಳಿಪುದೇಂ ವಿಸ್ಮಯಮೆ (ವೃಷಪ. ೧-೪೬). [ಸಂ.]

ಸಸ್ಯ (ನಾ). ೧. ಧಾನ್ಯ ; ಕಾಳು. ೨. ಗಿಡ, ಮರ ಮುಂತಾದುವುಗಳಿಂದ ಉತ್ಪತ್ತಿಯಾಗುವ ಕಾಯಿ, ಹಣ್ಣು ಇತ್ಯಾದಿ ; ಫಸಲು : ''ಸಸ್ಯಂ, ವೃಕ್ಷಾದೀನಾಂ ಫಲಂ. ಮರಗಳು ಮೊದಲಾದವುಗಳ ಫಲಕ್ಕೆ ಹೆಸರು. ಅಂದರೆ ಫಸಲು, ಹಣ್ಣು ಕಾಯಿ ಧಾನ್ಯ ಮುಂತಾದ ಫಲ'' (ಸಿದ್ಧಾಂತಿ. ೧೧೪). ೩. ಗಿಡ, ಬಳ್ಳಿ ಮುಂತಾದುವು : ಆ ನಾಡೂರೂರ್ದಪ್ಪದದೇನೆಸವುವೂ ಕೌದ್ರವೀಣದ . . . ಮೌದ್ಗೀನದ ಬಹುಸಾರಸಸ್ಯಸಕಳಫಳಂಗಳ್ (ಪುಷ್ಪಪು. ೨-೧೨); ಸಸ್ಯಗಳನ್ನು ಸಂಗ್ರಹಿಸುವುದಕ್ಕೂ ಅವುಗಳನ್ನು ಒಣಗಿಸಿ ಒಪ್ಪಗೊಳಿಸುವುದಕ್ಕೂ ಕ್ರಮಗಳಿವೆ (ಹಸುಹೂ. ೧೨೨). ೪. ಉತ್ತಮದರ್ಜೆ ; ಶ್ರೇಷ್ಠವರ್ಗ. ೫. ಒಂದು ಬಗೆಯ ಉತ್ತಮದರ್ಜೆಯ ರತ್ನ : ಪುಷ್ಕರಾಗ ಸಸ್ಯ ಕರ್ಕೇತನ ಇಂದ್ರನೀಲಂ ಮೊದಲಾಗೊಡೆಯ ಅನರ್ಘ್ಯಮಪ್ಪ ಮಾಣಿಕದಿಂ ಸಮೆದ ಪಲವುಂ ನಾನಾಪ್ರಕಾರದ ಕಂಕಣಂಗಳುಮಂ ತೊಟ್ಟು ಮುಂಗೆಯ್ಯುಂ (ವಡ್ಡಾರಾ. ೧೪೮-೧೪). 'ಶಸ್ಯ' ಪರಾ. [ಸಂ.]

ಸಸ್ಯಜನ್ಯ (ನಾ). ಗಿಡ, ಮರಗಳಿಂದ ಉತ್ಪತ್ತಿಯಾಗುವ ಪದಾರ್ಥ: ತೆಂಗಿನೆಣ್ಣೆ, ಎಳ್ಳೆಣ್ಣೆ, ನೆಲಗಡಲೆ ಎಣ್ಣೆ, ಆಲಿವ್‌ಬೀಜದ ಎಣ್ಣೆ ಇತ್ಯಾದಿಗಳು ಸಸ್ಯಜನ್ಯಗಳು (ಅಡುಪೂ. ೫೮). [ಸಂ.]

ಸಸ್ಯಜಾತಿ (ನಾ). ಗಿಡ, ಮರ, ಬಳ್ಳಿಗಳ ಗುಂಪು, — ವರ್ಗ: ಇಂಥ ತುಣುಕು ಸಂಗತಿಗಳನ್ನು ಮೊತ್ತವಾಗಿ ತೂಕಮಾಡಿ ನೋಡಿದರೆ ಎರಡು ಬಗೆಯ ಸಸ್ಯಜಾತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆಂದು ಹೇಳಬಹುದು (ಹಸುಹೂ. ೩೭೪); ಈ ಸಸ್ಯಜಾತಿ . . . ದಕ್ಷಿಣಭಾರತಕ್ಕೆ ಬಹುಕಾಲದಿಂದ ಪರಿಚಿತವಾಗಿದೆ (ಶಾಸಗಿ. ೧೪). [ಸಂ.]

ಸಸ್ಯನಿಧಿ (ನಾ). ಗಿಡ, ಬಳ್ಳಿ ಇತ್ಯಾದಿಗಳಿಗೆ ಆಶ್ರಯಸ್ಥಾನವಾದುದು; ಸಸ್ಯಸಮೃದ್ಧಿಯಿಂದ ಕೂಡಿದುದು : ಸಸ್ಯನಿಧಿ ನಿಖಿಳಧರೆಯಂ ಯಸ್ಯಾಶ್ಚಾಸ್ತಸ್ಯ ಮೇದಿನೀಯೆಂಬುದನಬ್ಜಾಸ್ಯಂ ದಿಟಮೆನಿಸಲನಾಲಸ್ಯನನೂನಾಶ್ವನಾಳ್ದನಶ್ವಪುರೇಶಂ (ಪಾರ್ಶ್ವಪು. ೭-೫೦). [ಸಂ.]

ಸಸ್ಯಮಂಜರಿ (ನಾ). ಧಾನ್ಯದ ತೆನೆ : ''ನಿಮಿರ್ದ ಸಸ್ಯಮಂಜರಿ ಕಣಶಂ'' (ವಸ್ತುಕೋ. ೯೫-೨೦); ''ಕಣಶಂ, ಸಸ್ಯಮಂಜರೀ — ೬ ನೆಲ್ಲು ಮುಂತಾದ ಧಾನ್ಯದ ತೆನೆಗಳ ಹೆಸರುಗಳು'' (ಸಿದ್ಧಾಂತಿ. ೨೮). [ಸಂ. ಸಸ್ಯಮಂಜರೀ]

ಸಸ್ಯಮೂಲಿಕೆ (ನಾ). ಔಷಧಿಗೆ ಉಪಯುಕ್ತವಾದ ಮೂಲಿಕೆ ; ಗಿಡಮೂಲಿಕೆ: ಆಗ ನಮ್ಮ ವೈದ್ಯ ಒಬ್ಬ, ಬೆಟ್ಟಗಳಿಂದ ಬಂದು ಗುಣಪಡಿಸಿದ. ಇವರಿಗೆ ಸಸ್ಯಮೂಲಿಕೆ ತಿಳಿಯುತ್ತೆ (ಮಲನಾ. ೨೧೨). [ಸಂ. ಸಸ್ಯಮೂಲಿಕಾ]

ಸಸ್ಯರಸ (ನಾ). ಗಿಡ, ಬಳ್ಳಿಗಳಲ್ಲಿ ಉತ್ಪತ್ತಿಯಾಗುವ ದ್ರವಪದಾರ್ಥ: ಜೀವರಸದ ಮಧ್ಯದಲ್ಲಿ ಕುಹರವಿದೆ. ಈ ಸೂಕ್ಷ್ಮಕುಹರದಲ್ಲಿ ಸಸ್ಯರಸ ತುಂಬಿದೆ (ಸಸ್ಯಶಾ. ೮೬); ನಾಳ – ಎಂದರೆ ಸಸ್ಯರಸವನ್ನು ಗಿಡಮರಗಳ ಬೇರಿನಿಂದ ಎಲೆತುದಿಯವರೆಗೂ ಕೊಂಡೊಯ್ಯುವುದಕ್ಕಾಗಿಯೇ ಸೇರ್ಪಟ್ಟಿರುವ ಕಣಸಮೂಹ (ಹಸುಹೂ. ೩೧೦). [ಸಂ.]

ಸಸ್ಯವಿಜ್ಞಾನ (ನಾ). ಗಿಡ, ಮರ, ಬಳ್ಳಿಗಳಿಗೆ ಸಂಬಂಧಪಟ್ಟ ವಿಷಯವನ್ನು ವೈಜ್ಞಾನಿಕವಾಗಿ ತಿಳಿಸುವ ಶಾಸ್ತ್ರ : ಬರಬರುತ್ತ ಸಸ್ಯವಿಜ್ಞಾನವೇ ನನ್ನ ಜೀವನದ ಹಂಬಲವಾಯಿತು (ಸಸ್ಯಕ. ೨). [ಸಂ.]

ಸಸ್ಯವಿಜ್ಞಾನಿ (ನಾ). ಗಿಡ, ಮರ, ಬಳ್ಳಿಗಳಿಗೆ ಸಂಬಂಧಪಟ್ಟ ವಿಷಯವನ್ನು ವೈಜ್ಞಾನಿಕವಾಗಿ ಅಭ್ಯಾಸಮಾಡಿದವನು ; ಸಸ್ಯವಿಜ್ಞಾನದಲ್ಲಿ ತಜ್ಞನಾದವನು : ಸಸ್ಯವಿಜ್ಞಾನಿಗಳ ಜೀವನಚರಿತ್ರೆ ಮತ್ತು ಸಂಶೋಧನಾಫಲಗಳನ್ನು . . . ವಿವರಿಸಲು ಪ್ರಯತ್ನಿಸಲಾಗಿದೆ (ಸಸ್ಯಕ. viii, ಆರಂಭಿ). [ಸಂ. ಸಸ್ಯವಿಜ್ಞಾನಿನ್]

ಸಸ್ಯಶಾಸ್ತ್ರ (ನಾ). = ಸಸ್ಯವಿಜ್ಞಾನ : ಸಸ್ಯಶಾಸ್ತ್ರದಲ್ಲಿ ಮೇಲಿಂದ ಮೇಲೆ ಸಂಶೋಧನೆಗಳು ನಡೆಯುತ್ತಿರುವುದರಿಂದ ಇದಕ್ಕೆ ಸಂಬಂಧಿಸಿದ ವಿಷಯಗಳು ಬಹುವಾಗಿ ಶೇಖರಿಸಲ್ಪಟ್ಟಿರುವುವು (ಸಸ್ಯಶಾ. ೧); ಪ್ರಕೃತಿಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದ ಇಂದಿನ ವಿಜ್ಞಾನದ ವಿವಿಧಭಾಗಗಳಿಗೆ . . . ಅಡಿಗಲ್ಲನ್ನು ಹಾಕಿದ ಕೀರ್ತಿ ರೇಗೆ ಸಲ್ಲುತ್ತದೆ (ಸಸ್ಯಕ. ೫). [ಸಂ.]

ಸಸ್ಯಶಾಸ್ತ್ರಜ್ಞ (ನಾ). = ಸಸ್ಯವಿಜ್ಞಾನಿ : ವಾಲಿಚ್ ಎಂಬ ಸಸ್ಯಶಾಸ್ತ್ರಜ್ಞ ಈ ಮರಕ್ಕೆ ಶಾಸ್ತ್ರೀಯವಾಗಿ ನಾಮಕರಣ ಮಾಡಿದಾಗ (ಹಸುಹೂ. ೩೦); ನನಗೂ ಒಬ್ಬ ಸಸ್ಯ ಶಾಸ್ತ್ರಜ್ಞನ ಸಹಾಯ ಮತ್ತು ಸಹಕಾರ ಅವಶ್ಯವಾಗಿ ಬೇಕಾಗಿದೆ (ಸಸ್ಯಕ. ೩೫). [ಸಂ.]

ಸಸ್ಯಶೂಕ (ನಾ). ಧಾನ್ಯದ ಮೇಲಿರುವ ಊಬು : ''ಶಂಶಾರುಃ, ಸಸ್ಯಶೂಕಂ - ೨ ಧಾನ್ಯದ ಸುಂಕು, ಧಾನ್ಯದ ಮುಳ್ಳು, ಭತ್ತದ ಊಗು'' (ಸಿದ್ಧಾಂತಿ. ೨೮೦). [ಸಂ.]

ಸಸ್ಯಹೇನು (ನಾ). ಗಿಡ, ಬಳ್ಳಿ ಇತ್ಯಾದಿಗಳಲ್ಲಿ ಸೇರಿ ಅವುಗಳನ್ನು ನಾಶಗೊಳಿಸುವ ಒಂದು ಬಗೆಯ ಹುಳು ; ಗಿಡಹೇನು : ಚಿಕ್ಕಟ, ಹೇನು, ಇರುವೆ ಮತ್ತು ಸಸ್ಯಹೇನುಗಳು ತಮ್ಮ ಹಿಂದಿನ ಪೂರ್ವಜಗಳಿಗೆ ರೆಕ್ಕೆಗಳಿದ್ದು, ಅವು ಭೂಮಿಯೊಳಗೆ, ಪ್ರಾಣಿಗಳ ಮೇಲೆ ನಿಶ್ಚಲಜೀವನಕ್ಕೆ ಹೊಂದಿಕೊಂಡಾಗ ರೆಕ್ಕೆಗಳು ಕಳೆದು ಅವನತಿ ಹೊಂದಿವೆ (ಕೀಚಚಿ. ೧೮). [ಸಸ್ಯ + ಹೇನು (< ಪೇನ್)]

ಸಸ್ಯಾಹಾರ (ನಾ). ೧. ತರಕಾರಿ, ಸೊಪ್ಪು, ಧಾನ್ಯ ಮುಂತಾದ ಸಸ್ಯೋತ್ಪನ್ನಗಳನ್ನೊಳಗೊಂಡ ಆಹಾರ ; ಶಾಕಾಹಾರ : ಇನ್ನು ಊಟದ ವಿಷಯ. ಸಸ್ಯಾಹಾರವೊ? ಮಾಂಸಾಹಾರವೋ? (ಸಮಜೀ. ೬೧೬); ಮಾಂಸಾಹಾರ ವರ್ಜ್ಯವಾದ್ದರಿಂದ ಸಸ್ಯಾಹಾರತಯಾರಿಕೆಯನ್ನು ಅರಿತ ನಳನನ್ನು ಹುಡುಕಬೇಕಾಯಿತು (ಹಸುಹೂ. ೨೩೩). ೨. ಸಸ್ಯಗಳ ಬೆಳವಣಿಗೆಗೆ ಬೇಕಾಗುವ ಆಹಾರ : ಸಾಕಾದಷ್ಟು ಸಸ್ಯಾಹಾರಗಳು ಭೂಮಿಯಲ್ಲಿದ್ದರೆ ಮಾತ್ರ ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ (ವ್ಯವಮ. ೨೬). [ಸಂ.]

ಸಸ್ಯಾಹಾರಿ (ನಾ). ಶಾಕಾಹಾರವನ್ನು ಮಾತ್ರ ಸೇವಿಸುವವನು : ಜೀವನ ಪರ್ಯಂತ ಸಂಪೂರ್ಣವಾಗಿ ಸಸ್ಯಾಹಾರಿಯಾಗಿರಬೇಕು (ಬೋಧೆದೇ. ೧೪); ಅವನು ಕೆಲವೆಡೆ ಮಾಂಸಾಹಾರಿಯಾಗಿದ್ದರೂ ಅವನ ಹಲ್ಲುಸಾಲು ಪ್ರಥಮತಃ ಸಸ್ಯಾಹಾರಿಯದೇ ಆಗಿದೆ (ಶಾಸಗಿ. ೧ ಮುನ್ನುಡಿ). [ಸಂ. ಸಸ್ಯಾಹಾರಿನ್]

ಸಸ್ಯೋರ್ವಿ (ನಾ). ಸಸ್ಯಸಮೃದ್ಧಿಯನ್ನು ಪಡೆದ ನೆಲ ; ಫಲವತ್ತಾದ ಭೂಮಿ : ''ಸಸ್ಯೋರ್ವಿಯೊಳಂ ಕೇವಳಮಪ್ಪುರ್ವಿಯೊಳಂ ಸಲೆ ನೆಗಟ್ಟುಮುರ್ವರಾ ಶಬ್ದಂ ತಾಂ'' (ವಸ್ತುಕೋ. ೧೪೦-೧೩೧). [ಸಂ. ಸಸ್ಯೋರ್ವಿ]

ಸಸ್ರೀ (ನಾ). ಶಾರದೆ ; ಸರಸ್ವತಿ : ಜಲಧಿಯೊಳಂಜನಗಿರಿಯಂ ಕಲಸಿ ಧರಾಪಟದೊಳಭವರೂಪವ ಸಸ್ರೀ ಸಲೆಯಿನ್ನೂ ಬರದಪಳಿನ್ನಳವೇ ನುತಿಸಲ್ (ಶಂಕಂ. ೬೭).

[< ಸಂ. ಸರಸ್ವತೀ]

ಸಸ್ಲೆ 'ಸಿಸಿಲ್' ನೋ.

ಸಸ್ಯ (ನಾ). ಧನವನ್ನು ಹೊಂದಿದವನು ; ಭಾಗ್ಯಶಾಲಿ : ರವಿಜಂ . . . ಶನಿಗೇಹದೊಳ್ ನಿಲೆ ಮಳಿಷ್ಯಂ ಭೋಕ್ತ್ರ ಸಸ್ಯಂ ಧನಂ (ಜಾತಕ. ೧೭-೩೩). [ಸಂ.]

ಸಹ$_1$ (ನಾ). ೧. ಸಹನೆಯಿಂದ ತಾಳಿಕೊಳ್ಳುವುದು, — ಅನುಭವಿಸುವುದು. ೨. ಶಕ್ತಿ ; ಬಲ : ''ಪ್ರಾಣಃ . . . ತರಃ, ಸಹಃ – ಈ ೮ ಬಲ್ಲು (ಬಲುಹು)'' (ಹಲಾಯು. ೧೨೦-೩೮). ೩. ಒಂದು ಮಾಸದ ಹೆಸರು; ಮಾರ್ಗಶಿರ: ''ಕ್ರಮದೊಳೊಂದಿರೆ ಮಧುಮಾಧವಂ . . . ಸಹಃ ಸಹಸ್ಯಂಗಳ್ ತಪಮುಂ ತಪಸ್ಯಮೆಂದಿಂತು ಸಮನಿಕ್ಕುಂ ಚೈತ್ರಾದಿ ನಾಮಂಗಳ್'' (ವಸ್ತುಕೋ. ೧೭-೧೨). [ಸಂ.]

ಸಹ$_2$ (ಅ). ೧. ಜೊತೆಯಲ್ಲಿ ; ಸಮೇತವಾಗಿ : ಬಿಸಿಯ ಹಾಲನು ಬೆಣ್ಣೆ ಸಹವೀಂಟಿದನು (ಸಾಳ್ವಭಾ. ೨೧-೪೯). ೨. ಕೂಡ ; ಸಹಾ : ''ಸಾರ್ಧಂ, ಸಾಕಂ, ಸತ್ರಾ, ಸಮಂ, ಸಹ — ೫ ಕೂಡೆ'' (ಸಿದ್ಧಾಂತಿ. ೪೩೩); ಕಾಯಕ ಮಾಡುವಾಗ ಅಹಂಕಾರದ ಸುದ್ದಿ ಸಹ ಸಾರಕೂಡದು (ವಚೋ. ೭೪); ನೇಕಾರರ ಮಕ್ಕಳಿಗೂ, ಅಕ್ಕಸಾಲಿಗ ಮೊದಲಾದವರ ಮಕ್ಕಳಿಗೂ ಅಮ್ಮ ಸಹ ಬೇಕಾಗುತ್ತಿರಲಿಲ್ಲ (ಚಿಟ್ಟುಪೂ. ೩).

ಸಹವಾಗಿ = ಸಮೇತವಾಗಿ : ನಿಜಕಾಂತೆವೆರಸಿದ ಪೆಂಡವಾಸದ ತಂಡ ಸಹವಾಗಿ . . . ತ್ರಿಭುವನತಿಲಕವೆಂಬಾ ವಸದಿಗೇಳ್ತಂದ (ಸಾಳ್ವಭಾ. ೪-೨೬); ನಿಂಮ ಸಖರು ಸಹವಾಗಿ ಹೊರಡಿಸಿಕೊಂಡು (ಎಕ. VII, ಶಿಕಾರಿ. ೧೦೭-೨೪; 1576). [ಸಂ.]

ಸಹಂಪತಿ (ನಾ). [ಬೌದ್ಧ] ಬ್ರಹ್ಮನ ಒಂದು ಹೆಸರು : ಬ್ರಹ್ಮಂ ಸಹಂಪತಿಯಾಗಳಿಂತು ಗಾಥೆಯನೊರೆದ (ವೃಶಾಪಿ. ೮೮-೬೮೬). [< ಸಂ. ಸಹಾಂಪತಿ]

ಸಹಕರಿಸು (ಕ್ರಿ). (ಒಂದು ಕಾರ್ಯ ಅಥವಾ ಉದ್ದೇಶಕ್ಕಾಗಿ ಪರಸ್ಪರ) ಒಂದುಗೂಡಿ ಕೆಲಸಮಾಡು ; ಒತ್ತಾಸೆನೀಡು : ಆ ಪ್ರಕರಣದಲ್ಲಿ ರಾಜೇಂದ್ರ ಪ್ರಸಾದರು ಕೊನೆಯವರೆಗೆ ಗಾಂಧೀಜಿಯವರನ್ನು ಅನುಸರಿಸಿ ಕಾರ್ಯಕ್ರಮವನ್ನು ಮುಂದುವರಿಸಿ ಸಹಕರಿಸಿದರು (ರಾಜವ. ೮); ಬೇಗನೆ ಬಂದು ಹಲಸಿನ ಕಾಯಿ ಸೀಳಲು ಅವ್ವನಿಗೆ ಸಹಕರಿಸಬೇಕು (ಮಸಕೂ. ೧೫). [(ಸಂ. ಸಹಕರಣ) + – ಇಸ್ಕು]

ಸಹಕಾರ (ನಾ). ೧. ಪರಸ್ಪರ ಸಹಾಯ ; ನೆರವು ; ಒತ್ತಾಸೆ : ಗೃಹಿಣಿಯರ ಸಹಕಾರವಿಲ್ಲದೆ ನಾವು ಉಪಯೋಗಿಸುವ ಆಹಾರವನ್ನು ಉತ್ತಮಗೊಳಿಸುವುದು ಸಾಧ್ಯವಿಲ್ಲ (ಅಡುಸೌ. ೭೨); ವಿದ್ಯಾರ್ಥಿಗಳಲ್ಲಿ ಸಹಕಾರಸಂಬಂಧವಿದ್ದು ಕಲಿವಿಗೆ ಪೋಷಕವಾದ ಮಾನವೀಯಸನ್ನಿವೇಶ ನೆಲಸಿರಬೇಕು (ಶಿಕ್ಷದ. ೩೦೮). ೨. ಮಾವು; ಚೂತ : ಇದಂ ಪುಗಲಿಂ ಗಡಮೆಂದು ಬೇಟಕಾಱರನಿರದೂಱೆ ಸಾಱೆ ಜಡಿವಂತೆಸೆಗುಂ ಸಹಕಾರಕೋಮಳಾಂಕುರ ಪರಿತುಷ್ಟಪುಷ್ಪಪರಪುಷ್ಪಗಳಧ್ವನಿ ನಂದನಂಗಳೊಳ್ (ಪಂಪಭಾ. ೨-೧೩); ಮಂದಮಾರುತನೊಡಗೂಡಿ ಬಂದ ಸಹಕಾರಪರಾಗದೊಳಾಡಿದಂತೆ . . . ಮೋಹಿಸದೆ ಪೇಱ್ ಗುಣವರ್ಮನ ಸೂಕ್ತಿಸಂಚಯಂ (ಪುಷ್ಪಪು. ೧-೬೬). [ಸಂ.]

ಸಹಕಾರನಂದನ (ನಾ). ಮಾವಿನ ಮರಗಳಿಂದ ತುಂಬಿರುವ ತೋಟ; ಮಾವಿನ ತೋಪು : ಸೋರ್ವ ಸಹಕಾರದೆ ತೀವಿದ ಬಾವಿ ಕಾಮದೇವನ ರಸಕೂಪದಂತೆ . . . ಎಸೆಯೆ ಕಣ್ಗೆಸೆಗುಂ ಸಹಕಾರನಂದನಂ (ಅಜಿಪು. ೨-೧೩). [ಸಂ.]

ಸಹಕಾರಲತೆ (ನಾ). ಎಳೆಯ ಮಾವು ; ಚೂತಲತೆ : ಯುವತಿಯ ಮುಖಾಬ್ಜಮಂ ಮುಸುಱುವ ಕುಂತಳಮಧುಕರಂಗಳಂ ಕರತಳವಲ್ಲವದಿಂದೋಸರಿಸುವ ಪುಣ್ಯವನಿತೆ ಸಹಕಾರಲತೆಯನೇಂ ಮಱಸಿದಳೋ (ಸುಕುಮಾ. ೧೦-೧೫). [ಸಂ. ಸಹಕಾರಲತಾ]

ಸಹಕಾರಸಂಘ (ನಾ). (ಗ್ರಾಹಕ ಮತ್ತು ಮಾರಾಟಗಾರರಿಬ್ಬರಿಗೂ ನೆರವಾಗುವಂತೆ) ಪರಸ್ಪರ ಸಹಾಯಕತೆಯ ದೃಷ್ಟಿಯಿಂದ ರಚಿತವಾದ ಸಂಘ : ಸಹಕಾರಸಂಘಗಳಿಂದ ಜನರು ಹೆಚ್ಚಿನ ಅನುಕೂಲವನ್ನು ಪಡೆಯಬಹುದು (ರೂಢಿ). [ಸಂ.]

ಸಹಕಾರಿ (ಗು). ೧. ನೆರವಾಗುವ ; ಸಹಕರಿಸುವ. (ನಾ). ೨. ಒತ್ತಾಸೆ ನೀಡುವುದು ; ನೆರವು ನೀಡುವುದು. ೩. ನೆರವಿಗೆ ಬರುವವನು ; ಸಹಕರಿಸುವವನು; ಸಹಾಯಕ : ಸಹಕಾರಿಗಳಂ ಭಟರಂ ಸುಹಿತದೆ ಧನವಾಹಕರ್ಕಳಂ ಕರೆಯಿಸುತಂ ವಹಿಲದೆ ಪರಿಜನರಂ ಸಖರಹ ಲೋಕರನೆಯ್ದೆ ಬರಿಸಿ ನುಡಿದಂ ಸಚಿವಂ (ಹಾಲಾಸ್ಯ. ೪-೧೦-೩೫). ೪. ಸಹಾಯಕವಾದುದು; ನೆರವಾಗುವಂತಹುದು : ಈ ಜಾಲಂಧ್ರಗಳು . . . ದೇವಾಲಯದ ಒಳಭಾಗಕ್ಕೆ ಹಿತಮಿತವಾದ ಬೆಳಕನ್ನು ನೀಡಲು ಬಹಳ ಸಹಕಾರಿಯಾಗಿವೆ (ನೂಳಂಬ. ೧೧೦); ಅವಳ ದುರಭಿಮಾನವೇ ತನಗೆ ಸಹಕಾರಿಯಾಗುವುದೆಂದು ಸಂತೋಷಪಟ್ಟ (ನಿರಾತ. ೮೬). [ಸಂ. ಸಹಕಾರಿನ್]

ಸಹಕಾರಿಕಾರಣ (ನಾ). [ತತ್ತ್ವಶಾ] ಸಹಾಯಕವಾದ ನಿಮಿತ್ತ ; ಪೂರಕವಾದ ಹೇತು : ಶರೀರವೃದ್ಧಿಯೊಳ್ ಚೈತನ್ಯವೃದ್ಧಿಯೆಂಬುದುದಕವೃದ್ಧಿಯೊಳಂಕುರವೃದ್ಧಿಯಂತಂತೆ ಸಹಕಾರಿಕಾರಣಮೆಂದನೇಕಯುಕ್ತೋಕ್ತಿಗಳಿಂ ಭೂತವಾದಿಯಪ್ಪ ಮಹಾಮತಿಯಂ ನಿರಾಕರಿಸಿ (ಆದಿಪು. ೨-೧೦ ವ); ಸ್ವರ್ಣಮಯಮಾದ ಕಟಕಮಕುಟಾದಿ ಕಾರ್ಯಕ್ಕೆ ಸ್ವರ್ಣಮುಪಾದಾನಕಾರಣಂ ಸ್ವರ್ಣಕಾರಂ ನಿಮಿತ್ತಕಾರಣಂ ಸುತ್ತಿಗೆ ಅಡಿಗಲ್ಲಿರ್ಕುಳ ಬೆಂಕಿ ನೀರ್ಮೊದಲಾದುವು ಸಹಕಾರಿಕಾರಣಂ (ಚಕಬಿ. ೨೨-೧). [ಸಂ.]

ಸಹಕಾರಿಸಂಘ (ನಾ). = ಸಹಕಾರಸಂಘ : ಸಹಕಾರಿಸಂಘಗಳು ಈಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿವೆ (ರೂಢಿ). [ಸಂ.]

ಸಹಕೃತಿ (ನಾ). ಒಟ್ಟಿಗೆ ಕೆಲಸಮಾಡುವಿಕೆ ; ಸಹಕಾರ : ಕಣ್ಣಿರದೆ ರವಿಯನು ರವಿಯಿರದೆ ಕಣ್ಣೇನು? ಅನ್ಯೋನ್ಯಸಹಕೃತಿಯಿನುಭಯಸಾರ್ಥಕತೆ (ಮಂಕುಕ. ೪೮೯). [ಸಂ.]

ಸಹಗಮನ (ನಾ). ೧. ಜೊತೆಯಲ್ಲಿ ಹೋಗುವುದು ; ಸಂಗಡ ತೆರಳುವುದು. ೨. ಪತಿಯ ಶವದ ಜೊತೆಯಲ್ಲಿಯೇ ಪತ್ನಿಯು ಸ್ವಇಚ್ಛೆಯಿಂದ ಚಿತೆಯೇರುವುದು ; ಸತಿಹೋಗುವುದು : ನಿಜಪತಿಯ ಸಹಗಮನದಲಿ ತನುವ ಮಱೆದಬಲೆಯರುಗಳ ದೆಸೆಯಿಂದಾಱುಮಡಿ ಸ್ವರ್ಗಾದಿಭೋಗವ ಸೂಱೆಗೊಂಬುದು ತಪ್ಪದು (ಕುಮಾಉ. ೩-೧೧೧); ತನಗೆ ಸಹಗಮನಕ್ಕೆ ನೇಮವ ದನುಜನಗ್ಗದ ರಾಣಿಯಳಲುತ ವನಜನಾಭನ ಬೇಡುತಿರಲು (ಕೌಹಿರಾ. ೪೨-೬೨). ೩. ಸಂಕಲ್ಪದಂತೆ ವೀರನು ಪ್ರಭುವಿನೊಂದಿಗೆ ಪ್ರಾಣವನ್ನು ಒಪ್ಪಿಸುವಿಕೆ, -- ಆತ್ಮಾರ್ಪಣೆ ಮಾಡಿಕೊಳ್ಳುವಿಕೆ : ಪೂಡೆವ ವೀರವಱೆಯ ಸಿಡಿವ ಬಿರುದಿನ ಕಾಳೆಯ ಸುತ್ತಱೆದ ಮುತ್ತಿನ ತಳೆಯ ತಲೆಗೆ ಮುಂದಲೆಯಾಗಿ ಲೆಂಕರ್ಕೂಡುವ ಸಿಡಿದಲೆಯ ಸಹಗಮನ ಸಮುತ್ಸುಕತೆಯಿಂ ಕೈವಿಡಿಸೆ (ಅನಂಪು. ೧೧-೭೪ ವ).

ಸಹಗಮನ ಮಾಡು = ಪತಿಯ ಶವದ ಜೊತೆಯಲ್ಲಿ ಚಿತೆಯನ್ನೇರು; ಸತಿಹೋಗು : ಮಾದ್ರಿಯು ಅವನೊಡನೆ ಸಹಗಮನ ಮಾಡಿದಳು (ವಚಭಾ. ೧೫); ಪತಿಯ ಸಾವನ್ನು ಕೇಳಿ ಹಲವರು ಸ್ತ್ರೀಯರು 'ಸಹಗಮನ' ಮಾಡುತ್ತಿದ್ದರು (ಕಶಾಅ. ೨೫೦). [ಸಂ.]

ಸಹಗಮಿಸು (ಕ್ರಿ). ಸತಿಹೋಗು ; ಸಹಗಮನ ಮಾಡು : ನಾನು ಸಹಗಮಿಸುವವಳು. ನನಗೆ ಇನ್ನು ಇಲ್ಲಿ ಏನು ಕೆಲಸ? (ಶಾಂತಲಾ. ೧೮); ಈ ಬಾಲಕನ ತಾಯಿ ಸಹಗಮಿಸಿದಳು (ಚಂದ್ರಸ. ೧೬). [ಸಹಗಮನ + –ಇಸ್ಕು]

ಸಹಚರ (ಗು). ೧. ಒಡನಾಡಿಯಾದ ; ಸಂಗಾತಿಯಾದ : ಸಹಚರಬಾಳಕ ಜಾಳಕಮಹೀನನಾಗಿರ್ದ ಹೀನನಂ ಕಂಡು (ವರ್ಧಪು. ೧೪-೬೯). (ನಾ). ೨. ಜೊತೆಯಲ್ಲಿ ಹೋಗುವುದು. ೩. ಒಡನಾಡಿ ; ಸಂಗಾತಿ. ೪. ಗಂಡ ; ಪತಿ. ೫. ಅನುಚರ ; ಸೇವಕ : ಸಹಚರರೆಲ್ಲರುಂ ನಿಜಪದಾಂಬುರುಹದ್ವಯಮಂ ನಿರಂತರಂ ಮಹಿಯೊಳ ಲಂಪಿನಿಂದಱಸಲೆಣ್ಣೆಸೆಗೆಯ್ದುದೊಡೆ (ದಶಕು. ೯-೨). [ಸಂ.]

ಸಹಚರಿ (ನಾ). ೧. ಒಡನಾಡಿಯಾದುದು ; ಸಂಗಾತಿಯಾದುದು : ಭಾವಗೀತೆ ಮೊದಲು ಜನ್ಮತಳೆದಾಗ ಸಂಗೀತದ ಸಹಚರಿಯಾಗಿಯೇ ಮೂಡಿತು (ಭಾವಗೀ. ೧೮). ೨. ಒಡನಾಡಿಯಾದ ಹೆಂಗಸು; ಗೆಳತಿ: ಅಂತಾ ಕಾಂತ ಪರಿಮಿತ ಪರಿವಾರವನಿತಾಪರೀತೆ ಸೇವಾಚತುರಸಹಚರೀಸುಭಾಷಿತಮನಾಲಿಸುತ್ತುಮಿರ್ಪಿನಂ (ಮಲ್ಲಿಪು. ೩-೧೦೧). ೩. ಹೆಂಡತಿ ; ಪತ್ನಿ : "ದಾರಾಃ . . . ಸಹಚರೀ . . . ಗೃಹಿಣೀ, ಗೃಹಾಃ – ಈ ೧೩ ಹೆಂಡತಿ" (ಹಲಾಯು. ೮೧-೩೪೦). ೪. ಸೇವಕಿ ; ದಾಸಿ : ಅವನು ಅವಳನ್ನು ತನ್ನ ರಾಣಿಯ ಸಹಚರಿಯನ್ನಾಗಿ ಗೊತ್ತುಮಾಡಿದನು (ಬಂಕಪಾ. ೧೬೧). ೫. (ಹಳದಿಬಣ್ಣದ ಹೂವುಗಳನ್ನು ಬಿಡುವ) ಒಂದು ಬಗೆಯ ಸಸ್ಯ; ಮುಳ್ಳುಗೋರಂಟೆ : "ಪೀತಾ, ಸಹಚರೀ – ಈ ೨ ಹೊಂಬಣ್ಣದ ಗೋರಂಟೆ" (ಹಲಾಯು. ೩೪-೫೨); ಸಹಚರಿ (ಮುಳ್ಳುಗೊರಟೆ), ಸಬ್ಬಸಿಗೆ, ಕಳ್ಳನ ಗಿಡ ಇವನ್ನು ಹಸಿಯದಾಗಿರುವಾಗಲೇ ಉಪಯೋಗಿಸಬೇಕು (ಸಕಪ್ರ. XII, ಪ್ರಸ್ತಾವನೆ). [ಸಂ. ಸಹಚರೀ]

ಸಹಚಾರಿ (ನಾ). ೧. ಸಂಗಡ ಚಲಿಸುವಂಥದು; ಸಹಚರವಾದುದು: ಸೌರವ್ಯೂಹಕ್ಕೆ ಸೇರಿ, ತನ್ನ ಸಹಚಾರಿಗಳಾದ ಬುಧ, ಶುಕ್ರ . . . ನೆಪ್ಚೂನುಗಳಂತೆ, ಭೂಮಿಯೂ ಒಂದು ಗ್ರಹ (ಜ್ಯೋತಿರ್ವಿ. ೯). ೨. ಗಂಡ ; ಪತಿ. [ಸಂ. ಸಹಚಾರಿನ್]

ಸಹಧರ್ಮ (ನಾ). ಕಪಟ ; ಮೋಸ ; ವಂಚನೆ : "ಕಪಟಂ, ನಿಭಂ . . ಸಹಧರ್ಮಮುಂ ಮಿಷಂ ಕೂಟಮುಂ ವ್ಯಪದೇಶಮೆನೆ ವ್ಯಾಜಮಕ್ಕುಂ" (ಮಂಗರಾ. ೧೨೮-೧೦). [ಸಂ. ಸಹಧರ್ಮಿನ್]

ಸಹಜ$_1$ (ಗು). ೧. ನೈಜವಾದ ; ಸ್ವಭಾವಸಿದ್ಧವಾದ : ಚೂತನೊಲ್ಲು ಪೊರೆಗುಂ ಗಿಳಿಯಂ . . . ಸಹಜವಕ್ರವಚಸ್ವಿಯನನ್ಯಪುಷ್ಪನಂ (ಮಲ್ಲಿಪು. ೬-೨೫); ಸ[ಪಾಂಡಾ. ಸಾ] ಹಜ ಸಜ್ಜನಿಕೆ ತಪ್ಪಿದರೆ ಕೂಡಲಸಂಗಯ್ಯ ಮೂಗ ಹಲುದೋಱ ಕೊಯ್ಯ (ಬಸವ. ೬೭೩); ಶತ್ರುವೆಂಬವನು ವಿವರಿಸೆ ಸಹಜ ಕೃತ್ರಿಮ ಭೇದಗಳಿಂದ ದ್ವಿವಿಧಮುಂಟು

(ಚಂಪ್ರಸಾ. ೨೦-೬೨). ೨. ಹುಟ್ಟಿನಿಂದ ಬಂದ; ಜೊತೆಯಲ್ಲಿ ಹುಟ್ಟಿದ: ಸಹಜಮಣಿಭೂಷಣಂಗಳ ಬಹಳೋದ್ಯದ್ದೀಪ್ತಿಯಿಂದೆ ಚಂದ್ರಾದಿತ್ಯಗ್ರಹತಾರಾನಕ್ಷತ್ರ ದಿನಹರ್ನಿಶಂ ಬೆಳಗುವಮರಗಿರಿಯನೆ ಪೋಲ್ತಂ (ಆದಿಪು. ೬-೬೮); ಸಹಜಮ[ನ] ವಿಭೂಷಾನೀಕದಿಮ್ಮಾಂಬರಸ್ರಕ್ಪಹಿತಮಭಿನವೋದ್ಯದ್ಯೌವನಶ್ರೀವಿಳಾಸಂ (ವರ್ಧಮಾ. ೧೦-೮). ೩. ಸರಿಯಾದ ; ಯಥಾವತ್ತಾದ. (ನಾ). ೪. ಸ್ವಾಭಾವಿಕವಾದುದು; ನೈಜವಾದುದು : ಸಹಜದ ಬೆಲ್ವಿನೊಳ್ . . . ಮನೋಜನುಮಂ ಗೆಲವಂದಂ (ಪಂಪಭಾ. ೧-೪); ಕಪಿಗೆ ಚಪಲತೆ ಸಹಜಂ (ಗದಾಯು. ೩-೪೧); ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದಱಿಯೆನು (ಬಸವ. ೮೫೦). ೫. (ಸ್ವಾಭಾವಿಕವಾದ) ಪ್ರವೃತ್ತಿ ; ಮನೋಧರ್ಮ ; ಸ್ವಭಾವ : ''ಧರ್ಮಮಾತ್ಮಸ್ವಭಾವಂ ಸಹಜಮೆನಿಸಿಕ್ಕು'' (ಮಂಗರಾ. ೧೩೭-೪೨); ಎನಗೆ ಸತ್ಯವೂ ಇಲ್ಲ ಅಸತ್ಯವೂ ಇಲ್ಲ ಅವ ಸಹಜವೂ ಇಲ್ಲದ ಲಿಂಗೈಕ್ಯ ಕಾಣಾ (ಬಸವ. ೯೩೪); ಸಹಜಂ ಸತ್ಯವುದಾರಮನ್ಯಯಗುಣಂ ಸ್ವಾಭಾವಿಕಂ ಸದ್ಗುಣಗ್ರಹಣಂ (ಎಸಾ. XVIII, ೨೦೯-೨೦; 1162). ೬. ಒಡಹುಟ್ಟಿದವನು ; ಸೋದರ: ''ಸಮಾನೋದರ್ಯಃ, ಸೋದರ್ಯಃ, ಸಗರ್ಭ್ಯಃ, ಸಹಜಃ - ೪ ವಂದು ತಾಯಿ ಮಕ್ಕಳ ಹೆಸರು, ವಡಹುಟ್ಟಿದವನು'' (ಸಿದ್ಧಾಂತಿ. ೧೭೬). ೭. ಸರಳಸ್ವಭಾವದವನು; ನಿಷ್ಕಪಟಿಯಾದವನು : ಸಹಜನಲ್ಲಯ್ಯಾ ಅನು ಸಮ್ಮಕ್ಕನಲ್ಲಯ್ಯಾ (ಬಸವ. ೩೫೧); ಸಹಜನೆಂದು ಹಿರಿಯನೆಂದು ಪರಮನೆಂದು ದೇವನೆಂದು ಕಹಳೆಕೊಂಬು ಇಡಿಸಿಕೊಂಬೆ (ಕಮೋ. ೩೬-೧). ೮. ನಿಜ; ದಿಟ; ಸತ್ಯ: ಸಹಜವ ನುಡಿದರೆ ಸೇರುವರಿಲ್ಲ ಕಾಣರಣ್ಣ ಅಸಹಜಕ್ಕಲ್ಲದೆ ಲೋಕ ಭಜಿಸದು (ಅವಚಂ. ೨೦೩-೯೭); ಸಹಜವೀ ನುಡಿ ಕರ್ಣನಾಡಿದನಹುದು ಪಾಂಡವರೆಂಬವರು ಕಡುಸಹಸಿಗಳು (ಕುವ್ಯಾಖ. ೮-೧೧). ೯. [ದ್ವೈತ] ಭಗವಂತನ ಹತ್ತು ಬಗೆಯ ವಿಭೂತಿರೂಪಗಳಲ್ಲಿ ಒಂದು; ಬ್ರಹ್ಮ ಮುಂತಾದ ದೇವತೆಗಳಲ್ಲಿ ವ್ಯಾಪಿಸಿಕೊಂಡಿರುವ ಭಗವದ್ರೂಪ: ನೀತ ಸಾಧಾರಣ ವಿಶೇಷ ಸಜಾತಿ ನೈಜಾಹಿತವು ಸಹಜ ವಿಜಾತಿ ಖಂಡಾಖಂಡ ಬಗೆಗಳನಱಿತು ಬುಧರಿಂದ (ಹಸಾಂ. ೫-೧). 'ನೀತವಿಭೂತಿ' ಪರಾ. ೧೦. [ವ್ಯಾಕ] ಸ್ವಾಭಾವಿಕವಾದ ಕ್ರಿಯಾಪದದ ಮೂಲರೂಪ ; ಸಹಜಧಾತು : ಧಾತುಗಳಲ್ಲಿ ಸಹಜ, ಪ್ರತ್ಯಯಾಂತ (ವ್ಯುತ್ಪನ್ನ), ಸಂಯುಕ್ತ (ಸಮಗ್ರ) ಎಂದು ಮೂರು ವಿಧಗಳವೆ. ಉದಾ:- ಸಹಜ - ಮಾ, ತಿನ್, ನುಡಿ, ಬೆಳಗು ಇತ್ಯಾದಿ (ಕೃವಿ. ೪೨). ೧೧. [ನಾಟ್ಯ] ಹುಬ್ಬಿನ ವಿಳುಬಗೆಯ ವಿನ್ಯಾಸಗಳಲ್ಲಿ ಒಂದು; ಸಹಜವಾದ ಭಾವವನ್ನು ತೋರ್ಪಡಿಸುವಾಗ ಹುಬ್ಬನ್ನು ಸ್ವಾಭಾವಿಕರೀತಿಯಲ್ಲಿರಿಸುವುದು: ಸಹಜ . . . ಚತುರ - ಈ ವಿಳು ಹುಬ್ಬಿನ ಭೇದಂಗಳ್, ಕುಟಿಲಮದಲ್ಲನಿತುಂ ಸಂಘಟಿಸದೆ ನಿಜದಿಂದಮಿರ್ದೂಡದುವೇ ಸಾಜಂ (ಅಸ್ಮರಂ. ೩-೪೩ ವ). ೧೨. [ಕಾವ್ಯಮೀ] ನೈಸರ್ಗಿಕವಾದ ಪ್ರತಿಭೆ : ಶಾಸ್ತ್ರದ ಬಲದಿಂದಳಿಪಂ ವೇಲ್ಪ್ರೊಡಮದು ಕೋಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ (ಧರ್ಮಾಮೃ. ೧-೪೯); ಸಹಜ, ಔಪಾಧಿಕ ಎಂದು ಪ್ರತಿಭೆಯನ್ನು ಎರಡು ಬಗೆಯಾಗಿ ವಿಂಗಡಿಸತಕ್ಕವರೂ ಉಂಟು (ಭಾರವಿ. ೧೭೬). ೧೩. [ಯೋಗ] ಸಹಜಾವಸ್ಥೆ; ಸಮಾಧಿ: ಈ ರಾಜಯೋಗಕ್ಕೆ ಉನ್ಮನಿ, ಮನೋನ್ಮನಿ, ಸಹಜ, ಅಮನಸ್ಕ ಮುಂತಾದ ಪರ್ಯಾಯನಾಮಗಳೆಂದೂ ಹೇಳಲಾಗಿದೆ (ಕರ್ನಾಸಂ. ೧೪೨).

ಸಹಜಕೀರ್ತಿಧ್ವಜ = ಒಂದು ಬಿರುದು : ಸಹಜಕೀರ್ತ್ತಿಧ್ವಜ ಸಂಗ್ರಾಮವಿಜಯ ಧ್ವಜ (ಎಕ. II (R), ೧೭೬-೨೮; 1123). **ಸಹಜಮಕರಧ್ವಜ** = ನಿಜವಾದ ಮನ್ಮಥ ನಂತಿರುವವನು ; ಚೆಲುವ ; ಒಂದು ಬಿರುದು : ಸುವರ್ಣ್ಣಗರುಡಧ್ವಜಂ ಸಹದಮಕರಧ್ವಜಂ ನಾಮಾದಿಸಮಸ್ತಪ್ರಸಸ್ತಿಸಹಿತಂ (ಪೌಷಾ. XX, ೬೨-೫; 1098?); ಸುವರ್ಣ್ಣಗರುಡಧ್ವಜಂ ಸಹಜವುಕರಧ್ವಜಂ . . . ಬಪ್ಪನ ಸಿಂಗಂ (ಕೊಲ್ಹಾಶಾ. ೨೩-೧೨; ?). **ಸಹಜಮನೋಜ** = ಸಹಜಮಕರಧ್ವಜ : ಮನೋಜನುಮಂ ಗೆಲವಂದನಾಗಳುಂ ಸಹಜಮನೋಜನೋಜನೆಮಗೀಗೆ ವಿಚಿತ್ರರತೋತ್ಸವಂಗಳಂ (ಪಂಪಭಾ. ೧-೪); ಕ್ಷತ್ರಿಯವವಿತ್ರಂ ಮತ್ತಗಜಾಂಗರಾಜಂ ಸಹಜವುನೋಜಂ (ಎಕ. VII, ೨೫೩. ೨೯೭-೧೫; 1080). **ಸಹಜಮುರಾರಿ** = ಒಂದು ಬಿರುದು: ಅರಿಘಟಕೇಸರಿ ಸಹಜಮುರಾರಿ ಚಾಳುಕ್ಯರಾಜ್ಯಸಮುದ್ಧರಣಂ (ಕಾಇ. ೧-೧-೩; 1092). **ಸಹಜವಿಳಾಸ** = ನೈಸರ್ಗಿಕವಾಗಿ ಲಾವಣ್ಯವನ್ನು ಹೊಂದಿದವನು ; ಚೆಲುವ ; ಒಂದು ಬಿರುದು: ನಿನ್ನ ಪದಪಂಕರುಹಕ್ಕೊಡನೆಱಗಿದವರಸಮಿತಿಯ ಬೆಪಂಗುವೆತ್ತಳಕಪಂಕ್ತಿ ಸಹಜವಿಳಾಸಾ (ಜಿವಾಲಿ. ೩೩-೩೩). **ಸಹಜಸರಸ್ವತಿ** = ಸಾಕ್ಷಾತ್‌ಸರಸ್ವತಿ ; ಬುದ್ಧಿವಂತೆ ; ಒಂದು ಬಿರುದು : ಸಹಜಸರಸ್ವತಿ . . . ಜಕ್ಕಿಸುನ್ನರಿಯರ್ಮಾಡಿಸಿದ ಬಸದಿ (ಎಕ. XI, ಚಿತ್ರದು. ೭೪-೧೬; 968). **ಸಹಜಾಸಹಜೇ** = ತಾನೇತಾನಾಗಿ ; ಸಲೀಸಾಗಿ ; ಸುಲಭವಾಗಿ : ಆ ರಂಗಪ್ಪನೂ ಏನು ಸಹಜಾಸಹಜೇ ಎಲ್ಲ ಹೇಳಲಿಲ್ಲ (ಮುಖದಾ. ೩೦೯). [ಸಂ.]

ಸಹಜ₂ (ಅ). (ಉಕ) ವಿಶೇಷಕಾರಣವಿಲ್ಲದೆ ; ಸುಮ್ಮನೆ : ಅಹುದು, ನಿಜವೇ. ಸಹಜ ಬಂದಿದ್ದ. ಆ ರಾತ್ರಿ ಇದ್ದು ಹೋದ (ಪ್ರತಿಸ. ೧೦). [< ಸಹಜ₁]

ಸಹಜಕವಿ (ನಾ). ನೈಸರ್ಗಿಕವಾಗಿಯೇ ಕವಿತಾಶಕ್ತಿಯನ್ನು ಹೊಂದಿದವನು; ಸ್ವಭಾವದಿಂದಲೇ ಕವಿಯಾದವನು : ಸಹಜಕವಿ ನಾಗವರ್ಮನ ಸಹಜಂ ಕವಿ ಗಮಕಿ ವಾದಿ ವಾಗ್ಮಿತ್ವಗುಣಂ ಸಹಜಂ ತನಗದು ಪರಮ[ಂ] ಸಹಜನತಾವರ್ಯನೆನಿಸಿದಂ ನಾಕಾರ್ಯಂ (ವರ್ಧಮಾ. ೧-೨೪); ಸಹಜಕವಿ ಚತುರಕವಿ . . . ನುತಮಹಾಕವೀಂದ್ರಂ ಸರಸ್ವತೀಮುಖಮುಕುರಂ (ಸುಕುಮಾ. ೧-೫೩). [ಸಂ.]

ಸಹಜಗುಣ (ನಾ). ಸ್ವಾಭಾವಿಕವಾದ ಪ್ರವೃತ್ತಿ , — ಮನೋಧರ್ಮ : ಲೌಕಿಕರ ಕಂಡು ಆಡುವೆ ಹಾಡುವೆ ತಾರ್ಕಿಕರ ಕಂಡು ಆಡುವೆ ಹಾಡುವೆ ಸಹಜಗುಣ ವೆನ್ನಲ್ಲಿಲ್ಲಯ್ಯಾ (ಬಸವ. ೨೮೭). [ಸಂ.]

ಸಹಜಜ್ಞಾನ (ನಾ). ಅಂತರ್ಗತವಾದ ಜ್ಞಾನ ; ಅಂತರ್ದೃಷ್ಟಿ : ಸಹಜಜ್ಞಾನ ಮನೋಹರಂ ಚರಮದೇಹಂ ಮೋಕ್ಷಲಕ್ಷ್ಮೀಕೃತಸ್ಪೃಹಂ (ಚಂದ್ರಪ್ಪ. ೧೩-೨೬). [ಸಂ.]

ಸಹಜತೆ (ನಾ). ಸ್ವಾಭಾವಿಕವಾದುದು; ನೈಸರ್ಗಿಕವಾದುದು: ಸಹಜತೆ ನಿರಕ್ಷರತೆ, ವಿದ್ಯೆ ತಾಂ ಕೃತಕವಲ (ಮಂಖಚ. ೨೦೪). [ಸಂ. ಸಹಜತಾ]

ಸಹಜದೀಕ್ಷೆ (ನಾ). [ವೀಶೈ] ಸ್ವಭಾವಸಿದ್ಧವಾದ ಸಂಸ್ಕಾರ : ಈ ಪ್ರಕಾರದುಪದೇಶ ಕೂದಲಚನ್ನಸಂಗಯ್ಯನಲ್ಲಿ ಸಹಜದೀಕ್ಷೆ (ಚನ್ನವ. ೪. ೪೦-೯೧). [ಸಂ.ಸಹಜದೀಕ್ಷಾ]

ಸಹಜಧಾತು (ನಾ). [ವ್ಯಾಕ] ಸ್ವಾಭಾವಿಕವಾದ ಕ್ರಿಯಾಪದದ ಮೂಲರೂಪ: ಸಹಜಧಾತುವುಂ ಭಾವಮಕ್ಕುಂ (ತಮಪ. ೨೧೩ ವೃತ್ತಿ); ಸಹಜಧಾತುಗಳಿಗೆ ಪ್ರೇರಣಾರ್ಥ ದಲ್ಲಿ ಇಸು ಮೊದಲಾದ ಪ್ರತ್ಯಯಗಳು ಸೇರಿ ಪ್ರತ್ಯಯಾಂತ ಧಾತುಗಳಾಗುತ್ತವೆ (ಕೃವಿ. ೪೨). [ಸಂ.]

ಸಹಜಜನ್ಮ (ನಾ). ಒಡಹುಟ್ಟಿದವನು ; ಸಹೋದರ : ಸಹಜಜನ್ಮನುತ್ತರಂಗೇಳ್ದು ಹಸ್ತಿನಾಪಾದಯುದ್ಧಮದು ಬಳವದ್ಬಿಗ್ರಹಮೆಂಬವೊಲಸಮರಣಾಗ್ರಹಣಕೆ ಬೆಜಗಾದ ತಾತನಂ ಬಗೞೂಳ್ ಏ (ಅನಂಪು. ೧೩-೫೪). [ಸಂ. ಸಹಜಜನ್ಮನ್]

ಸಹಜಪ್ರಜ್ಞ (ನಾ). ಸ್ವಾಭಾವಿಕವಾಗಿಯೇ ಜ್ಞಾನಿಯಾದವನು ; ಸಹಜ ಪಂಡಿತ : ಸಹಜಪ್ರಜ್ಞಂ . . . ಉದ್ಯದ್ಗುಣರತ್ನಸಂಗ್ರಹನೆನಿಪ್ಪಂಗಾ ಮಹಾಸಂಧಿವಿಗ್ರಹಿ ಗಾಳೋಚಿಸಿದಂದದಿಂದಸಗು ನೀನೆಂದಂ ಧರಾಧೀಶ್ವರಂ (ಪಾರ್ಶ್ವಪು. ೨-೪೭). [ಸಂ.]

ಸಹಜಪ್ರೀತಿ (ನಾ). ನೈಸರ್ಗಿಕವಾದ ಒಲುಮೆ : ಸಹಜಪ್ರೀತಿ ಮನೋಪರಾ ಧರಮಣಪ್ಪೋಚ್ಚುಂಬನಂ . . . ಮುಹುರ್ಮುಹುರಾಲಿಂಗನಮಂತದೇಂ ಮೞದುದೋ ಸಂಭೋಗಕೋಳಾಹಳಂ (ದಶಕು. ೧೦-೮೧). [ಸಂ.]

ಸಹಜಮಿತ್ರ (ನಾ). (ಅಕ್ಕತಂಗಿಯರ ಮಕ್ಕಳು, ಸೋದರತ್ತೆಯ ಮಕ್ಕಳು ಮುಂತಾಗಿ ನಂಟುತನದ ಮೂಲಕ ಉಂಟಾದ) ಸ್ವಾಭಾವಿಕವಾದ ಮೈತ್ರಿಯನ್ನು ತಳೆದವನು : ಕ್ಷಿತಿಯೊಳು ಹಿರಿಯಮ್ಮ ಸೋದರತ್ತೆಯ ಸುತರು ಸಹಜಮಿತ್ರರಹರು (ಚಂಪ್ರಸಾ. ೨೦-೮೪). [ಸಂ.]

ಸಹಜರೋಗ (ನಾ). ನೈಸರ್ಗಿಕವಾಗಿ ಉಂಟಾಗುವ ಬಾಧೆ : ಹಸಿವು, ತೃಷೆ, ಜರೆ ಮೊದಲಾದ ರೋಗಗಳು ಸಹಜರೋಗಗಳೆನಿಸಿಕೊಂಬುವುವು (ಸಚಿ. ೨೪). [ಸಂ.]

ಸಹಜವಿಭೂಷಣ (ನಾ). ಹುಟ್ಟಿನಿಂದ ಬಂದಿರುವ ಆಭರಣ ; ನೈಸರ್ಗಿಕವಾದ ಅಲಂಕಾರ: ಸಹಜವಿಭೂಷಣದಂತಿರೆ ಮಹನೀಯಕ್ಪುಣ್ಣಲಕ್ಷಣಂ ವಿಸುಗೆ ಶುಭಾ ವಹನೆನಿಸಿದನಂ ಕಂಡಂ ಮಹಾತ್ಮನಂ ಸುತನನಟ್ಟುಳ್ಳಿಂದಾ ಮಹಿಪಂ (ಕಾದಂಪು. ೪೧೬); ಸಹಜವಿಭೂಷಣಾಂಬರವಿಲೇಪನಕೇಸರದಾಮಗಂಧಸಸ್ಪೃಹಮಧುಪಾಳಿ ಮಂಡಳಿಸಿ

ಸೀಗುರಿಯಂತಿರೆ ಚಾಮರಂಗಳಿಂ ಬಹುವಿಧಮಿಕ್ಕುವರ್ ದಿವಿಜನೋಲಗದೊಳ್ . . . ವಾರನಾರಿಯರ್ (ಅನಂಪು. ೪-೫೧). [ಸಂ.]

ಸಹಜವೈರ (ನಾ). ಹುಟ್ಟಿನಿಂದ ಬಂದ ವೈರ ; ನೈಸರ್ಗಿಕವಾದ ಶತ್ರುತ್ವ : ಹಾವು ಮತ್ತು ಮುಂಗುಸಿಗೆ ಸಹಜವೈರವಿರುತ್ತದೆ (ರೂಢಿ). [ಸಂ.]

ಸಹಜವ್ಯಂಜನ (ನಾ). [ವ್ಯಾಕ] ಸ್ವಾಭಾವಿಕವಾದ ವ್ಯಂಜನಯುಕ್ತರೂಪ: ಮೇಣೆಂಬುದಱಿಂ ಸಹಜವ್ಯಂಜನಮಾಗಿಯೆ ಕೆಲವಿರ್ಪುವು – ವಾಕ್, ಗೀರ್ (ಶಮದ. ೮೬ ಪ್ರಯೋ). [ಸಂ.]

ಸಹಜಶತ್ರು (ನಾ). ಹುಟ್ಟಿನಿಂದ ಬೆಳೆಸಿಕೊಂಡು ಬಂದ ವೈರವುಳ್ಳವನು; ನೈಸರ್ಗಿಕವಾಗಿ ಶತ್ರುತ್ವವನ್ನು ಹೊಂದಿದವನು : ಇಳೆಯೊಳಗನುಜರು ದಾಯಾದ್ಯರ ಮಕ್ಕಳು ಸಲೆ ಸಹಜಶತ್ರುಗಳು (ಚಂಪ್ರಸಾಂ. ೨೦-೮೩). [ಸಂ.]

ಸಹಜಸಂಗಿ (ನಾ). ಸ್ವಾಭಾವಿಕವಾದ ಒಡನಾಟದವನು : ರೂಹಿಸುವಲ್ಲಿ ರೂಪಾಧಿಕ ನೋಡುವಲ್ಲಿ ನೋಟ ಘನ ಇಂತಪ್ಪ ಸಹಜಸಂಗಿಯ ನಿಲವಿನ ಪರಿ ಉದಕದೊಳಗಣ ಬಿಂದು ಉದಯರತ್ನದಂತೆ (ಬಸವ. ೯೧೬). [ಸಂ. ಸಹಜಸಂಗಿನ್]

ಸಹಜಸಮಾಧಿ (ನಾ). [ಯೋಗ] ಸಮಾಧಿಗಳಲ್ಲಿ ಒಂದು ಬಗೆ ; ಸಹಜವಾದ ಆನಂದವನ್ನು ಹೊಂದಿದ ಸ್ಥಿತಿ: ನಾರುಬೇರಿನ ಕುಟಿಲ ಕಪಟದ ಯೋಗವಲ್ಲಿದು ನಿಲ್ಲಿ ಭೋ . . . ಜೀವಸಮಾಧಿಯೆಂಬುದಲ್ಲ ನಿಜ ಸಹಜಸಮಾಧಿ ಗುಹೇಶ್ವರ (ಅವಚಂ. ೧೩೯-೬೪೦). [ಸಂ.]

ಸಹಜಸ್ವರ (ನಾ). [ವ್ಯಾಕ] ಸ್ವಾಭಾವಿಕವಾದ ಸ್ವರ ; ಶುದ್ಧಸ್ವರ : ಐ, ಔ ಎಂಬುವು ಕನ್ನಡದ ಸಹಜಸ್ವರಗಳಲ್ಲ (ಕೈಪಿಡಿ. ೫). [ಸಂ.]

ಸಹಜಾತ (ಗು). ೧. ಜೊತೆಯಲ್ಲಿ ಹುಟ್ಟಿದ ; ಆಜನ್ಮವಾದ : ಸಹಜಾತಾಂಬರ ದಿವ್ಯಭೂಷಣದಲನ್ಮಂದಾರಮಾಲಾವಿಲಾಸಿ (ಆದಿಪು. ೩-೪೨); ಸಹಜಾತಮಣಿ ವಿಭೂಷಣ ಬಹುವಿಧನವಕುಸುಮದಾಮದಿವ್ಯಾಂಬರಸನ್ಮಹಿಮಂ (ಸುಕುಮಾ. ೧೨-೪೪). ೨. ಸ್ವಾಭಾವಿಕವಾದ ; ನೈಸರ್ಗಿಕವಾದ: ಸಹಜಾತ ತ್ರಿಜ್ಞಾನದ ಮಹಿಮೆಯಿನಾ ನಿಖಿಳವಿದ್ಯೆಗಳ್ ತನ್ನೊಳ್ ಸನ್ನಿಹಿತಮೆನಿಸಿದುವು (ನೇಮಿಪು. ೯-೫). (ನಾ). ೩. ಹುಟ್ಟಿನಿಂದ ಬಂದುದು ; ಜೊತೆಯಲ್ಲಿ ಹುಟ್ಟಿದುದು ; ಆಜನ್ಮವಾದುದು : ಮಣಿಮಯಮಂ ವಿಭೂಷಣಸಮುಚ್ಚಯಮಂ ಸಹಜಾತಮಂ ವಪುಃಕಿಣಕರಮಂ . . . ಪೊತ್ತೆಂ (ಚಂದ್ರಪು. ೪-೮೨). ೪. ಸ್ವಾಭಾವಿಕವಾದುದು : ಮಳಯಜಗಂಧಮೆಂತು ಹರಿಪೌರುಷಮೆಂತು . . . ನಿಜಂ ತನಗಂತು ಸದ್ಗುಣಾವಳಿ ಸಹಜಾತಮಾತನೊರೆಗಂ ದೊರೆಗಂ ಬರಲಾರ್ ನೃಪೋತ್ತಮರ್ (ಶಾಂತಿಪು. ೭-೧೧೯); ಸಹಜಾತಂ ರೂಪಮೊಂದೆಂಬಿನಿತೆ ಬಗೆವೊಡರ್ಹತ್ಪದಾಂಭೋಜಪೂಜಾಸ್ಪೃಹೆಯುಂ . . . ಭೂವಿಹಿತಪ್ರಖ್ಯಾತಿಯುಂ ನಿಟ್ಟಿಸೆ ನಿಜಮೆನೆ ವಜ್ರಾಯುಧಂ ರಾಜಿಸಿರ್ದಂ (ಶಾಂತೀಶ್ವ. ೯-೧೫೦). ೫. ಒಡಹುಟ್ಟಿದವನು; ಸಹೋದರ : "ಸಹಜಾತಂ ಸಹೋದರಂ ಸೋದರಂ ಭ್ರಾತೃವೆನಲೊಡಹುಟ್ಟಿದಂ" (ಮಂಗರಾ. ೯೨-೧೧); ಜನಪತಿಸೇವೆಯಿಂ . . . ನಿಜಸಹಜಾತನಿನುರ್ವರೆಯಿನದಕ್ಕುಂ ಕನಕಂ ಕನಕಾಭಿಧಾನನಾರೋಹಿಣಿಯೊಳ್ (ಜಾತಕಿ. ೯-೨೧); ತಾತ ಕೇಳ್ಸಹಜಾತರಾದ ನಿಮ್ಮೈವರೊಳ್ ತಾ ತಳ್ತಿರದೆ ವಿರೋಧಿಸಿದನೆಮ್ಮಯ್ಯನಂತಾತನಪರಾಧಮಂ ಪರಿಹರಿಸದಿರ್ದೊಡಾನಿದ್ದು ಫಲವೇನು (ಜೈಮಿಭಾ. ೨-೩೯). [ಸಂ.]

ಸಹಜಾತೆ (ನಾ). ಒಡಹುಟ್ಟಿದವಳು ; ಸಹೋದರಿ : "ಪೆಣ್ಗೂಸಾದಂದು ಸ್ವಸ್ಯ ಸಹಜೆ ಸಹೋದರಿ ಸಹಜಾತೆ ಭಗಿನಿಯೆನೆ ಪೆಸ[ರಕ್ಕುಂ]" (ವಸ್ತುಕೋ. ೫೫-೧೮).

[ಸಂ. ಸಹಜಾತಾ]

ಸಹಜಾಮೋದ (ನಾ). ಸ್ವಾಭಾವಿಕವಾಗಿಯೇ ಉಲ್ಲಾಸದಿಂದಿರುವವನು: ಕಾತ್ಯಾಯನೀಲಬ್ಧವರಪ್ರಸಾದಂ ಸಹಜಾಮೋದಂ (ಕೊಲ್ಹಾಶಾ. ೯-೪೯; 1170). [ಸಂ.]

ಸಹಜಾಮೋದೆ (ನಾ). ನೈಸರ್ಗಿಕವಾಗಿ ದೇಹದಲ್ಲಿ ಸುಗಂಧವನ್ನು ಹೊಂದಿದವಳು : ಸಹಜಾಮೋದೆ ಸುಗಂಧಾಮಹಮೆನಿಸಿದ ಮರುಗದಲ್ಲಿ ಪರಿಮಳದೆಲೆಯಂ ಬಹುಗುಣಭೂಷಣೆ ಭಕ್ತಿಯೊಳಹಿನಿವಹಾಭರಣನರ್ಚನೆಗೆ ನೆಱೆ ತಿಱಿದಳ್ (ಗಿರಿಕ. ೫-೬೪). [ಸಂ. ಸಹಜಾಮೋದಾ]

ಸಹಜಾವ್ಯಯ (ನಾ). [ವ್ಯಾಕ] ಸ್ವಾಭಾವಿಕವಾಗಿ ಅವ್ಯಯವಾಗಿರುವ ರೂಪದಲ್ಲಿರುವುದು : ಅಂತರ್ . . . ಪೃಥಕ್ – ಇವು ಮೊದಲಾದ ಸಹಜಾವ್ಯಯಂಗಳ ನಿಱಿಸಿ ವಿಭಕ್ತಿಯಂ ಪತ್ತಿಸಲಾಗದು (ಶಮದ. ೮೧ ಪ್ರಯೋ). [ಸಂ.]

ಸಹಜಿ (ನಾ). ಸ್ವಾಭಾವಿಕವಾದ ನಡವಳಿಕೆಯುಳ್ಳವನು ; ಪ್ರಾಮಾಣಿಕ : ತಪಗೆಡಿಸಿ ತವಸಿಗಳನು . . . ಸಹಜಿ[ಪಾಠಾಂ. ಸಹಸಿ]ಗಳನು ಅಪವಾದಕಿಕ್ಕಿ ಮನ ಕಪಿಚೇಷ್ಟೆಯಂ ಮಾಡಿ ವಿಪರೀತವೃತ್ತಿಯಿಂ ಕಾಡುತಿಹುದು (ಮನೋವಿ. ೧-೧೮); ಹತ್ತುಮಾನುಷ್ಯರೊಳಗನ್ಯರೊಂಭತ್ತೆಣಿಸಿಯಾ ಹತ್ತನೇಯಾ ಸಹಜಿ ತನ್ನ ಮಱೆದಿರೆ (ವೀಶೈಪು. ೫-೪-೭). [ಸಹಜ$_1$ + -ಇ$_3$]

ಸಹಜೀಕ (ಅ). (ಉಕ) ಸ್ವಾಭಾವಿಕವಾಗಿ ; ಸಹಜವಾಗಿ : ಆದರೆ ತನಗಿಂತ ಸಣ್ಣವನಾದ ದಾದಲ್ಯಾ, ಸಹಜೀಕ – ತನಗಿಂತಲೂ 'ಢ' ಇರಬೇಕೆಂದು ಅವನ ಕಾಯಾಸ (ದೀಪಹ. II. ೧೬೦). [< ಸಹಜ$_2$]

ಸಹಜೀವನ (ನಾ). ಒಟ್ಟಿಗೆ ಜೀವಿಸುವುದು ; ಸಹಕಾರದ ಬದುಕು : ಸಹಜೀವನ, ಸಹಾನುಭೂತಿಯ ಜೀವನ . . . ಎಲ್ಲೆಡೆಗಳಲ್ಲೂ ಸಾಧ್ಯವಾಗಬಹುದು (ಭಾರದ. ೩೩೪).

[ಸಂ.]

ಸಹಜೀವಿತೆ (ನಾ). ಗೆಳತಿ ; ಸ್ನೇಹಿತೆ : "ಸಾರಜ್ಞೆ ಮಿತ್ರೆ ಸಖಿಯಾಳಿ ಸಹಜೀವಿತೆ [ಪಾಠಾಂ. ಸಹಜೀವಕೆ] ವಯಸ್ಯೆಯೆನೆ ಕೆಳದಿಯಕ್ಕುಂ" (ಮಂಗರಾ. ೯೦-೫).

[ಸಂ. ಸಹಜೀವಿತಾ]

ಸಹಜೆ (ನಾ). ೧. = ಸಹಜಾತೆ : "ಪೆಣ್ಗೂಸಾದಂದು ಸ್ವಸ್ಯ ಸಹಜೆ ಸಹೋದರಿ ಸಹಜಾತೆ ಭಗಿನಿಯೆನೆ ಪೆಸ [ರಕ್ಕುಂ]" (ವಸ್ತುಕೋ. ೫೫-೧೮). ೨. [ಯೋಗ] ಯೋಗದ ಮೂರು ಬಗೆಯ ಅವಸ್ಥೆಗಳಲ್ಲಿ ಒಂದು : ಉನ್ಮನೀ ಮನೋನ್ಮನೀ ಸಹಜಾದ್ಯವಸ್ಥಾಕ್ರಮಂಗಳುಂ . . . ಯೋಗಪಾದದಲ್ಲಿ ಪ್ರತಿಪಾದ್ಯಂಗಳಕ್ಕುಂ (ವಿವೇಕ. ೧೩೫). [ಸಂ. ಸಹಜಾ]

ಸಹಣ 'ಸಾಹಣ' ನೋ.

ಸಹಣಿ 'ಸಾಹಣಿ' ನೋ.

ಸಹಣೆ (ನಾ). (?) : ಗಂಗೆಯ ಸಹಣೆಯ ಮೇಲೆ ಹೊಯಿಸಣ ಗಂಡಭೇರುಂಡ ಗುಂಮ (ಎಕ. VIII, ಸಾಗರ. ೧೦೧-೫; 1303). [?]

ಸಹತಾಪ (ನಾ). ಸಮಾನವಾದ ವೇದನೆ : ನೀನು . . . ನನ್ನ ಸರಿ ಸಹ ತಾಪದಲಿ ಪರಿಪಾಕ ಹೊಂದಿದ ಬುದ್ಧನು (ಹಾಡುಪಾ. ೪೯-೧೮). [ಸಂ.]

ಸಹದೇವ (ನಾ). ೧. ಒಬ್ಬಾತನ ಹೆಸರು : ಸಹದೇವ ಮಾಣಿ (ಎಕ. II (R), ೮೮; ೩ನೆಯ ಶತ). ೨. ಪಂಚಪಾಂಡವರಲ್ಲಿ ಕೊನೆಯವನು : "ಕೌಂತೇಯನೆನಲು ಸಹದೇವನಕ್ಕುಂ" (ಮಂಗರಾ. ೭೮-೩); ಆಗಳಾ ಪಾಂಡುರಾಜನಾ ಕೂಸುಗಳ್ಗೆ . . . ನಕುಲ ಸಹದೇವರೆಂದವರ್ಗಮಳ್ವೆಸರನಿಟ್ಟು (ಪಂಪಭಾ. ೨-೩ ವ). [ಸಂ.]

ಸಹದೇವಿ (ನಾ). ಒಂದು ಬಗೆಯ ಸಸ್ಯ ; ಸರ್ಪಾಕ್ಷಿ : "ದಂಡೋತ್ಪಳಃ, ಸಹದೇ(ವಾ)ವಃ – ಈ ೨ ಸಹದೇವಿ" (ಹಲಾಯು. ೩೩-೪೫); ವಿಷ್ಣುಕ್ರಾಂತಿ ಸಹದೇವಿಯ ಬೇರು ಇವಂ . . . ಮಂತ್ರಿಸಿ ಮುಖಮಂ ಪೂಸೆ ಲೋಕವಶ್ಯ (ವಿವೃವಿ. ೨); ಕತ್ತೆಗಿವಿ ಸಹದೇವಿ ಮತ್ತೆತ್ತುನಾಲಗೆಯು ಉತ್ತರಣಿವೆರಸಿ ತಿಲಕವಿಡೆ ಲೋಕ ತನ್ನತ್ತ ಸಾರುವದು (ಸರ್ವಜ್ಞ. ೧೯೮೦). [ಸಂ. ಸಹದೇವೀ]

ಸಹದೇವಿಘೃತ (ನಾ). ಸಹದೇವಿ ಮುಂತಾದ ಔಷಧಿಮೂಲಿಕೆಗಳನ್ನು ತುಪದಲ್ಲಿ ಪಾಕಮಾಡಿ ತಯಾರಿಸಿದ ಒಂದು ಬಗೆಯ ಔಷಧ : ಸಹದೇವಿಘೃತ – ಒಂದು ಕೊಳಗ ಸಹದೇವಿಸಮೂಲವನ್ನೂ . . . ಕಾಯಿಸಿ ಪಾಕದಲ್ಲಿಳುಹಿಕೊಂಡು ಪ್ರತಿನಿತ್ಯವೂ ಎರಡುವರಹ ತೂಕವನ್ನು ಸೇವಿಸಲು, ಪಿತ್ತಜ್ವರ . . . ಸನ್ನಿಪಾತಜ್ವರ ಸಹ ಗುಣಮಕ್ಕುಂ (ಸಕವೈ. ೮೫). [ಸಂ. ಸಹದೇವೀಘೃತ]

ಸಹದೇವೀತೈಲ (ನಾ). ಸಹದೇವಿ ಎಂಬ ಔಷಧಿಮೂಲಿಕೆಯಿಂದ ತಯಾರಿಸಿದ ಒಂದು ಬಗೆಯ ಎಣ್ಣೆ : ಸಹದೇವೀತೈಲ – ಸಹದೇವಿಸೊಪ್ಪಿನ ರಸ ಒಂದು ಬಳ್ಳ, ಅಂಬಿಲ ಒಂದು ಬಳ್ಳ . . . ಕಾಯಿಸಿ ಹದದಲ್ಲಿಳುಹಿ, ದೇಹಲೇಪವಂ ಮಾಡಲು, ಶೀತಜ್ವರ, ಗರ್ಭಿಣಿಜ್ವರ ಸಹ ಮಾಣ್ಗುಂ (ಸಕವೈ. ೭೦). [ಸಂ.]

ಸಹಧರ್ಮಚಾರಿಣಿ (ನಾ). ವಿಧಿಪೂರ್ವಕವಾಗಿ ಮದುವೆಯಾದ ಹೆಂಡತಿ; ಧರ್ಮಪತ್ನಿ : ಸಹಧರ್ಮಚಾರಿಣಿಯೊಬ್ಬಳು ಬಂದಳು ಕೊರತೆ ನನಗಾವುದಿನ್ನೀಗ (ಇಂಚಾಪ. ೩೬-೬೯); ಪತ್ನಿಯು ಪತಿಯ ಕೇವಲ ಸಹಚಾರಿಣಿಯಲ್ಲ ಸಹಧರ್ಮಚಾರಿಣಿಯಾಗಿರುವಳು (ಪ್ರಬಂಧ. ೧೧೫). [ಸಂ. ಸಹಧರ್ಮಚಾರಿಣೀ]

ಸಹಧರ್ಮಿ (ನಾ). ೧. ಸಮಾನವಾದ ಮತವನ್ನು ಅನುಸರಿಸುವುದು ; ಒಂದೇ ಸಂಪ್ರದಾಯವನ್ನು ಪಾಲಿಸುವುದು. ೨. ತನಗೆ ಸಮಾನವಾದ ಮತವನ್ನು ಅನುಸರಿಸುವವನು ; ಒಂದೇ ಮತವನ್ನು ಅನುಸರಿಸುವವನು: ಎನ್ನಂ ತನ್ನ ಸಹಧರ್ಮಿಯಪ್ಪಂತು ಧರ್ಮೋಪದೇಶಂಗೆಯ್ದನಪ್ಪುದಱಿಂ ಗುರುಸ್ಥಾನನುಂ ಶರಣಾಗತನಪ್ಪುದಱಿಂ ಪುತ್ರಸ್ಥಾನನುಮಾಗಿರ್ಪಂ (ಪಂಚತಂ. ೧೦೨-೨೨); ಸಹಜಾತ, ಸಹಧರ್ಮಿ, ಸಹಭೋಜಿ (ಶಿಮಾ. [illegible] ಪ್ರಜೋ). [ಸಂ. ಸಹಧರ್ಮಿನ್]

ಸಹಧರ್ಮಿಣಿ (ನಾ). = ಸಹಧರ್ಮಚಾರಿಣಿ : ನಿಮ್ಮಯ್ಯಂಗವರಜೆ [illegible]ಪುತ್ರಸಹಧರ್ಮಿಣಿ . . . ಸುವೇದಿ ನಿಮ್ಮತ್ತೆ ವಿನಯದಿಂ ಬೆಸಕೆಯ್ಯಿಂ (ಸುಕುಮಾ. [illegible]). [ಸಂ. ಸಹಧರ್ಮಿಣೀ]

ಸಹನ (ನಾ). ೧. ಸಹನೆ ; ತಾಳ್ಮೆ ; ಸೈರಣೆ : "ಸಹನಂ, ಸಹನೀಯಂ, ಈ ೨ ತಾಳ್ಮೆ" (ಕಾಶಕ್ಯ. ೧೪೯); ದೊಡ್ಡಸಂಸಾರ ನಡಿಸತಕ್ಕವರಿಗೆ ಸಹನವೇ ಮುಖ್ಯವಾದುದ್ದು (ನೀತಿಚಿಂ. XV. ೧೭); ಮನೆಯಲ್ಲಿ ಅತ್ತೆಯ ಕಾಟವಿದ್ದರೂ ಹೆಣ್ಣು ಸಹನ ಮಾಡಿಕೊಂಡು ಹೋಗುವದು (ಕನ್ನಜಾ. ೧೨೩). ೨. ಸ್ವಾಭಾವಿಕವಾಗಿಯೇ ತಾಳ್ಮೆಯನ್ನು ಹೊಂದಿದವನು ; ಸಹನಶೀಲ : "ಸಹಿಷ್ಣುಃ, ಸಹನಃ, ಕ್ಷಂತಾ, ತಿತಿಕ್ಷುಃ, ಕ್ಷಮಿತಾ, ಕ್ಷಮಿ - ೬ ಸ್ವಭಾವದಿಂದ ಸೈರಣೆಯುಳ್ಳವನು" (ಸಿದ್ಧಾಂತಿ. ೩೩೧). [ಸಂ.]

ಸಹನಶಕ್ತಿ (ನಾ). ಸಹಿಸಿಕೊಳ್ಳುವ ಸಾಮರ್ಥ್ಯ ; ಸಹನೆ : ಭೂಮಿಯಲ್ಲಿ ಸಹನಶಕ್ತಿ . . . ಜೀವಾತ್ಮನಲ್ಲಿ ಬುದ್ಧಿಶಕ್ತಿ ಈ ರೀತಿಯಲ್ಲಿ ಎಲ್ಲೆಲ್ಲೂ ಶಕ್ತಿವೈಶಿಷ್ಟ್ಯವನ್ನು ನಾವು ಕಾಣುತ್ತೇವೆ (ಶಕ್ತಿವಿ. ೩೩). [ಸಂ.]

ಸಹನಶೀಲ (ಗು). ತಾಳ್ಮೆಯ ಗುಣವುಳ್ಳ : ಅವರು ತುಂಬ ಸಹನಶೀಲವ್ಯಕ್ತಿ (ರೂಢಿ). [ಸಂ.]

ಸಹನಶೀಲತೆ (ನಾ). ತಾಳ್ಮೆ; ಸೈರಣೆ; ಸಹಿಷ್ಣುತೆ: ಸಹನಶೀಲತೆಯ ಪರಮಾವಧಿಯದು (ಹಳ್ಳಿಹಾ. ೧೧೬). [ಸಂ. ಸಹನಶೀಲತಾ]

ಸಹನಾ (ನಾ). [ಸಂಗೀತ] ಒಂದು ರಾಗದ ಹೆಸರು : ಸಹನಾರಾಗವು (೧೮) (ಸಂ)ಪೂರ್ಣ ; ಷಡ್ಜಗ್ರಹವನ್ನು ಕೂಡಿದೆ (ಚತುಪ್ರ. ೧೩೮). [< ಸಂ. ಶಹನಾ]

ಸಹನಾತೀತ (ಗು). ತಾಳಿಕೊಳ್ಳಲು ಅಸಾಧ್ಯವಾದ ; ಅಸಹನೀಯವಾದ: ಸಹನಾತೀತ ಅವಮಾನದಿಂದ ಏನು ಮಾಡಿಕೊಳ್ಳುವಳೋ ಎಂಬ ಸಂಶಯಪಿಶಾಚಿಯು ಬಾಧಿಸಹತ್ತಿತ್ತು (ಸಂಜೀವಿ. ೧೫೪). [ಸಂ.]

ಸಹನೆ (ನಾ). = ಸಹನ ೧ : ನಿಜಕ್ಕೂ ಸತ್ಯ, ಪ್ರೇಮ, ತ್ಯಾಗ, ಅಹಿಂಸೆ, ಸಹನೆ, ಸಮತೆ, ಸಹಾನುಭೂತಿ . . . ಇವೇ ಮಾನವಧರ್ಮದ ಮೂಲತತ್ತ್ವಗಳು (ಧರ್ಮಸಾ. ೩). [ಸಂ. ಸಹನ]

ಸಹಪಂಕ್ತಿ (ನಾ). ಸಮಾನವಾದ ಪಂಕ್ತಿ ; ಒಂದೇ ಸಾಲು : ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ (ಬಸವ. ೪೪೯); ಅರಿಕೇಸರಿಯೂ ತಾನೂ ಸಹಪಂಕ್ತಿಯಲ್ಲಿ ಕುಳಿತಾಗ ಮಹಾರಾಣಿಯೇ ಬಂದು ಬಡಿಸುತ್ತಿದ್ದ ದಿವ್ಯದೃಶ್ಯ ಕಣ್ಣಿದಿರು ಬಂದಂತಾಯಿತು (ದಾನಚಿಂ. ೪೦). 'ಅಡ್ಡಪಂಕ್ತಿ' ಪರಾ. [ಸಂ.]

ಸಹಪಂಕ್ತಿಭೋಜನ (ನಾ). ೧. ಸಮಾನವಾದ ಪಂಕ್ತಿಯಲ್ಲಿ ಕುಳಿತು ಮಾಡುವ ಊಟ ; ಒಂದೇ ಸಾಲಿನಲ್ಲಿ ಕುಳಿತು ಮಾಡುವ ಭೋಜನ : ನಿಮ್ಮ ಸಹಪಂಕ್ತಿಭೋಜನವು ಲಭಿಸದುದರಿಂದ ನನಗೆ ಬಹು ವಿಷಾದವಾಗಿರುವುದು (ಕವಿಕ. ೨೧). ೨. ಬೇರೆ ಬೇರೆ ವರ್ಣದ ಜನ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುವುದು. ೩. ಗುರು, ಯಜಮಾನ ಅಥವಾ ಗಣ್ಯರ ಜೊತೆಯಲ್ಲಿ ಉಳಿದವರು ಕುಳಿತು ಭೋಜನಮಾಡುವುದು. [ಸಂ.]

ಸಹಪಂತಿ (ನಾ). = ಸಹಪಂಕ್ತಿ : ಸಹಪಂತಿಯಲ್ಲಿ ತನ್ನ ಗುರುವೆಂದು ವಿಶೇಷವ ಮಾಡಲಾಗದು (ಸಕವ. ಕ. I. ೧೧೮-೪೫೦); ಸಹಪಂತಿಯಲ್ಲಿ ಮೃಡಶರಣನ ಪ್ರಸಾದವ ಕೊಳಲೊಲ್ಲದೆ ತುಡುಗುಣಿನಾಯಂತೆ ತೊಗಲ ಗಡಿಗೆಯ ತುಂಬುವ ಗುರುಪಾತಕರಿಗೆಲ್ಲಿಯದೊ ಒಡೆಯರ ಕಟ್ಟಳೆ (ಮೋಳಿಮಾ. ೨೧-೮೪). [< ಸಂ. ಸಹಪಂಕ್ತಿ]

ಸಹಪತ್ನಿ (ನಾ). ಗಂಡನ ಜೊತೆಯಲ್ಲಿರುವವಳು ; ಪತಿಸಮೇತಳಾಗಿರುವವಳು : ಆರು ಸುತ ಸಹಪತ್ನಿ ಮೇಣ್ ನೀನ್ಯಾರು ನಾನ್ಯಾರು (ಬಿಜ್ಜಪು. ೮೯-೬೦). [ಸಂ. ಸಹಪತ್ನೀ]

ಸಹಪಾಂಶುಕ್ರೀಡಿತ (ನಾ). (ಆಲಂ) ಧೂಳಾಟದಲ್ಲಿ ಜೊತೆಗೂಡಿದವನು; ಬಾಲ್ಯದ ಒಡನಾಡಿ : ಸಹಪಾಂಶು[ಪಾಠಾಂ. ಸು]ಕ್ರೀಡಿತರಪ್ಪ ಪಲಂಬರರಸುಗಳ್ಳೆರಸು ಪುರಮಂ ಪೊಱಮಟ್ಟು ಪೋಗಿ (ಚಂದ್ರಪು. ೪-೨೪ ವ). [ಸಂ.]

ಸಹಪಾಂಸುಕೇಳಿ (ನಾ). ಜೊತೆಯಾಗಿ ಧೂಳಿನಲ್ಲಿ ಆಡುವ ಆಟ ; ಬಾಲ್ಯದ ಒಡನಾಟ : ಅಮರಕುಮಾರರಂ ಜಿನಕುಮಾರಕನಂ ಸಹಪಾಂಸುಕೇಳಿಯೊಳ್ ಸಮವಯಸಂ ಮನಂಗೊಳಿಸೆ ಮೇಳಿಸಲುಂ . . . ಬೆಸವೇಟ್ಟು (ಮಲ್ಲಿಪು. ೧೩-೫೨). [ಸಂ. ಸಹಪಾಂಸುಕೇಲಿ]

ಸಹಪಾಂಸುಕ್ರೀಡಿತ (ನಾ). = ಸಹಪಾಂಶುಕ್ರೀಡಿತ : ದುರ್ಯೋಧನಪ್ರಭೃತಿಗಳ್ ನೂರ್ವರುಂ ಧರ್ಮಪುತ್ರಾದಿಗಳಯ್ವರುಂ ಸಹಪಾಂಸುಕ್ರೀಡಿತರಾಗಿ (ಪಂಪಭಾ. ೨-೨೯ ವ); ನಾಮತ್ತ ಪೋಗಲಾಗದೆಂದು ಸಹಪಾಂಸುಕ್ರೀಡಿತರಪ್ಪ ಗೋಪಾಲಕರ್ ಪೇಟೆ (ಜಗವಿ. ೩-೮೧ ವ). [ಸಂ.]

ಸಹಪಾಂಸುಕ್ರೀಡೆ (ನಾ). = ಸಹಪಾಂಸುಕೇಳಿ : ಸಹಪಾಂಸುಕ್ರೀಡಾನೇಕವಿಕ್ರಮ ಕ್ರೀಡಾರಸೋದಾರರಾಜದಾರಕಪರಿವೃತನಾಗಿ (ಆದಿಪು. ೮-೪೧ ವ); ಓರಗೆಗಳಪ್ಪ ಬಹುವೃಂದಾರಕದಾರಕರನಂದು ಸಹಪಾಂಸುಕ್ರೀಡಾರಸದೊಳ್ . . . ನಿರವಿಸೆ (ಪುಷ್ಪಪು. ೧೨-೫೫). [ಸಂ. ಸಹಪಾಂಸುಕ್ರೀಡಾ]

ಸಹಪಾಠಿ (ನಾ). ಜೊತೆಯಲ್ಲಿ ವಿದ್ಯಾಭ್ಯಾಸ ಮಾಡುವ ವ್ಯಕ್ತಿ ; ಒಡನೋದಿ : ತನ್ನ ಸಹಪಾಠಿಗಳನ್ನು ಕಾರಣವಾಗಿ ಒಡ್ಡಿದ (ಹಸುಹೂ. ೨೩೨); ನನಗೆ ಚೇತನ ಬಂದಾಗ ನನ್ನ ಸಹಪಾಠಿಗಳಲ್ಲಿ ಒಬ್ಬಳು ನಿಂತುಕೊಂಡು ನನ್ನನ್ನು ಮಾತಾಡಿಸುತ್ತಿದ್ದಳು (ಹೇಮಂತ. ೯೩). [ಸಂ. ಸಹಪಾಠಿನ್]

ಸಹಪಾನ (ನಾ). (ಮದ್ಯವನ್ನು) ಒಟ್ಟಿಗೆ ಕುಡಿಯುವುದು ; ಜೊತೆಯಾಗಿ ಪಾನಮಾಡುವುದು : "ಸಾರೆ ಕೆಲಬರ್ ಕೂಡಿ ಕುಡಿಯೆ ಸಹಪಾನಮದು" (ಮಂಗರಾ. ೬೬-೮). [ಸಂ.]

ಸಹಬಾಳ್ವೆ (ನಾ). ಜೊತೆಗೂಡಿದ ಬದುಕು ; ಒಟ್ಟುಗೂಡಿ ನಡೆಸುವ ಬಾಳು : ಇನ್ನು ರಾಯಚೂರು ಉರ್ದು – ಕನ್ನಡ ಸಹಬಾಳ್ವೆ ನಡಸುವ ಊರು (ದ್ರಾವಿವಿ. ೩೯೨). [ಸಹ + ಬಾಳ್ವೆ (< ಬಾಟ್ವೆ)]

ಸಹಭವ (ಗು). ೧. ಜೊತೆಯಲ್ಲಿ ಹುಟ್ಟಿದ; ಒಡಹುಟ್ಟಿದ. (ನಾ). ೨. ಒಡಹುಟ್ಟಿದವನು; ಸೋದರ : ಶಿವಭಕ್ತರ ಸಹಭವ ಗುರು ತಂದೆಗಳೆನಗೆ (ಮಹಾದೇ. ಬ. ೧೫೭-೩೪೯); ಇವಳಿಗೋಸುಗವಳಿದನೇ ಸಹಭವನು (ಕುವ್ಯಾವಿ. ೩-೯೭). ೩. ಜೊತೆಯಲ್ಲಿ ಹುಟ್ಟಿದುದು; ಒಡಹುಟ್ಟಿದುದು : ಸುರೆಯಿಂ ಸೊರ್ಕಂ . . . ದುಶ್ಚ್ಯವನನ ಹಯದಿಂ ವೇಗಮಂ ತಾಳ್ದಿ ನೀರಾಕರದಿಂದೇಟ್ಟಂದಳಂತಾ ಸಿರಿ ಸಹಭವರಂ ಪೋಲ್ವುದೇಂ ಚೋದ್ಯಮಾಯ್ತೆ (ಕಾದಂಪೂ. ೫೪೬). ೪. ಪ್ರೀತಿ; ಒಲುಮೆ : "ಸಹಭವಂ [ಪಾಠಾಂ. ಭಟಂ, ಭುಜಂ] ಸಂಗತಂ ಪ್ರೀತಿ ಸಖ್ಯಂ ಸ್ನೇಹಮೆನಲು ಮೈತ್ರಕ್ಕೆ ನಾಮಂ" (ಮಂಗರಾ. ೧೨೮-೮). [ಸಂ.]

ಸಹಭವೆ (ನಾ). ಒಡಹುಟ್ಟಿದವಳು; ಸಹೋದರಿ : "ಸಹಭವೆಯುಂ ಪತಿವ್ರತೆಯುಮೆಂಬಿವು ಜಾಮಿಯನಿಕ್ಕು" (ನಾನಾರ. ೧೧೦). [ಸಂ. ಸಹಭವಾ]

ಸಹಭಾಗಿ (ನಾ). ೧. ಒಡನಾಡಿ; ಜೊತೆಯ ವ್ಯಕ್ತಿ : ಕಾಮಾಭಿಲಾಷೆ ಕೆಟ್ಟದ್ದೆಂದು ನಿಸ್ಸಂಶಯವಾಗಿ ನಿರ್ಧರಿಸಬಹುದು, ಅದರೆ ಅದನ್ನು ಸಹಭಾಗಿಯ ಉನ್ನತಿಗಾಗಿ ಪ್ರಯತ್ನಿಸುವೆನೆಂಬ ಒಂದು ಒಳ್ಳೆಯ ಭಾಷೆಯೊಡನೆ ಜತೆಗೂಡಿಸಿರುವುದರಿಂದ ಆ ಸಂಬಂಧದ ಕೆಟ್ಟತನದ ಅಂಶ ಕಡಿಮೆಯಾಗುತ್ತದೆ (ನಿಶಲು. ೨೩೮). ೨. ಸಮಾನಜವಾಬ್ದಾರಿಯನ್ನು ಹೊಂದಿದ ವ್ಯಕ್ತಿ ;

ಪಾಲುದಾರ : ಈ ಕಾರ್ಯದಲ್ಲಿ ಅವರಿಬ್ಬರೂ ಸಹಭಾಗಿಗಳಾಗಿದ್ದಾರೆ. (ರೂಢಿ).
[ಸಂ. ಸಹಭಾಗಿನ್]

ಸಹಭೋಗಿನಿ (ನಾ). (ರಾಜನ) ಉಪಪತ್ನಿ : ಪಟ್ಟದ ರಾಣಿ ಸಹಭೋಗಿನಿಯರೆಲ್ಲರ ಬರಹೇಳಿ (ಇಚಶಾಂ. ೮-೧೮). [ಸಂ. ಸಹಭೋಗಿನೀ]

ಸಹಭೋಜನ (ನಾ). ೧. (ಸ್ನೇಹಿತರು ಮೊದಲಾದವರೊಡನೆ) ಒಟ್ಟಿಗೆ ಊಟಮಾಡುವುದು ; ಜೊತೆಗೂಡಿ ಊಟಮಾಡುವುದು : ಘನಶೀಲರುಗಳು ದೇವಾರ್ಚನೆ ಸಹಭೋಜನ ತಾಂಬೂಲ ಸುಗಂಧ ಮನಗೊಂಬ ನಿಖಿಳ ವೈಭೋಗದಿಂದಿರ್ಪರು ದಿನಗಳೆದರು ಬಹುಸುಖದಿ (ಮೋಹಶ. ೩೩-೩). ೨. = ಸಹಪಂಕ್ತಿಭೋಜನ ೧ : ಧನವನಿತ್ತಾದೊಡೆಯು ಸಹಭೋಜನವನುಂಡಾದೊಡೆಯು . . . ರಿಪುಜನಪತಿಯ ವಶಮಾಳ್ಪುದು (ಕುಮಾಭ. ೮-೪೫); ನಿಮ್ಮ ರಾಜರುಗಳು ರಾಯಭಾರಿಯನ್ನು ಕರೆದು ಅವನೊಡನೆ ಸಹಭೋಜನ ಮಾಡುತ್ತಾರೆ (ಪ್ರವಾಗ. ೧೧.೧೨). ೩. [ವೀಶೈ] "ಮುಂದಿಟ್ಟ ಪದಾರ್ಥಗಳನ್ನೆಲ್ಲ ಲಿಂಗಕ್ಕೆ ಮೊದಲು ಕೊಟ್ಟು ಭೋಜ್ಯಭೋಜ್ಯಕ್ಕೆ ಕೊಟ್ಟುಕೊಂಬುದು ಸಹಭೋಜನವು" (ಶಿವಾಕೋ. ೧೧೨) : ಸಹಭಾ[ಪಾಠಾಂ. ಭೋ]ಜನ ಸಹಭೋಜನವೆಂದೆಂಬರು ಭಾಜನವಾವುದು ಭೋಜನವಾವುದೆಂದಱಿಯರು ಭಾಜನವ ಅಂಗ ಭೋಜನವ ಲಿಂಗ (ಅಪಚಂ. ೨೮೦-೧೨೩); ಸಹಭೋಜನವ ಮಾಡುವನ ಇರವು ಹೇಗೆಂದಡೆ ದಗ್ಧಪಟದಂತೆ . . . ಒಡಲಿನ ಆತ್ಮನ ಭೇದದಂತಿರಬೇಕು (ಸಕಪ. ಕ. ೧. ೧೨೫-೪೭೬). [ಸಂ.]

ಸಹಭೋಜನಿಗ (ನಾ). ಜೊತೆಯಲ್ಲಿ ಊಟಮಾಡುವವನು: ಹನುಮ ನೀನೆಮ್ಮೊತನೆ ಸಹಭೋಜನಿಗನೆಂದಿದಿರ್ದು . . . ಅಮಲವಿಷ್ಟರದ ಕೊನೆಯಲಾತನ ನಿಲಿಸಿದನು (ತೊರರಾ. ೬-೫೫-೪೭). [ಸಹಭೋಜನ + -ಇಗ]

ಸಹಭೋಜಿ (ನಾ). = ಸಹಭೋಜನಿಗ : ಸಹಜಾತ, ಸಹಧರ್ಮಿ, ಸಹಭೋಜಿ (ಶಮದ. ೨೯೧ ಪ್ರಯೋ). [ಸಂ. ಸಹಭೋಜಿನ್]

ಸಹಮತ (ನಾ). ಒಮ್ಮತ; ಏಕಾಭಿಪ್ರಾಯ : ಈ ಗುರುಶಿಷ್ಯರ ಸಹಮತದಿಂದ ಟಿಳಕರು ವಣಿಯಲ್ಲೇ ಇರುವದೆಂದಾಯಿತು (ಸ್ಮೃತಿಚಿ. ೯೨). [ಸಂ.]

ಸಹಮತಿ (ನಾ). ೧. ಐಕಮತ್ಯ; ಒಗ್ಗಟ್ಟು : ಹಣವಿಲ್ಲ; ಹಣವಿಲ್ಲದೆಯೂ ದೊಡ್ಡ ದೊಡ್ಡ ಕಾರ್ಯಗಳನ್ನು ಸಾಧಿಸಬಹುದಾದ ಸಹಮತಿಯಿಲ್ಲ (ಪ್ರಬಾಪ್ರ. ೯೫). ೨. ಒಪ್ಪಿಗೆ; ಅಂಗೀಕಾರ : ಮೇಲೆ ಹೇಳಿದ ಸೂಚಿಗಳಲ್ಲಿನ ಇತರ ಯಾವ ವಿಷಯಗಳನ್ನು ಆ ರಾಜ್ಯದ ಸರ್ಕಾರದ ಸಹಮತಿಯೊಡನೆ ರಾಷ್ಟ್ರಪತಿಯವರು ಆದೇಶದ ಮೂಲಕ ಉಲ್ಲೇಖಿಸಬಹುದೋ ಅಂಥವುಗಳ ಮಟ್ಟಿಗೂ ಪರಿಮಿತವಾಗ ತಕ್ಕುದು (ಭಾಧಾನ. ೨೨೬). [ಸಂ.]

ಸಹಮೂಲ (ಗು). ೧. ಬೇರುಸಹಿತವಾದ; ಬೇರಿನಿಂದ ಕೂಡಿದ. (ನಾ). ೨. ಒಂದು ಬಗೆಯ ಔಷಧೀಮೂಲಿಕೆ : ಮುಳ್ಳುಸುಂಡೆ ಸಹಮೂಲದ ಚೂರ್ಣ ಸಮಸಕ್ಕರೆ ಬೆರಸಿ ಎರಡುವರಹಾ ತೂಕ ನಿತ್ಯ ಸೇವಿಸೆ ವೀರ್ಯವೃದ್ಧಿಯಹುದು (ಕಾಮಶಾ. ೨೬೪); ಜಾತರಾಸಿ ಸಹಮೂಲ ದ್ರಾಕ್ಷಿಹಣ್ಣು . . . ಕಷಾಯವನಿಕ್ಕಿ ತೆಗೆದು ಕೊಳ್ಳಲು ಶೀತಜ್ವರ ಪರಿಹಾರವಾಗುವುದು (ಸಕಪ. ೬೫). [ಸಂ.]

ಸಹಯಿಗ (ನಾ). ನೆರವಿಗೆ ಬರುವವನು; ಸಹಾಯಕ : ಚರಾಚರಂಗಳಲಿರ್ಪ ಜನಜಾಲ ಹರಿಗೆ ಸಹಯಿಗರಾಗಿ ಬರಲು (ಕೋಗಯ. ೧೮-೬೯). 'ಸಹಾಯಿಗ' ಪರಾ.
[< ಸಹಾಯಕ]

ಸಹಯೋಗ (ನಾ). ಸಹಕಾರ; ನೆರವು : ಈ ಕನ್ನಡರೂಪವನ್ನು ಆಡುವ ಸಮರ್ಥ ನಟರೊಬ್ಬರ ಸಹಯೋಗ ದೊರಕುವುದಾದರೆ — ಇದನ್ನು ಇನ್ನಷ್ಟು ಉತ್ತಮಪಡಿಸುವ ಅಭಿಲಾಷೆಯುಳ್ಳವರಾಗಿದ್ದಾರೆ (ವೀರಯೋ. Vii ಪೀಠಿಕೆ). [ಸಂ.]

ಸಹಯೋಗಿ (ನಾ). ೧. ಜೋಡಿ; ಜೊತೆ : ಪಾಶ್ಚಾತ್ಯರಲ್ಲಿ ಕಾವ್ಯಮೀಮಾಂಸೆ ಬೆಳೆಯುತ್ತಾ ಹೋದಂತೆ ಅದರ ಪ್ರಾಯೋಗಿಕರೂಪವಾದ ಸಾಹಿತ್ಯವಿಮರ್ಶೆಯೂ ಸಹಯೋಗಿಯಾಗಿಯೆ ಬೆಳೆದು ಬಂದಿದೆ (ಬಂಕಮ. ೯ ಮುನ್ನುಡಿ). ೨. ಸಹಚರ; ಸಂಗಡಿಗ : ಡಾರ್ವಿನ್ನನ ಸಹಯೋಗಿ . . . ಈ ರೀತಿ ಸ್ಪಷ್ಟವಾಗಿ ಬರೆದಿಯತ್ತಾನೆ (ಜೀವಾತ್ಮ. ೨೩೬). [ಸಂ. ಸಹಯೋಗಿನ್]

ಸಹವರ್ತಿ (ನಾ). ೧. ಅನುವರ್ತಿ; ಸಂಗಡಿಗ : ತನುಜ ಕೇಳಿನ್ನೊಡನೆ ಸಹವರ್ತಿಯಾಗಿ ನೀಂ ಬಿನದಿಂದೀನನೊಡರಿಬಿದೆಯದು ಪೂಜೆಯಾಗನುಕರಿಪೆನು (ಸೌಂದಪು. ೬ ೫೧); ಎಂಥಂಥ ಕುತ್ತುಗಳಲ್ಲಿ ಸಹವರ್ತಿಗಳಾಗಿ . . . ಈ ಗಂಡಾಂತರದಲ್ಲಿ ಒಂಟಿಗನಾಗಿ ಉಳಿಯಬೇಕಾಯಿತೇ? (ಮೇದಿಮಾ. ೧೬೪). ೨. ಅನುವರ್ತಿಯಾದುದು; ಸಂಗಡವಿರುವುದು : ಈ ಮೊದಲನೆಯ ಗುಂಪಿನ ಇಬ್ಬರು ವಿಮರ್ಶಕರು ಇದು ಕಾವ್ಯದೃಷ್ಟಿಗೆ ಪ್ರೇರಕವಾಗುವ ಭಾವದ ಸಹವರ್ತಿ ಎನ್ನುತ್ತಾರೆ (ಭಾವಗೀ. ೨೪).
[ಸಂ. ಸಹವರ್ತಿನ್]

ಸಹವಾಸ (ನಾ). ೧. ಒಟ್ಟಿಗೆ ವಾಸಿಸುವುದು; ಜೊತೆಯಲ್ಲಿ ಬದುಕುವುದು. ೨. ಒಡನಾಟ; ಸ್ನೇಹ : ಹರಿಯ ಸಹವಾಸಮೇ ಸಾಲ್ಗು ಜಗದೊಳ್ಸ್ವಧರ್ಮಮಂ ಪಡಿಸದವರಾರು (ಶ್ರೀಮಿಭಾ. ೮-೪೪); ದುರ್ಜನನ ಸಹವಾಸದಿಂದ ಸಜ್ಜನ ಕೆಡುವನು (ಗಾದೆ). ೩. ಸಂಭೋಗ; ಕೂಟ : ಅವನು ವೇಶ್ಯೆಯ ಸಹವಾಸದಿಂದ ಆರೋಗ್ಯವನ್ನು ಕೆಡಿಸಿಕೊಂಡ (ರೂಢಿ). [ಸಂ.]

ಸಹವಾಸದೋಷ (ನಾ). ಒಡನಾಟದಿಂದ ಉಂಟಾಗುವ ದೋಷ, - ಕಳಂಕ : ಎಲ್ಲ ಸ್ಥಳದೋಷ, ಸಹವಾಸದೋಷ, ಸ್ವಭಾವದೋಷವಲ್ಲ (ರಂಗನಾ. ೬). [ಸಂ.]

ಸಹವಾಸಿ (ಗು). ೧. ಒಟ್ಟಿಗಿರುವ; ಜೊತೆಗಿರುವ. (ನಾ). ೨. ಒಟ್ಟಿಗೆ ವಾಸಿಸುವುದು. ೩. ಒಟ್ಟಿಗೆ ವಾಸಿಸುವವನು; ಜೊತೆಗಿರುವವನು : ಸಹವಾಸಿ — ಸಾವಾಸಿ (ಶಮದ. ೨೯೧ ಪ್ರಯೋ); ಸೆಂಟ್ರಲ್‌ಕಾಲೇಜಿನ ಹಾಸ್ಟಲಿನಲ್ಲಿ ಒಂದೇ ಕೊಠಡಿಯಲ್ಲಿದ್ದ ಸಹವಾಸಿಗಳು (ಮಹಾಗ. ೩). ೪. ಒಂದು ಪಂಗಡದ ಹಸರು : ಘನತರದ ಸಹವಾಸಿವಂಶದೊಳನುಪಮನು ಮಹಲಿಂಗದೇವನ ತನಯನಹ ಶ್ರೀರಂಗ (ಅಮೃತ. ೧-೩). 'ಸಾವಾಸಿ' ಪರಾ. [ಸಂ. ಸಹವಾಸಿನ್]

ಸಹಶಿಕ್ಷಣ (ನಾ). ಶಾಲಾಕಾಲೇಜುಗಳಲ್ಲಿ ಹುಡುಗರು ಮತ್ತು ಹುಡುಗಿಯರು ಒಟ್ಟಿಗೆ ವಿದ್ಯಾಭ್ಯಾಸಮಾಡುವುದು : ಸಹಶಿಕ್ಷಣದಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿ ಸಮಾನಮನೋಭಾವನೆ ಬೆಳೆಯಲು ಅವಕಾಶವಾಗುತ್ತದೆ (ರೂಢಿ). [ಸಂ.]

ಸಹಸ (ಗು). ೧. ಸಾಹಸವುಳ್ಳ; ಕಸುವಿನಿಂದ ಕೂಡಿದ : ಕಾಯ್ದು ಬಿಟ್ಟರು ನಕುಲ ಸಾತ್ಯಕಿಯ ಸಹಸ ದ್ರುಪದ ವಿರಾಟರುಗಳುಮ್ಮಹವ ಸೆಳೆದರು (ಕುಪ್ಪಾಡ್ರೂ. ೪ ೪೨). (ನಾ). ೨. ಕಸುವು; ಸಾಮರ್ಥ್ಯ; ಸಾಹಸ : "ಸಹಸಮೆಂದೊಡೆ ಸತ್ವಂ" (ಭಾರಸಿ. ೨೧); ಬಹಳಬಲ ನುಗ್ಗಾಯ್ತು ಶಿಶುವಿನ ಸಹಸ ಕುಂದದು (ಕುಪ್ಪಾಡ್ರೂ. ೫-೫೧); ಸಹಸದಿಂ ಕಲಿಕಾಮನಂ ಗೆಲ್ದುದರಿದಿನ್ನು (ಸೌಂದಪು. ೧೬-೪೫). ೩. ಪರಾಕ್ರಮಶಾಲಿ ; ಸಾಹಸಿ : ಭೀಮ ಬಾ ಸಹಸ ಬಳಲಿದೆಯಲಾ ಎಂದು . . . ಕರಯಲ್ (ತುರಂಗ. ೭೭-೨೨). ೪. ಚಾಂದ್ರಮಾನವರ್ಷದ ಒಂಬತ್ತನೆಯ ತಿಂಗಳು; ಮಾರ್ಗಶಿರಮಾಸ : ಬಹಿರುದ್ಯಾನಾಂತರದೊಳ್ ಸಹಸೋದಿತ ಮತ್ತಕೋಕಿಲೋಚ್ಚೈರ್ಧ್ವಾನಂ ಮುಹುರಾಕರ್ಣಿಸೆ (ಕವಿರಾ. ೧-೫೬). [ಸಂ. ಸಹಸ್]

ಸಹಸಂಚಾರಿಕೆ (ನಾ). [ಕಾವ್ಯಮೀ] ನಾಯಿಕೆಯ ನಾಲ್ಕು ಬಗೆಯ ಪರಿಚಾರಿಕೆಯರಲ್ಲಿ ಒಬ್ಬಳು; ಸಹಚರಿ : ಅಭಿಸಾರಿಕೆ ಚತುರಿಕೆ ಸಹಸಂಚಾರಿಕೆ ದೂತಿಕೆಯರೆಂಬ ಚತುರ್ವಿಧಸಖಿಯರಿಂ (ವಿವೇಕ. ೧೮೩). [ಸಂ. ಸಹಸಂಚಾರಿಕಾ]

ಸಹಸಂಭವ (ನಾ). ಒಡಹುಟ್ಟಿದವನು; ಸಹೋದರ : ಪತಿಯ ಸಹಸಂಭವನ ಮರಣವ್ಯತಿಕರವ ನೋಡಿದಡೆ ದುಷ್ಕೀರ್ತಿಯ ಮೊಳೆ ಹೊಮ್ಮುವವಲೇ ರವಿಸುತನೆ ಕೇಳೆಂದ (ಕುವ್ಯಾಕ. ೧೯-೬೧). [ಸಂ.]

ಸಹಸಂಭೂತ (ಗು). ೧. ಜೊತೆಯಲ್ಲಿ ಹುಟ್ಟಿದ : ಸಹಸಂಭೂತವಿನೂತಭೂಷಣಗಭಸ್ತಿಸ್ತೋಮಮುದ್ದಾಮ ತದ್ಗೃಹ ತದ್ದೇಹಮರೀಚಿಯೊಳ್ ಸೆಣಸೆ (ಸೇಮಿಪು. ೨-೬೬). (ನಾ). ೨. = ಸಹಸಂಭವ : ಸಹಸಂಭೂತನೆನೆಂದಿಳಾವಳಯದೊಳ್ ಸವ್ಯಸ್ತು ಸಂದೋಹಮಂ ಸ್ಪೃಹಯಿಂ ಕೊಂಡೆನೆ (ಸೇಮಿಪು. ೩-೧೫೦). [ಸಂ.]

ಸಹಸಾ (ಅ). ೧. ವೇಗವಾಗಿ; ರಭಸದಿಂದ. ೨. ಏಕಾಏಕಿಯಾಗಿ; ಇದ್ದಕ್ಕಿದ್ದಂತೆ : "ಸಹಸಾ ಶಬ್ದಂ ವರ್ತಿಕುಮಹೇತುತತ್ಕಾಲಮಂಬಿವೆರಡರ್ಥದೊಳಂ" (ಪಸ್ತಕೋ. ೧೩೬-೧೧೦); ಆ ಸಮಯದಲ್ಲಿ ಒಂದು ಹಸಿದ ನರಿ ಸಹಸಾ ಆ ಸಿಂಹವನ್ನು ಕಂಡು, ಓಡಲಾರದೆ ಅದರ ಮುಂದೆ ಅಡ್ಡಬಿದ್ದಿತು (ಬುದ್ಧಚಾ. ೧೪೭). ೩. ಸಾಮಾನ್ಯವಾಗಿ :

ದಿನಾಲು ನಿಯಮದಿಂದ ವ್ಯಾಯಾಮ ಮಾಡಿದರೆ ಸಹಸಾ ಅಜೀರ್ಣವಿಕಾರವಾಗದು (ಮುಂಬಯಿ. ೪-೧); ಸುಶಿಕ್ಷಿತಮಹಿಳೆಯರೂ ಕೂಡ ಇಂಥ ಪ್ರವಾಸವನ್ನು ಸಹಸಾ ಸ್ವತಂತ್ರವಾಗಿ ಕೈಕೊಂಡಾರೆಂದು ನಮಗೆನಿಸುವುದಿಲ್ಲ (ಸಮಜೀ.೮೧೨).

[ಸಂ./ ಹಿಂ. ಮರಾ. ಸಹಸಾ]

ಸಹಸಿ (ಗು). ೧. ಪರಾಕ್ರಮಶಾಲಿಯಾದ; ಸಾಹಸವುಳ್ಳ. (ನಾ). ೨. ಪರಾಕ್ರಮಶಾಲಿ; ಸಾಹಸಿ : ಅಹುದಹುದು ಕಲಿಭೀಮ ಸಮರದ ಸಹಸಿಗಳ ಲೆಕ್ಕಿಸೆನು ನೀನತಿಸಹಸಿಗಸುವನು ತೆಱುವೆಯೆಂಬುದನಱಿಯಲಾ ಕೇಳ್ದು (ಕುವ್ಯಾದ್ರೋ. ಓರಿಇ. ಪರಿ. ೨೯೪-೨); ನಿನ್ನ ಮಗನತಿಸಹಸಿ ಕೇಳು (ಉತ್ತರಾ. ೭-೭೫). [ಸಂ. ಸಹಸಿನ್]

ಸಹಸಿಗ (ನಾ). = ಸಹಸಿ ೨ : ಸಹಸಿಗನ ಹಾವುಗೆಯ ಹಜ್ಜೆಯಿವೆ (ಸಿದ್ಧರಾ. ೨-೩೫); ಸಾರಥಿ ಸಹಸಿಗನ ಸಂತೈಸಿ ತಂದನು ರಾಜಮಂದಿರಕೆ (ಕುವ್ಯಾಕ. ೩-೨೭); ನಿನ್ನವೊಲು ಬಲುಬಾಹು ಸಹಸಿಗ[ಪಾಠಾಂ. ಸಾಹಸ]ರಿನ್ನು ಜನಿಸರು ಜಗದೊಳು (ತೊರರಾ. ೩-೬-೫೩). [ಸಹಸ + -ಇಗ]

ಸಹಸಿತನ (ನಾ). ಶೌಯ; ಪರಾಕ್ರಮ; ಕಲಿತನ : ಕೆಡೆಪಿ ಪಿಡಿದೆತ್ತಿಯೊತ್ತಿ ಕುಸುಬಿ ಕುಸುಕಿಱಿದು ಪೊಸೆದು ಪೂಳ್ವ ಸ[ಪಾಠಾಂ. ಸಾ]ಹಸಿತನಕೆ ಬೆರಸಿದ ಮಲ್ಲನನೊರಸಿ (ಗಿರಿಕ. ೨-೧೦೫ ವ). [ಸಹಸಿ + - ತನ]

ಸಹಸಿಸು (ಕ್ರಿ). ಸಾಹಸ ಮಾಡು; ಪ್ರಯತ್ನಿಸು : ಇಹುದಕಿಂತೊಳಿತಿಹುದು; ಒಳಿತ ಗಳಿಸಲ್ಪಹುದು ಸಹಸಿಸುವನದಕೆನುವ ಮತಿಯಿನೇ ಪ್ರಗತಿ (ಮಂಕುಕ. ೨೧೫).

[ಸಹಸ + - ಇಸ್ಸು]

ಸಹಸ್ತ (ನಾ). ೧. ಕೈಗಳನ್ನು ಹೊಂದಿರುವುದು. ೨. ಆಯುಧಗಳನ್ನು ಪ್ರಯೋಗಿಸುವುದರಲ್ಲಿ ನೈಪುಣ್ಯ ಪಡೆದಿರುವವನು, — ಕುಶಲನಾದವನು : "ಕೃತಶಿಕ್ಷಾಸ್ತ್ರಂ ಸಹಸ್ತಂ" (ವಸ್ತುಕೋ. ೯೯-೬). [ಸಂ.]

ಸಹಸ್ಯ (ನಾ). ಚಾಂದ್ರಮಾನದ ಒಂದು ತಿಂಗಳಿನ ಹೆಸರು; ಪುಷ್ಯಮಾಸ : "ಪುಷ್ಯಮಾಸಮಂ ಸಹಸ್ಯಮೆಂಬುದು" (ಹಲಾಯು. ೧೯-೧೧೪). [ಸಂ.]

ಸಹಸ್ರ (ನಾ). ೧. ಒಂದು ಸಂಖ್ಯೆ; ಹತ್ತುನೂರು; ಸಾವಿರ : ಸಹಸ್ರಕಾಷ್ಠದ ಭಾರ ಸದ್ಯೋಘೃತ ಕುಂಭ ನೂಱು (ಪುರಂದ. ಧಾ. ೫-೫೭-೧); ಸಹಸ್ರಭೇದಯುಕ್ತಮಾದ ಸಾಮವೇದಂ . . . ಪ್ರಸಿದ್ಧಸದ್ಯದೊಳ್ ಭವಂ (ಹಾಲಾಸ್ಯ. ೧-೧೭-೩೪). ೨. ಅನೇಕ; ಬಹಳ : ಅತಿರಥಸಹಸ್ರಮಿರಲಪ್ರತಿರಥನೊರ್ವನೆ ಮುಕುಂದನಿಸೆ (ಜಗವಿ. ೧೨-೨೨); ಕಟ್ಟಿದರಜಸ್ರಂ ಸಹಸ್ರಶಿಲ್ಪಿಗಳಲ್ಲಿ ಸ್ಮಾರಕನಿಕೇತನಸ್ತೂಪಮಂ (ಚಿತ್ರಾಂಗ. ೯೦-೨೪೯೨); ಸಮಯಕ್ಕಾಗದ ಅರ್ಥ ಸಹಸ್ರವಿದ್ದರೂ ವ್ಯರ್ಥ (ಗಾದೆ). ೩. [ಗಣಿತ] ಹಲವು ಅಂಕಿಗಳಿರುವ ಸಂಖ್ಯೆಯಲ್ಲಿ ಬಲಗಡೆಯಿಂದ ಎಡಗಡೆಗೆ ಎಣಿಸುವಾಗ ನಾಲ್ಕನೆಯ ಸ್ಥಾನ : ಏಕಂ ದಹಂ ಶತಂ ಸಹಸ್ರಂ . . . ಇಂತು ಚಿಪ್ಪೀಸತಾಣವರೆ ಸಂಖ್ಯೆಯಕ್ಕುಂ (ಮಂಗರಾ.೧೦೫-೧೨).

ಸಹಸ್ರಾರು = ಅಮಿತವಾದ; ಅಸಂಖ್ಯಾತವಾದ: ಅಸ್ರಾಗ್ನಿ ಪೊತ್ತಿದ ಸಹಸ್ರಾರು ದೀವಿಗೆ ಸೊಡರ್ಮಾಲೆಗಳ್ ನರ್ತಿಸುವ ತಿಮಿರಕಾಳಿಯ ರಸನೆಗಳ ಹೋಲಿ ರಂಜಿಸಿದುವಲ್ಲಿ (ಚಿತ್ರಾಂಗ. ೮೫-೨೩೪೬); ಸುತ್ತಲೂ ನಾನಾಪಕ್ಷಿಗಳ ಸಹಸ್ರಾರು ಕಂಠಧ್ವನಿಗಳು ಕೇಳಿಸುತ್ತವೆ (ಮಲೆಚಿ. ೨). [ಸಂ.]

ಸಹಸ್ರಕ (ನಾ). ೧. ಸಾವಿರ; ಸಹಸ್ರ. ೨. = ಸಹಸ್ರ ೩ : ಏಕಂ ತು ಪ್ರಥಮಂ ಸ್ಥಾನಂ ದ್ವಿತೀಯಂ ದಶಸಂಜ್ಞಕಂ . . . ಚತುರ್ಥಂ ತು ಸಹಸ್ರಕಂ (ವ್ಯವಹಾ. ೮). [ಸಂ.]

ಸಹಸ್ರಕರ (ನಾ). ೧. ಅಸಂಖ್ಯಾತವಾದ ಕಿರಣಗಳು : ಮತ್ತಮತಿಮೈತ್ರಿಯುಂ ಸಹಸ್ರಕರಜ್ಯೋತಿಯುಂ . . . ಕರಮೊಪ್ಪೆ (ಶಾಂತಿಪು. ೧೨-೧೯ ವ). ೨. ಅಸಂಖ್ಯಾತವಾದ ಕಿರಣಗಳುಳ್ಳವನು; ಸೂರ್ಯ : ದಿವಮಂ ಧವಳಿಸಲಿರ್ದ ಸಹಸ್ರಕರ [ಪಾಠಾಂ. ಕಿರಣ]ನಂತೆ ಇರ್ದಪಂ (ನಂಬರ. ೪-೧೮). ೩. ಸಾವಿರಹಸ್ತಗಳನ್ನುಳ್ಳವನು : ಸಹಸ್ರನೇತ್ರನಾಗಳ್ ಸಹಸ್ರಕರನಾದಂ . . . ಎನೆ ವಿರಾಜಿಸಿತು ಹಸ್ತಪದವಿನ್ಯಾಸಂ (ಅಜಿಪು. ೫-೧೯). [ಸಂ.]

ಸಹಸ್ರಕಿರಣ (ನಾ). ೧. = ಸಹಸ್ರಕರ ೧ : ಸೂರ್ಯಕೋಟಿಪ್ರಭೆಯ ಬೆಳಗಿನ ಸಹಸ್ರ ಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯನು (ಬಸವ. ೮೫೪). ೨. = ಸಹಸ್ರಕರ ೨ : ಅನಂತರಂ[ಸಂಪಾದಿತ] ಪಿತೃತರ್ಪಣನುಮಭಿವಂದಿತ ಸಹಸ್ರಕಿರಣನುಂ . . . ಆಗಿ ಕತಿಪಯಪದಂಗಳಂ ನಡೆದು (ಕಾದಂಪೂ. ೭೯). [ಸಂ.]

ಸಹಸ್ರಕೂಟ (ನಾ). ಅಸಂಖ್ಯವಾದ ಶಿಖರ : ಸಪ್ತತಳಪ್ರಾಸಾದದ ಮೇಗಿರ್ವರುಂ ದಿಶಾವಳೋಕನಂಗೆಯ್ಯುತ್ತಿರ್ಪನ್ನೆಗಂ ಸಹಸ್ರಕೂಟಾಕಾರಮಪ್ಪುದೊಂದು ಮುಗಿಲಂ ಕಂಡು (ವಡ್ಡಾರಾ. ೧೦೯-೪); ಸಮಯಕ್ಕೆ ಪಂಚಶತವಧಿಕಮಾಗೆ ಸಮಯಿಸಿ ಸಹಸ್ರಕೂಟ ಸಹಸ್ರಾಸ್ರಮುಮಂ ಸಮಯಿಸಲಾರ್ಗಂ ಸಮಯಿಸಿದಳ್ ಸಮನೆ ದಾನಚಿಂತಾ ಮಣಿಯೊಳ್ (ಅಜಿಪು. ೧-೫೯). [ಸಂ.]

ಸಹಸ್ರಗುಣ (ನಾ). ಸಾವಿರಪಾಲು ; ಸಾವಿರದಷ್ಟು : ಪಾಯ್ದುವಿಷುಪ್ರತತಿಗಳಧಿಕಂ ತಚ್ಛರತತಿಯಿಂ ಗಣನೆಗೆ ಸಹಸ್ರಗುಣಮೆಂಬಿನೆಗಂ (ಜಗವಿ. ೧೨-೨೨). [ಸಂ.]

ಸಹಸ್ರಘ್ನಿ (ನಾ). ಒಂದು ಬಗೆಯ ಆಯುಧ : ಸಹಸ್ರಘ್ನಿ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿಸಾಧನವಿಶೇಷಂಗಳಿಂದಲುಂ (ವಿವೇಕ. ೨೬೩). [ಸಂ.]

ಸಹಸ್ರಜಿಹ್ವ (ನಾ). ಸಾವಿರ ನಾಲಿಗೆಯುಳ್ಳವನು : ವಜ್ರಾಯುಧಮಹೀಪಾಲನೊಳ್ ಸಹಸ್ರಜಿಹ್ವನಪ್ಪ ನಾಗರಾಜನೆನೆ ಪೋಲ್ತು ನುಡಿಯೆ (ಶಾಂತಿಪು. ೮-೧೨೬ ವ). [ಸಂ.]

ಸಹಸ್ರದಂಡ (ನಾ). ದಂಡನೆಯ ರೂಪದ ತೆರಿಗೆಯಿಂದ ಬರುವ ಆದಾಯ : ನಿಧಿನಿಧಾನನಿಕ್ಷೇಪ ಸಹಸ್ರದಣ್ಣಂ ಮೊದಲಾಗಿ ದುಷ್ಟನಿಗ್ರಹ ವಿಸಿಷ್ಟಪ್ರತಿಪಾಳನಂಗೆಯ್ದು ಸುಖದಿನಾಳುತ್ತಿರೆ (ಎಕ. XI, ಚಿತ್ರದು. ೪೯-೧೯; 947). [ಸಂ.]

ಸಹಸ್ರದಂಷ್ಟ್ರ (ನಾ). (ಸಾವಿರ ಹಲ್ಲುಗಳನ್ನು ಹೊಂದಿರುವ) ಒಂದುಬಗೆಯ ಮೀನು; ಪಾಠೀನ: "ವೈಸಾರಿಣಃ . . . ಸಹಸದಂಷ್ಟ್ರಃ, ಪಾಠೀನಃ- ಈ ೧೩ ಮೀನ್" (ಹಲಾಯು. ೧೦೮-೩೬). [ಸಂ.]

ಸಹಸ್ರದಲ, ಸಹಸ್ರದಳ (ನಾ). ೧. ಸಾವಿರದಳಗಳನ್ನೊಳಗೊಂಡುದು ; ತಾವರೆ : ಪೊಡವಿಯೊಳಗೆಂದುಂ ಪ್ರಭವಿಸದ ಗಿಡುವಿನೊಳು ಧವಿವಡೆದು ನವಕಂಬಡೆದ ನವ್ಯ ಸಹಸ್ರದಲ [ಪಾಠಾಂ. ೪] ಶತದಳಮನರ್ಪಿಸುತ (ಬಸಪು. ೩೫-೧೩). ಸಹಸ್ರದಳ: ೨. [ಯೋಗ] ಶಿರಸ್ಸಿನ ಅಗ್ರಭಾಗದಲ್ಲಿರುವುದೆಂದು ಭಾವಿಸಲಾದ, ಮಗುಚಿಟ್ಟ ತಾವರೆಯನ್ನು ಹೋಲುವ, ಆತ್ಮದ ಪೀಠಸ್ಥಾನವೆಂದು ಹೇಳಲಾಗುವ ಒಂದು ಬಗೆಯ ಕುಹರ; ಶಿರಸ್ಸಿನಲ್ಲಿ ಅಧೋಮುಖವಾಗಿರುವುದೆಂದು ಹೇಳಲಾದ ಸಹಸ್ರದಳಕಮಲ : ಸಹಸ್ರದಳ ತ್ರಿದಳ ಏಕದಳ ಪದ್ಮತ್ರಯಂಗಳು (ವಿವೇಕ.೧೩೪). 'ಸಹಸ್ರದಳಕಮಲ' ಪರಾ. [ಸಂ.]

ಸಹಸ್ರದಳ 'ಸಹಸ್ರದಲ' ನೋ.

ಸಹಸ್ರದಳಕಮಲ (ನಾ). = ಸಹಸ್ರದಲ ೨ : ಸಂತತಂ ಬ್ರಹ್ಮರಂಧ್ರದ ಸಹಸ್ರದಳಕಮಲಮಂತದರ ಕರ್ನಿಕಾಮಧ್ಯ ಬಹ ಶಶಿಸೂರ್ಯಕಾಂತಿ ಪ್ರಜ್ವಲಿಪ ತದಾತ್ಮ ಜ್ಯೋತಿರ್ಲಿಂಗಮನುವಾ ಮನೋದೃಷ್ಟಿಯಾ ವೊಂದುಗೊಳಿಸುತ್ತ (ನವಮೋ.೧೮-೩೦).

[ಸಂ.ಸಹಸ್ರದಲಕಮಲ]

ಸಹಸ್ರದೃಕ್ಕು (ನಾ). ಸಾವಿರ ಕಣ್ಣುಗಳನ್ನುಳ್ಳವನು; ಇಂದ್ರ : " ಪುರುಹೂತಂ . . . ಸಹಸ್ರದೃಗ್ಭೃದ್ಧಶ್ರವಂ . . . ಶಚಿಪಾಲನೆಂದರೆ ಶಕ್ರನಕ್ಕುಂ" (ಮಂಗರಾ. ೧೨-೧).

[ಸಂ. ಸಹಸ್ರದೃಶ್]

ಸಹಸ್ರನಯನ (ನಾ). = ಸಹಸ್ರದೃಕ್ಕು : ಅಂತು ಸಹಸ್ರನಯನಂ ಸುಖರಸನಿಮೀಲಿತ ನಯನನಾಗೆ (ಅಜಿಪು. ೪-೧೬ ವ). [ಸಂ.]

ಸಹಸ್ರನಾಮ (ನಾ). ೧. (ಯಾವುದಾದರೂ ದೇವತೆಯ) ಸಾವಿರ ಹೆಸರುಗಳು : ಲಲಿತಾಸಹಸ್ರನಾಮದಲ್ಲಿ ಏನು ಹೇಳಿದೆ, ಅಪ್ಪಯ್ಯ? (ಮನೋನಂ. ೧೫೪). ೨. ಸಹಸ್ರನಾಮಪೂಜೆ : ಅಮ್ಮನವರಿಗೆ ಕುಂಕುಮಾರ್ಚನೆ, ಸಹಸ್ರನಾಮ, ಅಷ್ಟೋತ್ತರಪೂಜೆ ಎಲ್ಲವನ್ನೂ ಕ್ರಮವಾಗಿ ಮಾಡಿ . . . ಹಾಡಲಾರಂಭಿಸಿದರು (ಹಂಗೀತ. ೧೯೮). ೩. (ಆಲಂ) ಬಯ್ಗುಳು; ನಿಂದೆ : ಸದ್ಯ ಅಷ್ಟಕ್ಕೆ ಏಟು ಹಾಕುವುದನ್ನು ನಿಲ್ಲಿಸಿ 'ಸಹಸ್ರನಾಮ' ಷುರುವು ಮಾಡಿದರು (ಸುವಸಂ. ೨೦). [ಸಂ. ಸಹಸ್ರನಾಮನ್]

ಸಹಸ್ರನಾಮಪೂಜೆ (ನಾ). ಒಂದು ನಿರ್ದಿಷ್ಟವಾದ ದೇವತೆಯ ಸಾವಿರ ಹೆಸರುಗಳನ್ನು ಉಚ್ಚರಿಸುತ್ತಾ (ಬಿಲ್ವ, ತುಳಸಿ, ಮಂಗಳದ್ರವ್ಯ ಅಥವಾ

ಯಾವುದಾದರೂ) ಸಾವಿರ ಹೂವುಗಳನ್ನು ಒಂದೊಂದು ಹೆಸರು ಹೇಳುವಾಗಲೂ ಅರ್ಪಿಸುತ್ತ ಮಾಡುವ ಪೂಜೆ, — ಅರ್ಚನೆ : ಬಳಿಕ ಶ್ರೀಕಂಠಶಾಸ್ತ್ರಿಗಳು . . . ಸಹಸ್ರನಾಮಪೂಜೆ ಮಾಡಿ, ಮಂಗಳಾರತಿ ಮಾಡಿ, ತೀರ್ಥ, ಪ್ರಸಾದ ಕೊಟ್ಟರು (ಪಂಗೀತ. ೨೦೭). [ಸಂ. ಸಹಸ್ರನಾಮಪೂಜಾ]

ಸಹಸ್ರನಾಮಾರ್ಚನೆ (ನಾ). = ಸಹಸ್ರನಾಮಪೂಜೆ : ದೇವಸ್ಥಾನಕ್ಕೆ ಹೋಗಿ ದೇವರಿಗೆ ಸಹಸ್ರನಾಮಾರ್ಚನೆ ಮಾಡಿಸಿಕೊಂಡು ಬಾ (ಡಾಥಿ).

[ಸಂ. ಸಹಸ್ರನಾಮಾರ್ಚನಾ]

ಸಹಸ್ರನಾಮಾವಳಿ (ನಾ). ೧. (ದೇವರ) ಸಾವಿರ ಹೆಸರುಗಳ ಸಮೂಹ : ಆ ವೃದ್ಧರು ದೇವರ ಸಹಸ್ರನಾಮಾವಳಿಯನ್ನು ಭಕ್ತಿಯಿಂದ ಹೇಳುತ್ತಿದ್ದಾರೆ (ಡಾಥಿ). ೨. (ಆಲಂ) ನಿಂದೆಯ ಮೊತ್ತ : ಒಬ್ಬೊಬ್ಬನಿಗೂ ಸಹಸ್ರನಾಮಾವಳಿಯನ್ನು ಹಚ್ಚಿದರು (ಹುಬಾಕೂ. ೬೮೧). [ಸಂ. ಸಹಸ್ರನಾಮಾವಲಿ]

ಸಹಸ್ರಪತ್ರ (ನಾ). ಸಾವಿರದಳಗಳನ್ನುಳ್ಳದು; ತಾವರೆ : "ಸಹಸ್ರವತ್ರಂ, ಶತಪತ್ರಂ . . . ಪಂಕಜಂ — ಈ ೧೭ ತಾವರೆ" (ಹಲಾಮು. ೧೧೨-೫೭). [ಸಂ.]

ಸಹಸ್ರಪದಿ (ನಾ). ಸಾವಿರಕಾಲುಗಳಿರುವುದೆಂದು ಭಾವಿಸಲಾದ ಒಂದು ಬಗೆಯ ಕೀಟ; ಒನಕೆಬಂಡೆ ಹುಳು : ಸಹಸ್ರಪದಿಗಳಿಗೆ ಪ್ರತಿಭಾಗಕ್ಕೂ ಎರಡು ಜೊತೆ ಒಟ್ಟು ಸುಮಾರು ೨೧೩ ಜೊತೆ ಕಾಲುಗಳುಂಟು (ಕಟಪ್ರ. ೧೫).

[ಸಂ. ಸಹಸ್ರಪದೀ]

ಸಹಸ್ರಪಾದ (ನಾ). ೧. ಸಾವಿರ ಪಾದಗಳನ್ನು ಹೊಂದಿದವನು; ವಿಷ್ಣು. ೨. ಸಾವಿರಕಿರಣಗಳನ್ನು ಹೊಂದಿದವನು; ಸೂರ್ಯ. [ಸಂ.]

ಸಹಸ್ರಫಣ (ನಾ). ಸಾವಿರ ಹೆಡೆಗಳನ್ನು ಹೊಂದಿರುವುದು; ವಾಸುಕಿ : ನಡೆಗಲ್ಪಂದುಂ ಬಿನ್ಪೆಂ ಕೊಡೆ ನೆಗದಪುದುರ್ವಿಯೆಂದು ವಾಸುಗಿ ಪಲವುಂ ಪೆಡೆಯಂ ಶಿಶು ನಡವೆಡೆಯೊಳ್ ಪಡೆದಾಂತು ಸಹಸ್ರಫಣನೆನಲ್ ಪೆಸರ್ವಡೆದಂ (ಪಂರಾಮಾ. ೩-೧೫೯).

[ಸಂ.]

ಸಹಸ್ರಫಳ (ನಾ). ಅಮಿತವಾದ ಫಲ,— ಫಲಿತಾಂಶ : ಪರಮಕಲ್ಯಾಣಾಭ್ಯುದಯಸಹಸ್ರಫಳಭೋಗಭಾಗಿನೀದ್ವಿತೀಯಲಕ್ಷ್ಮೀಸಮಾನೆಯರಪ್ಪ . . . ಮೈಲಳದೇವಿಯರು (ಎಕ VI(R), ಪಾಂಡವ. ೪೨-೧೦; ?). [ಸಂ. ಸಹಸ್ರಫಲ]

ಸಹಸ್ರಬಾಹು (ನಾ). ೧. ಸಾವಿರ ತೋಳುಗಳನ್ನು ಹೊಂದಿದವನು ; ಸಾವಿರ ಬಾಹುಗಳುಳ್ಳವನು. ೨. ಶಿವ. ೩. ಕಾರ್ತವೀರ್ಯ. ೪. ಬಲಿಯ ಮಗ ; ಬಾಣಾಸುರ. ೫. ವಿಷ್ಣು. [ಸಂ.]

ಸಹಸ್ರಭುಜ (ನಾ). ಸಾವಿರತೋಳುಗಳನ್ನು ಹೊಂದಿದವನು; ಕಾರ್ತವೀರ್ಯ : ತಱಿದ್ದೆ ಸಹಸ್ರಭುಜನಂ . . . ಪರಶುರಾಮಾಕಾರದಿಂದಚ್ಯುತಾ(ಜಗವಿ.೧೦-೬೦). [ಸಂ.]

ಸಹಸ್ರಮಡಿ (ನಾ). ೧. ಸಾವಿರಪಟ್ಟು ; ಸಾವಿರಪಾಲು : ಸುರರಾಜನ ಸತಿಗೆ . . . ಸಹಸ್ರಮಡಿ ಮಿಗಿಲೆನಿಪಳ್ (ಧರ್ಮಾಮೃ. ೧೦-೧೧). ೨. ಸಾವಿರಪಾಲು ಮಿಗಿಲಾದುದು: ಅದಂ ಬಗೆವೊಡವರಿಂ ನೀವೆಮಗೆ ಸಹಸ್ರಮಡಿಯಪ್ಪುದಲ್ಲಿಂ ನಿಮಗ ಮಾಡಿದ ದಾನಮುಂ ಪಾಲುಕ್ಕಿಮ್ಮಡಿಸುವಂತಿಮ್ಮಡಿಯಕ್ಕುಂ (ಧರ್ಮಾಮೃ. ೧-೧೨೬). [ಸಹಸ್ರ + ಮಡಿ]

ಸಹಸ್ರಮೌಲಿ (ನಾ). ಸಾವಿರತಲೆಗಳನ್ನುಳ್ಳವನು ; ವಿಷ್ಣು. [ಸಂ.]

ಸಹಸ್ರಲೋಚನ (ನಾ). ೧. ಸಾವಿರಕಣ್ಣುಗಳನ್ನು ಹೊಂದಿದವನು : ಪರಮನ ನಿರತಿಶಯಾಂಗಸ್ವರೂಪಮಂ ನೆಱೆಯೆ ನೋಡಲ್ . . . ಸುರೇಂದ್ರನುಂ ಗಡ ಸಹಸ್ರಲೋಚನನಾದಂ (ಆದಿಪು. ೭-೧೦೭). ೨. = ಸಹಸ್ರದೃಕ್ಕು : ಆನ್ನೆಗಂ ದ್ವಿತೀಯತೀರ್ಥಕರದಿನಕರೋದಯನಿವೇದಕಮಪ್ಪ ನಿಜಾಸನಕಂಪದಿಂ ಸಮುತ್ಪನ್ನಾವಧಿಬೋಧವಿಲೋಚನಂ ಸಹಸ್ರಲೋಚನನೞಿದು (ಅಜಪು. ೪-೭ ವ) ; ಅಂತು ಸಹಸ್ರಲೋಚನಂ . . . ಸಹಸ್ರಪತ್ರಾಯತನೇತ್ರನಂ ನೋಡಿ (ಜಗವಿ. ೪-೧೨೧ ವ). [ಸಂ.]

ಸಹಸ್ರವೀರ್ಯ (ನಾ). ಒಂದು ಬಗೆಯ ಹುಲ್ಲು; ಗರಿಕೆ : "ದೂರ್ವಾ, ಶತಪರ್ವಿಕಾ, ಸಹಸ್ರವೀರ್ಯಾ . . . ಅನಂತಾ - ೬ ಗರಿಕೆಹುಲ್ಲಿನ ಹೆಸರುಗಳು" (ಸಿದ್ಧಾಂ. ೧೪೯). [ಸಂ. ಸಹಸ್ರವೀರ್ಯಾ]

ಸಹಸ್ರವೇದಿನಿ (ನಾ). ಒಂದು ಬಗೆಯ ಔಷಧಿದ್ರವ್ಯ : ಈ ಘಟಕೆ ಭಾವಿಸಲನರ್ಘ್ಯಮಕ್ಕುಂ ವಿನುತಂ ಸಹಸ್ರವೇದಿನಿಯೆಂದು ಭಕ್ತಿಯಿಂದನಘವೇಮಯ್ಯಂಗೆ ನಲಿಯುತಾ ಸಿದ್ಧನತಿವಿನಯದಿಂದಿತ್ತನಾ ಘಟಕೆಯಂ (ಆರಾಚ. ೨-೧೩-೧೧).

[ಸಂ. ಸಹಸ್ರವೇದಿನೀ]

ಸಹಸ್ರವೇಧಿ (ನಾ). ೧. ಒಂದು ಬಗೆಯ ಸಸ್ಯ; ಪುಲ್ಲಂಪುರುಚೆ : "ಸಹಸ್ರವೇಧೀ, ಚುಕ್ರಃ, ಅಮ್ಲವೇತಸಃ, ಶತವೇಧೀ - ೪ ಹುಳಿಹಚ್ಚೆ ಹೆಸರು, ಬಚ್ಚಲು ಹುಣಸೆ" (ಸಿದ್ಧಾಂ. ೧೪೪). ೨. ಇಂಗು; ಹಿಂಗು : "ಸಹಸ್ರವೇಧಿ, ಜತುಕಂ . . . ರಾಮಠಂ - ೫ ಹಿಂಗು. ಇಂಗಿನ ಪೆಸರುಗಳು" (ಸಿದ್ಧಾಂ. ೨೮೫); ಯಷ್ಟಿಮಧುಕ, ಏಲಕ್ಕಿ, ತವಕ್ಷೀರ, ಸಹಸ್ರವೇದಿEಧಿ . . . ತುರುಚನ ಬೇರಿನ ತಿಗುದು ಇವುಗಳನ್ನು ಸಮತೂಕದಲ್ಲಿ ಚೂರ್ಣಿಸಿ (ಸಚಿವ್ಯ. ೮೬). ೩. ಒಂದು ಬಗೆಯ ಬೆತ್ತ ; ನೀರುಹಬ್ಬೆ. [ಸಂ. ಸಹಸ್ರವೇಧಿನ್]

ಸಹಸ್ರಶೀರ್ಷ (ನಾ). ಸಾವಿರತಲೆಗಳನ್ನು ಹೊಂದಿದವನು; ಪರಮಾತ್ಮ : ಸಹಸ್ರಶೀರ್ಷನಾದಿಪುರುಷನು ವೇದಪುರುಷನೊಬ್ಬ ಪುರುಷನು (ಬಾಪ್ರ. ೯೫೫); ವಿನುತಿಸುತ್ತ ಸಹಸ್ರಶೀರ್ಷಾ ಎನಲು ಸಾವಿರತಲೆಗಳೆಸವಾತನ ತಲೆಯೆ ತಾ ನಿನ್ನ ತಲೆಯದು (ಬಾಪು. ೩೮-೭೦). [ಸಂ.]

ಸಹಸ್ರಾಂತಿಕ (ಗು). ಸಾವಿರವರ್ಷಗಳ ನಂತರದ : ಭಾಸ್ಕರನನ್ದಾಪಣ್ಣಿತಪತಿಗಳುಂ ಸಹಸ್ರಾಂತಿಕಶಕಕಾಳಯುಕ್ತಾಬ್ದಮಧುಮಾಸಾವಸಾನದೊಳು . . . ಇನ್ನಪುರಾತಿಥಿಗಳಾದರು (ಶಾಶಾ. XX, ೫೨-೬೯; 1077). [ಸಂ.]

ಸಹಸ್ರಾಂಬಕ (ನಾ). ಸಾವಿರಕಣ್ಣುಗಳನ್ನುಳ್ಳವನು; ಇಂದ್ರ : ಸಹಸ್ರಾಂಬಕಸೇವಿತ ಮುಕ್ತಿವಧುವನೆಂದುಂ ಕೂಡಂ (ಜಸಾಲ. ೧೩-೧೩). [ಸಂ.]

ಸಹಸ್ರಾಂಬಕಸೂನು (ನಾ). ಇಂದ್ರನ ಮಗ; ಅರ್ಜುನ : ಸಹಸ್ರಾಂಬಕ ಸೂನುಗಾದುದು ಮನೋರಥಸಿದ್ಧಿಭವಂ ಮಹೋತ್ಸವಂ (ಶಬಾಂ. ೫-೫೩). [ಸಂ.]

ಸಹಸ್ರಾಂಶು (ನಾ). ೧. = ಸಹಸ್ರಕರ ೨ : "ರವಿ ಮಾರ್ತಂಡಂ . . . ಸಹಸ್ರಾಂಶು . . . ತರಣಿ ಸಪ್ತಾಶ್ವನಾದಿತ್ಯನಕ್ಕುಂ" (ವಪ್ರಕೋ. ೧೧-೬೪). ೨. ಒಂದು ಬಗೆಯ ಮರ: "ಪಲು ಸಹಸ್ರಾಂಶು[ಪಾಠಾಂ. ಸಹಸ್ರಾಂಗಿ, ಸಹಸ್ರಾಂಶಿ]ವೆನಲುಗುನಿ" (ಮಂಗರಾ. ೪೪-೪೪). [ಸಂ.]

ಸಹಸ್ರಾಕ್ಷ (ನಾ). ೧. ಸಾವಿರಕಣ್ಣುಗಳನ್ನುಳ್ಳವನು : ಸಹಸ್ರಾಕ್ಷನಾದ ಇಂದ್ರನು ಗೌತಮಶಾಪವನ್ನು ಆ ಕಾಲದಲ್ಲಿ ಹಿತಕರವೆಂದು ಭಾವಿಸಿದನು (ತುಳಸೀ. ೯೫). ೨. = ಸಹಸ್ರಾಂಬಕ : ಆಗಳ್ ಸಹಸ್ರಾಕ್ಷಂ . . . ದುರ್ಗಾರ್ಣವಸಾರಕ್ಷೀರದಿಂದಂ ಮಿಸಿಸೆ ಭವದವಜ್ವಾಳನಂ ಬಾಳನಂ (ಅಜಪು. ೪-೫೩ ವ); ವೀರಭದ್ರಾದಿ ಗಣನಿಕರಮಂ ದೈತ್ಯಾರಿ ಸಾರಸೋದ್ಭವ ಸಹಸ್ರಾಕ್ಷಾದಿ ನಿರ್ಜರರುಮಾರಯಲ್ . . . ಹಾರೈಸಿಕೊಳುತಿರ್ಪರ್ (ಆರಾಚ. ೧-೫-೭೯). ೩. ಪರಮಾತ್ಮ; ದೇವರು : ನಿಂದುದಯ್ ವಿಶ್ವಧರ್ಮಸಹಸ್ರಾಕ್ಷಸಾಕ್ಷಿಯೆಂಬಂತೆವೋಲ್ ನಾಕಚುಂಬಿತಶುಕ್ಲ ಮೂಕದ ಮೂಕರಾತ್ರಿ! (ತ್ರೀರಾಮಾ. ೬೦೦-೪೧೫). [ಸಂ.]

ಸಹಸ್ರಾಗಮ (ನಾ). ಇಪ್ಪತ್ತೆಂಟು ಬಗೆಯ ಶೈವಾಗಮಗಳಲ್ಲಿ ಒಂದು : ಮತ್ತಮಾ ಸಿದ್ಧಾಂತಭೇದಂಗಳಾವವೆಂದೊಡೆ ಕಾಮಿಕಾಗಮ ಯೋಗಜಾಗಮ . . . ಸಹಸ್ರಾಗಮ . . . ವಾತೂಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ (ವಿವೇಕ. ೬೨). 'ದೀಪ್ತ' ಪರಾ. [ಸಂ.]

ಸಹಸ್ರಾರ (ಗು). ೧. (ಚಕ್ರಾಯುಧದಲ್ಲಿ) ಸಾವಿರಮೊನೆಗಳನ್ನುಳ್ಳ; ಸಾವಿರ ಮೊನಗಳನ್ನು ಹೊಂದಿದ : ಸಹಸ್ರದಿನಕರಕರಸ್ಪರ್ಧಿ ಸಹಸ್ರಾರಧರ್ಮ ಚಕ್ರರತ್ನಪುರಸ್ಸರನುಮಾಗಿ (ಆದಿಪು. ೧೦-೬೭ ವ). (ನಾ). ೨. ಸಾವಿರಮೊನೆಗಳನ್ನು ಹೊಂದಿರುವುದು : ದಿವಮೆಂತಂತೆ ಶತಾರಮಗ್ರಿಮಸಹಸ್ರಾರಂ ಸಹಸ್ರಾರಮಪ್ಪವಿಲಕ್ಷ್ಮಂ . . . ಬಂದುದಿಂದು ವಿಯಚ್ಚಕ್ರದಿನಸ್ಯಶಾಲೆಗೆ ಮಹಾಚಕ್ರಂ (ಶಾಂತಿಪು. ೧೦-೧೧೫). ೩. = ಸಹಸ್ರದಲ ೨ : ಪ್ರಾಣಾಯಾಮವಿಧಿಗೆ . . . ಸಹಸ್ರಾರಸಮ್ಮಿತವಾಗಿಪ್ಪ ಪಿಂಡಾಂಡದೊಳು (ವಿವೇಕ. ೧೫೧); ಷಟ್ಚಕ್ರದಗ್ರದ ಸಹಸ್ರಾರವೋ? (ಅನೇ. ೯-೧೬). ೪. [ಜೈನ] ಹದಿನಾರು ಬಗೆಯ ಸ್ವರ್ಗಗಳಲ್ಲಿ

ಒಂದು; ಷೋಡಶಕಲ್ಪಗಳಲ್ಲಿ ಒಂದು : ಸೌಧರ್ಮ . . . ಸಹಸ್ರಾರ ಆನತ ಪ್ರಾಣತಾರಣಾಚ್ಯುತಮೆಂಬ ಪದಿನಾಱುಂ ಕಲ್ಪಂಗಳೊಳಂ . . . ಪುಟ್ಟಿ (ವಡ್ಡಾರಾ. ೯೭-೨೬). [ಸಂ.]

ಸಹಸ್ರಾರಕಲ್ಪ (ನಾ). = ಸಹಸ್ರಾರ ೪ : ತಾನುಂ ಪದ್ಮಾವತಿಕಾಂತಿಯರ ಸಾರೆ ಆಚಾಮ್ಲವರ್ಧನಮಂ ನೋಂತು ಸಹಸ್ರಾರಕಲ್ಪದೊಳ್ದೇವಿಯಾಗಿ (ಚಾವುಂಪು. ೩೫೬); ಓರಂತೆ ತೊಳಗಿ ಪೊಳೆವ ಶತಾರ ಸಹಸ್ರಾರಕಲ್ಪಯುಗಂಗಳ್ ಶೋಭಾರಮಣೀಯಂಗಳ್ (ಸುಕುಮಾ. ೧೧-೬೬). [ಸಂ.]

ಸಹಸ್ರಿ (ನಾ). ೧. ಸಾವಿರವನ್ನು ಹೊಂದಿರುವುದು; ಸಾವಿರದಿಂದ ಕೂಡಿರುವುದು. ೨. ಸಾವಿರ ಜನರ ಗುಂಪು. ೩. ಸಾವಿರಮಂದಿಯಿಂದ ಕೂಡಿದ ಪಡೆಯ ಅಧಿಪತಿ : "ಸಾಹಸ್ರಃ, ಸಹಸ್ರಿ - ೨ . . . ಯಾರು ಸಾವಿರದ ಲೆಕ್ಕವುಳ್ಳ ಸೈನ್ಯದಿಂದ ಬಲವುಳ್ಳವರೋ ಅಂತವರ ಹೆಸರುಗಳು" (ಸಿದ್ಧಾಂತಿ. ೨೫೫). [ಸಂ. ಸಹಸ್ರಿನ್]

ಸಹಸ್ರೋಸ್ರ (ನಾ). ಅಸಂಖ್ಯಾತವಾದ ಕಿರಣಗಳುಳ್ಳವನು; ಸೂರ್ಯ : ಆಗಸದಿಂದುಗ್ರತ್ವಮಂ ಬಿಟ್ಟವನಿಪತಿಯನಾಶ್ವಾಸಿಸಲ್ ಬಂದವಂ ತಾನೆ ಸಹಸ್ರೋಸ್ರಂ (ಚಂದ್ರಪ್ರ. ೫-೨೦). [ಸಂ.]

ಸಹಹೇತುಕ (ನಾ). ಕಾರಣದಿಂದ ಕೂಡಿದುದು; ಕಾರಣಸಹಿತವಾದುದು : ಹೇತುಮದಾಖ್ಯಾನಂ ಸಹಹೇತುಕಮದು ಹೇತುವೆಂಬಲಂಕೃತಿಯಕ್ಕುಂ (ಕಾವ್ಯಾವ. ೬೫೫). [ಸಂ.]

ಸಹಾ (ಅ). ಕೂಡ; ಕೂಡೆ; ಸಹ : ಯದಕೆ ಸಹಾ ಕೊಡಬೇಕೆಂದು (ಎಕ. VI, ತರೀಕೆ. ೨೨-೨೨; 1681); ಕುದುರೆ ೫೦೦ ಪ್ಯಾದೆ ೬೫೦ ಸಹಾ ಭರ್ತಿಮಾಡಿ (ಹೃದರ. ೨೧); ಇಂಥವರು ಸಹಾ ನಮಗೆ ಪತ್ರದ್ವಾರ ತಿಳಿಸಿದ್ದಲ್ಲಿ (ಮುಂಬಾಪ್ರಾ. ೨ ಅಂಚೆ). [< ಸಹ್ಯ]

ಸಹಾಧ್ಯಾಯಿ (ನಾ). = ಸಹಪಾಠಿ : " ಸಹಪಾಠಿ, ಸಹಾಧ್ಯಾಯಿ " (Classmate. ಪತ್ರಿನಿ. ೧೭). [ಸಂ. ಸಹಾಧ್ಯಾಯಿನ್]

ಸಹಾನುಭೂತಿ (ನಾ). ಅನುಕಂಪೆ; ದಯೆ : ನಿಮಗೆ ಹಂಗಸರ ವಿಷಯದಲ್ಲಿ ಒಂದಿಷ್ಟಾದರೂ ಸಹಾನುಭೂತಿಯಿಲ್ಲ! (ಹಸುಹೂ. ೧೮); ಅವನನ್ನು ಸಹಾನುಭೂತಿಯಿಂದ ನೀವು ನೋಡುತ್ತಿಲ್ಲವೆಂದು ನನ್ನ ಗ್ರಹಿಕೆಯಾಗಿದೆ (ರಂಗರೂ. ೧೨೬). [ಸಂ.]

ಸಹಾಯ (ನಾ). ೧. ಸಹಚರ; ಸಂಗಡಿಗ; ಸ್ನೇಹಿತ : ಪಾಲಿಸವೇಳ್ಕುಮನ್ನಯ ಸಹಾಯನ ಜೀವಮಂ (ಕಾದಂಪೂ. ೮೨೦). ೨. ಅನುಯಾಯಿ; ಅನುಚರ; ಸಹಾಯಕ : ದಮಿತಾರಿ ನಿರ್ಗುಣನಪ್ಪ ಸಹಾಯನಂ ಬಿಸುಟ್ಟಂತೆ ಬಿಲ್ಲಂ ಬಿಸುಟು (ಶಾಂತಿಪು. ೪-೪೮ ವ). ೩. ಸಮಯದಲ್ಲಿ ಒದಗುವಿಕೆ; ನೆರವು; ಒತ್ತಾಸೆ : "ಸಹಾಯಕೆ ಪೆಸರು ಕೆಲಚು" (ಶಬ್ದಮಂ. ೫೮); ಯಜಮಾನನು ತನ್ನ ಕೆಲಸಕ್ಕೆ ಇತರರ ಸಹಾಯವನ್ನು ಕೇಳುವ ತನಕ ನಮಗೆ ಕೇಡು ಇರಲಿಲ್ಲ (ನೀತಿಚಂ. VIII, ೭). [ಸಂ.]

ಸಹಾಯಕ (ಗು). ೧. ನೆರವಾಗುವ; ಪೂರಕವಾಗುವ : "ಜಿಲ್ಲಾನ್ಯಾಯಾಧೀಶರು" ಎಂಬ ಪದಗಳ ಅರ್ಥದಲ್ಲಿ . . . ಸಹಾಯಕಸತ್ರನ್ಯಾಯಾಧೀಶರೂ ಸೇರಿರುತ್ತಾರೆ (ಭಾಧಾನ. ೧೨೯). (ನಾ). ೨. ನೆರವು ನೀಡುವ ವ್ಯಕ್ತಿ; ಒತ್ತಾಸೆ ಕೊಡುವ ವ್ಯಕ್ತಿ : ಇರಿವನೊಳಂಬದಿಲೀಪನು ಕಡೆಯವರೆಗೂ ರಾಷ್ಟ್ರಕೂಟಕೃಷ್ಣನ ಸಹಾಯಕನಾಗಿದ್ದನು (ನೊಳಂಬ. ೪೨). ೩. ನೆರವು ನೀಡುವಂಥದು; ಪೂರಕವಾದುದು : ಕೀಟಗಳ ಬೆಳವಣಿಗೆಗೆ ನೀರಿನಲ್ಲಿ ಕರಗುವ ಅನ್ನಾಂಗಗಳು ಬೇಕು; ಅವು ಜೀವದ್ರವ್ಯದ ಪರಿಣಾಮಕ್ಕೆ ಸಹಾಯಕ (ಕೀಟಚಿ. ೩೦). [ಸಂ.]

ಸಹಾಯದ್ರವ್ಯ (ನಾ). ಜನೋಪಯುಕ್ತವಾದ ಉದ್ಯಮ, ಸಂಸ್ಥೆ ಇತ್ಯಾದಿಗಳ ವೆಚ್ಚಕ್ಕಾಗಿ ಖಾಸಗಿ ವ್ಯಕ್ತಿ, ಸಂಸ್ಥೆ ಅಥವಾ ಸರ್ಕಾರವು ಕೊಡುವ ಹಣ : ವರ್ಷಂಪ್ರತಿ ಇಷ್ಟು ಸಹಾಯದ್ರವ್ಯವನ್ನು (Grant-in-aid) ಕೊಡುತ್ತೇವೆಂದು ವಾಗ್ದಾನ ಮಾಡಿ ಅಲ್ಲಿನ ಕಾರ್ಯಗಳಿಗೆ ಸಹಾಯಮಾಡಬಹುದು (ಹಣಪ್ರ. ೨೩೬). [ಸಂ.]

ಸಹಾಯಧನ (ನಾ). = ಸಹಾಯದ್ರವ್ಯ : ಸಹಾಯಧನವನ್ನು ಯಾವುದಾದರೂ ರೂಪದಲ್ಲಿ ಒಂದು ರಾಷ್ಟ್ರವು ಕೊಡುತ್ತಿದ್ದರೆ . . . ತಿಳಿಸಬೇಕು (ಅಂತಸಂ. ೧೬೬). [ಸಂ.]

ಸಹಾಯಾರ್ಥ (ನಾ). ಬಡಬಗ್ಗರಿಗೆ, ದೀನರಿಗೆ ನೆರವು ನೀಡುವ ಉದ್ದೇಶವನ್ನು ಹೊಂದಿರುವುದು : ಕೈಯಿಂದ ಕೊಡುವುದಲ್ಲದ 'ಸಹಾಯಾರ್ಥ' ನಾಟಕಗಳನ್ನಾಡಿ . . . ಎಂಬತ್ತುತೊಂಬತ್ತುಸಾವಿರರೂಪಾಯಿಗಳನ್ನು ಒದಗಿಸುತ್ತಿದ್ದಳು (ರಂಗನಾ. ೧೮೬); 'ಸಹಾಯಾರ್ಥ', 'ಧರ್ಮಾರ್ಥ' - ಇವೆಲ್ಲಾ 'ಭಿಕ್ಷೆ' ಎನ್ನುವುದಕ್ಕೆ ಪರ್ಯಾಯಪದಗಳೇನೋ (ಹಪಕಾ. ೧೩). 'ಧರ್ಮಾರ್ಥ' ಪರಾ. [ಸಂ. ಸಹಾಯಾರ್ಥಂ]

ಸಹಾಯಿ (ನಾ). ೧. ಸಹಾಯ ಮಾಡುವವನು; ನೆರವು ನೀಡುವವನು : ದಯದಿಂದ ಬಿಟ್ಟು ಧರ್ಮವಿಲ್ಲ ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ (ಸಮಾಪ. ೧-೨); ಭಕ್ತಸಹಾಯಿಯಂ ಶಿವಧರ್ಮಕೀರ್ತಿವಿಧೇಯನಂ ತನ್ನಿ (ಬಸವಪು. ೫೯-೩೯). ೨. ಮೈತ್ರಿಯ ಭಾವವನ್ನು ಹೊಂದಿದವನು; ಸ್ನೇಹಿತ : ಜಗದೇವಶರಣನ ಮನೆಗೆ ಬಸವಂ ಭಕ್ತಲೋಕದೊಡನೆ ಸಹಾಯಿಗಳಾಗೆ ನಡೆತಂದು (ಬಸವಪು. ೬೦-೬೨). [ಸಂ. ಸಹಾಯಿನ್]

ಸಹಾಯಿಗ (ನಾ). = ಸಹಾಯಿ ೧ : ಸಂತತಾಘಸಹಾಯಿಗನನಶ್ರಾಂತದುರ ಹಂಕಾರಯುತನಂ . . . ಎನ್ನಂ ಸಲಹು (ಬಸವಪು. ೨೨-೫೦). [ಸಹಾಯ + - ಇಗ]

ಸಹಿ, ಸೈ$_2$ (ನಾ). ೧. (ಒಪ್ಪಿಗೆಯ ಸೂಚಕವಾದ) ಸ್ವಹಸ್ತಾಕ್ಷರ; (ಅಂಗೀಕಾರಸೂಚಕವಾದ) ರುಜು,— ದಸ್ಕತ್ತು : ಶಂಕರನಾರಾಯಣಯ್ಯ ಎಂದು ಇಂಗ್ಲೀಷಿನಲ್ಲಿ ಸಹಿಯಾಯಿತು (ರಂಗವ. ೬೫); ಮೀಟಿಂಗಿನ ವಿನಂತಿಪತ್ರ ನೋಡಿದ ಬಗ್ಗೆ ಸಹಿ ಕೂಡ ಮಾಡಲಿಲ್ಲವಂತೆ (ಬದುಜ. ೧೫೪). ೨. ಯಥಾರ್ಥವಾದುದು; ನಿಜವಾದುದು : ಅವನು ವಹಿಸಿರ್ಪ ಮೂಜೀವರೆಹಗಾದರಂಬಿರವ ಸಹಿಯೆಂಬ ಮಾಳ್ಕೆಯಿಂದೊಱೆವುದೆನಲು (ಮನೋವಿ. ೬-೧೨); ಬಹುದಿನದಲಿ ಇದ್ದ ಭವರೋಗ ಹಿಂಗಿತು ಸಹಿ ವಿಷ್ಣು ವಿಜಯವಿಠ್ಠಲವೈದ್ಯನಿಂದಲಿ (ಮೋಕ್ಷದೀ. ೮-೮). **ಸೈ$_2$** : ೧. ರಾಜರು ತಮ್ಮ ಸಂಸ್ಥಾನದ ರಾಜಮೋಹರವನ್ನೂ ಒತ್ತಿ ತಮ್ಮ ಹೆಸರ ಸೈಹಾಕಿ (ರಾಚೇಂದ್ರ. ೧೯).

ಸಹಿ ಮಾಡು = ೧. ರುಜು ಹಾಕು; ಸ್ವಹಸ್ತಾಕ್ಷರವನ್ನು ಹಾಕು; ದಸ್ಕತ್ತು ಹಾಕು : ಇದರ ಮೇಲೆ ಪುಸ್ತಕದ ಹೆಸರು ಬರೆದು ತಮ್ಮ ಸಹಿ ಮಾಡಿರಿ (ಆಪೋಲೀ. ೧೫೧). ೨. ನಿಜಮಾಡು; ದಿಟವಾಗಿಸು : ನೀವಿಂತಿಂತು ಸಹಿ ಮಾಡಿ ತೋರ್ಪ ಸಂಬಂಧದಿಂದೆ ಮಹದ ವಿಸ್ತರವು ಸನ್ನಿಹಿತವೆಂದಱಿದೆ (ಮನೋವಿ. ೨-೩೪).

[<- ಅರ. ಪಾರ. ಸಹೀಹ್; ಹಿಂ. ಸಹೀ; ಮರಾ. ಸಹೀ, ಸಈ]

ಸಹಿತ$_1$ (ಗು). ೧. ಸೇರಿದ; ಕೂಡಿದ. (ನಾ). ೨. ಹಿತದಿಂದ ಕೂಡಿದುದು; ಒಳಿತಾದುದು : ಸಹ್ಯವಲ್ಲದುದನ್ನೂ, ಸಹಿತವಲ್ಲದುದನ್ನೂ, ಸಾಹಿತ್ಯವೆಂದು ಕರೆಯುವುದಾದರೂ ಹೇಗೆ? (ಸಪ್ತಿ. III . ಪ್ರಸ್ತಾವನೆ). ೩. ಸಮೇತವಾದುದು; ಕೂಡಿದುದು : ಅಂಗಲಿಂಗಸಹಿತ [ಪಾಠಾಂ. ಸನ್ನಿಹಿತ] ವಾಗಿ ಬಂದರೆ ಸಂಗ ನೀನೆಂದು ಮತ್ತ ಮನದಲ್ಲಿ ಸಂದೇಹ ಹೊಳೆದರೆ ಬೆಂದನಲ್ಲಾ ನಾನು (ಬಸವ. ೪೦೩). ೪. [ಗಣಿತ] ಕೂಡುವುದು; ಸಂಕಲನ : "ಯುತಮನ್ವಿತಂ . . . ಸಹಿತಮೆನಲು ಕೂಡಲ್ಕೆ ನಾಮಂ" (ಮಂಗರಾ. ೧೩೦-೧೮); ಯುತಂ . . . ಸಹಿತಂ, ಕೂಡು, ಬತಂ ಇಂತಿನಿತುಂ ಕೂಡೂದಕ್ಕೆ ಹೆಸರು (ವೃವಹಾ. ೧೧). [ಸಂ.]

ಸಹಿತ$_2$ (ಅ). ಸಮೇತವಾಗಿ; ಒಡನೆ : ದೇವಸಹಿತ ಭಕ್ತ ಮನೆಗೆ ಬಂದರ ಕಾಯಕವಾವುದೆಂದು ಬೆಸಗೊಂಡರೆ ನಿಮ್ಮಾಣೆ (ಬಸವ. ೪೫೨); ರಾಯರಾಜಶಿರೋಮಣಿಯ ಕಟಕಾಯ ಬಿಟ್ಟುದು ಬಳಿಕ ಕೊಟ್ಟಿಗೆ ಲಾಯ ಗುಡಿ ಗೂಡಾರ ಸಹಿತ ಪುರೋಪಕಂಠದಲಿ (ತೂರರಾ. ೧-೬-೧೨). [< ಸಹಿತ$_1$]

ಸಹಿತಂ (ಅ). = ಸಹಿತ$_2$: ಸಾಸಿರ್ವ್ವರುಂ ಅಱುನೂರ್ವ್ವರುಂ ಸಹಿತಂ . . . ಕಾಸಂಪಳ್ಳಿಯಾ ಸಮಭಾಗಮಾನ್ . . . ಕೊಟ್ಟರ್ (ಎಇ. XXI, ೧೭೮-೭; ಸು. ೫೦೦ ಶತ); ಮಹಿಳಾಸಹಿತಂ ವಾಹನಸಹಿತಂ ಸಂಗೀತಸಹಿತಮತಿಶುದ್ಧಮನಸ್ಸಹಿತಂ ನಿಜವಿವಿಧಾಯುಧಸಹಿತಂ ನಿಲವೇಟ್ಟ ನೆಲೆಯೊಳೆರೆ ದಿಗಧೀಶರ್ (ಶಾಂತಿಪು. ೧೦-೩೨). [ಸಂ.]

ಸಹಿರಣ್ಯ (ನಾ). ಚಿನ್ನದ ಸಮೇತವಾದುದು; ಬಂಗಾರದ ಸಹಿತವಾದುದು : ಬ್ರಹ್ಮಪುರಿವೃತಿಗಳನು ಸಹಿರಣ್ಯವಾಗಿ ಧಾರಾಪೂರ್ವ್ವಕಂ ಕೊಟ್ಟ ಕ್ರಮ (ಸೌಇಇ. XV, ೧೮೭-೧೦; 1248). [ಸಂ.]

ಸಹಿಷ್ಣು (ನಾ). ತಾಳ್ಮೆಯುಳ್ಳವನು; ಸೈರಣೆಯನ್ನು ಹೊಂದಿದವನು : ನೀವೂ ಸಹಿಷ್ಣುವಾಗಿ ಪಗೆಯಂ ಬಗೆಯೊಳೆ ಕಾದಿ ಕೊಲ್ಲುದು (ಪಾಚಶತಂ. ೨೦೯-೨೩); ಸೈರಿಸನ್ನಯ ಘಾಯವನು ಘೋರಪ್ರಹಾರಸಹಿಷ್ಣು ಗಡ ನೀನು (ಕುಪ್ಪಾಗ. ೭-೨೩). [ಸಂ.]

ಸಹಿಷ್ಣುತೆ (ನಾ). ತಾಳ್ಮೆ; ಸೈರಣೆ : "ಮರ್ಷಃ . . . ಕ್ಷಾಂತಿಃ, ಸಹಿಷ್ಣುತಾ — ಈ ೫ ಸೈರಣೆ" (ಹಲಾಯು. ೧೨೦-೪೦); ನಿಜಕ್ಕೂ ಸತ್ಯ, ಪ್ರೇಮ . . . ಸಹಿಷ್ಣುತೆ, ದಯೆ, ಮಮತೆ - ಇವೇ ಮಾನವಧರ್ಮದ ಮೂಲತತ್ತ್ವಗಳು (ಧರ್ಮಾ. ೩). [ಸಂ. ಸಹಿಷ್ಣುತಾ]

ಸಹಿಸು (ಕ್ರಿ). ಸೈರಿಸು; ತಾಳು : ಸಹಿಸಲಸಹ್ಯಮಪ್ಪ ಮದನಜ್ವರವೇಗದೆ . . . ಕೆಡೆದು ಪೊಂದಿದನಾ ಯಿಳಿಯಲ್ಲಚೇತನಂ (ಕಾದಂಬ. ೫೭೫); ನೀರು ನೆಳಲಿಲ್ಲ ತನುತಾಪಮಿಂಬಾದುದಿದ ಸಹಿಸಲಳವಲ್ಲ (ವಂಶಾರಾ. ೫-೨-೧೭). [ಸಹನ + - ಇಸ್ತು]

ಸಹೃದಯ (ಗು). ೧. ಒಳ್ಳೆಯ ಮನಸ್ಸಿನ; ಸಹಾನುಭೂತಿಯುಳ್ಳ; ಅಂತಃಕರಣವುಳ್ಳ. ೨. ಹೃತ್ಪೂರ್ವಕವಾದ; ಮನಃಪೂರ್ವಕವಾದ. ೩. ಬುದ್ಧಿವಂತಿಕೆಯುಳ್ಳ; ಪ್ರಾಜ್ಞತೆಯನ್ನು ಹೊಂದಿದ. (ನಾ). ೪. ಸಹಾನುಭೂತಿಯುಳ್ಳವನು : ನಿನ್ನ ಮನಸ್ಸಿಗೆ ನೋವನ್ನುಂಟುಮಾಡುವ ವಿಷಯ ನನಗೂ ಒಂದಲ್ಲ ಒಂದು ವಿಧವಾಗಿ ನೋವನ್ನುಂಟುಮಾಡಿಯೆ ಮಾಡುವುದು . . . ಪತಿಯು ಸಹೃದಯನಲ್ಲವೆ? (ಶಾಂತಲಾ. ೨೦೫). ೫. ಶುದ್ಧಹೃದಯವುಳ್ಳವನು; ಪ್ರಾಮಾಣಿಕ : "ಚಿದ್ರೂಪಃ, ಸಹೃದಯಃ — ಈ ೨ ಲೇಸಪ್ಪ ಮನದವಂ" (ಹಲಾಯು. ೬೧-೨೧೮). ೬. ಪ್ರಾಜ್ಞ; ವಿದ್ವಾಂಸ. ೭. [ಕಾವ್ಯಮೀ] ರಸಗ್ರಾಹಿಯಾದ ಓದುಗ; ಕಾವ್ಯರಸಜ್ಞ; "(ಕವಿಹೃದಯಕ್ಕೆ) ಸಮಾನವಾದ ಹೃದಯವುಳ್ಳವನೇ ಸಹೃದಯ" (ಧಾರಮಾ. ೨೨೦) : ನಿರಂತರವಾಗಿ ಕಾವ್ಯದ ಅನುಶೀಲನೆಯಿಂದ ಮಾನಸದರ್ಪಣವು ನಿರ್ಮಲವಾಗಿರಬೇಕು; ವರ್ಣನೀಯವಿಷಯದಲ್ಲಿ ತನ್ಮಯಾಭಾವ ಆಗುವಂತಹ ಯೋಗ್ಯತೆಯಿರಬೇಕು, ಹೃದಯಸಂವಾದ ಸಹಜವಾಗಿರಬೇಕು — ಹೀಗೆ ಯಾರಿರುವರೋ ಅವರೇ ಸಹೃದಯರು (ಧ್ವನ್ಯಾಲೋ. ೧೦ ಅಡಿ); ಭಗವಂತನೆ ಕವಿ, ಸಹೃದಯ ನಾಂ! (ಅನಿಕೇ. ೭೦-೨). [ಸಂ.]

ಸಹೃದಯತೆ (ನಾ). ೧. ಅಂತಃಕರಣ; ಸಹಾನುಭೂತಿ : ಸಹೃದಯತೆಯೂ ಅವಶ್ಯಕವೆಂಬುದನ್ನು ನೆನಪಿನಲ್ಲಿಡಬೇಕು (ಶಿಕ್ಷಿದ. ೩೯). ೨. ರಸಗ್ರಾಹಿತ್ವ.

[ಸಂ. ಸಹೃದಯತಾ]

ಸಹೃದಯೆ (ನಾ). ಒಳ್ಳೆಯ ಮನಸ್ಸನ್ನು ಹೊಂದಿದವಳು : ಅಂತಃಕರಣಜೀವಿಯೂ ಸಹೃದಯೆಯೂ ಆದ ಶಾಂತಲೆಗೆ, ಲಕ್ಷ್ಮಿ ಆಗ ಅಂದ ಮಾತು ಶಾಶ್ವತವಾಗಿ ಎದೆಯಲ್ಲಿ ನೆಟ್ಟುಹೋಯಿತು (ಶಾಂತಲಾ. ೧೨). [ಸಂ. ಸಹೃದಯಾ]

ಸಹೆ (ನಾ). ೧. ಭೂಮಿ; ಧರೆ. ೨. ಒಂದು ಮಾಸದ ಹೆಸರು; ಮಾರ್ಗಶಿರ : "ಮಾರ್ಗಶೀರ್ಷಃ, ಸಹಾಃ, ಮಾರ್ಗಃ, ಆಗ್ರಹಾಯಣಕಃ - ೪ ಮಾರ್ಗಶೀರ್ಷಮಾಸದ ಹೆಸರುಗಳು" (ಸಿದ್ಧಾಂತಿ. ೩೯). ೩. ಗೋರಂಟಿಯಲ್ಲಿ ಒಂದು ಬಗೆ; ಸಣ್ಣಗೋರಂಟಿ : "ಸಹಾ, ಕುಮಾರೀ, ತರಣಿಃ — ೩ ಸಣ್ಣಗೋರಂಟಿ ಪೆಸರುಗಳು" (ಸಿದ್ಧಾಂತಿ. ೧೨೯). ೪. ಒಂದು ಬಗೆಯ ಹೆಸರುಕಾಳು; ಕಾಡುಹೆಸರು : "ಕಾಡ ಹೆಸಱು— ಮುದ್ಗಪರ್ಣ, ಕಾಕಮುದ್ಗ, ಸಹೆ" (ನಾಚಿರಾ. ೬). [ಸಂ. ಸಹಾ]

ಸಹೇತುಕ (ನಾ). ಕಾರಣದಿಂದ ಕೂಡಿರುವುದು; ಉದ್ದೇಶಪೂರ್ವಕವಾದುದು : ನಿಜವಾದ ಭಕ್ತಿ ಸಹೇತುಕವಾಗಿರಲಾರದು! (ಕರ್ನಾಕ. ೧೮೧). [ಸಂ.]

ಸಹೋಕ್ತಿ (ನಾ). ೧. ಏಕಕಾಲದಲ್ಲಿ ಮಾತನಾಡುವಿಕೆ; ಒಟ್ಟಿಗೆ ಮಾತನಾಡುವಿಕೆ. ೨. [ಕಾವ್ಯಮೀ] ಅರ್ಥಾಲಂಕಾರದ ಒಂದು ಭೇದ; ಒಂದು ವಸ್ತುವಿನೊಡನೆ ಮತ್ತೊಂದರ ಸಹಭಾವವನ್ನು ಸಹೃದಯರು ಮೆಚ್ಚುವಂತೆ ವರ್ಣಿಸುವುದು : ಗುಣಜಾತ್ಯಾದಿಗಳಂ ದೊರೆಯಣಿಸುವುದು ಸಹೋಕ್ತಿಯೆಂಬುದಕ್ಕುಂ . . . ಅತಿಧವಳಮಾಯ್ತು ಗುಣಸಂತತಿಯೊಡನೆ ಯಶೋವಿತಾನಮಾಶಾಧೀನಂ ಸತತಂ ಪೆರ್ಚಿತ್ತು ನಿಜಾಯತಿಯೊಡನೆ ಮಹಾವಿಭೂತಿ ಪರಮೋದಯನಾ (ಕವಿರಾ. ೩-೧೫೪); ಸಮಕಾಲಮಪ್ಪುವೆರಡರ್ಥಮನೊಡನೆಯೆ ಪೇಳ್ವುದದು ಸಹೋಕ್ತಿ . . . ಅಲರ್ದುವೊಡನೊಡನೆ ಕುವಲಯಕುಲಮುಂ ಕುಲಟಾಮುಖಂಗಳುಂ ಮುಗಿದುವು ನಿಶ್ಚಲಯೋಗನಿರತ ಸಂಧ್ಯಾಂಜಲಿಯುಂ ಸರಸಿರುಹವನಮುಮೊಡನೊಡನಾಗಳ್ (ಕಾವ್ಯಾವ. ೭೧೩). [ಸಂ.]

ಸಹೋಕ್ತ್ಯಲಂಕಾರ (ನಾ). = ಸಹೋಕ್ತಿ ೨ : ಸಹೃದಯರಂಜಕವಾದ ಸಹಭಾವವಿದ್ದಲ್ಲಿ ಎಂದರೆ ಎರಡುವಸ್ತುಗಳು ಒಟ್ಟಿಗೆ ಇದ್ದುವು ಅಥವಾ ಒಟ್ಟಿಗೆ ಹೋದುವು ಎಂದು ಮುಂತಾಗಿ ವರ್ಣಿಸಿದರೆ - ಸಹೋಕ್ತ್ಯಲಂಕಾರವಾಗುವುದು (ಕೃಪಿಡಿ. ೨೭೪). [ಸಂ.]

ಸಹೋಢ (ನಾ). ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದವಳ ಮಗ : ಕನ್ಯೆಯಲ್ಲಿ ಹುಟ್ಟಿದ ಕಾನೀನ, ಸಹೋಢ ಎಂಬ ಪುತ್ರರು ಆಮೇಲೆ ಅವಳನ್ನು ಮದುವೆಯಾದವನಿಗೂ ಶಾಸ್ತ್ರೀಯವಾಗಿ ಮಕ್ಕಳೇ ಎಂಬುದನ್ನು ನೀನು ಬಲ್ಲೆ (ವಚಭಾ. ೨೫೮).

[ಸಂ.]

ಸಹೋತ್ಥಾಯಿ (ನಾ). (ಅಭ್ಯುದಯದ) ಒಳಸಂಚಿನಲ್ಲಿ ಸಹಾಯಕನಾದವನು : ಮಹಾರಾಜರ ಅಭ್ಯುದಯವನ್ನೇ ಅವಲಂಬಿಸಿ ಅವರೊಂದಿಗೆ ಸಹೋತ್ಥಾಯಿಗಳಾಗಿ ನಿಂತ ಗಜಾಧ್ಯಕ್ಷ ಭದ್ರಭಟ . . . ಬರೆದುಕೊಟ್ಟಿರುವ ಪ್ರಮಾಣಲೇಖ್ಯಪತ್ರವಿದು (ರಾಶ್ಯಮು. ೧೯). [ಸಂ. ಸಹೋತ್ಥಾಯಿನ್]

ಸಹೋತ್ಪನ್ನ (ನಾ). ಒಡಹುಟ್ಟಿದವನು; ಸೋದರ : ತನ್ನಿಱಿದು ಗೆಲ್ದ ಕೊಳುಗುಳವನ್ನೋಡಲ್ ಚಕ್ರಪಾಣಿಯುಂ ತನ್ನ ಸಹೋತ್ಪನ್ನರುಮೊಡವರೆ (ಪಂಪಭಾ. ೧೪-೨). [ಸಂ.]

ಸಹೋದರ (ನಾ). = ಸಹೋತ್ಪನ್ನ : "ಸಹಜಾತಂ ಸಹೋದರಂ ಸೋದರಂ ಭ್ರಾತೃವೆನಲೊಡಹುಟ್ಟಿದಂ" (ಮಂಗರಾ. ೯೨-೧೧); ಸಹೋದರರೆವೆಂದೊಸೆದಾಳ್ಕುದು ಭೃತ್ಯವಿತಾನಮಂ (ಶಮದ. ೨೨೦ ಪ್ರಯೋ); ಬಾರೈ ವರಸಹೋದರ ಕಲ್ಪತರುವೇ (ಕೌಶಿರಾ. ೩೬-೮೦). [ಸಂ.]

ಸಹೋದರಿ (ನಾ). ಒಡಹುಟ್ಟಿದವಳು; ಸೋದರಿ : "ಸಹಜೆ ಸಹೋದರಿ ಸಹಜಾತೆ ಭಗಿನಿಯೆನೆ ಪೆಸ[ರಕ್ಕುಂ]" (ವಸ್ತುಕೋ. ೫೫-೧೮); ಬಸವಂ ನಿಜಸಹೋದರಿಯೆನಿಪ ನಾಗಾಂಬಿಕೆಯು ತಾನು ತನಗೆಯಲ್ಲಿರಲಾಗದೆನುತೆಯ್ತಂದು ಮಹಮನೆಯ ಮನೆಗೆ ಬರುತಿರೆ (ಬಸಪು. ೩-೮೪); ಅಯೋಧ್ಯಾ ನಗರಿ ಕಿಷ್ಕಿಂಧೆಗಕ್ಕುಮ ಸಹೋದರಿ! (ಶ್ರೀರಾಮಾ. ೨೯೩-೨೧೫). [ಸಂ. ಸಹೋದರೀ]

ಸಹೋದ್ಯೋಗಿ (ನಾ). ಜೊತೆಯಲ್ಲಿ ಕೆಲಸ ಮಾಡುವ ವ್ಯಕ್ತಿ; ಸಂಗಡ ಉದ್ಯೋಗ ಮಾಡುವ ವ್ಯಕ್ತಿ : ಆಕೆ ಸಹೋದ್ಯೋಗಿಯ ಬೇಡಿಕೆಯನ್ನು ನಿರಾಕರಿಸಲಿಲ್ಲ (ವಾಶ್ವಲ್ಯ. ೨೧೦); ಸಹೋದ್ಯೋಗಿಗಳೂ ಒಲವಿನವರು (ಮನೋಸಂ. ೭೬).

[ಸಂ. ಸಹೋದ್ಯೋಗಿನ್]

ಸಹ್ಯ (ಗು). ೧. ಸೈರಿಸಬಹುದಾದ; ಸಹಿಸಲು ಸಾಧ್ಯವಾದ. ೨. ತಕ್ಕುದಾದ; ಅನುರೂಪವಾದ. ೩. ಬಲವಾದ; ಶಕ್ತಿಯುತವಾದ. ೪. ಇನಿದಾದ; ಹಿತವಾದ : 'ಶ್ರುತಿಸಹ್ಯ' ಪರಾ. (ನಾ). ೫. ಸೈರಿಸಬಹುದಾದುದು; ಸಹಿಸಲು ಸಾಧ್ಯವಾದುದು : ಅವನ ಸೊಕ್ಕಿನ ಮಾತು ಎಲ್ಲರಿಗೂ ಸಹ್ಯವಾಗುವುದಿಲ್ಲ (ರೂಢಿ). ೬. ಹಿತವಾದುದು; ಇನಿದಾಗಿರುವುದು : ಪಠ್ಯಪುಸ್ತಕ ದೋಷರಹಿತವಾಗಿದ್ದರೇನೋ ಅದರ ಪರಿಣಾಮ ಸಹ್ಯವೆನ್ನಬಹುದು (ಶಿಕ್ಷಿದ. ೨೬೬). ೭. ಆರೋಗ್ಯ; ರೋಗವಿಲ್ಲದಿರುವಿಕೆ. ೮. ಸಹಕಾರ; ನೆರವು. ೯. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ, ವಿಂಧ್ಯ ಮತ್ತು ಪಾರಿಯಾತ್ರ ಎಂಬ ಏಳು ಕುಲಗಿರಿಗಳಲ್ಲಿ ಒಂದು : "ಅರುಜಾದ್ರಿ ಮನೋಹರ ಸಹ್ಯವಾಚಕಂ" (ನಾನಾರ. ೧೦೨). ೧೦. (ಗೋದಾವರೀನದಿಯು ಹುಟ್ಟುವ) ದಕ್ಷಿಣದ ವಾಯವ್ಯಪ್ರದೇಶದ ಘಟ್ಟದ ಸಾಲು ಮತ್ತು ಘಟ್ಟದ ಜಿಲ್ಲೆ; ಮಲೆನಾಡು : ಎಲ್ಲಿಯು ಎಲ್ಲವು ಮಹತ್ತೆ ಇಲ್ಲಿ ಈ ಸಹ್ಯ ಮಹಾಬೃಹತ್ತಿನಲ್ಲಿ! (ಪಕ್ಷಿಕಾ. ೮೨-೨೨). [ಸಂ.]

ಸಹ್ಯತೆ (ನಾ). ೧. ಸೈರಿಸಿಕೊಳ್ಳುವ ಬಲ; ಸಹನಶಕ್ತಿ. ೨. ಶಕ್ತಿ; ಬಲ; ಕಸುವು : ಅವನ ಬದುಕಿಗೆ ಆ ಮಾತು ಕೊಟ್ಟ ಸಹ್ಯತೆ ಊಹಿಸುವುದಕ್ಕೂ ಅಸಾಧ್ಯ (ಹೊಸಕ್ತಿ. ೩೯). [ಸಂ. ಸಹ್ಯತಾ]

ಸಹ್ಯಾದ್ರಿ (ನಾ). ೧. = ಸಹ್ಯ ೧೦ : ಸಹ್ಯಾದ್ರಿಯ ಪ್ರದೇಶ ಅಥವಾ ಮಲ್ನಾಡ.— ಕಾನಡಾಜಿಲ್ಲೆಯ ಮಧ್ಯಭಾಗದಲ್ಲಿ ಅಂದರೆ ಕೊಂಕಣಪಟ್ಟಿಯ ಪೂರ್ವನೆರೆಯಲ್ಲಿ ಸಹ್ಯಾದ್ರಿಯ ಸಾಲು ದಕ್ಷಿಣೋತ್ತರವಾಗಿ ಇರುತ್ತದೆ. ಇದಕ್ಕೆ ಪಶ್ಚಿಮಘಟ್ಟವೆಂತಲೂ ಅನ್ನುವರು (ಕಭಾಗ. ೫); ಉದಯಿಸುತಿಹನದೊ ಅಭಿನವದಿನಮಣಿ ಸಹ್ಯಾದ್ರಿಯ ಶೃಂಗಾಳಿಯ ಮೇಲೆ (ಕಾಸೂರ. ೬೩೭). ೨. ಸ್ಕಂದಪುರಾಣದ ಪ್ರಕ್ಷಿಪ್ತವಾದ ಒಂದು ಭಾಗ; ತುಳುವದೇಶದ ಗ್ರಾಮಪದ್ಧತಿಯನ್ನು ವಿವರಿಸುವ

ಅಧ್ಯಾಯ : ವೇದವ್ಯಾಸಕೃತ ಸ್ಕಂದಪುರಾಣದಲ್ಲಿ ಈ ಸಹ್ಯಾದ್ರಿಖಂಡವಿರುವುದಿಲ್ಲ . . . ಸಹ್ಯಾದ್ರಿ ಎಂಬುದು ನವೀನಕಲ್ಪನಾಗ್ರಂಥವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ (ತುಳುನಾ. ೯೯). [ಸಂ.]

ಸಳಕ, ಸಳಗ (ನಾ). ಒಂದು ವಂಶದ ಹೆಸರು : ಸಳಕಗೊರವಂಗ ಕರಿಯ ನೆಲಂ (ಕಾಇ. ೪೯-೫-೪೩; 973). **ಸಳಗ** : ಸಳಗ ತಿರುಮಣ್ಣಾಗವುನ್ನಾರ ಮುದ್ದಯಂ ಕಾದಿ ಸ್ವರ್ಗಸ್ತನಾದ (ಎಕ. X, ಮುಳಬಾ. ೨೭೬-೪; ಸು. 900 ?). [?]

ಸಳಗ 'ಸಳಕ' ನೋ.

ಸಳಮಳನೆ (ಅ). 'ಸಳಮಳ' ಎಂಬ ಶಬ್ದದೊಡನೆ : ನೀಲವ್ವ ಇನ್ನೂ ಸಳಮಳನೆ ಕುದಿಯುತ್ತಿರುವ ಆ ಅನ್ನವನ್ನೆ ನೋಡುತ್ತಲಿದ್ದಳು (ಬಹಾ. ೧೫೨).

[ಸಳಮಳ್ಕ + - ಅನೆ₁]

ಸಳವ 'ಸಾಳುವ₁' ನೋ.

ಸಳಸಳನೆ (ಅ). ವೇಗವಾಗಿ; ತ್ವರೆಯಿಂದ : ಅಕಸ್ಮಾತ್ತಾಗಿ ಎಂದೂ ಇಲ್ಲದ ನಾಚುಗಯ ಹೂಗಳು ಸಳಸಳನೆ ನನ್ನ ಮೇಲೆ ಸುರಿದ ಹಾಗಾಯಿತು (ಪಚಿ. ೫); ಆ ರತ್ನವನ್ನು ಮತ್ತೆ ತನ್ನ ಹೆಡೆಯಲ್ಲಿ ಅಡಗಿಸಿಟ್ಟುಕೊಂಡು ಸಳಸಳನೆ ಹರಿದು ಅದೃಶ್ಯವಾಯಿತು (ಕವಕೋ. I, ೨೦೦). [ಸಳಸಳ್ಕ + - ಅನೆ₁]

ಸಳ್ಳಿ₁ 'ಚಳ್ಳಿ₁' ನೋ.

ಸಳ್ಳಿ₂ 'ಚಳ್ಳಿ₂' ನೋ.

ಸಳ್ಳಿ₃ (ನಾ). (ಕಬ್ಬಿಣದ) ಕಂಬಿ; ಸರಳು; ಸಲಾಕೆ : ತಲೆಯು ಹಿಂದೆ ಸೀಟಿನ ಸಳಿಗೆ ಜಜ್ಜಿತ್ತು (ಹೊಟ್ಟ. ೧೭೧); ಕಬ್ಬಿಣದ ಸಳಿಯಿಂದ ಅರೆದು, ಹೊಟ್ಟೆಯೊಳಿಗಿನ ಕರಿಯ ಕಾಳುಗಳನ್ನು ಬೇರೆ ಮಾಡಿದರು (ಕಪವ. ೪-೫೭) ; ಕಿಡಕಿಯ ಸಳಿಗಳೊಳಗಿಂದ ನೇಸರ ಕಿರಣಗಳು ಒಳನುಗ್ಗಿದ್ದವು (ಚಿಂದುಟ. ೮೦).

[← ಮರಾ. ಸಳಈ, ಸಳೀ./ ಸಂ. ಶಲಾಕಾ]

ಸಳಿಗದಿರ 'ಚಳಿಗದಿರ' ನೋ.

ಸಳಿಗೆ (ನಾ). (ಕರಾ) ದನದ ಕೊಟ್ಟಿಗೆಯ ಬಾಗಿಲಲ್ಲಿ ಆಚೆಯಾಚೆ ಸರಿಸಲು ಬರುವಂತಿರುವ ಗೂಟಗಳುಳ್ಳ ಕದ; ಅಡಂಬೆ : ಕಳ್ಳದನಕ್ಕೆ ಸಳಿಗೆ ತಾಡೆ? (ಗಾಡ).

[ದೇ. ॥ ತುಳು. ಸಲಕೆ, ತಲಕೆ]

ಸಳಿಯಸಟ್ಟುಗ (ನಾ). ಒಂದು ಬಗೆಯ ಔಷಧೀಮೂಲಿಕೆ : ಸಳಿಯಸಟ್ಟುಗದ ಬೇರ ನೀರಲ್ಲಿ ಅರದು ಕುಡಿಯಲು ವಿಷಹರ (ವಿಷಚಿ. ೧೧-೫). [?]

ಸಳಿಳ 'ಸಲಿಲ' ನೋ.

ಸಳೀಲ 'ಸಲೀಲ₁' ನೋ.

ಸಳುಕಿ 'ಚಳುಕ್ಕ' ನೋ.

ಸಳುಗ (ನಾ). ಬಲಿಷ್ಠವಾದ ಗಂಡಾನೆ; ಸಲಗ (?) : ಕೂಚಿರಸನು . . . ಸೂಚೆಗೊನ್ನು ಹೋಹಲ್ಲಿ ಹಡಪದ ಮಲಯ್ಯನು ಒದನಿಸಳ ಕುದುರೆ ಸನ್ನ ಸಳುಗವ ಹಿಡಿವಲ್ಲಿ ಕಣ್ಣಾದ ಸಟಿಯ ಮಗ ಕಟ್ಟಪ್ಪನು ಆ ದಳಕೆ ಎದಿರಾಗಿ ಹೊದ್ದು ಹೋಗಿ . . . ಕವಿಳಾಸಕೆ ಸನ್ನನು (ಎಕ, XII, ಪಾವ್ಗೂ. ೪೮-೩; ಸು. 1285?).

[IP ಇದು 'ಸಲಗ' ಎಂಬುದರ ಅಪಲಿಖಿತವಿರಬಹುದೆ?]

ಸಳ್ಳ 'ಸೆಳ್ಳೆಹ' ನೋ.

ಸಳ್ಳಕ (ನಾ). ೧. ಅಳ್ಳಕ; ಸಡಿಲು : ಆವಳ ತಲೆಯ ಉದ್ದವಾದ ಗುಂಗುರುಕೂದಲು . . . ಸಳ್ಳಕ ಬಿದ್ದು ಎರಡು ಕಿವಿಯನ್ನೂ ಅರೆಅರೆಯಾಗಿ ಮುಚ್ಚಿಕೊಂಡಿರಲಾಗಿ (ವೀಚಮಾ. ೨೨). ೨. ಸಲಿಗೆ ; ಸದರ : ಸಾಹುಕಾರ ಧರ್ಮದಾಸನು . . . ಸ್ವಕೀಯ ವಿಚಾರದಲ್ಲಿ ಅಷ್ಟು ಸಳ್ಳಕವನ್ನು ಕೊಟ್ಟಿರಲಿಲ್ಲ (ಅದೂಬು. ೭೪); ಅದೆಲ್ಲ ಸರಿ ಅಮ್ಮ, ಆದರೂ ನಾ ತೀರಾ ಸಳ್ಳಕ ಆಗಬಾರದು (ಸ್ಕಾಕ. ೯-೪೧).

[ದೇ. ॥ ತಮಿ. ಚಲುಕ್ಕಮ್; ತೆಲು. ಸಲಿಕ = ಕಂಪನ]

ಸಳ್ಳಿ (ನಾ). ೧. (ಸೌತೆಕಾಯಿಯಿಂದ ತಯಾರಿಸುವ) ಒಂದು ಬಗೆಯ ಉಪ್ಪಿನಕಾಯಿ : ಸವುತೆಯ ಸಳ್ಳಿ ಬಾಳೆಯ ಹಣ್ಣಿನ ಸೀಕರಣೆಯನು ಪುಲ್ಲಾಕ್ಷಿಯರಿಕ್ಕಿದರು (ಜ್ಞಾನಚ. ೪೯-೧೧೪). ೨. ಒಂದು ಬಗೆಯ ಮೇಲೋಗರ : 'ಮೇಲೋಗರ' ಗಳಲ್ಲಿನ ಕೆಲವು ಹೆಸರುಗಳು . . . 'ಮುದ್ದೆಹುಳಿ', 'ಸಳ್ಳಿ', 'ಪಳದ್ಯ', 'ಕೊಚ್ಚಸಳ್ಳಿ' ಇತ್ಯಾದಿ (ಕಸಂಸ್ಕೃ. ೨೯೫). [← ತುಳು. ತಲ್ಲಿ, ಸಳ್ಳಿ , ತಳ್ಳಿ]

ಸಳ್ಳುಗುರು 'ಸೆಳ್ಳುಗುರ್' ನೋ.

ಸಳ್ಳೆ ' ಸರ್ಲೆ' ನೋ.

ಸಱ್, ಸರ್₁ (ನಾ). ವೇಗವನ್ನು ಸೂಚಿಸುವ ಒಂದು ಅನುಕರಣಶಬ್ದ : ಸಱ್ಱೆಂಬ ಫರಿಲಂಬ . . . ಭೋರೆಂಬ ಕೂರಸಿಗಳುರವಣೆಯ ದನಿಯಡಸುತಂ ಪುಟ್ಟೆ (ಇಪಪ. ದೇ. ೪೧-೨೬). **ಸರ್₁** : ಬೆಕ್ಕು ಸರ್ ಎಂದು ಕಿಟಕಿಯ ಕಡೆಗೆ ಓಡಿತು (ಡೂಢ).

ಸಱಿಕನೆ, ಸರಕ್ಕನೆ, ಸಱಿಕ್ಕನೆ (ಅ). ತ್ವರಿತವಾಗಿ; ವೇಗವಾಗಿ : ಸಱಿಕನೆ ಸೀತಡೆ ಪಱರಂ ಜಱೆದಡೆ ಕೆಮ್ಮಿದಡೆ . . . ಕುಱುಪಿಂಗೆ ಪಾರ್ಪರೆಸವರ್ ತಮ್ಮೊಳ್ (ಸೂಪ್ರಸು. ೪-೧೨೪); ಇರದೊಮ್ಮೆ ನಡೆಯುತ್ತ ಸಱಿಕನೇ ಸೀತಿಹರೆ ಅಱಿದರಡಿಯಿಡದೆ ನಿಲ್ಲುವರು (ಸರ್ವಜ್ಞ. ೧೫೯೮). **ಸರಕ್ಕನೆ** : ಗೌಡರು ಸರಕ್ಕನೆ ಹಿಂತಿರುಗಿ ಹೋಗಿ ಸ್ನಾನಮಾಡಿದರು (ಕಾಸೂರ. ೩೭೬); ಸರಕ್ಕನೆ ಅದನ್ನು ಅಳಿಸಿದರು (ಮೂಯದಾ. ೬೬). **ಸಱಿಕ್ಕನೆ** : ತುಱುಕರು ಬಂದರೆ ಸಱಿಕ್ಕನೆ ಏಳಬೇಕು (ಪುರಂದ. ೧-೧೭೯-೨).

[ಸಱಿಕ್ + - ಅನೆ₁]

ಸಱಿಕ್ಕನೆ 'ಸಱಿಕನೆ' ನೋ.

ಸಱಿದು, ಸರಡೆ (ನಾ). ಸಾಲು ; ಪಂಕ್ತಿ : 'ಕಲ್ಪಱಿದು' ಪರಾ. **ಸರಡೆ** : ಆ ಪುರದ ನೈಋತ್ಯದ ಸರಡೆಯ ಕೋಣ ಬಯಲ ಗದ್ದೆ ಕತ್ಸವಿಯ ಫಳೆಯೊಳು ಮತ್ತರು ಪನ್ನೆರಡುಮಂ (ಎಕ. VII , ೨೫ಶಾ. ೧೨೫-೨೮; 1019); ಚಂಚರಿವಳ್ಳದ ತಿ(ತೀ)ರಮೆ ಸನ್ನಾ ಬೆಳ್ಗಲ್ಲ ಸರಡೆ (ಇಆ. VIII , ೨೧೩-೩೭; 10ನೆಯ ಶತ). [?]

ಸಱನಾತಿ (ನಾ). ವಂದನೆ; ನಮಸ್ಕಾರ; ಶರಣು : ಮಿಱುಪ ಭಕ್ತರ ಕಂಡೊಡವರಡಿಗೆ ಸಂತಸದೆ ಸಱನಾತಿ ಸಱನಾತಿ ಸಱನಾತಿ ಎಂದು ಸಲೆ ತಱಿಸಿಂದು ವಂದಿಸುತ್ತ . . . ಕಱೆಗೊರಲನಂತ್ಯಜನ ವೇಷದಿಂ ಬಂದನು (ಆರಾಚ. ೧-೭-೧೧).

[IP ಇದು 'ಶರಣಾರ್ಥಿ' ಎಂಬುದರ ಅಪಲಿಖಿತ]

ಸಱಸಱ, ಸರಸರ (ನಾ). (ವೇಗವನ್ನು ಸೂಚಿಸುವ) ಒಂದು ಅನುಕರಣಶಬ್ದ : 'ಸಱಸಱನೆ' ಪರಾ. **ಸರಸರ** : 'ಸರಸರನೆ' ಪರಾ.

ಸಱಸಱನೆ, ಸರಸರನೆ (ಅ). ವೇಗವಾಗಿ; ಶೀಘ್ರವಾಗಿ : ಸಱಸಱನೆ ನಡದು ಬಂದಂ (ವಿಕಾರ. ದೇ. ೧೧೭-೨೫); ನರರು ತವತವಗಲ್ಲಿಗಲ್ಲಿಗೆ ಸಱಸಱನೆ ತತ್ಪಥವನಿತ್ತೋ ಸರಿಸಲರಿದರಿದೆನುತ ಲೋಕಂ ಹೊಗಳುತಿರಲು (ಬಸವ. ೮-೮). **ಸರಸರನೆ** : ಕೆಂಪಿ ಸರಸರನೆ ಹೊರಟೇಹೋದಳು (ಕಾಡಿಕೂ. ೧೪೩). [ಸಱಸಱ + - ಅನೆ₁]

ಸಱಸಱಿಕೆ (ನಾ). ತ್ವರೆ; ಆತುರ : ವರುಷಾಱು ತಿಂಗಳೊಳಗೆ ಮದುವಗ ಸಲ್ಲ ಹರೆಯದ ಕೋಮಲಾಂಗಿಯರು ಸಱಸಱಿಕೆಯೊಳೆಯ್ದುತಿದ್ದರು ಜಾತಿಸಿಂಗರಗೂಡಿ (ಭರಚ. ೪೩-೩೦). [ಸಱಸಱ + -ಇಕೆ]

ಸಱಸಱಿಸು, ಸರಸರಿಸು (ಕ್ರಿ). ತ್ವರೆಯಿಂದ ಬರು; ಲಗುಬಗೆಯಿಂದ ಬರು : ದಿಙ್ಮೂಢರಾಗಿ ನಿಲಲುಂ ಸಱಸಱಿಸಿ ಪೋಗಲುಮಱಿಯದೆ ಕುಱುಕುಱು ಮೆಟ್ಟುತ್ತುರ್ವಿನಂ (ಅರ್ಜುನ. ೭-೪೪ ವ); ಸಱಸಱಿಸಿ ಬಳಿಕಾ ಮುನೀಂದ್ರರು ಸರಸಿಜಾಕ್ಷನ ಸಂದರುಶನಕೆ ಬರಲು (ತೂರಾ. ೧-೧೪-೧೯). **ಸರಸರಿಸು** : ಆ ಸಭೆಗೆ ಸರಸರಿಸಿ ಜ್ಞಾನನಿಧಿ ನಾರದಮಹಾಮೌನಿಯೈತಂದನು (ವಂಕಾರಾ. ೨-೨೧-೩೬). [ಸಱಸಱ + - ಇಸು]

ಸಱಿ₁, ಜರ್ರಿ₃, ಜಱಿ₂, ಸರ್ರಿ₃ (ನಾ). ೧. ಬೆಟ್ಟದ ಇಳಿಜಾರು ಪ್ರದೇಶ; ಕೊಳ್ಳ; ಪ್ರಪಾತ : ''ಅಱಿಯಟ್ಟು ಕಮ್ಮರಿಗಳೊಳ್ ಸಱಿ'' (ಶಬ್ದಮಂ. ೧೧೪); ತಳತಳಿಸಿ ತೊಳಗಿ ಬೆಳಗುವ ಪಳಿಕಿನ ಸಱಿಯೊಂದು ಮಱಿಯೊರ್ದೆರಲೆ ಮಹೋಜ್ವಳತುಹಿನಕಿರಣ ಮಂಡಲದೊಳಗಣ ಹರಿಣಂಬೊಲೊಪ್ಪಿ ತೋಱಿತ್ತಾಗಳ್ (ಕಾವ್ಯಸಾ. ೧೦೫೦ ಪೂರ್ವಕ); ಪರಿಮುರಿದಟ್ಟು ಕಟ್ಟು ಸಱಿಯಂ ಹೊದಱಂ ಪುಗಿಸು . . . ಎನುತಿರ್ವ ಬೇಡರಬ್ಬರಕಿರದೊಂದನೊಂದೆಡಹುತಾಕುಳಮಾಯ್ತು ವ್ಯಗೀವ್ಯಗವ್ರಜಂ (ಮಹಾನೇ. ೨-೧೪). ೨. (ಕಮ್ಮರಿಯ ನೆತ್ತಿಯಲ್ಲಿರುವ) ಕೋಡುಗಲ್ಲು; (ಕೊಳ್ಳದ ತುದಿಯಲ್ಲಿರುವ) ಕೋಡುಗಲ್ಲು : ಸಱಿಯನೇಱಿ ನೆಲಕ್ಕೆ ಬೀಳ್ವ . . . ಸುಣ್ಣಮಂ ಬಱೆದ ತಿಂಬಿಗ್ಗನಂ ಪೋಲ್ಕುಂ (ಧರ್ಮಾಮೃ. ೧೩-೧೩ಎ); ಹಿರಿಯ

ಸಜಿಯಲ್ಲಿ ನಿಂದೂರ್ಧ್ವಬಾಹುವಾಗಿಯೆ ಬಾಯ ತೆಱದು ವಾಯುವೆ ಭಕ್ಷ್ಯವಾದಂದು ತಲೆಯಿಟ್ಟು ಬಿಜುವಿಸಿಲನಾಂತಿರಲು ಕಂಡು (ಸಿದ್ಧರಾ. ೨-೬೭). ೩. ಬಂಡೆ; ಶಿಲೆ ; ದೊಡ್ಡ ಹಾಸುಗಲ್ಲು : ವಿಕಸಿತಸರಸಿಜಮಂ ಸಜಿಯೊಳಱಸುವಂತಾಗಿರ್ಕುಂ (ಆದಿಪು. ೯-೧೦೩); ವಾಯುವ್ಯದೊಳ್ ಪಾಪಿಯ ಸಜಿಯುಂ ಬಡಗಲು ವೇಲಿವಿದಿರುಂ . . . ಸೀಮೆ (ಸೌಇಇ. IX - i, ೧೨೧-೪೯; 1057); ಕೆಟ್ಟಗಳಲಿ ಧುಮ್ಮಿಕ್ಕಿ ಮುಳುಗುತ ಸಜಿಗಳಂ ತಾವಡರುತಂ . . . ಅಖಿಳಚ್ಛಿನರು ಹೊರಳುತಿರಲು (ಬಸವು. ೫೨-೧೫). ೪. ಬಾಂದು ಕಲ್ಲು; ಗಡಿಕಲ್ಲು : ದಿನರಾತ್ರಿಗಳನಳೆದು ಹೂಲಮೇರೆಯಲಿ ನೆಡಲೆಂದು ವರುಣ ನಿಲಿಸಿದ ಹವಳದೊಂದು ಸಜಿಯೊ . . . ಎನಿಸಿ ಕಡೆವಗಲ ರವಿ ಕಣ್ಣ ಸೊಗಸಿರ್ದನು (ಪಚಕಾ. ೩-೭೩). ೫. (ಆಲಂ) ಕಾಠಿಣ್ಯ; ಕರ್ಕಶತೆ : 'ಸಜಿಮೊಲೆ' ಪರಾ. ೬. ಹಿರಿದು; ದೊಡ್ಡದು : 'ಸಜಿಗಲ್' ಪರಾ. ೭. ಶಕ್ತಿ; ಕಸುವು : 'ಸಜಿದಲೆ' ಪರಾ. ಜರ್ತಿ$_3$: ೧. "ದರಾ, ದರೀ- ಈ ೨ ಜರಿ" (ಕಾಶಕ್ಯ. ೧೪೧). ಜಜ್ಜಿ$_2$: ೧. ಕುರುಡನಿಗೆ ದಾರಿಯ ತೋಱದಾತಗೆ ಮುನಿದು ಜಜ್ಜಿಗೆ ನೂಕಿ ದಡವನು ಏನು ಮಾಡುವನು (ಕನಕ. ೧೪೧-೩); ಸೈಗೆಡದುದೂ ಭದ್ರೇಭ ಜಜ್ಜಿಯೊಳಗೆನುತ ಕೂಗಿದರು (ಉತ್ತರಾ. ೨೨-೩೯). ಸರ್ಜಿ$_3$: ೧. ಗುಲ್ಮ ಸರಿ ಡೊಣೆ (ರುಕ್ಮಾಂಗ. ೯-೩೫).

[ದೇ. ॥ ತಮಿ. ಚರಿ, ಚರಿವು; ಮಲ. ಚರಿವು; ತುಳು. ಜರಿ; ತೆಲು. ಚಜ್ಜಿ, ಚಜ್ಜಿಯ]

ಸಜ್ಜಿ$_2$, ಚರ್ಜಿ$_2$, ಸರ್ಜಿ$_4$ (ನಾ). ೧. ಸೋಕಿದ ಸ್ಥಳಕ್ಕೆ ಮೆತ್ತಿಕೊಳ್ಳುವ ಗುಣಧರ್ಮವಿರುವ ಪದಾರ್ಥ, — ಜಿಗುಟಾದ ವಸ್ತು; ಅಂಟು : "ಸಜಿ ಪರಿಸನ ಗಳೊಳಗಂಟು" (ಶಬ್ದಮಂ. ೯೧); ಚಿನ್ನ ಲೋಹಾದಿಗಳು ಕರಗಿ ಒಂದುಗೂಡುವುದಲ್ಲದ ಮಣ್ಣು ಬೆಂದು ಹಿಂಗಿವೋಡಾದುದು ಸಜಿಯಿಂದ ಒಂದುಗೂಡುವುದ (ಸಕವ. I, ೪. ೪೩೧-೨೬); ಮೊಲೆ ಗಲ್ಲ ತೋಳ್ ಕೊರಲಲ್ಲಿ ತೀವಿ ಸಜಿಯಿಂ ಬರೆದ ಪಂಸೆ ಲತೆಗಳು ಪತ್ರವಲ್ಲಿ ಮಕರಿಕೆಯನಿಕ್ಕುಂ (ಮಂಗರಾ. ೧೦೦-೨೫). ೨. ಮುದ್ದೆ; ಮಿಡ್ಡೆ : ಹೊತ್ತುವುದು ಸಜಿಯಹುದು . . . ವೂಣಗಿಹುದು ದೋಷವಶನಕ್ಕೆಂಟು ತೆಱನಪ್ಪುದು (ಸೂಪಶಾ. ೩-೧). ೩. ದೋಸೆ, ಕಡುಬು ಮುಂತಾದುವು ಮೆದುವಾಗಲು ಅಕ್ಕಿಯೊಡನೆ ಸೇರಿಸುವ ಉದ್ದು, ಮೆಂತ್ಯ ಮುಂತಾದುವು; ಹುದುಗು : ಉದ್ದಿನ ಸಜಿಯನಿಕ್ಕಿ ತುಪ್ಪವಂ ಮತ್ತದಕೆ ಬಿಟ್ಟು ಕೆಂಪಾಗುವಂದದಿ ಹಸನ ಮಾಡಿ ಪಾಕವ ಮಾಳ್ಪುದು (ಸೂಪಶಾ. ೪-೪೯). ೪. ರಸ; ದ್ರವ : ಸಜಿಯನಿಟ್ಟಳವಜಿಕೆ ರೇಖೆಯ ನಿಜಿಗೆ ಬಣ್ಣದ ಜಾತಿ ಭಾವದ ನೆಱವಣಗೆಯಿಂ ಬಲಿದ ನಿಪುಣತೆ ಕಣ್ಣ ಸೊಗಯಿಸಲು . . . ಮಣಿಭಿತ್ತಿಗಳೊಳದು ಪ್ರಜ್ವಳಿಸೆ ನೋಡಿದನು (ಕಮುರಾ. ೩-೫೧). ೫. ಅಂಬಲಿ; ಗಂಜಿ : ಎತ್ತಿದ ಪತಾಕೆಯೊಳಂ ಸುತ್ತಿದ ಬೇವಿನ ದಂಡೆಯೊಳಂ ಸೆಱಗೆಯ್ದು ಸಜಿ[ಪಾಠಾಂ. ಸಜಿಗೆ]ಯೊಳಂ . . . ಕೈಗೈದು (ಅನಂಪು. ೧೧-೮೨ ವ). ೬. (ಆಲಂ) ಬೆಸುಗೆ; ಸಂಬಂಧ : ಸಜಿ ಬಿಡದಪ್ಪು ರಸವನೊಸರ್ವಿಂದುಟ ಕುಜುಪನಿಡುವ ಕೂರುಗುರಳಿದಲಸಿಕೆ ನೆಱ ಸೊಗಯಿಸಿದುವು ನವಸುರತಕ್ರೀಡೆಯೊಳಾ ದಂಪತಿಗೆ (ಜಯಕಾ. ೮-೨೫). ಚರ್ಜಿ$_2$: ೧. ಹತ್ತಿಯ ಬಟ್ಟೆಗೆ ಹುಣಿಸಬೀಜದ ಚರಿಯನ್ನು ಸಮತಲವಾಗಿ ಮೆತ್ತಿ . . . ಕಡಿತಗಳನ್ನು ಸಿದ್ಧಪಡಿಸುತ್ತಿದ್ದರು (ಕನ್ನಸಂ. ೪೦); ಇದಕ್ಕೆ ಹುಣಿಸೆಬೀಜದ ಚರಿಯನ್ನು ಲೇಪಿಸಿ ಬಳಿಕ ಇದ್ದಲಿನ ಪುಡಿ ಬಳಿದು ಕಪ್ಪುಬಣ್ಣಕ್ಕೆ ತಿರುಗಿಸಿರುತ್ತಾರೆ (ಭಾರಪ. ೧೩ ಪೀಠಿಕೆ). ಸರ್ಜಿ$_4$: ೫. ನಮ್ಮ ದೇಶದವರು ಜೋಳ ಕುದಿಸಿ ಸರಿ ಮಾಡಿ (ಮುಂಬಯಿ. ೧-೩೪).

[ದೇ. ॥ ತೆಲು. ಚರಿ, ಚರಿಯ, ಸರಿ]

ಸಜಿಕಲ್ 'ಸಜಿಗಲ್' ನೋ.

ಸಜಿಕು (ನಾ). ಸಂಪರ್ಕ; ಸಂಬಂಧ : ನಾನು ನೀನೆಂಬುಭಯದ ಸಜಿಕಿನಿಂ ಮನವೆಂಬುದು (ಮನೋವಿ. ೪-೩). [< ಸಜ್ಜಿ$_2$]

ಸಜಿಗ (ನಾ). ಬಲಶಾಲಿ; ಬಲಿಷ್ಠ : ಸಜಿಗರೆದ್ದುದು ಮೂಜುಕೋಟಯ ಸುರರು (ಕುಮಾಅ. ೧೨-೩೯); ಮುಜಿದು ಬಾಗಿಲುಗಳನು ಸಂಧಿಸಿ ಸಜಿಗ ರಕ್ಕಸ ಕಿಂಕರರು ನೆಲನಜಿಚೆ ಹೂಣಿಸಿ ಹೊತ್ತರು . . . ರಕ್ಕಸನ (ತೊರರಾ. ೫-೮-೪೦).

[ಸಜ್ಜಿ$_1$ + -ಗ$_2$]

ಸಜಿಗಲ್, ಸಜಿಕಲ್ (ನಾ). (ಆಲಂ) ದೊಡ್ಡ ಬಂಡೆ ; ಹೆಬ್ಬಂಡೆ : ಸಜಿಗಲ್ಲಂ ದಬ್ಬುಕದಿಂದಿಜಿದೊಡೆ ಕಿಡಿ ಪಾಜುವಂತೆ (ಅರ್ಧನೇ. ೩-೧೮). ಸಜಿಕಲ್ : ಬೆಟ್ಟಗಳಾಗಿ ಸಜಿಕಲ್ಗಳಾಗಿ ಗುಂಡುಗಳಾಗಿ . . .ಮಾಯೆಯೊಳುಜುಬಿ ರಕ್ಕಸರ್ ಕೊಲುತಿರ್ದರು (ಚಿಬಪು. ೩೨-೩೬). [ಸಜ್ಜಿ$_1$ + ಕಲ್$_3$]

ಸಜಿಗುಂಡು (ನಾ). = ಸಜಿಗಲ್ : "ಗಿರಿಯ ಶಿರದಿಂದುರುಳ್ವ ಸಜಿಗುಂಡುಗಳ್ ಗಂಡಶೈಲಂಗಳೆಂದನಿಕ್ಕುಂ"(ಮಂಗರಾ. ೨೯-೧). [ಸಜ್ಜಿ$_1$ + ಗುಂಡು]

ಸಜಿಗೊಳ್$_1$ (ಕ್ರಿ). (ಆಲಂ) ಬೊಜ್ಜುಬರು ; ಡೊಳ್ಳಾಗು : ಬಿಟ್ಟು ನಿಜಿಗೊಂಡ ಕುಚಂ ಸಜಿಗೊಂಡ ಪೆರ್ಬಸಿಱ್ ಬಿಟ್ಟಪ್ಪುಗೆಟ್ಟ ತೋಳ್ ತೊಡೆ (ಸೂತ್ರಿಸು. ೮-೩೮೪).

[ಸಜ್ಜಿ$_1$ + ಕೊಳ್$_1$]

ಸಜಿಗೊಳ್$_2$ (ಕ್ರಿ). ಅಂಟಿಕೊಳ್ಳು ; ಹತ್ತಿಕೊಳ್ಳು; ತಗುಲಿಕೊಳ್ಳು: "ಜಿಗಿಲ್ತುದೆಂದು ಸಜಿಗೊಂಡುದು" (ಕಶಾಸಾ. ೫೪-೧೮೮); "ಜಿಗಿಲ್ತುದು ಸಜಿಗೊಂಡುದು" (ಕವಿಹಂ. ೭೬). [ಸಜ್ಜಿ$_2$ + ಕೊಳ್$_1$]

ಸಜಿದಲೆ (ನಾ). (ಆಲಂ) ಬಲಿಷ್ಠವಾದ ತಲೆ : ಅಱಗುಲಿಯಂ ಮುನ್ನೆಮ್ಮ ಗಜಿಗಳಂ ತಜಿದಿಂದ್ರನನಾ ಸಗ್ಗಮನ್ನೀ ಸಜಿದಲೆಯಿಂ ಪೊತ್ತಂಬುಜಜನ್ಮಾಂಡದ ಪೂಱಗಡೆಗಾಗಿ ನುಜಿಯಪ್ಪದಂದದಿ ಹಾಕದೊಡನಗೇತಱ ದೊಡ್ಡಿತ್ತು (ಜಯಕಾ. ೧-೩೩). [ಸಜ್ಜಿ$_1$ + ತಲೆ$_1$]

ಸಜಿದೊಡಕು (ನಾ). ಕಠಿಣವಾದ ಸಮಸ್ಯೆ : ಮಾತಿನಂತುಟಲ್ಲ ಶಿವಾಚಾರದ ಸಜಿ [ಪಾಠಾಂ. ಪರಿ, ಶರಿ, ಸಿರಿ] ದೊಡಕು ಕಾಣರಣ್ಣ (ಅವಚಂ. ೧೧೦-೫೦೦); ಎನ್ನ ಅಜಗಣ್ಣನಿಕ್ಕಿದ ಸಜಿದೊಡಕಿಂಗೆ ಬೆಱಗಾದೆನು (ಶೂನ್ಯಸಂ. ೨೮-೨೧).

[ಸಜ್ಜಿ$_1$ + ತೊಡಕು$_3$ (< ತೊಡಂಕ್ಕು$_3$)]

ಸಜಿಮಿಂಡಿ (ನಾ). ೧. ಪ್ರಾಯಕ್ಕೆ ಬರಲಿರುವ ಹೆಣ್ಣು; ಯೌವನಾವಸ್ಥೆಗೆ ಕಾಲಿಡುತ್ತಿರುವ ಹೆಣ್ಣು: "ಸಜಿಮಿಂಡಿಯೆಂದು ಪ್ರಥಮಋತುವಾಗದಾಕೆ" (ಕಶಾಸಾ. ೬೨-೩೭೧). ೨. ಏರುಯೌವನವನ್ನು ಹೊಂದಿದವಳು; ನವಯುವತಿ: "ಸಜಿಮಿಂಡಿಯನಲ್ ಪ್ರಾಯದಿಂದ ಸೊರ್ಕುವಬಲೆಯ " (ಚತುನಿ. ೧೨೮); ತಿಜಿದರ್ . . . ಸಜಿಮಿಂಡಿಯರ್ಮನಂಗೊಳಿಪ ಪುಷ್ಪಂಗಳಂ (ಉದ್ಭಟ. ೯-೫೬); ಆವಗಮೋಲಗಿಪ್ಪ ಸಜಿಮಿಂಡಿಯರೊಪ್ಪಿದರತ್ತ ನೋಟ್ಪುಡಂ (ಕಬ್ಬಿಗಾ. ೧೩೩) ; ಚಂಡವೇಗದಿನೊರ್ವ ಪಾಂಥನೆಯ್ತರುತೆ ಸಜಿವಿಂEಮಿಂ3ಡಿಯಾಗಸವ ಗೋಪಿಯನಿಕ್ಕುವಾಟಯೊಳ್ ಕಂಡು . . . ಅಲ್ಲಿಗಯ್ದಿ ನೆರದು ಗಂಡಗಾಡಿಯನಾಚರಿಸಿ ಪೋಗೆ (ಪದ್ಮರಾ. ೮-೧೯). 'ತುಜುಮಿಂಡಿ'ಪರಾ. [ಸಜ್ಜಿ$_1$ + ಮಿಂಡಿ$_1$]

ಸಜಿಮಿಂಡಿವೆಣ್ (ನಾ). = ಸಜಿಮಿಂಡಿ ೨ : ಸಜಿಮಿಂಡಿವೆಣ್ಗಳ ಕೊರಲ ಹಾರದ ಮುತ್ತು ಪಜಿದುದಿರುವ ಮಣಿನಿಚಯ . . . ತುಜುಗಿರ್ದುದುಯ್ಯಲೆಯಡಿಯ (ಮೋಪಶ. ೧೪-೯೦); ಇವನ ನಿಜಿಗುರುಳಂ ಪಜೆನೊಸಲಂ . . . ಕಂಡು ಮರುಳ್ಗೊಂಡು ಮೇರ ಮಿಾಜೆ ಮೆಯ್ಯಜೆದೆಕ್ಕಟೆಯೊಳ್ ಸೂರ್ಕೆ ಮೇಲಿಕ್ಕುವ ಸಜಿಮಿಂಡಿವೆಣ್ಗಳಂ ಸದೆದು (ಚಕಾಂ. ೬೩-೮). [ಸಜಿಮಿಂಡಿ + ಪೆಣ್]

ಸಜಿಮೊಲೆ (ನಾ). "ಬಿಗಿದ ಮೊಲೆ; ಕಠಿಣಕುಚ" (ಪ್ರಭಣ್ಣ) : ತೆಳ್ಳಸಿಱುಗೆ ಪಾಟ್ಟಸಿಱ್ ಸಜಿಮೊಲೆಯಾಗೆ ಬಿರ್ದ ಮೊಲೆ ಪೂತನಿ ಗೋಪಿವೊಲಾಗೆ ಬೇಗದಿಂ (ಅರ್ಧನೇ. ೭-೭೦). [ಸಜ್ಜಿ$_1$ + ಮೊಲೆ$_1$]

ಸಜಿಯೂದು (ನಾ). ಸಾಂಬ್ರಾಣಿ, ಹಾಲುಮಡ್ಡಿ, ಲೋಬಾನ ಇತ್ಯಾದಿ (ಅಂಟನ್ನು ಹೊಂದಿರುವ)ಸುಗಂಧಪದಾರ್ಥ : ಮದನಮಹೀರಮಣನ ನಯನೋತ್ಸವಕ್ಕೆ ಕಟ್ಟಿದಿರೊಳ್ ಸಜಿಯೂದಿನ ಬಿಜಿಸುಗಟ್ಟ ರಚಿಸಿದ ಕುರುಚೆಂಬಂತಿರಲ್ . . . ಸೊಂಪುಗಜೆವ ಚಂಪಕಪ್ರತಾನಮಂ (ಶಬಶಂ. ೨-೪೨ ವ).

[ಸಜ್ಜಿ$_2$ + ಊದು$_3$]

ಸಜಿಹೃದಯ (ನಾ). (ಕಲ್ಲಿನಂತೆ) ಕಠಿಣವಾದ ಮನಸ್ಸನ್ನುಳ್ಳವನು ; ಕಲ್ಲುಹೃದಯದವನು : ಸಜಿಹೃದಯ ನೀ ನಿನ್ನೊಡನೆ ಸರಿಗೂಜಲಲಾಜೆನು ಭೀಮ ಪಾರ್ಥರನೊಜಲಿಸುವೆನೀ ಬಾಣದಲಿ (ಕುಮಾಕ. ೯-೨೯); ಸಜಿಹೃದಯರೀಗ ಬಳಲುತ್ತಲ್ಕೆದರೆ ಮಹಾಪುರುಷನಿಂ ಕರುಣದಿಂ ನೋಡಿದಡೆ ಬಹುಜನ್ಮಪಾಪಗಳು ಪಿಂಗಿ ಮುಕ್ತಿ ದೊರಕೊಂಬುದು (ಪಚಲಿ. ೧೦-೩೩). [ಸಜ್ಜಿ$_1$ + ಹೃದಯ]

ಸಜುಸ್ಯೆತನೆ (ಅ). ೧. ನೇರವಾಗಿ; ನೆಟ್ಟಗೆ : ಮುಗಿಲಂ ಸಜುಸ್ಯೆತ[ಪಾಠಾಂ. ಕ]ನೆ

ಬೆಳೆವೊಡುದ್ದಮೆಯ್ದುತೆಂಬಂತೆಯುಂ. . . ಮಾಣಿಕದಿಂ ಸಮೆದ ಮರವಂತೆ ಸೊಗಯಿಸಿದುದು (ಲೀಲಾವ. ೮-೪೧ ವ); ಏಮೆ ಮಱೆಯಾಗೆ ನೋಡುವೆಡೆಯೊಳ್ ಸಱುಸ್ಯೆತ[ಪಾಠಾಂ. ಸಱುಸ್ಯೆಕ, ಸಱುಸುಯ್ಯ]ನೆ ನಿನ್ನ ಮೆಯ್ಯವಿರ್ ನಿರ್ಮಿರ್ದೆಡೆಯಾಡೆ (ಲೀಲಾವ. ೧೪-೬೦). ೨. ಚೆನ್ನಾಗಿ : ಕೋಕನದವದನೆ ಸಲೆ ಸಱುಸ್ಯೆಕEತತೆನೆಯೊರ್ಮಗ್ಗುಲಾಗಿರಲ್ (ದಶಕು. ೧೧-೧೮); ಮಱೆಮಾಡಿ ಮೆಯ್ಯ ಬಂದೀ ನಿನ್ನ ನಿಜರೂಪ ಸಱುಸ್ಯೆ [ಪಾಠಾಂ. ಱುಸೇ, ರಸ್ಯೆ]ಕEತತೆನೆ ನೋಡಿ ಪೋಗಿ ಎಱೆದರವಳ ಕಿವಿಗಿನಿನುಡಿ ರಸವನು (ವರ್ಧಚಿ. ೫-೮). [ಸಱ್ಯು + ಸ್ಯೆತನೆ (< ಸಯ್ತನೆ)]

ಸಱುಸ್ಯೆತು (ಅ). ೧. ಸುಮ್ಮನೆ : 'ಸಱುಸ್ಯೆತುವೋಗು' ಪರಾ. ೨. ವಿಶೇಷವಾಗಿ : ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಮುಳಿದುದು ಸಱುಸ್ಯೆತವಚಱನೆ ಮಾಡಿ ಸಱುಸ್ಯೆತುವೋಕುಮೇಂ ಬಗೆಯ ಬಟ್ಟೆಯಂ ಮುಟ್ಟುಗುಮೇ (ಆದಿಪು. ೧-೧೮). [ಸಱ್ಯು + ಸ್ಯೆತ್ತು (< ಸಯ್ತ್ತು)]

ಸಱುಸ್ಯೆತುವೋಗು (ಕ್ರಿ). ಸುಮ್ಮನೆ ಹೋಗು; ವ್ಯರ್ಥವಾಗು : ಕಿವಿಯಿಂ ಬಗೆವುಗುವೊಡೆ ಕೊಂಕುವೆತ್ತ ಪೊಸನುಡಿಯೆ ಪುಗುಗುಮುಳಿದುದು ಸಱುಸ್ಯೆತವಚಱನೆ ಮಾಡಿ ಸಱುಸ್ಯೆತುವೋಕುಮೇಂ ಬಗೆಯ ಬಟ್ಟೆಯಂ ಮುಟ್ಟುಗುಮೇ (ಆದಿಪು. ೧-೧೮).
[ಸಱುಸ್ಯೆತು + ಪೋಗು$_1$ (< ಪೋ$_1$)]

ಸಱ್ಣನೆ, ಸರ್ರನೆ (ಅ). ತಟ್ಟನೆ; ವೇಗವಾಗಿ : ಬಂಡಿಯಂ ಬಲವಂದು ಕಾಲ್ಗಱಗಿ ಮೇಲ್ಗುಡಿಗಟ್ಟಿ ಹೆಱಮಟ್ಟಿ ಸಱ್ಣನೆ ತಿರುಗಲು (ನಂಬರ. ೨-೩೦); ಸಱ್ಣನೆ ಕೀಳ್ತಲಗಿಂ ಕಡಂಗಿ ಕಾಯ್ದುಱಿದನೊರ್ವ ಲುಬ್ಧಕನಗುರ್ವಿನ ಪರ್ಬುಲಿಯಂ ವನಾಂತದೊಳ್ (ಗಿರಿಕ. ೧-೯೮). **ಸರ್ರನೆ :** ಬೇಗ ತಿರ್ರನೆ ತಿರುಗಿ ಸರ್ರನೆ ಲಾಗಹಾಕಿದ ದೊಂಬನು (ಕಪಪು. ೩೮-೬); ಅಲ್ಲಿ ಬಹಳ ಹೊತ್ತು ನಿಲ್ಲಲಿಲ್ಲ. ಸರ್ರನೆ ಹೊರಗೆ ಬಂದಳು (ಹಳ್ಳಿಪಾ. ೧೧೫).

ಸಱ್ಣಸಱ್ಣನೆ (ದ್ವಿರುಕ್ತಿ) : ಕರ್ಕಶಕ್ಷಾರವಾರಿಯಂ ತಂದು ಸಱ್ಣಸಱ್ಣನೆ ಪೂಸುವುದುಂ (ಸುಕುಮಾ. ೧೧-೪೭ ವ). [ಸಱ್ + - ಅನೆ$_1$]

ಸಱ್ಣನೆಸರಿ (ಕ್ರಿ). ತಟ್ಟನೆ ಚಲಿಸು; ವೇಗವಾಗಿ ಚಾಲನೆಹೊಂದು : ತಿಱ್ಣನೆ ತಿರುಗುವ ಸುಟ್ಟುರೆಗಾಳಿಯಂದದಿಂ ಸಱ್ಣನೆ ಸರಿದುದು ಹಿಂದಕೆ ರಥಂ (ಚೈಮಿಭಾ. ೧೩-೩೫). [ಸಱ್ಣನೆ + ಸರಿ$_1$]

ಸಱ್ಣನೆಸೀಳ್, ಸಱ್ಣನೆಸೀಳು (ಕ್ರಿ). ಥಟ್ಟನೆ ಸಿಗಿದುಹಾಕು : ನಡುಬೆನ್ನಂ ಸಱ್ಣನೆಸೀಳೆಯುಂ ತೊಡೆಯನುಡಿಯೆಯುಂ (ಅಜಿಪು. ೧೧-೧೦ ವ); ಕೋಪಿಸುತೆದ್ದು ಸೆಳೆದು ಸಱ್ಣನೆ[ಪಾಠಾಂ. ಸಿ ಸೆಳೆದುಕೊಂಡು ಪತ್ರವ]ಸೀಳೆ ಸಂದಣಿಸಿ ಶತಚೂರ್ಣವಾಗಿ ನೆಲದೊಳು ಬೀಳೆ (ನಂಬರ. ೭-೮೫). **ಸಱ್ಣನೆಸೀಳು :** ಮಟ್ಟಿ ಸಱ್ಣನೆಸೀಳಿ ನೆಲಕಱೆಯಟ್ಟಿ ಹೊಯ್ದನು (ಕುವಾವಿ. ೬೧೩. ೪-೭೯); ನಾಯ್ಗಳ ಗಡಣವನು ನೆಱೆ ಪೊಡೆದುದೊಂಕಿದು ದಡಸಿ ಸಿಕ್ಕಿದುದೊತ್ತಿ ಸಱ್ಣನೆಸೀಳಿತು (ಸಾಳ್ವಿಭಾ. ೫-೩೪). [ಸಱ್ಣನೆ + ಸೀಳ್$_1$]

ಸಱ್ಣನೆಸೀಳು 'ಸಱ್ಣನೆಸೀಳ್' ನೋ.

ಸಱ್ಪೆ (ನಾ). ಒಂದು ಸ್ಥಳದ ಹೆಸರು : ಗಂಗವಾಸನ ಮಗಂ ಗೋವಿನ್ದರಂ ಸಱ್ಪೆಮೂನೂಱುಂ ಕುಣಂಗಿಲಯ್ನೂಱುಮಂ ಪ್ರತಿಪಾಲಿಸುತ್ತಿರೆ (ಎಕ. IX, ದೇವನ. ೪೨-೨; ಸು. 900 ?). [?]

ಸಱ್ಬಂಗ (ನಾ). ಒಂದು ಸ್ಥಳದ ಹೆಸರು (?); ☞ ಈ ಶಬ್ದದ ಬಗ್ಗೆ ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಕೆಲವು ಅಭಿಪ್ರಾಯಗಳು ಹೀಗಿವೆ; ಇದು 'ಷಡ್ಭಾಗ'ದ ತದ್ಭವವಿರಬೇಕು, 'ಷಡ್ಭಾಂಗ' (ಪಾಂಗ = ತೆರಿಗೆ)ದಿಂದ ಬಂದಿರಬಹುದು, ಪರ್ಷಿಯನ್ ಪದ 'ಸರ್ಹಂಗ್'(= ದಳಪತಿ) ಶಬ್ದದಿಂದ ಬಂದಿರಬಹುದು, ಷಡ್ಭಂಗ, ಷಡ್ಭಾಗ್ಯ, ಷಡ್ಭಾಪ್ರ, ಷಡ್ಭಗ ಎಂಬ ಪದಗಳಿಂದ ಬಂದಿರಬಹುದು : ಇರ್ವರುಂ ಸಱ್ಬಙ್ಗದರ್ ವಿಚಾರಸರುಂ ಪಲ್ಮಡಿಗೆ ಕುಱುಮ್ಬಿಡಿವಿಟ್ಟಾರ್ (ಮೃಅರಿ. ೧೯೩೬, ೧೬-೧೪ ; 450 ?). [?]

ಸಾ, ಸಯ್$_1$, ಸಾಯ್, ಸಾಯಿ$_1$, ಸಾಯು, ಸಾಹು$_1$ (ಕ್ರಿ). ಸತ್ತ (ಭೂತಕೃ), ಸತ್ತು (ಭೂತನ್ಯೂ), ಸಾವ (ಭವಿಕೃ). ೧. ಮರಣ ಹೊಂದು ; ಪ್ರಾಣಬಿಡು : ಕೊಱ್ಗುಣಿಅರಸರ ಆಳು ಎಱೆದು ಸತ್ತೊನ್ (ಮೃಅರಿ. ೧೯೩೯, ೨೨-೫; ಸು. 790); ದೇವಿಲಂ ಮೊದಲಾಗೊಡೆಯ ಪಲಂಬರ್ ಪರದರ್ ಸತ್ತರ್ (ವಡ್ಡಾರಾ. ೭೬-೧೪); ಅತ್ತಲೋಪನುಮಿದನಿಂತೆ ಕೇಳ್ದೊಡೆ ನಿರಾಶೆಯೊಳಕ್ಕಟ ಸಾಗುಂ (ಕಾದಂಪು. ೮೭೬). ೨. (ಆಲಂ) ಸತ್ತ್ವಗುಂದು ; ನಿಷ್ಕ್ರಿಯವಾಗು : ಅಂಗುಳಂಗುಳ ಸಂದಿಗಳ ಕಳೆಯಿಂಗಿ ನೆತ್ತರು ಸತ್ತ ತೊಗಲ ನರಂಗಳು (ಬಸಪು. ೪೬-೫೮). **ಸಯ್$_1$:** ೧. ನರೆದು ಬಂದಪರವರ್ ಸಯಲಾ ಬಲಮೆಲ್ಲಮೆಟ್ಟರದೆ ಕೊಂದಪನಿವಂದಿರನೀಗಳೆ ನಿಕ್ಕುವಂ (ಕವಿರಾ. ೧-೧೩೦); ಬಿಡೆ ನಾಂ ನೀಂ ಸಯೆ ಸಾವನಲ್ಲದುಬೆಯೆಂ (ಅನಂಪು. ೧೧-೯೫). ೩. ತಡೆ; ನಿಲ್ಲು : ಎನ್ನೊಳಾ ಆಱ್ಬುಡುಗಿದಂದು ನಾನ್ ಸಯ್ತಪೆನ್ (ಅಂತಗೂ. ೫-೭೬). **ಸಾಯ್ :** ೧. ಆತಂ ದೇಶಸಕಲಸಂಯಮಂಗಳಂ ಕೊಳ್ಪಂ ಆಯುಷ್ಯಮಂ ಕಟ್ಟಂ ಸಮ್ಯಙ್ಮಿಥ್ಯಾತ್ವಂಗಳೊಳ್ ಎಲ್ಲಿ ಮುನ್ನಾಯುಷ್ಯಂ ಬದ್ಧಮಾದುದಲ್ಲಿಗೆ ಸಂದು ಸಾಯ್ಗುಂ (ತತ್ತ್ವಪ್ರ. ೧೫); ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ (ಬಸವ. ೧೧೭); ಸಾಯ್ವರ ಶಾಪದಲಿ, ಬೀಳ್ವರ ತಾಪದಲಿ . . . ಕೆನೆಯುವ ಹಯಗಳ ಹೇಷಾರವದಲಿ, ಕಿವಿ ಬಿರಿಯುವುದು! (ಕನ್ನಬಾ. ೧೨೫-೨೦). **ಸಾಯಿ$_1$:** ೧. ಸಾಯಿ ಫಡಿಫಡ ಕೆಡೆಯನುತ ತಮ್ಮೊಬ್ಬರೊಬ್ಬರ ಜಡಿಯಲಬ್ಬರವಾದುದಾರೋಹಕರ ಕೇರಿಯಲಿ (ಕುವಾಕ. ೮-೧೧); ನೀನು ಸಾಯಿ. ನಾನಿನ್ನು ಮಾತಾಡಲಾರೆ (ಗಾಳಿಪ. ೧೯). 'ಸಾಯಿಗುತ್ತ' ಪರಾ. **ಸಾಯು:** ೧. ದಿನಾ ಸಾಯುವವರಿಗೆ ಅಳುವವರು ಯಾರು? (ಗಾದ). ೪. (ಆಲಂ) ಒದ್ದಾಡು ; ಕಷ್ಟಪಡು : ಅವನು ಕೆಲಸ ಮಾಡಲು ಸಾಯುತ್ತಾನೆ (ರೂಢಿ). **ಸಾಹು$_1$:** ೧. ಅಜ್ಞಾನವೆಂಬ ಹಾವಸೆ ಅವಗ್ರಹಿಸಿಕೊಂಡಲ್ಲಿ ಜೀವಭಾವ ಭ್ರಾಂತಿಯ ಸಂದೇಹದಲ್ಲಿ ಸಾಹುತ್ತಿಹರು (ಮೋಳಿಮಾ. ೨೩೮-೭೮೯); ತಲೆಯ ಕಡಿದರೆ ಸಾಹನಲ್ಲದ ಗತಿಯ ಕಾಣೆನು (ನಿಭಾಗ. ೧-೧೨-೨೬).

ಸತ್ತು ಸತ್ತು ಉಳಿ = ಮರಣಾಸನ್ನವಾದ ಖಾಯಿಲೆಯಿಂದ ಗುಣಹೊರಿದು, — ಉಳಿದುಕೊಳ್ಳು; ಪ್ರಾಣಾಪಾಯಕಾರಿಯಾದ ಖಾಯಿಲೆಯಿಂದ ಬದುಕಿಕೊಳ್ಳು: ಆ ವೃದ್ಧರು ಕ್ಷಯರೋಗದಿಂದ ಸತ್ತುಸತ್ತು ಉಳಿದರು (ರೂಢಿ). **ಸತ್ತುಸತ್ತು ಬದುಕು** = ಸತ್ತುಸತ್ತು ಉಳಿ : ಅವರ ಮಗು ಮೊನ್ನೆ ಮೆದುಳುಜ್ವರದಿಂದ ಸತ್ತುಸತ್ತು ಬದುಕಿತು (ರೂಢಿ). **ಸತ್ತುಸುಣ್ಣವಾಗು** = ವಿಪರೀತವಾಗಿ ಬವಣೆಪಡು ; ಬಹಳ ತೊಂದರೆಪಡು : ಅವನು ಸಾಲಕ್ಕಾಗಿ ಊರೂರು ತಿರುಗಿ ಸತ್ತು ಸುಣ್ಣವಾಗಿದ್ದಾನೆ (ರೂಢಿ). **ಸಾಯ ಬಡಿ** = ಸಾಯುವಂತೆ ಹೊಡೆ : ಹಣ್ಣುಗಾಯಿ ನೀರುಗಾಯಿ ಮಾಡು : ಮುಳಿದು ಸಾಯ [ಪಾಠಾಂ. ಯೆ] ಬಡಿದು ಮನೆಯಿಂ ಪೆಂಡತಿಯನಟ್ಟಿ ಕಳೆದೊಡೆ (ವಡ್ಡಾರಾ. ೭೭-೧೫); [ಪಸಿದ ಕೋಪದಿಂ ತನ್ನ] ಭಾರ್ಯೆಯಂ ಸಾಯಬಡಿವುದುಂ (ಧರ್ಮಾಮೃ. ೧೪-೧೯೯); ವಂಗಭೂಪನ ಬಾಯೊಳಗೆ ಬೆಟ್ಟಿದನು ಗದೆಯನು ಮಿಕ್ಕ ನಾಲ್ವರನು ಸಾಯಬಡಿದನು (ಕುವಾದ್ರೋ. ೨-೮೨). **ಸಾಯಬಡು** = ಸಾಯು; ಮರಣವನ್ನು ಹೊಂದು : ನ್ಯಾಯವಿಲ್ಲದೆ ತಿಲೋತ್ತಮಿಯಗೋಸುಗವಾಗಿ ಸಾಯಬಟ್ಟರು ಒಡಹುಟ್ಟಿದವರು (ವಿಶಾಸು. ೫೫-೩). **ಸಾಯಲಾಗು** = ಸಾಯುವಂತಾಗು; ಮರಣ ಹೊಂದುವ ಸ್ಥಿತಿ ಮುಟ್ಟು : ಸಾಯಲಾದನು ಧೃಷ್ಟಕೇತು ವಿಡಾಯಿಗೆಟ್ಟನು ಭೋಜನು (ಕುವಾದ್ರೋ. ೨-೫೨). **ಸಾಯಹಾರು** = ಸಾವನ್ನು ನಿರೀಕ್ಷಿಸು : ಉಳುಹಿಕೊಳಲೆಳಸಿಯಮರರನು ಹರಿಯಜರನ್ನ ಕಳವರವನೀಗ ಹೇಳಿದರೆ . . . ಅದು ನಿಮಿತ್ತಂ ಸಾಯ ಹಾರಿದರುಯೆಂದು ಮರುಗಿ (ನವಪೋ. ೫-೧೨). **ಸಾಯೆ ಪೊಯ್** = ಸಾಯ ಬಡಿ: ಅಬ್ಬೆಯೊಡವುಟ್ಟಿದ ಮಾವನಶೇಷಶಾಸ್ತ್ರಪಾರಗನತಿಧನ್ಯನೆಂದು ಪರಿಭಾವಿಸಿ ಬಂದೊಡವಜ್ಜೆಗೆಯ್ದು . . . ತೊಟ್ಟಗೆ ವಿಭು ಸಾಯೆ ಪೊಯ್ದು ಕಿವಿಯಂ ಪಿಡಿದೊಡಲೊಡರ್ಚಿ ಬಂದನೇ (ಸುಬಿಮಾ. ೨-೬೩). **ಸಾಯೆ ಬಡಿಸು** = ಸಾಯುವಂತೆ ಹೊಡೆಯಿಸು; ಹಣ್ಣುಗಾಯಿ ನೀರುಗಾಯಿ ಮಾಡಿಸು : ಸೊಕ್ಕಿರ್ದರ ಮದಮಿಂತಲ್ಲದುಡುಗದೆಂದು ಸಾಯ ಬಡಿಸುವಂ (ಧರ್ಮಾಮೃ. ೨-೬೭). **ಸಾಯೆ ಸರಸಂ ನುಡಿ** = ಮರ್ಮಾಘಾತವಾಗುವಂತೆ ಗೇಲಿಮಾಡು : ಎಮ್ಮಂ ಪಿಡಿದೆಟೆವಂದಿನ ನಿಮ್ಮದಟುಗಳೀಗಳೀತ್ತವೋದುವೊ . . . ನಿಮಗಮಿಾಗಳೀಯೆಡರಾಯ್ತೇ ಎಂದು ಸಾಯೆ ಸರಸಂ ನುಡಿದು (ಪಂಪಭಾ. ೭-೩೯ವ). [ದೇ. ॥ತಮಿ. ಚಾ, ಚಾಯ್; ಮಲ. ಚಾ; ಕೊಡ. ಚತ್ತ್; ತೊದ. ಸೊಯ್; ತುಳು ಸಯಿ, ಸೈ; ತೆಲು. ಚಚ್ಚು, ಸಚ್ಚು ; ಪರ್ಜ. ಚಯ್; ಕುಇ. ಸಾವ]

ಸಾಂಕರ್ಯ (ನಾ). (ವಿಭಿನ್ನವಾದುವು) ಕೂಡುವಿಕೆ; ಸಂಕರವಾಗುವಿಕೆ : ನಿರುಪಾಧಿಕಾಂತರ್ಜ್ವಲತ್ಸರ್ವಸಾಕ್ಷಿಕಸ್ಫುರಣರುದ್ರಂಗೀ ಗುಣೋಪಾಧಿ ಭಿನ್ನ ರಜಹರಿಗಳೆಣೆಯೆಂದದಾರದ್ವೈತವಿಭ್ರಮದೆ ನುಡಿವರವರನ್ವಯಕ್ಕೆ ನಿರುತಮಿದು ಸಾಂಕರ್ಯಮುಂಟಂತೆ ನುಡಿಯದರ್ ವರವಂಶಜರ್ (ಪದ್ಮರಾ. ೧೧-೮); ಈ ಧರ್ಮಶಾಸ್ತ್ರ ಕಾರರು ವಿದೇಶೀಯರ ಆಕ್ರಮಣದಿಂದುಂಟಾದ ಸಂಸ್ಕೃತಿಸಾಂಕರ್ಯ ಹೊಂದಿದ ಜನತೆಯನ್ನು ಉದ್ಧರಿಸಲು . . . ವ್ಯತ್ಯಾಸಗಳನ್ನು ಮಾಡಿದರು (ಭಾರದ. ೬೧). [ಸಂ.]

ಸಾಂಕೇತಿಕ (ಗು). ೧. ಗುರುತುಗಳಿಂದ ಕೂಡಿದ ; ಸಂಜ್ಞೆಗಳುಳ್ಳ : ಬೀಜಗಣಿತ ಸಾಂಕೇತಿಕರೂಪದ್ದಾದ್ದರಿಂದ ಈ ಶಾಲೆಯಲ್ಲಿ ಅದನ್ನು ಸೇರಿಸಬೇಕಾಗಿಲ್ಲ (ಶಿಕ್ಷದ. ೧೫೨). ೨. (ಯಾವುದಾದರೂ ವಸ್ತು, ವಿಚಾರ ಮುಂತಾದುವುಗಳಿಗೆ) ಪ್ರತೀಕವಾದ; ನಿದರ್ಶನವಾದ : ಪಾರಿಭಾಷಿಕಶಬ್ದಗಳ ಅರ್ಥವನ್ನೂ ಸಾಂಕೇತಿಕಸನ್ನಿವೇಶಗಳ ಅನ್ವಯವನ್ನೂ ಕೇವಲ ಚಾರಿತ್ರಿಕದೃಷ್ಟಿಯಿಂದ ನಿರ್ಣಯಿಸುವುದು ಕಷ್ಟ (ಭಾರದ. ೧೦೯); ಕಾದಂಬರಿಯಲ್ಲಿ ಸಾಂಕೇತಿಕಪಾತ್ರ ಹಾಗು ಸನ್ನಿವೇಶಗಳು ಕೆಲವಿವೆ (ಸಮಜೀ. ೩೧ ಪೀಠಿಕೆ). ೩. ಸೂಚಿಸುವ; ಮುಂದಾಗಿ ತಿಳಿಸುವ : ಮುಖದ ಮೇಲೆ ಈ ಕಾಯಿಲೆಯ ಸಾಂಕೇತಿಕ ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ (ಕೆಲರೋ. ೫೭). (ನಾ). ೪. (ಯಾವುದೇ ವಸ್ತು, ವಿಚಾರ ಮುಂತಾದುವನ್ನು) ಸೂಚಿಸುವಂತಹುದು; ಪ್ರತಿಬಿಂಬಿಸುವಂತಹುದು; ನಿದರ್ಶನರೂಪವಾದುದು : ನಮ್ಮ ಹಬ್ಬಗಳೆಲ್ಲ ಸಾಂಕೇತಿಕವಾಗಿವೆ (ರಂಗರೋ. ೧೧೨); 'ಅಂಚೆಮನೆ' ಎಂಬುದೊಂದು ಚಿಕ್ಕನಾಟಕ . . . ಈ ನಾಟಕವು ಸಾಂಕೇತಿಕವೆಂದು ಕೆಲವು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ (ಧರ್ಮಸಾ. ೬೪). [ಸಂ.]

ಸಾಂಕೇತಿಕಮುಷ್ಕರ (ನಾ). ಸಂಕೇತರೂಪದ ಚಳುವಳಿ; ಮುನ್ಸೂಚನೆಯ ಪ್ರತೀಕವಾದ ಮುಷ್ಕರ : ಆ ಗಿರಣಿಯ ಕಾರ್ಮಿಕರು ಇಂದು ಸಾಂಕೇತಿಕಮುಷ್ಕರ ನಡೆಸುತ್ತಿದ್ದಾರೆ (ರೂಧಿ). [ಸಾಂಕೇತಿಕ + ಮುಷ್ಕರ$_1$]

ಸಾಂಕ್ರಾಮಿಕ (ಗು). ೧. ಒಬ್ಬರಿಂದೊಬ್ಬರಿಗೆ ಅಥವಾ ಒಂದರಿಂದ ಮತ್ತೊಂದಕ್ಕೆ ಹರಡುವ, — ವ್ಯಾಪಿಸುವ, — ಸೋಂಕುವ : ಯುದ್ಧ ಮೊದಲಾದ ಒಂದು ತಿಂಗಳೊಳಗೆ, ವಿಷ್ಣುವರ್ಧನಪ್ರಭುವಿನ ಸೈನ್ಯಶಿಬಿರಗಳಲ್ಲಿ ಸಾಂಕ್ರಾಮಿಕ ಉಪಟಳ ಒಂದು ಕಾಣಿಸಿಕೊಂಡಿತು (ಶಾಂತಲಾ. ೪೦೦). (ನಾ). ೨. (ರೋಗ ಮುಂತಾದುವು) ಒಬ್ಬರಿಂದ ಒಬ್ಬರಿಗೆ ಅಥವಾ ಒಂದರಿಂದ ಮತ್ತೊಂದಕ್ಕೆ ಹರಡುವಿಕೆ, — ವ್ಯಾಪಿಸುವಿಕೆ: ಡಿಫ್ತೀರಿಯಾ . . . ಕೆಲವು ಕಡೆ ಸಾಂಕ್ರಾಮಿಕ (Epidermic) ವಾಗಿ ಹರಡಿದರೆ ಕೆಲವು ಕಡೆ ಸ್ಥಾನಿಕ (Endermic) ರೋಗವಾಗಿರುತ್ತದೆ (ಕೆಲರೋ. ೧೪). [ಸಂ.]

ಸಾಂಕ್ರಾಮಿಕರೋಗ (ನಾ). ಒಬ್ಬರಿಂದ ಅನೇಕರಿಗೆ ಅಥವಾ ಒಂದರಿಂದ ಅನೇಕಕ್ಕೆ ಹರಡುವ ಖಾಯಿಲೆ; ಸೋಂಕುರೋಗ; ಅಂಟುಜಾಡ್ಯ : ಸೊಳ್ಳೆ, ನೊಣ ಮೊದಲಾದವು ಸಾಮೂಹಿಕಜಂತುಗಳು. ಸಾಂಕ್ರಾಮಿಕರೋಗಗಳಂತೆ ಅವುಗಳ ಚಲನವಲನ (ನಂಟರು. ೪೪); ನಾನು ಅಲ್ಲಿಗೆ ಹೋದಾಗ ಅಲ್ಲಿ ಒಂದು ಸಾಂಕ್ರಾಮಿಕರೋಗ ಹರಡಿತ್ತು (ಪ್ರವಾಇ. II, ೧೧೮). [ಸಂ.]

ಸಾಂಖ್ಯ (ಗು). ೧. ಸಂಖ್ಯೆಗೆ ಅಥವಾ ಲೆಕ್ಕಾಚಾರಕ್ಕೆ ಸಂಬಂಧಿಸಿದ . (ನಾ). ೨. ಸಂಖ್ಯೆಗೆ ಅಥವಾ ಲೆಕ್ಕಾಚಾರಕ್ಕೆ ಸಂಬಂಧಿಸಿದುದು : ಸಾಂಖ್ಯವೆಂಬ ಶಬ್ದವು, ಸಂಖ್ಯಾಶಬ್ದದಿಂದ ಸಿದ್ಧಿಸುತ್ತದೆ. ಸಂಖ್ಯೆಯೆಂದರೆ ಚರ್ಚೆಯೆಂದೂ, ವಿಚಾರಣೆಯೆಂದೂ ಎಣಿಕೆಯೆಂದೂ ಅರ್ಥ (ಭಾರದ. ೧೨೫). ೩. ಚರ್ಚೆ ಮಾಡುವಿಕೆ. ೪. ವಿಶೇಷವಾದ ತಿಳಿವಳಿಕೆ; ಜ್ಞಾನ : ಸಾಂಖ್ಯ ಎಂದರೆ ಜ್ಞಾನ. ಯೋಗ ಎಂದರೆ ಭಗವದರ್ಪಣ ಬುದ್ಧಿಯಿಂದ ವಿಹಿತಕರ್ಮಾನುಷ್ಠಾನ (ಭಾತತ್ತ್ವ. ೧೧೯). ೫. ಶಿವ; ಈಶ್ವರ. ೬. [ತತ್ತ್ವಶಾ] ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ ಮತ್ತು ಉತ್ತರಮೀಮಾಂಸೆ (ವೇದ ಮತ್ತು ವೇದಾಂತ) ಎಂಬ ಆರು ಬಗೆಯ ದರ್ಶನಗಳಲ್ಲಿ ಒಂದು; ಷಡ್ದರ್ಶನಗಳಲ್ಲಿ ಒಂದು : ಸಾಂಖ್ಯ ಪಾತಂಜಲ ವೇದಾಂತಗಳೆಂಬ ಆತ್ಮಜ್ಞಾನಫಲವಾಗುಳ್ಳವೇ ಅಧ್ಯಾತ್ಮಶಾಸ್ತ್ರತ್ರಯಂಗಳು (ವಿವೇಕ. ೧೨); ವೈಶೇಷಿಕ, ನ್ಯಾಯ, ವೇದಾಂತ, ಸಾಂಖ್ಯ, ಯೋಗ, ವೇದ ಎಂದು ಆರು ದರ್ಶನಗಳು (ಹಿಂದಸಾ. ೯). ೭. ಸಾಂಖ್ಯತತ್ತ್ವಗಳನ್ನು ಒಪ್ಪಿ ಅನುಸರಿಸುವವನು; ಸಾಂಖ್ಯದರ್ಶನದ ಅನುಯಾಯಿ : ಷಡಭಿಜ್ಞಂ ಕ್ಷಣಿಕಂ . . . ನಡೆವಂ ಕಾಪಿಳ ವೃತ್ತಿಯಂ ಬಿಡದೆ ಸಾಂಖ್ಯಂ (ಚಂದ್ರಪು. ೧-೨೫); ವಸ್ತುಗಳನ್ನು ಸಂಖ್ಯೆಮಾಡಿ ತತ್ತ್ವಗಳು ಇಪ್ಪತ್ತೈದು, ಪದಾರ್ಥಗಳು ಅರುವತ್ತು ಎಂದು ನಿರ್ಣಯಮಾಡಿರುವುದರಿಂದ ಇವರಿಗೆ ಮೊದಲು ಸಾಂಖ್ಯರೆಂದು ಹೆಸರು ಬಂದಿತು (ಹಿಂದಸಾ. ೪೮). [ಸಂ.]

ಸಾಂಖ್ಯದರ್ಶನ (ನಾ). = ಸಾಂಖ್ಯ ೬ : ಸಾಂಖ್ಯದರ್ಶನವನ್ನು ನಿರೀಶ್ವರವಾದವೆಂದೂ . . . ವೇದಾಂತದಾರ್ಶನಿಕರು ದೂರ ತಳ್ಳಿದ್ದಾರೆ (ಭಾರದ. ೧೧೩). [ಸಂ.]

ಸಾಂಖ್ಯಮತ (ನಾ). = ಸಾಂಖ್ಯ ೬ : ಪ್ರಕಟಮಾಡಿ ಸಾಂಖ್ಯಮತಮಂ ನಿರ್ಮೂಳನಂಗೆಯ್ದು (ಶಾಸಪ. ೫೨-೪೯; 1138); ಚಾರ್ವಾಕಮತವನ್ನೂ ಬೌದ್ಧಮತವನ್ನೂ ಸೇರಿಸಿದರೆ ಸಾಂಖ್ಯಮತವಾಗುತ್ತದೆ (ಹಿಂದಸಾ. ೬೯). [ಸಂ.]

ಸಾಂಖ್ಯಯೋಗ (ನಾ). = ಸಾಂಖ್ಯ ೬ : ಇಂತೀ ಪಂಚವಿಂಶತಿತತ್ತ್ವಂಗಳು ನಾನಲ್ಲ ಅವು ನನ್ನವಲ್ಲವೆಂದು ವಿಭಾಗಿಸಿ ಕಳೆದು ಪರಾತ್ಪರವಾದ ಪರಶಿವಬ್ರಹ್ಮವೆ ನಾನೆಂದು ತಿಳಿವುದೇ ಸಾಂಖ್ಯಯೋಗ ನೋಡಾ (ಅಖಂಡೇ. ೨೨೨-೬೪). [ಸಂ.]

ಸಾಂಖ್ಯಾಗಮ (ನಾ). = ಸಾಂಖ್ಯ ೬ : ಮಿಥ್ಯಾತಮತಿರಸ್ಕರಿಣೀತಿರಸ್ಕೃತಮನಸ್ಕಂ ತತ್ತ್ವಾಭಾಸಮಂ ಸಾಂಖ್ಯಾಗಮಮಂ ಮಾಡಿ ಕಪಿಳಾಗಮಮಂ ಮಾಡಿ ಕಪಿಳಾದಿಗಳಪ್ಪ ಶಿಷ್ಯವರ್ಗಕ್ಕೆ ತಿಳಿಪುತ್ತಂ (ವರ್ಧಮಾ. ೬-೧೨ ವ). [ಸಂ.]

ಸಾಂಗ$_1$ (ಗು). ೧. ಅಂಗಗಳಿಂದ ಕೂಡಿದ; ಅವಯವಗಳಿಂದ ಕೂಡಿದ. ೨. ಅಂಗಗಳಿಗೆ ಸಂಬಂಧಿಸಿದ; ಆಂಗಿಕವಾದ : ಅಂಗದಿಂದಂ ಗಾಡಿ ಸಂಚಾರಿಗಳಿನುಚಿತಸಾಂಗಭಾವಂಗಳಿಂ ಶಿವನ ಲೀಲೆಯೊಳ್ಳೆದು ಪಿಂಗೆ ವಿಂಶತಿಯ ಭೃಂಗಿರಿಟಿ ನರ್ತಿಸೆ ಗಣಂಗಳ್ ಭಾಪೆನುತ್ತಿರ್ದರು (ಭಾವಚಂ. ೧-೩೬). ೩. ಪೂರ್ಣವಾದ; ಸಮಗ್ರವಾದ : ಲಿಂಗಶರಣನೆ ನಿತ್ಯ ಜಗಮನಿತ್ಯಮದೆಂಬ ಸಾಂಗನಿತ್ಯಾ ನಿತ್ಯವಿವರಸುಜ್ಞಾನಮದು ಹಿಂಗದದ ತಿಳಿದಾಚರಿಸುವಾತನೆ ಸ್ವಾನುಭಾವಿ (ಷತಿಲ. ೫-೨೪). ೪. (ವೇದದ ವಿಷಯದಲ್ಲಿ) ಷಡಂಗಗಳಿಂದ ಕೂಡಿದ : 'ಸಾಂಗವೇದ' ಪರಾ. (ನಾ). ೫. ಪೂರ್ಣವಾದುದು; ಸಮಗ್ರವಾದುದು : ಸಾಂಗವಾಗಿದೆ ಗೃಹವೆನುತ ರೋಷಾಂಗ ಮನವಿಡಿವೈದು ಬರೆ (ಕೃಷ್ಣಾಕಾ. ೧೧-೫). ೬. ಪರಿಪೂರ್ಣತೆ; ಸಮಗ್ರತೆ : ಜಂಗಮವ ನಾನೆಂದೆ ನೋಡಿರು ಸಾಂಗದಿಂ ತ್ರಿವಿಧಪ್ರಸಾದಾಸಂಗದೊಳು ಪರಿಣಾಮಿಸುತಮಿರು (ಬಸಪು. ೪-೬೬); ಮೋಹನಾಂಗಿಗೀ ಸಿಂಗರದ ಹಂಗುಂಟೆ ಮಂಗಲದ ಸಾಂಗಕ್ಕೆ ಸಿಂಗರಿಪೆವು (ಪದ್ಮರಾ. ೩-೪೨). ೭. ಯೋಗ್ಯವಾದುದು; ಸರಿಯಾದುದು : ಧರೆಯೊಳಿಂತಪ್ಪನ್ನದಾತರ ಸರಿಯಿಡುವರಾರಯ್ಯ ನಿನಗತಿಸಾಂಗವಾಯಿತ್ತು ನಿರುತವೆಲ್ಲಡೆಯೊಳು ಸಮಾನವನೊರೆಯಲಿಲ್ಲದಭೀಷ್ಟದಾನವನರರೆ ಎಮಗಿಕ್ಕಿದೆ (ಬಸಪು. ೨೪-೨೭).

ಸಾಂಗಮಾಗು, ಸಾಂಗವಾಗು = ೧. ಪರಿಪೂರ್ಣವಾಗು; ಸಮಗ್ರವಾಗು; ಸಂಪೂರ್ಣವಾಗು : ಅತಿಮಂಗಳದ ದಿನವಿಂದು ನಿಜಮಂದಿರದೊಳೆಂದನುತ ಸಾಂಗಮಾಗಲು ವೇದ್ಯಶೃಂಗಾರಂಗಳಿಂದವಲಂಕರಿಸಿ (ಬಸಪು. ೨೪-೧೬); ನಿರ್ವಿಘ್ನದಲಿ ಮುನಿತಿಲಕನಧ್ವರ ಸಾಂಗವಾದುದು (ಶೂರರಾ. ೧-೧೧-೨೨); ನೃಪಾಲಕತಿಲಕನಧ್ವರ ಸಾಂಗವಾದುದು (ತಿಮ್ಮಶ್ವ. ೧-೧೧೨). ೨. ಸರಿಯಾಗು; ಯೋಗ್ಯವಾಗು : ಉಪಕರಣತತಿಯ ಸಾಂಗಮಾಗಲು ಬೆಳಗೆಯೋ ಶಿವಲಿಂಗಮಜ್ಜನಸಾಲೆಗಳ ಮಲಿನಂಗಳಂ ತೊಳೆಯೆಯೊ (ಬಸಪು. ೪೭-೧೩). ೩. ದೊರಕು; ಲಭ್ಯವಾಗು : ಮಂಗಳಪ್ರದ ಸತ್ಕ್ರಿಯೆಗಳೊಳಿಹಂಗೆ ಗರ್ವಿಸಿ ನುಡಿದವಂಗಂ ಸಾಂಗವಹುದೇ ಭಕ್ತಿಪರಿಣತಿ ಬಸವಸುಕುಮಾರ (ಬಸಪು. ೨೪-೮೯). [ಸಂ.]

ಸಾಂಗ$_2$ (ನಾ). (ಭರ್ಜಿಯಂತಹ) ಒಂದು ಬಗೆಯ ಆಯುಧ : ಸಾಂಗಭಲ್ಲೆಯ . . . ಚಕ್ರಾಯುಧದ ಅಂಗವಣೆಯ ಕಲಿತರು ಬೇಗದಲಿ ಶ್ರೀರಂಗಭಕ್ತರು ಮುದದಿಂದ (ಕಂನಮಿ. ೪-೮೬); ಊರಿ ಸಮ್ಮಿಶ್ರಕ್ಕೆಭಾಕು ಸಾಂಗಿಟ್ಟ ಕೈಚೂರಿಗಳಲಿರಿದಾಡಿದೀರ್ವಲದ ತಲೆವೆಲೆಯ ಕ್ರೂರರದ್ಭುತಗರೆದರು (ಜಿನಮು. ೧೦-೨೦). [← ಹಿಂ. ಮರಾ. ಸಾಂಗ್]

ಸಾಂಗಗೊಳಿಸು (ಕ್ರಿ). ಕ್ರಮಬದ್ಧವಾಗಿ ಮುಗಿಸು, — ಪೂರ್ಣಗೊಳಿಸು : ಈ ಪರಿಯಾಗಿ ನಿತ್ಯವೂ ಕರ್ತವ್ಯಕರ್ಮಗಳನ್ನು ಸಾಂಗಗೊಳಿಸಿ . . . ಚಾರು ತನ್ನ ದಿನವನ್ನು ಸಮಾಪ್ತಗೊಳಿಸುವಳು (ಇಪ್ರಕ. ೨೮೫). [ಸಾಂಗ$_1$ + ಕೊಳ್$_1$ + - ಇಸು$_3$]

ಸಾಂಗಡ, ಸಂಗಟ$_2$, ಸಂಗಡಿ$_3$, ಸಾಂಗಡೆ, ಸಾಗಡ, ಸಾಗಡೆ$_1$, ಸಿಂಗಡಿ$_2$ (ನಾ). ೧. (ಹಲಗೆಗಳನ್ನು ಜೋಡಿಸಿ ರಚಿಸುವ) ಒಂದು ಬಗೆಯ ಜೋಡುತೆಪ್ಪ; ಜೋಡುದೋಣಿ : (ಮೃಗಜೆ. IV, ೭೮೪); (ರೈಸ್‌ಗೆ. II, ೫೬೧). **ಸಂಗಟ$_2$** : ೨. ಈಸುಗಾಯಿ; ಈಜುಬುರುಡೆ : ಚಟುಲಲೋಚನೆಯಂತೆ ಕುಟಿಲಕುಂತಳಿಯಂತೆ ವಿಟಹೆಣ್ಣಿನಂತೆ ಹಗಲಲ್ಲಿ ಇರುಳು ಸಂಗಟಿನ ಕಾಯಂತೆ (ಸರ್ವಜ್ಞ. ೨೦೭೨). **ಸಂಗಡಿ$_3$** : ೧. ಹೊಳೆಯ ದಾಟುವಗೆ ಸಂಗಡಿಯು ದೊರೆದಂದದಿಂ (ಮಹಾಂತೇ. ೨೨-೧೭); ಜ್ಞಾನವೇ ಸಂಸಾರಿಗನ ಸಂಗಡಿ. ಅದೇ ಸಂಸಾರಸಾಗರದ ಈಸುಗುಂಬಳ (ಬಾಳಬ. ೨೯). ೨. ಒಬ್ಬ ಸಾಲೇಹುಡುಗನು ಈಸುಗುಂಬಳಕಾಯಿಯ ಸಂಗಡಿಯನ್ನು ನಡುವಿಗೆ ಕಟ್ಟಿಕೊಂಡು . . . ಹೊಳೆಯಲ್ಲಿ ಈಸುಗಲಿತ ಮೇಲೆ . . . ಸಂಗಡಿಯನ್ನು ಹೊಳೆಯ ದಡದಲ್ಲಿ ಬಿಟ್ಟು ಹಾಗೇ ನೀರೊಳಗೆ ಬಿದ್ದನು (ಮುಂಬಯಿ. ೪-೩೭). ೩. ಚಟ್ಟ; ಸಿದಿಗೆ : ಪೆಣದ ಸಜ್ಜಡಿ ಕಟ್ಟುವೋನ್ (ಕಾ. I,೫-೪; ೫ನೆಯ ಶತ). **ಸಾಂಗಡೆ** : (ಕಿ). **ಸಾಗಡ** : ೧. ಬೆಸ್ತರು ಒಳ್ಳೇ ಸಾಹಸಿಗಳಾಗಿ ಸಾಗಡಕ್ಕೆ ಒಂದೊಂದು ಸಲಕ್ಕೆ ಎರಡು ಭರ್ತಿ ಗಾಡಿ ತುಂಬುತ್ತಿದ್ದರು (ಬೆಸ್ತಕ. ೫೪). **ಸಾಗಡೆ$_1$** : ೧. ಒಂದೊಂದು ಸಲ ಸಾಗಡೆ ನಡೆಸುತ್ತಿದ್ದ ಬೆಸ್ತರ ಎತ್ತುಗಳ ಮೇಲೆ ಪೈಪೋಟಿಯುಂಟಾಗಿ ಅವರು ಅವುಗಳ ಜತೆಗೆ ಸಾಗಡ ಬಿಡಲು ಪ್ರಯತ್ನಿಸುತ್ತಿದ್ದರು (ಬೆಸ್ತಕ. ೫೫). **ಸಿಂಗಡಿ$_2$** : ೧. ಹೊತ್ತು ಮುಳುಗೋದರಾಗ ದಾಟದರಾತೂ ಅಂತ ಸಿಂಗಡಿ ಹತ್ತಿ ಬಿದ್ದಿ (ಧರ್ಮಸ. ೭೭). ೨. "ಸಿಂಗಡಿ — ತೇಲಿಸುವ ಕುಂಬಳಕಾಯಿ" (ಜಾನಕೋ. ೪೯). 'ಜಂಗಾಲ್$_1$' ಹೋ. [<— ಮರಾ. ಸಾಂಗಡ, ಸಾಂಗಡೀ ./ ತಮಿ. ಚಜ್ಜಟಮ್]

ಸಾಂಗಡೆ 'ಸಾಂಗಡ' ನೋ.

ಸಾಂಗಡೆಗಡಿ (ಕ್ರಿ). ಒಟ್ಟಾಗಿ ಕತ್ತರಿಸು (?) : ಸಿಗಿಯಲೆರಗುವ ಕೊಂತ ಕೈಕಾಲ್ದೆಗವ ಕೈಚಕ್ರಂಗವನು ಚುಚ್ಚೊಗುವ ಸಾಂಗಡೆಗಡಿವ ಪರಶುಗಳು (ಜಿರಾಮಾ. ೪೫೮-೩೯). 'ಸಂಗಡ$_2$' ಹೋ. [ಸಾಂಗಡೆ$_?$ + ಕಡಿ$_2$]

ಸಾಂಗತೆ (ನಾ). ಸಮರ್ಪಕವಾಗಿ ಪೂರ್ಣಗೊಳ್ಳುವಿಕೆ ; ಸಾಂಗವಾಗಿ ಮುಕ್ತಾಯಗೊಳ್ಳುವಿಕೆ, — ನೆರವೇರುವಿಕೆ : ಹೀಗೆ ಜಾತಕರ್ಮದ ಸಾಂಗತೆಯಾದ ಬಳಿಕ ನಂದನು ಯಾವತ್ತೂ ಗೋಪಿಕಾಸ್ತ್ರೀಯರನ್ನು ವಸ್ತ್ರಾಲಂಕಾರಗಳಿಂದ ಸತ್ಕರಿಸಿದನು (ಭಾಮೃತ. ೩೦೩). [ಸಂ. ಸಾಂಗತಾ]

ಸಾಂಗತ್ಯ (ನಾ). ೧. ಹೊಂದಾಣಿಕೆ ; ಸಾಮರಸ್ಯ : ಸಾಂಗತ್ಯವಿಲ್ಲದ ಸಂಸಾರವೇತಕೆ ಬರಿಯ ಸಾಹಿತ್ಯವೆ ಸಾಕೆ (ಇಂಚಾಪ. ೧೭೮-೭೯). ೨. ಕೂಟ; ಜೊತೆ : ಅದು ಸಂಸಾರಾಬ್ಧಿಯಂ ದಾಂಟಿಸುವುದು . . . ಬಳಿಕ್ಕಂತದು ಲಿಂಗಾರೂಢನಂ ಮಾಡುವುದು ಶರಣಸಾಂಗತ್ಯವು (ರಕ್ಷಾಶ. ೫೭). ೩. ಸಂಗತಿ; ವಿಚಾರ : ಚಿತ್ತವಿಸು ತನ್ಮಾಯೆ ಜನಿಸಿದಳೇನು ಕಾರಣವು ಎತ್ತಣದು ಸಾಂಗತ್ಯ ನಮಗೀ ಬಿತ್ತರವನಱುಪು (ಪ್ರಭುಲೀ. ೩-೧೯). ೪. [ಛಂದ] ಪದ್ಯದಲ್ಲಿ ನಾಲ್ಕುಪಾದಗಳುಳ್ಳ, ಗೇಯ ಗುಣವನ್ನು ಹೊಂದಿರುವ ಅಂಶಗಣಯುಕ್ತವಾದ ಒಂದು ಅಚ್ಚಗನ್ನಡ ಛಂದಸ್ಸು : ಸಾಂಗತ್ಯ:— ಇದರ ಒಂದು ಮೂರನೆಯ ಪಾದಗಳಲ್ಲಿ ನಾಲ್ಕು ವಿಷ್ಣುಗಣಗಳೂ, ಎರಡು ನಾಲ್ಕನೆಯ ಪಾದಗಳಲ್ಲಿ ಎರಡು ವಿಷ್ಣುಗಣಗಳೂ, ಕೊನೆಯಲ್ಲಿ ಒಂದು ಬ್ರಹ್ಮಗಣವೂ ಇರಬೇಕು. ವಿಷ್ಣುಗಳಿಗೆ ಪ್ರತಿಯಾಗಿ ಅಲ್ಲಲ್ಲಿ ಬ್ರಹ್ಮಗಣವೂ ಬರಬಹುದು (ಕೈಪಿಡಿ. ೧೦೩). [ಸಂ.]

ಸಾಂಗವೇದ (ನಾ). ಷಡಂಗಗಳಿಂದ ಕೂಡಿದ ವೇದ; ಸಂಪೂರ್ಣವಾದ ವೇದ : ಸಾಂಗವೇದವನೋದಿ ಸಕಲಧರ್ಮದ ತತ್ವಂಗಳನಱಿತಾಚರಿಸಿ . . . ಮುನಿಪುಂಗವನೊರ್ವನೆಸೆದನು (ಹದಿಬ. ೨-೩೦); ಸಾಂಗವೇದವನ್ನು ಅಧ್ಯಯನ ಮಾಡಿ ವಿಚಾರಪೂರ್ವಕ ವೇದಾರ್ಥವನ್ನು ತಿಳಿದುಕೊಂಡು ಅದರಂತೆ ಅನುಷ್ಠಾನಮಾಡಿ ಸಕಲಶ್ರೇಯಸ್ಸುಗಳನ್ನು ಹೊಂದಬೇಕೆಂಬ ಅಭಿಪ್ರಾಯ ಸರ್ವಸಮ್ಮತ (ಹಿಂದಸಾ. ೧೬೨). [ಸಂ.]

ಸಾಂಗಿಕ (ನಾ). ಕ್ರಮಬದ್ಧವಾದುದು; ವಿಧಿವತ್ತಾದುದು; ಸಮರ್ಪಕವಾದುದು : ಸತ್ಯನುಡಿಯೇ ನಿರ್ವಾಣವೆಂಬರ್ಥದಿಂ ಸಲೆ ಸತ್ಯವ್ರತನೆಂಬ ನಾಮ ತನಗಂ ಸಾಂಗಿಕಮಾಗಿರ್ದು ನಿರ್ಮಲನಿಂತಿರ್ದಡೆ (ನನ್ನಚಾ. ೬-೧೨೮).

ಸಾಂಗಿಕವಾಗಿ ಮಾಡು = ವಿಧಿವತ್ತಾಗಿ ದಾನ ಮಾಡು : ಇನ್ತೀ ಧರ್ಮ್ಮವಂ ಪ್ರತಿಪಾಳ್ಸಿದವರ್ಗ್ಗೆ ವಾರಣಾಸಿ ಕುರುಕ್ಷೇತ್ರದಲ್ಲಿ ಗೋವುಸಹಸ್ರವಂ ಸಾಂಗಿಕವಾಗಿ ಮಾಡಿದ ಫಲವ ಪಡೆವರು (ಕಾ. IV. ೧-೧೦೪; 1204). [ಸಂ.]

ಸಾಂಗೋಪಾಂಗ (ಗು). ೧. ಎಲ್ಲ ಭಾಗಗಳಿಂದ ಕೂಡಿದ ; ಪೂರ್ಣವಾದ : ಕಲಿತರು ಎಮ್ಮ ಪೂರ್ವನೃಪಾಲಕರು ಸರಹಸ್ಯಸಾಂಗೋಪಾಂಗವಿದ್ಯೆಗಳ (ಕುಮ್ಮಾಲ. ೭-೧). (ನಾ). ೨. (ವೇದದ ವಿಚಾರದಲ್ಲಿ) ಅಂಗ, ಉಪಾಂಗಗಳಿಂದ ಕೂಡಿದುದು; ಪೂರ್ಣವೇದ. ೩. ಎಲ್ಲ ಭಾಗಗಳಿಂದ ಕೂಡಿದುದು; ಪೂರ್ಣವಾದುದು : ತನ್ನೊಡಲ ಖಂಡಂಗಳಂ ಕೊಯಿಕೊಯಿದು ಸಾಂಗೋಪಾಂಗಮಾಗಿರಲೊಪ್ಪಲೊಪ್ಪಲವಂ ತ್ರಿಸಂಧ್ಯೆಯಲಿ ಲಿಂಗಕನುರಾಗದಿ ಸಮರ್ಪಿಸುವಂಗದಲಿ (ಬಸಪು. ೪೪-೨೫); ಸರ್ವಕರ್ಮದ ವಿಧಿಯನಖಿಳನಿಗಮದ ಕಡೆಯನು . . . ಸಾಂಗೋಪಾಂಗಮಾಗಿ ಬರಿಸಿ (ಜೈಮಿಭಾ. ೧೯-೫೪). ೪. ವಿಧಿವತ್ತಾದುದು; ಶಾಸ್ತ್ರೋಕ್ತವಾದುದು: ಮಂಗಳಾಗಮಮಂತ್ರಪೂತಜಲಂಗಳಂ ತಳಿದೊಳಗೆ ಸಾಂಗೋಪಾಂಗದಿಂ ಪಂಚಾಮೃತಸ್ನಪನಂಗಳಂ ಮಾಡಿ ಲಿಂಗವಂ ಪೂಜಿಸಿ (ಬಸಪು. ೧೮-೩೫); ಕೃಷ್ಣವೇಣಿಗೂ ರಾಜನಿಗೂ ಸಾಂಗೋಪಾಂಗವಾಗಿ ವಿವಾಹವು ನೆರವೇರಿತು (ಸಾವಿತ್ರಿ. ೧೫೭). [ಸಂ.]

ಸಾಂಗ್ಯ (ನಾ). ಸಂಪ್ರದಾಯಬದ್ಧವಾದ ಆಚರಣೆ; ವಿಧಿವತ್ತಾದ ಆಚಾರ : ಕೋಣ ಊರೊಳಗೆ ಮೆರವಣಿಗೆ ಹೊರಟು ಎಲ್ಲ ಕೇರಿಯಲ್ಲೂ ಎಲ್ಲ ಮನೆಗಳ ಮುಂದೆಯೂ ಆರತಿಯನ್ನೆತ್ತಿಸಿಕೊಂಡು ಸಾಂಗ್ಯವೆಲ್ಲ ಮುಗಿಸಿಕೊಂಡು ಮತ್ತೆ ಚಾವಡಿಯ ಬಳಿ ಸೇರುವ ಹೊತ್ತಿಗೆ ಮಧ್ಯಾಹ್ನ ನಡುಬಿಸಿಲಾಗುವುದು ವಾಡಿಕೆ (ಸಣ್ಣಕ. VI, ೭೫); ಮನೆಯಾಕೆ ಅದಕೆ ಕರುವಿಗೆ ಕುಂಕುಮವನಿಕ್ಕಿ . . . ಏತರದೊ ಸಾಂಗ್ಯವ ಮಾಡಿದರು (ನವರಾ. V, ೮೧). [< ಸಂ. ಸಾಂಗ./ ತಮಿ. ಚಾಜ್ಕಿಯಮ್]

ಸಾಂಗ್ರಾಣಿ 'ಸಂಗ್ರಾಣಿ$_2$' ನೋ.

ಸಾಂಗ್ರಾಮಿಕ (ಗು). ಯುದ್ಧಕ್ಕೆ ಸಂಬಂಧಿಸಿದ : ದೇಶಾಂತರಂಗಳನೊರ್ವನೆ ತೊಳಲ್ದು ಸಾಂಗ್ರಾಮಿಕೋದ್ದೇಶಂಗಳಂ ಕಲ್ವಂತೆ ಕಲ್ತು (ಜೀವಸಂ. ೪೯-೨೦ ವ). [ಸಂ.]

ಸಾಂಘಿಕ (ಗು). ೧. ಸಾಮೂಹಿಕವಾದ; ಸಮುದಾಯಕ್ಕೆ ಸಂಬಂಧಿಸಿದ : ವಿರಾಮಕಾಲಗಳಲ್ಲಿ ಏನಾದರೂ ಸಾಂಘಿಕಕಾರ್ಯಕ್ರಮಗಳನ್ನು ಅನುಸರಿಸಬಹುದು (ಶಿಕ್ಷದ. ೬೭೫). ೨. ಸಂಘಕ್ಕೆ ಸಂಬಂಧಿಸಿದ; ಸಂಸ್ಥೆಗೆ ಸೇರಿದ : ಸಾಂಘಿಕ ಸರ್ವಾಧಿಕಾರಸಮಾಜದಲ್ಲಿ ವ್ಯಕ್ತಿಸ್ವಾತಂತ್ರ್ಯ ಬರಿ ನಾಲಗೆಯ ತುದಿಮಾತಾಗಿ ಉಳಿಯುತ್ತದೆ (ನವ್ಯಕಾ. ೧೮). (ನಾ). ೩. ಸಮುದಾಯಕ್ಕೆ ಸಂಬಂಧಿಸಿದುದು; ಸಾಮೂಹಿಕವಾದುದು : ಇಲ್ಲಿ ನಾಯಕ ಪ್ರತಿನಾಯಕನ ಸ್ಥಾನವು ಸಾಂಘಿಕವಾಗಿದೆ (ಕೈಲಾಕ. ೧. ಮುನ್ನುಡಿ). [ಸಂ.]

ಸಾಂಘಿಕಜೀವನ (ನಾ). ಸಾಮೂಹಿಕವಾದ ಬದುಕು; ಸಮಾಜಜೀವನ : ಅಭಿಪ್ರಾಯ ಕ್ರತುಶಕ್ತಿಗಳ ವಿವಿಧತೆಯೇ ಸಾಂಘಿಕಜೀವನಕ್ಕೆ ಜೀವಕಳೆಯನ್ನು ತಂದು ಕೊಡುತ್ತದೆ (ನವ್ಯಕಾ. ೧೮). [ಸಂ.]

ಸಾಂಡಣಿ, ಸಂಡಣಿ (ನಾ). ವೇಗವಾಗಿ ಚಲಿಸುವ ಒಂಟೆ; ಸವಾರಿಯ ಒಂಟೆ. ಸಂಡಣಿ .

ಸಾಂಡಣಿಯ ಸವಾರ, ಸಂಡಣಿಸವಾರ = ವೇಗವಾಗಿ ಚಲಿಸುವ ಒಂಟೆಯ ಮೇಲೆ ಸುದ್ದಿಸಮಾಚಾರಗಳನ್ನು ಒಯ್ಯುವವನು; ಒಂಟೆಯ ಸವಾರ : ರಾಜಾ ಜಯಸಿಂಗನು . . . ಪತ್ರವನ್ನು ಬಾದಷಹನಿಗೆ ಬರೆದು ಅದನ್ನು ಸಾಂಡಣಿಯ ಸವಾರನ ಸಂಗಡ ದಿಲ್ಲಿಗೆ ಅದೇ ಕಳಿಸಿ ಸಮಾಧಾನ ಹೊಂದಿದ್ದನು (ಧಾರ್ಮಿತೇ. ೧೮೦); ಖಂಡಣಿ ಹಣವನ್ನು ಕಳುಹಿಸಬೇಕೆಂದು ಸಂಡಣಿಸವಾರರನ್ನು ದುರ್ಗಕ್ಕೆ ಕಳುಹಿಸಿದನು (ಚಿತ್ರಪಾ. ೭೨). [<— ಮರಾ. ಸಾಂಡಣೀ ; ಹಿಂ. ಸಾಂಡನೀ]

ಸಾಂತ$_1$ (ನಾ). ೧. ಶಾಂತವಾದುದು; ನಿರುದ್ವಿಗ್ನವಾದುದು: "ಸಾಂತ್ವನಂ, ಸಾಂತ್ವನೀಯಂ, ಈ ೨ ಸಾಂತಂ" (ಕಾಶಕ್ಯ. ೨೬೨). ೨. ಶಾಂತಸ್ವಭಾವದವನು ; ಸಮಾಧಾನಚಿತ್ತನಾದವನು : "ಸಾಂತ-ಶಾಂತ=ಸಮಾಧಾನಿ, ಶಿವ" (ತದ್ಭಕೋ. ೪೪). ೩. ಶಿವ; ಈಶ್ವರ : "ಪೆಱದಲೆಯಂ . . . ಸಾಂತಂ ಬಾಂದೊಱದಲೆಯಂ ಪಗೆ ಗಣ್ಣಂ ತಱಿಸಂದುಮೆಯಾಣ್ಮಂ" (ಚತುನಿ. ೬); ಜಗದಱಿಕೆಯ ಸಾಂತನರೆವೆಣ್ಣಾಗನೆ! (ರಾಮಾಶ್ವ. ೫೬-೯). [< ಸಂ. ಶಾಂತ]

ಸಾಂತ$_2$ (ಗು). ೧. ಕೊನೆಯುಳ್ಳ; ಅಂತ್ಯವನ್ನುಳ್ಳ. ೨. ಪರಿಮಿತವಾದ; ಸೀಮಿತವಾದ : ಭ್ರಾಂತಿಯೋ ಸಂಪೂರ್ಣಸುಖದಾಶೆ ಬಾಹ್ಯದಲಿ ಸಾಂತಲೋಕದ ಸೌಖ್ಯ, ಖಂಡಖಂಡವದು (ಮಂಕುಶ. ೮೮೯). (ನಾ). ೩. ಕೊನೆಯನ್ನುಳ್ಳುದು; ಅಂತ್ಯವನ್ನುಳ್ಳುದು : ಆದರೆ ವಿಜ್ಞಾನ ಸಾಂತವಾದುದು, ಅನಂತವಲ್ಲ (ಈಶಿಕೆ. ೧೨೪); ಅನಂತಮಂ ಸಾಂತದಲ್ಪಕ್ಕೆಳೆವ ಸಾಹಸಂ ಸಾಲ್ಗುಮಿನ್ (ಶ್ರೀರಾಮಾ. ೧೭೨-೫೫೧). ೪. ಸಕಾರವನ್ನು ಕೊನೆಯಲ್ಲಿ ಉಳ್ಳ ಪದ; ಸಕಾರಾಂತವಾದ ಶಬ್ದ : ನಗಟ್ಟೆರ್ದ ರೇಫ ಉಟ ನಾಂತ ಗಾಂತ ಸಾಂತೋತ್ಕದಿದಿರ ವತ್ವಂ ಪತ್ವಂ ಪುಗುಗುಂ ದ್ವಿತ್ವಂ ಮೇಣ್ . . . ಸಾಂತಕ್ಕೆ - ತರಿಪಂ, ಬರಿಪಂ, ಇರಿಪಂ (ಶಮದ. ೨೬೨ ಪ್ರಯೋ).

[ಸಂ.]

ಸಾಂತಕಾಮಪ (ನಾ). ಒಬ್ಬಾತನ ಹೆಸರು : ಎಚ್ಯೆಯ ಪೆರ್ಮ್ಮಾಡಿಯ ಸಾನ್ತಕಾಮಪನ ಮಗಮ್ ಬಿನಯಿತಮ್ (ಎಕ. VII, ಶಿಕಾರಿ. ೨೮೪-೨ ; 902).

[ಸಾಂತ$_1$ + ಕಾಮ + ಅಪ (< ಅಪ್ಪ$_1$)]

ಸಾಂತಣ್ಣ (ನಾ). ಒಬ್ಬಾತನ ಹೆಸರು: ಕೊಳ್ಳಿಯಣ್ಣನ ಮಗಂ ಸಾನ್ತಣ್ಣಂ ಕಲ್ಲ ನಿಱಿಸಿದಂ (ಎಕ. III (R), ಗುಂಡ್ಲುಪೇ. ೫೦-೧೨; 10ನೆಯ ಶತ). [ಸಾಂತ$_1$ + ಅಣ್ಣ$_1$]

ಸಾಂತತೆ (ನಾ). ಕೊನೆಯನ್ನು ಹೊಂದಿರುವಿಕೆ; ಅಂತ್ಯವನ್ನು ಪಡೆದಿರುವಿಕೆ : ಇಂದ್ರಿಯಧೂಳೀದೂಸರದಿಂದ ಮಸುಳಾದ ಸಾಂತತೆಯ ಪರಿಣಾಮವೇ ವಿಕೃತಿ (ಸೌಂದಸ. ೩೭೩). [ಸಂ. ಸಾಂತತಾ]

ಸಾಂತರ (ನಾ). ಒಂದು ವಂಶ ಮತ್ತು ಆ ವಂಶದ ರಾಜನ ಹೆಸರು : ಶ್ರೀಮತ್ ವಿಕ್ರಮಾದಿತ್ಯ ಸಾಂತರನರಸುಗೆಯ್ಯುತ್ತುಮಿರೆ . . . ಸಾಂತರನ ಶ್ರಿಯಾಚಳವಿ ಶ್ರೀಮತ್ ಚನ್ದಿಗಮ್ . . . ಕಟ್ಟಮರರ್ಕ್ಕೆಜೆಯುಮಂ ಕಟ್ಟಿಸಿ (ಎಕ. VII . ಶಿಕಾರಿ. ೨೮೪-೪; 902); ಸಾನ್ತರಕುಳಕುಮುದಿನೀಶಶಾಂಕಮಯೂಖಾಂಕುರಂ . . . ಶ್ರೀಮನ್ಮಹಾಮಂಡಳೇಶ್ವರಂ ನಂನಿಸಾನ್ತರದೇವ (ಎಕ. VIII, ನಗರ. ೩೫-೪; 1077).

ಸಾಂತರಾದಿತ್ಯ = ಸಾಂತರವಂಶಕ್ಕೆ ಸೂರ್ಯನಂತಿರುವವನು; ಒಂದು ಬಿರುದು : ಸುಭಟಸಂಸ್ತುತ್ಯಂ ಸಾನ್ತರಾದಿತ್ಯಂ . . . ಕೃತಪ್ರತಿಜ್ಞಂ ಬಿರುದ ಸರ್ವಜ್ಞಂ ನಾಮಾದ್ಯನೇಕಾಂಕಮಾಳಾಸಮಳಂಕೃತರ್ ಶ್ರೀಮತ್‌ವೀರಸಾನ್ತರದೇವರ್ (ಮೈಆರಿ. ೧೯೫೦, ೭೪-೧೨; 1053 ?); ಸಾನ್ತರಾದಿತ್ಯಂ ಸಕಳಜನಸ್ತುತ್ಯಂ ನೀತಿಶಾಸ್ತ್ರಜ್ಞಂ ಬಿರುದ ಸರ್ಬ್ಬಜ್ಞಂ ಶ್ರೀಮನ್ಮಹಾಮಂಡಳೇಶ್ವರಂ ನಂನಿಸಾನ್ತರದೇವ (ಎಕ. VIII, ನಗರ. ೩೫-೫; 1077). [?]

ಸಾಂತರಶ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಸಾನ್ತರಶರ್ ರಾಜ್ಯಂಗೆಯ್ಯೆ ವುಜ್ಜಿಳನ್ ಗವುಂದದ ಮಹಾಜನಕ್ಕೆ ಶಾಲೆ ಕೊಟ್ಟುದು ಆಚನ್ದ್ರತಾಂಕಂ (ಎಕ. VII, ಶಿಕಾರಿ. ೪೫(ಬಿ)-೩೫; ಸು. 890 ?). [ಸಾಂತ$_1$ + ಅರಶ (< ಅರಸ$_1$)]

ಸಾಂತಳಿ 'ಸಾಂತಳ್ಗೆ' ನೋ.

ಸಾಂತಳಿಗೆ 'ಸಾಂತಳ್ಗೆ' ನೋ.

ಸಾಂತಳೆಗೆ 'ಸಾಂತಳ್ಗೆ' ನೋ.

ಸಾಂತಳ್ಗೆ, ಸಾಂತಳಿ, ಸಾಂತಳಿಗೆ, ಸಾಂತಳೆಗೆ, ಸಾಂತಟಿಗೆ, ಸಾತ್ತಟಿಗೆ (ನಾ). ಒಂದು ನಾಡಿನ ಹೆಸರು; P ಈಗಿನ ಕಳಸ, ಹುಂಚ ಇತ್ಯಾದಿ ಸ್ಥಳಗಳಿರುವ ಪ್ರದೇಶ : ಶ್ರೀಜಗೇಸಿ ಚಾನ್ತರಾಜಕುಲತಿಲಕ ಸಾನ್ತಳ್ಗೆಯ ಸಮಸ್ತಮುಮನಾಳೆ (ಎಕ. VII, ಶಿಕಾರಿ. ೨೮೩-೪; ಸು. 830). **ಸಾಂತಳಿ** : ಶ್ರೀಮನ್ಮಹಾಮಂಡಳೇಶ್ವರಂ ಕುಂದ ಮರಸರು ಬನವಾಸಿಪನ್ನಿರ್ಬ್ಬಾಸಿರಮುಮಂ ಸಾನ್ತಳಿಸಾಸಿರಮುಮಂ . . . ಸುಖಸಂಕಥಾ ವಿನೋದದಿಂ ಬಲಿಪುರದ ನೆಲೆವೀಡಿನೊಳು ರಾಜ್ಯಂಗೆಯ್ಯುತ್ತಮಿರ್ದ್ದು (ಎಕ. VII, ಶಿಕಾರಿ. ೧೨೫-೨೪; 1019). **ಸಾಂತಳಿಗೆ** : ಶ್ರೀಮತ್ಕುನ್ದರಾಜಂ ಬನವಾಸಿಪನ್ನಿರ್ಬ್ಬಾಸಿರಮುಂ ಸಾನ್ತಳಿಗೆಸಾಯಿರಮುಮನಾಳುತ್ತಿರೆ (ಮೈಆರಿ. ೧೯೨೯, ೫೩-೩; 1018); ಅರಸಿಮಯ್ಯನ ಮಗಂ . . . ಧಾರಾಪೂರ್ಬ್ಬಕದಿಂ ಸಾಂತಳಿಗೆಸಾಸಿರದ ಬಳಿಯ ಕೊಡನಾಡು ಮೂವತ್ತರೊಳಗಣ ಕುಡಿಗೆರಿಯ ಮನ್ನಿಯವೊಳಗಾಗಿ ಸರ್ಬ್ಬಾಭ್ಯಂತರಸಿದ್ಧಿಯಿಂದ ಕೊಟ್ಟಂ (ಎಕ. VII, ಶಿಕಾರಿ. ೫೩-೨೫; 1027). **ಸಾಂತಳೆಗೆ** : ಬದ್ದುಗ ಬನವಸಿ XXX ತ್ತಯ್ಯ ಸಾನ್ತಳೆಗರಸುಗೆಯೆ (ಮೈಆರಿ. ೧೯೨೩, ೮೧-೫; 933). **ಸಾಂತಟಿಗೆ** : ನೆಗಟ್ಟ ಗೋನರಸಂ ಸಾಂತಟಿಗೆಸಾಸಿರಮುಮಂ ದುಷ್ಟನಿಗ್ರಹ ಸಿಷ್ಟಪ್ರತಿಪಾಲನದಿಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರ್ದ್ದ ಪಿರಿಯಿಂಗುಣದ ಕುಮಾರಸ್ವಾಮಿ ಭಟ್ಟಸೋಮಯಾಜಿಗಳ್ಗೆ . . . ಮಾಡಿಕೊಟ್ಟಲ್ಲಿ (ಎಕ. VIII, ಸಾಗರ. ೧೦೮-೨೯; 1042). **ಸಾತ್ತಟಿಗೆ** : ವಾ [ಪಣ್ರ]ಸಯ್ಯಂ ಸಾತ್ತಟಿಗೆ ಎಟ್ಟುತ್ತುಮನಾ XXX ಣಮನಾಳುತ್ತಮಿರೆ (ಸೌಇಇ XX, ೨೦-೧೧; 1015). [?]

ಸಾಂತಟಿಗೆ 'ಸಾಂತಳ್ಗೆ' ನೋ.

ಸಾಂತಿ (ನಾ). ಶಾಂತಿ; ನಿರುದ್ವಿಗ್ನತೆ : ಶಾಲೆ-ಸಾಲೆ, ಶಾಂತಿ-ಸಾಂತಿ (ಶಮದ. ೨೫೩ ಪ್ರಯೋ). 'ಸಾಂತಿದಿಟ್ಟಿ' ಪರಾ. [< ಸಂ. ಶಾಂತಿ]

ಸಾಂತಿಗ 'ಸ್ನಾನೀಕ' ನೋ.

ಸಾಂತಿದಿಟ್ಟಿ (ನಾ). ಶಾಂತಿಯಿಂದ ಕೂಡಿದ ದೃಷ್ಟಿ; ಸಮಾಧಾನದ ನೋಟ: ತಣ್ಗದಿರಂದದ ಸಾಂತಿದಿಟ್ಟಿಯಿಂ ಪೊಂಗುತುಮೊರ್ಮೆ ನಿಟ್ಟಿಸುತುಂ . . . ನಿಂದಪಳ್ (ಚಕಪಿ ೬-೨೪೨). [ಸಾಂತಿ + ದಿಟ್ಟಿ]

ಸಾಂತ್ವ (ನಾ). ೧. ಸಮಾಧಾನ ಮಾಡುವುದು ; ಉಪಶಮನಗೊಳಿಸುವುದು. ೨. ಹಿತವಾದ ಮಾತು; ಮೃದುವಚನ: "ಬುದ್ಧಿಇಲ್ಲತೆಯಿಸುವ(?) ನುಡಿಯಂ ಸಾಂತ್ವವೆಂಬುದು" (ಹಲಾಯು. ೨೩-೧೪೦). [ಸಂ.]

ಸಾಂತ್ವನ (ನಾ). ೧. ಸಮಾಧಾನಪಡಿಸುವುದು; ಸಂತೈಸುವಿಕೆ : "ಪ್ರಣೀತಿಃ, ಅನುನಯಃ, ಪ್ರಣಿಪಾತಃ, ಸಾಂತ್ವನಂ — ಈ ೪ ಸಂತೈಸುಹ" (ಹಲಾಯು. ೧೨೩-೬೪). ೨. ಸಮಾಧಾನಪಡಿಸುವ ಮಾತು; ಸಂತೈಕೆಯ ನುಡಿ : ತನ್ನ ನೋವನ್ನು ತಿಳಿಸಿ ಹೇಳಿ ಸಾಂತ್ವನವನ್ನು ಪಡೆಯಲು ತಾಯಿಯಿಲ್ಲದೆ, ನರಹರಿಯು ಜರ್ಜರಿತನಾಗಿದ್ದ (ಸಮಜೀ. ೨೫೮). ೩. ಸಮಾಧಾನ; ಉಪಶಮನ : ಅವಳ ಆ ಅಳುವಿಕೆಯಲ್ಲಿ ಒಂದು ಬಗೆಯ ಸಾಂತ್ವನವಿತ್ತು (ಇಷ್ಟಕ. ೪೪೩). [ಸಂ.]

ಸಾಂತ್ವನಗುಟ್ಟು (ಕ್ರಿ). ಸಮಾಧಾನದ ಮಾತುಗಳನ್ನಾಡು; ಸಂತೈಕೆಯ ಮಾತುಗಳನ್ನಾಡು : ಎಲ್ಲರೂ ತಮ್ಮ ತಮ್ಮ ಪಂಗಡಗಳೊಳಗೆ ಸಾನ್ತ್ವನಗುಟ್ಟಿ ಕೊಳ್ಳುತ್ತಿರುವರು (ಬೆಟ್ಟಅ. ೧೩-೧೨). [ಸಾಂತ್ವನ + ಕುಟ್ಟು$_1$]

ಸಾಂತ್ವನವಚನ (ನಾ). ಸಮಾಧಾನದ ಮಾತು; ಸಂತೈಸುವ ನುಡಿ : ಜನನೀಜನಕರ್ ಬಾಂಧವಜನಸಹಿತತ್ತುಟೆ ಬಂದು ನಾನಾವಿಧಸಾಂತ್ವನವಚನ ಸಹಿತಮುಸಿರ್ದರ್ ಮನೆಗೊಡಗೊಂಡೊಯ್ಯಲೆಂಬ ಬಗೆಯಿಂದೆನ್ನಂ (ಕಾದಂಪೂ. ೯೫೪); ವಿವಿಧ ರೀತಿಯಿಂದ ಸಾಂತ್ವನವಚನಗಳನ್ನಾಡಿದಳು (ಅಶೋಕ. ೨೩೧). [ಸಂ.]

ಸಾಂತ್ವವಚನ (ನಾ). = ಸಾಂತ್ವನವಚನ : ಅನಿಂದ್ಯಮಪ್ಪ ನಿಜಚರಿತಮಂ ನಿಂದಿಸಲಾಗದೆಂದನೇಕಪುರಾಣಕಥಾಪ್ರಕಥನದೊಳಂ ಬಹುಪ್ರಕಾರಸಾಂತ್ವವಚನ ದೊಳಮೆಂತಾನುಮರಸಂ ಸಂತೈಸಿ (ಕಾದಂಪೂ. ೯೬೫). [ಸಂ.]

ಸಾಂದರ್ಭಿಕ (ಗು). ಸಂದರ್ಭಕ್ಕೆ ಸಂಬಂಧಿಸಿದ; ಪ್ರಾಸಂಗಿಕವಾದ : ಅಂತೇ ಸಾಂದರ್ಭಿಕ ಅಡೆ-ತಡೆಗಳೊಡನೆ ಇದನ್ನು ಕೆಲಕಾಲದ ತನಕ ಮುಂದುವರಿಸಿದೆನು (ಬಂಜನ್. ೧೪೩). [ಸಂ.]

ಸಾಂದರ್ಭಿಕರಜ, ಸಾಂದರ್ಭಿಕರಜೆ (ನಾ). (ಕಚೇರಿ ಮುಂತಾದ ಕಡೆಗಳಲ್ಲಿ) ಅಗತ್ಯವಾದಾಗ ಪೂರ್ವಭಾವಿಯಾದ ಸೂಚನೆಯಿಲ್ಲದೆ ತೆಗೆದುಕೊಳ್ಳ ಬಹುದಾದ ರಜ : ಅವರು ಇಂದು ಸಾಂದರ್ಭಿಕರಜ ತೆಗೆದುಕೊಂಡಿದ್ದಾರೆ (ರೂಢಿ). **ಸಾಂದರ್ಭಿಕರಜೆ** : ನಮ್ಮ ಅಧಿಕಾರಿಗಳು ಎರಡು ದಿನಗಳಿಂದ ಸಾಂದರ್ಭಿಕರಜೆಯಲ್ಲಿದ್ದಾರೆ (ರೂಢಿ). [ಸಾಂದರ್ಭಿಕ + ರಜ$_2$ (< ರಜಾ)]

ಸಾಂದರ್ಭಿಕರಜೆ 'ಸಾಂದರ್ಭಿಕರಜ' ನೋ.

ಸಾಂದು, ಸಾದು$_1$ (ನಾ). ೧. (ಚಳೆಯ, ಸಾರಣೆ ಇತ್ಯಾದಿಗಳಿಗಾಗಿ ಉಪಯೋಗಿಸುವ) ಕಸ್ತೂರಿ, ಕರ್ಪೂರ ಮೊದಲಾದ ಪರಿಮಳದ್ರವ್ಯಗಳ ಮಿಶ್ರಣ,— ಒಂದು ಬಗೆಯ ಗಂಧದ್ರವ್ಯ : ಮುತ್ತಿನ ಪಚ್ಚೆ ಮಾಣಕದ ವಜ್ರದ ಕೇಱಿಯೊಳೊಂದಿ ಸಾಂದಿನೊಳ್ ಕತ್ತುರಿಯೊಂದು ಕೋಳ್ಗಸಱೊಳೋಕುಳಿ ಚಂದನ ಗಂಧವಾರಿಯೊಳ್ (ಪಂಪಭಾ. ೧೪-೨೦); ಸಾ[ಂ]ದಿನೊಳಾದ ಸಾರವಣೆ ಮುತ್ತಿನೊಳಿಕ್ಕಿದ ರಂಗವಲ್ಲಿ (ವರ್ಧಮಾ. ೧-೭೦). ೨. ಚಂದನ, ಕಸ್ತೂರಿ, ಕೇಸರಿ ಇತ್ಯಾದಿಗಳಿಂದ

ಅಥವಾ ಅಕ್ಕಿ, ರಾಗಿ ಮುಂತಾದುವುಗಳ ಕರಿಕಿನಿಂದ ತಯಾರಿಸುವ, ಹಣೆಯಲ್ಲಿ ಬೊಟ್ಟು ಅಥವಾ ತಿಲಕವಿಟ್ಟುಕೊಳ್ಳಲು ಬಳಸುವ (ಕಪ್ಪುಬಣ್ಣದ) ಪರಿಮಳದ್ರವ್ಯ : ನೆರೆವದಳದರವ ಸಾಂದಿನ ಮೊರವಳಿಗಳ ಪರೆವ ಕಂಪನೆರವನಿಳನ ಮುಯ್ಯೊರವ ವಿಟಭೋಗಿಗಳ ವಿಸ್ತರದಿಂ ಸೊಗಯಿಪುವು ಘಟ್ಟವಳರಂಗಡಿಗಳ್ (ಪುಷ್ಪಪು. ೨-೮೩). 'ಈಳೆಸಾಂದು' ಪರಾ. ಸಾದು[1] : ೧. ಓರಣದ ಬೀದಿಯಲಿ ತಳಿತುವು ತೋರಣಂಗಳು ಹಲವು ಪರಿಯಲಿ ಸಾಲಿಸಿತು ಮುಗಿಲುಗಳು ಸಾದು ಜವ್ವಾದಿಕೆಸಲಿನಲಿ (ಸಂಭವ. ೨೦-೯೯); ಹೊನ್ನ ಬಾಗಿಲುಗಳ ರನ್ನದೋರಣಗಳ ಪನ್ನೀರು ಸಾದಿನಿಂದಸೆವಾ ಕನ್ನಡಿನೆಲದರಮನೆಯೊಳು ಹೊಕ್ಕು ನಿರ್ಭಾನ್ತಂತರಂಗರ್ಕೆದಿದರು (ಭರಚ. ೩-೬೬). ೨. ವನಜಂ ಕೋಷ್ಮಂ . . . ಗಜಕ್ಕೌದ್ರಮಿವಂ ದಿನಷಷ್ಟಿವರಂ ಜತುಭಾಜನದೊಳ್ ಪೊಯ್ದಿರಿಸೆ ಸಾದಿನಾಸವಮಕ್ಕುಂ (ಶೋಕೋಪ. ೭-೫೦); ಮೃಗಮದಮನಲಂಪಿಕ್ಕಿ ಸಾದಿನ ಕಂಪಂ ಕಕ್ಕಪುಟದೊಳು ಕೈಕೊಳಿಸಿ (ಬಾಸರ. ೮-೭); ದುರ್ದಮ ಕಾಳಕೂಟಮಂ ಕರಕಮಳಂಗಳಿಂ ಪೊಸದು ಸಾದಿನ ಮಾಟ್ಕೆಯೊಳೊಲ್ದು ಕಂಠದೊಳ್ ಧರಿಸಿದ ನೀಲಕಂಠನ ನಿಜಾಕೃತಿಯಂ ನೆನೆದೆಂ ನೃಪಾಲಕಾ (ದಶಕು. ೯-೧೦೯); ವರಜವಾಜಿಯ ಶೃಂಗಗಳ . . . ಸಾದಿನ ಭರಣಿಗಳ ಮೃಗನಾಭಿಗಳನಡಕಿದರು ಬಂಡಿಯಲಿ (ಹುಬ್ಮಾಆ. ೧೨-೧೬).

ಸಾಂದಿನ ಬೊಟ್ಟು, ಸಾದಿನ ಬಟ್ಟು, ಸಾದಿನ ಬೊಟ್ಟು = (ಕಪ್ಪುಬಣ್ಣದ) ಗಂಧದ್ರವ್ಯದಿಂದ ಹಣೆಯಲ್ಲಿ ಇಟ್ಟುಕೊಳ್ಳುವ ದುಂಡಾದ ಗುರುತು, — ತಿಲಕ; ಸಾದಿನಿಂದ ಇಟ್ಟುಕೊಳ್ಳುವ ಬೊಟ್ಟು : ಸಾಂ[ಪ್ರಾಹಾಂ. ಸಾ]ದಿನ ಬೊಟ್ಟು ಚೆಲ್ವಿನಗ್ಗಳಿಕೆಯನೀಯೆ ಕಣ್ಗೆಸವ ಯಕ್ಷಿಯನಬ್ಜದಳಾಯತಾಕ್ಷಿಯಂ ಅಂತು ಕವಿತಾವಿಲಾಸಂ ಕಂಡು (ಲೀಲಾವ. ೮-೫೭); ಗಗನಲಕ್ಷ್ಮಿಯ ಮೊಗದಂತಿರುವ ಯಿಂದುಮಂಡಲದಲ್ಲಿ ಸೊಗಸಿನಿಂದಿಟ್ಟ ಸಾದಿನ ಬಟ್ಟಿದೆನ್ನುವರು (ಸೌಗಂಧಿ. ೧೮೮-೧೯); ಮಿಸುಪ ಸಾದಿನ ಬೊಟ್ಟು ಪೊದಟ್ಟ ಗಲ್ಲದೊಳ್ ತೊಲಗುವ ದಿಟ್ಟಗರ್ವ . . . ಮನಂಗೊಳೆ (ಚಕವಿ. ೩-೫೨).

[ದೇ. ॥ ತಮಿ. ಚಾನ್ದು; ಮಲ. ಚಾಂದು; ಕೊಡ. ಚಾಂದ್; ತೆಲು. ಚಾದು]

ಸಾಂದ್ರ (ಗು). ೧. ದಟ್ಟವಾದ; ನಿಬಿಡವಾದ : ಪರೆದಿರೆ ರಾಗಂ ತನ್ನೊಳ್ ನಿರಂತರಂ ಗಗನವಿವರಮೊಪ್ಪಿತ್ತಾದಂ ವರಪಾರಿಜಾತಕುಸುಮೋತ್ಕರಸಾಂದ್ರ ಪರಾಗವಿಸರ ಪಿಂಜರಿತಂಬೊಲ್ (ಕವಿಕಾ. ೧-೧೦೨); ಅನುಚರಿವೊಲ್ ಸಂಜೆ ಸಂಜಾತರಕ್ತಾಂಬರದಿಂದಂ ಬಾಸಣಿಪ್ಪಂತೆಸೆದುದಸದಳಂ ಸಾಂದ್ರಶೋಣಾಂಶುಜಾಲಂ (ಕಾದಂಬ. ೪೧೬). ೨. ಗುಂಪಾದ; ಒತ್ತಾದ : ಅರವಿಂದಾಕರಸಾಂದ್ರಪದ್ಮವನಮಧ್ಯೋದ್ದೇಶದೊಳ್ ಲಕ್ಷ್ಮಿ . . . ಪ್ರತ್ಯಕ್ಷಮಿರ್ಪಳ್ ನಿರಂತರಂ (ಕಾದಂಪೂ. ೭೭೩). ೩. ಬಲವಾದ; ದೃಢವಾದ. ೪. ಅಧಿಕವಾದ; ಹೆಚ್ಚಾದ : ಸಿಂಹಳೇಂದ್ರಂ ಸಾಂದ್ರಹರ್ಷಮನಾಂತು ನಡೆದಿದಿರ್ಗೊಂಡು ರಾಜಶೇಖರರಾಜೇಂದ್ರನಂ . . .ತರ್ಪಾಗಳ್ (ರಾಜತ. ೬-೧೩೭ ವ). ೫. ಮೃದುವಾದ; ನಯವಾದ : ಪಿಂಗಿತು ತಮಂ ಸಾಂದ್ರಚಂದ್ರಾತಪಂ ವಸರಿಸಿತು ಕಣ್ಗೆ ಮಂಗಳವಾಗಲು (ಹಚಕಾ. ೩-೮೬); ತುಂದದಲೀಡಿರಿದು ಕುಡಿಕುಡಿದು ಬೊಬ್ಬಿಟ್ಟಾಡುತಿರ್ದವು ಸಾಂದ್ರಚಂದ್ರಿಕೆಯಲಿ ಚಕೋರಿಗಳು (ಹುಬ್ಮಾದ್ರೂ. ೧೭-೧೪). ೬. ಅಂಟಿಂಟಾದ ; ಜಿಗುಟಾದ. ೭. ಹಿತವಾದ. (ನಾ). ೮. ದಟ್ಟವಾದುದು; ನಿಬಿಡವಾದುದು : "ನಿರಂತರಂ, ಘನಂ, ಸಾಂದ್ರಂ, ಬಹುಳಂ, ವಿರಳೇತರಂ-ಈ ೫ ಮಂದಂ" (ಹಲಾಯು. ೧೧೯-೩೨). ೯. ತೀವ್ರವಾದುದು; ಉತ್ಕಟವಾದುದು : ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೋ ಮಾದಲಾಂಬಿಕಾನಂದನನು ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯಮಾಳ್ಪನೆಂತೋ ಮಾದರಸನ ಮೋಹದ ಮಗನು (ಸರ್ವಜ್ಞ. ೧೯೪-೮); ಸಾಂದ್ರವೆನಲ್ಕೆ ಸಂಕುವಿಡೆ ತದ್ರುಚಿ ರಾಜಿಸೆ ಮೌಕ್ತಿಕಾವಳೀರುಂದ್ರವರತ್ರೆ ಬಿತ್ತರಿಸೆ ಜಂಚಿಯಿನಂಚಿತಮಾಗೆ ಪಟ್ಟದಂತೀಂದ್ರನುಮಿಂತು ಪಣ್ಣಿ ಮಿಗೆ ಕಂಗೊಳಿಸುತ್ತಮೆ ಬಂದುದು (ಶಾಶೀಶ್ವ. ೧೦ ೬೧). ೧೦. ಕಾಡು; ಅರಣ್ಯ. [ಸಂ.]

ಸಾಂದ್ರತೆ (ನಾ). ೧. ದಟ್ಟವಾಗಿರುವಿಕೆ; ನಿಬಿಡತೆ : 'ಜನಸಾಂದ್ರತೆ' ಪರಾ. ೨. [ಭೌತವಿ] "ಏಕಮಾನದ ಗಾತ್ರದಲ್ಲಿರುವ ದ್ರವ್ಯದ ಮೊತ್ತ : ಒಂದು ವಸ್ತುವಿನ ದ್ರವ್ಯಪರಿಮಾಣಕ್ಕೂ ಘನಪರಿಮಾಣಕ್ಕೂ ಇರುವ ಪ್ರಮಾಣದಿಂದ ಅಳೆದ ಸಾಂದ್ರತೆ. ಗುಂಪುಗೂಡಿದ ಸ್ಥಿತಿ; ನಿಬಿಡತೆ ; ಸಂದಣಿ" (Density. ಇಂಜಿ): ಪೂರ್ವಕಾಲದಲ್ಲಿ ಬೆಳೆಯುತ್ತಿದ್ದ ಗಿಡಮರಗಳೇ ಇಂದಿಗೂ ನಮ್ಮ ನೆಲದ ಮೇಲೆ ಬೆಳೆಯುತ್ತಿವೆಯಾದರೂ ಅವುಗಳ ಹರವು-ನಕಾಸೆಯೂ ಸಾಂದ್ರತೆಯೂ ಹಾಗೆಯೇ ಉಳಿದುಕೊಂಡು ಬಂದಿದೆಯೆಂದು ಭಾವಿಸುವುದು ಸರಿಯಲ್ಲ (ಶಾಸಗಿ. ೧೦).

[ಸಂ. ಸಾಂದ್ರತಾ]

ಸಾಂದ್ರಪದ (ನಾ). [ಛಂದ] ವರ್ಣ ಛಂದಸ್ಸಿನ ಇಪ್ಪತ್ತಾರು ಛಂದಸ್ಸುಗಳಲ್ಲಿ ಹನ್ನೊಂದನೆಯ, ಪಾದದಲ್ಲಿ ಹನ್ನೊಂದು ಅಕ್ಷರಗಳನ್ನುಳ್ಳ, ತ್ರಿಷ್ಟುಪ್ಪೆಂಬ ಛಂದಸ್ಸಿನ ಒಂದು ಸಮವೃತ್ತ : ಚಂದ್ರನಿನಭ್ರಂ ಸುರವುರಮಾಶರ್ ರುಂದ್ರಪದಂ ತಾಂ ರಸಯತಿಯಿಂದಂ ಸಾಂದ್ರಪದಂ ಕೇಳ್ ಧರೆಯೊಳಿದಕ್ಕುಂ (ಛಂದೋಂಯು. ೨-೧೩೩). [ಸಂ.]

ಸಾಂದ್ರಾಣಿ 'ಸಂಗ್ರಾಣ್ಮೆ' ನೋ.

ಸಾಂದ್ರಾಣಿಕಲ್ಲು (ನಾ). ವ್ಯಾಯಾಮ ಮಾಡುವಾಗ ಬಳಸುವ, ಮಧ್ಯೆ ರಂಧ್ರ ವಿರುವ ವೃತ್ತಾಕಾರವಾದ ಕಲ್ಲು : ಉಳಿದ ಸ್ಥಳದಲ್ಲಿ ಕಸರತ್ತಿನ ಸಾಮಗ್ರಿಗಳು-ಕರೇಲ, ಸರವಳಿ, ಸಾಂದ್ರಾಣಿಕಲ್ಲು ಮೊದಲಾದವು (ಕಲನ. ೩೭೪).

[ಸಾಂದ್ರಾಣಿ (< ಸಂಗ್ರಾಣ್ಮೆ) + ಕಲ್ಲು (< ಕಲ್)]

ಸಾಂದ್ರಿಸು (ಕ್ರಿ). ಅಧಿಕವಾಗು; ಅತಿಶಯವಾಗು : ಚಂದ್ರಾರ್ಕಕೋಟಿಗೆ ಸಾಟಿ ಮಾಟನೆ ಕಾಂತಿ ಸಾಂದ್ರಿಸೆ ಬರುತಿರ್ದಳಾಕೆ (ಭರಚ. ೭೮-೧೫೧). [ಸಾಂದ್ರ + -ಇಸು]

ಸಾಂಧಾರ (ನಾ). [ವಾಸ್ತು] (?) : ಚಾಳುಕ್ಯಶಿಲ್ಪದಲ್ಲಿ ದ್ರಾವಿಡದಲ್ಲಿದ್ದಂತೆ ಸಾಂಧಾರಪ್ರದಕ್ಷಿಣಮಾರ್ಗ ಗರ್ಭಗುಡಿಯ ಸುತ್ತಲೂ ಇರುವುದಿಲ್ಲ (ಹೊಯ್ಸಾ. ೯); ಗದಗಿನ ಸರಸ್ವತಿದೇವಾಲಯದಲ್ಲಿ ಪ್ರದಕ್ಷಿಣಮಾರ್ಗ ಮುಚ್ಚಲ್ಪಟ್ಟಿದೆ. ಚಾಳುಕ್ಯ ಹೊಯ್ಸಳಶಿಲ್ಪದಲ್ಲಿ ಇದೊಂದೇ ಸಾಂಧಾರಪ್ರದಕ್ಷಿಣವಾಗಿದೆ (ಹೊಯ್ಸಾ. ೧೧). [?]

ಸಾಂಧ್ಯ (ಗು). ಸಾಯಂಕಾಲಕ್ಕೆ ಸಂಬಂಧಿಸಿದ; ಸಂಧ್ಯಾಕಾಲದ : ಆಶೀ ವಿಷೋಗ್ರಾಸ್ತ್ರಮಂ ಖಗರಾಜಾಸ್ತ್ರನಿಪಾತದಿಂ ಕಡಿಸಿ ದಿವ್ಯಾಸ್ತ್ರಂಗಳಿಂ ಗೆಲ್ವನಿಂದಗಿಯಂ ಸಂಹೃತಿಕಾಲಸಾಂಧ್ಯಜಲದಾರಕ್ಕೇಕ್ಷಣಂ ಲಕ್ಷ್ಮಣಂ (ಪಂಪಾಮಾ. ೧೪-೨೦). [ಸಂ.]

ಸಾಂಪದ (ನಾ). ಉಪಕರಣ ;ಸಲಕರಣೆ : ಆಗಳಮರರಾಜಂ . . . ಯಾಗಪ್ರಸ್ತಾವನಾ ಪ್ರಣವ ಪ್ರಣ[ತಿ]ಪೂರ್ವಕಂ ಸಾಂಪದಮ[ಂ] ನೋಡಿ ಪದ್ಮಾದಿಸರೋವರಪ್ರಯಾತ ಪುರಾಂಬುವಿಂದೀಕ್ಷಣಂಗೆಯ್ದು ಭೂಮಿಶೋಧನಂ ಮಾಡಿ (ವರ್ಧಮಾ. ೧೨-೨೩ ವ) [ಸಂ.]

ಸಾಂಪರಾಯ (ಗು). ೧. ಯುದ್ಧಕ್ಕೆ ಸಂಬಂಧಿಸಿದ. (ನಾ). ೨. ಯುದ್ಧ; ಕದನ : "ಸಂಗ್ರಾಮಃ, ಸಮಿತಿಃ . . . ಸಂಗರಃ, ಸಾಂಪರಾಯಃ, ಸಮಾಘಾತಃ, ಪ್ರಘಾತಃ . . . ವಿಗ್ರಹಃ- ಈ ೩೫ ಕಾಳಿಗಂ" (ಹಲಾಯು. ೭೫-೩೦); ಈ ಸಾಂಪರಾಯದಿಂ ಪಲಾಯನವು ಲೇಸೆಂದು ವಾಸವನತಿಜವಾಶ್ರವವುನಿಸಿದುಚ್ಚೈಶ್ರವವುನೇಱಿ ಮನೋವೇಗದಿಂ ಪೋಗೆ (ಜಗವಿ. ೪-೩೯ ವ). ೩. ಮುಂದಿನ ಬದುಕು; ಭವಿಷ್ಯದ ಜೀವನ ; ಭವಿಷ್ಯ. ೪. ಆಪತ್ತು; ಕೇಡು : "ಸಾಂಪರಾಯಃ- ೧ ಆಪತ್ತು, ಯುದ್ಧ, ಭವಿಷ್ಯತ್ಕಾಲ.೩" (ಸಿದ್ಧಾಂತಿ. ೪೦೯). ೫. ತನಿಖೆ; ತಪಾಸಣೆ. ೬ ಅನಿರ್ದಿಷ್ಟತೆ; ಅಸ್ಪಷ್ಟತೆ. ೭. ಸಹಾಯಕ; ಸೇವಕ. ೮. [ಜೈನ] ಲೌಕಿಕಜೀವನ; ಗೃಹಸ್ಥಜೀವನ : ಸಾಂಪರಾಯಮೆಂಬುದು ಸಂಸಾರಂ ಅದಂ ಪ್ರಯೋಜನಮಾಗುಳ್ಳ ಕರ್ಮಂ ಸಾಂಪರಾಯಿಕಂ (ತತ್ತ್ವಸ್ತ್ರ. ೨೫೫). [ಸಂ.]

ಸಾಂಪರಾಯಿಕ (ಗು).೧. ಯುದ್ಧಕ್ಕೆ ಸಂಬಂಧಿಸಿದ; ಯುದ್ಧತಂತ್ರದ ; ಯುದ್ಧೋಪಾಯದ. ೨. ವಿಪತ್ತಿನ; ತೊಂದರೆಯ. (ನಾ). ೩. ಯುದ್ಧ; ಕದನ : "ಯುದ್ಧಂ, ಅಯೋಧನಂ, ಜನ್ಯಂ, ಪ್ರಧನಂ . . . ಸಾಂ[ಪ್ರಾಹಾಂ. ಸಂ]ಪರಾಯಿಕಂ, ಸಮಯಃ . . . ಆಜಿಃ, ಸಮಿತ್, ಯುತ್- ೩೦ ಯುದ್ಧಕ್ಕೆ ಹೆಸರುಗಳು" (ಸಿದ್ಧಾಂತಿ. ೨೬೯); ಪಳಂಚುಪ ಚಕ್ರತೋಮರಶಕ್ತಿ ಮುಖ್ಯ ಸಮಸ್ತಶಸ್ತ್ರಂ ಪೊಗರ್ಗಳ ನೀಲಿಮಾಯುಧಜಾಲಮಂ ತಳೆದುಲ್ಲಸತ್ಸಾಂಪರಾಯಿಕಮಂ ನೆಗಟ್ಟಿದರಂದು ಸಂದ ಪರಾಕ್ರಮರ್ (ಉದ್ಭಟ. ೪-೧೦೬). ೪. ಯುದ್ಧದಲ್ಲಿ ಬಳಸುವ ರಥ; ಯುದ್ಧರಥ : "ಕಾಳಿಗದ ರಥಮಂ ಸಾಂಪರಾಯEಯಿತಿಕಮಂಬುದು" (ಹಲಾಯು. ೭೩-೨೯). ೫. [ಜೈನ] ಸಂಸಾರಕ್ಕೆ ಕಾರಣಭೂತವಾಗಿರುವ ಕರ್ಮಾಸ್ರವ :

ಸಕಷಾಯಾಕಷಾಯರಪ್ಪ ಪ್ರಾಣಿಗಳ್ಗೆ ಸಾಮಾನ್ಯದಿಂ ಸಾಂಪರಾಯಿಕೇರ್ಯಾಪಥ ಕರ್ಮಾಸ್ರವಂಗಳಕ್ಕುಮೆಂದು ನಿಶ್ಚಿಯಿಸುವುದು (ವರ್ಧಮಾ. ೧೪-೪೩ ವ). [ಸಂ.]

ಸಾಂಪು (ನಾ). ಒಂದು ಬಗೆಯ ಅಳತೆ : ಇತ್ತ ಧರ್ಮ್ಮನಾಲ್ವತ್ತು ಸಾಮ್ಮಿನೊಳೊನ್ದು ಮೂವತ್ತರ ಕೆಟಗುಂ ಇನ್ನೂಱ ಮೇಲುಂ ಅರೆ ಸಾಮ್ಮು (ಎಇ.VI. ೧೭೬-೭; 793). [?]

ಸಾಂಪ್ರತ್ $_1$ (ಗು). ೧. ತಕ್ಕುದಾದ ; ಯೋಗ್ಯವಾದ. ೨. ಈಗಿನ; ವರ್ತಮಾನದ: 'ಸಾಂಪ್ರತಕಾಲ' ಪರಾ. (ನಾ). ೩. ಉಚಿತವಾದುದು; ತಕ್ಕುದು : "ಸಾಂಪ್ರತಂ, ಸ್ಥಾನೇ-೨ ಯುಕ್ತೇ, ಉಚಿತವು" (ಸಿದ್ಧಾಂತಿ. ೪೩೪). ೪. ಈಗಿನ ಕಾಲ ; ವರ್ತಮಾನ ಕಾಲ: ಹಿಂದುಸ್ತಾನದಲ್ಲಿ ಸಾಂಪ್ರತಕ್ಕೆ ಅದರ ಪ್ರಚಾರ ವಿಶೇಷ ಇಲ್ಲ (ಮುಂಬಯಿ. ೪-೨೧೦); ಎರಡು ತೆರ ಮೌಲ್ಯಂಗಳೆಲ್ಲಕಂ ಲೋಕದಲಿ ಪರಮಾರ್ಥಕೊಂದು, ಸಾಂಪ್ರತದರ್ಥಕೊಂದು (ಮಂಕಿಕ. ೬೬೩). [ಸಂ.]

ಸಾಂಪ್ರತ್ $_2$ (ಅ). ಈಗ; ತತ್ಕಾಲದಲ್ಲಿ; ಪ್ರಕೃತದಲ್ಲಿ : ಅಪರಿಚಿತರನ್ನು ನೋಡಿ ಕೊಂಚ ನಾಚಿಕೆಯಿಂದ ಆವೃತನಾಗಿದ್ದ. ಸಾಂಪ್ರತ ತಂದೆಯ ಪ್ರೇಮಮಯನುಡಿಗಳಿಂದ ಧೈರ್ಯ ಬಂದಂತಾಯಿತು (ಬಿಂದಜೀ. ೩೮). 'ಉಭಯ' ಹೋ. [ಸಂ. ಸಾಂಪ್ರತಂ]

ಸಾಂಪ್ರತಕಾಲ (ನಾ). ವರ್ತಮಾನಸಮಯ ; ಪ್ರಸ್ತುತಕಾಲ : ಸಾಂಪ್ರತಕಾಲದಲ್ಲಿ . . .ಫ್ರಾನ್ಸ್ ಮುಂತಾದ ದೇಶಗಳಲ್ಲಿ ಕಬ್ಬಿಣದ ಗಣಿಗಳು ಬಹಳ (ಮುಂಬಯಿ. ೪-೧೪೪). [ಸಂ.]

ಸಾಂಪ್ರದಾಯ (ನಾ). ೧. ಪದ್ಧತಿ; ರೂಢಿ; ವಾಡಿಕೆ : ಭೂರಿಯೆನಿಸಿದ ಸೊನ್ನಲಿಗೆಪುರ ಚಾರುಭೋಗದವರು ನಟಿಸುತಿಹ ವೇರಣೆಯ ಸೌರಾಷ್ಟ್ರನಾಥನ ಸಾಂಪ್ರದಾಯದಲಿ ಸೇರಿಸಿದ ಚಿಂದುಗಳ ಜತಿಗಳ ಹಾರವಿಪ ಸುಗತಿಗಳೊಳಾಡುವ ಪೂರಿಸುವ ವೀಣಾದಿ ವಾದ್ಯಧ್ವನಿಗೆ ಕುಣಿವವರ . . . ಅತ್ತಲೊತ್ತರಿಸಿ (ಬಸಪು. ೫-೧೨); ಗಿರಿಜಾತಾಸಾಂಪ್ರದಾಯಾಗತನವಶಿವಚಿಹ್ನಂ ದಲಿಂತೆಲ್ಲಮೆಂದಾದರದಿಂ ತದ್ಯೇಶ್ಯ ಪೇಳ್ವೆಳ್ (ವೃಸವಿ. ೯-೩೨). ೨. ಒಂದು ನಿರ್ದಿಷ್ಟಸಂಪ್ರದಾಯಕ್ಕೆ ಸೇರಿದವನು,— ಪರಂಪರೆಗೆ ಸೇರಿದವನು : ನಳಿನಾಕ್ಷಿ ನೋಡಿ ಸಂತಸಪಟ್ಟು ಯಾತನಾ ವಲಿಮಪುತ್ರನೋ ಮೇಣು ಪೌತ್ರನೋ ತತ್ಸಾಂಪ್ರದಾಯನಹುದಾತನಲ್ಲಾಯನಲು (ನವಮೋ. ೨೬-೩೫). [< ಸಂ. ಸಂಪ್ರದಾಯ]

ಸಾಂಪ್ರದಾಯಿಕ (ಗು). ೧. ರೂಢಿಯಿಂದ ಬಂದ; ಪರಂಪರಾನುಗತವಾದ : ಈ ಗ್ರಂಥದ ವಿಚಾರವಾಗಿ ಸಾಂಪ್ರದಾಯಿಕಮಾರ್ಗದವರ ಅಭಿಪ್ರಾಯಕ್ಕೂ ಆಧುನಿಕ ಸಂಶೋಧಕರ ಅಭಿಪ್ರಾಯಕ್ಕೂ ಭೇದವಿದೆ (ಭಾರದ. ೮೩). (ನಾ). ೨. ಹಿಂದಿನಿಂದ ರೂಢಿಯಾಗಿ ಬಂದುದು; ಪರಂಪರಾನುಗತವಾಗಿ ಬಂದುದು: ಆಸನಾಭ್ಯಾಸ ಮಾಡುವುದರಲ್ಲಿ ಸಾಂಪ್ರದಾಯಿಕವಾಗಿ ಕೆಲವು ನಿಯಮಗಳೂ ಇವೆ (ಭಾರದ. ೧೫೭); ಈ ಸಂಗ್ರಹದಲ್ಲಿಯ ಮೊದಲಿನ ನಾಲ್ಕು ಕತೆಗಳಲ್ಲಿಯ ಕಥನಕ್ರಮ ಒಳ್ಳೆಯ ಅರ್ಥದಲ್ಲಿ ಸಾಂಪ್ರದಾಯಿಕವಾಗಿದೆ (ಹೂಸ್ತ. ೨೮೦). [ಸಂ.]

ಸಾಂಬ $_1$ 'ಸೋಂಬ' ನೋ.

ಸಾಂಬ $_2$ (ನಾ). ೧. ಅಂಬೆಯೊಡನಿರುವವನು; ಶಿವ : ನಂಬಿ ಕೆಳೆ ಬಲ್ಲಳನೆ ಕುಂಠಣಿ ಸಾಂಬ ನಿಮ್ಮಂ ನಗಿಸುವಂ ಕಲಿಯೆಂಬನಾರ್ಪಾಠಕನು ತಾ ವಾಗೀಶನೈನಾರು (ಬಸಪು. ೯-೪೧). ೨. ಮಹಾಭಾರತದ ಕೃಷ್ಣ ಮತ್ತು ಜಾಂಬವತಿಯರ ಮಗನ ಹೆಸರು : ಕಲಿ ಸಾಂಬನೀತನು ಚಾರುದೀಪಕನೀತನಮಲಾಕ್ರೂರ ಸತ್ಯಕನೀತ (ಕುವ್ಯಾಆ. ೧೩-೬೩). ೩. ಹದಿನೆಂಟು ಉಪಪುರಾಣಗಳಲ್ಲಿ ಒಂದು: ಸುಪ್ರಸಿದ್ಧವಾಗಿರುವ ಅಷ್ಟಾದಶಪುರಾಣಗಳೇ ಅಲ್ಲದೆ ಅನೇಕ ಉಪಪುರಾಣಗಳೂ ಇವೆ . . . ಅವು ಸನತ್ಕುಮಾರ . . . ಸಾಂಬ, ಸೌರ (ಭಾರದ. ೧೪೮). [ಸಂ.]

ಸಾಂಬಾರ್ 'ಸಂಬಾರ' ನೋ.

ಸಾಂಬಾರ 'ಸಂಬಾರ' ನೋ.

ಸಾಂಬಾರಜಿನಸು (ನಾ). ಮಸಾಲೆಯ ಪದಾರ್ಥ : ಮೆಣಸಿನಕಾಯಿ ಭಾರತಕ್ಕೆ ಬಂದು, ನಮ್ಮ ನಾಲಗೆಯನ್ನು ಗೆಲ್ಲುವುದಕ್ಕೆ ಮುಂಚೆ ಮೆಣಸೂ ಶುಂಠಿಯೂ ಖಾರವನ್ನೀಯುವ ಸಾಂಬಾರಜಿನಸುಗಳಾಗಿದ್ದವು (ಹಸುಹೂ. ೨೯೭).

[ಸಾಂಬಾರ (< ಸಂಬಾರ) + ಜಿನಸು]

ಸಾಂಬಾರು 'ಸಂಬಾರ' ನೋ.

ಸಾಂಬಾಳ 'ಸಂಬಾಳ' ನೋ.

ಸಾಂಬು (ಗು). ನೀರಿನಿಂದ ಕೂಡಿದ : ಆ ಶ್ರೀಯೋವಚನಂ ಬಗೆಯನಲರ್ಚ ಭವ್ಯನೃಪನಿಕರಮದೇನೆಂಬುತ್ಸಾಹದೆ ನಲಿದುದೂ ಸಾಂಬುಪಯೋಧರರವಕ್ಕೆ ಶಿಖಿನಿಕರದವೋಲ್ (ಆದಿಪು. ೧೦-೧೨). [ಸಂ.]

ಸಾಂಬೆ (ನಾ). ಒಂದು ಬಗೆಯ ಔಷಧೀಮೂಲಿಕೆ : ಶುದ್ಧರಸ, ಬಿಳುಗಾರ, ಗಂಧಕ, ಸೂದ, ಸಾಂಬೆ . . . ಕೊಡಲು ಸರ್ವರೋಗಹರ (ವಿಷ್ಣು. ೯೬). [?]

ಸಾಂಬ್ರಾಜ್ಯ (ನಾ). ಚಕ್ರಾಧಿಪತ್ಯ; ಸಾಮ್ರಾಜ್ಯ : ಚಿನ್ನನಗರಿದುರ್ಗದ ಸಿಂಹಾಸನವನ್ನು ಸ್ಥಿರಸಾಮ್ರಾಜ್ಯವಾಗಿ ಆಳುವನ್ನ ಶ್ರೀಮನ್ಮಹಾನಾಯಿಕಾಚಾರ್ಯ್ಯ ಕಾಮಗೆತ್ತಿ ಕಸ್ತೂರ್ರಿಮದಕರ್ರಿನಾಯಕರ ಬರಮಣನಾಯಕರು (ಎಕ. XI. ದಾವಣ. ೧೭೪-೧೩; 1698). [< ಸಂ. ಸಾಮ್ರಾಜ್ಯ]

ಸಾಂಬ್ರಾಜ್ಯಂಗೆಯ್ (ಕ್ರಿ). ಚಕ್ರಾಧಿಪತ್ಯವನ್ನು ನಡೆಸು; ಸಾಮ್ರಾಜ್ಯವನ್ನಾಳು : ಶ್ರೀವೀರಪ್ರತಾಪದೇವಮಹಾರಾಯರು ವಿಜಯನಗರಿಯ ಸಾಂಬ್ರಾಜ್ಯಂಗೆಯುತ್ತಿರಲು (ಮೃಆರಿ. ೧೯೩,೫೭-೬; 1417). [ಸಾಂಬ್ರಾಜ್ಯ + ಕೆಯ್ $_1$]

ಸಾಂಬ್ರಾಣಿ (ನಾ). ೧. ಒಂದು ಬಗೆಯ ಮರದಿಂದ ತೆಗೆಯುವ ಪರಿಮಳದ್ರವ್ಯ,— ಧೂಪದ್ರವ್ಯ; ಸಾಮ್ರಾಣಿ : ಅಗಿಲು ಸಾಂಬ್ರಾಣಿಯ ಧೂಪ ವಾಸನೆ ನೆಱೆ ನಿಗುರಿತು ಗಗನಮಂಡಲಕೆ (ಕಂನವಿ. ೨೦-೧೮); ಕಟ್ಟಾಣಿ ಮೌಕ್ತಿಕದಾರತಿಯ ಸಾಂಬ್ರಾಣಿಯಹ ಪೊಸಪವಳವಲ್ಲರಿಯ ಆರತಿಯ . . .ಧೂಪಾರತಿಯನೆತ್ತಿದರು ಶಂಕರಗೆ (ಶಂಕರಾ. ೨-೫೪). ೨. ಒಂದು ದೇಶದ ಹೆಸರು ಮತ್ತು ಶ್ರೇಷ್ಠವಾದುದೆಂದು ಪ್ರಸಿದ್ಧವಾದ ಅಲ್ಲಿಯ ಕುದುರೆ : "ಆ ಸಮುದ್ರಾಂತದೊಳು ಮಾಪಾರಿ ಹುರುಮಂಜಿಯಾಸುಸಾಂಬ್ರಾಣಿ ಕಲಹತಿ ಚೇರಮಾನಿಯೆಂಬೀಸಱೊಳು ಪುಟ್ಟಲಾ ದೇಶವೆಸರಿಂದಲಾ ಕುದುರೆಗಭಿಧಾನಮಕ್ಕುಂ" (ಮಂಗರಾ. ೮೩-೨೧); ಜನ್ನ ಜಿನ್ನಾರ . . ಕಂಕರಿಗಂ ಸನ್ನುತ ಸಾಂಬ್ರಾಣಿಯನೇಱಿ ನೃಪಕುಲರನ್ನರಿಗಂದು ತೋಱಿದರು (ಅಂಜಚ. ೬-೮೩); ಸೊಕ್ಕಾನೆಯನ್ನೂಱೆಪ್ಪತ್ತುಸಾವಿರ ಪಕ್ಕರಿಕೆಯ ಸಾಂಬ್ರಾಣಿ ಲಕ್ಕವರಡು ಕಾಲಾಳೆಸೆದಿರೆ (ಕುರಾಸಾ. ೧೪-೯೧). ೩. ತಿಳಿಗೇಡಿ; ದಡ್ಡ : 'ಮಡ್ಡಿಸಾಂಬ್ರಾಣಿ' ಪರಾ. [< ಸಂ. ಸಾಮ್ರಾಣಿ./ ತಮಿ. ಚಾಮ್ಬಿರಾಣಿ; ಮಲ. ತುಳು . ತೆಲು. ಸಾಂಬ್ರಾಣಿ]

ಸಾಂಬ್ರಾಣಿತೇಜಿ (ನಾ). ಸಾಂಬ್ರಾಣಿದೇಶದ ಒಂದು ಜಾತಿಯ ಶ್ರೇಷ್ಠವಾದ ಕುದುರೆ : ಅಟ್ಟ ಹೊಯ್ದನು ದಂತಿಗಳ ಹುಡಿಗುಟ್ಟದನು ಸಾಂಬ್ರಾಣಿತೇಜಿಯ [ಪಾಶಾ. ವಾಜಿಗಳ ತೇರಿನ] ಥಟ್ಟುಗಳ ಸೀಳಿದನು (ಕುವ್ಯಾದ್ರೋ. ೬-೪೫); ಕತ್ತೆಗಳು ಸಾಂಬ್ರಾಣಿತೇಜಿಯ ಗತಿಯ ಜಱೆಂತೆ . . . ಶ್ರೀಪುರುಷೋತ್ತಮನ ದಾಸರನು ನಿಂದಿಸುವರು ದುರಾತ್ಮಕರು (ನಿಭಾಗ. ೧೧-೯-೯). [ಸಾಂಬ್ರಾಣಿ + ತೇಜಿ $_1$]

ಸಾಂಬ್ರಾಣಿತೈಲ (ನಾ). ಸಾಮ್ರಾಣಿಮರದಿಂದ ತೆಗೆಯುವ ಸುಗಂಧತೈಲ : (ಕಿ).

[ಸಾಂಬ್ರಾಣಿ + ತೈಲ $_1$]

ಸಾಂಬ್ರಾಣಿಧೂಪ (ನಾ). ಸಾಮ್ರಾಣಿ ಎಂಬ ಪರಿಮಳದ್ರವ್ಯವನ್ನು ಕೆಂಡಕ್ಕೆ ಹಾಕಿದಾಗ ಹೊರಡುವ ಸುಗಂಧಮಿಶ್ರಿತವಾದ ಹೊಗೆ,—ಧೂಪ: ದೇವಸ್ಥಾನದಲ್ಲಿ ಸಾಂಬ್ರಾಣಿಧೂಪದ ಪರಿಮಳ ಹರಡಿತ್ತು (ರೂಢಿ).

[ಸಾಂಬ್ರಾಣಿ + ಧೂಪ]

ಸಾಂಬ್ರಾಣಿಮರ (ನಾ). ಸಾಮ್ರಾಣಿಧೂಪದ ದ್ರವ್ಯವನ್ನು ತೆಗೆಯಲಾಗುವ ಒಂದು ಬಗೆಯ ಮರ : ಸಾಂಬ್ರಾಣಿಮರ, ಜಾವಾಬಾದಾಮಿ, ಕಗ್ಗಲಿ (ಮೃಔಗ. ೧೬-೨೯೫). [ಸಾಂಬ್ರಾಣಿ + ಮರ $_1$]

ಸಾಂಯಾತ್ರಿಕ (ನಾ). ಸಮುದ್ರದ ಮೇಲೆ ಹೋಗಿ ವ್ಯಾಪಾರ ಮಾಡುವವನು; ಸಮುದ್ರವ್ಯಾಪಾರಿ: ವಾರಾಶಿಯ ಮಣಿಗಣಮಂ ಕ್ರೂರಕುಳೀರಕ್ಕೆ ಸುಗಿದು ಸಾಂಯಾತ್ರಿಕನೇಂ ತಾರನೆ (ಪಂಚಾಮಾ. ೧-೩೦). [ಸಂ.]

ಸಾಂವತ್ಸರ (ಗು). ೧. ಸಂವತ್ಸರಕ್ಕೆ ಸಂಬಂಧಿಸಿದ; ವಾರ್ಷಿಕ. (ನಾ). ೨. ಜ್ಯೋತಿಷಿ; ಜೋಯಿಸ : "ಸಾಂವತ್ಸರಃ, ಜ್ಯೋತಿಷಿಕಃ, ಜ್ಞಾನೀ . . . ಗಣಕಃ - ಈ ೮ ಜೋಯಿಸಿಗಂ" (ಹಲಾಯು. ೬೭-೨೪೯). [ಸಂ.]

ಸಾಂವತ್ಸರಿಕ (ಗು). ೧. = ಸಾಂವತ್ಸರ ೧. (ನಾ). ೨. = ಸಾಂವತ್ಸರ ೨: ತರುಣಿಯರ ಶುಭ್ರಗೀತ ಧ್ವನಿಸಾರರ ಸೂಕ್ತಸಾಂವತ್ಸರಿಕರಾಯತರವ ವೆಸದುದುದ್ಯಾಹಗೇಹದಲಿ (ತೊರಾ. ೧-೧೭-೪೦). ೩. ವರ್ಷದ ಶ್ರಾದ್ಧ. [ಸಂ.]

ಸಾಂಸರ್ಗಿಕ (ಗು). (ರೋಗದಂತೆ) ಸಂಸರ್ಗದಿಂದ ಉಂಟಾಗುವ; ಸೋಂಕಿನಿಂದ ಬರುವ : ಸಾಂಸರ್ಗಿಕರೋಗಗಳು ಜನತೆಯ ಮೇಲೆ ಭೀಕರಪರಿಣಾಮವನ್ನುಂಟುಮಾಡುತ್ತವೆ (ರೂಢಿ). [ಸಂ.]

ಸಾಂಸಾರಿಕ (ಗು).೧. ಸಂಸಾರಕ್ಕೆ ಸಂಬಂಧಿಸಿದ; ಕುಟುಂಬಕ್ಕೆ ಸೇರಿದ: ಅನಂತರಮಾ ಮಹಾತ್ಮನ ಆತ್ಮೀಯಸಾಂಸಾರಿಕಮನೋರಥಂಗಳೊಡನೆ ರಥಾಂಗಂಗಳ್ ವಿಘಟಿಸಯುಂ (ಚಂದ್ರಪ್ರ. ೨-೪೭ ವ). ೨. ಲೌಕಿಕವಾದ; ಪ್ರಾಪಂಚಿಕ: ಮರ್ತ್ಯಾಚರಣೆಗಳ ನಾಟಕವೂ ಮೇಣ್ ಸಾಂಸಾರಿಕಭ್ರಮೆಯೊ (ಕುವ್ಯಾಕ. ೨೨-೧೩). [ಸಂ.]

ಸಾಂಸಿದ್ಧಿಕ (ಗು). ಸಹಜವಾದ ; ಸ್ವಾಭಾವಿಕವಾದ : ಸಾಂಸಿದ್ಧಿಕಧರ್ಮಗಳು:- ಯಾವತ್ತು ಸೃಷ್ಟಿಪದಾರ್ಥಗಳಲ್ಲಿ ಕೆಲವು ಸ್ವಾಭಾವಿಕಧರ್ಮಗಳುಂಟು (ಮುಂಬಯಿ. ೫-೩೪). [ಸಂ.]

ಸಾಂಸ್ಕೃತಿಕ (ಗು). ೧. ಸಂಸ್ಕೃತಿಗೆ ಸಂಬಂಧಿಸಿದ; ನಾಗರಿಕತೆ, ಬುದ್ಧಿವಿಕಾಸಗಳಿಗೆ ಸಂಬಂಧಪಟ್ಟ: ಹಾಗೆ ಮಾಡಿದಾಗ ಮಾತ್ರ ನಮ್ಮ ಸಾಮಾನ್ಯಜನತೆಯ . . . ಸಾಂಸ್ಕೃತಿಕ ವಿಕಾಸ ಸಾಧ್ಯವಾಗುತ್ತದೆ (ಗೃಪಾ. iii. ಮುನ್ನುಡಿ). (ನಾ). ೨. ಸಂಸ್ಕೃತಿಗೆ ಸಂಬಂಧಿಸಿದುದು; ಬುದ್ಧಿ ಮತ್ತು ಮನೋವಿಕಾಸಗಳಿಗೆ ಸೇರಿದುದು: ಬ್ರಿಟಿಷರ ಅಧೀನಕ್ಕೆ ಸಿಕ್ಕಿ ನಮ್ಮ ದೇಶಕ್ಕೆ ನಾಲ್ಕುಪಟ್ಟಿನ ನಷ್ಟ ಸಂಭವಿಸಿದೆ . . . ಮೂರನೆಯದು ಸಾಂಸ್ಕೃತಿಕವಾದ ನಷ್ಟ (ರಾಮಕಾ. ೬೭). [ಸಂ.]

ಸಾಂಸ್ಕೃತಿಕಕಾರ್ಯಕ್ರಮ (ನಾ). (ನೃತ್ಯ, ಸಾಹಿತ್ಯ, ಸಂಗೀತ ಇತ್ಯಾದಿ) ಕಲೆಗಳಿಗೆ ಸಂಬಂಧಪಟ್ಟ ಸಮಾರಂಭ : ವಿದ್ಯಾರ್ಥಿಗಳು ನಡಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ತುಂಬ ಚೆನ್ನಾಗಿತ್ತು (ರೂಢಿ). [ಸಂ.]

ಸಾಕ (ನಾ). ಒಂದು ಬಗೆಯ ಮರ; ತೇಗ: "ತೇಗಿನ ಮರನದೆ ಸಾಕಂ" (ಪಾಪ್ಪಕೋ. ೬೫-೧೬). 'ಸಾಗವಾನಿ' ಪರಾ. [< ಪ್ರಾ. ಸಾಗ./ ಸಂ. ಶಾಕ]

ಸಾಕಂ (ಅ).೧. ಜೊತೆಯಲ್ಲಿ; ಒಟ್ಟಿಗೆ: "ಸಾಕಂ ಸಮಂ ಸಾರ್ದಮಂ ಸತ್ರಮಿಂದಂಬುದಾ ಕೂಟದಲ್ಲಿ ವರ್ತಿಸುವವು" (ಮಂಗರಾ. ೧೫೫-೭೧). ೨. ಏಕಕಾಲದಲ್ಲಿ; ಒಂದೇ ಸಮಯದಲ್ಲಿ. [ಸಂ.]

ಸಾಕಣೆ (ನಾ). ಸಾಕುವಿಕೆ; ಪಾಲಿಸುವಿಕೆ : ಈತನನ್ನಣ್ಣನ ಮಗಂ . . . ಬಾಲನೀತನ ಸಾಕಣೆಯುಮೆನಗೆ ಬಂತಂದಿನಿಂ (ಪಜ್ಜಿರ. ೬-೧೫); ನಾಯಿಗಳ ಸಾಕಣೆಯು ಒಂದು ಕಲೆಯೇ ಆಗಿದೆ (ಬಾಲಪ್ರ. III. ೧೪೪೩). [ಸಾಕು₁ + - ಅಣ್ಕೆ]

ಸಾಕಲ್ಯ (ನಾ). ಸಂಪೂರ್ಣತೆ; ಸಮಗ್ರತೆ: ಮುನಿ ಮನದೊಳಗೆ ಮಹದಾನಂದಪುಳಕಿತದಿಂದ ಶಿವಪದಕಂದು ಮೊಳೆಯ ಮನೆದು ಸಾಖಿಕತಿಲ್ಕದೊಳು ನುತಿಸುತಿರೆ (ಅಂದಕಾ.೨-೨೨); ಲೋಕದಲಿ ಜಾತಿಯಲಿ ವ್ಯಕ್ತಿಯಲಿ ಸಂಸ್ಥೆಯಲಿ ಸಾಕಲ್ಯದರಿವಿರಲಿ (ಮಂಜಿಕ. ೧೩೪).

ಸಾಕಲ್ಯವಾಗಿ = ಸಂಪೂರ್ಣವಾಗಿ; ಪೂರ್ತಿಯಾಗಿ: ಕ್ರಯದ್ರವ್ಯ ವರಹನಂಗ XXX ೩೦೦ ಅಕ್ಷರದಲೂ ಮೂನೂಱು ಹೊನ್ನನು ಸಾಕಲ್ಯವಾಗಿ ಸಲಿಸಿಕೊಂಡು (ಎಕ. VIII. ತೀರ್ಥಹ. ೧೩೪-೮; 1404); ಸಾವಿರದ ಐನೂರು ವರಹಾವನ್ನು ವೆಂಕಟರಾಯನ ಮುಖಾಂತರಾ ಬೊಕ್ಕಸಕ್ಕೆ ಸಾಕಲ್ಯವಾಗಿ ವಪ್ಪಿಸಿದ್ದರಿನ್ನಾ (ಎಕ. IX. ನಲಮಂ. ೫೧-೧೯; 1763). [ಸಂ.]

ಸಾಕಲ್ಯವಚನ (ನಾ). ಸಮಗ್ರವಾಗಿ ಓದುವಿಕೆ ; ಆಮೂಲಾಗ್ರವಾಗಿ ವಾಚನ ಮಾಡುವಿಕೆ : "ಸಾಕಲ್ಯವಚನಂ, ಪಾರಾಯಣಂ- ಈ ೨ ಕಡೆಮುಟ್ಟಲೋದುವುದು" (ಹಲಾಯು. ೬೬-೨೪೭). [ಸಂ.]

ಸಾಕಲ್ಯಸಂಜ್ಞೆ (ನಾ). [ವ್ಯಾಕ] ಎಲ್ಲ ಪ್ರಕರಣದ ಪಾರಿಭಾಷಿಕ ಶಬ್ದ, — ಪರಿಭಾಷೆ; ಸಮಸ್ತ ಸಂಜ್ಞೆ: ಇದು ಪೂರ್ವಪ್ರಕರಣಮಿಂತಿದಱೊಳ್ ಸಾಕಲ್ಯಸಂಜ್ಞೆ ಪೇಳವನಲ್ಪೇಡ (ಕಾಮದ. ೫೧). [ಸಂ. ಸಾಕಲ್ಯಸಂಜ್ಞಾ]

ಸಾಕಳಿ (ನಾ). ೧. ಸರಪಳಿ; ಸಂಕಲೆ. ೨. ಒಂದು ಉದ್ದದ ಅಳತೆ: ಈ ಅನುವರಿತು ಮೂರು ಮಾರು ಅಂತರವಾಗಿ ಹಾಕತಕ್ಕ ಗಿಡಗಳು ಯಾವತ್ತು ಸಾಕಳಿ ಅಳತಿ (ಒಂದು ಸಾಕಳಿ ಅಂದರೆ ೪೧ ಮೊಳ)ಯಿಂದ ಒಂದು ಸಾಕಳಿ ಆಗಲ ಹಾಗು ಹತ್ತು ಸಾಕಳಿ ಉದ್ದ ಅಳೆದರೆ ಈಗಿನ ಪೈನೂಸಿ ಪ್ರಕಾರ ಒಂದು ಎಕರೆ ಆಗುವದು (ಕೃಪ್ರ. ೧೫೯). [<— ಮರಾ. ಸಾಖೀ, ಸಾಂಖೀ./ ಸಂ. ಶೃಂಖಲಾ]

ಸಾಕಳ್ಳ (ನಾ). ಜೊತೆಯಲ್ಲಿರುವ ಕಳ್ಳ; ಜೊತೆಗಳ್ಳ : ಸಾಕಳ್ಳನವನಾವನವನಂ ತಂದು ಕೊಡು ಕೊಡದೆ ಮೂರ್ಖತೆಯ ಹಾವಳಿಯ ಹಣ್ಣಿದಡೆ ಹದುಳವಲ್ಲಿದು ನಿನ್ನ ಸಾವಿಂಗೆ ಸಂಚಕಾರ (ಸಿಂಗಿರಾ. ೧೭-೧೬). [< ಸಹ್ಯ + ಕಳ್ಳ₁]

ಸಾಕಾಣಿಕೆ (ನಾ). ಸಾಕುವಿಕೆ; ಪೋಷಿಸುವಿಕೆ : ಕೋಳಿಸಾಕಾಣಿಕೆ ಒಂದು ಲಾಭದಾಯಕವಾದ ಉದ್ಯಮವಾಗಿ ಬೆಳೆದಿದೆ (ರೂಢಿ). [< ಸಾಕಣೆ + - ಇಕೆ]

ಸಾಕಾರ (ಗು). ೧. ಆಕೃತಿಯುಳ್ಳ; ಆಕಾರಸಹಿತವಾದ : ಸಾಕಾರ ಪರಮಾತ್ಮನು ದಿವ್ಯಮಂಗಳವಿಗ್ರಹನಾಗಿ ಶಿವನೆನಿಸಿ ಮಹಾಕೈಲಾಸದಲ್ಲಿ ನೆಲಸಿರುವನು (ಶಕ್ತಿ. ೫೫). ೨. ಸುಂದರವಾದ; ಮನೋಹರವಾದ : ನಿಗಮದಲ್ಲಿಕೆಯ ತನ್ನ ಸಾಕಾರ ಮೂರ್ತಿಯಂ ತೋಱಿಸಿದನು (ಕೃಮಿಭಾ. ೨೬-೬೭). (ನಾ). ೩. ಆಕಾರವನ್ನು ಹೊಂದಿರುವಿಕೆ; ಆಕೃತಿಸಹಿತವಾಗಿರುವಿಕೆ : ನಿರಾಕಾರವ ಮಿಱುವ ಸಾಕಾರವುಂಟೆ ಗೊಹೇಶ್ವರಲಿಂಗವ ಮಿಱುವ ಒಡೆತನ ಉಂಟೆ (ಅವಚ. ೨೭೦-೧೪೦); ಸಾಕಾರವಲ್ಲದ ನಿರಾಕಾರವೆಡೆಗೊಂ [ದಿನ್ನು] ತೆಱಪುಗೊಡು ತಂದೆ (ಬಸ. ೧೩-೭೨). ೪. ಆಕಾರವುಳ್ಳವನು; ಸ್ವರೂಪವುಳ್ಳವನು : ಜಗಮೆಲ್ಲಮಂ ಸೃಷ್ಟಿಪಡೆಯೊಳಾ ಶಿವನೆಯ್ದಿ ನೆಗಳ್ದನಾಕಾರನೂ ನಿರಾಕಾರನೋ ಮತ್ತೆ ಬಗೆದು ನೋಡಲ್ . . . ಸಾಕಾರನಾದೊಡೆ ನಿತ್ಯನೋ ಬಳಿಕ್ಕೊಗೆದನಿತ್ಯನೊ ನೋಡು (ಆಕಾಚ. ೩-೨-೩೩). ೫. [ಜೈನ] ಒಂದು ಬಗೆಯ ಅನಶನವ್ರತ; ಒಂದು ನಿರ್ದಿಷ್ಟಕಾಲದವರೆಗೆ ಆಹಾರವನ್ನು ತೆಗೆದುಕೊಳ್ಳುವುದಿಲ್ಲವೆಂದು ಆಹಾರತ್ಯಾಗ ಮಾಡುವುದು : ಸಾಕಾರ ನಿರಾಕಾರಗತಮಪ್ಪನಶನಮಂಬ ಮೊದಲ ತಪದೊಳಂ . . . ನಿಲ್ದೆದು (ಅರಿಷ್ಟ. ೬-೩೦ ವ); ಸಾಕಾರ ನಿರಾಕಾರಮೆನಿಪ್ಪೆರಡು ಭೇದದಶನಮಂ . . . ಆಂತಂ ಮುನಿವಂ (ಚಂದ್ರಪ್ರ. ೧೧-೮). 'ನಿರಾಕಾರ' ಪರಾ. [ಸಂ.]

ಸಾಕಾರಮುಕ್ತ (ನಾ). ಆಕಾರವನ್ನು ಪಡೆಯುವ ಜನ್ಮಪರಂಪರೆಯಿಂದ ಕಳಚಿಕೊಂಡವನು; ಹುಟ್ಟು ಸಾವುಗಳಿಲ್ಲದವನು : ಸತ್ಯಮಾನಾಕಾರತೆಯುಮಪ್ಪ ಸಾಯುಜ್ಯವೆಯ್ದುತ್ತ ಸಾಕಾರಮುಕ್ತರುಮೆನಿಸಿಯಾಯಾ ಸುದೇವತೆಯ ಸಾರಿ (ವೀಶ್ವಪು. ೫-೨೦-೧೦). [ಸಂ.]

ಸಾಕು₁ (ಕ್ರಿ). ೧. ಬೆಳೆಸು; ಪೋಷಿಸು; ಪಾಲನೆಮಾಡು : ತುಡುಗುಣಿನಾಯನು ಹಿಡಿತಂದು ಸಾಕಿದರೆ ತನ್ನೊಡೆಯಂಗೆ ಬಗುಳುವಂತೆ ಕಾಣಾ (ಬಸವ. ೫೬೬); ಎಂತು ಮಜಿವೆನೊ ಬೆಣ್ಣೆಯಿಕ್ಕಿ . . . ಸಾಕಿ ಲೋಕದ ಬಾಲರಂತಿರ್ದು ಕಳೆಯ ಸ್ಫರಿಸುವೆನೆನಲು (ಸಿದ್ಧರಾ. ೨-೫೦). ೨. ಕಾಪಾಡು; ರಕ್ಷಿಸು : "ಸಾಕು - ರಕ್ಷಣೇ" (ಕಮಧಾ); ಅಂಬಿಕಾಪತಿ ಲೋಕಮಂ ಸಾಕಲೊಗೆದಂ (ಸಿದ್ಧರಾ. ೨-೮); ಸಾಕಿದ ಪತಿಗೆ ತಪ್ಪಿದನ . . . ವಿಪ್ರರ ಜಡಿದು ನುಡಿದ ಗತಿಗಳಾಗಲಿ ರಣದೊಳೋಡಿದರೆ (ಕುವ್ಯಾದ್ರೋ. ೨-೮).

ಸಾಕಿಕೊಳ್ಳು = ೧. (ಮಕ್ಕಳಿಲ್ಲದಾಗ) ಬೇರೆಯವರ ಮಗುವನ್ನು ಸ್ವೀಕಾರ ಮಾಡಿ ಬೆಳೆಸು : ಆ ದಂಪತಿಗಳು ಒಂದು ತಬ್ಬಲಿಮಗುವನ್ನು ಸಾಕಿಕೊಂಡಿದ್ದಾರೆ (ರೂಢಿ). ೨. ಕಾಪಾಡು; ರಕ್ಷಿಸು : ಸಾಕಿಕೊಳ್ಳಿಲೆ ದೇವ ಸ್ತುತಿಗಳ ಸಾಕಿಕೊಳ್ಳೆ, ಸ್ವಾಮಿ ಪತಿಗಳ ಸಾಕಿಕೊಳ್ಳೆ, ಮುಂದೆ ಸೌಭದ್ರೆಯಳನೆನ್ನುವನು ಸಾಕಿಕೊಳ್ಳೆಂದನ್ನ ಮಾನವ ಸಾಕಿದಂತಿಂದಿನಲಿ ಕರುಣ ವಿವೇಕ ಸಲಹೆಂದೆನುತ ಬಿದ್ದಳು ಹರಿಯ ಚರಣದಲಿ (ಕೃಷ್ಣಾಕಾ. ೨೬-೫೦). ಸಾಕಿ ಸಲಹು = ಪ್ರೀತಿಯಿಂದ ಬೆಳೆಸಿ ಕಾಪಾಡು; ಅಕ್ಕರೆಯಿಂದ ಪೋಷಿಸಿ ರಕ್ಷಿಸು : ನೀವು ಇಷ್ಟುದಿನದವರೆಗೂ ನನ್ನ ಮಗನನ್ನು ಸಾಕಿ ಸಲಹಿದ್ದಕ್ಕಾಗಿ ನಾನು ನಿಮಗೆ ಏನು ಪ್ರತ್ಯುಪಕಾರ ತಾನೇ ಮಾಡಿಯೇನು? (ಪ್ರಕಾಪ. ೧೭); ಬಹುದಿವಸದಿಂದಲೂ ತಾನು ಸಾಕಿ ಸಲಹಿದ ಪ್ರಾಣಿಯಂತೆ ಅದರೊಡನೆ ಪ್ರೇಮದಿಂದ ಮಾತನಾಡಿದನು (ಬಂಗಾಪ. ೨೩).

[ದೇ. ॥ ಕೋತ. ಚಕ್; ಕೊಡ. ಚಾಕ್; ತೊದ. ಸೊಕ್; ತುಳು. ಸಾಂಕು; ತೆಲು. ಸಾಕು]

ಸಾಕ್ಕು₂ (ನಾ). ೧. ಅಗತ್ಯವಿರುವಷ್ಟು; ಸಾಕಷ್ಟು : (ಕಿ). ೨. (ಆಲಂ) ಕೊನೆ; ಅಂತ್ಯ : ನೋಡಿದಷ್ಟೂ ನೋಡಬೇಕು ಎಂಬ ಆಶೆಗಿಲ್ಲ ಸಾಕು! (ಅನಿಕೇ. ೪೦-೪).

ಸಾಕಾಗು = ೧. ಸಾಲು; ಅಗತ್ಯವಿದ್ದಷ್ಟಾಗು; ಬೇಕಾದಷ್ಟಾಗು : ಇಂಥ ದೊಡ್ಡಮನುಷ್ಯನಿಗೆ ಒಂದೇ ಹೆಸರು ಸಾಕಾಗುತ್ತದೆಯೇ? (ಭಾರತಿ. ೨೬); ಓದು, ಬರಹ, ಬಾಯಿಲೆಕ್ಕ ಆದರೆ ಸಾಕಾಗಿಬಿಡುವದು (ಬೆಟ್ಟಹೊ. ೨). ೨. (ಆಲಂ) ಆಯಾಸವಾಗು; ದಣಿವಾಗು : ಇವರನ್ನು ಕೊಂದು ಕೊಂದು ರಾಮನಿಗೆ ಸಾಕಾಯಿತು (ನೀತಿಚಿಂ. XII, ೯); ನಾರಾಯಣನನ್ನು ಹುಡುಕಿ ಹುಡುಕಿ ರಾಯರಿಗೆ ಸಾಕಾಗಿತ್ತು (ಕಂಬಹು. ೧೩೧).

ಸಾಕುಬೇಕಾಗು = (ಆಲಂ) ಬಹಳ ಪ್ರಯಾಸವಾಗು; ತುಂಬ ಕಷ್ಟವಾಗು : ಪ್ರಳಯರುದ್ರನಂತೆ ಕಾಣುವ ಅಶ್ವತ್ಥಾಮನಿಗೆ ತಿಳಿಯದಂತೆ ಪಶ್ಚಿಮದ್ವಾರದಿಂದ ಹೊರಟು ತಮ್ಮ ಬಳಿಗೆ ಬರಲು ಸಾಕುಬೇಕಾಯಿತು (ಪ್ರಪೂರ್ತಿ. ೭೦). **ಸಾಕುಬೇಕಾದಷ್ಟು** = ಬಹಳಷ್ಟು; ಹೆಚ್ಚು; ವಿಪರೀತ : ವಾಗದ್ವೈತದ ಭಾವಿಗಳ ಸಾಕುಬೇಕಾದಷ್ಟು ಕಂಡೆ (ಸಕವ. II, ಕ. ೪೩೬-೯೪). **ಸಾಕುಮಾಡು** = ೧. ನಿಲ್ಲಿಸು; ಮುಗಿಸು : ಸಾಕು ಮಾಡ್ಕೆ ತಂದೆ ಲೋಕದಾಟವನಿನ್ನು (ಬಸರ. ೧೩-೭೧); ಸಾಕು ಮಾಡಿತೆ ವಿಧಿ ದುರಾಪದವೇಕೆ ಸಿದ್ಧಿಸಿತೇನ ಮಾಡಿದೆ ನೀ (ಆನಂರಾ. ೨-೩-೯). ೨. ಸಾಲುವಂತೆ ಮಾಡು; ಅಗತ್ಯವನ್ನು ಪೂರೈಸುವಂತೆ ಮಾಡು : (ಕಿ). ೩. ಆಯಾಸಪಡಿಸು; ಇನ್ನು ಸಾಧ್ಯವಿಲ್ಲ ಎನ್ನುವಂತೆ ಮಾಡು : ಈ ಓಡಾಟ ನನ್ನನ್ನು ಸಾಕು ಮಾಡಿಬಿಟ್ಟಿದೆ (ರೂಢಿ). **ಸಾಕುಸಾಕಾಗು, ಸಾಕೋಸಾಕಾಗು** = ತುಂಬ ಆಯಾಸವಾಗು; ಬಹಳ ಪ್ರಯಾಸವಾಗು : ಈ ಕೆಲಸ ಮುಗಿಸುವ ಹೊತ್ತಿಗೆ ಸಾಕುಸಾಕಾಗಿ ಹೋಯಿತು (ರೂಢಿ); ನೂಕುನುಗ್ಗಲಿನ ರೈಲುಪ್ರಯಾಣ ಸಾಕೋಸಾಕಾಯಿತು (ರೂಢಿ).

[< ಸಾಕ್ಕು₃ ./ ಕೋತ. ಚಕೊ ; ತೊದ. ಸೊಕೆ]

ಸಾಕ್ಕು₃ (ಅ). ೧. ಇಷ್ಟಾದರೆ ಅಗತ್ಯ ಪೂರೈಕೆಯಾಗುತ್ತದೆ, ಸಾಲುತ್ತದೆ, ಇಷ್ಟೇ ಇರಲಿ, ಹೆಚ್ಚಿಗೆ ಬೇಡ ಎಂಬರ್ಥವನ್ನು ಕೊಡುವ ಒಂದು ಕ್ರಿಯಾರ್ಥಕಾವ್ಯಯ : ಒಂದೆ ನುಡಿ ಸಾಕು ಹುಸಿಯಿಲ್ಲ ವೃದ್ಧರೊಳು (ಸಿದ್ಧರಾ. ೧-೪೫); ಪುಷ್ಪಮಾಲಾಸಮುದಾಯಮಂ ಮುಡಿಗೆ ಭಾರಮಿದೆಂದು . . . ಸಾಕೆನುತಿರ್ಪಳಾವಗಂ (ಬಾಧಪು. ೨-೫೮); ಸೂತತನವೇ ಸಾಕು ತನಗೆನುತಾ ತತುಕ್ಷಣ ಧನುವ ಬಿಸುಟು ವಿಧೂತರಿಪುಬಲಪಾರ್ಥನಿದ್ದನು ಹೊತ್ತ ದುಗುಡದಲಿ (ಕುವ್ಯಾದ್ರೋ. ೩-೬೨); ಈಕೆಯ ಮೊಗಂ ಶಶಿಯಾ ಜಗಮಂ ಗೆಲಲ್ಕೆ ಸಾಕೀಕೆಯ ರೂಪಂ (ರಸರ. ೧-೧೩). ೨. (ಇನ್ನು ಬೇಡ, ನಿಲ್ಲಿಸು, ನಿವಾರಿಸು ಎಂಬರ್ಥವನ್ನು ಕೊಡುವ) ಒಂದು ಕ್ರಿಯಾರ್ಥಕಾವ್ಯಯ : ಸಾಕು ಸೈರಿಸಲಾಱೆ ನಾನಿನ್ನು (ಬಸಪು. ೪೯-೨೩); ಸಾಕು ನಮ್ಮಯ ಮಾತು ರಾತ್ರಿಯ ನಾಕುಜಾವದೊಳೆರಡು ಸಂದವು (ಸಂಭವ. ೩೨-೨೩). ೩. (ತಿರಸ್ಕಾರ, ಧಿಕ್ಕಾರಗಳಿಂದ) ಅಗತ್ಯವಿಲ್ಲ, ಬಿಡು, ತೆಗೆ, ನಿಲ್ಲಿಸು ಎಂಬರ್ಥಗಳನ್ನು ಸೂಚಿಸುವ ಅವ್ಯಯ : "ರಕ್ಷಣ ತಿರಸ್ಕಾರದೊಳ್ ಸಾಕೆಂಬುದಕ್ಕು" (ಶಬ್ದಮಂ. ೭೯); ಸಾಕು ನಿನ್ನಂ ನೀನಱಿಯದಿರಲೇಕೆ ನೀನಱಿಯದ ವಿಷಯವುಂಟೇ (ಬಸಪು. ೪೦-೮೨); ಬಣಗುಕವಿಗಳ ಲೆಕ್ಕಿಪನೆ ಸಾಕೆಣಿಸದಿರು ಶುಕರೂಪನಲ್ಲವೆ ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ (ಕುವ್ಯಾಆ. ೧-೧೭); ನಿನಗಂತಕನ ಭಯವಿಲ್ಲ ಸಾಕಾ ಮಾತದಂತಿರಲಿ (ತೊರರಾ. ೧-೪-೧೧). ೪. (ಕರಾ) ಆಗಬಹುದು, ಬರಬಹುದು, ಒದಗಬಹುದು ಎಂದು ಮುಂತಾಗಿ ಸಂಭಾವ್ಯತೆಯನ್ನು ಸೂಚಿಸುವ ಅವ್ಯಯ : ಬಹುಶಃ ನನ್ನಂತಹವರು ಇದಕ್ಕೆ ಕೈಹಾಕಿಯಾರೆಂಬ ಅನುಮಾನ ಅವರಿಗೆ ಬಂದಿರಲು ಸಾಕು (ದೇಕನ್ಯ. ೩೮); ಇಂದು ಮಳೆ ಬರಲಿಕ್ಕೆ ಸಾಕು (ರೂಢಿ).

ಸಾಕುಸಾಕು (ದ್ವಿರುಕ್ತಿ) : ವಿಟನು ತನಗೆ ಬಸವಾ ಸಾಕು ಸಾಕಿನ್ನೆನುತವನಿಯಲಿ ಗುಡಿಸಿ ದೀಪಿಸುವನಿತು ದಿವ್ಯಾಂಬರವಿತಾನಮನೊಯ್ದಬಳೆಗಿತ್ತ (ಬಸಪು. ೧೧-೩೯); ಸಾಕುಸಾಕಿನ್ನು ಸಂಸಾರಸುಖವು (ಪುರಂದ. ೧-೧೫೨ ಪಲ್ಲವಿ). **ಸಾಕಷ್ಟು** = ೧. ಬೇಕಾಗಿರುವಷ್ಟು; ಅಗತ್ಯವಿರುವಷ್ಟು; ತಕ್ಕಷ್ಟು : ಭಾರತೀಯರಾದ ನಮ್ಮದು ಮೊದಲೇ ಸಾಕಷ್ಟುಪುಷ್ಟಿಕರವಾದ ಆಹಾರಾಂಶಗಳೆಲ್ಲಾ ಇಲ್ಲದಿರುವ ಜನಾಂಗ (ತರಬಿ. ೬೫); 'ಎ' ಜೀವಾತು ಸಾಕಷ್ಟುಪ್ರಮಾಣದಲ್ಲಿ ಇಲ್ಲವಾದರೆ ಚರ್ಮ ಮತ್ತು ಕಣ್ಣುಗಳ ಮೇಲೆ ದುಷ್ಪರಿಣಾಮಗಳಾಗಬಹುದು (ಅಡುಸೌ. ೬೦). ೨. ಕಡಮೆಯಲ್ಲದಷ್ಟು; ಬಹಳ; ತುಂಬ : ದ್ರಾವಿಢಭಾಷೆಗಳಲ್ಲಿ ಪಕಾರ ಸಾಕಷ್ಟು ಪ್ರಾಚೀನವಾದ ಧ್ವನಿ (ದ್ರಾವಿವಿ. ೩೩೩); ಇವರುಗಳ ಪ್ರಭಾವವೂ ಜನರ ಮೇಲೆ ಸಾಕಷ್ಟು ಆಗಿದ್ದಿತು (ಜಗದಾ. ೧೪೪). **ಸಾಕೆನಿಸು** = ೧. ಅಗತ್ಯ ಪೂರೈಸಿತೆನಿಸು; ತಣಿಸು : ಗೋಕುಲವನು ನೆಱೆಕಾದ ಕೋಕನದಾಕ್ಷನ ಬಲಗೊಂಡು ಕೃತಿವೇಳು ಸಾಕೆನಿಸದುಯೆನ್ನ ಕಿವಿಗೆ (ಮೋಹತ. ೩೬-೧). ೨. (ಕಷ್ಟ, ಆಯಾಸ, ಬೇಸರಗಳಿಂದ) ಇನ್ನು ಬೇಡ ಎನಿಸು; ನಿಭಾಯಿಸಲು ಸಾಧ್ಯವಿಲ್ಲವೆನಿಸು : ಇಂದಿನ ರಣದೊಳಗೆ ಸಾಕೆನಿಸುವನು ಸಂಸಾರತರಸುಖವ (ತೊರರಾ. ೪-೩-೪). ℙ ಇದು 'ಸಾಲ್' ಎಂಬ ಕ್ರಿಯಾಪದದ ಪ್ರಥಮಪುರುಷ ವರ್ತಮಾನ-ಭವಿಷ್ಯದ್ರೂಪವಾದ 'ಸಾಲ್ಗುಂ' ಎಂಬುದರ ಮುಂದುವರಿದ ರೂಪವಾಗಿದ್ದು, ವಿಶೇಷವಾಗಿ ಕ್ರಿಯಾರ್ಥಕಾವ್ಯಯದಲ್ಲಿ ಸ್ವತಂತ್ರವಾಗಿ ಬಳಕೆಯಾಗುತ್ತದೆ. [< ಸಾಲ್₁]

ಸಾಕುತಂದೆ (ನಾ). ಬೇರೆಯವರ ಮಗುವನ್ನು ದತ್ತು ತೆಗೆದುಕೊಂಡು ಬೆಳೆಸಿದ ತಂದೆ; ದತ್ತುತಂದೆ : ದೇವರ ದಯೆಯಿಂದ ನನ್ನ ಸಾಕುತಂದೆಯಾದ ಶಾಂತಲಿಂಗಂಪಿಳ್ಳೆಯವರು ಗುಣಹೊಂದಿದರು (ಪ್ರತಾಪ. ೧೫). [ಸಾಕು₁ + ತಂದೆ]

ಸಾಕುತಾಯಿ (ನಾ). ಬೇರೆಯವರ ಮಗುವನ್ನು ದತ್ತು ತೆಗೆದುಕೊಂಡು ಸಾಕಿದ ತಾಯಿ; ದತ್ತುತಾಯಿ : ಸುಂದರಿತ್ತಿಣಿಯೂ ಆಕೆಯ ಪತಿಯೂ ನಿನ್ನನ್ನೂ. ನಿನ್ನ ಸಾಕುತಾಯಿಯನ್ನೂ ಕೈಬಿಟ್ಟರು (ಪ್ರತಾಪ. ೧೫). [ಸಾಕು₁ + ತಾಯಿ (< ತಾಯ್)]

ಸಾಕುಪ್ರಾಣಿ (ನಾ). ಸಾಕಿದ ಪ್ರಾಣಿ; ಮನೆಯಲ್ಲಿ ಬೆಳೆಸಿ, ಪಳಗಿಸಿದ ಬೆಕ್ಕು ನಾಯಿ ಮೊದಲಾದ ಪ್ರಾಣಿ : ಸಾಕುಪ್ರಾಣಿಗಳು ತಮ್ಮ ಮನೆ, ಯಜಮಾನರನ್ನು ಸ್ಪಷ್ಟವಾಗಿ ಗುರುತಿಸುತ್ತವೆ (ರೂಢಿ). [ಸಾಕು₁ + ಪ್ರಾಣಿ]

ಸಾಕುಮಗ (ನಾ). ಬೇರೆಯವರಿಂದ ದತ್ತುಸ್ವೀಕಾರ ಮಾಡಿ ಬೆಳೆಸಿದ ಮಗ ; ದತ್ತುಪುತ್ರ : ಇಮ್ಮಡಿಮದಕರಿನಾಯಕನ ಸಾಕುಮಗ ಓಬಣ್ಣನಿಗೆ ಪಟ್ಟಕಟ್ಟಿದರು (ಚಿತ್ರಪಾ. ೨೬). [ಸಾಕು₁ + ಮಗ]

ಸಾಕುಮಗಳು (ನಾ). ಬೇರೆಯವರಿಂದ ಸ್ವೀಕಾರಮಾಡಿ ಬೆಳೆಸಿದ ಮಗಳು ; ದತ್ತುಪುತ್ರಿ : ಆಗ ಗುಣವಂತನು ತನ್ನ ತಂತ್ರಬಲದಿಂದ ನನ್ನ ಸಾಕುಮಗಳು ಪ್ರತಾಪಕುಮಾರಿಯನ್ನು ಅಪಹರಿಸಿಕೊಂಡು ಹೋದನು (ಅರ್ಯಕ. ೫).

[ಸಾಕು₁ + ಮಗಳು (< ಮಗಳ್)]

ಸಾಕುಮಗು (ನಾ). ಬೇರೆಯವರಿಂದ ಸ್ವೀಕಾರಮಾಡಿ ಬೆಳೆಸಿದ ಮಗು,— ಸಾಕಿದ ಮಗು : (Foster-Child . ಇಂಕನಿ).

ಸಾಕುಮಕ್ಕಳು (ಬಹುವ) = ಬೇರೆಯವರಿಂದ ಸ್ವೀಕರಿಸಿ ಬೆಳೆಸಿದ ಮಕ್ಕಳು : ಸಾಕುಮಕ್ಕಳಾದ ಶ್ರೀ ಮೋಹನದಾಸರೂ, ಕಲ್ಲೂರಿನಲ್ಲಿ ಶ್ರೀಸುಬ್ಬಣ್ಣದಾಸರೂ . . . ಪ್ರಖ್ಯಾತಹರಿದಾಸರೆನ್ನಿಸಿಕೊಂಡಿದ್ದರು (ಜಗದಾ. ೧೪೪). [ಸಾಕು₁ + ಮಗು]

ಸಾಕೂತ (ಗು). ೧. ಉದ್ದೇಶಪೂರ್ವಕವಾದ; ಇಂಗಿತವುಳ್ಳ : ಒಂದು ಸಾಕೂತ ಪ್ರಯತ್ನದ ಮೂಲಕ ಮಾಡಿಕೊಂಡ ಮಾರ್ಪಾಡು ಇಲ್ಲವೆ ಬೆಳೆವಣಿಗೆಗಳು (ಭಾಷಾಶಾ. ೧೨೬). (ನಾ). ೨. ಉದ್ದೇಶಪೂರ್ವಕವಾದುದು; ಸಾಭಿಪ್ರಾಯವುಳ್ಳುದು; ಅರ್ಥಗರ್ಭಿತವಾದುದು : ಬ್ರಹ್ಮ- (ಸಾಕೂತವಾಗಿ) ಆದರೂ ಮಹಾಲಕ್ಷ್ಮಿಯು ಈ ತನಕ ಸುಖವಾಗಿರುವಳಷ್ಟೆ? (ಕೃಲಾಕ. ೫೧). [ಸಂ.]

ಸಾಕೇತ (ನಾ). ೧. ಮನೆಗಳಿಂದ ಕೂಡಿದುದು; ಗೃಹಗಳಿಂದ ಕೂಡಿದುದು. ೨. ಕೋಸಲದೇಶದ ರಾಜಧಾನಿಯಾಗಿದ್ದ ಅಯೋಧ್ಯೆಯ ಹೆಸರು : ಕುರು ನೇಪಾಳ ನಿಷಧ ವಿದರ್ಭಧರಣೀಪಾಲತತಿ ಸಂದಣಿಸಿದುದು ಸಾಕೇತನಗರಿಯಲಿ (ತೊರರಾ. ೧-೭-೧೮); ಆಕಾಶಕೆದ್ದ ಪತಾಕೆಗಳಿರೆ ನೋಡಿ ಸಾಕೇತಪುರವೆಂಬರದನು (ಭರಚಿ. ೨೦-೧೮). ೧, ೨ : ಅಂತು ಸಮೆದ ಪುರವರಕ್ಕರಾತಿನಿಕರಕ್ಕಯೋಧ್ಯಮಪ್ಪುದ ಱಿಂದಯೋಧ್ಯೆಯುಮನೇಕನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ . . . ಎಂಬ ಪೆಸರ್ಗಳನಿಟ್ಟು (ಆದಿಪು. ೬-೧೦೭ ವ). [ಸಂ.]

ಸಾಕ್ಕಿ 'ಸಕ್ಕಿ' ನೋ.

ಸಾಕ್ರಿ (ನಾ). (ಕರಾ). (ಹುಲ್ಲಿನ) ಕಟ್ಟು; ಕಂತೆ : ಹೋದ ವರ್ಷ ಸಾಕ್ರಿ ಕಟ್ಟುವಾಗ ಉದುರಿದ ಭತ್ತ ಈ ವರ್ಷ ಕುತ್ತರಿ ಬಡಿದರೆ ಆಗಲಿಕ್ಕಿಲ್ಲ (ರೂಢಿ). [?]

ಸಾಕ್ಷರ (ಗು). ೧. ಅಕ್ಷರಗಳಿಂದ ಕೂಡಿದ; ವರ್ಣಸಹಿತವಾದ .(ನಾ). ೨. ಅಕ್ಷರಗಳನ್ನು ಬಲ್ಲವನು; ಓದುಬರಹ ಬಲ್ಲವನು; ಅಕ್ಷರಸ್ಥ : ಇಂಡೋನೇಶಿಯದ ಪ್ರಜಾಕೋಟಿಯಲ್ಲಿ ನೂರಕ್ಕೆ ೭೨ರಷ್ಟು ಸಾಕ್ಷರರು (ಎಅಗ್ಲೀ. ೫೫). ೩. ವಿದ್ವಾಂಸ; ಪಂಡಿತ : ಭಾಷಾವಳಿ ಲಿಪಿಜ್ಞನ ಸಾಕ್ಷರನ . . . ಸುಕರ ದುಷ್ಕರ ತಿಳಿವ ಹೃದಯನ ಸಂಧಿವಿಗ್ರಹರನಿಸಬೇಕೆಂದ (ಕುವ್ಯಾಖ್ಯಾ. ೩-೮೯).

ಸಾಕ್ಷರನಿಳಯ = ವಿದ್ವತ್ತಿಗೆ ಆಶ್ರಯನಾದವನು; ಒಂದು ಬಿರುದು : ನಿರತಿಶಯೋನ್ನತಮತಿ ಭಾಸ್ಕರ ಸರಸಕವೀಂದ್ರರಚಿತಶಾಸನಮಂ ಬಿತ್ತರದಿಂ ಪ್ರತಿಕಂಟಂ ಸಾಕ್ಷರನಿಳಯಂ ತಿದ್ದಿ ಭಾಸ್ಕರಯ್ಯಂ ಬರೆದಂ (ಕಾಇ. ೧೪-೯-೬೨; 1127). [ಸಂ.]

ಸಾಕ್ಷರಜನ (ನಾ). ಪಂಡಿತವರ್ಗ; ವಿದ್ವಾಂಸರ ಸಮುದಾಯ : ಸಮಸ್ತಸಾಕ್ಷರಜನಕಂ ಜಗಜ್ಜನಕನೊಲ್ದುದನಿತ್ತಭರಕ್ಷಿಪಟ್ಟಿಯಿಂ . . . ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ (ಪುಪ್ರಪು. ೧-೭೫). [ಸಂ.]

ಸಾಕ್ಷರಜನಕ (ನಾ). ವಿದ್ವಾಂಸರಿಗೆ ಆಶ್ರಯದಾತನಾದವನು ; ವಿದ್ವಜ್ಜನರ ಪೋಷಕನಾದವನು : ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ (ಪುಪ್ರಪು. ೧-೭೫). [ಸಂ.]

ಸಾಕ್ಷರತಾಆಂದೋಲನ (ನಾ). ಜನಸಮುದಾಯವನ್ನು ಅಕ್ಷರಸ್ಥರನ್ನಾಗಿ ಮಾಡಲು ತೊಡಗಿರುವ ಕ್ರಾಂತಿ; ಜನತೆಗೆ ಓದುಬರಹಗಳನ್ನು ಕಲಿಸಲು ತೊಡಗಿರುವ ಆಂದೋಳನ : ಸಾಕ್ಷರತಾಆಂದೋಲನದ ಯೋಜನೆಗಳಿಗೆ ಸರ್ಕಾರವು ಅಪಾರಹಣ ವೆಚ್ಚಮಾಡುತ್ತಿದೆ (ರೂಢಿ). [ಸಂ.]

ಸಾಕ್ಷರತೆ (ನಾ). ಓದುಬರಹಗಳನ್ನು ತಿಳಿದಿರುವಿಕೆ ; ಅಕ್ಷರಜ್ಞಾನವನ್ನು ಹೊಂದಿರುವಿಕೆ : ಮುಂದುವರಿಯುತ್ತಿರುವ ದೇಶಗಳಲ್ಲಿ ತಮ್ಮ ದೇಶ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಮಾಡುತ್ತಿವೆ (ಕವಿಲೋ. I. ೧೬೨). [ಸಂ. ಸಾಕ್ಷರತಾ]

ಸಾಕ್ಷರಿಕ (ಗು). ೧. ವಿದ್ಯೆಯನ್ನುಳ್ಳ; ಪಾಂಡಿತ್ಯವನ್ನುಳ್ಳ : ಸಾಕ್ಷರಿಕಜನಸಮುಧರಣ ನಾಮಾದಿಸಮಸ್ತಪ್ರಸಸ್ತಿಸಹಿತಂ ಶ್ರೀಮದ್ದಣ್ಣನಾಯಕಂ ಶ್ರೀಧರಯ್ಯಂಗಳುಂ (ಸೌಗಾ. XX. ೬೦-೭; 1088). (ನಾ). ೨. ವಿದ್ವಾಂಸ; ಜ್ಞಾನಿ : ಇವರ್ ನಮ್ಮನತ್ಯಾಗ್ರಹದಿಂ ಶಿಕ್ಷಿಸಿ ಸಾಕ್ಷರಿಕರಂ ಮಾಟ್ಪೊಡೆ (ಸುಕುಮಾ. ೨-೫೫ ವ); ಪೋಗಿ ಋಷಿಯರಂ ಸಾರ್ದು ಸಾಕ್ಷರಿಕನಾಗಿ ಮಗುಟ್ಟು ಬಂದು (ಪಂಂತಾಮಾ. ೧೫-೪೭ ವ). [ಸಂ.]

ಸಾಕ್ಷಾತ 'ಸಾಕ್ಷಾತು' ನೋ.

ಸಾಕ್ಷಾತು, ಸಾಕ್ಷಾತ (ಅ). ಪ್ರತ್ಯಕ್ಷ; ಸ್ವತಃ : ರುದ್ರನಕ್ಷಿಯ ಮಣಿಯ ಭದ್ರದಲಿ ಧರಿಸಿದಗೆ ಹೊದ್ದಿರ್ದ ಪಾಪ ಹೋಗಲವ ಸಾಕ್ಷಾತು ರುದ್ರನೇ ಅಕ್ಕು (ಸರ್ವಜ್ಞ. ೩೧೨). **ಸಾಕ್ಷಾತ:** ತಂತುಹಾರುವನಲ್ಲ ಸಾಕ್ಷಾತಬೊಮ್ಮನಪ್ಪನು ಅಗಿ ಬುಧರೊಳು ದಿಮ್ಮಿತಪ್ಪಿಳಾಗಮಜ್ಞನು (ಬಸಪು. ೫೫-೭೭). [< ಸಂ. ಸಾಕ್ಷಾತ್]

ಸಾಕ್ಷಾತ್ಕರಣವೆರು (ಕ್ರಿ). ಸಾಕ್ಷಾತ್ಕಾರವನ್ನು ಹೊಂದು; ಪ್ರತ್ಯಕ್ಷವಾಗು : ಯತಿವೇಷದಿಂದನ್ನಾಸಿಯರ್ಜುನನೆ, ಪ್ರೇಮದ ತಪಸ್ಸೆ ಸಾಕ್ಷಾತ್ಕರಣವತ್ತಂತೆ, ಇಲ್ಲಿಗ್ಕೆ ತಂದುದನ್ ಕೇಳ್ವೊಡೆ (ಚತ್ರಾಗ. ೨೪-೭೪೭).

[ಸಾಕ್ಷಾತ್ಕರಣ್ಯ + ಪೆರು,(< ಪೞು,)]

ಸಾಕ್ಷಾತ್ಕರಿಸು (ಕ್ರಿ). ೧. ಪ್ರತ್ಯಕ್ಷವಾಗುವಂತೆ ಮಾಡು; ಎದುರಿಗೆ ಗೋಚರವಾಗುವಂತೆ ಮಾಡು : ಜ್ಞಾನಾಗ್ನಿಯಲ್ಲಿ ಕರ್ಮಫಲವೆಂಬ ಹವಿಸ್ಸನ್ನು ಹಾಕಿ ಯಜ್ಞನಾರಾಯಣನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು (ಭಾರದ. ೧೧೬); ಇವರು ಮಾತ್ರವ ದೈವವನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲವರು (ಶಾಂಕರಾ. ೬೭೧). ೨. ಮನಸ್ಸಿಗೆ ಸ್ಪುಟವಾಗಿ ಗೋಚರಿಸುವಂತೆ ಮಾಡು,— ಸ್ಪಷ್ಟಗೊಳಿಸು : (೬). ೩. ಪ್ರತ್ಯಕ್ಷವಾಗಿ ನೋಡು ; ಸ್ವತಃ ನೋಡು ; ಖುದ್ದಾಗಿ ಕಾಣು : (೬).

[ಸಾಕ್ಷಾತ್ಕರಣ್ಯ + -ಇಸ್ಕು]

ಸಾಕ್ಷಾತ್ಕಾರ (ನಾ). ೧. ಕಣ್ಣಿಗೆ ಕಾಣಿಸುವುದು,— ಗೋಚರಿಸುವುದು; ಪ್ರತ್ಯಕ್ಷವಾಗುವುದು : ನಾವಲೇ ಕೃತಕೃತ್ಯರಿಂದೀ ದೇವಸಾಕ್ಷಾತ್ಕಾರದರ್ಶನ ಭಾವವೋಯದು ನಮಗೆನುತ ಹೊಗಳಿದನು ಸಹದೇವ (ಕುವ್ಯಾಖ್ಯಾ. ೬-೩೯). ೨. (ಅಧ್ಯಾತ್ಮಿಕವಾದ) ಜ್ಞಾನದ ಅನುಭವ,— ಅರಿವು : ಶ್ರೀಗುರುಕಟಾಕ್ಷ ದಿಂದಲ್ಲದ ತಾರಕಬ್ರಹ್ಮವು ಆರಾರಿಗೂ ಸಾಕ್ಷಾತ್ಕಾರವಾಗದಯ್ಯಾ (ಅಖಂಡೇ. ೨೨೩-೬೫). ಅಧ್ಯಾತ್ಮಿಕಕಲ್ಪನೆಯು ಸಂಪೂರ್ಣವಾಗಿ ಅಧ್ಯಾತ್ಮದ ಸಾಕ್ಷಾತ್ಕಾರದೊಳಗೆ ಪರಿಣತವಾಗಬೇಕಾಗುವುದು (ಶ್ರೀಬಂಧ. ೧೩೭); ಸಾಕ್ಷಾತ್ಕಾರವು ಕರ್ಮಯೋಗಕ್ಕಿಂತ ಶ್ರೇಷ್ಠವೆನ್ನುವ ಬಳಿಕರ ಮಾತನ್ನಷ್ಟು ಗಮನಿಸೋಣ (ಧರ್ಮಸಾ. ೧೫೧). [ಸಂ.]

ಸಾಕ್ಷಾತ್ತು (ನಾ). ಸ್ವಂತ; ಸ್ವಕೀಯ : ರಾಮನಿಗೆ ಪ್ರಿಯವಪ್ಪಿಯಾದ ಅವಳನ್ನು ತೃಷ್ಣೆವು (ಬ್ರಹ್ಮನು) ತಾನೇ ಸಾಕ್ಷಾತ್ತಾಗಿ ಸೃಷ್ಟಿಮಾಡಿದ್ದನು (ವಚಿಧಾ. ೪೦೩). [ಸಂ. ಸಾಕ್ಷಾತ್./ IP ಸಂಸ್ಕೃತದಲ್ಲಿ ಇದು ಒಂದು ಅವ್ಯಯ]

ಸಾಕ್ಷಾದ್ವಚನ (ನಾ). ಪ್ರತ್ಯಕ್ಷವಾದ ಮಾತು : "ಸಾಕ್ಷಾದ್ವಚನಂ ಬಗೆಯೆ ಸದ್ಯಕ್ಷ ಪ್ರತ್ಯಕ್ಷವಾಚಕಂ ತಾನಕ್ಕುಂ" (ಪುಪ್ರಕೋ. ೧೩೫-೧೦೬). [ಸಂ.]

ಸಾಕ್ಷಿ (ನಾ). ೧. ನೋಡುವಿಕೆ ; ಕಾಣುವಿಕೆ. ೨. ಗಮನಿಸುವಿಕೆ; ಲಕ್ಷಿಸುವಿಕೆ. ೩. ಪುರಾವೆಯನ್ನು ಒದಗಿಸುವಿಕೆ; ರುಜುವಾತು ಮಾಡುವಿಕೆ : ಹಿಂದ ತಾನು ನೋಡಿ ತಿಳದು ಅನುಭವ ಮಾಡಿಕೊಂಡ ಅಂಶವನ್ನು ಪುನಃ ಜ್ಞಾಪಿಸಿಕೊಂಡು ಹೇಳುವುದೇ ಸಾಕ್ಷಿ (ಜೀವಾತ್ಮ. ೭೭); ಸಾಹೇಬಜನರಿಗೆ ಸಾಕ್ಷಿ ಬೇಕಾಗುವುದಿಲ್ಲ (ಭಾಸಾ. ೧೧). ೪. ಪುರಾವೆ; ರುಜುವಾತು . ವಸುಮತಿ ಸಾಕ್ಷಿ ಧೀರತೆಗೆ ವಾಕ್ಪತಿ ಸಾಕ್ಷಿ ನ್ಯತಕ್ಕೆ ದಿಗ್ಯಧೂಪ್ರಸರಮೆ ಸಾಕ್ಷಿ ಕೀರ್ತಿಗೆ ರವಿಬ್ರಜಿಮಂಡಳಮಯ್ದೆ ಸಾಕ್ಷಿ ಸಾಹಸಕೆ ನಿಡಾಸಿ ಸಾಕ್ಷಿ ಗಳ ವೀರಗುಣಕ್ಕೆನೆ . . . ಬಿತ್ತರಿಪರಾರ್ಗ್ಗಳ ಭಾಸ್ಕರದಣ್ಣನಾಥನಂ (ಪೌಗಾ. XX. ೪೬; 1072); ನಿಮಿಷದಲಿ ಸ್ಥೂಲವನಮಾಲಿಪ್ರತುಮೆ ನೆಜೆ ಹೋಳಿದಿಬ್ಬಗಿಯಾಗಿ ನೆಲದಲಿ ಧೂಳಿಪಟವಾಯ್ತದಕಿದಱ ಶೂನ್ಯಾಲಯವೆ ಸಾಕ್ಷಿ (ಬಸಪು. ೫೩-೭೧); ಬೇವು ತಾ ಪರಿಪಕ್ವವಾದರೆ ಹಾವುಮಕ್ಕೆಗೆ ಸಾಕ್ಷಿ ಗಡ (ಕುವ್ಯಾಖ್ಯಾ. ೧೭-೧೫); ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ (ಗಾದೆ). ೫. ಯಾವುದಾದರೊಂದು ನಡೆದ ಘಟನೆಯನ್ನು ನೇರವಾಗಿ ನೋಡಿದವನು; ರುಜುವಾತುಮಾಡುವವನು; ಪುರಾವೆದಾರ : ನನ್ನಿಕಾಡನಾ ಎಜನಾಗನಾ ವ್ಯವಹಾರದನ್ತರಂ ಸಾಲಮ್ ಇಲ್ಲಾಮ್ ಎಕ್ಕೆ ಸಾಕ್ಷಿ ಲೋಕಾದಿತ್ಯ ಎಳಅರಸರ್ಮ್ಮಗನ್ನಿರ್ (ಎಕ. X. ಕೋಲಾರ. ೭-೪; 760); ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮದೇವ ಸಾಕ್ಷಿಯಾಗಿ (ಬಸವ. ೩೪೫); ಪ್ರಾಣಲಿಂಗಕೆ ತದ್ಗುರುಸ್ವಾಮಿ ಪ್ರಾಣವಾಗುರು ತಾನೆನಿಪ್ರ ಧುರೀಣಜಂಗಮಲಿಂಗವೇ ಮತ್ ಪ್ರಾಣಲಿಂಗ ಮಿದಕ್ಕೆ ಸಂಗಮದೇವನೇ ಸಾಕ್ಷಿ (ಬಸಪು. ೬೫-೫೦). ೬. [ವೇದಾಂತ] ನಾನು ಎಂಬ ಭಾವ; ಅಹಂಭಾವ: ಪ್ರತ್ಯಕ್ಷವು (೧) ಕಣ್ಣು, (೨) ಮೂಗು, (೩)ನಾಲಿಗೆ, (೪) ಚರ್ಮ, (೫) ಕಿವಿ, (೬) ಮನಸ್ಸು, (೭) ನಾನು ಎಂಬ ಸಾಕ್ಷಿ ಏಳು ಬಗೆಯಾಗಿದ-ಈ ಸಿದ್ಧಾಂತದಲ್ಲಿ ಸಾಕ್ಷಿಪ್ರತ್ಯಕ್ಷವು ಸಪ್ರಮಾಣವಾಗಿ ನಿರೂಪಿತವಾಗಿದೆ (ಭಾರದ. ೩೭೮). ೭. ಪರಮಾತ್ಮ; ಪರತತ್ತ್ವ : ಪುರುಷನು ಚೈತನ್ಯರೂಪನು, ಇವನು ಜ್ಞಾನಕ್ಕೆ ವಿಷಯನಾಗುವುದಿಲ್ಲ. ಆದುದರಿಂದಲೇ ಇವನಿಗೆ 'ಸಾಕ್ಷೀ' ಎಂದು ಹೆಸರು (ಭಾತತ್ತ್ವ. ೬೨೧).

ಸಾಕ್ಷಿಮಾಡು = ಸಾಕ್ಷಿಗಾರನನ್ನಾಗಿ ಇಟ್ಟುಕೊಳ್ಳು ,— ಗೊತ್ತುಮಾಡು : ಮತ್ತೊಂದು ದಿವಸಂ ಗಿಳಿಯಂ ಸಾಕ್ಷಿಮಾಡಿ ಇರ್ವರುಂ ಚದುರಂಗಮಾಡುತ್ತಿರೆ (ಪಡ್ಡಾರಾ. ೧೦೮-೭೫). **ಸಾಕ್ಷಿಹೇಳು** = ಕಂಡದ್ದನ್ನು ರುಜುವಾತು ಮಾಡು,— ಪ್ರಮಾಣೀಕರಿಸು : ಈಗ ನೀನು ಖಾನರಿಗೆ ಅನುಕೂಲವಾಗಿ ಸಾಕ್ಷಿ ಹೇಳಿದರೆ, ಇಗೋ, ಕಾರಾಗೃಹವಾಸವು ತಪ್ಪುವುದು (ರಾಸಾಜ. ೧೩೭); ನ್ಯಾಯಾಲಯಗಳಲ್ಲಿ ಸಾಕ್ಷಿ ಹೇಳುವ ಪದ್ಧತಿಯೊಂದಿದೆ (ಜೀವಾತ್ಮ. ೭೬). [ಸಂ. ಸಾಕ್ಷಿನ್]

ಸಾಕ್ಷಿಕ (ನಾ). ಸಾಕ್ಷಿಯಾಗಿರುವವನು; ಪ್ರಮಾಣವಾಗಿರುವವನು : ತತ್ಸಾಕ್ಷಿಕ ಸಾಕ್ಷಾದ್ಬ್ರಹ್ಮಮುಂ ಸರ್ವಮುಮೆಲೆ ಪೆಱರಾರ್ ನೀನೆ ವಿಶ್ವಾಧಿನಾಥಾ (ಶಬುಶಂ. ೫-೩೫); ಎಲೆಮುನಿಪಯಿಾ ಕಾರ್ಯ ನಿನ್ನನುಳಿದಾದುದೇ ಮತ್ತೆ ಪೇಳ್ಳ ಸಾಕ್ಷಿಕನಂದದೀ (ಸವಮೋ. ೧೩-೧೯). [ಸಂ.]

ಸಾಕ್ಷಿಕಟ್ಟೆ (ನಾ). ನ್ಯಾಯಾಲಯಗಳಲ್ಲಿ ಸಾಕ್ಷಿಗಾರನು ಪುರಾವೆಗಳನ್ನೊದಗಿಸಲು ನಿಲ್ಲುವ ಕಟಕಟೆ, — ಬೌಕಟ್ಟು : ಮನೆಯ ಹಣ್ಣನ್ನು ನ್ಯಾಯಸ್ಥಾನದ ಸಾಕ್ಷಿಕಟ್ಟೆಯಲ್ಲಿ ನಿಲ್ಲಿಸಿ ಅಡ್ಡಪ್ರಶ್ನೆಗಳನ್ನು ಹಾಕಿದಂತಾಗುತ್ತದ (ನಿಬಂಧ. II, ೩೩೬). [ಸಾಕ್ಷಿ + ಕಟ್ಟೆ,]

ಸಾಕ್ಷಿಕಲ್ಲು (ನಾ). ಪುರಾವೆಗಳನ್ನೊದಗಿಸಲು ಸಾಕ್ಷಿಗಾರನು ನಿಲ್ಲುವ ಕಲ್ಲು: ಅಗ್ನಿಯ ಬೇಡಿ ದಂತಿಗಮನೆ ಆಗಸ್ವಂತಾದಿ ಸಾಕ್ಷಿಕಲ್ಲಿನ ಮ್ಯಾಲೆ ನಿಂತು . . .ಭರದಿಂದ ತಾ ನೆಗದು ಆ ವುರಿಯೊಳು ಬೀಳೆ (ಯನಗ. ೧೫೦). [ಸಾಕ್ಷಿ + ಕಲ್ಲು (< ಕಲ್$_3$)]

ಸಾಕ್ಷಿಗಾರ (ನಾ). (ಯಾವುದಾದರೂ ಮೊಕದ್ದಮೆಯ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿ, ಕಂಡ ವಿಚಾರವನ್ನು ನ್ಯಾಯಾಲಯದಲ್ಲಿ ಹೇಳಿ) ರುಜುವಾತು ಪಡಿಸುವವನು : ಸಾಕ್ಷಿಗಾರನು ಭೂತಕಾಲದಲ್ಲಿದ್ದು ಈಗಿಲ್ಲದಿದ್ದರೆ ಸಾಕ್ಷ್ಯ ನಡೆಯಲಾರದು (ಜೀವಾತ್ಮ. ೭೬). [ಸಾಕ್ಷಿ + -ಗಾರ (< -ಕಾಱ)]

ಸಾಕ್ಷಿಗೊಳಿಸು (ಕ್ರಿ). ರುಜುವಾತುಗೊಳಿಸು; ಪ್ರಮಾಣೀಕರಿಸು : ಗುರುಹಿರಿಯ ಕುಂಭಕುಂಭಮ ಸಾಕ್ಷಿಗೊಳಿಸಿಯೀರ್ವರನು ಸ್ಥಿರದಂಪತಿಗಳೆನಿಸಿ (ನವಮೋ. ೩೪-೨೧). [ಸಾಕ್ಷಿಗೊಳು + -ಇಸು$_3$]

ಸಾಕ್ಷಿಗೊಳು (ಕ್ರಿ). ರುಜುವಾತಾಗಿ ಹೊಂದು ; ಪ್ರಮಾಣವಾಗಿ ಪಡೆ : ಮುರನ ತಲೆ ಹಾಱಿದುದು ನಭದೊಳು ನೋಡುವಮರರ ಸಾಕ್ಷಿಗೊಳುವಂತೆ (ಸಾಳ್ವಭಾ. ೨೩-೩). [ಸಾಕ್ಷಿ + ಕೊಳು (< ಕೊಳ್$_1$)]

ಸಾಕ್ಷಿದಾರ (ನಾ). = ಸಾಕ್ಷಿಗಾರ : ನಾನು ಸರಕಾರಿ ಸಾಕ್ಷಿದಾರನಾಗಲು ಸಿದ್ಧನಿದ್ದೇನೆ (ಕೊಡಕಾ. ೨೩). [ಸಾಕ್ಷಿ + -ದಾರ$_4$]

ಸಾಕ್ಷಿಪ್ರಜ್ಞೆ (ನಾ). [ಕಾವ್ಯಮೀ] ಎಲ್ಲವನ್ನೂ ಸಾಕ್ಷಿಯಾಗಿ ನೋಡುವ ನಿಲುವು. [ಸಂ. ಸಾಕ್ಷಿಪ್ರಜ್ಞಾ]

ಸಾಕ್ಷೀಭೂತ (ನಾ).೧. ಸಾಕ್ಷ್ಯ, ಪ್ರಮಾಣಗಳಿಂದ ನೆಲೆಗೊಳಿಸಲ್ಪಟ್ಟವನು : ಖ್ಯಾತದೃಷ್ಟಾದೃಷ್ಟಸಾಕ್ಷೀಭೂತಲೋಕಪ್ರತ್ಯಯಾದಿಪುನೀತ ಜಂಗಮಮೂರ್ತಿ ಶಾಪಾನುಗ್ರಹಸಮರ್ಥ (ಬಸಪು. ೬೨-೩). ೨. ಸಾಕ್ಷಿಗಾರನಾಗಿರುವಿಕೆ; ಸಾಕ್ಷಿಸ್ವರೂಪವಾಗಿರುವಿಕೆ : (ಕ). [ಸಂ.]

ಸಾಕ್ಷ್ಯ (ನಾ). ೧. ಸಾಕ್ಷಿ; ರುಜುವಾತು; ಪುರಾವೆ : ಆ ಸಂವಾದದಲ್ಲಿ ನಮ್ಮ ಪ್ರಭುಗಳ ಪಕ್ಷವಾಗಿ ಈತನು ಸಾಕ್ಷ್ಯವನ್ನು ಕೊಡಬೇಕಾಗಿದೆ (ರಾವಿಜ. ೧೨೫); ಸಾಕ್ಷಿಗಾರನು ಭೂತಕಾಲದಲ್ಲಿದ್ದು ಈಗಿಲ್ಲದಿದ್ದರೆ ಸಾಕ್ಷ್ಯ ನಡೆಯಲಾರದು (ಜೀವಾತ್ಮ. ೭೬). ೨. ಪುರಾವೆ ನೀಡಿದುದು; ಸಾಕ್ಷಿ ನೀಡಿದುದು : ಆ ಕೆಲಸ . . . ನ್ಯಾಯಾಲಯಕ್ಕೆ ಬರಲಾರದವರ ಸಾಕ್ಷ್ಯವನ್ನು ದಾಖಲೆಮಾಡಿಕೊಂಡು ಬರುವುದಾಗಿರಬಹುದು (ಕವಿಕೋ. I, ೭೦೯). [ಸಂ.]

ಸಾಖಾಚರ (ನಾ). ಕೋತಿ; ಕಪಿ.

ಸಾಖಾಚರೇಂದ್ರಧ್ವಜ = ೧. (ಹಾನುಗಲ್ಲಿನ ಕದಂಬಕುಲದವರ ಲಾಂಛನವಾಗಿದ್ದ) ಕಪಿಧ್ವಜ. ೨. ಕಪಿಧ್ವಜವನ್ನುಳ್ಳವನು; ಒಂದು ಬಿರುದು: ಬನವಾಸಿಪುರವರೇಶ್ವರಂ ಸಾಖಾಚರೇಂದ್ರಧ್ವಜಂ . . . ಶ್ರೀಮನ್ಮಹಾಮಣ್ಡಳೇಶ್ವರಂ ಕೀರ್ತಿವರ್ಮದೇವರ್ (ಸೌಇ. XX, ೪೧-೭; 1088). [< ಸಂ. ಶಾಖಾಚರ]

ಸಾಖ್ಯ (ನಾ). ಒಂದು ಅಳತೆ; ನಾಲ್ಕುಬಳ್ಳಗಳ ಪರಿಮಾಣ; ಕೊಳಗ : "ಸಾ[ಪಾಠಾಂ. ಶಾ]ಖ್ಯಂ ಶಿವಂ ಕೊಳಗಮಕ್ಕುಂ" (ಮಂಗರಾ. ೬೧-೧೯). [?]

ಸಾಗಡ 'ಸಾಂಗಡ' ನೋ.

ಸಾಗಡೆ$_1$ 'ಸಾಂಗಡ' ನೋ.

ಸಾಗಡೆ$_2$, ಸಾಗಾಡೆ (ನಾ). ಒಂದು ಬಗೆಯ ಮರ : ಸುಜ್ಜಿಲರಳಿ ಸಾಗಡೆ . . . ಗರಿಕೆ ಸಸಿ ನೇಸಱವೆಳಗಿಗೆ ವೆಜ್ಜಗೊಡದೆ ಬೆಳೆದಿರಾಲ ಬಿಂಜಂ ಭೀಕರತರಮಾಯ್ತು (ಜಯಕಾ. ೧೫-೨೪); ಮರಗಳು . . . ಹೊನ್ನೆ, ಸಾಗಡೆ, ಚೆಂದಲ, ಕಡಗ (ನಮ್ಮನು. ೨೩೬). **ಸಾಗಾಡೆ** : ಸಾಗಾಡೆ (ಕಸಂಬ).- ದೊಡ್ಡಮರ, ಶೋಭೆಯುಳ್ಳದ್ದು, ಬಹುಸಾಧಾರಣ (ಕಭಾಗೆ. ೪೮). [?]

ಸಾಗಣೆ, ಸಾಗವಣೆ (ನಾ). ಕಳುಹಿಸುವಿಕೆ; ರವಾನಿಸುವಿಕೆ : ಕೀಟಗಳಲ್ಲಿ ರಕ್ತಪರಿಚಲನೆ . . .ಶ್ವಾಸೋಚ್ಛ್ವಾಸಅನಿಲಗಳ ಸಾಗಣೆ (ಕೀಟಶಾ. ೩೧); ಜನರ ಪ್ರಯಾಣ, ಸಾಮಾನುಸಾಗಣೆ ಎಲ್ಲಕ್ಕೂ ಎತ್ತಿನ ಬಂಡಿಯೇ ಆಧಾರವಾಗಿತ್ತು (ನಾಪದ. ೧೩೨). **ಸಾಗವಣೆ** : ಉಪ್ಪಿನ ಸಾಗವಣೆಗಾಗಿ ಅಸಂಖ್ಯಾತಮಾರ್ಗಗಳು ಇದ್ದಿರಬೇಕೆಂದು ಇಂದು ಸಹಜವಾಗಿ ಊಹಿಸಬಹುದಾಗಿದೆ (ಸುಕ್ತುಮು. ೧೯). [ಸಾಗು$_1$ + -ಅಣೆ$_4$]

ಸಾಗಮನ (ನಾ). ಗಂಡ ಸತ್ತಾಗ ಹೆಂಡತಿಯು ಜೊತೆಯಲ್ಲಿ ಅಗ್ನಿಪ್ರವೇಶ ಮಾಡುವುದು; ಸಹಗಮನ : ಪಶ್ಚಿಮಾಂಬುಧಿಯೊಳು ಜೀವವ ತೊಱೆದ ಚಂದ್ರಮನು ಪೋಗಲಾಣ್ಮನ ಕೂಡೆ ನಕ್ಷತ್ರ ನಿಶಿವೆಣ್ಣು ಸಾಗಮನವನೆ ಮಾಡಿದುವು (ಮೋಹತ. ೧೮-೧೦೭). [< ಸಂ. ಸಹಗಮನ]

ಸಾಗರ (ನಾ). ೧. ಕಡಲು; ಸಮುದ್ರ : ಸಾಗರದೊಳಗಿರ್ದಂಕದ ಮಾಗಧನಂ ಕಟ್ಟದಲ್ಲದಿರನರಸನೆನುತ್ತೋಗಡಿಸದೆ ನಡೆದುದು ಬಲಸಾಗರಮಾ ಸಾಗರಂಬರಂ ತರತರದಿಂ (ಆದಿಪು. ೧೨-೬೪). ೨. ಸಮುದ್ರದೇವತೆ : ಲಕುಮಿಯ ಮಗಳೆನಲಳಿಯನು ಹರಿಯು . . . ಏನು ಕುಟಂಬವೊ ಸಾಗರಗೆ (ಧ್ವನ್ಯಾಲೋ. ೨೧೧). ೩. ಕೆರೆ; ಜಲಾಶಯ: ಆ ದಣಾಯಕಪುರದಿಂ ಮೂಡಲು ಅಕ್ಕತಂಗೆಯ ಕಟ್ಟೆಯ ಒಳಗೆರೆಯೊಳಗಣ ಹಳ್ಳದ ಸಾಗರ ಮೇರೆಯಾಗಿ (ಎಕ. VII . ಶಿವಮೊ. ೭೧-೩೮;1431). ೪. ಕೆಲವು ಊರುಗಳ ಹೆಸರುಗಳ ಕೊನೆಯಲ್ಲಿ ಸೇರುವ ಶಬ್ದ ; ಉದಾಹರಣೆಗೆ 'ಕೃಷ್ಣರಾಜಸಾಗರ', 'ಬುಕ್ಕಸಾಗರ' ಇತ್ಯಾದಿ : ಭರಮಸಾಗರದ ಕೆರೆ, ಅಬ್ಬನಾಯಕನ ಹಳ್ಳ ಕೆರೆ . . . ಇವೇ ಮೊದಲಾದ ಹಲವು ದೊಡ್ಡಕೆಲಸಗಳನ್ನು ಮಾಡಿಸಿದರು (ಚಿತ್ರಜಾ. ೪೭). ೫. ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕಿನ ಹೆಸರು. ೬. [ಗಣಿತ] ನಾಲ್ಕು ಎಂಬ ಸಂಖ್ಯೆಯ ಸಂಕೇತ. ೭. ಏಳು ಎಂಬ ಸಂಖ್ಯೆಯ ಸಂಕೇತ : ಸ್ವರ ಸಾಗರ ಪರ್ವತಾದ್ರಿಯೇಟಱ ನಾಮಂ (ತ್ರಿಪಜಾ. ೯-೭). ೮. ಸಂಖ್ಯೆಯ ಸ್ಥಾನಗಳಲ್ಲಿ ಮೂವತ್ತೇಳನೆಯ ಸ್ಥಾನ ಮತ್ತು ಮೂವತ್ತೇಳು ಅಂಕೆಗಳಿಂದ ಕೂಡಿದ ಒಂದು ದೊಡ್ಡಸಂಖ್ಯೆ : ಎಕ್ಕಂ ದಾಹಂ ಶತಂ ಸಾವಿರ . . . ಸಾಗರ ಮಹಾಸಾಗರ ಪರಿಮಿತ ಮಹಾಪರಿಮಿತ ಈ ೪೦ ಸ್ಥಾನದ ಉಗ್ಗಡಣೆ (ವ್ಯವಹಾ. ೬-೧೯); ಪ್ರಥಮಸ್ಥಾನ ದ್ವಿತೀಯಸ್ಥಾನ . . . ಪಂಚಮಸ್ಥಾನವೆಂದಿಂತು ಮೂವತ್ತಾಱುಸ್ಥಾನಪರ್ಯಂತರಂ ಕ್ರಮದಿಂದವಕ್ಕೆ ಎಕ್ಕಂ ದಹಂ ಶತಂ . . . ಮಹಾನಿಧಿ ಸಾಗರ ಮಹಾಸಾಗರ . . . ಕ್ರತುವೆಂಬವೆ ಉಗ್ರಡಣೆಗಳು (ವಿವಕ. ೭). ೯. [ಜೈನ] ಅಸಂಖ್ಯಾತಕೋಟಿವರ್ಷಗಳ ಒಂದು ದೀರ್ಘಕಾಲಮಾನ; ಹತ್ತುಕೋಟಾಕೋಟಿಪಲ್ಯೋಪಮ ಪರಿಮಿತಕಾಲ : ಹಿಮರುಚಿ ಕುಂದೆ ಕುಂದೆ ನೆಱೆದೊಪ್ಪುವ ಚಂದ್ರಿಕೆ ಕುಂದುವಂತೆ ಬಂಹಿಮವದಪಾರಸಾಗರಮಿತಾಯುವ ಲೆಕ್ಕದ ಕುಂದೆ ಕುಂದೆ (ಶಾಂತಿಪು. ೭-೭೮); ತನ್ನ ಸಮಕಟ್ಟಿದಾಯುಷ್ಯದ ಸಾಗರವಿರ್ಪತ್ತೆರಡಱ ಭಾಗದನಿತ ಮಾಸಮಾಗೆ ಸುಯ್ಯಂ ನೆನೆವೊಂ ಭೋಗೇಚ್ಛೆ ಪುಟ್ಟಿದೊಡೆ ತತ್ಸಾಗರಸಮ್ಮಿತ ಸಹಸ್ರಮಾಸಕ್ಕುಣಿಸಂ (ಚಂದ್ರಪ್ರ. ೯-೪೮). [ಸಂ.]

ಸಾಗರದಾನ (ನಾ). ಒಂದು ಬಗೆಯ ಡೇರೆ ,— ಗುಡಾರ (?) : ಮುತ್ತಿನ ಗುಡಿ ಹೊಯ್ದವು ಸಾಗರದಾನವೆತ್ತಿತು ಜೀನಗೆಲಸದ ಮೊತ್ತದ ಗುಡಿಗಳು ನೆಗೆದವವಳಿಗೆ ವಿಯತ್ತಳವನು ಚುಂಬಿಸುತ (ಕುರಾಸಾಂ. ೪೨-೫೪); ನೆಗಳ್ದುವಲ್ಲಲ್ಲಿ ಮಯನಿರ್ಮಿತ ದೊಳಾಗ ಬಗೆಬಗೆಯ ಗುಡಿ ಗುಮುತಿ ಗೂಡಾರ ಸಾಗರದಾನಂ (ಚಿಬಪು. ೪೭-೩೩). [?]

ಸಾಗರನಾಥ (ನಾ). ಸಮುದ್ರದ ಅಧಿಪತಿ ; ವರುಣ : ಗೋಸಂಬಂಧವ ತೋಟಿಯಳಾ ಸಾಗರನಾಥನಿತ್ತ ಶಾಪದಿನವರ್ಗಾದಾ ಸುತರುಂ ಗೋಪಾಲವ್ಯಾಸಂಗರ್ ಕೆಲವುಕಾಲಮಿರ್ಕುಂ ವ್ರಜದೊಳ್ (ಜಗವಿ. ೧-೭೬). [ಸಂ.]

ಸಾಗರಬೀಳು (ಕ್ರಿ). ೧. (ಉಕ) ಆತುರದಲ್ಲಿ ಮೈಚಾಚಿ ಮುಂದೆ ಬೀಳು; ಇದ್ದಕ್ಕಿದ್ದ ಹಾಗೆ ಮುಗಿಬೀಳು : ಗಿಯಾಸಳು ಸಾಗರಬಿದ್ದು ತನ್ನ ಕಂದಮ್ಮನನ್ನು ಎತ್ತಿಕೊಂಡು ಎದೆಹಾಲನುಣಿಸಿದಳು (ನೂರಜ. ೭); ಎಲ್ಲವ್ವ ಸಾಗರಬಿದ್ದು ತನ್ನ ಮೊಮ್ಮಗನನ್ನು ಕೈಗೆತ್ತಿಕೊಂಡಳು (ಬಸಸಿ. ೫೦). ೨. ಅಂಗಲಾಚು; ದುಂಬಾಲು ಬೀಳು : ಅವರು ತಮ್ಮಲ್ಲಿಗೆ ಒಮ್ಮೆಯಾದರೂ ಬಂದು ಹೋಗಬೇಕೆಂದು ನನಗೆ ಸಾಗರ ಬಿದ್ದಿದ್ದರು (ರೂಢಿ). [? + ಬೀಳು$_1$ (< ಬೀಳ್$_1$)]

ಸಾಗರಮರಿಯಾದೆ (ನಾ). ೧. ಸಮುದ್ರದ ಅಂಚು ,— ತೀರ. ೨. ಕೆರೆಯ ದಡ; ಜಲಾಶಯದ ತೀರ : ಆ ಹಳ್ಳವ ದಾಟಿ ವಾಯಾಬ್ಯಕ್ಕೆ ನಡದು ರಾಘವಪುರದ ಲಕ್ಷ್ಮಣಸಮುದ್ರದ ನೀರೊತ್ತು ಸಾಗರಮರಿಯಾದೆ (ಎಕ. III(R), ಗುಂಡ್ಲುಪೇ. ೪೦-೫೩; 1320). [ಸಾಗರ + ಮರಿಯಾದೆ]

ಸಾಗರವರಿ$_1$ (ಕ್ರಿ). ಸಮುದ್ರವು ಹರಿ,— ಪ್ರವಹಿಸು : ಸಾಸಿವೆಯ ಮೇಲೆ

ಸಾಗರವರಿದಂತಾಯಿತ್ತಯ್ಯಾ . . . ಕೂಡಲಸಂಗನ ಶರಣರು ಬಂದರೆ ಉಬ್ಬಿ ಕೊಬ್ಬಿ ಹರುಷದಲೋಲಾಡುವೆ (ಬಸವ. ೩೭೭). [ಸಾಗರ + ಪರ್ಸಿ₂]

ಸಾಗರವರ್ಸಿ₂ (ಕ್ರಿ). = ಸಾಗರಬೀಳು ೧ : ಕಮಲಾಬಾಯರ ಕೈಗೆ ಪುಟಿಗೆ ಕೊಟ್ಟು ಉಷೆಯು ಸುಶೀಲೆಯೆಡೆಗೆ ಸಾಗರವರಿದಳು (ಸಮಜೀ. ೬೨೪). [? + ಪರ್ಸಿ₂]

ಸಾಗರವಾಣಿ (ನಾ). (?) : ಚಕ್ರವರ್ತಿಯಲ್ಲಿ ಪಡೆದ ಸಾಗರವಾಣಿ ಮ[ತ್ರ] ರಿಗೆಯುಂ (ಇಎ. ೧೯೪೭, ಕರೀಂನಗರ, ೧೬೨-೫೫; 955). [?]

ಸಾಗರಶಾಯಿ (ನಾ). (ಕ್ಷೀರ) ಸಮುದ್ರದಲ್ಲಿ ಮಲಗಿರುವವನು ; ವಿಷ್ಣು : ಸಾಗರಶಾಯಿಯೊಳ್ಬೀಗುತ್ತಿಹುದೆ ನಿರ್ವಿಷಯವೆಸರ ಸಮಾಧಿ (ಗಗಾ. ೧೬-೨೨).

[ಸಂ. ಸಾಗರಶಾಯಿನ್]

ಸಾಗರಾಂತ (ಗು). ೧. ಸಾಗರದಿಂದ ಸುತ್ತುವರಿಯಲ್ಪಟ್ಟ ; ಸಮುದ್ರವನ್ನೆ ಎಲ್ಲೆಯಾಗಿ ಉಳ್ಳ : ಸುವಿಧನರಾಧಿಪನಚ್ಯುತೇಂದ್ರಂ ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೈಸಿದ ವಜ್ರನಾಭಿಯಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ (ಆದಿಪು. ೧೬-೫೮). (ನಾ). ೨. [ಜೈನ] ಅಸಂಖ್ಯಾತ ಕೋಟಿವರ್ಷಗಳ ಒಂದು ಕಾಲಮಾನದ ಕೊನೆ,— ಅಂತ್ಯ : ಸವಿ ನೋಟ್ಟಂ ಸಾಗರಾಂತಕ್ಕಸುರರ ನೆರೆಗೊಳ್ವಂ ತ್ರಿಪಲ್ಯಕ್ಕೆ . . . ಇದೇಂ ನಿರ್ದಯನೋ ಸಾರ್ಧಕಪಲ್ಯ ಕ್ಕುಬೆದಱುವರುಮಂ ನಂದೆವೊಯ್ಯಂ ಕೃತಾಂತಂ (ಮಲ್ಲಿಪು. ೧೩-೧೦೩). [ಸಂ.]

ಸಾಗರೋತ್ತರ (ಗು). ಸಮುದ್ರದಾಚೆಯ; ಕಡಲಿನಿಂದಾಚೆಗೆ ಸೇರಿದ : ಸಾಗರೋತ್ತರದೇಶಗಳು ಈ ಹೊಸದಾಗಿರುವ ಹಾಗು ವಿಸ್ತಾರವಾಗಿ ವ್ಯಾಪಿಸುತ್ತಲಿರುವ ಭಾಷೆಯ ಆಧ್ಯಾತ್ಮಿಕಅಂತಃಸಾಮರ್ಥ್ಯವನ್ನು ವೃದ್ಧಿಂಗತಗೊಳಿಸಲು ಬೃಹದಾಕಾರದ ಹೊಸಮೂಲಾಂಶಗಳನ್ನು ತರಲಿರುವುವು (ಪ್ರಬಂಧ. ೧೩೬). [ಸಂ.]

ಸಾಗರೋಪಮ (ಗು). ೧. ಸಮುದ್ರಕ್ಕೆ ಸದೃಶವಾದ. (ನಾ). ೨. = ಸಾಗರ ೯ : ಇಂತಾಯಿರ್ವರುಂ ಇರ್ಪತ್ತೆರಡುಸಾಗರೋಪಮಾಯುಷ್ಯಮನೊಡೆಯೊರಾಗಿ ದೇವರಾಗಿ ಪುಟ್ಟಿದರ್ (ವಡ್ಡಾರಾ. ೨೪-೨೩); ಅದೊಂದು ಪತ್ತುಕೋಟಿಕೋಟಿಸಾಗರೋಪಮ ಸಂಖ್ಯೆಯಂ ತಾಳ್ದಿ . . . ಒಂದೊಂದು ಷಡ್ಭೇದಭಿನ್ನಮಾದುದು (ಆದಿಪು. ೬-೪೮ ವ). ೩. (ಆಲಂ) ಅಪಾರವಾದುದು : ಅಂದಿನ ಸಭೆಗೆ ಸೇರಿದ್ದ ಜನಸಮೂಹ ಸಾಗರೋಪಮವಾಗಿತ್ತು (ರೂಢಿ). [ಸಂ.]

ಸಾಗವಣೆ 'ಸಾಗಣೆ' ನೋ.

ಸಾಗವಾನಿ, ಸಾಗುವಾನಿ₂ (ನಾ). (ಚೌಬೀನೆ ಕೆಲಸಗಳಿಗಾಗಿ ಉಪಯೋಗಿಸುವ) ಬೆಲೆಬಾಳುವ ಒಂದು ಬಗೆಯ ಗಟ್ಟಿಯಾದ ಮರ; ತೇಗ : ಹೆಬ್ಬಲಸಿನ, ಬೋವಿನ, ಸಾಗವಾನಿಯ ಮತ್ತು ಅನೇಕ ತರಹದ ಮರಗಳು ದೈತ್ಯಾಕಾರವಾಗಿ ಬೆಳದು ನಿಂತು ಭೂಮಿ-ಆಕಾಶಗಳನ್ನು ಮುಟ್ಟಿದ್ದವು (ಗಂಗಾವ. ೩೩); ಸಾಗವಾನಿಯ ಮರದ ಹಲಗೆಯೆಂಬುದೂ ನನಗೆ ಗೊತ್ತಾಯಿತು (ಕಂಬಹಾ. ೬೭). **ಸಾಗುವಾನಿ₂** : "ತೇಗ, ತ್ಯಾಗ, ತೇಗು, ಸಾಗುವಾನಿ, ತೇಗದ ಮರ" (ಸಸ್ಯನಿ. ೧೨೬); ಮರಗಳಲ್ಲೆಲ್ಲಾ ಸಾಗುವಾನಿಗೆ (Teak) ತುಂಬಾ ಬೆಲೆಯಿದೆ (ಬಾಲಪ್ರ. II, ೬೫೯). 'ಸಾಕ' ಹೋ.

[<— ಮರಾ. ಸಾಗವಾನ್, ಸಾಗವಾನೀ]

ಸಾಗಾಡೆ 'ಸಾಗಡೆ₂' ನೋ.

ಸಾಗಾಣಿಕೆ (ನಾ). ೧. ರವಾನಿಸುವಿಕೆ; ಸಾಗಿಸುವಿಕೆ : ಅನೇಕಜನ ಹೆಣ್ಣುಮಕ್ಕಳ ಸಾಗಾಣಿಕೆಯೇ ಅವಳ ಮುಖ್ಯಕಸಬು (ಕೊನಭೇ.೨೮೫); ಬಡಇಂಡಿಯಾದಲ್ಲಿ ಅಧಿಕಾರಿಗಳ ದುಂದಿನಿಂದ ಸಾಗಾಣಿಕೆಯ ಗತಿ ತೀವ್ರವಾಯಿತು (ದಾದಾನ. ೫೨). ೨. ನಿರ್ವಹಿಸುವಿಕೆ; ನಿರ್ವಹಣೆ : ಮನೆಮಾಲಿಕರ ಅಟ್ಟಹಾಸದ ಭವ್ಯಜೀವನದ ಮುಂದೆ ನಮ್ಮ ಸಂಸಾರ ಸಾಗಾಣಿಕೆ — ಸಂಸಾರ ಎಂಬುದಕ್ಕೆ ಕೇವಲ ಒಂದು ಅಪವಾದವಾಗಿದ್ದಿತು (ನಾಡಿಗೇ. ೧೯೦). [< ಸಾಗಣೆ + - ಇಕೆ]

ಸಾಗಾರ (ನಾ). [ಜೈನ] ೧. ಶ್ರಾವಕನ ಧರ್ಮ; ಗೃಹಸ್ಥಧರ್ಮ : ಸಾಗಾರಮಣಗಾರಮೆಂದು ಧರ್ಮಮೆರಡು ತೆಱನಕ್ಕುಂ ಅಲ್ಲಿ ಸಾಗಾರಮೆಂಬುದು ದರ್ಶನವ್ರತ ಸಾಮಾಯಿಕ ಪ್ರೋಷ ಧೋಪವಾಸಾದಿಭೇದದಿನೇಕಾದಶವಿಧಮಕ್ಕುಂ (ಚಾವುಂಪು. ೪೨೬). ೨. ಗೃಹಸ್ಥಾಶ್ರಮದಲ್ಲಿರುವವನು; ಗೃಹಸ್ಥ; ಶ್ರಾವಕ : ಇದರಲ್ಲಿ ಸಾಗಾರರು ಅಥವಾ ಗೃಹಸ್ಥರು ಆಚರಿಸಬೇಕಾದ ಸಮ್ಯಗ್ದರ್ಶನ ಮತ್ತು. . . ಮಹಾಪುರುಷರ ಕಥೆಗಳು ಒಂದೊಂದು ಅಧ್ಯಾಯದಲ್ಲಿ ಹೇಳಲಾಗಿವೆ (ತವನಿ. ೧೫). [ಸಂ.]

ಸಾಗಾರಧರ್ಮ (ನಾ). = ಸಾಗಾರ ೧ : ಸಾಗಾರಧರ್ಮಮಣುಬ್ರತ ಗುಣಬ್ರತ ಶಿಕ್ಷಾಬ್ರತ ವಿಕಲ್ಪದಿಂ ಮೂಱು ಪ್ರಕಾರಂ (ವರ್ಧಮಾ. ೭-೩ ವ); ಸಾಗಾರಧರ್ಮ ನಿರೂಪಣಾರ್ಥಂ ವಿಕವಿಂಶತಿಸೂತ್ರಚಯಂ ಸಂದುದು (ತತ್ತ್ವಸಾ. ೨೮೮). [ಸಂ.]

ಸಾಗಾರವ್ರತ (ನಾ).= ಸಾಗಾರ ೧: ದಾನಕ್ಕುತ್ತಮಪಾತ್ರಸಂತತಿ ಮಹಾಪೂಜಾವಿಧಾನಕ್ಕೆ ಚೈತ್ಯಾನೀಕಂ ನಿಜಶೀಲವರ್ತನೆಗೆ ಸಾಗಾರವ್ರತವ್ರಾತಂ . . . ತಾನೆಯ್ದಿತ್ತಣಮಿಲ್ಲದೇಂ ನಿರತರೋ ಭೂಕಾಂತನುಂ ಕಾಂತೆಯುಂ (ಚಂದ್ರಪ್ರ. ೫-೮೨).

[ಸಂ.]

ಸಾಗಿಸು₁ (ಕ್ರಿ). ೧. ಹೋಗುವಂತೆ ಮಾಡು; ಕಳುಹಿಸು : ನವಮಂತ್ರಿದೇವ ನಂತಾಗಡಪಾರಭೂಪತಿಗಳಂ ಬರವೇಳ್ದು ಧುರಕ್ಕೆ ಸೇನೆಯಂ ಸಾಗಿಸಿದಂ (ಹಮ್ಮೀರ. ೨-೧೨೩); ಬಾಗಿಲ ತಿವಿದು ನೂಂಕುವ ದಂತಿಶಿರವ ವಿಭಾಗಿಸಿ ಕೂರ್ಗಣೆಯಿಂದೆ ತಾಗಿಸಿ ಜೋದರ ತಲೆಯನಾಗಸಕಾಗಿ ಸಾಗಿಸಿದನು (ಪೋಹಶ. ೩೪-೭); ಗಂಧದ ಮರಗಳನ್ನು ಕೊಡಗಿಗೆ ಗುಟ್ಟಿನಲ್ಲಿ ಸಾಗಿಸುತ್ತಿದ್ದನಂತೆ (ಚಂಗಾಳ್ವ. ೨೩೬). ೨. ನಿರ್ವಹಿಸು; ನಿಭಾಯಿಸು: ಸೊಪ್ಪಾಗದ ಕರಘಾತಮಗಲದಿರ್ಪನುಭವದೊಳ್ ಸಾಗಿಸುವ ಸರಭಸಂ ಮಿಗೆ ರಾಗಿಸುವ ಮನಂ ಮನೋಹರಂ ಜಾರೆಯರೊಳ್ (ಗಿರಿಕ. ೪-೮೩); ಎನ್ನ ಪರಿಚರ್ಯೆಗನುಕೂಲೆಯಾಗಿರ್ದು ಮನೆವಾಳ್ತೆಯಂ ಸಾಗಿಪುದು ನೀನೆಂದೊಡೆ (ಚೈಮಿಪಾ. ೧೦-೨೩). ೩. ಪೋಷಿಸು; ಸಾಕು : ಭಕ್ತಿಯ ಮಱೆಯಂ ಸಲಹುವಂತೆ ನಿಷ್ಠೆಯ ಶಿಶುವಂ ಸಾಗಿಪಂತೆ ಮೋಹದಿಂದೋವುತ್ತಿರಲು (ಬಸರ. ೧೦-೧೧೩); ತನಯನಕಟಾ ಕಡುಬಳಲಿದನು ಜನನಿ ಸಾಗಿಸಿ ಸಲಹಬೇಡಾ ಮನದೊಳಿನಿತಾದಡೆ ಕರುಣವಿಲ್ಲವ್ವ ಇಂತಿಹರೇ (ಬಸಪು. ೨೪-೬೧); ಮಡದಿ ಮಗ ಮೊಮ್ಮಂದಿರಂ ಸಾಗಿಸುವೆನೆಂಕೊ . . . ತಾನೆಂದು ಬಾಳುವೆಗೆ ಬಿಡದೆ ಚಿಂತಿಸಿ ತಾಪಕೊಳಗಾಗಿ (ಚೈಮಿಪಾ. ೩೨-೨೯). ೪. ರಕ್ಷಿಸು; ಜೋಪಾನಮಾಡು : ಶಂಕರನ ಸುಪಿಮಂ ಸಾಗಿಪಂತೆ . . . ಸುಂದರವೆನಿಸಿ ತಾನೆ ಬಿತ್ತಿದ ಪುಷ್ಪವಾಟಿಗಾದರದೊಳುದಕವೆತ್ತಿ ಹೊರೆದು (ಸಿದ್ಧರಾ. ೪-೩೫); ಅತಿವೃದ್ಧರಾದೆಮ್ಮನಾರೈದು ಸಾಗಿಸಬೇಹುದು (ಸೌಂದಪು. ೪-೬೨); ಆ ಗ್ರಾಮವನೂ ಸಾಗಿಸಿ ಈ ಧರ್ಮವನೂ ನಡಸುವನ ಸಂಬಳ ಗ ೬ ವರಹ (ಎಕ. XIV, ಶ್ರೀರಂಗ. ೨೬೦-೬; 1551). ೫. (ಮಗುವನ್ನು) ಎತ್ತಿಕೊಳ್ಳು : ಅಪ್ಪದರುರದೊಪ್ಪಂ ಸಾಗಿಸುವರ ಸೋಗಿಲ ಧನಂ ಕೈಕೊಂಬರ ಕಡವರವೆನಿಸಿ (ಸಂಬರ. ೨-೩); ಸಾಗಿಸುವ ಸಾವಿತ್ರಿಯ ಸೋಗಿಲೊಳಂ ಎತ್ತುವನಸೂಯೆಯ ಹಸ್ತದೊಳಂ . . . ಸಕಲಜಗನ್ಮಾತೆಯಪ್ಪ ಗಿರಿಜಾತೆ ಶೈಶವಲೀಲೆಯ ಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬಳೆಯುತಿರ್ದಳ್ (ಗಿರಿಕ. ೩-೬೯ ವ). ೬. ಒಪ್ಪಿಸು; ವಹಿಸಿಕೊಡು : ಬಾಗಿಲು ಬಾಗಿಲುಗಳನು ಮನೆಯರಿಗೆ ಸಾಗಿಸಿದನು ಬಗೆಯಱಿದು ಬೀಗಗಳಿಗೆ ತನ್ನ ಸಜ್ಜನರನು ಮಂತ್ರಿಯಾಗಳಿಕ್ಕಿದನು ಬೇಗದಲಿ (ಕುರಾಸಾಂ. ೩೮-೮೪). ೭. ವೃದ್ಧಿಗೊಳಿಸು; ಹೆಚ್ಚಿಸು: ಅತಿಶಯದ ಲಿಂಗಮಂ ಸನ್ನುತಕರದೊಳಗಿರಿಸಿ ಪರಮಭಕ್ತಿಯ ಸಾಗಿಪ ಮತವಿದೆಂದಱುಪಿ (ದೀಕ್ಷಾಬೋ. ಕ. ೧೦೭-೨೮). ೮. ಪ್ರಾರಂಭಿಸು; ತೊಡಗು : ಮನೋಮುದದಿಂದ ಕಾವ್ಯಪದ್ಧತಿಯೊಳಾನಭವಂದನಂಗೈದು ಮುಂದೆ ಪದಸಂದರ್ಭಮಂ ಸಾಗಿಪೆಂ (ಸಂದಿಮಾ. ೧-೧೫). ೯. ವ್ಯವಸಾಯಮಾಡು; ಕೃಷಿಮಾಡು : ತಾನು ಇಟ್ಟುಕೊಂಡ ಕೂಲಿಯವರಿಂದ ಬೆಲೋಭೂಮಿಯನ್ನು ಸಾಗಿಸಿ (ಮುಂಬಯಿ. ೬ ೫-೮೫). ೧೦. ಲಲ್ಲೈಸು; ಓಲೈಸು : ಬಂದ ವಿಟರ್ಗುನ್ನತಾಸನಮನಿತ್ತು ಮನ್ನಿಸಿ ಮಣಿದು ಸಜ್ಜನವೆನಗೆಯ್ದು ಸಜ್ಜನಸ್ನೇಹದಿಂ ಸಾಗಿಸಿ ನೋಡಿ ಭೋಗದೊಳ್ ಬೋಳಯಿಸಿ (ಗಿರಿಕ. ೨-೧೦೫ ವ). [ಸಾಗು₁ + - ಇಸು₃]

ಸಾಗಿಸು₂ 'ಸಾವಗಿಸು' ನೋ.

ಸಾಗು₁ (ಕ್ರಿ). ೧. ಮುಂದೆ ಹೋಗು; ಮುಂದಕ್ಕೆ ತೆರಳು; ಚಲಿಸು : ಲೋಕಜ್ಞಾನವಱಿದು ಭಾವಭ್ರಮೆಯಲ್ಲಿ ಚರಿಸಿದಡೆ ಅಱಿಯಬಾರದು ನೋಡಾ ಅಱಿದಲ್ಲಿ ಸಾಗುವನೊಡಲು ತೆಪ್ಪದ ಮೇಲಿಪ್ಪ ಒಪ್ಪದ ಓಲೆಂದೆ (ಪೋಳಮಾ. ೧೮೨-೬೮೪); ಯೋಗವನು ಮನ ಮುಟ್ಟಿ ಭೋಗವನು ತೊಱೆದಿಹರೆ ಮಾಗಿಯ ಮಳೆಯು ಸುರಿದಂತೆ

ಆ ಯೋಗ ಸಾಗುತ್ತಲಿಹುದು (ಸರ್ವಜ್ಞ. ೪೬೮); ದೋಣಿ ಸಾಗಲಿ ಮುಂದೆ ಹೋಗಲಿ ದೂರತೀರವ ಸೇರಲಿ (ಭಾಪಗೀ. ೫೦೯). ೨. ನೆರವೇರು; ಜರುಗು : ಅವನೊಡನೆ ಬಂದ ವೃಶ್ಯಪ್ರತತಿ ತವತವಗೆ ಪೋದ ಬೆವಹಾರಮೆಲ್ಲಂ ಸಾಗಲಾ ಕುರಿತ ಮೂಱಬ್ದಕೆ ಆ ಪಳಾಶಗ್ರಾಮಕೆಯ್ದಲು (ಸಮ್ಯಕ್ತ. ೧೧-೧೮); ಹದಿನೈದನೆಯ ಶತಮಾನದಲ್ಲಿ ಸಾಗಿದ ಕೃಷಿ ಒಂದುನೂರುವರ್ಷಗಳ ವೇಳೆಗೆ ಉತ್ತಮವಾದ ಕೃತಿಗಳನ್ನು ನೀಡುವುದು ಸೂಕ್ತವಾಗಿದೆ (ಕುಮಾಸಾಂ. ೪); ಒಬ್ಬ ಬ್ರಾಹ್ಮಣನ ನಿಮಿತ್ತವಾಗಿ ಯಾಗಕ್ಕೆ ವಿಘ್ನ ಬರುವುದೇ ಹೊರ್ತಾಗಿ ಕಡೆಗೂ ಸಾಗಲಾರದು (ಕೃವಾಲ. ೭೬). ೩. ಆಗು; ಸಾಧ್ಯವಾಗು : ತನ್ನ ಕಯ್ಯೊಳ್ಸಾಗದಂಜುವೆಂ ಸಂವರ್ತನತಿತಪೋಬಲನಿಳೆಯೊಳು . . . ಸಾಕೆಂದು ಶಿಖಿ ತೊಲಗೆ (ಚೈಮಿಭಾ. ೫-೪೧); ಪಾಪಂಗಳ ಕೇಳಲಾರೆವು ತಾಯೆ ಸಾಗದನ್ಯಾಯಮಂ ಹೇಳಲಾರೆವು (ತುರಂಗ. ೩-೨೪); ಕೈಯಲ್ಲಿ ಯಾವ ಕೆಲಸವೂ ಸಾಗದಿದ್ದರೂ ಅವನು ಗುರುಸೇವೆಯನ್ನು ಬಿಡಲಿಲ್ಲ (ನೀತಿಚಂ. IV.೧೭). ೪. (ಕಾಲ, ಹಾದಿ ಮುಂತಾದುವು) ಕಳೆ; ವ್ಯತೀತವಾಗು : ಕುದುರೆಯ ಮೇಲೆಯೇ ಹೋಗಿ ಬಿಡುವ, ಬೇಗ ಸಾಗುವುದು ಹಾದಿ (ಸಿಪಲಿ. ೧೬). ೫. ಕಳೆದುಹೋಗು; ಇಲ್ಲವಾಗು : ಬೀಗೆ ಕುಂತಳತಮಂ ಸಾಗೆ ಚೆಂದುಟಿಗೆಂಪು ಮೇಗೆ ಸೌಖ್ಯೋದಯದ ಬೆಳಗ ಪಸರಿಸಿ ನಿತ್ಯನಾಗಸೆವ ಪಂಪಾವಿರೂಪಾಕ್ಷ ಸೂರ್ಯನಾನಂದಮಂ ನಮಗೀಯಲಿ (ಚಿಬಷ. ೧-೨). ೬. ನಡೆ; ಪರಿಣಾಮಬೀರು : ನೀವೆಲ್ಲರು . . . ಕೂಡಿ ಇದ್ದರೆ ನಿಮ್ಮ ಮೇಲೆ ಯಾರ ಕಾಟವೂ ಸಾಗದು (ಮುಂಬಯಿ. ೨-೩೦). ೭. ಹರಿ; ಪ್ರವಹಿಸು : ಆಗಲಂಧನೃಪಾಲ ಕಣ್ಣೊಳು ಸಾಗ ಜಲಧಾರೆಗಳು ಪಾಂಡುವು ನೀಗೆ . . . ನಾಗನಗರಿಯ ಸೇರುವೆಯ ಸಿರಿಭೋಗ ತನ್ನದು ಸುತರಿಗೆಂದನು (ತಮ್ಮಸ್ವಾ. ೧-೭೯). ೮. ವ್ಯವಸಾಯಮಾಡು; ಕೃಷಿಮಾಡು : ಯಾ ಕೆಜೆಯಲೂ ಸಾಗಿದ ಗದೆಗೆ (ಸೌಇಪ. ೧೯೩೪, ಪುಗನೂರು. ೧೫೬-೧೫; 1419). ೯. (ಕಾಸಿದ ಕಬ್ಬಿಣವು ಸುತ್ತಿಗೆಯಿಂದ ಹೊಡೆದಾಗ ಆಗುವಂತೆ) ಹಿಗ್ಗು ; ವಿಸ್ತಾರಗೊಳ್ಳು : ಈ ಪ್ರಕಾರ ತೆಗಿದ ಕಬ್ಬಿಣವು ಮಿದುವಿರುತ್ತದೆ. ಅದನ್ನು ಸಾಗಬಡಿದು ತಂತಿ ತಗಡು ಮುಂತಾದವುಗಳನ್ನು ಮಾಡಬಹುದು (ಮುಂಬಯಿ. ೬-೧೮). ೧೦. ನೀಡು; ಚಾಚು : ಮುಂದುಗಡೆಯಲ್ಲಿ ಪಾದಗಳನ್ನು ಬೇರೆ ಚಾಚಿ ಶರೀರವನ್ನು ಬಗ್ಗಿಸಿಕೊಂಡು ಕೈಗಳ ಸಾಗಿ ಬೀಸುವದು ಯಾವುದು ಅದು ಸಾಗಿ ಬೀಸುವುದು (ಶಿಪ್ಪಕಿ. ೪-೩೭); ತಲೆಯೆತ್ತಿ ನೋಡಿದರೂ ಮುಗಿಯದಂತೆ ಮುಗಿಲಲ್ಲಿ ಸಾಗಿದ ತೆಂಗಿನ ಮರಗಳು ತುದಿಯಲ್ಲಿ ಪಚ್ಚೆಯಂತಹ ಎಳೆದೊಗುಗಳ ಆಭರಣಗಳನ್ನು ಇಟ್ಟುಕೊಂಡಿದ್ದವು (ಸಮಜೀ. ೮೮).

ಸಾಗಗೊಳಿಸು = ಪ್ರಯಾಣ ಹೊರಟವರನ್ನು ಸ್ವಲ್ಪದೂರ ಜೊತೆಯಲ್ಲಿ ಹೋಗಿ ಕಳುಹಿಸಿಕೊಡು; ಬೀಳ್ಕೊಡು : ಸಾಗಗೊಳಿಸಲು ಶಾಮರಾಯರೂ ಚಾನಕಮ್ಮನವರೂ ಊರಹೊರಗಿನ ದಾರಿಯ ಮಾವಿನಮರದವರೆಗೂ ಹೋಗಿದ್ದರು (ಮೂಲಾನ. ೧೬). **ಸಾಗಹಾಕು** = ೧. ಹೋಗುವಂತೆ ಮಾಡು; ಅಟ್ಟು : ಅದೇ ದಿನ ನನ್ನನ್ನು ಮುಂಬಯಿಗೆ ಸಾಗಹಾಕಿದರು (ಸ್ಮೃತಿಚಿ. ೭೪). ೨. ಮುಂದುವರಿಸು ; ನಡೆಸು : (೬). **ಸಾಗುಕಳಿಸು** = ಸಾಗಗೊಳಿಸು : ನಾವು ಅವನನ್ನು ಹಿಂಬಾಲಿಸಿ ಸ್ವಲ್ಪ ದೂರ ಸಾಗುಕಳಿಸಿ ಬರಬೇಕು (ದೌಲತ್.೧೬೦). **ಸಾಗುಕಳುಹಿಸು, ಸಾಗಕಳುಹಿಸು** = ಸಾಗಗೊಳಿಸು: ಬೇರುಸಹಿತವಾಗಿ ಕಿತ್ತುಕೊಂಡು ಬರುತ್ತಿರುವ ಮಹಾವೃಕ್ಷಗಳು ಸಾಗುಕಳುಹಿಸುವದಕ್ಕೆ ಬಂದ ಬಂಧುಜನಗಳ ಹಾಗೆ ಕಾಣಿಸುತ್ತಿರುವುವು (ಕೃವಾಲ. ೧೮೧); ಶ್ರೀಕೃಷ್ಣನು ಒಪ್ಪಲು ದ್ರುಪದನು ಅವರನ್ನು ಸಾಗಕಳುಹಿಸಿಕೊಟ್ಟನು (ಪಚಭಾ.೬೬).

[ದೇ. ॥ ತಮಿ. ಚಾಯ್; ತುಳು. ಸಾಗು; ತೆಲು. ಸಾಗು, ಚಾಗು]

ಸಾಗ್ಯು₂ (ನಾ). ೧. ಮುಂದುವರಿಯುವಿಕೆ; ಪ್ರಗತಿ : (೬). ೨. ನಡವಳಿಕೆ; ನಡತೆ : ತ್ಯಾಗದೊಳಗನುವಾದ ಭೋಗಸರಾಗದೊಳಗವನೀಶರಾಳ್ವನುರಾಗ ದೊಳಗುತ್ಸವ್ವತೇಜದಿ ಕೀರ್ತಿ ಸಜ್ಜನರ ಸಾಗು ಸತ್ಯಗಳಾಗಿ ಸಹಜಗಳಾಗಿ ನಡತೆಗಳಲ್ಲಿ ಬಿಜ್ಜಣನಾಗಿ ಸರಿ ಈ ಕಾಲಕಿನ್ನಿಲ್ಲನ್ಯರೆನಿಸಿದನು (ಬಿಜ್ಜಪ್ಪ. ೮೨-೨೮). ೩. ವ್ಯವಸಾಯ ; ಕೃಷಿ : (೬). ೪. ವ್ಯವಸಾಯದ ಭೂಮಿ; ಸಾಗುವಳಿಯ ನೆಲ : ಶ್ರೀಮತು ಆದಿಯಪ್ಪನಾಯಕರು . . . ಕೊಟ್ಟ ಸಾಗಿನ ಧರ್ಮಶಾಶನದ ಕ್ರಮವೆನ್ತೆನ್ದರೆ (ಎಕ. XI, ದಾಪಣ. ೧೦೬-೮; 1528); ಕಂಮಾರದೆಉಹೊಲ ಕುಪ್ಪಗೆ ಕಟ್ಟಿದ ಸಾಗಿನ ಬಗೆಲ್ಲು ಮು ೧ ರ ಗ ೧ ನಾಲ್ಕು ವೊಕ್ಕಲಿಗೆ ಕಟ್ಟಿದ ಬಗೇಲು ಕೇಶವಉಡುಪನ ಸಾಗು (ಎಕ.VIII, ತೀರ್ಥಹ. ೧೮೦-೪೦; 1687). ೫. [ಸಂಗೀತ] ಹಾಡು ಅಥವಾ ಸಂಗೀತದ ಗತಿ, — ಗಮನ; ಗಮಕ: ಕಳ್ಳ ಚಕ್ಕಣಮೆನಿಪ್ಪುದು ಸಾ[ಪಾಕಾಂ. ಸೋ]ಗನಿಸಲ್ಕೆ ಸಾಲ್ವ ಸಗ್ಗದ ಪೊಸ ದೇಸಿಯೋಳಿಗಳನೊರ್ವಳೊಬಲ್ದು ನೆಲಲ್ದು ಪಾಡಿದಳ್ (ಪಂಪಭಾ. ೭-೯೧). 'ನೋಗು' ಪರಾ.

ಸಾಗುಬೀಳು = (ಭೂಮಿಯು) ವ್ಯವಸಾಯವಿಲ್ಲದೆ ಪಾಳುಬೀಳು: ಸಾಗುಬಿದ್ದ ಹೊಲ ಹಾಗಕ್ಕೂ ಬೇಡ (ಗಾದೆ). **ಸಾಗುಮಾಡು** = ವ್ಯವಸಾಯಮಾಡು; ಕೃಷಿಯನ್ನು ನಡೆಸು : ತಾನೂ ಇಲ್ಲಿಗೆ ಬಂದು ಅವಳ ಹೊಲ ಸಾಗುಮಾಡಲಿಕ್ಕೆ ಸಹಾಯ ಮಾಡುತ್ತಾ ಕಾಲಕಳೆವನು (ಮೇದಿಮ. ೯೮); ಈಗಿರುವ ಎಲೆಬಳ್ಳಿಗಳು ಒಣಗಿಹೋದ ಮೇಲೆ ಇಲ್ಲಿ ಸಾಗುಮಾಡುತ್ತಾರೆ (ಸಮಜೀ. ೮೮). [< ಸಾಗ್ಯು₁ ./ ತುಳು. ತೆಲು. ಸಾಗು]

ಸಾಗ್ಯು₃ (ನಾ). ಅನೇಕ ಬಗೆಯ ತರಕಾರಿಗಳನ್ನು ಸೇರಿಸಿ ಮಾಡುವ ಒಂದು ಬಗೆಯ ಮೇಲೋಗರ : ಇಂದು ಪೂರಿಯ ಜೊತೆಗೆ ಮಾಡಿದ ಸಾಗು ತುಂಬ ರುಚಿಯಾಗಿತ್ತು (ರೂಢಿ). [<- ಹಿಂ. ಸಾಗ್]

ಸಾಗುಅಕ್ಕಿ (ನಾ). ಸಬ್ಬಕ್ಕಿ; ಸೀಮೆಅಕ್ಕಿ : "ಸಬ್ಬಕ್ಕಿ, ಸಾಗುಅಕ್ಕಿ, ಸೀಮೆಅಕ್ಕಿ" (Sago. ಇಂಕನ). 'ಸಾಬುಅಕ್ಕಿ' ಪರಾ.

[ಸಾಗ್ಯು₀ (IP <- ಹಿಂ. ಮರಾ. ಸಾಗೂ) + ಅಕ್ಕಿ₁]

ಸಾಗುಚೀಟು (ನಾ). ಸಾಗುವಳಿಯ ಜಮೀನನ್ನು ನಿಯಮಿತಕಾಲದ ಮೇಲೆ ಹಿಂದಕ್ಕೆ ಬಿಟ್ಟುಕೊಡಬೇಕೆಂದು ಸೂಚಿಸುವ ಗೇಣಿಚೀಟಿ, — ಗುತ್ತಿಗೆ ಕಾಗದ, —ಭೋಗ್ಯಪತ್ರ : (ಕಸಂಗ್ಲಾ. ೧೬). [ಸಾಗ್ಯು₂ + ಚೀಟ್ಟು₂]

ಸಾಗುಣ್ಯ (ನಾ). ಅತಿಶಯವಾದ ಗುಣಗಳಿಂದ ಕೂಡಿರುವಿಕೆ; ಗುಣಾತಿಶಯ : "ನಿತ್ಯದಲ್ಲಿ ಸಾದಾಸನಾಖ್ಯಂ ಸಾಗುಣ್ಯವಕ್ಕು" (ಮಂಗರಾ. ೧೫೬-೭೪). [ಸಂ.]

ಸಾಗುದುರೆ, ಸಾಯ್ಗುದುರೆ (ನಾ). ಕೊನೆಯುಸಿರೆಳೆಯುತ್ತಿರುವ ಕುದುರೆ; ಸಾಯುತ್ತಿರುವ ಕುದುರೆ : ಲೋಗರ ಮಗನನಿಕ್ಕಿ ನೆಲೆಯ ನೋಡಿದನಕಟ ಸಾಗುದುರೆಗಡಕಿದನು ಹುಲ್ಲ (ಹಚಕಾ. ೧೨-೫೨); ಸಾಗುದುರೆಗೆ ಪುಲ್ಲನಡಕಿ ಕೆಡುವನೆ ಚೆದುರಂ (ಯಶೋಚ. ೩-೧೫). **ಸಾಯ್ಗುದುರೆ** : ಸಾವಿಗೆ ಹುಟ್ಟಿ ಬೆಳೆದು ಜವ್ವನವಾಂತೀಪೊಡಲನು ನಿತ್ಯಮೆಂದು ಓವುವವನು ಸಾಯ್ಗುದುರೆಗೆ ಹುಲ್ಲೀವ ಗಾವಿಲನಂದವಡೆವನು (ಶ್ರೀಪಾಲ. ೧೪-೪೨). [ಸಾ + ಕುದುರೆ]

ಸಾಗುಬಳಿ 'ಸಾಗುವಳಿ' ನೋ.

ಸಾಗುವಳಿ, ಸಾಗುಬಳಿ (ನಾ). ೧. ಕೃಷಿ ; ಒಕ್ಕಲುತನ ; ಬೇಸಾಯ : ಗ್ರಾಮದಲು ಸಾಗುವಳಿ ಕಲಪಟೆಯಾಗಿ ತಱಿದು ಗ ೪೦ ಅಕ್ಷರದಲು ನಲವತ್ತುವರಹಂನ್ನು ತೆಱುತಲಿ ಕಾಣಿಕೆ ಬೇಡಿಗೆಯಿಲ್ಲ (ಪ್ರಆರಿ. ೧೯೩೦, ೨೦-೧೩; 1546); ಕ್ರಮವರಿತ ಸಾಗುವಳಿಯಿಂದ . . . ಯಾವ ಜಮೀನನ್ನಾದರೂ ತರಕಾರಿಬೆಳೆಗೆ ಅನುಗೊಳಿಸಬಹುದು (ತರಬಿ. ೨). **ಸಾಗುಬಳಿ** : ೨. ಒಕ್ಕಲು; ಕೋರಿ : ಎಂದೆಂದಿಗೂ ನಿಮ್ಮ ಸಾಗುಬಳಿಯಾಗಿ ನಡಸಿ ಬಹುವು (ಸೌಇಪ. ೧೯೩೪, ಪುಗನೂರು ೧೫೬-೧೬; 1419).

ಸಾಗುಬಳಿಯ ವೋಲೆ = ಸಾಗುವಳಿಚೀಟಿ; ಗುತ್ತಿಗೆಪತ್ರ : ಸ್ಥಾನಿಕರು . . . ಕುಪ್ಪಯಗಳೂ ರಾಮಸಮುದ್ರದ ಕದರೀನಾರಸಿಂಹದೇವಗಳಿಗೆ ಕೊಟ ಸಾಗುಬಳಿಯ ವೋಲೆಯ ಕ್ರಮವೆನ್ತೆನ್ದರೆ (ಎಕ. X, ಮುಳಬಾ. ೧೭೩-೩; 1503). **ಸಾಗುವಳಿಮಾಡು** = ವ್ಯವಸಾಯಮಾಡು ; ಕೃಷಿಮಾಡು : ಬಂಜರ ಜಮೀನು ಸಾಗುವಳಿ ಮಾಡಿಕೊಳ್ಳ ತಕದು (ಎಕ. VI, ಕೊಪ್ಪ. ೪೮-೪೪; 1811); **ಸಾಗುವಳಿಯಾಗು** = ವ್ಯವಸಾಯವಾಗು ; ಉಳುಮೆಯಾಗು : ಕಬ್ಬಿಣದ ಸಹಾಯದಿಂದ ಭೂಮಿಯ ಸಾಗುವಳಿಯಾಗುತ್ತದೆ (ಮುಂಬಯಿ. ೪-೧೪೩). [ಸಾಗ್ಯು₁ + - ವಳ್ಳಿ ./ತಮಿ. ಚಾಕುಪಟಿ; ತುಳು. ಸಾಗುವಳಿ, ಸಾಗೋಳಿ, ಸಾಗ್ಗಳಿ; ತೆಲು. ಸಾಗುಬಡಿ]

ಸಾಗುವಳಿಗಾರ (ನಾ). ವ್ಯವಸಾಯಮಾಡುವವನು ; ರೈತ : ಸಾಗುವಳಿಗಾರನಿಗೆ ನಿತ್ಯಸಂಕಟ (ಹಸುಹೊ. ೩೩೬). [ಸಾಗುವಳಿ + - ಗಾರ (< - ಕಾಱ)]

ಸಾಗುವಳಿಚೀಟು (ನಾ). "ವ್ಯವಸಾಯ ಮಾಡಲು ಬಯಸಿದ ರೈತನಿಗೆ ಅದಕ್ಕೆ ಒಪ್ಪಿಗೆಯಿತ್ತು ಬರೆದುಕೊಡುವ ಅನುಮತಿಪತ್ರ" (ಕಸಂಗ್ಲಾ. ೧೫೯).

[ಸಾಗುವಳಿ + ಚೀಟ್ಟು₂]

ಸಾಗುವಾಡ (ನಾ). ಸಾಗಿಸುವಿಕೆ ; ರವಾನಿಸುವಿಕೆ : ಈ ಕೆಲಸಕ್ಕೆ ಅವಶ್ಯವಿರುವ ಬ್ಯಾಂಕುಗಳು, ಪಾಲುವಿಕ್ರಯಮಾಡುವವರು, ವ್ಯಾಪಾರಿಗಳು, ಸಾಗುವಾಡ (Transit) ಗಳು --ಎಲ್ಲವೂ ಅಷ್ಟು ವ್ಯವಸ್ಥಿತವಾಗಿರಬೇಕು (ಬಾಲಪ್ರ. ೧. ೧೮೦).

[< ಸಾಗು / ತೆಲು. ಸಾಗುವಾಟು]

ಸಾಗುವಾನಿ$_1$ (ನಾ). = ಸಾಗುವಾಡ : ವ್ಯಾಪಾರವಹಿವಾಟಿನಲ್ಲಿ ಬ್ರಿಟಿಷರ ಕೈವಾಡ ಬೆಳೆಯುತ್ತಲೇ ಇತ್ತು, ಸಾಗುವಾನಿ ಉದ್ಯಮವೆಲ್ಲ ಬ್ರಿಟಿಷರ ಗುತ್ತಿಗೆಯಾಗಿತ್ತು (ಪಶಿಸಂ. ೧೮). [< ಸಾಗು$_1$]

ಸಾಗುವಾನಿ$_2$ 'ಸಾಗವಾನಿ' ನೋ.

ಸಾಗುಸಂತು (ನಾ). ಬಿತ್ತನೆಯಾದ ಬೀಜದ ವರ್ಗ ಮತ್ತು ಪರಿಮಾಣ ; ಸಾಗುವಳಿಯ ಜಮೀನಿನ ವಿವರ ಮತ್ತು ಕೃಷಿಯಾಗದಿರುವ ಜಮೀನಿನ ವಿವರಗಳ ಲೆಕ್ಕ (ಕಿಸಂಗ್ಲಾ. ೧೪೯): ಸಾಗುಸಂತು ಮಾಡುವ ಬಗ್ಗೆ ತಾಲೂಕು ಜಿರಾಯತ ಮಾಡಬೇಕೆಂದು, ದೂರದೇಶಕ್ಕೆ ಹೋಗಿ ಇದ್ದಂಥಾ ರೈತರನ್ನು ಕರೆಸಿ, ಜಮಾ ಮಾಡಿದಲ್ಲಿ (ರಾಚೇಂದ್ರ. ೯೧); ಅರಮನೆ ಕೆಲಸ, ಸ್ಥಳಮನೇ ಸಾಗುಸಂತು, ಎತ್ತುವಳಿ ಮೊದಲಾದ ಕೆಲಸಗಳನ್ನು ಮಾಡುತಾ, ಆ ಸೇನುಭೋಗರ ಸಮ್ಮತಿಯಿಂದ ನಡೆದುಕೊಳ್ಳುವುದು (ಚಿತ್ರಪಾ. ೮). [ಸಾಗು$_2$ + ಸಂತು?]

ಸಾಗೆರೆ (ನಾ). ಒಂದು ಊರಿನ ಹೆಸರು : ದಣ್ಣಾಧೀಶಪರಾದಂ ಸಾಗೆರಗ್ರಾಮದೆಳಿ ಈಷಾಣಿ ಚದುರಂ ಇದನಳಿಪಿ xxx ಉಳ್ಳೊತ್ತಿ ಮಕ್ಕಳ್ಪುಟ್ಟದೆ ಕೆಟ್ಟು ಪಞ್ಚಮಹಾಪಾತಕ ನಪ್ಪರ್ (ಎಕ. III (R). ನಂಜನ. ೧೪೨-೧; ಸು ೫ನೆಯ ಶತ). [? + ಕರೆ$_2$ (< ಕೆಱೆ)]

ಸಾಚ 'ಸಾಚಾ' ನೋ.

ಸಾಚಾ, ಸಾಚ (ಗು). ೧. ನಿಜವಾದ; ದಿಟವಾದ : "ಸರಿಯಾದ, ಸಾಚಾ" (True. ಇಂಕನಿ). ೨. ಕೃತ್ರಿಮವಲ್ಲದ; ಸೀದಾ; ನಿಷ್ಕಪಟವಾದ : ಸಾಚಾ ಇಸಮು ಅನ್ನಿಸಿ ಶಾಭಾಸ್‌ಗಿರಿ ಪಡೆದಿದ್ದೆ (ಚಂಗೂಲಿ. ೮೩); ಸಾಚಾವ್ಯಾಪಾರ ಮಾಡಿ, ರೊಕ್ಕ ಕೊಟ್ಟು ಜಮೀನು ತಗಂಡವರೆ (ಚಂದತೋ. ೧೪೦). (ನಾ). ೩. ನಿಜವಾದುದು; ದಿಟವಾದುದು: ಅದೇನು ಸಾಚಾನೇ ಖೋಟಾನೇ ಎಂದು ಎರಡು ಮೂರು ಬಾರಿ ನೋಡಿದನು, ಎಲ್ಲವೂ ಸಾಚಾ (ರಂಗಕ. ೯). ೪. ಪ್ರಾಮಾಣಿಕತೆಯುಳ್ಳ ವ್ಯಕ್ತಿ; ನಂಬಿಕೆಗೆ ಅರ್ಹನಾದ ವ್ಯಕ್ತಿ : ಈಚೀಚಿನ ವರೆಗೂ ಏನೋ ಸಾಚಾ ಇದ್ದ ಹಾಗಿದ್ದ (ಮುನಿಮಾ. ೪೮); ಪಂಡಿತರು, ಸ್ವಾಮಿಗಳು, ಸಂನ್ಯಾಸಿಗಳು ಇವರಲ್ಲಿ ಖೋಟಾ ಸಾಚಾ ಇಬ್ಬರೂ ಇದ್ದರು (ಬಂಕಿಮ. ೧೫೪). **ಸಾಚ** : ೫. ಸಹಜವಾದುದು; ಸ್ವಾಭಾವಿಕವಾದುದು : ನೀಚಹೊಲೆಯಗೆ ದಾಸನಾಗಲು ನಾಚಿಪರೆ ಜನರೇನ ಪೇಳ್ಕೆ ಮಾಚಿ ಮಾರಲು ಯನ್ನ ಈ ಪರಿ ಸಾಚವೇ ನಿನಗೆ (ಹಮಚ. ೧೨೦).

[<— ಹಿಂ. ಸಚ್ಚಾ, ಸಾಂಚ್; ಮರಾ. ಸಚ್ಚಾ, ಸಾಚ್]

ಸಾಚಾಮನುಷ್ಯ (ನಾ). ಸತ್ಯವಂತನಾದ ಮನುಷ್ಯ; ಪ್ರಾಮಾಣಿಕನಾದ ವ್ಯಕ್ತಿ: ಬಹಳ ಸಾಚಾಮನುಷ್ಯ ಅಂತ ಕಾಣುತ್ತೆ (ಮುನಿಮಾ. ೧೦೫). [ಸಾಚಾ + ಮನುಷ್ಯ]

ಸಾಚಿ$_1$ (ನಾ). ೧. ಮಗ್ಗುಲಿನಿಂದ ಕಾಣುವ ನೋಟ,— ಆಕೃತಿ; ಪಾರ್ಶ್ವದೃಶ್ಯ,— ಭಂಗಿ : ಕೆಲರಾಗಳ್ ಋಜುವಿಂದಮರ್ಧಋಜುವಿಂದಂ ಸಾಚಿಯಿಂದಂ ಕೆಲರ್ ಪಲವುಂ ಭಂಗಿಯಿನಿರ್ದು ಜಾನಕಿಯ ರೂಪಾಶ್ಚರ್ಯಮಂ ನೋಡಿ . . . ನಿಷ್ಪಂದರಾಗಿರ್ಪುದುಂ (ಪಂರಾಮಾ. ೫-೬೫); ಸ್ತನಲಕ್ಷ್ಯಾಲೋಕನಂ ಸಿಂಪಿಸೆ ಮುರರಿಪು ತನ್ವಂಗಿ ತಾರುಣ್ಯಭಾರಾತಿನಿರೋಧಾಲಸ್ಯದಿಂ ಮೆಯ್ಮುಱಿದಳೆನೆ ಪೆಱಳ್ ಸಾಚಿಯಿಂ ನಿಂದು . . . ಶೋಭವೆತ್ತಳ್ (ಜಗವಿ. ೧೪-೧೦೫). ೨. [ಚಿತ್ರಶಾ] ಒಂಭತ್ತು ಬಗೆಯ ಸ್ಥಾನಕಗಳಲ್ಲಿ ಒಂದು; ಮಗ್ಗುಲಿನಿಂದ ಕಾಣುವ (ಮುಖದ) ದೃಶ್ಯ ; ಪಾರ್ಶ್ವಚಿತ್ರ : ಋಜು ಋಜುಪರಾವೃತ್ತಿ ಅರ್ಧಋಜು ಅರ್ಧಋಜುಪರಾವೃತ್ತಿ ಸಾಚಿ ಸಾಚಿಪರಾವೃತ್ತಿ ದ್ವ್ಯರ್ಧಾಕ್ಷಂ ತತ್ಪರಾವೃತ್ತಿ ಪಾರ್ಶ್ವಗತಮೆಂಬ ನವಸ್ಥಾನಕಂಗಳೊಳಂ (ಚಂದ್ರಪು. ೧೫-೭೦ ವ). ೩. [ನಾಟ್ಯ] "ರೆಪ್ಪೆಯೊಳಕ್ಕೆ ಆಲಿಯನ್ನು ಸೇರಿಸಿ ವಕ್ರವಾಗಿ ನೋಡುವುದು" (ಲಾಸ್ಯರಂ. ೨೬೫ ಗದ್ಯಾನುವಾದ): ಸಮ ಸಾಚಿ ಅನುವೃತ್ತ ಅವಲೋಕಿತ ವಿಲೋಕಿತ ಉಲ್ಲೋಕಿತ ಆಲೋಕಿತ ಪ್ರವಿಲೋಕಿತ—ಈ ಎಂಟು ವಿಷಯಾಭಿಮುಖ ಆಲಿಯ ಭೇದಂಗಳ್ . . . ಸೊಗಯಿಸುವೆವೆಗುಡ್ಡೆಯೊಳೊಟ್ಟಿಗೆ ಪುದಿದಾ ತಾರೆ ನೋಡೆ ಸಾಚಿಯೆನಿಕ್ಕುಂ (ಲಾಸ್ಯರಂ. ೩-೬೩ ವ).

[IP ಸಂಸ್ಕೃತದಲ್ಲಿ ಇದು ಒಂದು ಅವ್ಯಯ]

ಸಾಚಿ$_2$ (ಅ). ವಕ್ರವಾಗಿ. [ಸಂ.]

ಸಾಚೀಕೃತ (ಗು). ೧. ವಕ್ರಗೊಳಿಸಿದ; ಡೊಂಕುಗೊಳಿಸಿದ. ೨. ತಿರುಚಿದ ; ವಿರೂಪಗೊಳಿಸಿದ. ೩. ತಪ್ಪಾಗಿ ನಿರೂಪಿಸಿದ; ಅಪಾರ್ಥಮಾಡಿದ. ೪. ಪಕ್ಕಕ್ಕೆ ತಿರುಗಿದ; ಪಾರ್ಶ್ವಕ್ಕೆ ಹೊರಳಿದ : ಹಾರದ ಲಂಬಣಮಂ ಕೇಯೂರಶಿಖಾಕೋಟಿಯೊಳ್ ತಗುಳ್ದುದನಿಭಹಸ್ತೋರುಭುಜಂ ಸಾಚೀಕೃತಚಾರು ವದನನೂರ್ವನಿರದುರಕ್ಕದನುಯ್ದಂ (ಶಾಂತಿಪು. ೫-೧೦೪). (ನಾ). ೫. ಪೂರ್ವಕಲ್ಪಿತ ಅಭಿಪ್ರಾಯ; ಪೂರ್ವಗ್ರಹ. [ಸಂ.]

ಸಾಜ (ಗು). ೧. ಸಹಜವಾದ; ಸ್ವಾಭಾವಿಕವಾದ : ಸಾಜಗುಣಮಲ್ಲದಱಿಯದ ಮುಗ್ಧೆಯರ್ ಬಳಿಕ್ಕೀ ಜೇಟೆಗಾಱನಂ ಕಂಡು ಮರುಳಪ್ಪುದಿದು ಸೋಜಿಗಮೆ (ಚಬಪು. ೨೦-೨೧): ಸಾಜಗುಣವೆಂದುಪೇಕ್ಷಿಪೆಯ ನಿನ್ನವಗುಣವ? ಸಾಜವನು ಬಿಟ್ಟಲುಗದಿಹುದು ಮೃಗಕೀಟ (ಮಂಕುಕ. ೨೧೩). ೨. ನಿಜವಾದ; ದಿಟವಾದ : ಸಂದೆಗಮೆ ಸಾಜ ನಿರ್ಗುಣವೆಸರು ನಾಲ್ಕವಱೊಳೊಂದಱೊಳಗಣಮನೆರದವರ್ಗುಸಿಕ ನೀಯೆ ನಿನ್ನಂದಗಂಡರ್ ಬೆಱಗುವಟ್ಟು ಮನವಿಟ್ಟೊಳಗೆ ನೂಱೆಂಟನುಸುರದಿಹರೆ (ಉದ್ಭಟೇ. ೧-೩೦). (ನಾ). ೩. ಸಹಜವಾದುದು; ಸ್ವಾಭಾವಿಕವಾದುದು : ಮುಳ್ಗೆ ಚೂರ್ಮೊನೆ ಭವಚ್ಚಿತ್ತಕ್ಕೆ ತತ್ವಜ್ಞತಾವಿಭವಂ ಸಾಜಂ (ಶಾಂತಿಪು. ೧೧-೯೪); ಉದಯದೊಳೀಶಂ ಮಧ್ಯಾಹ್ನದೊಳಗಧರನಸ್ತಸಮಯದೊಳ್ಕಮಳಜನಪ್ಪುದು ಸಾಜಂ ಸೂರ್ಯಂಗಂದಿದನೊಳ್ಪರ್ಪಲರುಮಿನ್ನವಘಟಿತಮೊಳವೇ (ಸಮಪ. ೮-೧೬೭). ೪. ದಿಟ; ನಿಜ : "ನನ್ನಿ, ನಿಕ್ಕುವಂ, ನಿಸದಂ, ಸಾಜಂ, ನನಸು, ದಿಟಂ - ಈ ೬ ಸತ್ಯಂ" (ಕಶಸಾ. ೫೭-೨೫೪); ಕ್ಷಮೆ ಮೆಯ್ ಮಾರ್ದವವೋಜೆ ಸಾಜಮಳವಟ್ಟಿರ್ದಾರ್ಜವಂ ಸೈಪು . . . ವರ್ಧಮಾನಮುನಿಗಕ್ಕುಂ ಪೆಱರ್ಗಕ್ಕುಮೇ (ಸುಕುಮಾ. ೧-೨೬); ನೆರ ನೆಪ್ಪು ನೇವಣೆ ಬನ್ನಣೆ ಬೇಡ ಸಾಜವ ಹೇಳಿರೆಂದನಾ ನೃಪತಿ (ಭರಚ. ೧೪-೨೦). ೫. ಸರಳವಾದುದು ; ನಿರಾಡಂಬರವಾದುದು : ರಾಜ[ದ್ರಾ]ಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ ಕನ್ನಡದೊಳ್ ನಿರ್ವ್ಯಾಜದೆಸಕದೊಳೆ ಪುದಿದೊಂದೋಜೆಯ ಬಲದಿನಿಯ ಕವಿತೆ ಪಂಪನ ಕವಿತೇ (ಪಂಪಭಾ. ೧೪-೫೮); ಅನಂತರಮಾ ಕಾಂತೆಯರ್ . . . ನಿಚ್ಚದಲ್ಲದ ರನ್ನವಚ್ಚವಂ ತೆಗೆದಿಟ್ಟು ಮಿಱುಮಿಱುಗುವ ಪಟ್ಟುಡೆಯಂ ಸಡಿಲ್ಚಿ ಸಾಜದ ರಂಗುಸೀರೆಯನುಟ್ಟು ಜಲಕೇಳಿಗೆ ಮೇಳವಿಸಿದರ್ (ರಾಮಾಶ್ವ. ೧೨೬-೧೧). ೬. ಸತ್ಯವಂತನಾದವನು; ಪ್ರಾಮಾಣಿಕ : ಥಳಕುಪಳಕುಗಳೇನೆ ಇರಲಿ ಯಾರು ಸಾಜ, ಅವನೆ ರಾಜ (ಇಂಗೀತ. ೩೭-೧೫). [< ಸಂ. ಸಹಜ]

ಸಾಜಂ (ಅ). ಸಹಜವಾಗಿ; ಸ್ವಾಭಾವಿಕವಾಗಿ : ಸಮವೃತ್ತಸಂಧಿಲಕ್ಷಣಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮುತ್ತಮಕಾವ್ಯಬಂಧದಂತಾ ದಮಿತಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್ (ಶಾಂತಿಪು. ೩-೪೬). [< ಸಾಜ]

ಸಾಜಗಾರ (ನಾ). ಸಹಜತೆಯುಳ್ಳವನು; ಪ್ರಾಮಾಣಿಕ : ಅರಸ ಕರಸಿ, ಬಿರುದ ಹೊರಿಸಿ, ಮರಸಬಲ್ಲ, ಏನೆ ಇರಲಿ, ಸಾಜಗಾರ ಎನಿಸಲಾರ (ಇಂಗೀತ. ೩೮-೩).

[ಸಾಜ + - ಗಾರ (< - ಕಾಱ)]

ಸಾಜತೆ (ನಾ). ಸ್ವಾಭಾವಿಕತೆ; ನೈಜತೆ: ಬಚ್ಚಿಟ್ಟುಕೊಂಡಿಹುದೆ ಸತ್ಯ ಮಿಥ್ಯೆಯ ಹಿಂದೆ . . . ಬ್ರಹ್ಮಸೃಷ್ಟಿಗಳೇಕೊ ಮುಚ್ಚಿಹವು ಸಾಜತೆಯ (ಮಂಕುಕ.೩೧).

[ಸಾಜ + - ತೆ$_3$]

ಸಾಜಿಂದಿ (ನಾ). (ಸಾಮಾನ್ಯವಾಗಿ ವೇಶ್ಯೆಯರ ನರ್ತನಕ್ಕೆ) ಪಕ್ಕವಾದ್ಯ ನುಡಿಸುವವನು; ಪಕ್ಕವಾದ್ಯಗಾರ : ಪಾತರದವರ ಗಂಡುಮಕ್ಕಳು ಸಾರಂಗ, ಮೃದಂಗಗಳನ್ನು ಬಾರಿಸಲಿಕ್ಕೆ ಕಲಿತು ಸಾಜಿಂದಿಗಳಾಗುತ್ತಾರೆ (ಕಭಾಗೆ. ೧೯೫).

[<— ಪಾರ. ಸಾಝಂದ; ಹಿಂ. ಮರಾ. ಸಾಜಿಂದಾ]

ಸಾಜು$_1$ (ನಾ). (ನೃತ್ಯಕ್ಕೆ ಬೇಕಾದ) ಪರಿಕರ,— ಸಲಕರಣೆ.

ಸಾಜಿನವರು = ನೃತ್ಯಕ್ಕೆ ಹಿಮ್ಮೇಳವನ್ನೊದಗಿಸುವವರು; ನೃತ್ಯದ ಪಕ್ಕವಾದ್ಯಗಾರರು: ನಿನ್ನ ಸಾಜಿನವರು ಖಡ್ಗವನ್ನು ಹಿಡಿಯಲಾರಂಭಿಸಿದರೆ,

ನಾವಿನ್ನು ತಂತಿಯನ್ನು ಬಾರಿಸಬೇಕಾಯಿತಲ್ಲ (ಯದುರಾ.೬೨).

[<— ಪಾರ. ಸಾಝ್; ಹಿಂ. ಮರಾ. ಸಾಜ್./ ಸಂ. ಸಜ್ಜಾ]

ಸಾಜ್ಯ₂ (ನಾ). (?): ನೈವೇದ್ಯಕ್ಕೆ ನಮ್ಮ ಮೂಲದ ಸಾಜನ ಭೂಮಿಯ ಮೇಲೇ ಪ್ರತಿದಿನದಲು ಕಟೆಯಲು ನಡಸುವ ಅಕ್ಕಿ ಸೇ ೧ ಉಭಯಂ . . . ಸ ೧/೨ ಸಾಜನಲೂ ಸ ೭ ೧/೨ ಉಭಯಂ ಭತ ಸ ೧೫ (ಎಕ. VI, ಮೂಡಗೆ. ೩೯—೦೭; 1518?). [?]

ಸಾಜ್ಯ (ಗು). ತುಪ್ಪದಿಂದ ಕೂಡಿದ; ಆಜ್ಯಸಹಿತವಾದ : ರಚಿತರುಚಿನಿಚಿತಶುಚಿ ಸಾಜ್ಯ ಭೋಜ್ಯಾಳಿಯಿಂ ನವನಾರಿಕೇಳಕದಳೀಫಳಪ್ರಸರದಿಂ . . . ರಾಜಿತಜಿನಾಧಿಪಂ ರಾಜಿಸುತೆ ನಲ್ಮೆಯಿಂ ಪೂಜಿಸಿದನೊಲ್ಮೆಯಿಂ (ರಾಜಶೇ. ೧೬—೫೧ ರಗಳೆ). [ಸಂ.]

ಸಾಟಿ₁, ಚಾಟ್ಟು₃ (ನಾ). ೧. ಎಣೆ; ಸರಿ; ಸಮಾನ: "ಸದ್ಯಕ್ಷದೊಳ್ ಪಾಟ ಪೋಲ್ವೆ ಪಡಿ ತೋಡು ಸಂಗಡಂ ಸಾಟ ಪಾಸಟಿಯನಲ್ಲೆ ಪತ್ತುಗುಂ" (ಕರ್ಣಾಗಿ. ೧೪); ಗಣದದೊಳೇಂ ಕರುಮಾಡಂ ಪೊಣರ್ಚುವೊಡೆ ನೆಗಳ್ದ ದಿವಿಜರಾಜವಿಮಾನಕ್ಕೆಣೆ ಪೋಲ್ವೆ ಸಮಂ ಸದೃಶಂ ತೊಣೆ ತೋಡನುಸಾರಿ ಸಾಟ ಪಾಸಟಿಯನಿಕುಂ (ಸುಕುಮಾ. ೧೦—೫೧). ೨. ಹೋಲಿಕೆ; ತುಲನೆ: ನಿಮ್ಮ ಭಾಗ್ಯ ದೊಡ್ಡದೊ ನಮ್ಮ ಭಾಗ್ಯ ದೊಡ್ಡದೊ ಸಮ್ಮತಿಂದ ನಾವು ನೀವು ಸಾಟ ಮಾಡಿ ನೋಡುವ ಬನ್ನಿ (ಪುರಂದ .೨—೩೧ ಅನುಪಲ್ಲವಿ). ಚಾಟ್ಟು₃: ೧. ದೊರೆಯುತ್ತಿದ್ದ ಸ್ವಲ್ಪ ಕೂಲಿಗೂ ಹೊಟ್ಟೆಗೂ ಚಾಟು (ಪವನ.೧). [ದೇ. ‖ ತೆಲು. ಸಾಟಿ./ ಮರಾ. ಸಾಟೀ, ಸಾಠೀ]

ಸಾಟ್ಟೆ₂, ಚಾಟ್ಟೆ₂, ಶಾಠಿ (ನಾ). ೧. (ಸಂನ್ಯಾಸಿಗಳು ಧರಿಸುವ ಕಾವಿಬಣ್ಣದ) ಬಟ್ಟೆ; ವಸ್ತ್ರ: ಪಾಟ ಇಲ್ಲದವನು ಸಾಟ ಬೇದಾನೇ? (ಗಾದೆ). ೨. ಗೌರವಾರ್ಥವಾಗಿ ಕೊಡುವ ವಸ್ತ್ರ: (ಕ). ಚಾಟ್ಟೆ₂: ೧."ಸಾಟ (ಚಾಟ) ಶಾಟೀ = ಯತಿಗಳ ಮೈಬಟ್ಟೆ" (ತದ್ಭವ. ೪೪). ಶಾಠಿ: ೧. ಜ್ವಾಲೆಯು ಸಿಂಹಾಸನದ ಸಮೀಪಕ್ಕೆ ಬರಲು ವ್ಯಾಸರಾಯರು ತಮ್ಮ ಕಾವೀಶಾಠಿಯನ್ನು ತೆಗೆದೊಗೆದರು. ದಳ್ಳುರಿಯಿಂದ ಶಾಠಿಯು ದಗ್ಧವಾಗಿ ಜ್ವಾಲೆಯು ಶಾಂತವಾಯಿತು (ಕಥಾ. ೯೮).

ಶಾಠಿ ಅಪ್ಪಳಿಸು = (ಅಲಂ) ವಿನಾಕಾರಣ ಕೋಪಮಾಡಿಕೊಳ್ಳು : ಪಂಡಿತರಿಗೆ ಕೋಪಬಂದು ಶಾಠಿಅಪ್ಪಳಿಸಿ ಸಭೆಯಿಂದ ಹೊರಟೇ ಬಿಟ್ಟರು (ರೂಢಿ).

[< ಪ್ರಾ. ಸಾಡೀ ./ಸಂ ಶಾಟೀ]

ಸಾಟ್ಟ₃, ಸಾಟ್ಟೆ₁ (ನಾ). (ವ್ಯಾಪಾರದಲ್ಲಿ) ವಸ್ತುವಿನಿಮಯ; ಅದಲು ಬದಲು ಮಾಡಿಕೊಳ್ಳುವಿಕೆ: ಗೋಪಾಲ ಕೃಷಿ ವಾಣಿಜ್ಯ ವೈಶ್ಯಧರ್ಮಂಗಳು ವಾರಣಾಸಿಯಲ್ಲಿ ಸಾಟಿಬೇಹಾರಧರ್ಮ ತಪ್ಪದೆ ಬೇಹಾರವ ಮಾಡಿ (ಎಕ. IX, ಬೆಂಗಳೂ. ೯೬—೩೯; 1402?); ಅದೇನು ಎಮ್ಮೆ ದನ ಸಾಟ ಮಾಡಿದ ಹಾಗಲ್ಲ (ಸರ್ವ .೮೫); ಪರದೇಶದಿಂದ ಬರುವ ಚಿನ್ನ ಬೆಳ್ಳಿಯ ನಾಣ್ಯಗಳನ್ನು ದೇಶೀಯನಾಣ್ಯಗಳಿಗೆ ಸಾಟಮಾಡಿ ವರ್ತಕರು ಅದರಿಂದ ಲಾಭ ಸಂಪಾದಿಸುತ್ತಾರೆ (ಪ್ರವಾ. I. ೧೫). ಸಾಟ್ಟೆ₁.

ಸಾಟವ್ಯಾಪಾರ = ಪರಸ್ಪರವಸ್ತು ವಿನಿಮಯ ಮಾಡಿಕೊಳ್ಳುವ ವ್ಯಾಪಾರ; ಯಾವುದೇ ಪದಾರ್ಥ ಅಥವಾ ಪ್ರಾಣಿ ಮುಂತಾದುವನ್ನು ಕೊಟ್ಟು ಪ್ರತಿಯಾಗಿ ಮತ್ತೊಂದನ್ನು ಪಡೆಯುವ ವ್ಯವಹಾರ : (ಕ). ಸಾಟಿಮದುವೆ = ಮನೆಯ ಹೆಣ್ಣುಗಂಡುಗಳನ್ನು ಪರಸ್ಪರರಿಗೆ ಕೊಟ್ಟು ತಂದು ಮಾಡುವ ಮದುವೆ: ವಾಗ್ದೇವಿಯಮ್ಮನ ಮನಸ್ಸಿನಲ್ಲಿ 'ಸಾಟಿ ಮದುವೆಯಾದರೆ ಆದೀತು' ಎಂಬ ಯೋಚನೆಯಿತ್ತೊ ಏನೋ (ಸ್ವಪ್ನಹಾ. ೧೧೯).

[< ಪ್ರಾ. ಸಟ್ಟ ./ ಮರಾ. ಸಾಟಾ, ಸಾಟೀ, ಸಾಠೀ./ ತುಳು. ಸಾಟೆ, ಸಾಟ್; ತೆಲು. ಸಾಟ, ಸಾಟಾ]

ಸಾಟ್ಟೆ₄ (ನಾ). ಅರವತ್ತುವರ್ಷ: ಶುಚಿಯಾಗಿ ದಿಟಯೋಗಿಯ ಹುಟ್ಟಿನ ನೆಲವಾಗಿ ನಿಂತಾಳ ಸಾಟ ದಾಟೀದ ಸುಗ್ಗಲವ್ವೆ (ಸಿದ್ಧಪು. ೧—೯೯).

[< ಪ್ರಾ. ಸಟ್ಠಿ ./ ಹಿಂ. ಸಾಠ್; ಮರಾ. ಸಾಠ್, ಸಾಠೀ ./ ಸಂ. ಷಷ್ಠಿ]

ಸಾಟ್ಟೆ₅ (ನಾ). ಚಿರೋಟಿ, ಚಪಾತಿ ಮುಂತಾದುವುಗಳ ಹಾಳೆಗಳ ನಡುವೆ ಜಿಡ್ಡನ್ನು ಸವರಿ ಮತ್ತೆ ಲಟ್ಟಿಸಿ ಪದರಗಳು ಬರುವಂತೆ ಮಾಡುವಿಕೆ: ಸಾಟ ಇಲ್ಲದೆ ಮಾಡಿದ ಚಪಾತಿ ಒರಟಾಗಿರುತ್ತದೆ (ರೂಢಿ).

ಸಾಟ ಹಾಕು = ಚಿರೋಟಿ, ಚಪಾತಿ ಮುಂತಾದುವುಗಳ ಹಾಳೆಗಳ ನಡುವೆ ಜಿಡ್ಡು ಸವರಿ ಮತ್ತೆ ಲಟ್ಟಿಸಿ ಪದರಗಳು ಬರುವಂತೆ ಮಾಡು: ಸಾಟ ಹಾಕಿ ಮಾಡಿದ ಚಪಾತಿ ತುಂಬ ರುಚಿಯಾಗಿರುತ್ತದೆ (ರೂಢಿ). ಸಾಟಹಿಟ್ಟು = ಕಣಕದ ಹಿಟ್ಟು: ಹೋಳಿಗೆ ಮೃದುವಾಗಲು ಸಾಟಹಿಟ್ಟು ಬನಿಯಾಗಿರಬೇಕು (ರೂಢಿ).

[<— ಮರಾ. ಸಾಟಾ]

ಸಾಟಗಾಣು (ಕ್ರಿ). ಹೋಲಿಕೆಯನ್ನೊಳಗೊಂಡಿರು : ಸಾಟಗಾಣದ ಲಕ್ಷ್ಮಿ ಉರಸ್ಥಳವಾಗಿರೆ ಲೋಷ್ಠಕಾಸು ಎಂತು ಕಾಣಿಕೆ ನೀಡಲೊ (ಪುರಂದ. ೨-೬೭-೬); ಕೋಟಿ ಮಾರ್ತಾಂಡಸಂಕಾಶಕಿರೀಟಕ್ಕೆ ಅಸಮಪ್ರಕಾಶ ಎಲ್ಲು ಸಾಟಗಾಣೆನು ಲವಲೇಶ (ವಿದಾಕೃ. ೫೬-೨೨). [ಸಾಟ₁ + ಕಾಣು (< ಕಾಣ್)]

ಸಾಟಗೈ (ಕ್ರಿ). ಹೋಲಿಕೆಮಾಡು; ತುಲನೆಮಾಡು: ಶೈವಕವಿವೃಂದಮಂ ಭರದಿಂದೆ ಕೊಂಡಾಡಿ ಕೃತಿ ಪೇಳ್ವೆನುಳಿದರಂ ಕರದಿಂದೆ ಸಾಟಗೆಯ್ಯಂ (ಮಹಾವಿ. ೧—೨೦).

[ಸಾಟ₁ + ಗೈ (< ಕೆಯ್₁)]

ಸಾಟಿನ್, ಸಾಟೀನ್ (ನಾ). ೧. (ಒಂದು ನಿರ್ದಿಷ್ಟವಾದ ನೇಯ್ಗೆಯ ಕ್ರಮದಿಂದ ತಯಾರಿಸಲಾಗುವ) ನುಣುಪು ಮತ್ತು ಹೊಳಪುಗಳಿಂದ ಕೂಡಿದ ಮೇಲ್ಮೈಯುಳ್ಳ ಒಂದು ಬಗೆಯ ರೇಷ್ಮೆಬಟ್ಟೆ: ಆ ಅಂಗಡಿಯಲ್ಲಿ ಸಾಟಿನ್ ಬಟ್ಟೆಯಲ್ಲಿ ಸಿದ್ಧಪಡಿಸಿದ ಉಡುಪುಗಳು ಚೆನ್ನಾಗಿವೆ (ರೂಢಿ). ಸಾಟೀನ್ : ೧. ಕೆಂಪುಬಣ್ಣದ ಸಾಟೀನ್ ಅಂಗಿ ಆ ಮಗುವಿಗೆ ಚೆನ್ನಾಗಿ ಒಪ್ಪುತ್ತದೆ (ರೂಢಿ). ೨. ಒಂದು ಬಗೆಯ ದಪ್ಪನಾದ ಒರಟು ಹತ್ತಿಬಟ್ಟೆ: (ಕ). [<— ಇಂ. Sateen]

ಸಾಟಿಸು (ಕ್ರಿ). ಘೋಷಣೆಮಾಡು; ಸಾರು; ಪ್ರಕಟಿಸು: ತಾಟಿಸಿ ಪಟ್ಟಿಯಡ್ಡಣದ ಬಿನ್ನಣಮಂ ಮೆಱದೆಲ್ಲ ವೀರರುಂ ಸಾಟಿಸಿ ಪೊಬ್ಬಿಡಲ್ (ಎಕ. VII, ಶಿಕಾರಿ.೨೪೮-೧೫; 1224). 'ಚಾಟಿಸು₂' ಪರಾ. [? + - ಇಸು₃ ./ ತೆಲು. ಸಾಟಂಚು]

ಸಾಟೀನ್ 'ಸಾಟಿನ್' ನೋ.

ಸಾಟ್ಟೆ₁ 'ಸಾಟ್ಟ₃' ನೋ.

ಸಾಟ್ಟೆ₂ 'ಸಟ್ಟಾ' ನೋ.

ಸಾಟೆವ್ಯಾಪಾರ 'ಸಟ್ಟಾವ್ಯಾಪಾರ' ನೋ.

ಸಾಟೋಪ (ಗು). ಆಟೋಪದಿಂದ ಕೂಡಿದ; ಅಬ್ಬರ, ಆಡಂಬರಗಳಿಂದ ಕೂಡಿದ: ಸಾಟೋಪಭೂಪಚಾಪಜ್ಯಾಟಂಕಾರಕ್ಕೆ ಸುಗಿದು ಸಮದೇಭಕರೋನ್ಮೋಟಿತ ಮಹೀಜಮಂ ವಿಂಧ್ಯಾಟವಿಯಂ ಪೊಕ್ಕುದಾ ಮಹೋಗ್ರವರಾಹಂ (ರೀಲಾವ. ೬—೧೭).

[ಸಂ.]

ಸಾಠಾ (ನಾ). ಸಂಗ್ರಹ; ಶೇಖರಣೆ: ಅವನು ನಾಲಾಯಖನಿರುವನೆಂದು ಸಿದ್ಧಪಡಿಸಲಿಕ್ಕೆ ನನ್ನಲ್ಲಿ ಸಾಕ್ಷಿಪುರಾವೆಯ ಸಾಠಾ ಇತ್ತು (ದೀಚಹ. II. ೬೭೦). 'ಸಾಠೈಸು' ಪರಾ. 'ಸಟ್ಟಾ' ಹೋ. [<— ಮರಾ. ಸಾಂಠಾ, ಸಾಂಠ್, ಸಠ್]

ಸಾಠೈಸು (ಕ್ರಿ). ಸಂಗ್ರಹವಾಗು; ಶೇಖರವಾಗು: ಸಚಿವಾಲಯ ಕೋಠಿಯ ವ್ಯೂಹದಲಿ ಸಾಠೈಸಿದೆ ದ್ವೈತ. ಅದನಾವರಿಸಿದ ವಾಸ್ತುಶಿಲ್ಪದಲಿ ಮಾಯೆಯ ಅದ್ವೈತ! (ಚಂತನ. ೬೬—೧೫). [< ಸಾಠಾ + - ಇಸು₃]

ಸಾಡ (ನಾ). ಸಾಲು; ಪಂಕ್ತಿ: ಬಳಿಕಮಾ ಸಮಯದಿಂದಾತ್ಮಪ್ರದೇಶದಿ ತಳೆದ ವಿಸರ್ಪಣಗಳನು ತಳುವದೇಯುಪಸಂಹರಿಪರಂತಿರಲದ ತಿಳಿವುದಾಗಮ ಸಾಡದಲ್ಲಿ (ಪೂಜ್ಯಪ. ೯—೧೨೬). [?]

ಸಾಡೆ (ನಾ). ೧. ಮದುವೆಯಾದ ಬಳಿಕ ನಾಲ್ಕನೆಯ ದಿವಸ ಐರಣೀಪೂಜೆಯ ಸಮಯದಲ್ಲಿ ವಧೂವರರಿಗೆ ವಸ್ತ್ರಗಳನ್ನು ನೀಡುವ ಒಂದು ವಿಧಿ : ಸಾಡೆಯ ದಿವಸ ಕೂಸನ್ನೊಪ್ಪಿಸುವಾಗ ಮಾಲತಿಯನ್ನು ಶಿವಪ್ಪನಾಯಕನ ತೊಡೆಯ ಮೇಲೆ ಕೂಡಿಸಿದಾಗ ಅವನು ಆನಂದಾಶ್ರುಭರಿತನಾಗಿದ್ದನು (ಗುರುಪ್ರ. ೫೮). ೨. ಮದುವೆಯ ರಾತ್ರಿಯ ಮೆರವಣಿಗೆ: ಮರುದಿನ ರಾತ್ರಿ ಸಾಡೇದ ಮೆರವಣಿಗೆ ಅದ್ಭುತವಾದ ವಿಜೃಂಭಣೆಯಿಂದ ಸುಮಾರು ಬೆಳತನಕ ಸಾಗಿತು (ಅನ್ನ. ೨೪೯).

[<— ಮರಾ. ಸಾಡೇ./ತೆಲು. ಸಾರೆ = ಗಂಡನ ಮನೆಗೆ ಕಳುಹಿಸುವಾಗ ಮಗಳಿಗೆ ಕೊಡುವ ಬಳುವಳಿ]

ಸಾಡೇಸಾತ್, ಸಾಡೇಸಾತ, ಸಾಡೇಸಾತಿ (ನಾ). ೧. ಒಂದು ಸಂಖ್ಯೆ; ಏಳೂವರೆ;

ಏಳರ ಮೇಲೆ ಅರ್ಧ. **ಸಾಡೇಸಾತ:** ೨.(ಆಲಂ) ಏಳೂವರೆವರ್ಷಗಳ ಕಾಲ ಕಾಡುವ ಶನಿ, — ಅನಿಷ್ಟ; ಏಳರಾಟ: ನಮಗೆ ಪಂಚಮಶನಿ ಸಾಡೇಸಾತ ಮೊದಲಾದ ಕ್ರೂರಗ್ರಹಗಳ ಪೀಡೆಯುಂಟು (ಕೃಷ್ಣಪ್ರ. ೨೨೦). ೩. ಅನಿಷ್ಟವ್ಯಕ್ತಿ; ಕೆಟ್ಟವ್ಯಕ್ತಿ: ಗಂಡ ಅಂಬೊ ಅಭಿಮಾನಾನಾದರೂ ಆ ಸಾಡೇಸಾತಕ್ಕೆ ಏತಾ? (ಬಂಗಬು. ೧೭೬). **ಸಾಡೇಸಾತಿ:** ೩. ಏನಾದರೂ ಕೈಯಾಗ ಇಟ್ಟಾಂಗೆ ಮಾಡಿ ಅವನ್ನ ಅಟ್ಟಿಬಿಡು ಹೋಗಲಿ ಸಾಡೇಸಾತಿ (ಶೃಂಗಾಜಿ. ೨೬). ೪. ಅನಿಷ್ಟಸೂಚಕವಾದುದು; ಅಶುಭಸೂಚಕವಾದುದು: ಥತ್ ಈ ಸಾಡೇಸಾತಿಗೆ ಬಂದ ರೋಗವೆ . . . ಆ ಕಾಗೆಯನ್ನು ಸ್ವಲ್ಪ ಓಡಿಸಿರೋ (ಮೂಲುದಾ. ೧೫).

ಸಾಡೇಸಾತ್‌ಶನಿ = ಏಳೂವರೆವರ್ಷಗಳ ಕಾಲ ಕಾಡುವ ಶನಿ; ಏಳರಾಟ; P ಜ್ಯೋತಿಷ್ಯಶಾಸ್ತ್ರದ ಪ್ರಕಾರ ಜನ್ಮರಾಶಿಯಿಂದ ಮುಂದೆ ಮೂರು ಮನೆಗಳಲ್ಲಿ ಒಟ್ಟು ಏಳೂವರೆ ವರ್ಷಗಳಿರುವ ಶನಿ ಅನಿಷ್ಟಫಲದಾಯಕ: ಒಟ್ಟಾರೆ ಮೇಲೆ ನಸಗಿದು "ಸಾಡೇಸಾತ್‌ಶನಿ" ಹಿಡಿದ ಕಾಲವೆಂದು ಕಾಣುತ್ತದೆ (ರೂಪಸಂ. ೩೩). [<— ಹಿಂ. ಸಾಢೇಸಾತೀ; ಮರಾ. ಸಾಡೇಸಾತೀ]

ಸಾಡೇಸಾತ 'ಸಾಡೇಸಾತ್' ನೋ.

ಸಾಡೇಸಾತಿ 'ಸಾಡೇಸಾತ್' ನೋ.

ಸಾಣ$_1$ 'ಸಾವಣ' ನೋ.

ಸಾಣ$_2$, ಸಾಣು, ಸಾಣೆ$_4$ (ನಾ). ೧. ಒಂದು ಬಗೆಯ ಕತ್ತಿ: 'ಸಾಣಕತ್ತಿ' ಪರಾ. ೨. ಗರಡಿಮನೆಯಲ್ಲಿ ಅಂಗಸಾಧನೆ ಮಾಡಲು ಬಳಸುವ ಒಂದು ಬಗೆಯ ಸಾಧನ: ಸಾಣವನುದ್ದಕಿಟ್ಟಾನೆನೆ ವೃಕ್ಷವ ಹೂಣೆ ಕಿತ್ತಿಟ್ಟಾನುತಿಹರು (ಭರಚ. ೬೩-೬೬); ಸಾಣಮಂ ಜಡಿವುತ್ತಂ ಮಲ್ಲರ್ನಲಿನಲಿದೈತರೆ (ಬೀಳವಂ. ೧-೩೧). 'ನಿಡುಸಾಣ' ಪರಾ. **ಸಾಣು:** ೧. 'ಸಾಣುಕತ್ತಿ' ಪರಾ. **ಸಾಣೆ$_4$:** ೧. ರನ್ನದ ಚಿಲ್ಲಿನ ಹತ್ತಕಡಕು ರಾಜಿಸಲು ಒತ್ತಿಲಿರ್ದನು ಸಾಣೆಯನೂಱಿ ಭೂಭುಜನತ್ತ ನೋಡುತ ಗಾಡಿಕಾಱ (ನಾಗಕು. ೬-೫೦). [?]

ಸಾಣಂಗ, ಸಾಣಂಗಿ (ನಾ). ಒಂದು ಬಗೆಯ ಧಾನ್ಯ; ಕಡಲೆ: ಬಸಲ ಸೊಪ್ಪು, ಸಾಣಂಗಬೇಳೆ, ಅಮರದವಳ್ಳಿ . . . ಅಭ್ಯಂಗನಸ್ನಾನ ಇವೆಲ್ಲಂ ಪಥ್ಯಂಗಳು (ಸಕವೃ. ೪೦೧). **ಸಾಣಂಗಿ** : "ಮಸೂರವಿದಲದ-ಸಾಣಂಗಿಬೇಳೆಯ" (ಬಾಪಟೇ. ೨-೫-೧೧೪ ವ); ಬಿಳಿಯ ಸಣ್ಣಕ್ಕಿ ಸಾಣಂಗಿಯನೆರೆದ ಬೇಳೆ (ಏವೇಭ. ೧೧-೨೩). 'ಚಣಗೆ', 'ಚಾಣಂಗಿ' ಪರಾ. [< ಸಂ. ಚಣಕ]

ಸಾಣಂಗಿ 'ಸಾಣಂಗ' ನೋ.

ಸಾಣಕತ್ತಿ, ಸಾಣಾಕತ್ತಿ, ಸಾಣಾಗತ್ತಿ, ಸಾಣುಕತ್ತಿ, ಸಾಣೆಗತ್ತಿ (ನಾ). ಒಂದು ಬಗೆಯ ಕತ್ತಿ : ಕೃಷ್ಣಾಜಿನ ಒರಯಲ್ಲಿರುವ ಸಾಣಕತ್ತಿಯೂ ಸಹ ಸಹದೇವನ ಆಯುಧಗಳು (ಕೃವಾಅ. ೭೨). **ಸಾಣಾಕತ್ತಿ** : ಸಾಣಾಕತ್ತಿ, ಫಿರಂಗಿಕತ್ತಿ . . . ಮೊದಲಾದ ಆಯುಧಗಳನ್ನು (ಕಾಣಿಕೆಯಾಗಿ) ತಂದು . . . ಸಮಯವನ್ನು ಕಾಯುತ್ತಿದ್ದರು (ಕೃವಾಸ. ೧೧೮); ಝುಡಿದು ಸಾಣಾಕತ್ತಿಗಳ ಹೆಜ್ಜೆಪಾಡಿನಿಂ ಪಿಡಿದು (ಕೃಷ್ಣವಿ. ೨-೮). **ಸಾಣಾಗತ್ತಿ** : ಸಾಣಾಗತ್ತಿ ಧರಿಸುವ ಚಕ್ರಬಾಹುರಿಯೂ ಹರಿಗತ್ತಿ ಸಿರಿಗತ್ತಿ . . . ಧರಿಸಿ ವಾಲಗದಿ ನಿಂದಿಹರು (ಶಾಂತಕಾ. ೩-೧೧೧). **ಸಾಣುಕತ್ತಿ** : ಆ ಸಾಧನೆಯಪ್ಪೂ ಆ ತರುವಾಯದಲ್ಲಿ ಗರುಡಿಯಲ್ಲಿ ಕ್ಷತ್ರಿಯನಾಗಿ ಯುದ್ಧಂಥಾ ಗುರುವಿನಿಂದ ಸಾಣುಕತ್ತಿಯಿಂದ ಮಾಡಲು ತಕ್ಕಂಥಾದು (ಖಡ್ಗಚೇ. ೫-೭೭). **ಸಾಣೆಗತ್ತಿ** : ಸಾಣೆಗತ್ತಿಯನ್ನೂಱಿ ಕೊಂಡು ಜಾಣಶಿರೋಮಣಿ ನಿಂದಿರ್ದನು ಪಂಚಬಾಣ ಬಿಲ್ಲೂಱಿ ನಿಂದಂತೆ (ನಾಗಕು. ೬-೪೭). [ಸಾಣ$_2$ + ಕತ್ತಿ]

ಸಾಣವ (ನಾ). ಒಂದು ಸಂಖ್ಯೆ; ತೊಂಬತ್ತಾರು : ಬಾರಹಕೋಟ ಸಾವಂತರುಗಳೊಗ್ಗಿನಿಂ ಸಾಣವ [ಪಾಶಾ. ಸಾರ್ವ, ನಡೆವ] ಲಕ್ಷ ತೊಂಭತ್ತಾಱುಜಾತ್ಯಶ್ವಯೆಡಬಲದಿ ಉಕ್ಕಿ ಕವಿದುದು (ಸಿಂಗಿಪಾ. ೩೦-೬). [<— ಮರಾ. ಶಾಣ್ಣವ, ಶಾಣ್ಣೌ]

ಸಾಣಾಕತ್ತಿ 'ಸಾಣಕತ್ತಿ' ನೋ.

ಸಾಣಾಗತ್ತಿ 'ಸಾಣಕತ್ತಿ' ನೋ.

ಸಾಣಿ 'ಸಾಹಣಿ' ನೋ.

ಸಾಣಿಗ$_1$ 'ಸಾಹಣಿಗ' ನೋ.

ಸಾಣಿಗ$_2$ (ನಾ). ಆಯುಧಗಳನ್ನು ಸಾಣೆ ಹಿಡಿಯುವವನು, — ಮಸೆದು ಹರಿತಗೊಳಿಸುವವನು : ಲಾಳಕರ್ ಸಾಣಿಗರ್ ಕೆಲಸಿಗರ್ . . . ಜೂಜುಗಾಱರ ಮುಖ್ಯರೊದಗಿ ಬರುತಿರ್ದರೇಂ ವಣ್ಣಿಸುವೆನು (ಚಿಬಪು. ೪೭-೪೧).

[ಸಾಣೆ$_1$ + - ಇಗ]

ಸಾಣಿಗಾಱ (ನಾ). ಕುದುರೆಯನ್ನು ಪಳಗಿಸುವವನು; ಕುದುರೆಸವಾರ : ತೇಜಿಯ ತಿದ್ದುವ ಸಾಣಿಗಾಱರ ಕೇರಿ ರಾಜಿಸಿತಖಿಳವೈಭವದಿ (ಅಬ್ಬಲೂ. ೩-೧೧೯).

[ಸಾಣಿ (< ಸಾಹಣಿ) + - ಕಾಱ]

ಸಾಣಿಗೆ$_1$ (ನಾ). ಸಾಣೆಯ ಕಲ್ಲು; ಗಂಧ ತೇಯುವ ಕಲ್ಲು : ಪಡುವೆಟ್ಟನೆಡೆಯೊಳೊಪ್ಪುವ ಕಡಲೊಡೆಯನ ಮಡದಿ ತೇದ ಸಿಂದೂರದ ಕೆಂಪಿಡಿದೆಸೆವ ಸಾಣಿಗೆಯಿದೆನೆ ಬೆಡಂಗುವಡೆದಿರ್ದುದಸ್ತಭಾಸ್ಕರಬಿಂಬಂ (ರಾಜಶೇ. ೧೧-೩). [< ಸಣ್ಣಿಗೆ]

ಸಾಣಿಗೆ$_2$ 'ಸಾರಣಿಗೆ' ನೋ.

ಸಾಣಿಬಳೆ, ಸಾಣೆಬಳೆ (ನಾ). ನಕ್ಕಿ, ನಕಾಸೆಗಳಿಲ್ಲದ ಸಣ್ಣಗಾತ್ರದ ಗಾಜಿನ ಸಾದಾಬಳೆ : ಸಾಣಿಬಳೆಗಳು ಕಿವಿಗೆ ಇಂಪುಮಾಡುವಂತೆ ಝಣಗುಡುತ್ತಿದ್ದುವು (ವಂಶವೃ. ೧೦೬). **ಸಾಣೆಬಳೆ** : ಸಾಣೆಬಳೆ, ರೇಷ್ಮೆಬಳೆ, ಮುತ್ತೈದೆಬಳೇ! ನಾನಾ ಬಣ್ಣದ ಬಳೇ! (ದಾನಚಿಂ. ೭೯). [ಸಾಣೆ$_2$ + ಬಳೆ$_2$]

ಸಾಣಿಸು (ಕ್ರಿ). ೧. ಒಂದರಿಯಾಡು ; ಜರಡಿಯಿಂದ ಶೋಧಿಸು : ಒರಳಲ್ಲಿಯ ಒಬ್ಬೆಯನ್ನು ಮಗುಚುವುದಕ್ಕೂ ಅವಲಕ್ಕಿಯನ್ನು ಸಾಣಿಸುವುದಕ್ಕೂ ಒಂದು ಹೆಣ್ಣಾಳನ್ನು ಇಟ್ಟಿದ್ದರು (ಬೆಳ. ೨); ನಾವು ಕಣಕವನ್ನು ಸಾಣಿಸಿ ತವಡು ಚಲ್ಲಿಬಿಡುತ್ತೇವೆ (ಭಾರಸಂ. ೨೫೯). ೨. (ಆಲಂ) ಶುದ್ಧಾಶುದ್ಧಗಳನ್ನು ಪ್ರತ್ಯೇಕಿಸು, — ಬೇರ್ಪಡಿಸು: ಲಿಂಗ ಕಟ್ಟಿಕೊಳ್ಳಬೇಕು; ಜನಿವಾರ ಧರಿಸಬೇಕು; ಗಡ್ಡ ಇರಬೇಕು . . . ಇಂತಹ ಕಾಲಿಕಸಂಗತಿಗಳನ್ನು ಸಾಣಿಸಿ, ಸಣ್ಣಿಸಿ ಸಾರ್ವಕಾಲಿಕವಾಗಿ ನಿಲ್ಲುವ ವಿಚಾರಗಳಷ್ಟೇ ಸ್ವೀಕರಿಸತಕ್ಕದ್ದು (ಯಕ್ಷಪ್ರ. ೧೭೫). [< ಸಾರಣೆ$_4$ + - ಇಸು]

ಸಾಣು 'ಸಾಣ$_2$' ನೋ.

ಸಾಣುಕತ್ತಿ 'ಸಾಣಕತ್ತಿ' ನೋ.

ಸಾಣೆ$_1$ (ನಾ). ಗಂಧವನ್ನು ತೇಯುವ ಕಲ್ಲು; ಗಂಧದ ಕಲ್ಲು : "ಸ್ಫುರಣಯೆನೆ ಸಾಣೆ" (ಮಂಗರಾ. ೮೮-೩೮); ಸಾಣೆಯ ಮೇಲೆ ಶ್ರೀಗಂಧವ ತೇಯುವರಲ್ಲದೆ ಇಟ್ಟಿಗೆಯ ಮೇಲೆ ತೇವರೆ (ಪ್ರಭುವ. ೧೫೮); ಪಳುಕಿನೊಳೆಸವ ಸಾಣೆಯೊಳು ಗಂಧವನೊರ್ವ ತೊಳವಗಣ್ಣವಳರಿವುತಿರೆ ಇಳೆಯೊಳವಳ ನೋಡಿಯಳುಕದ ತಾಪಸಬಳಗವನಾ ಕಂಡಱಿಯೆಂ (ಅಂಜಚ. ೩-೭೦). 'ಸಾಣೆಗೆ$_1$' ಪರಾ. [< ಸಣ್ಣ]

ಸಾಣೆ$_2$ (ನಾ). ೧. ಆಯುಧ ಮೊದಲಾದುವನ್ನು ಹರಿತಗೊಳಿಸಲು ಮಸೆಯುವ ಕಲ್ಲು, — ಉಜ್ಜುವ ಕಲ್ಲು : ಪೊಳೆವ ಸಂಜೆಯ ಕೆಂಪದು ಸಾಣೆಗೊಡ್ಡಿದಿಟ್ಟಿಗೆಯ ರಜಂಬೊಲೆಂಬಿನೆಗಮಸ್ತಮಯಕ್ಕಿಟ್ಟಿದಂ ದಿವಾಕರಂ (ಪಂಪಭಾ. ೧೦-೩೫); ಮಸೆವ ಸಾಣೆಯಂತೆ ವೈಹಾಳಿಯ ಕುದುರೆಯಂತೆ (ಧರ್ಮಾಮೃ. ೯-೨೩); ಶಿವನ ಕಾರುಣ್ಯಾಯುಧವೆ ಮಸೆದುದು ಸುರೇಂದ್ರಸ್ನೇಹಸಾಣೆಯಲಿ (ಕುವ್ಯಾಅ. ೧೧-೨೮). 'ಕರಸಾಣೆ' ಪರಾ. ೨. (ಚಿನ್ನ, ಬೆಳ್ಳಿ, ವಜ್ರಮುಂತಾದುವುಗಳಿಗೆ) ಹೊಳಪನ್ನು ಕೊಡಲು ತಿಕ್ಕುವ ಕಲ್ಲು; ಮೆರುಗನ್ನು ಕೊಡಲು ಉಜ್ಜುವ ಕಲ್ಲು : ಸಾಣೆಯಲ್ಲಾ ಭಕ್ತಗುಣಮಣಿ ಜಾಣನಲ್ಲಾ ಪರಮತತ್ವದೊಳೇಣಿಯಲ್ಲಾ ಮುಕ್ತಿಗೇಱುವ ನಿಮ್ಮ ಬಸವಣ್ಣ (ಬಸಪು. ೩೭-೪೯); ಸಾಣೆಯ ಮೇಲೆ ರನ್ನಗಳಿಟ್ಟು ಮಸೆದೊಪ್ಪುಗಾಣಿಸಿ ಕುಡುವ ತೇಟಿಗರು . . . ವಾಣಿಜರಿರ್ದರಿಕ್ಕೆಲದಿ (ಮೋಹತ. ೩-೨೬). ೩. (ಚಿನ್ನ, ಬೆಳ್ಳಿ ಮುಂತಾದುವನ್ನು) ಪರೀಕ್ಷಿಸುವ ಕಲ್ಲು; ಒರೆಗಲ್ಲು : "ಶಾಣಃ, ನಿಕಷಃ, ಕಷಃ - ೩ ವರೆಗಲ್ಲಿನ ಪೆಸರು, ಸಾಣೆಯು" (ಸಿದ್ಧಾಂತಿ. ೩೧೬). ೪. (ಮಸೆಗಲ್ಲಿನ ಮೇಲೆ) ಮಸೆಯುವಿಕೆ; ಸಾಣೆಹಿಡಿಯುವಿಕೆ : ಶೋಕವಿಮ್ಮಡಿಸಿತ್ತು ಚಿತ್ತವ್ಯಾಕುಳತೆಯಾ ಸತಿಯ ನುಡಿಗಳನೇಕ ಸಾಣೆಯ ಸರಳು ಮುಱಿದವು ನೃಪನ ಹೃದಯದಲಿ (ಕುವ್ಯಾದ್ರೋ. ೭-೧೮); ಚಿಪ್ಪಿಗರು ಸಾಣೆಯಂ ಹಿಡಿಯುವವರು . . . ಮೊದಲಾದ ನಾನಾಜಾತಿಯವರಿಗೆ ಬೇರ್ಬೇರೆ ಬೀದಿಗಳಂ ಹಂಚಿ (ಸೌಗಂಧಿ. ೧೩೫-೭).

ಸಾಣೆನಾಲಗೆ = ಹರಿತವಾದ ನಾಲಗೆ : ಪದ್ಮನಂಥಾ ಸಾಣೆನಾಲಗೆಯ, ದೊರಗಳ ಬನ್ನದ . ವ್ಯಕ್ತಿಯ ಮೇಲೆ ಜನರು ಸ್ವಾಭಾವಿಕವಾಗಿಯೇ ಅಭಿಮಾನ ತಾಳಿದರು (ಒಡ್ಡಿಯ. ೧೩). **ಸಾಣೆಯಲಗು** = ೧. ಸಾಣೆ ಹಿಡಿದು ಹರಿತಗೊಳಿಸಿದ ಆಯುಧದ ಅಂಚು : ಮಾಣದಸುರರ್ ಗಾಯನಡದುರುಳೆ ಮುಪ್ಪುರಕೆ ಸಾಣೆಯಲಗಿನ ಸರಳ್ ಸುರಿದುವು (ಚಿಬಸ. ೪೩-೫೧); ಪೊಸಸಾಣೆಯಲಗಿನ ಸರಳ್ಗಳನಚ್ಚು ಕರ್ಣಜಂ ಪೋರ್ಗಳನವನ ಮೈಯೊಳು ಕಾಣಿಸೆ (ಪೃಮಭಾ. ೧೨-೫೧). ೨. ಮಸೆಗಲ್ಲಿನ ಮೇಲೆ ಉಜ್ಜಿ ಮೊನಚುಗೊಳಿಸಿದ ಬಾಣ; ಹರಿತವಾದ ಬಾಣ : ಸಾಣೆಯಲಗಿನ ಸರಿಯ ಸೋನೆಯ ಚಾಣತನವೋ ಜಯದ ಸುಭಟರ ಕಾಣೆನ್ಯ (ಕುವ್ಯಾತ. ೨೦-೪೦). [< ಸಂ. ಶಾಣ]

ಸಾಣೆ3 'ಸಾವಣ' ನೋ.

ಸಾಣೆ4 'ಸಾಣ2' ನೋ.

ಸಾಣೆ5 (ನಾ). [ಸಂಗೀತ] (?) : ನಾದಕಟ್ಟುಗಳಿಂ ತಂತ್ರಿಗಳಂ ಸಾಣೆ ವರಕು ಮಿಟುಗಳಿಂ ಹದಗೊಳಿಸಿ ಆಯಾ ರಾಗಾನುಗುಣಮಾಗಿ ಮೇಳೈಸಿ (ವಿವೇ. ೨೩೭). 'ವರಕು2' ಪರಾ. [?]

ಸಾಣೆಕಲ್ 'ಸಾಣೆಗಲ್ಲು' ನೋ.

ಸಾಣೆಕಲ್ಲು1 'ಸಾಣೆಗಲ್ಲು' ನೋ.

ಸಾಣೆಕಲ್ಲು2 (ನಾ). ಒರೆಗಲ್ಲು; ನಿಕಷ : ಸಾಣೆಕಲ್ಲಿನಲ್ಲಿ ಒರೆ ಹಚ್ಚಿದ ನವರತ್ನಗಳು ಪ್ರಕಾಶಿಸುವುವೇ? (ಪ್ರಶಾಪ. ೩). [ಸಾಣೆ5 + ಕಲ್ಲು (< ಕಲ್5)]

ಸಾಣೆಖಂಡೆಯ (ನಾ). ಒಂದು ಬಗೆಯ ಕತ್ತಿ,— ಖಡ್ಗ : ಕಟ್ಟಿದ ಬಾಕು ಕಲಕಿದ ಬೊಬ್ಬಸವಿರೆ ಸಾಣೆಖಂಡೆಯ ಪೊಳೆಯಲಾ ದಿಟ್ಟ ಕೈಮುಗಿದ ರಾಯನಿಗೆ (ಸಾಗಚ. ೬-೪೫). [ಸಾಣೆ4 (< ಸಾಣ2) + ಖಂಡೆಯ5]

ಸಾಣೆಗಟ್ಟು (ಕ್ರಿ). ೧. ಆಯುಧಗಳನ್ನು ಮಸೆದು ಹರಿತಗೊಳಿಸು : (೬). ೨. ಸಾಣೆಯ ಕಲ್ಲನ್ನು ಕಟ್ಟು : ಅಂತಪೂರ್ವಂಗಳಾಗಿ ತೊಳಗುವ ಕಿಱುದೊಡೆಗಳುಡುವಡರ್ದನ್ನಮಾರೂಢಸರ್ವಜ್ಞನ ದೊಡ್ಡ ಮಾರ್ಗಂಗಳೆಳವಾಲೆಯದಿಂಡಿನೊಳ್ ಸಾಣೆಗಟ್ಟಿದಂತಾದುವು (ಪಂಪಭಾ. ೨-೩೯ ವ). [ಸಾಣೆ2 + ಕಟ್ಟು1]

ಸಾಣೆಗತ್ತಿ 'ಸಾಣಕತ್ತಿ' ನೋ.

ಸಾಣೆಗಲ್ಲು, ಸಾಣೆಕಲ್, ಸಾಣೆಕಲ್ಲು1 (ನಾ). ಗಂಧವನ್ನು ತೇಯುವ ಕಲ್ಲು; ಗಂಧದ ಕಲ್ಲು : ಮುದದಿಂದ ತೊಳೆದನಾ ಸಾಣೆಗ[ಪಾಠಾಂ. ಕ]ಲ್ಲಂ ಕರಂ ದೇವನಂ ನೋಡುತಂ ಮೊಳಕಯ್ಯುಮಂ ತೊಳೆದು... ತೇದನೊಲವಿಂದ ಮೊಳಕಯ್ಯನಾನಂದದಿಂ (ಒಲ. ದೇ. ೧೪೧-೧೪); ತನ್ನಯ ಬಲದ ಮೊಳಕೈ ಸಾಣೆಗ[ಪಾಠಾಂ. ಕ]ಲ್ಲಲಿ ನಿಲಿಸಿ ತವ ತೇದುತ್ತಮಶ್ರೀಗಂಧಮಂ ಪಡೆದು ಮಲಹರಂಗರ್ಪಿಸಿ (ಬಸವ. ೨೭-೬). **ಸಾಣೆಕಲ್** : ಮುಟ್ಟಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ ನೆಟ್ಟನೆಯೆ ಸ್ವರ್ಗ ಪಡೆವಡೆ ಸಾಣೆಕಲ್ ಕೆಟ್ಟು ಕೇಡೇನು (ಸರ್ವಜ್ಞ. ೯೨). **ಸಾಣೆಕಲ್ಲು1** : ಸಾಣೆಕಲ್ಲೊಳು ಗಂಧ ಮಾನದಲೆ ಎಸೆವಂತೆ ಜಾಣಸದ್ಗುರುವಿನುಪದೇಶದಿಂ ಮುಕ್ತಿ ಕಾಣಿಸುತ್ತಿಹುದು (ಸರ್ವಜ್ಞ. ೬೭); ಸಾಣೆಕಲ್ಲನ್ನು ತರಿಸಿಕೊಂಡು, ತಾವು ಸಂಗಡ ತಂದಿದ್ದ ಮಾತ್ರೆಯನ್ನು ಜೇನುತುಪ್ಪದಲ್ಲಿ ಒಂದೂವರೆ ಸುತ್ತು ತೇಯ್ದು . . . ಮಗುವಿನ ಬಾಯಿಗೆ ಇಟ್ಟರು (ಪಂಶಬ್ಧ. ೨೩). [ಸಾಣೆ1 + ಕಲ್ಲು (< ಕಲ್5)]

ಸಾಣೆಗಾಣಿಸು (ಕ್ರಿ). ಸಾಣೆಯನ್ನು ಹೊಂದು; ಸಾಣೆಹಿಡಿಯಲ್ಪಡು : ಮದನಾಸ್ತ್ರಂ [ಕ]ರ ಸಾಣೆಗಾಣಿಸಿದುದೆಂಬಂತಾಗೆ ನಿನ್ನೊಂದು ಕಂದಿದ ಮಯ್ಯನ್ನೆಯ ತೋಳೊಳೊಂದೆ ಸಿರಿಯಂ ನೀನುಯ್ದು ತೊಬ್ಬಾ[ಳ್ದು] ರಾಗದಿನೆನ್ನೊಳ್ ಸುಕಮಿರ್ಪುದು (ಪಂಪಭಾ. ೮-೬೬). [ಸಾಣೆ5 + ಕಾಣಿಸು]

ಸಾಣೆಗಾಣು (ಕ್ರಿ). (ಆಯುಧವು) ಮಸೆಗಲ್ಲಿನ ಮೇಲೆ ಮಸೆದು, ಹರಿತಗೊಳ್ಳು,— ತೀಕ್ಷ್ಣಗೊಳ್ಳು : ಸಾಣೆಗಂಡಲಗಿವನು ಸಮರಕೆ ಹೂಣೆಗನು ರಿಪುಬಲದ ಹಾಣಾಹಾಣಿಕಾಱನು (ಕುವ್ಯಾಕ. ೧೭-೨೦). [ಸಾಣೆ2 + ಕಾಣು (< ಕಾಣ್)]

ಸಾಣೆಗಾರ 'ಸಾಣೆಗಾಱ' ನೋ.

ಸಾಣೆಗಾಱ, ಸಾಣೆಗಾರ (ನಾ). ಆಯುಧಗಳನ್ನು ಮಸೆಗಲ್ಲಿನ ಮೇಲೆ ಮಸೆದು ಹರಿತಗೊಳಿಸುವವನು; ಸಾಣೆಹಿಡಿಯುವವನು : ಕತ್ತಿ ಮುಸಲ ಮುದ್ಗರ ತೋಮರಗಳ ಮಸೆವಸಿಕಲಿಗೆಯ್ವ ಸಾಣೆ[ಪಾಠಾಂ.ಣೆ]ಗಾಱ ಕಣ್ಗಸೆದರಾ ಕುಮ್ಮಟದೊಳ್ಗೆ (ಕುರಾಸಾ. ೩೭-೬೧). **ಸಾಣೆಗಾರ** : ವಡಿ, ರಸಿ, ಕವಣೆ . . . ಹೊಡಗೞ್-ಇನ್ನೂ ಮೊದಲಾದ ಅಸಂಖ್ಯಾತವಸ್ತುಗಳನ್ನು ನಮ್ಮಾರರೂ, ಕಲ್ಕುಟಿಗರೂ, ಬಡಗಿಗಳೂ, ಸಾಣೆಗಾರರೂ ಸೇರಿ ಜೋಡಿಸುತ್ತಾರೆ (ಸಂಪಾಂಜ. ೧೯). [ಸಾಣೆ2 + - ಕಾಱ]

ಸಾಣೆಚಕ್ರ (ನಾ). ಆಯುಧಗಳಿಗೆ ಸಾಣೆ ಹಿಡಿಯುವ ಚಕ್ರ : ಮನ್ಮಥನ ಬಾಣಂಗಳಂ ಮೊನೆಮಾಡುವ ಸಾಣೆಚಕ್ರಮೊ (ಸಾಗಂಧಿ. ೫೭೦-೯). [ಸಾಣೆ2 + ಚಕ್ರ1]

ಸಾಣೆಬಳೆ 'ಸಾಣೆಬಳೆ' ನೋ.

ಸಾಣೆಯಿಕ್ಕು (ಕ್ರಿ). ೧. ಮಸೆಗಲ್ಲಿನ ಮೇಲೆ ಉಜ್ಜಿ ಆಯುಧವನ್ನು ಹರಿತಗೊಳಿಸು; ಸಾಣೆಹಿಡಿ : ಬಂಬಾಧರೆಯರ್ ಬಂದಲರಂಬುಂ ಕತ್ತುರಿಯ ಸಾಣೆಯಿಕ್ಕುವ ತೆಱದಿಂದಂಬುಜದಳಸದೃಶಾಂಬಕದಂಬಕೆಗಂಜನಮನೆಚ್ಚಿದರ್ ಸಂತಸದಿಂ (ಗಿಂಕ. ೧೦ ೪೧); ಹೂಣೆ ಹೊಗೆವವರೊಡನೆ ಸೆಣಸಿನ ಸಾಣೆಯಿಕ್ಕಪು ಮಸೆವ ಕದನವ ಕಾಣ್ವಮ್ಮಱಿಕೆಯಲಿ (ಕುವ್ಯಾಅ. ೧೭-೨೩). ೨. ಮಸೆಗಲ್ಲಿನ ಮೇಲೆ ಉಜ್ಜಿ ನಯಗೊಳಿಸು : ಮುನ್ನಿನ ಪ್ರತಿಮಾಗ್ರದಲ್ಲಿಯ ಕಲ್ಲ ಗಂಟಂ ಕಂಡು ಇದಱಿಂದೀ ಪ್ರತಿಮೆಯ ಚೆಲುವದುಮೊಪ್ಪಂಗಟ್ಟುದೆಂದು ಕಲುಗುಟಿಗನ ತಂದದ ಸಾಣೆಯಿಕ್ಕಬೇಕೆನೆ (ಪುಣ್ಯಾಸ್ರ. ೨ ೬೭). [ಸಾಣೆ2 + ಇಕ್ಕು]

ಸಾಣೆವಿಡಿ, ಸಾಣೆಹಿಡಿ (ಕ್ರಿ). ೧. = ಸಾಣೆಯಿಕ್ಕು ೧ : ರೋಷವಹ್ನಿಗೆ ಸಾಣೆವಿಡಿದ ಪೊಲಾಯ್ತು ಕಣ್ಣುಗುಳಿದುವು ಕೇಸುರಿಯ (ಕುವ್ಯಾಗ. ೭-೪೮), ಸಾಣೆವಿಡಿದಿರ್ದ ಕರ ಪತ್ರಮಂ ಕೊಡಿಸಿದಂ ಪ್ರಾಣನಾಥೆಯ ಕೈಯೊಳು (ಪೃಮಭಾ. ೨೭-೬೦). ೨. ಬೆಳ್ಳಿ, ಬಂಗಾರ ಮುಂತಾದುವನ್ನು ಒರೆಗಲ್ಲಿನ ಮೇಲೆ ಉಜ್ಜಿ ಹೊಳಪನ್ನು ಕೊಡು : ಕಣಿಯೊಳಗಾಯ್ದು ಸಾಣೆವಿಡಿದೊಳ್ಪಣಿಯಂತಿರ ಮಾತಿನೋಜೆ (ಚಿಕವಿ. ೧-೧೦). **ಸಾಣೆಹಿಡಿ** : ೧. ಸಂಸಾರವು ಒಂದು ರಣರಂಗವಾಗಿ ಇದೆ. ಅದಕ್ಕೆ ಅವಯವಗಳೇ ಆಯುಧಗಳು. ಬಲಪಡಿಸೋಣವೇ ಸಾಣೆಹಿಡಿಯೋಣವು (ಅನಂಶ. ೭೭ ಟೀ). [ಸಾಣೆ2 + ಪಿಡಿ1]

ಸಾಣೆವೊಯ್ (ಕ್ರಿ). ಸಾಣೆಗೆ ಒಡ್ಡು; ಸಾಣೆಹಿಡಿ : ಬಜಿಸಿಡಿಲೆ ಬಂದುದೆಂಬಂತಱ ವಳವೊಯ್ಯಾಂತ ಗದೆಯೊಳಾಗಳ್ ಭಾಗ[ಂ] ಮುಱಿಯುತೆ ಜೀಱಿರ್ದೊಗೆದಾ ಮುಱಿವಾಜಿತು ಸಾಣೆವೊಯ್ದುಗುವಲ್ಲಭದೊಳ್ (ಬಂಚರಿ. ೧೨-೫೧). [ಸಾಣೆ2 + ಪೊಯ್2]

ಸಾಣೆಹಿಡಿ 'ಸಾಣೆವಿಡಿ' ನೋ.

ಸಾಣೆಹಿಡಿಸು (ಕ್ರಿ). ಮಸೆಗಲ್ಲಿನ ಮೇಲೆ ಉಜ್ಜಿಸಿ ಆಯುಧಗಳನ್ನು ಹರಿತಗೊಳಿಸು : ದಿನನಿತ್ಯ ಬಳಸುವ ಚಾಕು, ಕತ್ತರಿ ಮುಂತಾದುವನ್ನು ಆಗಾಗ ಸಾಣೆಹಿಡಿಸುತ್ತಿರಬೇಕು (ಡೂಢಿ). [ಸಾಣೆಹಿಡಿ (< ಸಾಣೆವಿಡಿ) + - ಇಸ್ಕು]

ಸಾತತ್ಯ (ನಾ). ನಿರಂತರವಾಗಿರುವುದು; ಎಡೆಬಿಡದೆ ಇರುವುದು : ಪ್ರಾಣದ ಅನ್ನಮಯತೆ, ಪಶುವಿನ ಮನೋಮಯತೆ, ಮನುಷ್ಯನ ವಿಜ್ಞಾನಮಯತೆ ಇವೆಲ್ಲವುಗಳಲ್ಲಿಯೂ ಜೀವನದ ಅಖಂಡತೆ — ಸಾತತ್ಯಗಳು ಅನುಸ್ಯೂತವಾಗಿವೆ (ವಿಚಾವಾ. ೫೭). [ಸಂ.]

ಸಾತಲೆ (ನಾ). ೧. ಒಂದು ಬಗೆಯ ಸಸ್ಯ : "ಸಪ್ತಲಾ, ವಿಮಲಾ, ಸಾತಲಾ, ಭೂರಿಫೇನಾ, ಚರ್ಮಕಷಾ — ೫ ಸಮ್ಮಗಾರಯೆಂಬುವದು, ಸಂಬರೇಣೆ" (ಉದ್ಭಾಂಪ. ೧೪೫). ೨. ಸೀಗೆಕಾಯಿಗಿಡ : (೬). [ಸಂ. ಸಾತಲಾ]

ಸಾತವೇದನೀಯ (ನಾ). [ಜೈನ] ಸಾತವೇದನೀಯ ಮತ್ತು ಅಸಾತವೇದನೀಯ ಎಂಬ ಎರಡು ಬಗೆಯ ವೇದನೀಯಕರ್ಮಗಳಲ್ಲಿ ಒಂದು; ಇಂದ್ರಿಯಜನ್ಯವಾದ ಸುಖವನ್ನುಂಟುಮಾಡುವ ಕರ್ಮ : ಇಂದ್ರಿಯಸುಖಕಾರಣವಸ್ತು ಪ್ರಾಪಣಕಾರಿಯಪ್ಪ ಸಾತವೇದನೀಯಮುಂ (ತತ್ತ್ವಪ್ರ. ೫೬); ವೇದನೀಯಂ ದ್ವಿವಿಧಮಕ್ಕುಂ ಸಾತವೇದನೀಯಮುಮಸಾತವೇದನೀಯಮುಮೆಂದಿಂತು ಅಲ್ಲಿ ರತಿಮೋಹನೀಯ ಕರ್ಮೋದಯಬಲದಿಂದಂ ಜೀವಕ್ಕೆ ಸುಖಕಾರಣೇಂದ್ರಿಯವಿಷಯಾನುಭವಮುಂ ಮಾಡಿಸುಗುಂ ಸಾತವೇದನೀಯಂ (ಗೊಮ್ಮಸಾ. ೩-೮). [ಸಂ.]

ಸಾತಾನಿ, ಚಾತಾಣಿ, ಚಾತಾಲ, ಚಾತಾಳ, ಚಾತಾಳಿ (ನಾ). ವಿಷ್ಣುವಿನ ದೇವ

ಸ್ಥಾನದಲ್ಲಿ ಪರಿಚರ್ಯೆ ಮಾಡುವ ಬ್ರಾಹ್ಮಣರಲ್ಲದ ಒಂದು ಪಂಗಡ ಮತ್ತು ಆ ವರ್ಗಕ್ಕೆ ಸೇರಿದ ವ್ಯಕ್ತಿ : ಸೋಮಯ್ಯ ಸಾತಾನಿ. ಸೋಮಯ್ಯನಿಗೆ ತನ್ನನ್ನು ಸಾತಾನಿ ಎಂದು ಕರೆದರೆ ಬಹಳ ಸಿಟ್ಟು ಬರುತ್ತದೆ (ಗರುಡಾ. ೧೨೫); ದೇವಸ್ಥಾನದ ಸೇವಕರು . . . ಪೂದುವಾಳ, ಸಾತಾನಿ, ಸ್ಥಾನಿಕ, ವಾರಿಯನ್ (ತುಳುನಾ. ೧೭೨). ಚಾತಾಣಿ : (ಕ). ಚಾತಾಲ: (ರೃಸಂಗ. II, ೫೪೫). ಚಾತಾಳ : ಔಷಧವನ್ನು ಒಪ್ಪಿಸುವುದಕ್ಕೆ ವೃದ್ಧನಾಗಿ ಹಳಬನಾದ ತಿರುವೆಂಗಡಯ್ಯನೆಂಬ ಚಾತಾಳದ ಪಂಡಿತನನ್ನೂ ನೇಮಕಮಾಡಿ (ಮಹಾವಂ. I, ೫೪). ಚಾತಾಳಿ : ವೃದ್ಧನಾಗಿಯೂ ಹಳಬನಾಗಿಯೂ ಇರುವ ತಿರುವೆಂಗಳಯ್ಯನೆಂಬ ಒಬ್ಬ ಚಾತಾಳಿ ಪಂಡಿತನನ್ನು ನೇಮಕಮಾಡಿ (ಚಾಮವಂ. ೫೪).

[ದೇ. ॥ ತಮಿ. ಚಾತ್ತಾಣಿ; ತೆಲು. ಸಾತಾನಿ, ಸಾತನಿ]

ಸಾತಾರಿ (ನಾ). ಮಹಾರಾಷ್ಟ್ರದ ಸಾತಾರ ಎಂಬ ಪ್ರದೇಶದ ಟಂಕಸಾಲೆಯಲ್ಲಿ ಮುದ್ರಿತವಾದ, ಮೂರು ರೂಪಾಯಿ ನಾಲ್ಕು ಆಣೆ ಬೆಲೆಯನ್ನು ಹೊಂದಿದ್ದ ಒಂದು ನಾಣ್ಯ : ಬ್ರಿಟಿಶಸರಕಾರದ ಅಮಲಿನ ಆರಂಭದಲ್ಲಿ . . . ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ . . . ೧೫ ಸಾತಾರಿ (ಕಥಾಗ. ೨೮೦). [?]

ಸಾತಾವೇದನೀಯ (ನಾ). = ಸಾತವೇದನೀಯ : ವೇದನೀಯಮುಂ ಸಾತಾವೇದನೀಯಮುಮಸಾತಾವೇದನೀಯಮುಮೆಂದಿರ್ತೆಱನಕ್ಕುಂ (ಶಾಂತಿಪು. ೧೨-೧೧ ವ) [ಸಂ.]

ಸಾತಾಳಿಸು (ಕ್ರಿ). ಎಣ್ಣೆ ಅಥವಾ ತುಪ್ಪದಲ್ಲಿ ಚೆನ್ನಾಗಿ ಬಾಡಿಸು : ಅಱವತ್ತುದಿನಸಿನ ಪರಿಪರಿಶಾಕಗಳು ಕರಿದು ಸಾತಾಳಿಸಿದ ಬಗೆಬಗೆ ಲವಣಶಾಕಗಳು ಈ ಪರಿಯಿಂದಲಿ ಎಡೆಗಳನೆ ಮಾಡಿ ತಂದು ನೈವೇದ್ಯಿಟ್ಟು ಶ್ರೀಹರಿಗೆ ಅರ್ಪಿಸುತ್ತಿದ್ದೆ (ಪುರಂದ. ೫-೬೯-೧೪). 'ತಾಳಿಸು$_2$' ಪರಾ. [? + - ಇಸು $_3$ ./ ಮರಾ. ಸಾತಳಣೇ]

ಸಾತಿ$_1$ (ನಾ). ಇಪ್ಪತ್ತೇಳು ನಕ್ಷತ್ರಗಳಲ್ಲಿ ಹದಿನೈದನೆಯದಾದ ಸ್ವಾತಿನಕ್ಷತ್ರ: ವತ್ಸಲೋಪಕ್ಕೆ — ಈಶ್ವರ — ಈಸರ . . . ಸ್ವಾತಿ — ಸಾತಿ, ಸ್ವಾಮಿ — ಸಾಮಿ (ಶಮದ. ೨೮೧ ಪ್ರಯೋ); ಕಾಲರಜಕಂ ಮಲಿನದಿವಸಾಂಬರವನಾ ವಿಶಾಲ ಸಾತಿಯ ಮಟೆಯೊಳೊಗದು ದಕ್ಷಂಗೀಯಲು (ಭಾವಚಿಂ. ೬-೧೨). [< ಸಂ. ಸ್ವಾತಿ]

ಸಾತಿ$_2$ (ನಾ). ೧. ಕೊಡುಗೆ ; ದಾನ : (ಕ). ೨. ಗಳಿಸುವಿಕೆ; ಪಡೆಯುವಿಕೆ : (ಕ). ೩. ಸಹಾಯ; ಸಹಕಾರ. ೪. ವಿನಾಶ; ಧ್ವಂಸ. ೫. ಕೊನೆ; ಮುಕ್ತಾಯ: "ಸಾತಿಯದವಸಾನಾರ್ಥಂ" (ವಸ್ತುಕೋ. ೧೧೪-೨೨). ೬. ತೀಕ್ಷ್ಣವಾದ ನೋವು ; ಅತೀವವಾದ ವೇದನೆ. ೭. ಐಶ್ವರ್ಯ; ಸಂಪತ್ತು. [ಸಂ.]

ಸಾತಿರೇಕ (ಗು). ಅತಿರೇಕದಿಂದ ಕೂಡಿದ; ಮಿಗಿಲಾದ : ತುರಗರತ್ನಮನೇಱಿ ಪಶ್ಚಿಮಾಭಿಮುಖನಾಗಿ ನಿಂದು ಭರತೇಶ್ವರಚಕ್ರವರ್ತಿ ಗೆಲ್ಗೆಂದು ಸಾತಿರೇಕ [ಪಾಶಾಂ. ಕಂ] ದ್ಯಾದಶಯೋಜನವಿಸ್ತಾರಾಷ್ಟಯೋಜನೋತ್ಸೇಧವಜ್ರಕವಾಟಪುಟಂಗಳಂ ಭರದಿಂದಂ ದಂಡದೊಳ್ ತಾಟಿಸಿದೊಡೆ (ಆದಿಪು. ೧೩-೩೫ ವ). [ಸಂ.]

ಸಾತಿವಳೆ (ನಾ). ಸ್ವಾತಿನಕ್ಷತ್ರದಲ್ಲಿ ಬರುವ ಮಳೆ : ಜಂಗಮದೇವನೊರ್ವನೆಳ್ತಂದು . . . ಮುತ್ತಿನ ರಂಗವಲ್ಲಿ ಬೇಕೆನೆ ತದಾಗಮನವೇ ಭಾವಿಸಲ್ಕೆ ಮಿಗೆ ಸಾತಿವಳೆ [ಪಾಶಾಂ. ಸಾರಿವಳೆ, ಸ್ವಾತಿಮಳೆ]ಯಾಗೆ (ಆರಾಚ. ೧-೧೩-೧೭).

[ಸಾತಿ$_1$ + ಮಳೆ < ಮಟೆ)]

ಸಾತಿಶಯ (ಗು). ೧. ಅತಿಶಯದಿಂದ ಕೂಡಿದ; ವಿಶೇಷವಾದ : ಸಾತಿಶಯ ಬೋಧ ಸಸ್ಯವಿಘಾತೀತಿಪರಿಗ್ರಹೇಚ್ಛೆಯಂ ಯತಿಪತಪಃಸ್ಯಾತಿ ಬೆದಱಟ್ಟೆ ಬಳೆದುದು ಭೂತಳಪತಿ ಚಿತ್ತದಲ್ಲಿ ತತ್ವವಿವೇಕಂ (ಪಾರ್ಶ್ವಪು. ೧೨-೩೫). (ನಾ). ೨. ಅತಿಶಯತೆ; ಅಸಾಧಾರಣತೆ: ಸಾತಿಶಯದಿಂ ಬಹಃಕ್ಷಿಪ್ರಮೆಂಬುದು ನೋಡೆ ಭೂತಬಲಿಯಕ್ಕುಂ (ಆರಾಚ. ೧-೫-೧೪); ಜ್ಯೋತಿ ಬೆಳಗುತಿದೆ . . . ಮಾತು ಮನಂಗಳಿಂದತ್ತತ್ತ ಮೀಱಿದ ಸಾತಿಶಯದ ನಿರುಪಾಧಿಕ ನಿರ್ಮಲ (ಕೈವಲ್ಯ. ೫೯ ಪಲ್ಲವಿ). [ಸಂ.]

ಸಾತಿಶಯಾರ್ಥ (ನಾ). ಅತಿಶಯವಾದ ಅರ್ಥ; ವಿಶೇಷವಾದ ಅರ್ಥ : ಸಾತಿಶಯಾರ್ಥಮುಮಂ ನಲ್ಪಾತುಮನೊಪ್ಪಿಸಿದರೊಸೆದು ತಮಗಿಲ್ಲದುದಂ ಖ್ಯಾತಂಗೆ ಸುಕವಿನೇಮಿಗೆ ಭೂತಭವದ್ಭಾವಿಕಕವಿಗಳೇನೊಳ್ಳಿದರೋ (ಲೀಲಾವ. ೧-೭೮). [ಸಂ.]

ಸಾತಿಶಯೋಕ್ತಿ (ನಾ). ಅತಿಶಯದಿಂದ ಕೂಡಿದ ಮಾತು; ವಿಶೇಷವಾದ ಮಾತು : ರುದ್ರರ ಸಂಖ್ಯೆಯೊಳಾಗೆ ವಿಶ್ರಮಂ ಸಾತಿಶಯೋಕ್ತಿಯಿಂತಿದು ವಿರಾಜಿಸುಗುಂ ಕವಿರಾಜಹಂಸನಿಂ ಭೂತಲದೊಳ್ಪೆಗಟ್ಪೆವಡೆದುತ್ಪಲಮಾಲೆ (ಛಂದೋಂಬು. ೨-೧೭೭).

[ಸಂ.]

ಸಾತೀನ (ನಾ). ಒಂದು ಬಗೆಯ ಕಡಲೆ; ಬಟ್ಟಕಡಲೆ : "ಕಳಾಯಃ, ಖಂಡಿಕಃ, ಸಾತೀನಃ — ಈ ೩ ಬಟ್ಟಗಡಲೆ" (ಹಲಾಯು. ೯೫-೪೨೮). [ಸಂ.]

ಸಾತೆ (ನಾ). ಮಂಚಿಕೆ; ಅಟ್ಟ (?) : ಪೂಲನನೆಲ್ಲರುಮ್ಮದಿ ಬಿಲ್ಲರ ನಿಲಿಸಿ ಕಳಿವನು ಕಟ್ಟಿ ಮರಮೆಟ್ಟೊಲೆಯದೇಱಿಯೆ ಸಾತೆಯನುನಿಂದುಳಿಗಳನು ಕಟ್ಟೀ ಸಲೆ ಬಳಸಿ ಹಜ್ಜೆಯನಱಿದು ಲೆಲೆಲೆಲೆಯೆನುತೆ ಹರಕೊಳಿಸಿ ಸೋವುತರುಲಿದು ಸನ್ನೆಯ ಹಾಡೆ ಹಳುವನು ಜಡಿದರವರಂದು (ಸಾಳ್ವಭಾ. ೫-೨೪). [?]

ಸಾತ್ಕುಡಿ (ನಾ). ಈಳಿಜಾತಿಗೆ ಸೇರಿದ ಒಂದು ಬಗೆಯ ಹಣ್ಣು ; ಮೂಸಂಬಿ: ಸಾತ್‌ಕುಡಿ, ಕಮಲಾಹಣ್ಣು (ಮೃಜಿಗಿ. ೨೨-೪೦೪). [<— ತಮಿ. ಚಾತ್ತುಕ್ಕುಟಿ]

ಸಾತ್ತಟಿಗೆ 'ಸಾಂತಳ್ಗೆ' ನೋ.

ಸಾತ್ತುಗಾಮುಂಡ (ನಾ). ಒಬ್ಬಾತನ ಹೆಸರು : ಬಳ್ಳಿಗ್ಗಮಯ ಗಾಮುಣ್ಡನ್ ಗುಂದು ಗುಡೆಯಾ ಸಾತ್ತುಗಾಮುಣ್ಡ (ಎಇ. VIII ,ಸೊರಬ. ೧೦-೧೩; ಸು. 800). [? + ಗಾಮುಂಡ]

ಸಾತ್ತ್ವಿಕ (ಗು). ೧. ಸತ್ತ್ವಗುಣದಿಂದ ಕೂಡಿದ; ಒಳ್ಳೆಯ ಗುಣವನ್ನು ಹೊಂದಿದ. (ನಾ). ೨. ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ಬಗೆಯ ಗುಣಗಳಲ್ಲಿ ಒಂದು; ಸತ್ತ್ವಯುಕ್ತವಾದ ಗುಣ : ಬುದ್ಧಿ ಎಂಬ ಸಮುದ್ರದಲ್ಲಿ ಗುಳ್ಳೆಗಳಂತೆ ಅಹಂಕಾರವೆಂಬ ಮೂರನೆಯ ತತ್ತ್ವವು ಹೊರಬೀಳುವುದು. ಅದು ಸಾತ್ತ್ವಿಕ ರಾಜಸ ತಾಮಸ ಎಂದು ಮೂರು ವಿಧ (ಒಡಸಾ. ೫೫). ೩. ಸತ್ತ್ವಗುಣಗಳಿಂದ ಕೂಡಿದವನು; ಸಾಧುಸ್ವಭಾವದವನು : ಜೀವನು ತನ್ನನ್ನು ಸಾತ್ತ್ವಿಕ, ರಾಜಸ, ತಾಮಸನೆಂದು ಭಾವಿಸಿಕೊಳ್ಳುತ್ತಿರುವನು (ಶಕ್ತಿವಿ. ೪೮). ೪. ಬ್ರಾಹ್ಮಣ. ೫. ಬ್ರಹ್ಮನ ಹೆಸರು. ೬. ಶರತ್ಕಾಲದ ರಾತ್ರಿ. ೭. [ಕಾವ್ಯಮೀ] ಸ್ಥಾಯಿ, ಸಂಚಾರಿ ಮತ್ತು ಸಾತ್ತ್ವಿಕ ಎಂಬ ಮೂರು ಬಗೆಯ ಭಾವಗಳಲ್ಲಿ ಒಂದು; ಆಂತರಿಕಭಾವನೆ, ಉದ್ವೇಗ ಮೊದಲಾದುವುಗಳ ಬಾಹ್ಯಸೂಚನೆ,- ದೇಹವಿಕಾರ : ಸಾತ್ತ್ವಿಕಗಳೂ ಚಿತ್ತವೃತ್ತಿರೂಪವಾದ ಅನುಭವವಿಶೇಷಗಳೇ (ಕೃಚಿಂ. ೧೮೯). ೮. [ನಾಟ್ಯ] ಆಂಗಿಕ, ವಾಚಿಕ, ಸಾತ್ತ್ವಿಕ ಮತ್ತು ಆಹಾರ್ಯಕಗಳೆಂಬ ನಾಲ್ಕು ಬಗೆಯ ಅಭಿನಯಗಳಲ್ಲಿ ಒಂದು; ಸ್ವೇದ, ರೋಮಾಂಚ, ಅಶ್ರು ಮೊದಲಾದ ಎಂಟುಬಗೆಯ ಸಾತ್ತ್ವಿಕಭಾವಗಳ ಅಭಿನಯ : ಆಂಗಿಕ, ವಾಚಿಕ, ಆಹಾರ್ಯ (ವೇಷಭೂಷಣ) ಮತ್ತು ಸಾತ್ತ್ವಿಕ — ಇದು ನಾಟ್ಯಕಲೆಯ ಆಧಾರ (ಭಾರದ. ೫೫೨). [ಸಂ.]

ಸಾತ್ತ್ವಿಕಭಾವ (ನಾ). = ಸಾತ್ತ್ವಿಕ ೭ : "ಮೈಮರವಾಗುವುದು (ಎಂದರೆ ನಿಶ್ಚೇಷ್ಟತೆ), ಬೆವರು, ರೋಮಾಂಚ, ಧ್ವನಿವಿಕಾರ, ನಡುಕ, (ಮುಖದ) ಬಣ್ಣ ವ್ಯತ್ಯಾಸವಾಗುವುದು, ಕಂಬನಿ, ಮೂರ್ಛೆ" — ಈ ಎಂಟನ್ನು ಪ್ರತ್ಯೇಕಿಸಿ ಇವಕ್ಕೆ ಸಾತ್ತ್ವಿಕಭಾವಗಳೆಂದು ಹೆಸರು ಕೊಟ್ಟಿದ್ದಾರೆ . . . ಸಾತ್ತ್ವಿಕಭಾವಗಳನ್ನು ಒಂದು ವಿಶೇಷರೀತಿಯ ಅನುಭಾವಗಳೆಂದು ಗಣಿಸಿದರೆ ಸಾಕು (ಭಾರಮಾ. ೩೫೧); ಭಾವಗಳು ಮೂರುವಿಧವಾದುವು, ಸ್ಥಾಯಿಭಾವ, ಸಂಚಾರೀಭಾವ, ಸಾತ್ತ್ವಿಕಭಾವ (ಭಾರದ. ೫೫೩). [ಸಂ.]

ಸಾತ್ಮ್ಯ (ಗು). ೧. ಸ್ವಭಾವಕ್ಕೆ ಹೊಂದಿಕೊಳ್ಳುವ; ಪ್ರಕೃತಿಗೆ ಒಡಂಬಡುವ. (ನಾ). ೨. ಯುಕ್ತವಾಗಿರುವಿಕೆ; ಯೋಗ್ಯವಾಗಿರುವಿಕೆ. ೩. [ವೈದ್ಯಶಾ] ವಿರುದ್ಧಪ್ರಕೃತಿಯುಳ್ಳ ದೇಹಕ್ಕೂ ಸಹ ವಿರುದ್ಧ ಆಹಾರಪಾನೀಯಗಳು ಒಗ್ಗುವುದು, — ಒಡಂಬಡುವುದು : ವಿರುದ್ಧಪಾನಾಹಾರಂಗಳು ವಿರುದ್ಧಪ್ರಕೃತಿಯುಳ್ಳವನಾಗಿದ್ದರೂ ದೇಹಕ್ಕೆ ಒಡಂಬಟ್ಟು ಬಂದರೆ ಅದೇ ಸಾತ್ಮ್ಯವೆನಿಸಿಕೊಂಬುದು . . . ದೇಶಸಾತ್ಮ್ಯ, ದೇಹಸಾತ್ಮ್ಯ, ವ್ಯಾಧಿಸಾತ್ಮ್ಯವೆಂದು ಆ ಸಾತ್ಮ್ಯ ಮೂಱುತೆಱನಾಗಿಹುದು (ವೃದ್ಧಸಾ. I. ೧೨); ವಿರುದ್ಧಪಾನಾಹಾರಗಳು

ವಿರುದ್ಧ ಪ್ರಕೃತಿಯುಳ್ಳವನಿಗಾದರೂ ಒಡಂಬಟ್ಟು ಬರುವುದಾವುದುಂಟೋ ಅದೇ ಸಾತ್ಮ್ಯವೆನಿಸಿಕೊಂಬುದು (ಸಕ್ಷ. ೧೬). [ಸಂ.]

ಸಾತ್ಯವತೇಯ (ನಾ). ಸತ್ಯವತಿಯ (ಮತ್ತು ಪರಾಶರಮಹರ್ಷಿಯ) ಪುತ್ರ; ವೇದವ್ಯಾಸ : ''ಸಾತ್ಯವತೇಯಃ, ಪಾರಾಶರ್ಯಃ, ದ್ವೈಪಾಯನಃ, ವ್ಯಾಸಃ — ಈ ೪ ವ್ಯಾಸಂ'' (ಹಲಾಯು. ೭೮-೨೫೯); ಬಳಿಕ ಸಾತ್ಯವತೇಯನಾ ಶುಕಗೆ ವಲಿದು ತಿಳುಹಿದ ಸಾಂಖ್ಯ ಯೋಗಂಗಳನು ಪಿರಿದಹ ಮೋಕ್ಷಧರ್ಮಂಗಳನು ಬೋಧಿಸಿದ (ತಿಮ್ಮಶಾ. ೧೯-೧೬). [ಸಂ.]

ಸಾತ್ವತ (ನಾ). ೧. ಕೃಷ್ಣ. ೨. ವಿಷ್ಣು. ೩. ಬಲರಾಮ : ''ಬಲದೇವಃ, ಬಲಭದ್ರಃ, ಮುಸಲೀ . . . ಸಾತ್ವತಃ . . . ಕಾಮಪಾಲಃ, ಹಲಾಯುಧಃ — ಈ ೧೮ ಬಲದೇವನ ಪೆಸರ್'' (ಹಲಾಯು. ೭-೨೯). ೪. ಬಹಿಷ್ಪ್ಲತನಾದ ವೈಶ್ಯನ ಮಗ. [ಸಂ.]

ಸಾತ್ವತಿ (ನಾ). [ಕಾವ್ಯಮಿಮಾ] ಕಾವ್ಯ, ನಾಟಕಗಳಲ್ಲಿ ನಾಯಕನ ಸ್ವಭಾವವನ್ನು ತಿಳಿಸುವ ಕೈಶಿಕಿ, ಸಾತ್ವತಿ, ಆರಭಟಿ ಮತ್ತು ಭಾರತಿ ಎಂಬ ನಾಲ್ಕು ಬಗೆಯ ವೃತ್ತಿಗಳಲ್ಲಿ ಒಂದು; ಶೌರ್ಯ, ಉದಾರತೆ, ಉಲ್ಲಾಸ ಮುಂತಾದುವುಗಳಿಂದ ಕೂಡಿರುವುದು : ಭಾರತಿ ಸಾತ್ವತಿ ಕೈಶಿಕಿಯಾರಭಟಿಯುಮೆಂಬ ವೃತ್ತಿಯೊಳ್ ರಸಮಂ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು ಬೇಱೆ ನೀಲಾಂಜನೆಯಾ (ಆದಿಪು. ೯-೨೬); ಚಾಗಂ ಬೀರಂ ಸೊಬಗೆಂಬೀ ಗುಣಮುಂ ಶಾಂತವೃತ್ತಿಯುಂ ಸಾಹಸದುದ್ಯೋಗಮುಮತಿಲಲಿತ ಸದಾಭೋಗದೊಳಿಂಬಾಗೆ ರಂಜಿಕುಂ ಸಾತ್ವತಿಯೊಳ್ (ಕಾವ್ಯಾವ. ೮೬೯); ಸಾತ್ವತಿಯು ಸತ್ತ್ವ, ಶೌರ್ಯ, ತ್ಯಾಗ, ದಯೆ, ಹರ್ಷ ಮುಂತಾದವುಗಳಿಂದ ಕೂಡಿ ಗಲುವಾಗಿರುವುದು (ಕೃವಿ. ೨೧೧). [ಸಂ. ಸಾತ್ವತೀ]

ಸಾತ್ವಿಕ (ಗು). ೧. = ಸಾತ್ತ್ವಿಕ ೧ : ಸಾತ್ವಿಕ ಸುಭಕ್ತಿ ಸ್ಥಿರಮನಸ್ಕನು ಚಿಕ್ಕಮಾದಯನೆಂಬ ಸದುಭಕ್ತ . . . ಪಡಿಯಂ ಕೊಡುತಿರಲು (ಬಸವ. ೪೭-೪). ೨. = ಸಾತ್ತ್ವಿಕ ೨ : ರಮಾಧವನಂ ಕೀರ್ತಿಪುದೇ ಸಮಸ್ತಫಲ ಸನ್ಮೋಕ್ಷಪ್ರದಂ ಸಾತ್ವಿಕಂ (ಸಾತ್ವಿ. ೧೪); ಅದರಲ್ಲಿ ಹಲವು ಪ್ರಧಾನವಾಗಿ ಸಾತ್ವಿಕ, ಮತ್ತೆ ಹಲವು ಪ್ರಧಾನವಾಗಿ ರಾಜಸಿಕ ಅಥವಾ ತಾಮಸಿಕ (ಸೌಂದ. ೧೧೧). ೩. = ಸಾತ್ತ್ವಿಕ ೩ : ಭೂತಿಕನ ಸೀರೆಯ ಸಾತ್ವಿಕ ನೆಱವುಟ್ಟುರೆ ಭೂತಿಕ ಸಾತ್ವಿಕನಾದ ಸಾತ್ವಿಕ ಭೂತಿಕನಾದ (ಬಸವ. ೯೧೦); ಜೀವರಾಶಿಗಳು ದೇವಮನುಷ್ಯಾದಿಭೇದಗಳಿಂದ ಸಾತ್ವಿಕರು, ರಾಜಸರು, ತಾಮಸರೆಂಬ ಮೂರುವಿಧ'ರಾಗಿ ಭಾಗಿಸಲ್ಪಟ್ಟಿರುವರು (ಹಸಾರ. ೧-೪ ವಿಶೇಷಾರ್ಥ). ೪. ಸತ್ತ್ವಗುಣದಿಂದ ಕೂಡಿದುದು; ಒಳ್ಳೆಯದು; ಋಜುವಾದುದು : ನಿನ್ನ ಪರಿಣಾಮ ಸಾತ್ವಿಕವಾದುದು. ನಮ್ಮಂಥ ಯತಿಗಳೂ ನಿನ್ನ ದರ್ಶನ ಮಾಡಿ ಮಾರ್ಗದರ್ಶನ ಪಡೆಯಬೇಕು (ದಾನಚಂ. ೧೬೭); ಅವರ ಸುಖದುಃಖಗಳನ್ನು ನೋಡಿಕೊಂಡು ಹೋಗಬೇಕು! ಅನ್ಯಮಾರ್ಗವಾವುದೂ ಸಾತ್ವಿಕವಾದುದಲ್ಲ (ಕಬಾಪು. ೬೫). ೫. = ಸಾತ್ತ್ವಿಕ ೭ : ಸಾತ್ವಿಕ ಸ್ವೇದಬಿಂದುಗೆ ರೋಮೋದ್ಗತಿರ್ಕಿಯಾದ ಸುತೆಗಂ ಜಾಮಾತೃಗಂ ಪ್ರೀತಿ ಕೈಮಿಗೆ ಕೈನೀರೆಱೆದಂ ಕನತ್ಕಳಶ ಹಸ್ತಂ ತಜ್ಜನಶ್ರೀಪ್ರಿಯಂ (ಚಂದ್ರಪು. ೬-೭೧). ೬. = ಸಾತ್ತ್ವಿಕ ೮ : ಆಗಳ್ ನಾಟ್ಯವಿಧಿಯಂ ನಿರ್ವರ್ತಿಸಿ . . . ಎಂಟು ಸಾತ್ವಿಕಭಾವಂಗಳುಮನಾಂಗಿಕಸಾತ್ವಿಕವಾಚಿಕಾಹಾರ್ಯಕಮೆಂಬ ನಾಲ್ಕು ಭಿನಯಮುಮಂ . . . ಪಾತ್ರಸಂಕ್ರಮಣದೊಳ್ ನೆಱೆಯೆ ತೋಱೆ (ಅಜಪು. ೫-೩೦ ವ); ಸ್ವೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಮಶ್ರೂದ್ಗೇದಂ ಸ್ತಂಭಂ ಲಯಮೆಂದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ (ಕಾವ್ಯಾವ. ೭೯೬). [ಸಂ.]

ಸಾತ್ವಿಕೋಕ್ತಿ (ನಾ). ಒಳ್ಳೆಯ ಮಾತು : ಅಂತು ಸಮುಚಿತಚರಾಚರಪರಿಗ್ರಹಂಗಳಂ ಸರಸಸಾತ್ವಿಕೋಕ್ತಿಯಿಂದಮಾಱೆ ನುಡಿದನಂತರಮಂತಃಪುರದ್ವಾರದಿಂ ಪೊಱಮಡುವ ಶುದ್ಧಾಂತಕಾಂತೆಯರ ತಂಡಮಂ ಕಂಡು (ಪುಷ್ಪಸ. ೧೩-೧೦೦ ವ). [ಸಂ.]

ಸಾದ$_1$ (ನಾ). ಒಂದು ಬಗೆಯ ತೆರಿಗೆ : ಅಲನ್ದೆಯ [ಸ್ಥ]ಯಂಭುಸೋಮೇಶ್ವರ ದೇವರ್ಗ್ಗಾಳ್ವ ೧೨ರಡೂರ್ಗ್ಗಳಾಜಲ್ಲಂ ಕಳ್ವಳಿಕೆ ಸಾದಂ ಬನ್ನೆಗಯನೆ [ಪ]ರಿಹಾರ ಮಾಡಿ ಬಟ್ಟಂ (ಎಇ. XXVIII, ೬೫-೫೪; 1082); ಸಾದಂ ಬನ್ನೆಗೆ ಬಳಂಬೆಯ ತೆಱೆ . . . ದಣ್ಣದಾಯವಿನ್ತಿನಿತುಮಂ (ಸೌಇ. IX-I, ೧೭೨-೧೮; 1106); ಸುಂಕ ಸಾದ ತಳಸಾರಿಗೆ . . . ಸಂಗಮೇಶ್ವರಕೆ ಪಾರಣೆಯ ಜಂಗಮಾರಾ[ಧ]ನೆಗೆ . . . ಕೊಟ್ಟ ಸಾಸನ (ಎಇ. XXI, ೧೪-೭೨; 1260). 'ಸಾದದೆಱೆ' ಪರಾ. [ದೇ. ॥ ತೆಲು. ಸಾದಮು]

ಸಾದ$_2$ (ನಾ). ೧. ಮುಳುಗುವಿಕೆ; ತಳಸೇರುವಿಕೆ. ೨. ಹಾಳಾಗುವಿಕೆ; ಕೆಡುವಿಕೆ. ೩. ತೆಳುವು; ಸಪ್ಪಿರತೆ. ೪. ನೋವು; ವೇದನೆ. ೫. ಶುದ್ಧತೆ; ಸ್ಪಷ್ಟತೆ. ೬. ನಡೆಯುವಿಕೆ; ಚಲನೆ. ೭. ಇಡುವಿಕೆ; ಇರಿಸುವುದು. ೮. ಆಯಾಸ; ದಣಿವು. ೯. ಕೆಸರು; ಪಂಕ : ''ಪಂಕಃ, ಸಾದಃ . . . ಅವಕಲಃ — ಈ ೬ ಕೆಸಱು'' (ಹಲಾಯು. ೧೧೨-೫೬). [ಸಂ.]

ಸಾದಕ (ನಾ). ೧. ಸಾಧನೆಮಾಡುವವನು; ಸಾಧಕ : ನಿಧಿ, ನಿದಿ; ಸಾಧಕ, ಸಾದಕ; ಭೈರವ, ಭೈರವ (ಶಬ್ದಾನು. ೧೪೩ ಪ್ರಯೋ). ೨. ಅಂಗಸಾಧನೆ; ವ್ಯಾಯಾಮ : ರೋಸದಿಂದೊರ್ಮೆ ಜಗಜಟ್ಟಿ ಇರ್ದಿರ್ ಮುಂ ಮಧುರೆಯೊಳ್ ಕುವಲಯಾಪೀಡಕ್ಕಂ ಚಾಣೂರಂಗಂ ಮಾರ್ಮಲೆತಂತೆ ದಂಡೆಯಂ ಮಾಡಿ ಸಾದಕದೊದವಂ ಮೆಱೆಯುತ್ತೆ (ಚಿಕವಂ. ೧೭೪-೧೦). [< ಸಂ. ಸಾಧಕ]

ಸಾದಣ 'ಸಾದನೆ' ನೋ.

ಸಾದಣಿ 'ಸಾದನೆ' ನೋ.

ಸಾದಣಿಗೈ (ಕ್ರಿ). ಮಲ್ಲಸಾಧನೆಮಾಡು : ಅಣೆದುಬ್ಬ ತಗ್ಗಿ ತೊಡಕಿ ತೂಗಿ ಸರ್ವಾಂಗ ಕುಣೆದು ಕುಣೆದರೆಂದು ಸುಡಿಯ ಪೆಣೆದು ಮೇಣದ ಬೊಂಬೆಯೆರಡು ಮೈಸೋಂಕಿ ಸಾದಣಿಗೈದವಚ್ಚರಿಯೆಂಬೆ (ಭರಚ. ೧೧-೯೭).

[ಸಾದಣ (< ಸಾದನೆ) + ಗೈ (< ಕೆಯ್$_1$)]

ಸಾದದಂಡಿಗೆ (ನಾ). ಒಂದು ಬಗೆಯ ದಂಡಿಗೆ, — ಪಲ್ಲಕ್ಕಿ : ಸವರವಳ್ಳಿಯ ಸರ್ಬೇಶ್ವರದೇವರ ನಿವೇದ್ಯಕ್ಕಂ ಸಾದದಣ್ಣಿಗೆ x ಬಲ್ಲವರಸಂ ಪಸಾಯಿತ [ಒಕ್ಕ]ರಸ[ರು] . . . ಧಾರಾಪೂರ್ವ್ವಕಂ ಮಾಡಿ ಕೊಟ್ಟುದಂ (ನಾಂದೇಡ್. ೧೮-೭; 1115).

[ಸಾದ$_2$ + ದಂಡಿಗೆ]

ಸಾದದೆಱೆ (ನಾ). ಒಂದು ಬಗೆಯ ತೆರಿಗೆ : ರಾಮೇಸ್ವರದೇವರ್ಗ್ಗಾ ಪುರದ [ಸಾ]ದದ[ಱೆ] ಹಂದರುವಣವೆಂಬಿವಂ ಸರ್ವ್ವನಮಶ್ಯವಾಗಿ ಬಿಡೆಂದು ಬೇ x ವುದುಂ (ಸೌಇ. XX, ೭೮-೧೩; 1118); ಧರ್ಮಾಪುರದ ಶ್ರೀ ಕೇಶವದೇವರಿಂಗೆ . . . ಸಾದದೆಱೆ ಉದುವಲುದೆಱೆ ಅಯ್ಯೂಜುಗುಳಿಯ ಪನ್ನಾಯದೆಱೆ ನಾವಿದದೆಱೆ ಇನ್ತಿನಿಸುಂ ತೆಱೆಯನು ಧಾರಾಪೂರ್ವ್ವಕಂ ಮಾಡಿ ಬಿಟ್ಟರು (ಎಕ. IV (R), ಹುಣಸೂ. ೨೪-೪೦; 1162).

[ಸಾದ$_2$ + ತೆಱೆ$_3$]

ಸಾದನ 'ಸಾದನೆ' ನೋ.

ಸಾತ್ವಿಕತೆ (ನಾ). = ಸಾತ್ವಿಕಗುಣ : ಸಮಾಜಕ್ಕೆ ಗೊತ್ತಿರದ ಒಂದು ಸಾತ್ವಿಕತೆ ದೇಸಾಯರ ಜೀವನವನ್ನು ತುಂಬಿದೆ (ಸಮಜೀ. ೧೧ ಟೀಕೆ). [ಸಂ. ಸಾತ್ವಿಕತಾ]

ಸಾತ್ವಿಕದಾನ (ನಾ). ಸದ್ಭಾವನೆಯಿಂದ ಸತ್ಪಾತ್ರರಲ್ಲಿ ಮಾಡುವ ದಾನ : ಮುಂದೆ ತನ್ನಯ ಗೃಹಗಳಲಿ ಶಾಂತಿಂದ ಬ್ರಹ್ಮಾರ್ಪಣವುಯೆಂದೇ ಅಂದು ಮಾಡುವ ದಾನ ಸಾತ್ವಿಕದಾನವದುಯೆಂದ (ಜ್ಞಾನಸಿಂ. ೩೦-೨೨). [ಸಂ.]

ಸಾತ್ವಿಕಭಾವ (ನಾ). = ಸಾತ್ತ್ವಿಕ ೭ : ಆಗಳ್ ನಾಟ್ಯವಿಧಿಯಂ ನಿರ್ವರ್ತಿಸಿ . . . ಎಂಟು ಸಾತ್ವಿಕಭಾವಂಗಳುಮನಾಂಗಿಕಸಾತ್ವಿಕವಾಚಿಕಾಹಾರ್ಯಕಮೆಂಬ ನಾಲ್ಕು ಭಿನಯಮುಮಂ . . . ಪಾತ್ರಸಂಕ್ರಮಣದೊಳ್ ನೆಱೆಯೆ ತೋಱೆ (ಅಜಪು. ೫-೩೦ ವ); ಸ್ವೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಮಶ್ರೂದ್ಗೇದಂ ಸ್ತಂಭಂ ಲಯಮೆಂದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ (ಕಾವ್ಯಾವ. ೭೯೬). [ಸಂ.]

ಸಾತ್ವಿಕೋಕ್ತಿ (ನಾ). ಒಳ್ಳೆಯ ಮಾತು : ಅಂತು ಸಮುಚಿತಚರಾಚರಪರಿಗ್ರಹಂಗಳಂ ಸರಸಸಾತ್ವಿಕೋಕ್ತಿಯಿಂದಮಾಱೆ ನುಡಿದನಂತರಮಂತಃಪುರದ್ವಾರದಿಂ ಪೊಱಮಡುವ ಶುದ್ಧಾಂತಕಾಂತೆಯರ ತಂಡಮಂ ಕಂಡು (ಪುಷ್ಪಸ. ೧೩-೧೦೦ ವ). [ಸಂ.]

ಸಾದನೆ, ಸಾದಣ, ಸಾದಣೆ, ಸಾದನ (ನಾ). ೧. ಸಾಧಿಸುವುದು; ಸಿದ್ಧಿಯನ್ನು ಪಡೆಯುವುದು : ಶುದ್ಧಿ—ಸುದ್ಧಿ, ಸಾಧನ—ಸಾದನೆ (ಶಮದ. ೨೫೫ ಪ್ರಯೋ). ೨. ದಾಖಲೆ; ದಸ್ತಾವೇಜು; ಅಧಿಕಾರಪತ್ರ : ಗುರುವಪ್ಪಗವುಡ ಸೇನಬೋವ ತಿಪರಸರ ತಿಂಮರಸರು ಕೊಟ ಸಾದನೆ (ಎಕ. IX(5), ಮಾಗಡಿ. ೧೩೩-೬; 1339). ಸಾದಣ : ಅಂಗಸಾಧನೆ; ವ್ಯಾಯಾಮ : ಪುರದ ಬಹಿರ್ವಳಯದೊಳು ಬಿಲ್ಲೋಜರ ಗರುಡಿ ಜಟ್ಟಿಗಳ ಕಾಲಾಟ ಪಿರಿದು ಸಾದಣ[ಪಾಠಾಂ. ರಣೆ] ಸಬಳಿಗರ ಕೃಪಾಣದಿಂದರರೆ ಕೌತುಕವು ನೋಳ್ಪರಿಗೆ (ಅನಂಚ. ೧-೧೦೬). **ಸಾದಣೆ** : ೩. 'ಸಾದಣೆಗ್ಗೆ' ಪರಾ. **ಸಾದನ** : ೨. ಸರ್ವಕಾರ್ಯಂಗಳಲು ಯಲುವರು ಪ್ರತಿಪಾಳಿಸುವರು ರಾಜಮುದ್ರಾಸಹಿತ ತಾಂಬ್ರಸಾದನ ಕೊಟ್ಟರು (ಎಇ. XXVII, ೧೬೨-೮೮; 1256?). 'ಸಾಸನ' ಪರಾ. [< ಸಂ. ಸಾಧನ]

ಸಾದರ$_1$ (ಗು). ೧. ಆದರದಿಂದ ಕೂಡಿದ; ಮರ್ಯಾದೆಯಿಂದ ಕೂಡಿದ. ೨. ಲಕ್ಷ್ಯದಿಂದ ಕೂಡಿದ; ಗಮನದಿಂದ ಕೂಡಿದ : ನಮ್ಮನೆ ಹೆಣ್ಣುಮಕ್ಕಳ ಸಾದರ ಪೋಷಣೆ ಮಾಡದಿದ್ದರೆ ದೇವರು ಮೆಚ್ಚಾನೆ? (ಬೆಂದಜೀ. ೩೦). (ನಾ). ೩. ಗೌರವ; ಮನ್ನಣೆ : ಶರಣ ಇನ್ನೇಳೇಳೆನುತ ಸಾದರದಿನಾಗಳೆ ಸೈಗೆಡೆದ ಮಾದರಸನಂ ನಿಜಕರಕಮಲದಿಂ ತೆಗೆದು ಬಿಗಿಯಪ್ಪಿ (ಬಸಪು. ೨೦-೬); ಸಾದರದೊಳೆನ್ನೊಡನೆ ರಮಿಸುವುದು (ಜೈಮಿಭಾ. ೧೬-೧೩). [ಸಂ.]

ಸಾದರ$_2$, ಸಾದರು (ನಾ). ಹಾಜರುಪಡಿಸುವುದು; ಪ್ರಕಟಿಸುವುದು : 'ಸಾದರಪಡಿಸು' ಪರಾ. **ಸಾದರು** : ಸಾದರಾಗುವ ಆಜ್ಞೆಗನುಸಾರ ಮರಣದಂಡನೆ ಅಥವಾ . . . ದಂಡನೆಗಳನ್ನು ವಿಧಿಸುತ್ತಿದ್ದರು (ಮಹಾವಂ. II,೨೯); ಯಾವ ವ್ಯಕ್ತಿಯನ್ನಾದರೂ . . . ನಿರ್ಬಂಧದಲ್ಲಿಟ್ಟಿದ್ದರೆ, ಆದೇಶವನ್ನು ಸಾದರು ಮಾಡದೆ ಪ್ರಾಧಿಕಾರಿಯು . . . ಆ ವ್ಯಕ್ತಿಗೆ ತಿಳಿಸತಕ್ಕುದು (ಭಾಧಾನ. ೧೪).

[<— ಅರ. ಹಿಂ. ಸಾದಿರ್; ಮರಾ. ಸಾದರ್]

ಸಾದರಂ (ಅ). ಆದರಪೂರ್ವಕವಾಗಿ : ನಾನದಂ ಬಲ್ಲಂತೆ ಬಣ್ಣಿಪೆಂ ಸಾದರಂ ಕಡುನೇಹದಿಂದಿಂತು ಪೊಗಳ್ದಪೆಂ (ತಿರುರ. ದೆ. ೨-೨); ಉರುತರ ವಿಭೂತಿಯಂ ಸಾದರಂ ಸಂತತಂ ಧರಿಸಿದವನೇ ಬ್ರಾಹ್ಮಣೋತ್ತಮಂ (ಆರಾಚ. ೧-೨-೫). [ಸಂ.]

ಸಾದರಣ (ನಾ). ಆದರ; ಮನ್ನಣೆ; ಗೌರವ : "ಸಾದೃತಂ ಸಾದಂEರ∃ಣಂ" (ವಸ್ತುಕೋ. ೧೦೧-೨೦); ಚರಣವಿಷಯಭ್ರಾಂತಿಯಿಂದಂ ಚರಿಸಿ ರಾಜವದುಪಚರಣ ಸಾದರಣ[ಪಾಠಾಂ. ದಾದಿರಣ, ಸಾಧರಣ] ಕರಣಂಗಳನುಳಿದೆನೇ ಛಾಂದಸತ್ವದಲಿ (ಬಸಪು. ೪೫-೧೧). [ಸಂ.]

ಸಾದರಣೆ (ನಾ). = ಸಾದರಣ : ಕಾದಿ ಗೆದ್ದವ ಬೇರೆ ನಮಗೆ ಈ ಸಾದರಣೆ ಬೇಡೆಂದನು (ತುರಂಗ. ೩೭-೬೦). [ಸಂ. ಸಾದರಣ]

ಸಾದರಪಡಿಸು (ಕ್ರಿ). ಪ್ರಕಟಪಡಿಸು; ಹಾಜರುಪಡಿಸು : ಯಜಮಾನಿಯ ದುರಾಗ್ರಹಕ್ಕೆ ಕೆಲಜನ ವರಗಳ ಯಾದಿಯನ್ನು ಸಾದರಪಡಿಸಿದ್ದರು (ಸಂಜೀವಿ. ೫೨); ಭೀಮಪ್ಪ ವಕೀಲರ ಮುಖಾಂತರ ತನ್ನ ತಕರಾರುಅರ್ಜಿ ಸಾದರಪಡಿಸಿದ್ದ (ಮನೆದೆ.೮).

[ಸಾದರ$_2$ + ಪಡಿಸು]

ಸಾದರು 'ಸಾದರ$_2$' ನೋ.

ಸಾದಾ (ಗು). ೧. ಸಾಧಾರಣವಾದ; ಸರಳವಾದ : ಆನೆಗೆ ಸಾದಾಬನಾತಿನ ಜೂಲು ೧ (ಎಕ. XIV, ನಂಜನ. ೨೯೨-೪೧; 1847); ಕಲಾವಂತರು ಸಾದಾತರದ ಅನ್ನವಸ್ತ್ರಗಳ ಮೇಲೆ ಸಂತುಷ್ಟರಾಗಿ ಉಳಿಯಬಹುದಾದರೆ ಸಮಾಜವು ಅವರನ್ನು ಸಾಕಲೂಬಹುದು (ಪ್ರಬಂಧ. ೧೯೯). (ನಾ). ೨. ಸಾಧಾರಣವಾದುದು; ಸರಳವಾದುದು : ಆನೆಕತ್ತಿಗೆ ಘಂಟೆಸರ ೨ ಕ್ಕೆ ದೊಡ್ಡದಕ್ಕೆ ಮಧ್ಯ ದೊಡ್ಡಘಂಟೆ ೧ ಯರಡುತರ ೨ ಸಾದಾ (ಎಕ. XIV, ನಂಜನ. ೨೬೨-೩೬; 1847).

ಸಾದಾಅಂಚು = ಜರಿ, ಹೆಣಿಕೆ ಮುಂತಾದುವುಗಳಿಲ್ಲದ ಸಾಧಾರಣವಾದ ಅಂಚು: ಸಾದಾಅಂಚಿನ ಪಂಚೆಗಿಂತ ಜರಿಅಂಚಿನ ಪಂಚೆಗೆ ಬೆಲೆ ಹೆಚ್ಚು (ರೂಢಿ). **ಸಾದಾಉಡುಪು** = ೧. ಸರಳವಾದ ಉಡುಗೆ : ಆಕೆಯದು ಸಾದಾಉಡುಪಿನಲ್ಲೂ ಎದ್ದು ಕಾಣುವ ಸೌಂದರ್ಯ (ರೂಢಿ). ೨. ಸಮವಸ್ತ್ರವಲ್ಲದ ಸಾಧಾರಣವಾದ ಉಡುಪು; ಮಫ್ತಿ : ಪೋಲೀಸಿನವರು ಅನೇಕ ವೇಳೆ ಕಳ್ಳತನಗಳನ್ನು ಪತ್ತೆಹಚ್ಚಲು ಸಾದಾಉಡುಪಿನಲ್ಲಿರುತ್ತಾರೆ (ರೂಢಿ). **ಸಾದಾದೋಸೆ** = (ಪಲ್ಯ ಮುಂತಾದ ಮಸಾಲೆಗಳನ್ನು ಹಾಕದ) ಸಾಮಾನ್ಯವಾದ ದೋಸೆ; ಖಾಲಿದೋಸೆ : ಸಿದ್ಧ, ನಿನಗೆ ಸಾದಾದೋಸೆ ಬೇಕೋ? ಮಸಾಲೆದೋಸೆ ಬೇಕೋ? (ಕಪಪು. ೩-೫). **ಸಾದಾನೇಯ್ಗೆ** = ಹೆಚ್ಚು ತೊಡಕಿಲ್ಲದ ಸರಳವಾದ ನೇಯ್ಗೆ : ಸಾದಾನೇಯ್ಗೆಗೆ ಕುಕ್ಕೆಯನ್ನು ಹೆಣೆಯುವಾಗ ಉಪಯೋಗಿಸುವ ಹೆಣಿಗೆ ಉಪಯೋಗಿಸಲ್ಪಡುತ್ತದೆ . . . ವಾಯಿಲ್, ಮಸ್ಲಿನ್, ಮಲ್ ಇವನ್ನು ಸಾದಾನೇಯ್ಗೆ ಉಪಯೋಗಿಸಿ ನೇಯುವರು (ಗೃಹವಿ. ೭೩). **ಸಾದಾಸೀದಾ** = ನೇರವಾದ ನಡವಳಿಕೆಯ; ಸರಳಸ್ವಭಾವದ : ಮೊದಲಿನಿಂದಲೂ ಅವನು ಸಾದಾಸೀದಾ ಮನುಷ್ಯನಲ್ಲ (ಸಾಹೇಬ್. ೨೭೬). [<— ಪಾರ. ಸಾದ ; ಹಿಂ. ಸಾದಾ]

ಸಾದಾಖ್ಯ (ನಾ). [ವೀಶೈ] "ಸಂತತ ಶಿವಭಾವದಿಂದಿರುವುದು" (ವೀಶೈಪಾ. ೨೪-೭; 1961): ಆ ಸದಾಶಿವತತ್ತ್ವ ಸಾದಾಖ್ಯವೆನಿಸುತ ವಿಲಾಸಿಪುದು ಪಂಚಪ್ರಕಾರದಿಂ (ಲಶಿಚಿಂ. ೧-೨೩); ವಿಶ್ವವ್ಯಾಪಕವಾದ ನಿಷ್ಕಲಲಿಂಗವು . . . ಸಾಕಾರಲಿಂಗಗಳಾಗಿ ವಿಶ್ವದಲ್ಲಿ ನೆಲಸಿರುವುದು, ಇವು . . . ಸದಾಶಿವನಿಂದ ಹೊರಟು ಅವನ ಹೆಸರು ಮತ್ತು ಲಕ್ಷಣಗಳಿಂದ ಸಾದಾಖ್ಯಗಳೆನಿಸಿ ಜೀವರಿಗೆ ಅನುಗ್ರಹಮಾಡುತ್ತಿರುವುವು (ಶಕ್ತಿವಿ. ೨೬). 'ಪಂಚಸಾದಾಖ್ಯ' ಪರಾ. [ಸಂ.]

ಸಾದಾಖ್ಯತತ್ತ್ವ (ನಾ). = ಸಾದಾಖ್ಯ : ತದ್ಬಿಂದುವಿಂ ಸದಾಶಿವನೆನಿಪ್ಪಾ ಸಾದಾಖ್ಯ ತತ್ತ್ವವಾಯ್ತು (ವೀಶೈಪು. ೬-೫-೧೩). [ಸಂ.]

ಸಾದಾರತೆ (ನಾ). ಆಧಾರವಾಗಿರುವಿಕೆ ; ಆಶ್ರಯಗುಣ : ಬೀರರಸಂಗಂ ಸಿತ ಪಂಕೇರುಹದಳನಯನೆ ರೆಬ್ಬಿಕಬ್ಬೆಗಮತಿಗಂಭೀರಗುಣಂ ಪುಟ್ಟಿದ ಸಾದಾರತೆಯೊಡವುಟ್ಟೆ ಕಂಬನೆಂಬ ಮಹಾತ್ಮಂ (ಸೌಇಇ. IX-I, ೧೫೫-೯; 1086).

[P ಇದು 'ಸಾಧಾರತೆ' ಎಂಬುದರ ಅಪಲಿಖಿತ]

ಸಾದಿ (ನಾ). ೧. ನಾಶಮಾಡುವಿಕೆ; ಹಾಳುಮಾಡುವಿಕೆ. ೨. ಕುಳಿತು ಕೊಂಡಿರುವವನು . ೩. ಕುದುರೆಯ ಸವಾರ; ರಾವುತ : ತಾರಾಪೀಡಂ . . . ಧಾರ್ತೆಯನಾರಯ್ಯಲಾಪ್ತರೆನಿಸಿದ ಸಾದಿಗಳಂ ತ್ವರಿತಗತಂ ಬೆರಸಟ್ಟಿದಂ (ಕಾದಂಉ. ೬೬೧); ಕಡಿವಾಣವಿಡಿದೆಳೆದು ಬಲ್ಪಿಂದೆ ಸಾದಿಗಳ್ತಡೆದೊಡಂ ನಿಲ್ಲದಶ್ವಶ್ರೇಣಿ ಪಡಲಿಟ್ಟುದು (ಶೇಷರಾ. ೧೦-೨೬). ೪. ಆನೆಯ ಸವಾರ ; ಮಾವುತ : ರಾವುತ್ತರ್ ಸಾದಿಗಳ್ ತೇರಾಳ್ಗಳ್ ದಂಡೆತ್ತಿ ಪೋದರ್ (ರಾಮಾಶ್ವ. ೯೩-೨೯). ೫. ರಥವನ್ನು ನಡೆಸುವವನು; ಸಾರಥಿ. ೬. ಆದಿಯನ್ನುಳ್ಳುದು; ಅನಾದಿಯಲ್ಲದುದು: ಏಕಜೀವಾಪೇಕ್ಷೆಯಿಂ ಅನಾದ್ಯಪರ್ಯವಸಾನಮುಂ ಅನಾದಿಪರ್ಯವಸಾನಮುಂ ಸಾದಿಪರ್ಯವಸಾನಮುಮೆಂದು ಭಂಗತ್ರಯಮಕ್ಕುಂ (ತತ್ತ್ವಪ್ರ. ೩೧).

[ಸಂ. ಸಾದಿ, ಸಾದಿನ್]

ಸಾದಿತ (ಗು). ೧. ಕುಳಿತುಕೊಂಡ; ಆಸೀನವಾದ. ೨. ಕುಳಿತುಕೊಳ್ಳುವಂತೆ ಮಾಡಿದ; ಕೂರಿಸಿದ. ೩. ನಿರುತ್ಸಾಹದಿಂದ ಕೂಡಿದ; ಖಿನ್ನವಾದ.

[ಸಂ.]

ಸಾದಿಲ್ವಾರು (ನಾ). (ಶಾಲೆ, ಕಚೇರಿ ಮುಂತಾದ ಕಡೆಗಳಲ್ಲಿ ಶಾಯಿ, ಕಾಗದ ಲೇಖನಿ ಮುಂತಾದುವಕ್ಕೆ ಬಳಸುವ) ಚಿಲ್ಲರೆಖರ್ಚು; ಅನಿರೀಕ್ಷಿತವಾಗಿ, ಆಗಂತುಕವಾಗಿ ಬರುವ ಸಣ್ಣಪುಟ್ಟಿ ವೆಚ್ಚ : ಹೊಟ್ಟೆಗೆ ಸಂಪಾದಿಸಲೇ, ಬಟ್ಟೆ ಹವಣಿಸಿಕೊಳ್ಳಲೇ, ಕಾಗದದ ಕಡ್ಡಿ ಸಾದಿಲ್ವಾರು ಹುಡುಕಿಕೊಂಡು ಹೋಗಲೇ! (ಶ್ರೀಕಥೆ. ೮೧); ತಿಂಗಳಿಗೆ ಎಂಟಾಣೆಯನ್ನಾದರೂ ಸಾದಿಲ್ವಾರಿಗೆ ಕೊಡಬೇಕು (ರಂಗಕ. ೫೦).

ಸಾದಿಲ್ವಾರುಮೊಬಲಗು = (ಕಚೇರಿ ಮುಂತಾದ ಕಡೆಗಳಲ್ಲಿ) ಚಿಲ್ಲರೆಖರ್ಚು, ಆಗಂತುಕವೆಚ್ಚಗಳಿಗೆ ಉಪಯೋಗಿಸಲು ಇರುವ ಹಣ : ಸಾದಿಲ್ವಾರು ಮೊಬಲಗನ್ನು ಹೆಚ್ಚಿಸಬೇಕು ಎಂಬುದು ಅವನ ತೀರ್ಮಾನವಾಗಿತ್ತು (ರಂಗಕ. ೫೦).

[<— ಮರಾ. ಸಾದಿಲ್‌ವಾರ್; ಅರ. ಸಾದಿರ್‌ವಾರಿದ್]

ಸಾದಿಸು (ಕ್ರಿ). ಹಿಂದಕ್ಕೆ ಪಡೆ; ಮರಳಿ ಪಡೆ : ಸಾದಿ[ಪಾಠಾಂ. ಧಿ]ಸುವೆಂ ಫಲ್ಗುಣನಿಂ ಸಾದಿ[ಪಾಠಾಂ.ಧಿ]ಸುವೆಂ ಪವನಸುತನ ಬಸಿಱಿಂ ಹಾ ಕರ್ಣಾ ದುಶ್ಶಾಸನ ತೆಗೆವೆಂ

ನಿರ್ದೋಷಿಬೀಸ್ಕೆಯಮಜನೊಳ್ ಪುದುವಾಟ್ಟಂ (ಗದಾಸಂ. ೪-೧೭). ☞ ಈ ಪದ್ಯದಲ್ಲಿ ಪ್ರಾಸಕ್ಕಾಗಿ ಕವಿಯು ಅಲ್ಪಪ್ರಾಣವನ್ನು ಬಳಸಿದಂತೆ ತೋರುತ್ತದೆ. [< ಸಾಧಿಸು]

ಸಾದು₁ 'ಸಾಂದು' ನೋ.

ಸಾದು₂ (ಗು). ೧. ಸಾಧುಸ್ವಭಾವದ; ಒಳ್ಳೆಯ. (ನಾ). ೨. ಒಳ್ಳೆಯತನ; ಸಾಧುಸ್ವಭಾವ : ''ಸುಜನತ್ವ ಗಂಧಪ್ರವ್ಯಂಗಳೊಳ್ ಸಾದಕ್ಕು'' (ಶಬ್ದಮಂ. ೧೧೧). ೩. ಸಾಧುಸ್ವಭಾವದ ವ್ಯಕ್ತಿ; ಸಜ್ಜನ: ಮಾತಾಳಿ, ಸಾದು, ಗಾಳು, ಪಾರು (ಭಾಪಾಭೂ. ೧೯೬ ಪ್ರಯೋ); ಸಾದು ಕೆರಳಿದ ತರಗಲೀ ಸಂವಾದ ಲೇಸೆಂದಮರರುಲಿಯಲು ಮಾಧವನ ಮೈದುನನು ಮದನನ ನೋಡಿ ನಸುನಗುತ . . . ಮರುಳೆ ಮರಳೆಂದ (ಕೋಗಮ. ೨೫ --೯೨).

ಸಾದುಎತ್ತು, ಸಾದೆತ್ತು = ಸೌಮ್ಯಸ್ವಭಾವದ ಎತ್ತು : ಹೊಸದಾಗಿ ಹೂಡಿದ ಮೂಡಲ ಹೋರಿ ಮುಸುಗರದು ಅಡ್ಡಾದಿಡ್ಡಿ ಜಗ್ಗುತಿದೆ. ಜೊತೆಗಿರುವ ಸಾದುಎತ್ತಿನ ಕೂಡ ಕಾದಾಟ (ನಲಮು. ೩೨-೫); ಕೆಂದ ಸಾದತ್ತಾಗಿ ಮುಂದಱಿವ ಮಗನಾಗಿ ಕುಂದದಲೆ ಗೆಯ್ದ ಸೊಸೆಯಾದರಾ ಮನೆಗೆ ಬಿಂದಿಗೆಯ ಹೊನ್ನು (ಸರ್ವಜ್ಞ. ೧೭೫). [< ಸಂ. ಸಾಧು]

ಸಾದುಗಪ್ಪು (ನಾ). ಸಾಮಾನ್ಯವಾದ ಕಪ್ಪು; ನಸುಕಪ್ಪು: ಱಬ್ಬರ ಬಣ್ಣವೂ ಸಾದುಗಪ್ಪೇ (ಕಲಾಜ್ಞೋ. ೩); ಸ್ವರ್ಣವರ್ಣದ ಹೆಂಗಳೆಯರಿಗೆ ಕರಿಯ ಚಂದ್ರಕಾಳೆಯ ಸೀರೆಯೂ, ಸಾದುಗಪ್ಪಿನವರಿಗೆ ಬಳಿಯ ಪತ್ತಲಗಳೂ ಸೇರುವವು (ಅಂದಚ. ೨೭). [ಸಾದು₂ + ಕಪ್ಪು (< ಕರ್ಪು)]

ಸಾದುಗಿಱು (ಕ್ರಿ). ಒಳ್ಳೆಯ ವ್ಯಕ್ತಿಯೆಂದು ಭಾವಿಸು : ಸಾದುಗತ್ತು ಬಗೆಯಾದವ ನಾನೋಡಲಟ್ಟಿದೆಂ (ಕವಿಪಾ. ೧-೧೨೮). [ಸಾದು₂ + ಗಿಱು]

ಸಾದೃತ (ನಾ). = ಸಾದರಣ : ''ಸಾದೃತಂ ಸಾದಂEರತಿಣಂ'' (ವಸ್ತುಕೋ. ೧೦೧--೨೦). [?]

ಸಾದೃಶ್ಯ (ನಾ). ಹೋಲಿಕೆ; ಒಂದೇ ರೀತಿ ಇರುವಿಕೆ : ''ವಿದ್ವಂಸೂಚ್ಯಾಭಿ ಮುಖಾಯುದ್ವಂ ಸಾದೃಶ್ಯಮಪ್ಪುದುಂ ತಾಂ ವಿದ್ವಂ'' (ವಸ್ತುಕೋ. ೧೩೬-೫೭); ನೃಪತಿಯ ಮರಣಸಾದೃಶ್ಯಪ್ರಹಾರವ್ಯಥೆಯ ಕಾಣಿಕೆಗೆ ಅರರೆ ಭಾಜನವಾದನ್ಕೆ ಹರಹರ ಮಹಾದೇವಾ (ಕುವ್ಯಾಕ. ೧೨-೯). [ಸಂ.]

ಸಾದೇವ (ನಾ). ಜೊತೆಯಲ್ಲಿರುವ ದೇವತೆ : ಸಹದೇವ — ಸಾದೇವ (ಕಮಪ್ರ. ೨೯೧ ಪ್ರಯೋ); ಸಾದೇವಂ, ಸಹದೇವಂ (ಶಬ್ದಾನು. ೩೭೪ ಪ್ರಯೋ). [< ಸಂ. ಸಹದೇವ]

ಸಾದ್ಯಂತ (ಗು). ೧. ಮೊದಲಿನಿಂದ ಕೊನೆಯವರೆಗಿನ; ಸಮಗ್ರವಾದ : ಮರುದಿನ ರಾಚಪ್ಪನಿಗೆ ಸಾದ್ಯಂತ ಹಕೀಕತ್ತನ್ನು ವಿವರಿಸಿದೆ (ಬೀಪಹ. II.೧೯೦). (ನಾ). ೨. ಮೊದಲಿನಿಂದ ಕೊನೆಯವರೆಗಿರುವುದು; ಸಮಗ್ರವಾದುದು : ಅವನ ಹದಿನಾಲ್ಕುವರ್ಷಗಳ ಇತಿವೃತ್ತ, ಸಾದ್ಯಂತವಾಗಿ ಕೇಳಿ ಭಟ್ಟರಿಗಾದ ಆನಂದ — ಆಶ್ಚರ್ಯ ಅಷ್ಟಿಷ್ಟಲ್ಲ (ಹೂಸಕ್ಷ. ೪೨). [ಸಂ.]

ಸಾಧಕ (ನಾ). ೧. ನೆರವೇರಿಸುವುದು; ಪೂರೈಸುವುದು. ೨. ಅಭ್ಯಾಸ; ಪರಿಶ್ರಮ: 'ಕತ್ತಿಸಾಧಕ', 'ಗರುಡಿಸಾಧಕ' ಪರಾ. ೩. ಕಾರ್ಯವನ್ನು ಸಾಧಿಸುವವನು. ೪. (ಅಧ್ಯಾತ್ಮ, ಯೋಗ ಇತ್ಯಾದಿ) ಸಾಧನೆಯ ಪಥವನ್ನು ಹಿಡಿದವನು; ಸಾಧನೆಯ ಹಾದಿಯಲ್ಲಿರುವವನು : ವೇದಕ್ಕೆ ಬೆಲೆಯಿಲ್ಲ ಭೇದಕ್ಕೆ ಹೊಲಬಿಲ್ಲ ಸಾಧಕಗೆ ಆವ ಭಯವಿಲ್ಲ (ಸರ್ವಜ್ಞ. ೩೯); ಈಶ್ವರೋಪಾಸನೆಯು ಮೋಕ್ಷಕ್ಕೆ ಸಾಧನವಾಗುತ್ತದೆ. ಸಾಧನು ಶಾರೀರಕ ಮತ್ತು ಮಾನಸಿಕಪ್ರಯತ್ನಗಳಿಂದಕ್ರಮಕ್ರಮವಾಗಿ ವಿಕಾಸವನ್ನು ಪಡೆಯಬೇಕು (ಭಾರದ. ೧೫೧). ೫. ಕುಶಲನಾದವನು; ನಿಪುಣ; ಸಮರ್ಥ : ಕೈಕರಣಿಗಳಲಧಿಕನನತಿಶುಚಿಯ ಸಾಧಕನನಕ್ರೋಧಿಯನನಾಲಸನ . . . ಪತಿಕರಿಸುವುದು ಸೂಪಕಾರತೆಗೆ (ಕುವ್ಯಾಲಾ. ೩-೯೨). ೬. ಯಕ್ಷಿಣಿಗಾರ; ಐಂದ್ರಜಾಲಿಕ : ಭೈರವನಂತೆ ಭಾಂಕಾರಂಗುಡುತಿರ್ಪ ಸಾಧಕರಿಂ (ಕಾವ್ಯಸಾ. ೫೨೯ ಕೂರ್ಕ); ಯಂತ್ರತಂತ್ರಗಳ ಸಾದರದಿ ಸಾಧಿಸಿಹ ಘಟಿಕಾಪಾದುಕಾಸಿದ್ಧಿಗಳ ಪಡೆದಿಹ ಸಾಧಕರು ಮೊದ[illegible] ಕಾಲಾಧೀನರಾಗಿಹರು (ಅಪ್ಯಾತ. ೨-೩೭). ೭. ಸಹಾಯ ಮಾಡುವಿಕೆ; ಸಹಕಾರವನ್ನು ಒದಗಿಸುವಿಕೆ : (೬). ೮. ಸಾಧಿಸಿದುದು ; ಸಿದ್ಧಿ : ಶಪನಪ್ರವೀಣರು — ಈ ಮೊದಲಾದವರು ತಂತಮ್ಮ ವಿದ್ಯಾಪರಿಶ್ರಮದ ಕಲಾ ಪರಿಣತಿಯ ಸಾಧಕಗಳಿಂದ ಆಸ್ಥಾಯಿಕೆಯ ಮನೋರಂಜನವನ್ನು ಸಿದ್ಧಿಗೊಳ್ಳತೊಡಗುವರು (ಬೆಟ್ಟಳ. ೩೨-೧೧). ೯. ರಸವಿದ್ಯೆಯನ್ನು ಬಲ್ಲವನು: ಬಳಸ್ಯಂಯೆಂಬ ಸಾಧಕನಿಳೆಯಂ ಪೊಸಮೂಸೆ ಮಾಡಿ ಶಶಿಮಂಡಲಮಂ ಗುಳಿಗೆಯಿಡೆ ತಿಮಿರಕಾಳಿ ತಿಳಿದಂತೆ ಜಲಕ್ಯನಾಯ್ತು ಪೊಸವೆಳ್ದಿಂಗಳ್ (ಆನಂವ. ೭-೮೫). ೧೦. ಅಂಗಸಾಧನೆ ; ವ್ಯಾಯಾಮ: ಕೆಲವು ಅಪ್ರರು ಅರಸುಮಕ್ಕಳು ಱಳಿಗದವರು ಸಹ ಗರುಡಿಗೆ ಬಂದು ಹವಣಾಗಿ ಸಾಧಕವಂ ಮಾಡಿ (ವಚಕಾ. ೨); ಈ ಐದು ಜನರೂ ಒಂದೇ ಗರಡಿಯಲ್ಲಿ ಸಾಧಕವನ್ನು ಮಾಡಿದರು (ನೀತಿಚಂ. XII, ೪). ೧೧. ಶಸ್ತ್ರಗಳ ಪ್ರಯೋಗದ ರೀತಿ,-- ಕ್ರಮ: ಆ ಕುಮಾರರು . . . ತಿರುಗುಚಕ್ರ ಗಂಡುಗೊಡಲಿ ಮೊದಲಾದ ಸಾಧಕಗಳನು ಕಲಿತು . . . ಆ ಗುರುಗಳಿಗೆ ಮನಸ್ಸಂತೋಷಮಾಡಿದರು (ವಚಕಾ. ೪). ೧೨. ಸಾಧನವಾದುದು; ಸಲಕರಣೆ; ಉಪಕರಣ : ತ್ರಿಜಗತ್ಸಾರಂ ಭಾವಿಪೊಡೆ ಜೋಯಿಸಂ ಸಾರಮಲ್ಲಿ ಜಾತಕಮದು ವಿಶ್ವಜನಾನಂದಿತಜೋತಿಷವು ಜಾತಕಮೆನಿಪ್ಪ ಸೂಕ್ತಿ ಸಾಧಕಮದಱಿಂ (ಜಾತಕ. ೧-೧೫). ೧೩. ನಂಜಿಕೊಳ್ಳುವ ಸಾಧನ; ವ್ಯಂಜನಪದಾರ್ಥ; ಮೇಲೋಗರ : ಇಂದು ನಿಮ್ಮ ಮನೆಯಲ್ಲಿ ಏನು ಸಾಧಕ ಮಾಡಿದ್ದಿರಿ? (ಡೂಢಿ). ೧೪. [ಜೈನ] ಸಮಾಧಿಮರಣವ್ರತ; ಸಲ್ಲೇಖನ : ಸಾಧಕಮಂಬುದು ಜೀವಿತಾಂತ್ಯದೊಳು ದೇಹಾಹಾರತ್ಯಾಗಂಗಳ್ಗಂ ಪರಮಧ್ಯಾನ ಶುದ್ಧಿಯಿಂ ಲೋಕಾಗ್ರದೊಳು ಮತಿಯನಿಡುವುದು (ಜಾವುಂರಾ. ೨೨೭).

ಸಾಧಕಬಾಧಕ = ಅನುಕೂಲ ಮತ್ತು ಪ್ರತಿಕೂಲ : ಊಹೆಯು ಎಲ್ಲ ವಿಧದಲ್ಲೂ ಸರಿಯಾಗುವುದೇ ಎಂದು ಅದರ ಸಾಧಕಬಾಧಕಗಳನ್ನು ಪರಿಶೀಲಿಸಬೇಕು (ವಿಜ್ಞಾ. ೫೪೦); ಸಾಧಕಬಾಧಕಗಳನ್ನು ಮುಂದಿಟ್ಟು ಸ್ಪಷ್ಟವಾಗಿ ಚರ್ಚಿಸಿದರು (ಓಂಕಾಮು. ೩೫). [ಸಂ.]

ಸಾಧಕಪ್ರತ್ಯಯ (ನಾ). [ವ್ಯಾಕ] ಪ್ರಕೃತಿಯನ್ನು ಪದವನ್ನಾಗಿ ಸಾಧಿಸುವ ಪ್ರತ್ಯಯ; ಸಾಧಿತಪ್ರತ್ಯಯ : ಹಳಗನ್ನಡಶಬ್ದಗಳ ಮೂಲರೂಪದ ವರ್ಣಗಳು ಹೊಸಗನ್ನಡದಲ್ಲಿ ಬದಲಾದದ್ದಲ್ಲದೆ, ವ್ಯಾಕರಣದಲ್ಲಿ ಸಹ, ವಿಶೇಷವಾಗಿ ಸಾಧಕಪ್ರತ್ಯಯಗಳಲ್ಲಿಯೂ, ವಿಭಕ್ತಿಪ್ರತ್ಯಯಗಳಲ್ಲಿಯೂ ಬಹಳ ಭೇದ ಉಂಟಾಗಿದೆ (ಮುಖಬಾಬ. ೫-೨೪೨). [ಸಂ.]

ಸಾಧಕಿ (ನಾ). ೧. ಸಾಧನೆಯನ್ನು ಮಾಡುವವಳು. ೨. ವಾಮಾಚಾರದ ಸಾಧನೆಯನ್ನು ಮಾಡುವ ಸ್ತ್ರೀ; ಕಾಪಾಲಿಕಪಂಥದ ಸ್ತ್ರೀ : ಪಾವುಗೆ ಪಂಚಮಸ್ಮನಂ ಚಿತ್ರದ ಕೋಲಿವೊಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೫೬೩). [ಸಾಧಕ + - ಇ]

ಸಾಧನ (ನಾ). ೧. ಗುರಿಮುಟ್ಟುವ ಪ್ರಯತ್ನ; ಸಿದ್ಧಿಯನ್ನು ಪಡೆಯುವ ಯತ್ನ : ನಮ್ಮೆಲ್ಲ ಬಗೆಯಾದ ಪ್ರವೃತ್ತಿ, ನಿವೃತ್ತಿ, ಸಾಧನ, ಸಿದ್ಧಿಕರ್ಮ ಮೊದಲಾದವುಗಳಲ್ಲಿ . . . ಪರಮಾತ್ಮನ ಕೈವಾಡವು ಅವರವರ ಕರ್ಮಕ್ಕೆ ತಕ್ಕಂತೆ ಉಂಟೆಂಬ ರಹಸ್ಯಪ್ರಮೇಯದ ವಿಮರ್ಶೆಯನ್ನು ಕೂಲಂಕಷವಾಗಿ ಮಾಡಿರುವುದು ದ್ವೈತಸಿದ್ಧಾಂತದ ಒಂದು ದೊಡ್ಡವೈಶಿಷ್ಟ್ಯ (ಭಾರದ. ೨೮೦). ೨.(ಕಾರ್ಯವನ್ನು) ಸಾಧಿಸುವಿಕೆ ;ಗುರಿಮುಟ್ಟುವಿಕೆ: 'ಕಾರ್ಯಸಾಧನ' ಪರಾ. ೩. ಪೂರೈಸುವಿಕೆ; ನೆರವೇರಿಸುವಿಕೆ. ೪. ಪಡೆಯುವಿಕೆ; ಗಳಿಸುವಿಕೆ : (೬). ೫. (ಆಯುಧ, ಯಂತ್ರ ಮೊದಲಾದ) ಸಾಮಗ್ರಿ; ಉಪಕರಣ; ಸಲಕರಣೆ : ಕೊಡೆ ತಲೆ ತಳ್ತ ಸೀಗುರಿ ಕರೀಂದ್ರಘಟಾಳಿ . . . ಎಗಡಿಸದ ಗಾಡಿಕಾರ್ತಿಯರ ಬರ್ಪ ನಿಯೋಗಿಗಳಾದ ಚೆಲ್ವನಾವೆಡೆಯೊಳಮಿಯೆ ಕಣ್ಗೊಸಗೆಯಂ ಪಡೆದತ್ತು ಸಮಸ್ತಸಾಧನಂ (ಆದಿಪು. ೪-೯೨); ಸಾರಥಿಯ ಬಲುಹಿಲ್ಲದಿರ್ದಡೆ ಭೂರಿಸಾಧನವಿವು ನಿರರ್ಥಕವು (ಕುವ್ಯಾಕ. ೫-೭); ಒಲ್ಲನೋ ಹರಿ ಕೊಳ್ಳನೋ ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ (ಪುರಂದ. ೨-೭೯ ಅನುಪಲ್ಲವಿ). ೬. (ಕಾರ್ಯಸಾಧಕವಾದ) ಕಾರಣ; ಹೇತು; ನಿಮಿತ್ತ : ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ (ಸೋಮೇಶ. ೮). ೭. ಸೈನ್ಯ; ದಳ : ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ

. . . ಇಂತುದಾತ್ತನಾರಾಯಣನಾದ ದೇವನಮಗೀಗರಿಕೇಸರಿ ಸೌಖ್ಯಕೋಟಿಯಂ (ಪಂಪಭಾ. ೧-೧); ಕಜೆಯೆ ಬಲ್ಸರಿಯೆಂಬಿನಮಂಬನಂಬು ನಟ್ಟುದೆ ನೆಲಸಾಗೆ ಕೂಡೆ ಗತಜೀವಿತಮಾಯ್ತು ಕಿರಾತಸಾಧನಂ[ಪಾಠಾಂ. ಸಂಕುಲಂ] (ಪಂಂರಾಮಾ. ೪-೬೩); ಸಕಲರಿಪುಸಾಧನವನೊಬ್ಬನೆ ಕರ್ಣ ಗೆಲಿದನು (ಕುವ್ಯಾಕ. ೧೧-೬). ೮. ಸೈನ್ಯದ ಭಾಗ; ಸೇನೆಯ ತುಕಡಿ : ''ಸಾಧನಮನೆ ಸೇನಾಂಗಂ'' (ವಸ್ತುಕೋ. ೧೩೪-೯೮). ೯. ಸಹಾಯ; ನೆರವು : (೫). ೧೦. ಮಂತ್ರತಂತ್ರಗಳಿಂದ ಜಯಿಸುವುದು, – ಹತೋಟಿಗೆ ತೆಗೆದುಕೊಳ್ಳುವುದು. ೧೧. ಅಭ್ಯಾಸ; ಸಾಧನೆ ಮಾಡುವಿಕೆ: ಸಂಗೀತದ ಸಾಧನ, ನಿರೂಪಣ, ಪೋಷಣ ಮಿಗಿಲಾಗಿ ಅಭಿರುಚಿ ಮತ್ತು ಪ್ರವೃತ್ತಿಗಳಲ್ಲಿ ಆಗುವ ಬದಲಾವಣೆಗಳು ಗಮನಾರ್ಹ (ಭಾರದ. ೫೪೫). ೧೨. ಕೊಲ್ಲುವಿಕೆ; ವಧಿಸುವಿಕೆ. ೧೩. ಹೋಗುವಿಕೆ ; ತೆರಳುವಿಕೆ. ೧೪. ಹಿಂದಿನಿಂದ ಹೋಗುವಿಕೆ; ಹಿಂಬಾಲಿಸುವಿಕೆ. ೧೫. ಔಷಧಿ; ಮದ್ದು. ೧೬. ಪುರುಷನ ಜನನೇಂದ್ರಿಯ; ಶಿಶ್ನ. ೧೭. ಧನ; ಐಶ್ವರ್ಯ. ೧೮. ಸ್ನೇಹ; ಗೆಳೆತನ. ೧೯. ಲಾಭ; ಪ್ರಯೋಜನ. ೨೦. ಯುದ್ಧ; ಕದನ. ೨೧. ಶವವನ್ನು ಸುಡುವಿಕೆ; ಶವದಹನ. ೨೨. ಕಾಯ, ವಚನ ಮತ್ತು ಮನಸ್ಸು ಎಂಬ ತ್ರಿಕರಣಗಳು; ಕರಣತ್ರಯ : ''ಸಾಧನಂ ತಾಂ ಕರಣಂ'' (ವಸ್ತುಕೋ. ೧೩೪-೯೮). ೨೩. ಹಸು ಮೊದಲಾದ ಪ್ರಾಣಿಗಳ ಕೆಚ್ಚಲು. ೨೪. ಪ್ರಮಾಣ; ಸಾಕ್ಷ್ಯ; ಸಕಾರಣವಾಗಿ ಸಾಧಿಸುವಿಕೆ. ೨೫. ಹಿಂಸೆ; ತೊಂದರೆ : (೫). ೨೬. ಪೂಜೆ; ಉಪಾಸನೆ. ೨೭. ಲೋಹಮಾರಣ; ಲೋಹಪುಟ. ೨೮. ಕೀರ್ತಿವಂತ; ಯಶೋವಂತ: (೫). ೨೯. ದಿಕ್ಕು; ದಿಸೆ: (೫). ೩೦. ಸಹಾಯಕವ್ಯಕ್ತಿ : (೫). ೩೧. ಅನ್ನ ಮೊದಲಾದ ಆಹಾರಗಳ ರುಚಿ; ಷಡ್ರಸ : (೫). ೩೨. ದಾಖಿಲೆ; ದಸ್ತಾವೇಜು : ಭೂಕಾಣಿಯನು ದೇವರಿಗೆ ಬಿಟ ಸಾಧನ (ಎಕ. X (೬). ಬೌಂಗ್. ೧೧೨-೧: 14ನೆಯ ಶತ); ಇಂಗ್ಲೀಜರೊಡ್ಡಸರಕಾರಕ್ಕೆ ಅರಿಕೆ ಆಗುವ ಬಗ್ಗೆಯೂ, ಸಮಸ್ತ ಜನರು ತಿಳಿಯುವ ಬಗ್ಗೆಯೂ, ಈ ಸಾಧನದಲ್ಲಿ ಬರಸಿ, ಕೊಡಗಿನ ರಾಜಸ್ಥಾನದಲ್ಲಿ ಇಟ್ಟು ಇದ (ರಾಜೇಂದ್ರ. ೧೧೦). ೩೩. [ನ್ಯಾಯ] ತರ್ಕಸರಣಿ ಅಥವಾ ನ್ಯಾಯ ಸರಣಿಯ ಮಧ್ಯಪದ; ಸಿದ್ಧಾಂತಸಮರ್ಥನೆಯ ಕಾರಣ : ಅದು ಸಾಧನ ದೂಷಣ ಪ್ರಯೋಗಾನ್ಯಥಾನುಪಪತ್ತಿಯಿಂ ಬಹಿರರ್ಥಸಿದ್ಧಿಯಕ್ಕುಮದಱಿಂ ವಿಜ್ಞಾನ ಮಾತ್ರಮೆ ತತ್ತ್ವಮಾತ್ಮಾದಿ ತತ್ತ್ವಮಿಲ್ಲೆಂಬ ನಿನ್ನ ಮಾತು ಛಿನ್ನಭಾಜನಸಮಾನಂ (ಅದಿಪು. ೨-೧೦ ವ). ೩೪. ಸಾಲದ ಹಣ; ದಂಡ ಮುಂತಾದುವುಗಳನ್ನು ಕೊಡಲು, ಆಸ್ತಿಯನ್ನು ಸ್ವಾಧೀನಪಡಿಸಲು, ಮಾಡುವ ಬಲಾತ್ಕಾರ, – ಜುಲುಮೆ. ''ವಸುವಿನೊಳು ಪೀಡೆಯೊಳು ಕಾರ್ಯದೊಳು ಲಿಂಗವರ್ಚಸದೊಳು ಕುಠಾರಾದಿಯೊಳು ಕರಣದೊಳು ಗೃಹಕ್ಕೆಸೆವ ಮುಟ್ಟುಗಳೊಳಿನ್ನಾದಿ ರುಚಿಕಾರದೊಳು ಸಾಧನಾಖ್ಯಮೆನಿಕ್ಕುಂ'' (ಮಂಗರಾ. ೧೪೭-೩೭); ''ವಸುವಿನೊಳಾಶೆಯೊಳ್ ಪಡೆಯೊಳಿಂಕ ದೊಳಾಯತದಲ್ಲಿ ಲಿಂಗವರ್ಚಸದೊಳಿಗನ್ನಮುಖ್ಯರುಚಿಸಂಚಯದೊಳ್ ಕರಣತ್ರಯಂ ಗಳೊಳ್ ಜಸಯುತನೊಳ್ ಗೃಹೋಪಕರಣಂಗಳೊಳುತ್ತಮಕಾರ್ಯದಲ್ಲಿ ವರ್ತಿಸುವದು ಸಾಧನಾಹ್ವಯ'' (ಸಾನಾರ. ೧೧೫). [ಸಂ.]

ಸಾಧನಂಗುಡು (ಕ್ರಿ). ಅವಶ್ಯಕವಾದ ವಸ್ತುಗಳನ್ನು ಕೊಡು; ಅಗತ್ಯವಾದ ಸಲಕರಣೆಗಳನ್ನು ಒದಗಿಸು : ಶಿವಾರ್ಚನೆಗರ್ಘ್ಯಜಲಂಗಳೀವ ನೀಡಾಗದೆ ಸಾಧನಂಗುಡುವ . . . ತಾಪಸೇಂದ್ರರ ಕುಮಾರಿಯರೊಪ್ಪುಗುಮಲ್ಲಿ ಸಂತತಂ (ಶಬಶಂ. ೨-೬೪). [ಸಾಧನ + ಕುಡು$_{1}$(< ಕೊಡು$_{1}$)]

ಸಾಧನಗಾತಿ (ನಾ). ಅಂಗಸಾಧನೆ ಮಾಡುವವಳು :ಆ ಸಾಧನಗಾತಿಯು ಕಾಮನ ಗರಡಿಯೊಳ್ . . . ಕಣ್ಣುಗಳಂ ಮುಚ್ಚಿ (ಸೌಗಂಧಿ. ೫೫೮-೧೫). [ಸಾಧನ + - ಕಾತಿ]

ಸಾಧನಗೈ (ಕ್ರಿ). ಅಂಗಸಾಧನೆ ಮಾಡು; ಕಸರತ್ತುಮಾಡು : ಗರಡಿಯೊಳಗೆ ಸಾಧನಗೈದು ದೇಹದೊಳಿರುವ ಜಲವ ಮೇಲೆ ಧರಿಸಿ ಮಿಱುವ ಕುಂಕುಮವಸನದ ಕೈ ಸಾಣೆಯ ದೊರಗಳ ಕುವರರೈದಿಹರು (ಕಂಸವ. ೬-೧೭). [ಸಾಧನ + ಗೈ (< ಕೆಯ್$_{1}$)]

ಸಾಧನಚತುಷ್ಟಯ (ನಾ). [ವೇದಾಂತ] ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರ ಫಲ ಭೋಗವಿರಾಗ, ಶಮಾದಿಷಟ್ಕಸಂಪತ್ತಿ ಮತ್ತು ಮುಮುಕ್ಷುತ್ವಗಳೆಂಬ ನಾಲ್ಕು ಬಗೆಯ ಮೋಕ್ಷಸಾಧಕವಾದ ಹೇತುಗಳು : ಸಾಧನಚತುಷ್ಟಯವ ವೇದಿಸುತೆ ತತ್ತ್ವಮಸ್ಯಾದಿ ವಾಕ್ಯಂಗಳಿಂ ಬೋಧಿಸುತೆ (ಮನೋವಿ. ೧-೩೧); ಶಮಾದಿಷಟ್ಕವ ಪಡೆದು ಮೋಕ್ಷವನು ಅರ್ಥಿಸುತ ಸಾಧನಚತುಷ್ಟಯ ಸತ್ಸಂಪತ್ತಿರ್ದು ನಿರ್ಮಲ ಚಿತ್ತನಾದುತ್ತಮಗೆ ಪೇಳೀ ಅನುಭವಾಮೃತವ (ಅಮೃತ. ೩-೩). [ಸಂ.]

ಸಾಧನಸಮಗ್ರ (ನಾ). ಆಯುಧಗಳ ಬಳಕೆಯಲ್ಲಿ ಪ್ರಾವೀಣ್ಯವನ್ನು ಪಡೆದವನು; ಶಸ್ತ್ರವಿದ್ಯಾಪ್ರವೀಣ : ಮುಮ್ಮೊನೆಯ ಬೋಳಿಯ ಸರಳಿನಲಿ ಸಾಧನಸಮಗ್ರರು ಶಿಶುವನೆಚ್ಚರು ದಿಸೆದಿಸೆಗೆ ಕವಿದು (ಕುವ್ಯಾಪ್ರೋ. ೬-೧೧). [ಸಂ.]

ಸಾಧನಸಿದ್ಧಿ (ನಾ). ಸಾಧನೆಯ ಪರಿಪೂರ್ಣತೆ, — ಸಫಲತೆ : ಮನಸಿಜಮಂತ್ರ ದೇವತೆಯರಂಗನೆಯರ್ ತದುದಾರಸಾರಸಾಧನೆಗನುಸಾರಿಯಪ್ಪ ಸಕಲೀಕರಣಂಗಳ ಪಾವುವನ್ನ ನಚ್ಚನ ಸೊಬಗೆಂತುಮಾಗೆ ತನಗೆನ್ನದ ನಿಶ್ಚಯಮಪ್ಪ ದಾನಮೆಂಬಿನಿತಿಲ್ಲ ದೊಂದೆ ಗಣಿಕಾಜನಸಾಧನಸಿದ್ಧಿಯಕ್ಕುಮೇ (ಶಾಂತಿಪು. ೮-೯೯). [ಸಂ.]

ಸಾಧನಿ (ನಾ). ನಂಜಿಕೊಳ್ಳುವ ಸಾಧನ, — ವ್ಯಂಜನ : ಮೇಲೆ ಸಾಧನಿಗೆ ಚಟ್ನಿಯೋ ಬೇಳಿಹುಳಿಯೋ ಇದ್ದರೂ ಸರಿಯೇ (ವಿಜಯ. ೧೦೬). [< ಸಾಧನ]

ಸಾಧನೆ (ನೌ). ೧. (ಅಧ್ಯಾತ್ಮ, ಸಂಗೀತ ಇತ್ಯಾದಿಗಳ ಸಿದ್ಧಿಗಾಗಿ ಮಾಡುವ) ಪರಿಶ್ರಮ; ಅಭ್ಯಾಸ : ಸಾಧಕಗೆ ತಿಳಿಯುವುದು ತುದಿಯಲ್ಲಿ ಸಾಧನೆಯೆ ಸಿದ್ಧಿಎಂದು (ಪಾಂಚಜ. ೪೫-೧೨); ಕೊನೆಗೆ ಒಂದು ದಿನ ಭಟ್ಟರಿಗೆ ಚಳಿಜ್ವರ ಬಂದು ಸಾಧನೆಗೆ ಸ್ವಲ್ಪ ವಿಚ್ಛಿತ್ತಿ ಬಂದಿತ್ತು (ರಾಮಾಸ. ೯೩). ೨. ಸಾಧಿಸಿದುದು; ಸಿದ್ಧಿ : ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸುವುದು (ಬಸವ. ೬೧೩). ೩. ಅಂಗಸಾಧನೆ; ವ್ಯಾಯಾಮ : 'ಗರುಡಿಸಾಧನೆ' ಪರಾ. ೪. ಸ್ವಾಧೀನ; ವಶ : 'ಸಾಧನೆವೋಗು' ಪರಾ. ೫. = ಸಾಧನಚತುಷ್ಟಯ : ಸಾಧನೆಗಳಾವಾವೆಂದರೆ ನಿತ್ಯಾನಿತ್ಯ ವಸ್ತು ವಿವೇಕವೆಂದು . . . ಮುಮುಕ್ಷುತ್ವವೆಂದು ನಾಲ್ಕುವಿಧಮಾಗಿಪ್ಪುದು (ಸಾನಾಗು. ೧೯-೨). ೬. [ಗಣಿತ] ಉತ್ತರರೂಪವಾದ ಫಲಿತಾಂಶ, ಎಣಿಕೆ ಇತ್ಯಾದಿಗಳ ಯಥಾರ್ಥತೆಯನ್ನು ಪರಿಶೀಲನೆಮಾಡುವ ಕ್ರಮಬದ್ಧವಾದ ವಿವರಣೆ, — ಗಣಿತಕ್ರಿಯೆ : ಈ ದೇಶಗಳಲ್ಲೆಲ್ಲಾ ತೀವ್ರವಾದ ತರ್ಕವನ್ನವಲಂಬಿಸಿದ ಸಾಧನೆ(Proof)ಯ ಕಡೆಗೆ ಅಷ್ಟಾಗಿ ಪ್ರಾಮುಖ್ಯತೆಯು ತೋರಿರಲಿಲ್ಲ (ಗಣಚ. ೧೮).

ಸಾಧನೆ ಮಾಡು = ೧. ಅಭ್ಯಾಸ ಮಾಡು; ಅಭ್ಯಾಸ ನಡೆಸು : ಬೆಳಿಗ್ಗೆ ಹೊತ್ತಿಗೆ ಮುಂಚೆ ಎದ್ದು ಕತ್ತಿಸವರೆಗೂ ತಣ್ಣೀರಿನಲ್ಲಿ ಮುಳುಗಿ ಅಕಾರ ಉಕಾರ ಸಾಧನೆ ಮಾಡಿದರೆ ನಿಮಗೆ ಪಲುಕು ಬರುತ್ತೆ (ರಾಮಾಸ. ೯೩). ೨. ವ್ಯಾಯಾಮ ಮಾಡು; ಕಸರತ್ತು ನಡೆಸು : ಅವನು ಗರುಡಿಮನೆಯಲ್ಲಿ ನಿತ್ಯವೂ ಸಾಧನೆ ಮಾಡುತ್ತಾನೆ (ರೂಢಿ). ೩. (ಯಾವುದೇ ವಸ್ತುವನ್ನು) ಹಿಂತಿರುಗಿಸಲು ಒತ್ತಾಯಪಡಿಸು; ವಸೂಲುಮಾಡು : (೫). ೪. ಪ್ರಯತ್ನದಿಂದ ಪಡೆ; ಪರಿಶ್ರಮದಿಂದ ಗಳಿಸು; ಸಾಧಿಸು : ನೀನು ಅವರ ಮೇಲೆ ದ್ವೇಷಕಟ್ಟಿಕೊಂಡರೆ ಏನು ಸಾಧನೆ ಮಾಡಿದಂತಾಯಿತು? (ರೂಢಿ). ೫. ರೂಢಿಸು; ಕಾರ್ಯರೂಪಕ್ಕೆ ತರು : ಹಾವು ಹನ್ನೆರಡುವರ್ಷವಾದರೂ ದ್ವೇಷವನ್ನು ಸಾಧನೆ ಮಾಡುತ್ತದೆ (ರೂಢಿ). [ಸಂ. ಸಾಧನ]

ಸಾಧನೆಗೆಯ್ಯು, ಸಾಧನೆಗೈ (ಕ್ರಿ). ೧. ಅಂಗಸಾಧನೆ ಮಾಡು ; ಕಸರತ್ತುಮಾಡು : ಪೊಡವಟ್ಟು ಬೇಡಿಕೊಂಡೆದ್ದು ಸಾಧನೆಗೆಯ್ಯತೊಡಗಿದ ಜಗಜಟ್ಟಿದೈತ್ಯ (ಮೋಹತ. ೧೧-೬೫). **ಸಾಧನೆಗೈ** : ೨. ಪರಿಶ್ರಮ ಮಾಡು; ಅಭ್ಯಾಸ ಮಾಡು : ಸಾಧನೆಗೈದರೆ ಸಹನೆಯ ನೀಗದೆ ಬೆಳಗದೆ ನಿನ್ನಾತ್ಮತೇಜ (ಇಂದಾವ. ೨೧೫-೬೨).

[ಸಾಧನೆ + ಗೆಯ್ಯು(< ಕೆಯ್$_{1}$)]

ಸಾಧನೆಗೈ 'ಸಾಧನೆಗೆಯ್ಯು' ನೋ.

ಸಾಧನೆವೋಗು (ಕ್ರಿ). ಸ್ವಾಧೀನವಾಗು; ವಶವಾಗು : ಬುಧಕೋಟಿಗೆ ಕೊಟ್ಟ ನರ್ಥಮಂ ಸಾಧನೆವೋಯ್ತು ಸರ್ವನಿಧಿಯೆಂಬಿನೆಗಂ ದೊರೆ ಯಾರ್ ಕುಮಾರ ಲಕ್ಷ್ಮೀಧರ ದೇವನೊಳ್ ಪತಿಹಿತಕ್ರಮದೊಳ್ ಪಡೆದೀವ ದಾನದೊಳು (ಎಕ. V, ಬೇಲೂರು. ೧೧೨- ೫೮; ಸು. 1220). [ಸಾಧನೆ + ವೋಗು$_{1}$ (< ವೋ$_{1}$)]

ಸಾಧರ್ಮ್ಯ (ನಾ). ೧. ಸಹಾನುವರ್ತನೆ; ಸಾಹಚರ್ಯ : ಬಸವಣ್ಣನವರು

ಇಲ್ಲಿ ಸಾಧರ್ಮ್ಯವನ್ನು ಸೂಚಿಸುವರೋ ಇಲ್ಲವೇ ತಾದಾತ್ಮ್ಯವನ್ನು ಸೂಚಿಸುವರೋ ಎಂಬುದನ್ನು ಗುರುತಿಸಬೇಕು. ಇಲ್ಲಿ ಸಾಧರ್ಮ್ಯದ ಉದಾಹರಣೆಯನ್ನು ಕೊಟ್ಟಿದ್ದರೂ, ಬಸವಣ್ಣನವರು ಬಹುತರವಾಗಿ ತಾದಾತ್ಮ್ಯವನ್ನೇ ಸೂಚಿಸಿರಬಹುದು ಎಂದೆನಿಸುವುದು (ಪರಪ. ೧೩೦). ೨. ಕೂಡುಒಡೆತನ; ಸಹಸ್ವಾಮ್ಯ. ೩. ಒಂದೇ ರೀತಿಯ ನಡವಳಿಕೆ; ಸಮಾನಗುಣಧರ್ಮ. ೪. ಒಂದೇ ಮತಧರ್ಮಕ್ಕೆ ಸೇರಿರುವಿಕೆ; ಸಮಾನಧರ್ಮವನ್ನು ಹೊಂದಿರುವಿಕೆ. [ಸಂ.]

ಸಾಧವ್ಯ (ನಾ). ಮುತ್ತೈದೆತನ; ಸುಮಂಗಲಿತನ : ಅಗಲಂಚಿನ ಸೀರೆಯ ಬದಲು ಗೀರಂಚಿನ ಸೀರೆ ಉಟ್ಟು, ಸೀರಾದ ಒಂದೊಂದು ಬಳೆಯನ್ನು ತೊಟ್ಟು, ಸಾಧವ್ಯವನ್ನು ಕಾಪಾಡುವುದು (ಎರಸ. ೯೯). [ಸಂ.]

ಸಾಧಾರ (ನಾ). ೧. ಸಮರ್ಥನೆ ಮಾಡುವ ಪ್ರಮಾಣ; ಸಾಧಿಸುವ ವಸ್ತು : ಥಾಮಸ್‌ಬರೊ... ಧ್ವನಿಪರಿವರ್ತನೆಯಿಂದ ಮೊದಲುಗೊಂಡು ಅರ್ಥವ್ಯತ್ಯಾಸದವರೆಗೆ ಸಾಧಾರಗಳಿಂದ ವಿವರವಾಗಿ ಪರಿಶೀಲಿಸಿದ್ದಾರೆ (ದ್ರಾವಿವಿ. ೪೩). ೨. [ವೀಶೈ] ಒಂದು ಬಗೆಯ ದೀಕ್ಷೆ : ಈ ನಾಲ್ಕನಾಬಾಲವೃದ್ಧರ್ಗೆ ಬೋಧಿಪುದು ತಾನೇಯದಧಿಕಾರ ವೈಯ ಸಾಧಾರವೆಂಬಾ ದೀಕ್ಷೆ ಬಹುವಿಧವಲಾ (ವೀಶೈಪು. ೬-೬-೬೪). [ಸಂ.]

ಸಾಧಾರಣ (ಗು). ೧. ಅನೇಕರಿಗೆ ಅಥವಾ ಎಲ್ಲರಿಗೆ, ಎಲ್ಲಕ್ಕೆ ಅನ್ವಯಿಸುವ, - ಸಂಬಂಧಿಸುವ; ಸಾರ್ವತ್ರಿಕವಾದ : ಈ ಪ್ರಾಂತಗಳೊಳಗಿಂದ ಮುಂಬಯಿಗೆ ಮಾರಾಟಕ್ಕೆ ಬರುವ ಮಾಲಿನ ಬಗೆ ಸಾಧಾರಣಮಾಹಿತಿ (ಮುಂಬವ್ಯಾ. ೨೪ ಪ್ರಸ್ತಾವನೆ). ೨. ವಿಶೇಷವಲ್ಲದ; ಸಾಮಾನ್ಯವಾದ. ೩. ಸಮಾನವಾದ; ಒಂದೇ ರೀತಿಯ. ೪. ಮಿಶ್ರವಾದ; ಬೆರೆತ. (ನಾ). ೫. ಅನೇಕರಿಗೆ ಅಥವಾ ಎಲ್ಲರಿಗೆ, ಎಲ್ಲಕ್ಕೆ ಅನ್ವಯಿಸುವಂತಹುದು; ಸಾರ್ವತ್ರಿಕವಾದುದು. ೬. ಎಲ್ಲರಿಗೂ ಅನ್ವಯಿಸುವ ಸಾಮಾನ್ಯವಾದ ನಿಯಮ; ಸಾರ್ವತ್ರಿಕವಾದ ಕಟ್ಟಳೆ. ೭. ಸಾಮಾನ್ಯವಾದುದು; ವಿಶೇಷವಲ್ಲದುದು. ೮. ನಿರ್ದಿಷ್ಟವಾದ ಗುಣಧರ್ಮ ; ನಿಶ್ಚಿತವಾದ ಶೀಲಸ್ವಭಾವ. ೯. ಅರುವತ್ತುಸಂವತ್ಸರಗಳಲ್ಲಿ ನಲವತ್ತನಾಲ್ಕನೆಯ ಸಂವತ್ಸರ : ಮತ್ತಮಾ ವರ್ಷವೇ ಪ್ರಭವ ವಿಭವ . . . ಸೌಮ್ಯ ಸಾಧಾರಣ . . . ಕ್ರೋಧನ ಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೨೬೩). ೧೦. ಮೂರು ಬಗೆಯ ದೇಶಭೇದಗಳಲ್ಲಿ ಒಂದು; ಜಲವಸತಿಯಿರುವ ಪ್ರದೇಶ; ಜವುಗುನೆಲ : ದೇವಮಾತೃಕ ಸಾಧಾರಣಾನೂಪ ಜಾಂಗಲಭೇದಂಗಳುಮಂ (ಆದಿಪು. ೮-೬೩ ವ); ಜಾಂಗಲ, ಅನೂಪ, ಸಾಧಾರಣವೆಂದು ದೇಶ ಮೂಱುತೆಱ (ವೃದ್ಧಸಾ. I, ೧೦); ದೇಶಭೇದವು ಜಾಂಗಲ, ಅನೂಪ, ಸಾಧಾರಣವೆಂದು ಮೂರು ತೆರನಾಗಿರುವುದು (ಸಕವ್ಯ. ೧೫). ೧೧. [ದ್ವೈತ] ಪರ ಮಾತ್ಮನ ಹತ್ತುಬಗೆಯ ವಿಭೂತಿರೂಪಗಳಲ್ಲಿ ಒಂದು: ಶ್ರೀತರುಣವಲ್ಲಭನ ಪರಮವಿಭೂತಿರೂಪವ ಕಂಡಕಂಡಲ್ಲೀ ತೆಱದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ ನೀತ ಸಾಧಾರಣ ವಿಶೇಷ ಸಜಾತಿ ನೈಜಾಹಿತವು ಸಹಜವಿಜಾತಿ ಖಂಡಾಖಂಡ ಬಗೆಗಳನಱಿತು ಬುಧರಿಂದ (ಹಸಾರ. ೫-೧). ೧೨. [ಜೈನ] ಹದಿನಾರುಬಗೆಯ ಕರ್ಮಪ್ರಕೃತಿಗಳಲ್ಲಿ ಒಂದು : ಪೂರ್ವೋಕ್ತವಿಧಾನದಿನಂತರ್ಮುಹೂರ್ತದಿಂ ನಿದ್ರಾನಿದ್ರಾ ಪ್ರಚಲಾಪ್ರಚಲಾ . . . ಸ್ಥಾವರ ಸಾಧಾರಣ ಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮಪ್ರಕೃತಿಗಳಂ ನಿಶ್ಶೇಷಂ ಕಿಡಿಸಿ (ಆದಿಪು. ೧೦-೧೪ ವ).

ಸಾಧಾರಣರ್ (ಬಹುವ) = ಸಾಮಾನ್ಯರಾದ ಜನ; ವಿಶಿಷ್ಟಗುಣಧರ್ಮ ಗಳನ್ನು ಹೊಂದಿರದವರು : ಸಾಧಾರಣರಿವರೆನಿಪ ವಿರೋಧಿಗಳುಮನುಱದೆ ನೆಗೞ್ಚುದನುಚಿತಂ (ಪಂರಾಮಾ. ೧೪-೮೨). [ಸಂ.]

ಸಾಧಾರಣದೇಶ (ನಾ). = ಸಾಧಾರಣ ೧೦: ಸಂಕರಲಕ್ಷಣ ಉಳ್ಳದು ಸಾಧಾರಣದೇಶವೆನಿಸಿಕೊಂಬುದು (ವೃದ್ಧಸಾ. I, ೧೦); ಈ ಎರಡು ಲಕ್ಷಣಗಳೂ ಕೂಡಿರುವ ಸಂಕರದೇಶವು ಸಾಧಾರಣದೇಶವೆನಿಸಿಕೊಂಬುದು ಸಂಕರರೋಗಗಳನ್ನುಂಟು ಮಾಡುವುದು (ಸಕವ್ಯ. ೧೫). [ಸಂ.]

ಸಾಧಾರಣಧರ್ಮ (ನಾ). ೧. ಎಲ್ಲರಿಗೂ ಸಮಾನವಾದ ಧರ್ಮ; ಸಾರ್ವತ್ರಿಕವಾದ ಕರ್ತವ್ಯ. ೨. ಸಾಮಾನ್ಯವಾದ ಗುಣ; ಸ್ವಾಭಾವಿಕವಾದ ಗುಣಧರ್ಮ : ಕೆಳಮುಖವಾಗಿ ಹರಿಯುವುದು ದ್ರವಪದಾರ್ಥಗಳ ಸಾಧಾರಣಧರ್ಮ (ರೂಢಿ). ೩. [ಕಾವ್ಯಮೀ] ಉಪಮೆಯ ಲಕ್ಷಣಗಳಲ್ಲಿ ಒಂದು; ಉಪಮಾನ ಮತ್ತು ಉಪಮೇಯಕ್ಕೆ ಇರುವ ಸಮಾನಾಂಶ : ಶಿಶುಗಳಲ್ಲಿರುವ ಹಾಗೆಯೇ ಗಿಳಿಗಳಲ್ಲಿಯೂ ಕಂಡುಬರುವ ಬಳಸುವುದು ಸುಳಿದಾಡುವುದು ಹಾಲು ಕುಡಿಯುವುದೇ ಮೊದಲಾದ ಸಾಧಾರಣಧರ್ಮಗಳೂ ಸ್ಪಷ್ಟವಾಗಿ ಉಕ್ತವಾಗಿರುವುದರಿಂದ ಈ ಹೋಲಿಕೆ ಪೂರ್ಣೋಪಮೆ (ಕೈಪಿಡಿ. ೨೫೬). [ಸಂ.]

ಸಾಧಾರಣೀಕರಣ (ನಾ). ೧. (ಬೇರೆಬೇರೆ ವಿಚಾರ ಮುಂತಾದುವನ್ನು ಒಂದು) ಸಾಮಾನ್ಯಸೂತ್ರಕ್ಕೆ ಅಳವಡಿಸುವಿಕೆ, — ಸಾರ್ವತ್ರಿಕಗೊಳಿಸುವಿಕೆ: ವಿಶಾಲಾರ್ಥದಲ್ಲಿ ವಿಜ್ಞಾನ ವಸ್ತುಸತ್ಯದಿಂದ ಸಾಧಾರಣೀಕರಣದತ್ತ, ಮತ್ತೆ ಅದರಿಂದ ಹೆಚ್ಚು ಹೆಚ್ಚು ವ್ಯಾಪಕವಾದ ಸಾಧಾರಣೀಕರಣಗಳತ್ತ ಮುಂಬರಿಯುತ್ತದೆ (ಸಾಹಿಪ್ರ. ೭೧). ೨. ವಿಶಿಷ್ಟವಾದದ್ದು ಸಾಧಾರಣವಾಗುವ ವಿಧಾನ; ವೈಶಿಷ್ಟ್ಯದಿಂದ ಕೂಡಿರುವುದು ಸಾಧಾರಣವಾಗುವ ಕ್ರಮ. ೩. [ಕಾವ್ಯಮೀ] ಭಾವವು ರಸವಾಗಿ ಸಹೃದಯನಲ್ಲಿ ಆಸ್ವಾದವಾಗುವ ವಿಧಾನ; ಕಾವ್ಯ ನಾಟಕಾದಿಗಳ ಪಾತ್ರ, ಸಂದರ್ಭಗಳೊಂದಿಗೆ ಸಹೃದಯನು ಏಕೀಭವಿಸು ವಿಕೆ,— ಒಂದಾಗುವಿಕೆ; ಪಾತ್ರಗಳ ಭಾವ, ಸುಖದುಃಖಾನುಭವಗಳು ಸಾರ್ವತ್ರಿಕಗೊಳ್ಳುವಿಕೆ : ಈ ಸಾಧಾರಣೀಕರಣದಿಂದ ಸೋತವನ ಮನಸ್ಸಿನ ಅವ್ಯಕ್ತವಾದ ನೋವು ನಮಗೆ ಪರಿಚಯವಾಗುತ್ತದೆ (ಅನುಕ. ೫೨); ಭಾರತೀಯಕಾವ್ಯ ಮೀಮಾಂಸೆಯಲ್ಲಿ ಬರುವ ಅಭಿನವಗುಪ್ತನ 'ಸಾಧಾರಣೀಕರಣ' ತತ್ವವನ್ನು ಬಹುಮಟ್ಟಿಗೆ ಆಶ್ಚರ್ಯಕರವಾಗಿ ಹೋಲುವ ಈ 'ಮಾನಸಿಕದೂರ' ಇನ್ನೂ ವಿಸ್ತಾರವಾದ ತುಲನಾತ್ಮಕಅಭ್ಯಾಸಕ್ಕೆ ಯೋಗ್ಯವಾಗಿದೆ (ಸೌಂದಸ. ೮೮). [ಸಂ.]

ಸಾಧಾರಣೀಕರಿಸು (ಕ್ರಿ). ಸಾಮಾನ್ಯಸೂತ್ರಕ್ಕೆ ಅಳವಡಿಸು; ಸಾರ್ವತ್ರಿಕಗೊಳಿಸು : ಇಲ್ಲಿ ಸಾಧಾರಣೀಕರಿಸಿ 'ವ್ಯಂಜನದ ಪಿಂದಣ ಲಘು' ಎಂದು ಹೇಳದೆ, "ಪದ್ಯಾರ್ಧದ ತುದಿಯ ವ್ಯಂಜನದ ಪಿಂದಣ ಲಘು" ಗುರುವಾಗುವುದೆಂದು ಹೇಳಿದೆ (ಸಂಶೋಧ. ೧೦೭); ವಿಷಯಗಳನ್ನು "ಸಾಧಾರಣೀಕರಿಸಿ" ನಾಟಕೀಯವನ್ನಾಗಿ ನಿರೂಪಿಸುವ ಕಾವ್ಯಗಳಲ್ಲಿ ಹೋಮರನ ಮಹಾಕಾವ್ಯಗಳು ಹೇಗೆ ಮೊದಲಿನವಾಗಿವೆಯೋ ಹಾಗೆಯೇ ಅವನ ವೈನೋದಿಕಕಾವ್ಯ . . . ಕೂಡ ಮೊದಲನೆಯದು (ಅರಿಕಾ. ೬೭).

[ಸಾಧಾರಣೀಕರಣ + - ಇಸ್ಸು]

ಸಾಧಾರಣೀಕೃತ (ನಾ). ಕಾವ್ಯ, ನಾಟಕಾದಿಗಳ ಪಾತ್ರ, ಸಂದರ್ಭ ಮುಂತಾದುವು ಸಹೃದಯನೊಂದಿಗೆ ಏಕೀಭವಿಸುವುದು, — ಸಾರ್ವತ್ರಿಕಗೊಳ್ಳುವುದು : ಭಟ್ಟನಾಯಕನು ಕಾವ್ಯದ ಶಬ್ದವ್ಯಾಪಾರದಿಂದ ವಿಭಾವಾನುಭಾವಗಳು ಸಾಧಾರಣೀಕೃತ ವಾಗುವುದರ ಜೊತೆಗೆ ಅದರಿಂದಲೇ ರಸವೂ ಭೋಗ್ಯವಾಗುವುದೆಂದು ಹೇಳುತ್ತಾನೆ (ಭಾರಮೀ. ೩೬೮). [ಸಂ.]

ಸಾಧಾರಣೆ (ನಾ). [ಕಾವ್ಯಮೀ] ನಾಯಿಕೆಯರ ಮೂರುಪ್ರಕಾರಗಳಲ್ಲಿ ಒಂದು; ವೇಶ್ಯೆ : 'ನಾಯಿಕೆಯರಲ್ಲಿ' ಸ್ವೀಯೆ, (ತನ್ನವಳು), 'ಅನ್ಯೆ' (ಇತರಳು), ಸಾಧಾರಣೆ (ವೇಶ್ಯೆ) ಎಂದು ಮೂರು ವಿಧ (ಕೈಪಿಡಿ. ೨೧೦). [ಸಂ. ಸಾಧಾರಣಾ]

ಸಾಧಿತ (ಗು). ೧. ಸಾಧಿಸಿದ; ಸಿದ್ಧಿಯನ್ನು ಪಡೆದ : ಸಾಧಿತಸಮ್ಯಗ್ದರ್ಶನಬೋಧ ಚರಿತ್ರಂಗಳೆಂಬ ಧರ್ಮಮಿದವ್ಯಾಬಾಧಂ (ಶಾಂತಿಪು. ೬-೪೫). ೨. ಮುಗಿಸಿದ ; ಪೂರೈಸಿದ. ೩. ಸಿದ್ಧಾಂತ ಮಾಡಿ ತೋರಿಸಿದ; ಸಮರ್ಥಿಸಿದ. ೪. ಪಡೆದ; ಗಳಿಸಿದ : ಸೌಜನ್ಯಕಂದಾಂಕುರಂ ಶ್ರೀವಿಜಯಂಗೆ ಹೇತಿವಿದಾರಿಣಿಯುಂ ಬಂಧ ವಿಮೋಚಿನಿಯುಮೆಂಬಿವೆರಡುಂ ವಿದ್ಯೆಗಳಂ ಕೊಟ್ಟು ಮತ್ತಂ ಸಾಧಿತಮಹಾವಿದ್ಯಂಮಾಡಿ (ಶಾಂತಿಪು. ೬-೩೭ವ); ಸಾಧಿತಪಂಚಧಾರೆಗಳೆನಿಪ್ಪ ಮನೋಜ್ಞತುರಂಗಮಂಗಳುದ್ಬೋಧಿತ ವಿಸ್ಮಯಾಭಿನವವೀಧಿಗಳೊಳ್ ಬಿಡದುಚ್ಚನೀಚಮಾರ್ಗಾಧಿಕವೇಗದಿಂದೆ ಪರಿಲಂಘಿಸುವಲ್ಲಿ (ಬಾಧಪು. ೮-೧೨). ೫. ಹುಟ್ಟಿದ; ನಿಷ್ಪನ್ನವಾದ: 'ಸಾಧಿತಶಬ್ದ' ಪರಾ. ೬. ನಿಗ್ರಹಿಸಿದ; ಸ್ವಾಧೀನಕ್ಕೆ ತೆಗೆದುಕೊಂಡ : ಸಾಧಿತಶತ್ರುಷಡ್ವಲರನುಕ್ರಮದಿಂ ಚರರಂ ದ್ವಿಷನ್ಪೃಪಾಷ್ಟಾದಶತೀರ್ಥದೊಳ್ನಡೆಯಿಸಲ್ನೆಱೆವರ್ (ಶಾಂತಿಪು. ೨-೪೨). ೭. ಮರಳಿ ಪಡೆದ; ವಸೂಲು ಮಾಡಿದ. ೮. ದಂಡ, ಜುಲ್ಮಾನೆ

ಮೊದಲಾದುವನ್ನು ಹಾಕಲ್ಪಟ್ಟ,– ವಿಧಿಸಲ್ಪಟ್ಟ. ೯. ಕೊಡುವಂತೆ ಮಾಡಿದ. [ಸಂ.]

ಸಾಧಿತಧಾತು (ನಾ). [ವ್ಯಾಕ] ನಾಮಪ್ರಕೃತಿ ಅಥವಾ ಧಾತುವಿಗೆ 'ಇಸು' ಅಥವಾ 'ಸು' ಮುಂತಾದ ಪ್ರತ್ಯಯಗಳನ್ನು ಸೇರಿಸಿ ನಿಷ್ಪನ್ನಮಾಡಿದ ಹೊಸ ಧಾತು; ℙ ಉದಾಹರಣೆಗೆ: ನಡೆ + ಇಸು; ಇಂಬುಕೆಯ್ + ಸು; ಇತ್ಯಾದಿ: ಸಾಧಿತಧಾತು-೧ ನಾಮಪ್ರಕೃತಿಗಳಿಂದಲೂ ಧಾತುಗಳಿಂದಲೂ ಬೇರೆ ಬೇರೆ ರೀತಿಗಳಲ್ಲಿ ಹೊಸ ನಾಮಪ್ರಕೃತಿಗಳನ್ನು ಸಾಧಿಸುವಂತೆಯೇ ಹೊಸಧಾತುಗಳನ್ನೂ ಸಾಧಿಸಬಹುದು (ಮಧ್ಯಮ. ೧೪೯). [ಸಂ.]

ಸಾಧಿತನಾಮಪ್ರಕೃತಿ (ನಾ). [ವ್ಯಾಕ] ನಾಮಪ್ರಕೃತಿ ಅಥವಾ ಧಾತುವಿಗೆ ಪ್ರತ್ಯಯ ಅಥವಾ ಬೇರೆ ಪದವನ್ನು ಸೇರಿಸಿ, ನಿಷ್ಪನ್ನಮಾಡಿದ ಹೊಸ ನಾಮಪದ: ಸಾಧಿತನಾಮಪ್ರಕೃತಿಗಳನ್ನು (೧) ಕೃದಂತನಾಮ, (೨) ಕೃದಂತಭಾವನಾಮ, (೩) ತದ್ಧಿತಾಂತಭಾವನಾಮ, (೪) ತದ್ಧಿತಾಂತನಾಮ, (೫) ಸಮಾಸ ಎಂದು ಐದು ಬಗೆಯಾಗಿ ವಿಂಗಡಿಸಬಹುದು (ಮಧ್ಯಮ. ೧೨೨). [ಸಂ.]

ಸಾಧಿತಶಬ್ದ (ನಾ). [ವ್ಯಾಕ] ಧಾತು, ನಾಮಪ್ರಕೃತಿಗಳಿಗೆ ಪ್ರತ್ಯಯ ಮೊದಲಾದುವನ್ನು ಸೇರಿಸಿ ನಿಷ್ಪನ್ನಮಾಡಿದ ಹೊಸ ಶಬ್ದ : ನಾವು ಬಲ್ಲ ಎಷ್ಟೋ ಧಾತುಗಳಿಗೂ ನಾಮಪ್ರಕೃತಿಗಳಿಗೂ ಪ್ರತ್ಯಯ ಮೊದಲಾದುವನ್ನು ಸೇರಿಸಿ ಹೀಗೆ ಹೊಸ ಶಬ್ದಗಳನ್ನು ಸಾಧಿಸಬಹುದು. ಈ ರೀತಿ ಉಂಟಾದ ಶಬ್ದಗಳಿಗೆ ಸಾಧಿತ ಶಬ್ದಗಳೆಂದು ಹೆಸರು (ಮಧ್ಯಮ. ೧೧೮). [ಸಂ.]

ಸಾಧಿಷ್ಟಿತ (ನಾ). ಪ್ರಭುತ್ವ; ಮೇಲಧಿಕಾರ : ಕಳಿಙ್ಗಬ್ಬೆಯ ಮಗಂ ಪರಕಯ್ಯನ್ ಇನ್ತು ಪಾರಮ್ಪರ್ಯ್ಯಾಯಮೆಡೆವಱಿಯದೆ ಬನ್ದ ಧರ್ಮ್ಮಸನ್ತತಿ ಮುದ್ದಿಮಯ್ಯಂಗೆ ಪರಕಯ್ಯಂ ಪನ್ನಿರ್ವ್ವರ ಅರಸಿನ ಸಾಧಿಷ್ಟಿತದೊಳ್ ಕಾಲಂ ಕಟ್ಟಿ ಕೊಟ್ಟ ಭೂಮಿ ಆವುದೆನ್ದೊಡೆ (ಎಕ. XI, ದಾವಣ, ೧೭-೧೨ ; 889).

[ℙ ಇದು 'ಸಾಧಿಷ್ಠಿತ' ಎಂಬುದರ ಅಪಲಿಖಿತ]

ಸಾಧಿಸು (ಕ್ರಿ). ೧. ಪಡೆ; ದೊರಕಿಸಿಕೊಳ್ಳು: ಪ್ರತಿಕೂಲನಾಗಿ ನಿಲೆ ವಿಧಿ ಮತ ನಯಮನುಕೂಲಮಾಗಿ ನಿಲೆಯುಂ ಕಾರ್ಯಸ್ಥಿತಿಯಂ ಸಾಧಿಸಲಾಗದು (ಕವಿರಾ. ೩-೧೪೫); ಗೋವರ್ಧನಭಟಾರರ್ ಸಮಾಧಿಮರಣದಿಂದಂ ರತ್ನತ್ರಯಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್ (ವಡ್ಡಾರಾ. ೭೪-೨೮) ; ಸಾಧಿಸುವೊಡಮರಿನೃಪರಂ ಸಾಧಿಸುವೊಡಮಸ್ತ್ರಚಯಮನಿನ್ನುಂ ತನುವಂ ಬಾಧಿಸು ತಪೋಗ್ನಿಯಿಂದಾರಾಧಿಸು ನೀಂ ಮಗನೆ ದುರಿತಹರನಂ ಹರನಂ (ಪಂಪಭಾ. ೮-೮). ೨. ಸ್ವಾಧೀನಪಡಿಸಿಕೊಳ್ಳು; ವಶಪಡಿಸಿಕೊಳ್ಳು: ಅರಸಂ ಪರಚಕ್ರಮಂ ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡಾದಮಾನುಮುಬ್ಬೆಗಂಬಟ್ಟು ಸೈರಿಸಲಾಱದೆ . . . ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ ಸಾಧಿಸಿದೊಂ (ವಡ್ಡಾರಾ. ೭೫-೨೩) ; ಎಡಱುವಹಿತರಂ ಚಕ್ರಮೆ ಸಾಧಿಸಿದಪ್ಪುದು (ಆದಿಪು. ೧೪-೬೧) ; ವಿಜಯಗರ್ವದಲಿಹ ಬಲವ ನೀನೊಬ್ಬನೇ ಸಾಧಿಸುವುದರಿದು (ಕುವ್ಯಾದ್ರೋ. ೪-೪೨). ೩. ರುಜುವಾತುಮಾಡು; ಪ್ರಮಾಣಪಡಿಸು: ಏನನಾದರೆಯೂ ಸಾಧಿಸಬಹುದು ಮತ್ತೇನನಾದರೆಯೂ ಸಾಧಿಸಬಹುದಯ್ಯ ತಾನಾರೆಂಬುದ ಸಾಧಿಸಬಾರದು ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ (ಬಸವ. ೯೨೫) ; ಕದ್ದ ಕಳವ ಮಱಸಿಕೊಂಡು ನಾ ಸಜ್ಜನನೆಂಬಂತೆ ಇದ್ದ ಗುಣವ ನೋಡಿ ಹೊದ್ದಿ ಸಾಧಿಸಲಾಗಿ ಕದ್ದ ಕಳವು ಕೈಯಲ್ಲಿದ್ದ ಮತ್ತೆ ಸಜ್ಜನತನ ಉಂಟೇ (ಮೋಳಿಮಾ. ೨೩-೯೧). ೪. ಆಚರಿಸು; ಅನುಸರಿಸು : ಜಪತಪಸ್ನಾನಾಗ್ನಿಹೋತ್ರ ವಿಧಿವೇಳೆಗಳನು ಸಾಧಿಸುವ . . . ಮುನಿಗಳಾಶ್ರಮದೆಡೆಯೊಳಿರುತಿರ್ದರು (ಜೈಮಿಭಾ. ೧೦-೧೫). ೫. ಸಿದ್ಧಿಯಾಗು; ಕೈಗೂಡು : ಈ ದಾರಿ ಅಷ್ಟು ಸುಗಮವಲ್ಲ . . . ದಾರಿಯೂ ಸಾಗದು. ಗುರಿಯೂ ಸಾಧಿಸದು (ದೀಪಹ. II. ೧೮೦); ಎಷ್ಟು ಪ್ರಯತ್ನಿಸಿದರೂ, ಚಾರುನ ಸಂಗಡ ಸರಿಯಾಗಿ ವಿಲಾಸ ವಿನೋದನ ಹೊಂದಿಸಿ ಹದಕ್ಕೆ ತಂದುಕೊಳ್ಳುವುದು ಭೂಪತಿಗೆ ಸಾಧಿಸದೆ ಹೋಯ್ತು (ಇಪ್ಪಕ. ೨೭೯); ಯಾವ ಕೆಲಸಕ್ಕೇ ಆಗಲಿ ತಲೆ ಹೋದರೆ ಹೋಗಲಿ ಎಂಬುದಾಗಿ ಹೊಡೆದಾಡುವ ಜನ ನಮ್ಮಲ್ಲಿ ಇಲ್ಲ. ಅಂಥವರಿದ್ದರೆ ಆ ಕೆಲಸ ಸಾಧಿಸಿಯೇ ಸಾಧಿಸುತ್ತದೆ (ಗರುದಾ. ೬೯). ೬. ಪೂರ್ವಗ್ರಹಪೀಡಿತವಾಗಿರು : ತಪ್ಪ ಸಾಧಿಪ ನೃಪನೊಳಿಪ್ಪವನೆ ಕಡುಹೆಡ್ಡ (ಸರ್ವಜ್ಞ. ೨೨೨). ೭. ಛಲ, ರೋಷ ಮುಂತಾದುವನ್ನು ಬಹಳ ಕಾಲದವರೆಗೂ ಹೊಂದಿರು : ನನ್ನ ಮೇಲೆ ದ್ವೇಷವನ್ನು ಸಾಧಿಸಬೇಡ (ರೂಢಿ). ೮. ಕಾಯು; ನಿರೀಕ್ಷಿಸು : ಬಾಧೆಯುಂಟೇ ನಿನ್ನ ಸತ್ಯಕೆ ಸಾಧಿಸುವುದವಧಿಯನು ನಿನ್ನ ವಿರೋಧಿಗಳಿಗೆ ನಿವಾಸವಹುದು ಕೃತಾಂತಲೋಕದಲಿ (ಕುವ್ಯಾಅ. ೪-೧೩); ಪಾಯ್ವನೀ ಹರಿಯಜಂ ನಿರ್ಲಕ್ಷನಾಗೆ ತಲೆಗಾಯ್ವೆನೇ ನಿನ್ನನೆನುತೆಱಗುವಂ ಬಿದಿಯೊಲೆದು ಮೆಯ್ವಳಿಗೆ ಸಂದು ಸಾಧಿಸುವಂ ಮುರಧ್ವಂಸಿ (ಚಿಬಪು. ೧೬-೩೩). ೯. ಉದ್ದೇಶವು ನೆರವೇರು : ಆವನೊರ್ವಂಗೆ ಪರಾಕ್ರಮಶಕ್ತಿಯಿಲ್ಲದಿರ್ದೊಡಮನ್ಯಶಕ್ತಿಪರಾಕ್ರಮದಿಂ ಸಾಧಿಸಿಕೊಂಬುದು (ಪಂಚತಂ. ೮೧-೨೧); ಸಾಧಿಸಿಕೊಳ್ ಮನೋಮುದದಿನೆಂದು ತದಿಂದ್ರರಥಂ ವಿಶಾಳಪುಣ್ಯೋದಿತಫಲ್ಗುಣಂಗೆ ನೆಱೆ ಮಂತ್ರಪದಂಗಳನಿತ್ತಂ (ನೇಮಿಪು. ೧೦-೫೫). [ಸಾಧನ + - ಇಸ್ಸು$_3$]

ಸಾಧಿಸುಹ (ನಾ). (ಛಲ, ದ್ವೇಷ ಮುಂತಾದುವುಗಳನ್ನು) ಸಾಧನೆ ಮಾಡುವುದು : "ವೈರಶುದ್ಧಿ, ಪ್ರತೀಕಾರ, ವೈರನಿರ್ಯಾತನ - ಹಗೆಯ ಸಾಧಿಸುಹ" (ನಾಚಿರಾ. ೬). [ಸಾಧಿಸು + - ಹ$_2$ (< - ಪ$_2$)]

ಸಾಧು$_1$ (ಗು). ೧. ಒಳ್ಳೆಯ; ಉತ್ತಮವಾದ. ೨. ಪ್ರಾಮಾಣಿಕವಾದ; ವಿಶ್ವಾಸಯೋಗ್ಯವಾದ. ೩. ಒಳ್ಳೆಯ ಸ್ವಭಾವದ; ಸೌಮ್ಯಸ್ವಭಾವದ : ಅಲ್ಲಿಂ ತಳರ್ದು ಮೋಸದಿಂ ಸಾಧು[ಪಾಠಾಂ. ದು, ರ್ದು]ಬ್ರಾಹ್ಮಣನಂತೆ ಚಪ್ಪರದಿಂ ಪೊಱಮಟ್ಟು (ನಂಬಿರ. ೬-೮೩). ೪. ತಕ್ಕುದಾದ; ಯೋಗ್ಯವಾದ. ೫. ಶುದ್ಧವಾದ; ಶಿಷ್ಟವಾದ. ೬. ಸುಂದರವಾದ; ಮನೋಹರವಾದ. ೭. ಸದ್ವಂಶಸ್ಥವಾದ. (ನಾ). ೮. ಒಳ್ಳೆಯದು; ಉತ್ತಮವಾದುದು : "ಪ್ರಾಗ್ರ್ಯಂ, ಪ್ರಾಗ್ರಹರಂ . . . ಸೌಮ್ಯಂ, ಸಾಧು, ವಲ್ಗು, ಚಾರು, ಸುಷಮಂ, ವಾಮಂ, ಶುಭಂ, ಪೇಶಲಂ — ಈ ೨೯ ಒಳ್ಳಿತು" (ಹಲಾಯು. ೧೧೪-೪). ೯. ಸೌಮ್ಯವಾದುದು; ಉಗ್ರವಲ್ಲದುದು : ಆನೆಯೊ ಸಿಂಹವೊ ಮೊಸಳೆಯೊ ಮೀನೋ ಉಗ್ರವೊ ಸಾಧುವೊ ಎಂತೋ ಏನೋ (ಅನಿಕೇ. ೩೦-೧೬). ೧೦. ತಕ್ಕುದು; ಯೋಗ್ಯವಾದುದು : ತಮ್ಮ ಈ ಭಾವನೆಯು ಸಾಧುವೆಂದು ನನಗೆ ತೋರುವುದಿಲ್ಲ (ನಡದಾ. I, ೫೬೫); ಆದರೆ ಈ ಅಭಿಪ್ರಾಯ ಸಾಧುವಲ್ಲ (ಶಿಕ್ಷದ. ೧೨೧). ೧೧. (ಭಾಷೆ ಮುಂತಾದುವುಗಳ ವಿಚಾರದಲ್ಲಿ) ಶುದ್ಧವಾದುದು; ಶಿಷ್ಟವಾದುದು: ಒಂದು ಶಬ್ದರೂಪವು ಸಾಧುವೇ, ಅಸಾಧುವೇ ಎಂದು ನಿರ್ಣಯಿಸುವುದರಲ್ಲಿ ಶಿಕ್ಷಾಶಾಸ್ತ್ರ, ಭಾಷಾಗತಿ, ಶಿಷ್ಟಸಮ್ಮತಿ, ಇವೆಲ್ಲವನ್ನೂ ಗಮನಕ್ಕೆ ತಂದುಕೊಳ್ಳಬೇಕು (ದ್ರಾವಿವಿ. ೮೬). ೧೨. ಸುಂದರವಾದುದು ; ಮನೋಹರವಾದುದು : "ಕಮನೀಯಮಭಿರಾಮ ಮುಜ್ಜ್ವಳಂ . . . ಪ್ರಿಯ ಸಾಧು ರಮಂ ರಮಣ್ಯಂ ರಮ್ಯರುಚಿರಂ ಪ್ರವೇಕಮೆನೆ ಸೌಮ್ಯಕ್ಕೆ ನಾಮಮಕ್ಕುಂ" (ಮಂಗರಾ. ೧೨೬-೨). ೧೩. ಒಳ್ಳೆಯ ವ್ಯಕ್ತಿ; ಸಭ್ಯ; ಸತ್ಪುರುಷ : ಸಾಧುಗೆ ಸಾಧು ಮಾಧೂ(ಧು)ರ್ಯ್ಯನ್ನೆ(ಂಗೆ) ಮಾಧೂ(ಧು)ರ್ಯ್ಯಮ್ ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ ಮಾಧವನೀತನ್ ಪೆಱನಲ್ಲ (ಇಆ. X, ೬೧-೫ ; ಸು. 700). ೧೪. ಸಂನ್ಯಾಸಿ; ಯತಿ : "ಯತಿ ಸಂಯಮಿ ಋಷಿ ಮುನಿ ಸುಶ್ರುತನಾತಂ ಸಾಧು" (ಮಸ್ತುಕೋ. ೫೭-೩೩); ಮೋದದಿ ನಿನ್ನಯ ಪಾದವ ತೋಱೊ ಸಾಧುವಂದಿತನೆ ಆದರದಿಂದಲೆ (ಪುರಂದ. ೧-೬-೨); ಯಜ್ಞವೆಂದರೆ ಭಗವದರ್ಚನೆ ಮತ್ತು ಅರ್ಪಣ - ಸಾಧು ಸಂತರ ಸೇವೆ (ಶಕ್ತಿವಿ. ೪೭). ೧೫. ಒಳ್ಳೆಯ ವಂಶದಲ್ಲಿ ಹುಟ್ಟಿದವನು; ಸತ್ಕುಲಪ್ರಸೂತನಾದವನು : ಕುಳಜಾತಂ ತಕ್ಕನಾರ್ಯಂ ಸುಜನನಭಿಜನಂ ಸಾಧು ಸದ್ವೃತ್ತನಪ್ಪಂ" (ಮಸ್ತುಕೋ. ೧೦೦-೧೧). ೧೬. ಚಿನ್ನ, ಬೆಳ್ಳಿಗಳ ವ್ಯಾಪಾರ ಮಾಡುವವನು; ರತ್ನಪಡಿವ್ಯಾಪಾರಿ. ೧೭. ಬಡ್ಡಿ ವ್ಯವಹಾರ ನಡೆಸುವವನು; ಕುಸೀದಕ. ೧೮. [ಜೈನ] ಪಂಚಪರಮೇಷ್ಠಿಗಳಲ್ಲಿ ಒಬ್ಬ ; ಜೈನ ಸಂನ್ಯಾಸಿ : "ನಗ್ನಾಟಃ . . . ನಿರ್ಗ್ರಂಥಃ, ಸಾಧುಃ - ಈ ೧೦ ಸವಣರ ಪೆಸರ್" (ಹಲಾಯು. ೫೭-೧೮೯); ಅರ್ಹತ್, ಮುನಿ (ಸಿದ್ಧ), ಆಚಾರ್ಯ, ಉಪಾಧ್ಯಾಯ, ಸಾಧು ಇವರು ಪಂಚಪರಮೇಷ್ಠಿಗಳು (ಹಿಂದಸಾ. ೯೦). [ಸಂ.]

ಸಾಧು₂ (ಅ). ಚೆನ್ನಾಗಿ, ಸೊಗಸಾಗಿ ಎಂಬಿತ್ಯಾದಿಯಾದ ಒಪ್ಪಿಗೆ, ಮೆಚ್ಚುಗೆಗಳ ಉದ್ಗಾರವನ್ನು ಸೂಚಿಸುವ ಒಂದು ಅವ್ಯಯ : ಸಾಧು, ವತ್ಸ, ನೀನು ದೇವಪುತ್ರನ ಮರ್ಯಾದೆಗೆ ತಕ್ಕ ಹಾಗೆ ನುಡಿಯುತ್ತೀಯೆ (ಬಾಣಾಲ. ೮೫). 'ಸಾಧುಕಾರ', 'ಸಾಧುವಾದ' ಪರಾ. [ಸಂ.]

ಸಾಧುಕಾರ (ನಾ). (ಮೆಚ್ಚುಗೆ, ಪ್ರಶಂಸೆ ಇತ್ಯಾದಿಗಳನ್ನು ಸೂಚಿಸುವ ಸಲುವಾಗಿ ಮಾಡುವ) ಸಾಧು, ಸಾಧು ಎಂಬ ಉದ್ಗಾರ, — ಘೋಷ : ಪೆಱನಂ ಮಿಥ್ಯಾದರ್ಶನಕ್ರಿಯಾಕಾರಣಾವಿಷ್ಟನಂ ಪ್ರಶಂಸಾದಿಗಳಿಂ ಸಾಧುಕಾರದಿಂ ದೃಢಂ ಮಾಳ್ಪುದು (ತತ್ತ್ವಪ್ರ. ೨೫೭): ಮಹಾಜನರೆಲ್ಲ ಸಾಧುಕಾರ ಮಾಡಿದರು (ಹತ್ತುಮ. ೪೭). [ಸಂ.]

ಸಾಧುಜನ (ನಾ). ೧. ಒಳ್ಳೆಯ ಜನ; ಪ್ರಾಮಾಣಿಕಜನ: ರಸರೂಪಗಂಧ ಶಬ್ದಸ್ಪರ್ಶವೆಂದೆಂಬ ವಿಷಯದೊಳು ನೂಲಿನೊಳು ಸಾಧುಜನದೊಳು . . . ಪರಮ ನೊಳು ಗುಣಮೆನಿಕ್ಕುಂ (ಮಂಗರಾ. ೧೪೭-೩೭). ೨. [ಜೈನ] ಪಂಚಪರಮೇಷ್ಠಿಗಳಲ್ಲಿ ಕೊನೆಯ ವರ್ಗಕ್ಕೆ ಸೇರಿದ ಶ್ರವಣಸಮೂಹ: ಎದ್ಯೋಪಶಮಗಂಭೀರಸ್ಥಿರವ ದಾನ್ಯತ್ವ ಸಾಧುಜನಸಹಾಯತಾದಿ ಗುಣನಿಧಾನನಂ ನಿನ್ನನ್ನನಂ ಮತ್ತೊರ್ವನನೆಲ್ಲಿಯುಂ ಕಂಡುಂ ಕೇಳ್ದುಮಱಿಯೆವು (ಶಾಂತಿಪು. ೩-೭೫ ವ). [ಸಂ.]

ಸಾಧುತನ (ನಾ). ಒಳ್ಳೆಯತನ; ಸಜ್ಜನಿಕೆ : ಅವರ ಪ್ರಾಮಾಣಿಕತನ, ಸಾಧುತನ ನಮ್ಮ ಶಿನ್ನ ಒಪ್ಪಿಕೊಳ್ಳುತ್ತಿದ್ದನೆ? (ಮೂಯಾದಾ. ೧೩೫). [ಸಾಧು + - ತನ]

ಸಾಧುತ್ವ (ನಾ). ೧. = ಸಾಧುತನ. ೨. ಔಚಿತ್ಯ ; ಯಥಾರ್ಥತೆ: ಕಾವ್ಯದಲ್ಲಿನ ಸಾಧುತ್ವಾಂಶವು [Correctness] ರಾಜನೀತಿಯಲ್ಲಿಯೋ ಅಥವಾ ಇನ್ನಾವ ಕಲೆಯಲ್ಲಿಯೋ ಇರುವ ಸಾಧುತ್ವದ ವಿಧದ್ದಲ್ಲವೆಂಬುದನ್ನು ಗಮನದಲ್ಲಿಡಬೇಕು (ಅರಿಕಾ. ೧೩೮). [ಸಂ.]

ಸಾಧುಪಂಥ (ನಾ). ತಕ್ಕ ಮಾರ್ಗ; ಉಚಿತವಾದ ದಾರಿ: ಲೇಸು ಮಾಡಿದಿರೆನ್ನ ಚಿತ್ತಕ್ಲೇಶ ಬೀತುದು ನಾನು ಬದುಕಿದೆ ದೋಷಿಯಿರಲಗ್ನಿಪ್ರವೇಶವೆ ಸಾಧುಪಂಥವದು (ಕೌಶಿರಾ. ೪೩-೨೯). [ಸಂ.]

ಸಾಧುಪುರುಷ (ನಾ). ಮುನಿ; ತಪಸ್ವಿ : ಇದರಿಂದ, ಇಲ್ಲವೇ ತುಂಬ ಬಲಿಷ್ಠನಾದ ಮನುಷ್ಯ ತಯಾರಾಗಬಹುದು, ಇಲ್ಲವೇ ವಾಸನಾಬಂಧನಗಳನ್ನು ಕತ್ತರಿಸಿ ಒಬ್ಬ ದೊಡ್ಡ ಸಾಧುಪುರುಷನಾಗಬಹುದು (ನಬಂಧ. II. ೨೭೨). [ಸಂ.]

ಸಾಧುಪ್ರಾಣಿ (ನಾ). ೧. ಸೌಮ್ಯಸ್ವಭಾವದ ಪ್ರಾಣಿ; ಹಿಂಸ್ರವಲ್ಲದ ಮೃಗ. ೨. (ಆಲಂ) ಸೌಮ್ಯಸ್ವಭಾವದ ವ್ಯಕ್ತಿ ; ನಿರುಪದ್ರವಿಯಾದ ಮನುಷ್ಯ: ಪೊಂಪಾಪತಿಭಟ್ಟ — ತಸೀಲ ಕಚೇರಿಯು ಒಂದೂಟ ಕೊಟ್ಟು ಸಾಕಿರುವ ಸಾಧುಪ್ರಾಣಿ (ಪನ್ನೂಂದ. ೧). [ಸಂ. ಸಾಧುಪ್ರಾಣಿನ್]

ಸಾಧುಮಾರ್ಗ (ನಾ). ಸರಿಯಾದ ಮಾರ್ಗ; ಸತ್ಪಥ : ಮಾಡಲರಿಯದೆ ಜಪತಪಂಗಳ ಆಡಲರಿಯದೆ ಸಾಧುಮಾರ್ಗದೊಳಾಡುವವರನು ನೋಡಲಾರದೆ ಕೇಡ ನೆನನೆನದು . . . ಆಡುತಡರುವ ಮೂಢನೊಳ್ ಮಾತಾಡಬ್ಯಾಡೆಂದ (ಗಗತಾ. ೫೧-೨). [ಸಂ.]

ಸಾಧುವಾದ (ನಾ). ಒಳ್ಳೆಯದು, ಒಳ್ಳೆಯದಾಗಲಿ ಎಂಬ ಅರ್ಥದ ನುಡಿ : ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧುವಾದದೊಳ್ ಬೆರಸಿ . . . ಬಂದುದದೊಂದನುಕೂಲಮಾರುತಂ (ಪಂಪಭಾ. ೨-೯೫); ಆಚಾರ್ಯರು ಸಾಧುವಾದ ಮಾಡಿದರು (ಬಾಣಾಲ. ೮೬). [ಸಂ.]

ಸಾಧ್ಯ (ಗು). ೧. ಮಾಡಬೇಕಾದ; ನೆರವೇರಿಸಬೇಕಾದ. ೨. ಕಾರ್ಯರೂಪಕ್ಕೆ ತರಬಹುದಾದ; ನಡೆಸಬಹುದಾದ; ಶಕ್ಯವಾದ. ೩. ಸಿದ್ಧಾಂತವನ್ನು ಮಾಡಿ ತೋರಿಸಬೇಕಾದ; ಸಿದ್ಧಪಡಿಸಬೇಕಾದ. ೪. ಗೆಲ್ಲಬಹುದಾದ; ಜಯಿಸಬಹುದಾದ. ೫. (ರೋಗ ಮುಂತಾದುವಂತೆ) ಗುಣಪಡಿಸ ಬಹುದಾದ; ವಾಸಿಮಾಡಬಹುದಾದ. ೬. [ತರ್ಕಶಾ] ನಿರ್ಣಯಿಸಬೇಕಾದ. (ನಾ). ೭. ಸಾಧಿಸಬಹುದಾದುದು; ಕಾರ್ಯರೂಪಕ್ಕೆ ತರಬಹುದಾದುದು: ಎಲ್ಲ ಸಂಗತಿಗಳನ್ನೂ ಕಲಹಾಕುವುದು ಈ ಕಿರುಹೊತ್ತಗೆಯ ಪರಿಮಿತಿಯಲ್ಲಿ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ (ದ್ರಾವಿ. ೧೦). ೮. ಸಾಧಿಸಬೇಕಾದ ವಿಚಾರ ; ಸ್ಥಿರಪಡಿಸಬೇಕಾದ ವಿಷಯ. ೯. ಸಂಪೂರ್ಣತೆ; ಪರಿಪೂರ್ಣತೆ. ೧೦. ಒಂದು ಮಂತ್ರದ ಹೆಸರು: ಆ ಚಕ್ರದಲ್ಲಿ ಸಾಧ್ಯನಾಮದಿಂದ ಸಹಿತ ಅಕಾರ ಮೊದಲಾಗಿ ಕ್ಷಕಾರ ಪರ್ಯಂತವಾದ ಅಕ್ಷರಗಳು ಪೂಜಿಸತಕ್ಕದ್ದು (ಅರ್ಚಾಮಾ. ೩೯). ೧೧. ದೇವತೆಗಳಲ್ಲಿ ಒಂದು ವರ್ಗ, — ಗುಂಪು : "ಆದಿತ್ಯಾಃ, ವಿಶ್ವ, ವಸವಃ . . . ಸಾಧ್ಯಾಃ, ರುದ್ರಾಃ, (ಗಣದೇವತಾಃ) - ಗಣದೇವತೆಗಳ ಹೆಸರುಗಳು" (ಸಿದ್ಧಾಂತಿ. ೧೫); ಸಿದ್ಧರು ಸಾಧ್ಯರು . . . ಹಣೆಯೊಳು ಬರೆದುದನಳಿಸಲಶಕ್ತರು (ಇಂಚಾಪ. ೧೪೫-೧೨). ೧೨. (ರೋಗ ಮುಂತಾದುವಂತೆ) ಗುಣಪಡಿಸ ಬಹುದಾದುದು ; ವಾಸಿಮಾಡುವಂತಹುದು : ಈ ಐದು ಪ್ರಕಾರದಿಂದಲೂ ರೋಗಿಯ ರೋಗವರಿತು ಇದು ಸಾಧ್ಯ, ಇದು ಕಷ್ಟಸಾಧ್ಯ, ಇದು ಅಸಾಧ್ಯ ವೆಂದು ತಿಳಿದು ವೈದ್ಯನು ಚಿಕಿತ್ಸೆಯನ್ನು ಪ್ರಾರಂಭಿಸುವುದು (ಸಕವ್ಯ. ೨೨). ೧೩. ದೊರಕುವವನು; ನಿಲುಕುವವನು; ಲಭ್ಯನಾಗುವವನು : ಸಾಧ್ಯ ಭವ್ಯಾತ್ಮರಿಗೆ ತ್ರಿಭುವನವೇದ್ಯ . . . ಮಿಥ್ಯಾಮಾರ್ಗದೋಡೆಗಭೇದ್ಯ ಪೂರ್ಣ ಕಟಾಕ್ಷದಿಂದಲಿ ರಕ್ಷಿಸುಗೆ ಜಗವ (ನಾಗಚ. ೧೫-೯೩). ೧೪. (ಮುಂದೆ ಸಾಗುವಳಿ ಮಾಡಬಹುದಾದ) ಜಮಿನಿನಿಂದ ಬರುವ ಆದಾಯ : ನೀಲೆ ನರಸಿಂಹ ಭಟ್ಟರಿಗೆ ಸಾಧ್ಯ ಖ ೩ ಬಾಸಿರಕಟ್ಟಿಗೆ ಟೆಂಕಲಾಗಿ ಉಪಾಧ್ಯಭಟ್ಟರಿಗೆ ಸಾಧ್ಯ ಖ ೨ . . . ನರಸಿಂಹಭಟ್ಟರಿಗೆ ಈ ಗ್ರಾಮಕ್ಕೆ ಸಲವಗ್ರಹಾರಾಮಕ್ಷೇತ್ರ ಗದ್ದೆ ಬೆದ್ದಲು ಮೊದಲಾದ ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯವನ್ನು ಅನುಭವಿಸಿ ಕೊಂಡು ಬಹರಿಯೆಂದು ಒಪ್ಪಿ ಕೊಟ್ಟ ದಾನಶಾಸನ (ಮೈಆರ್. ೧೯೨೯, ೧೮-೮೪; 1402). 'ಅಷ್ಟಭೋಗ', 'ಸಾಧ್ಯಭೂಮಿ' ಪರಾ. ೧೫. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಇಪ್ಪತ್ತೆರಡನೆಯದು: ವಿಷ್ಕಂಭ ಪ್ರೀತಿ ಆಯುಷ್ಮಾನ್ . . . ಶಿವ ಸಿದ್ಧ ಸಾಧ್ಯ ಶುಭ ಶುಕ್ಲ ಬ್ರಹ್ಮ ಐಂದ್ರ ವೈಧೃತಿಗಳೆಂಬ ಇಪ್ಪತ್ತೇಳು ಯೋಗಂ ಗಳುಂ (ವಿವೇಕ. ೨೬೨). ೧೬. [ತರ್ಕಶಾ] ಊಹಿಸಿ ತಿಳಿಯತಕ್ಕದ್ದು; ಸಾಧಿಸಬೇಕಾದುದು; ಅನುಮೇಯ : ವಿಶ್ವವಿಜ್ಞಾನವಾದಮಂಬದಂ ವಿಜ್ಞಾನದಿಂದ ನೀಂ ಸಾಧಿಸುವೆಯಪ್ಪೊಡೆ ಸಾಧ್ಯಸಾಧನಂಗಳ್ಕೆಮಪ್ಪುದಱಿಂ ಸಾಧ್ಯಂ ನಿಶ್ಚಯಮಾಗದು (ಆದಿಪು. ೨-೧೦ ವ); ಸಾಧ್ಯ : — ಹಿಂದೆ ಹೇಳಿದ ರೀತಿಯಲ್ಲಿ ಧೂಮಜ್ಞಾನದಿಂದ ವಹ್ನಿಯ ಜ್ಞಾನವು ಹುಟ್ಟುವುದು. ಈ ಸಂದರ್ಭದಲ್ಲಿ ವಹ್ನಿ ಸಾಧ್ಯವೆನಿಸುವುದು . . . ಪರ್ವತವು ವಹ್ನಿ ಉಳ್ಳುದು ಎಂಬಲ್ಲಿ ವಹ್ನಿ ಸಾಧ್ಯ ; ಈ ಸಾಧ್ಯವುಳ್ಳ ಪರ್ವತವು ಪಕ್ಷ (ಭಾತತ್ತ್ವ. ೧೭೬).

ಸಾಧ್ಯಮಾಗು, ಸಾಧ್ಯವಾಗು = ೧. ಸಾಧಿಸಲಾಗು; ಗೆಲ್ಲು : ಎಱಿದ ಕೋಟೆ ಸಾಧ್ಯಮಾಗದ ದೆಶೆ ಕಪ್ಪಮಾಯದಿದಿರಂದುದಿನನ್ನದ ಭೂಪರಾಬ್ದಡಂಗಳ ಪಗೆ[ಕ]ರ್ಯನಾನ[ದಭ]ಮಾ[ನಿ] [ಶ]ರಣ್ಗುಗದನ್ಮ[ರಿತ್ರು] ಕಾಣದ ನೃಪರಿಲ್ಲ (ಕಾಆ. ೩-೨-೮೨; 1058). ೨. ದೊರಕು; ಲಭ್ಯವಾಗು : ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ (ಬಸವ. ೩೭). ೩. ನೆರವೇರಿಸಲಾಗು; ನಡೆಸಲಾಗು : ಆದ್ಯರ ವಚನ ಆದ್ಯರಿಗಾಯಿತ್ತು ವೇದ್ಯರಿಗಲ್ಲದೆ ಸಾಧ್ಯವಾಗದು (ಬಸವ. ೮೪೨): ಊರಲ್ಲಿ ತಾನು ಬಂದು ಮೂರು ದಿನಗಳಾಗಿದ್ದರೂ ವಸಂತನನ್ನು ಸಂಧಿಸುವುದು ಸಾಧ್ಯವಾಗಿರಲಿಲ್ಲ (ಕಮನ. ೧೬೩). [ಸಂ.]

ಸಾಧ್ಯಭೂಮಿ (ನಾ). ವ್ಯವಸಾಯಕ್ಕೆ ಯೋಗ್ಯವಾದ ಭೂಮಿ : ಅಚ್ಯುತಭಟ್ಟರಿಗೆ ಖಂ ೧ ಮೇಲಾದ ಸಾಧ್ಯಭೂಮಿ ಯಜಮಾನಾದಿ ಸರ್ವಸ್ವಾಮ್ಯವೂ . . . ಗದ್ದೆ ಬೆದ್ದಲು ಮೊದಲಾದ ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯವನ್ನು ಅನುಭವಿಸಿಕೊಂಡು ಬಹರಿಯೆಂದು ಒಪ್ಪಿ ಕೊಟ್ಟ ದಾನಶಾಸನ (ಮೈಆರ್. ೧೯೨೯, ೧೮-೮೮; 1402). [ಸಂ.]

ಸಾಧ್ಯಯೋಗ (ನಾ). [ಜ್ಯೋತಿ] ಇಪ್ಪತ್ತೇಳು ವಿಧವಾದ ಯೋಗಗಳಲ್ಲಿ ಒಂದು : ಸಾಧ್ಯಯೋಗಕ್ಕೆ ಗಾನಾ ೩ ಗಳಿಗೆ ಮೇಲೆ ತ್ಯಾಜ್ಯಾ (ಭಾಸ್ಕರ. ೭೦-೭). [ಸಂ.]

ಸಾಧ್ಯವೇಳೆ (ನಾ). ಗೆಲ್ಲಲು ತಕ್ಕ ಅವಕಾಶ : ಆ ದುರ್ಗದಲ್ಲಿದ್ದ ದೊರೆಗಳ ವಿರೋಧವನಱಿದು ಇದೆ ದುರ್ಗಕ್ಕೆ ಸಾಧ್ಯವೇಳೆಯೆಂಬುದನಱಿತು ಮಾಯಾಮಲಂ

ನಾಸ್ತಿಯೆಂಬ ಮನ್ನೆಯ ಕಾಳಗವ ಹಿಡಿದು ದುರ್ಗವ ಮುತ್ತಿ ಕೈಯೊಳಗಾದರು ಮೂವರು ದೊರೆಗಳು (ಪಜಮ. ೬. ೨. ೧೩೬-೫೧೮). [ಸಂ. ಸಾಧ್ವವೇಲಾ]

ಸಾಧ್ವಸ (ನಾ). ೧. ಭಯ; ಅಂಜಿಕೆ : ಅಂತಭಿನವಸಂಗಸಮುತ್ಪನ್ನಸಾಧ್ವಸರಸ ರಮಣೀಯತರಮುಗ್ಧವಧೂವದನವಿಲೋಕನಸುಖಮನನುಭವಿಸಿ (ಆದಿಪು. ೪-೫೧ ವ); ಮನಂಗೆಲೆ ಮಾತಾಡುವ ಮಾತಿನಿಂ ಕಳೆದು ಲಜ್ಜಾಸಾಧ್ವಸೋದ್ರೇಕಮಂ ಜಲಚಾತಾಕ್ಷ ನೊಳಾಕೆ ಬಿಚ್ಚತಿಕೆಯಂ ಮಾಡಲ್ (ಜಗವಿ. ೧೦-೧೪೦). ೨. ಸಡಗರ; ಸಂಭ್ರಮ : ಸಾಧ್ವಸದಿಂ ಬೆಮರ್ ಬೆಮರ್ವಡೆಗಳನುಣ್ಮೆ ಪೊಣ್ಮೆದುದು . . . ಸತಿಗೆ ನೋಡಲೊಡಂ ಪಡೆಮಚ್ಚೆ ಗಂಡನಂ (ಪಂಪಭಾ. ೫-೧೫). ೩. [ಕಾವ್ಯಮಿಾ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದಾದ ಭಾಣಿಕೆಯ ಏಳು ಅಂಗಗಳಲ್ಲಿ ಒಂದು ; ಗಲಿಬಿಲಿ ; ಕ್ಷೋಭೆ : ಭಾಣಿಕಾ — ಇದರಲ್ಲಿಯೂ ಒಂದೇ ಅಂಕ . . . ಉಪನ್ಯಾಸ, ವಿನ್ಯಾಸ, ವಿಬೋಧ, ಸಾಧ್ವಸ, ಸಮರ್ಪಣ, ನಿವೃತ್ತಿ, ಸಂಹಾರ ಎಂಬ ಏಳು ಅಂಗಗಳು (ಸಂನಾಟ. ೩೭). [ಸಂ.]

ಸಾಧ್ವಸಭಯ (ನಾ). ಉದ್ವೇಗದಿಂದ ಉಂಟಾದ ಭಯ — ಗಾಬರಿ : ಅಕಾರಾನುರೂಪ ದೌವಾರಿಕಾವಚನರಚನಾಶ್ರವಣಸಮುಪಚಾತಸಾಧ್ವಸಭಯ ಮುಮೆಱಕಮುಂ ಪೆರ್ಚೆ . . . ಭಾಸ್ವಜ್ಜನಚಂದ್ರಚಂದ್ರಪ್ರಭೆಗೆ ಜ್ಯೋತಿ ಸೋಲ್ವಂತೆ ಜ್ಯೋತಿಷ್ಪ್ರಭೆ ಸೋಲ್ತು (ಶಾಂತಿಪು. ೫-೧೫೫ ವ). [ಸಂ.]

ಸಾಧ್ವಿ (ನಾ). ೧. ಸಚ್ಚಾರಿತ್ರ್ಯವುಳ್ಳ ಹೆಂಗಸು; ಸುಶೀಲೆ. ೨. ಗಂಡನಿಗೆ ವಿಧೇಯಳಾದ ಹೆಂಡತಿ ; ಪತಿವ್ರತೆ : "ಕುಲವಧು ಸಾಧ್ವಿ ಪತಿವ್ರತೆ ಕುಲಪಾಳಿಕೆ ಸತಿ ಚರಿತ್ರವತಿಯಕ್ಕುಂ" (ಪಪ್ರಕೋ. ೫೨-೪); ಧರಣೀನಂದನಗೇಹದೊಳ್ . . . ಭಾಸ್ಕರಪುತ್ರಾಂಶದೊಳಾಕೆ ತೊಟ್ಟು ಸುರನಾಥೇಚ್ಛಾಂಶದೊಳ್ ಸಾಧ್ವಿ (ಜಾತಕ. ೨೨-೩); ತಡೆಯದೆಲ್ಲಡೆಯೊಳು ತಾನು ಬೀಸುವನೀಯೆಡರನೇಳಿಪೆನೆಂದೆಲರು ಸಡಗರದಿಂದ ಸಾಧ್ವಿಯರಡಿ ಸೋಂಕಿದ ಪುಡಿಯ ಮುಡಿಯೊಳಾನುವುದು (ಪದಿಪು. ೨-೭).

[ಸಂ. ಸಾಧ್ವೀ]

ಸಾಧ್ವೀಮಣಿ (ನಾ). ಪತಿವ್ರತೆಯರಲ್ಲಿ ಶ್ರೇಷ್ಠಳಾದವಳು: ಪತ್ನಿಯಾದ ಕೂಸಮ್ಮನೆಂಬ ಸಾಧ್ವೀಮಣಿಯೊಂದಿಗೆ ವಾಸಮಾಡಿಕೊಂಡಿದ್ದರು (ಎಡಾಕ್ಯ. ೧ ಪೀಠಿಕೆ).

[ಸಂ.]

ಸಾನ$_1$, **ಸೋನ**$_1$ (ನಾ). ನಾಯಿ; ಶುನಕ : ವತ್ಸಲೋಪಕ್ಕೆ . . . ಶ್ವಾನ – ಸಾನ (ಶಮದ. ೨೮೧ ಪ್ರಯೋ). **ಸೋನ**$_1$: ಶ್ವಾನ , ಸೋನೆ (ಶಬ್ದಾನು. ೧೫೧ ಪ್ರಯೋ); ಆನೆ ಮೇಲಿದ್ದವನು ಸೋನ ಕಂಡೊಡುವನೆ (ಸರ್ವಜ್ಞ. ೩೭೧).

[< ಪ್ರಾ. ಸಾಣ. / ಸಂ. ಶ್ವಾನ]

ಸಾನ$_2$ 'ಸ್ಥಾನ' ನೋ.

ಸಾನಂದ (ಗು). ೧. ಆನಂದದಿಂದ ಕೂಡಿದ; ಹಿಗ್ಗಿನಿಂದ ಕೂಡಿದ : ಲೋಕಂ ತಮತಮಗೆ ಸಾನಂದಲೀಲೆಯೊಳಮಿತ್ರಸದ್ಭಕ್ತಿಪ್ರಭಾವದಲಿ ಸಂದು (ಬುಪು. ೫೩-೭). (ನಾ). ೨. ಸಂತೋಷ; ಆನಂದ : ಮೇಧಾವಿನಿ ಕಂದನಂ ತೆಗೆದೆತ್ತಿಕೊಳುತೆ ಬಿಗಿಯಪ್ಪಿ ಸಾನಂದದಿಂ ಪೊರೆಯೇಱಿದಳ್ (ಚಿಮಭಾ. ೨೮-೫೯); ಸಾನಂದದಿನೆಚ್ಚತ್ತಂ ಭೂನಾಥಂ . . . ಮೈಮುರಿದು ನಿದ್ರೆಯಿಂದೆಚ್ಚತ್ತಂ (ಮಲ್ಲಕಾ. ೩೧೭-೧೧೭). ೩. ಸಂತೋಷದಿಂದ ಕೂಡಿದವನು. ೪. ಒಬ್ಬ ಋಷಿಯ ಹೆಸರು : ಪುಲಸ್ತ್ಯ ಸಾನಂದ ಶತಾನಂದ ಶ್ವೇತಕೇತೂಪಮನ್ಮು ಮೊದಲಾದಷ್ಟಾಶೀತಿಸಹಸ್ರ ಋಷೀಶ್ವರರ್ಗನಂತಾಶ್ರಯಂಗಳುಂ (ವಿವೇಕ. ೧೬೪).

ಸಾನಂದಾಶ್ರು (ನಾ). ಆನಂದದಿಂದ ಉಂಟಾಗುವ ಕಣ್ಣೀರು : ಮೃಡಗುಣ ಸ್ತುತಿಗೆಯ್ವ ಘೋಷಣವಡಗೆ ಸಾನಂದಾಶ್ರುಗಳನೆಡವಿಡದೆ ನೋಡುವ ನಯನಗಳು ಹೊಳೆದಾವರಿಯುತಿರಲು (ಬುಪು. ೩೫-೫). [ಸಂ.]

ಸಾನಿ (ನಾ). ೧. ಒಡತಿ; ಸ್ವಾಮಿನಿ; ನಾಯಕಿ : ನಿನ್ನ ಗಂಡ ನಿನಗೆ ನಾಯಕ. ಅವನಿಗ ಸರಿಸರಿಯಾಗಿ ಕುಳಿತುಕೊಳ್ಳತಕ್ಕವಳಾದ್ದರಿಂದ ನೀನು ಅವನಿಗೆ ಸಾನಿ (ಅಡುಮು. ೦೫). ೨. ಹೆಂಡತಿ; ಪತ್ನಿ : 'ದೊರೆಸಾನಿ' ಪರಾ. ೩. ವೇಶ್ಯೆ ಮತ್ತು ಕೆಲವು ಸಲ ವೇಶ್ಯೆಯ ಹೆಸರಿನ ಕೊನೆಗೆ ಸೇರುವ ಪದ : ಅವಳು ದೊಡ್ಡ ಶ್ರೀಮಂತ ಸಾಹುಕಾರನ ಸಾನಿ (ಹಳ್ಳಿಹಾ. ೮); ರಂಗಸಾನಿಯ ಕಡೆಗೆ ಒಂದು ಅಚೇಯವಾ. . . ತಿರಸ್ಕಾರದಿಂದ ಅವರು ನೋಡಿದರು (ಸಮಜೀ. ೨೨); ಉಳಿದ ಹೆಂಗಸರಿಂದ ಬ' ' ಯೆಂದು ತೋರಿಸುವ ವೃತ್ತಿನಾಮ ಒಂದೇ ಒಂದು – ಸಾನಿ, ಇದು ವೇಶ್ಯೆಯ ಹ ಕೊನೆಗೆ ಇರುತ್ತದೆ (ನಮ್ಮನು. ೨೪೯). 'ನಾಯಕಸಾನಿ' ಪರಾ. ೪. ಹೆಂಗ . ; ಸ್ತ್ರೀ : 'ಮಂತ್ರಸಾನಿ' ಪರಾ.

[< ಸಂ. ಸ್ವಾಮಿನೀ./ ತಮಿ. ಚಾನಿ ; ತುಳು. ತೆಲು. ಸಾನಿ]

ಸಾನಿಗ 'ಸ್ತಾನೀಕ' ನೋ.

ಸಾನು (ನಾ). ೧. ಬೆಟ್ಟದ ಮೇಲಿನ ಮಟ್ಟಸವಾದ ಮೇಲ್ಮೈಯುಳ್ಳ ಹರವಾದ ಪ್ರದೇಶ,— ಪ್ರಸ್ಥಭೂಮಿ : ಮದಮ್ಮೇರಯಕಭಾರಚಂಚರೀಕಮನಿಂದುಕ್ಷೀರ ರುಚಿಯಂ ವೃಷೇಂದ್ರನನಾ ರಮಣೀರತ್ನಮಿರುಳ ಕಡೆಯೊಳ್ ಕಂಡಳ್ (ಶಾಂತಿಪು. ೯-೨೨); ಸಾನುವಿನೊಳಿಱಗಿ ಘನಸಂತಾನಂ ಕಾರ್ಗಾಲದಲ್ಲಿ ಕಱಿವುದು (ಚಂದ್ರಪ್ರ. ೧೦. ೨) ಏರಿದರ್ ದುಃಖಿಗಳ್ ಪರ್ಣಕುಟಿಯರ್ದೆಡೆಗೆ, ರಮ್ಯಸಾನು ಮಹೀಧರೋನ್ನತಿಗೆ (ಶ್ರೀರಾಮಾ. ೧೭೮-೩೩). ೨. (ಬೆಟ್ಟದ) ತುದಿ ; ಶಿಖರ. ೩. ಮೊಳಕೆ ; ಅಂಕುರ ೪. ಕಾಡು; ಅರಣ್ಯ. ೫. ರಸ್ತೆ; ದಾರಿ. ೬. (ಬಂಡೆ, ಬೆಟ್ಟಗಳ) ಕಡಿದಾದ ಕೊರಕಲು; ಕಣಿವೆ; ಪ್ರಪಾತ. ೭. ಬಿರುಗಾಳಿ; ಚಂಡಮಾರುತ ೮. ವಿದ್ವಾಂಸ ; ಪಂಡಿತ. ೯. ಸೂರ್ಯ. [ಸಂ.]

ಸಾನುಕೂಲ (ಗು). ೧. ಸ್ನೇಹದ; ಮೈತ್ರಿಯ. ೨. ಅನುಕೂಲಕರವಾದ; ಸುಗಮವಾದ. ೩. ಸಜ್ಜಾದ; ಸಿದ್ಧವಾದ. (ನಾ). ೪. ಅನುಕೂಲಕರ ವಾದುದು; ಸುಗಮವಾದುದು : ಚಂನಪಟ್ಟ ಮದ್ದೂರು ಸ್ವಾಧೀನವಾದಲ್ಲದೆ ಮುಂದಣ ಯತ್ನ ಸಾನುಕೂಲವಾಗದೂ ಯೆಂದೂ ಪ್ರಸ್ತಾಪವಾದಲ್ಲಿ (ಹೃದಂ. ೪೧).

[ಸಂ.]

ಸಾನುತಳ (ನಾ). ಬೆಟ್ಟದ ಮೇಲಿನ ಸಮತಲಪ್ರದೇಶ : ಮಿತಸಾರೇತರಸಾರ ಮಾಗೆ ವಿಜಯಾರ್ಧಾದೀಂದ್ರದುದ್ದಾಮಸಾನುತಳಂ ತದ್ಭವಂ ತಳಾಮಳಕಮಂಚಾ ಸ್ಫೋಟದಿಂ ಬಂದು . . . ಕೃತಮಾಲಾಮರನಾಥನಂದಱಿಗಿದಂ ಶಾಂತೀಶಪಾದಾಬ್ಜದೊಳ್ (ಶಾಂತಿಪು. ೧೧-೩೫). [ಸಂ. ಸಾನುತಲ]

ಸಾನುನಯ (ಗು). ೧. ವಿನಯದಿಂದ ಕೂಡಿದ; ನಮ್ರ. (ನಾ). ೨. ಅನುನಯ; ವಿಶ್ವಾಸ : ಆಭರಣವನುಲೇಪನಾದಿಗಳ ಸಾನುನಯದಲಿ ಪಾಂಡುಪುತ್ರರ ಮಾನಿನಿಗೆ ಕೊಡಿ (ಕುವ್ಯಾಖ. ೨೨-೭). [ಸಂ.]

ಸಾನುನಾಸಿಕ (ಗು). ೧. ಮೂಗಿನಿಂದ ಉಚ್ಚರಿಸಬೇಕಾದ; ಅನುನಾಸಿಕದ ಉಚ್ಚಾರವುಳ್ಳ. (ನಾ). ೨. [ವ್ಯಾಕ] ಅನುನಾಸಿಕದಿಂದ ಕೂಡಿದುದು : ವಕಾರವನ್ನು ಸಾನುನಾಸಿಕವಾಗಿ ಉಚ್ಚರಿಸಿದುದನ್ನು ಕಂಡು ಗೇಲಿಮಾಡಲು ವಕಾರ ಯುಕ್ತವಾದ ಪದಗಳನ್ನೆಲ್ಲ ಒಟ್ಟಿಗೆ ಸೇರಿಸಿ ಹೇಳಿದ ಮಾತು ಇದು (ಸುವರ್ಣ. ೧೫೬); ಒಂದೇ ಕಾಲದಲ್ಲಿ . . . ಗಕಾರವು (ತಾನು) ಒಂದೇ ಆಗಿದ್ದುಕೊಂಡೇ ಉದಾತ್ತವೂ, ಅನುದಾತ್ತವೂ, ತ್ವರಿತವೂ, ಸಾನುನಾಸಿಕವೂ, ನಿರನುನಾಸಿಕವೂ (ಆಗಿದೆ) (ಬ್ರಹ್ಮಭಾ. ೪೭೨). [ಸಂ.]

ಸಾನುಪ್ರದೇಶ (ನಾ). = ಸಾನುತಳ : ಹೇಮಕೂಟಾದ್ರಿಯ ಸಾನುಪ್ರದೇಶಗಳಲ್ಲಿ ಬೆಳೆದ ಸುಗಂಧಪೂರಿತ ಹೂಗಿಡಗಳ ಮೇಲೆ ಬೀಸಿ ಬಂದ ತಂಗಾಳಿ ಗ್ರಹಣೇಂದ್ರಿಯಕ್ಕೆ ಚೇತೋಹಾರಿಯಾಗಿತ್ತು (ರಾಜ್ಞೋದ. ೯೯). [ಸಂ.]

ಸಾನುಭವ (ಗು). ೧. ಅನುಭವದಿಂದ ಕೂಡಿದ; ಫಲಸಿದ್ಧಿಯನ್ನು ಹೊಂದಿದ (ಕ). (ನಾ). ೨. ಫಲಾನುಭವ; ಫಲಸಾಧನೆ : (ಕ). [ಸಂ.]

ಸಾನುಭಾವ (ಗು). ಅನುಭಾವದಿಂದ ಕೂಡಿದ; ಆತ್ಮಾನುಭವವನ್ನು ಹೊಂದಿದ : ರೂಢಶಿವಲಿಂಗಪ್ರಯೋಗಾಲೀಢಚಿತ್ತನು ಸಾನುಭಾವಪ್ರೌಢನ್ (ಬುಪು. ೩೩-೨). [ಸಂ.]

ಸಾನುಭೂತಿ (ನಾ). ಇತರರ ಕಷ್ಟಕ್ಕೆ ಮರುಗುವ ಸ್ವಭಾವ; ಸಹಾನುಭೂತಿ ಅನುಕಂಪ : ಪರಬೊಮ್ಮನಾ ವಿಧಿಯ ನೇಮಿಸಿಹುದೀತಕೆನೆ ನರಜಾತಿ ಸಾನುಭೂತಿ ಕಲಿಯಲೆಂದು (ಮಂಜಕ. ೧೫೭). [ಸಂ.]

ಸಾನುರಾಗ (ಗು). ೧. ಅನುರಾಗದಿಂದ ಕೂಡಿದ. (ನಾ). ೨. ಅನುರಾಗ ; ಪ್ರೀತಿ : ಸಾನುರಾಗಂ ಕೊನರ್ದು ಕೊನರ್ದಾ ಶಿವಶರಣರಂ ಕಂಡು ಕಂಡುಬ್ಬಿ (ಬಸಪು. ೩೫-೩) ; ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೊ ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು (ಪುರಂದ. ೧-೧೬ ಪಲ್ಲವಿ). [ಸಂ.]

ಸಾನೂದ್ಯಾನ (ನಾ). ಬೆಟ್ಟದ ಸಾನುಪ್ರದೇಶದಲ್ಲಿರುವ ತೋಟ,– ಉದ್ಯಾನವನ : ಸಾನೂದ್ಯಾನಪ್ರತಾನಂ . . . ನಾನಾರತ್ನಪ್ರಕೂಟಪ್ರಕರದಿನೆಸೆದಿ ರ್ಪೂರ್ಜಯಂತಕ್ಕೆ ಬಂದಾ ಭೂನಾಥರ್ ಸೇವ್ಯಮಪ್ಪಾ ನಗದ ವಿಭವಮಂ ನೋಡುತುಂ ಬಂದರೆಲ್ಲಂ (ನೇಮಿಪು. ೭-೧೩). [ಸಂ.]

ಸಾನೆಟ್ 'ಸಾನೆಟ್ಟು' ನೋ.

ಸಾನೆಟ್ಟು, **ಸಾನೆಟ್** (ನಾ). (ಪಾಶ್ಚಾತ್ಯರ ಪ್ರೇರಣೆಯಿಂದ ಆವಿಷ್ಕಾರಗೊಂಡ) ಒಂದೇ ಭಾವವನ್ನು ಹೊಂದಿರುವ, ಹದಿನಾಲ್ಕು ಸಾಲುಗಳ, ವಿವಿಧ ಅಂತ್ಯಪ್ರಾಸವನ್ನುಳ್ಳ ಒಂದು ಪದ್ಯಪ್ರಕಾರ ; ℙ ಇದನ್ನು ಅಷ್ಟಷಟ್ಪದಿ, ಚತುರ್ದಶಪದಿ, ಸುನೀತ ಎಂದೂ ಕರೆಯುತ್ತಾರೆ : ಸಾನೆಟ್ಟಿನ ಒಂದು ಮುಖ್ಯ ಅಗತ್ಯವೆಂದರೆ ಒಂದೇ ಒಂದು ಆಲೋಚನೆಯನ್ನು ಉದ್ದಕ್ಕೂ ಬೆಳಸಿಕೊಳ್ಳಬೇಕು ಎಂಬುದು (ಭಾವಗೀ. ೭೧); ಮೂರು ಸಾನೆಟ್ಟುಗಳು ವಿಶ್ವವಿದ್ಯಾಲಯಕ್ಕೆ ಮುಡಿಪಾಗಿವೆ (ನೆಲಮು. IX ನಾಲ್ಕುಮಾತು). **ಸಾನೆಟ್** : ಸಾನೆಟ್ ಪ್ರಾರಂಭವಾದದ್ದು ಪ್ರಣಯ ಗೀತೆಯಾಗಿ (ಭಾವಗೀ. ೭೨). [← ಇಂ. Sonnet]

ಸಾನ್ನಾಯ್ಯ (ನಾ). ಯಜ್ಞಯಾಗಾದಿಗಳಲ್ಲಿ ಅಗ್ನಿಗೆ ಅರ್ಪಿಸುವ ಹವಿಸ್ಸು ; ಚರು : "ಹವಿ ಸಾನ್ನಾಯ್ಯಂ ಚರು" (ವಸ್ತುಕೋ. ೫೯-೪೨) ; ಜಳದಿಂದಂ ಬಳಮಂ . . . ಚಂದ್ರಿಕೋಜ್ಜ್ವಳಸಾನ್ನಾಯ್ಯದಿನಿಂದುಲಕ್ಷ್ಮಿಯನುದಂಚದ್ದೀಪದಿಂ ಕಾಂತಿಯಂ ವಿಳಸದ್ದೂಪದಿನೈಷ್ಯಮಂ ಫಲದಿನವ್ಯಾಬಾಧೆಯಂ ಮಾಡುಗುಂ (ಶಾಂತಿಪು. ೧೦-೫೫).

[ಸಂ.]

ಸಾನ್ನಿಧ್ಯ (ನಾ). ಹತ್ತಿರದಲ್ಲಿರುವಿಕೆ; ಸಾಮೀಪ್ಯ : ಕೂಡಲಸಂಗನ ಪ್ರಸಾದ ಸಾನ್ನಿಧ್ಯದಿಂದ ಭವಜನಕರ್ಮ ಪಂಚಭೂತಪೂರ್ವನಾಸ್ತಿ (ಬಸವ. ೮೩೪); ವಧ್ಯಚಿಹ್ನಂಗಳಿಂದೆಸೆದು ಸಾನ್ನಿಧ್ಯದಲಿ ನಲಿವಾತ್ಮಜನ ಸದುಬುಧ್ಯನುಮತಿಗೆ ಮೆಚ್ಚಿ ಮಾತಾಪಿತರು ಹರುಷದಲಿ (ಬಸಪು. ೨೪-೨೦); ನಿನ್ನೊಳ್ಪದಾ ಕೃಪಾನಿಧಿಯ ಸಾನ್ನಿಧ್ಯಮಿರುತಿರಲಾಗಿ ವಾಜಿಮೇಧಂ ಬೇಹುದೆ (ಜೈಮಿಭಾ. ೧೦-೧೯). [ಸಂ.]

ಸಾಪ್ 'ಸಾಫ್ಪ್' ನೋ.

ಸಾಪ, ಶ್ರಾಪ, ಸಾಪಣಿ, ಸಾಪಳ (ನಾ). ಕೆಡುಕಾಗಲೆಂದು ಬಯಸಿ ಹೇಳುವ ಮಾತು; **ಶಾಪ** : ಬಿದಿ ಸಾಪಮನಿತ್ತುದಱಿಂ ಬಿದಿರ್ಗಳ್ ಫಲಮಾಗಲೊಡನೆ ಸಾವುವು ಧರೆಯೊಳ್ (ಧರ್ಮಾಮೃ. ೩-೧೭೦); ಶಾಪ – ಸಾಪ, ಶಾರೀರ – ಸಾರೀರ (ಶಮದ. ೨೫೩ ಪ್ರಯೋ); ಗೆಂಟಿನೊಳ್ ದುಮ್ಮಾನದಿಂ ತಾರಿ ಲೋಕಮನೆ ಪಗೆವೊಂದು ರೋಸಮುಂ, ಬಿದಿ ನಿನಗೆ ಬರೆದಿಟ್ಟ ಸಾಪಮಾದುದು (ಸಂಸಪ. ೨೩-೧೮). **ಶ್ರಾಪ** : 'ಶ್ರಾಪಿಸು' ಪರಾ. **ಸಾಪಣಿ** : ಆತನಂ ನಿಂದಿಸಿದೊಡೊದಗಲಹುದವನ ಸಾಪಣಿಯೆಂದು ಮತ್ತನಿತು ಚದುರಿಂದ ಪಲ್ಲಿಸಿದು ನೆರೆದಜ್ಞರಂ ನಗಿಸಿ ನಗುತಿರ್ಪ ಸಮಯದಲ್ಲಿ (ಮಹಾಂತೇ. ೯-೩೨). **ಸಾಪಳ** : ಇತರರೂ ಬಸ್ಸಿನವನಿಗೆ 'ಸಾಪಳ' ಹಾಕಿದರು (ಸರ್ವಮಂ. ೪೬).

ಸಾಪದಕ್ಕರ = ಶಾಪದ ಮಾತು : ಪೊಱಮಡುವ ಸಾಪದಕ್ಕರದ ಪೊಯ್ಲಿಂಗೆ ನಡುಗುವಂತೆ ಕೆತ್ತುವ ತುಟಿಯುಂ . . . ಅಂಜಿಕೆಯಂ ಪುಟ್ಟಿಸೆ (ಕಬ್ಬಿಕಾ. ೩೧೦).

[< ಸಂ. ಶಾಪ]

ಸಾಪಂಗೊಳು (ಕ್ರಿ). ಶಾಪವನ್ನು ಹೊಂದು, – ತಾಳು : ಸಪಿಸಲಾನೆಲ್ಲಿ? ಸಾಪಂಗೊಳುವ ತಾವೆಲ್ಲಿ? (ಹಬ್ಬರ. ೩೪-೯). [ಸಾಪ + ಕೊಳು (< ಕೊಳ್$_1$)]

ಸಾಪಂದಳಿ (ಕ್ರಿ). = ಸಾಪಂಗೊಳು : ಅನ್ನೆಗಮಿತ್ತಲಾ ಬಾಂದೊಱೆದಲೆಯನ ಸಾಪಂದಳೆದು ಬಂದು ನೀನೀ ಪೂವಿನ ಪೊಟಲೊಳ್ ನನೆಯಂಬನೆಂಬರಸಾದೆ (ಕಬ್ಬಿಕಾ. ೩೧೯). [ಸಾಪ + ತಳ್$_1$]

ಸಾಪಣಿ 'ಸಾಪ' ನೋ.

ಸಾಪತಿಕರಿಸು (ಕ್ರಿ). ಜೊತೆ ಸೇರಿ ಕರುಣೆಯನ್ನು ತೋರಿಸು : ಸಾಪತಿಕರಿಸಿ ಕೊಂಡಿದ್ದೊಡೆಯನನು ಕರೆ ಕೊಲೆಗರುಹ ನೀನಲ್ಲ ಸಾರೆಂದ (ತೋರರಾ. ೬-೧೪-೬).

[< ಸಹ$_2$ + ಪತಿಕರಿಸು]

ಸಾಪತ್ನ (ಗು). ೧. ಸವತಿಗೆ ಸಂಬಂಧಿಸಿದ ಅಥವಾ ಸವತಿಯಿಂದುಂಟಾದ. (ನಾ). ೨. ತಂದೆಯ ಬೇರೆ ಹೆಂಡತಿಯ ಮಗ ; ಮಲತಾಯಿಯ ಮಗ : "ಉಪಮಾತೆಯೆನೆ ಬಲದಾಯೆನಿಕ್ಕುಮಾಕೆಗೆ ಪುಟ್ಟಿದಾತ ದಾಯಾದ್ಯನಾ ಸಾಪತ್ನನಕ್ಕು" (ಮಂಗರಾ. ೯೨-೧೨). ೩. ಅಣ್ಣತಮ್ಮಂದಿರ ಮಕ್ಕಳು; ದಾಯಾದಿ : ಸಾಪತ್ನರಲಿ ಸದರವ ಕಾಣೆ (ಕುವ್ಯಾಆ. ೮-೬). ೪. ಹಗೆ; ಶತ್ರು : ಜಲದೊಳ್ ಪುಟ್ಟಿದ ವಸ್ತುವಿಂ ಪೆಱರ ಪೊನ್ನಿಂ ಭೋಗಿ ಸಾಪತ್ನರಂ ಗೆಲಲಾರ್ಪಂ . . . ಮೀನಾಲಯಪ್ರೋದ್ಭವಂ (ಜಾತತಿ. ೧೭-೧೨); ಅರಸುಕುಲದಲಿ ಹುಟ್ಟಿ ಸಾಪತ್ನರು ಗಳಿರೆ ದೇಹಾಭಿಲಾಷೆಯಲುರಗನಂ ತೊಳಗಿಹುದು ಧರ್ಮವೆ (ಕುವ್ಯಾಉ. ೩-೨೨).

[ಸಂ.]

ಸಾಪತ್ನಕ (ನಾ). ೧. ದ್ವೇಷ; ಹಗೆತನ. ೨. ಮಲತಾಯಿಯ ಮಗ; ಬಲಸೋದರ : ಅಕಟ ಲಕ್ಷ್ಮಣದೇವ ರಘುನಾಯಕನ ಮರಣದ ನುಡಿ ನಿನಗೆ ರಂಜಕವೆ . . . ಸಾಪತ್ನಕವಿವೇಕಕೆ ಸೊಗಸ ತಂದೈ (ತೊರರಾ. ೩-೯-೫). [ಸಂ.]

ಸಾಪತ್ನಿ (ನಾ). ಸವತಿ; ಸಹಪತ್ನಿ : ತವೆ ಸಾಪತ್ನಿಯರಾದ ಸಾಲ ಮಧುಪಾನಂ . . . ಸೂಳೆಯರೊಳೊಲ್ದಿರ್ಪಾಟಮಿಂತೆಲ್ಲ ಮುಂ ಸವಿಯಾಗಂತ್ಯದಿ ಕಷ್ಟವೈ (ಸೋಮೇಶ. ೨೪). [ಸಂ. ಸಾಪತ್ನೀ]

ಸಾಪತ್ನಿಕ (ನಾ). ಹಗೆ; ಶತ್ರು: ಎನಗಿಂ ಸ್ವೇಚ್ಛಾವಿಹಾರವ್ಯತಿಕರವೊಗೆದತ್ತೇಕೆ ಗೋವಿನ್ದದಂಡೇಶನ ಚಿತ್ತಂ ದೃಪ್ತಸಾಪತ್ನಿಕಬಳದಳನೋದ್ರೇಕದೊಳ್ತಳ್ತುದು (ಎಕ. VII, ಶಿಕಾರಿ. ೧೩೭-೩೦; 1114). [< ಸಾಪತ್ನಕ]

ಸಾಪತ್ನ್ಯ (ನಾ). ೧. ಸವತಿಯಾಗಿರುವಿಕೆ; ಸಹಪತ್ನಿಯಾಗಿರುವಿಕೆ. ೨. ಸವತಿಯ ಮಗ : "ಸವತಿಯ ತನಯಂ ಸಾಪತ್ನ್ಯನಂತವಂ ದಾಯಾದ್ಯಂ" (ವಸ್ತುಕೋ. ೫೫-೧೯). ೩. ಅಣ್ಣ ತಮ್ಮಂದಿರ ಮಕ್ಕಳು ; ದಾಯಾದಿ ; ಜ್ಞಾತಿ: ಭರತಾನ್ವಯದೊಳಂದಿನಿಂದುವರೆಗಂ ಸಾಪತ್ನ್ಯರೊಳ್ [ಪಾಠಾಂ. ತ್ನರೊಳ್, ತ್ನ್ಯದೊಳ್] ಬದ್ಧಮತ್ಸರದಿಂದೆಮ್ಮನಕಾರಣಂ ಕದಡಿದ್ಕೆ (ಗದಾಯು. ೭-೯). ೪. ಹಗೆ ; ಪ್ರತಿಸ್ಪರ್ಧಿ. ೫. ಹಗೆತನ; ವೈರ. [ಸಂ.]

ಸಾಪತ್ರ (ನಾ). ಒಟ್ಟಾಗಿ ಬರೆದುಕೊಟ್ಟ ಪತ್ರ : ಮಾಚಣ್ಣಗೌಡಮಾರಮತಿಪೆನಾಯ್ಕ ಮಾರಿಶೆಟಮಾರತಂಮ ಪಾಪಿನಾಯ್ಕ ಯಿ ನಾಲ್ವರಿಗೆ ಕೊಟ ಸಾಪತ್ರ ನೀಉ ನಮ್ಮ ಕಯ್ಯ ಕೊಂಡ ಕುದುರೆಯ ಗ ೬೫ ಹೊನ್ನ ಪತ್ರ ಹೋಯಿತಾಗಿ ಆ ಪತ್ರ ಸಾಪತ್ರ (ಎಕ. X, ಗೋರೀಬಿ. ೬೬-೨; ಸು. 1700). [< ಸಹ$_2$ + ಪತ್ರ]

ಸಾಪರಾಧ (ಗು). ಅಪರಾಧದಿಂದ ಕೂಡಿದ ; ತಪ್ಪನ್ನು ಮಾಡಿದ : ಮುಂದೊಂದು ಮಂದಿರದಲ್ಲಿ ಸಾಪರಾಧನಾಯಕಂ ತಿಳುಪುತ್ತಿರೆ ಖಂಡಿತೆಯಖಂಡಿತೇರ್ಷೆಯಿಂ ನೋಡಿ . . . ನಂಬಲಕ್ಕುಮೇ ಎಂಬಳ ನುಡಿಗೇಳುತ್ತಿರ್ಪಿನಂ (ರಾಜಶೇ. ೧೧-೧೨೮ ವ). [ಸಂ.]

ಸಾಪಳ 'ಸಾಪ' ನೋ.

ಸಾಪಿಂಡ್ಯ (ನಾ). ಸಮಾನಪಿತೃಗಳಿಗೆ ಪಿಂಡಪ್ರದಾನಮಾಡುವುದರಿಂದ ಇರುವ ಸಂಬಂಧ; ರಕ್ತಸಂಬಂಧ; ಜ್ಞಾತಿತ್ವ : ಸಾಪಿಂಡ್ಯವು ಮೂಲಪುರುಷನಿಂದ ಏಳುತಲೆಯವರೆಗೂ ಇರುವುದು (ಆರ್ಯಧ. ೧೧೫). [ಸಂ.]

ಸಾಪಿಸು, ಶ್ರಾಪಿಸು (ಕ್ರಿ). ಶಾಪವನ್ನು ಕೊಡು; ಶಪಿಸು : ಕಟ್ಟೆಯಿಂದಿಳಿದೇಱಿ ಕಯ್ಯೆತ್ತಿ ಸಾ[ಪಾಠಾಂ. ಶಾ, ಕೋ]ಪಿಸುತೆ ಕೆಟ್ಟೆನಿವರಿಂದೆನುತೆ ಕೈನೀಡಿ ಸಾ [ಪಾಠಾಂ. ಶಾ, ಕೋ] ಪಿಸುತೆ (ತಿರುರ. ದೇ. ೧೯-೧); ನೀರನಿಳಿದು ನೆಲವೊಯ್ದು ಧೂಳೆತ್ತಿ ಹೆಮ್ಮಾರಿಯ ಸಾ[ಪಾಠಾಂ. ಶ]ಪಿಸುತಳಲು ತೋರದನಿಯ ಕಲಕಲದಿಂ ಮಸಣದ ದಾರಿಯಳಲ ಪುಟ್ಟಿಸಿದುದು (ಶ್ರೀಪಾಲ. ೮-೪). **ಶ್ರಾಪಿಸು** : ಈಗಾಗಳೆ ತನ್ನ ಹೆಸರಲ್ಲೆ ಶ್ರಾಪಿಸಿ ಕಲ್ಲೊಗೆಯುವದೆಂದರೆ ಮನೆಯಲ್ಲಿ ನಿತ್ಯಕ್ರಮವಾಗಿದೆ (ಅನ್ನ. ೧೪೬).

[ಸಾಪ + - ಇಸ್ಸು$_3$]

ಸಾಪು 'ಸಾಫು' ನೋ.

ಸಾಪುಗಾರ (ನಾ). ಶುಚಿಗೊಳಿಸುವವನು; ಶುದ್ಧಿಮಾಡುವವನು : ಆದರೆ ಈ ಟೇಬಲ್ ಸಾಪುಗಾರರು ಮಾತ್ರ ಮಾಣಿಗಳಿಗಿಂತ ಕಡಿಮೆದರ್ಜೆಯವರು (ಮೂಗಾಪ್ರ. ೫೭). [ಸಾಪು (< ಸಾಪು) + - ಗಾರ (< - ಕಾಱ)]

ಸಾಪುನಾಣ್ಯ (ನಾ). ಸವೆದು ನುಣುಪಾಗಿ, ಚಲಾವಣೆಯಾಗದ ಸ್ಥಿತಿಗೆ ಬಂದ ನಾಣ್ಯ; ಸವಕಲುನಾಣ್ಯ : ಧರ್ಮ ನೀಡುವವರಿದ್ದ ಹಾಗೆಯೇ ಬೈದು ಕಳಿಸುವವರಿದ್ದರು; 'ಸಾಪು' ನಾಣ್ಯಗಳನ್ನೆಸೆಯುವವರೂ ಇದ್ದರು (ಬಸಸಿ. ೯೭).

[ಸಾಪು (< ಸಾಪು) + ನಾಣ್ಯ (< ನಾಣಯ)]

ಸಾಪೇಕ್ಷ (ಗು). ೧. (ಪರಸ್ಪರ) ಅವಲಂಬಿಸಿರುವ; ಪೂರಕವಾದ. ೨. ಪಕ್ಷಪಾತವುಳ್ಳ. (ನಾ). ೩. (ಪರಸ್ಪರ) ಅವಲಂಬಿಸಿರುವುದು; ಪೂರಕವಾದುದು : ಇಂತು ವಿಶೇಷ್ಯಂ ಕ್ರಿಯೆಯುಂ ಸಂತಂ ನೋಟ್ಟುದಱಿನಕ್ಕುಮದು ಸಾಪೇಕ್ಷಂ ಚಿಂತಿಸೆ ಸಮಾಸಮಂ ಪೇಟ್ಟಂತಪ್ಪ ಪದಂ ಸಮರ್ಥಮಲ್ತಪ್ಪುದಱಿಂ ಸಮನಿಸೆ ಸಾಪೇಕ್ಷಮುಮಾ ಸಮಾಸಮುಂ ಪೆಱಗುಮೆಲ್ಲಿಯಾನುಂ ಗಮಕಂ ಕ್ರಮಮದಱೊಳೆಲ್ಲಮೆನಲಿನಿತು ಮಾರ್ಗದೊಳ್ ಸಮಱುಗಿಂತು ಕವಿವೃಷಭರ್ಕಳ್ (ಕವಿರಾ. ೨-೯೪, ೯೫); ಇವೆ ಮಹಾಮಂತ್ರಾಸ್ತ್ರಸಂತತಿಯಿವೆ ಮಹಾಧನುರಾಜ್ಯ ಸತ್ಕೃತಿಸವನಸಾಪೇಕ್ಷಂಗಳಿವೆ (ಶಿವಾಗ. ೪-೩೬). [ಸಂ.]

ಸಾಪೇಕ್ಷಕ (ನಾ). = ಸಾಪೇಕ್ಷ ೩ : ಆಗ ಮೊದಲನೆಯವನಿಗೆ ಸಾಪೇಕ್ಷಕವಾಗಿ ಎರಡು ಮತ್ತು ಮೂರನೆಯವರ ವೇಗವು ತಾಸಿಗೆ ಮೂರು ಮತ್ತು ಹತ್ತು ಮೈಲಿಗಳು. ಆದರೆ ಎರಡನೆಯವನಿಗೆ ಸಾಪೇಕ್ಷವಾಗಿ ಮೂರನೆಯವನ ವೇಗವು ಏಳು ಮೈಲಿಗಳು (ಜ್ಯೋತಿರ್ವಿ. ೨೭ ಅಡಿಟಿ). [ಸಂ.]

ಸಾಪೇಕ್ಷಕ್ರಿಯಾರೂಪ (ನಾ). [ವ್ಯಾಕ] "ತಮ್ಮ ಅರ್ಥವನ್ನು ಪೂರ್ತಿ ಮಾಡುವುದಕ್ಕಾಗಿ ಬೇರೆ ಕ್ರಿಯಾಪದಗಳ ಸಹಾಯವನ್ನು ಅಪೇಕ್ಷಿಸುವ ಕ್ರಿಯಾರೂಪಗಳಿಗೆ ಸಾಪೇಕ್ಷಕ್ರಿಯಾರೂಪಗಳೆಂದು ಹೆಸರು" (ಮಧ್ಯಮ. ೭೪).

[ಸಂ.]

ಸಾಪೇಕ್ಷವಾದ (ನಾ). = [ವಿಜ್ಞಾ] ಪರಸ್ಪರಾವಲಂಬನೆಯ ಸಿದ್ಧಾಂತ: ಈ ಸಾಪೇಕ್ಷವಾದ (Relativity Theory)ವು ವಿಜ್ಞಾನವನ್ನು ತತ್ವಶಾಸ್ತ್ರಕ್ಕೆ ಮತ್ತಷ್ಟು ಸಮೀಪ ಮಾಡಿದೆ (ಬಾಲಪ್ರ. III, ೧೩೬೬); ಈಗ ಸಾಪೇಕ್ಷವಾದದ ಈ ಯುಗದಲ್ಲಿ ಯಾವುದೇ ಒಂದು ಭಾವವನ್ನು ಅತಿ ಸರಳಗೊಳಿಸಿ ಅದರ ಇತರ ಮುಖಗಳಿಂದ ಪ್ರತ್ಯೇಕಿಸಿ ನೋಡುವುದು ಪ್ರತಿಭಾವಂತನಿಗೆ ಅಸಾಧ್ಯ (ಎಮುಕ. IX, ಮುನ್ನುಡಿ). [ಸಂ.]

ಸಾಪೇಕ್ಷೆ (ನಾ). ಅಪೇಕ್ಷೆಯಿಂದ ಕೂಡಿರುವಿಕೆ; ಬಯಕೆಯನ್ನು ಹೊಂದಿರುವಿಕೆ: ರಾಯನೀ ಪರಿ ನುಡಿದು ಜನಸಮುದಾಯವನು ಕಳುಹಿದನು ಸುಮನೋಭೂಯ ಸಾಪೇಕ್ಷೆಯ ಸಮಾಧಿಯೊಳಿರಲು ರಾತ್ರಿಯಲಿ (ಶಿವಾಅ. ೨೧-೬೩).

[ಸಂ. ಸಾಪೇಕ್ಷ]

ಸಾಪ್ತಪದೀನ (ನಾ). ೧. ವಧೂವರರು ವಿವಾಹದ ಸಂದರ್ಭದಲ್ಲಿ ಏಳು ಹೆಜ್ಜೆಗಳಲ್ಲಿ ಜೊತೆಯಾಗಿ ಅಗ್ನಿಯನ್ನು ಪ್ರದಕ್ಷಿಣೆ ಮಾಡುವುದು; ಸಪ್ತಪದಿ. ೨. ಸ್ನೇಹ; ಸಖ್ಯ : "ಸ್ನೇಹಮಜರ್ಯಂ . . . ಸಾಪ್ತಪದೀನಂ ಸೌಹೃದಮದು" (ಪಕ್ಷಿಕೋ. ೧೧೧-೪). [ಸಂ.]

ಸಾಪ್ತಾಹಿಕ (ಗು). ೧. ಏಳುದಿನಗಳಿಗೆ ಸಂಬಂಧಿಸಿದ: ಸಾಪ್ತಾಹಿಕ ಪುರವಣಿಯಲ್ಲಿ ಬಂದಿರುವ ವಿಶೇಷ ಲೇಖನ ಚೆನ್ನಾಗಿದೆ (ರೂಢಿ). (ನಾ). ೨. ವಾರಕ್ಕೊಮ್ಮೆ ಪ್ರಕಟವಾಗುವ ಪತ್ರಿಕೆ; ವಾರಪತ್ರಿಕೆ : ಸಾಪ್ತಾಹಿಕಗಳು ತುಂಬ ಜನಪ್ರಿಯವಾಗಿವೆ (ರೂಢಿ). [< ಸಂ. ಸಪ್ತಾಹ. / ಮರಾ. ಹಿಂ. ಸಾಪ್ತಾಹಿಕ್]

ಸಾಫ್$_1$ 'ಸಾಪು' ನೋ.

ಸಾಫ್$_2$ 'ಸಾಫ$_2$' ನೋ.

ಸಾಫ$_1$ 'ಸಾಪು' ನೋ.

ಸಾಫ$_2$, ಸಾಪ್, ಸಾಫ್$_2$ (ಅ). ೧. ಸ್ಪಷ್ಟವಾಗಿ ; ನೇರವಾಗಿ : ಬಾಪೂಸಾಹೇಬ ಅವರಿಗೆ ಭೂಮಿ ಮತ್ತು ವಾಡೇದ ಕಬಜಾ ಕೊಡಲಿಕ್ಕೆ ಸಾಫ ಒಲ್ಲೆಂದಾಗ, ಆ ಹೆಣ್ಣುಮಗಳು ಏನು ಮಾಡಬೇಕು? (ಗ್ರಾಮಾಯ. ೩೦೪) ; ಇಪ್ಪತ್ತರ ಮೇಲೆ ತಕ್ಕೊಂಡರೆ ನಾಲ್ವತ್ತೆಂಟು, ನೂರದ ಮೇಲಿದ್ದರೆ ನಾಲ್ವತ್ತೇಳರಂತೆ ಭಾವ ಬಿದ್ದೀತೆಂದು ಸಾಫ ಹೇಳುತ್ತಾರೆ (ಮುಂಬಪ್ರಾ. ೬೨); ನೀ ನನ್ನ ಕಡೆ ಬಂದು . . . ನನಗ ರಾಜಾನ ಪಾರ್ಟ ಕೊಡು ಅಂದರ, ನಾ ಸಾಫ ಒಲ್ಲೆ ಅಂತೇನಿ (ಗಂಮಾಯ. ೨೧೬). **ಸಾಪ್** : ೨. ಪೂರ್ಣವಾಗಿ; ತೀರಾ: ಮೈಯಿಂದ ಸಾಪ್ ಇಳಿದುಹೋಗಿದ್ದಾಳೆ (ಮೂರುದಾ. ೬೮). **ಸಾಫ್$_3$** : ೧. ಇದು ನೋಡು, ಹಾಂಗ ಸಾಫ್ ಒಡದು ಹೇಳಬ್ಯಾಡಾ (ಹೊಸಂಸಾ. ೧೫೯).

ಸಾಫ್‌ಸಾಫ್ ಹೇಳು = ಸ್ಪಷ್ಟವಾಗಿ ಹೇಳು ; ನೇರವಾಗಿ ನುಡಿ : ಇವತ್ತ ಸಂಜೆಗೆ ಡಾಕ್ಟರು ಬರ್ಲಿ, ಸಾಫ್ ಸಾಫ್ ಹೇಳಿ ಬಿಡತೇನಿ (ಹೊಸಂಸಾ. ೧೫೯).

[← ಅರ. ಹಿಂ. ಮರಾ. ಸಾಫ್]

ಸಾಫಲ್ಯ (ನಾ). ೧. ಸಾರ್ಥಕತೆ; ಸಫಲತೆ: 'ಜನ್ಮಸಾಫಲ್ಯ' ಪರಾ. ೨. ಸಫಲವಾದುದು ; ಸಾರ್ಥಕವಾದುದು ; ಯಶಸ್ವಿಯಾದುದು : ಎಮ್ಮೆಯ ಪುಣ್ಯವೆಮ್ಮ ಜನನಂ ಸಾಫಲ್ಯವು (ಗಿರಿಕ. ೪-೪೧) ; ಇಂದಾನು ಕೃತಕೃತ್ಯನಾದೆನ್ನಯ ಜನ್ಮವಿಂದು ಸಾಫಲ್ಯವಾಯ್ತು (ಹಚಕಾ. ೫-೩೪). [ಸಂ.]

ಸಾಫಲ್ಯತ್ವ (ನಾ). ಸಫಲತೆಯನ್ನು ಹೊಂದಿರುವಿಕೆ; ಸಾರ್ಥಕತೆ : ಎನಿತು ಪುಣ್ಯಂಗೆಯ್ದೆವೋ ಮಜ್ಜನನ ಸಾಫಲ್ಯತ್ವವಾಯ್ತೆಂದೆನುತ ಹೇಳುತ ಬೆಸಗೊಳುತ ಜನರೆಯ್ದೆ ಕೀರ್ತಿಸಲು (ಬಸಪು. ೫-೫೧). [ಸಂ.]

ಸಾಫು, ಸಾಪು, ಸಾಫ್$_1$, ಸಾಫ$_1$ (ನಾ). ೧. ಶುಭ್ರವಾದುದು; ಶುಚಿಯಾದುದು; ಸ್ವಚ್ಛವಾದುದು : (ಕೆ). ೨. ರೋಗವಿಲ್ಲದುದು; ನಿರೋಗಿಯಾದುದು : (ಕೆ). ೩. ಸಮತಲವಾದುದು; ಹಳ್ಳತಿಟ್ಟುಗಳಿಲ್ಲದುದು: ಸಾಫಾಗ್ ಅಳ್ಳ ತಿಟ್ಟಲ್ಲಂಗೆ ಮಡಿಕೇರೀಲಿ ಮಂಜು! (ಕನ್ನಡಾ. ೧೦೮). ೪. ಸರಳವಾದುದು; ನಿಷ್ಕಪಟವಾದುದು : ನಮ್ಮಣ್ಣನ ಹತ್ತಿರ ಬರುವವರಲ್ಲೆಲ್ಲ ನೀವು ಒಬ್ಬರು ಸಾಫಾಗಿ ಮಾತನಾಡಿ ಅವರಿಗೆ ಒಳ್ಳೆಯದಾಗಲಿ ಎಂತ ನಿಜವಾಗಿ ಕಷ್ಟಪಡುತ್ತೀರಿ (ಶಿವಧ. ೩೪). ೫. ಸುಲಭವಾದುದು; ಸಲೀಸಾದುದು : ಸ್ನಾನಸಮಯದಲ್ಲಿ ಹೊಟ್ಟೆಯನ್ನು ಕಸುವಿನಿಂದ ತಿಕ್ಕಿದರೆ ಶೌಚಕ್ಕೆ ಸಾಫಾಗುತ್ತದೆ (ಬ್ರಹ್ಮಜ್ಞಾ. ೧೨೫). ೬. ಪೂರ್ತಿಯಾದುದು; ಸಮಗ್ರವಾದುದು; ಪರಿಷ್ಕಾರವಾದುದು : (ಕೆ). ೭. ನಾಶ; ಹಾನಿ: (ಕೆ). **ಸಾಪು** : ೧. 'ಸಾಪುಗಾರ' ಪರಾ. ೩. "ಸಾಪು ; ನೆಲಸಮ" (ಕನ್ನಡಾ. ೨೧೧); ರಥ ಬರುವ ರಭಸಕ್ಕೆ ಗುಂಡುಕಲ್ಲು ತಗ್ಗು ಮಿಟ್ಟೆ ಗಿಡ ಸಾಪಾಗಿ ಕುಂಬಾರನ ಚಕ್ರದಂತೆ ತಿರುಗಲು ಭೂಮಿ (ಕರ್ಣಾಕ. ೨೯೪). ೮. ಸವೆದು ನುಣುಪಾದುದು: 'ಸಾಪುನಾಣ್ಯ' ಪರಾ. ೯. ಸರಿ ; ಸ್ಫುಟ. **ಸಾಫ್$_1$**: (ಗು). ೧೦. ನೇರವಾದ ; ಸುತ್ತುಬಳಸಿಲ್ಲದ : ನಾವು ಅಲ್ಲೆಲ್ಲ ಸಾಫ್ ಯುದ್ಧಮಾಡಿ ಕಪ್ಪ ತೆಗೆದುಕೊಂಡೇ ಬಂದೆವು (ಸಾಲ್ಕುಕ. ೧೧). **ಸಾಫ$_1$**: ೯. ಹಮ್ಮೂ ಗಂಟಲು 'ಸಾಫ' ಮಾಡಿಕೊಂಡ ಅಷ್ಟೆ (ಪುರುಷಾ. ೨೪).

ಸಾಪಾಗಿರು = ೧. ಚೆನ್ನಾಗಿರು ; ಸೊಗಸಾಗಿರು : ತಿಮ್ಮನ ಮಡದಿ ವೈನಾಗಿದ್ದಾಳೆ, ಸಾಪಾಗಿದ್ದಾಳೆ (ಕುಡೂಕೂ. ೨೪೧); ಎಲ್ಲರೂ 'ಮಾಣ ಎಷ್ಟು ಸಾಪಾಗಿದೆ' ಎಂದರು (ಮರಮ. ೧೫೭). ೨. ಉತ್ತಮವಾಗಿರು; ರುಚಿಯಾಗಿರು: ಕಾಫಿ ಅಂದರೆ ಇದು ಮಾರಾಯ್ರೆ . . . ಎಷ್ಟು ಸಾಪಾಗಿರುತ್ತೆ ಕುಡಿಯುವುದಕ್ಕೆ (ದೇವಹೊ. ೬೩). **ಸಾಪು ಮಾಡು** = (ಆಲಂ) ನಾಶಮಾಡು; ಹಾಳುಮಾಡು; ಮುಗಿಸು: ಮೊದಲು ಆರುಸಾವಿರ ವರ್ಷಾ ಉತ್ಸನ್ನವಿದ್ದದ್ದು ಈಗ ಎರಡುಸಾವಿರಕ್ಕೆ ಬಂದು ಹತ್ತಿದೆ. ಈ ಜನ ಎಲ್ಲಾ ತಿಂದು ಸಾಪುಮಾಡಿಬಿಟ್ಟರು (ಪ್ರಮಾಪ್ರ. ೨೯). **ಸಾಫ್‌ಸೀದಾ** = ನಿಷ್ಕಪಟವಾದುದು; ಸಾಟಾ: ನಿನ್ನ ಹಾಗೇ ಲೋಕ ಎಲ್ಲಾ ಸಾಫ್‌ಸೀದಾಂತ ನೀನು ತಿಳಿದುಕೊಂಡಿದೀಯ (ಚಂದಹೋ. ೧೨೨).

[← ಅರ. ಹಿಂ. ಮರಾ. ಸಾಫ್]

ಸಾಬ್ 'ಸಾಹೇಬ' ನೋ.

ಸಾಬ 'ಸಾಹೇಬ' ನೋ.

ಸಾಬಕು, ಸಾಬಕ್ಕು (ಗು). ೧. ಹಿಂದಿನ; ಮೊದಲಿನ; ಪೂರ್ವದ : ಸುಳ್ಳ ವಗೈರೆ ಸಾಬಕುಸರಕಾರದ ಇಲಾಖೆ ಒಳಗೆ ಇರುವ ಸೀಮೆಯನ್ನು ಯಥಾಪ್ರಕಾರ

ಸರಕಾರ ತಾಲೂಕು ಮಾಡಿ (ರಾಜೇಂದ್ರ ೧೧೨). (ನಾ). ೨. ಮೊದಲು ; ಪೂರ್ವ: ತಾಲ್ಲೂಕು ಮಜಕೂರಲ್ಲಿ ವಾರದ ಹೊಲ ಗದ್ದ ಪೈಕಿ ಸಾಬಕಿನಿಂದ ಹುಟ್ಟುವಳಿ ಜಾಸ್ತಿಯಾಗುತ್ತಿದ್ದದ್ದು . . . ಸ್ಥಳದ ಪಾರುಪತ್ಯಗಾರ ಮೊದಲಾದವರೇನಾದರೂ ಹೀನಕಂದಾಯಕ್ಕೆ ಮಾಡಿದ್ದರೆ ಆ ಬಾಬು ವಿಚಾರಣೆ ಮಾಡಿ ಕ್ರಮಪಡಿಸುವುದು (ಮಹಾವಂ. II. ೫೮). **ಸಾಬಕ್ಕು** : ೧. ನೀರು ವಾಜಬಿ ಯಿದ್ದ ಮೇರೆಗೆ ಚಂನ್ನಾಗಿ ದರ್ಯಾಪ್ತು ಮಾಡಿ ಸಾಬಕ್ಕು ಮಾಮೂಲ್ಲು ಪ್ರಕಾರಕ್ಕೆ ನಡೆದುಕೊಳುವ ಹಾಗೆ . . . ಚೋರ ತಾಕಿಯತು ಮಾಡುವರು (ಮೈಆರ್. ೧೯೬೨, ೪೬-೩೨ : 1812).

[← ಅರ. ಹಿಂ. ಸಾಬಕ್ : ಮರಾ. ಸಾಬಕ್, ಸಾಬೀಕ್]

ಸಾಬಕ್ಕು 'ಸಾಬಕು' ನೋ.

ಸಾಬಣ 'ಸಾಬೂನು' ನೋ.

ಸಾಬಾಣ 'ಸಾಬೂನು' ನೋ.

ಸಾಬಾಣು 'ಸಾಬೂನು' ನೋ.

ಸಾಬಿ 'ಸಾಹೇಬ' ನೋ.

ಸಾಬೀತ್ 'ಸಾಬೀತು' ನೋ.

ಸಾಬೀತು, ಸಾಬೀತ್, ಸಾಬೂತು (ನಾ). ೧. (ಯಾವುದೇ **ವಿಚಾರವು** ನಿಜವೆಂದು) ರುಜುವಾತು ಮಾಡಿದುದು ; **ಪ್ರಮಾಣೀಕರಿಸಿದುದು** : ನಿಮ್ಮ ಪ್ರತ್ಯುತ್ತರದಲ್ಲಿ ಪ್ರತ್ಯಕ್ಷರವೂ ಸುಳ್ಳೆಂಬ ಸಾಬೀತಾಗಿ ದೋಷವು **ಶತಾಧಿಕವಾಗಿದೆ** (ಶ್ರೀರಾಮು. ೧೯೬); ನಾನೇ ಅಪರಾಧಿ ಅಂತ ಸಾಬೀತು ಆಗುತ್ತೆ (ಮುರಳಿ. ೧೬೯). ೨. ಬಲವಾದುದು; ಗಟ್ಟಿಮುಟ್ಟಾದುದು : (೫). ೩. **ಸುರಕ್ಷಿತತೆ**; ಭದ್ರತೆ : ನಾರಾಯಣನನ್ನು ತಂಮ ಹಾಕಿದ ಮೇಲೆ . . . ತೋಟವನ್ನು ಸಾಬೀತಾಗಿ ಇರಿಸಿಕೊಂಡಿದ್ದಾನೆ (ಚಟ್ಟುಜೀ. ೧೯); ನಿನ್ನನ್ನು ಕಂತ್ರಿಗಳ ಕಣ್ಣು ತಪ್ಪಿಸಿ ಸಾಬೀತಿನಲ್ಲಿಟ್ಟುಕೊಳ್ಳುವುದು ತೋಮನಿಗೆ ತುಂಬ ಸುಲಭವಲ್ಲ (ಹೂಸಕ್ಕಿ. ೫೧). **ಸಾಬೀತ್** : ೧. ಸುಳ್ಳು ಕಾರ್ಡಂತೆ, ಹೇಗೆ ಸಾಬೀತ್ ಮಾಡುತ್ತೀರೀ, ಅದರ ಮೇಲೆ ಅಮಲ್ದಾರರ ರುಜು ಇಲ್ಲವೆ ? (ಮುರಳಿ. ೧೧೮). **ಸಾಬೂತು**: ೧. ಈಗ ನಡಸಿದಂಥಾ ಶರಾರತ್ತು ತಪ್ಪು ಅವರ ಮೇಲೆ ಸಾಬೂತು ಆಗಬೇಕು ಎಂಬುದನ್ನು ಕುರಿತು, ಅವರ ಕಡೆ ಜನರು ಸರಹದ್ದು ದಾಟಿ, ಸೀಮೆ ಒಳಗೆ ಬಂದಾಗ್ಲೂ, ನೀವು ಅಡ್ಡಿ ಮಾಡಬೇಡಿ (ರಾಜೇಂದ್ರ ೯೨).

ಸಾಬೀತಾಗು = (ನಿಜವೆಂದು) ರುಜುವಾತಾಗು; ದೃಢಪಡು : ನಿಮ್ಮ ಅಪರಾಧವೇ ಸಾಬೀತಾಗುತ್ತೆ (ಚಂದಮೋ. ೧೫೨); ಅಪರಾಧವೂ ಸಾಬೀತಾಗಿಲ್ಲ (ದೌಲತ್. ೨೫೫). **ಸಾಬೀತು ಮಾಡು, ಸಾಬೂತು ಮಾಡು** = ೧. (ನಿಜವೆಂದು) ರುಜುವಾತು ಮಾಡು : ಮೊಹಂಜೊದಾರೊದ ಮುದ್ರಿಕೆಗಳೇನಿದ್ದರೂ ಕೇವಲ ಅಲ್ಲಿದ್ದ ಅಧಿಕಾರಿಗಳ ಮುದ್ರಿಕೆಗಳಿಂದ ಸಾಬೀತು ಮಾಡಿದನು (ಡ್ಯಾವಿ. ೨೪). ೨. ಬಲಪಡಿಸು; ದೃಢಪಡಿಸು : ಮೈಸೂರ ಅರಸುಗಳ ಸರಕಾರಕ್ಕೂ ತಮ್ಮ ಸರಕಾರಕ್ಕೂ ದೋಸ್ತಿ ಪಾಯಾ ಸಾಬೂತು ಮಾಡುವದರಿಂದಾ, ಉಭಯಕಡೆ ರೈತರಿಗೂ ಸುಖವೂ, ಫಾಯದೆಯೂ ಸಹಾ ಇದೆ (ರಾಜೇಂದ್ರ ೨೩೯).

[← ಪಾರ. ಸಾಬಿತ್, ಸಬೂತ್; ಅರ. ಸಬೂತ್, ಸುಬೂತ್ ; ಓ. ಸಾಬಿತ್, ಸಾಬುತ್: ಮರಾ. ಸಾಬೀತ್, ಸಾಬೂದ್, ಸಾಬೂತ್, ಶಾಬಿತೀ]

ಸಾಬು (ನಾ). ಒಂದು ಬಗೆಯ ಮರ : 'ಸಾಬುಅಕ್ಕಿ' ಪರಾ.

[← ಮರಾ. ಸಾಬೂ]

ಸಾಬುಅಕ್ಕಿ, ಸಬ್ಬಕ್ಕಿ (ನಾ). ಸೀಮೆಅಕ್ಕಿ : ತವಣೀಲು (ಕೂವೆಹಿಟ್ಟು), ಸಬ್ಬಕ್ಕಿ (ಸಾಬುಅಕ್ಕಿ) ಬಟಾಟೆ . . . ಮುಂತಾದ ವಿಶೇಷೋತ್ಪಾದಕ ಕಂದಮೂಲಾದಿಗಳು . . . ಈ ವರ್ಗದೊಳಗೆ ಬರುತ್ತವೆ (ಮುಂಬಯಿ. ೬-೧೬೨): **ಸಾಬುದಾಣ (ಸಾಬುಅಕ್ಕಿ)** ಪಿಕ್ಕಲದ ವಜನವು ೫,೬೨೦ ಸೂರ್ತಿ ರೂಪಾಯಿಗಳ ತೂಕವಿರುತ್ತದೆ (ಮುಂಬಪ್ರಾ. ೧೧೯). **ಸಬ್ಬಕ್ಕಿ**: ಸಂಜೆ ಒಲೆ ಹಚ್ಚಿ ಸಬ್ಬಕ್ಕಿ ಗಂಜಿಯನ್ನಿಷ್ಟು ಬೇಯಿಸಿ ಸುನಂದಾ ತಾಯಿಗೆ ಕುಡಿಸಿದಳು (ಏಕಾಂಗಿ ೩೦) [ಸಾಬು + ಅಕ್ಕಿ]

ಸಾಬೂಣಿ 'ಸಾಬೂನು' ನೋ.

ಸಾಬುದಾಣ 'ಸಾಬೂದಾಣೆ' ನೋ.

ಸಾಬುದಾಣೆ 'ಸಾಬೂದಾಣೆ' ನೋ.

ಸಾಬುದಾನಿ 'ಸಾಬೂದಾಣೆ' ನೋ.

ಸಾಬೂತು 'ಸಾಬೀತು' ನೋ.

ಸಾಬೂದಾಣೆ, ಶಾಬೂದಾಣ, ಸಾಬುದಾಣ, ಸಾಬುದಾಣೆ, ಸಾಬುದಾನಿ (ನಾ). = **ಸಾಬುಅಕ್ಕಿ** : ಮಕ್ಕಳಿಗೆ ಒಂದೊಂದಾಣೆಯ ಕಲ್ಲುಸಕ್ಕರೆ ಮತ್ತು ಸಾಬೂದಾಣೆ ತಾ (ಧಾರಿ. ೬೮). **ಶಾಬೂದಾಣ** : ಶಾಬೂದಾಣ, ಸಕ್ಕರೆ, ಚಿಮನೇಯಣ್ಣೆ ಮತ್ತು ಕಡ್ಡೀಪೆಟ್ಟಿಗೆ (ಸ್ವಾಚ. ೪೬೮). **ಸಾಬುದಾಣ** : ಸಾಬುದಾಣ (ಸಾಬು ಅಕ್ಕಿ) ಪಿಕ್ಕಲದ ವಜನವು ೫,೬೨೦ ಸೂರ್ತಿ ರೂಪಾಯಿಗಳ ತೂಕವಿರುತ್ತದೆ (ಮುಂಬಪ್ರಾ. ೧೧೯). **ಸಾಬುದಾಣೆ** : ಸಾಬುದಾಣೆ ಕಿಚಡಿ ಅದ ಏನು? (ಚಂದುಟ. ೧೦೦). **ಸಾಬುದಾನಿ** : ರೋಗಿಗಳ ಊಟಕ್ಕೆ ಸ್ವಲ್ಪ ಸಾಬುದಾನಿ ಸಿಗುತ್ತದೆ (ಶ್ರೀಕಾಂತ. ೧೭).

[← ಹಿಂ. ಸಾಬೂದಾನಾ ; ಮರಾ. ಸಾಬೂದಾಣಾ, ಶಾಬುದಾಣಾ]

ಸಾಬೂನು, ಸಾಬಣ, ಸಾಬಾಣ, ಸಾಬಾಣು, ಸಾಬೂಣ (ನಾ). ನೀರಿನೊಂದಿಗೆ ಬೆರೆತಾಗ ವಿಶೇಷವಾಗಿ ನೊರೆಯನ್ನು ಉಂಟುಮಾಡುವ, ಬಟ್ಟೆ, ಮೈಗಳನ್ನು ಶುದ್ಧಿಗೊಳಿಸಲು ಬಳಸುವ, ಕ್ಷಾರ, ಎಣ್ಣೆ ಮುಂತಾದುವುಗಳಿಂದ ತಯಾರಿಸುವ ಒಂದು ಬಗೆಯ ರಾಸಾಯನಿಕ ವಸ್ತು ; ಸೋಪು : ಸಾಬೂನಿನ ತಯಾರಿಯನ್ನು ಕಾವಿನ ಬಲದಿಂದಲೂ, ಕಾವಿಲ್ಲದೆಯೂ ಮಾಡುತ್ತಾರೆ (ಪಾಲಶ್ಯ. III. ೧೪೩); ಸಾಬೂನು, ಕೊಬ್ಬು ಮತ್ತು ಕ್ಷಾರಪದಾರ್ಥಗಳನ್ನು ಮಿಶ್ರಮಾಡಿ ತಯಾರಿಸಿದ ಪದಾರ್ಥ (ಗೃಪಮ. ೮೬). **ಸಾಬಣ** : ಸಾಬಣಾ (ಸಬಕಾರ), ಕುಂಕುಮಾ, ಹಿಪ್ಪಲಿ, ಅಕ್ಕಲಕಾರ (ಮುಂಬಪ್ರಾ. ೧೯). **ಸಾಬಾಣ** : ಸಾಹೇಬರ ಮನೆಯ ಸಾಬಾಣದಲ್ಲಿ ನಿತ್ಯ ನಮ್ಮ ಅರಿವೆ ಮಡಿಯಾಗಿ ಶುಭ್ರ ಧವಳವಾಗುತ್ತಿದ್ದವು (ದೀಪಶ. II. ೩೮). **ಸಾಬಾಣು** : ಅವನು ಅಂಗಿಗೆ ಸಾಬಾಣು ಹಚ್ಚಿದನು (ರಕ್ತಧ. ೪೮); **ಸಾಬೂಣ** : (ಸಾಬೂಣ) ಸಬಕಾರ ಪೆಟ್ಟಿಗೆ ಇಲ್ಲವೆ ಬಂಡಲ (ಮುಂಬಪ್ರಾ. ೨೫೭).

[← ಅರ. ಹಿಂ. ಸಾಬುನ್; ಮರಾ. ಸಾಬಣ, ಸಾಬೂಣ]

ಸಾಭಿಜ್ಞಾನ (ಗು). ೧. ನೆನಪಿನ ಕುರುಹುಗಳಿಂದ ಕೂಡಿದ; ಸ್ಮರಣೆಗೆ ತರುವ ಗುರುತುಗಳನ್ನು ಹೊಂದಿದ: ಸಮುದ್ರದತ್ತಂ . . . ಸರ್ವದೈತೆಯೊಳು ನೆರೆದು ಸಾಭಿಜ್ಞಾನ(ಸಂವುಜ್ಞ)ದುಂಗುರಮಂ ಕೊಟ್ಟು (ಚಾವುಪು. ೮೦). (ನಾ). ೨. ಕುರುಹಗಳಿಂದ ಕೂಡಿದುದು. ೩. ಕುರುಹು; ಗುರುತು: ಎವುಗಿರ್ಪತ್ತೊಂದು ದಿವಸಮಾಯುಷ್ಯಮೆಂಬುದರ್ಕೆ ಸಾಭಿಜ್ಞಾನಮೇನೆಂದು ಬೆಸಗೊಂಡೊಡೆ ಭಟಾರರೆಂದರ್ . . . ಮತ್ತಂತೆ ಪೋಪನ್ನೆಗಂ ತೋಚೀವುಗುಮಿದೊಂದು ಸಾಭಿಜ್ಞಾನಂ (ಪಡ್ಡಾರಾ. ೧೦೦-೬). [ಸಂ.]

ಸಾಭಿಜ್ಞಾನಪಟ (ನಾ). ನೆನಪಿಗೆ ತರುವ ಕುರುಹುಳ್ಳ ಪಟ ; ಜ್ಞಾಪಕವನ್ನುಂಟು ಮಾಡುವ ಗುರುತಿನ ಚಿತ್ರ : ಮನಃಪ್ರಿಯತಮನ ಬರೆದ ಸಾಭಿಜ್ಞಾನ ಪಟಮನೀವುದುಮಾಕೆಯುಮದಂ ನಿರ್ಮಿರ್ಚ ನೋಡಿ . . . ಮಾಧವಸಮಯ ದೊಳಲರ್ದ ಚೂತಲತೆಯನೆ ಪೋಲ್ತಳ್ (ಆದಿಪು. ೪-೨೨ ವ). [ಸಂ.]

ಸಾಭಿಪ್ರಾಯ (ಗು). ೧. ಅಭಿಪ್ರಾಯದಿಂದ ಕೂಡಿದ ; ಉದ್ದೇಶಪೂರ್ವಕವಾದ: ಮುರಮಥನ ಚಿತ್ತೈಸಿದ್ಕ ತರುವರಿಯ ಸಾಭಿಪ್ರಾಯವಾಕ್ಯಸ್ಮರಣವನು (ಕುವ್ಯಾಕ. ೨೦-೨೯); ಅನೇಕವಿಧದಿನಾ ನೀತಿಭೂಷಣಮಂತ್ರಿಪಂ ಸಾಭಿಪ್ರಾಯಹಿತಮಿತಪ್ರಚುರ ವಚನನಿಚಯದಿನೊಡಂಬಡಿಸುತೆ (ರಾಜಶೇ. ೬-೧೩೨ ವ). (ನಾ). ೨. ಅಭಿಪ್ರಾಯದಿಂದ ಕೂಡಿದುದು; ಉದ್ದೇಶಸಹಿತವಾದುದು: ವಿಶೇಷಣವು ಸಾಭಿಪ್ರಾಯವಾಗಿದ್ದರೆ ಪರಿಕರಾಲಂಕಾರವೆನ್ನಿಸಿಕೊಳ್ಳುವುದು (ಕೃಪಂ. ೨೭೦). [ಸಂ.]

ಸಾಭಿಲಾಷ (ನಾ). ಅಪೇಕ್ಷೆ; ಕಾತರ: ಎನ್ನ ಮುನ್ನಿನ ಭವದ ಗಂಡನೆಂದು ಕಪೋತರತಿವರನಂ ಸಾಭಿಲಾಷದಿಂ ಪೊರ್ದ (ಚಾವುಪು. ೯೧). [ಸಂ.]

ಸಾಭಿಲಾಷೆ (ನಾ). = **ಸಾಭಿಲಾಷ** : ಭೀತಿಯಿಂದೈತರ್ಪ ಕಾಮಿನಿಯನು ಸಾಭಿಲಾಷೆಯೊಳೊರ್ವ ವಿಟನಿದಿರ್ವಂದು . . . ತಕ್ಕೈಸಿದನದೇಂ ಪ್ರೌಢನೋ (ಚಮಭಾ. ೨೬-೮).

[ಸಂ. ಸಾಭಿಲಾಷ]

ಸಾಮ್ಯ₁ (ನಾ). ಕಡುನೀಲಿ ಬಣ್ಣ ; ಶ್ಯಾಮವರ್ಣ : 'ಸಾಮವಣ್ಣ' ಪರಾ.

[< ಪ್ರಾ. ಸಾಮ. / ಸಂ. ಶ್ಯಾಮ]

ಸಾಮ್ಯ₂ 'ಸಾಮು' ನೋ.

ಸಾಮ್ಯ₃ (ನಾ). ೧. ಶಾಂತಗೊಳಿಸುವಿಕೆ ; ಸಮಾಧಾನಪಡಿಸುವಿಕೆ. ೨. ಸಾಮ, ದಾನ, ಭೇದ ಮತ್ತು ದಂಡ ಎಂಬ ಕಾರ್ಯಸಾಧನೆಯ ಚತುರೋಪಾಯಗಳಲ್ಲಿ ಒಂದು; ಒಡಂಬಡಿಕೆ; ರಾಜಿ: ಸಾಮಂ ಪ್ರಿಯಜನಪ್ರಯೋಜ್ಯಂ . . . ದಂಡಂ ಪೌರುಷಾತ್ಮಯೋಚಿತಂ (ಶಾಂತಿಪು. ೬-೯೩ ವ) ; ಸಾಮದೊಳಳವಡುವೊಡೆ ಸಂಗ್ರಾಮಂ ರಿಪುನೃಪರೊಳೇಕೆ (ಪಾರ್ಶ್ವಪು. ೨-೪೦). ೩. ಸಾಂತ್ವನದ ನುಡಿ; ಸಮಾಧಾನದ ವಚನ: ಸಾಮಪೂರ್ವಕಮಕ್ರಮಣಾವಸಾನಾನಂದಿತಗಂಭೀರೋದಾರ ಸಾರಭಿನ್ನನಯ ಸಂತತಿಸಮನ್ವಿತಮನಱಿಯೆ ತೆಱೆಯೆ ನೆಱೆಯೆ ನುಡಿದು ಪ್ರೀತಿವರ್ಧನಂ ಮಾಣ್ಬುದುಂ (ಶಾಂತಿಪು. ೬-೮೯ ವ); ರಾತ್ರಿಯಲಿ ದಾಯವಿದು ತಮಗೆಂದು ದೈತ್ಯನಿಕಾಯ ಬಂದು ರಸಾತಳಕೆ ಕುರುರಾಯನನು ಕೊಂಡೊಯ್ದು ತಿಳುಹಿದರವರು ಸಾಮದಲಿ (ಕುವ್ವಾಲ. ೨೧-೬೬). ೪. ಶಾಂತಸ್ವಭಾವ; ಸಾಧುವಾದ ನಡವಳಿಕೆ. ೫. (ದೇವರ) ಛಂದೋಬದ್ಧವಾದ ಸ್ತೋತ್ರ ,– ಕೀರ್ತನೆ. ೬. ಚತುರ್ವೇದಗಳಲ್ಲಿ ಮೂರನೆಯದು ಮತ್ತು ಗಾನಮಾಡಲಾಗುವ ಅದರ ಮಂತ್ರಭಾಗ: "ಸಾಮರ್ಗ್ಯಜುಸ್ತ್ರಯಂ ತ್ರಯಿಯೆನಿಕುಂ" (ವಸ್ತುಕೋ. ೬-೧೨); ನೆಱೆ ಸಾಮದ ಗೀತಸಾರಮಂ . . . ಗಲಿದೊಲವಿಂದೆ ಕೂಡಿ ಮಿಗೆ ಪುಟ್ಟಿಸಿದಂ ಬಿದಿ ನಾಟ್ಯವೇದಮಂ (ಲಾಸ್ಯರಂ. ೧-೮). ೭. [ದ್ವೈತ] (ಸಾಮವೇದದಲ್ಲಿ ಪ್ರತಿಪಾದ್ಯನಾದ) ಭಗವಂತನ ಐದು ರೂಪಗಳು : 'ಪಂಚಸಾಮ' ಪರಾ. ೮. [ಸಂಗೀತ] ಒಂದು ರಾಗದ ಹೆಸರು : ಸಾಮ – ೨ಲನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ (ಸಂಗೀಚಂ. ೧೬೦).

ಸಾಮಂ ಮಾಡು = (?): ತಾಮರಸೋಪಮವದನಂಗಾಣುತ ಸಾಮಂ ಮಾಡದ ತದ್ಗಿರಿತಟದೊಳ್ ಭೀಮಾರಣ್ಯಮದೊಂದಿರ ಕಂಡದಱೊಳಗಡೆಗೆಯ್ದುದನು (ಜಯಕಾ. ೧೫-೨೨); "ತಡಮಾಡು ; ಅಲಕ್ಷ್ಯಮಾಡು (?)" (ಪ್ರಭಣ್ಣ).

[ಸಂ. ಸಾಮನ್]

ಸಾಮಂಜಸ್ಯ (ನಾ). ೧. ಹೊಂದಾಣಿಕೆ; ಸಮಂಜಸತೆ : ಪರಸ್ಪರ ಸಾಮಂಜಸ್ಯವಿಲ್ಲದ ಲ್ಯಾಟಿನ್ ನ್ಯಾಯಶಾಸ್ತ್ರಗಳಿಂದ ಇಪ್ಪತ್ತು ಪುಟಗಳನ್ನೋದಿದನಂತೆ (ಪುನರು. ೧೦೬). ೨. ಔಚಿತ್ಯ; ಯುಕ್ತತೆ: ಇಲ್ಲದಿದ್ದರೆ 'ವೃತ್ತಿ'ಯ ಮಾತುಗಳಿಗೆ ಸಾಮಂಜಸ್ಯ ಬರುವುದಿಲ್ಲ (ಧ್ವನ್ಯಾಲೋ. ೪ ಅಡಿಟಿ). ೩. ನಿಷ್ಕೃಷ್ಟತೆ ; ಯಥಾರ್ಥತೆ.

[ಸಂ.]

ಸಾಮಂತ (ಗು). ೧. ಅಕ್ಕಪಕ್ಕದ; ನೆರೆಹೊರೆಯ. ೨. ಸರಹದ್ದಿನ; ಗಡಿಯ. ೩. ಸಾರ್ವತ್ರಿಕವಾದ; ಸಾರ್ವಲೌಕಿಕವಾದ. (ನಾ). ೪. ಒಬ್ಬ ರಾಜನಿಗೆ ಅಧೀನದಲ್ಲಿದ್ದು ಕಪ್ಪ, ಕಾಣಿಕೆಗಳನ್ನು ಒಪ್ಪಿಸುವ ಆಶ್ರಿತರಾಜ; ಮಾಂಡಲಿಕ: ಉಱದೆನ್ನಂ ಕುಡಲಿರ್ದ ಕೂಸನೊಡಗೊಂಡುಯ್ವಾತನಂ ತಾಗಿ ತಳ್ಳಱಿಯಲ್ ಕೋಡಗಗಟ್ಟುಗಟ್ಟಿ ತರಲಿನ್ನಾರಾರ್ಪರಂತಪ್ಪ ಪೊಚ್ಚಱಸಾಮಂತರೆ ಪೋಗಿಮೆಂದು ಪಲರಂ ಪೇಳ್ದುಗಳ್ (ಪಂಪಭಾ. ೫-೨೧); ನೆರೆದ ಸಾಮಂತಾದಿ ಭಟಪರಿಕರನಿಕರವುದ್ಭ್ರಮಿಸಿ ಸವೆದರು ಕಾದಿ ತಮ್ಮೊಳಗೆ (ಬಸಪು. ೬೧-೩೯). ೫. ನೆರೆಯವನು; ಪಕ್ಕದಲ್ಲಿ ವಾಸವಾಗಿರುವವನು. ೬. ನೆರೆರಾಜ್ಯದ ರಾಜ; ಪಕ್ಕದ ರಾಜ್ಯದ ದೊರೆ. ೭. ಮೂರುಲಕ್ಷ ಕರ್ಷಗಳಷ್ಟು ಕಂದಾಯವನ್ನು ಪಡೆಯುವ ರಾಜಪುತ್ರ. ೮. ಮುಖ್ಯಸ್ಥ ; ಮುಖಂಡ. ೯. ನೆರೆಹೊರಿಕೆ ; ಅಕ್ಕಪಕ್ಕದಲ್ಲಿರುವಿಕೆ. ೧೦. [ಸಂಗೀತ] ಒಂದು ರಾಗದ ಹೆಸರು: ಸಾಮಂತರಾಗವು (೧) ಸಂಪೂರ್ಣ, ಆರೋಹದಲ್ಲಿ ದೈವತವು ವಕ್ರವಾಗಿದೆ (ಚತುಪ್ರ. ೧೪೧).

ಸಾಮಂತಗಸಣಿ, ಸಾಮಂತಘಸಣಿ = ಸಾಮಂತರಲ್ಲಿ ಪ್ರಬಲನಾದವನು; ಸಾಮಂತವರ್ಗದಲ್ಲಿ ಬಲಿಷ್ಠನಾದವನು; ಒಂದು ಬಿರುದು : ಸಾಮನ್ತಗಸಣಿ ಧರ್ಮ್ಮರತ್ನಾಕರಂ . . . ಶ್ರೀಮಾನ್‌ಮಹಾಸಾಮನ್ತಗೋವಿದೇವಂ ಹುಳಿಯೇಱು ಹನ್ನೆರಡುಮಂ ಮಹೋತ್ಸವದಿಂನ್ನಾಳುತ್ತಮಿರೆ (ಎಕ. VI, ಕಡೂರು. ೩೪-೧೧; 1148); ಮಹಾಸಾಮನ್ತಘಸಣಿ ಜಗವನಣ್ಣಲೆವ ಸಿತಗರ ಗಣ್ಣ ಸಾಮನ್ತಬಿಟ್ಟಿಯ ಹುಳಿಯಱ ವೃತ್ತಿಯೊಳು . . . ರಾಜ್ಯಂಗೆಯ್ಯುತ್ತಮಿರೆ (ಎಕ. XII, ಚಿಕ್ಕನಾ. ೬೨-೧೨; 1161 ?). ಸಾಮಂತಚಕ್ರ = ಆಶ್ರಿತರಾಜರ ಸಮೂಹ: ನಿಜವಿಜಯಶ್ರೀಪತಿಂವರಾಪರಿಣಯ ನೋತ್ಸವಾಲೋಕನಕುತೂಹಲಪ್ರಚಲಿತ ಸಮಸ್ತಸಾಮಂತಚಕ್ರನುಂ . . . ಮೇದಿನೀ ಚಕ್ರನುಮಾಗಿ ಚಕ್ರವರ್ತಿಯ ಬಲಮನಿದರ್ಚಲೆಂದು ಮೇಲೆತ್ತಿ ಬರ್ಪಾಗಳ್ (ಆದಿಪು. ೧೪-೯೧ ವ). ಸಾಮಂತಚೂಡಾಮಣಿ = ೧. ಸಾಮಂತರಾಜರಲ್ಲಿ ಶ್ರೇಷ್ಠನಾದವನು. ೨. (ಕನ್ನಡದ ಮಹಾಕವಿ ಪಂಪನ ಆಶ್ರಯದಾತ ರಾಜನಾದ) ಚಾಲುಕ್ಯ ಅರಿಕೇಸರಿಯ ಒಂದು ಬಿರುದು : ಅನ್ನೆಗಮಿತ್ತ ಬಲದೇವಂ ಸುಭದ್ರೆಯಂ ಸಾಮಂತಚೂಡಾಮಣಿಯುಯ್ದನೆಂಬುದಂ ಕೇಳ್ದು (ಪಂಪಭಾ. ೫-೨೦ ವ). ಸಾಮಂತಾಧಿಪತಿ = ಸಾಮಂತರಾಜರ ಒಡೆಯ ; ಒಂದು ಬಿರುದು : ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ . . . ಮಹಾಮಡಮೋತ್ತುಂಗಂ ನಾಮಾದಿ ಸಮಸ್ತಪ್ರಸಸ್ತಿಸಹಿತಂ (ಶಾಂಇಇ. XX. ೪೬-೩೩; 1072).

[ಸಂ.]

ಸಾಮಂತಿಕೆ (ನಾ). ೧. ಸಾಮಂತನಾಗಿರುವಿಕೆ ; ಅಧೀನರಾಜನಾಗಿರುವಿಕೆ: ನೊಳಂಬರು, ತತ್ಕಾಲೋಚಿತವಾಗಿ ತ್ರೈಲೋಕ್ಯಮಲ್ಲ . . . ಮುಂತಾದ ಚಾಳುಕ್ಯ ಚಕ್ರವರ್ತಿಗಳ ಬಿರುದುಗಳನ್ನೆ ತಮ್ಮ ಸಾಮಂತಿಕೆಯ ದ್ಯೋತಕವಾಗಿ ಸ್ವೀಕರಿಸಿದ್ದರು (ನೊಳಂಬ. ೭೩). ೨. ಉಂಬಳಿ ; ಜಹಗೀರು : ಶ್ರೀಮನ್ಮಹಾಮಣ್ಡಳೇಶ್ವರಂ ಮದನಕರ್ಣಾರಸರು . . . ಸೋಮೇಶ್ವರದೇವರ ಅಂಗಭೋಗ ರಂಗಭೋಗ ಅನ್ನದಾನ ವಿದ್ಯಾದಾನಕ್ಕಂ ಆಲೂರ ಸಾಮಂತಿಕೆಯಂ ಬಿಟ್ಟರು (ನಾಂದೇಡ್. ೧೫-೫; 1113).

[ಸಾಮಂತ + - ಇಕೆ]

ಸಾಮಕಿ (ನಾ). ಒಂದು ಬಗೆಯ ಧಾನ್ಯ; ಸಾಮೆ : "ಸಾ|ಪಾರಾಂ. ಶ್ಯಾ|ಮಕಿಯೆನಲು ಸಾವೆಯಕ್ಕುಂ" (ಮಂಗರಾ. ೧೧೦-೪).

[IP ಇದು 'ಶ್ಯಾಮಕ' ಎಂಬುದರ ಅಪಭ್ರಂಶವಿರಬಹುದು]

ಸಾಮಗಾನ (ನಾ). ಸಾಮವೇದದ ಮಂತ್ರಗಳನ್ನು ಹಾಡುವಿಕೆ : ಸಾಮಗಾನಾನಂದ ನಾಮರೂಪಾತೀತ ಕಾಮಿತಫಲಪ್ರದಾಯಕ ರಕ್ಷಿಸೆಮ್ಮುವಂ (ಆರಾಚ. ೧-೭-೧); ಸಾಮಗಾನಪ್ರೇಮ ಕಾಂಚನಧಾಮಧರ ಸುತ್ರಾಮವಿರಚಿತ ಕಾಮ ರವಿಕುಲಸೋಮ ರಕ್ಷಿಸು (ಹರಿಸಾ. ೬). [ಸಂ.]

ಸಾಮಗ್ರಿ (ನಾ). ೧. ಸಂಪೂರ್ಣತೆ; ಸಮಗ್ರತೆ. ೨. (ಸಂಸಾರಕ್ಕೆ) ಅಗತ್ಯವಾದ ವಸ್ತು , – ಸಾಧನ ; ಅವಶ್ಯಕವಾದ ಪದಾರ್ಥ, – ಸಲಕರಣೆ: ಸಯಮಾಡಿಪೆನೆಂಬ ಜೀವಂಗೆ ಮನವೆಂಬ ಸತಿ ತನ್ಮಾತ್ರೆಗಳೆಂಬ ಸುತರು ಇಂತಪ್ಪ ಸಂಸಾರಸಾಮಗ್ರಿಯಿಂ ಜೀವಿಸುತ್ತಮಿರಲು (ಆದಪ. ೧೫-೬೬); ಆ ಕಂದರ್ಪಕಲ್ಪಲತೆಯ ಸಮಸಮಾಯೋಗ ಸಮುಪಕ್ರಮಿತಕಾಲಧಾತುವಯೋನುರೂಪಕರಣಪರಿರಂಭಚುಂಬನ ಕಳಾಸಾಮಗ್ರಿಯಿಂ ಕಾಮತಂತ್ರವಿಜ್ಞಾನಮಂ ಸುಜ್ಞಾನಂ ಮಾಡಿಯುಂ (ಚಂದ್ರಪ್ರ. ೨-೧೬ ವ). ೩. ಮೂಲವಿಷಯ ; ಮೂಲವಸ್ತು : ಒದವಿದ ಸಾಮಗ್ರಿಯೊಳೇಕದೇಶ ವೈಕಲ್ಯಮಾಗಯುಂ ಮತ್ತಂ ತತ್ಸಮಗ್ರಫಲಸಿದ್ಧಿಯಂ ತೋರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ (ಕಾವ್ಯಾದ. ೭೫೦); ಇಷ್ಟು ದಿನಗಳ ನಂತರ ಸಂಸ್ಕೃತಸಾಹಿತ್ಯದ ಒಂದು ಅಪೂರ್ವ ಸಾಮಗ್ರಿ ದೊರಕಿತ್ತು (ಬಾಣಅ. ೬). [ಸಂ. ಸಾಮಗ್ರೀ]

ಸಾಮಗ್ರಿಸಂಕಲನ (ನಾ). [ಗ್ರಂಥಸಂ] ಗ್ರಂಥಸಂಪಾದನೆಯ ನಾಲ್ಕು ಹಂತಗಳಲ್ಲಿ ಮೊದಲನೆಯದು ; ಹಸ್ತಪ್ರತಿ ಇತ್ಯಾದಿ ಮೂಲಪರಿಕರಗಳ ಸಂಗ್ರಹ: ಮೊದಲನೆಯದು ಹಸ್ತಪ್ರತಿಗಳು, ಬಾಹ್ಯಸಾಕ್ಷಿಗಳು ಮುಂತಾದ ಲಿಖಿತ ಸಾಮಗ್ರಿಗಳನ್ನು ಒಂದೆಡೆ ಸೇರಿಸಿ ಪರೀಕ್ಷಿಸಿ ವರ್ಗೀಕರಣಮಾಡಿ ಪರಸ್ಪರಸಂಬಂಧ ಮತ್ತು ಪೀಳಿಗೆಯನ್ನು ರಚಿಸುವುದು ; ಇದನ್ನು ಸಾಮಗ್ರಿಸಂಕಲನ (Heuristics) ಎಂದು ಕರೆದಿದೆ (ಕನ್ನಸಂ. XII. ಪ್ರವೇಶ). [ಸಂ. ಸಾಮಗ್ರೀಸಂಕಲನ]

ಸಾಮಜ (ಗು). ೧. ಸಾಮವೇದಕ್ಕೆ ಸಂಬಂಧವಾದ ; ಸಾಮವೇದದಿಂದ ಹುಟ್ಟಿದ : ಸಾಮಬೋಲ್ಗಾಸದಿಂದೆ ಪಾಡುತ್ತೆ . . . ಗೋಚರಿಸಿದಂ ನಾರದಮುನೀಶ್ವರಂ

ಬಾಂದಳದೊಳು (ಕೃಮಭಾ. ೨೫-೮). (ನಾ). ೨. ಸಾಮೋಪಾಯದಿಂದ ಉಂಟಾದುದು; ಸಹೃದಯನಡವಳಿಕೆಯಿಂದ ಹುಟ್ಟಿದುದು. ೩. ಆನೆ; ಗಜ: ಸಾಮಜಮಶ್ವತ್ಥಾಮಂ ನಾಮದಿನೊಂದಬ್ಜಿದೊಡಲ್ಲಿ ಕಂಡು ಹತೋಶ್ವತ್ಥಾಮಾ ಎನೆ (ಪಂಪಭಾ. ೧೨-೨೭); ಪವನಪಥಾಂತರದೊಳ್ ಪವನವೇಗದಿಂ ಸಾಮಜಾದಿವಾಹನ ಸಹಿತರ್ ದಿವಿಜರನೇಕದ್ವೀಪಾರ್ಣವಂಗಳಂ ಕಳೆದು ಮುಟ್ಟಿವರ್ಪವಸರದೊಳ್ (ಜಗಪ. ೧-೪೨). [ಸಂ.]

ಸಾಮಜಪತಿ (ನಾ). ಆನೆಗಳ ಒಡೆಯ ; ಮುಖ್ಯವಾದ ಆನೆ: ರಜನಿವಿನೋದನಕ್ಕೆ ಮುಳಿದಿರ್ದ ಲತಾಂಗಿಯನಪ್ಪುಕೆಯ್ದು ಸಾಮಜಪತಿ ಪೊಕ್ಕು ಪಕ್ಕುವಿಡಿಯಂ ನಡೆಸೋಂಕುವವೋಲ್ . . . ಅಮರ್ದಪ್ಪೆ (ಶಾಂಪು. ೮-೧೧೦). [ಸಂ.]

ಸಾಮಜಪದಾಭಿರಾಮ (ನಾ). ೧. ಸಾಮವೇದದ ಪದಗಳಿಂದ ರಮ್ಯವಾದುದು. ೨. ಆನೆಗಳಿಗೆ ಹಿತವಾದ ನಿವಾಸಸ್ಥಾನವಾದುದು. ೧, ೨ : ಆ ಮಹಾವನಂ . . . ಪಿತಾಮಹಾನನದಂತೆ ಸಾಮಜಪದಾಭಿರಾಮಮುಂ ಸ್ಥಾಣು ನಿವಸನಮಾಗಿಯುಂ ಅಪರ್ಣಾನ್ವಿತಮಲ್ತು (ಚಂದ್ರಶ. ೫-೩೨ ಪ). [ಸಂ.]

ಸಾಮಜಪೋಷಕ (ನಾ). (ಇಂದ್ರದ್ಯುಮ್ನವೆಂಬ) ಗಜೇಂದ್ರನನ್ನು ರಕ್ಷಿಸಿದವನು; ವಿಷ್ಣು : ರಾಮರಾಮ ಎಂಬೋ ಗಿಳಿ ಕೋಮಲಕಾಯದ ಗಿಳಿ ಸಾಮಜಪೋಷಕ ತಾನು ಪ್ರೇಮದಿ ಸಾಕಿದ ಗಿಳಿ (ಪುರಂದ. ೧-೧೧೨-೫). [ಸಂ.]

ಸಾಮಜಮೈರಿವಿಷ್ಟರ (ನಾ). ಸಿಂಹಾಸನ ; ಸಿಂಹಪೀಠ : ತನ್ನ ದಿವ್ಯರೂಪುದೋಱೆ ಕಾಮಚಂಡಾಳನಿಸಮವಿದ್ಯೆಯತಿವಿದ್ದ ಸಾಮಜಮೈರಿವಿಷ್ಟರವ ಚಾಮರ ದಿವ್ಯಾತಪತ್ರ ಮನಧಿಕಸುಪ್ರೇಮದಿ ಕೊಟ್ಟಿಂತು ನುಡಿದ (ಸೇಮಸಂ. ೧೫-೧೨೬). [ಸಂ.]

ಸಾಮಜಾರಿ (ನಾ). ಆನೆಯ ಶತ್ರು; ಸಿಂಹ : ಸಾಮಜಾರಿಗೆ ಸರಿಯೆ ಶುನಕಸ್ತೋಮವಾಶಾವಾರಣಕ್ಕಂ ಗ್ರಾಮಸೂಕರವಿತತಿ ಸರಿಯೇ (ಬಸಪು. ೫೫-೨೨). [ಸಂ.]

ಸಾಮಜಾಸುರ (ನಾ). ಶಿವನಿಂದ ಹತವಾದ ಆನೆಯ ರೂಪಿನ ಒಬ್ಬ ರಾಕ್ಷಸ ; ಗಜಾಸುರ : ಮದಸಾಮಜಾಸುರನಂ ಮುನಿದು ತಾಂ ಕೊಂದನೇ ಮುನ್ನ (ಬಸಪು. ೪೬-೧೪). [ಸಂ.]

ಸಾಮತಿ (ನಾ). ೧. ಹೋಲಿಕೆ; ಸಾದೃಶ್ಯ : ತಾನು ಕೊಟ್ಟ ಸಾಮತಿ ತನಗೇ ಸಂತಸವುಂಟುಮಾಡಿ ಕುದುರೆ ಕೆನೆದ ಹಾಗೆ ನಗುತ್ತಾನೆ (ನಾಗೀ. ೧೧೭). ೨. ಉಪಮಾನ; ದೃಷ್ಟಾಂತ: ನಾನು ಆಗಾಗ ಕೊಡುವ ಸಾಮತಿಯನ್ನು ಅವರು ಚೆನ್ನಾಗಿ ಅರ್ಥಮಾಡಿಕೊಂಡಿರುವಂತೆ ಕಾಣಿಸುತ್ತದೆ! (ಸಂಬಾಹ. VII. ಅಂಕೆ). ೩. ದೃಷ್ಟಾಂತ ಗಳನ್ನುಳ್ಳ ಕಥೆ ; ನಿದರ್ಶನಗಳನ್ನುಳ್ಳ ಪ್ರಸಂಗ ,– ಪ್ರಕರಣ : ಯೇಸು ತನ್ನ ಶಿಷ್ಯರಿಗೆ . . . ಇನ್ನು ಇತರ ಸಾಮತಿಗಳನ್ನೂ ತಿಳಿಯಪಡಿಸಿ, ಹೀಗೆ ಎಷ್ಟೋ ವಿಷಯಗಳನ್ನು ಕುರಿತು ಧರ್ಮೋಪದೇಶ ಮಾಡಿದನು (ಗೂಡ್ಸ್ಪೀ. V. ಮುನ್ನುಡಿ). ೪. ಗಾದೆ; ನಾಣ್ಣುಡಿ; ಲೋಕೋಕ್ತಿ : ಜನದ ಮಾತಿನಲ್ಲಿ ಎಂದಿನಿಂದಲೋ ಬೆರೆತುಕೊಂಡ ಕೆಲವು ಸಾಮತಿಗಳು ಎಲ್ಲ ಕಾಲದ ಕವಿಗಳಿಗೆ ಸಾಮಗ್ರಿಯನ್ನೊದಗಿಸುತ್ತವೆ (ಕಸಾಚ. ೬೧೨). [< ಸಂ. ಸಾಮ್ಯತಾ. / ತುಳು. ತೆಲು. ಸಾಮತಿ]

ಸಾಮಯಿಕ (ಗು). ೧. ಗೊತ್ತಾದ; ನಿಗದಿಯಾದ : ಅವುಗಳಲ್ಲಿ ಅನೇಕವು ಸಾಮಯಿಕಕ್ರಮವನ್ನು ಹಿಡಿದೋ ಹಿಡಿಯದೆಯೋ ಪರಿವರ್ತನಶೀಲವಾದುವುಗಳು (ಕ್ಯೂಇವಿ. ೭೦). ೨. ಸಮಯೋಚಿತವಾದ; ಕಾಲಕ್ಕೆ ತಕ್ಕ : ಈ 'ಶೂದ್ರಕ'ದ ಕಾವ್ಯಭಾಗಗಳನ್ನು ವಿಮರ್ಶದೃಷ್ಟಿಯಿಂದ ನೋಡಿದರೆ ಸಾಮಯಿಕ ಹಾಗೂ ಪ್ರೌಢವಾದ ವರ್ಣನಾಶಕ್ತಿ ಎದ್ದು ಕಾಣುತ್ತವೆ (ಕಾಚ. ೫೧). ೩. ಸಂಪ್ರದಾಯಕ್ಕನುಸಾರವಾದ; ಲೌಕಿಕವಲ್ಲದ: ಲೌಕಿಕಸಾಮಯಿಕೋರುವಿವೇಕಮುಮಭ್ಯುದಯ ಪರಮ ನಿಃಶ್ರೇಯಸಮುಂ ಪ್ರಾಕಟಮಕ್ಕುಂ ವಿದಿತಾನೇಕಕವೀಶಪ್ರಯೋಗಪದವದ್ಧತಿಯೊಳ್ (ಕವಿರಾ. ೧-೧೪). (ನಾ). ೪. ಕಾಲ; ವೇಳೆ. ೫. ಲೌಕಿಕವಲ್ಲದುದು; ಶಾಸ್ತ್ರ ಸಿದ್ಧಾಂತ: ಸಕಳಕಳಾಭಾಷಾಲೌಕಿಕಸಾಮಯಿಕಾದಿವರ್ಣನಾನಿರ್ಣಕ್ತಪ್ರಕಟತರ ವಸ್ತು ವಿಸ್ತರವಿಕಲ್ಪವಿದನಲ್ಲದಾಗದಾಗದು ಪೇಬಲ್ (ಕವಿರಾ. ೧-೨೮). ೬. [ಜೈನ] ಸಂಸಾರಕಾರಣಗಳನ್ನು ದೂರೀಕರಿಸಿ ಸಮ್ಯಕ್‌ಜ್ಞಾನವನ್ನು ಪಡೆಯಲು ಸಾಧಕವಾದ ಐದು ಬಗೆಯ ನಡವಳಿಕೆಗಳಲ್ಲಿ ಒಂದು : ಅಂತಾ ಪರಮಯೋಗೀಶ್ವರಂ . . . ಸಾಮಯಿಕವುಂ ಛೇದೋಪಸ್ಥಾಪನವುಂ ಪರಿಹಾರವಿಶುದ್ಧಿಯುಂ ಸೂಕ್ಷ್ಮಸಾಂಪರಾಯಮುಂ ಯಥಾಖ್ಯಾತಚಾರಿತ್ರಮುಮೆಂಬ ಪಂಚವಿಧಚಾರಿತ್ರದೊಳಂ . . . ನೆಲೆಗೊಂದು ನಿಸ್ಸಂಗರಾಗಿ (ಅಜಪು. ೧೨-೪ ವ). 'ಪಂಚಚಾರಿತ್ರ' ಪರಾ. ೭. ಹನ್ನೊಂದು ಬಗೆಯ ನೆಲೆಗಳಲ್ಲಿ ಒಂದು; ಮುಂಜಾನೆ, ಮಧ್ಯಾಹ್ನ ಮತ್ತು ಸಂಜೆಯಲ್ಲಿ ವಿಧಿಪೂರ್ವಕವಾಗಿ ಅರ್ಹತ್ಪೂಜೆಯನ್ನು ಮಾಡುವ ನೆಲೆ : ನಿಯತಂ ತ್ರಿಸಂಧ್ಯಮೊಳ್ ಸಮತೆಯಿನರುಹತ್ಪೂಜೆಯಿಂದಮಿರ್ಪಾತಂ ನಿಶ್ಚಯದಿಂ ಮೂಜನೆಯಂ ಸಾಮಯಿಕ ವ್ರತಧಾರಿ (ಸುಕುಮಾ. ೬-೨೮). ೮. ಸಾಮಯಿಕದ ನೆಲೆಯಲ್ಲಿರುವವನು: ಸಾಮಯಿಕವ್ರತಧಾರಿ ಪೆಸರೊಳಂ ಸಾಮಯಿಕಂ (ಸುಕುಮಾ. ೬-೨೮). [ಸಂ.]

ಸಾಮಯಿಕತೆ (ನಾ). ೧. ನಿಯತವಾಗಿರುವುದು : ಗುಹಾನಿಹಿತ, ಅಭಾವನೀಯ ಎನ್ನಬಹುದಾದ ರಸಪ್ರಕೃತಿಯು ಯಾವುದೊಂದು ವಿಶಿಷ್ಟ ಉತ್ಪೇಜನ ಪಡೆದ ಸಾಮಯಿಕತೆಯ ಕಟ್ಟು ಕಾನೂನುಗಳಿಗೂ ಅಧೀನವಲ್ಲ (ನಿಬಂಧ. II, ೨೦). ೨. ತತ್ಕಾಲಕ್ಕೆ ಸಂಬಂಧಿಸಿದುದು; ಪ್ರಸ್ತುತತೆ: ಈ ಹೃದಯವೈಶಾಲ್ಯದಲ್ಲಿ ಏನೋ ಒಂದು ಕಣ್ಣುಮುಚ್ಚಣಿಕೆಯಿದೆ, ತೋರಿಕೆಯಿದೆ, ಸಾಮಯಿಕತೆಯಿದೆ (ಸಾಒವಿ. ೩೧). ೩. [ಕಾವ್ಯಮೀ] ಆರು ಬಗೆಯ ಅರ್ಥಗುಣಗಳಲ್ಲಿ ಒಂದು: ಅಗ್ನಿಪುರಾಣದಲ್ಲಿ . . . ಮಾಧುರ್ಯ, ಸಂವಿಧಾನ, ಕೋಮಲತ್ವ, ಉದಾರತಾ, ಪ್ರೌಢಿ, ಸಾಮಯಿಕತಾ ಇವು ಆರೂ ಅರ್ಥಗುಣಗಳೆಂದೂ . . . ಹೇಳಿದೆ (ಕೃವಿ. ೨೬೨ ಅಡಿ). [ಸಂ. ಸಾಮಯಿಕತಾ]

ಸಾಮರಸ (ನಾ). ಸಮರಸವನ್ನು ಹೊಂದಿರುವಿಕೆ; ಹೊಂದಾಣಿಕೆ: ಸಾಮರಸಗೊಳಿವುದಖಿಳರನೆಂದು ಕೌಸಲ್ಯೆ ಪ್ರೇಮದಿಂದೊರೆಯೆ (ವಂಕಾರಾ. ೨-೭೪-೩೦). [< ಸಾಮರಸ್ಯ]

ಸಾಮರಸ್ಯ (ನಾ). ೧. ಸಾದೃಶ್ಯ; ಸಮಾನತೆ. ೨. ಸಮರಸದ ಭಾವ; ಐಕಮತ್ಯ: ಆಸಕ್ತಿಗೂ ಪ್ರಯತ್ನಕ್ಕೂ ಸಾಮರಸ್ಯವನ್ನು ಕಲ್ಪಿಸುವುದೇ ಶಿಕ್ಷಣ ವಿಧಾನದಲ್ಲಿ ಅತ್ಯಂತ ಪ್ರಧಾನವಾದ ಆಶಯ (ಕ್ರಿಯೂಶಿ. ೬೮). [ಸಂ.]

ಸಾಮರಾಗ (ನಾ). [ಸಂಗೀತ] ಒಂದು ರಾಗದ ಹೆಸರು: ವಸಂತದೊಳ್ ಮಧುಮಾಧವಿ ಮಕರಂದಿಯಾದುದು . . . ಸಾಮರಾಗದೊಳ್ ಕೌಮುದಿಕಾಂತಿ ಸೇವಿಯಾಯಿತ್ತು (ಪಮ್ಮಿಠ. ೨-೯೦ ವ). [ಸಂ.]

ಸಾಮರಿವಾಡ (ನಾ). ಒಂದು ಊರಿನ ಹೆಸರು: ನರಿನ್ಬಕಸಾಮರಿವಾಡ(ಡ) ಗ್ರಾಮ ಪಥಿ (ಇಆ. VII, ೨೧೩-೫೬: ಪು. 10ನೆಯ ಶತ). [? + ವಾಡ (< ಬಾಡ)]

ಸಾಮರ್ಥ್ಯ (ನಾ). ೧. ದಕ್ಷತೆ; ಯೋಗ್ಯತೆ: ಗಗನಗಮನಸಾಮರ್ಥ್ಯ ರ್ತಾರ್ಕಿಕತಿಳಿಕರೆಂದು ಪೊಗಟ್ಟುದು ಸಕಳಜನಂ ಪೂಜ್ಯಪಾದಭಟ್ಟಾರಕರಂ (ಜಾವುಂಪು. ೨); ವೇದಶಾಸ್ತ್ರಾರ್ಥರಹಸ್ಯಾಚಿಂತ್ಯಸಾಮರ್ಥ್ಯದ ಮುರಹರನಂ ಬಣ್ಣಿಸಲ್ ಬಲ್ಲನಾವಂ (ಜಗಪ. ೧-೧೪). ೨. ಬಲ; ಶಕ್ತಿ : ಶಹಾಮ್ಯಗದ ಮೈಯಲ್ಲಿ ಅದರ ಆಕಾರಮಾನಕ್ಕೆ ತಕ್ಕ ಸಾಮರ್ಥ್ಯವು ಇರುವುದು (ಮುಂಒಹು. ೪-೧೪೭). ೩. ಗುರಿ ಅಥವಾ ಉದ್ದೇಶದ ಏಕರೂಪತೆ ,– ಸಾದೃಶ್ಯ. ೪. ಶಬ್ದಕ್ಕಿರುವ ಅರ್ಥವನ್ನು ತಿಳಿಸುವ ಶಕ್ತಿ; ಪದದ ಅರ್ಥಸ್ಫುರಣಶಕ್ತಿ : ಗುಣಂ = ಶಬ್ದಸಾಮರ್ಥ್ಯವೆಂಬ ಗುಣಂ (ಕಮದ. ೬೧೫. ೬. ಟೀ); ತನ್ನ ಸಾಮರ್ಥ್ಯಬಲದಿಂದಲೇ ಪದಗಳ ಅರ್ಥವು ವಾಕ್ಯದ ಅರ್ಥವನ್ನು ಪ್ರಕಾಶಿಸುವುದಾದರೂ (ಧ್ವನ್ಯಾಲೋ. ೨೪). ೫. ಧನ; ಐಶ್ವರ್ಯ. ೬. ಪ್ರಯೋಜನ; ಅನುಕೂಲ. [ಸಂ.]

ಸಾಮರ್ಥ್ಯತೆ (ನಾ). ಸಾಮರ್ಥ್ಯ; ಸತ್ತ್ವ : ವರತೇಜದಿಂ ಪವಿತ್ರಾಚರಣೆಯಿನತಿಕಮನ ವಿಮಳಸಾಮರ್ಥ್ಯತೆಯಿಂ ಕರಮೆಸೆದನುನಯದಿಂ ರಾಜರುಷಿ ಬ್ರಹ್ಮಋಷಿ ದೇವಋಷಿ ಗಳ್ ಬಂದರ್ (ಗಿರಿಕ. ೧೦-೬೭). [ಸಂ. ಸಾಮರ್ಥ್ಯತಾ]

ಸಾಮರ್ಥ್ಯಹಣ (ನಾ). = ಸಾಮರ್ಥ್ಯತೆ : ಏನನೆಂಬೆನು ಬೊಪ್ಪ ಕುಂತೀಸೂನುಗಳ ಸಾಮರ್ಥ್ಯವಣವನು (ಕುವ್ಯಾಸ. ೧೨-೨೯). [ಸಾಮರ್ಥ್ಯ + - ಪಣ್ಮ]

ಸಾಮರ್ಥ್ಯಪುರುಷ (ನಾ). ಸಮರ್ಥನಾದ ವ್ಯಕ್ತಿ; ಬಲಿಷ್ಠ : ಅರಸ ಕೇಳ್ ಬಲುವಿದ್ಯದಲಿ ಮೂವರು ಕಣಾ ಸಾಮರ್ಥ್ಯಪುರುಷರು (ಕುವ್ಯಾಆ. ೯-೧೩). [ಸಂ.]

ಸಾಮರ್ಥ್ಯಭಕ್ತಿ (ನಾ). ಸತ್ತ್ವದಿಂದ ಕೂಡಿದ ಭಕ್ತಿ; ದೃಢಭಕ್ತಿ: ಕೊಂಡಾಡುವೆಂ ರಾಜಿಪೀ ಲಿಂಗಮಂ ಸಾಮರ್ಥ್ಯಭಕ್ತಿಯಿಂ (ವೀಶೈಪು. ೬-೧-೪೨). [ಸಂ.]

ಸಾಮವಣ್ಣ (ನಾ). ಕಡುನೀಲಿ ಬಣ್ಣ; ಶ್ಯಾಮವರ್ಣ : ಕೆಂಪು ಕರಿದು ಸಾಮವಣ್ಣ ತಳ್ಳಿತು ತೋರ ನುಂಪಿನ ಮೈಯ ಪೆಣ್ಣುಗಳ ಗುಂಪಿನೊಳಗೆ ಬಂದ ತಾನೊಬ್ಬ ಹಲವುರೂಪಂ ಪಡೆದವರ ಕೈವಿಡಿದು (ಧರಚ. ೧೫-೬). [ಸಾಮ + ಬಣ್ಣ]

ಸಾಮವರಾಲಿ (ನಾ). [ಸಂಗೀತ] ಒಂದು ರಾಗದ ಹೆಸರು: ಸಾಮವರಾಲಿಯೆಂಬ ರಾಗವು (೩೦) ಸಾಮವೇದದಿಂದ ಹುಟ್ಟಿದೆ (ಚತುಪ್ರ. ೬೦). [ಸಂ. ಸಾಮವರಾಲೀ]

ಸಾಮವರ್ಣ (ನಾ). = ಸಾಮವಣ್ಣ: ಶ್ಯಾಮವರ್ಣ - ಸಾಮವರ್ಣ (ಶಮದ. ೨೮೧ ಪ್ರಯೋ). [ಸಾಮ + ವರ್ಣ]

ಸಾಮವಾಕ್ಯ (ನಾ). ೧. ಸಮಾಧಾನದ ಮಾತು; ಸಾಂತ್ವನದ ನುಡಿ: (ಕ). ೨. ಸಾಮವೇದದ ವಾಕ್ಯ; ಸಾಮವೇದದ ಮಂತ್ರ : ತತ್ಪದ ತ್ವಂಪದ ಅಸಿಪದ ಯೀ ಮೂರು ಪದಕ್ಕೂ ಕೂಡಿ ಸಾಮವಾಕ್ಯವೆಂದು ಹೇಳಲ್ಪಡುವದು (ಈಶಸ್ವ. ೧೯-೭). [ಸಂ.]

ಸಾಮವೇದ (ನಾ). = ಸಾಮ ೬ : ವೇದವನ್ನು ನಾಲ್ಕುಭಾಗಗಳಾಗಿ ವಿಂಗಡಿಸಿ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂದು ಕರೆಯುವುದು ವಾಡಿಕೆ (ಭಾರದ. ೧೯). [ಸಂ.]

ಸಾಮವೇದಿ (ನಾ). ಸಾಮವೇದವನ್ನು ಅಧ್ಯಯನ ಮಾಡಿದವನು; ಸಾಮವೇದ ಪಾರಂಗತ: ಸಾಮವೇದಿಗಳಾಚಪೆದ್ದಿಯ ಧಾಮವಡಗಿತು ದಳ್ಳುರಿಗೆ (ಬಸಪು. ೫೬-೩೬); ಸೆರೆನರದ ದರ್ಭೆಗಳ ಮಿದುಳಿನ ಚರುವಿನೆಲುವಿನ ಸಮಿಧೆಗಳ ಬಿಲುದಿರುರವದ ಚತುರಂಗರಭಸದ ಸಾಮವೇದಿಗಳ . . . ಸಂಗರಯಜ್ಞದೀಕ್ಷೆಯ ಮಜ್ಜೆದಿರಕಟೆಂದ (ಕುವ್ಯಾಗ. ೧-೨೦). [ಸಂ. ಸಾಮವೇದಿನ್]

ಸಾಮಸೂಮ (ನಾ). ಮೌನ; ನೀರವತೆ : ಲವಲವಿಕೆಯೆಲ್ಲ ಎಕ್ಕಿಕ್ಕಿ ನಡೆದು ಮುಗ್ಗರಿಸಿಕೊಂಡು ಬಿತ್ತು. ಬರಿ ಸಾಮಸೂಮ ಹಬ್ಬುತ್ತ ಒಮ್ಮೆಗೆಲೆ ಸ್ತಬ್ಧವಾಗಿ ಇತ್ತು (ಚಿತ್ರಾಲ. ೫೫-೬); ಮನೆಯಲ್ಲಿ ಅಲ್ಲಿಗೆ ಇಲ್ಲಿಗೆ ಸಾಮಸೂಮ ಇತ್ತು (ಮಾಮಿಡೋ. ೨೮). [← ಮರಾ. ಸಾಮಸೂಮ್]

ಸಾಮಳವಾಡಿಗೆ (ನಾ). ಒಂದು ಊರಿನ ಹೆಸರು : ಸಾಮಳವಾಡಿಗೆ ಒಡ್ಡವೊಡಿಗೆ ಮಧ್ಯವತಿ[ರ]ಪಿಪ್ಪರಗೆನಾಮಗ್ರಮೋ ಸರ್ವ್ವಬಾಧಪರಿಹಾರೇಣ(ಂ) ದತ್ತಿ (ಸೌಇ. XI-i, ೮-೧೮; 862). [?]

ಸಾಮಾಚಾರ (ನಾ). [ಜೈನ] ಸಾಮಯಿಕಕ್ಕೆ ಪೋಷಕವಾದ ಆಚಾರ; ಒಳ್ಳೆಯ ಮಾತುಗಳಿಂದ ಕೂಡಿದ ವರ್ತನೆ : ಸೂತ್ರಾರ್ಥಂಗಳಂ ಗುರುಗಳು ಪೇಳುತ್ತಮಿರಲು ತಾಂ ಕೇಳ್ವಲ್ಲಿ ನಿಮ್ಮಡಿಗಳೆಂತು ಪೇಳ್ವೆರಂತೆಯಕ್ಕುಮೆಂಬ ಸಾಮಾಚಾರಮಕ್ಕುಂ (ಶಾಸ್ತ್ರಸಾ. ೯೪-೮). [ಸಂ.]

ಸಾಮಾಜಿಕ (ಗು). ೧. ಸಮಾಜಕ್ಕೆ ಸಂಬಂಧಿಸಿದ; ಸಾಂಘಿಕಜೀವನಕ್ಕೆ ಸೇರಿದ: ಸಾಮಾಜಿಕ ಮತ್ತು ರಾಜಕೀಯಜೀವನದಲ್ಲಿ ಶಕ್ತಿಹೀನರಿಗೆ ಸ್ಥಾನವಿಲ್ಲ (ಧರ್ಮಸಾ. ೧೮೫). ೨. ಸಂಘ ಅಥವಾ ಸಂಸ್ಥೆಗೆ ಸಂಬಂಧಿಸಿದ : (ಕ). (ನಾ). ೩. ಸಮಾಜಕ್ಕೆ ಸಂಬಂಧಿಸಿದುದು; ಸಾಂಘಿಕಜೀವನಕ್ಕೆ ಅನ್ವಯಿಸಿದುದು: ರಂಗಭೂಮಿ ಎಂಬುದು ಹೀಗೆ ಒಂದು ಸಾಮಾಜಿಕವಾದ, ಸಾರ್ವಜನಿಕವಾದ ವಿನೋದ ವ್ಯವಹಾರವಾಗಿದ್ದಿತು (ಭಾರದ. ೫೭೦); ಈ ಸಾಹಿತ್ಯರಸಗಳು . . . ಒಂದು ವಿಧದಲ್ಲಿ ಅವು ಸಾಮಾಜಿಕವಾಗಿವೆ (ಸಾಹಿವಿ. ೨೯). ೪. ಸಮಾಜದಲ್ಲಿರುವ ವ್ಯಕ್ತಿ: ನಾವು ಹಮ್ಮಿಕೊಂಡಿರುವ ಈ ಬೃಹತ್ಕಾರ್ಯಕ್ಕೆ ಸಾಮಾಜಿಕರ ಸಂಘಸಂಸ್ಥೆಗಳ ಸಹಕಾರ ಬೇಕು (ರೂಢಿ). ೫. ಆಸ್ಥಾನ, ಸಭೆಗಳಲ್ಲಿರುವ ಗಣ್ಯವ್ಯಕ್ತಿ : ಅಂತು ಸಾಮಾಜಿಕಸಮಾಜಮಂ ಜಗಜ್ಜನದಾರಿದ್ರ್ಯನಿದಾಘಕನಕಮೇಘನನೂನದಾನದಿಂ ತಣಿಪಿ ಮಾನ್ಯರಾಜನ್ಯಕಮಂ ತಾಂಬೂಲದಾನಪುರಸ್ಸರಂ ವಿಸರ್ಜಿಸುವುದುಂ (ಮಲ್ಲಿಪು. ೮-೬೫); ಆ ಸದಸ್ಯತ್ವವನು ವೇದವ್ಯಾಸ ಕೈಕೊಂಡನು ಮುನೀಂದ್ರಮಹಾಸಮಾಜದ ಬಯಕೆಗಾ ಶಾಂಡಿಲ್ಯ ನಾರದರು ಭೂಸುರರು ಸಾಮಾಜಿಕರು (ಕುವ್ಯಾಸ. ೭-೨೪). ೬. ಪ್ರೇಕ್ಷಕ ; ನೋಟಕ : ಸಾಮಾಜಿಕರ ಮತ್ತು ಪಾಠಕರ ವಿದ್ಯಾಬುದ್ಧಿ ಸಂಸ್ಕಾರಾದಿಗಳ ಮೇಲೆ ಪ್ರತಿಯೊಬ್ಬರಿಗೂ ರಾಮ . . . ಸಾವಿತ್ರಿ ಮುಂತಾದವರ ವಿಚಾರವಾಗಿ ಒಂದೊಂದು ಅಭಿಪ್ರಾಯವುಂಟಾಗಿರುತ್ತದೆ (ಕೃಪಿಡಿ. ೧೯೬). ೭. ಸಂಘ ಅಥವಾ ಸಂಸ್ಥೆಯ ಸದಸ್ಯ : (ಕ). [ಸಂ.]

ಸಾಮಾಜಿಕಕ್ರಾಂತಿ (ನಾ). ಸಮಾಜಕ್ಕೆ ಸಂಬಂಧಿಸಿದ ಕ್ರಾಂತಿ ; ಸಮಾಜ ಸಂಬಂಧವಾದ ಆಂದೋಳನ : ಪೇಟೆಗಳ ಮೂಲ್ಯಗಳ ಏರಿಕೆಯ ಪರಿಸ್ಥಿತಿ ಸಾಮಾಜಿಕ ಕ್ರಾಂತಿಗೆ ಕಾರಣವಾಯ್ತು (ಕರ್ನಾಕ. ೩೮೩). [ಸಂ.]

ಸಾಮಾಜಿಕಜೀವನ (ನಾ). ಸಮಾಜಕ್ಕೆ ಸಂಬಂಧಿಸಿದ ಬದುಕು; ಸಾಂಘಿಕ ಜೀವನ : ಅನೇಕ ಲತೆಗಳು ಹಬ್ಬಿ ಬೆಳೆಯಲು ಆಶ್ರಯ ಕೊಟ್ಟು ಶೋಭಿಸುವ ಮಹಾವೃಕ್ಷದಂತೆ ಭಾರತೀಯ ಸಾಮಾಜಿಕಜೀವನವು ಕಂಗೊಳಿಸುತ್ತಿದೆ (ಭಾರದ. ೩೮೧); ಕನ್ನಡನಾಡಿನ ಸಾಮಾಜಿಕಜೀವನದಲ್ಲಿ ಲಿಪಿಕಾರರಿಗೆ ಇದ್ದ ಸ್ಥಾನಮಾನಗಳು . . . ಸ್ವಲ್ಪಮಟ್ಟಿಗೆ ವಿಶದವಾಗಿದೆ (ಕನ್ನಸಂ. ೫೮). [ಸಂ.]

ಸಾಮಾಜಿಕತೆ (ನಾ). ಸಮಾಜಕ್ಕೆ ಸಂಬಂಧಿಸಿದ ನಡವಳಿಕೆ ; ಸಮಾಜದೊಂದಿಗೆ ಬೆರೆತು ನಡೆಯುವ ಸ್ವಭಾವ : ವಿಲಾಯತಿಯ ವಾಸದಿಂದ ಪುನಃ ಜಾಗೃತವಾದ ಸಾಮಾಜಿಕತೆಯು . . . ಮತ್ತೆ ಆಂತರಿಕತೆಯ ಇನ್ನೊಂದು ಮುಖಕ್ಕೆ ಅನುವು ಮಾಡಿಟ್ಟಿತ್ತು (ಸಮಜೀ. ೯೭೭). [ಸಂ. ಸಾಮಾಜಿಕತಾ]

ಸಾಮಾಜಿಕಪ್ರಜ್ಞೆ (ನಾ). ಸಮಾಜದ ಬಗೆಗಿನ ಅರಿವು : ವಿಷ್ಣುನ ಸಾಮಾಜಿಕಪ್ರಜ್ಞೆ ಮೊದಲಿನಿಂದ ತೀಕ್ಷ್ಣವಾಗಿತ್ತು (ಸಮಜೀ. ೯೭೭). [ಸಂ. ಸಾಮಾಜಿಕಪ್ರಜ್ಞಾ]

ಸಾಮಾಜಿಕವ್ಯವಸ್ಥೆ (ನಾ). ಸಮಾಜಕ್ಕೆ ಸಂಬಂಧಿಸಿದ ಕಟ್ಟಳೆ ,— ನಿಯಮ: ಗಾರ್ಹಸ್ಥ್ಯ ಮತ್ತು ಸಾಮಾಜಿಕವ್ಯವಸ್ಥೆಯಲ್ಲಿ ಇಬ್ಬರಲ್ಲಿ ಭೂಮ್ಯಾಕಾಶದಷ್ಟು ಅಂತರ (ಶೇಪ್ರಶ್ನ. ೧೦೧). [ಸಂ. ಸಾಮಾಜಿಕವ್ಯವಸ್ಥಾ]

ಸಾಮಾಧಿಕ (ನಾ). = ಸಾಮಾಜಿಕ ೫ : ಕರಾಚೂರಿ ನಂದರಾಜಅರಸುಗಳು ತಿಳಿದು ತಿರುಗಿಬಿದ್ದು, ಆ ಕೃಷ್ಣರಾಜಒಡೆಯರ ಅರಮನೆಗೆ ಗುಂಡು ಹೊಡೆದು ಅವರ ಸಾಮಾಧಿಕರನ್ನು ಆಜ್ಞೆ ಮಾಡಿಸಿ, ಅವರ ಮನೆಗೆ ಪಾರಾಯಿಟ್ಟು ಬಂದೋಬಸ್ತು ಮಾಡಿದರು (ರಾಜೇಂದ್ರ. ೧೬). [< ಸಂ. ಸಾಮಾಜಿಕ]

ಸಾಮಾನಿಕ (ಗು). ೧. ಒಂದೇ ಮಟ್ಟಕ್ಕೆ ಸೇರಿದ; ಸಮಾನಸ್ಥಾನಕ್ಕೆ ಸಂಬಂಧಿಸಿದ : (ಕ). (ನಾ). ೨. [ಜೈನ] ಒಂದು ದೇವತಾವರ್ಗ ಮತ್ತು ಆ ವರ್ಗಕ್ಕೆ ಸಂಬಂಧಿಸಿದ ದೇವತೆ : ಆ ದೇವಂ . . . ದೇವಲೋಕಕ್ಕೆ ವಂದು ಚತುಸ್ಸಹಸ್ರಸಾಮಾನಿಕಸಮೇತನುಂ ತತ್ಪ್ರಮಾಣಾಂಗರಕ್ಷತ್ರಿದಶಾನೀಕನುಂ . . . ಆಗಿ ಪರಮೈಶ್ವರ್ಯಸಂಪನ್ನನಾದಂ (ಸುಕುಮಾ. ೯-೩೧ ವ); ಅವರೊಡನೆ ಸಾಮಾನಿಕತ್ರಯಸ್ತ್ರಿಂಶದಾತ್ಮರಕ್ಷಲೋಕಪಾಳಕಪ್ರಕೀರ್ಣಕಾಭಿಯೋಗ್ಯಕಿಲ್ಬಿಷಿತ ಪ್ರಮುಖಸಪ್ತಸೇನೆ ಸಂದಣಿಸೆ ವಂದು ನಿಂದರ್ (ಮಲ್ಲಿಪು. ೧೨-೧೯). [ಸಂ.]

ಸಾಮಾನಿಕದೇವ (ನಾ). = ಸಾಮಾನಿಕ ೨ : ಶ್ರೀಮತ್ಕಾರ್ಯಯುಂ ಸಮ್ಯಕ್ತ್ವ ಮಹಾತ್ಮ್ಯದಿಂ ಸ್ತ್ರೀತ್ವಮಂ ಪತ್ತುವಿಟ್ಟು ತತ್ಸ್ವಯಂಪ್ರಭವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬೊಂ ದೇವನಾದೊಂ (ಆದಿಪು. ೫-೭೦ ವ); ಇತ್ತ ವಿಶಾಖಭೂತಿಯುಂ ಭೂರಿತಪೋಭಾರಮಂ ನಿರ್ವಹಿಸಿ ಶತಾರಕಲ್ಪದೊಳ್ ಸಾಮಾನಿಕದೇವನಾದೊಂ (ಶಾಂತಿಪು. ೭-೫೯ ವ). [ಸಂ.]

ಸಾಮಾನು (ನಾ). ೧. (ಸಂಸಾರಕ್ಕೆ ಅಗತ್ಯವಾದ) ಪದಾರ್ಥ; ಸಲಕರಣೆ ; ಸಾಮಗ್ರಿ : ನ್ಯೂನವಿಲ್ಲದ ಹಾಗೆಯೇ ಸಾಮಾನುಗಳನೊದಗಿಸುತ ನಿಮ್ಮಿಚ್ಛಾನುಸಾರವು ನಡೆಯಲ್ ತಮ್ಮನ ನೇಮಿಸಿಹೆ ನಾನು (ಅರ್ಜಾವಿ. ೧೮-೫೦); ಸಾಧ್ಯವಾದರೆ ಸಾಮಾನುಗಳನ್ನಿರಿಸಲು . . . ಉಗ್ರಾಣವಿರುವುದು ಒಳ್ಳೆಯದು (ಅಡುಸೌ. ೫೨); ಒಂದು ಸಾಮಾನು ನೆಟ್ಟಗ ನೋಡಿ ತರುವಂತಿಲ್ಲ ಬಿಡುವಂತಿಲ್ಲ (ಅಶೋಕ. ೧); ಪೆಪ್ಪರಮೆಂಟಿನಿಂದ ಸೂಜಿದಾರದವರೆಗೆ ಎಲ್ಲ ಸಾಮಾನುಗಳೂ ಇದ್ದುವು (ನಡೆದಾ. II, ೧೦೯೯). ೨. (ಪ್ರಯಾಣದ) ಪೆಟ್ಟಿಗೆ, ಗಂಟು ಮೂಟೆ, ಭಾಂಗಿ ಇತ್ಯಾದಿ ; ಸರಕು ; ಮಾಲು : ಸುಲಭವಾಗಿ ದೋಣಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಪ್ರದೇಶಕ್ಕೆ ಸಾಮಾನು ಸಾಗಿಸುತ್ತೇವೆ (ನನದಿ. ೫). ೩. ಒಡವೆ ; ನಗ : ಚಿನಾದ ಮುಲಾವಿನ ಸಾಮಾನು . . . ಕತ್ತಿಗೆ ಹಾಕಿರುವ ಸಾಮಾನು . . . ಪುಲ್ಲೆಕಡೆಸಾಮಾನು . . .

ಗಂಗಾಜಮುನಾಸಾಮಾನು . . . ಬೆಳ್ಳಮುಲಾವಿನ ಸಾಮಾನು (ಎಕ. XIV. ಸಂಜನ ೨೮೯-೧೯೬ ಕಲಂ: 1847).

ಸಾಮಾನು ಸಟ್ಟು = ೧. (ಸಂಸಾರಕ್ಕೆ ಅಗತ್ಯವಾದ) ಪದಾರ್ಥ : ಅವರು ಸಾಮಾನು-ಸಟ್ಟು ತಂದು ಹಾಕಿದರು. ನಾನವುಗಳನ್ನು ಹೊಂದಿಸಿ ಇಡುವ ಕೆಲಸ ಕೈಕೊಂಡೆ (ಸ್ವತಚ. ೬೨). ೨. (ಪ್ರಯಾಣಕ್ಕೆ ಬೇಕಾದ) ಪದಾರ್ಥ; ಗಂಟುಮೂಟೆ ಇತ್ಯಾದಿ : ಅವರ ಸಾಮಾನು ಸಟ್ಟುಗಳೆಲ್ಲ ನಮ್ಮ ಕಂಪಾರ್ಟ್‌ಮೆಂಟಿನಲ್ಲಿಯೆ ಉಳಿದಿದ್ದುವು (ಜನಜೀ. ೧೧೪). ಸಾಮಾನು ಸರಂಜಾಮು = ಸಾಮಾನು ಸಟ್ಟು ೨: ಮೈಸೂರುಸವಾರರು ಶತ್ರುಗಳ ಬೆನ್ನುಹತ್ತಿ ಅವರ ಆನೆ, ಒಂಟೆ, ಸಾಮಾನು ಸರಂಜಾಮು ಮುಂತಾದುವನ್ನು ಬಹಳಮಟ್ಟಿಗೆ ಸ್ವಾಧೀನಪಡಿಸಿಕೊಂಡು ತಂದೊಪ್ಪಿಸಿದರು (ಭಾಷಾಕಾ. II. ೪೯). [← ಪಾರ. ಹಿಂ. ಮರಾ. ಸಾಮಾನ್]

ಸಾಮಾನ್ಯ (ಗು). ೧. ಸಾರ್ವತ್ರಿಕವಾದ; ಎಲ್ಲಕ್ಕೂ, ಎಲ್ಲರಿಗೂ ಅನ್ವಯಿಸುವಂತಹ. ೨. ಒಂದೇ ರೀತಿಯ; ಏಕಪ್ರಕಾರದ. ೩. ಸಾಧಾರಣ ಮಟ್ಟದ : ಉತ್ತಮ ಮಧ್ಯಮ ಕನಿಷ್ಠವೆಂದು ಬಂದ ಜಂಗಮವನೆಂದೆನಾದರೆ ನೊಂದೆನಯ್ಯಾ ಬೆಂದೆನಯ್ಯಾ ಎನ್ನ ಕಿಚ್ಚು ಎನ್ನ ಸುಟ್ಟಿತ್ತು ಸುಖಿಜಂಗಮ ಸಾಮಾನ್ಯಜಂಗಮವೆಂದುಂಟೆ (ಬಸವ. ೪೦೦). ೪. ಕೆಳಮಟ್ಟದ ; ಕೆಳದರ್ಜೆಯ. ೫. ಪೂರ್ಣವಾದ ; ಸಮಗ್ರವಾದ. (ನಾ). ೬. ಸಾರ್ವತ್ರಿಕವಾದುದು; ಎಲ್ಲಕ್ಕೂ, ಎಲ್ಲರಿಗೂ ಅನ್ವಯಿಸುವಂತಹುದು: ನಮಗಲ್ಲರಿಗೂ ಸಾಮಾನ್ಯವಾದ ಒಂದು ವಿಶಿಷ್ಟವಾದ ಸಂಸ್ಕೃತಿ ಇದೆಯೇ? (ಭಾರದ. ೬). ೭. ಸಾಧಾರಣವಾದುದು; ಕೇವಲ : "ಸಾವಭೃತಂ ಸಾಮಾನ್ಯಂ ಕೇವಲಮೆಂಬುದದೆನಿಕ್ಕುಂ" (ಪಪ್ರಕೋ. ೧೨೬-೪೯); ಅಬ್ಬದಳಾಕ್ಷೀ ಪೇಟ ಸಾಮಾನ್ಯಮೆ ಬಗೆಯ ಭವತ್ಕೇಶಪಾಶ ಪ್ರಪಂಚಂ (ಪಂಪಭಾ. ೧೨-೧೫೬); ಇದು ಕೇಳ್ ಸಾಮಾನ್ಯಮೆ ಶಂಖದ ಬೂದಿಯನೊಳ್ಕಿತಾಗಿ ಪರಿಮರ್ದಿಸಿ ಪೀಸದಿನಂತದನೊಂದಿರೆ ಪೊಸದೊಪ್ಪಂ ನರೆ ಕರಿಯವಾಗಿ ಸೊಗಯಿಸಿ ತೋರ್ಕುಂ (ಕೋಕೋಪ. ೯-೫೦). ೮. ವಾಡಿಕೆ; ರೂಢಿ: ಲಿಂಗತ್ರಯಮೆನ್ನದೆ ವಚನತ್ರಯಮೆನ್ನದೆ ಸ್ವರಾಂತ ವ್ಯಂಜನಾಂತಂಗಳೆನ್ನದೆ ಸಾಮಾನ್ಯದಿಂ ಸಂಬೋಧನೆಯ ಕಡೆಯೊಳ್ ವಿಕಲ್ಪದಿಂ ಎ ಏ ಎಂದಿವಕ್ಕುಂ (ಶಮದ. ೧೨೪ ವೃತ್ತಿ). ೯. ಸಾಧಾರಣನಾದ ವ್ಯಕ್ತಿ; ನಾಡಾಡಿ: ಸಾಮಾನ್ಯನಲ್ಲನಾತಂ ನೀಮಿದನವಧರಿಪುದು (ನೇಮಿಪು. ೭-೧೫೭): ಅನಿರುದ್ಧಂ ನಳಕೂಬರಂ ವರಜಯಂತಂ ನೋಡೆ ಸಾಮಾನ್ಯರೇ (ಹಮ್ಮೀ. ೨-೭೪). ೧೦. ಸಂಪೂರ್ಣತೆ; ಸಮಗ್ರತೆ. ೧೧. ನಿರ್ದಿಷ್ಟವಾದ ಗುಣಲಕ್ಷಣ; ಖಚಿತವಾದ ಸ್ವಭಾವ. ೧೨. ಜಾತಿ; ವರ್ಗ; ಬಣ: "ಜಾತಿ, ಜಾತಂ, ಸಾಮಾನ್ಯಂ - ೩ ಜಾತಿಯ ಹೆಸರುಗಳು" (ಸಿದ್ಧಾಂತಿ. ೪೩). ೧೩. ಸಮಾನಗುಣ ಲಕ್ಷಣಗಳಿಂದ ಭಿನ್ನವಸ್ತುಗಳಲ್ಲಿರುವ ಸಾಮ್ಯ ,— ಸಾದೃಶ್ಯ. ೧೪. [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ; ಉಪಮಾನ ಮತ್ತು ಉಪಮೇಯಗಳಲ್ಲಿ ಪರಸ್ಪರ ಸಾದೃಶ್ಯದಿಂದ ವ್ಯಾವರ್ತಕಧರ್ಮ ವಿಲ್ಲದೆ ವಿಶೇಷವು ತಿಳಿಯದಿರುವಿಕೆ : ಸಮನಾದ ವಸ್ತುವಿಗೆ ವಿಶೇಷ ತೋಱಿದಡೆ ವಿವರಿಸಲ್ಕಿದು ಸಾಮಾನ್ಯವು (ಕವಲ. ೧೪೫-೧೭). ೧೫. [ತರ್ಕಶಾ] ವೈಶೇಷಿಕದರ್ಶನದ ಏಳು ಬಗೆಯ ಪದಾರ್ಥಗಳಲ್ಲಿ ಒಂದು ಬಗೆ : ಕಾಣಾದವೆಂಬ ವೈಶೇಷಿಕಶಾಸ್ತ್ರವೇ ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ಸಮವಾಯ ಅಭಾವಗಳೆಂಬ ಪದಾರ್ಥಸಪ್ತಕಮಂ ಪ್ರತಿಪಾದಿಸುವುದಱಿಂ ಪ್ರಪಂಚಸ್ವರೂಪಮಂ ವಿವರಿಸಿ ವಿಭಾಗಿಸುತಿರ್ಕುಂ (ವಿವೇಕ. ೧೦). ೧೬. [ದ್ವೈತ] ಹತ್ತು ಬಗೆಯ ಪದಾರ್ಥಗಳಲ್ಲಿ ಒಂದು : ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ವಿಶಿಷ್ಟ, ಅಂಶಿ, ಶಕ್ತಿ, ಸಾದೃಶ್ಯ, ಅಭಾವ ಎಂದು ಪದಾರ್ಥಗಳು ಹತ್ತು (ಹಿಂದಸಾ. ೨೭೫). [ಸಂ.]

ಸಾಮಾನ್ಯಗಣಿತ (ನಾ). ವ್ಯವಹಾರಕ್ಕೆ ಅಗತ್ಯವಾದ ಸಾಮಾನ್ಯ ಲೆಕ್ಕಾಚಾರ ; ಹೆಚ್ಚು ಪಾರಿಭಾಷಿಕವಲ್ಲದ ಸಾಧಾರಣವಾದ ಗಣಿತ : ಸಾಮಾನ್ಯಗಣಿತವು ತಕ್ಕಮಟ್ಟಿಗಾದರೂ ತಿಳಿದಿತ್ತೆಂದು ಹೇಳಬೇಕು (ಗಣಚ. ೫). [ಸಂ.]

ಸಾಮಾನ್ಯಗತಿ (ನಾ). ಸಾಧಾರಣವಾದ ವೇಗ ; ಹೆಚ್ಚು ವೇಗವಲ್ಲದ ಚಲನೆ: ನೆಲಲನಱಸುತ ವೇಗಗತಿ ಸಾಮಾನ್ಯಗತಿಗಳಲಿ ಬಳವಿಡಿದು ಭೂಭೂಧರ ಯಾನಂಗಳೊಳಗಳುಕದೆ ಡಗೆಯ ಸೈರಿಸಿ ಬಳಸುವವನೇ ಛತ್ರಧಾರಕನು (ಕುವ್ಯಾಉ. ೬-೯೯). [ಸಂ.]

ಸಾಮಾನ್ಯಜನ (ನಾ). ಸಾಧಾರಣವಾದ ಜನ ; ಜನಸಾಮಾನ್ಯರು : ಹೆಚ್ಚಾಗಿ ಲಿಪಿಗಳು ಪ್ರಾಕೃತದಲ್ಲಿಯೇ ಇರುವುದರಿಂದ ಆಗ್ಗೆ ಸಾಮಾನ್ಯಜನರಿಗೂ ಪ್ರಾಕೃತವು ತಿಳಿಯುತ್ತಿದ್ದಿರಬೇಕು (ಕರ್ನಾಅ. ೬). [ಸಂ.]

ಸಾಮಾನ್ಯತೆ (ನಾ). ೧. ಸಾಧಾರಣವಾಗಿರುವಿಕೆ ; ಸಮಾನವಾಗಿರುವಿಕೆ : (೫). ೨. ಕೆಳಮಟ್ಟದಲ್ಲಿರುವಿಕೆ ; ಕೀಳುದರ್ಜೆಯಲ್ಲಿರುವಿಕೆ : (೪).

[ಸಂ. ಸಾಮಾನ್ಯತಾ]

ಸಾಮಾನ್ಯಧರ್ಮ (ನಾ). ೧. ಎಲ್ಲರಿಗೂ ಅನ್ವಯಿಸುವ ಧರ್ಮ; ಸಾರ್ವತ್ರಿಕವಾದ, ನಿಯಮ ,— ವಿಧಿ : ಸಂಧ್ಯೋಪಾಸನೆಯು ದ್ವಿಜರಿಗೂ ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥರಿಗೂ ಸಾಮಾನ್ಯಧರ್ಮವು (ಆರ್ಯಧ. ೧೧). ೨. ಸಾಧಾರಣವಾದ ಸ್ವಭಾವ ; ಸಹಜವಾದ ಗುಣಧರ್ಮ : ಮಾನವನ ಸಾಮಾನ್ಯಧರ್ಮಗಳಾದ ಸತ್ಯ, ಅಹಿಂಸೆ, ಪ್ರೇಮ, ಔದಾರ್ಯ, ಆತ್ಮಶುದ್ಧಿ ಇತ್ಯಾದ್ಯಾತ್ಮ ಧರ್ಮಗಳು ಸನಾತನವಾಗಿ ಮುಂದುವರಿಯುತ್ತಿವೆ (ಋಸ್ಫಾದ. ೧೨೨ ಟೀಕೆ). [ಸಂ.]

ಸಾಮಾನ್ಯನಿಯಮ (ನಾ). ಸೂತ್ರರೂಪವಾದ ಕಟ್ಟಳೆ ; ಎಲ್ಲರಿಗೂ, ಎಲ್ಲಕ್ಕೂ ಅನ್ವಯಿಸುವ ನಿಯಮ : ಇದು ಉಪದೇಶದಿಂದಲೇ ತಿಳಿಯಬೇಕಾಗಿದ್ದರೂ ಒಂದು ಸಾಮಾನ್ಯನಿಯಮವನ್ನು ಅನುಸರಿಸಬಹುದು (ಭಾರದ. ೧೫೭).

[ಸಂ.]

ಸಾಮಾನ್ಯಪ್ರತ್ಯಯ (ನಾ). [ವ್ಯಾಕ] ಬಳಕೆಯಾದ ಪ್ರತ್ಯಯ; ಹೆಚ್ಚು ರೂಢಿಯಾದ ಪ್ರತ್ಯಯ : ಇಗ ಎಂಬುದು ಚತುರ್ಥೀವಿಭಕ್ತಿಯ ಸಾಮಾನ್ಯ ಪ್ರತ್ಯಯ (ಮಧ್ಯಮ. ೫೯). [ಸಂ.]

ಸಾಮಾನ್ಯಲಕ್ಷಣ (ನಾ). ೧. ಎಲ್ಲರಿಗೂ ಎಲ್ಲಕ್ಕೂ ಅನ್ವಯಿಸುವ ಗುಣಸ್ವಭಾವ: ಇವುಗಳಿಗೆಲ್ಲಾ ಕೆಲವು ಸಾಮಾನ್ಯಲಕ್ಷಣಗಳೂ ವಸ್ತು - ನಾಯಕ - ರಸಭೇದದಿಂದ ಕೆಲವು ಭೇದಗಳೂ ಇರುತ್ತವೆ (ಕೃವಿ. ೨೦೫). ೨. ನಿಯತವಾದ ವಿಶೇಷಗುಣ; ವಿಶಿಷ್ಟವಾದ ಗುಣಸ್ವರೂಪ : (೫). [ಸಂ.]

ಸಾಮಾನ್ಯವಾಕ್ಯ (ನಾ). [ವ್ಯಾಕ] ಒಂದು ಪೂರ್ಣಕ್ರಿಯಾಪದವನ್ನುಳ್ಳ ಸ್ವತಂತ್ರವಾಕ್ಯ : ಒಂದು ಪೂರ್ಣಕ್ರಿಯಾಪದವನ್ನುಳ್ಳ ಸ್ವತಂತ್ರವಾಕ್ಯಕ್ಕೆ ಸಾಮಾನ್ಯ ವಾಕ್ಯವೆಂದು ಹೆಸರು. ಸಾಮಾನ್ಯವಾಕ್ಯದಲ್ಲಿ ಒಂದೇ ಪೂರ್ಣಕ್ರಿಯಾಪದವಿರದೇಕು: ಸಾಪೇಕ್ಷಕ್ರಿಯಾರೂಪಗಳು ಎಷ್ಟಾದರೂ ಇರಬಹುದು (ಮಧ್ಯಮ. ೧೯೪). [ಸಂ.]

ಸಾಮಾನ್ಯವಾಚಿ (ನಾ). ಒಂದು ಸಾಮಾನ್ಯವಾದ ಅರ್ಥವನ್ನು ಹೊಂದಿರುವ ವಸ್ತುವಾಚಕ : ಸಾಮಾನ್ಯವಾಚಿಗಳನೀ ತೆಱದಿಂದನನ್ಯಸಾಮಾನ್ಯಮಾನ್ಯಸುಚರಿತ್ರ ಗುಣಾವತಾರಂ ಸಾಮಾನ್ಯಮಪ್ಪ ಜನಮುಂ ತಿಳಿವಂತು ಪೇೞ್ದಂ ದಾಮೋದರಪ್ರಿಯಸುತಂ ಕವಿಕರ್ಣಪೂರಂ (ಪಪ್ರಕೋ. ೧೧೬-೩೫). [ಸಂ. ಸಾಮಾನ್ಯವಾಚಿನ್]

ಸಾಮಾನ್ಯಶೈವ (ನಾ). ೧. [ಶೈವ] ಶೈವಮತದ ನಾಲ್ಕು ಪ್ರಭೇದಗಳಲ್ಲಿ ಒಂದು : ಆ ಶೈವಂಗಳಲ್ಲಿ ಮುಖ್ಯವಾವ ಸಾಮಾನ್ಯಶೈವ ಮಿಶ್ರಶೈವ ಶುದ್ಧಶೈವ ವೀರಶೈವವೆಂದು ಚತುರ್ವಿಧಶೈವಂಗಳ್ (ವಿವೇಕ. ೬೮). ೨. ಸಾಮಾನ್ಯಶೈವ ಪಂಗಡಕ್ಕೆ ಸೇರಿದವನು: ಆವನೋರ್ವನು ಶ್ರೀವಿಭೂತಿಯ ಧಾರಣಮಾತ್ರದಿಂ ಶುದ್ಧಾತ್ಮನಾಗಿ . . . ಅಷ್ಟವಿಧಭಕ್ತಿಯುಕ್ತನಾಗಿರ್ಪಾತನೇ ಸಾಮಾನ್ಯಶೈವನಪ್ಪಂ (ವಿವೇಕ. ೬೮). [ಸಂ.]

ಸಾಮಾನ್ಯಾರ್ಥಕ (ನಾ). ೧. ವಿಶೇಷವಿಲ್ಲದ ಅರ್ಥವನ್ನು ಕೊಡುವಂತಹುದು. ೨. [ವ್ಯಾಕ] ಮೂರು ಬಗೆಯ ಕ್ರಿಯಾಪದಗಳಲ್ಲಿ ಒಂದು; ಸಾಮಾನ್ಯವಾದ ಅರ್ಥವನ್ನು ಕೊಡುವ ಕ್ರಿಯಾವಾಚಕ : ಕ್ರಿಯಾಪದಗಳನ್ನು ಸಾಮಾನ್ಯಾರ್ಥಕ, ವಿಧ್ಯರ್ಥಕ, ನಿಷೇಧಾರ್ಥಕ ಎಂದು ಮೂರು ಪಂಗಡಗಳಾಗಿ ವಿಭಾಗಿಸಬಹುದು (ಕೃವಿ. ೪೩).

ಸಾಮಾನ್ಯಾಲಂಕಾರ (ನಾ). [ಕಾವ್ಯಮೀ] ಒಂದು ಬಗೆಯ ಅರ್ಥಾಲಂಕಾರ ;

ಎರಡು ವಸ್ತುಗಳು ಸಮಾನವಾಗಿದ್ದು ವಿಶೇಷವಿಲ್ಲದಿರುವುದು: ಎರಡುಂ ವಸ್ತುಗಳುಂ ಸಮಾನಂಗಳಾಗಿರ್ಪುದಱಿಂದೊಂದರ್ಕೊಂದು ವಿಶೇಷಂ ಕಾಣಿಸದಿರೆಯದು ಸಾಮಾನ್ಯಾಲಂಕಾರಂ (ಅಪ್ರತಿ. ೧೨೨-೧): ಸಮನಾದೆರಡುವಸ್ತುವಿನೊಳೊಂದು ವಿಶೇಷ ತೋಱದಿರ್ದಡೆ ಸಾಮಾನ್ಯಾಲಂಕಾರವೆನಿಪುದು (ಕುವಲ. ೧೪೬-೨). [ಸಂ.]

ಸಾಮಾನ್ಯಾವ್ಯಯ (ನಾ). [ವ್ಯಾಕ] ಒಂದು ಕ್ರಿಯೆಯ ಕಾಲ, ಸ್ಥಾನ, ರೀತಿ ಮುಂತಾದುವನ್ನು ತಿಳಿಸುವ ಒಂದು ಅವ್ಯಯ : ಕ್ರಿಯೆಯ ಕಾಲ, ಸ್ಥಾನ, ರೀತಿ ಮೊದಲಾದುವನ್ನು ತಿಳಿಸುವ ಅವ್ಯಯಗಳಿಗೆ ಸಾಮಾನ್ಯಾವ್ಯಯಗಳೆಂದು ಹೆಸರು (ಮಧ್ಯಮ. ೧೫೪): ಸಾಮಾನ್ಯಾವ್ಯಯಗಳು - ಅಲ್ಲಂ, ಅಲ್ಲ, ಅಲ್ಲದೆ, ಅಲ್ತು . . . ಬಟೊಕ್ಕಂ, ಬಟೊಯಂ (ಕೈಪಿಡಿ. ೫೨). [ಸಂ.]

ಸಾಮಾನ್ಯಾಸ್ತ್ರ (ನಾ). ವಿಶೇಷಶಕ್ತಿಯಿಲ್ಲದ, ಸಾಧಾರಣವಾದ ಬಾಣ: ಸಾಮಾನ್ಯಾಸ್ತ್ರಂಗಳಿಂ ಭಂಗಮನೊಡರಿಸಿದಂ (ಪಂರಾಮಾ. ೧೪-೨೩). [ಸಂ.]

ಸಾಮಾನ್ಯೆ (ನಾ). ೧. ಸಾಧಾರಣಳಾದ ಹೆಂಗಸು : ಕಾಕುಮತಿಗಳು ನಾವು ಚಿತ್ತವ್ಯಾಕುಳತೆಯರು ನಾವು ಭಕ್ತಿವಿವೇಕಸಾಮಾನ್ಯೆಯರು ನಾವತಿಕಾಮಚಾರಿಯರು (ಬಸಪು. ೪೦-೮೨). ೨. [ಕಾವ್ಯಮೀ] ಮೂರು ಬಗೆಯ ನಾಯಿಕೆಯರಲ್ಲಿ ಒಬ್ಬಳು; ವೇಶ್ಯೆ: ಸ್ವಕೀಯೆ ಪರಕೀಯೆ ಸಾಮಾನ್ಯೆಯ[ಪಾಠಾಂ. ಪಣ್ಯ]ರೆಂಬ ತ್ರಿವಿಧನಾಯಿಕೆಯರಿಂ (ವಿವೇಕ. ೧೮೨). [ಸಂ. ಸಾಮಾನ್ಯಾ]

ಸಾಮಾನ್ಯೋಕ್ತಿ (ನಾ). ವಿಶೇಷವಲ್ಲದ ಮಾತು; ಸಾಧಾರಣವಾದ ಉಕ್ತಿ : ಸಾಮಾನ್ಯಮುಂ ವಿಶೇಷಮುಂ ಎಂದು ಸತ್ಪರೂಪಣಂ ದ್ವಿವಿಧಂ ಸಾಮಾನ್ಯೋಕ್ತಿಯಿಂ ಅಸ್ತಿ ಮಿಥ್ಯಾದೃಷ್ಟಿಯೆಂದು ಬೇಱೆವೇಱೆ ಪೇಳ್ವುದು (ತತ್ತ್ವಪ್ರ. ೧೭); "ಕಲ್ಲುಂ ಕಳ್ಳಿಯುಂ ನಾಟ್ಟಿ" ಎಂಬ ವಚನ ಕ್ರಿ.ಶ. ೮ನೇ ಶತಮಾನದಿಂದಲೂ . . . ತಮಿಳುನಾಡಿನ ಶಾಸನಗಳಲ್ಲಿ ಕಾಣಬರುವ ಸಾಮಾನ್ಯೋಕ್ತಿ (ಶಾಸಗಿ. ೬). [ಸಂ.]

ಸಾಮಾಭಾಸ (ನಾ). ತೋರಿಕೆಯ ಸಾಮೋಪಾಯ; ಸಾಮೋಪಾಯದ ಸೋಗು : ಸಾಮಾಭಾಸದಿಂ ದಂಡೋಕ್ತಿಯನೆ ನುಡಿಯಲೊಡಂ (ಚಂದ್ರಪ್ರ. ೬-೨೨ ವ). [ಸಂ.]

ಸಾಮಾಯಿಕ (ನಾ). ೧. ಸಮಚಿತ್ತತೆ ; ಸಮಭಾವ. ೨. [ಜೈನ] ಪ್ರಾಪಂಚಿಕ ವ್ಯವಹಾರಗಳಿಂದ ನಿವೃತ್ತಿಯನ್ನು ಹೊಂದಿ, ಆತ್ಮನಲ್ಲಿ ಏಕಾಗ್ರತೆಯಿಂದಿರುವಿಕೆ ; ರಾಗದ್ವೇಷಾದಿ ಭಾವನೆಗಳನ್ನು ತೊರೆದು ಆತ್ಮಚಿಂತನೆಯಲ್ಲಿರುವಿಕೆ : ಚಿತ್ತತ್ತ್ವೈಕಾಗ್ರಚಿಂತಾನಿರೋಧರೂಪಸರ್ವಸಾವದ್ಯಯೋಗ ನಿವೃತ್ತಿಲಕ್ಷಣೀಭೂತಸಾಮಾಯಿಕಮುಂ (ತತ್ತ್ವಪ್ರ. ೨೬೬). ೩. ತ್ರಿಕಾಲಗಳಲ್ಲಿ ಏಕಾಂತದಲ್ಲಿದ್ದು ಚಿತ್ತೈಕಾಗ್ರತೆಯಿಂದ ಮಾಡುವ ಆತ್ಮಧ್ಯಾನ: ಶ್ರಾವಕಂ ತನ್ನ ನಿತ್ಯಸ್ಥಿತಿಯೊಳಕ್ಕೆ ಪರ್ವದಿನಂಗಳೊಳಕ್ಕೆ ತನ್ನ ಸಾಮಾಯಿಕದ ಸಮಯದೊಳಕ್ಕೆ (ರತ್ನಕ. ೩ ೨೫ ವ). ೪. ಸಂಸಾರಕಾರಣಗಳನ್ನು ದೂರೀಕರಿಸಿ ಸಮ್ಯಗ್ಜ್ಞಾನವನ್ನು ಪಡೆಯಲು ಸಾಧಕವಾದ ಐದು ಬಗೆಯ ನಡವಳಿಕೆಗಳಲ್ಲಿ ಒಂದು: ಅದು ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರಶುದ್ಧಿಸೂಕ್ಷ್ಮಸಾಂಪರಾಯ ಯಥಾಖ್ಯಾತ ಚಾರಿತ್ರಭೇದದಿಂ ಪಂಚವಿಧಮೆಂದು ಹೇಯೋಪಾದೇಯ ತತ್ವಮನಱಿಪಿ (ಆದಿಪು. ೧೦-೩ ವ): ದಶಕುಶಲಧರ್ಮದೊಳ್ ನಿಯತಾತ್ಮನಾಗಿ ಸಾಮಾಯಿಕಚ್ಛೇದೋಪಸ್ಥಾಪನಾ ಪರಿಹಾರಶುದ್ಧಿಚಾರಿತ್ರದೊಳ್ ಕೂಡೆ ನೆಗೞುತ್ತಂ (ವರ್ಧಮಾ. ೧೦-೭ ವ). ೫. ಏಳು ಬಗೆಯ ಸಂಯಮಗಳಲ್ಲಿ ಒಂದು : ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರವಿಶುದ್ಧಿಸೂಕ್ಷ್ಮಸಾಂಪರಾಯ ಯಥಾಖ್ಯಾತಚಾರಿತ್ರ ದೇಶಸಂಯಮ ಅಸಂಯಮವಿಕಲ್ಪದಿಂ ಸಂಯಮಂ ಸಪ್ತವಿಧಂ (ತತ್ತ್ವಪ್ರ. ೧೭). ೬. ಹದಿನಾಲ್ಕು ಬಗೆಯ ಅಂಗಬಾಹ್ಯಗಳಲ್ಲಿ ಒಂದು : ಅಂಗಬಾಹ್ಯಂ- ಸಾಮಾಯಿಕಮುಂ ಚತುರ್ವಿಂಶತಿಸ್ತವನಮುಂ ವಂದನೆಯುಂ . . . ದಶವೈಕಾಲಿಕೆಯುಂ . . . ಮಹಾಪುಂಡರೀಕಮುಂ ಅಶೀತಿಕೆಯುಂ ಎಂದು ಪದಿನಾಲ್ಕು ತೆಱಂ ಅಲ್ಲಿ ಸಾಮಾಯಿಕಮೆಂಬುದು ನಾಮಸ್ಥಾಪನಾದ್ರವ್ಯಕ್ಷೇತ್ರಕಾಲಭಾವಂಗಳಲ್ಲಿ ಸಮತ್ವವಿಧಾನಮಂ ವಿಧಿಯಿಸುಗುಂ (ತತ್ತ್ವಪ್ರ. ೬೫). ೭. ನಾಲ್ಕು ಬಗೆಯ ಶಿಕ್ಷಾವ್ರತಗಳಲ್ಲಿ ಒಂದು: ವಿನುತದೇಶಾವಕಾಸಿಕ ಸಾಮಾಯಿಕ ಘನತರಪ್ರೋಷಧನಿಯಮ ಅನುಪಮ ವೈಯಾವೃತ್ಯಮೆಂಬಿವು ನಾಲ್ಕು ಜನನುತ ಶಿಕ್ಷಾವ್ರತವು (ನಾಗಕು. ೨೮-೪೬). ೮. ಏಕಾಂತಸ್ಥಳದಲ್ಲಿ ಆತ್ಮಧ್ಯಾನದಲ್ಲಿ ತೊಡಗಿರುವವನು : ದರ್ಶನಿಕನು ವ್ರತಿಕನು ಸಾಮಾಯಿಕ ಸುರುಚಿರ ಪ್ರೋಷಧನಿಯಮಿ . . . ಅನುಮತಿವಿರತ ವರವುದ್ದಿಷ್ಟ ವಿರತನೆಂದು ಹನ್ನೊಂದು ಪರಿಯಿದು (ನಾಗಕು. ೨೮-೩೯): ಸಾಮಾಯಿಕ : - ಮೊದಲ ನೆಲೆಗಳ ಶೀಲಗಳೊಂದಿಗೆ ತನ್ನ ಮನಸ್ಸನ್ನು ಪರಿಶುದ್ಧ ವಸ್ತುಗಳ ಮೇಲೂ, ಪರಮಾತ್ಮನ ಮೇಲೂ ಕೇಂದ್ರೀಕರಿಸಿ ಏಕಾಂತಸ್ಥಳಗಳಲ್ಲಿ ಆತ್ಮಧ್ಯಾನದಲ್ಲಿ ಸಂಜೆ ಮುಂಜಾನೆ ನಿರತನಾಗಿರುವನು (ಭಾರದ. ೧೮೪). 'ಸಾಮಯಿಕ' ಪರಾ. [ಸಂ.]

ಸಾಮಾಯಿಕವ್ರತ (ನಾ). [ಜೈನ] ನಾಲ್ಕು ಬಗೆಯ ಶಿಕ್ಷಾವ್ರತಗಳಲ್ಲಿ ಒಂದು : ಪರಿಕಿಪೊಡಸ್ಮರಣಮನಾದರಂ ಮನೋವಾಕ್ಕರೀರದುಷ್ಪ್ರಣಿಧಾನಂ ನಿರುಪಮಶಿಕ್ಷಾವ್ರತದೊಳ್ ನಿರುದ್ಧ ಸಾಮಾಯಿಕವ್ರತಕೃತಿಚಾರಂ (ಸುಕುಮಾ. ೬-೨೧). [ಸಂ.]

ಸಾಮಾರ್ಥ (ನಾ). ಸಾಮೋಪಾಯದ ರಹಸ್ಯ ,— ತಿರುಳು : ವಸಿಷ್ಠಂಗೆ ಕೌಶಿಕಂ ನುಡಿದ ಪ್ರತಿಜ್ಞೆಯಂ ಗೆಲುವೊಡಿನ್ನು ಜಾಣಂ ಹರಿಶ್ಚಂದ್ರರಾಯನುನ್ನತಿಯಳಿವ ಕಾಣಬೇಕೆಂದಖಿಳಸಾಮಾರ್ಥದ ಕಲಾಪ್ರವೀಣನಂತಸ್ಥದೇಕಾಂತದೊಳು ಚಿಂತೆಯಿಂ ಭ್ರಾಂತಿಯೋಗದೊಳಿರ್ದನು (ಹಚಕಾ. ೩-೧). [ಸಂ.]

ಸಾಮ್ಯಿ$_1$, **ಸಾಯ್ಯಿ**$_3$, **ಸಾವಿ**$_1$, **ಸೋಮ್ಯಿ**$_1$ (ನಾ). ೧. ಯಜಮಾನ ; ಒಡೆಯ : ವತ್ವಲೋಪಕ್ಕೆ . . . ಸ್ವಾತಿ - ಸಾತಿ, ಸ್ವಾಮಿ - ಸಾಮಿ (ಶಮದ. ೨೮೧ ಪ್ರಯೋ); ಹಗೆಯ ಭುಜದಗ್ಗಳಿಕೆಯನೆ ಕೊಂಡಾಡಿ ಸಾಮಿಯನಿಳಿಕೆಗಾಬಿರಿ ನಿಮ್ಮ ಪೈಕಕೆ ಖುಲ್ಲತನ ಸಹಜ (ಕುವ್ಯಾವಿ. ೭-೫). ೨. ದೊರೆ; ರಾಜ: ಕನ್ನವಾಡ ಗಂಗವಾಡ ಬಳೆಯವಾಡ ರೆರ್ನಾಡಾಳ ಸಿಯಳಾಱ ಸಾಮಿಸರ್ಬರಸ ಕೋಟೋರ್ ಶಿನ್ತರ್ಗೆ ಆ ಶೆಂಬಾಜ ಗೆಯೋದಂ (ಮೃಆರಿ. ೧೯೨೯, ೧೧೮-೨; ಸು. 820); ಮಗನಟಲೊಳ್ ಕರಂ ಮಱುಗುತಿರ್ಪಿನಮೆನ್ನ ತನೂಜನಾಳ್ವ ಸಾಮಿಗಮಱಿವಾಗೆ ಶೋಕರಸವಿರ್ಮಡಿಸಿತ್ತು (ಪಂಪಭಾ. ೧೩-೧೦೬); ಸಾಮಿ ಬಂದೊಡೆ ವಿನೀತಗುಣರ್ ಬೆಸಕೆಯ್ಯದಿರ್ಕುಮೇ (ಪುಷ್ಪಪು. ೧೪-೨೪). ೩. ಅಧಿಕಾರಿ : 'ಪಟ್ಟಣಸಾಮಿ' ಪರಾ. ೪. ಗಂಡ; ಪತಿ : ಎಲೆ ಪರಪುಷ್ಟ ಕೇಳ್ . . . ವನರಾಜಿ ಕೇಳ್ ನೆನೆಯುತಿರ್ಪುದು ಕೂರ್ಪುದು ಸ್ಪರಿಸಿರ್ಪುದಗ್ಗಲಿಸಿದ ನಲ್ಮೆ ತಣ್ಮಲೆಯೆ ಬೆನ್ನನೆ ಪೋದಪೆಮೆಮ್ಮ ಸಾಮಿಯಾ (ಕಪಪು. ೬-೧೧೨). ೫. ದೇವರು; ಪರಮಾತ್ಮ: ಅಂಬುಜಾಕ್ಷಿಯ ಕಾದ ದೇವಗೆ ಶಂಬರಾರಿಯ ಪಡೆದ ಸಾಮಿಗೆ . . . ನಂಬಿದವರನು ಸಲಹುವರಸಗೆ ಕೊಡುವೆನೀ ಕೃತಿಯ (ಕೋಗಯ. ೧-೨೨). ೬. ಕೆಲವರ ಹೆಸರುಗಳ ಜೊತೆಯಲ್ಲಿ (ಗೌರವಾರ್ಥವಾಗಿ) ಸೇರುವ ಶಬ್ದ : 'ಗಾಮುಂಡಸಾಮಿ' ಪರಾ. ಸಾಯ್ಯಿ$_3$: ೬. ಶಿರಡಿ ಸಾಯಿಬಾಬಾ ಪ್ರಸಿದ್ಧ ಸಂತರು (ರೂಢಿ). ಸಾವಿ$_1$: ೧. ನಿಜಮಕಾರದ ವಕಾರಕ್ಕೆ - ತಾಮರೆ, ತಾವರೆ . . . ಸಾಮಿ, ಸಾವಿ (ಶಮದ. ೧೦೪ ಪ್ರಯೋ). ೬. ಶ್ರೀಮಂ ಮಹಾಪ್ರತಾಪಿ ಭಯಿರವದೇವವೊಡೆಯರ ಬಂಟ ಕಲುವಣಿಕೆಯ ಬರದ ಹಾಲೆಯ ಬಳಿಯ ಗೋವಿಂದಸಾವಿ (ಕಇ. I. ೫೬-೧೧: 1438). ಸೋಮ್ಯಿ$_1$: ೧. "ಸಾಮಿ (ವಿ, ಸೋಮಿ) - ಸ್ವಾಮಿನ್ - ಒಡೆಯ" (ತದ್ಭಕೋ. ೪೪). ೫. ಮೇಲಿರೋ ಸೋಮಿ ಕಣ್ ತೆರೆದಾಗ, ಲಕ್ಷಿಮಿ ಮನೆಬಾಗಿಲ್ ತಾವ ಓಡಿಬತ್ತಾಳೆ! (ಹಾಹುತ್ತ. ೫೯). ೭. ಗುರುಹಿರಿಯರು, ದೇವರು, ಅಧಿಕಾರಿಗಳು ಮುಂತಾದವರನ್ನು ಕುರಿತು ಗೌರವಸೂಚಕವಾಗಿ ಸಂಬೋಧಿಸುವಾಗ ಬಳಸುವ ಒಂದು ಶಬ್ದ: ಹೋಯ್ತು ಸೋಮಿ ಹೋಯ್ತು, ನಮ್ಮೂರಿಗೆ ಏನೋ ಬಂದ್ಬುಡ್ತು (ಹುಟ್ಟಿಹ. ೧೬೮); ಏನು ಸೋಮಿ, ನಿಮ್ಮಂಥ ಧಾರಾಳವಾಗಿ ಖರ್ಚುಮಾಡೋರೆ ಇಷ್ಟು ಚೌಕಾಸಿ ಮಾಡಿದರೆ ಬಡವರ ಗತಿ ಏನು ಸೋಮಿ? (ಮಹಾಲ. ೩೯).

[< ಸಂ.ಸ್ವಾಮಿನ್./ ಪ್ರಾ. ಸಾಮಿ, ಸಾಮಿಅ. / ತಮಿ. ಚಾಮಿ ; ತುಳು. ತೆಲು. ಸಾಮಿ]

ಸಾಮ್ಯಿ$_2$ (ನಾ). ಒಂದು ಬಗೆಯ ಮರ : ಸಾಮಿ (ರಾಯಿನಿ). - ದೊಡ್ಡ ವೃಕ್ಷ. ಕಟ್ಟಿಗೆ ಕೆಂಪು (ಕಭಾಗೆ. ೪೯). [< ಸಂ. ಸಾಮಿಕ]

ಸಾಮ್ಯಿ$_3$ (ನಾ). ೧. ಅರೆಪಾಲು ; ಅರ್ಧ : "ಖಂಡಃ, ಅರ್ಧಃ(ರ್ಧಂ) . . . ಸಾಮಿ - ಈ ೬ ಅರ್ಧಂ" (ಹಲಾಯು. ೧೧೮-೨೮). ೨. ನಿಂದೆ. [ಸಂ.]

ಸಾಮಿಕ (ನಾ). [ಸಂಗೀತ] ರಾಗದ ಸ್ವರೂಪರಚನೆಯಲ್ಲಿಯ ಮೂರು ಸ್ವರಗಳ ಪ್ರಯೋಗ : ರಾಗ, ಕ್ರಮವಾಗಿ ಸ್ವರೂಪಗೊಂಡ ರೀತಿಯಲ್ಲಿ ಆರ್ಚಿಕ (ಏಕಸ್ವರ ಪ್ರಯೋಗ), ಗಾತಿಕ (ದ್ವಿಸ್ವರ ಪ್ರಯೋಗ), ಸಾಮಿಕ (ಮೂರು ಸ್ವರಗಳ ಪ್ರಯೋಗ) . . . ಸಂಪೂರ್ಣ (ಏಳು ಸ್ವರಗಳ ಪ್ರಯೋಗ) ಎಂಬ ಹಂತಗಳು ಕಂಡುಬಂದಿದೆ (ಸಂಗೀಚಂ. ೨೨). [?]

ಸಾಮಿದೋಹಿ (ನಾ). ಒಡೆಯನಿಗೆ ಕೇಡು ಬಗೆಯುವವನು ; ಸ್ವಾಮಿದ್ರೋಹಿ: ಸಂಗರಕೆ ಹೆಂಗಳ್ಳ ದನುಜಗೆ ಮಂಗಳನ ಬಲವಿಲ್ಲ ತೊಡಚಲು ಭಂಗ ತಪ್ಪದು ಸಾಮಿದೋಹಿಗೆ ಕೇಡುಗಾಲವೆನೆ (ಕೌಶಿರಾ. ೩೨-೩). [< ಸಂ. ಸ್ವಾಮಿದ್ರೋಹಿನ್]

ಸಾಮಿಪಕ್ವ (ಗು). ಅರ್ಧಹಣ್ಣಾದ; ಅರೆಪಕ್ವವಾದ: ಮಣಿಕನಕ ರಜತ ಪಾತ್ರಂಗಳೊಳ್ ಪರಿಪಕ್ವ ಸಾಮಿಪಕ್ವ ಶಲಾಟುಭೇದ ಭಿನ್ನಂಗಳಪ್ಪ ಮಾಕಂದ . . . ದ್ರಾಕ್ಷಾಚೋಚಮೋಚಾದಿ ಫಳಕುಳಂಗಳುಂ ಸೊಗಯಿಪುವು (ಚಂದ್ರಪು. ೬-೫೪ ವ). [ಸಂ.]

ಸಾಮಿಯಬ್ಬೆ, ಸಾವಿಯಬ್ಬೆ (ನಾ). ಒಬ್ಬಾಕೆಯ ಹೆಸರು : ಶ್ರೀಸಾಮಿಯಬ್ಬೆ ಸೆದೆಗೊಟ್ಟಡೆ ಸಾನ್ತರನ ಬಿನ್ನನಪ್ಪ ಮೊಗಮಂ ನೋಡೆನೆನ್ದರಸಿ XXX ಪಱಿದು ಪ್ರಭಾವತಿ ಕನ್ತಿಯರೆನ್ದು ಪೆಸರಂ ಕೊಣ್ಡು ಸನ್ಯಾಸನಂಗೆಯ್ದೊಡೆ (ಎಕ. VIII, ನಗರ. ೪೫-೮; ಸು. 950). **ಸಾವಿಯಬ್ಬೆ** : ಜಿನೇನ್ದ್ರಭಕ್ತಿಸದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೆ ಕಾಣೆರೇ (ಎಕ. II(R), ೧೭೨-೧೩; ಸು. 10ನೆಯ ಶತ). [ಸಾಮಿ$_1$ + ಅಬ್ಬೆ$_1$]

ಸಾಮಿಷ (ಗು). ಮಾಂಸದಿಂದ ಕೂಡಿದ.

ಸಾಮಿಷ ಆಹಾರ = ಮಾಂಸದಿಂದ ಕೂಡಿದ ಆಹಾರ ; ಮಾಂಸಾಹಾರ: ಸಾಮಿಷ ಆಹಾರವನ್ನು ಪ್ರತಿಪಾದಿಸುವ ಆಗಮ ಸೂತ್ರಗಳು ಬಹು ಪ್ರಾಚೀನ ಕಾಲದುವೆಂದೂ ಬಲ್ಲವರು ಹೇಳುತ್ತಾರೆ (ಚೈನಪ. ೫೨೮). **ಸಾಮಿಷ ಆಹಾರಿ** = ಮಾಂಸಾಹಾರವನ್ನು ಸೇವಿಸುವ ವ್ಯಕ್ತಿ ; ಮಾಂಸಾಹಾರಿ: ನಿರ್ಗ್ರಂಥಸಂಘವನ್ನು ಕಟ್ಟುವಾಗ - ಆರಂಭದಲ್ಲಿ . . . ಎಷ್ಟೋ ಜನರು ಸಾಮಿಷ ಆಹಾರಿಗಳೂ ನಿರ್ಗ್ರಂಥಸಂಘದಲ್ಲಿ ಸೇರಿದರು (ಚೈನಪ. ೫೨೭). [ಸಂ.]

ಸಾಮೀಪ್ಯ (ನಾ). ೧. ಸನಿಹದಲ್ಲಿರುವಿಕೆ ; ಸಾನ್ನಿಧ್ಯ: ಚರಣಚುಂಬನಕೆ ಕಲ್ಲೆ ತಾಂ ಬೆಣ್ಣೆಯಾಯ್ತೆನೆ ಕಂಪಿಸಿತು ಬಂಡೆ, ಪ್ರೇಮಸಾಮೀಪ್ಯದಿಂ . . . ತಲ್ಲಣಂಗೊಳ್ಳು ವಬಲೆಯೋಲ್ (ಶ್ರೀರಾಮಾ. ೩೮-೨೮೧); ನಿನ್ನ ಸಾಮೀಪ್ಯ ನನಗೆ ಬೇಕಿಲ್ಲ (ದೂದಟ್ಟ. ೧೦೯). ೨. [ತತ್ತ್ವಶಾ] ನಾಲ್ಕು ವಿಧದ ಮೋಕ್ಷಪದವಿಗಳಲ್ಲಿ ಒಂದು; ಮುಕ್ತನಾದ ಜೀವನಿಗೆ ದೊರಕುವ ಪರಮಾತ್ಮನ ಸಾನ್ನಿಧ್ಯ : ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತುಮಾಡಿ ಸಲಹಿದ ಸುಖವು ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಂತುಟಲ್ಲಾ ಕೇಳಿರಯ್ಯಾ (ಬಸವ. ೪೭೪); ಪರಮನಱಿವನು ಬಸವನನುವನು ಪುರಹರನ ಸಾಲೋಕ್ಯದೊಳಗಮರ್ದಿರಲಹುದು ಸಾಮೀಪ್ಯದಿಂ ಸಂದಿಲ್ಲದಿರಲಹುದು (ಬಸಪು. ೧-೩೦). ೩. ಸಾಮೀಪ್ಯವೆಂಬ ಮೋಕ್ಷ ಪದವಿಯನ್ನು ಹೊಂದಿದ ವ್ಯಕ್ತಿ : ಈ ಲೋಕದ ಭೀತರು ಆ ಲೋಕದ ಕಲಿಗಳು ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರೆಲ್ಲರೂ ಅಜಾತಂಗೆ ಸರಿಯೆ (ಬಸವ. ೯೦೧). [ಸಂ.]

ಸಾಮೀಪ್ಯಂಬಡೆ (ಕ್ರಿ). ಸಾನ್ನಿಧ್ಯವನ್ನು ಹೊಂದು ; ಸಮೀಪದಲ್ಲಿರು : ಸುರಭಿ ವಿಲೇಪನಸುರುಚಿರರತ್ನಾಭರಣಮನತಿಗಳೆಯಿಸಿ . . . ತೊವಲ್ದೂವೆಗಳೀಶನ ಸಾಮೀಪ್ಯಂಬಡೆವಂತೆ . . . ದುರ್ಜನಸಂತತಿಗಾನಂಜುವೆನು (ಜಯಕಾ. ೧-೧೯). [ಸಾಮೀಪ್ಯ + ಪಡೆ$_1$]

ಸಾಮೀಪ್ಯಪದ (ನಾ). = ಸಾಮೀಪ್ಯ ೨ : ನಿಮ್ಮ ಶರಣರ ಅರ್ಚನೆ ಪೂಜೆಯೇ ಎನಗೆ ಸಾಮೀಪ್ಯಪದವಯ್ಯಾ (ಉರಿಪೆ. ಕ. ೧೭೩-೨೩೩); ಆನವನ ಭಕ್ತಿಭರಕ್ಕೆ ಮಚ್ಚಿ . . . ಸಾಮೀಪ್ಯಪದಮಂ ಸಾರ್ಚಿದೆಂ (ವೃಷವಿ. ೧೪-೧೦೬). [ಸಂ.]

ಸಾಮು, ಸಾಮ$_2$ (ನಾ). ೧. ಶಾರೀರಿಕವ್ಯಾಯಾಮ; ಅಂಗಸಾಧನೆ: ಜಟ್ಟಿಗಳಾಡುತಿಹ ಸಾಮುಗಳಿಗನುಸರಗೂಡಿದೊಸ್ತುವ ನೋಡಿ ಕೊಡುತಿಹ ರಾಯ ಬಿಜ್ಜಣನು (ಬಿಜ್ಜಪು. ೮೨-೨೭); ಸಾಯುವ ತನಕ ಸಾಮು ಕಲಿತರೆ ಯುದ್ಧ ಮಾಡುವುದು ಯಾವಾಗ? (ಗಾದೆ). ೨. ಕತ್ತಿ ಮೊದಲಾದುವುಗಳಿಂದ ಮಾಡುವ ವಿಶೇಷ ಸಾಧನೆ ; ಕಸರತ್ತು : ಹೂವುಗಳೆನುವ ಹದವಾದ ಕತ್ತಿಗಳ ಮೇಲೆ ಸಾಮುಗಳ ಮಾಡಿ (ಸೌಗಂಧಿ. ೪೭೬-೧೪); ಕೊನೆಯ ಮೀಸೆಯ ಕುಣಿಸುತಾಹವವೊನೆಯ ನಾಯಕರಿತ್ತೆರದಿ ಸಾಮಿನಲಿ ನಡೆದರು ರಣಮುಖಾವನಿಗೆ (ಪಶುಭಾ. ೭-೫೮); ಅವನು . . . ಕತ್ತಿಯ ಸಾಮಿನಲ್ಲಿ ಜಾಣನು (ಛತ್ರಶಿ. ೨೬). **ಸಾಮ$_2$** : ೧. ಎಲವೊ ಗರುಡಿಯ ಕಟ್ಟಿ ಸಾಮವ ಕಲಿಸಿ ಬಳಿಕಾ ಕೋಲ ಮಕ್ಕಳ ಬಲದಿ ಬದುಕುವ ಕೃಪಣವೃತ್ತಿಯ ನಿಮ್ಮ ಕೂಡೆಮಗೆ ಕಲಹವೇತಕೆ (ಕುವ್ಯಾವಿ. ೮-೧೬). [< ಸಂ. ಶ್ರಮ. / ತೆಲು. ಸಾಮು]

ಸಾಮುಗಲಿಸು (ಕ್ರಿ). ಶಾರೀರಿಕವ್ಯಾಯಾಮವನ್ನು ಹೇಳಿಕೊಡು, – ಅಭ್ಯಾಸ ಮಾಡಿಸು : ಗರುಡಿಯೊಳು ಸಾಮುಗಲಿಸುವ ಶಿಷ್ಯರನು ಕುಳ್ಳಿರ್ದೋದಿಸುವ . . . ಪರರ ಮನೆಯೊಳು ಜಾತವೆಂದರೆ ಹರುಷದೊಳು ಹಿಗ್ಗುವ ವಿಡಂಬದ ಪರಿಯ ನಾಥರು ನೀವು (ಕುವ್ಯಾವಿ. ಓರಿಇ. ೮-೨೦). [ಸಾಮು + ಕಲಿಸು$_1$]

ಸಾಮುದಾಯಿಕ (ಗು). ೧. ಸಮುದಾಯಕ್ಕೆ ಸಂಬಂಧಿಸಿದ ; ಗುಂಪಿಗೆ ಸಂಬಂಧಪಟ್ಟ. ೨. ಒಟ್ಟಾದ ; ಸಮಷ್ಟಿಯ : ಒಂದೊಂದು ದೇಶದ ಜನಕ್ಕೂ ಒಂದು ಸಾಮುದಾಯಿಕ ಸ್ವಾಭಿಮಾನ ಸಹಜವಾಗಿರುತ್ತದೆ (ರಾಜ್ಯಶಾ. ೧೨). (ನಾ). ೩. ಸಮೂಹಕ್ಕೆ ಸಂಬಂಧಪಟ್ಟುದು: ಒಂದು ನಂಬರಿನ ಸರಹದ್ದಿನ ಹೊರಗಿರುವ ಸಾಮುದಾಯಿಕವಾದ ಸ್ಥಳ ಅಥವ ಸರ್ಕಾರಿ ಫಡನಂಬರಿನಲ್ಲಿ . . . ವಿನಿಯೋಗಿಸಿಕೊಂಡಿದ್ದರೆ ಅದನ್ನು ಗ್ರಾಮನೌಕರರು ತಡೆಯುವುದು (ಭೂಮಿಅ. ೩೭). [ಸಂ.]

ಸಾಮುದ್ರ (ಗು). ೧. ಸಮುದ್ರಕ್ಕೆ ಸಂಬಂಧಿಸಿದ; ಕಡಲಿನ. (ನಾ). ೨. ಸಮುದ್ರದ ಮೇಲೆ ವ್ಯಾಪಾರ ಮಾಡುವವನು; ಸಮುದ್ರವ್ಯಾಪಾರಿ. ೩. ಸಮುದ್ರದ ಉಪ್ಪು ; ಕಡಲುಪ್ಪು : ಸಾಮುದ್ರಂ ಗರ್ದುಗಿನ ಕೊನೆ ಸಾಮಾನ್ಯಂ ಸರ್ವರೋಗಹರಂ (ಅಶ್ವಶಾ. ೭-೩೫). ೪. ಒಂದು ಬಗೆಯ ಸಮುದ್ರ ಪ್ರಾಣಿಯ ಮೂಳೆ ; ಸಮುದ್ರದ ನೊರೆ. ೫. ಶರೀರದ ಮೇಲಿನ ಗುರುತು ,– ಚಿಹ್ನೆ. [ಸಂ.]

ಸಾಮುದ್ರಕ (ನಾ). ೧. = ಸಾಮುದ್ರ ೩.೨. ಮುಖ್ಯವಾಗಿ ಅಂಗ್ಯೆ ರೇಖೆಗಳ ಮತ್ತು ಶರೀರದ ಮೇಲಿನ ಗುರುತುಗಳ ಆಧಾರದ ಮೇಲೆ ಮನುಷ್ಯನ ಭವಿಷ್ಯವನ್ನು ತಿಳಿಸುವ ಶಾಸ್ತ್ರ ; ಭವಿಷ್ಯಶಾಸ್ತ್ರ : ಸಕಲವಾದ ಸಾಮುದ್ರಕದಲ್ಲಿ ಹೇಳಿ ಇರುವ ಮುವ್ವತ್ತೆರಡು ಲಕ್ಷಣಗಳುಳ್ಳಂಥವನಾಗಿ (ಶಿವದ. ೨೨೪-೧೪). [ಸಂ.]

ಸಾಮುದ್ರಲವಣ (ನಾ). = ಸಾಮುದ್ರ ೩ : ಸಾಮುದ್ರಲವಣ, ಪದ್ಮಕೇಸರ, ಇವೆರಡನು ಸಮಾಂಶವಾಗಿ ತೆಗೆದುಕೊಂಡು ನೀರಿಂದ ಅರೆದು ಪಾನವ ಮಾಡಿಸಲು ಓತಿಯ ಎಲ್ಲಾ ವಿಷಗಳೂ ಶಮನವಹವು (ವೃದ್ಧಸಾ. II. ೨೨೦). [ಸಂ.]

ಸಾಮುದ್ರಿಕ (ಗು). ೧. = ಸಾಮುದ್ರ ೧. ೨. ಸಮುದ್ರದ ಮೇಲೆ ಸಂಚಾರಮಾಡುವ. ೩. ಭವಿಷ್ಯವನ್ನು ಸೂಚಿಸುವುವು ಎನ್ನಲಾದ, ಮುಖ್ಯವಾಗಿ ಅಂಗ್ಯೆ ಮೇಲಿನ ಗೆರೆಗಳು ಅಥವಾ ಶರೀರದ ಮೇಲಿನ ಗುರುತುಗಳಿಗೆ ಸಂಬಂಧಿಸಿದ. (ನಾ). ೪. = ಸಾಮುದ್ರಕ ೨ : ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕಾಯುರ್ವೇದ ಧನುರ್ವೇದ ಹಸ್ತ್ಯಶ್ವತಂತ್ರ ರತ್ನ ಪರೀಕ್ಷೆಗಳುಮಂ . . . ಉಪದೇಶಂಗೆಯ್ದಂ (ಆದಿಪು. ೮-೬೦ ವ). ೫. ಮುಖ್ಯವಾಗಿ ಹಸ್ತರೇಖೆಗಳ ಆಧಾರದ ಮೇಲೆ ಭವಿಷ್ಯವನ್ನು ಹೇಳುವವನು ; ಸಾಮುದ್ರಿಕಶಾಸ್ತ್ರವನ್ನು ಬಲ್ಲವನು ; ಜ್ಯೋತಿಷಿ : ಸಾಮುದ್ರಿಕರಿಗೆ ಕೈತೋರಿಸಿದ್ದನ್ನು ಬಹಳ ಜನರು ಬಚ್ಚಿಡುವರು (ನಿರಾಭ. ೧೬೮). ೬. ಹಸ್ತರೇಖೆ ಅಥವಾ ದೇಹದ ಮೇಲಿನ ಗುರುತುಗಳಿಂದ ಸೂಚಿತವಾಗುವುವೆಂದು ಹೇಳಲಾಗುವ ಅದೃಷ್ಟ, – ಭಾಗ್ಯ: ಎನ್ನಯ ಸಾಮುದ್ರಿಕವಿಂತಿರಲು ನಂಬಿದರಿಂಬೆನೆ ಜನ ಮೆಚ್ಚಿರಲು ಶಿವಗಾಯಿತು ಮರುಳ್ಗಳ ಬಲುಕಾಟ (ಗಣೇಶ. ೮-೧೯೧). ೭. ಒಂದು ಬಗೆಯ ಔಷಧೀಸಸ್ಯ ; ಸಮುದ್ರ ಫಲ (?) : ವಿದಿತಂ ಸಾಮುದ್ರಿಕಮಂ ಸದಮಲತಕ್ರಮುಮನೊಂದುತಿಂಗಳ್ವರ ಮಿಕ್ಕಿದೊಡೆ ಮಟ್ಟಿಗಾಲದೊಳ್ ಬಡಗುದುರೆಗೆ ಬಲಮಕ್ಕುಂ (ಅಶ್ವಶಾ. ೭-೫೦). [ಸಂ.]

ಸಾಮುದ್ರಿಕಜ್ಞ (ನಾ). = ಸಾಮುದ್ರಿಕ ೫ : ಶ್ರೀಗಾಗರನೆಂತೆನಿಸಿದನೀ ಗರುವರ ಹಿರಿಯನೆಂದು ರೇಖಾವಳಿಯಂ ತೂಗಿ ಪರಿಕಿಸುತೆ ಕರದೊಳ್ ನೈಗಮಸಾಮುದ್ರಿಕಜ್ಞರಿಂತೆಂದೊರೆದರ್ (ಪಪ್ರನಂ. ೫-೩೩). [ಸಂ.]

ಸಾಮುದ್ರಿಕಾಲಕ್ಷಣ (ನಾ). ಮುಖ್ಯವಾಗಿ ಅಂಗೈ ಮೇಲಿನ ವೈಶಿಷ್ಟ್ಯಪೂರ್ಣವಾದ ಗುರುತು, ಗೆರೆ ಮುಂತಾದುವು ಮತ್ತು ಅವುಗಳಿಂದ ಸೂಚಿತವಾಗುವ ಫಲನಿರೂಪಣೆ : ಇಲ್ಲಿ ಸಾಮುದ್ರಿಕಾಲಕ್ಷಣವನ್ನು ಹೇಳಲಾಗುತ್ತದೆ (ರೂಢಿ). [< ಸಂ.ಸಾಮುದ್ರಿಕ ಲಕ್ಷಣ]

ಸಾಮುದ್ರಿಕಾಶಾಸ್ತ್ರ (ನಾ). = ಸಾಮುದ್ರಿಕ ೨: ಅವರು ಸಾಮುದ್ರಿಕಾಶಾಸ್ತ್ರದಲ್ಲಿ ಬಹಳ ಪ್ರಸಿದ್ಧರು (ರೂಢಿ). [< ಸಂ. ಸಾಮುದ್ರಿಕಶಾಸ್ತ್ರ]

ಸಾಮುದ್ರಿಕೆ (ನಾ). = ಸಾಮುದ್ರಿಕಾಲಕ್ಷಣ. [ಸಂ. ಸಾಮುದ್ರಿಕ]

ಸಾಮೂಹಿಕ (ಗು). ೧. ಒಟ್ಟಾಗಿರುವ ; ಗುಂಪಿನ : ಬಿಳಿಯ ಉಡುಪನ್ನು ಧರಿಸಿದ ಮಕ್ಕಳು ಸಾಮೂಹಿಕ ಕವಾಯತು ಮಾಡಿದರು (ಕಪಪ್ರ. ೪-೩೫). ೨. ಎಲ್ಲರಿಗೂ ಸಂಬಂಧಿಸಿದ ; ಸಾರ್ವಜನಿಕ : ಈ ಒಲೆಯನ್ನು . . . ವಿದ್ಯಾರ್ಥಿಗೃಹಗಳು, ಉಪಾಹಾರಗೃಹಗಳು, ಆಸ್ಪತ್ರೆಗಳು ಮೊದಲಾದುವುಗಳ ಸಾಮೂಹಿಕ ಅಡುಗಮನೆಗಳಿಗೆ ತಕ್ಕಂತೆಯೂ ಹೊಂದಿಸಿಕೊಳ್ಳುವುದು ಸಾಧ್ಯವಿದೆ (ಅಡುಸಾ. ೨೪); ನಾನು ಯಾವ ಸಾಮೂಹಿಕ ಕೆಲಸವನ್ನೂ ಮಾಡಿಯೇ ಇಲ್ಲ (ಶಾಲಮು. ೧೭೫). (ನಾ). ೩. = ಸಾಮುದಾಯಿಕ ೩ : ಅವರು ನಡೆಸುತ್ತಿರುವ ಚಳುವಳಿ ಸಾಮೂಹಿಕವಾದುದು (ರೂಢಿ). [ಸಂ.]

ಸಾಮೂಹಿಕನಿಧಿ (ನಾ). ಸಾರ್ವಜನಿಕರ ಕೆಲಸಗಳಿಗಾಗಿ ಮಿಸಲಿಟ್ಟ ಹಣ ; ಪುದುವಟ್ಟು : ನೀವೊಂದಿಷ್ಟು ಹಣ ಕೊಡಬೇಕಾಗುತ್ತದೆ. ಆ ಹಣವನ್ನು ಸಹ ಸಾಮೂಹಿಕನಿಧಿಗೆಂದು ನಿಮಗೇ ಹಿಂದಿರುಗಿಸಿ ಬಿಡುತ್ತಾರೆ (ಪುನರು. ೨೯೩). [ಸಂ.]

ಸಾಮೂಹಿಕಬೇಸಾಯ (ನಾ). ಎಲ್ಲರೂ ಒಟ್ಟಾಗಿ ನಡೆಸುವ ಬೇಸಾಯ, — ಕೃಷಿ : ಅವರ ಮಾತಿನಿಂದ ನಾಸ್ಯ ಆ ಹಳ್ಳಿಯ ಸಾಮೂಹಿಕಬೇಸಾಯದ ಅಧ್ಯಕ್ಷೆಯೆಂದು ತಿಳಿಯಿತು (ಯೋಧಪ್ರ. ೩). [ಸಾಮೂಹಿಕ + ಬೇಸಾಯ (< ಬೆವಸಾಯ)]

ಸಾಮೆ 'ಸಾವೆ₁' ನೋ.

ಸಾಮೆಯಕ್ಕಿ 'ಸಾವೆಯಕ್ಕಿ' ನೋ.

ಸಾಮೆಯನ್ನ (ನಾ). ಸಾಮೆಅಕ್ಕಿಯಿಂದ ಮಾಡಿದ ಅನ್ನ : ಮೂರುದಿನವೂ ಸಾಮೆಯನ್ನವನ್ನೇ ತಿನ್ನಬೇಕು (ಸಚಿತ್ರ. ಪರಿ. ೪೯೩). [ಸಾಮೆ (< ಸಾವೆ₁) + ಅನ್ನ]

ಸಾಮೆಹುಲ್ಲು (ನಾ). ಒಂದು ಬಗೆಯ ಹುಲ್ಲು : ಸಾಮ, ಸಾಮೆಹುಲ್ಲು (ಮೃಡಿಗಿ. ೫೯-೧೧೪೯). [ಸಾಮೆ (< ಸಾವೆ₁) + ಹುಲ್ಲು (< ಪುಲ್)]

ಸಾಮೋದ್ಭವ (ನಾ). ಆನೆ ; ಗಜ : "ಮಾತಂಗಃ, ದ್ವಿರದಃ . . . ಸಾಮೋದ್ಭವಃ, ಸಿಂಧುರಃ- ಈ ೧೪ ಆನೆಯ ಪೆಸರ್" (ಹಲಾಯು. ೩೬-೬೧); ನವವರೂಢಾವಳಿಯ ಸುರಪನ ಧವಳದಂತಿಯ ವಿಗಡಸಾಮೋದ್ಭವ ಘಟಾಳಿಯ ಗರುವಸೇನೆಯ ಕಾಣಲಾಯ್ತಲ್ಲಿ (ತೊರರಾ. ೬-೭-೨೧). [ಸಂ.]

ಸಾಮೋಪಚಾರ (ನಾ). ಹಿತವಾದ ಮಾತು, ನಡವಳಿಕೆಗಳಿಂದ ಮಾಡುವ ಸಮಾಧಾನ : ಆದಷ್ಟು ಸಾಮೋಪಚಾರದಿಂದ ಅವರ (ಕೈಕೆಳಗಿನವರ) ಕೈಲಿ ಕೆಲಸಾ ತಕ್ಕೊಳ್ಳಬೇಕು (ಮುಂಬಯಿ. ೪-೨೩). [ಸಂ.]

ಸಾಮೋಪಾಯ (ನಾ). ೧. (ಕಾರ್ಯಸಾಧನೆಗಾಗಿ) ಮೃದುವಚನ, ಒಳ್ಳೆಯ ನಡವಳಿಕೆಗಳಿಂದ ಒಲಿಸಿಕೊಳ್ಳುವ ತಂತ್ರ,— ಯುಕ್ತಿ : ಕೇವಲ ಸಾಮೋಪಾಯಕ್ಕಾಗಿ ಅವನು ಅಂತೆ ವರ್ತಿಸುತ್ತಿರಲಿಲ್ಲ (ಪುನರು. ೩೯೧); ಎಂಥವರಿಗೂ 'ಗಿಲೀಟು ಮಾಡಿ' ತನ್ನ ಕಾರ್ಯ ಸಾಧಿಸಿಕೊಳ್ಳುವ ಸಾಮೋಪಾಯಗಳು ಅವನಲ್ಲಿದ್ದವು (ಕಂಬಹ. ೧೩). ೨. [ರಾಜನೀ] ಶತ್ರುವನ್ನು ಗೆಲ್ಲುವ ನಾಲ್ಕು ಉಪಾಯಗಳಲ್ಲಿ ಒಂದು; ವೈರಿಯೊಡನೆ ಸಂಧಾನವನ್ನು ನಡೆಸಿ ಮಾಡಿಕೊಳ್ಳುವ ರಾಜಿ ,— ಸಂಧಿ : ಸಾಮಜದಿಂದ ಪುಟ್ಟಿದ ಕದನ ಸಾಮೋಪಾಯದಿಂದ ಕದಲುವವೆಂದಾ ಸಚಿವೋತ್ತಮನನುವದಿಸಲಾ ನುಡಿಯನು ಕೇಳಿ . . . ಪೇಳ್ದನಿಂತೆಂದು (ಚಂಪ್ರಸಾ. ೨೦-೧೩). [ಸಂ.]

ಸಾಮ್ಯ₁ (ನಾ). ಒಡೆತನ; ಯಜಮಾನಿಕೆ : ಮಲ್ಲಿಕ(ಕಾ)ರ್ಜುನಭಟ್ಟಾರರ ಶಿಷ್ಯರ್ ಚನ್ನಪ್ರತೇಜಭಟ್ಟಾರರ್ಗ್ಗೆ ಮಾವಿನೂರೊಳ್ ಬಗೆಗ [ನು] ಕೊಟ್ಟಂ ಸಾವಿರ(೦) ಬಳ್ಳಿಯ ತೋಗ್ಗಾದ ಸಾಮ್ಯಮ ಮುಗಿನ ಕಾಡಮ್ಮನುಂ ಎಲೆನಾಗನುಂ ಕುಪ್ಪನುಂ ವಾದನುಂ ಒಕ್ಕಲ್ತನಂಗೆಯ್ಯೆ (ಎಇ.XXVI. ೬೨-೧೫: 906); ಕೋಗಲಿಯ ಚತುರಾಘಾಟ್ಟದೊಳಾದ ಮಣ್ಣ ನೀರ ಸಾಮ್ಯಕ್ಕಂ ದಣ್ಣದೋಸಮಲ್ಲ ಬಸದಿಗೆ (ಸಿಇಇ. IX-i, ೭೭-೨೨; 992). [< ಸಂ. ಸ್ವಾಮ್ಯ]

ಸಾಮ್ಯ₂ (ನಾ). ೧. ಸಮಾನ; ಸರಿಸಮ : "ಪಡಿಪಾಟಿ ಪಾಂಗು ಪಾಸಟ . . . ಜೋಡಿಯು ಭಂಗಿ ಸಾಮ್ಯ" (ಶಬ್ದಮಂ. ೫೬); ಪೊಸೆಯಿಸುವರ್ಥಕ್ರಿಯೆಯಿಂ ಪ್ರಸಿದ್ಧ ವಸ್ತುವಿನ ದೊರೆಗೆ ವರೆ ಸಾಮ್ಯಂ (ಕಾವ್ಯಾವ. ೭೦೧). ೨. ಸಾದೃಶ್ಯ; ಹೋಲಿಕೆ : ಪುಷ್ಪಗರ್ಭತನವವಸಂತದ ಲಸಲ್ಲತೆಗೆ ಪಣ್ ಬೀತುಪೋದ ಮಾಗಿಯ ಮರದ ಸಾಮ್ಯಮೇಂ? (ಚಿತ್ರಾಂಗ. ೭೪-೨೦೩೭); ಇಲ್ಲಿ ಸಾಮ್ಯಗಳ ವರ್ಣನೆಯನ್ನು ಮಾಡಬೆಯೇ 'ವ್ಯತಿರೇಕ'ವನ್ನು ಮಾತ್ರ ತೋರಿಸಿದೆ (ಧ್ವನ್ಯಾಲೋ. ೮೫). ೩. ಹೊಂದಾಣಿಕೆ; ಸಾಮರಸ್ಯ. ೪. ಸಂಗೀತ, ನೃತ್ಯ ಮುಂತಾದುವುಗಳಲ್ಲಿಯ ತಾಳದ ಸಮತ್ಯ : "ಲಯಃ - ೧ ಸಾಮ್ಯಂ - ನೃತ್ತಗೀತವಾದ್ಯಗಳು ಸರಿಯಾಗಿರುವದಕ್ಕೆ ಹೆಸರು" (ಸಿದ್ಧಾಂತ. ೬೦). ೫. ಪಕ್ಷಪಾತವಿಲ್ಲದಿರುವಿಕೆ ; ಸಮತೆ. ೬. ಯೋಗ್ಯವಾದುದು; ತಕ್ಕುದು : ಉಂಡು ಬದುಕುವ ಬಹಳ ಭಾಗ್ಯರ ಕಂಡಸೂಯಂಬಡುವ ಖಿಡ್ಡರ ಭಂಡರೆನ್ನದೆ ರೋಕ ನಿನಗಿದು ಸಾಮ್ಯವಲ್ಲ (ಕುವ್ಯಾಸ. ೧೨-೪೯). [ಸಂ.]

ಸಾಮ್ಯತೆ (ನಾ). ಹೋಲಿಕೆ; ಸಾದೃಶ್ಯ : ಉಪಮಾನ - ಯಾವ ವಸ್ತುವಿನ ಸಾಮ್ಯತೆಯ ಕೊಡತಕ್ಕದ್ದೋ, ಆ ವಸ್ತು (ಗಂಗಾಮ. ೪). [ಸಂ. ಸಾಮ್ಯತಾ]

ಸಾಮ್ಯತ್ವ (ನಾ). = ಸಾಮ್ಯತೆ : "ಸಾಮ್ಯತ್ವ[ಪಾಕಾಂ. ಸಾಮ್ಯ]ದೊಳಗುಱೆ ಭಂಗದೊಳ್ ಪಾಟ" (ಶಬ್ದಮಂ. ೯೧). [ಸಂ.]

ಸಾಮ್ಯದೋಷ (ನಾ). ಹೋಲಿಕೆಯಿಂದಾದ ತಪ್ಪು ,— ಪ್ರಮಾದ : ಚೋರನನು ಕಾಣುತ್ತ ಮರಳಿದು ಚೋರನೆಂದೊಡೆ ಪತಿತನನು ನಿಷ್ಠುರತನದಿಂ ಪತಿತನೆಂದೊಡೆ ಸಾಮ್ಯದೋಷವದು (ಕುವ್ಯಾಉ. ೪-೯೧). [ಸಂ.]

ಸಾಮ್ಯಪ್ರತೀತಿ (ನಾ). ಹೋಲಿಕೆಯ ಭಾವನೆ : ಪ್ರತಿವಸ್ತೂಪಮ ಸಾಮ್ಯಪ್ರತೀತಿಯಿಂದಂ ಸಮಾನವಸ್ತುನ್ಯಸನಂ ಪ್ರತಿಪಾದಿಸುವುದಭೇದಾತ್ಮತೆಯಿಂದುಪಮೆಯನದಲ್ತೆ ರೂಪಕಮಕ್ಕುಂ (ಕಾವ್ಯಾವ. ೬೮೫). [ಸಂ.]

ಸಾಮ್ಯವಾದ (ನಾ). ಎಲ್ಲರೂ ಸಮಾನರೆಂದು ಪ್ರತಿಪಾದಿಸುವ ಒಂದು (ರಾಜಕೀಯ) ತತ್ತ್ವ ; ಸಮತಾವಾದ : ಮನುಷ್ಯರಲ್ಲೂ, ಇತರ ಪಶುಪಕ್ಷಿ ಸ್ಥಾವರಗಳಲ್ಲೂ, ಬಾಹ್ಯಶರೀರಗಳಲ್ಲಿ ತಾರತಮ್ಯವಿರುವ ಹಾಗೆ, ಆತ್ಮಸ್ವರೂಪದಲ್ಲೂ, ಮನುಷ್ಯಾದ್ಯಾಕಾರಭೇದವಾದ ಏಕಾತ್ಮವಾದಕ್ಕೂ ಸಾಮ್ಯವಾದಕ್ಕೂ ಸಾಕ್ಷಾತ್ಕೃತಿ ಪಕ್ಷವಾಗಿರುವುದು (ಹೊದಸಾ. ೨೬೭); ಪ್ರಾಣಿಗಳಿಗೂ ಇಲ್ಲಿ ಸಾಮ್ಯವಾದದ ಚಿಂತೆ . . . ಕತ್ತೆ ಹಿಂಡಿಗೆ ಒಂದು ಕಡೆಯಲ್ಲಿ ಸಾಮ್ಯವಾದದ ಬೋಧೆ ಭರದಿಂದ ಸಾಗುತ್ತಿತ್ತು (ಕೋಗಿಲೆ. ೨-೪೪). [ಸಂ.]

ಸಾಮ್ಯವಾದಿ (ನಾ). ಸಮತಾವಾದದ ತತ್ತ್ವಗಳನ್ನು ಅನುಸರಿಸುವ ವ್ಯಕ್ತಿ ; ಸಮಾಜವಾದಿ : ಮೇಲಿನ ಸಂಗತಿಗಳನ್ನು ಗಮನಿಸಿದಲ್ಲಿ ಧರ್ಮದ ವಿರುದ್ಧವಾಗಿ ಸಾಮ್ಯವಾದಿಗಳು ಎತ್ತಿದ ಆಕ್ಷೇಪಣೆಗಳು ಸರಿ, ನ್ಯಾಯವಾದವುಗಳು - ಎಂದು ಎನಿಸಬಹುದು (ಧರ್ಮಸಾ. ೧೩). [ಸಂ. ಸಾಮ್ಯವಾದಿನ್]

ಸಾಮ್ರಾಜ್ಞಿ (ನಾ). ೧. ಸಾಮ್ರಾಜ್ಯದ ಒಡತಿ ; ಚಕ್ರವರ್ತಿನಿ : ಅತ್ತಿಮಬ್ಬೆ, ನೀನು ಧರ್ಮಸಾಮ್ರಾಜ್ಯಸಾಮ್ರಾಜ್ಞಿ ! (ದಾನಚಿಂ. ೧೭೬). ೨. ಸಾಮ್ರಾಟನ ಹೆಂಡತಿ.

[< ಸಂ. ಸಮ್ರಾಜ್ಞೀ]

ಸಾಮ್ರಾಜ್ಯ (ನಾ). ೧. ಸಾರ್ವಭೌಮಾಧಿಕಾರವನ್ನುಳ್ಳ ರಾಷ್ಟ್ರ ; ಚಕ್ರಾಧಿಪತ್ಯ : ಹೇಯಂ ಸಾಮ್ರಾಜ್ಯಮುಪಾದೇಯಂ ಪ್ರವ್ರಜ್ಯಮೆಂದು ಮಾಣದ ರಾಜ್ಯಶ್ರೀಯಂ ಕೊಟ್ಟಂ. ಮುಕ್ತಿಶ್ರೀಯಂ ಬಗೆದರ್ಕಕೀರ್ತಿಗಾಗಳ್ ಭರತಂ (ಆದಿಪು. ೧೬-೬೨); ಶಿಕ್ಷಾಪುರಸ್ಸರಂ ಸಕಲಸಾಮ್ರಾಜ್ಯಶ್ರೀಯಂ ಶ್ರೀಷೇಣಭೂಪತಿ ನಿಜತನೂಜನೊಳ್ ನಿಯೋಜಿಸಿ

(ಚಂದ್ರಪ್ರ. ೪-೨೪ ಪ); ಅಡವಿಯೇ ಸಾಮ್ರಾಜ್ಯ ನಿಮ್ಮಡಿಯೊಡನಿರಲು ನೀವಿಲ್ಲದಾ ಪುರವಡವಿ ನಮಗಹುದು (ಕುವ್ಯಾವಿ. ೧-೯). ೨. (ರಾಷ್ಟ್ರದ) ಪರಮಾಧಿಕಾರ ; ಆಧಿಪತ್ಯ. ೩. [ಜೈನ] ಮೋಕ್ಷಕ್ಕೆ ಸಂಬಂಧಿಸಿದ ಏಳು ಉತ್ತಮಸ್ಥಾನಗಳಲ್ಲಿ ಒಂದು: ಸಜ್ಜಾತಿಸದ್ಗೃಹಿತ್ವಪಾರಿವ್ರಾಜ್ಯಸುರೇಂದ್ರತ್ವಸಾಮ್ರಾಜ್ಯಪರಮಾರ್ಹಂತ್ಯ ಪರಿನಿರ್ವಾಣಮೆಂಬೇಳುಂ ಪರಮಸ್ಥಾನನಾಮಕೃತಾನ್ವಯಕ್ರಿಯೆಗಳಂ (ಆದಿಪು. ೧೫-೧೬ ಪ). ೪. ಐವತ್ತುಮೂರು ಬಗೆಯ ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ಭೂಮಂಡಲಾಧಿಪತ್ಯವನ್ನು ಪಡೆದು ದುಷ್ಟಶಿಕ್ಷಣ, ಶಿಷ್ಟ ಪರಿಪಾಲನೆಯನ್ನು ಮಾಡುತ್ತಾ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುವುದು: ದ್ವಾದಶಾಂಗದೊಳ್ ಪೇಳ್ದುದಾನ ಪ್ರೀತಿ ಸುಪ್ರೀತಿ . . . ಚಕ್ರಾಭಿಷೇಕ ಸಾಮ್ರಾಜ್ಯಪರಿನಿಷ್ಕ್ರಮಣಯೋಗಸಮ್ಮಹಾರ್ಹಂತ್ಯವಿಹಾರಯೋಗ್ಯ ತ್ಯಾಗ ನಿರ್ವೃತಿಯೆಂಬಯ್ತತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೬ ಪ). [ಸಂ.]

ಸಾಮ್ರಾಜ್ಯಕ್ರಿಯೆ (ನಾ). = ಸಾಮ್ರಾಜ್ಯ ೪ : ಚಕ್ರರತ್ನಂಬೆರಸು ನಿಧಿರತ್ನಂಗಳಂ ಪೂಜಿಸಿ . . . ಶ್ರೀದೇವಿಯರುಂ ಸರಿದ್ದೇವಿಯರುಂ ವಿಶ್ವೇಶ್ವರಾದೇವಿಯರುಂ ತಂತಮ್ಮ ನಿಯೋಗದೊಳ್ ಓಲಗಿಸಿ ಸುಖಮಿರ್ಪುದು ಸಾಮ್ರಾಜ್ಯಕ್ರಿಯೆ (ಚಾವುಂಪು. ೨೧೯).

[ಸಂ. ಸಾಮ್ರಾಜ್ಯಕ್ರಿಯಾ]

ಸಾಮ್ರಾಜ್ಯಶಾಹಿ, ಸಾಮ್ರಾಜ್ಯಷಾಹಿ (ನಾ). ೧. ಚಕ್ರಾಧಿಪತ್ಯದ ಸರ್ವಾಧಿಕಾರ; ಸಾರ್ವಭೌಮತ್ವದ ಅಧಿಕಾರ: ಈ ಸಾಮ್ರಾಜ್ಯಶಾಹಿಗೆ ಹತ್ತೊಂಭತ್ತನೆಯ ಶತಮಾನದಲ್ಲಿ ಸುಗ್ಗಿಯ ಅನುಭವವಾಗಿತ್ತಂತೆ (ಏಶಸಂ. ೪); ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಂಸೆ, ದಬ್ಬಾಳಿಕೆ, ಕ್ರೂರಶಿಕ್ಷೆಗಳ ಪರಿಣಾಮ ಹೀಗೇ ಆಯಿತು (ಆತ್ಮಾರ್ಪ. ೧೩೦). ೨. ಸಾರ್ವಭೌಮಾಧಿಕಾರವುಳ್ಳ ವ್ಯಕ್ತಿ; ಸರ್ವಾಧಿಕಾರಿ : ಆ ದಡದ ಸಾಮ್ರಾಜ್ಯಶಾಹಿಗಳೆಂದರೇ ವೆಂಕಟಿಪೂಂಜರು (ಕಂಬಿಮ. ೨). ಸಾಮ್ರಾಜ್ಯಷಾಹಿ : ೧. ಬ್ರಿಟಿಷ್ ಸಾಮ್ರಾಜ್ಯಷಾಹಿಯನ್ನು ದಿಟ್ಟತನದಿಂದ ಎದುರಿಸಿದ ನಿಮಗೆ ರಂಗನಾಥ, ಕಲ್ಲಪ್ಪನಂತಹ ಲಂಚಕೋರ ಹೇಡಿಗಳನ್ನು ಎದುರಿಸುವುದು ಕಷ್ಟವೇನೂ ಅಲ್ಲ (ಪಂಜಪಂ. ೧೫೩). [ಸಾಮ್ರಾಜ್ಯ + ಶಾಹಿ]

ಸಾಮ್ರಾಜ್ಯಷಾಹಿ 'ಸಾಮ್ರಾಜ್ಯಶಾಹಿ' ನೋ.

ಸಾಮ್ರಾಟ (ನಾ). ಚಕ್ರಾಧಿಪತಿ; ಸಾರ್ವಭೌಮ : ಸಾಮ್ರಾಟರ ಪ್ರಭಾವವು ಕುಂದದಂತೆ ನೋಡಿಕೊಳ್ಳಲು ಮತ್ತು ಅಗತ್ಯಬಿದ್ದಂತೆ ಸಾಮ್ರಾಟರ ದಿಗ್ವಿಜಯಗಳಲ್ಲಿ ನೆರವಾಗಲು ಅನೇಕ ಸಾಮಂತ ಅರಸುಗಳು ಅಲ್ಲಲ್ಲಿಯ ಸಂಸ್ಥಾನಗಳಲ್ಲಿ . . . ಆಡಳಿತಸೂತ್ರಗಳನ್ನು ವಹಿಸಿಕೊಂಡರು (ನೊಳಂಬ. ೭೦). [< ಸಂ. ಸಮ್ರಾಜ್]

ಸಾಮ್ರಾಣಿ (ನಾ). ೧. ಒಂದು ಬಗೆಯ ಮರದಿಂದ ದೊರಕುವ ಪರಿಮಳ ಯುಕ್ತವಾದ ಧೂಪದ್ರವ್ಯ; ಸಾಂಬ್ರಾಣಿ : ಸಾಮ್ರಾಣಿಯ ಹೊಗೆ. ದೀಪದ ಬೆಳಕು, ಏನೇನೋ ಗಲಾಟೆ (ಹೊಸಕ್ತಿ. ೧೨೦). 'ಸಾಂಬ್ರಾಣಿ' ಪರಾ. ೨. [ಸಂಗೀತ] (?) : ದೇಶೀಯ ವಿಶೇಷಭೇದದಿನಾಚಾರ್ಯವಿರಚಿತಾಭಿನಯ ಭೇದದಿಂ ಜನಿಯಿಸಿದ ನೂಱುನಾಲ್ವತ್ತುಂ ರಾಗಭೇದದೊಳಮಾವ ನೋರೊಂದಱೊಳ್ಪೆರಮಪ ಸಾಮ್ರಾಣಿಭೇದದೊಳಂ ಚಚ್ಚಪುಟ ಚಾಚುಪುಟಾದಿ ಸಕಲತಾಳ ಸಂಚಾರಸಮುದಿತಮಪ್ಪಿರ್ಪತ್ತೆಂಟು ವಸ್ತುಗೀತದೊಳಮತಿಪ್ರವೀಣನಪ್ಪ ಗಾಣಂ ಪಾಡಲೊಡರಿಸುವುದುಂ (ಮಲ್ಲಿಪು. ೮-೨೫ ಪ). [ಸಂ.]

ಸಾಮ್ರಾಣಿಧೂಪ (ನಾ). ಸಾಂಬ್ರಾಣಿಯನ್ನು ಕೆಂಡದ ಮೇಲೆ ಹಾಕುವುದರಿಂದ ಉಂಟಾಗುವ ಪರಿಮಳಯುಕ್ತವಾದ ಹೊಗೆ : ರಂಗಮುದ್ರೆಯ ತೊಡೆದು ಸಾಮ್ರಾಣಿಧೂಪಮಂ ಲಿಂಗಕ್ಕೆ ಗುಪ್ತದಿಂ ಮಂಚರಸನರ್ಪಿಸಲು (ಗುರುಚಾ. ೬-೪೦).

[ಸಂ.]

ಸಾಯ್ 'ಸಾ' ನೋ.

ಸಾಯ್$_1$ 'ಸಾಹ್ಯ' ನೋ.

ಸಾಯ್$_2$ (ನಾ). ೧. ಕೊನೆ ; ಮುಕ್ತಾಯ. ೨. ಸಂಜೆ ; ಸಾಯಂಕಾಲ : "ಚೈಗಿನ ಪೊಟ್ಟಂ ಸಾಯಮೆಂಬುದು" (ಹಲಾಯು. ೧೮-೧೦೯); ತತ್ಸಾಯಮಾವರಿಸೆ ಕಾಳಾಂಬರವನುಟ್ಟ ನಿಶಿಯಾಂಗನೆಯ ಬಳಗಮೆನೆ ರಾಜಿಸಿದರು ತರುಣಿಯರು (ಸಮೋ. ೨೪-೬೨). [ಸಂ.]

ಸಾಯಂ (ಅ). ಸಾಯಂಕಾಲದಲ್ಲಿ ; ಸಂಜೆಯಲ್ಲಿ : 'ಸಾಯಂಭೇರಿ' ಪರಾ.

[ಸಂ.]

ಸಾಯಂಕಾಲ (ನಾ). ಹಗಲಿನ ಕೊನೆಯ ಭಾಗ ; ಸಂಜೆ : "ದಿವಸಾಂತವಪ್ಪಿರುಳು ಸಾಯಂಕಾಲಮನಿಕು" (ವಂಗರಾ. ೨೦-೭); ಸಾಯಂಕಾಲ ಹೆಣ್ಣುಗುಬ್ಬಿಯು ಗಂಡನನ್ನು ಕುರಿತು ಆ ದಿನ ನಡೆದ ಸಂಗತಿಯನ್ನು ಹೇಳಿತು (ನೀತಿಚಂ. VIII. ೬); ಪ್ರಾತಃಕಾಲದಲ್ಲಾಗಲಿ, ಸಾಯಂಕಾಲದಲ್ಲಾಗಲಿ ಪಡಸಾಲೆಗೆ ನೇರವಾಗಿ ಬಿಸಿಲು ಬೀಳದಂತೆ . . . ಮನೆಯನ್ನು ಕತ್ತಲು ಮಾಡಬೇಕಾಗಿಲ್ಲ (ನಂಬರು. ೧೮).

[ಸಂ.]

ಸಾಯಂತನ (ಗು). ೧. ಸಂಜೆಯ ; ಸಂಧ್ಯಾಸಮಯದ : ವನಸಾಯಂತನ ಮಲ್ಲಿಕಾಮುಕುಳಕೋಟ್ಯಗ್ರಂಗಳೊಳ್ ಕೂಡೆ ನೂತನಸದ್ಗಂಧಿಗಳೊಳ್ ಮದಾಂಧ ಮಧುಪಂ . . . ಪಾಯ್ದು (ಶಾಂತಿಪು. ೭-೧೨೮). (ನಾ). ೨. ಸಂಜೆ ; ಸಾಯಂಕಾಲ: ಆಗಳ್ ಸಾಯಂತನದ ನಿಯೋಗಮನೋಳಿಯೊಳೆ ತೀರ್ಚ ಸಂಗರವಿಜಯೋದ್ಯೋಗಿ ವಿಧಿಪೂರ್ವಕಂ ಚೆಲ್ವಾಗಿರೆ ಹರಿ ದರ್ಭಶಯನತಳಗತನಾದಂ (ವರ್ಧಮಾ. ೪-೩೩).

[ಸಂ.]

ಸಾಯಂತನಸಮಯ (ನಾ). ಸಂಜೆಯ ವೇಳೆ ; ಸಾಯಂಕಾಲದ ಹೊತ್ತು : ಅನ್ನೆಗಮಾಷಾಢಪೌರ್ಣಮಾಸೀವಾಸರಸಾಯಂತನ ಸಮಯದೊಳ್ ಪರಭಾಗಂ ಬಡೆದು ಗಗನೋಭಯಭಾಗದೊಳ್ ದಿಗ್ವಿತ್ತಿಗಳುಂ . . . ಬೆಳಗೆ (ಆದಿಪು. ೬-೫೧ ಪ); ಸಾಯಂತನಸಮಯಸಮೀರಣಂ ಸೌಖ್ಯಸಾರಸರ್ವಸ್ವಮೆನಿಸಿದಾಗಳ್ (ಚಂದ್ರಪ್ರ. ೮-೪ ಪ). [ಸಂ.]

ಸಾಯಂಭೇರಿ (ನಾ). ರಾಜಕೀಯ ಅಥವಾ ಧಾರ್ಮಿಕ ಉತ್ಸವಗಳ ಆಚರಣೆಯ ಅಂಗವಾಗಿ ಸಾಯಂಕಾಲದಲ್ಲಿ ಮಾಡುವ ಸಾಮೂಹಿಕ ಮೆರವಣಿಗೆ : ಸಿದ್ದಾಪುರದಲ್ಲಿ ಗಾಂಧಿ ದಿನಾಚರಣೆಯ ನಿಮಿತ್ತ . . . ಸ್ತ್ರೀಯರು ರಾಷ್ಟ್ರಧ್ವಜ ಹಿಡಿದು ಸಿದ್ದಾಪುರಕ್ಕೆ ಬಂದು ಸಾಯಂಭೇರಿ ತಗೆದರು (ಕರವೀ. ೧೮೪). 'ಪ್ರಭಾತಭೇರಿ' ಪರಾ.

[ಸಾಯಂ + ಭೇರಿ]

ಸಾಯಂಸಂಧ್ಯೆ (ನಾ). ಸಂಜೆಯಲ್ಲಿ ಮಾಡುವ ಸಂಧ್ಯಾವಂದನೆ : ನಮ್ಮ ನೆರೆಹೊರೆಯ ಒಬ್ಬ ಗೃಹಸ್ಥರು ಸಾಯಂಸಂಧ್ಯೆಗೆ ಕುಳಿತಿದ್ದರು (ಸ್ಮೃತಿಚಿ. ೨೦).

[ಸಂ. ಸಾಯಂಸಂಧ್ಯಾ]

ಸಾಯಕ$_1$ 'ಸಾಹ್ಯಕ' ನೋ.

ಸಾಯಕ$_2$ (ನಾ). ೧. ಬಾಣ; ಶರ : ತನ್ನಂಕದೊಂದುಗ್ರಸಾಯಕದಿಂ ನಾಯಕರಂ ಪಡಲ್ಬಡಿಸುತುಂ ತಾಂ ತಂದನಂದಂಬೆಯಂಬಿಕೆಯಂಬಾಲೆಯುರೆಂಬ ಬಾಲೆಯ[ರನೇಂ] ಭೀಷ್ಮಂ ಯಶೋಭಾಗಿಯೋ (ಪಂಪಭಾ. ೧-೭೪); ವರಗಾಂಗೇಯ ಚಾಪವ ಮಿಡಿದು ಭರಳಲಿ ಸಾಯಕವ ತೂಗುತ್ತ ತಡೆದನು ಪಾರ್ಥನುರವಣೆಯ (ಕುವ್ಯಾವಿ. ೮-೪೯). ೨. ಕತ್ತಿ ; ಖಡ್ಗ : "ಕರವಾಲ ಸಾಯಕಂ ರಿಷ್ಟಿ ಮಂಡಲಾಗ್ರಮೆನೆ ಖಟ್ಗಂ" (ವಸ್ತುಕೋ. ೮೪-೧೬). [ಸಂ.]

ಸಾಯನ (ನಾ). [ಜ್ಯೋತಿ] ಅಯನದ ಗತಿಯನ್ನು ಅನುಸರಿಸಿ ಗ್ರಹಗಳ ಸ್ಥಾನವನ್ನು ನಿರ್ದೇಶಿಸುವುದು : ಪ್ರತಿಯೊಂದು ನಕ್ಷತ್ರದ ಅವನಾಮಕೋನ, ಸವ್ಯಾರೋಹಣಗಳೂ ವರ್ಷ ವರ್ಷಕ್ಕೂ ಬದಲಿಸುತ್ತಿರುತ್ತವೆ. ಪಾಶ್ಚಾತ್ಯಖಗೋಳಜ್ಞರ ಈ ಪದ್ಧತಿಯನ್ನು ಸಾಯನಪದ್ಧತಿ ಎಂದು ನಮ್ಮವರು ಕರೆಯುತ್ತಾರೆ (ನಕ್ಷತ್ರ. ೬೫).

[ಸಂ.]

ಸಾಯರ್ 'ಸಾಯರು' ನೋ.

ಸಾಯರ 'ಸಾಯರು' ನೋ.

ಸಾಯರಬಾಬು 'ಸಾಯರುಬಾಬು' ನೋ.

ಸಾಯರಯಿಲಾಖೆ (ನಾ). ಕಂದಾಯ, ತೆರಿಗೆ ಮುಂತಾದುವುಗಳ ವಸೂಲಿಗೆ ಸಂಬಂಧಿಸಿದ ಆಡಳಿತಶಾಖೆ : ದವ್ವ ಧಾನ್ಯವೇನಾದರ್ರು ತನ್ನುಕೊಳುವಲ್ಲು

ಸಾಯರಯಿಲಾಖೆಯವರು ಸುನ್ನ ಬರಬೇಕೆನ್ದು ಅಡ್ಡಿ ಮಾಡದನ್ತೆ (ಮೈಸೂ. ೧೯೬೦, ೪೩-೩೯: 1812). [ಸಾಯರ (< ಸಾಯರು) + ಇಲಾಖೆ]

ಸಾಯರು, ಸಾಯರ್, ಸಾಯರ (ನಾ). ಸುಂಕ ; ಜಕಾತಿ : ಕೆಲವು ಡಿಸ್ಟ್ರಿಕ್ಟುಗಳಲ್ಲಿ ಸಾಯರು ಅಮಾನಿಯಾಗಿಯೂ ಇನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಷಿಕ್ಕೆಯಾಗಿಯೂ ನಡೆಯುತ್ತಿತ್ತು (ಚಾಮವಂ. ೩೩೩). **ಸಾಯರ್**: (ರೈಸ್‌ಗ. II,೫೬೧). **ಸಾಯರ**: 'ಸಾಯರಬಾಬು', 'ಸಾಯರಯಿಲಾಖೆ' ಪರಾ.

[← ಆರ. ಸಾಇರ್; ಹಿಂ. ಮರಾ. ಸಾಯರ್]

ಸಾಯರುಬಾಬು, ಸಾಯರಬಾಬು (ನಾ). ಸುಂಕ, ಜಕಾತಿ ಮುಂತಾದುವಕ್ಕೆ ಸಂಬಂಧಿಸಿದುದು : ಜಮಾನು ಮತ್ತು ಸಾಯರುಬಾಬುಗಳಲ್ಲಿ ಹಿಂದಿನ ಮಹಾಪ್ರಭುಗಳವರ ಕಾಲದಲ್ಲಿದ್ದಂತೆಯೇ ತೆರಿಗೆಯನ್ನು ದಾಖಲ್ಮಾಡಿದರು (ಮಹಾಪಂ. II, ೩೦). **ಸಾಯರಬಾಬು** : ದೇಶದೊಳಗಿನ ಕೆಲವು ಸರಕುಗಳ ಮೇಲೆ ಎಕ್ಸಾಯಿಜ್ ಅಂದರೆ ಸಾಯರಬಾಬು ಎಂಬ ಜಕಾತಿಯನ್ನು ಅಥವಾ ಕರವನ್ನು ಕೂಡ್ರಿಸಿ ಅದನ್ನು ಎತ್ತಲಿಕ್ಕೂ ಯೋಚಿಸಿದನು (ಇಂಗ್ಲಂಡ. ೨೦೩). [← ಮರಾ. ಸಾಯರಬಾಬ್]

ಸಾಯಸ (ನಾ). ೧. ಕಷ್ಟ ; ತೊಂದರೆ : ಸತ್ಯವತೀನಂದನಂ ತನ್ನ ಮಕ್ಕಳ ಸಾಯಸಂಗಳ್ಗೆ ಮನ್ಮುಮಿಕ್ಕು ಕಣ್ಣ ನೀರಂ ನೆಗವೆ (ಪಂಪಭಾ. ೭-೫೯ ವ). ೨. ಶ್ರಮ ; ಪ್ರಯತ್ನ : ಅನೇಕ ಸಾಯಸದಿಂದ ಗಳಿಸಿದಂತಹ ಧನವನು ಗುರುಲಿಂಗಜಂಗಮಕ್ಕೆ ವೆಚ್ಚಿಸಲೊಲ್ಲದೆ . . . ಮಱುಗುತ್ತಿಹನು (ಚನ್ನವ. ಕ. ೪೧೨-೮೭೦) ; ಕೃತಿ ಪೊಸತಾದಡೇನದಕೆ ಕುಂದೆ . . . ನೋಡಿ ಸತ್ಕವಿಪ್ರತತಿಗಳ್ಕೆದೆ ಮೆಚ್ಚುವುದು ಸಾಯಸಮಂ ನೆಱೆ ಬಲ್ಲ ಸೂರಿಗಳ್ (ನನ್ನಚಾ. ೧-೨೬) ; ಕಾಯಸುಖವನು ಬಯಸಿ ಧನವನು ಸಾಯಸದಲಾರ್ಜಿಸಿ ಮದಾಂಧರ ಗಾಯಕರ ಪಾಠಕರ ಭಂಡರ ಬಯಕೆಗಳ ಬಯಸಿ (ಅಮೃತ. ೧-೩೨). ೩. ಶ್ರಮದ ಕೆಲಸ ; ಪರಿಶ್ರಮದ ಕೆಲಸ : ಸಾಯಸಕ್ಕೊಳಗಾಗಿ ರಕ್ಕಸ ನಾಯಕರು ಕೆಲಕೆಲರು ಬೆರಳನು ಬಾಯಲಿಟ್ಟರು ವಾನರಂಗಳ ಗಾಯದುರ ವಣಗೆ (ಶಾಶಿರಾ. ೨೦-೨೬). [< ಸಂ. ಸಾಯಾಸ]

ಸಾಯಸಂಗೊಳ್, ಸಾಯಸಗೊಳ್, ಸಾಯಸಗೊಳ್ಳು (ಕ್ರಿ). ೧. ಕಷ್ಟಪಡು ; ತೊಂದರೆಗೆ ಒಳಗಾಗು : ಮಾಯೆ ಸದ್ರೂಪಿಣಿಯದೀ ನಿಖಿಳಜಗವಾಗಿ ಸಾಯಸಂಗೊಳುತಮಿಹುದೆಂದೊಡೇನು (ಅನುಸಾ. ೧-೫-೩). ೨. ಆಯಾಸಕ್ಕೊಳಗಾಗು; ಬಳಲು : ಸಾಧಕಜನಂಗಳನ್ಯಶಾಸ್ತ್ರಸಂಭ್ರಮಗಳಲ್ಲಿ ಸಾಯಸಂಗೊಳ್ದೆ (ಪರಮಾ. ೮೮). **ಸಾಯಸಗೊಳ್** : ೨. ಕಂಪಿಲರಾಯಗೆ ತಲೆದೊಡವಾದನ್ನೇ ನಳಿತೋಳ ಕೊಡುವನೆ ನಿನಗೆ ಸಾಯಸಗೊಳಬೇಡ (ಕುರಾಸಾಂ. ೩೪-೮೧); ಕಾಯಕವನು ಮಾಡಿ ಸಾಯಸಗೊಳಲೇಕೆ (ಅಮಬಸಾಂ. ೭-೫೯). **ಸಾಯಸಗೊಳ್ಳು** : ೧. ವಾಯುವ ಹಿಡಿದು ದಂಡವ ಕೊಂಡು ಸಾವರ ಹಿಡಿದು ಸಂಕದೋಲೆಯನಿಕ್ಕಿ ವಿಧಿಯಲ್ಲಿ ಸಾಯಸಗೊಳ್ಳದೆ . . . ಇವನೇನೆನ್ನದಿಪ್ಪುದೇ ಸರ್ವಜ್ಞಾನದ ಒಳಗು (ಮೋಳಿಮಾ. ೧೦೫-೪೧೮). [ಸಾಯಸ + ಕೊಳ್$_1$]

ಸಾಯಸಗೊಳ್ 'ಸಾಯಸಂಗೊಳ್' ನೋ.

ಸಾಯಸಗೊಳಿಸು (ಕ್ರಿ). ಕಷ್ಟಕ್ಕೆ ಒಳಗಾಗಿಸು; ತೊಂದರೆಪಡಿಸು: ಕಬ್ಬ ಕಡಿದಡೆ ಖಂಡಿಸಿದಡೆ . . . ನಾನಾಪ್ರಕಾರದಲ್ಲಿ ಸಾಯಸಗೊಳಿಸಿದಡೆಯು ಮಿಗೆಮಿಗೆ ಮಧುರವಾಗಿಪ್ಪುದಲ್ಲದೆ ವಿಷವಾಗದು (ಚನ್ನವ.ಕ. ೧೨೫-೨೮೬).

[ಸಾಯಸಗೊಳ್ (< ಸಾಯಸಂಗೊಳ್) + - ಇಸು$_3$]

ಸಾಯಸಗೊಳ್ಳು 'ಸಾಯಸಂಗೊಳ್' ನೋ.

ಸಾಯಸವಡು (ಕ್ರಿ). ಕಷ್ಟಪಡು; ತೊಂದರೆಗೊಳಗಾಗು : ಜೀಯ ಪರಾಕಿದು ಬೇಱೊಂದೋಯರದಿಂ ಬಂದು ವಂದಿಪರ್ ಕಿಱಿಯರಸರ್ ಸಾಯಸವಡುವರ್ ಸಂತತಮಿಯೆಸಕಮನೆಳಸಿ ದಟ್ಟಿಗಟ್ಟುವರನಿಬರ್ (ಚಕಿವಿ. ೫-೫೮).

[ಸಾಯಸ + ಪಡು$_1$]

ಸಾಯಸಿಗ 'ಸಾಸಿಗ' ನೋ.

ಸಾಯಾಹ್ನ (ನಾ). ಸಂಜೆ ; ಸಾಯಂಕಾಲ : ಜೀವನದ ಸಾಯಾಹ್ನವು ಸ್ವರ್ಣವನ್ನು ಹುಡುಕಿಕೊಂಡು ತೀತವಾಗಿ ಬಿಟ್ಟಿದೆ (ನಿಬಂಧ. II, ೧೬೦). [ಸಂ.]

ಸಾಯಾಳು (ನಾ). ಸಹಾಯಕ್ಕಾಗಿ ಇರುವ ಮನುಷ್ಯ ; ರಕ್ಷಣೆಯನ್ನು ನೋಡಿಕೊಳ್ಳುವ ಯೋಧ : ಆಳ ಮೇಳೆಯ ಮುರಿದುದೀ ಸಾಯಾಳು ಸತ್ತುದು ಹಲವು ಪಡಿಬಲದಾಳು ಕೂಡದ ಮುನ್ನ ಕೊಂದನು ಕೊಂಬಿಸಂಖ್ಯೆಗಳ (ಕುವ್ಯಾಕ. ೧೩-೧೫). [ಸಾಯ$_1$ (< ಸಾಹ್ಯ) + ಆಳು$_3$ (< ಆಳ್$_3$)]

ಸಾಯಿ$_1$ 'ಸಾ' ನೋ.

ಸಾಯಿ$_2$ (ನಾ). ನೆರವಾಗುವವಳು; ಸಹಾಯಮಾಡುವವಳು: ಶಮಂಗೆ ಪ್ರೀತಿ ಕಾಮಂಗೆ ರತಿ ಹರುಷಂಗೆ ಆನಂದಿನಿಯರೆಂಬ ಸ್ತ್ರೀಯರುಗಳು. ಅವರು ಜಗತ್ತಿನ ಧರ್ಮಂಗಳಿಗೆ ಸಾಯಿಗಳಾಗಿರ್ಕುಂ (ಭೃರಸೂ. I. ೧೫). [ಸಾಯ$_1$ (< ಸಾಹ್ಯ) + - ಇ$_2$]

ಸಾಯಿ$_3$ 'ಸಾಮಿ$_1$' ನೋ.

ಸಾಯಿ$_4$ (ನಾ). ಹಾಲು, ಮೊಸರು ಮುಂತಾದುವುಗಳ ಕೆನೆ : (ಕ).

[← ಮರಾ. ಸಾಯ]

ಸಾಯಿಗುತ್ತ (ನಾ). ಮರಣಾಂತಿಕವಾದ ರೋಗ : ಆಶ್ಲೇಷೆಯೊಳು ಮೈನೆರೆದಡಾ ಪುತ್ರನಾಸ್ತಿಯು . . . ಸ್ವಾತಿಯೊಳು ಕಡುಚಪಳೆ ಸಾಯಿಗುತ್ತವನುಳ್ಳಳ್ಕೆ ತಿಳಿ (ವೀಶ್ವಪು. ೪-೨೧-೧೮). [ಸಾಯಿ$_1$ (< ಸಾ) + ಕುತ್ತ]

ಸಾಯಿತ್ಯ, ಸಾಹಿತಿಯ (ನಾ). ೧. ಸಲಕರಣೆ ; ಸಾಮಗ್ರಿ : ಮಾನ್ಯದ XXX ಉಭಯ ಸಾಯಿತ್ಯಕೆ ಮಧುಲಿಂಗಸ್ವಾಮಿಗೆ ನಡಸುವ ಸೇವೆ (ಸೌಇಇ. XX, ೨೫೩-೩೭ ; 1598). **ಸಾಹಿತಿಯ**: ೨. ಕಾವ್ಯ, ನಾಟಕ ಮುಂತಾದ ರಚನೆ : ಮುನ್ನಿಲ್ಲದ ಸಾಹಿತಿಯೆಳೆಗನ್ನದೊಳಂದೊಗೆದ ಮುನಿಯಿನುಣ್ಮೆದ ತೆಱದಿಂ ಮುನ್ನಿಲ್ಲದ ಸಂಗೀತಮುಮಿನ್ನೆಗಮಿ ಚಿಕ್ಕದೇವನಿಂ ನೆಗೞ್ದುದು ದಲ್ (ಚಕಿವಿ. ೪-೧೩೦).

[< ಸಂ. ಸಾಹಿತ್ಯ]

ಸಾಯಿಬ್ಬೆ (ನಾ). ಒಬ್ಬಾಕೆಯ ಹೆಸರು : ಮಲದ ಕುಮಾರಣನ್ನಿಭಟಾರರ ಸಿಪಿತ್ತಿಯರ್ ಸಾಯಿಬ್ಬೆಕನ್ತಿಯರ XXX (ಎಕ II, ೧೫೬-೬ ; ಸು. 950).

[P ಇದು 'ಸಾಮಿಯಬ್ಬೆ' ಎಂಬುದರ ಅಪಲಿಖಿತ]

ಸಾಯಿರ 'ಸಾಸಿರ' ನೋ.

ಸಾಯಿರಗಯ್ಯ 'ಸಾಸಿರ್ಗೈಯ' ನೋ.

ಸಾಯಿಲ (ನಾ). ಒಂದು ವಂಶದ ಹೆಸರು : ಸಾಯಿಲರ ಕೋಜಯ್ಯ ಕೊಟರರ ಅಳಿಯ ಸಿರಿ ಮೇಱೆ ತುಱುವಾನ್ನಿಕ್ಕಿಸಿ ಕಾದಿ ಸತ್ತ (ಎಕ. X, ಶಿವಮೊ. ೫೯-೪. ಸು. 900).

[?]

ಸಾಯಿಸು, ಸಾಸಿಸು (ಕ್ರಿ). ಸಾಯುವಂತೆ ಮಾಡು; ಕೊಲ್ಲು : ಒಂದು ಹೆಂಡತಿಯನ್ನು ಸಾಯಿಸಿ ಎರಡನೆಯ ಮದುವೆಯಾಗಿ ಸುಖಪಡುವುದು ಅಷ್ಟು ಸುಲಭವೆ? (ಪದ್ಮಸ. ೧೪೬). **ಸಾಸಿಸು** : ನೇಸಱೊನೊಳದಂದೆನ್ನಂ ಸಾಸಿಸುವಂ ಸುರಪಸೂನು ವಲ್ಲದೊಡಟೊವಂ (ನೇಮಿಪು. ೧೨-೭೩). [ಸಾಯು (< ಸಾ) + - ಇಸು$_3$]

ಸಾಯು 'ಸಾ' ನೋ.

ಸಾಯುಜ್ಯ (ನಾ). ೧. ಅನ್ಯೋನ್ಯಸಂಯೋಗ ; ಏಕತೆ : ಪ್ರಳಯತಿಮಿರದ ಬೀಜ ನೀಲಾಚಳದ ಸಾಯುಜ್ಯವೊ ನಭೋಮಂಡಲದೊಳದನೇವೊಗಳುವೆನು ಮಸಗಿತು ತಮಸ್ತೋಮ (ಕುವ್ಯಾದ್ಯೋ. ೧೫-೨೮); ತನ್ನೊಂದು ಜೀವಿತಕೆ ರಾಜಪುತ್ರಿಯೆ ಸರ್ವ ಸುಖಮಾಗೆ . . . ಮರೆತಳು ತನ್ನನುಂ ತಾನೆ, ಕೈಕೆಯೊಳ್ ಸಾಯುಜ್ಯ ಪೊಂದಿ (ಶ್ರೀರಾಮಾ. ೨೪-೬೨೭). ೨. [ತತ್ತ್ವಶಾ] ನಾಲ್ಕು ಬಗೆಯ ಮೋಕ್ಷಗತಿಗಳಲ್ಲಿ ನಾಲ್ಕನೆಯದು ; ಮುಕ್ತಜೀವನು ಪರಮಾತ್ಮನಲ್ಲಿ ಲೀನವಾಗುವುದು : ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತುಮಾಡಿ ಸಲಹಿದ ಸುಖವು ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಂತುಟಲ್ಲಾ (ಬಸವ. ೪೭೪) ; ಸಾಯುಜ್ಯದ ನಿಲವಿನಂತೆ ಶಿವನ ಸುಖದಂತೆ . . . ಬೆಳಬೆಳಗಿ ನಳನಳಸಿ ಬಳೆಯುತಿರ್ದಳ್ (ಗಿರಿಕ. ೩-೬೯ ವ). [ಸಂ.]

ಸಾಯುಜ್ಯಪದ (ನಾ). = ಸಾಯುಜ್ಯ ೨ : ಅಯ್ಯಾ ನಿಮ್ಮ ಪುರಾತನರ ಜ್ಞಾನಾನುಭವಸಮರಸಾನಂದವೇ ಎನಗೆ ಸಾಯುಜ್ಯಪದವಯ್ಯಾ (ಉರಿಪ.. ಕ. ೧೭೩-೨೩೩). [ಸಂ.]

ಸಾಯುಜ್ಯಪದವಿ (ನಾ). = ಸಾಯುಜ್ಯ ೨ : ರಕ್ಕಸಿಯ ಮನೆಯಲ್ಲಿ

ಭೋಜನವುಂಡು ತೃಪ್ತಿಯಾಯಿತ್ತೆಂದು ಬೆಸಗೊಂಡರೆ ಹೇಳಹೆನು ನೀರ ಕೈಯಲು ಕಿಚ್ಚ ಬಯ್ಕೆಯ ಕೊಟ್ಟಂತೆ ಸಾಯುಜ್ಯಪದವಿಯನವರೆತ್ತ ಬಲ್ಲರು (ಬಸವ. ೯೨೧) ; ಮದನರಿಪುವಂ ಕುಲಿತು ಮೆಚ್ಚಿಸಿ ಪದುಳದಿಂ ಸಾಯುಜ್ಯಪದವಿಯೊಳೊದಗಿ ಪಡೆದನು ನಿಮಿಷದಲಿ ಶಿವಭಕ್ತರಂತಾಗಿ (ಬಸಪು. ೫೩-೫೪) ; ಪರಮಾನಂದಪದದೊಳಗಾಳಿ ನಿಜಸಾಯುಜ್ಯಪದವಿಯ ಪಡೆದು ಸುಖಿಯಹುದು (ಅಮೃತ. ೧-೮). [ಸಂ.]

ಸಾಯ್ಮುದುರೆ 'ಸಾಗುದುರೆ' ನೋ.

ಸಾರ್₁, ಸಾರು₁ (ಕ್ರಿ). ಸಾರ್ದ (ಭೂತಕೃ), ಸಾರ್ದು (ಭೂತನ್ನೂ), ಸಾರ್ವ್₁ (ಭವಿಷ್ಯ). ೧. (ಹತ್ತಿರಕ್ಕೆ) ಬರು ; ಸಮೀಪಿಸು: ಬಾಯ ಕಂಪಿಂಗೆ ಸಾರ್ವಳಿಪ್ರಕರಮಂದು ಸೀಗುಡಿವೊಲಾಗೆ (ಪಂಪಭಾ. ೪-೮೯); ಈ ಗುಹೆಯತ್ತ ಸಾರದಂತಿರಲಿವನಂ ನಿವಾರಿಸು (ಕಾದಂಬ. ೨೫೭); ಜೋಡೆಯ ಬಂಡರ ಸಾರ್ದ ನೆತ್ತ ಗಾಜುರ ಚದುರಂಗಕಾಜಿರೊರೆಗಾಜುರ ಬಾಜಿಪ ಬೀಡೆಗಾಜುರಾಗರಮನೆ ಪೆಂಪುಸೊಂಪ ನೊಳಕೊಂಡೆಸದಿರ್ಪುವು ಸೂಳೆಗೇರಿಗಳ್ (ಕಬ್ಬಕಾ. ೪೨). ೨. (ಹತ್ತಿರಕ್ಕೆ) ಹೋಗು; ತೆರಳು: ಶ್ರೀಮತಿವೆರಸಾಗಳತಿಪ್ರೇಮದೆ ಮುನಿಯುಗಳನಿಕಟಮಂ ಸಾರ್ದು (ಆದಿಪು. ೫-೧) ; ಸುಣ್ಣದಂತೆ ತೀವ್ರಮಪ್ಪ ಕತ್ತರಿವಾಟೆಯಂತೆ ಸಾರಲರಿದಪ್ಪ . . . ಸಂಸಾರಮಂ ನಂಬಿ (ಧರ್ಮಾಮೃ. ೬-೧೪೬). ೩. ಹತ್ತಿರದಲ್ಲಿರು; ಬಳಿಯಲ್ಲಿರು : ಅದ[ಜಾ] ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸಯ್ತಕ್ಕುಮನುಕ್ರವಾನುಗತದಿಂ ಬರಮಿಗೆಮಗೆಂಬ ಕಾರಕಂ ಸಕ್ಕದವೇನೊ (ಕವಿತಾ. ೧-೧೧೬). ೪. ಸೇರು ; ತಲುಪು ; ಮುಟ್ಟು : ಅಮ್ಮ ನೀನುಂ ತಪೋವನಮಂ ಸಾರ್ವುದಮಾನದಾರ್ಗ ಮಱವೆಂ ಮತ್ಪ್ರಾಜ್ಯಸಾಮ್ರಾಜ್ಯಮಂ (ಆದಿಪು. ೧೪-೧೩) ; ತೊಱೆಯೆಂದು ಸಾರೆ ಮಾಯಿದ ತೊಱೆಗಳ್ಮಾಯ್ಪೆಗ್ಗೆಯಾಗಿ ಪತ್ತಿ ಸುಡಲ್ (ಧರ್ಮಾಮೃ. ೩-೮೩) ; ಮುನಿಪನುತ್ತರದಲಗು ಬೆನ್ನಲಿ ಮೂಡಿದುದು ಹೆಡತಲೆಗೆ ಸಾರ್ದುದು ಜಿಹ್ವೆ ಕಳವಳಿಸಿದವು ಕರಣಚಯ (ತೊರಾ. ೧-೯-೨೮). ೫. ಸರಿ; ಜರುಗು: ಬಿಸಿಲೊಳ್ ನಿಂದೊಡೆ ನೆಲಲತ್ತ ಸಾರಿಮೆಂದೆಂದುಮಱಿವನಲ್ಲಂ ನಮ್ಮಂ (ಸುಕುಮಾ. ೨-೬೫). ೬. ಮುಂದಕ್ಕೆ ಸಾಗು, — ನಡೆ: ಮುಂದಣ ಮೃಗವಂ ಕಣ್ದೋರ್ಕೆಂದು ಕೊರಲ್ಮೊಂಡ ಗೀತರವದಿಂ ತಾವುಂ ಪೊಂದುವುವು ಸಾರ್ದ ಮೃಗಚಯಂ (ಧರ್ಮಾಮೃ. ೫-೨೩) ; ಅಭವನಂ ಬೀಳ್ಕೊಂಡು ಸಾರ್ದು ಹರವರಿಯ ಹರುಷಾಂಭೋಧಿಯೊಳಕೊಂಡು ಪೂಜಮಟ್ಟನಚ್ಚ ಶಿವಲಿಂಗಾರ್ಚಕಂ (ತಿರು. ದೇ. ೬-೪); ಪಿಶಿತಭೋಜನದಲ್ಲಿಗೆ ನಿಲ್ಲದಕ್ಕೆಯುಂ ಸಾರ್ವ ನಿಶಾಚರೀಜನಮಂ . . . ಈಕ್ಷಿಸಿದಂ ಪ್ರತಿರೂಪಶೂದ್ರಕಂ (ಕಾವ್ಯಸಾ. ೫೩೪). ೭. ಬೆರೆ ; ಒಂದುಗೂಡು : ಕೆಲರೊಡವಂದಾದುದಯದೊಳೆ ಸಾರ್ವರ್ ಎಡರೊಳಗಲ್ವರ್ (ಕಾವ್ಯಸಾ. ೯೯೯ ಶೂದ್ರಕ). ೮. ಲಭಿಸು ; ಪ್ರಾಪ್ತವಾಗು : ನಮಗೆ ಪಾರಣೆಯಂ ಮಾಟ್ಪುಗಳ್ ಯಥಾಕರ್ಮದ ದೋಷಂ ಸಾರ್ತರ್ಕುಂ (ವಡ್ಡಾರಾ. ೧೦೩-೨೧) ; ಪ್ರತಿಸೂರ್ಯಂ ಸೂರ್ಯನಿಂದಂ ಬಡಗಲೊಗೆಯೆ ವೃಷ್ಟಿಪ್ರದಂ ತೆಂಕಲಾದಂದು ತಗುಳ್ದಂ ಗಾಳಿ ಸಾರ್ದಿರ್ಕೆಲದೊಳಿಗೆಯೆ ಕೊಳ್ದಂ ಮಹಾವೃಷ್ಟಿ (ಲೋಕೋಪ. ೪-೩೭) ; ಮೂಱು ಕೋಟಿ ಕವಿಲೆ[ಗ]ಳುಮನನಿಬರುಬ್ರಾಹ್ಮಣರು ಮನಳಿದನಿಸು ಪಾಪಂ ಸಾರ್ಗುಂ (ಶಾಸಾ. XI-i, ೧೦೩-೧೧; 1070). ೯. ಪಡೆ ; ಹೊಂದು : ಗಿರಿರಾಜನ ಸಂಗಸುಖಮಂ ಸಾರ್ದು ಮಂಗಳಾಕಾರೆಯಾಗಿರೆ (ಗಿರಿಕ. ೧, ಕಥಾಗರ್ಭಂ). ೧೦. ಆಶ್ರಯಿಸು : ಅರಸರ ದೆಸೆಯಿಂ ಮನೆಯುಂ ಕವರ್ತೆವೋಪುದುಂ ಪಜರ ಕೀಲೊಳೆಮ್ಮಬ್ಬೆಯುಂ ಮುತ್ತಬ್ಬೆಯುಂ ಸಾರ್ದು ಬದಗುಗೆಯ್ದುಗೆ (ಆದಿಪು. ೩-೩೪ ವ) ; ಸಂಗರದೊಳ್ಪಾಂಡವರಂ ಗೆಲಲ್ಕೆಱೆಯನಿನ್ನೇಣಾಕಿ ದುರ್ಯೋಧನಂ ಸೆರಗಂ ಸಾರ್ದಪನೆಂಗುಮಿಾ ಧರೆ (ಗದಾಯು. ೩-೪೭). **ಸಾರು₁** : ೧. ಆರಿಗಜುಪುವೆನು ಹೇಳಿಲೆ ಮಗನೆ ಸಾರಿನ್ನಳಲದಿರೆನ್ನಿಲೆ ಮಗನೆ (ಹಚಕಾ. ೧೨-೩೦ ರಗಳೆ); ಸಾರಿ ಕೈಗೊಡುವದಟುರನು ಕಣ್ಣೋರೆಯಲಿ ಕೋಪಿಸುತ ತನ್ನಯ ತೇರನಿಳಿದನು ಪಾರ್ಥನಸುರಾರಿಯ ನಿರೂಪದಲಿ (ಕುವ್ಯಾದ್ಯೋ. ೮-೧೨). ೪. ದ್ಯುಮಣಿ ಪಡುವಣ ಕಡಲ ಸಾರುವ ಸಮಯವಾಯಿತ್ತು (ಕುವ್ಯಾಕ. ೪-೩೪); ಚಂದದೆ ಬಳಿಕಿರುತಿರೆ ದಿನನಾಯಕನಂದು ಸಾರಿದನಸ್ತಗಿರಿಯ (ಕಂನವಿ. ೯-೧೬೪). ೭. ಅಮರದಿಶಾಂಗನೆಯ ಸಾರಿದನು ರವಿ (ತೊರಾ. ೭-೨೮-೭೮). ೮. ಕಲ್ಲಿನೊಳಗಣ ಅಪ್ಪು ದಳ್ಳುರಿಯಲ್ಲಿಪ್ಪುದೇ ಹಿಳಿದಡೆ ಸಾರದು (ಪೋಪಪಾ. ೧೧೭-೪೫೪); ಪುಣ್ಯದಿಂ ಸಾರಿತ್ತು ನಮಗಚಲಸಂಪದಂ (ನಂಬರ. ೩-೨೫); ವಾರಿಜಾಕ್ಷನ ಭೃತ್ಯರಿಗೆ ಭಯ ಸಾರುವುದೆ (ತೊರಾ. ೭-೨೨-೭). ೧೦. ಗಗನದೊಳು ಬಟ್ಟೆಯಂ ನಡೆದು ಬೆಂಡಾದ ಖಚರರು ಸಾರಲೆಂದಿಟ್ಟ ಭದ್ರಂಗಳೋ (ಹಚಕಾ. ೧-೩೭) ; ಆರಿಗೊಜಲುವೆನಾರ ಸಾರುವೆನಾರು ತನ್ನನು ಸಲಹುವರು (ಕುವ್ಯಾಖ. ೬೧೩. ೨೬-೩೪); ಮೂಜುಜನ್ಮವೆ ಸಾಕು ಹಗೆತನದಿಂದ ಬೇಗದಲಿ ಸಾರುವೆವು ನಿಮ್ಮಡಿಯ ಸಿರಿಚರಣಾರವಿಂದವನು (ತೊರಾ. ೧-೮-೨೧); ಬಿಸಿಲಿಂದೆ ಭಟರು ಪೆರ್ಮರಗಿಡನೆಳಲ ಸಾರಿದರು (ಮೋಹತ. ೧೪-೪೪). ೧೧. ದೂರ ಸರಿ ; ದೂರ ಹೋಗು : ಆರು ನೀನೆನ್ನನಿಯನಲ್ಲ ಬಿಡು ಸಾರು (ಹಚಕಾ. ೨೧೦ ಪದ) ; ಸದೆಗ ನೀ ಸಾರೆಲವೊ ಭಾರಿಯ ಮದಗಜದ ಬಡಿಹೋರಿ (ಕುವ್ಯಾಕ. ೨-೧೮). ೧೨. ಅಡಗು ; ಮರೆಯಾಗು : ವಿಮಲನೀರಿನೊಳು ಶಿವಿಯಿರ್ದು ಅರಿಗೂ ತೋಱದದಱಂತೆ ಎನ್ನೊಳಗೆ ಸಾರಿಹನು ಶಿವನು (ಸರ್ವಜ್ಞ. ೩೨೮).

ಸಾರ್‌ಸಾರ್, ಸಾರುಸಾರು (ದ್ವಿರುಕ್ತಿ) : ಸಾರೆಸಾರೆ ತನುವಂ ತತ್ಕುಂಜಸಂಜಾತ ಭೂಜಗಳತ್ಪುಷ್ಪಪರಾಗ ಸೌರಭವಹನ್ಮಂದಾನಿಲಂ ಸೋಂಕೆ (ಆದಿಪು. ೧೩-೧೦); ಕುಳಿರುತ್ತಂ ಸುತ್ತಲುಂ ಕತ್ತಲಿಪ ತರುತಲಚ್ಛಾಯೆಯಂ ಸಾರ್ದುಸಾರ್ದುತ್ಪಲ ಗಂಧೋದ್ಗಾರಿ ವಂಪಾಸರದ ಸಲಿಲಮಂ ಪೀರ್ದುಪೀರ್ದು . . . ತರುತಲಸ್ಕಂದದೊಳ್ ನಿಂದೆನಾಗಳ್ (ಕಾದಂಬ. ೭೩೪); ಸಾರುಸಾರಭಿಮನ್ಯು ಘಡ ಇನ್ನಾರ ಬಸುಜನು ಹೊಗುವೆ (ಕುವ್ಯಾದ್ಯೋ. ೫-೫೨). [ದೇ. ॥ತಮಿ. ಚಾರ್; ಮಲ. ಚಾರು]

ಸಾರ್₃ (ನಾ). ಸಮೀಪ ; ಹತ್ತಿರ ; ಸಾನ್ನಿಧ್ಯ : ಜನಿತಮುದಶ್ರುಮಿಶ್ರನಯನದ್ವಿತಯಂ ನರನಾಥ ಚಕ್ರಿ ಸದ್ಮನಯದೆ ಸಾರ್ಗೆ ವಂದು ಮುನಿಸೇವ್ಯಸುಧರ್ಮಮುನೀಶ್ವರಾಂಘ್ರಿ ಪಾವನವನಜಕ್ಕೆ ತಾನೆಱಗಿದಂ (ಜಸುಮಾ. ೪-೧೦೧) ; ಇನ್ನಿದಾಯ್ತೆನ್ನ ಕಾರ್ಯವೆನುತ್ತುಂ ಕುಸುಮಾವಳೀಸತಿಯ ಸಾರ್ಗೆಯ್ತಂದೆನೌತ್ಸುಕ್ಯದಿಂ (ಜಸುಮಾ. ೧೨-೧೭೦).

ಸಾರಣ್ = ಹತ್ತಿರ ; ಸಮೀಪ : ತನಗೆ ಕರುಣಾರಸಂ ಸಂಜನಿಯಿಸೆ ಸಾರಣ್ಗೆ ಕರೆದು ಕುಳ್ಳಿರಿಸಿ ಲತಾತನು ಕಣ್ಣನಿಯಂ ತೊಡೆದಳ್ (ಪಂಂಪಾಮಾ. ೯-೩೮) ; ಪಿರಿದು ದಿನಮಾಯ್ತು ಬಂದೆಮ್ಮರಸನ ಸಾರಣ್ಗೆ ಪೋಗವೇಱ್ಕುದು (ದಶಕು. ೨-೮೩).

[< ಸಾರ್₁]

ಸಾರ್₃ 'ಸರ್₂' ನೋ.

ಸಾರ್₄, ಸಾರು₄ (ನಾ). ೧. ಸಣ್ಣ ತೊರೆ, ಹಳ್ಳ ಮುಂತಾದುವನ್ನು ದಾಟಲು ಹಾಕುವ ಮರದ ಅಡ್ಡಗಟ್ಟೆ ; ಸಂಕ ; ಪೂಲು : ಸಾರ ಪರಿಕಾಲ್ಗಳನೊಯ್ಯನೆ ದಾಂಟಿ (ಮಲ್ಲಿಪು. ೨-೨೮) ; ಮುಕ್ಕುಱುಕಿ ಧರ್ಮಜ ನಕುಲ ಸಾತ್ಯಕಿ ಭೀಮನಂದನರು ಸರಳ ಸಾರವ ಕಟ್ಟಿದರು (ಕುವ್ಯಾದ್ಯೋ. ೩-೩೧) ; ಅಮ್ಮ ದೊಡ್ಡ ಹೊಳೆಗೆ ಸಾರ ಹಾಕಲಿಕ್ಕೆ ಅದೇನು ಹಳ್ಳವೆ? (ಮಲಮ. ೭೦೬). ೨. ಸೋಪಾನ ; ಮೆಟ್ಟಿಲು : ಸುರನಿಲಯಂಗಳೀಶನ ದಿನೇಶನ ಪಾದಯುಗಕ್ಕೆ ಭಕ್ತರಪ್ಪರ[ನ]ವರಿಪ್ಪ ಶಾಶ್ವತ ಪದಕ್ಕಡರ್ದೇಱಿಸಲೆಂದು ಸಾರಮಾಗಿರೆ ಬಿದಿ ಕಟ್ಟಿದೊಂದು ಪಥಮೆಂಬವೊಲಂ ಬರಮಂ ತಱುಂಬಿ ಭಾಸುರತರಶಾತಕುಂಭಕಳಶಂಗಳೆನೊಪ್ಪುಗುಮೆನ್ನು ನೋರ್ಪ್ಪಡ (ಎಗ. XVIII, ೧೯೧-೨೭; 1104). ೩. ಹಿಂದಿನ ಕಾಲದ ಯುದ್ಧಗಳಲ್ಲಿ ಕೋಟೆಯನ್ನು ಏರಲು ಬಳಸುತ್ತಿದ್ದ (ಸೋಪಾನದಂಥ) ಒಂದು ಬಗೆಯ ಸಾಧನ : ಸಾರ ಎನ್ನುವುದು ಕೋಟೆಯನ್ನು ಹತ್ತುವುದಕ್ಕೆ ಶತ್ರುಗಳು ಬಳಸಿ ಕೊಳ್ಳುತ್ತಿದ್ದ ಸಾಧನ (ಕಕಾಳ. ೨೪೭). 'ನಡೆಸಾರ್₄,' 'ಸಾರಮಾರಿ' ಪರಾ. **ಸಾರು₄** : ೨. ಬನುವ ಆ 'ಸಾರು'ಗಳ ಮೇಲೆ ಕುಳಿತೇ ಇದ್ದ (ಬಸಪು. ೭೭). [ದೇ. ॥ತಮಿ. ಚಾರ]

ಸಾರ್₅ (ಗು). ೧. ಅತ್ಯುತ್ಕೃಷ್ಟವಾದ; ಶ್ರೇಷ್ಠವಾದ : ಸಾರಸಹಕಾರಧಾರಾಸಾರಂ ಕೊಳದಬವೆಯಂತೆ ಸುರಿತರೆ ಪಲವುಂ ಧಾರಾಗ್ರಹಂಗಳತನುವಿಕಾರಮನೊದವಿಪುದು ದೇವದಂಪತಿಗದಱೊಳ್ (ಆದಿಪು. ೬-೯೫) ; ಸಾರಪ್ರಸನ್ನತರಗಂಭೀರಗುಣಾಧಾರಪದ ದೊಳರ್ಪಂದದೆ ಶೃಂಗಾರಾದಿ ರಸಸಮೃದ್ಧಿ ವಿಚಾರಿಪೊಡುತ್ತಾನಪದದೊಳರಲರಿದಪ್ಪುದೇ (ಪಾರ್ಶ್ವಪು. ೧-೭೩). (ನಾ). ೨. ವಸ್ತು, ವಿಷಯ ಮುಂತಾದುವುಗಳ ಸಾರವತ್ತಾದ ಭಾಗ ; ಸತ್ತ್ವ; ತಿರುಳು : ಜೋಯಿಸಗಬ್ಬಮಿದೆನ್ನದೆ ಚೀಯೆನ್ನದೆ ಸಾರಮೆನ್ನರೆನ್ನರುಮದಱಿಂ ಜೀಯೆನೆ ತಜ್ಞರ್ ವಿಬುಧಾದೇಯಮಿದೆನೆ ಪೇಳ್ದು

ಮೆಚ್ಚುವುದಲ್ಲಿವಂ ಮೆಚ್ಚೆಂ (ಜಾತಕ. ೧-೧೩) ; ಇದು ಪುರಾಣದ ಸಾರವಿದು ಶ್ರುತಿ ಸ್ಮೃತಿಯುಳುಮೆಯಿದು ಶಿವಾಗಮದೊಂದು ಗೂಢಾರ್ಥವು (ಸಾನಂಚ. ೧-೨೫); ಪತಿಯ ಪಾದಾಂಬುಜದೊಳ್ ಭಕ್ತಿಗೈವುದು ಸತಿಯರ ಧರ್ಮದ ಸಾರ (ಹದಿಬ. ೩-೪). ೩. ರಸದಿಂದ ಕೂಡಿರುವಂಥದು: ಸಾರಮನಂಗಜಂಗಮಲತಾಲಲಿತಾಂಗಿಯರಿಂದಮಲ್ತೆ ಸಂಸಾರಂ (ಪಂಪಭಾ. ೧-೧೧೪). ೪. ಶಕ್ತಿಯುತವಾದುದು; ಸಮರ್ಥವಾದುದು: ಸಾರಂಗಳ್ ನಿನ್ನ ಶರಾಸಾರಂಗಳಸಾರಮುಬೊದ ಕೆಯ್ದುಗಳೆಂತುಂ (ಪಂಪಭಾ. ೧೨-೪೬) ೫. ಔಚಿತ್ಯ; ಯುಕ್ತತೆ. ೬. ಸತ್ತ್ವವುಳ್ಳವನು; ಸಮರ್ಥ : ತೋಱುತಿದೆ ಚಿತ್ತದಲಿ ಮಿಕ್ಕಿನ ಮೂಱುಮಕ್ಕಳಿಗಿಂತ ರಾಮನೆ ಸಾರ [ಪಾಠಾಂ. ನೀಱ, ವೀರ]ನೀ ಸಾಮ್ರಾಜ್ಯಸತಿಗೆಂದವನಿಪತಿ ನುಡಿದ (ತೊರಾ. ೨-೧-೬). ೭. ಮೂಳೆಯ ಪೊಳ್ಳುಭಾಗದಲ್ಲಿರುವ ಮೆತ್ತನೆಯ ಪದಾರ್ಥ; ನೆಣ. ೮. ಗಿಡಮರಗಳ ಕಾಂಡದ ಮಧ್ಯದಲ್ಲಿರುವ ತಿರುಳು; ಕೆಚ್ಚು : "ಮಜ್ಜಾ, ಸಾರಃ - ಈ ೨ ಮರದ ಕೆಚ್ಚು" (ಹಲಾಯು. ೩೦-೩೯). ೯. ಸಸ್ಯಗಳಿಗೆ ಶಕ್ತಿಯನ್ನು ಕೊಡುವ ಪದಾರ್ಥ; ಗೊಬ್ಬರ : ಒಂದಿಷ್ಟು ತರಕಾರಿ ಬೆಳೆಯಿಸಬೇಕು. ಅವನ್ನು ನಡುವುದು, ನೀರೆರೆಯುವುದು, ಸಾರ ಹಾಕುವುದು (ಮುಗಿಯು. ೩೭೧). ೧೦. ಮಕರಂದ ; ಬಂಡು. ೧೧. ಕೀವು; ರಸಿಕೆ. ೧೨. ವೀರ್ಯ; ರೇತಸ್ಸು. ೧೩. ಶೌರ್ಯ; ಪರಾಕ್ರಮ. ೧೪. ನೈಪುಣ್ಯ; ಚಾಕಚಕ್ಯತೆ : 'ಲವಣಸಾರ' ಪರಾ. ೧೫. ದೃಢತೆ. ೧೬. ಸಿರಿ; ಸಂಪತ್ತು. ೧೭. ಅಭಿಪ್ರಾಯ; ತಾತ್ಪರ್ಯ. ೧೮. ನೀರು; ಜಲ. ೧೯. ಮಳೆ; ವೃಷ್ಟಿ: ಸಮ್ಮುಖದೊಳವಗಡಿಸುವಿಭಕೋಟಿಗಳ ಕೊಂದನು ಸರಳ ಸಾರದಲಿ (ಕುವ್ಯಾಕ್ರೋ. ೫-೭) : ಬೊಬ್ಬಿಟ್ಟಿದು ಮಾತಾಡು ನೀನೇ ಮಹೇಶನೆಂಬಾತನೆಂದೆನುತಲನುಮಾನಮಿಲ್ಲದೆ ಸರಳ ಸಾರಮಂ ಕಱೆದನದನೇನೆಂಬೆನಚ್ಚರಿಯನು (ಚಿಬಪು. ೨೬-೩೫). ೨೦. ಅದೇ ತಾನೆ ಕಡೆದ ಬೆಣ್ಣೆ; ನವನೀತ. ೨೧. ಒಂದು ಬಗೆಯ ಲೋಹ; ಉಕ್ಕು. ೨೨. ಶಕ್ತಿ; ಕಸುವು : ಇನ್ನು ಆ ಹಳೆಯ ಎಕ್ಕಡವನ್ನು ಯಾರು ನೋಡಿಕೊಳ್ಳುವರು . . . ಅದರ ಸಾರ ವಯಸ್ಸೂ ಕಳೆದು ಹೋಗುತ್ತ ಬಂದಿದೆ (ಪಂಯಾತ್ರ. ೪೮). ೨೩. ಇಂಗಾಲಾಮ್ಲ ಅನಿಲವನ್ನು ಹುದುಗಿಸಿ, ನೊರೆಯುಕ್ಕುವಂತೆ ಮಾಡಿದ ಪಾನೀಯ(ಸೋಡಾ)ದಲ್ಲಿನ ಅಶುದ್ಧ ಇಂಗಾಲಾಮ್ಲಲವಣ. ೨೪. ಮೀನು. ೨೫. ರೋಗ ; ವ್ಯಾಧಿ. ೨೬. ಸ್ಥಿರವಾದುದು. ೨೭. ಕ್ಲೇಶ; ಸಂಕಟ : "ಸ್ಥಿರ ದುಃಖಂ ವಸ್ತು ಶೌರ್ಯಂ ಜಲಚರ ಮಲ ಕೆಚ್ಚಂದ್ರಿಯಂ ಸಾರಮಕ್ಕುಂ" (ನಾನಾರ. ೮೧). ೨೮. [ಕಾವ್ಯಮೀ] ವಾಸ್ತವಾಲಂಕಾರದಲ್ಲಿ ಒಂದು ಬಗೆ ; ಒಂದು ವಸ್ತುವಿಗಿಂತ ಮತ್ತೊಂದು ವಸ್ತುವು ಅತಿಶಯವಾಗಿದೆ ಎಂದು ಹೇಳುವುದು: ಇತರೇತರಕಾರಕ ಸಂಪ್ರತಿಪತ್ತಿಪರಸ್ಪರಂ ಸಮೂಹದೊಳೆಸವೊಂದತಿಶಯಗುಣದಿಂ ನಿರ್ಧಾರಿತಮಪ್ಪುದು ಸಾರಮೆಂಬ ಸದಲಂಕಾರಂ (ಕಾವ್ಯಾವ. ೬೫೮) ; ಸಾರ-ಉತ್ತರೋತ್ತರೋತ್ಕರ್ಷವರ್ಣನೆ ಎಂದರೆ ಒಂದಕ್ಕಿಂತ ಮತ್ತೊಂದು ಅತಿಶಯವಾಗಿದೆ ಎಂದು ಹೇಳುವುದು ಸಾರಾಲಂಕಾರ (ಕೃಪಿಡಿ. ೨೮೨). [ಸಂ.]

ಸಾರಂಗ$_1$ (ನಾ). ೧. ವಿಷ್ಣುವಿನ ಬಿಲ್ಲು; ಶಾರ್ಙ್ಗ : 'ಸಾರಂಗಪಾಣಿ' ಪರಾ. ೨. ಶಾರ್ಙ್ಗವೆಂಬ ಬಿಲ್ಲನ್ನು ಧರಿಸಿರುವವನು; ವಿಷ್ಣು : ಸರಸಿಜನಯನನಾಮ ನಾರದ ನಿನ್ನ ದಾಸರ ಸಂಗತಿಯನನುಸಾರದಲೆ ಸಾರಲಿಲ್ಲವು ನಿನ್ನ ಸಾರಸುಧೇನಾಮ ಲೋಕ ಸಾರಂಗನಾಮ ಶಿರಿವಿಜಯವಿಠ್ಠಲನೆ (ವಿಸಾಸು. ೩೦-೧).

[< ಸಂ. ಶಾರ್ಙ್ಗ]

ಸಾರಂಗ$_2$ (ಗು). ೧. ನಾನಾಬಣ್ಣಗಳಿಂದ ಕೂಡಿದ: 'ಸಾರಂಗವಟ್ಟೆ' ಪರಾ. ೨. ಚುಕ್ಕೆಗಳಿಂದ ಕೂಡಿದ. (ನಾ). ೩. ಹಲವು ಬಣ್ಣಗಳಿಂದ ಕೂಡಿದುದು; ಮಿಶ್ರ ವರ್ಣ : "ಸಾರಂಗಃ, ಶಬಳಃ - ಈ ೨ ಬೆರಕೆವರ್ಣಂ" (ಹಲಾಯು. ೧೨೧-೫೧). ೪. ಹುಲ್ಲೆ ; ಜಿಂಕೆ: ಕೊಂಚೆಯಂಚೆ ಕಪಿ ಸಾರಂಗಂ ನವಿಲ್ (ಲೋಕೋಪ. ೧೨-೧೪) ; ಬೆಳೆದ ಸಾರಂಗದೆಳವಱಿಯನೆರಳೆಯ ತೊಡೆಯನುಗ್ರಮಾತಂಗದಂತಂಗಳಂ . . . ಹರಿಶ್ಚಂದ್ರರಾಯಂಗೆ ಕಾಣಕೆಯನಿತ್ತಡಿಗೆಱಗುತಿರ್ದರಗ್ಗದ ಬೇಡವಡೆಯೊಡೆಯರು (ಹಚಕಾ. ೫-೩) ; ಒಂದು ಸಾರಂಗವು ತನ್ನನ್ನು ಬೆನ್ನಟ್ಟಿ ಬರುವ ಬೇಟೆನಾಯಿಗಳಿಂದ ಜೀವ ಉಳಿಸಿಕೊಳ್ಳುವುದಕ್ಕಾಗಿ . . . ಸೊಪ್ಪಯ ಮರಗೆ ಅಡಗಿಕೊಂಡಿತು (ಮುಂಬಯಿ. ೪-೪೧). ೫. ಮೈಮೇಲೆ ಚುಕ್ಕೆಗಳಿರುವ ಜಿಂಕೆ ; ಚುಕ್ಕೆದುಪ್ಪಿ : "ಸಾರಂಗಂ ಪೃಷತಾಖ್ಯಂ" (ಮಾಕೋ. ೪೦-೪) ; ಸೀತೆಯಂ . . . ಶರಭಸಾರಂಗಪ್ರಮುಖ ಮೃಗವಿಕೀರ್ಣ ನಾನಾವೃಕ್ಷಗುಲ್ಮಲತಾಸಂಘಟ್ಟನಕುಧರಕುಂಜಸಂಚರಣವನೇಚರ ಭಯಂಕರಮುಮಪ್ಪ ಭೀಮಾಟವಿಗೊಯ್ದು ರಥದಿಂದಿಳಿಪೆ (ಪುಣ್ಯಾಸ್ರ. ೭-೧೭ ವ). ೬. ಸಿಂಹ; ಕೇಸರಿ. ೭. ಆನೆ ; ಗಜ : 'ಸಾರಂಗವದನ' ಪರಾ. ೮. ಒಂದು ಬಗೆಯ ಪಕ್ಷಿ; ಚಾತಕ : "ಸಾರಂಗಮೇಣಮುಂ ಚಾತಕಮುಂ" (ಮಾಕೋ. ೧೨೨-೨೬). ೯. ನವಿಲು ; ಮಯೂರ: ಸಾರಂಗ ಸರ್ಪನ ಪಿಡಿವವೊಲು ಪುಲಿಯ ಪಿಡಿವುದೇ (ಶಂಕದಾ. ೧೨-೪). ೧೦. ದೊಡ್ಡ ಕಪ್ಪುದುಂಬಿ : ಸದ್ಗುಣಭೂಷಂ ಮಾರಾರಿ ಜನಪದಾಂಬುಜಸಾರಂಗಂ ಬಾಳ್ಗೆ ವಿಬುಧಸಂಸ್ತುತವೃತ್ತಂ (ಕಇ. II-i, ೧೭-೧೭ ; 1556). ೧೧. ಒಂದು ಬಗೆಯ ಕುದುರೆ : ಜರ್ದಾ ಸಾರಂಗ ಎಂಬುದಾಗಿ ಹಲವು ಬಣ್ಣದ ಕುದುರೆಗಳುಂಟು (ಮುಂಬಯಿ. ೩-೫೫). ೧೨. ಮೋಡ ; ಮೇಘ : "ಜಾತಕದೊಳು ಘನಂಗಳೊಳು ತುರಗಕುಲದೊಳು ಶಬಲವರ್ಣದೊಳು ಪೃಷತದೊಳ್ ಸಾರಂಗನಾಮಮಕ್ಕುಂ" (ಮಂಗರಾ. ೧೪೯-೪೪). 'ಸಾರಂಗಗಮನ' ಪರಾ. ೧೩. ಕೊಂಬು ; ಕೋಡು. ೧೪. ಕಣ್ಣು : ಸಾರಂಗಶ್ರವಣಭೂಷಣ ಸುರಭಿಸಂಹಾರ . . . ಸಾರಂಗಜಟಿ ಸಿದ್ಧನಂಜೇಶ ಪಾಲಿಪುದು (ಚಿಬಪು. ೬೩-೭೭ ಅ). ೧೫. ಕರ್ಪೂರ. ೧೬. ಕಮನೀಯತೆ; ಮನೋಹರತೆ : "ಕಂಗಳೊಳುಂ ಮೇಘದೊಳು ತುರಂಗದೊಳಾನೆಯೊಳು ಭೃಂಗ ಕಮನೀಯದೊಳು ಕುರಂಗಾದಿ ಚಾತಕದೊಳು ಸಾರಂಗದೊಳೊಂಬತ್ತು ಶಬ್ದಮಿವು ಸಾರಂಗಂ" (ಶಬ್ದಮಂ. ೨೦); "ಕಂಗಳೊಳಶ್ವ ಜಾತಿಯೊಳು ಚಾತಕದೋಳ್ ಗಜದೋಳ್ ಕುರಂಗದೊಳಭ್ರದೋಳ್ ಶೃಂಗದೋಳ್ ಶಬಲವರ್ಣದೊಳುಂ ಕಮನೀಯದಲ್ಲಿ ಸಾರಂಗಮೆನಿಕ್ಕುಂ" (ನಾನಾರ. ೩೫). ೧೭. ಚಿನ್ನ ; ಬಂಗಾರ. ೧೮. ಹೊಳಪು ; ಕಾಂತಿ. ೧೯. ಒಂದು ಬಗೆಯ ತಂತೀವಾದ್ಯ: ಸಾರಂಗದ ತಿದಿಯಲ್ಲಿ ಧಾರೋದ್ರಿಜವ ತುಂಬಿದರು ಮೇರುಮಂದಿರದ ಮೇಲೆ ಮನೆಯ ಮಾಡಿದರಾರೊ ತಿದಿಯ ಹಱಿವೆ ಮನೆಯ ಸುಡುವೆ (ಸಕವ.ಕ. II, ೨೪೮-೨೮) ; ನಮ್ಮ ದೇಶದ ತಂತಿವಾದ್ಯಗಳಲ್ಲಿ ಅತಿಶ್ರೇಷ್ಠವೆಂದರೆ ವೀಣೆಯೇ ಸರಿ. ಅನಂತರದ ಸ್ಥಾನವು ಸಾರಂಗ, ದಿಲ್ರುಬಾ, ಇಸ್ರಾಜ್ ಮೊದಲಾದವುಗಳಿಗೆ ಸೇರುವುದು (ಬಾಲಪ್ರ. II, ೧೧೦೭). 'ಸಾರಂಗವೀಣೆ' ಪರಾ. ೨೦. ಕೋಗಿಲೆ. ೨೧. ಭೂಮಿ. ೨೨. ಇರುಳು ; ರಾತ್ರಿ. ೨೩. ಛತ್ರಿ ; ಕೊಡೆ. ೨೪. ಚಂದನ; ಶ್ರೀಗಂಧ. ೨೫. ಬಿಲ್ಲು; ಧನುಸ್ಸು : ಸಾರಂಗನಾಮಾಯುಧಾಕಲಿತಕರಪದ್ಮ ಸಾರಂಗಜಟಿ ಸಿದ್ಧನಂಜೇಶ ಪಾಲಿಪುದು ಸಾರಂಗಪದವನೊಲಿದು (ಚಿಬಪು. ೬೩-೭೭ ಅ). ೨೬. ಒಡವೆ ; ಆಭರಣ. ೨೭. ವಸ್ತ್ರ ; ಉಡುಪು : ಮುತ್ತುಸ್ವಾಮಿ . . . ಬರಿಗೈಯಿಂದ ಹೋದರೆ ಹೇಗೆ ಎಂದು ಅವಳಿಗಿಷ್ಟವಾದ ಸಿಲ್ಕ ಸಾರಂಗವನ್ನು ಕೊಂಡು ಕ್ವಂಟನ್‌ಬಸ್ಸನ್ನು ಹಿಡಿದ (ಕಸಾ. ೮೬). ೨೮. ಕೂದಲು. ೨೯. ತಾವರೆ ; ಕಮಲ. ೩೦. ಹೂವು ; ಪುಷ್ಪ. ೩೧. ಶಿವ ; ಈಶ್ವರ : 'ಸಾರಂಗಪದ' ಪರಾ. ೩೨. ಕಾಮ ; ಮನ್ಮಥ. ೩೩. ಶಂಖ. ೩೪. ಚಂದ್ರ : 'ಸಾರಂಗತೇಜ', 'ಸಾರಂಗಮೌಲಿ' ಪರಾ. ೩೫. [ಸಂಗೀತ] ಒಂದು ರಾಗದ ಹೆಸರು : ಮಧುಮಾಧವಿ ಶಂಕರಾಭರಣ ಹಿಂದೋಳ ಬಂಗಾಳ ಗುಂಡಕ್ರಿ ಶ್ರೀರಾಗ ಸಾರಂಗ [ಪಾಠಾಂ. ಳಗ] . . . ಕರ್ನಾಟಕಬಂಗಾಳಮೆಂಬಿಪ್ಪತ್ತೇ ರಾಗಾಂಗದಿಂದಾದ ರಾಗಂಗಳು (ಎವೇಕ. ೧೮೮); ಕೃಷ್ಣಭಾಗವತರು ತ್ಯಾಗರಾಜರ ಕೀರ್ತನೆ "ನೀವಾಡನೇ ಗಾನಾ" ಎಂಬುದನ್ನು ಸಾರಂಗರಾಗದಲ್ಲಿ ಹಾಡಿದುದನ್ನು ಶರಭಶಾಸ್ತ್ರಿಗಳು ಕೇಳಿದರು (ಸಂಗೀತ. ೯೧).

ಸಾರಂಗತನುಜವಾಮಾಂಗ = ಶಿವ (?) : ಸಾರಂಗತನುಜವಾಮಾಂಗನಂ ಭಂಗನಂ ಸಾರಂಗತೇಜ . . . ಸಾರಂಗಮೌಲಿ ತ್ರಾಹಿ (ಚಿಬಪು. ೬೩-೭೭ ಬ). [ಸಂ.]

ಸಾರಂಗಗಮನ (ನಾ). ಮೋಡದಲ್ಲಿ ಚಲಿಸುವವನು ; ಚಂದ್ರ : ಸಾರಂಗಗಮನ [ಪಾಠಾಂ. ಪಯಣ] ಹರಿಮಿತ್ರನಂ ಪಾತ್ರನಂ . . . ಸಾರಂಗಮೌಲಿ ತ್ರಾಹಿ (ಚಿಬಪು. ೬೩-೭೭ ಬ). [ಸಂ.]

ಸಾರಂಗಚರ್ಮ (ನಾ). ಆನೆಯ ತೊಗಲು.

ಸಾರಂಗಚರ್ಮಾಂಬರ = ಗಜಚರ್ಮವನ್ನು ಧರಿಸಿದವನು; ಶಿವ: ಸಾರಂಗಸುರಜ್ಯೇಷ್ಠ ಶತಧರ್ಮನಮಿತಪದ ಸಾರಂಗಚರ್ಮಾಂಬರ . . . ಪಾಲಿಪುದು ಸಾರಂಗಪದವನೊಲಿದು (ಚಿಪು. ೬೩-೭೭ಅ). [ಸಂ. ಸಾರಂಗಚರ್ಮನ್]

ಸಾರಂಗಜಟಿ (ನಾ). ಮನೋಹರವಾದ ಜಟೆಯನ್ನುಳ್ಳವನು; ಶಿವ: ಸಾರಂಗನಾಮಾಯುಧಾಕಲಿತಕರಪದ್ಮ ಸಾರಂಗಜಟಿ ಸಿದ್ಧನಂಜೇಶ ಪಾಲಿಪುದು ಸಾರಂಗಪದವನೊಲಿದು (ಚಿಪು. ೬೩ ೭೭ ಅ). [ಸಂ. ಸಾರಂಗಜಟಿನ್]

ಸಾರಂಗಟ್ಟು,, ಸಾರಗಟ್ಟು (ಕ್ರಿ). ಸಣ್ಣ ತೊರೆ ಮುಂತಾದುವನ್ನು ದಾಟಲು ಅಡ್ಡಗಟ್ಟೆ ಹಾಕು; ಸಂಕವನ್ನು ನಿರ್ಮಿಸು : ನೀರಡಸಿ ಕುಡಿದು ಸಿಂಪೆಯ ನೀರೊಳಗರೆಮುಟುಗಿ ಮಗ್ಗುಲಿಕ್ಕಿರ್ದುದು ಮುನ್ನೀರಂ ನೀಲಾಚಲದಿಂ ಸಾರಂಗಟ್ಟಿದ ವೊಲಿರೆ ಬಲ್ದು ಲುಲಾಯಂ (ಯಶೋಚ. ೩-೬೮) ; ನದನದೀಪತಿಗೆ ಸಾರಂಗಟ್ಟುವೊರ್ ಚಲದ ಬಲದ ವಾನರಕುಲದ ಕ್ಷಿಪ್ರಕರ್ಮಿಕಕೌಶಲರ್ (ಶ್ರೀರಾಮಾ. ೫೯೧-೧೫೪). **ಸಾರಗಟ್ಟು** : ಸಾರಗ[ಪಾಠಾಂ. ಕ]ಟ್ಟಿತು ಸಾಗರಕೆ ವೃಂದಾರಕಾಚಲವಿಡಿದು ಗಿರಿಗಳ ಭಾರಕಿಳಿ ಕಡುತಗ್ಗುತಿರ್ದುದು ನಿಮುಷನಿಮುಷದಲಿ (ತೊರಕಾ. ೬-೫-೧೪).

[ಸಾರ$_1$ + ಕಟ್ಟು$_1$]

ಸಾರಂಗತೇಜ (ನಾ). ಚಂದ್ರನ ತೇಜಸ್ಸುಳ್ಳವನು : ಸಾರಂಗತೇಜ ಅಜವಲಿಗನಂ ತಲೆಗನಂ ಸಾರಂಗಮೌಲಿ ತ್ರಾಹಿ (ಚಿಪು. ೬೩-೭೭ ಬ). [ಸಂ. ಸಾರಂಗತೇಜಸ್]

ಸಾರಂಗಧರ (ನಾ). ೧. ಜಿಂಕೆಯನ್ನು ಧರಿಸಿದವನು; ಚಂದ್ರ : ಸಾರಂಗಧರ ಕಲಾಜೂಟವಿಲಸದ್ದೇವ ಸಾರಂಗವಾಹನಾದ್ಯಖಿಳದೇವರ ದೇವ . . . ಸಾರಂಗವರವೀವುದು (ಚಿಪು. ೬೨-೧). ೨. ಶಿವ: ಸಾರಂಗಧರ ಪರಮವಾಹನ ಮಹಾದೇವ . . . ಪಂಪಾವಿರೂಪಾಕ್ಷ ಸಾರಂಗವರವೀವುದು (ಚಿಪು. ೬೨-೧). [ಸಂ.]

ಸಾರಂಗನಾಟ (ನಾ). [ಸಂಗೀತ] ಒಂದು ರಾಗದ ಹೆಸರು : ನಾಟ, ಸೌರಾಷ್ಟ್ರ, ಸಾರಂಗನಾಟ, ಶುದ್ಧವಸಂತ . . . ಸಾಮವರಾಲೀ - ಈ ಮೂವತ್ತೊಂದು ರಾಗಗಳು ಪದ್ಮನನ್ನು ನ್ಯಾಸ, ಗ್ರಹ, ಅಂಶವನ್ನಾಗಿ ಉಳ್ಳವುಗಳು (ಚತುರ್ದ. ೨೬). [ಸಂ.]

ಸಾರಂಗಪದ (ನಾ). ಶಿವನ ನೆಲೆ; ಕೈಲಾಸ : ಸಾರಂಗಜಟಿ ಸಿದ್ಧನಂಜೇಶ ಪಾಲಿಪುದು ಸಾರಂಗಪದವನೊಲಿದು (ಚಿಪು. ೬೩-೭೭ ಅ). [ಸಂ.]

ಸಾರಂಗಪದ್ಮ (ನಾ). "ಆಕಾಶಗಂಗೆ" (ಚಿಪು. ಕೋಶ).

ಸಾರಂಗಪದ್ಮಧರ = ಆಕಾಶಗಂಗೆಯನ್ನು ಧರಿಸಿದವನು; ಶಿವ : ಸಾರಂಗಪದ್ಮಧರ ಜೀಮೂತಚಾರಮಣ . . . ಸಿದ್ಧನಂಜೇಶ ಪಾಲಿಪುದು ಸಾರಂಗಪದವನೊಲಿದು (ಚಿಪು. ೬೩-೭೭ ಅ). [ಸಂ.]

ಸಾರಂಗಪಾಣಿ$_1$ (ನಾ). 'ಶಾರ್ಙ್ಗ'ವೆಂಬ ಬಿಲ್ಲನ್ನು ಹಿಡಿದಿರುವವನು; ವಿಷ್ಣು : ತೆಂಗಾಯಿ ಪಲಸು . . . ಭೃಂಗಾಯಿವಣ್ಣಳು ಸಹಿತ ಹಿಂಗದೆ ಬಹುಫಲಾದಿಗಳ ತೋಂಟಗರು ಸಾರಂಗಪಾಣಿಗೆ ಸಾರ್ಚಿದರು (ಮೋಹತ. ೪-೬೨).

[< ಸಂ. ಶಾರ್ಙ್ಗಪಾಣಿ]

ಸಾರಂಗಪಾಣಿ$_2$ (ನಾ). ಜಿಂಕೆಯನ್ನು ಕೈಯಲ್ಲಿ ಹಿಡಿದವನು; ಶಿವ : ಸಾರಂಗಪಾಣಿ ದೇವ ಸಾರಂಗಧರ ಪರಮವಾಹನ ಮಹಾದೇವ . . . ಸಾರಂಗವರವೀವುದು (ಚಿಪು. ೬೨-೧). [ಸಂ.]

ಸಾರಂಗಭೈರವಿ (ನಾ). [ಸಂಗೀತ] ಒಂದು ರಾಗದ ಹೆಸರು: ನೀಲೋತ್ಪಳನಿ ವಿಕಚ್ಛವಿ . . . ಸಾರಂ[ಪಾಠಾಂ. ಳ]ಗಭೈರವಿ . . . ವಸಂತಬಂಗಾಳ ಉಪಾಂಗಮೆಂಬ ಇಪ್ಪತ್ತೆರಡು ಕ್ರಿಯಾಂಗದಿಂದಾದ ರಾಗಂಗಳು (ವಿವೇಕ. ೧೮೬). [ಸಂ. ಸಾರಂಗಭೈರವೀ]

ಸಾರಂಗಮಣಿ (ನಾ). "ಸೂರ್ಯ" (ಚಿಪು. ಕೋಶ) : ಸಾರಂಗಮಣಿ ಪದ್ಮ ಧೂಮಾಂಕ ಗೋಪದ್ಮ ಸಾರಂಗಸುರಜ್ಯೇಷ್ಠ . . . ಪಾಲಿಪುದು ಸಾರಂಗಪದವನೊಲಿದು (ಚಿಪು. ೬೩-೭೭ ಅ). [ಸಂ.]

ಸಾರಂಗಮೌಲಿ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಶಿವ : ಸಾರಂಗತೇಜ ಅಜವಲಿಗನಂ ತಲೆಗನಂ ಸಾರಂಗಮೌಲಿ ತ್ರಾಹಿ (ಚಿಪು. ೬೩-೭೭ ಬ).

[ಸಂ. ಸಾರಂಗಮೌಲಿನ್]

ಸಾರಂಗವಟ್ಟೆ (ನಾ). ಬಣ್ಣಬಣ್ಣದ ಬಟ್ಟೆ ,– ವಸ್ತ್ರ : ಸಾರಂಗವಟ್ಟೆ [ಪಾಠಾಂ. ಟ್ಟ] ಪಳಿ ಸಂಧ್ಯಾರಾಗಂ ತ್ರಿವಳಿ ಮಂಚಟಿಗೆ ಪಲ್ಲಕಿ ನಲ್ಲೂರ ತೆಳಗಾವಿಯೆಂಬಾ ಸೀರೆಗಳಂ ಸತಿಯರೊಲೆಯೊಳುರುಪಿದರಾಗಳ್ (ತ್ರಿಪು. ೧೦-೨೮). [ಸಾರಂಗ$_2$ + ಬಟ್ಟೆ$_1$]

ಸಾರಂಗವದನ (ನಾ). ಆನೆಯ ಮುಖವುಳ್ಳವನು ; ಗಣಪತಿ.

ಸಾರಂಗವದನಪಿತ = ಗಣಪತಿಯ ತಂದೆ ; ಶಿವ : ಸಾರಂಗವದನಪಿತ ಪಂಪಾವಿರೂಪಾಕ್ಷ ಸಾರಂಗಪದವೀವುದು (ಚಿಪು. ೬೨-೧). [ಸಂ.]

ಸಾರಂಗವಾಹನ (ನಾ). (ಐರಾವತವೆಂಬ) ಆನೆಯನ್ನು ವಾಹನವಾಗಿ ಉಳ್ಳವನು ; ಇಂದ್ರ : ಸಾರಂಗವಾಹನಾದ್ಯಖಿಳದೇವರ ದೇವ ಸಾರಂಗಪಾಣಿದೇವ . . . ಪಂಪಾವಿರೂಪಾಕ್ಷ ಸಾರಂಗವರವೀವುದು (ಚಿಪು. ೬೨-೧). [ಸಂ.]

ಸಾರಂಗವೀಣೆ (ನಾ). ಒಂದು ಬಗೆಯ ವೀಣೆ: ಕ್ಷೋಣಿಯೊಳು ಪೆಸರುಳ್ಳ ರಾವಳವೀಣೆ . . . ಸಾರಂಗವೀಣೆ ಪಿನಾಕವೀಣೆಗಳು ತಾನು ಮೊದಲವು ಮುನ್ನವವಜೊಳು ಗಾನಮೊಪ್ಪುವ ದಂಡಿಗೆಯನವಧಾನಿಸುತ (ಬಸವ. ೧೫-೭).

[ಸಂ. ಸಾರಂಗವೀಣಾ]

ಸಾರಂಗಿ (ನಾ). ೧. ಚುಕ್ಕೆಗಳಿರುವ ಒಂದು ಬಗೆಯ ಜಿಂಕೆ ,– ದುಷ್ಟಿ : "ಪೃಷತೀ - ಸಾರಂಗಿ" (ಓಷಧಿ. ೧೦೨). ೨. ಒಂದು ಬಗೆಯ ತಂತೀವಾದ್ಯ : ಒಂದೆಡೆಗೆ ವೀಣೆ ಸಾರಂಗಿ ತಂಬುರಿಯಿಂತು ಸಂದಣಿಸಿ ಪೂರ್ಕೆಸೆ (ಶ್ರೀರಾಮಾ. ೪-೫೫) ; ತಾಳ ಮದ್ದಳೆ ಸಿತಾರ್ಸಾರಂಗಿಯೂ ಚಂದದಿಂ ಮುಖವೀಣೆ ವೇರ್ಚಂಗ್ ಪಿಟೀಲುಗಳ ಪಿಂದೆ ನುಡಿಪಿಮ್ಮೇಳದವರೊಡನೆ (ಅರ್ಜಾವಿ. ೨೪-೫೧). [ಸಂ. ಸಾರಂಗೀ]

ಸಾರಂಗಿಡು 'ಸಾರಂಗೆಡು' ನೋ.

ಸಾರಂಗೆಡು, ಸಾರಂಗಿಡು (ಕ್ರಿ). ಸತ್ತ್ವವನ್ನು ಕಳೆದುಕೊಳ್ಳು ; ನಿಸ್ಸಾರವಾಗು: ಅರಯ್ದು ನೋಡ ತೊಳೆಗಳ ನೀರುಂ ವಾರಿಧಿಯ ನೀರ ಪೊರ್ದುಗೆಯಿಂದಂ ಸಾರಂಗಿಟ್ಟುಪ್ಪಪ್ಪವೊಲಾರುಂ ದುರ್ಜನರ ಕೂಟದಿಂದಂ ಕೆಡರೇ (ಧರ್ಮಾಮೃ. ೨-೭೭). **ಸಾರಂಗಿಡು** : ಸಾರಂಗಿಡೆ ಪಾರ್ಥಿವಪರಿವಾರಂ ದೆಸೆಗೆಟ್ಟು ಪೋಪವೋಲ್ಪೋದುವು ನಿಸ್ಸಾರಸರೋಜಾಕರದಿಂ ಸಾರಸಕಳಹಂಸಚಕ್ರವಾಕಕುಟುಂಬಂ (ಪಂಡಾಮಾ. ೭-೮೭).

[ಸಾರ$_2$ + ಕೆಡು$_1$]

ಸಾರಂದಗಾಜಿಕೆ (ನಾ). ತೋರಿಕೆ ; ಆಡಂಬರ ; ಸೋಗು : ಮಹಾಂಧಕಾರದಲ್ಲಿ ಸಂದಿಲ್ಲದೆ ಹೊದ್ದಿ ಬಾಹಾಗ ಬಂದುದ ಬಲ್ಲೆಯಾ . . . ಇದಕ್ಕೆ ಸಾರಂದಗಾಜಿಕೆಯ ಮಾತೇಕೆ ಅದು ನೀ ಬಂದುದು ಬೆಂಬಳಿ ಕಂಬಳಿಯಿಲ್ಲದೆ ಲಿಂಗವೆ (ಮೋಳಮಾ. ೧೭೪-೬೧೩). [ಸಾರಂದಗಾಜಿ + ಇಕೆ]

ಸಾರಕ (ಗು). ೧. ಭೇದಿಯಾಗಿಸುವ; ವಿರೇಚಕಗುಣವುಳ್ಳ. (ನಾ). ೨. ಹೊರದೂಡುವುದು ; ವಿಸರ್ಜಿಸುವುದು. ೩. ವಿರೇಚಕಗುಣವುಳ್ಳುದು: ಕಕ್ಕಿ . . . ಕಾಯಿಯೊಳಗಿನ ತಿಳಲು ಸಾರಕವಿರುತ್ತದೆ; ಅದನ್ನು ಔಷಧಕ್ಕೆ ಉಪಯೋಗಿಸುವರು (ಕಭಾಗ. ೩೭). ೪. ಜೇನು; ಮಧು : "ಕುಸುಮರಸ ಮಾಕ್ಷಿಕಂ ಕ್ಷೌದ್ರ ಸಾರಕಾಖ್ಯಾತಿ ಮಧುವಿನೊಳ್ ವರ್ತಿಸುಗುಂ" (ಪಾಕೋ. ೧೪-೧೩).

[ಸಂ.]

ಸಾರಕಿ, ಸಾರಿಗೆ$_3$ (ನಾ). ೧. ಒಂದು ಬಗೆಯ ಹಕ್ಕಿ. ೨. ಹೆಣ್ಣುಗಿಳಿ : ಮುಗ ಚಕೋರ ಕೀರ ಸಾರಕಿ[ಪಾಠಾಂ. ರಿವ]ಗಳ ತಾಣದಿಂದೆ ಸೆಜ್ಜೆ ಸೊಗಸನೆಸಗುತಲ್ಲಿಗಲ್ಲಿಗೊಪ್ಪಿ ತೋರ್ಪವು (ಜನವ. ೮-೧೪) ; ಸಾರಕಿಯು ಪಾರಿವ ಮರಾಳವು ಚಾರುವಿದ್ಯಾಧಿಕರು ಘನಗಂಭೀರಬಂಧುಸಮೂಹ ಸಖಿಸಖಿನಿವಹ ತೆರಳಿದುದು (ನಾಗಚ. ೩-೫೧). **ಸಾರಿಗೆ$_3$** : ೨. ಗಿಳಿ ಗೀಜಗ ಸೋಗೆನವಿಲು ಸಾರಿಗೆ[ಪಾಠಾಂ. ಗ] . . . ಕನ್ನವಿಲ್ಲಳ ಹೊಲೆ ಮುಂದೆ ತಳರೆ ತಡೆಯದೆಯ್ದುದನು (ಹರಿಶಾಂ. ೩೪-೩); ಹಾ! ಎನ್ನ ಪಂಜರದ ಸಾರಿಗೆಯೇ! ಪಾಲನೆಲೆವಳಾವಳೋ! (ರಾಮಾಶ್ವ. ೪೦-೩). [< ಸಂ. ಸಾರಿಕಾ]

ಸಾರಗ (ನಾ). ೧. ಮೈಮೇಲೆ ಚುಕ್ಕೆಗಳಿರುವ ಜಿಂಕೆ; ಚುಕ್ಕೆದುಷ್ಟಿ : ಸಾರಗದ ಕವಲುಗೊಂಬೇಲ್ದವು ಸರ್ಪನಾ ಸಾರಗದ ಮಱಗೆ ಮೊಲೆಯಿವ ಪೆಣ್ಣುಲಿವಿಂಡು (ಸಮ್ಮೇ. ೧-೧೪); ಹುಲ್ಲೆ ಮರೆ ಸಾರಗಗಳ ಕಂಗಿಡಿಸುವ ಜಂಘಾಲಿಗಳು ನಡುವಿನ ರತ್ನಮೇಖಲೆಯಾಂತು ಬಾಲವ ಬಡಿಯುತೆ ನಡೆದುವೊಗ್ಗಿನಲಿ (ಮೋಹತ. ೧೪-೧೨) ;

ಸಾರಗದ ಕೊಂಬನ್ನು ಮೊಲೆಹಾಲಿನಲ್ಲಿ ತೇದು ಕದಡಿ ಸೇವಿಸಿದರೆ ದಾಹಜ್ವರ ಗುಣಮಕ್ಕುಂ (ಸಕವೈ. ೭೮). [< ಸಂ. ಸಾರಂಗ]

ಸಾರಗಟ್ಟು 'ಸಾರಂಗಟ್ಟು' ನೋ.

ಸಾರಗನ್ನಡ (ನಾ). ಸತ್ತ್ವಯುತವಾದ ಕನ್ನಡ; ತಿರುಳ್ಗನ್ನಡ: ತಿಳಿಯತಿ ಗೂಢಗನ್ನಡವನಾ ಮಱಗನ್ನಡ ಸಾರಗನ್ನಡಂಗಳು ಮೊದಲಾದ ಸಾಸಿರದ ಮೇಲೆರಳ್ನೂಱುಮಿವಾದಿಯಾದವಂ (ಕವಿಜಿ. ೪-೪). [ಸಾರ$_2$ + ಕನ್ನಡ$_1$]

ಸಾರಘ (ನಾ). ಜೇನುತುಪ್ಪ: "ಸಾರಘಂ, ಮಾಕ್ಷಿಕಂ, ಕ್ಷೌದ್ರಂ, ಮಧು, ಪುಷ್ಪರಸ: - ಈ ೫ ಜೇನುತುಪ್ಪಂ" (ಹಲಾಯು. ೧೦೨-೪೬೭). [ಸಂ.]

ಸಾರಜನಕ (ನಾ). [ವಿಜ್ಞಾ] ಬಣ್ಣ, ರುಚಿ ಮತ್ತು ವಾಸನೆಗಳಿಲ್ಲದುದು ಹಾಗೂ ವಾಯುಮಂಡಲದಲ್ಲಿ ಶೇಕಡ ಎಂಬತ್ತರಷ್ಟಿರುವ ಒಂದು ಬಗೆಯ ರಾಸಾಯನಿಕವಸ್ತು; ನೈಟ್ರೊಜನ್: ಇಂಗಾಲ, ಸಾರಜನಕ . . . ಕಬ್ಬಿಣ ಮೊದಲಾದ ನಿರವಯವಸ್ತುಗಳು ಸಸ್ಯಗಳ ಆಹಾರದ ಘಟಕವಸ್ತುಗಳು (ಪ್ರಾಣಿಶಾ. ೬); ಸಾರಜನಕ, ಹೀಲಿಯಂ ಇತ್ಯಾದಿ ಅನಿಲಗಳನ್ನು ತುಂಬಿದ ಗಾಜಿನ ಬುರುಡೆಯೊಳಗೆ ಟಂಗ್‌ಸ್ಟನ್ ಎಂಬ ಲೋಹದ ಸಣ್ಣತಂತಿಯನ್ನು ಎರಡು ತಾಮ್ರದ ತಂತಿಗಳಿಗೆ ಸೇರಿಸಿರುತ್ತಾರೆ (ಭೌತವಿ. ೩೪೫). [ಸಂ.]

ಸಾರಟು 'ಸಾರೋಟು' ನೋ.

ಸಾರಡಿ (ನಾ). ಕೊಳೆಬಟ್ಟೆಗಳ ಮೂಟೆ, — ಗಂಟು: ಸರಿಸರಿದು ಹಾಸರಗತ್ತಿಯಂತೆ ಸಾರಡಿಯ ಪೊತ್ತು ನಿಸ್ಸಾರರವನಾದೆನೊ ಸರಿಯರೊಳಗೆ (ವಿಸಾಸು. ೩೦-೧). [?]

ಸಾರಡೆ 'ಸರಾಡ$_1$' ನೋ.

ಸಾರಣ$_1$ (ನಾ). ಗಂಧರ್ವ: 'ಸಾರಣವೆಣ್' ಪರಾ. [< ಸಂ. ಚಾರಣ]

ಸಾರಣ$_2$ (ನಾ). [ಸಂಗೀತ] ನಾದ; ಧ್ವನಿ: ಮಾನಿತಂ ನವಠಾಣಮುಂ ಸಂಧಾನಮಮರಂ ತಾಳಪಠ್ಯಮನೂನಪತ್ರಂ ಪೊಟ್ಟವಣಿ ಸಾರಣಮಲರ್ದಿರಲು (ಬಸಪು. ೧೯-೮). [ಸಂ. ಸಾರಣಾ]

ಸಾರಣ$_3$ (ನಾ). ೧. ಒಂದು ಬಗೆಯ ಸುಗಂಧವಸ್ತು. ೨. ಸುಗಂಧವಸ್ತು, ಗೋಮಯ ಮುಂತಾದುವುಗಳಿಂದ ನೆಲವನ್ನು ಸಾರಿಸುವುದು: 'ಸಾರಣಂಗೆಯ್' ಪರಾ. [ಸಂ.]

ಸಾರಣಂಗೆಯ್ (ಕ್ರಿ). ಸುಗಂಧವಸ್ತು, ಗೋಮಯ ಮುಂತಾದುವುಗಳಿಂದ ನೆಲವನ್ನು ಸಾರಿಸು, — ಬಳಿ: ಚನ್ನಪೂಗಿಡುಗಳಡಿಯಂ ಸಾರಣಂಗೆಯ್ದವಂ ಗಾಳಿ ಸೋಂಕದಂತೆ ತರಿಸಿ ಕಟನಿಕರಂಗಳಂ ಸುತ್ತಲುಂ ಕಟ್ಟಿ (ಆರಾಚ. ೨-೩-೫).

[ಸಾರಣ$_3$ + ಕೆಯ್$_1$]

ಸಾರಣವೆಣ್ (ನಾ). ಗಂಧರ್ವಸ್ತ್ರೀ: ತೋರಣಗುಡಿಗೋಪುರಕೆ ಕೆಯ್ಯಿಕ್ಕುವ ವಾರಣನಿಚಯವೆಣ್ಣೆಸೆಯ ಸಾರಣವೆಣ್ಗಳ ನುಡಿನಡೆಗಲಿವ ವಿಚಾರಣದಿಂದಲೆಯ್ದಿದರು (ಮೋಹತ. ೨೪-೨೪). [ಸಾರಣ$_1$ + ಪೆಣ್]

ಸಾರಣಿ$_1$ 'ಸಾರವಣೆ' ನೋ.

ಸಾರಣಿ$_2$ (ನಾ). ೧. ತೋಡು; ನಾಲೆ; ಕಾಲುವೆ: "ಯಾನಮೆನಲ್ಕೆ ಸಾರಣಿಯೆನಲ್ ನೀರ ಹರಿಕುಣಿಯೆನಿಕ್ಕುಂ" (ಮಂಗರಾ. ೧೨೫-೧೯). ೨. ಒಂದು ಬಗೆಯ ವನಸ್ಪತಿ ಗಿಡ; ಮುಳ್ಳಗಸೆ: "ಸಾರಣೀ . . . ಭದ್ರಬಲಾ - ೫ ಕಿರಿಯ ಹಸಾರಣೇಗಿಡ, ಸಾರಣೇಗಿಡ" (ಸಿದ್ಧಾಂತಿ. ೧೪೭). [ಸಂ. ಸಾರಣೀ]

ಸಾರಣಿ$_3$, ಸಾರಿಣಿ$_2$ (ನಾ). ಒಂಟೆ. ಸಾರಿಣಿ$_2$: 'ಸಾರಿಣಿಸವಾರ' ಪರಾ.

ಸಾರಣೀಸವಾರ = ಒಂಟೆಯನ್ನು ನಡೆಸುವವನು; ಒಂಟೆಸವಾರ: ರಹಸ್ಯವಾಗಿ ತಮ್ಮ ಹೆಸರಿನಿಂದ ಟೀಪೂಸುಲ್ತಾನನ ಬಳಿಗೆ ಜಾಗತ್ರೆಯಾಗಿ ಬರುವಂತೆ ಅರ್ಜಿಯನ್ನು ಬರೆದು ಸಾರಣೀಸವಾರನ ಸಂಗಡ ಕಳುಹಿಸಿಕೊಟ್ಟು (ಮಹಾವಂ. ೧. ೨೩೨). 'ಸಾಂಡಣಿ' ಪರಾ. [← ಮರಾ. ಸಾಂಡಣೀ; ಹಿಂ. ಸಾಂಡನೀ]

ಸಾರಣಿಅರಿವೆ (ನಾ). ಸಾರಣೆಗೆ ಉಪಯೋಗಿಸುವ ಬಟ್ಟೆ; ಸಾರಿಸುವ ಬಟ್ಟೆ: ಸಾರಣಿಅರಿವೆಗಿಂತ ಸ್ವಾರಸ್ಯವಿಲ್ಲದಲೆ ಸಾರದುರಿತಪ್ರಸಾರವನು ಉಂಡೆ (ವಿಸಾಸು. ೩೦-೧). [ಸಾರಣಿ$_1$ (< ಸಾರವಣೆ) + ಅರಿವೆ (< ಅಱುವೆ)]

ಸಾರಣಿಗೆ, ಸಾಣಿಗೆ$_2$ (ನಾ). ಜರಡಿ; ಒಂದರಿ: "ಚಾಳನಿ ರಂಧ್ರಿ ಸಾರಣಿಗೆ" (ಮಂಗರಾ. ೬೨-೨೧); ಸಾರಣಿಗೆಯಂತೆ ರಸ ಬಿಟ್ಟು ಕಸ ಎತ್ತಿಹಿಡಿಯುವ ಮಹಾಪುರುಷರ ಬಗ್ಗೆ ರನ್ನನು ವಿಷಾದಿಸುವನು (ಸಾಹಿವಿ. ೭೧). ಸಾಣಿಗೆ$_2$: ತಮಗೆ ಬೇಕಾದಾಗ ಹಿಟ್ಟು ಜಲ್ಲಿಸುವ ಸಾಣಿಗೆಯಲ್ಲಿ ಹಾಕಿ ಜಲ್ಲಿಸಿದರೆ . . . ಖಂಡಗಗಟ್ಟಲೆ ಧಾನ್ಯವನ್ನಾದರೂ ಕಡೆಗೆ ಮಾಡಿಕೊಳ್ಳಬಹುದು (ಕೃಷಿಪ್ರ. ೬೯); ಇವರು ಚಾಪಿ, ಬುಟ್ಟಿ, ಮೊರ, ಸಾಣಿಗೆ ಮುಂತಾದ ಬಿದಿರಿನ ಒಡವೆಗಳನ್ನು ಮಾಡಿ ಮಾರುತ್ತಾರೆ (ಕಭಾಗೆ. ೪೫೩).

[ಸಾರಣೆ$_2$ + - ಇಗೆ$_0$]

ಸಾರಣೆ$_1$ (ನಾ). ಪ್ರಕಟಪಡಿಸುವಿಕೆ; ಘೋಷಿಸುವಿಕೆ: 'ಸಾರಣೆಗರೆ' ಪರಾ.

[ಸಾರು$_2$ (< ಸಾಱು$_1$) + - ಅಣೆ$_4$]

ಸಾರಣೆ$_2$ (ನಾ). ಒಂದರಿ; ಜರಡಿ: ಸಾರಣೆಯಂತಿರೆ ಕಸಮಂ ಪಿಡಿವರ್ ಕೆಲರ್ ಮಹಾಪುರುಷರ್ಕಳ್ (ಅಜಿಪು. ೧-೯೧); ನಿನ್ನ ಬಾಲದೊಳೊಂದು ತೂತಿಹುದೆಂದಂತೆ ಸಾರಣೆ ಸೂಜಿಯ ಕುರಿತು (ಇಂಚಾಪ. ೧೧೨-೪೮).

[ದೇ. ॥ ತುಳು. ಸಾರಣೆ. / ಸಂ. ಚಾಲನೀ]

ಸಾರಣೆ$_3$ (ನಾ). ೧. [ಸಂಗೀತ] ಷಡ್ಜಸ್ವರದ ಧ್ವನಿ, — ನಾದ: ಸಾರಣೆ ಮಾಣ್ದ ವೀಣೆಯವೊಲಾದುದು ಸಂದಣಿ ಪಿಂಗೆ (ಅನಂಪು. ೫-೮೮). ೨. ವೀಣೆ, ತಂಬೂರಿ ಮುಂತಾದ ತಂತೀವಾದ್ಯಗಳಲ್ಲಿರುವ ಷಡ್ಜಸ್ವರದ ತಂತಿ: ಸಾರಣೆಯ ತಂತಿಗಿಂತ ದಪ್ಪವಾಗಿರುವ ಮಂದ್ರ, ಪಂಚಮದ ತಂತಿಯ ಸ್ಥಾಯಿಯು ಕಡಿಮೆಯಾಗಿರುವುದೂ ಇದರಿಂದ ಅರ್ಥವಾಗುತ್ತದೆ (ಭೌತವಿ. ೧೪೨); ಬಲದಿಂದ ಎಡಕ್ಕೆ ನಾಲ್ಕುತಂತಿಗಳು ಕ್ರಮವಾಗಿ ಪಂಚಮ, ಸಾರಣೆ, ಅನುಸಾರಣೆ ಮತ್ತು ಮಂದ್ರ ಎಂದು ಕರೆಯಲ್ಪಟ್ಟಿದೆ (ಸಂಗೀಚಂ. ೧೧೧). 'ಅನುಸಾರಿಣಿ' ಪರಾ. [ಸಂ. ಸಾರಣಾ]

ಸಾರಣೆ$_4$ (ನಾ). ೧. ಒಂದು ಬಗೆಯ ಸುಗಂಧದ್ರವ್ಯ. ೨. ಸುಗಂಧದ್ರವ್ಯಗಳ ಲೇಪನ: ಮಕರಕೇತನನ ಕೇತಕಿಯಲಗಂ ಪರಾಗದ ಸಾರಣೆಯೊಳ್ ಪರಿಮಳದ ಹೊಗರೆತ್ತುವಳಿಕುಂತಳೆಯರಿಂ (ಗಿರಿಕ. ೭-೧೧ ವ); ಅವರ ದೇಹಾಂಗಗಳಿಗೆ, ಕರ್ಪೂರ . . . ಜವ್ವಾಜಿಗಳ ಸಾರಣೆಯನ್ನು ಲಘುವಾಗಿ ಲೇಪಿಸಿದರು (ಶಾಂತಲಾ. ೧೦೪). ೩. ಕಸ್ತೂರಿ, ಚಂದನ ಮುಂತಾದ ಸುಗಂಧದ್ರವ್ಯಗಳಿಂದ ಅಥವಾ ಗೋಮಯದಿಂದ ನೆಲವನ್ನು ಸಾರಿಸುವುದು, — ಬಳಿಯುವುದು: ಮಾಂಸದ ಭಿತ್ತಿಗೆ ರಸದ ಹೂಸಣೆ ಸುಖದ ನೆಲಗಟ್ಟು ರಕ್ತದ ಸಾರಣೆ ಮಜ್ಜೆಯ ಕಾರಣೆ (ಆದವ. ೧೫-೩೩); ಪುರವೀಥಿಯಲಿ ಪ್ರಕಟವಾಗಿರಲಾರ್ದ್ರಕಸ್ತೂರಿಕೆಯ ಸಾರಣೆಯಿಂದ ನವಮೌಕ್ತಿಕಫಲಾವಳಿ ರಂಗವಾಲಿಗಳಭಿನವಿಸುತಿರಲು (ಬಸಪು. ೪-೩); ಕೆದಱಿದರಲು ಮೌಕ್ತಿಕರಂಗವಲಿ ಮಿಗಮದದ ಸಾರಣೆಯ ಕುಂಕುಮದಿ ಹುದುಗಿದ ಗಂಧವ ಕಾರಣೆ ಪನಿನೀರೊಳೊದವಿದ ಚಳಯಮೊಪ್ಪಿದುದು (ವರ್ಧಚ. ೫-೪೩). ೪. ನಯಗಾರೆ ಹಾಕುವುದು; ಗಿಲಾವು ಮಾಡುವುದು: ಅವರ ಮನೆ, ಬಚ್ಚಲು ಪ್ರತಿಯೊಂದು ನಿರ್ಮಾಣವಾಯಿತು. ಸಾರಣೆ ಮುಗಿಯಿತು (ಜಾರುದಾ. ೨೨೪); ಸಾರಣೆಗೆಂದು ತಂದುಹಾಕಿದ್ದ ಮರಳುಗುಡ್ಡೆ ಇತ್ತು (ಕಪಪು. ೫-೭೦).

ಸಾರಣೆಕಾರಣೆ = ನೆಲವನ್ನು ಸಾರಿಸುವುದು ಹಾಗೂ ಗೋಡೆಯ ಕೆಳಭಾಗದಲ್ಲಿ ಬಣ್ಣದ ಗೆರೆ ಬಳಿಯುವುದು: ರಕ್ತಚಂದನದಲ್ಲಿ ಸಾರಣೆಕಾರಣೆ ರಕ್ತಚಂದ್ರಿಕೆಯ ಮೇಲ್ಗಟ್ಟು ರಕ್ತ ವರ್ಣದ ಪುಷ್ಪಮಾಲೆಯಿಂದಾ ಶಾಲೆ ಯುಕ್ತಿಗೊಪ್ಪಿತು ಸಂಜೆಯಾಯ್ತು (ಭರಚ. ೨೦-೧೨೬); ಮನೆಯನ್ನೆಲ್ಲಾ ಸಾರಣೆಕಾರಣೆಗಳಿಂದ ಶೃಂಗಾರಗೊಳಿಸಿದ್ದರು (ಅಲ್ಪವಿ. ೬೩). [ಸಂ. ಸಾರಣ]

ಸಾರಣೆಗರೆ (ಕ್ರಿ). ಡಂಗುರಸಾರು; ಘೋಷಿಸು: ವನಕೈತರಲಿ ನೃಪವರರೆಂದು ಸಾರಣೆಗರೆದರವನಾಪ್ತಿಗರು (ಜಿನಭಾ. ೧೯-೧). [ಸಾರಣೆ$_1$ + ಕರೆ$_1$]

ಸಾರಣೆಗೆಯ್ (ಕ್ರಿ). ಸುಗಂಧದ್ರವ್ಯಗಳಿಂದ ಅಥವಾ ಗೋಮಯದಿಂದ ನೆಲವನ್ನು ಸಾರಿಸು: ಚಮರೀರಾಜಿ ರಜಂಗಳಂ ಕಳೆಗುಮುದ್ಯದ್ದಂತಿ ನೀರಿಟ್ಟು ಸಂಭ್ರಮದಿಂ ಸಾರಣೆಗೆಯ್ವುದಲ್ಲಿ ಪವನಂ ಪೂದೂಳಿಯಿಂ ರಂಗಮಂ ಕ್ರಮದಿಂ ಮಾಳ್ಪುದು (ಶಬಶಂ. ೨-೭೨); ಕೈಯಿಂ ಕತ್ತುರಿಸಾರಣೆಗೆಯ್ದನೀಶಪೂಜಾಸ್ಥಹದೊಳ್ (ಭೈರಪು. ೧೭-೪೪). [ಸಾರಣೆ$_4$ + ಕೆಯ್$_1$]

ಸಾರಣೆಗೆಲಸ (ನಾ). ಸುಗಂಧದ್ರವ್ಯಗಳಿಂದ ಸಾರಿಸುವುದು ,— ಶುದ್ಧಿಗೊಳಿಸುವುದು: ಪೊಳಿವ ಪನ್ನೀರ್ಗಳೆಯದಿಂದುಜ್ವಲಿಪ ವ್ಯಗವದದೆಸವ ಸಾರಣೆಗೆಲಸದಿಂ . . . ಪುರವೀಧಿ ರಂಜಿಸಿತು (ಕಾವೇಮ. ೧-೪೫). [ಸಾರಣೆ + ಕೆಲಸ]

ಸಾರಣೆದೆಗೆ (ಕ್ರಿ). ಸಾರಣೆಯನ್ನು ಮಾಡು; ಸಾರಿಸು : ವರಕುಂಕುಮಸಾರಣೆದೆಗೆಯುತ ಮುತ್ತ ಪರಪಿ ರಂಗವಲಿಯನಿಕ್ಕಿ (ಗೊಮ್ಮಟ. ೩-೭). [ಸಾರಣೆ + ತೆಗೆ]

ಸಾರತ (ನಾ). ವಿಷಯಾಸಕ್ತಿ ; ವಿಷಯಾಭಿಲಾಷೆ (?): ಸಾರತ ಸವೆದು ಆರತವಳಿದು ಸಾಕಾರ ಸನ್ಮೂರ್ತಿಯ ಸಂವಿತ್ತು ಸಂಸುಖವಾಗಿ ಸಾನಂದವೇದ್ಯವಾದ ಮಹಾಮಹಿಮರ ತೋಲಿಸಯ್ಯ ಎನಗೆ (ಅದಪ. ೧೭-೪೧). [ಸಂ.]

ಸಾರತಪ (ನಾ). ಶ್ರೇಷ್ಠವಾದ ತಪಸ್ಸು : ಪರಮಾಳೋಚನದೊಳ್ . . . ನಿಬಡಕಾರ್ಯೋತ್ಸರ್ಗದೊಳ್ ಶುದ್ಧಿ ತಳ್ಪರೆ ದೋಷಪ್ರತಿಕಾರಸಾರತಪಮಂ ತತ್ಕಾಪಸಂ ತಾಳ್ದಿದಂ (ಸುಕುಮಾ. ೪-೧೫). [ಸಂ.]

ಸಾರತಿಗೆಯ್ಮೆ (ನಾ). ರಥವನ್ನು ನಡೆಸುವುದು; ಸಾರಥ್ಯ: ಸಾಧ್ವೀ ನಳ ನಳಕೂಬರ ಮಾತಲಿಗಳಂ ಸಾಟಗೈಯದ ಸಾರತಿಗೆಯ್ಮೆಯೊಂದುಜಾಣ್ಮೆಯಿಂ ಸೂಟಿಯಿಂ ನೂಂಕೆ ಪಾಲ್ ನಾಡಿಂ ನಾಡಿಂಗೆ ಧೀಂಕಿಟ್ಟುನೋ ಎನೆ ಪವನಜವಮಂ ಮುಂಚ ವಾಜಿಗಳೋಟುಂಗೊಂಡುವು (ರಾಮಾಶ್ವ. ೨೯-೩೦). [ಸಾರತಿ + ಗೆಯ್ಮೆ (< ಕೈಮೆ)]

ಸಾರಥಿ (ನಾ). ರಥವನ್ನು ನಡೆಸುವವನು; ಸೂತ : ಸಾರಥಿಯಪ್ಪೊಡಪ್ಪನೆನಗೀತನೆ (ಪಂಪಭಾ. ೮-೯೮) ; ಬಲುಹು ಸಾರಥಿಯಿಂದ ರಿಪುಗಳ ಗೆಲವು ಸಾರಥಿಯಿಂದ ಸಾರಥಿಯೊಲಿದಡೇನೇನಾಗದು (ಕುವ್ಯಾಕ. ೫-೬).

ಸಾರಥಿಮಾಡು = ಸಾರಥಿಯನ್ನಾಗಿ ನಿಯಮಿಸು: ಸಾರಥಿಮಾಡು [ಪಾಠಾಂ. ಡ]ಮಾತ್ಸ್ಯಸುತನುತ್ತರನಂ[ತದ]ರಾತಿಸ್ಯನ್ಯಕೂಪಾರದ ಪಾರಮಂ ತಡೆಯದೆಯ್ದುವೆನೆಂಬುದುಂ (ಪಂಪಭಾ. ೮-೯೭). [ಸಂ.]

ಸಾರಥಿತನ (ನಾ). ರಥವನ್ನು ನಡೆಸುವುದು; ಸಾರಥ್ಯ : ಧನುವನಿಕ್ಕಡಿಗಳೆದು ರಿಪುಸೂತನ ಶಿರವ ಹರಿಯೆಸಲು ಸಾರಥಿತನವ ತಾನೇ ಮಾಡುತಿದಿರಾದನು ಕೃಪಾಣದಲಿ (ಕುವ್ಯಾದ್ರೋ. ೧೩-೪೪); ವ್ಯಥಿಸಿದಂ ಗಾಯದಿಂ ಸೂತನಳಿಯಲ್ಕೆ ಸಾರಥಿತನವನುಂ ತಾನೆ ಮಾಡುತಿದಿರಾದನತಿರಥ'ರೊಳಗ್ಗಳೆಯನರ್ಜುನನಾ ಸುಧನ್ವಂಗೆ (ಚೈಮಭಾ. ೧೩-೨೧). [ಸಾರಥಿ + - ತನ]

ಸಾರಥ್ಯ (ನಾ). ೧. = ಸಾರಥಿತನ : ಕೌರವನ್ಯಪತಿ ಶಲ್ಯಗೆ ಹೇಳಿದನು ಸಾರಥ್ಯ ಸಂಯೋಜನಸವಾಹಿತವ (ಕುವ್ಯಾಕ. ೬-೧); ದಿವ್ಯರಥ'ಹಯಚಾಪಶರಕೇತು ಕಂಬುಗಳ್ವಸಾಚಿತ್ರಮಿವು ನಿನಗೊದಗಿದವು ರಣದೊಳವ್ಯಯಂ ಸಾರಥ್ಯಮಂ ಮಾಡಲಿನ್ನು ಜಯಮಹುದೆ ಹುಲುಸೂತನಿಂದೆ (ಚೈಮಭಾ. ೧೩-೯). ೨. (ಆಲಂ) ಮುಂದಾಳುತನ ; ನೇತೃತ್ವ : ಅವರ ಸಾರಥ್ಯದಲ್ಲಿ ಅಂದಿನ ಸಮಾರಂಭವು ಯಶಸ್ವಿಯಾಗಿ ನಡೆಯಿತು (ರೂಢಿ). [ಸಂ.]

ಸಾರದ (ನಾ). ೧. ನಾಚುವ ಸ್ವಭಾವ ; ಸಂಕೋಚಪ್ರಕೃತಿ : "ಸಾರದ(ಮೆ)ನಿಱು ಮಧ್ಯಸ್ಥಂ" (ಪಪ್ರಕೋ. ೧೨೬-೫೨). ೨. ಪರಿಶುದ್ಧವಾದುದು; ಪವಿತ್ರವಾದುದು. ೩. ಮುನಿಯ ಸಿದ್ಧಾಂತ ,— ತತ್ವ : "ಸಾರದಮಕ್ಕುಂ ವಿಶುದ್ಧಮುಂ ಮುನಿಮತಮುಂ" (ಪಪ್ರಕೋ. ೧೨೬-೫೨). [< ಸಂ. ಶಾರದ]

ಸಾರದಾರು (ನಾ). ಗಟ್ಟಿಯಾದ ಮರದ ತೊಲೆ ,— ದಿಮ್ಮಿ : ದಿವ್ಯಶಕ್ತಿ ಪ್ರಭಾವದಿಂದ ಮಾನುಷಾರಣ್ಯಂಗಳ ಮಹಾದ್ರುಮಂಗಳಂ ತರಿಸಿ ನಡಿಸಿ ನಟ್ಟು ಕಂಭಂಗಳ ಮೇಗೆ ಸಾರದಾರು[ಪಾಠಾಂ. ದರಂ]ಗಳನೆಡಗಿಜಿಂದಿರೆ ಪಾಸಿ ಪಸರಿಸಿ ಪಡೆಗೆ ನಡೆಯಲಿಂಬುಮಾಡಿದಾಗಳ್ (ಆದಿಪು. ೧೩-೫೨ ವ). [ಸಂ.]

ಸಾರದೆ (ನಾ). ಸರಸ್ವತಿ ; ಶಾರದೆ : "ನುಡಿವೆಣ್ . . . ಸಾರದೆ, ಸರಸತಿ - ಈ ೬ ಸರಸ್ವತಿಗೆ ಪೆಸರ್" (ಕಶಸಾ. ೪೮-೧೬೨). [< ಸಂ. ಶಾರದಾ]

ಸಾರದೆಯಾಳ್ಕ (ನಾ). ಸರಸ್ವತಿಯ ಗಂಡ; ಬ್ರಹ್ಮ : "ಬದಿಯಲರಿಚಂ ಬೇದಬಿಜ್ಜೆಗಂ ಬೊಮ್ಮ ಸಾರದೆಯಾಳ್ಕ[ಪಾಠಾಂ. ಣ್ಕ] ನಾಲ್ಮೊಗಂ . . . ಬ್ರಹ್ಮಗೆ ಒದವಿರ್ವ ನಾಮ" (ಶಬ್ದಮಂ. ೯). [ಸಾರದೆ + ಆಳ್ಕ]

ಸಾರಧನ (ನಾ). ಶ್ರೇಷ್ಠವಾದ ಸಂಪತ್ತು ,— ಐಶ್ವರ್ಯ : ಸೋದರಮಾವಂ ಭದ್ರಮಿತ್ರನಲ್ಲಿ ಮೊದಲ್ಗೊಂಡು ಸ್ಥಳಯಾತ್ರೆಗೆ ಪೋಗಿ ಸಂಪ್ರಾತೀತಸಾರಧನಮಂ ಪಡೆದು ಬರ್ಪೆಡೆಯೊಳ್ (ಶಾಂತಿಪು. ೯-೯೦ ವ). [ಸಂ.]

ಸಾರಧಾತುಜ್ಞ (ನಾ). ಚಿನ್ನ ಮೊದಲಾದ ಶ್ರೇಷ್ಠವಾದ ಖನಿಜಗಳ ಪರೀಕ್ಷೆಯಲ್ಲಿ ನಿಪುಣನಾದವನು: ಧಾತುಜ್ಞರ್ ಸಂತತತನುಧಾತುಜ್ಞರ್ ಭೂರಿಸಾರಧಾತುಜ್ಞರ್ ಸದ್ಧಾತುಜ್ಞರ್ ನೆರೆದಿರ್ದರ್ ಕೌತುಕ ಹಮ್ಮೀರವೀರರಾಜನ ಸಭೆಯೊಳ್ (ಹಮ್ಮೀರ. ೨-೧೧೩). [ಸಂ.]

ಸಾರಪೊಪ್ಪಳಿ (ನಾ). ಶ್ರೇಷ್ಠವಾದ ಪೊಪ್ಪಳಿ ಸೀರೆ: ಚಾರುವಸನ ಪೊಂಬಟ್ಟೆ ಬಿಳಿಯ ವಸ್ತ್ರ ಸಾರಪೊಪ್ಪಳಿ ಮೊದಲಾದ ಸೀರೆಸಹಿತ ಸ್ನಾನವ ಮಾಳ್ಪ ವಿಪ್ರರ ನಾರಿಯರೆಸೆದರಿತ್ತಟೆ (ಹಂಸಮ. ೫-೫೧). [ಸಾರ್ + ಪೊಪ್ಪಳಿ]

ಸಾರಪ್ರಭೆ (ನಾ). ಶ್ರೇಷ್ಠವಾದ ಕಾಂತಿ; ಉಜ್ವಲವಾದ ಬೆಳಕು: ಸಾರಪ್ರಭೆ ಮಸುಳ್ದುದೊ ಪೇಳ್ದೀರಾಜನವೋದೆದಪ್ಪಿ ಮನಮಿತ್ತೆಯೊ ಪೇಳೋರಂತೆ ಗಡಣಿಸಿರ್ದುಪಹಾರಕ್ಕಿರಿಟ್ಟು ಸೊಡರ ಕಳೆ ಕುಂದಿದುದೋ (ಪೃಷ. ೬೨-೧೫). [ಸಂ. ಸಾರಪ್ರಭಾ]

ಸಾರಬೀದಿ (ನಾ). ಸಂಪದ್ಭರಿತವಾದ ಬೀದಿ: ಬಸದಿವರೆಗಂ [ದ್ರು]ಮ್ಮಮುಂ ಪೊನ್ನುಂ ಸಾರಬೀದಿಯಾಗಿಲಿಗೆತೆಯುಮುಗುತ್ತಂ[ಪಾಠಾಂ. ತುಡುಗೆಗಳುಂ ಮುತ್ತುಂ] ಪೋದುವೆಂದು ಪೇಳ್ದೊಡೆ (ವರ್ಧಾರಾ. ೧೭೭-೧೧); "ಸಾರಬೀದಿಯಾಗಿಯುಂ- ಬೀದಿಯುದ್ದಕ್ಕೂ, ಕಟ್ಟೆ ಕಟ್ಟಿದ ಹಾಗೆ (?)" (ವರ್ಧಾರಾ. ೩೭೭ ಟಿಪ್ಪಣಿ). [ಸಾರ್ + ಬೀದಿ]

ಸಾರಭೂತ (ನಾ). ೧. ಅತ್ಯುತ್ಕೃಷ್ಟವಾದುದು; ಶ್ರೇಷ್ಠವಾದುದು: ವೇದದ ಸಾರಭೂತವಾದ ಒಂದು ಭಾಗವು ಪುರುಷಸೂಕ್ತ (ನಕ್ಷತ್ರ ೧). ೨. ಶ್ರೇಷ್ಠನಾದವನು; ಉತ್ತಮ ವ್ಯಕ್ತಿ: ಸಾರಭೂತರಲೇ ಸಮಸ್ತವಿಕಾರಿಗಳೊಳೀ ವಿಶ್ವನೃಪ ಸಂಹಾರ ರಿಬ್ಬರ ಬೀಯವನು ಮೇಲಿನ್ನು ಕೇಳು (ಕುವ್ಯಾಕ. ೧೫-೨೬). [ಸಂ.]

ಸಾರಮಣಿ (ನಾ). ಶ್ರೇಷ್ಠವಾದ ಮಣಿ; ಅನರ್ಘ್ಯರತ್ನ: ಸಾರಮಣಿ ಪ್ರಸಾನು ವಿಜಯಾರ್ಧಮಹೀಧರಗೋಮಿನೀಮುಖಾಕಾರಮಂ . . . ಗುಹಾದ್ವಾರಮನೆಯ್ದುದತ್ತು ಪಡೆ (ಪಾರ್ಶ್ವಪು. ೧೧-೫೫). [ಸಂ.]

ಸಾರಮತಿ$_1$ (ನಾ). [ಸಂಗೀತ] ಒಂದು ರಾಗದ ಹೆಸರು: ದೇವಗಾಂಧಾರಿ ಕೀರ್ತನೆ ಮುಗಿಸಿ ಪಿಳ್ಳಪ್ಪ ಸಾರಮತಿಯ ಕೀರ್ತನೆ ಆರಂಭಿಸಿದ್ದ (ಅಪಾಸಾ. ೩೬). [ಸಂ. ಸಾರಮತೀ]

ಸಾರಮತಿ$_2$ (ನಾ). ಒಳ್ಳೆಯ ಬುದ್ಧಿ; ಸದ್ಭಾವನೆ: ಮುನಿಕುಲಾದ್ಯರು ಸಾರಮತಿಯಲಿ ತಮ್ಮ ತಮ್ಮಯ ಪೆಸರೊಳೊಂದೊಂದು ಚಾರುತಿವಲಿಂಗಂಗಳಂ ಸಲೆ . . . ಪ್ರತಿಷ್ಠಿಸಿ (ಬಸಪು. ೫೪-೬೫). [ಸಂ.]

ಸಾರಮಹಿಮಾಕರ (ನಾ). ಅತಿಶಯವಾದ ಮಹಿಮೆಯುಳ್ಳವನು: ಗಿರಿಸುತಾಕಾಂತನಂ ಪರಿಹೃತಕೃತಾಂತನಂ ಸಾರಮಹಿಮಾಕರಂ ವೈರಿಜನಭೀಕರಂ ಭಾಜಿತ ದಿನಾಧಿಪಂ ರಾಜಿತಜನಾಧಿಪಂ ರಾಜಿಸುತೆ ನಲ್ಮೆಯಿಂ ಪೂಜಿಸಿದನೊಲ್ಮೆಯಿಂ (ರಾಜಶೇ. ೧೩-೫೧ ರಗಳೆ). [ಸಂ.]

ಸಾರಮಾರಿ (ನಾ). ಹಿಂದಿನ ಕಾಲದಲ್ಲಿ ಯುದ್ಧ ಸಮಯದಲ್ಲಿ ಕೋಟೆಯನ್ನು ಹತ್ತಲು ಬಳಸುತ್ತಿದ್ದ 'ಸಾರ' ಎಂಬ ಸಾಧನವನ್ನು ನಾಶಮಾಡುತ್ತಿದ್ದ ಒಂದು ಬಗೆಯ ಸಾಧನ: ಕಣೆಯ ಕಲ್ಲೊರಲೆ ಡೆಂಕಣಿಯಾಗೆಯುಂ ಸಾರಮಾರಿಯ ಪೊಯ್ಲೊರಣಿಕೆಗೆಡೆಯುಂ . . . ವೀರಭಟಕುಣಪಗಳಿಂ ಪೆಣ್ದ ಪೆರ್ಮೆಟ್ಟೆಯಂ ಕಹಿವ ವಿಳಯಜಳಧರದೊಡ್ಡಿನಂತೆ ದೊಡ್ಡಿಗೊಂಡಿರ್ದುದು (ಅನಂಪು. ೧೧-೬೪ ವ) ; ಪಲವು ತೆಜದ ಸಾರಮಾರಿ ಬದ್ದರ ನೆಲಗುಮ್ಮ ಹಾರೆ ಸಬಳಗಳ ಸಾಲಿಂದ ಘೋರಾಕಾರಮಾಯ್ತಾ ಕೋಂಟೆ ಕಣ್ಗೆ (ಚಂಪ್ರಶಾಂ. ೮-೯). [ಸಾರ$_1$ + ಮಾರಿ]

ಸಾರಮೇಯ (ನಾ). ೧. ನಾಯಿ; ಶ್ವಾನ: ಸಮಾಧಿಗುಪ್ತರೆಂಬ ಯತಿಪತಿಗಳಧ್ಯಯನಂ ನಿನಗನಿಷ್ಟಮಪ್ಪುದಱಿನಧ್ಯನಾಂತರಾಯಮಂ ಮಾಡಲೆಂದವರೋದುವಾವಾಸದೊಳ್ ಸಂಕ್ಲೇಶಮಾಗೆ ಸಾರಮೇಯಪೂತಿಕಳೇವರಮನಿಕ್ಕಿದೊಡೆ (ಆದಿಪು. ೬-೬೮ ವ);

ಸಿದ್ದೇಶ್ವರಂ ತನ್ನ ಪದಪಂಕಜದ ಮೇಗೆ ಹೊರಳುವ ಸಾರಮೇಯನಿರವಿಂಗೆ ಬೆಱಗಾಗಿ ನುಡಿಸಿದೊಡೆ (ಸಿದ್ಧರಾ. ೭-೪೭). ೨. ಸಾಹಸ; ಪರಾಕ್ರಮ. ೧, ೨: ಪರಮಶ್ಲಾಘ್ಯಗುಣಂ ಸದಾಮದಹಿತಂ ಶೌರ್ಯೋತ್ತರಂ ಗಂಧಬಂಧುರನೆಂದುಂ ನರಸಾರಮೇಯನಬಳಾಪ್ರೇಮಾಸ್ಪದೋದ್ಯದ್ವನೇಚರನೇತ್ರಾಸ್ಯಂ . . . ಈತಂ ನಸುಪಿಂಗೆ ಬರ್ಕುಮೆನಗೀಗಳ್ ಪಾರವಶ್ಯಂ ಸಖೀ (ರಾಜಶೇ. ೧೧-೧೭೫). [ಸಂ.]

ಸಾರಮೇಯಶಿಶು (ನಾ). ನಾಯಿಯ ಮರಿ: ಅಂತಾ ಯತಿನಾಯಕನೊಂದು ಸಾರಮೇಯಶಿಶುವಂ ಕಂಡು ಪ್ರೀತಿವಟ್ಟು ನಡಪುತ್ತಿರ್ಪುದುಂ (ಪಂಚತಂ. ೨೬೦-೧೮). [ಸಂ.]

ಸಾರರಸ (ನಾ). ತುಪ್ಪ, ಹಾಲು, ಜೇನು, ಮೊಸರು ಮುಂತಾದ ಶ್ರೇಷ್ಠವಾದ ದ್ರವವಸ್ತು: ಸಾರರಸವೆಂದರೆ ಪರಮಾತ್ಮನು ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧದಜೀವರನ್ನು ಸೃಷ್ಟಿಸಿ, ಅವರುಗಳು ಭೋಗಿಸುವುದಕ್ಕಾಗಿ ಸಾತ್ವಿಕ, ರಾಜಸ, ತಾಮಸ ಪದಾರ್ಥಗಳನ್ನು ಸೃಷ್ಟಿಸಿರುವನು (ಹಸಾರ. ೧೩-೨೭ ಶಾಸ್ತ್ರರ್ಯ). [ಸಂ.]

ಸಾರವಣೆ, ಸಾರಣ್ಣಿ, ಸಾರಳಿ (ನಾ). ೧. ಸುಗಂಧವಸ್ತುಗಳಿಂದ ಅಥವಾ ಗೋಮಯದಿಂದ ನೆಲವನ್ನು ಸಾರಿಸುವಿಕೆ: ಯಕ್ಷಕರ್ದಮದ ಸಾರವಣೆ [ಪಾಠಾಂ. ಸಾರಣೆ]ಯಿಂ ಬಿಡುಮುತ್ತಿನ ರಂಗವಲಿಯಿಂ . . . ದಿವ್ಯಶಯನಗೃಹದ ವೈಡೂರ್ಯ ಪರ್ಯಂಕದೊಳ್ ಪವಡಿಸಿರ್ದು (ಅಜಿಪು. ೩-೧೧ ವ); ಸಾರವಣೆ ಮಳಯಜಂ ಕರ್ಪೂರರಜಂ ರಂಗವಲ್ಲಿ ಸಲೆ ಪೊಂದಳಿರ್ಗಳ್ ತೋರಣಮೆನೆ ಕರಮೆಸೆವುವು ವಾರಾಂಗನೆಯರ ನಿವಾಸದೊಳಗುಂ ಪೊಱಗುಂ (ಸುಕುಮಾ. ೯-೬೧); ಸಿರಿಕಂಡದ ಕೋಟ್ಕೆಸಱೊಳ್ ಬೆರಸಿದ ಕತ್ತುರಿಯ ಸಾರವಣೆ ಬೆಳಗಿದ ಕಪ್ಪುರವಳಿಕಿನ ಸೊಡರ್ಗಳ್ ಸುಂದರಮೆನೆ ಜಿನಪತಿಯನವನಿಪತಿ ಪೂಜಿಸಿದಂ (ಪಂರಾಮಾ. ೧೨-೩). **ಸಾರಣ್ಣಿ**: ೧. 'ಸಾರಣಿಅರಿವೆ' ಪರಾ. ೨. ಲೇಪನ; ಗಿಲಾವು: ಸುಣ್ಣ ಮುಂತಾದ ಸಾರಣಿ ಇಲ್ಲದ್ದರಿಂದ ಅವು ಹಾಳುಗೋಡೆಗಳ ಹಾಗೆ ಕಾಣಿಸುವುವು (ಕಭಾಗ. ೭). **ಸಾರಳಿ** : ೧. ಮೃಗಮದದ ಸಾರಳಿಯ ಕುಂಕುಮದೊಗುಮಿಗೆಯ ಕಾರಳಿಯ ಪೊಸಮುತ್ತುಗಳ ನಾನಾಬಗೆಯ ಚಿತ್ರದ ರಂಗವಲ್ಲಿಗಳ . . . ಪಚ್ಚೆಯ ತೋರಣಗಳೋರಣವ ಪಸರಿಪವು (ಆನಂರಾ. ೧-೩-೨೮).

[< ಪ್ರಾ. ಸಾರವಣ. / ಸಂ. ಸಾರಣ./ ತುಳು. ಸಾರಣೆ, ಸಾರಳಿ. / ಮರಾ. ಸಾರವಣ]

ಸಾರವತಿ (ನಾ). ಒಂದು ಬಗೆಯ ಸಸ್ಯ: "ಹಾಡಗಂ ಸಾರವತಿಯಕ್ಕು" (ಮಂಗರಾ. ೪೦ ೩೨) [ಸಂ. ಸಾರವತೀ]

ಸಾರವತ್ತು (ನಾ). ಸತ್ತ್ವದಿಂದ ಕೂಡಿದುದು; ತಿರುಳುಳ್ಳುದು: ಆಗ ನಾನು ಆ ಕಾದಂಬರಿಯ ಸಾರವತ್ತಾದ ಭಾಗವನ್ನು ಓದುತ್ತಿದ್ದೆ (ರೂಢಿ). [ಸಂ. ಸಾರವತ್]

ಸಾರವಸ್ತು (ನಾ). ಉತ್ತಮವಾದ ಪದಾರ್ಥ; ಶ್ರೇಷ್ಠವಾದ ಸಾಮಗ್ರಿ: ಸಾರವಸ್ತುಗಳಿಂ ನೆಱೆದಂಭೋರಾಶಿಯ ಕಾದಿಗೆ ಕಾವನುಂ ಸೀರಪಾಣಿ ವಿಳಾಸದಿನಾಳ್ದಂ ಚಕ್ರಧರಂ (ಪಂಪಭಾ. ೪-೩೨); ಕೌರವನು ತನ್ನರಮನೆಗೆ ಹರಿ ಬಾರದಿರನೆಂದಖಿಳವಿಧದಲಿ ಸಾರವಸ್ತುವ ತರಿಸಿಯಾರೋಗಣೆಗೆ ಮಾಡಿಸಿದ (ಕುವ್ಯಾಲಾ. ೮-೨). [ಸಂ.]

ಸಾರವಾನ (ನಾ). ಒಂಟೆಯ ಮೇಲೆ ಪ್ರಯಾಣಮಾಡುವವನು : ಸಾರವಾನನಿಗೆ ದಯೆ ಹುಟ್ಟಿ . . . ಆ ಬ್ರಾಹ್ಮಣನನ್ನು ಬದುಕಿಸಬೇಕೆಂಬ ಹವಣಿಕೆಯಿಂದ ಒಂಟೆಯನ್ನು ತಂದು ಬಾವಿಯ ದಂಡೆಯ ಮೇಲೆ ನಿಲ್ಲಿಸಿದನು (ಮುಂಬಯಾ. ೪-೧೭೭); ದೊಡ್ಡವರಾದಂತೆ ಸಾರವಾನರಾಗಿ ವ್ಯಾಪಾರ ಉದ್ಯೋಗಗಳನ್ನು ಮಾಡುತ್ತ ಪ್ರಪಂಚವನ್ನು ಸಾಗಿಸತೊಡಗಿದರು (ಹಿಂಮುಸ. ೯).

[← ಪಾರ. ಸಾರ್ಬಾನ್, ಸಾರ್ವಾನ್; ಮರಾ. ಹಿಂ. ಸಾರವಾನ್]

ಸಾರವಿಚಾರ (ನಾ). ಶ್ರೇಷ್ಠವಾದ ವಿವೇಚನೆ: ಸಾರವಿಚಾರಚಂಚುರಮತಿಪ್ರಸರಂ . . . ಸುಜನವತ್ಸಳನೆಲ್ಲಿಯುಮೀತನೆಂದು ಕೈವಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗವರ್ಮನಂ (ವಸ್ತುಕೋ. ೧೧೭-೩೬). [ಸಂ.]

ಸಾರವೀರ (ನಾ). ಶ್ರೇಷ್ಠನಾದ ಪರಾಕ್ರಮಿ,— ಸಾಹಸಿ: ಹಾ ಮದೀಶ ಯಿದೆತ್ತಡಂಗಿದ ಕಿನ್ನರೇಶಾ . . . ಸಾರವೀರಗುಣಾನುರಂಜನ ಕಿನ್ನರೇಶಾ (ವೃಷಮಿ. ೨೪-೭ ರಗಳೆ). [ಸಂ.]

ಸಾರವೆ 'ಸಾರ್ವೆ' ನೋ.

ಸಾರಶಾಸ್ತ್ರ (ನಾ). ಶ್ರೇಷ್ಠವಾದ ವಿದ್ಯೆ; ಉತ್ತಮಮಟ್ಟದ ಶಾಸ್ತ್ರ: ಸಾರಶಾಸ್ತ್ರವನಱಿವ ಕೃಷ್ಣಾಜಿನದ ಕಡೆಗೆ ದಾರವಿಕ್ಕುವ ಕಂದಮೂಲಫಲಮಂ ತಪ್ಪ ಚಾರುಮುನಿಪುತ್ರರ್ಗೆ ವಂದಿಸುತ ಬಂದಿದಿರೊಳೊಂದು ಕೊಳನಂ ಕಂಡಂ (ಹಚಕಾ. ೫-೫೫). [ಸಂ.]

ಸಾರಸ (ಗು). ೧. ಸರೋವರಕ್ಕೆ ಸಂಬಂಧಿಸಿದ. ೨. ಸರೋವರದಲ್ಲಿ ಇರುವ,— ವಾಸಿಸುವ: ವಿರುವತ್ಸಾರಸರಾಜಹಂಸರವದಿಂದೇವಂದಿರ ಬನ್ನಿಮಿಂತಿರಿಮೆಂದಾದರಿಪಂತುಟಾಯ್ತು . . . ಅನಿಲಜಂಗಭ್ಯಾಗತಪ್ರೀತಿಯಿಂ (ಗದಾಯು. ೬-೪೦). (ನಾ). ೩. ಕೊಳ; ಸರೋವರ: ಈ ಸಾರಸವು ನನ್ನದು ನಿನ್ನ ತಮ್ಮದಿರಸುವನೆಳೆದವ ನಾನು ಕೇಳ್ಕೆ ಧರ್ಮಸುತ (ಕುವ್ಯಾಆ. ೨೩-೩೬). ೪. ಬಕ; ಕೊಕ್ಕರೆ: ಸಾರಸಹಂಸಕೋಕಿಳಕುಳಧ್ವಾನೋತ್ಕರಂ ಚೆಲ್ವನಾಯ ಕರಂ . . . ನಂದನಂ (ಪಂಪಭಾ. ೫-೮೦); ಸಾರಸ ರಸವದ್ಧ್ವನಿಯಿಂ ನೀರಜರಜ ಮದಾಳಿಗಳ ಗಳರುತಿಯಿಂ ಸೌರಭರಭಸದಿನದು ಸಂಚಾರಣರಣದೂಮಿ ಪದ್ಮವನವನಮಧ್ಯಂ (ಜಗವಿ. ೧೦-೬೦); ಸಾರಸಂ ಸಲಿಲದೊಳ್ನೆನದ ಪಕ್ಕಂಗಳ ಬಿದಿರ್ಚಿ (ಜೈಮಿಭಾ. ೨೮-೩೬). ೫. ಹಂಸ; ಮರಾಳ. ೬. ತಾವರೆ; ಕಮಲ "ಅರವಿಂದಂ ರಾಜೀವಂ ಸರಸಿರುಹಂ ಸಾರಸಂ ಮಹೋತ್ಪಳಮಬ್ಜಂ . . ಶತಪತ್ರಂ" (ವಸ್ತುಕೋ. ೨೫-೧೯); ಬಂಕಣ್ಣಗಳಾ ರಮ್ಯವಹ ಪೌದಸಾರಸಂಗಳ ನೆನೆಯುತಾ ರಾಣಿ ಶಿವನ ಭಜಿಸಿ (ಭಾವಚಂ. ೯-೪೩). ೭. ಒಂದು ಬಗೆಯ ಗಿಡ; ಬೆಟ್ಟದಾವರೆ: "ಸಾರಸಂ ಬೆಟ್ಟದಾವರೆಯಕ್ಕು" (ಮಂಗರಾ. ೩೫-೧೫). ೮. ಯವ. ೯. ಒಂದು ಬಗೆಯ ಮರ: "ಸಾರಸಮೆನಲ್ಕೆ ಗಾವಟೆ" (ಮಂಗರಾ. ೪೨-೪೧). ೧೦. ಬೆಟ್ಟ; ಪರ್ವತ: "ವಿಕಸಿತಾಂಬುಜದೊಳು ಮರಾಳನೊಳು ಕಾಲನೊಳು ಸಕಲಗಿರಿಯೊಳು ಸಾರಸಾಖ್ಯಮಕ್ಕು" (ಮಂಗರಾ. ೧೫೨-೫೭). ೧೧. ಹತ್ತಿರ; ಸಮೀಪ. ೧೨. ದುರುಳ; ದುಷ್ಟ: "ಬಿಸಜ ವಿಹಂಗ ಧೂರ್ತ ಗಿರಿಗಾವಟ ಮೃತ್ಯು ಸಮೀಪ ಹಂಸ ಸಾರಸಮೆನಿಕ್ಕುಂ" (ನಾನಾರ. ೫೭). ೧೩. ಚಂದ್ರ. [ಸಂ.]

ಸಾರಸಂಗ್ರಹ (ನಾ). ಸತ್ತ್ವಯುತವಾದ ಸಾರಾಂಶ,— ಸಂಗ್ರಹ: ಈ ಬಗೆಯ ಅದರ ಉಪಯೋಗಗಳನ್ನು ಎಲ್ಲಕ್ಕೂ ಮೊದಲು ಸಾರಸಂಗ್ರಹವಾಗಿ ಹೇಳಿದವರೆಂದರ ಸಿ.ಎ. ಕಟರ್ (ಗ್ರಂಥಾಲ. ೩೮). [ಸಂ.]

ಸಾರಸತ್ವ (ನಾ). ಅತಿಶಯವಾದ ಶಕ್ತಿ,— ಬಲ: ಸುಯ್ಲಿನಲಿ ಮುರುಕಿಸುವ ರಿಪುಭಟನನೋರೆಯೊಳೆಱಗಿ ನೋಡುತ ಸಾರಸತ್ವದ ನೆಱವಣಿಗೆ ಕೈಗೂಡಲೆದ್ದನು ಗದೆಯ ಕೈ ನೀಡಿ (ಕುವ್ಯಾಗ. ೭-೩೧). [ಸಂ.]

ಸಾರಸನ (ನಾ). ೧. ಡಾಬು; ಒಡ್ಯಾಣ: ಹಾರಂ ಸಾರಸನಂ ಕೇಯೂರಂ ಕರ್ಣಿಕೆ ವಿಚಿತ್ರಮಣಿಕಟಕಂ ಮಂಜೀರವಮೆನೆ ವಿವಿಧಾಳಂಕಾರಮನವಟಯಿಸಿದಳ್ ಜಿನಾಂಬಿಕೆಗೊರ್ವಳ್ (ವರ್ಧಮಾ. ೧೧-೪೫); ಹಾರಕೇಯೂರ ಸಾರಸನ ನೂಪುರರವಕೆ ಕಿವಿಗೊಟ್ಟು ಬೆರಗಾದುದಾ ಅಯೋಧ್ಯಾವನಂ (ಶ್ರೀರಾಮಾ. ೧೬-೪೨೭). ೨. (ಪುರುಷರ) ನಡುಕಟ್ಟು; ನಡುಪಟ್ಟಿ. [ಸಂ.]

ಸಾರಸನಯನ (ನಾ). ಕಮಲದಂತಹ ಕಣ್ಣುಗಳುಳ್ಳವನು; ವಿಷ್ಣು: ಮಾರಜನಕ ಮಂಜುಳಾಂಗ ಸಾರಸನಯನ ಸಕಲಲೋಕೇಶ್ವರ ಸಾರಿದೆ ಸಲಹೆನ್ನ ನೊಲಿದು (ಅಕ್ಷಸಾಂ. ೬೧-೩). [ಸಂ.]

ಸಾರಸಭವ (ನಾ). ತಾವರೆಯಲ್ಲಿ ಹುಟ್ಟಿದವನು; ಬ್ರಹ್ಮ: 'ಸಾರಸಭವಾಂಡ' ಪರಾ. [ಸಂ.]

ಸಾರಸಭವಾಂಡ (ನಾ). ಬ್ರಹ್ಮನಿಂದ ಸೃಷ್ಟಿಯಾದ ಜಗತ್ತು; ಬ್ರಹ್ಮಾಂಡ : ಸಾರಸಭವಾಂಡಭಿತ್ತಿಯ ವಾರಾವರಣಾಂತರಾಳದೊಳ್ ನೆಲಸಿರ್ಕುಂ ಕಾರಣ ವೈಕುಂಠಾಭಿಧಮಾರಯೆ ತದ್ಯೂಹಲೋಕಮಮಿತಾಲೋಕಂ (ಚಿಡಮಿ. ೫-೧೩೮). [ಸಂ.]

ಸಾರಸರ್ವಸ್ವ (ನಾ). ಸಮಗ್ರವಾದ ತಿರುಳು: ವೇದಗಳ ಸಾರಸರ್ವಸ್ವ ಉಪನಿಷತ್ತುಗಳಾದರೆ ಉಪನಿಷತ್ತುಗಳ ಸಾರಸರ್ವಸ್ವ ಭಗವದ್ಗೀತೆ (ಭಾರದ. ೧೮೯). [ಸಂ.]

ಸಾರಸವಕ್ಕಿ (ನಾ). ಬಕ; ಕೊಕ್ಕರೆ: ಮಱೆದುಂಬಿಗಳು ಕಳಹಂಸೆ ರಥಾಂಗಗಳುರುತರ

ಸಾರಸವಕ್ಕಿ ಮೆಱೆವಾ ಕಮಲಾಕರದ ಸೌಂದರ್ಯದೊಂದಿರವ ನಾನೇನ ಬಣ್ಣಿಸುವೆ (ಕಂನವಿ. ೨೩-೩೨). [< ಸಂ. ಸಾರಸಪಕ್ಷಿನ್]

ಸಾರಸವದನೆ (ನಾ). ತಾವರೆಯಂತೆ ಮುಖವುಳ್ಳವಳು; ಕಮಲಾನನೆ: ಮುಸುಟಿ ಚೌಡಯ್ಯಂಗಳಿಗೆ ವಂದಿಸಿದ ಬಾಲಕಿ . . . ಅಸುಗಳೆದಡಾ ಅಯ್ಯನಂತೀಕ್ಷಿಸುತವಾ ಕ್ಷಣದಲ್ಲಿಯಾ ಸಾರಸವದನೆಯೊಳು ಪ್ರಾಣವಂ ಪಡೆದೀಯನೆ ಮುನ್ನ (ಬಸಪು. ೪೬-೪೩). [ಸಂ. ಸಾರಸವದನಾ]

ಸಾರಸವಾಸ (ನಾ). ಕಮಲದಲ್ಲಿ ನೆಲಸಿರುವಿಕೆ: ನೀಂ ಸಾರಸವಾಸಮಾತ್ರದಿಂ ಸಂತಸವಾಂತದನೆಂತು ಮರೆದೆಯೆಲೆ ಮಧುಕರನೇ (ಶಾಕುಂತ. ೬೦-೧೧೦೧). [ಸಂ.]

ಸಾರಸಸಖ (ನಾ). ತಾವರೆಯ ಮಿತ್ರ; ಸೂರ್ಯ: ಸಾರಸಸಖನಾ ನಗಕಾಸಾರಸಮುತ್ಸನ್ನ ಕಮಳಮಂ ಕೀಳ್ತಾಂತಂ (ರಾಜಶೇ. ೧-೧೧೧). [ಸಂ.]

ಸಾರಸಸಖತನಯ (ನಾ). ೧. ಸೂರ್ಯನ ಮಗ. ೨. ಶನಿ : ಉದಗ್ರಗ್ರಾಹದೊಳ್ ಸಾರಸಸಖತನಯಂ ದಂಡದೊಳ್ ರೋಹಿಣೀನಂದನನಂತಾ ದ್ವಂದ್ವದೊಳ್ಸಿಶ್ರುತಮೆನೆ . . . ಪುತ್ರನಂ ಪೆತ್ತಳ್ (ಸುಕುಮಾ. ೧೦-೨೬). [ಸಂ.]

ಸಾರಸಾರಿ (ನಾ). ತಾವರೆಯ ಶತ್ರು; ಚಂದ್ರ: ಸರೋರುಹಸಾರಸಾರಿಬೃಂದಾರಕ . . . ಸಮೀರಭುಗ್ವರೋದ್ಗೌರಯಶಂ ವಿರಾಜಿಸಿದುದೆಣ್ಣೆಸೆಯೊಳ್ ಚಿಕವೀರದೇವನಾ (ರಾಜಶೇ. ೧-೬೬). [ಸಂ.]

ಸಾರಸಾಸನ (ನಾ). (ವಿಷ್ಣುವಿನ ನಾಭಿಯ) ಕಮಲವೇ ಪೀಠವಾಗುಳ್ಳವನು; ಬ್ರಹ್ಮ: ಅಖಿಳದಿವೌಕಪ್ರಸರಪ್ರಚೋದಿತಂ ಸಾರಸಾಸ[ಪಾಠಾಂ. ನ]ನಂ ದಂತ ಕಾಂತಿ ಪಸರಿಸೆ ನುಡಿದಂ (ವಿಷ್ಣುಪು. ೫-೧-೩೫). [ಸಂ.]

ಸಾರಸಿ (ನಾ). ಹೆಣ್ಣುಕೊಕ್ಕರೆ: "ಸಾರಸಾ, ಲಕ್ಷ್ಮಣಾ - ಈ ೨ ಸಾರಸಿ" (ಹಲಾಯು. ೪೧-೯೧). [ಸಂ. ಸಾರಸೀ]

ಸಾರಸೆ (ನಾ). ೧. ಹಂಸವನ್ನು ವಾಹನವಾಗುಳ್ಳವಳು; ಸರಸ್ವತಿ: ಶಾರದೆಯ ಸುಕುಮಾರಿ ಬ್ರಹ್ಮಿಣಿ ಸಾರಸೆಯ ಸುಪವಿತ್ರೆ . . . ಉದ್ಧರಿಸು ಕಾವ್ಯವ (ಬಿಜ್ಜಪು. ೩೧-೧೧). ೨. ಹೆಣ್ಣು ಕೊಕ್ಕರೆ : "ಸಾರಸಾ, ಲಕ್ಷ್ಮಣಾ - ಈ ೨ ಸಾರಸಿ" (ಹಲಾಯು. ೪೧-೯೧). [ಸಂ. ಸಾರಸಾ]

ಸಾರಸೋದ್ಭವ (ನಾ). ವಿಷ್ಣುವಿನ ನಾಭಿಕಮಲದಲ್ಲಿ ಜನ್ಮ ತಾಳಿದವನು; ಬ್ರಹ್ಮ: ವೀರಭದ್ರಾದಿ ಗಣನಿಕರಮಂ ದೈತ್ಯಾದಿ ಸಾರಸೋದ್ಭವ ಸಹಸ್ರಾಕ್ಷಾದಿ ನಿರ್ಜರರುಮಾರಯಲ್ . . . ಕರಂ ಭೋರೆನುತ ಜೋಹರಿ ಸಹಸ್ರಾಕ್ಷ ಎಂದುಲಿಗುಮಾವಗಂ ಸಂತಸದೊಳು (ಆರಾಚ. ೧-೫-೬೯). [ಸಂ.]

ಸಾರಸೋನ್ನತಪೀಠ (ನಾ). ೧. ಶ್ರೇಷ್ಠವೂ ಉನ್ನತವೂ ಆದ ಆಸನ. ೨. ಶ್ರೇಷ್ಠವಾದ ಕಮಲದ ಪೀಠ. ೧, ೨ : ಆ ನೃಪೇಂದ್ರನುಪೇಂದ್ರನಂತೆ ಸದಾನಂದಕರಾಜಿತನುಂ ಕಮಳಭವನಂತೆ ಸಕಳವಿಬುಧಸಂಸೇವಿತಸಾರಸೋನ್ನತ ಪೀಠಾಸೀನನುಂ . . . ಎನಿಸಿರ್ದಂ (ರಾಜಶೇ. ೩-೯ ವ). [ಸಂ.]

ಸಾರಸ್ವತ (ಗು). ೧. ಸರಸ್ವತಿಗೆ ಸಂಬಂಧಿಸಿದ. ೨. ವಿದ್ವತ್ತಿನಿಂದ ಕೂಡಿದ. ೩. ಸರಸ್ವತಿ ಎಂಬ ನದಿಗೆ ಸಂಬಂಧಿಸಿದ. (ನಾ). ೪. ವಿದ್ವತ್ತು; ಪಾಂಡಿತ್ಯ: ತನ್ನ ಸಾರಸ್ವತದಿಂ [ಬಿಣ್ಪಿ]ನೊಳಂ ಬುದ್ಧಿಯೊಳಂ ತಾಂ ಪ[ಡೆ]ದಂ ಪಿರಿಯನೆನಿಸುವರ್ನ್ನಂ ರನ್ನಂ (ಕಇಆ. ೧೨-೩-೫೭; 1093). ೫. ಸರಸ್ವತೀ ನದಿ. ೪, ೫ : ಎಲ್ಲರುಂ ಸಾರಸ್ವತಯುಕ್ತರಾಗಿಯುಂ ತಾಂ ಜಡಧಿಯೆಂದೆನಿಸರು (ಚಿಬವು. ೬-೪೫). ೬. ವಿದ್ವತ್ತಿನಿಂದ ಕೂಡಿದುದು; ಪಾಂಡಿತ್ಯಪೂರ್ಣವಾದುದು : ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ (ಗದಾಯು. ೧-೩೮). ೭. ವಿದ್ವಾಂಸ; ಪಂಡಿತ: ಇದು . . . ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯ ತದನುಜಾತಾಭಿಜಾತಸಾರಸ್ವತ ಪುನ್ನಮಾರ್ಯಕಾರಿತಮುಮಪ್ಪ ಪುರಾಣಚೂಡಾಮಣಿಯೊಳ್ ಪ್ರಥಮಾಶ್ವಾಸಂ (ಶಾಂತಿಪು. ೧-೯೬ ವ). ೮. ಸರಸ್ವತೀನದಿಯ ಸುತ್ತಮುತ್ತಲಿನ ಪ್ರದೇಶ,— ಸ್ಥಳ: ಶ್ರೀಗೋವಿಂದಪೈಗಳು . . . ಗೌಡಸಾರಸ್ವತರ ಮೂಲವಾಸಸ್ಥಾನವು ಸಾರಸ್ವತದೇಶವೆಂದೂ . . . ಕೊಂಕಣಕ್ಕೆ ಕಾಲಕ್ರಮೇಣ ಬಂದಿರಬೇಕೆಂದೂ (ಕನಿಷ್ಟ ಪಕ್ಷ ಕ್ರಿ.ಶ.ದ ಆರಂಭದಲ್ಲಿ) ತಿಳಿಸುತ್ತಾರೆ (ತುಳುನಾ. ೧೬೦). ೯. ಕರಾವಳಿಯಲ್ಲಿ ವಾಸಿಸುವ ಒಂದು ಬ್ರಾಹ್ಮಣಪಂಗಡ : ನಮ್ಮ ಸಾರಸ್ವತರಲ್ಲಿ ಗೆಳತಿಯರಿಗೇನು ಕಡಿಮೆ? (ಮುಕ್ತಿ. ೨೮): ಈ ಪಂಚಗೌಡ ಬ್ರಾಹ್ಮಣರ ಮೊದಲಿಗರು ಸಾರಸ್ವತರು (ತುಳುನಾ. ೧೬೦). ೧೦. ಪ್ರಾಕೃತಭಾಷೆ: ಪ್ರಾಕೃತಭಾಷೆಗೆ ಸಾರಸ್ವತವೆಂತಲೂ ಬಾಲಭಾಷೆಯೆಂತಲೂ ಹೆಸರುಗಳುಂಟು (ಮುಂಬಯಿ. ೪-೧೨೫). ೧೧. ಒಬ್ಬ ಮುನಿಯ ಹೆಸರು. ೧೨. [ಜೈನ] ಎಂಟು ವಿಧವಾದ ಲೋಕಾಂತಿಕದೇವರುಗಳಲ್ಲಿ ಒಂದು ವರ್ಗ: ಬ್ರಹ್ಮಕಲ್ಪಾಂತವಾಸಿಗಳುಮಪ್ಪ ಸಾರಸ್ವತಾದಿತ್ಯವಹ್ನ್ಯರುಣಗರ್ದತೋಯತುಷಿತಾವ್ಯಾಬಾಧಾರಿಷ್ಟರೆಂಬೆಣ್ಬರುಂ ಲೋಕಾಂತಿಕದೇವರ್ ಬಂದು (ಆದಿಪು. ೯-೬೦ ವ). [ಸಂ.]

ಸಾರಸ್ವತಗುಣ (ನಾ). ಪಾಂಡಿತ್ಯ; ವಿದ್ವತ್ತು: ಅತಿಶಯಧವಳೋರ್ವಿಪೋದಿತಾಳಂಕೃತಿಮತಿ[ಯೆ] ನಿರಂತರಪ್ರತೀತಂ ಶ್ರುತಿಯುವತಿಕೃತೋಪಚಾರ ಸಾರಸ್ವತಗುಣದಿಂದೆ ಕೃತಕೃತ್ಯಮಕ್ಕುಂ (ಕವಿರಾ. ೧-೧೪೮). [ಸಂ.]

ಸಾರಸ್ವತಸ್ಫುರಿತ (ಗು). ೧. ತನಗೆ ತಾನೇ ಬಿರಿದ; ಸ್ವಯಂ ವಿಕಸಿತವಾದ. ೨. ವಿದ್ಯೆಯಿಂದ ಪ್ರಕಾಶಿಸುವ. ೧, ೨ : ಆ ಮಹಾಸ್ಥಾನಂ ಸಾರಸ್ವತಸ್ಫುರಿತ ಮಾನಸಕಮಳವಿತತಾಮೋದವಾಹ ಸುಧಿರಾಜಸಮನ್ವಿತಮುಂ . . . ಎನಿಸಿರ್ದುದು (ರಾಜಶೇ. ೧೪-೧೫೮ ವ). [ಸಂ.]

ಸಾರಸ್ವಾದು (ನಾ). ಉತ್ತಮರುಚಿ; ಮಧುರವಾದ ಸವಿ: ಸಾರಸ್ವಾದು ಲೇಸೆಂದಡೆ ಜಿಹ್ವೆ ಹೊಱತೆಯಾಗಿ ಕುಱುಹುಗೊಂಡಿತ್ತೆ (ಮದೇವ. ೨೮೨-೪೯). [ಸಂ.]

ಸಾರಹೃದಯ (ಗು). ಒಳ್ಳೆಯ ಅಂತಃಕರಣವುಳ್ಳ: ನೀರೊರೆವ ಕಣ್ಣುಗಳನೊರಸುತ ಸೀರೆಯಲ್ಲಿ ಗದಗದಿತಗಳದಲಿ ಸಾರಹೃದಯಮಹೀಶನದ್ದನು ಖೇದಪಂಕದಲಿ (ಕುವ್ಯಾಗ. ೮-೨೧). [ಸಂ.]

ಸಾರಳಿ 'ಸಾರವಣೆ' ನೋ.

ಸಾರಳ್ಯ (ನಾ). ಸರಳತನ; ನಿರಾಡಂಬರ: ಚಿತ್ರದಲ್ಲಿಯ ಸಾರಳ್ಯ, ಗಭೀರತೆ . . . ಪ್ರೇಕ್ಷಕರನ್ನು ಆಶ್ಚರ್ಯಚಕಿತರನ್ನಾಗಿಸಿತು (ಉದರಾ. ೮೮); ಮಾತಿನಲ್ಲಿ ಸಾರಳ್ಯವಿತ್ತು ಏನೂ ಕೊಂಕುತನವಿರಲಿಲ್ಲ (ನಡವಾ. II, ೧೫೧೦). [ಸಂ. ಸಾರಲ್ಯ]

ಸಾರಾ (ನಾ). ಸಕಲ; ಸಮಸ್ತ; ಎಲ್ಲಾ: ಟೀಪುಸುಲ್ತಾನರು ತಮ್ಮ ಸಾರಾ ದಂಡು ತೆಗೆದುಕೊಂಡು ತಮ್ಮ ಸರ್ವಶಕ್ತಿಯಿಂದಾ ಸಿದ್ಧೇಶ್ವರನ ಗದ್ದಿಗೆ ಮಾರ್ಗವಾಗಿ ಬಂದಲ್ಲಿ, ಅಲ್ಲಿ ಜನರಲ್ ಹಾಟ್ಲಿಸಾಹೇಬರು ಹಾಜರು ಇದ್ದರು (ರಾಜೇಂದ್ರ. ೧೬೭).

ಸಾರಾಸಗಟು = ಒಟ್ಟಾದುದು ; ಮೊತ್ತ : ಜನಪದಕಾವ್ಯವನ್ನು ಸಾರಾಸಗಟಾಗಿ ಇಟ್ಟುಕೊಂಡು ಅಭ್ಯಾಸಿಸುವುದು ತಪ್ಪು (ಕಜಕಾ. ೧೪ ಪ್ರಸ್ತಾವನೆ).

[← ಮರಾ. ಸಾರಾ. / ಸಂ. ಸರ್ವ]

ಸಾರಾಂಶ (ನಾ). ೧. ತಿರುಳು; ಸತ್ತ್ವ: (ಕಿ). ೨. (ಬೋಧನೆ, ಭಾಷಣ, ಲೇಖನ, ಪದ್ಯ ಮುಂತಾದವುಗಳ) ತಾತ್ಪರ್ಯಾರ್ಥ; ಉದ್ದಿಷ್ಟವಾದ ಆಶಯ : ಸಾರಾಂಶವೇನೆಂದರೆ ತಾವು ಎರಡನೆಯವರಿಗೆ ಮಾಡಿದ ಹಾಗೆ, ಅವರು ತಮಗೆ ಮಾಡುವರು (ಮುಂಬಯಿ. ೪-೮೫). [ಸಂ.]

ಸಾರಾಚಾರ (ನಾ). ಶ್ರೇಷ್ಠವಾದ ಸಂಪ್ರದಾಯ; ಕಟ್ಟುಪಾಡು: ಸಾರಾಚಾರವಿಚಾರಘೋರತಪದಿಂ ಶ್ರೀಪಾರ್ವತೀದೇವಿಯಂ ಧೀರಂ ಪರ್ವತರಾಜನೊರ್ಮೆ ಪಡೆದಂ (ಹಮ್ಮೀರ. ೨-೬). [ಸಂ.]

ಸಾರಾಯ್ಯ, ಸರಾಯ, ಸರಾಯಿ, ಸರಾಯಿಾ, ಸಾರಾಯಿ (ನಾ). ಈಚಲುಮರ, ಕಬ್ಬು, ಧಾನ್ಯ ಮುಂತಾದವುಗಳಿಂದ ಭಟ್ಟಿಯಿಳಿಸಿದ ಮದ್ಯ; ಹೆಂಡ: ಹೇಸರಗತ್ತೆಯ ಮೇಲೆ ಸಾರಾಯದ ಪೀಪಗಳ ಲೆಕ್ಕವೀಸೆಂದು ಪೇಳ್ವರಾರದನು (ಕಂನವಿ. ೧೧-೩೮) : ಕ್ಷೀರವನು ಮಾನವರು ಮಾಱುವರು ಮನೆಮನೆಗೆ ಸಾರಾಯದೆಡೆಗೆ ಹಾಱುವರು ದುರುಳರ ದಾರಿ ಇಂತೆಂದ (ಸರ್ವಜ್ಞ. ೮೨೨). **ಸರಾಯ:** ಗಾಂಜ ಅಪು ಸರಾಯ ಮುಂತಾದ ಅಮಲೇರುವ ಪದಾರ್ಥಗಳನ್ನು ಎಷ್ಟುಮಾತ್ರವೂ ಸೇವಿಸಬಾರದು (ಮುಂಬಯಿ. ೪-೨೫); ಒಂದು ಬಟ್ಟಲ ತುಂಬ ಸರಾಯ ಕುಡಿಯುತ್ತಾನೆ (ಮೋಹಿನೀ. ೫೫). **ಸರಾಯಿ:** ಸುಮಾರು ೬೦ ವರ್ಷಗಳವರೆಗೆ ತೆಂಗಿನಮರವು

ಕಾಯಿಗಳನ್ನೂ ಸರಾಯಿಯನ್ನೂ ಕೊಡುತ್ತದೆ (ಕಭಾಗೆ. ೩೪); ಪರಮೇಶ್ವರಭಟ್ಟನೇನೋ ತಾನಾಗಿ ಸರಾಯಿ ಕೊಡಲು ಆಗ್ರಹಪಡಿಸುತ್ತಿರಲಿಲ್ಲ (ಗಂಮಾಮು. ೯೮). **ಸರಾಯಿಾ** : ಈ ಕಾಕವೆಯು ಸರಾಯಾ ಮಾಡುವುದರಲ್ಲಿ ಮುಖ್ಯವಾಗಿ ಉಪಯೋಗಿಸಲ್ಪಡುತ್ತದೆ (ಮುಂಬಯಿ. ೫-೨೦೧). **ಸಾರಾಯಿ** : ಪದೇ ಪದೇ ಸ್ವಲ್ಪ ಸಾರಾಯಿಯನ್ನು ಕುಡಿಸುವುದು (ಗ್ರಾಮೋ. ೧೫೫); ನಿನಗೆ ಬೇಕಾದ ಮಾಂಸವನ್ನೂ ಅನ್ನವನ್ನೂ ಮೊಸರು ಸಾರಾಯಿ ಕಳ್ಳು ಮೊದಲಾದ ಪಾನಗಳನ್ನೂ . . . ಕಳಹಿಸುತ್ತೇವೆ (ವ್ಯಾಸಚಿ. ೭೧).

ಸಾರಾಯದಂಗಡಿ = ಹೆಂಡ ಮಾರುವ ಅಂಗಡಿ; ಪಡಖಾನೆ: ಭಂಗಿಯ ಹೇಅಪಿನಿಯ ಮೊಟ್ಟೆ ಸಾರಾಯದಂಗಡಿ ಸುರೆಯ ತಿತ್ತಿಗಳ ಜಂಗುಳಿ . . . ಒಪ್ಪಿದುವು (ತಾಸಪು. ೧೯-೨೨). [ದೇ. ॥ ತಮಿ. ಮಲ. ಚಾರಾಯ; ತುಳು. ಸಾರಾಯಿ; ತೆಲು. ಸಾರಾ, ಸಾರಾಯಮು, ಸಾರಾಯಿ. / ಪ್ರಾ. ಸರಯ. / ಸಂ. ಸರಕ]

ಸಾರಾಯ$_3$ (ಗು). ೧. ಸಾರವತ್ತಾದ; ಸತ್ತ್ವಪೂರ್ಣವಾದ: ನೀರೆಱೆದುಪ ಕಾರಕ್ಕೆಳನೀರಂ ರುಚಿವೆರಸು ತೀವಿ ವನಪಾಲಕರಂ ಪಾರುತ್ತಿರ್ಪಂತಿರ್ಪುವು ಸಾರಾಯ ಫಲಾಳಿ ನಾಳಿಕೇರಂ ಬನದೊಳೆ (ಗಿರಿಕ. ೨-೪೭). ೨. ಉತ್ತಮವಾದ; ಶ್ರೇಷ್ಠವಾದ: 'ಸಾರಾಯಪದ' ಪರಾ. (ನಾ). ೩. ತಿರುಳು; ಸತ್ತ್ವ: ಭೂಮಿಯ ಸಾರಾಯದಲೊಂದು ತರು ಬೆಳೆಯಿತ್ತು ನವರಸಫಲವನಿತ್ತಿತ್ತು (ಬಸಹ. ೧೦೫-೧೩೭); ಪರಮಜಿನೇಶ್ವರಮತದೊಳು ಪರಿಕಿಸಿ ಸಾರಾಯಮಪ್ಪವಂ ಕೊಂಡು ಕರಂ ವಿರಚಿಸಿತಪ್ಪುದಱಿಂದಂ ಪರಮಾಗಮಸಾರಮಾದುದೀ ಕೃತಿಯಿಂದಂ (ಪರಮಾ. ೬೩-೧೫೯); ಅವನಿಪಂ ಧರ್ಮಸಾರಾಯಮಂ ಕೇಳ್ದನಾ ಮುನಿವರನೊಳು (ಕ್ಷಮಾಧಾ. ೫-೪೮). ೪. ಜ್ಞಾನ; ಅನುಭಾವ: ಊರಿಂಗೆ ದಾರಿಯನು ಯಾರು ತೋಱಿದಡೇನು ಸಾರಾಯದ ನಿಜವ ತೋಱುವ ಗುರುವು ತಾನಾರಾದಡೇನು (ಸರ್ವಜ್ಞ. ೩೮). ೫. [ವೀಶ್ಯ] ನಿಜತತ್ತ್ವ : ದೂರವಿಲ್ಲದ ಗಮನಕ್ಕೆ ದಾರಿಯ ಪಯಣ ಹಲವಾಯಿತ್ತು ಸಾರಾಯ ನಿರ್ಣಯವನೇನೆಂಬೆ (ಅವಚಾ. ೨೧-೮೬); ಸತ್ಯರ ಸಾರಾಯದ ಅನುಭಾವದ ಉಪದೇಶವು ಬರಲು ಸುತ್ತಿದ ಪ್ರಪಂಚು ಭವಕರ್ಮಂಗಳು ಬಿಟ್ಟೋಡುವವಾ ಶರಣರ ಆಜ್ಞೆಗೆ (ಶಿವಗೀ. ೭೬-೩೭೬). ೬. ನಿಜತತ್ತ್ವವನ್ನು ಅರಿತವನು: ಮಾರಾರಿಯ ಬೆಳಸನಾರಯ್ಯ ಸಂತವಿಡುವರೆಂದರೆ ಸಾರಾಯಂಗಲ್ಲದೆ ಮತ್ತಿನ್ನಾರಿಗಹುದು ಹೇಳಾ (ಅವಚಂ. ೨೫೦-೧೧೪೩); ಶಿವಭಕ್ತಿಸಾರಾಯಂ[ಪಾಠಾಂ. ಸಾರ್ವಭೌಮ] ಜಂಗಮ ಪ್ರಾಣಿ ಸಂಗನ ಬಸವಂ (ಬಸರ. ೬-೧೧೪). [ಸಾರ$_2$ + ಆಯ$_1$]

ಸಾರಾಯಗುಡುಹಿ (ನಾ). ಹೆಂಡ ಕುಡಿಯುವವನು; ಮದ್ಯಪಾನ ಮಾಡುವವನು: ಸಾರಾಯಗುಡುಹಿಗಳ ಸಾರಿ ಸಂಹರಿಪೆ (ಕಂಕ. ೪೯-೧೧). [ಸಾರಾಯ$_1$ + ಕುಡುಹಿ (< ಕುಡಿಹಿ)]

ಸಾರಾಯಪದ (ನಾ). ಶ್ರೇಷ್ಠವಾದ ಪದವಿ; ಮುಕ್ತಿ: ತಾರಾಚಳಾಗ್ರ ನಿಳಯಾರೂಢನೊಪ್ಪಿದಂ ಸಾರಾಯಪದವೀವ ಶರಣಪತಿಯೊಪ್ಪಿದಂ (ಇಜಿಕ. ದೇ. ೧೧೪-೧೦). [ಸಾರಾಯ$_2$ + ಪದ$_2$]

ಸಾರಾಯಮತಿ (ನಾ). [ವೀಶ್ಯ] ನಿಜತತ್ತ್ವದ ಜ್ಞಾನ ,– ಅರಿವು : ತಾರಕಾರಾತಿಯೆಂಬಭಿಧಾನದಿಂದ ವೃಂದಾರಕರ ಪೊರೆದ ಕ್ರೌಂಚಾರಿ ರಕ್ಷಿಪುದೆನ್ನ ಸಾರಾಯಮತಿಯನಿತ್ತು (ಪ್ರಾಥರಾ. ೧-೧೩). [ಸಾರಾಯ$_2$ + ಮತಿ]

ಸಾರಾಯಶರಣ (ನಾ). [ವೀಶ್ಯ] ನಿಜತತ್ತ್ವವನ್ನರಿತ ಭಕ್ತ ; ಶಿವತತ್ತ್ವಜ್ಞಾನಿ: ಮಾರಯ್ಯನೊಬ್ಬ ಸಾರಾಯಶರಣನೆಂಬುದು ಶಂಕರದಾಸಿಮಯ್ಯನಿಗೆ ಮನವರಿಕೆಯಾಯಿತು (ಶರಚ. ೭೩). [ಸಾರಾಯ$_2$ + ಶರಣ]

ಸಾರಾಯಸೋನೆ (ನಾ). ಒಳ್ಳೆಯ ಮಳೆ: ನಮ್ಮ ಭೀಷ್ಮದ್ರೋಣನಿವನಲ್ಲ ಅಳುಕದಿರಿ ಕವಿಕವಿಯೆನುತ ಹೆಬ್ಬಲ ಸಘಾಡದಲೌಕಿ ಕರ್ಣನ ಹೊಲಬುಗೆಡಿಸಿದುದಂಬುಗಳ ಸಾರಾಯಸೋನೆಯಲಿ (ಕುವ್ಯಾಳ. ೧೧-೨೦). [ಸಾರಾಯ$_2$ + ಸೋನೆ$_1$]

ಸಾರಾಯಿ 'ಸಾರಾಯ$_1$' ನೋ.

ಸಾರಾಯಿಬೇಲ (ನಾ). ಒಂದು ಬಗೆಯ ಮರ: ಬಳೀಜಾಲಿ, ತೊಪ್ಪಾಲಿ, ಸಾರಾಯಿಬೇಲ, ತುಂಬಿಮರ (ಮೃಜಿಗಿ. ೧-೧೬). [ಸಾರಾಯಿ ? + ಬೇಲ (< ಬೆಳಲ್)]

ಸಾರಾಯ್ಯ (ನಾ). ಒಳ್ಳೆಯದು; ಶ್ರೇಷ್ಠವಾದುದು: ಸಾರಾಯ್ಯರಲಿಂಡೆಯೊಳ್ ಶಿವಲಿಂಗಮಂ ಮುಂಬರಿವ ನೇಹದಿಂ ಕರುಣಿಸಿದನಿವನೇಳ್ಗೆಯಂ ಬಣ್ಣಿಸುವೊಡರಿದೆನುತ್ತೆಲ್ಲ ಮೃಡಗಣಾಡಂಬರಂ ನುತಿಸುತಿರಲಿಷ್ಟಲಿಂಗವನರ್ಚಿಸುತ್ತಿರ್ದನಾರ್ಯೋತ್ತಮಂ (ಕೊಟ್ಟೂಪು. ೧೫-೭೦). [< ಸಾರಾಯ$_2$ + - ಗೆ]

ಸಾರಾಲಂಕಾರ (ನಾ). [ಕಾವ್ಯಮೀ] ಒಂದು ವಸ್ತುವಿಗಿಂತ ಮತ್ತೊಂದು ವಸ್ತುವು ಅತಿಶಯವಾಗಿದೆ ಎಂದು ಹೇಳುವ ಒಂದು ಬಗೆಯ ಅರ್ಥಾಲಂಕಾರ: ಉತ್ತರೋತ್ತರವಾದ ಪದಗಳಲ್ಲಿ ಒಂದಕ್ಕಿಂತ ಒಂದು ಹೆಚ್ಚಾಗಿ ವರ್ಣಿಸಲು ಸಾರಾಲಂಕಾರವು (ಕುವಲ. ೯೮); ಉತ್ತರೋತ್ತರೋತ್ಕರ್ಷ ವರ್ಣನೆ ಎಂದರೆ ಒಂದಕ್ಕಿಂತ ಮತ್ತೊಂದು ಅತಿಶಯವಾಗಿದೆ ಎಂದು ಹೇಳುವುದು ಸಾರಾಲಂಕಾರ. ಲಕ್ಷ್ಯ – ಕಲಿ ಪಾರ್ಥಂ ಪಾರ್ಥನಿಂದಂ ಕಲಿ ರವಿತನಯಂ ಪಾರ್ಥನಿಂ ಕರ್ಣನಿಂದಂ ಕಲಿ ಭೀಮಂ ಪಾರ್ಥನಿಂ ಕರ್ಣನಿನನಿಲಜನಿಂ ರಾಘವಾಧೀಶಭೃತ್ಯಂ ಕಲಿ ಶಕ್ರಾಪತ್ಯನಿಂ ಕರ್ಣನಿನನಿಲಜನಿಂದಂಜನಾಪುತ್ರನಿಂದಂ ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಲಯಂ ವೀರಮಾರ್ತಾಂಡದೇವಂ (ಕೃಬಿ. ೨೮೨). [ಸಂ.]

ಸಾರಾಸಾರ (ನಾ). ೧. ಸತ್ತ್ವವುಳ್ಳುದು ಮತ್ತು ಸತ್ತ್ವವಿಲ್ಲದುದು. ೨. ಸಾಮರ್ಥ್ಯ ಮತ್ತು ಅಸಾಮರ್ಥ್ಯ; ಬಲಾಬಲ : ಮಾಹೇಂದ್ರನಂದನನ ಸಾರಥಿಯ ಬಲಗೊಂಡು ಸಾರಾಸಾರಗಳ ನಿರ್ಣೈಸಿ ಪೇೞ್ದನು (ಕಜವಿ. ೫೬೫). ೩. ಒಳಿತು ಮತ್ತು ಕೆಡುಕು : ಕುಟುಂಬದಲ್ಲಿ ಎಲ್ಲರೂ ಸಾರಾಸಾರ ವಿಚಾರ ಮಾಡಿ ನಡೆದರೆ ಒಳಿತು (ಕನ್ನಕಾ. ೯೯). [ಸಂ.]

ಸಾರಿ$_1$, ಸಾರೆ$_2$ (ನಾ). ಬಾರಿ; ಸಲ; ಸರತಿ : ನಾಲ್ಕುಸಾರಿ ತೆಂಗಿನ ಕಾಯಿಗಳನ್ನು ಕೊಯ್ಯುತ್ತಾರೆ (ಮುಂಬಯಿ. ೨-೪೨); ಈ ಕಾರಿಕೆಗಳಲ್ಲಿ ನಾವು ಯುಕ್ತಿವಾದವನ್ನು ಸಾಮಾನ್ಯರೀತಿಯಲ್ಲಿ ಮೊದಲನೆ ಸಾರಿ ನೊಡುತ್ತೇವೆ (ತತ್ಪಜ್ಞಾ. ೪೦೬). **ಸಾರೆ$_2$** : ಚಿಕ್ಕಣ್ಣನಿಂದ ಈ ಸಾರೆಯ ಬಿಡುವಿಗಾಗಿ ನಮ್ಮಲ್ಲಿಗೇ ಬರಬೇಕೆಂದು ಪತ್ರ ಬಂದಿತು (ಅಲ್ಪವಿ. ೧); ಈ ಸಾರೆ ಮಾತ್ರ ಪಶ್ಚಿಮ ತಿಬೆಟದಲ್ಲಿರುವ ಮಾನಸಸರೋವರ ಕೈಲಾಸಗಳಿಗೆ ಮುಟ್ಟೇತೀರುವ ನಿರ್ಧಾರದಿಂದ ಹೊರಟೇಬಿಟ್ಟನು (ಕೈಲಾಸ. ೪). [ದೇ. ॥ ತಮಿ.ಚಾರಿ ; ತುಳು. ತೆಲು. ಸಾರಿ]

ಸಾರಿ$_2$ (ನಾ). ಸೀರೆ : ಸಾರಿಯ ನಿಱಿ ಬಲ್ಮುತ್ತಿನೇಕಾವಳಿ ಚಾರುಚಂದನದಡ್ಡಬೊಟ್ಟು . . . ರಾಜಿಸಲು ನಡೆತಂದು ಫಣಿರಾಜತನಯಗಾ ಗಾಯಕಿ ಪೊಡಮಟ್ಟಳು (ನಾಗಕು. ೩೬-೨). 'ಸಾಟಿ' ಪರಾ. [< ಪ್ರಾ. ಸಾಡಿಆ, ಸಾಡೀ./ಸಂ. ಶಾಟೀ./ಹಿಂ. ಮರಾ. ಸಾಡೀ]

ಸಾರಿ$_3$ (ನಾ). [ನಾಟ್ಯ] ನೃತ್ಯದ ಒಂದು ಪ್ರಕಾರ : ದೊರೆ ರಾಯನ ಸಾರಿಯ ಮೇಳವೆಣ್ಣುಗಳುಲೆ ನಾಲ್ಕುದೆಸೆಯ ದೇಸೆಗಳ ಬಿರುದಿನ ಗಣಕೆಯರ್ಪುರವರನಾರಿಯರಿರದೆ ಸಿಂಗರಿಸಿಯ್ದಿದರು (ಕಜವಿ. ೨೧-೬೪); ಪುರುಪ್ರಾಡ್, ತೋದಯಂ ಮತ್ತು ಅಷ್ಟಕಲಶಂ ಇವು ತಾಂಡವನೃತ್ಯಗಳು. ಸಾರಿ ಕುಮ್ಮಿ ಪಂತಡಿ ಇವು ಲಾಸ್ಯಗಳು (ಭಾರದ. ೫೫೭). [< ಸಂ. ಚಾರೀ]

ಸಾರಿ$_4$ (ನಾ). ಆನೆಯ ಮೇಲೆ ಕುಳಿತುಕೊಳ್ಳಲು ಹಾಕುವ ಮಂಟಪ; ಅಂಬಾರಿ; ಹೌದಾ: "ದುಂಡಿಜೆಯುಮಂ ಬಸುಗೆ ಸಾರಿಯೆಂದಕ್ಕುಂ" (ಕಬ್ಬಕ್ಕೆ. ೮೦); ಕರಿಸೇನಾಸಾರಿನದ್ದೋತ್ತರಲಕದಲಿಕಾಕಾನನೋಚ್ಚುಂಬ್ಯಮಾನಾಂಬರಚಕ್ರಂ . . . ವಜ್ರಬಾಹುಕ್ಷಿತಿಪತಿಗಿದಿರಂ ಬಂದನುತ್ಸಾಹದಿಂದಂ (ಅದಿಪು. ೪-೨೪) ; ಕರಿಸೇನಾಸಾರಿಭಾರಗ್ರಥನಮುರುತುರಂಗೌಘ ಪಲ್ಯಾಣಸಚ್ಚೀಕರಣಂ . . . ಬಲಯುಗಳದೊಳಂ ಕಣ್ಗಗುರ್ವಾದುವಾದಂ (ಚಂದ್ರಪ್ರ. ೧೦-೬೫). P ಸಂಸ್ಕೃತದ 'ಶಾರಿ' ಎಂಬ ರೂಪವನ್ನು 'ಆದಿಪು' ಮತ್ತು 'ಚಂದ್ರಪ್ರ' ಪ್ರಯೋಗಗಳಲ್ಲಿ 'ಸಾರಿ' ಎಂದು ಬಳಸಲಾಗಿದೆ. [< ಸಂ. ಶಾರಿ]

ಸಾರಿ$_5$ (ನಾ). ೧. ಪಗಡೆಯಾಟದಲ್ಲಿ ಉಪಯೋಗಿಸುವ ಕಾಯಿ: ಪಿಡಿಯೆಂಬರಿಷ್ಟಧನವಂ . . . ಕೊಲ್ಲೆಂಬರಿ ಸಾರಿಯಂ (ಪೌಭಾ. XVIII. ೨೯೫-೧೩; 1188); ಸದರದೆ ದಾಯಮಂ ಪಿಡಿವ ವಿತ್ರಮನೊಡ್ಡುವ . . . ಸಾರಿಯಂ ಕೆದಱುವ ನೆತ್ರಗಾಜರ ವಿನೋದಮನೀಕ್ಷಿಸುತಿರ್ದನುರ್ವಿಪಾ (ದಶಕು. ೮-೮೯); ಸಮರ ದ್ಯೂತಕೇಳಿಯಲಿ ಹಲಗೆಯ್ಮೆ ಕುರುಭೂಮಿ ಕೌರವಕುಲದ ತಲೆ ಸಾರಿಗಳು

ಸೆಱೆಯಲಿ ಗೆಲಲು ಬಂದನು ಕೊಳ್ಳು ಹಾಸಂಗಿಗಳನೆನುತೆಚ್ಚ (ಕುವ್ಯಾದ್ರೋ. ೧೦-೪೯). ೨. ಚದುರಂಗದ ಆಟದಲ್ಲಿ ಉಪಯೋಗಿಸುವ ಕಾಯಿ; ಚದುರಂಗದ ಕಾಯಿ: (ಕ). [ಸಂ. ಸಾರಿ, ಸಾರೀ]

ಸಾರಿ₆ 'ಸವಾರಿ' ನೋ.

ಸಾರಿ₇ (ನಾ). (?): ಆ ಕಳದ ಕೆಲದೊಳ್ ಸಾರಿಯಂ ಕೋಲೊಡ್ಡಿ ಗೆಲ್ವ . . . ತಕ್ಕು ಮಿಕ್ಕುವರೆ (ಪುಷ್ಪಪು. ೨-೬೦ ವ). [?]

ಸಾರಿಕೆ (ನಾ). ಹೆಣ್ಣುಗಿಳಿ; ಶಾರಿಕೆ : "ಪುರುಳಿಯೆಂದುಂ, ಸಾರಿಕೆಯೆಂದುಂ ಪೆಣ್ಗಿಳಿ" (ಕಶಸಾ. ೫೫-೨೦೩); ಪಾಱೆನೆ ಕರಂ ಪಿರಿದುಂ ಗಟಪುತ್ತುಮಿರ್ಪಳಂ ಸಾರಿಕೆಯೆಂಬರಲ್ಲದಭಿಸಾರಿಕೆಯೆಂಬರೆ ಬುದ್ಧಿಯಳ್ಳವರ್ (ಪಂಪಭಾ. ೪-೮೩); ಸಾರಿಕೆಯ ಕೀರದಂಚೆಯ ಪಾರಾವತದಿಂಚರಂಗಳಿಲ್ಲದ ಕೋಪಾಗಾರಮನಾ ವಧು ಪೊಕ್ಕಳ್ (ಜಗಮ. ೧೨-೭೬). [ಸಂ. ಸಾರಿಕಾ]

ಸಾರಿಕೆಬೇಟೆ (ನಾ). ಒಂದು ಬಗೆಯ ಬೇಟೆ ,– ಶಿಕಾರಿ: ಎರಡನೆಯ ತರಹದ ಬೇಟೆಯನ್ನು "ಸಾರಿಕೆಬೇಟೆ" ಎಂದು ಕರೆಯುತ್ತಾರೆ. ಅದರಲ್ಲಿ ಬೇಟೆಗಾರನು ಒಬ್ಬನೇ ಹೊರಟು (ನಾಯಿ ಗೀಯಿ ಒಂದೂ ಇರುವುದಿಲ್ಲ) ಕಾಡಿನಲ್ಲಿ ಸುಮ್ಮನೆ ಅಲೆಯುತ್ತ ಹೋಗುತ್ತಾನೆ. ಆಗ ಕಣ್ಣಿಗೆ ಬಿದ್ದ ಪ್ರಾಣಿಗಳನ್ನು ಹೊಡೆಯುತ್ತಾನೆ (ಮಲೆಟಿ. ೫).

[ಸಾರಿಕೆ₇ + ಬೇಟೆ (< ಬೇಂಟೆ)]

ಸಾರಿಗೆ₁ (ನಾ). ೧. ಹತ್ತಿರ; ಸಮೀಪ: ಪಶುವನು . . . ನಾ ಬಿಡೆನು ತಾ ಬಿಡೆನೆನುತ ತಮ್ಮೊಳಗೆ ನಿರ್ಣಯಿಸಲಱಿಯದೆ ಸುಧರ್ಮವನೆನ್ನ ಸಾರಿಗೆ ಬಂದರವರೀ ಬನ್ನಬಡಿಸಿದ ಹದನನಿದನವಧರಿಸಿ ಕೇಳೆಂದ (ವಿಧಾಗ. ೧೦-೮೩-೩೫). ೨. ಕೊಡ ಕೊಳ್ಳುವ ವ್ಯವಹಾರ; ವ್ಯಾಪಾರ : ಪೊರಮಟ್ಟನಾಕ್ಷಣಂ . . . ನೆರೆದು ಬಳ್ಳಾರಿ ಸಂತೆಗೆ ಪೋಪ ಸಾರಿಗೆಯ ಜನರೊಡನೆ ಚಚ್ಚರದೊಳು (ಮಹಾಂತೇ. ೩-೪೯). ೩. ಆದಾಯ; ವರಮಾನ: ಸಾಲ ಮೂಲವ ತಿಂತು ಸುಂಕ ಸಾರಿಗೆ ತಿಂತು ಬರ ಬಂದು ದೇಶವ ತಿಂತು .(ಇಂಚಾಪ. ೧೭೧-೪೪). ೪. ಸರಕುಗಳನ್ನು ಅಥವಾ ಜನರನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು; ಸಾಗಣೆ: ವ್ಯಾಪಾರದ ಸಾರಿಗೆ ಮಾಡುವದೂ, ಬೇರೆ ಹಲಕೆಲವು ಕಾರಣಗಳ ನಿಮಿತ್ತ ಊರಿಂದೂರಿಗೆ ಮನೆ ಬಿಟ್ಟು ಅನೇಕ ದಿನಗಳವರೆಗೆ ಗಂಡು ಹೋಗಬೇಕಾಗುವುದು (ಕನ್ನಜಾ. ೧೨೧). ೫. ವಾಹನಸಂಚಾರ: ಒಂದೊಂದು ರಾಷ್ಟ್ರವೂ ತನ್ನದೇ ಆದ ರೈಲು, ರಸ್ತೆ, ಹಡಗು, ವಿಮಾನ ಇತ್ಯಾದಿ ಸಾರಿಗೆಯ ಪದ್ಧತಿ ಮತ್ತು ನೀತಿಗಳನ್ನು ಅನುಸರಿಸುತ್ತದೆ (ಅಂತಸಂ. ೨೩೪); ಸಾರಿಗೆ ನಿಂತು ಪ್ರವಾಸಿಗಳ ಗೋಳನ್ನು ಮಾತ್ರ ಹೆಚ್ಚಿಸಿತು (ಗೊಂಡಾರ. ೭೦). ೬. ಸಂಚಾರಕ್ಕಾಗಿ ಬಳಸುವ ಸಾಧನ; ವಾಹನ. ೭. ಸವಾರಿ: ಆಗಿನ ಕಾಲದ ಬಣಜಿಗರು ವ್ಯಾಪಾರಕ್ಕೆ ಹೋಗುವ ಕುದುರೆಯ ಸಾರಿಗೆಯನ್ನು ಚಿಕ್ಕಮಕ್ಕಳು ಆಟದಲ್ಲಿ ಅನುಕರಣಮಾಡಿರಬಹುದೆಂದು ಊಹಿಸಬಹುದು (ಕನ್ನಜಾ. ೪೫). ೮. ಅನೇಕ ಸೀಳುಗಳುಳ್ಳ ಸಾಗುವಳಿಜಮೀನಿನ ಅಥವಾ ತೋಟದ ಭಾಗ: ಪಂಚಸತಗೋತ್ರಾನ್ವಯರುಮಪ್ಪೈನೂರ್ವ್ವರು ನಕರಮುಮಿರ್ದ್ದು ಬಿಟ್ಟ ಧರ್ಮ್ಮಮಾವುದೆಂದಡೆ ಸಾರಿಗೆಯೊಕ್ಕಲಲು ಭತ್ತ ಕೊಳಗ ೧ ಎಳ್ಳು ಉಪ್ಪು ಗೋದುವೆ ಬಳ್ಳ ೨ (ಸೌಇಇ. XI-ii, ೧೫೮-೧೫ ; 1109); ಚಿಕ್ಕ ನಾಗಣ್ಣನು ಎಳ್ಳೇಶ್ವರದೇವರಿಗೆ ಕೊಟ್ಟ ಗದ್ದೆ ಸಲಗೆವೊನ್ದು ಮಾವಿನ ಸಾರಿಗೆಯೊನ್ದು ಹಿರಿಯ ಹೊಲನೊನ್ದು (ಎಕ. IV, ಹೊಳೆನ. ೯೩-೧೫ ; 1237); ಇದಕ್ಕೆ ಬ ಸಾರಿಗೆ ವಾಯವ್ಯ ಮೂಡಮುಖನೆ ೧ ಇದಕ್ಕೆ ಮೂತೆವರ ಮಧ್ಯ ಅರೆಸಾರಿಗೆ ನೈಋತ್ಯ ತೆಂಕಮುಖನೆ ೧ (ಎಕ. II, ತಿರುಮ. ೬೩-೫೭೪ ; 1748). ೯. ಒಂದು ಬಗೆಯ ತೆರಿಗೆ: ಕಿಸುಕಾಡೆಬ್ಬತ್ತ ಱೊಳಂ ಸಾರಿಗೆ ಬೀರವಣಸಹಿತಂ ಸುಂಕಂ ಪರಿಹಾರಂ (ಎಇ. XV, ೭೯-೨೩; 1051).

[ಸಾರ್₁ + - ಇಗ್ಗೆ]

ಸಾರಿಗೆ₂ (ನಾ). ಸಲ; ಬಾರಿ; ಸರತಿ: ಧಾರುಣೀಶರು ಮಡಿದರೊಂದೇ ಸಾರಿಗೆಯಲ್ಕೆನೂಱು (ಕುವ್ಯಾದ್ರೋ. ೧೮-೫೧); ಧುರದೊಳೊಂದೊಂದು ಸಾರಿಗೆಗನಿತು ಬಾಣಂಗಳುರವಣಿಸಿ ಕೆಡಿದನಿತುಮಂದಿ ಸುಭಟರ ಕಳೇವರದೊಳಂಬಂ ಬಿಡದೆ ತುಂಬುವನೆನಲ್ ಬಣ್ಣಿಸಲ್ ಪವಣೆ ಗುಹನದಟನು (ಚಿಬಪು. ೩೯-೨೫); ಅಕ್ಷತೆಗೆ ಬಂದ ಅತಿಥಿಗಳಿಗೆಲ್ಲಾ ಸಾರಿಗೆ ಮೇಲೆ ಸಾರಿಗೆಯಂತೆ ಚಹಾ, ಪಾನ್‌ಸುಪಾರಿ ಮುಗಿಯುವವರೆಗೂ ತಾಸೆರಡುತಾಸಾಯಿತು (ವೈನಿ. ೧೫). [ಸಾರಿ₁ + - ಗೆ]

ಸಾರಿಗೆ₃ 'ಸಾರಕಿ' ನೋ.

ಸಾರಿಗೆದೇರ (ನಾ). ಗಿಳಿಯನ್ನು ವಾಹನವಾಗಿ ಉಳ್ಳವನು; ಮನ್ಮಥ : ಸಾರಿಗೆದೇರನೈದೆ ಬಡಿದಾಡುವ ಮುತ್ತಿನ ಕಂತುಕಂ ಲಸನ್ಮಾರನ ಮಂತ್ರಿಯೊಲ್ಕುವರಿಯೊಪ್ಪಿದಳ್ (ಉದ್ಭಟ. ೬-೧೮೮).

[ಸಾರಿಗೆ₃ (< ಸಾರಕಿ) + ತೇರು₂ (< ತೇರ್₂) + - ಅ₇]

ಸಾರಿಗೆಸಂಸ್ಥೆ (ನಾ). ಜನರ ಹಾಗೂ ಸರಕುಗಳ ಸಾಗಾಣಿಕೆಯ ಏರ್ಪಾಡನ್ನು ನೋಡಿಕೊಳ್ಳುವ ಕಾರ್ಯಾಲಯ: ಸಾರಿಗೆಸಂಸ್ಥೆಯು ಅನುಭವಿಸುತ್ತಿರುವ ಲಕ್ಷಾಂತರರೂಪಾಯಿಗಳ ನಷ್ಟವನ್ನು ಕಟ್ಟುನಿಟ್ಟಾದ ಮೇಲುಸ್ತುವಾರಿಯಿಂದ ಹೋಗಲಾಡಿಸಬಹುದು (ರೂಢಿ). [ಸಾರಿಗೆ₁ + ಸಂಸ್ಥೆ]

ಸಾರಿಗೆಹೊಲ (ನಾ). ಬೆಳೆ ಬೆಳೆಯುವ ಅನೇಕ ತುಂಡುಭೂಮಿಗಳನ್ನು ಹೊಂದಿರುವ ಒಂದು ನಿರ್ದಿಷ್ಟಪ್ರಮಾಣದ ಜಮೀನು : ಉರ ಮುಂದಣ ಸಾರಿಗೆಹೊಲ ಕಂಬ ೫೦ ತೆಂಕಳ ಸಾರಿಗೆಹೊಲ ಕಂಬ ೫೦ . . . ಆಗುಮಾಡ ಅನುಭವಿಸಿ ನಡಸುವಂತಾಗಿ ಕೊಟ್ಟ ಕೊಡಗೆ (ಮೈಆರಿ. ೧೯೩೪, ೪೪-೬ ; 1523); ಮಳಲೂರ ಪಟ್ಟಣದ ಸೂಲದ ಸಾರಿಗೆಹೊಲಗಳಿಗೆ XXX ಭಯಿರವದೇವರ ಹೊಂದಾ X ಯಾಗಿರ್ದ್ದ ಚತುಸ್ಸೀಮೆ (ಎಕ. IX (S), ಚನ್ನಪ. ೧೫೨-೧೫ ; 1535). [ಸಾರಿಗೆ + ಹೊಲ (< ಪೊಲ)]

ಸಾರಿಗೊಳಿಸು (ಕ್ರಿ). ಸವಾರಿಗಾಗಿ ವಾಹನಗಳನ್ನು ಸಜ್ಜುಗೊಳಿಸು: ಭೇರೀರಥಂಗಳಂ ಸಾರಿಗೊಳಿಸಿಯುಂ ಅಡಿಗಡಿಗೆ ನೆಲನನುಗೃಡಿಸಿಯುಂ ಇಂತತಿಚಿತ್ರಮಾಗೆ ಯಾತ್ರೆಯಂ ನಡೆಯಿಪಲ್ಲಿ (ಚಂದ್ರಪ್ರ. ೧೨-೮೫ ವ).

[ಸಾರಿ₆ (< ಸವಾರಿ) + ಕೊಳ್₁ + - ಇಸು₃]

ಸಾರಿಡು (ಕ್ರಿ). ಬೆರೆಯುವಂತೆ ಮಾಡು; ಒಂದುಗೂಡಿಸು: ಕಪ್ಪುರಗಂಪನೆಣ್ಣೆಸೆಗೆ ಸಾರಿಡೆ ಪಣ್ಣನೆ ಸುಯ್ಯಲರ್ ಸಮಂತುಪ್ಪುಳಗಣ್ಣೊಳಪ್ಪ ಕುಡುಮಿಂಚಿನ ಮಂಜರಿಯೊಳ್ಪಳಂಚೆ . . . ಪಾಡಿದರ್ ನಲಿದು ಗಾಯಿನಿಯರ್ ನವಗೀತಚಾಳಮಂ (ಉದ್ಭಟ. ೩-೨). [ಸಾರ್₁ + ಇಡು₁]

ಸಾರಿಣ್ಣ₁ (ನಾ). ೧. ನೀರು ಹೋಗಲು ಮಾಡಿದ ನಾಲೆ, ತೋಡು: "ಯಾನಂ, ಸಾರಿಣೀ - ಈ ೨ ಹರಿಕೇಣಿ" (ಹಲಾಯು. ೧೧೩-೬೩). ೨. ಹೊಳೆ; ನದಿ.

[ಸಂ. ಸಾರಿಣೀ]

ಸಾರಿಣ್ಣ₂ 'ಸಾರಣ್ಣ₁' ನೋ.

ಸಾರಿಣಿಸವಾರ (ನಾ). ಒಂಟೆಯ ಮೇಲೆ ಸಾಗುವವನು; ಒಂಟೆಸವಾರ: ಹೈದರನು . . . ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಸಾರಿಣಿಸವಾರರನ್ನು ಕರೆಸಿ ಅವರಲ್ಲಿ ಆ ಹಣವನ್ನು ಹಂಚಿದನು (ಒಡಕ. ೮೬). [ಸಾರಿಣ್ಣ₂ (< ಸಾರಣ್ಣ₃) + ಸವಾರ]

ಸಾರಿತ (ನಾ). [ಕಾಮಶಾ] ಒಂದು ಬಗೆಯ ರತಿಬಂಧ: ಅವಳ ಎರಡು ಕಾಲ್ಗಳಂ ಪುರುಷನ ಹೆಗಲ ಮೇಲಿಕ್ಕೆ ಸಾರಿತಮೆಬ ಕರಣಂ (ಕಾಮಶಾ. ೨೩೫). [ಸಂ.]

ಸಾರಿಮೇಳ (ನಾ). 'ಸಾರಿ' ನೃತ್ಯದಲ್ಲಿ ತೊಡಗಿರುವ ಗುಂಪು ,– ತಂಡ: ವಸಂತೋತ್ಸವ, ನಾಟಕಶಾಲೆ, ಸಾರಿಮೇಳ, ಗಂಧರ್ವವೀಣೆ ಮುಂತಾದ ಮಹಾರಾಜವೈಭವದಿಂದ ಸತ್ಕೀರ್ತಿಯಂ ಪಡೆದು (ಮಹಾವಂ. I, ೬೪); ಸಾರಿಮೇಳಕ್ಕೆ ಪ್ರತಿಯಾಗಿ ಸಪ್ತಾಂಗಮುದ್ರೆಯ ಮಂತಣಗಳೂ . . . ಕಯ್ಗೂಡಿ (ವಿಗಡ. ೧೩-೪).

[< ಸಂ. ಚಾರೀಮೇಲ]

ಸಾರಿರ 'ಸಾರೀರ' ನೋ.

ಸಾರಿವೆ (ನಾ). ಒಂದು ಬಗೆಯ ಬಳ್ಳಿ; "ಶಾಮಲತಾ" (ಪಂಡಿತ. ೨೫೭).

[ಸಂ. ಸಾರಿವಾ]

ಸಾರಿಸು₁ 'ಸಾಱಿಸು' ನೋ.

ಸಾರಿಸು₂, ಸಾರೈಸು (ಕ್ರಿ). ೧. ಸುಗಂಧದ್ರವ್ಯಗಳಿಂದ ಅಥವಾ ಗೋಮಯದಿಂದ ನೆಲವನ್ನು ಒರಸು ,– ಬಳಿ: ಕಸಗಳವೆಡೆಗಳೊಳಂ ಸಾರಿಸುವೆಡೆಯೊಳ ಮಕ್ಕಿಗುಟ್ಟುವೆಡೆಯೊಳ್ಸಲೆ ಸೋಧಿಸಿ ಜೀವನಿಕರಮಂ ರಕ್ಷಿಸುವರೆನಲ್ ಜೈನರಿಂ

ದಯಾಪರರೊಳರೇ (ಸಮಭ. ೫-೮); ಅಮಳಾಂಬುವಂ ತಾಂ ಪೊತ್ತು ತಂದು ಸುಗೋಮಯದಿ ಬೆರಸುತ್ತ ಶೋಧಿಸಿ ಸಾರಿಸಿದನಾ ದೇಗುಲವನೆಲ್ಲ (ಬಸವ. ೧೮-೩೪); ನೆರೆದ ಭೂಸುರತತಿಯ ನೋಟಕೆ ಕರೆಸಿ ಕುಳ್ಳಿರಿಸುವನು ಸಾತ್ಯಕಿ ಭರದಿನೆಂಜಲ ತೆಗೆಸಿ ಸಾರಿಸುವುದು ವಿಕರ್ಣಂಗೆ (ಕುವಾಸ. ೭-೧೭). ೨. ಸುಗಂಧದ್ರವ್ಯ, ಔಷಧ ಮುಂತಾದುವನ್ನು ಲೇಪಿಸು ,– ಸವರು : ಬಾರಲವೊ ಸಾರಥಿ ಸಮೀಪವೊ ದೂರವೋ ನಿನ್ನವಗೆ ಸಾವ ವಿಕಾರ . . . ಔಷಧಿಗಳುಳ್ಳಡೆ ಸಾ [ಪಾಠಾಂ. ಸೇ]ರಿಸೇಱಿನ ಮೇಲುಮಾರ್ಗದ ದಾರಿಯವರಾವಲ್ಲ ಬೇಗುಪಚರಿಸು ನೀನು (ತೊರಕ. ೬-೨೪-೨೦). ೩. ಸವರಿಕೊಳ್ಳು; ಹಚ್ಚಿಕೊಳ್ಳು: ದೆಸೆದೆಸೆಗಳೆಲ್ಲ ಚಂದನಚರ್ಚೆಯಿಂದ ಸಾರಿಸಿದಂತುಟಾಯ್ತು ನಲವೇಱಿದುದು ಸಸ್ಮಾಳಿಯಾ ಶಶಾಂಕೋದಯದೊಳು (ಸಮ್ಮೇ. ೧-೪೦). ೪. ಹರಡು; ಹಾಸು : ಪಗಲಡಗಿದಾ ವೇಳೆಯಲಿ ಸಲಿಲ ಪೊಗದಂತೆ ತೊಗಲ ಸಾರಿಸಿ ಮೇಣಮನ್ನೊರಸಿ ದಿವ್ಯವಸ್ತ್ರಗಳ ಹಚ್ಚಡಿಸಿ ತಲೆಗಿಂಬನಮರಿಸಿ ತರುಣನಂ ಪೊಗಿಸಿ ಕಡುಜವದೊಳು (ಲಕ್ಷ್ಮೀಶ. ೬-೩೩-೧೪). ೫. (ಆಲಂ) ಏನೂ ಉಳಿಯದಂತೆ ಚೊಕ್ಕಟಗೊಳಿಸು: ವೇದೋಜಸುತನೈದಿದನು ರಣವ ಸಾರಿಸಿ ಹೆಣಗಳನೆತ್ತುವೊಡೊಂದು ಕ್ಷಣ ನಿಲಲಂಜಿ ಬೌದಸೆಗೆ ಕುಣಪಗಳೇಡಾಡಿ ಬಿರುದ ಬಿಸುಟು ಹಿಂದಕಣಗೆಟ್ಟು ಸರಿದರು (ಕಂಪಪ. ೧೮-೧೧೫). ೬. ಹಾಳುಮಾಡು; ನಾಶಮಾಡು: ಶಲತಲಾಂತರದಿಂದ ಬಂದಿದ್ದ ಅಸ್ತಿಯನ್ನೆಲ್ಲಾ ಒಂದೇ ವರ್ಷದಲ್ಲಿ ಸಾರಿಸಿದಿಟ್ಟ (ಕೂಡ). **ಸಾರೈಸು** : ೧. "ಸಾರವಣೆ ಸಾರೈಪುದಕ್ಕುಂ" (ಕವಿಕಂ. ೨೫೦); ಇಂಬಾಗಾರೈವುದು ಪುಳ್ಳಿ ಬೆರಟಿಯೊಳಗಣ ಪುಲುವಂ ಸಾರೈಸುವಲ್ಲಿ ದಯೆಯಿಂದಾರೈವುದು (ಸಮಭ. ೬-೧೪) ; ಎಲೆ ಪುತ್ರಿ ನಿನ್ನನು ಪಲವು ನೋಂಪಿಯ ನೋಂತು ನೆಲನನಿರದೆ ಸಾರೈಸಿ ಅಲಸದವುಂಡು ಪಡೆದನು (ಅಂಜಪ. ೯-೧೨೯). [ಸಾರಣೆ + - ಇಸು]

ಸಾರೀರ, ಸಾರಿರ (ಗು). ೧. ಶರೀರಕ್ಕೆ ಸಂಬಂಧಿಸಿದ; ದೈಹಿಕವಾದ : (ಅ). (ನಾ). ೨. ಶರೀರಕ್ಕೆ ಸಂಬಂಧಿಸಿದುದು ; ಶಾರೀರಿಕವಾದುದು : ಶಕಾರಕ್ಕೆ-ಅಶನಿ-ಅಸನಿ . . . ಶಾಪ - ಸಾಪ, ಶಾರೀರ - ಸಾರೀರ (ಶಮದ. ೨೫೩ ಪ್ರಯೋ). **ಸಾರಿರ**: ೩. ಕಂಠದ ನಾದಮಾಧುರ್ಯ : ನಾರಾಟಕಾವುಳವೆಂಬ ಧ್ವನಿಗೂಡಿ ನಿಗುರ್ವ ಬೌಳುಳವೆಂಬ ಸಾ[ಪಾಠಾಂ. ಶಾ]ರಿರ ಸುಗತಿಯಿಂದನುಬದ್ಧಗೂಡಿ ಪ್ರಗಣಿತಾಳತಿಯಸೆಯ ಸಂಧಿಸೆ ಗಮಕಸಪ್ತಕವು (ಬಸವ. ೧೯-೧೦). [< ಸಂ. ಶಾರೀರ]

ಸಾರು$_1$ 'ಸಾರ್$_1$' ನೋ.

ಸಾರು$_2$ 'ಸಾಜು$_1$' ನೋ.

ಸಾರು$_3$ 'ಸಾಜು$_2$' ನೋ.

ಸಾರು$_4$ 'ಸಾರ$_1$' ನೋ.

ಸಾರುವಭೌಮ, ಸಾರ್ಬಭೌಮ (ನಾ). ೧. ಅತ್ಯುನ್ನತವಾದ ಅಧಿಕಾರ; ಪರಮಾಧಿಕಾರ : ಸಾರುವಭೌಮದ ಪದವನು ನೆನೆಯರೇನುಮನು ಒಳ್ಳಿತೆನ್ನರು . . . ಮುಕುತಿಯನು ಬಯಸುವ ಮಹಾಪ್ರಿತರು (ನಿಭಾಗ. ೧೧-೨೧-೨೧). **ಸಾರ್ಬಭೌಮ** : ೨. ಪರಮಾಧಿಕಾರವುಳ್ಳವನು; ಚಕ್ರವರ್ತಿ : ಏಕಚ್ಛತ್ರದಿಂದಂ ಸುರಪತಿ ವಿಭವಂ ಪಾಳಿಸುತ್ತಿರ್ದ್ದನುರ್ವ್ವೀಶ್ವರಚೂಡಾರತ್ನಂ . . . ತ್ರೈಳೋಕ್ಯಮಲ್ಲಂ ಶಶಿವಿಶದಯಶೋವಲ್ಲಭಂ ಸಾರ್ಬ್ಬಭೌಮ (ಸಾಂದೀಪ. ೩-೪ ; 1047).

[< ಸಂ. ಸಾರ್ವಭೌಮ]

ಸಾರುವೆ 'ಸಾರ್ವೆ' ನೋ.

ಸಾರೂಪ್ಯ (ನಾ). ೧. ತಾದ್ರೂಪ್ಯ; ಸಮಾನರೂಪತ್ವ : ವೀರರಿರಿದಿರಹ ಹೊತ್ತು ರಣಮ್ಮಿಲಾರರಾದರು ಮರಳಿ ತೆಗೆವುತ ಭೈರವನ ಸಾರೂಪ್ಯವಾದರು (ಕುವಾಸ. ೫-೭೦) ; ಧಾತ್ರೀನರರೆಲ್ಲಂ ಚಂದ್ರಸಾರೂಪ್ಯಮನೆ ಪಡೆದರೆಂಬಾತೆ ಕಣ್ಗೊಪ್ಪುತಿರ್ದರ್ (ರಾಜಶೇ. ೧೧-೬೭). ೨. [ತತ್ತ್ವಶಾ] ಮೋಕ್ಷದ ನಾಲ್ಕುಪ್ರಕಾರಗಳಲ್ಲಿ ಒಂದು ; ಇಷ್ಟದೇವರಿಗೆ ಸಮಾನವಾದ ರೂಪವನ್ನು ಪಡೆಯುವುದು : ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತು ಮಾಡಿ ಸಲಹಿದ ಸುಖವು ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಂತುಟಲ್ಲಾ (ಬಸವ. ೪೭೪); ಸಾರೂಪ್ಯದ ಸುಧೆಯಂತೆ . . . ಗಿರಿಜಾತೆ ಶೈಶವಲೀಲೆಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬಳೆಯುತಿರ್ದಳ್ (ಗಿರಿಕ. ೬-೬೯ ವ); ಸೇವಿಸುವಜೀಕೆಯ ದಾಸರ್ಗೆ ಮಱುವುಟ್ಟುಂ ಪೋಗೊಳಿಸಿ ಸಾರೂಪ್ಯಮನಿತ್ತು ತನ್ನಂತು ವಾಲ್ಪ ಸಾಲ್ದೋಳಿನೆಸವ ಪುರುಷೋತ್ತಮನೊಂದು ವಾಸದ ಗುಡಿಯಿರ್ಕುಂ (ರಾಮಾಶ್ವ. ೭೪-೮). [ಸಂ.]

ಸಾರೂಪ್ಯಪದ (ನಾ). ನಾಲ್ಕು ಮೋಕ್ಷಪದವಿಗಳಲ್ಲಿ ಒಂದು; ಇಷ್ಟದೇವತೆಗೆ ಸಮಾನವಾದ ರೂಪವನ್ನು ಪಡೆದಿರುವ ಸ್ಥಾನ : ನಿಮ್ಮ ಗಣಂಗಳ ಧ್ಯಾನವೇ ಎನಗೆ ಸಾರೂಪ್ಯಪದವಯ್ಯಾ (ಉಂಪಪ. ೪. ೧೭೩-೨೩೩); ಸಾರೂಪ್ಯಪದವಿತ್ತನೀಶ್ವರನವಂಗೆ (ವೀಶ್ವಪು. ೨-೭ ಸೂಚನೆ). [ಸಂ.]

ಸಾರೆ$_1$ (ನಾ). ಹತ್ತಿರ; ಸಮೀಪ : ಎಳೆಯೊಳ್ ತೋಱಿದ ರೂಪನಾಗಳ ನಭೋಭಾಗಾಗ್ರದೊಳ್ ತೋರ್ಪನಾಗಳೆ ಗೆಂಟಾಗಳೆ ಸಾರೆಯಾಗಿ ಪೊಳೆವಂ ಸೂಕ್ಷ್ಮಾಂಗನಾಗಿರ್ಪಂ (ಆದಿಪು. ೭-೧೨೧); ಗುರುವಿಂಗೂ ಶಿಷ್ಯಂಗೂ ಆವುದು ದೂರ ಆವುದು ಸಾರೆಯೆಂಬುದನಾರು ಬಲ್ಲರು (ಅವಚಂ. ೫೧೧-೯೪೯); ಸಾರೆಯಾಯ್ತಸ್ತಮಯಸಮಯ (ಕುವಾಅ. ೧೭-೧೩). [< ಸಾರ್$_1$]

ಸಾರೆ$_2$ 'ಸಾರಿ$_1$' ನೋ.

ಸಾರೆ$_3$ ' ಸೇರೆ$_1$ ' ನೋ.

ಸಾರೆ$_4$ (ಅ). ೧. ಹತ್ತಿರದಲ್ಲಿ; ಸಮೀಪದಲ್ಲಿ: ಆ ಪೊಬಲ ಸಾರೆ ಪರಾಳಕೂಟಮೆಂಬೂರೊಳ್ ದೇವಿಲನೆಂಬೊಂ ಶಾಕಟಿಕಂ ಪರದಂ (ವಡ್ಡಾರಾ. ೭೬-೮) ; ಕಾದಂಬರಿ ಕೇಯೂರಕನುಮಂ ಪರಿಜನಮುಮನರಸನ ಸಾರೆಯಿರವೇಱ್ದು (ಕಾದಂಬ. ೧೬೦). ೨. ಒಡನೆ; ಜೊತೆಯಲ್ಲಿ : ಶ್ರೀಧರೆಯುಂ ಯಶೋಧರೆಯುಂ ಗುಣವತಿ ಆರ್ಯಕೆ(ಕಂತಿಕೆ)ಯರ ಸಾರೆ ತಪಂಬಟ್ಟರ್ (ಜಾವುಂಪು. ೧೫೯); ಪುದಿದ ಸುತಮೋಹದಿಂದೋದಿದೊಡಂ ಮುನಿದನದ ಸಾರೆ ಬಸದಿಯೊಳಿರ್ದಾಡಿದೊಡಮಿ ವನಲಸುಗೆಂದಾನಿದನಱಿಯದೆ ದುಷ್ಕಕಷ್ಟರೊದನಾಡಿಸಿದೆಂ (ಧರ್ಮಾಮೃ. ೨-೮೦); ಈತನೊಡ್ಡಿನ ಸಾರೆ ಸಂಗರಕಾತುಕೊಂಡದೆ ಕೃಪನ ದಳಸಂಘಾತವೊಂದಕ್ಕೋಣೆ ಸುಭಟರ ಸಾಲ ಮಧ್ಯದಲಿ (ಕುವಾಭೀ. ೩-೧೨). [< ಸಾರೆ$_1$]

ಸಾರೆಕರೆ 'ಸಾರೆಗರೆ' ನೋ.

ಸಾರೆಗದ್ದೆ (ನಾ). ಒಂದು ಬಗೆಯ ಗದ್ದೆ : ಶ್ರೀಕಾಳೇಶ್ವರದೇವರಂಗಭೋಗಕಂ ತ್ರಿಕಾಲಪೂಜೆ ಸೊಡರುನಿವೇದ್ಯಗುರುಪರ್ವ್ವ ನಿಮಿತ್ತವಾಗಿ ದಿಟ್ಟ ದತ್ತಿ X X X ಬಡಗಲು ಹಿರಿಯ ಕೆಱೆಯ ಕೆಳಗೆ ಗೌಡಉಂಬಳಿಯ ಸಾರೆಗದ್ದೆ ಮತ್ತರೊನ್ದು (ಎಕ. VI. ತೀರ್ಥ. ೧೨-೩೪ ; 1168). [ಸಾರೆ$_2$ + ಗದ್ದೆ (< ಗಱ್ದೆ)]

ಸಾರೆಗರೆ, ಸಾರೆಕರೆ (ಕ್ರಿ). ಬಳಿಗೆ ಬರಹೇಳು; ಹತ್ತಿರಕ್ಕೆ ಕರೆ : ಅಂದು ಕೂಡಲತ್ಯಾತುರಚಿತ್ತೆ ಸಾರೆಗರೆದಿನ್ನೆಗಮೇಕೆಯೊ ಬಾರದಿರ್ದೆಯೆಂದಾ ತರಳಾಕ್ಷಿ . . . ನುಡಿದಳ್ (ನೇಮಿಪು. ೭-೧೪೨) ; ಭೈರವೇಂದ್ರಂ ಸಂತಸಂದಳೆದು ಪುತ್ರಸಂ ಸಾರೆಗರೆದು (ಕೊಟ್ಟೂಪು. ೧೪-೧೬). **ಸಾರೆಕರೆ** : ಆಸ್ಥಾಯಿಕಾಜನಕ್ಕೆ ಲಕ್ಕೆತೆಱದಿಂ ಪೊಗಟ್ಟು ಸಾರೆಕರೆದೇಱಲಿಕ್ಕಲ್ಪೇಟ್ಟು ಕುಳ್ಳಿರಿಸಿ (ಶಾಂತಿಪು. ೬-೫೩ ವ). [ಸಾರೆ$_4$ + ಕರೆ$_1$]

ಸಾರೆಬರ್ 'ಸಾರೆವರ್' ನೋ.

ಸಾರೆಬರು 'ಸಾರೆವರ್' ನೋ.

ಸಾರೆವರ್, ಸಾರೆಬರ್, ಸಾರೆಬರು (ಕ್ರಿ). ಸಮೀಪಿಸು; ಸನಿಹಕ್ಕೆ ಬರು: ನೋಟಕರ್ ತಳವೆಳಗಾಗೆ ಸಾರವರೆ ನೀರದಮಾರ್ಗದಿನಂದು ನಾರದಂ (ಪಂಪಭಾ. ೬-೬); ಮಹಾಪ್ರತೀಹಾರನಪ್ಪ ಸುಭದ್ರನೆಂಬುದೊಂದು ವನಮಹಿಷನ ಸಾರೆವಂದು (ಪಂಚತಂ. ೩೩-೭) ; ಸರಸರನೆ ಸಾರೆವಂದು ಕೆಲದೊಳಿಕ್ಕಿರ್ದಾನೆದಲೆಯ ನೆತ್ರಪ್ಪುದಿದ ಮುತ್ತಂ ದಾಳಿಂಬಬೀಜಂಗೆತ್ತಿತ್ತಿ ಕಳ್ಳನೆ ಮುಕ್ಕಲ್ ನೋಡಿ (ರಾಜಶೇ. ೫-೫೫ ವ). **ಸಾರೆಬರ್** : ಆನುಮಾ ತೀರ್ಥದ ಸಮೀಪದೊಳ್ ತಾಪಸರೂಪಧಾರಿಯಾಗಿರ್ದು ಸಾರೆಬಂದುದೇನಾನುಂ ಪ್ರಾಣಿಗಳಂ ತಿಂದು ಕಾಲಮಂ ಕಟಿವೆಂ (ಪಂಚತಂ. ೪. ೧೭೬-೧೪). **ಸಾರೆಬರು** : ಸಾರೆಬರವರೆ ಕಂಡನಲ್ಲಿ ಕುಬೇರನಾಳ್ದುದು ತದೀಯ ಸರೋರುಹದ ಕಾಹಿನಲಿ ಯಕ್ಷರು ಲಕ್ಷಸಂಖ್ಯೆಯಲಿ (ಕುವಾಅ. ೧೦-೪೫); ಆ ಮೃಕಂಡುಮುನಿ ತನ್ನಂದನಂ ದಿನಂ ಸಾರೆಬರೆ ಕಂಡು ಶಿವಪೂಜೆಯಂ ಮಾಡುತಿರಲು (ಚಿಬಪು. ೫೧-೧೯). [ಸಾರೆ$_4$ + ವರ್]

ಸಾರೈಸು 'ಸಾರಿಸು$_2$' ನೋ.

ಸಾರೋಕ್ತಿ (ನಾ). ಸಾರವತ್ತಾದ ನುಡಿ ; ಸತ್ತ್ವವುಳ್ಳ ಮಾತು : ತನಯೆ ತಪದಿಂದೆ ನೀಂ ನಿನ್ನನೆಯಲ್ಲದೆ ನಮ್ಮ ಕುಲಮುಮಂ ಬೆಳಗಿದೆಯೆಂತೆನೆ ಮುಗಿಲ ಮುತ್ತು ಮುಗಿಲಂ ನೆನೆಯಿಸಿ ಮಂಡಲಿಯ ನಿಪುಣರಿಂ ಪೊಗಳ್ಚಿಸದೇ ಎಂದು ಗಂಭೀರಧೀರೋದಾರಸಾರೋಕ್ತಿಗಳಂ ನುಡಿದು (ಶಾಂತಿಪು. ೪-೧೦೫ ವ). [ಸಂ.]

ಸಾರೋಟು, ಸಾರಟು (ನಾ). ಜೋಡುಕುದುರೆಗಳನ್ನಾಗಲಿ ಎತ್ತುಗಳನ್ನಾಗಲಿ ಹೂಡಿರುವ ಬಂಡಿ , – ಸವಾರಿಗಾಡಿ : ಕೈಯಾಡಿತು ಬೀಳಲಿಲ್ಲ ಏಟು; ಕಾಲಾಡಿತು, ಓಡಲಿಲ್ಲ ಕ್ರಾಂತಿಯ ಸಾರೋಟು (ನಡೆಬಂ. ೭೨-೧೯); ಸುಸಜ್ಜಿತವಾದ ಸಾರೋಟಿನ ಮೇಲೆ ಅವರನ್ನು ಕುಳ್ಳಿರಿಸಲಾಯಿತು (ಪ್ರೇಮಾಶ್ರ. ೨೫೪). **ಸಾರಟು** : ವಾಗ್ದೇವಿಯು ಕೂತುಕೊಂಡಿರುವ ಸಾರಟಿನ ಎತ್ತುಗಳು ಕಾಣಲಿಕ್ಕೆ ಪುಷ್ಟಿಯಾಗಿದ್ದರೂ ಸಾರಟು ಮೆಲ್ಲಗೆ ಎಳೆಯುವ ದೆಸೆಯಿಂದ ಚಂಚಲನೇತ್ರರ ಅವಸರವು ಹದಮೀರಿತು (ವಾಗ್ದೇವಿ. ೪೧). [← ಇಂ. Chariot. / ತಮಿ. ಚಾರಟ್ಟು ; ತುಳು. ಸಾರಟ್, ಸಾರೊಟು ; ತೆಲು. ಸಾರಟು]

ಸಾರೋದ್ಧಾರ (ನಾ). ೧. ಅತ್ಯುತ್ತಮವಾದುದು; ಉತ್ಕೃಷ್ಟವಾದುದು: ಹರಿಯೆ ಚಿತ್ತಯಿಸೈಯಹಿಂಸಾಪರಮಧರ್ಮವು ಎಂಬ ವಾಕ್ಯದ ಸರಣಿ ಸಾರೋದ್ಧಾರವಲ್ಲಾ ಸಕಲದರುಶನಕ್ಕೆ (ಕುವ್ಯಾಭೀ. ೩-೫೦). ೨. ಪೂರ್ಣವಾದ ಉದ್ಧಾರ : ವೇದಪುರಾಣತಂತ್ರಗಳ ಸಾರೋದ್ಧಾರ ಮಾಡಿ ಪ್ರಾಚೀನಶಾಸ್ತ್ರದ ಗೌರವವನ್ನು ಉಜ್ಜ್ವಲವಾಗಿರುವಂತೆ ಮಾಡಿದನು (ಸಿಂಧಿ. II, ೩೭೭). ೩. ಕ್ರಮಬದ್ಧವಾಗಿಯೂ ನಿರಂತರವಾಗಿಯೂ ಆಗುವಂಥದು; ಅಡೆತಡೆಯಿಲ್ಲದುದು : ರಥೋತ್ಸವ ಮುನ್ನಾದ ಸಕಲೋತ್ಸವಂಗಳು ಧರ್ಮಾಧ್ಯಯನ ರಾಮಾನುಜಕೂಟ ಮುನ್ನಾದ ಸೇವೆಗಳು ಸಾರೋದ್ಧಾರವಾಗಿ ನಡೆಯತಕ್ಕ ಬಗ್ಗೆ . . . ನಿಷ್ಕರ್ಷೆಮಾಡಿ (ಎಕ. XIV. ಮೈಸೂರು. ೬೧-೩೩ ; ಸು. 1828); ಹೊಸಗನ್ನಡದಲ್ಲಾಗಲೀ ಹಳಗನ್ನಡದಲ್ಲಾಗಲೀ ಪಂಚಮೀವಿಭಕ್ತಿಯ ಕಾರ್ಯವನ್ನು ತೃತೀಯೆಯೇ ಸಾರೋದ್ಧಾರವಾಗಿ ಮಾಡುತ್ತ ಬಂದಿದೆ (ಸಂಶೋಧ. ೬೯). [ಸಂ.]

ಸಾರೋರ್ವೀಜ (ನಾ). ಸತ್ತ್ವಯುತವಾದ ಮರ : ಸಾರೋರ್ವೀಜಸಮಾಜದಿಂದೆಸೆವ ಲೀಲೋದ್ಯಾನಸಂತಾನದಿಂ . . . ಶ್ರೀಗೃಹರಾಜಿಯಿಂ ಗಜಪುರಂ ಸಂಸೇವ್ಯಮವ್ಯಾಹತಂ (ಸೇಮಿಪು. ೨-೩೬). [ಸಂ.]

ಸಾರ್ಕೆ (ನಾ). ೧. ಸಮೀಪ ; ಹತ್ತಿರ : ಕದಪಿನ ಕಣ್ಣ ಸಾರ್ಕೆಯನಳಂಕೃತಮಪ್ಪ ಗಳಪ್ರದೇಶಮಂ ಪದಕದ ತಾಣಮಂ . . . ಅಂಗುಲೀಕದ ಕುಸುಮಂಗಳಂ ಪಱಿದು ಪತ್ತಿಸಿದಂತೆವೊಲೊಪ್ಪಿ ತೋರ್ಪಿನಂ (ಕಾವ್ಯಸಾ. ೬೬೬ ಕುದ್ರಶ); ನೀರ್ ಪೊರ್ಕುವಟೆಯೊಳ್ ಜೋಲ್ದುಳ್ಳಡೆ ಸಾರ್ಕೆಯೊಳೀಂ ನೃಪನ ಮನಮನಳವಡಿಸಿದುದೋ (ಆದಿಪು. ೧೧-೧೮೫); ಅರ್ಕಕೀರ್ತ್ಯಾದಿರಾಜರ ಮುಖ ನಗೆವೆತ್ತುವರ್ಕನ ಕಂಡಬ್ಜದಂತೆ ಸಾರ್ಕೆಯ ಸಖರು ಮುಂತಾದವರೆಲ್ಲ ಕುಳಿರ್ಕೊಂಡಿದರು ನೋಡಿ ಜಿನನ (ಭರಜಿ. ೭೭-೯೦) . ೨. ಹತ್ತಿರಕ್ಕೆ ಬರುವಿಕೆ ; ಆಗಮನ : ತದ್ಗಾಯಕಾನಾಯಿಕೆಯರ . . . ನೆಱನಱಿದು ಪಾಡುವ ಪಾಟಕ್ಕಂ ಪೊಟ್ಟಱಿದು ಸಾರ್ವ ಸಾರ್ಕೆಗಂ ಮನಂಬೆಚ್ಚು ಪತ್ತೆಪೊಯ್ದಂತಾಗಿರೆ (ಶಾಂತಿಪು. ೩-೫೯ ವ). ೩. ಒಡನಾಟ; ಸಂಗ : ಆ ಪ್ರಸವದ ದಿವ್ಯಸೌರಭದ ಸಾರ್ಕೆಯ ಸಮ್ಮದದಲ್ಲಿ ಕೂಡಿ ಬಂದೆಸಗಿದುದಾ . . . ಮಂದಮಾರುತಂ (ಮಹಾನೇ. ೧೪-೫). ೪. ದೊರಕಿದುದು; ಲಭ್ಯ; ಪ್ರಾಪ್ತಿ : ಸಿರಿಯ ಸಾರ್ಕೆಗಮಾಯತಿಯರ್ಕೆಗಂ ಪೆಱರ್ ಮೇಗೆನಲಿಲ್ಲದಂತು ನೆಗೞ್ದಿರ್ದುದಱಿಂ (ಶಾಂತಿಪು. ೧-೬೮); ಎಸಕದ ಸೋಮವಂಶಜರೊಳಾರ್ದ್ಕೊರೆ ತನ್ನೊಳೆನಿಪ್ಪುದೊನ್ದು ಸಾಹಸದ ನಿಮಿರ್ಕೆ ವರ್ದ್ಧಿಸುವ ರಾಜ್ಯದರ್ಮಕ್ಕೆ . . . ವೈರಿಗಳ ರಾಜ್ಯದ ಸಾರ್ಕೆ ಕಡುಪ್ಪಿಂ ವಿಗುರ್ಚಿಸುವ ಮಾಸೆಯಂ ಸುಡುವ ತೇಜದಳುರ್ಕೆ ಧರಿತ್ರಿಯೊಳ್ ವಿರಾಜಿಸುತ್ತಿರಲ್ (ಎಕ. XI. ದಾವಣ. ೮೫-೨೧ ; 1143) ; ನಿಜಭುಜಕ್ಕೆ ವರ್ಜ ವಸುಮತೀಚಕ್ರದ ಸಾರ್ಕೆಗೆ ಸಂಚಕರಮೆನಿಸಿ ಕೆಯ್ಯಾರ್ದು ಬೆಸನಂ ಪಾರ್ವ ಚಕ್ರರತ್ನಮಂ ಚಕ್ರಧರಸಪಾಂಗ ಲೋಚನಮರೀಚಿಗಳಿನುಜ್ವಳಿಸಿ ಬೆಸಸಲ್ (ಪರ್ಧಪು. ೮-೬೦ ವ). [ಸಾರ್$_1$ + - ಕೆ]

ಸಾರ್ಕೆಗುಡು (ಕ್ರಿ). ಸಮೀಪಿಸಲು ಅವಕಾಶ ಕೊಡು ,– ಆಸ್ಪದ ನೀಡು : ಎನ್ನನಪ್ಪುವಳಿಯಾಸೆಯಿಂ ದೂರದೊಳ್ ನಿಮಿರ್ವ ನಿಡುತೋಳ್ಗಳುಂ ತನ್ನೊಳ್ ತೋಱಿ ಸತ್ವಗುಣಕ್ಕೆ ಸಾರ್ಕೆಗುಡದೆ . . . ಅಚ್ಚಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ ಕಂಡು ಭಯಂಗೊಂಡು (ಕಾದಂಬ. ೫೬೫).

[ಸಾರ್ಕೆ + ಕುಡು$_1$ (< ಕೊಡು$_1$)]

ಸಾರ್ಕೆವರ್ (ಕ್ರಿ). ಹತ್ತಿರಕ್ಕೆ ಬರು; ಸಮೀಪಕ್ಕೆ ಬರು : ಕಂದರ್ಪನಾರ್ಪಿಂ ಕುಟಿಲ ಕುಸುಮಕೋದಂಡದೊಳ್ ಸಾರ್ಕೆವಂದ್ಮೆಮೊಗ ನಿನ್ನಂ ಮಾಣದೆಚ್ಚಂದು (ಶಬಶಂ. ೨-೯).

[ಸಾರ್ಕೆ + ಬರ್ (< ವರ್)]

ಸಾರ್ಚು (ಕ್ರಿ). ೧. ಹತ್ತಿರಕ್ಕೆ ಬರು ; ಸಮೀಪಿಸು : "ಸಾರ್ಚು - ಸಮೀಪಾಗಮನೇ" (ಶಮಧಾ); ಪುಟ್ಟಿ ಸಮಸ್ತಧಾತ್ರಿಗೆ ಭಯಂ . . . ಶಿಶುಪಾಲನಿದಿರ್ಚಿ ಸಾರ್ಚಿದಂ (ಜಗಿ. ೭-೯೫) ; ಸಲ್ಲಲಿತಾಂಗಭೂಷಣದೆ ನಿಲ್ಲದೆ ಜಗವ ಮೋಹಿಪ ಮಿಂದಿವೆಂಗಳು ಪಲ್ಲಕ್ಕಿಯ ಸಾರ್ಚಿದರು (ಮೋಹತ. ೨೪-೪). ೨. ಹೋಗು; ತೆರಳು : ಇನಿಯನ ವರವಾಕ್ಯವ ಕೇಳ್ದು ಮಾನಿನಿ ನನಗೋಲನರ್ಧಾಂಗನೆಗೆ ಮೊನೆದೋಱದೆ ಮೃದುವಾಕ್ಯದಿಂದಡಿಗೆಯ ಮನೆಗೆಲಸಕೆ ಸಾರ್ಚಿದಳು (ಮೋಹತ. ೧೦-೪೧). ೩. ಬಂದು ಸೇರು; ತಲುಪು: ಭವನಾಂಗಣದೊಳ್ ಸಾರ್ಚಿದಿಂದ್ರಾಯುಧಮಂ ಚಂದ್ರಾಪೀಡನೇಱಿ ದಿಗಂತರಂಗಳೆಲ್ಲಮನಂತಹಯಹೇಷಾರವಂಗಳಿಂ ತೆಕ್ಕನೆ ತೀವೆ . . . ಪೊಱಮಟ್ಟು (ಕಾದಂಬ. ೫೧೧). ೪. ಮುಟ್ಟು ; ಸೋಕು : ಚರ್ಚಲ್ ಶಶಿಶಿಶುವಂ ಕಱೆಗರ್ಚಲ್ ಘನಘಟೆಯನುರ್ಚಲಮರದ್ರುಮಮಂ ಸಾರ್ಚಲಿನನೆಂಬ ಸೊಡರನೊಡರ್ಚಿದುವೆನೆ ನೀಳ್ದುವಿದಱ ಶಿಖರಕರಂಗಳ್ (ಕಾವ್ಯಾವ. ೫೫೬). ೫. ತಲುಪಿಸು; ಸೇರಿಸು: ಭವಜಳಧಿಯ ತಡಿಗೆ ಸಾರ್ಚು . . . ನೀಂ ಭವಮಥನಾ (ಆದಿಪು. ೧೦-೫೮); ತಮ್ಮಂ ನಂಬಿದರಂ ಸೊರೆಯ ಕಾಯ್ ಮುಂತಾಗಿ ನದಿಯ ತಡಿಯಂ ಸಾರ್ಚುವುದೆಂದೊಡೆ (ಪಂಚತಂ. ಅ. ೬೫-೧೫); ಎಱೆಯ ಕೇಳ್ ನಿನ್ನ ವಿಯೋಗಸಂತಾಪದ ತೊಱೆಯೊಳು ಮುಳುಗಿರ್ದೆನ್ನ ಮಱೆಯದೆ ತಡಿಗೆ ಸಾರ್ಚಿದಳನೀಕ್ಷಿಪುದು (ಮೋಹತ. ೩೧-೪೦). ೬. ಮುಟ್ಟಿಸು; ತಾಗಿಸು; ಸೋಕಿಸು : ಅವರ್ ಚರಣಕಮಲದೊಳ್ ಶಿರೋಭಾಗಮಂ ಸಾರ್ಚುವುದುಂ (ದಶಕು. ೨-೩೪ ವ); ಬೊಮ್ಮಗೆ ಪೇಳೆ ತನ್ನ ತೋಳೊಳಪ್ಪುವನ ಸ್ಪೃಷ್ಟಿಸಿ ಕುಡಬೇಕೆಂದು ಭಾಳವನಡಿಗೆ ಸಾರ್ಚಿದಳು (ಮೋಹತ. ೯-೨೯). ೭. ಚಾಚು; ನೀಡು: ನಟ್ಟಿರುಳ್ ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ ಮೆಲ್ಲಮೆಲ್ಲನೆ ಪತ್ತುವಿಡಿಸಿ (ಪಂಪಭಾ. ೪-೧೨) ; ಪದಘಾತಕ್ಕೆ ಧರಿತ್ರಿ ಬಾಯ್ವಿಡೆ ಭುಜಾದಂಡಂಗಳಂ ಸಾರ್ಚಿ ಬರ್ಚಿದಿಳಾಸಂಧಿಗೆ ಮೆಯ್ವೊಣರ್ಚಿ (ಪಂರಾಮಾ. ೧೧-೯); ಪೊಸವಾಣಿತಿವುಲ್ಲೆ . . . ತೊರೆದ ಮೊಲೆಯಂ ಸಾರ್ಚ ತಣಿಯೂಡದೆ ನಡೆಗೊಳಿಸಿ ತವಕದಿಂ ಬರುತ್ತುಂ (ಪುಷ್ಪಪು. ೩-೭೬ ವ). ೮. ಧರಿಸು; ತೊಡು: ಚಂಚನ್ಮಣಿಕಿಂಕಿಣಿಗಳನಂಚಿತಮಾಡಿರ್ದ ವಿವಿಧರಚನಾಯುತಸತ್ಕಾಂಚನ ಕಾಂಚೀವಳಯಮುಮಂ ಚೆಲ್ವನಿತಂಬದಲ್ಲಿ ಸಾರ್ಚಿದಳೊಲವಿಂ (ಪಾಧಪು. ೬-೬೯) ; ಮಲಯರುಹಘುಸೃಣಂಗಳಂ ಪೂಸುವಂಗದೊಳ್ ತಳೆವರೇ ಭಸಿತಮಂ ದಿವ್ಯವಸ್ತ್ರಮನುಡುವ ಸೆಳೆನಡುವಿಗಕಟ ವಲ್ಕಲಮನೇಂ ಸಾರ್ಚುವರೆ (ಚಿಪು. ೩೬-೮). ೯. ಧರಿಸುವಂತೆ ಮಾಡು; ತೊಡಿಸು: ಸತಿಗೆ ಮಣಿಪಾದುಕೆಗಳಂ ಸಾರ್ಚಿ ಕೆಲಕೆಲರ್ ಕೃತಪುಣ್ಯೆಗಾದರದಿ ಕೈಗೊಟ್ಟು ಕೆಲಕೆಲರ್ (ವರ್ಧಪು. ೧೩-೫೨); ಶತಕೋಟಿನೀಲಮಾಣಿಕ್ಯದೋಲೆಯ ಬಾಣಸುತೆಯ ಕರ್ಣದೊಳು ಸಾರ್ಚಿದರು (ಮೋಹತ. ೨೩-೩೫). ೧೦. (ಒರಗಿಸಿ) ಇಡು; ಇರಿಸು : ಕೆಲದ ಲತೆಯ ಮೆಳೆಯೊಳ್ ಬಿಲ್ಲುಮಂಬುಮಂ ಸಾರ್ಚಿ ಕೊಳನಂ ಪೊಕ್ಕು (ಪಂಪಭಾ. ೮-೩೮ ವ); ಮೇಗಣ್ಗೆತ್ತಿ ಪಾದಂಗಳಂ ಶಿರಮಂ ಸೂಚಿಯ ಮೇಲೆ ಸಾರ್ಚಿ ತಪಮಂ ಮಾಳ್ಪನ್ನ ಭಾವಂ . . . ಬೀಱಿತಾಶ್ಚರ್ಯಮಂ (ವೃಷಮಿ. ೧೧-೪೬); ಸುಗುಣೋದ್ರೇಕಕೆ ಕೂರ್ತು ವೀರಚಿಕದೇವಂ ಬೀಣೆಯಂ ಲೀಲೆಯಿಂ ತೆಗೆದುತ್ಸಂಗದೊಳಿಟ್ಟು ನೇವರಿಸಿ ವಕ್ಷೋಜಂಗಳೊಳ್ ಸಾರ್ಚಿ ಸೆಳ್ಳುಗುರಿಂ ಠಾವಱಿತೊಂಕಿ . . . ಸರುದೋಱುಗುಂ (ಚಿಕಿ. ೪-೧೩೨). ೧೧. ಹತ್ತಿರಕ್ಕೆ ತರು; ಸಮೀಪಕ್ಕೆ ತೆಗೆದುಕೊಂಡು ಬರು: ತದಬ್ಜಮಂ ನೃಪವರಂ ವಕ್ತ್ರಾಬ್ಜದೊಳ್ ಸಾರ್ಚಿ ಕಂಪು ಕರಂ ಪೊಂಪುಱಿಯೆಂದು ಸೋಲ್ತುಸಿರ್ವಿನಂ ಘ್ರಾಣೇಂದ್ರಿಯೌತ್ಸುಕ್ಯಮಂ ಪ್ರಕಟಂ ಮಾಡಿ ನೃಪಂಗಲಂಪು

ವಡೆದತ್ಯಂಭೋಜಗಂಧಾಸವಂ (ಆದಿಪು. ೪-೬೯) ; ಕಡುಗಲಿ ಚಂಡಿಕೆಯಂ ತನ್ನೆಡಗೈಯಿಂದಡಸಿ ಪಿಡಿದು ಸಾರ್ಚಿ ಕೊರಲ್ಗಾ ಕಡುಗಮನೆ ಘಿರಿಘಿರಿಲನೆಡೆಯುಡುಗದೆ ಕೊಲೆದರರೆ ಮಡಗಿದಂ ನಿಜಶಿರಮಂ (ರಾಜಶೇ. ೧೪-೨೯). ೧೨. ಕೊಡು; ಒಪ್ಪಿಸು : ಪಿರಿದಪ್ಪೀ ದ್ರವ್ಯಮಂ ಸಾರ್ಚಿ ಮೇದಿನಿಕಾಂತಾಪತಿಯಲ್ಲಿ ಮೆಚ್ಚುಗೊಳುವೆಂ (ಧರ್ಮಾಮೃ. ೧೨-೧೪೬); ಎಲ್ಲ ತೇಜಂಗಳಂ ಶರಣತತಿಗೀವುತಂ ಎಲ್ಲ ಮಾನ್ಯಂಗಳಂ ಭಕ್ತರ್ಗೆ ಸಾರ್ಚುತಂ (ಇಳಿರ.ದೀ. ೪೯-೧೨); ತೆಂಗಾಯಿ ಪಲಸು ಕಿತ್ತಳೆ ಮಾವು ಮಾದಲ ಭೃಂಗಾಯಿವಣ್ಗಳು ಸಹಿತ ಹಿಂಗದ ಬಹುಫಲಾದಿಗಳ ತೋಂಟಿಗರು ಸಾರಂಗಪಾಣಿಗೆ ಸಾರ್ಚಿದರು (ಮೋಹತ. ೪-೬೨). ೧೩. (ಪಕ್ಕಕ್ಕೆ) ನೂಕು; ತಳ್ಳು: ತಡವರಿಸಿ ಕೈಯಿಡುವ ಬಾಲಂಗೆ ಮೋಹದಿಂದೆ ಜೋಲ್ದೊಲೆವ ಹಾರಮಂ ಸರಿದು ಮುಯ್ಯಿಗೆ ಸಾರ್ಚಿ ಪಾಲ್ದೊರೆದ ಮೊಲೆಯೂಡಿ . . . ತೂಗುವಳು (ಜೈಮಿಭಾ. ೧೪-೨೧). ೧೪. ಸರಿಪಡಿಸು; ತಿದ್ದು: ನೆವದಿಂ ಪರ್ಚುವ ಮುತ್ತಿನೆಕ್ಕಸರಮಂ ಜೋಲ್ದಿರ್ದುವೆಂಬಂತೆ ಸಾರ್ಚುವ ಕರ್ಣೋತ್ಪಲಮಂ ತೊಡರ್ಚುವ . . . ಅತಿಪ್ರೌಢೆಯ ಪೊರ್ದುವಾಸೆಗೆ ನೃಪಂ ರೋಮಾಂಚಮಂ ತಾಳ್ದಿದಂ (ಮಲ್ಲಿಕಾ. ೩-೪೩); ಚರಣತಳಕ್ಕೆ ಬೀಬ್ಯ ಮಣಿಕಾಂಚಿಯನೆತ್ತದೆಯುರ್ಚುತಿರ್ಪ ನೂಪುರಮನೆ ಸೈತು ಸಾರ್ಚದೆ . . . ಬಂದು ಸಂಭ್ರಮದೊಳೀಕ್ಷಿಸಿದಳ್ ಪದಪಿಂ ತ್ರಿಪಿಷ್ಟನಂ (ಕಾಂತೀಶ್ವ. ೩-೨೯) ; ಮೊಲೆವಿಣ್ಪಿಂ ಬಳ್ಕುತುಂ . . . ಚಲವೇಣೀಭಾರದಿಂದೋಸರಿಸುವ ಮುಸುಕಂ ಸಾರ್ಚುತುಂ ಪಾಣ್ಕೆ ಪೋದಳ್ (ರಸರ. ೪-೧೮೯). ೧೫. ಆವರಣವನ್ನಾಗಿ ಮಾಡಿಕೊಳ್ಳು; ಮರೆಮಾಡಿಕೊಳ್ಳು : ನಡುಗುತ್ತುಂ ಮೇಲುದೆಂದೊರ್ಮೊದಲೆ ತೆಗೆದು ಹಾರಾಂಶುವಂ ಸಾರ್ಚುತಂ . . . ಕಾಂತೆಯೆಂತಾನುಮೆಬ್ಬಳ್ (ಕಾದಂಬ. ೨೩೪) ; ಇದು ಕನಸೆಂಬೊಡಂ ಕನಸಿದಲ್ತು ದಿಟಂ . . . ಅದಲ ಕಾರಣಮಂ ತಿಳಿವನ್ನೆಗಂ ವನಾಂತದೊಳೊಱಗಿರ್ಪೆನೆಂದು ಮುಸುಕಂ ಪದೆದೆನ್ನ ಮುಖಕ್ಕೆ ಸಾರ್ಚಿದೆಂ (ದಶಕು. ೧೧-೩೦) ; ಸೆಱಗ ಮೊಗಕೆ ಸಾರ್ಚ ನಗುವಳು ಕಂಭದ ಮಱೆಗೆ ಹೋಹಳು (ಭರಚ. ೮-೩೯). ೧೬. ಸಿದ್ಧಪಡಿಸು; ಅಣಿಗೊಳಿಸು : ಇಂದುವದನೆ ರುಕ್ಮಿಣಿ ಸತ್ಯಭಾಮೆಯರಂದುಗೆ ಘಲಿರೆಂಬ ರವದಿ ಬಂದು ವಸಂತಪೂಜೆಯ ಮಾಡಬೇಕೆನಲಂದು ಸಾರ್ಚಿದರು ವಸ್ತುಗಳ (ಮೋಹತ. ೧೪-೪೭). ೧೭. (ಬಿಲ್ಲಿಗೆ) ಬಾಣವನ್ನು ತೊಡು,– ಹೂಡು : ಮೊನೆಯಂಬಂ ದೊಣೆಯಿಂದಮುರ್ಚಿ ತಿರುವಾಯೊಳ್ ಸಾರ್ಚಿ ಬೇಗಂ ಪ್ರಹಸ್ತನ ವಕ್ಷಸ್ಥಲಮಂ ಕರುತ್ತಿಸುವುದುಂ (ಪಂಡಾಮಾ. ೧೩-೯೦); ನಿಡುಸರಳ ತುದು ಕೆಲಕೆ ಸಿಡಿಯದಿರ್ಪೊಡೆ ಸಾರ್ಚು ತುಡುಕು (ಜೈಮಿಭಾ. ೨೮-೪೫). ೧೮. ಒಡ್ಡು ; ಈಡು ಮಾಡು: ಇದಕ್ಕೆಣೆಯಾಗಿ ಮದೀಯ ಪುತ್ರನಂ ಮಾಣದೆ ತಂದು ಭಂಡಿಗಿರ ದಿಕ್ಕುವೆನೆಂದು ನಿಜಾತ್ಮಜಾತನಂ ಕ್ಷೋಣಿಪನಂದು ತಚ್ಛಕಟಮಾರ್ಗಕೆ ಸಾರ್ಚಿದಂ (ಉದ್ಭಟ. ೧೨-೮೫). ೧೯. ಕೂಡಿಸು; ಸೇರಿಸು : ಪಲ್ಲವಾಧರವ ಕರ್ದುಂಕಿದು ಪೊಳೆವ ಕೆಂಬಲ್ಲಿಗೆ ರಸದಂಬುಲವ ಮೆಲ್ಲಗೆ ಸಾರ್ಚಿ ನಾಲಗೆಯಿಂದೆ ರತಿದೇವಿ ಬಲ್ಲಂತೆ ಶಾಖಿ ಮಾಡಿದಳು (ಮೋಹತ. ೧೭-೫೯). ೨೦. ತಾಕು; ಎದುರಾಗು : ಚೋಳಂ ಕೊಟ್ಟ ನಾಡಂ ಕೊಡದೆ ಕಾದಿ ಕೊಳ್ಳಿಮನೆ ವಿಜಿಗೀಷುವೃತ್ತಿಯಿನ್ನಮೆತ್ತಿ ಬಳಮೆರಡುಂ ಸಾರ್ಚ್ಚಿದಲ್ಲಿ (ಎಕ. II. ೨೪೦-೨೧ ; 1175). ೨೧. ಒದಗು; ಸಂಭವಿಸು: ಸಾರ್ಚಿದಗಲ್ಕೆಯೊಳಿಂತು ಬೇಟದುಬ್ಬಿಗಮನಾಂತ ನಲ್ಲಳ ಮುಖಾಂಬುಜಮಂ ನಡೆ ನೋಡಿ ನೋಡಿ ಸಾಯದೆ ಬರ್ದುಕಾಡಿದಂ (ಆದಿಪು. ೧೨-೨೫); ಕೃತಶಾಸ್ತ್ರ[ರ್]ಧೃತಶಾಸ್ತ್ರರಪ್ರತಿಹತಪ್ರಾಗಲ್ಭ್ಯರ್ಗಳ್ ಪೃಥಾಸುತರುದ್ಯೋಗಮನೆತ್ತಿಕೊಳ್ಳ ದೆವಸಂ ಸಾರ್ಚಿತ್ತು (ಪಂಪಭಾ. ೪-೮೭). ೨೨. ಉಂಟುಮಾಡು; ಒದಗಿಸು: ನರ್ದೋಷಭಾಸುರತೆಯಿಂ ದಿನರಾಜನಂತೆ ಮತ್ಯತಿ ಬುಧರ್ಗುರುತರಾನಂದಮಂ ಸಾರ್ಚುತಿರ್ಕುಳಿಗೊಳದೆ ಮನವಮಂ ಮಹೀತಳದೊಳು (ನಂದಿಮಾ. ೧-೨೫) ; ಶೋಕರಸಂದಾಳ್ದುದಿಭಂ ವೃಥಾನ್ಯಪರಿಭಂಗಂ ಭಂಗಮಂ ಸಾರ್ಚಿದೇ (ರಾಜಶೇ. ೫-೭೩). ೨೩. ಹರಡು ; ಹಾಸು : ತುಡು ಕೋಲಂ ಹರಿಣಂಗೆ ಸಾರ್ಚು ಬಲೆಯಂ ಕೋಕಂಗೆ (ಕವ್ಯಸಾ. ೧೦೮೪). ೨೪. ಹಬ್ಬು; ವ್ಯಾಪಿಸು : ಪೊಬ್ಬು ಪೊದಬ್ದು ಸಾರ್ಚಿತೋ ಪೊಸಯಿಸಿಯಾಗಸಂ ನೆಲಕುರುಳ್ಚಿತೊ ಪೆರ್ಚಿತುಪೆರ್ಚಿತೆಂಬಿನಂ ಪಸರಿಸುವಾ ಮರಾಟಭಟರಂ ಸದೆದಂ ಚಿಕದೇವಭೂವರಂ (ಅಪ್ರಕಾ. ೨೫-೨೨). ೨೫. ಹಬ್ಬಿಸು; ವ್ಯಾಪಿಸುವಂತೆ ಮಾಡು : ಘಿಡುಘಿಡಿಸಿ ಮೊಳಗುವಸಿತಾಭ್ರಮಂ ಕುಲಗಿರಿತಟಪ್ರದೇಶಕೆ ಸಾರ್ಚುವನಿಲನಂತೆ . . . ನಿರ್ಮಲವಾಜಿಯಂ ಸುವೇಗಂ ತಂದು ನಿಲಿಸಿದಂ ಧರ್ಮಜನ ಸಮ್ಮುಖದೊಳು (ಜೈಮಿಭಾ. ೫-೧೧); ಕ್ಷಾಂತಿಯೇಂ ನಿನ್ನ ಕಡುಸಂತಸದ ತಿಳಿಮೆಗಿನ್ನೆಂತು ನಿನ್ನಯ ಬಳಿಗೆ ತನ್ನ ನೆಳಲಂ ಚಂತೆ ಸಾರ್ಚಿತು? (ಗಿಳಿವಿ. ೮-೯೪). ೨೬. ಸೂಚಿಸು ; ಪ್ರಕಟಪಡಿಸು : ಬೆರ್ಚಂ ಕಟ್ಟಿದ ರೀತಿಯಂ ಮೆಱೆಯೆ ಶಾರ್ದ್ದಂ . . . ಗದೆ ಸುವರ್ಣಸ್ಥಂಭದೊಂದೊರೆಯಂ ಸಾರ್ಚಲ್ (ಪಜ್ಜ್ವಲಂ. ೩-೨೩). ೨೭. ಎಳೆ; ಜಗ್ಗು : ಪಿರಿದುಮಧರ್ವದೆ ಗತಿಗೆಟ್ಟರಸುಗಳೆಲೆ ಪೆಬವುಗೊಂಡರೆಂಬಂತೆ ವಲಂ ಕರವಿಡಿದು ಸಾರ್ಚುವೆತ್ತುವ ತುರಿಪದೆ ಕೆಯ್ಗುಡುವುದಕ್ಕೆ ಲಜ್ಜಿಸರರೆಬರ್ (ಕಾದಂಪೂ. ೫೭೦). [ಸಾರ್ + -ಚ್ಚು]

ಸಾರ್ಚುಂದೊಲೆ (ನಾ). (ಯುದ್ಧದ ಸಂದರ್ಭಗಳಲ್ಲಿ) ಕೋಟೆಗೆ ಒರಗಿಸಿ, ಅದರ ಮೂಲಕ ಹತ್ತುತ್ತಿದ್ದ ಮರದ ದಿಮ್ಮಿ ,– ತೊಲೆ : ದುರ್ಗಕ್ಕೆ ನಿಚ್ಚಣ ಸಾರ್ಚುಂದೊಲೆ ವೀರಸೇತು . . . ಪಡಿಗೋಂಟೆಯೆಂಬ ಬಹುಕೋಟಾಯಂತ್ರ ಸಾಮಗ್ರಿ ತಿಂತಿಣಿಗೊಂಡಾಂತಿರೆ ಲಗ್ಗೆಗಾರ್ದು ವಸುಷೇಣಂ ಸಾರ್ದು ಸೂಟ್ಕೆಸಿದಂ (ಅನಂಪು. ೧೧-೮೩). [ಸಾರ್ಚು + ತೊಲ್ಕೆ]

ಸಾರ್ತರ್ (ಕ್ರಿ). ೧. ಹತ್ತಿರಕ್ಕೆ ಬರು; ಸಮೀಪಿಸು: ''ಸಾರ್ತರ್ (ಸಾರ್ + ತರ್) - ಸಮೀಪಾಗಮನೇ'' (ಶಮಧಾ); ಮುನಿ ವೀತರಾಗನೆಂದುಂ ಬನಮಂ ಸಾರ್ತಕ್ಕುಮಾವ ತೆಱದಿಂ ಪೋಪಂ . . . ಪಗವಂಗೆ ಪಾಪಕರ್ಮಂ ಪೊಲ್ಲಂ (ಕವಿಪ್ರಾ. ೧-೭೯); ಆಂ ಸತ್ತೊಡಂ ನಂಬನೆನ್ನಂ ಮಱುಗುತ್ತಿರ್ದಪ್ಪಳಿಂದೆಂದೆಸಿ ನುಡಿದೊಡಂ ಪೇಟಿನಾನೇನುಮಂ ಕೇಳ್ ಪೆಱತೇಂ ಸಾರ್ತಡವಂ ಕಾಲ್ಪಿಡಿದೊಡವೊಸೆಯಂ (ಕಾದಂಬ. ೫೮೧); ಮನೋಹರೆ ಮಾನ್ಮೆ ಮೇನೆ ಸಾರ್ತಂದು ನಿಜೇಶನಂ ಪ್ರಿಯದೊಳಪ್ಪಿ . . . ಸುಖಾನ್ವಿತೆಯಾಗುತೊಪ್ಪಿದಳ್ (ಗಿಂಕ. ೩-೧೯). ೨. ಒದಗು; ಉಂಟಾಗು: ನುಡಿ ತಡವಪ್ಪುದೊಂದು . . . ನುಡಿಗಳ್ ಮೊಱೆಯಂ ಮಱೆಯಿಪ್ಪುದೊಂದು ಕಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದು (ಪಂಪಭಾ. ೨-೪೯); ಉದಯಂ ರಾಜೇಂದ್ರಚಂದ್ರಾತ್ಮಕನೆನಿಸಿದ ಚಂದ್ರಂಗೆ ಸಾರ್ತಂದುದು (ಕಾದಂಬ. ೬೭೬); ಪದುಳಂ ತ್ರಿಪ್ರಭೃತಿಗ್ರಹಂಗಳಿರೆ ತಂತಮ್ಮುಚ್ಚದೊಳ್ ಭೂಪವಂಶದವಂ ಭೂಪತಿಯಕ್ಕುಂ . . . ಮೂಲತ್ರಿಕೋಣದೊಳಂ ತತ್ಸಮದಿಂ ಗೃಹಂಗಳಿರೆಯುಂ ಸಾರ್ತಕ್ಕುಮಂತಾ ಫಳಂ (ಜಾತಕ. ೧೨-೧). [ಸಾರ್ + ತರ್]

ಸಾರ್ಥ (ಗು). ೧. ಅರ್ಥಸಹಿತವಾದ ; ಅರ್ಥಗರ್ಭಿತವಾದ. ೨. ಗುರಿಯನ್ನು ಹೊಂದಿದ; ಲಕ್ಷ್ಯವುಳ್ಳ. ೩. ಒಂದೇ ರೀತಿಯ ಅರ್ಥವನ್ನುಳ್ಳ; ಸಮಾನಾರ್ಥಕವಾದ. ೪. ಉಪಯುಕ್ತವಾದ ; ಪ್ರಯೋಜನದಿಂದ ಕೂಡಿದ: ಅಮ್ರಸೂನು, ನಿನ್ನ ಬಾಳು ಸಾರ್ಥ ಬಾಳು (ಪೂಂದಳ. ೪೦-೯). ೫. ಸಮೃದ್ಧವಾದ ; ಶ್ರೀಮಂತವಾದ. (ನಾ). ೬. ಅರ್ಥಸಹಿತವಾದುದು; ಅನ್ವರ್ಥವಾದುದು: ಅನುಜಂ ನಾಮಾಕ್ಷರದಿಂದನಂತವೀರ್ಯಂ ಪರಾಕ್ರಮಕ್ರಮದಿಂ ತನ್ನನೆ ತಾನೆ ಪೋಲ್ದುಮೆಂಬಿನಮನಂತವೀರ್ಯಂಗನಂತವೀರ್ಯತೆ ಸಾರ್ಥಂ (ಶಾಂತಿಪು. ೨-೧೧). ೭. ವ್ಯಾಪಾರಸ್ಥರ ಗುಂಪು; ವರ್ತಕಸಮೂಹ : ಸಮುದ್ರದತ್ತಂ ಮಗುಳ್ದು ಬಂದು . . ಆರುಮಱೆಯದಂದಿನಿರುಳು ಸಾರ್ಥಮಂ ಕೂಡಿ ಪೋದಂ (ಚಾವುಪು. ೮೦); ಆ ಬೀಡಂ ಕಂಡೆಡೆಗೊಂಡು ಕಿರಾತಸೇನೆ ಕವಿದಿಱಿಯೆ ನೆರಂಗೆಡ[ದಾ] ಸಾರ್ಥಂ ದೆಸೆಗೆಟ್ಟಡವಿಯೊಳತ್ತಿತ್ತ ಸೂಸಿ ಪೋಪುದುಮಾಗಳ್ ಆ ಸಾರ್ಥದೊಡನೆ ತೀರ್ಥ ಯಾತ್ರಾ ನಿಮಿತ್ತದಿಂ ಬರುತಿರ್ದ ಸಾಗರಸೇನರೆಂಬ ಯೋಗೀಶ್ವರರ್ . . . ಬರ್ಪಿನಂ (ವರ್ಧಮಾ. ೬-೮) ; ನಿರುಪಮನೆಂದು ಪೇಱ್ದು ಪೊಱಮಟ್ಟರದಾಗಳೆ ದಕ್ಷಿಣಾಸೆಯೊಳ್ ಬರುತಿರೆ ಸಾರ್ಥಮೊಂದನಸಮೋದ್ಭಮತತ್ಪರನೆಂದು ಕಂಡದಂ ತ್ವರಿತದಿನೆಯ್ದಿ ವಂದು (ನೇಮಿಪು. ೪-೬೮). ೮. ಮನುಷ್ಯರ ಸಮೂಹ; ಜನಸಮುದಾಯ. ೯. ಯಾವುದಾದರೂ ಸಮಾನಜಾತಿಯ ಪ್ರಾಣಿಗಳ ಗುಂಪು,– ಹಿಂಡು : ''ಸಮರೂಪಜಂತು ಸಮುದಯಮುಮದಕ್ಕುಂ ಸಂಘ ಸಾರ್ಥ(ಮನಿತುಂ) ತಿರ್ಯಕ್ಸಮುದಾಯಂ ಯೂಥಂ ಪಶುಸಮೂಹ(ಮದು ತಾಂ)ಸಮಂತು ಸಮಜ ಮೆನಿಕ್ಕುಂ'' (ಪಸ್ತುಕೋ. ೧೦೨-೨೮). ೧೦. ಯಾತ್ರಿಕರ ಗುಂಪು; ಯಾತ್ರಾರ್ಥಿಗಳ

ಸಮೂಹ. ೧೧. ರಾಶಿ; ಒಟ್ಟಿಲು: ಯಮತನೂದಂ . . . ನಿನಗಾವ ವಸ್ತುವುಂ ತೀರದುದಿಲ್ಲವಾದೊಡಮಿವಂ ಜನರಂಜನೆಗಿತ್ತೆನೆಂದು ದೈತ್ಯಾರಿಗೆ ಕೊಟ್ಟನುತ್ತಮಗಜಾಶ್ವರಥಾದಿ ಪದಾರ್ಥಸಾರ್ಥಮಂ (ಜಗವಿ. ೧೭-೫೯). [ಸಂ.]

ಸಾರ್ಥಕ (ಗು). ೧. ಅರ್ಥದಿಂದ ಕೂಡಿದ; ಯಥಾರ್ಥವಾದ : ಹೊಯಿಸಳ ಬಿಟ್ಟದೇವಪ್ರಭುವು . . . ಭಗವಂತನ ಆಶೀರ್ವಾದವನ್ನೂ ಆತನ ನಾಮಾಂಕಿತವೆ ಆದ ವಿಷ್ಣುವರ್ಧನನೆಂಬ ಸಾರ್ಥಕನಾಮವನ್ನೂ ಆಂತರು (ಶಾಂತಲಾ. ೧೫೧). ೨. ಪ್ರಯೋಜನವುಳ್ಳ; ಸಫಲವಾದ; ಉಪಯುಕ್ತವಾದ. (ನಾ). ೩. ಅರ್ಥಪೂರ್ಣವಾದುದು; ಯಥಾರ್ಥವಾದುದು: ಕುವಲಯಮಂ ಮೃದುಕರಪಾತವಿಳಾಸದಿನೆಯ್ದಿ ನೀನಲರ್ಚ ನಿರ್ಮಿಸಿ ಭುವನಾಂತರಾಳದೊಳ್ ತನುಭವ ನಿನ್ನಯ ರಾಜನಾಮಮಂ ಸಾರ್ಥಕಮಂ (ಚಂದ್ರಪ್ರ. ೪-೨೦); ನನ್ನ ರಾಜಶಬ್ದವು ಸಾರ್ಥಕವಾದದ್ದು (ಶಾಕುಂತ. ೬೫-೨೨); ಮಂಥರೆಯ . . . ಬದುಕು ಸಾರ್ಥಕ ಮಧುರಮಾಯ್ತು ಶಶುಸ್ಪರ್ಶನಾಧಿಯ ಪ್ರೇಮಸೌಂದರ್ಯ ಮಹಿಮೆಯಲಿ (ಶ್ರೀರಾಮಾ . ೨೩-೬೧). ೪. ಫಲಕಾರಿಯಾದುದು; ಸಫಲವಾದುದು: ನೋಳ್ಪುದೀ ಮರದೊಳದಮ್ಮೊಂದು ಫಲವಿದೆ ಮಾಗಿ ಸಕಾಲಿಕವಾಗಿ ನೆರೆದಿ ಹಣ್ಣಿದೆ ಸಾರ್ಥಕವಾಗಿದೆ (ಇಂಚಾಪ. ೧೪೭-೨೨). ೫. ಪ್ರಯೋಜನ; ಉಪಯೋಗ: ಆಗಿ ಹೋದ ಮೇಲೆ ಚಿಂತಿಸುವುದರಲ್ಲಿ ಯಾವ ಸಾರ್ಥಕವೂ ಇಲ್ಲ (ದೇವಹಂ. ೨೫೯). ೬. ಗುಂಪು; ಸಮೂಹ: ಜಗಮನ ದಿರ್ಪಲಾರ್ಪ ಬಿರುದಾಂತ ಬಲಂಗಳನೆತ್ತಿ ನುಂಗಿ ವಿಳಾಸಮೊಪ್ಪೆ ಗದ್ದಿಗೆಯೊಳಗಿರ್ದು ದಗ್ಗಳೆಯಗ್ಗದ ಪಾರ್ಥಿವ ಪುತ್ರಸಾರ್ಥಕಂ (ಅನಂಪು. ೨-೨೮). [ಸಂ.]

ಸಾರ್ಥಕತೆ (ನಾ). ೧. ಅರ್ಥಪೂರ್ಣತೆ ; ಯಥಾರ್ಥತೆ : ಪ್ರಬಂಧಕ್ಕೆಲ್ಲ ಒಂದೇ ಪ್ರಧಾನರಸವನ್ನು ತರುವುದರಿಂದ ಅತಿಶಯವಾದ ಸಾರ್ಥಕತೆಯಂತೆ ಸೌಂದರ್ಯಾತಿಶಯವೂ ಬರುತ್ತದೆ (ಧ್ವನ್ಯಾಲೋ. ೨೪೬). ೨. ಸಫಲತೆ ; ಸಾಫಲ್ಯ : ಪ್ರಯತ್ನ ಪುರುಷಜನ್ಮದ ಸಾರ್ಥಕತೆ ಎನ್ನುತ್ತಾರೆ, ತಿಳಿದವರು (ಚಿತಂಪಾ. ೩೩). [ಸಂ. ಸಾರ್ಥಕತಾ]

ಸಾರ್ಥಕ್ಯ (ನಾ). ೧. ಸಾರ್ಥಕತೆ : ಶಿಕ್ಷಣವ್ಯವಸ್ಥೆಯ ಸಾರ್ಥಕ್ಯವನ್ನು ನಿಷ್ಕರ್ಷಿಸುವಾಗ . . . ಎಲ್ಲ ಅಂಶಗಳನ್ನೂ ಪರೀಕ್ಷಿಸಬೇಕು (ಶಿಕ್ಷಣ. ೩೩೯). ೨. = ಸಾರ್ಥಕತೆ ೨: ಸರಿಯಾದ ವಿವೇಚನೆಯಿಂದ ಪ್ರಯೋಗಿಸಿದಂತಹ 'ರೂಪಕ' ವೇ ಮೊದಲಾದ ಅಲಂಕಾರವರ್ಗವೂ ಧ್ವನಿಗೆ ಆತ್ಮಭೂತವಾದ ಶೃಂಗಾರದಲ್ಲಿ ಸಾರ್ಥಕ್ಯವನ್ನು ಪಡೆಯುತ್ತದೆ (ಧ್ವನ್ಯಾಲೋ. ೮೦). ೩. ಪರಿಪೂರ್ಣತೆ; ಸಂಪೂರ್ಣತೆ : (೫). [ಸಂ.]

ಸಾರ್ಥತೆ (ನಾ). ೧. ಅನ್ವರ್ಥವಾಗಿರುವಿಕೆ; ಯಥಾರ್ಥತೆಯನ್ನು ಹೊಂದಿರುವಿಕೆ: ಪ್ರಚುರಚಂದನ ನಂದನಗಂಧದಿಂ ದಿಶಾವರಿಧಿಯನೆಯ್ದೆ ಬಾಸಣಿಸುತಿರ್ಪುದು ಸಾರ್ಥತೆಯಂ ನಿಜಾಖ್ಯೆಯೊಳ್ ನೆರಪಿ ಸುಗಂಧಿಮಂಡಲ ಮಿಳಾರಮಣೀರಮಣೀಯಕುಂಡಲಂ (ಚಂದ್ರಪ್ರ. ೩-೧೧). ೨. ಸಮೃದ್ಧವಾಗಿರುವಿಕೆ ; ಶ್ರೀಮಂತವಾಗಿರುವಿಕೆ : (೫). [ಸಂ. ಸಾರ್ಥತಾ]

ಸಾರ್ಥನಾಥ (ನಾ). ವ್ಯಾಪಾರಿಗಳ ತಂಡದ ಮುಖ್ಯಸ್ಥ : ಶ್ರೀವಿಭುತಂತ್ರಗುಪ್ತನತಿ ನಿರ್ಮಳಧಾರ್ಮಿಕ ಚಂದ್ರಗುಪ್ತನೆಂಬಾ ವರಸಾರ್ಥನಾಥರುರುಮಾರ್ಗಶ್ರಮದಿಂದೆ ಬಂದು . . . ಬಿಟ್ಟರುದಾರತೀರದೊಳ್ (ಪಾರ್ಶ್ವಪು. ೪-೧೦೬). [ಸಂ.]

ಸಾರ್ಥನಾಮ (ನಾ). ಅನ್ವರ್ಥಕವಾದ ಹೆಸರನ್ನು ಹೊಂದಿದ ವ್ಯಕ್ತಿ : ಕಥನಕಲೆಯಲ್ಲಿಯೇ ಆನಂದವನ್ನು ಪಡೆದು ಆನಂದವನ್ನು ನೀಡಬೇಕೆಂಬ ಉದ್ದೇಶವನ್ನು ಹೊಂದಿ ಸಾರ್ಥನಾಮರಾದ ಆನಂದರು . . . ಕಡೆಯ ಕಾಣಿಕೆಯನ್ನು ಸಲ್ಲಿಸಿದರು (ಸಮರ್ಪ. ೧೫೮). [ಸಂ. ಸಾರ್ಥನಾಮನ್]

ಸಾರ್ಥಪತಿ (ನಾ). = ಸಾರ್ಥನಾಥ : ಸಮುನ್ನತಧರ್ಮಶ್ರವಣಕ್ಕೆ ಸಾರ್ಥಪತಿಗಳ್ತಾಮಬ್ಬಿಯಂ ಮಾಡಿದರ್ (ಪಾರ್ಶ್ವಪು. ೪-೧೦೬). [ಸಂ.]

ಸಾರ್ಥವಾಹ (ನಾ). ೧. ವ್ಯಾಪಾರಿಗಳ ತಂಡದ ಮುಖ್ಯಸ್ಥ; ವರ್ತಕರ ಮುಖಂಡ ,– ಮುಂದಾಳು : (ಲೋಕಸ. ೩೦). ೨. ವ್ಯಾಪಾರಿ; ವರ್ತಕ : "ಮೈದೇಹಕಃ, ಸಾರ್ಥವಾಹಃ . . . ಕ್ರಯವಿಕ್ರಯಿಕಃ – ಆ ವರ್ತಕತನ ಮಾಡುವವನ ಹೆಸರು" (ಸಿದ್ಧಾಂತ. ೨೯೭). [ಸಂ.]

ಸಾರ್ಥವಾಹಕ (ನಾ). = ಸಾರ್ಥವಾಹ ೧: ಧರ್ಮಸ್ವಾಮಿ ಜಿನೇಶ್ವರ ಧರ್ಮರತಂ ಸಾರ್ಥವಾಹಕಂ ಬಂಧು[ಬ]ಳರ್ ಮರ್ಮರಪತ್ರಾಳಿಯೊಳ್ ಪೆರ್ಮರದಿಟ್ಟಿಡೆಯೊಳಿಲ್ಲಿ ಬೀಡಂ ಬಿಟ್ಟಂ (ವರ್ಧಮಾ. ೬-೭). [ಸಂ.]

ಸಾರ್ಥಾಧಿಪತಿ (ನಾ). = ಸಾರ್ಥವಾಹ ೧ : ಆ ಶಾಂತಾತ್ಮರಂ ಸಾರ್ಥಾಧಿಪತಿಗಳತಿಶಯತೀರ್ಥಮೆ ತಮ್ಮಿದಿರ್ಗ ವಂದುದೆಂದನುಪಮಪುಣ್ಯಾರ್ಥಿಗಳಮಳಚರಿತ ಕೃತಾರ್ಥರನೊಲವಿಂದೆ ಬಂದು ಬಂದಿಸಿದರವರ್ (ಪಾರ್ಶ್ವಪು. ೪-೧೦೫). [ಸಂ.]

ಸಾರ್ದ 'ಸಾರ್[1]' ಪರಾ.

ಸಾರ್ದು 'ಸಾರ್[1]' ಪರಾ.

ಸಾರ್ದ್ರ (ಗು). ೧. ತೇವದಿಂದ ಕೂಡಿದ ; ಒದ್ದೆಯಾದ. ೨. ಮೃದುವಾದ ; ಕೋಮಲವಾದ : 'ಸಾರ್ದ್ರವಿಲೋಕನ', 'ಸಾರ್ದ್ರಹೃದಯ' ಪರಾ. (ನಾ). ೩. ತೇವದಿಂದ ಕೂಡಿದುದು; ಒದ್ದೆಯಾದುದು : "ಆರ್ದ್ರಂ ಸಾರ್ದ್ರಂ" (ವ್ಯಾಕೋ. ೧೦೬-೫೧). [ಸಂ.]

ಸಾರ್ದ್ರತೆ (ನಾ). ತೇವ ; ಆರ್ದ್ರತೆ : ಮಿತ್ರಪಾರ್ಥಿವಾಂತರಂಗಚಂದ್ರಕಾಂತಸಂತಾನಮಂ ಸಾರ್ದ್ರತೆಗೆ ಸಲ್ಲಿಸಿಯುಂ (ಚಂದ್ರಪ್ರ. ೧೩-೨೫ ವ). [ಸಂ. ಸಾರ್ದ್ರತಾ]

ಸಾರ್ದ್ರವಿಲೋಕನ (ನಾ). ಆರ್ದ್ರತೆಯಿಂದ ಕೂಡಿದ ದೃಷ್ಟಿ ; ಪ್ರೇಮದಿಂದ ಕೂಡಿದ ನೋಟ : ಇನಿಯನ . . . ಸಾರ್ದ್ರವಿಲೋಕನಮಾತನೊಂದು ಸೋಂಕಿನಿತಿರದಾಜಿಪಂತೆನಗೆ ತಾಪಮನಾಜಿಸಲಾಜವೀ ವ್ಯಾಕಾಳನಿಕರವೀ ಹಿಮಾಂಬುಲವಂ (ಚಂದ್ರಪ್ರ. ೮-೬೫). [ಸಂ.]

ಸಾರ್ದ್ರಹೃದಯ (ನಾ). ೧. ಮೃದುವಾದ ಮನಸ್ಸು ; ಕೋಮಲಹೃದಯ. ೨. ಮೃದುಹೃದಯವುಳ್ಳವನು : ದುಃಖದತಿಶಯಬಲೆಯೊಳ್ ಮಲುಮಲಸೆ ಮಱುಗಿ ಒಲ್ಮಿರ್ದವಳಂ ಕಂಡು ಕರುಣಸಾರ್ದ್ರಹೃದಯಂ ಮನ್ಮು[ಗ]ದ್ಧದಕಂಕನು ಮಾಗಿ ನೀಡುಂ ಭಾಮಿಸಿ ನೋಡಿ (ಸುಕುಮಾ. ೪-೬೦ ವ). [ಸಂ.]

ಸಾರ್ದ್ರಾಂತರಂಗ (ನಾ). = ಸಾರ್ದ್ರಹೃದಯ ೨ : ಪಿತೃಸಂದೇಶದಿಕಾ 'ಮಹೋನ್ನತಿಯುತಂ ಸಾರ್ದ್ರಾಂತರಂಗಂ . . . ಪ್ರಭಾವತಿಯೆಂಬಗ್ಗದ ಕನ್ನೆಯಂ ಮದುವೆನಿಂದಂ (ಚಂದ್ರಪ್ರ. ೪-೧೨). [ಸಂ.]

ಸಾರ್ಧ (ಗು). ಅರ್ಧದಿಂದ ಕೂಡಿದ : ಆ ಮಹೀಧರದ ಚೂಲಿಕಾಗ್ರದಿಂ ವಾಲಾಗ್ರಮಾತ್ರಾಂತರಿತಮಾಗಿ ಸಾರ್ಧರಜ್ವಭ್ಯಂತರದೊಳ್ ಸೌಧರ್ಮೇಂದ್ರನ ಋತುವಿಮಾನಂ ನಡುವಾಗೆ (ಸುಕುಮಾ. ೧೧-೬೦ ವ). [ಸಂ.]

ಸಾರ್ಪಿಷ್ಕ (ನಾ). ತುಪ್ಪದಲ್ಲಿ ಮಾಡಿದುದು : "ತುಪ್ಪದಿಂ ಸಂಸ್ಕೃತಮಾದುದು ಸಾರ್ಪಿಷ್ಕಂ" (ವ್ಯಾಕೋ. ೯೪-೧೨). [ಸಂ.]

ಸಾರ್ಬಭೌಮ 'ಸಾರುವಭೌಮ' ನೋ.

ಸಾರ್ಬರಿ (ನಾ). ಅರುವತ್ತುಸಂವತ್ಸರಗಳಲ್ಲಿ ಒಂದು; ಶಾರ್ವರಿ : ಶ್ರೀಸಿಂಹಣವಿಜಯ ವಿಜಯರಾಜ್ಯದ ೩೧ನೆಯ ಸಾರ್ಬರಿಸಂವತ್ಸರದ ಮಾಘ ಶು ೧೦ (ಕ್ರಾ IV. ೨-೫ ; 1241). [< ಸಂ.ಶಾರ್ವರಿನ್]

ಸಾರ್ಬೀಟು (ಕ್ರಿ). ಮುಂದುವರಿದು ಹರಿ ,– ಸುರಿ: ಸ್ತನತಾರಾತುಳಹಾರ ವಲ್ಲಿಗೆಣೆಯಂ ತಾಮುಂ ಪೆಱುತ್ತಿರ್ಪುವೆಂದೆನಲಾ ಚೂತಕದಿಂ ಪಯಃಕಣಗಣಂ ಸಾರ್ಬೀಟಲಾ ಲೋಲಲೋಚನಹರ್ಷಾಮಳಬಾಷ್ಪವೆಯ್ದೆವೆಗಳಂ ತಳ್ತೀಡೆ (ಜಸುಮಾ. ೧೫-೧೨೬). [ಸಾರ್[1] + ಬೀಟು[1]]

ಸಾರ್ವ[1] 'ಸಾರ್[1]' ಪರಾ.

ಸಾರ್ವ[2] (ಗು). ೧. ಸಾರ್ವತ್ರಿಕವಾದ ; ಸರ್ವಸಾಧಾರಣವಾದ. ೨. ಎಲ್ಲರಿಗೂ, ಎಲ್ಲಕ್ಕೂ ಅನ್ವಯಿಸಬಹುದಾದ : ಸಾರ್ವನಿಗಮಾರ್ಥಮಂ ತಿಳಿದು ಸತ್ಕರ್ಮಮಂ ಸಾರ್ವಕಾಲಂಗೆಯ್ದು . . . ಪರರೊಡವೆಗೆ ಪಾರ್ವನಲ್ಲದೆ ಸದಾಚಾರದಿಂ ನಡೆದೊಡಾ ಪಾರ್ವನಿಹಪರೋತ್ಕರ್ಷಪರನಾಗಿ ಬಳಿಕವಂ ಪಾರ್ವನುತ್ತಮಗತಿಗೆ ದೇಹಾವಸಾನದೊಳ್ (ಧ್ವನ್ಯಾಲೋ. ೫೯). [ಸಂ.]

ಸಾರ್ವಕಾಲ (ನಾ). ಎಲ್ಲಾ ಕಾಲ; ಸದಾಕಾಲ : 'ಸಾರ್ವಕಾಲಂಗೆಯ್' ಪರಾ. [ಸಂ.]

ಸಾರ್ವಕಾಲಂಗೆಯ್ (ಕ್ರಿ). ಎಲ್ಲ ಕಾಲಗಳಲ್ಲೂ ನಡೆಸು; ಸತತವಾಗಿ ಆಚರಿಸು : ಸಾರ್ವನಿಗಮಾರ್ಥಮಂ ತಿಳಿದು ಸತ್ಕರ್ಮಮಂ ಸಾರ್ವಕಾಲಂಗೆಯ್ದು . . . ಸದಾಚಾರದಿಂ ನಡೆದೊಡೆ (ಚೆಮಿಭಾ. ೫-೪೯). [ಸಾರ್ವಕಾಲ + ಕೆಯ್]

ಸಾರ್ವಕಾಲಿಕ (ಗು). ೧. ಎಲ್ಲ ಕಾಲಕ್ಕೂ ಸಂಬಂಧಿಸುವ ,– ಅನ್ವಯಿಸುವ : ಇದೇ ಸಾರ್ವಕಾಲಿಕ ಸಿದ್ಧಾಂತವಾಗುವುದೆಂದು ಹೇಗೆ ಹೇಳುವುದು? (ವಿಜ್ಞಾಕ. ೬). (ನಾ) ೨. ಎಲ್ಲ ಕಾಲಕ್ಕೂ ಸಂಬಂಧಿಸಿದುದು; ಎಲ್ಲ ಸಮಯಕ್ಕೂ ಅನ್ವಯವಾಗುವಂತಹುದು : ಇದರೊಳಗಿನ ಆತ್ಮವೀರದ ಕತೆ ದೇಶಾಚಾರ ಕಾಲಾಚಾರಗಳನ್ನು ಮೀರಿ ಸಾರ್ವಕಾಲಿಕವಾದ ಸಾರ್ವದೇಶಿಕವಾದ ಗುಣವನ್ನು ಹೊಂದಿ ಗುರುತ್ವವನ್ನು ಪಡೆದಿದೆ (ವೀರಯೋ. VI, ಮುನ್ನುಡಿ). [ಸಂ.]

ಸಾರ್ವಕಾಲಿಕಸತ್ಯ (ನಾ). ಯಾವಾಗಲೂ ಇರುವಂಥ ಸತ್ಯ; ಶಾಶ್ವತವಾದ ನಿಜ : ಸಾರ್ವಕಾಲಿಕಸತ್ಯವೆಂದು ಭಾಮಿಸಿದುದನ್ನು ಸುಳ್ಳೆಂದು ಹೇಳಲು ಹೊರಟರೆ ಮೂರ್ಖತನವಾಗುತ್ತದೆ (ರೂಢಿ). [ಸಂ.]

ಸಾರ್ವಜನಿಕ (ಗು). ೧. ಎಲ್ಲ ಜನರಿಗೂ ಸಂಬಂಧಿಸಿದ; ಸರ್ವರಿಗೂ ಸಂಬಂಧಪಟ್ಟ : ಮನೆಗಳಲ್ಲಿ ಹಾಗೂ ಸಾರ್ವಜನಿಕ ಉಪಾಹಾರಗೃಹಗಳಲ್ಲಿ ಆಹಾರವಸ್ತುಗಳನ್ನು ಅನಾರೋಗ್ಯಕರಸ್ಥಿತಿಯಲ್ಲಿರಿಸುವುದೇ ಇದಕ್ಕೆ ಕಾರಣವಾಗಿದೆ (ಆಡುಸೌ. ೬೪); ಪ್ರಾಚೀನಸಂಪ್ರದಾಯ ಪಾಲಿಸಿದ ಭಾರತೀಯರಿಗೆ . . . ಸಾರ್ವಜನಿಕಸ್ಥಳಗಳಲ್ಲಿ ಧಿಕ್ಕಾರ (ಶುಕ್ಲಾರ. ೧೧೫ ಪೀಠಿಕೆ). ೨. ರಹಸ್ಯವಲ್ಲದ; ಬಹಿರಂಗವಾದ : ಸದನಗಳ ಅಧಿವೇಶನವು ನಡೆಯುತ್ತಿದ್ದಲ್ಲಿ ಸಂದೇಶದ ಮೂಲಕವೂ ಮತ್ತು ಅವುಗಳ ಅಧಿವೇಶನವು ನಡೆಯುತ್ತಿಲ್ಲದಿದ್ದಲ್ಲಿ ಸಾರ್ವಜನಿಕ ಅಧಿಸೂಚನೆಯ ಮೂಲಕವೂ . . . ತಮ್ಮ ಉದ್ದೇಶದ ಅಧಿಸೂಚನೆಯನ್ನು ಕೊಡಬಹುದು (ಭಾಧಾಸಂ. ೫೩). (ನಾ). ೩. ಜನ; ಜನತೆ ; ಸಾರ್ವಜನಿಕರ ಚಿತ್ತವನ್ನು ಉದ್ರೇಕಗೊಳಿಸುವುದೇ . . . ಅದರ ಉದ್ದೇಶವಾಗಿತ್ತು (ನಿಬಂಧ. I, ೩೩೪). ೪. ಬಹಿರಂಗವಾದುದು; ಪ್ರಕಟವಾದುದು.

ಸಾರ್ವಜನಿಕಜೀವನ = ಸರ್ವರಿಗೂ ಸಂಬಂಧಿಸಿದ ಜೀವನ; ಸಮಾಜ ಜೀವನ: ಪ್ರಾಚೀನಕಾಲದಲ್ಲಿ . . . ಅಂತಶ್ಛಿದ್ರಗಳಿಗೆ ಅವಕಾಶವಿರಲಿಲ್ಲ. ಇದ್ದರೂ ಸಾರ್ವಜನಿಕಜೀವನಕ್ಕೆ ಕುಂದಕ ಬರುವಷ್ಟಿರಲಿಲ್ಲ (ಆರ್ಯಧ. ೮೩). ಸಾರ್ವಜನಿಕರಜ = ಎಲ್ಲರಿಗೂ ಅನ್ವಯವಾಗುವಂಥ ರಜ ; ಸಾರ್ವತ್ರಿಕವಾದ ಬಿಡುವು : ಸರ್ಕಾರವು ಈ ಕೆಳಕಂಡ ದಿನಗಳನ್ನು ಸಾರ್ವಜನಿಕರಜವೆಂದು ಘೋಷಿಸಿದೆ (ರೂಢಿ). ಸಾರ್ವಜನಿಕಸೇವೆ = ಸಮಾಜಸೇವೆ; ಲೋಕಸೇವೆ : ಅವರು ತಮ್ಮ ಜೀವನದುದ್ದಕ್ಕೂ ಸಾರ್ವಜನಿಕಸೇವೆಯಲ್ಲೇ ನಿರತರಾಗಿದ್ದರು (ರೂಢಿ). [ಸಂ.]

ಸಾರ್ವತ್ರಿಕ (ಗು). ೧. ಎಲ್ಲ ಕಡೆಗಳಲ್ಲೂ ಇರುವ. ೨. ಎಲ್ಲಕಾಲಕ್ಕೂ ಸಂಬಂಧಿಸಿದ. ೩. ಎಲ್ಲರಿಗೂ ಅನ್ವಯಿಸುವ : ನಾಡಿನ ಭಾಗ್ಯೋದಯ ವಾಗಬೇಕಾದರೆ ಯಶಸ್ವಿಯಾಗತಕ್ಕ ಸಾರ್ವತ್ರಿಕ ಶಿಕ್ಷಣಯೋಜನೆ ಅನಿವಾರ್ಯ (ಶಿಕ್ಷದ. ೧೩೫). (ನಾ). ೪. ಎಲ್ಲರಿಗೂ ಸಂಬಂಧಿಸಿದುದು ; ಸರ್ವಸಾಮಾನ್ಯ ವಾದುದು : ಪ್ರಾಚೀನಕಾಲದಲ್ಲಿ ನಾವು ಸ್ವತಂತ್ರರಾಗಿದ್ದೆವು . . . ಸಮೃದ್ಧಿಯು ಸಾರ್ವತ್ರಿಕವಾಗಿತ್ತು (ಆರ್ಯಧ. ೮೩); ಅವು ಸಾರ್ವತ್ರಿಕವಾದಷ್ಟೂ ಅವುಗಳ ಶಿಕ್ಷಣ ಪ್ರಭಾವ ವ್ಯಾಪ್ತಿಯಲ್ಲೂ ಆದರ್ಶದಲ್ಲೂ ಹೆಚ್ಚಬಲ್ಲುದು (ಶಿಕ್ಷದ. ೫೭).

ಸಾರ್ವತ್ರಿಕರಜ = ಎಲ್ಲರಿಗೂ ಅನ್ವಯಿಸುವ ರಜೆ, – ಬಿಡುವು : ಅಂದು ಸಾರ್ವತ್ರಿಕರಜವಿದ್ದುದರಿಂದ ನಾನು ಮೈಸೂರಿಗೆ ಹೋಗಿದ್ದೆ (ರೂಢಿ). [ಸಂ.]

ಸಾರ್ವತ್ರಿಕಚುನಾವಣೆ (ನಾ). ಲೋಕಸಭೆಯ ಪ್ರಜಾಪ್ರತಿನಿಧಿಗಳನ್ನು ಸರ್ವಮತದಾನದ ಮೂಲಕ ಆರಿಸಲು ನಡೆಸುವ ಚುನಾವಣೆ; ಮಹಾಚುನಾವಣೆ : ಬಿಗಿಯಾದ ಬಂದೋಬಸ್ತಿನಲ್ಲಿ ಆ ಕ್ಷೇತ್ರದ ಸಾರ್ವತ್ರಿಕ ಚುನಾವಣೆಯು ನಡೆಯಿತು (ರೂಢಿ). [ಸಾರ್ವತ್ರಿಕ + ಚುನಾವಣೆ]

ಸಾರ್ವತ್ರಿಕತೆ (ನಾ). ಎಲ್ಲಕ್ಕೂ ಅನ್ವಯವಾಗುವಂಥ ಗುಣ ; ಸರ್ವವ್ಯಾಪಕತ್ವ : ಸಾಹಿತ್ಯದೃಷ್ಟಿಯಿಂದ ಈ ಕಾವ್ಯವು ಕನ್ನಡಿಗರಿಗೆಲ್ಲ ಸೊತ್ತಾಗಬೇಕಾದರೆ ಅದರೊಳಗೆ ಒಂದು ಸಾರ್ವತ್ರಿಕತೆ ಬೇಕು (ಸಾಹಿಸ. ೧೬೬). [ಸಂ. ಸಾರ್ವತ್ರಿಕತಾ]

ಸಾರ್ವಭೌಮ (ನಾ). ೧. ಸಮಸ್ತಭೂಮಂಡಲವನ್ನೂ ಒಳಗೊಂಡುದು; ವಿಶ್ವವ್ಯಾಪಿಯಾದುದು. ೨. ಸಮಸ್ತಭೂಮಂಡಲಕ್ಕೆ ಸಂಬಂಧಪಟ್ಟುದು. ೩. ಸಮಸ್ತಭೂಮಂಡಲಕ್ಕೆ ಅಧಿಪತಿಯಾದವನು ; ಚಕ್ರವರ್ತಿ : ಪಡೆವೆಂ ಶಾಶ್ವತಶ್ರೀಯನೆಂಬುಜ್ಜುಗದೊಳ್ ಚಿತ್ತಂ ಕರಂ ತಣ್ಪಲೆಯ ನೆಜೆಯ ನಿಶ್ಚೈಸಿದಂ ಸಾರ್ವಭೌಮಂ (ಆದಿಪು. ೬-೨೬); ಇರ್ಪತ್ತೊಂದನಿತ್ತಂ ಕರಿಗಳನಪರಾದಿತ್ಯನಂತೀಯ ದಂದಾತನನಿರ್ಪತ್ತೊಂದುವಂಶಂ ಕಿಡೆ ಮುಳಿದನೊ ಸತ್ಕಾಶ್ರಯಂ ಸಾರ್ವಭೌಮಂ (ಗಧಾಯು. ೧-೨೮) ; ದೇವದೇವ ಸುಕುಮಾರ ಸಾರ್ವಭೌಮನಪ್ಪ ಸೌಂದರಪೆರುಮಾಳೆಯಿರ ವನವಧರಿಪುದು (ನಂಬಿರ. ೪-೧೬). ೪. ಅಷ್ಟದಿಗ್ಗಜಗಳಲ್ಲಿ ಒಂದು; ಈಶಾನ್ಯದಿಕ್ಕಿನ ಆನೆ; ಕುಬೇರನ ಆನೆ : "ಐರಾವತಃ . . . ಸಾರ್ವಭೌಮಃ, ಸುಪ್ರತೀಕಃ – ಈ ೮ ಮೂಡಣಂ ಕ್ರಮದಿನಿರ್ದ ದೆಸೆಯಾನೆಗಳ್" (ಹಲಾಯು. ೧೮-೧೦೪); ಅತಿವಿಹ್ವಲಮಾದುದು ಸಾರ್ವಭೌಮಮಂದದಿರ್ದುದು ಸುಪ್ರತೀಕಮಿರದಾಲಿಸಿ ತತ್ಪಟಹಪ್ರಣಾದಮಂ (ಶಿಶುಪಾ. ೫-೮). ೫. (ಆಲಂ) ಸರ್ವಶ್ರೇಷ್ಠವಾದುದು : ನನ್ನ ಸುಖವೇ ಸಾರ್ವಭೌಮ. ಮಿಕ್ಕುದೆಲ್ಲ ಗೌಣ (ವಾಶ್ವಲ. ೧೯೧). ೬. ಸರ್ವಶ್ರೇಷ್ಠನಾದವನು : ಸಾರ್ವಭೌಮನು ಸೃಷ್ಟಿಯೊಳಗದೊರ್ವನೆ ಕಾಣೊ ಸರ್ವವನು ತನ್ನಾತ್ಮವೆಂದು ಬದುಕುವನು ನಿರ್ವಿಕಾರಾಂತರಂಗದಿ ಜಗವ ಧರಿಸುವನು ಸರ್ವಮಂಗಳನವನು (ಮಂಚಕ. ೮೦೫). [ಸಂ.]

ಸಾರ್ವಭೌಮಕ (ನಾ). ಸಾಮ್ರಾಜ್ಯಾಧಿಪತಿ ; ಚಕ್ರವರ್ತಿ : ಅವನಾ ನಿತಂಬಿನಿಯ ಕಂಡು ಬಿಡಲಾಱದೆ ವಿರೋಧವ ಕೊಂಡು ಕರೆದನು ಕಾಳಗಕೆ ಕೈಕೊಂಡು ಮನದಾದಿಯಲಿ ಕಪಿಕುಲ ಸಾರ್ವಭೌಮಕನ (ತೊರರಾ. ೪-೨-೨೪) ; ಸಾರ್ವಭೌಮಕ ನಿನ್ನ ರಕ್ಷೆಯಂ ಶಿಕ್ಷೆಯಂ ಮೀರ್ವರಲ್ಲ (ಚೆಮಿಭಾ. ೨೬-೫೩). [ಸಂ.]

ಸಾರ್ವಭೌಮತೆ (ನಾ). ಸಾಮ್ರಾಜ್ಯಪದವಿ; ಚಕ್ರವರ್ತಿಪಟ್ಟ : ಸಾರ್ವಭೌಮತೆ ನಾಲ್ಕುಗುಣಕೆ ಗುಣರಾಜ್ಯದಲಿ ಧೈರ್ಯ ಮೊದಲಿನದೆರಡನೆಯದು ಮತಿಯೋಜೆ ಸರ್ವದಯೆ ಮೂರನೆಯದದುವೆ ನೀತಿಯ ಮೂಲ ನಿರ್ಮಮತ್ವವೆ ಮುಕುಟ (ಮಂಚಕ. ೭೫೬). [ಸಂ. ಸಾರ್ವಭೌಮತಾ]

ಸಾರ್ವಭೌಮಿಕ (ಗು). ೧. ಸಾರ್ವಭೌಮನಿಗೆ ಸಂಬಂಧಿಸಿದ; ಚಕ್ರವರ್ತಿಗೆ ಸಂಬಂಧಪಟ್ಟ. ೨. (ಆಲಂ) ಶ್ರೇಷ್ಠವಾದ; ಅತ್ಯುತ್ತಮವಾದ : ಇಂದು ಭಾರತವು ಉಪನಿಷತ್ತಿನ ಸಾರ್ವಭೌಮಿಕಧರ್ಮದಿಂದ ಬಹಳ ದೂರ ಸರಿದುಹೋಗಿದೆ (ಭಾರದ. ೪೭). ೩. ಅತ್ಯಧಿಕವಾದ; ಪರಾಕಾಷ್ಠೆಯ : ತೇರ ಚಲನೆಯ ಸಾರ್ವಭೌಮಿಕ ಉದಾಸೀನನಿರ್ವೇಗದಲಿ, ಎನಿತೊ ದಿನಗಳಿಂದುದ್ಯಾನಯಜ್ಞ ವೇದಿಯೊಳುದಿಸಿ, ಕವಿಮನೋಧ್ಯಾನದೇವತಾವಸ್ತುವಾಗಿಹುದೀ ಮಹಾಕುಟ್ಮಲಾಕಾರ (ಅನಿಕೆ. ೨೨-೪). (ನಾ). ೪. (ಆಲಂ) ಶ್ರೇಷ್ಠವಾದುದು; ಅತ್ಯುತ್ತಮ ವಾದುದು: ಸರ್ವಶಾಸ್ತ್ರಂಗಳೊಳ್ ಸಾರ್ವಭೌಮಿಕಮಪ್ಪ ಸಂಖ್ಯಾಕಾಂಡಮನ್, ಲೇಖನನ್ಯಾಸಮನ್ . . . ಅಗ್ಗಳಮಪೂರ್ವಂ ನವನಿರ್ಮಿತಿಗಳನ್ ಪೂಱತಂದುದೆನ್ನ ಜಾಣ್ (ಬದ್ಧಪ್ರ. ೨೫-೫೨೨). [ಸಂ.]

ಸಾರ್ವಭೌಮಿಕೆ (ನಾ). ಚಕ್ರವರ್ತಿತ್ವ ; ಸರ್ವಾಧಿಕಾರತ್ವ : ಈ ಸಾರ್ವಭೌಮಿಕೆಯ ಬಂಕಪೊಂಕಗಳೆಲ್ಲ ನೆರೆಯಿಳವಂತೆ ಇಳಿದುಹೋಗಿ ಅವನು ಸ್ನೇಹಭಾವದಿಂದ ತನ್ನೊಡನೆ ಹೊಂದಿ ನಡೆಯುವ ಕಾಲ ಬಂದೇ ಬರುತ್ತದೆ (ಬದ್ಧಪ್ರ. XXX, ಪೀಠಿಕೆ). [ಸಂ. ಸಾರ್ವಭೌಮಿಕ]

ಸಾರ್ವರ್ತುಕ (ಗು). ೧. ಎಲ್ಲ ಋತುಗಳಿಗೂ ಸಂಬಂಧಿಸಿದ: 'ಸಾರ್ವರ್ತುಕವನ' ಪರಾ. (ನಾ). ೨. ಎಲ್ಲ ಋತುಗಳಿಗೂ ಸಂಬಂಧಿಸಿದುದು : ಜಂಬುಜಂಬೀರಪನಸ . . . ಕದಳೀಷಂಡ ಕಮಳಷಂಡಂ ಗಳಿಂದಿಡಿದು ಕಡುಬೆಡಂಗಾದ ಸಾರ್ವರ್ತುಕವಾದ ಸದಮಳತಪೋವನದ ಪರಮಪವಿತ್ರತೆವೆತ್ತ ಪರ್ಣಶಾಲೆಯೊಳ್ (ರಾಜಶೇ. ೧-೧೨೫ ವ) ; ಇಂತೊಪ್ಪುವ ಭಾಗೀರಥಿಗರ್ಮೆಯೊಳಂ ಸಾರ್ವರ್ತುಕಮೆನಿಸಿ ಕೌಂಗಿನ ದಾಳಿಂಬದ ಚೆಂದೊಗಿನ . . . ಕಬವೆಯ ಪೊಸತೋಂಟಂಗಳ್ ಕಣ್ಗೆಡ್ಡಮಾಗಿ ಸಾಲ್ಗೊಂಡುವು (ರಾಮಾಶ್ವ. ೩೦-೧೫). [ಸಂ.]

ಸಾರ್ವರ್ತುಕಂ (ಅ). ಎಲ್ಲ ಋತುಗಳಲ್ಲೂ : ಕನಕಪ್ರಾಕಾರವೇಟುಂ ಬಳಸಿರೆ ವಿಳಸದ್ಗೋಪುರಾಟ್ಟಾಳಕಂ ನಂದನವೇಟುಂ ಲೋಚನಾನಂದಮನೊದವಿಸೆ ಸಾರ್ವರ್ತುಕಂ ರಂಜಿಕುಂ (ಪಂಠಾಮಾ. ೧೦-೧೦೨). [< ಸಾರ್ವರ್ತುಕ]

ಸಾರ್ವರ್ತುಕವನ (ನಾ). ಎಲ್ಲ ಋತುಗಳಲ್ಲೂ ಫಲಪುಷ್ಪಗಳನ್ನು ಬಿಡುವ ಮರಗಿಡಗಳುಳ್ಳ ತೋಟ: ಸಾರ್ವರ್ತುಕವನಶೋಭಿತಗೀರ್ವಾಣಾಚಳದೊಳಿಂದ್ರ ನಮರಸಮೇತಂ ನಿರ್ವರ್ತಿತ ಜಿನಸವನಂ ನೇರ್ವಡೆಪಡೆ ವಾರಣಾಸಿಗಭಿಮುಖನಾದಂ (ಪಾರ್ಶ್ವಪು. ೧೪-೧೧೦). [ಸಂ.]

ಸಾರ್ವರ್ತುಕೋದ್ಯಾನ (ನಾ). = ಸಾರ್ವರ್ತುಕವನ: ಸಿರಿ ತಂದಿಕ್ಕಿದಶೋಕೆ ವಾಗ್ವನಿತೆಯಿಟ್ಟಾವ್ರುಂ . . . ತರದಿಂದಂ ರತಿಯಿಟ್ಟ ದಾಡಿಮಕುಲಂ ಸಾರ್ವರ್ತುಕೋದ್ಯಾನದೊಳ್ (ಗಿರಿಕ. ೨-೩೧). [ಸಂ.]

ಸಾರ್ವಲೌಕಿಕ (ಗು).೧. ಎಲ್ಲ ಲೋಕಗಳಿಗೂ ಸಂಬಂಧಿಸಿದ; ವಿಶ್ವವ್ಯಾಪಕವಾದ: ಸಾರ್ವಲೌಕಿಕಸೌಖ್ಯ ನೆಲಸುವನ್ನೆಗಮಿಳೆಯೊಳೊರ್ವನುಂ ಸುಖಿಯಲ್ತು (ಮಂಕುಕ. ೮೫೩). (ನಾ). ೨. ಸರ್ವವಿದಿತವಾದುದು; ಎಲ್ಲರಿಗೂ ತಿಳಿದುದು : ಬದುಕು ಶಾಶ್ವತವಲ್ಲವೆನ್ನುವುದು ಸಾರ್ವಲೌಕಿಕವಾದ ಸತ್ಯ (ರೂಢಿ). [ಸಂ.]

ಸಾರ್ವೆ, ಸಾರವೆ, ಸಾರುವೆ (ನಾ). ೧. ಸಣ್ಣನದಿ, ನಾಲೆ ಮುಂತಾದುವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟಿಹೋಗುವುದಕ್ಕಾಗಿ ಹಾಕುವ ಸೇತುವೆ; ಸಂಕ: ಕೆಳಗೆ ಹರಿಯುವ ನೀರು, ಮೇಲೆ ಬಿಸಿಲು, ಮಳೆ ಇವುಗಳನ್ನು ಲೆಕ್ಕಿಸದೆ ಸಾರ್ವೆಯ ಮೇಲೆ ನಿಂತು ಕೆಲಸಮಾಡುವವರ ಸಾಹಸವೆಷ್ಟು? (ಕೊನಭೇ. ೩೨). **ಸಾರವೆ** : ೨. (ಕಟ್ಟಡಗಳನ್ನು ಕಟ್ಟುವಾಗ) ಮೇಲೆ ಹತ್ತಲು ಅನುಕೂಲ ವಾಗುವಂತೆ ಮರ, ಕಲ್ಲು ಮುಂತಾದುವುಗಳಿಂದ ಕಟ್ಟುವ ಮೆಟ್ಟಲು,— ಪಾವಟಿಗೆ: (ಕ). **ಸಾರುವೆ** : ೨. ಮಲ್ಲಿಕಾರ್ಜುನದೇವರು ಉಂನತಮಾಡಿದರು ಸಾರುವೆ ಹಾಕಿಸಿದರು (ಮೈಅರಿ. ೧೯೪೫, ೪-೫; 1903); ಸಾಮಾನುಗಳನ್ನು ಸಾರುವೆಗಳ ಮೇಲೆ ಆಳುಗಳು ಕಟ್ಟೆಯ ಮೇಲಕ್ಕೆ ಸಾಗಿಸುತ್ತಾರೆ (ಶಿಲ್ಪನಾ. ೪೦೪). 'ಸಾರ್ಂ' ಪರಾ.

[ಸಾರ್ಂ + - ವೆ. / ತೆಲು. ಸಾರುವ]

ಸಾಲ್ಂ, ಸಾಲು$_1$ (ಕ್ರಿ). ೧. ಕಡವನ್ನು ತೆಗೆದುಕೊಳ್ಳು ; ಸಾಲಮಾಡು : "ಸಾಲ್-ಋಣೇ, ಸಸ್ಯಪಂಕ್ತೌ ಚ (ಪೈರಿನ ಸಾಲು)" (ಶಮಧಾ); ಇದು ಪುಸಿ ನನ್ನಿಯೆಂದಱಿಯದಾ ರಿಣಮೋಚನತೀರ್ಥಮಂಬ ಕೊಂಡದೊಳಿರದಿಕ್ಕಿದಾಗ ಕರಿದಾಗಡೆ ತಾಂ ಬಿಳಿದಪ್ಪು ದನ್ನವಪ್ಪುದಕಮನೊಮ್ಮೆ ಮಿಾಯೆ ಗಡ ಕೊಂಡ ರಿಣಂಗಳ ದೋಷಮಂತೆ ಪೋಪುದು ಗಡ ಸಾಲ್ವ ಸಾಲಿಗರ್ಗೆ ನಿಗ್ಗಮಮಲ್ಲದೆ ಪೋಪಡಾ ರಿಣಂ (ಸಮಪ. ೧೨-೨೫). ೨. ಸಾಕಾಗು; ಅಗತ್ಯವನ್ನು ಪೂರೈಸುವಷ್ಟಾಗು; ತಣಿಯುವಷ್ಟಾಗು: ಅಧೀಶ್ವರನಾ ದಯೆ ಸಾಲ್ಗುಂ (ಕವಿರಾ. ೧-೧೧೫); ಭಟಾರಾ ಇನಿತುಕಾಲಮುಂಡುದು ಸಾಲ್ಗುಮೆಮಗೆ (ವಡ್ಡಾರಾ. ೮೨-೨೦); ಬಳೆಯಲ್ಕಣ್ಮೆದುದಿಲ್ಲ ವಿಂಧ್ಯಗಿರಿಯುಂ ತನ್ನಾಜ್ಞೆಯಿಂದೊರ್ಮೆ ಮುಕ್ಕುಳಿಸಲ್ಕಂಬುಧಿ ಸಾಲ್ದುದಿಲ್ಲ (ಪಂಪಭಾ. ೪-೨೦); ಸತ್ತ ಮಗಂದಿರ್ಸತ್ತರ್ನೀನೆಮಗುಳ್ಳೊಡೆ ಸಾಲ್ವುದು (ಗದಾಯು. ೪-೩). ೩. ತಕ್ಕುದಾಗು; ಉಚಿತವಾದುದಾಗು: ನೀನಿರಾನೆ ರಿಪುಸೇನೆಗೆ ಸಾಲ್ವೆನವುಂಕಿ ಪೇಡಿ ಪಾಡಿಗಟ್ಟಿಱಿ ವೆಡಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟುದೇ (ಕಾವ್ಯಸಾ. ೪೧೧ ಶೂದ್ರಕ); ಅತಿತೃಷ್ಣಾಪರನಾಗಿ ಮುನ್ನೆ ತೊಡರ್ದಿರ್ದಾ ಗಾಂಪೆ ಸಾಲ್ಗುಂ ಮದಾಕೃತಿಯಂ ಮಾಸಿಸಿ ಮುಪ್ಪು ಚಪ್ಪರಿಸೆಯುಂ (ಆದಿಪು. ೧-೮೧) ; ನೆರಪಲ್ ಸಿರಿಯಂ ದುರಿತಮನುರುಪಲ್ ದಶದಿಶೆಯೊಳಿಂದುಕರರುಚಿ ಯಶಮಂ ಪರೆಪಲ್ ಪರನೃಪರುಮನೊತ್ತರಿಪಲ್ ಸಾಲ್ವುದು ನಯಜ್ಞಹಿತಮಿತವಚನಂ (ರಾಜಶೇ. ೧೩-೧೫). ೪. ಶಕ್ತವಾಗು; ಸಮರ್ಥವಾಗು: ನೀನಿರಾನೆ ರಿಪುಸೇನೆಗೆ ಸಾಲ್ವೆನವುಂಕಿ ಪೇಡಿ ಪಾಡಿಗಟ್ಟಿಱಿವೆಡಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟುದೇ (ಕಾವ್ಯಸಾ. ೪೧೧ ಶೂದ್ರಕ); ಪೆಱಗಂ ತಗುಳ್ವ ಯಾದವಬಲಮುಂಟಪ್ಪೊಡದನಂಬುಗಾಣಿಸಲ್ ನೀನೆ ಸಾಲ್ವೆಯುಱಿದುದಂ ಮಾಣಿಸಲಾನೆ ಸಾಲ್ವೆಂ (ಪಂಪಭಾ. ೫-೨೦ ವ) ; ಈ ಬೂತೆನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲನಿವಂಗಾನೆ ಸಾಲ್ವೆಂ (ಗದಾಯು. ೭-೯ ವ); ಬಱಿದೂಱಂ ತಡೆಯಲಾವಂ ಸಾಲ್ವಂ! ಹರಂಗಮಂತಿರೆ ಪಱಿಗುಂ! (ರಾಮಾಶ್ವ. ೧೪-೧೭). **ಸಾಲು**$_1$: ೨. ಭವಬಂಧನದುರಿತಂಗಳ ಗೆಲುವೊಡೆ ಓಂ ನಮಃಶಿವಾಯ ಶರಣೆಂದೊಡೆ ಸಾಲದೇ (ಬಸವ. ೭೯); ಬಸವಾ ಬಸವಯೆಂದುಸುರಿದಡೆ ಸಾಲದೆ ವಿಷವಮೃತವಹುದು (ಬಸಪು. ೮-೨೪); ಎಲೆ ವೃಕೋದರ ನಕುಳ ಸಾತ್ಯಕಿ ನಿಲಿಸಿರ್ಕೆ ತಂಗಿಯನು ತನ್ನಯ ಕೊಲೆಗೆ ಮಗನಳಿವೊಂದು ಸಾಲದೆ ತನ್ನ ನುಡಿಯೇಕೆ (ಕುವ್ಯಾದ್ರೋ. ೬-೧೯); ಕೂತು ಉಣ್ಣುವವನಿಗೆ ಕುಡಿಕೆ ಹಣವೂ ಸಾಲದು (ಗಾದೆ). ೪. ಬತ್ತೀಸಾಯುಧದಲ್ಲಿ ಅಭ್ಯಾಸವು ಮಾಡಿದರೇನು ಹಗೆಯ ಕೊಲುವರೆ ಒಂದಲಗು ಸಾಲದೆ (ಬಸವ. ೭೩೪) ; ಕಂದುಗೊರಲನೊಳು ಕಾದಲ್ಕೆ ಸ್ಮರ ತನ್ನದೊಂದು ಬಿಲ್ಲದು ಸಾಲದೆಂದು ತಂದಿಲ್ಲಿ ಬೆಳಸಿದನೆಂಬಂತೆ ಬೆಳ್ಗರ್ಬು ಸಂದಣಿಸಿತು ಬನಬನದಿ (ಮೋಹತ. ೨-೪೭) ; ಇಂತಹ ಮಸ್ತಿ ತುಂಬಿದ ಹೆಣ್ಣಿಗೆ ಅಂತಿಂತಹ ಗಂಡು ಸಾಲುವನೆ ? (ಮೂರುದಾ. ೨೪೧). [ದೇ. ॥ ತಮಿ. ಚಾಲ್ ; ತೆಲು. ಚಾಲು]

ಸಾಲ್ಂ (ಕ್ರಿ). ೧. ಪಡೆ; ಹೊಂದು: ಪರದನಾರ್ಬ್ಬನ್ದಡವಂಗಡಿಯ ಪಾಜಿಕದಿಂದಿಟಿಯನನ್ಯಾಯದೊಳ್ಪರಧನಂ ಪೊಯ್ದಡೆ ಸಾವು ಸಾಲ್ವರ್ (ಸೌಇಇ. IX-i, ೭೭-೩೫ ; 992). ೨. ಹೋಗು: ಸಾಸಿರಕಾವಿಲೆಯು ಸಾಸಿರಪರ್ವ್ವರು[ಂ] ಕೊ[ಂ]ನ್ದಾ ಲೋಕಕೆ ಸಾಲ್ಗುಂ (ಸೌಇಇ. XI-i, ೯-೪೪ ; 862). [< ಸಲ್]

ಸಾಲ್ಂ, ಸಾಲು$_2$ (ನಾ). ೧. ಪಂಕ್ತಿ; ಓಳಿ; ಶ್ರೇಣಿ: ನೀರ್ಗಾಯ ತುಱುಗಲಿಂದೆಱಗಿದ ನಾಳಿಕೇರಭೂರುಹಂಗಳುಂ . . . ಬಳ್ವಳ ಬೆಳೆದೆಳಗೌಂಗಿನ ಸಸಿಯ ಸಾಲ್ಗಳುಂ (ಚಂದ್ರಪು. ೧-೧೦೬) ; ಕಣ್ಗೆ ಮಂಗಳಮಾದ ತೆಂಗುಗಳ ಸಾಲ್ಗಳಿಂ ತಣ್ಗಂಪನೀವ ಪೂವಲ್ಲಿಗಳ ಮೇಲ್ಗಳಿಂ (ಉದ್ಭಟ. ೩-೮೮) ; ಹದ್ದು ಕಾಗೆಗೆ ನಿನ್ನವರು ಸಾಲಿದ್ದು ಬೋನವ ಸವಸಿದರು ಬಲವಿದ್ದು ಮಾಡುವುದೇನು ನಿಮಗಿನ್ನು (ಕುವ್ಯಾಕ. ೩-೫) ; ಕಣ್ಗೆ ರಮಣೀಯಮಾಗಿವೆ ಕರ್ಣತನಯ ನೋಡೀ ಪುರದ ಮುಗಿಲಟ್ಟಳೆಯ ಸಾಲ್ಗಳು (ಚೃಮಿಭಾ. ೩-೨೦). ೨. ಭೂಮಿಯನ್ನು ಉಳುವಾಗ ನೇಗಿಲಿನಿಂದುಂಟಾಗುವ ಗೆರೆ, — ರೇಖೆ ; ಉಕ್ಕೆ : ನಿನ್ನುಟ್ಟ ಸಾಲೊಳೊಗೆದುದು ಪೊನ್ನೊಳ್ ತೀವಿರ್ದ ಕಳಶಮದನಾಂ ಕೊಂಡಂದೆನ್ನೊಳ್ಪು ಕಿಡುಗುಂ (ಜೀವಸಂ. ೨೦೦-೩೬). ೩. ಗುಂಪು; ಸಮೂಹ : "ಬಂಬಲ್, ತುಱುಗಲ್ . . . ಸಾಲ್,'ಮೊಕ್ಕಳಂ, ತೋಮಂ, ತೆಮ್ಮಲ್, ಗುಮ್ಮಿ, ಗೊಂದಣಿ (ಉಂದಲ್) - ಈ ೪೦ ಸಮೂಹಂ" (ಕಶಸಾ. ೫೬-೨೨೨) ; ಪಣ್ಗಳ ಸಾಲಿಂದೆನಸುಂ ಮೊದಲ್ ಗುಟಿಗಳೆಲ್ಲಂ ತೀವಿ ತುಂಬುರ್ಚಿ ಪೋಯ್ತಿಳೆಯೋಳ್ ತಾನೆನೆ ತದ್ವನಾಂತರದೊಳಿಂತೊಪ್ಪಿರ್ಪುವಿಮ್ಮಾವುಗಳ್ (ಕುಸುಮಾ. ೧-೯೫); ಶರಣರ ಮೈಯೊಳು ಬುರುಬುರನೆ ನೆಗೆನೆಗೆದೇಳ್ವ ಪುಳಕದ ಸಾಲ್ಗೆ ದೃಷ್ಟಿಯಾದಪುದೆಂದು ಗವಸಣಿಗೆಯಿಕ್ಕು ವಂತೆ ಮೈತೀವಿ ಪೊದೆಯಿಸಿ (ಬಸರ. ೮-೧೪). **ಸಾಲು**$_2$: ೧. ಇವರು ಗಾಣದಲ್ಲಿ ಬಪ್ಪ ಸಾಲಿನ ಹೆಜ್ಜೆಯಂತೆ . . . ಮೆಟ್ಟಿದ ಹೆಜ್ಜೆಯ ಮೆಟ್ಟುವ ಕಷ್ಟಜೀವಿಗಳಿಗೆತ್ತಣ ಗತಿಯೋ (ಮೋಳಿಮಾ. ೧೦-೩೫) ; ನೆಗೆಹಿದವು ಕೈದೀವಿಗೆಯ ಸಾಲುಗಳು ಹೊಂದಂಡಿಗೆಯ ದೂವಾರಿಗಳು ವೆಂಠಣಿಸಿದರು ಸೀಗುರಿ ಮೊಗವ ಮೋಹಿದವು (ಕುವ್ಯಾದ್ರೋ. ೮-೫೫); ಪರಿಪರಿಯ ಮಣಿಕನಕಮಯದುಪ್ಪರಿಗೆಗಳ ಸಾಲಿನಲಿ ಸುರಪನ ಪುರವನಣಕಿಸುತಿರ್ದುದಾ ಸತ್ಯಾವತೀನಗರ (ತೂರರಾ. ೧-೯-೧೦) ; ದಂತಿಗಳ ಪಂತಿಗಳ, ವಾಜಿಗಳ ರಾಜಿಗಳ, ಕಾಲಾಳುಗಳ ಸಾಲುಗಳ, ರಥಸಮೂಹಗಳ . . . ಮೆರವಣಿಗೆ ಚಲಿಸಿತು ಕಡಲ ತಡಿಗೆ (ಚಿತ್ರಾಂಗ. ೮೮-೨೪೩೯). ೩. "ಸಾಲುಯೆನಲಕ್ಕುದು ಸಮೂಹ" (ಕಶರ. ೧೦೭). ೪. ಪದ್ಯ, ಗದ್ಯ ಮುಂತಾದುವುಗಳ ಒಂದು ಪಂಕ್ತಿ : ಈ ಹೊಸಗನ್ನಡ ಯುಗದಲ್ಲಿಯೂ ಹಳೆಗನ್ನಡದ ಅಚ್ಚಗನ್ನಡದ ಕೆಲವು ಸಾಲುಗಳು - ಹಾಡುಗಳು ಮಿಂಚಿನಂತೆ ಆಗಾಗ ಮಿನುಗುತ್ತಿವೆ (ಕಾಲೂರ. ೬ ಹರಕೆ) ; ನನಗೆ ಆ ಪದ್ಯದ ಒಂದು ಸಾಲೂ ಮರೆತಿಲ್ಲ (ರೂಢಿ). ೫. ಸುರಿಯುವಿಕೆ; ಧಾರೆ: ಒಡನೆ ಕಳುಹುತ ಬಂದನಾ ನೆಲದೊಡೆಯನನುಜರುಸಹಿತ ನಯನದಿ ಬಿಡುವನಿಯ ಸಾಲಿನಲಿ ನನೆದರು ಬಂದು ಕಿಱಿದೆಡೆಯ ನಡೆ ವಿಜಯನಾಗೆಂದು ತನುವನು ತಡವಿದರು (ಕುವ್ಯಾದ್ರೋ. ೪-೫೩).

ಸಾಲುಸಾಲು, ಸಾಲಾಸಾಲು (ದ್ವಿರುಕ್ತಿ) : ಎಡಬಲದುಪ್ಪರಿಗೆಯ ಸಾಲುಸಾಲಲಿಯಡರಿ ನೋಡುವ ಹೆಣ್ಣುಗಂಡು ಜಡಜಕುಟ್ಮಲಯೌವನೆಯರನೀಕ್ಷಿಸಿ ಪಡೆದರು ತನುತಾಪಗಳನು (ಮೋಹತ. ೨೪-೨೦) ; ಮೊದಲಿಗೆ ಅರಣ್ಯಮಧ್ಯದಲ್ಲಿ

ಸಾಲಾಸಾಲು ತಂಬುಗಳು ಹುಟ್ಟಿಕೊಂಡುವು (ಜಾರುದಾ. ೧೬೩). ಸಾಲ ಮನ್ನೆಯ ಬೇಂಟೆಕಾಱ = ಒಂದು ಬಿರುದು (?): ಪತಿಕಾರ್ಯ್ಯಧುರಂಧರಂ ಸಾಲ ಮನ್ನೆಯ ಬೇಣ್ಟೆಕಾಱನುದ್ದಂಡಗಣ್ಡಭಂಗಾಱಂ . . . ಪರಬಲಸಾಧಕನೆನಿಸಿದಡ್ಡಾಯಿದದ ಹರಿಹರ ದಣ್ಣಾಯಕನನ್ಯಯಾವಶಾರವೆನ್ನೊಡೆ (ಎಕ. III, ಮಂಡ್ಯ. ೧೨೧-೨೪ ; 1235). ಸಾಲ್ಗೆಯ್ಯ ನೃಪ = ಸಾಲಾಗಿ ಕೈಗಳುಳ್ಳ ರಾಜ; ಸಹಸ್ರಬಾಹು; ಕಾರ್ತವೀರ್ಯಾರ್ಜುನ: ದುರ್ಗುಣಂ ಸದ್ಗುಣಾಭರಣಮಿರ್ಪಾ ಸಾಲ್ಗೆಯ್ಯ ನೃಪನೊಳುಂ ಪುಟ್ಟಿತಲ (ಪರಶು. ೨೬-೫). [ದೇ. ॥ ತಮಿ. ಮಲ. ಚಾಲ್ ; ತುಳು. ಸಾಲ್ ; ಕೊಡ. ಸಾಲ್ = ಸರತಿ; ತೆಲು. ಚಾಲು]

ಸಾಲ್$_4$ 'ಸಾಲ್ಯು$_3$' ನೋ.

ಸಾಲ್‌ಆಚ್ಮೆರು 'ಸಾಲಾಚ್ಮೆರು' ನೋ.

ಸಾಲ್‌ಜಾಡ 'ಸಾಲ್‌ಝಾಡ' ನೋ.

ಸಾಲ್‌ಜಾಡೆ 'ಸಾಲ್‌ಝಾಡ' ನೋ.

ಸಾಲ್‌ಝಾಡ, ಸಾಲ್‌ಜಾಡ, ಸಾಲ್‌ಜಾಡೆ, ಸಾಲಜೇಡು (ನಾ). ವರ್ಷದ ತಃಪ್ತೆ, – ಲೆಕ್ಕಪಟ್ಟಿ : (ಕೃಸ್ಗ. II, ೫೬೦). **ಸಾಲ್‌ಜಾಡ** : (ಮೃಗಜ. IV, ೭೮೪). **ಸಾಲ್‌ಜಾಡೆ**: (ಮೃಗಜ. IV, ೭೮೪). **ಸಾಲಜೇಡು** : ಇನ್ನೂ ಚಪ್ಪರವನ್ನು ಪೂರ್ಣ ಅಳಿದಿಲ್ಲ. ಊರಿನ ಸಾಲಜೇಡು ಮುಗಿಸಿಲ್ಲ (ಮೂಕಜ್ಜಿ. ೧೧೭).

[<– ಮರಾ. ಸಾಲಝಾಡಾ]

ಸಾಲ್‌ಬಸಾಲ್ (ನಾ). ಪ್ರತಿವರ್ಷ; ವರ್ಷಂಪ್ರತಿ : (ಮೃಗಜ. IV, ೭೮೪).

[<– ಮರಾ. ಸಾಲಬಸಾಲ್]

ಸಾಲ$_1$ (ನಾ). (ನಿಗದಿಯಾದ ಕಾಲದಲ್ಲಿ) ಬಡ್ಡಿ ಅಥವಾ ಬಡ್ಡಿಯಿಲ್ಲದೆ ಹಿಂತಿರುಗಿಸುವ ಕರಾರಿನ ಮೇಲೆ ಕೊಟ್ಟ ಅಥವಾ ಪಡೆದ ಹಣ, ಪದಾರ್ಥ ಮುಂತಾದುವು; ಕಡ: ಸ್ವಸ್ತಿಶ್ರೀ ಶ್ರೀಪುರುಷಮಹಾರಾಜರ್ ಪೃಥುವೀರಾಜ್ಯಗೆಯ ಕೂಡಲೂರ್ಪ್ಪಾಡಿ ಒಡೆಯ ನನ್ದಿಕಾದನಾ ಎಱನಾಗನಾ ವ್ಯವಹಾರದನ್ತರಮ್ ಸಾಲ ಮಿಲ್ಲಾಮ್ (ಎಕ. X, ಕೋಲಾರ. ೭-೪ ; ಸು. 760) ; ಐದುದಿನಕಾದೊಡಮಾಱುದಿನಕಾದೊಡಂ ತನ್ನ ಮನೆಯಲ್ಲಿ ಮಾದುರಮನಾದೊಡಮಟ್ಟು ಸಾಲಮಿಲ್ಲದೆ ಪರರಾಳಲ್ಲದುಂಡಿ ಹುದುಚಿತಮೆಲೆ ರಾತ್ರಿಂಚರ (ಪಂಚತಂ. ಅ. ೫೨-೩೧); ಜೋಳವಾಳಿಯೊಳುಂಡು ಮಾಡಿದ ಸಾಲವನು ತಲೆಗಳಲಿ ತಿದ್ದಿದರಾಳ ತಱುಬುವ ಪತಿಗೆ ಹರುಷವ ಮಾಡಿ ತಮತಮಗೆ (ಕುವ್ಯಾಭೀ. ೬-೧೦) ; ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುಱಿದಂತೆ (ಸರ್ವಜ್ಞ. ೧೩೯೧).

ಸಾಲಕೇಳು = ೧. ಕಡವನ್ನು ಕೇಳು; ಎರವಲನ್ನು ಬೇಡು : ಅವನು ಈ ತಿಂಗಳು ನನ್ನ ಹತ್ತಿರ ನೂರುರೂಪಾಯಿ ಸಾಲಕೇಳಿದ್ದಾನೆ (ರೂಢಿ). ೨. ಕೊಟ್ಟ ಕಡವನ್ನು ವಾಪಸ್ಸು ಕೇಳು : ಸಾಲ ಕೇಳದೆ ಹೋಯಿತು, ಹೊಲ ನೋಡದೆ ಹೋಯಿತು (ಗಾದೆ). ಸಾಲ ತಿದ್ದು = ೧. ಕಡಕೊಡು : ಅವನು ಬಂದ ಹಣವನ್ನೆಲ್ಲ ಕೇಳಿದವರಿಗೆ ಸಾಲ ತಿದ್ದಿ ಮುಗಿಸಿದ (ರೂಢಿ). ೨. ತೆಗೆದುಕೊಂಡ ಕಡವನ್ನು ತೀರಿಸು, – ಹಿಂತಿರುಗಿಸು: ಕಲಿತೆನೆಂಬುವ ತಣವೆ, ಸಾಲ ತಿದ್ದಿದೆನೆಂಬ ತಿಳಿಮನವೆ ಫಲವೈಸೆ! (ಹಬ್ಬರ. ೧೮-೬೬). ಸಾಲತೀರಿಸು = ಕೊಂಡ ಕಡವನ್ನು ಹಿಂದಕ್ಕೆ ಕೊಡು; ಋಣಮುಕ್ತವಾಗು: ಈ ವರ್ಷ ಸಾಲತೀರಿಸದಿದ್ದರೆ ಮರ್ಯಾದೆ ಹೋಗುತ್ತದೆ (ರೂಢಿ). ಸಾಲತೀರು = ಕಡವನ್ನು ಹಿಂದಕ್ಕೆ ಕೊಟ್ಟು ಮುಗಿ; ಋಣ ಹರಿ: ಸಾಲಗಾರನು ಕೊಡುವ ಹಣದ ಜೊತೆಗೆ ಬ್ಯಾಂಕು ಸೇರಿಸುವ ಹಣವೂ ಲಾಭವೂ ಸೇರುವುದರಿಂದ ಗೊತ್ತಾದ ಕಾಲಕ್ಕೆ ಮುಂಚೆಯೇ ಸಾಲತೀರುವ ಅವಕಾಶವುಂಟು (ಹಣಪ್ರ. ೧೫೯) ; ಜೋಲುವವನ ಕಾಲು ಹಿಡಿದರೆ ಸಾಲ ತೀರೀತೇ? (ಗಾದೆ). ಸಾಲಸೋಲ = ಕಡ ಮುಂತಾದುವು : ಇನ್ನು ಮುಂದೆ ಅವನು ಮಾಡುವ ಸಾಲಸೋಲಗಳಿಗೆ ತಾನು ಜವಾಬ್ದಾರನಾಗುವುದಿಲ್ಲವೆಂದೂ . . . ಎಚ್ಚರಿಕೆ ಕೊಟ್ಟನು (ಪುನರು. ೩೪೧).

[< ಸಾಲ್$_1$./ ತುಳು. ಕೊಡ. ಸಾಲ; ಕೋತ. ಚಾಲ್$_2$]

ಸಾಲ$_2$, ಸಾಳ$_1$ (ನಾ). ೧. ಮರ; ವೃಕ್ಷ : "ತರು ವನಸ್ಪತಿ ಸಾಲಮಂಘ್ರಿಪಂ . . . ಕುಜಮೆನಲು ವೃಕ್ಷಕ್ಕೆ ನಾಮವಕ್ಕುಂ" (ಮಂಗರಾ. ೩೧-೧). ೨. ಅಂಟುದ್ರವವನ್ನು ಸ್ರವಿಸುವ ಒಂದು ಬಗೆಯ ಎತ್ತರವಾದ ಮರ; ಸರ್ಜವೃಕ್ಷ; ಶಾಲವೃಕ್ಷ: ಸಾಲಪ್ರಾಂಶುವಿಶಾಲಲೋಲನಯನಂ . . . ಗಂಗಾತ್ಮಜನ್ಮಂ ಜಯಶ್ರೀಲೋಲಂ ಜಮದಗ್ನಿರಾಮಮುನಿಯೊಳ್ ಕಲ್ತಂ ಧನುರ್ವಿದ್ಯೆಯಂ (ಪಂಪಭಾ. ೧-೬೮); ವಾರವಧೂಜನಮುಗ್ಧಸಾಲಕಾನನಮಿರೆ ಸಾಲಕಾನನಮನೀಕ್ಷಿಸಲಬ್ಬಿಗನಾದೆ (ಪಂರಾಮಾ. ೭-೧೧) ; ಈಳೆ ಹೊಂಗೇದಗೆಯ . . . ಸಾಲಸಂತಾನವನು . . . ಬಾಲದಿಂದಲಿ ಕಿತ್ತೊರಸಿ ಹುಡಿಹುಡಿ ಮಾಡಿದನು ಹನುಮ (ಕೌಶಿಕಾ. ೧೧-೨೦). ೩. ಆವರಣ ; ಸುತ್ತುಗೋಡೆ; ಪ್ರಾಕಾರ : ಇರೆ ನೀಚಗೃಹದಿ ಸೌಮ್ಯರ್ ಮರಮೊದಲೊಳ್ ಸಾಲ[ಪಾಠಾಂ. ೪] ಮೂಲದೊಳ್ ಜನನಂ (ಜಾತಕ. ೪-೨೨); ಇರುಳೊಸರ್ವ ಚಂದ್ರಮಣಿ ಬಂಧುರತತ್ಪುರಸಾಲದಂಬು ಬಳೆಯಿಸೆ ಬೆಳೆದಾ ಪುರನಂದನಮಂ ಹರಹರ ಸುರನಂದನಮೆಂದು ಬಣ್ಣಿಸಲ್ಪಗೆವುಗದೇ (ರಾಜಶೇ. ೨-೩೩). ಸಾಳ$_1$: ೨. ಸಾಳತಮಾಳಕಾನನಭರೋದ್ಧತಸಿಂಧುರಕಂಠಗರ್ಜನಾಭೀಳಮಂ . . . ಇಂದುಕಾಂತ [ಸು]ಸಲೀಳಮನೆಯ್ದುದನಿಂದ್ರಕೀಳಮಂ (ಪಂಪಭಾ. ೭-೭೬); ಸಾಳರಸಾಳತಾಳ . . . ಹಿಂತಾಳ ಮಹೀಜಮುಖ್ಯತರುಸಂತತಿಯಿಂ ವನಬೃಂದವೊಪ್ಪುಗುಂ (ಯಾದಚಂ. ೧-೩೫). ೩. "ಪರಿಧಿ ಪ್ರಾಕಾರ ವಪ್ರನಾಮಂ ಸಾಳಂ" (ವಸ್ತುಕೋ. ೪೬-೬). [ಸಂ.]

ಸಾಲಂಕಾರ (ಗು). ೧. ಅಲಂಕಾರಸಹಿತವಾದ; ಸಿಂಗರಿಸಲ್ಪಟ್ಟ: ಅತ್ಯಧಿಕಹಯಗಜರಥಂಗಳೊಂದೊಂದನೌಚಿತ್ಯಸಾಲಂಕಾರಗೋಸಹಸ್ರವನೊಂದುಭಾರ ಪೊನ್ನಂ ಕುಡುವುದು (ಶೃಮಿಭಾ. ೨-೨೭); ಸಾಲಂಕಾರತ್ರಿಮೂರ್ತಿದಾನ . . . ಗಜಾಶ್ವರಥದಾನ ಮೊದಲಾದ ಅನೇಕ ದಾನಗಳನ್ನು ಮಾಡಿ (ಮಹಾವಂ. II, ೧೬೯). (ನಾ). ೨. ಅಲಂಕಾರಸಹಿತವಾದುದು: ಮಂದನೆಯ ಮದದುಬ್ಬುಗೊಬ್ಬಿನ ಧಂದಸಾಲಂಕಾರದಲಿ ಹರಿನಂದನನು ಹಲುದಿನುತ ಹರಿತಂದೊದೆದನತಿರಥನ (ತೊರರಾ. ೬-೩೯-೭). [ಸಂ.]

ಸಾಲಂಕೃತಕನ್ಯಾದಾನ (ನಾ). ವಧುವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ವರನಿಗೆ ಧಾರೆಯೆರೆದು ಕೊಡುವುದು : ಮನೆ ಮಾರಿದ ಸುದ್ದಿ ನನ್ನ ಕಿವಿಗೆ ಬಿತ್ತು. ಅಲ್ಲದೆ ಇದು ಸಾಲಂಕೃತಕನ್ಯಾದಾನವೇ ಆಗಿತ್ತು! (ಸ್ವತಿಚಿ. ೩೪೮). [ಸಂ.]

ಸಾಲಂಗಿ (ನಾ). ಒಂದು ಬಗೆಯ ಉದ್ದವಾದ ಅಂಗಿ (?) : ಮಲಯಜ ವನನುಲೇಪನಂಗೆಯ್ದು ಧೂಪಿಸಿದ ಬಿಳಿಯ ಪಟ್ಟೆಯನುಟ್ಟು ದುವ್ವಟದ ಹಚ್ಚಡವನಳವಡಿಸಿ ಸಾಲಂಗಿಯಂ ತೊಟ್ಟು . . . ಸೌಂದರಂ ವನಕೆ ಪೊಱಮಟ್ಟನು (ಸೌಂದಪು. ೧೦-೧೧). [ಸಾಲ್$_3$? + ಅಂಗ್ಗಿ]

ಸಾಲಂಗುಳಿ, ಸಾಲಗುಳಿ (ನಾ). ಸಾಲಮಾಡುವ ಸ್ವಭಾವವುಳ್ಳವನು: ಗುಳಿ ಪ್ರತ್ಯಯಕ್ಕೆ – ಆಟಂಗುಳಿ, ಸಾಲಂಗುಳಿ, ಲಂಚಂಗುಳಿ (ತಮದ. ೨೦೨ ಪ್ರಯೋ); ಲಂಚಮಂ ಕೊಳ್ವಂ, ಲಂಚಂಗುಳಿ. ಏವಂ ಸಾಲಂಗುಳಿ, ಆಟಂಗುಳಿ (ಶಬ್ದಾನು. ೪೧೪ ಪ್ರಯೋ). **ಸಾಲಗುಳಿ** : ಸಾಲಗುಳಿಗೆ ಆ ಯೋಗ್ಯತೆ ಉಂಟಾಗುವುದು ಅವನ ಚರಸ್ಥಿರ ಆಸ್ತಿಯಿಂದ (ಶಬ್ದಪ. ೮೧). [ಸಾಲ$_1$ + – ಗುಳ್ಳಿ$_2$ (< – ಕುಳ್ಳಿ$_3$)]

ಸಾಲಂಗೊಡು, ಸಾಲಕೊಡು (ಕ್ರಿ). ಕಡವನ್ನು ಕೊಡು; ಎರವಲು ನೀಡು: ಒಕ್ಕಲಿಗರ್ ಸಾಕ್ಷಿಯಿಲ್ಲದೆ ಸಾಲಂಗೊಟ್ಟರಂತೆ [ಬೆಕ್ಕಸಂ] ಬೆಱಗಾಗೆ (ಧರ್ಮಾಮೃ. ೨-೬೯). **ಸಾಲಕೊಡು** : ಆಧಾರವಿಲ್ಲದಲೆ ಸಾಲಕೊಡುವುದು ಕಷ್ಟ ಮಾದ ಹುಣ್ಣದು ಮತ್ತೆ ಹುಟ್ಟಿದರೆ ಕಷ್ಟ (ಪುರಂದ. ಧಾ. ೫-೧೪೮-೫); ಸಾಲಕೊಡುವವನು ಸಾಲಗುಳಿಯ ರಪಣವನ್ನು ನೋಡಿ ಕೊಟ್ಟರೆ ಅದು ವಸೂಲಾಗುವುದರಲ್ಲಿ ಅವನಿಗೆ ಸಂದೇಹವಿರುವುದಿಲ್ಲ (ಶಬ್ದಪ. ೮೧). [ಸಾಲ$_1$ + ಕೊಡು$_1$]

ಸಾಲಂಗೊಳ್ (ಕ್ರಿ). ಕಡವನ್ನು ಪಡೆ; ಸಾಲಮಾಡು: ಪುರುಷಂ ತೀರಮೆಯಿಂದಂ ಪರದೇಶದೊಳಿರ್ದರಿತ್ತಲುತ್ತಮಪಾತ್ರಂ ಬರೆ ಸಾಲಂಗೊಂಡುಂ ಬಿತ್ತರದಿಂದಿಕ್ಕುವಡೆ ಧರ್ಮಪತ್ನಿಯೆನಿಕ್ಕುಂ (ಸಮಪ. ೫-೧೨೯). [ಸಾಲ$_1$ + ಕೊಳ್$_1$]

ಸಾಲಂಚು (ನಾ). (?): ಮಿಂಚುವ ಪರಿವಾಣ ಚಂಬು ಗಿಂಡಿಗಳು ಸಾಲಂಚಿನ ಮಜ್ಜನಸಾಲೆ ಪಂಚಾರತಿಗಂಟೆಗಳಿಂದ ಮೆಱೆದುವು ಕಂಚುಗಾಱರ ಪಸರಗಳು (ಕಂನವಿ. ೬-೬೯). [?]

ಸಾಲಂಬಡು, ಸಾಲಬಡು (ಕ್ರಿ). ಸಾಲಕ್ಕೆ ಸಿಕ್ಕು; ಋಣಕ್ಕೆ ಬೀಳು:

ಸಾಲಂಬಡಲಾಗದೆಂಬುದುತ್ತರವಾಕ್ಯಂ (ನೀತಿವಾ. ೩೧-೧೪). **ಸಾಲಬಡು** : ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು ಸಾಲಬಟ್ಟರೆ ಮಾಱಿಕೊಂಬರಯ್ಯಾ ಸಾಲಬಟ್ಟರೆ ಅವಱನೊತ್ತೆಯನಿಟ್ಟುಕೊಂಡುಂಬರಯ್ಯಾ (ಬಸವ. ೫೫೯). [ಸಾಲ$_1$ + ಪಡು$_1$]

ಸಾಲಂಮಿಶ್ರಿ 'ಸಾಲಾಮಿಸ್ರಿ' ನೋ.

ಸಾಲಕ 'ಶಾಲಕ' ನೋ.

ಸಾಲಕೊಡು 'ಸಾಲಂಗೊಡು' ನೋ.

ಸಾಲಗ$_1$ (ನಾ). ಕಡವನ್ನು ಕೊಡುವವನು; ಎರವಲು ನೀಡುವವನು: "ಋಣಕಃ = ಸಾಲಗಂ" (ಕಾಶಕ್ಷ. ೨೩೯). [ಸಾಲ$_1$ + - ಗ$_2$]

ಸಾಲಗ$_2$, ಸಾಳಗ (ನಾ). ೧. [ಸಂಗೀತ] ಹೊಂದಾಣಿಕೆ; ಮೇಳ; ಸಾಮಂಜಸ್ಯ: ಸೂಡವು ಶುದ್ಧ, ಛಾಯಾಲಗವೆಂಬ ಕ್ರಮದಿಂದ ಎರಡು ಬಗೆ . . . ಛಾಯಾಲಗವೆಂಬ ಮಾತು ಅಪಭ್ರಂಶವಾಗಿ ಸಾಲಗವೆಂದಾಗಿದೆ (ಚತುಪ್ರ. ೭೦). ಸಾಳಗ: ೧. ಠಾಯೆಯಿಂದಾಣತಿಮಾಡಿ ಸಾಳಗದ ದೇಸಿಯ ಗೀತಮನಂದು ಪಾಡುವಿಂಪಾಣನನುರ್ವರಾಧಿಪತಿ ಲೀಲೆಯಿನೆಕ್ಕಲಗಾಣನೊರ್ವನಂ ಕೇಳುತ್ತುಮಿರ್ದಂ (ಚಂದ್ರಪ್ರ. ೭-೯೭); ಸೇರಿ ಲಾಲಿತಶುದ್ಧಸಾಳಗಪೂರದೇಶೀಮಾರ್ಗಮೆಸೆಯಲಪಾರ ಲಳಿಧ್ರುತ ಮಧ್ಯಲಲಿತ ವಿಳಂಬಿತಂಗಳೊಳು (ಬಸಪು. ೧೯-೧೧) ; ಸಾಳಗದ ಸನ್ಮೋಹನದ ಮಳೆಗಾಲವೋ ಗೀತವೊ . . . ನರ್ತನವೊ ಸೊಗಸಿನ ಮೇಳವಣಿಗಳ ಪಾಟಿಯಾದುದು ಜನದ ಕಣ್ಣನಕೆ (ಕುವಾಆ. ೧೨-೨೦). ೨. ಮದ್ದಳೆಯ ನಾಲ್ಕು ಬಗೆಯ ವಾದನಕ್ರಮಗಳಲ್ಲಿ ಒಂದು: ಶುದ್ಧ ಸಾಳಗ ಸಂಕೀರ್ಣ ಠವಣಿಗಳೆಂಬ ಚತುರ್ವಿಧ ಮೃದಂಗಮಂ ಮೇಳೈಸಿ . . . ತ್ರಿವಿಧಕ್ರಮವಱಿದು ನುಡಿಸುವ ಕಡುಚಾಣರಪ್ಪ ಮರ್ದಳೆಕಾಱರಿಂ (ವಿವೇಕ. ೧೯೧). ೩. ಒಂದು ರಾಗದ ಹೆಸರು : ಮತ್ತೊರ್ವ ಮಾನಿನಿ ಸಾಳಗ ಗವುಳಗಳನು ಮನದೊಲವಿಂದಾಯೆಂದು ಪಾಡಿದಳು (ಜೀವಂಸಾಂ. ೧೯-೪೩); ಮಧುಮಾಧವಿ ಶಂಕರಾಭರಣ . . . ಶ್ರೀರಾಗ ಸಾಳಗ . . . ಕರ್ನಾಟಕಬಂಗಾಳಮೆಂಬಿಪ್ಪತ್ತೇ ರಾಗಾಂಗದಿಂದಾದ ರಾಗಂಗಳು (ವಿವೇಕ. ೧೮೮). [ಸಂ.]

ಸಾಲಗಾತಿ (ನಾ). ೧. ಸಾಲವನ್ನು ಕೊಟ್ಟವಳು; ಕಡವನ್ನು ನೀಡಿದವಳು: (ಕ). ೨. ಸಾಲವನ್ನು ಪಡೆದವಳು; ಕಡವನ್ನು ಹೊಂದಿದವಳು : ಪತಿಗೆ ಹೆಂಡತಿ ಸಾಲಗಾತಿ ತಾನಂತೆ ; ನಮ್ಮೊಳಂತಲ್ಲ, ನಾ ಸಾಲಿಗನೆ ನಿನ್ನ(ಗಿಳಿವಿ. ೫೮-೩೬).

[ಸಾಲ$_1$ + - ಕಾತಿ$_3$]

ಸಾಲಗಾರ (ನಾ). ೧. ಕಡವನ್ನು ಕೊಟ್ಟವನು; ಎರವಲು ನೀಡಿದವನು : ಮೊದಲೇ ಆತನ ಬಡತನ ; ಮೇಲೆ ಸಾಲಗಾರರ ಹಿಂಸೆ (ನೀತಿಚಂ. XIII, ೪); ಪಡಕೊಂಡ ಹಣಕ್ಕೆ ನ್ಯಾಯವಾದ ಮಶಾಧಿಪತಿಯು ಹೊಣೆಯಲ್ಲವೆಂದು ಅದಾಲತಿನಲ್ಲಿ ಪೈಸಲಾಗಿ ಸಾಲಗಾರರ ಬಾಯಿಗೆ ಮುತ್ತಿಕೆ ಆಯಿತು. ಧನಶೋಕದಿಂದ ಸಾಲಗಾರರು ಸಂತಾಪಪಟ್ಟರು (ವಾಗ್ಭಟಾ. ೨೮೭) ; ಸಾಲಗಾರನ ಮನೆಗೆ ಸವುದೆ ಹೊತ್ತರೆ, ಮೇಲಣ ಬಡ್ಡಿಗೆ ಸಮವಾಯಿತು (ಗಾದೆ). ೨. ಕಡವನ್ನು ಪಡೆದವನು ; ಋಣಿ : ಅವರಿಗೆಲ್ಲಾ ನಾನು ಸಾಲಗಾರನಾಗಿ ಕೈಜೋಡಿಸಿ ತಲೆಬಾಗುತ್ತೇನೆ (ಕಾಲೂರ. ೫ ಮುನ್ನುಡಿ).

[ಸಾಲ$_1$ + - ಗಾರ (< - ಕಾಱ)]

ಸಾಲಗಾರಿಕೆ (ನಾ). ಕಡವನ್ನು ಪಡೆಯುವುದು ; ಸಾಲಮಾಡುವುದು : ಶ್ರೀಮಂತ ದಳವಾಯಿಯವರು - ಬೆಳ್ಗೊಳದ ಸ್ಥಾನದವರ ಸಾಲಗಾರಿಕೆಯ ವಿಷಯವಾಗಿ ಆಧಿಕಾರಿಕನಿರ್ಣಯವನ್ನು ಈಗ ಈವೋಲಗದಲ್ಲಿ ಅಪ್ಪಣೆಕೊಡುವುದಾಗಿ ಅಭಯ ಮಾಡಿದ್ದರು (ಬೆಟ್ಟಅ. ೨೦೦-೧೬). [ಸಾಲಗಾರ + - ಇಕೆ]

ಸಾಲಗಾರ್ತಿ (ನಾ). = ಸಾಲಗಾತಿ : (ಕ). [ಸಾಲಗಾರ + - ತಿ$_1$ (< - ಇತ್ತಿ)]

ಸಾಲಗುಳಿ 'ಸಾಲಂಗುಳಿ' ನೋ.

ಸಾಲಗುಳಿಕ (ನಾ). ಸಾಲಮಾಡುವ ಸ್ವಭಾವದ ವ್ಯಕ್ತಿ : ಅವ್ವಯ್ಯ, ಎಂಥ ಸಾಲಗುಳಿಕರು ನೀವು ! (ಭಾಮಿನಿ. ೧೯). [ಸಾಲಗುಳಿ (< ಸಾಲಂಗುಳಿ) + - ಕ$_3$]

ಸಾಲಗೇರಿ 'ಸಾಲುಗೇರಿ' ನೋ.

ಸಾಲಗ್ರಾಮ (ನಾ). ವಿಷ್ಣುವಿನ ಸ್ವರೂಪವೆಂದೂ ಪೂಜಾರ್ಹವೆಂದೂ ಭಾವಿಸಲಾದ, ಸಾಮಾನ್ಯವಾಗಿ ಗಂಡಕೀನದಿಯಲ್ಲಿ ದೊರೆಯುವ ಕಪ್ಪನೆಯ ದುಂಡುಕಲ್ಲು : ಸಾಲಗ್ರಾಮ ಶಕ್ತಿ ಲಕ್ಷ್ಮಿ ದುರ್ಗಿ ಎಂಬ ಕಿಱುಕುಳದೈವಮಂ ಪೂಜಿಸಿ (ಸರ್ವಜ್ಞ. ೧೭೬-೮೨೯); ತೆಗೆ ತಿಲವನೌಪಾಸನದ ಕೊಳವಿಗಳ . . . ಬೇಳೆಗಳ ಸಾಲಗ್ರಾಮಗಳ ದೋಸೆಗಳ ಕಾವಲಿಗಳನೆನುತ ಕಳವಳಿಸೆ ಭೂಸುರರು (ತೊರರಾ. ೫-೮-೭೦); ಬಟ್ಟೆಯೊಳ್ಮುಣ್ಮವಶದಿಂದರ್ಭಕನ ಕಣ್ಗೆ ಪುಟ್ಟ ಸಾಲಗ್ರಾಮದೊಂದು ರಮಣೀಯಶಿಲೆ ಕಟ್ಟೆಸಕದಿಂದೆ ಕಾಣಿಸಲು (ಚೈಮಿಭಾ. ೨೮-೨೩). [ಸಂ.]

ಸಾಲಜೇಡು 'ಸಾಲ್‌ಝೂಡ' ನೋ.

ಸಾಲಣ 'ಶಾಲಣ' ನೋ.

ಸಾಲತ್ತ (ನಾ). ಒಂದು ಪಂಗಡದ ಹೆಸರು : ಪೆರ್ವಯಲ ಕೆಬರುಂ ತೆನನ್ನಾಕರುಂ ಕೊಳನೆಲ್ಲೂರ ಸಾಲತ್ತರುಂ ವಾರದರುಂ ಏನೆವ್ವರುಂ ನರಸಾಕ್ಷಿ (ಎಕ. V (R), ಕೃಷ್ಣನ. ೧೦೫-೭೨ ; ಸು. 890). [?]

ಸಾಲತ್ತಕಾಡು (ನಾ). ಒಂದು ಸ್ಥಳದ ಹೆಸರು : ಕಿಱುಮಾಮಿಪಾಳಮೆ ವದಿರಕೆಱೆವ ಸಾಲತ್ತಕಾಡೇಱೆನ ಪೇರೊಟ್ಟೆವಿ ಪಗನ್ತೆವಂಳಮೆ ಗೋಸನ್ನನೆ ಕೊಣ್ಟೆನ್ದಗಱೆವ (ಎಕ. V (R), ಕೃಷ್ಣನ. ೧೦೫-೭೪ ; ಸು. 890). [ಸಾಲತ್ತ, + ಕಾಡು$_2$]

ಸಾಲತ್ತಿ (ನಾ). ಒಂದು ಸ್ಥಳದ ಹೆಸರು : ದುಗ್ಗತಿಗವುಣ್ಡಿಯ ಮಗಂ ನಾಗತಿ ಸಾಲತ್ತಿಯ [ತು]ಱುಗೊಳ ಸತ್ತಂ (ಸೌಇ. XX, ೧೪-೪; 878). [?]

ಸಾಲಪತ್ರ (ನಾ). ಸಾಲವನ್ನು ಪಡೆದ ವ್ಯಕ್ತಿ ಅಥವಾ ಸಂಸ್ಥೆಯು ಸಾಲದ ವಿವರ, ನಿಬಂಧನೆ ಮತ್ತು ಹಿಂತಿರುಗಿಸುವ ವಾಗ್ದಾನಗಳೊಂದಿಗೆ ಸಾಲಕೊಟ್ಟವರಿಗೆ ಬರೆದುಕೊಡುವ ಪತ್ರ : ಯಾವಾಗ ಮಾರಿದರೂ ತಕ್ಷಣ ಅಷ್ಟು ಲೋಹವನ್ನೂ ನಾಣ್ಯವನ್ನೂ ಬೆಲೆಯನ್ನೂ ಕೊಂಡು ತರುವ ಸಾಲಪತ್ರ, ಲೇವಾದೇವಿಪತ್ರಗಳೂ ಇರುವುವು (ಹಣಪ್ರ. ೨೮). [ಸಾಲ$_1$ + ಪತ್ರ]

ಸಾಲಪರ್ಣಿ (ನಾ). ಒಂದು ಬಗೆಯ ಮರ : ಸಾಲಪರ್ಣಿ, ಕೊಳಕುನಾರು (ಮೃಡಿಗಿ. ೨೯-೫೭೧). [ಸಂ. ಸಾಲಪರ್ಣೀ]

ಸಾಲಬಂದಿಕೆ (ನಾ). ಬಟ್ಟೆ, ಮರ, ದಂತ ಮೊದಲಾದುವುಗಳಿಂದ ತಯಾರಿಸಿದ ಗೊಂಬೆ , — ಪುತ್ತಳಿ : "ಕನ್ನಡದಲ್ಲಿ 'ಮದನಕ್ಕೆ' ಎಂಬುದು ಬಹುಶಃ ಮದನಿಕಾ ಎಂಬ ಸಂಸ್ಕೃತಪದದ ತಮಿಳುರೂಪಾಂತರದಿಂದ ಬಂದಿತೆಂದು ಊಹಿಸಲಾಗಿದೆ. ಶಿಲ್ಪಿಗಳು ಇವುಗಳನ್ನು 'ಸಾಲಬಂದಿಕೆ', 'ಪುತ್ತಳಿ' ಎಂದು ಕನ್ನಡಶಾಸನಗಳಲ್ಲಿ ಕರೆದಿರುವರು (ಹೊಯ್ಸಾಲಾ. ೨೬). [< ಸಾಲಭಂಜಿಕೆ]

ಸಾಲಬಡಕ (ನಾ). ಸಾಲ ಮಾಡುವವನು ; ಸಾಲಗಾರ : (ಕ).

[ಸಾಲ$_1$ + - ಬಡಕ$_2$ (< - ಬಡಿಕ$_2$)]

ಸಾಲಬಡು 'ಸಾಲಂಬಡು' ನೋ.

ಸಾಲಬಾಗೆ, ಸಾಲುಬಾಗೆ (ನಾ). ಒಂದು ಬಗೆಯ ಬಾಗಿಮರ : ಸಾಲಬಾಗೆ, ಬೆಳ್ಳಟ್ಟೆ, ಬಿಕುಲ್ (ಮೃಡಿಗಿ. ೪-೬೭). **ಸಾಲುಬಾಗೆ** : "ಬಿಕುಲ್, ಬೆಳ್ಳಟ್ಟೆ, ಅಥಂಜಿ, ಸಾಲುಬಾಗೆ" (ಸಸ್ಯನಿ. ೮). [ಸಾಲ$_2$ + ಬಾಗೆ$_1$]

ಸಾಲಭಂಜಿಕೆ (ನಾ). = ಸಾಲಬಂದಿಕೆ: ಗೃಹದೇವತೆಯರ್ ಸನ್ನಿಹವಾದರೆನಿಸಿ ರಂಜಿಸುವ ಮಣಿಮಯ ಸಾಲಭಂಜಿಕೆಗಳೊಳಂ (ಕಾಲಂಪೂ. ೭೯); ಕಮಲಜಂ ನೀಲದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀವಂದಳೆದವೋ (ಜಚಕಾ. ೭-೪); ಸಾಲಭಂಜಿಕೆ ಗೆತ್ತರಸಂ ನೋಡಿದಂ ಲಲಾಟಕೋಮಲೆಯಂ (ಶಮದ. ೨೪೦ ಪ್ರಯೋ); ಮರಕತದ ಸೋಪಾನಗಳ ಸುತ್ತಣ ಸಾಲಭಂಜಿಕೆಗಳ ವಿಲಾಸದಲಿ ಸೊಗಸಿತಾ ಮಂಟಪ (ತೊರರಾ. ೧-೧೩-೮); ಸಾಲಮಣಿಮಯದ ಸೋಪಾನದೊಳ್ಪಲಿಸರ್ದ ಸಾಲಭಂಜಿಕೆಗಳೊ ವಿಚಿತ್ರಮೆನೆ ರಂಜಿತ ರಸಾಲಪಲ್ಲವಪಾಣಿಪಾದತಳದಬಲೆಯರ ರೂಪುಗಳ್ಕಣ್ಗೆಸೆದುವು (ಚೈಮಿಭಾ. ೩೦-೧೩). [ಸಂ. ಸಾಲಭಂಜಿಕಾ]

ಸಾಲವಣಿಗ (ನಾ). = ಸಾಲಂಗುಳಿ : ವಣಿಗಪ್ರತ್ಯಯಕ್ಕೆ - ಕೂಬ್ಬಣಿಗಂ ಮತ್ತೆ ಕೆಲವಱೊಳುಂಟು - ಲಂಚವಣಿಗಂ, ಸಾಲವಣಿಗಂ (ಶಮದ. ೨೦೬ ಪ್ರಯೋ).

[ಸಾಲ$_1$ + - ವಣಿಗ$_2$]

ಸಾಲವಿದ್ಯೆ (ನಾ). (ಕೋಟೆಯ) ಪ್ರಾಕಾರವನ್ನು ರಚಿಸುವ ಕೌಶಲ : ಆಕೆಯ ಕೈಯೊಳಾ ವಿದ್ಯೆಯಂ ಕೊಂಡು ಕಟೊಪಿ ಮಱುದಿವಸಂ ಸಾಲವಿದ್ಯೆಯಂ ಪ್ರತಿವಿದ್ಯೆಯಿಂ

ಕಿಡಿಸಿ ದುರ್ಲಂಘ್ಯಪುರಮಂ ರಾವಣಂ ಮುತ್ತುವುದುಂ (ಪಂರಾಮಾ. ೧೦-೧೯೬ ವ).

[ಸಂ. ಸಾಲವಿದ್ಯಾ]

ಸಾಲಾಂಬಾಲ (ಗು). ಕಠಿಣವಾದ; ಉಗ್ರವಾದ: ಶ್ರೀಬಾಳಾಮೇಲ್ಕಿಮೇಲೆ ಸರ್ಪದ ಮಹಾದನ್ತಾಗ್ರದುಳ್ಳಲ್ವವೊಲ್ ಸಾಲಾಮ್ಬಾಲತಪೋಗ್ರದಿನ್ತು ನಡದೊಂ ನೂಱಿಣ್ಮುಸಂವತ್ಸರಂ (ಎಕ. II (R), ೨೫-೨ ; ಸು. 700). [?]

ಸಾಲಾಖ್ಯೆರು, ಸಾಲ್‌ಆಖ್ಯೆರು (ನಾ). ವರ್ಷದ ಕೊನೆ; ಸಂವತ್ಸರದ ಅಂತ್ಯ: ಬಾಕಿ ಏನಾದರೂ ನಿಂತರೆ ಅದು ಸಾಲಾಖ್ಯೆರಿನಲ್ಲಿ ವ್ಯವಸ್ಥೆಯಾಗುತ್ತಿತ್ತು (ಮಹಾವಂ. II, ೧೮). **ಸಾಲ್‌ಆಖ್ಯೆರು** : (ಕ). [ಸಾಲ್+ (< ಸಾಲ್ಕು) + ಆಖ್ಯೆರು]

ಸಾಲಾಮಿಸಿರಿ 'ಸಾಲಾಮಿಸ್ರಿ' ನೋ.

ಸಾಲಾಮಿಸ್ರಿ, ಸಾಲಂಮಿಶ್ರಿ, ಸಾಲಾಮಿಸಿರಿ (ನಾ). ಒಂದು ಬಗೆಯ ಸಸ್ಯ ಮತ್ತು ಔಷಧೀಯಗುಣವುಳ್ಳ ಅದರ ಗೆಡ್ಡೆಯಿಂದ ತಯಾರಿಸುವ ಹಿಟ್ಟು : ಸಾಲಾಮಿಸ್ರಿ ತೊಲೆ ಮೂರು ಕೊಳವಳಿಕೆಬೀಜ ತೊಲೆ ಮೂರು (ಕಾಮಶಾ. ೨೬೫). **ಸಾಲಂಮಿಶ್ರಿ** : ಸಾಲಂಮಿಶ್ರಿ . . . ಗುಲಾಬನೀರು (ಮುಂಬಾ. ೯೯). **ಸಾಲಾಮಿಸಿರಿ** : (ಕ). [← ಅರ. ಸಾಲಬಮಿಸ್ರೀ ; ಹಿಂ. ಸಾಲಮಮಿಶ್ರೀ ; ಮರಾ. ಸಾಲಂಮಿಶ್ರೀ, ಸಾಲಮಿಶ್ರೀ./ ಮಲ. ಸಾಲಬ್‌ಮಿಸ್ರೀ ; ತುಳು. ಸಾಲಾಮಿಸ್ರಿ ; ತೆಲು. ಸಾಲಮಿಶ್ರಿ]

ಸಾಲಾವಳಿ, ಸಾಲುವಳಿ (ನಾ). ಮದುವೆಯನ್ನು ನಿಶ್ಚಯಿಸುವಾಗ ವಧೂವರರ ಜಾತಕ, ಮನೆತನ ಇತ್ಯಾದಿ ವಿಷಯಗಳಲ್ಲಿ ಕಂಡುಬರುವ ಹೊಂದಾಣಿಕೆ, — ಸಾಮರಸ್ಯ: ಶಕುನಾ ನಮಗಾದೂ ಸಾಲಾವಳಿ ನಿಮಗಾದೋ ನಾಳೇಯ ಲಗ್ನಾ ನಮಗಾದೋ (ಹುಬ್ಬಹ. ೧೭೪) ; ಹೆಣ್ಣುನೋಡುವುದೆಂದರೆ ಆ ಕಾಲದಲ್ಲಿ ಸುಲಭವಾಗಿರಲಿಲ್ಲ. ವಾವೆ ನೋಡಬೇಕು; ಸಾಲಾವಳಿ ನೋಡಬೇಕು (ನನ್ನೂರು. ೭೦). **ಸಾಲುವಳಿ** : ಕೊಡಬೇಕೆನುತ ಜೋಯಿಸರ ಕರೆಯಿಸಿ ತಾನು ಬಿಡದೆ ಸಾಲುವಳಿ ಕೇಳೆ (ಪೂಜ್ಯಚ. ೮-೮). [← ತುಳು. ಸಾಲಾವಳಿ]

ಸಾಲಾವೃಕ (ನಾ). ೧. ನಾಯಿ; ಶ್ವಾನ. ೨. ಕಪಿ; ಕೋತಿ. ೩. ನರಿ; ಸೃಗಾಲ: "ಸಾಲಾವೃಕಾಹ್ವಯಂ ಶ್ವ ಸೃಗಾಲ ಪ್ಲವಗಂಗಳೊಳ್ ಪ್ಲವಂಗಮಶಬ್ದಂ" (ಮಸ್ಕೂಕೋ. ೧೩೦-೭೭). [ಸಂ.]

ಸಾಲಿ₁ 'ಸಾಲ್'₂ ನೋ.

ಸಾಲಿ, ಶಾಲ್ಕೆ, ಸಾಲ್ಕೆ (ನಾ). ೧. ಬತ್ತ; ನೆಲ್ಲು : 'ದಬ್ಬಣಸಾಲಿ' ಪರಾ. **ಶಾಲ್ಕೆ** : ೧. ಶ್ರೀಜನ್ನ ಕಲ್ಲನಿಜಿಸಿ ಪನ್ನಿರ್ಕಣ್ಣುಗ ಬೆದಮಕ್ಕೊಟ್ಟಾರ್ದ್ದಿವಸಕೆಕ್ಕೊರ್ಗೀ ಶಾಲೆಗೊದುವೊದು (ಮೈಆರಿ. ೧೯೪೪, ೬-೩; ೪೦೩ ?); ಪಟ್ಟೆಯ ಶಾಲೆಯಂ ಧರಾಲಲನೆ ವಿಳಾಸದಿಂ ತಳೆದಳೆಂದೆನೆ ಶಾಲೆಯ ಗರ್ದೆ ತೋಱುಗುಂ (ರಾಜಶೇ. ೨-೧೦). **ಸಾಲ್ಕೆ** : ೧. "ಸಾಲ್ - ೧. ಶಾಲೀ = ನೆಲ್ಲು (೨. ಬೇಲ)" (ತದ್ಭವಕೋ. ೪೪). ೨. ಒಂದು ಬಗೆಯ ಬತ್ತ : ಭಾರದ್ವಾಜಗೋ ಆಶ್ವಲಾಯನಸೂ ಭಾಗವತ ಸೇವೆಯ ತಿಂಮಣಗೆ ಹಲವು ಸಾಲೇ ಭತ್ತ XXX (ಎಕ. VIII, ತೀರ್ಥಹ. ೧೯-೬೮ ; 1573). [< ಸಂ. ಶಾಲಿ]

ಸಾಲಿಕ್ಕು (ಕ್ರಿ). ಒಂದರ ಹಿಂದೊಂದು ಇರು; ಸಾಲುಗಟ್ಟು: ಉಕ್ಕಿತೋ ವಿಲಯಾಬ್ಧಿಯನೆ ಸಾಲಿಕ್ಕಿ ನಡೆದುದು ಸೇನೆ (ಕುವಾಶ. ೮-೨೫) ; ಜೀವವ ತೊಳೆದ ಕರಿ ತುರಗಗಳ ಸಾಲಿಕ್ಕಿದ ಮೆದೆಯಿಂದ ಮೆಳೆದುದು ರಣಭೂಮಿಯಂದು (ಕಂನಪ. ೧೫-೬೫).

[ಸಾಲ್+ ಇಕ್ಕು]

ಸಾಲಿಗ₁ (ನಾ). ೧. ಕಡವನ್ನು ಕೊಟ್ಟವನು ; ಸಾಲಗಾರ : ಸಾಲಿಗರ್ ಕಲುಗುಂಡಂ ತಲೆಗೇಱಿವರ್ ತೊಲಗಿರಲ್ ಲಕ್ಷ್ಮೀಕಟಾಕ್ಷೇಕ್ಷಣಂ (ಸೋಮೇಶ. ೫೧); ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುಱಿದಂತೆ (ಸರ್ವಜ್ಞ. ೧೩೧೧). ೨. ಸಾಲವನ್ನು ಪಡೆದವನು; ಋಣವನ್ನು ಹೊಂದಿದವನು : ಸಾಲಿಗನು ಸಾಲವನು ತಿರ್ದಿ ಪೋಪಂತೆ ಪಾಪಕ್ಕೆ ನಿರ್ಣಯಂಗಂಡು ನೆಲೆ ಪೋಪನಾ ಜೀವನು (ಸಿದ್ಧರಾ. ೭-೯) ; ಕವಿವ ನೃಪಾಲಕರು ಭೀಮಂಗೆ ಹರಣದ ಸಾಲಿಗರು ಸಂದಣಿಸಿತಬುಜವ್ಯೂಹದಗ್ರದಲಿ (ಕುವಾಡ್ರೋ. ೧೨-೨೭) ; ಬೆಂಡಿರದೆ ಮುಳುಗಿದರು ಗುಂಡೆದ್ದು ತೇಲಿದರು ಬಂಡಿಯ ನೊಗವು ಚಿಗಿತರೂ ಸಾಲಿಗನು ಕೊಂಡದ್ದು ಕೊಡನು (ಸರ್ವಜ್ಞ. ೧೩೯೭). [ಸಾಲ₁ + - ಇಗ]

ಸಾಲಿಗ₂, **ಸಾಳಿಗ**₁ (ನಾ). ಸೀರೆ ಮುಂತಾದುವನ್ನು ನೇಯುವವನು ; ನೇಕಾರ: ಇರುಳ್ ಪೋಗಮಟ್ಟು ಪಾಟಳೀಪುತ್ರಮಂ ಪೊಕ್ಕು ಪಸಿದು ಸಾಲಿಗರ ಮನೆಯಂ ಪೊಕ್ಕು ಸಾಲಿಗರ ಬರ್ದಿಯನುಣಲ್ವೇಡಿದೊಡೆ (ವಡ್ಡಾರಾ. ೧೭೮-೧೩) ; ಸಾಲಿಗನ ಕೈಯೊಳ್ ದೂದವಿಯಪ್ಪವಳ್ ಪೃಥಾ ಮೂಗಂ ಕೊಯಿಸಿಕೊಂಡಳ್ (ಪಂಚತಂ೨-೧೯) ; ಕಾಪಿ ಕಮ್ಮಾಣಿನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗ[ಪಾಠಾಂ. ಸಾಲಿಗಾರ]ನಾದ ವೇದವನೋದಿ ಹಾರುವನಾದ (ಬಸವ. ೫೯೧) ; ಮೂಡಲಾಗಿ ಹೋದ ಸಾಲಿಗರ ಕೇರಿಯ ಮಗ ಗರವಾರಗಳನು ಆ ಮೂಡಬಾಗಿಲ ಸುಂಕವನೂ . . . ಧಾರೆಯನೆಱದು ಕೊಟಂಥಾ ಧರ್ಮ್ಮಶಾಸನಕೆ ಶುಭಮಸ್ತು (ಸೌಶಾ. IX-ii, ೪೭೬-೧೩; 1506). **ಸಾಳಿಗೆ**₁ : ಮಣಿಗಾಱ ಪದ್ಮಸೆಟ್ಟಿ . . . ಸಾಳಿಗೆ ಮಾಚಸೆಟ್ಟಿಯೊಳಗಾಗಿ ಸಮಸ್ತವಣಗ್ಗಾಮ್ಮಿಕರುವಂ ಮಹನೀಯ ವಿಷದಂ ಮಾಡಿ (ಎಕ. VII, ಶಿಕಾರಿ, ೧೧೯-೬೮ ; 1181).

[ಸಾಲ್+ - ಇಗ]

ಸಾಲಿಗಸಮಯ (ನಾ). ನೇಯ್ಗೆಯವರ ಮಂಡಲಿ; ನೇಕಾರರ ಸಂಘ: ಸಾಲಿಗಸಮಯಂಗಳ್ ಗೌಡಮುಖ್ಯವಾಗಿ ನೂಲ ಪರ್ವ್ವಕ್ಕೆ ವರ್ಷಂಪ್ರತಿ ಒಕ್ಕಲಲ್ಲಿ ವೀಸವಯ್ದಂ ಕೊಟ್ಟರ್ (ಎಇ. V, ೧೪-೬೩ ; 1161). [ಸಾಲಿಗ₂ + ಸಮಯ]

ಸಾಲಿಗ್ರಾಮ, ಸಾಲಿಗ್ರಾವ, ಸಾಳಿಗ್ರಾವ (ನಾ). = ಸಾಲಗ್ರಾಮ : ಅವನೇ ಹೋಗಿದ್ದಾನೆ. ಇನ್ನೆಂತಹ ಸಾಲಿಗ್ರಾಮವನ್ನು ತರುವನೋ ನೋಡೋಣ (ಪಪಾ. ೮೨); ದೊಡ್ಡವರು ಎಲ್ಲರಿಗೂ ದೊಡ್ಡವರು. ಅಂಥವರನ್ನು ನಮ್ಮವರು ನಿಮ್ಮವರೆಂದಾಡುವುದು 'ಇದು ನನ್ನ ದೇವರ ಪೆಟ್ಟಿಗೆ-ಅದು ನಿನ್ನ ದೇವರ ಪೆಟ್ಟಿಗೆ' ಎಂದು ಪ್ರತ್ಯೇಕ ಸಂಪುಟಗಳಲ್ಲಿ ಸಾಲಿಗ್ರಾಮಗಳನ್ನು ಕಟ್ಟಿಟ್ಟುಕೊಂಡಂತೆ! (ಕಥಎ. IX, ಮುನ್ನುಡಿ). **ಸಾಲಿಗ್ರಾವ** : (ಕ). **ಸಾಳಿಗ್ರಾವ** : ನದಿಯೊಳರ್ಪ ಕಲ್ಲೆಲ್ಲಂ ಸಾಳಿಗ್ರಾವಂ ವಲಂ (ರಾಮಾಶ್ವ. ೭೯-೮).

[< ಸಂ. ಸಾಲಗ್ರಾಮ]

ಸಾಲಿಗ್ರಾವ 'ಸಾಲಿಗ್ರಾಮ' ನೋ.

ಸಾಲಿಡು (ಕ್ರಿ). ೧. ಸಾಲನ್ನು ರಚಿಸು; ಪಂಕ್ತಿಮಾಡು : ರಿಸಿಯರ್ ಕನ್ನಮಿಕ್ಕಿ ತಮ್ಮ ಬಸದಿಯೊಳ್ ಕಸವರಮನೊಟ್ಟಿಟ್ಟು ಸಾಲಿಟ್ಟಂತಿರೆ (ವಡ್ಡಾರಾ. ೧೧೭-೧೦) ; ಪೆಣನಂ ಸಾಲಿಟ್ಟವೋಲಾಗೆ ಮೇದಿನಿಯೊಳ್ ಖಚರಸೇನೆ ಬೀಳೆ ಬಯಲಾದತ್ತಾಗಸಂ (ಪಂರಾಮಾ. ೯-೬೯) ; ಕೆಂದಾವರೆವೂಗಳಂ ತರದೆ ಕೇಸಡಿ ಸಾಲಿಡೆ ಬಿಂಕದಿಂ ನೆಗಟ್ಟಾವಗಮೋಲಗಿಪ್ಪ ಸಱಿಮಿಂಡಿಯರೊಪ್ಪಿದರೆತ್ತ ನೋಟೞ್ಪೊಡಂ (ಕಬ್ಬಕಾ. ೧೩೬). ೨. ಸಾಲಾಗಿರು; ಪಂಕ್ತಿಗೊಳ್ಳು : ಸಾಲಿಟ್ಟು ಬೆಳೆದಡಕೆಗಳ . . . ಕಡಲಿಟ್ಟು ಸುರಿ:ತ ಸುಧಾರಸದ ಹೊಂಗಟ್ಟುಗಳ ಫಲಭೂದರಾಜಿಯ ಕಿತ್ತನಾ ಹನುಮ (ತೂರಾ. ೫-೪-೫) ; ಕಟ್ಟದುವು ಮನೆಮನೆಯ ಮುಂದಾಗಲಿರದೆ ಸಾಲಿಟ್ಟುವು ಮಕರತೋರಣಂಗಳಾಕಾಶಮಂ ಮುಟ್ಟಿದುವು ಕೇತನಪ್ರತತಿಗಳ್ (ಚಿಬಪು. ೬-೪೨). ೩. ಒಂದರ ಹಿಂದೊಂದು ನಡೆ ; ಸಾಲಾಗಿ ಚಲಿಸು : ಥಟ್ಟು ಮುರಿದುದು ಕೂಡೆ ತೆರೆ ಸಾಲಿಟ್ಟ ಸಾಗರದಂತೆ (ಕುವಾಭೀ. ೮-೭೪) ; ಬಟ್ಟಬಲ್ಮೊಲೆಯ ಭಾವೆಯರಾಯತಿವೆತ್ತು ಪಟ್ಟಣದಿಂ ಪೊಱಮಟ್ಟು ನೆಟ್ಟನೆ ಸ್ಮರನಿರ್ದ ನಂದನವೆಡೆಗೆ ಸಾಲಿಟ್ಟುದನೇಕಸಂಭ್ರಮದಿ (ವೀಜಿತ. ೫-೨೯). ೪. ಹೊರಸೂಸು; ಚೆಲ್ಲು; ಬೀರು : ನಗೆಪೊಗದಿಂ ಮುಗುಳ್ನಗೆ ತುಳುಂಕಿ ಬಳಲ್ಮುಡಿಯಿಂದರಲ್ಗಳಲ್ಲುಗೆ ನಿಡುಗಣ್ಗಳಿಂ ಪೊಳೆವು ಸಾಲಿಡೆ . . . ಗೋಪಿ ಡಕ್ಕೈಯ ಲಯಕ್ಕೆ ಪೆಱಳ್ ಜತಿಮೆಟ್ಟುತಾಡಿದಳ್ (ಜಗವಿ. ೫-೧೫೫) ; ಅಸಿ ಪರಶು ಪಟ್ಟಸ ಮುಸುಂಡಿಪ್ರಸರಧಾರಾಪಾತದಲಿ ಮೈ ಬಸಿಯೆ ರಕುತದ ಸಾರ ಸಾಲಿಡೆ ಬಲದೊಳೊಳಹೊಕ್ಕ (ಕುವಾಡ್ರೋ. ೧೫-೭೩) ; ಸಾಲಿಡುವ ಕಂಬನಿಯ ಮಱುಕದ ಮಾಲೆಗಿಚ್ಚಿನ ಚುಚ್ಚನಂಗದ ಬಾಲೆ ಬಾಯ್ಬಿಡುತೀಕ್ಷಿಸಿದಳಾಸುರದ ಮಸ್ತಕವ (ತೂರಾ. ೬-೧೨-೨೭). ೫. ಹರಡು; ಚೆಲ್ಲು : ಸೂಸುವ ಮಿದುಳ ಮೊಗೆದೆಣ್ಕೆಸೆಗೆ ಸಾಲಿಡುವ . . . ಕಿಱಿಯ ಬರಿಕೈ ಬಿಡಿಸಿದವು ಹುಟ್ಟಾಗಿ ಯಮರಾಜನ ಪರಿಗ್ರಹಕೆ (ಕುವಾಭೀ. ೪-೮೨). ೬. ಉಂಟುಮಾಡು; ಒದಗಿಸು: ಶರೀಷದ ಮಾಲೆಯಂ ಪ್ರಭಾಮಾಲೆಯನೇಲಿಸುತ್ತಿರೆ ಭುಜಂ ನಖಮಾಲೆ ಮಯೂಖಮಾಲೆಯಂ ಸಾಲಿಡೆ ಬಾಲೆ ಬಂದು ವನಮಾಲಿಗೆ ಮಾಲೆಯನೊಲ್ದು ಸೂಡಿದಳ್ (ಜಗವಿ. ೧೦-೭೪); ಬಿಂಕದಿಂ ಕೊಂಕಿ ನಿಂದು ಕಂಕಣರಣಿರಣಿತಾಕಾರಂ ಸಭೆಯ ಕಿವಿಗೆ ಸವಿಗಳಂ ಸಾಲಿಡೆ

ಸೂಳುಬಿದಿಕ್ಕುವ ಚಾಮರಗ್ರಾಹಿಣಿಯರೊಳಂ (ಗಿರಿಕ. ೨-೧೦೫ ವ) ; ತವರಾಜದ ಸಿರಿಯಂತಿರೆ ಸವಿಯಂ ಸಾಲಿಡುವುದಖಿಲಬುಧತತಿಗಳ್ಗಂ ಕವಿಯೊಳ್ ನಾಗೇಂದ್ರನ ನಿಜಕವಿತೆಯ ಕನ್ನಡದ ನುಡಿಯ ಬೆಡಗಿನ ಗಡಣಂ (ಪುಣ್ಯಾಸ್ರ. ೧-೩೧). [ಸಾಲ್$_3$ + ಇಡು$_1$]

ಸಾಲಿಪೈಠಣೆ (ನಾ). ಒಂದು ಬಗೆಯ ಬಟ್ಟೆ : ಅಲವಟ್ಟನ ಬೀಸಿ ಗರ್ವಾವರಿಸಿ ಸಾಲಿಪೈಠಣೆಯನು ತೊಡಿಸಿ ಮೇಲುಕುಲಾಯವನಿಕ್ಕಿ ಭೂ.. ' ಲೀ.. ತೊಡಿಸಿದರು (ಜಿನರಾ. ೯-೪೯). [ಸಾಲಿ$_1$ (< ಸಾಲ್$_2$) + ಪೈಠಣೆ (< ಪೈಠಣಿ)]

ಸಾಲಿಯಾನ 'ಸಾಲಿಯಾನಾ' ನೋ.

ಸಾಲಿಯಾನಾ, ಸಾಲಿಯಾನ, ಸಾಲ್ಲೀಯಾನಾ (ಅ). ಒಂದು ವರ್ಷಕ್ಕೆ ; ವರ್ಷ೦ಪ್ರತಿ : ಅಂಥವನು ಸಾಲಿಯಾನಾ ೧೦ ರೂಪಾಯಿಗೆ ಕಡಿಮೆ ಇಲ್ಲದಂತೆ ಕಂದಾಯ ಕೊಡುವ ಜಮಿನ್ ಹಿಡುವಳೀದಾರನಾಗಿರಬೇಕು ಅಥವಾ ಸಾಲಿಯಾನಾ ೧೦ ರೂಪಾಯಿಗಿಂತ ಕಡಿಮೆ ಇಲ್ಲದಂತೆ ಪೂರಾ ಕಂದಾಯ ಬೀಳುವ ಇನಾಂಜಮಿನನ್ನು ಪಡೆದಿರಬೇಕು (ಗ್ರಾಮಾಳ. ೧೨). **ಸಾಲಿಯಾನ** : ಭೂಮಿ ವುತ್ತಾರ ಹೋಗಲಾಗಿ ಸಾಲಿಯಾನ ಜೋಡಿ ೩೩ ॥ ೧ ॥ ಬರುತ್ತಾಯಿದ್ದದ್ದು ಸರಿಯಷ್ಟೆ (ಮೈಆರ್. ೧೯೩೪, ೫೨-೧೦ ; 1812). **ಸಾಲ್ಲೀಯಾನಾ** : ಸಾಲ್ಲೀಯಾನಾ ಕಂಟರಾಯಿ ಐದುವರಹಾದ ಪ್ರಕಾರಾ ಜೋಡಿ ತೆಗೆದುಕೊಂಡು (ಮೈಆರ್. ೧೯೨೯, ೯೪-೪೬ ; 1813).

[← ಪಾರ. ಸಾಲಿಯಾನಾ; ಹಿಂ. ಸಾಲಾನಾ, ಸಾಲಿಯಾನಾ ; ಮರಾ. ಸಾಲನಾ, ಸಾಲಿನಾ, ಸಾಲೀನಾ]

ಸಾಲಿಸು (ಕ್ರಿ). ೧. ಸಾಲವನ್ನು ಕೊಡು ; ಕಡವನ್ನು ನೀಡು : ತನ್ನಂ ತಪದಿಂ ನೋಯಿಸದುನ್ನತಿಯಂ ದಿವ್ಯಭೋಗಮಂ ಬಯಸುವ ಗಾಂಪಂ ನೆಲೆ ಪೋಲ್ಕುಂ ಸಾಲಿಸದಿನ್ನಳಿಪಂ ಬಡ್ಡಿವೇಡಿ ಮಱುಗುವ ಮರುಳಂ (ಧರ್ಮಾವ್ಯ. ೬-೧೫೬). ೨. ಸಾಕುಮಾಡು; ನಿಲ್ಲಿಸು: ಆಲಿಸುತೆ ಬೇಗಮೋಹೋ ಸಾಲಿಸಿಮೆನೆ ವಿರಸಮಪ್ಪ ಕಬ್ಬಂಬೇಟ್ಟುಲೋಲತೆಯಿಂದಂ ಬ[ರೆಬರೆ]ದೋಲೆಗಳಂ ಕಿಡಿಸುವಂತು ತಾಪೊಳು ಪಗೆಯೇ (ಬಂಹರಿ. ೧-೧೧). [ಸಾಲ್$_1$ + - ಇಸು$_3$]

ಸಾಲಿಱಿ (ಕ್ರಿ). ಸಾಲಾಗಿರು; ಪಂಕ್ತಿಗೊಳ್ಳು : ಸಾಲಿಱಿದಳಿ ಕವಿದಿರೆ ಪೂಮಾಲೆಯನವರ್ದೆತ್ತಿ ಪಿಡಿದ ಕಾಮಿನಿಯೊರ್ವಳ್ ಲೀಲೆಯಿನಲರ್ವಿಲ್ಲಂ ಪೂಗೋಲಂಗಿರದತ್ತಿ ಕೊಡುವ ರತಿಯಂ ಪೋಲ್ತಳ್ (ವೃಷಪ. ೪-೪೬).

[ಸಾಲ್$_3$ + ಇಱಿ$_1$]

ಸಾಲೀವೊಗೆ (ನಾ). ಒಂದು ಸ್ಥಳದ ಹೆಸರು : ಎಡವೊಬಲ್ನಾಮವಿಷಯೇ ಸಾಲೀವೊಗೆನೋ(ನಾ)ಮಗ್ರಾಮಸ್ಯೋದಕಂ ಸಹಿರಂಣ್ಯಂ ಅಕರಮಭಟಪ್ರವೇಶಂ ಸಸರ್ವ್ವಾ(ಬಾ)ಧಾಪರಿಹಾರೋ ದತ್ತಃ (ಇಆ. XIX, ೧೫೦-೫೬; 682). [?]

ಸಾಲು$_1$ 'ಸಾಲ್$_1$' ನೋ.

ಸಾಲು$_2$ 'ಸಾಲ್$_3$' ನೋ.

ಸಾಲು$_3$, ಸಾಲ್$_4$ (ನಾ). ವರ್ಷ ; ಸಂವತ್ಸರ : ಇಡೀ ಸಾಲು (ವರ್ಷ) ಬೆವರನ್ನು ಸುರಿಸಿ, ಎದೆಯ ರಕ್ತವನ್ನು ಭೂಮಿತಾಯಿಗೆ ಬಸಿದು ಬೆಳೆದ ಕಬ್ಬನ್ನು ಆಲೆಯಾಡಿ, ಬೆಲ್ಲದಡಿಗೆಯನ್ನು ಕಂಡಾಗ ರೈತರಿಗಾಗುವ ಹೆಚ್ಚಳ ಹೇಳತೀರದು (ಕವಿಕೋ. II, ೧೭). **ಸಾಲ್$_4$** : (೬). [← ಪಾರ. ಹಿಂ. ಮರಾ. ಸಾಲ್]

ಸಾಲುಗಂಬ 'ಸಾಲುಗಂಭ' ನೋ.

ಸಾಲುಗಂಭ, ಸಾಲುಗಂಬ (ನಾ). ಸಾಲಾಗಿ ಕಟ್ಟಿರುವ ಕಂಭ : ವೈಡೂರ್ಯದ ಬಲುಭಿತ್ತಿ ಪಚ್ಚೆಯ ಸಾಲುಗಂಭ ಇತ್ತರದೊಳಗಾಸ್ಥಾನವಂಟಪದೊಳು ಬಿತ್ತರದೊಳಗೊಪ್ಪಿದುವು (ಕಂಪವಿ. ೨೦-೨೮). **ಸಾಲುಗಂಬ** : ಒಲಗಶಾಲೆಯ ರನ್ನಕುರುಜುಗಳ ಸಾಲುಗಂಬಗಳ ಮಜಿಯಲಿ . . . ಮುದ್ದುಬಾಲಕಿಯರು ರಾಜಿಸಿದರು (ಕಂಪವಿ. ೨೧-೨೪). [ಸಾಲ್ವು$_2$ (< ಸಾಲ್$_3$) + ಕಂಭ]

ಸಾಲುಗಟ್ಟು 'ಸಾಲ್ಗಟ್ಟು' ನೋ.

ಸಾಲುಗನ್ನಡಿ (ನಾ). ಸಾಲಾಗಿ ಜೋಡಿಸಿದ ಕನ್ನಡಿ : ಹೊನ್ನಾನೆಗಲ್ಲಿಂದ ಹೊಳೆವಳಿಗೆಯ ಸಾಲುಗನ್ನಡಿಯಿಂದ ಗೋಡೆಗಳ ಕಿನ್ನರಕಿಂಪುರುಷರ ಚಿತ್ರದಿಂದ ಸಂಪನ್ನಗೃಹಗಳು ಮೆಱೆದುವು (ಭರಚ. ೧೫-೨೪). [ಸಾಲ್ವು$_2$ (< ಸಾಲ್$_3$) + ಕನ್ನಡಿ$_1$]

ಸಾಲುಗುಜಸ್ತಾ 'ಸಾಲುಗುದಸ್ತಾ' ನೋ.

ಸಾಲುಗುದಸ್ತಾ, ಸಾಲುಗುಜಸ್ತಾ (ನಾ). ಕಳೆದ ವರ್ಷ; ಹಿಂದಿನ ವರ್ಷ: (೬). **ಸಾಲುಗುಜಸ್ತಾ** : (೬). [← ಮರಾ. ಸಾಲಗುದಸ್ತ]

ಸಾಲುಗುದಸ್ತಾಬಾಕಿ (ನಾ). ಕಳೆದ ವರ್ಷದ ಬಾಕಿ ; ಹಿಂದಿನ ವರ್ಷದ ಉಳಿಕೆ: ಸಾಲುಗುದಸ್ತಾಬಾಕಿಯಲ್ಲಿ ಒಂದು ಕಾಸೂ ಬಾಕಿ ನಿಲ್ಲದಂತೆ ಶ್ರಾವಣ ಶುದ ೧೫ರೊಳಗೆ ವಸೂಲು ಮಾಡಬೇಕು (ಮಹಾಮ. II. ೬೫). [ಸಾಲುಗುದಸ್ತಾ + ಬಾಕಿ]

ಸಾಲುಗೇರಿ, ಸಾಲಗೇರಿ (ನಾ). (?): ನಾನು . . . ಸ್ತ್ರೀವೇಷವನ್ನು ಹಾಕಿಕೊಂಡು ಅರಮನೆ ಸಾಲುಗೇರಿಯಲ್ಲಿ ಕೆಲಸಕ್ಕೆ ಸೇರಿ ಚೆಲುವಾಂಬಾವನ್ನು ಭೇಟಮಾಡಿ ಆವಳನ್ನು ಕರೆದುಕೊಂಡು . . . ನಮ್ಮೂರಿಗೆ ಸೇರಬೇಕೆಂಬ ಯೋಚನೆಯು ಬಂತು (ಚಿಂಗಾಳ್ಳ. ೪೦೭). **ಸಾಲಗೇರಿ** : ಮೈಸೂರ ಅರಮನೆಯು ಶಿಥಿಲವಾಗಿದ್ದುದರಿಂದ ಜಂತದ ತೊಟ್ಟಿ . . . ನಾಮತೀರ್ಥದ ತೊಟ್ಟಿ ಮುಂತಾದ ತೊಟ್ಟಿಗಳನ್ನೂ ಒಳಬಾಗಿಲಲ್ಲಿ ಸಾಲಗೇರಿಗಳನ್ನೂ ವಿಸ್ತಾರವಾಗಿ ಕಟ್ಟಿಸಿ (ಮಹಾಮ. I. ೮೦). [?]

ಸಾಲುಗೊಳ್ 'ಸಾಲ್ಗೊಳ್' ನೋ.

ಸಾಲುಗೊಳಿಸು 'ಸಾಲ್ಗೊಳಿಸು ' ನೋ.

ಸಾಲುಗೊಳ್ಳು 'ಸಾಲ್ಗೊಳ್ ನೋ.

ಸಾಲುತೋಪು (ನಾ). (ರಸ್ತೆಯ ಎರಡು ಪಕ್ಕಗಳಲ್ಲೂ ಇರುವ) ಸಾಲುಮರ: (೬). [ಸಾಲ್ವು$_2$ (< ಸಾಲ್$_3$) + ತೋಪು$_1$]

ಸಾಲುದಲೆ 'ಸಾಲ್ದಲೆ' ನೋ.

ಸಾಲುದೆರೆ (ನಾ). ಒಂದರ ಹಿಂದೊಂದರಂತೆ ಬರುವ ಅಲೆ : ತುರಗನಿಕರ ಸಾಲುದೆರೆ ಮದಗಜಗಳು ಗಿರಿ ಡಾಳಿವ ಚಾಮರಾಳಿ ಮೆಱೆವ ಶಫರಿ ಬೆಳ್ಗೊಡೆ ನೊರೆಯೆನೆ ಬಲಶರಧಿಯೈತಂದುದು (ಕಂಪವಿ. ೧೨-೩). [ಸಾಲ್ವು$_2$ (< ಸಾಲ್$_3$) + ತೆರೆ$_1$]

ಸಾಲುಧೂಪ (ನಾ). ಒಂದು ಬಗೆಯ ಧೂಪದ ಮರ; ಬಿಳಿಗುಗ್ಗುಳದ ಮರ : ಧೂಪದ ಮರ, ಸಾಲುಧೂಪ, ಬಿಳೀಗುಗ್ಗಲ, ಬಿಳಿಡಾಮರ್, ಹಾಗಡಮರ, ಉಗುಳುಧೂಪ (ಮೃಡಿಗಿ. ೭೭-೧೫೭೭). [ಸಾಲು$_2$ + ಧೂಪ]

ಸಾಲುಬಾಗೆ 'ಸಾಲಬಾಗೆ' ನೋ.

ಸಾಲುಮಂಟಿಗೆ (ನಾ). ಕಾಲುಬೆರಳಿಗೆ ಧರಿಸುವ ಒಂದು ಬಗೆಯ ಆಭರಣ: ಕಾಲುಂಗುರವ ಕದ್ದು ಮೇಲೆ ಪಿಲ್ಲಿಯ ತೆಗೆದು ಸಾಲುಮಂಟಿಗೆಯನಿಳುಹಿದ (ಗುಂಡುಸು. ೩-೧೬೦). [ಸಾಲು$_2$ + ಮಂಟಿಗೆ (< ಮೆಂಟಿಕೆ)]

ಸಾಲುಮಣೆ (ನಾ). ರಾಗಿ ಮುಂತಾದುವುಗಳ ಪೈರನ್ನು ಸಾಲಾಗಿ ನಾಟಿ ಮಾಡಲು ಅನುಕೂಲವಾಗುವಂತೆ ಉಕ್ಕೆಹೊಡೆಯುವ ಸಾಧನ : ರೈತರು ರಾಗಿ ನಾಟಿಮಾಡುವ ಮುನ್ನ ಸಾಲುಮಣೆ ಹೊಡೆಯುತ್ತಾರೆ (ರೂಢಿ).

[ಸಾಲ್ವು$_2$ (< ಸಾಲ್$_3$) + ಮಣೆ$_1$]

ಸಾಲುಮರ 'ಸಾಲ್ಮರ' ನೋ.

ಸಾಲುಮಳಿಗೆ 'ಸಾಲ್ಮಳಿಗೆ ' ನೋ.

ಸಾಲುಮೂಲಿಗ (ನಾ). ವ್ಯಾಪಾರಿಗಳ ಒಂದು ವರ್ಗಕ್ಕೆ ಸೇರಿದವನು : ಹರದರುನ್ನತರು ಮುನ್ನುರಿದಂಡಮಂ ಕಬ್ಬಿಲರನವಿಳಸಾಲು[ವಾಕಾಂ. ಸಾಲ್ಕು] ಮೂಲಿಗರನದಿದೆನ್ನದಿಹ ಪರಿಜನವನ್ಮೆದೆ ನೆರಹಿದರು ನೆರೆಯಿತ್ತು ಮಿಗೆ ಭೂಮಿ ಬೆಸಲಾದಂತಿರೆ (ಸೋಮಚ. ೪-೫೦). [ಸಾಲುಮೂಲೆ + - ಇಗ]

ಸಾಲುಮೂಲೆ (ನಾ). ವ್ಯಾಪಾರಿಗಳ ಒಂದು ವರ್ಗ ; ಹರದರ ಒಂದು ಪಂಗಡ: ಸಾಲುಮೂಲೆಯವರ ವೊಪ್ಪ ಶ್ರೀಗಣೇಶ್ವರ ಗವಜೇಶ್ವರದೇವರು (ಎಕ. V, ಬೇಲೂರು. ೭೫-೧೩೭; 1382) ; ಆಯವತ್ತಾಱುದೇಶದ ಸಾಲುಮೂಲೆ ಸಮಸ್ತಹಲರು ಪಳ್ಳಾಳ ಸಹಿತವಾಗಿ ಕೂಡಿ (ಎಕ. X. ಬೌರಿಂಗ್. ೬೨-೧೦ ; 1480?). [?]

ಸಾಲುವ (ನಾ). = ಸಾಲುಮೂಲಿಗ : ತಲಕಾಡ ಹಮುಗಿಯನು ಗವುಡುಗಳು ಅಣ್ಣತಮ್ಮ ಸಾಲುವರು XX ಏ X ಮಗ್ಗದ ಹುರುಳಗವುಡ ಬಿದಿಯಗವುಡ ಏಚಗವುಡ ಆ ಮಕ್ಕಳು ಚನ್ನು XX ದವನು XX ಮಾಡಿ ಹೊಯಿಸ್ಸಳಪಟ್ಟಮಂ ಕಟ್ಟಿಸಿಕೊಣ್ಣು (ಎಕ. XVI, ತಿಪಟೂ. ೧೫೭-೧೮ ; ?). [?]

ಸಾಲುವಲೆ 'ಸಾಲ್ವಲೆ' ನೋ.

ಸಾಲುವಳಿ 'ಸಾಲಾವಳಿ' ನೋ.

ಸಾಲುವಿಡಿ 'ಸಾಲ್ವಿಡಿ' ನೋ.

ಸಾಲುಳು (ಕ್ರಿ). ಸಾಲಾಗಿ ಉಳು; ಸಾಲುಕ್ಕೆಯನ್ನು ಮಾಡು : ಚೆಲುವುನೆಲ ಸಾಲುತ್ತು, ಕಲೆಯ ಹೊಂಬೆಳೆಯಿಟ್ಟು ನಗಿಸಿದರು ನಾಡನು, ಕಡಿದು ಕಗ್ಗಾಡನು (ಹೊಂಗಳು. ೨೨-೧೫). [ಸಾಲು$_2$ (< ಸಾಲ್$_3$) + ಉಳು (< ಉಱ್)]

ಸಾಲೆ$_1$ (ನಾ). ೧. ಗುಳ್ಳೆಗಳ ಸಾಲು : 'ಬೆಮರ್ಸಾಲೆ' ಪರಾ. ೨. ಉಳುವಾಗ ನೇಗಿಲಿನಿಂದುಂಟಾಗುವ ಗೆರೆ; ಉಕ್ಕೆ: ಮೂಱಡಿ ತೂಮ್ಬು ದೇವಧೋಗಂ ಈ ಕಟನಿ ಫಲಮಾ ಕೊಣ್ಡು ಬೆಳೆಸಿ ನಾಗೊಮ್ಮೆಯುಂ ಸಾಲೆ ಉಳುವದು (ಎಕ. X, ಕೋಲಾರ. ೧೧-೧೦; 753). [< ಸಾಲ್$_3$]

ಸಾಲೆ$_2$, ಶಾಲೆ$_1$, ಸಾಲಿ$_1$, ಸಾಳೆ (ನಾ). ೧. ಅರಿವೆ; ಬಟ್ಟೆ; ವಸ್ತ್ರ: ಕಡುಸಣ್ಣಸಾಲೆಯುಡಿಗೆಯ ಪಂಚರತ್ನದೊಳ್ಪೊಡಿಗೆಯ ವಿಲಾಸಿನಿಯರೇಳ್ತಂದರ್ (ಸೌಂದಪು. ೭-೪೧); ತಾಯಂತೆ ಮಕ್ಕಳು, ನೂಲಂತೆ ಸಾಲೆ (ಗಾದೆ). ೨. ಸೀರೆ : ಗಟ್ಟಿಕುಚ ನಸುದೋಱುವಂದದೊಳುಟ್ಟ ಸಾಲೆಯ ಮೇಲುದೊಪ್ಪಿರೆ ದಿಟ್ಟೆಯೊರ್ವಳು ನಿಂದಳಂಗಜನಲಗಿನಂದದಲಿ (ಜೈಮಿಭಾ. ೧೭-೩೩). ೩. ನೇಕಾರರ ಒಂದು ಪಂಗಡ: ನೇಯ್ಗಾರರೂ, ಪಂಚಾಂಗಕರ್ತರೂ, ವರ್ಣಗಾರರೂ . . . ಪಟ್ಟಿಗಾರ, ಸಾಲೆ, ಸೇಣೆಯ (ತುಳುನಾ. ೧೭೩). 'ಪಡಸಾಲೆ$_2$', 'ಪದ್ಮಸಾಲೆ' ಪರಾ. **ಶಾಲೆ$_1$** : ೨. ಹಾಲ ಸುಂಕವ ಬೇಡಿ ಕೋಲನ್ನೆ ಅಡ್ಡಕಟ್ಟಿ ಶಾಲೆಯ ಸೆಳೆಕೊಂಡು ಹೇಳದೋಡಿದ ಕೃಷ್ಣ (ಪುರಂದ. ೧-೯೧-೧); ಪಟ್ಟೆಯ ಶಾಲೆಯಂ ಧರಾಲಲನೆ ವಿಳಾಸದಿಂ ತಳೆದಳೆಂದೆನೆ ಶಾಲೆಯ ಗರ್ದೆ ತೋಱುಗುಂ (ರಾಜಶೇ. ೨-೧೦); ನಮ್ಮೂರ ಪುರೋಹಿತರು ಹೊಳೆಯಲ್ಲಿ ಸ್ನಾನಕ್ಕೆ ಇಳಿಯುವುದಕ್ಕೂ ಮೇಲುಗಡೆ . . . ಹೆಂಗಸರು ಶಾಲೆ ಕುಕ್ಕುವುದಕ್ಕೂ ಸರಿಹೋಗಿದೆ (ಹೆಮಾಪ. ೨). **ಸಾಲಿ$_1$** : ೨. ಒಡನುಟ್ಟ ಸಾಲಿಯ ನೆಱಿಯೊಳಗಳವಟ್ಟು ಕಡುಚೆಲ್ವ ಕಾಂಚಿಯ ದಾಮ ಜಡೆ ತುಂಬಿದ ಪೂಸರದ ಪೂರ್ತಿಯ ಸಿದ್ಧಿ ಮಡದಿಯ್ಯೆತಂದಳರ್ತಿಯಲಿ (ಕಂಸವಿ. ೨೧-೭೦); ಬಿತ್ತಿದ ಹೊಲದಾಗೆ ಮುತ್ತು ಸೂರಿಟ್ಟಂಗೆ ಸಾರಿ ಗೌರಮನ ಗೆಣತೇರ ಕಣ್ಣೇರು ಸಾಲೀ ಸೆರಗೆಲ್ಲ ನೆನೆದವು (ನಾಪದ. ೧೦೮). ೪. ಒಂದು ಬಗೆಯ (ಜಾಳು)ಬಟ್ಟೆ : ಬಿಳಿಯುಳ್ಳಿಯಂ ಹುರಿದು ಹಿಂದುಮುಂದಂ ಚಿವುಟಿ ಹೊಳಚಿ ನಡುವಣ ದಿಂಡ ತೆಗೆದು ಸಾಲಿ [ಪಾಠಾಂ. ನಾಲಿ, ಸಾರಿ]ಯ ವಸ್ತ್ರದೊಳಗೆ ಪುಟ್ಟಣಗಟ್ಟಿ (ಸೂಪಶಾ. ೩-೮); ಲಾಲಿತಚೆಂಬಾವುಗೆ ಮೆಟ್ಟಿ ಮೃದುವೆತ್ತ ಸಾಲಿಯ ದುಪ್ಪುಟದಾಳ್ದು ಸೋಲಿಸಿ ತೊಲಗಿ ಪೋದವನ ನಿಟ್ಟಿಸುವ ಸಲೀಲೆಯಿಂದೆದ್ದಳಾ ಕುವರಿ (ಪೂಚಕ. ೨೮-೬); ವೀಳೆಯಕಿದು ಚಿಲುವಾಲಿಗೆ ಕ್ರಯಕಿದು ಸಾಲಿಯ ಸೀರೆಗಿದೆಂದು ಹೇಳಿ ನೀ ಮುದ್ದುಮಾತಿಂ ಪೊನ್ನ ಸೆಳೆಕೊಂಡು ಜಾಳಿಗೆಯನು ಕಟ್ಟು ಮಗಳೆ (ಕಂಸವಿ. ೬-೧೪೯). **ಸಾಳಿ** : ೩. ಸಾಳಿ ಅಂದರೆ ಬಟ್ಟೆ ನೆಯ್ಯುವವರುಯೆಂಬ ಹೆಸರು ನಡಿಯುತ್ತದೆ (ಕಭಾಗೆ. ೧೫೯); ಇವರು ಸಾಳಿಯ ಜಾತಿಯವರು (ಕರ್ನಾಸಂ. ೧೮೯).

ಸಾಲೆರೋಗ, ಶಾಲೆರೋಗ = ಅತ್ಯಧಿಕವಾಗಿ ಋತುಸ್ರಾವವಾಗುವ ಒಂದು ಬಗೆಯ ರೋಗ : (ಶಿ). **ಸಾಲೇರ ಪಂಚೆ** = ಒಂದು ಬಗೆಯ ಪಂಚೆ , — ಧೋತ್ರ: ಸಾಲೇರ ಪಂಚೆಯನ್ನು ಮೈಮೇಲೆ ಹಾಕಿಕೊಂಡು . . . ಸೋಮಯಾಜರು ಕೆಳಹಿತ್ತಲಿಗೆ ಹೋದರು (ದೇವಹೂ. ೨೧೧). **ಸಾಲೇಹುಳ** = ಜೇಡರ ಹುಳು : "ಲೂತಾ, ತಂತುವಾಯಃ, ಊರ್ಣನಾಭಃ, ಮರ್ಕಟಕಃ — ಜಾಡಹುಳು, ಸಾಲೇಹುಳ" (ಸಿದ್ಧಾಂಶಿ. ೧೫೭).

[< ಪ್ರಾ. ಸಾಲಿಅ./ ಸಂ. ಶಾಟಿಕಾ./ ತೆಲು. ಸಾಲೆ, ಸಾಳಿಯ]

ಸಾಲೆ$_3$ 'ಸಾಲಿ$_2$' ನೋ.

ಸಾಲೆ$_4$ (ನಾ). ೧. ಮನೆ ; ವಾಸಸ್ಥಾನ : ಆಱುಂ ಋತುಗಳ ಪೂಗಳನೊಂದುಮಾಡಿ ಪೂವಿನಂಬುಗಳಂ ಪಣ್ಣಲೆಂದು ಕಾಮದೇವಂ ಮಾಡಿದೋಜನ ಸಾಲೆಯರ್ಪಂತಿರ್ದ ಪೂವಿನ ಸಂತೆಯೊಳ್ (ಪಂಪಭಾ. ೪-೮೦ ವ); ಪಾಡುವ ತುಂಬಿ ಗಾಣರೆಂದೆನೆ ನನೆಯಂಬನೋಲಗದ ಸಾಲೆವೊಲಿರ್ದುವು ಬಂದ ಮಾವುಗಳ್ (ಕಬ್ಬಿಕಾ. ೬೧); ಶಂಕರನ ಸೌಖ್ಯದ ಸಾಲೆ . . . ಎನಿಸುವಾ ಭೃಂಗಿನಾಥನ ಪರಿ ವಿರಾಜಿಸುತಿರ್ದುದಾ ಶಶಿಧರನ ಸಭೆಯೊಳಗೆ (ಪ್ರಭುಲಿಂ. ೨-೨೩). ೨. ಕಮ್ಮಾರ, ಕುಂಬಾರ ಮೊದಲಾದವರು ಕೆಲಸ ಮಾಡುವ ಸ್ಥಳ : 'ಕಮ್ಮಾರಸಾಲೆ', 'ಕುಂಬಾಱಸಾಲೆ' ಪರಾ. ೩. ವಿದ್ಯೆಯನ್ನು ಕಲಿಸುವ ಸ್ಥಳ : ದಿನಾಲು ನೇಮದಿಂದ ಸಾಲೆಗೆ ಬಂದು . . . ಕಲಿಯಬೇಕು (ಮುಂಬಯಿ. ೪-೧); ಹರಯದಲಿ ಮುಪ್ಪಿನನುಭವ ಸೇರಲೆಂದು, ಜರೆಯೊಳಗೆ ಹರೆಯದುತ್ಸಾಹ ಇರಲೆಂದು . . . ಹರಸಿದೆವು ಸಾಲೆಯಾ ಬಾಲಕರು ಬಂದು (ಕಏಪು. ೧೬-೯). ೪. ಆನೆ, ಕುದುರೆಗಳನ್ನು ಕಟ್ಟುವ ಸ್ಥಳ : ಆನೆಗಳ ಸಾಲೆಗಳ್ ಪರಮಾನಂದಮನೆಯ್ದೆ ಮಾಟ್ಟುವಖಿಳಜನಕ್ಕಂ ದಾನಪರಿಮಳವಿಲೋಭನಿಲೀನಾಳಿ ಕುಳಪ್ರಣಾದದಿಂ ಮುಖರಂಗಳ್ (ಪಾಧಪು. ೧-೧೫೦).

ಸಾಲೆಗೆ ಹಾಕು = ಮೊದಲ ಬಾರಿಗೆ ಮಗುವನ್ನು ಪಾಠಶಾಲೆಗೆ ಸೇರಿಸು : ಸರಿಯಾದ ವಯಸ್ಸಿಗೆ ಮಕ್ಕಳನ್ನು ಸಾಲೆಗೆ ಹಾಕಬೇಕು (ರೂಢಿ). **ಸಾಲೆ ಬರೆ** = ಕಲಿ; ವಿದ್ಯಾಭ್ಯಾಸ ಮಾಡು : ಏನು ಸಾಲೆ ಬರೆದಿರುವೆಯಾ . . . ಸಾಲೆ ಬರೆಯೋದು ನಮಗ್ಯಾಕಪ್ಪಾ? (ಮುಕ್ಕಪು. ೩). **ಸಾಲೆಮಠ** = ಪಾಠಶಾಲೆ ; ವಿದ್ಯಾಲಯ : ಈಗಲೂ ಹಳ್ಳಿಗಳಲ್ಲಿ ಪಾಠಶಾಲೆಗಳನ್ನು 'ಮಠ', 'ಸಾಲೆಮಠ' ಎಂದು ಕರೆಯಲು ಬಹುಮಟ್ಟಿಗೆ ಪ್ರಾಚೀನ ದೇವಸ್ಥಾನಗಳೇ ಕಾರಣ (ಕಶಾಅ. ೧೯೦). [< ಸಂ. ಶಾಲಾ]

ಸಾಲೆ$_5$ (ನಾ). ಒಂದು ಬಗೆಯ ಮರ : ಸಾಲೆಬೇರು, ಹಾಲಿವಾಣದ ತಿಗಡು, ಶಾವರೆಯ ಹೂವು, ನೈದಿಲ ಗೆಡ್ಡೆ ಈ ಔಷಧಿಗಳಿಂದ ಕಷಾಯವಂ ಮಾಡಿ (ಎನೃವಿ. ೧೫೨). [< ಸಂ. ಶಾಲ]

ಸಾಲೆಯ (ನಾ). ಬಟ್ಟೆ ನೇಯುವವನು; ನೇಕಾರ : "ಸಾಲೆ[ಪಾಠಾಂ. ಳೆ]ಯನುವಿಂದ ಕುವಿಂದಕನೆನಿಕ್ಕು" (ಮಂಗಶಾ. ೧೧೧-೨). [ಸಾಲೆ$_2$ + - ಅ$_7$./ ತಮಿ. ಮಲ. ಚಾಲಿಯನ್; ತುಳು. ಸಾಲೆ ; ತೆಲು. ಸಾಲಿಯ]

ಸಾಲೇಱು (ಕ್ರಿ). ೧. ಗುಂಪುಗೂಡು ; ರಾಶಿಯಾಗು : ಮಾಲೆಗಟ್ಟಿದ ಬಳ್ಳಿಗರುಳು ಸಾಲೇಱಿದ ಪಂದಲೆಯಿಂದ ಹೇರಾಲಯ ಭಯಂಕರಮಾಯ್ತು (ಶ್ರೀಪಾಲ. ೮-೩೩). ೨. ಗುಂಪಿನ ಮೇಲೆ ಬೀಳು; ಗುಂಪನ್ನು ಆಕ್ರಮಿಸು : ಪಲಮ್ಮರು ನಾಯಕರೊಡನೆ ಯೇಕಾಂಗವೀರನಾಗಿ ಸಾಲೇಱಿ ತಳ್ತಱಿದು ಹೆಸರೊಳು ವಿಶೇಸವಾಗಿದ್ದ ನಾಯಕರಂ ಪಲಮ್ಮರ ಕೊಮ್ಮ ಸಾಲಕಾಮಯ್ಯನೆಮ್ಮ ಪೆಸರಂ ಪಡೆದು ಸುರಲೋಕಪ್ರಾಪ್ತನಾದನ್ (ಎಕ. XII, ತಿಪಟೂ. ೬೩-೧೧; 1136?). [ಸಾಲ್$_3$ + ಏಱು$_1$ (< ಏಱ್$_1$)]

ಸಾಲೋಕ್ಯ (ನಾ). ೧. (ಇನ್ನೊಬ್ಬರೊಂದಿಗೆ) ಒಂದೇ ಲೋಕದಲ್ಲಿರುವಿಕೆ; ಸಮಾನಲೋಕದಲ್ಲಿ ನೆಲಸಿರುವಿಕೆ. ೨. ನಾಲ್ಕು ಬಗೆಯ ಮೋಕ್ಷಗಳಲ್ಲಿ ಒಂದು; ಇಷ್ಟದೇವತೆಯಿರುವ ಲೋಕದಲ್ಲಿ ನೆಲಸುವಿಕೆ: ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತುಮಾಡಿ ಸಲಹಿದ ಸುಖವು ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಂತುಟಲ್ಲಾ ಕೇಳಿರಯ್ಯಾ (ಬಸವ. ೪೭೪); ಸಾಲೋಕ್ಯದ ಸವಿಯಂತೆ ಸಾಮೀಪ್ಯದ ಸೀಮೆಯಂತೆ . . . ಗಿರಿಜಾತೆ ಶೈಶವಲೀಲೆಯನೊಳಕೊಂಡು . . . ಚಳಿಯುತಿರ್ದಳ್ (ಗಿರಿಕ. ೩-೬೯ ವ); ಸಾಲೋಕ್ಯ ಸಾಮೀಪ್ಯ ಸಾಯುಜ್ಯವೆಂಬ ಚತುರ್ವಿಧಫಲಪದಂಗಳ ನಾನೊಲ್ಲೆನಯ್ಯಾ (ಅಖಂಡೇ. ೧೬೧-೨೨). ೩. ಇಷ್ಟ ದೇವತೆಯ ಲೋಕದಲ್ಲಿ ನೆಲಸುವ ಮೋಕ್ಷಪದವಿಯನ್ನು ಪಡೆದವನು: ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರೆಲ್ಲರೂ ಅಜಾತಂಗೆ ಸರಿಯೆ (ಬಸವ. ೯೦೧).

[ಸಂ.]

ಸಾಲೋಕ್ಯಪದ (ನಾ). = ಸಾಲೋಕ್ಯ ೨ : ಅಯ್ಯಾ ನಿಮ್ಮ ಶರಣರ ಚರಣದ ಭಕ್ತಿಯೇ ಎನಗೆ ಸಾಲೋಕ್ಯಪದವಯ್ಯಾ (ಉರಿಪ. ಕ. ೧೭೩-೨೩೩); ಕೂರ್ತಾನಿವನಿಗೆ ಸಾಲೋಕ್ಯಪದವನಿತ್ತೆನು (ಕುರಾಸಾಂ. ೬-೯೩). [ಸಂ.]

ಸಾಲ್ಕುಳಿ (ನಾ). ಸಾಲವನ್ನು ಮಾಡುವ ಸ್ವಭಾವದವನು: ಮಾಟ್ಟುದು ಶೀಲಮಿಾತಂಗೆ ಮಾಟ್ಟುಳಿ, ಏವಂ ಆಟ್ಟುಳಿ, ಪೋರ್ಕುಳಿ, ಸಾಲ್ಕುಳಿ, ಅಡುಕುಳಿ . . . ಸಾಲ್ಕುಳಿ ಋಣಶೀಲಃ (ಶಬ್ದಾನು. ೫೮೫ ಪ್ರಯೋ). [< ಸಾಲ$_1$ + - ಕುಳಿ$_3$]

ಸಾಲ್ಗಟ್ಟು, ಸಾಲುಗಟ್ಟು (ಕ್ರಿ). ಸಾಲಾಗಿರು; ಪಂಕ್ತಿಯಲ್ಲಿರು: ಭಜನೆಯ ಮಾಡಿ ಬಾಗಿಲ ಬಂದು ಕಾದಿಹ ದ್ವಿಜರನುಮತವ ತೀರಿಸದ ನಿಜಲೋಭಿಶತವೆಂಬಂದದಿ ಸಾಲ್ಗಟ್ಟಿ ಕುಜವಿರ್ದುದಾ ಬನಬನದಿ (ಪೂಚಕ. ೨೪-೪೮). **ಸಾಲುಗಟ್ಟು**: ಚೋಳಭೂನಾಥನ ಪಿರಿಯ ಕರಿ . . . ಸಾಲುಗಟ್ಟಿ ಮದಾಂಬುಧಾರಾಜಾಲವುಗೆ

ಪುರವೀಥಿವಿಡಿದಾಧೀಳದಿಂದೆಯ್ತಪ್ಪ ಸಮಯದೊಳು (ಬಸಪು. ೨೨-೬).

[ಸಾಲ್$_3$ + ಕಟ್ಟು$_1$]

ಸಾಲ್ಗುಚ್ಚು (ನಾ). ಒಂದರ ಪಕ್ಕದಲ್ಲಿ ಮತ್ತೊಂದರಂತೆ ಕಟ್ಟಿದ ಕುಚ್ಚು; ಸಾಲಾಗಿರುವ ಗೊಂಡೆ: ಪವಳ ಮೌಕ್ತಿಕ ಸಾಲ್ಗುಚ್ಚ[illegible]ಚ್ಚಯದ ತೋರಣದಿ ವಾರಣಿಸಿದಾ (ನವಮೋ. ೩-೭). [ಸಾಲ್$_3$ + ಕುಚ್ಚು$_4$]

ಸಾಲ್ಗುಡಿ (ನಾ). ಒಂದರ ಪಕ್ಕದಲ್ಲಿ ಮತ್ತೊಂದರಂತೆ ಜೋಡಿಸಿದ ಬಾವುಟ,-ಪತಾಕೆ ; ಧ್ವಜಮಾಲೆ : ಸಾಲ್ಗುಡಿ ಮಕರಟಕ್ಕೆ ಸತ್ತಿಗೆ ಸೀಗುರಿ . . . ಮುಂತಾದುವನ್ನು ಹಿಡಿದು ಊಳಿಗಗುಡುತ್ತ . . . ರಂಜಿಸುತ್ತಿರುವ ಸೇವಾಜನರ ಒಡ್ಡಣೆ (ಚಟ್ಟಅ. ೩೦-೭).

[ಸಾಲ್$_3$ + ಗುಡಿ$_2$]

ಸಾಲ್ಗೊಳ್, ಸಾಲುಗೊಳ್, ಸಾಲುಗೊಳ್ಳು (ಕ್ರಿ). ೧. ಸಾಲಾಗಿರು; ಪಂಕ್ತಿಗೊಳ್ಳು : ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃ ಶಿವಾಯಯೆಂಬ ವೃದ್ಧಧ್ವನಿ ಪುಟ್ಟೆ ಕೊಡಂಗಳ ಮೇಲೊಡೆದಿಳ್ದು (ಸಂಬರ. ೬-೪೦); ಶಶರವಿವೀಥಿಗಳೊಳು ಸಾಲ್ಗೊಂಡು ಸಂತಸದೊಳೊಪ್ಪುವ ಸರ್ವಜನರ ವಸತಿಗಳೆಸವುವು ನವರತ್ನಹೇಮಪ್ರಸರದುಪ್ಪರಿಕೆಗಳಿಂದ (ಕಂನಮಿ. ೨-೬೯). ೨. ರಾಶಿಯಾಗು ; ಒಟ್ಟಾಗು: ತನುವಿನಲ್ಲಿ ಪುಳಕಂ ಸಾಲ್ಗೊಂಡುಣ್ಮುತ್ತಿರೆ ಗಿರಿಪತಿಸುತೆ ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್ (ಎಕ. VIII(S), ಸೊರಬ. ೫೮೭-೪; 1207); ಸರಸಪರಿಮಳಕೆ ಸಾಲ್ಗೊಂಡೆಱಗಲ ವ್ಯಳಿಪಳಿಪ್ರತಾನಮನೊಳಗಣ್ಣೆ ಪುಗಲೀಯದೆ ಸೋದು ಕಳೆವೆಳೆಕೊಂಗಿನ ಬಾಗಿಲ್ವಾಡದ ಕಾಪಿನ ಚಾಂಪೇಯನಿರ್ಮಿತಮಾದ ಜಂತ್ರದ ಪುತ್ತಳಿಗಳಿಂ (ರಾಜಶೇ. ೧೦-೩೧ ವ). **ಸಾಲುಗೊಳ್** : ೧. ಸೊಗಸಾಗಿ ಸಾಲುಗೊಂಡಾವರಣವಾದ ವಿಶಾಲಕಲ್ಪವೆನಲ್ಕೆ ಪೆಂಪಂ ತಾಳಿದುದುವಿದು ಕಲ್ಪತರುವನುಮಾನವೇಕೆ (ಬಸಪು. ೨೬-೪೧); ತೊಳಪ ಬೆಳ್ಳುಗಿಲ ಮೊಗ್ಗರದಂತೆ ಸಾಲುಗೊಂಡಳವಟ್ಟು ಪುರದೊಂದಲ್ಕೆದಿ ಸಲಿಲವನೀಂಟಿ ಮರಳಿ ಪೋಪ ತೇಜಿಯ ಬಳವೊಪ್ಪಿದುವು (ಕಂನಮಿ. ೨-೫೫). **ಸಾಲುಗೊಳ್ಳು** : ೧. ಅದರ ಎಲೆಗಳು . . . ನೇರಿಲ ಎಲೆಯ ಹಾಗೆ ಇದ್ದು, ದೇಟನ ಬುಡದಿಂದ ತುದಿಯ ತನಕ ಎರಡೆರಡರಂತೆ ಸಾಲುಗೊಂಡಿರುತ್ತವೆ (ಮುಂಬಯಿ. ೪-೫೫). [ಸಾಲ್$_3$ + ಕೊಳ್$_1$]

ಸಾಲ್ಗೊಳಿಸು, ಸಾಲುಗೊಳಿಸು (ಕ್ರಿ). ೧. ಸಾಲಾಗಿರುವಂತೆ ಮಾಡು; ಪಂಕ್ತಿಗೊಳಿಸು: ಧ್ವಜಂಗಳನು ಇತ್ತರದಿ ಸಾಲ್ಗೊಳಿಸಿ ದಿವಿಜರು ಪೆತ್ತ ರತ್ನವಿಮಾನ ಕೋಟಿಯ ಸೂತ್ರಿಸಿದವೊಲು ನಡೆಸಿದರು ಸುರವೇತ್ರಪಾಣಿಗಳು (ಸಾಳ್ವಧಾ. ೩೩-೩೮); ಬಳಸಿರೆ ಕಟ್ಟಿ ಬಿಟ್ಟ ಪೊಸಮಲ್ಲಿಗೆಮಾಲೆ . . . ಸಾಲ್ಗೊಳಿಸಿದ ಮೌಕ್ತಿಕಪ್ರಸರಮಂ ಹರಿನೀಲಮಣಿಪ್ರತಾನದೊಳ್ಕೆಳಗೊಳಿಸುತ್ತ ತೆತ್ತಿಸಿದವೋಲ್ಕೆಱೆದಿರ್ದುದು ಮಂಟಪಾಗ್ರದೊಳ್ (ರಾಜಶೇ. ೮-೩). ೨. ಗುಂಪುಗೂಡಿಸು ; ಒಟ್ಟಾಗಿಸು : ಕದಳಿಯ ಫಲ ನಾಳಿಕೇರ ಖರ್ಜೂರಗಳ್ಮುದವಿಡಿದಿಕ್ಕುದಂಡಗಳ ಮೆದೆಮೆದೆಯಾಗಿ ಸಾಲ್ಗೊಳಿಸಿ ನೈವೇದ್ಯವ ಪದುಳದೊಳೊಲಿದು ಮಾಡಿದರು (ಕಂನಮಿ. ೨೨-೨೬). ೩. ಒಂದಾದ ನಂತರ ಒಂದು ಬರುವಂತೆ ಮಾಡು ; ನಿರಂತರವಾಗಿರುವಂತೆ ಮಾಡು : ಒಡನೊಡನೆ ಪಾರ್ಥನ ಚರಿತ್ರಮಂ ಸಾಲ್ಗೊಳಿಸಿ ನುಡಿನುಡಿಗಳಲ್ದು . . . ಮಱುಗಿದರುಲೂಪಿ ಚಿತ್ರಾಂಗದೆಯರು (ಶೃಮಿಭಾ. ೨೩-೬೦). **ಸಾಲುಗೊಳಿಸು** : ೧. ಸಿತವಟ್ಟೆವಿಡಿ ಗದ್ದುಗೆಯಲ್ಲಿ ಮಂದಸ್ಮಿತಮುಖಿಯರ ಸಾಲುಗೊಳಿಸಿ ಸತಿಯರ ತಲೆವಣಿ ಸಖಿಯೊಡ ನಿರ್ದಳು ರತಿ ಸರಸತಿಯ ರೀವಿಯಲಿ (ಮೋಹತ. ೨೬-೫). [ಸಾಲ್ಗೊಳ್ + -ಇಸು$_3$]

ಸಾಲ್ದಲೆ, ಸಾಲುದಲೆ (ನಾ). ಸಾಲಾಗಿರುವ ತಲೆ; ಶಿರಸ್ಸುಗಳ ಸಮೂಹ : ಕೂರಂಬಿನಿಂ ತವೆ ನಿನ್ನ ಸಾಲ್ದಲೆಯನ್ನು ಕಳಚುವೆಂ ನೋಡೆನುತೆ ದಾನವಂ ಬೆನ್ನಬತ್ತಳಿಕೆಯಿಂದುಗಿದು ಬಿಡಲಾ ಬಾಣವೆಲ್ಲವಂ ಮುಳಿದು ಕಡಿದಂ ಗುಹಂ (ಚಿಬಪು. ೪೦-೬). 'ಸಾಲ್ದಲೆಯ' ಪರಾ. **ಸಾಲುದಲೆ** : ಬೀಸಿದುದು ಬಿಱುಗಾಳಿ ರಾಮಶರಾಸನದ ಸರಳೋಟದಲಿ ಹೊಱಬೀಸಿಬಿದ್ದವು ಬಿರುದಿನಸುರರ ಸಾಲುದಲೆ ನೆಲಕೆ (ತೊರರಾ. ೩-೬-೧೦). [ಸಾಲ್$_3$ + ತಲೆ$_1$]

ಸಾಲ್ದಲೆಯ (ನಾ). ಸಾಲಾದ ತಲೆಗಳನ್ನುಳ್ಳವನು; ದಶಕಂಠ; ರಾವಣ : ಸಾಲ್ದಲೆಯನಾತ್ಮಭವನತಿವೇಗದಿಂದ ಬಂದಾಲ್ದಂಬುಗಳ ಮಳೆಯ ಕರೆಯೆ (ವಂಕಾರಾ. ೬-೪೪-೯). [ಸಾಲ್ದಲೆ + -ಅ$_7$]

ಸಾಲ್ದಳೆ (ಕ್ರಿ). ಸಾಲನ್ನು ಹೊಂದು ; ಪಂಕ್ತಿಗೊಳ್ಳು : ತೊಳಪ ಕಳಸದ ಗುಡಿಯ ಸಾಲ್ದಳೆದ ಕನ್ನಡಿಯ . . . ಗೊಂದಳದ ಬಗೆ ಕಂಗಳಿಂಬಗೆ ಕೌತುಕಂಗಳಿಂ ಬೀದಿಗ ಳೊಳೆಸೆದಿರ್ಪುವು (ಶೃಮಿಭಾ. ೩-೧೭). [ಸಾಲ್$_3$ + ತಳೆ$_1$]

ಸಾಲ್ದೆಗೆ (ಕ್ರಿ). ೧. = ಸಾಲ್ದಳೆ : ಕಾಲ್ದೆಗೆಯ ಬಳ್ದನಂ ಮಿಗೆ ಸಾಲ್ದೆಗೆದುದು ವಿಹಗವೀಥಿ ಮುಗಿಯುತ್ತಬ್ಬಂ ಹೋಲ್ದುವು (ಗಿರಿಕ. ೪-೬೮). ೨. ಸಾಲಾಗಿ ರಚಿಸು; ಪಂಕ್ತಿಗೊಳಿಸು : ಜಗದಗಲಕ್ಕೆ ಸಾಲ್ದೆ[ಪಾಠಾಂ. ಲ್ಪೆ]ಗದು ನೀಳ್ದು ನಿಱಿಸಿದ ಮಾಣಿಕ್ಯಸ್ತಂಭಕೋಟಿಗಳೆಳಗೆಂಪುಗಳೊಪ್ಪುವ ಚಪ್ಪರದ ಮೇಲ್ಕಟ್ಟಂ ಹೊತ್ತೆತ್ತು ತಿರ್ದುವು (ಗಿರಿಕ. ೧೦-೨೮ ವ). [ಸಾಲ್$_3$ + ತೆಗೆ$_1$]

ಸಾಲ್ಮರ, ಸಾಲುಮರ (ನಾ). ಸಾಲಾಗಿರುವ ಮರ; ವೃಕ್ಷಗಳ ಸಾಲು: ಸಲ್ಲಲಿತೋಭಯತಟದ ಸಾಲ್ಮರದೊಳು ಬೆಲ್ಲದ ಪಾನಕವೆಱೆದು ಅಲ್ಲದ ಕೆನೆಮೊಸಱಶ ನವ ಕರೆಕರೆದೆಲ್ಲರಿಗುಣಬಡಿಸುವರು (ಮೋಹತ. ೨-೩೨) ; ತಳ್ವಾವರಿಸಿರ್ದ ಸಾಲ್ಮರಗಳಿಂದೆ ಹೃತಾತಪತಾಪಮಾಗಿ . . . ಸೌಖ್ಯಾವಹಮಿಾಗೆಗಳ್ಕೆಯನುಕೂಲಸಮೀರಣಮಾಗಿ ಮೇಣ್ ವಧಂ (ಶಾಕುಂತ. ೫೩-೮೯). **ಸಾಲುಮರ** : ಪಲಸು ನೇಱಿಲು ಚೂತ . . . ಲಲಿತಶುದ್ಧಸ್ಫಟಿಕದಲಿ ಬಿಗಿದ ಕೋಮಲ ಸಾಲುಮರಗಳೊಪ್ಪಿದುವು (ಮೋಹತ. ೨-೫೪) ; ಸಾಲುಮರಗಳನ್ನು ಬೆಳೆಸಬೇಕೆಂಬ ಧರ್ಮಬುದ್ಧಿ ಹಳ್ಳಿಯ ಜನರಲ್ಲಿ ಮಾಯವಾಯಿತು (ಕಳಪು. ೧೦೧). [ಸಾಲ್$_3$ + ಮರ$_1$]

ಸಾಲ್ಮಳಿಗೆ, ಸಾಲುಮಳಿಗೆ (ನಾ). ಸಾಲಾಗಿರುವ ಮಳಿಗೆ; ಅಂಗಡಿಸಾಲು: ಪದ್ಮದಳನೇತ್ರ ಕೇಳಾ ವೀಥಿಯಕ್ಕೆಲದೊಳಿರ್ದ ಸಾಲ್ಮಳಿಗೆಯಂಗಡಿಗೆಯ ಮಂಟಪಂ (ನವಮೋ. ೨-೨೯). **ಸಾಲುಮಳಿಗೆ** : ಹಲವು ದೀಪ್ತಿಯ ಪಟ್ಟೆ ಝಲ್ಲಿ ನಾನಾವರ್ಣದಳೆದ ಚಿತ್ರಾಂಬರನಿಚಯ ಸುಲಲಿತ ದೇವಾಂಗವಸ್ತ್ರದೊಟ್ಟಿಲ ಸಾಲುಮಳಿಗೆಗಳಿರ್ದುವಿಕ್ಕೆಲದಿ (ಮೋಹತ. ೩-೨೪). [ಸಾಲ್$_3$ + ಮಳಿಗೆ (< ಮಱಿಗೆ)]

ಸಾಲ್ಮೊಗ (ನಾ). ಅನೇಕಮುಖಗಳುಳ್ಳವನು; ಆದಿಶೇಷ: ಶಾಲ್ಮಲಿಯಂ ಸುರದ್ರುಮವೆನುತ್ತಲಗರ್ದಮನೋಜೆದಪ್ಪಿ ಮೇಣ್ ಸಾಲ್ಮೊಗನೆಂದು ಕಾಳ್ಪುರವನಂಬುಧಿಯೆಂದಱಿವಜ್ಜರಂದದಿಂ (ವೀರವಿ. ೧೨-೫೭). [ಸಾಲ್$_3$ + ಮೊಗ]

ಸಾಲ್ಲಿಬ್ರಹ್ಮ (ನಾ). ಒಬ್ಬಾತನ ಹೆಸರು : ಪಂಚಲದೇವನ್ ಸಾಲ್ಲಿಬ್ರಹ್ಮನಂ ಕಟೊಪಿ (ಮೃಅರಿ. ೧೯೮೨, ೨-೫ ; 973). [ಸಾಲ್ಲಿ$_1$ + ಬ್ರಹ್ಮ$_1$]

ಸಾಲ್ಲೀಯಾನಾ 'ಸಾಲಿಯಾನಾ' ನೋ.

ಸಾಲ್ವಲೆ, ಸಾಲುವಲೆ (ನಾ). ಬೇಟೆಯಲ್ಲಿ ಬಳಸುವ ಒಂದು ಬಗೆಯ ಬಲೆ : ಇಡುವಲೆ ಸಿಡಿವಲೆ ಕಿಱುವಲೆ . . . ನಿಡುವಲೆ ಸಾಲ್ವಲೆ ಬಿಡುವಲೆಗಳೆನಿಪ್ಪುವೆಸೆದುವಾ ಬೇಂಟೆಗರೊಳ್ (ಶಬಶಂ. ೩-೨೪). **ಸಾಲುವಲೆ** : ಸಾಲುವಲೆ ಬೀಸುವಲೆ . . . ಸಗಾಢವಲೆಗಳ ಹೊಱೆಗಳೋಳಿಯಂ ಪೊತ್ತು ನಡೆತಂದುದು ಪುಳಿಂದರೂಪದಲಿ ಭೂತಗಣಂಗಳು (ಸೌಂದಪು. ೧೮-೩೯); ತಡಿಕೆವಲೆ ತಟ್ಟಿವಲೆ ಸಾಲುವಲೆ . . . ಇಡುವಲೆಯದೊಳವಲೆಯು ಮಱೆವಲೆಗಳಿರ್ದುವಾ ಶಬರರಲ್ಲಿ (ಸಿದ್ಧೇಪು. ೮-೬).

[ಸಾಲ್$_3$ + ಬಲೆ$_1$]

ಸಾಲ್ವಿಡಿ, ಸಾಲುವಿಡಿ (ಕ್ರಿ). ೧. ಸಾಲಾಗಿರು; ಪಂಕ್ತಿಗೊಳ್ಳು: ರಂಗದೊಳೆಲ್ಲರು ಮೊತ್ತವಾಗಿರೆ ನಿಂದು ಹೆಂಗಳು ಮತ್ತೆಂಟು ದೆಸೆಗೆ ದಾಂಗುಡಿಯಿಟ್ಟು ಸಾಲ್ವಿಡಿದಾಗ ಶೃಂಗಾರಗಂಗೆ ಪರಿವವೊಲಾಡಿದರು (ಭರಚಿ. ೧೩-೯೮); ಸಾಲ್ವಿಡಿದೆಡೆಗೊಂಡನೇಕ ಬಕಪಂಕ್ತಿಗಳಿಂ ಕೆಱೆ ತಳ್ತು ರಂಜಿಕುಂ (ರಾಜಶೇ. ೬-೯). ೨. ಗುಂಪುಗೊಳ್ಳು; ಸಮೂಹಗೊಳ್ಳು : ಸಾಲ್ವಿಡಿದಾಮ್ರಭೂಜದೆಳಗೊಂಬುಗಳೊಳ್ ಪಸುರ್ವೆತ್ತು ಬಿಣ್ಪನಿಂ ನೇಲ್ವ ಫಲಂ (ನಳಚಂ. ೬೧೭). **ಸಾಲುವಿಡಿ** : ೧. ಸಾಲುವಿಡಿದೆಸೆವ ವಾರಣಶಾಲೆ ನವವಾಜಿಶಾಲೆ ಬಹುವಿಧಶಸ್ತ್ರಶಾಲೆ (ಸಮ್ಮೇಶಿ. ೪-೫); ಜೋಗಿಗ ಮುಚ್ಚಿಗರ ಗೃಹ ಸಾಲುವಿಡಿದು ರಾಜಿಪುವು (ಕಂನಮಿ. ೬-೫೬). [ಸಾಲ್$_3$ + ಪಿಡಿ$_1$]

ಸಾಲ್ಪರಿ (ನಾ). ನಿರಂತರವಾಗಿ ಸುರಿಯುವ ಮಳೆ : ಮೆಲ್ಪರಿ ಸೂಳ್ಪರಿ . . . ಬಲ್ಪರಿ ಕಾಲ್ಪರಿ ಸಾಲ್ಪರಿ ಸಲೆ ಸುರಿದು ಕಱೆದುವಿರುಳುಂ ಪಗಲುಂ (ರಾಜಶೇ. ೮-೧೧೨); ಮೆಲ್ಪರಿ ತೆಳ್ಪರಿ ಸಾಲ್ಪರಿ ಸೂಳ್ಪರಿ ಸುರಿದುವು - ಉಧೋ ಉಧೋ ! (ಕ್ರೌಂಚಧ್ವ. ೫೨-೧೯).

[ಸಾಲ್$_3$ + ಸರಿ$_7$]

ಸಾವ 'ಸಾ' ಪರಾ.

ಸಾವಂತ (ನಾ). ೧. ಚಕ್ರವರ್ತಿಗೆ ಅಧೀನನಾಗಿರುವ ರಾಜ,— ಮಾಂಡಲಿಕ : ಮೊದಲೊಳ್ಪವಂತರಿನಿನಿಸುದಿತೋದಿತನಾಗಿ ಮಂಡಲೇಶ್ವರನಿಂದಭ್ಯುದಯಪರನೆನಿಸಿ (ಗದಾಯು. ೧-೩೪); ನಿಜ ಮಕಾರದ ವಕಾರಕ್ಕೆ : ತಾಮರೆ - ತಾವರೆ, ಸಾಮಂತಂ-ಸಾವಂತಂ (ಶಮದ. ೧೦೪ ಪ್ರಯೋ); ದಂಡನಾಥಾಮಾತ್ಯಶೇಖರ ಮಂಡಳಿಕ ಸಾವಂತ ಹಯವೇದಂಡ ರಥಪರಿಕರಸಹಿತವಾತ್ಮಾನುರಾಗದಲಿ ಚಂಡತೇಜದಿ ನಡೆವುತಿರಲು (ಬಸಪು. ೫-೧೪); ರಾವಣ ಹೊದ್ದಿದನು ಸಿಂಹಾಸನವ ಸಾವಂತರೊಗ್ಗಿನಲಿ (ತೊರಗ. ೬-೩೪-೨). ೨. ಪಕ್ಕದ ರಾಜ್ಯದ ರಾಜ; ನೆರೆಯ ನಾಡಿನ ದೊರೆ: ಅರಸರಿಗೆ ತಂದೆಜೆದು ಮೊದಲಲಿ . . . ಕುಮಾರಕರ್ಗೆಜೆದು ತರಿಸಿ ಸಾವಂತರಿಗೆಜೆದು ಶಿಷ್ಟರಿಗೆಜೆದು ನಂಟರಿಗೆಜೆದು (ಬಸಪು. ೫೯-೨೬). ೩. ಮುಖ್ಯಸ್ಥ; ಮುಖಂಡ; ನಾಯಕ: ನಾಳ್ಪಭುಗಳು ಅಧಿಕಾರಿ ಸಾವಂತಮಾರಯ್ಯನುಂ ಮಲದ್ಧಾರೆಯಾಗಿ ನೇಮಿಚಂದ್ರ ಭಟ್ಟಾರಕರ ದೇವರ ಕಾಲಂ ತೊಳದು (ಎಕ. VII, ಶಿವಮೊ. ೬೫-೯; 1204?); ತಿಳಿದವನ ಮತಿವಿದನ ಭಾಷಾವಳಿ ಲಿಪಿಜ್ಞನ . . . ಸಾವಂತರ ವಿಶೇಷದಲವಸರವನಱಿದು (ಕುವ್ಯಾಉ. ೩-೮೯). ೪. ಉತ್ತರ ಕರ್ನಾಟಕದಲ್ಲಿ ಗಂಡಸರ ಹೆಸರಿನ ಕೊನೆಯಲ್ಲಿ ಸೇರುವ ಒಂದು ಶಬ್ದ: ಕೊಂಕಣೇಮಹಾರಾಷ್ಟ್ರರು . . . ಇವರ ಅಡ್ಡ ಹೆಸರುಗಳು ಸಾವಂತ, ದೇಸಾಯಿ, ಸಾಯಿಳ ಇತ್ಯಾದಿಗಳುಂಟು (ಕಭಾಗ. ೧೩೮).

ಸಾವಂತಗಸಣ = ಅಧಿಕಾರಿಗಳನ್ನು ಅಂಕೆಯಲ್ಲಿಟ್ಟುಕೊಳ್ಳುವವನು,— ನಿಗ್ರಹಿಸುವವನು(?); ಒಂದು ಬಿರುದು: ಸಿತಗರ ಗಣ್ಡ ಸಾವನ್ತಗಸಣ ಅರಮನೆಗೊಣ್ಡೆಯರ ಗಣ್ಡ ತಮ್ಮಯ್ಯನ ಪೆಸರಲಿಲಿಂ XXX ಪ್ರೆಯಂ ಮಾಡಿ (ಎಕ.VI, ತರೀಕೆ. ೩೬-೨೨; 1178 ?). ಸಾವಂತ ಮಾರ = ಅಧಿಕಾರಿಗಳಲ್ಲಿ ಮನ್ಮಥನಂತಿರುವವನು,— ಶ್ರೇಷ್ಠನಾದವನು (?); ಒಂದು ಬಿರುದು : ಅವರೊಳಿತ ಪ್ರಖ್ಯಾತಂ ವಿಮಳಯಶಂ ಸಾವಂ[ಮಂ]ತಮಾರ ಧೀರೋದಾತ್ತಂ ಕವಿಗುರು . . . ಜನವಿನೂತ ಪ್ರಧಾನ ಚೂಡಾರತುನ ಮಾರಂ (ಎಕ.VII, ಶಿವಮೊ. ೧೬-೨೫; 1203).

[< ಸಂ. ಸಾಮಂತ]

ಸಾವಂತಿಕೆ (ನಾ). ಚಕ್ರವರ್ತಿಗೆ ಅಧೀನರಾಜನಾಗಿರುವಿಕೆ; ಮಾಂಡಲಿಕತನ : ನಿಮ್ಮಿಬ್ಬರನ್ನೂ ನಾವು ಎಂದೂ ಸಾವನ್ತಿಕೆಗೆ ತಂದುಕೊಂಡವಾದರೂ . . . ನಮಗೆ ಕತ್ತಿಯಂ ಮಸೆದು ದ್ರೋಹವನ್ನು ಬಗೆದು ಉಜ್ಜುಗಿಸುತ್ತಿರುವುದು ಬಹಳ ವಿಷಾದಕರವಾಗಿದೆ (ಬಿರುಗಂ. ೩೬-೧೨). [ಸಾವಂತ + - ಇಕೆ]

ಸಾವಂದಯ್ಯ (ನಾ). ಒಬ್ಬಾತನ ಹೆಸರು : ಮಗ ಸಾವನ್ದಯ್ಯ (ಎಕ.VIII. ಸೊರಬ. ೫೭೦-೧೭; 951). [ಸಾವಂದ್ರ + ಅಯ್ಯ]

ಸಾವಕಾತಿ (ನಾ). ಶ್ರೀಮಂತ ಹೆಂಗಸು; ಧನಿಕಸ್ತ್ರೀ : ವಸಂತಸೇನೆಯು ಬಹಳ ಸಾವಕಾತಿಯಾಗಿದ್ದಳು (ರೂಢಿ). [< ಸಾವಕಾರ + - ತಿ(< - ಇತ್ತಿ)]

ಸಾವಕಾರ, ಸಾವುಕಾರ, ಸಾಹುಕಾರ (ನಾ). ೧. ಹಣವಂತ ; ಧನಿಕ ; ಶ್ರೀಮಂತ: ಹುಡೂರು ಮೋದೀಖಾನೆ ಸಾವಕಾರ ಬೆಟ್ಟದ ಪುರದ ಮೇಗಳ ಮನೆ ಲಿಂಗಣ್ಣನ ಮಗ (ಎಕ. XIV, ಹುಣಸೂ. ೧೪೫-೫; 1667); ನಮ್ಮ ರುದ್ರಪ್ಪ ಸಾವಕಾರರನ್ನು ಬಲ್ಲೆಯಷ್ಟೆ? (ಸಟಸಾ. ೫೮೦); ಸಾವಕಾರರಾದರೇನು ಸಾವು ತಪ್ಪಿಸ್ಕಾರೋ (ಗಾಪ). ೨. ಬಡ್ಡಿಗೆ ಹಣ ಕೊಟ್ಟು ವ್ಯವಹಾರ ಮಾಡುವವನು ; ಲೇವಾದೇವಿ ನಡೆಸುವವನು : ಐವತ್ತು ಸಾವಿರ ರೂಪಾಯಿ ಎಲ್ಲಿಂದ ತರಬೇಕು? ನೀವು ಸಾವಕಾರರು, ನಿಮ್ಮ ಮಾತು ಬೇರೆ (ಕುರಿಹಿ. ೧೫೯). ೩. ದೊಡ್ಡವ್ಯಾಪಾರಿ ; ವರ್ತಕ : ದಾರಿಕಾರ ನಿನ್ನಲ್ಲಿ ಮುತ್ತಿನ ಹಾರ ಐತೆಯಂತೆ ಕೊಡ ಸಾವಕಾರ್ಗೆ (ಶನಿಮಾ. ೧೫); ಒಬ್ಬ ಸಾವಕಾರನು ವ್ಯಾಪಾರದೊಳಗೆ (ಮುಂಬಯಿ. ೨-೨೪). ಸಾವುಕಾರ : ೧. ಇದನ್ನು ತೆಗೆದುಕೊಂಡು ನೀವೇ ಸಾವುಕಾರರಾಗಿರಿ (ಫಲಸಂ. ೫೭); ಕೊಣಬೇಗೌಡಂಬೋನು ದೊಡ್ಡ ಸಾವುಕಾರ (ಸಾಪದ. ೨೧). ೨. ನಾವು ಸಾವುಕಾರರು; ರೂಪಾಯಿ ಕೊಟ್ಟರೆ ಆಯಿತು ನಮ್ಮ ಕೆಲಸ . . . ನಾನೊಂದು ವೇಳೆ ರೂಪಾಯಿ ಕೊಡದಿದ್ದರೆ ಕಾಸಿಮಅಲಿಯು ಮತ್ತೊಬ್ಬ ಸಾವುಕಾರನ ಕಡೆಯಿಂದ ತೆಗೆದುಕೊಳ್ಳುವನು (ಕುರಿಹಿ. ೧೬೨). ೩. ಆ ಸಾವುಕಾರನ ಹಾಗೆ ಕಾಳ ಕೊಸರುವ ದುಡಿಮೆ, ಮಡಿವನಕ ಬದುಕುವುದು ತಪ್ಪಿಲ್ಲ (ಉಯ್ಯಾಲೆ. ೬-೧೧). ಸಾಹುಕಾರ : ೧. ಇಬ್ಬರೂ . . . ಸಾಹುಕಾರ ಕೊರಗಯ್ಯನಲ್ಲಿಗೆ ಹೋದರು (ಹರಿಕೂ. ೫೪); ಸಾಹುಕಾರ ಭಿಕಾರಿಯಾದ (ನಟಸಾ. ೪೧೬). ೨. ಸಾಲಗಾರರು ಸಾಲತೀರ್ಮಾನಕ್ಕಾಗಿ ಕೊಟ್ಟ ಅಡಕೆ, ಭತ್ತ, ಬೆಲ್ಲ ಮುಂತಾದವುಗಳೆಲ್ಲವನ್ನೂ ಸಾಹುಕಾರರ ಬಡ್ಡಿಯೇ ನುಂಗಿ ಬಿಡುತ್ತಿತ್ತು (ಪಂಜಪಂ. ೯). ೩. ಸಾಹುಕಾರರು ಅಂಗಡಿಗೆ ಇನ್ನೂ ಬಂದಿಲ್ಲ (ರೂಢಿ).

[← ಮರಾ. ಸಾವಕಾರ್, ಸಾಹುಕಾರ್ ; ಹಿಂ. ಸಾಹೂಕಾರ್./ ತಮಿ. ಚಾವ್ಕಾರ್; ತೆಲು. ಸಾಹುಕಾರಿ, ಸಾಹುಕಾರು, ಸಾಹೂಕಾರು]

ಸಾವಕಾರಿ, ಸಾವುಕಾರಿ (ನಾ). ಖಾಸಗಿ; ಸ್ವಂತ : ನಿಮಗೆ ಸರ್ಕಾರದಲ್ಲಾದರೂ ಕೆಲಸ ಸಿಕ್ಕುತ್ತೆ. ಸಾವಕಾರೀಲೂ ಸಿಕ್ಕುತ್ತೆ. ಆದರೆ ನಮ್ಮಂಥವರಿಗೇ ತೊಂದರೆ (ಹೂಸಮೂ. ೮೨). ಸಾವುಕಾರಿ : ನಮ್ಮ ಭಾಷೆಯಲ್ಲಿ ತೀರಾ ಹೊಂದಿಕೊಂಡು ಹೋದ . . . ಶಬ್ದಗಳೆಂದರೆ - ಕಚೇರಿ . . . ಅಮೀರ, ಸಾವುಕಾರಿ, ದಸ್ತಾವೇಜು, ಮೊಖದ್ದಮೆ, ದಾವಾ (ಭಾಷಾಶಾ. ೧೬೬). [← ಮರಾ. ಸಾವಕಾರೀ ; ಹಿಂ. ಸಾಹೂಕಾರೀ ./ ತಮಿ. ಚಾವಕಾರಿ]

ಸಾವಕಾರಿಕೆ, ಸಾಹುಕಾರಿಕೆ (ನಾ). ೧. ಹಣವಂತಿಕೆ; ಶ್ರೀಮಂತಿಕೆ: ಅವರ ಸಾವಕಾರಿಕೆ ಬಹಳ ಜೋರಾಗಿದೆ (ರೂಢಿ). ೨. ಸಾವುಕಾರನ ವ್ಯವಹಾರ; ಲೇವಾದೇವಿ ; ಬಂಡವಾಳಗಾರಿಕೆ : (ಅ). ಸಾಹುಕಾರಿಕೆ : ೨. ಆ ಉದ್ಯೋಗವನ್ನು ಬಿಟ್ಟು ಈಗ ಮನೆಯಲ್ಲಿಯೇ ಕುಳಿತು ಸಾಹುಕಾರಿಕೆ ಮಾಡುತ್ತಿದ್ದಾರೆ (ಪರಿಣೀ. ೭); ಬಂಡವಾಳಗಾರರು ತಾವು ಪಡೆದ ಲಾಭದ ಹಣವನ್ನೆಲ್ಲ . . . ಸಾಹುಕಾರಿಕೆಯಲ್ಲಿ ಅಥವಾ ಬಂಡವಾಳಗಾರಿಕೆಯ ಉದ್ಯೋಗಗಳ ಪಾಲುಗಳನ್ನು ಕೊಂಡುಕೊಳ್ಳುವುದರಲ್ಲಿಯೇ ತೊಡಗಿಸಬಹುದು (ಮಾವಾದ. ೧೪೦). [ಸಾವಕಾರ + - ಇಕೆ]

ಸಾವಕಾಶ (ಗು). ೧. ಬಿಡುವಿರುವ; ವಿರಾಮವಿರುವ. (ನಾ). ೨. ಬಿಡುವು; ವಿರಾಮ : ಆ ಮಾತು ಆಡುವುದಕ್ಕೆ ಇನ್ನೂ ಸಾವಕಾಶವಿದೆ (ಮಹಾಗ. ೧೧೬). ೩. ನಿಧಾನ; ತಡ : ಸಾವಕಾಶವಿಲ್ಲದ ಮನೋರಥಕ್ಕೆ ಸುಖಾಗಮನವೆ? (ಶಾಕುಂತ. ೩೮-೨೨); ಗೋವು ಸ್ನಾನವ ಮಾಡಿಕೊಂಡು ಗವಿಯ ಬಾಗಿಲ ಪೊಕ್ಕು ನಿಂತು ಸಾವಕಾಶವ ಮಾಡದಂತೆ ವ್ಯಾಘ್ರರಾಯನ ಕರೆದಳು (ಗೋಕಾಯ. ೧೯-೯೧). [ಸಂ.]

ಸಾವಗ (ನಾ). ಒಂದು ಜಾತಿ ಮತ್ತು ಆ ಜಾತಿಗೆ ಸೇರಿದ ವ್ಯಕ್ತಿ : ಗೋಪುರದ ಮೂಡಣ ಅಂಗಡಿಗಂ ಗಾಣ ೧ ಅಲ್ಲಿ ಬೆಸಗೆಯ್ವ ಕಲ್‌ಕುಟಿಗರ ಮನೆ ೧ ಸಾವಗರಿರ್ಪ್ಪ ಪೊಲೆಮನೆ ೧ (ಇಆ. XIX, ೨೭೩-೪೧; 1054). [?]

ಸಾವಗಿಸು, ಸಾಗಿಸು$_2$ (ಕ್ರಿ). ೧. ನೇರಮಾಡು; ಸರಿಪಡಿಸು; ಕ್ರಮಪಡಿಸು: "ಸಾವಗಿಸುವುದೆಂದು ಸಸಿನೆ ಮಾಟ್ಟುದು" (ಕಶಾಸಾ. ೬೩-೩೯); ಸಾವಗಿಸುವ ಮೇಲುದಂ ಮೊಲೆಗಳಳ್ಳಿಱಿಯುತ್ತಿರೆ (ಪಂಪಭಾ. ೮-೫೯); ಪರೆದ ಕುರುಳ್ಗಳಂ ಸಡಿಲ್ಚ ಮುಡಿಯುಮಂ ಸಾವಗಿಸಲೆಂದೆಳಸುವ ವಿಳಾಸಿನಿಯರಂ ಹೂಂಕಾರದಿಂ ನಿರಾಕರಿಸಿಯುಂ (ಜಗಿ. ೧೧-೭ ವ); ಕನಕಕನಕ್ಕಾಂಚಿಯೊಳ್ ನೀವಿಯಂ ಸಾವಗಿಸುತ್ತಂ ಬಂದರೀರ್ವರ್ ಸುಲಲಿತ ಚತುರಾಪಾಂಗೆಯರ್ ಕಾಂತೆಯರ್ಕಳ್ (ಪುಣ್ಯಾಸ್ರ. ೧-೪೨). ೨. ಕ್ರಮಕ್ಕೆ ಒಳಪಡಿಸು; ವ್ಯವಸ್ಥೆಗೆ ಒಳಗುಮಾಡು : ಮೂವತ್ತರ್ಥಾಸಿರ್ವರ್ ದೇವರ ಮೆಯ್ಗಾಪು ದೇವದೇವಂಗವರಂ ಸಾವಗಿಸಿ ತಂತ್ರಪಾಲತೆಗಾವಗಮಾಗಿಯೆ ನೃಪಾಂಪ್ರಿಯುಗಲದ ಮೊದಲೊಳ್ (ತಾಂಶಿಪು. ೧೦-೧೩೩). ೩. ಸಂತೈಸು; ಉಪಚರಿಸು: ವಿಯೋಗದುಪವಾಸದ ಪಾರಣೆಗೆಂದು ಚಕ್ರವಾಕಿಗೆ ರಮಣಂ ಮೃಣಾಳಕಬಳಂಗಳನಾಗಳ್ ಬಂದು ನೀಡಿ ಸಾವಗಿಸುದಂ (ತಾಂಶಿಪು. ೮-೧೧೧); ಸಲೆ ಸಾವಗಿಸುತ್ತಿರ್ದೊಂ ದೇವಿಯರನಗಣಿತ ಶಿಶಿರೋಪಚಾರದಿಂದಿನ್ನೆವರಂ (ಕುಸುಮಾ. ೧೨-೧೬೧). ೪. ಸುಮ್ಮನಿರು; ಮೌನದಿಂದಿರು: "ಸಾವಗಿಪುದುಂ ಸೈತೆನಲ್ಕಪ್ಪುದದು ಮೌನಾರ್ಥವು" (ಕ್ಷಿಪ್ತ. ೪೮); ರಿಪುಶಿರಮನೆರಡುಂ ಕರದಿಂ ಸಾವಗಿಸದೊಡದು ಕಿಟ್ಟಂ (ಎಕ. V, ಅರಸೀ.೧೦೮-೬; 1254). ೫. ನಿಶ್ಚೇಷ್ಟಗೊಳಿಸು; ಸ್ತಬ್ಧಗೊಳಿಸು: ಮಲ್ಲಿಗೆಸರಲ ಬಲ್ಲಣಿಗೆ ತಲ್ಲಣಂಗೊಂಡು ಸಾವಗಿಸುವ ನೋವನೋವದೆ ಬಾವೆಯೊಡನೆ . . . ಸೇವಿಸುವ ದಿಜ್ಮೋದರರುಂ (ರಾಮಾಶ್ವ. ೭೩-೬). ಸಾಗಿಸು$_2$: ೧. ಚೆನ್ನಾಗಿ ತಿಲಕವ ತಿದ್ದಿ ಭಿನ್ನಕುಂತಳವ ಸಾಗಿಸಿ ಕೊಳುತೊಯ್ಯನೆ ತನ್ನ ತಾ ನಳ್ಕಳುದ್ದುನೊಳು (ಧರಾಚ. ೧೦-೭೫). [? + - ಇಸ್ತು]

ಸಾವಡರ್ (ಕ್ರಿ). ಸಾವನ್ನು ಹೊಂದು ; ಸತ್ತುಹೋಗು : ಈ ನಿಜಲಲನೆ ಹಡೆದ ಹಸುಗೂಸು ಬಲುರೋಗದಿಂ ಸಾವಡರ್ದುದು (ಕ್ರಿಪಂಚಾ. ೨-೩೯). [ಸಾವು + ಅಡರ್]

ಸಾವಡಸು (ಕ್ರಿ). ಸಾವು ಉಂಟಾಗು; ಮರಣವು ಪ್ರಾಪ್ತವಾಗು: ಆವ ಕಾಲವ ಕಳೆದರೆ ಜೀವವುಳ್ಳನ್ನ ಸಾವಡಸದೆ ಮಾಣ್ಬಪುದೆ (ಮೋಹತ. ೩೩-೪೭).

[ಸಾವು + ಅಡಸು]

ಸಾವಣ, ಸಾಣ $_1$, ಸಾಣ್ಣೆ $_3$, ಸೋಣ, ಸೋಣ್ಣೆ $_2$, ಸೋಣೆ, ಸೋನ್ನೆ $_2$ (ನಾ). ೧. ಚಾಂದ್ರಮಾನದ ಐದನೆಯ ತಿಂಗಳು ; ಶ್ರಾವಣಮಾಸ : ನವರಾಗದನು ಭೋಗ ಸುಗ್ಗಿ ಸಾವಣವು! (ಕವಿಕಾ. ೯೪-೪). **ಸಾಣ $_1$** : ೧. ಮೆರೆಯುತ್ತಿತ್ತು ಸಾಣಮಾಸ (ಕವಿಕಾ. ೭೦-೧೫). **ಸಾಣ್ಣೆ $_3$** : ೧. ದೀವಳಿಗೆಯ ಹಬ್ಬದಲಿ ರಂಗಪೂಜೆ ೧ ಸಾ[ಣೆ]ಯ ಸಹಸ್ರಕ್ಕೆ ಅಕ್ಕಿ ಮು ೧ (ಸೌಇ. IX-ii, ೪೪೮-೧೧;1442). **ಸೋಣ** : ೧. ಜೋಗಿ ನಡೆತರ ಸೋಣವಲ್ಲ . . . ಉತ್ತಿಲಿಗೆ ನಾನೋಡಿದೆ (ಗಿಳಿಂ. ೬೭-೯೭); ಉಳಿದದ್ದನ್ನು ಸೋಣ, ಕನ್ನೆ ತಿಂಗಳಲ್ಲಿ ಕೊಟ್ಟರೂ ಸಾಕು (ಬ್ಲೂಉಾ. ೧೦). **ಸೋಣ್ಣೆ $_2$** : ೧. ದೇವಸ್ಥಾನದಲಿ ನಿತ್ಯ ಪುರಾಣ ನ[ಡ]ವಂತಾಗಿ ಮಠದಲಿ ಸೋಣೆ ಮುವತ್ತು ದಿನ ಪುರಾಣ ನಡಸೂ ವಂತಾಗಿ ಮಾಡಿಕೊಂಡು (ಕಾ. I, ೫೩-೨೪; 1433); ಭಯಿರರಸ ಒಡೆಯರು ಮಾಡಿದ ಸೋಣೆಯ ಧರ್ಮಕ್ಕೆ ಶ್ರೀಕಳಶನಾಥದೇವರಿಗೆ ಸಲುದು ಗ ೨ (ಪ್ರಸಿರಿ. ೧೯೪೦, ೨೮-೨೬; 1509). **ಸೋಣೆ** : ೧. ಸುರೇಶ್ವರ ಶ್ರೀಪದಂಗಳ ಮಠದಲ್ಲಿ ಸೋಣೆ ದಿ ೩೦ ಪುರಾಣ ನಡವಂತಾಗಿಯೆ (ಕಾ. I, ೫೩-೨೨; 1433); ತೊಳಸೆಪೂಜೆ ಸೋಣೆಯ ತಿಂಗಳ ಚಉತೀ ಹೋಮಕೆ (ಸೌಇ. ೧೯೩೨, ಉಡುಪಿ. ೩೧೦-೧೩; 1544); ಅಸಾಡಿ, ಸೋಣೆ, ಕನ್ನೆ - ಈ ಮೂರು ತಿಂಗಳೂ ಬಿಡುವು (ಅನಾಥ. ೧೯೯). ೨. (ಕರಾ) ಶ್ರಾವಣಮಾಸದಲ್ಲಿ ಗದ್ದೆಯಂಚಿನಲ್ಲಿ ಬೆಳೆಯುವ ಒಂದು ಬಗೆಯ ಗಿಡ ಮತ್ತು ಅದರ ಹೂವು. **ಸೋನ್ನೆ $_2$** : ೧. ಆಉದೂ ಸಲ್ಲದು [ಸೋನೆ]ಯ ತಿಂಗಳಲಿ ಸೋನೆಮರಿಯಾದೆ ಸಲುಉದು (ಸೌಇ. ೧೯೩೧, ಕೊಡಾಪುರ್, ೩೭೬-೧೪; 1306); ಚಿಕ್ಕದೇವರಿಗೆ ಅಸಾಡಿಸೋನೆಗೆ ರುದ್ರಪೂಜೆಗೆ ಅಉವತ್ತು ಹಾನೆ ಅಕ್ಕಿಯನೂ ಕೊಟ್ಟು (ಸೌಇ. IX-ii, ೪೩೦-೩೪; 1406).

[< ಪ್ರಾ. ಸಾವಣ./ ಸಂ. ಶ್ರಾವಣ]

ಸಾವದಿಸು(?) (ಕ್ರಿ). ಸಮೀಪಿಸು ; ಹತ್ತಿರಕ್ಕೆ ಬರು (?) : ಮಣ್ಣಳಿಕ ಮಾಱಟ ಮೂನೂಱಱ ಮನ್ನೆಯ ಬೆನ್ನರಸನಂ ಸಾವದಿಸಿ ಬಿನ್ನಪಂಗೆಯ್ದು ಕಂಬೇಶ್ವರದ ಖಣ್ಡಸ್ಫುಟಿತ್ತ ಜೀರ್ಣೋದ್ಧಾರಕ್ಕಂ (ಸೌಇ. IX-i, ೧೫೫-೩; 1086). [? + - ಇಸ್ $_3$]

ಸಾವದ್ಯ (ಗು). ೧. ನಿಂದಾರ್ಹವಾದ; ದೋಷಪೂರ್ಣವಾದ : ಬಾಧಾಪರಿಹಾರಾರ್ಥಂ ಸಾವದ್ಯಪಥದೊಳು ಬಾರದೆ ನಿರವದ್ಯಪಥದೊಳು ಬಂದವೆಂಬುದುಂ (ಚಾವುಂಪು. ೫೨). (ನಾ). ೨. ದೋಷ; ಕಳಂಕ : ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ ಸಾವದ್ಯಂ ಸಾಗದಂತಾಗಿರೆ . . . ಒಸರಿಸಿ ಕಳೆಗೆ ಸಂಸಾರಕಾಂತಾರದಿಂದಂ (ಆದಿಪು. ೧-೩); ನಿತ್ಯಾಲಂಬಂ ನಿರವದ್ಯಮಾಯ್ತು ಚರಿತಂ ಸಾವದ್ಯಮುಂ ಪೂರ್ದದೆಂದೀ ಲೋಕಂ ಪೊಗೆಟ್ಟ ಪ್ರಮತ್ತಗುಣಸಂಸ್ಥಾನಕ್ಕೆ ಪಕ್ಕಾದ ಬೋಧಾಲೋಕರ್ ದಯೆಗೆಯ್ದೆ (ಚಂದ್ರಪ್ರ. ೧-೫). ೩. ದೋಷಯುಕ್ತವಾದುದು; ಕಳಂಕಪೂರ್ಣವಾದುದು.

[ಸಂ.]

ಸಾವದ್ಯಕ್ರಿಯೆ (ನಾ). ಕಳಂಕಪೂರ್ಣವಾದ ಕೃತ್ಯ; ದೋಷಯುಕ್ತವಾದ ಕ್ರಿಯೆ: ಹಿಂಸಾದ್ಯಶೇಷ ಸಾವದ್ಯಕ್ರಿಯಾನಿವೃತ್ತಿಗೆಯ್ದು ಕಾಯವಾಙ್ಮನಃಕರ್ಮಯೋಗ ತ್ರಯವಿಶುದ್ಧಿಯಿಂದೆಸಗುವೆಸಕಂ ಸಮ್ಯಕ್ಚಾರಿತ್ರಮೆಂಬುದಕ್ಕುಂ (ಸಾಕುಮಾ. ೬-೮ ವ).

[ಸಂ. ಸಾವದ್ಯಕ್ರಿಯಾ]

ಸಾವದ್ಯದೂರತ್ವ (ನಾ). ದೋಷವಿಲ್ಲದಿರುವಿಕೆ ; ದೋಷವಿಮುಕ್ತವಾಗುವಿಕೆ: ಅಱಿವಂ ತಾಳ್ದಿರವುಂ ಹಿತಾತಿರುಚಿಯುಂ ಸಾವದ್ಯದೂರತ್ವಮುಂ ಪೆಱರ್ಗೊಳ್ಪುಂ ತನಗೊಳ್ಪುಮಪ್ಪ ನುಡಿಯುಂ . . . ಒಯ್ಯುಮಕ್ಷಯಸುಖಾವಾಸಕ್ಕೆ (ಪೀಪಸಂ. ೧೭೭-೨). [ಸಂ.]

ಸಾವದ್ಯಭೀರು (ನಾ). ದೋಷಕ್ಕೆ ಹೆದರುವ ವ್ಯಕ್ತಿ ; ಪಾಪಭೀರು : ಸಾವದ್ಯಭೀರುಗಳ್ ಕೆಲರಾ ಎವಿಧಫಲಪ್ರಸೂನಪಲ್ಲವತತಿಯಿಂ ತೀವಿದ ರಾಜಾಂಗಣಮ ನಿಳಾವಂದ್ರರ್ ಮೆಚ್ಚಲೊಲ್ಲದಲ್ಲಿಯೆ ನಿಂದರ್ (ಆದಿಪು. ೧೫-೯). [ಸಂ.]

ಸಾವಧ (ನಾ). ೧. ಎಚ್ಚರ; ಜಾಗೃತ: ನಿಮ್ಮ ಮಿತ್ರನಾದ ಪಂತನನ್ನು ಎಚ್ಚರಗೊಳಿಸಿರಿ ಮತ್ತು ನೀವೂ ಸಾವಧರಾಗಿರ್ರಿ (ಅಂಬಿಕ. ೨೪); ಮೂರ್ಛಿತಳಾದ ರಮಾದೇವಿಯು ಜನರ ಉಪಚಾರದಿಂದ ಸಾವಧಗೊಂಡಳು (ಸ್ಕೂಲಮಿ. ೯೩). ೨. ಸಮಾಧಾನ; ನಿರಾಳ : ಯಜಮಾನಳೇ ಸಾವಧರಾಗಿರಿ. ಯಾಕಂದರೆ ವಸಂತಮಾಧವಜಿಯವರು ಸುರಕ್ಷಿತವಾಗಿ ಬಂದಿದ್ದಾರೆ (ಮಂಜುಕ. ೯೬).

[← ಮರಾ. ಸಾವಧ./ ಸಂ. ಸಾವಧಾನ]

ಸಾವಧಗಿರಿ (ನಾ). ಸಮಾಧಾನ; ಶಾಂತಿ; ಸಹನೆ: ನನ್ನಪ್ಪು ಸಾವಧಗಿರಿಯನ್ನು ಬೇರೆ ಯಾರೂ ವಹಿಸಿರಲಿಕ್ಕಿಲ್ಲ! (ಕಳ್ಳಕಾ. ೧೪). [← ಮರಾ. ಸಾವಧಗಿರೀ]

ಸಾವಧಾನ (ನಾ). ೧. ಎಚ್ಚರದಿಂದಿರುವಿಕೆ ; ಲಕ್ಷ್ಯದಿಂದಿರುವಿಕೆ. ೨. ಎಚ್ಚರಿಕೆ; ಲಕ್ಷ; ಗಮನ : ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ (ಶೂನ್ಯಸಂ. ೧೯-೨೨); ಕವಿಗುರುವ, ನೀಡೆನಗೆ ವಾಙ್ಮಂತ್ರಶಕ್ತಿಯಂ ಸಾವಧಾನದಿ ಕೇಲ್ದು ಸಾಗುವೆನ್ (ಶ್ರೀರಾಮಾ. ೫-೧೦೮); ಹೋ! ಅವಧಾನ, ಅವಧಾನ! ಸಾವಧಾನ ಮಹಾಸನ್ನಿಧಾನ (ಸವತಿ. ೧). ೩. ಸಮಾಧಾನ; ತಾಳ್ಮೆ; ಸಹನೆ : ಅಂಗದಲ್ಲಿ ಸಂಗಗೊಳಿಸಿದ ಬಳಿಕ ಅದೇ ಪ್ರಾಣಲಿಂಗವೆಂದೆಂದು ಸಾವಧಾನದಿಂದರ್ಚಿಸಬೇಕು (ಚನ್ನವ. ೬. ೬೪-೧೪೭); ಗುರುಲಿಂಗಜಂಗಮವ ಶಿವನೆಂದೆಂಬ ಭಾವದಿಂ ಭಜಿಸಿ ತೀರ್ಥಪ್ರಸಾದವ ಕೊಂಡು ಸಾವಧಾನದೊಳರ್ಚವರನೆಲ್ಲಿಯುಂ ಕಂಡುದಿಲ್ಲ (ಸಿದ್ಧೇಪು. ೧-೫೦); ತಂದೆಯವರು . . . ಅಷ್ಟೊಂದು ಸಾವಧಾನವಾಗಿ ಶಾಂತಮನಸ್ಸಿನಿಂದ ಹೇಳಿದ್ದನ್ನು ನಾನು ನೋಡಿದ್ದು ಇದೇ ಮೊದಲು (ಸುವಸಂ. ೨೦). ೪. ನಿಧಾನ; ಸಾವಕಾಶ: ಆ ವೀರವರ್ಮಂ ಕನಲ್ದಾಗ . . . ಆಹವದೊಳೆನ್ನ ಕೂಡೆ ಸಾವಧಾನದೊಳೊದಗಿದೊಡೆ ಕಾಣಬಹುದೆನುತೆ ಪಾವನಿಯನಡಸಿ ಪೊಯ್ದೊಡೆ (ಚೈಮಿಭಾ. ೨೬-೪೮); ವಸತಿಸೌಕರ್ಯವಿಲ್ಲದಿದ್ದರಿಂದ ನಾವು ಸಾವಧಾನ ಮಾಡಬೇಕಾಯಿತು (ಹಸುಹೂ. ೩೧೮). ೫. ಆರು ವಿಧವಾದ ಭಕ್ತಿಗಳಲ್ಲಿ ಒಂದು : ಭಕ್ತಿ ಆರು ವಿಧವಾಗಿದೆ. ಶ್ರದ್ಧಾಭಕ್ತಿ, ನೈಷ್ಠಿಕಭಕ್ತಿ, ಸಾವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿ (ಭಾರದ. ೧೧೯). [ಸಂ.]

ಸಾವಧಾನಿ (ನಾ). ಎಚ್ಚರವುಳ್ಳವನು; ಸಮಾಧಾನಚಿತ್ತವುಳ್ಳವನು: ಪ್ರಾಣಲಿಂಗಕ್ಕೆ ಕೊಟ್ಟು ಕೊಂಬಲ್ಲಿ ನಿರಂತರ ಸಾವಧಾನಿ ಗುಹೇಶ್ವರ ನಿಮ್ಮ ಪ್ರಸಾದಿ (ಅವಚಂ. ೫೬-೨೪೦); ಮುಕ್ತಸ್ಥಿತಿಯಲ್ಲಿಯೂ ಮೈಮರೆಯದೆ ಸಾವಧಾನಿಯಾಗಿ ಭಕ್ತನಾಗಿರಬೇಕು (ಭಾರದ. ೧೩೧). [ಸಂ. ಸಾವಧಾನಿನ್]

ಸಾವಧಿಠೇವಣಿ (ನಾ). ಒಂದು ನಿರ್ದಿಷ್ಟಅವಧಿಯನ್ನು ಗೊತ್ತುಪಡಿಸಿ ಬ್ಯಾಂಕಿನಲ್ಲಿ ಬಡ್ಡಿಗಾಗಿ ಇಡುವ ಹಣ; ಇಡುಗಂಟು: ಅವರು ನಿವೃತ್ತರಾದ ಮೇಲೆ ಬಂದ ಹಣವನ್ನು ಸಾವಧಿಠೇವಣಿಯಲ್ಲಿ ತೊಡಗಿಸಿದ್ದಾರೆ (ರೂಢಿ).

[ಸಾವಧ್ಯಿ + ಠೇವಣಿ]

ಸಾವನ (ನಾ). ೧. ಐದು ಬಗೆಯ ಸಂವತ್ಸರಗಳಲ್ಲಿ ಒಂದು : ಆ ಸಂವತ್ಸರವೇ ಸೌರ ಚಾಂದ್ರ ಬಾರ್ಹಸ್ಪತ್ಯ ನಾಕ್ಷತ್ರ ಸಾವನಭೇದದಿಂದೈದುತೆಱನಾಗಿರ್ಪುದು (ವಿವೇಕ. ೩೨೧). ೨. ಯಜ್ಞದ ಕೊನೆಯ ಭಾಗ,— ಅಂತ್ಯದ ಭಾಗ. ೩. ಸೌರಮಾನಪದ್ಧತಿಯ ತಿಂಗಳು. ೪. ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ದಿನದ ಭಾಗ. [ಸಂ.]

ಸಾವನಿಗ (ನಾ). (?) : ಸಾವನಿಗರ ಪಱೆಯರ [ನಾ] ಸೀವಿಗಳ ನೆಗರ್ತೆವೆತ್ತ ಗಂದಿಗರ ಬೆಡಂಗಾವರಿಸುವ [ತಂ]ಬುಲಿಗರ ಪೂವೆತ್ತುವ ಮಾಲೆಗಾಱರಂಗಡಿಯಡಿಗಂ (ಪರ್ಧಮಾ. ೧-೬೭); ಮತ್ತಮಲ್ಲಿಯೊರ್ವಂ ಸಾವನಿಗನ ಚಿತ್ರಮಂ ಬರೆದಂಗಡಿಗೆ ಪೋಗಿ ಕುಳ್ಳಿರ್ದೊಡಂದಾ ವಣಿಕ್ಪತಿಗೆ ಲಾಭಮಾದೊಡೀತಂ ಬಂದಲ್ಲಿ ಪಡೆದೆನೆಂದಾತನ ತೇದಕ್ಕಂ ಬುದ್ಧಿಗಂ ಮಚ್ಚಿ ಕೂಸಂ ಕುಡಲೆಂದಿರ್ದಂ (ಪೀಪಸಂ. ೨೦೫-೧೪). [ಸಾವನ $_7$ + - ಇಗ]

ಸಾವಭೃತ (ನಾ). ಸಾಮಾನ್ಯವಾದುದು; ಕೇವಲ: "ಸಾವಭೃತಂ ಸಾಮಾನ್ಯಂ ಕೇವಲಮೆಂಬುದದೆನಿಕ್ಕುಂ" (ವಸ್ತುಕೋ. ೧೨೬-೪೯). [ಸಂ.]

ಸಾವಯ್ $_1$ (ನಾ). ೧. [ವೀಶೈ] ಅವಯವಸಹಿತವಾದುದು; ಅಂಗಸಹಿತವಾದುದು : ತನುವೆ ಸಾವಯವಾಗಿ ರೂಪಾದಿ ಗುಣವರ್ತಿಯೆನಿಸುತ ಘಟಾದಿಯಂತಳಿವ ಭೌತಿಕವಲ್ಲೆ (ವೀಶೈಪು ೫-೪-೯). ೨. ಜೀವಾತ್ಮ : ಶರಣನು ದೃಷ್ಟಾದೃಷ್ಟವನಱಿಯನು ಸಾವಯ ನಿರವಯವೇನೆಂದು ವಿವರಿಸಿ ನುಡಿಯನು (ಚನ್ನವ. ೫೮೨-೧೨೯೬).

[< ಸಂ. ಸಾವಯವ]

ಸಾವಯ$_2$ (ನಾ). ಒಂದು ಬಗೆಯ ಸಸ್ಯ : ಬಿಳಿದಾಳೆ, ಮಸ್ಸಿ, ಶಾವಿಗೆ, ಸಾವಯ, ಕೈತಾಳೆ (ಮಲಿಗ ೭೨-೧೪೭೫). [?]

ಸಾವಯವ (ಗು). ೧. ಅವಯವಗಳಿಂದ ಕೂಡಿದ; ಸಾಕಾರವಾದ: ಪೋಪ್ ಅದನ್ನು 'ಅಲೋಚನೆಯ ವಸ್ತ್ರ' ಎಂದು ಕರೆದಾಗ, ಅದರ ಮುಖ್ಯವಾದ ಸಾವಯವ ಸ್ವರೂಪವನ್ನು ಅರಿತುಕೊಳ್ಳಲು ಆತ ಸಂಪೂರ್ಣ ಅಸಮರ್ಥನಾದ (ಕಾಒಪ್ರ. ೨೩). ೨. ಮೂಲಭೂತವಾದ; ಜೈವಿಕ: ಪ್ರೋಟೀನುಗಳು ಸಸಾರಜನಕಯುಕ್ತವಾದ ಸಾವಯವಆಹಾರಾಂತಗಳು (ಗೃಹಾ. ೯). (ನಾ). ೩. ಅವಯವಸಹಿತವಾದುದು; ಸಾಕಾರವಾದುದು : ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋಱಿದನಾಗಿ ಸಾವಯವ[ಪಾಠಾಂ. ಸಾವಯ]ಕ್ಕೆ ನಿರವಯವಕ್ಕೆ ಭಿನ್ನವಿಲ್ಲವಯ್ಯ (ಮಹಾದೇ. ಬ. ೬೩-೧೫೧); ತನು ಕರಣ ಮೊದಲಾದವನಿತು ಸಾವಯವಂಗಳನಿಸಿ ತಾ ತೋಱುತಿಹುದಾಗಿ ನಿರವಯವೆನಲು ಮತ್ತಂತು ತೆಱಿಲ್ಲ (ಅನುಮು. ೧-೪-೪೬); ಪರಮಾತ್ಮನ ಸ್ವರೂಪವನ್ನು ತಿಳಿಸಲು ಶ್ರುತಿಗಿಂತಲೂ ಅಧಿಕವಾದ ಪ್ರಮಾಣವನ್ನು ನಾವು ಕಾಣಲಾರೆವು. ಮೂರ್ತ ಎಂದರೆ ಸಕಲ, ಸಾವಯವ; ಅಮೂರ್ತ ಎಂದರೆ ನಿಷ್ಕಲ, ನಿರವಯವ ಎಂದರ್ಥ (ಶಕ್ತಿವಿ. ೨೩). [ಸಂ.]

ಸಾವಯವರೂಪಕ (ನಾ). [ಕಾವ್ಯಮೀ] ರೂಪಕಾಲಂಕಾರಗಳಲ್ಲಿ ಒಂದು ಬಗೆ; ವ್ಯಕ್ತಿ ಅಥವಾ ವಸ್ತುವನ್ನು ಸಮಗ್ರವಾಗಿ ಮತ್ತೊಂದರಲ್ಲಿ ಆರೋಪಿಸಿ ರೂಪಕಮಾಡದೆ, ಒಂದೊಂದು ಅವಯವವನ್ನೂ ಮತ್ತೊಂದರಲ್ಲಿ ಆರೋಪಿಸಿ ರೂಪಕಮಾಡುವುದು; ಒಂದೊಂದೂ ಅವಯವದ ರೂಪವನ್ನೊಳಗೊಂಡುದು: ಸ್ಫುರಿತಾಧರಪಲ್ಲವ ಬಂಧುರಲೋಚನಕುಸುಮ ರೋಲಭುಜಶಾಖೆ ಮನೋಹರ ಕಾಂತೆಯೆಂಬುದವಯವನಿರೂಪಣಕ್ರಮದಿನವಯವಂ ರೂಪಕದೊಳ್ (ಸಾವಯವರೂಪಕಂ) (ಕವಿಪಾ. ೩-೧೫೫); ಸಾವಯವರೂಪಕಕ್ಕೆ- ಪರಿಲುಳಿತಘರ್ಮಜಲಮುಂದರಿ ವಿಚಲದ್ಭ್ರೂಪತಾಕಮತಿತರಳತರ ಸ್ಫುರಿತಾಧರ ಪಲ್ಲವಮಿವಳ ರೋಪಮಂ ವಕ್ತ್ರಮಿದೆ ವಲಂ ಕನ್ನಡಿಕುಂ (ಕಾವ್ಯಾವ. ೬೯೦). 'ನಿರವಯವರೂಪಕ' ಪರಾ. [ಸಂ.]

ಸಾವರಣೆ 'ಸಂವರಣೆ$_1$' ನೋ.

ಸಾವರಿಸು 'ಸಂವರಿಸು$_1$' ನೋ.

ಸಾವರ್ಣಕ (ನಾ). ಸಗೋತ್ರದವನು : ಜಡನಾದವನ ಸಾವರ್ಣಕನಾ ದುರಾಚಾರನಾದವನಾ ಶ್ರಾದ್ಧಕ್ಕೆ ಹೇಳಬಾರದು (ಕೀಪು. ೧೭-೨೦). [ಸಂ.]

ಸಾವಶ್ಯಪ್ರಣವ (ನಾ). ಪಂಚಪ್ರಣವಮಂತ್ರಗಳಲ್ಲಿ ಒಂದು : ಸಾಕಲ್ಯಪ್ರಣವ, ಶಾಂಭವಪ್ರಣವ, ಸೌಖ್ಯಪ್ರಣವ, ಸಾವಶ್ಯ[ಪಾಠಾಂ. ಸ್ಯ]ಪ್ರಣವ ಸಾಯುಜ್ಯಪ್ರಣವವೆಂಬ ಪಂಚಪ್ರಣವಮಂತ್ರಂಗಳಂ (ವಿವೇಕ. ೭೧). [ಸಂ.]

ಸಾವಜೆ (ನಾ). ಹೆಣದ ಮುಂದೆ ಬಾರಿಸುವ ಒಂದು ಬಗೆಯ ಚರ್ಮವಾದ್ಯ: ಬಲೆಯರ್ದಿಲೆಲ್ಲು ಸಾವಜೆ ಪುರಿಯೋಡು . . . ವಿಮುಕ್ತಕೇಶಯದಿರೊಳ್ ಬರೆ ಕಾಣಲುಮಾಗದು (ರೋಹೋಪ. ೧೨-೧೦); ನೆಜನಂ ದುಷ್ಕೃತಮೆಂಬ ಜೀನ ನೊಬಮೇಂ ಪಾಯ್ದೂಜವೇ ಬಂದು ಬೆಟ್ಟುಜೆ ದುಃಖಜ್ವಲನಾರ್ಚಿಗಳ್ ಬಳಸಿಯುಂ ತಳ್ತಬ್ಬವೇ ಪೊಯ್ವ ಸಾವಜೆ[ಪಾಠಾಂ. ಸಾಯ್ವರ]ಗಳ್ ದರ್ಚದೆ ತೀಡವೇ ಕಿವಿಗಳೊಳ್ . . . ಪೇಬ್ ಜೀವನೇ (ಜೀಪಸಂ. ೮೨-೧೪). [< ಸಾವು + ಪಜೆ$_1$./ ಕೊಡ. ಚಾವುಪರೆ]

ಸಾವಾಸ (ನಾ). ಜೊತೆಯಲ್ಲಿರುವಿಕೆ; ಒಡನಾಟ: ಕಲಿತವರ ಸಾವಾಸ ಚಲೋ (ಮಣ್ಣುಹ. ೫೭). [< ಸಂ. ಸಹವಾಸ]

ಸಾವಾಸಿ, ಸವ್ಯಾಶೆ, ಸವ್ವಾಶೆ (ನಾ). ೧. ಜೊತೆಗಿರುವವನು; ಸಹವಾಸಿ; ಒಡನಾಡಿ: ಸಾಗೆ - ಸಹದೇವ - ಸಾದೇವ; ಸಹವಾಸಿ - ಸಾವಾಸಿ (ಶಮಜ. ೨೯೧ ಪ್ರಯೋ); ಸಾದೇವಂ, ಸಹದೇವಂ; ಸಾವಾಸಿ, ಸಹವಾಸಿ (ಶಬ್ದಾಸು. ೬೭೪ ಪ್ರಯೋ). ೨. ಅಂತಃಪುರದ ಕಾವಲುಗಾರ, — ವೃದ್ಧಕಂಚುಕಿ : "ಸೌವಿದಃ. ಸೌವಿದಲ್ಲಃ, ಸ್ಥಾಪತ್ಯಃ, ಕಂಚುಕೀ - ಈ ೪ ಸಾವಾಸಿ" (ಹಲಾಯು. ೭೦-೨೭೩); ಬಟ್ಟೆಯಟ್ಟಿ ಬಂದು ಮುನ್ನಂ ಪುಟುವಗೆಗೊಳಗಾದಳೆಂದು ಸಾವಾಸಿಗಳಂ ಕಟ್ಟಿಪಿದನಲ್ಲಂ ತಲೆಯಂ ಬಟ್ಟೆಯಟ್ಟಿದನೆಂದು ಪೋದುದಸು ಶಶಿಮುಖಿಯಾ (ಅನಂಪ್ರ. ೧೨-೫); ದಾಸ ದಾಸಿಜನಕ್ಕೆಲ್ಲಿದು ವಿಶ್ವಾಸಿಗಳಿಗಾರ್ಯರಿಗೆಳೆದು ಸಾವಾಸಿಗಳಗಜೆದಂಗ ರಕ್ಷಕರಿಂಗೆಜದು (ಬಸಪು. ೨೯-೨೮). ೩. ಕಾವಲುಗಾರ : ಕೇಶಿರಾಜನ ಶಿಷ್ಯನೋ ಸತ್ಕೇಶ ಚಾಮಯ್ಯನ ಮನೆಯ ಸಾವಾಸಿಯೋ (ಬಸ್ಕಾ೪೭-೩೫). ೪. ಆರ್ಯ; ಹಿರಿಯ: "ಸಾವಾಸಿ[ಪಾಠಾಂ. ಸೋವಾಸೆ]ಯರು ಆರ್ಯನೇದೆನಿಸಿಕೊಂಬುದು" (ಮಂಗರಾ. ೧೪೧-೧೪); "ಸೂರ್ಯಂ ತಾಪಸಭೋಗಭೂಮಿಭವರುಂ ಸಾವಾಸಿಯುಂ ಸ್ವಪ್ನಪರಿಂತಾಯರ್ಜಿಸ್ಸುಂ" (ನಾನಾರ. ೧೦೭); ಅಜ್ಜಂ = ಸಾವಾಸಿ (ಪೊಸವಾಸಿ) (ಶಮದ. ಪಾ. ೨). ೫. ಬ್ರಾಹ್ಮಣರಲ್ಲಿ ಒಂದು ಒಳಪಂಗಡ ಮತ್ತು ಆ ಪಂಗಡಕ್ಕೆ ಸೇರಿದ ವ್ಯಕ್ತಿ; ಸಾವಾಸಿಬ್ರಾಹ್ಮಣ : ಗುತ್ತಿಯಧಿಕಾರಿ ಪೆರ್ಗ್ಗಡೆ ಹಂವಣಯ್ಯಂಗಳು ಶ್ರೀ ಬಿಲ್ಲವರಸರು ಪಾಳೆಯದ ಸಾ[ವಾ]ಸಿ ಜನಾರ್ದ್ದನಭಟ್ಟನಾಯಕನುಂ (ಸೌಶಾ. VIII, ೩೭೨-೧೨; 1101); ಗುತ್ತಿಯ ಪಣ್ಣನಾಯಕಂ ಸಂಬುದೇವನುಂ ಪಾಳೆಯದ ಸಾವಾಸಿ ಅನಂತಭಟ್ಟನುಂ . . . ಮಾದಿರಾಜಂಗೆ ಬಿಟ್ಟ ಕೆಯಿ (ಸೌಶಾ. IX-i, ೨೩೨-೧೨; 1135); ಈ 'ಸಾವಾಸಿ' ಬ್ರಾಹ್ಮಣರು ಕರ್ನಾಟಕದಲ್ಲಿ ಬಂದು ನೆಲಸಿ ಲೌಕಿಕಕಾರ್ಯಗಳಲ್ಲಿ ತೊಡಗಿದ್ದರೆಂದು . . . ತಿಳಿದುಬರುವುದು (ಕರ್ನಾಸಂ. ೨೯೫). **ಸವ್ಯಾಶೆ** : ೫. ಧಾರವಾಡಜಿಲ್ಲೆಯಲ್ಲಿ 'ಸವ್ಯಾಶೆ' ಎಂಬ ಬ್ರಾಹ್ಮಣರು ಇರುವರೆಂದೂ ಶ್ರೀರಾಮನು ವನವಾಸಕ್ಕೆ ಹೋದಾಗ ಅವನ ಸಹವಾಸದಲ್ಲಿದ್ದ 'ಸಹವಾಸಿ'ಎಂಬವನು ತಮ್ಮ ಮೂಲಪುರುಷನೆಂದು ಈ ಜನರ ಅಭಿಪ್ರಾಯವಿದೆಯೆಂದೂ . . . ಗೆಜೆಟಿಯರಕಾರರು ಹೇಳುತ್ತಾರೆ (ಕರ್ನಾಸು. ೫೨). **ಸವ್ವಾಶೆ** : ೫. ಸವ್ವಾಶೆ ಬ್ರಾಹ್ಮಣರು - ಇವರು ಧಾರವಾಡಜಿಲ್ಲೆಯಲ್ಲಿ ಮಾತ್ರ ಇದ್ದಾರೆ. ರಾಮನು ವನವಾಸಕ್ಕೆ ಹೋದಾಗ ಆತನ ಜತೆಯಲ್ಲಿದ್ದ "ಸಹವಾಸಿ" ಯೆಂಬುವನು ತಮ್ಮ ಜಾತಿಯ ಮೂಲಸ್ಥಾಪಕನೆಂದು ಇವರು ಹೇಳುವರು (ಕಭಾಗ. ೮೨).

ಸಾವಾಸಿಗರ ದಂಡ = ಸಾವಾಸಿಗಳಲ್ಲಿ ಮುಖ್ಯನಾದವನು : ರಾಯಪಾಳ ಸಾವಾಸಿಗರ ದಂಡ ಶ್ರೀಮನ್ಮಾಳ್ಪಭು ಘಟಸರ್ಪ ಹಡವಳ ಕಾಮಯ್ಯ (ಕರ್ನಾಸಂ. ೨೯೫). [< ಸಂ. ಸಹವಾಸಿನ್./ ಮರಾ. ಸವಾಶಾ, ಸವಾಶೇ; ಗುಜ. ಸವಾಸೋ]

ಸಾವಿ 'ಸಾಮಿ$_1$' ನೋ.

ಸಾವಿತ್ರ (ಗು). ೧. ಸೂರ್ಯನಿಗೆ ಸಂಬಂಧಿಸಿದ : ನಿನ್ನ ಸಾವಿತ್ರಮಂತ್ರವನ್ನು ಅನುಷ್ಠಾನಮಾಡಿದರೆ ಅದು ಗಾಯತ್ರವಾಗುವುದು (ಗುಹಾಗ. ೨೮೬). ೨. ಸೂರ್ಯವಂಶದ. (ನಾ). ೩. ಸೂರ್ಯ; ಭಾನು. ೪. ಶಿವ; ಈಶ್ವರ. [ಸಂ.]

ಸಾವಿತ್ರಿ (ನಾ). ೧. ಸೂರ್ಯನ ಕಿರಣ,— ರಶ್ಮಿ. ೨. ಋಗ್ವೇದದಲ್ಲಿ ಸೂರ್ಯನನ್ನು ಕುರಿತು ಇರುವ ಪ್ರಸಿದ್ಧವಾದ ಒಂದು ಮಂತ್ರ; ಗಾಯತ್ರೀಮಂತ್ರ : "ಸಾವಿತ್ರಿ = ೧. ವೇದಮಂತ್ರ" (ಗಂಗಾಮ. ೬೨೮). ೩. ಸವಿತೃದೇವತೆಯ ಮಗಳು; ಸೂರ್ಯನ ಪುತ್ರಿ: ಮಿತಾಹಾರನೂ ಜಿತೇಂದ್ರಿಯನೂ ಆಗಿದ್ದುಕೊಂಡು ನಿತ್ಯವೂ ಸಾವಿತ್ರಿಯನ್ನುದ್ದೇಶಿಸಿ ಹತ್ತುಸಾವಿರ ಹೋಮವನ್ನು ಮಾಡುತ್ತಿದ್ದನು (ಪಚಭಾ. ೧೬೭). ೪. ಬ್ರಹ್ಮನ ಒಬ್ಬಳು ಹೆಂಡತಿಯ ಹೆಸರು. ೫. ಪಾರ್ವತಿಯ ಹೆಸರುಗಳಲ್ಲಿ ಒಂದು : ಸಾಮವೇದಮಯವಾಗಿ ತಮೋಗುಣಾಧಿಕ್ಯದಿಂ ರುದ್ರಾಧಿದೇವತೆಯೆನಿಸಿ ಸಾವಿತ್ರಿ ಮಹೇಶ್ವರಿಯೆಂಬ ಪೆಸರ್ವಡೆದು (ವಿವೇಕ. ೧೨೦); ತಾಯೆ ಪಾರ್ವತಿ ಪರಮಕಲ್ಯಾಣಿ ಶಂಕರಪ್ರೀಯೆ ಸರ್ವೇಶ್ವರಿ ಜಗನ್ಮಾತೆ ಸನ್ನುತಚ್ಛಾಯೆ ಸಾವಿತ್ರಿ . . . ಕಾಳಿ ಕಾತ್ಯಾಯನಿ (ಜೈಮಿಭಾ. ೩೧-೭೨); ಪರಮ ಪವಿತ್ರತೆಯಿದ್ದ ಬಳಿಯೊಳಾ . . . ಸರಸತಿ ಸಾವಿತ್ರಿಗಾಯತ್ರಿಯರುಮಾ ಪರಿಸರದೊಳು ಬಳಸಿಹರು (ಹದಿಬ. ೨-೧೭). ೬. ಅಶ್ವಪತಿರಾಜನ ಮಗಳು; ಸತ್ಯವಾನನ ಹೆಂಡತಿ : ಸಾವಿತ್ರಿಯ ವರದಿಂದ ಹುಟ್ಟಿದವಳಾದ್ದರಿಂದ ಅವಳಿಗೆ ಸಾವಿತ್ರಿಯೆಂದೇ ಹೆಸರಿಟ್ಟರು (ಪಚಭಾ. ೧೭೭); ಸತ್ಯವಾನನ ರೂಪ ಗುಣಗಳನ್ನು ಸಾವಿತ್ರಿ ಮೆಚ್ಚಿದಳು (ಭಾಹಬ್ಬ. ೮೯). ೭. ಒಂದು ಸಸ್ಯದ ಹೆಸರು; ದೇವಪತ್ರ ; ಗಾಂಧಾರಿ: "ದೇವಪತ್ರಂ ಪಂಚಪತ್ರೆ ಗಾಂಧಾರಿಯದು ಸಾವಿತ್ರಿ[ಪಾಠಾಂ. ತ್ರಿ]ಯಕ್ಕು" (ಮಂಗರಾ. ೪೦-೩೦). ೮. ಮದುವೆಯಾದ ಸ್ತ್ರೀ ; ವಿವಾಹಿತೆ: "ಸಾವಿತ್ರೀ = ೧. ವೇದಮಂತ್ರ, ೨. ಮದುವೆಯಾದ ಸ್ತ್ರೀಯಳು" (ಗಂಗಾಮ. ೬೨೮).

[ಸಂ. ಸಾವಿತ್ರೀ]

ಸಾವಿತ್ರೀವ್ರತ (ನಾ). ಜ್ಯೇಷ್ಠಮಾಸದಲ್ಲಿ ಸ್ತ್ರೀಯರು ತಮ್ಮ ಸುಮಂಗಲಿತನದ ಶ್ರೇಯಸ್ಸಿಗಾಗಿ ಮೂರುದಿನ ಮಾಡುವ ಒಂದು ವ್ರತ; ಸಾವಿತ್ರೀದೇವಿ ಪೂಜೆಯ ವ್ರತ: ಮುಂಬಯಿ ಮೊದಲಾದ ಮಹಾನಗರಗಳಲ್ಲಿ . . . ಆಲದ ಹರಯನ್ನು ಎಲ್ಲಿಂದಲಾದರೂ ತರಿಸಿ ಅದನ್ನು ಒಂದೆಡೆಯಲ್ಲಿ ಊರಿ ಸುವಾಸಿನಿಯರೆಲ್ಲ ಒಟ್ಟಾಗಿ ಸಾವಿತ್ರೀವ್ರತಾಚರಣೆ ಮಾಡುತ್ತಾರೆ (ಭಾಜ್ಞು. ೧೧). 'ವಟಸಾವಿತ್ರೀವ್ರತ' ಪರಾ. [ಸಂ.]

ಸಾವಿನಿಮ್ಮಡಿ (ನಾ). ಒಬ್ಬಾಕೆಯ ಹೆಸರು: ಸ್ವಸ್ತಿಶ್ರೀ ನಾಗಾರ್ಜುನಯ್ಯನನ್ ವಿಜ್ಜೆಯಡೆಯ ಮಗಳ್ ಸಾವಿನಿಮ್ಮಡಿ ಸರ್ವಶಾಸ್ತ್ರಪ್ರಸಿದ್ಧಿ ಶ್ರೀ (ಎಕ. X, ಬೌಂಗ್. ೬೫-೨: ಸು. 900). [ಸಾವಿ$_1$ (< ಸಾಮಿ$_1$) + ಇಮ್ಮಡಿ (< ಇರ್ಮಡಿ)]

ಸಾವಿಯಬ್ಬೆ 'ಸಾಮಿಯಬ್ಬೆ' ನೋ.

ಸಾವಿರ 'ಸಾಸಿರ' ನೋ.

ಸಾವಿರಾಲಿ (ನಾ). ಸಾವಿರ ಕಣ್ಣುಗಳು; ಸಹಸ್ರನೇತ್ರ: ಸಾವ ಹರಯವ ಎನುತ ಗಗನದ ದೇವತತಿ ಮಱುಗಿತ್ತು ಶಕ್ರನ ಸಾವಿರಾಲಿಯೊಳೊಱತೆ ಮಸಗಿತು ಪೌತ್ರಶೋಕದಲಿ (ಕುಮಾರವ್ಯಾ. ೬-೬೬). [ಸಾವಿರ (< ಸಾಸಿರ) + ಆಲಿ$_2$]

ಸಾವು, ಸಾಹು$_2$ (ನಾ). ೧. ಮರಣ; ಮೃತ್ಯು: "ನಿಧನಂ, ನಾಶಃ, ಮೃತ್ಯುಃ, ಮರಣಂ . . . ದೀರ್ಘನಿದ್ರಾ – ಈ ೧೨ ಸಾವು" (ಹಲಾಯು. ೧೦೩-೬); ರಕ್ಕಸಮಣಿಯ ಕೋಣೆಯ ಗಂಗನ ಕಾಳೆಗದೊಳ್ ತನ್ನ ಸಾವಂ ನಿಶ್ಚಯ್ಸಿ ಕಾಳೆಗಕಿಡೆ ರಕ್ಕಸಮಣಿಯ ಕಟಿಪಿ ತನ್ನ ಬಲಮುಂ ಮಾರ್ಬಲಮುಂ ತನ್ನನೆ ಪೊಗಱೆ (ಎಕ. II, ೧೩೮-೪; 940); ಘಟೋತ್ಕಚನಿಳಾವಂತನ ಸಾವಂ ಕಂಡು ಸೈರಿಸದಳಂಭೂಪನನೆಬ್ಬುವುದುಂ (ಪಂಪಭಾ. ೧೧-೭ ವ); ಮರಳರೆ ಕೈಕೆಯರು ಮತ್ಸ್ಯರು ಬಿರುದ ಸೃಂಜಯರಕಟಕಟ ಖೊಳರು ವೃಥಾ ನಿಮಗೇಕೆ ಸಾವೆನುತಿರ್ದನಾ ದ್ರೋಣ (ಕುಮಾರವ್ಯಾ. ೧೭-೩೨); ದೊಂಬರ ಸಾವು ಗಣಿಯ ಮೇಲೆ ಬಿಲ್ಲವರ ಸಾವು ಮರದ ಮೇಲೆ (ಗಾದೆ). ೨. ಹೆಣ; ಶವ: "ಶುಕದೊಳಖಿಳಮೃಗದೊಳು ಸಾವಿನೊಳು ಶಬಾಖ್ಯಂ" (ಪಂಗರಾ. ೧೫೨-೫೭). **ಸಾಹು$_2$**: ೧. ತನಗೆ ಸಾಹು ತಪ್ಪದು (ನಿಘಾಗ. ೩-೯-೨). ☞ ಇದು ಪ್ರಾಸಕ್ಕಾಗಿ ಮಾಡಿಕೊಂಡಿರುವ ರೂಪ.

ಸಾವಿಗೆ ಹೋಗು = ಸತ್ತವರ ಪಾರ್ಥಿವಶರೀರವನ್ನು ನೋಡಿ ಅಂತ್ಯಕ್ರಿಯೆಗಳಲ್ಲಿ ಭಾಗವಹಿಸಲು ಹೋಗು: ಯಾರಾದರೂ ಬಂಧುಗಳು ಸತ್ತಾಗ, ಅವರ ಸಾವಿಗೆ ಹೋಗುವುದು ಸಾಮಾನ್ಯವಾದ ಪದ್ಧತಿ (ರೂಢಿ). **ಸಾವುನೋವು** = ಮರಣ ಮತ್ತು ಸಂಕಟ, — ತೊಂದರೆ: ವಾಹನಗಳ ಅಪಘಾತಗಳಿಂದ ಅನೇಕ ಸಾವುನೋವುಗಳು ಉಂಟಾಗುತ್ತವೆ (ರೂಢಿ). **ಸಾವುಸೂತಕ** = ೧. ಯಾರಾದರೂ ಸತ್ತಾಗ (ದಾಯಾದಿಗಳಿಗೆ) ಉಂಟಾಗುವ ಮೈಲಿಗೆ; ಸಾವಿನ ಕಾರಣದಿಂದ ಬರುವ ಸೂತಕ. ೨. ಅಂತ್ಯಕ್ರಿಯೆ ಮತ್ತು ಸೂತಕ ತೆಗೆಯುವ ವಿಧಿ: ಬೈದಿತಿಯು ಲೋಕಯಾತ್ರೆಯನ್ನು ಮುಗಿಸಿದಳು. ಅನಂತರ ಜಾತಿವಿಧಿಗೆ ಅನುಸಾರವಾಗಿ ನಡೆಯತಕ್ಕ ಸಾವು ಸೂತಕಗಳು ನಡೆದವು (ಕಗಪ್ರ. ೨-೬೬).

[ದೇ. ‖ತಮಿ. ಚಾ, ಚಾವು; ಕೊಡ. ತೆಲು. ಚಾವು]

ಸಾವುಕಾರ 'ಸಾವಕಾರ' ನೋ.

ಸಾವುಕಾರಿ 'ಸಾವಕಾರಿ' ನೋ.

ಸಾವುಗಾಣ್ (ಕ್ರಿ). ಸಾಯು; ಮರಣ ಹೊಂದು: ಕಂದಿದಳ್ ಕುಂದಿದಳ್ ಕೋಟಲೆಗೊಂಡಳ್ ಸಾವುಗಂಡಳ್ . . . ವಿರಹದುರಿಯ ಸಂತಾಪವಿಭ್ರಾಂತಿಯಿಂದಂ (ಕಾವ್ಯಸಾ. ೫೯೨). [ಸಾವು + ಕಾಣ್]

ಸಾವೆ$_1$, ಸಾಮೆ (ನಾ). ೧. ಒಂದು ಬಗೆಯ ತೃಣಧಾನ್ಯ: "ಶ್ಯಾಮಾಕಃ, ಶ್ಯಾಮಕಃ – ಈ ೨ ಸಾವೆ" (ಹಲಾಯು. ೯೬-೪೩೦); ತೆಂಗಿನ ಮರನಂ ಕಡಿದು ಸಾವೆಗೆ ಬೇಲಿಯನಿಕ್ಕುವಂತೆ (ಧರ್ಮಾಮೃ. ೧೩-೧೪೦); ಅನುನಾಸಿಕ ವಕಾರಕ್ಕೆ — ಸೇವಂ, ಸೋವೆ, ಸಾವೆ . . . ಸೇವಗೆ (ತಮಿಪ. ೧೬ ಪ್ರಯೋ); ಕುಡುವುದು ಪಥ್ಯಂಗಳೊಳಂ ತೊಡಗೂಡಿದ ಸಾವೆಯೋಗರಂ ಶಕ್ರಮುಮಂ (ಖಮಪ. ೧೨-೭). **ಸಾಮೆ**: ೧. ಕೆಲರು ಗೋಧಿಯ ಸಾಮೆಯನು ಕೆಲಕೆಲರು . . . ಪತಿಕರಿಸಿರಲು (ರಾಮಚ. ೧೧-೩೩); ಸಾಮೆ, ನವಣೆ, ಸಜ್ಜೆ, ಹಾರಕ – ಇವು ಹೆಚ್ಚು ಆದಾಯಕರವಾದ ಪೈರುಗಳಲ್ಲವಾದ್ದರಿಂದ ಇವಕ್ಕೆ ಹೆಚ್ಚುವ್ಯವಸಾಯ ಮಾಡಿ ಫಲವಿಲ್ಲ (ವ್ಯವಮ. ೪೪). ೨. ಒಂದು ಬಗೆಯ ಹುಲ್ಲು: "ಅಪುತ್ರವಲ್ಲೀ—ಸಾಮೆ" (ಓಷಧಿ. ೬); ಸಾಮೆ, ಸಾಮೆಹುಲ್ಲು (ಮೃಡಿಗಿ. ೫೯-೧೧೮೯). [< ಸಂ. ಶ್ಯಾಮ]

ಸಾವೆ$_2$ (ನಾ). ಒಂದು ಬಗೆಯ ಗಿಡ ಮತ್ತು ಅದರ ಗಡ್ಡೆ: ಸಾವೆ ತಿನ್ನುವವನ ಮನೆಯಲ್ಲಿ ಸಜ್ಜಿಗೆ ಹುಡುಕಿದ ಹಾಗೆ (ಗಾದೆ). 'ಸಾವೆಗೆಡ್ಡೆ' ಪರಾ.

[< ಸಂ. ಶ್ಯಾಮಾ]

ಸಾವೆಗೆಡ್ಡೆ (ನಾ). ತರಕಾರಿಯಾಗಿ ಬಳಸುವ ಒಂದು ಬಗೆಯ ಗಡ್ಡೆ; ಸಾಮೆಗೆಡ್ಡೆ: ಕೆಸವಿನಗೆಡ್ಡೆ, ಸಾವೆಗೆಡ್ಡೆ (ಮೃಡಿಗಿ. ೨೪-೪೩೬).

[ಸಾವೆ$_2$ + ಗೆಡ್ಡೆ (< ಗಡ್ಡೆ)]

ಸಾವೆಯಕ್ಕಿ, ಸಾಮೆಯಕ್ಕಿ (ನಾ). ಸಾವೆಧಾನ್ಯದ ಕಾಳು: ಬದನೆಯ ಪಳೆದೆಯ, ಬುಡುಮೆಯ ಪಲ್ಯ, ಸಾವೆಯಕ್ಕಿಯನ್ನ (ರಾಮನ. ೨೬). **ಸಾಮೆಯಕ್ಕಿ**: ಕಗ್ಗೆಚಕ್ಕಿಯನ್ನು ಹುಸುವಿನ ಮಜ್ಜಿಗೆಯೊಡನೆ ಕುಟ್ಟಿ ಆ ಮಜ್ಜಿಗೆಯನ್ನು ಕುದಿಸಿ ಅದರಲ್ಲಿ ಸಾಮೆಯಕ್ಕಿಯನ್ನು ಬೇಯಿಸಿ ಒಂದು ದಿನ ಮಾಡಿ ತಿನ್ನಬೇಕು (ಸಚಿವ. ೪೯೩ ಪಠ); ಸಾಮೆಯಕ್ಕೀ ಅನ್ನ ಸಪ್ಪೆ ಬೇಳೇ ಉದಕ ಉಂಡು ನೋಡಯ್ಯ ಕಡುರುಚಿಯಾ (ಹಳ್ಳಿಯ. ೧೩೯). [ಸಾವೆ$_1$ + ಅಕ್ಕಿ$_1$]

ಸಾವೇರಿ$_1$ (ನಾ). [ಸಂಗೀತ] ಒಂದು ರಾಗದ ಹೆಸರು: ಬಳಕ ಸಮಸ್ತ ರಾಗಂಗಳೊಳಗೆ ರಾಮಕ್ರಿಯೆ . . . ಸಾವೇರಿ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯಮಾಗಿ ಬಳಕೆಯಿಂದಧುನಾತನರಲ್ಲಿ ಪ್ರಸಿದ್ಧಿಗೊಂಡಿಪ್ಪವು (ವಿವೇಕ. ೨೩೪); ಲಲಿತಸಾಳಂಗ ಸಾವೇರಿ ಗುಜ್ಜರಿಗೌಳ ಫಲಮಂಜರಿಗಳೆಂಬ ವಿವಿಧರಾಗಂಗಳಂ ಬಳಸಿ ಪಾಡಿಸಿದಂ (ಚಿಮಿಧಾ. ೨೧-೫೬); ಸಾವೇರಿ ೧೫ನೇ ಮೇಳಕರ್ತ ಮಾಯಾಮಾಳವಗೌಳದಲ್ಲಿ ಜನ್ಯ. ಉಪಾಂಗರಾಗ, ಪ್ರಸಿದ್ಧರಾಗ (ಸಂಗೀಚಂ. ೧೫೩).

[ಸಂ. ಸಾವೇರೀ]

ಸಾವೇರಿ$_2$ (ನಾ). ಒಂದು ಬಗೆಯ ಮರ: ಚಾರಿ ಮಂಗಾರಿಯಿಂ ಚಿಲ್ಲು ಬೆಲ್ಲವತ ಬಂದಾರಿ ಸಾವೇರಿಯಿಂ ತಡಸು ಕೊಡಸೀಜೆ ಸಿರಿವಾರ ಮತ್ತಾರಿಯಿಂದುಗಿನಿ ಬಗಿನಿ ಪಚಾರಿ ಮಂದಾರಿ ದೇವದಾರಿ . . . ಎಸೆದವು (ನಂದಿಮಾ. ೧೩-೧೩). [?]

ಸಾಶಂಕ (ಗು). ೧. ಅಳುಕು, ಭಯ, ಅನುಮಾನಗಳಿಂದ ಕೂಡಿದ; ಶಂಕೆಗೊಂಡ. (ನಾ). ೨. ಅಳುಕು, ಭಯ, ಸಂದೇಹಗಳಿಂದ ಕೂಡಿದುದು; ಶಂಕೆಯಿಂದ ಕೂಡಿದುದು. ೩. ಆತಂಕ, ಭಯ, ಸಂದೇಹಗಳಿಂದ ಕೂಡಿದ ವ್ಯಕ್ತಿ; ಶಂಕೆಯಿಂದ ಕೂಡಿದವನು: ಇವರೆಲ್ಲರನ್ನೂ ಈ ಸ್ಥಿತಿಯಲ್ಲಿ ಬಿಟ್ಟು ತಾನು ಹೊರಬೀಳುವದು ಯೋಗ್ಯವೇ ಎಂದು ಸಾಶಂಕನಾದ (ಹೂಸಕ್ಷಿ. ೨೦೭); ಅವನ ಸರ್ವಪ್ರಿಯತೆಗಾಗಿ ಅವನ ವಿಷಯದಲ್ಲಿ ಖಾನಸಾಹೇಬ ಸಾಶಂಕನಾಗಿದ್ದ (ಪ್ರೇಮಾತ್ರ. ೬೫). [ಸಂ.]

ಸಾಶನ (ಗು). ೧. ಆಹಾರವನ್ನು ಸ್ವೀಕರಿಸುವ; ಭೋಜನವನ್ನು ಮಾಡುವ. (ನಾ). ೨. ಆಹಾರವನ್ನು ಸ್ವೀಕರಿಸುವವನು; ಭೋಜನ ಮುಂತಾದುವನ್ನು ಮಾಡುವವನು: ಸಾಶನಾಹ್ವಯ ಸ್ತ್ರೀಪುರುಷರೊಳು ವಾಸವಾಗಿಹನೆಂದರಿದು ವಿಶ್ವಾಸಪೂರ್ವಕ ಭಜಿಸಿ ತೋಷಿಸು ಸ್ವಾವರೋತ್ತಮರ (ಹಸಾರ. ೨೪-೨೯). [ಸಂ.]

ಸಾಶ್ರುಪಾತ (ಗು). ಕಣ್ಣೀರಿಡುವ; ಗೋಳಾಡುವ: ಸ್ಮರವಿಶಿಖನಿಪಂಗಂ ಸಾಶ್ರುಪಾತಾಂತರಂಗಂ ಹರವಿಚಳದಪಾಂಗಂ ಮ್ಲಾನಮಾಯ್ತಾ ರಥಾಂಗಂ (ಚಂದ್ರಪ್ರ. ೮-೫). [ಸಂ.]

ಸಾಷಾಢ (ಗು). ೧. ಪೂರ್ವಾಷಾಢ ಮತ್ತು ಉತ್ತರಾಷಾಢ ನಕ್ಷತ್ರಗಳಿಂದ ಕೂಡಿದ. ೨. (ಋಷಿಗಳು ಹಿಡಿಯತಕ್ಕ) ಮುತ್ತುಗದ ದಂಡದಿಂದ ಕೂಡಿದ. ೧, ೨: ವಳಯಿಭೂತ ತಮಸ್ತಮಾಳಗಹನಂ ಸಾಷಾಢ ಸಪ್ತರ್ಷಿಸಂಕುಳಸಂಪೂತ ವರುಂಧತೀಸ್ತುತಿನುತಂ ಮೂಲಾನ್ವಿತಂ ವ್ಯೋಮಮಂಡಳಮಾಯ್ತಾಶ್ರಮಮೆಂದು ಬಂದೆಳಸಿದಂ ವೈರಾಗದಿಂ ದೌತವಲ್ಕಲಶೋಭಾಂಬರನಂದು ಮಿತ್ರವಿರಹೋದ್ವೇಗಾತುರಂ ಚಂದ್ರಮಂ (ಕಾದಂಪೂ. ೨೦೩). [ಸಂ.]

ಸಾಷ್ಟಾಂಗ (ನಾ). ೧. ಎದೆ, ಹಣೆ, ಎರಡು ಕೈಗಳು, ಎರಡು ಮಂಡಿಗಳು

ಮತ್ತು ಎರಡು ಪಾದಗಳು ಹೀಗೆ ಒಟ್ಟು ದೇಹದ ಎಂಟು ಅಂಗಗಳಿಂದ ಕೂಡಿದುದು, – ಅವಯವಗಳಿಂದ ಕೂಡಿದುದು: ಆತನಂ ರಾಮಸ್ವಾಮಿಯಲ್ಲಿಗುಯ್ಯುದುಮಾತಂ ಸಾಷ್ಟಾಂಗಪ್ರಣತನಾಗಿ (ಪಂರಾಮಾ. ೧೪-೪೬ ವ); ಭಯಭಕ್ತಿಯಿಂ ಬಿಲ್ಲಿದನೊಡಲನಿಳೆಯೊಳಾ ಬಭ್ರುವಾಹನಂ ನೀಡಿ ಸಾಷ್ಟಾಂಗದಿಂದ (ಕೃಮಿಭಾ. ೧೭-೪೭); ನೆಲೆ ನೋಡಿ ಸಾಷ್ಟಾಂಗದಿಂದಲಷ್ಟಾಂಗನ ಸುಚರಣದೊಳ್ ಮೈಯಿಕ್ಕಿ (ನಂದಿಮಾ. ೧೪-೩೮). ೨. ದೇಹದ ಎಂಟು ಅಂಗಗಳನ್ನು ನೆಲಕ್ಕೆ ಸೋಕಿಸಿ ಮಾಡುವ ನಮಸ್ಕಾರ : ನೀತಿಯ ಕಂಡಲ್ಲಿಗ ಸಾಷ್ಟಾಂಗವ ನೀ ತಳುವದೆ ಮಾಡ್ಯೆ (ಕವಪು ೪೯); ಸಾಷ್ಟಾಂಗ ಮಾಡಿದರೂ ಅಟ್ಟುಂಬೋದು ಹೋಗಲಿಲ್ಲ (ಗಾದ).

ಸಾಷ್ಟಾಂಗ ಬೀಳು = ದೇಹದ ಎಂಟು ಅಂಗಗಳನ್ನು ನೆಲಕ್ಕೆ ಸೋಕಿಸಿ ನಮಸ್ಕಾರಮಾಡು ,— ಅಡ್ಡಬೀಳು: ಇನ್ನೊಂದು ಸಲ ಬಂದು ಯಜಮಾನರಿಗೆ ಸಾಷ್ಟಾಂಗಬೀಳುತ್ತೇನೆ (ಹಸುಹೂ. ೩೭೯). [ಸಂ.]

ಸಾಷ್ಟಾಂಗತ (ನಾ). = ಸಾಷ್ಟಾಂಗ ೨: ಆ ತಾರೆ ನಡುವಣ ರೋಹಿಣಿಯಂತೆ ವಿತತದಿಂದೊಪ್ಪಿರಲು ಸಾಷ್ಟಾಂಗತವಗ್ಗೆದಗ್ರಜನ ವಿಳಂಬುತಲಿ ಕೊಡಿಸಿದಳೊಂದು ಗದ್ದುಗೆ ಬಸವ ಕುಳಿತಲ್ಲಿ (ಬಿಜ್ಜಳ. ೧೩-೧೨). [< ಸಾಷ್ಟಾಂಗ]

ಸಾಷ್ಟಾಂಗನಮಸ್ಕಾರ (ನಾ).= ಸಾಷ್ಟಾಂಗ ೨ : ನೀವು ಇದನ್ನು ಸ್ವೀಕರಿಸಿ ನನ್ನನ್ನು ನರಕದಿಂದ ಮೇಲೆತ್ತಬೇಕು ಎಂದು ಬೇಡಿಕೊಂಡು ಮುದುಕನಿಗೆ ಸಾಷ್ಟಾಂಗನಮಸ್ಕಾರ ಹಾಕಿದನು (ಕಂಬಾಮಾ. ೨೧). [ಸಂ.]

ಸಾಷ್ಟಾಂಗಪ್ರಣಾಮ (ನಾ). = ಸಾಷ್ಟಾಂಗ ೨ : ಮಹೀಸುರಕುಲನುಮಾಪರಮೇಶ್ವರರಿಗೊಲವಲರೆ ಸಾಷ್ಟಾಂಗಪ್ರಣಾಮವನಿಕ್ಕಿ ಕೈಮುಗಿದು (ಬಸಪು. ೫೦-೧೨); ತನುವನೀಡಾಡಿ ಸಾಷ್ಟಾಂಗಪ್ರಣಾಮದಿಂ . . . ಕಣ್ಣಣಿಯದಚ್ಯುತನಂ ನಿರೀಕ್ಷಿಸಿದನು (ಕೃಮಿಭಾ. ೧೩-೨೫). [ಸಂ.]

ಸಾಷ್ಟಾಂಗಮೆಱಗು, ಸಾಷ್ಟಾಂಗವೆರಗು, ಸಾಷ್ಟಾಂಗವೆಱಗು (ಕ್ರಿ). ದೇಹದ ಎಂಟು ಅಂಗಗಳನ್ನು ನೆಲಕ್ಕೆ ಸೋಕಿಸಿ ನಮಸ್ಕಾರಮಾಡು: ತನ್ನುನೀಶ್ವರನ ಶ್ರೀಪಾದಪದ್ಮಕ್ಕೆ ಸಾಷ್ಟಾಂಗಮೆಱಗಿ ಪೊಡವಟ್ಟು (ಬಿಜ್ಜಳ. ೧೨-೪ ವ); ಸಾಷ್ಟಾಂಗಮೆಱಗಿ ಶಂಭುಗೆ ತುಷ್ಟಿಯನೆಯ್ದಿಸುತೆ ಕರಯುಗಳಮಂ ಮುಗಿಯುತೆ (ಹಾಲಾಸ್ಯ. ೨-೧-೩೬). **ಸಾಷ್ಟಾಂಗವೆರಗು** : ಹಣೆಯ ಪಾದಕೆ ಹಚ್ಚಿ ನಮಿಸುವೆವು ಸಾಷ್ಟಾಂಗವೆರಗುವವು (ನಲಮು. ೩೬-೫); ಇಬ್ಬರೂ ತಲೆತುಂಬ ಹೂ ಮುಡಿದು . . . ಮತ್ತೊಮ್ಮೆ ಶಾರದೆಗೆ ಸಾಷ್ಟಾಂಗವೆರಗಿದರು (ಶಾಂತಲಾ. ೫೮). **ಸಾಷ್ಟಾಂಗವೆಱಗು** : ಪೊಂಗಿ ದಾಸಿಯು ದುಗ್ಗಳೆಯು ಸಾಷ್ಟಾಂಗವೆಱಗಿಯೆ ನಮಿಸಿ ದಾಸಯ್ಯಂಗಳಡಿಗಳ ಮೇಲೆ ಇಬ್ಬರು ಕೆಡೆದು ಬಿಡದಿರಲು (ಬಸಪು. ೨೩-೩೫); ಶ್ರೀವಾದುತ್ಸಹದೇವನುತ . . . ಪ್ರೇಮದಿಂ ಸಾಷ್ಟಾಂಗವೆಱಗಿಯೆ ಮೂಳೆ ಬಿನ್ನಹವ (ಪರಿಸಾ. ೧೬). [ಸಾಷ್ಟಾಂಗ + ಎಱಗು]

ಸಾಷ್ಟಾಂಗವೆರಗು 'ಸಾಷ್ಟಾಂಗಮೆಱಗು' ನೋ.

ಸಾಷ್ಟಾಂಗವೆಱಗು 'ಸಾಷ್ಟಾಂಗಮೆಱಗು' ನೋ.

ಸಾಸ$_1$ (ನಾ). ಸಾಹಸ; ಪರಾಕ್ರಮ; ಶೌರ್ಯ: "ಸಾಸಂ ಸಾಹಸಂ" (ಕರ್ನಾನಿ. ೭೧); ಜಯಸಿಂಘದೇವನರಪಂ . . . ನೆಗಲ್ದೀ ದಾಸಂ ಕರಂ ಸಾಸದೊಳ್ ಪಡೆದುದನತ್ತ ಧೋಗತಿಗೆXಗ್ಗವಳಂತಿರೆ ಪೂಟ್ಟು ಬಯ್ತು (ಶಾಸಾ. XI-i, ೭೫-೩೭; 1042); ಗಂಡಿನ ಮಾತುಗಳ್ ಪಿರಿಯವಲ್ಲದೆ ಮಾಡಿದ ಸಾಸಮುಂಟೆ ದೋರ್ದಂಡಸಹಸ್ರಮಂ . . . ಹೈಹಯನಂ ಸುರದ್ವಿಪಂ (ಜಗವಿ. ೧೪-೮೨); ಮೊಸಳೆಯ ಕೂಡೆ ಸಾಸದಿಂ ಪರಿರಚಿಸಿ ಯುದ್ಧಮಂ (ಸೌಂದಪು. ೧೭-೭೫); ಎನ್ನ ಸಾಸಕೆ ಜಗವು ಅಡಿಯಾಳುತನ ಮಾಡಿ ಮನ್ನಣೆಯ ತೋರುವುದು ತಾನೆಂದು ಬಗೆದೆ (ಎಱೀಗೀ. ೧೦-೯). 'ಸಾಯಸ$_1$' ಪರಾ.

[< ಸಂ. ಸಾಹಸ]

ಸಾಸ$_2$, ಸೋಸ, ಸ್ವಾಸ (ನಾ). ಶ್ವಾಸ; ಉಸಿರು: "ಸ್ವಾ[ಪಾಠಾಂ. ಶ್ವಾ]ಸಂ ಸಾಸಮೆನಲ್" (ಕರ್ನಾನಿ. ೭೧); ಸಮಾನಾನಿಲಂ . . . ಅನ್ನರಸಮಂ ಲೇಸಾಗಿ ಬಹುರೋಮನಾಳಕ್ಕೆ ಹಂಚಿಕ್ಕಿ ಸಾಸದಿಂದಿಹುದಿದು (ವೀಶಪು. ೪-೨೦-೨೩). **ಸೋಸ** : ವಾಸನಾವಾಸನದ ಪರಿಮಳ ಸೋಸ [ಪಾಠಾಂ. ಪರಿಮಳೋಶ್ವಾಸ] ನಾಸಿಕವಂ ನೆನೆವನಳಯಾಸೆಯಲಿ ನೆನೆವಂ ಸಮುಜ್ವಲದಂತಪಂತಿಯನು (ಬಸಪು. ೪೨-೨೬); ನಿರೂಢಿಯ ಸೋಸಮಯ ಗದುಗದಿತ ಕಂಠದ ತಳಿತಭಂಗದ ತಿರುಗುವಾಲಿಗಳ . . . ಕೆಲಕೆ ಜಾಱಿದ ಗದೆಯ ಗರುವಾಯಳಿದ ಭೀಮನ ಕಂದನಾ ಭೂಪ (ಕುವಾಪ. ೧೩-೩೮).

ಸ್ವಾಸ : 'ಮೇಲ್ಸ್ವಾಸ' ಪರಾ. [< ಸಂ. ಶ್ವಾಸ]

ಸಾಸಗ್ಗಳ ? (ನಾ). (?) : ಪೇಸುವಳೋ ನಾಣ್ಚುವಳೋ ಬೇಸಱುವಳೋ ಪಗೆಗೆ ಪಾಪಕಂಜುವಳೋ ಚಿಃ ಸನ್ನೆವೆಳೆಯರಕ್ಕಸಿ ಸಾಸಗ್ಗಳ ಕಣಿಕನಿಷ್ಠೆಲಂಜಿಕೆಯೆಂಬಳ್(?) (ಪಸಾರ. ೨೫೮). [?]

ಸಾಸಟಂಕೊಡಿಗೆ (ನಾ). ಒಂದು ಬಗೆಯ ಕೊಡುಗೆ,— ದತ್ತಿ (?) : ಉಂಬಳಂ ಕೊಡಿಗೆ ಪಣ ೨ ವಿ ೫ . . . ಪತ್ತಿಮಳವೆಗೆ ವಿ ೨ ॥ ಸಾಸಟಂಕೊಡಿಗೆ ವಿ ೨ ॥ ತವರದಡೆಗೆ ವಿ ೨ ॥ (ಕಾಇ. ೧೩೬-೪೨-೩೫; 1057). [ಸಾಸಟ್ಟ$_0$ + ಕೊಡಿಗೆ (< ಕೊಡಂಗೆಯ್$_2$)]

ಸಾಸತ, ಸಾಸದ (ಗು). ೧. ಸ್ಥಿರವಾದ; ನಾಶವಿಲ್ಲದ. (ನಾ). ೨. ಶಾಶ್ವತ; ಅಮರ: ಮತ್ಸ ಲೋಪಕ್ಕೆ . . . ಶಾಶ್ವತ - ಸಾಸತ; ಶ್ವಾನ - ಸಾನ (ಕಮದ. ೨೮೧ ಪ್ರಯೋ). **ಸಾಸದ** : ೨. ಮೊಱದೊಳ್ಕಲಮೊಪ್ಪದೊಳಾಳುತೇಳುತುಂ ಕೂಸೆ ನಿಸರ್ಪ್ಪದೆಂತುಟದನಾಂ ಮಱೆದಾಗಳೆ ಶಕ್ಕು ಜವ್ವನಂ ಸಾಸದವೆಂದು ನಚ್ಚದೆನಲಾ (ಅಪಶ. ೪೫). [< ಸಂ. ಶಾಶ್ವತ]

ಸಾಸದ 'ಸಾಸತ' ನೋ.

ಸಾಸನ (ನಾ). ೧. ಆಜ್ಞೆ; ಅಪ್ಪಣೆ: ದೇವನೆಂದಿ ಸಾಸನದಿ ನಿಶ್ಚಾವ ನಡೆಯದ ನಿಮ್ಮ ಪಾದಕೆ ಸೇವಿಸುವನೆರವಿಲ್ಲದಂದದೊಳೆಂದನಾ ಬಸವ (ಬಿಜ್ಜಳ. ೯೪-೧೩). ೨. ರಾಜ ಮುಂತಾದವರು ಶಿಲೆ ಅಥವಾ ತಾಮ್ರದ ಪಟ್ಟಿಕೆಯ ಮೇಲೆ ದಾನ ದತ್ತಿ ಮುಂತಾದ ಮಹಾಕಾರ್ಯಗಳನ್ನು ಮಾಡಿದ ನೆನಪಿಗಾಗಿ ಬರೆಸುವ ಬರಹ; ರಾಜಾಜ್ಞೆ; ಶಾಸನ: ಮಾಧುರ್ಯ್ಯಸುಕರ ಚಾತುರ್ಯ್ಯ ಗುಣಪ್ರೋನ್ನತರಿಲ್ಲೆನೆ ಸಾಸನಮನ್ನಿದೆ ಚೆಲ್ವಾಗೆ ಸಾಮಿಯಣ್ಣಂ ಬರೆದೋಂ (ಸೌಶಾ. XI-i, ೪೧-೫೭; 989); ಸೇನಬೋವಂ ಮೊಱಿಯಿಯ ಚಾವುಣ್ಣಮಯ್ಯಂ ಸಾಸನಮಂ ಬರೆದಂ (ಶಾಸಾ. XX, ೧೪-೭೪; 1015).

ಸಾಸನವಾಗು = ಸ್ಥಿರವಾಗು; ನಿರ್ಣಯವಾಗು: ವೆರ್ಗ್ಗಡೆತನಕೆಯ ಅರಿಉರ್ವ್ವನ್ನಿರ್ವ್ವರು ತೊಲೆಕ್ಕಾರಾಟ್ಟ ಉಮೆಕ್ಕಯಿಯ ಮೂವಲ್ಲೋಗೆಯು ಕೂಡಲೂರು ಇನೆತ್ತುಮೂರ್ ನೆರ ಸಾಸನಮಾಗೆ ಕುದಿಯ್ಕುಕೊ XX ಲು (ಎಕ. IV, ಗುಂಡ್ಲುಪೇ. ೮೮-೬; ಸು. 750). ಸಾಸನವರ್ತ್ತಿಯಾಗಿ = ಶಾಸನಪೂರ್ವಕವಾಗಿ; ಆಜ್ಞಾಧಾರಕನಾಗಿ: ನೊಳಂಬವಾಡಿಯಂ ಮೇಲೆ ಪಾನುಂಗಲ್ಲು ನಾಡು ಬನವಾಸೆದೇಸವುಂ ಸಾಸನವರ್ತ್ತಿಯಾಗೆ ದಯೆಗೆಯ್ದು ಕೊ[ಟ್ಟು] (ಶಾಸಾ. XX, ೪೯-೧೪; 1076 ?).

[< ಸಂ. ಶಾಸನ]

ಸಾಸನಂಗೊಡು (ಕ್ರಿ). ಅಪ್ಪಣೆಯನ್ನು ಕೊಡು; ಆಜ್ಞೆಯನ್ನು ನೀಡು: ಚಾವುಣ್ಣಯ್ಯಂಗ ಇವರ್ ವೇಟೆ ನಾಡು ಸಾಸನಂಗೊಟ್ಟರ್ ಇದರ್ಕೈಮಣ್ಣೆಗರ್ ಸಾಕ್ಷಿ (ಎಕ. IX, ಹೊಸಕೋ. ೧೧೧-೬; 997). [ಸಾಸನ + ಕೊಡು$_1$]

ಸಾಸನಗಬ್ಬ (ನಾ). ಪದ್ಯರೂಪದಲ್ಲಿ ಬರೆದ ಶಾಸನ; ಶಾಸನಕಾವ್ಯ: ಸನ್ನುಎಗ್ರಂ ದಾಮರಾಜಂ ಸಾಸನಗಬ್ಬಮಂ ಪೇಳ್ದು ಬರೆದಂ (ಎಕ. VII, ಶಿವಮೊ. ೧೦-೫೯; 1085). [ಸಾಸನ + ಕಬ್ಬ$_1$]

ಸಾಸನಿಗ (ನಾ). ಶಾಸನವನ್ನು ಪಡೆದವನು; ಆಜ್ಞೆಯನ್ನು ಸ್ವೀಕರಿಸಿದವನು: ಕವಿಳಾಸಪುರವೇ ಸಾಸನದ ವನೆ ಬಸವರಾಜನೇ ಸಾಸನಿಗನೆಂದುವುಭಯ ನಾನಾದೇಸಿ ಮುಮ್ಮುರಿದಂಡಂಗಳು ಕೊಟ[ಟ್ಟು] [ಸಾ(ಶಾ)ಸನ] (ಎಇ XXI, ೧೪-೭೯. 1260).

[ಸಾಸನ + - ಇಗ]

ಸಾಸವಾಸಿ (ನಾ). ಸಾಹಸದ ಖ್ಯಾತಿಯನ್ನು ಪಡೆದವನು; ಪ್ರಸಿದ್ಧವಾದ ಸಾಹಸವಂತ ,— ಪರಾಕ್ರಮಶಾಲಿ: ಬೀಸುವ ಸಬಳಂ ವಿಚಿತ್ರಮನೆ ತಳ್ಪಲಿದರ್ ಮನೆಯಲ್ಲಿ ಕಲ್ತ ಪಾರ್ಥಿವಕುಲ ವಿದ್ಯೆಯಂ ಮೊನೆಯೊಳಂ ನೆಚಿ ತೋರ್ಪುರು ಸಾಸವಾಸಗಳ್ [ಪಾಠಾಂ. ತೋರ್ಪರ ಸಾಸವಾರಿಗಳ್] (ಜಗವಿ. ೭-೫೯).

[ಸಾಸ$_1$ + ವಾಸಿ$_1$]

ಸಾಸವೆ 'ಸಾಸಿವೆ' ನೋ.

ಸಾಸವೆಗಲಸು (ಕ್ರಿ). ಸಾಸವೆ ಮುಂತಾದ ಸಂಬಾರಪದಾರ್ಥಗಳನ್ನು ಸೇರಿಸಿ ಕಲಸಿ; ಒಂದು ಬಗೆಯ ಖಾದ್ಯವನ್ನು ತಯಾರಿಸು: ಗಂಗಾದೇವಿಯ ಹುಳಿಯ ಕಾಸಿ ಗೌರೀದೇವಿಯ ಕೂಳನಟ್ಟು ಭಕ್ತನ ಬಾಡನಟ್ಟು ದೇವನ ಸಾಸವೆಗಲಸಿ ಬ್ರಹ್ಮನಡ್ಡಣಿಗೆ ವಿಷ್ಣು ಪರಿಯಾಣ ರುದ್ರನೋಗರ ಈಶ್ವರ ಮೇಲೋಗರ ಸದಾಶಿವ ತುಪ್ಪ ಉಣಲಿಕ್ಕಿ ಕೈಕಾಲು ಮುಱಿಯಿತ್ತು ಗುಹೇಶ್ವರ (ಅವಚಂ. ೧೨೫-೫೬೦).

[ಸಾಸವೆ (< ಸಾಸಿವೆ) + ಕಲಸು$_1$]

ಸಾಸವೆಗುಡಿ (ಕ್ರಿ). ಸಾಸವೆಯನ್ನು (ಅರೆದು) ಕುಡಿ: ಬಿಡದೌಡುಗರ್ಚಿ ನೋವಿಂದ ಡಿಗಡಿಗಹಹಾಯೆನುತ್ತುಮೆಡಗಯ್ಯಂದಂ ತಡವರಿಸುತ್ತುಂ ಸಾಸವೆಗುಡಿದಂತಿರೆ ಕರಮೆ ಮುಱುಗಿ ತಳವೆಳಗಾದಂ (ಧರ್ಮಾಮೃ. ೧-೧೪೩). [ಸಾಸವೆ (< ಸಾಸಿವೆ) + ಕುಡಿ$_1$]

ಸಾಸವೆಗೊಡ (ನಾ). ಸಾಸವೆಯ ಕದಡನ್ನು ತುಂಬಿದ ಕೊಡ: ಕರಿಯ ಮದ್ದಿನ ಪೊಟ್ಟಣ . . . ಅರೆದ ಸಾಸವೆಗೊಡ ಕಾದಡವಿಯ ಬಹು ಹರವಿಗಳೊಪ್ಪಿದುವಾಗ (ಕಂನಿ. ೧೧-೧೩೩). [ಸಾಸವೆ (< ಸಾಸಿವೆ) + ಕೊಡ$_2$]

ಸಾಸಿ (ನಾ). ಸಾಹಸಿ; ಪರಾಕ್ರಮಿ: ತಮ್ಮನ ಸಾಸಿಯೆಂದುಬ್ಬಿಸಿ ನುಡಿದ (ಭರತ. ೫೧-೧೦೦); ಆತನೇ ಸಾಸಿಯೆನೆ ಕೇಳ್ದು (ಜೆಬುಪು. ೧೭-೪೨). [< ಸಂ. ಸಾಹಸಿನ್]

ಸಾಸಿಗ, ಸಾಯಸಿಗ (ನಾ). ೧. ಸಾಹಸಶಾಲಿ; ಪರಾಕ್ರಮಿ: (ಕ). ೨. ಧೈರ್ಯಶಾಲಿ; ಸ್ಥೈರ್ಯವಂತ: ಸಾಸಿರ್ವರ್ ವನಿತೆಯರ್ . . . ಅರಸುಗಳ್ಪೆರಸಾ ಸಾಸಿಗನುಚಿತದೀಕ್ಷೆಯಂ ಕೈಕೊಂಡಂ (ಆದಿಪು. ೬-೫); ಪಾಪಮನೆ ಪೆರ್ಚಿಸಿ ಸತ್ತು ನರಕದೊಳಾದ ಮಹಾದುಃಖವೆಂಬಗ್ನಿಗೆ ತಮ್ಮ ಶರೀರಮೆಂಬ ಪುಳ್ಕಿಗಳನಿಕ್ಕುವರದೇಂ ಸಾಸಿಗರೋ (ಧರ್ಮಾಮೃ. ೬-೧೬೫); ಸಾಸಿಗನು ತಂದೆಯನು ಕೊಲ್ಲದೆ ಹೇಸಿ ದಿಟ್ಟನು (ಕಾಶಿಖಂ. ೨೮-೭೨). ೩. ದುಡುಕಿನವನು; ಉದ್ದಟತನದ ವ್ಯಕ್ತಿ : ಕಾಳೋರಗನಂ ಕೂಸು ಪಿಡಿವಂತೆ ಪಿಡಿದಂ ಸಾಸಿಗನವಿವೇಕಿ ಸೀತೆಯಂ ದಶಕಂಠಂ (ಪಂರಾಮಾ. ೯-೧೦೧). ೪. ಅವಿವೇಕಿಯಾದವನು; ಮೂರ್ಖ: ಮಗನಂ ಪಡೆವಂತಿರೆ ಬಂಜೆಗೆ ಮರ್ದಂ ಮಾಳ್ಪೆನೆಂಬ ಸಾಸಿಗನೇಂ ತಾಂ ಪುಗಿಸುವನೆ ಜೀವವಂತದುವೆ ಗರ್ಭದೊಳುಮರ್ದಿ ಮೇಣದಕ್ಕುಮೆ ಜೀವಂ (ಸಮಯ. ೧೨-೩೫). 'ಸಾಹಸಿಗ' ಪರಾ. **ಸಾಯಸಿಗ:** (ಗು). ೫. ಸಾಹಸದಿಂದ ಕೂಡಿದ; ದಿಟ್ಟ: ಸಾಯಸಿಗ ಭುಜಬಲನೆ . . . ರಾಯದಳವತ್ತಿ ಬಂದರೆ ನಾಯಂ ಹಲ್ಲಣಿಸಿ ಗೆಲುವರೇ ನೃಪಶಿಲಕಾ (ನೀತಿಸಾ. ೩೪೯). [< ಸಂ. ಸಾಹಸಿಕ]

ಸಾಸಿಮೆ 'ಸಾಸಿವೆ' ನೋ.

ಸಾಸಿರ, ಸಾಯಿರ, ಸಾವಿರ (ನಾ). ೧. ಒಂದು ಸಂಖ್ಯೆ ; ಸಹಸ್ರ ; ಹತ್ತುನೂರು: ಮಲೆ ಸಾಸಿರಮುಮಾಳೆ (ಇಆ. XIV, ೨೩೨-೫೦; ೪ನೆಯ ಶತ); ಸಾಸಿರ ಪೊಂಗೆಯ್ದುಂ ಚಿಃ ಕಾಸಟಂ (ಪಂಪಧಾ. ೩-೪೪); ಬಿಡುವಲ್ಲಿ ನೂಱು ಪರಿವಾಗಳ್ಸಾಸಿರಂ (ಗದಾಯು. ೩-೩); ನೆನೆದು ನಾಮೋಚ್ಚರಣೆಗೆಯ್ದೆ ಸಾಸಿರಪಶುಗಳನು ದಾನವಿತ್ತ ಫಲ (ಸೌಂದಪು. ೭-೩೧). ೨. (ಆಲಂ) ಅನೇಕ; ಹೇರಳ; ಹಲವು: 'ಸಾಸಿರವಗೆ' ಪರಾ. **ಸಾಯಿರ:** ೧. ಬಾರಣಾಸಿಯೊಳ್ ಸಾಯಿರ ಕವಿಲೆಯುಮಂ . . . ಅಱೆದ ಬ್ರಹ್ಮಾತಿಯಕ್ಕು (ಇಆ. XII, ೨೨೫-೧೨; 916); ಒಡೆಯರ್ಗೆ ಸಾಯಿರಗದ್ಯಾಣಪೊನ್ನಂ ಕುಡುಮೆನೆ (ಚಾವುಂಪು. ೪೯). **ಸಾವಿರ** : ೧. ಸಾವಿರ(ಂ) ಬಳ್ಳಿಯ ತೋಣ್ಬದ ಸಾಮ್ಯಮ (ಎಇ. XXVI, ೪-೧೫; ೩೦೬); ತೋಡಿದನು ಕೂರಂದಿನಲಿ ಸಾವಿರಮಹಾರಧ್ರ (ಕುವಾದ್ರೋ. ೧-೬೮); ಒಬ್ಬರ ಕಣ್ಣೆಗೊಂದಾಳು ಸಾವಿರವಾಗಿ ಮಬ್ಬುವಿಡಿದು ಕಾಣಿಸಲು (ಕಂನಿ. ೧೪-೯೧). ೨. ನಿನಗೆ ನಂಬಿಗೆ ಸಾವಿರ[ಪಾಲಾಂ. ಬಹಳ]ವನಿತ್ತಪೆಂ ಪಾಡು ಎಂಬ ನುಡಿಗೇಳುತುಂ (ಪಂಪಿರಾ. ೧೧-೭೪); ಸಾವಿರ ಜನರ ಮುಂದೆ ಕೆಲಸ ಮಾಡುವಾಗ ಇವಳಿಗೆ ಹೆದರಿಕೆಯಾಗುವುದಿಲ್ಲ (ಎಧ್ರುವ. ೮೦).

ಸಾವಿರಾರು = ಅಸಂಖ್ಯ; ಹೇರಳ: ನಿಮ್ಮಂತಹ ಮೇಡಂಗೆ ನನ್ನಂತಹ ಸಾವಿರಾರು ಶಿಷ್ಯೆಯರು (ನಿಂದೆನಿ. ೧೯೯). [< ಸಂ. ಸಹಸ್ರ]

ಸಾಸಿರಕಣ್ಣ 'ಸಾಸಿರ್ಗಣ್ಣ' ನೋ.

ಸಾಸಿರಗಣ್ಣ 'ಸಾಸಿರ್ಗಣ್ಣ' ನೋ.

ಸಾಸಿರಗದಿರ (ನಾ). ಸಾವಿರಾರು ಕಿರಣಗಳನ್ನು ಹೊಂದಿದವನು; ಸೂರ್ಯ: ಸಾಸಿರಗಣ್ಣಗೆ ಸೊಬಗಿನೊಳಿಮ್ಮಡಿ ಸಾಸಿರಗದಿರಗೆ ತೇಜದೊಳಯ್ಮಡಿ (ಜಯಕಾ. ೧೫-೧); ಸಾಸಿರಗದಿರನೋರಗೆಯ ಭಾಸುರ ತೇಜೋಪೇತನೊಪ್ಪಿದನು ವಿಲಾಸರಸಾಬ್ಧಿ ಚಂದ್ರಮನು (ತ್ರಿಪಾಲ. ೮-೨). [ಸಾಸಿರ + ಕದಿರ್$_2$ + - ಅ$_7$]

ಸಾಸಿರಗಯ್ಯ 'ಸಾಸಿರ್ಗೈಯ' ನೋ.

ಸಾಸಿರಗೆಯ್ಯ 'ಸಾಸಿರ್ಗೈಯ' ನೋ.

ಸಾಸಿರದಲೆಯ 'ಸಾಸಿರ್ದಲೆಯ' ನೋ.

ಸಾಸಿರದೋಳ 'ಸಾಸಿರ್ದೋಳ' ನೋ.

ಸಾಸಿರಮಡಿ 'ಸಾಸಿರ್ಮಡಿ' ನೋ.

ಸಾಸಿರವಗೆ (ನಾ). ಹಲವು ಬಗೆ; ಅನೇಕ ರೀತಿ: ಸಾಸಿರವಗೆಯ ಬೋಳಿಯ ಮಾತ ಕಿವಿಯೊಳು ಸೂಸಿ (ಮೋಹತ. ೧೦-೨೦). [ಸಾಸಿರ + ಬಗೆ$_2$]

ಸಾಸಿರವಧಿ (ನಾ). ೧. ಸಾವಿರವರ್ಷಗಳ ಕಾಲ. ೨. (ಆಲಂ) ದೀರ್ಘಾಯುಷ್ಯ; ಜೀವಿತಾವಧಿ: ನಿನಗಾಂ ಕಲಿಸಿದುದೆ ನಿನ್ನ ಸಾಸಿರವಧಿಗೆ ಸಾಕು (ಹಜ್ಜರ. ೪-೬). [ಸಾಸಿರ + ಅವಧಿ]

ಸಾಸಿರಶಿರ (ನಾ). ಸಾವಿರ ತಲೆಗಳುಳ್ಳವನು; ಸಹಸ್ರಶೀರ್ಷ; ಪರಮಾತ್ಮ: ಸಾಸಿರಶಿರನೆ ಸಾಸಿರಲೋಚನನೆ . . . ಸಾಸಿರಚರಣನೆ ಸಾಸಿರ ನಮೋ ನಮೋ (ಪುರಂದ. ಧಾ. ೨-೫-೭). [ಸಾಸಿರ + ಶಿರ$_2$]

ಸಾಸಿರಾಹ್ವಯ (ನಾ). ಸಹಸ್ರನಾಮವನ್ನು ಹೊಂದಿದವನು; ಭಗವಂತ: ಬಲರಾಮ . . . ರುಕ್ಮಾಂಗದರು ಮುಖ್ಯ ಯಾದವಬಲಾಢ್ಯರುಗಳು ಸಾಸಿರಾಹ್ವಯನ ಕೆಲಬಲದೊಳಂ ಮಂಡಿಸಿರಲು (ನವಮೋ. ೧೭-೧೪). [< ಸಂ. ಸಹಸ್ರಾಹ್ವಯ]

ಸಾಸಿರ್ಗಣ್ಣ, ಸಾಸಿರಕಣ್ಣ, ಸಾಸಿರಗಣ್ಣ (ನಾ). ಸಾವಿರಾರು ಕಣ್ಣುಗಳುಳ್ಳವನು; ಹಲವುಗಣ್ಣ; ಇಂದ್ರ: "ಇಂದಿರಂ . . . ಮುಗಿಲ್ದೇರನೊಸೆದು ಸಾಸಿರ್ಗಣ್ಣಂ [ಪಾಠಾಂ. ಸಾಸಿರಗಣ್ಣ] ಬೆಟ್ಟುವಗೆಯನೆನಲ್ಕೆ ಸುರಪತಿಯ ನಾಮಮಕ್ಕುಂ" (ಶಬ್ದಮಂ. ೧೦); ಸಾಸಿರ್ಗಣ್ಣಂ ಮೊದಲಹ ಭಾಸುರ ದಿವಿಜರ್ಕಳು . . . ನಿಂದು ಪೊಡಮಡುತ್ತಿರ್ಪರಣಂ (ಹಾಲಾಸ್ಯ. ೩-೪-೭). **ಸಾಸಿರಕಣ್ಣ** : ಸೌಧರ್ಮೇಂದ್ರಂ ಸಾಸಿರಕಣ್ಣನತೀಂದ್ರಿಯದರ್ಶನನಿದೇಂ ಜಿನಂ ಸುಂದರನೋ (ಶಾಂತಿಪು. ೧೨-೧೬). **ಸಾಸಿರಗಣ್ಣ** : ಸಾಸಿರಗಣ್ಣಗೆ ಸೊಬಗಿನೊಳಿಮ್ಮಡಿ (ಜಯಕಾ. ೧೫-೧).

[< ಸಾಸಿರ + ಕಣ್ + - ಅ$_7$]

ಸಾಸಿರ್ಗೈಯ, ಸಾಯಿರಗಯ್ಯ, ಸಾಸಿರಗಯ್ಯ, ಸಾಸಿರಗೆಯ್ಯ (ನಾ). ೧. = ಸಾಸಿರಗದಿರ : "ತಾವರೆಗಳೆಯಂ . . . ಸಾಸಿರ್ಗೈಯ, ಗರಂಗಳಾಣ್ಮಂ - ಈ ೧೧ ಸೂರ್ಯನ ಪೆಸರ್" (ಶಶಾ. ೪೮-೨೮). **ಸಾಯಿರಗಯ್ಯ** : ೧. ತುತಿಪೆಂ ಸಾಯಿರಗಯ್ಯಂ ಕುಳಿರ್ಗಯ್ಯಂ ಕಾರ್ಬಟ್ಟಿಗನೆಂಬೊಳ್ಗಣ್ಣವನಂ (ಅಂದ್ರಪೆ. ೩-೭೬). **ಸಾಸಿರಗಯ್ಯ**: ೧. "ಸೂರ್ಯನೊಳ್ ಸಾಸಿರಗಯ್ಯಂ" (ಕರ್ಣಾ. ೧೧). **ಸಾಸಿರಗೆಯ್ಯ** : ೨. ಸಾವಿರ ಕೈಗಳನ್ನು ಹೊಂದಿದವನು; ಬಾಣಾಸುರ: ಸಾಸಿರಗಯ್ಯನಂದನೆಯ ಲಾವಣ್ಯಾಂಬುರಾಶಿಯನೊಡಗೂಡಿ (ಮೋಹತ. ೨೪-೩).

[< ಸಾಸಿರ + ಕೈ$_2$ (< ಕೆಯ್$_2$) + - ಅ$_7$]

ಸಾಸಿರ್ದಲೆಯ, ಸಾಸಿರದಲೆಯ (ನಾ). ಸಾವಿರ ತಲೆಗಳುಳ್ಳವನು ; ಆದಿಶೇಷ: "ಸಾಸಿರ್ದಲೆಯಂ, ಸಹಸ್ರಶಿರಾ" (ಶಬ್ದಾನು. ೩೫೬ ವ್ಯಾಖ್ಯಾ). **ಸಾಸಿರದಲೆಯ**: "ಸಾಸಿರ್ದಲೆಯಂ, ಸಾಸಿರದಲೆಯಂ" (ಶಬ್ದಾನು. ೩೫೬ ಪ್ರಯೋ).

[< ಸಾಸಿರ + ತಲೆ$_1$ + - ಅ$_7$]

ಸಾಸಿರ್ದೋಳ, ಸಾಸಿರದೋಳ (ನಾ). = ಸಾಸಿರ್ಗೈಯ : "ಸಾಸಿರ್ದೋಳಂ, ಸಹಸ್ರಬಾಹುಃ" (ಶಬ್ದಾನು. ೩೫೬ ವ್ಯಾಖ್ಯಾ). **ಸಾಸಿರದೋಳ** : "ಸಾಸಿರ್ದೋಳಂ, ಸಾಸಿರದೋಳಂ" (ಶಬ್ದಾನು. ೩೫೬ ಪ್ರಯೋ). [< ಸಾಸಿರ + ತೋಳ್ + - ಅ$_7$]

ಸಾಸಿರ್ಮಡಿ, ಸಾಸಿರಮಡಿ (ನಾ). ಸಾವಿರ ಸಲ; ಸಹಸ್ರಪಟ್ಟು: ನೆಯ್ದಿಲ ಕಡುಗಂಪುಮನಿವಱ ಕಂಪು ಗೆಲ್ದುವು ಸಾಸಿರ್ಮಡಿಯೆನೆ ಪೊಂಬಣ್ಣದ ಕೆಂಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ (ಆದಿಪು. ೧-೬೦); ಧರ್ಮಮುಮರ್ಥಮುಂ ಬಿಡದೆ ಕಾಮಮುಮನ್ನೊಳಗೊಂದಕೊಂದು ಸಾಸಿರ್ಮಡಿಯಾಗಿ ಪೆರ್ಚಿದುದು (ಚಾಧಪು. ೩-೫೬);

ನಿನ್ನನ್ನು ನೋಡುತ್ತಿದ್ದರೆ, ನನ್ನ ಹೃದಯಕ್ಕೆ ಹಿಂಸೆಯು ಸಾಸಿರ್ಮಡಿಯಾಗಿ ಹೆಚ್ಚುವುದು (ಸುಗುಗಂ. ೧೪೧-೧೨). **ಸಾಸಿರಮಡಿ** : ಸವಿಯೊಳು ಸಾಸಿರಮಡಿ ಮಿಕ್ಕುವು (ಧರ್ಮಾಮೃ. ೧-೧೫೩); ಸಂದ ಸಾಸಿರಮಡಿಯೊಂದು ಭಾವಿಸದಿರಲೊಂದದಿಹುದೆ ಪಾತಕವು (ಅಂಜಚ. ೧೦-೮೦). 'ಸಾಸಿರ್ಮೆ' ಪರಾ. [< ಸಾಸಿರ + ಮಡಿ$_2$]

ಸಾಸಿರ್ಮಡಿಸು (ಕ್ರಿ). ಸಾವಿರಪಟ್ಟು ಹೆಚ್ಚಾಗು; ಸಹಸ್ರದಷ್ಟು ವೃದ್ಧಿಸು: ವಕ್ಷಕಂಜಂಗಳೊಳೆ ಕೂಡೆ ಸಾಸಿರ್ಮಡಿಸುತ್ತುಂ (ಸೂಕ್ತಿಸು. ೧೨-೨೦).

[ಸಾಸಿರ್ಮಡಿ + - ಇಸು$_3$]

ಸಾಸಿರ್ಮೆ (ನಾ). ಸಾವಿರಸಲ; ಸಹಸ್ರಬಾರಿ : "ಸಾಸಿರ್ಮೆ ಸಹಸ್ರವಾರದೊಳ್" (ಕರ್ಣಾನಿ.೮೫); ಮೆ ಪ್ರತ್ಯಯಕ್ಕೆ - ಒರ್ಮೆ, ಇರ್ಮೆ, ಮೂರ್ಮೆ, ಸಾಸಿರ್ಮೆ (ಶಮದ. ೨೦೭ ಪ್ರಯೋ); ಒಂದು ಮೊದಲಾದ ಸಂಖ್ಯಾವಾಚಿಗಳಿಗೆ ಆವೃತ್ತಿ ಎಂಬರ್ಥದಲ್ಲಿ ಮೆ ಸೇರುವುದು - ಒರ್ಮೆ, ಇರ್ಮೆ, ಸಾಸಿರ್ಮೆ (ಕೈಪಿ. ೫೨). 'ಸಾಸಿರ್ಮಡಿ' ಪರಾ.

[< ಸಾಸಿರ + - ಮ್ಮೆ]

ಸಾಸಿವೆ, ಸಾಸವೆ, ಸಾಸಿಮೆ, ಸಾಸುವೆ (ನಾ). ೧. ಒಂದು ಬಗೆಯ ಸಂಬಾರಪದಾರ್ಥ; ವಿಶೇಷವಾಗಿ ಒಗ್ಗರಣೆಗೆ ಹಾಕಲು ಬಳಸುವ, ರಾಗಿಯಾಕಾರದ ಸಣ್ಣ ಕಾಳು; ಸರ್ಷಪ: ಕಡಲು ಸಾಸಿವೆಯೊಳಗಡಗಿದಂತೀ ಮೂಱು ಪೊಡವಿಯಷ್ಟಗಲದ ಹಂಸ ಬಡಮ್ಮೆಯೊಳಿರ್ದುದ ನೆನೆದು ಬೆಕ್ಕಸಬಟ್ಟು ಬೆಡಗೋಯಂದನೆ ನೃಪನೆಸೆದಾ (ಭರಚ. ೩-೨೨); ಎಳ್ಳು, ಧನಿಯ, ಸಾಸಿವೆ, ಹುಚ್ಚೆಳ್ಳು ಮೊದಲಾದವುಗಳನ್ನು . . . ಬೆಳೆಯುತ್ತಾರೆ (ವ್ಯವಹಾ. ೪೪). ೨. ಸಾಸಿವೆಕಾಳಿನಿಂದ ತೆಗೆದ ಎಣ್ಣೆ: ಬೆಂದ ಹುಣ್ಣಲಿ ಸಾಸಿವೆಯ ಬಳಿಯದಿರು (ಕುವ್ರಾಧ್ಯೋ. ೧-೮). ೩. ಒಂದು ಬಗೆಯ ಮೇಲೋಗರ : ಸಾರಿನಲ್ಲೂ ಊಟ ಮಾಡಿದಿರಿ; ಸಾಸಿವೆಯಲ್ಲೂ ಊಟ ಮಾಡಿದಿರಿ (ಮೂಕಜ್ಜಿ. ೨೨೬). ೪. ಒಂದು ಅತಿ ಸಣ್ಣ ಅಳತೆ, — ಪ್ರಮಾಣ; ಒಂದು ಕೂದಲ ತುದಿಯಷ್ಟು ಪ್ರಮಾಣ: ಕರಿರೋಮಾಗ್ರಂ ಸಾಸಿವೆ (ವ್ಯವಹಾ. ೮-೩೭ ಅನುಬಂಧ). ೫. ಅಕ್ಷತೆಯಾಗಿ ಬಳಸುವ ಒಂದು ಬಗೆಯ ಬಿಳಿಯ ಬಣ್ಣದ ಕಾಳು: ಗೊಂದೆಗೆನು ಜೀವ ಇರುತ್ತದೆಯೇ? ಸಾಸಿವೆ ಇಕ್ಕೋದಕ್ಕೆ (ಸುಪಸಂ. ೩೦). **ಸಾಸವೆ** : ೧. ಸಾಸವೆಯ ಮೇಲೆ ಸಾಗರವರಿದಂತಾಯಿತ್ತಯ್ಯ (ಬಸವ. ೩೩೩); ಸರ್ಷಪಂ-ಸರುಸಪಂ, ಸರ್ಷಪಮೆಂದು, ಸಾಸವೆ (ಶಮದ. ಕಿ. ೨೫೪ ಪ್ರಯೋ). **ಸಾಸಿಮೆ** : ೧. ಉತ್ತರ ಪ್ರತ್ಯುತ್ತರಗಳು ಕವಯಿತ್ರಿ ಹೇಳಿದಂತೆ "ಎಣ್ಣೆ- ಸಾಸಿಮೆ ಸಿಡಿದಂತಿವೆ" (ಕರ್ನಾಕ. ೨೬೩). ೩. ಪಡುವಲಕಾಯಿಯ ಸಾಸಿಮೆಗೆ ಒಗ್ಗರಣೆ ಹಾಕುವುದಿತ್ತು (ದೇವತಂ. ೩೫). **ಸಾಸುವೆ** : ೧. ಜೀವಜಶೃಂಗಂ ಸಾಸುವೆ ತಾವಿನಿತುಂ ಭೂತಜ್ವರೋಪಶಾಂತಿಗೆ ಧೂಪಂ (ಕಲ್ಯಾಕಾ. ೩-೫೧); ಹುರುಳಿ ಸಾಸುವೆ ಮೆಂತೆಯದ ಚೂರ್ಣ ಹಪ್ಪಳಂ ಸಂಭಾರವಸ್ತುವಹವು (ಸೂಪಶಾ. ೪-೧). ೩. ಈಗ ನಿಮಗೇನು ಬೇಕು ಹೇಳಿ; ಸಾರನ್ನು ತರಲೋ ಸಾಸುವೆ ತರಲೋ? (ಮೂಕಜ್ಜಿ. ೨೨೬).

[< ಸಂ. ಸರ್ಷಪ./ ತುಳು. ಸಾಸಿಮೆ, ಸಾಸೆಮಿ; ತೆಲು. ಸಾಸುವುಲು]

ಸಾಸಿವೆಗದಡು (ನಾ). ಸಾಸಿವೆಯನ್ನು ಅರೆದು ಕದಡಿದ ನೀರು; P ಇದನ್ನು ಯುದ್ಧಕಾಲದಲ್ಲಿ ಶತ್ರುಗಳ ಮೇಲೆ ಎರಚಲು ಬಳಸುತ್ತಿದ್ದರು: ಕಾಯ್ದೆಣ್ಣೆಗೂಡಿ ಮಳಲರಗು ಸಾಸಿವೆಗದಡು ಸುಣ್ಣಕಲ್ಲಂಬಲಿಗಳುಂ ಸುರಿದುವು (ಚಟಪು. ೪೨-೩೨). [ಸಾಸಿವೆ + ಕದಡು$_2$]

ಸಾಸಿವೆಹಾಲು (ನಾ). = ಸಾಸಿವೆಗದಡು : ಸಾಸಿವೆಹಾಲು ಸಾಧಕಾಂಗಾರ ನಾಸಿಕದ ನೀರ ಬರಿಸಿತ್ತು (ಕಲ್ಯಾಶಾಂ. ೯-೧೦೪). [ಸಾಸಿವೆ + ಹಾಲು$_1$ (< ಪಾಲ್$_1$)]

ಸಾಸಿಸು 'ಸಾಯಿಸು' ನೋ.

ಸಾಸುವೆ 'ಸಾಸಿವೆ' ನೋ.

ಸಾಸುವೆಬದನೆಗಾಯಿ (ನಾ). ಒಂದು ಬಗೆಯ ಬದನೆಕಾಯಿಯ ಪಲ್ಯ: ಉತ್ತರಿಸಿದೆಳೆಯ ಬದನೆಯಕಾಯ ಕತ್ತರಿಸಿ . . . ಸಾಸುವೆಗೆ ಹುಳಿಯನು ಇತ್ತರೆದು . . . ಜೀರಿಗೆ ಮೆಂತೆಯನಿಕ್ಕಲದುವೆ ಸಾಸುವೆಬದನೆಗಾಯಾದುದು (ಸೂಪಶಾ. ೪-೨೭).

[ಸಾಸುವೆ (< ಸಾಸಿವೆ) + ಬದನೆಗಾಯಿ (< ಬದನೆಕಾಯ್)]

ಸಾಸ್ಕರ (ನಾ). (?) : ಭಾಸ್ಕರೋದಯಕಾಲಕೆಲ್ಲೆಲ್ಲಿ ಅರಸಿ ನಯನಾಸ್ಕರಂಗೊಳದಿರಲು . . . ಸಾಸ್ಕರಪ್ರವೀರ ನಾನೀ ರತ್ನಸಂಚಯವನಾಸ್ಕರಿಪೆನೈದಿ ಖಳಬರಲಿನೀಕ್ಷಿಪೆನು ಯಂಬಾಸ್ಕರದಿ ಬೀಳ್ಕೊಟ್ಟನೆಲ್ಲರ (ಜಿನಮು. ೨೨-೧೨); ಪಾಸ್ಕರವಾಸಗೋತ್ರದ ಮಿಸುನಿಯ ನಾಮ ಭಾಸ್ಕರದಕ್ಷ ಪಾಂಗಜನಾ ಆಸ್ಕರ ಸೇರಿದವನ ವಾಚ್ಯಕೆ ದೂರ ಸಾಸ್ಕರಲ್ಲದಗೆ ನಾ ನಮಿಪೆ (ದೇವಪು. ೧-೩೬). 'ಆಸ್ಕರ' ಪರಾ. [?]

ಸಾಸ್ನ (ನಾ). ದನಗಳ ಕುತ್ತಿಗೆಯ ಕೆಳಭಾಗದಲ್ಲಿ ಜೋತಾಡುವ ಚರ್ಮದ ಪದರ; ಗಂಗೆದೊವಲು: "ಕೊರಲೊತ್ತಿನ ತೊಗಲು ಸಾಸ್ನವದು" (ಮಂಗರಾ. ೫೩-೨); ಪ್ರಣವರವತಣತ್ಕಾರನಾನಂದ ಸಾಸ್ನಾಸ್ಪದನಾಮ್ನಾಯಾಂತ ಘಂಟಾಗಳ ನಮ್ಯತಕಕುದ್ಧಂಧುರಂ . . . ತೊಳಗಿದನಭವಾಂಭೋಧಿಚಂದ್ರಂ ವೃಷೇಂದ್ರಂ (ರಾಜಶೇ. ೧೪-೧೫೧); ಗೋವು ಎಂಬುದಕ್ಕೆ ಅರ್ಥವೇನೆಂದು ಕೇಳಿದರೆ ಸಾಸ್ನಾ ಮೊದಲಾದುದನ್ನುಳ್ಳುದು ಗೋವು ಎಂದು ಮತ್ತೊಂದು ಶಬ್ದದಿಂದ ಉತ್ತರ ಕೊಡುವೆವು (ಧಾತತ್ತ್ವ. ೪೦೦). [ಸಂ. ಸಾಸ್ನಾ]

ಸಾಹಚರ್ಯ (ನಾ). ಸಹವಾಸ; ಒಡನಾಟ; ಮೈತ್ರಿ: ಇಂದ್ರನಿಗೂ ಮರುತ್ತುಗಳಿಗೂ ಇರುವ ಸಾಹಚರ್ಯ ಪ್ರಸಿದ್ಧವಾದುದು (ಶುಕ್ಲಾರ. ೭೧ ಟಿಪ್ಪಣಿ); ಒಂದು ಸ್ಥಳದಲ್ಲಿ ವಹ್ನಿ ಧೂಮಗಳ ಸಾಹಚರ್ಯವನ್ನು ನೋಡಿದ ಮಾತ್ರದಿಂದಲೇ ಸಕಲ ವಹ್ನಿಧೂಮಗಳ ಸಾಹಚರ್ಯವು ಗೃಹೀತವಾಗಿ (ಹಿಂದಸಾ. ೧೪೦). [ಸಂ.]

ಸಾಹಣ, ಸಹಣ (ನಾ). ೧. ಕುದುರೆಗಳನ್ನು ಸಾಕುವುದು,— ಪಳಗಿಸುವುದು: (ಕ). ೨. ಆನೆ, ಕುದುರೆಗಳನ್ನು ಕಟ್ಟುವ ಮನೆ; ಲಾಯ; ಕರೋಟಿ: ಸುಧಾಧವಳಿತದೀರ್ಘಮಂದಿರಸಾಹಣಂಗಳಂ ತೋಱೆ (ಶಾಂತಿಪು. ೩-೧೫ ವ); ರಾಗದಿನೆಳೆತಂದ ದಂತಿಹಯಸನ್ತತಿಯಲ್ಲದೆ ಹೊನ್ನನಿತ್ತು ಕಟ್ಟಿದ ಕರಿವಾಜಿ ಸಾಹಣದೊಳೆಲ್ಲಿಯುವಿಲ್ಲೆನಿಪೊಂದು ಸಾಹಸಾಭ್ಯುದಯಮಂ (ಎಕ. XI, ದಾಮಣ.೪೨-೩೪; ಸು. 1162); ವಿಚಾರಿಸುವೊಡಮಿಯಂದದಿಭಂ ಬನದೊಳಿಲ್ಲ ಸಾಹಣದೊಳಮಿಲ್ಲಂ ದರಸನಾನೆಯಂ ತಾಂ ನಿಂದೆನಸುಂ ನೋಡಿ ನೋಡಿ ವಿಸ್ಮಯಮುತ್ತಂ (ಚಂದ್ರಪ್ರ. ೯-೯೫). ೩. (?): ರಜನೀಚರಿಯರ್ಕಳ ಮಿಕ್ಕ ಪೆಕ್ಕಣಂ ಬಳ್ಳುವ ಸಾಹಣಂ ತಲೆಯ ಪುಂಜಿಗೆ ಕುಂದವು (ಕಾವ್ಯಸಾ. ೫೩೧ ಶೂದ್ರಕ). **ಸಹಣ** : ೧. ಪಟ್ಟಸಹಣದ ಹಿರಿಯ ಸಹಣದ ವಿಮಲಸಹಣಿಗಳವರ ಕರೆಯೆನುತ ಧುರಧುರಂಧರರೊಱಲಿದರು (ಕುವ್ಯಾಧಿ.೪-೪೭). 'ಸಾಹಣಿ' ಪರಾ. [? ./ ತೆಲು. ಸಾಹಿಣ]

ಸಾಹಣಿ, ಸಹಣಿ, ಸಾಣಿ, ಸಾಹಿಣಿ (ನಾ). ೧. ಆನೆ ಮತ್ತು ಕುದುರೆಗಳನ್ನು ಪಳಗಿಸುವವನು; ಕಾಸ್ತಾರ: ತಂತಮ್ಮ ಮುಂದೆ ಸಂದಣಿಸಿ ಪಲ್ಲಣಸಲವ್ವಳಿಪ ರಾವುತರ್ವರ್ಸರು ಸನ್ನದ್ಧರಾದ ಸಾಹಣಿಗಳುಮಂ (ವರ್ಧಪು. ೯-೫೬ ವ); ಅಶ್ವಗಜಸಾಹಣಿಗಳಿಗೆ ಎಱೆದು . . . ಭಂಡಾರಿಗಳಿಗೆಱೆದು ಆ ಗರಳಮಂ ಬಸವನಬಿಳ ನಿಯೋಗಿಗಳಿಗೆಱೆಯಲ್ಕವರ್ಗಳ ಭಾಗಕದು ಪಾಲ್ತುಪ್ಪವಾಗಿರೆ (ಬಸಪು. ೫೯-೨೮). 'ಗಜಸಾಹಣಿ' ಪರಾ. ೨. ಕುದುರೆಯ ಸವಾರ, — ರಾವುತ: ಸೆಣಸುವ ಸಾಹಣಿ ಸರಭಭೇರುಣ್ಡನುಂ . . . ಸಮಸ್ತಪ್ರಶಸ್ತಿಸಹಿತಂ [ಶ್ರೀಮನ್ಮಹಾ]ಸಾಹಣಿ ಬಲ್ಲರಸರ್ (ಸೌಇ. XI-i, ೧೦೭-೧೧; 1068). ೩. ಕುದುರೆದಳದ ಮುಖಂಡ: ಸಾಹಸದಿಂ ಋತುಪರ್ಣನ ಸಾಹಣಿಯಂ ಸಾರ್ದುಸುಖದಿನಿರ್ದನಿಳೇಶಂ (ನಳಚಂ. ೬೪೮). **ಸಹಣಿ**: ೧. ದುಷ್ಟ ವಾಜಿಯಂ ಕಂಡು ಸ[ಹಾಶಾಂ. ಸಾ]ಹಣಿಯಂ ಬೆಸಗೊಂಡನೇ ವಾರುವವನೇ ಪರಿಯಲಿರಿಸುವ ಕಾರಣಮೇನೆನಲ್ (ಪುಣ್ಯಾಸ್ರ. ೭-೫೧ ವ); ಪಂಚಪಲ್ಲವದ ತೇಜಿಗಳ ಸಿಂಗರಿಸಿ ತರುತುಂ ಚಮತ್ಕಾರದಿಂ ಸಹಣಿಗಳು ಮುಂದಿಡೆ (ಚೇರಮ. ೧೧-೪೪). ೩. 'ವಿಮಲಸಹಣಿ' ಪರಾ. **ಸಾಣಿ**: ೧. ಅಮಳಸ್ಕಂಧವಗಳಂ ಪಿಡಿದರಿಕ್ಕೆಲದಲ್ಲಿ ಸಾಣಿಗಳು ಸಿಂಗರಿಸಿ (ಭಾವಚಂ. ೮-೩); ರಾವುತರಿಗೆ . . . ಸಾಣಿಗಳಿಗೆ ಜೀವಿತಗಳ ಹೆಚ್ಚುಮಾಡಿ ಮನ್ನಣೆಯಿತ್ತು (ಭರಚ. ೫೩-೧೧೪); ಅಶ್ವಗಳನು ತಳುವದೆ ಕೋಲುನೇಣಂ ತಿದ್ದುತಿಹರಲ್ಲಿ ಬಳಿಸಂದು ಬಲು ಸಾಣಿ [ಶಾಶಾಂ. ಸಾಣ, ಸಹಣಿ, ಸಾಹಣಿ]ಗಳು (ಕುಶಾಸಾಂ. ೪-೭೩). **ಸಾಹಿಣಿ** : ೧. ಪಾರುವೇಟೆಗೆ ಧರಿಸಿದ್ದ ಸಾಹಿಣಿಯ ಉಡುಪನ್ನೇ ಸಿಂಗಿರಾಜನು ಆಗಲೂ ಧರಿಸಿದ್ದನು (ರೂಲೆಚಾ. ೧೫). [ಸಾಹಣ + - ಇ$_3$./ ಪ್ರಾ. ಸಾಹಣ = ಸೈನ್ಯ./ ಸಂ. ಸಾಧನ = ಸೈನ್ಯ./ ಹಿಂ. ಸಾಹನಿ = ಸೇನೆ, ಸೇನಾನಿ; ಮರಾ. ಸಾಹಾಣ = ಸೈನ್ಯ, ಸಾಹಣೇ = ಸೇನಾನಿ./ ತೆಲು. ಸಾಹಣಿ]

ಸಾಹಣಿಗ, ಸಾಣಿಗ$_1$ (ನಾ). = ಸಾಹಣಿ ೧ : ಸುರಗಿಕಾಱಂ ಚೌಡರಾಯನ ತುರಗಗಜ ಸಾಹಣಿಗ (ಬಸಪು. ೯-೪೭). **ಸಾಣಿಗ$_1$** : ಗಳೆ ಕೋಲುವಿಡಿದು ಬಂದಾಂತ ಸಾಣಿಗರನು ತುಳಿದಶ್ವಶಾಲೆಯ ನೂಂಕಿ . . . ಕೆಡಹುತಿರ್ದುದು (ನಾಗಚಂ. ೭-೯); ಕರಿಹಯಾವಳಿಯನುವ ತೋರಿಸಲೆಂದು ಸಾಣಿ[ಪಾಠಾಂ. ಣಿ]ಗರನುವಿನೊಳು ಬರಲೆಂದು ಕರಸಿದ (ಜಿನಭಾ. ೮-೨೫). [ಸಾಹಣ + - ಇಗ]

ಸಾಹಣಿತಿ (ನಾ). ಕಾಸ್ತಾರನ ಪತ್ನಿ; ಸಾಹಣಿಯ ಹೆಂಡತಿ: ಸಾಹಿಣಿಯರ ಸಾಹಣಿತಿ ಜಕ್ಕವೆ (ಎಕ. V, ಹಾಸನ. ೧೪೮-೩; 1200 ?). [ಸಾಹಣಿ + - ತಿ$_1$ (< - ಇತ್ತಿ)]

ಸಾಹಣಿಪೆರ್ಗಡೆ 'ಸಾಹಣಿವೆರ್ಗಡೆ' ನೋ.

ಸಾಹಣಿವೆರ್ಗಡೆ, ಸಾಹಣಿಪೆರ್ಗಡೆ (ನಾ). ಕಾಸ್ತಾರರ ಮುಖ್ಯಸ್ಥ ; ಸಾಹಣಿಗಳ ಮುಖಂಡ: ಮಹಾಪ್ರಚಣ್ಡದಣ್ಡನಾಯಕನನ್ತಬ್ಬುರಾಧ್ಯಕ್ಷಮಾ[ನಿ] ಸಾಹಣಿವೆರ್ಗ್ಗಡೆ ಲೋಕಸಹವಾಸಿಗಳಧಿಷ್ಠಾಯಕಂ (ಸೌಇಇ. XX, ೭೪-೧೭; 1112). **ಸಾಹಣಿಪೆರ್ಗಡೆ:** ಶ್ರಿಮದನ್ತಬ್ಬುರಾಧ್ಯಕ್ಷಂ ಕರಿ ತುರೆಯ ಸಾಹಣಿಪೆರ್ಗ್ಗಡೆ ಹೇರಿಕನ್ನಡಸನ್ನಿವಿಗ್ರಹಿ (ಸೌಇಇ. XV, ೨೬-೧೧; 1144). [ಸಾಹಣಿ + ಪೆರ್ಗಡೆ$_1$]

ಸಾಹಸ (ನಾ). ೧. ಪರಾಕ್ರಮ; ಶೌರ್ಯ: ಸಾಹಸಮಂ ಪೂಣ್ಣಂ ರಿಪು ಸಾಹಸಮುಂ ನಾಹಮಸ್ಮಿಯೆಂಬಿನಿತು (ಚಂದ್ರಪ್ರ. ೧೦-೧೦೦); ಸಾಹಸದ ತನಿಹೊಗರಿನಾತಗಳೆಲ್ಲಿ ಭೀಮಾರ್ಜುನರ ಬರಹೇಳು (ಕುವಾದ್ರೋ. ೧-೫೩); ಬರುವ ಚಕ್ರದ ಬಿಂಕವಲ್ಲವ ನೋಡಿ ಯತಿವರ ಶಂಕೆಯಲ್ಲದೆ ನುಂಗಿದನು ನಿಶ್ಶಂಕಸಾಹಸದಿ (ಗಗಾ. ೪-೧೦೮). ೨. ಧೈರ್ಯ; ದಿಟ್ಟತನ. ೩. ಶಕ್ತಿಯನ್ನು ಮೀರಿ ಮಾಡುವ ಕಾರ್ಯ: ಅವನು ತುಂಬ ಸಾಹಸವನ್ನು ಮಾಡಿ ಇಲ್ಲಿಗೆ ತಲುಪಿದ್ದಾನೆ (ರೂಢಿ). ೪. ಹಿಂಸೆ; ಕ್ರೌರ್ಯ. ೫. ದರೋಡೆ, ಅತ್ಯಾಚಾರ ಮುಂತಾದ ನೀಚಕಾರ್ಯ. ೬. ದುಡುಕುತನ; ಹಿಂದೆ ಮುಂದೆ ನೋಡದೆ ಮುನ್ನುಗ್ಗುವ ಪ್ರವೃತ್ತಿ: ಬೇಡ ಬೇಡಾ ಸಾಹಸಂ ದೇವಿ ಬೇಡುವೆನು (ಚಿತ್ರಾಂಗ. ೩೭-೧೦೧೯). ೭. ರಭಸ; ಜೋರು. ೮. ದಂಡನೆ ಶಿಕ್ಷೆ.

ಸಾಹಸಭೀಮ = ಪರಾಕ್ರಮದಲ್ಲಿ ಭೀಮನಂತಿರುವವನು ; ಒಂದು ಬಿರುದು: ಪತಿಹಿತಪ್ರಕಾರನೇಕಾಂಗವೀರ ಸನ್ಸ್ಮಾರಾಮ ಸಾಹಸಭೀಮ (ಎಕ. II, ೧೪೧-೧೫; 1139). **ಸಾಹಸರು** (ಬಹುವ) = ಪರಾಕ್ರಮಶಾಲಿಗಳು; ಶೂರರು: ವಿಕಟಭುಜಬಲದವರು ಸಾಹಸರು (ತುರಂಗ. ೧೩-೩). **ಸಾಹಸ ವಿದ್ಯಾಧರಿ** = ಸಾಹಸದಲ್ಲಿ ವಿದ್ಯಾಧರಸ್ತ್ರೀಯನ್ನು ಹೋಲುವವಳು; ಒಂದು ಬಿರುದು: ಧಾತ್ರೀಜನರಕ್ಷಾಮಣಿ ಸಾಹಸವಿದ್ಯಾಧರಿ ಸಕಳಕಳಾವತಿ (ಸೌಇಇ. XX, ೬೧-೯; 1094). **ಸಾಹಸವೈನತೇಯ** = ಶೌರ್ಯದಲ್ಲಿ ಗರುಡನಂತಿರುವವನು; ಒಂದು ಬಿರುದು: ಕಟಕಕಮಳಾರ್ಕ್ಕಂ ಕಾರ್ಯ್ಯಬೃಹಸ್ಪತಿ ಗುಣರತ್ನಪಯಃಬ್ಧಿ ಸಾಹಸವೈನತೇಯಂ ಸತ್ಯರಾಧೇಯಂ (ಕಇಅ. ೧-೧-೨; 1092). **ಸಾಹಸೋತ್ತುಂಗ** = ಪರಾಕ್ರಮದಲ್ಲಿ ಅಗ್ಗಳನಾದವನು; ಶ್ರೇಷ್ಠನಾದ ಶೂರ; ಒಂದು ಬಿರುದು: ತೈಲನಸಿಂಘಂ ಸಾಹಸೋತ್ತುಂಗಂ ಸರಣಾಗತವಜ್ರಪಂಜರಂ (ಸೌಇಇ.XX, ೪೧-೧೧; 1068); ಸಾಹಸೋತ್ತುಂಗಂ ಆತ್ರೇಯಗೋತ್ರಸಮುದ್ಧರಣಂ (ಸೌಇಇ. XX, ೬೪-೬; 1100). [ಸಂ.]

ಸಾಹಸತೇಜ (ನಾ). ಶೌರ್ಯದಿಂದ ಉಜ್ವಲಗೊಂಡವನು; ಕ್ಷಾತ್ರತೇಜ: ಎಲ್ಲಿ ಆರ್ಯರ ರಾಜರು - ಈಗಲ್ಲಿ ಸಾಹಸತೇಜರು? (ಹೊಂಗಳು. ೧-೧೬).

[ಸಂ. ಸಾಹಸತೇಜಸ್]

ಸಾಹಸಭೂಷಣೆ (ನಾ). ಧೈರ್ಯ ಸ್ಥೈರ್ಯಗಳೇ ಅಲಂಕಾರವಾಗಿರುವವಳು; ಅತ್ಯಂತ ಧೈರ್ಯಶಾಲಿನಿ : ಆ ಸಾಹಸಭೂಷಣೆ ನಾಲ್ಗಾಸಿರ್ವರ್ ಕುಡದ ಕೂಸುಗಳ್ಬೆರಸು . . . ಅಮಳದೀಕ್ಷೆಯಂ ಕೆಯ್ಕೊಂಡಳ್ (ಶಾಂತಿಪು. ೪-೮೪).

[ಸಂ. ಸಾಹಸಭೂಷಣಾ (ಸಾಹಸ + ಭೂಷಣ + -)]

ಸಾಹಸಮಲ್ಲ (ನಾ). ಅತ್ಯಂತ ಶೂರನಾದ ಯೋಧ; ಮಹಾಪರಾಕ್ರಮಿ: ಸಾಹಸಮಲ್ಲನಡಹಾಯಿದನು ದ್ರುಪದನು ಧನುವನೊದರಿಸುತ (ಕುವಾದ್ರೋ. ೨-೪೭); ಆಹವಮಲ್ಲವಲ್ಲಭನಾತನ ಮಗನಿಱಿವಬೆಡೆಂಗಂ ಸಾಹಸಮಲ್ಲಂ (ಸೌಇಇ. XX, ೧೯-೨೧; 1015). [ಸಂ.]

ಸಾಹಸರಸಿಕ (ನಾ). ಪರಾಕ್ರಮದಲ್ಲಿ ಆಸಕ್ತನಾದವನು, — ರುಚಿಯುಳ್ಳವನು: ಬಾಹುಬಲಿ ತನ್ನ ದಕ್ಷಿಣಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್ ಸಾಹಸರಸಿಕಂ ಕಂಡು (ಆದಿಪು. ೧೪-೧೨೦). [ಸಂ.]

ಸಾಹಸವಂತ (ನಾ). ಪರಾಕ್ರಮಿ ; ಶೂರ: ಸಾಹಸವಂತನಿಂದ್ರಿಯರತಂ ಬಹು ಮೂರ್ಖನತೀವಕಾಮುಕಂ (ದಶಕು. ೯-೬೪); ಕುದುರೆಯನೇರಿದ ಸಾಹಸವಂತ ರಾಹುತರು (ಇಟಸಾಂ. ೧೫-೪೩). [ಸಂ. ಸಾಹಸವತ್]

ಸಾಹಸಸಂಪನ್ನತೆ (ನಾ). ಪರಾಕ್ರಮದ ಶ್ರೀಮಂತಿಕೆ: ತನ್ನ ವಿಭವಂ ತನ್ನೋಜೆ ತನ್ನುದ್ಧಸಾಹಸಸಂಪನ್ನತೆಯಿಂ ಧರಾವಳೆಯಮಂ ನಾನಾವಿಧ[ಂ] ಕೂಡ ಮುದ್ರಿಸಿದಂ . . . ನೃಪಾಳೋ [ತ್ತಮಂ] (ಸೌಇಇ.XX, ೫೦-೧೧; 11ನೆಯ ಶತ). [ಸಂ. ಸಾಹಸಸಂಪನ್ನತಾ]

ಸಾಹಸಾಂಕ (ನಾ). ಹೆಸರಾದ ಕಲಿ; ಶ್ರೇಷ್ಠವೀರ: ಅಮ್ಮನ ಗಂಧವಾರಣನುಂ ಸಾಹಸಾಂಕನುಮೆನಿಸಿದ ಭೀಮಸೇನಂ (ಗದಾಯು. ೨-೧ ವ); ಕಿರಾತರಲ್ಲಿ ನೀನುಱೆ ಸಾಹಸಾಂಕನೆನಿಪಯ್ (ಶಿಪಂ. ೪-೫೩). [ಸಂ.]

ಸಾಹಸಿ (ನಾ). ೧. ಸಾಹಸಕಾರ್ಯಗಳನ್ನು ಮಾಡುವ ವ್ಯಕ್ತಿ; ಪರಾಕ್ರಮಿ: ಜಗದ್ವಿಖ್ಯಾತ ಸಾಹಸಿ ಪಾರ್ಥ ಹೇಳ್ಳೆ (ಕುವಾಉ. ೬-೧೨); ಅತಿಸಾಹಸಿ ಸರೋಧಿಮಧ್ಯಸ್ಥಿತನುದ್ಧತನಾ ಸಿಂಹಳನ್ (ರಾಜಶೇ. ೫-೧೩೧). ೨. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವ ವ್ಯಕ್ತಿ. ೩. ದುಷ್ಟಸ್ವಭಾವದ ವ್ಯಕ್ತಿ; ಕ್ರೂರಿ. ೪. ವಿಮರ್ಶೆಯಿಲ್ಲದೆ ಕೆಲಸ ಮಾಡುವವನು; ದುಡುಕುಸ್ವಭಾವದ ವ್ಯಕ್ತಿ: ಅವನು ರಾಮನಂತೆ ವೀರ, ಭೀಮನಂತೆ ಸಾಹಸಿ (ಸಾಹಿಸ. ೧೫). [ಸಂ. ಸಾಹಸಿನ್]

ಸಾಹಸಿಕ (ನಾ). = ಸಾಹಸಿ ೧ : ಸಾಹಸಿಕಂ ಮುರಾರಿ ಪುಗುತಂದಂ . . . ಶಸ್ತ್ರಗೇಹಮಂ (ಜಗವಿ. ೬-೨೮); ಸಾಹಸಿಕನಾದಡೆ ನಿಲ್ಲೆನುತ ಮೂದಲಿಸಿದನು ಶಲ್ಯ (ಕುವಾಶ. ೩-೫೮). [ಸಂ.]

ಸಾಹಸಿಕೆ (ನಾ). ಶೌರ್ಯ; ಪರಾಕ್ರಮ: ಇವರ ಸಾಹಸಿಕೆಯನಱಿದವವು (ತ್ರಿಪುಸಾಂ. ೧೪-೧೫೭); ಹಿರಿಯರು ಕಟ್ಟಾಳ್ತನದ ಸಾಹಸಿಕೆಯ ಪರಾಕ್ರಮದಿಂದ ಸಂಪಾದಿಸಿ ತಮ್ಮ ಕೆಯ್ಗಾಪಿಗೊಪ್ಪಿಸಿರುವ ರಾಜ್ಯಶ್ರೀಗೆ (ಚಟ್ಟಲ. ೨೪-೨೫). [ಸಾಹಸ + - ಇಕೆ]

ಸಾಹಸಿಗ, ಸಾಹಸೀಕ (ನಾ).= ಸಾಹಸಿ ೧ : ಬೇಹಿನ ಸಾಹಸಿಗನೊರ್ವಂ ಪುರಕೆ ಪರಿತಂದು (ಬಸರ. ೧೦-೧೮); ಇದು ಕೈದುಕಾಱರ ಠಾವು ಸಾಹಸಿಗರಿಗೆ ಸಮಯವಿದು (ಕುವಾದ್ರೋ. ೧೪-೨೬); ಅದರಲ್ಲಿ ತನ್ನಂತಹ ಸಾಹಸಿಗನಿಗೆ ನ್ಯಾಯವಾದ ಹಕ್ಕು ಇದೆ (ಮುಂಗಾಮು. ೬೧). **ಸಾಹಸೀಕ** : ಗಮನ ತಟ್ಟೆಯವಾಯ್ತು . . . ಸಾಹಸೀಕರು ಭ್ರಮಿಸುತಿದೆ (ಕುವಾದ್ರೋ. ೧೦-೨೫). 'ಸಾಸಿಗ' ಪರಾ. [ಸಾಹಸ + - ಇಗ]

ಸಾಹಸಿಗತನ (ನಾ). ೧. ಶೌರ್ಯ; ಪರಾಕ್ರಮ . ೨. ಧೈರ್ಯ ಸ್ಥೈರ್ಯಗಳಿಂದ ಕೂಡಿರುವಿಕೆ: ಸಾಹಸಿಗತನದಿಂದಲಾ ನಿರ್ಮೋಹದಲಿ ನಿಲುವವನೆ ನಿತ್ಯನು (ಪ್ರಭುಲಿಂ. ೧೩-೬೨). [ಸಾಹಸಿಗ + - ತನ]

ಸಾಹಸಿತನ (ನಾ). = ಸಾಹಸಿಗತನ ೧ : ಕುಸುದಿ ಕುಸುಕಿಱಿದು ಪೊಸೆದು ಪೂಳ್ಳ ಸಾಹಸಿತನಕೆ ಬೆರಸಿದ ಮಲ್ಲನನೊರಸಿ ಬಿಡುವ (ಗಿರಿಕ. ೨-೧೦೫ ವ).

[ಸಾಹಸಿ + - ತನ]

ಸಾಹಸೀಕ 'ಸಾಹಸಿಗ' ನೋ.

ಸಾಹಸೋನ್ನತಿ (ನಾ). ಪರಾಕ್ರಮದ ಅತಿಶಯತೆ; ಶೌರ್ಯಾಧಿಕ್ಯ: ಹೂಸಿಕದ ಹೂಣಿಗತನವ ಸೊನ್ನಾರವಿದ್ಯೆಯ ಸಾಹಸೋನ್ನತಿಯ ಸೊಗಸ ಹುಟ್ಟಿಸಿ ಸುಲಿವ ರಸವಾದಿಗಳನಿವರ ವಿಡಾಯಿಗಳ . . . ಕರ್ಣ ನೋಡೆಂದ (ಕುವಾದ್ರೋ. ೧೬-೨೫). [ಸಂ.]

ಸಾಹಸ್ರ (ಗು). ೧. ಸಾವಿರಕ್ಕೆ ಸಂಬಂಧಿಸಿದ ; ಸಹಸ್ರಸಂಬಂಧವಾದ. (ನಾ). ೨. ಸಾವಿರವನ್ನುಳ್ಳುದು ; ಸಹಸ್ರಸಂಬಂಧವಾದುದು. ೩. ಸಾವಿರಗಳ ಮೊತ್ತ; ಸಹಸ್ರಗಳ ಗುಂಪು. ೪. ಸಾವಿರಸೈನಿಕರನ್ನುಳ್ಳ ಸೈನ್ಯ. ೫. ಸಾವಿರಸೈನಿಕರನ್ನುಳ್ಳವನು : "ಸಾಹಸ್ರಃ, ಸಹಸ್ರಿನ್ . . . ಯಾರು ಸಾವಿರದ ಲೆಕ್ಕವುಳ್ಳ ಸೈನ್ಯದಿಂದ ಬಲವುಳ್ಳವರೋ ಅಂಥವರ ಹೆಸರುಗಳು" (ಸಿದ್ಧಾಂತ. ೨೫೫). ೬. ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು : ಕಾಮಿಕ . . . ಸೂಕ್ಷ್ಮ, ಸಾಹಸ್ರ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). [ಸಂ.]

ಸಾಹಾಯ್ಯ (ನಾ). ಸಹಾಯ; ಒತ್ತಾಸೆ; ನೆರವು: ಮುರಾರಿಯ ಪರಮಸಾಹಾಯ್ಯದಲಿ ಸಾಹಸಮಲ್ಲನುರವಣಿಸೆ (ಕುಮಾರ್ಯೋ.೯-೩೮); ಪಾಕಶಾಸನ ಮುಖ್ಯದೇವತಾನಿಚಯಕ್ಕನೇಕಸಾಹಾಯ್ಯಮನ್ನೆಸಗಿ ಸತ್ಕೀರ್ತಿಯಂ ಜೋಕೆಯಿಂ ಗಳಿಸಿ (ವಂಕಾರಾ. ೨-೨-೯). [ಸಂ.]

ಸಾಹಿಣಿ 'ಸಾಹಣಿ' ನೋ.

ಸಾಹಿತಿ (ನಾ). ರಸಾವಹವಾದ ಕೃತಿಗಳನ್ನು ರಚಿಸುವವನು; ಬರಹಗಾರ; ಲೇಖಕ : ರವೀಂದ್ರರು . . . ಒಳ್ಳೆಯ ಸಾಹಿತಿಗಳಿದ್ದಂತೆ ಒಳ್ಳೆಯ ಸಂಗೀತಜ್ಞರೂ ಇದ್ದರು (ಧರ್ಮಸಾ. ೬೪); ಚಿತ್ರಕಾರರು ಚಿತ್ರಕಲಾಪ್ರದರ್ಶನದ ಕಡೆಗೂ ಸಾಹಿತಿಯೊಬ್ಬನು ನೂತನ ಪುಸ್ತಕಗಳ ಕಡೆಗೂ . . . ಗಮನ ಕೊಡುತ್ತಾರೆ (ಶಕ್ತಿದ. ೪೦೦).

[ಸಂ. ಸಾಹಿತೀ./ ತೆಲು. ಸಾಹಿತಿ = ಪಾಂಡಿತ್ಯ]

ಸಾಹಿತಿಯ 'ಸಾಯಿತ್ಯ' ನೋ.

ಸಾಹಿತ್ಯ (ನಾ). ೧. ಸಾಹಚರ್ಯ; ಸಂಬಂಧ: ಕರ್ತೃಕೂಡಲಸಂಗಮದೇವರ ಒಲವಿನ ದಯದ ಚಿತ್ತವಿಡಿದಂಗಲ್ಲದೆ ಶಿವತತ್ತ್ವ ಸಾಹಿತ್ಯವಾಗದು (ಬಸವ. ೦೦೬); ಅಂತಪ್ಪ ಪರಬ್ರಹ್ಮವ ಸರ್ವಾಂಗದಲ್ಲಿ ಸಾಹಿತ್ಯವ ಮಾಡಿಕೊಂಡು ಲಿಂಗಾಂಗಸಮರಸಾನಂದದಲ್ಲಿ ಅವಿರಳಜ್ಞಾನಪ್ರಸಾದವನಾರೋಗಿಸುತಿರ್ದ (ಕೋಲಶಾಂ. ೨೦-೧೪); ಸಾಂಗತ್ಯವಿಲ್ಲದ ಸಂಸಾರವೇತಕೆ ಬರಿಯ ಸಾಹಿತ್ಯವೆ ಸಾಕೆ (ಇಂಚಾಪ. ೧೭೮-೭೯). ೨. ರಸಾವಹವಾದ ಕಾವ್ಯ, ನಾಟಕ, ಕಥೆ, ಕಾದಂಬರಿ, ಪ್ರಬಂಧ ಮುಂತಾದ ವಿವಿಧ ಪ್ರಕಾರಗಳನ್ನೊಳಗೊಂಡ ಸೃಜನಾತ್ಮಕ ಬರವಣಿಗೆ : ವ್ಯಾಕರಣಮರ್ಥಶಾಸ್ತ್ರಾನೀಕಂ ಸಾಹಿತ್ಯವಿದ್ಯೆಯಿತಿಹಾಸಂ ಮಿಕ್ಕೇಕಾಕ್ಷರಮಿ(ಮು)ನಿತರ್ಕ್ಕಂ ಟೀಕಂಬರೆಯಲ್ಸಮಗ್ರರಾಭ್ಯಾ[ಸಿಸುವ] ರ್ (ಎಇ XIII, ೩೩೨-೫೪; 929); ಬರೆಹ ವಾಚನ . . . ವ್ಯಾಕರಣ ಸಂಗೀತ ಸಾಹಿತ್ಯ . . . ಮುಖೋದ್ಗತಂ ಬಸವಂಗೆ (ಬಸಪು. ೩-೪೨); ರಸಾತ್ಮಕವಾಗಿದ್ದು ಜನಸಾಮಾನ್ಯಕ್ಕೂ ಹೃದಯಾನಂದವನ್ನು ಉಂಟುಮಾಡುವುದು ಸಾಹಿತ್ಯ (ಕೈಪಿಡಿ. ೧೬೮). ೩. ಕಾವ್ಯಲಕ್ಷಣಶಾಸ್ತ್ರ. ೪. ಕಾವ್ಯಲಕ್ಷಣಪರಿಣತಿ : ತನುವಿಂದೊಂದು ಗುಣಂಗಳಿಂದರಡು ಸಾಹಿತ್ಯಂಗಳಿಂ ಮೂಱು ಸನ್ನಯದಿಂ ನಾಲ್ಕು . . . ತನಗಿನ್ನಾರ್ಪರಿ ನಾಗವರ್ಮಕೃತಿಗೆಂದಂ ಕಾಳಿದಾಸಂಬರಂ (ಧಂಡೋಂಬು.೧-೨೫). ೫. (ಅಮೂಲ್ಯವಾದ) ಸಾಮಗ್ರಿ; ಸಲಕರಣೆ: ಮೇನೆಯುಂ ಗಿರರಾಜನುಂ ಕಣ್ ತೀವಿ ನೋಡಿ . . . ಸಾಹಿತ್ಯಮಂ ಸಯ್ತುಡುವಂತೆ ಪ್ರಾಣಮಂ ಪರಿರಕ್ಷಿಪಂತೆ . . . ಮುಕ್ತಿಯಂ ಮೂರ್ತಿಗೊಳಿಸುವಂತೆ ಪಾರ್ವತಿಯಂ ಸಲಹುತ್ತುಮಿರೆಯಿರೆ (ಗಿರಿ. ೩-೧೧೯ ವ); ತಮ್ಮ ರಾಜ್ಯದಿಂದ ಆಗುವಂಥಾ ಸಾಹಿತ್ಯ ಮಾಡಿಸಿ ಕೊಟ್ಟು (ರಾಜೇಂದ್ರ. ೭೧); ಅವಳು ಮೈ ತೊಳೆದುಕೊಂಡು ದೇವರ ಪೂಜೆಯ ಸಾಹಿತ್ಯವನ್ನು ಸರಿಪಡಿಸಬೇಕೆನ್ನುವಾಗ (ನಿರಾಧಾ. ೫೩). ೬. ಒಂದು ಗೊತ್ತಾದ ವಿಷಯವನ್ನೊಳಗೊಂಡ ವೈಜ್ಞಾನಿಕವೂ ಶಾಸ್ತ್ರೀಯವೂ ಆದ ಸೃಜನೇತರ ಬರವಣಿಗೆ. ೭. ಒಂದು ನಿರ್ದಿಷ್ಟ ದೇಶ, ಭಾಷೆ ಅಥವಾ ಕಾಲದಲ್ಲಿ ಸೃಷ್ಟಿಯಾದ ಸಮಗ್ರ ಬರವಣಿಗೆ. ೮. ಪ್ರಚಲಿತ ವಿಚಾರಗಳಿಗೆ ಸಂಬಂಧಿಸಿದ ಉಪಯುಕ್ತಮಾಹಿತಿಗಳನ್ನೊಳಗೊಂಡ ಬರವಣಿಗೆ. ೯. ಯಾವುದೇ ಬಗೆಯ ಮುದ್ರಿತವಿಷಯ. ೧೦. ವಿದ್ವಾಂಸ; ಪಂಡಿತ: ಕಡತನಕಮೇಗುತ್ತರೋತ್ತರವನೀವ ಭಾಷೆಗಳನವಧರಿಸುವುದು ಸಾಹಿತ್ಯರು (ಸೋಮಚಿ. ೧-೨೫); ಕೂಡಿತಿದು ಪುಣ್ಯದಲಿ ಸುರಸತಿ ಮಾಡಿದವಕೃತಿ ನಿನ್ನ ಭಾಷೆಯ ಬೀಡ ಸಲಹಿದುದಱಿಯೆ ನೀ ಸಾಹಿತ್ಯನಲ್ಲೆಂದ (ಕುಮಾಅ.೮-೫೩). ೧೧. ಭೋಜನಸಾಮಗ್ರಿ,- ಪದಾರ್ಥ.

ಸಾಹಿತ್ಯ ಮಾಡಿಕೊಳ್ಳು = ಸಜ್ಜುಮಾಡಿಕೊಳ್ಳು; ಸಿದ್ಧಪಡಿಸಿಕೊಳ್ಳು : ನಾವು ದುಡುಕದೆ ಸ್ವಲ್ಪ ಸಾಹಿತ್ಯ ಮಾಡಿಕೊಂಡು . . . ಮುತ್ತಿಗೆ ಹಾಕಿದರೆ ಖಿಲ್ಲೆ ಸ್ವಾಧೀನವಾಗುವುದು (ಚತ್ರಪಾ. ೭೭). [ಸಂ.]

ಸಾಹಿತ್ಯಕ (ಗು). ರಸಾವಹವಾದ ಕೃತಿಗಳಿಗೆ ಸಂಬಂಧಿಸಿದ,- ಬರವಣಿಗೆಗೆ ಸಂಬಂಧಪಟ್ಟ : ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ - ಎಲ್ಲ ಬಗೆಯ ಕ್ರಾಂತಿಗಳೂ ಆ ಕಾಲದಲ್ಲಿ ಕಂಡು ಬರುವವು (ಸಾಹಿಸ. ೧೩೪); ಸಣ್ಣಪುಟ್ಟ ಸಾಹಿತ್ಯಕ ಚಳುವಳಿಗಳು ನವ್ಯಮಾರ್ಗದಲ್ಲಿಯೇ ಲಯವಾಗಿ ಸಫಲವಾದವು (ನವ್ಯಕಾ.೨೭). [ಸಂ.]

ಸಾಹಿತ್ಯಕಾರ (ನಾ). ರಸಾವಹವಾದ ಕೃತಿಗಳನ್ನು ರಚಿಸುವವನು ; ಬರಹಗಾರ; ಸಾಹಿತಿ : ಒಬ್ಬ ವ್ಯಕ್ತಿಯನ್ನು ಸಾಹಿತ್ಯಕಾರ . . . ಅಥವಾ ಆತನ ಕೃತಿಯನ್ನು ಸಾಹಿತ್ಯ ಎಂದು ಕರೆಯಬೇಕಾದರೆ ಅಲ್ಲಿ ನಾವು ಸಾಮಾನ್ಯವಾಗಿ ಅರಸುವುದು ಆತನ 'ಆತ್ಮಾಭಿವ್ಯಕ್ತಿ' ಯನ್ನು (ಶ್ರೇಷ್ಠಪ್ರ. ೪೨); ಈ ಉಲ್ಲಂಘನೆ ಎಲ್ಲೆಲ್ಲಿ ಎಷ್ಟು ತಕ್ಕುದು ಅಥವಾ ತಗದು ಎಂಬ ವಿವೇಕ ಸಾಹಿತ್ಯಕಾರನಿಗೆ ಇರಬೇಕು (ಸಂಶೋಧ. IV. ೮೦೯). [ಸಂ.]

ಸಾಹಿತ್ಯಕ್ಷೇತ್ರ (ನಾ). ಬರಹಗಾರರ ರಸಾವಹವಾದ ಕೃತಿರಚನೆಗೆ ಸಂಬಂಧಿಸಿದ ವಲಯ,- ಬರವಣಿಗೆಗೆ ಸಂಬಂಧಪಟ್ಟ ಕ್ಷೇತ್ರ: ಸಾಹಿತ್ಯಕ್ಷೇತ್ರದಲ್ಲಿಯೂ ಮಾನವದೃಷ್ಟಿ ಇಂದು ಮಲಿನವಾಗಿದೆ (ನವ್ಯಕಾ. ೪). [ಸಂ.]

ಸಾಹಿತ್ಯಗುಣ (ನಾ). ರಸಾವಹವಾದ ಬರವಣಿಗೆಯ ಸಾರಲಕ್ಷಣ: ಸಾಹಿತ್ಯಗುಣವು ಮುಖ್ಯವಾಗಿ ಜನಜೀವನಗುಣದ ಪ್ರತಿಫಲ (ಜೀವಸಾ. ೪೯). [ಸಂ.]

ಸಾಹಿತ್ಯಗೋಷ್ಠಿ (ನಾ). ಬರಹಗಾರರ ರಸಾವಹವಾದ ಬರವಣಿಗೆಗಳನ್ನು ಕುರಿತಾದ ಚರ್ಚೆ, ವಾಚನ ಮುಂತಾದುವುಗಳಿಗಾಗಿ ಸೇರಿದ ಕೂಟ,- ಸಭೆ : ಸಾಹಿತ್ಯಗೋಷ್ಠಿಯ ಈ ಶುಭಪ್ರಸಂಗದಲ್ಲಿ ತಮ್ಮೆಲ್ಲರ ಸಹವಾಸ ಅಲ್ಪಾವಧಿಯಾದರೂ ದೊರೆತುದು ನನ್ನ ಸುದೈವ (ನವ್ಯಕಾ. ೧); ಈಗ ತಾವು ತುಸು ತಡೆದು ನಮ್ಮ ಸಾಹಿತ್ಯಗೋಷ್ಠಿಯಲ್ಲಿ ಭಾಗವಹಿಸಿ ಅನಂತರ ದಯಮಾಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇವೆ (ಪುನರು. ೨೦೬). [ಸಂ.]

ಸಾಹಿತ್ಯಚರಿತ್ರೆ (ನಾ). ಒಂದು ಭಾಷೆಯ ವಿವಿಧಕ್ಷೇತ್ರಗಳಿಗೆ ಸೇರಿದ ಲೇಖಕರ ಜೀವನ ಹಾಗೂ ಕೃತಿಗಳಿಗೆ ಸಂಬಂಧಿಸಿದ ಇತಿಹಾಸ ಮತ್ತು ಅವುಗಳನ್ನೊಳಗೊಂಡ ಗ್ರಂಥ : ಸಾಹಿತ್ಯಚರಿತ್ರೆಯಲ್ಲಿ ಜನಪದಸಾಹಿತ್ಯಕ್ಕೆ ಮೇಲಾದ ಸ್ಥಾನವಿದೆ (ಕಸಾಚ. ೧). [< ಸಂ. ಸಾಹಿತ್ಯಚರಿತ]

ಸಾಹಿತ್ಯಜ್ಞಾನ (ನಾ). ರಸಾವಹವಾದ ಬರವಣಿಗೆಗಳ ಬಗೆಗಿನ ತಿಳಿವಳಿಕೆ: ಕವಿತಾಶಕ್ತಿ ಮತ್ತು ಸಾಹಿತ್ಯಜ್ಞಾನವು ಸೇರಿ ಕಾವ್ಯವು ಉತ್ಪತ್ತಿಯಾಗುವ ಅಂಶವೂ ಕಾವ್ಯರಚನೆಯು ಪವಿತ್ರಕಾರ್ಯವೆಂಬುದೂ ಇದರಿಂದ ತೋರಿಬರುತ್ತದೆ (ಭಾರದ. ೪೪೮). [ಸಂ.]

ಸಾಹಿತ್ಯನಿರ್ಮಿತಿ (ನಾ). ರಸಾವಹವಾದ ಕೃತಿಯ ರಚನೆ , — ಬರವಣಿಗೆಯ ಸೃಷ್ಟಿ : ಸಾಹಿತ್ಯನಿರ್ಮಿತಿಯಲ್ಲಿ ಮಾತ್ರ ಈಚೀಚೆಗೆ ಇದಕ್ಕೆ ಅಷ್ಟಾಗಿ ಪ್ರಾಶಸ್ತ್ಯ ಪ್ರಾಥಮ್ಯಗಳು ದೊರೆತಿಲ್ಲ (ಕಾವ್ಯಕು. ೧೬); ೧೨ ನೆಯ ಶತಮಾನದ ಮುಂದೆ ಔತ್ತರೇಯಗೌಡೀಯ ಭಾಷೆಗಳಲ್ಲಿ ಸಾಹಿತ್ಯನಿರ್ಮಿತಿಗೆ ಪ್ರಾರಂಭವಾಯಿತೆನ್ನಬಹುದು (ಸಾಹಿಸ. ೩೮). [ಸಂ.]

ಸಾಹಿತ್ಯಪ್ರಕಾರ (ನಾ). ೧. ಗದ್ಯ, ಪದ್ಯ ಮತ್ತು ಮಿಶ್ರ ಅಥವಾ ಚಂಪೂ ಎಂಬ, ಬರವಣಿಗೆಯ ಮೂರು ಬಗೆ. ೨. ಕಾವ್ಯ, ನಾಟಕ, ಕಥೆ, ಕಾದಂಬರಿ, ಪ್ರಬಂಧ ಮುಂತಾದ, ರಸಾವಹವಾದ ಬರವಣಿಗೆಯ ಪ್ರಭೇದ: ಸಾಹಿತ್ಯಪ್ರಕಾರಗಳು ವಿವಿಧವಾಗಿರುವುದಲ್ಲದೆ ಒಂದೊಂದು ಪ್ರಕಾರದಲ್ಲಿಯೂ ಸಣ್ಣಪುಟ್ಟ ಭೇದಗಳನ್ನು ಕಾಣಬಹುದು (ನವ್ಯಕಾ. ೩). [ಸಂ.]

ಸಾಹಿತ್ಯಪ್ರಭೇದ (ನಾ). = ಸಾಹಿತ್ಯಪ್ರಕಾರ : ಸಾಹಿತ್ಯಪ್ರಭೇದಗಳು, ಪುರಾಣ ಸಾಹಿತ್ಯದ ಲಕ್ಷಣಗಳು - ಇವುಗಳನ್ನು ಕುರಿತು ಎರಡು ಲೇಖ ಇವೆ (ಸಾಹಿಸ. ೪ ನಿವೇದನೆ).

[ಸಂ.]

ಸಾಹಿತ್ಯಪ್ರೇಮಿ (ನಾ). ರಸಾವಹವಾದ ಕೃತಿಗಳನ್ನು ಆಸಕ್ತಿಯಿಂದ ಅಭ್ಯಾಸಮಾಡುವುದು, ಓದುವುದು, ಕೇಳುವುದು ಮುಂತಾದುವುಗಳ ಕಡೆಗೆ ಒಲವಿರುವ ವ್ಯಕ್ತಿ : ಅವರಂತಹ ವಿದ್ವತ್‌ಪಕ್ಷಪಾತಿಗಳೂ ಸಾಹಿತ್ಯಪ್ರೇಮಿಗಳೂ ಸಹಾಯಕರ್ತರೂ ದೊರಕುವುದು ಸುಲಭವಲ್ಲ (ಜೀವಸಾ. ೫೧).

[ಸಂ. ಸಾಹಿತ್ಯಪ್ರೇಮಿನ್]

ಸಾಹಿತ್ಯಭಾವ (ನಾ). ಹಿತಕರವಾದ ನಡವಳಿಕೆ; ಒಳ್ಳೆಯ ಪ್ರವೃತ್ತಿ: ಮುಂದೆ ಗುರುವನು ಬಂಧುಜನವನು ಹಿಂದೆ ಕರ್ಮಾಂತ್ಯದಲಿ ಸೇವಕವೃಂದವನು ಕೊಂಡಾಡುವುದು ಸಾಹಿತ್ಯಭಾವವಿದು (ಕುಮಾಅ. ೩-೬೬). [ಸಂ.]

ಸಾಹಿತ್ಯಭಾಷೆ (ನಾ). ೧. ಸಹಾನುಭೂತಿಯ ಮಾತು: ಪಾಂಡುನಂದನರು ಗಾಸಿಯಾದರು ಗಟ್ಟಬೆಟ್ಟದ ಪೈಸರದೊಳೆಂದಳಲಿ ಮಱುಗುತ ಸೂಸಿದ್ದೆ ಸಾಹಿತ್ಯ ಭಾಷೆಯನೆಂದನಾ ಕರ್ಣ (ಕುಮಾಅ. ೧೭-೧೭). ೨. ಕೃತಿರಚನೆಯಾಗಿ ಲಿಖಿತರೂಪದಲ್ಲಿ

ಪ್ರಕಟವಾಗಲು ಸಮರ್ಥವಾಗಿರುವ ಪರಂಪರಾಗತವಾದ ಭಾಷೆ; ಸಾಹಿತ್ಯವು ವ್ಯಕ್ತಗೊಳ್ಳುವ ನುಡಿ : ಸಾಹಿತ್ಯಭಾಷೆಯಲ್ಲಾದರೂ ಅದು ಒದುಗೂಡಿರುವುದು ಅವಶ್ಯಕ (ಸಂಶೋಧ. ೬೯). [ಸಂ. ಸಾಹಿತ್ಯಭಾಷಾ]

ಸಾಹಿತ್ಯರಂಗ (ನಾ). = ಸಾಹಿತ್ಯಕ್ಷೇತ್ರ : ನಾನು ಈ ವಯಸ್ಸಿನಲ್ಲಿ ಸಾಹಿತ್ಯರಂಗಕ್ಕೆ ಕಾಲಿಟ್ಟಿರುವುದು ಸ್ವಲ್ಪ ವಿಮರ್ಶಾರ್ಹವಾದ ವಿಷಯವೇ (ಚಂಗಾಳ್ವ. ೧, ಮುನ್ನುಡಿ). [ಸಂ.]

ಸಾಹಿತ್ಯರಸ (ನಾ). ರಸಾವಹವಾದ ಬರವಣಿಗೆಯನ್ನು ಓದಿದಾಗ ಅಥವಾ ಕೇಳಿದಾಗ ಉಂಟಾಗುವ ಆನಂದ; ಸಾಹಿತ್ಯದ ಸ್ವಾರಸ್ಯವು ಒದಗಿಸುವ ಸಂತೋಷ : ಸಾಹಿತ್ಯರಸದ ರುಚಿಯು ಶಂಕರನಿಗಾದರೂ ತಿಳಿಯುವುದೋ ಇಲ್ಲವೋ (ಜೀವಪಾ. ೧೪೧); ಸಾಹಿತ್ಯರಸದ ಆಸ್ವಾದದಲ್ಲಿ ವಿಮುಖನಾಗಿದ್ದ ಭೂಪತಿಯ ಬಳಿಗೆ ತಂದು . . . ಹೀಗೆ ನೆಲೆದಪ್ಪಿಸಿದಿಟ್ಟಿದ್ದಕ್ಕೆ ಅಮಲನು . . . ಸಿಡಿಮಿಡಿಗೊಂಡನು (ಇಷ್ಟಕ. ೨೪೧). [ಸಂ.]

ಸಾಹಿತ್ಯರೇಖೆ (ನಾ). ಹಿತವಾಗಿ ಜೊತೆಗೂಡಿರುವಿಕೆ; ಸಖ್ಯ : ಸಾಕಿದನ ಸಮಯಕೆ ಸುಳಿದಿರೈ ಸಾಹಿತ್ಯರೇಖೆಯಲಿ (ಕುವ್ಯಾಗ. ೪-೩೧). [ಸಂ. ಸಾಹಿತ್ಯರೇಖಾ]

ಸಾಹಿತ್ಯವಿದ್ಯೆ (ನಾ). ಕಾವ್ಯಲಕ್ಷಣಶಾಸ್ತ್ರ : ಪ್ರಕಟತೋಕ್ತಿ ವಿವಿಕ್ತಕಳಾಕಳಾಪಕನು ವಾಹಿತಸಾಹಿತ್ಯವಿದ್ಯೆಯೊಳ್ (ಕವಿರಾ. ೩-೨೧೮); ರೂಪಕಶಾಸ್ತ್ರವು . . . ಸಾಹಿತ್ಯವಿದ್ಯೆಯ ಶಿರೋರತ್ನವಾಗಿದೆ (ಸಾಮಿ. ೩).

ಸಾಹಿತ್ಯವಿದ್ಯಾವಿತರ್ಕ = ಕಾವ್ಯಲಕ್ಷಣಶಾಸ್ತ್ರದಲ್ಲಿ ಪರಿಣತನಾದವನು; ಒಂದು ಬಿರುದು : ಮಹಾಪ್ರಚಣ್ಡದಣ್ಡನಾಯಕಂ ವೈರಿನಾಯಕಾ ಸಾಹಿತ್ಯವಿದ್ಯಾವಿತರ್ಕ್ಕಂ ಕಟಕಮಲಾರ್ಕ್ಕಂ (ಕಾಇ. ೮-೩-೨೮೦; 1062). [ಸಂ. ಸಾಹಿತ್ಯವಿದ್ಯಾ]

ಸಾಹಿತ್ಯವಿಮರ್ಶೆ (ನಾ). ಸಾಹಿತ್ಯಕೃತಿಗಳ ಗುಣದೋಷಗಳನ್ನು ಪರಿಶೀಲನೆ ಮಾಡಿ ಮೌಲ್ಯಮಾಪನಮಾಡುವುದು : ಇವು ಕಾವ್ಯದ ಭವಿತವ್ಯಕ್ಕೂ ಸಾಹಿತ್ಯವಿಮರ್ಶೆಗೂ ಹೆಚ್ಚು ಉಪಕಾರಿಗಳಾಗಿವೆ (ನವ್ಯಕಾ. ೧೩೦). [ಸಂ. ಸಾಹಿತ್ಯವಿಮರ್ಶ]

ಸಾಹಿತ್ಯಸಂಘ (ನಾ). ಸಾಹಿತ್ಯದಲ್ಲಿ ಆಸಕ್ತಿಯಿರುವವರು ಸಾಹಿತ್ಯಸಂಬಂಧವಾದ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ರಚಿಸಿರುವ ಸಂಸ್ಥೆ.-- ಕೂಟ: ಈಗಾಗಲೇ ಅನೇಕಸ್ಥಳಗಳಲ್ಲಿ ಕರ್ನಾಟಕ ಸೇವಾಸಮಿತಿಗಳೂ ಸಾಹಿತ್ಯಸಂಘಗಳೂ ಏರ್ಪಾಟಾಗಿವೆ (ಸಾಹಿ. ೫೭); ಸಾಹಿತ್ಯಸಂಘಗಳು ತಮ್ಮ ಕಾರ್ಯರಂಗವನ್ನು ಕೇವಲ ಸಾಹಿತ್ಯಕ್ಕೆ ಅಡಕಮಾಡಿಕೊಳ್ಳಬೇಕಾದ ಅಗತ್ಯವಿಲ್ಲ (ಸಾಹಿಪ್ರೀ. ೩೪). [ಸಂ.]

ಸಾಹಿತ್ಯಸಮ್ಮೇಲನ, ಸಾಹಿತ್ಯಸಮ್ಮೇಳನ (ನಾ). ಒಬ್ಬ ಅಧ್ಯಕ್ಷರ ನೇತೃತ್ವದಲ್ಲಿ ಸಾಹಿತ್ಯದ ವಿವಿಧವಿಷಯಗಳನ್ನು ಕುರಿತು ಸಾಹಿತ್ಯಜ್ಞರು ಕಲೆತು ಚರ್ಚೆ ಮಾಡಲು ಕರೆಯುವ ಅಧಿವೇಶನ : ಪೂಜ್ಯ ಪಂಜೆ ಮಂಗೇಶರಾಯರ ಹಿರಿತನದಲ್ಲಿ ನೆರೆದ ಸಾಹಿತ್ಯಸಮ್ಮೇಲನದ ಅಂಗವಾದ ಕವಿಗೋಷ್ಠಿಯ ಅಧ್ಯಕ್ಷಸ್ಥಾನವು ನನ್ನದಾಗಿತ್ತು (ನವ್ಯಕಾ. ೧). **ಸಾಹಿತ್ಯಸಮ್ಮೇಳನ** : ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದ ಸಾಹಿತ್ಯಸಮ್ಮೇಳನದಲ್ಲಿ ಈ ರೀತಿಯಾದ ಒಂದು ನಿರ್ಣಯವು ಅಂಗೀಕೃತವಾಗಿದೆ (ಸಾಹಿ. ೫೭). [ಸಂ.]

ಸಾಹಿತ್ಯಸಮ್ಮೇಳನ 'ಸಾಹಿತ್ಯಸಮ್ಮೇಲನ' ನೋ.

ಸಾಹಿತ್ಯಸೃಷ್ಟಿ (ನಾ). ಸೃಜನ ಅಥವಾ ಸೃಜನೇತರ ಬರವಣಿಗೆಯ ರಚನೆ : ಸಾಹಿತ್ಯಸೃಷ್ಟಿಗೆ ಈ ಶತಮಾನದಲ್ಲಿ ಇಡಿಯ ಭಾರತವರ್ಷದಲ್ಲಿಯೇ ಕರ್ನಾಟಕವು ಕೇಂದ್ರವಾಗಿದ್ದಿತೆಂಬುದು ಇದರ ಮೇಲಿಂದ ದೃಢವಾಗುವುದು (ಸಾಹಿಸ. ೫೨); ಸಾಹಿತ್ಯಸೃಷ್ಟಿಯಲ್ಲಿ ಕಣ್ಣೀರಿನ ಮಿಡಿತವು ಶಾಶ್ವತವಾದ ಗಂಭೀರವಾದ ಪರಿಣಾಮವನ್ನುಂಟು ಮಾಡಬಲ್ಲುದು (ಸಾಸಮಾ. ೧೭೦). [ಸಂ.]

ಸಾಹಿತ್ಯಸೇವೆ (ನಾ).ಸಾಹಿತ್ಯಕೃತಿಗಳ ರಚನೆಮಾಡುವುದು ಮತ್ತು ಅವುಗಳ ರಚನೆ, ಪ್ರಸಾರ, ಉನ್ನತಿಗಾಗಿ ಆಸಕ್ತವಹಿಸಿ ದುಡಿಯುವುದು: ಧಾರವಾಡದ ಆಲೂರ ವೆಂಕಟರಾಯರು . . . ಅನೇಕರಿಗೆ ಸಾಹಿತ್ಯಸೇವೆಯ ದೀಕ್ಷೆಯನ್ನು ಕೊಟ್ಟರು (ಸಾಸಮಾ ೮). [ಸಂ. ಸಾಹಿತ್ಯಸೇವಾ]

ಸಾಹಿತ್ಯಿಕ (ಗು). ೧. = ಸಾಹಿತ್ಯಕ : ಶಾಂತವನ್ನು ಸಾಹಿತ್ಯಿಕರಸವೆಂದು ಒಪ್ಪಿಕೊಳ್ಳಬಹುದೋ ಇಲ್ಲವೋ (ಸಾಹಿಸಂ. ೯); ಅಕ್ಕಮಹಾದೇವಿ ಹೊಸಯುಗದ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕಕ್ರಾಂತಿಗಳೆಲ್ಲ ಮೈವೆತ್ತು ಬಂದ ರೂಪದಂತಿದ್ದಾಳೆ (ಕರ್ನಾಕ. ೬೯). (ನಾ). ೨. ಸಾಹಿತ್ಯಕ್ಕೆ ಸಂಬಂಧಪಟ್ಟುದು : ಪೊಫ್ಲರ್ ಕಲೆ ನಿರೂಪಣಾತ್ಮಕವೂ ಸಾಹಿತ್ಯಿಕವೂ ವಾಸ್ತವವೂ ಆಗಿತ್ತು (ಭಾರದ ೫೮೯). [ಸಂ.]

ಸಾಹಿತ್ಯೇತಿಹಾಸ (ನಾ). = ಸಾಹಿತ್ಯಚರಿತ್ರೆ : ಒಬ್ಬ ವ್ಯಕ್ತಿಯ ಹೆಸರಿನಿಂದ ಸಾಹಿತ್ಯವೊಂದು ಬೆಳೆದುದು ಸಾಹಿತ್ಯೇತಿಹಾಸದಲ್ಲಿ ಇದೇ ಮೊದಲು (ಭಾರದ. ೪೬೬); ಮೈಸೂರಿನ ಮುಮ್ಮಡಿ ಕೃಷ್ಣರಾಜರಿಗೆ ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ವಮುಖಸ್ಥಾನವಿರುವುದು (ಸಾಸಮಾ. ೧). [ಸಂ.]

ಸಾಹಿತ್ಯೋಪಾಸಕ (ನಾ). ರಸಾವಹವಾದ ಕೃತಿಗಳನ್ನು ಪ್ರೀತಿ, ಗೌರವ ಶ್ರದ್ಧೆಗಳಿಂದ ಅಧ್ಯಯನಮಾಡುವವನು : ಕುವೆಂಪುರವರು ನಿಜವಾದ ಸಾಹಿತ್ಯೋಪಾಸಕರು (ಸಾಸಮಾ. ೧೦೩). [ಸಂ.]

ಸಾಹಿತ್ಯೋಪಾಸನೆ (ನಾ). = ಸಾಹಿತ್ಯಸೇವೆ : ಸಾಹಿತ್ಯೋಪಾಸನೆಯ ಉತ್ಸಾಹವು ನೂರಾರು ಎಳೆಯ ಕಣ್ಣುಗಳಲ್ಲಿ ಹೊಳೆಯುತ್ತಿವೆ (ಜೀವಪಾ. ೧೯).

[ಸಂ. ಸಾಹಿತ್ಯೋಪಾಸನಾ]

ಸಾಹಿಯಾಣ (ನಾ). ಒಂದು ಪ್ರದೇಶದ ಹೆಸರು ಮತ್ತು ಆ ಪ್ರದೇಶದಲ್ಲಿ ತಯಾರಾದ ವಸ್ತ್ರ : ಸಾಹಿ[ಪಾಶಾ. ಸುಯ]ಯಾಣದ ಚೀನದ ಧವಳವಟ್ಟದ ಜೊಂಗದ ದೇವಾಂಗದ ಸಕಳಪಟ್ಟಿಗಳುಮಂ ಮೆಟ್ಟುವೆಡೆಗಳೊಳಿಲ್ಲಂ ಪಾಸಿ (ಆದಿಪು ೪-೩೪ ವ); ಕಾಲೋಹಣದ ಸಾಹಿಯಾಣದ ಚೀನದ . . . ಪುಟ್ಟಗೆಗಳನೊಟ್ಟಿ, ಬೆಟ್ಟಾಗಿ ಪುಂಜಿಸಿ (ಪುಟುಮಾ. ೧೦-೯೧ ವ). [?]

ಸಾಹು$_1$ 'ಸಾ' ನೋ.

ಸಾಹು$_2$ 'ಸಾವು' ನೋ.

ಸಾಹ್ಯ (ನಾ). (?) : ಸಾಹಿನ ಬಿಲ್ಲಾಳುಗಳಾ ಜಾಯಿಲವ್ಯೂಹಮನತಿಜೋಕೆಯೊಳು ಸೋಹಿಸಿಕೊಂಡು ಬಂದರು (ಸೇಮುಂ. ೨-೧೨). [?]

ಸಾಹುಕಾರ 'ಸಾವಕಾರ' ನೋ.

ಸಾಹುಕಾರಿಕೆ 'ಸಾವಕಾರಿಕೆ' ನೋ.

ಸಾಹೇಬ್ 'ಸಾಹೇಬ' ನೋ.

ಸಾಹೇಬ, ಸಾಬ್, ಸಾಬ, ಸಾಬಿ, ಸಾಹೇಬ್ (ನಾ). ೧. ಒಡೆಯ; ಯಜಮಾನ: ಸಾಹೇಬರು ಇನ್ನೂ ಮನೆಗೆ ಬಂದಿಲ್ಲ (ರೂಢಿ). ೨. ಮೇಲಧಿಕಾರಿ; ವರಿಷ್ಠಅಧಿಕಾರಿ: ಸಾಹೇಬರು ಊರಲ್ಲಿಲ್ಲ. ಈ ಜಿಲ್ಲೆಯ ಆಡಳಿತಕ್ಕೀಗ ನಾನೇ ಮುಖ್ಯಾಧಿಕಾರಿಯಾಗಿದ್ದೇನೆ (ಪುನರು. ೨೨೩); ಗಂಡಿನ ಕಡೆಯ ಬೀಗರು ಅಂದರೆ ಕಚೇರಿಗೆ ಸಾಹೇಬರು ಬಂದ ಹಾಗೆ (ಪ್ರಾಒ.). ೩. ಗೌರವಸೂಚಕವಾಗಿ ಹೆಸರಿನ ಕೊನೆಯಲ್ಲಿ ಸೇರಿಸುವ ಪದ : ಅದಲು ಶಾ ಪದಾಶಹಾಸಾಹೇಬರಿಗೆ ಪುಣ್ಯವಾಗಬೇಕೆಂದು (ಬೂಂಶಾ. ೧೯೫೩, ಬಂಕಾಪುರ. ೧೧-೪; 1520); ಕಲೂಸಪೇಟೆಯ ರಾಜ ಮಹಾರಾಜಸಾಹೇಬರವರು (ಎಕ.IX, ಚನ್ನಪ. ೫-೭; 1799); ಇದೇ ನನೀಲಾಲಸಾಹೇಬ ಒಂದು ಕಾಲದಲ್ಲಿ ಹಣ ಸಾಲವಾಡುವುದಕ್ಕೆ ಹೀಗೆ ಅಲೆಯುತ್ತಿರಲಿಲ್ಲವೆ? (ಸಾಹೇಬ್.೭೫೯). ೪. (ಶ್ರೀಮಂತ, ಮಹಾಶಯ ಇತ್ಯಾದಿಯಂತೆ) ಗೌರವ ಪ್ರತಿಷ್ಠೆಗಳ ಸೂಚಕವಾಗಿ ಬಳಸುವ ಪದ : ಬಿಡ್ರಿ ಬಾಬೂ ಸಾಹೇಬ (ಕುರಿಹಿ. ೫೩). ೫. (ಗೌರವಪೂರ್ವಕವಾಗಿ) ಸ್ತ್ರೀಯರನ್ನು ಸಂಬೋಧಿಸುವ ಅಥವಾ ಸೂಚಿಸುವ ಪದ : ಬೀಬಿ ಸಾಹೇಬ, ಮಾಫ್ ಮಾಡಬೇಕು (ಇಷ್ಟಕ. ೧೭೩); ಮೇಮಸಾಹೇಬಳು ನನ್ನ ಹತ್ತಿರ ಬಂದು ಕುಳಿತುಕೊಂಡು, ನನ್ನ ಕಡೆಗೆ ಮಿಕಿಮಿಕಿ ನೋಡತೊಡಗಿದಳು (ಕುರಿಹಿ. ೧೧೧). ೬. ಇಂಗ್ಲೀಷ್ ಜನಾಂಗದವನು; ಆಂಗ್ಲ : ನಿಯೋಗಿಯು ಅಮಾನುಷರೀತಿಯಲ್ಲಿ ಸಾಹೇಬರ ಅವತಾರ ತಾಳಿದ್ದ (ಸಮಜೀ.೯೧೧). ೭. ಮಹಮ್ಮದೀಯ; ಇಸ್ಲಾಂ ಮತಾನುಯಾಯಿ: ಮಸೀದಿಯ ಮುಂದೆ ಒಬ್ಬ ವಯಸ್ಸಾದ ಸಾಹೇಬರು ನಿಂತಿದ್ದರು (ರೂಢಿ). **ಸಾಬ್**: (೬). **ಸಾಬ** : ೭. 'ಎಮ್ಮನ್‌ಸಾಹೇಬ' ಎಂದರೆ ಸಾಬನಲ್ಲ ಮತ್ತೆ ಪಕ್ಕಾ ಬ್ರಾಹ್ಮಣಜಾತಿ! (ಕಂಬಹು. ೪೧); ಎಲ್ಲಾ ಸಾಬರ ಮನಸ್ಸೂ ಮುರಿದುಹೋಗಿತ್ತು (ತುಟುಮಾ. ೬೬). **ಸಾಬಿ** : ೩. ಕುನ್ನಗ್ರಾಮದ ಜಹಗೀರದಾರ್ ಹಯತ್ತ್ಖಾನಸಾಬಿ ಯಿಂ ಮೇರೆ (ಎಕ. IX, ಕೊಡಗು. ೨೯-೨೯; 1857). ೭. ಸೊಕ್ಕಿನ ಸಾದಿ ಈಗೇಕೆ ಮಾತು (ತುಟುಮಾ. ೧೨೫); ೫-೬ ಆಡುಗಳನ್ನು ಆಡಿಸುತ್ತಾ

ಒಬ್ಬ ಸಾಬಿ ಇದ್ದ (ದಿಲ್ಲಿಪ. ೪೯). **ಸಾಹೇಬ್** : ೩. ರಾವ್‌ಸಾಹೇಬ್ ಮತ್ತು ತಾತ್ಯಾಟೋಪೆಯವರು . . . ಮುಂದಿನ ಯುದ್ಧಯೋಜನೆಗಳನ್ನು ರಚಿಸತೊಡಗಿದರು (ಝಾನಾ.೩೦೩). ೪. ಸಾಹೇಬರೆಂದರ ಸಾಹೇಬ್ ನನೀಸಾಹೇಬರು (ಸಾಹೇಬ್. ೭೩೯). ೫. ಇಲ್ಲ ಬಾಯಿಸಾಹೇಬ್, ಅವನು ತ್ಯಜಿಸಿಲ್ಲ (ಝಾನಾ. ೧೭೫).

[<– ಅರ. ಸಾಹಿಬ್; ಹಿಂ. ಸಾಹಬ್, ಸಾಹೇಬ್; ಮರಾ. ಸಾಹೇಬ್, ಸಾಬ್]

ಸಾಹೇಬಕಿ (ನಾ). ದೊಡ್ಡಸ್ತಿಕೆ; ಹಿರಿತನ: ನಾನು ಭಾವಿಸಿದೆ . . . ನನ್ನ ಸಾಹೇಬಕೀಯ ರೈಲುಗಾಡಿಯನ್ನು ಹಕ್ತಿ . . . ದರ್ಪದೊಂದಿಗೆ ಅಲ್ಲಿಂದ ಹೊರಟು ಹೋಗಿಬಿಡಬೇಕೆಂದು (ಇಪ್ರಕ. ೧೮೭). [< ಸಾಹೇಬ]

ಸಾಹೇಬಗಿರಿ (ನಾ). = ಸಾಹೇಬಕಿ : ಪಂಡಿತನಿಗೆ ಸಾಹೇಬಗಿರಿಯನ್ನು ಮಾನವೀಯರೀತಿಯಲ್ಲಿ ಮುಟ್ಟಬೇಕೆಂಬ ಇಚ್ಛೆಯಿತ್ತು (ಪಪುಜೀ. ೯೧೧).

[ಸಾಹೇಬ + – ಗಿರಿ₂]

ಸಾಹ್ಯ, ಸಾಯ₁ (ನಾ). ಸಹಾಯ ; ನೆರವು : ಅರಿಗಾವುದು ತಕ್ಕುದಾರಿಗಾವುದು ದಕ್ಕದೀ ರಹಸ್ಯದಿನಾದ ಸಾಹ್ಯವುಪಕಾರ ತಾರತಮ್ಯ ವಿವೇಕವರಿಯದಾ ಸಂಸ್ಕಾರ ಪ್ರೇರಕವೂ ಔರ್ಯಕ್ಕೆ (ಮಂಜುಕ. ೮೭೧); ವಾಗೀಶನ ಸಾಹ್ಯವನ್ನು ಪಡೆದು ಕೊಂಡು (ದನ್ನಚೀ. ೩೭). **ಸಾಯ₁** : ಮನೆಪ್ರಂದ್ರ ವುಜ್ಯೆಯ ಬಾಗಿಲು ನಿಲಕೆ ಸಾಯ ಮಾಡಿರೆದ (ಎಕ IX. ಕೊಡಗು. ೫೯-೨೧; 1857); ಆದವರು ಆ ಬಡಪಾಯಿಗೆ ಅಮ್ಮು ಸಾಯಾ ಮಾಡಿರಯ್ಯ (ಮಲ್ಲಿ. ೯). [< ಸಂ. ಸಾಹಾಯ್ಯ./ ತುಳು. ತೆಲು. ಸಾಯ./ ಮರಾ. ಸಾಯ]

ಸಾಹ್ಯಕ, ಸಾಯಕ₁ (ನಾ). ೧. ನೆರವುನೀಡುವವನು ; ಸಹಾಯಕ : ಈ ಇನಾಮದಾರರು ಮೊದಲಿಗೆ ಅರಸನಿಗೆ ಸಾಹ್ಯಕರಾಗಿದ್ದು . . . ಅಭಿಪ್ರಾಯಗಳು ಕೇಳಲ್ಪಡುತ್ತಿದ್ದವು (ಮುಂಬಯಿ. ೫-೨೫೭). **ಸಾಯಕ₁** : ೨. ನೆರವುನೀಡುವಂಥದು; ಸಹಾಯಕವಾಗುವಂಥದು : ಬಹಳ ಕಪಟೋಪಾಯಕಿದು ಸಾಯಕವಲೇ ತಿಳಿಯೆ (ಕೋಗಯ. ೧೭-೪೦). [< ಸಂ. ಸಾಹಾಯ್ಯಕ]

ಸಾಳ₁ 'ಸಾಲ₂' ನೋ.

ಸಾಳ₂ (ನಾ). ಒಂದು ಬಗೆಯ ವಾದ್ಯ : ಭೋರ್ಗರೆವವನಿತಱೊಳ್ ಸಾಳ ನಿಃಸಾಳಂ (ಚಿಬಿಪು. ೩೧-೩೦). 'ನಿಸ್ಸಾಳ' ಪರಾ. [?]

ಸಾಳಂಗ₁ (ನಾ). ೧. [ಸಂಗೀತ] ಒಂದು ರಾಗದ ಹೆಸರು : ಸಾಳಂಗ ನಾಟ ಭೈರವಿ ದೇಶಿ ಗುಜ್ಜರಿ . . . ಭೈರವಿ[ಯಜಿ]ದೊಳವನವನೊಲ್ದು ಪಾಡಿದ (ತ್ರಿಭುವಿ. ೬-೩೦); ಪಾಡಿ ವಸಂತ ಸಂಕೀರ್ಣ . . . ಸಾಳಂಗಗಳೆಂಬ ಗಾಡಿಕಾತಿಯರು ಗಾನವನಾಲಾಪವಮಾಡಿದರು (ಸೂಬಸೋ ೨೪-೩೫); ಲಲಿತ ಸಾಳಂಗ ಸಾವೇರಿ ಗುಜ್ಜರಿ ಗೌಳ ಪಳಮಂಜರಿಗಳೆಂಬ ವಿವಿಧ ರಾಗಂಗಳಂ (ಜೈಮಿಭಾ. ೨೧-೫೬). ೨. ಒಂದು ಬಗೆಯ ವಾದ್ಯ : ಪರಮೇಶ್ವರಮುಖಕಮಳವಿನಿರ್ಗ್ಗತ ಸು[ಶು]ದ್ಧಸಾಳಂಗ ಬ್ರಹ್ಮವೀಣಾದಿ ಗೇಯ ಗಾಂಧರ್ವ್ಯ[ರ್ವ] (ಕೊಲ್ಹಾಶಾ. ೨೧-೧೫; 1209); ತಾಳ ಮದ್ದಳೆ ಪಾವುಜ ಶ್ರುತಿ ಮುಖವೀಣೆ ಸಾಳಂಗ ಶುದ್ಧ ಗಾನೆಯರ ಮೇಳ (ಮೋಪತ. ೩-೩೧). ೩. ಮದ್ದಳೆಯನ್ನು ನುಡಿಸುವ ಒಂದು ಕ್ರಮ : ಶುದ್ಧ ಸಾಳಂಗ ಸಂಕೀರ್ಣ ತವಣೆಗಳೆಂಬ ಚತುರ್ವಿಧಮ್ಮದಂಗಮಂ ಮೇಳ್ಕೆಸಿ (ಭೈರಪು. ೫-೫೭). ೪. (?) : ಸರಿಸಕೆ ಸರಿಸ ವಿಷಮಕೆ ವಿಷಮಗತಿ ಶರಸಾರ ಸಾಳಂಗದಲಿ ರಂಜಿಸಿದ (ಕುವ್ಯಾಚ.೨೦-೩೪). [ಸಂ. ಸಾಲಂಗ]

ಸಾಳಂಗ₂ (ನಾ). ಒಂದು ಬಗೆಯ ಬಟ್ಟೆ : ರಂಗು ಚಿತ್ರ ವಸಂತರತಿ ಸಾಳಂಗ ಗುಜ್ಜರಿ ರತುನ . . . ಸುರಾಗರಚಿತ ತುರಂಗವಿಲಸಿತವಸನ ಬಾಲಕೆ ಸೇರಿದವು ಕಪಿಯ (ತೊರಾ. ೫-೮-೧೭). 'ಸಾಟಿಗೆ' ಪರಾ. [?]

ಸಾಳಗ 'ಸಾಲಗ₂' ನೋ.

ಸಾಳಗಸೂಳ (ನಾ). [ಸಂಗೀತ] ಹಾಡುವ ಒಂದು ಕ್ರಮ : ಧ್ರುಪ ಮಟ್ಟೆಯ ರೂಪಕ ಝಂಪೆ ತಿವಡೆ ಅಟತಾಳ ಏಕತಾಳ ಮೊದಲಾದ ಸಾಳಗಸೂಳಮಂ ಪಾಡುವಲ್ಲಿ (ವಿರೂಪಾ. ೭೩ ವ). [< ಸಂ. ಸಾಲಗಸೂಡ]

ಸಾಳಾಂಗ (ನಾ). ಒಂದು ರಾಗದ ಹೆಸರು : ಶುದ್ಧ ಸಾಳಾಂಗ ಗತಿವಡೆದ ರಾಗದಲ್ಲಿ ಪರಿಷ್ಕಾಯಕದಳ ಕಂಮರನು ಪೂಜಿತನು ರಸವನಾಲಿಸುತ (ಸರ್ವಮ. ೯೦-೪೯೯).

[< ಸಂ. ಸಾಲಂಗ]

ಸಾಳಿ 'ಸಾಲೆ₂' ನೋ.

ಸಾಳಿಗೆ₁ 'ಸಾಲಿಗ₂' ನೋ.

ಸಾಳಿಗೆ₂ 'ಸಾಟಿಗೆ' ನೋ.

ಸಾಳಿಗ್ರಾವ 'ಸಾಲಿಗ್ರಾಮ' ನೋ.

ಸಾಳುವ₁, ಚಾಳುವ, ಸಳವ, ಸಾಳ್ವ₁ (ನಾ). ಬೇಟೆಗಾಗಿ ಪಳಗಿಸುವ ಒಂದು ಬಗೆಯ ಹಕ್ಕಿ ; ಗಿಡುಗ ; ಡೇಗೆ : ಪುಲ್ದಂಡೆ ಬೆಳ್ಳಾರ್ಪಟುಮರೆ ಬಲೆಗಳ್ ಸಾಳುವಂ ಕೂಳೆಗಾಳಂ . . . ದೀಹದ ಪುಲಿ (ಗಿಂಪು. ೧-೭೯); ಕೊಂಡುದಂತದುವೆ ಸಾಳುವನಲ್ಲದು ತಪ್ಪಿತತ್ತಲಾ ಕೊಂಡುದು ಜಾಯಿಲಂ (ಸೂಪ್ರಸು. ೩-೧೨೧); ಸಾಳುವನ ಕೂಡರಗಿಳಿಗೆ ಸಮಮೇಳವೇ (ತುವ್ಯಾಕ. ೧೧-೫೮). **ಚಾಳುವ** : ಚಾಳುವನ ಹಕ್ಕಿಯನು ಪಾಳೆಯದ ನಾಯಿ ಹಿಡಿದುದ ಕಾಡೆನಯ್ಯ (ಪದ್ಮಪು. ೧೯೨-೫೮೪). **ಸಳವ** : ಸುಟ್ಟುರೆಯ ಬಿರುಬಿಂಗೆ . . . ನಭಕ್ಕೇರುತಿವೆ ಪೆರ್ಗೋಡುಗಳ್, ತಾಯಿ, ಸಳವನೆರಗಿದ ಖಗದ ಕಿಪ್ಪುಳ್ಗರಿಗಳಂತೆ! (ಶ್ರೀರಾಮಾ. ೧೨೬-೭೦೮). **ಸಾಳ್ವ₁** : ಮುಂಗುರಿಯುಂ ಖಗಮಂ ಸಾಳ್ವಗಳಿರಲಾಜ್ಞೆಯ ಲಿಂಬುಗೊಂಡನಾ ವನರಾಜಂ (ಮಲ್ಲಕಾ. ೩-೧೯೦); ಗಿಳಿಯ ಗಿಡಗನ ಕೂಟ ಮಱಿಗೋಗಿಲೆಯ ಸಾಳ್ವನ ಸಖ್ಯ (ತೊರಾ. ೧-೫-೪೩); ಹರಡೆ ಗವುಂಜು ಲಾವುಗೆ ಕಪೋತನು ಸಾಳ್ವನು ಚಿಟ್ಟ ಟಿಟ್ಟಿಭಂ (ನನ್ನಚಾ. ೬-೨೦೩); ಪಿಂಗಳಿಕ ಸಾಳ್ವನರಳಿಗ (ಝಾಂಗ. ೧೦-೫). [ದೇ. ॥ ತೆಲು. ಸಾಳುವ, ಸಾಳ್ವ]

ಸಾಳುವ₂, ಸಾಳ್ವ₂ (ನಾ). ೧. ವಿಜಯನಗರವನ್ನು ಆಳಿದ ಒಂದು ರಾಜ ವಂಶದ ಹೆಸರು : ಸಾಳುವ ಮಲ್ಲಿರಾಜೇಂದ್ರ (ಕಾ. I, ೬೨-೫; 1481); ಸಾಳುವ ನರಸಿಂಗರಾಯ ಮಹಾರಾಯ (ಎಕ. XVI, ಚಿಕ್ಕನಾ. ೮೭-೭;1497); ಸಾಳುವ ನೃಸಿಂಹರಾಜ್ಯ (ಎಕ. VII, ಶಿವಮೂ. ೮೩-೨೩; 1587). ೨. ರಸರತ್ನಾಕರ, ಸಾಳ್ವಭಾರತ ಮುಂತಾದ ಕೃತಿಗಳನ್ನು ರಚಿಸಿದ, ಹದಿನಾರನೆಯ ಶತಮಾನದ ಒಬ್ಬ ಕನ್ನಡಕವಿಯ ಹೆಸರು: ಪಳ್ಳದಾ ಕವಿಯೆಂದೊಡೆಣ್ಬಸೆ ಮುಟ್ಟೆ ಪಸರಿಪುದರಿದ ಗುಣವಳವಟ್ಟ ನಿರ್ಮಲ ಕೀರ್ತಿಯಾತನ ಸುಕವಿ ಸಾಳುವನ (ಸಾಳ್ವಭಾ. ೧-೩೩). **ಸಾಳ್ವ₂** : ೧. ವಿಜಯನಗರವನ್ನು ಸಾಳ್ವ ಮನೆತನದವರೂ ಆಳಿದರು (ಕೂಫಿ). ೨. ಸಾಜಕವಿ ಕರ್ಣಾಟಲಕ್ಷಣೋಜೆಗನು ಕವಿಸಾಳ್ವನಿಂ ಜಿನರಾಜಚರಿತೆಯ ಭಾಮಿನೀಷಟ್ಪದಿ ಯಲುಸುರೆಂದು ಸುರಸ ಸಾಳುವದೇವಭೂಪತಿ ನಿರವಿಸಿದನು (ಸಾಳ್ವಭಾ. ೧-೩೫); ಮಾರ್ಗಸಾರಂಗಳಂ ರಸರತ್ನಾಕರಮಂ ಸಮಂತು ಕವಿಸಾಳ್ವಂ ಪೇಳ್ದನೊಳ್ಪೆಂಬಿನಂ (ರಸರ. ೧-೫).

ಸಾಳ್ವ₁ 'ಸಾಳುವ₁' ನೋ.

ಸಾಳ್ವ₂ 'ಸಾಳುವ₂' ನೋ.

ಸಾಱಿಕೆ (ನಾ). ಪ್ರಕಟಣೆ; ಘೋಷಣೆ: ತೋಱಿಸುವೆನರಘಳಿಗೆಯಲಿ ನಗೆಗಾಜರಿಗೆ ಹಗರಣವ ಸನ್ನೆಯ ಸಾಱಿಕೆಯಿದೀಗಂದು ಸಂತೈಸಿದನು ಸುಗ್ರೀವ (ತೊರಾ. ೬-೨೭-೫೮). [ಸಾಱು₁ + – ಇಕೆ]

ಸಾಱಿಸು, ಸಾರಿಸು₁ (ಕ್ರಿ). ಡಂಗುರ ಹೊಡೆಸು; ಘೋಷಣೆ ಮಾಡಿಸು; ಪ್ರಕಟಿಗೊಳಿಸು : ರಾಜ್ಯಾರ್ಹರಲ್ಲದವರ್ ಬರವೇಡ ಸಿಂಹಾಸನಸ್ಥರೆ ಬರ್ಪುದೆಂದು ಸಾಱಿಸಿ (ಜಗವಿ. ೮-೭೮ ವ); ಲಗ್ನೆ ಮಾಡಲೊಲ್ಲದೆ ಪಡೆಯಂ ಸಾಱಿಸಿ . . . ತೆಗೆಯವೇಳ್ದನಾ ವಸುಷೇಣಂ (ಆನಂಪು. ೧೨-೩೭); ಹೊಳಲ ಪರಿವಾರಕ್ಕೆ ಸಾಱಿಸು ಕೆಲಬಲದ ರಾಯರಿಗೆ ದೂತರ ಕಳುಹಿ ನೆರಹಿಸು (ಕುವ್ಯಾಧೀ. ೧-೮). **ಸಾರಿಸು₁** : ಅಮರಾವತಿಯ ಬೀದಿಯೊಳ್ ಸಾರಿಸಿಯೆಂದು ಗೊತ್ತುಗಾರನಿಗೆ ಅಪ್ಪಣೆಯನಿತ್ತು (ಸೌಗಂಧಿ. ೫೦೩-೧೨); ಬಾದಶಹನು . . . ಈ ಹೊತ್ತು ಕೊತವಾಲನ ತಲೆ ಹೊಡಿಸುತ್ತೇವೆಂದು ಡಂಗುರವ ಸಾರಿಸಿದನು (ಮುಂಬಯಿ. ೪-೨೦); ಸುಂಕ ಇಮ್ಮು ಕೊಡಬೇಕೆಂದು ಸಾರಿಸಿರಲಿಲ್ಲವೇನಯ್ಯ (ಚಿಂಗಾಳ್ಳ. ೬೭೭). [ಸಾಱು₁ + – ಇಸು]

ಸಾಱು₁, ಸಾರು₂ (ಕ್ರಿ). ೧. ಡಂಗುರಹೊಡೆ; ಘೋಷಿಸು; ಪ್ರಕಟಪಡಿಸು: "ಸಾಱು-ಘೋಷಣೇ, (ಡಂಗುರಹೊಡಿ), ರಸಾರ್ದ್ರೇಚ (ಬೇಳೆಯ ಸಾರು)" (ಶಮಧಾ); ಸಾಱುಗಾನೆಯವರೆಲ್ಲರುಮಂ ನೃಪ[ತಾ]ನೆ ಮತ್ತೇಱು[ವಂ] ಪಣಿದೊಡಾನೆಯಂ (ಕವಿರಾ. ೧-೧೩೪); ಮೂಱುಸೂಟ್ಟರಂ ಸಾಱಿ ನುಡಿದು (ವಡ್ಡಾರಾ. ೧೧೬-೬); ತಂಡದೆ

ಕೀಱಿ ಸಾಱುವ ಪಲರ್ ಪಡೆವಳ್ಳರ ಮಾತುಗಳ್ ಮನಂಗೊಂಡಿರೆ (ಪಂಪಭಾ. ೧೦-೪೯); ಮಱುದಿವಸ . . . ಪರಿಣಯವೆಂದು ಸಾಱಿತು ಪಾಳೆಯಂಗಳಲ್ಲಿ (ಕುವ್ಯಾಲಿ.೧೩-೧). ೨. ಒತ್ತಿಹೇಳು; ಖಂಡಿತವಾಗಿ ಹೇಳು : ಸಾಱಿದೆಂ ಕೆಡಬೇಡ ತೊಲಗು ಹರಿವಿಧಿಗಳಂ ಗಾಱುಗಿಸಿದ ವಿಕ್ರಮಂ ಸಲ್ಲದು (ಚಿಬಪು. ೪೯-೫೧). ಸಾರು$_2$: ೧. ಮುಖದಲ್ಲಿ ಉಂಟಾಗುವ ವಿಕಾರಗಳೂ . . . ಇದನ್ನು ಸಾರುತ್ತವೆ (ದೇಸಸ್ಯ. ೨೫); ಈ ಬ್ರಾಹ್ಮಿಲಿಪಿ ಹುಟ್ಟಿ ಬೆಳೆದದ್ದು ಭಾರತದಲ್ಲಿಯೇ ಎಂದು ಸಾರಿದ್ದಾರೆ (ದ್ರಾವಿವಿ. ೪೮).

ಸಾಱುಸಾಱು, ಸಾರುಸಾರು (ದ್ವಿರುಕ್ತಿ) : ೧. ಒತ್ತಿ ಹೇಳು; ಖಂಡಿತವಾಗಿ ಹೇಳು : ಸಾಱುಸಾಱಲು ಎನ್ನ ಮಾತಂ ಮೀಱೆ ಕಳುಹಿದೆ ಮತ್ತಕರಿಯಂ (ಬಸಪು.೨೨-೨೨). ೨. ಪ್ರಕಟಪಡಿಸು; ಪ್ರಚಾರಮಾಡು : ಗೋವಿಂದಭಟ್ಟ ಊರತುಂಬ ಇಡೀದಿನ ಅಲೆದು . . . ಮಗನ ಮಹತಿಯನ್ನು ಸಾರಿಸಾರಿ ಬಂದ (ದೀಪಹ. II, ೧೫೦). ಸಾರಿಸಾರಿಹೇಳು = ಸಾಱುಸಾಱು ೧ : ಈ ಸಮಯದಲ್ಲಿ ದುಡುಕಿಮಾತನಾಡುವುದು ಒಳ್ಳೆಯದಲ್ಲವೆಂದು ಅವರು ಮಗನಿಗೆ ಸಾರಿಸಾರಿ ಹೇಳಿದರು (ರೂಢಿ).

[ದೇ. ॥ ತಮಿ. ಮಲ. ಚಾಱು ; ತುಳು. ಸಾರಿ, ಸಾರು; ತೆಲು. ಚಾಟು]

ಸಾಱು$_2$, ಸಾರು$_3$ (ನಾ). ಅನ್ನದೊಂದಿಗೆ ಕಲಸಿಕೊಳ್ಳಲು ಬಳಸುವ, ಸಾಮಾನ್ಯವಾಗಿ ಬೇಳೆ ಅಥವಾ ಕಾಳು, ಸಂಬಾರಪದಾರ್ಥ ಮುಂತಾದುವನ್ನು ಹಾಕಿ ತಯಾರಿಸುವ ಒಂದು ಬಗೆಯ ರಸ,— ಮೇಲೋಗರ: ಹುಳಿದಾಳಿದ ಸಾಱು ಶಿಖರಿಣಿ ಬಹುಕೂಟದಳೆದ ನಿಂಬೆಯ ಹಣ್ಣ ಸವಿದು (ಮೋಹತ. ೩-೫೭); ರಸ ರಸಾಯನ ಸಾರ್ಗಳುಪ್ಪುಗಾಯ್ಪಾಳುಕಂ (ಜೈಮಿಭಾ. ೬-೪೪). ಸಾರು$_3$: ಸಾರನ್ನು ಬಡಿಸುವಾಗ ಅದು ಹರಿದು ಪಲ್ಲೆಯಲ್ಲಿ ಸೇರಿದರೆ ಕ್ಷಮಿಸಲು ಸಾಧ್ಯವೆ (ಹುಚ್ಚುಹು. ೧೩); ಅಡಿಗೇ ಗುಣ ಸಾರಿನಲ್ಲಿ ನೋಡು, ಮಡಿಗೇ ಗುಣ ಫಲದಲ್ಲಿ ನೋಡು (ಗಾದೆ).

[ದೇ. ॥ ತಮಿ. ಮಲ. ಚಾಱು ; ತುಳು. ಚಾರ್, ಚಾರು, ಸಾರು ; ತೆಲು. ಚೇರು]

ಸಾಱೆದೆ (ನಾ). ಒಂದು ಸ್ಥಳದ ಹೆಸರು : ಕೆಸವೂರ ಮಹಾಜನಕ್ಕೆ ಸಾಲೆ ಆಚನ್ಪ್ರಾತಾರಕಂ ಸಾಱೆದೆ ಮಹಾಜನಕ್ಕೆ ಎರಡು ಸಾಲೆ ಆಚನ್ಪ್ರಾಕಾರಕಂ (ಎಕ. VII, ಶಿಕಾರಿ. ೪೫-೧೫; 890 ?). [?]

ಸಾಱಿಗೆ, ಜಾಱಿಗೆ, ಸಾಳಿಗೆ$_1$ (ನಾ). ಉಡುಗೆ; ಉಡುಪು : "ಸಾಱಿಗೆಯೆಂದು ಉಡುಗೆ" (ಕಶಸಾ. ೬೩-೩೯೫); ದುಕೂಲದ ಚೆಲ್ವನಪ್ಪ ಸಾಱಿಗೆಗೆ ಪಯೋಜಸೂತ್ರ ನವಮುಂಜಿಗೆ (ಶಾಂತಿಪು. ೮-೯೦). ಜಾಱಿಗೆ : "ಜಾಱಿಗೆಯೆಂದು ಉಡಿಗೆ" (ತಮದ. ನ. ೩೩ ವೃತ್ತಿ) ; ಜಾಱಿಗೆ, ಜೋಱಿಗೆ (ಶಬ್ದಾನು. ೧೪೦ ವ್ಯಾಖ್ಯಾ). ಸಾಳಿಗೆ$_1$: "ಉಡಿಗೆಯೊಳು ಸಾಳಿಗೆಯೆನಿಕ್ಕು" (ಕಶರ. ೧೩೦). 'ಸಾಲೆ$_2$', 'ಸಾಳಿ' ಪರಾ.

ಸಿಂಗ$_1$, ಸಿಂಘ$_1$ (ನಾ). ೧. ಸಿಂಹ; ಕೇಸರಿ : "ಏಮೊಗಮೆಂದುಂ, ಸಿಂಗಮೆಂದುಂ ಸಿಂಹಂ" (ಕಶಸಾ. ೫೧-೧೦೦); ತುಂಗಗಿರಿಶಿಖರದಿಂದಂ . . . ಸುರಿಗೆಯ ಮೊನೆಯೊಳ್ ಪೊಂಗಿ ಸೊಡರ್ಗುಡಿಯ ಮೇಲೆ ಪತಂಗಂ ಪಾಯ್ವಂತೆ ಪಾಯ್ದು ಬರ್ದುದು ಸಿಂಗಂ (ಕಾವ್ಯಪಾ. ೧೧೧೪ ಶಾಬ್ದಿಕ); ಸಿಂಗಂ ಮಸಗಿದವೋಲ್ ನರಸಿಂಗಂ ತಳ್ತಱೆಯೆ (ಪಂಪಭಾ. ೧-೩೪); ಅಂಗಮಿಸಿ ಮಱೆಹುಲ್ಲೆ ಖುರದಲಿ ಸಿಂಗವನು ಹೊಯ್ವಂತೆ ನೃಪರುತ್ತುಂಗ ಸಹಸಿಯ ಮೇಲೆ ಕೈಮಾಡಿದರು (ಕುವ್ಯಾಭೀ. ೯-೨೦). ೨. ಒಬ್ಬಾತನ ಹೆಸರು: ಅರಟ್ಟಿXXರಮ್ಮಗನ್ದಿರ್ ಸಿಂಗಂ ದೀಕ್ಷೆ ಬೀಳಾದು ಅರಟ್ಟಿಶೀರರ್ ಕುಡಲೂರದ ಗೊಟ್ಟಿ ಮಡಿ ಒಡೆಯಮ್ಮರಾಳ್ವಿಕೆಯ (ಎಕ. III, ಮೈಸೂರು. ೨೫-೩; ಸು. 750). ೩. [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು; ಸಿಂಹಪ್ರಾಸ : ನಿಜದಿಂ ಬಂದೊಡೆ ಸಿಂಗಂ ಗಜ ದೀರ್ಘಂ . . . ಹಯಮಂಬುಜಮುಖಿ ದಡ್ಡಕ್ಕರಂಗಳಿವು ಷಟ್‌ಪ್ರಾಸಂ (ಛಂದೋಂಬು. ೧-೪೬ ಅಡಿಪದ್ಯ). ೪. [ಜ್ಯೋತಿ] ಹನ್ನೆರಡು ರಾಶಿಗಳಲ್ಲಿ ಐದನೆಯದು; ಸಿಂಹರಾಶಿ. ೫. ಸೌರಮಾನಪದ್ಧತಿಯ ಒಂದು ತಿಂಗಳಿನ ಹೆಸರು; ಸಿಂಹಮಾಸ : 'ಸಿಂಗವೆರೆ' ಪರಾ. ಸಿಂಘ$_1$: ೧. ಕಟ್ಟಿದ ಸಿಂಘಮನ್ನೆಟ್ಟೊಡೇನೆ ಮಗನ್ದು ಬಿಟ್ಟವೊಲ್ ಕಲಿಗೆ ವಿ[ಪ]ರೀತಂಗಹಿತರ್ಕಳ್ ಕೆಟ್ಟರ್ಮೇಣ್ ಸತ್ತರವಿಚಾರಂ (ಇಆ. X, ೬೧-೯; ಸು. 700); ಆನೆಯ ಸಿಂಘದ ಗಿಳಿಗಳ ನಾನಾ ರೂಪುಗಳನಕ್ಕ ರಂಗಳೊಳೆಸೆಯಲು ತಾನಳವಡಿಸಿದನ್ (ಎಕ. XI, ಚತ್ರದು. ೪೭-೩೭; 1067).

ಸಿಂಗದೇರಳ್, ಸಿಂಗದೇರವಳ್ = ಸಿಂಹವನ್ನು ವಾಹನವಾಗಿ ಉಳ್ಳವಳು; ಪಾರ್ವತಿ : "ಮಾಕಾಳಿ, ಮಾದೇವಿ, ಸಬ್ಬಾಣಿ, ಏಕಿಲ್ಪೆಟ್ಟಣುಗಿ, ಸಿಂಗದೇರಳ್ — ಈ ೫ ಪಾರ್ವತಿಯ ಪೆಸರ್" (ಕಶಸಾ. ೪೭-೩); "ಏಕಿಲ್ಪೆಟ್ಟಣುಗಿ ಸಿಂಗದೇರವಳ್ ಸಬ್ಬಾಣಿಯೆಂದು ಶಿವೆಯ ಲಳಿತನಾಮಂ" (ಕಬ್ಬಿಕೃ. ೫). ಸಿಂಘನ ಗರುಡ = (ಆಲಂ) ಅತ್ಯಂತ ಪರಾಕ್ರಮಿ; ಒಂದು ಬಿರುದು : ಸುಭಟಶಿರಶ್ಶೇಖರಂ ಸಮರ್ಕೆಕವೀರಂ . . . ಕಟಕಸನ್ನಾಹಂ ಸಿಂಘನ ಗರುಡಂ ಶ್ರೀಜಗದೇಕಮಲ್ಲದೇವರ ಮಗಂ (ಸೌಇಇ. XX, ೨೧-೪೬; 1019). [< ಪ್ರಾ. ಸಿಂಘ./ ಸಂ. ಸಿಂಹ]

ಸಿಂಗ$_2$, ಸಿಂಗಿ$_2$ (ನಾ). ೧. ಬೆಟ್ಟದ ತುದಿ, — ಶಿಖರ; ಶೃಂಗ: "ಶೃಂಗಕೇಸರಿಗಳೊಳ್ ಮದನನಲ್ಲಿ ಅಱೆಗೆ ಸಿಂಗಮದೆಂದು" (ಶಬ್ದಮಂ. ೮೪); ಶೃಂಗ, ಸಿಂಗ (ಶಬ್ದಾನು. ೧೫೮ ಪ್ರಯೋ). ೨. (ಪ್ರಾಣಿಗಳ) ಕೊಂಬು; ಕೋಡು : 'ಸಿಂಗನಾದ$_2$' ಪರಾ. ಸಿಂಗಿ$_2$: ೨. 'ಸಿಂಗಿನಾದ' ಪರಾ. [< ಪ್ರಾ. ಸಿಂಗ./ ಸಂ. ಶೃಂಗ]

ಸಿಂಗ$_3$ (ನಾ). ಕಾಮ; ಮನ್ಮಥ: ಕುಡುವಿಲ್ಲ ಪೂಪುಣಂಬಂ ಸುಗ್ಗಿಗೆಳೆಯ ಪೆಣ್ಣಡೆಯನಿಂಗೋಲ್ವಿಲ್ಲಂ ಗಿಳಿದೇರ ಸಿಂಗ ಪೆಱೆಗೊಡೆಯ . . . ಎಂದಿವಿಂತೊಡನೆ ಮನ್ಮಥನಾಮ" (ಶಬ್ದಮಂ. ೮); "ಶೃಂಗಕೇಸರಿಗಳೊಳ್ ಮದನನಲ್ಲಿ ಅಱೆಗೆ ಸಿಂಗಮದೆಂದು" (ಶಬ್ದಮಂ. ೮೪). [?]

ಸಿಂಗಕೇಸರಿ (ನಾ). ಬೆಟ್ಟಮಲ್ಲಿಗೆ ; ಕೊಡಸಿಗೆಮರ : "ಸಿಂಗಕೇಸರಿ ಶಕ್ರಶಾಖಿಯೆ ನಿಸಿಕ್ಕು" (ಮಂಗರಾ. ೩೬-೧೯). [< ಸಂ. ಸಿಂಹಕೇಸರ]

ಸಿಂಗಗಟ್ಟಿಗೆ (ನಾ). ಬೇಟೆಯ ಸಾಧನಗಳಲ್ಲಿ ಒಂದು ; ಸಿಂಹವನ್ನು ಹಿಡಿಯಲು ಬಳಸುವ ಒಂದು ಬಗೆಯ ಮರದ ಸಾಧನ : ತಡಿಕೆವಲೆ . . . ಹಿಡಿಯರೆಳೆ ಸಿಂಗ[ಶಾಕಾಂ. ಸಿಲುಕು]ಗಟ್ಟಿಗೆ ಬೀಸುಗಣ್ಣೆ . . . ಕತ್ತಿ ಬಡಿಕೋಲ್ಕಲ್ಲಿ ಹಿಡಿದ ಹುಲಿ ಶರಭಭೇರುಂಡ ಸಿಂಹಪ್ರಕರವರಸಿ ನಡೆವರ ಕಂಡನು (ಆಸಪು. ೩-೧೪ ; ಹಚಕಾ. ೫-೯ ನೋ).

[ಸಿಂಗ$_1$ + ಕಟ್ಟಿಗೆ$_1$]

ಸಿಂಗಡಿ$_1$ 'ಸಿಂಗಾಡಿ' ನೋ.

ಸಿಂಗಡಿ$_2$ 'ಸಾಂಗಡ' ನೋ.

ಸಿಂಗಡಿಅರಸ (ನಾ). ಒಬ್ಬಾತನ ಹೆಸರು : ಕುನ್ದಸತ್ತಿಅರಸಂ ವಡಗೆರೆನಾಡು ಮೂನೂಱುಮಾಳ ಮುದುಗುನ್ದೂರ ಸಿಙ್ಗಡಿಅರಸ ಪುವಗಾಮಮಾಳ್ದುವಿದ್ದರ್ (ಎಕ. VII (R), ಮಳವ. ೧೨೨-೬; 776). [ಸಿಂಗಡಿ$_2$ + ಅರಸ]

ಸಿಂಗಣ 'ಸಿಂಗಳ$_1$' ನೋ.

ಸಿಂಗಣಂದಿ (ನಾ). ಒಬ್ಬಾತನ ಹೆಸರು : ಶ್ರೀ ವೆಟ್ಟೆಡೆಗುರವಡಿಗಳ್ಕಾಣಾಕ್ಕ ಸ್ಸಿಂಗಣನ್ದಿ ಗುರವಡಿಗಳ್ನೋನ್ತು ಕಾಲಂ ಕೆಯ್ದಾರ್ (ಎಕ. II, ೩೨; ಸು. 700).

[< ಸಂ. ಸಿಂಹನಂದಿನ್]

ಸಿಂಗಣಿಕ$_1$ 'ಸಿಂಗಳೀಕ' ನೋ.

ಸಿಂಗಣಿಕ$_2$ 'ಸಿಂಗಳಕ' ನೋ.

ಸಿಂಗಣೀಕ 'ಸಿಂಗಳೀಕ' ನೋ.

ಸಿಂಗನಡು (ನಾ). ೧. ಸಿಂಹದ ಸೊಂಟ; ಸಿಂಹಕಟಿ. ೨. (ಆಲಂ) ಸಣ್ಣದಾಗಿರುವ ಸೊಂಟ; ಚಿಕ್ಕ ನಡು: ಸಿಂಗನಡುವಿನೊಪ್ಪಿದಿನಡುವುಗಳ ಸಣ್ಣನಡುವಿನಿಲ್ಲುಂಟೆಂಬ ನಡುವಿನಬಲೆಯರ್ಕೆದೆ ಬರುತಿರ್ದರು (ಚಿಬಪು. ೩೭-೪೨). [ಸಿಂಗ$_1$ + ನಡು$_2$]

ಸಿಂಗನಾದ$_1$ (ನಾ). ೧. ಸಿಂಹದ ಕೂಗು , — ಗರ್ಜನೆ : ಆ ಮಹಾಟವಿಯ ಮೃಗರಾಜ ಪಿಂಗಳಕ ಸಿಂಗನಾದಮಂ ಕೇಳ್ದು ಸಾಮಜಘಟೆಯೆಲ್ಲಂ ಬೆದಱೆ (ಪಂಚತಂ. ೨೫). ೨. ಜೋರಾದ ಕೂಗು; ಬಲವಾದ ಧ್ವನಿ : ಸಿಂಗನಾದದೆ ಸಿಂಗ ಗರ್ಜಿಸಲಾನಗ ಪಿಂಗದೆ ಮಾರ್ದನಿಗೊಡಲು ಸಂಗಡಿಸಿದ ರವವಾ ಪ್ರಳಯದ ಸಿಡಿಲಿಂಗೊರೆ ದೊರೆಯಾಯಿತಂದು (ಅಂಜಚಿ. ೧೦-೨೦). [ಸಿಂಗ$_1$ + ನಾದ$_1$]

ಸಿಂಗನಾದ$_2$, ಸಿಂಗಿನಾದ (ನಾ). ಕೊಂಬಿನ ಧ್ವನಿ : ದಾಸಯ್ಯನ ಜಾಗಟೆ, ಭವನಾಶಿ, ಶಂಖ, ಗರುಡಗಂಬಗಳು, ಜೋಗಿಯ ಸಿಂಗನಾದ . . . ಅವರು ನಡೆಸುವ ಆಚರಣೆಯ ಸಾಧನ ಸಲಕರಣೆಗಳು (ಕವಿಕೋ. I, ೭೦೪). ಸಿಂಗಿನಾದ : ಹಿಂಡುಗೂಡುತ್ತೆಲ್ಲರುಗಳು ಬಾಯೊಳ್ಕಟ್ಟಿಕೊಂಡಾಗ ಸಿಂಗಿನಾದವನೂದುತೆಯ್ತರಲ್ಬಂದರೆಲ್ಲಿಂದ

ಬಂದರೂ ಎಂದವರ ನೋಡಿ ನಸುನಗುತ ಸುಮ್ಮನಿರಲು (ಸಿದ್ರೇಪು. ೫-೪).

[ಸಿಂಗ$_2$ + ನಾದ$_1$./ ತೆಲು. ಸಿಂಗಿನಾದ]

ಸಿಂಗಪೀಠ (ನಾ). ಸಿಂಹಾಸನ; ಗದ್ದುಗೆ: ಮಂಗಳಯನಂಗದೊಳ್ ಸಂಗೊಳಿಸಿ ಪರಶಿವಂ ಸಿಂಗಪೀಠದಿ ಪ್ರಮಥ ಗಂಗೆವಾಳುಕರು ಮುನಿಪುಂಗವರ್ಸಹಿತೋಲಗಂಗೊಟ್ಟು (ಚಿಬಪ್ರ. ೧-೮). [ಸಿಂಗ$_1$ + ಪೀಠ]

ಸಿಂಗಪ್ರಾಸ (ನಾ). [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು; ಸಿಂಹಪ್ರಾಸ: ಸಕಳಕಳಾನಿಧಿ ನಿಕಟದೆ . . . ಕಾವ್ಯಮೆಂಬಮೃತಪಯೋಧಿ ಕರಂ ಪೆರ್ಚುಗುಮಲ್ಲದ ಕುಕವಿ ಬುಧಪ್ರಚ್ಛತಿಯಿದಿರೊಳೇಂ ಪೆರ್ಚುಗುಮೇ? - ಇದು ಸಿಂಗಪ್ರಾಸಂ (ಛಂದೋಂಬು. ೬. ೧-೪೪). [< ಸಂ. ಸಿಂಹಪ್ರಾಸ]

ಸಿಂಗಬಲ (ನಾ). ೧. ಸಿಂಹದ ಬಲ, — ಶಕ್ತಿ. ೨. ಸಿಂಹಕ್ಕೆ ಸಮಾನವಾದ ಶಕ್ತಿಯುಳ್ಳವನು; ಮಹಾಬಲಶಾಲಿ : ಸಿಂಗಬಲನೆಂಬಗುರ್ವಿನ ಸಿಂಹಮನಸಿಧನು ಕಿರಣ ಕೇಸರವಾಲಾಸಂಗತವಾನಡಸಿ ನುಂಗಲ್ ಸಂಗತಬಲ ನೊಂದು ಶರಭವಿರ್ವಂತಿರ್ದಂ (ಪಂಪಭಾ. ೮-೭೪). [< ಸಂ. ಸಿಂಹಬಲ]

ಸಿಂಗಮುಯ್ (ನಾ). ೧. ಸಿಂಹದ ಹೆಗಲು. ೨. ಸಿಂಹದ ಹೆಗಲಿನಂತಿರುವ ವಿಶಾಲವಾದ ಹೆಗಲು: ನಿಡುದೋಳ್ ಸಿಂಗಮುಯ್ ಗೂಳಿಕಣ್ ಪೇರೆರ್ದೆಯುಮಾದವಂ . . . ತಳೆದಂ ಸುಂದರಾಮ್ಯೆಯಂ (ಪೌನಂದ. ೨-೫೮).

[ಸಿಂಗ$_1$ + ಮುಯ್$_2$ (< ಮುಯ್ಯು)]

ಸಿಂಗರ 'ಸಿಂಗಾರ' ನೋ.

ಸಿಂಗರಂಗಾಣ್ (ಕ್ರಿ). ಅಲಂಕಾರವನ್ನು ಕಾಣು; ಶೃಂಗಾರವನ್ನು ನೋಡು: ಪಲತೆಱದ ಸಿಂಗರಂಗಂಡು ಮುದ್ದಾಡುತಂ ಜಾವಮಾತನಂ ಬಸವದಂಡೇಶ್ವರಂ ಸುಖದೊಳಿರುತಿರ್ದನು (ಚಿಬಪ್ರ. ೫-೪೬). [ಸಿಂಗರ (< ಸಿಂಗಾರ) + ಕಾಣ್]

ಸಿಂಗರಂಗೆಯ್, ಶೃಂಗರಂಗೈ, ಸಿಂಗರಂಗೈ, ಸಿಂಗರಗೆಯ್, ಸಿಂಗರಗೈ (ಕ್ರಿ). ೧. ಶೃಂಗಾರಮಾಡು; ಅಲಂಕರಿಸು : ಮದನಂ ಲಕ್ಷಣಯುಕ್ತ ಹಸ್ತಿನಿಯನೀಗಳ್ ಸಿಂಗರಂಗೆಯ್ದು ಹಸ್ತದೊಳೀ ಮಾಲೆಯನಿತ್ತನೋ ದಿಟವೆನಲ್ ವೇಟೆಂಬಿನಂ ಮಂದಯಾನದಿನೆಟ್ಟಂದಳ್ (ನಳಚಂ. ೩.೨೮). **ಶೃಂಗರಂಗೈ** : ೧. ಶೃಂಗರಂಗೈದ ಗಜವ್ರಜಸ್ಯಂದನಾಳಿಯುತ ರಂಗಚಯದೊತ್ತಲು (ನವಮೋ. ೩೪-೨೬). **ಸಿಂಗರಂಗೈ** : ೧. ''ವೇಶಂ ಪ್ರಸಾದನಂ ಮಂಡನಂ ಪ್ರತಿಕರ್ಮವುಂ ಸಿಂಗರಂಗೈವುದಕ್ಕುಂ'' (ಮುಂಗರಾ. ೯೮-೧೯). **ಸಿಂಗರಗೆಯ್**: ೧. ತರುಣಿಯರಲಂಕರಿಸಲಿಂತು ನಲವಿಂದ ಸಿಂಗರಗೆಯ್ದು ಶುಭಮುಹೂರ್ತದೊಳು ಪೊಜಮಟ್ಟು (ಪೌಂದಪು. ೭-೩೨). **ಸಿಂಗರಗೈ** : ೧. ಆ ವೇಳೆಯಲಿ ಸಿಂಗರಗೈದು ನಿನ್ನಯ ಭಾವದ ಬಗೆದೋಱಿಯವನ ಕಾವನಂಬಿಗ ಮಯ್ಯೊಡ್ಡಿಸಿ ಸೆಳೆದು ಸಂಭಾವಿಸು ಮೋಹರತಿಯೊಳು (ಕಂಸವಿ. ೯-೫೭). ೨. ಸಜ್ಜಾಗು; ಸಿದ್ಧವಾಗು : ದಶಶಿರ ಭರದಿ ಬಂದೋಲಗವನಿತ್ತನು ಧುರಕೆ ಸಿಂಗರಗೈಯುತಿರ್ದನುದಾರಸಾಹಸನು (ಕಾಶಿರಾ. ೪೧-೧). [ಸಿಂಗರ (< ಸಿಂಗಾರ) + ಕೆಯ್$_1$]

ಸಿಂಗರಂಗೈ 'ಸಿಂಗರಂಗೆಯ್' ನೋ.

ಸಿಂಗರಂಬೆಱು (ಕ್ರಿ). ಶೃಂಗಾರವನ್ನು ಹೊಂದು ; ಅಲಂಕಾರದಿಂದ ಶೋಭಿಸು: ಕತ್ತುರಿಯ ಸಾರಣೆಯಿಂ ಕುಂಕುಮದ ಕಾರಣೆಯಿಂ . . . ಸಿಂಗರಂಬೆತ್ತ[ಪಾಠಾಂ. ಸಿಂಗರವೆತ್ತ] ರಾಜವೀಥಿಗಳಿಂ ಮಂಗಳತರಮಾಗಿ ಕಣ್ಗೊಳಿಪ ನಿಜರಾಜಧಾನಿಯೆನಿಪ ಕೈಲಾಸಪುರವರಮಂ ಪೊಕ್ಕು (ಶಬಶಂ. ೫-೫೭ ವ). [ಸಿಂಗರ (< ಸಿಂಗಾರ) + ಪೆಱು$_1$]

ಸಿಂಗರಗದುಗು (ನಾ). ೧. ಒಂದು ಬಗೆಯ ಮರ; ಪ್ರಿಯಂಗುವೃಕ್ಷ. ೨. (?). ೧ , ೨ : ಸುರಪನಂತಿಂದ್ರವಾರುಣಿಯಿಂದೆ . . . ಧನಿಕನಂದದೊಳೆ ಸಿಂಗರಗದುಗಿನಿಂ ಶಿವನ ತೆಱದೊಳಾಲದಿನೊಪ್ಪಿತಾ ಘೋರತರಕಾನನಂ (ಚೀರಮ. ೧೦-೧೫). [ಸಿಂಗರ$_2$ + ಗದುಗು$_1$ (< ಗರ್ದುಗು)]

ಸಿಂಗರಗೆಯ್ 'ಸಿಂಗರಂಗೆಯ್' ನೋ.

ಸಿಂಗರಗೇರಿ (ನಾ). ಅಲಂಕಾರದಿಂದ ಶೋಭೆಗೊಂಡ ಬೀದಿ : ಅಂಗಡಿಗೇರಿಯಾನೆಯ ಶಾಲೆ . . . ಜನರ ಸಿಂಗರಗೇರಿಯ ನೋಡುತ ನೆಱೆ ಗಣಿಕಾಂಗನಾವೀಥಿಗೈತಂದ (ಕಂಸವಿ. ೧೦-೨೨). [ಸಿಂಗರ (< ಸಿಂಗಾರ) + ಕೇರಿ]

ಸಿಂಗರಗ್ಗೆ 'ಸಿಂಗರಂಗೆಯ್' ನೋ.

ಸಿಂಗರಗೊಳ್, ಸಿಂಗರಗೊಳು, ಸಿಂಗರಗೊಳ್ಳು (ಕ್ರಿ). ಅಲಂಕಾರವನ್ನು ಹೊಂದು,— ಪಡೆ : ಸುರಸುಂದರಿಯರ್ಕಳ್ ಸಿಂಗರಗೊಂಡುಳುಪಿರ್ದ ಬನ್ನಿದಿಂ . . . ಬರೆವರ್ (ಶಾಕುಂತ. ೧೦೦-೧೬೮). **ಸಿಂಗರಗೊಳು** : ತನಗು ಹಿರಿದುಂಟೆಂಬ ತಿಳಿವ ಹೊಳಪಿನೊಳಿಟ್ಟು ಆತ್ಮ ಸಿಂಗರಗೊಳುವ ವಿನ್ಯಾಸವೇ (ವಾಲದೇ. ೨೦-೪). **ಸಿಂಗರಗೊಳ್ಳು** : ಅವಳು ಚಿನ್ನದ ಹುರಿಯಿಂದ ಸಿಂಗರಗೊಂಡಿದ್ದ ನೀಲಿಯಂಚಿನ ಸಮವಸ್ತ್ರವನ್ನೂ ನೀಲಿಯ ದಬಾಲಿಯನ್ನೂ ಧರಿಸಿದ್ದಳು (ಪುನರು. ೧೪೦).

[ಸಿಂಗರ (< ಸಿಂಗಾರ) + ಕೊಳ್$_1$]

ಸಿಂಗರಗೊಳು 'ಸಿಂಗರಗೊಳ್' ನೋ.

ಸಿಂಗರಗೊಳ್ಳು 'ಸಿಂಗರಗೊಳ್' ನೋ.

ಸಿಂಗರಜೋಗಿ, ಸಿಂಗರಜೋಯಿ (ನಾ). ಕಾಮ; ಮನ್ಮಥ: ''ಕುಡುವಿಲ್ಲ ಸಿಂಗರಜೋಗಿ ಮಿನುಪ ಮಿಂಬಟವಿಗೆಯ . . . ಎನೆ ಮನ್ಮಥನಾಮಮಕ್ಕುಂ'' (ಕಬ್ಬಿಕೈ. ೮). **ಸಿಂಗರಜೋಯಿ** : ಸಿಂಗರಜೋಯಿಯ ಕುಲದೇವತೆಯ ಗೃಹಾಂಗಣ ಸಮ್ಮೋಹನರಸಪೂರಿತದಿಂಗಡಲೊಳಗಣ ಬುದ್ಬುದವೋ ಸಿಂಗರದೆಱವೆಟ್ಟುಗಳೋ ಅಂಗಜಗಿರಿದುರ್ಗಗಳೋ ಎನೆ . . . ವೇಶ್ಯಾವಾಟಂ ಕಣ್ಗೊಪ್ಪಿದುವು (ಜಯಾಕಾ. ೧-೬೨).

[ಸಿಂಗರ (< ಸಿಂಗಾರ) + ಜೋಗಿ$_1$./ ಸಂ. ಶೃಂಗಾರಯೋನಿ]

ಸಿಂಗರಜೋಯಿ 'ಸಿಂಗರಜೋಗಿ' ನೋ.

ಸಿಂಗರಥ (ನಾ). ೧. ಸಿಂಹಗಳನ್ನು ಹೂಡಿದ ತೇರು, — ರಥ : ಅಖಿಲ ನೃಪಾಲ ರಥ ಹಯವು ಸಿಂಗರಥಕಿದಿರಾಗಲಮ್ಮವು (ಸಾಳ್ವಭಾ. ೧೯-೫). ೨. ಸಿಂಹಗಳನ್ನು ಹೂಡಿದ ರಥವುಳ್ಳವನು : ಸಿಂಗವೆರಡನು ಸಾಕಿ ತೇರೊಳು ಸಂಗೊಳಿಸಿದದಱಿಂದೆ ಪೆಸರಲಿ ಸಿಂಗರಥನೆನಿಸಿಪ್ಪನು (ಸಾಳ್ವಭಾ. ೧೯-೫). [ಸಿಂಗ$_1$ + ರಥ]

ಸಿಂಗರದೋಂಟ, ಸಿಂಗರದೋಟ (ನಾ). ಅಲಂಕೃತವಾದ ವನ; ಸುಂದರವಾದ ಉದ್ಯಾನ : ಸಿಂಗರದೋಂಟದ ಬಾಗಿಲುಪ್ಪರಿಗೆಯ ಹೊಂಗಳಸವ ನೋಡಿ ನಮಿಸಿ ಹೆಂಗಳ ರನ್ನೆ ಪಲ್ಲಕ್ಕಿಯನಿಳಿದಳು (ಮೋಹಶ. ೨೪-೩೨). **ಸಿಂಗರದೋಟ** : ಕಂದರ್ಪನ ನಿಜನಗರಿ ಮಂದಸಮಿರನಾಡುಂಬೊಲನೆನೆ ಬಗವಂದುದಾ ಸಿಂಗರದೋಟ (ಶ್ರೀಪಾಲ. ೫-೧೭); ಸಿಂಗರದೋಟದ ಸಿರಿಗಂಪ ಸುಜನರ್ಗೆ ತಂಗಾಳಿ ತಂದೀವ ತೆಱದೆ ಮಂಗಳ ಹರಿಕಥಾಮೃತವ ನಾ ನಿನ್ನ ಕರ್ಣಂಗಳಿಗೆಱೆವೆ (ಮೋಹಶ. ೧೦-೨).

[ಸಿಂಗರ (< ಸಿಂಗಾರ) + ತೋಂಟ]

ಸಿಂಗರದೋಟ 'ಸಿಂಗರದೋಂಟ' ನೋ.

ಸಿಂಗರಭೂಮಿ (ನಾ). ಅಲಂಕೃತವಾದ ಭೂಮಿ; ಸೊಬಗಿನ ತಾಣ: ಅಂಗನೆಯರ ಪಾದದರುಣಮರೀಚಿ ಬೆದಂಗುವದೆದ ಕುಳಿರ್ಗಲ್ಲ ಸಿಂಗರಭೂಮಿಯರಾಗ ಮಾಡಲು ಸ್ತ್ರೀಯರಂಗಸೋಂಕೇನ ಪುಟ್ಟಿಸದೊ (ವರ್ಧಚ. ೧-೩೨).

[ಸಿಂಗರ (< ಸಿಂಗಾರ) + ಭೂಮಿ]

ಸಿಂಗರವಡಿಸು (ಕ್ರಿ). ಅಲಂಕಾರ ಮಾಡು; ಶೃಂಗರಿಸು: ಮುಡಿಸಿದರಲರ ವೆರ್ದುಱುಬೊಳು ಸಿಂಗರವಡಿಸಿದರ್ ಬಾಣನಂದನೆಯ (ಮೋಹಶ. ೩೧-೬).

[ಸಿಂಗರವಡು + - ಇಸ್ಕು]

ಸಿಂಗರವಡು, ಶೃಂಗರವಡು (ಕ್ರಿ). ಅಲಂಕಾರವನ್ನು ಹೊಂದು; ಅಲಂಕೃತಗೊಳ್ಳು : ದಾನವಮಲ್ಲ ಸಿಂಗರವಟ್ಟ ಶೂಲಿಗೆ ನಮಿಸಿ ಖಡ್ಗವ ಪಿಡಿದು ಝಳಪಿಸಿದ (ಕಾಶಿರಾ. ೨೧-೧೦). **ಶೃಂಗರವಡು** : ಕೇಳಲಾಶಿಸದಱಿಯನವನಲಿ ಹೇಳುವಾತನು ಜಾಣನೆನಿಸನು ಬಾಲೆ ಶೃಂಗರವಟ್ಟು ಕುರುಡನ ಮುಂದೆ ಕುಣಿದಂತೆ (ಕಾಶಿರಾ. ೨೩-೧೦). [ಸಿಂಗರ (< ಸಿಂಗಾರ) + ಪಡು$_1$]

ಸಿಂಗರವಡೆ 'ಸಿಂಗಾರವಡೆ' ನೋ.

ಸಿಂಗರವನ (ನಾ). ಅಂದವಾದ ತೋಟ; ಅಲಂಕಾರಯುಕ್ತವಾದ ವನ: ಸ್ಮರನರಗಿಳಿ ಪೊನ್ನ ಪಂಜರವಿಳಿದು ಸಿಂಗರವನದೊಳು ಹೋಗುವಂತೆ ತರುಣಿ ಪಲ್ಲಕ್ಕಿಯಿಂದಿಳಿದು ಭೂಪಾಲರ ನೆರವಿಗೆಯ್ದುದಳು (ಧರಚ. ೫೫-೭೮); ಅಂಗಜ ಹೆಂಗಳ ಸಿಂಗರವನದೊಳು ತೊಂಗಿಸಿ ಮುನಿಮೃಗಾವಳಿಯ ಜಂಗುಳಿಗೊಡ್ಡಿದ ಬೆಳ್ಕಾರವಲೆಯನೆ

ಕಂಗೊಳಿಸಿತು ಸೂಳೆಗೇರಿ (ಕಂನವಿ. ೬-೯೧). 'ಸಿಂಗರದೋಂಟಿ' ಪರಾ.

[ಸಿಂಗರ (< ಸಿಂಗಾರ) + ವನ]

ಸಿಂಗರವಾನ್ (ಕ್ರಿ). = ಸಿಂಗರವಡು: ಕಾಸೆ ಚೆಲ್ಲಣ ಪೊಂಬರಿಯಣದೊಳು ಕುವರನಿಗೆ ಸರಿಮೈಭಾಗವ ಕಳುಹಲು ಕೈಕೊಂಡು ಏರಿದು ಸಿಂಗರವಾಂತು ಬಂದ (ಮೋಹ. ೧೨-೪೮). [ಸಿಂಗರ (< ಸಿಂಗಾರ) + ಆನ್$_1$]

ಸಿಂಗರವುಯಿಲ್ (ನಾ). ಶೃಂಗಾರಕಲಹ; ರತಿಕ್ರೀಡೆ : ಕಳಿವೂದಾಳ್ಳಿ ಕಟಲ್ಲು ಬೀಚೆಯುಡೆನೂಲ್ ಪರ್ಬೋಂದೆ ಪೊನ್ನೇವುರಂ ಕಳನಾದಂಗೊಳ ಪೊಂಗಿ ಸಿಂಗರವುಯಿಲ್ಲೊಂಡೊಂದುವೇಂ ಗೆಲ್ಲಮಂ (ಅಪ್ರತಿ. ೧೭-೨೩).

[ಸಿಂಗರ (< ಸಿಂಗಾರ) + ಪುಯಿಲ್ (< ಪೊಯಿಲ್)]

ಸಿಂಗರಶಾಲೆ (ನಾ). ಅಲಂಕೃತವಾದ ಭವನ; ಸಿಂಗರಿಸಿದ ನಿಲಯ: ಸರಸಿಜಭವನ ನೇಮದೆ ಸುರವರ್ಧಕಿ ಹರುಷದೊಳಗೆ ಕೈಗೈದ ಏರಿದು ಸಿಂಗರಶಾಲೆಯೆನೆ ದಿವ್ಯಪ್ರಾಕಾರ ಪರಿಶೋಭಿಸಿದುದು (ಕಂನವಿ. ೭-೭೪). [ಸಿಂಗರ (< ಸಿಂಗಾರ) + ಶಾಲೆ$_3$]

ಸಿಂಗರಿಗ 'ಸಿಂಗಾರಿಗ' ನೋ.

ಸಿಂಗರಿಸು 'ಸಿಂಗಾರಿಸು' ನೋ.

ಸಿಂಗರೂಪ 'ಶಿಂಗರೂಪ' ನೋ.

ಸಿಂಗಲಾಂಚನ, ಸಿಂಘಲಾಂಘನ (ನಾ). ೧. ಸಿಂಹದ ಚಿಹ್ನೆ,— ಗುರುತು. ೨. ಧ್ವಜದಲ್ಲಿ ಸಿಂಹದ ಚಿಹ್ನೆಯನ್ನು ಉಳ್ಳವನು : ಪ್ರಥಮತುಳಾಪುರುಷದಾನ ಪಾರಗ ಸಿಂಗಲಾಂಚನಂ ವಾನರಧ್ವಜ (ಎಕ. VIII, ಸಾಗರ. ೧೦೩-೧೧; 1089). **ಸಿಂಘಲಾಂಘನ:** ೨. ಸಾಖಾಚರೇಂದ್ರಧ್ವಜವಿರಾಜಮಾನಮಾನೋತ್ತುಂಗ ಸಿಂಘಲಾಂಘನ (ಸೌಗಾ. XX, ೭೬-೧೨; 1118). [< ಸಂ. ಸಿಂಹಲಾಂಘನ]

ಸಿಂಗಲೀಕ 'ಸಿಂಗಳೀಕ' ನೋ.

ಸಿಂಗವಟ್ಟಿಗೆ, ಸಿಂಗವಡ್ಡಿಗೆ (ನಾ). ಒಂದು ಬಗೆಯ ತೆರಿಗೆ : ಚೈತ್ರದ ಪರ್ಬ್ಬಕ್ಕೆ ಆದಿತ್ಯವಾರದ ಸಿಂಗವಟ್ಟಿಗೆ ೨ ಪವಿತ್ರದ ಪರ್ವ್ವಕ್ಕೆ ಆದಿತ್ಯವಾರದ ಸಿಂಗವಟ್ಟಿಗೆ ೨ . . . ನಾಗೇಶ್ವರದೇವರ್ಗ್ಗೆ ೫೦ ಮತ್ತರಲು ತಂತಮ್ಮಾಯಮಂ ಬಿಟ್ಟರು (ನಾಂದೇಹ. ೬-೨೨ ವ ; 1047); ಯೆಲೆಯ ಹೇಱಿಂಗೆ ವೀಸವೊಂದು ಸ್ಥಳದ ಸಿಂಗವಟ್ಟಿಗೆ ಸೋಮವಾರದಲು ನಿವಾಳಿಗೆ ಗಾಣಕ್ಕೆ ಯೆಂಣ್ಣೆ ಸೊಳಸಗೆಯೆರಡು ದೇವರಿಗೆ ನಡೆವ ಗಾಣವೊಂದು (ಕಾ. I, ೩೦-೪೭; 1222); ಬೇಳೆ ಸಿಂಗವಟ್ಟಿಗೆಯ ಮಾಜುವ ಘೀಣಿಂದಂ ಒಳಗಣ ಕುದುರೆಗೆ ಬೇಳೆ ಪ್ರತಿ ಗದ್ಯಾಣ ಒಂದಕ್ಕಂ (ಎಕ. V, ಬೇಲೂರು. ೭೫-೧೦೯; 1382). **ಸಿಂಗವಡ್ಡಿಗೆ** : ಬಾದರಿಗರಿಗೆ ತೆಱೆ ಮಾನ್ಯಂ ಈ ಬ್ರಹ್ಮಪು XXX ಯ ಸಿಂಗವಡ್ಡಿಗೆ ಸುಂಕ ಮಾನ್ಯದಂಡ ದೋಷ ಅಪುತ್ರಿಕವಿ[ಲ್ಲ] (ಸೌಗಾ. XV, ೧೦೭ ೪೫; 1248).

[?]

ಸಿಂಗವಡ್ಡಗಿ (ನಾ). ಶ್ರೇಷ್ಠನಾದ ಬಡಗಿ; ಕುಶಲನಾದ ಮರಗೆಲಸದವನು: ತದಸೂರಾ ಸಿಙ್ಗವಡ್ಡಗಿ ರಾಪಮ್ಮನ್ ಸಿರಿವಾಳ್ಳ ಮಾಡಿದಾನ್ (ಸೌಗಾ. XX ,೮-೩; ಸು. ೫೧೮ ಶಕ). [ಸಿಂಗ$_1$ + ಬಡ್ಡಗಿ(< ಬಡಗಿ)]

ಸಿಂಗವಡ್ಡಿಗೆ 'ಸಿಂಗವಟ್ಟಿಗೆ' ನೋ.

ಸಿಂಗವಣೆ (ನಾ). = ಸಿಂಗಪೀಠ: ಎಸಳ್ಳಳೆಯಲ್ಲಾ ನುಡಿ ಸಿಂಗವಣೆ ಝುಲ್ಲಿಯಸುಗೆ ಮುಕ್ತಾವಳಿವೆಳಗು ಮಿಸುಗುವಚ್ಛತ್ರವರೆಯೆಸೆವ ಭವನ ಪಾದಬಿಸರುಹಕಾನೆಱಗುವೆನು (ಶ್ರೀಪಾಲ. ೧-೨); ತೇಜೋನಿಧಿ ಸಿಂಗವಣೆಯೊಳು ಕುಳಿತು ವಿಭ್ರಾಜಿಸಿದನು ರಾಜೇಂದ್ರ (ಜ್ಞಾನಚಿ. ೨೭-೭೩). [ಸಿಂಗ$_1$ + ಮಣೆ$_1$]

ಸಿಂಗವರಿ 'ಸಿಂಗವಱಿ' ನೋ.

ಸಿಂಗವಲೆ (ನಾ). ಸಿಂಹವನ್ನು ಹಿಡಿಯುವ ಒಂದು ಬಗೆಯ ಬಲೆ: ಹಾಸುವಲೆ ಕಣ್ಣೆವಲೆ . . . ವ್ಯಾಘ್ರವಲೆ ಸಿಂಗವಲೆ . . . ನೀರುವಲೆ ಶಶಕವಲೆಯು (ರುಕ್ಮಾಂಗ. ೧೦-೧೯). [ಸಿಂಗ$_1$ + ಬಲೆ$_1$]

ಸಿಂಗವಸುಳೆ (ನಾ). ಸಿಂಹದ ಮರಿ : ಮುಂಗಾರ ಮೊಳಗುಗೇಳಿದ ರಾಜಹಂಸನ ಭಂಗಿಯವೊಲು ಬೆದಱಿದನು ಸಿಂಗವಸುಳೆನಡುವಿನ ಜಾರೆಯ ನುಡಿಗಂಗಜರಾಜ ಕುಂಜರನು (ನೇಮಿಸಾ. ೧೯-೧೦). [ಸಿಂಗ$_1$ + ಪಸುಳೆ]

ಸಿಂಗವಱಿ, ಸಿಂಗವರಿ (ನಾ). = ಸಿಂಗವಸುಳೆ: ಕರಮುಕ್ತವಾ ಯಂತ್ರಮುಕ್ತ ಮುಕ್ತಾಮುಕ್ತ ಉರುತರದ ಮೂದೆಱದ ಕೈದುಕಾಱರು ಸಿಂಗವಱಿಗಳೆನೆ ಕಡುಕೆಯಿದು ಹೂಣಿಸಿ ಪಚಾರಿಸುತೆ (ಸಾಳ್ವಭಾ.೨೫-೧೪); ಅಳಿಗಳಪ್ಪುಗೆ ಸಿಂಗವಱಿಗಳ ಚೆಲ್ಲಾಟ ಕಳಹಂಸಗಳ ಬಾಯ್ಮೂಟ . . . ಇರ್ವರ ನೆಲೆಗೊಂಡು ಮೆಱೆದುವು (ಕಂನವಿ. ೧೦-೪೪). **ಸಿಂಗವರಿ** : ನವಿಲಗರಿ ನಂಗೊಂಬು . . . ಸಿಂಗವರಿ ಬದನಿಕೆ ಚಿತ್ತ ಕತ್ತುರಿ ಪುಣುಗು ಪುಲಿಯುಗುರ . . . ಇತ್ತು ಬಿನ್ನೈಸಿದನು ಶಬರಪತಿ (ಆನಂರಾ. ೩-೩-೭); ಮೊಲೆವಾಲ ಕುಡಿಯುತ್ತೆ ಸಿಂಗವರಿಗಳು ಮೂರು ಆಟವಾಡುವುವು (ಬಾಲಪ್ರ. III, ೧೨೭೯).

[ಸಿಂಗ$_1$ + ಮಱಿ]

ಸಿಂಗವಿಟ್ಟರ, ಸಿಂಘವಿಷ್ಟರ (ನಾ). ಸಿಂಹಾಸನ; ಗದ್ದುಗೆ: ಕಂಗೊಳಿಸುವ . . . ಚಾವಡಿಯ ಸಿಂಗವಿಟ್ಟರದೊಳೊಡ್ಡೋಲಗಗೊಟ್ಟರ್ದ ಲಿಂಗಾರ್ಚಕ ಜಾಣ ಬಾಣ (ಮೋಹ. ೨೦-೩೧). **ಸಿಂಘವಿಷ್ಟರ** : ಸಿಂಘವಿಷ್ಟರವನೇಱಿದನಾ ಜಯಸಿಂಘವಲ್ಲಭಂ (ಎಕ. VII, ಶಿಕಾರಿ. ೧೨೫-೧೭; 1019). [< ಸಂ. ಸಿಂಹವಿಷ್ಟರ]

ಸಿಂಗವೆರೆ (ನಾ). "ಸಿಂಹಮಾಸದ ಚಂದ್ರ" (ಗಿಳಿಮಂ. ೧೩೮ ಟಿಪ್ಪಣಿ): ಕಾತಿಕೆಯ ಮಳೆ ಮುಗಿದು ಬಂದು ಸಿಂಗವೆರೆ ಇನ್ನುಮೊಗೆಯದ ಸಂಜೆಯೊಂದು ಆ ಕೆಳವ ಕೋವನಂಗಡಿಯಲ್ಲಿ ನಿಂದೆ (ಗಿಳಿಮಂ. ೧೨೩-೪೦). [ಸಿಂಗ$_1$ + ಪೆರ್$_1$ (< ಪೆಱೆ)]

ಸಿಂಗವೇಂಟೆ (ನಾ). ಸಿಂಹವನ್ನು ಹಿಡಿಯುವುದು; ಸಿಂಹದ ಬೇಟೆ: ಸಿಂಗವೇಂಟೆಯನಾಡಿ ತಿರುಗಿ ರಿಪುಮಾತಂಗಸಿಂಗನೆಯ್ತಪ್ಪಾಗ (ಹಚಕಾ. ೫-೩೮); ಅಪಭ್ರಂಶಕ್ಕಂ ದೇಶೀಯಪದಕ್ಕಂ ಸಮಾಸಂ — ರಾಯಗೋಟೆ, ಸಿಂಗವೇಂಟೆ, ಸಜ್ಜೆವನೆ (ಕವಿದ. ೨೯೯ ಪ್ರಯೋ). [ಸಿಂಗ$_1$ + ಬೇಂಟೆ]

ಸಿಂಗಳ$_1$, ಸಿಂಗಣ, ಸಿಂಘಣ (ನಾ). ಸಿಂಹಳದೇಶ ಮತ್ತು ಆ ದೇಶಕ್ಕೆ ಸೇರಿದ ವ್ಯಕ್ತಿ : ಸೌರಾಷ್ಟ್ರ ಸಿಂಗಳ ದ್ರವಿಡ ಕಾಂಬೋಜದೇಶದ ಸಕಲಶರಣರೈತರುತಿರ್ದರು (ಚಿಬಸು. ೬-೪೯); ಸಿಂಗಳದ ದೇಶದಿಂದಂಗನೆಯು ಬಂದಾಳು (ಸರ್ವಜ್ಞ. ೧೦೧೬). **ಸಿಂಗಣ:** ಮೂಡಣ ಕಡಲ ಕರವಳಿಗಳನು ಶೋಧಿಸಿ . . . ತಡಿಯ ಸಿಂಗಣ ತಾಮ್ರಪರ್ಣಿಯ ಹುಡುಕಿ ಹೊಳೆಸಾಲಿನಲಿ ತಿರುಗಿತು ಬಲವು ಬಲಿಮುಖರ (ತೊರರಾ. ೪-೧೦-೫). **ಸಿಂಘಣ:** ಇಂದು ಕನಕನನೆ ಭೇದಿಸಿದಂದಕ್ಕುಂ ಚೋಳ ಸಿಂಘಣರ್ಗತಿಭಯಮುಂ (ಅಚ್ಚಮ. ೭-೧೧೧). [< ಪ್ರಾ. ಸಿಂಘಲ./ ಸಂ. ಸಿಂಹಲ]

ಸಿಂಗಳ$_2$ 'ಸಿಂಗಾರ' ನೋ.

ಸಿಂಗಳಕ, ಸಿಂಗಣೆಕ$_2$, ಸಿಂಗಳಿಕ$_2$ (ನಾ). = ಸಿಂಗಳ$_1$: ಕುಸುರಿದರಿವುತ ಸಿಂಗಳಕದ ಹೆಸರ ಕೆಡಸಿದುದೇನ ಬಣ್ಣೆಪೆನಸುರ ಪಾಳಯ ಬಿಡಲು ನಾನಾವಿವರ ಮಾರ್ಗದಲಿ (ಮೂಲರಾ. ೩-೩೨). **ಸಿಂಗಣೆಕ$_2$:** ಉಭಯತಟವರ್ತಿಗಳಪ್ಪ ಕೊಂಕಣಿಗ ಸಿಂಗಣಿಕ ಶಬರ ಬಾಂಡಾಲ ಪ್ರಭೃತಿಗಳೆಲ್ಲವೇಕೆ ಪಾಪಕ್ಷಯಮುಂ ಪುಣ್ಯಬಂಧಮುಮಾಗಲೆವೇಳ್ಕುಂ (ಪಾಸಾ. ೯೨೫). **ಸಿಂಗಳಿಕ್ಕ$_2$:** ಅಂಗ ವರಾಳ ಸಿಂಗಳಿಕ ಗೊರ್ಜ್ಜರ . . . ಯಾದವ ಮಹೀಭುಜಮೌಳಿಮಣಿಬ್ರಜಪ್ರಭಾಲಿಂಗಿತಪಾದಪೀಠನ್ (ಸೌಗಾ. XX, ೪೬-೫; 1072). [< ಸಂ. ಸಿಂಹಲಕ]

ಸಿಂಗಳಪಿಪ್ಪಲಿ (ನಾ). ಒಂದು ಬಗೆಯ ಔಷಧೀಸಸ್ಯ,— ಹಿಪ್ಪಲಿ: "ಬ್ರಹ್ಮಭೂಭುಜ—ಸಿಂಗಳಪಿಪ್ಪಲಿ" (ಓಷಧಿ. ೧೦೮). [< ಸಂ. ಸಿಂಹಲಪಿಪ್ಪಲೀ]

ಸಿಂಗಳಿಕ$_1$ 'ಸಿಂಗಳೀಕ' ನೋ.

ಸಿಂಗಳಿಕ$_2$ 'ಸಿಂಗಳಕ' ನೋ.

ಸಿಂಗಳೀಕ, ಶಿಂಗಣಿಕ, ಶಿಂಗಲೀಕ, ಶಿಂಗಳೀಕ, ಸಿಂಗಣೆಕ$_1$, ಸಿಂಗಣೀಕ, ಸಿಂಗಲೀಕ, ಸಿಂಗಳಿಕ$_1$ (ನಾ). ೧. ಕಪ್ಪುಮುಸುಡಿನ ಒಂದು ಬಗೆಯ ಕೋತಿ; ಮುಸುವ: ನಡುಮನೆಯಲಾಡುವ ಸಿಂಗಳೀಕನನು ಒಂದು ಉಡು ನುಂಗಿದುದ ಕಂಡು (ಸಿದ್ಧೇಸ. ೪೮-೧೩೫); ವಾನರ ಸಿಂಗಳೀಕ ಮುಸು ಕರಡಿಯ ಬಲಂ ಮುತ್ತಿದುದು (ಜೈಮಿಭಾ. ೨೧-೧೮). **ಶಿಂಗಣೆಕ** : ೧. ಕರಡಿ ಕಪಿ ಮುಸು ಶಿಂಗಣೆಕಗಳ ನೆರವಿಗಳು (ಉತ್ತರ. ೩೩-೧೧). **ಶಿಂಗಲೀಕ** : ೨. (ಆಲಂ) ಕಪ್ಪುಕೋತಿಯಂತೆ ಇರುವವನು ; ಕೆಟ್ಟಮುಖದವನು: ಸರಸ್ವತಿ — (ಲಲಿತೆಗೆ) ನನ್ನ ಮಾತು ಕೇಳಿಕೊಂಡು ಕುಣಿಯಬೇಡ. ಆ ಶಿಂಗಲೀಕನ್ನ ಕಟ್ಟಿಕೊಂಡು ಕುಣಿ! (ಆಶಾಧೂ. ೨೬). **ಶಿಂಗಳೀಕ** : ೧. ಹರಿ ಎಂಬವಳಿಗೆ

ಶಿಂಗಳೀಕಗಳು ಕಪಿಗಳು . . . ಹುಟ್ಟಿದವು (ಕೃವಾಅ. ೧೦೯); ಕೋತಿಗಳಲ್ಲಿ ಜಾತಿ: ಶಿಂಗಳೀಕ, ಕರ್ಕೋಡಗ, ಕೋತಿ (ನಮ್ಮನು. ೨೫೯). **ಸಿಂಗಣೆಕ$_1$** : ೧. ಹಣೆಯ ಜೂಬಿನ ಜೂಲುಗೂದಲ ಕಣುಗಿಡಿಯ ಕಡುಕಾಹುರದ ಸಿಂಗಣೆಕಗಳನರ್ಬುದವನತಿಬಲ ತಾರ ತೋಱಿಸಿದ (ತೊರಾ. ೪-೭-೨೩). **ಸಿಂಗಣೇಕ** : ೧. ಹಲುಗಿರಿದು ಹಣಗಿದವು ಕೋಡಗ ಸಿಂಗಣೇಕಗಳು (ಅಂಬಿಕಾ. ೩೨-೩). **ಸಿಂಗಲೀಕ** : ೧. ಹರಿಹರಿದಸುರಭಟರನು ಸಿಂಗಲೀಕರು ಸೀಳಿ ಬಿಡುತಿರಲು (ಕಾಶಿಖಂ. ೨೦-೪). **ಸಿಂಗಳಿಕ$_1$** : ೧. ಮುಸು ಕರಡಿ ಸಿಂಗಳಿಕ ಕೋಡಗ ವಸರಗಳ ಸಂದಣಿಯ ಸಂಭ್ರಮವೆಸೆದುದ್ಕೆ (ತೊರಾ. ೬-೩೦-೧೬); ತಂಗಿಗಾದುದು ತಿರಿವ ಪ್ರಾಪ್ತಿಯ ಭಂಗ . . . ಸಿಂಗಳಿ[ಪಾಠಾಂ. ಣಿ]ಕರಂತೆಸೆವ ಜೀವವ ನುಂಗದೇತಕೆ ಮೃತ್ಯು ಪಾಟಿಗಳಂಗವನು ನೋಡುವರೆ ಶಿವಶಿವಯೆಂದನಾ ರಾಮ (ಕೃಷ್ಣಾಕಾ. ೧೯-೯).

[ದೇ. ॥ ತೆಲು. ಸಿಂಗಿಲೀಕ, ಶಿಂಗಿಲೀಕ]

ಸಿಂಗಾಡಶಂಭ (ನಾ). [ಅಶ್ವಶಾ] ಕುದುರೆಗೆ ಬರುವ ಒಂದು ಬಗೆಯ ನಾಸಿಕರೋಗ: ಮೂಗಿನಲ್ಲಿ ಹತ್ತಿಯ ಹಾಗೆ ಬಿದ್ದಡೆ ಅದಂ ಸಿಂಗಾಡಶಂಭಮೆಂಬುದು (ಅಶ್ವಸೃ. ೧೨-೭೧ ಟೀಕು). 'ಶಂಭ', 'ಸಿಂಘಾಣ', 'ಸೆಂಬ' ಪರಾ.

[< ಸಂ. ಸಿಂಘಾಣಶಂಭ?]

ಸಿಂಗಾಡಿ, ಶಿಂಗಾಡಿ, ಸಿಂಗಡಿ$_1$ (ನಾ). ಬಿಲ್ಲು; ಧನುಸ್ಸು : ಕಡುಚೆಲ್ವೆನಿಪ ಸಿಂಗಾಡಿ ಭಲ್ಲೆಯ ಕತ್ತಿವಿಡಿದು ಬಂದರು ರಾವುತರು (ಅಂಜಚ. ೬-೮೧); ಕಡುಪಿಂ ಕಾಯ್ದೇಱಿ ಸಿಂಗಾಡಿಯನೆ ಸೆಳೆದು . . . ಮಾಣದೆಚ್ಚಂ (ರಾಜಶೇ. ೬-೧೦೧); ಕಾವನ ಸಿಂಗಾಡಿಯಂತೆ ಬಾಗಿರ್ಪ ಪುರ್ಬುಂ (ಅದ್ಭುತ. ೮-೧೪). **ಶಿಂಗಾಡಿ** : ಹೊಂದಿಕೆಯ ಶಿಂಗಾಡಿಯೆನೆ ಹುರಿಗೊಂಡ ಮೀಸಗಳ (ಆನಂದಾ. ೩-೬-೩೮). **ಸಿಂಗಡಿ$_1$** : ಸ್ಮರವೀರ ತಾ ಮನದಂದು ಕರದೊಳುವಿಡಿದ ಸುವರ್ಣಸಿಂಗಡಿಯನು ಜಱವವು ಕಿವಿ ಕೋಮಲೆಯ (ಜ್ಞಾನಚಿ. ೨-೧೦); ಸ್ಮರನ ಸಿಂಗಡಿಗಿಂದಧಿಕ ಪುರ್ಬು (ಶ್ರೀಕೃಷ್ಣಾ. ೨೯).

ಸಿಂಗಾಡಿತೆಗವ ಹೆಜ್ಜೆ = ಕತ್ತಿವರಸೆಯಲ್ಲಿ ಒಂದು ಭಂಗಿ : ಒಂದು ಬಾರಿ ದೇಹಭ್ರಮಣವನ್ನು ಮಾಡಿ ಒಂದು ಪಾದವನ್ನು ಚಾಚಿ ಮತ್ತೊಂದು ಪಾದದಲ್ಲಿ ನಿಂತು ಕೈಗಳಿಂದ ಬಿಲ್ಲ ತೆಗೆವದರ ಆಕಾರ ತೋರುವುದು ಆವದೂ ಅದರ ಹೆಸರು ಸಿಂಗಾಡಿ ತೆಗವ ಹೆಜ್ಜೆಯೆಂದು ತಿಳಿವರು (ಏಕ್ಷಟೀ. ೪-೪೩). **ಸಿಂಗಾಡಿನಾಯಕಾಗ್ರಣಿ** = ಬಿಲ್ಲುಗಾರರ ಮುಖಂಡ; ಒಂದು ಬಿರುದು : ರಣತನುದರದೊಳಾ ರಾಮಂ ಪುಟ್ಟುವನ್ನದಿಂ ದಶರಥಧಾತ್ರೀರಮಣಂಗೆನೆ ದುರ್ಗುಣದೂರಂ ಸಿಂಗಾಡಿನಾಯಕಾಗ್ರಣಿಯೊಗೆದಂ (ಎಕ. XIV, ನಾಗಮಂ. ೧೪೦-೩೦ ; 1225). **ಸಿಂಗಾಡಿಮಾರಾಕಾರ** = ಬಿಲ್ಲನ್ನು ಹಿಡಿದ ಮನ್ಮಥನ ಆಕಾರವುಳ್ಳವನು; ಒಂದು ಬಿರುದು : ಸಾಮನ್ತ ಸಿಂಗಾಡಿ ಮಾರಾಕಾರಂ ವರಸೂನುವಂ ಪಡೆದನನ್ದಾ ಕಾಮದೇವಂ ಮಹೀಲೋಕಂ ಬಣ್ಣಿಸುತಿಪ್ಪಿನಂ ಹಿರಿಯ ಮಾಚ ಖ್ಯಾತ ಸಾಮನ್ತನಂ (ಎಕ.XIV, ನಾಗಮಂ.೧೪೦-೩೩; 1225). **ಸಿಂಗಾಡಿಯ ಕಾಮದೇವ** = ಬಿಲ್ಲನ್ನು ಹಿಡಿದಿರುವ ಮನ್ಮಥ; ಒಂದು ಬಿರುದು : ಬಣ್ಣಿಪುದೀ ಧರೆ ಸಿಂಗಾಡಿಯ ಕಾಮದೇವನನಮಿತ್ರಭೇದಗಾಂಡೀವಿಯಂ (ಎಕ. XIV, ನಾಗಮಂ. ೧೪೦-೩೧ ; 1225). [ದೇ. ॥ ತಮಿ. ಚಿಜ್ಜೂಟಿ, ಚಿಜ್ಜೂಣಿ ; ಮಲ. ಚಿಂಗಾಡಿ ; ತೆಲು. ಸಿಂಗಾಣಿ, ಸಿಂಗಿಣಿ./ ಸಂ. ಸಿಂಜಿನೀ]

ಸಿಂಗಾಡಿಗಟ್ಟು (ನಾ). ಕತ್ತಿವರಸೆಯಲ್ಲಿ ಒಂದು ಪಟ್ಟು : ಒಂದು ಪಾದವನ್ನು ನಿಲಿಸಿ, ಮತ್ತೊಂದು ಪಾದವನ್ನು ಹಿಂದಕ್ಕೆ ಮುದಿಡಿಕೊಂಡು ಶಿರಸ್ಸನ್ನು ಹಿಂದಕ್ಕೆ ಬಗ್ಗಿಸುವುದಾವುದುಂಟು ಅದು ಸಿಂಗಾಡಿಗಟುEಟ್ಟುಕೆಯೆಂದು ಸಮ್ಮತವು (ಏಕ್ಷಟೀ.೪-೪೧). [ಸಿಂಗಾಡಿ$_7$ + ಕಟ್ಟು$_2$]

ಸಿಂಗಾಡಿಗತ್ತಿ (ನಾ). ಬಿಲ್ಲಿನಂತೆ ಬಾಗಿರುವ ಒಂದು ಬಗೆಯ ಕತ್ತಿ : ಸುಲಲಿತ ತರಕಸ ಸಿಂಗಾಡಿಗತ್ತಿ ಜವದಾಡೆ ಅಲ್ಲಿ ಅದೆ ಅವನುಡಿಯಲ್ಲಿ (ಸಕಸ.ಕ. II. ೬೬೯-೬೪).

[ಸಿಂಗಾಡಿ + ಕತ್ತಿ]

ಸಿಂಗಾಡಿಪುರ್ಬು (ನಾ). ಬಿಲ್ಲಿನ ಹಾಗೆ ಬಾಗಿರುವ ಹುಬ್ಬು ; ಡೊಂಕಾಗಿರುವ ಹುಬ್ಬು: ತರಬೇಕು ತರುಣಿಯಳ . . . ಸ್ಮರನ ಸಿಂಗಾಡಿಪುರ್ಬಿನ ನೀರೆ ಮಲ್ಲಿಗೆ ಪರಿಮಳಿಸುವ ಮೈಯ ವರಕರಿಗಮನೆಯ (ಹುಕ್ಷಬ. ೨೧೨).

[ಸಿಂಗಾಡಿ + ಪುರ್ಬು (< ಪುರ್ವು)]

ಸಿಂಗಾಡಿಬಿಲ್ಲು 'ಸಿಂಗಾಡಿವಿಲ್ಲು' ನೋ.

ಸಿಂಗಾಡಿಯಂಬು (ನಾ). ಒಂದು ಬಗೆಯ ಬಾಣ: ಸಿಂಗಾಡಿಯಂಬಿನ ಮಳೆಯುಱಿಬಿಗೆ ಬಲ ಕಂಗೆಟ್ಟು ದೆಸೆದೆಸೆಗೋಡಿ (ಕಂನವಿ. ೧೧-೬೨); ಸಿಂಗಾಡಿಯಂಬಿನ ಮಳೆ ಬಾಣದಾರ್ಭಟೆ . . . ಕಂಗೆಡಿಸಿದುವು ತ್ರಿಜಗವ (ಕಂನವಿ. ೧೪-೨೧).

[ಸಿಂಗಾಡಿ + ಅಂಬು$_3$]

ಸಿಂಗಾಡಿವಿಡಿ (ಕ್ರಿ). ಬಿಲ್ಲನ್ನು ಹಿಡಿ; ಧನುಸ್ಸನ್ನು ಹಿಡಿ: ತಂಗಾಳಿ ತೀಡೆ ತಿಂಗಳ್ ಮೂಡೆ ಮನಸಿಜಂ ಸಿಂಗಾಡಿವಿಡಿಯೆ (ಚಿಬಪ್ರ. ೧೦-೬೫); ಸಿಂಗಾಡಿವಿಡಿದಂಗಜಂ ಪೆಕ್ಕಳಿ ಸಲಂದವರ ವೀಡಿನೊಳ್ ಪೊಕ್ಕನಾ ಭಾನು (ರುಕ್ಮಾಂಗ. ೧೧-೩). [ಸಿಂಗಾಡಿ + ಪಿಡಿ$_1$]

ಸಿಂಗಾಡಿವಿಲ್ಲು, ಸಿಂಗಾಡಿಬಿಲ್ಲು (ನಾ). ಒಂದು ಬಗೆಯ ಬಿಲ್ಲು, — ಧನುಸ್ಸು: ಕೋಲನುಗುಳಿಸುತ ಸಿಂಗಾಡಿವಿಲ್ಲಿಂದ ಮೇಲವರಿರದೆಯ್ತಂದು ಮೇಲೆ ಬಿದ್ದರು (ಕುರಾಸಾಂ. ೪೪-೧೨೮). **ಸಿಂಗಾಡಿಬಿಲ್ಲು** : ಬಲ್ಲಿತೆನಿಪಾ ನಾಳಿವಿಲ್ಲುಗಳನಂತೆ ಸಿಂಗಾಡಿಬಿಲ್ಲುಗಳ . . . ಪಿಡಿದಾ ನಿಶಾಟರು ನೆರೆದುದವನೊಡನೆ (ಸಾಳ್ವಭಾ. ೫-೧೩); ಸಿಂಗಾಡಿಬಿಲ್ಲ ಮೋಹರದಲ್ಲಿ ಹಿರಿಯ ತುರಂಗವನೇಱಿ ಕುಣಿಸುತ ಅಂಗದೇಶದ ರಾಯ . . . ಸಾಗಿದನು (ಭರಚಿ. ೨೨-೧೨); ಸಿಂಗಾಡಿಬಿಲ್ಲಿನವರೂ . . . ಭರ್ಜಿಯವರೂ ಮುಂದೆ ನಡೆಯಲಿ (ವೇಟಮಾ. ೨). [ಸಿಂಗಾಡಿ + ಬಿಲ್ಲು$_1$ (< ಬಿಲ್$_2$)]

ಸಿಂಗಾಯ್ (ನಾ). ಒಂದು ಬಗೆಯ ವಿಷದ ಕಾಯಿ : ಕರ್ವ ಕೈಪೆಯಾಯ್ತೇ! ತಂಗಾಯ್ ಸಿಂಗಾಯಾಯ್ತೇ! (ರಾಮಾಶ್ವ. ೩೫-೧೭). [< ಸಿಂಗಿ$_2$ + ಕಾಯ್$_4$]

ಸಿಂಗಾರ, ಶೃಂಗರ, ಸಿಂಗರ, ಸಿಂಗಳ$_2$ (ನಾ). ೧. ಅಲಂಕಾರ; ಶೃಂಗಾರ : ಸುಭಟರಿಗಾಯುಧದ ಸಿಂ[ಪಾಠಾಂ. ಶೃಂ]ಗಾರವೋ ಮೇಣ್ ಕಾಲ ನೇವುರವೊ (ಕುವ್ಯಾಕ. ೪-೨); ಸಿರಿಯ ರಮಣನ ವೈಭವಂಗಳ ಮೆಱೆವ ಸಿಂಗಾರವನು ನೋಡುತ ಹರುಷದೊಳಗೋಲಾಡುತಿರ್ದುದು ಸಕಲಜನ ನಲಿದು (ಕಾಶಿಖಂ. ೪೪-೪೮); ದೊಣೆಗೇಕೆ ಚಿತ್ತಾರ ಕಣೆಗೇಕೆ ಸಿಂಗಾರ ಗುರಿಯನು ಕಂಡೆಚ್ಚದವಗೆ (ಇಂಚಾಪ. ೮೬-೨೦). ೨. ಚೆಲುವು; ಅಂದ; ಶೋಭೆ : ಕಂಗೊಳಿಸುತಿಹೊಪ್ಪಿದಿನಡುವಿನ . . . ಸಿಂಗಾರದ ಸೆಳೆನಡುವಿನ ಬಲು ಮೋಹನಾಂಗಿಯರ್ಕೆತಂದರಾಗ (ಕಂನವಿ. ೯-೮೧). ೩. ಪ್ರಣಯವನ್ನು ವ್ಯಕ್ತಪಡಿಸುವ ಹಾವಭಾವ; ಶೃಂಗಾರಚೇಷ್ಟೆ : ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ ನಮ್ಮ ಸಲ್ಲ ಸುಳಿಯಲಿಲ್ಲ ಸುಳಿದು ಸಿಂಗಾರವ ಮಾಡಲಿಲ್ಲ (ಬಸವ. ೮೪೯). ೪. ಅಡಕೆಯ ಹೂವಿನ ಗೊಂಚಲು; ಹೊಂಬಾಳೆ : ಸೋಮಯಾಜರು . . . ಸಿಂಗಾರದ ಎಸಳನ್ನು ಕಿತ್ತು "ಹೆಗ್ಗಡತಿಗೆ ಕೊಡಿ" ಎಂದರು . . . ಹೆಗಡೆ ಸಿಂಗಾರದ ಎಸಳನ್ನು ಜೋಬಿನ ಒಳಬಿಟ್ಟು (ದೇವಹಂ. ೧೯೬); ಸಿಂಗಾರದ ಅಕ್ಕಿ ಮುಖಕ್ಕೆಲ್ಲ ಅಂಟಿಕೊಂಡು ಪಾತ್ರಿಯ ರೂಪ ಮತ್ತಷ್ಟು ವಿಕಾರವಾಯಿತು (ಕುಡಿಕೂ. ೬೫). **ಶೃಂಗರ** : ೧. 'ಶೃಂಗರಂಗೈ', 'ಶೃಂಗರವಡು' ಪರಾ. **ಸಿಂಗರ** : ೧. "ಶೃಂಗಾರದೊಳ್ ಸಿಂಗರಂ" (ಕರ್ಣಾನಿ. ೬೫); ಸಿಂಗರದ ಚೆನ್ನಾಂತ ಪಟ್ಟವಣೆಯ (ಕಬ್ಬಿಕಾ. ೩೪೧); ಸಿಂಗರಕಿದೇ ಸೀಮೆಯೆಂದೆನಿಪ ಪೇರುರಮೊಪ್ಪೆ (ಸೌಂದಪ್ರ. ೪-೫); ಚೆಲುವೆಗೆ ತಕ್ಕ ಸಿಂಗರವ ನಿರ್ಮಿಸಿ . . . ನಿಲವುಗನ್ನಡಿಯ ತೋಱಿದರು (ಮೋಪತ. ೨೩-೫೩). ೨. ಸಿಂಗರಮದಾಗೆ ತಾಂಡವಮುಖ್ಯ ನೃತ್ಯಂಗಳಿಂದೆ (ಭಾವಚಿಂ. ೧-೩೬); ಅರಸಂಚೆ ಕೋಗಿಲೆ . . . ಪಾರಿವವು ಪರಿಶೋಭಿಸಿರುವಾ ಉದ್ಯಾನದ ಸಿಂಗರವನದೇನ ಬಣ್ಣಿಪೆನು (ಕಂನವಿ. ೨-೫೦). ೫. ಒಡವೆ, ಆಭರಣ ಮುಂತಾದ ಅಲಂಕಾರಸಾಧನ : ಸಿಂಗರಂ ರುದ್ರಾಕ್ಷಿ ಜಂಗಮಂ ರುದ್ರಾಕ್ಷಿ ಮಂಗಳಂ ರುದ್ರಾಕ್ಷಿ ಅಂಗತತಿ ರುದ್ರಾಕ್ಷಿ (ರುದ್ರಾರ. ೫-೧೫); ಅಮಳವಸ್ತುಗಳುಮಂ ಸೀರೆಯಂ ರತ್ನಭಂಡಾರವನು ಲೇವನಾಗಾರವ ಸಿಂಗರವನಿತ್ತು ತಣಿಯಂ (ಸಾನಂಚ. ೧-೯೫); ಮಂಗಳಕರಮಾತ್ರವನಲ್ಲದೆ ಮಿಕ್ಕ ಸಿಂಗರಗಳನು ಚಿಂತಿಸದೆ ಸಂಗಾತಿವೆಂಗಳ ಸರಸಭಾಷಣವ ಮನಂಗೊಳಿಸದೆ ಮಱುಗುವಳು (ಹವಿಬ. ೭-೧೦). ೬. [ಕಾವ್ಯಮೀ] ನವರಸಗಳಲ್ಲಿ ಒಂದು; ಶೃಂಗಾರರಸ : ಸಿಂಗರಮೇಟ್ಟೆಯಂ ಪಡೆಯೆ ದೇಸೆ ಪೊದಟ್ಟಿರೆ ಕೊಂಕು ತೀವೆ . . . ನನೆವಿಲ್ಲನ ಬೀರಮನೊಲ್ದು ಪೇಟ್ಟೆನಾಂ (ಕಬ್ಬಿಕಾ. ೧೭); ರೌದ್ರಮುಱೆವೆಯ್ದೆ ಸಿಂಗರಮುನ್ನತವೀರಮಾವಗಂ (ಉಮಾಶ. ೨). **ಸಿಂಗಳ$_2$** : ೧. ಆ ಪುರದ ತರದ ವಿಸ್ತರದ ಸೌಧೋತ್ಕರದ ತ್ರಿಪುರದ ರಾಪಣದ ಸಿಂಗಳದ ಮಂಗಳದ ಗೋಪುರದ ಮತ್ತವಾರಣದ ತೋರಣದ ಘನತರದ ವೃಷಭಧ್ವಜಗಳು

(ಗುಭಚ. ೧೬-೫೩); ಸಿಂಗಳನಾದ ತುರಂಗದ ಮೇಲೇರಿ ಸಿಂಗಾಡಿ ತೀರ ಜೋಡಿಸುತ ಶೃಂಗಾರವಡದು ಭುಜಂಗಭೂಪರು ರಣರಂಗದಿ ಬಂದು ನಿಂದಿಹರು (ಸೌಂದಾ. ೭-೧೦೬).

ಸಿಂಗಾರದೇಱೆಯ = ಕಾಮ; ಮನ್ಮಥ: ಸಿರಿರಾಣಿಯಣುಗಂಗೆ ಸಿಂಗಾರದೇಱೆಯಂಗೆ . . . ಮದನಂಗೆ ಸುರುಚಿರಾಂಗಂಗೆ ಸುಖಿಮಿಕ್ಕೆ (ಚಾಸಿ. ೭-೧೫೪ ಪ). **ಸಿಂಗಾರಹಾರ** = ಒಂದು ಬಿರುದು : ಗಜಭೀಮ ಸಿಂಗಾರಹಾರ ವೀರಪ XX ಟಿ (ಎಕ. VII, ಶಿವಮೊ. ೬೯-೧೨; 1320). [< ಪ್ರಾ. ಸಿಂಗಾರ./ ಸಂ. ಶೃಂಗಾರ]

ಸಿಂಗಾರಕಾಱಿ (ನಾ). ಸುಂದರ; ಚೆಲುವ: ಗಂಗಾದೇವನು ತನ್ನ ಸಂಗಸಂಪದ ಗೂಡಿ ಬಂದಿದಿರ್ಗೊಂಡನು ಸಿಂಗಾರಕಾಱಿಭಾವವನು (ಭರಚ. ೩೭-೨೭).

[ಸಿಂಗಾರ + -ಕಾಱಿ]

ಸಿಂಗಾರಗಿಡ (ನಾ). ಅಡಕೆಯ ಮರ: ಬಂಜಿಯ ಮನಿಮುಂದ ಸಿಂಗಾರಗಿಡ ಹುಟ್ಟಿ ಕೊಂಗಿ ಕೊಂಗಿಲಿ ಗಿಳಿ ಕೂತು ಓಡ್ಯಾವ ಬಂಜೀಯ ಬದುಕು ಹೆರವರಿಗೆ (ಕ್ಷತ್ರಾ. ೧೦೪). [ಸಿಂಗಾರ + ಗಿಡ (< ಗಿಡು)]

ಸಿಂಗಾರದುಱುಬು (ನಾ). ಅಂದವಾದ ಕೇಶಾಲಂಕಾರ: ತಳುದೊಗಲ ನಿಡುಸೋಗೆ ಯುಡುಗೆಯನೆಳಗರುಳ ಸಿಂಗಾರದುಱುಬಿನ ಕೆಳದಿಯರ ಕೈನೇಣ ಕಿಱಿದೊಟ್ಟಿಲಿನ ಬೊಂದೆಗಳ . . . ಕೆಳಗಳೊಳು ಕೊಡಗೂಸು ಪೂತನಿನಿಕರವೊಪ್ಪಿದವು (ಕುವಾಧೀ. ೫-೭೪).

[ಸಿಂಗಾರ + ತುಱುಬು$_{2}$ (< ತುಱುಂಬು$_{2}$)]

ಸಿಂಗಾರಬಳ್ಳಿ (ನಾ). ಒಂದು ಬಗೆಯ ಬಳ್ಳಿ: ಸಿಂಗಾರಬಳ್ಳಿ, ಕ್ರಮಿಳ್ಳಿ (ಪ್ರಹಿ. ೬೫-೬೭೬). [ಸಿಂಗಾರ$_{1}$ + ಬಳ್ಳಿ]

ಸಿಂಗಾರಬೀಜ (ನಾ). ಒಂದು ಬಗೆಯ ಜಲಸಸ್ಯ: ಮುಳ್ಳುಕೊಂಬುಬೀಜ, ಸಿಂಗಾರಬೀಜ, ನೀರು ಅಕ್ರೋಟು (ಪ್ರಹಿ. ೬೫-೧೫೬೪). [ಸಿಂಗಾರ$_{1}$ + ಬೀಜ]

ಸಿಂಗಾರಮುಱುಕು (ನಾ). (ಅಲಂ) ಅತಿಶಯಸೌಂದರ್ಯದಿಂದ ಕೂಡಿದುದು: ಬಂಗಾಳದರಸೀತ ನೋಡೆಂದರೀಕ್ಷಿಸಿ ಮುಂಗಡೆಗೆಯ್ದುದಳೊಡನೆ ಸಿಂಗಾರಮುಱುಕು ವಿಡಾಯ ಹಾರಿತು ಹೊಸ ಬಿಂಗಿಯಂತಿರ್ದನಾ ನೃಪತಿ (ಭರಚ. ೫೫-೮೪).

[ಸಿಂಗಾರ + ಮುಱುಕು$_{3}$ (< ಮುಱಿಕು)]

ಸಿಂಗಾರವಡೆ, ಸಿಂಗರವಡೆ (ಕ್ರಿ). ಅಲಂಕಾರವನ್ನು ಹೊಂದು; ಅಲಂಕೃತವಾಗು: ಸಿಂಗಾರವಡೆದ ಱಾಟಳದುಯ್ಯಲೆಯ ಮಂಗಳವಿಭವದಿನಡರ್ದು (ಮೋಹ. ೧೪-೮೮). **ಸಿಂಗರವಡೆ**: ಸಿಂಗರವಡೆದಿಹ ಪುರಜನ ಬಹುಬಗೆಹಂಗಳು ವಿಪ್ರನಾರಿಯರು . . . ರಂಗನುತ್ಸವದೊಳ್ಕೆದಿದರು (ಕಂಪಾ. ೯-೬೩). [ಸಿಂಗಾರ + ಪಡೆ$_{1}$]

ಸಿಂಗಾರಸೊಗ (ನಾ). ಪ್ರಣಯದ ಸುಖ: ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ, ಸಿರಿಬಾಳ್ವ ಸಿಂಗಾರಸೊಗಕೆ ಹೊಯಿಕ್ಕೆಯಹುದ ಪೇಳ್ ಬದುಕಿನಲಿ? (ಶ್ರೀರಾಮಾ. ೫೪-೨). [ಸಿಂಗಾರ + ಸೊಗ]

ಸಿಂಗಾರಹೂ, ಸಿಂಗಾರಹೂವು (ನಾ). ಅಡಕೆಯ ಹೂವಿನ ಗೊಂಚಲು; ಹೊಂಬಾಳೆ: ದೆವ್ವದಿಂದ ಪ್ರೇರಿತವಾದವನಂತೆ ಕೈಯಲ್ಲಿ ಸಿಂಗಾರಹೂ ಹಿಡಿದು ನಡುಗತೊಡಗಿದ (ಕುಡಿಕೂ. ೬೫). **ಸಿಂಗಾರಹೂವು**: ಹಿರಿಮಲೆಯ ಯಜಮಾನ ಪೂಜಾರಿಯ ಕೈಗೆ ಸಿಂಗಾರಹೂವು ಹಾಕಿದ . . . ತುಕ್ರ ಅವಮಾನ ಸಹಿಸಲಾರದೆ, ಇನ್ನಷ್ಟು ಸಿಂಗಾರಹೂವನ್ನು ಕೊಂಡು ಪೂಜಾರಿಯ ಕೈ ಮೇಲೆ ಇರಿಸಲು ಹೋದರೆ, ಪೂಜಾರಿಯು ಅದನ್ನು ಸ್ವೀಕರಿಸಲಿಲ್ಲ (ಕುಡಿಕೂ. ೧೪೭). [ಸಿಂಗಾರ + ಹೂ$_{2}$ (< ಪೂ$_{2}$)]

ಸಿಂಗಾರಹೂವು 'ಸಿಂಗಾರಹೂ' ನೋ.

ಸಿಂಗಾರಿ (ನಾ). ಅಲಂಕರಿಸಿಕೊಂಡಿರುವವಳು; ಚೆಲುವೆ; ಬೆಡಗಿ: ಕಾಲೊಳು ಹೆಜ್ಜೆಯ ಹಾಕುತ ನರ್ತಿಸೆ ಬಂಕದ ಸಿಂಗಾರಿ (ಚಂದ್ರಮಾ. ೬೬-೪); ಚಿಮ್ಮುತ ನಿರಿಯನು ಬನದಲಿ ಬಂದಳು ಬಂಕದ ಸಿಂಗಾರಿ (ಇಂಗಿಷ. ೪೯-೨). [ಸಿಂಗಾರ + -ಇ$_{3}$]

ಸಿಂಗಾರಿಗ, ಸಿಂಗರಿಗ (ನಾ). ೧. ಅಲಂಕರಿಸುವವನು; ಅಲಂಕಾರ ಮಾಡುವವನು: ಆ ಸಿಂಗಾರಿಗರು ೬೯೦ ಗ ೩೬ ಆ ಪರಿಚಾರಕರು ೬೯೦ ಗ ೨೪ ದೇವರ ಅಗ್ಗಣಿಯವರು ೬೯೦ ಗ ೨೪ (ಎಕ V (R), ತಿಮಮ. ೯೬-೮೩; 1269). **ಸಿಂಗರಿಗ**: ೧. ಮಾಡುವಂಗ – ಕಬ್ಬಿಗ, ಸರವಂದಿಗ, ಸಿಂಗರಿಗ (ತಮಿದ. ೧೯೭ ಪ್ರಯೋ). ೨. ಅಲಂಕರಿಸಿಕೊಂಡಿರುವವನು; ಚೆಲುವ: "ಸಿಂಗರಿಗನೆನೆ ಚೆಲುವಂ" (ಚಾಷಾ. ೧೯೭); ಹರನೊಲಿದು ಸಿಂಗರಿಗನಾಗಿ ವಿಭವದೆ ಸಾಗಿ . . . ಶಿವಲೋಕಮಂ ಪೊಕ್ಕನು (ಚಿಬಪು. ೩೭ ಸೂಚನ); ವರರತ್ನದೀಪಗಳಿಂದ . . . ಸುರಗಿರಿಯಂತೆ ಸಿಂಗರಿಸಿದರ್ಕ್ಕುಗಳ ಸಿಂಗರಿಗರೆತ್ತಿದರಾ ಜಿನಗೆ (ಭರಚ.೭೦-೧೭). [ಸಿಂಗಾರ + -ಇಗ]

ಸಿಂಗಾರಿಸು, ಶೃಂಗರಿಸು, ಸಿಂಗರಿಸು (ಕ್ರಿ). ೧. ಅಲಂಕರಿಸು; ಅಲಂಕಾರಮಾಡು: ಕಮಲಮುಖಿಯರ ಕರೆದು ಸಿಂಗಾರಿಸಲು ನೇಮಿಸಿದ (ತೂರರಾ. ೧-೧೪-೧೨). ೨. ಅಲಂಕೃತವಾಗು; ಅಲಂಕರಣಹೊಂದು : ತೋರಣಗಟ್ಟರ್ದುವಲ್ಲಲ್ಲಿ ಕುರುಜ ಸಿಂಗಾರಿಸರ್ದುವು ಕೆಲಬಲದಿ (ಭರಚ. ೩೭-೨೫). **ಶೃಂಗರಿಸು** : ಸಂಗಡ ಮಿರ್ದಂಗನೆಯರ್ ಶೃಂಗರಿಸೆ ಮಂಗಳಮುಖಿ ಹೊಂಗಿ ಹೊರೆಯೇಱಿ (ಗಿರಿ. ೯-೭ ವ); ಮಸ್ಕಾಲಂಕಾರ ಗಂಧ'ಮಾಲ್ಯಗಳಿಂದಲಂಕೃತನಾಗಿ ಶೃಂಗರಿಸಿರುವ ದಿವ್ಯಾಶ್ವವನ್ನೇರಿ (ಸೌಗಂಧಿ. ೨೫೮-೧೨). **ಸಿಂಗರಿಸು** : ೧. ಚಪ್ಪರಮನುಬೆ ಸಿಂಗರಿಸಿ (ಪದ್ಮರಾ. ೩-೩೯); ಸೆಜ್ಜೆಯನು ಸಿಂಗರಿಸು ನಿನ್ನಿನಿಯ ಬಂದಪ ನೀಲವೇಣಿ (ಮೋಹಚ. ೩೦-೪೨); ಜನರೆಲ್ಲ ಹರುಷದಿಂದ ತಮ್ಮ ಮನೆಗಳನ್ನು ಸಿಂಗರಿಸುತ್ತಿದ್ದಾರೆ (ಜೀವರಾ. ೫೧). ೨. ರುದ್ರ ಕನ್ನೆಯರೊಲಿದು ಸಿಂಗರಿಸಿ ಕುಳ್ಳಿರಲು (ಬಾಶಿ. ೧-೧೩); ಸಿಂಗರಿಸಿ ಸುಳಿದಾಡುವರ ಕಂಡನು ನೃಪತಿ ಹರ್ಷಿಸುತ (ನಳಚ. ೮-೪೮); ಪರಿಪರಿ ಪಾತ್ರವೆಂಗಳು ಸಿಂಗರಿಸಿಯೆ ಹರುಷದೊಳಗೆ ನಡೆತಂದು (ಕಂಗಮ. ೭-೧೦೬). [ಸಿಂಗಾರ + -ಇಸು]

ಸಿಂಗಾಸನ (ನಾ). ಸಿಂಹಪೀಠ; ಸಿಂಹಾಸನ : ಓ! ಶಿವರುದ್ರ! ಸಿಂಗಾಸನ . . . ಇದನ್ನು ಯಾರಾದರೂ ಹೊತ್ತುಕೊಂಡು ಹೋದರೆ ಏನು ಗತಿ? (ಚಿಟ್ಟಿಆ. ೧೦೫-೧೯); ಹಿರಿಯ ಎರೆಯಂಗನೇನೋ ಸಿಂಗಾಸನ ತನಗೆ ಬೇಡವೇ ಬೇಡ ಎಂದು ಹಟ ತೊಟ್ಟಿದ್ದನಹುದು (ಸುಚಾ. ೧೪೭). [< ಸಂ. ಸಿಂಹಾಸನ./ ಪ್ರಾ. ಸಿಂಘಾಸಣ]

ಸಿಂಗಿ$_{1}$ (ನಾ). ೧. ಒಂದು ಬಗೆಯ ಘೋರವಾದ ವಿಷ : "ಸಿಂಗಿ ವಿಷಾಂತರಾಹ್ವಯಮೆ" (ಕಣಾ. ೨೧); ಅಂತರಂಗಶುದ್ಧವಿಲ್ಲದವರ ಸಂಗ ಸಿಂಗಿ ಕಾಳ ಕೂಟವಿಷವೋ (ಬಾಮ. ೧೧೯); ಸಿಂಗಿಯನು ಬಿತ್ತಿದೆನು ಪಾಂಡವರಂಗದಲಿ ತತ್ಫಲದ ಬೆಳಸಿನ ಸಿಂಗಿಯಲಿ ಸಾವೆನು (ಕುವ್ಯಾಸ. ೧೨-೪೪). ೨. ಒಂದು ಜಾತಿಯ ಮೀನು (?): ಬಿತ್ತಿದಲೆಗಳ ಮೆಯ್ಯ ಬೂದಿಯವೊತ್ತಿ ಬಿಗಿದುಡಿದಾರ ಕಚ್ಚುಟವಿತ್ತೆಱದ ಕಾಮಾಕ್ಷಿಕಂಠದ ಸಿಂಗಿನಾಥಗಳ (ಕಂಪದಾ. ೧೫-೪). [< ಸಂ. ಶೃಂಗೀ]

ಸಿಂಗಿ$_{2}$ 'ಸಿಂಗ$_{2}$' ನೋ.

ಸಿಂಗಿಗೊರಳ (ನಾ). ಕೊರಳಲ್ಲಿ ವಿಷವನ್ನು ಧರಿಸಿದವನು; ವಿಷಕಂಠ; ಶಿವ: ನಿಮಗೀ ಭಂಗವಾರಿಂದಾಯ್ತು ನಡುಗುವಿರೇಕೆ ಹೇಳಿಯೆನೆ ಸಿಂಗಿಗೊರಳ ನವರ್ಗಳೆಮ್ಮನು ಭಂಗಿಸಿದರೀ ಪರಿಯೆನಲು (ನಳಾಗ. ೪-೩-೪).

[ಸಿಂಗಿ$_{1}$ + ಕೊರಳು (< ಕೊರಲ್) + -ಅ$_{7}$]

ಸಿಂಗಿತಲೆಪಣ್ಕಾರ (ನಾ). ಒಬ್ಬಾತನ ಹೆಸರು: ತಮ್ಮ ಪ್ರಸಾದಪರನಪ್ಪೊನ್ನೆ ಆರಿದ (ಹಾರಿತ)ಗೋತ್ರಜನ್ನೆ ಸಿಂಗಿತಲೆಪಣ್ಕಾರನ್ನೆ ಕಾಸಂಪಳ್ಳಿಯಾ ಸಮಭಾಗಮಾನ್ ಚನ್ನಸೂರ್ಯ್ಯರುಳ್ಪಿನಂ ಸರ್ವ್ವವಿರುದ್ಧರಹಿತಂ ಗೋಪಾಲದೇವ[ರ್] ಕೊಟ್ಟರ್ (ಎಇ. XXI, ೧೭೮-೪; ಸು. ೮೫ಯ ಶತ). [?]

ಸಿಂಗಿನಾದ 'ಸಿಂಗನಾದ' ನೋ.

ಸಿಂಗಿವಲ್ಲು (ನಾ). ವಿಷದ ಹಲ್ಲು : ಕೆಳಗಣ ಹಲ್ಲು ಹದಿನಾರಕ್ಕೆ ಹೆಚ್ಚಾಗಿಯಿರೆ ತಾಯಿಗೆ ಆಗದು ಸಿಂಗಿವಲ್ಲಾಗೆ ವ್ಯಧವೇ (ಕಾಶೀಮ. ೧೯೫-೫೫). [ಸಿಂಗಿ$_{1}$ + ಹಲ್ಲು (< ಪಲ್)]

ಸಿಂಗಿವಾವು (ನಾ). ಒಂದು ಬಗೆಯ ವಿಷಸರ್ಪ; ಉರಿಸಿಂಗಿ: ಬೆಂಗದಿರನ ನುರಿವಿನ ಕಾಂತಶಿಲೆಯಗ್ನಿ ಸಿಂಗಿವಾವಿನ ಪಜ್ಜೆಗಳ ಜಂಗುಳಿ ಮರಗೊಂಬಿನೊತ್ತುರಿಯಿಂದುಜು ಲಿಂಗಂಬೋಲಾದುದಾ ಶಿಖರಿ (ಶ್ರೀಪಾಲ. ೪-೫೧). [ಸಿಂಗಿ$_{1}$ + ಪಾವು$_{1}$]

ಸಿಂಗುಟ್ಟಿ (ನಾ). ಒಬ್ಬಾತನ ಹೆಸರು: ಶ್ರೀ ತರುಣವಸನ್ನನ್ ಸಾಮನ್ತಕೇಸರಿಯಾ ಕೊಟ್ಟ ಪನ್ನಾಸು ಸಿಂಗುಟ್ಟಿಯಾ ಲಿಖಿತಂ (ಸೌಇಇ. IX-i, ೪೭-೧೯; ಸು. ೩೫ಯ ಶತ). [?]

ಸಿಂಗೂರ್ (ನಾ). ಒಂದು ಊರಿನ ಹೆಸರು: ಸತ್ತಿಯೂರುಂ ಸಿಂಗೂರು ನಗರಲ ಪನ್ನಿರ್ವ್ವರು ಮಹಾಪರಿಷೆಯು ಎಡನಾಡ ಮುವರ್ನ್ನಾಟ್ಟುಮುಣ್ಣುಗಳುಂ ಸಕ್ಕಿ (ಎಇ. III (R), ನಂಜನ. ೨೪೯-೪; ಸು. 10ನೆಯ ಶತ). [? + ಊರ್$_{3}$ (< ಊರ್)]

ಸಿಂಗೆ (ನಾ). (ಜಮೀನಿನ) ಸಣ್ಣಭಾಗ; (ಹೊಲ, ಗದ್ದೆ, ಮುಂತಾದುವುಗಳ)

ಭಾಗ; ಸೀಳು: ಚಳಹೊಂಡದ ಗದೆಯ ಸಿಂಗೆ ೧ ಅಂತು ಗದೆಯ ತುಂಡು ೨ ಸಿ ೧ ಗದೆಯ ಕಲವಿನ ಹಕ್ಕಲೂ ಸಹ (ಮೃಅಂ. ೧೯೩೦, ೫೬-೧೭; 1597).

[ದೇ. ॥ ತುಳು. ಸಿಂಕೆ, ತಿರ್ಕೆ, ಸಿರ್ಕೆ = ತುಂಡು, ಚೂರು]

ಸಿಂಗೆಯ (ನಾ). ಒಬ್ಬಾತನ ಹೆಸರು: ಬೆಮ್ಮೂಡಿ ಬೂತುಗಂ ಗಂಗವಾಡಿಯ ನರಸುಗೆಯ್ಯೆ ಬೂತಯ್ಯನ ಮಾದಯ್ಯ ಸಿಂಗೆಯರ ಮಾದಯ್ಯ ಗಾವುಣ್ಡಗೆಯ್ಯೆ (ಮೃಅಂ. ೧೯೫೫, ೩೬-೩; 968). [< ಸಿಂಗ$_1$ + ಅಯ್ಯ$_1$ (< ಅಯ್ಯ$_1$)]

ಸಿಂಘು$_1$ 'ಸಿಂಗ$_1$' ನೋ.

ಸಿಂಘು$_2$ (ನಾ). (?): ಕರವಾಳಿಂದೇಸುವೇಟ್ಟುಂದಿಱಿಯಲಹಿತರಂ ಯುದ್ಧದೊಳ್ ಋದ್ಧ ಕೋಪಂ ನೊರೆನೆತ್ತರ್ ಸೂಸೆ ಕಂಡಂ ಸಡಿಲೆ ಕಟಲಲಾ ಕಾಳಿಜಂ ಮೂಳೆ ಬೀಟಲ್ಪರಿಯಲ್ ನುರ್ಗಾಗೆ ಬಿಕ್ಕೊಕ್ಕುರುಳೆ ತೊರಳೆಗಳ್ ಸಿಂಘಗಳ್ ತಾಱೆ ಪಾಱಲ್ ಕರುಳೊಕ್ಕಾ ಸಂಧಿಬಂಧಂ ಬಿಡಲತಿಭಯದಿಂ ಘೋರಮಾಯ್ತಾ ಜಿರಂಗಂ (ಶಾಸಮಂ. ೧೩೮೫; ಎಕ. VIII, ಸಾಗರ. ೧೪೦-೧೬; 1265 ನೋ). [P ಇದು 'ಜಂಘೆ' ಎಂಬುದರ ಅಪಲಿಖಿತವಿರಬಹುದೇ?]

ಸಿಂಘುಣ 'ಸಿಂಗಳ$_1$' ನೋ.

ಸಿಂಘುಪರಿಶೆ (ನಾ). [ಶೈವ] ಶೈವಗುರುಗಳ ಒಂದು ಗುಂಪು; ಸಿಂಹಪರ್ವೆ: ಹರಿಕೇಶ್ವರದೇವರಿಂಗೆ ನಿವೇದ್ಯಕ್ಕಂ ತಪೋಧನರ್ಗ್ಗೆ ಆಹಾರದಾನಕ್ಕಂ ಸಿಂಘಪರಿಶೆ ಬ್ರಹ್ಮೇಶ್ವರಪಂಡಿತರ ಕಾಲ[ಂ] ಕರ್ಚ್ಚೆ (ಕಾಅ. ೨೦-೧೦-೧೨; 1031). [< ಸಿಂಹಪರ್ವೆ]

ಸಿಂಘಲಾಂಛನ 'ಸಿಂಗಲಾಂಚನ' ನೋ.

ಸಿಂಘವಿಷ್ಟರ 'ಸಿಂಗವಿಟ್ಟರ' ನೋ.

ಸಿಂಘವುರಗಣ (ನಾ). ಸಿಂಹಪುರವೆಂಬ ಊರಿಗೆ ಸಂಬಂಧಿಸಿದ ಜೈನಮುನಿಗಳ ಒಂದು ವರ್ಗ: ಸಿಂಘವುರಗಣದ ನಾಗಣನ್ನಾಚಾರ್ಯ್ಯರ್ಪ್ಪಡೆದೋರತ್ತಿಗೇರಿಯ ಬಟ್ಟಿ ಇದಕ್ಕೆ ಸಾಕ್ಷಿ (ಕಾ. II, ೫-೧೦; 814). [< ಸಂ. ಸಿಂಹಪುರಗಣ]

ಸಿಂಘಾಣ (ನಾ). ೧. ಮೂಗಿನ ಮಲ; ಸಿಂಬಳ; ಗೊಣ್ಣೆ. ೨. [ಅಶ್ವಶಾ] ಕುದುರೆಯ ಮೂಗಿಗೆ ಸಂಬಂಧಿಸಿದ ಒಂದು ಬಗೆಯ ರೋಗ: ತುರಗದ ನಯನಂಗಳ್ ನೀರ್ ಸುರಿಗುಂ ನಾಸಾಂತರಂಗದಿಂದಂ ಶ್ಲೇಷ್ಮಂ ಸುರಿಗುಮಡಿಗಡಿಗೆ ಕೆಮ್ಮುತ್ತಿರ ಸಿಘಾ(ಹಾ)ಣದ ವಿಕಾರಮೆಂದಱಿವುದದಂ (ಅಶ್ವಶಾ. ೧೧-೪೯). [ಸಂ.]

ಸಿಂಘಿನಿ (ನಾ). ಮೂಗು; ನಾಸಿಕ: "ನಾಸಿಕಂ ಸಿಂಘಿನಿ ಘ್ರಾಣಮಾ ಘೋಣಮೆನೆ ನಾಸೆಯೆನೆ ಮೂಗಕ್ಕು" (ಮಂಗರಾ. ೯೪-೫). [< ಸಂ. ಸಿಂಘಿಣೀ]

ಸಿಂಚನ (ನಾ). ಚಿಮುಕಿಸುವುದು; ಸಿಂಪಡಿಸುವಿಕೆ: ಔಷಧದ್ರವ್ಯವನ್ನು ಗಾಯದ ಮೇಲೆ ಸ್ವಲ್ಪಸ್ವಲ್ಪ ಸಿಂಚನ ಮಾಡಬೇಕು (ರೂಢಿ). [ಸಂ.]

ಸಿಂಜಾನ (ನಾ). (ಗೆಜ್ಜೆ, ಕಿರುಗಂಟೆಗಳಿಂದುಂಟಾಗುವ) ಕಿಣಿಕಿಣಿಧ್ವನಿ; ಕ್ವಣನ: ಸಿಂಜಾನ ಸಮದಷಟ್ಪರಣಂ ಜೇವೊಡೆಯನಿಸ . . . ನವಮಂಜುಲಲತೆ ಮದನಚಾಪಲತೆಯನೆ ಪೋಲ್ಪುಂ (ಲೀಲಾವ. ೫-೩೧); ಕಡಗ ಕಂಕಣ ಝಣತ್ಕಾರ ಮನ್ನನುವಹಿಸಿ ಬೆಡಗಿನಿಪ ಸಿಂಜಾನಮಂಜೀರಮಂಜುಳದ ನುಡಿ (ಪಂಚಾರಾ. ೧-೬-೧೪).

[ಸಂ.]

ಸಿಂಜಾನಮಣಿ (ನಾ). ಕಿಣಿಕಿಣಿಧ್ವನಿಯನ್ನುಂಟು ಮಾಡುವ ಕಿರುಗಂಟೆ: ಅಭಿನವ(ನ)ಮೇರು ಮಂದಾರಪಾರಿಜಾತಸಂತಾನಕಕುಸುಮಮಂಜರೀಮಧ್ಯಲಂಬಮಾನ ಸಿಂಜಾನಮಣಿಕಿಂಕಿಣೀಕ್ವಣಿತದೊಳ್ (ಶಾಂತಿಪು. ೧೦-೭೭ ಪ). [ಸಂ.]

ಸಿಂಜಿತ (ನಾ). = ಸಿಂಜಾನ: ಬಳೆಗಳ್ಗಲ್ಕೆನದಂತೆ ಕಣ್ಮಳೆಗದೆತ್ತಂ ಸೂಸದಂತಿಟ್ಟು ಮಂಜುಳಭೂಷಾಳಿಯ ಸಿಂಜಿತಂ ನೆಗಳದಂತೆ . . . ಪುಂಶ್ಚಳಿಯರ್ ಬಂದುಪಕಾಂತ ಸೂಚಿತ ನಿಶಾಂತಾಂತಂಗಳಂ ಪೊರ್ದಿದರ್ (ರಾಜಶೇ. ೧೧-೨೪). [ಸಂ.]

ಸಿಂಜಿನಿ (ನಾ). ೧. ಬಿಲ್ಲಿನ ಹೆದೆ; ಜ್ಯಾ: "ಬಿಲ್ಲ ಹೆದೆ ಜೀವೆ ಸಿಂಜಿನಿ ಮೌರ್ವಿ ಜ್ಯಾ ಗುಣವೆನಿಕ್ಕು" (ಮಂಗರಾ. ೮೭-೫೫); ಜೋದರಾನೆಗಳನಂಕುಶವಿಕ್ಕಿ ನೂಂಕಿದರ್ . . . ಸಂದಿ ಸಿಂಜಿನಿಯ ತಲೆವಿಲ್ಲೊಂಡು ಪೊಕ್ಕರ್ ಧನುರ್ಧರರ್ ಮೂದಲಿಸುತೆ (ಚಪಪು. ೧೬-೧೪); ಪಟುಭುಜನೊತ್ತಿ ಜೇವೊಡೆದು ಸಿಂಜಿನಿಯಂ ಸೆಳೆದಾರ್ ಸಾರ್ದು ಸಂಘಟಿಸಿ ತೊಡರ್ಚುತೆಟ್ಟೊಡೆ (ರಾಜಶೇ. ೬-೮೭). ೨. ಕಾಲಿನ ಕಡಗ; ಅರಿದುಗೆ: "ಸಿಂಜಿನೀ, ಪಾದಕಟಕಃ- ಈ ೨ ಕಾಲ ಕಡಗಂ" (ಜಲಾಯು. ೯೨-೪೦೭); ದುಕೂಲವನುಟ್ಟು ಚಲ್ಲಣಮಂ ಖಚಿಸಿ ಮಣಿರಚಿತಸಿಂಜಿನಿಯ ಕಟ್ಟಿಕೊಂಡು . . . ಸೋವಲದೇವಿ ನಡೆ ತಾರೌ (ಚಪಪು. ೧೨-೪೩). [ಸಂ. ಸಿಂಜಿನೀ]

ಸಿಂಜಿನಿಗೆಯ್, ಸಿಂಜಿನಿಗೈ (ಕ್ರಿ). ಬಿಲ್ಲಿನ ಹೆದೆಯನ್ನು ಅನುವುಗೊಳಿಸು; ಹೆದೆಯೇರಿಸು: ಸಿಂಜಿನಿಗೆಯ್ದು ಬಲುಬಿಲ್ಲ ಕರದೊಳಗಾಂತು ಜೇವೊಡೆದ (ಮೋಹಶ. ೧೯-೬೨). ಸಿಂಜಿನಿಗೈ: ಇನಿರಸವಾಂತ ಕರ್ವಿಲ್ಲಿಗೆ ಭ್ರಮರಸಿಂಜಿನಿಗೈದೆಡದ ಹಸ್ತದಲಿ ದನಿಗೆಯ್ದುತಿರೆ (ಮೋಹಶ. ೫-೩೭). [ಸಿಂಜಿನಿ + ಕೆಯ್$_1$]

ಸಿಂಜಿನಿಗೈ 'ಸಿಂಜಿನಿಗೆಯ್' ನೋ.

ಸಿಂಜಿನಿಗೊಳಿಸು (ಕ್ರಿ). = ಸಿಂಜಿನಿಗೆಯ್: ರಂಜಿಪ ಹೊಂಗಟ್ಟಿನ ಬಿಲ್ಲ ಮನ್ಮಥ ಸಿಂಜಿನಿಗೊಳಿಸಿ ಜೇವೊಡೆಯ ಅಂಜಿದು ಫಣಿರಾಯ ತಲೆದೊನೆಯಲು ರತ್ನ ಗುಂಜಿಯಂತೆಸೆದು ಚೆಲ್ಲಿದುವು (ಮೋಹಶ. ೧೨-೫೩); ಅನಿತರೊಳು ಮಾರೇಕ್ಷುಚಾಪಕೆ ಭ್ರಮರ ಸಿಂಜಿನಿಗೊಳಿಸಿ ಜೇವೊಡೆಯೆ (ನಮೋ. ೬-೨೨). [ಸಿಂಜಿನಿ + ಕೊಳ್$_1$ + -ಇಸು$_3$]

ಸಿಂಜಿನೀವಳಯ (ನಾ). ಕಾಲುಕಡಗ; ಪಾದಕಟಕ: ಮಂಜುಳೋಪಮಂ ಬೀಱುವ ಸಿಂಜಿನೀವಳಯ ಕಾಂಚಿಗಳೆಂಬವೆಱಿಂದದೊಂದು ಚೆಲ್ವೆಱೆರೆ ಭೋಗಿಭಾಮಿನಿಯರಾ ಮಡುವಿಂ ಪೊಱಮಟ್ಟರ್ (ಜಗವಿ. ೩-೧೦೨); ಅಳಕಂ ನೀಳಬಳಾಹಕಂ ಘನರವಂ ಸತ್ಕಿಂಕಿಣೀಸಿಂಜಿನೀವಳಯಧ್ವಾನಮನೇಕಭೂಷಣಮ[ಣಿ]ಜ್ಯೋತ್ಸ್ನಾಳಿ ಗೋತ್ರಾರಿ ಚಾಪಳ ಚಾಪಂ ತಮಗೆಂದನಂ (ನಳಚಂ. ೪೩೭). [ಸಂ. ಸಿಂಜಿನೀವಲಯ]

ಸಿಂಟ (ನಾ). ಹೊಲಸು ನಾರುವವನು; ಕೊಳಕ: ಒಂದು ಮೃಗಂ ಬೀಟದು ನೋಡಿಂದಿನ ಬೇಂಟೆಯೊಳ್ ಸಿಂಟನಂ ಕಂಡುದಱಿಂ (ಯಶೋಧ. ೪-೫೦).

[ಸಿಂಟು + - ಅ$_7$]

ಸಿಂಟೆಮರ (ನಾ). ಒಂದು ಬಗೆಯ ಮರ: ಉಡಿಮರ, ಗೊಡ್ಡ, ಊದಿಮರ, ಸಿಂಟಮರ, ಗೊಗಲ್, ಹೆಣ್ಣುಗೊಡ್ಡ (ಪ್ರಾಚಿಗಾ. ೫೭-೧೧೫೦). [ಸಿಂಟೆ$_7$ + ಮರ$_1$]

ಸಿಂಟು (ನಾ). ಕೆಟ್ಟವಾಸನೆ; ದುರ್ನಾತ: 'ಸಿಂಟ', 'ಸಿನುಗು' ಪರಾ. [?]

ಸಿಂಟೆಗೊಳ್ (ಕ್ರಿ). ಶೇಖರಿಸು; ಕೂಡಿಸು; ಸಂಗ್ರಹಮಾಡು (?: ರತ್ನ ಮೊದಲಾದೆಲ್ಲ ವಸ್ತುಗಳ ಸಿಂಟೆಗೊಂಡೀ ಫಣಿಕುಮಾರನ ತುಂಟತನವನು (ಫಣಿಚ. ೨-೪೩). [ಸಿಂಟೆ$_7$ + ಕೊಳ್$_1$]

ಸಿಂಡಮೂಗು (ನಾ). ಗೆಡ್ಡೆಮೂಗು; ಮೊಂಡಾಗಿರುವ ಮೂಗು: ಮಿನುಗುವ ಕಣ್ಣು, ಸಿಂಡಮೂಗು, ಮೊಂಡಕ್ರಾಪು, ಎರಡು ಕೈಯನು ಜೇಬೊಳಗೆ ಇಳಿಬಿಟ್ಟು ಹೊರಗೆ ಬಂದವನಿಗೆ ಊಟದ ಮನೆಯ ಮೂಲೆಯಲ್ಲಿದ್ದ ನಾನು ಕಂಡೆ (ಹೊಸಕ್ಷ. ೧೧೨); ಕುಳ್ಳಾಗಿ, ಗುಜ್ಜಾಗಿದ್ದ ಸಿಂಡಮೂಗಿನ ಸಾಬು . . . ಅವನಿಗೆ 'ಲುಂಗೀಸಾಬು' ಎಂದು ಹೆಸರು ಬಂದಿತ್ತು (ಮಲೆಮಾ. ೨೬೮). [ಸಿಂಡ$_7$ + ಮೂಗು]

ಸಿಂಡರಿಸು (ಕ್ರಿ). ೧. (ಕೋಪ, ಜುಗುಪ್ಸೆ ಮೊದಲಾದುವುಗಳಿಂದ) ಹುಬ್ಬು ಗಂಟಿಕ್ಕು; ಮುಖ ಗಂಟುಹಾಕಿಕೊಳ್ಳು: ಮೂರನೆಯ ಮಂತ್ರಿಗಳು ಮುಖವನ್ನು ಸಿಂಡರಿಸಿಕೊಂಡು 'ಚೆನ್ನಾಯ್ತು'ಎಂದರು (ಚಂಗಾಳ. ೫೭೦); ಮೂರ್ತಿ ಮುಖ ಸಿಂಡರಿಸಿಕೊಂಡು ಗೊಣಗಿದ (ಬದುಕೃ. ೪೦). ೨. (ಆಲಂ) ಅರಳಿಸು; ಹಿಗ್ಗಿಸು: ಅದು ವಾಸನೆ ನೋಡುವಂತೆ ತನ್ನ ರೋಜಾಬಣ್ಣದ ಮೂಗನ್ನು ಸಿಂಡರಿಸಿಕೊಳ್ಳುತ್ತಾ ಅಲುಗಾಡದೆ ನನ್ನ ಅಂಗೈಯ ಮೇಲೆ ಕುಳಿತಿತ್ತು (ಕಾಲಿಮ. ೩೮). [? + -ಇಸು$_3$]

ಸಿಂಡು 'ಜಿಡ್ಡು' ನೋ.

ಸಿಂಡುವಾಸನೆ (ನಾ). ಕಮಟುವಾಸನೆ; ದುರ್ಗಂಧ: ಆಗ ಸಿಂಹದ ಸಿಂಡು ವಾಸನೆಯು ಪೈಶಾನಿಸ ಮೂಗಿಗೆ ಮುಟ್ಟಿತು (ಮಾಶಿ. ೧೫).

[ಸಿಂಡು(< ಜಿಡ್ಡು) + ವಾಸನೆ$_2$]

ಸಿಂತರಿಸು (ಕ್ರಿ). ತಿರಸ್ಕರಿಸು; ಅಲ್ಲಗಳೆ: ಎಲ್ಲರೂ ಅವಳು ಮಾಡಿದ್ದನ್ನು ಸಿಂತರಿಸಿ (ಅಲ್ಲಗಳೆದು) ಬಿಡುವರು . . . ಎಂತಾದು ಮಾಡಿದರು ಸಿಂತರಿಸಿ ಬಿಡುವಾರು ಎಂತಾದ ನನ್ನ ಕೈಗೂಣ ಶಿವಲಿಂಗ (ಕಲ್ಲಾಜಾ. ೧೧೧). [? + -ಇಸು$_3$]

ಸಿಂತುರು (ನಾ). (?): ದಂತಿ ತುರಗರಥ ಭಟರು ವಿಮಾನಗಳಂ ತರಿಸದೆ ಹೊಕ್ಕು ಕಲಸೆ ಸಂತಸದಿಂದ ಪಾಯ್ಮಳವೆಲ್ಲ ಮಸಗಿತು ಸಿಂತುರು ಮಸಗಿದಂದದೊಳು (ಭರತೆ. ೪೬-೨೬). [?]

ಸಿಂತ್ರ (ನಾ).(?): ವ್ಯೋಮಾದಿ ಭೂತಂಗಳ ಸೋಮತಂತ್ರ ಕಾಮಾದಿಷಡ್‌ವರ್ಗದ ಸಂಗ ಸಿಂತ್ರ ವಾಮಾಂಗ ಹಸ್ತಾಬ್ಜದ ಲಿಂಗಮಂತ್ರ ನಾಮಾದಿ ಮೂಲಾಕ್ಷರವೆ ಸ್ವತಂತ್ರ (ಮೃಲಾ.೧೫೧-೮); ಭಾವೆ ಹಿದಿದಿದ್ದಾಳು ಬಟ್ಟಲಲ್ಲಿ ವೀಳಯವ . . . ಯಂತ್ರಾ ಮಾಯಾದಿಂದಾಗಲಿ ತಂತ್ರಾ ಜಪದಿಂದಾಗಲಿ ಸಿಂತ್ರಾವಾಗಲಿ ಶಾಬಲ ಮಂತ್ರವಾಗಲಿ . . . ಕಂತುಪಿತನಾ ಕರತಂದವಳಿಗೆ ಕರುಣಿಸಿ ಕೊಡುವೆನೆಂದು (ಶ್ರೀಪ್ರಾ. ೧೬). [?]

ಸಿಂದ₁ 'ಸಿಂಧ' ನೋ.

ಸಿಂದ₂ (ನಾ). ಒಂದು ಬಗೆಯ ಮರ: ಮಿಕ್ಕ ಸಿಂದವು ಕಂಬೇವು ಮಾಮರಗಳು ಇಕ್ಕೆಲದಲಿಯೆಸೆದಿಹುದು (ಮಾದಲಾಂ. ೧-೫೭). [?]

ಸಿಂದ₃ (ನಾ). ಒಂದು ರಾಜವಂಶದ ಹೆಸರು ಮತ್ತು ಆ ವಂಶಕ್ಕೆ ಸೇರಿದ ವ್ಯಕ್ತಿ: ಸಿಂದವಂಶದ ಅರಸರಲ್ಲಿ ಕ್ರಿ. ಶ. ೧೧೧೩ ರಿಂದ ೧೧೨೫ರ ವರೆಗಣ ಶಾಸನಗಳುಳ್ಳ II ಆಚುಗಿ ಅಥವಾ ಆಚರಸನೂ . . . ಆಳತೊಡಗಿದನು (ಮೂಅಶಾ. ೭೩); ಸಿಂದರು, ಸಿಂಧೂತೀರದಿಂದ ಬಂದವರೆಂಬ ಮಾತು ಅವರ ಮನೆತನದ ಹೆಸರಿನಿಂದ ತಿಳಿದು ಬರುವುದಾದರೂ, ಸಿಂಧೂತೀರದ ಯಾವ ನಾಡಿನಿಂದ ಬಂದರು ಎಂಬ ಮಾತು ಸಂದಿಗ್ಧವಾಗಿಯೇ ಉಳಿಯುತ್ತದೆ (ಶಾಶಾ. ೨೩.೨). 'ಸಿಂಧು' ಪರಾ. [?]

ಸಿಂದಗಾವುಂಡ (ನಾ). ಒಬ್ಬಾತನ ಹೆಸರು: ಅವರ ದಣ್ಣನಾಯಕಂ ಶ್ರೀಧರಯ್ಯನುಂ ನಾಡುಂ ನಾಟ್ಟುಗವ್ಣುಂ ಸಿನ್ದಗಾವುಂಡನುವಿಟ್ಟು (ಎಕ. IX. ಹೊಸಕೋ. ೧೧೧-೫; 997).

[ಸಿಂದ₃? + ಗಾವುಂಡ(< ಗಾಮುಂಡ)]

ಸಿಂದಿ, ಸೇಂದಿ (ನಾ). ೧. ಮದ್ಯವನ್ನು ತೆಗೆಯುವ ಒಂದು ಬಗೆಯ ಕಾಡು ಈಚಲಮರ: ಸಿಂದಿಯ ಮರಗಳು ಬೆಳೆಯತಕ್ಕಂಥ ಭೂಮಿಯಾದರೆ ತಂಟಿನ ಮರಗಳು ಚನ್ನಾಗಿ ಬೆಳೆಯುವವು (ಕೃಪ್ರ. ೧೪೭); ತೇವುನೆಲದಲ್ಲಿ ಲಕ್ಕಿ, ಸಿಂದಿ, ಕಳ್ಳಿ ಎಂಬ ಕೀಳುಮರಗಳನ್ನು ಕಾಣಬಹುದು (ಮುಂಬಯಿ. ೫-೧೪೪). ೨. ಮದ್ಯ; ಸುರೆ; ಹೆಂಡ: ಸಿಂದಿಯನು ಸೇವಿಪನು ಹಂದಿಯಂತಿರುತಿಹನು (ಸರ್ವಜ್ಞ. ೧೨೫೯); ಸಿಂದಿ ಸರಾಯಿಗಳನ್ನು ಕುಡಿಯಬೇಡಿರಿ (ಪಬ್ಬಿಬು. ೨೧೭); ಉತ್ತರಕನ್ನಡಜಿಲ್ಲೆಯಲ್ಲಿ ತಂಗಿನ ಗಿಡದಿಂದ ಸಿಂದಿ ತೆಗೆಯುವುದುಂಟು (ಕರಮೀ. ೬೨). **ಸೇಂದಿ** : ೨. ಸೇಂದಿಯ ವಿಚಾರದಲ್ಲಿ ಬೊಂಬಾಯಿ ಸರ್ಕಾರದವರು ಅನುಸರಿಸುತ್ತಿದ್ದ ಕಾರ್ಯನೀತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದರು (ಭಾಗ್ಯಶ್ರೀ. ೮೮). [<— ಮರಾ. ಶಿಂದೀ, ಶಿಂಧೀ; ಹಿಂ. ಸೇಂಧೀ]

ಸಿಂದು 'ಸೆಂದು' ನೋ.

ಸಿಂದುಕೆ (ನಾ). ಒಂದು ಬಗೆಯ ಸಣ್ಣ ಮರ: "ತೊಳೆಮತ್ತಿ ಸಿಂದುಕೆ [ಪಾಶಾಂ. ಸಿಂಧುಕಿ]ಯೆನಿಕ್ಕು" (ಮುಂಗಾ. ೬೫-೧೪). [ಸಂ. ಸಿಂದುಕ]

ಸಿಂದುರ₁ 'ಸೆಂದುರ' ನೋ.

ಸಿಂದುರ₂, ಸಿಂದೂರ₁, ಸಿಂಧೂರ₂ (ನಾ). ಆನೆ; ಗಜ: ಸಿಂಧುರ – ಸಿಂದುರ; ಸ್ಕಂಧವ–ಸ್ಕಂದವ (ಶಮದ. ೨೫೫ ಪ್ರಯೋ). **ಸಿಂದೂರ₁**: 'ಸಿಂದೂರಲಾಂಛನ' ಪರಾ. **ಸಿಂಧೂರ₂**: ಮುಂದಿಯಂ ನೂಂಕಿಸಲು ಒಂದಿಷ್ಟು ಮಣಿಯದಿರೆ ಸಿಂಧೂರ ನೂಲೆಂಟನೊಂದೆ ಬಾರಿಗೆ ಬಿಗಿಸಿ ಮುಂದಕ್ಕೆ ಮಿಣಿ ಹಲ್ಲಿದು ಬೀಳೆ (ಪ್ರೌಢಾ. ೧೨-೮).

[< ಸಂ. ಸಿಂಧುರ]

ಸಿಂದುರ₃ (ನಾ). ಒಂದು ಬಗೆಯ ಹೂವು ಮತ್ತು ಅದರ ಮರ; ಸಿಂಧುವಾರ: ಅಲರ್ದಪೊಸ ಸಿಂದುರಂಗಳನಲೆವಳಿಕುಳಮಂ ತಳರ್ಚಿ ತಣ್ಮಲೆವೆಲರೀಯಲೆದಪು ವೆಮ್ಮಂತಃಪುರಲಲನೆಯರಂ ಕೋಡು ಸೆಡುಗೊಳ್ಸಿನಂ (ಆದಿಪು. ೧೮-೮೮); ಪೂತ ಗೊಜ್ಜಗೆಗಳ ಸಿಂದು[ಪಾಶಾಂ. ಧು]ರಂಗಳೊಳಗೋಗರಗಂಪನೆ ಬೀಱುತಿರ್ಪ ಮಲ್ಲಿಗೆಯೊಳರಲ್ದ ಸಂಪಗೆಯೊಳಗ್ಗಲಿಸುತ್ತು ಬಸಂತಮಾಸದೊಳ್ (ಪಂಪಭಾ ೫-೩೦).

[< ಸಂ. ಸಿಂದುವಾರ]

ಸಿಂದುರಂಬೊರೆ (ಕ್ರಿ). ಸಿಂಧೂರವನ್ನು ಬಳಿ,— ಲೇಪಿಸು : ಅವಗಾಹನಕ್ಕೆಂದು ಬಂದ ಸೊಕ್ಕಿದಾನೆಗಳ ಸಿಂದುರಂಬೊರೆದ ಸಲಿಲಗಳೊಳಂ . . . ಒಪ್ಪಂಬೆತ್ತ ವೇತ್ರವತಿಯೆಂಬ ನದಿಯಿಂ ಸುತ್ತುಗೊಂಡಿರ್ಪುದಾ ರಾಜಧಾನಿಯೊಳ್ (ಕಾದಂಪೂ. ೧೭).

[ಸಿಂದುರ₁ (< ಸೆಂದುರ) + ಪೊರ್ದ್₂]

ಸಿಂದುವಜಿ (ಕ್ರಿ). ನಾಶವಾಗು; ಧ್ವಂಸವಾಗು: ಕಿಱಿಯಮುಗಿಳಿಯ ಬಸವನಹಳ್ಳಿಯ ಪೇಲೆವೆರಿಗೆ ಹಟಗೆ ಹುರಿಗೆ ಸಿನ್ದುವಜಿದು ದೇವಳಿಗೆನಾಡ ಎಳ್ಪದಿಮ್ಬರುಪ್ರಭುಗಳಱಿಯಲು (ಎಕ. VI. ಚಿಕ್ಕಮ. ೧೫೯; 1074?). [ಸಿಂದು₁ (< ಸೆಂದು)? + ಪಜಿ್₁]

ಸಿಂದುವಾರ (ನಾ). = ಸಿಂದುರ₃: ಮತ್ತೊರ್ವಳ್ ಸಿಂದು[ಪಾಶಾಂ. ಧು]ವಾರ ಕುಸುಮಸುರಭಿನಿಶ್ವಾಸೆ . . . ಎನೆ (ಆದಿಪು. ೧೧-೧೧೭ ವ); ಒದವಿದ ತೋರಮಲ್ಲಿಗೆಯ ಹಾರದ ಸೂಸಕದಿಂದೆ ಸಿಂದ [ಪಾಶಾಂ. ಧು]ವಾರದ ಚಮರೀಜದಿಂದೆ . . . ಬೆಲ್ಲುವೆತ್ತುದು ಕದಳೀದ್ರುಮಗ್ರಥಿತ ಸುಂದರವಂದನಮಾಲಿಕಾವೃತಂ (ಕಾದಂಪೂ.೨೧.೬). 'ಸಿಂಧುವಾರ' ಪರಾ. [ಸಂ.]

ಸಿಂದೂರ₁ 'ಸಿಂದುರ₂' ನೋ.

ಸಿಂದೂರ₂ (ನಾ). ಮಂಗಳದ್ರವ್ಯವಾದ ಕೇಸರಿಬಣ್ಣದ ಪುಡಿ; ಚಂದ್ರ: "ಸಿಂದೂ [ಪಾಶಾಂ. ಧೂ]ರಮೆನಲು ಚಂದ್ರಂ" (ಮಂಗಶಾ. ೩೧-೭); ಕುಳಭೂಭೃತ್ಕೂಟದೊಳ್ ಮಾಣಿಕದೆಳವಿಸಿಲೆಂತಂತೆ ದಿಕ್ಕುಂಭಿಕುಂಭಸ್ಥಳದೊಳ್ಪಿಂದೂರಮೆಂತಂತೆ . . . ಪರ್ವಿತ್ತು . . . ದಶರಥವಸುಧಾಧೀಶತೇಜಃಪ್ರಕಾಶಂ (ಪಂರಾಮಾ. ೩-೧೩); ಸಿನ್ದೂರದಲ್ಲಿ ತೂಳಿಕೆಯನ್ನದ್ದಿ ಹದ ಮಾಡಿಕೊಳ್ಳುತ್ತಿರುವಳು (ಮುಂತ್ರಶ. ೨೪-೧೪). [ಸಂ.]

ಸಿಂದೂರಬೊಟ್ಟು (ನಾ). ಹೆಂಗಸರು ಹಣೆಯ ಮೇಲೆ (ದುಂಡಾಗಿ) ಇಡುವ ಕೆಂಪುಬೊಟ್ಟು: ಇನ್ನೇನು ಸಿಂದೂರಬೊಟ್ಟು ಇಟ್ಟರೆ ಮದುಮಗಳ ಸಿಂಗಾರವೆಲ್ಲ ಮುಗಿಯಿತು (ರೂಢಿ). [ಸಿಂದೂರ₂ + ಬೊಟ್ಟು₂ (< ಬಟ್ಟು)]

ಸಿಂದೂರಲಾಂಛನ 'ಸಿಂಧೂರಲಾಂಛನ' ನೋ.

ಸಿಂದೂರವಸನ (ನಾ). ಕೆಂಪುಬಣ್ಣದ ಬಟ್ಟೆ; ಅರುಣವರ್ಣದ ವಸ್ತ್ರ: ಸಿಂದೂರವಸನಮಂ ಕಳೆದೊಂದು ಸಿತಾಂಬರಮನುಟ್ಟು (ಜಗವಿ. ೧೨-೮೯). [ಸಂ.]

ಸಿಂದೆ 'ಸಿವನೆ' ನೋ.

ಸಿಂದೆಱಿ (ನಾ). ಒಂದು ಊರಿನ ಹೆಸರು: ಅಣ್ಣುಗಿಯಾ ಗಾಮಿಗರುಂ ನೀರೆಲ್ಲಿಯಾ ಸಿನ್ದೆಱಗಾಮಿಗರುಂ ಮುಖಮಾಗೆ (ಎಕ. VII. ಶಕಾಂ. ೧೫೪-೧೧; ಸು. 685). [?]

ಸಿಂಧ,ಸಿಂದ₁ (ನಾ). ಬಾವುಟ; ಧ್ವಜ: ಪೊಳೆವ ನವಿಲ ಸಿಂಧಂ ಬೆಡಂಗಾಗೆ (ಜಗವಿ. ೧೮-೫೧); ಹೂಡಿದರು ರಥವೆರಡನಿವರು ಸಘಾಡದಲಿ ಕಪಿ ಗರುಡಸಿಂಧವ ಜೋಡಿಸಿದರು (ಕುವ್ಮಾಚ. ೨೦-೨೧); ಸಿಂಧ ಸೀಗುರಿ ಛತ್ರ ಚಾಮರ ಪತಾಕೆಗಳ್ಸಂದಣಿಸಿ (ಜೈಮಿಭಾ. ೨೨-೫). **ಸಿಂದ₁** : ಅಂತುಭಯಬಲಮುಂ . . . ಮಿಳಿರ್ದು ಮಿಳ್ಕಿಸುವ ಪೆಸರ ಕುಲಿಪಿನ ಪಳಯಿಗೆಗಳುಂ ಸಂದಣಿಸಿ ಮುಂದೆ ನಿಂದ ಪಲವುಂ ಸಿಂದಂಗಳುಂ [ಪಾಶಾಂ. ಚಿಂದಮುಂ] (ಪಂರಾಮಾ. ೧೩-೬೪ ವ); ಮುಗಿಲ ಮುಟ್ಟುವ ವೈಜಯಂತಿಗಳಿಂ ನವದುಗುಲದ ನೇಜಯದಿಂದ ಸೊಗಯಿಪ ಸಿಂದಂಗಳಿಂದ ಸ್ವಯಂವರ ಮಿಗೆ ರಂಜಿಸಿದುದು (ರಾಮವಿ. ೭-೬೨). [P ಸಂಸ್ಕೃತಮೂಲವಿರಬಹುದೆಂದು ತೋರುವ ಈ ಶಬ್ದವು ಸಂಸ್ಕೃತಕೋಶಗಳಲ್ಲೆಲ್ಲೂ ದೊರಕಿಲ್ಲ]

ಸಿಂಧಮ್ಮನಾಡು (ನಾ). ಒಂದು ಪ್ರದೇಶದ ಹೆಸರು : ಸಿನ್ದಮ್ಮನಾಡ ಬವರದೊಳು ಕೆಲ್ಲೀಗಱೆಯ ತುಮುಂಗಳೊಳೆ xxx ಸತ್ತ (ಎಕ. V. ಅರಸೀ. ೧೯-೪; ಸು. 890).

[? + ನಾಡು]

ಸಿಂಧು₁ (ನಾ). ೧. ಕಡಲು; ಸಮುದ್ರ: ಶ್ರೀವರ್ಧಮಾನಪ್ರವರಮುನಿಜನಾನಂದ ಸಂಸ್ತುತ್ಯ ಸಿಂಧುಸ್ತೋಮಾಳಂಕಾರಿತಾಂಭೋನಿಧಿ ನಿರುಪಮಬೋಧಾಕರಂ (ಸುಕುಮಾ. ೧-೧); ಸಿಂಧೂಪರೀತಭೂತಳಮನೀಬ್ಬುಕೊಳಲ್ಕರಚಕ್ರದಿಂ ಜರಾಸಂಧನ ಕಂಠಮಂ ಕೆಡೆಯೆ ಕೇಶವನಿಟ್ಟಪನೆಂದು ತೋರ್ಪವೋಲ್ಸಂಧಗಜೇಂದ್ರಯಾನೆ . . . ಕಂಕಣದಿಂದಿಡುವಳ್ ವಿನೋದದೊಳ್ (ಅರ್ಧನೇ. ೭-೪೧); ದುರ್ವಾಸಮುನಿಶಾಪದಿಂದಂದು ಪೋದ ಸುರರರ್ವಮಂ ಬೇಡಿ ಮಥಿಯಿಸಿದೊಡಂ ತಪ್ಪಿಂಧು ಪೂರ್ವಾಮರಾಮರರ ಬಲ್ಮಾವ ಪಿಡಿಸುತುಚ್ಚೈಶ್ರವಮೆನಿಪ್ಪ ಹಯವ ಸರ್ವಬಾಧೆಯೊಳಿತ್ತಂ (ಭಾವಚಂ. ೭-೧೨). ೨. ನದಿ; ಹೊಳೆ: ಪೊಳೆವೆಳದಿಂಗಳೊಳ್ಮುಂಗಿಳಿಂ ಸುರಸಿಂಧುವ ಶೀಕರಂಗಳಿಂ ಜಳನಿಧಿಯಲ್ಲಿ ಮಾರ್ಪೊಳೆವ ತಾರೆಗಳಿಂ ಸಮೆದಂತೆ . . . ಎಸೆದುದುಜ್ವಳಮೌಕ್ತಿಕ ಹಾರಮಂಡಲಂ (ಕಾದಂಪೂ. ೧೧೬); ಸಿಂಧುವನು ಹಿಮಗಿರಿಗೆ ಹಿಂದಿರುಗಿ ಬೇರೊಂದು ಚಿಂದದಲಿ ಪರಿದು ಬಾರೆಂದಾಣತಿಪೆಯಾ? (ಮಂಕುಶ. ೮೭೬). 'ಸುರಸಿಂಧು' ಪರಾ.

೩. ಒಂದು ನದಿಯ ಹೆಸರು: ಇರಾವತಿಯೆಂಬ ಸಿಂಧುಯೆಂಬ ಶತಾದ್ರಿಯೆಂಬ ನದಿಗಳ ತೀರದ ದೇಶದೊಳ್ ಪುಟ್ಟಿದ ಸ್ತ್ರೀ (ಕಾಮಶಾ. ೭೧); ಸಿಂಧು ಎಂಬುದರ ಬದಲಾಗಿ ಹಿಂದು ಎಂದು ಅಪಭ್ರಂಶವಾಗಿ ಆ ನದಿಯ ಪ್ರದೇಶಕ್ಕೆ ಹಿಂದುಸ್ಥಾನವೆಂಬ ಹೆಸರು ಮೊದಲು ಬಂದು ಇತ್ತಿತ್ತ ಇಡೀ ಹಿಂದುಸ್ಥಾನಕ್ಕೆ ಬಂದಿರಬಹುದೆಂದು ಕೆಲವರು ಅನ್ನುತ್ತಾರೆ (ಮುಂಬಯಿ. ೪-೧೧೦). ೪. ಒಂದು ದೇಶದ ಹೆಸರು; ಸಿಂಧೂನದಿಯ ತೀರದ ಪ್ರಾಂತ: ಬಳಿಕ ಬರ್ಬರ ಪಾಂಡ್ಯ ತುರುಷ್ಕಾಣ್ಯ ತುಳುವ ನೇಪಾಳ ಸಿಂಧು . . . ಇಂತಸಮ ಭಿಪ್ಪನ್ನದೇಶದೊಳಧಿಕಸೀಮಂತಮಣಿಯೆನಿಪ ಕುಂತಳದೇಶ ಮೆಱೆವುದು (ಪ್ರೌಶಾಂ. ೧-೩೧); ಮರಳಿ ಕೃಷ್ಣಾರ್ಜುನರ್ಸಿಂಧುದೇಶದ ಮೇಲೆ ಗಜನಗಂಗ್ಯತಂದರು (ಜೈಮಿಭಾ. ೩.೨ ಸೂಚನೆ). ೫. ಸಿಂಧುದೇಶಕ್ಕೆ ಸೇರಿದ ಜನ ಮತ್ತು ಅಲ್ಲಿಯ ರಾಜ: ಇದಿರೆ ಶಕಟವ್ಯೂಹವದಱಗ್ರದಲಿ ದುಶ್ಶಾಸನನು ಕೆಲಬಲದೊದವಿನಲಿ ಬಾಹ್ಲಿಕನು ಸೌಬಲ ಸಿಂಧು ಮಾಗಧರು (ಕುವಾದ್ರೋ. ೯-೧೮); ನಿಜಹರ್ಷದುರ್ವಿನಿಂದೀ ಸಿಂಧುನೃಪನೆರಡು ಕುದುರೆಗಳನುರ್ವರಾಧಿಪಗೀಯಲು (ಭಾವಚಂ. ೭-೧೨); "ಜನಪದಭೇದವಾರ್ಧಿ ನದಿಯೆಂಬವು ಸಿಂಧು ಸಮಾಖ್ಯೆ" (ನಾಸಾರ.೭೧). ೬. ಬೆಣ್ಣೆಯನ್ನು ತೆಗೆದ ಮಜ್ಜಿಗೆ; ತಕ್ರ : ಮೊಸರ ನಾಲ್ಕಱೊಳೊಂದು ಭಾಗ ನೀರಱೆದುಕೊಂಡದನು ಕಡೆದು ಅನುಮಾಡೆ ಸಿಂಧು [ಪಾಶಾಂ. ದು]ವೆಸರಾಯ್ತು (ಸೂಪಶಾ. ೨-೧೩); ಮೂರು ಭಾಗ ಮೊಸರು ಒಂದು ಭಾಗ ನೀರನೆರೆದು ಬೆಣ್ಣೆಗಳದ ಮಜ್ಜಿಗೆ ಸಿಂಧುವೆಂಬುದು, ಇದಕ್ಕೆ ತಕ್ರವೆಂದು ಹೆಸರಿದೆ (ಭೀಮಸೂ. ೨೮). ೯. [ಸಂಗೀತ] ಒಂದು ರಾಗದ ಹೆಸರು: ರಾಮಕ್ರಿಯೆ . . . ಸಿಂಧು . . . ಮಧ್ಯಮಾವತಿಯೆಂಬ ಮೂವತ್ತಾಱುರಾಗಂಗಳೇ ಮುಖ್ಯಮಾಗಿ . . . ಪ್ರಸಿದ್ಧಗೊಂಡಿರ್ಪವು (ವಿವೇ. ೨೩೪). [ಸಂ.]

ಸಿಂಧು₂ (ನಾ). ೧. ಕಾನೂನಿನ ಪ್ರಕಾರ ಒಪ್ಪಿತವಾದುದು, – ಸಾಧುವಾದುದು: ರಾಮಕೃಷ್ಣನ ಬುದ್ಧಿಗೆ ಅಷ್ಟು ಸ್ವಾಸ್ಥ್ಯವಿಲ್ಲವೆಂದೂ . . . ಆತ ಬರಕೊಟ್ಟ ರಿಕಾರ್ಡುಗಳಾವುವೂ ಸಿಂಧುವಲ್ಲವೆಂದೂ ಒಂದು ಪ್ರಕಟಣೆಯ ಜಾಹೀರು ಕೊಡಬೇಕು (ತ್ಯಾಗಮ. ೭೨). ೨. ಸಫಲವಾದುದು; ಸಾರ್ಥಕವಾದುದು: ಒಂದೆ ಮಂತ್ರದಲಿ ಎಲ್ಲರ ಕೊಂದು ಮಂತ್ರಶಕ್ತಿಯನು ಮಾಡುವೆ ಸಿಂಧು (ಕೋಗಿಲೆ. ೨೧-೬೬).

ಸಿಂಧುಮಾಡಿಸು = ಕಾನೂನಿನ ಪ್ರಕಾರ ಒಪ್ಪಿತವಾಗುವಂತೆ ಮಾಡು; ಕಾನೂನುಬದ್ಧವಾಗುವಂತೆ ಮಾಡು: ಅದು ಕಾಯಿದೆಗೆ ಸರಿಯಾದ ರೀತಿಯಲ್ಲಿ ಬರೆದಿದೆ. ಅದನ್ನು ಕೋರ್ಟಿನಲ್ಲಿ ಹಾಜರುಪಡಿಸಿ ಸಿಂಧುಮಾಡಿಸಬೇಕೆಂದು ನನಗೆ ತಿಳಿಸಿದ್ದಾರೆ (ನಿಷ್ಕಾಮ. ೧೭೧). ಸಿಂಧುವಾಗು = ಕಾನೂನಿನ ಪ್ರಕಾರ ಒಪ್ಪಿತವಾಗು, – ಊರ್ಜಿತವಾಗು, – ನಿಲ್ಲು: ಈ ಅಭಿಪ್ರಾಯ ಸಿಂಧುವಾಗಲಾರದು (ತುಳುನಾ. ೨೦); ಸರ್ಟಿಜಿಸ್ಟಾರರವರ ಸಮಕ್ಷಮ ರಿಜಿಸ್ಟಾದರೆ ಸಿಂಧುವಾಗುವುದೆಂಬ ಕಾನೂನು ಬಳಕೆಗೆ ಬಾತು (ಗಂಗಾಳ. ೬೬). [?]

ಸಿಂಧುಜ (ನಾ). ೧. ಕಡಲಿನಿಂದ ಉತ್ಪತ್ತಿಯಾದುದು. ೨. ಚಂದ್ರ. ೩. ನೀರಿನಲ್ಲಿ ಹುಟ್ಟಿದುದು; ಜಲಚರ. ೪. ಕಲ್ಲುಪ್ಪು; ಸೈಂಧವಲವಣ. ೫. ಸಿಂಧುದೇಶದಲ್ಲಿ ಹುಟ್ಟಿದುದು. [ಸಂ.]

ಸಿಂಧುತನ (ನಾ). ಸಾರ್ಥಕ್ಯ; ಸಫಲತೆ: ಸಾಧಕದಿ ತಿಳಿದಲ್ಲ ಕುಟಿಲವ ಭೇದಿಸೀಗನ್ನೋನ್ಯದಲಿ ನಿಜಸಾಧುಗಳ ನೆರೆ ಭಜಿಸಿ ಪಡೆ ನೀ ಸಿಂಧುತನವನ್ನು (ಪಶುಧಾ. ೧-೮). [ಸಿಂಧು₂ + - ತನ]

ಸಿಂಧುತೋಯ (ನಾ). ಸಮುದ್ರದ ನೀರು; ಸಾಗರದ ಜಲ: ಚರವಿಕ್ಷೋಭಿತ ಸಿಂಧುತೋಯಶಿಶಿರಂ . . . ಚಕ್ರಿಯನಾಲಿಸಿತ್ತು ವಿಜಯಾರ್ಧೋಪಾಂತಮಂದಾನಿಳಂ (ಆದಿಪು. ೧೩-೯); ಬಿಟ್ಟೆಱಗಿದ ವಂಜುಳಪ್ರಕರಮಂ ಪರಿವರ್ಧಿಪ ಸಿಂಧುತೋಯದಂತೆ . . . ರಾಜಲೀಲೆ ಕಣ್ಮೆಱೆದುದು ಪುಷ್ಪದಂತಮಹಿಪಾಳನೊಳ್ (ಪುಷ್ಪಪು. ೧೩-೬). [ಸಂ.]

ಸಿಂಧುದ್ವಾರ (ನಾ). ಸಮುದ್ರದ ಮುಂಭಾಗ: ನಿಜವಿಜಯಕುಂಜರಂಗಳಂ ವಿಹಾರಿಸಿ ಬಂದು ಸಿಂಧುದ್ವಾರದೊಳ್ ಸಮುದ್ರಕಲ್ಲೋಲಲೀಲಾಂದೋಳಿತವನ ದೇವತಾಂದೋಳನಾನುಕಾರಿ ತಾಂಬೂಲಲತಿಕಾಲಂಬಕ್ರಮುಕಮುಂ (ಆದಿಪು. ೧೩-೩ ವ); ಅಂತು ಬಂದು ಶಾಂತೀಶ್ವರಂ ನಿಜವಿಜಯಸ್ಕಂಧಾವಾರಮಂ ಸಿಂಧುದ್ವಾರಕ್ಕಿದಿರಾಗಿ ಬೀಡಂ ಬಿಡಿಸಿ (ಶಾಂತಿಪು. ೧೧-೧೯ ವ). [ಸಂ.]

ಸಿಂಧುನಂದನೆ (ನಾ). ಸಾಗರಪುತ್ರಿ; ಲಕ್ಷ್ಮಿ.

ಸಿಂಧುನಂದನೆಯಾಣ್ಮ = ಲಕ್ಷ್ಮಿಯ ಪತಿ; ವಿಷ್ಣು: ಸಿಂಧುನಂದನೆಯಾಣ್ಮ ಪರಮೇಷ್ಠಿ ಶತಧರ್ಮವಂದಿತವದಾಂಭೋಜ ಒಲಿದು ಪಾಲಿಪುದೆನ್ನ (ಪ್ರೌಶಾಂ. ೧೭-೧). [ಸಂ. ಸಿಂಧುನಂದನಾ]

ಸಿಂಧುನದಿ (ನಾ). = ಸಿಂಧು ೩: ಸಿಂಧುನದೀತೀರಂದಿಡಿದು ಪೋಗಿ . . . ಸಿಂಧು ದೇವಿಯಿಂದಂ ಸಿಂಧುಜಲಂಗಳೊಳ್ಪಭಿಷಿಕ್ತನಾಗಿ (ಆದಿಪು. ೧೩-೭೭ ವ). [ಸಂ. ಸಿಂಧುನದೀ]

ಸಿಂಧುಪತಿ (ನಾ). ೧. ನದಿಗಳ ಒಡೆಯ; ಸಮುದ್ರ: ಸ್ಕಂಧಾವಾರೇಭ ಮುಮೋದ್ಬಂಧಾವಲೆಯಂ ಕವೇರಕನ್ನಿಕೆಯುಂ ತತ್ಸಿಂಧುಪತಿಗಿಂಬಿನಿಂದತಿಸಂಧಿಸಿದಂ ನೃಪತಿ ಬಿಟ್ಟು ತದುಭಯತಟದೊಳ್ (ಶಾಂತಿಪು. ೧೧-೨). ೨. ಸಿಂಧುದೇಶದ ರಾಜ; ಜಯದ್ರಥ. [ಸಂ.]

ಸಿಂಧುಪುತ್ರ (ನಾ). ನದಿಯ ಮಗ; ಭೀಷ್ಮ; ಗಾಂಗೇಯ: ರಾಜ್ಯಂ ನಷ್ಟ ರಾ[ಜ]ಮಾದುದರ್ಕೆ ಮಮ್ಮಲಮಱುಗಿ ಯೋಜನಗಂಧಿ ಸಿಂಧುಪುತ್ರನನಿಂತೆಂದಳ್ (ಪಂಪಭಾ. ೧-೮೦ ವ). [ಸಂ.]

ಸಿಂಧುಪೂರ (ನಾ). ಸಮುದ್ರದ ಅಥವಾ ನದಿಯ ಪ್ರವಾಹ: ಸೌಂದರ್ಯ ಬಾಂಧವ್ಯಗಳನು ಬರಿದೆನಲಹುದೆ . . . ಸಿಂಧುಪೂರದಿ ಬಿದ್ದವರೊಳೊಬ್ಬರೊಬ್ಬರನು ಅಂದಿಕೊಳಲದು ಬರಿದೆ? (ಮಂಜುಶ. ೬೯). [ಸಂ.]

ಸಿಂಧುಪ್ಲವ (ನಾ). = ಸಿಂಧುಪೂರ: ಸಮಸ್ತಸುರಕೋಟಿ ಹೇಮಘಟಕೋಟಿಯಿಂ ಮಿಸಿಸೆ ದುಗ್ಧಸಿಂಧುಪ್ಲವಂ ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಶಾರ್ತುದಿಲ್ಲಂ (ಆದಿಪು. ೧೩-೮೩). [ಸಂ.]

ಸಿಂಧುಬಂಧನ (ನಾ). ೧. ಸಮುದ್ರಕ್ಕೆ ಸೇತುವೆಯನ್ನು ಕಟ್ಟುವಿಕೆ; ಸೇತುಬಂಧನ. ೨. ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದವನು; ರಾಮ: ಕುಂದಕುಟ್ಮಲರದನ ಪರಮಾನಂದ ಹರಿ ಗೋವಿಂದ ಸನಕಸನಂದವಂದಿತ ಸಿಂಧುಬಂಧನ ಮಂದರಾದ್ರಿಧರ (ಹರಿಸಾ. ೧೨). [ಸಂ.]

ಸಿಂಧುಬಿಂದುನ್ಯಾಯ (ನಾ). [ತರ್ಕಶಾ] ಲೌಕಿಕನ್ಯಾಯಗಳಲ್ಲಿ ಒಂದು; ℙ 'ಪರಮಾತ್ಮಪ್ರಾಪ್ತಿಯೆಂಬ ಮೋಕ್ಷಕ್ಕೆ ಹೋಲಿಸಿದಾಗ ಅಭ್ಯುದಯವೆಂಬುದು ಸಮುದ್ರದಲ್ಲಿ ಒಂದು ಬಿಂದುವಿದ್ದಂತೆ' ಎಂಬ ಅಭಿಪ್ರಾಯ: ಈ ಪರಮಾತ್ಮಪ್ರಾಪ್ತಿಯೆಂಬ ನಿಶ್ರೇಯಸ್ಸಿನಲ್ಲಿ, ಅಭ್ಯುದಯವೆಂಬ ಫಲವು ಸಿಂಧುಬಿಂದು ನ್ಯಾಯದಿಂದ ಅಡಗಿರುವುದೆಂದು ತಿಳಿಯಬೇಕು (ಹಿಂದುಸಾ. ೧೭೪). [ಸಂ.]

ಸಿಂಧುರ (ನಾ). ೧. ಆನೆ; ಗಜ: ವಜ್ರದಂತಚಕ್ರವರ್ತಿಯುಮನಂತಸಾಮಂ ಕಾಂತಃಪುರಪರಿವಾರಪರಿವೃತನುಂ ಬಂಧುರಗಂಧಸಿಂಧುರಾರೂಢನುಮಾಗಿ (ಆದಿಪು. ೪-೨೩ ವ); ನರಲುತ್ತುಂ ಪೊರಳುತ್ತುಮಿರ್ಪ ಭಟರಿಂ ಬಿಟ್ಟಾದ ಪೀಱಾದ ಸಿಂಧುರದಿಂ (ಪಂಡಾಮಾ. ೯-೧೨೪). ೨. ಒಬ್ಬ ರಾಕ್ಷಸನ ಹೆಸರು; ಗಜಾಸುರ: ಸಿಂಧುರಜಟಾಭಸ್ಮ ಶಾರ್ದೂಲಾಂಧ . . . ಜಲಂಧರ ಪ್ರಮುಖಾಸುರರನಪಹರಿಸನೇ ಹರನು (ಬಸಪು. ೫೪-೫೬). ೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: "ಗಗನಾಂಬರಂ ವ್ಯೋಮ ಸಿಂಧುರಂ ಲೋಚನಂ ನಗಮ್ಮೆಕ್ಕಮೆಂಬ ಸಂಖ್ಯೆಗಳು ಕೃತಯುಗಮಕ್ಕುಂ" (ಮಂಗರಾ. ೨೨-೧೪). [ಸಂ.]

ಸಿಂಧುರಂಗ (ನಾ). ಸಮುದ್ರತೀರ: ಸಿಂಧುರನಗರದಿಂದೆ ನಡೆತಂದು ಪವನಜಂ ಸಿಂಧುರಂಗದೊಳೆಸವ ದ್ವಾರಕೆಯೊಳ್ಪೆದೆ (ಜೈಮಿಭಾ. ೬ ಸೂಚನೆ). [ಸಂ.]

ಸಿಂಧುರಘಟೆ (ನಾ). ಆನೆಗಳ ಗುಂಪು, – ಸಮೂಹ: ಸಿಂಧುರಘಟಾಸಂದೋಹದಿಂ . . . ಸೇನಾಚಕ್ರಮನೊಪ್ಪಿತೋ (ಪುಷ್ಪಪು. ೧೪-೪೬). [ಸಂ. ಸಿಂಧುರಘಟಾ]

ಸಿಂಧುರವಿರೋಧಿ (ನಾ). ಆನೆಗೆ ವೈರಿಯಾದುದು; ಸಿಂಹ.

ಸಿಂಧುರವಿರೋಧಿಪೀಠ = ಸಿಂಹಪೀಠ; ಸಿಂಹಾಸನ: ಸಿಂಧುರವಿರೋಧಿಪೀಠಂ ಗಂಧಕುಟೀಮಧ್ಯದಲ್ಲಿ ಸಿರಿಯಂ ಪಡೆಮಾತೇಂ ಧರಿಯಿಸಿ ಕಮಲದ ತೆಱದಿಂ ಧಾರ್ಮಿಕ ನಿಕರಮಧುಕರಮನೇನೆಱಗಿಸಿತೋ (ಪಾರ್ಶ್ವಪು. ೧೭-೭೪). 'ಗಜವೈರಿಪೀಠ' ಪರಾ. [ಸಂ. ಸಿಂಧುರವಿರೋಧಿನ್]

ಸಿಂಧುರಸ್ಕಂಧ (ನಾ). ಆನೆಯ ಹೆಗಲು, – ಭುಜ; ಗಜಸ್ಕಂಧ: ಆ ಮಹೇಂದ್ರಂ

ಗರ್ವಾಂಧಂ ಸಿಂಧುರಸ್ಕಂಧದಿನಿಟಿದು (ಚಂದ್ರಪ್ರ. ೫-೧೧೨).

ಸಿಂಧುರಸ್ಕಂಧಪೀಠ = ಆನೆಯ ಬೆನ್ನಿನ ಮೇಲೆ ಕುಳಿತುಕೊಳ್ಳಲು ಹಾಕುವ ಭದ್ರಾಸನ; ಅಂಬಾರಿ: ರಾಜ್ಯಲಕ್ಷ್ಮೀಲೀಲಾಲಂಬನಮೆನಿಸಿದ ಬಿಸುಗೆಯ ಮತ್ತಾಲಂಬನಮನವಳಂಬಿಸಿ ಸಿಂಧುರಸ್ಕಂಧಪೀಠದೊಳ್ ಸುಖಾಸೀನನಾಗಿರ್ದಾಗಳ್ (ಆದಿಪು. ೧೪-೧೦೨ ವ). [ಸಂ.]

ಸಿಂಧುರಾಜ (ನಾ). ೧. ನದಿಗಳ ಒಡೆಯ; ಸಾಗರ: ತೊಳತೊಳಗಿ ಬೆಳಗುವ ನದೀವಧುಗಳುಳ್ಗದಡು ತಿಳಿದು ನಿಜಕಾಂತನಾಗಿಹ ಸಿಂಧುರಾಜನಂ ನೆರೆಯದಿರರೆಂ ಬೊಲಾಯ್ತು (ಪ್ರಮಿಭಾ. ೨೫-೪); ಸಿಂಧುರಾಜನ್ಮದಸಿಂಧುರಹರ್ಯಕ್ಷ ಪರಾಕು (ಯಾದವಂ. ೩-೧ ವ). ೨. ಜರಾಸಂಧ. [ಸಂ.]

ಸಿಂಧುರಾನನ (ನಾ). ೧. ಆನೆಯ ಮುಖ; ಗಜಮುಖ. ೨. ಆನೆಯ ಮುಖವುಳ್ಳವನು; ಗಣಪತಿ: ಮಂದಹಾಸಾಸ್ಯದಿಂದೆಂದನಾ ಪರಮೇಶನಿಂದು ನಿನ್ನಯ ಶಿಷ್ಯನಪ್ಪುತಿಯಂ ಕರೆಸಿ ಸಿಂಧುರಾನನಮಾತೆಗೀಗ ರಾಗವನು ಕೇಳಿಸುವದೆಂದುಱ್ ನೇಮಿಸೆ (ಪ್ರಾಣ್ಯರಾ. ೭-೩೧). [ಸಂ.]

ಸಿಂಧುರಾಮಕ್ರಿಯೆ (ನಾ). [ಸಂಗೀತ] ಒಂದು ರಾಗದ ಹೆಸರು: ಹಾಗೆಯೇ ಶೈವಪಂತುವರಾಲಿಯ (ಮೇಳದ)ಲ್ಲಿ ಸಿಂಧುರಾಮಕ್ರಿಯಾ (ಚತುಪ್ರ. ೧೩೦).

[ಸಂ. ಸಿಂಧುರಾಮಕ್ರಿಯಾ]

ಸಿಂಧುರಾಸನ (ನಾ). ಗಜಲಾಂಛನವನ್ನುಳ್ಳ ಪೀಠವನ್ನು ಹೊಂದಿದವನು: ಕನಕಚ್ಛಾಯನಜೇಯಸಂಹನನನೂನಸ್ವಾಪದೇಯಾದಿನಾಥಂ . . . ಸಿಂಧುರಾಸನನಬ್ಜಾಯತನೇತ್ರನೀಗಭಿಮತಂ ಸರ್ವಾಹ್ಲಯಕ್ಷಂ (ಸುಕುಮಾ. ೧-೯). [ಸಂ.]

ಸಿಂಧುರಿಪು (ನಾ). ಸಮುದ್ರದ ವೈರಿ; ಅಗಸ್ತ್ಯಋಷಿ: ಸಿಂಧುರಿಪು ಗಾರ್ಗ್ಯ ಗಾಲವ ಕಪಿಲ ಮುದ್ಗಲ ಮುನೀಂದ್ರ ಗೌತಮ ರೋಮಶಾದಿಗಳ್ ಶಿಷ್ಯಗಣವೃಂದ ಬಂದರಲ್ಲಿಗೆ (ತುರಂಗ. ೨೯-೩). [ಸಂ.]

ಸಿಂಧುಲವಣ (ನಾ). ಘನರೂಪದಲ್ಲಿ ಖನಿಜವಾಗಿ ದೊರೆಯುವ ಒಂದು ಬಗೆಯ ಅಡಿಗೆ ಉಪ್ಪು; ಕಲ್ಲುಪ್ಪು; ಸೈಂಧವಲವಣ. [ಸಂ.]

ಸಿಂಧುವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು: ಸಿಂಧುವರಾಳಿ ಕನ್ನಡವರಾಳಿ ದ್ರಾಮಿಡವರಾಳಿ ಪ್ರಥಮವರಾಳಿಯೆಂಬ ನಾಲ್ಕು ರಾಗಂಗಳುಂ ಉಪಾಂಗ ವರಾಳಿಗಳು (ವಿವೇಕ. ೨೩೪). [ಸಂ. ಸಿಂಧುವರಾಲೀ?]

ಸಿಂಧುವಾರ (ನಾ). ಒಂದು ಬಗೆಯ ಹೂವು ಮತ್ತು ಅದರ ಮರ: ಮಲ್ಲಿಕಾ ಬದ್ಧಕುಟ್ಮಳಾಡಂಬರಕದಂಬಸಾನಂದಾರವಿಂದವಿಕಸಿತಸಿಂಧುವಾರಪ್ರಬುದ್ಧಲೋಧ್ರಂಗಳಿಂ (ಆದಿಪು. ೭-೫೬ ವ); ಪ್ರೌಢೆಯರಾದ ವನಿತೆಯರೊದೆದೊಡೆ ಮುಖಪ್ರಸನ್ನತೆ ಕಂಡರೆ ಕ್ರಮದಿಂ ಕುಸುಮಿತಂಗಳಪ್ಪ ಅಶೋಕ . . . ಸಿಂಧುವಾರ . . . ಚಂಪಕಂಗಳೆಂಬ ದಶದೋಹಳವೃಕ್ಷಜಾತಿಗಳುಂ (ವಿವೇಕ. ೨೧೨). [ಸಂ.]

ಸಿಂಧುಶಯನ (ನಾ). (ಕ್ಷೀರ)ಸಾಗರದಲ್ಲಿ ಮಲಗಿರುವವನು; ವಿಷ್ಣು: ಒಂದೆ ಮನದಲಿ ಸಿಂಧುಶಯನ ಮುಕುಂದ ಎನೆ ಎಂದೆಂದು ವಾಸಿಪನಾ ಮಂದಿರದೊಳಗೆ (ಪುರಂದ. ೧-೧೪೭-೧). [ಸಂ.]

ಸಿಂಧುಶುಕ್ತಿ (ನಾ). (ಸಮುದ್ರದ) ಕಪ್ಪೆಚಿಪ್ಪು: ಕಣ್ಮುಚ್ಚಿದೆವೆಗಳಿಂ ಸ್ರವಿಸಿದತ್ತಶ್ರು ಶೋಕದ ಸಿಂಧುಶುಕ್ತಿಯಿಂ ನಿಶ್ಶಬ್ದತಾಬಿಂದುಮುಕ್ತಾಫಲಗಳುಕ್ಕಿ ಸುರಿವಂತೆ (ಶ್ರೀರಾಮಾ. ೧೭೯-೪೦೧). [ಸಂ.]

ಸಿಂಧುಸಂಗಮ (ನಾ). ನದಿಯು ಸಮುದ್ರವನ್ನು ಸೇರುವ ಸ್ಥಳ: "ಸಂಭೇದಃ, ಸಿಂಧುಸಂಗಮಃ — ನದಿಗಳ ಕೂಡಿಕೆ ಹೆಸರು. ಕಡಲಿನೊಳು ಹೊಳೆಯ ಕೂಡ್ಪು, ನದೀಸಂಗಮ" (ಸಿದ್ಧಾಂತಿ. ೮೮). [ಸಂ.]

ಸಿಂಧೂತ್ಥ (ನಾ). ಕಡಲಿನಿಂದ ಉತ್ಪತ್ತಿಯಾಗುವ ಲವಣ; ಕಡಲುಪ್ಪು; ಸೈಂಧವಲವಣ: "ಸಿಂಧೂತ್ಥಂ, ಮಾಣಿಮಂಥಂ, ಸೈಂಧವಂ, ಲವಣೋತ್ತಮಂ — ಈ ೪ ಸೈಂಧವಂ" (ಹಲಾಯು. ೧೦೦-೪೬೦); ಹಿಪ್ಪಲಿ ಸಿಂಧೂತ್ಥಂ ಸದಗುಪ್ಪೆ ಮರಿಚಮಗ್ನಿ ನಾಗರಂ ವಾಸಿತದಿಂದೊಪ್ಪುವ ಕಳ್ ಪ್ರತಿಪಾನಕಮಪ್ಪುದು ತುರಗಕ್ಕೆ (ಅಶ್ವಶಾ. ೭-೮೮). [ಸಂ.]

ಸಿಂಧೂದ್ಭವ (ನಾ). ೧. = ಸಿಂಧೂತ್ಥ: ಹಿಪ್ಪಲಿ . . . ವಿಳಂಗಾಗ್ನಿಲೋಧ್ರ ಸಿಂಧೂದ್ಭವಮಂ ತಪ್ಪದೆ ಸಮಮಾಗಿರೆ ಯೋಜಿಪ್ಪುದು (ಅಶ್ವಶಾ. ೭-೮೪). ೨. = ಸಿಂಧುಪುತ್ರ: ಮೇರೆಯೊಳ್ ವಾರ್ದ್ಧಿ ಸೌಚವ್ರತದೊಳ್ ಸಿಂಧೂದ್ಭವಂ ಸತ್ಯದೊಳಿನತನಯಂ ಸೌರ್ಯದೊಳ್ ಭೀಮಸೇನಂ (ಎಕ. VIII, ನಗರ. ೩೫-೮; 1077). [ಸಂ.]

ಸಿಂಧೂರ$_1$ 'ಸೆಂದುರ' ನೋ.

ಸಿಂಧೂರ$_2$ 'ಸಿಂದುರ$_2$' ನೋ.

ಸಿಂಧೂರತಿಲಕ (ನಾ). ಹಣೆಯ ಮೇಲಿಡುವ ಕೆಂಪು ಗುರುತು, — ಕುಂಕುಮದ ಬೊಟ್ಟು: ಇದು ಮೂಡಣಂಗನೆಯ ಸಿಂಧೂರತಿಲಕವೋ (ಹಚಕಾ. ೩-೮೮).

[< ಸಂ. ಸಿಂದೂರತಿಲಕ]

ಸಿಂಧೂರಲಾಂಛನ, ಸಿಂದೂರಲಾಂಛನ (ನಾ). ಧ್ವಜದಲ್ಲಿ ಆನೆಯ ಗುರುತುಳ್ಳವನು: ಬಟ್ಟುಕುಳಭೂಷಣಂ ಸಿಂಧೂರಲಾಂಛನಂ ಸಫಳೀಕೃತವಿದ್ವಜ್ಜನಾಭಿವಾಂಛನಂ (ಕೊಲ್ಹಾಶಾ. ೨೩-೧೧; 578 ?). ಸಿಂದೂರಲಾಂಛನ: ವೈರಿಕುಳವಿಳಯಾಂತಕವಿಭೀಷಣಂ ಸಿಂದೂರಲಾಂಛನಂ (ಸೊಂಬ. XX, ೫೦-೫; ಸು. 1070). [< ಸಂ. ಸಿಂಧುರಲಾಂಛನ]

ಸಿಂಪಡಿಸು, ಸಿಂಪರಿಸು, ಸಿಂಬಡಿಸು (ಕ್ರಿ). ೧. ಸಿಂಚನೆ ಮಾಡು; ತಳಿ; ಚಿಮುಕಿಸು: ಕಮಂಡಲೋದಕವನ್ನಭಿಮಂತ್ರಿಸಿ ಅವಳ ಮೇಲೆ ಸಿಂಪಡಿಸಿದನು (ಶ್ರೀರಾಪ. ೭೨); ಸೆಗಣಿನೀರು ಸಿಂಪಡಿಸಿ ಆಕರ್ಷಕವಾಗಿ ರಂಗೋಲಿ ಬಿಡುತ್ತಾರೆ (ಚೋರೇದಂ. ೨೩). ೨. ಹಚ್ಚು; ಬಳಿ; ಲೇಪಿಸು: ಮುಖಕ್ಕೆ ಮತ್ತಮ್ಮ ಪೌಡರ ಸಿಂಪಡಿಸಿಕೊಂಡು ಕೆಳಗೆ ಬಂದಾಗ ಮೀನಾಕ್ಷಿ ಗೇಟಿನ ಬಳಿ ನಿಂತಿದ್ದಳು (ದೂಪಚ್ಚಿ. ೬). ಸಿಂಪರಿಸು: ೧. ಅಗಿಯುವ ಕೀಟಗಳ ಹತೋಟಿಗೆ ಹೊಟ್ಟೆಪಾಷಾಣವನ್ನು ಸಿಂಪರಿಸಬೇಕು ಅಥವಾ ಪುಡಿಯನ್ನು ಧೂಳಿಸಬೇಕು (ಕೆಚಿಬೆ. ೭೪). ಸಿಂಬಡಿಸು: ೧. ಗಂಡಹೆಂಡರ ಮಾತು ಒಂದೆ ಹಾಸಿಗಿ ಮ್ಯಾಲ ಗಂಧ ಸಿಂಬಡಿಸಿ ನಗತಾಳ ನನ ತಮ್ಮ ಗಂಗಿ ನಿನಗೆಲ್ಲಿ ದೊರೆತಾಳ (ಗರತಿ. ೮೧). 'ಸಿಂಪಿಣಿ' ಪರಾ. [<— ಮರಾ. ಶಿಂಪಡಣೇಂ, ಶಿಂಪಣೇಂ, ಶಿಪಣೇಂ, ಸಿಂಪಡಣೇಂ, ಸಿಂಪಣೇಂ]

ಸಿಂಪಣಿ 'ಸಿಂಪಿಣಿ' ನೋ.

ಸಿಂಪರಿಸು 'ಸಿಂಪಡಿಸು' ನೋ.

ಸಿಂಪಿ$_1$ 'ಸಿಪ್ಪು' ನೋ.

ಸಿಂಪಿ$_2$, ಚಿಪ್ಪಿ (ನಾ). ೧. ಬಟ್ಟೆ ಹೊಲೆಯುವವನು; ಚಿಪ್ಪಿಗ: ಆ ಸಿಂಪಿ ಮುನವೇಲ್ ಇವಳಿಗೆ ಶೋಕಿನ ಅಂಗಿ ಹೊಲಿದು . . . ಪುಕ್ಕಟೆ ಕೊಡುತ್ತಾನೆ (ದಕ್ಷಿನ. ೬೩); ಲೆಕ್ಕವಿಲ್ಲದಷ್ಟು ಅರಿವೆ ಹೊಲಿಸಿದ್ದರು: ಬೇಟೆಯ ಸಿಂಪಿಯಿಂದಲೇ ಮತ್ತೆ! (ಮೂಲಿದಾ. ೧೨೬). ಚಿಪ್ಪಿ: ೧. 'ಚಿಪ್ಪಿಗ$_2$' ಪರಾ. ೨. ಶಿಲ್ಪಕಾರ್ಯ ಮಾಡುವವನು; ಶಿಲ್ಪಿ: ಗೌಳ ನೀಂ ಸಂತ್ಯಸು ಗಾಯಕರ ತಿರ್ದು ಪಾಂಚಾಳ ನೀಂ ಚಿಪ್ಪಿಗಳ ಗುರ್ಜರನೆ ಕಾದಿರ್ಪುದರಮನೆಯೊಳೊಳವಾಗಿಲಂ (ಭಾವಚಿಂ. ೫-೨೮). 'ಸಿಪ್ಪಿಗ' ಪರಾ.

[<— ಮರಾ. ಶಿಂಪೀ, ಸಿಂಪೀ./ ಪ್ರಾ. ಸಿಪ್ಪಿ./ ಸಂ. ಶಿಲ್ಪಿನ್./ ತಮಿ. ಚಿಪ್ಪಿ; ತೆಲು. ಚಿಪ್ಪಿವಾಡು]

ಸಿಂಪಿಗ 'ಸಿಪ್ಪಿಗ' ನೋ.

ಸಿಂಪಿಗನಹುಲ್ಲು (ನಾ). ಒಂದು ಬಗೆಯ ಹುಲ್ಲು: ಗೊಳಗೊಳಕೆ . . . ಸಿಂಪಿಗನ ಹುಲ್ಲು, ಜೇಕು . . . ಇವಲ್ಲದೆ ನಾನು ಹೆಸರಿಸಲಾರದ ಏನೇನೋ ಜಾತಿಯ ಎಲ್ಲವೂ ಮಣ್ಣಿನ ರಚನೆಯಲ್ಲಿಯೆ ಇದ್ದ ಹಾಗೆ ತೋರುತ್ತದೆ (ಗಾಳಿ. ೧೦೪). 'ಸಿಂಪಿಗೆಯ ಪುಲ್' ಪರಾ. [? + ಹುಲ್ಲು (< ಪುಲ್)]

ಸಿಂಪಿಗಹಕ್ಕಿ (ನಾ). (ಎಲೆ, ನಾರು ಮುಂತಾದುವುಗಳನ್ನು) ಒಂದನ್ನೊಂದಕ್ಕೆ ಸೇರಿಸಿ ಗೂಡು ಕಟ್ಟುವ ಪ್ರವೃತ್ತಿಯುಳ್ಳ ಹಕ್ಕಿ: ಸಿಂಪಿಗಹಕ್ಕಿ ಎಲೆಗಳನ್ನು ಜೋಡಿಸಿ ಹೊಲೆದು ಗೂಡು ರಚಿಸುತ್ತದೆ (ಪಕ್ಷಿ. ೪೬).

[ಸಿಂಪಿಗ (< ಸಿಪ್ಪಿಗ) + ಹಕ್ಕಿ(< ಪಕ್ಕಿ)]

ಸಿಂಪಿಗೆಯಪುಲ್ (ನಾ). ಒಂದು ಬಗೆಯ ಹುಲ್ಲು: ಕೆಯ್ದುಗಳನೆ ಮಾಱ ಸಿಂಪಿಗೆಯ ಪುಲ್ವಿಡಿವರ್ ಸುಭಟರ್ ಧರಿತ್ರಿಯೊಳ್ (ಜಟ್ಟಿಸು. ೭-೧೨೬). 'ಸಿಂಪಿಗನ ಹುಲ್ಲು' ಪರಾ. [? + ಪುಲ್]

ಸಿಂಪಿಣೆ, ಸಿಂಪಣಿ (ನಾ). ಚಿಮುಕಿಸುವುದು; ಸೇಚನೆ; ಸಿಂಚನ: ಸಿಂಪಿಣಿಯ ತಣ್ಪೆನಿಂ ಪೂವಲಿಯ ತಿಣ್ಪೆನಿಂ ಮನಂಗೊಳಿಸುವ ಭವನಾಂಗಣದೊಳವತರಿಸಿ (ಕಾದಂಬ. ೪೬೨); ಭೋರೆಂದೆಱುವ ಜಲಧರಧಾರಾಪುಷ್ಕರದಿನಾತ್ಮಕರಪುಷ್ಕರಮಂ ಪೂರಿಸಿ ಸಿಂಪಿಣಿಯಂ ಕಾಂತಾರದೊಳಾಡಿದುವು ಕರಿಗಳುಂ ಕರಿಣಿಗಳುಂ (ಪಂಪಾಮಾ. ೭-೧೫೯). **ಸಿಂಪಣಿ:** ಅಲಿಗೋಡುವ ಶೀತಜಲದ ಸಿಂಪ[ಪಾಠಾಂ. ಪಿ]ಣಿಗಳಿಂ ಮೇಲೆ ಸೂಸುವ ತುಷಾರವನಂಬುವಟೆಗಳಿಂ(ನಳಚಂ. ೧೯೫ ರಗಳೆ). 'ಸಿಂಪಡಿಸು' ಹೋ. [?]

ಸಿಂಪಿಣಿಗೆ (ನಾ). ಸಿಂಚನ ; ಸೇಚನೆ: 'ಸಿಂಪಿಣಿಗೆಗೊಡು' ಪರಾ.

[ಸಿಂಪಿಣಿ + - ಗೆ]

ಸಿಂಪಿಣಿಗೆಗೊಡು (ಕ್ರಿ). ೧. ಸೇಚನಮಾಡು. ೨. ಸೇಚನವನ್ನು ಹೊಂದು,— ಪಡೆ: ಏಲಾರಸದಿಂ ಸಿಂಪಿ [ಪಾಠಾಂ. ಪ]ಣಿಗೆಗೊಟ್ಟು ಮುಟ್ಟಿದೊಡಲ್ಲದಱಿಯಲ್ಪಾರ ದೆಂದೆನಿಪ ಭೃಂಗದ ಚಪ್ಪರಂಗಳುಮಂ (ಕಾದಂಬ.೨೦೪). [ಸಿಂಪಿಣಿಗೆ + ಕೊಡು$_1$]

ಸಿಂಪಿಣಿಯಾಡು (ಕ್ರಿ). ೧. ಸೇಚನಮಾಡು; ಸಿಂಪಡಿಸು; ಸೂಸು: ಉಚ್ಚಳಿಪ ನೆತ್ತರ ಕುಂಕುಮಪ್ರಾರಿಯಂ ದಿಶಾಲಳನೆಯರತ್ತ ಸಿಂಪಿಸುತೆ ಸಿಂಪಿಣಿಯಾಡೆ (ಜಗಪಿ. ೧೭-೮೮); ನಲ್ಲರೊಳ್ ನಲಿವ ಸಿಂಪಿಣಿಯಾಡುವ ನರ್ತಿಪೊಂದು ಚಿತ್ರವಿಧದ ಚಿತ್ರಕಾಮಿನಿಯರಿಂದೆಸೆದಿರ್ದುದು ತಜ್ಜನಾಶ್ರಯಂ (ಚಂದ್ರಪ್ರ. ೬-೪೯). ೨. ಓಲಾಡು; ಮುಳುಗಾಡು : ಮನದೊಳ್ ಗುಡಿಗಟ್ಟಿ ಬಗೆಯೊಳ್ ಬದ್ದವಣಂಬೊಯ್ದು ರಾಗರಸದೊಳ್ ಸಿಂಪಿಣಿಯಾಡಿ ನಡೆದೆಯ್ದವಂದು (ಜಗಪಿ. ೧೧-೨೯ ವ).

[ಸಿಂಪಿಣಿ + ಆಡು$_1$]

ಸಿಂಪಿಸು (ಕ್ರಿ). ೧. ಚಿಮುಕಿಸು; ತಳೆ; ಸೇಚನ ಮಾಡು: "ಚಳಯಕ್ಕೆ ಸೂಸು ವುದಕ್ಕೆ ಸಿಂಪಿಸೆಂದಕ್ಕುಂ" (ಕಬ್ಬಿಗ. ೬೮); ಚಾರುಚಾಮೀಕರಯಂತ್ರವ್ರಾತದಿಂ ಕುಂಕುಮಘನರಸಮಂ ಸಿಂಪಿಸುತ್ತಿರ್ದನೆಂಬಂತಿರಲೆತ್ತಂ ನೀಳ್ದು ಪೊಣ್ಮೆತ್ತುದಯಸಮಯ ದೊಳ್ಕೋಣಸೂರ್ಯಾಂಶುಜಾಲಂ (ಕಾದಂಪೂ. ೧೪೧); ಸಿಂಪಿಸಿದ ಗಂಧದ ಬಂಧದಕ್ಷತೆಯು ಕೀಲಣೆಯ ಮಣಿವೆಳಗುಗಳ ಹರಿದಾಳಿಯಲಿ ಕಾಳೋರಗನ ಕುಡಿನಾಲಗೆಯ ವೋಲೆಸೆದುದಂಕುಶ (ಕುಮಾರವ್ಯಾ. ೩-೫೬); ಎಡದೆಡೆವರಲ ಸೆಳ್ಳುಗುರಿಂದೆ ಕಂಬನಿಗಡಣವ ಮೊಗೆದು ಸಿಂಪಿಸುತ (ಮೋಹಕ. ೯-೮). ೨. ಬಳಿ; ಲೇಪಿಸು: ದಮಯಂತಿಯ ವಕ್ರಶಿರೋಜಕ್ಕೆ ಶ್ಲೇಷಂ ಸಿಂ [ಪಾಠಾಂ.ನುಂ] ಪಿಸಿದರ್ (ನಳಚಂ. ೪೨೮). 'ಸಿಂಪಡಿಸು' ಪರಾ. [< ಸಿಂಪಿಣಿ + - ಇಸು$_3$]

ಸಿಂಪು$_1$ 'ಸಿಪ್ಪು' ನೋ.

ಸಿಂಪು$_2$ (ನಾ). ಎಳೆಯ ಕಾಯಿ; ಹೀಚು: ನಸುಮಿಡಿ ಸಿಂಪು ಪೂಮಿಡಿ ಬಟಲ್ಮಿಡಿಕಾಯ್ ಪೊದಟ್ಟ ಕಾಯ್ ನಸುಪರೆದೋರೆ ದೋರೆಯರೆವಣ್ ತನಿವಣ್ಣೆಸೆ ದತ್ತು ಮಾಮರಂ (ಸೂಕ್ತಿಸು.೧೦-೩೯); ಅರಲರಲ್ಬರಲು ನಸುಮಿಡಿ ಸಿಂಪು ಸಿರ್ಮಿಡಿ ಗಳಿರದಾ ಬಳಲ್ಮಿಡಿಗಳಲ್ಲಿ ಬಲ್ಮಿಡಿಕಾಯ್ಗಳಿರರೆ ನಸುದೋರೆ ದೋರೆಗಳು ಮರೆವಣ್ಣು ತನಿವಣ್ಣೊಳಮ್ಮೂವೆಸೆದುದು (ವೀರಶೈವ. ೨-೩-೧೫). [?]

ಸಿಂಪೆ 'ಸಿಪ್ಪು' ನೋ.

ಸಿಂಬ (ನಾ). ಆಳು; ತೊತ್ತು: 'ಸಿಂಬಕ', 'ಸಿಂಬಿ$_3$' ಪರಾ.

ಸಿಂಬಕ (ನಾ). ಆಳು; ತೊತ್ತು; ಸೇವಕ: ಲಿಂಗಕ್ಕೆ ಮಾಡಿದ ದೋನವ ಸಿಂಬಕ ತಿಂಬಂತೆ ಸಮಯೋಚಿತವನಱಿಯದೆ ಉದರವ ಹೊರೆವವರ ನರಕದಲ್ಲಿಕ್ಕದೆ ಮಾಣ್ಬನೆ ಕೂಡಲಸಂಗಮದೇವ (ಬಸವ. ೪೨೬); ಕರಿಕಾಲನ ಕರಾಳುವೊ ಮಸಣದೇವನ ಕಿಂಕರನೊ ಬಾಣಸಿಗನೋ ಚೇರಮನ ಕಕ್ಕಯ್ಯಗಳ ಸಿಂಬಕನೊ (ಬಸಪು. ೪೭-೩೪); ತುಡುಗುಣಿತನ ವದ್ಯೆಸೆ ಸಂಗನಾರೋಗಿಸೂವಡೆ ಬಾಯಿ ಬೇಕಲ್ಲ ಚರಲಿಂಗದೊಡಲೆ ತನ್ನೊಡಲಾರಿಗರ್ಪಿಸಲಿ ಒಡೆಯಗಟ್ಟಿಡಿಗೆ ಶಿಂಬುವ ಸಿಂಬಕನೊಲೆಂದನು (ಸಿಂಗಿರಾ. ೩೧-೩೮). [ಸಿಂಬ + - ಕ$_3$]

ಸಿಂಬಡಿಸು 'ಸಿಂಪಡಿಸು' ನೋ.

ಸಿಂಬಳ 'ಸಿಂಬುಳ್' ನೋ.

ಸಿಂಬಿ$_1$, ಸಿಂಬೆ$_1$ (ನಾ). ೧. ಪಾತ್ರೆ, ಬುಟ್ಟಿ ಮುಂತಾದುವುಗಳ ತಳಕ್ಕೆ ಇಡುವ ಅಥವಾ ತಲೆಯ ಮೇಲೆ ಹೊರೆಯನ್ನು ಹೊರಲು ಇಟ್ಟುಕೊಳ್ಳುವ ಬಟ್ಟೆ ಮುಂತಾದುವುಗಳ ಸುರುಳಿ; ಸಿವುಡು: ಖಳರ ಬಹುಭಾರದಿಂ ನೊಂದು ತದ್ಭಾರಮಂ ಕಳೆಯಲ್ಕಮಳದುಕೂಲದ ಸಿಂಬಿಯಂ ಸುತ್ತಿ ಚಳಕದಿಂದಂ ತಲೆಯೊಳಾಂತಿರಲ್ (ಮಡಿಕ್ಕಾ. V.೧೫೫೨); ಚಿನ್ನಾದ ಹರವ್ಯಲ್ಲ ರನ್ನಾದ ಸಿಂಬ್ಯಲ್ಲ ಮಣ್ಣಾರವಿಗೇಕೆ ಕಡುದುಃಖ ಮಾದಮ್ಮ ಪುರುಸಾಗೆ ಹೇಳು ತರುತಾನೆ (ಹಳೆಪ. ೧೦೫). ೨. ಸುರುಳಿ; ಸುತ್ತು: ಶೇಷಂ ಫಣಂ ಬಳ್ಳಿ ಸುರ್ಕಿದಪಂ ಸೀರೆಯ ಸಿಂಬಿವೋಲ್ ಖಳನೃಪಾಲಾಕ್ರೌಹಿಣೀಭಾರದಿಂ (ಜಗಪಿ. ೧-೩೦); ಒರಗಲ್ಸಿಂಬಿಯ ಸುತ್ತಿ ಶೇಷಫಣಿ ಕೂರ್ಮೇಂದ್ರಂ ವಲಂ ತೆಕ್ಕೆಯಿಂ ಸೊರಗಲ್ . . . ಬಂದತ್ತು ಸೇನಾವ್ರಜಂ (ಚಂದ್ರಭ್ಯು. ೧೨-೪೭); ಮಂಟಪದ ಕಟ್ಟೆಯ ಮೇಲೆ ಉದ್ದಕ್ಕೂ ಹಿಂಡಿ ಸಿಂಬಿಯಾಕಾರದಲ್ಲಿ ಕುಕ್ಕೆಯಲ್ಲಿಟ್ಟ ಸೀರೆಗಳು (ಗಜುದಾ. ೪೬); ೩. (ವ್ಯಂಗ್ಯವಾಗಿ) ಪೇಟ; ರುಮಾಲು: ಹೊತ್ತಿಗೆ ಸರಿಯಾಗಿ ಸಿಂಬಿ ಸುತ್ತಿಕೊಂಡು ಹೋಗಿ ಒಂದಿಷ್ಟು ಊದಿ ಬಂದರಾಯಿತು ಎನ್ನುವ ಮನೋಭಾವ ಅವರಲ್ಲಿ ನೆಲಸಿತ್ತು (ರಾಗಿಣಿ. ೧.). 'ಚಿಮ್ಮುರಿ' ಪರಾ. **ಸಿಂಬೆ$_1$:** ೧. "ಸಿಂಬೆಯೆಂದು ಸಿವುಡು" (ಕಶಸಾ. ೭೨-೬೩); ಕೈಯೆ ಬೋಹರಿಗೆ ಮಂಡೆಯ ಮೇಲೆ ಸಿಂಬೆ [ಪಾಠಾಂ. ಬಿ] ಸಿಂಬಕನ ಮನೆಯ ಮಗ ನಾನಯ್ಯಾ (ಬಸವ. ೩೫೪); ಈ ಭೂಮಿಯನ್ನು ಹೊರಬೇಕಾದರೆ ನನಗೊಂದು ಸಿಂಬೆ ಬೇಕು (ಮಾಸಿ. ೧೦೧). ೨. ಸರ್ಪಯಜ್ಞದಲ್ಲಿ ಸರ್ಪಗಳು ಅಗ್ನಿಕುಂಡದಲ್ಲಿ ಸಿವುಡು ಸಿವುಡಾಗಿ ಬಂದು ಬೀಳುತ್ತಿದ್ದಂತೆ ನಮ್ಮ ಮನೆಯಲ್ಲಿಯ ಬಟ್ಟೆಗಳು ಸಿಂಬೆಸಿಂಬೆಯಾಗಿ ಸರಸರನೆ ಆ ರಾಶಿಯ ಮೇಲೆ ಬಂದು ಬೀಳಹತ್ತಿದವು (ಸ್ವೃತಿಚಿ. ೩೫೭).

ಸಿಂಬಿ ಹೊರು = (ಆಲಂ) (ಮತ್ತೊಬ್ಬರ) ಹೊರೆಯನ್ನು ಹೊರು; ಜವಾಬ್ದಾರಿಯನ್ನು ಹೊಂದು: ಜೀವಮಾನವೆಲ್ಲ ತಲೆಯ ಮೇಲೆ ಸಿಂಬಿ ಹೊತ್ತು ಕಂಡವರ ನಿರರ್ಥಕಸೇವೆಯಲ್ಲಿ ಕಳೆಯುವುದು ರಾಜನ ಮನಸ್ಸಿಗೆ ಬೇಡವಾಗಿತ್ತು (ನಟಸಾ. ೨೫).

ಸಿಂಬಿ$_2$, ಸಿಂಬು (ನಾ). ಬಿರುಕು; ಸೀಳು. ಸಿಂಬು.

ಸಿಂಬಿಯಾಗು, ಸಿಂಬಾಗು = ೧. ಬಿರುಕು ಬಿಡು; ಒಡೆ: ಆರು ಹರದಾರಿ ದೂರ, ನಡೆದು ನನ್ನ ಕಾಲೆಲ್ಲ ಸಿಂಬಿಯಾಯಿತು (ಜಾರುದಾ. ೧೨೬); ದೇವರ ಗರ್ಭಗುಡಿಯ ಮುಂದಿನ ಧ್ವಜಮರ ಕೂಡಾ ಒಡೆದು ಸಿಂಬಾಗಿ ಹೋಗಿದೆ (ದೇವಹಿ. ೯೨). ೨. ಸೀಳಾಗು; ಕವಲಾಗು: ಗೋಡೆಗಳಂತಿರುವ ಅವುಗಳ ಮೈಮೇಲೆ ಬೆಟ್ಟದ ನೀರು ಇಳಿದು, ಒಡೆದು, ಸಿಂಬಿಯಾಗಿ ತೆಳ್ಳಗಿನ ಬಿಳಿಯ ತೆರೆಯೊಂದನ್ನು ಗಾಳಿಗೆ ಹಿಡಿದಂತೆ ಕಾಣುವ ನೋಟ—ಬಲು ಚೆನ್ನ (ಕುಡಿಕೂ. ೧೯೯). [ದೇ. ॥ ತಮಿ. ಚಿಮ್ಬು = ಬಿದಿರು ಮುಂತಾದುವುಗಳ ಸೀಳು,— ದೆಬ್ಬೆ; ಮಲ. ಚಿಮ್ಬು; ತೆಲು. ಚಿಂಪಿ = ಚೂರು, ಚಿಂದಿ]

ಸಿಂಬಿ$_3$ (ನಾ). ಸೇವಕಿ; ದಾಸಿ; ತೊತ್ತು: ರಂಭೆಯ ನುಡಿ ಸಿಂಬಿ [ಪಾಠಾಂ. ಬಿ]ಗೆ ಶೃಂಗಾರವೆ (ಅವಚಂ.೭೧-೩೧೫); ರಂಭೆಯ ಸರಿಮಿಗಿಲೆನಿಪ ನಿತಂಬಿನಿಯರ ಬಿಟ್ಟು ಸಿಂಬಿಗೊಲಿವಂತಕ್ಕುಂ (ನೀತಿಸಾ. ೩೫೩); ತತ್ಪ್ರಸಾದಮಂ ಭೋಗಿಸುತ್ತವಿರತಂ ಸುಖ ಮಿರ್ದಳಾ ಮಲ್ಲಮಾಂಬೆ ಶರಣೆಯರ ಸಿಂಬಿ (ಮಲ್ಲಚ. ೨ ಸೂಚನೆ). 'ಸಿಂಬೆ$_2$' ಪರಾ.

[ಸಿಂಬ + - ಇ$_2$]

ಸಿಂಬಿ$_4$ (ನಾ). ಹೊಟ್ಟು ತೆಗೆದ ಅಕ್ಕಿ ಮುಂತಾದ ಧಾನ್ಯ: "ಸದಕಂ ತಂಡುಲಮಕ್ಷತಮದು ನಿಸ್ತುಷವಾದ ಸಿಂಬಿಧಾನ್ಯಮದಕ್ಕುಂ" (ವಸ್ತುಕೋ. ೯೫-೨೧).

[ಸಂ. ಸಿಂಬೀ, ಸಿಂಬಾ]

ಸಿಂಬಿಕಂಬ (ನಾ). ಕುಸ್ತಿಯ ಕಣದಲ್ಲಿರುವ ಕಂಬ (?): ಇಬ್ಬರನ್ನೂ ಸಿಂಬಿಕಂಬಕ್ಕೆ ಬಿಗಿದು ಕರುಳಿಗೆ ಬಾಕು ಹಾಕಿ ಮಟ್ಟಿಮಣ್ಣಿನೊಳಗೆ ಸಮಾಧಿ ಕಾಣಿಸ್ಬೇಕು (ಭೀಮಕಾ. ೨೪೧). [ಸಿಂಬಿ$_2$ + ಕಂಬ$_1$ (< ಕಂಭ)]

ಸಿಂಬಿಕಿ (ನಾ). ಸೇವಕಿ; ತೊತ್ತು; ದಾಸಿ: ಚೆನ್ನೆಯನಖಿಲಕಲಾಸಂಪನ್ನೆಯ ನೊಲಿಸದೀ ಕುರೂಪಿಯಂ ಸಿಂಬಿಕಿಯಂ ತನ್ನ ಮನದಿರ್ಪವನರಿಯದೆ ಕುನ್ನಿಯನೊಲಿಸುವುದು ಪ್ರೌಢಿಯೇ (ನೀತಿಸಾ. ೭೭೫). 'ಸಿಂಬಿ$_3$' ಪರಾ. [< ಸಿಂಬಕ + - ಇ$_2$]

ಸಿಂಬಿಯಣುಗ (ನಾ). ದಾಸಿಯ ಮಗ; ದಾಸೀಪುತ್ರ: ನಂಬಿಯೆನ್ನಯ ಸಿಂಬಿಯಣುಗನೇ ಸಹಜವೆಂದೆಂಬುದಕೆ ಲಿಖಿತವುಂಟೆನೆ (ಪ್ರೌಢರಾ. ೧೭-೨೨).

[ಸಿಂಬಿ$_3$ + ಅಣುಗ (< ಅಣುಂಗ)]

ಸಿಂಬು 'ಸಿಂಬಿ$_2$' ನೋ.

ಸಿಂಬುಳ್, ಸಿಂಬಳ, ಸಿಂಬುಳ, ಸಿಂಬುಳು, ಸುಂಬಳ್$_1$, ಸುಂಬಳು, ಸುಂಬುಳ (ನಾ). ಮೂಗಿನಲ್ಲಿ ಸುರಿಯುವ ಶ್ಲೇಷ್ಮ; ಗೊಣ್ಣೆ: ಉಗುಟುಂ ಪೇಲುಂ ಸಿಂಬುಳುಮಗಲಿರ್ದವನೆಯ್ದೆ ನೋಡಿ ಪೇಸುವರ್ (ಧರ್ಮಾಮೃ. ೭-೧೪೪); ಬಿಸುನೆತ್ತರ್ ತೊಗಲೆಲ್ಲು . . . ಸಿಂಬುಳ್ ಸಿಳ್ಳುಗಳ್ ಲೋಳೆ . . . ಉರ್ವಿಸುಗುಂ ಪೇಸುಪತಂಕರಂ ಕಿಸುಗುಳಂ ಕಾಯಂ ಶುಚಿಪ್ರಾಯಮೇ (ಪುಷ್ಪಪು. ೧೩-೪೯). **ಸಿಂಬಳ:** ಮೂಗಿನಲ್ಲಿ ಸುರಿವ ಸಿಬುಳು - ಸಿಂಬಳ ಹಲ್ಲಿನಲ್ಲಿ ಕಿಸಿಕೆ ಉರದಲ್ಲಿ ಮಾಂಸದ ಗ್ರಂಥಿ (ಸಿದ್ಧೇಶ. ೫೦-೧೪೨); ಪೂತನೆಯೊರ್ವಳ್ ಬಿಸುನೆತ್ತರೀಂಟೆ ಸಿಂಬಳಮೊಸರ್ವಿನೆಗಂ ಪೇಸಿ ಮೊಗದೊಳು ಗುಳ್ಳುಗುಟ್ಟುಂ (ಅಜಿತ. ೨೭-೬); ಕಣ್ಣಿನಲ್ಲಿ ಜಿಬರ ಮೂಗಿನಲ್ಲಿ ಸಿಂಬಳ (ರಾಮಾನ. ೧೧೦). **ಸಿಂಬುಳ:** ಸಿಂಬುಳ ನಾಳಿ ಮೂಗುಗುಟ ಪರ್ದೂಜೆ ಬಾಯ್ ಮಲದಾಗರಂ ಬಸಿಱ್ (ಧರ್ಮಾಮೃ. ೫-೨೮). **ಸಿಂಬುಳು:** ಸಿಂಬುಳು ಕೀವು ಕೆರಂಕ ಸೃಗಂಬು . . . ಜೀವಂ ಬೆಂಬಿಡದೀ ಪಂದೊವಲ ಪಸುಂಬೆಯೊಳೀಯೊಡಲೊಳಾವ ಸುಖಕಿರ್ದಪುದೋ (ಅಜಿಪು. ೬-೫೪); ನಾಸಿಕಂ ಸಿಂಬುಳದ ಹಿರಿನಾಳವೆಂದಿರದೆ ಪೇಸಿಕೆಯ ಮುಖವು ಬಚ್ಚಲ ನಾಳವೆಂದಿರದ . . . ಎಱಗಿದಂ ಪ್ರಾಯದೊಳು ಭೀಬತ್ಸವೆಂದಿರದೆ (ಪಿಂಡೋತ್ಪ. ಪ. ೫೦೩-೩); ರಕ್ತ ಶ್ಲೇಷ್ಮ ಸಿಂಬುಳಿಂದೆಯಾದ ಕೂಪದಲ್ಲಿ ಎಲುಗಳುಳಿಯೆ ಕ್ರಿಮಿಗಳುಳಿಯೆ ಹೊಗಿಸಿ ಸುತ್ತಿ ಬರಿಸಿಯಲ್ಲಿ (ಸಾನಂಚಿ. ೬-೧೭). **ಸುಂಬಳ್$_1$:** ತನ್ನ ಮಕ್ಕಳ ಸುಂಬಳ ಒರೆಸುವಾಗ ಇರುವ ಸಹಜತೆಯ ಭಾವವು ಎರಡನೆಯವರ ಮಕ್ಕಳ ಸುಂಬಳವನ್ನು ಕಳೆಯುವಾಗ ಬರಬೇಕು (ಭಾರಸಂ. ೧೩೪). **ಸುಂಬಳು:** ವಿಶಾಲನೇತ್ರಾಂಬುಗಳಂ ಕೂಡೆ ಸುರಿಸುತ್ತ ಸುಂಬಳನೀಡಾಡುತ್ತಳುತೆ ಕರೆಯುತಂ ಸತ್ತವರಂ (ಹಾಲಾಸ್ಯ. ೪-೧೫-೩೧). **ಸುಂಬುಳ:** ಕೀವು ಸುಂಬುಳ ನೆತ್ತರುಗುಳು ತಿಪ್ಪೆಗಳಂತೆ ಭಾವಯಂ ಕಾಣಬೇಕು (ಮಹಾಂತೇ. ೨೬-೬).

ಸಿಂಬಳದ ಹುಳ, ಸುಂಬಳದ ಹುಳು = ಒಂದು ಬಗೆಯ ಹುಳು; ಗೊಣ್ಣೆ ಹುಳು: ಕೋಪ, ಆತ್ಮಮರುಕವಾಗಿ - ಸರ್ಪ, ಸಿಂಬಳದ ಹುಳವಾಗಿ - ಕಜ್ಜಿ ಕೀವಾಗುತ್ತದೆ (ಪೊಸಕ್ತಿ. ೨೨೦); "ಸಣ್ಣ ಸಸ್ಯಗಳನ್ನು ಹಾಳು ಮಾಡುವ. ಚಿಪ್ಪಿಲ್ಲದ. ಒಂದು ಬಗೆಯ ಬಸವನ ಹುಳು ; ಗೊಂಡೆಹುಳು, ಸುಂಬಳದ ಹುಳು" (Slug. ಇಂಗಿನ).

[ದೇ. ॥ ತೆಲು. ಚೀಮಿಡಿ. / ಸಂ. ಸಿಂಘಾಣ. / ಮರಾ. ಶೇಂಬೂಡ]

ಸಿಂಬುಳ 'ಸಿಂಬುಳ್' ನೋ.

ಸಿಂಬುಳು 'ಸಿಂಬುಳ್' ನೋ.

ಸಿಂಬೆ$_1$ 'ಸಿಂಬಿ$_1$' ನೋ.

ಸಿಂಬೆ$_2$ (ನಾ). ೧. ಸೇವಕಿ; ದಾಸಿ; ತೊತ್ತು: ಸಿಂಬೆಗೆ ರಂಬೆತನ ಉಂಟೆ . . . ಡಿಂಗರಿಗಂಗೆ ಸಮವೆಂಬ ಸಂಭ್ರಮ ಉಂಟೆ (ಶಾಸ್ತ್ರಸಂ. ೧೨೦-೧೩); ರಂಬೆಯ ಬಿಟ್ಟು ಸಿಂಬೆಯ ಬಯಸುವ ಶಿಖಂಡಿಯಂತೆ (ಸಿದ್ಧೇಶ. ೧೩೪-೩೯೬). ೨. ದಾಸಿ, ತೊತ್ತು ಎಂಬರ್ಥದ ಒಂದು ಬೈಗುಳು: ಚಂಡಿ ನೀ ಚಂಡಿ ಸಿಂಬೆ ನೀ ಸಿಂಬೆಯೆಂದು ತಲೆಯೆತ್ತಿಯೊರ್ವರೊರ್ವರು ಕಚ್ಚಿ ತಾವು ಮುಂದಲೆವಿಡಿದು . . . ಬಿದ್ದುರುಳುವ ಚೌವಟ ಬೇಟಗಾರ್ತಿಯರ ಜಗಳಮಂ ಕಂಡು ನಗುತಿರ್ದನಣುವ (ಕುಮಾರಾ. ೧೪-೫೮) ; ಬಗಬಗೆಯ ಗುಣದ ಗೋಸುಂಬೆಯರ್ಸಿಂಬೆಯರ್ಜಗದ ಮರ್ತ್ಯರ ಮನದ ಗಂಟುಗಳ್ ನಂಟುಗಳ್ (ಪಜಿಲ. ೨-೫೯). 'ಸಿಂಬಿ$_3$' ಪರಾ. [ಸಿಂಬ + - ಎ$_2$]

ಸಿಂಬೆ$_3$ (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ: ಸಿಂಬೆ ಕೂಗಲಿ ಪಿಪ್ಪಲಿಗಾಯ ಕೊಯ್ದರು ನಿಂಬೆಯ ಕಳವಣ್ಣಳೊಡನೆ (ಮೋಹಿತ. ೪-೬೦).

[? / ಸಂ. ಶಿಂಬೀ, ಶಿಂಬಾ = ಒಂದು ಬಗೆಯ ಸಸ್ಯ / ತಮಿ. ಚಿಮ್ಬೈ = ಕಾಡುಹುರಳಿ]

ಸಿಂಬೆಗೊಳ್ (ಕ್ರಿ). ಸುರುಳಿಯಾಗು; ಸುತ್ತುವರಿ: ಆ ವಾರಣದ ತೋರಹತ್ತಮಾನು ಪೂರ್ವಿಸ್ಥೂಳಮುಮಾಭೀಳಮುಮತಿಪ್ರಲಂಬಮುಮಾಗೆ ಸಿಂಬೆಗೊಂಡು ನಖಮುಖದೊಳ್ ಕುಪ್ಪಳಿಸಿ ರೌದ್ರರಸಮಂ ಕಱೆವ ಕಾರಮುಗಿಲೊಡ್ಡು ಕಾಲೂಱೆದಂತಿರ್ಪುದು (ಅನಂಪು. ೧೩-೨೦ ವ). [ಸಿಂಬೆ$_1$ (< ಸಿಂಬು$_1$) + ಕೊಳ್$_1$]

ಸಿಂಹ (ನಾ). ೧. ಮೃಗರಾಜನೆಂದು ಹೆಸರಾದ ಒಂದು ಬಗೆಯ ವನ್ಯಮೃಗ; ಕೇಸರಿ: ನೀರ್ಗೆ ಪೋಗದೆ ತೃಷ್ಣಾತುರನಾಗಿಯುಂ ಮಗುಟ್ಟುದಾ ಸಿಂಹಂ ಭಯಭ್ರಾಂತಿಯಿಂ (ಪಂಚತಂ. ೨೩-೮೩); ಕಸ್ತೂರಿಯ ಮೃಗ ಶಾರ್ದೂಲಚರ್ಮವ ಸಿಂಹಮಗುರುಗಳ . . . ಕೋಡಗದ ಮಱಿಗಳನರಸ ರಾಮಂಗಿತ್ತು ಕಂಡುದು ಶಬರಸಂದೋಹ (ತೊರಾ. ೩-೩-೪); ಸಿಂಹಕ್ಕಿಂತ ಹುಲಿಯು ಕ್ರೂರವು (ಮುಂಬಿಯು. ೪-೩೭). ೨. ಒಂದು ನರಕದ ಹೆಸರು: ಸಿಂಹ . . . ವ್ಯಾಘ್ರಮಂಬೈದು ಮಂತ್ರಿನರಕಂಗಳ ಮಧ್ಯದಲ್ಲಿ ಮಹಾಚಂಡವೆಂಬರಸುನರಕವಿಹುದು (ಏವೇಕ. ೧೮೦). ೩. (ಆಲಂ) ಸಮಾಸಗಳಲ್ಲಿ ಶ್ರೇಷ್ಠ, ಪ್ರಮುಖ ಎಂಬರ್ಥದಲ್ಲಿ ಬಳಕೆಯಾಗುವ ಒಂದು ಶಬ್ದ: 'ಸಿಂಹದ್ವಾರ' ಪರಾ. ೪. [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು; "ಪ್ರತಿಪಾದದ ಒಂದರಡನೆಯ ಸ್ವರಗಳ ನಡುವ ಒಂದೇ ವಿಧವಾದ ಒಂದು ವ್ಯಂಜನವು ಬಂದು ಅದರ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಸಿಂಹಪ್ರಾಸ" (ಕ್ರಿಛಂ. ೭೧). ೫. [ಜ್ಯೋತಿ] ಜ್ಯೋತಿಶ್ಚಕ್ರದ ಹನ್ನೆರಡುರಾಶಿಗಳಲ್ಲಿ ಒಂದು: ಘಟೋಕ್ಷ ವೃಶ್ಚಿಕ ಸಿಂಹಂ ಸ್ಥಿರರಾಶಿ (ಜಾತಕ. ೧-೨೩); ಆ ಖಗೋಳದಲ್ಲಿ ಮೇಷ . . . ಸಿಂಹ . . . ಮೀನವೆಂಬ ಪನ್ನೆರಡುರಾಶಿಗಳು (ಏವೇಕ. ೨೫೮). 'ದ್ವಾದಶರಾಶಿ' ಪರಾ. ೬. [ವಾಸ್ತು] ಕಟ್ಟಡನಿರ್ಮಾಣಕ್ರಮದಲ್ಲಿ ನೋಡಬೇಕಾದ ಎಂಟು ಬಗೆಯ ಆಯಪ್ರಕಾರಗಳಲ್ಲಿ ಒಂದು: ಪಸರಿಸೆ ತರದಿಂ ಧ್ವಜ ಧೂಮ ಸಿಂಹ ಶುನ ಕೋಕ್ಷಖರಗಜಧ್ವಾಂಕ್ಷಂಗಳ್ ದಸೆಯಿಂದ ಮೂಡನಾಳ್ಗಂ ದಸೆಯಾಯಂ ಶುಭದಮಲ್ಲಿ ಪೆಱವಶುಭಂಗಳ್ (ಲೋಕೋಪ. ೩-೧೯); ವಿವಿಧವಾದ ಪ್ರಾಸಾದಾದಿಗಳು ಎಂಟು ವಿಧವಾದ ಗಜ, ಉಷ್ಟ್ರ (ಒಂಟೆ), ಖರ, ಸಿಂಹ, ವೃಷ, ಧ್ವಜ, ಧೂಮ, ಶ್ವಾನ ಎಂಬ ಆಯಗಳನ್ನರಿತು ನಿರ್ಮಾಣವಾಗತಕ್ಕದ್ದೆಂದೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಭಾರದ. ೮೦). 'ಧೂಮಾಯ' ಪರಾ. [ಸಂ.]

ಸಿಂಹಕಟಿ (ನಾ). (ಸಿಂಹದ ನಡುವಿನಂತೆ) ಬಹಳ ಸಣ್ಣದಾದ ಸೊಂಟ: ತುಂಬುಕುತ್ತಿಗೆ, ಉನ್ನತವೂ ವಿಶಾಲವೂ ಆದ ವಕ್ಷ, ಸಿಂಹಕಟಿ (ಶಾಂತಲಾ. ೧೦೭). [ಸಂ.]

ಸಿಂಹಕಡಗ (ನಾ). ಸಿಂಹದ ಮುಖದ ಆಕಾರವನ್ನು ಕೆತ್ತಿರುವ ಒಂದು ಬಗೆಯ ಬಳೆ, - ತೋಡ: ಕೀಲ ಕಡಗ . . . ಸಿಂಹಕಡಗ ಗೌಳಸರದ ಪಣಿಗಡಗದ ಸೊಬಗಿನ ನೀಲಕುಂತಳೆಯರೊಪ್ಪಿದರು (ಕಂನಿ. ೨೪-೩೯). [ಸಿಂಹ + ಕಡಗ$_1$]

ಸಿಂಹಕೇಸರ (ನಾ). ಸಿಂಹದ ಕತ್ತಿನ ಮೇಲಿರುವ ಜೂಲುಕೂದಲು; ಅಯಾಲು: ಸಿಂಹಕೇಸರದುಯ್ಯಲಾಡುವ ಗಜವ ನೋಡೆಂದುಱುಬಿದನು ನೃಪನ (ಕುಮಾರ್ಪ್ರ. ೧೫-೫೬). [ಸಂ.]

ಸಿಂಹಕ್ರೀಡ (ನಾ). [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು: ಪದಯುಗದಲಾತಚಾರಿಯನೊದವಿಸಿ ಮತ್ತೊಂದು ಪಾದಮಂ ಮುಂತಿರಿಸುತ್ತೊದೆದು ನೆಲನಂ ಪತಾಕಮನದು ಮತ್ತಂ ಕೈ[ಗ]ಳೊಂದೆ ಸಿಂಹಕ್ರೀಡಂ (ಲಾಸ್ಯರಂ. ೪-೧೫೦). [ಸಂ.]

ಸಿಂಹಕ್ರೀಡಿತ (ನಾ). = ಸಿಂಹಕ್ರೀಡ: ತಲಪುಷ್ಪಪುಟ, ಲೀನ, ವಿವರ್ತಿತ . . . ಸ್ಖಲಿತ, ಸಿಂಹಕ್ರೀಡಿತ, ಸಿಂಹಾಕರ್ಷಿತ . . . ಗಂಗಾವತರಣ - ಈ ಸೂಚ್ಯಂಟು ಕರಣಗಳ್ (ಲಾಸ್ಯರಂ. ೪-೪೨೨). [ಸಂ.]

ಸಿಂಹಗರ್ಜನೆ (ನಾ). ೧. ಸಿಂಹದ ಗಟ್ಟಿಯಾದ ಕೂಗು, — ಆರ್ಭಟೆಯ ಧ್ವನಿ. ೨. (ಆಲಂ) ಶೌರ್ಯಾಲಾಪ; ವೀರಗರ್ಜನೆ: ಸಿಂಹಗರ್ಜನೆಯಿಂ ಗರ್ಜಿಸಿ ಕುರುರಾಜದ್ವಾರೋಪಾಂತಮನೆಯ್ದುವಂದಾಗಳ್ (ಗದಾಯು. ೬-೩೧ವ); ಇವರ ಸಿಂಹಗರ್ಜನೆಯಿಂದಲೇ ಗಂಗಸಾಮ್ರಾಜ್ಯ ಬಹುತೇಕ ವಿಶಾಲಗೊಂಡಿತು (ನೊಳಂಬ. ೧೮). [ಸಂ. ಸಿಂಹಗರ್ಜನ]

ಸಿಂಹಘಂಟಿಕೆ (ನಾ). ಸಿಂಹನಾದದಂತೆ ಧ್ವನಿಯನ್ನು ಹೊರಡಿಸುವ ಗಂಟೆಯಂತಹ ಒಂದು ಬಗೆಯ ವಾದ್ಯ: ಪ್ರೀತಿ ಮಿಗೆ ಶಂಖಪಟಹ ವಿನೂತೋದ್ಭುರ ಸಿಂಹಘಂಟಿಕಾನಿಸ್ವನಸಂಕೇತದೆ ಭವನ ಭೌಮ ಜ್ಯೋತಿಷ ವೈಮಾನಿಕಾಮರರ್ನೆರೆತಂದರ್ (ಸುಕುಮಾ. ೮-೬೪). [ಸಂ. ಸಿಂಹಘಂಟಿಕಾ]

ಸಿಂಹತಾಳತ (ನಾ). = ಸಿಂಹಕಡಗ: ಹಿರಿಯ ವೈಣಿಕರಾದ ವೆಂಕಟರಮಣದಾಸರಿಗೆ ವೈಸ್‌ರಾಯ್ ಲಾರ್ಡ್‌ಕರ್ಜನ್ ಒಂದು ಸಿಂಹತಾಳತವನ್ನು ಬಹುಮಾನವಾಗಿ ಕೊಟ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು [ತಾಳತವೆಂದರೆ ಒಂದು ಚಿನ್ನದ ಬಳೆ. ರತ್ನಖಚಿತವಾದ

ಇದರ ಎರಡು ಕಡೆಯೂ ಸಿಂಹದ ತಲೆಯನ್ನು ಕೆತ್ತಲಾಗಿದೆ] (ಸಂಗೀಶ. ೬೬).

[ಸಿಂಹ + ತಾಳತ್ರ]

ಸಿಂಹದ್ವಾರ (ನಾ). (ಅರಮನೆ, ದೇವಾಲಯ ಮುಂತಾದುವುಗಳ) ಪ್ರಮುಖವಾದ ಬಾಗಿಲು; ಮುಖ್ಯದ್ವಾರ: ಅಸವನೆಗೆ ಕೆಯ್ಗೆ ತೋಂಟಕ್ಕೆ ಸಿಂಹದ್ವಾರ [ಪಾಠಾಂ.[ಸ]ಮಗಾರ]ಗೃಹಕೆ ಪೂಳೆವನೆಗಾಳ್ಗಾಂ ಬೆಸವೋದನೆಂದು ಪುಂಶ್ಚಲಿ ಸುಶೀಲೆ ಪೋಕುಂ (ಮಮತಿ. ೮-೪೯) [ಸಂ.]

ಸಿಂಹಧ್ವನಿ (ನಾ). ೧. = ಸಿಂಹಗರ್ಜನೆ ೧. ೨. = ಸಿಂಹಗರ್ಜನೆ ೨: ಕಳಕಳಿಕೆ ತಗ್ಗಿದ ಸಭಾಸ್ಥಳದೊಳಗೆ ಸಿಂಹಧ್ವನಿಯಲವನಿಪಕುಲಕುಠಾರನು ಪರಶುರಾಮನು ನುಡಿದನರಸಂಗೆ (ಕುಮಾಲು. ೯-೯). [ಸಂ.]

ಸಿಂಹನಂದನ (ನಾ). [ಸಂಗೀತ] ಒಂದು ತಾಳದ ಹೆಸರು: ಧ್ರುವ ಮಟಯ . . . ಸಿಂಹ[ಪಾಠಾಂ. ಹಾ]ನಂದನ ಸಿಂಹವಿಕ್ರೀಡಿತ ಸಿಂಹನಾದ ಸಪ್ತಮುದ್ರಿತ ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳಾದೊಡೆ (ವಿವೇಕ. ೧೯೨); ೧೦೮ ತಾಳಗಳಲ್ಲಿ ಸಿಂಹನಂದನವೇ ಅತ್ಯಂತ ದೊಡ್ಡತಾಳ (ಸಂಗೀತ. ೨೮). [ಸಂ.]

ಸಿಂಹನಾದ (ನಾ). ೧. = ಸಿಂಹಗರ್ಜನೆ ೧. ೨. = ಸಿಂಹಗರ್ಜನೆ ೨: ಗಲಲೆನಗೆ ರಿಪುಬಲಂ ಬಲ್ಲಲಮಾದೊಡೆ ಸಿಂಹನಾದಮಂ ಮೂಟ್ಟಿಂ (ಪಂರಾಮಾ. ೯-೯೭). ೩. [ಸಂಗೀತ] ಒಂದು ತಾಳದ ಹೆಸರು: ಸಿಂಹನಾದ . . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಗಳಾದೊಡೆ (ವಿವೇಕ. ೧೯೨). [ಸಂ.]

ಸಿಂಹನಾದಂಗೆಯ್ (ಕ್ರಿ). ರಣಗರ್ಜನೆಯನ್ನು ಮಾಡು; ವೀರಾಲಾಪವನ್ನು ಮಾಡು: ಹಿಡಿಂಬಕನೈರಿ ಸಿಂಹನಾದಂಗೆಯ್ದಂ (ಗದಾಯು. ೭-೧೭); ಅವಂ ರಣಕ್ಕೋಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣಶಕ್ತಿಯಿಂ ಸಿಂಹನಾದಂಗೆಯ್ಯೆಂಬುದುಂ ಅಂತೆಗೆಯ್ದೆನೆಂದು ವಿದ್ಯಾದೇವತೆ ಪೋಗಿ ಸಿಂಹನಾದಂಗೆಯ್ದುದುಂ (ಪಂರಾಮಾ. ೯-೯೭ ವ). [ಸಿಂಹನಾದ + ಕೆಯ್$_1$]

ಸಿಂಹಪರ್ಷೆ (ನಾ). [ಶೈವ] ಶೈವಮುನಿಗಳ ಒಂದು ವರ್ಗ: ಕೋಗಳಿಯಯ್ಯೂಱಱ ಮಠಾಧಿಪತಿಗಳಪ್ಪ ಸಿಂಹಪರ್ಷೆಯ ಶ್ರೀಮನ್ಮಲೆಯಾಳಪಂಡಿತದೇವರ ವರಶಿಷ್ಯರ್ (ಸೌಂದ. IX-೧. ೧೦೧-೩೫; ಸು. 1045); ಪರ್ಷೆಗಳಲ್ಲಿ . . . ಬಹು ಪ್ರಸಿದ್ಧವಾದುವು ಎರಡು - ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳು (ಕಶಾಶ. ೧೩೧). [ಸಿಂಹ + ಪರ್ಷ್ಟ$_0$ (< ಪರಿಸ್ಟ$_1$)]

ಸಿಂಹಪಾಲು (ನಾ). (ಆಲಂ) ಹೆಚ್ಚುಭಾಗ; ಅಧಿಕಾಂಶ: ಬರುವ ಆದಾಯದಲ್ಲಿ ಅವನಿಗೆ ಯಾವಾಗಲೂ ಸಿಂಹಪಾಲು ಕೊಡಬೇಕು (ರೂಢಿ).

[ಸಿಂಹ + ಪಾಲ್ಲು$_2$ (< ಪಾಲ್$_2$)]

ಸಿಂಹಪೀಠ (ನಾ). ೧. ಸಿಂಹಲಾಂಛನವನ್ನು ಹೊಂದಿರುವ ಪೀಠ; ರಾಜನ ಗದ್ದುಗೆ; ಸಿಂಹಾಸನ: ಏಱೆದ ಸಿಂಹಪೀಠಮಿರದೊರಲಿದುದು (ಶಾಂತಿಪು. ೩-೧೦೫); ಕೈಲಾಸದಲ್ಲಿ ಶಿವನು ಓಲಗದಿ ಸಿಂಹಪೀಠದೊಳೆರಲು (ಪ್ರೌಢರಾ. ೨-೨); ದತ್ತು ತೆಗೆದುಕೊಂಡಾಕ್ಷಣಕ್ಕೆ ದತ್ತುಪುತ್ರನು ಸಿಂಹಪೀಠವನ್ನೇರಬೇಕು ಎಂದೇನೂ ಇಲ್ಲ (ಸವತಿ. XIV ಪ್ರಸ್ತಾವನೆ). ೨. [ವಾಸ್ತು] ಸಿಂಹದ ಶಿಲ್ಪವನ್ನು ಹೊಂದಿರುವ ವಿಗ್ರಹದ ಪೀಠ: ಆದಿನಾಥ ಶಾಂತಿನಾಥ ವಿಗ್ರಹಗಳಿಗೆ ಲತಾತೋರಣ ಸಿಂಹಪೀಠಗಳಿವೆ (ಹೊಯ್ಸಾಲಾ. ೮೦); ಮಧ್ಯಫಲಕದಲ್ಲಿ ಯಕ್ಷಯಕ್ಷಿ, ಗಂಧರ್ವರ ನಡುವೆ ಸಿಂಹಪೀಠ . . . ಸಿಂಹಪೀಠದ ಮೇಲೆ ಪ್ರಭಾವಳಿ ಮುಕ್ಕೊಡೆ ಹೊಂದಿರುವ ಜಿನವಿಗ್ರಹವಿದೆ (ಹೊಯ್ಸಾಲಾ. ೧೦೩). ೩. [ವೀಶೈ] ಶಿವಪೂಜಾಯೋಗಪೀಠಗಳಲ್ಲಿ ಒಂದು: ಶಿವಾರ್ಚನೆಗುಪಯುಕ್ತಮಾಗಿ ಅನಂತಪೀಠ ಕಮಠಪೀಠ ಸಿಂಹಪೀಠ ಪದ್ಮಪೀಠ ಭದ್ರಪೀಠ ಯೋಗಪೀಠಗಳ ಭಾವನೆಯೆಂದುಪಕಲ್ಪಿತಮಾದ ದಿವ್ಯಮಂಟಪಮಧ್ಯಗತಸಿಂಹಾಸನಕ್ಕೆ (ವಿವೇಕ. ೧೦೪). ೪. [ಜೈನ] "ಸಮವಸರಣದ ಗಂಧಕುಟಿಯ ಮಧ್ಯದಲ್ಲಿ ಸುಂದರವೂ ಉನ್ನತವೂ ಶ್ರೇಷ್ಠವಾದ ರತ್ನಗಳಿಂದ ಕಾಂತಿಸಮೂಹವುಳ್ಳದೂ ಆದ ಸುವರ್ಣದ ಮಹಾಪೀಠ" (ಜೈನಕೋ. ೨೭೬). [ಸಂ.]

ಸಿಂಹಪುಚ್ಛಿ (ನಾ). ಒಂದು ಬಗೆಯ ಹುಲ್ಲು; ನರಿಬಾಲದ ಹುಲ್ಲು: "ಕ್ರೋಷ್ಟುವಿನ್ನಾ, ಸಿಂಹಪುಚ್ಛೀ, ಕಲಶೀ, ಧಾವನೀ, ಗುಹಾ - ೫ ನರಿಬಾಲದ ಹುಲ್ಲು, ನರಿಬಾಲದ ಹೊನ್ನೆ" (ಸಿದ್ಧಾಂಕಿ. ೧೩೩). [ಸಂ. ಸಿಂಹಪುಚ್ಛೀ]

ಸಿಂಹಪೋತ (ನಾ). ೧. ಸಿಂಹದ ಮರಿ: ಎನಿತು ಮದವಾರಣಂ ಕ್ರೋಧಿನಿ ಪೊಕ್ಕುಂ ಸಿಂಹಪೋತಮಂ ಗೆಲ್ಗುಮೆ (ಶಾಂತಿಪು. ೪-೫೧). ೨. ಒಂದು ಬಗೆಯ ಕುದುರೆ: ಸಿಂಗದ ಕೇಸರಮಂ ಪೋಲ್ವಂಗರುಹಂ ಮಿಶ್ರಕೇಶವಾಲಧಿ ಮುಷ್ಕಾಪಾಂಗಾಸ್ಯಮರುಣಮಾದ ತುರಂಗಮಮದು ಸಿಂಹಪೋತಂ (ಅಶ್ವಶಾ. ೨-೨೬). [ಸಂ.]

ಸಿಂಹಪ್ರಾಸ (ನಾ). [ಛಂದ]ಆರು ಬಗೆಯ ಪ್ರಾಸಗಳಲ್ಲಿ ಒಂದು; ಅದ್ವಿತ್ವವೂ ಹ್ರಸ್ವಸ್ವರಯುಕ್ತವೂ ಆಗಿರುವ ಪ್ರಾಸ: ಪ್ರತಿಪಾದದ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ಒಂದು ವ್ಯಂಜನವು ಬಂದು ಅದರ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಸಿಂಹಪ್ರಾಸ (ಕೃಪಿ. ೭೧). [ಸಂ.]

ಸಿಂಹಬಲ (ನಾ). ಸಿಂಹದಷ್ಟು ಶೌರ್ಯವುಳ್ಳವನು; ಸಿಂಹದ ಬಲಕ್ಕೆ ಸಮನಾದ ಬಲವನ್ನು ಹೊಂದಿರುವವನು: ಬಕಸಂಹರಣಂ ಕೀಚಕಮಥನಂ ನಿರಸ್ತಮಿತ ವೈರಿನಿವಹ ಗಜಸಿಂಹಬಲಂ (ಗದಾಯು. ೧-೫೪). [ಸಂ.]

ಸಿಂಹಭಾಗ (ನಾ). = ಸಿಂಹಪಾಲು: ಇದಕ್ಕೆ ಪ್ರತಿಫಲವಾಗಿ ಅವನಿಗೆ ಕೊಳ್ಳೆಯಲ್ಲಿ 'ಸಿಂಹಭಾಗ' ದೊರೆಯುತ್ತಿತ್ತು (ಇಸ್ಲಾಂಸಂ. ೩೫). [ಸಂ.]

ಸಿಂಹಮುದ್ರೆ (ನಾ). ಸಿಂಹದ ಗುರುತು, — ಚಿಹ್ನೆ.

ಸಿಂಹಮುದ್ರೆಕಲ್ಲು = ಸಿಂಹದ ಲಾಂಛನವನ್ನು ಕೆತ್ತಿರುವ (ಗಡಿ)ಕಲ್ಲು: ಈ ಊರ ವಾಮನಮುದ್ರೆಕಲ್ಲ ಬಡಗವತ್ತು ಸಿಂಹಮುದ್ರೆಕಲ್ಲ ಬಳಿಯ ಪಡುವಮುಖವಾನೆ (ಎಕ. V (R), ತಿರುಮ. ೧೬-೧೧೮೧ ; 1749). [ಸಂ. ಸಿಂಹಮುದ್ರಾ]

ಸಿಂಹರವ (ನಾ). ೧. ಸಿಂಹನಾದ; ಸಿಂಹಗರ್ಜನೆ. ೨. = ಸಿಂಹನಾದ ೨: ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂಹರವಂ ದೋಱಿದಂ (ವಂರಾಮಾ. ೯-೯೮). ೩. [ಸಂಗೀತ] ಒಂದು ರಾಗದ ಹೆಸರು: ಸಿಂಹರವವೆಂಬ ರಾಗವು ಷಡ್ಜವನ್ನು ನ್ಯಾಸ, ಅಂಶಗ್ರಹವನ್ನಾಗಿ ಉಳ್ಳದ್ದು (ಚತುರ್ದ. ೬೩). [ಸಂ.]

ಸಿಂಹರಾಶಿ (ನಾ). = ಸಿಂಹ ೫: ಕಟಕದ ಮೇಲಿರುವ ಸಿಂಹರಾಶಿಯ ಕೇಸರಶಿರವು ನಮಗೆ ನೆತ್ತಿಯ ಮೇಲೆ ಕಾಣುತ್ತದೆ (ನಕ್ಷತ್ರ. ೭೭). 'ದ್ವಾದಶರಾಶಿ' ಪರಾ. [ಸಂ.]

ಸಿಂಹಲ, ಸಿಂಹಳ (ನಾ). ೧. ಭಾರತದ ದಕ್ಷಿಣಕ್ಕಿರುವ ಒಂದು ದ್ವೀಪದ ಹೆಸರು; IP ಈಗಿನ ಶ್ರೀಲಂಕಾ: ಲಾಳ ಮಾಳವ ಸಿಂಧು ಸಿಂಹಲ [ಪಾಠಾಂ. ಳ]ಗೌಳ ಗುರ್ಜರ . . . ಕೇರಳ ಮುಖಾಪಾರ ದೇಶಂಗಳೊಳೆಸೆವ ಜಂಗಮವು ಭಕ್ತಾಳಿ (ಬಸವು. ೬-೧೮). ೨. ಸಿಂಹಳದೇಶಕ್ಕೆ ಸೇರಿದ ಜನ ಮತ್ತು ಅಲ್ಲಿಯ ರಾಜ: ವಿತತಚತುರಂಗಬಳಸಂಯುತನತಿಸಾಹಸಿ ಸರೋಧಿಮಧ್ಯಸ್ಥಿತನುದ್ಧತನಾ ಸಿಂಹಲಂ [ಪಾಠಾಂ. ಳಂ] (ರಾಜಶೇ. ೫-೧೩೧). ಸಿಂಹಳ: ೧. ಅಂಗ ವಂಗ ಕಳಿಂಗ ಕೊಂಗ ಮಾಳವ ಚೋಳ ನೇಪಾಳ ಸಿಂಹಳ . . . ಮರುಪ್ರಭೃತಿಭೂಪಾಲಕರಿಂ (ಜಗವಿ. ೨-೩೯ ವ); ಮತ್ತಮಾ ಭರತವರುಷದಲ್ಲಿಯೇ ಅಂಗ ವಂಗ ಕಳಿಂಗ ತೆಲುಂಗ ಕೊಂಗ ಲಾಟ ಬಂಗಾಳ ಚೋಳ ಕೇರಳ ಗೌಳ ಪಾಂಚಾಳ ಸಿಂಹಳ . . . ಎಂಭೈವತ್ತಾಱು ಬಗೆಯ ಜನರಿಂದ . . . ನಿರೂಢಮಾದೈವತ್ತಾಱು ಪ್ರಾಂತಗಳಿರ್ಪವು (ವಿವೇಕ. ೨೪೩). ೨. ಸಿಂಹಳಗಹ್ವರೀಭರ್ತೃ ಮಸ್ತಕಾಂಕುಶ ಪರಾಕು (ಯಾದಚಂ. ೩-೧ ವ). [ಸಂ.]

ಸಿಂಹಲಂಘನ (ನಾ). ಸಿಂಹದ ನೆಗೆತ,— ಜಿಗಿತ: ಕಲ್ಪಾಂತಕೃತಾಂತನಂತೆ ಮಾಮಸಕಂಮಸಗಿ ಪೊಡೆವ ಸಿಡಿಲಂತೆ ಸಿಡಿಲ್ದು ಸಿಂಹಲಂಘನದಿಂದಂಬರಕ್ಕೆ ನೆಗೆದು (ಪಂರಾಮಾ. ೧೧-೧೪೩ ವ). [ಸಂ.]

ಸಿಂಹಲಗ್ನ (ನಾ). [ಜ್ಯೋತಿ] ಸೂರ್ಯನು ಸಿಂಹರಾಶಿಯನ್ನು ಪ್ರವೇಶಿಸುವ ಕಾಲ; ಒಂದು ದಿನದ ಹನ್ನೆರಡು ಭಾಗಗಳಲ್ಲಿ ಒಂದು; ಸಿಂಹರಾಶಿಯು ಉದಯಿಸುವ ಕಾಲ: ರವಿಚಂದ್ರರ್ ನಿಲೆ ಸಿಂಹಲಗ್ನದೊಳಿಳಾಜಾತಾರ್ಕಜರ್ ನೋಡೆ ನೇತ್ರವಿಹೀನಂ ನರಂ (ಜಾತಕ. ೪-೩೮). [ಸಂ.]

ಸಿಂಹಲಲಾಟ (ನಾ). ೧. ಸಿಂಹದ ಮುಂದಲೆಯ ಆಕೃತಿಯುಳ್ಳ ಬಳೆ; ಸಿಂಹಕಡಗ. ೨. [ವಾಸ್ತು] ಸಿಂಹದ ಮುಂದಲೆಯ ಶಿಲ್ಪಾಕೃತಿ: ಮೇಲೆ ಮಕರಗಳ ಮಧ್ಯದಲ್ಲಿ ಸಿಂಹಲಲಾಟ, ಗೋಡೆಗಳಲ್ಲಿ ಜಾಲಂದ್ರಗಳೂ ಇವೆ (ಹೊಯ್ಸಾಲಾ. ೧೨೩). [ಸಂ.]

ಸಿಂಹಲಾಂಛನ (ನಾ). ೧. ಸಿಂಹದ ಗುರುತು; ಸಿಂಹಲಾಂಛನ. ೨. ಧ್ವಜದಲ್ಲಿ ಸಿಂಹದ ಗುರುತುಳ್ಳವನು, — ಸಿಂಹಲಾಂಛನವನ್ನುಳ್ಳವನು: ಬನವಾಸಿಪುರ ವರೇಶ್ವರಂ ಸಾಖಾಚರೇಂದ್ರಧ್ವಜಂ ಸಿಂಹಲಾಂಚನಂ (ಶಾಸಾ. XX. ೪೭-೭; 1068). [IP ಇದು 'ಸಿಂಹಲಾಂಛನ' ಎಂಬುದರ ಅವಲಿಖಿತ]

ಸಿಂಹಲಾಂಛನ (ನಾ). ೧. = ಸಿಂಹಲಾಂಚನ ೧: ಇವರ ಕಾವ್ಯಪಟ್ಟಿಕೆಗಳ ಮೊಹರುಗಳ ಮೇಲೆ ಸಿಂಹಲಾಂಛನವಿರುತ್ತದೆ (ಕರ್ಣಾಟ. ೪). ೨. = ಸಿಂಹಲಾಂಚನ ೨. ಸಿಂಹಲಾಂಛನಪ್ರಸೂತಂ = ಸಿಂಹಲಾಂಛನವುಳ್ಳವರ ವಂಶದಲ್ಲಿ ಹುಟ್ಟಿದವನು; ಒಂದು ಬಿರುದು: ಮಹಾಸಾಮನ್ತಂ ವಿಜಯಶ್ರೀಕಾನ್ತಂ ಮಣಲೆರಾನ್ವಯಪ್ರಸೂತಂ ಸಿಂಹಲಾಂಛನಪ್ರಸೂತಂ ಪುರಿಕರಪುರವರೇಶ್ವರಂ . . . ಜಯಕೇಶಿಯರಸರ್ (ಶಾಸಾ. XX. ೪೭-೨೧; 1074). [ಸಂ.]

ಸಿಂಹಲೀಲ (ನಾ). ೧. [ಸಂಗೀತ] ಒಂದು ತಾಳದ ಹೆಸರು: ಸಿಂಹಲೀಲ (ತಾಳ)ದಲ್ಲಿ ಮೊದಲು ಕೊನೆಗಳಲ್ಲಿ ಲಘುವಿರುವ ಮೂರು ದ್ರುತಗಳಿರುತ್ತವೆ (ಚತುಪ್ರ. ೮೭). ೨. ಒಂದು ಪ್ರಬಂಧದ ಹೆಸರು: ಸಿಂಹಲೀಲಾತಾಳದಲ್ಲಿ ವಿರಚಿತವಾಗಿರುವ ಪ್ರಬಂಧವು ಸಿಂಹಲೀಲವೆಂದು ಸ್ಮೃತವಾಗಿದೆ (ಚತುಪ್ರ. ೮೭). [ಸಂ.]

ಸಿಂಹವರ್ಣ (ನಾ). ಸಿಂಹದ ಸ್ವಭಾವವನ್ನು ಹೋದಿದವನು; ಪರಾಕ್ರಮಿ: ತಮ್ಮ ಬಲಮಬ್ಬೂಡುವುದುಮಂ . . . ಕಂಡು ತಾಂ ಸಿಂಹವರ್ಣನುಂ ಸಿಂಹಾನೀಕನುಂ ಪಾಪೇಭಕಂಠೀರವನುಮಪ್ಪುದಱಿಂದಮೆಯ್ದೆ ಮುಳಿದು (ಶಾಂಪು. ೪-೧೭ ವ). [ಸಂ.]

ಸಿಂಹವಾಹನ (ನಾ). ಶಿವ. [ಸಂ.]

ಸಿಂಹವಾಹನೆ (ನಾ). ದುರ್ಗೆ; ಪಾರ್ವತಿ. [ಸಂ. ಸಿಂಹವಾಹನಾ]

ಸಿಂಹವಾಹಿನಿ (ನಾ). ೧. ಸಿಂಹವನ್ನು ವಾಹನವಾಗಿ ಉಳ್ಳವಳು; ದುರ್ಗೆ; ಪಾರ್ವತಿ. ೨. [ಜೈನ] ಒಂದು ಬಗೆಯ ವಿದ್ಯೆ: ಕೇಸರಿವಿಕ್ರಮನೆಂಬೊ ಸಮ್ಮೇದಗಿರಿಯೊಳ್ ಸಿಂಹವಾಹಿನಿಯುಂ ಗರುಡವಾಹಿನಿಯುಮೆಂಬ ವಿದ್ಯಾದಿಗಳಂ ಸಾಧಿಸಿ ತನ್ನಳಿಯರ್ಗೆ ಕೊಟ್ಟು (ಚಾವುಂಪು. ೨೬೮); ಅಂತದಂ ಗರುಡಾಧಿಪನಪ್ಪ ಮಹಾಲೋಚನನಱಿದು ಬಹುವಿದ್ಯಾಪರಿವಾರಮನುಳ್ಳ ಸಿಂಹವಾಹಿನಿಯುಂ ಗರುಡವಾಹಿನಿಯುಮೆಂಬೆರಡು ವಾಹನವಿದ್ಯೆಗಳುಮಂ . . . ಕುಡೆಂದು . . . ಬೆಸಸುವುದುಂ (ಪಂಪಾಮಾ. ೧೩-೧೫೭ ವ). 'ಗರುಡವಾಹಿನಿ' ಪರಾ. ೩. ಭರತಚಕ್ರವರ್ತಿಯ ಪರ್ಯಂಕ, — ಶಯ್ಯೆ : ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ ಅನುತ್ತರೆಯೆಂಬ ಸಿಂಹಾಸನಮುಂ (ಆದಿಪು. ೧೫-೩ ವ); ಚಕ್ರೇಶ್ವರನೆನ್ಬತ್ತುನಾಲ್ಕುಲಕ್ಷೆ ಭದ್ರಗಜಂಗಳಿಂದಂ . . . ಸಿಂಹವಾಹಿನಿಯೆಂಬ ಶಯ್ಯೆಯಿಂದಂ . . . ನೆಱೆದೈಶ್ವರ್ಯದ ಮೇಗೆ ವಜ್ರಿ ಬೆಸದಾಳಂತಾಗಿಯುಂ (ಶಾಂಪು. ೧೧-೪೪ ವ). [ಸಂ. ಸಿಂಹವಾಹಿನೀ]

ಸಿಂಹವಿಕ್ರಮ (ನಾ). ೧. = ಸಿಂಹಬಲ. ೨. [ಕಾಮಶಾ] ಕರಣಭೇದಗಳಲ್ಲಿ ಒಂದು: ಭಿತ್ತಿಯೆಡೆಯನಂಬುಜಾಕ್ಷಿಯೊತ್ತುಗೊಂಡು ನಿಂದು ತನ್ನ ಚಿತ್ತದವನನಪ್ಪಲು . . . ಎತ್ತಿ ರಮಿಸಲದುವೆ ಕೇಳು ಮತ್ತದಂತಿಗವುನೆ ಸಿಂಹವಿಕ್ರಮಾಖ್ಯವು (ಜನಪ. ೯-೪೬). [ಸಂ.]

ಸಿಂಹವಿಕ್ರೀಡಿತ (ನಾ). ೧. [ಸಂಗೀತ] ಒಂದು ತಾಳದ ಹೆಸರು: ಚಂಚತ್ಪುಟ . . . ಸಿಂಹವಿಕ್ರೀಡಿತ . . . ಜಯಾಳವೆಂಬವೇ ಮೊದಲಾದ ನೂಱೊಂದುತಾಳಂಗಳಾದೊಡೆ (ಎವಕ. ೧೯೨). ೨. [ಜೈನ] ದೀರ್ಘಉಪವಾಸ ಮತ್ತು ಪಾರಣೆಗಳಿಂದ ಕೂಡಿದ ಒಂದು ಬಗೆಯ ವ್ರತ: ಸರ್ವತೋಭದ್ರ ಸಿಂಹವಿಕ್ರೀಡಿತಗಳೆಂಬ ತಪದೊಳ್ ನೆಗಟ್ಟು (ಆದಿಪು. ೩-೫೭ ವ); ಸಿಂಹಗವಿಕ್ರೀ[ಪಾಕಾಂ. ನಿಷ್ಕ್ರೀ]ಡಿತತಪದೊಳ್ ನೆಗಟ್ಟೆನ್ನ ತಪದ ಫಲಮುಂಟಪ್ಪೊಡೆ ಅನ್ಯಜನ್ಮದೊಳ್ಮಹಾಬಲಪರಾಕ್ರಮನಪ್ಪೆಂ (ಚಾವುಂಪು. ೧೭೫). [ಸಂ.]

ಸಿಂಹವಿಧೃತ (ನಾ). = ಸಿಂಹವಾಹಿನಿ ೩: ಸಿಂಹವಿಧೃತಮಪ್ಪ ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ (ಆದಿಪು. ೧೫-೩ ವ). [ಸಂ.]

ಸಿಂಹವಿಷ್ಟರ (ನಾ). = ಸಿಂಹಪೀಠ ೧: ನೃಪನೆಟ್ಟು ಸಿಂಹವಿಷ್ಟರದಿಂದಂ ನಡದೀಬಡಿಯಂ ಜನನಿರ್ದೆಡೆಗಱಿಗಿ ಬಲ್ಕೈ ಮಚ್ಚುಗೊಟ್ಟಂ . . .ನೃಪೇಂದ್ರಂ (ಶಾಂಪು. ೧-೮೨); ಕುಮತಿ ಕೌರವನಿಳೆಯದಿರ್ದನು ಸಿಂಹವಿಷ್ಟರವ (ಕುವಾ.ಭಾ. ೮-೫೮). [ಸಂ.]

ಸಿಂಹಶಿಶು (ನಾ). ಸಿಂಹದ ಮರಿ; ಸಿಂಹಪೋತ: ಅಂಬೆಗಾಲಿಕ್ಕುವ ಪದದೊಳ್ ಸಿಂಹಶಿಶುವೊಲೆಸದಂ ಕೃಷ್ಣಂ (ಜಗವಿ. ೩-೩೬); ಅರರೇ ಜನನಿಯ ಮೊಲೆವಾಲರೆಯುಂಡೀ ಸಿಂಹಶಿಶುವನಿರದೊಡನಾಡಲ್ . . . ಸೆಳೆಯುತಿರ್ಪಂ ಬಲ್ಲಿಂ (ಶಾಕುಂತ. ೧೦೪-೧೭೭). [ಸಂ.]

ಸಿಂಹಸಂಕ್ರಾಂತಿ (ನಾ). [ಜ್ಯೋತಿ] ಸಿಂಹಲಗ್ನದಲ್ಲಿ ಬರುವ ಸಂಕ್ರಮಣ: ಈಶ್ವರಸಂವತ್ಸರದ ಶ್ರಾವಣಶುದ್ಧ ೫ ಆದಿವಾರ ಸಿಂಹಸಂಕ್ರಾಂತಿ ಪುಣ್ಯಕಾಲದಲು (ಎಕ. V (R), ಕಿರುಮ. ೧೭-೨೬; 1397). [ಸಂ.]

ಸಿಂಹಸಂಘಾತ (ನಾ). ಸಿಂಹಗಳ ಗುಂಪು, - ಸಮೂಹ: ಸಿಂಹಸಂಘಾತರ ವೈಕಾಭೀಳಮಂ ಭೀಕರಕುಧರಗುಹಾರೌದ್ರಮಂ . . . ನಿರ್ಜನವನಮನಿದಂ ನೀನೆಂತು ಪೊಕ್ಕೆ (ಪಂಚತಂ. ೫೭-೩). [ಸಂ.]

ಸಿಂಹಸಂಹನನ (ನಾ).೧. ಸಿಂಹದ ಆಕಾರ, -ಆಕೃತಿ. ೨. (ಆಲಂ) ಸುಂದರವಾದ ಆಕಾರ, -ಆಕೃತಿ. ೩. ಸುಂದರವಾದ ಆಕಾರವುಳ್ಳವನು; ಬೆಲುವ: "ಪ್ರಕೃಷ್ಟತರಮೂರ್ತಿ ಸಿಂಹಸಂಹನನನವಂ" (ವಪ್ರಕೋ. ೧೦೦-೧೭). [ಸಂ.]

ಸಿಂಹಸ್ಥಪರ್ವಣಿ (ನಾ). ಸಿಂಹಮಾಸದಲ್ಲಿ ಬರುವ ಹುಣ್ಣಿಮೆ ಅಥವಾ ಅಮಾವಾಸ್ಯೆ: ಹಜಾಮರಿಗೆ ಭಟ್ಟರಿಗೆ ಸಿಂಹಸ್ಥಪರ್ವಣಿ ಇದ್ದಂತೆ ಈ ಗುಲಾಮರಿಗೆ ಈ ಪ್ಲೇಗು ಪರ್ವಕಾಲವಾಗಿದೆ (ಸ್ವತಿಚಿ. ೩೧೫). [ಸಂ. ಸಿಂಹಸ್ಥಪರ್ವಣೀ]

ಸಿಂಹಸ್ವಪ್ನ (ನಾ). (ಆಲಂ) ಅತಿಯಾದ ಭಯವನ್ನುಂಟುಮಾಡುವ ವಸ್ತು ಅಥವಾ ವ್ಯಕ್ತಿ: ದೊಡ್ಡವರ ಬಾಯಿಂದ ದಡ್ಡಮಾತುಗಳನ್ನು ಆಡಿಸಿ ತಂಟೆ ತಂದಿಡುತ್ತಾರೆಂಬುದು ಹಲವರಿಗೆ ಸಿಂಹಸ್ವಪ್ನ (ಪುಚ್ಛಪು. ೯೯). [ಸಂ.]

ಸಿಂಹಸ್ವರ (ನಾ). ಸಿಂಹದ ಗರ್ಜನೆ; ಸಿಂಹನಾದ: "ಏಷಮುಂ [ಸಿಂಹ] ಸ್ವರಮುಂ ಕ್ಷ್ವೇಡಾಂಕಂಗಳ್" (ಚಪ್ರಕೋ. ೧೨೯-೬೯). [ಸಂ.]

ಸಿಂಹಳ 'ಸಿಂಹಲ' ನೋ.

ಸಿಂಹಳಪಿಪ್ಪಲಿ (ನಾ). ಹಿಪ್ಪಲಿಯಲ್ಲಿ ಒಂದು ಬಗೆ : " ಅದ್ರಿಜಾಹ್ವಾ— ಸಿಂಹಳಪಿಪ್ಪಲಿ" (ಓಷಧಿ. ೫). [ಸಂ. ಸಿಂಹಲಪಿಪ್ಪಲೀ]

ಸಿಂಹಳಹಿಪ್ಪಲಿ (ನಾ). = ಸಿಂಹಳಪಿಪ್ಪಲಿ : "ಅಮಳಸ್ಥಾ - ಸಿಂಹಳಹಿಪ್ಪಲಿ" (ಓಷಧಿ. ೫). [ಸಿಂಹಳ (=ಸಿಂಹಲ) + ಹಿಪ್ಪಲಿ]

ಸಿಂಹಾಕರ್ಷಿತ (ನಾ). [ನಾಟ್ಯ] ನೂರೆಂಟು ವಿಧವಾದ ಕರಣಗಳಲ್ಲಿ ಒಂದು: ಸಿಂಹಾಕರ್ಷಿತ — ಪದಮಂ ವೃಶ್ಚಿಕಪಾದಮಂ ಸಮೆದು ಹಸ್ತದ್ವಂದ್ವಮಂ ಪದ್ಮಕೋಶದ ಚೆಲ್ವಂ ಪುದಿದಿರ್ದು ಮೇಣ್ ಕರಮದೂರ್ಣನಾಭಮಂ ಮಾಡಿ . . . ಹಸ್ತಂಗಳುಂ ಮೊದಲಂತಾದೊಡೆ ಸಿಂಹದಾಕರುಷಣಂ ತಾನಕ್ಕುಂ (ಲಾಸ್ಯರಂ. ೪-೧೫೧). [ಸಂ.]

ಸಿಂಹಾಣ (ನಾ). ೧. ಕಬ್ಬಿಣದ ತುಕ್ಕು, -ಕಿಟ್ಟ: " ಮಂಡೂರಂ, ಸಿಂಹಾಣಂ-೨ ಕಬ್ಬಿಣದ ಕಿಟ್ಟಕ್ಕೆ ಹೆಸರುಗಳು" (ಪದ್ಮಾಂತಿ. ೬೦೪). ೨. ಗೊಣ್ಣೆ; ಸಿಂಬಳ: 'ರಕ್ತಸಿಂಹಾಣ' ಪರಾ. [ಸಂ.]

ಸಿಂಹಾನೀಕ (ನಾ). (ಆಲಂ) ಪರಾಕ್ರಮಿಗಳಿಂದ ಕೂಡಿದ ಸೈನ್ಯವುಳ್ಳವನು: ತಮ್ಮ ಬಲಮಬ್ಬೂಡುವುದುಮಂ . . . ಕಂಡು ತಾಂ ಸಿಂಹವರ್ಣನುಂ ಸಿಂಹಾನೀಕನುಂ ಪಾಪೇಭಕಂಠೀರವನುಮಪ್ಪುದಱಿಂದಮೆಯ್ದೆ ಮುಳಿದು (ಶಾಂಪು. ೪-೧೭ ವ). [ಸಂ.]

ಸಿಂಹಾಯ (ನಾ). = ಸಿಂಹ ೬: ವಿಸ್ತಾರವಾಗಿ ಉದ್ದ ಅಗಲವನು ಅಳೆದು ಒಟ್ಟುಗೂಡಿಕೊಂಡ ಕೋಲುಯೆಮ್ಮೋ ಅದನು ೩ ಹೆಚ್ಚ . . . ಅದಂ ಅರಿಂದ ಭಾಗಿಸಿ ಉಳಿದವು ಆಯಂಗಳೂ X X X ೩ ರುಳಿದರೆ ಸಿಂಹಾಯ (ಆಯಟೀ. ೧-೫). [ಸಂ.]

ಸಿಂಹಾರಿ (ನಾ). ಸಿಂಹದ ವೈರಿ; ಶರಭ: ಆ ಸರ್ವನಂ ಹಸ್ತಿಯಂ ಕೇಸರಿಯಂ ಸಿಂಹಾರಿಯೆಂಬುಂಪದದಿನಿಱಿದುದು (ಜಗವಿ. ೧೭-೧೪). [ಸಂ.]

ಸಿಂಹಾವಲೋಕನ, ಸಿಂಹಾವಳೋಕನ (ನಾ). ೧. ಸಿಂಹದ ದೀರ್ಘವಾದ ಹಿನ್ನೋಟ. ೨. (ಆಲಂ) ಹಿಂದೆ ನಡೆದ ಘಟನೆ ಅಥವಾ ಕಾರ್ಯವನ್ನು ಮತ್ತೊಮ್ಮೆ ವಿವರವಾಗಿ ಅವಲೋಕಿಸುವುದು, - ಪುನರಾಲೋಕನ ಮಾಡುವುದು; IP ನಡೆದಾಡುವಾಗ ಸ್ವಲ್ಪದೂರ ಹೋಗಿ, ಹಿಂದೆ ನೋಡಿಕೊಂಡು ಮುಂದೆ ನಡೆಯುವ ಸಿಂಹದ ಸ್ವಭಾವದಂತೆ ಮನುಷ್ಯನು

ತಾನು ಹಿಂದೆ ಮಾಡಿದ ಕಾರ್ಯವನ್ನು ಮತ್ತೆ ಪರಿಶೀಲಿಸಿ ಮುಂದಿನ ಕಾರ್ಯದಲ್ಲಿ ಪ್ರವೃತ್ತನಾಗುವುದು: ಹತ್ತನೆಯ ಶತಮಾನದ ಸಾಹಿತ್ಯದ ಈ ಚರಿತ್ರೆಯು ಆ ಕಾಲದಲ್ಲಿ ನಿರ್ಮಿತವಾದ ಇತರ ಸಾಹಿತ್ಯದ ಸಿಂಹಾವಲೋಕನವನ್ನು ಮಾಡಿದ ಹೊರತು ಪರಿಪೂರ್ಣವಾಗಲಾರದು (ಸಾಹಿತ್ಯ. ೬೭); ಇದೀ ರಾಷ್ಟ್ರದ ವಿದ್ಯಾ ಸಂಸ್ಥೆಯ ರಾಜಕೀಯ ನಿರ್ವಹಣವೇನು! ನಿರ್ಮೋಹಿಯಂತೆ ಆರ್ಷ ಆಧ್ಯಾತ್ಮಗ್ರಂಥಗಳ ಸಿಂಹಾವಲೋಕನವೇನು! (ಜೀವಾತ್ಮ. xii, ಮುನ್ನುಡಿ). ೩. [ಕಾಮಶಾ] ಕರಣಭೇದಗಳಲ್ಲಿ ಒಂದು : ಸತಿ ಮೊಗಮನೊಡನೆತ್ತಿ ತಲವಿಡಿದು ಕುಡುಕುಗೊಳೆ ಸಿಂಹಾವಲೋಕನಮದು (ಜನಪ. ೯-೫೦). ಸಿಂಹಾವಲೋಕನ : ೨. 'ಸಿಂಹಾವಲೋಕನಕ್ರಮ' ಪರಾ. [ಸಂ.]

ಸಿಂಹಾವಲೋಕನಂಗ್ಮೆ (ಕ್ರಿ). (ಸಿಂಹದಂತೆ ದೂರದಲ್ಲಿ ನಿಂತು) ಹಿಂದಕ್ಕೆ ತಿರುಗಿ ನೋಡು : ಸಿಂಹಗಾಂಭೀರ್ಯದಿಂದೆಳ್ದು ನಡೆದಡವಿಯೊಳ್ ಮರೆಯಾದ ನೊರ್ಮೆಯುಂ ಸಿಂಹಾವಲೋಕನಂಗ್ಮೆಯದೆಯೆ (ಚಿತ್ರಾಂಗ. ೧೪-೬೭). [ಸಿಂಹಾವಲೋಕನ + ಗ್ಮೆ (< ಕೆಯ್)]

ಸಿಂಹಾವಲೋಕನಕ್ರಮ, ಸಿಂಹಾವಳೋಕನಕ್ರಮ (ನಾ). ಹಿಂದೆ ನಡೆದ ಘಟನೆ ಅಥವಾ ಕಾರ್ಯವನ್ನು ಮತ್ತೊಮ್ಮೆ ಸಮಗ್ರವಾಗಿ ಪರಿಶೀಲಿಸುವ ವಿಧಾನ; ಪುನರಾಲೋಕನ ಕ್ರಮ: ಶೇಕಡ ೧೦ರಷ್ಟನ್ನು ಸಿಂಹಾವಲೋಕನಕ್ರಮದಿಂದ ಹೊರಪದರವನ್ನು ನೋಡಿದಾಗ ಕೂಡ . . . ಎಂಥ ಅಮೂಲ್ಯವಾದ ಆಧಾರಸಾಮಗ್ರಿಗಳು ದೊರಕಿವೆ ಎಂಬುದನ್ನು ತೋರಿಸುವುದೇ ಈ ಉಪನ್ಯಾಸದ ಮುಖ್ಯಉದ್ದೇಶ (ಕಾಸಗಿ. ಓಸ್ಮುಡಿ). ಸಿಂಹಾವಳೋಕನಕ್ರಮ : ಒಳಪೊಕ್ಕು ನೋಡ ಭಾರತದೊಳಗಣ ಕಥೆಯೆಲ್ಲಮಾ ಗದಾಯುದ್ಧದೊಳಂತೊಳಕೊಂಡತ್ತನೆ ಸಿಂಹಾವಳೋಕನಕ್ರಮದಿ ನಲಿಪಿದಂ ಕವಿರನ್ನಂ (ಗದಾಯು. ೧-೪೫). [ಸಂ.]

ಸಿಂಹಾವಲೋಕಿಸು (ಕ್ರಿ). (ಸಿಂಹದಂತೆ) ಮುಂದೆ ಹೋಗಿ ನಿಂತು ಮತ್ತೊಮ್ಮೆ ಹಿಂದಿರುಗಿ ನೋಡು: ಅಮೇಲೆ ತನಗೆ ತಾನೇ ಪ್ರದಕ್ಷಿಣೆ ಬಂದು ಬೆಟ್ಟುಗದ್ದೆಗಳನ್ನು ಮಡಲುಗದ್ದೆಗಳನ್ನು ಸಿಂಹಾವಲೋಕಿಸಿದ (ಚಾಳಿ. ೧೧೯). [ಸಿಂಹಾವಲೋಕನ + - ಇಸು]

ಸಿಂಹಾವಳಿ (ನಾ). ೧. ಸಿಂಹಗಳ ಗುಂಪು,— ಸಮೂಹ. ೨. [ಸಂಗೀತ] ಒಂದು ರಾಗದ ಹೆಸರು: ನೀಲೋತ್ಪಲಿನಿ ವಿಕಚ್ಛವಿ . . . ಗಂಧಿಕಾಮೋದಿ ಸಿಂಹಾವಳಿ ಕಾಮದೇವ ದೇವನಾದೋತ್ತರ ವಸಂತಬಂಗಾಳವೆಂಬಿಪ್ಪತ್ತೆರಡು ರಾಗಂಗಳುಂ ಕ್ರಿಯಾಂಗದಿಂದ ಪುಟ್ಟಿದವು (ವಿವೇ. ೨೩೪). [ಸಂ. ಸಿಂಹಾವಲಿ]

ಸಿಂಹಾವಳೋಕನ 'ಸಿಂಹಾವಲೋಕನ' ನೋ.

ಸಿಂಹಾವಳೋಕನಕ್ರಮ 'ಸಿಂಹಾವಲೋಕನಕ್ರಮ' ನೋ.

ಸಿಂಹಾಸಂದಿ (ನಾ). = ಸಿಂಹಾಸನ ೧ : ಮುನ್ನಮೆ ಸುರಾನೀಕಂ ಜನಂಗಳ್ ಮನಂಗೊಳೆ ಮಾಡಿಟ್ಟ ವಿಚಿತ್ರಮಂಟಪದ ಸಿಂಹಾಸಂದಿಯೊಳ್ಕಾಲನಂ ಕುಲಿಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟೀಂ ಸಂತಸಂಬಟ್ಟನೋ (ಆದಿಪು. ೭-೧೧೦); ಕನಕದ ರಜತದ ಕಾಂಸ್ಯದ ಮಸೆಮುಟ್ಟುರಿ ಮುಟ್ಟೆ ಕರಗಿ ಕಣ್ಣಿಟ್ಟುವು ದೈತ್ಯನ ಸಿಂಹಾಸಂದಿಗೆ ರಾಮನ ವೀರಶ್ರೀ ಕಡಂಗಿ ಕಣ್ಣಿಟ್ಟಳೆನಲ್ (ಪಂರಾಮಾ. ೧೧-೧೫೨). [ಸಂ. ಸಿಂಹಾಸಂದೀ]

ಸಿಂಹಾಸನ (ನಾ). ೧. ಪಟ್ಟಾಭಿಷಿಕ್ತನಾದ ರಾಜನು ಕುಳಿತುಕೊಳ್ಳುವ, ಸಿಂಹದ ಪ್ರತಿಮೆಗಳನ್ನೊಳಗೊಂಡಿರುವ ಪೀಠ; ಸಿಂಹವಿಷ್ಟರ : ಸಿಂಹವಾಹಿನಿಯೆಂಬ ಮೃದುಶಯ್ಯೆಯುಂ ಅನುತ್ತರೆಯೆಂಬ ಸಿಂಹಾಸನಮುಂ (ಆದಿಪು. ೧೫-೬ ವ); ಧರಣಿಪತಿ ಸಿಂಹಾಸನದ ಮೇಲಿರದೆ ಬಹರೇ (ಕುವ್ಯಾಉ. ೮-೬೦). ೨. [ಯೋಗ] ಒಂದು ಬಗೆಯ ಆಸನ: ಸುಖಸ್ಥೈರ್ಯ ನಿಶ್ಚಲಾವಹಮಾದ ಯೋಗ ಯೋಗ್ಯಾಸನಗಳಲ್ಲಿ ಸಿಂಹಾಸನ . . . ಅರ್ಧಾಸನಾದಿಯೆಂಭತ್ತಾಲ್ಕಾಸನಭೇದಂಗಳು (ವಿವೇ. ೧೪೯); ಮುಖ್ಯವಾದ ಕೆಲವು ಆಸನಗಳು . . . ೧. ಉತ್ತಾನಾಸನ . . . ೫೬. ಸಿಂಹಾಸನ. ೫೭. ಗೋಮುಖಾಸನ (ಭಾರದ. ೧೬೭). ೩. [ಜೈನ] ಪಾರಿವ್ರಾಜಕಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರಪದಗಳಲ್ಲಿ ಒಂದು; ಆಸನವನ್ನು ತ್ಯಜಿಸಿ ಪರಮಾತ್ಮನ ದಿವ್ಯಾಸನವನ್ನು ಹೊಂದುವ ವ್ರತ: ಪಾರಿವ್ರಾಜ್ಯಲಕ್ಷಣಮಪ್ಪ ಸೂತ್ರ(ಪದ)ಂಗಳಿಪ್ಪತ್ತೇಳು ತೆಱನಕ್ಕುಮವಾವುವೆಂದಡೆ — ಜಾತಿಯುಂ ಮೂರ್ತಿಯುಂ . . . ನಾಥತ್ವಮುಂ ಸಿಂಹಾಸನಮುಂ . . . ಆಹಾರಮುಂ ಸುಖಮುಮೆಂದಕ್ಕುಂ (ಚಾವುಂಪು. ೨೨೮). [ಸಂ.]

ಸಿಂಹಾಸನವೇರು 'ಸಿಂಹಾಸನವೇಱು' ನೋ.

ಸಿಂಹಾಸನವೇಱು, ಸಿಂಹಾಸನವೇರು (ಕ್ರಿ). ೧. ಸಿಂಹಪೀಠವನ್ನು ಏರು,— ಹತ್ತು: ಗೊಂದಣದತಿಚತುರಕವೀಂದ್ರರ ಬಲುಸಂದಣಿಯೊಳು ಸಿಂಹಾಸನವೇಱೆ . . . ಓಲಗಮಿರ್ದಂ (ಜಯಕಾ. ೩-೧). ಸಿಂಹಾಸನವೇರು : ೨. ಪಟ್ಟಕ್ಕೆ ಬರು; ರಾಜ್ಯಾಧಿಕಾರವನ್ನು ವಹಿಸಿಕೊಳ್ಳು: ಆ ರಾಜಕುಮಾರನು ತಂದೆಯ ಕಾಲಾನಂತರ ಸಿಂಹಾಸನವೇರಿದನು (ರೂಢಿ). [ಸಿಂಹಾಸನ + ಏಱು$_1$ (< ಏಱ್$_1$)]

ಸಿಂಹಾಸನಸ್ಥ (ನಾ). ಸಿಂಹಾಸನವನ್ನು ಉಳ್ಳವನು; ರಾಜ: ಆ ಧೂರ್ತನೆನ್ನನೆ ಕುಳ್ಳಿತು ರಾಜ್ಯಾರ್ಹರಲ್ಲದವರ್ ಬರವೇಡ ಸಿಂಹಾಸನಸ್ಥರ್ ಬರ್ಪುದೆಂದು ಸಾರಿಸಿ (ಜಗವಿ. ೮-೭೮ ವ); ಅನೇಕ ಸಾಮಂತಅರಸುಗಳು ಅಲ್ಲಲ್ಲಿಯ ಸಂಸ್ಥಾನಗಳಲ್ಲಿ ಸಿಂಹಾಸನಸ್ಥರಾಗಿ ಆಡಳಿತಸೂತ್ರಗಳನ್ನು ವಹಿಸಿಕೊಂಡರು (ನೋಳಂಬ. ೭೦). [ಸಂ.]

ಸಿಂಹಾಸನಾರೂಢ (ನಾ). ೧. ಸಿಂಹಾಸನದಲ್ಲಿ ಕುಳಿತವನು. ೨. ಪಟ್ಟಾಭಿಷಿಕ್ತನಾದವನು; ರಾಜ; ದೊರೆ: ಹರಿವರ್ಮನು ಕ್ರಿ.ಶ. ೫೩೦ರಲ್ಲಿ ಸಿಂಹಾಸನಾರೂಢನಾದನೆಂದು ಮೇಲೆಯೇ ಹೇಳಿದ್ದೇನೆ (ಕರ್ನಾಅ. ೧೨). [ಸಂ.]

ಸಿಂಹಾಸನಾರೋಹಣ (ನಾ). ೧. ಸಿಂಹಾಸನವನ್ನು ಹತ್ತುವಿಕೆ, — ಏರುವಿಕೆ. ೨. ಪಟ್ಟವನ್ನು ವಹಿಸಿಕೊಳ್ಳುವಿಕೆ : ಪಟ್ಟಂ = ಸಿಂಹಾಸನಾರೋಹಣಂ (ಕಾಶಕ್ಷ. ೨೦). [ಸಂ.]

ಸಿಂಹಾಸನಾಸೀನ (ನಾ). ೧. = ಸಿಂಹಾಸನಾರೂಢ ೧ : ಆಸ್ಥಾನಮಂಡಪದೊಳ್ . . . ಉತ್ತುಂಗಸಿಂಹಾಸನಾಸೀನಂ . . . ಒಡ್ಡೋಲಗಂಗೊಟ್ಟರೆ (ಆದಿಪು. ೨-೨ ವ); ಉಗ್ರಸೇನನ ಸೂನು ಸಿಂಹಾಸನಾಸೀನನಾಗಿ ಲೀಲೆಯಿಂದೊಡ್ಡೋಲಗಂಗೊಟ್ಟರ್ದಲ್ಲಿ (ಜಗವಿ. ೨-೩೯ ವ). ೨. = ಸಿಂಹಾಸನಾರೂಢ ೨ : ಅಯೋಧ್ಯಾಸಿಂಹಾಸನಾಸೀನನು ಮುದಿತೋದಿತಸಾಮ್ರಾಜ್ಯಸುಖಾನುಭವನುಂ ಕೃತಕೃತ್ಯನುಮಪ್ಪ ಸಕಲಚಕ್ರವರ್ತಿ (ಆದಿಪು. ೧೫-೫ ವ). [ಸಂ.]

ಸಿಂಹಾಸ್ಯ (ನಾ). ೧. ಸಿಂಹದ ಮುಖ. ೨. ಸಿಂಹದ ಮುಖವುಳ್ಳುದು. ೩. ಒಂದು ಬಗೆಯ ಸಸ್ಯ; ಆಡುಸೋಗೆ: "ವೈದ್ಯಮಾತಾ, ಸಿಂಹೀ . . . ಸಿಂಹಾಸ್ಯಃ, ವಾಶಕಃ, ವಾಜಿದಂತಕಃ — ೮ ಅಡ್ಡಸರದ ಗಿಡ, ಆಡುಸೋಗೇಗಿಡದ ಹೆಸರು" (ಸದ್ಧಾಂಶ. ೧೩೫). [ಸಂ.]

ಸಿಂಹಿ (ನಾ). ೧. ಹೆಣ್ಣುಸಿಂಹ: ಹತ್ತಡಿಯ ಹದ್ದಿನಲಿ ಸುತ್ತಲಿನ ಸರೆಯಲ್ಲಿ ನರರ ಅಂಕೆಯೊಳಲ್ಲಿ ಸಿಂಹ ಸಿಂಹಿಯರು (ಜಾಲಹ. III, ೧೩೭). ೨. ಆಡುಮುಟ್ಟದ ಗಿಡ; ಆಡುಸೋಗೆ: "ವೈದ್ಯಮಾತಾ, ಸಿಂಹೀ . . . ಮೇಕೆ ಒಲ್ಲದ ಗಿಡ" (ಸದ್ಧಾಂಶ. ೧೩೫). ೩. ಒಂದು ಬಗೆಯ ಬದನೆಗಿಡ; ಗುಳ್ಳಬದನೆ: "ವಾರ್ತಾಕೀ, ಹಿಂಗುಳೀ, ಸಿಂಹೀ, ಭಂಟಾಕೀ, ದುಸ್ಪ್ರಧರ್ಷಿಣೀ — ೫ ಬದನೇಗಿಡದಲ್ಲಿ ಮುಳ್ಳುಜಾತಿ. ಗುಳ್ಳವಾದಿ, ರಾಜಗುಳ್ಳ, ತನಿಗುಳ್ಳ, ರಾಮಗುಳ್ಳ, ಮುಳಕ" (ಸದ್ಧಾಂಶ. ೧೩೮). ೪. ರಾಹುವಿನ ತಾಯಿ; ಸಿಂಹಿಕೆ. [ಸಂ. ಸಿಂಹೀ]

ಸಿಂಹಿಕಾತನಯ (ನಾ). ಸಿಂಹಿಕೆಯ ಮಗ; ರಾಹು: "ಇನರಿಪು . . . ಸಿಂಹಿಕಾತನಯಂ ತಮಂ ಖೇಚರಾಹಿಯೆನೆ ರಾಹು" (ಮಂಗರಾ. ೧೨-೭). [ಸಂ.]

ಸಿಂಹಿಕಾತ್ಮಜ (ನಾ). = ಸಿಂಹಿಕಾತನಯ: ಪ್ರತಿವಾದಿ ರವಿ ಸಿಂಹಿಕಾತ್ಮಜಂ ವಿಮಲನುನ್ನತಪಂಡಿತೇಶ್ವರಂ ಕಾಲವಾದಮನೊಸೆದು ವಿತತಮಪ್ಪಂತೆ ಜಯಿಸಿದ ಕಥನಮಂ ಕೇಳ (ಅರಾಚ. ೩-೪ ಸೂಚನೆ). [ಸಂ.]

ಸಿಂಹಿಕೆ (ನಾ). ೧. ರಾಹುವಿನ ತಾಯಿ: ಆರಿ ಬೊಬ್ಬಿಜಿದೊಡನೆ ಕಡುಹಿನ ವೀರನಾ ಸಿಂಹಿಕೆಯ ಸೀಳ್ದ ಶರೀರದೊಳಗೊಂದೆಡದ ಭಾಗದ ಹೋಳ ದಶಶಿರನ ಊರಿಗಿಟ್ಟನು (ತೊರರಾ. ೫-೧-೨೨). ೨. ಒಂದು ಬಗೆಯ ಗಿಡ: "ಸೊಂಡೆ ರುಚಿ ಚಿತ್ರರತೆ ಸಿಂಹಿಕಾ [ಪಾಕಾ. ತಾ]ಕ್ಯಂ" (ಮಂಗರಾ. ೩೫-೨೮). [ಸಂ. ಸಿಂಹಿಕಾ]

ಸಿಂಹೀಮಧ್ಯೆ (ನಾ). ಸಿಂಹದ ನಡುವಿನಂತಿರುವ ಸಣ್ಣ ನಡುವನ್ನು ಹೊಂದಿರುವವಳು: ಭೂಭೃನ್ನಿತಂಬೋದ್ಯಲೆ ಸಿಂಹೀಮಧ್ಯೆ ಬಿಂಬಾಧರೆ

ಶುಕವಿಲಸದ್ಯಾಣಿ ತಾನಾದ ಪಾಂಗಿಂದೆ ಲತಾತನ್ವಂಗಿ ಕಲ್ಪದ್ರುಮಸಮನ್ಯಪನೊಳ್ಕೂಡಿ ಬಾಳುತ್ತಮಿರ್ದಳ್ (ರಾಜಶೇ. ೩-೨೦). [ಸಂ. ಸಿಂಹೀಮಧ್ಯಾ]

ಸಿಂಹೇಂದ್ರಮಧ್ಯಮ (ನಾ). [ಸಂಗೀತ] ಒಂದು ರಾಗದ ಹೆಸರು : ಸಿಂಹೇಂದ್ರ ಮಧ್ಯಮ -- ೫೭ನೇ ಮೇಳಕರ್ತರಾಗ. ಎಲ್ಲಾ ವೇಳೆಯಲ್ಲೂ ಹಾಡಬಹುದು (ಸಂಗೀಚಂ. ೧೫೧). [ಸಂ.]

ಸಿಂಹೋದ್ಭವ (ನಾ). [ಜ್ಯೋತಿ] ಸಿಂಹರಾಶಿಯಲ್ಲಿ ಜನಿಸಿದವನು : ಕ್ರೂರು . . . ಅನಿಮಿತ್ತಕ್ರೋಧಿ ಸಿಂಹೋದ್ಭವಂ (ಭಾತತಿ. ೧೭-೫). [ಸಂ.]

ಸಿಕ್, ಸಿಕ್ಕ೩, ಸಿಖ್ (ನಾ). ೧. ಗುರುನಾನಕ್ ಸ್ಥಾಪಿಸಿದ ಪಂಥ ,— ಮತ: ಉತ್ತರಭಾರತದಲ್ಲಿ ರಾಮಾನಂದ ಪರಂಪರೆಯ ಸಾಧುಗಳೇ ಧರ್ಮವನ್ನೂ ಆತ್ಮಗೌರವವನ್ನೂ ರಕ್ಷಿಸುವ ಭಾರದಲ್ಲಿ ಈಗಿನ ''ಸಿಕ್'' ಪಂಥಕ್ಕೆ ತಳಹದಿಯಾದರೆಂದು ಜನಶ್ರುತಿಯಿದೆ (ಭಾರದ. ೨೬೭). **ಸಿಕ್ಕ೩** : ೨. ಸಿಕ್‌ಮತದ ಅನುಯಾಯಿ: ಹಿಂದು ಪಾರಸಿ ಬೌದ್ಧ ಸಿಕ್ಕ ಮುಸಲಿಮ ಕ್ರಿಸ್ತ ಹಿಂದುಳಿದ ಜನರೆನದೆ ಎಲ್ಲರೊಂದಾಗೆ (ಕುಮಾಕ್ಯ. xvi. ಮುನ್ನುಡಿ); ಪ್ರತಿಯೊಬ್ಬ ಸಿಕ್ಕನೂ ಸೊಂಟದಲ್ಲಿ 'ಕೃಪಾಣ' ಎಂದು ಒಂದು ಸಣ್ಣಕತ್ತಿಯನ್ನು ಇಟ್ಟುಕೊಂಡಿರುತ್ತಾನೆ (ದಿಲ್ಲಿಪ. ೬೫). **ಸಿಖ್** : ೧. ಅವನು ಸಿಖ್ ಮತದ ಅನುಯಾಯಿ (ರೂಢಿ). [<— ಹಿಂ. ಸಿಕ್ಖ್, ಸಿಖ್; ಮರಾ. ಶೀಕ್, ಶೀಖ್, ಸೀಖ್]

ಸಿಕತ (ನಾ). ೧. ಮರಳು; ಉಸುಕು : ''ವಾಳುಕಮೆನಲ್ ಸಿಕತಮೆನೆ ಮಳಲಕ್ಕುಂ'' (ಮಂಗರಾ. ೧೨೨-೧೧); ಕಲನೊಂದಂ ತೀವಿ ನೀರಂ ಪೊಸದು ಸಿಕತದೊಳ್ ಗಾಣಮಂ ಪೊಯ್ದು ಮತ್ತಂ ಶಿಲೆಯೊಳ್ ಧಾನ್ಯಂಗಳಂ ಬಿತ್ತಿಯುವೊಣಗಿದ ಭೂಜಕ್ಕೆ ನೀರ್ವೊಯ್ಯುದುಂ (ಪಂರಾಮಾ. ೧೬-೫೫). ೨. ಮರಳಿನ ತೀರ ,— ದಡ. ೩. ಸಣ್ಣ ಹರಳು ,— ಕಣ: ಅದರೊಳಗೆ ಹತ್ತುತ್ತ ಕಬ್ಬಿನ ತುದಿಯ ಪಾಲ್ವೀಡಲ್ಕೆ ಸಿಕತವಿಳಿದು ಮಧುರ ಪಾಯಸವು ಕೆಲಲ್ಮರದ ದರ್ವಿಯೊಳು (ದೇವಪು. ೨-೪೨). [ಸಂ. ಸಿಕತಾ]

ಸಿಕತತಟ (ನಾ). ಮರಳಿನ ತೀರ , — ದಡ : ಸಾರೆ ಬರೆ ದಕ್ಷಿಣಸಿಕತತಟವಿಪಿನಪಂಕ್ತಿ . . . ನಡೆಗೊಂಡನದವಿಕೀಳ್ಪಟ್ಟೆಯೊಳಿಳಾತ್ಮಜಾವಲ್ಲಭಂ (ಶ್ರೀರಾಮಾ. ೧೨೬-೪೯).

[ಸಿಕತ + ತಟ]

ಸಿಕತಭಾಂಡ (ನಾ). ಮರಳಿನ ಗಡಿಗೆ: ಕಮಲಮುಖಿಯರು ಸಿಕತಭಾಂಡಮಂ ಮಾಡಲಾ ಕ್ರಮವಳಿವುತೊಡೆದು ಮಳಲಿತ್ತತ್ತ ಕೆದಱುವುದು (ವೀಶ್ವಪು. ೩-೨೦-೨೫).

[ಸಿಕತ + ಭಾಂಡ]

ಸಿಕತಾಕೃತಿ (ನಾ). ಮರಳಿನ ಆಕಾರ ,— ಆಕೃತಿ: ಸಿಕತಾಕೃತಿಯಾದುದೊ ತಾಂ ಪ್ರಕಟದೆ ಭೃಗು ದೇವತಾಪ್ರಹಾಸಮರೀಚಿಪ್ರಕರಮೆನೆ ಬೆಳ್ಕಳಲ್ ವುದಿದು ಕರಂ ಕಣ್ಗೆಸದುದು (ಕುಸುಮಾ. ೭-೬೦). [ಸಂ.]

ಸಿಕತಿಲ, ಸಿಕತಿಳ (ಗು). ೧. ಮರಳಿನಿಂದ ಕೂಡಿದ: ಕೈಲಾಸತರಂಗಿಣೀತರಂಗಿತ ಕಾಂಚನಸಿಕತಿಲಭೂಭಾಗದೊಳ್ ಸೂರ್ಯಕಾಂತಮಣಿಮಯಶೂಲಪಾಣಿ ದೇವಾಯತನಮಿರ್ದುದನನತಿದೂರದೊಳೆ ನೋಡಿ (ಕಾದಂಪು. ಲಾಶಾ). ೨. (ನಾ). ಮರಳುನೆಲ: ''ಮರಳುಳ್ಳ ಪ್ರಾಂತವಾದ ದೇಶಕ್ಕೆ ಸಿಕತಾ , ಸಿಕತಿಲ ಎಂತಲೂ . . . ಊಹಿಸತಕ್ಕದು'' (ಸಿದ್ಧಾಂತಿ. ೯೬). **ಸಿಕತಿಳ** : ೨. ''ಪುಳಿನಸ್ಥಳ ಸ್ಯಕತೆ ಸಿಕತಿಳಾಹ್ವಯಂ ಸಿಕತೆ ವಾಳುಕಾವರ್ಯಾಯಂ'' (ವಸ್ತುಕೋ. ೨೪-೧೪). [ಸಂ.]

ಸಿಕತಿಲತಲ, ಸಿಕತಿಳತಳ (ನಾ). ಮರಳಿನಿಂದ ಕೂಡಿದ ಭೂಮಿ: ಸಿಕತಿಲತಲಶಯ್ಯಾಚಯಸ್ಪರ್ಶನೀಯಂ (ಚಂದ್ರಪ್ರ. ೧-೧೧೨). **ಸಿಕತಿಳತಳ** : ನುಣ್ಮಣಲಂ ಮಣಲ್ದಿಂಟೆಗೆತ್ತದಱ ಪರಿತಪ್ತಲೋಹರಜಸ್ಸಿಕತಿಳತಳದೊಳ್ ಮೆಯ್ಯನೀಡಾಡುವುದುಂ (ಶಾಂತಿಪು. ೭-೯೧ ವ). [ಸಂ.]

ಸಿಕತಿಳ 'ಸಿಕತಿಲ' ನೋ.

ಸಿಕತಿಳತಳ 'ಸಿಕತಿಲತಲ' ನೋ.

ಸಿಕತೆ (ನಾ). ೧. ಮರಳು; ಉಸುಕು: ''ಸಿಕತಾ , ವಾಳುಕಾ — ಈ ೨ ಮಣಲ್'' (ಹಲಾಯು. ೧೧೦-೪೭). ೨. ಮರಳಿನಿಂದ ಕೂಡಿದ ನೆಲ; ಉಸುಕುಭೂಮಿ: ''ಮಳಲುಳ್ಳ ಮಹಿ ಸಿಕತೆಯಕ್ಕುಂ'' (ಮಂಗರಾ. ೨೮-೩). [ಸಂ. ಸಿಕತಾ]

ಸಿಕರ , ಚಿಕರ , ಸಿಖಿರ , ಸಿಖಾರ (ನಾ). ೧. ಮರ, ಬೆಟ್ಟ ಮುಂತಾದುವುಗಳ ತುದಿ ,— ಅಗ್ರಭಾಗ; ಶಿಖರ: ಗಂಗಿಯೊಳಗ ಸ್ನಾನ ಮಾಡಿ ಶಿವನ ಸಿಕರ ಸುತ್ತಿ ಬಂದು (ಮಲ್ಲಿಗ. ೪); ಮಲ್ಲಯ್ಯ ಸಿವನ ಸಿಕರಾದ ಮೇಲಿರುವ ಬೆಳ್ಳಿ ಬಸವಣ್ಣಾನ ನೆನೆದೇನು (ಗೌಪ. ೫). ೨. (ದೇವಾಲಯದ ಮಹಾದ್ವಾರ ಅಥವಾ ಗರ್ಭಗುಡಿಗೆ ಕಟ್ಟುವ) ಗೋಪುರ ,— ಗುಮ್ಮಟ: ವಿಕ್ರುತುಸಂವತ್ಸರದ ಕಾರ್ತಿಕಶುದ ೫ಲು ಸರ್ವೇಜ್ಞಶಿವಯು ಸರ್ವಜ್ಞಶಿವಿ ತಂಮ ಗೆಲುವ್ಮೆಯಿನ ಕೊಮಾರ ಚಿಗದೇಮಂಣನು ಯಿಕ್ಕರ್ತ್ರರು ಕಟಿಸಿದ ಸಿಕರ (ಎಕ. XVI, ಮದ್ದಗ. (ಗಗ-೪; 1659). **ಚಿಕರ** : ೧. ''ಚಿಕರಂ ಶಿಖರಾಭಧಾನದೊಳ್'' (ಕರ್ಣಾನಿ. ೨೭). **ಸಿಖಿರ** : ೨. 'ಸಿಖಿರದೀಪ್ತಿ' ಪರಾ. **ಸಿಖಾರ** : ೨. ಶ್ರೀಮತು ಕೂರಡಿಯ ಬಡಗಿ ಪಲ್ಲೋಜನು ಮಾಡಿಸಿದ ಸಿಖಾನಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ (ಎಕ. XI, ದಾವಣ. ೧೭೪-೭; 1417). [< ಸಂ. ಶಿಖರ]

ಸಿಕರಣಿ 'ಸೀಕರಣಿ' ನೋ.

ಸಿಕಲ 'ಶಕಲ' ನೋ.

ಸಿಕಲಗಾರ 'ಶಕಲಗಾರ' ನೋ.

ಸಿಕಲಿ 'ಶಕಲ' ನೋ.

ಸಿಕಲಿಗಾರ 'ಶಕಲಗಾರ' ನೋ.

ಸಿಕಲಿಗೆಯ್ (ಕ್ರಿ). ಸಾಣೆಹಿಡಿ; ಹರಿತಗೊಳಿಸು : ಅಸಿ ಪಿಂಡಿವಾಳ ಸೆಲ್ಲಿಹ ಬಲ್ಲಿಹ ಕತ್ತಿ ಮುಸಲ ಮುದ್ಗರ ತೋಮರಗಳ ಮಸೆವ ಸಿಕಲಿಗೆಯ್ವ ಸಾಣೆಗಾಱರು ಕಣ್ಗೆಸದರಾ ಕುಮ್ಮಟದೊಳಗೆ (ಕುರಾಸಾಂ. ೩೭-೬೧). [ಸಿಕಲಿ (< ಶಕಲ) + ಕೆಯ್]

ಸಿಕ್ಕಿ (ನಾ). ಬೆಂಕಿ; ಕಿಚ್ಚು; ಶಿಖಿ: ''ಶಿಖಿಯೊಳ್ ಸಿಕಿ ಕಿಚ್ಚು ಬೆಂಕಿಯೊಳ್'' (ಕರ್ಣಾನಿ. ೫೩). [< ಸಂ. ಶಿಖಿನ್]

ಸಿಕ್ಕಿ 'ಸಿಕೆ' ನೋ.

ಸಿಕಿನಿ 'ಶಕಲ' ನೋ.

ಸಿಕಿನಿವಳೆಯ (ನಾ). ದುಂಡಾದ ಮಸೆಗಲ್ಲು ,— ಸಾಣೆಕಲ್ಲು : ಸುರಪನಿಡುವ ಚಿಗಿಹಲ್ಲೆಯ ಮೋಹನಶರಮಂ ಬೆಳಗುವ ಸಿಕಿನಿವಳೆಯ ರತಿವರನಾ ಮೋಹನವಂಚಕ ವಿತತಿಯನಱಸಿ ಹಿಡಿದು ತರಲು ಭರದಿಂ ನಡೆಯಿಪ ಬೆಳ್ಳಿಯ ಬಟ್ಟಲ ಏರಿದುಂ ಮೋಹನಮಲ್ಲಂ ದಕ್ಷಿಣಕರದಿಂದೆತ್ತಿದ ಸಂಗ್ಗಾಣಿಗೆ ಸಮನೆನೆ ಸಸಿ ಸೊಗಯಿಸಿತು (ಜಯಾಕಾ. ೧೪-೧೧). [ಸಿಕಿನಿ (< ಶಕಲ) + ವಳೆಯ]

ಸಿಕಿರೆಅಱೆ (ನಾ). ಒಂದು ಸ್ಥಳದ ಹೆಸರು (?) : ಸಿಕಿರೆಅಱೆಯಿನ್ ತೆಪ್ಕ್ಕೆ ನೋಡಿ ನಡದು ವೇರ್‌ಒಟ್ಟೆ ದುಗ್ಗನ ಕೆಱೆ ಮೂಡ್ಕೆ ಕಡೆಗೋಡು (ಮೈಅರಿ. ೧೯೧೪, ೧೨-೨೨;೪೧೦).

[ಸಿಕಿರೆ + ಅಱೆ]

ಸಿಕೆ, ಸಿಕ್ಕಿ (ನಾ). ೧. ತುದಿ; ಕೊನೆ; ಅಗ್ರಭಾಗ : ಸುಂಡಿಲ ಸಿಕೆಯಿಂ ಸೀಕರಮಂ ಮಿಗೆ ಮಱುಕದೊಳು ಕಳಭದ ಮೇಲೆ ಕಱೆವ ಪಿಡಿಗಳ್ ಒಪ್ಪಿದುವು (ಜಯಾಕಾ. ೧೫-೨೧). **ಸಿಕ್ಕಿ** : ೨. ಕೂದಲು; ಜುಟ್ಟು; ಶಿಖೆ: ತಲೆಯೆಡೆಯಂ ಬೆಳರ್ತಿಸುವೋರೆ ಸಿಕಿ. . . ಚಂದಿರನೆಂಬ ಸಂದೆಯಮಂ ಸಮನಿಸುತ್ತಿದೆ ಆ ಸಿಕಿಯೊಳ್ಕಟ್ಟಿದೊಳ್ಕಟ್ಟಿಯ ಮೂಱುಂ ಸೆಱಂಗುಗಳೊಳ್ಕೊಂದು ನೇಲ್ದ ಬಟ್ಟಮುತ್ತುಗಳುಂ . . . ತಾರಗೆವೆಣ್ಗಳೆಂಬ ನೆನಪಂ ನಿಗುರಿಸುತ್ತಿದೆ (ಚಿಕವಂ. ೮೨-೧). [< ಸಂ. ಶಿಖಾ]

ಸಿಕ್ಕ೧ 'ಸಿಲ್ಕು೧' ಪರಾ.

ಸಿಕ್ಕ೨, ಚಿಕ್ಕ೨, ಚಿಕ್ಕು೧ (ನಾ). ೧. (ಪಾತ್ರೆ , ಬುಟ್ಟಿ ಮುಂತಾದುವುಗಳನ್ನು ಇಟ್ಟು ಇಳಿಬಿಡುವ) ಹಗ್ಗದ ಜಾಳಿಗೆ; ನೆಲುವು : ಮೂಲೆಯಲ್ಲಿ ಸಿಕ್ಕದ ಮೇಲೆ ದೊಡ್ಡ ಬುಟ್ಟಿಯಲ್ಲಿ ನೆಲ್ಲುಹುಲ್ಲಿನ ಮೇಲಿರುವ ಮೊಟ್ಟೆಗಳನ್ನು ರೆಕ್ಕೆಗಳಲ್ಲಿ ಅಪ್ಪಿಕೊಂಡು ಕಾವು ಕೂತಿರುವ ಕುಕ್ಕುಟಗರ್ಭಣಿ (ಕಾಪೂರು. ೩೭); ನಾಗಂದಿಗೆಯಿಂದ ನೇಲುತ್ತಿದ್ದ ಬುಟ್ಟಿಯಲ್ಲಿ ಕಾವು ಕೂತಿದ್ದ ಹೇಟೆಯನ್ನೆತ್ತಿ (ಮಲಮ. ೨೬೯). **ಚಿಕ್ಕ೨** : ೨. ಬಲೆಯಂತೆ ಹೆಣೆದಿರುವ ಚೀಲ ; ಕಲ್ಲಿ : ಚಿಕ್ಕದಲ್ಲಿಕ್ಕಿದ ಬುತ್ತಿ ಪೆಗಲಲ್ಲಿ ಪಕ್ಕೆಯೊಳಗೆ ಕೋಲು (ಎಸ್ಕೂಸು. ೧೯-೪). ೩. (ಪ್ರಾಣಿಗಳು ತಿನ್ನುವುದಕ್ಕೆ ತಡೆ ಹಾಕಲು, ಅವುಗಳ ಬಾಯಿಗೆ ಕಟ್ಟುವ) ಕುಕ್ಕೆ ; ಬಾಯಿಕುಕ್ಕೆ : ಎಡೆ ಹೊಡೆಯುವಾಗ ಎತ್ತಿನ ಬಾಯಿಗೆ ಚಿಕ್ಕ ಹಾಕಬೇಕು (ರೂಢಿ). 'ಬಾಯಿಚಿಕ್ಕ' ಪರಾ. **ಚಿಕ್ಕು೧** : ೩. ಎತ್ತಿನ ಬಾಯಿಗೆ ಚಿಕ್ಕು ಹಾಕಿದ್ದೀಯಾ? (ರೂಢಿ). [< ಸಂ. ಶಿಕ್ಕ , ಶಿಕ್ಯಾ./ ತಮಿ. ಚಿಕ್ಕಮ್; ತೆಲು. ಚಿಕ್ಕ]

ಸಿಕ್ಕ$_3$ 'ಸಿಕ್' ನೋ.

ಸಿಕ್ಕಟಿಗೆ, ಸಿಕ್ಕಟ್ಟಿಗೆ, ಸಿಕ್ಕಣಿಗೆ (ನಾ). ಕೂದಲಿನ ಸಿಕ್ಕು ಬಿಡಿಸುವ ಸಾಧನ; ಹಲ್ಲುಗಳು ದಪ್ಪನಾಗಿದ್ದು ದೂರ ದೂರವಾಗಿರುವ ಹಣಿಗೆ : ಪಟನುಡಿವೆಂಡಿರ ಕುರುಳ ಸಿಕ್ಕುವಿಡಿಸಲ್ಕೊಂಡ ಸಿಕ್ಕಟಿಗೆಯಂ ಪೋಲ್ವ ಮುಕ್ಕೋಲುಂ (ಚಕವಂ. ೧೧೯-೧೮); ಮಗಳೆ ನಾವು ಬರುವಾಗ ಕಿರಿಗೆ , ಸಿಕ್ಕಟಿಗೆ , ಬಾಚಣಿಗೆ . . . ತಹೆವು (ಶರಲೀ. ೩೮೬); ಸಿಕ್ಕಟಿಗೆ ಬಾಚಣಿಗೆ ತುರುಬಿಲಿ (ಕರಿ. ೨೦-೫). **ಸಿಕ್ಕಟ್ಟಿಗೆ** : ಅಟಮಟ ಸಂಸಾರ ಹರನ ಜಟಾಜೂಟ ತಳತುದಿ ಸಿಗದಂಥ ಮಾಟ ಇದಕೆ ಸಿಕ್ಕಟ್ಟಿಗೆ ಮರೆವು ಮೌನವು ನಗುವು ಬಿಡುವುದು ಎಲ್ಲ ಜಟಿಲವು (ಚಂದ್ರವಾ. ೬-೨೪). **ಸಿಕ್ಕಣಿಗೆ** : (ಕ).

[ಸಿಕ್ಕು$_3$ (< ಸಿಲ್ಕು$_2$) + ಅಟಿಗೆ (< ಪಣಿಗೆ)./ ತಮಿ. ಚಿಕ್ಕಮ್, ಚಿಕ್ಕಱಿಕ್ಕಿ = ಬಾಚಣಿಗೆ ; ಮಲ. ಚಿಕ್ಕಱಿಕ್ಕಿ = ಬಾಚಣಿಗೆ; ತೆಲು. ಚಿಕ್ಕಂಟು , ಚಿಕ್ಕಂಟೆ , ಚಿಕ್ಕಟ್ಟು]

ಸಿಕ್ಕಟ್ಟಿಗೆ 'ಸಿಕ್ಕಟಿಗೆ' ನೋ.

ಸಿಕ್ಕಣ (ನಾ). ಸಿಕ್ಕು; ತೊಡಕು; ಗೋಜು: ಈ ಚರಿತ್ರೆಯ ಸಿಕ್ಕಣಗಳನ್ನು ಮೆಲ್ಲನೆ ಬಿಡಿಸಿ ಬಾಚಿ ಮುಡಿಗಟ್ಟುವುದೆಂದರೆ ಸುಲಭವಲ್ಲ (ನಾಡೋಜ. ೧೪). [< ಸಿಕ್ಕು$_3$]

ಸಿಕ್ಕಣಿಗೆ 'ಸಿಕ್ಕಟಿಗೆ' ನೋ.

ಸಿಕ್ಕನೆ (ಅ). ರಭಸವಾಗಿ , ಕೂಡಲೆ ಎಂಬರ್ಥದ ಒಂದು ಅನುಕರಣಾವ್ಯಯ: 'ಸಿಕ್ಕನೆಸೀಳ್' ಪರಾ. [? + -ಅನೆ$_1$]

ಸಿಕ್ಕನೆಸೀಳ್ (ಕ್ರಿ). ರಭಸವಾಗಿ ಸೀಳು , — ಸಿಗಿ: ಅದಂತಿರಲ್ಕೆ ನೀಂ ಸಿಕ್ಕನೆ ಸೀಳ್ದುದಿಟ್ಟೆರಳನಿತ್ತುಮನರ್ದಿ ನೃಮೂತ್ರದೊಳ್ ಬುಧಂ (ಖಮದ. ೭-೨೬); ಅಂತು ರಕ್ಕಸನ ತನು ಸಿಕ್ಕನೆಸೀಳ್ವಂತೆ ಪೊಯ್ದೊರಸಿ ಕೊಂದು ವೇದಮಾತೃಕೆಯಂ ತಂದು . . . ವಿಶ್ವರೂಪನಾಗಿ ಕ್ಷೀರಾಬ್ಧಿಗೈದಿ ಬ್ರಹ್ಮಾದಿಗಳಂ ಕರಸೆ (ದಶಾವ. ೨-೨೮ ವ).

[ಸಿಕ್ಕನೆ + ಸೀಳ್$_1$]

ಸಿಕ್ಕಲಗಾರ 'ಶಿಕಲಗಾರ' ನೋ.

ಸಿಕ್ಕಾ, ಶಿಕ್ಕಾ, ಶಿಕ್ಕೆ, ಶಿಖಾ, ಸಿಕ್ಕೆ (ನಾ). ೧. (ರಾಜ, ಸರಕಾರ, ಅಧಿಕಾರಿ ಮುಂತಾದವರ) ಮುದ್ರೆ; ಮೊಹರು; ಠಸ್ಸೆ. ೨. (ರಾಜನ) ಮುದ್ರೆಯುಳ್ಳ ಉಂಗುರ; ಮುದ್ರೆಯುಂಗುರ: ರಾಯರು ಸಿಕ್ಕಾ (ಮೊಹರುಂಗುರ) ಇದೆಯೆಂದು ಹೇಳಿದರು (ಕಭಪ. ೫೮೩). ೩. ಮುದ್ರೆಯುಳ್ಳ ನಾಣ್ಯ. **ಶಿಕ್ಕಾ** : ೧. ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ ಶಬ್ದಗಳೆಂದರೆ . . . ಕಚೇರಿ . . . ಶಿಕ್ಕಾ ಇತ್ಯಾದಿ (ಭಾಷಾಶಾ. ೧೬೬); ಉಪಕಾರ್ಯದರ್ಶಿ ಕಾರ್ಯದರ್ಶಿ ಅದಕ್ಕೆ ರೆಕಾರ್ಡ್ ಶಿಕ್ಕಾ ಹಾಕುತ್ತಾರೆ (ದೀಪಹ. II, ೩೧೮). **ಶಿಕ್ಕೆ** : ೧. "ಶಿಕ್ಕೆ — ಮುದ್ರೆ" (ಜಾನಕೋ. ೪೫). **ಶಿಖಾ**: ೪. [ವೀಶೈ] ಜಗದ್ಗುರುವಿನ ಪಟ್ಟಾಧಿಕಾರವನ್ನು ಸ್ವೀಕರಿಸುವಾಗ ಧರಿಸುವ ರಾಜಮರ್ಯಾದೆಯ ಮೂರು ಬಗೆಯ ಲಾಂಛನಗಳಲ್ಲಿ ಒಂದು; IP "ಶಿಖಾ ಶೈಲ : ಇವೆರಡನ್ನೂ ಶೂನ್ಯಸಿಂಹಾಸನದ ಜಗದ್ಗುರು ಪಟ್ಟವನ್ನು ಕಟ್ಟುವಾಗ ಆ ಪಟ್ಟಾಧಿಕಾರಿಯ ಕೊರಳಿಗೆ ಹಾಕುವಂಥವು" (ಮಹಾವಿ. ಕೋಶ): ನಿನ್ನ ಲೆಕ್ಕದೊಳ್ . . . ಇರಲೆನುತ್ತಂ ಬರೆಸಿ ಸ್ವರ್ಣಸಿಂಹಾಸನಂ ವರಶಿಖಾಶೈಲಂಗಳಂ ಅವನ ವಶಕೀ ತ್ರಿವಿಧಮಂ ಕೊಟ್ಟು (ಮಹಾವಿ. ೧೩-೩೮); ಆ ಶಿಖಾಶೈಲಂಗಳಂ ಕೊರಳಿಂಗೆ ಧರಿಸುತೆ (ಮಹಾವಿ. ೨೫-೨೮). **ಸಿಕ್ಕೆ** : ೧. ಕಾಗದ ಬರೆಬರೆದು ಸಿಕ್ಕೇವನೊತ್ಯಾನ ಕಾಲಾಳ ಹೋಗಿ ಕರಿರೆಂದ (ಲೋಕಗೀ. ೨೦೩).

[<— ಆರ. ಸಿಕ್ಕ; ಪಾರ. ಶಿಕ್ಕಾ; ಹಿಂ. ಸಿಕ್ಕಾ; ಮರಾ. ಶಿಕ್ಕಾ, ಸಿಕ್ಕಾ]

ಸಿಕ್ಕಾಪಟ್ಟೆ 'ಸಿಕ್ಕಾಬಟ್ಟೆ' ನೋ.

ಸಿಕ್ಕಾಬಟ್ಟೆ , ಸಿಕ್ಕಾಪಟ್ಟೆ (ಅ). ಮನಸ್ಸು ಬಂದ ಹಾಗೆ; ಮಿತಿಯಿಲ್ಲದೆ; ವಿಪರೀತ: ನಗರದ ಜನಗಳು ಸಿಕ್ಕಾಬಟ್ಟೆ ಮಾತಾಡುತ್ತಿದ್ದಾರೆ (ವ್ಯಾಸಜಿ. ೫೮); ಭೇದಿಯನ್ನು ಅಲಕ್ಷಿಸಿ, ಸಿಕ್ಕಾಬಟ್ಟೆ ತಿನ್ನಿಸಿದರೆ ಮಕ್ಕಳಿಗೆ ಆಮಶಂಕೆ ಬರುವುದುಂಟು (ಗೃಪವಿ. ೧೪೭). **ಸಿಕ್ಕಾಪಟ್ಟೆ** : ಸಿಕ್ಕಾಪಟ್ಟೆ ಹರಟೆ ಹೊಡೆಯುತ್ತಿದ್ದ (ಬಾಳಿವೃ. ೧೦೫); ದಾಸದಾಸಿಯರಿಗೆ ಅವಳು ಸಿಕ್ಕಾಪಟ್ಟೆ ಬೈದು ಅನರ್ಥ ಮಾಡಿಬಿಡುತ್ತಾಳೆ (ಇಪ್ರಕ. ೨೬೦).

[< ಸಿಕ್ಕು$_1$./ IP ಇದು 'ಕಂಡಾಬಟ್ಟೆ', 'ಮೂರಾಬಟ್ಟೆ' ಮುಂತಾದ ರೂಪಗಳ ಸಾದೃಶ್ಯದ ಮೇಲೆ ರಚನೆಯಾಗಿರುವ ರೂಪವಿರಬಹುದು]

ಸಿಕ್ಕಿತೆ (ನಾ). ಆಪ್ತಸೇವಕಿ , — ದಾಸಿ; ಲೆಂಕಿತಿ: "ಸಿಕ್ಕಿತೆ [ಪಾಠಾಂ. ಶಿಕ್ಷಿತೆ]ಯೆನಲು ಲೆಂಕಿತಿಗೆ ನಾಮಮಕ್ಕುಂ" (ಮಂಗರಾ. ೯೦-೪). [?]

ಸಿಕ್ಕಿಸು 'ಸಿಲ್ಕಿಸು' ನೋ.

ಸಿಕ್ಕು$_1$ 'ಸಿಲ್ಕು$_1$' ನೋ.

ಸಿಕ್ಕು$_2$ 'ಸಿಲ್ಕು$_1$' ಪರಾ.

ಸಿಕ್ಕು$_3$ 'ಸಿಲ್ಕು$_2$' ನೋ.

ಸಿಕ್ಕುದಕ್ಕು (ನಾ). ಸಿಕ್ಕಿಸಿಕೊಂಡು ಹಿಡಿಯುವ ಒಂದು ಬಗೆಯ ಬೇಟೆಯ ಸಾಧನ : ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣಿ ತೊವಲ್ವಲೆ ಸಿಕ್ಕುದಕ್ಕು ಪೆರ್ಮೊಲವಲೆ . . . ಕಾನನಸ್ಥಳದೊಳಗಲ್ದು ತೋಹುವಿಡಿದೊಡ್ಡಿದರ್ಕೆದೆ ಪುಳಿಂದನಾಯಕರ್ (ದಶಕು. ೨-೧೧೫). [ಸಿಕ್ಕು$_1$ (< ಸಿಲ್ಕು$_1$) + ದಕ್ಕು$_4$ (< ದರ್ಕು$_2$)]

ಸಿಕ್ಕುಬಂಧನ (ನಾ). ಕ್ಲೇಶಕರವಾದ ಸೆರೆ; ಕಷ್ಟಕರವಾದ ಬಂಧನ: ಲೆಕ್ಕಕ್ಕೆ ದುಕ್ಕಿಲ್ಲ ಬೆಕ್ಕಿಗಂ ವ್ರತವಿಲ್ಲ ಸಿಕ್ಕುಬಂಧನದಿ ಸುಖವಿಲ್ಲ ನಾರಿಗೆ ಸಿಕ್ಕದವರಿಲ್ಲ (ಸರ್ವಜ್ಞ. ೧೬೫೧). [ಸಿಕ್ಕು$_3$ (< ಸಿಲ್ಕು$_2$) + ಬಂಧನ]

ಸಿಕ್ಕುಮೂತ್ರ (ನಾ). ಮೂತ್ರವಿಸರ್ಜನೆಗೆ ತಡೆಯುಂಟಾಗುವ ಒಂದು ಬಗೆಯ ರೋಗ: ಆ ಬೇರಂ ಹಾಲಲ್ಲಿ ಅರೆದು ಕುಡಿಯಲು ಸಿಕ್ಕುಮೂತ್ರ ಮಾಣ್ಗುಂ (ವಿಷ್ಣುವಿ. ೧೧೯). [ಸಿಕ್ಕು$_3$ (< ಸಿಲ್ಕು$_2$) + ಮೂತ್ರ]

ಸಿಕ್ಕುವಲೆ (ನಾ). ಪ್ರಾಣಿ, ಪಕ್ಷಿಗಳನ್ನು ಹಿಡಿಯುವ ಒಂದು ಬಗೆಯ ಬಲೆ: ತಡಿಕೆವಲೆ . . . ಸಿಡಿವವಲೆ ಸಿಕ್ಕು[ಪಾಠಾಂ. ಸಿಲುಕು]ವಲೆ . . . ಮಂದಸಿನವಲೆಯ ಹೊಱೆಗಳ ಬೇಡವಡೆ ನೆರೆದುದು (ಹಚಕಾ. ೫-೮); ತೊಡಕುವಲೆ ಸಿಕ್ಕುವಲೆ ಸಿಡಿಲುವಲೆ ಹಾಸುವಲೆ ಬೀಸುವಲೆ ಚಕ್ಕನೆಯಳವವಲೆ ಮೊದಲಾದ ಪರಿಪರಿಯ ವಲೆಸಮೂಹವ ನೋಡುತೆ (ನವಮೋ. ೧೬-೨೦). [ಸಿಕ್ಕು$_3$ (< ಸಿಲ್ಕು$_2$) + ಬಲೆ$_1$]

ಸಿಕ್ಕುಸಿಕ್ಕು$_1$ 'ಸಿಲ್ಕು$_1$' ಪರಾ.

ಸಿಕ್ಕುಸಿಕ್ಕು$_2$ 'ಸಿಲ್ಕು$_2$' ಪರಾ.

ಸಿಕ್ಕೆ 'ಸಿಕ್ಕಾ' ನೋ.

ಸಿಕ್ಕೆಮೋರ್ತಬ, ಶಿಕ್ಕಾಮೋರ್ತಬ್ಬ (ನಾ). ಮುದ್ರೆ; ಮೊಹರು; ಠಸ್ಸೆ: ಸೊಟ್ಟಬಟ್ಟಾದ ಹಳೆಯ ಸಿಕ್ಕೆಮೋರ್ತಬಗಳುಳ್ಳ ಬಂಗಾರದ ನಾಣ್ಯಗಳಿದ್ದವು (ದೇವಲ. ೨೯). **ಶಿಕ್ಕಾಮೋರ್ತಬ್ಬ** : ಗವ್ವರ್ನರನ ಸಾಬನೂ ಕೂಡ ನಮ್ಮ ಊರ ಪೋಸ್ಟಮನ್ ಪಾಂಡೂನಂತೆ ಶಿಕ್ಕಾಮೋರ್ತಬ್ಬ ಮಾಡಲಿಕ್ಕೆ ಸಿದ್ಧನಾಗಿಯೇ ನಿಂತಿರುತ್ತಿದ್ದ (ದೀಪಹ. II, ೩೧೮). [ಸಿಕ್ಕೆ (< ಸಿಕ್ಕಾ) + ಮೋರ್ತಬ್ಬ (< ಮೋರ್ತಬ್ಬ)]

ಸಿಕ್ಕೆಯುಂಗುರ (ನಾ). ಮುದ್ರೆಯನ್ನುಳ್ಳ ಉಂಗುರ; ಮೊಹರನ್ನುಳ್ಳ ಉಂಗುರ: ಈ ಸಿಂಹಾಸನಕ್ಕೆ ನೀನೇ ಬಾಧ್ಯನು ಎಂದು ಹೇಳಿ ಸಿಕ್ಕೆಯುಂಗುರವನ್ನು . . . ಮುಂದೆ ಚಾಚಿದನು (ಕುಮುದಿ. ೪೪). [ಸಿಕ್ಕೆ (< ಸಿಕ್ಕಾ) + ಉಂಗುರ]

ಸಿಕ್ಕೇದಾರ 'ಸಿಕ್ದಾರ್' ನೋ.

ಸಿಕ್ಕೊಡೆ (ಕ್ರಿ). ಕೂದಲಿನ ಗೋಜನ್ನು ಬಿಡಿಸು; ಸಿಕ್ಕು ಬಿಡಿಸು: ಕಾಮಿನಿಯ ನೀಲ ನಿಡುಗುರುಳ ಸಿಕ್ಕೊಡೆದು ಪೊಂಬಲಿಗೆಯೊಳು ಪರಪಿದೋಲ್ ರಾಮಣಿಯ್ಯಕದಿ ರಮಣಿಯ ಬೆನ್ನೊಳೊಪ್ಪುತಿರೆ (ನವಮೋ. ೨೩-೬). [ಸಿಕ್ಕು$_3$ (< ಸಿಲ್ಕು$_2$) + ಒಡೆ$_1$]

ಸಿಕ್ತ (ಗು). ೧. ಸಿಂಪಡಿಸಿದ; ಸೇಚನ ಮಾಡಿದ. ೨. ತೊಯ್ದ; ನೆನೆದ; ಆರ್ದ್ರವಾದ: ಹರಿವಿದಳಿತಮದಗಜಕುಂಭರಕ್ತಸಿಕ್ತಾರ್ದ್ರಮೌಕ್ತಿಕಪ್ರಕರದವೋಲ್ ಕರಮೆಸೆವ ದಾಡಿಮಾಬೀಜರಾಜಿಯಂ ತೆಗೆದು ರಸವನಾಸ್ವಾದಿಸಿದೆಂ (ಕಾದಂಪು. ೮೭); ಸತ್ಯಂ ಸದ್ಗುರುಪದಸೇವಾಕೃತಕೃತ್ಯಂ ಶಂಕರಭಜಕಂ . . . ಭವನಿಮುಕ್ತಂ ಸುಖಜಲಸಿಕ್ತಂ ಗತರಕ್ತಂ (ಉದ್ದವ. ೩-೨೧). (ನಾ). ೩. ಆರ್ದ್ರವಾದುದು; ನೆನೆದುದು: ವಜ್ರಬಾಹುಮಹೀಪತಿ ವಜ್ರದಂತಚಕ್ರವರ್ತಿಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿನೊಗೆದಂಕುರಿಸಿದಂಕುರನಿಕರಮನನುಕರಿಸುವ ರೋಮಾಂಚನಿಚಯದಿಂ ನಿಚಿತಾಂಗನಾಗಿ (ಆದಿಪು. ೪-೨೯ ವ). [ಸಂ.]

ಸಿಕ್ಥ (ನಾ). ೧. ಬೇಯಿಸಿರುವ ಅನ್ನದ ಅಗುಳು. ೨. ಅನ್ನದ ತುತ್ತು , — ಉಂಡೆ. ೩. ಜೇನುಮೇಣ. ೪. ನೀಲಿಯ ಪುಡಿ. [ಸಂ.]

ಸಿಕ್ಥಕ (ನಾ). ೧. = ಸಿಕ್ಥ ೧. ೨. (ಪ್ರಸಾದದ) ಅನ್ನದ ಉಂಡೆ : ತಱುವಾಯಿಂ ಪರಿವಿಡಿಯೊಳೆಡೆಗೊಂಡ ಪಂತಿಗೆ ತೀರ್ಥಪ್ರಸಾದಂಗಳನೋರಣದಿಂ ಪಱ್ಚುಗೊಟ್ಟುಂ ಸವಿದುಂ ತಂತಮ್ಮೆಡೆಗೆ ಪೋದಿಂಬಱಿಯಂ ತನ್ನ ಪಾಲ ಸಿಕ್ಥಕಮನುಂಡಮ್ಮೆಳೆಯನುಂ ಪೊಱಮಟ್ಟುಂ (ರಾಮಾಶ್ವ. ೭೭-೯). ೩. = ಸಿಕ್ಥ ೩ : "ಸಿಕ್ಥಕಂ ಮೇಣಮದು" (ಮಂಗರಾ. ೧೦೫-೧೪). [ಸಂ.]

ಸಿಕ್ದಾರ್, ಸಿಕ್ಕೇದಾರ (ನಾ). ಸೇನೆಯ ಪೋಲೀಸ್ ಅಧಿಕಾರಿ : ಪ್ರತಿಯೊಂದು ಪರ್ಗಣಕ್ಕೂ ಒಬ್ಬ ಅಮೀರನೂ ಅವನಿಗೆ ಸಹಾಯಕರಾಗಿ ಒಬ್ಬ ಕೋಶಾಧಿಕಾರಿ (ಪೋತದಾರ್), ಒಬ್ಬ ಕಾರ್ಯದರ್ಶಿ ಮತ್ತು ಒಬ್ಬ ಸೇನಾ – ಪೋಲೀಸ್ ಅಧಿಕಾರಿ (ಸಿಕ್‌ದಾರ್) ಇವರೂ ಇದ್ದರು (ಇಸ್ಲಾಂಸಂ. ೬೩). ಸಿಕ್ಕೇದಾರ : ಹಿಸ್ಸಾರ ಫಿರೋಜಾ ಸುಬೆಯ ಸಿಕ್ಕೇದಾರನಾದ ಹಾಮಿದಖಾನನು ಕಾದಲಿಕ್ಕನುವಾಗಿರುತ್ತಾನೆಂದು ಕೇಳಿ ಅವನಿಗಿದಿರಾಗಲು ಹುಮಾಯನನನ್ನು ಕಳುಹಿದನು (ಮೋಬಾದ. ೧೯). [?]

ಸಿಖ್ 'ಸಿಕ್' ನೋ.

ಸಿಖಂಡಿ (ನಾ). ಪೌರುಷಹೀನನಾದವನು; ಸತ್ತ್ವಹೀನ; ನಪುಂಸಕ: ಸರಿಯಾಗಿ ಯಿಬ್ಬರಿಗೆ ಚಂದ್ರಸ್ವರ ನಡವಾಗ ಸುರತಮಂ ಗೈಯಲು ಸಿಖಂಡಿ ತಾಂ ಪುಟ್ಟುವನು (ನವಮೋ. ೧೪-೪೫). [< ಸಂ. ಶಿಖಂಡಿನ್]

ಸಿಖರ 'ಸಿಕರ' ನೋ.

ಸಿಖರದೀಪ್ತಿ (ನಾ). (ಕಟ್ಟಡ, ದೇವಾಲಯ ಮುಂತಾದುವುಗಳ) ಗೋಪುರಕ್ಕೆ ಮಾಡುವ ದೀಪಾಲಂಕಾರ: ಹಿಡಿಮ್ಬನಾತದೇವರಿಗೆ [ತ]ತ್ಸಂವತ್ಸರದ ತಥಾ ತಿಥಿ ಕಾರ್ತ್ತಿಕ ಶು ೧೫ ಪುಣ್ಯಕಾಲದಲ್ಲಿ ಮಹಾಪೂಜೆ ನೈವೇದ್ಯ ಸಿಖರದೀಪ್ತಿಯನ್ನು ಮಾಡಿ (ಎಕ. XI. ಚತ್ರಮು. ೧೪-೧೨; 1411). [< ಸಂ. ಶಿಖರದೀಪ್ತಿ]

ಸಿಖರಿ (ನಾ). ಒಂದು ಬಗೆಯ ಸಸ್ಯ; ಅಪಾಮಾರ್ಗ; ಉತ್ತರಣೆ: "ಜಂಘಾಲಿಃ – ಸಿಖರಿ" (ಓಷಧಿ. ೬೦). [< ಸಂ. ಶಿಖರಿನ್]

ಸಿಖಾರ 'ಸಿಕರ' ನೋ.

ಸಿಖಿಮಂಥಣಿ (ನಾ). ಘರ್ಷಣೆಯಿಂದ ಯಾಗಾಗ್ನಿಯನ್ನು ಹುಟ್ಟಿಸಲು ಬಳಸುವ ಮರದ ಕೊರಡು; ಅರಣಿ : ಗಡುಗೆಯ ಬ್ರಾಹ್ಮಣರಿಗೆವೂಂ ಆಚಾರಿಯರಿಗೆವೂಂ ಸಿಖಿಮಂಥಣಿಗೆ ಹೋಮದ ವರದಕ್ಷಿಣೆಗೆವೂಂ ಗ ೬ ಪ ೫ ಹ ೨ (ಎಕ. V (R), ತಿರುಮ. ೯೬-೮೦; 1269). [< ಸಂ. ಶಿಖಿಮಂಥನ]

ಸಿಗಡಿ 'ಸೀಗಡಿ' ನೋ.

ಸಿಗರೇಟ್ 'ಸಿಗರೇಟು' ನೋ.

ಸಿಗರೇಟು, ಸಿಗರೇಟ್ (ನಾ). ಹೊಗೆ ಸೇದಲು, ಹೊಗೆಸೊಪ್ಪಿನ ಪುಡಿ ಮತ್ತು ಮತ್ತನ್ನುಂಟುಮಾಡುವ ದ್ರವ್ಯವನ್ನು ಇಟ್ಟು ಸುತ್ತಿರುವ ಕಾಗದದ ಸಣ್ಣ ಸುರುಳಿ; ಹೊಗೆಸೊಪ್ಪಿನ ಬತ್ತಿ: ದಾರಿಹೋಕರು ದೀಡಿ ಸಿಗರೇಟನ್ನು ಸೇದುತ್ತಾ ಹೋಗುತ್ತಿದ್ದುದನ್ನು ನೋಡಿ ನನಗೆ ಸಿಗರೇಟಿನ ಚಟ ಬೇರೆ ಹಿಡಿಯಿತು (ಮಗಮಾಂ. ೫೨); ಅವರಿಗಂಟಿಕೊಂಡಿದ್ದ ಇನ್ನೊಂದು ವ್ಯಸನ ಸಿಗರೇಟಿನದು (ರತ್ನಗೂ. ೫). ಸಿಗರೇಟ್ : ಸಿಗರೇಟ್ ಸೇದಬೇಕೆಂಬ ಇಚ್ಛೆಗೆ ಭೌತತತ್ತ್ವ ಕಾರಣವಲ್ಲ (ಜೀವಾತ್ಮ. ೧೦೧).

[<— ಇಂ. Cigarette]

ಸಿಗಳಿಗೆ 'ಸೆಗಳಿಕೆ' ನೋ.

ಸಿಗಿ (ಕ್ರಿ). (ಉದ್ದುದ್ದವಾಗಿ) ಸೀಳು; ಹರಿ : ಕೇಳಿಯೊಳಿನಿಯಂಗೆ ಸುಖವನೆಯ್ದಿಸದೆ ಧಡಾಳಿಸಿದವಳ ಪೇರುರವ ಬಾಳಿನೊಳ್ ಸಿಗಿವಂತೆ ಕೂರುಗುರ್ಗೊನೆಯಿಂದೆ ಸೀಳಿದಳೊಂದು ಬೆಳ್ಳೆಲೆಯ (ಮೋಹತ. ೧೬-೩೩); ಅಪ್ಪಾಜಿ ಕಂಡರೆ ನಮ್ಮನ್ನೆಲ್ಲ ಸಿಗಿದಾರು (ಚಕೂಾ. ೬).

ಸಿಗಿಸಿಗಿ (ದ್ವಿರುಕ್ತಿ) : ವಸ್ತ್ರರಾಶಿ ವಸುಧೆಯೊಳು ಬೀಳೆ ಸಿಗಿಸಿಗಿದು ಕಂಬಿಯ ಸೆರಗಿನೆಸೆವ ಶಾಲೆಗಳ ಜಂಗಮವಿಸರಕಿತ್ತನಾ ಬಸವಯ್ಯನು (ಗುರುಚಾ. ೭-೧೦). ಸಿಗಿದುಕಟ್ಟು = ಸೀಳಿ ಭಾಗ ಮಾಡಿ (ತೋರಣ) ಕಟ್ಟು: ಕಾಡು ಇದೆ, ಕಡಿ: ಸಿಗಿದು ಕಟ್ಟು ತೋರಣ (ಚಂಡಮ. ೪೬-೧). ಸಿಗಿದುತೋರಣಕಟ್ಟು = ೧. = ಸಿಗಿದುಕಟ್ಟು. ೨. (ಆಲಂ) ಉಗ್ರವಾಗಿ ಶಿಕ್ಷಿಸು : ಅಲ್ಲಿ ಅಂಥ ಅಧಿಕಪ್ರಸಂಗವೇನಾದರೂ ಮಾಡಿ ಬಂದರೆ ಸಿಗಿದು ತೋರಣ ಕಟ್ಟುತ್ತೇನೆ (ಮೂರುದಾ. ೬೪). ಸಿಗಿದುಬಿಡು = ೧. ಸೀಳಿ ಹಾಕು; ಕತ್ತರಿಸಿ ಚೆಲ್ಲು. ೨. = ಸಿಗಿದು ತೋರಣಕಟ್ಟು ೨ : ನಾನು ನಿಮ್ಮೊಡನೆ ಮಾತುಕತೆ ಆಡ್ತೀನೆಂದು ತಿಳಿದರೆ ನನ್ನ ಸಿಗಿದು ಬಿಡ್ತಾರೆ (ಅಜಜ. ೧೪೪).

[ದೇ. ॥ ಮಲ. ಚೀನ್ತು; ತುಳು. ತಿಗಿ, ತಿಗು; ತೆಲು. ಚಿಂಚು, ಚಿಂಪು, ಚೀರು; ಪರ್ಜಿ. ಚೀಕ್; ಕುಾ. ಸಿಕಿನ್ನ; ಕುರುಖ್. ಚೀನ್ನಾ]

ಸಿಗು 'ಸಿಲ್ಲು$_1$' ನೋ.

ಸಿಗುಡಿ (ನಾ). ಕುರೂಪಿಯಾದವಳು (?) : ಒಂದುಮೊಲೆ ದೊಡ್ಡಿತಾದೊಂದು ಮೊಲೆ ಸಣ್ಣಮಾದೊಂದುಮೊಲೆಯಿಳಿದೊಂದುಮೊಲೆಯೇಱಿದ ಚಂದವಿಲ್ಲದ ಸಿಗುಡಿ [ಶಾಕಾಂ. ರು] ಸಂದಿಸಿದ ದನಿಯ . . . ಪೆಣ್ಗಳಂ ತರಲಾಗದು (ಜನವ. ೧೧-೯); ಬರಡೆಯಾಗಲು ನೋವು ಸಿಗುಡಿ[ಶಾಕಾಂ. ಡೆ]ಯಾಗಲು ದುಃಖ ಪರಿಹಾಸಗೈವರು ಪೆಣ್ಣ (ರಾಮವಿ. ೧೨-೧೩೦). [?]

ಸಿಗುಡಿತೆ 'ಸೇಗುಡಿತೆ' ನೋ.

ಸಿಗುಣೂರ್ (ನಾ). ಒಂದು ಊರಿನ ಹೆಸರು (?) : ಸ್ವಸ್ತಿ ಶ್ರೀ ಸಿಗುಣೂರರ್ ಕೆಳೆನಲ್ಲು (ಎಕ. X (S), ಮುಳಿಯಾ. ೧೧೮-೧; 9ನೆಯ ಶತ). [? + ಊರ್]

ಸಿಗುರು 'ಸಿವುಱು$_2$' ನೋ.

ಸಿಗುಳ್ಳು$_1$ (ಕ್ರಿ). ಸಿಗಿ; ಸೀಳು; ತುಂಡು ಮಾಡು: ದೈತ್ಯರು . . . ಇಡಲಮಿತ ತೂಣೀರ ಚಾಪಗಳ ಸಿಗುಳಿಯಕ್ಷಯಬಾಣದಲಿ ಸಂಯುಗದೊಳಾ ಮೂವರ ಶಿರಂಗಳ ನೆಗಯಿಸಿದ ಗಗನಾಂಗಣಕೆ ರಾಘವನು (ಆನಂರಾ. ೩-೪-೧೦). 'ಸಿವುಱು$_1$' ಪರಾ.

[IP ಇದು 'ಸಿಗಿ' ಮತ್ತು 'ಸೀಳು' ಎಂಬ ಎರಡು ಶಬ್ದಗಳೂ ಸೇರಿ ಆದ ರೂಪವಿರಬಹುದು]

ಸಿಗುಳ್ಳು$_2$ (ನಾ). ತುಂಡು; ಸೀಳು: ಮದ್ದೂರನ್ಯಾಯ ನಮ್ಮಣ್ಣನ್ನೇಲೆ ಬಿದ್ದರೆ ಇದ್ದೆಗಾರ ತಂಗಿ ಕಿರಿಯೋಳು ಕೂತ್ಕಂಡು ಬರಕೊಟ್ಟು ಎಲೆಯ ಸಿಗುಳಲ್ಲಿ (ಕಜಕಾ. ೭).

[< ಸಿಗುಳ್ಳು$_1$]

ಸಿಗುಱು 'ಸಿವುಱು$_2$' ನೋ.

ಸಿಗುಱು 'ಸಿವುಱು$_2$' ನೋ.

ಸಿಗುಱೇಳು 'ಸಿವುಱೇಟು' ನೋ.

ಸಿಗೆನಡು (ನಾ). ಒಂದು ಪ್ರದೇಶದ ಹೆಸರು: ಪರ್ಮ್ಮಾಡಿಯ ಸುಳಿ ಜೋಗಬೈಯ ಮಗಳ್ ಸಿಗೆನಡ ಪೆರ್ಮ್ಮಾಡಿಗಾವುಣ್ಣನ ಪೆಣ್ಣತಿ ಚಾವುಣ್ಣಬೈ ಈ ದೇಗುಲವ ಮಡಿಸಿ ತೆರಗಾಲಂ ದೆವಟ್ಟ ಬಿಟ್ಟಳ್ (ಮೃಆರಿ. ೧೯೩೦, ೧೪-೭; 882).

[IP ಇದು 'ಸೀಗೆನಾಡು' ಎಂಬುದರ ಅವಲಿಖಿತವಿರಬಹುದು]

ಸಿಗ್ಗ (ನಾ). "ನಾಚಿಕೆಯುಳ್ಳವನು" (ಪ್ರಭಣ್ಣ). [ಸಿಗ್ಗು$_1$ + -ಅ$_7$]

ಸಿಗ್ಗನೆ (ಅ). ಒಂದು ಅನುಕರಣಾವ್ಯಯ : ಸಿಗ್ಗನೆ ಸಿಗಿದು ಬಿಱ್ಱನೆ ಬೀಗಿ ಡಱ್ಱನೆ ತೇಗಿ (ಶಬ್ದಾನು. ೨೦ ವ್ಯಾಖ್ಯಾ). [? + - ಅನೆ$_1$]

ಸಿಗ್ಗಾನು (ಕ್ರಿ). ನಾಚಿಕೆಯನ್ನು ಹೊಂದು; ನಾಚು: ಧರಯೊಳೊಂದಂ ಪಡೆದವಳ ಮೊಗವ ನೋಡಲಾಗದುಯೆನಲು ಸಿಗ್ಗಾಂತೆಯೋ (ನವಮೋ. ೧೦-೩೯).

[ಸಿಗ್ಗು$_1$ + ಆನು$_1$ (< ಆನ್$_1$)]

ಸಿಗ್ಗಾಮೆ (ನಾ). ಒಂದು ಊರಿನ ಹೆಸರು; IP ಇದು ಧಾರವಾಡ ಜಿಲ್ಲೆಯ ಈಗಿನ ಶಿಗ್ಗಾಂವೆ : [ಮೂ]ಸಱಱ ಕಳ್ಳವಳ್ಳ ಪೆದ್ದಮನಾಳುತ್ತಮಿಲ್ಲು ಕುಪ್ಪೆಯರಸರ್ಗ್ಗೆ ಬಿನ್ನಪಂಗೆಯ್ದು ಸಿಗ್ಗಾಮೆಯ ಕಳ್ಳವಳ್ಳದೆಱೆವ ಶ್ರೀಕ[ಲ್ಲೆ]ಱೆಭಟಾರಗೆ ಕೊಟ್ಟನ್ (ಕಾ. I, ೧೪-೭; ಸು. 868). 'ವಳ್ಳಿಗ್ಗಾಮೆ' ಪರಾ. [? + ಗಾಮ್ಯ (< ಗಾಮ)]

ಸಿಗ್ಗಾಳಿ (ನಾ). ನಾಚಿಕೆಯ ಸ್ವಭಾವದ ವ್ಯಕ್ತಿ; ಸಂಕೋಚಪ್ರವೃತ್ತಿಯ ವ್ಯಕ್ತಿ: ನೀಱಂ ಜೂದಾಳಿ ಕರಂ ನೀಱಂ ಮಾತಾಳಿ ಕರೆಯೆ ಸಿಗ್ಗಾಳಿಯಿವಳ್ (ಕಾವ್ಯಾವ. ೩೫೩); ಆಃ! ಸಿಗ್ಗಾಳಿ! ಆಗಳುಂ ಸುಶೀಲದಿನೆ ಬಾಗಿ ನಡೆವ . . . ತಿಳಿಪೆ ತಿಳಿವ, ನಿನ್ನ ರತಿರಹಸ್ಯಮನಿನ್ನೆಂತು ಮಱೆವೆನೋ! (ರಾಮಾಶ್ವ. ೪೫-೨೯); ಅವನು ಪ್ರಶ್ನಿಸಿದಾಗ ಅವಳು ಸಿಗ್ಗಾಳಿಯಾಗಿ ನುಣುಚುನುಣುಚಾಗಿ ಉತ್ತರ ಕೊಟ್ಟಳು (ಪುನರು. ೪೯೭).

[ಸಿಗ್ಗು$_1$ + -ಆಳಿ$_3$]

ಸಿಗ್ಗು₁ (ನಾ). ೧. ನಾಚಿಕೆ; ಲಜ್ಜೆ: ಚಕ್ರೇಶ ಸಿಗ್ಗನುಬೆ ಮುಳಿಸಂ ನೀನೆಂದಿಂಗಂ ಬಿಸುಡು (ಆದಿಪು. ೧೪-೧೨೮); ಮದನಮದೋದ್ರೇಕದಿನ್ನೆದಿರೊಳ್ ಧೃತಿಗೆಟ್ಟು ಸಿಗ್ಗಿನಿಂ ತನ್ನೊಳ್ ಪೊಲ್ಲದನೆತ್ತಾಚರಿಸುಗುಮೋ ಒದವಿದ ಸಿಗ್ಗಿಂದಮಾರುಮೇನನೊಡರ್ಚರ್ (ಕಾದಂಪೂ. ೮೨೫); ಹೊಸದರಲಿ ಸಿಗ್ಗು ಪ್ರೇಮವನು ನಸುಮರೆಸಿರಲು ನೀನೆನ್ನ ಬಳಿ ಸುಳಿಯಲಾರದೆಯೆ (ನನ್ನಪ. ೧೩-೨). ೨. ಅವಮಾನ; ಮುಖಭಂಗ: ದ್ರೌಪದಿ ತನ್ನ ಕೇಶಪಾಶಮಂ ದುಶ್ಶಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್ (ಪಂಪಭಾ. ೭-೯ ವ); ಆ ದಿವಿಜವನಿತೆಯರೆನಿತಾನುಂ ತೆಱದ ಶೃಂಗಾರಚೇಷ್ಟೆಗಳನುಪಯೋಜಿಸಿಯುಮೆಂತುಮೇಗೆಯ್ದುಮಾ ಜಂಗಮಮೇರುವೆನಿಸಿದ ಸೌಜನ್ಯಕಂದಾಂಕುರನಂ ಸಂಚಳಿಸಲಾಱದೆ ಸಿಗ್ಗಿನನುಕಂಪೆಯಂ ತಱೆ (ಶಾಂತಿಪು. ೯-೯೯ ವ); ಶಾಸ್ತ್ರಿಗಳೇ ಸಿಗ್ಗಿನಿಂದ ಸರಿದುಹೋದ ಗಂಟಲು ಸರಿಪಡಿಸಿಕೊಂಡು ಏನೋ ಹೇಳುವುದಕ್ಕೆ ಪ್ರಯತ್ನಿಸಿದರು (ಹೂಸಕ್ಕ. ೪೩). ೩. ಖಿನ್ನತೆ; ಜುಗುಪ್ಸೆ; ಖೇದ: "ಖಿನ್ನಂ ಸಿಗ್ಗು" (ಕರ್ಣಾ. ೬); ಒಗ್ಗೊಡೆದು ಕುಳ್ಳಿರಿಸಿದಾಸನ ಝಗ್ಗೆನಲು ಕುಳ್ಳಿರ್ದು ಕೋಪದ ಸಿಗ್ಗಿನೊಳಗಾಡುತ್ತ ನೇಗಿಲನೆತ್ತಿ ಮೋದುತಿರೆ (ಕೃಷ್ಣಾಕಾ. ೨೦-೫೦).

ಸಿಗ್ಗಾಗು = ೧. ನಾಚಿಕೊಳ್ಳು; ಲಜ್ಜೆಯನ್ನು ಹೊಂದು: ಹರಿಶ್ಚಂದ್ರಭೂಭುಜಂ ತನ್ನ ಸಾರ್ದರ ಬೇಡಿದರ ಬಯಸಿದರ ಸೋಂಕಿದರ ಬೆರಸಿದರನು ತನ್ನಂತೆ ಮಾಳ್ಪುನ್ನತಿಕೆಯಂ ಕಂಡು ನಾಚಿ ಸಿಗ್ಗಾಗಿ ಸೆಡೆದು . . . ಸ್ವರ್ಗಸ್ಥವಾಯ್ತು ಸುರತರು (ಹಚಕಾ. ೧-೪೨). ೨. ನಾಚಿಕೆಯಾಗು; ಲಜ್ಜೆಯಾಗು: ನಾನೊಬ್ಬಳೆ ವೀಣೆ ನುಡಿಸಿ ಹಾಡಲು ಸಿಗ್ಗಾಗುತ್ತದೆ (ಶಾಂತಲಾ. ೮೧). ೩. ಅವಮಾನಗೊಳ್ಳು; ಅಪಮಾನಿತನಾಗು; ಭಂಗಿತನಾಗು: ವಿಷ್ಣುಮತ್ಸ್ಯಂ . . . ತನ್ನ ಪಾಂಡಿತ್ಯದ ಗರ್ವದಿಂದಂ ವೃಷಭಸೇನಾಚಾರ್ಯರೊಡನೆ ವಾದಗೆಯ್ದು ನೆರವಿಯೊಳ್ ಸೋಲ್ತು ಸಿಗ್ಗಾಗಿ ಪೋಗಿ ನಟ್ಟಸಡುವಿರುಳ್ ಬಂದು ಕಿಚ್ಚಂ ತಗುಳ್ಚಿ ಪೋದಂ (ವಡ್ಡಾರಾ. ೧೯೩-೨೧); ವಿಷಖರ್ವರನೆಂಬಂ ತನ್ನ ಮಲ್ಲರೆಲ್ಲರುಮಂ ಕೊಂದೊಡೆ ಸಿಗ್ಗಾಗಿ ತನ್ನ ಬಾಣಸಿಗನಾಗಿರ್ದ ವಲ್ಲಲನಂ ಕರೆದು ಪೇಳ್ದಾಗಳ್ (ಪಂಪಭಾ. ೮-೫೭ ವ). ೪. ಖೇದಗೊಳ್ಳು; ಜುಗುಪ್ಸೆಯನ್ನು ಹೊಂದು : ನಿಮ್ಮ ಮಾವನಂ ನೀಂ ನಿರಾಕರಿಸಿ ನುಡಿದೊಡೆನ್ನ ಭರ್ತಾರಂ ನಿನ್ನನೇನುಮೆನಲಱಿಯದೆ ತನ್ನಂ ತಾನೆ ನಿಂದಿಸಿಕೊಂಡು ಸಿಗ್ಗಾಗಿ ಪೋಗಿ ತಪಂಬಟ್ಟಂ (ಸುಕುಮಾ. ೫-೭ ವ); ಬಂದ ತನ್ನೊಂದು ಸೇವೆಯನೆನೆದಾ ಕಾರ್ಯದಂದಗೆಟ್ಟುದಕೆ ಸಿಗ್ಗಾಗಿ ಕಂದಿದ ಮೊಗ ಕೆಲಬಲಕೆ ಕಾಲಿಡದ ಕಣ್ಣಿಂದೆಯ್ದುತಿರ್ದ ಮೋನದೊಳು (ಭರತ. ೪೯-೩). ೫. ನಾಚಿಕೆ, ಅವಮಾನಗಳಿಂದ ಕೆರಳು, – ಸಿಟ್ಟುಗೊಳ್ಳು : ಅದಂ ಕಂಡು ಸಿಂಹೋದರಂ ಸಿಗ್ಗಾಗಿ ಸಿಂಹದಂತೆ ಮೇಲ್ಪಾಯ್ದುದುಂ (ಪಂರಾಮಾ. ೭-೫೮ ವ).

[ದೇ. ॥ ತೆಲು. ಸಿಗ್ಗು; ಕೊತ. ಚಿಗ್]

ಸಿಗ್ಗು₂ (ನಾ). ಒಂದು ಬಗೆಯ ಮರ; ನುಗ್ಗೆಮರ : ಸಿಗ್ಗು ಗುಗ್ಗುಳಂ ಮತ್ತಮನೇಕ ವೃಕ್ಷತತಿಯಿಂದೆಸೆದಿರ್ದುದು ತದ್ವನಾಂತರಂ (ಸಳಚಂ. ೭೧).

[< ಪ್ರಾ. ಪಾಲಿ. ಸಿಗ್ಗು./ ಸಂ. ಶಿಗ್ರು]

ಸಿಗ್ಗುಗೆಡಿಸು (ಕ್ರಿ). ನಾಚಿಕೆಗೆಡುವಂತೆ ಮಾಡು; ಅವಮಾನಗೊಳಿಸು: ಸಿಂಧುರಾಜನನು ಸದೆದು ಸಿಗ್ಗುಗೆಡಿಸಿಹನು (ಕಂಕ. ೬-೩). [ಸಿಗ್ಗು₁ + ಕೆಡಿಸು₁]

ಸಿಗ್ಗುಡಿತೆ 'ಸೇಗುಡಿತೆ' ನೋ.

ಸಿಗ್ಗೊಂದು (ಕ್ರಿ). ನಾಚಿಕೆಯನ್ನು ಹೊಂದು; ಲಜ್ಜೆಗೊಳ್ಳು: ಹಿಂದೆ ಜಂಗಮ ವೇಷಮಂ ನೆವದಿಂದೆ ಧರಿಸಿದ್ದುದನಱಿದು ಸಿಗ್ಗೊಂದಿ (ಬಸಪು. ೩೮-೧೯).

[ಸಿಗ್ಗು₁ + ಒಂದು₁]

ಸಿಚ (ನಾ). ಬಟ್ಟೆಯ ಅಂಚು; ಸೆರಗಿನ ತುದಿ; ಕರೆ: "ವರ್ತಿ ಸಿಚಮೆನೆ ಕರೆಯಕ್ಕು" (ಮಂಗರಾ. ೧೦೧-೨೮). [ಸಂ. ಸಿಚ್]

ಸಿಚಯ (ನಾ). ೧. ಅರಿವೆ; ಬಟ್ಟೆ; ವಸ್ತ್ರ: "ವಾಸಮಾಚ್ಛಾದನಂ ವಸ್ತ್ರಂ ಪಟಂ ಚೇಲಮಾ ಸಿಚಯಂ . . . ಅಂಬರಮೆನಲ್ಕಾ ಸೀರೆಯಕ್ಕು" (ಮಂಗರಾ. ೧೦೦-೨೭). ೨. ಮೇಲುಹೊದಿಕೆ; ಸೆರಗು: ತೊಲಗುತ್ತಿದೆ ಘನಕುಚಯುಗಳದಿಂದೆ ನೋಡಿದೆ [ಸಿಚಯಂ] [ಪಾಠಾಂ. ಸಾಚರಿ] ನಿನ್ನಯ ಮುಂದೆ (ಕಾದಂಪೂ. ೪೮೨). ೩. ಅಂಗಿ; ಕವಚ: ಚಳಮಾಲೋರಸ್ಸ್ಥಳಂ ಕಾಂಚನರುಚಿಸಿಚಯಂ ಸಂಚಲತ್ಕರ್ಣಪೂರಂ . . . ವೃಂದಾವನಾಂತಸ್ಸ್ಥಳಮಂ ಪೊಕ್ಕಂ (ಜಗವಿ. ೪-೧೧೪). ೪. ಹಳೆಯ ಬಟ್ಟೆ; ಜೀರ್ಣವಸ್ತ್ರ. [ಸಂ.]

ಸಿಚಯಕ (ನಾ). ಕುಪ್ಪಸ; ರವಿಕೆ: ವಸುಧಾಂಗನೆ ಮೇಲ್ಮೊಂಡಳೊ ಪೊಸ ಪಸುರ್ವಟ್ಟೆಯ ವಿಳಾಸದಿಂದೆಸೆವ ದುಕೂಲಸಿಚಯಕಮನೆನೆ ತನ್ನದಿಯೆಸೆದುದು (ಜಗವಿ. ೮-೯). [ಸಂ.]

ಸಿಟಕು 'ಸಿಡುಕ್ಕು' ನೋ.

ಸಿಟ್ಟೆ, ಸಿಷ್ಟಿ, ಸುಟ್ಟಿ₁ (ನಾ). ೧. ಜಗತ್ತು; ಪ್ರಪಂಚ: ಇಷ್ಟನೊರ್ವ್ವನಧಿದೇವತೆ ಗೆಂದೊಸದಿತ್ತುದಂ ದುಷ್ಟನೊರ್ವ್ವನದಱ ಫಳಮಂ ಸಲೆ ತಿಂದವಂ ಸಿಟ್ಟೆ ಮೇಲೆ ಪರಮಾತ್ಮನೆ ಬಂದೆಡೆಗೋವದಂ ಕಟ್ಟೆ ಕೊಣ್ಡ ಬಿದಿರನ್ತೆ ಕುಲಕ್ಷಯಮಾಗುಗುಂ (ಎಕ. VIII, ನಗರ. ೫೮-೧೯; 1062); ಮಾದಿಯಣಂ ಪುಟ್ಟೆ ಸಿಟ್ಟಿಯೊಳು ಕರಮೆಸೆದಂ (ಬೊಂಕಶಾ. ೧೯೫, ಕುಂದಗಲ್. ೧೦೬-೧೩; ?). ೨. ಸೃಷ್ಟಿ; ನಿರ್ಮಾಣ : ಸೃಷ್ಟಿ-ಸಿಟ್ಟೆ (ಶಮದ. ೨೮೩ ಪ್ರಯೋ); ಕಣ್ಣಿಗೆ ಕಾಣುವ ಬೊಮ್ಮನ ಸಿಟ್ಟಿಯೊಳೀ ತಣ್ಗದಿರನೆ ಸುಂದರನು (ನವಲು. ೬೮-೫). ಸಿಷ್ಟಿ : ೧. ಸಿಷ್ಟಿಯೊಳಗ್ಗಳಮೆನಿಪ್ಪ ಬರ್ಮ್ಮನೆ ಗಾವುಣ್ಡಂ (ಸೌಇಇ. XX, ೩೫-೧೪; 1055). ಸುಟ್ಟಿ₁ : ೨. ಸೃಷ್ಟಿ, ಸುಟ್ಟಿ; ಕಷ್ಟ,ಕಟ್ಟ (ಶಬ್ದಾನು. ೧೬೦ ಪ್ರಯೋ). [< ಸಂ. ಸೃಷ್ಟಿ]

ಸಿಟ್ಟೆಪತಿ (ನಾ). (ಆಲಂ) ಭೂಮಿಯ ಒಡೆಯ; ರಾಜ: ಸಿಟ್ಟೆಪತಿ ಜಯಸಿಂಹರಾಯನ ಕೊಟ್ಟಣವ ಮಾರಿಯರ ಕೈಯಲಿ ಕುಟ್ಟಿಸಿದನೊಲವಿಂದೆ ಶಂಕರದಾಸಿಮಯ್ಯಗಳು (ಶಂಕದಾ. ೯ ಸೂಚನೆ). [< ಸಂ. ಸೃಷ್ಟಿಪತಿ]

ಸಿಟ್ಟು (ನಾ). ಮುಳಿಸು; ಕೋಪ: ಮುನಿಸಂಕುಳಮುಮನಾನರ್ಕಿಂದಂ ಪಳದೊಡೆ ಮುನಿದೆನ್ನ ಸಿಟ್ಟನೆನ್ನೊಳ್ ಕಳೆದಂ (ಧರ್ಮಾಮೃ. ೧-೧೭೭); ಆದರೆ ಸಿಟ್ಟು . . . ನನಗೇ ಹೆಚ್ಚು (ಹಾಹುತ್ರ. ೪); ಬಡವನ ಸಿಟ್ಟು ದವಡೆಗೆ ಮೂಲ (ಗಾದೆ).

ಸಿಟ್ಟಂ ನುಡಿ = ಕೋಪದಿಂದ ಮಾತನ್ನಾಡು; ಮಾತಿನಲ್ಲಿ ಸಿಟ್ಟನ್ನು ವ್ಯಕ್ತಪಡಿಸು: ವೈರಿನಾಯಕದಿಕ್ಕುಂಜರಂ ಮಟ್ಟನಿರದೆ ಸಿಟ್ಟಂನುಡಿವ ದುಟ್ಟನಾಯಕರ ನಿಟ್ಟೆಲ್ಲಂ ಮುಱಿದು (ಕೊಲ್ಹಾಶಾ. ೧೫-೬೬; 1186). ಸಿಟ್ಟಾಗು = ಕೋಪಗೊಳ್ಳು; ರೋಷಹೊಂದು; ಕೆರಳು: ದಣಿಗಳು ಆ [ಮಾ]ತು ಕೇಳಿ ಮಹ ಸಿಟ್ಟಾಗಿ (ಎಕ. XI, ಮೊಳಕಾ. ೨೫-೭೬; 1665); ಅನ್ಯಾಯ ಮಾಡಿದರೆ ದೇವರು ನಿಮ್ಮ ಮೇಲೆ ಸಿಟ್ಟಾಗುವನು (ಮುಂಬಯಿ. ೬. ೪-೯೪). ಸಿಟ್ಟಗೆಬ್ಬಿಸು = ಕೋಪಗೊಳ್ಳುವಂತೆ ಮಾಡು; ರೇಗಿಸು; ಉದ್ರೇಕಿಸು: ವಿನಾಕಾರಣ ಅವನನ್ನು ಸಿಟ್ಟಗೆಬ್ಬಿಸಿದುತಾಯಿತು (ರೂಢಿ). ಸಿಟ್ಟಗೇಳು = ಸಿಟ್ಟಾಗು: ಸಿಟ್ಟಗೆದ್ದಾಗ ಅದು ಗುರುಗುಟ್ಟುತ್ತದೆ (ಮುಂಬಯಿ. ೪-೩೬); ನೀವು ಸಿಟ್ಟಗೇಳುವ ಕಾರಣವೂ ಇಲ್ಲ (ಕಮನಿ. ೩೨೩). ಸಿಟ್ಟಿನದು = ಕೋಪವನ್ನು ಸ್ವಭಾವವಾಗುಳ್ಳುದು: ಗಂಡಕ . . . ಜಾತ್ಯಾಸಿ ಸಿಟ್ಟಿನದಲ್ಲ (ಮುಂಬಯಿ. ೪-೪೭). ಸಿಟ್ಟುಇಳಿಸು = ಕೋಪವಿಳಿಯುವಂತೆ ಮಾಡು; ರೋಷವು ಕಡಮೆಯಾಗುವಂತೆ ಮಾಡು: ಆತನ ಸಿಟ್ಟು ಇಳಿಸಿದನು (ಮುಂಬಯಿ. ೬. ೫-೪೭). ಸಿಟ್ಟು ತೀರಿಸಿಕೊಳ್ಳು = ರೋಷವನ್ನು ತೀರಿಸಿಕೊಳ್ಳು: ಮಗನ ಕೊಂದ ಸಿಟ್ಟು ತೀರಿಸಿಕೊಳ್ಳಬೇಕೆಂದು (ಮುಂಬಯಿ. ೬. ೫-೪೬). ಸಿಟ್ಟು ನುಂಗಿಕೊಳ್ಳು = (ಆಲಂ) ಕೋಪವನ್ನು ವ್ಯಕ್ತಪಡಿಸದೆ ಇರು; ರೋಷವನ್ನು ತಡೆದುಕೊಳ್ಳು, – ಅಡಗಿಸಿಕೊಳ್ಳು: ಏನಾದರಾಗಲಿ ಸಿಟ್ಟು ನುಂಗಿಕೊಂಡು ಸುಮ್ಮನಿದ್ದುಬಿಡೋಣವೆಂದರೆ ಸಾಧ್ಯವಾಗಲಿಲ್ಲ (ರೂಢಿ). ಸಿಟ್ಟುನೆತ್ತಿಗೇರು = (ಆಲಂ) ಅತಿಯಾದ ಕೋಪವುಂಟಾಗು; ಕೋಪೋದ್ರೇಕ ಉಂಟಾಗು: ಅಧ್ಯಕ್ಷತೆವಹಿಸಿದ್ದ ಮೋಹನನಿಗೆ ಈ ಭಾಷಣಗಳನ್ನು ಕೇಳಿ ಸಿಟ್ಟು ನೆತ್ತಿಗೇರಿತ್ತು (ಪಂಜಪಂ. ೧೨೩). ಸಿಟ್ಟು ಮಾಡು = ಕೋಪವನ್ನು ವ್ಯಕ್ತಪಡಿಸು; ರೇಗು : ಮನೆಯ ಯಜಮಾನನು ಆಳುಮಕ್ಕಳನ್ನು ಒದರುತ್ತಾ ಅವರಿಗೆ ಸಿಟ್ಟು ಮಾಡುತ್ತಾ ಹಕ್ಕೆಯೊಳಗೆ ಬಂದನು (ಮುಂಬಯಿ. ೪-೪೩). [ದೇ. ॥ ತಮಿ. ಚೀಱು, ಚೀಱ್ಱುಮ್; ಮಲ. ಚೀಱು, ಚೀಱ್ಱು; ತುಳು. ಶಿಟ್ಟು, ಸಿಟ್ಟು, ಸೀರು; ತೆಲು. ಚೀರು]

ಸಿಟ್ಟುಗುಟ್ಟು (ಕ್ರಿ). ಕೋಪದಿಂದ ರೇಗು; ಮುಳಿಸಿನಿಂದ ಸಿಡುಕು : ಇಂತು ರೋಮಜರೆಂಬರು ಸಿಟ್ಟುಗುಟ್ಟಿ ತರುಮರನಡಿಯಲಿದ್ದರು (ಬಸವ. ೮೫೭); ಅಷ್ಟ

ಮಹಿಷಿಯರು ಸಿಟ್ಟುಗುಟ್ಟಲಿ ಎನ್ನ . . . ಪುರಂದರವಿಠಲನ್ನ ಕಂಡಲ್ಲಿ ಬಿಡುವೆನೆ (ಪುರಂದ. ಧಾ. ೧-೧೯೯-೪). [ಸಿಟ್ಟು + ಕುಟ್ಟು$_1$]

ಸಿಟ್ಟೇರು (ಕ್ರಿ). ಕೋಪವು ಹೆಚ್ಚಾಗು; ರೋಷವೇರು : (ಪೆನ್ಸಿಲನ್ನು ಅಪ್ಪಳಿಸಿ ಗದ್ದುಗೆಯಿಂದಿಳಿದು ಅತ್ಯಂತ ಸಿಟ್ಟೇರಿ) . . . (ಹೋಗುವನು) (ಪ್ರಕಾಶ. ೭೫).

[ಸಿಟ್ಟು + ಏರು$_1$ (< ಎಱ್$_1$)]

ಸಿಡಕ್ಕನೆ (ಅ). ಸಿಟ್ಟಿನಿಂದ ರಭಸವಾಗಿ ಹೋಗುವುದನ್ನು ಸೂಚಿಸುವ ಒಂದು ಅನುಕರಣಾವ್ಯಯ : ಲಲಿತ ಸಿಡಕ್ಕನೆ ತನ್ನ ರೂಮಿಗೆ ಹೊರಟುಹೋಗಿದ್ದಳು (ರೂಪಸ. ೬೭). [ಸಿಡಕ್$_0$ + -ಅನೆ$_1$]

ಸಿಡಿ$_1$ (ಕ್ರಿ). ೧. ಚಿಮ್ಮು; ಎಲ್ಲಕಡೆಗೂ ಎಗರು, – ಹಾರು : ಲವಣಾಂಬುರಾಶಿ ಕುಳ್ಳುಬಗುದಿವಲ್ಲಿ ಕೂಬ್ಬುದಿಯೆ ಮೇಗೆ ಸಿಡಿಲ್ಗುಳಂತೆ ಕೂಡೆ ತತ್ತಬಗುದಿಯುತ್ತು ಮಿರ್ಪ ಕುದಿಯೊಳ್ ಸಿಡಿದಲ್ಲಿಯ ಮುತ್ತುಗಳ್ (ಪಂಪಭಾ. ೧೧-೧೫೩); ಕ್ಷೀರವಾರಿಧಿಯ ನಮರಸಂದೋಹವು ಭೋರೆಂದು ಕಡೆವಲ್ಲಿ ಸಿಡಿದಾ ನೀರ ಬಿಂದುಗಳೆನಲೊಗೆದವಾಗಸದೊಳು ಚಾರುನಕ್ಷತ್ರಸಂಕುಳವು (ಅಂಜಚ. ೫-೧೧೪); ನೆರೆದು ಘನಘನಮವೇಭೋತ್ಕರಮಿಾಂಟಿ ಮರುತ್ತರಂಗಿಣೀಜಲಮಂ ಪೂತ್ಕರಿಸಿ ಸಿಡಿದಿಳಿವ ಕಣಗಣದಿರವೆನಿಸಿದುದರರ ಸುರಿವ ಪೆರ್ಮಳೆ ನಭದಿಂ (ರಾಜಶೇ. ೮-೧೦೯). ೨. ನೆಗೆ; ಹಾರು : ಆ ಕುಳಿಂದಂ . . . ಸಿಡಿದೋಡುವಾ ಕುರಂಗದ ಬೆನ್ನನ್ನೆದಿದಂ (ಕೃಷ್ಣಭಾ. ೨೮-೫೩); ಕೋವಿಗಳ್ ಬಡಿಯೆ ಮಿಡಿಗಳ ಹುಲ್ಲೆ ಕಡವೆಗಳವೆಲ್ಲ ಸಿಡಿದೋಡಿದುವು ತಂಡತಂಡದಿಂ ಕಂಡೆಡೆಗೆ (ಕಾಲೂರ. ೧೨-೧೬೧). ೩. ಚೆಲ್ಲಾಪಿಲ್ಲಿಯಾಗು; ಚೆದರು; ಹರಡು : "ಸಿಡಿ – ವಿಕೀರ್ಣೇ, ಸೂಕ್ಷ್ಮಾಯಸದಾಹಾಂತಗಜಕ್ರೋಧವಸ್ತುನೋಃ" (ಶಮಧಾ. ೫); ಹಿಂದೆ ಹಿಡಿವರು . . . ತಿರುಗಿದರೆ ಬಲದಿಂದ ಕೈಮಾಡುವರು ಕವಿದರೆ ಸಿಡಿವರೆಡಬಲಕೆ (ಕುಮಾರ್ಯೂ. ೩-೩೦); ಸಿಂಗದ ಬಟ್ಟೆ ನೋಳ್ಪೊಡಿಂತಿದು ಗಜಮೌಕ್ತಿಕಂ ಸಿಡಿದುದಿಲ್ಲಿ . . . ಎಂದು ಪಲವಚ್ಛೆಯಂ ಪರೀಕ್ಷಿಸಿ (ಶಬಶಂ. ೩-೪೬). ೪. ಒಡೆ; ಬಿರಿ ; ಸೀಳು : ಕರುಳುಗಿಯೆ ತಲೆ ಸಿಡಿಯೆ ನಿಟ್ಟೆಲು ಮುಱಿಯೆ . . . ಹಳಚಿದರು (ಕುಮಾಧೀ. ೪-೨೮); ಸಿಡಿದುದು ದಂತಿದಂತಮದು ಸಂಗಡಮಾಗಿರೆ ಕುಂಭಮೌಕ್ತಿಕಂ . . . ಬೇಸಗೆ ಯುಗ್ರಮೆಂತುಟೋ (ರಾಜಶೇ. ೫-೪೬); ಕಲ್ಲು ಮುಳ್ಳನು ತುಳಿದು ಕಾಲೆಲ್ಲ ಸಿಡಿಯುತಿದೆ ಕೆನ್ನೀರು ಹರಿಯುತಿದೆ (ಕವಿಸೂ. ೭೬-೨). ೫. ಆಸ್ಫೋಟವಾಗು ; ಸ್ಫೋಟಗೊಳ್ಳು : ಮೊಳೆದೆಱಗಿಕೊಳ್ಳ ಮಱೆ ಭೋರ್ಗರೆದೂದುವ ಗಾಳಿ ಸಿಡಿದು ಪೊಯ್ಯ ಸಿಡಿಲ್ ಕಾರಿರುಳೊಳಗುರ್ವಂ ಪಡೆದಿರೆ ಮರವಾನಸನೆನೆ ತಪಸ್ಸಿ ಮರಮೊದಲಿರ್ದಂ (ಆದಿಪು. ೬-೩೨); ಮಱೆ ಭೋರ್ಭೋರೆಂದಹೋರಾತ್ರಮುಮುಡುಗದೆ ಕೊಳ್ಳಲ್ಲಿ . . . ಮೆಯ್ಯಂ ಜಳೂಕಾವಳಿಗಳ್ ಪೀರ್ವಲ್ಲಿ ಮರ್ವುರ್ವಿಸೆ ಸಿಡಿದು ಸಿಡಿಲ್ ಬಂದು ಪೊಯ್ಯಲ್ಲಿ ಹೈಮಾಚಳಮಿರ್ಪಂತಾಗಳೆರ್ದ[ಂ] . . . ಯೋಗಿನಾಥಂ (ಸುಕುಮಾ. ೪-೯); ವಿಜ್ಞಾನವು ಮಾನವನ ಕಲ್ಯಾಣಕ್ಕೆಂದು ಜನ್ಮತಾಳಿ ಸಿಡಿಯುವ ಪರಮಾಣುಗಳನ್ನೂ ಜಲಜನಕಮಾರಕಅಣುಗಳನ್ನೂ ನಿರ್ಮಿಸಿ ವಿಶ್ವಮೇಧಕ್ಕೆ ಅಣಿಮಾಡುತ್ತಿದೆ (ಭಾರದ. ೧೭೫). ೬. (ಕಣ್ಣೀರನ್ನು) ಮಿಡಿ; ಸೂಸು : ಘಟೋತ್ಕಚನ ಸಾವಿಂಗೆ ಕರಮಟಲ್ಲು ಕಣ್ಣ ನೀರಂ ಸಿಡಿವಂತಕಾತ್ಮಜನನನಂತನಿಂತೆಂದಂ (ಪಂಪಭಾ. ೧೨-೧೫ ವ); ವಿನಯಮಂ ನುಡಿಯುತುಂ ಮುದಶ್ರುವಂ ಸಿಡಿಯುತುಂ ಪುನಃಪುನರಾಲಿಂಗನಂಗೆಯ್ಯುತುಂ (ಶಾಂತೀಶ್ವ. ೫-೧೭ ವ); ನುಡಿಯದಶ್ರುಗಳಂ ಸಿಡಿಯುತ್ತಿರೆ (ಪುಷ್ಪಪು. ೩-೭೨). ೭. ಕುಣಿ; ನೆಗೆ : ಸಿಡಿದ ಮೀಸೆಯ ಬಿಗಿದ ಹುಬ್ಬಿನ ಜಡಿವ ರೋಮಾಂಚನದ ಪಾತಿಯ ಕಡುಹುಕಾಱರು ಮಸಗಿದರು (ಕುಮಾರ್ಯೂ. ೫-೬೯). ೮. (ದೂರಕ್ಕೆ ಚಿಮ್ಮಿ) ಪ್ರತ್ಯೇಕವಾಗು; ಬೇರ್ಪಡು : ಶ್ರೀಸಂಗಮೇಶ್ವರಲಿಂಗದ . . . ವೀರದೊಳೊಂದಂ ಲೇಸನೀಯೆ ವೀರಭದ್ರನಾದಂ ಚೆಲುವಿನೊಳಿನಿತುಂ ಸಿಡಿಯೆ ಕಾಮನಾದಂ (ಬಸರ. ೮-೧೩೬). ೯. ದೂರ ಸರಿ; ದೂರವಾಗು : ಫಡಫಡೆತ್ತಲು ಸ್ವಾಮಿದ್ರೋಹರು ಸಿಡಿದರೋ ನಿಜಕುಲದ ಬೇರ್ಗಳ ಕಡಿದರೋ . . . ಎನುತ ಸೇನೆಯ ತಡೆದು ನಿಂದನು (ಕುಮಾಕ. ೨-೧೦); ಪಡೆಗಾರು ಕರ್ತರೆಲ್ಲರಿಸಿದ ವಿಜಯಾಂಕ ಸಿಡಿದೇಕೆ ಬಂದೆ ನೀನೆನಲು (ಭರಚ. ೩೭-೩); ಅಲರ್ಗೊಯ್ಯ ಬೇಳಂಬದಿಂದೆ ಕೆಲ ಸಿಡಿದು ಬಂದಾ ವಿಷಯೆ ಚೂತದ್ರುಮದ ನೆಳಲೊಳು . . . ಮಲಗಿಹ ಚಂದ್ರಹಾಸನಂ ಕಂಡು (ಕೃಷ್ಣಭಾ. ೩೦-೧೯). ೧೦. (ಆಲಂ) ಯಾತನೆಯಿಂದ (ತಲೆಯ) ಸ್ನಾಯುಗಳು ಮಿಡಿ, – ತುಡಿ: ಊಟ ಮುಗಿಸಿ ಚಾಪೆಯಲ್ಲಿ ಉರುಳಿಕೊಂಡಾಗ ಬ್ಯಾರಿಗಳ ತಲೆ ಸಿಡಿಯುತ್ತಿತ್ತು (ಮುಂಗಾಮು. ೨). ೧೧. ಕೆರಳು; ಸಿಟ್ಟಿಗೇಳು : ಹಂಸನಾಥನ ನೋಡುವಾಗ ಕರ್ಮಾಳಿವಿಧ್ವಂಸನಪಹುದೆನಲಿವನು ತಾಂ ಸಿಡಿದು (ಭರಚ. ೨೪-೧೬); ತನ್ನ ಮಗಂದಿರೇ ಎಂದಾದರೂಮ್ಮೆ ಅವರಿಗೆ ಕಠಿನಮಾತುಗಳನ್ನು ಆಡಿದ್ದೇ ಆದರೆ ಆಕೆ ಸಿಡಿದು ಹೋಗುವಳು (ಮಧುನ. ೫).

ಸಿಡಿಸಿಡಿ$_1$ (ದ್ವಿರುಕ್ತಿ) : ಮಡುವಿನಿಂ ಪೊಱಮಟ್ಟು ಮಱೊಮಿನಿನಂತೆ ಕೆಲ ಸಿಡಿಸಿಡಿದು ಪೊರಳಿ (ಚಿಬಪು. ೧೯-೪೩).

ಸಿಡಿ$_2$ (ನಾ). ೧. ಸಿಡಿಯುವಿಕೆ ; ಸ್ಫೋಟ : 'ಸಿಡಿಗೊಳ್ಳು' ಪರಾ. ೨. ಹಾರಿದ ಸಣ್ಣಚೂರು, – ಸಣ್ಣಕಣ ; ಸ್ಫುಲಿಂಗ : ಒಂದು ರತ್ನಮಂ ತೆಗೆದು ಸಿಲೆಯ ಮೇಲಿಟ್ಟು ಬೇಱೊಂದು ಸಿಲೆಯೊಳ್ ಪೊಯ್ಯ ಸಿಡಿದ ಸಿಡಿಯೊಂದು ಗಳಹನ ನಡುನೊಸಲಂ ತಾಗಿ ಪರಿವ ನೆತ್ತರ ಪೊಸಲಿಂ (ಪುಣ್ಯಾಸ್ರ. ೧೧-೨೦). [< ಸಿಡಿ$_1$]

ಸಿಡಿ$_3$ (ನಾ). ೧. ಕಬ್ಬಿಣದ ಕೊಕ್ಕೆ : (ಕೆ). ೨. ಹಳ್ಳಿಗಳ ವಾರ್ಷಿಕಹಬ್ಬಗಳಲ್ಲಿ ಗ್ರಾಮದೇವತೆಗೆ ಸಲ್ಲಿಸುವ ಒಂದು ಬಗೆಯ ಸೇವೆ ; P ಎತ್ತಿನ ಗಾಡಿಯ ಮೇಲೆ ಬಾವಿಯಿಂದ ನೀರನ್ನೆತ್ತುವ ಏತದಂತಹ ಏತವನ್ನು ಹೂಡುತ್ತಾರೆ. ಆ ಏತದ ತುದಿಯಲ್ಲಿ ಎರಡು ಕಬ್ಬಿಣದ ಕೊಕ್ಕೆಗಳಿರುತ್ತವೆ. ದೇವರ ಗುಡಿಯ ಮುಂದೆ ಹೆಬ್ಬಾಗಿಲಿನ ಬಳಿ ಈ ಏತದ ಗಾಡಿ ನಿಂತಿರುತ್ತದೆ. ಹರಕೆ ಸಲ್ಲಿಸುವ ವ್ಯಕ್ತಿ ಅಲ್ಲಿಗೆ ಬಂದಾಗ ಏತವನ್ನು ಬಗ್ಗಿಸಿ ಅದರ ತುದಿಯಲ್ಲಿರುವ ಕೊಕ್ಕೆಗಳನ್ನು ಸೊಂಟಕ್ಕೆ ಚುಚ್ಚಿ ಅನಂತರ ಏತವನ್ನು ಮೇಲಕ್ಕೆ ಎತ್ತುತ್ತಾರೆ. ಹೀಗೆ ಎತ್ತಿ ಇಳಿಸಿಯಾದ ಮೇಲೆ (ಅದರಿಂದಾದ ಗಾಯಕ್ಕೆ ಔಷಧಿಹಾಕಿ) ಆ ವ್ಯಕ್ತಿಯನ್ನು ದೇವರ ಮುಂದೆ ಕರೆದುಕೊಂಡು ಹೋಗಿ ಪೂಜೆ ಮಾಡಿಸುತ್ತಾರೆ. ಇದು ಹಿಂದೆ ಸಿಡಿ ಆಡಿಸುತ್ತಿದ್ದ ವಿಧಾನ. ಈಗೀಗ ಸೊಂಟಕ್ಕೆ ಕಬ್ಬಿಣದ ಕೊಕ್ಕೆಗಳನ್ನು ಚುಚ್ಚುವ ಬದಲು ಬಟ್ಟೆಯನ್ನು ಸೊಂಟಕ್ಕೆ ಬಿಗಿದು ಸಿಡಿಕಂಬದ ಅಡ್ಡಮರಕ್ಕೆ ತೂಗುವಂತೆ ಕಟ್ಟುವ ಸೌಮ್ಯವಿಧಾನಗಳು ರೂಢಿಗೆ ಬಂದಿವೆ : ತಿಂಗಳಿಗೆ ಒಂದು ಬಾರಿ ಉಚ್ಚಂಗಮ್ಮನಿಗೆ ಉತ್ಸವ, ವರುಷಕ್ಕೆ ಒಂದು ಬಾರಿ ಸಿಡಿ ಈ ಪ್ರಕಾರ ನಡೆಯುವಂತೆ ಏರ್ಪಾಡು ಮಾಡಿಸಿದ್ದನು (ಚಿತ್ರಪಾ. ೫೮); ಕನ್ನಡರಮಣಿಯರು ಧಾರಾಳವಾಗಿ ಅನುಸರಿಸಿದ ಸಿಡಿ, ಸಹಗಮನ, ಆನೇ ಕಾಲ ಹರಕೆ, ಜೋಹಾರ ಮುಂತಾದ ಕಠೋರವಾದ ಪದ್ಧತಿಗಳು ಅವರ ವೀರಜೀವನದ ಉಜ್ವಲತೆಯನ್ನು ಬೀರುತ್ತವೆ (ಕಮಿಂಚ. ೨೯). ೩. ಸಿಡಿಯಾಡಲು ಹರಸಿಕೊಂಡ ಗುಂಪು : ಏಳೂರ ಸಿಡಿ ಬಂದು ತಾನಾಕೆ ನಿಂತಾವು ತಾಯೂರ ಸಿಡಿ ಬರಲಿಲ್ಲಾ ದೊಡ್ಡಮ್ಮ ಕೋಡ್ಗಲ್ಲ ಹತ್ತೀ ದನಿ ತೋರೇ (ಹುಚ್ಚಪ. ೬೬). ೪. ಪ್ರಾಣಿಗಳನ್ನು ಹಿಡಿಯಲು ಬಳಸುವ ಸಾಧನ; ಕೊಕ್ಕೆ ಬಲೆ ಮುಂತಾದವು : ಆ ಬಲೆಯೊಳ್ತವೆ ಸಿಲ್ಕಿದಂ ಸಮಂತಾಮಿಗೆ ಪಣ್ಣ ಪೋದ ಸಿಡಿಯೊಳ್ಕಿಗೆ ಬಿಟ್ಟ ಬಿಡಾಲನಂದದಿಂ (ಉದ್ಭಟ. ೬-೧೨೬); ಉರುಳು ಪಾಡಿ ಸಿಡಿ ಸೆಳೆಗಾಣ ಬೆಳ್ಳಾರ ತಡಿಕೆ ದೀವದ ಖಗಮೃಗಸಂತತಿಗೂಡಿ ನಡೆತಂದನಾ ವನಚರನು (ನೇಮಿಸಂ. ೨-೩೮); ಹಾಳು ಹೆಗ್ಗಣದ ಉಪದ್ರವವಂತೂ . . . ಎಮ್ಮ ಬೋನುಗಳನ್ನು ಮಾಡಿಕೊಂಡಾಗ್ಗೂ ಸಿಡಿ ಒಡ್ಡಿಕೊಂಡಾಗ್ಗೂ ಇದ್ದೇ ಇದೆ (ಮುದ್ರಾಮಂ. ೧೧೬). ೫. ಒಂದು ಬಗೆಯ ಆಯುಧ : ಒಡ್ಡಿದ ಸೂಲಂಗಿಗಳಿಂದೊಡ್ಡಿದ ಡೆಂಕಣಿಯ ಮೇಲೆ ಆಲುವ ಹೆಣ ಮತ್ತಡ್ಡಾಯುಧ ಸಿಡಿ ಗರಗಸ ಒಡ್ಡಿಹ ಮಾಱಂಬುಗಂಡ ನೃಪಕುಲತಿಲಕಂ (ನನ್ನಚಾ. ೪-೧೭೨). ೬. ಆನೆಯನ್ನು ಚೋದಿಸುವ ಸಾಧನ ; ಅಂಕುಶ : "ಸಿಡಿ – ವಿಕೀರ್ಣೇ, ಸೂಕ್ಷ್ಮಾಯಸದಾಹಾಂತಗಜಕ್ರೋಧವಸ್ತುನೋಃ" (ಶಮಧಾ. ೫); ಸಿಡಿಯಂ ಕಂಡ ಸಿಂಧುರದಂತೆ ಕೆಳರ್ದು ಸೇನಾಸಮನ್ವಿತಂ ಪೊಱಮಟ್ಟು (ಮಹಾನೇ. ೭-೯೩ ವ).

ಸಿಡಿ ಚುಚ್ಚಿಸಿಕೊಳ್ಳು = (ಹರಕೆಯನ್ನು ಸಲ್ಲಿಸುವುದಕ್ಕಾಗಿ) ಸಿಡಿಕಂಬದ ಅಡ್ಡಮರಕ್ಕೆ ತೂಗುವಂತೆ ಇರುವ ಕಬ್ಬಿಣದ ಕೊಕ್ಕೆಯನ್ನು ಸೊಂಟಕ್ಕೆ ಚುಚ್ಚಿಸಿಕೊಂಡು ಸಿಡಿಯಾಡು : ಹತ್ತು ಹದಿನೆರಡು ವರ್ಷಗಳಿಗೊಮ್ಮೆ ತನ್ನ

ಅಪೂರ್ವಉತ್ಸವಕಾಲದಲ್ಲಿ, ಜನ ಸಿಡಿ ಚುಚ್ಚಿಸಿಕೊಳ್ಳುವ ಉತ್ಸವ ಜರುಗಿಸಿ, ಭಕ್ತರು ಕೇಳಿದಂಥ ವರಗಳನ್ನು ಸಲ್ಲಿಸಿ, ಮೆರೆದ ಹಿರಿಯ ದೆವ್ವ ಕಲ್ಯಾಡ (ಕುಡಿಕೂ. ೨).

[ದೇ. ॥ ತಮಿ. ಚೆಟಿಲ್; ತುಳು. ಸಿಡಿ, ಸೆಡಿ; ತೆಲು. ಸಿಡಿ, ಸಿಡುಲು, ಸಿಳ್ಳು]

ಸಿಡಿ₄ 'ಸೀಡಿ' ನೋ.

ಸಿಡಿ₅ (ನಾ). ಮೆಟ್ಟಲು : ಏಣಿ : (ಕ).

[<— ಮರಾ. ಶಿಡೀ, ಶಿಢೀ, ಸಿಡೀ, ಸಿಢೀ; ಹಿಂ. ಸೀಢೀ./ ಪ್ರಾ. ಸಿಢ್ಢೀ./ ಸಂ. ಶ್ರೇಢೀ, ಶ್ರೇಣೀ]

ಸಿಡಿಂಗು (ನಾ). (?) : ಚಿರಕಾಲವಸುರನ ಸಿಡಿಂಗಿತ್ತು ಕೊಟ್ಟ ಜವ [ಪಾಠಾಂ. ಸಿಗಳ್ಳೆ ಕೊಟ್ಟ ಜೇವಿತ್ತು] ಚಿರಕಾಲವಂಗಜನ ಬರ್ದುಗೆಯೊಳುಂ ಬಳಿಕ ಚಿರಕಾಲ ಬಸುಱ ಭಂಗದೊಳು ಮೇಣ್ಚಿರಕಾಲ ಮಂಗಲದಿ ಗಿರಿಜಾತೆಯ (ಪದೇಪು. ೧೩-೩). [?]

ಸಿಡಿಂಬ 'ಸಿಡುಂಬು' ನೋ.

ಸಿಡಿಂಬು 'ಸಿಡುಂಬು' ನೋ.

ಸಿಡಿಕಂಬ (ನಾ). ಸಿಡಿಯಾಡಿಸಲು ನೆಟ್ಟ ಕಂಬ, — ಸನ್ನೆಗೋಲು : ದೇವರ ಗುಡಿಯ ಮುಂದೆ ಸಿಡಿಕಂಬದ ಬಳಿ ಸಾರಿಸಿ, ರಂಗೋಲಿ ಇಟ್ಟು, ಪೂಜೆ ಮಾಡಿದ ಒಂದು ಸ್ಥಳದಲ್ಲಿ ಬಂದು ನಿಂತು . . . ಅಬ್ಬರಿಸುತ್ತಾನೆ (ನನ್ನೂರು. ೬೪).

[ಸಿಡಿ₃ + ಕಂಬ₁ (< ಕಂಭ)]

ಸಿಡಿಕಲ್ಲು 'ಸಿಡಿಗಲ್' ನೋ.

ಸಿಡಿಖಂಡ (ನಾ). ಹಾರಿದ ಮಾಂಸಖಂಡ : 'ಸಿಡಿಖಂಡಂಗೊಳ್' ಪರಾ.

[ಸಿಡಿ₂ + ಖಂಡ]

ಸಿಡಿಖಂಡಂಗೊಳ್ (ಕ್ರಿ). ಚಿಮ್ಮಿದ ಮಾಂಸಖಂಡವನ್ನು ತೆಗೆದುಕೊಳ್ಳು : ಅಡಗಿನ ಕಡುವೆಸನಿಗ ತಿನ್ನಡಗಂ ನಿನ್ನಡಗನೆಂದು ಪೇಸೇಟ್ಟೆನೆಗಂ ಸಿಡಿಖಂಡಂ ಗೊಂಡುಗಿಬಗಿದಿಡಿ[ದಿ]ಡಿದೆಡೆವಿದೆ ಕೂಱುಗೊಳ್ವರ್ ಬಾಯೊಳ್ (ಸುಕುಮಾ. ೧೧-೪೨).

[ಸಿಡಿಖಂಡ + ಕೊಳ್₁]

ಸಿಡಿಗಂಟಿ (ನಾ). ಒಂದು ಬಗೆಯ ಮುಳ್ಳುಗಿಡದ ಪೊದೆ, — ಹೊದರು : ಅಡವಿಯೊಳಗಱಸುವಡೆ ಸಿಡಿಗಂಟಿ ತಾನಲ್ಲ ಮಡುವಿನೊಳಗಱಸುವಡೆ ಮತ್ಸ್ಯ ಮಂಡುಕವಲ್ಲ (ವಚಸಂ. ೪-೭). [ಸಿಡಿ₂ + ಕಂಟಿ₂]

ಸಿಡಿಗನ್ನ (ನಾ). ಪ್ರಕಟವಾದ ಮೋಸ; ಬಹಿರಂಗವಾದ ಕಪಟ : ಅತಿ ಮೂರ್ಖನೆಂದು ಸಿಡಿಗನ್ನದೊಳು ಕಟಕಿಯೊಳು ಹದಿರೊಳಣಕದೊಳಾದಿಮಯ್ಯನಂ ನುಡಿದನವನು (ಸೋಮಚ. ೨-೧೧೧). [ಸಿಡಿ₁ + ಗನ್ನ₁]

ಸಿಡಿಗಲ್, ಸಿಡಿಕಲ್ಲು (ನಾ). ೧. ಚಿಮ್ಮುವ ಕಲ್ಲು : ನೆಗ್ಗಿ ಸಿಡಿಗಲ್ಲಳಿಂದೊರಗಿದವು ವ್ಯಾಘ್ರಂಗಳು (ಪರಶು. ೨೧-೩೨). ಸಿಡಿಕಲ್ಲು : ೨. ಸಿಡಿತಲೆಯನ್ನು ಕೊಡಲು ಬಳಸುತ್ತಿದ್ದ ಕಲ್ಲು, — ಶಿಲೆ (?) : ಆ ಬಯಲುಸೀಮೆ ಮೂಡಲು ಸಿಡಿಕಲ್ಲು ಮೇರೆ ಬಡಗಲು ಪಡುವಲು ತೆಂಕಲು ಗವನಿ ಮೇರೆಯೊಳಗಾಗಿ ಬಸದಿಯ XX ಸಣ್ಣ ಶ್ರೀ (ಎಕ. VIII, ನಗರ. ೫೯-೧೬; 1066). [ಸಿಡಿ₁ + ಕಲ್₃]

ಸಿಡಿಗುಂಡು (ನಾ). ೧. ಎಸೆಯುವ ಕಲ್ಲು; ಬೀಸಿ ಚಿಮ್ಮುವ ಕಲ್ಲು : ಖಗಮೃಗವ್ರಾತಮಂ ಪಾತಮಂ ಮಾಡಿದರ್ಕೂಡೆಕೂಡೆ ಸಿಡಿಗುಂಡು ಬಡಿಕೋಲ್ಗಳುಱಬೆಯಿಂದಿಱಬೆಯಿಂದಿಡುಗವಣ ನೇಣುರಲ್ಗೊಲೆಗಳಿಂ ಬಲೆಗಳಿಂ (ಜೈಮಿಭಾ. ೨೮-೪೭). ೨. ಫಿರಂಗಿಯಿಂದ ಹಾರುವ ಗುಂಡು : ಸಿಡಿಗುಂಡಿನೆದುರಿನಲಿ ಕೂರಸಿಗಳೆದುರಿನಲಿ . . . ಮುಂದಿಟ್ಟ ಕಾಲ ಹಿಂದೆಗೆಯದಳಿವವನು ಸತ್ಯಾಗ್ರಹಿ! (ಪಾಂಚಜ. ೨೦-೯). ೩. ಸ್ಫೋಟಿಕವಸ್ತು : ಜಲಗರ್ಭನಾವೆಗಳು . . . ನೀರಿನ ಕೆಳಕ್ಕೆ ಮುಣುಗಿ ವೈರಿಹಡಗುಗಳ ಮಗ್ಗುಲನ್ನು ಸೇರಿ ಅಲ್ಲಿ ಸಿಡಿಗುಂಡುಗಳನ್ನು (Bombs) ಕಟ್ಟಿ ಮರೆಯಾಗುತ್ತಿದ್ದುವು (ಚಾಲಪ್ರ. II, ೭೭೬). [ಸಿಡಿ₁ + ಗುಂಡು]

ಸಿಡಿಗೊಳ್ಳು (ಕ್ರಿ). ಸ್ಫೋಟಗೊಳ್ಳು; ಚೂರುಚೂರಾಗು : ಬೀಳುತಿರ್ದವು ಕೆಲವು ಉರಿಯೊಳಗೆ ಹೊಗೆಯೊಳಗೆ . . . ಬೀಳುತಿರ್ದುವು ಕೆಲವು ಝಣಝಣತ್ಕಾರದಿಂ ಶಿಖಿಯೊಳಗೆ ಸಿಡಿಗೊಂಡವು (ತುರಂಗ. ೬-೩೮). [ಸಿಡಿ₂ + ಕೊಳ್ಳು₁ (< ಕೊಳ್₁)]

ಸಿಡಿಝೋಮು (ನಾ). ಸಿಡಿತದಿಂದೊಡಗೂಡಿದ ಜೋಮು; ಸ್ನಾಯುಗಳ ತುಡಿತ : ಎರಡು ವಾರಗಳಿಂದ ಹಗಲೂ ರಾತ್ರಿ ಸಿಡಿಝೋಮು ತಲೆಯನ್ನು ಬಿಗಿದಿದೆ, ತುಂಬಾ ಕಷ್ಟವಾಗಿದೆ (ಮನೋನಂ. ೧೦೦). [ಸಿಡಿ₂ + ಝೋಮು (< ಜುಮ್ಮು₃)]

ಸಿಡಿತ (ನಾ). ೧. ಆಸ್ಫೋಟ : ಈ ಬಾಧೆಗಳಿಂದ ಗಣಿಗಳೊಳಗೆ ಸಿಡಿತವನ್ನು (Explosion) ತಪ್ಪಿಸಿ ಸಹಸ್ರಾರುಜನರ ಪ್ರಾಣಾಪಾಯವನ್ನು ಹೋಗಲಾಡಿಸುವುದು ಹೇಗೆ, ಎಂದು ಕೆಲವರು ಚಿಂತಿಸುತ್ತಿದ್ದರು (ಎಜ್ಞಾಕ. ೭೩). ೨. ಯಾತನೆಯಿಂದ ಸ್ನಾಯುಗಳು ಮಿಡಿಯುವಿಕೆ, — ತುಡಿಯುವಿಕೆ : ಪೇರೇರುಗಳ ಕಿಚ್ಚು ಸಿಡಿತದಿಂ ತೆಣರುತಿರೆ ಹೋರಾಟ ಬಾಳ್ಳೆಯಂ ಬೇಡೆನ್ನುತ್ತಿತ್ತು (ಕಾಲೂರ. ೧೦೫-೨೧೩); ತಲೆಯ ಸಿಡಿತಕ್ಕೆ ಮಲಶೋಧನೆಕೊಂಡ ಹಾಗೆ (ಗಾದೆ) [ಸಿಡಿ + - ತ₂]

ಸಿಡಿತಲೆ 'ಸಿಡಿದಲೆ' ನೋ.

ಸಿಡಿತಲೆಗೊಡು 'ಸಿಡಿದಲೆಗೊಡು' ನೋ.

ಸಿಡಿದಲೆ, ಸಿಡಿತಲೆ (ನಾ). ೧. ದೇಹದಿಂದ ಬೇರೆಯಾಗಿ ಚಿಮ್ಮುತ್ತಿರುವ ತಲೆ; ದೇಹದಿಂದ ಬೇರ್ಪಟ್ಟ ತಲೆ : ತಮ್ಮಟೆಯಾಟಕ್ಕೆ ಬಾಯ್ಯಟೆಗುಟ್ಟುವ ಸಿಡಿದಲೆಗಳುಮಂ (ಅರ್ಜನೇ. ೫-೪೧ ವ); ಮತ್ತಮವರ ಪಸುಳೆಗಳ್ ಪಕ್ಕಿಯ ಸಿಡಿದಲೆಯೊಳ್ ತಿಱಿಕಲ್ಲಾಟಮಂ . . . ತುಡುಂಕಿ ಪಿಡಿವೆಡೆಯೊಳ್ ಕೊಡಪುವ ಕೋಳ್ಬೆಯೆಱಂಕೆಯ ಪೊಯ್ಲಿಂ ನೆಗೆದ ದೂಳಿ ಕಣ್ಗೆ ಬೀಳೆ ಕಣ್ಮುಚ್ಚುವುದಱಿಂ ಕಣ್ಮುಚ್ಚಾಟಮಂ ಕಲ್ಪರ್ (ಚಕವಂ. ೮-೧೨). ೨. ಸ್ವಾಮಿಭಕ್ತಿಯ ಕಾಣಿಕೆಯಾಗಿ ಸಂಕಲ್ಪದಂತೆ ತಲೆಯನ್ನು ಅರ್ಪಿಸುವಿಕೆ, — ಬಲಿಯಾಗುವಿಕೆ : ಪೊಡವ ವೀರವಱೆಯ ಪಿಡಿವ ಬಿರುದಿನ ಕಾಳೆಯ ಸುತ್ತಿಱದ ಮುತ್ತಿನ ತಳೆಯ ತಲೆಗೆ ಮುಂದಲೆಯಾಗಿ ಲೆಂಕರ್ಕುಡುವ ಸಿಡಿದಲೆಯ ಸಹಗಮನಸಮುತ್ಸುಕತೆಯಿಂ ಕೈವಿಡಿಸೆ (ಅನಂಪು. ೧೧-೭೪ ವ). ೩. ಸ್ವಾಮಿಭಕ್ತಿಯ ಕಾಣಿಕೆಯಾಗಿ ತಲೆಯನ್ನು ಅರ್ಪಿಸುವ ವೀರ : ಪವಡಿಸಿಹ ರಾಜನಂ ಪೊಡೆಯ ಸೀಳ್ದಪರಂತೆ ಕುನ್ನಿಗಳ್ ತಾವೆತ್ತ ಸಿಡಿದಲೆಗಳೆತ್ತನುತೆ ಬಲ ಮತ್ತೆ ಮೆತ್ತಿದುದು (ಪರಶು. ೧೩-೬೨). ಸಿಡಿತಲೆ : ೨. ಹೊನ್ನಿ ಸಿಡಿತಲೆಯಗೊಟ್ಟು ಸುರಲೋಕಪ್ರಾಪ್ತಿಯಾದಲ್ಲಿ ಚನ್ದ್ರಾರ್ಕಮುಳ್ಳನ್ನ XXX ಸ್ಥಿರಸ್ಥಾಯಿಯಾಗಿ ನಿಲಿಸಿದ ಕಲ್ಲು (ಎಕ. XI, ಮೊಳಕಾ. ೧೨-೬; ಸು. 1215).

[ಸಿಡಿ₁ + ತಲೆ₁]

ಸಿಡಿದಲೆಗುಡು 'ಸಿಡಿದಲೆಗೊಡು' ನೋ.

ಸಿಡಿದಲೆಗೊಡು, ಸಿಡಿತಲೆಗೊಡು, ಸಿಡಿದಲೆಗುಡು (ಕ್ರಿ). ೧. ತಲೆಯನ್ನು ಕತ್ತರಿಸು : ಕಡಿದನು ಖಳರೆಚ್ಚ ಕೋಲ್ಗಳ ವಕ್ಷದೊಳಿಡಿದನೆಲ್ಲರಿಗೆ ಕರ್ಗಣೆಯ ಉಡಿದನು ಕಲಹಕಾತುರಿಯದ ದೈತ್ಯರ ಸಿಡಿದಲೆಗೊಟ್ಟನಾಹವದಿ (ಮೋಹತ. ೩೪-೧೧). ಸಿಡಿತಲೆಗೊಡು : ೨. ತಲೆಯನ್ನು ಕಾಣಿಕೆಯಾಗಿ ಅರ್ಪಿಸು : ಹೊಣೆಯನ್ನು ಹೊತ್ತವನು ಪ್ರಾಣವನ್ನು ಬಿಟ್ಟಾನು! ಸಿಡಿತಲೆಗೊಟ್ಟು ಮಾನವನ್ನು ಕಾಪಾಡಿಕೊಂಡಾನು! (ಸವತಿ. ೪). ಸಿಡಿದಲೆಗುಡು : ೩. ಬಲಿಕೊಡು : ತಲೆ ಚೋಳಿಸಿ ಹೋತಂ ಸಿಡಿದಲೆ[ಪಾಠಾಂ. ಹೊಂತಂ ಮಿಡಿದಲೆ]ಗುಡುವರ್ (ಸಮಪ. ೯-೧೨೧).

[ಸಿಡಿದಲೆ + ಕೊಡು₁]

ಸಿಡಿನುಡಿ (ಕ್ರಿ). ಕೋಪದಿಂದ ನುಡಿ; ರೇಗಿ ಮಾತನಾಡು : ಮಾಡಿಕೊಳ್ಳುವವರು ನೋಡಿ ಮೆಚ್ಚಿದರಾಯಿತು ಎಂದು ತಡೆಯಲಾರದೆ ಸಿಡಿನುಡಿದಳು (ತೇಮೋಡ. ೧೦೩); ಇವಳು ಒಮ್ಮೆಯಾದರೂ ಸಿಡಿನುಡಿಯಬಾರದೆ? (ಕಪ್ಪುಸು. ೨೪). [ಸಿಡಿ₁ + ನುಡಿ₁]

ಸಿಡಿಪಿಡಿ (ನಾ). ಕೋಪ; ಅಸಹನೆ; ಸಿಡಿಮಿಡಿ : ಏನೇ, ಹಾಗೆ ಸಿಡಿಪಿಡಿ ಸುರುವು ಮಾಡಿಬಿಡ್ತೀಯಾ ಮನೆಗೆ ಬಂದ ಕೂಡಲೇ (ಹನ್ನೊಂದ. ೮೦); ಸರೋಜಳಲ್ಲಿ ಸಿಡಿಪಿಡಿ ತೋರಹತ್ತಿತ್ತು (ಭಾರಥಿ. ೧೫೭).

ಸಿಡಿಪಿಡಿ ಮಾಡು = ಅಸಹನೆಯಿಂದ ವರ್ತಿಸು : ಹೆಂಡತಿ ಸಿಡಿಪಿಡಿಮಾಡತೊಡಗಿದಳು (ರಂಗರೂ. ೧೦೧). 'ಸಿಡಿಮಿಡಿ' ಪರಾ. [< ಸಿಡಿ₁]

ಸಿಡಿಬಲೆ 'ಸಿಡಿವಲೆ' ನೋ.

ಸಿಡಿಬು 'ಸಿಡುಂಬು' ನೋ.

ಸಿಡಿಮಜ್ಜಿಗೆ (ನಾ). (ಬಾಣಂತಿಯರಿಗೆ ಬಡಿಸಲು) ಕಾದ ಬಿಳಿಕಲ್ಲು ಹಾಕಿ ಸಿಡಿಸಿ ಉಪ್ಪು, ಮೆಣಸು, ಅರಿಸಿನ ಮುಂತಾದುವುಗಳನ್ನು ಬೆರಸಿ

ಸಂಸ್ಕಾರಗೊಳಿಸಿದ ಮಜ್ಜಿಗೆ : ಮಜ್ಜಿಗೆಯೊಳಗೆ ಉಪ್ಪು ಶುಂಠಿಯ ತದಕುಟ್ಟಿ ಹಾಕಿ, ಒಂದು ಬಿಸಣಿಗೆಯಲಿ ಕಾಯಲೆತ್ತಿವೊಪ್ಪಚ್ಚಿ ಬೆಣ್ಣೆಯ ಹಾಕಿ, ಸಾಸಿವೆ, ಜೀರಿಗೆ, ಕರಿಬೇವು ಹಾಕಿ ತೊಳಸುತ್ತವೊಡೆಯದ ಮುನ್ನ ಎರೆದುಂಬುದೀಗ ಸಿಡಿಮಜ್ಜಿಗೆ (ಭೀಮಸೂ. ೨೯). 'ಸಿಡಿಯಳೆ' ಪರಾ. [ಸಿಡಿ$_1$ + ಮಜ್ಜಿಗೆ]

ಸಿಡಿಮದ್ದು (ನಾ). ೧. (ಬಂಡೆಯನ್ನು ಒಡೆಯಲು ಬಳಸುವ) ಸ್ಫೋಟಕ ವಸ್ತು ; ಡೈನಮೈಟು : ಸಿಡಿಮದ್ದಿನ ಪೇರುಂಡೆಯು ನಾನು ; ಸಿಡಿವ ಫಿರಂಗಿಯು ನಾನು (ಪಾಂಚಜ. ೧೬-೬); ಸಿಡಿಮದ್ದನ್ನು ಸಿಡಿಯಿಸಿ ಬೆಂಕಿಯಿಂದ ಸುತ್ತುಮುತ್ತು ಸುಡುವುದೂ ಸೃಷ್ಟಿಯೇ (ಸಾಹಿಜೀ. ೯). ೨. ಪಟಾಕಿ : ಬೀದಿಯ ತುಂಬಾ ಹುಡುಗರು ಸುಡುವ ಸಿಡಿಮದ್ದಿನ ಹಾವಳಿ (ರೂಢಿ). [ಸಿಡಿ$_1$ + ಮದ್ದು (< ಮರ್ದು)]

ಸಿಡಿಮರ (ನಾ). = ಸಿಡಿಕಂಬ : ಸಿಡಿಮರದ ಹತ್ತಿರ ಸಾರಿಸಿ, ರಂಗೋಲಿ ಇಟ್ಟು ಪೂಜೆ ಮಾಡಿದರು (ರೂಢಿ). [ಸಿಡಿ$_3$ + ಮರ$_1$]

ಸಿಡಿಮಿಡಿ (ನಾ). ೧. ಅಸಹನೆ; ಕೋಪ : ಸಿಡಿಮಿಡಿಯಿಂದಾಚರಿಸಲು ಬಾಲಕ (ಯೋಗಾಂವಿ. ೨-೧೦); ಗಾಡಿಯವನು . . . ಸುತ್ತು ಹಾಕಿ ಹಾಕಿ ಕೊನೆಗೆ ಬೇಸತ್ತು ಸಿಡಿಮಿಡಿಯ ಸ್ವರದಲ್ಲಿ ನುಡಿದನು (ಇಪ್ರಕ. ೩೩೧); ಸಿಡಿಮಿಡಿಗೆ ಬೆದರಿ ಬಗೆ ಸುಡುವ ಕಾಟಂ ಪಿರಿದು (ಕಾಲಾರ. ೧೦೯-೨೨೩). ೨. ಗಾಬರಿ; ತಳಮಳ: "ಸಿಡಿಮಿಡಿಯೆನಲ್ಕೆ ತಳ್ಳಂಕಂ ತಾಂ" (ಕವಿಕಂ. ೨೫೩). ೩. ದುಃಖ; ವ್ಯಥೆ: 'ಸಿಡಿಮಿಡಿಗೊಳ್' ಪರಾ.

ಸಿಡಿಮಿಡಿ ಮಾಡು = ಅಸಹನೆಯಿಂದ ವರ್ತಿಸು; ಅಶಾಂತಸ್ಥಿತಿಯಲ್ಲಿರು : ಕಚೇರಿಯಿಂದ ಸಿಡಿಮಿಡಿ ಮಾಡುತ್ತಲೆ ಕಿಟ್ಟಿ ಮನೆಗೆ ಬರುವುದು ಗಂಗವ್ವನ ಸಾಮಾನ್ಯ ಅನುಭವವಾಯಿತು (ಗಂಮಾಯಿ. ೩೧); ಹೋದವನು ಮುಂದೆ ತಿರುಗಿ ಬಂದ ಮೇಲೆ ಸಿಡಿಮಿಡಿ ಮಾಡಿ ಸರಿದು ಮಾತಾಡದೆ ಸುಮ್ಮನಿರಲು (ಕನ್ನಡಾ. ೧೧೮). **ಸಿಡಿಮಿಡಿಯಾಗು** = ಸಿಡಿಮಿಡಿಮಾಡು : ಪಡು(ಡ)ಗುಂ ಪೊರಳ್ಗುಂ (ಸಲೆ) ಸಿಡಿಮಿಡಿಯಕ್ಕುಂ ಬೆಮರ್ತುಮುಮ್ಮಳಿಸುಗುಂ . . . ಸುಭಿಕ್ಷಶೂಲೆ ಕೆರಳ್ಮೊಡೆ ತುರಗಂ (ಅಶ್ವಶಾ. ೧೧-೪); ಗಂಡನು ತನ್ನ ಪ್ರೇಮವನ್ನು ಅವಳ ಮೇಲೆ ತೋರಿಸದೆ ಸಿಡಿಮಿಡಿಯಾಗಿ ವೈಮನಸ್ಸಿನಿಂದಿರಲು (ಕನ್ನಡಾ. ೧೦೧). [< ಸಿಡಿ$_1$./ ತೆಲು. ಚಿಡಿಮುಡಿ, ಸಿಡಿಮುಡಿ]

ಸಿಡಿಮಿಡಿಗುಟ್ಟು (ಕ್ರಿ). ಅಸಮಾಧಾನವನ್ನು ವ್ಯಕ್ತಪಡಿಸು; ಸಿಟ್ಟಿನಿಂದ ವರ್ತಿಸು : ಹಾಗ್ಯಾಕೆ ಮಾಡಿದೆಯೊ? ಅಂತ ಸಿಡಿಮಿಡಿಗುಟ್ಟುತ್ತಾ ಇದ್ದಾರೆ (ಮನೋನಂ. ೨೧೨); ಸಿಡಿಮಿಡಿಗುಟ್ಟಬಾರದಂತೆ ಬರೋದು ತಡವಾದರೇಂತ ತಿಳಿಸೇ ಬಿಡಿ (ವೃದ್ಧವಿ. ೮೯). [ಸಿಡಿಮಿಡಿ + ಕುಟ್ಟು$_1$]

ಸಿಡಿಮಿಡಿಗೆಯ್ (ಕ್ರಿ). ಅಸಮಾಧಾನ, ರೋಷಗಳನ್ನು ವ್ಯಕ್ತಪಡಿಸು; ಕ್ರೋಧಗೊಳ್ಳು : ಕೇಳಿ ಸಿಡಿಮಿಡಿಗೆಯ್ಯುತೆದ್ದು ನೃಪಾಲನೋಲಗವನು ವಿಸರ್ಜಿಸಿ (ಜೀವಂಚ. ೬-೭). [ಸಿಡಿಮಿಡಿ + ಕೆಯ್$_1$]

ಸಿಡಿಮಿಡಿಗೊಳ್, ಸಿಡಿಮಿಡಿಗೊಳು, ಸಿಡಿಮಿಡಿಗೊಳ್ಳು (ಕ್ರಿ). ೧. ಅಸಮಾಧಾನವನ್ನು ಹೊಂದು; ಅಸಹನೆಯಿಂದ ವರ್ತಿಸು: ಸಿಡಿಮಿಡಿಗೊಂಡು ತನ್ನ ಕಲುಷೋಗ್ರಕೃಶಾನುವೆ ತನ್ನ ದೇಹಮಂ ಸುಡೆ (ಪಂಡಾಮಾ. ೧೪-೧೭೩); ಕೋಡಗಮಂ ಪುಲ್ಲೋಳ್ ಮುಚ್ಚಿ ಸಿಡಿಮಿಡಿಗೊಂಬಂತೆ ಸಿಡಿಮಿಡಿಗೊಳುತ್ತುಂ (ಧರ್ಮಾಮೃ. ೧-೧೫೬); ತಾರಾಚಳನಾಥನ ಘನವೈರಾಗ್ಯಕೃಂಜೆ ನಡುಗಿ ಸಿಡಿಮಿಡಿಗೊಳ್ವಳ್ (ಗಿರಿಕ. ೫-೮೮). ೨. ಗಾಬರಿಗೊಳ್ಳು; ತಬ್ಬಿಬ್ಬಾಗು : ಸಿಡಿಲ ಸೇತುವಿನಂತೆ ಜ್ವಾಲೆಯೆದ್ದುದ ನೋಡಿ ಸಿಡಿಮಿಡಿಗೊಂಡರತ್ತಿತ್ತ (ಭರಚಿ. ೨೯-೮೬). ೩. ದುಃಖಪಡು; ವ್ಯಥೆಗೊಳ್ಳು: ಮುಡಿ ಮೊಲೆ ನಿತಂಬಭಾರಕ್ಕೆ ತೊಡೆ ನಡು ಕೊರಳ್ ಕಡಿವಂತಿರಾದಪ್ಪುದೇಗೆಯ್ವೆನೆಂದು ಸಿಡಿಮಿಡಿಗೊಂಬ ಮಾನಿನಿಯ ಭರವನಾಲಿಸಿ ನಿಲುವನವನೀಶ ಮರನಡಿಯೊಳು (ಪಚಕಾ. ೯-೨೮). ೪. (ಆಲಂ) ನಾಶವಾಗು; ಹಾಳಾಗು : ದೊಡ್ಡ ಹಂಚಿಟ್ಟು ಹುರಿದವೋಲ್ ಸೇನೆ ಸಿಡಿಮಿಡಿಗೊಂಡು ಬೇವ ಕರ್ಮವರಿಯತ್ತಜಾಂಡಕಂದು (ಚಿಬಪು. ೪೦-೧೫). **ಸಿಡಿಮಿಡಿಗೊಳು** : ೧. ಜವನ ಮಂತಣ ಸೂಲದಂತೆ ನೆಗೆದ ಕೊಂತದ ಕೂರ್ಮೊನೆಯ ಕೋಲಾಟಕ್ಕೆ ತಾರಗೆವಟ್ಟೆಯೊಳ್ ನಡೆವ ಬಿಚ್ಚೋದರಿಯರ್ ಪುಗಲಱಿಯದೆ ಸಿಡಿಮಿಡಿಗೊಳುತ್ತಿರೆಯುಂ (ಕಬ್ಬಿಗಾ. ೨೮೮); ಮೃಡನಡಿಗೆ ಪೊಡಮಡುಗು ಪಾಲಂ ಕುಡಿಯದಿರ್ದಡೆ ನೋಡಿ ಕಡು ಸಿಡಿಮಿಡಿಗೊಳುತ್ತೋರಂತೆ ಚಂತಿಸುತಿರ್ಕು ಕೊಡಗೂಸು (ಬಸಪು. ೧೪-೧೯). ೨. ಪಿಡಿವೆತ್ತ ಕಳ್ಳನಂತೆ ಸಿಡಿಮಿಡಿಗೊಳುತಿರ್ದುಂ (ಪಂಚತಂ. ೧೮-೨೦); ಫಣಿಯ ಪಿಡಿದವಿವೇಕಿಮರ್ಕಟನ ಮಾಳ್ಕೆಯಿಂ ಸಿಡಿಮಿಡಿಗೊಳುತಿರ್ದರವರನಿಬರು (ಸೌಂದಪು. ೧೨-೮೪); ನೀರನೆಱೆವ ನೀಱೆಯರ ಲಾವಣ್ಯಾಂಬುಪೂರದ ಸುಳಿಯೊಳು ಸಿಲುಕಿ ದಾರಿಗರತಿಸಿಡಿ[ಪಾಠಾಂ.ಡು]ಮಿಡಿಗೊಳು ತಂಗಜವೀರಗೊಡಲನೊಪ್ಪಿಸಿದರು (ರಾಮವಿ. ೨-೭೩). **ಸಿಡಿಮಿಡಿಗೊಳ್ಳು** : ೧. ಸಂತೋಷದಿಂದ ಆಡಿಕೊಂಡಿರುವ ಮಗುವು ಇದ್ದಕ್ಕಿದ್ದ ಹಾಗೆ ಸಿಡಿಮಿಡಿಗೊಳ್ಳುವುದು (ಗೃಹವಿ. ೧೪೩); ಅವನ ಹೆಂಡತಿ ಮೂಗಮ್ಮ . . . ಒಂದೊಂದು ಬಾರಿ ಸೊಸೆಯಂದಿರ ಮೇಲೆ ಸಿಡಿಮಿಡಿಗೊಳ್ಳುತ್ತಿದ್ದಳು (ನನ್ನೂರು. ೧೧೦). ೫. ತವಕಿಸು ; ಅವಸರಗೊಳ್ಳು: ಕಡಿವಾಣದಡಿ ನೊರೆ ಸುರಿಸುತ್ತ ಮುನ್ನುಗ್ಗಲು ಸಿಡಿಮಿಡಿಗೊಳ್ಳುತ್ತಿದ್ದ ಕಪ್ಪು ಹೊಳಪಿನ ಕುದುರೆಗಳ ಲಗಾಮನ್ನವನು ಬಹು ಪ್ರಯಾಸದಿಂದ ಹಿಡಿದುಕೊಂಡಿದ್ದನು (ಪುನರು. ೪೪೦). [ಸಿಡಿಮಿಡಿ + ಕೊಳ್$_1$]

ಸಿಡಿಮಿಡಿಗೊಳು 'ಸಿಡಿಮಿಡಿಗೊಳ್' ನೋ.

ಸಿಡಿಮಿಡಿಗೊಳ್ಳು 'ಸಿಡಿಮಿಡಿಗೊಳ್' ನೋ.

ಸಿಡಿಮಿಡಿಯೋಗು 'ಸಿಡಿಮಿಡಿವೋಗು' ನೋ.

ಸಿಡಿಮಿಡಿವರ್ (ಕ್ರಿ). ೧. ಗಾಬರಿಗೊಳ್ಳು; ಚಡಪಡಿಸು : [ಗ]ಂಗೆಯಂ ಮಿವಾಗಳ್ ನೆಗೞ್ ಬಂದು ಕಾಲಂ ಪಿಡಿದೊಡೆ ಬಿಡಿಸಲಱಿಯದೆ ಸಿಡಿಮಿಡಿವಂದು . . . ಧನದೇವನಂ ಕರೆದೀ ನೆಗೞಂ ಬಿಡಿಸೆಂಬುದುಂ (ಸುಕುಮಾ. ೭-೧೭ ವ). ೨. ಅವಸರಪಡು; ತ್ವರೆಗೊಳ್ಳು; ತವಕಿಸು : ಯೌವನೋನ್ಮತ್ತೆಯರುಟ್ಟ ಪಟ್ಟಣಿಗೆಯ ನಱಿಯ ತುಱುಂಗಲಂ ನೆಗಪಿ ನುಣ್ಣೊಡೆಯ ಚೆಲ್ವಂ ನೋಡಲೆಂದು ಸಿಡಿಮಿಡಿವರ್ಪ ಕಾತರವಿಟರ ಕಣ್ಗೆ ಪಾರಣೆಯಂ ಮಾಡಿಸಿಯುಂ (ಚಂದ್ರಪ್ರ. ೮-೪ ವ).

[ಸಿಡಿಮಿಡಿ + ಬರ್ (< ವರ್)]

ಸಿಡಿಮಿಡಿವೋಗು, ಸಿಡಿಮಿಡಿಯೋಗು (ಕ್ರಿ). ೧. ಸಿಟ್ಟು ಮಾಡಿಕೊಳ್ಳು ; ಅಸಮಾಧಾನ ಹೊಂದು; ಕೋಪಗೊಳ್ಳು : ಬಳ್ಳಿ ಮರನನು ಹಬ್ಬುವಂದದಿ ನಿಲ್ಲದಡರಲು ಬಳಿಕ ತಾ ತನ್ನಲ್ಲಿ ಸಿಡಿಮಿಡಿವೋಗುತಿರ್ದನು ಸಿದ್ಧರಾಮಯ್ಯ (ಪ್ರಭುಲಿಂ. ೧೩-೩೩); ಸಿಡಿಮಿಡಿವೋಗುತ್ತಿದ್ದ ಸಿದ್ಧರಾಮನನ್ನು ಕುರಿತು ಅಲ್ಲಮ . . . ಬುದ್ಧಿ ಹೇಳುತ್ತಾನೆ (ಶೂನ್ಯಸಂ. ೭೮). **ಸಿಡಿಮಿಡಿಯೋಗು** : ೨. ದುಃಖಪಡು; ವ್ಯಥೆಗೊಳ್ಳು : ತನ್ನ ದೆಸೆಯಿಂದಾದ ಬಾಧಿತಭಿನ್ನಹೃದಯನು ಕನಸು ಕಳವಳಗನ್ನದಲಿ ತಲೆ ಸಿಕ್ಕಿ ಸಿಡಿಮಿಡಿಯೋದನಡಿಗಡಿಗೆ (ತೂರರಾ. ೬-೪೫-೧೨).

[ಸಿಡಿಮಿಡಿ + ಪೋಗು$_1$ (< ಪೋ$_1$)]

ಸಿಡಿಯಳೆ (ನಾ). = ಸಿಡಿಮಜ್ಜಿಗೆ : ತಿಳಿಮಜ್ಜಿಗೆಯೊಳುಳ್ಳಿ ಶುಂಠಿ ಸೈಂಧವವಿಕ್ಕಿ ಕಳಸಿಗೆಯ ಕಾಸಿ ಜೀರಿಗೆ ಸಾಸುವೆಯನಿಕ್ಕಿ ಬಳಿಕದಂ ಹುಯ್ದುಪೊಗ್ಗರಿಸಿ . . . ಬಿಳಿಯುಪ್ಪನಿಕ್ಕಿ ನೀರೋಗರಕೆ ಹಾಕಿ ಸಿಡಿಯಳೆಯ ಕೂಳಾಯಿತು (ಸೂಪಶಾ. ೩-೩೦).

[ಸಿಡಿ$_1$ + ಅಳ್ಳೆ]

ಸಿಡಿಯಾಡು (ಕ್ರಿ). ಸಿಡಿಯನ್ನು ಆಚರಿಸು : ಹಳ್ಳಿಗಳಲ್ಲಿ ಈಗ ಸಿಡಿಯಾಡುವ ಸಂಪ್ರದಾಯಕ್ಕೂ ಹಿಂದೆ ಸಿಡಿತಲೆಯನ್ನು ಕೊಡುತ್ತಿದ್ದ ವಿಧಾನಕ್ಕೂ ಬಹಳ ವ್ಯತ್ಯಾಸವಿದೆ (ಕಶಾಅ. ೩೦೧). [ಸಿಡಿ$_1$ + ಆಡು$_1$]

ಸಿಡಿರೋಷ (ನಾ). ಅತಿಯಾದ ರೋಷ; ಅಧಿಕವಾದ ಕ್ರೋಧ : ಗುಡುಗುಡಿಪ ಸಿಡಿರೋಷಮುಕ್ಕಿ, ತಾಂ ನಿಂತ ಬಂಡೆಯನಾನೆಯೊರ್ಮಂಡೆಯಂ ಗೆತ್ತು, ನಖವಜ್ರದಿಂದವ್ವಳಿಸೆ (ಶ್ರೀರಾಮಾ. ೬೨೫-೨೨೧). [ಸಿಡಿ$_1$ + ರೋಷ]

ಸಿಡಿಲ್$_1$ (ನಾ). ೧. ಚಿಮ್ಮು; ಸಿಡಿ : ಲವಣಾಂಬುರಾಶಿ ಕುಕ್ಕುಟಗುದಿವಲ್ಲಿ ಕೂಟ್ಟುದಿಯೆ ಮೇಲೆ ಸಿಡಿಲ್ದಗುಳಂತೆ . . . ಸಿಡಿದಲ್ಲಿಯ ಮುತ್ತುಗಳ್ (ಪಂಪಭಾ. ೧೧-೧೫೩); ಒಡವುಟ್ಟಿದನರಸಿಯನೆನ್ನೊಡವುಟ್ಟಿದರೆನ್ನದಬ್ಬೆಯೆಂದತ್ತಿಗೆಯೆಂದೊಡೆ ನಾಲಗೆಯಾತನ ತಲೆ ಸಿಡಿಲ್ದು ಪಾಱೇಟ್ಟುಮೆನ್ನ ಪಾಱುಂಬಳೆಯೊಳ್ (ಶಾಂತಿಪು. ೬-೮೦); ಸಿಡಿಲ್ದ ಸೀರ್ಪನಿಗಳೊಪ್ಪಿರೆ ಧೂಮದವೋಲ್ (ರಾಜಶೇ. ೫-೬೯). ೨. ನೆಗೆ; ಹಾರು : ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ ನೀಳಾಭ್ರಮಂ ದಂತಿಗೆತ್ತು ಸಿಡಿಲ್ದಾಗಸಕೆಯ್ದೆ ಪಾಯ್ದು ಪಲವುಂ ಸಿಂಗಂಗಳಿಂದೆ . . . ಕಾಮ್ಯಕವನಂ

ಮಾಡಿತ್ತತಿಪ್ರೀತಿಯಂ (ಪಂಪಭಾ. ೭-೨೬). ೩. ಚೆದರು ; ಹರಡು ; ಚೆಲ್ಲಾಪಿಲ್ಲಿಯಾಗು : "ಸಿಡಿಲ್ – ವಿಕೀರ್ಣೇ (ಎರಚು), ಮೇಘವಹ್ನೌಚ" (ಶಮಧಾ). ೪. ಸೀಳು ; ಬಿರಿ : ತಚ್ಛಶಿಕಾಂತಶಿಳಾತಳಂ [ಸಿ][ಪಾಠಾಂ. ಸ]ಡಿಲ್ದಂದೊಡೆದತ್ತಿದೇಂ ಬಿಸಿದೊ ಬೇಟದ ಬೆಂಕೆ ಮ್ಯಗಾಂಕವಕ್ತ್ರಯಾ (ಪಂಪಭಾ. ೫-೭); ಇಕ್ಕಿದ ಸೀಸಕಂ ಪಱಿದು ನೆತ್ತಿ ಸಿಡಿಲ್ದೊಡೆದು (ಕಬ್ಬಿಕಾ. ೨೫೦). ೫. ಹೊರಬೀಳು; ಹೊರಕ್ಕೆ ಬರು : ಇಱುಂಕಿದೆಱಂಕೆಯೊಳಗಣಂ ಸಿಡಿಲ್ದು ದೈವವಶದಿಂ ಗಾಳಿಯೊಳ್ ತೆರಳ್ದು ತಱಗೆಲೆಯ ರಾಶಿಯೊಳ್ ಪೋಗಿ ಬಿರ್ದು (ಕಾದಂಪೂ. ೧೮೫). ೬. ಸಡಿಲವಾಗು : ಎಡೆಯಱಿದು ತೊಳಗುವಂತಿರೆ ಸಿಡಿಲ್ದು ಪೊ Eಪೋ3 ಯ್ತುಟ್ಟುದಾಗಳಂಗಜಕಲೆಯೊಳ್ (ಕಾವ್ಯಸಾ. ೬೫೮ ಶೂದ್ರಕ). ೭. ಆರ್ಭಟಿಸು; ಗರ್ಜಿಸು : ನೆಗಟ್ಟೆಯ ಗಾಂಡಿವಮಂ ತಗುಳ್ದು ಜೇವೊಡೆಯೆ ಸಿಡಿಲ್ ಸಿಡಿಲ್ದು ಪೊಡೆವಂತೆವೊಲಾಯ್ತು (ಪಂಪಭಾ. ೮-೧೦೧); ಘೋರನಿರ್ಘೋಷಮುಣ್ಮೆದುದೆಂಬಂತೆ ಸಿಡಿಲ್ ಸಿಡಿಲ್ದೆಱಗಿತೋ ಪೇಟ್ (ಪಂಚತಂ. ೨೬-೬); ಕಲ್ಪಾಂತಕೃತಾಂತನಂತೆ ಮಾಮಸಕಂ ಮಸಗಿ ಪೊಡೆವ ಸಿಡಿಲಂತೆ ಸಿಡಿಲ್ದು ಸಿಂಹಲಂಘನದಿಂದಂಬರಕ್ಕೆ ನೆಗೆದು (ಪಂರಾಮಾ. ೧೧-೧೪೩ ವ). ೮. ಕನಲು; ಕಿಡಿಕಿಡಿಯಾಗು : ಸಂಜಯನ ನುಡಿಗೆ ಘಣರಾಜಕೇತನಂ ಸಿಡಿಲ್ದು (ಗದಾಯು. ೩-೨೨ ವ); ಸಿಂಹೋದರಂ ಘನರವಕ್ಕೆ ಸಿಡಿಲ್ದ ಸಿಂಹದಂತೆ ಮುನಿದು (ಪಂರಾಮಾ. ೭-೫೨ ವ); ಸುಕೇಶಿನಿ ಕೇಳ್ದು ತುಂಬುರುಗೊಳ್ಳಿಯಂ ಕಂಬದೊಳ್ಪೊಯ್ದಂತೆ ಸಿಡಿಲ್ದು [ಕಿಡಿಕಿಡಿವೋಗಿ] (ಧರ್ಮಾಮೃ. ೩-೪೮); ಸಿಡಿಲ್ದುಗುವ ಸೊರ್ಕುನುಡಿ ಬಿಗಿವಿಡಿಯವೇಱ್ಪುಂ (ಬದ್ಧಪ್ರ. ೧೮-೩೮೧).

ಸಿಡಿಲ್$_2$, ಸಿಡಿಲು (ನಾ). (ಸಾಮಾನ್ಯವಾಗಿ ಮಳೆಗಾಲದಲ್ಲಿ) ಎರಡು ಮೋಡಗಳ ಗುಂಪಿನ ನಡುವಿನ ಘರ್ಷಣೆಯ ಫಲವಾಗಿ ಜೋರಾದ ಶಬ್ದದೊಂದಿಗೆ ಗೋಚರಿಸುವ ವಿದ್ಯುತ್ಪ್ರವಾಹ : ಮೊಱೆದೆಱಗಿ ಕೊಳ್ಳ ಮಱೆ ಭೋರ್ಗರೆದೂದುವ ಗಾಳಿ ಸಿಡಿದು ಪೊಯ್ದ ಸಿಡಿಲ್ ಕಾರಿರುಳೊಳಗುರ್ವಂ ಪಡೆದಿರೆ (ಆದಿಪು. ೬-೩೨); ಸಿಡಿಲ ಪೊಡರ್ಪಾ ಕ್ಷಣದೊಳೆ ಕಿಡುವುದು . . . ಎನಲೇಂ ಕಿಡಿಕಿಡಿವೋದನೊ ಕೋಪತಾಪದಿಂ ಪವನಸುತಂ (ಪಂರಾಮಾ. ೧೧-೧೪೧); ಮುಗಿಲ್ಗಳತಿಭರದಿಂ ಸಿಡಿಲ್ಮಿಂಚುಗಳ ಕೂಡೆ ಪೆರ್ಮಳೆಯನು ಸೂಸದು . . . ಅಚಲೇಂದ್ರತನುಜೆ ತಪಮಿರೆ ಬನದೊಳು (ಜೈಮಿಭಾ. ೧೫-೧೭). ಸಿಡಿಲು : ಬಯಲ ಸಿಡಿಲು ಹೊಯ್ದಡೆ ಹಿಂದೆ ಹೆಣನ ಸುಡುವರಿಲ್ಲ (ಅವಚಂ. ೬೭-೨೯೬); ಸಿಡಿಲು ಜಂಗಮವಾಯ್ತೊ ಪ್ರಳಯದ ಮೃಡನು ಬಾಲಕನಾದನೋ ಕೊಲೆಗಡಿಕನಹುದೋ ಕಂದ (ಕುಮಾರ್ಯೋ. ೬-೪೮); ಗೊಳ್ಳೆಂದು ನಗೆಯ ತೆರೆನೊರೆಯುಕ್ಕೆ ಮಸಗಿತುತ್ಸಾಹದಿಂ ಪಾಂಡವದಳದ ಜಳಧಿ; ಸಿಡಿಲು ಕೋಲಾಡಿದುದು (ಚಿತ್ರಾಂಗ. ೭೭-೨೧೨೧).

ಸಿಡಿಲ ಕಿಚ್ಚು = ಸಿಡಿಲಿನಿಂದ ಉಂಟಾಗುವ ಬೆಂಕಿ; ಮೇಘಾಗ್ನಿ : ಸಿಡಿಲ ಕಿಚ್ಚಿನ ಬೇಗೆಯನಾಱಿಸಲ್ ಜಲಧರಸಂಕುಲಮಿರ್ಪ ತಾಣಂ (ಕಾದಂಉ. ೨೧೮). ಸಿಡಿಲ ಕಿಡಿ = ಮೇಘಾಗ್ನಿಯ ಕಣ; ಸ್ಫುಲಿಂಗ : ಸಿಡಿಲ ಕಿಡಿಯಂತೆಸೆವ ಕಣ್ಣು . . . ಮೃತ್ಯುವಿನ ಕಯ್ಯ ನಿಡಿಯ ನಾರಾಚದಗೆಯೆನಿಪ ಮೆಯ್‌ರೋಮತತಿ . . . ಮೆಱೆವ ಸೂಕರನಿರಲು (ಹಚಕಾ. ೬-೪). ಸಿಡಿಲ ಗರ್ಜನೆ = ಸಿಡಿಲಿನ ಶಬ್ದ ,– ಆರ್ಭಟ : ಕಕ್ಕಸದ ಸಿಡಿಲ ಗರ್ಜನೆಗಳಂ ಕಲ್ಪಾಂತಕುಕ್ಕುವಬ್ಬಿಗಳ ಬೆರ್ದೆಱೆಗಳ ಸುಘೋಷಮಂ ಮಿಕ್ಕುವು ಸಮಸ್ತವಾದ್ಯಧ್ವನಿಗಳು (ಜೈಮಿಭಾ. ೭-೩೧). ಸಿಡಿಲ ದನಿ = ಸಿಡಿಲ ಗರ್ಜನೆ : ಸಿಡಿಲ ದನಿಗೇಳ್ದ ಸಿಂಹಂ ಸಿಡಿಲ್ದು ನೆಗೆವಂತೆ ಗಜಱಿ ಗರ್ಜಿಸಿ (ಪಂರಾಮಾ. ೮-೨೮). ಸಿಡಿಲ ಬಳಗ = ಒಂದಾದ ಮೇಲೆ ಒಂದರಂತೆ ಹೊಡೆಯುವ ಸಿಡಿಲು; ಸಿಡಿಲುಗಳ ಸಾಲು : ಪೌಳೋಮಿಪತಿ . . . ವಿಳಯಕಾಳಾಂಬುದದಂತೆ ಮೊಱಗುಮಂ ಸಿಡಿಲ ಬಳಗಮನೊಳಕೊಂಡ ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸುವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್ (ಪಂಪಭಾ. ೫-೯೫ ವ); ಸಿಡಿಲ ಬಳಗಂಗಳಂ ಬಱಸಿಡಿಲ ಚಯಂ ಪೊಯ್ದ ತೆಱದೆ ವಾಹಕರಂದಿರ್ಪಡೆಯವರ್ಗಳೊಡನೆ ಪೊಯ್ದರ್ (ನೇಮಿಪು. ೧೧-೬೧). ಸಿಡಿಲ ಮಱೆ = ಸಣ್ಣ ಸಿಡಿಲು : ಆಲಿಕಲುಗಳು ಸಿಡಿಲ ಮಱೆಗಳ ಮೇಲುವಾಯ್ದವು (ಕುಮಾಕ.೧೦-೨೬); ಸಿಡಿಲ ಮಱೆ ತಾ ಕಾರ್ಮುಕದೊಳುಗ್ರಡಿಸುವಂತಿರೆ ಢಣಢಣತ್ಕೃತಿ ಜಡಿಯೆ . . . ಅಡಸಿ ಬಂದುದು ಚಾಪವಾ ರಘುಭೂಪನಿದ್ದೆಡೆಗೆ (ತೊರರಾ. ೩-೬-೫೦). ಸಿಡಿಲ ಮಱೆ = ಸಿಡಿಲಿನಿಂದ ಕೂಡಿದ ಮಳೆ; ಭಾರಿ ಮಳೆ : ಸಿಡಿಲ ಮಱೆಯೆನಿಸಿ ಕಱೆದರ್ ಬಿಡದ ಸರಲ್ಮಱೆಯಂ (ಜಗಸಿ. ೧೮-೩೮). ಸಿಡಿಲ ಸರಿ = ಸಿಡಿಲ ಮಱೆ : ಸಿಡಿಲ ಸರಿ ಮೊಱಗುಗುಗಳ ಮಱೆ . . . ಬಿಡದ ರಜನಿಗಳ ಮಱೆಯೊಳ್ ಮಿಡುಕದೆ ಮರಮೊದಲೊಳರ್ದನಿರ್ಪವೊಲಚಳಂ (ಅರ್ಧನೇ. ೪-೬೧). ಸಿಡಿಲು ಬಡಿ = ಸಿಡಿಲು ತಾಕು : ದೇವಿಯನ್ನು ಸ್ಮರಿಸುತ್ತ ಮೇಲೆ ಹತ್ತುವಾಗ ಭಯಂಕರವಾದ ಸಿಡಿಲು ಬಡಿಯುತ್ತದೆ (ಸಂಸಕ. ೯೯).

[ದೇ. ॥ ತುಳು. ತೆಡಿಲ್, ಶಿಡಿಲ್, ಸಿಡಿಲ್, ಸೆಡಿಲ್; ಕೊಡ. ತೆಡ್]

ಸಿಡಿಲಂಕರಾಮ (ನಾ). ಒಬ್ಬಾತನ ಹೆಸರು : ಸಿಡಿಲಂಕರಾಮನ ಮಾಡಿಸಿದ ದೇಗುಲ ಸಿಡಿಲೇಶ್ವರಕ್ಕೆ (ಎಕ. XI, ಹೊಳೆಲ್ಕೆ. ೨೩-೧೪; 968). [ಸಿಡಿಲಂಕ$_0$ + ರಾಮ]

ಸಿಡಿಲಯ್ಯ (ನಾ). ಒಬ್ಬಾತನ ಹೆಸರು : ಶ್ರೀದಿವ್ಯಲಿಂಗಿಧಟೂರರ್ಗ್ಗೆ ಸೂದ್ರಕಯ್ಯಂ ಕಾಲ್ಗೆಱೆಯೆ ಸಿಡಿಲಯ್ಯಂ ಕಾಲಂ ಕಟ್ಟಿ (ಎಕ. XI, ಹೊಳೆಲ್ಕೆ. ೨೩-೧೪; 968).

[ಸಿಡಿಲ್$_2$ + ಅಯ್ಯ$_1$]

ಸಿಡಿಲಿಂಗಳ (ನಾ). ಸಿಡಿಲಿನಿಂದುಂಟಾಗುವ ಬೆಂಕಿ ,– ಕಿಚ್ಚು : ಸಿಡಿಲಿಂಗಳದ ಜಂಗಳದಕ್ಷಿಯುಗಳಗಳ ಕುಲಿಶದಂಷ್ಟ್ರದ ವಿಕೃತವಕ್ತ್ರದ ವಿಲಯಭೈರವನಂತೆ ಮುಂದಕೆ ಸುಳಿಯಲು (ತೊರರಾ. ೩-೧-೯). [ಸಿಡಿಲ್$_2$ + ಇಂಗಳ$_1$]

ಸಿಡಿಲು 'ಸಿಡಿಲ್$_2$' ನೋ.

ಸಿಡಿಲುಮರಿ (ನಾ). ೧. ಮಿಂಚು : ಸಿಡಿಲುಮರಿಯೆಂದರೆ 'ಮಿಂಚು' ಎಂಬ ಅರ್ಥ (ಪಾರ್ಶ್ವನಾ.೧೩). ೨. (ಆಲಂ) ಬಹಳ ಚೂಟಿಯಾದ ವ್ಯಕ್ತಿ : ಇದೀ ಮದುವೆ ಮನೆಯಲ್ಲಿ ಆ ಸಿಡಿಲುಮರಿಯ ಓಡಾಟ ಹೇಳತೀರದು. ಎಲ್ಲ ಕೆಲಸಕ್ಕೂ ಅವನೇ ಮುಂದು (ರೂಢಿ). [ಸಿಡಿಲು (< ಸಿಡಿಲ್$_2$) + ಮರಿ (< ಮಱೆ)]

ಸಿಡಿಲುವಲೆ (ನಾ). ಒಂದು ಬಗೆಯ ಬಲೆ : ಕಣ್ಣವಲೆ ಸಿಡಿಲುವಲೆ . . . ಮರವಲೆಗಳರ್ದುವಾ ಶಬರರಲ್ಲಿ (ಸಿದ್ಧೇಪು. ೮-೬); ಸಿಡಿಲುವಲೆ ಹಾಸುವಲೆ ಬೀಸುವಲೆ ಚಕ್ಕನೆಯೆಳೆವ ವಲೆ ಮೊದಲಾದ ಪರಿಪರಿಯ ವಲೆಸಮೂಹವ ನೋಡುತ (ನವಮೋ. ೧೬-೨೦). [ಸಿಡಿಲು (< ಸಿಡಿಲ್$_2$) + ಬಲೆ$_1$]

ಸಿಡಿಲುಹೊಡೆ 'ಸಿಡಿಲ್ಪೊಡೆ' ನೋ.

ಸಿಡಿಲೆರಗು 'ಸಿಡಿಲೆಱಗು' ನೋ.

ಸಿಡಿಲೆಱಗು, ಸಿಡಿಲೆರಗು (ಕ್ರಿ). ಸಿಡಿಲು ಅಪ್ಪಳಿಸು ,– ಬಡಿ; ಸಿಡಿಲುಹೊಡೆ : ದುರ್ಯೋಧನಂ . . . ಸಿಡಿಲೆಱಗುವಂತೆ ಭೋರೆಂದೊಡನೆಱಗಿ ಮಹೋಗ್ರ ಘನಗದಾಪರಿಘದಿನಾ[ರ್ದೆಡೆ]ಗಿಡೆ ಪೊಯ್ದೊಡೆ ಭೀಮಂ ಕೆಡೆದಂ (ಪಂಪಭಾ. ೧೩-೯೫); ಸೂಳವಿಸಿದವು ಲಗ್ನೆಯಲಿ ನಿಸ್ಸಾಳತತಿ ಸಿಡಿಲೆಱಗಿತೆನಲು (ಕುಮಾರ್ಯೋ. ೪-೫೨); ನರಸಿಂಹ ನದುವಜ್ರಗುಂಬವನೊಡೆದು ಘುಡುಘುಡಿಸುತ ಪೊಱಮಟ್ಟುವೆ ಮಹದಾದಿ ಸಿಡಿಲೆಱಗಿದುವು (ಪೋಷಕ. ೪-೩೪). ಸಿಡಿಲೆರಗು : ಲಗ್ನಪತ್ರಿಕೆ ಓದಿದೆ. ತಲೆಗೆ ಸಿಡಿಲೆರಗಿದಂತಾಯಿತು (ರಾಮಾನಿ. ೬೯). [ಸಿಡಿಲ್$_2$ + ಎಱಗು$_1$]

ಸಿಡಿಲೇಳಿಗೆ 'ಸಿಡಿಲೇಳ್ಗೆ' ನೋ.

ಸಿಡಿಲೇಳ್ಗೆ 'ಸಿಡಿಲೇಳ್ಗೆ' ನೋ.

ಸಿಡಿಲೇಳ್ಗೆ , ಸಿಡಿಲೇಳಿಗೆ , ಸಿಡಿಲೇಳ್ಗೆ (ನಾ). ಸಿಡಿಲಿನ ವೇಗ ,– ರಭಸ : ಅವಂ ಮೊಱಗಿ ಸಿಡಿಲ್ದೊಂದು ಸಿಡಿಲೇಳ್ಗೆಯಿನೆಯ್ತರೆ (ಪಂಪಭಾ. ೩-೧೬); ಮೊಱೆದು ಹಿತೋಪದೇಶಮನೆ ಕೇಳಲೊಡಂ ಸಿಡಿಲೇಳ್ಗೆಯೆರ್ದು . . . ಗುರುಸಂಕುಳಮಂ ಮಱೆದಿಂತು ಮಮ್ಮಲಂ ಮಱುಗಿಪರಲ್ತೆ ತಮ್ಮ ನಿಜಗರ್ವದೆ ಮಾಯ್ದ ನೃಪರ್ (ಕಾದಂಪೂ. ೫೪೪). ಸಿಡಿಲೇಳಿಗೆ : ಕೇಳಿ ಸಿಡಿಲೇಳಿಗೆಯಲೆದ್ದು ನೃಪಾಲಕರು ಗಜಬಜಿಸಿ ರಭಸದೊಳೋಲಗವ ಹೊಱವಂಟು ನಡೆದರು (ಕುಮಾವಿ. ೪-೪೧); ಅದ್ರಿಗಳ ಹೆಡತಲೆ ಸೀಳಿ ಸಿಡಿಲೇಳಿಗೆಯಲೆದ್ದವು ವಿವಿಧವಾದ್ಯರವ (ಕುಮಾರ್ಯೋ. ೧-೪೪). ಸಿಡಿಲೇಳ್ಗೆ : ಅನ್ತು ಸಿಡಿಬಲೆಯು ಸಿಡಿ[ಲೇಳ್ಗೆ]ಯುಮಿಪ್ಪಂತಿರ್ದ್ದ ಕುಂದುಗೊಳದ ಕಲಿಗೊಡಗೆ ಕಲಿಗಳಂಕುಸಂ ಕಾಮದೇವನೆತ್ತಲುತ್ತವಳನಾಗಿಪ್ಪುದುಂ (ಶೌಂಗಾ. XX, ೧೨೬-೫; 1186); ಕೊನೆಮೊಸೆ ಕೆತ್ತ ಸಿಡಿಲೇಳ್ಗೆಯಿಂದಂ ಕರಂ ನಡೆ ತೋಱು ತೋಱು ಕೊಂಡವನೆನುತ್ತಿರಲು (ನಂಬಿರ. ೧೭-೧೭೦). [ಸಿಡಿಲ್$_2$ + ಏಱ್ಗೆ]

ಸಿಡಿಲೊಬ್ಬುಳಿ (ನಾ). ಸಿಡಿಲುಗಳ ಸಮೂಹ : ತಿವಿದ ಸಿಡಿಲೊಬ್ಬುಳಿಯೊ ಪ್ರಳಯದ ಜವನ ನೆರವಿಯೊ . . . ಎನೆ ಸ್ಕಂಧವನ ಕಾಹಿನ ಮೋಹರಂಗಳು ಕಿಡಿಯನುಗುಳಿದವು (ಕುವ್ಯಾದ್ರೋ. ೯-೨೫).

[ಸಿಡಿಲು (< ಸಿಡಿಲ್$_2$) + ಒಬ್ಬುಳಿ$_1$ (< ಒರ್ವುಳಿ)]

ಸಿಡಿಲ್ಗೆಂಡ (ನಾ). = ಸಿಡಿಲಿಂಗಳ : ಸಿಡಿಲ್ಗೆಂಡವೆಂಬಂತು ಕಣ್ಗಳ್ ಕಡುಗೆಂಪಂ ತಾಳ್ದೆ (ಜಗವಿ. ೧೩-೬೯). [ಸಿಡಿಲ್$_2$ + ಕೆಂಡ]

ಸಿಡಿಲ್ತರ್ (ಕ್ರಿ). ಹಾರಿ ಬರು; ಚಿಮ್ಮಿ ಬರು : ಸಂಪುಟಂ ಪತ್ತುಗೆವಿಟ್ಟೋರಂದದಿಂ ಸಿಂಪುಗಳುಗುಟ್ಟ ಸಿಡಿಲ್ತಂದ ಮುಕ್ತಾಫಲಶ್ರೇಣಿಗಳಿಂದಂ ಪಶ್ಚಿಮಾಂಭೋಧಿಯ ಪುಳಿನಚಯಂ ಬೆಳ್ನಾಳ್ಬೆರ್ದುವಾಗಳ್ (ಕಾದಂಪು. ೧೪೨). [ಸಿಡಿಲ್$_1$ + ತರ್]

ಸಿಡಿಲ್ದನಿ (ನಾ). ಸಿಡಿಲು ಬಡಿಯುವಾಗ ಉಂಟಾಗುವ ಶಬ್ದ : ಘುಡುಘುಡು ಚಿಳಿಛಿಟಲೆಂದುಗ್ರಡದ ಸಿಡಿಲ್ದನಿಯೆ ಪೊಡೆಯೆ ಗಗನಸ್ಥಳದಿಂದೆ . . . ಎಡೆವಿಡದಿಳೆ ವಾಲಿಪರಲ ಮಳೆ ಬಗೆಗೊಳಿಕುಂ (ರಾಜಶೇ. ೫-೧೧೩). [ಸಿಡಿಲ್$_2$ + ದನಿ$_1$]

ಸಿಡಿಲ್ಮಟೆ (ನಾ). ಸಿಡಿಲಿನ ಆರ್ಭಟದಿಂದೊಡಗೂಡಿದ ಮಳೆ; ಭಾರಿಮಳೆ : ಮೂಲೆಗೊಳುತ್ತುಮೊತ್ತರಿಸಿ ಪಾಯ್ದ ಸರಲ್ಗಳಿನುಣ್ಮೆ ವಿಸ್ಫುಲಿಂಗಾಲಿ ಬರಲ್ ಸರಲ್ಮಟೆ ಸಿಡಿಲ್ಮಟೆಯಂ ಗೆಲೆವಂದುದೆಂಬಿನಂ (ಜಗವಿ. ೧೩-೭೭). [ಸಿಡಿಲ್$_2$ + ಮಟೆ]

ಸಿಡಿಲ್ಬೆಳಗು (ನಾ). ಸಿಡಿಲು ಬಡಿಯುವ ಮೊದಲು ತೋರುವ ಬೆಳಕು; ಮಿಂಚು : "ತಾಂ ಮುಗಿಲ್ಗಿಚ್ಚು ಸಿಡಿಲ್ಬೆಳಗದು ನೋಡಲು ತಾಂ[ಪಾಠಾಂ. ಕಾರ್ಮುಗಿಲ್ಗಿಚ್ಚು ಸಿಡಿಲ್ ಮುಗಿಲ್ಬೆಳಗು ಮಿಂಚದು] ಸೋನೆಗೆ ನಾಮಂ ತಂದಲ್" (ಚತುನಿ. ೧೧೧). [ಸಿಡಿಲ್$_2$ + ಬೆಳಗು$_2$]

ಸಿಡಿಲ್ಪೊಡೆ, ಸಿಡಿಲುಹೊಡೆ (ಕ್ರಿ). ೧. ಸಿಡಿಲು ಬಡಿ, — ಅಪ್ಪಳಿಸು: ನಿನಗಾಯಬ್ಬೆಯೊಡೆಯಳೆಂಬುದಂ ಪೇಳ್ದುದುಮದಂ ಕೇಳ್ದು ತೊಟ್ಟನೆ ನೆತ್ತಿಯಂ ಸಿಡಿಲ್ಪೊಡದಂತಾಗೆ (ಕಾದಂಉ. ೭೩೯). **ಸಿಡಿಲುಹೊಡೆ** : ೧. ಬ್ಲಾಂಡಿಂಗ್ಸ್ ಸಿಡಿಲುಹೊಡೆದವನಂತೆ ಹಾರಿ ಬಿದ್ದ (ಯೋಧವು. ೨೬). ೨. ಇಂದ್ರನ ವಜ್ರಾಯುಧದ ಹೊಡೆತ ಬೀಳು : ಸಿಡಿಲುಹೊಡೆದುಚ್ಚಳಿಸಿದುರದುಗ್ಗಡದ ಗಾಯದ . . . ದಡಿಗರಕ್ಕಸರಾಯರಿದ್ದುದು ಕೋಟಿಸಂಖ್ಯೆಯಲಿ (ತೊರರಾ. ೩-೭-೫).

[ಸಿಡಿಲ್$_2$ + ಪೊಡೆ$_1$]

ಸಿಡಿಲ್ಪಿಡಿ (ಕ್ರಿ). ಸಿಡಿಲು ಚಿಮ್ಮು, — ಸ್ಫೋಟಿಸು : ಇಟ್ಟೊಡೆ . . . ಮಹಾ ನೈಷ್ಠವಾಸ್ತ್ರಮಂ ಗಾಂಗೇಯಂ ತೊಟ್ಟಿಸುವುದುಮರಡುಂ ಕಿಡಿಗುಟ್ಟಿ ಸಿಡಿಲ್ಪಿಡಿಯೆ ಪೋರ್ದುವಂಬರತಳದೊಳ್ (ಪಂಪಭಾ. ೧೧-೨೨). [ಸಿಡಿಲ್$_2$ + ಸಿಡಿ$_1$]

ಸಿಡಿವನಿ (ನಾ). ಮೇಲಕ್ಕೆ ಚಿಮ್ಮುವ ಹನಿ, — ತೊಟ್ಟು : ಕಡಲ ಸಿಡಿವನಿಯೊ ಮೇಘಾವಳಿಯ ತತ್ತಿಗಳೊ . . . ಎನೆ ತಾರಾಳಿ ನೆಗೆದವು (ಸೋಮಚ. ಪರ. ೨೦೬); ಎಡಬಲದ ಚಾಮರದ ಗಾಳಿಯ ತಡೆವ ಚಾರುವ್ಯಜನದಮೃತದ ಸಿಡಿವನಿಯ . . . ಪರಮೈಶ್ವರ್ಯದಲಿ ರಂಜಿಸಿದನಸುರಾರಿ (ನಿಭಾಗ. ೪-೪-೧೪). [ಸಿಡಿ$_1$ + ಪನಿ$_2$]

ಸಿಡಿವಲೆ, ಸಿಡಿಬಲೆ (ನಾ). ಒಂದು ಬಗೆಯ ಬಲೆ : ತಡಿಕೆವಲೆ ಕಣ್ಣಿವಲೆ . . . ತಡೆವಲೆ ಸಿಡಿವಲೆ ನಿಡುವಲೆಗಳೊಪ್ಪಿದವು ಲುಬ್ಧಕರೊಳ್ (ಗಿರಿಕ. ೧-೮೦); ಉರುಗದೆಯ ದಡಿವಲೆಯಲಸಿ ಮುದ್ಗರದ ಸಿಡಿವಲೆಗಳಲಿ ಸಮರದೊಳರಿವುಗವ್ರಾತವನು ಭೀಮಕಿರಾತ ಕೈಕೊಂಡ (ಕುವ್ಯಾದ್ರೋ. ೧೨-೩೧); ಗರ್ಭಗೃಹಮಂ ಪೊಕ್ಕೊಡಂ ಬಿಡದೆ ಸಿಡಿವ[ಪಾಠಾಂ. ದ]ಲೆಯಿಕ್ಕಿ (ಚಕವಿ. ೭-೧೨). **ಸಿಡಿಬಲೆ** : ಅನ್ತು ಸಿಡಿಬಲೆಯು ಸಿಡಿ[ಲೇಳ್ಪ]ಯುವಿಪ್ಪಂತಿರ್ದ್ದ ಕುಂದುಗೊಳದ ಕಲಿಗೊಡಗೆ ಕಲಿಗಳಂಕುಸಂ ಕಾಮನೆತ್ತಲುತ್ತವಳನಾಗಿಪ್ಪುದುಂ ಚಲದಂಕರಾಮ ಮಾದಿಸೆಟ್ಟಿ . . . ಮಹಾಲಗ್ನೆ ಮಾಳ್ಪುದುಂ (ಸೌಇಾ. XX, ೧೨೬-೫; 1186). [ಸಿಡಿ$_2$ + ಬಲೆ$_1$]

ಸಿಡಿಸಾಲೆ (ನಾ). ಒಂದು ಬಗೆಯ ಸಸ್ಯ : ತೊಗರತ್ತಿ, ಸಿಡಿಸಾಲೆ (ಮೃಔಗಿ. ೫-೭೪).

[?]

ಸಿಡಿಸಿಡಿ$_1$ 'ಸಿಡಿ$_1$' ಪರಾ.

ಸಿಡಿಸಿಡಿ$_2$ (ನಾ). ಕೋಪ; ಸಿಟ್ಟು.

ಸಿಡಿಸಿಡಿಯಾಗು = ಕೋಪಗೊಳ್ಳು; ರೇಗು : ಮಾತೆತ್ತಿದರೆ ಸಾಕು ಸಿಡಿಸಿಡಿಯಾಗುತ್ತಿದ್ದರು (ಆಲಪಾ. ೪೦). **ಸಿಡಿಸಿಡಿಸಿಟ್ಟು** = ಅಧಿಕವಾದ ಸಿಟ್ಟು; ಉಗ್ರಕೋಪ : ಭೀಮನು ಪ್ರಳಯೋಗ್ರಾಂತಕನಂತೆ ಸಿಡಿಸಿಡಿಸಿಟ್ಟನಲಿದ್ದಾನೆ (ಸಾಹಿಸಂ. ೧೦೩). [< ಸಿಡಿ$_1$]

ಸಿಡಿಸಿಡಿವೋಗು (ಕ್ರಿ). ಕೋಪಗೊಳ್ಳು; ರೇಗು : ಸಿಡಿಸಿಡಿಯೋ[ವೋ]ಗಿ ಕಣ್ಗಡರೆ ಕೆಂಪವನುದ್ಧತನಪ್ಪಂ (ಮಹಾನೇ. ೫-೭೫). [ಸಿಡಿಸಿಡಿ$_2$ + ಪೋಗು$_1$ (< ಪೋ$_1$)]

ಸಿಡಿಸು (ಕ್ರಿ). ೧. ನೀರು, ಮಣ್ಣು ಮುಂತಾದುವನ್ನು ಮೇಲೆ ಚಿಮ್ಮುವಂತೆ ಮಾಡು, — ಚಿಮ್ಮಿಸು : ಕೊಳಚೇ ಮೇಲೆ ಹೆಂಚೆ ಹಾಕಿ, ಮೋರೇ ಮೇಲೆ ಸಿಡಿಸಿಕೊಂಡಂತೆ (ಗಾದ). ೨. ಸಿಂಪಡಿಸು; ಚಿಮುಕಿಸು : ಅಲ್ಲಿ ಗಂಗೋದಕವನ್ನು ಸಿಡಿಸಿ, ಆ ಸ್ಥಳವನ್ನು ಶುದ್ಧಮಾಡಿದರು (ಮುಂಬಯಿ. ೫-೬೧). [ಸಿಡಿ$_1$ + - ಸು$_1$]

ಸಿಡಿಹಾಯ್ (ಕ್ರಿ). (ಸಸ್ಯಗಳಿಗೆ) ರೋಗ ತಗಲು, — ಅಂಟು : ನೀರು ಬಹಳ ದೂರ ಇರುವ ತೆವರುಕಟ್ಟುಭೂಮಿಯಲ್ಲಿ ಮಾವಿನ ಗಿಡಗಳನ್ನು ಬೆಳಿಸಿದರೆ ಕೆಲವು ವರ್ಷಕ್ಕೆ ಸಿಡಿಹಾಯ್ದು ಒಣಗಿಹೋಗುವವು (ಕೃಪಪ್ರ. ೧೪೦).

[ಸಿಡಿ$_4$ (< ಸೀಡಿ) + ಹಾಯ್$_1$ (< ಪಾಯ್$_1$)]

ಸಿಡಿಹು (ನಾ). ಆತಂಕ; ಕಳವಳ : ಸಿಡಿಹಿನಿಂ ನೋಡಿ ಪಕ್ಕಪ ಬಿದಿರ್ದು ಬೆದಱುತ್ತ ನಡುಗೊಂಬನೇಱಿ ಸುಸ್ವರಗಳಿಂ ಧ್ವನಿಗೆಯ್ದು ಪಡಿಯಱೂಂಕಿತವಕ್ಕಿ ಪೌಸರದೊಳಿಹವು (ಪ್ರಭುಪು. ೩-೧೯). [ಸಿಡಿ$_7$ + - ಹು$_2$ (< - ಪ್ಪು$_2$)]

ಸಿಡುಂಬು, ಸಿಡಿಂಬ, ಸಿಡಿಂಬು, ಸಿಡಿಬು, ಸಿಱುಂಬು (ನಾ). ೧. ದಟ್ಟವಾದ ಮೆಳೆ, — ಹೊದರು : ಅಳವಿಗಱಿಯೆ ಬಳೆದು ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೋಡುಂಗಾಱನಂತೆ (ಪಂಪಭಾ. ೧೨-೧೬೭ ವ); ಬಿದಿರ ಸಿಡುಂಬಿನೊಳ್ ಗಜಱ ಗರ್ಜಿಸಿ ಪೆರ್ವುಲಿ ಪಾಯೆ (ಮಲ್ಲಿಪು. ೧೦-೭೩); ನಿತ್ಯಬಿಂದುಗೆ-ಬೆಡಂಗು, ಕಡಂಗು . . . ಸಿಡುಂಬು, ಸೆಱಂಗು (ಶಮದ. ೩೬ ಪ್ರಯೋ); ಸಿಡುಂಬು ಮೆಳೆ ಬಳ್ಳಿ . . . ನಾನಲ್ಗಳೊಳೆಡೆವಿಡದೋಡಿತ್ತು ಪಂದಿ ಜವದಿಂದಾಗಳ್ (ಶಬಶಂ. ೪-೨೩). ೨. (ಮುಳ್ಳುಗಳಿರುವ) ಮರ; ವೃಕ್ಷ : "ಸಿಡುಂಬೆಂದು ಕುಜಂ" (ಕಶಸಾ. ೭೩-೬೫೯). **ಸಿಡಿಂಬ** : ೧. ನಾನಲುಮಂ ಬಾನಲುಮಂ ಸಿ[ಪಾಠಾಂ. ಸ]ಡಿಂಬಮನಿಡಿಂಬಮಂ . . . ಕಳೆದು ಪೋಗಿ (ಲೀಲಾವ. ೬-೧೪ ವ). **ಸಿಡಿಂಬು** : ೧. ನಟ್ಟ ಕೂರ್ಗಣೆಯ ಬಿಣ್ಪೊಱೆಯಿಂದೆ ಬಟಲ್ದನುರ್ವಿ ಪೆರ್ವಿದಿರ ಸಿಡಿಂಬಿನೊಳ್ ಪುದಿದದೊಂದು ಕುಳಾಚಳದಂತೆ ಸಿಂಧುಜಂ (ಪಂಪಭಾ. ೧೧-೪೫). **ಸಿಡಿಬು** : ೧. "ಪ್ರತಾನೇ = ಸಿಡಿಬನುಳ್ಳ (ಶಾಖಿಯುಪಶಾಖೆ ಗಂಡುಗಳನುಳ್ಳ), ವಂಶೇ = ಬಿದಿರೊಳ್" (ನೀತಿವಾ. ೨೯-೩೭). **ಸಿಱುಂಬು** : ೧. ಮಿಸುಗುವ ಸಿಱುಂಬಿನಿಂದೆಡೆವಿಡದಿಱುಂಬಿನಿಂದೊಸರ್ವೂಜ್ಜರಂಗಳಿಂದೆ . . . ಮೆಱೆವರಣ್ಮಂಬೊಕ್ಕನು (ಚೇರಮ. ೧೦-೧೬).

ಸಿಡುಕ, ಸೀಡಕ (ನಾ). ೧. ಸಿಟ್ಟುಮಾಡಿಕೊಳ್ಳುವ ಸ್ವಭಾವದವನು; ಕೋಪಿಷ್ಠ : ನಾವು ಸಾಮಾನ್ಯವಾಗಿ ಎಂಥವನನ್ನು ಸಿಡುಕ, ಮುಖಗೇಡಿ . . . ಚೊತೆ ಬೇಡದ ಗೊಡ್ಡು — ಎಂದು ಕರೆಯುತ್ತೇವೆಯೋ ಅಂಥವನು ಸಹ ಸಮಾಜ ಸಂಬಂಧಗಳನ್ನು ಒಂದೆರಡನ್ನಾದರೂ ಉಳಿಸಿಕೊಂಡಿರುತ್ತಾನೆ (ರಾಜ್ಯಶಾ. ೩೭); ಅವನು ಬಡವನಾಗಿರಲಿ ಸಿಡುಕನಾಗಿರಲಿ, ಅವನಲ್ಲಿ ಅವರಿಗೆ ಗೌರವವೇ (ಬಂಕಿಮ. ೨೦೯). **ಸೀಡಕ** : (ಗು). ೨. ಕೋಪಿಸಿಕೊಳ್ಳುವ; ಸಿಟ್ಟುಮಾಡಿಕೊಳ್ಳುವ : ಆ ನ್ಯಾಯಮೂರ್ತಿಗಳು ಇಂತಹ ಸೀಡಕಪ್ರವೃತ್ತಿಗಾಗಿ ಹೆಸರಾಗಿದ್ದರು (ಕೂನೆಕಾ. ೪೫).

[ಸಿಡುಕು$_2$ + - ಅ$_7$]

ಸಿಡುಕಲು$_1$ (ಗು). ಚಿಮ್ಮುವಂಥ ; ಹಾರುವ : ಮಳೆಯ ಸಿಡುಕಲು ಹನಿಗಳಿಂದ ದಾರಿಗಳು ಮೊದಲೇ ನೆನೆದು ಹೋಗಿರಲು, ಸುಳಿರ್ಗಾಳಿ ಅವರನ್ನು ಸೆಟೆಯುವಂತೆ ಮಾಡುತ್ತಲಿದ್ದಿತು (ಕೃತಕೃ. ೨). [< ಸಿಡಿ$_1$ + - ಕಲ್ಲು$_2$ (< - ಕಲ್$_4$)]

ಸಿಡುಕಲ್ಲು$_2$ 'ಸಿಡುಕು$_2$' ಪರಾ.

ಸಿಡುಕಿ (ನಾ). ಕೋಪಗೊಳ್ಳುವ ಸ್ವಭಾವದವಳು : ಅವಳು ತುಂಬಾ ಸಿಡುಕಿ (ರೂಢಿ). [ಸಿಡುಕ + - ಇ$_2$]

ಸಿಡುಕು$_1$ (ಕ್ರಿ). ಕೋಪಗೊಳ್ಳು; ರೇಗು : "ನಿಮಗ್ಯಾರು ಬೇಕಾಗಿದೆ?" ಎಂದು ಮುದುಕಿ ಸಿಡುಕಿದಳು (ಪುನರು ೨೮೨). [< ಸಿಡಿ$_1$]

ಸಿಡುಕು$_2$, ಸಿಟಕು (ನಾ). ಕೋಪ; ಸಿಟ್ಟು : ವಸುಮತಿ ದಸ್ತಗೀರನನ್ನು ಸಿಡುಕಿನಿಂದ

ನೋಡಿ . . . ಹಣವನ್ನು ದೂರ ಸರಿಸಿದಳು (ಮಲ್ಲೇಪು. ೧೫೫); ಗಡಿಗೆಯ ಮುಖವೇಕೆ ಗುಡುಗಿನ ದನಿಯೇಕೆ ಸಿಡುಕಿನ ಪರಿತಾಪವೇಕೆ (ಇಂದಾಪ. ೧೧೨-೩೬). **ಸಿಟಕು.**

ಸಿಟಕುಪಟಕುಮಾಡು = ಸಿಟ್ಟಾಗು; ರೇಗು : ತಂದೆತಾಯಿಗಳು ಹುಡುಗರ ಮೇಲೆ ಆಗಾಗ್ಗೆ ಸಿಟಕುಪಟಕು ಮಾಡಿದಿಗೆ (ಮುಂಬಯಿ. ೫-೪೭). **ಸಿಡುಕಲು**$_2$ = ರೇಗುವ; **ಕೋಪಗೊಳ್ಳುವ : ಅವನದ್ದು ಸಿಡುಕಲು ಸ್ವಭಾವ (ಕೂಡಿ).**

[< ಸಿಡುಕು$_1$./ ತಮಿ. ಚಿಟುಕ್ಕು]

ಸಿಡುಕ್ಕು, ಶಿಡಕು (ನಾ). ರೇಖೆ; ಪಟ್ಟೆ : ಕಪ್ಪಾದ ಸಿಡುಕುಗಳಿಂದ ಬೆಟ್ಟದ ಸಾಲುಗಳೂ ನಕಾಶದಲ್ಲಿ ತೋರಿಸಲ್ಪಟ್ಟಿರುತ್ತವೆ (ಮುಂಬಯಿ. ೫-೨೦೬). **ಶಿಡಕು :** ಮುಸಲ್ಮಾನರ ಮನೆಗಳಲ್ಲಿ ಹೊರಗೋಡೆಗಳನ್ನು ಬರಿ ಸುಣ್ಣದಿಂದ ಸಾರಿಸುವರು ಇಲ್ಲವೆ ಅವಕ್ಕೆ ಸುಣ್ಣದ ಶಿಡಕುಗಳನ್ನು ಕೊಡುವರು (ಕಭಾಗ. ೨೨೦). [?]

ಸಿಡುಕುತನ, ಸೀಡಕತನ (ನಾ). ಕೋಪಗೊಳ್ಳುವ ಸ್ವಭಾವ : ನೀವು ನಿಮ್ಮ ಸಿಡುಕುತನವನ್ನು ಬಿಟ್ಟರೆ ಎಂದಿಗೂ ಜಗಳವು ಬರಲಾರದು (ಮೋಹನ. ೪೯). **ಸೀಡಕತನ :** ಸೀಡಕತನದಿಂದಲೂ ಸ್ವೇಚ್ಛಾಚಾರದಿಂದಲೂ ಕ್ರೂರಮುದ್ರೆಯಿಂದಲೂ ತನ್ನ ನಂಬಿಗಸ್ತರನ್ನಾದರೂ ಹೆದರಿಸುತ್ತಿದ್ದರು (ಮೋಚಾದ. ೧೧೦). [ಸಿಡುಕು$_1$ + -ತನ]

ಸಿಡುಕುಮುಖ (ನಾ). ಸಿಟ್ಟನ್ನು ವ್ಯಕ್ತಪಡಿಸುವ ಮುಖ ; ಕೆರಳಿದ ಮುಖ : ಹದಗಟ್ಟಿದ್ದ ಮೇರಿ ಸಿಡುಕುಮುಖದಿಂದಲೇ ಮಾಸ್ತರನ್ನು ತಿನ್ನುವಂತೆ ನೋಡುತ್ತಾ ಕುರ್ಚಿ ಬಿಟ್ಟೆದ್ದು ಬಂದಳು (ಕಾವೇ. ೮೯). [ಸಿಡುಕು$_2$ + ಮುಖ]

ಸಿಡುಕುಮೋರೆ (ನಾ). = ಸಿಡುಕುಮುಖ : ಗಂಡನ ಕಡೆಗೆ ತಿರುಗಿ, ಸಿಡುಕುಮೋರೆಯ ಮಾಡಿ, ನೆಲಗುಡುಗಿನಂತಾಡಿದಳ್ (ಶ್ರೀರಾಮಾ. ೧೫೫-೯೮).

[ಸಿಡುಕು$_2$ + ಮೋರೆ (< ಮೋಜೆ)]

ಸಿಡುಕುವಲೆ (ನಾ). ಒಂದು ಬಗೆಯ ಬಲೆ : ಸಿಡುಕು[ವಾಕಾಂ. ದಿವ]ವಲೆ ಸಿಲುಕುವಲೆ . . . ಮುಂದಾಸುವಲೆಯ ಹೊಲಿಗೆಗಳ ಮೊತ್ತಮಂ ಕಂಡನಾದಯ್ಯನು (ಸೋಮಚ. ಪರಿ. ೨೧೧; ಪಚಣಾ. ೫-೮ ನೋ). 'ಸಿಡಿವಲೆ' ಪರಾ. [ಸಿಡುಕು$_2$ + ಬಲೆ$_1$]

ಸಿಡುಗುಟ್ಟು (ಕ್ರಿ). = ಸಿಡುಕು$_1$: ತಂದೆ ಕೋಪದಿಂದ ಸಿಡುಗುಟ್ಟಿದ (ಕಶ್ರಪ. ೪೮); ಆಗಲಿಂದ ತಂದೆಯದಿರಾಗಿ ಮುಖವನ್ನು ಕಿರಿದು ಮಾಡಿಕೊಂಡು ಸಿಡುಗುಟ್ಟುತ್ತಿದ್ದಳು (ಕವಿಕ. ೨೮). [< ಸಿಡುಕು$_1$ + ಕುಟ್ಟು$_1$]

ಸಿಡುಬು (ನಾ). ೧. ಕೀವು ತುಂಬಿದ ಬೊಕ್ಕೆಗಳು ಮೈಮೇಲೆ ಹೊಮ್ಮುವ ಒಂದು ಬಗೆಯ ಸಾಂಕ್ರಾಮಿಕರೋಗ; ಮೈಲಿಬೇನೆ; ಅಮ್ಮ : ದಿಸದಿಸ ಮಸೆವಾ ಪ್ಲೇಗುಂ ಘಸಣಿಯ ಸಿಡುಬಿಂಪ್ಲೆಂಜುಂ ಮಸಣಿಭಯವನೇ ತೋರ್ಗುಂ (ಪ್ಯಸೂಮು. ೨-೯೧); ಜನರನ್ನು ಮೃತ್ಯುಮುಖಕ್ಕೆ ತಳ್ಳುವ ಮಹಾರೋಗಗಳಲ್ಲಿ ಸಿಡುಬು ಒಂದಾಗಿದೆ (ಮಾನಸಾ. ೧). ೨. ಮೈಲಿಬೇನೆಯನ್ನು ತಡೆಗಟ್ಟುವುದಕ್ಕಾಗಿ ಮುಂಚಿತವಾಗಿಯೇ ಚುಚ್ಚುಮದ್ದಿನ ಮೂಲಕ ಕೊಡುವ ಲಸಿಕೆ : ಅವರ ಮಗುವಿಗೆ ಸಿಡುಬು ಹಾಕಿಸಿದ್ದಾರೆ (ಕೂಡಿ).

ಸಿಡುಬು ತಗಲು, ಸಿಡುಬು ತಗುಲು = ಮೈಲಿಬೇನೆಗೆ ಒಳಗಾಗು; **ಸಿಡುಬಿನ ಸೋಂಕಾಗು :** ಜಲಜಳಿಗೀಗ ಸಿಡುಬುತಗಲಿತು (ಚಿಗುಬು. ೬೨); ಸಿಡುಬುತಗುಲಿದಾಗ ವೈದ್ಯರ ಪಾಲನೆಗೆ ಮಗುವನ್ನು ಒಪ್ಪಿಸಬೇಕು (ಗೃಹವಿ. ೧೫೧). **ಸಿಡುಬು ಹಾಕು** = ಮೈಲಿಬೇನೆಯನ್ನು ತಡೆಗಟ್ಟುವ ಲಸಿಕೆಯನ್ನು ಚುಚ್ಚುಮದ್ದಿನ ಮೂಲಕ ರಕ್ತಕ್ಕೆ ಸೇರಿಸು; ದೇವಿಹಾಕು : ಹುಟ್ಟಿದ ಆರುತಿಂಗಳೊಳಗೇ ಮಕ್ಕಳಿಗೆ ಸಿಡುಬುಹಾಕುತ್ತಾರೆ (ಕೂಡಿ). [< ಸಿಡಿ$_1$./ ತುಳು. ಶಿಡಿಬು, ಶಿಡುಬು, ಸಿಡುಬು]

ಸಿಡುಬುಡಾಕು (ನಾ). ಸಿಡುಬುರೋಗ ತಗುಲದಂತೆ ಮುಂಚಿತವಾಗಿಯೇ ಚುಚ್ಚುಮದ್ದಿನ ಮೂಲಕ ರಕ್ತಕ್ಕೆ ಸೇರಿಸುವ ಸಿಡುಬಿನ ಲಸಿಕೆ; ದೇವಿ : ಇವನು ಮೈಸೂರಿನಲ್ಲಿ ಸುಮಾರು ೨೫೦೦೦ ಜನಕ್ಕೆ . . . ಸಿಡುಬುಡಾಕು (vaccination) ಹಾಕಿದನು (ಪಾಶ್ಚಾವಿ. ೨೬೪). [ಸಿಡುಬು + ಡಾಕು$_2$ (< ಡಾಗು$_1$)]

ಸಿಡುಬುಬೇನೆ (ನಾ). = ಸಿಡುಬು ೧ : ಯಾವುದಾದರೊಂದು ಮನೆಯಲ್ಲಿ ಯಾರಿಗಾದರೂ ಸಿಡುಬುಬೇನೆ ಬಂದ ಕೂಡಲೆ ಮನೆಯಲ್ಲಿರುವ ಇತರರಿಗೆ ದೇವಿಹಾಕಿಸಬೇಕು (ಕಲರೋ. ೬೦). [ಸಿಡುಬು + ಬೇನೆ]

ಸಿಡುಬುರೋಗ (ನಾ). = ಸಿಡುಬು ೧ : ನಾವು ಹೋಗುವ ಮಾರ್ಗದಲ್ಲಿ ಸಿಡುಬುರೋಗ ತಗುಲಿ ಅನೇಕರು ಮಡಿದರಂಬ ಸುದ್ದಿ ಕೇಳಿ ನಮಗಲ್ಲಾ ತುಂಬಾ ಗಾಬರಿಯಾಯಿತು (ಪ್ರಶಾವ. ೧೧೬); ಸಿಡುಬುರೋಗ ಮುಖ್ಯವಾದ ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿರುತ್ತದೆ (ಕಲರೋ. ೫೪). [ಸಿಡುಬು + ರೋಗ]

ಸಿಡ್ಲು (ನಾ). **ಕಣ್ಣಿನ ಪಿಸುರು ; ಗೀಜು :** "ದೂಪಿಕಾ . . . ಕಣ್ಣಿನ ಸಿಡ್ಲು, ಗೀಜು" (ಸಿದ್ಧಾಂತ. ೧೧೮). [?]

ಸಿಣಕು 'ಸಿಣುಕು' ನೋ.

ಸಿಣುಕು, ಸಿಣಕು (ಕ್ರಿ). ೧. ಅಸಹ್ಯ, ಅಸಮ್ಮತಿ ಮುಂತಾದುವನ್ನು ಸೂಚಿಸಲು ಮುಖವನ್ನು ಕಿವಿಚು, – ಸಿಂಡರಿಸು : ಒಂದೊಂದು ಸಲ ಅಲ್ಲಿ ಹತ್ತುಜನ ಸೇರಿರುವ ವೇಳೆ ರಾಮಾಚಾರ್ಯ, ಇವನೆಂತ ಬೇರೆ ಜನ, ವಚ್ಚರೋ ವಚ್ಚಲೋ ಎಂಬ ಪದ ಬಂದೊಡನೆ ತಾಳಲಾರದೆ ಮುಖವ ಸಿಣುಕುವರು (ನವರಾ. IV. ೭೨-೨೧). **ಸಿಣಕು :** ೨. (ಮುಖವು) ಸಿಂಡರಿಸಿಕೊಳ್ಳು, – ಕಿವಿಚು : ಮುಖಕ್ಕೆ ಬಿಸಿಲು ತಾಗಿ ಮುಖ ಸಿಣಕಿತು (ಚಕರಾ. ೩೪೮).

[ದೇ. ॥ ತಮಿ. ಚಿಣುಕ್ಕು; ತುಳು. ಸಿರಿಂಟು, ಸಿರುಂಟು, ಸಿರ್ಟು, ಸಿರ್ದು]

ಸಿತ (ಗು). ೧. ಬಿಳಿಯ ; ಶ್ವೇತವರ್ಣದ : ಲತಾಂತಂ ತಳ್ತ ಶಯ್ಯಾಶ್ರಿತಸಿತಮೃದುಳ ಪ್ರಚ್ಛದಚ್ಛನ್ನಶಯ್ಯಾತಲದೊಳ್ . . . ಶೂದ್ರಕನೃಪತಿ ಸುಖಾಸೀನನಾಗಿರ್ದಂ (ಕಾದಂಪು. ೦೦); ನವಾಶೋಕವೃಕ್ಷಂ ಸಿತಚಂಚೆಚ್ಚಮರಂ ಬೆಳ್ಗೊಡೆ ಸೊಗಯಿಪ ಭಾಮಂಡಳಂ (ಸುಕುಮಾ. ೪-೫೦). ೨. ಕಟ್ಟಿದ; ಬಿಗಿದ. ೩. ಸುತ್ತುವರಿದ. ೪. ಪತ್ತೆ ಹಚ್ಚಿದ ; ಕಂಡುಹಿಡಿದ. ೫. ಕೊನೆಮುಟ್ಟಿದ ; ಮುಗಿದ. (ನಾ). ೬. ಬಿಳಿಯ ಬಣ್ಣ; ಬಿಳುಪು : "ಗೌರಃ, ಶ್ವೇತಃ, ಸಿತಃ . . . ಪಾಂಡುರಃ -- ಈ ೧೨ ಬಿಳಿದು" (ಹಲಾಯು. ೧೫೧-೪೭); ತರದಿಂದಂ ಲೋಹಿತ ಸಿತ . . . ಮಲಿನವರ್ಣಮಿವು ಗೃಹವರ್ಣಂ (ಜಾತಕ. ೧-೫೧). ೭. ಶುಕ್ರ; ಬೆಳ್ಳಿನಕ್ಷತ್ರ : ಒರಂತಿರೆ ಬೆಳಗುತ್ತಂ ತಾರಾರವಿಚಂದ್ರ ಭಗಣಬುಧಸಿತಗುರ್ವಂಗಾರಕ . . . ಮೇಗಸೆದಿಕ್ಕುಂ (ಪರ್ಥಪು. ೧೫-೧೪); ದಿನಪಾಚ್ಚಾರಬುಧಾಮರೇಜ್ಯಸಿತಮಂದಾಹೀಂದ್ರಕೇತುವ್ರಜಂ ನಿನಗೇಕಾದಶರಕ್ಕೆ (ಪಪ್ಪಸ. ೮-೬೪) ೮. ಸಕ್ಕರೆ : ಬಲಿಕೆ ಚಾತುರ್ಜಾತಕಂ ನಾಳಿಕೇರದ ತೋಯಂ ಸಿತಮೆಂಬಿವಂ ಕಲಸಿ (ಲೋಕೋಪ ೮-೭); ಪನ್ನೆರಲ್ಪವಡಿ ಮಂಡಗೆಯೊಮ್ಮಾನ ತುಪ್ಪವಕ್ಕಾವಾಲ್ಪರಸಿ ಸಿತಾನ್ವಿತಂ ತೆಱುವರ್ (ಧರ್ಮಪ. ೯-೧೪). ೯. ಬಾಣ. ೧೦. ಬೆಳ್ಳಿ. ೧೧. ಶುಕ್ಲಪಕ್ಷ : ಅಂತು ಜ್ಯೇಷ್ಠಮಾಸದ ಸಿತಚತುರ್ದಶಿಯೊಳ್ ಭರಣೀನಕ್ಷತ್ರದೊಳಪರಾಹ್ಣದೊಳ್ ಪರಮದೀಕ್ಷೆಯಂ ಕಯ್ಕೊಳ್ವುದುಂ (ಶಾಂತಿಪು ೧೧-೧೦೬ ವ). ೧೨. ಶ್ರೀಗಂಧ. ೧೩. ಕಗ್ಗಲಿಮರ ; ಖದಿರ : "ಖದಿರಂ ಸಿತಮಜಿಯಂತದು ಕದಿರಂ" (ವಸ್ತುಕೋ. ೬೫-೧೫). [ಸಂ.]

ಸಿತಕ 'ಸಿತಗ' ನೋ.

ಸಿತಕಂದ (ನಾ). (ಗೆಡ್ಡೆಗಳುಳ್ಳ) ಒಂದು ಬಗೆಯ ಸಸ್ಯ : "ಖಂಡಕಃ – ಸಿತಕಂದ, ಸಕ್ಕರೆ" (ಓಷಧಿ. ೪೨). [ಸಂ.]

ಸಿತಕರ (ನಾ). ೧. ಬಿಳುಪಾದ ಕಿರಣಗಳುಳ್ಳವನು; ಚಂದ್ರ : 'ಸಿತಕರಚೂಡ' ಪುರಾ. ೨. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : ಶಶಾಂಕ ಸೋಮಂ ಸುಧಾಂಶು ರಜನಿಕರಂ . . . ಸಿತಕರ ಒಂದಱ ನಾಮಂ (ವ್ಯವಹಾ. ೯-೧). [ಸಂ.]

ಸಿತಕರಚೂಡ (ನಾ). ಚಂದ್ರನನ್ನು ಜಟೆಯಲ್ಲಿ ಧರಿಸಿದವನು; ಶಿವ : ನಾಡಾಡಿಯಲ್ತು ಸಿತಕರಚೂಡನೆನಿಪ್ಪಮಿಳಕೋಟಿನಾಥಸ್ಥಾನಂ ರೂಢಿಯೊಳಾಚನ್ಯಾರ್ಕ್ಕಂ (ಎಕ. VIII, ಸೊರಬ. ೨೭೬-೫೮; 1070). [ಸಂ.]

ಸಿತಕರಿ (ನಾ). ಬಿಳಿಯ ಆನೆ; ಐರಾವತ : ಸುರರಿಗೆರೆಯನದಂಬಿನಿ ಸಿತಕರಿಯ ಪರಿವಿಡಿಯಲ್ಲ (ಕೋಗಯ. ೧೧-೨೬). [ಸಂ. ಸಿತಕರಿನ್]

ಸಿತಕೀರ್ತಿ (ನಾ). ನಿರ್ಮಲವಾದ ಯಶಸ್ಸು; ಧವಳಕೀರ್ತಿ : ಒತ್ತಿಗಿಪ ಸಿತಕೀರ್ತಿಯೊಳು ಪ್ರಭೆವೆತ್ತು ಪರದರುಶನದ ಮೂಗಿನ ಕತ್ತಿಯೆಂಬಾ ಶಕ್ಯಯವನಾವುರದೊಳೆತ್ತಿಸಿದ (ಬಸವ. ೫೩-೫೭). [ಸಂ.]

ಸಿತಕುಷ್ಠ (ನಾ). ಒಂದು ಬಗೆಯ ಕುಷ್ಠರೋಗ; ಬಿಳಿಯ ಕುಷ್ಠ : [ಗೃಹದಿಂ]

ದ್ವಿತೀಯ ರಿಃಫದೊಳಿರೆ ಸದ್ಗ್ರಹೇತರಗಣಂ ಸಿತಕುಷ್ಮಸಮೇತನಾ ನರಂ (ಜಾತಕ. ೨೧-೧೨). [ಸಂ.]

ಸಿತಗ, ಸಿತಕ, ಸಿಟ್ಗ (ಗು). ೧. ಲಂಪಟತನದಿಂದ ಕೂಡಿದ; ಜಾರತನದ : ಸಿತಗತುಂಬಿಗಳೆಯ್ದು ಪುಷ್ಪರಸಮಂ ಪೀರ್ವುತತಿಲಂಪಟತ್ವದಿಂದೆಸಳ್ಗಡಣಮಂ ಕೊರಗಿಸುತೆ (ಅರಾಜ. ೨-೧-೧೨). ೨. ಗಟ್ಟಿಗತನವುಳ್ಳ; ಬಲಿಷ್ಠವಾದ . (ನಾ). ೩. ಹಾದರಿಗ; ಜಾರ : "ಸಿತಗಂ, ಜೋಡಂ, ಪರಳಿಗಂ, ಪಾಣ್ಪಂ — ಈ ೪ ಜಾರಂಗೆ ಪೆಸರ್" (ಕಶಾ. ೬೨-೩೮೭); ದೀವದಿಂ ನಿಂದು ಸಿತಗನಂ ನುಡಿವುದು (ಕವಿಗಾ. ೨-೧೫೦); ಸಿಂಗಾರ ಸಿತಗನು ಹೊಳೆವ ಮಣಿರಥವೆಜ್ಜೆ ಹೊಱವಂಟು (ಕೌಶಾ. ೩೬-೫). ೪. ನೀಚ; ಅಲ್ಪ : ನಿನ್ನ ಸಿತಗತನದಿಂ ಶತವಾರಂ ಹುತವಹನಂ ಪ್ರವೇಶಂಗೆಯ್ದೊಡಂ ಸಿತಗನೆಯಾಗಿ ಪುಟ್ಟುವೆ (ಪಂಚತಂ. ಅ. ೧೯೨-೨೫); ಸಿತಗಂ ಮಱೆದು ಎನ್ನಾಜ್ಞೆಯಂ ಮೀಱೆ ಕೀಱೆ ನಡೆವಂ (ನಂದಿರ. ೧೫-೧೮೮); ಸುರರೊಳಗೆ ಸಿತಗರ ಸೀಳುವೆನು (ಕುವ್ಯಾಧ್ಯೋ. ೧೬-೩೨). ೫. ಕಠೋರವಾಗಿರುವವನು; ನಿಷ್ಠುರಿ : ರೊದ್ದವ ತುಳಿವ ಸಿತಗರಂ ಪಿಡಿವ ರಾಯರಾಯವುರ ಸೂಱೆಕಾಱ (ಎಕ. II, ೧೪೩-೪೦; 1131); ಕೂಳ ಸೊಕ್ಕು ತಲೆಗೇಱೆ ರಾಣಿವಾಸದೊಡನೆ ಸರಸ ಬೇಡ ಕೂಡಲಸಂಗಮದೇವ ಕರಸಿತಗನಯ್ಯ (ಬಸವ. ೬೪೨); ಸುತರು ನಾಲ್ವರು ಸಾಧುಮಕ್ಕಳು ಸಿತಗನೊಬ್ಬನು . . . ಆತನ ಸಲಹಲಾನಾಱೆ (ಸುಭಪ. ೨೩-೩೮). ೬. ಮೋಸಗಾರ ; ಕಪಟಿ : ಇಂತಪ್ಪ ಸಿತಗನೀ ವಟು . . . ಸಂತಮಿಡಲಾರ್ಕುಮೇ (ಅರ್ಜುನ. ೬-೩೨). ೭. ಗಟ್ಟಿಗ ; ಬಲಿಷ್ಠ : ಹತ್ತುಸಾವಿರ ಮಕುಟವರ್ಧನರು ಸಾಯಲಂಜದ ಸಿತಗರದೆ ತನ್ನಾಯತದೊಳಪ್ರತಿಮರೌದ್ರದ ನಾಯಕರ ನೆರವಿಯೊಳು ಶಲ್ಯನೃಪಾಲ ನೋಡು (ಕುವ್ಯಾಧ. ೩-೯). **ಸಿತಕ** : ೨. ಅತಿರಥಮಹಾರಥಿಕರರ್ಧರಥಸಮರಥರು ಸಿತಕರಾವುತರುಮಾರೋಹಕರ್ (ಲಶಚಂ. ೩೧-೩೬). **ಸಿಟ್ಗ** : ೧. ಖಟ್ಗಕರನಾಗಿ ಪಿರಿದುಂ ಸಿಟ್ಗರ ಸೂಳೆಯರ ಸಂಗದಿರ್ಪುದು ಭೂದೇವರ್ಗಿದು ತಕ್ಕುದೆ ನಿಜನಿಜಮಾರ್ಗದೊಳಿರವೇಟ್ಟುದಾವನುಂ ದ್ವಿಜತಿಲಕಾ (ಶಬ್ದಾನು. ೧೪೦ ಪ್ರಯೋ. ಪುಟ ೧೬೯).

ಸಿತಗರ ಗಂಡ = ನೀಚರನ್ನು ನಿಗ್ರಹಿಸುವವನು; ಒಂದು ಬಿರುದು: ಶರಣಾಗತವಜ್ರಪಂಜರಂ ಸಿತಗರ ಗಣ್ಡಂ (ಎಕ. VI, ಕಡೂರು. ೩೨-೧೦; 1139); ಶ್ರೀಮನ್ನೃಹಾಸಾಮಂತಾಧಿಪತಿ ಸಿತಗರ ಗಣ್ಡ ಮಣ್ಣಳಿಕರವಿರಾಹು (ಎಕ. XVI, ಚಿಕ್ಕನಾ. ೬೨-೨೭; 1242). [< ಸಂ. ಸಿದ್ಧ]

ಸಿತಗತನ (ನಾ). ೧. ಹಾದರ; ವ್ಯಭಿಚಾರ : ನಿನ್ನ ಸಿತಗತನದಿಂ ಶತವಾರಂ ಹುತವಹನಂ ಪ್ರವೇಶಂಗೆಯ್ದೊಡಂ ಸಿತಗನೆಯಾಗಿ ಪುಟ್ಟುವೆ (ಪಂಚತಂ. ಅ. ೧೯೨-೨೪). ೨. ತುಂಟತನ; ಚೇಷ್ಟೆ : ಮಾಡಲಾಪಡೆ ಸಿತಗತನಗಳನು ಕಾಣಲೀ ಜಗವೈದೆ (ನಿಧಾಗ. ೧೦-೯-೪೭). [ಸಿತಗ + -ತನ]

ಸಿತಗಲ, ಸಿತಗಳ (ನಾ). ನೀಲಕಂಠ; ಶಿವ : ವ್ರತವ ಕೆಡಿಸಿ ಕೈವಿಡಿದ ಕಾರಣದಿಂ ಹತವಾದಳವಳುರಿಯೊಳಗೆ . . . ಎಂದಾ ನುಡಿಗೇಳ್ದಾ ಸಿತಗಲ ತನ್ನ ಮನದೊಳಗೆ (ಪ್ರಭಂಜ. ೩-೧೨೦); ಲಸಿತಸಿತಗಲನ ಗಾತ್ರಾಮರಕ್ಷಿತಿರುಹಾವೃತಕಲ್ಪಲತೆ ಶೈಲಸುತೆ (ಉದ್ಯದೇ. ೧-೮). **ಸಿತಗಳ** : ವಿತತಗಣ ಚತುರಗುಣ ಸುರರಾಜ ವರತೇಜ ಸಿತಗಳನೆಯತಿಬಳನೆ ಶರಣಾಗು (ಹಚಕಾ. ೧-೫); ಸಿತಗಳನಂ ದಿಗಂಬರನನಸ್ಥಿ ವಿಭೂಷಣನಂ . . . ಧವಳದೇಹನನುಗ್ರನನೊಲ್ದು (ದಶಕು. ೧-೪). 'ಅಸಿತಗಲ' ಪರಾ.

[ಇ ಸಂಸ್ಕೃತದಲ್ಲಿ 'ಸಿತಿಗಲ' ಎಂಬುದಕ್ಕೆ 'ನೀಲಕಂಠ' ಎಂಬ ಅರ್ಥವಿದೆ. ಅದರ ಸಾಮ್ಯದ ಮೇಲೆ ಇಲ್ಲಿ ಭ್ರಮೆಯಿಂದ 'ಸಿತಗಲ' ಪದವನ್ನು ಬಳಸಿದಂತಿದೆ]

ಸಿತಗಳ 'ಸಿತಗಲ' ನೋ.

ಸಿತಗಾನೆ (ನಾ). ದುಷ್ಟಗಜ; ತುಂಟ ಆನೆ : "ವ್ಯಾಳನೆನೆ ಸಿತಗಾನೆ" (ಮಂಗರಾ. ೪೭-೪). [ಸಿತಗ + ಆನೆ$_1$]

ಸಿತಗೆ (ನಾ). ಜಾರೆ; ಸೂಳೆ : "ಚದುರರ್ ಸಿತಗೆಯು ಜೋಡೆಯು ಬೆದಗಾರ್ತಿಯು ಪಾಣ್ಬೆಯೆನಲು ಜಾರೆಯರಕ್ಕುಂ" (ಕವಿಕಂ. ೧೬೮); ಏನೀ ಪೊತ್ತತ್ತವೋಪ್ಪೆ ಸಿತಗೆ ಮಗುಟೆ ಮಗುಟೆ (ಸುಬಮಾ. ೭-೨೧); ಒಕ್ಕಲಿತಿ ಜೋಡೆಯಾದಂತಕ್ಕುಮವಳ್ ಸಿತಗೆ ಪತಿಗೆ ಮಿಗೆ ಕಾಯ್ಯಳ್ (ಕಾವ್ಯಾವ. ೩೩೩). [ಸಿತಗ + -ಎ$_2$]

ಸಿತಚಂದನ (ನಾ). ಒಂದು ಬಗೆಯ ಶ್ರೀಗಂಧ; ಬಿಳಿಯ ಚಂದನ : "ತ್ರಿಚಂದನಂ — ರಕ್ತ, ಪೀತ, ಸಿತಚಂದನ" (ಒಪಧಿ. ೭೦). [ಸಂ.]

ಸಿತಚಾಮರ (ನಾ). ಬಿಳಿಯ ಚಮರೀಮೃಗದ ಕೂದಲಿನಿಂದ ಮಾಡಿದ ಚಾಮರ, — ಚೌರಿ: ಕೋಮಲಿಕೆಯರು ಸಿತಚಾಮರವ ಚಿಮ್ಮಲು ಭೂಪ ಮೆಚ್ಚಿದನು (ಶಿವಾಶಿ. ೮ ೪೫). [ಸಂ.]

ಸಿತಚೌರಿ (ನಾ). = ಸಿತಚಾಮರ : ಪಿಡಿದು ಚಾಮರ ಛತ್ರ ಕುಂಚ ಸಿತಚೌರಿಯ ಚಮತ್ಕಾರದಿಂ (ನವಮೋ. ೧೦-೧೭). [ಸಿತ + ಚೌರಿ (< ಚವರಿ)]

ಸಿತಚ್ಛತ್ರ (ನಾ). ಬಿಳಿಯ ಕೊಡೆ ; ಶ್ವೇತಚ್ಛತ್ರ : ಸಿತಚ್ಛತ್ರತಂಪಿನೊಳು ಬಪ್ಪಾತ ನೀನು ಎಂತು ಬಿಜುಬಿಸಿಲನಾನುವೆ (ಹಚಕಾ. ೯-೬). [ಸಂ.]

ಸಿತಚ್ಛತ್ರೆ (ನಾ). ಒಂದು ಬಗೆಯ ಸಸ್ಯ; ಕಾಡುಸಬ್ಬಸಿಗೆ : "ಶತಪುಷ್ಪಾ, ಸಿತಚ್ಛತ್ರಾ . . . ಕಾರವೀ — ೭ ಕಾಡುಸಬ್ಬಸಿಕೆ ಹೆಸರು" (ಸಿದ್ಧಾಂತಿ. ೧೪೭).

[ಸಂ. ಸಿತಚ್ಛತ್ರಾ]

ಸಿತಚ್ಛದ (ಗು). ೧. ಬಿಳಿಯ ರೆಕ್ಕೆಗಳುಳ್ಳ : 'ಸಿತಚ್ಛದಖಗ' ಪರಾ. (ನಾ). ೨. ಬಿಳಿಯ ರೆಕ್ಕೆ. ೩. ಬಿಳಿಯ ರೆಕ್ಕೆಗಳುಳ್ಳುದು. [ಸಂ.]

ಸಿತಚ್ಛದಖಗ (ನಾ). ಬಿಳಿಯ ರೆಕ್ಕೆಗಳುಳ್ಳ ಪಕ್ಷಿ; ಹಂಸ : "ಅಂಚೆ ಸಿತಚ್ಛದಖಗಂ ಮರಾಳಂ ಹಂಸಂ" (ವಸ್ತುಕೋ. ೪೩-೧೮). [ಸಂ.]

ಸಿತಚ್ಛವಿ (ನಾ). ಬಿಳಿಯ ಕಾಂತಿ; ಧವಳಪ್ರಕಾಶ : ಸಿತಚ್ಛವಿಯುಮೊಪ್ಪುವ ದಂಡಿಗೆಯುಂ ನಿಕಾಮನಿರ್ಮಳದಶನಂಗಳುಂ ಸೆಣಸೆ (ಶಾಂತಿಪು. ೩-೧೬). [ಸಂ.]

ಸಿತತುರಗ (ನಾ). ೧. ಬಿಳಿಯ ಕುದುರೆ. ೨. ಬಿಳಿಯ ಕುದುರೆಗಳುಳ್ಳವನು; ಅರ್ಜುನ : ಸುರವನರಸಿಯ ಶಾಪದಲಿ ಸಿತತುರಗನರೆವೆಣ್ಣಾಗಿ ಮತ್ಸ್ಯೇಶ್ವರನ ಮಗಳಿಗೆ ನಾಟ್ಯವಿದ್ಯಾಭ್ಯಾಸಸಂಗದಲಿ ಇರಲು (ಕುವ್ಯಾವಿ. ೧-೨೩). [ಸಂ.]

ಸಿತದೀಧಿತಿ (ನಾ). ಬಿಳಿಯ ಕಿರಣಗಳುಳ್ಳವನು; ಚಂದ್ರ : ಅಖಿಲಮನುಜಪಶು ಕೀಟಕಸಂತತಿಯುಮನಾಪ್ಯಾಯಿಸುಗುಂ ಸಿತದೀಧಿತಿ ನಿಜಕರಸ್ರುತೋದಾಣುಗಳಿಂ (ವಿಷ್ಣುಪು. ೨-೨-೨೧೧). [ಸಂ.]

ಸಿತದೀಪ್ತಿ (ನಾ). = ಸಿತಚ್ಛವಿ : ಹರಿಣಾಂಕನುದಯಿಸುತ ತನ್ನ ಸಿತದೀಪ್ತಿಯನು ಹರಿದಿದನು (ಪ್ರೌಢರಾ. ೬-೬). [ಸಂ.]

ಸಿತದೂರ್ವಾಂಕುರ (ನಾ). ಬಿಳಿಯ ಗರಿಕೆಯ ಚಿಗುರು : ಸಿತದೂರ್ವಾಂಕುರ ಮಾತುಲುಂಗ ನಳಿನೀಭೃಂಗಾರ ಗೋರೋಚನಾಕ್ಷತ ದಧ್ಯಾದಿ ವಿಡಂಬಮಂಗಳದೊಳೇಂ (ಆದಿಪು. ೧೬-೧೦). [ಸಂ.]

ಸಿತದೇಹ (ನಾ). ಬಿಳಿಯ ದೇಹ,-ಶರೀರ : ಕರಾಗ್ರದೊಳ್ಕಮಲಸಂಭವನೂತ್ನ ಕಪಾಲಮುಂ ವಿಜೃಂಭಿಸೆ ಸಿತದೇಹದೊಳ್ಪು ಜಗಮಂಡನಮೊಪ್ಪೆ (ಪಾಂಡವಾ. ೨-೧೪). [ಸಂ.]

ಸಿತದ್ಯುತಿ (ನಾ). = ಸಿತಚ್ಛವಿ : ಆ ಘನಸಮಯಂ . . . ಸಿತವಾರಿದೋಪಲ ಸಿತದ್ಯುತಿಯುಂ . . . ಆಗಿಯುಂ (ರಾಜಶೇ. ೯-೧೧೮ ವ). [ಸಂ.]

ಸಿತಪಕ್ಷ (ನಾ). ೧. ಬಿಳಿಯ ರೆಕ್ಕೆ. ೨. ಬಿಳಿಯ ರೆಕ್ಕೆಗಳುಳ್ಳುದು ; ಹಂಸ. ೩. ಶುಕ್ಲಪಕ್ಷ : ಸಿತಪಕ್ಷದ ಪಂಚಮಿ ದಿನಪತಿವಾರಂ . . . ನೆಗೆಟ್ಟುದೀ ಮತ್ಕೃತಿ ಜಗದೊಳ್ ಪುದಿದು ಸಾಗರಾಂತಕ್ಷಿತಿಯಂ (ಆದಿಪು. ೧೬-೭೭); ಸಿತಪಕ್ಷದಂತೆ ಚಂದ್ರಕಿರಣಾಂಕಿತನಿಶಾಂತಮುಂ . . . ಎಂಬ ಮಹನೀಯಮಹಿಮೆಯಂ ತಳೆದು (ಪುಪ್ಪಪು. ೯-೩೦ ವ); ಒದವಿದ ಪಾಲ್ಗುಣ ಸಿತಪಕ್ಷದ ರೋಹಿಣಿಯೊಳ್ ಶಶಾಂಕನ ಪರಿವೇಷಂ ಪುದಿದೊಡೆ (ಅಚ್ಚಮಾ. ೯-೯೨). ೨ , ೩ : ಸುರರ ನಿವಾಸದಂತನಿಮಿಷಪ್ರಕರಂ . . . ಮಧುಮಾಸದಂತೆ ಸಿತಪಕ್ಷಯುತಂ (ಗಿರಿಕ. ೨-೫೪). ೪. ಚಂದ್ರ. [ಸಂ.]

ಸಿತಪ್ರಮೇಹ (ನಾ). ಬಿಳುಪಾಗಿ ಮೂತ್ರ ಹೋಗುವ ಒಂದು ಬಗೆಯ ಮೇಹರೋಗ : ಸಿತಪ್ರಮೇಹಕ್ಕೆ ಚಿತ್ರಮೂಲದ ಕಷಾಯವಂ ಮಾಡಿ ಕೊಡುವದು (ವೈದ್ಯವಿ. ೨೪). [ಸಂ.]

ಸಿತಭಾನು (ನಾ). = ಸಿತದೀಧಿತಿ : ಸಿತಭಾನು ಶಾಂತಾಸು ನಿಜಭಾನುತೇಜ ಭೂಪತಿ ಪೇಳು ಮುಂದಣ ಕಥೆಯ (ರಾಮವಿ. ೧೯-೬). [ಸಂ.]

ಸಿತಭಾನುಮುಖಿ (ನಾ). ಚಂದ್ರನಂತೆ ಮುಖವುಳ್ಳವಳು; ಇಂದುಮುಖಿ :

ಸಿತಭಾನುಮುಖಿಯತಿಹಿತಮಿತವಾಣಿ ಸನ್ಮತಿವಂತೆ ಮಾಯಾವಿದೂರೆ (ರಾಮವಿ. ೧೯-೩).
[ಸಂ. ಸಿತಭಾನುಮುಖೀ]

ಸಿತಮತಿ (ನಾ). ಸೂಕ್ಷ್ಮಬುದ್ಧಿಯುಳ್ಳವನು: ಇದು ಶಿವಕೃತಮಕ್ಕುಮಭವ ನೊಲ್ಮೆಗೆ ನೃಪನಗ್ಗದ ಮಹಿಮೆಗೆ ಕಾರಣಮಿಂತಿದು ತಾನೆಂದಱಿದನವನದೇಂ ಸಿತಮತಿಯೋ (ರಾಜಶೇ. ೧೪-೪). [< ಸಂ. ಶಿತಮತಿ]

ಸಿತಯಶ (ನಾ). ೧. = ಸಿತಕೀರ್ತಿ: ಉದಾರಕೃತಿ ಸಿತಯಶಮಂ ತಿಳಿಜೊನ್ನ ಮನಿಂದಮಜ್ಜಳಕಳವಡೆವವೊಲಬಳಿ ಪಡೆದಳಮಳಾರ್ಭಕನಂ (ರಾಜಶೇ. ೪-೫೧). ೨. ನಿರ್ಮಲವಾದ ಕೀರ್ತಿಯನ್ನು ಗಳಿಸಿದವನು: ಕಲಕೇತಬೊಮ್ಮಗುಣೋತ್ತಮಂ ಮೆಚ್ಚವಾದಿಭಕ್ತನುದಾತ್ತಚರಿತಂ ಸಿತಯಶಂ (ಬಸಪು. ೨೯-೧). [ಸಂ. ಸಿತಯಶಸ್]

ಸಿತರೋಚಿ (ನಾ). ೧. ಬಿಳಿಯ ಕಿರಣಗಳುಳ್ಳವನು; ಚಂದ್ರ. ೨. ಯತಿ; ಮುನಿ. ೩. ಸಜ್ಜನ ; ಸತ್ಪುರುಷ. ೪. ನಿರ್ಮಲವಾದ ಯಶಸ್ಸು. ೫. ಶಿವ. "ಏಣಾಂಕ ಮುನೀಂದ್ರ ಸಜ್ಜನ ಸುಕೀರ್ತಿ ಶಿವಂ ಸಿತರೋಚಿವಾಚಕಂ" (ನಾನಾರ. ೧೪೭).
[ಸಂ. ಸಿತರೋಚಿಸ್]

ಸಿತವಟ್ಟೆ (ನಾ). ಬಿಳಿಯ ಬಟ್ಟೆ; ಶ್ವೇತಾಂಬರ: ಸಿತವಟ್ಟೆವಿಡಿಗದ್ದುಗೆಯಲ್ಲಿ ಮಂದಸ್ಮಿತಮುಖಿಯರ ಸಾಲುಗೊಳಿಸಿ ಸತಿಯರ ತಲೆವಣಿ ಸಖಿಯೊಡನಿರ್ದಳು ರತಿ ಸರಸತಿಯ ಠೀವಿಯಲಿ (ವೋಪತ. ೨೬-೫). [ಸಿತ + ಬಟ್ಟೆ]

ಸಿತವಣ್ಣ (ನಾ). ಬಿಳಿಯ ಬಣ್ಣ; ಶ್ವೇತವರ್ಣ : ಪೊಳೆವ ಮುತ್ತಿನ ಕಂಠಮಾಲೆ ನೆಲಸಿದ ಜವ್ವನದ ಸಿತವಣ್ಣದ ಮೆಯ್ಯ ನಳಿನವದನೆಯರೊಪ್ಪಿದರು (ಜೀವಂಸಾಂ. ೨೦-೧೧). [ಸಿತ + ಬಣ್ಣ]

ಸಿತವರ್ಣ (ನಾ). = ಸಿತವಣ್ಣ : "ಸಿತವರ್ಣಂ ಕರ್ಕಂ" (ವಸ್ತುಕೋ. ೩೬-೨೪). [ಸಂ.]

ಸಿತವಾಹನ (ನಾ). = ಸಿತತುರಗ ೨ : ನೀನಿಂದು ಸಿತವಾಹನಂಗೀಯದಿರ್ಕುದುರೆಯಂ (ಚೈಮಿಭಾ. ೯-೧). [ಸಂ.]

ಸಿತವ್ಯಾಲ (ನಾ). = ಸಿತಕರಿ : ಪುಷ್ಪಮಾಲೆಯಂ ದುರ್ವಾಸಲೋಲಮುನಿ ಕುಡೆ ಸಿತವ್ಯಾಲಕುಂಭಕ್ಕಿಟ್ಟೊಡೆ (ಭಾವಚಂ. ೩-೧೯). [ಸಂ.]

ಸಿತಶಾಲಿ (ನಾ). ಒಂದು ಬಗೆಯ ಬತ್ತ: "ಸಿತಶಾಲಿ ಕೆಂಗಬವೆ ಕೆಂಬತ್ತಿ . . . ಎಂದಿವು ನೆಲ್ಲ ಭೇದಂಗಳ್" (ಮಂಗರಾ. ೧೧೦-೪). [ಸಂ.]

ಸಿತಶಿವ (ನಾ). ಒಂದು ಬಗೆಯ ಉಪ್ಪು; ಕಲ್ಲುಪ್ಪು. [ಸಂ.]

ಸಿತಶೂಕ (ನಾ). ಒಂದು ಬಗೆಯ ಧಾನ್ಯ; ಯವೆ. [ಸಂ.]

ಸಿತಸರ್ಪಪ (ನಾ). ಬಿಳಿಯ ಸಾಸುವೆ : ಬುದ್ಧಿಸಾಗರಂ ಸಗರನ ಮೇಲೆ ಸಿತಸರ್ಪಪಂ ಗಳನಿಟಿಯೆ ಸುರಿವುದುಂ (ಅಜಿಪು. ೧೦-೫೩ ವ); ಅತಿಸಿತಸರ್ಪಪ ಶೇಷಾಕ್ಷತಂಗಳಂ ಮಂಗಳಾರ್ಥದಿಂ ಪೆರ್ವೆಂಡಿರ್ . . . ತಳಿದರ್ (ಸುಕುಮಾ. ೧೧-೬). [ಸಂ.]

ಸಿತಸಿಂಧುವಾರ (ನಾ). ಒಂದು ಬಗೆಯ ಹೂವು; ಬಿಳಿಯ ಲೊಕ್ಕಿ : ಜಿನನುರದೊಳೆಸೆವ ಪಾಲಿನ ಪೊನಲ್ . . . ಮನೋಜ್ಞಸಿತಸಿಂಧುವಾರಮಾಲೆಯ ನಿಟಿಕುಂ (ಶಾಂತಿಪು. ೧೦-೪೬). [ಸಂ.]

ಸಿತಹಯ (ನಾ). = ಸಿತತುರಗ ೨ : "ಇಂದ್ರಜಂ ಸಿತಹಯಂ . . . ಫಲ್ಗುಣನೆ ನಲ್ಕರ್ಜುನನೆನಿಕ್ಕು" (ಮಂಗರಾ. ೭೮-೩); ಸಿತಹಯನನಕಟಾ ತೋಱೆರ್ಕೆ (ಕುಮಾಕ. ೮-೩೭). [ಸಂ.]

ಸಿತಾಂಗ (ನಾ). ೧. ಬಿಳಿಯ ದೇಹ; ಬಿಳುಪಾದ ಶರೀರ : ಉಜ್ವಲಿಸುವಪ್ರತಿಮ ದೀಪದವೊಲು ಸಿತಾಂಗದ ಸತಿಯ ಜಠರದಲಿ ಅತುಳಿತಪ್ರಭೆವೆತ್ತು (ಬಸಪು. ೩-೧೨). ೨. ಬಿಳುಪಾದ ದೇಹವುಳ್ಳವನು; ಶಿವ : ಒಲಿದು ಕೀರ್ತಿಸಲೊತ್ತುವವೊ ತಾಂ ಪಲವು ಮಾತೃಕೆಗಳಿಗೆನುತ ಕೋಮಳಸಿತಾಂಗನನಾವಗಂ ನೆನೆವಂದವೋ (ಬಸಪು. ೩೫-೨೪). ೩. ಶುಕ್ರಗ್ರಹ : "ಸಿತಾಂಗನುಶನನಸುರಗುರುವೆಂದೆನಲು ಶುಕ್ರಂ" (ಮಂಗರಾ. ೧೨-೬). ೪. ಒಂದು ಬಗೆಯ ಸನ್ನಿಪಾತ : ಆ ತ್ರಯೋದಶ ಸನ್ನಿಪಾತಮಾವುದೆಂದೊಡೆ . . . ಚಿತ್ತವಿಭ್ರಮ , ಸಿತಾಂಗ (ಸಕ್ಯ. ೧೫೧). [ಸಂ.]

ಸಿತಾಂಗಿ (ನಾ). ಬಿಳುಪಾದ ದೇಹವುಳ್ಳವಳು; ಸರಸ್ವತಿ: ಸಿತಾಂಗಿಯೆನ್ನ ಹೃದಯಾಬ್ಜದೊಳಿರ್ದು ಮತಿಪ್ರಕಾಶಮನ್ನೆಸಗು (ಕಜಕಂ. ೪). [ಸಂ. ಸಿತಾಂಗೀ]

ಸಿತಾಂಬರ (ನಾ). ೧. ಬಿಳಿಯ ಬಟ್ಟೆ; ಶ್ವೇತವಸ್ತ್ರ : ಸಿತಾಂಬರದಿಂದೆ ಗಾಳಿಸಿ (ಲೋಕೋಪ. ೮-೫೩). ೨. [ಜೈನ] ಶ್ವೇತಾಂಬರಪಂಗಡಕ್ಕೆ ಸೇರಿದ ಸಂನ್ಯಾಸಿ.
[ಸಂ.]

ಸಿತಾಂಬು (ನಾ). ಬೆಳ್ಳಗಿರುವ ನೀರು; ನಿರ್ಮಲಜಲ : ಮಜ್ಜನ ಭೋಗಿಸುವರೆ ಸಿತಾಂಬು ತಿಳಿಗೊಳನು (ಕುಮಾಅ. ೨೧-೭). [ಸಂ.]

ಸಿತಾಂಬುಜ (ನಾ). ಬಿಳಿಯ ತಾವರೆ : "ಪುಂಡರೀಕಮೆನಿಕುಂ ಸಿತಾಂಬುಜಂ ತಾನದಱೊಳ್" (ವಸ್ತುಕೋ. ೨೫-೨೦); ಮಾನಸದಿಂ ಸಿತಾಂಬುಜಶತಂ ತಳರ್ವಂತೆ ವೊಲೆಯ್ದೆ . . . ಬಂದೆಱಗಿತ್ತು . . . ಮರಾಳಮಂಡಳಂ (ಜಗವಿ. ೪-೬೪); ಸಿತಾಂಬುಜಮೌಕ್ತಿಕೌಘಸುಕ್ಷೀರವಿಶೇಷಗೌರರುಚಿಪೂರಿತಚಿತ್ರಶರೀರದಿಂದೆ ಮೇಣ್ ಪುಣ್ಯದ ಪುಂಜದಂತೆ . . . ಎಸೆವ . . . ವೃಷಭೇಶ್ವರನಂ ಕಂಡು (ಹಮ್ಮೀರ. ೫-೪).
[ಸಂ.]

ಸಿತಾಕ್ಷತ (ನಾ). ಬಿಳಿಯ ಮಂತ್ರಾಕ್ಷತೆ : ಪುಷ್ಪಸಂಕುಳದಿಂ ಪೂಜ್ಯತೆಯಂ ಸಿತಾಕ್ಷತದಿನುದ್ಯತ್ತಮಂ . . . ಫಲದಿನವ್ಯಾಬಾಧೆಯಂ ಮಾಡುಗುಂ (ಶಾಂತಿಪು. ೧೦-೫೫); ಮಡಿವರ್ಗ ದೂರ್ವಾಂಕುರ ಸಿತಾಕ್ಷತ ಧವಳಸರ್ಷಪ ವರಫಲಾವಳಿಯ ತರಿಸಿದನು (ಕುಮಾಕ. ೧-೨೮). [ಸಂ.]

ಸಿತಾತಪತ್ರ (ನಾ). = ಸಿತಚ್ಛತ್ರ : ಶತಪತ್ರದ ಸಿತಾತಪತ್ರದೊಳಂ ಪೊಂಬಾಚೆಯ ಚಾಮರಂಗಳೊಳಮೆಸೆವ . . . ಪದ್ಮರಾಗದ ಪಟ್ಟವಣೆಯೊಳ್ ನಿಲಿಸಿದ ಕಾಮದೇವನನತಿಪ್ರೀತಿಯಿಂದರ್ಚಿಸಿ (ಕಾದಂಉ. ೭೮೧); ಉಡಿದು ಕೆಡೆದ ಸಿತಾತಪತ್ರದ ನಡುವೆ ಹರಿಸಾಲಿನ ಕಪಾಲದ ಗಡಣವಿರೆ (ಕುಮಾಕ. ೧೯-೮೮); ತೋರದೇತಕೊ ಏನೊ ಲೋಕಪೂಜಿತ ದೇವ ದಶರಥಸಿತಾತಪತ್ರಂ! (ಶ್ರೀರಾಮಾ. ೧೫೯-೧೯೭). [ಸಂ.]

ಸಿತಾಬ್ಜ (ನಾ). ಬಿಳಿಯ ಕಮಲ; ಪುಂಡರೀಕ : ಸಿತಾಬ್ಜಮೆಂಬ ಕಣ್ ಮಿಸುಪ ಪರಾಗಮೆಂಬ ನಸುಗೆಂಪಿನೊಳೊಂದಿರೆ (ಚಂದ್ರಪ್ರ. ೭-೬೩). [ಸಂ.]

ಸಿತಾಭ್ರ (ನಾ). ೧. ಬಿಳಿಯ ಮೋಡ; ಬೆಳ್ಮುಗಿಲು : ಧರಣಿಪನ ಕೀರ್ತಿವಧು ನಭಃಕಬರಿಯಲ್ಲಿ ಗೊಜ್ಜಗೆಯ ಸರೋತ್ಕರವಾಂತವೊಲೆ ಸಿತಾಭ್ರಂ ನೆರೆದಿರೆ (ರಾಜಶೇ. ೯-೬). ೨. ಕರ್ಪೂರ. [ಸಂ.]

ಸಿತಾರ್ 'ಸಿತಾರು' ನೋ.

ಸಿತಾರ 'ಸಿತಾರ್' ನೋ.

ಸಿತಾರು, ಸಿತಾರ್, ಸಿತಾರ (ನಾ). ಒಂದು ಬಗೆಯ ತಂತೀವಾದ್ಯ : ಮಕ್ಕಳು ನರ್ತನವಿದ್ಯೆಯ ಕಲಿತರು ಕಲಿತರು ತಾಯಿ ಸಿತಾರು (ಇಂಚಾಪ. ೪೭-೨೧); ಆ ಸಿತಾರಿನ ಹುಡುಗ ಅಷ್ಟು ಊಟ ಮಾಡಿದ್ದನ್ನು ನಾನು ನೋಡಿಯೇ ಇರಲಿಲ್ಲ (ಮಹಾತ್ಮಾ. ೪೨). **ಸಿತಾರ್**: ಎರಡು ಪಾರ್ಶ್ವಂಗಳೋತ್ಕಾಳಮದ್ದಳೆಸಿತಾರ್ಸಾರಂಗಿಯೂ (ಅರ್ಚಾವಿ. ೨೪-೫೧); ವೆಂಕಟರಮಣದಾಸರು . . . ಸಿತಾರ್ ಮತ್ತು ರುದ್ರವೀಣೆಗಳ ವಾದನದಲ್ಲಿಯೂ ಪ್ರವೀಣರಾಗಿದ್ದರು (ಸಂಗೀತ. ೬೯). **ಸಿತಾರ** : ಸಿತಾರವನ್ನಾದರೂ ತಾ (ಕಲಾಜ್ಞೋ. ೧೦೧). [<— ಪಾರ. ಸಿತಾರಾ; ಹಿಂ. ಮರಾ. ಸಿತಾರ್]

ಸಿತಾಳ 'ಸೀತಳ' ನೋ.

ಸಿತಿ (ನಾ). ೧. ಬಿಳಿಯ ಬಣ್ಣ; ಬಿಳುಪು. ೨. ಕರಿಯ ಬಣ್ಣ; ಕಪ್ಪು. [ಸಂ.]

ಸಿತಿಕಂಠ (ನಾ). ಕಪ್ಪು ಕೊರಳುಳ್ಳವನು; ನೀಲಕಂಠ; ಶಿವ : ಸಿತಿಕಂಠನಂ ಕರ್ತು ತಪಗೆಯ್ದು (ಪ್ರಾಥರಾ. ೮-೯೬). [ಸಂ.]

ಸಿತಿಗಳ (ನಾ). ಶಿವ; ಸಿತಿಕಂಠ : ಈ ಸಿತಿಗಳನೇನುಮನಱಿಯದ ಮತಿರಹಿತೆಯ ಮಾತುಗೇಳ್ದು ಪಾಲ್ಗುಡಿದಪನೇ (ವೃಷವಿ. ೯-೧೧). 'ಸಿತಗಲ' ಪರಾ.
[ಸಂ. ಸಿತಿಗಲ]

ಸಿತಿನಿ (ನಾ). ಒಂದು ಬಗೆಯ ಔಷಧದ್ರವ್ಯ : ಅರಿದಳ, ಸಿತಿನಿ, ನಗ್ಗಿಲ ಹೂವು . . . ಇವೆಲ್ಲವ ಸಂಪಾದನೆ ಮಾಡಿ (ವೈದ್ಯವಿ. ೧೭೫). [?]

ಸಿತೆ (ನಾ). ಒಂದು ಬಗೆಯ ಸಕ್ಕರೆ; ರಾಯಿಪುಡಿಸಕ್ಕರೆ : "ಶರ್ಕರಾ, ಸಿತಾ - ತವರಾಜನೆಂಬ ಸಕ್ಕರೆ; ರಾಯಿಪುಡೀಸಕ್ಕರೆ" (ಸಿದ್ಧಾಂತಿ. ೨೮೬). [ಸಂ. ಸಿತಾ]

ಸಿತೇಕ್ಷು (ನಾ). ಬಿಳಿಯ ಕಬ್ಬು : ಕಂತು ಚಾಪಕ್ಕೆ ಚಿತ್ತದೊಳಾಳ್ದಿರ್ಪ ಸಿತೇಕ್ಷುಮಾಲೆ

ವಿಷಮಾಸ್ತ್ರಂ ಪಂಚಬಾಣಕ್ಕೆ ಮಾಣದೆ ಕಣ್ಣಾದಿರಿಸಿಟ್ಟ ಮಲ್ಲಿಗೆ . . . ಎಸಗುಂ ತನ್ನಂದನೋಪಾಂತದೊಳ್ (ಚಂದ್ರಪ್ರ. ೧-೧೦೪). [ಸಂ.]

ಸಿತೇಕ್ಷುದಂಡ (ನಾ). ಬಿಳಿಯ ಕಬ್ಬಿನ ಜಲ್ಲೆ : ಎಸೆವ ಸಿತೇಕ್ಷುದಂಡಮಂಡಲಿ ಬನದೊಳ್ (ಮಲ್ಲಿಪು. ೨-೪೩). [ಸಂ.]

ಸಿತೇತರ (ನಾ). ೧. ಬಿಳುಪಲ್ಲದುದು; ಕಪ್ಪು. ೨. ಒಂದು ಬಗೆಯ ಕುದುರೆ : ''ಸಿತೇತರಾಖ್ಯಂ ತುರಂಗಮಿಂದ್ರಾಯುಧನುಂ'' (ವಸ್ತುಕೋ. ೮೬-೨೪). [ಸಂ.]

ಸಿತೇತರಗತಿ (ನಾ). ೧. ಕಪ್ಪುಹೊಗೆಯೊಡನೆ ಹಬ್ಬುವವನು; ಅಗ್ನಿ : ''ಸಪ್ತಾರ್ಚಿಃ . . . ಸಿತೇತರಗತಿಃ . . . ಹುತಾಶನಃ — ಈ ಳಂ ಕಿಚ್ಚನ ಪೆಸರ್'' (ಹಲಾಯು. ೧೨-೬೨). ೨. (ಆಲಂ) ದುರಾಚಾರಿ; ಪಾಪಿ. ೧, ೨ : ಪರಿಕಿಪೊಡ ವಿಚಾರಿ ಸಿತೇತರಗತಿಯಾದಂ ಪ್ರಭಂಜನಪ್ರಿಯನತಿನಿಷ್ಠುರಜಿಹ್ಮನುಷರ್ಬುಧನಂತಿರೆ ದುರ್ಬುಧನಾರೊಳೊಂದಿ ಪಡೆಯಂ ನೋವಂ (ಚಂದ್ರಪ್ರ. ೧-೪೨). [ಸಂ.]

ಸಿತೋತ್ಪಲ (ನಾ). ಬಿಳಿಯ ತಾವರೆ : ''ಕುಮುದಂ ಕೈರವಮೆಂದು ಸಿತೋತ್ಪಲವದಲ್ಲಿ ಪೇಬಲ್ಪುದುಗುಂ'' (ವಸ್ತುಕೋ. ೨೫-೨೨). [ಸಂ.]

ಸಿತ್ತುಂಡಿಗಿಡ (ನಾ). ಒಂದು ಬಗೆಯ ಔಷಧೀಸಸ್ಯ : ಸಿತ್ತುಂಡಿಗಿಡ, ಸಿದಿಗೂಲಿ, ಹನುಮಂತತೊಪ್ಪಲು, ಚೇಡುಬೀರ (ಮೃಡಿಗಿ. ೨೧-೩೯).

[ಸಿತ್ತುಂಡಿ + ಗಿಡ (< ಗಿಡು)]

ಸಿದಕು 'ಸಿದುಗು' ನೋ.

ಸಿದಾಯ 'ಸಿದ್ಧಾಯ' ನೋ.

ಸಿದಿಗೆ, ಶಿದ್ದಿಗೆ, ಸಿದ್ದಿಗೆ$_2$ (ನಾ). ೧. ಹೆಣವನ್ನು ಸುಡಲು ಒಟ್ಟಿದ ಕಟ್ಟಿಗೆಯ ರಾಶಿ; ಚಿತೆ : ಸ್ಮರನಿಟ್ಟ ಸಿದಿಗೆಯಂತಿರೆ ಸಿರಿಮಂಚಂ ಸ್ಮರಮಹಾಗ್ನಿಯಿಂ (ಲೀಲಾವ. ೧೪-೬೫); ಸುದತಿಯರ ಒಲುಮೆ ಅಲೆಯಿದ ಅರಸು ತಾ ಸಿದಿಗೆಯ ಹೆಣನು (ಸರ್ವಜ್ಞ. ೬೫೨). ೨. ಹೆಣ ಹೊರುವ ಸಾಧನ; ಚಟ್ಟ : ಭಾವದೊಳು ಕೃಪೆ ಹುಟ್ಟಿ . . . ಸಿದಿಗೆಯನಿಳುಹವೇಳ್ದು (ಬಸವ. ೩೨-೪೩); ತಿಂಮನ ಇತಿಶ್ರೀಯಾಯಿತೆಂದು ಸಿದಿಗೆ ಬಿಗಿದು ನಾಲ್ಕರು ಭುಜ ಕೊಟ್ಟು ನಡದೇ ಬಿಟ್ಟರು (ತಿಂಮತ. ೧೯); ಬಾಬಣ್ಣನ ಮನೆಯ ಮುಂದೆ ಸಿದಿಗೆ ಕಟ್ಟುತ್ತಲಿದ್ದಾರೆ (ಅಶೋಕ. ೨೪೮). **ಶಿದ್ದಿಗೆ** : ೨. ಸೀತಮ್ಮನ ಶವವನ್ನು ಶಿದ್ದಿಗೆಯ ಮೇಲೆ ಹಾಕಿ ಕಟ್ಟುತ್ತಲಿದ್ದಾರೆ (ಪ್ರಣಸ. ೨೨). **ಸಿದ್ದಿಗೆ**$_2$: ೧. ''ಚಿತೆಯೆನಲು ಸಿದ್ದಿಗೆಯೆನಿಕ್ಕುಂ'' (ಮಂಗರಾ. ೧೧೮-೭). ೨. ಕುಲದಲಧಿಕ ಹಾರುವಂಗೆ ಸಿದ್ದಿ [ಪಾಠಾಂ. ದ್ದಿ]ಗೆಯ್ಸೆಸಲೆ (ಬಸವ. ೫೯೭); ಸಿದ್ದಿಗೆಯ ನುಲಿಯ [ಪಾಠಾಂ. ಸಿದಿಗೆಯ ತುದಿಯಲಿ] ಒತ್ತಿ ಬಿಗಿಬಿಗಿದು ಹಂಜರಿಸಿ (ಪಚಕಾ. ೧೧-೪೩); ಚಿವುಡರಸನಾ ಸಿದ್ದಿಗೆಯನುಱೆ ತಟ್ಟಿ . . . ತರಳೆ ಏಳೇಳೆನುತ ಪೆಸರಲಿ ಕರೆಯಲು (ಬಸವ. ೩೨-೩೪); ನೆಟ್ಟನೆ ಶೂಲದ ಮರ ಹಳೆಯ ಸಿದ್ದಿಗೆಯ ಕಟ್ಟಿ ತವಗ ಮಾಡಿ ಕುಳಿತ (ಹರಿಸಾಂ. ೪-೧೮).

ಸಿದುಗು$_1$, **ಸಿದಕು** (ಕ್ರಿ). ಕೈಯಿಂದ ಹುಡುಕು; ತಡಕಾಡು: ''ಸಿದುಗು — ಹಸ್ತಾನ್ವೇಷಣೇ (ಕೈಯಿಂದ ಹುಡುಕು)'' (ಶಮಧಾ); ಗಳಗಳನೆ ಮುನ್ನ ಬೆಂದುಳಿದಿರ್ದ ಕರಿಗೊಳ್ಳಿಗಳನೆಲ್ಲವಂ ಸಿದುಗಿ ತಂದೊಟ್ಟಿ (ಪಚಕಾ. ೧೨-೩೫). **ಸಿದಕು** : ಪುಸ್ತಕವನ್ನು ಎಲ್ಲೋ ಇಟ್ಟು ಮನೆಯೆಲ್ಲಾ ಸಿದಕಿದ (ರೂಢಿ).

ಸಿದುಗು$_2$ (ನಾ). ಕಸ; ಹೊಲಸು: ನೆಲದ ಮೇಲೆ ಬಗ್ಗಿಕೊಂಡು ಸಿದುಗನ್ನೆಲ್ಲಾ ಬದಿಗೆ ಮಾಡಿ ಬಿದ್ದಿದ್ದ ರೂಪಾಯಿಗಳನ್ನು ಶೋಧಿಸತೊಡಗಿದಳು (ಪ್ರಕಿಂ. ೭).

[ದೇ. ॥ ತಮಿ. ಚಿತಕು = ದೋಷ, ತಪ್ಪು]

ಸಿದ್ಧಾಯ, ಸಿದಾಯ (ನಾ). ಗೊತ್ತುಪಡಿಸಿದ ತೆರಿಗೆ; ನಿಗದಿಯಾದ ಕಂದಾಯ : ಊರ್ಗಳ ಸಿದ್ಧಾಯವನಿತ್ತು (ಎಕ. VII, ಶಕಾರಿ. ೧೦-೫೨; 1085); ರಾಯ ನಿನಗಾವಿಂದು ದಿಟ ಸಿದ್ಧಾಯವನು ನಾವೆತ್ತೆವಲ್ಲದೆ ವಾಯುಜನ ಫಲುಗುಣನ ಬಲ್ಲಿನ ಬಲುವೆಗಂಜಿದೆವೆ (ಕುವ್ಯಾಸ. ೮-೩೦); ಇವನ ಸಿದ್ಧಾಯಕ್ಕಾಗಿ ಏನೆಂಬೆನೊಂದು ಸಾಸಿರಬಂಡಿ ಕನಕಮಂ ನ್ಯೂನಮಿಲ್ಲದೆ ತೆತ್ತು ಬಹೆವು (ಚೆಮುಭಾ. ೧೭-೧೨). **ಸಿದಾಯ**: ಸಿದಾಯ ವರಾಡ ಬಿರಾಡ ಗರಿಕೆ X ಹೊರಕೆ ಮುಂತ್ತಾದವ ತರಿಸಿಕೊಂಡು (ಪ್ರಾಶಾ. XX, ೨೫೩-೨೫; 1596). [< ಸಂ. ಸಿದ್ಧಾಯ./ ತೆಲು. ಸಿದ್ಧಾಯಮು]

ಸಿದ್ದಿಗೆ$_1$, **ಸಿದ್ಧಿಗೆ** (ನಾ). ೧. ಎಣ್ಣೆ, ತುಪ್ಪ ಮುಂತಾದ ದ್ರವಪದಾರ್ಥಗಳನ್ನು ತುಂಬುವುದಕ್ಕಾಗಿ ಬಳಸುವ ಚರ್ಮದ ಚೀಲ; ಬುದ್ದಲಿ: ತುಂಬಿದ ಸಿದ್ದಿಗೆಯಂತೆ ರಥದ ಗಾಲಿಯಂತೆ ಬಟ್ಟಿತ್ತಾಗಿರ್ಪೆ (ಪಂಚತಂ. ೧೫೧-೧೯). ೨. ದ್ರವಪದಾರ್ಥಗಳನ್ನು ಅಳೆಯುವ ಒಂದು ಅಳತೆ : ತುಪ್ಪಮೆಣ್ಣೆಯೆಮ್ಮಿವು ಕೊಡಕ್ಕೆ ಸೊಲ್ಲಗೆ ಸಿದ್ದಿಗ ಗರವಾನಂ (ಎಇ. XIX, ೩೩-೨೬; 1135). **ಸಿದ್ದಿಗೆ**: ೧. ತಿತ್ತಿ ಸಿದ್ದಿಗ ತೊಗಲ್ವೇಱೊಳಗೆ ಬಂದತ್ತು ಗಂಗಾಸಾಗರವು (ಕುರಾಸಾಂ. ೧೯-೧೧).

[ದೇ. ॥ ಮಲ. ಚುತ್ತಿಕ; ತುಳು. ಶಿದ್ದಿಗೆ, ಸಿದ್ದಿಗ ; ತೆಲು. ಸಿದ್ದಿಯ]

ಸಿದ್ದಿಗ್ಗೆ 'ಸಿದಿಗೆ' ನೋ.

ಸಿದ್ದೆ (ನಾ). ೧. ಒಂದು ನಿರ್ದಿಷ್ಟ ಅಳತೆ, — ಪ್ರಮಾಣ: ಪ್ರತಿ ಸೋಮವಾರಕ್ಕೆ ಅಕ್ಕಿ ಸಿದ್ದೆ ೧ (ಮೈಅರಿ. ೧೯೩೪, ೧೭-೮; ?); ಹೊನ್ನಾವರ ಕುಮಟಾ ತಾಲೂಕುಗಳಲ್ಲಿ . . . ೨ ಅರವಲಕ್ಕೆ ೧ ಸಿದ್ದೆ, ೨ ಸಿದ್ದೆಗೆ ೧ ಶೇರು (ಕಭಾಗ. ೫೯೦). ೨. ಒಂದು ನಿರ್ದಿಷ್ಟ ಅಳತೆಯನ್ನು ಅಳೆಯುವ (ಲೋಹ, ಮರ ಮುಂತಾದುವುಗಳಿಂದಾದ) ಸಾಧನ: ಕಟ್ಟಿನ ಕೈಯಲ್ಲಿ ಬತ್ತ ಅಳೆಯುವ ಮರದ ಹಾನಿ, ಶಂಕರನ ಕೈಯಲ್ಲಿ ಹಿತ್ತಾಳೆಯ ಸಿದ್ದೆ (ಸ್ವಪ್ನಹೂ. ೬೯); ಅದರ ಸಮೀಪದಲ್ಲಿ ಕವುಚಿಹಾಕಿದ ಒಂದು ಸಿದ್ದೆಯ ಮೇಲೆ ಚಿಮಣಿದೀಪ ಇಡಿಸಿದರು (ಮಲಮ. ೨೬೫).

[ದೇ. ॥ ತಮಿ. ಚಿತ್ತಿ, ಚಿತ್ತೆ, ಚುತ್ತಿ; ತುಳು. ಶಿದ್ದೆ, ಸಿದ್ದೆ; ತೆಲು. ಸಿದ್ದೆ]

ಸಿದ್ದೆಗುಮ್ಮ (ನಾ). ಮೆಣಸಿನಕಾಯಿಯ ಹೊಗೆಯ ಘಾಟನ್ನು ಅನುಭವಿಸುವಂತೆ ಮಾಡುವ ಒಂದು ಬಗೆಯ ಶಿಕ್ಷೆ : ಸಿದ್ದಗುಮ್ಮ ಎಂದರೆ, ಒಂದು ಬದಿರಿನ ಸಿದ್ದೆಯಲ್ಲಿ ಎಂದರೆ ಅಳತೆಯ ಪಾತ್ರೆಯಲ್ಲಿ ಒಣಮಣಸಿನಕಾಯಿಗೆ ಉರಿಯುವ ಕೆಂಡವನ್ನು ಹಾಕಿ, ಅದನ್ನು ಮೂಗಿಗೆ ಒತ್ತಿ ಹಿಡಿದು, ಬಾಯಲ್ಲಿ ಉಸಿರೆಳೆದುಕೊಳ್ಳದಂತೆ ಅದನ್ನೂ ಕೈಯಿಂದ ಒತ್ತಿ ಹಿಡಿಯುತ್ತಾರೆ (ಕಾನೂಡು. ೩೬೦); ಅವರು ಅವನನ್ನು ಚಕ್ಕಂದಿನಿಂದಲೂ . . . ಸಿದ್ದೆಗುಮ್ಮ ಮಾಡಿ, ಕತ್ತಲಿಕೋಣೆಯಲ್ಲಿ ಉಪವಾಸ ಕೂಡಿಹಾಕಿ ಭಯಂಕರವಾಗಿ ವಳಗಿಸಲು ಪ್ರಯತ್ನಪಟ್ಟಿದ್ದರು (ಮಲಮ. ೩೨೪). [ಸಿದ್ದೆ + ಗುಮ್ಮ]

ಸಿದ್ಧ (ಗು). ೧. ನಿರ್ವಹಿಸಿದ; ಪೂರೈಸಿದ; ನೆರವೇರಿಸಿದ. ೨. ಅಣಿಯಾದ; ತಯಾರಾದ. ೩. ಪಡೆದ; ಹೊಂದಿದ. ೪. ಸಮಂಜಸವಾದ; ಸಾಧುವಾದ. ೫. ರುಜುವಾತಾದ; ಸ್ಥಿರೀಕರಿಸಿದ. ೬. ಸಾಧಿಸಿದ; ಯಶಸ್ವಿಯಾದ. ೭. ಪಕ್ವವಾದ; ಹಣ್ಣಾದ. ೮. ಕೀರ್ತಿಯನ್ನು ಹೊಂದಿದ; ಪ್ರಸಿದ್ಧವಾದ. (ನಾ). ೯. ಅಣಿಯಾದುದು; ತಯಾರಾದುದು : ಸಿದ್ಧವಾದ ಸರಕನ್ನು ದೋಣಿಗಳ ಮೂಲಕ . . . ಕಳುಹಿಸಬಹುದು (ಸಪದಿ. ೨೨). ೧೦. ತಯಾರು; ಸನ್ನದ್ಧ: ನೀನು ಎಲ್ಲಿಗೆ ಕರೆದರೂ ನಾನು ಬರಲು ಸಿದ್ಧ (ರೂಢಿ). ೧೧. ತಯಾರಾಗಿರುವ ವ್ಯಕ್ತಿ : ನಾನು ಬರುವ ಹೊತ್ತಿಗೆ ನೀವೆಲ್ಲ ಸಿದ್ಧರಾಗಿರಿ (ರೂಢಿ). ೧೨. ಅಣಿಮಾದಿ ಅಷ್ಟಸಿದ್ಧಿಗಳನ್ನು ಸಾಧಿಸಿದವನು ; ಅಲೌಕಿಕಸಾಮರ್ಥ್ಯವುಳ್ಳವನು: ಸಿದ್ಧರೆಂದರೆ ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಸಾಯುಜ್ಯ ಮತ್ತು ಸೌಷ್ಟಿತ ಎಂಬ ತತ್ವಗಳಲ್ಲಿ (ಧ್ಯೇಯಗಳಲ್ಲಿ) ನಿಷ್ಣಾತರಾದ ಪವಿತ್ರಸಂತರು (ತುಳುನಾ. ೪೭); ಸಿದ್ಧರು ಸಾಧ್ಯರು ವರತಾಪಸೋತ್ತಮರು . . . ಹಣೆಯೊಳು ಬರೆದುದನಳಿಸಲಶಕ್ತರು (ಇಂಚಾಪ. ೧೪೫-೧೨). ೧೩. ದೇವತೆಗಳಲ್ಲಿಯ ಒಂದು ಪಂಗಡ: ಖಚರಕಿನ್ನರ ಸಿದ್ಧನಿರ್ಜರನಿಚಯವೆಮಗೋಲ್ಕೆಸಿ ಹೋಗಲಿ (ಕುವ್ಯಾಕ. ೬-೫); ವಿದ್ಯಾಧರ ಅಪ್ಸರ . . . ಸಿದ್ಧ ಭೂತ ಬೇತಾಳರೆಂಬ ದೇವತಾಭೇದಂಗಳಲ್ಲಿ (ವಿವಕ. ೧೭೦); ಅವನ ದರ್ಶನದಿಂದ ಸಿದ್ಧನಾಗಿ ಸ್ವರ್ಗಕ್ಕೆ ಬರಲು ಸಮರ್ಥವಾಗುವೆ (ವಚಭಾ. ೧೨೪). ೧೪. ನಿಜವಾದುದು; ಸತ್ಯ: ಆ ಭೂತಂಗಳುಂ ಕಾಯಾಕಾರಪರಿಣತಂಗಳಕ್ಕುಮಿದು ಪ್ರತ್ಯಕ್ಷಪ್ರಮಾಣಸಿದ್ಧಂ (ಶಾಂಪು. ೮-೧೨೮ ವ); ಆ ನೀಚನಾದ ರಾವಣನೇ ಆದರೂ ನಮಗೆ ಶರಣಾಗತನಾಗಿ ಬಂದಲ್ಲಿ ನಾವು ಮನ್ನಿಸಿ ರಕ್ಷಿಸುವುದೇ ಸಿದ್ಧ (ನೀತಿಚು. XIV. ೧೮). ೧೫. ಕೆಲವು ಶಾಸನಗಳ ಆರಂಭದಲ್ಲಿ ಹೇಳುವ ಶುಭಸೂಚಕವಾದ ಶಬ್ದ : ಸಿದ್ಧಂ ನೆಲೆದಾದ ವ್ರತಶೀಲನೋನ್ನಿಗುಣದಿಂ . . . ನೋನ್ತು (ಎಕ. III (R), ೮೬-೧; 7ನಯಶತ). ೧೬. [ಜೈನ]ಪಂಚಪರಮೇಷ್ಠಿಗಳಲ್ಲಿ ಒಬ್ಬ: ತ್ರಿಲೋಕೈಕಚೂಡಾಮಣಿಗಳ್ಗಿದ್ಧರ್ ಸ್ವಕೀಯಪ್ರಭುತೆಯನೆಮಗಂ ಮಾಬ್ಕುತಿಪ್ರೀತಿಯಿಂದಂ (ಆದಿಪು. ೧-೨);

ಸಿದ್ಧರ್ಕಳ್ . . . ಉದ್ಧರಿಸುಗೆಮ್ಮಂ (ಪುಷ್ಪ. ೧-೨). ೧೭. [ಶೈವ] ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದು: ಲಲಿತ, ಸಿದ್ಧ, ಸಂತಾನ . . . ಪಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). ೧೮. [ವೀಶೈ] ಮೂರು ಬಗೆಯ ಪ್ರಸಾದಗಳಲ್ಲಿ ಒಂದು; ಲಿಂಗಕ್ಕೆ ಅರ್ಪಿಸಿ ಉಳಿದುದು: ಉರುಶುದ್ಧಸಿದ್ಧ ಪ್ರಸಿದ್ಧಂ . . . ಇನಿತುಮಂ ನಿಯಮದಿಂದಿರದೆ ಕೊಂಬರ ವಿವರಮಂ ಪೇಳ್ವೆನು (ಲಕ್ಷಂ. ೪೭-೧೫); ಶುದ್ಧ ಸಿದ್ಧ ಪ್ರಸಿದ್ಧವೆಂದು ಪ್ರಸಾದಲಿಂಗ ತ್ರಿವಿಧವು (ವಿವೇಕ. ೧೧೨). [ಸಂ.]

ಸಿದ್ಧಉಡುಪು (ನಾ). ಬೇರೆ ಬೇರೆ ಅಳತೆ ಹಾಗೂ ಆಕಾರಗಳಲ್ಲಿ ಹೊಲಿದು ತಯಾರಿಸಿಟ್ಟಿರುವ ಉಡುಪು : ನಮ್ಮ ಮನೆಯ ಎದುರಿನಲ್ಲಿ ಸಿದ್ಧಉಡುಪುಗಳ ಅಂಗಡಿಯಿದೆ (ರೂಢಿ). [ಸಿದ್ಧ + ಉಡುಪು]

ಸಿದ್ಧಕ್ಷೇತ್ರ (ನಾ). ಸಿದ್ಧರೂ ಮುನಿಗಳೂ ನೆಲಸಿರುವ ಸ್ಥಳ : ಈ ಮಯ್ಯೋಳೀ ಶೋರ್ಪುದೆ ಸಿದ್ಧಕ್ಷೇತ್ರಂ (ಸುಕುಮಾ. ೪-೪೬). [ಸಂ.]

ಸಿದ್ಧಗೊಳಿಸು (ಕ್ರಿ). ೧. ತಯಾರುಮಾಡು; ಏರ್ಪಾಡುಮಾಡು : ಮುಖ್ಯಾಧಿಕಾರಿಯು ಸಮಾರಂಭಕ್ಕೆ ಅಗತ್ಯವಾದುದನ್ನು ಸಿದ್ಧಗೊಳಿಸಲು ಹೇಳಿದರು (ರೂಢಿ). ೨. ಖಚಿತಪಡಿಸು; ದೃಢಪಡಿಸು: ಕನ್ನಡವು ಕ್ರಿ.ಶ. ೨ನೆಯ ಶತಕ್ಕಿಂತ ಮುಂಚೆ ದಕ್ಷಿಣಕನ್ನಡಸಮುದ್ರತೀರದಲ್ಲಿ ವ್ಯವಹಾರಭಾಷೆಯಾಗಿತ್ತೆಂದು ಹಲವು ಪಂಡಿತರು ಸಿದ್ಧಗೊಳಿಸಿದ್ದಾರೆ (ಕಶಾಚ. ೬). [ಸಿದ್ಧ + ಕೊಳ್ + ಇಸು]

ಸಿದ್ಧಘೃತ (ನಾ). ಒಂದು ಬಗೆಯ ಔಷಧೀದ್ರವ್ಯ : ಸಿದ್ಧಘೃತ – ಕೊಡಸಿಗದೀಜ , ಲಾಮಂಚೆ . . . ನೆಲಗುಳ್ಳ ಸಹ ಚೂರ್ಣಂಗಳ್ಗಂ ತುಪ್ಪದಲ್ಲಿ ಹಾಕಿ ಆಟ್ಟು , ಆ ಘೃತವನ್ನು ಸೇವಿಸಲು ಸಕಲಜ್ವರ . . . ತಲೆಬೇನೆ ಸಹ ಮಾಣ್ಗುಂ (ಸಕವ್ಯ. ೧೧೩). [ಸಂ.]

ಸಿದ್ಧಚಕ್ರ (ನಾ). [ಜೈನ] ಸಾಧಕನು ಸಿದ್ಧಿಯನ್ನು ಪಡೆಯಲು ಪೂಜಿಸುವ ಒಂದು ಬಗೆಯ ಚಕ್ರ : ಜಗತ್ಪತಿಶಯಂ ಶ್ರೀಸಿದ್ಧಚಕ್ರಂ ಮಹತ್ ಅದೆಲ್ಲಮಂ ಹ್ರೀಂಕಾರದಿಂ ತ್ರಿಧಾವೇಷ್ಟನಮಂ ಮಾಡಿ (ಪ್ರಭಾಪ್ರಾ. ೧೦-೧೫).

ಸಿದ್ಧಚಕ್ರದ ನೋಂಪಿ = ಸಿದ್ಧಚಕ್ರವನ್ನು ಪೂಜಿಸುವ ವ್ರತ ,-- ನೋಂಪಿ : ದೇವಣನು ಸಿದ್ಧಚಕ್ರದ ನೋಂಪಿ ಶ್ರುತಪಂಚಮಿ ನೋಂಪಿಗೆ ಮಾಡಿಸಿದ ಪಂಚಪರಮೇಷ್ಠಿಗಳ ಪ್ರತಿಮೆ (ಕಾಶಿ. ೭೩-೧೧-೪; 12ನಯ ಶತ). [ಸಂ.]

ಸಿದ್ಧತೆ (ನಾ). ೧. ಪರಿಪೂರ್ಣತೆ ; ಸಮಗ್ರತೆ. ೨. ಏರ್ಪಾಡು ; ತಯಾರು : ಮದುವೆಗೆ ಸಕಲಸಿದ್ಧತೆಗಳೂ ನಡೆದಿವೆ (ರೂಢಿ). [ಸಂ. ಸಿದ್ಧತಾ]

ಸಿದ್ಧದೇವದಾರು (ನಾ). ಒಂದು ಬಗೆಯ ಮರ :"ಶಿವದಾರು – ಸಿದ್ಧದೇವದಾರು" (ಓಷಧಿ. ೧೭೫). [ಸಂ.]

ಸಿದ್ಧನಿಲಯ (ನಾ). = ಸಿದ್ಧಕ್ಷೇತ್ರ : ಮೂಜುಂಲೋಕದಿಂ ಮೇಲೆ ಬಳ್ಗೊಡೆಯರ್ಪಂತೆವೊಲಿರ್ದ ಸಿದ್ಧನಿಲಯಕ್ಕಾನಂದದಿಂ ಪೋಗಿ (ಪಂಚಾಮೃ. ೧೭-೪೨). [ಸಂ.]

ಸಿದ್ಧಪಡಿಸು (ಕ್ರಿ). ತಯಾರುಮಾಡು ; ಸಿದ್ಧಗೊಳಿಸು : ಜಾತಕ ಸಿದ್ಧಪಡಿಸಲು ಅವರನ್ನೇ ಕೇಳಿಕೊಳ್ಳಲಾಯಿತು (ಒಡ್ಡಿಆ. ೧೩); ಅಮ್ಮೈಯನು ಮುಂದೆ ಬರುವ ವಿಪತ್ತನ್ನು ತಿಳಿಯದೆ ಸಡಗರದಿಂದ ಸಿದ್ಧಪಡಿಸುತ್ತಿದ್ದರು (ಚಂಗಾಳ್ವ. ೧೪೮). [ಸಿದ್ಧ + ಪಡಿಸು]

ಸಿದ್ಧಪತ್ರೆ (ನಾ). ಗಾಂಜಾವಿಲೆ ; ಭಂಗಿಸೊಪ್ಪು : "ಭಂಗೀ = ರೀತಿಯುಂ, ಸಿದ್ಧಪತ್ರೆಯುಂ" (ಕಾಶಿಕ್ಷ. ೨೬೫); ಸಿದ್ಧಪತ್ರೆ ಶಿವಧ್ಯಾನ , ನಿದ್ದೆ ಬಿದ್ದರೆ ಎಮ್ಮೆ ಕೋಣ (ಗಾದ). [ಸಂ. ಸಿದ್ಧಪತ್ರ]

ಸಿದ್ಧಪದ (ನಾ). [ಜೈನ] ಸಿದ್ಧನ ನೆಲೆ; ಮೋಕ್ಷ : ಸಿದ್ಧಪದಮಂ ಕೈಕೊಳ್ಳುದ ಕಡ್ಡಮೊಡ್ಡಣಮೊಡ್ಡಿರ್ದಘಸ್ಮೃನ್ಮಮಂ ತುಬಿಯಿಸಲ್ (ಶಾಂತಿಪು. ೧-೭); ಇನ್ನು ಮುಂದೆ ಸಾಧಕನು ಅರ್ಹತಪದವನ್ನು ಹತ್ತಬೇಕು. ಆಮೇಲೆ ಸಿದ್ಧಪದವು (ಜೈನಪ. ೫೦೧). [ಸಂ.]

ಸಿದ್ಧಪರಮೇಷ್ಠಿ (ನಾ). [ಜೈನ] ಪಂಚಪರಮೇಷ್ಠಿಗಳಲ್ಲಿ ಒಬ್ಬ ; ಕರ್ಮಗಳನ್ನು ನಾಶಗೊಳಿಸಿ ಮುಕ್ತಿ ಪಡೆದವನು : ಸಿದ್ಧಪರಮೇಷ್ಠಿಗಳಷ್ಟಗುಣಂಗಳಂ ನೆನೆಯುತ್ತಂ (ಆದಿಪು. ೧೦-೧೪ ವ); ವಿದ್ಯೆಗಳಂ ಸಾಧಿಸಿ ಸಿದ್ಧಪರಮೇಷ್ಠಿಗಳಂ ಸ್ತುತಿಯಿಸುತಿರ್ಪ ಸಮಯದೊಳ್ (ಪಂಚಾಮೃ. ೧೦-೧೩೮ ವ). [ಸಂ. ಸಿದ್ಧಪರಮೇಷ್ಠಿನ್]

ಸಿದ್ಧಪುರುಷ (ನಾ). ಅಲೌಕಿಕಶಕ್ತಿಯನ್ನು ಹೊಂದಿದವನು: ಸಿದ್ಧಪುರುಷರಿಗೆ ಕ್ಷೇಮವೆಂಬುದು ಸ್ವಾಧೀನವಾಗಿರುವುದು (ಶಾಕುಂತ. ೬೫-೨೪); ಸಿದ್ಧಪುರುಷರು ದೇವತಾಸಾಕ್ಷಾತ್ಕಾರ ಪಡೆದು ತಮ್ಮ ಅಲೌಕಿಕಸಾಮರ್ಥ್ಯದಿಂದ ಬೀಜಾಕ್ಷರಗಳನ್ನು ಉಚ್ಚರಿಸಿರುತ್ತಾರೆ (ಭಾರದ. ೧೫೪). [ಸಂ.]

ಸಿದ್ಧಪ್ರಯೋಗ (ನಾ). ಫಲ ಕೊಡುವಂಥದು; ಪರಿಣಾಮಕಾರಿಯಾದುದು: ಮಗಳೆ ಬಾ ಕೊಳ್ ಐದು ಮಂತ್ರಾಳಿಗಳನಿವು ಸಿದ್ಧಪ್ರಯೋಗವು (ಕುವ್ಯಾಲ. ೩-೧೬); ಅದರಿಂದಿದು ಸಿದ್ಧಪ್ರಯೋಗವೆಂದರಿವುದು (ಸಕವ್ಯ. ೩೭೬). [ಸಂ.]

ಸಿದ್ಧಪ್ರಸಾದ (ನಾ). [ವೀಶೈ] ಮೂರು ಬಗೆಯ ಪ್ರಸಾದಗಳಲ್ಲಿ ಒಂದು ; ಲಿಂಗಕ್ಕೆ ಅರ್ಪಿಸಿ ಉಳಿದುದು: ಶುದ್ಧಪ್ರಸಾದ ಗುರುವಿನದದು ಸಿದ್ಧಪ್ರಸಾದ ಲಿಂಗದದು ಪ್ರಸಿದ್ಧಪ್ರಸಾದ ಜಂಗಮದದು ಇಂತೀ ತ್ರಿವಿಧ ಒಂದಾದವರ ತೋಱಾ (ಬಸವ. ೪. ೭೧೦); ಮನುಜನಸುವವ್ಯತತ್ವವಂ ಪಡೆದನುವಹುದು ಮೇಣಾವುದಂ ಬಿಡದನುಭವಿಸುವವನೊಂದುವಂ ಸಿದ್ಧಪ್ರಸಾದಸುಖಿ (ಬಸಪು. ೪೩-೭೩). [ಸಂ.]

ಸಿದ್ಧಪ್ರಸಾದಿ (ನಾ). [ವೀಶೈ]ಸಿದ್ಧಪ್ರಸಾದವನ್ನು ಸ್ವೀಕರಿಸುವವನು: ಕಾಲನ ಕೊಂದಾತನಲ್ಲದೆ ಶುದ್ಧಪ್ರಸಾದಿಯಲ್ಲ ಕಾಮನ ತಿಂದಾತನಲ್ಲದೆ ಸಿದ್ಧಪ್ರಸಾದಿಯಲ್ಲ (ಅಪಚಂ. ೨೭೭-೧೩೭೮). [ಸಂ. ಸಿದ್ಧಪ್ರಸಾದಿನ್]

ಸಿದ್ಧಮಾತ್ರಿಕ (ನಾ). ಪ್ರಾಚೀನ ನಾಗರೀಲಿಪಿ: ಬಹುಬಳಕೆಯಲ್ಲಿರುವ ವರ್ಣಮಾಲೆಯನ್ನು 'ಸಿದ್ಧಮಾತ್ರಿಕ' ಎಂದು ಕರೆಯುತ್ತಾರೆ. ಇದು ಮೊದಲಿಗೆ ಕಾಶ್ಮೀರದಲ್ಲಿ ಹುಟ್ಟಿತೆಂದು ಕೆಲವರು ಅಭಿಪ್ರಾಯಪಡುತ್ತಾರೆ (ಪ್ರವಾಗ. I. ೩೫೭). [ಸಂ. ಸಿದ್ಧಮಾತ್ರಿಕಾ]

ಸಿದ್ಧಮೂಲಿಕೆ (ನಾ). ಸಿದ್ಧಿಯನ್ನುಂಟುಮಾಡುವುದೆಂದು ನಂಬಲಾದ ಮೂಲಿಕೆ: ಆ ಮಹಾತ್ಮರು . . . ತಿಮ್ಮಣ್ಣನಾಯಕನಿಗೆ ದೆಸೆಗಟ್ಟಿನ ದೂಳಿತ, ಸಿದ್ಧಮೂಲಿಕೆ, ಕೈಅಂಬು ಇವುಗಳನ್ನು ಕೊಟ್ಟು . . . ಹೊರಟು ಹೋದರಂತೆ (ಚಿತ್ರಾ. ೭). [ಸಂ. ಸಿದ್ಧಮೂಲಿಕಾ]

ಸಿದ್ಧರಸ (ನಾ). ೧. ಪಾದರಸ ; ಪಾರಜ. ೨. ಯಾವುದೇ ಲೋಹವನ್ನು ಬಂಗಾರವನ್ನಾಗಿ ಮಾರ್ಪಡಿಸುವುದೆಂದು ನಂಬಲಾದ ಒಂದು ಬಗೆಯ ರಸ: ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ ಪುಟ್ಟೆ ಸಿದ್ಧರಸಮಂ ಮುಟ್ಟಿದ ಲೋಹದಂತೆ ಶುದ್ಧಾಂತರಂಗನಾಗಿ (ಆದಿಪು. ೩-೫೬ ವ); ಆಗದಿಹುದೇ ಸಿದ್ಧರಸ ಸಂಯೋಗದಿಂ ಸೌವರ್ಣ (ಬಸವ. ೫೭-೬೯); ಸಿದ್ಧರ ಸತತವಿಶುದ್ಧರ . . . ನೆನೆದು ನಾನೀಗ ಸಿದ್ಧರಸದೊಳು ಲೋಹವನದ್ದಿದಂತಾತ್ಮಸಿದ್ಧಿಯ' ಪಡೆವೆನಿನ್ನೇನು (ಧರಚ. ೧-೨). [ಸಂ.]

ಸಿದ್ಧರಸವೇದ (ನಾ). ೧. ರಸವಾದದಲ್ಲಿ ಸಿದ್ಧಿಯನ್ನು ಪಡೆದವನು. ೨. ಬಯಕೆಯು ಈಡೇರಿದವನು. ೧ , ೨ : ಬದ್ಧರಸನುಂ ಸಿದ್ಧರಸ ವೇದನುಮಾದ ರಸವಾದಿಯಂತೆ ಜ್ವಳನಜಟಿ ರಾಗಿಸಿ ನೈಮಿತ್ತಿಕನಂ ಬರಿಸಿ (ಶಾಂತಿಪು. ೫-೩೭ ವ). [< ಸಂ. ಸಿದ್ಧರಸವೇದಿನ್]

ಸಿದ್ಧಲಿಕೆ (ನಾ). ತುಪ್ಪ ಮೊದಲಾದ ದ್ರವಪದಾರ್ಥಗಳನ್ನು ತುಂಬುವ ಚರ್ಮದ ಚೀಲ : ತುಪ್ಪ ತುಂಬಲಿಕ್ಕೆ ಸಿದ್ಧಲಿಕೆ ಎಣ್ಣೆ ತುಂಬಲಿಕ್ಕೆ ಬುದ್ಧಲಿಕೆ (ವಚಶಾ. I. ೨೭೦). [< ಸಿದ್ಧಿಗೆ]

ಸಿದ್ಧಲೇಪ (ನಾ). = ಸಿದ್ಧರಸ ೨: ಅಮೃತಫಲ ಸುಕಬೀಜ ಸಿದ್ಧಲೇಪಾದಿ ಸುವಸ್ತುಗಳನೇಕಮಾಗಿ ಅಲ್ಲಿಯಣ ಶಿವಭಕ್ತರಿಗೆ ಸುಕೃತಾನುರೂಪದಿಂದಾನಂದ ಕರಗಳಾಗಿರ್ಕುಂ (ವಿವೇಕ. ೨೧೦). [ಸಂ.]

ಸಿದ್ಧವಟಕ (ನಾ). ಒಂದು ಬಗೆಯ ಔಷಧದ ಗುಳಿಗೆ : ಸಿದ್ಧವಟಕ – ಜಾಕಾಯಿ, ವಾದಕ್ಕಿ . . . ಎಲಚಿಯ ಪ್ರಮಾಣ ಗುಳಿಗೆಯಂ ಮಾಡಿ . . . ಮೆಲ್ಲಲು ಸರ್ವಾತಿಸಾರಂ ಮಾಣ್ಗುಂ ; ಸಿದ್ಧವಟಕವೆಂದಿದಂ ಆತ್ರೇಯಮುನಿಗಳು ನಿರ್ಮಿಸಿದರು (ಸಕವ್ಯ. ೬೨೯). [ಸಂ.]

ಸಿದ್ಧವಸ್ತು (ನಾ). ಕಚ್ಚಾಮಾಲುಗಳಿಂದ ತಯಾರಾಗಿ ಮಾರಾಟಕ್ಕೆ ಸಜ್ಜಾಗಿರುವ ಪದಾರ್ಥ: ಸಿದ್ಧವಸ್ತುಗಳು ಭಾರತಕ್ಕೆ ಆಮದಾಗಿ ಬರುತ್ತವೆ (ಭೂವಿವ. ೩೭೭); ಟಾಟಾರವರು . . . ಕಚ್ಚಾಮಾಲುಗಳ ಸಂಗ್ರಹ, ಸಿದ್ಧವಸ್ತುಗಳ ಮಾರಾಟ ಮೊದಲಾದ

ಎಲ್ಲ ವಿಚಾರಗಳನ್ನು ತಿಳಿದುಕೊಂಡು ಸ್ವದೇಶಕ್ಕೆ ಹಿಂದಿರುಗಿದರು (ಕಪಪು ೬-೮೭). [ಸಂ.]

ಸಿದ್ಧವೈದ್ಯ (ನಾ). ಭಾರತೀಯ ವೈದ್ಯಕೀಯ ಪ್ರಕಾರಗಳಲ್ಲಿ ಒಂದು : ಅವರು ಸಿದ್ಧವೈದ್ಯದಲ್ಲಿ ಪರಿಣತರು (ರೂಢ). [ಸಂ.]

ಸಿದ್ಧಶಿಲೆ (ನಾ). ೧. ಪವಿತ್ರವಾದ ಬಂಡೆಗಲ್ಲು : ಜಿನವಲ್ಲಭನ ಸುಧರ್ಮ್ಮ ಸನ್ಮತಿಯೊಳ್ಪೊಟ್ಟ ಗುಣಾವಳಿಯನೀ ವೃಷಭಗಿರಿಯ ಸಿದ್ಧಶಿಲೆಯೊಳಿಜಿಯಮ್ಮಂ ಟಂಕ್ಕೋ(ಕೋ)ತ್ಕೀರ್ಣ್ಣಮ್ಮಾಡಿದಂ (ಶಾಸಸಂ. ೯-೧೧; ಪು. 975). ೨. [ಜೈನ] ಸಿದ್ಧರು ನೆಲಸಿರುವ ಬೆಟ್ಟ: ಸಾವಂ ರಾವಣನೆಂದರ್ ಕೇವಲಿಗಳ್ ಸಿದ್ಧಶಿಲೆಯನುದ್ಧರಿಸಿದ ಶೌರ್ಯಾವಷ್ಟಂಭದಿನದು ಪುಸಿಸಾವಾದುದು ನಿನಗೆ ವೈರಿಶಸ್ತ್ರಾಹತಿಯಿಂ (ಪಂರಾಮಾ. ೧೪-೪೫). [ಸಂ. ಸಿದ್ಧಶಿಲಾ]

ಸಿದ್ಧಶೇಷೆ (ನಾ). [ಜೈನ] ಪೂಜೆ ಮಾಡಿದ ಹೂವು, ಅಕ್ಷತೆ ಮೊದಲಾದುವು; ಪ್ರಸಾದ : ಮಾರಮಥನನಂ ಸ್ತುತಿಯಿಸಿ ತತ್ಪ್ರಕಟಫಲಪ್ರಾಪ್ತಿಗೆ ಸಂಚಕರಂಗೊಳ್ಳಂತೆ ಸಿದ್ಧಶೇಷೆಯನಾಗಳ್ ಕೊಂಡು (ಆದಿಪು. ೪-೨). [ಸಂ. ಸಿದ್ಧಶೇಷಾ]

ಸಿದ್ಧಶೈಲ (ನಾ). = ಸಿದ್ಧಶಿಲೆ ೨ : ನಿನಗೆ ಸಿದ್ಧಶೈಲಮನೆತ್ತಿದನ ಕೈಯೊಳ್ ಮರಣಮಕ್ಕುಂ (ಪಂರಾಮಾ. ೧೧-೭ ವ). [ಸಂ.]

ಸಿದ್ಧಸಹಣೆ (ನಾ). ಅಶ್ವಸೈನ್ಯದ ಮುಖ್ಯಸ್ಥ : ಸಿ[ದ್ಧ]ಸಹಣೆ ಮ(೦)ನ್ನೆಯ ಬೋಯರಸನು (ಸೌಾ. XX, ೩೭೩-೫; ಸು. 14ನೆಯ ಶತ). [ಸಿದ್ಧ + ಸಹಣೆ (< ಸಾಹಣೆ)]

ಸಿದ್ಧಸೇಸೆ (ನಾ). = ಸಿದ್ಧಶೇಷೆ : ಶ್ರೀಜಿನಪತಿಪದಕಮಳವಿರಾಜಿತಮಂ ಸಿದ್ಧಸೇಸೆಯಂ ತಳೆದನಿಳಾಪೂಜಿತಚರಿತಂ (ಮಲ್ಲಿಪು. ೧೧-೧); ನಿತ್ಯವ್ರತಂಗಳಂ ಕೈಕೊಂಡು ಸಿದ್ಧಸೇಸೆಯಂ ಕೊಂಡು (ಧರ್ಮಾಮೃ. ೫-೭೦). [< ಸಿದ್ಧಶೇಷೆ]

ಸಿದ್ಧಹಸ್ತ (ನಾ). ೧. ಸಿದ್ಧಿಯನ್ನು ಪಡೆದುದು ; ಎತ್ತಿದ ಕೈ : ರಾಜ್ಯಾದಳಿತದ ಕ್ಷೇತ್ರದಲ್ಲಿ ರಾಜಾಜಿಯವರ ಕೀರ್ತಿ ಬೆಳೆದಿದೆ ; ಆ ಬಗೆಯಲ್ಲಿ ಅವರದು ಸಿದ್ಧಹಸ್ತ (ರಾಜವ. ೮೫). ೨. ಸಿದ್ಧಿಯನ್ನು ಪಡೆದವನು ; ನಿಪುಣ : ಕಥಾರಚನೆಯಲ್ಲಿ ಇವನು ಸಿದ್ಧಹಸ್ತನಾದನು (ಮೂಪಾಸಾ. ೫ ಮುನ್ನುಡಿ). [ಸಂ.]

ಸಿದ್ಧಾಂಜನ (ನಾ). ಸಿದ್ಧಿಯನ್ನು ದೊರಕಿಸುವ ಅಂಜನ : ಮುನಿವಾಕ್ಯಮೆಂದೆಂಬ ಸಿದ್ಧಾಂಜನಮಿಟ್ಟುಮರಸುತ್ತಲ್ಕೆತರೆ (ನಾಗವ. ೧೦-೭೩). [ಸಂ.]

ಸಿದ್ಧಾಂತ (ನಾ). ೧. ನಿರ್ಣಯ ; ತೀರ್ಮಾನ ; ನಿರ್ಧಾರ : ಸಿದ್ಧಾಂತಪದವು ಯುಕ್ತಿಯಿಂದ ಸಾಧಿಸಲ್ಪಟ್ಟ ನಿರ್ಣಯವೆಂದರ್ಥದಲ್ಲಿರುವುದು (ಹಿಂದಸಾ. ೧೮೩); ಮಗಳ ಮನೆಯೆಂಬ ಕಿಚ್ಚಿಗಾದರೂ ತಮ್ಮಲ್ಲಿಗೆ ಅದು ಬರಬೇಕಾದದ್ದು ನ್ಯಾಯ ಎಂದು ಅವಳ ಸಿದ್ಧಾಂತ (ಹೂಸಕ್ಷ. ೪೩). ೨. ನಿರ್ಣಯಾತ್ಮಕವಾದ ತತ್ತ್ವ : "ಸಮಯ ಸಿದ್ಧಾಂತಮಕ್ಕುಂ" (ಪುಂಗರಾ. ೪-೧೦); ಕಂತುವೆ ಪರಮಾತ್ಮನಾಗೆ ತನ್ಮತಮೆ ಸಿದ್ಧಾಂತಮಾಗೆ (ಶಾಂತಿಪು. ೭-೧೦ ವ); ನಿಮ್ಮಯ ಪೂರ್ವಪಕ್ಷಮಮಗಾದುದೇ ವಲಂ ಸಿದ್ಧಾಂತಂ (ಗದಾಯು. ೪-೮); ವಿದಿತವ್ಯಾಕರಣದ ತರ್ಕದ ಸಿದ್ಧಾಂತದ ವಿಶೇಷದಿಂ ತ್ರೈವಿದ್ಯಾಸ್ಪದರೆಂದೀ ಧರೆ ಬಣ್ಣಿಪುದು ದಿವಾಕರನಂದಿದೇವಸೈದ್ಧಾಂತಿಗಳಂ (ಸುಕುಮಾ. ೧-೨೮). ೩. ಧರ್ಮ, ಜ್ಯೋತಿಷ್ಯ ಮುಂತಾದುವುಗಳಿಗೆ ಸಂಬಂಧಿಸಿದ ಶಾಸ್ತ್ರಗ್ರಂಥ : ಒಳ್ಳಿತಪ್ಪ ದಿವಸವಾರನಕ್ಷತ್ರಮುಹೂರ್ತದೊಳ್ ಸಿದ್ಧಾಂತಮಂ ತೊಡಗಿಸೆ (ವಡ್ಡಾರಾ. ೬-೧೫); ಸಿದ್ಧಾನ್ತಾದಿ ಸಮಸ್ತಶಾ[ಸ್ತ್ರಾ]ಮೃತಪಾರಾವಾರಪಾರಗರುಂ (ಸೌಾ. XX, ೪೬-೨೫; 1072). ೪. [ಶೈವ] ಶೈವದ ನಾಲ್ಕು ಪ್ರಭೇದಗಳಲ್ಲಿ ಒಂದು: ಆ ಶೈವವೇ ವಾಮ ದಕ್ಷಿಣ ಮಿಶ್ರ ಸಿದ್ಧಾಂತವೆಂದು ನಾಲ್ಕು ತೆಱನಾಗಿರ್ಪುದವಱಲ್ಲಿ . . . ಪರಶಿವಪರವಾದುದೇ ಸಿದ್ಧಾಂತಮಕ್ಕುಂ (ಎವೇಶ. ೬೭). ೫. [ನ್ಯಾಯ] ಷೋಡಶಪದಾರ್ಥಗಳಲ್ಲಿ ಒಂದು : ನ್ಯಾಯವೇ ಪ್ರಮಾಣ ಪ್ರಮೇಯ . . . ಸಿದ್ಧಾಂತ . . . ನಿಗ್ರಹಸ್ಥಾನಂಗಳೆಂಬ ಷೋಡಶಪದಾರ್ಥಂಗಳಂ ವೇಳುತ್ತವೇ ಪ್ರಪಂಚಕ್ಕೀಶ್ವರಕರ್ತೃತ್ವಮಂ ನಿಶ್ಚೈಸುವುದು (ಎವೇಶ. ೧೨); ನ್ಯಾಯದರ್ಶನದಲ್ಲಿ ಪ್ರಮಾಣ . . . ಸಿದ್ಧಾಂತ ಅವಯವ ತರ್ಕ . . . ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸಿರುವರು (ಹಿಂದಸಾ. ೧೮೫).

ಸಿದ್ಧಾಂತಚಕ್ರವರ್ತಿ = ಹಿಂದಿನ ಕಾಲದಲ್ಲಿ ಆಗಮದ ಆರುಖಂಡಗಳನ್ನು ಅಭ್ಯಾಸ ಮಾಡಿದವರಿಗೆ ಕೊಡುತ್ತಿದ್ದ ಒಂದು ಬಿರುದು: ಈ ಷಟ್‌ಖಂಡಾಗಮದ ಪೂರ್ಣಅಭ್ಯಾಸಿಗಳಿಗೆ 'ಸಿದ್ಧಾಂತಕಚಕ್ರವರ್ತಿ' ಎಂಬ ಪದವಿಯನ್ನು ಕೊಡಲಾಗುತ್ತಿದ್ದಿತು (ಕ್ಷನಪ. ೧೬೨). [ಸಂ.]

ಸಿದ್ಧಾಂತಿ (ನಾ). ೧. ಸಿದ್ಧಾಂತಗಳನ್ನು ಸ್ಥಾಪಿಸುವವನು ; ತತ್ತ್ವಗಳನ್ನು ನಿರೂಪಿಸುವವನು: ನೆಗಟ್ಟರ್ಹಣಂದಿಸಿದ್ಧಾಂತಿಗಳಧಿಗತಸಕಳತತ್ಪರಾಯತಲವಣಾಬ್ಧಿ ಗಭೀರಭೂರಿವಾರಿಧಿನಿಗೂಢಮಹರುದ್ಭಸತ್ಪಸಿದ್ಧಿಸಮೇತರ್ (ಶಾಂತಿಪು. ೧-೨೧); ಆತ್ಮನಲ್ಲಿ ಮಲವು ಹುದುಗಿರ್ದ ಭೇದವ ತಿಳಿದು ಗೂಹಿಸಿ ಹೇಳಬಲ್ಲಡೆ ಸಿದ್ಧಾಂತಿ ಎಂಬೆ (ಅಂಬಿ. ೪. ೨೦೬-೨೦೭). ೨. ಶಾಸ್ತ್ರ, ವಿಜ್ಞಾನಗಳನ್ನು ಅಭ್ಯಾಸಮಾಡಿದವನು ; ವಿಜ್ಞಾನಿ: ಅವರು ಮಹಾಸಿದ್ಧಾಂತಿಗಳು. ಅವರ ಗುರುತ್ವದಿಂದ ನನ್ನ ಮಗನು ವಿದ್ಯಾಸನಾಗುತ್ತಾನೆ (ಚಿಂಗಾಳ್ಳ. ೪). ೩. ಭವಿಷ್ಯ ಹೇಳುವವನು ; ಜ್ಯೋತಿಷಿ : ಅಪ್ಪಾಪಿಯವರು ಸ್ನಾನ ಮುಗಿಸಿ ಮಡಿಯುಟ್ಟು ವೈಖಾನಸರ, ಸಿದ್ಧಾಂತಿಗಳ, ಪುರೋಹಿತರ ಒಡಗೂಡಿ . . . ನಡೆದುಬಂದರು (ಶಾಂತಲಾ. ೨೫೭). ೪. ಪ್ರಯೋಗಗಳನ್ನು ನಡೆಸುವವನು; ಪ್ರಯೋಗಶೀಲ : (ಕ). [ಸಂ. ಸಿದ್ಧಾಂತಿನ್]

ಸಿದ್ಧಾಂತಿಗ (ನಾ). = ಸಿದ್ಧಾಂತಿ ೧: ಪ್ರಭಾಚಂದ್ರಸಿದ್ಧಾನ್ತಿಗರ ಗುಡ್ಡನಾಗಿ (ಎಕ. VII, ಶಿಕಾರಿ. ೧೦-೫೬; 1085); ಜೋಯಿಸಮನಜೀವನೋದುವಂ ಮೇಣ್, ಜೋಯಿಸಿಗಂ. ವಿವಂ ಗಣಿದಿಗಂ, ಸಿದ್ಧಾಂತಿಗಂ (ಶಬ್ದಾನು. ೪೦೦ ಪ್ರಯೋ). [ಸಿದ್ಧಾಂತ + - ಇಗ]

ಸಿದ್ಧಾಂತಿಸು (ಕ್ರಿ). ನಿರ್ಣಾಯಕವಾಗಿ ಹೇಳು: ಏನಾ ಮಾಯೆಯುಂ ಬೊಮ್ಮನೆಯೆ ಮಾಸಿಪ್ಪೊಂದು ಪದಾರ್ಥಮಾಗಲೆರಡಂ ಸಿದ್ಧಾಂತಿಸಲ್ಕಾರದೇ (ಮ್ಯಸೂಮ. ೨-೪೨); ಇದೇ ಕೊನೆಯ ಮಾತೆಂದು ವಿಮರ್ಶಕನು ಏನನ್ನೂ ಖಚಿತವಾಗಿ ಸಿದ್ಧಾಂತಿಸಲಾರನು, ಹಾಗೆ ಸಿದ್ಧಾಂತಿಸಲೂ ಬಾರದು (ಸಮಾಡೋ. ೨೦೩). [ಸಿದ್ಧಾಂತ + - ಇಸು]

ಸಿದ್ಧಾಗಮ (ನಾ). ಒಂದು ಆಗಮದ ಹೆಸರು: ಆ ಸಿದ್ಧಾಂತಭೇದಂಗಳಾವ ವೆಂದೊಡೆ ಕಾಮಿಕಾಗಮ . . . ಲಲಿತಾಗಮ ಸಿದ್ಧಾಗಮ . . . ವಾತೂಲಾಗಮವೆಂಬವೇ ಇಪ್ಪತ್ತೆಂಟು ದಿವ್ಯಾಗಮಂಗಳಕ್ಕುಂ (ಎವೇಶ. ೬೩). [ಸಂ.]

ಸಿದ್ಧಾದಾಯ (ನಾ). ಒಂದು ಬಗೆಯ ತೆರಿಗೆ: ತೆರಿಗೆಯ ವ್ಯವಸ್ಥೆಯ ಪುನರ್ಘಟನೆ ಮಾಡಿ ಬಂಕದೆರೆ, ಸಿದ್ಧಾದಾಯ, ಬಿಟ್ಟಿಕೊಟ್ಟಣ . . . ತಳವರಿಕೆ, ಗುತ್ತಿಗೆಗಳೆಂಬ ಹದಿಮೂರು ಹೊಸಕರಗಳನ್ನು ನಿಯೋಜಿಸಿದರು ಬಸವಣ್ಣನವರು (ಶರಚ. ೧೨೯). [ಸಂ.]

ಸಿದ್ಧಾನ್ನ (ನಾ). ತಯಾರಾದ ಅಡುಗೆ ; ಸಿದ್ಧವಾಗಿರುವ ಆಹಾರ : ಸಿದ್ಧಾನ್ನವನ್ನು ತಳ್ಳಿಬಿಡುವುದು ಪ್ರಸಾದರಾವಿಗೆ ಮಾತ್ರ ಒಳ್ಳೆಯದೆ! (ಲಕ್ಷ್ಮೀಪ್ರ. ೭೩). [ಸಂ.]

ಸಿದ್ಧಾಯ (ನಾ). = ಸಿದ್ಧಾಯ: ಸಿದ್ಧಾಯದ ಪೊನ್ನೊಳ್ಪತ್ತುಗದ್ಯಾಣ ಪೊನ್ನುಂ . . . ಬಿಟ್ಟರ್ (ಎಕ. I(R), ೯೭-೭: 9ನೆಯ ಶತ); ಸಿದ್ಧಾಯವ ತೆತ್ತು ಬಿತ್ತಿ ಉಂಬ ಒಕ್ಕಲಿಗರಾದರು (ಸರ್ವವ. ೧೭೫-೭೮೩); ಸಂಜಾತವಸ್ತುಗಳ ಸಿದ್ಧಾಯಮಂ ಕುದವೇಳ್ದುದರಸಂಗೆ ನಾವು (ಚೆಮಿಭಾ. ೨೯-೧೭). [ಸಂ.]

ಸಿದ್ಧಾಯತನ (ನಾ). ೧. ಪವಿತ್ರವಾದ ಸ್ಥಳ; ದೇವಾಲಯ: ಇದು ಸಿದ್ಧಾಯತನಂ ಮನಂಗೊಳಿಸಿ ತೋಱುತ್ತಿರ್ಪುದು (ಕಾದಂಪು. ೬೫೭). ೨. [ಜೈನ] ಸಿದ್ಧರ ಆವಾಸಸ್ಥಾನ; ಸಿದ್ಧರ ಕ್ಷೇತ್ರ : ಪೆಂಡರ್ಕಳ ಪ್ರಳಾಪಂಗೆಯ್ದಟ್ಟ ಕಳಕಳಧ್ವನಿಯಿಂದಂ ಕಳಕಳಾಯತಮೆಂದು ಸಿದ್ಧಾಯತನಮಾದುದು (ವಡ್ಡಾರಾ. ೩೧-೩). [ಸಂ.]

ಸಿದ್ಧಾರ್ಥ (ನಾ). ೧. ಸಿದ್ಧಿಯನ್ನು ಪಡೆದವನು ; ಗುರಿಯನ್ನು ಸಾಧಿಸಿದವನು. ೨. ಬುದ್ಧನ ಹೆಸರುಗಳಲ್ಲಿ ಒಂದು : "ಬುದ್ಧಂ ಸಮಂತಭದ್ರಂ ಸಿದ್ಧಾರ್ಥಂ ಮುನಿ ತಥಾಗತ . . . ಶಾಕ್ಯಂ ಸುಗತಂ" (ಪಸ್ತುಕೋ. ೨-೧೦). ೩. ಬಿಳಿಯ ಸಾಸುವೆ : "ಬಿಳಿದಪ್ಪ ಸರ್ಷಪಂ ಸಿದ್ಧಾರ್ಥಂ" (ಪಸ್ತುಕೋ. ೧೫-೧೯); ಸ್ವಜನಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವರ್ಗರ್ಂ ಸೇಸೆಯನಿಕ್ಕಲ್ (ವಡ್ಡಾರಾ. ೩೬-೧೪); ಸಿದ್ಧಾರ್ಥ ದೂರ್ವಾಂಕುರ . . . ಕಳಮಾವ್ರತಕರವಲ್ಲವೆಯರವ್ವ ಪುರಂಧ್ರಿಯರುಂ ಬದ್ಧವಣದ ಪಳಿಗಳುಂ ಬೆರಸಿದರ್ವರಂದು (ಪಾಪಭಾ. ೩-೨ ವ); ಅಟ್ಟಿಯಿಂ ಮಂಗಳಾರ್ಥಮೆಂದು ಸಿದ್ಧಾರ್ಥದ ಸೇಸೆಗಳನಿಕ್ಕಿದೊಡೆ (ಸುಕುಮಾ. ೧೧-೬೫ ವ).

೪. ಒಂದು ಬಗೆಯ ಕುದುರೆ ; ಬಿಳಿಯ ಸಾಸುವೆಬಣ್ಣದ ಕುದುರೆ : ತುರಗದ ಮೆಯ್ಯರ್ಣಂ ಸಿತಸರುಷಪಮಂ ಪೋಲ್ತು ತೋಱೆ ಸಿದ್ಧಾರ್ಥಂ (ಅಶ್ವಶಾ. ೨-೨೮). [ಸಂ.]

ಸಿದ್ಧಾರ್ಥವೃಕ್ಷ (ನಾ). ಇಚ್ಛಿಸಿದುದನ್ನು ಸಿದ್ಧಿಸುವಂತೆ ಮಾಡುವ ಮರ ; ಕಲ್ಪವೃಕ್ಷ : ಚೈತ್ಯವೃಕ್ಷಪರಿಕಲಿತಚತುರ್ದಿಗವಸ್ಥಿತಸಿದ್ಧಪ್ರತಿಮಾವಭಾಸಿಸಿದ್ಧಾರ್ಥ ವೃಕ್ಷಪರಿಭ್ರಾಜಿತಮಪ್ಪ ಮಧ್ಯಪ್ರದೇಶಮುಂ (ಆದಿಪು ೧೦-೩೩ ಪ). [ಸಂ.]

ಸಿದ್ಧಾರ್ಥಿ (ನಾ). ಅರುವತ್ತುಸಂವತ್ಸರಗಳಲ್ಲಿ ಐವತ್ತು ಮೂರನೆಯದು : ಆ ವರ್ಷವೇ ಪ್ರಭವ . . . ಸಿದ್ಧಾರ್ಥಿ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ಏವೇಕ. ೨೬೩). [ಸಂ. ಸಿದ್ಧಾರ್ಥಿನ್]

ಸಿದ್ಧಾಸನ (ನಾ). [ಯೋಗ] ಒಂದು ಬಗೆಯ ಯೋಗಾಸನ : ಸಿದ್ಧಾಸನ . . . ಸುಖಾಸನಂಗಳೇ ಜಪಕರ್ಮಕ್ಕೆ ಯೋಗ್ಯಮಾದಾಸನಗಳೆಂದು (ಏವೇಕ.೮೮); ಈತ . . . ಸಿದ್ಧಾಸನ ಹಾಕಿ, ನೀರಲ್ಲಿ ಕುಳಿತು ತಪಸ್ಸುಮಾಡುವುದುಂಟು (ಸ್ವಕ್ಷಹೂ. ೧೩). [ಸಂ.]

ಸಿದ್ಧಿ (ನಾ). ೧. ಸಾಧಿಸಿದುದು ; ಸಾಧನೆ : ಯಾವುದೋ ಹಾದಿಯೊಂದನು ಹಿಡಿದು ನಡೆಯಲಿದ್ದೆಡೆಯೆ ಸಿದ್ಧಿ! (ಪಾಂಚಜ. ೪೨-೯); ಬುದ್ಧಿ ಶ್ರದ್ಧೆಗಳೆರಡೂ ಸಿದ್ಧಿಗೆ ಅಗತ್ಯವೆಂಬುದು ದಾರ್ಶನಿಕರ ವಾದವಿಧಾನ (ಭಾರದ. ೧೨೨). ೨. ಕಾರ್ಯಸಫಲತೆ ; ಜಯ: ಸಲ್ಲದೌ ನಿನ್ನ ಬಯಕೆಯ ಸಿದ್ಧಿ (ಚಿತ್ರಾಂಗ. ೨೪-೬೬೬). ೩. ಮೋಕ್ಷ ; ಮುಕ್ತಿ: ಪರ್ಗ್ಗೋರವಂ ಸಮಾಧಿ ನೆಱೆದೊನ್ನೋನ್ತೆಯ್ದಿದೋರ್ಸ್ಸಿದ್ಧಿಯಾನ್ (ಎಕ. II, ೨೨-೪; ಸು. 700); ಜಾತಿವರ್ಗದ ಪರಮಧರ್ಮದ ಸಾರವಿದನಾಚರಿಸಿ ಸಿದ್ಧಿಯನ್ನೈದಿದನ . . . ಧರ್ಮವ್ಯಾಧನೆಂಬನ ಕಥೆಯ ಕೇಳು (ಕುಮಾಅ. ೧೪-೪೮). ೪. ಸಿದ್ಧತೆ ; ಏರ್ಪಾಡು. ೫. ಅಣಿಮಾ, ಗರಿಮಾ ಮುಂತಾದ ಎಂಟು ಬಗೆಯ ಅಲೌಕಿಕಶಕ್ತಿ. ೬. ಸಾತ್ವಿಕಗುಣಗಳಲ್ಲಿ ಒಂದು : ವಿರತಿ . . . ಸಿದ್ಧಿ . . . ನಿಶ್ಚಯ ಮುಂತಾದ ಸಾತ್ವಿಕಗುಣಂಗಳಿಂ (ಏವೇಕ. ೨೪೭). ೭. [ಯೋಗ] ಇಪ್ಪತ್ತೇಳು ಬಗೆಯ ಯೋಗಗಳಲ್ಲಿ ಒಂದು : ವಿಷ್ಕಂಭ . . . ಸಿದ್ಧಿ . . . ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ಏವೇಕ. ೨೬೨). ೮. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : ಸಿದ್ಧಿ ವಾರಣಮಾರಯೆ ಯೆಂಬಕ್ಕೆ ನಾಮಂ (ವೃಪಜಾ. ೯-೮). ೯. [ಸಾಂಖ್ಯ] ಐವತ್ತು ಪದಾರ್ಥಗಳಲ್ಲಿ ಒಂದು : ಉಳಿದ ಐವತ್ತು ಪದಾರ್ಥಗಳು ಪ್ರತ್ಯಯಸರ್ಗಕ್ಕೆ ಸೇರಿದವು. ವಿಪರ್ಯಯಗಳು ಐದು, ತುಷ್ಟಿಗಳು ಒಂಬತ್ತು, ವಧಗಳೆಂಬ ಅಶಕ್ತಿಗಳು ಇಪ್ಪತ್ತೆಂಟು, ಸಿದ್ಧಿಗಳು ಎಂಟು, ಅಂತೂ ಐವತ್ತು (ಹಿಂದಸಾ. ೫೭). [ಸಂ.]

ಸಿದ್ಧಿಗೆ 'ಸಿದ್ಧಿಗೆ$_1$' ನೋ.

ಸಿದ್ಧಿಪ್ರದಾಯಕ (ನಾ). ಇಷ್ಟಾರ್ಥವನ್ನು ನೀಡುವವನು : ಸಮಸ್ತಸಿದ್ಧಿಪ್ರದಾಯಕ ವಿನಾಯಕ ಮಾಳ್ಪುದೆಮಗೆ ನಿರ್ವಿಘ್ನತೆಯನು (ಚೈಮಿಭಾ. ೧-೩). [ಸಂ.]

ಸಿದ್ಧಿಮಂತ್ರ (ನಾ). ಸಿದ್ಧಿಯನ್ನು ಸಾಧಿಸುವ ಮಂತ್ರ : ಅವನಿಗೆ ಶರಣರ ಹಾಡು ಶಿವಪದವನ್ನು ಕೊಡುವ ಸಿದ್ಧಿಮಂತ್ರವೇ ಆಗಿದೆ (ಕನ್ನಜಾ. ೧೬). [ಸಂ.]

ಸಿದ್ಧಿಯೋಗ (ನಾ). [ಯೋಗ] ಇಪ್ಪತ್ತೇಳು ಯೋಗಗಳಲ್ಲಿ ಒಂದು : ಸಿದ್ಧಿಯೋಗಕ್ಕೆ ಸಮಾ ೫೭ ಗಳಿಗೆ ಮೇಲೆ ತ್ಯಾಜ್ಯ (ಭಾಸ್ಕರ. ೭೦-೪). [ಸಂ.]

ಸಿದ್ಧಿವರು (ಕ್ರಿ). ಸಿದ್ಧಿಸು ; ಈಡೇರು : ಆತನನ್ನು ನನ್ನ ಸಮ್ಮೋಹನಾಸ್ತ್ರಗಳಿಗೆ ಗುರಿಗಯ್ಯುದೂ . . . ಒಂದೆರಡು ನಿಮಿಷಗಳಲ್ಲಿ ಸಿದ್ಧಿವರುವ ಅಳಿಗಜ್ಜವಲ್ಲ! (ಮುಂತ್ರಶ. ೨೮-೪). [ಸಿದ್ಧಿ + ಬರು$_1$ (< ವರ್)]

ಸಿದ್ಧಿವಾರ (ನಾ). ಸಿದ್ಧಿಸುವ ವಾರ ; ಸ್ಥಿರವಾರ ; ಶನಿವಾರ : ಸಿದ್ಧಿವಾರದ ದಿನ ನೆಲದೆಂಗ ತಂದು ಕತ್ತರಿಸಿ ನೆಳಲಲ್ಲಿ ಒಣಗಿಸಿ . . . ಮೂರುದಿನಗಳು ಸೇವಿಸೆ ಶ್ಲೇಷ್ಮಜ್ವರ ಗುಣವಾಗುವುದು (ಸಕವೈ. ೯೧). [ಸಂ.]

ಸಿದ್ಧಿಸು (ಕ್ರಿ). ೧. ಈಡೇರು ; ನೆರವೇರು : ಸಾಮಂ ಸಿದ್ಧಿಸಿದೊಡೆ ವಿಜಯವಹುದು (ಪಂಚತಂ. ೧೬೮-೧೭); ಸುದತಿ ಮನೋರಥಂ ಸಖಿಗೆ ಪೇಳದೆ ಸಿದ್ಧಿಸದು (ಜಗವಿ. ೧೧-೧೨); ಎಲೆ ಮಹೀಪತಿತನುಜ ಕೇಳ್ ತಪವೀ ತಪೋವನದೊಳಗೆ ಸಿದ್ಧಿಪುದು (ತೂರರಾ. ೧-೧೧-೫); ಅವನ ಉದ್ದೇಶ ಸಿದ್ಧಿಸಲಿಲ್ಲ (ಪ್ರವಾಇ. II, ೩). ೨. ಪ್ರಾಪ್ತವಾಗು ; ದೊರಕು : ನೂತನವಿದ್ಯೆ ಸಿದ್ಧಿಸಿತೆಂದು ಖಳ ಮಿನಕೇತುವ ಕೊಂಡಾಡಿದನು (ಮೋಹತ. ೧೨-೮೩); ಅಭ್ಯಾಸದಿಂದ ಕಾರ್ಯಕೌಶಲ್ಯ ಸಿದ್ಧಿಸುತ್ತದೆ (ಶಿಕ್ಷದ. ೨೪೪). ೩. ಫಲಕಾರಿಯಾಗು ; ಸಫಲವಾಗು : ತದೀಯ ಶರಾಳಿಗಳು ಸಿದ್ಧಿಸಲಿ (ಕುಮಾಅ. ೪-೨೧); ಧೀರೋದಾತ್ತ ಹರನೊಳು ಕಾಳೆಗ ಕಂದರ್ಪ ನಿಮಗೆ ಸಿದ್ಧಿಪುದೇ (ಮೋಹತ. ೬-೭). ೪. ಸಾಧಿಸು ; ಪಡೆ : ಮಾಳನುಂ ಮಾರಗನುಂ ನಾಗ x x x ಮುದ್ದನು ಒಡನೆ ಸಿದ್ಧಿಸಿದರ್ (ಗಿಕ VII, ಶಿಕಾಂ. ೨೪-೭ : ಸು. 920 ೧); ಅರಮನೆಯೊಳಗಣ ಬಸದಿಯೊಳಗೆ ದೇವರಿರುತಾತ್ಮಪದವ ಸಿದ್ಧಿಪುದು (ಭರಚಿ. ೫೯-೩೦). [ಸಿದ್ಧಿ + - ಇಸು$_3$]

ಸಿದ್ಧೌಷಧ (ನಾ). ೧. ರೋಗಕ್ಕೆ ತಕ್ಕುದಾದ ಔಷಧ, — ಪ್ರಭಾವಶಾಲಿಯಾದ ಮದ್ದು : ಆ ವೈದ್ಯರದು ಸಿದ್ಧಹಸ್ತ, ಅವರು ಕೊಡುವ ಮದ್ದು ಸಿದ್ಧೌಷಧ (ರೂಢಿ). ೨. (ಆಲಂ) ಸಮರ್ಪಕವಾದ ಪರಿಹಾರ ; ಸರಿಯಾದ ಮಾರ್ಗ : ಈ ಅಪಮಾನವನ್ನು, ಈ ನಿಕೃಷ್ಟತೆಯನ್ನು ತೊಲಗಿಸಲು ಸೇದುತೀರಿಸಿಕೊಳ್ಳುವುದೇ ಸಿದ್ಧೌಷಧ (ನಿಶಿಂ. ೬೭); ಸಮಸ್ತಸಮಸ್ಯೆಗಳಿಗೆ ತನ್ನ ಕಾರ್ಯಕ್ರಮ ಸಿದ್ಧೌಷಧವೆಂದು ಅವನು ನಂಬಿಕೊಂಡಿದ್ದನು (ಪುನರು. ೫೩೭). [ಸಂ.]

ಸಿಧಿ (ನಾ). ಚಿತೆ; ಸಿಬಿಕೆ: ಗುರುಪುರೋಹಿತಬಂಧುವರ್ಗವ ಕರಿಸಿ ತದನಂತರದೊಳಪರಕ್ರಿಯೆವಿಧಾನದಲಿ ಪರಿಪರಿಯ ಸಮಿಧೆಗಳ ರಾಶಿಯ ಸುರಿದು ಸಿಧಿಯನು ಹೂಡಿ ದಶಕಂಧರನ ಹೋಮಾಗ್ನಿಯಲಿ ಸಂಸ್ಕಾರವನು ಮಾಡಿಸಿದ (ಆನಂರಾ. ೬-೨೨-೨೮). [< ಸಿದಿಗೆ]

ಸಿಧ್ಮ (ನಾ). ೧. ಬಿಳಿಯ ಚುಕ್ಕೆಗಳುಂಟಾಗುವ ಒಂದು ಬಗೆಯ ಚರ್ಮ ರೋಗ; ಚಿಬ್ಬು : "ಸಿಧ್ಮಮೆಂದರೆ ಚಿಬ್ಬು" (ಮಂಗರಾ. ೧೧೩-೨). ೨. ಒಂದು ಬಗೆಯ ಕುಷ್ಠರೋಗ: ಇಲ್ಲಣ, ಅರಿಸಿನ, ಕೋಷ್ಠ, ರಾಗಿ, ಕೊಡಸಿಗೆಯ ಕಾಯಿ, ಇದಂ ಮಜ್ಜಿಗೆಯಲ್ಲಿ ಅರೆದು ಶಿಶುಗಳಿಗೆ ಪೂಸೆ, ಸಿಧ್ಮವೆಂಬ, ಪಾಮಾ ಎಂಬ, ವಿಚರ್ಚಿಯೆಂಬ ಮೂಱುತೆಱದ ಕುಷ್ಠ ಮಾಣ್ಗುಂ (ವೈದ್ಯವಿ. ೮೨). [ಸಂ.]

ಸಿಧ್ಮಲ, ಸಿಧ್ಮಳ (ಗು). ೧. ಚಿಬ್ಬುಗಳಿಂದ ಆವೃತವಾದ. ಸಿಧ್ಮಳ: (ನಾ). ೨. ಚಿಬ್ಬುಗಳುಳ್ಳವನು : "ಕಿಲಾಪಯುತಂ ಸಿಧ್ಮಳನಕ್ಕುಂ" (ಮಸ್ತುಕೋ. ೭೩-೩೮). [ಸಂ.]

ಸಿಧ್ಮಳ 'ಸಿಧ್ಮಲ' ನೋ.

ಸಿನಿಕ (ನಾ). ಇತರರಲ್ಲಿ ತಪ್ಪನ್ನು ಹುಡುಕಿ, ತನ್ನ ಅಣಕ, ಕುಚೋದ್ಯಗಳಿಂದ ಹೀಯಾಳಿಸುವ ಸ್ವಭಾವದವನು : ಆ ಸಿನಿಕ ಯಾರ ಬಗ್ಗೆಯೂ ಒಂದೇ ಒಂದು ಒಳ್ಳೆಯ ಮಾತನ್ನು ಆಡಿದ್ದು ನಾನು ಕೇಳಿಲ್ಲ (ರೂಢಿ). [<— ಇಂ. cynic]

ಸಿನಿಕತನ (ನಾ). ಎಲ್ಲದರಲ್ಲೂ ತಪ್ಪು ಕಂಡುಹಿಡಿದು ಹೀಯಾಳಿಸುವ ಸ್ವಭಾವ: ದಿಗ್ಭ್ರಾಂತಿಯನ್ನು ಮರೆಯಲು ಕಲಿಸಿಕೊಟ್ಟಿತು ಅವನು ಬೆಳೆಸಿಕೊಂಡ ಸಿನಿಕತನ (ಏಳಿಜೀ. ೩೫). [ಸಿನಿಕ + -ತನ]

ಸಿನಿಮಾ, ಸಿನೆಮಾ (ನಾ). ಚಲನಚಿತ್ರ : ಈಗೇನು ಸಿನಿಮಾ, ಟಾಕಿ, ನಾಚು ಮುಂತಾದವುಗಳಿಗೇ ಹೆಚ್ಚು ಪ್ರೋತ್ಸಾಹನವೇ ವಿನಹ, ಹಳೇಕಾಲದ ನಾಟಕಗಳನ್ನು . . . ನೋಡುವವರು ಯಾರು? (ರಾಯಕ. ೬೫); ಸಿನಿಮಾದಲ್ಲಿ ಯಾವ ಆಸಕ್ತಿಯೂ ಉಳಿದಿರಲಿಲ್ಲ (ಮೋಹಬ. ೪೨೦). ಸಿನೆಮಾ : ಮೆಲ್ಲ ಮೆಲ್ಲನೆ ನಾಟಕ ಸಿನೆಮಾಗಳ ಅನುಕರಣೆಯ ಹಾವಳಿಯಾಗುತ್ತಿದೆ (ಯಕ್ಷಬ. ii, ಮುನ್ನುಡಿ). [<— ಇಂ. cinema]

ಸಿನಿಮಾತಾರೆ (ನಾ). ಚಲನಚಿತ್ರಗಳಲ್ಲಿ ಅಭಿನಯಿಸುವ ನಟ ಅಥವಾ ನಟಿ : ಸಿನಿಮಾತಾರೆಗಳೊಡನೆ ಹೋಲಿಸಿ ನೋಡಿದಾಗ ರಂಗನಟರಿಗೆ ತಮ್ಮ ಆದಾಯ ಕಡಿಮೆಯೆಂದೆನಿಸುತ್ತದೆ (ಸಾಹಿಜೀ. ೭೬). [ಸಿನಿಮಾ + ತಾರೆ$_2$]

ಸಿನಿಮಾಮಂದಿರ (ನಾ). ಚಲನಚಿತ್ರವನ್ನು ಪ್ರದರ್ಶಿಸುವ ಮಂದಿರ ; ಟಾಕೀಸು : ತುಂಬಿದ ಬೀದಿಗಳಲ್ಲಿ ಸಿನಿಮಾಮಂದಿರಗಳಲ್ಲಿ ಜೊತೆಗೊಂಡು ಸ್ವಚ್ಛಂದದಿಂದ ನಲಿಯುವುದಕ್ಕಿಂತಲೂ ಹೆಚ್ಚೇನು ಬೇಕು? (ಚಂದುಬಿ. ೨೩೦). [ಸಿನಿಮಾ + ಮಂದಿರ]

ಸಿನಿಮಾಯ (ನಾ). ಚಲನಚಿತ್ರದ ರೀತಿ : ಮಗ ವೆಂಕಟಕೃಷ್ಣನ ವಿದ್ಯಾಭ್ಯಾಸ, ಎಲ್ಲಾ ಸಿನಿಮಾಯವಾಗಿ ಅವರ ತೇಲುತ್ತಿದ್ದ ಮನಸ್ಸಿನಲ್ಲಿ ಮೂಡಿದುವು (ಮಾಮನೆ. ೩೯). 'ನಾಟಕೀಯ' ಪರಾ. [< ಸಿನಿಮಾ]

ಸಿನಿರವ (ನಾ). (ಹೆದರಿಕೆಯನ್ನುಂಟುಮಾಡುವ) ಒಂದು ಬಗೆಯ ಧ್ವನಿ : ಪೆಟಲ್ಗಳೊ ರಣರಕ್ಕಸಿಯರ ನಾಸಾಪುಟಗಳೊ ಪೊಗೆಯೊ ನಿಟ್ಟುಸಿರೊ ಪಟಲೆಂಬ ದನಿಯೋ ಸಿನಿರವವೋಯೆನೆ ಭಟರ್ಗಳ ಭಯಗೊಳಿಸಿತ್ತು (ಚಂಪ್ರಸಾಂ. ೮-೪೮).

[ಸಿನಿ + ರವ]

ಸಿನೀವಾಲಿ (ನಾ). ಚಂದ್ರಕಲೆಯಿಂದ ಕೂಡಿದ ಅಮಾವಾಸ್ಯೆ : "ಚಂದ್ರನಾ ಕಾಣಬಹಂತಹ ಅಮಾವಾಸ್ಯೆ ಸಿನೀವಾಲಿಯೆಂಬುದು" (ಹಲಾಯು. ೧೯-೧೧೨).

[ಸಂ. ಸಿನೀವಾಲೀ]

ಸಿನುಗು (ನಾ). ದುರ್ವಾಸನೆ ; ಸಿಂಡು : ಕೋಳ್ಳಿಗರ ಸಿನುಗು ಕೌರಹ ಬಿಸಿಯುಸಿರ್ ಮೊಗಕೆ ತೀಡುತಿರೆ (ಚತ್ರಾಂಗ. ೧೫-೫೭೭); ಮಳೆಯಲ್ಲಿ ತೊಪ್ಪನೆ ತೊಯ್ದು ಮೆಯ್ಯಿಂದ ಆವಿ ಏಳುತ್ತಿರುವ ಕಂತ್ರಿನಾಯಿಯ ಸಿನುಗುವಾಸನೆ! (ಮಲೆಮ. ೬).

ಸಿನೆ (ಅ). ೧. ಸಂಪೂರ್ಣವಾಗಿ ; ಪೂರ್ತಿಯಾಗಿ : ದೇವಭಕ್ತರಿಲ್ಲದೂರು ಸಿನೆ ಹಾಳು (ಬಸವ. ೮೭); ಗುಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು (ಅಪಚಂ. ೧೩೬-೬೨೫); ಅಱಿವು ಮಱವೆ ಸಿನೆಯಳಿದು ನಿಜದಱಿವು ಜನಿಸಿದಲ್ಲದೊಡಾತ್ಮಗನುವಹುದೆ ಪರಿಪೂರ್ಣದಿರವು (ಮನೋವಿ. ೬-೫೦). ೨. ಸ್ವಲ್ಪವೂ ; ಎಳ್ಳಷ್ಟೂ ; ಲವಲೇಶ ಮಾತ್ರವೂ : ಅವಕ್ಕೆಡೆಯಾಗಿರ್ಪ ಅಭಿಮಾನವೃತ್ತಿ ಸಿನೆಯಿಲ್ಲೇನೆಂಬಿನಾಶ್ಚರ್ಯಮಂ (ಶತಕ. ೧೧೦-೫೭); ಈ ಲಿಂಗಕೆನ್ನಂಗಕ್ಕೆ ಸಿನೆ ಭೇದವಿಲ್ಲೆಂದು (ಸಿದ್ರೇಪು. ೫-೩೩).

[< ಸಂ. ಶೂನ್ಯ]

ಸಿನೆಮಾ 'ಸಿನಿಮಾ' ನೋ.

ಸಿನ್ನೆ 'ಸಿವನೆ' ನೋ.

ಸಿಪಲೆ 'ಸಿಪಿಲೆ' ನೋ.

ಸಿಪಲೆವಕ್ಕಿ 'ಸಿಪಿಲೆಹಕ್ಕಿ' ನೋ.

ಸಿಪಲೆಹಕ್ಕಿ 'ಸಿಪಿಲೆಹಕ್ಕಿ' ನೋ.

ಸಿಪಾದಾರ (ನಾ). ಸೈನ್ಯಾಧಿಕಾರಿ : ಸೈದ್‌ಹಮ್ಮದ ಸಿಪಾದಾರ ಶೇಕ್‌ಅನ್‌ಸರ ಸಿಪಾದಾರ (ರಾಜೇಂದ್ರ. ೪೨). [<— ಪಾರ. ಸಿಪಾಹ್‌ದಾರ್]

ಸಿಪಾಯಿ, ಶಿಪಾಯಿ (ನಾ). ೧. ಸೈನಿಕ ; ಯೋಧ : ನಮ್ಮ ಜನರೂ ಸಹ ಸಿಪಾಯಿಗಳಾಗಬಯಸುತ್ತಾರೆ (ರಂಗಗೆ. ೩೭); ಕಾಜಿಯು ಹೆಚ್ಚು ಸಿಪಾಯಿಗಳನ್ನು ತರುವಂತೆ ಫೌಜುದಾರನಿಗೆ ಹೇಳಿಕಳುಹಿಸಿದನು (ಬಂಕಮ. ೩೦೨). ೨. ಆಳು ; ಜವಾನ : ಕುಳಿತು ಬೇಸತ್ತ ಸುಮಳಿಗೆ ಸ್ಕೂಲಬೋರ್ಡಿನ ಸಿಪಾಯಿ ಕರೆದಾಗ ಆತ ದೇವರಂತೆ ಕಂಡಿರಬೇಕು (ಜನ್ಮಹಿಂ. ೯). ಶಿಪಾಯಿ : ೧. ಸೋಲ್ಜರ್ ಶಿಪಾಯಿ ಪರಾರಿಯಾಗುವದಕ್ಕೆ ಕುಮ್ಮಕು ಮಾಡೋಣ — ೨ ಸಂವತ್ಸರ ಮತ್ತು ಜುರ್ಮಾನೆ (ಗ್ರಾಮಕ. ೧೭೯); ಹೈದರನ ತಾತ ಶಿಪಾಯಿ (ಯಕ್ಷಪ್ರ. ೧೩೭). ೨. ಥಿಯೇಟರು ಬಾಗಿಲು ಕಾಯುವ ಶಿಪಾಯಿ (ಹೇಮಂತ. ೩೫೫); ಖಾಸಗೀ ಶಿಪಾಯಿಯ ಹಾಗೆ ಕಾಣುತ್ತಾನೆ (ರತ್ನಗೋ. ೧೬). ೩. ಪೋಲೀಸು ; ಪ್ಯಾದೆ : ಇನ್ಸ್‌ಪೆಕ್ಟರನು ಕೊತವಾಲನನ್ನು ಕಾಣದೆಯೇ ಶೀಘ್ರವಾಗಿ ಅಲ್ಲಿಂದ ತನ್ನ ಶಿಪಾಯಿಯೊಡನೆ ಮನೆ ಮುಟ್ಟಿದ (ಕೊತಕಾ. ೭೦).

[<— ಪಾರ. ಹಿಂ. ಸಿಪಾಹೀ; ಮರಾ. ಶಿಪಾಈ, ಶಿಪಾಯ, ಸಿಪಾಈ]

ಸಿಪಾಯಿಗಿರಿ (ನಾ). ೧. ಸಿಪಾಯಿಯ ಉದ್ಯೋಗ : (ಕ). ೨. ಸಾಹಸ ; ಶೌರ್ಯ : ತಮ್ಮ ಸಿಪಾಯಿಗಿರಿಯನ್ನು ನೋಡಿ ಬಹಳ ಸಂತೋಷವಾಯಿತು. ತಮ್ಮನ್ನು ಪರೀಕ್ಷಿಸಲು ಬಂದೆವು (ಚಿತ್ರಶಾ. ೮೭). [<— ಪಾರ. ಸಿಪಾಹ್‌ಗಿರೀ; ಹಿಂ. ಸಿಪಾಹಗಿರೀ; ಮರಾ. ಶಿಪಾಈಗಿರೀ, ಸಿಪಾಈಗಿರೀ]

ಸಿಪಾಯಿತನ (ನಾ). = ಸಿಪಾಯಿಗಿರಿ ೧ : ಶರೀರಶ್ರಮದಿಂದ ಕೆಲಸಮಾಡುವುದು ಅವರ ಸಿಪಾಯಿತನದ ಗೌರವಕ್ಕೆ ಕಡಿಮೆಯೆಂದು ತಿಳಿಯುವರು (ಬಾಲವ್ರ. I, ೯೧೬).

[ಸಿಪಾಯಿ + - ತನ]

ಸಿಪಾರಸು 'ಶಿಫಾರಸ್ಸು' ನೋ.

ಸಿಪಾಲೆ (ನಾ). ಒಂದು ಬಗೆಯ ಸಸ್ಯ : "ಪ್ರಾಣಜಃ — ಸಿಪಾಲೆಯ ಸೊಪ್ಪು" (ಓಷಧಿ. ೯೬). [?]

ಸಿಪಾಸಾಲಾರ (ನಾ). ಸೈನ್ಯದ ಒಬ್ಬ ಅಧಿಕಾರಿ : ರಸ್ತುಸಾಮಾನು ಸರಂಜಾಮು ಮುಂತಾಗಿ . . . ಸಿಪಾಸಾಲಾರರ ತಾಬೆ ಮಾಡಿ (ರಾಜೇಂದ್ರ. ೪೨).

[<— ಪಾರ. ಸಿಪಾಹ್‌ಸಾಲಾರ್]

ಸಿಪಿಗೆಂಡೆ 'ಸೀಪಿಯಗೆಡ್ಡೆ' ನೋ.

ಸಿಪಿಲೆ, ಚಿಪಿಲೆ, ಸಿಪಲೆ, ಸೀಪಲೆ (ನಾ). ತನ್ನ ಉದ್ದವಾದ ತೋಕೆಯನ್ನು ಸದಾ ಅಲುಗಾಡಿಸುತ್ತಿರುವ ಒಂದು ಬಗೆಯ ಹಕ್ಕಿ . ದಿಕ್ಕಿಗೆ ಜೆಸರಾಂತ ಸಿಪಿಲೆಗೆ ಕವಳವನಿಕ್ಕಿ ಕಾದಿಸುತಿರ್ದ ಮದನ (ಮೋಹತ. ೫-೩೫); ಗರಿಪುಕ್ಕಮಂ ಕುಣಕುಣಿಸಿ ಸಿಳ್ಳನೂದಿತು ಸಿಪಿಲೆ (ಶ್ರೀರಾಮಾ. ೨೨೮-೨೧). ಚಿಪಿಲೆ : ಶುಕ ಗಿಡುಗ ಚಿಪಿಲೆ ಗುಬ್ಬಿಯು . . . ಕೂಗಲು ಬನದೋಳ್ (ಹಮಚ. ೨೦೬). ಸಿಪಲೆ : ತಗರು ಸಿಪಲೆ ಕೋಳಿಕಾಳಗಗಳು ನೆಚ್ಚ ಪಗಡೆಜೂಜುಗಳ ನೆವದಲಿ . . . ಸೊಗಸುಗಾಱರು ಚರಿಸುವರು (ಕಂನವಿ. ೬-೧೯೭). ಸೀಪಲೆ : ತಗರು ಸೀಪಲೆ ಕೋಳಿ ಕೋಣನ ಭರದಿಂದ ಕಾದಿಸುವುದನು (ಜ್ಞಾನಚಿ. ೩೮-೧೧೨). [ದೇ. ॥ ತಮಿ. ಮಲ. ಚೇವಲ್ = ಗಂಡುಹಕ್ಕಿ]

ಸಿಪಿಲೆಗಚ್ಚಿಸು (ಕ್ರಿ). ಸಿಪಿಲೆಹಕ್ಕಿಗಳು ಒಂದನ್ನೊಂದು ಕಚ್ಚುವಂತೆ ಮಾಡು ; ಸಿಪಿಲೆಹಕ್ಕಿಗಳ ಕಾಳಗವಾಡಿಸು : ತಗರ್ವೆಣಗಿಸುವ ಸಿಪಿಲೆಗಚ್ಚಿಸುವ ಕೋಳಿಗಾಳಗವ ಕಾದಿಸುವ . . . ಜೂಜುಗಳನೊಡ್ಡಿ (ಜೈಮಿಭಾ. ೬-೩೯); ಸಿಪಿಲೆಗಚ್ಚಿಸುವರು ಚರಣಾಯುಧಗಳ ಕುಪಿತಮುಖದೆ ಕಾದಿಸುವರು (ಕಂನವಿ. ೨-೨೭).

[ಸಿಪಿಲೆಗಚ್ಚು + - ಇಸ್ಸು]

ಸಿಪಿಲೆಗಚ್ಚು (ನಾ). ಸಿಪಿಲೆಹಕ್ಕಿಗಳ ಕಾಳಗ, — ಕಾದಾಟ : ತಗರ ಪೊಯ್ಮಾಟ ಹಿಳ್ಳೆಗಳೋಟ ಸಿಪಿಲೆಗಚ್ಚುಗಳ ಸರಸಾಟ (ಲಕ್ಷ್ಮೀಭಾ. ೧-೨೮-೫). [ಸಿಪಿಲೆ + ಕಚ್ಚು]

ಸಿಪಿಲೆಹಕ್ಕಿ, ಸಿಪಲೆವಕ್ಕಿ, ಸಿಪಲೆಹಕ್ಕಿ (ನಾ). = ಸಿಪಿಲೆ : ಮನೆಯ ಸೂರಿನಲ್ಲಿ ನೇತಾಡುತ್ತಿದ್ದ ಗೂಡುಗಳಲ್ಲಿ . . . ಸಿಪಿಲೆಹಕ್ಕಿಗಳು ಸೆರೆಯಾಗಿ . . . ಅವನ ಪ್ರೀತಿಗೆ ಪಾತ್ರವಾಗಿದ್ದವು (ಮಗಮಾಂ. ೨೫). ಸಿಪಲೆವಕ್ಕಿ : ಅವನೀಶ್ವರರ ನಂದನರು ತವಕದ ಸಿಪಲೆವಕ್ಕಿಗಳ ಕಾದಿಸುತಿಹ ಸುವಿಲಾಸವನೇವೇಳ್ವೆ (ಕಂನವಿ. ೭-೧೩). ಸಿಪಲೆಹಕ್ಕಿ : ಪಚ್ಚೆಹಕ್ಕಿಯು ಪಾರಿವಾಳವು ಹೆಚ್ಚಿನಾ ಗೌಜೀನ ಹಕ್ಕಿಯು ಕಚ್ಚಿ ಆಡುವ ಸಿಪಲೆಹಕ್ಕಿಯು ರಚ್ಚಿಸಿ ಮೆರೆದವರಣ್ಣಾದಿ (ಗೋಹಾಡು. ೩-೧೩). [ಸಿಪಿಲೆ + ಹಕ್ಕಿ (< ಪಕ್ಕಿ)]

ಸಿಪಿವಿಷ್ಣು (ನಾ). ಶಿವ ; ರುದ್ರ : ಸಿಪಿವಿಷ್ಟನಂಗಭವಿಭಸಿತವಾಗಿಯೇ ತಾನು ಗುಪಿತದಿಂದಿರೆ (ಮೃಲಾರ. ೧೯೯-೬). [< ಸಂ. ಶಿಪಿವಿಷ್ಟ]

ಸಿಪ್ಪಡಂಬಡೆ (ಕ್ರಿ). ವ್ಯಥೆಗೊಳ್ಳು ; ಖಿನ್ನತೆಯನ್ನು ಹೊಂದು (?) : ಮನದನ್ನಳಪ್ಪ ಕೆಳದಿಗುಸಿರ್ದಂದು ಸಿಪ್ಪಡಂಬಡೆದನನ್ನೆಗಂ ಬಿನ್ನನಿರ್ದ ವಯಸ್ಯೆಯಾಸ್ಯಮಂ ಅವನೊಡನಾಡಿ ಕಂಡು (ಚಂದ್ರಪ್ರ. ೮-೭೭ ವ). 'ಸಿಪ್ಪದಿ' ಪರಾ. [ಸಿಪ್ಪಡ, + ಪಡೆ]

ಸಿಪ್ಪಡಸು (ಕ್ರಿ). (ಕಪ್ಪನೆಯ) ಚಿಪ್ಪು ಕವಿ, — ಮುಸುಕು : ಒಡನೆ ದಿಗಂತದಂತಿಗಳ ಕೋಡ ಮೊದಲ್ಗಳೊಳೆಯ್ದೆ ಪೊಕ್ಕು ಸಿಪ್ಪಡಸಿದ ಮಾಳ್ಕೆಯಾದುವು . . . ಆ ಯಮುನೆಗಗ್ಗದ ಯಾಗದ ಧೂಮದೇಳ್ಗೆಯೊಳ್ (ಪಂಪಭಾ. ೬-೩೭); ಲೋಹದ ಸಿಪ್ಪಡಸಿದ ಸನ್ನಾಹಂ ಹಕ್ಕರೆ ಹಯಾಂಗಮಂ ಪೊಯ್ಯಲ್ಕೆ (ಮಹಾನೇ. ೧೧-೧೩೬).

[ಸಿಪ್ಪು + ಅಡಸು]

ಸಿಪ್ಪರಿಗವಿದ್ಯೆ (ನಾ). ದರ್ಜಿಯ ಕೆಲಸ : ಸಾಮುದ್ರಿಕೆಯ ಲಕ್ಷಣ, ಚಿತ್ತಾರಿವಿದ್ಯೆ, ಸಿಪ್ಪರಿಗವಿದ್ಯೆ, ಪುಸ್ತಕದ ಲೇಖನವಿದ್ಯೆ . . . ನಾನಾವಿದ್ಯೆಗಳನು . . . ಅರಿತು (ವಚಕಾ. ೮). [< ಸಿಪ್ಪಿಗ + ವಿದ್ಯೆ]

ಸಿಪ್ಪಿಗ, ಚಿಂಪಿಗ, ಚಿಪ್ಪಿಗ, ಶಿಂಪಿಗ, ಸಿಂಪಿಗ (ನಾ). ಬಟ್ಟೆ ಹೊಲೆಯುವವನು; ದರ್ಜಿ : ಕುಪ್ಪಸದಂತೆ ಬೆನ್ನಂ ಪತ್ತಿ ಕೆತ್ತುವರ್ ಸಿಪ್ಪಿಗನಂತೆ ಪೊಲಿವರ್ (ಧರ್ಮಾಮೃ. ೩-೭೩); ಯೆಂಣೆಯಂ ಕೊಟರು ಸಿಪ್ಪಿಗರುಂ (ಬೊಂಕಶಾ. ೧೯೩೪, ಹಿರೇಕೆರೂರ. ೨೨-೪೫; ?). ಚಿಂಪಿಗ : ಒಬ್ಬ ಚಿಂಪಿಗನಲ್ಲಿ ಆವುದಾನೊಂದು ಉಡಿಗೆತೊಡಿಗೆಯ ಹೊಲಿಸಿಕೊಂಡು . . . ಒಪ್ಪಿದರೆ ಇಟ್ಟುಕೊಂಬರು (ವಚಶಾ. I, ೯೬); ಗಾಣಿಗರ್ ಚಿಂಪಿ[ಪಾಠಾ. ಚಿಪ್ಪಿ]ಗರ್ . . . ಜೂಜುಗಾಱರ್ ಮುಖ್ಯರೊದಗಿ ಬರುತಿರ್ದರು (ಚಿಬಪು. ೪೭-೪೧). ಚಿಪ್ಪಿಗ : ಆ ವಿಗಡ ಜನಿಸುವನು ಚಿಪ್ಪಿಗನಾಗಿ ಧರಣಿಯಲಿ (ಸಂಭವ. ಪರಿ. ೩೪೪); ಶರತ್ಕಾಲವೆಂದೆಂಬ ಚಿಪ್ಪಿಗಂ ಬಿಳಿಯ ಹಳೆಯಂಬರಂ ಹಱಿಯದಂತು . . . ಹೊಲಿದ ಬೆಳ್ಗೊಡೆಯೊ . . . ಎನಲು ಬೆಳ್ಮುಗಿಲೆಸೆದವು (ಚೇರಮ. ೪-೩);

ಚಿಪ್ಪಿಗನೇಳಿಗೆಯನಾಗಿಸುವ . . . ವರವನು ಕಾಂಬೆ ನಾನು (ನಿಭಾಗ. ೧೦-೩.೨-೩೭). ಶಿಂಪಿಗ : ಶಿಂಪಿಗರು : ಇವರಲ್ಲಿ ಕನ್ನಡಿಗರು, ಮಹಾರಾಷ್ಟ್ರಿಯೆಂಬೆರಡು ವರ್ಗಗಳಿವೆ (ಕಭಾಗ. ೧೫೨). ಸಿಂಪಿಗ : ಗಂದಿಗರ ಅಂಗಡಿಯ ಸಾಲ್ಗಳು-ಮುಂದೆ . . . ಕುಪ್ಪಸಗಳನು ಮಾಡುವ ಸಿಂಪಿಗರ ಮಳಿಗಿ (ನಂದೀಲೀ. ೯-೯); ಎಳ್ಳು ಗಾಣಿಗ ಬಲ್ಲ ಸುಳ್ಳು ಸಿಂಪಿಗ ಬಲ್ಲ ಕಳ್ಳರನು ಬಲ್ಲ ತಳವಾಜ (ಸರ್ವಜ್ಞ. ೧೪೨೦); ನನ್ನನ್ನು ಸಿಂಪಿಗನ ಕಡೆಗೆ ಒಯ್ದರು (ಕಪು. ೪-೫೭). [< ಸಂ. ಶಿಲ್ಪಿಕ./ ಪ್ರಾ. ಸಿಪ್ಪಿಅ./ ತಮಿ. ಚಿಪ್ಪಿ, ಚಿಪ್ಪಿಯನ್; ತುಳು. ಚಿಪ್ಪಿಗೆ; ತೆಲು. ಚಿಪ್ಪೆವಾಡು./ ಮರಾ. ಶಿಂಪೀ, ಸಿಂಪೀ]

ಸಿಪ್ಪಿಗಗೊತ್ತಳಿ (ನಾ). ದರ್ಜಿಗಳ ಸಂಘ : ಸಮಸ್ತಸಿಪ್ಪಿಗಗೊತ್ತಳಿಯೆಲ್ಲಂ ದೇವರ ಚೈತ್ರಪವಿತ್ರದ ಪರ್ವಕ್ಕೆ . . ಒಂದು ಪಣಮುಂ (ಎಕ. VII. ಶಿಕಾ. ೧೧೩-೩.೨; 1139); ಅಲ್ಲಿನ ನೇಕಾರಗೊತ್ತಳಿ, ಸಿಪ್ಪಿಗಗೊತ್ತಳಿಗಳೂ ಕೂಡ ಸ್ವಲ್ಪ ನೆರವಾಗಿವೆ (ಸಮತಿ. ೨೧). [ಸಿಪ್ಪಿಗ + ಕೊತ್ತಳಿ (< ಕೊತ್ತಲಿ)]

ಸಿಪ್ಪಿಡು (ಕ್ರಿ). ಚೀಪು; ಹೀರಿಕೊಳ್ಳು: ಸೊಪ್ಪುಸೊವಡಾಗದೆಸಲೆಸಲ್ದಪ್ಪದ ಮೊಗಮಿಱಿದು ಕಾರ್ದು ಚಪ್ಪಲರ್ವಿನೆಗಂ ಸಿಪ್ಪಿಟ್ಟು ಕರೆದು ಕೊಂಡುವು ಸಪ್ಪದ ಮುಪ್ಪಳಿದಿನೊಱೆವ ನಱುವಂಡುಗಳಂ (ಲೀಲಾವ. ೯-೮೬). [< ಸೀಪು + ಇಡು]

ಸಿಪ್ಪು, ಚಿಂಪಿ, ಚಿಂಪೆ, ಚಿಪ್ಪು, ಸಿಂಪಿ, ಸಿಂಪ್ಪು, ಸಿಂಪೆ, ಸಿರ್ಪು (ನಾ). ೧. ಸಾಮಾನ್ಯವಾಗಿ ಸಮುದ್ರದಲ್ಲಿ ದೊರಕುವ, ಗಟ್ಟಿಕವಚವುಳ್ಳ (ಭರಣಿಯಾಕಾರದ) ಒಂದು ಪದಾರ್ಥ; ಶುಕ್ತಿ : ಜಲನಿಧಿಯ ಸಿಪ್ಪಿನೊಳಗಣ ನನುಪಮಮೌಕ್ತಿಕಮೆ ಪುಟ್ಟುವಂದದಿನೊಗೆದಂ (ಸೌಗಾ. IX-i, ೧೭೬-೧೫; 1111); ಕರಮೆಸೆವ ಮುತ್ತು ಸಿಪ್ಪಿನ ಪೊರೆಯೊಳ್ಪಜ್ಜಳಿಸೆ (ಪಾರ್ಶ್ವಪು. ೫-೮೬). ೨. ತೆಂಗಿನಕಾಯಿ ಮೊದಲಾದುವುಗಳ ಕರಟ : ಬಿದಿರಂಡೆ ಕೊಂಬು ಪೊಸಸಿಪ್ಪು [ಪಾಕಾಂ. ಹೊಯಿಸಿಪ್ಪ] ನಾಳಿಗಳಿಸೆಯೆ (ಬಾಗರ. ಹ. ೩-೨೪). ೩. ತಲೆಯ ಮೇಲುಭಾಗ ; ಓಡು ; ಬುರುಡೆ: ''ಕಪಾಲಮೆಂಬುದು ತಲೆಯ ಸಿಪ್ಪು'' (ಹಲಾಯು. ೧೦೪-೧೧); ಕಯ್ಯ ಸಿಪ್ಪು ಸೆಳೆಮೆಟ್ಟಿದ ಪಾವುಗೆ ತೊಟ್ಟ ಜೋಗವಟ್ಟಿಗೆ ತೆಗೆದುಟ್ಟ ಸೋಗೆ ಕರವೊಪ್ಪಿರೆ ಜೋಗಿಣಿ ಬರ್ಪಳೊಪ್ಪಿದಳ್ (ಲೀಲಾವ. ೪-೭೭). ೪. ಭರಣಿ ; ಸಂಪುಟಿ : ಕೊಂಚಿಯಂಚಿಯ ಕುಂತಳಿಕೆಯ ಮಾಟ್ಕೆಯ ಸಿಪ್ಪುಗಳೊಳ್ ತೀವಿ (ಪಂಪಭಾ. ೪-೮೭ ವ); ಪೊಡರ್ವ ಗಂಧದ ಸಿಪ್ಪು ಕರ್ಪೂರದ ನಾಳಿಗಳ ಪಿಡಿದು (ಪದ್ಮರಾ. ೮-೭); ಕರ್ಪೂರ ಕರಡಿಗೆ ಕೂಡಿದ ಗಂಧದ ಸಿ[ಪಾಕಾಂ. ಚಿ]ಪ್ಪು ಸಾದಿನ ವನಿನೀರ ಕುಪ್ಪಿಗೆಯಾಂತು (ಕುರಾಸಾಂ. ೨೧-೪೯). ೫. ಚೊರು; ಚೆಕ್ಕೆ : ಅಂತಾ ದಂತಿಘಟೆಗಳಂ . . . ಭಾರ್ಗವರ್ ಸುರಗಿಜಿವಂತಿಜಿಯೆ ಸೂಸುವ ಕೆನ್ನೆತ್ತರ್ ಕಲಬ್ದುದಿರ್ವ ಸಕ್ಕದ ಸಿಪ್ಪುಗಳುಂ ಸಿಡಿಲ್ದು ಜೀಜೀಳ್ಳ ಕೋಟ್ಮಳುಮಗುರ್ವಂ ವಡೆಯೆ (ಪಂಪಭಾ. ೧೦-೯೩ ವ). ೬. ಒಂದು ಬಗೆಯ ವಾದ್ಯ : ಪಟವದ ತಿವಳಿಯ ಜುಂಕದ ಮೊಳಸಿನ ಜೇಕಿರದ ಸಿವಿರ ಸಿಪ್ಪಿನ ಲಯದಿಂದೆಬಲದೆ ಕುಣಿದರ್ ಕೆಲಬರ್ (ಅಜಪು. ೫-೩.೨). ಚಿಂಪಿ : ೧. ''ಜಲಶುಕ್ತಿ = ಸಣ್ಣ ಚಿಂಪಿ'' (ಗಂಗಾಮ. ೧೩೦). ಚಿಂಪೆ : ೧. ''ಮುಕ್ತಾಸ್ಫೋಟ – ಮುತ್ತು ಹುಟ್ಟುವ ಚಿಂಪೆ'' (ಗಂಗಾಮ. ೨೫೦). ಚಿಪ್ಪು : ೧. ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ (ತೋಳವಾ. ೯೫-೩.೭೭); ಸ್ವಾತಿಯುದಕದೊಳಾದ ಮೌಕ್ತಿಕವ್ರಾತಕಯ್ಯನೆ ಚಿಪ್ಪು (ಕುಮ್ಮಾಕ. ೮-೩); ಜಲಬಿಂದು ಚಿಪ್ಪಿಂದಲೊಡದು ಸಿಡಿವ ಮುತ್ತುಗಳೆನಲೊಪ್ಪಿದುದು (ಕಂಸವ. ೫-೪೫). ೨. ಪೊಡೆದೊಡೆ ಲೌಡಿಯಿಂ ಕೊಳಿಯೊಡನೆ ತಲೆಯೊಡೆದು ಚಿಪ್ಪುಗಳೇಳ್ವವು (ಕುರಾಸಾಂ. ೧೩-೧೦೦). ೪. ಲೇಪನ ಚಿಪ್ಪುಗಳನು ಕರದಿ ಪಿಡಿದು ಪುಷ್ಪಗಂಧಿಯರು (ಅಂಜಚ. ೮-೪೮). ೫. ಉರವನೆಚ್ಚನು ಜರಿಯೆ ಜೋಡಿನ ಚಿಪ್ಪು ದೆಸೆದೆಸೆಗೆ (ಕುಮ್ಮಾಕ. ೪-೩). ೬. ಹೊರಆವರಣ; ಮೇಲ್ಮೈ: ಬೆಂಗಡೆಯೊಳ್ ಮೂಡಿದ ಬಲ್ಲೆಯದಿಂ ಬಲುಚಿಪ್ಪಂ ಜೋಡಿಸಿದಾ ಸೀಸಕಮಂ ಹಱಿದು (ಜಯಾ. ೬-೩೭); ತಪ್ಪು ನೆಪ್ಪುಗಳ ಚಿಪ್ಪನೊಡೆದು ತೆಗೆದಪ್ಪಿದವನೆ ಬಲ್ಲ (ನಲಮು. ೩೮-೮). ೮. ಬಾಳಹಣ್ಣಿನ ಹಣಿಗೆ : ಹತ್ತುಬಾಳೆಯ ಹಣ್ಣಿರುವ ಒಂದು ಚಿಪ್ಪಿನಲ್ಲಿ ಚಿಪ್ಪೆಂಬ ಹನ್ನೊಂದನೆಯ ವಸ್ತುವಿಲ್ಲ (ಧನ್ಯಾಲೋ. ೬೯ ಅಡಿಟ). ಸಿಂಪಿ : ೧. ಸಿಂಪಿಯ ಮುತ್ತಾಯಿತು ಅವಳ ಕಣ್ಣೀರು (ವಳಜೀ. ೪೫); ಮುತ್ತಿನ ಲಡಿಯ ಮೇಲೆ ಕಿಮ್ಮತ್ತು ಆಗತಕ್ಕದ್ದು. ಸಿಂಪಿಯ ಮುತ್ತು (ಮುಂಬಾ. ೧೩೯). ೯. ಮಕ್ಕಳಿಗೆ ಹಾಲು, ಔಷಧ ಮುಂತಾದುವನ್ನು ಕುಡಿಸುವ ಸಾಧನ; ಒಳಲೆ: ಕಾಫಿಗೆಂದು ಎಸರಿಟ್ಟ ಒಲೆಯು ಶಾಂತವಾಗಿದ್ದಿತು. ಮೇಲಿನ ನೀರು ಸಹ ಕುದ್ದು ಕುದ್ದು, ಸಿಂಪಿಯಷ್ಟು ಉಳಿದಿದ್ದಿತು (ಜಯಂತ. ೧೩೫); ತಲೆದಿಸೆಯಲ್ಲಿ ಔಷಧ ಹಾಕುವ ಸಿಂಪಿಯೊಂದಿತ್ತು (ಆಹೋಶ. ೨೪೬). ಸಿಂಪ್ಪು : ೧. ನಸುದೆಱೆಯುತ್ತಮರ್ದ ಪೊಸಮುತ್ತಿನ ಸಿಂಪಿನ ಸಂಪುಟಂಗಳಿಂ ನುಸುಳ್ದು ಸುವಾಣಿಯಾಗಿ ಪೊಱಪೊಣ್ಮುವ ಮುತ್ತಿನ ಮಾಲೆಯಂದದಿಂ (ಕಾದಂಪೂ. ೩೩೧); ಮುನ್ನೊಜಱುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿವ್ಪುದೆ ಸಿಂಪು ಅದು ಸ್ವಾತಿಗಲ್ಲದೆ ಬಾಯ್ದೆಱೆಯದು (ಬಸವ. ೯೦೯); ಮುತ್ತುಗಳು ಸಮುದ್ರದೊಳಗೆ ದೊಡ್ಡಸಿಂಪುಗಳಲ್ಲಿ ಹುಟ್ಟುತ್ತವೆ (ಮುಂಬಯಿ. ೫-೨). ೯. ಕಿಸಲಯವೆಸಳ ಮಾಣಿಕ್ಯದ ಸಿಂಪಿಂ ಫಳರಸದ ಪಾಲನೆಱೆದು . . . ಪುಂಡರೀಕದೆಸಳ ಬೆಳ್ಕಯ ಸಿಂಪಿಂ ಪರಿಮಳದ ರಸಮನೆಱೆದು (ಗಿರಿಕ. ೨-೭೧ ವ). ಸಿಂಪೆ: ೯. ''ಒಳಲೆ = ಕೂಸಿಗೆ ಹಾಲು ಹಾಕುವ ಸಿಂಪೆ'' (ಗಂಗಾಮ. ೪). Δ ಸಿರ್ಪು : ೧. ಸಿರ್ಪಿನ ಬಣ್ಣದ ಮುಗಿಲುಂ ನೇರ್ಪಡೆ (ಅಚ್ಯುಪು. ೮-೧೩). ೩. ಮಿದುಳ್ಗಳುಗುಗೆ ತಲೆಯ ಸಿರ್ಪುಗಳುದಿರೆ (ಅರ್ಧನೇ. ೪-೧೧೫); ಬಿಱಿದ ನಾಯಕರ ಶಿರದ ಸಿರ್ಪಂ ಬಿದಿರ್ಚುವ . . . ಶ್ರೀಮತು ಹೆಬ್ಬೆಯನಾಯಕಂ (ಕೋಲ್ಹಾಶಾ. ೧೫-೭೩; 1186). ೪. ಎಡದ ಕರದೊಳ್ಗಂದಂ ಪೂಮಾಲೆ ಸಿರ್ಪಿನ ಸೇಸೆ ಪೊಂಬಡಲಗೆಯೊಳೊಂದಂದಂ ಚೆಲ್ವಾಗೆ . . . ಒರ್ವಂ ಬಂದಂ ಪ್ರಗಲ್ಭಪುರೋಹಿತಂ (ಅರ್ಧನೇ. ೨-೧೯). ೧೦. ಸಿಗುರು; ಸಿಱುರು : ವಲ್ಲಭಪ್ರಣಯದಿಂ ಬೀರಸಿರಿ ವಿಗುರ್ವಿಸಿದ ಸನ್ನಣದ ವಜ್ರದ ಸಿರ್ಪುಗಳಿವೆನಿಸಿ ಮೆಯ್ಮವಿರ್ಗಳಿಡುಕುಜೊಳು ತುಱುಗಿ ತೋಱುವ ಬೆಮರ ಬಿಂದುಗಳುಂ (ವರ್ಧಪು. ೭-೪೧ ವ).

ಚಿಪ್ಪುಕೊಡು = (ಆಲಂ) ಬರಿದು ಮಾಡು ; ನಿಶ್ಶೇಷಗೊಳಿಸು : ಇದ್ದುದನ್ನೆಲ್ಲಾ ಅಣ್ಣತಮ್ಮಂದಿರು ಪೋಲುಮಾಡಿ ಮಕ್ಕಳಿಗೆ ಚಿಪ್ಪುಕೊಟ್ಟರು (ರೂಢಿ). ಚಿಪ್ಪುಚೀಱುಗಿಸು = ಚೊರುಚೊರುಮಾಡು; ಸಂಪೂರ್ಣವಾಗಿ ಧ್ವಂಸಮಾಡು: ಅವನಟ್ಟಿ ತೋಳ್ಗಳಂ ಚಪ್ಪರಿಸಿಕೊಂಡೆದ್ದು . . . ಚಿಪ್ಪುಚೀಱುಗಿಸಿತು ಸಕಲಪರಿವಾರಮಂ (ಜೈಮಿಭಾ. ೧೩-೫೦). ಚಿಪ್ಪುಚೀಱುಗು = ಚೊರುಚೊರಾಗು: ಬೆಟ್ಟ ಚಿಪ್ಪುಚೀಱುಗಿ ಸೂಜಿಯ ಮೊನೆ ಮುಱಿದು (ಸಭಾ. ಕ. II, ೨೨೭-೬೭). ಚಿಪ್ಪುಚೊರು = ಚೊರುಚೊರು: ಚಿಪ್ಪುಚೊರು ಮಾಳ್ಪೆನೆಸುತಲಪ್ಪಳಿಸಿದನು (ರಾವಣೋ. ೯). [ದೇ. II ತಮಿ. ಮಲ. ಚಿಪ್ಪಿ, ಚಿಮ್ಮು; ತುಳು. ಚಿಪ್ಪಿ, ತಿಪ್ಪಿ, ಸಿಪ್ಪಿ; ತೆಲು. ಚಿಪ್ಪ./ ಸಂ. ಶುಕ್ತಿ./ ಪ್ರಾ. ಸಿಪ್ಪಿ]

ಸಿಪ್ಪೆ (ನಾ). ೧. ಹಣ್ಣು, ಕಾಯಿ ಮೊದಲಾದುವುಗಳ ಮೇಲಿನ ಪದರ; ತೋಲು: ಫಲ ಒಳಗೆ ಪಕ್ವವಾಗಿಯಲ್ಲದೆ ಹೊಱಗಣ ಸಿಪ್ಪೆ ಒಪ್ಪಗೆಡದು (ಮಹಾದೇ ಬ. ೭೩-೧೫೩); ರಸವಡೆದ ನಿಂಬೆಹಣ್ಣಿನ ಹುಳಿಯನದಱ ಸಿಪ್ಪೆಯ ಸುಟ್ಟು ಬೂದಿಯಾಗಲಿ ಸುಣ್ಣದುದಕವಾಗಲಿ ಕೂಡಿ ಚೆನ್ನಾಗಿ ಕಾಸಿದೊಡೆ (ಸೂಪಶಾ. ೨-೩೭); ಆಲೂಗಡ್ಡೆ ಸಿಪ್ಪೆ ತೆಗೆಯುವ . . . ಸಲಕರಣೆಗಳು (ಅಡುಪ. ೩೪); ಸಿಪ್ಪೆ ತಿಂದವ ಸಿಕ್ಕಿಕೊಂಡ, ಹಣ್ಣು ತಿಂದವ ನುಣುಚಿಕೊಂಡ (ಗಾದ). ೨. ಒಣಗಿದ ಗಾಯ ಅಥವಾ ಹುಣ್ಣಿನ ಮೇಲಿನ ಪದರ ; ಹೆಕ್ಕಳೆ : 'ಸಿಪ್ಪೆಗಟ್ಟು' ಪರಾ. ೩. ಅಡಿಕೆ, ತೆಂಗು ಮುಂತಾದ ಫಲಗಳ ನಾರುನಾರಾದ ಹೊರಪದರ : (ತ). ೪. ಆವರಣ ; ಕವಚ: ಹೊರಚೆಲುವು ಸಿಪ್ಪೆ ಚಪ್ಪರಿಸಿ ಕೆಟ್ಟಿತು ಕಣ್ಣು (ನಡಬಂ. ೧೯-೩). ಸಿಪ್ಪೆಯ ಕಾಯಿ = ಸುಲಿಯದೆ ಇರುವ (ತೆಂಗಿನ) ಕಾಯಿ: ಲಲಿತ . . . ಕೋಣೆಯಲ್ಲಿಟ್ಟ ಸಿಪ್ಪೆಯ ಕಾಯಿ ಎರಡು ತಂದು ಮಂದಾರಳಿಗೆ ಮೂರು ಸುತ್ತು ಸುಳಿದು 'ಕಲ್ಲುಕುಟಿಕ'ನಿಗೆ ಹೇಳಿಕೊಂಡಳು (ಬಾಳ್ಮ. ೨೧). ಸಿಪ್ಪೆಹಿಪ್ಪೆಗಳಾಗು = ಸಂಪೂರ್ಣವಾಗಿ ರಸವಿಲ್ಲದಾಗು : ಹಸ್ತ ಮುಟ್ಟಿದ ರೂಪು ಸಿಪ್ಪೆಹಿಪ್ಪೆಗಳಾಯಿತು (ದೀಕ್ಷಾಬೋ. ೯೯-೫).

ಸಿಪ್ಪೆಗಟ್ಟು (ಕ್ರಿ). ಹೆಕ್ಕಳೆಯುಂಟಾಗು : ಗಾಯ ಸಿಪ್ಪೆಗಟ್ಟಿ ಮಾಯುವ ಸ್ಥಿತಿಗೆ ಬಂದಿದೆ (ರೂಢಿ). [ಸಿಪ್ಪೆ + ಕಟ್ಟು]

ಸಿಪ್ಪೆದೆಗೆ (ಕ್ರಿ). ಕಾಯಿ, ಹಣ್ಣು ಮೊದಲಾದುವುಗಳ ಮೇಲಿನ ಪದರವನ್ನು ಸುಲಿ: ಬದನೆಕಾಯಿಗಕ್ಕೆಯಂ ತಡಹಿ ಕೆಂಡದಿ ಸುಟ್ಟು ಸಿಪ್ಪೆದೆಗೆದು . . . ತುಪ್ಪವಿಟ್ಟಾ ಕಾಯನ್ನು ಮಡಗಿ ಬೇಯಿಸಿ (ಸೂಪಶಾ. ೪-೨೫). [ಸಿಪ್ಪೆ + ತೆಗೆ]

ಸಿಪ್ಪೆಸುಲಿ (ಕ್ರಿ). ೧. = ಸಿಪ್ಪೆದೆಗೆ : ಅವಳು ಸಿಪ್ಪೆಸುಲಿದ ಕತ್ತಳಿಹಣ್ಣೊಂದನ್ನು ನನಗೆ ಕೊಟ್ಟಳು (ರೂಢಿ). ೨. ಗಾಯ, ಹುಣ್ಣು ಮೊದಲಾದುವುಗಳ ಮೇಲೆ

ಹೆಕ್ಕಳೆಯುಂಟಾಗು: ರೋಗಿಯ ಮೈಮೇಲಿನ ಸಿಪ್ಪೆಸುಲಿಯುವವರಗೂ ರೋಗಿಯನ್ನು ಬೇರ್ಪಡಿಸಿಟ್ಟಿರಬೇಕು (ಕಲರೋ. ೬೪). [ಸಿಪ್ಪೆ + ಸುಲಿ]

ಸಿಫಾರಸು 'ಶಿಫಾರಸ್ಸು' ನೋ.

ಸಿಬರು 'ಸಿವುಜ್ಜು' ನೋ.

ಸಿಬಾರ 'ಸೀಯದರ' ನೋ.

ಸಿಬಿಕೆ 'ಸಿಬಿಗೆ' ನೋ.

ಸಿಬಿಗೆ, ಶಿವಿಗೆ, ಸಿಬಿಕೆ, ಸಿಬುಕ, ಸಿವಿಕೆ, ಸಿವಿಗೆ (ನಾ). ೧. ಅಂದಣ; ಪಲ್ಲಕ್ಕಿ: ವೇಸರಿಗಚ್ಚೆಗಳುಂ ಪಿಡಿಗಳುಂ ಸಿಬಗೆಗಳುಮನೇಱಿ . . . ಬರೆ (ವಡ್ಡಾರಾ. ೮೦-೧೦); ಕರಿತುರಗರಥಪ್ಪಗಳಂ ಸಿಬಿಗೆಯಂ ತಾನೇಱಿ ಬರುತಿರಲು (ಜ್ಞಾನಚಂ. ೧-೬೦). ಶಿವಿಗೆ : ೧. ಶಿವಿಗೆಯ ಕೆಲದೊಳ್ ತಾನುಂ ತುರಂಗಾರೂಢನಾಗಿ ಬರ್ಪಂದಮುಂ ಮಾಯೆಯುಂ ಮಾಡಿ (ಚಾವುಂಪು. ೬೦೪); ಶಿವಿಗೆಯಂ ಶ್ರೀನಾಥ ನೊಲ್ದೇಱಿದಂ (ಅನಂತ. ೯-೬೧); ಅರಸನನ್ನು ಒಂದು ಶಿವಿಗೆಯಲ್ಲಿ ಮಲಗಿಸಿ . . . ಕಳುಹಿಸಿ ಕೊಟ್ಟರು (ಚಿಕಾ. ೪೨೦). ಸಿಬಿಕೆ : ೧. ಅವರ್ಣನೀಯವಾದ ಸುಂದರ ಸಿಬಿಕೆಗಳಲ್ಲಿ ಕುಳಿತು ಯಾವತ್ತೂ ರಾಣಿಯರು ಹೊರಟರು (ತುಳಸೀ. ೧೬೮). ೨. ಹಣವನ್ನು ಹೊರುವ ಸಾಧನ; ಚಟ್ಟಿ: ಅವಳು ಸತ್ತರೆ ಸಿಬಿಕೆಯ ಮುಂದಿನ ಕಂಬಿಗೆ ನನ್ನ ಹೆಗಲನ್ನು ಕೊಡುವೆ (ಜಯಂತ. ೬೭೫); ಆ ಸುಡುಗಾಡಿನಲ್ಲಿ ಹರಿದ ಹೂಮಾಲೆಗಳು ಸೂರೆಯಾಗಿದ್ದವು . . . ಕಳಲಿದ ಸಿಬಿಕೆಗಳು ಬಿದ್ದಿದ್ದುವು (ಬದುಕು. ೧೫೧). ಸಿಬುಕ : ೧. ಮೊಗೆಮೊಗೆದು ಹೊನ್ನ ರಾಸಿಯ ನಿವಾಳಿಸಿ ಮತ್ತೆ ಪಗಲಾಣ್ಮ ತೇಜಮಂ ಜಱಿಪ ಸಿಬುಕದೊಳಿಟ್ಟು ಕೊಂಡೊಯ್ದನರಮನೆಗವಂ (ಪ್ರಭುಪು. ೪-೫೨). ಸಿವಿಕೆ : ೧. ಕಬಲ – ಕವಳ, ಶಿಬಿಕೆ – ಸಿವಿಕೆ (ಶಬ್ದಾನು. ೧೪೪ ಪ್ರಯೋ). ಸಿವಿಗೆ : ೧. ನಡತಂದರ್ ಸಂತಸದೆ ಪೊನ್ನ ಕಳಸದ ದಂತದ ಸಿವಿಗೆಗಳನೇಱಿ ಭೋಗಿಯರರೆಬರ್ (ಪಂಪಭಾ. ೯-೧೦೧); ಸುರಪತಿವಿರಚಿತಮಪ್ಪ ಸುದರ್ಶನಸಿವಿಗೆಯನೇಱಿ (ಪುಣ್ಯಾಸ್ರ.೧೦-೧೯ ವ); ಸಿಂಗರಂಬೆತ್ತ ಸಿವಿಗೆಯೊಂದು ನೆಲಕ್ಕಿಟ್ಟಿತರ್ಪುದುಂ (ರಾಮಾಶ್ವ. ೮೦-೨೮). [< ಸಂ. ಶಿಬಿಕಾ, ಶಿವಿಕಾ]

ಸಿಬಿರ (ನಾ). ಸೈನ್ಯ ಮುಂತಾದುವು ತಾತ್ಕಾಲಿಕವಾಗಿ ಬೀಡುಬಿಡುವ ಸ್ಥಳ; ಪಾಳೆಯ; ಠಾಣ್ಯ: ಉಯ್ಗೆ ಸಿಸುಗಳ್ ಸಿಬಿರಕ್ಕೆ ಬಲ್ದ ಭೂಪನಂ (ಪಂಪಭಾ. ೧೨-೧೧೮); ಶಬರಾವಳಿಯ ಬಲುಸಿಬಿರವದಱೊಳು ತೀವಿದಿಭಕುಂಭಜ ಸುಮೌಕ್ತಿಕರಾಶಿ (ಸಾಳ್ವಭಾ. ೫-೫); ಬಾವಿಯ ಹತ್ತಿರವೇ ಒಂದು ದೊಡ್ಡ ಸಿಬಿರ (ಗಂಗಾಸಾ. ೧). [< ಸಂ. ಶಿಬಿರ]

ಸಿಬಿರು 'ಸಿವುಜ್ಜು' ನೋ.

ಸಿಬುಕ 'ಸಿಬಿಗೆ' ನೋ.

ಸಿಬುರು 'ಸಿವುಜ್ಜು' ನೋ.

ಸಿಬುಜು 'ಸಿವುಜ್ಜು' ನೋ.

ಸಿಬ್ಬ 'ಚಿಬ್ಬು' ನೋ.

ಸಿಬ್ಬಂದಿ, ಶಿಬಂದಿ, ಶಿಬ್ಬಂದಿ (ನಾ). ಒಬ್ಬ ಮೇಲಧಿಕಾರಿಯ ಉಸ್ತುವಾರಿಯಲ್ಲಿ ಕಚೇರಿಯ ಕಾರ್ಯನಿರ್ವಹಿಸುವವರ ಗುಂಪು; ನೌಕರವರ್ಗ: ಇವರ ಕಾಲದಲ್ಲಿ . . . ಇಲಾಖೆಗಳ ಸಿಬ್ಬಂದಿಗಳು ಬಡಾಯಿಸಿದುವು (ಮಹಾಮಂ. II, ೧೧೧); ಉಪಾಧ್ಯಾಯರು ಮತ್ತು ಸಿಬ್ಬಂದಿಯ ವಾಸದ ಮನೆಗಳು (ಚಿಂಗೂಲಿ. ೪ ಮುನ್ನುಡಿ). ಶಿಬಂದಿ : ಶಿಬಂದೀಜನರಿಗೆ . . . ನಿರಂಕುಶಪ್ರಭುತ್ವವನ್ನು ನಡೆಯಿಸುತಾ (ಮಂಜುಳ. ೧೩); ಅಲ್ಲಿ ಬೇರೆ ಸರಕಾರ . . . ಸಾಹುಕಾರರು ಮತ್ತು ಅವರ ಶಿಬಂದಿಯವರನ್ನುಳಿದು ಇಷ್ಟೊ ಎಂದು ಹೇಳಲಾಗದು (ರಕ್ತರೂ. ೬೪). ಶಿಬ್ಬಂದಿ: ಆ ಇಲಾಖಾಶಿಬ್ಬಂದಿಯ ಒಬ್ಬ ಅಧಿಕಾರಿಯಿಂದ . . . ವಿಕ್ರಯಿಸಲ್ಪಡುವದು (ಗ್ರಾಮೋ. ೧೦೮); ಅಂಗರಕ್ಷಕರು ೮, ಶಿಬ್ಬಂದಿ ಜನ ೨೦೦ (ಗುರುದ. ೧೧). [<— ಪಾರ. ಶಿಬಂದೀ; ಮರಾ. ಶಿಬಂದೀ, ಸಿಬಂದೀ]

ಸಿಬ್ಬಂಬೊಯ್ 'ಚಿಬ್ಬಂಬೊಯ್' ನೋ.

ಸಿಬ್ಬತಿ 'ಸಿಬ್ಬದಿ' ನೋ.

ಸಿಬ್ಬದಿ, ಸಿಬ್ಬತಿ, ಸಿಬ್ಬಿದಿ, ಸಿಬ್ಬುದಿ (ನಾ). ೧. ನಾಚಿಕೆ; ಲಜ್ಜೆ; ಸಿಗ್ಗು: 'ಸಿಬ್ಬದಿಗೊಳು' ಪರಾ. ಸಿಬ್ಬತಿ : ೨. (ಅಗಲಿಕೆಯ) ದುಃಖ; ಸಂತಾಪ: ಕಾದಂಬರಿಯ ಅಗಲಿ ಬಂದ ಮನಸ್ಸಿನ ಸಿಬ್ಬತಿಯಿಂದ ಎಂದಿನ ರೀತಿಯಲ್ಲಿ ಮಾತಾಡಿಕೊಂಡಿರದೆ (ವಚಕಾ. ೯೦). 'ಸಿಪ್ಪಡಂಬಡೆ' ಪರಾ. ಸಿಬ್ಬಿದಿ : ೧.'ಸಿಬ್ಬಿದಿಗೊಳ್' ಪರಾ. ಸಿಬ್ಬುದಿ : ೧. 'ಸಿಬ್ಬುದಿಗೊಳು' ಪರಾ. ೩. (?): ಗುಬ್ಬಿ ಗುಂಭವನೊಡೆದು ಒಬ್ಬುಳಿಕೆಯಾಯಿತ್ತು ತನ್ನ ಸಿಬ್ಬುದಿ [ಪಾಠಾಂ. ಸಿಬ್ಬುದ್ದಿ, ಸುಬುದ್ದಿ]ಯ ಬಟ್ಟು ಕಬ್ಬಕ್ಕಿಯ ಹಿಂಡನೊಲ್ದದೆ ನಿಬದ್ದಿಯಾಗಿ ಅಲ್ಲಿಯೆ ಹೋಯಿತ್ತು ಲಿಂಗವನಱಿತು (ಸಕವ. ಕ. I. ೩೫-೧೩); ಬ್ರಹ್ಮನ ಹರಿದಾಟ ವಿಷ್ಣುವಿನ ಕಾಲಾಟ ರುದ್ರನ ಬಾಯಾಟ ಈ ತ್ರಿವಿಧ ಸಿಬ್ಬುದಿ[ಪಾಠಾಂ. ದ್ವಿ] ಹಱಿದು ಅಕ್ಕನ ಗುಟ್ಟಿನೊಳಗಾಗಬೇಡ (ಸಕವ. ಕ. I. ೩೫-೧೭). [?./ ತೆಲು. ಸಿಬ್ಬಿತಿ, ಸಿಬ್ಬೆತ]

ಸಿಬ್ಬದಿಗೊಳು, ಸಿಬ್ಬಿದಿಗೊಳ್, ಸಿಬ್ಬುದಿಗೊಳು (ಕ್ರಿ). ನಾಚಿಕೆಪಡು; ಲಜ್ಜೆಗೊಳಗಾಗು: ತಿಬ್ಬಳಿಯದಂಗಿ ದಿಬ್ಬಾ ವೀರಭಟವಿತತಿ ಸಿಬ್ಬದಿಗೊಳುತ್ತ ಸಿಡಿಮಿಡಿಗೊಂಬ ನೃಪಸಮಿತಿ (ಸಮ್ಮಾಕಾ. ೮-೩೩). ಸಿಬ್ಬಿದಿಗೊಳ್ : ಒಬ್ಬರ ಮೊಗವನೊಬ್ಬರು ನೋಡಿ ತಮ್ಮೊಳು ಸಿಬ್ಬಿದಿಗೊಂಡು ಚಿಂತಿಪರು (ಭರಚ. ೪-೨೯); ಒಬ್ಬರೊಬ್ಬರ ವೋಲ್ ನೋಡಿ ನಾಣ್ಬುವರತಿಸಿಬ್ಬಿದಿಗೊಂಡು ಜಾಱುವರು (ಭರಚ. ೨೫೫-೧೦೮). ಸಿಬ್ಬುದಿಗೊಳು : ಸೋತನ್ಯೆಗುಳರತ್ನವ ಸಿಬ್ಬುದಿ [ಪಾಠಾಂ. ಸಿಬುದ್ದಿ, ಸುಬುದ್ದಿ]ಗೊಳುತ್ತಿರಲು ಜೂಜುಗಾರರ್ನೆರೆದು . . . ಬೊಬ್ಬಿಡಲು (ಸಂಗಕಾ. ೯-೨೧). [ಸಿಬ್ಬದಿ + ಕೊಳು (< ಕೊಳ್)]

ಸಿಬ್ಬಲು 'ಚಿಬ್ಬಲ್' ನೋ.

ಸಿಬ್ಬದಿ 'ಸಿಬ್ಬದಿ' ನೋ.

ಸಿಬ್ಬಿದಿಗೊಳ್ 'ಸಿಬ್ಬದಿಗೊಳು' ನೋ.

ಸಿಬ್ಬು 'ಚಿಬ್ಬು' ನೋ.

ಸಿಬ್ಬುದಿ 'ಸಿಬ್ಬದಿ' ನೋ.

ಸಿಬ್ಬುದಿಗೊಳು 'ಸಿಬ್ಬದಿಗೊಳು' ನೋ.

ಸಿಬ್ಬೆ 'ಚಿಬ್ಬು' ನೋ.

ಸಿಮ (ನಾ). ತಣೆವು; ತಂಪು: ನಿನ್ನ ಕೈ ಮಹಾ ಸಿಮ, ನೀರಿನ ಪಸೆ ಒರೆಸಿಕೊಂಡಿಲ್ಲ (ಚಾಳಿಗ. ೯೧). [<— ತುಳು. ಶಿಮ, ಸಿಮ]

ಸಿಮಟಿ (ನಾ). ಒಂದು ಬಗೆಯ ಮರ: ಮರಗಳು: ಹೆಸವ . . . ಸುರಗಿ, ಉಡಿ, ಸಿಮಟಿ, ಸಣ್ಣಹೆಸರೆ (ನಮ್ಮಸು. ೨೩೬). [<— ತಮಿ. ಚಿಮಟ್ಟಿ, ಚಿಮುಟ್ಟಿ]

ಸಿಮಹಿಡಿ (ಕ್ರಿ). ತಣ್ಣಗಾಗು; ಆರು: ಅಪ್ಪಯ್ಯ ಎದ್ದಿದ್ದಾರೆಯ ನೋಡಮ್ಮ. ಕಾಫಿ ಸಿಮಹಿಡಿದು ಹೋಗಿದೆ (ಅನುಸ. ೩೬). [ಸಿಮ + ಹಿಡಿ (< ಪಿಡಿ)]

ಸಿಮಿಸಿಮಿ (ನಾ). (ಮುಖ್ಯವಾಗಿ ಸುಡುವ ಶಬ್ದವನ್ನು ಸೂಚಿಸುವ) ಒಂದು ಅನುಕರಣಪದ: ಪೂತ್ಕರಿಸಿದವು ಫಣಿ ವದನದಲಿ ದಳ್ಳುರಿಯ ಸಿಮಿಸಿಮಿಗಳ ತುಷಾರದ ಕಿಡಿಯ ತುಂತುಱಿನ . . . ಗರಳಾಕ್ಷರದ ಜಿಗಿಯಲಿ ಮಾತು ತೋಱಿತು ಬೆಸಸು ಬೆಸಸು (ಕುವಾಕ. ೨೫೫-೧೧); ಶ್ರಾವಣಸಂಧ್ಯಾಸಮಯಸಮೀರನು ಅಮಂದಗಮನದಿ ಬರುತಿಹನು . . . ಮರ್ಮರ ಸಿಮಿಸಿಮಿ ಸದ್ದನು ಮಾಡಿ (ಪಾಂಚಜ. ೨೩-೫).

ಸಿಮಿಸಿಮಿಗರೆ (ಕ್ರಿ). (ಸುಡುವುದರಿಂದ) ಸಿಮಿಸಿಮಿ ಎಂದು ಸದ್ದು ಮಾಡು: ಖರನ ಕರಕೋಪಾನಲನ ದಳ್ಳುರಿಗೆ ಸೀದವು ತಾರೆ ಸಿಮಿಸಿಮಿಗರೆದುದಂಬರಸಿಂಧು ಸುರಪುರ ಹೊಗೆದುದಗಲದಲಿ (ತೊರರಾ. ೩-೫೯-೬). [ಸಿಮಿಸಿಮಿ + ಕರೆ]

ಸಿಮಿಸಿಮಿತ (ಗು). ಸಿಮಿಸಿಮಿ ಎಂದು ಸದ್ದುಮಾಡುವ: ವಿತತಪಟುನಟನ ವಿಘಟಿತಜಟಾಪಟಲಗಳಿತಗಂಗಾತರಂಗಸೀಕರನಿಕರಸಿಮಿಸಿಮಿತ ನಿಟಲತಟವಟು ನಯನಶಿಖಿಶಿಖೋದ್ದಾಮಧೂಮರೇಖಾರಚಿತ (ರಾಜಶೇ. ೧೩-೫೪ ವ).

[ಸಿಮಿಸಿಮಿ + -ತ]

ಸಿಮಿಸಿಮಿಸು (ಕ್ರಿ). = ಸಿಮಿಸಿಮಿಗರೆ: ಉರಿಯೊಳು ಕದಳಿಗಳು ಸಿಮಿಸಿಮಿಸೆ (ನಳಚ. ೬-೭); ನೊರೆಗಟ್ಟಿ ಸಿಮಿಸಿಮಿಸಿ ನಿಂದಿರುವ ನೆತ್ತರನು ಕೊಡಲಿಯಲುಗಿಂದಿಕ್ಕಿ . . . ಮತ್ತಮಾರ್ದಿಕ್ಕುವನು (ಶಕಾರ. ೮೩). [ಸಿಮಿಸಿಮಿ + -ಇಸು]

ಸಿಮೆಂಟು (ನಾ). ನೆಲಕ್ಕೆ ಸಾರಣೆ ಮಾಡಲು, ಇಟ್ಟಿಗೆ ಅಥವಾ ಕಲ್ಲಿನ ಗೋಡೆಗಳನ್ನು ಕಟ್ಟಲು ಬಳಸುವ, ಸುಟ್ಟ ಸುಣ್ಣಕಲ್ಲು ಮತ್ತು ಜೇಡಿ ಮಣ್ಣನ್ನು ಬೆರಸಿ ತಯಾರಿಸಿದ ಕಲ್ಲುಗಾರೆ : ತಾರ್ಸಿ ಸೆಜ್ಜೆ ಸಿಮೆಂಟು ಇತ್ಯಾದಿಗಳನ್ನು ಕುರಿತ ಪಾಂಡಿತ್ಯ ನನಗಿಲ್ಲ (ಚಂಗೂಲಿ. ೨); ಅವರವು . . . ಇಟ್ಟಂಗಿ – ಸಿಮೆಂಟುಗಳಿಂದ ಕಟ್ಟಲ್ಪಟ್ಟಿರುತ್ತವೆ (ಕೃಕಕ್ಕೆ. ೧೩೭). [<— ಇಂ. Cement]

ಸಿಮ್ಮನೂರ್ (ನಾ). ಒಂದು ಊರಿನ ಹೆಸರು: ಸಿಮ್ಮನೂರ ಕಿಳ್ಮನ್ ಅಣ್ಣುಗಿಯ ರಟ್ಟಿಗನ್ (ಎಕ. VIII, ಸೊರಬ. ೧೦-೧೩; ಸು. 800). [? + ಊರ್]

ಸಿಮ್ಮಿಸು (ಕ್ರಿ). ನೆಗೆಯುವಂತೆ ಮಾಡು; ಚಿಮ್ಮಿಸು: ನೆಗೆವ ಧೂಳಿಯಿಂ ತಾಂ ನಿಮಿರ್ದು ಸಿಮ್ಮಿಸಲ್ ಕೆನ್ನನೊದಗಿದವು ತುರಗಂ (ಚೀರಮ. ೧೧-೪೨). 'ಚಿಮ್ಮಿಸು' ಪರಾ. [ಸಿಮ್ಮು + -ಇಸು]

ಸಿಮ್ಮು (ಕ್ರಿ) ಚಿಮ್ಮು; ಹಾರು: ಕಾದ ಸುವರ್ಣಶಲಾಕೆಗಂದು ಕೂರ್ತಂಗಜಕಾರುಕಂ ಬಿಡದೆ ಸಿಮ್ಮುವ ಶೀತಲವಾಃ ಕಣಾಳಿಯೋಲ್ (ಉಡ್ಡಟ. ೭-೪೭); ಎಣ್ಣೆಸೆಯೊಳ್ಪಿಮ್ಮಿದಮೃತ ಕಣಮಿಸರಮೆನಲ್ಕೆಱೆದುದಮರ್ದ ತಾರಾನಿಚಯಂ (ಉಡ್ಡಟ. ೧೦-೩೦). 'ಚಿಮ್ಮು₂' ಪರಾ. [< ಚಿಮ್ಮು₁]

ಸಿಯಕೊಲ್ಲ (ನಾ). ಒಬ್ಬಾತನ ಹೆಸರು: ಶ್ರೀ ಗುಣ್ಡಣ್ಣಲಾ ಸಿಯಕೊಲ್ಲ ಅಸಿಉನ್ನತನ್ ಎನ್ಪೊನ್ ಕೆಳೀನಿತ್ತನ್ (ಎಕ. XVI, ತುಮಕೂ. ೯೫-೭; ಸು. 7ನೆಯ ಶತ).

[IP ಇದು 'ಸಿಯಕೆಲ್ಲ' ಎಂಬುದರ ಅಪಲಿಖಿತ]

ಸಿಯಗೆಲ್ಲ (ನಾ). ಒಬ್ಬಾತನ ಹೆಸರು: ಶ್ರೀಪುರುಷಮಾಹರಾಜರ್ಪ್ಪಥುವೀ ರಾಜ್ಯಂಗೆಯೆ ಸಿಯಗೆಲ್ಲರ್ ಮಱುಗರೆನಾಡುಮೂನೂಱುಮಾಳೆ (ಎಕ. XVI, ತುಮಕೂ. ೮೭-೭; 750); ಸ್ವಸ್ತಿಶ್ರೀ ಸಿಯಗೆಲ್ಲರಶರ ಆಳು ರಣಕೇತುಗಳ ಮಗನ್ ದೆವೆಯನೆಮ್ಮೋನ್ . . . ಸತ್ತಾನ್ (ಎಕ. XII, ಮಧ್ಯಗಿ. ೩೮-೧; ಸು.950). [< ಶ್ರೀ + ಕೆಲ್ಲ]

ಸಿಯಳಾಜಿ, ಶಿಯಳಾರ, ಶಿಳಜಿ, ಶಿಳಾಜಿ, ಸೆಳಜಿ (ನಾ). ೧. (ಪ್ರಾಚೀನ ಕರ್ನಾಟಕದ) ಒಂದು ರಾಜಮನೆತನದ ಹೆಸರು: ಕನ್ನವಾಡ ಗಂಗವಾಡ ಬಳಿಯವಾಡ ರೆರ್ನಾಡಾಳ ಸಿಯಳಾಜಿ ಸಾಮಿ ಸರ್ಬರಸ ಕೊಟೋರ್ (ಮೈಆ. ೧೫೨-೨; ೫೫೦). **ಶಿಯಳಾರ** : ೧. ಮಹೇಶ್ವ[ರ]ಂ ಶಿಯಳಾರವಂಶೋದ್ಭವಂ . . . ಸುವರ್ಣ್ಣಗರುಡಧ್ವಜಂ ವಿಮಳಕೀರ್ತಿ್ಧ್ವಜಂ (ಸೌಇ. XX, ೫೧-೧೦; 1077). **ಶಿಳಜಿ** : ೧. ಪ್ರಕಟಿಯಶಶಿಳಜಿವಿವಾಕರನುದಿಯಿಸಿದನಿಳೆಗೆ (ಸೌಇ. XX, ೭೧-೨೮; 1109). **ಶಿಳಾಜಿ** : ೧. ಶಿಳಾಜಿಕುಳಕಮಳಮಾರ್ತ್ತಣ್ಡಂ ಸಮರಪ್ರಚಣ್ಡಂ (ಸೌಇ. XX, ೧೭-೪೫; 1109). **ಸೆಳಜಿ** : ೧. ಭೀಮಬಲಂ ಸೆಳಜರ ಕುಲಕೀ ಮಹಿಯೊಳ್ ತಿಲಕದನ್ತೆ ಕಂಚಿಗನೆಂಬೋಂ (ಎಇ. IV, ೬೪-೬; 945); ಜೀಮೂತವಾಹನಾನ್ವಯಾಂಬರಶರಶ್ಚಂದ್ರ . . . ಸೆಳಜಿಕುಳಕಮಳಮಾರ್ತ್ತಂಡ (ಕೈಇ. II, ೧೨-೩೩; 1114). ೨. ಒಬ್ಬಾತನ ಹೆಸರು: ಭೀಮಬಳಂ ಸೆಳಜಿನೆಂಬ ಹೆಸರೆಸೆವರಸಂ (ಕೊಲ್ಕಾಶಾ. ೯-೪೬; 1170). 'ಶಿಲಾಹಾರ' ಪರಾ. [?]

ಸಿಯಾಳ 'ಸೀಯಾಳ' ನೋ.

ಸಿಯಿಮ್ಮ (ನಾ). ಒಬ್ಬಾತನ ಹೆಸರು : ಸನ್ನಿವಿಗ್ರಹಿ ಸಿಯಿಮ್ಮ (ಎಕ. VIII, ಸೊರಬ. ೪೭೭-೨೬; 991). [?]

ಸಿಯ್ಯನೆ 'ಸೀಯನೆ' ನೋ.

ಸಿರ್ 'ಸಿಜು' ನೋ.

ಸಿರ₁ (ನಾ). ತಲೆ; ಶಿರಸ್ಸು: ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯ ಸಿರದೊಳ್ (ಕಾದಂಬಿ. ೫೭೧); ಸಂಸಾರಸಾಗರ ಸಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ (ಬಸವ. ೮೯); ನಿಷಧಪತಿ ಸಿ[ಪಾಶಾಂ. ಶ]ರವ ನಸುಬಾಗಿದನು (ನಳಚ. ೫-೬).

[< ಸಂ. ಶಿರಸ್]

ಸಿರ₂ (ನಾ). ೧. ನರ; ನಾಡಿ: ಕವಿಗಳ್ ತೋರ್ಪೊಡೆ ನಿರ್ಮಾಂಸವಾಗಿ ಸಿರವ(ರೆಯ) ಸಮವಾಗಿ [ನೆರ]ನಿಲೆ . . . ದುಃಖಿತೆಯಕ್ಕುಂ (ಲೋಕೋಪ. ೧೧-೫೫); ಅವನ ಗಂಟಲ ಸಿರ ಬಿಗಿದು . . . ಕಣ್ಣೀರು ಸುರಿಸಿದನು (ಮುಂಬಯಿ. ೪-೭೫). ೨. (ಕೆಲವು ಹಣ್ಣುಗಳು ಹಾಗೂ ಎಲೆಗಳಲ್ಲಿರುವ) ನಾರು; ಎಳೆ: ಆಕೆಯ ಸುಣ್ಣ ತಂಬಾಕ ಶಿಕ್ಕುವ ಕ್ರಮವನ್ನಾಗಲೀ, ಎಲೆಗಳ ಸಿರಗಳನ್ನು ಕಿತ್ತುವ ನಯವನ್ನಾಗಲೀ ನೋಡಲು ಹತ್ತಿಪ್ಪತ್ತು ಚಿಕ್ಕಚಿಕ್ಕಮಕ್ಕಳು ಸುತ್ತಲೂ ನೆರೆಯುತ್ತಿದ್ದರು (ಗಂಮಾಯಿ. ೧೩೩). [ಸಂ. ಸಿರಾ]

ಸಿರ₃ 'ಶಿರಾ' ನೋ.

ಸಿರ₄ (ನಾ). ಒಂದು ಸ್ಥಳದ ಹೆಸರು: ಸ್ವಸ್ತಿಶ್ರೀ ಸಿರದ ದೆವಲೆಯರ ಮಗ ದಾವಣಗವುದದ ಮಹಾಜನಕ್ಕೆ ಕೊಟ್ಟದು ಶಾಲೆ (ಎಕ. VII, ಶಿಕಾ. ೪೫-೩೩; ಸು. 890?).

[?]

ಸಿರ₅ (ನಾ). ಕುದುರೆಯ ದೇಹದ ಒಂದು ಭಾಗ: ಎರಡುಂ ಕಿವಿಯೆಡೆಗಕ್ಕುಂ ಸಿರಮೆಂಬಭಿಧಾನ (ಅಶ್ವಶಾ. ೯-೫೧). [?]

ಸಿರಂಜಿ (ನಾ). ಒಂದು ಬಗೆಯ ಗಿಡ ಮತ್ತು ಅದರ ಬೇರು: ಸಿರಂಜಿ ಎಂಬುದು ಆ ಗಿಡದ ಬೇರು ಮತ್ತು ಆ ಬೇರಿನ ಎಲ್ಲ ಅದ್ದಕಡ್ಡಿ ಸಹ ನೂಲನ್ನು ಕೆಂಪುಬಣ್ಣ ಮಾಡುವುದಕ್ಕೆ ಬರುತ್ತದೆ. ಅದರಿಂದ ಅದರ ಬೇರುಗಳಿಗೆ ಸಿರಂಜಿ ಎನ್ನುತ್ತಾರೆ (ಕೃಪಕ್ರ. ೯೧). [?]

ಸಿರಂಟು 'ಶಿರಂಟು' ನೋ.

ಸಿರಂದೂಗು (ಕ್ರಿ). ತಲೆಯು ತೂಗಾಡು, – ಅಲುಗಾಡು: ಎಡೆಗೊಂಡೀ ಮುಪ್ಪುದೋಱಲ್ ನೆರೆ ನೆಗೆದು ಸಿರಂದೂಗಿ ಬೆನ್ ಬಾಗಿ (ರಕ್ಕಾಶ. ೩೮).

[ಸಿರ₁ + ತೂಗು₁ (< ತೂಂಕು₁)]

ಸಿರಂಬೊರೆ (ಕ್ರಿ). ತಲೆಗೆ ಲೇಪಿಸು, – ಹಚ್ಚು: ನೆಲಕಲೆವ ಮೇಲುದು ಸಿರಂಬೊರೆದ ಕಮ್ಮೆಣ್ಣೆ (ಚಲಪ. ೧೯-೨೪). [ಸಿರ₁ + ಪೊರ್₂]

ಸಿರಕಲು (ನಾ). ಸಣ್ಣ ಕೊರಕಲು: ಬುದ್ಬುದನಿಕರಗಳಿಂ ಕೊರಕಲದ ಸಿರಕಲದ ಪರಕಲಿಸಿ . . . ಚರಿಪ ಘಟಪಾನದಿಯ ನೋಡುತ್ತೆ (ದುರಪ. ೫೧-೩); ಒಂದು ಸಿರಕಲ ಕೂಡಿ ಅದರ ಗುಂಟ ಹರಿಯಿತು (ಮನಚಿ. ೧೩೬). [?]

ಸಿರಗಡಿಸು (ಕ್ರಿ). ತಲೆಯನ್ನು ಕತ್ತರಿಸುವಂತೆ ಮಾಡು; ಶಿರಚ್ಛೇದ ಮಾಡಿಸು: ಯೋಗಿನಿ ಪರಮೇಷ್ಠಿ ಸಿರಗಡಿಸಿದಳು (ದೇವಾಂಪು. ೨-೫೫೦).

[ಸಿರ₁ + ಕಡಿಸು (< ಕಡಿಯಿಸು₂)]

ಸಿರಗತ್ತಿ (ನಾ). ಒಂದು ಬಗೆಯ ಸಸ್ಯ: ಸೋಮಲತೆ, ಮಂಜಿಷ್ಠ, ಸಿರಗತ್ತಿ (ಮೈಪಿಗಿ. ೬೭-೧೩೬೦). [?]

ಸಿರಣವಟ್ಟ (ನಾ). ಮಲ್ಲಯುದ್ಧದ ಒಂದು ಪಟ್ಟು: ಎಸವ ಮುಹಗ್ಗಳಂ . . . ಚಟ್ಟು ಸಿರಣವಟ್ಟ ಬಾಹುದಣಿ ಖಿಮ್ಮರಿ ಕತ್ತರಿ ಖೋಡವಂಕುಶಂ ಸಸಿಕುವೆನಿಪ್ಪ ಜೆಟ್ಟಿಗನ ನಚ್ಚಿನ ಬನ್ನಣಮೊಪ್ಪೆ ಕಾದಿದರ್(?) (ಚಂದ್ರಪ್ರ. ೫-೭೮). 'ಸೀರಣ' ಪರಾ. [?]

ಸಿರತಾಳಿ (ನಾ). ಒಂದು ಬಗೆಯ ಉಡುಪ್ಪ: ನಾನಾಬಗೆಯ ದುಗುಲವ ವಿರಚಿಸುತಿಹ ಸೇಲಿಗದ ಸಿರತಾಳಿ ಜೋಡು ಪೈಠಣಿಗೆಗಳ ಹೊಲಿಗೆಯ ಗರುವ ಚಿಪ್ಪಿಗಗೇರಿಯಿಹುವು (ಕಂನವಿ. ೬-೫೫೫). [?]

ಸಿರನಿ (ನಾ). ದೇವರು ಅಥವಾ ಗುರುವಿನ ಹೆಸರಿನಲ್ಲಿ ಹಂಚುವ ಸಿಹಿಪದಾರ್ಥ: ಮುದುಕಿಯ ಗಂಗಾಯಾತ್ರೆಯಾದರೆ ಸಿರನೀ ಹಂಚುವುದಕ್ಕೆ ಒಂದೂಕಾಲುರೂಪಾಯಿ ಮುಡುಪಿಟ್ಟಿದ್ದೇನೆ (ಅಥಗಿ. ೯೧).

[<— ಪಾರ. ಶೀರೀನೀ; ಹಿಂ. ಸಿರನೀ; ಮರಾ. ಶಿರಾಣೀ, ಸಿರಾಣೀ]

ಸಿರಪೇಚು 'ಸಿರಪೇಷ್' ನೋ.

ಸಿರಪೇಷ್, ಶಿರಪೇಚ, ಶಿರಪೇಚು, ಶಿರಪೇಮು, ಸಿರಪೇಚು (ನಾ). ಕಿರೀಟ, ಪೇಟ, ಟೋಪಿ ಮುಂತಾದುವುಗಳ ತುದಿಗೆ ಅಲಂಕಾರಕ್ಕಾಗಿ ಅಳವಡಿಸಿದ ಮುತ್ತು ಮುಂತಾದುವುಗಳ ಕುಚ್ಚು; ತುರಾಯಿ : ನವರತ್ನಖಚಿತದ ಸಿರಪೇಷ್ ತುರಾಯಿಕಲ್ಲಿಯನು ಸರಸಿಜಮುಖಿಯೊರ್ವೆ ಪಿಡಿದು ನಿಂದಿರ್ದಳು (ಕಂನವಿ. ೨೪-೬೯). **ಶಿರಪೇಚ** : ಸಾವುಕಾರನ ತಿಜೋರಿಯಲ್ಲಿರುವ . . . ರತ್ನ ಕೆಚ್ಚಿದ ಶಿರಪೇಚ ಆಭರಣದ ಮೇಲೆ ನನ್ನ ಕಣ್ಣು ಕುಳಿತಿದೆ (ಕಳ್ಳಕಾ. ೪). **ಶಿರಪೇಚು** : "ಶಿರಪೇಚು-ತುರಾಯಿ" (ಜಾನಪೋ. ೪೬). **ಶಿರಪೇಷು** : ತುರಾದವರು ಹೂವಿನ ತುರಾಯನ್ನೂ ಕಲ್ಕಿಯವರು 'ಶಿರಪೇಷಿ' ನಂತಹ ಕುಚ್ಚನ್ನೂ ಉಪಯೋಗಿಸುವುದರಿಂದ ಇವರಿಗೆ ಈ ಹೆಸರುಗಳು ಬಂದಿವೆ (ಕರ್ಣಾಸಂ. ೨೪); ಆ ಕಾಲದಲ್ಲಿ ಆತನು . . . ದಿವ್ಯವಾದ

ವಜ್ರದ ಶಿರಪೇಚನ್ನು ಧರಿಸಿ ಮಂಡಿಸಿದ್ದನು (ಭಾರವೀ. ೧೫೭). **ಸಿರಪೇಚು** : ಬೆರಳಿಗುಂಗುರವಿಡಿಸಿ ಕೊರಳ ಪದಕವ ಹಾಕಿ ಸಿರಪೇಚು ತಲೆಗೆ ವಜ್ರರದು (ಕಾಡಪ. ೯). [<-- ಪಾರ. ಸರಪೇಚ್, ಸರಪೇಶ್; ಹಿಂ. ಸಿರಪೇಚ್, ಸಿರಪೇಶ್; ಮರಾ. ಸರಪೇಚ್]

ಸಿರಪೊಟ್ಟ 'ಶಿರಪೊಟ್ಟಲಿ' ನೋ.

ಸಿರಮಾಲೆ (ನಾ). ತಲೆಯ ಮೇಲೆ ಏಳುವ ಹುಣ್ಣು: ಈ ತ್ಕೆಲದಿಂ ಕಜ್ಜಿ, ಇಸುಬಿನ ಹುಣ್ಣು, ಊತ, ಪಳೇಹುಣ್ಣು, ಸಿರಮಾಲೆ, ಗಂಡಮಾಲೆ, ದನವಿನ ವ್ರಣ – ಇವೆಲ್ಲಾ ಮಾಣ್ಗುಂ (ಎಪ್ಪವಿ. ೬೯). [ಸಿರ + ಮಾಲೆ]

ಸಿರಸ್ತೇದಾರ 'ಶಿರಸ್ತೆದಾರ' ನೋ.

ಸಿರಾ 'ಶಿರಾ' ನೋ.

ಸಿರಾಪೆ 'ಶಿರಾದಿ' ನೋ.

ಸಿರಿ (ನಾ). ೧. ಸಂಪತ್ತು; ವೈಭವ: ಅಂಬರಚರರಾಜನ ಸಿರಿಯ ಪೆಂಪನಾಂ ನೆಜೆಯೆ ಪೊಗಲ್ವೆನೆಂಬವನೆ ಗಾಂಪಂ (ಶಾಂತಿಪು. ೩-೭); ಅನಿಮಿಷಚಾಪದಂತೆ ಸಿರಿ ಶಾರದನೀರದ ಕಾಂತಿಯಂತೆ ಯೌವನದೆಸಕಂ (ಪಂಚತಂ. ೫೯-೧೪); ಹರಿಯ ಕಾರುಣ್ಯಾಂಬುಧಿಯೆ ಸಿ[ಪಾಕಾಂ. ೨]ರಿ (ಸಳಚ. ೧-೧೭); ಹುಲ್ಲಿನ ಉರಿ, ಕನಸಿನ ಸಿರಿ ನಿಲ್ಲದು (ಗಾಡ). ೨. ಐಶ್ವರ್ಯದ ಅಧಿದೇವತೆ; ಲಕ್ಷ್ಮಿ: ಅದಂ ಪಬಿಕೆಯ್ದು ತೊಟ್ಟನುಬಿದಂತುಬಿದ ಮಹಾಪುರುಷರಜಿಯದುಬಿದರೆ ಸಿರಿಯಂ (ಕವಿಕಾ. ೩-೧೭೫); ತಾವರೆಯೆಸಲ್ಗಳ ನಡುವಿರ್ಪ ಸಿರಿಯುಮಾಲೆಯ ಕೆಲದೊಳ್ ನಸುಮುಸುಳ್ಗು ತೋರ್ಪಳ್ (ಪಂಪಭಾ. ೧-೪೦); ಪಾಲ್ಗಡಲೊಳಗೊಗೆದ ಸಿರಿಯೊಡನುದಯಿಸಿದ ಅಮೃತಕಳಾಧರ ನೆನಿಪ್ಪ ಚಂದ್ರನ ಕಿರಣಾವ್ಯತಮನೀಂಟಿ (ಪಂಚತಂ. ೨೨೫-೧೦); ತನಿಜವ್ಯನದ ಕಡುಚಲುಶಬರಿಯರು ಕಾಳರಾತ್ರಿಯ ಸಿರಿಗಳನಿಸಿದರು (ಪಾಳ್ಕಥಾ. ೧೬-೭); ಸಿರಿಯೊಲಿದರೆ ಐಶ್ವರ್ಯ, ಹರಿಯೊಲಿದರೆ ವೈಕುಂಠ (ಗಾಡ). ೩. ಚೆಲುವು; ಶೋಭೆ; ಸೊಬಗು: ಕಡುರಯ್ಯಂ ಬನದ ತೊಜೆಯ ಸಿರಿ ಧರಣಿಪತೀ (ಆದಿಪು. ೧೧-೬೭); ಮರುಳ್ಗುಂಬಿಯೊಂದಲರ್ದ ಪೊಂದಾವರೆಯ ಸಿರಿಗೆತ್ತು ಮೊಗಕೆಱಗೆ (ಪದ್ಮಪು. ೮-೪೭); ಸುತವಿನೋದದ ಸಿರಿಗೆ ದಿವಿಜರ ಪತಿಯು ಸಿರಿ ತೊತ್ತೆಂದು . . . ಉಚ್ಚಿದನು ಕಲಿವಾಂಡು ವಿಪಿನದಲಿ (ಸಂಭವ. ೧೭-೩). ೪. ಏಳಿಗೆ; ಅಭ್ಯುದಯ: ಆಕೆಯ ನಡುವಿನ ಬಡತನಮುಂ ಪಗೆವರ ಸಿರಿಯುಮೊಡನೊಡನೆ ಕೆಟ್ಟುವು (ಪಂಪಭಾ. ೧-೧೪೧ ವ); ಪೂರ್ಣಚಂದ್ರನ ಸಿರಿಯಂತೆ . . . ರುದ್ರಭಟ್ಟನ ಕವಿತಾರಸಂ ಮನಮನಿರ್ಕುಲಿಗೊಳ್ಳುದು ಸಜ್ಜನರ್ಕಳಾ (ಜಗವಿ. ೧-೧೭); ಸಂದಣಿಗಳಲಿ ಸ್ಮೆಗಲಿದರಂಬಿನ ಸಿರಿಯನುರವಣಿಸಿ (ಶುಷ್ಕಾಪ್ರೋ. ೧೫-೯೦). ೫. ಆಧಿಕ್ಯ; ಹೆಚ್ಚಳ: ನೋಡುತಂ ಬೆಜಗಾಗುತಲ್ಲಿ ಬಸವಣ್ಣನಿರೆ ಕೂಡೆ ಲೆಕ್ಕದ ಸಂಭ್ರಮಂ ಸಿರಿಯನುಗುಳುತಿರೆ (ಬಸರ. ೯-೬೭). ೬. ಹಿರಿಮೆ; ಶ್ರೇಷ್ಠತೆ: ಇಂದುಮುಖಿ, ಹೆಸರಿನ ಹುಸಿಗೆ ನಿನ್ನೆದೆಯ ಸಿರಿಯ ಮಾರದಿರು (ಚಿತ್ರಾಂಗ. ೩೭-೯೯೧).

ಸಿರಿಯ ಕರುಮಾಡ = ಲಕ್ಷ್ಮಿಯ ನಿವಾಸ; ಕಮಲ: "ಕೆಸರ್ಮಲ್ಲಿಗೆ, ಸಿರಿಯ ಕರುಮಾಡಂ, ತಾಮರೆ, ನೀರ್ವೂ – ಈ ೪ ಕಮಲಕ್ಕೆ ಪೆಸರ್" (ಕಶಪಾ. ೫೪-೧೭೫). **ಸಿರಿಯುಳ್ಳಂ** = ಐಶ್ವರ್ಯವಂತ; ಧನಿಕ: ಉರಗಪ ವಿಷಮೇಲೆಂದರುಂ ಸಿರಿಯುಳ್ಳರು . . . ಮೆಯ್ಯಲಿಯರ್ (ಧರ್ಮಾಮೃ. ೪-೧೯೭); ಸಿರಿಯೊಡೆಯಂ ಸಿರಿಯುಳ್ಳಂ (ಕಾವ್ಯಾವ. ೩೩೭). [< ಸಂ. ಶ್ರೀ]

ಸಿರಿಂಗೆಜೆ (ನಾ). ಒಂದು ಊರಿನ ಹೆಸರು; IP ಚಿತ್ರದುರ್ಗಜಿಲ್ಲೆಯ ಈಗಿನ ಸಿರಿಗೆರೆ: ಹೆದರಿಗಟ್ಟವುಂ ಕಾರಿಂಗೆಜೆಯಂ ಸಿರಿಂಗೆಜೆಯುಂ ಇಟ್ಟಿಗೆಯುಮನ್ತು ನಾಲ್ಕುಂ ಬಾಡವುಮುಂ (ಎಪ್ರ. XI. ಚಿತ್ರದು. ೭೬-೨೨; 937). [ಸಿರಿ + ಕೆಜೆ]

ಸಿರಿಕಂಟ (ನಾ). ಈಶ್ವರ; ಶಿವ: ಕೋಟಿಮೂವತ್ತೆರಳ್ಗಣನಾಯಕರ ಸಹಂ ಸಿರಿ [ಪಾಕಾಂ. ತಿ]ಕಂಟನೋಲಗಿವರು (ಸಂದಿಮಾ. ೫-೨೩). [< ಸಂ. ಶ್ರೀಕಂಠ]

ಸಿರಿಕಂಡ, ಸಿರಿಖಿಂಡ (ನಾ). ೧. ಒಂದು ಬಗೆಯ ಮರ; ಚಂದನವೃಕ್ಷ: ನಾಗಾಚಲದೊಳ್ ಸಿರಿಕಂಡಂ ಪುಟ್ಟುವಂತ (ಆದಿಪು. ೬-೨೮ ವ). ೨. ಶ್ರೀಗಂಧದ ಕೊರಡನ್ನು ತೇದು ತೆಗೆದ ಲೇಪನ ವಸ್ತು: "ಮಲಯಜಮಿರದದು ಬಾವನ್ನಮೆಂದು ಸಿರಿಕಂಡಮೆನಲ್" (ಕವಿಗಂ. ೫೫); ಅಗರುವ ಮೆಚ್ಚುವಚ್ಚ ಸಿರಿಕಂಡದೊಳಗ್ಗಲಿಸಿತ್ತು (ಪಂಪಭಾ. ೫-೩೦); ಕತ್ತುರಿಗಂಪು ಸಿರಿಕಂಡದ ತಿಳಿಗಂಪು (ಚಿಪು. ೩೭-೪೭). **ಸಿರಿಖಿಂಡ** : ೧. ಮರನನಜೀವಂತು ಬಲ್ಲರೆ ಸಿರಿಖಿಂಡವಂ (ಧರ್ಮಾಮೃ. ೧-೨೦೩.); ದುರುಳ ಕಾಷ್ಠಕ . . . ಶಬವ ಶೃಂಗರಿಸಿ ಸಿರಿಖಿಂಡದ ಕೊಬಡುಗಳಿಂದ ದಹಿಸಿದ (ಜೀವಂಸಾಂ. ೫-೭೭). ೨. ಸುಯ್ಯೆಲರೊಳು ಸಿರಿಖಿಂಡಕೆ ಪರಿಮಳ ಮುಯ್ಯಾನುತಿಮ್ಮಿಡಿ ಮಾಡಿ ರಯ್ಯಮೆನಿವ ಶಶಿಕಾಂತಸಣ್ಣಿಗೆ ಯಾಳಗೊಯ್ಯನರೆವರು ನಾರಿಯರು (ವರ್ಧಚ. ೧-೧೦೯). [< ಸಂ. ಶ್ರೀಖಂಡ]

ಸಿರಿಕಂಡವೆಟ್ಟು (ನಾ). ಶ್ರೀಗಂಧದ ಮರಗಳು ಬೆಳೆಯುವ ಪರ್ವತ; ಮಲಯ ಪರ್ವತ: ಬೇವು ಬೊಬ್ಬುಲಿಗಳಂ ತನ್ನಂತೆ ಮಾಬ್ಪ ಸಿರಿಕಂಡವೆಟ್ಟಿನೊಳ್ ಪುಟ್ಟಿಯುಂ (ಕಬ್ಬಕಾ. ೫೪). [ಸಿರಿಕಂಡ + ಬೆಟ್ಟು (< ಬೆಟ್ಟ)]

ಸಿರಿಕನ್ನೆ (ನಾ). ಒಂದು ಬಗೆಯ ಸಸ್ಯ: "ಸಿರಿಕನ್ನೆ ಮಧುಮೂಲಿಯಿನೆ ಹಣ್ಣೆ" (ಮಂಗರಾ. ೪೫-೪೬). [ಸಿರಿ + ಕನ್ನೆ]

ಸಿರಿಕಾಳಗಿಡ (ನಾ). ಕಟುವಾಸನೆಯುಳ್ಳ, ಒಂದು ಬಗೆಯ ಸಸ್ಯ; ಅಜಗಂಧಿ: (೬). [ಸಿರಿಕಾಳ + ಗಿಡ (< ಗಿಡು)]

ಸಿರಿಖಿಂಡ 'ಸಿರಿಕಂಡ' ನೋ.

ಸಿರಿಗಂದ (ನಾ). ಲಕ್ಷ್ಮಿಯ ಮಗ; ಮನ್ಮಥ: ವಾರಣಾಸಿಯೆಂಬ ಪುರದೊಳ್ನಾಥ ಕುಲಾಂಬರಚಂದ್ರಂ ಸಿರಿಗಂದಂಗೆಣೆಯೆನಿಪನಕಂಪಂ ಸುರಪರಿವೃಢನಮರಾವತಿಯೊಳು ಸುಖಮಿರ್ಪಂದದಿನಿರ್ಪಂ (ಜಯಕಾ. ೩-೧೬). [ಸಿರಿ + ಕಂದ]

ಸಿರಿಗಂಧ (ನಾ). ೧. = ಸಿರಿಕಂಡ ೧ : "ಚಂದನಂ, ಮಳಯಜಂ, ಶ್ರೀಖಂಡ(:)ಂ, ರೋಹಿಣೇದ್ರುಮ: – ಈ ೪ ಸಿರಿಗಂಧಂ" (ಹಲಾಯು. ೮೪-೬೯). ೨. = ಸಿರಿಕಂಡ ೨: ಕತ್ತುರಿ ಸಿರಿಗಂಧಗಳಣ್ಣು ರಾಮ ಕೃಷ್ಣರೊಳೆಸಗುಂ (ಜಗವಿ. ೬-೨೨); ಮೆಯ್ಯೊಳ್ ಪೂಸಿದ ಸಿರಿಗಂಧದ . . . ಮುಡಿದ ಕದಂಬಪ್ರಸೂನದ ಬೆರಕೆಗಂಪಿಗುರವಣಿಸಿ . . . ಎಱಗುವ ಮಧುಕರನಿಕರಂ (ಗಿರಿಕ. ೨-೧೦೫ ವ); ಪೂಸಿದ ಸಿರಿಗಂಧ ಕರಿಕಾದುದು (ಮೋಹತ. ೨೨-೧೭). [< ಸಂ. ಶ್ರೀಗಂಧ]

ಸಿರಿಗಂಪು (ನಾ). (ಶ್ರೀಗಂಧ ಮೊದಲಾದ) ಉತ್ಕೃಷ್ಟವಾದ ಸುವಾಸನಾ ದ್ರವ್ಯ: ತಾಪಕ್ಕಿಕ್ಕಿದ ಸಿರಿಗಂಪು ಪಣೆಯೊಳೆಸೆದುದು (ಚಂದ್ರಪು. ೮-೧೬); ಕೃಷ್ಣ ಕೈದೊಳೆದು ಮಿಟಾದ ಸಿರಿಗಂಪ ಕೈಕೊಂಡು ಕರ್ಪೂರಕೂಟವೀಟಿಕೆಯನು ಸವಿದು (ಮೋಹತ. ೧೪-೧೬). [ಸಿರಿ + ಕಂಪು]

ಸಿರಿಗಜ್ಜ (ನಾ). ಶ್ರೇಷ್ಠವಾದ ಕೆಲಸ; ಮಹಾಕಾರ್ಯ: ಮದವನೊತಗೂಡಿ ಮಧುನೃಪಂ ವಿಧಿವಿಲಾಸಕೆ ತನ್ನ ಕೈಂಕರ್ಯಮಂ ಸಲ್ಲಿಸುವ ಸಿರಿಗಜ್ಜದೊಳ್ ತೊಡಗಿ (ಶ್ರೀರಾಮಾ. ೪೩-೪೮೭). [ಸಿರಿ + ಕಜ್ಜ]

ಸಿರಿಗಣೆ (ನಾ). ಒಂದು ಬಗೆಯ ಉತ್ತಮವಾದ ರೇಷ್ಮೆಬಟ್ಟೆ: ಪೊಂಬಟ್ಟೆ ಸಿರಿಗಣೆ[ಪಾಕಾಂ. ೧೧] ಗುಜ್ಜರಾಷ್ಟ್ರದ ಪಟ್ಟೆ ವಾರಾಣಸಿಯ ದಸರಿಯ ಹೊತ್ತಿ ಸಿರಿವನ್ನ (ಬಸಪು. ೧೮-೨೬). [ಸಿರಿ + ಕಣೆ]

ಸಿರಿಗತ್ತಿ (ನಾ). ಒಂದು ಬಗೆಯ ಕತ್ತಿ: ಸಿರಿಗತ್ತಿ ಡೊಣೆಗತ್ತಿ ಕೊಂಗತ್ತಿ ಧರಿಸಿ (ಸೊಂದಣ. ೩-೧೧೧). [ಸಿರಿ + ಕತ್ತಿ]

ಸಿರಿಗನ್ನಡ (ನಾ). ಸಂಪದ್ಯುಕ್ತವಾದ ಕನ್ನಡಭಾಷೆ: ಮಂಗಳಮಯ ತಾನೆತ್ತಲು ನಾಡು ಸಿಂಗರದಾ ಸಿರಿಗನ್ನಡನಾಡು (ಹಂಗಳು. ೧೧-೧೩); ದೊರೆಕೊಳುಗೆ ಚರಶಾಂತಿ ; ಸಿರಿಗನ್ನಡಂ ಗೆಲ್ಗೆ ! (ಶ್ರೀರಾಮಾ. ೬-೧೫೫). [ಸಿರಿ + ಕನ್ನಡ]

ಸಿರಿಗನ್ನಡಿ (ನಾ). ಉತ್ತಮವಾದ ಕನ್ನಡಿ: ಸಿರಿಗನ್ನಡಿ ಕನ್ನಡಿಪುದಾದುದಿಂದು ಶ್ರೀಯಂ (ಆದಿಪು. ೬-೧೦); ಬೀರಸಿರಿಯ ಸಿರಿಗನ್ನಡಿಯ ಪಿಡಿಗೆ ಪಡಿಯಾದ ಪಿಡಿಯನಡುವಿನೊಳಿಂ (ವರ್ಧಪು. ೧೮-೫ ವ). [ಸಿರಿ + ಕನ್ನಡಿ]

ಸಿರಿಗಾಳು (ನಾ). ಒಂದು ಊರಿನ ಹೆಸರು: ತಸ್ಯ ಕ್ಷೇತ್ರಸ್ಯ ಸೀಮಾ ಪೂರ್ವೋತ್ತರ ದಿಗ್ಭಾಗೇ ಸಿರಿಗಾಳುಗ್ರಾಮಸೀಮ್ನಿ (ಎಪ್ರ. XI, ದಾವಣ. ೬೬-೩೧; 694). [ಸಿರಿ + ಕಾಳು]

ಸಿರಿಗುವರ (ನಾ). = ಸಿರಿಗಂದ: "ಕಾಮಂ ಸಿರಿಗುವರಂ ರತಿಮನೋಹರಂ ಮಧುಮಿತ್ರಂ" (ಪಪುಕೋ. ೫-೨೮). [ಸಿರಿ + ಕುವರ]

ಸಿರಿಗೂಡು (ಕ್ರಿ). ಲಕ್ಷ್ಮೀಸಮೇತವಾಗಿರು; ಲಕ್ಷ್ಮಿಯೊಡನೆ ಇರು: ಸಿರಿಗೂಡಿ ನರಹರಿ ಶೇಷತಲ್ಪದೊಳಾಗ ಹರುಷದೆ ರಾಜಿಸುವಂತೆ (ಕಂನವಿ. ೮-೯೪).

[ಸಿರಿ + ಕೂಡು$_1$]

ಸಿರಿಗೆಡು (ಕ್ರಿ). ಐಶ್ವರ್ಯವು ಕಳೆದುಹೋಗು; ಬಡತನ ಬರು: ನಾವು ಸಿರಿಗೆಟ್ಟು ಬಡವರಿದ್ದಪೆವೆಮ್ಮ ಇರವಂ ಸುಡು (ಬಸಪು. ೨೯-೨೮). [ಸಿರಿ + ಕೆಡು$_1$]

ಸಿರಿಗೇಡಿ (ನಾ). ಸಂಪತ್ತನ್ನು ಕಳೆದುಕೊಂಡವನು; ಐಶ್ವರ್ಯವನ್ನು ನೀಗಿಕೊಂಡವನು: ಈ ಸಿರಿಗೇಡಿ ಚಾರುದತ್ತನು ನಾನು ಹೇಳಿದರೆ ಅನ್ನುವುದಿಲ್ಲ (ಮುಂಬಯಿ. ೬-೨೧೮); ಸಿರಿಗೇಡಿ ನೀನೆಲ್ಲಿ ಕೂತಿದ್ದೇಳ (ಲೋಕಗೀ. ೬೯). [ಸಿರಿ + ಕೇಡಿ$_1$]

ಸಿರಿಗೇಡುಗ (ನಾ). ಐಶ್ವರ್ಯವನ್ನು ಹಾಳುಮಾಡುವವನು; ಸಂಪತ್ತನ್ನು ನಾಶಗೊಳಿಸುವವನು: ನೋಡಿದ್ಕೆ ಬೊಮ್ಮ ನೀಂ ದನುಜರ್ಗೆ ಮುಂಬರ್ಪ ಕೇಡನಱಿಯದೆ ವರವನಿತ್ತೆಯವರಿವರ ಸಿರಿಗೇಡುಗರಲಾ (ಚಿಬಪು. ೪೧-೩೭).

[ಸಿರಿ + ಕೇಡುಗ]

ಸಿರಿಗೋದು (ನಾ). ಒಂದು ಊರಿನ ಹೆಸರು: ಪೂರ್ವೋತ್ತರ ದಿಭಾ(ಗ್ಭಾ)ಗೇ ಸಿರಿಗೋದುಗ್ರಾಮ ಸೀಮ್ನಿ (ಇಆ. VI, ೯೩-೩೧; 695). [?]

ಸಿರಿತನ (ನಾ). ಐಶ್ವರ್ಯ; ಶ್ರೀಮಂತಿಕೆ: "ಈಶ - ಐಶ್ವರ್ಯೇ, ಸಿರಿತನದೊಳ್" (ಕಾಶಕ್ಯ. ೧೭೦); ನನಗೆ . . . ಸಿರಿತನ ಬೇಕೆಂದು ದೇವರಲ್ಲಿ ಬೇಡಿಕೊಂಡವನಲ್ಲ (ಪದ್ಮಸ. ೨೨೩). [ಸಿರಿ + - ತನ]

ಸಿರಿತಾಳೆ (ನಾ). ಒಂದು ಬಗೆಯ ತಾಳೆಯ ಮರ; ಶ್ರೀತಾಳೆ: ಕಮ್ಮರದಾರ ಕೇರ ನೇಳಲ ಸಿರಿತಾಳೆಯಿಂಗುಳದ ನೆಲ್ಲಿಯ ನೀವದ ಸೋಲೆಯಾಲದಿಂ . . . ಕಟ್ಟಲಿಸುತಿರ್ದುದು ಕಾನನವೆತ್ತ ನೋಟ್ಪೊಡಂ (ಲೀಲಾವ. ೬-೨೧). [< ಸಂ. ಶ್ರೀತಾಲ]

ಸಿರಿತುಪ್ಪೆ (ನಾ). ಧಾನ್ಯವನ್ನು ಶೇಖರಿಸಿಡುವ ದೊಡ್ಡ ಗಳಗೆ, — ತೊಂಬೆ: ನೂರುಮಡಿ ಭತ್ತ ಆ ಬಾಕಿಮಾರಿನಿಂದ ಪ್ರತಿವರುಷ ಭಟ್ಟರ ಮನೆಯ 'ತುಪ್ಪೆ'ಯಲ್ಲಿ ಬಿದ್ದೇ ತೀರುತ್ತದೆಂದರೆ ಅಚ್ಚರಿಪಡಬೇಕಾಗಿಲ್ಲ. ಭಟ್ಟರ ಮನೆಯಲ್ಲಿ 'ಸಿರಿತುಪ್ಪೆ'ಯನ್ನೇ ಹಾಕಬೇಕು. ಅಷ್ಟೊಂದು ಭತ್ತ ಹಿಡಿಸಬೇಕಲ್ಲ? ಒಂದಲ್ಲ, ಜೋಡು 'ಸಿರಿತುಪ್ಪೆ' ಹಾಕುತ್ತಿದ್ದರು (ದಂಬನಾ. ೧೨). [ಸಿರಿ + ತುಪ್ಪೆ (< ತೊಂಬೆ$_2$)]

ಸಿರಿತುಳಸಿ (ನಾ). ಶ್ರೇಷ್ಠವಾದ ತುಳಸಿ; ಶ್ರೀತುಳಸಿ: ಮುಟ್ಟಬೇಡ . . . ಸಿರಿತುಳಸಿವನಮಾಲೆಯಿಂದೊಪ್ಪುವವರ (ಕನಕ. ೮೫-೨). [< ಸಂ. ಶ್ರೀತುಲಸೀ]

ಸಿರಿದರ 'ಸೀಯದರ' ನೋ.

ಸಿರಿದಾರ 'ಸೀಯದರ' ನೋ.

ಸಿರಿದಿನ (ನಾ). ಅಭ್ಯುದಯದ ಕಾಲ; ಉತ್ಕರ್ಷದ ಕಾಲ: ಎಲೆ ಜೀವ, ಬಾಳಿದವು ಬಹುಕಾಲ ಇಲ್ಲಿ, ಹೊಳೆವ ಸಿರಿದಿನಗಳಲಿ, ದುರ್ದಿನಗಳಲ್ಲಿ (ಇಂಗೀತ. ೯೬-೬).

[ಸಿರಿ + ದಿನ]

ಸಿರಿದೇವಪ (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀ ಆತ್ತೆಯರ ಕೇಸಣ್ಣನ ಮಗನ್ ಸಿರಿದೇವಪ ಕೊಟ್ಟದು (ಎಕ. VII, ಶಿಕಾರಿ. ೪೫-೭೦ ; ಸು. 890?).

[ಸಿರಿ + ದೇವ + ಅಪ (< ಅಪ್ಪ$_1$)]

ಸಿರಿದೇವಿ (ನಾ). ಐಶ್ವರ್ಯದ ಅಧಿದೇವತೆ; ಲಕ್ಷ್ಮಿ: ಹರಿದರುಶನಕಾಗಿ ನಾರದರು ಬರಲು ಸಿರಿದೇವಿ ಹೊಱಗಿನ ಬಾಗಿಲಲ್ಲಿದ್ದಳು (ಪುರಂದ. ೩-೫೦ ಪಲ್ಲವಿ); ಸಿರಿದೇವಿ ಪಾದಪದ್ಮವನೊತ್ತೆ ಭೋಗೀಶ್ವರಭೋಗತಲ್ಪದೊಳೆಸೆವ ಹರಿಯ ಕಂಡು (ಕಂನವಿ. ೫-೩೨). [< ಸಂ. ಶ್ರೀದೇವೀ]

ಸಿರಿಧರ (ನಾ). ಲಕ್ಷ್ಮಿಯನ್ನು ಹೊಂದಿರುವವನು; ವಿಷ್ಣು: ಸಿರಿ [ಪಾಠಾಂ. ಶ್ರೀ]ಧರನು ಸೋಮೇಶ್ವರನನರ್ಚಿಸ ಬರುತ (ಬಸಪು. ೪೩-೪೧); ಸಿರಿಧರ ಪಶ್ಚಿಮರಂಗನೀ ಪುರದಲ್ಲಿ ಸ್ಥಿರವಾಗಿ ನೆಲಸಿದ ಬಗೆಯ ಹರುಷದೊಳೊರೆವೆನು (ಕಂನವಿ. ೫-೧೧). [< ಸಂ. ಶ್ರೀಧರ]

ಸಿರಿನುಡಿ (ನಾ). ಶ್ರೇಷ್ಠವಾದ ಮಾತು : ಕನ್ನಡತಾಯಿಯ ಸಿರಿನುಡಿಭೇರಿಯ ಬಾರಿಸು ಮೊಳಗಿಸು ಗೆಳೆಯ (ಇಂಚಾಪ. ೨೪೪-೧೦೮); ಅವನ . . . ಕೆಲವು ಸಿರಿನುಡಿಗಳಾದರೂ ಹತ್ತನೆಯ ಶತಮಾನದ ಸಾಲಿಗೆ ಬಂದಿದ್ದಿರಬಹುದು (ಸಾಹಿಸ. ೩೬). [ಸಿರಿ + ನುಡಿ$_2$]

ಸಿರಿಪಚ್ಚೆ 'ಸಿರಿವಚ್ಚೆ' ನೋ.

ಸಿರಿಪಟ್ಟಿ (ನಾ). ಒಂದು ಊರಿನ ಹೆಸರು: ಸಿರಿಪಟ್ಟಿನಾಮಗ್ರಾಮೇ ಪಶ್ಚಿಮ ಸ್ಯಾಂದಿಶಿ (ಇಆ. VII, ೨೧೪-೩೪; 10ನೆಯ ಶತ). [ಸಿರಿ + ಪಟ್ಟಿ$_1$]

ಸಿರಿಪದ (ನಾ). ಮಂಗಳಕರವಾದ ಚರಣ; ಪೂಜ್ಯಪಾದ: ಪ್ರವಹಿಸಲಿ ಮುಗಿದ ಕೈಮೈನಳಿಗೆಯಿಂದೆಲ್ಲ ನಮನಂಗಳೆನ್ನವಾ ಸಿರಿಪದದ ತಡಿಗೆ (ಮಲೆದೇ. ೨೧-೨).

[< ಸಂ. ಶ್ರೀಪದ]

ಸಿರಿಬೀಡು 'ಸಿರಿವೀಡು' ನೋ.

ಸಿರಿಮಂಚ (ನಾ). ಶ್ರೇಷ್ಠವಾದ ಮಂಚ: ಇರ್ವರರಸಿಯರುಂ . . . ಅರಸನ ಸಿರಿಮಂಚದೊಳ್ ಗಾಢಾಲಿಂಗನಂಗೈದು ಮಱೆದೊಱಗಿರ್ದರ್ (ಪಂಚತಂ. ೧೯೫-೩); ಬಂದರಸಂ ಸಿರಿಮಂಚಮನಳಂಕರಿಸಿ ಕುಳ್ಳಿರ್ಪುದುಂ (ಅರ್ಧನೇ. ೧-೧೧೧ ವ); ಇನಿಯಂ ಪೋದನಿತು ಬೇಗಮಂ ಸೈರಿಸಲಾಱದೆ ಪರಿತಂದು ಸೆಜ್ಜೆವನೆಯ ಸಿರಿಮಂಚದೊಳ್ ಕುಳ್ಳಿರ್ದು (ಗಿರಿಕ. ೨-೧೦೫ ವ). [ಸಿರಿ + ಮಂಚ]

ಸಿರಿಮರ 'ಸಿರಿವರ$_1$' ನೋ.

ಸಿರಿಮಾಳ್ಕೆ (ನಾ). ಸುಂದರವಾದ ರಚನೆ: ಸಮೆದುದಧ್ವರಶಾಲೆ . . . ರಮಣೀಯಗಂಧಬಂಧುರದೇವ ಕಾನನನಿಕೇತನದ ಸಿರಿಮಾಳ್ಕೆಯಿಂದೆ (ಶ್ರೀರಾಮಾ. ೧೦-೨೭೧). [ಸಿರಿ + ಮಾಳ್ಕೆ (< ಮಾಟ್ಕೆ)]

ಸಿರಿಮುಡಿ (ನಾ). ೧. ಚೆಲುವಾದ ತುರುಬು; ಅಂದವಾದ ಮುಡಿ: ಮಾನಿನಿಯ ಸಿರಿಮುಡಿಯ ಕಟ್ಟುವ ಸೂನ ಮುಡಿಸುವ ವರಕಟಾಕ್ಷಕೆ ಕಾಡಿಗೆಯನಿಡುವ ಏನ ಹೇಳಿದ ಮಾಡಬಲ್ಲೆನು (ಕುವ್ಯಾವಿ. ೧-೩೧); ನೇವರಿಸಿದರು ಸೆಳ್ಳುಗುರ್ಗಳಲಿ ಶಶಿಮುಖಿಯ ಸಿರಿಮುಡಿಯ (ತೊರರಾ. ೧-೧೪-೧೩); ಅಚ್ಚರವೆಣ್ಣುಗಳಿಗೆ ಸಿರಿಮುಡಿಗಲರೀವೊಲಂಬರಕಡರಿದ ಮರಗಳೊಪ್ಪಿದುವಡಕೆಗಳ (ಕಂನವಿ. ೫-೭೭). ೨. ಪವಿತ್ರವಾದ ಶಿರಸ್ಸು: ಕಂಪುಳ್ಳ ಸಂಪಗೆಯ ಪೂಗಳಂ ತಿಱಿತಂದು ಹೆಂಪಿನಿಂ ಶಶಿಧರನ ಸಿರಿಮುಡಿಗೆ ಬೇಕೆಂದು (ಬಸರ. ೧-೨೮); ಸಿರಿಮುಡಿಯೊಳೆಸೆವ ಪೆಱೆಯಂ ತೆಗೆದು . . . ವಿಟಜಂಗಮಾಕೃತಿಯನಾಂತು (ಪದ್ಮರಾ. ೫-೪೨). ೩. ಕಿರೀಟ; ಮಕುಟ: ಸಿರಿಮುಡಿಯ ಮುಸುಕಿನ ರಾಯರಿದ್ದರು ಬಯಲ ಬಿಂಕದಲಿ (ಕುವ್ಯಾಅ. ೧೪-೭); ಇಲ್ಲಿಯ ಸರಾಫಕಟ್ಟೆಯಲ್ಲಿ ಭೂತಕ್ಕೆ ಒಂದು ಬಂಗಾರದ ಸಿರಿಮುಡಿ ಮಾಡಲಿಕ್ಕೆ ಹಾಕಿದ್ದಾರೆ (ಒಡ್ಡಿಉ. ೨೧). [ಸಿರಿ + ಮುಡಿ$_2$]

ಸಿರಿಮುದ್ದ (ನಾ). ಒಬ್ಬಾತನ ಹೆಸರು: ಸಿರಿಮುದ್ದನೆಂಬನಾತನ ಪಿರಿಯ ಮಗಂ ನೆಗಟ್ಟಂ (ಸೌಇಇ. XI-i, ೪೫-೬; 980). [ಸಿರಿ + ಮುದ್ದ$_1$]

ಸಿರಿಮುರಿ (ನಾ). ಬಾಗಿರುವ ಒಂದು ಬಗೆಯ ಆಯುಧ: ಕಡಿತಲೆ . . . ಸಿರಿಮುರಿ ಕಕ್ಕಡೆ ಚುಂಚುಲೆ ರವಿಹಾಸ ಉರಿಯನುಗುಳುತಿರ್ದುವಲ್ಲಿ (ಭರಚ. ೨೦-೧೩೪).

[ಸಿರಿ$_7$ + ಮುರಿ$_3$ (< ಮುರಿವು)]

ಸಿರಿಮೆಯ್ (ನಾ). ೧. ಕಾಂತಿಯುಕ್ತವಾದ ದೇಹ; ಶೋಭಾಯಮಾನವಾದ ಶರೀರ : ಪರಮಭಾಗವತರ ಸಿರಿಮೆಯ್ಯೊಳ್ತೊಳಪ ವಿಮಲೋರ್ಧ್ವಪುಂಡ್ರಚ್ಛಾಯೆಯಿಂ ಸತ್ವಮಯಮುಂ (ಚಿಕವಂ. ೧೨೨-೭). ೨. (ಆಲಂ) ಐಶ್ವರ್ಯ; ಶ್ರೀಮಂತಿಕೆ: ಸಿರಿಮೆಯ್ಯೊಳಗಂದಱಿವಿರೆ ನೆರವಿಯೊಳಾರಱಿವರ್ (ಪಂಪಭಾ. ೨-೬೩). ೩. ಹಿರಿಮೆ; ಔನ್ನತ್ಯ: ಗೆಲಲುಂ ಸಾಯಲುಮಾಱದೆ ತೊಲಗಿದೊಡೆ ನೆಗಟ್ತೆ ತೋಱುಗುಮೆ ಸಿರಿಮೆಯ್ಯಂ (ಗದಾಯು. ೨-೨೧). [ಸಿರಿ + ಮೆಯ್$_2$]

ಸಿರಿಮೇಱೆ (ನಾ). ಒಬ್ಬಾತನ ಹೆಸರು: ಸಾಯಿಲರ ಕೋಜಯ್ಯ ಕೊಟರರ ಅಳಿಯ ಸಿರಿಮೇಱೆತುಱುವಾನ್ನಿಕ್ಕಿಸಿ ಕಾದಿ ಸತ್ತ (ಎಕ. X, ಶಿಡ್ಲಘ. ೫೯-೫; ಸು. 900). [?]

ಸಿರಿಮೊಗ (ನಾ). ಚೆಲುವಾದ ಮುಖ; ಸುಂದರವದನ: ಎಳನಗೆಯ ಸಿರಿಮೊಗದ ಚೆಲುವಿನ ಹೊಳೆಹೊಳೆವ ನಿಟ್ಟೆಸಳುಗಂಗಳ . . . ಮುನ್ನಿನ ರೂಪ ತೋಱು (ಕುವ್ಯಾಭೀ. ೩-೭೬); ಪರಮಬ್ರಹ್ಮಹೃದಯಸರಸಿರುಹೋದರದೊಳಗೊಗೆದಾತನ ಸಿರಿಮೊಗದೊಳು ಗರುವಿಕೆದಾಳಿ ನೆಱೆದ ಕೈವಲ್ಯಸತಿಗೆ ಸಹಚರಿಯಾಗಿ (ಜಯಕಾ. ೧-೭).

[< ಸಂ. ಶ್ರೀಮುಖ]

ಸಿರಿಯಕ್ಕ (ನಾ). ಲಕ್ಷ್ಮಿಯ ಅಕ್ಕ; ದಾರಿದ್ರ್ಯದ ಅಧಿದೇವತೆ; ಜ್ಯೇಷ್ಠಾ

ದೇವಿ : ಅರಸರುಂ ಮಂಚಕ್ಕೆ ಬರಿಸಿ ಎನ್ನ ಬೆರಸಿದ ಬಳಿಕ ಆನಂಜುವಳೆ ಆನು ಸಿರಿಯಕ್ಕನೇ ಪರುಷ ಮುಟ್ಟಿದ ಬಳಿಕ ಲೋಹವೇ (ಬಸವ. ೭೭೮). [ಸಿರಿ + ಅಕ್ಕ]

ಸಿರಿಯಡಿ (ನಾ). ಶ್ರೇಷ್ಠವಾದ ಪಾದ; ದಿವ್ಯಸನ್ನಿಧಿ; ಶ್ರೀಪಾದ: ನೀಲದ ಪೆಂಡೆಯಂಗಳ ಧರಿಸಿದ ಸಿರಿಯಡಿಗಳನಱಸಿ ಕುಱುಪುಗಂಡೆಱಗಿ ಕೃತಾರ್ಥನಪ್ಪೆಂ (ಚಿಕವಂ. ೧೪೯-೫). [ಸಿರಿ + ಅಡಿ]

ಸಿರಿಯಣುಗ (ನಾ). ಲಕ್ಷ್ಮಿಯ ಮಗ ; ಮನ್ಮಥ : ಸಿರಿಯಣುಗಂ ಸಮ್ಮೋಹನಶರದಿಂ ವಿರಹವಿತಾನಮನೆಚ್ಚು ಕೆಡಪಿ (ಜಯಕಾ. ೩-೩೯). [ಸಿರಿ + ಅಣುಗ (< ಅಣುಂಗ)]

ಸಿರಿಯಣ್ಣ (ನಾ). ಒಬ್ಬಾತನ ಹೆಸರು: ನಾಗಮಯ್ಯನ ಮಗ ಚನ್ನಯ್ಯನುಂ ಸಿರಿಯಣ್ಣನುಂ . . . ಪೊನ್ನ ಕೊಟ್ಟರ್ (ಎಕ. X; ಚಿಂತಾಮ. ೪೪-೧೩; 960?).

[ಸಿರಿ + ಅಣ್ಣ]

ಸಿರಿಯದರ 'ಸೀಯದರ' ನೋ.

ಸಿರಿಯದಾರ 'ಸೀಯದರ' ನೋ.

ಸಿರಿಯಬಾರ 'ಸೀಯದರ' ನೋ.

ಸಿರಿಯಮಯ್ಯ (ನಾ). ಒಬ್ಬಾತನ ಹೆಸರು: ಇರುಗಮಯ್ಯನ ಮಗಂ ಸಿರಿಯಮಯ್ಯನೆರಡುಕೆಱೆಯಂ ತೂಂಬನಿಕ್ಕಿ (ಎಕ. IX, ಬೆಂಗಳೂ. ೭೯-೫; ಸು. 870). 'ಸಿರಿಯಮ್ಮ' ಪರಾ. [ಸಿರಿ + ಅಮ (< ಅಮ್ಮ) + ಅಯ್ಯ]

ಸಿರಿಯಮ್ಮ (ನಾ). ಒಬ್ಬಾತನ ಹೆಸರು: ಕಾಕಂಬಾಟ ಕಂಬಯ್ಯನುಂ ಅಸಗಗೋಡ ಸಿರಿಯಮ್ಮನುಂ (ಎಕ. XI, ಚಿತ್ರದು. ೭೫-೨೩; 941); ಬಿಚ್ಚಿವರುಮಯಿನ್ನ ಮಯ್ಯನೆಱೆಯಮ್ಮನುಂ ಸಿರಿಯಮ್ಮನುಂ (ಎಕ. XI, ಹೊಳಲ್ಕೆ. ೩೦-೧೨; 964).

[ಸಿರಿ + ಅಮ್ಮ]

ಸಿರಿಯರಸ (ನಾ). ೧. ಲಕ್ಷ್ಮಿಯ ಒಡೆಯ; ವಿಷ್ಣು: ''ಅರಲ್ವೊಡೆಯಂ . . . ಸಿರಿಯರಸಂ . . . ಕಾವನಯ್ಯಂ — ಈ ೧೨ ವಿಷ್ಣುಗೆ ವೆಸರ್'' (ಕಶಾ. ೧-೯); ಸಿರಿಯರಸಂ[ಪಾಠಾಂ. ಯೆಱೆಯಂ] ಮಾದೇವಂ ಸರಸತಿಯೆಱೆಯರ್ಕಳಿಗಳಿಂದೀ ಕೆಂದಾವರೆಗಳ್ ಪೊರೆಗೆಮ್ಮಂ (ಕಬ್ಬಕಾ. ೨). ೨. ಕೃಷ್ಣ : ಸಿರಿಯರಸನ ಶ್ರೀಚರಣವ ನೆನೆದು ಕರುಣಿಸಿ ರೂಪವ ತಾ ಕೈಕೊಂಡು (ಕುವಾದ್ಯೂ. ೬೧೩. ಪರಿ. ೨೮೪).

[ಸಿರಿ + ಅರಸ]

ಸಿರಿಯರಸಿ (ನಾ). ಐಶ್ವರ್ಯದ ಅಧಿದೇವತೆ; ಲಕ್ಷ್ಮಿ: ''ಸಿರಿಯರಸಿ [ಪಾಠಾಂ. ಲಕುಮಿ] ಮಾಲಕುಮಿಯೆನೆ ಸದಾ ಶ್ರೀಸತಿಗೆ ನಾಮಮಕ್ಕುಂ'' (ಕಬ್ಬಕೈ. ೭); ವೇರರ್ದೆಯುಂ ಕಡಲ್ದೆತ್ತು ಕೌಸ್ತುಭಮುಂ ಸಿರಿಯರಸಿಯುಂ ನೆಲಸಿರ್ಕುಂ (ಚಿಕವಂ. ೧೨೮-೧೧).

[ಸಿರಿ + ಅರಸಿ]

ಸಿರಿಯಾಣ್ಮ (ನಾ). = ಸಿರಿಯರಸ ೧ : ''ಸಿರಿಯಾಣ್ಮಂ ಪೊಡೆಯಲರಂ'' (ಕರ್ಣಾನಿ. ೩); ಮಹದಾಧಿಕ ಭಾಸುರಕಾರ್ಯಪರಂಪರೆಯಂ ಸಿರಿಯಾಣ್ಮನೆ ನಿತ್ಯನಾಗಿ ಕಣ್ದೊಳಿಸರ್ಕುಂ (ವಿಷ್ಣುಪು. ೧-೪-೯೭). [ಸಿರಿ + ಆಣ್ಮ (< ಆಳ್ಮ)]

ಸಿರಿಯೆಱೆಯ (ನಾ). = ಸಿರಿಯರಸ ೨ : ''ಸಿರಿಯೆಱೆಯಂ ಸೌರಿಯಂದು ತಾವರೆಗಣ್ಣಂ'' (ಕರ್ಣಾನಿ. ೩). [ಸಿರಿ + ಎಱೆಯ]

ಸಿರಿಯೇಱು (ಕ್ರಿ). ಶೋಭಿಸು: ಚರಣಾಂಗಳ್ ಲೀಲೆಯೇಱುಲ್ ಮೊಗಂ ಸಿರಿಯೇಱುಲ್ ತಲೆಗೇಱಿದುತ್ಸವದ ನಿಮ್ಮಂ ಪೂಜಿಸುತ್ತೆ (ಪಾಪಾತ. ೧೮). [ಸಿರಿ + ಏಱು (< ಏಱ್)]

ಸಿರಿಯೊಡೆಯ (ನಾ). ೧. ಧನಿಕ; ಶ್ರೀಮಂತ: ಸಿರಿಯೊಡೆಯನಾಗಿಯುಂ ದರ್ಪರಹಿತಂ (ಶಾಂತಿಪು. ೬-೬೬); ಸಿರಿಯೊಡೆಯಂ ಸಿರಿಯುಳ್ಳಂ ಸರೂಪಿ ಗುಣವಂತ ನಧಿಕದಾನಿ (ಕಾವ್ಯಾವ. ೩೩೭). ೨. = ಸಿರಿಯರಸ ೨: ಸಿರಿಯೊಡೆಯಂ ಕೀಲುಳಾಗಿರಲಱಿವನೆ ವರಿಸುತಂ ಕಿರೀಟಿಯ ರಥಮುಂ (ಸಮವ. ೮-೧೪೪).

[ಸಿರಿ + ಒಡೆಯ]

ಸಿರಿಯೋಲಗ (ನಾ). ವೈಭವಪೂರ್ಣವಾದ ದರ್ಬಾರು: ಅಪ್ಪದಿಕ್ಕಾಲರ ಮಧ್ಯದಲಿ ವೈಕುಂಠಪಟ್ಟಣವು ಸಿರಿಯೋಲಗವು ನಿತ್ಯದಿ (ಕನಕ. ೧೨೯-೧).

[ಸಿರಿ + ಓಲಗ]

ಸಿರಿಯೋಲಗಂಗೊಡು (ಕ್ರಿ). ವೈಭವಪೂರ್ಣವಾದ ದರ್ಬಾರನ್ನು ನಡೆಸು: ರಮ್ಯಹರ್ಮ್ಯಾಗ್ರದೊಳೆ ಸಿರಿಯೋಲಗಂಗೊಟ್ಟು (ಪಂಪಭಾ. ೪-೫೮ ವ).

[ಸಿರಿಯೋಲಗ + ಕೊಡು]

ಸಿರಿರಾಣಿ (ನಾ). = ಸಿರಿಯರಸಿ: ಸಿರಿರಾಣಿಯ ಪೆತ್ತ ಸೊದೆಗಡಲಿಳಿಯ ತಾತ್ಪರಿಯದಿ ನೋಡಬಂದಂತೆ . . . ಪರಿದಳು ತುಂಗಬೆಳ್ಗಂಗೆ (ಮೋಹತ. ೬-೩೫); ಪರಮಪತಿವ್ರತೆಯಿದ್ದ ಬಳಿಯೊಳಾ ಸಿರಿರಾಣಿ ಸೇರಿ ಬಂದಿಹಳು (ಹದಿಬ. ೨-೧೭). [ಸಿರಿ + ರಾಣಿ]

ಸಿರಿರಾಯ (ನಾ). = ಸಿರಿಯರಸ ೧ : ಸಿರಿಯೊಡನೆ ಸಿರಿರಾಯನುತ್ಸವದಿ ನಿಂತಿಹನು ಕಡುಸವಿಯ ಮೆಲುನಗೆಯೊಳು (ಮಲೆಮ. ೪೭-೧೧). [ಸಿರಿ + ರಾಯ]

ಸಿರಿಲಕ್ಷ್ಮಿ (ನಾ). ಸಂಪತ್ತಿನ ಒಡತಿ; ಧನಲಕ್ಷ್ಮಿ: ಸಿರಿಲಕ್ಷ್ಮಿ ಜಯಲಕ್ಷ್ಮಿ ಶಾರದಾಲಕ್ಷ್ಮಿಯಾ ವರಕೀರ್ತಿಲಕ್ಷ್ಮಿಯರಂತೆ ಪರಿಶೋಭಿಸುವ ರಾಜಪುತ್ರಿಯರನು ಭೂಪ ರಂಜಿಸಿದ (ಕಂನಮ. ೭-೬೯). [< ಸಂ. ಶ್ರೀಲಕ್ಷ್ಮಿ]

ಸಿರಿಲೋಲ (ನಾ). = ಸಿರಿಯರಸ ೨ : ಸಿರಿಲೋಲಸಹಿತ ಯುಧಿಷ್ಠಿರಾದಿಗಳು . . . ಹೊಕ್ಕರು ಕಾಳೆಗದ ಕಳನ (ಕುವಾದ್ಯೂ. ೯-೨೯). [< ಸಂ. ಶ್ರೀಲೋಲ]

ಸಿರಿವಂತ (ನಾ). ಐಶ್ವರ್ಯವಂತ; ಧನಿಕ: ಎಂತು ಪೊಲ್ಲರುಮೊಳ್ಪಿದರುಮೊಳರಂತು ತಿರಿಕರುಂ ಸಿರಿವಂತರುಮೊಳರ್ (ಧರ್ಮಾಮೃ. ೯-೭೮); ಜಗವರಾಡಕವಾಯ್ತು ಕುಮುದಾಳಿಗಳ ಬಾಗಿಲು ಹೂಡಿದವು ಸೂಱೆಗರು ಕವಿದುದು ತುಂಬಿಗಳು ಸಿರಿವಂತರರಮನೆಯ (ಕುವಾದ್ಯೂ. ೧-೪೩). [ಸಿರಿ + - ವಂತ]

ಸಿರಿವಂತಗಾಲ್ (ನಾ). ಒಂದು ಸ್ಥಳದ ಹೆಸರು: ಸಿರಿವಂತಗಾಲೊಳ ಇಟ್ಟೂಱು ಭತ್ತದ ಮಣ್ಣು ಮಹಾದೇವರ್ಗ್ಗೆ ಬಿಟ್ಟುಂ (ಎಕ. IV, ಗುಂಡ್ಲುಪೇ. ೧೪-೭; ಸು. 995?). [?]

ಸಿರಿವಂತಿಕೆ (ನಾ). ಶ್ರೀಮಂತಿಕೆ; ಸಿರಿತನ: ಸಿರಿಯಂ ಪರಿಭವಿಸಿ ತಂದು ಪೊಸಯಿಪ ಸಿರಿವಂತಿಕೆಯಿಂದ ಕಾಲೊಳೊದೆದಪರಿನಿಕುಂ (ಶಾಂತಿಪು. ೧೦-೧೭); ಸಿರಿವಂತಿಕೆಯ ಬಿಗುಮಾನವೂ ಪರಂಪರಾಗತವಾದುದೇನೊ! (ಅಬೋಲೀ. ೪೫). [ಸಿರಿವಂತ + - ಇಕೆ]

ಸಿರಿವಂತಿಗೆ (ನಾ). ಹುರಿಯಲು ಬಳಸುವ ಮಡಕೆಯ ಓಡು; ಹುರಿಯೋಡು: ''ಸಿರಿವಂತಿಗೆಯಂದೆ[ನ]ಲ್ಕೆ ಹುರಿಯೋಡಕ್ಕುಂ'' (ರನ್ನಕು. ೨); ಆ ಸಿರಿವಂತಿಗೆಯಂ ತೊಱೆವಂತಿರ ಖಚರಶ್ರೀಯನುಱಿದನಾ ಜಿನಚಂದ್ರಂ (ಶಾಂತಿಪು. ೭-೬೯); ಸಿರಿವಂತಿಗೆ = ಹುರಿಯೋಡು (ಕವಿದ. ಪರಿ. ೨); ಬಾಂದಳಮೆಂಬ ಸಿರಿವಂತಿಗೆಯೊಳಪರಿಮಿತ ಜಗತ್ತುಗಳೆಂಬ ಜೋಳದೊಳ್ಪಿತ್ತುಗಳನು ಹುರಿಯುತ್ತಿರಲ್ (ಶೇಷರಾ. ೩-೧೧). [?]

ಸಿರಿವಂತೆ (ನಾ). ಶ್ರೀಮಂತ ಹೆಂಗಸು; ಭಾಗ್ಯವಂತೆ: ಸಿರಿವಂತೆ, ಗುಣವಂತೆ (ಶಬ್ದಾನು. ೧೯೬ ಪ್ರಯೋ). [ಸಿರಿವಂತ + - ಎ]

ಸಿರಿವಚ್ಚ (ನಾ). ೧. ವಿಷ್ಣುವಿನ ಎದೆಯ ಮೇಲಿರುವ ಕಪ್ಪುಮಚ್ಚೆ; ಶ್ರೀವತ್ಸ: ಸಿರಿವಚ್ಚದ ಪಚ್ಚವಣಗಳ ಬೆಳಗಿನೊಳ್ಪೆರಸಿ (ಚಿಕವಂ. ೧೨೩-೧೬); ಸಿರಿವಚ್ಚಲಚ್ಚಣದಿ ನೊಪ್ಪುವೆರ್ದೆಯುಂ, ಬೆಳ್ಳಟ್ಟೆ ಬಿಗಿದ ನಡುವುಮಿಂದ ಬಾಗೆ (ಅದ್ಭುತ. ೩೫-೨೫). ೨. ಒಬ್ಬಾತನ ಹೆಸರು : ಮಣಿದಿಯು ಸಿರಿವಚ್ಚನುಂ ಶ್ರೀಪುರುಷನುಂ . . . ಎಱಿದು ಸತ್ತೊರ್ (ಮೃಅರಿ. ೧೯೪, ೬-೧; 808). [< ಸಂ. ಶ್ರೀವತ್ಸ]

ಸಿರಿವಚ್ಚೆ, ಸಿರಿವಚ್ಚೆ (ನಾ). ೧. ಶ್ರೇಷ್ಠವಾದ ಹಸುರುಕಲ್ಲು : ಸಿರಿವಚ್ಚೆಯ ಪಳಿಕಿಂ ಕಂಡರಿಸಿದ ಕರುವೆನೆ . . . ಕರಮೆಸೆದಂ ಭೂಪತಿ ಪುರಸತಿಯರ ಕಣ್ಗಳ ಕದಿರಿಂದ (ಜಯಕಾ. ೧೦-೫೬). **ಸಿರಿಪಚ್ಚೆ** : ೨. ಉತ್ತಮವಾದ ಪಚ್ಚೆತೆನೆ: ಸಿರಿಗಂಪು ಸಿರಿಪಚ್ಚೆ ವನಿನೀರು ಬಿಜ್ಜಣದೆಲರುಪದಾರಗಳಿಂದ ಧರಣೀಪತಿ ದಿಟ್ಟದೆಱೆದು (ಸೇಮಸಂ. ೮-೧೧೯); ಪನ್ನೀರ ಚೆಂಬುಗಳಿಡಿಗುಡ್ಡೆ ಸಿರಿಪಚ್ಚೆ ಪನ್ನೆಗಪ್ಪುರದ ರಾಶಿಗಳು (ಭರಚ. ೪೭-೧೪). [ಸಿರಿ + ಪಚ್ಚೆ (< ಪಸ್ಯ)]

ಸಿರಿವಡೆ (ಕ್ರಿ). ಸೊಬಗನ್ನು ಹೊಂದು: ಪರಮೆಗಳ ಸೇಣ ಹರಿನೀಲಮಣಿತೋರಣದ ಸಿರಿವಡೆಯೆ (ಶೇಷರಾ. ೭-೩೧). [ಸಿರಿ + ಪಡೆ]

ಸಿರಿವಣ್ (ನಾ). ವೈಷ್ಣವರು ಮುದ್ರೆಗಳನ್ನು ಧರಿಸಲು ಬಳಸುವ ಪವಿತ್ರವಾದ ಮಣ್ಣು; - ಗೋಪಿಚಂದನ: ಸಿರಿವಣ್ಗಳಿಗಿನಬ್ಬರಕ್ಕಿರ್ಬಗಿಯಾಗಿರ್ಕೆಲಕ್ಕೆ ಸರಿಯುತ್ತ . . . ಕುರುಳ್ದಬ್ಬಲೆ ನುಣ್ಬಾಣೆಯಂ ಪತ್ತಿ ಪದುಳದೊಳಿರ್ಕುಂ (ಚಿಕವಂ. ೧೨೮-೩).

[ಸಿರಿ + ಮಣ್]

ಸಿರಿವಣ್ಣ (ನಾ). ಒಂದು ಬಗೆಯ ಬಣ್ಣದ ಬಟ್ಟೆ: ಗುಜ್ಜರಾಷ್ಟ್ರದ ಪಟ್ಟಿ

ವಾರಾಣಸಿಯ ದಸರಿಯ ಹೊತ್ತಿ ಸಿರಿವಣ್ಣ . . . ಈ ವಿವಿಧ ಪಟ್ಟಾವಳಿಗಳುಂಟು (ಬಸವು. ೧೧-೨೭). [ಸಿರಿ + ಬಣ್ಣ]

ಸಿರಿವದನ (ನಾ). ಕಾಂತಿಯಿಂದ ಕೂಡಿದ ಮುಖ; ಶೋಭಿಸುವ ಮುಖ: ಸೊಂಪುಗೆಟ್ಟುದು ಸಿರಿವದನ ಮನದಿಂಪು ಬೀತುದು (ಕುಮಾಭಾ. ೬-೨೬). [ಸಿರಿ + ವದನ]

ಸಿರಿವಧು (ನಾ). ಸಂಪದ್ಯುಕ್ತಳಾದವಳು: ತಿರುಮಲರಾಜನ ಬಿಟ್ಟು ಸಿರಿವಧು ಜಯಲಕ್ಷ್ಮಿ ಬೆಟ್ಟದ ಚಾಮನ ನೆಱೆ ಹರುಷದಲಿ ಸೇರಿದಳು (ಕಂನಿ. ೩-೯೪).

[< ಸಂ. ಶ್ರಿವಧೂ]

ಸಿರಿವರ$_1$, ಸಿರಿಮರ (ನಾ). ಒಂದು ಬಗೆಯ ಶ್ರೇಷ್ಠಜಾತಿಯ ಮರ; ಅರಳಿ: "ಸಿರಿವರಂ ಚಳದಳಂ ಪಿಪ್ಪಲಂ ಬೋಧಿಯಶ್ವತ್ಥಮೆನಲರಳಿಯಕ್ಕುಂ" (ಮಂಗರಾ. ೩೪-೧೧); "ಗೌರಃ – ಸಿರಿವರ, ಬೆಜ್ಜಲು" (ಓಷಧಿ. ೫೧). **ಸಿರಿಮರ** : "ದೃಢತರುಃ – ಸಿರಿಮರ , ಬೆಜ್ಜಲಮರ" (ಓಷಧಿ. ೭೯). [ಸಿರಿ + ಮರ$_1$]

ಸಿರಿವರ$_2$ (ನಾ). ಲಕ್ಷ್ಮಿಯ ಗಂಡ; ವಿಷ್ಣು: ಸಿರಿವರ ನಿನ್ನ ಸರಿ ಯಾರು ಕಾಣೆ (ಪುರಂದ. ೧-೬೩-೩); ಸಿರಿವರನ ಬಗೆಯೊಳಗೆದಾ ಗಿರಿಶನ ಸಿರದಲ್ಲಿ ನೆಲಸಿ ಸನ್ಮಾರ್ಗದೊಳೇ ಚರಿಸುವ ಚಂದ್ರನ ವಂಶಂ ಪರಿಶುದ್ಧತೆವೆತ್ತು ನೆಗಳ್ದುದೇನಚ್ಚರಿಯೇ (ಅಪ್ರತಿ. ೧-೨). [< ಸಂ. ಶ್ರೀವರ]

ಸಿರಿವಲ್ಲಭ (ನಾ). = **ಸಿರಿವರ$_2$**: ಸಿರಿವಲ್ಲಭ ನಿಂಗೆ ಸರಿಯಿಹಪರದಲಿಲ್ಲ (ಗಗತಾ. ೫-೨೦). [< ಸಂ. ಶ್ರೀವಲ್ಲಭ]

ಸಿರಿವಟಯಿಗೆ (ನಾ). ಸಂಪದ್ಯುಕ್ತವಾದ ಬಾವುಟ: ರವಿಶಶಿಬಿಂಬಧ್ವಜದ ಧವಳಾತಪತ್ರವ್ರಜದೊಳಗನೆ ನಡೆಯ ಪೊನ್ನ ಸಿರಿವಟಯಿಗೆಯೊಳ್ (ಶಾಂತಿಪು. ೧೦-೧೫೦).

[ಸಿರಿ + ವಟಯಿಗೆ]

ಸಿರಿವಾಗಿಲ್ (ನಾ). ಮುಖ್ಯದ್ವಾರ; ಶ್ರೀದ್ವಾರ: ಬಿದಿಗೆ ಸೋಮವಾರದನ್ನು ಸಿರಿವುರದ ಸಿರಿವಾಗಿಲಂ ಕುಂಚವಡುಗ ದಾಸಯ್ಯಂ ಮಾಡಿಸಿದುದಕೆ (ಸೌಕಾ. XI-i, ೭೫-೧೫; 1042). [ಸಿರಿ + ಬಾಗಿಲ್]

ಸಿರಿವಾಯ್ (ನಾ). ೧. ಚೆಲುವಾದ ಬಾಯಿ : ಎಮ್ಮ ಬಸಿಱೊಳ್ ಬಂದು ಜಗಮಂ ಸಲಪುವೆನೆಂದು ತನ್ನರ್ಚಾವತಾರಮರ್ಯಾದೆಯಂ ಮೀಱಿ ಸಿರಿವಾಯ್ದೆಱೆದು ನಿರವಿಸಿ ಎನ್ನೆರ್ದೆಯೊಳ್ ಬಂದು ನಿಂದಂ (ಚಕವಾ. ೧೩೫-೧೦). ೨. = **ಸಿರಿವದನ** : ಸಿರಿವಾಯ ರಾಮರಾಜಂ ಸಿರಿಯಂ ಪಿರಿದೆನಿಸಲೆಳಸಿ ಕಡುನಿಡುವಯಣಂದೆರಳಲ್ಕೆ (ಚಕವಿ. ೨-೩೩).

[ಸಿರಿ + ಬಾಯ್]

ಸಿರಿವಾರ 'ಸೀಯದರ' ನೋ.

ಸಿರಿವಾಳಿಗೆ (ನಾ). ಸಂಪದ್ಧರಿತವಾದ ಮಾಳಿಗೆ, – ಉಪ್ಪರಿಗೆ: ತಂತಮ್ಮ ಸಿರಿವಾಳಿಗೆಗಳ ಬಾಗಿಲೊಳ್ ನಿಂದು ಪರಸುವ ಹದಿಬದೆಯರ ಪರಕೆದನಿಯುಮ ನಾಲಿಸುತ್ತೆ (ಚಕವಾ. ೧೩೩-೮). [ಸಿರಿ + ಮಾಳಿಗೆ$_1$]

ಸಿರಿವಾಳ್ಳ? (ನಾ). ದೇವಸ್ಥಾನದ ಒಂದು ಭಾಗ (?) : ಸಿಜ್ಜವಡ್ಡಗಿ ರಾಪಮ್ಮನ್ ಸಿರಿವಾಳ್ಳ ಮಾಡಿದಾನ್ (ಸೌಕಾ. XX, ೮-೩; ೫ನೆಯ ಶತ). [?]

ಸಿರಿವೀಡು , ಸಿರಿಬೀಡು (ನಾ). ಐಶ್ವರ್ಯದಿಂದ ತುಂಬಿದ ಮನೆ; ಸಂಪತ್ತಿನ ನೆಲೆ: ಮಹಮ್ಮದನಿಗೆ ಸಿರಿವೀಡಾಗಿ ಸಂತೋಷವನ್ನು ಹುಟ್ಟಿಸಿತು (ಪೃಮಹ. ೧೪). **ಸಿರಿಬೀಡು** : ಭಾರತವು ಸಂಪತ್ತಿನ ಮತ್ತು ವೈಭವದ ಶಿಖರವನ್ನೇ ಏರಿ . . . ಸಿರಿಬೀಡೇ ಆಯಿತೆಂದರೂ ಅತಿಶಯೋಕ್ತಿಯಲ್ಲ (ಭಾರದ. ೩೬೭). [ಸಿರಿ + ಬೀಡು]

ಸಿರಿವುರ (ನಾ). ಒಂದು ಊರಿನ ಹೆಸರು: ಮುಳ್ಗನ್ನು(ನ್ದ)ಪನ್ನೆರಡುಮಂ ಮಾಯಿರ್ಮ್ಮನಾಳ್ ಸಿರಿವುರಕೆ ಬಗೆಗ ಪೆರ್ಗ್ಗಾವುಣ್ಣಮಾಗುತ್ತಿರೆ (ಎಇ. XXVI, ೬೨-೧೧; 906); ಪುಯ್ಯಲ ಪಿನ್ನಿಕ್ಕಿ ಮುನ್ನಾಗಿ ಸಿರಿವುರದ ಹಳಮೆಗೆ ತುಱುವನಿಕ್ಕಿಸಿ ಮಗುಳ್ದು ಬರುತ್ತಿಟ್ಟೊಡೆ (ಎಇ. XII, ೫೫೬. ೧೦-೯; ಸು. 930). [ಸಿರಿ + ಪುರ$_2$]

ಸಿರಿವೆಣ್, ಸಿರಿವೆಣ್ಣು (ನಾ). ೧. ಐಶ್ವರ್ಯದ ಅಧಿದೇವತೆ; ಲಕ್ಷ್ಮಿ: ಸಿರಿವೆಣ್ಣಂ ದೂವೆದೊಟ್ಟೊಂಗೆಣೆಯನೆ ಬಗೆದಂ (ಚಂದ್ರಪ್ರ. ೧೦-೧೨೮); ಅರಹಂತನ ಮೆಲ್ಲಡಿದಾವರೆಗಳ್ ಬಗೆಯಲ್ಲಿ ನಿಂದುವೆಂದೊಡೆ ನಲವಿಂ ಸಿರಿವೆಣ್ಣವನೊಳ್ ನಿಚ್ಚಂ ಬೆರಸಿರ್ದವಳ್ (ಕಬ್ಬಿಕಾ. ೧೩). **ಸಿರಿವೆಣ್ಣು** : ೧. ಕರತಳದೊಳಮರಭೂರುಹವನು ಕಟಾಕ್ಷದೊಳು ಸಿರಿವೆಣ್ಣನೆಸಕಮಂ . . . ಪೆತ್ತನೋ ತಥ್ಯವೆನಲು (ಸೌಂದಪು. ೪-೧೧); ಸಿರಿವೆಣ್ಣು ನೆಱೆ ತಳೆದ ಬಿಸಜಗಳೊ (ಭಾವಚಂ. ೧-೪೫). ೨. ಚೆಲುವೆ; ಅಂದಗಾತಿ: ಸಿರಿವೆಣ್ಣಿಗಿನಿಯನ ಜಯಿಸೆ ಚೆಲುವಿನಲಗೊಂದಿರಲ್ ಕೂರಂಬೇಕೆ? (ಚತ್ರಾಂಗ. ೨೦-೫೯೯).

[ಸಿರಿ + ವೆಣ್]

ಸಿರಿವೆಣ್ಣರಸ (ನಾ). ಲಕ್ಷ್ಮಿಯ ಒಡೆಯ; ವಿಷ್ಣು: ತೊಳಗುವ ಸಂಕುಂ ಪಾಱುಂಬಳೆ ನೇರ್ಪಡೆ . . . ಮುಗಿಲೆಡೆಯೊಳರ್ದಂ ತಳತಳಿಸುವ ತೊಡವನಾಂತು ಸಿರಿವೆಣ್ಣರಸಂ (ಕಬ್ಬಿಕಾ. ೨೯೨). [ಸಿರಿವೆಣ್ + ಅರಸ$_1$]

ಸಿರಿವೆಣ್ಣು 'ಸಿರಿವೆಣ್' ನೋ.

ಸಿರಿವೆಱು (ಕ್ರಿ). ಸೊಗಸಾಗು; ಶೋಭಿಸು: ಕರಿಗಮನೆಯರು ತಂದರು ರತ್ನಮಯ ಹೊನ್ನ ಹರಿವಾಣದುಂಬಿದಾರತಿಯ ತಿರುಹಿ ನಿವಾಳಿಸೆ . . . ಸಿರಿವತ್ತು ನಿಂದರಿಕ್ಕೆಲದಿ (ಮೋಹತ. ೨೨-೧೩). [ಸಿರಿ + ಪೆಱು$_1$]

ಸಿರಿವೊತ್ತು, ಸಿರಿಹೊತ್ತು (ನಾ). ೧. ಮುಂಜಾನೆ, ಮಧ್ಯಾಹ್ನ ಮತ್ತು ಸಂಜೆ ಎಂಬ ದಿನದ ಮೂರು ಶುಭಕಾಲಗಳು : (ಕಿ). ೨. ಸಂಜೆ; ಸಾಯಂಕಾಲ: (ಚತುನಿ. ಕಿ. I, ೮೧). **ಸಿರಿಹೊತ್ತು**: ೩. ಶುಭಸಮಯ: ತಣ್ಣೆಲರು ತೀಡುತಿದೆ, ಪಯಣಕಿದೆ ಸಿರಿಹೊತ್ತು (ಹೆಚ್ಚರ. ೫-೭೮). [ಸಿರಿ + ಪೊತ್ತು$_4$ (< ಪೊಱ್ತು)]

ಸಿರಿಷ 'ಸಿರಿಸ' ನೋ.

ಸಿರಿಸ , ಸಿರಿಷ , ಸಿರೀಸ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು; ಬಾಗೆ: ಸಿರಿಸಂ ಸೀರೆ ಬೆಳಲ್ಲವಂಗಮೆಲವಂ (ಕಾವ್ಯಸಾ. ೧೦೪೦ ಹೂದ್ರಕ); ಸಿರಿಸಂ ಕಂಮ್ಮರನೀಳೆ ಬಾಳೆ ವಕುಳಂ (ಸೌಕಾ. IX-i, ೩೪೩-೪೦; 1226?); ರಸದಾಳಿ ಸಿರಿಸ ದಾಳಂಬದ ಸಾಲ್ಗಳ್ ಸಲೆ ಸೊಗಸಿದುವಲ್ಲಿ (ಜಯಕಾ. ೧೫-೪೩). **ಸಿರಿಷ** : ಸಿರಿಷದ ತರುವಿನೊಳು ಪರಮಾನಂದಜ್ಞಾನೋತ್ಪತ್ತಿಯಾಗೆ (ವರ್ಧಚ. ೫-೪). **ಸಿರೀಸ** : "ಪತಂಗಿಕೇರಿಷ್ಟಃ – ಸಿರೀಸ" (ಓಷಧಿ. ೯೪); ಕೋಮಳಸಿರೀಸಸುಮನೋದ್ದಾಮ ಕಾಂತಿಯಂ ತಾಳ್ದಿ . . . ತೋಱುಗುಂ ನಳಿತೋಳ್ಗಳ್ (ವರ್ಧಮಾ. ೩-೩೩). [< ಸಂ. ಶಿರೀಷ]

ಸಿರಿಸಂಘ (ನಾ). [ಜೈನ] ಧಾರ್ಮಿಕಸಂಘಗಳಲ್ಲಿ ಒಂದು: ನಮಿಲೂರಾ ಸಿರಿಸಂಘದಾಜಿಗಣದಾ ರಾಜ್ಞೀಮತೀಗನ್ತಿಯಾರ್ . . . ಸ್ವರ್ಗ್ಗಾಲಯಮೇಱಿದಾರ್ (ಎಇ. II, ೯೭-೧; ಸು. 700). 'ಶ್ರೀಸಂಗ' ಪರಾ. [< ಸಂ. ಶ್ರೀಸಂಘ]

ಸಿರಿಸಲ (ನಾ). = **ಸಿರಿಸ**: ಸಿರಿಸಲದ ಮರದರಳುಗಳ ಸರಸಾದ ಹಾರಗಳು ಹರಿದು ನೀರೊಳು ಹರಿಯೆ (ರಘುವಂ. ೧೯೨-೬); ಚೆಂದ ಕುರುವಕವು ಹೆಳಲಿನಲ್ಲಿ ಸಿರಿಸಲವು ಕಿವಿಯ ಬಳಿಗೆ (ಮುಕುಂದಾ. ೧೯-೩). [< ಸಿರಿಸ]

ಸಿರಿಹರಿ (ನಾ). ವಿಷ್ಣು; ಶ್ರೀಹರಿ: ಸೋಲಿಗರ ಸೀಮೆ ಸಿರಿಹರಿ ವೆಂಕಟ್ರಮಣ ಸೋಲೀಸು ಬೇಡ ಗೆಲಿಸಯ್ಯ (ಗರುದಾ. ೧೬೧). [< ಸಂ. ಶ್ರೀಹರಿ]

ಸಿರಿಹಸ್ತ (ನಾ). ಶ್ರೇಷ್ಠವಾದ ಕೈ : ಮಸ್ತಕ ಬಿರಿದು ಸುರಿವ ರಕ್ತವ ಸಿರಿಹಸ್ತದಿನೊತ್ತಿ ನಿಲ್ಲಿಸುತೆ (ಮೋಹತ. ೧೨-೬೩). [< ಸಂ. ಶ್ರೀಹಸ್ತ]

ಸಿರಿಹೆಟ್ಟಿಗೆ (ನಾ). ಚೆಲುವಾದ ಹೆಣ್ಣು; ಸುಂದರಿ: ಅಷ್ಟದಿಕ್ಪಟ್ಟಣಂಗಳಲಿರ್ಪ ಪರಮ ಸಿರಿಹೆಟ್ಟಿಗೆಯರವನುಳಿದು ತಮ್ಮಪಿಳವಸ್ತುಗಳ . . . ತಂದು (ನವಮೋ. ೨-೮೮).

[ಸಿರಿ + ಹೆಟ್ಟಿಗೆ (< ಪೆಟ್ಟುಗೆ)]

ಸಿರಿಹೊತ್ತು 'ಸಿರಿವೊತ್ತು' ನೋ.

ಸಿರೀಸ 'ಸಿರಿಸ' ನೋ.

ಸಿರು 'ಸಿಱು' ನೋ.

ಸಿರುಕೀರೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಸೊಪ್ಪು; ಚಿಲಿಕೆ: ಚಿಲಿಕೆಸೊಪ್ಪು , ಸಿರುಕೀರೆ (ಮೃಡಿಗಿ. ೫-೧೧). 'ಚಿಲುಕೀರೆ' ಪರಾ.

[ಸಿರು$_7$ + ಕೀರೆ./ ತಮಿ. ಚಿಱುಕೀರೆ , ಚಿಱುಕ್ಕೀರೈ]

ಸಿರುಗಣ್ಣು (ನಾ). ಒಂದು ಬಗೆಯ ಕಣ್ಣಿನ ರೋಗ : ಆ ಬೇರಂ ಜೇನುತುಪ್ಪದಿಂದ ಹಚ್ಚಲು ಸಿರುಗಣ್ಣು ಮಾಣ್ಗುಂ (ವೈದ್ಯವಿ. ೧೩೫). [ಸಿರು$_7$ + ಕಣ್ಣು (< ಕಣ್)]

ಸಿರುವಾಯಿ (ನಾ). ಹರಿದುಹೋಗಿರುವ ಮೇಲುತುಟಿ : (ಕಿ). 'ಸಿಱುವಾಯ' ಪರಾ. [ಸಿರು (< ಸಿಱು) + ಬಾಯಿ$_1$ (< ಬಾಯ್)./ ತುಳು. ಸಿರಿಬಾಯಿ, ತಿರಿಬಾಯಿ]

ಸಿರೆ$_1$ (ನಾ). ೧. ನರ; ರಕ್ತನಾಳ: ''ಸಿರೆ ನಾಳಪತ್ರಮನೆ ಸೆರೆಯಕ್ಕು'' (ಮಂಗರಾ. ೧೩೪-೩೪); ರೂಕ್ಷಸಸ್ಥೂಲಸಿರೆಯುಳ್ಳವರ್ಗಳೂ (ವೀಶಿವ. ೪-೨೩-೨೧). ೨. ಕೆಲವು ಹಣ್ಣು ಮತ್ತು ಎಲೆಗಳಲ್ಲಿರುವ ನಾರು ,— ಎಳೆ: ಬರಿಯಲ್ ಪೊಂಗಿದ ಪಣ್ಣಳ ಸಿರೆಯಱಿದಲ್ಲಿರಿಸಿ ಚಂಚುಪುಟದಿಂ ಸವಿಯಂ ಬರೆತೆಗೆದು . . . ಮೞೆದುದಾಮ್ರದೊಳ್ ಶುಕನಿಕರಂ (ಗಿರಿ. ೨-೩೮). [ಸಂ. ಸಿರಾ]

ಸಿರೆ$_2$ (ನಾ). ಮೆಣಸಿನ ಬಳ್ಳಿ: ತಳ್ತಡರ್ವ ಲತೆಗಳುಂ ಕೈವಿಟ್ಟ ಸಿರೆಗಳುಂ ಸೋರ್ವ ಸೋನೆಗಳುಂ ಒಱೆದುಗುವ ವನಿಗಳುಂ . . . ಎಸೆಯೆ (ಲೀಲಾವ. ೬-೬೦ ವ).

[ಸಂ. ಸಿರ]

ಸಿರೋತಿಗೆ (ನಾ). ಒಂದು ಬಗೆಯ ಭಕ್ಷ್ಯ: ಸಣ್ಣಕ್ಕಿಗಳ ಬೋನ ಬೆಣ್ಣೆ ಕಾಸಿದ ತುಪ್ಪಾ ನುಣ್ಣನೆ ಕಡುಬು ಸಿರೋತಿಗೆ (ದೇವಾಂಪು. ೫-೨೨೮). [?]

ಸಿರ್ಕ (ನಾ). (ದ್ರಾಕ್ಷಿ, ಸೇಬು ಮುಂತಾದ ಹಣ್ಣುಗಳ ರಸದಿಂದ ಮಾಡಿದ) ಒಂದು ಬಗೆಯ ಹುಳಿದ್ರವ: ಯಾವಾಗಲಾದರೊಮ್ಮೆ ತೊಳೆಯುವ ನೀರಿಗ ಹುಳಿರಸ ಅಥವಾ ಸಿರ್ಕ ಬೆರಸಿದರೆ ಪಾತ್ರೆಗಳಲ್ಲಿ ಕಲೆಗಳಿದ್ದರೆ ಹೋಗಿ ಶುಭ್ರವಾಗುವುವು (ಅಡುಸಿ. ೪೪). [<— ಪಾರ. ಸಿರ್ಕಾ; ಹಿಂ. ಸಿರಕಾ; ಮರಾ. ಶಿರಕಾ, ಶಿರ್ಕಾ, ಸಿರಕಾ]

ಸಿರ್ಕು$_1$ 'ಸಿಲ್ಕು$_1$' ನೋ.

ಸಿರ್ಕು$_2$ 'ಸಿಲ್ಕು$_2$' ನೋ.

ಸಿರ್ಕುಂಗೊಳಿಸು (ಕ್ರಿ). ತೊಡಕನ್ನುಂಟುಮಾಡು; ಅಡ್ಡಿಪಡಿಸು: ಸಾಂಗನಿಜ ಶೀಲಮಂ ಸಿರ್ಕುಂಗೊಳಿಸಿದೆಯೋ (ವೃಷವಿ. ೩೨-೧೨).

[ಸಿರ್ಕು$_2$ (< ಸಿಲ್ಕು$_2$) + ಕೊಳ್$_1$ + - ಇಸು$_5$]

Δ **ಸಿಪ್ಪು** 'ಸಿಪ್ಪು' ನೋ.

ಸಿರ್ಪೆ (ನಾ). (?) : ಕರ್ಪುಂ ನೇರ್ಪುಂ ಸಿ[ಪಾಕಾಂ. ಪೆ]ರ್ಪೆಯುಮಡರ್ಪುಮಾರ್ಪುಂ . . . ರೇಫಸಂಯೋಗಂಗಳ್ (ಶಮದ. ನ. ೫೦). 'ಸಿಪ್ಪೆ' ಪರಾ. [?]

ಸಿರ್ಮಲಗೆ (ನಾ). ಒಂದು ಊರಿನ ಹೆಸರು; IP ಬಿಜಾಪುರಜಿಲ್ಲೆಯ ಈಗಿನ ಚಿಮ್ಮಲಗೆ: ಕನ್ನವುರಿವಿಷಯೇ ಸಿ[ರ್ಮ್ಮ]ಲಗಪೂರ್ವ್ವದಿಗ್ಭಾಗೇ (ಸೌಶಾ. XI-i, ೮-೧೩: 862). [?]

ಸಿರ್ವೆಗಾರ (ನಾ). ಮೇಲಧಿಕಾರಿ; ಮೇಲ್ವಿಚಾರಕ: ಸಿರ್ವಗಾರ್ರು ರಾಣುವೆಯವರು ಅಳು ಗುರ್ರಿಕಾರ ವೆನ್ಕಟಕೃಷ್ಣಮರಾಜ್ಯೆಯ ಸಹ ಬರ್ರಿಸಿ ಕೊಟ ದಾನಶ್ಯಾಸನದ ಕ್ರಮ (ಎಕ. XIV, ತಿರುಮ. ೨೫೪-೧೮; 1758). [IP ಇದು 'ಸೇರುವೆಗಾರ' ಎಂಬುದರ ಅಪಲಿಖಿತ]

ಸಿಲದೆ (ನಾ). ಒಂದು ಬಗೆಯ ಔಷಧೀಸಸ್ಯ: ಅಂಡವಾತಕ್ಕೆ . . . ಹಕ್ಕಿ ಕಾರ, ಸೊಗದೆ, ಸಿಲದೆ, ನಾಯುನಾರೆ, ಇವಂ ಆಡಿನ ಹಾಲಲ್ಲಿ ಕೊಡಿಸುವುದು (ವೈವಿ. ೧೪೭).

[<— ತಮಿ. ಚಿಲನ್ರಿ]

ಸಿಲಾಲಿಕಿತ್ತ (ನಾ). ಕಲ್ಲಿನಲ್ಲಿ ಕೆತ್ತಿರುವ ಬರಹ; ಶಿಲಾಶಾಸನ: ಸಿಲಾಲಿಕಿತ್ತ ಯಿದಕೆ ಯಿ ೩ ಹಳ್ಳಿ ಕಾಣಿಗೆ (ಎಕ. IX (S). ಕಾಸಕಾ. ೩೦-೮: 1332).

[IP ಇದು 'ಶಿಲಾಲಿಖಿತ' ಎಂಬುದರ ಅಪಲಿಖಿತ]

ಸಿಲಾಸ್ತಂಭ (ನಾ). ಕಲ್ಲುಕಂಬ; ಶಿಲಾಸ್ತಂಭ: ಸಸಿರವಿಕಿರಣತತಿಗಳುಳ್ಳನ್ನೆಗಮಿ ಶಾಸನದ ಸಿಲಾಸ್ತಂಭಂ ಭಾಸುರತರಮಾಗಿ ನಿಲ್ಕೆ ವಸುಧಾತಲದೊಳ್ (ಸೌಶಾ. XI-i, ೧೪-೨೫; 872). [IP ಇದು 'ಶಿಲಾಸ್ತಂಭ' ಎಂಬುದರ ಅಪಲಿಖಿತ]

ಸಿಲುಕಂಬು (ನಾ). ಅಲಗಿನಿಂದ ಕೂಡಿರುವ ಒಂದು ಬಗೆಯ ಬಾಣ: ನೀಳದಾರಂ ಬಿಗಿದ ಸಿಲುಕಂಬಿನಿಂ . . . ಮಿನ್ಗಳಾ ತವಿಸುತಿಹ ಬೇಡರಂ ನೋಡಿದಂ ಭೂನಾಥನು (ಭಜಿಕಾ. ೫-೪೪).

[ಸಿಲುಕು$_3$ + ಅಂಬು$_2$/ ತೆಲು. ಚಿಲುಕುಟಮ್ಮು, ಚಿಲ್ಲುಟಮ್ಮು]

ಸಿಲುಕಿಟ್ಟಿ (ನಾ). ಮೊನೆಯುಳ್ಳ ಒಂದು ಬಗೆಯ ಈಟಿ : ಭೂರಿಭೀಕರವರಾಹನ ತಲೆ ಸಿಲುಕಿಟ್ಟಿ ಪೂರ್ಕೆವ ವಿಷದ ಜೇರ್ಕೊಳವೆ ಮಾರಿವೊಗದ ಡೆಂಕಣಿ ಮಸೆದಲಗುಗಳ್ತೋಜ್ಜಿಮುಪತಿಭಯಾಂಕುರವ (ಕಂಸವಿ. ೧೧-೧೩.೨). [ಸಿಲುಕು$_3$ + ಇಟ್ಟಿ$_2$]

ಸಿಲುಕಿಸು 'ಸಿಲ್ಕಿಸು' ನೋ.

ಸಿಲುಕು$_1$ 'ಸಿಲ್ಕು$_1$' ನೋ.

ಸಿಲುಕು$_2$ 'ಸಿಲ್ಕು$_2$' ನೋ.

ಸಿಲುಕು$_3$ (ನಾ). ಅಲಗು; ಮೊನೆ: 'ಸಿಲುಕಂಬು', 'ಸಿಲುಕಿಟ್ಟಿ' ಪರಾ.

[ದೇ. ॥ ತಮಿ. ಚಿಲುಕ್ಕು = ಕಬ್ಬಿಣದ ಸಲಾಕೆ ; ತೆಲು. ಚಿಲುಕು]

ಸಿಲುಕು$_4$ 'ಶಿಲುಕು' ನೋ.

ಸಿಲುಕುಗಟ್ಟಿಗೆ (ನಾ). ಬೇಟೆಯ ಒಂದು ಸಾಧನ; ಪ್ರಾಣಿಯು ಸಿಕ್ಕಿಹಾಕಿಕೊಳ್ಳುವಂತೆ ಅಳವಡಿಸಿರುವ ಮೊನಚಾದ ಕೋಲು , — ಕಟ್ಟಿಗೆ: ಸಿಲುಕು[ಪಾಕಾಂ. ಸಿಂಗ]ಗಟ್ಟಿಗೆ ಬೀಸುಗಣ್ಣ್ . . . ಭೇರುಂಡ ಸಿಂಹಪ್ರಕರವೆರಸಿ ಬೇಡರು ನೆರೆದರು (ಹಚಕಾ. ೫-೯); ಆ ಬೇಡಂ . . . ಹದವಿಲ್ಲು ಸರಳು ಪಲವಂದದ ಬಲೆ ಬಡಿಕೋಲು ಸಿಲುಕುಗಟ್ಟಿಗೆಯುಂ ಕೊರ್ಬಿದ ನಾಯ ಪಿಡಿದು ಬರುತಿರ್ಪ್ಪ ಕಂಡು ಮೃಗಂಗಳೆಲ್ಲ ಬೆದಱಿದವಾಗಳ್ (ನನ್ನಚಾ. ೫-೧೦೨). [ಸಿಲುಕು$_3$ + ಕಟ್ಟಿಗೆ$_1$]

ಸಿಲುಕುಗುದುರೆ 'ಸಿಲ್ಕುಗುದುರೆ' ನೋ.

ಸಿಲುಕುಬಳೆ (ನಾ). ಪ್ರಾಣಿಯು ಸಿಕ್ಕಿಹಾಕಿಕೊಳ್ಳಲು ಕೊಕ್ಕೆಯನ್ನು ಅಳವಡಿಸಿರುವ ಒಂದು ಬಗೆಯ ಬೇಟೆಯ ಸಾಧನ: ಸಿಲುಕುಬಳೆ ತಳುಕು ಬೌದಾರೆ ದಸಿ ಬಿಸುಗದಿರು ಸವಿವಾಯನೆಂಬ ನಾನಾಸರಳನು ಸೆಳೆದು (ಸೋಮಚ. ೫-೨೬). [ಸಿಲುಕು$_3$ + ಬಳ್$_2$]

ಸಿಲುಪಿ 'ಸಿಲ್ಪಿ' ನೋ.

ಸಿಲುಪು, ಶಿಲುವು, ಸಿಲುವು (ನಾ). ೧. (ದ್ರವಪದಾರ್ಥವು)ಮಂದವಲ್ಲದುದು; ತಿಳಿಯಾದುದು: ಕೆಂಪಾಗುವಂದದಿಂ ಕಾಸಿಕೊಂಡು ಸಿಲುಪಾದ ಮೊಸರಿನೊಳು ಹುಳಿ ಮಣಸು ಕರಿಬೇವಿನೆಲೆಯರಿಸಿನವನಿಕ್ಕಿಕೊಂಡು (ಸೂಪಶಾ. ೫-೧೧). **ಶಿಲುವು** : ೨. (ಕಾಗದ, ಬಟ್ಟೆ, ಲೋಹದತಗಡು ಮುಂತಾದುವುಗಳ) ತೆಳುವು ; ನವುರು: ಕಳಿಂಗದೇಶದ ಶಿಲುವಾದ ಪೀರೆಯನುಡಿಸಿ (ಸೌಗಂಧಿ. ೧೭೪-೬). **ಸಿಲುವು** : ೨. ''ಆಯತಾ — ನೀಳವಾಗಿ, ತನ್ನಿ — ಸಿಲುವಾಗಿ'' (ಪಾಹಾಟೀ. ೨-೩-೧೧೪ ವ); ಹಿರಿದು ಸಿಲುವಾ [ಪಾಕಾಂ. ತಳುಪಾ, ಸಿಲಪಾ]ಗಿ ಕಣಿಕವನೊತ್ತಿಕೊಂಡು (ಸೂಪಶಾ. ೧-೩೯). [?]

ಸಿಲುಬೆ 'ಶಿಲುಬೆ' ನೋ.

ಸಿಲುವು 'ಸಿಲುಪು' ನೋ.

ಸಿಲುವೆ 'ಶಿಲುಬೆ' ನೋ.

ಸಿಲ್ಕ$_1$, ಸೆಲ್ಕ$_5$ (ನಾ). ಕಲ್ಲುಬಂಡೆ; ಅರೆ: ''ಸಿಲೆಯಂದೆನೆ ಶಿಲೆಯಕ್ಕುಂ'' (ಕವಿಂ. ೫೧); ಎಣ್ಸಿರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು ಸಿಲೆಯಂ ತಂದು ತಲೆಯತ್ತಿಟ್ಟು ಪಟ್ಟರ್ದುದಂ ಕಾಷ್ಠಕೂಟಂ . . . ಕಂಡು (ವಡ್ಡಾರಾ. ೭೬-೨೮); ಸಿಲೆಯ ಮೇಲಾದೊಡಂ ಶಕುನಮಂ ನಿಜಿಪಂತೆ ನಿಜಿಸುವೆಂ ಪಂದಿಯಂ ನೀಂ ಮೆಚ್ಚಲುಂ (ಪಂಪಭಾ. ೫-೪೬); ಸಿ[ಪಾಕಾಂ. ಶಿ]ಲೆಯ ಮೞೆಯ ಹೇಮದಂತೆ (ಮಹಾದೇ. ಬ. ೯-೨). **ಸೆಲ್ಕ$_5$** : ಪಾಸಱೆಗಳುಮಂ ಕನಕದ ಪಿರಿಯ ಸೆಲೆಗಳುಮನೊಟ್ಟಿ ಬೆಟ್ಟಾಗಿ ಪುಂಜಿಸಿ (ಪಂಪಭಾ. ೬-೩೧ ವ); ಅಣುವಂ ಸಿಡಿಮಿಡಿಗೊಂಡಸವಸದಿಂ ದಪ್ಪಗವಗೆಯನಂ ಕೈಯ ವೆರ್ಮರನೊಳ್ ಸೆಲೆಯೊಳ್ ಮಲೆಯೊಳ್ ಮಲೆದು ತಾಗಿದಂ (ರಾಮಾಶ್ವ. ೧೩೧-೨೪).

[< ಸಂ. ಶಿಲಾ]

ಸಿಲ್ಕ$_2$ (ನಾ). ಉಕ್ಕಿನ ಕವಚ; ಚಿಲಖಿತ್ತ್ರ: ಖಾನಖಾನರು ಪೌಜ ಬೇಱೆ ಬೇಱೆಳವಡಿಸಿಯೆ ನಡೆತರಲು ಸಿಲೆಯ ಸಂಜೋಗದ ರಾವುತರೊಗ್ಗಲಿ ಖಳನೈತಂದ ನುಬ್ಬಿನಲಿ (ಕಂಸವಿ. ೧೧-೨೯); ತಲೆ ಠವುಳಿ ಜೋಡುದಗಲೆ ಬೆನ್ನೊಳಳವಟ್ಟ ಬಲುಬಾಣಗಳ ಬತ್ತಳಿಕೆಯ ಸಿಲೆಯ ಸಂಜೋಗದ ಕುದುರೆಯ್ಮತಂದುವು (ಕಂಸವಿ. ೧೮-೮೩).

[<— ಅರ. ಸಿಲಾಹ್; ಮರಾ. ಸೀಲ, ಸೀಲ್ಕಾ]

ಸಿಲೆದಾರ 'ಶಿಲೆದಾರ' ನೋ.

ಸಿಲೇದಾರ 'ಶಿಲೆದಾರ' ನೋ.

ಸಿಲ್ಕಾಸಿಲ್ಕಿ (ನಾ). (ಆಲಂ) (ತರ್ಕದ ರೀತಿಯಲ್ಲಿ) ಒಂದಕ್ಕೊಂದು ತೊಡರಿಕ್ಕುವುದು; ಒಂದು ಅಡ್ಡಿಗೆ ಇನ್ನೊಂದು ಅಡ್ಡಿಯನ್ನು ಒಡ್ಡುವುದು: ನಾಲ್ಮುಮುಪಾಯದ ನುಡಿಗಳ ಸಿಲ್ಕಾಸಿಲ್ಕಿಗಳನೆಯ್ದೆ ನುಡಿದೆ (ಶಾಂಕಿಪ್ರ. ೩-೯೧).

[< ಸಿಲ್ಕು$_2$ + ಸಿಲ್ಕು$_2$ + - ಇ$_3$]

ಸಿಲ್ಕಿಸು , ಸಿಕ್ಕಿಸು , ಸಿಲುಕಿಸು (ಕ್ರಿ). ೧. ಬಂಧನಕ್ಕೊಳಗಾಗುವಂತೆ ಮಾಡು; ಸಿಕ್ಕಿಕೊಳ್ಳುವಂತೆ ಮಾಡು: ಮಿಳಿರ್ವ ಬಂಬಲ್ಗುರುಳುಗಳೆಂಬ ತೊಡಂಕುವಲೆ ಬಸಂತನ ಕೆಳೆಯನೆಂಬರೆಲೆಯಂ ಸಿಲ್ಕಿಸೆಯುಂ (ಕಬ್ಬಿಗಾ. ೧೨೩). **ಸಿಕ್ಕಿಸು** : ೧. ಒಳಹೊಗಿಸಿ ಸಾತ್ಯಕಿಯ ಸಿಕ್ಕಿಸಿ ಗೆಲುವ ತವಕವ ಕಂಡು ಕೆಣಕಿದರಳವಿಯಲಿ ಸಹದೇವನಕುಳರು ಕೌರವಾನುಜನ (ಕುವ್ಯಾಕ. ೪-೫); ಹಕ್ಕಿಗಳರಸ ಜೀಮೂತವಾಹನಗೆ ದುಮ್ಮಿಕ್ಕಿದೊಲೆಱಗಿ ರಕ್ಕಸನ ಸಿಕ್ಕಿಸಿ ತಲೆಮುಱಿವಂತೊದ್ದು ನೆಲದೊಳಗಿಕ್ಕಿದ ಕಾಮ ಖಾತಿಯಲಿ (ಮೋಹತ. ೧೨-೯೪). ೨. ಒಳಪಡಿಸು; ಗುರಿಯಾಗಿಸು: ಕನ್ನಡ ಮಾತುಗಳನ್ನು ಬಗೆಬಗೆಯ ಪ್ರಸಂಗಗಳಿಗೆ ಹಚ್ಚಿ ತೀಡಬೇಕು . . . ಅನ್ಯಭಾಷಾಪದಗಳ ಸಂಪರ್ಕ ಸಂಘರ್ಷಣೆಗಳಿಗೆ ಅವನ್ನು ಸಿಕ್ಕಿಸಬೇಕು (ಸಾಹಿಶ. ೬೩); ನನ್ನನ್ನು ಈ ಇಕ್ಕಟ್ಟಿಗೆ ಸಿಕ್ಕಿಸಬೇಡ (ರೂಢಿ). ೩. ಒಳಹೊಗಿಸು; ತೂರಿಸು: ಅಲ್ಲಲ್ಲಿ ಊದುಕಡ್ಡಿ ಸಿಕ್ಕಿಸಿತ್ತು (ಕೀಲುಗೊ. ೧೫೨); ಬೆಟ್ಟಕ್ಕೆ ಹೋಗುವವನ ಸೊಂಟದಲ್ಲಿ ಕುಡುಗೋಲು ಸಿಕ್ಕಿಸಿದ ಹಾಗೆ (ಗಾದೆ). ೪. ನೇಲುವಂತೆ ಮಾಡು; ನೇತುಹಾಕು: ಅವರು ಅಂಗಿಯನ್ನು ಗೂಟಕ್ಕೆ ಸಿಕ್ಕಿಸಿದ್ದರು (ರೂಢಿ). ೫. ದೊರಕುವಂತೆ ಮಾಡು; ಲಭಿಸುವಂತೆ ಮಾಡು: ನನ್ನ ಸಮಯಕ್ಕೆ ಹಣ ಸಿಕ್ಕಿಸುವ ಜವಾಬ್ದಾರಿ ನಿನ್ನದು (ರೂಢಿ). **ಸಿಲುಕಿಸು** : ೧. ಬೆಳ್ಳಾರಬಲೆಗಳ ಹರಹಿ ಸೊಪ್ಪಿನ ತೋಹಿನಲಿ ಸಿಲುಕಿಸಿದರಾ ಮೃಗನ (ಕುವ್ಯಾಅ. ೨೩-೧೦); ನಿನ್ನ ಮುತ್ತಿನಂಥ ಮಕ್ಕಳ ಆಟಪಾಟ ನನ್ನನ್ನು ನಿನ್ನ ಋಣದಲ್ಲಿ ಸಿಲುಕಿಸಿವೆ ಗೊತ್ತೇ? (ಕಂಬಹು. ೧೨೩). ೨. ನನ್ನನ್ನು ಈ ಗೊಂದಲದಲ್ಲಿ ಸಿಲುಕಿಸಿ ತಮಾಷೆ ನೋಡಬೇಡ (ರೂಢಿ). [ಸಿಲ್ಕು$_1$ + – ಇಸು$_3$]

ಸಿಲ್ಕು$_1$, ಸಿಕ್ಕು$_1$, ಸಿಗು, ಸಿರ್ಕು$_1$, ಸಿಲುಕು$_1$ (ಕ್ರಿ). ಸಿಕ್ಕ$_1$ (ಭೂತಕೃ), ಸಿಕ್ಕು$_2$ (ಭೂತನ್ನೂ). ೧. ಬಂಧನಕ್ಕೊಳಗಾಗು; ಕಟ್ಟುಬೀಳು; ಸೆರೆಯಾಗು: "ಸಿರ್ಕು, ಸಿಲ್ಕು – ಪ್ರತಿಬಂಧೇ" (ಶಮಧಾ); ಬಾಟ್ಟ ಪಂಬಲದೇನಿಂ ನಿನಗುಂಟೆ ನಿನ್ನನುಜರಂ ಕಂಡೆಂತುಮೇನ್ನೆ ತೋಳ್ವಲೆಯೊಳ್ ಸಿಲ್ಕಿದೆಯೆಂದು ಮೂದಲಿಪುದುಂ (ಪಂಪಭಾ. ೧೨-೧೪೬); ಇದಱ ಬಲೆಯೊಳ್ ಸಿಲ್ಕವೇಡ (ಪಂಚತಂ. ೨೩೩-೬); ಮಾಕಂದಮಹೀಜದ ಮಧುರಫಲವನಾನಂದದಿ ಕಂಡಾಯೆಡೆಗೆಯ್ದುತ್ತಲ್ಲಿಯ ಬಲೆಯೊಳ್ ಸಿಲ್ಕಿ (ಜಯಕಾ. ೨-೩೩). ೨. ತೊಡಕಿಕೊಳ್ಳು; ತೊಡರಿಕೊಳ್ಳು: ಉಱುವ ಕಾಳ್ಗಿಚ್ಚಿನೊಳು ಸಿಲ್ಕಿದ ಗಱಿ ನೆಱೆಯದಂಚೆಯವೊಲಾದರು . . . ಶೋಕೋದ್ರೇಕ ಪರವಶರು (ಶಾಸಂಚ. ೭-೪೨); ಅವನಂ ನೋಳ್ಪ ಸುರುಚಿರಪಲ್ಲವಪಾಣಿಯ ತನುತನು ಪಿರಿದುಂ ನಡುಗಿ ಮನೋಹರಮಾದುದು ಪರಿವೊನಲೊಳ್ಸಿಲ್ಕಿದ ನವಮೋಹನಲತೆ ಕಂಪಿಸುವಂತೆ (ಜಯಕಾ. ೪-೨೦). ೩. ದೊರಕು; ಲಭಿಸು; ಲಭ್ಯವಾಗು: ಪಿಂಜರಿವಟ್ಟಲೊಳ್ಮೆಱುಪ ಸೀಧುವನೀಂಟುತೆ ನೋಡಲಲ್ಲಿ ಮೇಣ್ಮಂಜುಮುಖೇಂದು ಬಿಂಬಿಸೆ ಸುಧಾರುಚಿ ಸಿಲ್ಕಿದನೆಂದು ನೋಟ್ಟ ತಕ್ಕಂಜದಳಾಕ್ಷಿಯಂ . . . ಜಱಿದು (ಉದ್ಭಟ. ೫-೭೮); ಕಕ್ಕಸವೇಡನೋರ್ವನುಱೆ ಬೇಂಟೆಯನಾಡಲೊಡಂ ಪುಡುಂಕಿ ಬಲ್‌ಪಕ್ಕಿಗಳಂದು ಸಿಲ್ಕಿದವು (ಹಮ್ಮೀರ. ೪-೬೨). ೪. ವಶವಾಗು; ಅಧೀನಕ್ಕೊಳಪಡು: ಮಿಥಿಳಾಪತಿ ಸಿಲ್ಕಿದಂ . . . ಸೇನೆ ಪರೆದುದೆಣ್ಣೆಸೆಗಾಗಳ್ (ದಶಕು. ೨-೨೮). ೫. ಸಿಕ್ಕಿಬೀಳು; ಪತ್ತೆಯಾಗು: ಸಿಲ್ಕಿದೈ ಪೋ ಪೊಱಮಡು ಕೊಳದಿಂ ಸತ್ತೊಡಂ ಪುಟ್ಟ ನೀನೀಗಡೆ ದಲ್ ಕೊಂದಪ್ಪೆಂ (ಪಂಪಭಾ. ೧೩-೭೮). ೬. ಎಟುಕು; ನಿಲುಕು: ಇಡೆ ತಿರುಗುತ್ತ ಬರ್ಪ ಬಡಿಕೋಲೊಳೆ ಸಿಲ್ಕುತೆ ಸಿಲ್ಕದಾ ಮೊಲಂ ಗಿಡುಗಳೊಳೋಡಿ ಪೊಕ್ಕ ಪದದೊಳ್ (ಗಿರಿಕ. ೧-೮೮); ಪಿಡಿವ ತಳಕ್ಕೆ ಸಿಲ್ಕುತುಮುಮರ್ಚಿದೊಡಂ ನುಸುಳುತ್ತುಂ . . . ಚಮರೀಮೃಗಶಾಬಮಿಂತು ಸಂಗಡಿಯೊಳ್ ಪೋಗೆಪೋಗೆ ಬಱಿಯಂ ಬಿಡದೈದುತುಮಿರ್ದಂ (ಕುಸುಮಾ. ೭-೮೦). ೭. ಸೇರು; ಕೂಡು: ನೀಳನೀರಜವನಂಗಳ ಚೆಲ್ವುಗಳೆಂಬುವಾ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ ಸಿಲ್ಕಿನ ಸಿಲ್ಕಿವಲ್ಲವೇ (ಪಂಪಭಾ. ೪-೭೦); ತಕ್ಕು ಕಡಂಗಿದಚ್ಚಸವಿನೋಟಕೆ ಸಿಲ್ಕಿದ ದಿಟ್ಟಿ ಮೂರ್ಛೆಗೊಲ್ದಿಕ್ಕುವ ಚೇತನಂ . . . ಒಪ್ಪೆ ಶಿವೆಯಂ ನಲಿದರ್ಚಿಸುತೊಪ್ಪಿದಂ ನೃಪಂ (ಉದ್ಭಟ. ೪-೩); ನಿಮಿರ್ದುವು . . . ಸಮದೃಷ್ಟಿಯಾಗಿ ಸಿಲ್ಕಿದುವೆಮೆಯಿಕ್ಕಲ್ಮಱೆದುವವಳ ಧವಳಕಟಾಕ್ಷಂ (ಶಮದ. ೨೨೫ ಪ್ರಯೋ). ೮. ಚುಚ್ಚಿಕೊಳ್ಳು; ನಾಟು; ಒಳಸೇರು: ಅಡಿಯಲ್ಲಿ ಸಿಲ್ಕಿದ ಮುಳ್ಗಳಂ ನಿಲ್ಲದೊತ್ತಿ ಪುಳುಂಬಿನಿಂ ಕಳೆಯುತ್ತ . . . ಅರಣ್ಯಸಂಚರನೊಪ್ಪಿದಂ (ಉದ್ಭಟ. ೪-೧೨೦). **ಸಿಕ್ಕು$_1$** : ೧. ಸಿಕ್ಕಿದೆರಲೆಯಂತೆ ಪಲ್ಲ ಸಂದಿಯಡಕೆಯಂತೆ (ಧರ್ಮಾಮೃ. ೯-೨೩); ಬಹುಕಾಂಕ್ಷೆಯೊಳು ಸಿಕ್ಕಿ[ಪಾಠಾಂ. ಲ್ಕಿ]ದಂತಿರಬೇಕು ನಿಃಸ್ಪೃಹನಾಗಬೇಕೆದೆಯೊಳಗೆ (ಭರಚ. ೨-೯); ರೊಕ್ಕಗಳಿಲ್ಲ ಮೋಕ್ಷಕ್ಕೆ ನಾ ಸಿಕ್ಕಿ ದಕ್ಕಿದೆ ನಿನಗೆ (ಕಂನವಿ. ೨-೧೦೫). ೨. ಘನವಿಟಪಕೋಟಿಯೊಳ್ ಸಿಕ್ಕಿ[ಪಾಠಾಂ. ಸಿಲ್ಕಿ] ನಿಂದ ತಾರಗೆಗಳಿಲರಿನುದಿರ್ದಪು ವಿಳಿಗೆಂಬಿನೆಗಂ . . . ಬಿರಿದ ಬಿದಿರ ಮುತ್ತುಗಳುಗುಗುಂ (ವರ್ಧಪು. ೧೦-೪೨); ಮೃಡನಱಿದು ನಗುತೊತ್ತಲಾ ಗಿರಿಯಡಿಯಲೇ ಕೈಸಿಕ್ಕಿಯಜ ನಡನಡುಗಲೊದಱಿದನವನು ವರುಷಸಹಸ್ರಪರಿಯಂತ (ತೊರರಾ. ೧-೮-೩೨). ೩. ಸಿಕ್ಕಿತೇ ನಮಗೀಗಲಡವಿಯ ಮೆಕ್ಕಲು (ಸಂಭಪ. ೭-೩೭); ಈ ಹವ್ಯಾಸದಿಂದಲೇ ರಾಯರಿಗೆ 'ಚಾಕ್ಲೇಟು ಕಾಕಾ' ಎಂಬ ಬಿರುದು ಸಿಕ್ಕಿತು (ಕಂಬಹು. ೧೨೧); ದೂರದ ನೀರು ದಾರೀಲಿ ಸಿಕ್ಕೀತೆ? (ಗಾದೆ). ೪. ಸಿಕ್ಕಿದ ಕಳ್ಳನಂತೆ ಪಲವಂ ನೆನೆಯುತ್ತುಂ (ಧರ್ಮಾಮೃ. ೧-೧೪೪); ಹಕ್ಕಲಾದುದು ನಮ್ಮ ಬಲ ಶಿಶು ಸಿಕ್ಕನಿನ್ನೂ ಪಾಂಡವರ ಪುಣ್ಯಕ್ಕೆ ಸರಿಯಿಲ್ಲೆನುತ ಕೌರವರಾಯ ಗರ್ಜಿಸಿದ (ಕುವ್ಯಾದ್ರೋ. ೫-೮೦); ಓಡಿ ಸಿಕ್ಕಬೇಡ, ಆಡಿ ತಪ್ಪಬೇಡ (ನೀತಿಚಿಂ. V, ೧೭). ೫. ಮೊನ್ನೆ ಅವರ ಮನೆಯಲ್ಲಿ ಕದ್ದ ಕಳ್ಳ ಸಿಕ್ಕಿದ್ದಾನೆ (ರೂಢಿ). ೬. ಕಂಡುದ ಹಿಡಿಯಲೊಲ್ಲದೆ ಕಾಣದುದನಱಿ ಹಿಡಿದಹೆನೆಂದಡೆ ಸಿಕ್ಕದೆಂಬ ಬಳಲಿಕೆಯ ನೋಡಾ (ಅವಚಂ. ೪. ೨೪-೫೧); ಆ ಎತ್ತರದ ರೆಂಬೆಯಲ್ಲಿರುವ ಹೂವು ಕೈಗೆ ಸಿಕ್ಕುವುದಿಲ್ಲ (ರೂಢಿ). ೯. ಈಡಾಗು; ಗುರಿಯಾಗು: ಈ ಮಹಾಸ್ತ್ರಕೆ ಸಿಕ್ಕಿದವೆಯೆಂದೊಱಲಿತರಿಸೇನೆ (ಕುವ್ಯಾದ್ರೋ. ೧೯-೩೪); ಲಾಗಿಸಿ ನಭಕುಪ್ಪರಿಸುವ ಬಂದಿದಿರಾಗಿ ನಿಲ್ಲುವ ಭೂತದಂತೆ ತಾಗುವ ಶಸ್ತ್ರಕೆ ಸಿಕ್ಕದೆ ಬಯಲಾಗಿ ತಾಗಿ ಗರ್ಜಿಪ ಸಿಂಹದಂತೆ (ಮೋಹತ. ೧೧-೬೮). ೧೦. ಭೇಟಿಯಾಗು; ಸಂಧಿಸು: ನೀವು ನಿಲ್ಲಾಣದ ಹತ್ತಿರ ಸಿಕ್ಕಿದ್ದಿರೆಂದು ಭಾಸ್ಕರನೂ ಹೇಳಿದ್ದ (ಕಮನಿ. ೧೫೦). ೧೧. (?) : ತಂಡತಂಡದೆ ಕೃಷ್ಣನಗರಿಯೊಳ್ ಚಲಿಸುವ ಮಂಡಳಿಕರ ಕಾಲ ಕಡಗ ವೆಂಡೆಯ ತಾಟಾಡಿ ಸಿಡಿದ ರತ್ನಗಳ ಕೈದಂಡೆಯೊಳ್ ಸಿಕ್ಕಿ ಬಾಚುವರು (ಮೋಹತ. ೩-೭೧). **ಸಿಗು** : ೧. ತ್ರಿಕೂಟಗಳ ತಿರುಗಣೆಯಲ್ಲಿ ನನ್ನ ಅಂತರಾತ್ಮವು ಸಿಕ್ಕು ಹೊಯ್ದಾಡಹತ್ತಿತ್ತು (ಮುಂಗಾಪು. ೪೨); ಈ ಆಸೆಗಳ ಕಾಮನೆಗಳ ಜಾಲದಲ್ಲಿ ಸಿಕ್ಕ ಮಾನವ ಸತ್ವರಜತಮೋಗುಣಗಳ ಕೈಗೊಂಬೆಯಾಗುತ್ತಾನೆ (ಧರ್ಮಸಾ. ೧೩೧). ೩. ಸೊನ್ನಗಾರಗೆ ಶುದ್ಧಭಂಗಾರ ದೊರೆಯೆ ಸಂಪನ್ನಚಿತ್ರಕಗೆ ಸುಂದರಗಾತ್ರ ಸಿಗಲು . . . ಏಸಗದಿರ್ದಪರೆ ನಗವನಾಕಾರನಿಸ್ಸಂಗಮಾಲಾಕೃತಿಗಳ (ಪರಶು. ೧-೨೦); ಸಿಕ್ಕ ಬೇಟೆಯನ್ನು ಎಲ್ಲರೂ ಸರಿಯಾಗಿ ಹಂಚಿಕೊಳ್ಳಬೇಕು (ಮುಂಬಯಿ. ೪-೧೦); ಇಂಥವರು ಜಗತ್ತೇ ಸುತ್ತಿ ಬಂದರೂ ಸಿಗಲಾರರು (ಭಾರತಿ. ೫೬). ೬. ಸಂಗಡಿಯನ್ನು . . . ಆ ಹುಡುಗನ ಕೈಗೆ . . . ಸಿಗುವ ಹಾಗೆ ಹೊಳೆಯಲ್ಲಿ ತೇಲಿಬಿಟ್ಟನು (ಮುಂಬಯಿ. ೪-೩೮); ಮೇಲಿನ ರೆಂಬೆಯಲ್ಲಿರುವ ಹೂವು ನನ್ನ ಕೈಗೆ ಸಿಗುತ್ತಿಲ್ಲ (ರೂಢಿ). ೧೦. ರಜೆಯ ಮೇಲಿರುವುದರಿಂದ ಇಂದು ಅವರು ಕಚೇರಿಯಲ್ಲಿ ಸಿಗುವುದಿಲ್ಲ (ರೂಢಿ). **ಸಿರ್ಕು$_1$** : ೧. "ಸಿರ್ಕು, ಸಿಲ್ಕು – ಪ್ರತಿಬಂಧೇ" (ಶಮಧಾ); ಸೊರ್ಕಿ ಶರೀರ ನಾರಿ ಧನವೆನ್ನವೆಂದವರಲ್ಲಿ ಕಣ್ಮನಂ ಸಿರ್ಕಿ ವಿವೇಕಿಗಳ್ನೊಡಿದ ಧರ್ಮಮನೊಲ್ಲದೆ . . . ಅಂತಕನೊಯ್ಯ ಕಾಲದೊಳ್ ಮರ್ಕಟನಂತೆ ಪಲ್ಲಿರಿವರು (ನೀತಿಸಾ. ೯೮೮). ೨. ನಳಿನೀಸಂಪತ್ತಿಸೂತಂ ಪೆಱಗುಡುಗೆ ಹಯಂ ಜಾಱಿ ತೋಳ್ಬಾಱಿ ತೇರ್‌ವ್ಯಾಕುಳ ಚಕ್ರಂ ಸಿರ್ಕೆ ಶೃಂಗಾಗ್ರದಿನಿಱಿವೆಡೆಯೊಳ್ ಪದ್ಮಿನೀಕೋಶದೇಶಾವಳಿಯಂ ಕೈಕೊಂಡು ಬೆಂಬತ್ತಿಸೆ (ಅನಂಪು. ೭-೬೨). **ಸಿಲುಕು$_1$** : ೧. ಮಾಯದ ಸಂಸಾರದಲ್ಲಿ ಸಿಲುಕಿದೆನು ಎನ್ನ ದೇವ . . . ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ (ಮಹಾದೇ. ಬ. ೧೪-೧೩); ಸಿಲುಕುವುವು ಮೃಗಪಕ್ಷಿ ಹೂಡಿದ ಬಲೆಗಳಲಿ ಕಾಡಾನೆ ಬೀಸಿದ ಬಲೆಯ ಕೊಂಬುದೆ (ಕುವ್ಯಾಕ. ೧೩-೧೪). ೨. ಮರದ ತುದಿಗೊಂಬುಗಳೊಳ್ ಪೊಳೆವುವು ಸಿಲುಕಿದ ತಾರಾವಳಿಗಳೆವೆನೆ ತೊಳಗಿ ಮೊಳೆವ ಕುಸುಮಾವಳಿಗಳ್ (ಕಾದಂಪೂ. ೯೪); ರಿಪುಭಟ ನಿಪಹಮಧ್ಯದೊಳೀತ ಸಿಲುಕಿದನು (ಕುವ್ಯಾದ್ರೋ. ೧೧-೧೭); ಮುಗಿಲ ಪೇರಲೆಗಳೊತ್ತಾಟ ದೊಳು ಸೆರೆ ಸಿಲುಕಿ ಚಂದಿರನ ಕಿರುನಗೆಯು ಮಾಯವಾಗುತಲಿರಲು (ಕವಿಕಾ. ೨೮-೬). ೩. ನೋಡುವರೆ ಕಾಣಬರುತ್ತಿದೆ ಮುಟ್ಟುವರೆ ಕೈಗೆ ಸಿಲುಕದು (ಅವಚಂ. ೧೬೬-೭೦೦); ಇವಳು ಬಹುವಿಧಪುಣ್ಯಶಕ್ತಿಯೊಳೆವಗೆ ಸಿಲುಕಿದಳೆಂದು (ಕುವ್ಯಾಸ. ೧೫-೯); ಸ್ತುತಿಗೆ ಸಿಲುಕದ ಅಪ್ರತಿಮ(ಮಹಾ)ಮಹಿಮ ನೀನೆ (ಪುರಂದ. ೨-೨೬-೩). ೪. ದ್ರೋಣಂಗರಸ ಸಿಲುಕಿದನೆಂದು ಬಗೆದ್ದೆ ಮರುಳೆ ಮುರವೈರಿಯ ಕಟಾಕ್ಷದ ಕಾಹು ಘನವೆಂದ

(ಕುಮಾರವ್ಯಾ. ೨-೬೪); ಈ ಸೂಳೆ ವಿನ್ನಣದೋಱೆ ಸಿಲುಕಿದನು (ಸಾಳ್ವಭಾ. ೧೭-೨೬); ನಾನು ಚಂದ್ರಗುಪ್ತನಿಗೆ ಸಿಲುಕಿದರೆ ಏನು ಮಾಡುವನೋ? (ಮುದ್ರಾಮಂ. ೧೬೭). ೫. ಸಂಭೋಗದಲಿ ಸಿಲುಕಿದನಿಂದ್ರನಾತನ ಸದೆದುದೀ ಮುನಿಶಾಪ ರೂಪಾಯ್ತಂಗ ವಬಲೆಯರ (ತೂರರಾ ೧-೧೨-೧೭). ೬. ಆಕಾರ ನಿರಾಕಾರವ ನುಂಗಿ ಬಯಲು ಸಮಾಧಿಯಲ್ಲಿ ಸಿಲುಕಿತ್ತು ನೋಡಾ (ಅಪಚಂ. ೧೬೬-೭೫೦); ಚಿತ್ತವೆನಗೊಬ್ಬನಲಿ ಸಿಲುಕಿತು ಮರಳಿಪೊಡೆ ಕಮಲಾಕ್ಷಿಗಳವಲ್ಲ (ನಳಚ. ೩-೩೩). ೯. ಪಾರ್ಥನ ಸರಳ ಚೂಣಿಗೆ ಸಿಲುಕಿದೆನು ಪರಿಹರಿಸಿ ನೀವು (ಕುಮಾಧೀ. ೧೦-೬); ನಾನು ನಿರಪರಾಧಿಯಾದರೂ ಸುಳ್ಳುಅಪವಾದಕ್ಕೆ ಸಿಲುಕಿದ್ದೇನಾದರೂ ನಿಮ್ಮ ಕ್ರೂರಕೃತ್ಯವನ್ನು ಕ್ಷಮಿಸುತ್ತೇನೆ (ಪಾಶ್ವಾಪು. ೧೬).

ಸಿಕ್ಕುಸಿಕ್ಕು$_1$, ಸಿಲುಕುಸಿಲುಕು, ಸಿಲ್ಕುಸಿಲ್ಕು (ದ್ವಿರುಕ್ತಿ) : ದಕ್ಷಿಣದ ಅರಸಂಗೆ ಸೊಕ್ಕಿನ ತುರುಕರು ಸಿಕ್ಕುಸಿಕ್ಕಳಿದು ಜಗವೆಲ್ಲ ವಶವಹುದು (ಸರ್ವಜ್ಞ. ೧೧೦೬); ನಾಭಿಯಿಂದ ಕೆಳಗೆ ವೇದನೆಯುಂಟಾಗಿ ಮೂತ್ರ ವಿವರ್ಣಗೂಡಿ ಸಿಕ್ಕಿಸಿಕ್ಕಿ ಮೂತ್ರ ಬಿಡುತ್ತ . . . ದಾಹವನೂ ಉಂಟುಮಾಡುವುದೂ ಅದೇ ಪಿತ್ತಾಧಿಕ್ಯವಾದ ಮೂತ್ರ ಕೃಚ್ಛ್ರವೆಂದರಿವುದು (ಸಕವೈ. ೩೭೦); ನೆರೆಯಿಲ್ಲ ಸಂಸಾರವಿಳಿದಂತೆ ಬಾವಿಯೊಳು ಸಿಲುಕಿಸಿಲುಕಿ ಭ್ರಮಿತನಾದೆ (ಪುರಂದ. ೧-೧೫೯-೧); ರುಧಿರಸ್ರೋತಂಗಳಂ ದಾಂಟಿದಾಂಟಿಭ ದೋರ್ನಿಲಲತಾಪ್ರತಾನವಿಪಿನವ್ರಾತಂಗಳೊಳ್ಸಿಲ್ಕಿಸಿಲ್ಕಿ ಭರಂಗೆಯ್ದುಱದೆಯ್ದು . . . ಕುರುಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣಂ ದ್ರೋಣನಂ (ಗದಾಯು. ೪-೪೭). ಸಿಕ್ಕಿಕೊಳ್, ಸಿಕ್ಕಿಕೊಳ್ಳು = ೧. ಸಿಕ್ಕಿಬೀಳು; ಸೆರೆಯಾಗು: ಎಲ್ಲಿ ನೋಡಿ ದೊಡಶ್ವಗಜರಥದೊಳಗಿರ್ದು ಚೆಲ್ಲಿದ ಕರುಳು ಕಾಲ್ಬಲೆಗೆ ಬಲ್ಲಿದ ಚಮರಿಯ ಮಿಗ ಸಿಕ್ಕಿಕೊಂಡಂತೆ ಝಲ್ಲಿಯ ಕುದುರೆ ಬಿದ್ದಿಹುವು (ಮೋಹಶ. ೪೦-೬೮). ೨. ಇಕ್ಕಟ್ಟಿನಲ್ಲಿ ಬೀಳು; ತೊಡಕಿಗೆ ಬೀಳು: ಕತೆ ಹೇಳಲು ಆರಂಭಿಸಿ ಈಗ ಪೇಚಿನಲ್ಲಿ ಸಿಕ್ಕಿಕೊಂಡಾಗಿದೆ (ಆಲಹಾ. ೩೩). ೩. ಒಳಹೊಗು; ಚುಚ್ಚಿಕೊಳ್ಳು: ಕಾಲಿನಲ್ಲಿ ಸಿಕ್ಕಿಕೊಂಡಿದ್ದ ಮುಳ್ಳು ಹೊರಗೆ ಬರದೆ ಕೀವಾಗಿ ಗಾಯವಾಯಿತು (ರೂಢಿ). ಸಿಕ್ಕಿಬೀಳು = ೧. ಬಂಧಿಸಲ್ಪಡು; ಸೆರೆಯಾಗು: ನಾವೀಗ ಬೋನಿನಲ್ಲಿ ಸಿಕ್ಕಿಬಿದ್ದೆವು (ನಡದಾ. II. ೮೮೦). ೨. ಸಿಕ್ಕಿಹಾಕಿಕೊಳ್ಳು; ಪತ್ತೆಯಾಗು: ಬೆಳ್ಳಿ ಸಿಕ್ಕಿಬಿದ್ದ ಕಳ್ಳನಂತಾದಳು (ಕಾಲೂರ. ೫ ಕಥಾಸಾರ). ಸಿಕ್ಕಿಹಾಕಿಕೊಳ್ಳು = ಸಿಕ್ಕಿಬೀಳು ೨: ಯಾರಿಗೂ ತಿಳಿಯದಂತೆ ಆತ ಕತ್ತಲಲ್ಲಿ ಮನೆ ಬಿಟ್ಟು ಹೊರಡುವಾಗ ನಾಯಿಯ ಬಗುಳುವಿಕೆಯಿಂದ ಸಿಕ್ಕಿಹಾಕಿಕೊಂಡನು (ರೂಢಿ). ಸಿಕ್ಕುಹಾಕು = ವಶವಾಗುವಂತೆ ಮಾಡು : ಕಳ್ಳರ ಕೈಗೆ ಸಿಕ್ಕುಹಾಕಿ ಹೋದೆಯೇನೋ ಎಂದು ಅರಚಿದಳು (ದೇವೀಚೌ. ೪೦).

[ದೇ. ॥ ತಮಿ. ಚಿಕ್ಕು, ಚಿಕ್ಕು; ಮಲ. ತೆಲು. ಚಿಕ್ಕು; ತುಳು. ತಿಕ್ಕು, ಸಿಕ್ಕು, ಸಿಕ್ಕಾವು, ಸಿಲ್ಕು; ಕೊಡ. ಚಿಕ್ಕ್; ಕೋತ. ಚಿಕ್; ಕೋಲಾ. ಸಿಕ್]

ಸಿಲ್ಕು$_2$, ಸಿಕ್ಕು$_3$, ಸಿರ್ಕು$_2$, ಸಿಲುಕ್ಕು$_2$ (ನಾ). ೧. ಬಂಧನ; ಸೆರೆ: ನೀಳನೀರಜವನಂಗಳ ಚೆಲ್ವುಗಳೆಂಬುವಾ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ ಸಿಲ್ಕಿನ ಸಿಲ್ಕಿವಲ್ಲವೇ (ಪಂಪಭಾ. ೪-೭೦); ನೀನಾರ್ಗೆ . . . ನಿನಗಿಂತೆಂತಾಯ್ತೂ ನಾಗಪಾಶಬಂಧ ವಿಧಾನದ ಬಲು ಸಿಲ್ಕು (ಪುಷ್ಪಪು. ೫-೧೧೨). ೨. ಸೆರೆಯಾದ ವಸ್ತು ಮುಂತಾದುವು; ಬಂಧನಕ್ಕೊಳಗಾದುದು: ನೀಳನೀರಜವನಂಗಳ ಚೆಲ್ವುಗಳೆಂಬುವಾ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ ಸಿಲ್ಕಿನ ಸಿಲ್ಕಿವಲ್ಲವೇ (ಪಂಪಭಾ. ೪-೭೦). ೩. ಗೊಂದಲ; ತೊಡಕು; ತೊಡರು: ಎಲ್ಲಂಗಮೆಲ್ಲ ಧನಮುಮನೆಲ್ಲೆಡೆಯೊಳಮೆಲ್ಲ ತೆಱದೊಳಂ ಕುಡುಗೆಮ ಸಿಲ್ಕಿ[ಪಾಠಾಂ. ರ್ಕೆ,ಕೈ]ಲ್ಲದೆ ಬವರದೊಳೇಂ ಗಳ ಗೆಲ್ಲಂಗುಡದಿರ್ಕೆ ಪೊಣರ್ದೊಡಾರ್ಗಂ ಗಂಡಂ (ಕಾವ್ಯಾವ. ೨೫೩); ಬಲ್ಕೆವೆತ್ತಾ ಪೂರ್ವೆಯೆಂದರೆಚ್ಚೆಂಬುದ ಸಿಲ್ಕಾಗದಂತೆ ಪೇಳುವೆನು (ಭರಚ. ೭೬-೭). ೪. ಅಡ್ಡಿ; ತಡೆ; ನಿರ್ಬಂಧ: ಬರೆ ಮೂತ್ರ ಪುರೀಷದ ಸಿಲ್ಕಿ[ಪಾಠಾಂ. ಕೈ]ರೆ ಬೀಟ್ಟುಂ ವಾಜಿ ವಿಗತಜೀವಿತನಕ್ಕುಂ (ಅಶ್ವಶಾ. ೬-೪೫). ೫. ಮೀನು ಮುಂತಾದುವನ್ನು ಸೆರೆಹಿಡಿಯುವ ಬಲೆ, ಗಾಳ ಮುಂತಾದ ಸಾಧನ: ಕಾಡೊಡೆಯಂ ತೋಡಿಲ್ಲದ ತೊಱೆವೇಂಟೆಯಾಡಲೆಳಸುತಿಱೆಗೂಳಿ ಹಂಜರಗೂಳಿಡುಗಾಣಂ ಸೊರ್ಕು ಸಿಲ್ಕುರಿಲ್ . . . ಸೂಸುಗೂಳ್ಗಳೆಂಬವಂ ಕೊಂಡು (ರಾಜಶೇ. ೫-೧೧೪ ವ). ೬. ಅಗಡುತನ; ತುಂಟತನ: 'ಸಿಲ್ಕುಗುದುರೆ' ಪರಾ.

ಸಿಕ್ಕು$_3$: ೩. ಶರಣರ ಚರಣದ ರಜದೊಳು ಸರಳಿಸಿ ನೆಗೆದುರುಳಿ ಹೊರಳಿ ಹೊಂಗುವ ಸುಖಮಂ ಕರುಣಿಸಿ ಮಿಕ್ಕಿನ ಸಿಕ್ಕಿನ ವರಗಳನೊಲ್ಪೆಂ (ಶಾಕಂ. ೨೫-೯೮); ಉದಯದಲಿ ದೀಕ್ಷಿತರು ಕೋಣೆಯೊಳಗಡೆ ಕುಳಿತು ಸೂತ್ರದಾವುದೊ ಒಂದು ಸಿಕ್ಕ ಬಿಡಿಸಿ ಅರ್ಥವ ಬರಸುತಿಹರು (ಸುನೀತ. ೧೦-೧೪); ಒಟ್ಟಿನಲ್ಲಿ ಗ್ರಾಮದ ಎಲ್ಲಾ ಸಿಕ್ಕುಗಳೂ ಆಗ ತೀರ್ಮಾನವಾಗಿಬಿಡುತ್ತಿದ್ದವು (ಗರುಡಾ. ೮೮). ೪. ಸೊಕ್ಕಿದುರುಮಾನಂಗಳ ಗಂಟಲೊಳಕ್ಕಿದವಲಾ ಗಾಣ ಗಂಟಲ ಸಿಕ್ಕ ಬಿಡಿಸಿದೆ ಗರುವೆ ನೀನು (ಕುಮಾಸ. ೧೫-೫೫); ಸೂತಜನ ರಥದ ಗಾಲಿಗೆ ಸಿಕ್ಕ[ಪಾಠಾಂ. ಲ್ಕ]ನಿಕ್ಕಿದ ಮಹೀತಳದೊಳೆಡರಿಲ್ಲವಂಗೆ (ಕೃಮಭಾ. ೨೭-೪೨). ೭. ತೊಂದರೆ; ಕ್ಲೇಶ; ಕಷ್ಟ: ಸಿಕ್ಕು ರೋಗಾದಿಗಳು ಹೊದ್ದದ ಉತ್ಕಟದ ವರವೀಯಬೇಕು (ಕೌಶಿಂಗಾ. ೪೪-೩೪); ಕಪಿಲೆಯೊಂದು . . . ಕಱೆಯಲ್ಕೆ ಬರೆ ಕಱುವಿಗಂ ಮೊಲೆಯ ಕೊಡದೆ ಒಡೆವುತಿರೆಯುರನುಂಡುದೂ ಮನೆಯ ದೇವರಿಂದಿದಕೆ ಸಿಕ್ಕಾದುದೋ . . . ಎಂದು ತಮ್ಮೊಳು ಚಿಂತಿಸುತ್ತ (ಸಿದ್ಧೇಪು. ೯-೩೭); ಹೆಣ್ಣುಕೊಡದಿದ್ರೆ ಸಿಕ್ಕಿಲ್ಲ ತಮ್ಮಯ್ಯ ನಿನ್ನೂರ ಮೇಲೆ ಬರುತೀನೋ (ಹುಚ್ಚುಪ. ೧೦೧). ೮. ಕೂದಲು, ದಾರ ಮುಂತಾದುವು ಗಂಟುಗಂಟಾಗಿರುವುದು, — ಗೋಜಲಾಗಿರುವುದು: ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ . . . ಕೂದಲಸಂಗನ ಶರಣರೊಡನೆ ಮಱೆದು ಸರಸವಾಡಿದರೆ (ಬಸವ. ೬೭೦ ಆ); ಕಚಗಳ ಸಿಕ್ಕ ಬಿಡಿಸುತೆಣೆಗಂಟಿಕ್ಕಿ . . . ಅಂಗನೆಯರೊಪ್ಪಿದರು (ಕಂನವಿ. ೫-೫೪); ಮಲಗಿದ್ದಾಗ ಅದರ ತಲೆಯ ಸಿಕ್ಕು ತೆಗೆದು ಬಾಚಬೇಕೆಂದು ಅಪ್ಪಣೆ ಮಾಡಿತ್ತು (ಪಂಚಾಮೃ. ೧೦೧). ಸಿರ್ಕು$_2$: ೧. ಶ್ರುತದೊಳ್ ತಗುಳ್ದ ಕಡುಚಿಂತೆ ದುರ್ವಾಜಿಗಳೊಳ್ ತೊಡರ್ವ ಸಿರ್ಕು ನೆಗೆಟ್ಟ ಕರಿಗಳೊಳ್ ಪಿಡಿಕುತ್ತು ವರಭೂಷಣಂಗಳೊಳ್ ಮುತ್ತು (ಬಂಹರಿ. ೧-೧೯ ರಗಳೆ). ೩. ಕಸವರಮೆತ್ತನಂತಗುಣಮೆತ್ತ ಕಳತ್ರದ ಸಿರ್ಕಿದೆತ್ತ ನಿನ್ನಸದೃಶರೂಪದೂರ್ಧ್ವಗತಿಭಾವವಿದೆತ್ತ (ಜೀವಸಂ. ೭೭-೩೧); ಈ ಶಾಸನದ ರಾಯಸವನ್ನೋದಿದಷ್ಟರಿಂದ ಈ ಸಿರ್ಕಿನ ಕಷ್ಟಸನ್ನಿಗೆ ತಗುವ ಪ್ರತೀಕಾರವನ್ನೊಡ್ಡಿ ಗೆಲ್ಲಲಾಗುವುದೇನು? (ಮಂತ್ರಶ. ೧೪-೧). ೭. ಚಿತ್ರಭಾನುಸಂವತ್ಸರದೊಳ್ ಸಿರ್ಕಿಲ್ಲ ವ್ರತೆಗೆ ಶುಭದಂ (ಅಬ್ಬುಮ. ೭-೯). ಸಿಲುಕ್ಕು$_2$: ೨. ಬಾಟೆಯ ಗುದಿ ಬಲಗಯ್ಯೊಳ್ ಬಾಟೆಯ ಗೊನೆ ಪೆಗಲೊಳೊಪ್ಪೆ ಹಕ್ಕಿಯ ಸಿಲುಕಂ ತೋಳ ಮೊದಲೆತ್ತಿ ಬರುತಿರೆ ಬಾಳೆಯ ಕಯ್ ಪಿಡಿದು ವನಚರಂ ನಡೆತಂದಂ (ಸೂಕ್ತಿಸು. ೩-೧೭೧).

ಸಿಕ್ಕುಸಿಕ್ಕು (ದ್ವಿರುಕ್ತಿ) : ಪಾಶ್ಚಾತ್ಯವಿದ್ಯಾಂಸರು ಇಂಗ್ಲೀಷಿನಲ್ಲೂ ನಿರ್ದೇಶಿಸಿರುವರೆಂದು ಹೇಳುವುದನ್ನು ಸಿಕ್ಕುಸಿಕ್ಕಾಗಿ ಮಾಡಿ ಬಿಡಿಸಲಾಗದ ಗಂಟಿನಂತೆ ಒಂದು ಒಗಟಾಗಿ ಮಾಡಿಟ್ಟರೆಂದು ಹೇಳಬಹುದು (ದ್ರಾವಿವಿ. ೮೨). ಸಿಕ್ಕುಬಿಡಿಸು = ದಾರ, ಕೂದಲು ಮೊದಲಾದುವುಗಳ ಗಂಟನ್ನು ಬಿಡಿಸು, — ಗೋಜಲನ್ನು ಬಿಡಿಸು: ಮನದ ತಲೆಯನು ಹಿಕ್ಕಿ ಸಿಕ್ಕು ಬಿಡಿಸಲು ಹೋದ ಹಣೆಗೆಯೇ ಮುರಿದಿಹುದು ಹೆಣಗಿ ಹೆಣಗಿ (ಕಲ್ಲೋಲ. ೬೩-೪). ಸಿಕ್ಕುಮಾಡು = ೧. ಗಂಟುಗಂಟಾಗುವಂತೆ ಮಾಡು; ಗೋಜಲಾಗಿಸು: ದಾರದ ಸಿಕ್ಕು ಬಿಡಿಸು ಎಂದು ಕೊಟ್ಟರೆ ಮತ್ತಷ್ಟು ಸಿಕ್ಕು ಮಾಡಿರುವೆಯಲ್ಲ? (ರೂಢಿ). ೨. ತೊಂದರೆಯನ್ನುಂಟುಮಾಡು, ಕ್ಲೇಶವನ್ನುಂಟುಮಾಡು: ಎನ್ನಯ ಮಕ್ಕಳಿರ ನೀವಿಂದು ಬಂಧುಗಳೆಲ್ಲರನು ಕೊಂದು ಸಿಕ್ಕು ಮಾಡಿದಿರೆನ್ನೊಳು (ತಿಮ್ಮಸ್ತ್ರೀ. ೨-೭೩). ಸಿಲ್ಕಾದ ಕುದುರೆ = ತುಂಟುಕುದುರೆ; ಅಗಡುಕುದುರೆ: "ಸಿಲ್ಕಾದ ಕುದುರೆ ಸೂಕಳನೆನಿಕ್ಕುಂ" (ಮಂಗರಾ. ೮೨-೧೫).

[ದೇ. ॥ ತಮಿ. ಚಿಕ್ಕು, ಚಿಲುಕು, ಚಿಲುಕ್ಕು; ಮಲ. ಚಿಲುಕು; ತುಳು. ತಿಕ್ಕು, ಸಿಕ್ಕು; ತೆಲು. ಚಿಕ್ಕು, ಸಿಲುಗು, ಸಿಲುವು; ತೊದ. ಸಿಕ್]

ಸಿಲ್ಕು$_3$ 'ಶಿಲುಕು' ನೋ.

ಸಿಲ್ಕು$_4$ (ನಾ). ರೇಷ್ಮೆ : ಹಬ್ಬದ ಪ್ರಯುಕ್ತ ಪಾದಿ ಮತ್ತು ಸಿಲ್ಕಿನ ಬಟ್ಟೆಗಳ ಮೇಲೆ ರಿಯಾಯಿತಿ ಇದೆ (ರೂಢಿ). [<— ಇಂ. Silk]

ಸಿಲ್ಕುಗಾಣ್ (ಕ್ರಿ). ಸೆರೆಯಾಗು; ಬಂಧನಕ್ಕೊಳಗಾಗು: ಅಂಗಜಮಂತ್ರ ಸಿದ್ಧಿವಡೆದಂತಿರೆ ಮಾಂಬೊಣರಾಗಿ ಬಾಳ ಜಾಳಂಗಳ ಸಿಲ್ಕುಗಂಡುವು ಕುಮಾರಿಯ ಕಣ್ (ಅರ್ಧನೇ. ೨-೩೫). [ಸಿಲ್ಕು$_2$ + ಕಾಣ್]

ಸಿಲ್ಕುಗುದುರೆ, ಸಿಲುಕುಗುದುರೆ (ನಾ). ತುಂಟುಕುದುರೆ; ವಿಗಡಾಶ್ವ:

ಅದೇನಂತಹ ಕಟ್ಟಾಯದಾತುರಕೆ, ಪ್ಲುತಪ್ರಯಾಣಕ್ಕೆ ಉರವಣಿಸುತ್ತಿರುವ ಸಿಲ್ಕುಗುದುರೆಯು . . . ಕುಣಿದಾಡುತ್ತಿರುವಂತೆ? (ಮಂತ್ರಶ. ೭೩-೨೨). ಸಿಲುಕುಗುದುರೆ: "ಸೂಕಳನೆಂಬುದು ಸಿಲುಕುಗುದು[ಪಾಠಾಂ. ದಿ]ರೆ" (ಪಲಾಯು. ೭೨-೨೮೬).

[ಸಿಲ್ಕು$_2$ + ಕುದುರೆ]

ಸಿಲ್ಕುವಳಿ? (ಕ್ರಿ). ಗಟ್ಟಿಯಾಗಿ ದನಿಯೆತ್ತಿ ಕೂಗು (?) : ಎನ್ನ ಕೆಳೆಯನೊಳಗನಱಿದಪೆನೆಂದು ನಾಲ್ಕೈದು ಕೊರಲಂ ಸಿಲ್ಕುವಳಿದು (ಪಂಚತಂ. ೧೨೭-೫); ಪಲವುಂ ಸೂಟುಲಿದು ಪಲ್ಗರ್ಚಿ ಕಲ್ಲಸರದಿಂ ಸಿಲ್ಕುವಳಿದು ಮಾಣ್ಬುದುಂ (ಪಂಚತಂ. ೧೨೭-೧೨). [?]

ಸಿಲ್ಪಿ, ಶಿಲ್ಪಿ$_2$, ಸಿಲುಪಿ (ನಾ). ಊದುವ ಒಂದು ಬಗೆಯ ಸಾಧನ ಮತ್ತು ಅದರಿಂದ ಹೊರಡಿಸಬಹುದಾದ ಶಬ್ದ; ಸಿಳ್ಳು; ಸೀಟಿ: ಕಂದಕದಾರಿಯೊಳೋಡುತಲಿದೆ ಸಿಲ್ಪಿಯನೂದುತ ರೈಲು (ಕೋಗಿಲೆ. ೮೯-೨೨). ಶಿಲ್ಪಿ$_2$: ಬಂದೆಯಾ ಚೆಲುವಾ, ಬಾ ಅಂತ ಶಿಲ್ಪಿ ಹೊಡೆಯಿತು (ಚಿಂಗುಲಿ. ೧೧೪). ಸಿಲುಪಿ : ರೈಲುಗಾಡಿ ಸಿಲುಪಿಯನ್ನು ಊದಿ ಹೊರಟುಬಿಟ್ಟಿದೆ (ನಿಬಂಧ. I, ೨೫೩). [?]

ಸಿಲ್ಪಿನೀತೃಣ (ನಾ). ಒಂದು ಬಗೆಯ ಸಸ್ಯ: "ಶಿತಕ್ಷೇತ್ರಜಾ — ಸಿಲ್ಪಿನೀತೃಣ" (ಓಷಧಿ. ೧೬೭). [< ಸಂ. ಶಿಲ್ಪಿನೀತೃಣ]

ಸಿಲ್ಲಕು 'ಶಿಲುಕು' ನೋ.

ಸಿಲ್ಲಪಯ್ಯ (ನಾ). ಒಬ್ಬಾತನ ಹೆಸರು: ಗೊಮ್ಮಲಯ್ಯನ ಭಾವಂ ಸಿಲ್ಲಪಯ್ಯಂ ತಪೋಧನರ್ಗಂ ಚಾ(ಭಾ)ತ್ರರ್ಗಂ . . . ನಾಲ್ಕು ಮಾವಿನ ಮರನ ಬಿಟ್ಟು (ಎಇ. XXVIII, ೩೫-೫೭; 1002). [ಸಿಲ್ಲಪ್ಪ + ಅಯ್ಯ$_1$]

ಸಿಲ್ಲಿಮಿಳ್ಳಿ 'ಸಿಳ್ಳಿಮಿಳ್ಳಿ' ನೋ.

ಸಿಲ್ಹ (ನಾ). ಒಂದು ಬಗೆಯ ಸುಗಂಧದ್ರವ್ಯ; ಲೋಬಾನ; ಹಾಲುಮಡ್ಡಿ: "ತುರುಷ್ಕಃ, ಪಿಂಡಕಃ, ಸಿಲ್ಹಃ, ಯಾವನಃ . . . ತದುಕಿನ ಮಡ್ಡಿ ಎಂಬ ಧೂಪದ ಹೆಸರುಗಳು" (ಸಿದ್ಧಾಂತಿ. ೨೦೭). [ಸಂ.]

ಸಿವ, ಚಿವ (ಗು). ೧. ಮಂಗಳಕರವಾದ: ಸುಸ್ವಾಗತ ಸಿವಸುಗ್ಗಿಗೆ ಮೊಗ್ಗುಗಳೀ ಲಗ್ಗೆಗೆ (ಮಾನಸ. ೧೦-೧೭). (ನಾ). ೨. ಶಿವ; ಈಶ್ವರ: ರುದ್ರಸಟಿಯರ ದೆಸಭಾಗದ ಮಹಾಮತ್ತಿಗೆ ಸಿವಪ್ರೀತವಾಗಿ ಮಾಡಿದ ಭಕ್ತಿ (ಎಕ. V (R), ತಿರುಮ. ೨೦೧-೮; 1611). ಚಿವ : ೨. "ಚಿವಂ[ಪಾಠಾಂ. ಮಂ] ಶಿವಮೆನಲ್" (ಕರ್ಣಾಲಿ. ೭೧). [< ಸಂ. ಶಿವ]

ಸಿವಂಗಿ, ಶಿವಂಗಿ$_1$, ಸಿವ್ವಂಗಿ (ನಾ). ಚಿರತೆಯ ಜಾತಿಗೆ ಸೇರಿದ ಒಂದು ಬಗೆಯ ಕ್ರೂರಪ್ರಾಣಿ: ಒಂದಾನೊಂದು ಸಿವಂಗಿಯು ಹೊಟ್ಟೆಗೆ ಏನಾದರೂ ಸಿಕ್ಕಿತೆ, ಬಾಯಿಗೆ ಹಾಕಿಕೊಂಡೇನೆ ಎಂದು ಕಾದುಕೊಂಡು ಕೂತಿತ್ತು (ಸುಮಚ. ೪೬); ಸಿವಂಗಿ ಹಾಗೆ ಸಿರ್ ಅನ್ನಬೇಡ (ಚಂದತೋ. ೧೪). ಶಿವಂಗಿ$_1$: ಶಿವಂಗಿಗಳು ಕಡಹಗಳು ಕಾಡೆಮ್ಮೆಗಳು (ಸಿದ್ಧಕಾ. ೬-೩೨); ಹುಲಿಯ ಚರ್ಮದಿಂದಲೂ ಶಿವಂಗಿಯ ಚರ್ಮದಿಂದಲೂ ರಥಗಳನ್ನು ಅಲಂಕರಿಸಿ (ಕೃವಾಉ. ೨೪೪). ಸಿವ್ವಂಗಿ : ಸಾಳುವ ಡೇಗೆ ಸಿವ್ವಂಗಿಗಳು (ಅನಂರಾ. ೩-೩-೬). [ದೇ. ॥ ತಮಿ. ಚಿವಿಙ್ಕೆ; ಮಲ. ಸಿವಿನ್ನಿ; ತೆಲು. ಸಿವಂಗಿ, ಸಿವ್ವಂಗಿ, ಚಿವಾಗಿ, ಚಿವ್ವಂಗಿ]

ಸಿವಚೆಳ್ಳೆ (ನಾ). ಒಂದು ಬಗೆಯ ಸಸ್ಯ: "ಲಘುಶೀಲಃ, ಲಘುಶೀತ — ಈ ಯೆರಡುಂ ಸಿವಚೆಳ್ಳೆ" (ಓಷಧಿ. ೧೪೨). [ಸಿವ? + ಚೆಳ್ಳೆ (< ಸೆಳ್ಳ)]

ಸಿವಟ 'ಸೀವಟ$_2$' ನೋ.

ಸಿವಡಿ$_1$ 'ಸಿವುಡು' ನೋ.

ಸಿವಡಿ$_2$, ಸಿವುಂಡಿ, ಸಿವುಡಿ$_2$ (ನಾ). ಲೆಕ್ಕದ ಪುಸ್ತಕ; ವಹಿ; ಕಿರ್ದಿ: ಕೊಂಕುಬ ಸಿವಡಿಯ ಕೆಲದಡಪದ ಪಿಡಿದ ಕೊಡೆಯ . . . ಅಕ್ಕರಿಗರುಂ ಬಳಸಿ ಬರೆ (ಲೀಲಾವ. ೯-೫೪ ವ); ಪುರದ ಬಾಗಿಲ ಬೀಯಗಂಗಳನಿರಿಸಿ ಸಿವಡಿಯ ದಂಡಮುದ್ರೆಯ ನೊಪ್ಪಿಸಿದಂ (ಸಾನಂಚ. ೯-೯೯). ಸಿವುಂಡಿ : ಚನ್ನಾಗಿ ಬರದು ಸಿವುಂಡಿಯಾ ನಿರ್ನಯವಾಗಿರಿ[ಸಿ]ಕೊಂಡೂ ಲೆಕ್ಕವ ಮಱೆಯದೇ ತನ್ನ ಗುಣವಱಿತು ಹೇಳಲೂ ಮನ್ನಿಸುವನು ಶಾನುಭಾಗಾವುತ್ತಮನೆಂಬರು (ಗುಭಚ. ೧೭-೧೦೦). ಸಿವುಡಿ$_2$: ಸಿವುಡಿಯಿದು ಕರಣವಿದು ಮೇಲುಳ್ಳ ಸರ್ವಸ್ವವಿದು ನೋಡಿಕೋ ಮಹಾಪುರುಷ (ಹಚಕಾ. ೯-೪); ಎಸೆವ ಸಿವುಡಿಯಂ ದಂಡಮುದ್ರೆಯುಮನುರುತರದ ಬೀಯಗಮನುದ್ಯನ್ನಿಯೋಗಮ ನೆಲ್ಲವಂ ತರಿಸಿಯೊಪ್ಪಿಸಲೊಡಂ (ಪದ್ಮರಾ. ೬-೧೦೨); ಆ ಕಡೆಯ ಲೆಕ್ಕವೇನಾಯ್ತೆಂದು ಕೇಳ್ಬೋಲು ವಿವೇಕದಿಂ ನುಡಿದು ಕರೆಸಲು ಸಿವುಡಿ ಸಹಿತ ಬರಲು (ಸಂಗಿರಾ. ೧೬-೨೭).

[?]

ಸಿವಡು 'ಸಿವುಡು' ನೋ.

ಸಿವಡುಕಟ್ಟು 'ಸಿವುಡುಗಟ್ಟು' ನೋ.

ಸಿವಡುಗಟ್ಟು 'ಸಿವುಡುಗಟ್ಟು' ನೋ.

ಸಿವದಿಡು (ಕ್ರಿ). 'ಶಿವ ಶಿವ' ಎಂದು ದೇವರಲ್ಲಿ ಮೊರೆಯಿಡು; 'ಶಿವಧೋ' ಎಂದು ಕೂಗಿಕೊಳ್ಳು: ಪಲುಂಬ ಗೋಳಿಟ್ಟು ಆಲಿಟ್ಟು ಸಿವದಿಟ್ಟು ಮೊಱೆಯಿಟ್ಟು ಮೂರ್ಛಿಸುತ್ತೆ (ಬಸರ. ೪-೩೯); ಮಂದಿರಕ್ಕೆ ಮಂದಿರವೇ ಥರಗುಟ್ಟಿ ನಡುಗುವಂತೆ ಚೀರುವಳು . . . ಗೋಳಿಟ್ಟು ಸಿವದಿಟ್ಟು ಕೂಗುವಳು (ತುಂಗಭ. ೧೪೨). 'ಶಿವದಿಡು' ಪರಾ. [< ಶಿವಧೋ + ಇಡು$_1$]

ಸಿವನಿ, ಶಿವನಿ$_2$ (ನಾ). ಕುದುರೆಯ ಗುದಸ್ಥಾನದ ಕೆಳಭಾಗ: ಬಾಲದ ಮೊದಲೊಳು ತಿಕದೊಳುದರದೊಳುಂ ಸಿವನಿಯೊಳು ಕುದುರೆಗೆ ಸಿಳಿಯಾದೊಡೆ (ಅಶ್ವಪ್ಪ. ೪-೩೦). ಶಿವನಿ$_2$: ಗುದದೊಳ್ ವೃಷಣದೊಳಂ . . . ಶಿವನಿಯೊಳಂ ಕುದಿರೆಗೆ ಸುಟಿಯಾದೊಡೆ ಕೊಲ್ಲದೆ ಮಾಣ್ಬುಮೆ ರಣದೊಳಧಿಪನಂ ಮಾರ್ಗಣದೊಳ್ (ಅಶ್ವಶಾ. ೪-೩೦). [< ಸಂ. ಸೀವನೀ]

ಸಿವನೆ, ಶಿವನೆ, ಸಿಂದೆ, ಸಿನ್ನೆ (ನಾ). ಭೂಮಿಯ ಒಂದು ಅಳತೆ: ಮೊಂದು ಸಿವನೆ ಕೆಯಿ ಬೊಂಮ್ಮೆಯನಾಯಕಂಗೆ ಮುಂಬಳಿಯಾಗಿ ಬೀರರಸ ಕೊಟ್ಟದು (ಎಕ. VIII, ಸಾಗರ. ೭೮-೧೦; 1265); ಒಂದು ಸಿವನೆ ಕಬುನಾಡ ಚಂಣವಡ್ಡಿಯಲೊಂದು ಸಿವನೆ ತಮ್ಮ ಕೋಟೆನಾಯ್ಕ ಕೊಟ್ಟುದು (ಮೈಅರಿ. ೧೯೩೧, ೬೬-೧೧; ಸು. 1300). ಶಿವನೆ : ಶಿವನೆಯ ಕಿಱುದೆಱೆ ಕುಱುಕುಳಾಯ ಒಳಗಾಗಿ ಕಾಹಂ ಪಡೆದು ಸುಖಸಂಖ್ಯೆಯಿನಿರೆ (ಎಕ. VIII, ಸಾಗರ. ೮೦-೨೮; 1096); 'ಶಿವನೆ' ಎಂಬ ಅಳತೆಯು ಶಾಸನಗಳಲ್ಲಿ ದೊರಕುತ್ತದೆ (ಕಶಾಅ. ೩೯೪). ಸಿಂದೆ : ಸೊಡಳದೇವನ ಕೆಱೆಯ ಮೇಲೆ ಸಿಂನ್ದೆ ೧ ಆ ಕೆಳಗಣ ಸರು ಸಿಂನ್ದೆ ೧ (ಮೈಅರಿ. ೧೯೩೧, ೬೫-೧೦; 1303). ಸಿನ್ನೆ : ಧರ್ಮಕಾರ್ಯಕ್ಕೆ ಕೊಟ್ಟ ದೇವಸ್ವದ ವೃತ್ತಿಗಳಾವವೆಂದಡೆ ಪಡಹಳ್ಳಿಯ ಹರಳಿಯ ಸಿನೆ ೧ . . . ಕಳವೆಗಾರಲ್ಲಿ ಸಿನೆ ೧ (ಎಕ. VIII, ಸಾಗರ. ೯೯-೧೬; 1220); ದೇವರ ಕೆಯಿ ಸಿನೆ (ಎಕ. VIII, ಸಾಗರ. ೬೨-೧೯; 1307); ಸಿನ್ನೆ — ಇದೂ ಭೂಮಿಯ ಪ್ರಮಾಣವನ್ನು ತೋರಿಸುತ್ತದೆ (ಸಂಭಾನಿ. ೨೦೮). [?]

ಸಿವನ್ನಿ 'ಸೀವನ್ನಿ' ನೋ.

ಸಿವಪುರ (ನಾ). ಶಿವಭಕ್ತರು ನೆಲಸಲು ನಿರ್ಮಿಸಿದ ಊರು : ಕೆಱೆಗೋಡೆನಾಡ ಬಿದಿರಕೋಟೆಯ ಮಲ್ಲೆಯನಾಯಕ ಸೋಮೆಯನಾಯಕ ತಂಮ ಹಳಿಯ ಸಿವಪುರವಾಗಿ ಭಕ್ತರಿಗೆ ಧಾರಾಪೂರ್ವಕಂ ಮಾಡಿ ಕೊಟ್ಟ ಧರ್ಮವನು (ಮೈಅರಿ. ೧೯೩೩, ೪೮-೧೧; 1185). [ಸಿವ + ಪುರ$_2$]

ಸಿವಮಾರ (ನಾ). ಒಬ್ಬಾತನ ಹೆಸರು : ಸಿವಮಾರನ ಬಸದಿ (ಎಕ. II, ೪೧೫; 810).

[< ಸಂ. ಶಿವಮಾರ]

ಸಿವರಾಮಕಳ್ಳಿ (ನಾ). ಒಂದು ಬಗೆಯ ಸಸ್ಯ; ಪಾಪಾಸುಕಳ್ಳಿ: (ಕಿ).

[ಸಿವರಾಮ್ಯ + ಕಳ್ಳಿ$_2$]

ಸಿವಳಿಗೆ 'ಸೀವಳಿಗೆ' ನೋ.

ಸಿವಾಯಿ 'ಶಿವಾಯ್ಯಿ$_2$' ನೋ.

ಸಿವಾಲ್ಯ, ಶಿವಾಲ್ಯ (ನಾ). ಶಿವನ ದೇವಸ್ಥಾನ, — ಗುಡಿ: ತಾವು ಮುನ್ನಿಟ್ಟು ಕೊಟ್ಟ ನಾಡ ಸಿವಾಲ್ಯಂಗಳಿಗೆ ಆ ಅಭ್ಯಾಗತೆ ಅನ್ಯಾಯ ತಪ್ಪುತವುಡಿ ದಣ್ಣ . . . ಯುನ್ನಿವುಯಿಲ್ಲೆನ್ನು (ಎಕ. VI, ಚಿಕ್ಕಮ. ೪೯-೨೫; 1265); ಪೆರುಮನ್ಗಲಪಟ್ಟಣ ಪೆರುಮಾಳ ಸಿವಾಲ್ಯಕ್ಕೆ (ಮೈಅರಿ. ೧೯೨೯, ೨೫-೩; ?). ಶಿವಾಲ್ಯ : ಆ ವೀರಯ್ಯದೇವರ ಶಿವಾಲ್ಯದಲ್ಲಿಯಿಹ ಒಡೆಯರುಗಳು ನಾಲ್ವತ್ತು ಒಡೆಯರುಗಳಿಗೆ ಸಲುವ ಸಕಲಸಯಿದಾನ . . . ಸಲುವುದೆನೆ (ಎಕ. III (R), ಗುಂಡ್ಲುಪೇ. ೭೭ ೧೭; 1476). [< ಸಂ. ಶಿವಾಲಯ]

ಸಿವಿಕೆ 'ಸಿಬಿಗೆ' ನೋ.

ಸಿವಿಗೆ 'ಸಿಬಿಗೆ' ನೋ.

ಸಿವಿಲ್ (ಗು). ೧. ಸರ್ಕಾರಿ ಆಡಳಿತವಿರುವ: ಸಿವಿಲ್ ಇಲಾಖೆಯನ್ನು ತ್ಯಜಿಸಿ . . . ಯುದ್ಧಕಾಲದಲ್ಲಿ ಸೈನ್ಯವನ್ನು ಸೇರಿದ್ದು ಅವನು ತನ್ನ ಜೀವನದಲ್ಲಿ ಕಂಡ ಮತ್ತೊಂದು ಜಾಗೃತಿ (ಪುನರು. ೧೩೩). ೨. ಕಾನೂನಿಗೆ ಒಳಪಟ್ಟ: 'ಸಿವಿಲ್ ವಿವಾಹ' ಪರಾ. [<— ಇಂ. Civil]

ಸಿವಿಲ್‌ವಿವಾಹ (ನಾ). ಮತಸಂಸ್ಕಾರವಿಲ್ಲದೆ ಕಾನೂನು ಕಟ್ಟಳೆಗಳಿಗನುಸಾರವಾದ ಮದುವೆ: ಇಬ್ಬರೂ ಸಿವಿಲ್‌ವಿವಾಹದ ರೀತಿ ಮದುವೆಯಾದರು (ಡೂರಸ. ೪೦). [ಸಿವಿಲ್ + ವಿವಾಹ]

ಸಿವಿಳು (ನಾ). ಒಂದು ಬಗೆಯ ವಾದ್ಯ: ಪಟವದ ತಿವಳಿಯ ಜುಂಕದ ಮೊಳಸಿನ ಬೇಕಿರದ ಸಿವಿಳಿ ಸಿಪ್ಪಿನ ಲಯದಿಂದೆಬಲದೆ ಕುಣಿದರ್ ಕೆಲಬರ್ (ಅಜಪು. ೫-೩.೨); ಕಂಕರಿಯ ಸಿವಿಳಿ ಪಂಪಿನ ಝುಂಕಟ (ಪುಷ್ಪಪು. ೧೨-೩೭); ಸಿವ್‌ವಿವಿವಿಜ ಸಿಪ್ಪಿನ ಕೊರಗಿನ ಕಿನ್ನರದ ಸರಮೆ ಸರಮಾ ಪೊಲಲೊಳ್ (ಸೂಕ್ತಿಸು. ೪-೧೦೪). [?]

ಸಿವುಂಡಿ 'ಸಿವಡ್ಡಿ$_2$' ನೋ.

ಸಿವುಡಿ$_1$ 'ಸಿವುಡು' ನೋ.

ಸಿವುಡ್ಡಿ$_3$ 'ಸಿವಡ್ಡಿ$_2$' ನೋ.

ಸಿವುಡಿಗೆ (ನಾ). = ಸಿವಡ್ಡಿ$_2$: ಪುಸ್ತಕಗ್ರಹಣಪೂರ್ವಕ = ಸಿವುಡಿಗೆಯಂ (ಕವಳಿಗೆಯಂ) ಪಿಡಿವುದು ಮುಂತಾಗಿ (ನೀತಿವಾ. ೧೭-೫೭). [ಸಿವುಡ್ಡಿ$_2$ (< ಸಿವಡ್ಡಿ$_2$) + -ಇಗೆ$_6$]

ಸಿಸುಡು, ಸಿವಡಿ$_1$, ಸಿವಡು, ಸಿವುಡಿ$_1$ (ನಾ). ೧. ತಲೆಯ ಮೇಲಿನ ಹೊರೆಯು ಅಲುಗಾಡದಂತಿರಲು ಹೊರೆಯ ಅಡಿಯಲ್ಲಿಡುವ ಹುಲ್ಲು, ಬಟ್ಟೆ ಮುಂತಾದುವುಗಳ ಸುರುಳಿ; ಸಿಂಬಿ: "ಸಿಂಬೆ ಸಿವುಡೆಂದಕ್ಕುಂ." (ಕವಿಗಂ. ೨೪೪); ಬಾಸುಗಿ ತನ್ನ ಶಿರಕೆ ಸಿವುಡಂ ಕೊಟ್ಟುಂ (ಹಚಚಾ. ೩-೨೨); ಸೈನ್ಯಭಾರದಿಂ ಸೀರೆಯಂ ಸುತ್ತಿದಂತೆ ಸಿವುಡಾದನಹಿರಾಜಂ (ಚಿಬಪು. ೪೮-೨೨). ೨. (ಎಲೆ, ಹುಲ್ಲು, ಮೊದಲಾದುವುಗಳ) ಕಟ್ಟು; ಕಂತೆ: ಪಲ್ಲೆಯ ಸಿವುಡನ್ನು ಮುಂದೆ ಎಳೆದು ಕೊಂಡಳು (ಸಂಜೀವ. ೨೪); ಪತ್ರಿಕೆಯ ಸಿವುಡೊಂದನ್ನು ಹಿಡಿದುಕೊಂಡು ರಾಯರಲ್ಲಿಗೆ ನಡದ (ಆಪಸಾ. ೨೦). ೩. ಭತ್ತವನ್ನು ಅಳೆಯುವ ಒಂದು ಅಳತೆ : ಅಯದ ಸಿವುಡು ೨೦ನೆ ನಿಯಕ್ಕೆ ಸಿವುಡು ೮ ಗದ್ದೆಗಳ ಕೋರ್ತಿಗೆಗಯ್ದರೆ (ಎಕ. XI, ಹಿರಿಯೂ. ೮೮-೧೯; 1589). **ಸಿವಡಿ$_1$** : ೩. ಅಧಿಕ್ರಯದಾನ ದೋಹಳಂಗಳಿಗೆ ಸಿವಡಿಯೂ ಭಾಗವೂ (ಎಕ. VI, ತರೀಕೆ. ೬೪. ೨೬; 1291?). **ಸಿವಡು** : ೨. ನಾಲ್ಕು ಸಿವಡು ಹುಲ್ಲು ತಂದು ಆ ಕುದುರೆಗೆ ಹಾಕಿದನು (ಮುಂಬಾಯಿ. ೩-೧೧೮). **ಸಿವುಡಿ$_1$** : ೧. ಈ ಪ್ರಕಾರದಿ ಬಸವರಾಜನತಿಪ್ರತಿಜ್ಞೆಗೆ ಕಳಸ ವಾಯ್ತಖಿಳ ಪ್ರಮಥರುದ್ರರ ಸಿವುಡಿಗಳಿಗೇಱಿ ಸಂದಿತ್ತು (ಬಸಪು. ೩೬-೪೮). 'ಸೂಡು$_2$' ಪರಾ.

[ದೇ. || ತಮಿ. ಚಿವಿಟು, ಚುಮಟು, ಚುಮ್ಮಾಟು; ಮಲ. ಚುಮಟು, ಚುಮ್ಮಾಟು]

ಸಿವುಡುಕಟ್ಟು 'ಸಿವುಡುಗಟ್ಟು' ನೋ.

ಸಿವುಡುಗಟ್ಟು, ಸಿವಡುಕಟ್ಟು, ಸಿವಡುಗಟ್ಟು, ಸಿವುಡುಕಟ್ಟು (ಕ್ರಿ). ೧. ಕಂತೆಯನ್ನಾಗಿ ಕಟ್ಟು: ಏನಿದೀ ಹನಿಹನಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು! (ನಲಮು. ೧೧-೧). **ಸಿವಡುಕಟ್ಟು** : ೧. ಬತ್ತದ ಪೈರು ಚೆನ್ನಾಗಿ ಬೆಳೆದು . . . ಬತ್ತವಾದ ಮೇಲೆ ಕೊಯ್ದು ಹೊರೆಯ ಕಟ್ಟಿ, ಕಣಕ್ಕೆ ಒಯ್ದು ಸಿವಡುಕಟ್ಟಿ ಬಡಿದು ರಾಶಿಯ ಮಾಡಿದರೂ ಬರುತ್ತದೆ (ಕೃಪ್ರ. ೫೫೫). **ಸಿವಡುಗಟ್ಟು** : ೨. ಗುಂಪುಗೂಡು; ಹಿಂಡಾಗು: ಸಿವಡುಗಟ್ಟಿ ಜನವು ನಿಂತಲ್ಲೆಲ್ಲಾ ಅದೇ ಪಡೆಮಾತೇ (ಕನಕ. ೩೦). **ಸಿವುಡುಕಟ್ಟು** : ೧. ತೆನೆ ಕುಯ್ದು ಸಿವುಡುಕಟ್ಟಿ ನಿಲ್ಲಿಸಿದ ಮೆದೆಗಳು (ರಾಜಾದೇ. ೬೨); ಕೆಲವರು ಅವುಗಳನ್ನು ಸಿವುಡುಕಟ್ಟಿ ಗೂಡುಹಾಕುತ್ತಿದ್ದರು (ಕಪಪು. ೩-೬೪).

[ಸಿವುಡು + ಕಟ್ಟು$_1$]

ಸಿವುಡೆ (ನಾ). (?) : ಸಿವುಡೆಯರೆನಿಸಿದ ವೀರರ ಮೂಗಿಗೆ ಕವಡೆಯ ಕಟ್ಟಿ ನೀರ್ತರಿಸಿ ಡವುಡೆ ಜೇಗಟೆ ಮಲಹರಿಯ ಜಾಡಿಸಿಕೊಂಬ ಪ್ರವುಡೆಯರಿರ್ದರಿಕ್ಕೆಲದಿ (ಮೋಹತ. ೨೦-೩೯). [?]

ಸಿವುಜು$_1$, ಚಿವರು, ಚಿವುರು$_1$, ಚೀರು$_1$, ಚೂರು$_1$, ಜಿಗುಜು, ಜಿವಿರು (ಕ್ರಿ). ಕೆರೆ; ತುರಿಸು: ದಕ್ಷಿಣಕಟದೊಳ್ ಸಿವುಜುವ ದಕ್ಷಿಣರದನದೊಳೆ ಹಸ್ತಮಂ ಪೇಜುವ ಚೆಲ್ವೀಕ್ಷಣಹರಮೆನೆ ಜಯಮನನಕ್ಷರಮಱಿಪಿದುದು ಭರತರಾಜಮದೇಭಂ (ಆದಿಪು. ೧೨-೫೫). **ಚಿವರು** : ಕಸಕಸಿಯ ಕಾಯಿಗಳು ಹಣ್ಣಾಗುವ ಹದಕ್ಕೆ ಬಂದಾಗ . . . ಆ ಕಾಯಿಗಳಿಗೆ . . . ನಾಲ್ಕು ದಿಕ್ಕಿಗೂ ಚಿವರಿವ ಹಾಗೆ ಗೆರೆಗಳನ್ನು ಹಾಕಬೇಕು (ಕೃಪ್ರ. ೧೯೭); ಕೈಗೆ ಕೈಹತ್ತಿತು. ಚಿವಟುವುದೂ ಚಿವರುವುದೂ ನಡೆಯಿತು (ಕುಂಹಿ. ೭೭). **ಚಿವುರು$_1$** : ಬೋಧರಾಯನ ಹಣೆಗೆ ಏನೋ ಚಿವುರಿದಂತಾಯಿತು (ರಕ್ತಧ್ವ. ೯೦); ಕೈಲಾಗದ ಹೇಡಿ ಚಿವುರಿಕೊಳ್ಳುತ್ತಾನೆ (ಜಮಾವ್ಯಾ. ೧೩೪). **ಚೀರು$_1$** : (೫). **ಚೂರು$_1$** : ಅನಂತನೂ ಅವಳ ಕೈಗೆ ಚೂರಿದ. ಆಕೆ ಕೆರಳಿ ಅವನನ್ನು ನುಗಿಸಿಕೊಟ್ಟಳು (ನಿಸರ್ಗ. ೨೫). **ಜಿಗುಜು** : ಅಂಬುಜಮುಖಿ ಮುನಿದಶಿಕೋಪದಿ ಮೊಗವೆದೆ ತೋಳ್ ಕೊರಳೆದೆಯ ಜಿಗುಜಿ (ನಿಜಪಾಂ. ೪-೨). **ಜಿವಿರು** : "ಗಿಲ್ಲಕೀತಿ ಜಿವಿರಿದಪನೆಂಬುದು" (ಕಾಶಕ್ಕ. ೪೯).

[ದೇ. || ತೆಲು. ಚೀರು; ಕುರುಖ್. ಚೀರ್ವಾ = ವಿಭಾಗಿಸು]

ಸಿವುಜು$_3$, ಚಿವುರು$_2$, ಚೀರು$_2$, ಚೀಜು$_4$, ಸಿಗುರು, ಸಿಗುಜು, ಸಿಬರು, ಸಿಬಿರು, ಸಿಬುರು, ಸಿಬುಜು (ನಾ). ೧. (ನಯವಾದ ಮರ, ಲೋಹ ಮೊದಲಾದುವುಗಳ) ಮೊನೆಯುಳ್ಳ ನವುರಾದ ಕಡ್ಡಿ : ಮುಳ್ಳುಂ ಸಿವುಜುಗಳುಂ ನಟ್ಟು . . . ಬಾತೊಡೆ . . . ಒಲೆಗಲ್ಲ ಸೇಕಗೆಯ್ಮಲ್ ಮಾಣ್ಗುಂ (ಲೋಕೋಪ. ೯-೧೬೫); ತೆಂಗಿನ ತಿರುಳಿಲೆಯ ಸುಲಿಕೆಯೊಳಂ ಕೇದಗೆಯ ಬೆಳ್ಪುಟಿಯ ಸಿವುಜೊಳಂ ಬೇಱೆಬೇಱೆ ಸುತ್ತಿ (ಮಲ್ಲಿಪು. ೫-೪೯). **ಚಿವುರು$_3$** : (೫). **ಚೀರು$_3$** : (೫). **ಚೀಜು$_4$** : ೨. ಚಕ್ಕೆ; ಕೆಲ್ಲೆ: 'ಚೀಜೋಟುಃ' ಪರಾ. **ಸಿಗುರು** : ೧. ಸಣ್ಣದಾದ ಸಿಗುರು ಹೊಕ್ಕರೂ ಮೈಯ ನೋವನ್ನು ತಾಳಿಕೊಳ್ಳುವುದು ಶ್ರಮ (ಭೀಷ್ಮಚ. ೨೩೫); ನಾಲ್ಕು ಸಿಗುರುಗಳನ್ನಾದರೂ ಮಾಡೋಣ, ಕೊಟ್ಟಿಕಡ್ಡಿಗಳಿಗಾದಾವು (ಮೂಯದಾ. ೫೫). ೩. (ಆಲಂ) (ಸಂದೇಹದ) ಉಳಿಕೆ; ಅವಶೇಷ: ಸ್ವಲ್ಪವೂ ಸಿಗುರನ್ನು ನಿಲ್ಲಿಸದ ನಿಗಮನವು ತರ್ಕದಿಂದ ಎಂದೂ ದೊರೆಯುವುದಿಲ್ಲ (ಡೂರಸ. ೨೦೫). **ಸಿಗುಜು** : ೧. ಮುಳ್ಳು ಸಿಗುರ್ಗಳುಂ ಪೊಱಗಮುಚ್ಚಳಿಕುಂ (ಖಮದ. ೨-೨೦೦). **ಸಿಗುಜು** : ೧. ಬದಿರ ಸಿಗುಜೊಂದನುಡಿವರದ ನಾರಿಯೆಂದಾ ನಾಮಮಾತ್ರಕ್ಕೆಯೊಣಮರಂ ಸೇರಿಯಿಕ್ಕಡೆಯಲ್ಲಿ ಬಾಗುತಿರ್ಪುದು ಗಡಾ (ವೀಶ್ಯಪ್ರ. ೩-೫-೪೬). ೩. ರೂಡಿಸಿದ ಭಟ ನೀನು ಹರಿಬವ ಬೇಡಿ ತೊಡಕಿದೆ ನಾನು ಖಾಡಾಖಾಡಿಯಲಿ ಸಿಗುಜಿಲ್ಲ ತಗೆ ಹಂಗೇಕೆ ತೆತ್ತಿಗರ (ಕುವ್ಯಾಕ. ೧೯-೩೦). **ಸಿಬರು** : ೧. ಸಿಬರು ಮಾಡಿಕೊಂಡು ಪತ್ರಾವಳಿ ಹಚ್ಚತೊಡಗಿದರು (ಕವಲು. ೧೧೫); ಒಣಗಿ ತಾರವಾದ ಸಿಬರಿನ ಪೆಂಡಿಯನ್ನು ತೆಗೆದು (ದೀಪಹ. II, ೩). **ಸಿಬಿರು** : ೧. ಜೋಳದ ದಂಟನ್ನು ಸಿಗಿದು ಸಿಗಿದು ಸಿಬಿರನ್ನು ಮಾಡುತ್ತಿದ್ದರು (ಮುಂಗಾಮು. ೯೩). **ಸಿಬುರು** : ೧. ಕೈಗೆ ಸಿಬುರು ಚುಚ್ಚಕೊಂಡು ತುಂಬಾ ನೋವಾಗುತ್ತಿದೆ (ಡೂಫ). **ಸಿಬುಜು** : ೧. ಒಂದು ಬಿದಿರಿಗೆ ಕವೆ ಮೂಜು ಆ ಕವೆಯ ಒಳಗೆ ಲಕ್ಕ ಸಿಬುಜು (ಸರ್ವಜ್ಞ. ೪೧-೨೦೯); ತೆಂಗಾಯ ಪೊಳೆವವು ಸಿಬುಜಿನೊಳ್ಪುದುಗಿ (ಕರಚಾ. ೫-೨೧).

ಸಿಗುರಾಗು = (ಆಲಂ) ಒಗಟಾಗು; ಜಟಿಲವಾಗು: ಆ ನಿರ್ಣಯವನ್ನು ಕುರಿತು ಪುನರಾಲೋಚನೆ ಮಾಡಿದಾಗಲೆಲ್ಲಾ ರಾಜವಂಶದ ಸಮಸ್ಯೆ ಹೆಚ್ಚು ಸಿಗುರಾಗುತ್ತಿತ್ತೇ ವಿನಾ ನಯವಾಗುತ್ತಿರಲಿಲ್ಲ (ಕೃಷ್ಣಭೂ. ೧೧).

[< ಸಿವುಜು$_1$./ ತುಳು. ಸಿಗುರು = ಒಡೆ; ತೆಲು. ಚಿರುಗು]

ಸಿವುಜೋಟು್, ಚೀಜೋಟು್, ಸಿಗುಜೋಳು (ಕ್ರಿ). ೧. ಸಿಬುರು ವಿಳು: ಅವನೀ ಭರ್ತಾರನ ಚಿತ್ತವದ್ರಮಂ ತಾಗಿ ತಾಗಿ ತರಳಾಪಾಂಗಂ ಸಿವುಳಿದ್ದಂತೆವೊಲೆಸೆದುವು (ಅರ್ಧನೇ. ೩-೨೬). **ಚೀಜೋಟು್** : ೨. ಚಕ್ಕೆಯೇಳು; ಹೆಕ್ಕಳೆಯುಂಟಾಗು: ಕೆನ್ನೆತ್ತರ ಹೊಲಸಿಂಗೆ ಪೋಗದೆ ಮುಸುಜುವ ನೊಳವಿಂಗೆ ಕೆರಳ್ದು ಝಾಡಿಸುತೊದೆಯ ಬೀಜೆಲ್ದ ಹೆಟ್ಟೆಗಳ್ ಮೇಲೆ ಪಳಂಚಿ ಧೂಳಿವಿಡುತಿರೆ (ಕುಸುಮಾ. ೧೪-೨೯ ವ). **ಸಿಗುಜೋಳು** : ೧. ನಿಜನಿಶ್ಚಯದ ಬದಿರು . . . ಮಿಥ್ಯವೆಂಬ ಸಿಗುಜೆದ್ದರೆ ಕತ್ತಿ (ಸರ್ವಜ್ಞ. ೭೧-೩೨೨); ಸಿಡಿಲು ಸಿಗುಜೆದ್ದಂತೆ ಬಾರಿಸಿ ಜಡಿವ ಕೈದುಗಳು (ಕುವ್ಯಾಖ. ೧೧-೩೯). ೩. (ಆಲಂ) ತೊಡಕುಂಟಾಗು; ಭಂಗಬರು: ನುಡಿಯಡಹಿದರೆ ಸಿಗುಜೆಳ್ದು ಸದ್ಗುಣಕೆ (ಕುವ್ಯಾಸ. ೧೫-೩೭). ೪. ಒಳಗೊಳಗೇ ಚುಚ್ಚಿ

ವೇದನೆಪಡು; ಚಿಟುಕುಮುಳ್ಳಾಡು : ಕೇಳಿ ಕಡುಸಿಗ್ಗಾಗಿ ಸಿಗುಚೆದ್ದೇಳಿಗೆಯ ಚಿಂತೆಯಲಿ ಜಗದ ಜನಾಳಿಗೀ ಪದ್ಧತಿ ತಿರಸ್ಕರಿಸುವುದಲೇ ಎನುತ ಕೇಳಿಸಿದನೀ ನುಡಿಯನನುಜರ ಮೇಳದಲಿ (ತೂರರಾ. ೧-೩-೫). [ಸಿವುಱು$_2$ + ಏಱು$_1$]

ಸಿವೆ (ನಾ). ಪಾರ್ವತಿ; ಶಿವೆ: ಶಿವಾ — ಸಿವೆ, ಶೀತ — ಸೀತ (ಶಮದ. ೨೫೩ ಪಯೋ.). [< ಸಂ. ಶಿವಾ]

ಸಿವ್ವಂಗಿ 'ಸಿವಂಗಿ' ನೋ.

ಸಿಶ್ಯಂತಿ 'ಶಿಷಿತ್ತಿ' ನೋ.

ಸಿಷಿತ್ತಿ 'ಶಿಷಿತ್ತೆ' ನೋ.

ಸಿಷ್ಟ (ನಾ). ಯೋಗ್ಯನಾದವನು; ಸಜ್ಜನ: ಹರಿಯ ಸಿಷ್ಟರ ಪೊರೆಯಲೋಸುಗ ಧರಿಸಿ ತಾನೊಂದೊಂದು ವೇಷವ (ಗಗಾ. ೫-೨೦). [< ಸಂ. ಶಿಷ್ಟ]

ಸಿಷ್ಟಿ 'ಸಿಟ್ಟಿ' ನೋ.

ಸಿಷ್ಯಿಂತಿ 'ಶಿಷಿತ್ತಿ' ನೋ.

ಸಿಸವು 'ಸಿಸವೆ' ನೋ.

ಸಿಸವೆ, ಶಿಸವೆ, ಶಿಸ್ಸು, ಸಿಸವು, ಸಿಸುವು (ನಾ). ಗಟ್ಟಿಯಾದ ಒಂದು ಬಗೆಯ ಕರಿಮರ: (ಕ). ಶಿಸವೆ : "ಅಗುರು- ೧. ಕೃಷ್ಣಾಗರುಚಂದನ, ಚಂದಾಳ. ೨. ಶಿಸವೆಯ ಮರ" (ಗಂಗಾಮ. ೪). ಶಿಸ್ಸು : ಶಿಸ್ಸು . . . ಬಿಂಡಿ, ಇರಗುಂಡಿಮಾವು (ಮೃಚ್ಛಿ. ೨೮-೫೫೨). ಸಿಸವು : ಅದರೊಳಗಿಂದ ಹಾಯ್ದು ಹೊರಬಂದ ಅಚ್ಚು ಸಿಸವಿನ ಕೆಚ್ಚನದು (ಬೆಳಭಾ. ೧೩೫). ಸಿಸುವು : ಆ ಮರಗಳು ಯಾವವೆಂದರೆ — ತೇಗು, ಗಂಧಮರ, ಸಿಸುವು (ಕರಿಮರ), ಅಬನಸ, ಹೊನ್ನಿ (ಕಭಾಗ. ೩೩); ಇಲ್ಲಿ ಹುಟ್ಟುವ ತೊಲೆಗಳಲ್ಲಿ ತೇಗು, ಹೆದ್ದೇಗು . . . ಸಿಸುವು, ಹಲಸು, ಶ್ರೀಗಂಧ ಮೊದಲಾದವುಗಳೇ ಮುಖ್ಯ (ಮುಂಬಯಿ. ೫-೨೧೦). [< ಸಂ. ಶಿಂಶಪಾ. / ಮರಾ. ಶಿಂಸವ, ಶಿಸವ, ಶಿಸವೀ]

ಸಿಸಿರ (ನಾ). ಷಡ್ರುತುಗಳಲ್ಲಿ ಒಂದು; ಮಾಘ, ಫಾಲ್ಗುಣ ಮಾಸಗಳ ಅವಧಿ; ಶಿಶಿರ: ಸಿಸಿರಮನೆ ಪಿಡಿದು ಪರಕೆಗೆ ಬಸಂತನಲರ್ವೋದ ಮಾವಿನಡಿಮಂಚಿಕೆಯೊಳ್ ಕುಸುರಿದಜೀದಡಗಿನಂತೆವೊಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್ (ಯಶೋಚ. ೧-೩೭); ಮೈಗೆ ಮಂಜಿನ ಮುಸುಕು ದಾಸಿ ಸಿಸಿರದ ನಸುಕು ಬಿರುಸಿನೊಲು ಬಿಗಿದಿಹಳು ಅರಸುಕನ್ನೆ ! (ಗಿ. ೭೧-೮). [< ಸಂ. ಶಿಶಿರ]

ಸಿಸಿಲ್, ಸಸಿಲ್, ಸಸ್ಲೆ, ಸಿಸಿಲು (ನಾ). ಒಂದು ಬಗೆಯ ಮೀನು : ಹಂಗರಿಗಂ ಸಕ್ಕರೆಗಂ ಸಿಸಿಲ್ಪನವಳವಾಯಂ ಹೃದಲುಂ ಬಾಳೆ ಹೆಗ್ಗರಿಲುಂ . . . ಪಂದಿಗನೆಂಬ ಮೀನ್ದೆಗೆದನಾ ಭಕ್ತಂ ಮಹಾಲೀಲೆಯಿಂ (ತ್ರಿಪುಪು. ೫೭-೮). ಸಿಸಿಲ್ : ಸಸಿಲ್ಗೊದಳಿಮೀನ್ಗೊಂ ಬೊಪ್ಪುಮೀನ್ ಪಂದಿಮೀನ್ . . . ಬಣ್ಣಮೀನೆನಿಸಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೫-೧೧೫). ಸಸ್ಲೆ : ಒಂದು ಬಾಳೆಮೀನು ಒಂದು ಸಸ್ಲೆಮೀನು ಹನ್ನೆರಡು ಮೈಲಿ ನಾಲೆಯಲ್ಲಿ ಎಲ್ಲಿ ಈಜುತ್ತಿದ್ದರೂ ಹಿಡಿದುಕೊಂಡು ಬರುತ್ತಾನೆ (ಚಿತ್ರಕ. ೧೫); ಅಸ್ಲೆ ಮಳೆಗೆ ಸಸ್ಲೆ ಬೆಟ್ಟಕ್ಕೆ ನೆಗೀತು (ಚೃಸರ್ವ. ೯೯). ಸಿಸಿಲು : ತೆಂತಲು ಸಿಸಿಲು ಬೊಂಪು ಸವಿವಾಯ ಗೊದಳೆ . . . ಆನೆವೊಗನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದುರು (ಪಚಕಾ. ೫-೪೫). [?]

ಸಿಸಿಲು 'ಸಿಸಿಲ್' ನೋ.

ಸಿಸು (ನಾ). ೧. ಹಸುಳೆ; ಎಳೆಮಗು : ಸಿಸುವಂ ತಾಯೊಕ್ಕಲಿಗಂ ಸಸಿಯಂ . . . ರಕ್ಷಿಸುವಂದದಿಂ (ಧರ್ಮಾಮೃ. ೩-೨೪); ತಾಯ ಮುಂದೆ ಪರಿವ ಸಿಸುವಿನಂತೆ [ಪಾಶಾಂ. ಪರಿವೆಳಗಱುವಿನಂತೆ] (ವರ್ಧಪು. ೧೧-೯೯); ಸಿಸುವ ನೋಡಿ ಕಣ್ಗೆ ಮಾಯವೆ ಮುಸುಕುವುದು (ಪ್ರಭುಲಿಂ. ೩-೨೪). ೨. ಎಳೆಯ ಹುಡುಗ; ಚಿಕ್ಕವನು : ಉಯ್ಯೆ ಸಿಸುಗಳ್ ಸಿಬಿರಕ್ಕೆ ಬಟಲ್ದ ಭೂಪನಂ (ಪಂಪಭಾ. ೧೨-೧೧೮). [< ಸಂ. ಶಿಶು]

ಸಿಸುಗೆಡು (ಕ್ರಿ). ಮಗುವನ್ನು ಕಳೆದುಕೊಳ್ಳು : ದೆಸಗೆಟ್ಟಂತೆ ಚಿಂತಿಸಿ ಸಿಸುಗೆಟ್ಟರಂತೆ ಮಱುಗಿ (ಧರ್ಮಾಮೃ. ೧-೧೬೮). [ಸಿಸು + ಕೆಡು$_1$]

ಸಿಸುತನ (ನಾ). ಬಾಲ್ಯ; ಶೈಶವ: ಸಿಸುತನಮನುತ್ತರಿಸಿ ಮುಕ್ತಿಗೆ ನೆನೆಯ . . . ಚಾರಣಯುಗವನಪರಾಜಿತನೃಪತಿ ಕಂಡ (ಸಾಳ್ವಭಾ. ೪ ಸೂಚನೆ). [ಸಿಸು + - ತನ]

ಸಿಸುಮಗ (ನಾ). ಚಿಕ್ಕಮಗ: ಅವನ ಸಿಸುಮಗನೊಬ್ಬನು ಎತ್ತಿನ ಮೇಲೆ ಕುಳಿತು ನಗಾರಿಯನ್ನು ಬಾರಿಸುತ್ತಾ ಉತ್ಸಾಹದಿಂದ . . . ಹಾಡುತ್ತಾನೆ (ಗಯದಾ. ೧೭೨). [ಸಿಸು + ಮಗ]

ಸಿಸುವು 'ಸಿಸವೆ' ನೋ.

ಸಿಸುಳಹಾಟಿ (ನಾ). ಒಂದು ಊರಿನ ಹೆಸರು; P ಈಗಿನ ನವಲಗುಂದ ತಾಲ್ಲೂಕಿನ ಶಿಶುವಿನ ಹಳ್ಳಿ: ಕನ್ನೆರಾಸಿಯೊಳ್ಸೋಮಗ್ರಹಣದೊ [ಳ್ಸಿ] ಸುಳಹಾಟಿಯ್ದು ದಿಂಬರು ಮಹಾಜನಮನವಧಾರಿಸಿ (ಸೌಕಾ. XI-i. ೧೪-೧೧: 872). [?]

ಸಿಸೃಕ್ಷೆ (ನಾ). ಸೃಷ್ಟಿ ಮಾಡಬೇಕೆಂಬ ಅಪೇಕ್ಷೆ,— ಬಯಕೆ: ಕಾವ್ಯರಸಸಿಸೃಕ್ಷೆ ದಿವ್ಯಸ್ಫೂರ್ತಿನಿರೀಕ್ಷೆ (ಕ್ರೌಂಚಧ್ವ. ೩೧-೧೧). [ಸಂ. ಸಿಸೃಕ್ಷಾ]

ಸಿಸ್ತು 'ಶಿಸ್ತು' ನೋ.

ಸಿಸ್ತುಗಾತಿ 'ಶಿಸ್ತುಗಾತಿ' ನೋ.

ಸಿಸ್ತುಗಾರ 'ಶಿಸ್ತುಗಾರ' ನೋ.

ಸಿಸ್ತುಗಾರಿಕೆ 'ಶಿಸ್ತುಗಾರಿಕೆ' ನೋ.

ಸಿಸ್ಯ (ನಾ). ಕಲಿಯುವವನು; ವಿದ್ಯಾರ್ಥಿ : ಶ್ರೀಮತು ಕರಿಯಪಗಳ ಸಿಸ್ಯ ತಮ್ಮಯ (ಮೃಅರಿ. ೧೯೨೯, ೨೬-೨; ?). [< ಸಂ. ಶಿಷ್ಯ]

ಸಿಹಿ 'ಸೀ$_2$' ನೋ.

ಸಿಹಿಕರಣೆ 'ಸೀಕರಣೆ' ನೋ.

ಸಿಹಿಗಾಯ್ 'ಸೀಕಾಯ್' ನೋ.

ಸಿಹಿಗುಂಬಳ 'ಸೀಗುಂಬಳ' ನೋ.

ಸಿಹಿಗೆಣಸು 'ಸೀಗೆಣಸು' ನೋ.

ಸಿಹಿತೆನೆ 'ಸೀತೆನೆ' ನೋ.

ಸಿಹಿತೊಂಡೆ 'ಸೀದೊಂಡೆ' ನೋ.

ಸಿಹಿದಟ್ಟು (ಕ್ರಿ). (ಆಲಂ) ಅತಿಯಾಗಿ ಸಂತೋಷಗೊಳ್ಳು: ಅಹುದಹುದಧಿಕ ಪ್ರಸಂಗವಾದುದು ನಾವು ಸಿಹಿದಟ್ಟಿ ಮಱೆದಿದ್ದೆವು (ಧರಚಿ. ೪೩-೨೭). [ಸಿಹಿ (< ಸೀ$_2$) + ತಟ್ಟು$_1$]

ಸಿಹಿದ್ರಾಕ್ಷೆ (ನಾ). ಸಿಹಿಯಾಗಿರುವ ದ್ರಾಕ್ಷಿಹಣ್ಣು: "ಮಧುರಬೀಜಪೂರಕಃ - ಸಿಹಿದ್ರಾಕ್ಷೆ" (ಓಷಧಿ. ೧೨೩). [ಸಿಹಿ (< ಸೀ$_2$) + ದ್ರಾಕ್ಷೆ]

ಸಿಹಿನಿಂಬಿ 'ಸೀನಿಂಬೆ' ನೋ.

ಸಿಹಿನಿಂಬೆ 'ಸೀನಿಂಬೆ' ನೋ.

ಸಿಹಿನೀರು 'ಸೀನೀರು' ನೋ.

ಸಿಹಿಪಾಲೆ 'ಸಿಹಿವಾಲೆ' ನೋ.

ಸಿಹಿಪುನರ್ನವ (ನಾ). ಒಂದು ಬಗೆಯ ಸಸ್ಯ : ಕೊಮ್ಮೆ, ಪಸಲೆಸೊಪ್ಪು . ಸಿಹಿಪುನರ್ನವ (ಮೃಚ್ಛಿ. ೭೫ ೧೪೩). [ಸಿಹಿ (< ಸೀ$_2$) + < ಪುನರ್ನವಿ]

ಸಿಹಿಮಾತು 'ಸೀಮಾತು' ನೋ.

ಸಿಹಿಮಾದಲ (ನಾ). ಒಂದು ಬಗೆಯ ಮಾದಲಗಿಡ: "ಮಧುಕರ್ಕಟೀ- ಸಿಹಿಮಾದಲ" (ಓಷಧಿ. ೧೨೧). [ಸಿಹಿ (< ಸೀ$_2$) + ಮಾದಲ]

ಸಿಹಿಮಾವು 'ಸೀಮಾವು' ನೋ.

ಸಿಹಿಮೂತ್ರರೋಗ (ನಾ). ಮೂತ್ರದಲ್ಲಿ ಸಕ್ಕರೆ ಹೆಚ್ಚಾಗಿ ಹೋಗುವ ಒಂದು ಬಗೆಯ ಮೂತ್ರರೋಗ; ಸಕ್ಕರೆರೋಗ: ಸಿಹಿಮೂತ್ರರೋಗವುಳ್ಳವರು ಔಷಧ ತೆಗೆದುಕೊಳ್ಳುವುದು ಮಾತ್ರವಲ್ಲದೆ ಆಹಾರಸೇವನೆಯಲ್ಲೂ ಕಟ್ಟುನಿಟ್ಟಾಗಿರಬೇಕು (ರೂಢಿ). [ಸಿಹಿ (< ಸೀ$_2$) + ಮೂತ್ರರೋಗ]

ಸಿಹಿಮೆಕ್ಕೆ (ನಾ). ಒಂದು ಬಗೆಯ ಮೆಕ್ಕೆಬಳ್ಳಿ: ಸಿಹಿಮೆಕ್ಕೆ ಕಹಿಮೆಕ್ಕೆ ಬಿತ್ತಿದಾಗಳೆ ಫಲವಹುವು (ಧರಚಿ. ೬೮-೫೬). [ಸಿಹಿ (< ಸೀ$_2$) + ಮೆಕ್ಕೆ$_3$]

ಸಿಹಿಮೊಸರು 'ಸೀಮೊಸರು' ನೋ.

ಸಿಹಿಲವಂಗ (ನಾ). ಲವಂಗದಲ್ಲಿ ಒಂದು ಭೇದ: ಆಮದಾಗುವ ವಸ್ತುಗಳಾವುವೆಂದರೆ . . . ಗುಗ್ಗುಲ, ಸಿಹಿಲವಂಗ, ಪರಿಶುದ್ಧವಾದ ಹೊಳಪುಗಾಜು (ಪ್ರವಾಸ. ೧.೧೫). [ಸಿಹಿ (< ಸೀ$_2$) + ಲವಂಗ]

ಸಿಹಿವಾಲೆ, ಸಿಹಿಪಾಲೆ, ಸಿಹಿಹಾಲೆ (ನಾ). ಒಂದು ಬಗೆಯ ಸಸ್ಯ: "ಮಧುಕಾಕ್ಷೀ-ಸಿಹಿವಾಲೆ" (ಓಷಧಿ. ೧೨೦). **ಸಿಹಿಪಾಲೆ:** "ಜೀವಪೃಷ್ಠಾ, ಜೀವಧಾನೀ, ಜೀವಭದ್ರಾ—ಈ ಮೂಱುಂ ಸಿಹಿಪಾಲೆ" (ಓಷಧಿ. ೬೩); ಚಿಲುಕೀರೆಸೊಪ್ಪು ಸಿಹಿಪಾಲೆ ಸೊಪ್ಪು ಚಕ್ರವರ್ತ ಪುಳ್ಳಂಪುರುಚೆ (ಏಷಚಿ. ೧೩-೩.) **ಸಿಹಿಹಾಲೆ :** ಸಿಹಿಹಾಲೆಯ ಬೇರ ತೊಕ್ಕು (ವೃದ್ಧಸಾ. I, ೪೧೫); ಕೊಳವಳಿಕೆಬೇರು, ಸಿಹಿಹಾಲೆ, ರೊಡ್ಡಿ . . . ಯಷ್ಟಿಮಧುಕ ಇವುಗಳನ್ನು . . . ಕಾಯಿಸಿ (ಸಕವೃ. ೮೫). [ಸಿಹಿ (< ಸೀ$_2$) + ಪಾಲೆ$_2$]

ಸಿಹಿವಿಲ್ 'ಸೀಬಿಲ್' ನೋ.

ಸಿಹಿವಿಲ್ಲ 'ಸೀಬಿಲ್ಲ' ನೋ.

ಸಿಹಿಸಾರು 'ಸೀಸಾಱು' ನೋ.

ಸಿಹಿಸೊಡರಿ (ನಾ). ಒಂದು ಬಗೆಯ ಸಸ್ಯ: "ವೃಕ್ಷಗಂಧ- ಸಿಹಿಸೊಡರಿ" (ಓಷಧಿ. ೧೫೭). [ಸಿಹಿ (< ಸೀ$_2$) + ಸೊಡರಿ]

ಸಿಹಿಹಾಲೆ 'ಸಿಹಿವಾಲೆ' ನೋ.

ಸಿಹುಕೂರ್ (ನಾ). ಒಂದು ಊರಿನ ಹೆಸರು: ತಸ್ಯೈವ ಸಿಹುಕೂರೇ ಪಞ್ಚವಿಂಶತಿನಿವರ್ತನಂ (ಇಆ. VI, ೯೦-೩೮; 692). [? + ಊರ್]

ಸಿಳಿಸಿಳಿ (ನಾ). ಬೆಂಕಿ, ಮಿಂಚು ಮುಂತಾದುವುಗಳ ಆರ್ಭಟವನ್ನು ಸೂಚಿಸುವ ಒಂದು ಅನುಕರಣ ಶಬ್ದ: ಸಿಳಿಸಿಳಿ [ಪಾಠಾಂ. ಛಳಛಳ] ಧ್ವನಿ ಮಸಗೆ ತಿಲ ಹಕ್ಕಳಿಸಿದವು . . . ಹವಿಗೆ ಭುಗಿಲೆಂದುಲಿದು ನಲಿದಾಡಿದನು ಹುತವಹನಶ್ವಮೇಧದಲಿ (ತೊರರಾ. ೧-೭-೪೯).

ಸಿಳಿಸಿಳಿಲ್ (ನಾ). ಬೆಂಕಿ, ಮಿಂಚು ಮುಂತಾದುವುಗಳ ಆರ್ಭಟವನ್ನು ಸೂಚಿಸುವ ಒಂದು ಅನುಕರಣ ಶಬ್ದ: ಏಳುನಾಲಿಗೆ ಸಾರ್ಚಿ ಧಗಧಗಲ್ಲಿಳಿ ಸಿಳಿಲ್ಲಿನದದಿಂ . . . ದಹಿಸುತಲಿರ್ಪ (ನವಮೋ. ೬-೫೦).

ಸಿಳೀಮುಖ (ನಾ). ೧. ಬಾಣ; ಸರಳು: ಕಿಚ್ಚುಗಿಡಿಗೆದಱುವ ಸಿಳೀಮುಖ ಕೊಚ್ಚಲಿಭದವಯವವನಮರರಿಗಚ್ಚರಿಯ ತನಿಸೂಱ್ ಬಿಚ್ಚುನು ಭೀಮ ಬವರದಲಿ (ಕುವಾದ್ರೋ. ೧೨-೨೧). ೨. ತುಂಬಿ; ಭ್ರಮರ. ೧, ೨ : ಆ ವನಂ . . . ನೀರಜದಂತೆ ನಿಷಂಗದಂತೆ ನಿಬಿಡ ಸಿ[ಪಾಠಾಂ. ಶಿ]ಳೀಮುಖಮುಂ . . . ಎನಿಸಿದುದು (ರಾಜಶೇ. ೨-೭೮ ವ). [< ಸಂ. ಶಿಲೀಮುಖ]

ಸಿಳ್ಳಿ 'ಸಿಳ್ಳು$_1$' ನೋ.

ಸಿಳ್ಳಿಕ್ಕು (ಕ್ರಿ). ಬಾಯಿಂದ ಊದಿ ಸದ್ದುಮಾಡು; ಸಿಳ್ಳುಹಾಕು: ಎನ್ನವನೆ ನೋಡೆನುತ ಎತ್ತಿಕ್ಕಿಯಾಡುತಂ ಚೆನ್ನವನೆ ನೋಡೆಂದು ಸಿಳ್ಳಿಕ್ಕಿಯಾಡುತಂ (ಕಣ್ಣರ. ದೇ. ೧೫೯-೮). [ಸಿಳ್ಳು$_1$ + ಇಕ್ಕು]

ಸಿಳ್ಳಿಡು, ಸೀಳಿಡು$_2$ (ಕ್ರಿ). = ಸಿಳ್ಳಿಕ್ಕು: ಕೋಲಂ ಬೀಸುತ ಸಿಳ್ಳಿಡುತೆ . . . ಕೌಲೇಯಮನಲ್ಲಿ ಕರೆವುತಂ ನಡೆತಂದಂ (ವೃಷಸಂ. ೧೧-೬೩). **ಸೀಳಿಡು$_2$:** ಗಾಳಿಯಿಂ ತಲೆಗೂದಲಲುಗಲು ಸೀಳಿಡುತ ಕಣುಬಿಟ್ಟು ನೋಡುತ್ತ . . . ನಾಯಂ ಕರೆವುತ (ಬಸಪು. ೨೦-೧೩). [ಸಿಳ್ಳು$_1$ + ಇಡು$_1$]

ಸಿಳ್ಳಿಮಿಳ್ಳಿ, ಸಿಲ್ಲಿಮಿಳ್ಳಿ (ಗು). ಗಣನೆಗೆ ಬಾರದ; ಯಃಕಶ್ಚಿತ್ತು: ಆ ಮೂರಂತಸ್ತಿನ ಮನೆಯೊಳಗೆ ಈಗ ಸಿಳ್ಳಿಮಿಳ್ಳಿ ಮೂರೇ ಮೂರು ಪ್ರಾಣಿಗಳು ವಾಸವಾಗಿವೆ (ಎರಸೆ. ೧). **ಸಿಲ್ಲಿಮಿಳ್ಳಿ :** (ಕ). [?]

ಸಿಳ್ಳಿಹಾಕು 'ಸಿಳ್ಳುಹಾಕು' ನೋ.

ಸಿಳ್ಳು$_1$, ಶಿಳ್ಳಿ, ಶಿಳ್ಳು, ಸಿಳ್ಳಿ, ಸಿಳ್ಳೆ$_1$, ಸೀಳ್ಳು$_3$ (ನಾ). ೧. (ಮನುಷ್ಯ ಹಕ್ಕಿ ಮುಂತಾದುವು) ಬಾಯಿಂದ ಊದಿ ಮಾಡುವ ಸದ್ದು; ಸೀಟಿ: ಮುಂಗೈ ಯೊಳಾಡುವದು ಹಿಂಗುವದು ಹೊಂಗುವದು ಸಿಂಗಿಯಲಿ ಸಿಳ್ಳ ಬಿಡುತಿಹುದು ಆ ಮಿಗದ ಸಂಗವನು ನೋಡು (ಸರ್ವಜ್ಞ. ೨೦೫೪); ಗರಿಪುಕ್ಕಮಂ ಕುಣಿಕುಣಿಸಿ ಸಿಳ್ಳನೂದಿತು ಸಿಪಿಲೆ (ಶ್ರೀರಾಮಾ. ೨೨೮-೨೧); ಮಧುರನು ಏನೂ ಹೇಳದೆ ಇದ್ದವನು ಸಿಳ್ಳನ್ನು ಕೇಳಿದ ಕೂಡಲೆ ಧಢಧಢನೆ ಇಳಿದನು (ಬಂಕಿಮ. ೪೦). ೨. ಸೀಟಿಯ ಧ್ವನಿಯನ್ನು ಹೊರಡಿಸುವ ಒಂದು ಬಗೆಯ ಊದುವ ಸಾಧನ: 'ಸಿಳ್ಳುಹೊಡೆ' ಪರಾ. ಶಿಳ್ಳಿ: ೧. 'ಶಿಳ್ಳಿಹೊಡೆ' ಪರಾ. ಶಿಳ್ಳು : ೧. 'ಶಿಳ್ಳುದನಿ' ಪರಾ. ಸಿಳ್ಳಿ : ೧. 'ಸಿಳ್ಳಿಹಾಕು' ಪರಾ. ಸಿಳ್ಳೆ$_1$: ೧. ಸಿಳ್ಳಿಯ ಹೊಡಿಬೇಡ ನೆಟಿಕೆಯ ಮುರಿಬೇಡ (ಇಂಚಾಪ. ೧೬೦-೯೦). ೨. 'ಸಿಳ್ಳಿಯೂದು' ಪರಾ. ಸೀಳ್ಳು$_3$: ೧. ಎಳೆಮಕ್ಕಳು ಕೌತುಕದಿಂದ ಚಪ್ಪಾಳೆ, ಸೀಳು ಇಕ್ಕುತ್ತಿದ್ದರು (ಕಟ್ಟೆದೂ. ೫೨). [ದೇ. ॥ ತಮಿ. ಚೀಟ್ಟು, ಚೀಕ್ಕಲ್ ; ಮಲ. ಚಿಳ್, ಚೀಳ್./ ಮರಾ. ಶಿಳಳಿ, ಶಿಳೀ, ಶೀಳ್]

ಸಿಳ್ಳು$_2$, ಸಿಳ್ಳೆ$_3$ (ನಾ). ಕಣ್ಣಿನ ಪಿಸುರು; ಗೀಜು: ಕೀವು ಕೀಣಿ ಕೊಟ್ ಸಿಂಬುಳ್ ಸಿಳ್ಳುಗಳ್ . . . ದುರ್ಗಂಧಮುರ್ವಿಸುಗುಂ (ಪುಷ್ಪಪು. ೧೩-೪೯). 'ಸಿಳ್ಳುಗಣ್ಣು' ಪರಾ. **ಸಿಳ್ಳೆ$_3$:** 'ಸಿಳ್ಳೆಮುಸುಡು' ಪರಾ. [?]

ಸಿಳ್ಳುಗಣ್ಣು, ಸಿಳ್ಳೆಗಣ್ಣು (ನಾ). ಪಿಸುರು ತುಂಬಿದ ಕಣ್ಣು; ಗೀಜುಗಣ್ಣು: ಸಿ(ಶಿ)ಳ್ಳುಗಣ್ಣಿಗೆ ಮಂಜಂತೆ (ಚಿದಾವ. ೧೦೫-೬). **ಸಿಳ್ಳೆಗಣ್ಣು :** (ಕ).

[ಸಿಳ್ಳು$_2$ + ಕಣ್ಣು (< ಕಣ್)]

ಸಿಳ್ಳುನಾಯಿ 'ಸೀಳ್ನಾಯ್' ನೋ.

ಸಿಳ್ಳುಲಿ (ನಾ). ಸಿಳ್ಳಿನ ಶಬ್ದ: ಅಲ್ಲೊಂದು ಇಲ್ಲೊಂದು ಸಿಳ್ಳುಲಿ ನೀರವತಾವೀಣೆಯ ತಂತಿಯನ್ನು ಮೀಟಿದಂತೆ ಕೇಳಿಬರುತ್ತಿತ್ತು (ಮಲಮ. ೨೬೦). [ಸಿಳ್ಳು$_1$ + ಉಲಿ$_2$]

ಸಿಳ್ಳುಹಾಕು, ಸಿಳ್ಳಿಹಾಕು, ಸಿಳ್ಳೆಹಾಕು (ಕ್ರಿ). (ಮನುಷ್ಯ, ಪಕ್ಷಿ ಮುಂತಾದುವು ಬಾಯಿಂದ ಊದಿ) ಸಿಳ್ಳಿನ ದನಿ ಮಾಡು; ಸೀಟಿಹೊಡೆ: ಪೂದೆಗಳಲ್ಲಿ ಹಕ್ಕಿಗಳು ಸಿಳ್ಳುಹಾಕಿ ಚಲಿಪಲಿಗುಟ್ಟುತ್ತಿದ್ದವು (ಯೋಧಪು. ೩); ಡಕಾಯಿತರು . . . ಮನೆಯ ಹಿಂದೆ ಹೋಗಿ ಹಾಲಕ್ಕಿಯಂತೆ ಸಿಳ್ಳುಹಾಕಿದರು (ಬಂಕಿಮ. ೪೦). **ಸಿಳ್ಳೆಹಾಕು:** ಕಾಜಾಣಾನೂ ಸಿಳ್ಳೆಹಾಕಾಕೆ ಸುರುಮಾಡಿದುವಲ್ಲಾ! (ಮಲಮ. ೨೬೦). **ಸಿಳ್ಳೆಹಾಕು:** ಅವನು ಸಿಳ್ಳೆಹಾಕಿ ಅವರ ಗಮನ ಸೆಳೆದನು (ರೂಢಿ). [ಸಿಳ್ಳು$_1$ + ಹಾಕು (< ಪಾಯ್ಕು$_1$)]

ಸಿಳ್ಳುಹೊಡೆ, ಶಿಳ್ಳಿಹೊಡೆ (ಕ್ರಿ). ೧. = ಸಿಳ್ಳುಹಾಕು: ಸಿಳ್ಳುಹೊಡೆಯುತ್ತ . . . ಅಡ್ಡಾಡಲು ಪ್ರಾರಂಭಿಸಿದೆ (ಚಂದುಟಿ. ೯೮); ನೀಲ . . . ಸಿಳ್ಳುಹೊಡೆದು ತನ್ನ ಪ್ರಾಣಮಿತ್ರ ಕುದುರ ಹ್ಯರಿಯನ್ನು ಕರೆದನು (ಬಂಗಾಹ. ೬೮). ೨. ಸೀಟಿಯಂಥ ಸಾಧನದಿಂದ ಧ್ವನಿಮಾಡು: ಕಂದರದ ಮರೆಯಿಂದ ತೂರಿ ಬಹ ರೈಲು . . . ಸಿಳ್ಳುಹೊಡೆವುದು ಮಾಯಕಾರನಂತೆ! (ಭಾವಜೀ. ೨೧-೨೦). **ಶಿಳ್ಳಿಹೊಡೆ:** ೧. ಬಾಗಿಲಾಚೆ ಶಿಳ್ಳಿಹೊಡೆದಾಗ ಬಾಗಿಲು ತೆಗೆದಳಂತೆ (ಚಂಗೂಲಿ. ೧೯೧). [ಸಿಳ್ಳು$_1$ + ಹೊಡೆ$_1$ (< ಪೊಡೆ$_1$)]

ಸಿಳ್ಳೆ$_1$ 'ಸಿಳ್ಳು$_1$' ನೋ.

ಸಿಳ್ಳೆ$_2$ (ನಾ). ಕವಲಾಗಿರುವ ಚುಚ್ಚುಗೋಲು: "ಸರ್ವಲಾ, ತೋಮರ: - ೨ ಮರದ ಸಿಳ್ಳೆ, ಡಾಣೆ ಮುಂತಾದ ಆಯುಧಕ್ಕೆ ಹೆಸರು" (ಸಿದ್ಧಾಂತಿ. ೨೬೬).

[<— ತೆಲು. ಚಿಳ್ಳು, ಸಿಳ್ಳು]

ಸಿಳ್ಳೆ$_3$ 'ಸಿಳ್ಳು$_2$' ನೋ.

ಸಿಳ್ಳೆ$_4$ (ಗು). ಸೊರಗಿದ; ಬಡಕಲಾದ: 'ಸಿಳ್ಳೆಕಾಯ' ಪರಾ. [?]

ಸಿಳ್ಳೆಕಾಯ (ನಾ). ಸೊರಗಿದ ಶರೀರ; ಬಡಕಲು ಮೈ: ಒಬ್ಬ ಸ್ಥೂಲಶರೀರದವನು. ಮತ್ತೊಬ್ಬ ಸಿಳ್ಳೆಕಾಯದವನು (ಚಿಂಗಾಳ್ಳ-೪೬). [ಸಿಳ್ಳೆ$_4$ + ಕಾಯ]

ಸಿಳ್ಳೆಗಣ್ಣು 'ಸಿಳ್ಳುಗಣ್ಣು' ನೋ.

ಸಿಳ್ಳೆಮುಸುಡು (ನಾ). ಪಿಸುರಿನಿಂದ ಕೂಡಿದ ಮುಖ: ಸಿ[ಪಾಠಾಂ. ಹಿ]ಳ್ಳೆಮುಸುಡಿನ ತೊತ್ತೆ ನಡೆ (ತೊರರಾ. ೫-೮-೭೭). [ಸಿಳ್ಳೆ$_3$ (< ಸಿಳ್ಳು$_2$) + ಮುಸುಡು (< ಮುಸುಂಡು)]

ಸಿಳ್ಳೆಯೂದು (ಕ್ರಿ). ಸೀಟಿಯಂಥ ಸಾಧನದಿಂದ ಧ್ವನಿಮಾಡು : ಸೆರೆಮನೆಯ ದ್ವಾರಪ್ರದೇಶದಲ್ಲಿದ್ದ ಕಾವಲುಗಾರ ಸಿಳ್ಳೆಯೂದಿದನು (ಪುನರು. ೨೦೭).

[ಸಿಳ್ಳೆ$_1$ (< ಸಿಳ್ಳು$_1$) + ಊದು$_1$]

ಸಿಳ್ಳೆಹಾಕು 'ಸಿಳ್ಳುಹಾಕು' ನೋ.

ಸಿಱ್, ಸಿರ್ (ನಾ). ವೇಗವನ್ನಾಗಲೀ ಕೋಪವನ್ನಾಗಲೀ ಸೂಚಿಸುವ ಒಂದು ಅನುಕರಣ ಶಬ್ದ: ಬಡಿವಲ್ಲಿ ನಿಡಿಯ ಪುಳ್ಳಿಯ ಕಡೆಯುಡಿ ಸಿಱ್ಱೆಂದು ಪಾಱ್ (ಧರ್ಮಾಮೃ. ೧೨-೨೨೩). **ಸಿರ್:** ಸಿವಂಗಿ ಹಾಗೆ ಸಿರ್ ಅನ್ನಬೇಡ (ಚಂದಕೋ. ೧೪).

ಸಿಱು, ಸಿರು (ಕ್ರಿ). ಸೀಳು; ಬಿರಿ : 'ಸಿಱುಗವಡೆ', 'ಸಿಱುನಾಯ' ಪರಾ. **ಸಿರು:** 'ಸಿರುವಾಯಿ' ಪರಾ. [< ಸಿವುಱು$_1$]

ಸಿಱುಂಬಳಾಡು 'ಸೀಱುಂಬುಳಾಡು' ನೋ.

ಸೀಮುಂಬು 'ಸಿಡುಂಬು' ನೋ.

ಸೀಮುಂಬುಣಿ (ನಾ). ಮೆಳೆ; ಪೊದೆ (?): ಉಗುರು ತುಪ್ಪುಳು ಹಚ್ಚೆಗಳ ಸೀಮುಂಬುಣಿಯ ಹುತ್ತುಗಳ ನೋಡುತ ಸನ್ನೆಗಯ್ಯುತ್ತ ಹರದು ನಡೆ (ಚೀರಮ. ೧೦-೨೦).

[ಸೀಮುಂಬು (< ಸಿಡುಂಬು) + ಉಣ್ಣ್]

ಸೀಮುಂಬುಲಾಡು 'ಸೀಮುಂಬುಳಾಡು' ನೋ.

ಸೀಮುಂಬುಳ್ 'ಸೀಮುಂಬುಳು' ನೋ.

ಸೀಮುಂಬುಳಾಡು 'ಸೀಮುಂಬುಳಾಡು' ನೋ.

ಸೀಮುಗವಡೆ (ನಾ). ಒಡೆದ ಕವಡೆ; ಬಿರಿದು ಹೋದ ಕವಡೆ: ದಿವ್ಯರತ್ನ ಭೂಷಣಮೊಲ್ಲದೆ ಸೀ[ಪಾಠಾಂ. ಸೀ]ಮುಗವಡೆಯ ಸರಂಗಳ ಬೇಡಿ ಬದುಕುವ ವಿಕಾರಿಯಂದದಿ (ನಂದಿಪು. ೨೨-೧೧). [ಸೀಮು + ಕವಡೆ]

ಸೀಮುವಾಯು (ನಾ). ಸೀಳಿದ ಬಾಯುಳ್ಳವನು: ಮುಮುವೆಲ್ಲಿ ಕಮುವ ಬಿಡು ಮಿಗ ತುಱಿಸಾವಂ ಕಱವರೇಳು ಬಿದಿರ ಪಿಡಿ ನೀಂ ಸೀಮುವಾಯನೆನಿಪ್ಪಬ್ಬರ ತುಮುಹಟ್ಟಿ ಯೊಳುರ್ಬಿ ಪರ್ಬುತಿರ್ಪವಸರದೊಳ್ (ದಶಾವ. ೯-೧೫೫).

[ಸೀಮು + ಬಾಯ್ + -ಅ್]

ಸೀಮೂಲೇಖ (ನಾ). ಶಿಲಾಶಾಸನ; ಶಿಲಾಲೇಖ: ಸೀಮೂಲೇಖಿಮಂ ಬರೆದಂ ಶ್ರೀಮನ್ಮಹಾಶಾಮನ್ತಂ ಮಂಗಿಯೇಚಯ್ಯನ ಸನ್ನಿವಿಗ್ರಹಿ ಬಮ್ಮಯ್ಯಂ (ಎಕ. XI, ಚಿತ್ರದು. ೮೨-೩೬; 1074). [ಈ ಇದು 'ಶಿಲಾಲೇಖ' ಎಂಬುದರ ಅಪಲಿಖಿತ]

ಸೀಲ್ಗ 'ಸಿತಗ' ನೋ.

ಸೀ$_1$, **ಸೀಯು** (ಕ್ರಿ). ಸೀತ್, ಸೀದ್ (ಭೂತಕೃ), ಸೀದು (ಭೂತನ್ಯೂ). ೧. (ಉರಿಯಿಂದ ಆಹಾರಪದಾರ್ಥ ಮುಂತಾದವು) ಹೆಚ್ಚಾಗಿ ಸುಟ್ಟುಹೋಗು; ಕರಿಕಾಗು: ಸೀಯ ತಲೆ ಬೇಯಿ ಮಯ್ ಮೇಲ್ಯಾಯ ಕರಂ ಪಸಿದ ಪುಲ್ಮರುಳ್ (ಕವ್ಯಸಾ. ೫೩೭ ಪೂದ್ಯಕ); ಉಭಯಬಲಂಗಳೊಳಂ . . . ಕೊಳ್ಳಿವೀಸಿದಾಗಳ್ . . . ಅದನ ಪದ್ಮವಿಷ್ಟರದಸಬಂದರೆಸೀದುವು (ಪಂಪಭಾ. ೧೦-೩೭); ತೇಜದ ಸೋಂಕಿನಿಂದವೆಮೆ ಸೀಗೆಂದುದ್ದತರ್ನೋಡಲಂಜುವಿನಂ ವಿಕ್ರಮವಿಭ್ರಮಂ ಸೊಗಯಿಸಿತ್ತೀ ವಿಷ್ಣುಭೂಪಾಳನೊಳ್ (ಪೃಅರಿ. ೧೯೩೭, ೨೮-೯; 1148); ಝಳಕೆ . . . ಅಂಬುಜದಸಳು ಸೀದವು ತುಂಬಿಗಳು ಸಹಿತ (ಕುವ್ಯಾಅ. ೨೦-೫೪). ೨. ಬತ್ತು; ಒಣಗು: ನಿನ್ನೀ ನಗೆಮೊಗದ ಸಿರಿ ಸೀದು ಕರಿಯಾಯ್ತು (ಕುವ್ಯಾಸ. ೧೪-೨); ಬೀತುದು ಮಳೆಗಾಲ ಜಲ ನೆಲೆಗೊಂಡುದು ಸೀತರುಣಾಟ್ಟ ಕೊಬ್ಬಿದುವು (ಮೋಷತ. ೪-೪೨). ೩. ಅತಿಯಾದ ಬಿಸಿಯಿಂದ ಕಾಯು; ಹೆಚ್ಚಾಗಿ ಸುಡು: ಅಲ್ಲಿ ದೂತರೆಯ್ದೆ ಉರಿವ ಕಟ್ಟಿನೊಳಗೆ ತಲೆಕೆಳಕನೆ ಪಿಡಿದು ಸೀವುತಿಪ್ಪ ಕುದಿವ ಕಟ್ಟುಗುಳವನೆಬೆದು ಕುಡಿಯಿಮಂದು ಬಡಿವರಪ್ಪ (ಶಾನಂಚ. ೬-೧೦೬). ೪. (ಆಲಂ) ನಾಶವಾಗು; ಅಳಿ: ಆ ಮಹಾನಾರಾಯಣಾಸ್ತ್ರದ ಸೀವೆ ಸೀದುದು [ಪಾಠಾಂ. ಬಿದ್ದುದು] (ಕುವ್ಯಾಕ. ೧-೨೭). ಸೀಯು: ೧. ಒಲೆಯಡಿಯನುಜುಹಿದಡೆ ಹೊಗೆ ಗೋಳಕನಾಥನ ಕೊರಳೆ ಸುತ್ತಿತ್ತು ಮಹೀತಳನ ಜಿಡೆ ಸೀಯಿತ್ತು (ಬಸವ. ೯೩೦); ಒತ್ತುವ ಪದ್ಮಪತ್ರ ಕದಳೀದಳಸಂಕುಳಮೆಯ್ದೆ ಬೆಂದು ಸೀಯುತ್ತಿವೆ (ಗಿರಿಕ. ೪-೧೧೪); ಅನ್ನವು ಸೀದ ವಾಸನೆ ಮನೆಯೊಳಗೆಲ್ಲಾ ತುಂಬ ಹೊರಗಿನ ವಾತಾವರಣದಲ್ಲಿ ಸೇರಿಹೋಗುತ್ತಿದ್ದಿತು (ನಿರಾಚ. ೧೦೭). ೨. ಅವರೆಲ್ಲರು ದುಃಖದಿ ಕೋಪದಿ ಬಂದೀ . . . ಗುಡಿಯನು ಹೊತ್ತಿಸಿ ಅಂದದ ಮೂರ್ತಿಯ ಸೀಯುವರೊ (ಕವಷೋ. ೫೦-೧೬). ೪. ಕರ್ಣನಿ ಕೋಲ ಗಱೆ ಸೋಂಕಿದರೆ ಸೀಯದೆ ಸಿತಗತನ ನಿನಗೆ (ಕುವ್ಯಾಕ. ೧೬-೧೭). ೫. (ಆಲಂ) ಲಕ್ಷಿಸು; ಗಣನೆಗೆ ತೆಗೆದುಕೊಳ್ಳು: ಉದಧಿ ನದಿಯ ನೀರಂ ಸೀವುದೆ ಭಾಸ್ಕರಂ ಕನ್ನಡಿಯ ಬೆಳಗಂ ಪಾರ್ವನೆ (ಬಸರ. ೮-೧೨೦); ಆ ಹಳ್ಳೀಲಿ ಅವನನ್ನು ಯಾರೂ ಸೀಯಲಿಲ್ಲ, ಅದಕ್ಕೇ ಇಲ್ಲಿಗೆ ಬಂದಿದ್ದಾನೆ (ರೂಢಿ). ೬. ವಿಕ್ರಯಿಸು; ಮಾರು: ಜಮಿನನ್ನು ರೈತರಿಗೆ ಗುತ್ತಿಗೆ ಮಾಡಿದರೆ . . . ವ್ಯವಸಾಯದ ಮುಟ್ಟುಗಳು ಕೆಟ್ಟು ಅವುಗಳನ್ನು ಕಾಲುಭಾಗ ಬೆಲೆಗಾದರೂ ಸರಿಯೆ ಸೀಯಲಾಗದೆಂದೂ . . . ಪಾರುಪತ್ಯಗಾರ ವಾದಿಸಿದನು (ಪುನರು. ೨೬೫).

ಸೀದುಬಿಡು = (ಆಲಂ) ಮಾರು; ವಿಕ್ರಯಿಸು: ತಂದ ಮಾಲೆಲ್ಲಾ ಸಿಕ್ಕಾಪಟ್ಟೆ ಸೀದುಬಿಡುತ್ತಾನೆ (ಮರೀ. ೮); ಬರೋ ಚುಂಚನಗಿರಿಜಾತ್ರೇಲಿ ನಿಮ್ಮನ್ನು ಹೋದಷ್ಟಕ್ಕೆ ಸೀದುಬಿಡ್ತೀನಿ! (ನನ್ನೂರು. ೨೯೭). ಸೀದುಹೋಗು = ೧. ಅಧಿಕವಾದ ಉರಿಯಿಂದ ಆಹಾರಪದಾರ್ಥ ಮುಂತಾದುವು ಸುಟ್ಟುಹೋಗು,— ಕರಿಕಾಗು: ಕೊಮ್ಮೆಬೇಲು ತಂದು . . . ಬೇರು ಸೀದುಹೋಗದಂತೆ ಕಾಯಿಸಿ (ಸಕಸ್ಕೃ. ನಮ್ಮ-೨೨). ೨. (ಆಲಂ) ನಾಶವಾಗು: ನಮ್ಮ ವಂಶಾಂಕುರವು ಸೀದುಹೋಗುತ್ತದೆ (ಲಕ್ಷ್ಮೀಪ್ರ. ೬೭).

[ದೇ. ॥ ತಮಿ. ತೀ, ತೀಯ್; ಮಲ. ತೀ = ಬೆಂಕಿ; ತುಳು. ಚೀಂಬು, ಚೀಂತು]

ಸೀ$_2$, **ಸಿಹಿ** (ನಾ). ೧. ಷಡ್ರಸಗಳಲ್ಲಿ ಒಂದು; ಸವಿ: ಹಾರ್ಕೆಸ ಸೀ[ಪಾಠಾಂ. ಸಿಹಿ]ಯುಳ್ಳ ಸಕ್ಕರೆಯು ಪಡಿಯಿಲ್ಲ (ಚನ್ನರ. ದೀ. ೬೨೫-೨೦); ಜೇನೆಯ್ಕ ಸೀಯೆನಿಪ್ಪಾ ಗೇಯ ರಸದಿಂಪನೇನೆಂಬೆ (ಪದ್ಮರಾ. ೮-೬೨); ಆಡಿನ ಹಾಲು ಸೀ ಆಗಿ ಇರುವದು (ಮುಂಬಯಿ. ೬. ೫-೧೫೫). ಸಿಹಿ : ೧. ಸಕ್ಕರೆಗೆ ಸಿಹಿಯಾಗಿರ್ಪುದೆಂತು ಸಹಜಂ . . . ಅಂತೆ ಚಕ್ರವರ್ತಿಯ ದೇವೇಂದ್ರನ ಸರ್ವಜ್ಞನ ಪದವಿಯನೆಯ್ದುವ ಪುರುಷಂಗೆ . . . ಭಕ್ತಿಯುಂ ಸಹಜಮಾಗಿರ್ಕುಂ (ಧರ್ಮಾಮೃ. ೪-೪೦); ರೋಗಿಗೆ ಹಾಲು ಸಿಹಿಯಪ್ಪುದೆ (ಶೂನ್ಯಸಂ. ೨೭೦-೪೫); ಒಗರುಪ್ಪು ಸಿಹಿ ಕಹಿ ಹುಳಿ ಕಾರಗಳ ತೆಗೆತೆಗದೀವುತಿಹನು ನಾಲಗೆಗೆ (ಭರಚ. ೪-೯೩); ಸಿಹಿಯೋ ಕಹಿಯೋ (ಅನಿಕೇ. ೩೧-೨). ೨. ಸವಿಯಾದ ಪದಾರ್ಥ : ಅವರ ಮಗುವಿನ ಹುಟ್ಟುಹಬ್ಬಕ್ಕೆಂದು ಎರಡು ಬಗೆ ಸಿಹಿ ಮಾಡಿದ್ದರು (ರೂಢಿ).

[ದೇ. ॥ ತಮಿ. ತಿತ್ತಿ, ತೀಮ್, ತೀಯಮ್, ತೀವು; ಮಲ. ತಿತ್ತು; ತುಳು. ತೀ; ತೆಲು. ತಿಯ್ಯ, ತೀಪಿ, ತೀಪು, ತೀಯ; ಕುಗ. ಸೆಪ; ಕುವಿ. ತೀಪ]

ಸೀ$_3$ (ನಾ). 'ಛೀ', 'ಬಿಡು' ಎಂಬರ್ಥದಲ್ಲಿ ಬಳಸುವ ಒಂದು ಉದ್ಗಾರವಾಚಕ: ಅಂದಿನಾ ನಿನ್ನ ಗರ್ಜನೆಯುಂ ಬೀರಮುಮಿಗಳೆಂತು ಪುಡಿಯೊಳ್ ಟಃ ಸೀ ಪೂರಳ್ದಿರ್ಪುದೇ (ಶಾಂತಿಪು. ೭-೬೦).

ಸೀಂಟು, ಸೀಟು$_1$ (ಕ್ರಿ). ೧. ಒರಸು; ಉಜ್ಜು; ತೊಡೆ: ಇದು ನೀತಿಶಾಸ್ತ್ರದ ಬಲ್ಮೆಯಲ್ತೆಂದದಂ ಸೀಂಟಿ ತಾನಿಂತೆಂದು ಬರೆದಂ (ವಡ್ಡಾರಾ. ೧೮೪-೧೩); ಕಣೆ ರೋಮರೋಮಂದಪ್ಪದೆ ನಾಂಟಿದುವು ಸೀಂಟಿದುವು ವಿಧಿಲಿಖಿಯಂ (ಪಂರಾಮಾ. ೧೩-೭೧); ಸ್ವೇದಬಿಂದುಷ್ಟವಮಂ ಸೀಂಟುತ್ತೆ ಕುಳ್ದರ್ದಡೆಯೊಳಡಸಿ ನೆರ್ಮಾಗುತುಂ . . . ಅವನೀಶಂ ಗಾಸೆಯಾದಂ ಪ್ರಿಯಸಚಿವಸುತಂ (ಲೀಕಾವ. ೬-೪೨); ನಿತ್ಯಬಿಂದುಗೆ — ಬೆಡಂಗು . . . ಸೀಂಟು, ತೋಂಟಂ (ಶಮದ. ೬೬ ಪ್ರಯೋ). ೨. ಕೊನೆಯ ತೊಟ್ಟಿನವರೆಗೆ ಹಿಂಡು, — — ಹಿಳಿ: (ಕ). ೩. (ಮಕ್ಕಳು ಅಥವಾ ಹೆಳವರಂತೆ) ನೆಲದ ಮೇಲೆ ಕುಳಿತಂತೆಯೇ ಸರಿ,— ಜರುಗು: (ಕ). ೪. ಗುದವನ್ನು ತೊಳೆ,— ಪ್ರಕ್ಷಾಲಿಸು: "ಸೀಂಟು — ಗುದಸಮ್ಮಾರ್ಜನೇ" (ಶಮಧಾ). ೫. (ಆಲಂ) ನಾಶಮಾಡು; ಧ್ವಂಸಗೊಳಿಸು : ಇಂದ್ರಾದ್ಯರಂ ಸೀಂಟುವ ಯಕ್ಷಾಧೀಶನಂ ಕಟ್ಟುವ . . . ಆಗುರ್ವಂ ತೋಱಿದಪ್ಪಂ (ಜಗಪ. ೧೩-೩೮). ೬. ಅಲಕ್ಷಿಸು; ತೆಗೆದುಹಾಕು: ತನ್ನನುಜೆಗೆ ನಂದನನತ್ಯುನ್ನತನಪ್ಪಂ ಗಡಾಗಿ ಸೀಂಟದವೀ ಮಾತೆನ್ನದಿರೆನ್ನಯ ತಾಯಿಮನೆನ್ನು ಮನವನೋಲೆಗಳಸುವಂ ಗಡ ಕೇಳಾ (ಅರ್ಧನಾ. ೬-೧೬). **ಸೀಟು**$_1$: ೧. ವಿಧಿಯಿಲ್ಲದೆ ಗೋಪುವಿನ ಮುಖವನ್ನು 'ಸೀಟಿ'ದನು (ಬಾಳಹೂ. ೯೭). ೨. ಸಿರಿವಂತರೆಂದರೆ ಸಮಾಜದಲ್ಲಿಯ ಬಡಜನರ ರಕ್ತವನ್ನು ಸೀಟುವವರು (ಜನಜೀ. ೧೦೪).

ಸೀಂಟ ಕಳೆ = ೧. ಒರೆಸಿ ಬಿಡು; ತೊಡೆದು ಹಾಕು: ಪೂರ್ವವನೀಪಾಲಪ್ರಶಸ್ತಿ ಗಳೊಂದೊಂದಂ ದಂಡರತ್ನದಿಂ ಸೀಂಟ ಕಳೆದು (ಆದಿಪು. ೧೩-೭೧ ವ). ೨. ಒರೆಸಿಕೊಳ್ಳು; ತೊಡೆದುಕೊಳ್ಳು: ಬಿಸುನೆತ್ತರ್ ಕಣ್ಣಂ ಕವಿಯೆ ಸೀಂಟ ಕಳೆದು (ಪಂಪಭಾ. ೧೨-೭೪ ವ). ೩. ಬೆವುಟೆ ಹಾಕು; ಕತ್ತರಿಸು: ಬೆಳೆಯಿಸಬೇಡರಾತಿತರುವಂ . . . ಅದಂ ಮೊಳೆಯೊಳೆ ತೋಡಿ ಸೀಂಟ ಕಳೆಯಲ್ ಬಗೆದಪ್ಪುದು (ಸೂಕ್ತಿಸು. ೧೩-೧೪).

[ದೇ. ॥ ತಮಿ. ಚಿನ್ನು, ಚೀನ್ನು; ಮಲ. ಚೀಣ್ಣು = ತಡವು]

ಸೀಂತು 'ಸೀನ್' ಪರಾ.

ಸೀಂದು (ಕ್ರಿ). ಸಶಬ್ದವಾಗಿ ಮೊಗಿನಿಂದ ಸಿಂಬಳವನ್ನು ತೆಗೆದುಹಾಕು: ಅವಡು, ಕವಡು, ಸೀಂದು, ಸುಂದು ಇತಿ ಮೋದ್ಯಾದಿರಾಕೃತಿಗಣಃ (ಶಬ್ದಾನು. ೫೬೯ ಪ್ರಯೋ). 'ಸೀಂಟು' ಪರಾ. [ದೇ. ॥ ತಮಿ. ಚೀನ್ನು, ಚಿನ್ನು; ಮಲ; ಚೀನ್ನು, ಚೀಂಬ್ಬು; ತೆಲು. ಚೀದು; ಪರ್ಜ. ತೀದ್; ಗಡಬ. ಸೀಂದ್; ಕುಗ. ಸ್ತೀಂದ]

ಸೀಂಪ 'ಸೀನ್$_1$' ಪರಾ.

ಸೀಂಪಾಲ 'ಸೀಂಬಾಲ' ನೋ.

ಸೀಂಬಾಲ, ಶೀಂಬಾಲ, ಸೀಂಪಾಲ (ನಾ). ೧. ಒಂದು ಊರಿನ ಹೆಸರು: ತಸ್ಯ ಸಾಕ್ಷಿಣ . . . ಮಣಿಯುಗುರೆಯ ನನ್ದ್ಯಾಲ ಸೀಂಬಾಲಾದಪಭೃತ್ಯಯಾಂ (ಎಕ. I (R), ೧-೩೩; 466?); ಅಮಣಿಯ ನಂದ್ಯಾಲ ಸೀಂಬಾಲದೇಶ ಪ್ರಕೃತ್ಯಾಧ್ಯಕ್ಷಾಣಾಂ (ಮೈಆರಿ. ೧೯೩೦, ೩-೨೧; 500). **ಶೀಂಬಾಲ:** ೨. 'ಸೀಂಬಾಲ' ಎಂಬ ಊರಿಗೆ ಸೇರಿದವನು : ಮಣಿಯರುನ್ನಂದ್ಯಾಲರುಂ ಶೀಮ್ಬಾಲರುಂ . . . ಎಲ್ಲಾ ಸಾಮನ್ತರು ಮತ್ತಾಣಿಉಂ ಸಾಕ್ಷಿ (ಮೈಆರಿ. ೧೯೪೧, ೧-೩೪; ಸು. 643). **ಸೀಂಪಾಲ:** ೧. ಮಣಿಯದೆಗುರೆಯ ನಂದಿಯಾಲ ಸೀಮ್ಬಾಲನಾಣ್ಡಜೆಯ ಮದಣ್ಡ (ಮೈಆರಿ. ೧೯೨೪. ೭೮-೨೬; ?). [?]

ಸೀಂಬುಟು (ನಾ). ಕೀವಿನಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ಹುಳು: ಕಾಯ್ದ ಕಾವಲಿಯೊಳ್ ಕುಳ್ಳಿರಿಸೊಯ್ದು ಬಾಲವುಟುವುಂ ಕೀವಾಗಿ ತೀವಿರ್ದ ಸೀಂಬುಟುವಂ ಬಾಯ್ಗೆಜೆ (ದಶಕು. ೩-೧೭). [? + ಪುಟು]

ಸೀಕಂಚಿ (ನಾ). ಒಂದು ಬಗೆಯ ಗಿಡ ಮತ್ತು ಅದರ ಹಣ್ಣು: ಆ ಮಣ್ಣಿಂದ ಒಂದು ಸೀಕಂಚಿ ಗಿಡಾ ಹುಟ್ಟು (ಎಮುಕ. ೬). [ಸೀ$_2$ + ಕಂಚಿ$_1$]

ಸೀಕರ (ನಾ). ೧. ಸಣ್ಣ ಹನಿ; ತುಂತುರು: ಉಗುಳ ಸೀಕರಂಗಳ್ ತಮ್ಮ ಮುಂಗೈಯ ಮೇಗೆ ಬಿಚ್ಚೊಡೆ (ವಡ್ಡಾರಾ. ೬೯-೨೫); ಸೀಕರಮುಣ್ಮುವ ದಿಗ್ಗಜವ್ರಜಂ ಬಳಸಿದ ದಿವ್ಯದಂತಿಯೆನೆ . . . ಕಣ್ಗೆಸೆದಂ ನೃಪರೂಪಚಂದ್ರಮಂ (ಕಾದಂಪೂ. ೫೮೯); ಸುರುಚಿರಪಂಕಜಾಕರದ ಸೀಕರಮಂ ನಯದಿಂದಮೆತ್ತಿ ಬಂಧುರನವಗಂಧಶಾಳಿವನರಾಜಿಯನೊಯ್ಯನೆ ಸೋಂಕಿ . . . ತೊಳಗುತಿಪ್ಪುದು ಗಂಧವಹಂ ಪುರಾಂತದೊಳ್ (ವರ್ಧಮಾ. ೧-೬೦). ೨. ಹನಿಮಳೆ; ತುಂತುರುಮಳೆ: ಸೀಕರದ ಸೇಸೆಯೊಳುಮಿಂದು ಸುಮನೋರಜವ ಪೂಸಿ ಕೆಂದಳಿರ ತೆರೆಮರೆಗೊಂಡ ಶುಕಯೋಗಿ! (ಕವಿಕಾ. ೪೭-೭). [ಸಂ.]

ಸೀಕರಣೆ, ಶಿಖರಣೆ, ಶೀಕರಣೆ, ಸಿಕರಣೆ, ಸಿಹಿಕರಣೆ (ನಾ). ೧. (ಸಾಮಾನ್ಯವಾಗಿ) ಮಾವು, ಬಾಳೆ ಮುಂತಾದ ಹಣ್ಣುಗಳಿಗೆ ಸಕ್ಕರೆ, ಹಾಲು ಮುಂತಾದುವನ್ನು ಬೆರಸಿ ತಯಾರಿಸುವ ಒಂದ ಬಗೆಯ ಸಿಹಿಯಾದ, ಗಟ್ಟಿ ದ್ರವರೂಪದ ಪದಾರ್ಥ: ಸೀಕರಣೆ ಹೊದಕ ಪಾನ ಪಳಿದೆಯವೆಂಬ ನಾನಾಭಿನ್ನರುಚಿಯ ಶಾಕಂಗಳುಂ . . . ಮೊದಲಾಗಿ ಹದನಱಿದು ಬಡಿಸೆ (ಧರ್ಮಪ. ೨-೫೬ ವ); ಕಳಿತ ಬಾಳೆಯ ಹಣ್ಣ ಸಕ್ಕರೆಯ ಪೊಸಪಾಕದೊಳಗೆ ಕೆಲವಂ . . . ಚಿಲುಪಾಲಿನೊಳ್ ಕೆಲವನಿಳುಹಿಕೊಂಡಿಂತು ನಾನಾಪರಿಯ ಸೀಕರಣೆಗಳನು ಹಸನಂ ಮಾಳ್ಪುದು (ಸೂಪಶಾ. ೪-೯೦); ಪಕ್ವಫಲರಸಾಯನದ ಸೀಕರಣೆಗಳನು . . .ದಧಿ ದುಗ್ಧ ಮುಂತಾದ ಭೋಜ್ಯಪರಿಕರಮನುಜೆ ನೀಡಿಸಿದನಾ ಮಹಾಚರಕೊಲ್ಲು ಚೆನ್ನಬಸವೇಶಂ (ಚೆಬಸು. ೫-೬೦). **ಶಿಖರಣೆ:** ೧. ರಣಮಹೀಪಾತ್ರೆಯಲಿ . . . ನೆಣವಸೆಯ ಶಿಖರಣೆಯ ಕರುಳಿನ ವಿವಿಧಶಾಖಿಗಳ ಗಣನೆಯಿಲ್ಲದ ರುಧಿರಕ್ಷೃತದಿಂದುಣಬಡಿಸಿದರು (ಆಸಂಠಾ. ೪-೫-೨೮). **ಶೀಕರಣೆ:** ೧. ಹತ್ತೆಂಟು ಹಣ್ಣುಗಳ ಶೀಕರಣೆಯನ್ನು ತಿನ್ನುವಾಗ ವಸಂತರಾಯನ ಆದರ ವಿನಯಗಳು ಉಕ್ಕೇರಿದವು (ಗಂಮಾಯಿ. ೨೧೩); ಒಳಗೆ ತಾಯಿ ಮಕ್ಕಳು ಶೀಕರಣೆಯನ್ನು ಸುರಿಯುತ್ತಿದ್ದರು (ಧಾರಥಿ. ೧೯). **ಸಿಕರಣೆ:** ೧. ಪತ್ರಫಲಶಾಕ ಸಿಕರಣೆ . . . ಬಹುಭಕ್ಷ್ಯಭೋಜ್ಯವ ಸಲೆ ಸಮರ್ಪಿಸಿದನೀಶ್ವರಗೆ (ಮೋಹತ. ೨೦-೪೧); ಮಧು ಶರ್ಕರಾಮಿಷ ಪಳಿದ್ಯ ಸಿ[ಪಾಠಾಂ. ಸೀ]ಕರಣೆ ಶಾಕ ತನಿವಣ್ಣಳ . . . ಸವಿಧನಚ್ಚುತಂ (ಕೈಮಿಭಾ. ೬-೪೪). ೨. ಒಂದು ಬಗೆಯ ಮೇಲೋಗರ : ಬದನೆಯ ಬಲಿದ ಹಣ್ಣ ಕುಯಿದು ತಿಳಿದುಪ್ಪದೊಳಗುದಕಮಂ ಕೂಡಿಯೊಗ್ಗರಿಸಿ . . . ಹುಣಿಸೆಯ ಕೊಣಬಿನೊಳು ಕೆಲವು ಹೋಳ ಹುದುಗಿ ಸಾಸುವೆಯ ಸಿ[ಪಾಠಾಂ. ಸೀ]ಕರಣೆ ಮೊಸರ ಸಿಕರಣೆಯೊಳೊದವಿಸಿ (ಸೂಪಶಾ. ೪-೩೦). **ಸಿಹಿಕರಣೆ :** ೧. ಹಲವು ಪರಿಯ ಸಿಹಿಕರಣೆ ರಸಾಯನಗಳ ತಂತಂದು ನೀಡಿದರು (ಇಚಶಾಂ. ೧೧-೭೪).

[ಸೀ$_2$ + ಕರಣೆ$_2$ ./ ಮರಾ. ಶಿಕರಣ, ಶಿಕ್ರಣ, ಶಿಖರಣ ./ ಸಂ. ಶಿಖರಿಣೀ]

ಸೀಕರಿ, ಚೀಕರಿ (ನಾ). ಸೀಕಲು; ಕರಿಕು: ಈ ಹನುಮ . . .ಪುಚ್ಛಾಗ್ರದಲಿ ಸುತ್ತಿದ ನಿವಸನದ ಶಿಖಿಯಿಂದ ಸೀಕರಿಮಾಡಿದನು ಪುರವ (ತೊರಾ. ೫-೯-೧೩); ಸೀಕರಿಗಳಾದವು ತರುವ್ರಜ (ದಸೀಮ. ೨-೮). **ಚೀಕರಿ:** 'ಚೀಕರಿವೋಗು' ಪರಾ.

ಸೀಕರಿಯಾಗು = ೧. ಸುಟ್ಟು ಕರಿಕಾಗು; ಸೀದುಹೋಗು: ನೆಱೆ ಸೀಕರಿಯಾಗೆ ಪತಂಗಪಕ್ಷಿಸಂಕುಳವವನೀತಳಂ ಬಿರಿಯೆ . . . ವನಾಂತರಾಳಮಂ ಬಳಸಿ ದವಾನಳಂ ಬಳಸಿತು (ಉದ್ಭಟ. ೯-೮೪); ಸೀಕರಿಯಾ[ಪಾಠಾಂ. ಯೋ]ದ ಬೀಜವನೊಂದಱೊಂದಱ ವಿವರವಳಿಯದೆ ಗುಡಿಸಿಕೊಂಡೊಯ್ದು (ಬಸಪು. ೬೦-೧೮); ಅವಳ ಶೂಲದ ಶಿಖಿಯಲಾವನನಿವಹ ಸೀಕರಿಯಾಯ್ತು (ತೊರಾ. ೧-೧೦-೧೬). ೨. (ಆಲಂ) ಇಲ್ಲವಾಗು; ಕಳೆದುಹೋಗು: ಏನನೆಂಬೆನು ಪಾರ್ಥನುಗ್ರತಪೋನಿದಾಘಜ್ವಾಲೆಯನುಸಂಧಾನವನು ತತ್ಪರಿಸರದ ಪಾವನತಪೋಧನರ . . . ಸಮಾಧಿಧ್ಯಾನ ಸೀಕರಿಯಾಯ್ತು ಸಾರವಿಚಾರ ಶಮಸಹಿತ (ಕುವ್ಯಾಅ. ೫-೧೨); ಕರಗಿ ಸೀಕರಿಯಾಯ್ತು ನೇಹವು ಕರುಣೆಕಡಲಾಱೊತ್ತು (ಕೌಶಾರಾ. ೪೩-೧೬). [ಸೀ$_1$ + ಕರಿ$_2$]

ಸೀಕರಿಗಳೆ (ಕ್ರಿ). ೧. ಸುಟ್ಟು ಕರಿಕುಮಾಡು; ಸೀಯಿಸು: ದೆಶದೆಶಗೆ ಸೀಕರಿಗಳೆವು ತೃತಹ ತ್ರಿಶೂಲವ ಕಂಡು (ನಿಭಾಗ. ೬-೧೧-೨). ೨. (ಆಲಂ) ಹರಿದುಹೋಗು; ಜೀರ್ಣವಾಗು: ಸೀಕರಿಗಳೆದ ಕೌಪೀನವಸನದ ಸೀಳುದುಡಿಗೆಗಳ . . . ನೆಗ್ಗಿದ ಕಮಂಡಲುಗಳಲಿ ನಡತಂದ (ನಿಭಾಗ. ೧೦-೫೪-೨). [ಸೀಕರಿ + ಕಳೆ$_1$]

ಸೀಕರಿಗೊಳ್, ಸೀಕರಿಗೊಳು (ಕ್ರಿ). ಸೀದುಹೋಗು; ಕರಿಕಾಗು: ಕಾನನದ ಬೇಂಟೆಯೊಳ್ಪಿಕ್ಕಿ ಸೀಕರಿಗೊಂಬ ಮೃಗಪೋತಕಂಗಳಂತೆ (ಕೈಮಿಭಾ. ೨೧-೪೧). **ಸೀಕರಿಗೊಳು:** ಪೊತ್ತಿ ಸೀಕರಿಗೊಳುತಿರ್ಪ ಶುಷ್ಕದಳಸಂಕುಳಧೂಮವಿಮಿಶ್ರ ದಿಂದಮಂಬರಮನೆ ಚುಂಬಿಸುತ್ತಿರದೆ ಸುಟ್ಟುರೆಗಳ್ ನೆಗೆದತ್ತುವೆತ್ತಲುಂ (ಕುಸುಮಾ. ೮-೧೨೧). [ಸೀಕರಿ + ಕೊಳ್$_1$]

ಸೀಕರಿಗೊಳಿಸು (ಕ್ರಿ). ಸುಟ್ಟು ಕರಿಕುಮಾಡು; ಸೀಯಿಸು: ಸಿಡಿಲುಗಿಡಿಗಳು ಸೂಸೆಯಲ್ಲಮನಡಿಗಳೆಡೆಯನು ಹೊದ್ದಲಮ್ಮದೆ ಸಿಡಿದು ಸೀಕರಿಗೊಳಿ[ಪಾಠಾಂ. ಗರಿ] ಸುತಿರ್ದುವು ಸಕಲಜೀವರನು (ಪ್ರಭುಲಿಂ. ೧೩೩೦). [ಸೀಕರಿಗೊಳ್ + - ಇಸು$_3$]

ಸೀಕರಿಗೊಳು 'ಸೀಕರಿಗೊಳ್' ನೋ.

ಸೀಕರಿಯೋಗು 'ಸೀಕರಿವೋಗು' ನೋ.

ಸೀಕರಿವೋಗು, ಚೀಕರಿವೋಗು, ಸೀಕರಿಯೋಗು (ಕ್ರಿ). ೧. ಸೀದುಹೋಗು; ಕರಿಕಾಗು: ಸೀಕರಿವೋದತ್ತು ಮೃಣಾಳತಂತುರಚಿತಜ್ವಾಲೇಖೆ . . . ತಪೋರಾಜ್ಯತತ್ಪರ ಯೋಗೀಶ್ವರ ಬಾಲಚಂದ್ರಮುನಿನಾಥಜ್ಞಾನನೇತ್ರಾಗ್ನಿಯಿಂ (ಪಂಚಾಮಾ. ೧-೧೬); ಶೋಕಾಗ್ನಿಯೊಳ್ ಬೆಂದುಗಿದು ಸೀದು ಸೀಕರಿವೋಗಿ ಪೊರಳ್ಚು (ಗಿರಿಕ. ೮-೭೭ ವ); ಪಾರ್ಥನ ವಿಕ್ರಮಾಗ್ನಿಜ್ವಾಲೆಯಲಿ ನೆಱೆ ಸೀದು ಸೀಕರಿವೋಯ್ತು ಕುರುಸೇನೆ (ಕುವ್ಯಾಕ. ೧೪-೨೬). ೨. (ಆಲಂ) ಇಲ್ಲವಾಗು; ಹಾಳಾಗು: ಆ ತಪೋವನದ ತಪೋಧನರ್ಗೆ . . . ಜಪಾನುಷ್ಠಾನಮಿಲ್ಲಾಯ್ತು ಸದ್ವ್ರತಮುಂ ಸೀಕರಿವೋದುದು (ಶಬಶಂ. ೨-೧೦೭). ೩. ನೋಯು; ಸಂತಾಪಪಡು: ಆಕೆಯ ರೂಪನು ಕೇಶವ ತಾ ನೋಡಿ ವ್ಯಾಕುಲವಾಗಿ ಮನದೊಳು ಸೀಕರಿವೋದನು ಮನಸಿಜತಾಪದಿನಾ ಕಂಸಾರಿ ಬಸವಳಿದು (ಕಾಮಕ. ೧-೪೦). **ಚೀಕರಿವೋಗು:** ೧. ಕಾಯ್ದ ಲೋಹದ ತೊಱೆಯನೀಸಿಸೆಯಲ್ಲಿ ಬೆಂದು ಚೀಕರಿವೋಗೆ ಮಗುಱೆ ಓಡುವರಂ (ರತ್ನಕ. ೨-೪ ವ). **ಸೀಕರಿಯೋಗು:** ೧. ನಿಡುಸುಯಿಲಿಂದ ಸೀಕರಿಯೋದವೇಕಾವಳಿಯ ಮುತ್ತುಗಳು (ಕುವ್ಯಾವಿ. ೩-೫೫); ಪೊಸಮಾಂದಳಿರ ಹಚ್ಚಡಿಸಿತು ಮಾರನ ಬಿಸಜದೆಲೆಗಳಿಂದೆ ಬೀಸೆ ನಸುಸುಯಿಗಿಡಿಗಳಿಂದುರಿದು ಸೀಕರಿಯೋದನುಸುರಲೇನಂಗತಾಪವನು (ಅಂಜಚ. ೫-೮೧).

[ಸೀಕರಿ + ಪೋಗು$_1$ (< ಪೋ$_1$)]

ಸೀಕರಿಸು$_1$ (ಕ್ರಿ). ೧. ಸೀಯುವಂತೆ ಮಾಡು; ಕರಿಕಾಗುವಂತೆ ಮಾಡು: ಉರಿವ ಕೊಳ್ಳಿಯ ತೆಗೆತೆಗೆದು ಕುಕ್ಕಿರಿದು ಸರ್ವಾವಯವಗಳ ಸೀಕರಿಸಿ (ಆಸಂಠಾ. ೬-೧೯-೨೫). ೨. (ಆಲಂ) ಕೆರಳು; ಉಗ್ರವಾಗು: ಕೈಗಾರುಮೆಟುಕದಿರೆ, ಸಿಟ್ಟು ಸೀಕರಿಸುರಿಯೆ, ತನ್ನ ಕಣ್ಣಂ ತಾನೆ ಕಿಳ್ತನಮಮಾ, ಭೀತಿ ಬಡಿಯಲ್ಕೆ ನೋಳ್ಪರ್ಗೆ! (ಶ್ರೀರಾಮಾ. ೧೦೨-೫೧).

[ಸೀಕರಿ + - ಇಸು$_3$]

ಸೀಕರಿಸು$_2$ (ಕ್ರಿ). ಸಶಬ್ದವಾಗಿ ಮೂಗಿನಿಂದ ಸಿಂಬಳವನ್ನು ತೆಗೆದುಹಾಕು:

ಪುರಾಣಿಕರು ಪುರಾಣ ನಿಲ್ಲಿಸಿ ಸೀಕರಿಸಿ, ನಾಸೀಪುಡಿಯ ಒಂದೊಬ್ಬಿಯನ್ನು ಮೂಗಿಗೆ ಏರಿಸುವರು; ಒಂದರಡು ಸಲ ಸೀನುವರು (ಹೂಸಂಪಾ. ೮೨). [< ಸೀಂದು + - ಇಸು]

ಸೀಕರಿಸು₃ (ಕ್ರಿ). ತೆಗೆದುಕೊಳ್ಳು; ಸೇವಿಸು: "ಆಸ್ವಾದಯನ್, ಆಸ್ವಾದಕಃ- ಈ ೨ ಸೀಕರಿಸುವಂ" (ಶಾಕಟ್ಯ. ೨೪೧); ಮೇಲೋಗರ ಕಚರಿಗಳೊಪ್ಪಿರಲವನೆಲ್ಲಮುಮಂತಪ್ಪನೆ ಸೀಕರಿಸಲವುಂ ಮುಗಿದವು ಬೇಗಂ (ಹಾಲಾಸ್ಯ. ೧-೮-೨೦). [< ಸ್ಕೃಕರಿಸು]

ಸೀಕಲು, ಚೀಕಲು (ನಾ). ೧. ಸೀದುಹೋದುದು; ಕರಿಕು: ಪಾತ್ರೆಯ ತಳದಲ್ಲಿ ಬರಿ ಸೀಕಲು ಉಳಿದಿತ್ತು (ರೂಢಿ). ೨. ರಸವಿಲ್ಲದುದು; ನಿಸ್ಸಾರವಾದುದು: ರಸಭಾವಗಳ ಪರಿಪುಷ್ಟಿಯಿಲ್ಲದೆ ಕಾವ್ಯ ಅಳ್ಕಿಕವಾಗಿಲ್ಲ, ಸೀಕಲಾಗಿಲ್ಲ (ನಂಜುಂಡ. ೧೫೧). ೩. ಬಡಕಲು; ಕೃಶ. (ಗು). ೪. ಸೀದುಹೋದ; ಕರಿಕಾದ: ಸೀಕಲುರೊಟ್ಟಿ, ಮೆದುಗದ ಚಟ್ಟಿ ತಿಂದು ಮುದುಕಿಗೆ ಬೇಸರವಾಯಿತು (ದೇಶಾಂಶ. ೭೦). **ಚೀಕಲು**: ೩. ನಮ್ಮ ಬ್ರಾಹ್ಮಣಹೆಂಗಸರನ್ನು ನೋಡಿ, ಎಲ್ಲಾ ಚೀಕಲು (ಚೆಳವ. ೪೦); ಕೊಳಕುಕಾಲರ್ ಸುತ್ತುವರಿದಿದ್ದ ಸೀಕಲುಸೀಕಲಾದ ಕತ್ತನ್ನವಳು ಅತ್ತಿಂದಿತ್ತ ತಿರಿಚುತ್ತಿದ್ದಳು (ಪುಸರು. ೨೪೦). [ಸೀಕು + - ಅಲು (< - ಅಲ್₂)]

ಸೀಕಳಿ ? (ಕ್ರಿ). ಸೀಳು; ಕೊಲ್ಲು (?): ಅದಟಿನ ಪಟುತರದ ವಿಶಳಬಿರುದರನಮ ಮಟ್ಟಿದುದು ಪಿಡಿದ ಸೀಕಳಿದುದು ವಾದರಿಪುರದನಿಗಳ ತೈಲಭೂಪನ ಸಿಂಗ (ಎಸ. VIII. ಸಾಗರ. ೧೦೩-೨೯; 1089). [?]

ಸೀಕಾಯ್, ಸಿಹಿಗಾಯ್ (ನಾ). ೧. ಸವಿಯಾದ ಕಾಯಿ: ವಿಷದ ಕುಂಬಳಕಾಯ ತಂದೇ ಅಸವುಬಹುತೀರ್ಥದಲಿ ಮುಳುಗಿಸೆ ವಿಷವುಯೆಂಬುದು ಹೋಗಿ ಸೀ[ಪಾಠಾಂ, ಶೀ]ಕಾಯಹುದೆ (ಜ್ಞಾನಸಿಂ. ೨೨-೨೯). **ಸಿಹಿಗಾಯ್** : ೨. ಒಂದು ಬಗೆಯ ಮೇಲೋಗರ: ಬೆಂದ ಕುಂಬಳದ ಕಾಯ್ಗಳ ಪಲವು ತೆಱ ಮಾಡಿಯೊಂದು ಪುಳಿಚಾರಾಗಿಯೊಂದು ಸಿಹಿಗಾ[ಪಾಠಾಂ. ಕಾ]ಯಾಗಿ . . . ಮಾಡಿ (ಸೂಪಶಾ. ೫-೩೨).

[ಸೀ₂ + ಕಾಯ್₄]

ಸೀಕು₁, ಚೀಕು₁ (ನಾ). ಹೆಚ್ಚು ಉರಿಯಿಂದ ಸೀದುಹೋದ ಆಹಾರಪದಾರ್ಥ ಮುಂತಾದುವು; ಕರಿಕು: "ಭಸ್ಸುಟಾ, ದಗ್ಧಿತಾ —೨ ಅನ್ನದ ಸೀಕು" (ಸಿದ್ಧಾಂಶಿ. ೨೮೮). 'ಸೀಕಲು' ಪರಾ. **ಚೀಕು₁** : ಪಾತ್ರೆಯಲ್ಲಿರುವ ಅನ್ನದ ಚೀಕನ್ನು ನಾಯಿಗೆ ಹಾಕು (ರೂಢಿ). 'ಚೀಕಲು' ಪರಾ. [< ಸೀ₁]

ಸೀಕು₂, ಚೀಕು₂ (ನಾ). ಕಾಯಿಲೆ; ಬೇನೆ: (ತ). **ಚೀಕು₂**: (ತ). [<— ಇಂ. Sick]

ಸೀಕುಂಬಳ 'ಸೀಗುಂಬಳ' ನೋ.

ಸೀಕೆ 'ಸೀಗೆ' ನೋ.

ಸೀಕ್ಕುರಿ 'ಸೀಗುರಿ₁' ನೋ.

ಸೀಗಟೆಗಿಡ (ನಾ). ಒಂದು ಬಗೆಯ ಸಸ್ಯ: (ಮೈಡಿಗಿ. ೩೦-೫೭೪).

[? + ಗಿಡ (< ಗಿಡು)]

ಸೀಗಡಿ, ಸಿಗಡಿ, ಸೀಗುಡಿ (ನಾ). ಒಂದು ಬಗೆಯ ಸಣ್ಣ ಮೀನು: ಸೀಗಡಿ ಕೊರವಂ ಬಂಪು . . . ಹಂದಿಗನಾನೆಮೂಗಮದಲಿಂಬಗಣತಿಶಫರಾಳಿಗಳನೆ ತೆಗೆದರ್ ಬೇಡರ್ (ತ್ರಿಪುವಿ. ೨೭-೯೧); ಇವಕ್ಕೆ ಮೀನು, ಸೀಗಡಿಗಳೇ ಮುಖ್ಯಾಹಾರ (ಪಕ್ಷಿ. ೮೦). **ಸಿಗಡಿ**: ಕೆಂಪಿಗೆ ಏಡಿ, ಸಿಗಡಿ, ಮೀನು ಹಿಡಿಯುವುದೆಂದರೆ ತುಂಬ ಇಷ್ಟ (ಕಡಿಸೂ. ೧೬೧). **ಸೀಗುಡಿ**: ಸೀಗುಡಿ ಗೆಂಡೆ . . . ಆನೆಮೊಗನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಹಚಕಾ. ೫-೪೫); ತಾಳಿಸಿ ತಿಂಬ ಸೀಗುಡಿ ಕರಿಮಾನಿನ ಗೂಳಯವನು ಕಂಡ ರಾಯ (ಹರಿಸಾಂ. ೪-೨); ಗಱಿಮಾನ್ಸೀಗುಡಿ ಗೆಂಡೆಮಾನ್ . . . ಬಣ್ಣಮಾನೆನಿಪಿವೆಲ್ಲಂ ಬೀಳ್ದುವಾ ತಾಣದೊಳ್ (ರಾಜಶೇ. ೫-೧೦೫). [ದೇ. ॥ ತುಳು. ಚೀಕಡೆ; ತೆಲು. ಸೀಗಾಡು./ ಹಿಂ. ಸೀಂಗೀ. ಮರಾ. ಶಿಂಗಟೀ, ಶಿಂಗಡೀ]

ಸೀಗುಂಬಳ, ಸಿಹಿಗುಂಬಳ, ಸೀಕುಂಬಳ (ನಾ). ಸಿಹಿಯಾಗಿರುವ ಒಂದು ಬಗೆಯ ಕುಂಬಳ; ಸಕ್ಕರೆಗುಂಬಳ: (ಮೈಡಿಗಿ. ೨೬-೪೭೦). **ಸಿಹಿಗುಂಬಳ**: ಕುಂಬಳಕಾಯಿಗಳಲ್ಲಿ ಸಿಹಿಗುಂಬಳ ಮತ್ತು ಬೂದುಗುಂಬಳವೆಂಬ ಮುಖ್ಯವಾದ ಎರಡು ವಿಧಗಳಿವೆ (ತರಬ. ೨೪). **ಸೀಕುಂಬಳ** : ಈವತ್ತು ಸೀಕುಂಬಳದ ಪಲ್ಯ ಮಾಡಿದ್ದೆ (ರೂಢಿ).

[ಸೀ₂ + ಕುಂಬಳ]

ಸೀಗುಡಿ 'ಸೀಗಡಿ' ನೋ.

ಸೀಗುಡಿತೆ 'ಸೇಗುಡಿತೆ' ನೋ.

ಸೀಗುರಿ₁, ಸೀಕ್ಕುರಿ (ನಾ). ೧. ಚಾಮರ: "ಚಾಮರಂ, ಪ್ರಕೀರ್ಣಕಂ — ಈ ೨ ಸೀಗುರಿ" (ಹಲಾಯು. ೭೦-೨೬೯); ನೂಱಿದನು ರಥವನು ತನ್ನ ಸೇನೆಗೆ ಸೀಗುರಿಯ ಬೀಸಿ (ಕುವಾದ್ಯೂ. ೫-೬೩). ೨. (ದೇವರು, ರಾಜ ಮೊದಲಾದವರಿಗೆ ಗೌರವ ಸೂಚಕವಾಗಿ ಹಿಡಿಯುವ) ಚಾಮರದಂಥ ಒಂದು ಬಗೆಯ ಸಾಧನ: ಅಯ್ವೂರ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂಬೆರಸು ವೇಸರಿಗಟ್ಟಿಗಳುಂ ಪಿಡಿಗಳುಂ ಸಿದಿಗೆಗಳುಮನೇಱಿ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ . . . ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು (ವಡ್ಡಾರಾ. ೮೦-೧೦); ಕೊಡೆ ತಲೆ ತಳ್ತ ಸೀಗುರಿ . . . ಚೆಲ್ವನಾವೆಡೆಯೊಳಮಾಯೆ ಕಣ್ಮೊಸಗೆಯಂ ಪಡೆದತ್ತು ಸಮಸ್ತಸಾಧನಂ (ಆದಿಪು. ೪-೯೨); ಮೌಳಿಚಳನದೊಳೇಳುತೆಱಗುವ ಮಧುಕರನಿಕರಂ ಸೌರಭ್ಯ ಲಕ್ಷ್ಮಿಯಂಕುವ ನೀಲದ ಸೀಗುರಿಯಂತಿರೆ (ಗಿರಿಜ. ೨-೧೦೫ ವ). ೩. ಒಂದು ಬಗೆಯ ಕೊಡೆ; "ನವಿಲುಗರಿಯ ಕಣ್ಣುಗಳಿಂದ ಮಾಡಿದ ರತ್ನಖಚಿತ ಕಲಶದಂಡಗಳನ್ನುಳ್ಳ ಛತ್ರಿ" (ಪಂಪಭಾ. ೧೧೪): ತಳ್ತು ಪಿಡಿದ ಕನಕಪದ್ಮದ ಸೀಗುರಿಗಳ ನೆಲೆಲೆಡೆವಱಿಯದೆ ಬರೆ (ಪಂಪಭಾ. ೩-೪೮ ವ); ಚಿತ್ರಸಂಭವಭುವನೇಶ್ವರಂಗಳಕಡಾಳಮೆ ಸೀಗುರಿಯಾಗೆ ಪೋಲ್ತು, ತೋಱುವುದಸಿತೋತ್ಪಲೇಕ್ಷಣೆಯ ಯೌವನಲಕ್ಷ್ಮಿಯ ರಾಜ್ಯಲಕ್ಷ್ಮಿಯಂ (ಅಜಪು. ೨-೨೫); ಹೊಂಬಾಳೆಗಳ ಚಮರಮುತ್ಸಲದ ಮೇಲ್ಕಟ್ಟು ಮುಡಿವಳದ ಸೀಗುರಿ ಮೆಱೆದವಾ ಶೈತ್ಯಶಾಲೆಯೊಳಗೆ (ಹಚಕಾ. ೩-೪೫). ೪. (ದೇವರ ಅಥವಾ ರಾಜರ ಮೆರವಣಿಗೆಯಲ್ಲಿ ಗೌರವಾರ್ಥವಾಗಿ ಕೊಂಡೊಯ್ಯುವ) ಒಂದು ಬಗೆಯ ಬಿರುದಿನ ಫಲಕ : ಹಡಪ ಸೀಗುರಿ ಚಾಮರದ . . . ತಾಳವೃಂತಕದ ನುಡಿನಗೆಯ ಪರಿಹಾಸಕರ ವಂಗಡದ ಸೇವಾಸಖಿಯರಲಿ ವಿಂಗಡಿಸಿ ನೋಡಿದು ಕಾಣದಳವಳಿದಳಲಿದನು ಹನುಮ (ತೊರಕಾ. ೫-೨-೮೯); ಉಡುಪಾನನೆಗಿಂತೆಯ್ದುದ ನೋವವಳಡಪ . . . ಚಮರ ಸೀಗುರಿ ಬಿಜ್ಜಣ ಮುಡಿವೂ ಕರಗಂಬೊತ್ತ ಮಡದಿಯರ್ಗಂ ದೀವದ ಖಗಮ್ಯಗಱಂ ಬಿಡದಡಸಿತು (ಜಯಕಾ. ೨-೪೧). **ಸೀಕ್ಕುರಿ**: ೧. ಹೊಕ್ಕುಳ ಗಂಟೆ ಸೀಕ್ಕು[ಪಾಠಾಂ. ಸೋಕ]ರಿ ಮುಖರಂಭವ ಸಿಕ್ಕಿ ಡೊಂಕಣಿಗಳ ಬಿಗಿದು ಸೊಕ್ಕಿದ ಮದಕರಿಗಳ . . . ಶೃಂಗರಿಸಿ (ಬಸವ. ೫-೬೦).

ಸೀಗುರಿಯನಿಕ್ಕು = ಚಾಮರ ಬೀಸು: ಸ್ಮರನರಸಿಗೆ ಸೀಗುರಿಯನಿಕ್ಕು[ಪಾಠಾಂ. ನೆತ್ತು]ವಂತಿರ್ಪ ಸೋಗೆನವಿಲ್ಲಳಿಂ . . . ಮನಂಗೊಳಿಸಿ (ಅರ್ಧನಾ. ೪-೭೬ ವ); ದೇವಿಗೆ ಸಿರಿದೇವಿ ಸೀಗುರಿಯನಿಕ್ಕಲು (ಭೈರಸೂ. ೧, ೩೪). **ಸೀಗುರಿಯವರು** = ಚಾಮರವನ್ನು ಬೀಸಿ ಸೇವೆಮಾಡುವವರು: ಒಜಲಿ ಕೆಡೆದರು ಹಡಪಿಗರು ಸೀಗುರಿಯವರು ಸತ್ತಿಗೆಯವರು (ಕುವಾಭೀ. ೧೦-೧೨).

[ದೇ. ॥ ತಮಿ. ಚವಿಱಿ; ತೆಲು. ಸೀವಿರಿ ./ ಮರಾ ಸೀರಗಿರೀ, ಸೀರೀಗಿರೀ]

ಸೀಗುರಿ₂ (ನಾ). ಒಂದು ಬಗೆಯ ಮರ: ಸೆಳ್ಳು, ಸೀಗುರಿಯೊಡವಾರು ಬನ್ನಿ ಕಲುವಾದರಿ ಪಾದರಿಯಾದಿಯಾದ ಪೆರ್ಮರಗಳ ಕಾಡೊಳ್ಕಿತರುತಮಿರ್ದರು ವೈದ್ಯತನೂಜರಿರ್ವರುಂ (ಪುಣ್ಯಾಸ್ರ. ೩-೭೩). [<— ತಮಿ. ಚೀಕ್ಕಿರಿ]

ಸೀಗುರಿಕಾಱಿ (ನಾ). 'ಸೀಗುರಿ' ಎಂಬ ಛತ್ರಿಯನ್ನು ಹಿಡಿದಿರುವವನು: ಸೂಳಱಿದಿಕ್ಕೆಲದೊಳಿಕ್ಕುವ ಚಾಮರ ಸೀಗುರಿಕಾಱರಿಂ . . . ಭಕ್ತಮಹಾಗಣಂಗಳಿಂ ಕಿಕ್ಕಿಱಿಗಿಱಿದು (ಭೈರಸೂ. ೧, ೧೫). [ಸೀಗುರಿ₁ + - ಕಾಱ]

ಸೀಗುರಿಕೆ (ನಾ). ತಾಪ; ಶಾಖ: ಒಂದಿಹ ಸೀಗುರಿಕೆಯಲಿ ಮೂಜುಲೋಕವು ಬೇಗೆಗೊಳಗಾಗಿರ್ದರಳಲುತ ಬಯಸಿ ಪವನನನು (ಉತ್ತಕ. ೬೧-೪೫). [< ಸೀಕರಿ + - ಇಕೆ]

ಸೀಗುರಿಯಿಕ್ಕು (ಕ್ರಿ). ಚಾಮರ ಬೀಸು: ಸಿರಿಸರಸ್ವತಿಯರಂದೊಲಿದು ಚಾಮರವಿಕ್ಕೆ ಅರರೆ ಇಂದ್ರಾಣಿಯರು ನಲಿದು ಸೀಗುರಿಯಿಕ್ಕೆ (ಬಸಪು. ೧-೨೧೨). [ಸೀಗುರಿ₁ + ಇಕ್ಕು]

ಸೀಗುರಿವಿಡಿ (ಕ್ರಿ). ಚಾಮರದಂಥ ಸಾಧನವನ್ನು ಹಿಡಿದುಕೊಳ್ಳು: ಪಡಿಯಲ್ಕೆಯ ಸೀಗುರಿವಿಡಿವಡಪದ ಕನ್ನಡಿಯ ಪಡಿಗದಾಕೆಗಳೆಲ್ಲಂ ಮಿಡುಕಲಣ ಮಱಿಯದಿರ್ದಿರ್ದೆಡೆಯೊಳ್ಪೆಱಗಾಗಿ ಮೂಗರಂದದಿನಿರ್ದರ್ (ಕಾದಂಪು. ೬೫).

[ಸೀಗುರಿ₁ + ಪಿಡಿ₁]

ಸೀಗುರಿಸು (ಕ್ರಿ). ೧. ಸುಡು; ದಹಿಸು: ಸೀಗುರಿಸುವುರಿವಿಷದ ಲೋಳೆಯ ಲಾಗಿಸುವ ನಾಲಗೆಯ ಸುಯ್ಲಿನ ಬೇಗುದಿಯ ತೊಡಬೆಗಳ ಹಾವ್ ತುಡುಕಿದವು ಫಟ್ಟನಲಿ (ಕುವಾಕ. ೨೩-೩೯). ೨. ಸುಟ್ಟುಹೋಗು; ದಹಿಸಲ್ಪಡು: ಪೋಗಿ ಸುರಲೋಕಕ್ಕೆ ಅಮೃತಕ್ಕಾಗಿ ಕಾಪಾಗಿರ್ದ ವಹ್ನಿಯನಾ ಗರುತ್ಮನು ನೋಡಿ ಜ್ವಾಲಾಶತ ಸಹಸ್ರದಲಿ ಸೀಗುರಿಸುವುದು ಸಲ್ಲದೆಂದತಿವೇಗದಲಿ ಬ್ರಹ್ಮನನು ಕಾಬುದ್ಯೋಗದಲಿ ಪರಮೇಷ್ಠಿಲೋಕಕ್ಕಾತನ್ನೆದಿದನು (ತಮ್ಮಟ. ೩-೬೫). ೩. ಸಂತಾಪಿಸು; ಬೇಗುದಿಗೊಳ್ಳು: ತಾಗಿದೆಳಮುಳ್ಳಿನಲಿ ಮದಗಜ ಸೀಗುರಿಸುವುದೆ (ಕುವಾಕ. ೧೦-೫೧). ೪. ಹಬ್ಬು; ವ್ಯಾಪಿಸು: "ಸೀಗುರಿಸಿತೆನಲ್ಕೆ ಬಳ್ಕಿಮೂಡಿದುದಕ್ಕುಂ" (ಧಾರಾ. ೧೭); ಚುಂಬಿಸಿತು ಕಡುಶೋಕ ಮಿಡಿದನು ಕಂಬನಿಯನುಗುರಿನಲಿ ಘನಕರುಣಾಂಬುನಿಧಿ ಸೀಗುರಿಸಿ ಮೈಗೂಡಿಲಿದ ರೋಮದಲಿ (ಕುವಾಕ. ೨೦-೯). [< ಸೀಕರಿ + -ಇಸು]

ಸೀಗೆ, ಶೀಗೆ, ಸೀಕೆ (ನಾ). ೧. ಹಬ್ಬುವ ಒಂದು ಬಗೆಯ ಮುಳ್ಳುಪೊದೆ; ℙ ತಲೆಕೂದಲನ್ನು ಶುಚಿಗೊಳಿಸಲು ಇದರ ಕಾಯಿಯಿಂದ ಮಾಡಿದ ಪುಡಿಯನ್ನು ಉಪಯೋಗಿಸುತ್ತಾರೆ: "ತ್ಕಲಾರಿಯನಲಾ ಸೀಗಯಕ್ಕು" (ಮಂಗರಾ. ೪೫-೪೮); ಸತಿಯಳಲು ಸೀಗೆಯೊಳಗಣ ಬಾಳೆಗೆಣೆಯಾದುದು (ಪಚಣಾ. ೧೨-೧೩); ಅವರುಂ ದರಿದ್ರ ಸಂಗತರಾಗಿ ಜೀವಿಪರ್ ಸೀಗೆಯೊಳಗಣ ಬಾಳೆಯಂತೆ (ಚಿಬಾಪು. ೩-೧೨); ಅಡುಗಬ್ಬು ಸೀಗೆಗೆ ಸಹ ಮ ೮ (ಎಸಾ. VIII, ೧೩೩-೪೨; 1586); ಸೀಗೆಯಡಿಯಣ ಬಾಳೆಯಂತಾಗಿ ದೇವಿ ತನು ಬಾಗಿ ನಡದಳು (ತುರಂಗ. ೩೫-೩೦). ೨. ಸೀಗೆಕಾಯಿಯ ಮೇಲೆ ಹಾಕುವ ತೆರಿಗೆ: ಚರಾದಾಯ ಹೊರಾದಾಯ ಸೀಗ ಮಡ್ಡಿ ಪತಂಗ ಪೊಪ್ಪಳಿ ಗಿಡಗಾವಲು (ಮೈಅರ. ೧೯೨೬, ೧೧೩-೫೯; 1826). ೩. ಆಶ್ವೀಜಶುದ್ಧಹುಣ್ಣಿಮೆಯಂದು (ಸೀಗೆಯ ಕಾಯಿಗಳು ಫಲಕ್ಕೆ ಬರುವ ಕಾಲದಲ್ಲಿ) ಪೂಜಿಸಲು ಇಡುವ ಗೌರಿ: ನಾಗರಪಂಚಮಿ, ಗೌರಿಸೀಗೆ, ಅರಳಲೆಬಸವ ಮೊದಲಾದವುಗಳು ಹೆಣ್ಣಿನ ಹಬ್ಬಗಳು . . . ಸೀಗೆಯನ್ನಿಟ್ಟು ಬನದೂಟ ಮಾಡಿ . . . ಹೆಣ್ಣು ಆರುತಿಯೆತ್ತುವುದು (ಜನಗೀ. ೧೭ ಮೊದಲ ಮಾತು). 'ಸೀಗೆಗೌರಿ' ಪರಾ. **ಶೀಗೆ**: ೧. ಶನಿವಾರದ ಎಂಣೆ ಶೀಗೆಯಕಾಯಿ ಸಹ ಹನ್ನೆರಡು ಹಣ (ಎಸಾ. VI, ೩೨-೨೧; 1448); ಶೀಗೆ:- ಮರವು ತಕ್ಕಮಟ್ಟಿಗೆ ದೊಡ್ಡದಾಗುತ್ತದೆ. ಕಾಯಿ ಪ್ರಸಿದ್ಧ (ಕಫಾಗ. ೪೮). ೩. ಹೆಣ್ಣು ಮಕ್ಕಳು . . . ಬೆಳದಿಂಗಳಿನಲ್ಲಿ ಆಡಿ, ಹಾಡಿ, 'ಶೀಗೆ' ಯನ್ನು ತಂದು ಇಡುವರು . . . ಈ ಶೀಗೆಗೆ ಆರತಿಯನ್ನು ಬೆಳಗಿ ಆಡುವರು (ಕನ್ನಚಾ. ೧೩೭). **ಸೀಕೆ**: ೧. ಆ ತರುಗುಲ್ಮಲತಾ ಪ್ರತಾನಸೀಕಾಕುಂಜಂಗಳಂ ಸವರ್ದಾ ತಾಣಮಂ ಮನೋಹರಮಪ್ಪಂತು ಸೈತುಗೊಳಿಸಿ (ಕಉಸ್ಕ. ೧-೫೫).

ಶೀಗೆಯ ಹುಣ್ಣಿಮೆ, ಶೀಗೆಯ ಹುಣ್ಣಿವೆ = ಆಶ್ವಯುಜಮಾಸದ ಹುಣ್ಣಿಮೆ ಮತ್ತು ಅಂದು ಆಚರಿಸುವ ಗೌರೀಪೂಜೆ: ಶೀಗೆಯ ಹುಣ್ಣಿಮೆಯ ಚರಗವನ್ನು ಚೆಲ್ಲಿದ ಒಕ್ಕಲಿಗನು ಶುಭದಿನವನ್ನು ನೋಡಿ ಭೂಮಿಗೆ ಕುಡಗೋಲು ಹಾಕುವನು (ಕನ್ನಚಾ. ೧೩೬); ಇಂದು ಶೀಗೆಯ ಹುಣ್ಣಿವೆ (ಸ್ಮಪಚಿ. ೧೦೫). **ಸೀಗೆಯ ಕೆಯಿ** = ಸೀಗೆಯು ಬೆಳೆದಿರುವ ಭೂಮಿ: ಬಡಗಣ ಹೊಲದಲು ಸೀಗೆಯ ಕೆಯಿ ಕಂಬ ೨೬ (ಎಸಾ. VI, ತರೀಕೆ. ೬೧-೫೨; 1154). **ಸೀಗೆಯ ಮೆಳೆ** = ಸೀಗೆಯ ಪೊದರು: ಎಳೆಯ ಬಾಳೆಯ ಸುಳಿಗೆ ಸೀಗೆಯ ಮೆಳೆಯೊಡನೆ ಸರಸವೆ (ಕುವ್ಯಾದ್ರೋ. ೧೨-೨೯); ಎಳವಾಳೆ ಬಲ್ಲಿಗೆ ಬಂದರೆ ಸೀಗೆಯ ಮೆಳೆಯೊಳು ಮಥನವೆ (ಮೋಪತ. ೩೪-೨೪). [ದೇ. ‖ ತುಳು. ಶೀಗೆ, ಸೀಗೆ]

ಸೀಗೆಕಾಯಿ, ಶೀಗೆಕಾಯಿ (ನಾ). ಸೀಗೆಯ ಮೆಳೆಯ ಕಾಯಿ: (೬). **ಶೀಗೆಕಾಯಿ**: ಅಟ್ಟ ಅಡಿಗೆಲ್ಲಾ ಅರಿಶೀನ ಶೀಗೆಕಾಯಿ ಉಂಡ ಬಾಯಲ್ಲೀ ಗಮಗಾಮಾ (ಹುಟ್ಟಹ. ೫೧).

[ಸೀಗೆ + ಕಾಯಿ (< ಕಾಯ್)./ ತಮಿ. ಚೀಕ್ಕಾಯ್, ಚೀಯಕ್ಕಾಯ್, ಚೀಕ್ಕೈಕ್ಕಾಯ್; ಮಲ. ಚೀಕ್ಕಕಾಯಿ, ಚೀಯಕ್ಕಾಯಿ; ತುಳು. ಸೀಗೆಕಾಯಿ; ತೆಲು. ಸೀಕಾಯ./ ಮರಾ. ಶಿಕೇಕಳಿ, ಶಿಕೇಕಾಳಿ]

ಸೀಗೆಗೆರೆ (ನಾ). ಒಂದು ಕೆರೆಯ ಹೆಸರು: ಸೀಗುಗೆರೆನಾಮತಟಾಕ (ಮೈಅರ. ೧೯೪೨, ೭೫-೧೧೩; 819). [ಸೀಗೆ + ಕೆರೆ (< ಕೆಜೆ)]

ಸೀಗೆಗೌರಿ (ನಾ). = ಸೀಗೆ ೩ : ಹೊಲಗಳಲ್ಲಿ ನೆರೆನೆರೆಯಾಗಿಯೇ ಸೀಗೆಗೌರಿಯ ಪೂಜೆ ನಡೆಯುತ್ತಿದೆ (ಭಾಹಬ್ಬ. ೧೪೨). [ಸೀಗೆ + ಗೌರಿ]

ಸೀಗೆಣಸು, ಸಿಹಿಗೆಣಸು (ನಾ). ಗೆಣಸಿನಲ್ಲಿ ಒಂದು ಬಗೆ: ಕೆಲವರು ಸೀಗೆಣಸನ್ನು ಕೆಂಡದಲ್ಲಿ ಸುಟ್ಟು ತಿನ್ನುತ್ತಾರೆ (ರೂಢಿ). **ಸಿಹಿಗೆಣಸು**: "ಮಹಾನೀಲಾ – ಕರಿಯಗಿರಿಕರ್ಣೇ, ಹಿರಿಯ ಸೇಙೆಲ್, ದೊಡ್ಡ ಸಿಹಿಗೆಣಸು" (ಓಷಧಿ. ೧೧೭). [ಸೀ + ಗೆಣಸು (< ಗೆಬಸು)]

ಸೀಗೆಪುಡಿ (ನಾ). ಸೀಗೆಕಾಯಿಯನ್ನು ಜಜ್ಜಿ ಮಾಡಿದ ಪುಡಿ: ಜಿಡ್ಡಾದ ಪಾತ್ರೆಗಳನ್ನು ಕಡಲೆಹಿಟ್ಟು ಸೀಗೆಪುಡಿ ಮಿಶ್ರಮಾಡಿ ಉಜ್ಜಿದರೆ ಒಪ್ಪವಾಗುವುವು (ಗೃಹವಿ. ೧೭೭). [ಸೀಗೆ + ಪುಡಿ]

ಸೀಗೆಯೊಬ್ಬೆ (ನಾ). ಸೀಗೆಯ ಪೊದರು, — ಮೆಳೆ : ಬಸದಿಯ ಕೆಲೆಯೊಳಗು ಹಡುವಲು ಸೀಗೆಯೊಬ್ಬೆ ಕಟ್ಟು ಬಡಗಲು (ಎಸ. V. ಹಾಸನ. ೬೯-೭೮; 1155).

[ಸೀಗೆ + ಒಬ್ಬೆ (< ಒಬ್ಬೆ)]

ಸೀಗೆವೆಳೆ (ನಾ). = ಸೀಗೆಯೊಬ್ಬೆ : ತರುಗುಲ್ಮಲತಾಪ್ರತಾನಾವೃತಮಾದ ಸೀಗೆವೆಳೆಯ ಮಧ್ಯದೊಳ್ ರಾಮೇಶ್ವರನೆಂಬ ಮಹಾದಿವ್ಯಲಿಂಗಂ ನೆಲಸಿರ್ಪುದು (ಕಉಸ್ಕ. ೧-೫೫).

[ಸೀಗೆ + ಮೆಳೆ]

ಸೀಗೆಹುಣ್ಣಿವೆ, ಶೀಗೆಹುಣ್ಣಿಮೆ (ನಾ). ಆಶ್ವಯುಜಮಾಸದ ಪೌರ್ಣಿಮೆ ಮತ್ತು ಅಂದು ಆಚರಿಸುವ ಗೌರೀಪೂಜೆ: ಸೀಗೆಹುಣ್ಣಿವೆ ಮುಂದೆ ಸೋಗಿನ ಚಂದ್ರಮ ಸಾಗಿ ಬರುವೊಲು ಬರುವ ಚಳಿಯಾಕೆ (ಗಂ. ೧೦೬-೧); ಹೆದ್ದುಗ್ಗಿ ಅಥವಾ ಸೀಗೆಹುಣ್ಣಿವೆಯನ್ನು ಮಂಗಳವಾರ ಇಲ್ಲವೆ ಶುಕ್ರವಾರ ಆಚರಿಸುವರು (ಭಾಹಬ್ಬ. ೧೪೨). **ಶೀಗೆಹುಣ್ಣಿಮೆ** : ಆಶ್ವಿನಶುದ್ಧಹುಣ್ಣಿಮೆಯೇ ಶೀಗೆಹುಣ್ಣಿಮ (ಕನ್ನಚಾ. ೧೬೫); ಶೀಗಹುಣ್ಣಿಮ ದಿನ ಉಣ್ಣಲಿಕ್ಕೆ ಕರೆಯುವರೆಲ್ಲಾ (ಶೀಪ. ೬೭-೧).

[ಸೀಗೆ + ಹುಣ್ಣಿವೆ (< ಪುಣ್ಣಮೆ)]

ಸೀಗೆಹುಳಿ (ನಾ). ನೀರಿನಲ್ಲಿ ಕಲಸಿದ ಸೀಗೆಪುಡಿ : ನಿಮ್ಮಪ್ಪಾಜಿಗ ಸೀಗೆಹುಳಿ ತಡೆಯೋದಿಲ್ಲ. ಅದಕ್ಕೋಸ್ಕರ ಹೆಸರುಹಿಟ್ಟು ಉಪಯೋಗಿಸುವುದು (ಚಿಂಗಾಳ್ಳ. ೧೦).

[ಸೀಗೆ + ಹುಳಿ (< ಪುಳಿ)]

ಸೀಗ್ರಲಿಕಿತ (ನಾ). ಶಾಸನದ ಬರವಣಿಗೆಯ ಒಂದು ಸಂಪ್ರದಾಯ: ಮಠದಾಚಾರ್ಯ್ಯ ಬ್ರಹ್ಮೇಶ್ವರಜೀಯರ ಸೀಗ್ರಲಿಕಿತ (ಪೌಇ. IX-i, ೧೧೪-೫೩; 1054).

[ℙ ಇದು 'ಶೀಪ್ರಲಿಖಿತ' ಎಂಬುದರ ಅಪಲಿಖಿತ]

ಸೀಜೋಳ (ನಾ). ಸಿಹಿಯಾದ ರುಚಿ ಇರುವ ಒಂದು ಬಗೆಯ ಜೋಳ: ಸೀಜೋಳ ತಿಂದರೆ ದನ ಸೊಕ್ಕುತ್ತವೆ (ರೂಢಿ). [ಸೀ + ಜೋಳ]

ಸೀಟಿ, ಸೀಟೆ (ನಾ). ೧. ಬಾಯಿಂದ ಊದಿ ಮಾಡುವ ಶಬ್ದ; ಸಿಳ್ಳು: ಪರಾಯಿಜೇಬಿನಲ್ಲಿ ಕೈಯಿಟ್ಟು, ಸೀಟಿ ಹಾಕುತ್ತಾ ತಿರುಗಾಡುವುದು ಅವನ ಸ್ವಭಾವ (ಗಂಜಮ. ೨೭). ೨. ಸಿಳ್ಳಿನಂತಹ ಧ್ವನಿ ಹೊರಡಿಸುವ ಒಂದು ಬಗೆಯ ಸಾಧನ; **ಶಿಲ್ಪಿ** : ಅವರು ಸೀಟಿ ಊದಿದ ಕೂಡಲೆ ಎಲ್ಲ ನಾಯಿಗಳು ಜಾಗ್ರತವಾದವು (ಪಾಶಪ್ರ. ೫೯). **ಸೀಟೆ** : ೨. ಆ ಸಮಯಕ್ಕೆ ಸರಿಯಾಗಿ ಸೀಟಿ ಹಿಡಿದುಕೊಂಡಿದ್ದ ಗಾರ್ಡ್ ತನ್ನ ಪೆಟ್ಟಿಗೆಯ ಕಡೆಗೆ ಬರಬರನೆ ಹೆಜ್ಜೆಹಾಕಿದನು (ಪುನರು. ೪೫೬). [<— ಹಿಂ. ಸೀಟೀ; ಮರಾ. ಶಿಟೀ]

ಸೀಟು$_1$ 'ಸೀಂಟು' ನೋ.

ಸೀಟು$_2$ (ನಾ). ೧. ಆಸನ; ಪೀಠ: ಆಕೆಯ ಸಮೀಪವಾಗಿಯೇ ಗಂಡಸರ ಸೀಟಿನಲ್ಲಿ ಕುಳಿತಿರುವ ಯುವಕನ ಕಣ್ಣುಗಳಲ್ಲಿ ಒಲವು ತುಂಬಿದೆ (ವಕಾಗಿ. ೧೦). ೨. ಎಡೆ; ಸ್ಥಾನ: ಸೀಟನೆ ಪಡೆಯದ ವಿದ್ಯಾರ್ಥಿಗೇತಕೆ ಕಟ್ಟುವ ಶುಲ್ಕದ ಚಿಂತೆ (ಇಂಚಾಪ. ೨೨೦-೮೮). ೩. ಚುನಾವಣೆಯಲ್ಲಿ ಅಭ್ಯರ್ಥಿಯು ಸ್ಪರ್ಧಿಸಲು ಪಕ್ಷವು ಕೊಡುವ ಅವಕಾಶ : ಈ ಸಲದ ಚುನಾವಣೆಗೆ ತನ್ನ ಪಕ್ಷವು ತನಗೇ ಸೀಟು ಕೊಡುವುದೆಂದು ನಂಬಿದ್ದ ಅವನಿಗೆ ನಿರಾಶೆ ಕಾದಿತ್ತು (ರೂಢಿ). [<— ಇಂ. Seat]

ಸೀಟುಗಾಲು (ನಾ). ನಡೆಯುವಾಗ ನೆಲವನ್ನು ಉಜ್ಜಿಕೊಂಡು ಹೋಗುವ ಕಾಲು : (೬). [ಸೀಟು$_1$ (< ಸೀಂಟು) + ಕಾಲು$_1$ (< ಕಾಲ್)]

ಸೀಟೆ 'ಸೀಟಿ' ನೋ.

ಸೀಡಕ 'ಸಿಡುಕ' ನೋ.

ಸೀಡಕತನ 'ಸಿಡುಕುತನ' ನೋ.

ಸೀಡಿ, ಸಿಡ್ಡಿ (ನಾ). ೧. (ಅವರೆ ಮತ್ತು ತೊಗರಿ ಧಾನ್ಯಗಳ) ಬೀಜ ಕೋಶಗಳಲ್ಲಿರುವ ಕಾಳುಗಳನ್ನು ತಿಂದುಹಾಕುವ ಕೀಟ: (ಎಸಮ್ಮ. XV, ೬೭).

ಸಿಡಿ$_4$: ೨. ಸಸ್ಯಗಳಿಗೆ ತಗಲುವ ರೋಗ : 'ಸಿಡಿಹಾಯ್' ಪರಾ.

[ದೇ. ॥ ತೆಲು. ಚೀಡ]

ಸೀಡಿಸು (ಕ್ರಿ). ಮಡಿಚು; ಮುದುರು (?) : ಯಾರ್ರೋ ಅದೂ? ಕೊಡೆ ಸೂಡಿದೋರು? ಸೀಡಿಸ್ತೀರೋ ಇಲ್ಲೋ! (ಮಲೆಮ. ೭೨೪). [? + - ಇಸು$_3$]

ಸೀತ$_1$ 'ಸೀ$_1$' ಪರಾ.

ಸೀತ$_2$ 'ಸೀನ್$_1$' ಪರಾ.

ಸೀತ$_3$ (ನಾ). ೧. ಚಳಿ ; ಕುಳಿರು : ಮಾಗಿಯ ದಿವಸಂ ರಿಸಿಯರ್ಕಳ್ ಸೀತದೊಳ್ ಸೆಡೆಗುಂ (ವಡ್ಡಾರಾ. ೧೯೧-೨೬); ವ್ಯಂತರದೇವರಂ ಸೌಂತೆಯ ಬಳ್ಳಿಯೊಳೆಟ್ಟು ಪೊಕ್ಕಂತೆ ಮಾಡಿ ಜ್ಯೋತಿಷ್ಯದೇವರಂ ಸೀತಂ ಪತ್ತಿದ ವಾತಾಧಿಕರಂತೆ ಮಾಡಿ (ಧರ್ಮಾಮೃ. ೭-೧೫). ೨. ತಂಪು; ಶೈತ್ಯ : ಸೀತವುಳ್ಳನ್ನಕ್ಕ ಉಷ್ಣವ ಪ್ರತಿಪಾದಿಸಬೇಕು ಉಷ್ಣವುಳ್ಳನ್ನಕ್ಕ ಸೀತವ ಪ್ರತಿಪಾದಿಸಬೇಕು (ವಚರ. ೮೬); ಶೀತ ಸೀತ, ಶುಚಿ ಸುಚಿ (ಶಮಚ. ೨೫೩ ಪ್ರಯೋ); ಕಲ್ಲಾಗಿನ ನೀರು ಬಹಳ ಸೀತ (ಗಂಗಾಸಾ. ೯೧). ೩. ಶೀತಬಾಧೆಯಿಂದ ಉಂಟಾಗುವ ಒಂದು ಬಗೆಯ ರೋಗ; ನೆಗಡಿ: ಜ್ವಲನಂ ಜ್ವರಂಗೊಂಡ ನೆಂದು ಮಂತ್ರಿಸುವಂತೆ ಜಲಕೆ ಸೀ[ಪಾಠಾಂ. ಶೀ]ತಂ ಬಂದುದೆಂದು ಭಾವಿಸುವಂತೆ (ರುದ್ರರ. ದೇ. ೨೦೮-೬). [< ಸಂ. ಶೀತ]

ಸೀತಳ, ಶೀತಾಳ$_1$, ಸಿತಾಳ, ಸೀತಾಳ$_3$ (ನಾ). ೧. ಶೈತ್ಯ; ತಂಪು: ತೆಗೆದಬ್ಬಿದರೆ ಚಂದನದ ಸೀತಳದ ಹಾಂಗೆ ಆಗಬೇಕವ್ವಾ (ಸಕವ. ಕ. II, ೧೮೮-೪೯೯). ೨. ಚಳಿಯಿಂದ ಕೂಡಿದ ಜ್ವರ; ಶೀತಜ್ವರ: "ಸೀ[ಪಾಠಾಂ. ಶೀ]ತಳಮೆನಲು ಸನ್ನಿ" (ಮಂಗರಾ. ೧೧೪-೪). ೩. ಒಂದು ಬಗೆಯ ನೀರಾವರಿಭೂಮಿ: ಸೀತಳಕೆ ಗ ೧ ಹತುಖಂಡಿಗೆ ಉಪಹರ (ಎಕ. VI, ಕಡೂರು. ೯೭-೧೦೭; 1166). ಶೀತಾಳ$_1$: ೪. ತಣ್ಣನೆಯ ನೀರು; ಶೀತಲಜಲ: ಘನಶೀತಾಳದಱವಟ್ಟಿಗೆಯ ಮಧ್ಯದಲಂದು ಚಮರಗಳ ಡಾಳಿಸುತಲಿ . . . ಧರ್ಮವ ಮಾಡಿದರ ಕೊಂಡೊಯ್ಯರು (ಪ್ರಸ್ಥಾಚ. ೯-೧೪). ಸಿತಾಳ : ೫. ಪವಿತ್ರವಾದ ನೀರು ; ಶುದ್ಧಜಲ : ಆಚಾರವೆ ಅರ್ಪಿತ ಮಹತ್ವವೆ ಸಿ[ಪಾಠಾಂ. ಶಿ] ತಾಳ (ಅವಚಂ. ೮೪-೩೭೪); ಶಿಶು ಬಂಧುಗಳು . . . ಮುಂತಾದ ಇವರಿಗೆಲ್ಲಕ್ಕೂ ಒಡೆಯರಿಗೆ ಸಲುವುದಕ್ಕೆ ಮುನ್ನವೆ ಸಿತಾಳ ಶಿವದಾನವೆಂದು ಇಕ್ಕಬಹುದೆ (ಸಕವ. ಕ. I, ೪೨೮-೧೭೦೧). ಸೀತಾಳ$_3$: ೫. ಲಿಂಗಕ್ಕೆ ನೈವೇದ್ಯವ ತೋಱಿ ಸೀತಾಳವ [ಪಾಠಾಂ. ಶೈತ್ಯವ] ಕೊಟ್ಟು . . . ಪ್ರಸಾದಭೋಗವ ಮಾಡುವುದು ಲಿಂಗಪ್ರಸಾದ (ಚೆನ್ನವ. ಕ.೧೫೯-೩೧೪); ಸೀತಮ್ಮ ಮಿಾದ್ದೀರು ಸೀತಾಳ ಪಾತಾಳ (ಪಭೃಯ. ೬೪). (ಗು). ೬. ತಂಪಾದ; ತಣ್ಣಗಿರುವ: ಕುರುಕುಲಕಾಲಸರ್ಪನ ತಾಯುದರ ಸೀತಾಳಮಳಿಗೆಯಲೇ (ಕುವ್ಯಾಕ. ೨೨-೧). [< ಸಂ. ಶೀತಲ]

ಸೀತಱ್, ಸೀತಱು, ಸೀತುಱು (ನಾ). ೧. ಅಂಜಿಕೆ; ಭಯ: "ಕೆಕ್ಕಳಿಸಿದುದೆಂದುಂ ಸೀತಱೆಂದುಂ ಭಯವಿಕಾರಂ" (ಕಶಸಾ. ೫೬-೨೨೪). ಸೀತಱು : ೨. ಕೋಪ; ಸಿಟ್ಟು : "ಮುಳಿಸು . . . ಸೀತಱು ಕಾವು ತಿಳಿಯೆ ಕೋಪದ ಪೆಸರು" (ಶಬ್ದಮಂ. ೪೦). 'ಸೀತಱುದಾಳು' ಪರಾ. ಸೀತುಱು : ೧. 'ಸೀತುಱುಗೊಳ್' ಪರಾ.

[ದೇ. ॥ ತೆಲು. ಚೀದರ]

ಸೀತಱು 'ಸೀತಱ್' ನೋ.

ಸೀತಱುದಾಳು (ಕ್ರಿ). ಕೋಪಗೊಳ್ಳು; ಸಿಟ್ಟಾಗು: ಋಷಿವರನೆಡೆಗೆ ಕಮಲ ಸಂಭವನೆಯ್ತರಲ್ಮನ್ನಣೆಯ ಮಾಡದಿರೆಯವನ ಮೇಲೆ ಸೀತಱುದಾಳುತೆ (ಪಾಸೋಪಾ. ೧೦-೫೩). [ಸೀತಱು (< ಸೀತಱ್) + ತಾಳು$_1$ (< ತಾಳ್$_1$)]

ಸೀತಾಕುಮಾರಕ (ನಾ). ಸೀತೆಯ ಮಗ: ರುಧಿರಾಕ್ಷನೆಂಬ ಶೂರಾಸುರಂ . . . ಸೀತಾಕುಮಾರಕನ ಕರದ ಕೋದಂಡವುಂ ತುಡುಕಿದಂ ಮೇಲ್ಮಾಯ್ದು (ಕೃಮಿಭಾ. ೨೦-೪೮). [ಸಂ.]

ಸೀತಾಗ್ರ (ನಾ). ನೇಗಿಲಿನಿಂದ ಉತ್ತ ಸಾಲು, — ಗೆರೆ : "ಪಾತ್ರಂ ಸೀತಾಗ್ರಮುಂ" (ವಸ್ತುಕೋ. ೧೩೮-೧೧೮). [ಸಂ.]

ಸೀತಾಪತಿ (ನಾ). ಸೀತೆಯ ಗಂಡ; ರಾಮ: ಅಯೋಧ್ಯೆಯ ರಾಮ ಪಟ್ಟಾಭಿ ರಾಮನೆ ಸೀತಾಪತಿ ಜಾನಕೀಮನೋಹರ (ಪುರಂದ. ೫-೬೯-೧೮). [ಸಂ.]

ಸೀತಾಫಲ (ನಾ). ಒಂದು ಬಗೆಯ ಗಿಡ ಮತ್ತು ಅದರ ಹಣ್ಣು: ಸೀತಾಫಲ ದ್ರಾಕ್ಷೆಗೊಂಚಲುಗಳ ಈ ಪರಿಯಿಂದ ಹರಿಯ ಮಂಟಪಕ್ಕೆ ಗೊನೆಗಳ ಕಟ್ಟಿ ನಾ ಕೈಯ ಮುಗಿಯುತಲಿದ್ದೆ (ಪುರಂದ. ೫-೬೯-೬); ಅಂಜೂರ ಸೀತಾಫಲದ ವೃಕ್ಷಗಳು (ಜಿನಭಾ. ೭೯-೨೮). 'ರಾಮಫಲ' ಪರಾ. [ಸಂ.]

ಸೀತಾಶೃಂಗಿ (ನಾ). ಒಂದು ಬಗೆಯ ಸಸ್ಯ: ಅತಿವಿಷ, ಅತಿಬಜೆ, ಸೀತಾಶೃಂಗಿ (ಮೃಚಿಗಾ. ೨-೨೯). [< ಸೀತೆ$_1$ + ಶೃಂಗಿ$_2$]

ಸೀತಾಳ$_1$ 'ಸೀತಾಳಿ' ನೋ.

ಸೀತಾಳ$_2$ 'ಸೀತಾಳಿ' ನೋ.

ಸೀತಾಳ$_3$ 'ಸೀತಳ' ನೋ.

ಸೀತಾಳಗಡುಗೆ (ನಾ). ತಂಪಾದ ನೀರಿನ ಕೊಡ: ಶ್ರೀಕಲಿದೇವರಿಗೆ ನಿವೇದ್ಯಕ್ಕೆ ನನ್ನಾದೀವಿಗೆಗಂ ಸೀತಾಳಗಡುಗೆ ವಸುಧಾರೆಗಂ . . . ಧಾರಾಪೂರ್ವಕಂ ಮಾಡಿ ಕೊಟ್ಟ ಭೂಮಿ (ಎಕ. XI, ದಾವಣ. ೭೪-೩; 10547).

[ಸೀತಾಳ$_3$ (< ಸೀತಳ) + ಗಡುಗೆ (< ಗಡಿಗೆ)]

ಸೀತಾಳಗದ್ದುಗೆ (ನಾ). = ಸೀತಾಳಗಡುಗೆ: ಸ್ನಾನಾಚಾರ್ಯ್ಯರಿಬ್ಬರುಂ ಸೀತಾಳಗದ್ದುಗೆಗೆ ಕೊಡ ೨೦ ವಸುಧಾರೆ ೩ ಮಂ ನಡಸುವರ್ (ಸೌಇಇ. IX-i, ೨೯೬-೭೨; 1176). [ಸೀತಾಳ$_3$ (< ಸೀತಳ) + ಗದ್ದುಗೆ$_1$ (< ಗರ್ದುಗೆ$_1$)]

ಸೀತಾಳಸಿಡುಬು 'ಸೀತಾಳೆಸಿಡುಬು' ನೋ.

ಸೀತಾಳಿ, ಸೀತಾಳ$_1$ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು: ಸೀತಾಳಿದಂಡೆವೂಮಾಲೆಯಂ ಕಟ್ಟುತ್ತಿರ್ದಾಕೆ ಕಂಡು, ಬಿಲ್ಲುಂಬೆರಗುಮಾಗಿ, ರಿಕ್ತಾ ಗಮನದ ಖಿನ್ನತೆಗೆ ಕಾರಣಂ ಕೇಳೆ (ಶ್ರೀರಾವಾ. ೫೬-೨೬೬); ಪಶ್ಚಿಮದೇಶಗಳ ಸಂಸ್ಕೃತಿಯಲ್ಲಿ ಸೀತಾಳಿಗೆ ಒಂದು ಪ್ರತ್ಯೇಕಸ್ಥಾನ ಕಲ್ಪಿತವಾಗಿದೆ (ಹುಹೂ. ೨೭೩). ಸೀತಾಳ$_1$: ಚಿತ್ರ ವಿಚಿತ್ರ ಹೂವು ಬಿಡುವ, ಗಡ್ಡೆಬೇರಿನ ಒಂದು ಸಸ್ಯಜಾತಿ; ಸೀತೆಹೂವಿನ ಗಿಡ ; ಸೀತಾಳಗಡ್ಡೆ (Orchid. ಇಂಕನಿ). [ದೇ. ॥ ತಮಿ. ಚೀತಳಿ]

ಸೀತಾಳೆ, ಶೀತಾಳ$_2$, ಸೀತಾಳ$_2$ (ನಾ). ಒಂದು ಬಗೆಯ ಮೈಲಿಬೇನೆ; ಸಣ್ಣಸಿಡುಬು: "ಸೀತಾಳೆ (ಸೀತಾಳ) — ಶೀತಲಾ = ಒಂದು ಬೇನೆ" (ತದ್ಭವಕೋ. ೪೫). ಶೀತಾಳ$_2$: ಗೋಣತಟ್ಟು, ಸಣ್ಣತಟ್ಟು, ಶೀತಾಳ, ಶಿಡುಬು . . . ಮುಂತಾದ ರೋಗಗಳಿಂದ ಮರಣಹೊಂದಿದ್ದರೆ ಅಂತವುಗಳನ್ನು ಶಿಡಬಿನ ಹೆಡ್ಡಿಂಗಿನಲ್ಲಿ ಕಾಣಿಸಕೂಡದು (ಗ್ರಾಮಾಕ. ೧೫೬). ಸೀತಾಳ$_2$: ಮಗುವನ್ನು ಶುಚಿಯಾಗಿಟ್ಟುಕೊಂಡು ಸೀತಾಳ ಇಳಿದ ಮೇಲೆ ಬೇವಿನ ಸೊಪ್ಪು ಉಜ್ಜಿ ಸ್ನಾನಮಾಡಿಸಬೇಕು (ಗೃಹವಿ. ೧೫೦).

[< ಸಂ. ಶೀತಲಾ]

ಸೀತಾಳೆಸಿಡುಬು , ಸೀತಾಳಸಿಡುಬು (ನಾ). ಸಣ್ಣ ಸಿಡುಬು; ಸೀತಾಳೆ: ಸೀತಾಳಿಸಿಡುಬು ಒಂದು ಸಾಂಕ್ರಾಮಿಕ ರೋಗ (ರೂಢಿ). ಸೀತಾಳಸಿಡುಬು : ಸೀತಾಳಸಿಡುಬು: ಈ ಖಾಯಿಲೆ ಬಹಳ ಚಿಕ್ಕಮಕ್ಕಳಿಗೆ ಸಹ ಬರುತ್ತದೆ (ಗೃಹವಿ. ೧೫೦).

[ಸೀತಾಳೆ + ಸಿಡುಬು]

ಸೀತು$_1$ 'ಸೀನ್$_1$' ಪರಾ.

ಸೀತು$_2$ 'ಸೀದು$_2$' ನೋ.

ಸೀತುಱು 'ಸೀತಱ್' ನೋ.

ಸೀತುಱುಗೊಳ್ (ಕ್ರಿ). ಸಿಟ್ಟಾಗು; ಕೆರಳು: ಒಡಿಯಲದಾಗ ಧೇನುವತಿಸೀತುಱು ಗೊಂಡು ಚತುರ್ಬಲಂಗಳಂ ಕೆಡಪಿ (ದಶಾವ. ೭-೦೫).

[ಸೀತುಱು (< ಸೀತಱ್) + ಕೊಳ್$_1$]

ಸೀತೆ$_1$ (ನಾ). ೧. ಒಂದು ಬಗೆಯ ಹುಲ್ಲು: "ಮಾನುವೆ ಸೀತೆಯೆನಿಕ್ಕು" (ಮಂಗರಾ. ೩೩-೮). ೨. ಒಂದು ಬಗೆಯ ಮರ ಮತ್ತು ಅದರ ಹೂವು : ಅರಳಿದ ಗೊಂಚಲು ಒತ್ತಾಗಿ ನಾಜೂಕಾಗಿ ಪೋಣಿಸಿದ ದಂಡೆಯಂತೆ ಕಾಣುತ್ತದೆ . . . ಹೆಂಗಸರು ಸೀತೆಯ ದಂಡೆ ಎನ್ನುತ್ತಾರೆ (ಹುಹೂ. ೨೭೩). 'ಸೀತೆಹೂ' ಪರಾ. [< ಸಂ. ಶೀತಾ]

ಸೀತೆ$_2$ (ನಾ). ೧. ನೇಗಿಲಿನಿಂದ ಉತ್ತ ಗೆರೆ; ಉಕ್ಕೆ; ಸಾಲು: "ಸೀತಾ, ಲಾಂಗಲಪದ್ಧತಿಃ - ಈ ೨ ನೇಗಿಲ ಸಾಲ್" (ಹಲಾಯು. ೯೪-೪೨೨). ೨. ಉತ್ತ ನೆಲ, ಭೂಮಿ:

ಸೀತೆಯ ದೂಸಱಿಂದಱಿದ ರಾವಣನಂತಿರೆ ನೀನುಮಿಾಗಳೀ ಸೀತೆಯ ದೂಸಱಿಂದಱಿಯಲಾಟಿಸಿದ್ಯೆ (ಪಂಪಭಾ. ೯-೪೯); ಸರ್ವಲಕ್ಷಣಸಸ್ಯಸಂಪತ್ತಿಗೆ ಸೀತೆಯಪ್ಪುದಱಿಂ ಸೀತೆಯೆಂದು ಪೆಸರನಿಟ್ಟು ಕೊಂಡಾಡಿ ನಡಪುತ್ತುಮಿರೆ (ಪಂರಾಮಾ. ೪-೨೯ ವ). ೩. ಜನಕನ ಮಗಳು; ರಾಮನ ಹೆಂಡತಿ; ☞ ಜನಕನು ಸಂತಾನಾರ್ಥವಾಗಿ ಯಜ್ಞಮಾಡಲು ಭೂಮಿಯನ್ನು ಶುದ್ಧಿ ಮಾಡುತ್ತಿದ್ದಾಗ, ಉತ್ತ ಭೂಮಿಯಲ್ಲಿ ಈಕೆ ದೊರಕಿದ ಕಾರಣ 'ಸೀತೆ' ಎಂಬ ಹೆಸರು ಬಂದಿತು: ನಿನಗಂತು ಸೀತೆಯೇ ಸೀತೆ ಕಡಂಗಿ ಕಾಯ್ದು ಕಡೆಗಣ್ಣೆದಳಪ್ಪೊಡೆ ಧಾತ್ರನಿಂ ತೊದಳ್ಪಾತಿನೊಳೇನೊ ಪಾಂಡವರ ಕೆಯ್ಯೊಳಿ ನಿನ್ನ ನಿಸೇಕಮಾಗದೇ (ಪಂಪಭಾ. ೯-೪೯); ಅನುಬಂಧಮನ್ವಯಾಗತಮೆನಿಸಿದುದದನಧಿಕಮಾಗೆ ಮಾಟ್ಟುನುನಯದಿಂದೆ . . . ಸೀತೆಯಂ ನಿನಗಿತ್ತಂ (ಪಂರಾಮಾ. ೪-೭೯); ಭೂತಳದೊಳ್ ಕಾಳಬ್ಬೆಯ ಸೀತೆಗೆ ರುಗ್ಮಿಣಿಗೆ ರತಿಗೆ ಸರಿದೊರೆ (ಎಕ. II (R), ೫೩೯-೧೫; 1214). ೪. ಗಂಗಾನದಿಯ ನಾಲ್ಕು ಶಾಖೆಗಳಲ್ಲಿ ಒಂದು; ಗಂಗೆಯ ಪೂರ್ವಭಾಗದ ಶಾಖೆ: ಮೆಲ್ಲಗೆ ತರ್ಕಿಸಿತ್ತು ಪೂರ್ವಾಧ್ಧಿಯನಖಿಳನದೀಖ್ಯಾತಸೀತಾಪ್ರವಾಹಂ (ಮಲ್ಲಿಪು. ೨-೧೦); ಮನಂಗೊಳಿಪ ಸೀತಾತರಂಗಿಣಿಯ ದಕ್ಷಿಣೋತ್ತರತಟಂಗಳೆರಡಱೊಳ ಮೆಂಟುಪಟ್ಟಂಡ ಮಂಡಲಂಗಳಿರ್ಪುವು (ಪುಪ್ರಪು. ೨-೮ ವ).

ಸೀತೆದಂಡು = ಭೂಮಿಯನ್ನು ಸಾಗುವಳಿ ಮಾಡುವವರು; ಬೇಸಾಯಗಾರರ ಗುಂಪು: ನಮ್ಮ ಕಡೆ ಕೆಲವರು ರೈತರನ್ನು ಸೀತೆದಂಡು ಎಂದು ಕರೆಯುತ್ತಾರೆ (ಬೈಸರ್ವ. ೧೦೬). [ಸಂ. ಸೀತಾ]

ಸೀತೆನೆ , ಸಿಹಿತೆನೆ (ನಾ). ಇನ್ನೂ ಬಲಿಯದೆ ಹಾಲು ತಂಬಿ ಸಿಹಿಯಾಗಿರುವ ತೆನೆ; ಬೆಳಸಿ: "ಯೂಷಮೆಂಬುದು ಸೀತೆನೆ" (ಹಲಾಯು. ೯೬-೪೩೧); ಮಾಳಿಗೆಯಂ ಸುಟ್ಟು ಸೀತೆನೆಯಂ ತಿಂಬ . . . ಪಟ್ಟೆಯಂ ಪಱಿದು ಚಂಡಂ ಮಾಡುವ ಕಟ್ಟೆಗ್ಗರಂತೆ (ಧರ್ಮಾಮೃ. ೯-೧೬೨); ಕಿಚ್ಚು ಮಾಡಿದನು ಎಚ್ಚರದಿಂದಲೆ ಸಚ್ಚಿದಾನಂದಗೆ ಸೀತೆನೆ ತಿನಿಸಲು (ಸಿದ್ಧಪು. ೩-೭೭). **ಸಿಹಿತೆನೆ** : ಬೆಳಸಿ, ಸಿಹಿತೆನೆ [ಸೀತೆನೆ] (ಕಂನಹು. ೮೯).

[ಸೀ$_2$ + ತನೆ$_1$]

ಸೀತೆಹೂ, ಸೀತೆಹೂವು (ನಾ). ಒಂದು ಬಗೆಯ ಮರ ಮತ್ತು ಅದರ ಹೂವು: ಗಂಧನಕುಲ, ರಸ್ನಾ, ಸೀತೆಹೂ (ಮೃಚಿಾ. ೬೭-೧೩೭೧). **ಸೀತೆಹೂವು** : ಸಾಹೇಬರುಗಳೂ, ದೊರೆಗಳೂ, ಮೇಲಧಿಕಾರಿಗಳೂ ಬಂದಾಗ ಅವರಿಗೆ ಸೀತೆಹೂವಿನ ಒಂದೆರಡು ದಂಡೆಗಳನ್ನು ಕೊಡುತ್ತೇವೆ (ಹಸುಹೂ. ೨೨೩). [ಸೀತೆ$_1$ + ಹೂ$_2$ (< ಪೂ$_2$)]

ಸೀತೆಹೂವು 'ಸೀತೆಹೂ' ನೋ.

ಸೀತ್ಕರಿಸು (ಕ್ರಿ). (ಸಂತೋಷದಿಂದ) ಧ್ವನಿಮಾಡು; ಸೀತ್ಕಾರಮಾಡು: ತನಿವಣ್ಣಳ ಸಾರಮಂ ಶುಕಾವಳಿ ಸಲೆ ಪತ್ತಿ ಸೀತ್ಕರಿಸಿ ಕಣ್ಗಳನಿಂತರೆಮುಚ್ಚಿ ಪೀರುತುಂ ವಿಳಸಿತಚುಂಬನಾಭಿನಯಮಂ ನೆಱೆ ತೋರ್ಪವೊಲಿರ್ದುದಾಮ್ರದೊಳ್ (ಕುಸುಮಾ. ೫-೮೯). [ಸಂ. ಸೀತ್ಕರಣ + -ಇಸ್ತು$_3$]

ಸೀತ್ಕಾರ (ನಾ). ೧. ನೋವು, ದುಃಖ, ಸಂತೋಷ ಮುಂತಾದುವನ್ನು ಸೂಚಿಸುವಾಗ ಮಾಡುವ ಧ್ವನಿ: ಕುಸುಮಾಯುಧನಿಸೆ ನೊಂದು ಸೀತ್ಕಾರಮೊಗೆಯೆ (ಕಾದಂಬಾ. ೩೬); ವಿತರತ್ಸೀತ್ಕಾರವಕ್ತ್ರಂ ಜಳನಿಬಿಡಿತವಾಸಸ್ಸುಟೀಭೂತನಿಮ್ನೋನ್ನತಂ . . . ಕಣ್ಗೆವಂದಿರ್ದುದು (ಚಂದ್ರಪ್ರ. ೭-೧೪೯). ೨. [ಕಾಮಶಾ] ರತಿಕ್ರೀಡೆಯ ಒಂದು ಧ್ವನಿ: ಸಾರಸದೊಲ್ ಸೀತ್ಕಾರಂ ಮಿಗೆ ಮಾಳ್ಪುದು (ಜನವ. ೮-೨೧); ಚುಂಬನ ಕಾತರ ದೈನ್ಯ ಸಂಕಲಿತ ಸೀತ್ಕಾರಗಳಿಂದೆ . . . ಸುರತವೆಸಗುವ ಜಾಣ (ಇಚಾಸಾಂ. ೯-೬೫). [ಸಂ.]

ಸೀತ್ಕಾರಿ (ನಾ). [ಯೋಗ] ಕುಂಭಕದ ಎಂಟು ಪ್ರಕಾರಗಳಲ್ಲಿ ಒಂದು: ಸೂರ್ಯಭೇದನ ಉಜ್ಜಾಯಿ ಸೀತ್ಕಾರಿ . . . ಕೇವಲಮೆಂಬಷ್ಟಕುಂಭಕಪ್ರಕಾರಂಗಳುಂ (ಎವೇಕ. ೧೬೨). [ಸಂ. ಸೀತ್ಕಾರಿನ್]

ಸೀತ್ಕೃತ (ನಾ). ೧. = ಸೀತ್ಕಾರ ೨: ಸೀತ್ಕೃತಂ . . . ಶ್ವಸಿತಮುರುರಾತ್ಕೃತಂ ಎನಿಪೀ ಚಮತ್ಕೃತಿಯನಱಿದು ರಮಿಸುವನೆ ಚದುರಂ (ಜನವ. ೮-೫೦); ಸ್ತನಿತಂ ಬದಿರ ಗಂಟೊಡೆದಂತೆ ನಾಲಿಗೆಯಿಂದ ಸೀತ್ಕೃತಂ (ಕಾಮಶಾ. ೨೪೧). ೨. [ನಾಟ್ಯ] "ಕ್ಲೇಶ ಮತ್ತು ಶೈತ್ಯವನ್ನು ತೋರಿಸುವಂತೆ ಉಸುರು ಬಿಡುವುದು" (ಲಾಸ್ಯರಂ. ೨೭೮ ಗದ್ಯಾನುವಾದ): ಸಮಮುಂ . . . ಸೂತ್ಕೃತಂ ಸೀತ್ಕೃತಮುಂ ಇಂತುಂ ಪತ್ತೊಂಬತ್ತುಂ ಕಾಂತೇ ಕೇಳ್ ವಾಯುಭೇದಂ (ಲಾಸ್ಯರಂ. ೩-೭೭). [ಸಂ.]

ಸೀತ್ಕೃತಿ (ನಾ). = ಸೀತ್ಕಾರ ೧: ಕರಿಕರಾಗ್ರಸೀತ್ಕೃತಿ . . . ವಿಹಗಸಮುತ್ಕರ ಚೀತ್ಕೃತಿ ತೀವಿ ವಿಪಿನದೊಳ್ ಬಿಡದೆಸೆಗುಂ (ರಾಜಶೇ. ೫-೬೨). [ಸಂ.]

ಸೀತ್ಯ (ಗು). ೧. ಉಳುಮೆಯಾದ; ಉತ್ತ. (ನಾ). ೨. ಉತ್ತ ಭೂಮಿ: "ಕೃಷ್ಯಂ ಕ್ಷೇತ್ರಂ ಸೀತ್ಯಂ" (ವಸ್ತುಕೋ. ೬೩-೭೦). ೩. ಕಾಳು; ಧಾನ್ಯ. ೪. (ಬತ್ತ ಮುಂತಾದುವುಗಳ) ಎಳೆಯ ಗಿಡ; ಸಸಿ: "ಸೀತ್ಯಂ, ಸ್ವಸ್ಯಂ – ಈ ೨ ಸಸಿ" (ಹಲಾಯು. ೯೪-೪೨೦). [ಸಂ.]

ಸೀದ$_1$ 'ಸೀ$_1$' ಪರಾ.

ಸೀದ$_2$ 'ಸೀದಾ$_1$' ನೋ.

ಸೀದ$_3$ 'ಸೀದಾ$_3$' ನೋ.

ಸೀದಾ$_1$, ಸೀದ$_2$ (ನಾ). ೧. ಸ್ವಯಂಪಾಕಕ್ಕೆ ಅಗತ್ಯವಾದ ಅಕ್ಕಿ, ಬೇಳೆ, ಹಿಟ್ಟು, ಸೌದೆ ಮುಂತಾದ ವಸ್ತು: ಉಪ್ಪು ಸಹ ಸೀದಾ ಒಡವೆಗಳಲ್ಲಿ ಪ್ರಮುಖಸ್ಥಾನ ಪಡೆದಿತ್ತು (ಸುತ್ತುಮು. ೨೦); ಹಳ್ಳಿಯಲ್ಲಿ ಈ ಬಗೆಯ ಕ್ರಾಂತಿಯಾದರೂ ನಾವಲಿಗರಿಗೆ ಅವರ ಆಯಾ, ಸೀದಾ ತಪ್ಪುತ್ತಿರಲಿಲ್ಲ (ಹೊಲಮ. ೭೮). ೨. ಒಬ್ಬ ಮನುಷ್ಯನಿಗೆ ನಿಗದಿಯಾಗಿ ಕೊಡುವ ಆಹಾರಪದಾರ್ಥಗಳ ಪ್ರಮಾಣ; ರೇಷನ್ನು: ಅರಿವಯ ಬರ ಕಾಳಿನ ಸೀದಾ, ಪ್ರವಾಸದ ಅಗ್ನಿದಿವ್ಯ ಇವನ್ನೆಲ್ಲ ಆಗ ಅನುಭವಿಸಬೇಕಾಗಿರಲಿಲ್ಲ (ಸಮಜೀ. ೪೪೫); ಕಳೆದ ಸಲ ಸೀದಾದಲ್ಲಿ ಎಲ್ಲ ಧಾನ್ಯ ಸಿಕ್ಕಿರಲಿಲ್ಲ (ಪುರುಷಾ. ೧). ೩. ಉಚಿತವಾಗಿ ಕೊಡುವ ಆಹಾರಪದಾರ್ಥ; ಪಡಿ: ನವರಾತ್ರಿಯಲ್ಲಿ ಬ್ರಹ್ಮವೃಂದಕ್ಕೆ ವಾಡೆಯಿಂದ ನಿತ್ಯ ಸೀದಾ ದೊರೆಯಿತು (ಗ್ರಾಮಾಯ. ೬). **ಸೀದ$_2$** : ೧. ಅವರು ಅತಿಥಿಗಳಾದ ಬ್ರಾಹ್ಮಣರನ್ನು ಪೂಜಿಸಿ, ಚರಣತೀರ್ಥ ತಕ್ಕೊಳ್ಳುವರು. ಬ್ರಾಹ್ಮಣೇತರರಿಗೆ ಬೇಕಾದ ಸೀದವನ್ನು ಕೊಡುವರು (ಗುರುಪ್ರ. ೧).

[<— ಹಿಂ. ಸೀಧಾ; ಮರಾ. ಶಿಧಾ./ ಬಂಗಾಲಿ. ಸಿಧಾ; ಸಿಂಧಿ. ಸೀಧೋ; ಗುಜ. ಸೀಂಧೂ, ಸೀಧೂ]

ಸೀದಾ$_2$ (ಗು). ೧. ನೇರವಾದ; ಅಂಕುಡೊಂಕಿಲ್ಲದ: ಸೀದಾ ರಸ್ತೆ ಇವನೆಂದೂ ಕಂಡುದಿಲ್ಲ (ನೆಲಮು. ೨೮-೭). ೨. ಸರಳವಾದ: ಶಿವ ದೇವತೆಗಳಲ್ಲೆಲ್ಲ ಸೀದಾ ದೇವರು (ಪ್ರಹಾರ. ೪). (ನಾ). ೩. ಸರಿಯಾದುದು; ಋಜುವಾದುದು: 'ಪೂಟ್‌ಲಾಯ್ರಿ' ಅನ್ನೋ ಮಾತು, ಅವರಿವರಿಗೆ ಉಲ್ಟಾ ಸೀದಾ ಹೊಡೆದು ಮೋಸಮಾಡಿ ಕಾಸು ಕಮಾಯಿಸೋರಿಗೆ ಹೇಳೋ ಮಾತು (ನಮ್ಮೂರ್ಗ. ೨೩).

ಸೀದಾಸಾದಾ = ೧. ನಿಷ್ಕಪಟವಾದ; ಸರಳವಾದ: ನಿನ್ನಷ್ಟು ಸೀದಾಸಾದಾ ಮನುಷ್ಯರು ಸೀಗುವುದೇ ಅಪರೂಪ (ರೂಪಿ). ೨. ನಿಷ್ಕಪಟವಾದ ವ್ಯಕ್ತಿ; ಸರಳವ್ಯಕ್ತಿ: ಶಾಂತಿಬಾಯಿ ಕಾಣುವಷ್ಟು ಸೀದಾಸಾದಾ ಅಲ್ಲ (ಬದುಜ. ೧೪೭).

[<— ಹಿಂ. ಸೀಧ, ಸೀಧಾ; ಮರಾ. ಸೀಧಾ]

ಸೀದ್ಯಾ$_3$, ಸೀದ$_3$ (ಅ). ನೇರವಾಗಿ; ನೆಟ್ಟಗೆ: ಧನದಾಸನು ಸೀದಾ ನನ್ನ ಬೀಡಾರ ದೊಳಗೇ ನುಗ್ಗುವುದನ್ನು ಕಂಡು, ಯಾಕೋ ನನ್ನ ಕೈ, ಸೆರಗಿನಿಂದ ನಡುವನ್ನು ಬಿಗಿದುಕೊಂಡಿತು (ಪತಿ. ೮೯); ತಂತ್ರಿಯವರು ಸೀದಾ ಮನೆಗೆ ಬಂದರು (ಪದ್ಮಸ. ೧೮೧). **ಸೀದ್ಯ** : ಸೀದ ಸ್ವಲ್ಪವೂ ತಪ್ಪದಂತೆ, ವರನ ತಲೆಯ ಮೇಲೆಯೇ ಸುರಿಯುತ್ತಾರೆ (ಸುವಸಂ. ೫೪); ಊಟವನ್ನು ಮಾಡಿ ಸೀದ ಬಂದು . . . ಮರದಡಿ ಕುಳಿತುಕೊಂಡು ಒಬ್ಬನೆ ಯೋಚನೆ ಮಾಡುತ್ತಿರುತ್ತಿದ್ದ (ಕಲಾಸಾ. ೨೮). [< ಸೀದಾ$_2$]

ಸೀದಾಸಾಮಗ್ರಿ (ನಾ). ಆಹಾರಪದಾರ್ಥಗಳ ತಯಾರಿಕೆಗೆ ಬೇಕಾಗುವ ಧಾನ್ಯ, ಸೌದೆ ಮುಂತಾದ ಅವಶ್ಯ ವಸ್ತು: ಅವರ ಸಂಪನ್ನಸ್ಥಿತಿಯನ್ನು ಹಬ್ಬಹುಣ್ಣೆವೆಗಳಲ್ಲಿ ದೇಸಾಯರು ಅವರ ಮನೆಗೆ ಕಳಿಸುವ ಸೀದಾಸಾಮಗ್ರಿಗಳನ್ನು . . . ಹೇಳಿ ಮಗನು ಅಚ್ಚರಿಪಡುವಂತೆ ಮಾಡಿದ್ದಳು (ಜಯಂತ. ೬೧).

[ಸೀದಾ$_1$ + ಸಾಮಗ್ರಿ./ ಮರಾ. ಶಿಧಾಸಾಮಗ್ರೀ]

ಸೀದು$_1$ 'ಸೀ$_1$' ಪರಾ.

ಸೀದು$_2$, ಸೀತು$_2$ (ನಾ). ಒಂದು ಬಗೆಯ ಮದ್ಯ: ಮಧು ಸೀತುಂ ಕಟು ಸೀದು ಪೋ

ಪುಳಿತ ಕಳ್ಳಲ್ತುಂ ಕರಂ . . . ಎಂದು ಕುಡಿದರ್ ಕಾಮಾಂಗಮಂ ಕಾಂತೆಯರ್ (ಪಂಪಭಾ. ೪-೮೮); ಹಸಿತಾಂಭೋಜಾಸ್ಯೆಯರ್ ಮುಕ್ಕುಳಿಸಿಯುಗುಟ್ಟಿನಂ ಸೀದುವಂ ಸೀದುವಂ ಸೇವಿಸಿ ಸೊರ್ಕಿಂದೀ ಮಹೀಜಂ ತಳೆದು ಪುಳಕಪೆರ್ಮಾಂಬುಸಂದೋಹಮಂ ಸಂತಸದಿಂ ಪಾಡುತ್ತುಮಿರ್ದತ್ತು (ಜಗು. ೧೪-೩೦). **ಸೀತು**$_2$: ಮಧು ಸೀತುಂ ಕಟು ಸೀದು ಪೋ ಪುಳಿತ ಕಳ್ಳಲ್ತುಂ ಕರಂ . . . ಕಕ್ಕರಕ್ಕಿಂತುಟಪ್ಪುದು ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್ (ಪಂಪಭಾ. ೪-೮೮).

[< ಸಂ. ಸೀಧು]

ಸೀದೊಂಡೆ, ಸಿಹಿತೊಂಡೆ (ನಾ). ಸವಿಯಾಗಿರುವ ಒಂದು ಬಗೆಯ ತೊಂಡೆ: 'ಸೀದೊಂಡೆಬಳ್ಳಿ' ಪರಾ. **ಸಿಹಿತೊಂಡೆ**: ಕಾಗದೊಂಡೆ, ಸಿಹಿತೊಂಡೆ, ತೊಂಡೇಕಾಯಿ (ಮೈಡಿಗ. ೨೩-೪೨೩). [ಸೀ$_2$ + ತೊಂಡೆ$_1$]

ಸೀದೊಂಡೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: (ಕ). [ಸೀದೊಂಡೆ + ಬಳ್ಳಿ]

ಸೀಧು (ನಾ). ಒಂದು ಬಗೆಯ ಮದ್ಯ: ಉನ್ಮತ್ತಕಾಮಿನೀಗಂಡೂಷಸೀಧುಸೇಕ ಪುಳಕಿತವಕುಳಮುಕುಳವಿದಳಿತಮನೋಹರಾಶೋಕಲತಾ[ರ]ಮಣೀರಮಣೀಯ ನೂಪುರ [ರವ] ರಮ್ಯಮಂ . . . ವನಮನೆಯ್ದೆ ವಂದು (ಪಂಪಭಾ. ೫-೧೦೪); ವಕುಳದ ಮರಂಗಳೆಲರಲೆಪದಿಂ ಕೆದಱಿದ ಸೀಧುಧಾರಾಪ್ರಸರದಿಂ ತುಂತುರ್ಮಸಗಿದಂತೆಯುಂ (ಕಾದಂಪೂ. ೧೦೧೦); ಬಳಿಕಮಮೃತಮುಂ ಸೀಧುವುಂ ಪುಟ್ಟಿತಾಗಳ್ (ತ್ರಿಪುವಿ. ೧೭-೨೨). 'ಶೀಧು' ಪರಾ. [ಸಂ.]

ಸೀನ್$_1$, **ಶೀನು, ಸೀನು**$_1$ (ಕ್ರಿ). ಶೀತ$_1$, ಸೀತ$_2$ (ಭೂತಕೃ), ಸೀಂತು, ಸೀತು$_1$ (ಭೂತನ್ನೂ), ಸೀಂಪ (ಭವಿಕೃ) (ನೆಗಡಿ, ಘಾಟು ಮುಂತಾದುವುಗಳ ಪರಿಣಾಮವಾಗಿ) ಮೂಗಿನಿಂದ ಸಶಬ್ದವಾಗಿ ಉಸಿರು ಬರು: ''ಸೀನ್ – ಕ್ಕುತಕರಣೇ'' (ಶಮಧಾ); ಪುಟ್ಟಿದಾಗಳೆ ಮಾತಾಪಿತೃಯುಗಲಂಗಳ್ ಸೀಂತುಮಾಗುಳಿಸಿಯುಂ ಪರಾಸುಗಳಾಗೆ (ಆದಿಪು. ೫-೪೧೪); ಆತ್ಮಜರ್ ಪುಟ್ಟರೆ ಸೀಂತುಮಾಗುಳಿಸಿಯುಂ ಪಿತೃಗಳ್ ಕರಗುತ್ತೆ ಸಗ್ಗದೊಳ್ ಪುಟ್ಟುವರ್ (ಕಾಂತಿಪು. ೬-೧೦೬); ಕೊರೆದುಂ ಸುಯ್ದುಂ ಸೀಂತುಂ ಮೊಱೆದುಂ ನಿದ್ರೆಯನೆ ಕೆಡಿಪ ಮುದುವೊಱಸಂ ಮತ್ತೆರಡಿಲ್ಲದೊಲ್ಲಂ (ಧರ್ಮಾವ್ಯ. ೨-೫೪); ಸೀಂಪಂ, ಸೀಂಪಿನಂ, ನೋೀಂಪಂ, ನೋಂಪಿನಂ (ಶಬ್ದಾನು. ೫೧೬ ಪ್ರಯೋ). **ಶೀನು** : ಶೀತ ಭರಕೀ ಹನುಮನುಲ್ಕಾಪಾತದಂತಿರೆ ಸಿಡಿದು ಬಿದ್ದನು (ತೊರಾ. ೫-೨-೪೬); ನನಗಾದರೋ ಕಚ್ಚಗುಳಿ ಇಟ್ಟ ಹಾಗಾಯಿತು. ಬಲವಾಗಿ ಶೀದೆ. ನಾ ಶೀದುದಕ್ಕಾಗಿ ಅಲ್ಲಿದ್ದವರು ಹೇಳದೆ ಕೇಳದೆ ಕಾಲಿಗೆ ಬುದ್ಧಿ ಹೇಳಿದರು (ಗಲಿಪ್ರ. ೧೨). **ಸೀನು**$_1$: ಶಶು ಸೀನಲು ಮಹಾಸ್ಥಿರಜೀವಿಯಾಗೆಂದು ಹರಸಲು (ಜೀವಂಚ. ೫-೪೦); ಹಿರಿಯ ಮೂಗಿನ ಹೋರು ತುಂಬಲು ಭರದಿ ಬಿಲಿಸಿಂದವನು ಸೀತರೆ ಗಿರಿಯ ತೋರದ ಭಟರು ತಲುಗೆಲೆಯಂತೆ ಹಾಲ್ದಿರು (ಕಾಶಿಕಾ. ೨೪-೫); ಕೇಕರಿಸಿ ಕೆಮ್ಮಿ ಸೀತುಂ (ಚಿಬಪು. ೯-೧೨); ಈ ಪುಡಿಯು ಉಳಿದವರ ಮುಖಕ್ಕೂ ಹಾರಿತು . . . ಎಲ್ಲರೂ ವಿಕಪ್ರಕಾರವಾಗಿ ಸೀನಲಾರಂಭಿಸಿದರು (ಗಲಿಪ್ರ. ೨೪); ಬಾತವರು ಬದುಕುವುದಿಲ್ಲ, ಸೀತವರು ಸಾಯುವದಿಲ್ಲ (ಗಾಡ).

ಸೀನ್$_2$, **ಸೀನು** (ನಾ). (ನೆಗಡಿ, ಘಾಟು ಮುಂತಾದುವುಗಳ ಪರಿಣಾಮವಾಗಿ) ಮೂಗಿನ ಮೂಲಕ ಸಶಬ್ದವಾಗಿ ರಭಸದಿಂದ ಬರುವ ಉಸಿರು: ಸೀನಂ ಬೆರ್ಕಿನ ದನಿಯಂ . . . ಪೊಗೆಯಂ ತಾನಾಗಿಯೆ ಕಂಡು ಪೋಗಲಾಗದು ಮನುಜಂ (ಲೋಚೋಪ. ೧೨-೪೭); ಮಲವುಂ ಮೂತ್ರಂ ಸೀನುಂ ಘೆಬಿಲಿನೆಯೊರ್ಮೊದಲೆ ಪೋಪೊಡಂ . . . ತಿಳಿ ನೀನಾತಂಗೆಯಾಯುತಿಂಗಳ ಮರಣಂ (ಪಪಾರ. ೩೬೧); ಸೀನ್ ಕೆಮ್ಮು . . . ಧರ್ದಿಯಂ ನಿರೋಧಂಗಳಂ ಮಾಡಿಸುತ್ತೆ (ಚಿಬಪು. ೫೮-೨೪). **ಸೀನು**$_2$: ಆಗುಳಿಗೆ ಸೀನು ತೇಗಿದನಾಗಿಸುಗುಂ (ಕಲ್ಯಾಕಾ. ೨-೧೭); ವಿಜೆತುಸುರಿನಲರೆದ ಮೆಣಸಿನ ಕಾರ ನೆತ್ತಿಗೆ ಸೀನು ಸಿಡಿಲಾಕಾರದಲಿ ಹೊಱವಂಟು ಹೊಡೆದುದು ಪುರದ ನೆರವಿಗಳ (ತೊರಾ. ೬-೨೬-೩೩); ಕೈಗೊಡತಿಸೊಪ್ಪನ್ನು ಚೂರ್ಣಮಾಡಿ ಆಘ್ರಾಣ ಮಾಡಿದರೆ ಸೀನು ಬರುವುದು (ಸಕವ್ಯ. ಪರಿ. ೪೯೩). [< ಸೀನ್$_1$]

ಸೀನಿಂಬೆ, ಸಿಹಿನಿಂಬಿ, ಸಿಹಿನಿಂಬೆ (ನಾ). ಸವಿಯಾದ ರುಚಿಯಿಂದ ಕೂಡಿರುವ ನಿಂಬೆ: ಗಜನಿಂಬೆ ಸೀನಿಂಬೆ ಚಾರುತರಯಮೃತನಿಂಬೆ (ನವಮೋ. ೨೪-೫೦); ಅತ್ತೆ ಕಂಡರಬ್ಬ ಎನುವ ಬಾಳೆ ಸೀನಿಂಬೆ (ಗೋಹಿ. ೩೧-೧೧). **ಸಿಹಿನಿಂಬಿ** : ''ಮಧುಜಂಬಃ – ಸಿಹಿನಿಂಬಿ'' (ಓಷಧಿ. ೧೨೦). **ಸಿಹಿನಿಂಬೆ**: ''ಪಿತ್ರದ್ರಾವೀ – ಸಿಹಿನಿಂಬೆ'' (ಓಷಧಿ. ೯೮). [ಸೀ$_2$ + ನಿಂಬೆ]

ಸೀನಿದ್ದೆ (ನಾ). (ಆಲಂ) ಬೆಳಗಿನ ಜಾವದ ಸವಿನಿದ್ದೆ: ನನಗೆ ಒಂದು ಥರಾ ಮಂಪರು ಮಂಪರು ಸೀನಿದ್ದೆ (ಹೂಸಕ್ಕಿ. ೧೧೩). [ಸೀ$_2$ + ನಿದ್ದೆ]

ಸೀನೀರು, ಸಿಹಿನೀರು (ನಾ). (ಕುಡಿಯಲು ಯೋಗ್ಯವಾದ) ಸವಿಯಾದ ರುಚಿಯಿರುವ ನೀರು: ಮಣ್ಣಿನಿಂದ ಮರಳುಗಳಿಂದಲೂ ಕೂಡಿಯಿದ್ದರೆ ಆ ಭೂಮಿಯಲ್ಲಿ ಸೀನೀರು ಬೀಳುವದು (ಕಾಗಂಧಿ. ೪೩-೩೧). **ಸಿಹಿನೀರು**: ಕಬ್ಬು ಬಾಳೆ ನಾರಿವಾಳಕ್ಕೆ ಸಿಹಿನೀರನೆಱೆದವರಾರಯ್ಯ (ಮಹಾದೇ. ಬ. ೧೦-೩). [ಸೀ$_2$ + ನೀರು$_1$ (< ನೀರ್)]

ಸೀನು$_1$ 'ಸೀನ್$_1$' ನೋ.

ಸೀನು$_2$ 'ಸೀನ್$_2$' ನೋ.

ಸೀನ್ಕೆ (ನಾ). ಸೀನುವಿಕೆ; ಸೀನುವುದು: ಬಾನ್ಕೆ, ಆನ್ಕೆ, ಸೀನ್ಕೆ, ಕೂನ್ಕೆ (ಶಬ್ದಾನು. ೫೫೭ ಪ್ರಯೋ). [ಸೀನ್$_1$ + – ಕೆ]

ಸೀಪಲೆ 'ಸಿಪಿಲೆ' ನೋ.

ಸೀಪಲ್ಯ (ನಾ). ಹುಳಿಯನ್ನು ಹಾಕದೆ ಮಾಡುವ ಒಂದು ಬಗೆಯ ತರಕಾರಿಯ ಮೇಲೋಗರ: (ಕ). [ಸೀ$_2$ + ಪಲ್ಯ$_1$]

ಸೀಪಿ, ಚೀಪ್ಪು, ಸೀಬಿ (ನಾ). ಒಂದು ಬಗೆಯ ಸಸ್ಯ: (ಮೈಡಿಗ. ೫೦-೧೦೦೫). **ಚೀಪ್ಪು**: ಚೀಪಿನ ಗಿಡ ಹುಲುಸಾಗಿ ಬೆಳೆದಿದೆ (ಡಂಗಿ). **ಸೀಬಿ** : 'ಸೀಬಿಗೆಡ್ಡೆ' ಪರಾ. [ದೇ. ॥ ತಮಿ. ಚೇಮ್ಬು, ಚೇಮ್ಬೈ; ಮಲ. ಚೇಮ್ಬ, ಚೇಮ್ಬು]

ಸೀಪಿಯಗೆಡ್ಡೆ, ಶಿಪಿಗೆಂಡೆ, ಶೀವಿಗೆಡ್ಡೆ, ಸಿಪಿಗೆಂಡೆ, ಸೀಬಿಗೆಡ್ಡೆ, ಸೀಬಿಯಗೆಡ್ಡೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಗೆಡ್ಡೆ: ''ಜಾಯಾವೃಕ್ಷಃ– ಸೀಪಿಯಗೆಡ್ಡೆ'' (ಓಷಧಿ. ೬೨). **ಶಿಪಿಗೆಂಡೆ**: ಚಂಗಲಕೋಷ್ಠ, ಶಿಪಿಗಂಡೆ . . . ತಾವರೆಗಣುಪು ಇವು ಪ್ರತ್ಯೇಕ ಮೂಱುವರಹ ತೂಕವ ಚೂರ್ಣಿಸಿ (ವೈದ್ಯಸಾ. I. ೩೭೭). **ಶೀವಿಗೆಡ್ಡೆ**: ಹಿಪ್ಪಲಿ, ದ್ರಾಕ್ಷಿ, ಶೀವಿಗೆಡ್ಡೆ . . . ಶುಂಠಿ – ಇವಂ ಚೂರ್ಣವಂ ಮಾಡಿ (ಸಹವ್ಯ. ೨೫೧). **ಸಿಪಿಗೆಂಡೆ**: ಕರಿಗೂರಟೆ, ಸಿಪಿಗೊಂಜಿಗೆಂತೆಡೆ, ಕರಿಲೊಕ್ಕಿಬೇರು . . . ಕೊಮ್ಮೆಬೇರು (ಸಹವ್ಯ. ೩೮೩). **ಸೀಬಿಗೆಡ್ಡೆ**: ''ಕಸೇರುಕಾ – ಸೀಬಿಗೆಡ್ಡೆ, ಹಂದಿಗೆರಕನ ಗೆಡ್ಡೆ'' (ಓಷಧಿ. ೨೪). **ಸೀಬಿಯ ಗೆಡ್ಡೆ**: ''ಕುದ್ದಾಲಕಃ– ಕಂಚಿವಾಳ, ಸೀದಿಯ ಗೆಡ್ಡೆ, ಹೇರಾಚ'' (ಓಷಧಿ. ೩೫). [< ಸೀಪಿ + ಗೆಡ್ಡೆ (< ಗಡ್ಡೆ)]

ಸೀಪಿಸು (ಕ್ರಿ). ಹೀರುವಂತೆ ಮಾಡು; **ಚೀಪಿಸು**: ಮಧುಶರ್ಕರೆಯೊಡೆವೆರೆದಿರ್ಪ ಬೆಟ್ಟ ಸೀಪಿಸಿದರರ್ಭಕಗೆ (ಮೋಹತ. ೧೭-೨೪). [ಸೀಪು$_1$ + – ಇಸು]

ಸೀಪ್ಪು, ಚೀಪ್ಪು (ಕ್ರಿ). ರಸವನ್ನು ಒಳಗೆ ಎಳೆದುಕೊಳ್ಳು; ಹೀರು: ಸೀಪುವದು, ಏನಾದರೂ ಹೀರಿಕೊಂಡು ಕುಡಿಯುವದು ಮೊದಲಾದ ಕೆಲಸಗಳು (ಮುಂಬಾ. ೫-೭೮); ಗಗನದಮೃತದ ಮೊಲೆಯ ಸೀಪುವೆಲೆಗಳ ನಡುವೆ ಮುದದ ಹನಿಯಾರಿಸುತ ತೇಮಗೊಳುವಂತೆ (ಮಲದೇ. ೪೨-೭); ಬೊಟ್ಟು ಸೀಪಿದರೆ ಹೊಟ್ಟೆತುಂಬೀತೇ? (ಗಾಡ). **ಚೀಪ್ಪು**$_1$: ನೀರಿಗೆ ಬೆರಳು ಅದ್ದಿ ಚೀಪಿದಂತಾಯ್ತು (ಹುಟ್ಟಿಹ. ೧೪೧); [ದೇ.॥ ತಮಿ. ಚೀಪ್ಪು; ತೆಲು. ಸಿಬುಕು, ಸಿವುಕು; ಕುರುಖ್. ಚೀಪ್ನಾ; ಮಲ್ತೊ. ಚೀಪಿ]

ಸೀಪ್ಪು$_2$ (ನಾ). ಸಿಹಿ; ಸವಿ: ವಿಷದ ಕಯ್ಯೆಯುಂ ಸೀಪುಂ ಮೂರ್ಖನ ನಗೆಯುಂ ಮುನಿಸುಂ . . . ಪೊಲ್ಲೆಂತಂತೆ ಮಿಥ್ಯಾದೃಷ್ಟಿಯ ನೆಗಟ್ಲೆಯಮೊದು ಪೊಲ್ಲೆಂದು ಮುನಿದು ಬಲಿಯನಿಂತೆಂದಂ (ಧರ್ಮಾಮೃ. ೯-೧೩೨); ಸೀಪೊದವಿದ ನುಣ್ಗೊನೆಯಂ ಕೂಪರಸದ್ರಾಕ್ಷೆಗೆಸೆವ ಕುಸುಮದ ರಜದಿಂ ಕಾಪುವರೆದೊಸರ್ವ ಸೊನೆಯಂ ತೂಪಿಱಿವ ರಸಾಲಲತೆಗಳೇನೊಪ್ಪಿದುವೋ (ಧರ್ಮಾನಾ. ೨-೫೬). [ಸೀ$_2$ + – ಪ್ಪು$_2$]

ಸೀಪೆ (ನಾ). = ಸೀಪ್ಪು$_2$: ಇಂಪುವೆತ್ತ ಮಾಂಸವನತಿಸೀಪೆಯಪ್ಪ ಮಧುವಂ . . . ಗಟಿಸಿಕೊಂಡು (ದಶಕು. ೧೨-೬೯). [ಸೀ$_2$ + – ಪೆ./ ತುಳು. ಸೀಪೆ, ಶೀಪೆ, ತೀಪೆ]

ಸೀಬರಿ (ನಾ). (ಚೂಪುಎಲೆಗಳುಳ್ಳ) ಒಂದು ಬಗೆಯ ಸಸ್ಯ: (ಕ). [?]

ಸೀಬರಿಬಳ್ಳಿ (ನಾ). = ಸೀಬರಿ: ''ಸೀಬರಿಬಳ್ಳಿ, ಬಹುಸುತೆ, ಶೀಪಾರಿಮೂಲಿ, ಶತಮೂಲಿಕೆ'' (ಸಸ್ಯನಿ. ೧೬). [ಸೀಬರಿ + ಬಳ್ಳಿ]

ಸೀಬರಿಬೇರು, ಶೀಬಾರಿಬೇರು (ನಾ). = ಸೀಬರಿ: (ಕ). **ಶೀಬಾರಿಬೇರು:** ಶೀಬಾರಿಬೇರು, ಶಹಾವಲಿ, ಆಪಾಢಿಬೇರು, ಆಹೇರು, ಮಜ್ಜಿಗೆಗೆಡ್ಡೆ (ಮೃಜಿಗಿ. ೧೦-೧೬೮).

[ಸೀಬರಿ + ಬೇರು (< ಬೇರ್$_1$)]

ಸೀಬಳ್ಳಿ (ನಾ). ಒಂದು ಸ್ಥಳದ ಹೆಸರು: ಸೀಬಳ್ಳಿಯೆಚ್ಚಹಯ್ಯನ ಜೇಷ್ಠಪುತ್ರ ನಂಗಮ್ಮನ ಮಗ ಜೋಗಯ್ಯ (ಎಕ. VIII, ಸೊರಬ. ೪೭೭-೧೭; 991). [?]

ಸೀಬಿ 'ಸೀಪಿ' ನೋ.

ಸೀಬಿಗೆಡ್ಡೆ 'ಸೀಪಿಯಗೆಡ್ಡೆ' ನೋ.

ಸೀಬಿಯಗೆಡ್ಡೆ 'ಸೀಪಿಯಗೆಡ್ಡೆ' ನೋ.

ಸೀಬಿಲ್, ಸಿಹಿವಿಲ್ (ನಾ). (ಮನ್ಮಥನ) ಸಿಹಿಯಾದ ಕಬ್ಬಿನ ಬಿಲ್ಲು: 'ಸೀಬಿಲ್ಲ' ಪರಾ. **ಸಿಹಿವಿಲ್:** ಅಸಮಾಸ್ತ್ರ ನಾಣ್ಬೆ ಜನನ ಮುಂದೆ ಸಿಹಿವಿಲ್ಲ ಹಿಸುಕಿ ಬೀಸಾಡಿ ಸಾರ್ವಂತ ರಸದಾಳಿಗಬ್ಬಿನ ರಸದೊಳಾ ನೃಪತಿ ಮಿಾಯಿಸುವಂದ ಮೆಚ್ಚಿದುದಾ ಜಿನನ (ಧರಚಿ. ೧೬-೭೬). [ಸೀ$_2$ + ಬಿಲ್$_2$]

ಸೀಬಿಲ್ಲ, ಸಿಹಿವಿಲ್ಲ (ನಾ). ಸಿಹಿಯಾದ ಕಬ್ಬಿನ ಬಿಲ್ಲನ್ನು ಹೊಂದಿರುವವನು; ಮನ್ಮಥ: ಭೂಭ್ರಮಣೇಕ್ಷಣ ಶೋಭಿಪ ನಖಸ್ಪರ್ಶ ಲೋಭದ ವಚನಗಳಿಂದ ತ್ರಿಭುವನೇಶ್ವರ ತಾ ಬ್ಯಾಗನೆ ರತಿಲೋಭದ ಸುಖವೈದಿಸಿದ ಸೀಬಿಲ್ಲನ ಗಣಗಿಂಬಾದವು ಪುಲ್ಲನಾಭನ ಬಲುಬಲುಮಿಂದ (ಪ್ರಸಭಾ. ೪೪-೧೧). **ಸಿಹಿವಿಲ್ಲ** : ಬಹಿರಾತ್ಮರಿಗೆ ತನ್ನ ಪುಷ್ಪಬಾಣವ ತೋಱಿ ಬಹುಬಾಧೆಗೊಳಿಸಿದ ಸೊಕ್ಕು ಸಹಜಾತ್ಮರಸಿಕಗೆನಗೆ ತೋಱುತಿದ್ದನೆ ಸಿಹಿವಿಲ್ಲ ಸುಡು ಫಡಾಯೆಂದ (ಧರಚಿ. ೪೯-೫೧). [ಸೀಬಿಲ್ + - ಅ$_7$]

ಸೀಬು (ನಾ). ೧. ಬಿದಿರು, ಬೆತ್ತ ಮೊದಲಾದುವುಗಳ ಸಣ್ಣ ಸೀಳು, — ತುಂಡು: ಕೊಱಡುಮರನಡುಗುಬ್ಬು ಸೀಬು ಬಿದಿರು ಬಡಿಗೆ ಬೆತ್ತಂಗಳೇನುಂ ದೊರಕದಿದ್ದಡೆ ಹುಲುಸರವಿಗಳನೆಯ್ದೆ ಹೊಸೆಹೊಸೆದು (ಬಸಪು. ೧೬-೨೧); ಕಾಬಾಳೆ ದೀಪದ್ರಾಕ್ಷೆಕೇತನ ತೋರ ಸೀಬಾಂತ ಬಿದಿರ್ವೆತ್ತಗಳ ಲೋಬಾನ ಚಂದನಗಾಡಿನೊಳ್ಪಂದಿ ಮತ್ತೇಭಂಗಳಿರೆ ಕಂಡರವರು (ಮೋಪತ. ೧೯-೨೧); ಬಿದಿರ ಸೀಬನು ಬೊಗ್ಗಿಸಲು ಕೈ ಚದರಿ ಪಿಂದಕೆ ಬಿರ್ದ ನಾಚಿಗೆಯದೆಯೊಳಗೆ ನಿಲದಿಂತು ನುಡಿದರೆ (ಜಿನಭಾ. ೬೩-೩೪). ೨. ಸಣ್ಣ ಜಾತಿಯ ಬಿದಿರು, — ಬೆತ್ತ: ಕುಕ್ಕೇ ಹೆಣೆಯುವುದಕ್ಕಾಗಿ ಹಾಕಿದ್ದ ಸೀಬು ಇವನಿಗೆ ಹಾಸುಗೆಯಾಗಿತ್ತು (ಸುಮಚಿ. ೩೧); ಸಣ್ಣ ಸೀಬಿನ ತೊಟ್ಟಿಲು ನೋಡಿ ತೆಗದುಕೊಂಡು ಬಾರಪ್ಪ (ನಡದಾ. II. ೧೦೦೯). ೩. ಸಿಬುರು; ಸಿಗುರು: ಕೈಗೆ ಚುಚ್ಚಿಕೊಂಡಿದ್ದ ಸೀಬು ತೆಗೆಯುವಪ್ಪರಲ್ಲಿ ಸಾಕಾಯಿತು (ರೂಢಿ). ೪. (ಮನೆಯ ಬಾವಣಿಗೆ ಹಾಕುವ) ಬಿದಿರಿನ ದಪ್ಪ ತುಂಡು: ಅವುಗಳ ಮೇಲೆ (ಎಳೆಗಳ ಮೇಲೆ) ಸೀಬು ಅಡ್ಡ ಹರವಿ (ಮುಂಬಯಿ. ೪-೧೧೮). ೫. ತೆಂಗಿನ ಮಟ್ಟೆಗಳು ಮರಕ್ಕೆ ಅಂಟಿಕೊಂಡಿರುವಂತೆ ಹಿಡಿದಿರುವ ಜಾಲರಿಯಂತಹ ನಾರಿನ ತೊಗಟೆ; ಸೀರೆ: ತೆಂಗಿನ ಮರ ಹತ್ತಿ . . . ಅದನ್ನು ತೆಂಗಿನ ಮಟ್ಟೆಗಳ ಸಂದಿನಲ್ಲಿ ಭದ್ರವಾಗಿ ಗಿಡಿದು, ಸೀಬು ಮರೆಮಾಡಿ, ಕೆಳಗಿಳಿದ (ನನ್ನೂರು. ೨೧೧). [ದೇ. ॥ ತಮಿ. ಚಿಮ್ಬು ; ಮಲ. ಚಿಮ್ಬು, ಚೀಮ್ಬು]

ಸೀಬೆ, ಚೇಪೆ$_2$ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು; ಪೇರಲ: ಸೀಬೆ, ಚೇಪಕಾಯಿ (ಮೃಜಿಗಿ. ೬೪-೧೩೧); ನಿಂಬೆ . . . ಸೀಬೆ . . . ಇವೇ ಮುಂತಾದ ಹಲವು ಹಣ್ಣಿನ ಗಿಡಗಳನ್ನು ತೋಟಗಳಲ್ಲಿ ಬೆಳೆಯಬಹುದು (ವೃವಮ. ೫೮). **ಚೇಪೆ$_2$:** ನೆಲ್ಲಿ, ಕಿರುನೆಲ್ಲಿ, ಚೇಪೆ, ದಾಳಿಂಬೆ (ನಮ್ಮನು. ೨೩೭).

ಸೀಬೋರೆ (ನಾ). ಸವಿಯಾದ ರುಚಿಯಿರುವ ಎಲಚಿಹಣ್ಣು: ಬೋರೆಯರಬೋರೆ ಪುಳಿಬೋರೆ ಸೀಬೋರೆಯಿಂ ರಾಯಬೋರೆಯು ಬೆಳವಲಂ (ನವಮೋ. ೨೪-೫೦).

[ಸೀ$_2$ + ಬೋರೆ$_2$]

ಸೀಮ (ನಾ). ೧. ಒಂದು ಪ್ರದೇಶದ ಗಡಿ, — ಮೇರೆ: "ಅವಧಿ ಸೀಮೆ ಸೀಮಾಘಾಟಂ" (ಪಪ್ರಕೋ. ೪೫-೧). ೨. (ಜಮೀನಿನ) ಗಡಿಯನ್ನು ಸೂಚಿಸುವ ದಿಬ್ಬ, — ದಿಣ್ಣೆ: ಕೇತಯನ ಕುಜುಮಱಿ ಅಪಸುಬಾಳ ಹೊಲಮೇರೆಯ ಸೀಮಕ್ಕೆ ಕಟಕದ ಚಂದ್ರದಂಡನಾಯಕನ ಕುದುರೆಅ ಮೇಲೆವರಿದಡೆ (ಸೌಇಇ. IX-i, ೨೮೪-೯; ಸಿ. 1190). ೩. ಒಂದು ಮಿತಿಗೆ ಒಳಪಟ್ಟವನು: ಸೀಮರ ಕಂಡೆ ನಿಸ್ಸೀಮರ ಕಂಡೆ ಭಾವರ ಕಂಡೆ ನಿರ್ಭಾವರ ಕಂಡೆ (ಚಾಸ್ವ. ಕ. ೪೦೦-೮೪೫). [ಸಂ. ಸೀಮನ್]

ಸೀಮಂತ (ನಾ). ೧. ಕೂದಲನ್ನು ಎರಡುಕಡೆಗಳಿಗೂ ವಿಭಾಗಿಸುವ ಗೆರೆ; ಬೈತಲೆ: "ಸೀಮಂತಮೆಂಬುದು ಬಯ್ತಲೆ" (ಪಲಾಯು. ೮೭-೩೭೫); ಸಮದಸಮಸ್ತ ಸಾಮಂತಸೀಮಂತಿನೀಸೀಮಂತಸಿಂಧೂರಪೂರಪಲ್ಲವಪ್ರಸರರಸಹರಣಚರಣನುಂ. . . ಎನಿಸಿ ಪೊಗಳ್ತೆವಡೆದು (ರಾಜಶೇ. ೫-೧ ವ); ರವಿಕೀರ್ತಿ . . . ಅಗರುಧೂಪದಿಂದ ಸುಗಂಧಿತವಾಗಿದ್ದ ಸೀಮಂತವನ್ನು ಒಂದು ಸಾರಿ ಮುದ್ದಿಸಿ, ಮರಗಳ ಮಧ್ಯೆ ಮರೆಯಾದನು (ರೂಲೇಖಾ. ೧೨೮). ೨. (ಚೊಚ್ಚಿಲು) ಬಸಿರಿಹೆಂಗಸಿಗೆ ನಾಲ್ಕು, ಆರು ಅಥವಾ ಎಂಟನೆಯ ತಿಂಗಳಲ್ಲಿ ಮಾಡುವ ಸಂಸ್ಕಾರಗಳಲ್ಲಿ ಒಂದು; ಶ್ರೀಮಂತ: ಬಿಸುಗದಿರನ ಮುಂಬಸಿಱೊಳು ಮೂಡಣ ದೆಸೆವೆಣ್ಣ ಸೀಮಂತದ ವಸಗೆಯ ವಾದ್ಯಗಳೆನೆ ದೇಗುಲಗಳೊಳೆಸೆದವು ಶಂಖನಿನಾದಂ (ಶ್ರೀಪಾಲ. ೨-೨೮); ಸೀಮಂತಮಂ ತಾಂ ಚಾರು ಲೋಚನೆಗೆ ವಿಸ್ತರಿಸಿದಂ (ಚೈಮಿಭಾ. ೧೮-೩೭). [ಸಂ.]

ಸೀಮಂತಕ (ನಾ). [ಜೈನ] ರತ್ನಪ್ರಭೆಯೆಂಬ ನರಕದಲ್ಲಿರುವ ಹದಿಮೂರು ಬಗೆಯ ಇಂದ್ರಕಗಳಲ್ಲಿ ಒಂದು: ರತ್ನಪ್ರಭೆಯೊಳ್ ಸೀಮಂತಕನಿಲಯ . . . ವಿಕ್ರಾಂತಾಖ್ಯ ತ್ರಯೋದಶೇಂದ್ರಕ ತತ್ಸಂಬಂಧಿಶ್ರೇಢೀಬಂಧಪ್ರಕೀರ್ಣಕವಿಕಲ್ಪದಿಂ ತ್ರಿಂಶಲ್ಲಕ್ಷಬಿಲಂಗಳಪ್ಪುವು (ತತ್ತ್ವಪ್ರ. ೧೨೦). [ಸಂ.]

ಸೀಮಂತಪುತ್ರ (ನಾ). ಚೊಚ್ಚಿಲು ಮಗು: ಈತಂಗೆ . . . ರುಕ್ಮಾಂಗದನೆಂಬ ಸೀಮಂತಪುತ್ರನುಂಟು (ರಾಮಾಶ್ವ. ೧೨೨-೨೦). [ಸಂ.]

ಸೀಮಂತಪುತ್ರಿ (ನಾ). ಚೊಚ್ಚಿಲುಮಗಳು. [ಸಂ. ಸೀಮಂತಪುತ್ರೀ]

ಸೀಮಂತಮಣಿ (ನಾ). ೧. ಬೈತಲೆಗೆ ಧರಿಸುವ ಒಂದು ಬಗೆಯ ಒಡವೆ; ಬೈತಲೆಬಟ್ಟು; ಚೂಡಾಮಣಿ: ಸೀಮಂತಮಣಿಯನ್ನು ಕಟ್ಟುವರು (ಅಪ್ರಭಾ. ೧೭). ೨. (ಆಲಂ) ಶ್ರೇಷ್ಠವಾದ ವಸ್ತು ಅಥವಾ ವ್ಯಕ್ತಿ: ನಾರಿಯರ ಸೀಮಂತಮಣಿ ಲಕ್ಷಣದ ಕಣಿ . . . ಪೊಂಬಟ್ಟಲೊಳು ಭಿಕ್ಷಮಂ ತರುತಿರ್ದಳು (ಭಿಕ್ಷಾಟ. ೩-೩೮); ಇಂತೆಸೆವ ಭಪ್ಪನ್ನದೇಶದೊಳಗಧಿಕಸೀಮಂತಮಣಿಯೆನಿಪ ಕುಂತಳದೇಶ ಮೆಚ್ಚುವ ದತ್ಯಂತಸೂಬಗಿಂ (ಪ್ರಾಥಕಾ. ೧-೩೨); ತಾಮ್ರಾಧರೆಯರ ಸೀಮಂತಮಣಿ ಸೀತಾರಮಣಿ ಗರ್ಭಮಂ ತಾಳ್ದಳು (ಚೈಮಿಭಾ. ೧೮ ಸೂಚನೆ). [ಸಂ.]

ಸೀಮಂತರತ್ನ (ನಾ). = ಸೀಮಂತಮಣಿ ೧: ಶ್ರುತಿಸತೀಸೀಮಂತರತ್ನಂ ಮಹೇಶ್ವರಪಾದಾಬ್ಜನಖಂ ಸುಖೋದಯಕರಂ ತಾನಿರ್ಕೆ ಮಚ್ಚಿತ್ತದೊಳ್ (ರಾಜಶೇ. ೧-೩); ಭೂರಮೆಯ ಸೀಮಂತರತ್ನಂಬೋಲ್ ರಂಜಿಪ ಅಯೋಧ್ಯಾನಗರದೊಳ್ ನೇಸಱ ಬಟೊಯ ಪಲಂಬರರಸರರಸುಗೆಯ್ಯುತಿರ್ದರ್ (ರಾಮಾಶ್ವ. ೭-೭).

[ಸಂ.]

ಸೀಮಂತರೇಖೆ (ನಾ). ಬೈತಲೆಯ ಗೆರೆ, — ಗೀರು: ಸೊಗಯಿಸುವನೇಕ ಸಸ್ಯಸಂಪತ್ಸಾರಕೇದಾರಲಕ್ಷ್ಮೀಸೀಮಂತಿನಿಯ ಸೀಮಂತರೇಖಾವಿಲಾಸಮನುಂಟುಮಾಡುವ ಘಂಟಾಪಥಂಗಳ ಕೆಲದೊಳ್ (ಚಂದ್ರಪ್ರ. ೧-೧೭); ಈ ಮನೋಹರವಾದ ಭೂಮಾನಿನಿಯ ಚೆಲ್ವ ಸೀಮಂತರೇಖೆಯಂತೊಪ್ಪುತಿರ್ಪ ಆ ಮಾರ್ಗದಲ್ಲಿ ನಾನಾಮೋದಜಲಧಿಸುಖಧಾಮವಾದಱವಟಿಗೆಗಳು ಮೆಚ್ಚುವವು (ಗುರುಭಾ. ೨-೧೬). [ಸಂ. ಸೀಮಂತರೇಖಾ]

ಸೀಮಂತಿನಿ (ನಾ). ಹೆಂಗಸು; ಸ್ತ್ರೀ: ಪಸರಂಗೆಯ್ದುವೊಲಪ್ಪ ಪೊಚ್ಚಱ ಮಹಾಸಾಮಂತ ಸೀಮಂತಿನೀಪ್ರಸರಂ . . . ಎಸೆಯುತ್ತಿರ್ಪನ್ನೆಗಂ (ಪಂಪಭಾ. ೫-೨೫); ಮಂಡೋದರಿ . . . ಸಮಸ್ತಾಂತಃಪುರಸೀಮಂತಿನಿಯರ್ವೆರಸು ಸೀತೆಯ ಸಮೀಪಕ್ಕೆ ಬಂದು (ಪಂರಾಮಾ. ೯-೧೬೧ ವ). [ಸಂ. ಸೀಮಂತಿನೀ]

ಸೀಮಂತೋನ್ನಯನ (ನಾ). ನಾಲ್ಕು, ಆರು ಅಥವಾ ಎಂಟನೆಯ ತಿಂಗಳಲ್ಲಿ ಗರ್ಭಿಣಿಸ್ತ್ರೀಗೆ ಮಾಡುವ ಒಂದು ಸಂಸ್ಕಾರ; ಬೈತಲೆ ತೆಗೆಯುವ ಶಾಸ್ತ್ರ: ಅವರ್ಗೆ ಪುಂಸವನಸೀಮಂತೋನ್ನಯನಾದಿ ಸಕಲಮಂಗಳಮಂ ದಶರಥನರನಾಥಂ ಮಾಡ್ಪುದುಂ (ಪಂರಾಮಾ. ೩-೧೩೩ ವ); ನಿಜನಾಥಕಲ್ಪಿತ ಪುಂಸವನದ ಸೀಮಂತೋನ್ನಯನಾದಿ ಮಂಗಳಂಗಳನೊಳಕೆಯ್ದು (ಚಂದ್ರಪ್ರ. ೩-೯೨ ವ). [ಸಂ.]

ಸೀಮರಸ (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀ ಅಚ್ಚೆ ಕಲ್ನಾಡು XXX ಪುನ್ನಾಡರಸರಾ ಮಗನ್ದಿರ್ ಸೀಮರಸ XXX (ಎಕ. IX, ದೇವನ. ೪೧-೨; ಸಿ. 900 ?).

[? + ಅರಸ$_1$]

ಸೀಮಾಂತ (ನಾ). ೧. ಗಡಿಪ್ರದೇಶ; ಸರಹದ್ದು: ಭಾರತಸರಕಾರದ ಸೀಮಾಂತ ನೀತಿಯು ಕ್ರಮೇಣ ಹಿಗ್ಗುತ್ತ ಹಿಗ್ಗುತ್ತ ಸಂಯಮದ ಬಂಧನವನ್ನು ಹರಿದೊಗೆದು ಅತಿಕ್ರಮಣದ ಕಡೆಗೆ ಸಾಗುತ್ತದೆ (ಇಪ್ರಶ. ೨೨೬). ೨. ಪರಮಾವಧಿ; ಪರಾಕಾಷ್ಠೆ: ಮತ್ತೆ ನಿಡುನಟ್ಟು ನಿಟ್ಟಿಪಳ್ ದೂರ ವನಸೀಮಾಂತಸೀಮಂತರೇಖೆಯೆನಲೊಪ್ಪುವಾ ಬಟ್ಟಬಯಲ್ವಟ್ಟೆಯಂ (ಶ್ರೀರಾಮಾ. ೨೬೮-೧೫೦). [ಸಂ.]

ಸೀಮಾಂತಪೂಜೆ (ನಾ). ೧. (ಮದುವೆಯ ಸಂದರ್ಭದಲ್ಲಿ) ವರನು ಗ್ರಾಮದ ಎಲ್ಲೆಕಟ್ಟಿನೊಳಗೆ ಆಗಮಿಸಿದಾಗ ಮಾಡುವ ಉಪಚಾರ: ಸೀಮಾಂತಪೂಜೆಯೂ ಆದರಸತ್ಕಾರಗಳೂ ಆದ ಬಳಿಕ ಜನಕನು ಬೀಗರಿಗಾಗಿ ಗೊತ್ತುಮಾಡಿದ್ದ ಮಂದಿರಗಳಿಗೆ ಅವರನ್ನು ಕರಕೊಂಡು ಹೋಗಿ ಇಳಿಸಿದನು (ತುಳಸೀ. ೯೩). ೨. (ಮದುವೆಯ ಸಂದರ್ಭದಲ್ಲಿ) ವರನನ್ನು ಬರಮಾಡಿಕೊಳ್ಳುವ ಸಮಾರಂಭ; ವರನನ್ನು ಎದುರುಗೊಳ್ಳುವಿಕೆ: ನಾಡ್ಕರ್ಣ ರಾಮರಾಯರ ಹಿರಿಯ ಮಗಳು ಸುಮಿತ್ರೆಗೆ ನಾಳೆ ಮದುವೆ. ಇದೀಗ ಸೀಮಾಂತಪೂಜೆ (ಮೂಕಬಾ. ೨೧೫). [ಸಂ. ಸೀಮಾಂತಪೂಜಾ]

ಸೀಮಾಕರ (ನಾ). (ರೈಲು, ಹಡಗು, ವಿಮಾನ ಇತ್ಯಾದಿಗಳಲ್ಲಿ ಸಾಗಣೆಯಾಗುವ ವಸ್ತುಗಳು ಅಥವಾ ಅವುಗಳಲ್ಲಿ ಸಂಚಾರ ಮಾಡುವ ಪ್ರಯಾಣಿಕರಿಗೆ) ಕೊನೆಯ ಸರಹದ್ದಿನಲ್ಲಿ ವಿಧಿಸುವ ತೆರಿಗೆ, — ಸುಂಕ : ರೈಲ್ವೆ ಮೂಲಕ . . . ಅಥವಾ ವಿಮಾನದ ಮೂಲಕ ಸಾಗಿಸತಕ್ಕ ವಸ್ತುಗಳ ಮೇಲೆ ಅಥವಾ ಸಂಚಾರ ಮಾಡತಕ್ಕ ಪ್ರಯಾಣಿಕರ ಮೇಲೆ ವಿಧಿಸತಕ್ಕ ಸೀಮಾಕರಗಳು (ಭಾಧಾನ. ೧೫೨). [ಸಂ.]

ಸೀಮಾತು, ಸಿಹಿಮಾತು (ನಾ). (ಆಲಂ) ಇನಿದಾದ ಮಾತು; ಸವಿನುಡಿ: ಸೀಮಾತುಗಳ ಸೊನೆಯ ಸುರಿಸಿ ಎದೆಮುಗುಳಿಂದೆ (ಗಿ. ೯-೬). ಸಿಹಿಮಾತು: ನಿನ್ನ ಸಿಹಿಮಾತಿಗೆ ಮರುಳಾಗಿ ತಪ್ಪುಮಾಡಿದೆ (ರೂಢಿ). [ಸೀ$_2$ + ಮಾತು$_1$]

ಸೀಮಾಪುರುಷ (ನಾ). (ಆಲಂ) ಎಲ್ಲೆಯನ್ನು ಮೀರಿದವನು; ಅಸಾಮಾನ್ಯ ವ್ಯಕ್ತಿ: ಶಾಸ್ತ್ರಲೌಕಿಕಕಳೆಯೊಳ್ ಬೇರ್ವರಿದ ನೇಮಿ ಜನ್ನಿಗರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್ (ಧರ್ಮನಾ. ೧-೪೧); ಆತ್ಯಂತಿಕಸುಖದ ಸೀಮೆಯ ಸೀಮಾರೇಖೆಯನ್ನು ರೇಖಿಸುವ ಸೀಮಾಪುರುಷರ ಜೀವನದ ರಸಸಮುದ್ರದ ತರತ್ತರಂಗಗಳನ್ನು ಎಬ್ಬಿಸುವ ಪ್ರತಿಭಾಪ್ರಭಂಜನರು ಮಹಾಕವಿಗಳು (ಸಾಹಿಸಂ. ೧೪). [ಸಂ.]

ಸೀಮಾರೇಖೆ (ನಾ). ೧. ಎಲ್ಲೆಯನ್ನು ಗುರುತಿಸುವ ಗೆರೆ: ಇಂಥ ಐಕ್ಯವನ್ನು ಒದಗಿಸಲು ಬೇರೆ ಸ್ಥಳಗಳಿವೆ; ಬೇರೆ ಕಾಲವಿದೆ. ಇಲ್ಲಿ ನಾವು ಒಂದು ಸೀಮಾರೇಖೆಯನ್ನು ಎಳೆಯೋಣ (ಗೊಮ್ಮಗು. ೧೯). ೨. ಪರಮಾವಧಿ; ಪರಾಕಾಷ್ಠೆ: ಅವನ ಕಲ್ಪನಾಪಕ್ಷಿ ಗರಿಗೆದರಿ ಜೀವನಾಕಾಶದ ಸೀಮಾರೇಖೆಯನ್ನು ಮುಟ್ಟಲು ತವಕಿಸುತ್ತದೆ (ಪುನರು. ೫೪).

[ಸಂ. ಸೀಮಾರೇಖಾ]

ಸೀಮಾರೇಷೆ (ನಾ). = ಸೀಮಾರೇಖೆ ೧: ಆತ್ಯಂತಿಕಸುಖದ ಸೀಮೆಯ ಸೀಮಾರೇಷೆಯನ್ನು ರೇಖಿಸುವ ಸೀಮಾಪುರುಷರ ಜೀವನದ ರಸಸಮುದ್ರದ ತರತ್ತರಂಗಗಳನ್ನು ಎಬ್ಬಿಸುವ ಪ್ರತಿಭಾಪ್ರಭಂಜನರು ಮಹಾಕವಿಗಳು (ಸಾಹಿಸಂ. ೧೪). [ಸಂ. ಸೀಮಾರೇಷಾ]

ಸೀಮಾಲಂಘನ (ನಾ). ಎಲ್ಲೆಯನ್ನು ಮೀರುವುದು, — ಉಲ್ಲಂಘಿಸುವುದು: ಲಿಂಗಸೀಮೆ ಸೀಮಾಲಂಘನವಾದಲ್ಲಿ ಸೀಮೆಯ ಮೀಱಿದಲ್ಲಿ ಪ್ರಾಣ(ವಿ?)ಯೋಗ ವಾಗಬೇಕು (ಸರ್ವಸ. ೧೯೦-೮೮೯); ಕಾಳಕೂಟಾರ್ಣವದ ಸೀಮಾಲಂಘನವೂ ಮೃತ್ಯುವಿನ ಪಾಳಯವೂ (ಕುವ್ಯಾದ್ರೋ. ೯-೨೫). [ಸಂ.]

ಸೀಮಾವಿವಾದ (ನಾ). ಗಡಿಪ್ರದೇಶಕ್ಕೆ ಸಂಬಂಧಿಸಿದ ಕಲಹ, — ಜಗಳ: ಸೀಮಾವಿವಾದದಿಂ ತದ್ಭೂಮಿಜರೋರ್ವರೊರ್ವರಂ ಪಳಂಚಲೆವೆಡೆಯೊಳ್ ಸೀಮೆಗಳ ತೊಡರನುಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ (ಆದಿಪು. ೬-೫೬); ಸೀಮಂಕರನೆಂಬೊನಯ್ಯನೆಯ ಕುಲಧರಂ . . . ವೃಕ್ಷಸೀಮಾವಿವಾದಮಂ ಬರಿಸಿದಂ (ಚಾವುಂಪು. ೧೦). [ಸಂ.]

ಸೀಮಾವು, ಸಿಹಿಮಾವು (ನಾ). ಸವಿಯಾದ ರುಚಿಯಿರುವ ಮಾವು: ಪುಂಖಾನುಪುಂಖಮೆಂಬ ಸೀಮಾವಿನ ದೋರಗಾಯ್ಗಳಂ ಗೊಲೆವೆರಸು ನೆಲಕ್ಕೆ ಬೀಱಲೀಯದೆ . . . ಮನೋಹರಿಗೆ ಕುಡುತಿರ್ಪುದುಂ (ಧರ್ಮಾಮೃ. ೧೩-೩೦). ಸಿಹಿಮಾವು: "ಕಾಮಫಲಃ, ಕಾಮಾಯುತಃ - ಈಯೆರಡುಂ ಸಿಹಿಮಾವು" (ಓಷಧಿ. ೩೧).

[ಸೀ$_2$ + ಮಾವು]

ಸೀಮಾಸ್ಥಳ (ನಾ). ಗಡಿಪ್ರದೇಶ; ಸರಹದ್ದು: ಬಳಿಕ ಹಸ್ತಿನಪುರದ ಸೀಮಾಸ್ಥಳಕೆ ಬಂದರು ನಿಖಿಳಕಾಂತಾವಳಿ ಸಹಿತ (ಕುವ್ಯಾಗ. ೧೨-೨೩). [ಸಂ. ಸೀಮಾಸ್ಥಲ]

ಸೀಮಿತ (ಗು). ೧. ಮಿತಿಗೆ ಒಳಪಟ್ಟ: ಈ ಸೀಮಿತ ಕಾಲಾವಧಿಯಲ್ಲಿ ನಾನು ಹೆಚ್ಚಿಗೆ ಹೇಳಲಾರೆ (ರೂಢಿ). (ನಾ). ೨. ಮಿತಿಗೆ ಒಳಪಡುವಂಥದು: ಸ್ತ್ರೀಯ ರಂಗ ಮನೆಗೆ ಮಾತ್ರ ಸೀಮಿತವೇ? (ಧರ್ಮಾಸಾ. ೬೩). [ಸಂ.]

ಸೀಮಿತಗೊಳಿಸು (ಕ್ರಿ). ಮಿತಿಗೊಳಿಸು; ಅಂಕೆಯಲ್ಲಿರಿಸು: ಸ್ಯೂಸ್, ಓಡಿನ್, ಜಿಹೋವ ಇವರೆಲ್ಲ ಆಕಾಶದೇವತೆಗಳು. ಇವರ ಪ್ರಧಾನಹವ್ಯಾಸ ಎಂದರೆ ಶಕ್ತಿಯನ್ನು ಸೀಮಿತಗೊಳಿಸುವಿಕೆ (ಬದ್ಧಪ್ರ. ೫೫ ಟೀಠಿಕೆ). [ಸೀಮಿತ + ಕೊಳ್$_1$ + - ಇಸ್ಸು$_3$]

ಸೀಮುಱ್ (ನಾ). ಇತರರು ತಿಂದು ಮಿಕ್ಕ ಅನ್ನದ ಅಗುಳು; ಎಂಜಲನ್ನ: "(ಸೀಮುಱ್) = ಎಂಜಲವುಳು" (ಶಮದ. ಪಾ. ೨). [?]

ಸೀಮೆ (ನಾ). ೧. ಎಲ್ಲೆ; ಗಡಿ; ಮೇರೆ: ಸರಿದ್ಗಿರಿದರೀಭೂರುಹವನಸೀಮೋಪಲಕ್ಷ್ಯಿತಂಗಳುಮಪ್ಪ ಮಹಾಗ್ರಾಮಂಗಳುಮಂ . . . ಮಾಡಿದಂ (ಆದಿಪು. ೮-೬೩ ವ); ಮೇರು ಪಡುವಣ್ಗೆ ಸೀತಾತೀರಂ ತೆಂಕಣ್ಗೆ . . . ತನಗೆ ಸೀಮೆಯೆನಿಕ್ಕುಂ (ಮಲ್ಲಿಪು. ೨-೧೨); ಅಂಬುಧಿಗೆ ಸೀಮೆಯಲ್ಲದೆ ಹರಿವ ನದಿಗೆ ಸೀಮೆಯೆಲ್ಲಿಯದು (ಬಸವ. ೪೧೮); ಚತುರಂಬುನಿಧಿಮೇಖಲೆಯ ಉತ್ತರಕುರುನರೇಂದ್ರರ ಸೀಮಪರಿಯಂತ ನೆಲವಿದೆಮ್ಮದು (ಕುವ್ಯಾಸ. ೧೩-೫೯). ೨. ಗಡಿಯನ್ನು ನಿರ್ದೇಶಿಸುವ ಸ್ಥಳದಲ್ಲಿರುವ ಹಳ್ಳಿ, ಹೊಲ ಮುಂತಾದುವು: ವಡಗಣ್ಣಾ ಸೀಮೆ ಪೆರಮಟ್ಟೆ ಪಡುವಣ್ಣಾ ಸೀಮೆ ತಣ್ಬಳ್ಳಿ ಗಾರಪಾಟಿ ತೆಂಕಣ್ಣಾ ಸೀಮೆ ನೆಯ್ದಲ್ಗೆಱೆಯಾ ಏರಿ (ಎಇ. XXI, ೧೯೮೧-೧೧; ಸು ೫ನೆಯ ಶತ). ೩. ಮಿತಿ; ಕಟ್ಟು; ಪರಿಮಿತಿ: ಆ ಮಹಾನಾರಾಯಣಾಸ್ತ್ರದ ಸೀಮೆ ಸೀದುದು (ಕುವ್ಯಾಕ. ೧-೨೬); ನಳಿನನಾಭನ ಮಹಿಮೆಗಾವುದು ಸೀಮೆ (ತೊರವಿ. ೧-೮-೫೦); ತೀರ್ಥಪ್ರಸಾದರು ಮೊಗ್ಗಾವಿಗೆ ಬಂದಂದಿನಿಂದ ಅವರ ಭಾವಿಕತೆಗೆ ಸೀಮೆಯೇ ಇರಲಿಲ್ಲ (ಸಮಚಿ. ೪೦). ೪. ಪ್ರದೇಶ; ಜಾಗ; ಸ್ಥಳ: ಮಾಳೇನಹಳ್ಳಿ ಸೀಮೆ ದೆಸಾಯಿ ಬೆಳುವಂದೂರ ಶಾಖೆ ಶಿವಪ್ಪನಾಯಕರು ದೇವಲೋಕಪ್ರಾಪ್ತವಾದ ಸಮಾಧಿ (ಎಕ.VII. ಶಿಕಾರಿ. ೬-೫; 1061); ರೋಮದ ಸೀಮೆ ತ್ವಕ್ಕಿನ ಇಕ್ಕೆ . . . ಎಲುವಿನ ಬಲುಹಿಂದಿಪ್ಪುವುದೀ ಕಾಯ ಹೇಯವಯ್ಯ (ಆದಮ. ೧೫-೫೪); ನಾನು ಪಿರಿಯಾಪಟ್ಟಣದ ಸೀಮೆಯವನು (ಚಿಂಗಾಳ್ವ. ೧). ೫. ಪ್ರಾಂತ; ರಾಜ್ಯ: ರಾಮಗಿರಿಯ ದುರ್ಗ ಮೊದಲಾದ ಘನವಹ ಸೀಮೆಯ ಖಳನಿಗೆ ಕೊಟ್ಟು . . . ಕುಣಿಗಲ ಸೀಮೆಗೈದಿದನೇವೇಳ್ಪೆ (ಕಂನಿ. ೧೧-೬೨); ಬಂಗಾಲ ವಾಯವ್ಯಪ್ರಾಂತ ಪಂಜಾಬ ಮುಂತಾದ ಕೆಲವು ಸೀಮೆಗಳಲ್ಲಿ ನೀಲಿಯು ಬಹಳ ಹುಟ್ಟುತ್ತದೆ (ಮುಂಬಯಿ. ೪-೫೪). ೬. ದೇಶ; ನಾಡು: ಆ ಶಬರ ಸಂದೋಹ ಲೀಲೆಯಿಂ ಕಾಷ್ಠಾಂಗಾರನ ಸೀಮೆಯ ಮೇಲೆ ಮುಸುಕಿತು (ಜೀವಂಧಾ. ೮-೧೬); ಸೀಮೆಯನೆಲ್ಲಂ ತಿರುಗುತ್ತಾ ಮಹಿತವಣಿಗ್ಗ[ರ] ಬಹುವಿತ್ತಮನಾಗಳ್ ಪ್ರೇಮದಿ ಗಳಿಸುತ್ತಂ ಬರ್ಪಾ ಮಾರ್ಗದೊಳಿರ್ದುದೊಂದು ಘೋರಾರಣ್ಯಂ (ಜಾಲಾಸ್ಯ. ೧-೪-೯). ೭. ಭೂಮಿ; ಜಗತ್ತು: ರಾಮನಱಿವನು ಕೃಷ್ಣನಱಿವನು ಸೀಮೆಯಲಿ ಕಲಿಪಾರ್ಥನಱಿವನು ಭೂಮಿಪತಿಗಳೊಳಿಳಿದ ಸುಭಟರಿಗಱಿವುದಿಲ್ಲ (ಕುವ್ಯಾದ್ರೋ. ೪-೩೩). ೮. ವಿದೇಶ; ಹೊರದೇಶ: ನಾನು ಸೀಮೆಗೆ ಹೋಗುತ್ತಿದ್ದೇನೆ (ಬಾಣಾ. ೭). ೯. ಮೇರೆಯನ್ನು ಸೂಚಿಸುವ ರೇಖೆ, — ಗೆರೆ: ಸೀಮೆಯಿದು ಜಲಧಿಗಂ ಪೃಥ್ವೀ ಮಂಡಲಕೆಂದು ಪರಶುರಾಮಂ ಬರೆದಾ ಸೀಮೆಯೆ ಮೇರೆಯೆನಿಪ್ಪುದು ಭೂಮಿಗೆಯಳಿಕಂಬೊಲಾಯ್ತು ಸೀಮಾಲಂಘ್ಯಂ (ಸೂಕ್ತಿಸು. ೨-೨೬). ೧೦. ಪರಾಕಾಷ್ಠೆ; ಪರಮಾವಧಿ: ಈ ಧರಣೀಮಂಡಳದಲ್ಲಿ ಸಾರತರಸೌಖ್ಯಕ್ಕೀಕೆಯೇ ಸೀಮೆ (ಬಾಧಪು. ೨-೫೫); ಕಾಮವೆತ್ತಲು ಪರಮತತ್ವದ ಸೀಮೆಯೆತ್ತಲು (ಪ್ರಭುಲಿಂ. ೭-೮೦); ರಾಮನುಂ ಭರತನುಂ ತಬ್ಬಿಕೊಂಡತ್ತಂದು . . . ಸೀಮೆಯಂ ಮುಟ್ಟಿತಲ ಬಾಂಧವ್ಯಸೌಂದರ್ಯ (ಮಂಚಕ. ೪೬೧). ೧೧. ಕಟ್ಟಳೆ; ನಿರ್ಬಂಧ: ಎನ್ನ ಕಾಯಕ್ಕೆ ಸೀಮೆಯ ಮಾಡುವೆ . . . ಎನ್ನ ಶ್ರೋತ್ರಕ್ಕೆ ಸೀಮೆಯ ಮಾಡುವೆ . . . ಎನ್ನ ತ್ವಕ್ಕಿಗೆ ಸೀಮೆಯ ಮಾಡುವೆ . . . ಎನ್ನ ಪ್ರಾಣಕ್ಕೆ ಸೀಮೆಯ ಮಾಡುವೆ ಎನ್ನ ಪ್ರಾಣಲಿಂಗದಲ್ಲಿ

ಪ್ರಸಾದರೂಪಾಗಿ ಹಿಂಗದೆ ನೀವಿರುವ ಕಾರಣ (ಬಸಹ. ೬-೧೬); ಅಂಗನಾವಿಷಯದ ಸೀಮಾಸಂಗತಿಯ ಸೇರಿಸಿದನೈ ಮುನಿಪುಂಗವನ ಕರುಣದಲಿ ಗದುಗಿನ ವೀರನಾರಯಣ (ಕುವ್ಯಾಅ. ೧೮- ೩೪). ೧೨. ವ್ಯತ್ಯಾಸ; ಭೇದ: ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ (ಬಸವ. ೯೨೬); ಕೀಳುಮೇಲಿನ ಸೀಮೆ ನಿನ್ನಲಿ ಬೀಳುಕೊಂಡುದು ಸಾಕು ನಮಗಿನ್ನಾಳುತನವೇಕೆ (ಕುವ್ಯಾಕ. ೫-೨೩). ೧೩. (ಒಂದು ಪ್ರದೇಶದ) ಎಲ್ಲೆಯ ಗುರುತು; ಬಾಂದು: (ಕ). ೧೪. ತೀರ; ದಡ. ೧೫. ಕ್ಷಿತಿಜ; ದಿಗಂತ. ೧೬. (ಆಲಂ) ವಲಯ; ಕ್ಷೇತ್ರ: ಪ್ರಾಣಾಯಾಮವಂತರ್ಮುಖ ಸವಿಷಯ ಸ್ತೋಮ ಚಾರಿತ್ರಪ್ರವರ್ತನಸೀಮೆಯಲಿ ಪೂಸತನಿಸ ಪ್ರತ್ಯಾಹಾರಮೊದಗಿರಲು (ಬಸಪು. ೬೫-೧೮).

ಸೀಮೆಯ ಕಂದಾಚಾರದ ಚಾವಡಿ = ಹದಿನೆಂಟು ಕಚೇರಿಗಳಲ್ಲಿ ಒಂದು; ಗಡಿಪ್ರದೇಶಕ್ಕೆ ಸಂಬಂಧಿಸಿದ ಸೈನ್ಯಖಾತೆಯನ್ನು ನೋಡಿಕೊಳ್ಳುವ ಕಚೇರಿ: ಸೀಮೆಯ ಕಂದಾಚಾರದ ಚಾವಡಿ — ಇಲ್ಲಿ ಗಡಿಗಳಲ್ಲಿರುವ . . . ಸಿಬ್ಬಂದಿಯ ಜನಗಳ ಲೆಕ್ಕವನ್ನೂ . . . ಜಕೀರಿಸಾಮಾನು ಮುಂತಾದವುಗಳ ಲೆಕ್ಕವನ್ನೂ ಬರೆವಂತೆ ನಿಬಂಧನೆ ಮಾಡಿದರು (ಮಹಾವಂ. I. ೧೪೭). ಸೀಮೆಯವರು = ಹೊರದೇಶದ ಜನ; ವಿದೇಶೀಯರು: ಭದ್ರಯ್ಯ ಕೈಯಿನ್ದ ಸೀಮೆಯವರಿಗೆ ಹಿನ್ದೆ ಬರದ ಪ್ರಕಾರ ಕೊಡಸಿ (ಎಕ. VIII. ಸೊರಬ. ೨೬೬-೨೬; 1629 ?). [ಸಂ. ಸೀಮಾ]

ಸೀಮೆಅಕ್ಕಿ 'ಸೀಮೆಯಕ್ಕಿ' ನೋ.

ಸೀಮೆಅಗಸೆ 'ಸೀಮೆಯಗಸೆ' ನೋ.

ಸೀಮೆಅಲ್ಲೆಕಾಯಿ (ನಾ). (ಹೊರದೇಶದಿಂದ ಆಮದಾದ) ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ: ಸೀಮೆಅಲ್ಲೆಕಾಯಿ, ಡಿವಿಡಿವಿ (ಮೃಜಿಗಿ. ೧೫-೨೬೮).

[ಸೀಮೆ + ಅಲ್ಲೆ? + ಕಾಯ್ಕಿ (< ಕಾಯ್ಕೆ)]

ಸೀಮೆಅವರೆಕಾಯಿ (ನಾ). ಒಂದು ಬಗೆಯ ಅವರೆಕಾಯಿ: ಸೀಮೆಅವರೆಕಾಯಿ . . . ಬೆಟ್ಟಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಾಗುತ್ತದೆ (ತರಬಿ. ೪೩).

[ಸೀಮೆ + ಅವರೆ + ಕಾಯ್ಕಿ (< ಕಾಯ್ಕೆ)]

ಸೀಮೆಈರುಳ್ಳಿ (ನಾ). (ಹೊರದೇಶದಿಂದ ಆಮದಾದ, ಉದ್ದುದ್ದವಾಗಿರುವ) ಒಂದು ಬಗೆಯ ಈರುಳ್ಳಿ: ಬಿತ್ತಿದ ಸುಮಾರು ೪-೫ ತಿಂಗಳಲ್ಲಿ ಸೀಮೆಈರುಳ್ಳಿ ಬೆಳೆ ಸಿದ್ಧವಾಗುತ್ತದೆ (ತರಬಿ. ೫೪). [ಸೀಮೆ + ಈರುಳ್ಳಿ]

ಸೀಮೆಕಚೋರ (ನಾ). ಒಂದು ಬಗೆಯ ಕಚೋರ: (ಮೃಜಿಗಿ. ೩೨-೮೨೮).

[ಸೀಮೆ + ಕಚೋರ]

ಸೀಮೆಕಮಲ (ನಾ). (ವಿದೇಶದ) ಒಂದು ಬಗೆಯ ಕೃತಕವಜ್ರ: ಎಳಸಾದ ಮೂಗಿಗೆ ಒಪ್ಪೋಂಥ ಸೀಮೆಕಮಲದ ಬೇಸ್ರಿ (ಬಾಗಿನ. ೧).

[ಸೀಮೆ + ಕಮಲ ./ ತಮಿ. ಚೀಮ್ಮೆಕ್ಕಮಲಮ್]

ಸೀಮೆಕೋಳಿ (ನಾ). ವಿದೇಶಿ ತಳಿಯ ಕೋಳಿ: ಆತ ಹತ್ತು ಸೀಮೆಕೋಳಿಗಳನ್ನು ಸಾಕುತ್ತಿದ್ದಾನೆ (ರೂಢಿ). [ಸೀಮೆ + ಕೋಳಿ (< ಕೋಟ್ಟಿ)]

ಸೀಮೆಗಲ್ಲು (ನಾ). ಗಡಿಯನ್ನು ಸೂಚಿಸುವ ಕಲ್ಲು; ಬಾಂದುಗಲ್ಲು: ಅಂಕವ್ವೆ ದೇವಿಯ ಪಾಲಪರಿಯಂತರ ಹಾಕಿದ ಸೀಮೆಗಲ್ಲಿಂದ ಪಡುವಲು ಸಲುಉದು (ಮೃಆರಿ. ೧೯೪೬, ೧೮-೧೨; 1488). [ಸೀಮೆ + ಕಲ್ಲು (< ಕಲ್ಲ್)]

ಸೀಮೆಗಳಿ (ಕ್ರಿ). ಅತಿಶಯಿಸು; ಹಿರಿಮೆಯಿಂದ ಕೂಡಿರು: ಮಹಾಲಿಂಗದಾ ಮಹಾಮಹಿಮೆಯ ಸುಧಾಬ್ಧಿಯ ತರಂಗಬುದ್ಬುದಶೀಕರಂಗಳೆನಿಸಿ ತಾಮರಸಸಂಭವರು ತಾಮರಸಲೋಚನರು ಸೀಮೆಗಳಿ[ಶಾಶಾಂ. ೧]ದಸುರಸುರನರತಿರ್ಯಗಾದಿಗಳು ಆ ಮಧ್ಯದೊಳ್ ಸುಳಿವರು (ಲಶಿಚಿ. ೧-೧೯). [ಸೀಮೆ + ಕಳಿ (< ಕಟ್ಟಿ)]

ಸೀಮೆಗಳೆ (ಕ್ರಿ). ದಾಟು; ಮೀರು: ನಡುವಗಲಾದುದು ನಿನ್ನಯ ಪೂಣ್ಕೆಯದುತ್ಕಟವು ಸೀಮೆಗಳೆದುದು (ಉದ್ಯದೂ. ೭-೮). [ಸೀಮೆ + ಕಳೆ]

ಸೀಮೆಗಾಱ (ನಾ). ಗಡಿನಾಡಿನಲ್ಲಿರುವವನು: ಸೀಮೆಗಾಱರಿಹ ಹಿತ್ತಿಲಿಂ ಪಡುವ ಒತ್ತಿನ ನೀರು ಹರಿವ[ದ]ದನು ಮೂಡಕೇರ್ಯ ಹಲರು ಮುಟ್ಟಿಸ ಸಲ್ಲದು (ಸೊಇಇ. IX-ii. ೪೫೭-೫೬; 1455). [ಸೀಮೆ + - ಗಾಱ (< - ಕಾಱ)]

ಸೀಮೆಗೆಡಿಸು (ಕ್ರಿ). ಮೇರೆಯನ್ನು ಮೀರುವಂತೆ ಮಾಡು: ಆ ಮುಕುಂದಪದಾಬ್ಜ ಪರಿಮಳಧಾಮತುಳಸೀಗಂಧವಹ ನಿಸ್ಸೀಮರಂತಶ್ವಾಸಗತಿಯಲಿ ಹೊಕ್ಕು ಹೃದಯವನು ಸೀಮೆಗೆಡಿಸಿತು ಮುಕ್ತರನು (ನಿಭಾಗ. ೩-೫-೩೭). [ಸೀಮೆಗೆಡು + - ಇಸ್ಸು]

ಸೀಮೆಗೆಡು (ಕ್ರಿ). ಮೇರೆಯೇ ಇಲ್ಲವಾಗು; ಎಲ್ಲೆಯನ್ನು ಮೀರು: ಚಿನ್ನಮಲ್ಲಿ ಕಾರ್ಜುನ ನಿಮ್ಮನಱಿದು ಸೀಮೆಗೆಟ್ಟೆನು (ಮಹಾದೇ. ೩. ೨೭-೫೪). [ಸೀಮೆ + ಕೆಡು]

ಸೀಮೆಗೊಳಿಸು (ಕ್ರಿ). ಪರಾಕಾಷ್ಠೆಗೆ ಮುಟ್ಟಿಸು: ಶಂಕರನ ಪ್ರೇಮಮಂ ಸೀಮೆ ಗೊಳಿಸುವಂತೆ ಹರನ ಮನೋರಥಮಂ ಮದವೇಱಿಪಂತೆ ಪಾರ್ವತಿಗೆ ಸುವಾಸಿನಿಯರ್ ಸಿಂಗರಮಂ ಮಾಡಿ (ಗಿರಿಕ. ೧೦-೪೫ ೩). [ಸೀಮೆ + ಕೊಳ್ + - ಇಸ್ಸು]

ಸೀಮೆಗೋರಂಟಿ (ನಾ). ಒಂದು ಬಗೆಯ ಗೋರಂಟಿ, — ಮದರಂಗಿ: (ಮೃಜಿಗಿ. ೬೦-೧೨೦೭). [ಸೀಮೆ + ಗೋರಂಟಿ]

ಸೀಮೆತುತ್ತಿ (ನಾ). (ಜವುಗುಪ್ರದೇಶದಲ್ಲಿ ಬೆಳೆಯುವ ಬಿಂದಿಗೆಹೂವಿನ ಜಾತಿಯ) ಒಂದು ಬಗೆಯ ಸಸ್ಯ: (ಮೃಜಿಗಿ. ೫-೮೮). [ಸೀಮೆ + ತುತ್ತಿ]

ಸೀಮೆತೆಂಗು (ನಾ). ಒಂದು ಬಗೆಯ ತೆಂಗು: ಎಣ್ಣೆತೆಂಗು, ಸೀಮೆತೆಂಗು (ಮೃಜಿಗಿ. ೩೩-೬೩೦). [ಸೀಮೆ + ತೆಂಗು]

ಸೀಮೆತೋಕೆಗೋಧಿ (ನಾ). (ಹೊರದೇಶದ) ಉದ್ದವಾದ ಒಂದು ಬಗೆಯ ಗೋಧಿ: ಸೀಮೆಓಟ್ಸು, ಸೀಮೆತೋಕೆಗೋಧಿ (ಮೃಜಿಗಿ. ೧೦-೧೮೨).

[ಸೀಮೆ + ತೋಕೆಗೋಧಿ]

ಸೀಮೆದಳೆ (ಕ್ರಿ). ಗಡಿಯನ್ನು ಹೊಂದು; ಎಲ್ಲೆಯನ್ನು ಪಡೆ: ಇವನೂರ್ವನೆ ಸಾಗರಂಗಳಿಂ ಕರಿದೆನಿಸರ್ದ ಸೀಮೆದಳೆದೀ ನೆಲನೆಲ್ಲಮನಾಳ್ವಂ (ಶಾಕುಂತ. ೨೭-೫೦).

[ಸೀಮೆ + ತಳೆ]

ಸೀಮೆಧಾರಣೆ (ನಾ). ದೇಶದಲ್ಲಿ ಪ್ರಚಲಿತವಿರುವ ಪೇಟೆವಸ್ತುಗಳ ಮಾರಾಟದ ದರ: ಸೀಮೆಧಾರಣೆಯು ಮಾರುಕಟ್ಟೆಯ ಧಾರಣೆಯ ಅರೆವಾಸಿಯಷ್ಟಿರುತ್ತಿತ್ತು (ಪಂಜಪಂ. ೯). [ಸೀಮೆ + ಧಾರಣೆ]

ಸೀಮೆನಾಭಿಗಿಡ (ನಾ). ಒಂದು ಬಗೆಯ ವಿಷಸಸ್ಯ; ವತ್ಸನಾಭಿ: ಕಟುವಿಷ, ಸೀಮೆನಾಭಿಗಿಡ (ಮೃಜಿಗಿ. ೨-೩೦). [ಸೀಮೆ + ನಾಭಿ + ಗಿಡ (< ಗಿಡು)]

ಸೀಮೆನೆಲ್ಲಿ (ನಾ). ನೆಲ್ಲಿಯಲ್ಲಿ ಒಂದು ಬಗೆ: (ಮೃಜಿಗಿ. ೪೨-೧೦೪೨).

[ಸೀಮೆ + ನೆಲ್ಲಿ]

ಸೀಮೆನೇಗಿಲು (ನಾ). (ವಿದೇಶೀಯವಾದ) ಕಬ್ಬಿಣದ ಗುಳವಿರುವ ನೇಗಿಲು: ಮಂಗಳೂರು ಹೆಂಚಿನ ಮನೆ, ಸೀಮೆನೇಗಿಲು . . . ಕುಡಿಯುವ ನೀರಿಗೆ ಸೇದೂ ಬಾವಿ — ಇತ್ಯಾದಿ, ಇತ್ಯಾದಿ ಗೌಡರು ಮಾಡಿದ ಹೊಸತನಗಳು (ಸನ್ನೂರು. ೧೧೩).

[ಸೀಮೆ + ನೇಗಿಲು (< ನೇಗಿಲ್)]

ಸೀಮೆನೌಲಾದಿ (ನಾ). ಒಂದು ಬಗೆಯ ಸಸ್ಯ: (ಮೃಜಿಗಿ. ೭೮-೧೫೯೯).

[ಸೀಮೆ + ನೌಲಾದಿ]

ಸೀಮೆಬದನೆಕಾಯಿ (ನಾ). (ಹೊರದೇಶದಿಂದ ಬಂದ) ಒಂದು ಬಗೆಯ ತರಕಾರಿ: ಚೌಚೌ, ಸೀಮೆಬದನೆಕಾಯಿ (ಮೃಜಿಗಿ. ೬೯-೧೪೦೭).

[ಸೀಮೆ + ಬದನೆಕಾಯಿ (< ಬದನೆಕಾಯ್)]

ಸೀಮೆಬೆಂಡೆ (ನಾ). ಒಂದು ಬಗೆಯ ಸಸ್ಯ: ಸಣ್ಣಬಿಂದಿಗೇಗಿಡ, ಸೀಮೆಬೆಂಡೆ (ಮೃಜಿಗಿ. ೫೨-೧೦೪೩). [ಸೀಮೆ + ಬೆಂಡೆ]

ಸೀಮೆಮಾವು (ನಾ). ಮಾವಿನಲ್ಲಿ ಒಂದು ಬಗೆ: ಸೀಮೆಮಾವು, ಅವೊಕಾಡೊಹಣ್ಣು (ಮೃಜಿಗಿ. ೬೦-೧೨೫೯). [ಸೀಮೆ + ಮಾವು]

ಸೀಮೆಯಕ್ಕಿ, ಸೀಮೆಅಕ್ಕಿ (ನಾ). ಒಂದು ಬಗೆಯ ಧಾನ್ಯ; ಸಬ್ಬಕ್ಕಿ: ಹಬ್ಬಕ್ಕೆ ಸೀಮೆಯಕ್ಕಿ ಪಾಯಸ ಮಾಡಿದ್ದೆ (ರೂಢಿ). ಸೀಮೆಅಕ್ಕಿ: ಸಬ್ಬಕ್ಕಿ, ಸಾಗುಅಕ್ಕಿ, ಸೀಮೆಅಕ್ಕಿ (Sago. ಇಂಕಸಿ). [ಸೀಮೆ + ಅಕ್ಕಿ]

ಸೀಮೆಯಗಸೆ, ಸೀಮೆಅಗಸೆ (ನಾ). ಅಗಸೆಯಲ್ಲಿ ಒಂದು ಬಗೆ: (ಕ). ಸೀಮೆಅಗಸೆ: ದೊಡ್ಡತಂಗಡಿ, ಸೀಮೆಅಗಸೆ (ಮೃಜಿಗಿ. ೧೮-೩೨೮). [ಸೀಮೆ + ಅಗಸೆ]

ಸೀಮೆಯೆಣ್ಣೆ (ನಾ). ಕಲ್ಲಿದ್ದಲು, ಪೆಟ್ರೋಲಿಯಂ, ಪ್ಯಾರಫಿನ್

ಮುಂತಾದುವುಗಳನ್ನು ಬಟ್ಟೆಯಿಳಿಸಿ ತೆಗೆದ ಎಣ್ಣೆ : ಮಗ್ಗುಲಲ್ಲಿ ಸೀಮೆಯೆಣ್ಣೆಯ ಡಬ್ಬ, ಬುದ್ಧಿವಂತ, ಪಂಪು (ರಾಮಾನ. ೧೦೧). [ಸೀಮೆ + ಎಣ್ಣೆ]

ಸೀಮೆಶಾವಂತಿಗೆ (ನಾ). ಒಂದು ಬಗೆಯ ಸೇವಂತಿಗೆ: ಸೀಮೆಶಾವಂತಿಗೆ, ಚೆಂಡುಮಲ್ಲಿಗೆ (ಮೃಚಿ. ೭೩-೧೫೦). [ಸೀಮೆ + ಶಾವಂತಿಗೆ (< ಸೇವಂತಿಗೆ)]

ಸೀಮೆಸಂಕೇಶ್ವರ (ನಾ). ಒಂದು ಬಗೆಯ ಸಸ್ಯ : ಸೀಮೆಸಂಕೇಶ್ವರ, ದೊಡ್ಡರತ್ನಗಂಧಿ . . . ಕತ್ತೀಕಾಯಿ (ಮೃಚಿ. ೨೯-೫೬೪). [ಸೀಮೆ + < ಸಂಕೇಶ್ವರ]

ಸೀಮೆಸುಣ್ಣ (ನಾ). ಕಪ್ಪುಹಲಗೆಯ ಮೇಲೆ ಬರೆಯುವುದಕ್ಕೂ ಸುಣ್ಣ ಮಾಡುವುದಕ್ಕೂ ಉಪಯೋಗವಾಗುವ ಮೆತುವಾದ ಬಿಳಿಯ ಸುಣ್ಣಕಲ್ಲು : ಹೊಂಬುಚದ ಸೀಮೆಸುಂಣದ ಬಸ್ತಿಯ ಸಿದ್ಧಾಪುರದಲ್ಲೂ ಸಿದಂಮಾಜಿಯವರೂ ಕಟ್ಟಿಸ್ತ (ಎಕ. VIII, ಶಿಕೆರ್ಗಪ. ೫೩-೧೩; 1664); ಸುಣ್ಣವು ಈ ಗ್ಯಾಸವನ್ನು ಶೋಷಿಸಿ ಕೊಂಡು ಸೀಮೆಸುಣ್ಣ(ಖಡು) ಎಂಬ ಕಟಕದಂಥ ಪದಾರ್ಥವನ್ನುಂಟುಮಾಡುತ್ತದೆ (ಮುಂಬಯಿ. ೫-೧೫೫). [ಸೀಮೆ + ಸುಣ್ಣ]

ಸೀಮೆಸೋಂಪು (ನಾ). ಒಂದು ಬಗೆಯ ಸೋಂಪು: "ಸೀಮೆಸೋಂಪು, ಶಹಾಜೀರಿಗೆ" (ಸಸ್ಯನಿ. ೨೯). [ಸೀಮೆ + ಸೋಂಪು]

ಸೀಮೆಹತ್ತಿ (ನಾ). (ಹೊರದೇಶದ) ಹತ್ತಿ: "ಕರೀಅರಳೆ, ಸೀಮೆಹತ್ತಿ, ಅಮೆರಿಕಾಹತ್ತಿ" (ಸಸ್ಯನಿ. ೬೬). [ಸೀಮೆ + ಹತ್ತಿ$_1$ (< ಪಟ್ಟಿ)]

ಸೀಮೆಹರಳು (ನಾ). ಔಡಲದಲ್ಲಿ ಒಂದು ಬಗೆ: "ತೊಟ್ಟ, ಕರೀತುರುಕುಹರಳು, ಸೀಮೆಹರಳು, ತೊಟ್ಟೇಗಿಡ" (ಸಸ್ಯನಿ. ೬೮). [ಸೀಮೆ + ಹರಳು (< ಪರಲ್)]

ಸೀಮೆಹಲಸು (ನಾ). (ಹೊರದೇಶದ) ಒಂದು ಬಗೆಯ ಹಲಸು: ಸೀಮೆಹಲಸು, ದೀವಿಹಲಸು, ರೊಟ್ಟೇಹಲಸು (ಮೃಚಿ. ೯-೧೬೦). [ಸೀಮೆ + ಹಲಸು (< ಪಲಸು)]

ಸೀಮೆಹಸು (ನಾ). ವಿದೇಶಿ ತಳಿಯ ಹಸು: ಆತ ನಾಲ್ಕು ಸೀಮೆಹಸುಗಳನ್ನು ಕಟ್ಟಿದ್ದಾನೆ (ರೂಢಿ). [ಸೀಮೆ + ಹಸ್ತು$_2$ (< ಪಸ್ತು$_4$)]

ಸೀಮೆಹುಣಸೆ (ನಾ). ಒಂದು ಬಗೆಯ ಹುಣಸೆ: ಸೀಮೆಹುಣಸೆ, ಕೊರಕಾಪುಳಿ, ಕೊಟ್ಟಾಂಪುಳಿ (ಮೃಚಿ. ೭೨-೧೨೬೩). [ಸೀಮೆ + ಹುಣಸೆ (< ಪುಳಿಸೆ)]

ಸೀಮೊಸರು, ಸಿಹಿಮೊಸರು (ನಾ). ಸವಿಯಾದ ಮೊಸರು: ಚಪಾತಿಯೊಂದಿಗೆ ನಂಚಿಕೊಳ್ಳಲು ಚಟ್ನಿಪುಡಿ, ಸೀಮೊಸರು ಕೊಟ್ಟೆ (ರೂಢಿ). **ಸಿಹಿಮೊಸರು**: ನನಗೆ ಸಿಹಿಮೊಸರು ತುಂಬಾ ಇಷ್ಟ (ರೂಢಿ). [ಸೀ$_2$ + ಮೊಸರು (< ಮೊಸರ್)]

ಸೀಮೋಲ್ಲಂಘನ (ನಾ). ೧. ಗಡಿಯನ್ನು ದಾಟುವುದು; ಎಲ್ಲೆಯನ್ನು ಕ್ರಮಿಸುವುದು: ಯುದ್ಧ ಬಂದಿತು ಸಿದ್ಧರಾಗಿರಿ ಇಂದೆ ಸೀಮೋಲ್ಲಂಘನ! (ನಲಮು. ೪೭-೨). ೨. ಮೀರುವಿಕೆ; ದಾಟುವಿಕೆ: ಸೀಮೋಲ್ಲಂಘನ ಆದದ್ದು ಠೀಕ ಆತಂದಿ (ದೀಪಹ. II, ೩೬೧).

ಸೀಮೋಲ್ಲಂಘನ ಮಾಡು = ೧. ಗಡಿಯನ್ನು ದಾಟು : ಸತ್ವಶಾಲಿಯಾದ ಯಾವುದೇ ಸಂಸ್ಕೃತಿಯಾಗಲಿ, ತನ್ನ ಜನ್ಮಭೂಮಿಯ ಸೀಮೋಲ್ಲಂಘನ ಮಾಡಿ ಅನ್ಯಾನ್ಯದೇಶಗಳಲ್ಲಿ ಪ್ರಸೃತವಾಗುವುದು ಇತಿಹಾಸಪ್ರಸಿದ್ಧ (ಭಾರದ. ೩೩೮); ಭಾರತದಲ್ಲಿ ಜನ್ಮವೆತ್ತಿದ ಈ ಮತವು ಸೀಮೋಲ್ಲಂಘನ ಮಾಡಿ, ಎಲ್ಲ ಮಾನವರ ಕಲ್ಯಾಣಕ್ಕಾಗಿ ಮೈತ್ರಿಯಿಂದ ದುಡಿಯಿತು (ಮನೋನಂ. ೨೬೯). ೨. ನವರಾತ್ರಿಯಲ್ಲಿ ವಿಜಯ ದಶಮಿಯಂದು ಊರಿನ ಗಡಿಯನ್ನು ದಾಟುವ ಒಂದು ವಿಧಿಯನ್ನು ಆಚರಿಸು: ಮರವಣಿಗೆ ಊರ ಸುತ್ತೆಲ್ಲ ಸುಳಿದು ಸೀಮೋಲ್ಲಂಘನ ಮಾಡಿ ಮರಳಿ ಬಂದಿತು (ಪ್ರಬಂಧ. ೯೭). [ಸಂ.]

ಸೀಯ (ನಾ). ಹಡಗಿನ ಒಂದು ಭಾಗ: ಅಂಭೋಧಿವೀಚೀಪ್ರಚಯವಚಳದಂತೆಟ್ಟು ಪರ್ವಿರ್ದೊಡಂದುಚ್ಚಳಿಸಲ್ ತನ್ನಾವ ಸೀಯಂ ಪಱಿಯೆ ಮುಱಿವುದುಂ (ನೇಮಿಪು. ೪-೭೩). [?]

ಸೀಯಂ (ನಾ). ಮೂರನೆಯದು : ಅವ್ವಲ್, ದೂಯಂ, ಸೀಯಂ, ಚಾರಂ ನಾಲ್ಕನು ಹೇಳುವರಂತೆಲೋ (ನಾಪದ. ೧೪೩). [ದೇ. ∥ತುಳು. ಸಿಯಂ, ಶೀಯಂ, ಶಿಯಂ. /ಹಿಂ.ಸಿಹ]

ಸೀಯದರ, ಸಿಬಾರ, ಸಿರಿದರ, ಸಿರಿದಾರ, ಸಿರಿಯದರ, ಸಿರಿಯದಾರ, ಸಿರಿಯಬಾರ, ಸಿರಿವಾರ, ಸೀಯದಾರ, ಸೀಯಬಾರ (ನಾ). ಅಗಸೆ; ಹೆಬ್ಬಾಗಿಲು; ಮಹಾದ್ವಾರ: ಪಂದಲೆಯೋಳಿದೋರಣದ ಸೀಯದರಂ . . . ಮಿಂಚಿದುದಾ ಶ್ಮಶಾನದೊಳ್ (ಕಾವ್ಯಾವ. ೫೬); ಆ ರಾಜಗೇಹಾಜಿರದ ಸೀಯದರದ ಕಂಟಿಯ ಬಾರದಂತರಾಳದಲ್ಲಿ ಗಿರಿಗಳ ರೂಪದಿಂ ಕೆಲವು ಕರ್ಪುಗಳಿರ್ದಪುವು (ಅನಂಪು. ೧-೧೧೭ ವ). **ಸಿಬಾರ**: ೭೭೦ ವರ್ಷಇಲ್ಲದ ಸಿಬಾರವ ಅಱುವರಿಬರ ಪುತ್ರ ಮಡವರಿ ಬಸವ್ಯ(ವಯ್ಯ) ಮಾಡಿಸಿದ ಸಿಬಾರ ಮಂಗಳಮಹಾಶ್ರೀ (ಸೌಇ. XV, ೧೭೨-೧: 1226). **ಸಿರಿದರ**: ಸಿಂದರಂ, ಸಿರಿದಾರಂ, ಸಿರಿಬಾರಂ (ಶಬ್ದಾನು. ೩೭೮ ಪ್ರಯೋ). **ಸಿರಿದಾರ**: ಮನೆಮನೆಯ ಮುಂದಣ ಸಿರಿದಾರದ ಮೊಗಶಾಲೆಯೊಳು . . . ರಾಜಕುಮಾರರಿರಲು ಕಂಡಳಾಗ (ಶ್ರೀಪಾಲ. ೨-೨೦). **ಸಿರಿಯದರ**: ಶ್ರೀದ್ವಾರ-- ಸಿರಿಯದರ, ಸಿರಿಯದಾರ, ಸಿರಿಯಬಾರ (ಶಮದ. ೨೯೬ ಪ್ರಯೋ); ಗಂಧರ್ವಕನ್ನಿಕೆಯರೀಶ್ವರನಿರ್ದ ಮಣಿಮಯಹರ್ಮ್ಯೋತ್ಪಕಂಠಮಂ ಸಾರ್ದು ಸಿರಿಯದರದೊಳ್ನಿಂದು ಸುವರ್ಣವಲ್ಲರಿಯಂ ಬಾಜಿಸುತ್ತೆ (ವೀರವಿ. ೭-೧೧ ವ). **ಸಿರಿಯದಾರ**: "ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ — ಈ ೩ ಶ್ರೀದ್ವಾರಕ್ಕೆ ಪೆಸರ್" (ಕಶಾಸಾ. ೫೯-೨೯೯). **ಸಿರಿಯಬಾರ** : "ಸಿರಿಯದರ ಸಿರಿಯಬಾರಂ ನೆಱೆ ತಾಂ ಶ್ರೀದ್ವಾರ" (ಕವಿಕಂ. ೧೪೨). **ಸಿರಿವಾರ** : ಪೊನ್ನ ರನ್ನದ ಸಿರಿವಾರಂ[ಪಾಠಾಂ. ರೂವಾರಂ]ಗಳ್ ಮನಂಗೊಳೆ ವಿವಾಹಗೇಹಮಂ ಮಾಡಿಸಿದಾಗಳ್ (ಜಗವಿ. ೧೦-೯೨ ವ). **ಸೀಯದಾರ**: ಸೀಯದರಂ, ಸೀಯದಾರಂ, ಸೀಯಬಾರಂ (ಶಬ್ದಾನು. ೩೭೮ ಪ್ರಯೋ). **ಸೀಯಬಾರ**: ಶತ್ರುಂಜಯಮಹೀಪಾಲ ಗೋಮಂಡಳಿಗಂ ನಂದಿಮಿತ್ರನ ಗೋಮಂಡಳದೊಳೊರ್ಮೆ ಪೋರಿಗಳಾಗಿ ರಾಜಮಂದಿರದ ಸೀಯ[ಪಾಠಾಂ. ಸಿರಿಯ]ಬಾರದೊಳ್ ಪೂಣರ್ದು (ಶಾಂತಿಪು. ೯-೪೭ ವ); ಸೀಯಬಾರವಂತಃಪುರಮುಯ್ಯಲ್ . . . ಒರ್ಮೆಯೆ ನೆಱೆದಾಡಂಬರದಿಂ ತುಱುಗಿರೆ (ಪುಪ್ಪಪು. ೬-೨೩). [< ಸಂ. ಶ್ರೀದ್ವಾರ]

ಸೀಯದಾರ 'ಸೀಯದರ' ನೋ.

ಸೀಯನೆ, ಸಿಯ್ಯನೆ (ಅ). ೧. ಸಿಹಿಯಾಗಿ; ಸವಿಯಾಗಿ: ಕರಿಣಿಯ ಸೀಯನಪ್ಪ ಮೊಲೆವಾಲ್ಗೆ ತಗುಳ್ಳುದು ತತ್ಕಿಶೋರಕೇಸರಿ (ಪಂಪಭಾ. ೭-೮೦); ಕಂಡರಿಸಿದೊಡಿಕ್ಕು ಕಾಂಡಮೆನೆ ಸೀಯನೆ ಸದ್ರಸಮುಣ್ಮಾದಿರ್ದೊಡಂ . . . ರಸಜ್ಞಸುಮನೋಜ್ಞಮೆ ಕಾವ್ಯಮದುಂ ಧರಿತ್ರಿಯೊಳ್ (ರಾಜಶೇ. ೧-೫೧). ೨. (ಆಲಂ) ಇಂಪಾಗಿ; ಇನಿದಾಗಿ: ಎರ್ದೆಯಂ ಪಿಡಿದಲುಗುವ ಸೀಯನಪ್ಪ ಗೀತಾತೋದ್ಯನಾದಕ್ಕಮಿದಿರೊಳೆ ಕಣ್ಗೆ ವಂದು ಬಗೆಯನುಱೆ ಸೆಱೆವಿಡಿದ ವಿದ್ಯಾಧರವಿಳಾಸಕ್ಕಂ ಬೆಕ್ಕಸಂಬಟ್ಟು (ಆದಿಪು. ೨-೪೧ ವ); ಸೀಯನೆ ಪೇಳ್ಳು ಕಾದಲನ ಮಾತನೆ ಭಾವಿಸಿ ಕೇಳ್ಳ ಭಾವಮೊಲ್ದೀಯೆ (ಲೀಲಾವ. ೨-೯೨). **ಸಿಯ್ಯನೆ**: ೧. ಕಮ್ಮನೆ, ಇಮ್ಮನೆ, ಸಿಯ್ಯನೆ (ಶಮದ. ೩೦೦ ಪ್ರಯೋ); ತನಿವಣ್ಣಂ ಮನವಾರೆ ನೋಡಿ . . . ಚಂಚುಪುಟದಿಂದಂ ಮೆಲ್ವಿನಿಂ ಸೀಳ್ದು ಸಿಯ್ಯನೆ [ಪಾಠಾಂ. ಸೀಯೆನೆ]ಸೋರ್ವಾ ರಸಧಾರೆಯಂ ಸವಿದು (ಶಬಶಂ. ೨-೪೯).

ಸೀಯನಾಗು = ಹಿತವಾಗು; ತಂಪಾಗು: ಮೈಯನಾ ರಾಯ ತಡವಿದನಾ ಸುತರು ನೋಯಿಸಿದೆವು ಸ್ವಾಮಿಯೆಂದರಿಲ್ಲಿಲ್ಲಣ್ಣ ಸೀಯನಾಯ್ತಾಗೆದೆಯೆಂದ (ಧರಚ. ೪೫-೨೭). [ಸೀ$_2$ + - ಅನೆ ./ ತೆಲು. ತೀಯನ, ತಿಯ್ಯನಿ; ಕುರುಖ್. ತೀನ್ನಾ = ಸಿಹಿಯಾಗಿರುವ]

ಸೀಯಬಾರ 'ಸೀಯದರ' ನೋ.

ಸೀಯವಲ್ಲವರಸ, ಶೀಯವಲ್ಲವರಸ (ನಾ). ಒಬ್ಬಾತನ ಹೆಸರು: ಶ್ರೀಮತ್ ಕೊಜ್ಜೂಣಿ ಮುತ್ತರಸರಾ ಬೆಸದೆ ಕಾಡುವಟ್ಟಿ ದಣ್ಣೆಱಿದು ಕೊವಳಲದುಳ್ ಏಱಿದೋರ್ ಸೀಯವಲ್ಲವರಸ (ಎಕ. IX, ಹೊಸಕೋ. ೨೧-೬; ಸು. 750). **ಶೀಯವಲ್ಲವರಸ**: ಮುತ್ತರಸರುಂ ಶೀಯವಲ್ಲವರಸರುಂ . . . ಎಲ್ಲಾ ಸಾಮಂತರುಂ ಅತ್ತಾಣಲುಂ ಸಾಕ್ಷಿ (ಮೃಅರಿ. ೧೯೧೪, ೧-೩೩; 788). [< ಸಂ. ಶ್ರೀವಲ್ಲಭ + ಅರಸ$_1$]

ಸೀಯವೂರ್ (ನಾ). ಒಂದು ಸ್ಥಳದ ಹೆಸರು: ಸೀಯವೂರಮ ಅಕ್ಕಬ್ಬೆ ಆಳುತ್ತಿರೆ ಅಲ್ಲಿ ಕೊಟ್ಟದು ಎಣ್ಗಣ್ಣುಗ ಮಣ್ಣು (ಎಕ. XII, ಸಿರಾ. ೨೪-೪೧; ಸು. 900). [? + ಊರ್]

ಸೀಯಾವಳಿ (ನಾ). ಒಂದು ಬಗೆಯ ಸಿಹಿಖಾದ್ಯ: ಸಕ್ಕರೆಯ ಪೃತದೊಡನೆ ಪರಿಪಾಕದಡಿಗೆಯಿಂ ಗೈದ ಲಡ್ಡಿಗೆ ಬತಾಸಂ ಸೀರ್ಣ ಸಹಿತ ಸೀಯಾವಳಿಗಳಾ ಕೊಡುತ ರೊಪ್ಪುವನವನು ಕೊಳುತಲಿ (ನಮೋ. ೧೭-೬೧). [< ಸೀ$_2$]

ಸೀಯಾಳ, ಸಿಯಾಳ (ನಾ). (ಕರಾ) ಎಳನೀರಿರುವ ತೆಂಗಿನ ಕಾಯಿ; ಬೊಂಡ: ದಧಿ ದಿವ್ಯಮಧು ಸಕ್ಕರೆ ಸೀಯಾಳವೂ ಇಂದಿರೇಶಗೆ ಬೇಗ ಶಿರದ ಮೇಲಭಿಷೇಕ ಮುದದಿಂ ಮಾಡಿದ ಬಳಿಕ (ವಾದಿರಾ. ೩೬-೪); ಆ ನೀರಿಗೆ (ಎಳೆಗಾಯೊಳಗಿನ ನೀರು) ಎಳೆನೀರು ಎಂತಲೂ ಎಳೆಗಾಯಿಗೆ ಸೀಯಾಳವೆಂತಲೂ ಅನ್ನುತ್ತಾರೆ (ಮುಂಬಯಿ. ೨-೫೧); ತೋಟದಲ್ಲಿ ನಿಂಗ ಇದ್ದರೆ ಕೆಂದಾಳಿಮರದಿಂದ ಎರಡು ಸೀಯಾಳ ತೆಗೆಯುವಂತೆ ಹೇಳು (ದೇವಹಿ. ೧೫೯). **ಸಿಯಾಳ:** ಜಾರಪ್ಪ . . . ಒಂದು ಸಿಯಾಳವನ್ನು ತಂದು ತನ್ನ ದನಿಗೆ ಕೊಡುತ್ತಿದ್ದ (ಪರಾವ. ೧೦೮); ಪೂಂಜರ ಸಂಗಾತಿಗಳು . . . ನಾಲ್ಕಾರು ಸಿಯಾಳಗಳನ್ನು ಧ್ವಂಸಮಾಡಿದ್ದರು (ಕಂಬಹಾ. ೩). [?]

ಸೀಯಿಸು (ಕ್ರಿ). ಸೀದುಹೋಗುವಂತೆ ಮಾಡು; ಕರಿಕುಮಾಡು: ಕಾವಲಿಯ ಮೇಲಿನ ರೊಟ್ಟಿಯನ್ನು ಸೀಯಿಸಿ, ಕೆಲಸಕ್ಕೆ ಬಾರದ ತಿಂಡಿಪೋತ ಎನಿಸಿಕೊಂಡನು (ಆರ್ಯಕೇ. ೩೧). [ಸೀ$_1$ + -ಇಸ್ಯು]

ಸೀಯು 'ಸೀ$_1$' ನೋ.

ಸೀರ್, ಸೀರು$_2$ (ನಾ). ೧. ಹೇನಿನ ಮೊಟ್ಟೆ, — ತತ್ತಿ: ರಸಮಂ ಫಣಿವಲ್ಲೀದಳರಸದೊಳ್ ಮರ್ದಿಸಿ ಬಟಿಕೆಕ್ಕಪಡದೊಳ್ ಭಾವಿಸಿ ತಲೆಯೊಳ್ ಕಟ್ಟಿದೊಡುಳ್ಳ ಸೀರುಮುಳ್ಳನಿತು ಪೇನುಮಾಗಳೆ ಕಿಡುಗುಂ (ಲೋಕೋಪ. ೯-೫೭); ತಲೆಯೊಳ್ ತೀವಿದ ಪೇನ ಸೀರ್ಮಲಮನೆಂತುಂ ಬಾರ್ಚಿ ತಾಂ ತಾಳ್ದಿಯಾ ತಲೆಯಂ ನಿರ್ಮಲಮಪ್ಪಿನಂ ಪಣಿಗೆ ಮಾಟ್ಟುಂ (ಜೀವಸಂ. ಪರಿ. ೨. ೨೩೮). **ಸೀರ್ರು$_2$:** ೧. ಒಱೆಲೆ ತಗುಣ ಪೇನು ಸೀರು . . . ತುಂಬುಟು ಮೊದಲಾದವಜೊಳಂ (ಪಸಾರ. ೪೯); ಧೂಪ ಹಾಕುವಲ್ಲಿ . . . ಮಂಡೆಯ ಅಗುರು, ಹೇನು, ಸೀರು . . . ಹೋಗುವುವು (ಪಕವ್ಯ. ೩೩). 'ಈರ್$_2$' ಪರಾ. (ಗು). ೨. ಸಣ್ಣ; ಚಿಕ್ಕ: 'ಸೀರ್ದುಪ್ಪುಟ್', 'ಸೀರ್ಪುಲ್', 'ಸೀರ್ವನಿ' ಪರಾ. ೩. ತೆಳ್ಳಗಿರುವ; ತೆಳ್ಳನೆಯ: ನಾರುವದನಾದ ಕಣಕವನು ನಿಂಬೆಯ ಹಣ್ಣು ತೋರದುಂಡೆಯ ಮಾಡಿ ಮೆಯ್ಯಕ್ಕುವನ್ನವರ ಸೀರಱುವೆಯಂ ಕವಿಸಿ (ಸೂಪಶಾ. ೧-೨೬).

ಸೀರನಿತು = ಸ್ವಲ್ಪಪ್ರಮಾಣ; ಅತಿ ಕಡಿಮೆ: ವನಚರ ವನವನಜನಿವಹಮುಳ್ಳನಿತುಂ ಸೀರನಿತುಮಣಮುಳಿದುದಿಲ್ಲೆಂಬಿನಮುಂಡಂ ದಹನನಳುರ್ದು ಖಾಂಡವವನಮಂ (ಪಂಪಭಾ. ೫-೯೭); ಏನಗೆಳ್ಳನಿತುಂ ಸಾಸವೆಯನಿತುಂ ಸೀರನಿತು ಮೋಹಮಿಲ್ಲವನಿಯ ಮೇಲೆ (ಧರ್ಮಾಮೃ. ೧೧-೧೦೨). [ದೇ. ii ತುಳು. ಚೀರ್, ಸೀರ್; ಕೊಡ. ಚೀರೆ; ಕೋತ. ಕುರುಖ್. ಚೀರ್; ಕೋಲಾ. ಗೊಂಡಿ. ಸೀರ್; ನಾಯ್ಕಿ. ಶೀರ್]

ಸೀರ$_1$ (ನಾ). ತುಂತುರು: ಹನಿ: "ಸೀರ ತಂದಲಿವು ಶೀಕರಮುಂ" (ಕವಿಕಂ. ೧೦); ಪೊಳೆವ ರತ್ನಚಯದಿಂಡೀರದಿಂ ಸೀ[ಶಾಂಶಾ. ಶೀ]ರದಿಂ . . . ಕಡಲ್ ಕಣ್ಗೆಸೆದುದು (ಸಂದಿಮಾ. ೨-೫). [ದೇ. ii ಕೋತ. ಚೀರ್ಲ್ = ತುಂತುರುಬೀಳು; ತೊದ. ಸೀರ್; ಕುಣ. ಸೀರ್ಪ = ಹನಿಸು]

ಸೀರ$_2$ 'ಸೀರೆ$_2$' ನೋ.

ಸೀರ$_3$ (ನಾ). ೧. ನೇಗಿಲು; ಹಲ: "ಹಲಂ, ಲಾಂಗಲಂ, ಸೀರಃ — ಈ ಮೂಱು ನೇಗಿಲ್" (ಶಲಾಪು. ೯೪-೪೨೧); ಸೀರಗದಾಯುಧ ರುಧಿರೋದ್ಗಾರಿ ಗದಾಯುಧರು ಪೇಂದ್ರನೆರಡುಂ ಕೆಲದೊಳ್ ಸೀರರ್ ಚಕ್ರಮನಾಮೆ ನಿವಾರಿಪೆಮೆಂದೆಂಬ ಪೂಣ್ಕೆಯಿಂ ಪೂಣ್ದೆರ್ದರ್ (ಮಹಾನೇ. ೧೬-೭೮). ೨. ಸೂರ್ಯ. [ಸಂ.]

ಸೀರ$_4$ (ನಾ). ೧. ಗೆರೆ; ಪಟ್ಟೆ; ಗೀರು: (ಕ). ೨. ಗೀರುಗಳುಳ್ಳುದು; ಪಟ್ಟೆಗಳಿಂದ ಕೂಡಿರುವುದು: (ಮುಂಬಯಿ. ೬. ೩-೭೪). ೩. ನೀಳ; ಉದ್ದ: (ನರಿಯ) ಮೋರೆ ಸೀರ, ಉದ್ದಕ್ಕೆ ಹಾವಿರುತ್ತದೆ (ಮುಂಬಯಿ. ೩-೭೪); ದೇಶಪಾಂಡೆ ರಂಗ ಎಲ್ಲಕ್ಕೂ ಹಿರಿಯ . . ಮೈಕಟ್ಟು ತೆಳ್ಳಗೆ; ನಿಲುವು ಮಧ್ಯಮ; ಮೋರೆ ಸೀರವಾಗಿತ್ತು (ಮೇದಿಮಾ. ೨) ೪. ಬಡಕಲು; ಸಪೂರ: ಮಹಾತ್ಮರ ತಲೆಯನ್ನು ಕೊಡದಷ್ಟು ಗಡುತರವಾಗಿಯೂ ಕಾಲುಗಳನ್ನು ಕಡ್ಡಿಯಷ್ಟು ಸೀರವಾಗಿಯೂ ತೆಗೆಯುವ ವಿಕೃತ ಚಿತ್ರಕಾರನು . . . ಅಸೂಯೆಯಿಂದ ಹಾಗೆ ಮಾಡುವದಿಲ್ಲ (ನಿರಾಭ. ೧೪ ಮುನ್ನುಡಿ); ಅವಳ ಸೀರವಾದ ಕೈಯನ್ನು ಎತ್ತಿ ಮೃದುವಾಗಿ ಒತ್ತಿದೆ (ಮುಕ್ತಿ. ೩೮). [<— ಮರಾ. ಶೀರ]

ಸೀರಣ (ನಾ). ವೇಗವಾಗಿ ಹೆಚ್ಚೆಯಿಡುವ ಒಂದು ಕ್ರಮ, — ಗತಿ: "ಕಳಾಸ ಚಾಳೆಯ ಮಂಡಿ ಸೀರಣಂ ಹಚ್ಚೆಯಕ್ಕುಂ" (ಮಂಗರಾ. ೮೮-೩೮). [<— ತಮಿ. ಚೀರಣಿ]

ಸೀರಣಿಗೆ (ನಾ). ಹೇನಿನ ಮೊಟ್ಟೆಯನ್ನು ಬಾಚಿ ತೆಗೆಯಲು ಉಪಯೋಗಿಸುವ ಮರದ ಹಣಿಗೆ; ಈರಣಿಗೆ: ಸೀರಣಿಗೆ ಕಿವಿಯೋಲೆ ತಾಳೆ ಮೂಗುತ್ತಿಯೆನೆ ಆರೆನಲಿ ಪದಿರ ಪುರುಳರಿವು ದೊಡ್ಡಂಗೆ (ಕಾಲಾರ. ೫೨-೭೮); ರನ್ನದ ಬಾಸಣಿಗೆ ಚಿನ್ನದ ಸೀರಣಿಗೆ (ಗೌರಪ. ೧೦). [ಸೀರ್ + ಹಣಿಗೆ (< ಪಣಿಗೆ)]

ಸೀರಣಿಗೆಕಸ (ನಾ). ಒಂದು ಬಗೆಯ ಸಸ್ಯ: (ಕ). [ಸೀರಣಿಗೆ? + ಕಸ]

ಸೀರದನಿ (ನಾ). ಸಣ್ಣಧ್ವನಿ; ಕೀಚಲುಧ್ವನಿ: ಹೆಣ್ಣಿನ ದನಿಯನ್ನು ಅನುಕರಣ ಮಾಡುವ ಭರದಲ್ಲಿ ಸೀರದನಿ ತೆಗೆದು ತಾರಸ್ವರವನ್ನು ಮುಟ್ಟುವ ಅವನ ಹವಣಿಕೆ ನಡೆದಾಗ ಕೇಳುವವರಿಗಾಗುವ ಕಸಿವಿಸಿ ಅಷ್ಟಿಷ್ಟಲ್ಲ! (ಚೇಸಾಬಾ. ೨೯೯).

[ಸೀರ$_4$ + ದನಿ$_1$]

ಸೀರಧರ (ನಾ). ನೇಗಿಲನ್ನು ಹಿಡಿದಿರುವವನು; ಹಲಧರ; ಬಲರಾಮ: ಶ್ರೀರಮಣಂ ಜಿನಚಂದ್ರನುದಾರಂ ಜಿನಭವನಸಮಿತಿಗತ್ಯುತ್ಸವದಿಂ ಸೀರಧರನೆಱಗೆ ಶೇಷವಚೋರಚನೆಗೆ ಖಚರದೂತನುದ್ಯತನಾದಂ (ಶಾಂತಿಪು. ೩-೧); ಸೀರಧರ ನೀನುಮಿಂತೀ ನಾರಾಯಣನಗಲಲೊಡನೆ ನಿನ್ನಯ ಮನದೊಳ್ ದೂರಿಸಿ ಜಿನದೀಕ್ಷೆಯನಾಂತಾರಳಿವೆನೆ ನೆಗಟ್ಟು ದೇವನಪ್ಪೈ ದಿವದೊಳ್ (ಮಹಾನೇ. ೧೬-೨೦). [ಸಂ.]

ಸೀರನಿಗೆಸೊಪ್ಪು (ನಾ). ಒಂದು ಬಗೆಯ ಸಸ್ಯ: ಸೀರನಿಗೆಸೊಪ್ಪು, ಕೆಂಪುನೆಲಅಕ್ಕಿ (ಮೃಚಿಾ. ೭೪-೧೫೨). [ಸೀರನಿಗೆ + ಸೊಪ್ಪು]

ಸೀರನಿಗೆಹಂಬು, ಶೀರಣಿಗೆಹಂಬು (ನಾ). ಒಂದು ಬಗೆಯ ಬಳ್ಳಿ: (ಮೃಚಿಾ. ೬೯-೧೪೦೬). **ಶೀರಣಿಗೆಹಂಬು** : ಶೀರಣಿಗೆಹಂಬು, ಶೀರಂಗಬಳ್ಳಿ (ಸ್ಮೃನಿ. ೧೧೮).

[ಸೀರನಿಗೆ + ಹಂಬು$_2$ (< ಪರಪ್ಪು)]

ಸೀರಪಾಣಿ (ನಾ). = ಸೀರಧರ: ಸಾರವಸ್ತುಗಳಂ ನೆಚ್ಚಿದಂಭೋರಾಶಿಯೆ ಕಾದಿಗೆ ಕಾವನುಂ ಸೀರಪಾಣಿ (ಪಂಪಭಾ. ೪-೩೨); ಭಾಗಿಗಳಾರ್ ಸೀರಪಾಣಿಯೊರೆಗಂ ದೊರೆಗಂ (ಪಂರಾಮಾ. ೬-೧೩೪). [ಸಂ.]

ಸೀರಸನಿ (ನಾ). ಒಂದು ಬಗೆಯ ಮರ; ತಿಗಡೆ: "ಕುಟನ್ನಟಮೆನಲ್ ಸೀರಸನಿ [ಪಾಠಾಂ. ನೀರಸನಿ, ಸೀರಸಗಿ]" (ಮಂಗರಾ. ೪೨-೪೦). [?]

ಸೀರಹಸ್ತ (ನಾ). = ಸೀರಧರ: ನಿಷಾದಿಯನುರುಳಿಚ್ಚು ಗಜಪ್ರಿಯತೆಯನಹಿತರ್ ಪೊಗಟೆ ಸೀರಹಸ್ತಂ ಮೆಚ್ಚೆದಂ (ಶಾಂತಿಪು. ೪-೧೯). [ಸಂ.]

ಸೀರಾಂಗ (ನಾ). ನೇಗಿಲಿನ ಒಂದು ಭಾಗ; ಗುಳ. [ಸಂ.]

ಸೀರಾಯುಧ (ನಾ). ೧. ನೇಗಿಲು; ಹಲ: ಸೀರಾಯುಧದಿಂದಬ್ಧಿಯ ನೀರಂ ಬಲಭದ್ರನೆಯ್ದೆ ತಿರ್ದಿದೊಡೆ (ಮಹಾನೇ. ೧೬-೪೦). ೨. ನೇಗಿಲನ್ನು ಆಯುಧವಾಗಿ ಉಳ್ಳವನು; ಬಲರಾಮ: ಉಗ್ರಶಸ್ತ್ರತತಿಯಿಂ ಸೀರಾಯುಧಂ ಕಾದೆ (ಶಾಂತಿಪು. ೪-೩೬); ಸೀರಾಯುಧನುಂ ಗದಾಯುಧನುಮಾ ಕ್ಷಣದೊಳ್ ಇದು ದೇವದಾನವರ ಕೋಪ ದಿನುಣ್ಮೆದ ಕಿಚ್ಚು . . . ಎನುತ್ತೆ (ಮಹಾನೇ. ೧೬-೪೦). [ಸಂ.]

ಸೀರಾಸ್ತ್ರ (ನಾ). = ಸೀರಾಯುಧ ೨: ಶರಂಗಳಂ ಮುಳಿದು ಕಡಿದುಂ ಸೀಳ್ದುಂ ನೇರ್ದುಂ ನಿಜಾಸ್ತ್ರದಿನೇಂ ಮನಂಗೊಳಿಸಿದನೊ ಸೀರಾಸ್ತ್ರಂ ನೋಟ್ಪೆಂದ್ರ ರುಂದ್ರಸಭಾಳಿಯಂ (ಶಾಂತಿಪು. ೪-೨೪). [ಸಂ.]

ಸೀರಿ (ನಾ). = ಸೀರಾಯುಧ ೨ : ಸೀರಿ ಕೃತಕಾರ್ಯವಿಪರ್ಯಯಮಾದುದೆಂದು ಸುಸ್ಥಿರನದನಂತೆ ವಂಚಿಸುವ ಬುದ್ಧಿಯಿಂ (ನೇಮಿಪು. ೬-೧೧೦); ಸೀರಿ ನಾರಾಯಣ ರೆಸಕಮನೇವೇಟ್ಟಪೆಂ (ಅನಂಪು. ೧೩-೧೫). [ಸಂ. ಸೀರಿನ್]

ಸೀರಿಪ್ರಿಯೆ (ನಾ). ಒಂದು ಬಗೆಯ ಮದ್ಯ: "ಸೀರಿಪ್ರಿಯೆ ಸೀಧು ಮದಿರ ಸುರೆ (ಯಿರೆ) ಕಳ್ಳುಂ" (ವಸ್ತುಕೋ. ೯೨-೫). [?]

ಸೀರಿಸು (ಕ್ರಿ). ಸೀರಣಿಗೆಯಿಂದ ಕೂದಲನ್ನು ಬಾಚಿ ಹೇನಿನ ಮೊಟ್ಟೆಗಳು ಹೋಗುವಂತೆ ಮಾಡು: ಆಕೆ ಮಗಳ ತಲೆಯನ್ನು ಸೀರಿಸಿದರು (ರೂಢಿ).

[ಸೀರ್ + -ಇಸ್ಯು]

ಸೀರು$_1$ (ಕ್ರಿ). ೧. ಸೀರಣಿಗೆಯಿಂದ ಕೂದಲನ್ನು ಬಾಚಿ ಹೇನಿನ ಮೊಟ್ಟೆಗಳನ್ನು ತೆಗೆದುಹಾಕು: ಕೂತುಕೋ ಬಾ, ತಲೆ ಸೀರುತ್ತೇನೆ (ರೂಢಿ). ೨. (ಆಲಂ) ಒಟ್ಟು ಮಾಡಿಕೊಳ್ಳು: ಕಂಚು ಕಾಸು ಸೀರಿಕೊಂಡು ಕೆಂಚೇರೈವರು ಕೂಡಿಕೊಂಡು ಅರಸರ

ಮಡದಿ ದುರಪತಿ ಕೂಡ ಸರಸದಿಂದ ಕರಿಯ ಬಂದೆ (ರೂಪಗೀ. ೧೬೯). ೩. ಸೆಳೆದುಕೊಳ್ಳು: 'ಸೀರುಂಡೆ' ಪರಾ. [< ಸೀರ್]

ಸೀರು$_2$ 'ಸೀರ್' ನೋ.

ಸೀರು$_3$ 'ಸೀಜು$_3$' ನೋ.

ಸೀರು$_4$ (ನಾ). ಭವಿಷ್ಯ (?): ಅವರು ಜ್ಯೋತಿಷಿಗಳನ್ನು, ಕಣಿ ಹೇಳುವವರನ್ನು ಅಂದರೆ ಒಟ್ಟಾರೆ 'ಸೀರು ಹೇಳುವವರನ್ನು' ಕರೆದುಕೊಂಡು ಬರುತ್ತಾರೆ (ಗಂಗಾಮ. ೧೦). [?]

ಸೀರುಂಡೆ (ನಾ). ಕೊಳ್ಳೆ ಹೊಡೆದ ವಸ್ತು; ಲೂಟಿ; ಸೂರೆ: ಪ್ರಸಾದವಿನಿಯೋಗ ಹೊಡೆದಾಟದ ತನಕಾ ಸಾಗಿ ಮಾಮೂಲಿನಂತೆ ಸಿಕ್ಕವಂಗೆ ಸೀರುಂಡೆ ಆಗಿ ಜಗಳದಲ್ಲಿ ಕೊನೆಗೊಂಡಿತು (ಪ್ರದ್ಮಪ. ೬೯); ನನ್ನ ಸಾಮಾನುಗಳೂ ಸಿಕ್ಕವರ ಸೀರುಂಡೆಯಾದುವು (ಪ್ರಪಾಗ. II, ೧೦೬). [ಸೀರು$_1$ + ಉಂಡೆ]

ಸೀರುಂಬುಳಾಡು 'ಸೀಜುಂಬುಳಾಡು' ನೋ.

ಸೀರುದಿಕೆ 'ಸೀರೆಉಡುಕೆ' ನೋ.

ಸೀರುಮಣ್ಣು 'ಸೀಜುಮಣ್ಣು' ನೋ.

ಸೀರುಮಣ್ಣುಗೊಡು 'ಸೀಜುಮಣ್ಣುಗೊಡು' ನೋ.

ಸೀರೆ$_1$ (ನಾ). ೧. ಬಟ್ಟೆ; ವಸ್ತ್ರ: ಸಾದುಗತ್ತು ಬಗೆಯಾದವನಾನೋಡಲಟ್ಟದೆ ಸಾದಮಾನುಮಲಿಮಾನಸನಾಗದೆ ಮಾಳದೊಳ್ ಮೋದದಾನುಡುವ ಸೀಗೆಮೆನ್ನನ ದಿರ್ಪ ದಾರದ ಪೋದೆಡೆಯೊಳೆ ತಡೆದಾನವನೆಂದಪಂ (ಕವಿಕಾ. ೧-೧೨೪); ಅಯ್ಯಾ ಎಸಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ ಸೀರೆಯಂ ಕೊಂಡೀಯಿಂ (ವಡ್ಡಾರಾ. ೬೬-೧೧); ವಿಲಸಿತದುಕೂಲವಸ್ತ್ರಂಗಳನಲ್ಲದೆ ಪೆಱವು ಸೀರೆಗಳನುಟ್ಟಱಿಯಂ (ಪುಟುಮ. ೧೦-೧೦೪); ಈಗಿರ ಸೀರೆಗೆ ಅಸಗ ತಡಬಡಗೊಂಬಂತೆ . . . ನಿಮ್ಮನಱಿಯದ ಕಾರಣ ಕಿಮ್ಮನೆ ಕೆಟ್ಟೆನಯ್ಯಾ (ಮಹಾದೇ ಬ. ೧೯-೩೧). ೨. ಹೆಂಗಸರು ಉಡುವ ಬಟ್ಟೆ; ಸಾಲೆ: ಬಿಸಕೆಯ್ಯ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬಿಸಕೆಯ್ಯುಗುಂ (ವಡ್ಡಾರಾ. ೧೭೦-೧೨); ತಳಿರ್ಗಳ ಸೀರೆಯುಟ್ಟು, ಗುರುಗಂಜಿಯ ಹಾರಮನಾಂತು (ಗಿರಿ. ೧-೧೨೬); ಹರಹರಾಯನುತಾಗ ಸೀರೆಯ ಸೆಱಗ ಹಱಿದಿತ್ತಳು ನೃಪಾಲಗೆ (ನಳಚ. ೫-೬); ವಸ್ತ್ರ ಎಂಬರ್ಥದಲ್ಲಿರುವ 'ಚೀರ' ಎಂಬ ಸಂಸ್ಕೃತಶಬ್ದವು ಸೀರೆ ಎಂದು ತದ್ಭವವಾಗಿ ಹೆಂಗುಸರು ಮಾತ್ರ ಉಡುವ ವಸ್ತ್ರವೆನಿಸಿದೆ (ಸಂತೋಧ. ೮೯). ೩. ನಾರುಮಡಿ; ವಲ್ಕಲ: ಬಾರದಿರನಾ ಭರತಂ . . . ತಂದೆಯ ಭಾರವನ್ನಬರೀ ಸುಮಂತ್ರನ ಸಾರಲೆಂದಾ ಸೀರೆಯನು ಸೆಳೆದುಟ್ಟು ನೊಲವಿನಲಿ (ತೊರಾ. ೨-೩-೩೧). [ದೇ. ॥ ತಮಿ. ಚೀರೈ, ಚೀಲೈ; ಮಲ. ಚೀಲ, ಶೀಲ; ತುಳು. ಸೀರೆ, ಶೀರೆ; ತೆಲು. ಚೀರ./ ಹಿಂ. ಮರಾ. ಚೀರ./ ಹ್ರಾ. ಚೀರ./ ಸಂ. ಚೀರ]

ಸೀರ್$_3$, ಸೀರ್$_2$ (ನಾ). ೧. ಒಂದು ಬಗೆಯ ಮರ: ಸಿರಿಸಂ ಸೀರೆ ಬೆಳಲ್ವವಂಗ ಮೆಲವಂ (ಕಾವ್ಯಸಾ. ೧೦೪೦ ಪದ್ಯಕ); ಆ ಸರಸಿಜಭವನೀಕೆಯ ಕೇಶಕ್ಕೊಲಿದೀಯೆ ತಮ್ಮ ಬೆಲ್ಮಂ ಮುನಿದೀ ದೇಶದೊಳಿರಲೊಲ್ಲದೆ ಮಲೆದೇಶದೊಳಿಂತಪ್ಪವಂಜಿ ಸೀರೆಯ ತರುಗಳ್ (ಧರ್ಮಾಮೃ. ೨-೧೬೯); ಓರಂತೆ ತಾಳ ತೆಂಗಿನ ಸೀರೆಯ ಕಳ್ಗಳ್ ಕಳರ್ಚಿ ನಿತ್ಯಗ್ರಹಮಂ ಪಾರಯ್ಸೆ ಕುಣಿದರರಬರ್ ಭೋರೆನೆ ಕೆಯ್ಜಱೆಯೆ ಅಂಜೆವಱೆಯೆನೆ ವನದೊಳ್ (ಪುಷ್ಪಪು. ೫-೯೮). ೨. ತೆಂಗಿನಮರದಲ್ಲಿ ಮಟ್ಟೆಯನ್ನು ಸುತ್ತಿಕೊಂಡಿರುವ ನಾರಿನಂತಹ ಹೊದಿಕೆ; ಸೀಬು: ತೆಂಗಿನ ಮರದ ಸೀರೆಯನ್ನು ಕೆಲವರು ಉರುವಲಿನಂತೆ ಉಪಯೋಗಿಸುತ್ತಾರೆ (ರೂಢಿ). ೩. ಒಂದು ಬಗೆಯ ಮದ್ಯ: "ಮೈರೇಯಮಾಸವಂ ಮಧು ಮಾಧವಂ ಸೀಧು ಸೀರೆ ಸುರೆ ಕಳ್ಪೆನಿಕ್ಕುಂ" (ಮಂಗರಾ. ೬೫-೮). **ಸೀರ್$_3$**: ೧. ಮಾವರವಾವು ಸೀರ ನಾರಂಗ ಲವಂಗ . . . ಮಾತುಳುಂಗಂ ಭೂಜಂಗಳ್ (ಸೌಗಾ. XV. ೫೭-೫೮; 1184).

[ದೇ. ॥ ಕೋಲಾ. ಸಿರ, ಚೀರೆ; ನಾಯ್ಕಿ. ಶೀರೆ; ಹರ್ಜಿ. ಸೀರ್]

ಸೀರ್$_4$ (ನಾ). ನೇಗಿಲು; ಹಲ: ಮಗನನೆತ್ತಿ ಪುಳಕಾಂಕುರಮಂ ಮೈಗಗ್ಗಳಿಸದ ಕಾಂತೆಯ ಕೈಗಮದೇಂ ಭೇದಮುಂಟೆ ಸೀರೆಯ ಕೈಗಂ (ಮಲ್ಲಿಪು. ೩-೧೧೫). [ಸಂ. ಸೀರ]

ಸೀರೆಉಡುಕೆ, ಸೀರುದಿಕೆ (ನಾ). ಸೀರೆಯನ್ನು ಕೊಡುವುದರ ಮೂಲಕ ಮಾಡಿಕೊಳ್ಳುವ ಪುನರ್ವಿವಾಹ; ಉಡುಕೆ: ತಮ್ಮ ಜಾತಿಯಲ್ಲಿ ಮೊದಲಿನ ಗಂಡ ಸತ್ತ ಮೇಲೆ 'ಸೀರೆಉಡುಕೆ' ಎಂದು ಮಾಡಿ ಬೇರೆಯೋರ್ವನಿಗೆ ಕೊಡುವುದಿಲ್ಲವೆ? (ಚಂದಜೀ. ೮೬). **ಸೀರುದಿಕೆ**: ಒಂಟಬಾಳು ಸಾಕಾಗಿದ್ದ ಇಬ್ಬರೂ ಜಂಟಬಾಳಿಗೆ ಒಪ್ಪಿ 'ಸೀರುದಿಕೆ' ಮಾಡಿಕೊಂಡರು (ಮಲಮ. ೬೯). [ಸೀರೆ$_1$ + ಉಡುಕೆ$_1$]

ಸೀರೆಗಳ್ಳ (ನಾ). ಬಟ್ಟೆಯನ್ನು ಕದಿಯುವವನು: "ಪಾಟಚ್ಚರಃ, ಪಟಚ್ಚಾರಃ — ಈ ೨ ಸೀರೆಗಳ್ಳಂ" (ಹಲಾಯು. ೫೬-೧೦೫). [ಸೀರೆ$_1$ + ಕಳ್ಳ$_1$]

ಸೀರೆರೋಗ (ನಾ). ಹೆಚ್ಚು ಋತುಸ್ರಾವವಾಗುವ ಒಂದು ಬಗೆಯ ರೋಗ: (ಆ). [ಸೀರೆ$_1$ + ರೋಗ]

ಸೀರೆವರದ (ನಾ). ಬಟ್ಟೆಯ ವ್ಯಾಪಾರಿ; ಜವಳಿವ್ಯಾಪಾರಿ: "ದೂಸಿಗನೆನಲ್ ಸೀರೆವರದಂಗೆ ನಾಮಂ" (ಕಬ್ಬಕ್ಕ. ೩೪); ಮಿಗೆ ಬೆಲೆಯೇಱಿದ . . . ಬಟ್ಟೆಯ ಮಲೆಗೆಗಳಿಂ ಸೋಲಿಪುವು ಸೀರೆವರದರ ಪಸರಂ (ಕಬ್ಬಕಾ. ೩೮). [ಸೀರೆ$_1$ + ಪರದ$_1$]

ಸೀರ್ಕರಡಿ (ನಾ). ಜಗಳವಾಡಲು ಸಿದ್ಧವಾಗಿರುವ ಕರಡಿ; ಭಯಂಕರವಾದ ಕರಡಿ: ಪೋದ ಮಾರಿಯನ್ನಳಿ ಮನೆದೊಬ್ಬು, ಸೀರ್ಕರಡಿಯನ್ನಳಿ ನಾದುನಿ (ಪಂಪಭಾ. ೪-೯೪); ತರುಣಿಯರೆಂಬ ಪೆರ್ಬುಲಿಗಳಂ ಹರಿಣಾಕ್ಷಿಯರೆಂಬ ಕ್ರೂರ ಸೀರ್ಕರಡಿಗಳಂ . . . ಸ್ಮರಶರದಿಂದೆ ಮೆಯ್ಯಟಿಯದೊಯ್ಯನೆ ಪೊರ್ದಿದರಪ್ಪೊಡೆ (ಧರ್ಮಾಮೃ. ೭-೧೫೪); ಅರ್ಕಾಂಶುಗೆ ಹುಗಲಿಲ್ಲದ ಸೀರ್ಕರಡಿಯ ಕಡುಬನಂದದಡವಿಯ ತಮಮಂ ಮಾರ್ಕೊಂಡು ಸುಟಿವ ಕಾಡೆಳವರ್ಕಿನ ಕಣೆ ನಡೆವ ಸೊಡರ್ಗಳೆನೆ ಜಲಜಲಿಕುಂ (ಅರ್ಧನೇ. ೫-೮೧). [< ಸೀಜು$_1$ + ಕರಡಿ$_1$]

ಸೀರ್ಣ (ನಾ). ಕೃಶ; ಬಡಕಲು: ಜೀರ್ಣವಾದ, ಸೀರ್ಣವಾದ ದೇಹವನ್ನು ದೇಹಸ್ಥನಾದ ಆತ್ಮನು ತ್ಯಜಿಸಿ ನವದೇಹಧಾರಿಯಾಗಿ ಹುಟ್ಟುತ್ತಾನೆ (ಭಾರದ. ೧೮೪).

[< ಸಂ. ಶೀರ್ಣ]

ಸೀರ್ಣೆ (ನಾ). ಒಂದು ಬಗೆಯ ಸಿಹಿಪದಾರ್ಥ: ಪರಿಪಾಕದಡಿಗೆಯಿಂ ಗೈದ ಲಡ್ಡಿಗೆ ಬತಾಸಂ ಸೀರ್ಣೆ ಸಹಿತ ಸೀಯಾವಳಿಗಳಂ ಕೊಡುತ (ನವಮೋ. ೧೭-೬೧).

[<— ತಮಿ. ಚೀರಣಿ]

ಸೀರ್ದುಪ್ಪುಟ್ (ನಾ). ಸಣ್ಣ ಕೂದಲು: ಬರಿಯ ಸೀರ್ದುಪ್ಪುಟ ಬಂಬಲ್ಲಳನುಗುರಿಂ ಪಿಕ್ಕಿ ಬಿಸಿಲ್ಗಾದುದದೊಂದು ಮರದ ಕೋಡೊಳ್ ಕೋಡಂ (ಜಗವಿ. ೧೪-೧೧).

[ಸೀರ್ + ತುಪ್ಪುಟ್]

ಸೀರ್ನಾಯ್ (ನಾ). ಒಂದು ಬಗೆಯ ಭಯಂಕರವಾದ ನಾಯಿ: ಪಾಪಂಗಳಂಗೆಯ್ವವರಾನೆಯುಂ ಸಿಂಹಮುಂ . . . ತೋಳನುಂ ಸೀ[ಪಾಕಾಂ. ನೀ]ರ್ನಾಯುಂ . . . ಆಗಿ ತಿರಿಗತಿಯೊಳ್ ಪುಟ್ಟಿ (ವಡ್ಡಾರಾ. ೯೭-೪); ದುರ್ಜನನಂತೆ ಕವಿವ ಸೀರ್ನಾಯ್ಗಳಿಂ . . . ಅದ್ಭುತಮಪ್ಪ ಭೀಮವನಮೆಂಬ ಪೇರಡವಿಯೊಳಗೆ ಪೊಕ್ಕು (ಧರ್ಮಾಮೃ. ೧೩-೧೦೦); ಒಂದರಣ್ಮದೊಳ್ ಸೀ[ಪಾಕಾಂ.ನೀ]ರ್ನಾಯಾಗಿ ಪುಟ್ಟಿ ಕಾಲ್ಗಿಟ್ಟಂ ಬೆಂದು (ಪುಣ್ಯಾಸ್ರ. ೮-೩೦ ವ). [ಸೀಜು$_1$ + ನಾಯ್]

ಸೀರ್ಪಡಿಸು (ಕ್ರಿ). ಕಿರಿಚುತ್ತಾ ಒದ್ದಾಡು, — ಚಡಪಡಿಸು: ಇಡ ಕಾಲಂ ಬಲಿಸಿಲ್ಕಿ ಪಲ್ಕಿರಿದು ಕಣ್ಪೋತಂದು ಸುಯ್ಗೆಟ್ಟು ಸೀರ್ಪಡಿಸುತ್ತಿರ್ದ ಧರಾಮರರ್ ನಡುಗೆ (ನೇಮಿಪು. ೫-೨೪). [< ಸೀಜು$_1$ + ಪಡಿಸು]

ಸೀರ್ಪನಿ 'ಸೀರ್ವನಿ' ನೋ.

ಸೀರ್ಪನಿವಡಹ, ಸೀರ್ಪನಿವಡಹ (ನಾ). ತುಂತುರುಮಳೆ; ಸೋನೆಮಳೆ: ಜನವನಿತುಂ . . . ಮರವಟ್ಟರಲ್ಕೆ ಸೀರ್ಪನಿವಡವಂ ಪೊದಟ್ಟು ಮಸಗಿತ್ತು ತುಷಾರದ ತುಂತುಱಿಂಬಿನಂ (ಕುಸುಮಾ. ೬-೩೭). **ಸೀರ್ಪನಿವಡಹ**: ಸೀರ್ಪನಿವಡಹಂ ಪೊದಟ್ಟು ಮಸಗಿತ್ತು ತುಷಾರದ ತುಂತುಱಿಂಬಿನಂ (ಕಾಂಶೀಶ್ರ. ೧೨-೫೯).

[ಸೀರ್ಪನಿ (< ಸೀರ್ವನಿ) + ಬಡಪ]

ಸೀರ್ಪನಿವಡಹ 'ಸೀರ್ಪನಿವಡಪ' ನೋ.

ಸೀರ್ಪುಲ್ (ನಾ). ಸಣ್ಣ ಹುಲ್ಲುಕಡ್ಡಿ: ಮೂಲೋಕಮಂ ಯೌವನಚತುರತರಾಪಾಂಗದಿಂದೊಂದು ಸೀರ್ಪುಲ್ಗೆಸೆವನ್ನಂ ಮಾಡುತಂಗಪ್ರಭೆಯೊಳಖಿಲಕಾಂತಾರಮಂ ಕೂಡೆ ತೇಂಕಾಡಿಸುತಂ (ಕಾದಂಬ. ೫೪೭); ದಶದಶಗ್ರೀವರಾತಂಗೊಂದು ಸೀರ್ಪುಲ್ಗೆ ಸಾಟಿ, ಶತಕೋಟಿಬಲಶಾಲಿ ವಾಲಿಗೆ ಕಣಾ! (ಶ್ರೀರಾಮಾ. ೨೯-೩೦೬). [ಸೀರ್ + ಪುಲ್]

ಸೀರ್ಪೆ (ನಾ). ಕಿರಿಚಾಟ; ಚೀರಾಟ: ಉಲಿವ ಕಲಿಭಟರುಗಳ ಬೊಬ್ಬೆಯಿಂ ಸೀರ್ಪೆಯಿಂ . . . ಬ್ರಹ್ಮಾಂಡಗಳು ಬಿರಿದುವಾಗ (ತುರಂಗ. ೫೦-೪೭).

[< ಸೀಱು + -ಪೆ]

ಸೀರ್ಮಿಡಿ (ನಾ). ಚಿಕ್ಕ ಕಾಯಿ; ಸಣ್ಣ ಮಿಡಿ: ಸೀರ್ಮಿಡಿಗಳಿರದಾ ಬಳಲ್ಮಿಡಿಗಳಲ್ಲಿ . . . ತನುವಕ್ಕೊಳಿಮ್ಮಾವೆಸೆದುದು (ವೀಕ್ಷಕ. ೨-೩-೧೫೫). [ಸೀರ್ + ಮಿಡಿ]

ಸೀರ್ಮಿನ್ (ನಾ). ಚಿಕ್ಕ ಮೀನು; ಸಣ್ಣಮೀನು: ಪಲವಕ್ಕಿಗಳ ಮೊತ್ತಮಂ ತುತ್ತರಿಂದು ಸಿದಿದ ಸೀರ್ಮಿನ್ನಳಿಂ (ಚಿಪಮಂ. ೪-೧); ಅಂಚೆವಿಂಡುಗಳ ಬಾಯ್ಗಳಿನೊಕ್ಕಮೃತ ಧಾರಾಸಾರಶೀಕರಂಗಳಂ ಸೀರ್ಮಿನ್ಗೆತ್ತು (ಚಂದ್ರಪ್ರ. ೧-೯೦ ವ). [ಸೀರ್ + ಮಿನ್]

ಸೀರ್ಮುತ್ತು (ನಾ). ಚಿಕ್ಕಮುತ್ತು; ಸಣ್ಣಮುತ್ತು: ಬೆಳಗಪ್ಪ ಜಾವದಯ್ಮುಲ್ ಕೊಳೆ ಶೀತಕ್ಕಾಱದಳ್ಕಿ ತೊಟ್ಟರ್ದ ಧರಾತಳಮೆಂಬ ಪೆಣ್ಣ ಪೊಸಕಂಚುಳಿಕೆಯ ಸೀರ್ಮುತ್ತಿ ನಂದಮಾದವು ಪನಿಗಳ್ (ಕಾವ್ಯಸಾ. ೬೯ ಕೂದ್ರಕ); ಸಿಡಿವ ಸೀ[ಪಾಕಾಂ. ನೀ]ರ್ಮುತ್ತುಗಳೊ ತಡೆಯದೆ ವಿಚಾರಿಸೆನೆ ತಾರಾಳಿಯೆಸೆದುವು (ಪಚಕಾ. ೩-೮೯).

[ಸೀರ್ + ಮುತ್ತು]

ಸೀರ್ವನಿ, ಸೀರ್ಪನಿ (ನಾ). ಸಣ್ಣ ಹನಿ; ತುಂತುರು: ತುಱುಂಗಿ ತೂಲಿ ಸಿಡಿವ ಸೀರ್ವ[ಪಾಕಾಂ. ರ್ಪ]ನಿ ಕಡುಬೆಡಂಗುವಡೆಯೆ (ರಾಜಶೇ. ೨-೮ ವ). ಸೀರ್ಪನಿ: ಕೊಳದ ತಡಿಯಲ್ಲಿ ಸೀರ್ಪನಿಗಳ ತುಱುಗಲನುಗುಟ್ಟ ಚಂದ್ರಕಾಂತದ ಶಿಲೆಯೊಳ್ . . . ಎಸಟ ಪಸೆಯ ಮೇಲೊಱಗಿರ್ದಂ (ಕಾದಂಪೂ. ೯೦೫); ಪರಿವ ತೊಱೆಗಾಲ್ಗಳ ಸೀರ್ಪನಿಗಳನೀಂಟಿಯುಂ (ಕಬ್ಬಕಾ. ೫೪); ಬಡಬಶಿಖಿ ನೆಯ್ಮ ಸೀರ್ಪನಿಗಡಣದಿ ತಣಿದಪುದೆ (ಪ್ರಮಿ. ೫-೬೬). [ಸೀರ್ + ಪನ್ನಿ]

ಸೀಲ, ಸೀಳ (ನಾ). ನಡತೆ; ನಡವಳಿಕೆ: ಮಣಿಸುತ ಲೋಕವ ತೇತ್ಕತ್ಕಯನೆ ಕುಣಿಸಿ ಸೀಲವ ಪಱಿವಡಿಸಿ ಮುನಿಜನವನು ಮೂರ್ಛೆಗೊಳಿಸಿ ಮಾಯವ ಮಾಟ್ಟ ವನಿತೆಯರ್ಗಳಸದರ್ಗಳೆಯೇ (ಕವಿಪ. III, ೧೩೮ ಬೆಳ್ಳೊಳದ ಗೊಮ್ಮಟೇಶ್ವರಚರಿಂ). ಸೀಳೆ: ಚದುರ ಪಾಟಿಯ ಸೀಳದ ಪೆಂಪಿಂದಾ ಸತಿಗಾರ್ ದೊರೆ ಧಾತ್ರಿಯೊಳ್ (ಕಾವ್ಯಾವ. ೧೭೪).

[< ಸಂ. ಶೀಲ]

ಸೀಲಗುಣ (ನಾ). ಒಳ್ಳೆಯ ನಡತೆ; ಸದಾಚಾರ: ಆ ಯತಿಯ ತನೂಭವನಂದಾ ಯತಿಯಿಂ ಸೀಲಗುಣವ ಪಾಲಿಸುತಿರ್ದ್ದಂ (ಕಾ. I, ೪೧-೨೦; 1417?). [< ಸಂ.ಶೀಲಗುಣ]

ಸೀಲವಂತೆ (ನಾ). ಒಳ್ಳೆಯ ನಡತೆಯುಳ್ಳವಳು; ಶೀಲವಂತೆ: ಬೈರಪನಾಯಕರು ಪುಣ್ಯಸ್ತ್ರೀ ಚೆನಾಜಿಅಂಮ ಸೀಲವಂತ್ತ ಬೋಜನಾಯಕರಿಗೆ ಕೊಟ್ಟ ಸೀಲವಂತ್ತಪುರ (ಎಕ. XVI, ಚಿಕ್ಕನಾ. ೪೬-೭; ಸು. 1೩೯೮ ಶತ). [ಸೀಲ + - ವಂತ + - ಎ]

ಸೀಲಾಗಿಡ (ನಾ). ಒಂದು ಬಗೆಯ ಸಸ್ಯ: ಬಟ್ಟೆಹರಕುಗಿಡ, ಸೀಲಾಗಿದ (ಮೃಜಿಗಿ. ೭೪-೧೫೦೯). [ಸೀಲ್ಯಾ + ಗಿಡ (< ಗಿಡು)]

ಸೀಲು (ನಾ). ಮುದ್ರೆ; ಮೊಹರು: ಸೀಲಾಗಿದ್ದ ಡಬ್ಬಗಳನ್ನು ಕೆಲವರು ಕಲ್ಲಿನಿಂದಲೇ ಕುಟ್ಟಿ ತೆಗೆದುಬಿಟ್ಟರು (ಗೋಪುರ. ೪೩).

ಸೀಲು ಮಾಡು = ಮೊಹರು ಮಾಡು: ಸೀಲುಮಾಡಿದ ಹಾಗೆ ಕಣ್ಣು ಮುಚ್ಚಿರುವಳು (ಚಂದ್ರಮೇ. ೧೧-೪೪). [<— ಇಂ. Seal]

ಸೀಲೆ 'ಸೇಲೆ' ನೋ.

ಸೀವ (ನಾ). ಒಂದು ಪಂಗಡದ ಹೆಸರು (?): ಗೋವರ್ಧನಂ ಗೋವರ್ಧನಗಿರಿಯನೆತ್ತುವಂತೆತ್ತಿ ಗೋಕುಳಮಂ ಕಾದುದಂ ಕಂಡು ಗೋವರುಂ ಸೀವರುಂ ಜಕ್ಕರುಂ ಮಕ್ಕಳುಂ ಮಱಿಗಳುಂ ಬೆಕ್ಕಸಂಬಟ್ಟು (ಅರ್ಧನೇ. ೮-೧೬ ವ). [?]

ಸೀವಟ್ಟ$_1$ (ನಾ). ಹಣ್ಣುಗಳನ್ನು ಸೇರಿಸಿ ಮಾಡುವ ಮಿಶ್ರಣ: ಅರಸ ಬಂದನು . . . ಮಡದಿ ಸಕಲನಿಯೋಗಿಜನ ಸಹಿತ ಸರಸಿ ನೆಲೆಯವು ಸ್ನಾನಪಾನಕೆ ತರು ಲತಾವಳಿಗಳು ಯುಧಿಷ್ಠಿರನರಮನೆಯ ಸೀವಟಕೆ ಸಾಲವು (ಕುವ್ಯಾಅ. ೯-೨೦).

[<— ಮರಾ . ಚಿವಡಾ]

ಸೀವಟ್ಟ, ಷೀವಟ, ಸಿವಟ, ಸೀವಟ್ಟ (ನಾ). ೧. ಒಬ್ಬನ ಅಧಿಕಾರಕ್ಕೆ ಒಳಪಟ್ಟುದು, — ಸ್ವಾಮ್ಯದಲ್ಲಿರುವಂಥದು: ಶಾನ್ತಿವರ್ಮರಸಂ ಸುಗನ್ಧ ವರ್ತ್ತಿಯಲ್ ತನ್ನ ಮಾಡಿಸಿದ ಬಸದಿಗಾವೂರ ತನ್ನ ಸೀವಟದ ಪೊಲದೊಳಗೆ ಸರ್ವ್ವಬಾಧಾಪರಿಹಾರಮಾಗಿ ಬಿಟ್ಟ ಮತ್ತರ್ನ್ನೂಱಯ್ತತ್ತು (ಪೌಣಾ. XX. ೧೮-೩೬; 980); ತಮ್ಮ ಸೀವಟದ ಪೊಲದೊಳಂಕೇಶ್ವರದ ಗಡಿಂಬದಲಿ (ಕಾ. V. ೫೨-೪೦; 1087); ತನ್ನರಸುತನಕ್ಕೆ ಸೀವಟಮೆನಲ್ ಸಲೆ ಸಲ್ವಡುವತ್ತಮತ್ತರುರ್ವ್ವರೆಯನುದಾರಿ ರಾಯರಸಂ . . . ಬಿಟ್ಟಂ (ಪೌಣಾ. XV. ೨೦೪-೫೩: 1199). ೨. ಒಬ್ಬನ ಅಧಿಕಾರಕ್ಕೆ ಒಳಪಟ್ಟ ಭೂಮಿ. — ಸ್ವಾಮ್ಯಕ್ಕೆ ಒಳಪಟ್ಟಿರುವ ಕ್ಷೇತ್ರ: ಸಂಕ್ರಮಣದಂದು ತಮ್ಮ ಸೀವಟಂ ಇಟ್ಟುಗೆಯಲು (ಬೋಪಕಾ. ೧೯೫೪. ರಾಣಬೆನ್ನೂರ್. ೨೯-೯; 991); ಕಂಚರಸಂ ತನ್ನ ಸೀವಟದೊಳಗೆ ಧರ್ಮ್ಮಾನುರಾಗಚಿತ್ತಂ ಸಹಿರಣ್ಯಪೂರ್ವ್ವಕಂ ಕುಡೆ (ಎಇ. XVI. ೫೫-೨೨: 1053). ೩. ಕ್ಷೇತ್ರ; ಭೂಮಿ: ಗ್ರಾಮೇ ಮುಳುಗುನ್ನಾಖ್ಯೇ ಸೀವಟೇ ಷಡ್ನಿವರ್ತ್ತನಂ (ಪೌಣಾ. XX. ೧೩-೧; 875); ಕಾರೆಯಬಾಗುನಾಮಧೇಯಸ್ಯ ಸೀವಟೇ ದ್ವಾದಶನಿವರ್ತ್ತನಂ ಸರ್ವ್ವನಮಸ್ಯಂ ದತ್ತಂ (ಪೌಣಾ. XX. ೬೧-೨೧; 1098?); ಯಿದಕ್ಕೆ ಸೀಮೆ ತೆಂಕಲು ಸಂಕರಬಸದಿಯ ಪೊಲಂ ಮೇರೆ ಮೂಜುಂದ[ರೆ]ಯೊಳಂ ಸೀವಟಂ ಸೀಮೆ (ಪೌಣಾ. XX. ೯೯-೪; 1128). ೪. (ಆಲಂ) ಸೀಮೆ; ಮೇರೆ: ಕೌರವರಾಯನು . . . ಭಂಗದ ಭಾರಣೆಯ ಬಿಸುಸುಯ್ಲ ಸೂಱೆಯ ಸ್ಮರಣೆಯ ಸೀವಟದ ಸಿರಿಮಂಚದಲಿ ಪವಡಿಸಿದ (ಕುವ್ಯಾಸ. ೧೨-೨). ಷೀವಟ : ೧. ಶ್ರೀಮನ್ಮಹಾಮಂಡಳೇಶ್ವರಂ ಬನ್ನರಸರುಂ ಗ xxx ತಮ್ಮ ಷೀವಟ ತಾವಸವಳ್ಳಿಯ ಹೊಲದೊಳಗೆ . . . ಹಂನಿಮತ್ತರು ಕೆಯ್ಯಂ ಸರ್ವ್ವ ಬಾಧಾಪರಿಹಾರಂ ಸರ್ವ್ವನಮಸ್ಯವಾಗಿ ಬಿಟ್ಟರು (ಕಾ. II. ೨೪-೩೯: 1167). **ಸಿವಟಿ**: ೨. ಜಲನಿಧಿಪರಿವೇಷ್ಟಿತಭೂವಳಯದೊಳೊಪ್ಪುತ್ತಮಿಪ್ಪ ಕು(ಂ)ನ್ತಳಧಾತ್ರೀತಲದನೆಗೆ ಕೈಯಿಗಂನಡಿಯೆನೆ ಪುಲಿಗೆಱೆನಾಡೊಳಿಸರುಮಾ ಸಿವಟ[ಮ್] (ಪೌಣಾ. XI- ii, ೧೭೮-೧೨; 1127). **ಸೀವಟ್ಟಿ** : ೨. ಅಲ್ಲಿಂ ಪಡುವಲು ಸೀವಟ್ಟಿದ ಸನ್ನಿನೊಳು ನೈರಿತಿಯ ಗುಡ್ಡೆ ಅಲ್ಲಿಂ ಬಡಗಲು ಸೀವಟ್ಟಿದ ತದ್ದರಪೊಲದ ಸಂದಿನಲು ವಾಯವ್ಯದ ಗುಡ್ಡೆ (ಪೌಣಾ. XX , ೧೮-೩೯; 980). [?]

ಸೀವಟಗೇರಿ (ನಾ). ಒಬ್ಬನ ಸ್ವಾಮ್ಯಕ್ಕೆ ಸೇರಿದ ಕೇರಿ: ದೇವರ ಭೋಗದ ಸೂಳೆಯರ್ಗ್ಗೆ ದೇಗುಲದಿಂ ಮಾ x ಲು ಬಿಟ್ಟ . . . ಪಡಂಗಿಲೆಯ ಪಡುವಲೂರಿಂ ಪೊಱಗಣ ಸೀವಟಗೇರಿಯ ಸೀಮೆ (ಕಾ. V. ೫೨-೪೭: 1087). [ಸೀವಟ + ಕೇರಿ]

ಸೀವಟ್ಟ 'ಸೀವಟ' ನೋ.

ಸೀವಟ್ಟಣ (ನಾ). ಮಲ್ಲಯುದ್ಧದ ಒಂದು ವರಸೆ: ಆನಾಳ್ದದೆ ಕತ್ತರಂ ಕರವಡಂ ಸೀವಟ್ಟಣಂ ಢೊಕ್ಕರಂ ಪಸರಂ ಸಂದಣುವಟ್ಟ ಪೊಟ್ಟು ಮುಹಡಂ ಚೌವಟ್ಟ ಪಿಟ್ಟಾಳಸಂ ಎಂದು ಮಲ್ಲವಾತುಮಂ ನುಡಿದು (ಬಾಧಪ್ರ. ೧೬-೧೯). [?]

ಸೀವನ (ನಾ). ೧. ಬಟ್ಟೆ ಹೊಲಿಯುವುದು: ''ಸ್ಮೃತಿ ಸೀವನಂ'' (ಪಮ್ಪಕೋ. ೧೧೪-೨೨). ೨. ಹೊಲಿಗೆ. [ಸಂ.]

ಸೀವನಿ (ನಾ). ಸೂಜಿ. [ಸಂ. ಸೀವನೀ]

ಸೀವನೆ 'ಸೀವನ್ನಿ' ನೋ.

ಸೀವನ್ನಿ, ಶಿವನ್ನಿ$_1$, **ಶಿವನ್ನಿ, ಸಿವನ್ನಿ, ಸೀವನೆ** (ನಾ). ೧. ಒಂದು ಬಗೆಯ ಮರ; ತೇಗ: ಕುಟಜಂ ಕಬ್ಬನ್ನಿ ಸೀವನ್ನಿ ತುಂಬುರುಹಂ (ಕಾವ್ಯಸಾ. ೧೦೪೦ ಕೂದ್ರಕ). ೨. ಒಂದು ಬಗೆಯ ಔಷಧೀಸಸ್ಯ: ತದಾಸ್ಯಮನೆ ಬಲ್ಯಂ ತಗ್ಗಿ ಸೀವನ್ನಿ ಪಾದರಿಯಾವುಂಡಗೆಯೆಂಬಿವಂ ತೆಗಪಿ ಸೇಕಂಗೆಯ್ಕೆ ಮಾಣ್ದುಂ ಕಫಂ (ಲೋಕೋಷ. ೯-೨೨೫); ಗಿರಿಕರ್ನೆಯ ಸೀವನ್ನಿಯ ಯೆರಡುಂ ಗುಳ್ಕಂಗಳಿಸೆವಪಾಮಾರ್ಗದ ಬೇರ್ವೆರಸಿದ ನೀಲಿಯುಮೊದಾಗಿರೆ . . . ಪರಿಮರ್ದಿಸಿ (ಖಮಥ ೧೩-೧೩೯); ಸೀವನ್ನಿಯ ಬೇರು, ಬೇವಿನ ಬೀಜ . . . ಆಲದ ಹಣ್ಣು ಇವಿಷ್ಟನು ನೀರಿಂದ ಅರದು ಪಾನಲೇಪನಂಗಳಮಾಡಿಸಲು ಮನುಷ್ಯರ ಹಲ್ಲ ಏಷ ಶಮನವಹುದು(ಮೃದ್ಗಸಾ. II. ೨೨೩). **ಶಿವನ್ನಿ**$_1$: ೧. ''ಶ್ರೀಪರ್ಣಿಕಾ . . . ಕಟ್ಟಲು:— ೫ ಕಿರಿಯ ಶಿವನೀಮರದ ಹೆಸರುಗಳು. ಇದನ್ನು ತ್ಯಾಗದ ಮರವೆಂದು ಕೆಲವರನ್ನುನರು'' (ಸದ್ಗಾಂತಿ. ೧೨೧). ೨. ಬೆಲ್ಲವತ್ತದ ಬೇರು, ನರುವಲಬೇರು, ಶಿವನೀ ಬೇರು . . . ಮರದರಿಸಿನ, ಈ ಇಪ್ಪತ್ತೈಂಟು ಔಷಧಿಗಳ ಪ್ರತ್ಯೇಕ ಐದುವರಹತೂಕವಂ ನಾಗುಳನೀರಲ್ಲಿ ಕಷಾಯವೆತ್ತಿ (ಮೃದ್ಗಸಾ. II. ೫೯). **ಶಿವನ್ನಿ**$_2$: ೧. ಗುಲಡುಮರ, ಶಿವನ್ನಿ (ಮೃಜಿಗಿ. ೪೦-೭೮೩). **ಸಿವನ್ನಿ**$_1$: ೧. ಸಿವನ್ನಿಯ . . . ಬಸುರಿಯ ದುರಿಕ್ಕಕ್ಕಾಂತರಾಳದಿಂ ಪುದಿದಿಕ್ಕುಂ (ವರ್ಧಮಾ. ೫-೫೦). ೨. ರೊಡ್ಡಿ . . . ಸಿವನ್ನಿಯ ಬೇರು, ಹೆಗ್ಗೊಡನಾಂಗೆಡ್ಡೆ,

ಕಕ್ಕೇಬೇರಿನ ಚಿಕ್ಕೆ, ನಾಗಕೇಸರ ಇಷ್ಟು ದ್ರವ್ಯಗಳ ಪ್ರತ್ಯೇಕ ಮೂಱುವರಹತೂಕವ ತೆಗೆದುಕೊಂಡು (ವೃದ್ಧಸಾ. I. ೪೧೫). ಸೀವನೆ: ೧. "ಗಂಭಾರೀ, ಸರ್ವತೋಭದ್ರಾ . . . ಕಾಶ್ಮರ್ಯಃ — ೭ ಸೀವನೆಯ ಮರದ ಹೆಸರು"(ಸಿದ್ಧಾಂತಿ. ೧೨೦).

[< ಸಂ. ಶ್ರೀಪರ್ಣಿ, ಶ್ರೀಪರ್ಣೀ]

ಸೀವರ$_1$ (ನಾ). ೧. ಜುಗುಪ್ಸೆ; ಅಸಹ್ಯ: 'ಸೀವರಿಸು' ಪರಾ. ೨. ಹೆದರಿಕೆ; ಭಯ: 'ಸೀವರಿಕೆ' ಪರಾ.

ಸೀವರ$_2$ (ನಾ). ೧. ಹನಿಮಳೆ; ತುಂತುರುಮಳೆ : ಈಶ್ವರಜಟಾಜೂಟಾಟವೀಸಿಂಧು ಸೀವರಮಂ ಸೇವಿಸಲಿರ್ದಂ (ಎಕ. VIII, ಸಾಗರ. ೧೦೬-೬೫; 1042). ೨. (ನೀರಿನ) ತೊಟ್ಟು; ಹನಿ: "ಸೀವರಮೆಂದುಂ ತಂದಲೆಂದುಂ ಶೀಕರಂ" (ಕಶಸಾ. ೫೬-೧೪೫); ನೇಂಬಿಲ ಪಣ್ಣ ಕೊಂಬುಡಿದು ಬರ್ದವೊಲೊಟ್ಟಿದ ಸೀವರ [ಪಾಠಾಂ. ಶೀವರ, ಸೀದಱ]ಕ್ಕೆ ಪಾಯ್ದಾಱಡಿವಿಂಡಿನಿಂ ಮುಱಿದು ಸೂಸಿದ ಮಾವಿನ ಕೊಂಬು ಮೇಲ್ಮದಂಗಾಱೆ (ಅರ್ಥನೇ. ೫-೯೨). [< ಪ್ರಾ. ಸೀಅರ./ ಸಂ. ಶೀಕರ]

ಸೀವರಿ (ನಾ). ಹನಿ; ತುಂತುರು: ಕನಸು ಝಲ್ಲನೆ ಝಳಕೆ, ಸೋರ್ವ ಸೀವರಿಯಾ ಕುಡಿದು ಕಿಲಕಿಲ ಕೆಲೆವೆ ಕಂಠದಿಂ ಕವಿಯಾ (ಗಿಳಿವಿಂ. ೪೮-೧೨).

[< ಪ್ರಾ. ಸೀಅರಿ./ ಸಂ. ಶೀಕರಿನ್]

ಸೀವರಿಕೆ (ನಾ). ಅಂಜಿಕೆ; ಭಯ: ಪ್ರಹಸ್ತನ ಸಾಯಕದ ಬಲುಗಲಹ ಸೀವರಿಕೆ ಯನು ರಘುಕುಲದ ರಾಯರಲಿ ಹುಟ್ಟಿಸಿತು (ತೊರಾ. ೬-೧೯-೪೭).

[ಸೀವರ$_1$ + - ಇಕೆ]

ಸೀವರಿಸು (ಕ್ರಿ). ೧. ಆರ್ಭಟಿಸು; ಅಬ್ಬರಿಸು: ಹರದಂ ಲೆಕ್ಕಿಸುವಂ ಧರಾಧಿಪತಿ ತೇಜಂದೋಱುವಂ ಸಂದ ನಾಣ್ ಬಿರುದರ್ ಕಿತ್ತಲಗತ್ತಿ ಸೀವರಿಸುವರ್ (ಸೂಕ್ತಿಸು. ೮-೩೬೯); ಅಱೆದನಿವ ಚಾಪವನು ಬೋಳ್ಕೆಸಿದನು ಬಲಹೋ ಶಿವಯೆನುತ ಸೀವರಿಸಿದನು ಡಾವರಿಸಿದನು ಧನುವ (ಕುವ್ಯಾಅ. ೧೪-೧೪). ೨. ಜುಗುಪ್ಸೆಪಡು; ಹೇಸು: ಸಿರಿಖಂಡಕೆ ಸೀವರಿಪಳು ತಂಗಾಳಿಗುರಿವಳು ಕಮ್ಮಲರ್ಗಳು ಸೋಂಕೆ ಹುರುಳುಗೆಡುವಳು (ಸೂಬಸೂ. ೨೬-೧೫); ಹಱಿವುತಿದೆಯರಿಸಿನದ ಸಿರಿ ಸೀವರಿಸುತಿದೆ ಸೀಮಂತದೊಳು ಹಂತರಿಸುತಿದೆ ಕಾಡಿಗೆಯ ಗಾಡಿಗತನದ ಸೌಭಾಗ್ಯ (ತೊರಾ. ೬-೧೨-೩೪). ೩. ಉಪೇಕ್ಷೆ ಮಾಡು; ಅಸಡ್ಡೆ ಮಾಡು: ಕುಬೇರಜನ ಸೀವರಿಪ ಧನಭೋಗದಿಂಪು ಕಲೆ ಸೊಬಗು ಚೆಲ್ವಾವರಿಸಿದತಿಪದಸ್ಥೆಯರಾದ ವಾರಾಂಗನೆಯರಿರ್ದರಾಯೆಡೆಯೊಳು (ನಂದಿಮಾ. ೨೩-೩೨). ೪. ಹಿಂಜರಿ; ಹಿಮ್ಮೆಟ್ಟು: ಹೊಸಮುಖಕೆ ಸೀವರಿಸಿದವು ದೆಸೆದೆಸೆಗೆ ಹಿಂಡುಗಳೊಡೆದು ಹಾಯ್ದವು ಮಸಗಿತಂಬಾರವದ ಕಳಕಳವಾಯ್ತು ನಿಮಿಷದಲಿ (ಕುವ್ಯಾವಿ. ೪-೩೬); ಹರಹರಾ ಪೆರ್ಬೊಳೆಯ ಲಕ್ಷೀಕರಿಸಿದನೆ ಭಾವಿಸಿದನೇ ಸೀವರಿಸಿದನೆ ಮನದೊಳಗೆ ಶಂಕರದಾಸಿಮಯ್ಯಗಳು (ಶಂಕದಾ. ೫-೧೬). ೫. ಪ್ರಜ್ವಲಿಸು; ಧಗಧಗಿಸು: ಸೀವರಿಸಿ ಶಿಖಿ ಮೊಗೆದುದು ಮರುತ್ಪಥವ (ತೊರಾ. ೧-೧೭-೧೧); ಸಿಡಿಲೆಱಗಿ ಸೀವರಿಸಿ ಮಿಂಚಿನ ಕುಡಿವರಿಯೆ ಕಣ್ಮುಚ್ಚಿ ಬಲುಮಳೆ ಹೊಡೆಯಲು (ಶಂಕದಾ. ೫-೧೩). [ಸೀವರ$_1$ + - ಇಸು$_3$]

ಸೀವಳಿ (ನಾ). ಉಜ್ಜಿ ಮೆರಗು ಕೊಡಲು ಉಪಯೋಗಿಸುವ ಕಡ್ಡಿ: ಸೀವಳಿ ಗಂಧ ಹುಡಿ ಹಸುಂಬೆಯರಷ್ಟಶೆಟ್ಟಿಯರು ವ್ಯವಹರಿಪರು (ನವಮೋ. ೨-೪೭).

[ದೇ. ॥ ತಮಿ. ಚೀವುಳಿ]

ಸೀವಳಿಗೆ, ಸಿವಳಿಗೆ (ನಾ). ಒಂದು ಬಗೆಯ ಮೈಲಿಬೇನೆ; ಸಿಡುಬು: ಸಲಿಲ ಯುತಂ ಮಧುವಂ ಕುಡಿಯಲೊಡಂ ಸೀವಳಿಗೆಯಪ್ಪುಮವು ಮಾಣ್ಗುಂ (ಲೋಕೋಪ. ೯-೨೬); ಸೀವಳಿಗೆಯಾಗೆ ಸಲೆ ಮಾರಿಯ ಹುಣ್ಣೆಂಬರು (ಸಮಪ. ೯-೨೬). ಸಿವಳಿಗೆ: ಕಹಿಬ್ರಹ್ಮಿಯ ರಸವಂ, ಶ್ರೀಖಂಡ, ಇದಱ ಸಮಾನ ಗೋಮಯ ಮೂಱುದಿನ ಕುಡಿಯೆ ಸಿವಳಿಗೆ ಮಾಣ್ಗುಂ (ವೈದ್ಯವಿ. ೭೩). [?]

ಸೀವಳಿವಿಲ್ಲು (ನಾ). ಒಂದು ಬಗೆಯ ಬಿಲ್ಲು: ಪದವಿಲ್ಲುಗಳನೆಡೆಗೆಡೆಗೆ ಸೀವಳಿ ವಿ[ಪಾಠಾಂ. ಬಿ]ಲ್ಲುಗಳ ಪಿಡಿದಾ ನಿಶಾಟರು ನೆರೆದುದವನೊಡನೆ (ಸಾಳ್ವಭಾ. ೫-೧೩).

[ಸೀವಳಿ? + ಬಿಲ್ಲು$_1$ (< ಬಿಲ್$_2$)]

ಸೀವಿ (ನಾ). ಒಂದು ಬಗೆಯ ವೃತ್ತಿ ಮತ್ತು ಅದರಲ್ಲಿ ವ್ಯವಹರಿಸುವವನು (?): ಸಾವನಿಗರ ಪಜೆಯರ[ನಾ] ಸೀವಿಗಳ ನೆಗರ್ತವೆತ್ತ ಗಂದಿಗರ ಬೆಡಂಗಾವರಿಸುವ [ತಂ]ಬುಲಿಗರ ಪೂವೆತ್ತುವ ಮಾಲೆಗಾಱರಂಗಡಿಯಡಿಗಂ (ವರ್ಧಮಾ. ೧-೬೭). [?]

ಸೀವು (ಕ್ರಿ). ೧. ಅಲಂಕರಿಸಿಕೊಳ್ಳು; ಸಿಂಗರಿಸಿಕೊಳ್ಳು: "ಸೀವು — ಭೂಷಣೇ (ಅಲಂಕರಿಸಿಕೊಳ್ಳು)" (ಶಮಧಾ). ೨. ಹೆರೆ; ಒರೆದುಹಾಕು: ನೆಲದ ಮೇಲೆ ಚಾಪೆಯಂತೆ ಹಾಸಿ ತೂಗಟೆಯ ಒಣಬೆನ್ನನ್ನು ಕತ್ತಿಯಿಂದ ಸೀವಿ ಹಾಕಿದ (ಹಸುಹೂ. ೮೮). 'ಚೀವು' ಪರಾ. [ದೇ. ॥ ತಮಿ. ಮಲ. ಚೀವು; ತೆಲು. ಚೀವು, ಚಿವ್ವು]

ಸೀಸ$_1$ (ನಾ). ೧. ಮಲ್ಲಯುದ್ಧದ ಒಂದು ವರಸೆ, — ಪಟ್ಟು: ಪಿರಿದೆನಿಪ ಹೆಟ್ಟಾಂಗ ಸೀಸವು ಬೆರಸಿದ ಗದೆ ರಾಯಕರವಾಳುರುವ ದೊಂದಿಗಳೆಂಬ ತಾನಕದಿಂದ ಕಾದಿದರು (ಸಾಳ್ವಭಾ. ೨೨-೭೧); ವೀರಚಿಕದೇವಂ ನೋಟಕರ್ ಮೆಚ್ಚೆ ಮೆಲ್ವಗೆಯೊಳ್ . . . ಸೀಸಂ ಕರಂ ಕೊಂಕಸಂ ಮಗುಟ್ಟಿಂತೀ ಗತಿಭೇದದಿಂ ತೊಡಕಿ ತೋರ್ಕುಂ ಸಾಧಕಪ್ರೌಢಿಯಂ (ಚಿಕವಿ. ೪-೧೪೬). ೨. [ಛಂದ] ಪ್ರತಿಚರಣದಲ್ಲೂ ಮೊದಲು ಆರು ವಿಷ್ಣುಗಣಗಳೂ ಕೊನೆಯಲ್ಲಿ ಎರಡು ಬ್ರಹ್ಮಗಣಗಳೂ ಬರುವ ನಾಲ್ಕು ದೀರ್ಘಚರಣಗಳುಳ್ಳ ಒಂದು ದೇಸಿಛಂದಸ್ಸು: ಸೀಸ ಪುರು ಹೂತಗಣಂಗಳಾಱುಂ ಸರಸಿಜಸಖಿಗಣಗಳೆರಡು ಸಂಧಿಸಿ ಬರ್ಕುಂ ಚರಣಕ್ಕೆ ಸೀಸದಂತ ದೊಳೊಱಗಿಂತಹ ಸರಳ ತನ್ನೊಳೊಪ್ಪುವ ತೆಱದಿಂ (ಛಂದೋಂಬು. ೩-೨೨೨ ಅಡಿಪದ್ಯ); 'ಸೀಸ'ದಲ್ಲಿ ಆದಿಪ್ರಾಸವು ನಿಯತವಾಗಿದೆ. ೨. ಅಂತ್ಯಪ್ರಾಸವು ತಕ್ಕಮಟ್ಟಿಗೆ ಕಾಣುತ್ತದೆ. ೩. ಅನುಪ್ರಾಸವು ಪದ್ಯದ ಉದ್ದಕ್ಕೂ ತನ್ನ ವಿಲಾಸವನ್ನು ಬೀರಿದೆ. ೪. ಈ ಪದ್ಯದ ಪ್ರತಿಚರಣದಲ್ಲಿ ಪಂಚಮಾತ್ರಾಗಣಗಳು ೬ ಮತ್ತು ತ್ರಿಮಾತ್ರಾಗಣಗಳು ೩— ಹೀಗೆ ಮಾತ್ರಾಗಣಗಳು ಹೊರಡುತ್ತವೆ (ಛಂದೋವಿ. ೨೦೬). 'ಕಿರಿಸೀಸ' ಪರಾ.

[<— ತೆಲು. ಸೀಸ./ ಪ್ರಾ. ಸೀಸ./ ಸಂ. ಶೀರ್ಷ]

ಸೀಸ$_2$ (ನಾ). ತಲೆ; ಶಿರ: ಸೇಸಿಕ್ಕಲ್ಗಂಧಶಾಲ್ಯಕ್ಷತಶತಮನಿಷಂ ಪುಷ್ಪದಾಮಂ ತುಱುಂಬಲ್ಲೀಸಕ್ಕಿಂಬಾದುದು (ಅರ್ಥನೇ. ೧-೭೦); ನಭಕ್ಕೆ ಪುಟನೆಗೆದನಿಲಜನ ಸೀಸ [ಪಾಠಾಂ. ಸಿರಿಸ, ಸಿರಸ]ಕ್ಕೆ ಹೊಯ್ದಾರಿದನು ಕೌರವನೃಪತಿ ಖಾತಿಯಲಿ (ಕುವ್ಯಾಗ. ೭-೯).

[< ಸಂ. ಶೀರ್ಷ./ ಪ್ರಾ. ಸೀಸ]

ಸೀಸ$_3$ (ನಾ). ಒಂದು ಬಗೆಯ ಲೋಹ: ತನ್ನ ಗುರುವ ನಿಂದೆಗೇಳಿದವನ ಕಿವಿಯೊಳೆಱೆದು ಕಾಯ್ದ ತಾಮ್ರ ಸೀಸ ತವರವಾದಿಯಾದ ರಸವನೆಱೆದು (ಸಾನಂಚ. ೬-೧೧೨); ಸೀಳಬಹುದೇ ಸೀಸದುಳಿಯಲಿ ಶೈಲವನು (ಕುವ್ಯಾದ್ರೂ. ೧-೨೯).

ಸೀಸದ ಕಡ್ಡಿ = ಸೀಸಕಡ್ಡಿ: ಪ್ರಧಾನನ್ಯಾಯದರ್ಶ ತನ್ನ ಸೀಸದ ಕಡ್ಡಿಯಿಂದ ಮೇಜನ್ನು ಕುಟ್ಟಿದನು (ಪುನರು. ೧೦೨); ಸೀಸದ ಕಡ್ಡಿ . . . ಉಪಯೋಗಿಸಿ ಆಕಾರಗಳನ್ನು ಬರೆಯಲು ಅವು ಪ್ರಾರಂಭಮಾಡುವುವು (ಗೃಹವಿ. ೧೪೦). [ಸಂ.]

ಸೀಸಕ$_1$ (ನಾ). ಮಲ್ಲಯುದ್ಧದ ಒಂದು ವರಸೆ,— ಪಟ್ಟು: ಮಲ್ಲನನೌಂಕಿ ಪಿಡಿದು ಸುತ್ತಿ ಮುತ್ತಿ ಸೆಳೆದಿಕ್ಕಿ ಸೀಸಕದೊಳ್ ಪೂಕ್ಕು ಭುಜದೊಳಣೆದುರದೊಳ್ ತೇದು (ಗಿರಿ. ೨-೧೦೫ ವ). 'ಸೀಸ$_1$' ಪರಾ. [<— ತೆಲು. ಸೀಸಕ]

ಸೀಸಕ$_2$ (ನಾ). ೧. (ಯೋಧರು ಧರಿಸುವ ಕಬ್ಬಿಣ, ಉಕ್ಕು ಇತ್ಯಾದಿ ಲೋಹದ) ಟೊಪ್ಪಿಗೆ; ಶಿರಸ್ತ್ರಾಣ: ಗುರು ಕವಚಂ ಕರ್ಣಂ ಬಾಹುರಕ್ಕೆ ಸುರಸಿಂಧುನಂದನಂ ಸೀಸಕಮಾಗಿರೆ ಮೆಯ್ಗೆ ಮುಳಿಯಲಱಿಯದೆ ಕುರುರಾಜನ ತೊಡೆಯನುಡಿವೆನೆಂದಂ ಭೀಮಂ (ಗದಾಯು. ೨-೨೯); ವಿವಿಧ ವಜ್ರಾಂಗಿಗಳ ಸೀಸಕ ಕವಚಗಳ ತೊಟ್ಟತುಳಬಲರೇಱಿದರು ತೇಜಿಗಳ (ಕುವ್ಯಾಧೀ. ೪-೫೦). ೨. ಗುರುತು; ಲಾಂಛನ (?): ಬಟ್ಟತೆನಿಪ್ಪ ಚೊಲ್ಲೆಯದ ಮಟ್ಟಿಯ ಸೀಸಕಮಿಟ್ಟ ನಾಮದೊಳ್ಪಟ್ಟು ಮನಂಗೊಳಲ್ ಗರುಡಿಗೈಮೆಯೊಳೀ ಚಿಕದೇವರಾಯನಂ ನಿಟ್ಟಿಪ ಜಟ್ಟಿಗರ್ ಬೆಟ್ಟವರಲ್ಲಿಯ ಚತ್ತರ ಬೊಂಬೆಯೆಂಬಿನಂ (ಚಿಕವಿ. ೪-೧೩೪).

[< ಸಂ. ಶೀರ್ಷಕ./ ಪ್ರಾ. ಸೀಸಕ, ಸೀಸಕ್ಕ]

ಸೀಸಕ$_3$ (ನಾ).= ಸೀಸ$_3$: "ಸೀಸಕ . . . ಈ ೨ ಸೀಸಂ"(ಹಲಾಯು. ೨೮೧೮). [ಸಂ.]

ಸೀಸಕಂದಾಳ್ (ಕ್ರಿ). ಶಿರಸ್ತ್ರಾಣವನ್ನು ತೊಡು, — ಧರಿಸು: ಸೀಸಕಂದಾಳ್ದು ಕಾಲಾಳ್ಗಡಣಂ ಕೈಕೊಂಡು ನಾನಾಯುಧಮನಮವು ಬಂದತ್ತದಂ ಪೇಳ್ವೆನೇನಂ (ರಾಜಶೇ. ೧೩-೭೦). [ಸೀಸಕ$_2$ + ತಾಳ್$_1$]

ಸೀಸಕಡ್ಡಿ (ನಾ). ಸೀಸದ ಮೊನೆಯನ್ನು ಉಳ್ಳ, ಬರೆಯುವ ಒಂದು ಸಾಧನ; ಪೆನ್ಸಿಲ್ಲು: ಕಾಗದ ಸೀಸಕಡ್ಡಿಯೊಂದಿಗೆ ಸನ್ನದ್ಧನ್ಯಾದೆ (ಹುಚ್ಚುಹು. ೯೯); ನಮ್ಮದೋ ಬರಿ ಸೀಸಕಡ್ಡಿ ಬರೆದಂತಿಹುದು ಮರುಚಣ ಅಳಿಸಬಹುದು (ನೆಲಮು. ೮೮-೭).

[ಸೀಸ$_3$ + ಕಡ್ಡಿ]

ಸೀಸಪತ್ರ (ನಾ). = ಸೀಸ$_3$: "ಸೀಸಕಂ, ಸೀಸಪತ್ರಂ — ಈ ೨ ಸೀಸಂ" (ಹಲಾಯು. ೨೮-೧೮). [ಸಂ.]

ಸೀಸಪತ್ರಕ (ನಾ). = ಸೀಸ$_3$: "ತ್ರಪುವಂಗಂ ಸೀಸಂ ಸೀಸಪತ್ರಕಂ ನಾಗಮಱಿಗೆ ಸೌರಾಷ್ಟ್ರಕಂ" (ವಸ್ತುಕೋ. ೨೯-೯). [ಸಂ.]

ಸೀಸಪದ್ಯ (ನಾ). = ಸೀಸ$_1$ ೨: ಸೀಸಪದ್ಯದೊಡನೆ ಸೇರಿಸಿ ಹಾಡುವ ಗೀತಿ — ಆಟಗೀತಿ, ತೇಟಗೀತಿ ಎಂದು ಎರಡು ವಿಧ (ಕೃಪಿಡಿ. ೧೫೧): ತೆಲುಗಿನ ಆದ್ಯಕವಿ ನನ್ನಯಭಟ್ಟನು (೧೧ನೆಯ ಶತಮಾನದ ಮಧ್ಯಭಾಗ) ಸೀಸಪದ್ಯವನ್ನು ಬಳಸಿರುವುದರಿಂದ ಸೀಸಪದ್ಯವು ತೆಲುಗಿನಲ್ಲಿ ಪೂರ್ವದಿಂದಲೂ ರಚಿತವಾಗುತ್ತ ಇದ್ದಿತೆಂಬುದು ಸ್ವತಃಸಿದ್ಧ (ಛಂದೋವಿ. ೨೦೫). [ಸೀಸ$_1$ + ಪದ್ಯ]

ಸೀಸಭಸ್ಮ (ನಾ). ೧. ಸೀಸಲೋಹದ ಪುಡಿ: (ಬಳಿಯುವ ಬಣ್ಣಗಳು, ಮೆರುಗು ಎಣ್ಣೆಗಳು, ಮೊ.) ಬಳಿದ ಮೇಲೆ ಬೇಗ ಒಣಗುವುದಕ್ಕಾಗಿ ಅವುಗಳಿಗೆ ಸೇರಿಸುವ ಸೀಸ ಭಸ್ಮ, ಮ್ಯಾಂಗನೀಸ್ ಭಸ್ಮ, ಮೊ.ವು (Drier. ಇಂಕನಿ). ೨. [ವೈದ್ಯಶಾ] ಸೀಸಲೋಹ ಮುಂತಾದುವನ್ನು ಹಾಕಿ ತಯಾರಿಸುವ ಒಂದು ಬಗೆಯ ಚೂರ್ಣ: ಸೀಸಭಸ್ಮವಂ ಮಾಡುವ ಕ್ರಮ — ಮಣಿಸಿಲೆಯನ್ನೂ ಎಕ್ಕೆಹಾಲನ್ನೂ ಕೂಡ ಅರೆದು ಸೀಸಪತ್ರಂಗಳ ತೊಡೆದು ಪುಟವನಿಕ್ಕಲು (ಸೀಸ)ಭಸ್ಮವಕ್ಕು (ವಿವೃವಿ. ೫೫); ಶುಂಠಿ, ಅಪಿನಿ, ಸೀಸಭಸ್ಮ . . . ಅತಿಬಜೆ ಇವಂ ಸಮಭಾಗವಾಗಿ . . . ಜೇನುತುಪ್ಪ ಪ್ರತಿಪಾಕವಿಕ್ಕಿ ಕೊಡಲು ಸಕಲವಾದ ಅತಿಸಾರಂ ಗುಣಮಕ್ಕುಂ (ಸಕವೃ. ೩೩೦). [ಸಂ. ಸೀಸಭಸ್ಮನ್]

ಸೀಸವಟಕ (ನಾ). [ವೈದ್ಯಶಾ] ಸೀಸಲೋಹದ ಚೂರ್ಣ ಮುಂತಾದುವುಗಳನ್ನು ಹಾಕಿ ತಯಾರಿಸುವ ಒಂದು ಬಗೆಯ ಗುಳಿಗೆ: ಸೀಸವಟಕ : — ಸೀಸವನ್ನು ಏಳುಬಾರಿ ಕರಗಿಸುವುದು . . . ಈ ಪ್ರಕಾರದಲ್ಲಿ ಅಱುವತ್ತು ಪುಟವನಿಕ್ಕುವುದು (ವಿವೃವಿ. ೫೬). [ಸಂ.]

ಸೀಸವಾಳು (ನಾ). ಸೀಸಲೋಹದ ಕತ್ತಿ (?): ಏಸು ಬೇಹುದು ಮಲ್ಲತನ ನಿನಗೈಸು ನಿನ್ನಯ ಸೀಸವಾಳಿಗೆ [ಪಾಠಾಂ. ವಾಳವ,ವಾಳನು] ಹೊಯ್ವೆನೆಂದನು ನಿನ್ನ ಮಗ ನಗುತ (ಕುವ್ಯಾಕ. ೧೯ ೪೦). [ಸೀಸ$_3$ + ಬಾಳ್ಳು$_3$ (< ಬಾಳ್$_3$)]

ಸೀಸಾಯಿ 'ಸೀಸೆ' ನೋ.

ಸೀಸಾರು 'ಸೀಸಾಱು' ನೋ.

ಸೀಸಾಱು, ಸಿಹಿಸಾರು, ಸೀಸಾರು (ನಾ). (ಖಾರ, ಹುಳಿಗಳೆರಡನ್ನೂ ಹಾಕದೆ ಮಾಡುವ) ಒಂದು ಬಗೆಯ ಸಾರು: ಖಾರಸಾಱು ಮಾಡಬೇಡ ಉಣ್ಣಲಾಱೆನೆ ಎನಗೆ ಸೀಸಾಱು ಮಾಡಿದರೆ ಬೇಗನುಂಬುವೆ (ಪುರಂದ. ೪-೫-೧). **ಸಿಹಿಸಾರು**: ಮತ್ತೆ ಹತ್ತುದಿನಗಳ ಮೇಲೆ ಸಿಹಿಸಾರು, ಹಾಲನ್ನ ಎರಡುಹೊತ್ತು ತಿನ್ನುವಂತೆ ಆಯಿತು (ಸವನೀ. ೬೦). **ಸೀಸಾರು** : ಸೀಸಾರು ಬಹಳ ರುಚಿಯಾಗಿದೆ (ರೂಢಿ). [ಸೀ$_2$ + ಸಾಱು$_2$]

ಸೀಸು (ನಾ). ಒಂದು ಬಗೆಯ ಲೋಹ; ಸೀಸ: ಅದಕ್ಕೆ ಅಷ್ಟೇ ಸೀಸು ಕೂಡಿಸಿ ಸಣ್ಣ ಮುಶಿಯೊಳಗೆ ಹಾಕಿ ಜಾಲಗಾರನ ಕೈಯಲ್ಲಿ ಕರಗಿಸಲಿಕ್ಕೆ ಕೊಡುವನು (ಕಭಾಗೆ. ೨೮೨); ಸೌಟಿನೊಳಗೆ ಸೀಸು ಹಾಕಿ ಬೆಂಕಿಯ ಮೇಲೆ ಹಿಡಿ (ಮುಂಬಯಿ. ೫-೧೨೦). [< ಸಂ. ಸೀಸ]

ಸೀಸೆ, ಶೀಶೆ, ಶೀಷೆ, ಸೀಸಾಯಿ (ನಾ). ಗಾಜಿನ ಬುಡ್ಡಿ; ಬಾಟಲು; ಕುಪ್ಪಿ: ಕಲ್ಲೆಣ್ಣೆಯನ್ನು . . . ಸೀಸೆಯಲ್ಲಿ ತಂದಿದ್ದೆನು (ಸ್ಕೂಲಮಿ. ೧೭೩); ಒಲೆನಿನ್ ಎರಡು ಸೀಸೆ ಮದ್ಯವನ್ನು ಕುಡಿದಿದ್ದನು (ಮಲೆನಾ. ೭). **ಶೀಶೆ**: ದಿನಕ್ಕೆ ಒಂದು ಸಲವಾದರೂ ಎದೆಹಾಲಿನ ಬದಲು ಶೀಶೆಹಾಲನ್ನು ಕೊಡಬೇಕು (ಗೃಹವಿ. ೧೦೯). **ಶೀಷೆ**: ತೊಡೆಯ ಮೇಲಣ ಹದಿನೆಂಟು ತಿಂಗಳ ಮಗು ಶೀಷೆಯಿಂದ ಹಾಲು ಕುಡಿಯುತ್ತಿತ್ತು (ಏಳಜೀ. ೧೬೯); ಟೀಬಟ್ಟಲುಗಳೂ ಶೀಷೆಗಳೂ ಇದ್ದ ಕೊಳಕುಮೇಜು (ಪುನರು. ೩೧೦). **ಸೀಸಾಯಿ**: ಕೈ ಜಾರಿ ಕೆಳಗೆ ಬಿದ್ದು ಸೀಸಾಯಿ ಒಡೆದುಹೋಯಿತು (ರೂಢಿ).

[<— ಪಾರ. ಶೀಶ; ಹಿಂ. ಶೀಶಾ, ಶೀಶೀ; ಮರಾ. ಶಿಸಾ]

ಸೀಸೆಬಿರಟುಮರ, ಶೀಸೆಬಿರಟುಮರ (ನಾ). ಒಂದು ಬಗೆಯ ಮರ: ಬಿರಟು, ಸೀಸೆಬಿರಟುಮರ (ಮೃಜಿಗಿ. ೫೪-೧೦೭೭). **ಶೀಸೆಬಿರಟುಮರ**: "ಶೀಸೆಬಿರಟುಮರ, ಬಿರಡೆಮರ, ಕಾರ್ಕ್‌ಮರ, ಬಿರಟುಮರ" (ಸುಸ್ಥನಿ. ೯೦).

[ಸೀಸೆ + ಬಿರಟು (< ಬಿರಡ್$_2$) + ಮರ$_1$]

ಸೀಸೋರೆ (ನಾ). ಸಿಹಿಯಾದ ರುಚಿಯಿರುವ ಸೋರೆಕಾಯಿ: "ತುಂಬೀ, ಅಲಾಬೂ -೨ ಸೀ[ಪಾಠಾಂ. ಶೀ]ಸೋರೇಗಿಡದ ಹೆಸರುಗಳು, ಕಾಯಿಸೋರೆ" (ಸಿದ್ಧಾಂತಿ. ೧೪೮). [ಸೀ$_2$ + ಸೋರೆ$_1$]

ಸೀಹುಂಡ (ನಾ). ಒಂದು ಬಗೆಯ ಕಳ್ಳಿಗಿಡ; ಮುಂಡಗಳ್ಳಿ: "ಸೀಹುಂಡಃ, ವಜ್ರದ್ರುಃ, ಸ್ನುಕ್, ಸ್ನುಹೀ, ಗುಡಾ, ಸಮಂತದುಗ್ಧಾ — ೬ ಕಳ್ಳೀಹೆಸರುಗಳು, ಬೊಂತೇಕಳ್ಳಿ" (ಸಿದ್ಧಾಂತಿ. ೧೩೬). [ಸಂ.]

ಸೀಳ್$_1$, ಸೀಳು$_1$ (ಕ್ರಿ). ೧. ತುಂಡುಮಾಡು; ಹೋಳುಮಾಡು: "ಸೀಳ್ — ವಿದಾರಣೇ, ಶಕಲೇ ಚೆ" (ಶಮಧಾ); ಮೃಡ ಬೇಕೆಂದೆನೆ ಸೀಳ್ದು ತನ್ನ ಸುತನಂ ನೈವೇದ್ಯಮಂ ಮಾಡನೇ (ಸೋಮೇಶ. ೮೪). ೨. ಎರಡು ಪಾಲಾಗುವಂತೆ ಸಿಗಿ: ನೆಯ್ದಿಲ ಕಾವಂ ತುದಿಗೆಯ್ದೆ ಸೀಳ್ವ ತೆಱದಿಂ ಸೀಳ್ದಂ ಜರಾಸಂಧನಂ (ಪಂಪಭಾ. ೬-೨೭); ರಾವಣನಂ ಕೋವಣಮಂ ಸೀಳ್ವಂತೆ ಸೀಳ್ದು (ಧರ್ಮಾಮೃ. ೭-೯೫). ೩. ಬಗಿ; ತೋಡು: ನರಸಿಂಹಾಕಾರದಿಂ ದಾನವಪತಿಯುರವಂ ಸೀರ್ದಂ (ಮೃಆರಿ. ೧೯೨೯, ೬೫-೨೨; 1081); ಇರದೆ ಸೀಳಿದು ಹೊಟ್ಟೆಯನು ತೆಗೆಸುವರು ಕರುಳನು (ನಿಭಾಗ. ೫-೧೧-೩೩). ೪. ಹರಿ; ಹರಿದುಹಾಕು: ಕಾಮನ ಪಟಮಂ ಸೀಳ್ದು ಕಳೆ ವೃಥಾಪೂಜಿತಮಂ (ಕಾದಂಉ. ೫೯೧); ಕಪ್ಪಡಮಂ ಸೀಳ್ದು [ಮನೆಯಂ ಪೊಱಮಟ್ಟು] (ಪಂಚತಂ. ೧೯೩-೧೩). ೫. ಬಿರುಕು ಬಿಡಿಸು; ಬಿರಿಯುವಂತೆ ಮಾಡು: ಸಮನಾಗಿರೆ ಶಾಖಾಬೀಜಮನೆರಡಂ ಕೊಂಡು ಸೀಳ್ದು ಸಂಧಿಸಿ ಮಧುವಾಜ್ಯಮನಲ್ಲಿ ತೊಡೆದು ನಡುಗೊಂದೆ ಮೊದಲ್ ಪಿರಿದಾಗಿ ತತ್ಪಳಂ ಬೇಱಕ್ಕುಂ (ಲೋಕೋಪ. ೬-೨೨); ಅರಗಿಳಿ ಸೀಳ್ದೊಡೆ ಮಡಿಯೊಳ್ಸುರಿದಿರೆ ನೆಲ್ವಾಲ್ (ರಾಜಶೇ. ೨-೧೪). ೬. ಬಿರುಕುಬಿಡು; ಬಿರಿ: ನೀರೇಱಿದ ನಾಳಿಪುಣ್ಣೊಡೆದು ಸೌಳೆನೆ ಸೀಳ್ದುದು ದೋಣಿವೋಪಿನಂ (ಸುಕುಮಾ. ೫-೧೬); ಸೀಳೆ ಶೈಳಮಹಿರಾಜಂ ಬಳ್ಳೆ ಕೂರ್ಮಂ . . . ನಿಸ್ಸಾಳಧಳಂಧಳಂಧಳರವಂ ಪರ್ಬಿತ್ತು ಮೂಲೋಕಮಂ (ಗಿರಿಕ. ೬-೫೪). ೭. ತುಂಡಾಗು; ಕತ್ತರಿಸಿಹೋಗು: ರಸನೆ ನೀಳಕ್ಕೆ ಸೀಳ್ದುದು ನುಡಿದಡಿಂತಹ ಭಾಷೆಯಂ (ಬಸಪು. ೩೫-೪೯). **ಸೀಳು$_1$**: ೧. ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿಂದಲ್ಲದೇ (ಸೋಮೇಶ. ೭೬); ಪಿರಿದಾಗಿ ಬಲಿದ ಬಾಳೆಯ ಕಾಯಿಗಳನು ತಂದೆರಡಾಗಿ ಸೀಳಿ . . . ತೆಗೆದುಕೊಂಡು (ಸೂಪಶಾ. ೪-೭೩). ೨. ನೀನಲ್ಲ ದನ್ಯದೈವವುಂಟೆಂಬವನ ಬಾಯ ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ (ಬಸವ. ೭೫೧); ಹಸುಳೆತನದಲಿ ಹರನ ಮಗನಾ ವಿಷಮದೈತ್ಯನ ಸೀಳಿ ಬಿಸುಡನೆ (ಕುವ್ಯಾದ್ರೋ. ೫-೨೫). ೩. ಎಲೆ ಮರುಳೆ ನಿನ್ನೊಡಲ ಸೀಳಿಯೆ ತಿಳಿರಕುತದಲಿ ತಾಯ ತುಱುಬನು ನಾದಿಸುವೆನೆಂದ (ಕುವ್ಯಾದ್ರೋ. ೫-೪೪). ೪. ಕೋಪಿಸುತೆದ್ದು ಸೆಳೆದು ಸಱ್ಱನೆ ಸೀಳೆ . . . ಹೋಗದೆಲೆ ಮಗನೆ ಇದು ಪಡಿಪತ್ರವೆಂದೆನುತೆ (ನಂಬಿರ. ೭-೮೫); ಇಟ್ಟ ವಿಭೂತಿಯಱಿಯದಿರೆ ಸೀಳಿದ ಬಟ್ಟೆಯಂತಕ್ಕು (ಸರ್ವಜ್ಞ. ೧೨೦). ೫. ಸೀಳಿದುದು ತೋಳ್ಗಳಂ ಕಳಹಂಸ ಸಾರಸಮೃಣಾಳಮೆಂದುಂ ಚಂಚುವಿಂ (ಚಿಬಪು. ೧೦-೬೪); ತಲೆಯೆತ್ತಿ ಕೂದಲ ಸೆಳೆಕೊಳ್ವ ಮುಳ್ಳು ಮೈಯಲುಗೆ ಸೀಳುವ ಬಲುಮುಳ್ಳು (ಕಂನವಿ. ೧೮-೪೭). ೬. ಸೂಳವಿಸಿ ಬೊಬ್ಬಿಱಿದವುರುನಿಸ್ಸಾಳಚಯವದ್ರಿಗಳ ಹೆಡತಲೆ ಸೀಳೆ (ಕುವ್ಯಾದ್ರೋ. ೧-೪೪); ಕಾಲೊಳು ಮೂಡಿದ ದಸಿಮುಳ್ಳುಗಳು ತಾಕಿ ಸೀಳಿದ ಮೃಗಾಯದಿಂದ . . . ಜನಜಾಲವೈದಿತು ದೆಸೆದೆಸೆಗೆ (ಕಂನವಿ. ೧೧-೫೦). ೭. ಬಿರಿದ ಬತ್ತಳಿಕೆಗಳ ಸೀಳಿದ ಹರಿಗೆಗಳ ಹೇರಾಳದಲಿ ರಂಜಿಸಿತು ರಣಭೂಮಿ (ಕುವ್ಯಾಕ. ೧೫-೩೨); ಹರಿಗೆ ಹಱಿದವು ಕವಚ ಸೀಳಿದವು (ಕೌಶಿರಾ. ೩೨-೨೬). ೮. ಬೇರ್ಪಡಿಸು; ಪ್ರತ್ಯೇಕಿಸು; ವಿಭಾಗಿಸು: ನಾಣ್ಯವ ಹೊದ್ದೆನೆಂದರೆ ಬೆಲೆಯಲ್ಲಿ ಸಿಕ್ಕಿ ಸೀಳಬಹುದೇ ಬಾಳಾಂಬಕನ ಬಲ್ಲೆ ವೆಂದಡೆ ಕಾಳುಮರ್ತ್ಯರಲ್ಲಿ ಸತ್ಯವ ಸೀಳಬಹುದೇ (ಮೋಳಿಮಾ. ೩೫-೧೪೫). 'ಕೀಟ್', 'ಗೀಳ್$_1$' ಪರಾ. [ದೇ. ‖ ತೆಲು. ಚೀಲು]

ಸೀಳ್$_2$, ಸೀಳು$_2$ (ನಾ). ೧. ಚೂರು; ತುಂಡು: ಪೊಡೆಗೆಡೆದ ಹೇರೊಡಲ ಸೀಳ್ಗಳಿಂ

ಪೋಳ್ಗಳಿಂ (ಚಕ್ರಮಿಭಾ. ೪-೪೭). ೨. ಬಿರುಕು; ಒಡಕು: ಬಾಳ ರಕ್ತವನೀಂಟುವ ಜಿಗುಳಿಯೊಲಿರ್ಪ ತೋಳ ಮೇಗಳ ಸೀಳ್ಗಳೇನೇ (ಮೋಹತ. ೧೮-೭೭). ಸೀಳು$_2$: ೧. ಜನನದ ನೆಲೆಯ ಕಾಲಕೆ ಸತಿಯರುದರದೊಳಿದುದೊಂದೊಂದವಯವದ ಸೀಳೆರಡು ಸಮನಾಗಿ (ಕುಮಾಸ. ೨-೪೩); ಬೆಳಗ್ಗೆ ರಾಮನಾಥ ಮಾಡಿಕೊಟ್ಟ ಬಿದಿರಿನ ಸೀಳುಗಳನ್ನು ಹುಡುಕಿ ತಂದಳು (ಮೂಹರಾ. ೫೫). ೩. ಜಮಾನಿನ ಒಂದು ಸಣ್ಣ ಭಾಗ: ಕಾಲುವೆ ದಂಡೆಯ ಗದ್ದೆ ೩ ೧ ಕೈ ದಳವೈನ ಮೊದಲದಳೆ ೧ ಕೈ ಸೀಳು ೩ಕೈ ೩ ೧/೪ (ಎಇ. XVI. ಚಿಕ್ಕಜಾ. ೫೩-೧೬; 1639). ೪. ನೂಲಿನ ಲಡಿ; "ಸೂತ್ರವೇಷ್ಟನ, ಜೇಡರು ಸುತ್ತಿದ ನೂಲು, ಪಟ್ಟೆ" (ಗಂಗಾಮ. ೬). ೫. ಉಕ್ಕೆ; ಉಳುಮೆ: ನಮ್ಮ ಹೊಲಕ್ಕೆ ಮೊದಲ ಸೀಳು ಆಗಿದೆ (ರೂಢಿ). 'ಸೀಳುಕ್ಕೆ' ಪರಾ.

ಸೀಳಾಗು = ಭಾಗವಾಗು; ಪಾಲಾಗು: ಎರಡು ಸೀಳಾಯ್ತವನ ಕರಿ (ಕುಮಾಕ. ೨-೨೦); ತನುವೆರಡು ಸೀಳಾಯ್ತು ವಜ್ರದಲದ್ರಿ ಬಿರಿವಂತೆ (ನಿಭಾಗ. ೧೧-೩೬-೨೨).

[< ಸೀಳ್$_1$ ./ ಮಲ. ಚೀಳ್; ತುಳು. ಸೀಳ್, ಚೀಲ್; ತೆಲು. ಚೀಲಿಕ, ಚೀರಿಕ]

ಸೀಳ 'ಸೀಲ' ನೋ.

ಸೀಳಿಕೆ (ನಾ). ೧. ಚೂರು; ತುಂಡು: ಬಿದಿರ ಸೀಳಿಕೆ [ಪಾಠಾಂ. ಸಿಲಿಕ್ಕೆ]ಯಲ್ಲಿ ಕಾಲ ಕೆಸಱೆಲ್ಲಮಂ ಬಳಿದು ಕಳೆದು ಮತ್ತಾಕೆಯಟ್ಟದುದಕದಿಂ ಪಾದಂಗಳನೊದ್ದೆಯಂ ಮಾಡಿ (ಪುಣ್ಯಾಸ್ರ. ೧-೧೭ ಪ). ೨. ಬಿರುಕು ಬಿಟ್ಟುದು: ಅಂಗಾಲಿನ ಸೀಳಿಕೆಯಿಂದ ಹೆಜ್ಜೆ ಊರಲಾಗುವುದಿಲ್ಲ (ರೂಢಿ). [ಸೀಳ್$_1$ + - ಇಕೆ]

ಸೀಳಿಕ್ಕು (ಕ್ರಿ). ಕತ್ತರಿಸಿ ಹಾಕು; ಕಡಿ; ಕೊಚ್ಚು: ಸೌಂದರಿಯೊಳ್ ಕೂಡವೆನೆಂಬುದೆಗ್ಗು ಮರುಳೇ ಸೀಳಿಕ್ಕದೇಂ ಮಾಣ್ಬನೇ (ಧರ್ಮಾಮೃ. ೧೩-೧೩೧). [ಸೀಳ್$_1$ + ಇಕ್ಕು]

ಸೀಳಿಡು$_1$ (ಕ್ರಿ). = ಸೀಳಿಕ್ಕು: ಆತನೊಡಲಂ ಸೀಳಿಡು ದಿಶಾಬಲಿಗೊಡೆಂದೆಸಲ್ . . . ಕರಿತುರಂಗರಥಸಂದಣಿಯ ಮೇಲಿಡಿದುವಂಬುಗಳ್ (ಚಿಬಪು. ೩೨-೫).

[ಸೀಳ್$_1$ + ಇಡು$_1$]

ಸೀಳಿಡು$_2$ 'ಸಿಳ್ಳಿಡು' ನೋ.

ಸೀಳಿಸು (ಕ್ರಿ). ೧. ಸಿಗಿಯುವಂತೆ ಮಾಡು: ಅಚ್ಚಗೊಂಡದೊಳಗುರ್ವಿಸೆ ಸೀಳಿಸಿ ಮಾಣದಿಕ್ಕೆ ಪೋಟ್ಟೊರ್ವಗಿ ಮಾಡಿ ತಾಳಿಸೆ (ಶಾಂತಿಪು. ೭-೯೫); ಕಟದೆಲ್ಲು ಸೀಳಿ ಸೀಳಿಸಿ ಕಟವಾಯ್ಗಳಂ (ಅಜಿಪು. ೯-೩೬); ನುಡಿದರೆ ಬಾಯ ಸೀಳಿಸುವೆ (ಕೌಶಿಕಾ. ೧೮-೫೦). ೨. ಹರಿದು ಹಾಕುವಂತೆ ಮಾಡು; ಹರಿದು ಹಾಕಿಸು: ಬಡ್ಡಿಯಿಕ್ಕುವಂ ಮೊದಲಂ ಕೊಟ್ಟು ಪತ್ರವಂ ಸೀಳಿಸುವಂತೆ (ಧರ್ಮಾಮೃ. ೧೪-೧೦೪). [ಸೀಳ್$_1$ + - ಇಸು$_3$]

ಸೀಳು$_1$ 'ಸೀಳ್$_1$' ನೋ.

ಸೀಳು$_2$ 'ಸೀಳ್$_2$' ನೋ.

ಸೀಳು$_3$ 'ಸಿಳ್ಳು$_1$' ನೋ.

ಸೀಳುಂಗಲ್ಲ (ನಾ). ಬಿರಿದ ಗಲ್ಲ; ಸೀಳಿ ಹೋದ ಗಲ್ಲ: ಗೇಣಂಜುರಿಗ, ಸೀಳುಂಗಲ್ಲಂ (ಶಬ್ದಾನು. ೫೫ ಪ್ರಯೋ). [ಸೀಳು$_1$ (< ಸೀಳ್$_1$) + ಗಲ್ಲ$_1$]

ಸೀಳುಕಂಡಿ 'ಸೀಳುಗಂಡಿ' ನೋ.

ಸೀಳುಕ್ಕೆ (ನಾ). ಮೊದಲ ಉಕ್ಕೆ,— ಉಳುಮೆ: ವಕ್ಕಲಿಗನೆ ಭರದಿ ಸೀಳುಕ್ಕೆಯುತ್ತುತ್ತು (ಜ್ಞಾನಚಿ. ೧೩-೬); ಒಂದು ದಿನ ಇವನು ಮಂಡಹಳ್ಳಿಗೆ ಹೋಗುವ ದಾರಿಪಕ್ಕದ ದರೆಹೊಲದಲ್ಲಿ ಸೀಳುಕ್ಕೆ ಹೊಡೀತಾ ಇದ್ದ (ನನ್ನೂರು. ೨೯೭).

[ಸೀಳು$_2$ (< ಸೀಳ್$_2$) + ಉಕ್ಕೆ (< ಉಟ್ಕೆ)]

ಸೀಳುಗಂಡಿ, ಸೀಳುಕಂಡಿ (ನಾ). ಕಿಂಡಿ; ರಂಧ್ರ: ಹೊರಗಿನ ವಿದ್ಯುತ್ಪ್ರವಾಹವು ಅರ್ಧಸುತ್ತು ಬಂದಾಗ ಈ ಸೀಳುಗಂಡಿಯಿರುವ (Slit) ಕೊಳವಿಯು ಅದರ ದಿಕ್ಕನ್ನು ತಿರಿಗಿಸುತ್ತದೆ (ಕಿಲ್ಲಸಾ. ೨೩೬). ಸೀಳುಕಂಡಿ: ಅವನು ನನ್ನ ಬಾಗಿಲ ಸೀಳುಕಂಡಿಯಲ್ಲಿ ತನ್ನ ಅಳುಮೋರೆಯನ್ನಿರಿಸಿದನು (ಪುನರು. ೫೦೫). [ಸೀಳು$_1$ (< ಸೀಳ್$_1$) + ಕಂಡಿ$_1$]

ಸೀಳುಗಾಯ (ನಾ). ಬಿರುಕುಂಟಾಗುವ ಗಾಯ; ಬಿರಿದ ಗಾಯ: ಆ ಹುಡುಗನ ಕಾಲಿಗೆ ಸೀಳುಗಾಯ ಆಗಿದೆ (ರೂಢಿ). [ಸೀಳು$_1$ (< ಸೀಳ್$_1$) + ಗಾಯ]

ಸೀಳುದಾರಿ 'ಸೀಳ್ದಾರಿ' ನೋ.

ಸೀಳುನದಿ (ನಾ). ಕವಲುಗೊಂಡ ನದಿ; ಉಪನದಿ: ಸಮುದ್ರವನ್ನು ದಾಟಿ ಬಂದ ವರ್ತಕರು ಒಂದು ಸೀಳುನದಿಯಲ್ಲಿ ಸಿಕ್ಕಿ ಮುಳುಗಿದಂತಾಯಿತು (ವಚಭಾ. ೩೧೦)

[ಸೀಳು$_1$ (< ಸೀಳ್$_1$) + ನದಿ]

ಸೀಳುನಾಯಿ 'ಸೀಳ್ನಾಯ್' ನೋ.

ಸೀಳುನಾಲಿಗೆ (ನಾ). (ಆಲಂ) ಎರಡು ರೀತಿ ಆಡುವ ನಾಲಿಗೆ; ಸುಳ್ಳು ಹೇಳುವ ನಾಲಿಗೆ: ಸೀಳುನಾಲಿಗೆಯವನನ್ನು ನಂಬಬಾರದು (ರೂಢಿ).

[ಸೀಳು$_1$ (< ಸೀಳ್$_1$) + ನಾಲಿಗೆ (< ನಾಲಗೆ)]

ಸೀಳುಹಾದಿ (ನಾ). ೧. ಕವಲುಹಾದಿ; "ಕಾಲುದಾರಿ" (ಜಾನಕೋ. ೪೯). ೨. (ಆಲಂ) ಕೆಟ್ಟ ಮಾರ್ಗ: "ವ್ಯಧ್ವಃ . . . ಕಾಪಥಃ — ೫ ಕೆಟ್ಟದಾರಿ, ಸೀಳುಹಾದಿ" (ಸಿದ್ಧಾಂತಿ. ೯೭). [ಸೀಳು$_1$ (< ಸೀಳ್$_1$) + ಹಾದಿ (< ಪಾದಿ$_1$)]

ಸೀಳೆ (ನಾ). ಒಂದು ಬಗೆಯ ಮರ; ಚಳ್ಳೆಮರ: "ಝುಟ್ಟಿಃ, ಶ್ಲೇಷ್ಮಾತಕಃ, ಶೇಕಃ, ಉದ್ದಾಲಃ, ಬಹುವಾರಕಃ — ಈ ೫ ಸೀಳೆಯ ಮರ" (ನಾಚಿರಾ. ೧೦೭). [< ಸಂ. ಶೇಲು]

ಸೀಳೆಲುಬು (ನಾ). ಕವಲನ್ನು ಹೊಂದಿರುವ ಎಲುಬು: ತೋಳೆಲುಬಿಗೆ ಅಂಟಿ ಕೊಂಡು ತಿರುಗಾಡಬಲ್ಲ ಮುಂಗೈಯ ಸೀಳೆಲುಬಿದೆ (ಬಾಲಪ್ರ. I, ೧೯೬).

[ಸೀಳು$_1$ (< ಸೀಳ್$_1$) + ಎಲುಬು (< ಎಲ್ಬು)]

ಸೀಳ್ಕೆಡಹು (ಕ್ರಿ). ತುಂಡು ಮಾಡಿ ಚೆಲ್ಲು: ಇಬ್ಬಗಿಯಾಗಿ ತನ್ನೊಡಲ ಸೀಳ್ಕೆಡಹಬೇಡವೆ (ಚಕ್ರಮಿಭಾ. ೧೯-೨೯). [ಸೀಳ್$_2$ + ಕೆಡಹು (< ಕೆಡಪು)]

ಸೀಳ್ಗಡಿ (ಕ್ರಿ). ಇಬ್ಭಾಗವಾಗುವಂತೆ ಕತ್ತರಿಸು, — ತುಂಡುಮಾಡು: ಹಸ್ತಿಮಸ್ತಕವ ಸೀಳ್ಗಡಿದುದುರ್ದಯಮಳ ಪೇರ್ಮುತ್ತ ತಂದು (ನವಮೋ. ೧೬-೨೪).

[ಸೀಳ್$_2$ + ಕಡಿ$_1$]

ಸೀಳ್ಗಾಯ್ (ನಾ). ಬಿರಿದಿರುವ ಕಾಯಿ; ಬಿರುಕು ಬಿಟ್ಟಿರುವ ಕಾಯಿ: ಸೀಳ್ಗಾಯ್ಗಳ್ ಬೀಗಿ ಬೆಳೆದು ಕೆಂಬಿತ್ತುಗಳಿಂ ಪೋಳ್ಗೆದರ್ದಿರೆ ದಾಳಿಂಬದ ತಾಟ್ಗಳ್ ನಿಟ್ಟಿಪರ ದಿಟ್ಟಿಗಿಟ್ಟಳಮೆಸೆಗುಂ. (ಶಬ್ದಾನು. ೧೯೩ ವ್ಯಾಖ್ಯಾ). [ಸೀಳ್$_1$ + ಕಾಯ್$_4$]

ಸೀಳ್ದಾರಿ, ಸೀಳುದಾರಿ (ನಾ). ಕವಲೊಡೆದಿರುವ ದಾರಿ; ಕವಲುದಾರಿ: ರಾಜಮಾರ್ಗವನ್ನು ಬಿಟ್ಟು ಸೀಳ್ದಾರಿಯನ್ನು ಹಿಡಿದು ಒಂದು ಸಣ್ಣ ಕೆರೆಯ ದಂಡೆಗೆ ಬಂದು ನಿಂತ (ಫಲಸಂ. ೬). ಸೀಳುದಾರಿ: ಇತರ ಸೀಳುದಾರಿಗಳು ಆಸ್ಟ್ರೇಲಿಯ, ಭಾರತಗಳಿಗೆ ಹೋಗುತ್ತವೆ (ಭೂವಿವ. ೨೦೭); ಸೀಳುದಾರಿಗಳು ಬೈತಲೆಯಂತೆ ತೋರುತ್ತಿವೆ (ಕುಂಜಮ. ೪೧). [ಸೀಳ್$_1$ + ದಾರಿ]

ಸೀಳ್ನರಿ (ನಾ). ಕ್ಷುದ್ರವಾದ ನರಿ (?): ಸಿಡಿಲ ಭರವೆತ್ತ ಶಿಶುಗಳ ಬಳಗವೆತ್ತ ಗುಡಿಗುಡಿಪ ಸಿಂಹಮದೆತ್ತ ಸೀಳ್ನರಿಗಳೆತ್ತಲು (ಚಬಪು. ೩೧-೩೬). [ಸೀಳ್? + ನರಿ]

ಸೀಳ್ನಾಯ್, ಸಿಳ್ಳುನಾಯಿ, ಸೀಳುನಾಯಿ (ನಾ). ೧. ಭಯಂಕರವಾದ ಒಂದು ಜಾತಿಯ ನಾಯಿ; ಉಗ್ರವಾಗಿರುವ ಒಂದು ಜಾತಿಯ ನಾಯಿ (?): ಸರೆಯಂ ತೆಗವ ಸೀಳ್ನಾಯ್ಗಳುಮಂ . . . ಕಂಡು (ಗದಾಯು. ೫-೩ ಪ); ಪಾಲಿಂ ಮರ್ದಿಸಿ ಪುಷ್ಕರಮೂಲಮನಲ್ಲದೊಡೆ ಬಂಜೆಮಡುವಾಗಲುಮಂ ಪಾಲಿಂದರೆದೀಂಟುಗೆ ತಾಂ ಸೋಲಿಸೆ ಸೀಳ್ನಾಯ [ಪಾಠಾಂ. ಶೋಧಿಸೆ ಶೀಳ್ನಾಯ] ವಿಷಮನಂತದೆ ಸಾಲ್ಗುಂ (ಖಮದ. ೧೩-೨೫); ಸಿಂಹದ ಮಱಿ ಸೀಳ್ನಾಯಾಗಬಲ್ಲುದೇನಯ್ಯ (ಅಖಂಡಾ. ೨೦-೯). ಸಿಳ್ಳುನಾಯಿ: ೧. ಹುಲಿ ಅಟ್ಟುತ್ತಿದೆಯೋ? ಅಥವಾ ಸಿಳ್ಳುನಾಯಿಗಳೋ? (ಮಲಮ. ೭೬). ಸೀಳುನಾಯಿ: ೧. ಸಿಂಹದ ಮಱಿಯ ಸೀಳುನಾಯಿ [ಪಾಠಾಂ. ಸೀಳ್ನಾಯಿ] ತಿಂಬಡೆ ಭಂಗವಿನ್ನಾರದು ಚೆನ್ನಮಲ್ಲಿಕಾರ್ಜುನ (ಮಹಾದೇ. ಬ. ೯೩-೨೧೮); ಸೀಳುನಾಯಿ. ಸೀಱ್ನಾಯ್. ಸಿರ್ ಎಂದು ಮೇಲೆ ಬೀಳುವ ನಾಯಿ (ನಮ್ಮನು. ೧೧೦). ೨. 'ಬೇಟೆನಾಯಿ' (ಜಾನಕೋ. ೫೦). 'ಸೀರ್ನಾಯ್' ಪರಾ. [ಸೀಳ್? + ನಾಯ್]

ಸೀಱ (ನಾ). ಒಬ್ಬಾತನ ಹೆಸರು: ರಾಚಮಲ್ಲಗಾಮುಣ್ಣನುಂ ಸೀಱನುಂ ಗಂಗ ಗಾಮುಣ್ಣನುಮ್ . . . ಸಾಕ್ಷಿಯಾಗೆ ಕೊಟ್ಟತ್ತು (ಇಆ. XII. ೧೬-೪೬; 813). [?]

ಸೀಱು$_1$, ಸೇಱು (ಕ್ರಿ). ೧. ಸಿಟ್ಟಿಗೇಳು; ಸಿಡಿಮಿಡಿಯಾಗು: ಆಗ ಮೆಱೆಮಿಂದ ಸೀಱುತಿವನೇ ನಂಬಿಯಾತನ ಗಾಱುಗೆಲಸಕೆ ಶಂಕರಂ ಮನವೂಱೆ ನಿಚ್ಚಂ ಪಡಿಯನಿಕ್ಕುವನಹುದೆ ಲೇಸಾಯ್ತು . . . ಎನುತ (ಚಪಪು. ೨೬-೨೧). ೨. ಜಗಳವಾಡು: "ಸೀಱು —ದುಷ್ಕಲಹೇ, ದುಃಖಲಯೇ" (ಶಮಧಾ.ನಿ). 'ಸೀರ್ಕರಡಿ' ಪರಾ. ೩. ಕಿರಿಚು;

ಕೂಗು; ಚೀರು: ಹಾಱೆ ಕೆಡವುತ ಜಿನಬಸದಿಗಳನೇಱಿಯಲ್ಲಿಂದಿಳಿಯ ಜಾಱುತ ಸೀಱುತಪತಾಪಿಸುತ (ಬಸಪು. ೫೨-೧೩); ಕೆಟ್ಟೆನೆಂದೊಱಲುತ ಸೀಱುತಳವಱಿಯುತ್ತ . . . ನಡೆದು (ಭಾವಚಿಂ. ೮-೩೦). ಸೀಱು: ೪. ನಿಂದಿಸು; ದೂಷಿಸು: ದಿನದಿನಕೆ ನಿಯಮಾಚಾರಭಾಷೆಗಳ ಸೀಱಿದೆನೆ (ಬಸಪು. ೪೫-೧೮). 'ಕೀಱು$_1$', 'ಕೀಱು$_2$' ಪರಾ.

[ದೇ. ॥ ತಮಿ. ಮಲ. ಚೀಱು; ತುಳು. ಸೀರುನಿ; ತೆಲು. ಚೀರು, ಚೀಱು]

ಸೀಱು$_2$ (ಕ್ರಿ). ಚೆದರು; ಹರಡು: ವಿವಿಧವೃಥಪಾಂಸುಗಳಿಂದ ನಾಡೆ ಸೀಱಿದ ತಲೆಯುಂ . . . ನೆಗ್ಬಲ್ (ಕಾದಂಬ. ೬೩೬); ನೂಱಾಱು ಪೆಟಲ ಗುಂಡುಗಳ ಚೋಡಿಸಿ ಕಂಚಗಾಱರ ಪಸರಕಟ್ಟಂತೆ ಸೀಱಿ ಸಿಡಿಲು ಬೀಳುತಿವೆಯೆಂಡಬಲದೊಳಗೆ (ಭಂಚಪ. ೩೪-೨೪). [ದೇ. ॥ ತೆಲು. ಚೀಱುಮು; ತೊದ. ಸೀರ್; ಕುಣ. ಸೀರ್ಪ]

ಸೀಱು$_3$, ಶೇರು, ಸೀರು$_3$, ಸೇರು$_2$ (ನಾ). ೧. ಒಂದು ಬಗೆಯ ಜಿಗುಟುಮಣ್ಣು; ಜೇಡಿಮಣ್ಣು: 'ಸೀಱುಮಣ್ಣು' ಪರಾ. ಶೇರು: ೨. ಕೆಸರು; ಬದಿ: ಇಳಿಜಾರು ತೀಕ್ಷ್ಣವಾಯಿತು, ಜೌಗು ಅಧಿಕವಾಗಿ ಶೇರಾಯಿತು (ಪಜಹೂ. ೧೫೧). ಸೀರು$_3$: ೧. 'ಸೀರುಮಣ್ಣು' ಪರಾ. ಸೇರು$_2$: ೧. ಆ ಮನೆಯನ್ನು ಪೂರ್ತಿ ಸೇರಿನಲ್ಲೇ ಕಟ್ಟಿದ್ದಾರೆ (ರೂಢಿ). 'ಚೀಱು$_3$' ಪರಾ.

ಸೇರಮಣ್ಣು = ಜಿಗಿಯಾದ ಮಣ್ಣು; ಜೇಡಿಮಣ್ಣು: ಮೇಲೊಂದು ಮುಚ್ಚಳವಂ ಮುಚ್ಚಿ, ಅದರ ಸಂದಿಗೆ ಸೇರಮಣ್ಣಂ ಕೊಟ್ಟು ಕುಕ್ಕುಟಪುಟ ಹಾಕುವುದು (ಸಕವೃ. ೬೩).

[ದೇ. ॥ ತಮಿ. ಮಲ. ಚೀಱು; ಕೋತ. ಚೇರ್; ತೊದ. ಸೋಱು]

ಸೀಱುಂಬಳ್ 'ಸೀಱುಂಬುಳು' ನೋ.

ಸೀಱುಂಬಾಳು 'ಸೀಱುಂಬುಳು' ನೋ.

ಸೀಱುಂಬುಳ್ 'ಸೀಱುಂಬುಳು' ನೋ.

ಸೀಱುಂಬುಳಾಡಿಸು (ಕ್ರಿ). ಎರಚು; ಚಲ್ಲಾಪಿಲ್ಲಿ ಮಾಡು: ಬೆಂಬೇಳದ ತನಗಿದಿರಾದ ನೃಪನಿಕುರುಂಬವ ತಾನಿರದೆಚ್ಚ ಅಂಬುಗಳಿಂದ ಕರುಳ್ಗಳ ಸೀಳಿ ಸೀಱುಂಬುಳಾಡಿಸಿ ಕೊಂದನತ್ತ (ನೇಮಿಸಂ. ೨೯-೧೨೦). [ಸೀಱುಂಬುಳಾಡು + -ಇಸ್ಸು]

ಸೀಱುಂಬುಳಾಡು, ಸಿಱುಂಬಳಾಡು, ಸಿಱುಂಬುಲಾಡು, ಸಿಱುಂಬುಳಾಡು, ಸೀರುಂಬುಳಾಡು (ಕ್ರಿ). = ಸೀಱುಂಬುಳಾಡಿಸು: ಜಟಾಸುರನಂಬುಸುರನನಾ ಗಿರೀಂದ್ರಕಂದರದೊಳ್ ಸೀಳ್ದು ಸೀಱುಂಬುಳಾಡಿ (ಪಂಪಭಾ. ೮-೩೧ ವ); ಸೃಗಾಲಶಾರ್ದೂಲ ಕಾಕಂಗಳ್ ಕಥಕನ ಪೃಥುಶರೀರವಂ ಸೀಳ್ದು ಸೀಱುಂಬುಳಾಡಿ ಕೊಂದುವು (ಪಂಚತಂ. ೧೪೫-೧೮). ಸಿಱುಂಬಳಾಡು: ಆ ನರಿಗಳ್ ಸೀಳ್ದು ಸಿಱುಂಬಳಾಡಿ ತಿನೆ (ಸುಕುಮಾ. ೧೨-೩೯); ಮುಂಬರಿಯುತ ಶರಭಂಗಳ ಸೀಳಿ ಸಿಱುಂಬಳಾಡುತ ಬರೆ (ತ್ರಿಪಾಲ. ೬-೩೪). ಸಿಱುಂಬುಲಾಡು: ಮಿಕ್ಕಿದಿರಾನ್ತ ವೈರಿಗಳನಾಹವರಂಗದೊಳಿಕ್ಕಿ ಮೆಟ್ಟಿ ಸೀಳ್ದಿಕ್ಕಿ ಸಿಱುಮ್ಬುಲಾಡಿ (ಎಕ. VI. ಕಡೂರು. ೩೮-೫೦; 1191). ಸಿಱುಂಬುಳಾಡು: ದಂತಿಗಳಂ ಸೀಳ್ದು ಸಿಱುಂಬುಳಾಡಿದುದದೊಂದುತ್ಕಂಠಕಂಠೀರವಂ (ಜಗವಿ. ೧೬-೧೨); ಸಿಂಹಮಂ ಶರಭಂ ಸೀಳ್ದು ಸಿಱುಂಬುಳಾಡಿದವೂಲಾಂ ಮಾಟ್ಪೊ ದ್ವಿಪದ್ಯೂಪನಂ (ಮಹಾನಂ. ೫-೮೪). ಸೀರುಂಬುಳಾಡು: ಎರಳೆಗಳ ತಂಡಮಂ . . . ಪಿಡಿದು ನೆತ್ತರಂ ಕುಡಿದು ಝುಂಕಿಸಿ ಸೀರುಂಬುಳಾಡಿ ಸುಂಟಿಗೆಯಂ ತಿಂದು ತೇಗುವ ತರಕ್ಕುಗಳೊಳಂ (ಮರಾಚ. ೮-೨೪ ವ). [ಸೀಱುಂಬುಳು + ಆಡು$_1$]

ಸೀಱುಂಬುಳು, ಸಿಱುಂಬುಳ್, ಸೀಱುಂಬಳ್, ಸೀಱುಂಬಾಳು, ಸೀಱುಂಬುಳ್ (ನಾ). ಹರಡಿ, ಚಲ್ಲಾಪಿಲ್ಲಿಯಾಗಿರುವುದು: "ಸೀಱುಂಬುಳುಯೆಂದು ಕವಿಗಳಂ ಸೂಸಾಟಂ" (ಕವಿಕಂ. ೨೨೫). ಸಿಱುಂಬುಳ್: "ಸಿಱುಂಬುಳೆಂದು ಸೂಸಾಟಂ" (ಕಶಸಾ. ೬೬- ೪೭೩). ಸೀಱುಂಬಳ್: "ಸೀಱುಂಬಳೆಂದಕ್ಕು ಸೂಸಾಟಕ್ಕೆ" (ಶಬ್ದಮಂ. ೬೨). ಸೀಱುಂಬಾಳು: ಕಂಬುಕಂಧರಗಳ ಕವಲಂಬುಗಳಿಂ ಸೀಱುಂಬಾಳುವಂತಿಡುತಿಹರು (ಜ್ಞಾನಚಿ. ೧೩-೭೬). ಸೀಱುಂಬುಳ್: "ಸೀಱುಂಬುಳ್ಸೂಸಾಟಂ" (ಕವಿಕಂ. ೧೯೫). [< ಸೀಱು$_2$]

ಸೀಱುಡು (ನಾ). ದುಂಬಿಯ ಜಾತಿಗೆ ಸೇರಿದ ಒಂದು ಬಗೆಯ ಹುಳು; ಜೀರುದುಂಬಿ: ತಳ್ಪೊಳ್ಳ ಸೀಱುಡುವಿಂದದ್ಭುತದಿಂ ಹಿಡಿಂಬವನಮಂ ಪೊಕ್ಕಂ ಮರುನ್ನಂದನಂ (ಪಂಪಭಾ. ೩-೯); ಕರೆದುವು ಸೀಱುಡುಗಳ್ ಪೆರ್ಮರಂಗಳೆಲೆಯಿಕ್ಕಿ ಕಟಲೆ ಬೆಟ್ಟುವು (ಪಂರಾಮಾ. ೭-೮೬). 'ಜೀಱುಂಡೆ' ಪರಾ. [?]

ಸೀಱುದಲೆ (ನಾ). ಕೆದರಿದ ಕೂದಲುಳ್ಳ ತಲೆ: ತೋರಗಿವಿ ಕೆಂಗಣ್ಣು ಬಿಡುವಾಯ ನಿಡುದಾಡೆ ಸೀಱುದಲೆ ಬಱತಂಗವಱತ ಮೊಲೆ (ಸಿದ್ಧರಾ. ೬-೧); ಕಣಿಗಾಲ ಸೋಂಕಿದುಡುಗೆ ಸೀಱುದಲೆಯ ಕೊರವಿಯರದೇಂ ಕಡುದೇಸಿವಡೆದರೋ (ನೇಮಿಸಂ. ೨೧-೫೩).

[ಸೀಱು$_2$ + ತಲೆ$_1$]

ಸೀಱುಮಣ್ಣು, ಸೀರುಮಣ್ಣು, ಸೇರುಮಣ್ಣು (ನಾ). (ಪಾತ್ರೆ, ಮಡಕೆ ಇತ್ಯಾದಿಗಳ ಬಾಯನ್ನು ಗಾಳಿ ಹೋಗದಂತೆ ಭದ್ರಪಡಿಸಲು ಬಳಸುವ) ಒಂದು ಬಗೆಯ ಜಿಗುಟಾದ ಮಣ್ಣು; ಜೇಡಿಮಣ್ಣು: ಮಂಡಗಗೆ ತುಪ್ಪ ಸಕ್ಕರೆ ಬಟ್ಟವಾಲಿಕ್ಕಿಕೊಂಡು ಪಿಂಡಂ ಮಾಡಿ ಹೊಸಮಡಕೆಯೊಳಗೆ ನೆಯ್ಯುಂಡದೊಡವಿಕ್ಕಿ ಅದನಿರಿಸಿ ಮುಚ್ಚುಳನಿಟ್ಟು ಸೀ[ಪಾಠಾಂ. ನೀ]ಱುಮಣ್ಣಿಕ್ಕಿ (ಸೂಪಶಾ. ೧-೨೧). 'ಚೀರುಮಣ್ಣು' ಪರಾ. ಸೀರುಮಣ್ಣು: ಹಸುವಿನ ಹಾಲು ೪ ಕೊಳಗವನ್ನು ೧ ಗುಡಾಣಕ್ಕೆ ಹೊಯ್ದು . . . ಮುಚ್ಚಳ ಮುಚ್ಚಿಸಿ ಸೀರುಮಣ್ಣು ಕೊಟ್ಟು (ಸಕವೃ. ೩೯೦). ಸೇರುಮಣ್ಣು: ಚೀರುಮಣ್ಣನ್ನು ಕೆಲವರು ಸೇರುಮಣ್ಣೆಂದೂ ಹೇಳುತ್ತಾರೆ (ರೂಢಿ).

[ಸೀಱು$_3$ + ಮಣ್ಣು (< ಮಣ್)]

ಸೀಱುಮಣ್ಣುಗೊಡು, ಸೀರುಮಣ್ಣುಗೊಡು (ಕ್ರಿ). (ಪಾತ್ರೆ, ಮಡಕೆ ಮುಂತಾದುವುಗಳೊಳಗೆ ಗಾಳಿ ಹೋಗದಂತೆ ಅವುಗಳ ಬಾಯಿಗೆ) ಜಿಗುಟಾದ ಜೇಡಿಮಣ್ಣನ್ನು ಬಳಿ,— ಮೆತ್ತು: ಪರಿಮಳಂ ಪೋಗದಂದದಿ ಸೀ[ಪಾಠಾಂ.ನೀ]ಱುಮಣ್ಣುಗೊಡಲುರಿಗೆಂಡದ ಮೇಲೆ ಹೊತ್ತದಂದದೊಳವಂ ತಿರುಹಿ (ಸೂಪಶಾ. ೫-೨೨). ಸೀರುಮಣ್ಣುಗೊಡು: ಕುಂಬಳದ ಬಳ್ಳಿಯಂ ಸಣ್ಣನಾಗಿ ಕತ್ತರಿಸಿ ತದಕೆ ಉಪ್ಪಿನಲ್ಲಿ ಅಟ್ಟ ಮಡಕೆಗೆ ಹಾಕಿ ಮುಚ್ಚಳವ ಮುಚ್ಚಿ ಸೀರುಮಣ್ಣುಗೊಟ್ಟು (ಸಕವೃ. ೩೬೫). [ಸೀಱುಮಣ್ಣು + ಕೊಡು$_1$]

-ಸು$_1$ (ಪ್ರ). ಧಾತುಗಳಿಗೆ ಪ್ರೇರಣಾರ್ಥದಲ್ಲಿ ಸೇರುವ ಕೃತ್‌ಪ್ರತ್ಯಯ: ಕೆಲವು ಎಕಾರಾಂತ ಧಾತುಗಳಿಗೆ ಪ್ರೇರಣಾರ್ಥದಲ್ಲಿ ಇಸು ಪ್ರತ್ಯಯಕ್ಕೆ ಬದಲಾಗಿ — ಸು ಎಂಬುದು ಸೇರುವುದುಂಟು (ಮಧ್ವಮ. ೧೫೧). 'ಇಂಬುಕೆಯ್ಸು' ಪರಾ.

-ಸು$_2$ (ಪ್ರ). ನಾಮವಾಚಕದ ಮೇಲೆ ಸೇರಿ, ಕ್ರಿಯಾರ್ಥವನ್ನು ಕೊಡುವ ಪ್ರತ್ಯಯ: 'ಪಟಸು' ಪರಾ.

-ಸು$_3$ (ಪ್ರ). ಧಾತುವಿನ ಮೇಲೆ ಸೇರಿ ಭಾವನಾಮಗಳನ್ನು ಸಾಧಿಸುವ ಕೃತ್‌ಪ್ರತ್ಯಯ: 'ಮುನಿಸ್ಸು$_2$' ಪರಾ.

ಸು$_4$- (ಉಪ) ಒಳ್ಳೆಯ, ಸುಂದರ, ಉತ್ತಮ, ಸಂಪೂರ್ಣ, ಯೋಗ್ಯ ಇತ್ಯಾದಿ ಅರ್ಥಗಳಲ್ಲಿ, ಪದಗಳ ಆದಿಯಲ್ಲಿ ಸೇರುವ ಸಂಸ್ಕೃತದ ಒಂದು ಉಪಸರ್ಗ: 'ಸುಜಾಣ', 'ಸುಜಾಣೆ', 'ಸುಡಾಳ' ಪರಾ. [ಸಂ.]

ಸುಂಕ$_1$ (ನಾ). ೧. (ಸರಕುಗಳ ತಯಾರಿಕೆ, ಮಾರಾಟ, ಆಮದು, ರಫ್ತು, ಇತ್ಯಾದಿಗಳಿಂದ ಸರಕಾರಕ್ಕೆ ಸಲ್ಲಿಸಬೇಕಾದ) ತೆರಿಗೆ; ಜಕಾತಿ: ಶ್ರೀಮತು ಹೆಬ್ಬೊಲ ಕೊಗಳೇಶ್ವರದೇವರಿಗೆ ಸುಂಕದ ಹೆಮ್ಮಾಡಿಯನ್ನ ಅರಿಸ . . . ಸಂಚೆದೀವಿಗೆ ಕೊಟ್ಟ ಗದ್ಯಾಣ ೧ರ ಧರ್ಮ್ಮ (ಎಕ. IV,ಕೃಷ್ಣರಾ. ೪೧-೩; ಸು. 950?); ಅಡಕೆಯ ತೋಟದಲು ವರ್ಷಕ್ಕೆ ಮರದಲೊಂದಡಕೆ ಎಲೆಯ ಸುಂಕ (ಎಕ. VII. ಶಿಕಾರಿ. ೨೦-೧೬; 1032); ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು (ಬಸವ. ೧೯೮). ೨. ಕೊಡುಗೆ; ಕಾಣಿಕೆ: ನಿಡುಹುರ್ಬಿಗಂ ಕರ್ವಿಲ್ಲ ಬಿಂಕಮಂ ಸುಂಕಮಿಕ್ಕಿದಂತೆ ನಗೆವೊಗಕ್ಕೆ ಚಂದ್ರಮಂಡಲದೊಪ್ಪಮಂ ಕಪ್ಪಮಿಕ್ಕಿದಂತೆ (ಪುಣ್ಯಾಸ್ರ. ೨-೩೨ ವ); ಹುಬ್ಬಿನ ಬಿಂಕವು ಇಂದ್ರನ ಸುಂಕವು ಸೋಕಿದರರೆ ನೆಲಗೊಳಿಸುತಿವೆ (ಹಾಡುವಾ. ೨೨-೨). ೩. ಒಂದು ಬಗೆಯ ಲೆಕ್ಕ (?): ಬಿಸಿಗ ವಂದಕೊಪಿರೆಲ ಸಾಗಿಹ ಗಂಧ ಪಂಚಭಾರದ ಸುಂಕಂ ಅರಸನೊಲಿದೀವ ಪಡಿಯಂಬರದಿಂ ತೊಂಭತ್ತು ಭಾರಕ್ಕೇನುಂ ಬಕ್ಕುಂ (ಭಾಸ್ಕರ. ೩೪-೪).

ಸುಂಕದ ಕಟ್ಟೆ = ತೆರಿಗೆ ವಸೂಲಿ ಮಾಡುವ ಉಕ್ಕಡ; ಜಕಾತಿಕಟ್ಟೆ: ನರಸುಂಹಪುರದ ಸುಂಕದ ಕಟ್ಟೆಯಲ್ಲಿ ದೇವರ ಹೆಸರಿಗೆ ನಡೆಯುನ ಮಸಾಶನ ತಿಂಗಳು ೧ ಕ್ಕೆ . . . ರೂ ೧೨ (ಎಕ. V(R). ತಿರುಮ. ೧೪೦-೩೯; 1855); ಠೌಳಿಕಾರರಿಗೆ ಸುಂಕದ ಕಟ್ಟೆ ಕೇಡಿಗೆ ತಾವು ಕೊಡುವ ಕಲ್ಲ ಮಂಟಪದ ನವರಂಗಮೆನಿಪೆನ್ನ ಸರ್ವಾಂಶದಲಿ

ಕಾಣುವವಸರವಿಲ್ಲ (ಭಕ್ತಿಸ. III. ೩). ಸುಂಕದ ಮರ್ಯಾದೆ = ತೆರಿಗೆಯ ಕಟ್ಟಳೆ,—ವ್ಯವಸ್ಥೆ: ಕನ್ನರದೇವನ ಮರ್ಯ್ಯಾದೆಯಲಾದ ಸುಂಕದ ಮರ್ಯ್ಯಾದೆಯಂ ತಪ್ಪದ ನಡಯಿಮನ್ದು ಬಿಟ್ಟಂ (ಸೌಇ. IX-i. ೭೬-೧೫; 991). ಸುಂಕದ ಹೆಗ್ಗಡೆ = ತೆರಿಗೆಯನ್ನು ವಸೂಲುಮಾಡುವ ಅಧಿಕಾರವುಳ್ಳವನು; ಸುಂಕದ ಅಧಿಕಾರಿ: ಸುಂಕದ ಹೆಗ್ಗಡೆ ಬೊಪ್ಪಡೆ ಒಳಗಾಗಿ ಸುಂಕ ಆಯ ದಾಯ ಸಮಸ್ತಮಸ್ಯವಾದಿ ಧಾರಾಪೂರ್ವಕ ಮಾಡಿ ಬಿಟ್ಟರು (ಎಕ. V (R). ಮ್ಯಸೂರು. ೨೧೫-೧೪; 1175). ಸುಂಕವ ಮಾಡು = ತೆರಿಗೆಯನ್ನು ವಸೂಲುಮಾಡು; ಸುಂಕವನ್ನು ತೆಗೆದುಕೊಳ್ಳು: ಬೆದ್ದರಸರು ಸುಂಕವ ಮಾಡುವ ಕಾಲದಲು . . . ಕೊಟ್ಟ ಸಿಲಾಶಾಸನ (ಎಕ. XIV. ಚಾಮರಾ. ೧೨೦-೩; 1474?).

[< ಪ್ರಾ. ಸುಂಕ, ಸುಕ್ಕ./ ಸಂ. ಶುಲ್ಕ./ತಮಿ. ಚುಙ್ಕ, ಚುಕ್ಕ; ಮಲ. ಚುಂಗ; ತುಳು. ತೆಲು. ಸುಂಕ]

ಸುಂಕ$_2$ 'ಸುಂಕು$_3$' ನೋ.

ಸುಂಕ$_3$ (ನಾ). (?): ಮರ್ಕಟನ ಕೆಯ್ಯ ಸುಂಕಂ ಕರ್ಕಟಕನ ಕರಕಪಾಲ ವಾಂಗುಲಿಯುತದಿಂದರ್ಕಕ್ಷೀರದ ತೀವಿ ವಿಷಕ್ಕೇಱುಲುಮಿಟಿಯೆ ಪುಸಲೇಱುಗುಮಿಟಿಗುಂ (ಪಿಮದ. ೧೧-೩೭). [?]

ಸುಂಕಂಗೊಳ್ (ಕ್ರಿ). (ಆಲಂ) (ಸುಂಕದಂತೆ) ವಸೂಲುಮಾಡು; ಸೆಳೆದುಕೊಳ್ಳು; ವಶಪಡಿಸಿಕೊಳ್ಳು : ನನ ಪೇಱಿ ಬಂದ ಮಾವಂ ಮನೋಭಾವಂ ನಿಂದು ನೋಟ್ಟುದುಂ ವಿರಹಾಳಂಬಿನಿಯರಭಿಮಾನಧನಮುಳ್ಳನಿತುಮನಾಲೀಢಮಿಟ್ಟು ಸುಂಕಂಗೊಂಡಂ (ಮಲ್ಲಿಪು. ೬-೩೧); ನಿನ್ನ ಪ್ರಾಣವಲ್ಲಭನಪ್ಪುದ್ದಾಯನಮಹಾರಾಜನ ಬಿಂಕಮಂ ಸುಂಕಂಗೊಂಡು ವೀರಮಂ ದೂರಂ ಮಾಡಿ . . . ಕೋಡಗಗಟ್ಟುಗಟ್ಟಿ ತಂದೆಂ (ಧರ್ಮಾಮೃ. ೪-೨೫೨). [ಸುಂಕ$_1$ + ಕೊಳ್$_1$]

ಸುಂಕಂವಿಡು (ಕ್ರಿ). ತೆರಿಗೆವಿನಾಯಿತಿಯನ್ನು ಮಾಡು: ಸುಂಕಂವಿಟ್ಟರ್ XXX ಈವೂರಯೆಲ್ಲಕ್ಕಂ (ಎಕ. III. ನಂಜನ. ೨೩-೭; ಸು. 750). [ಸುಂಕ$_1$ + ಬಿಡು$_1$]

ಸುಂಕಗಳ್ಳ (ನಾ). ತೆರಿಗೆಯನ್ನು ಕೊಡದೆ ವಸ್ತುಗಳನ್ನು ಕಳ್ಳತನದಿಂದ ಸಾಗಿಸುವವನು : "ಕಳ್ಳತನದಿಂದ ಸಾಗಿಸುವವನು, ಸುಂಕಗಳ್ಳ" (Smuggler. ಇಂಕಾ).

[ಸುಂಕ$_1$ + ಕಳ್ಳ$_1$]

ಸುಂಕಠಾಣೆ (ನಾ). ತೆರಿಗೆಯನ್ನು ವಸೂಲು ಮಾಡುವ ಉಕ್ಕಡ; ಜಕಾತಿಕಟ್ಟೆ: ಘಟ್ಟದ ಕೆಳಗಣ ಸುನ್ಕಠಾಣೆಗಳಲ್ಲೂ ಬರೆಸಿ (ಮೈಅರಿ. ೧೯೨೮. ೫೮-೧೧; 1674).

[ಸುಂಕ$_1$ + ಠಾಣೆ (< ತಾಣ)]

ಸುಂಕಣಿ, ಸುಂಕರಿ (ನಾ). ೧. ಒಂದು ಬಗೆಯ ಹುಲ್ಲು : ಸುಂಕಣಿ ಹಳದಿ ಹೂನ್ನಿಯೊ ಶ್ವೇತ ಮುತ್ತಲವು (ನಂದಿಲೀ. ೭-೧೮). ಸುಂಕರಿ : ೧. ಸುಂಕರೀಹುಲ್ಲು, ಕರೀವುನುಗದ ಹುಲ್ಲು, ಊಬಿನ ಹುಲ್ಲು, ಸಣ್ಣ ಊಬಿನ ಹುಲ್ಲು, ಕರಡಹುಲ್ಲು (ಮೃಜಿಗಿ. ೪೩-೮೪೪). ೨. (ಆಲಂ) ಅಲ್ಪ; ಕ್ಷುದ್ರ (?): ಬರಿಯ ರಾಜಸದಿಂದಮೆಲ್ಲರೊಳ್ಪುಸಿವ ಸುಂಕರಿ ಬಿಂಕಮಂ ಬಿಡದ ಜಡಮತಿಗಳಂ ಸಾಮಭೇದದಿಂದ ವಶಗೊಳಿಸಲಳವೆ (ವಂಕಾರಾ. ೬-೭-೧೪). [< ಪ್ರಾ. ಸುಂಕಲಿ]

ಸುಂಕಪಾಳ 'ಸಂಕಪಾಲ' ನೋ.

ಸುಂಕಮಾನ್ಯ (ನಾ). ತೆರಿಗೆಯನ್ನು ರದ್ದುಗೊಳಿಸುವಿಕೆ; ಸುಂಕದ ರಿಯಾಯಿತಿ: ಯಾ ಧರ್ಮವನು ಆರೊಬ್ಬರು ಅಳಿದರೆ . . . ಕವಿಲೆಯ ಕೊಂದ ಪಾಪದಲಿ ಹೋಹನು ಸುಂಕಮಾನ್ಯ (ಎಕ. V (R). ತಿರುಮ. ೩೪-೧೧; 1564). [ಸುಂಕ$_1$ + ಮಾನ್ಯ]

ಸುಂಕರಿ 'ಸುಂಕಣಿ' ನೋ.

ಸುಂಕವೆಗ್ಗಡೆ 'ಸುಂಕವೆರ್ಗಡೆ' ನೋ.

ಸುಂಕವೆರ್ಗಡೆ, ಸುಂಕವೆಗ್ಗಡೆ (ನಾ). ತೆರಿಗೆಯನ್ನು ವಸೂಲಿ ಮಾಡುವ ಅಧಿಕಾರಿ: ಕಥಾನುರಾಗದಿಂದಿರ್ದಲ್ಲಿ ಸುಂಕವೆರ್ಗ್ಗಡೆ ಮಲ್ಲಿಯಣದಂಡನಾಯಕಂ (ಬೊಂಕಶಾ. ೧೯೩೪, ಬಂಕಾಪುರ. ೪-೨೦; 984?); ಇಂತಿನಿತುಮಂ ಪೆರ್ಗ್ಗಡೆ ಕರಣಂಗಳ್ ಸುಂಕವೆರ್ಗ್ಗಡೆಗಳುಂ . . . ರಕ್ಷಿಸುವರ್ (ಸೌಇ. XX, ೪೫-೩೨; 1071). ಸುಂಕವೆಗ್ಗಡೆ : ಬಳ್ಳಿಗಾವೆಯ ಸ್ಥಳದ ಠಾಣೋಗದ ಸುಂಕವೆಗ್ಗಡೆ ಕೊಮ್ಮರಾಜಂ (ಎಕ. III (S). ಶಿಕಾ. ೩೩೪-೧೯; ಸು.1100). [ಸುಂಕ$_1$ + ಪೆರ್ಗಡೆ$_1$]

ಸುಂಕಾಧಿಕಾರಿ (ನಾ). = ಸುಂಕವೆರ್ಗಡೆ: ಸುಂಕಾಧಿಕಾರಿ ಮಂಚ್ಕರಸಂಗೆ ಪುಣ್ಯವಾಗಲು ಅಡ್ಡವಟ್ಟೆಯ ಸುಂಕವನು ಮಾನ್ಯವಾಗಿ . . . ಬಿಟ್ಟ ಕೋಣ ೧೦ (ಕಾಇ. ೪೫-೬೩-೩೪; 1229); ಕೊಪ್ಪದ ನಾಡ ಸುಂಕಾಧಿಕಾರಿ ಮಾದಣ್ಣನ ಮಗ (ಎಕ. VI. ಕೊಪ್ಪ. ೧೧-೧೦; 1327). [ಸುಂಕ$_1$ + ಅಧಿಕಾರಿ]

ಸುಂಕಿಕ್ಕು (ಕ್ರಿ). ಸುರುಳಿ ಸುತ್ತು: ನಾರ ಸೀರೆಯನೊಗವ ಜಡೆಗೆ ಸುಂಕಿಕ್ಕುವಾದಾರಮಂ ಬಿಗಿವ . . . ಚಾರುಮುನಿಪುತ್ರರ್ಗ್ಗ ವಂದಿಸುತ ಬಂದು (ಪಚಕಾ. ೫-೫೫).

[ಸುಂಕು$_1$ (< ಸುರ್ಕು$_2$) + ಇಕ್ಕು]

ಸುಂಕಿಗ (ನಾ). ೧. ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿ: ಪಡಿಸಣಿಗಂ, ಸುಂಕಿಗಂ (ಧಾಪಾಧೂ. ೧೬೮ ಉದಾ); ಶ್ರೀಮತು ಮೂಱುನಾಡ ಸುಂಕಿಗರುವಿಟ್ಟು ಮುನ್ನೆ ನಡವಾಱು ಪೇಱೆನ ಮೇಲೆ (ಎಇ. XVI. ೭೭-೧: 1037); ಹೂಳಲ ಸುಂಕಿಗನಂತೆ ತೊಳಲುತ್ತಿದ್ದನವ್ವ (ಮಹಾದೇ. ಬ. ೪೩-೧೦೦). ೨. (ಆಲಂ) ಸೂರೆಕಾರ; ವಸೂಲಿಗಾರ (?): ಎಸುತ ಹೊಗುವರು ಭಟನ ಘಾಯಕೆ ಮುಸುಡ ತಿರುಹುವರಡಿಗಡಿಗೆ ಸಾಹಸದ ಸುಂಕಿಗನೊಡನೆ ತಲೆಯೊತ್ತಿದರು ಪಡುರಥರು (ಕುವಾದ್ರೋ. ೬-೨೬). [ಸುಂಕ$_1$ + -ಇಗ]

ಸುಂಕಿಗಿತಿ (ನಾ). ಸುಂಕದ ಅಧಿಕಾರಿಯ ಹೆಂಡತಿ: ಅರಸನ ಪೆಂಡತಿ, ಅರಸಿತಿ ಏವಂ . . . ಸುಂಕಿಗಿತಿ, ತೋಟಗಿತಿ (ಶಬ್ದಾನು. ೧೯೧ ಪ್ರಯೋ).

[ಸುಂಕಿಗ + -ಇತಿ$_1$ (< -ಇತ್ತಿ$_1$)]

ಸುಂಕಿಡು (ಕ್ರಿ). ಸುರುಳಿ ಮಾಡು; ಸುತ್ತು: ಯಜ್ಞೋಪವೀತಮಂ ಬಂಧಿಸುವ ಜಡೆಗೆ ಸುಂಕಿಡುವ [ಪಾಶಾಂ. ಯ ಸುಂಕಿಸುವ] . . . ಮುನೀಶ್ವರರ ಕುಮಾರರಂ ಕಂಡು ಕೈಮುಗಿದಂ ಹರಿಶ್ಚಂದ್ರನು (ಪಚಕಾ. ೬-೩೭); ಜೆಡೆಗೆ[ಪಾಶಾಂ. ಯೆ] ಸುಂಕಿಡುವಕ್ಷಮಾಲೆಯ ಕೋವ . . . ಕುಮಾರತಾಪಸಬ್ಬಂದಮೇನೆಸೆದಿರ್ದುದೋ (ವೃಪಸಿ. ೧೧-೪೪).

[ಸುಂಕು$_1$ (< ಸುರ್ಕು$_2$) + ಇಡು$_1$]

ಸುಂಕಿನುಂಡೆ 'ಸುಖಿನುಂಡೆ' ನೋ.

ಸುಂಕು$_1$ 'ಸುರ್ಕು$_2$' ನೋ.

ಸುಂಕು$_2$ 'ಸೋಂಕು$_2$' ನೋ.

ಸುಂಕು$_3$, ಸುಂಕ$_2$, ಸುಕ್ಕು$_3$, ಸೂಕ (ನಾ). ೧. ಧಾನ್ಯಗಳ ಮೇಲಿರುವ ಹೊಟ್ಟಿನ ಮೊನಚಾದ ತುದಿ; ಧಾನ್ಯಶೂಕ: ರಾಜಾನ್ನದ ಸುಂಕಿನೋಪಾದಿಯಲ್ಲಿ ಸೂಕ್ಷ್ಮವಾಗಿ . . . ಪರಮಾತ್ಮಲಿಂಗವು ವಿಶೇಷವಾಗಿರುತ್ತಿದ್ದಿತು (ಕೃಮೀ. ೨೪); ಸುಂಕಿನ ಜೋಳದ ರಾಸಿಯನ್ನು ನೋಡಿ ನೋಡಿ ನಲಿಯಬೇಕು (ಬೆಳುಮ. ೨೩೬). ೨. ತುದಿ; ಮೊನೆ: ಅಮೃತಕಲಶದ ಕೆಳಗೆ ಹಾಕಿರ್ದ ದರ್ಭೆಯ ನೆಕ್ಕಲು ಆ ದರ್ಭೆಯ ಸುಂಕಿನಿಂದ ಸರ್ಪಗಳ ನಾಲಿಗೆ ಯರಡಾಗಿ ಸೀಳಲು (ಕಾಶೀಮ. ೨೫೯-೪). ಸುಂಕ$_2$: ೧. ಹಂತಿಯ ತಿರುಗವ ಬಸವಣ್ಣನ ಮೈಮೇಲಿನ ಸುಂಕವನ್ನು . . . ಜಾಡಿಸುವಳು (ಕನ್ನಜಾ. ೨೬). ೨. ಹುಲ್ಲು ಮುಂತಾದುವುಗಳ ಎಲೆಯ ಮೇಲಿರುವ ಊಬು: ನೊಣನುತ್ತಕವೆಂಬ ವನಸ್ಪತಿಯ ಎಲೆಗಳ ಮೇಲೆ ಅಂಟಿನಂಥ ಜಿಗುಟುಪದಾರ್ಥವೂ ಸುಂಕವೂ ಇರುವದುಂಟು (ಮುಂಬಯಿ. ೬-೨೬೫). ಸುಕ್ಕು$_3$: ೧. ಜೋಳದ ತೆನೆಗಳ ಸುಕ್ಕುಗಾಳಿಗೆ ಹಾರಿ ಹೋಯಿತು (ರೂಪಿ). ಸೂಕ: ೧. ಹೃದಯಕುಹರಾಂಭೋಜದೊಳಗೆ ನೀವಾರಸೂಕದ ಸದೃಶವಾದ ನಿನ್ನಂ ಭಾವಿಸಿ (ಭಕ್ತಿಸು. III, ೨೪-೩)

[< ಪ್ರಾ. ಸುಂಕಅ, ಸೂಅ./ ಸಂ. ಶೂಕ./ ತೆಲು. ಸುಂಕು]

ಸುಂಕುದಬ್ಬೆಹುಲ್ಲು, ಸುಕ್ಕುದಬ್ಬೆಹುಲ್ಲು (ನಾ). (ಊಬಿನಿಂದ ಕೂಡಿರುವ) ಒಂದು ಬಗೆಯ ಹುಲ್ಲು: (ಮೃಜಿಗಿ. ೫೪-೧೦೮೭). ಸುಕ್ಕುದಬ್ಬೆಹುಲ್ಲು (ಮೃಜಿಗಿ. ೨೦-೩೭೭). [ಸುಂಕು$_3$ + ದಬ್ಬೆ$_2$ (< ದರ್ಬೆ) + ಹುಲ್ಲು (< ಪುಲ್)]

ಸುಂಕುಬುಲ್, ಸುಂಕುಬುಲ್ಲು (ನಾ). (ಊಬಿನಿಂದ ಕೂಡಿರುವ) ಒಂದು ಬಗೆಯ ಹುಲ್ಲು: ಪಕ್ಕಿಗಳೆಲ್ಲಂ ಪರ್ದು ಕಾಗೆಗಳೆ ಪುಲ್ಲೆಲ್ಲಮೆ ಸುಂಕುಬುಲ್ಲೆ . . . ಚರಿಯಿಸುವರೆಲ್ಲಂ ಕಿರಾತಗಣಮು[ಂ] ರಾಕ್ಷಸಗಣಮೆ (ಬಂಹರಿ. ೮-೧೩ ವ). ಸುಂಕುಬುಲ್ಲು: "ಶೂಕತೃಣಃ- ಸುಂಕುಬುಲ್ಲು" (ಓಷಧಿ. ೧೬೯). [ಸುಂಕು$_3$ + ಪುಲ್]

ಸುಂಕುಬುಲ್ಲು 'ಸುಂಕುಬುಲ್' ನೋ.

ಸುಂಕುರೋಗ 'ಸೋಂಕುರೋಗ' ನೋ.

ಸುಂಕೇಶ್ವರ, ಸಂಕೇಶ್ವರಿ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು: ಅಡಸಾರ ಸುಂಕೇಶ್ವರ ಅದರಗಂಚ ಗೋರಟ ರುದ್ರಗಂಟೆ (ಕೃಷಿಪ್ರ. ೨೦೧). **ಸಂಕೇಶ್ವರಿ:** ಸಣ್‌ಕತ್ತಿ, ಸಂಕೇಶ್ವರಿ, ವಾತನಾರಾಯಣ, ಕೆಂಪುಕೆಂಚಗೆ, ನೀರಂಗಿ (ಮೃಚಿಗ. ೨೯-೫೬೩). [ದೇ. ॥ ತೆಲು. ಸುಂಕೇಸರಿ, ಸುಂಕೇಸಲ, ಸುಂಕಾಸರಿ./ ಮರಾ. ಸಂಕಾಸುರ, ಸಂಕೇಶ್ವರ]

ಸುಂಕ್ಲಾಯಿ (ನಾ). ಒಬ್ಬ ಕ್ಷುದ್ರದೇವತೆಯ ಹೆಸರು: ಬುಳ್ಳನು ಸುಂಕ್ಲಾಯಿ . . . ಬಕ್ಕಾಯಿ ಎಲ್ಲ ನಾನಾಕದಾ ಕಳ್ಳದೇವತೆಗಳ ನಿಲ್ಲದೆ ಒಲಿಸಿದರು ಪೊಳ್ಳಲ್ಲದೆ ಗತಿ ಇಲ್ಲವೊ (ವಿಸಾಸು. ೫೮-೨). [?]

ಸುಂಗಲಂಬು (ನಾ). ಒಂದು ಬಗೆಯ ಬಾಣ: ಕಾಲಾಳ್ಮಾದುತ್ತಿರೆ ಸುಜ್ಜಲಂಬು ಪಾಱೆದೊಡೆ (ಸೌಗಾ. IX-I. ೫೮-೧೧; ಸು. 10ನೆಯ ಶತ). 'ಚುಂಗಲ' ಪರಾ.

[? + ಅಂಬ್ಬು$_2$]

ಸುಂಚಿಸು (ಕ್ರಿ). ಲೇಪಿಸು; ಬಳಿ: ವಿದ್ಯಾಧರತಂತ್ರಕ್ಕೆ ವಿಧಿ ಮಂತ್ರಿಸಿ ಕಾಡಿಗೆಯಂ ಸುಂಚಿಸಿದನೆಂಬಂತಿಂದ್ರನೀಲದ ವಿಮಾನಂಗಳಿಂ (ಧರ್ಮಾಮೃ. ೮-೧೯೬). [? + -ಇಸ್ಸು$_3$]

ಸುಂಟ 'ಶುಂಟ' ನೋ.

ಸುಂಟಗೆ, ಶುಂಟಿಕೆ, ಸುಂಟಿಗೆ, ಸುಂಡಿಕೆ, ಸೂಂಟಗೆ (ನಾ). ೧. ಸುಟ್ಟ ಮಾಂಸ: ಚತುರಂಗಸಾಧನದ ಮೆಯ್ಯೊಯ್ಯೊಳ್ ಜಿಗಿಲ್ತಾಂತ ನಾಯಕರಂ ಸುಂಟಗೆಯಾ [ಪಾಠಾಂ. ಟಿಗೆಯೂ, ಟಗೆಯೂ]ಱಿದಂತೆ ರಥದೊಳ್ ಜೋಲ್ವನ್ನೆಗಂ [ಕೋ]ದು ಚಾಪಕಳಾಕೌಶಳಮಂ ಜಗಕ್ಕೆ ಮೆಱೆದಂ ಮೆಯ್ಯೆರ್ಚಿ ಕುಂಭೋದ್ಭವಂ (ಪಂಪಭಾ. ೧೨-೨೪); ಕುತ್ತಿದ ಕೊಂತದೊಳ್ ಕೋಲ ಸುಂಟಗೆಯಂತೆ ಸಾಲಿಟ್ಟು ಬೀಱೆಯುಂ (ಅನಂಪು. ೧೧-೮೪ ವ). ೨. ಮಾಂಸ; ಬಾಡು: ಸುಡುವರ್ ಸುಂಟಗೆ ಕಾಸುವರ್ . . . ವೈರದಿಂ (ಅನಂಪು. ೯-೩೧); ಸುಂಟಗೆಯ ಕೋಲೊಳುರುಳ್ಳಿ ಕಾಸುತ್ತ (ಬಸಪು. ೧೮-೨೯). ೩. "ಎಲುಬಿನ ಭೇದ" (ಶಮದ. ನ. ೪೬ ವೃತ್ತಿ, ಅಂಟಿ). **ಶುಂಟಿಕೆ:** ೨. ರಣದೊಳಹಿತರ ಪಿಡಿದು ಶುಂಟಿಕೆಯಣಲೊಳಡಸುವ ಸುರಪಸಿಖಿಗಳ ಮಣಿಸುವತಿಬಲರಮಮ ಬಂದುದು ಭೂಮಿಯಗಲದಲಿ (ಅಂಬಿಕಾ. ೯-೪೧). **ಸುಂಟಿಗೆ:** ೧. "ಸುಂಟಗೆಯೆಂದುಂ ಕೊಟ್ಟಸಮಂದುಂ ಸುಡುಬಾಡು" (ಕಶಸಾ. ೫೨-೧೨೪); ತುಱುಗಿದೆಲುವಿನ ಸಾಲ ಸುಂಟಗೆ ಮೆಱೆವ ಮಾಂಸದ ರಾಸಿಗಳ ಹರದೆಱೆಗಳ ಕಂಡಬಲೆ ಹೊಗಳಿದಳಡಬಳದ ಮನೆಯ (ಕುಮಾವಿ. ೩-೩೭). ೨. ಇತ್ತಲು ಹೋಮಂ ಮಾಡುವರಿತ್ತಲು ಸುಂಟಗೆಯನೊಯ್ದು ಕಾಸುವರೆಂಬರ್ (ಸಮಪ. ೧೪-೮೯); ಅರಿಯ ಖಂಡದಿ ಹಸಿಯ ಸುಂಟಗೆವರಸಿ ಭೂತಾವಳಿಯ ದಣಿಸಿದ (ಕುಮಾಕ. ೮-೪೨). ೪. ಸಲಾಕಿಯಲ್ಲಿಟ್ಟು ಸುಡಲು (ಮುಖ್ಯವಾಗಿ) ತೆಗೆದುಕೊಳ್ಳುವ ದೇಹದ ಭಾಗ; ಗುಂಡಿಗೆ; ಹೃದಯ: ಕೆದಱೆತೀಱೆಯ ದಸೆ ಸುನೀತನ ಸದೆದು ತೆಗೆ ಸುಂಟಗೆಯನೆನುತಲಿ ಯದುನೃಪಾಲರು ಗಜಬಜಿಸಲು (ಕುಮಾಸ. ೮-೩೯); ತೊರಳೆಗುಪ್ಪೆ ಮಚ್ಚೆಯ ತೆವರ್ ಸುಂಟಗೆಯ ಸಾಲ್ ತಳಿತ ಖಂಡಂಗಳ ಬಣಬೆ . . . ತದ್ರಣರಂಗದೆಲ್ಲೆಡೆಯೊಳುಂ ತೀವೆ (ಚಿಬಪು. ೪೮-೫೬). **ಸುಂಡಿಕೆ:** ೨. ನಿನ್ನೆದೆಯ ಹಳಚಿ ಕವಿ ಬಲ ಮೇಘನಾದರ ಸೆಳೆದುತ್ಪತ್ತುಂಡಿಕೆಗಳನಿಬರು ಮೆಲುವ್ವೆವಂದನು (ಅಂಬಿಕಾ. ೨೭-೧೨). **ಸೂಂಟಗೆ:** ೨. ಸತ್ತಿಗೆ ಗಗ್ಗರಂ ಕರುಳ ಬಕ್ಕಳೆ ಮೀಂಟದ ಕಣ್ಗಳ್ಕೆಸರಂ ಸುತ್ತಿದ ಬಾಳದುಳ್ಳಿವಿಯ ಸೂಂಟಗೆ ಪಂದಲೆಯೊಂದು ಬಾಸಿಗಂ . . . ಒಂದಿ ನಿಲೆ ಸಾಧಕಿ ಬತ್ತಲೆ ಬರ್ಪಳೊಪ್ಪಿದಳ್ (ಕಾವ್ಯಸಾ. ೫೩೩). ೫. ನೆಣ; ಕೊಬ್ಬು: ನೇಪಾಳನ ಬೆನ್ನ ಸೂಂಟಗೆಗೆ . . . ಕಾಯ್ದು ಖಳ್ಗಮಾಕಾಳಿಯಡರ್ತ್ತು ನಿಳ್ಳುವಳು ನಾಲಗೆಯಂ ನರಸಿಂಗಭೂಪನ (ಎಕ. IV, ಹುಣಸೂ. ೧೩೭-೧೭; 1162).

ಸುಂಟಗೆಯ ಕೋಲು = ಸುಂಟಗೆಗೋಲ್ : ಕಣ್ಣಪ್ಪದೇವನು ಆ ಮೃಗವನೆಸದು ಮಾಂಸವ ತೆಗದು, ಸುಂಟಗೆಯ ಕೋಲಿನಲ್ಲಿ ಸರಗೊಳಿಸಿ ಉರಿಯ ಕಾಸಿ . . . ಮಾಂಸವ ಸಮರ್ಪಿಸಲು (ಭೃಕೂಸಾ. I. ೧೨೬). [?]

ಸುಂಟಗೆಗೋ (ಕ್ರಿ). ಸುಟ್ಟ ಮಾಂಸವನ್ನು ಕಂಬಿಯಲ್ಲಿ ಪೋಣಿಸು: ಗಱೆ ಸೀದು ಮುಱುಂಟ ವಿಹಂಗಸಂಕುಲಂ ಗೆಂಟಱೊಳೊಂದಿ ತಾಱೆದ ಮರಂಗಳ ತೂಱಲು ಗೊಂಬುಗೊಂಬಿನೊಳ್ ಸುಂಟಗೆಗೋದ ಮಾಚ್ಕೆಯವೊಲಿರ್ದುವು[ಡುಂ]ಗಿ ನಿದಾಘ ಕಾಲದೊಳ್ (ಸೂಕ್ತಿಸು. ೧೦-೧೦೯). [ಸುಂಟಗೆ + ಕೋ$_1$]

ಸುಂಟಗೆಗೋಲ್, ಸುಂಟಗೆಗೋಲು, ಸುಂಟಗೆಗೋಲು (ನಾ). ಮಾಂಸವನ್ನು ಸಿಕ್ಕಿಸಿ ಸುಡಲು ಬಳಸುವ ಕೋಲು, — ಚುಚ್ಚುಗೋಲು; ಮಾಂಸವನ್ನು ಚುಚ್ಚಿ ಸುಡಲು ಬಳಸುವ ಸಲಾಕಿ, — ಕಂಬಿ: ಚೆನ್ನ ಸುಂಟಗೆಗೋಲನಳವಡಿಸಿ ತಂದು ಹೊಸಕಿಚ್ಚಂ ಹೊಸೆದು (ಕಣ್ಣಾ. ದೇ. ೧೩೧-೫); ಮಸೆವುದು ಕೊಡೆ ಕತ್ತಿಗಳನಾಗಳೆ ಸುಂಟಗೆಗೋಲ್ಗಳೆಲ್ಲಮಂ ಬಸಿವುದು ಕೋಪದಿಂದರೆಯುತಿರ್ಪುದು ಸಂಬರಮಂ (ಸೂಕ್ತಿಸು. ೩-೯೮). **ಸುಂಟಗೆಗೋಲು:** ಸುಂಟಗೆಗೋಲಿಂದಡಗಂ ಮೀಂಟ ಪೊರಳ್ಚುತ್ತೆ ಪಚಿಸಿ (ವೃಷಮಿ.೧೦-೯೩). **ಸುಂಟಗೆಗೋಲು:** ಮೃಗವಂ ಬಿರ್ಚಿ ಮೇಲ್ಗಂಡಂಗಳಂ ತೆಗೆದು . . . ತಾಂ ಕಾಸಲ್ವೇಡಿ ಪೊಸ ಸುಂಟಗೆಗೋಲನೊಂದಂ ಕೀಸಿ ಪೊಸಕಿಚ್ಚಂ ಪೊಸೆದು ಪಟುವಂ ಮಾಡಿ (ತ್ರಿಪುವಿ. ೨೭-೧೨೨ ವ); ತನ್ನೃಗಯುಗದ ನವಖಂಡಮಂ . . . ಕಿಚ್ಚನೊಳಗಿಟ್ಟು ಸುಂಟಗೆಗೋಲಿನಿಂ ತವಕದಿಂ ತಿರುವಿ ಪಚಿಸುತ್ತೆ (ಮಹಾವಿ. ೭-೪೩).

[ಸುಂಟಗೆ + ಕೋಲ್$_1$]

ಸುಂಟಗೆಗೋಲು 'ಸುಂಟಗೆಗೋಲ್' ನೋ.

ಸುಂಟರ 'ಸುಟ್ಟುರೆ' ನೋ.

ಸುಂಟರಗಾಳಿ 'ಸುಟ್ಟುರೆಗಾಳಿ' ನೋ.

ಸುಂಟರುಗಾಳಿ 'ಸುಟ್ಟುರೆಗಾಳಿ' ನೋ.

ಸುಂಟಿ, ಸುಂಠಿ, ಸೊಂಟಿ (ನಾ). (ಅಡಿಗೆಗೆ ಅಥವಾ ಔಷಧಿಗೆ ಉಪಯೋಗಿಸುವ) ಒಂದು ಬಗೆಯ ಬೇರು; (ಹಸಿ ಅಥವಾ ಒಣ) ಶುಂಠಿ; ಕಾರಗೆಣಸು: ಬಿಸುನೀರೊಳ್ ಕುಡಿಯಿಸು ಹಿಂಗು ಸುಂಠಿ ಸಂವರ್ಚಲಂಗಳಂ (ಲೋಕೋಪ. ೯-೮); ಸುಂಟಿ ತಿಂದ ಬಾಯೊಳ್ ಬಿಸಿನೀರಂ ಕುಡಿದರಂತೆ ಮಿಡುಮಿಡುಮಿಡುಕಿ (ಧರ್ಮಾಮೃ. ೧೦-೧೯೨ವ). **ಸುಂಠಿ:** ಉಮರಾವತಿಯ ಕಡಿಯ ಸುಂಠಿಯು ಇತ್ತ ಕಡೆಗೆ ಬಹಳ ಪ್ರಖ್ಯಾತವದೆ (ಮುಂಬಪ್ರಾ. ೫೮). **ಸೊಂಟಿ:** ಸೊಂಟಿಯ ರಸದಿಂದ ಕೊಂಡರೆ ಕೆಡುವುದು ಕಂಟಕವಾದತಿಸಾರ (ಸಾಳ್ವಸಾಂ. ೭). [ಪ್ರಾ. ಸುಂಠೀ./ ಸಂ. ಶುಂಠಿ, ಶುಂಠೀ]

ಸುಂಟಿಗೆ 'ಸುಂಟಗೆ' ನೋ.

ಸುಂಟಿಗೆಗಳೆ (ಕ್ರಿ). ಮಾಂಸವನ್ನು ಕೀಳು: ಸದವರಿವುರ್ದುವ ಸುಡುವಡುವ ಸುಂಟಗೆಗಳೆವ ನೆತ್ತರ್ಗಱೆವ . . . ಗೆಯ್ಯೊಯೊಳ್ ಕೈಮೆಯುಂ ಸಫಲಮಪ್ಪುವು (ಚಿಕವಂ. ೯-೪). [ಸುಂಟಿಗೆ (< ಸುಂಟಗೆ) + ಕಳೆ$_1$]

ಸುಂಟಿಗೆಗೋಲು 'ಸುಂಟಗೆಗೋಲ್' ನೋ.

ಸುಂಟಿಗೆಯಡಗು (ನಾ). ಗುಂಡಿಗೆಯ ಮಾಂಸ: "ಸುಂ [ಪಾಠಾಂ. ತುಂ] ಟಿಗೆಯಡಗೆನೆ ಹೃದಯಮಾಂಸಂ" (ಭಾರಾ. ೧೮). [ಸುಂಟಿಗೆ (< ಸುಂಟಗೆ) + ಅಡಗು$_3$]

ಸುಂಟಿದಿನ್ (ಕ್ರಿ). ಶುಂಠಿಯನ್ನು ತಿನ್ನು: ತಲೆಯಂ ಬಲುದಡಿಗರ್ಕಱೆ ನಿಲಲಾಱದೆ ಸುಂಟದಿಂದ ಕೋಡಗದಂತುಮ್ಮಳಿಸಿ (ಧರ್ಮಾಮೃ. ೧-೧೪೧). [ಸುಂಟಿ + ತಿನ್]

ಸುಂಟಿಹುಲ್ಲು (ನಾ). ಒಂದು ಬಗೆಯ ಹುಲ್ಲು: (ಕ). 'ಶುಂಠಿಹುಲ್ಲು' ಪರಾ.

[ಸುಂಟಿ + ಹುಲ್ಲು (< ಪುಲ್)]

ಸುಂಟುರುಗಾಳಿ 'ಸುಟ್ಟುರೆಗಾಳಿ' ನೋ.

ಸುಂಟುರೆ 'ಸುಟ್ಟುರೆ' ನೋ.

ಸುಂಟೆ (ನಾ). ಬಿಲ್ಲೆ; ಚೂರು: ಒಬ್ಬ ಹುಡುಗಿಯು . . . ಒಂದು ದಪ್ಪ ಬೆರಣಿ ಸುಂಟೆಯನ್ನು ಇರಿಸಿ ಅದಕ್ಕೆ ಕೈಮುಗಿಯುತಾ (ಪೇಟೆಮಾ. ೬). [?]

ಸುಂಠಿ 'ಸುಂಟಿ' ನೋ.

ಸುಂಠಿವೆರಲ್ (ನಾ). ಚಿಕ್ಕ ಬೆರಳು; ಗಿಡ್ಡ ಬೆರಳು: ಕೊಱುಬುದಲೆಯ ಕೊಳೆನಾಱುವ ಕಬ್ಬಾಯ ಸುರುಟುಕಿವಿಯ ಸುಂಠಿವೆರಲ (ಸಿಮಿಸಾ. ೭-೧೦೩).

[ಸುಂಠಿ$_2$ (P <— ತಮಿ. ಚುಣ್ಣು = ಚಿಕ್ಕದು) + ಬೆರಲ್]

ಸುಂಠಿಸು (ಕ್ರಿ). (?): ನೆರೆಹೊರೆಗಳಿಂ ನೀಡಿಸಿಕೊಳುತ ಮಕ್ಕಳಾ ಕೂಡೆ ಸುಂಠಿಸುವ ರಲ್ಲಳುಕದಿರ್ಪವರಲ್ಲ (ಲಿಂಗಪು. ೧೮-೧೯). [? + — ಇಸ್ಸು$_3$]

ಸುಂಡ (ನಾ). ೧. (ಉದ್ದವಾದ ಮೂತಿ ಇರುವ ಒಂದು ಜಾತಿಯ) ಚಿಕ್ಕ ಇಲಿ; ಮೂಗಿಲಿ; ಚುಚುಂದರ: ಹಾಗೆಯ ಇರು ಸುಂಡ ಹೀಗೆಯ ಇರು ಸುಂಡ ಅಡಕೇಯ ಕುಕ್ಕೇಲಿ ಇರು ಸುಂಡ ನಮಗೆ ಅಡಕೆ ಕೊಟ್ಟೋಳ ಕಡಿ ಸುಂಡ

(ನನ್ನೂರು. ೧೦೩); ಸುಂಡ ತನ್ನ ಪ್ರಾಯದಲ್ಲಿ ಮೂಗಂಡಗ ಬಾಳಿತು (ಗಾದೆ). ೨. ಇಲಿಯ ಮರಿ: ಗಜದೊಳ್ ಸುಂಡಗೆ ಯುದ್ಧವೇ (ಸೋಮೇಶ. ೪೫); ಪೆಟ್ಟಿಗೆಯಿಂದ ಸುಂಡಗಳು ನೆಗೆದು ಬಂದಿದ್ದರೆ ಬೆಕ್ಕು ಹೇಗೆ ಮಾಡುತ್ತಿದ್ದಿತೊ ಹಾಗೆ (ಬಾಳಹೊ. ೧೯).

[ದೇ. ॥ ತಮಿ. ಚುಣ್ಣಾನ್; ಮಲ. ಚುಣ್ಣ; ತೆಲು. ಚುಂಡು./ ಸಂ. ಶುಂಡಮೂಷಿಕಾ, ಶುಂಡಿಮೂಷಿಕಾ]

ಸುಂಡಲ 'ಸುಂಡಿಲ್' ನೋ.

ಸುಂಡಲು 'ಸುಂಡಿಲ್' ನೋ.

ಸುಂಡಳೆ (ನಾ). (?): ಸುಳಿವ ಸೀಳುವ ಹಳಿಚ ಮಾರ್ಮಲ ಮಲತು ಹೋರುವ ಕಳೆಯಲುರೆ ನೊಂದಳಲಿ ಸುಂಡಳೆ ತೆಗೆದುವಸುವ (ಮೂಲರಾ. ೫-೨೫). [?]

ಸುಂಡಾಯ್ತ (ನಾ). (?): ಸೀಸಕ ಭುಜಯುಗದ ಅಕ್ಕೆ ಸುಂಡಾಯ್ತ [ಪಾಠಾಂ. ಸೂಡಾಯ್ತ, ಸೂಡಾಯ] ಕೈದುಗಳ್ ತುಂಬಿ ಬಂಡಿಗಳಗಣೆತಂ ಬಂದುವು (ಚಟುಪು. ೪೭-೪೪); "ಹಸ್ತ (ಮುಖ?) ರಕ್ಷಕ" (ಚಟುಪು. ಕೋಶ). [?]

ಸುಂಡಾಲ, ಸುಂಡಾಳ (ನಾ). ೧. ಸೊಂಡಿಲನ್ನುಳ್ಳುದು; ಆನೆ: ಸುರೇಂದ್ರನಜ ಸುಂಡಾಲವೋ ಧಾನುವೋ ವಿಧುವೆಯ್ದುತ್ತಿಹನೊ (ಭೃಂಗಪು. ೪-೪೦). **ಸುಂಡಾಳ**: ೧. ತತುಪುರವೀಧಿಯೊಳು ಸುಳಿವ ಸುಂಡಾಳಬ್ರಜ (ಕಬಲಿ. ೬-೧೬; 1218). ೨. ನೀರಾನೆ: ಖಳನಕ್ರಕ್ರೂರಕರ್ಕಾಟಕತಿ[ಗುಮ]ತಿಮಿವ್ಯಾಳ ಸುಂಡಾಳಭೇತೀಕುಳಭೀಳಂ . . . ತರಂಗಾಳಿಭದ್ರಂ ಸಮುದ್ರಂ (ಪಾರ್ಶ್ವಾಸ್ತ. ೧-೩೭). [< ಸಂ. ಶುಂಡಾಲ]

ಸುಂಡಾಳ 'ಸುಂಡಾಲ' ನೋ.

ಸುಂಡಿಕೆ 'ಸುಂಟಗೆ' ನೋ.

ಸುಂಡಿಲ್, ಶುಂಡಲ, ಶುಂಡಿಲ್, ಶುಂಡಿಲು, ಸುಂಡಲ, ಸುಂಡಲು, ಸುಂಡಿಲ, ಸುಂಡಿಲ್$_2$, ಸುಂಡಿಲು, ಸೊಂಡಿಲ್, ಸೊಂಡಿಲು (ನಾ). ೧. ಆನೆಯ ಕೈ; ಗಜಹಸ್ತ: ದೋರ್ಲತಿಕೆ ಸುಂಡಿಲ್ಪಂಧುರಮದಮೆಳಜವ್ಯನಮಾಗಿರೆ ಗಣಿಕೆಯರೆಸೆದ ರಂಗಜನ ಪಿಡಿಗಳವೋಲ್ (ಉಧಟು. ೧೦-೪೧); ವ್ಯಗ್ರದಾನೆಯ ಸುಂಡಿಲಂ ಹಸ್ತಾಗ್ರದಿಂ ಪಿಡಿದೊತ್ತಿ (ಬಸಪು. ೨೨-೧೫). **ಶುಂಡಲ**: ೧. ಮತ್ತಗಜಗಳ ಶುಂಡಲದಂದದ ಕತ್ತಿಗಳ (ದೇವೀಮಾ. ೩-೩೨). **ಶುಂಡಿಲ್**: ೧. ಕಾಲನೂಱುತ್ತದಱ ಶುಂಡಿಲ ನಾಳಮಂ ಹೊಕ್ಕಿಱಿ ದಿಱಿದು (ಬಸಪು. ೧೮-೪೪). **ಶುಂಡಿಲು**: ೧. ಅವನ ಬಾಲ ಶುಂಡಿಲು ತಾಗಿ ಹಿಂದೆ ಮುಂದೆ ಅನೇಕ ಪರ್ವತಂಗಳು ಒಡೆದು ಪುಡಿಯಾಗಿ ಸಮಸ್ತಪ್ರಾಣಿಗಳಿಗೆ ಮಾರಣವಾಗೆ (ಧೃರಸಾ. ೧. ೩೩). **ಸುಂಡಲ**: ೧. ಕರಿಮೊಗಂ ಸುಂಡಲದಿ ಸ್ತನ್ಯಪಾನಂಗೈವುತಿರಲು (ಸಪಮೋ. ೬-೨). **ಸುಂಡಲು**: ೧. ಪಾಶಾಂಕುಶದ ಹಸ್ತಮೋದಕದ ಸುಂಡಲಿನ ಸಿರಿ ಡೊಳ್ಳಿನಾ ಗಣನಾಯಕನೆಮಗೆ ಬುದ್ಧಿಯತಿವರ್ಧಿಸ್ಕೆ (ಪರಶು. ೧-೧೩); ದಿಗ್ಗಜಗಳ ಸುಂಡಲುಗಳಿಂದ ಹೊರಡುವ ತುಂತುರ್ವನಿಗಳಂತೆ ನಕ್ಷತ್ರಗಳು ಕಾಣಿಸುವುವು (ವಚಕಾ. ೭೦). **ಸುಂಡಿಲ**: ೧. ತುಂತುರ್ಗಳಂ ಸುರಿಪ ಸುಂಡಿಲದಿಂ ಯಥೇಷ್ಟಂ ತಾಂ ತನ್ನ ಕಾಂತೆಗೆ ಭಿಷೇಕವನಾಗಿಪಂ (ಉರಾಚ. ೭೪-೨೦). **ಸುಂಡಿಲಿ$_2$**: ೧. ಉರೆ ಹಸ್ತಯುಗ ಸುಂಡಿಲಿಯ ಕೊರಳಿನಲಿ ಬಂಧಿಸಿದ ಮುತ್ತಿನಸು ಪಟ್ಟಿಗೆಯ ಜತ್ತಿಗೆಯ ಪೇರ್ದುರುಬು ಮಾವತಿಗ (ನವಮೋ. ೨೪-೮). **ಸುಂಡಿಲು**: ೧. ಸುಂಡಿಲು ಮುಱಿದರೆ ಗಜವೇನು ಬಾತೆ (ಬಸವ. ೬೩೪); ಸುಂಡಿಲನು ತೂಗಾಡುವುದು . . . ಬಲುಕಣಿಯ ಹಿಡಿಹಿಂಗೆ ಲಾಗಿಸುತಿರ್ದುದಾ ದಂತಿ (ಕುಮಾರೋ. ೩-೩೭). **ಸೊಂಡಿಲ್**: ೧. ಸೊಂಡಿಲೊಳ್ ಕೊನೆವೆತ್ತ ಮದಹಸ್ತಿಗಳ ಕಚ್ಚಿಕೊಂಡಿರ್ದ ಕೇಸರಿಗಳನು . . . ಬೀಳಲಿಕ್ಕಿದನು (ಮೋಹಶ. ೧೯-೩೬); ಸೆಳೆಗೊಂಬು ಸೊಂಡಿಲ್ ಕವಲ್ಗೊಂಬು ಕೊಂಬುಗಳ್ (ಚಟುಪು. ೪೬-೩). **ಸೊಂಡಿಲು**: ೧. ತುಳಿದುದರಿಸುಭಟರನು ಸಾವಿರ ತಲೆಯ ಸೆಳೆದುದು ಸೊಂಡಿಲಲಿ (ಕುಮಾರೋ. ೩-೧೪); ಚಂಡಪ್ರತಾಪಿ ವಿಘ್ನೇಶ್ವರ ಮಲೆತಿರೆ ಕಂಡು ಹಲಾಯುಧ ಮುಳಿದು ಸೊಂಡಿಲು ದಂತಗಳೊಡೆವಂತೆ ಮುಸಲದೆ ಕೊಂದನು ಕೂಗಿ ಬೊಬ್ಬಿಱಿದು (ಮೋಹಶ. ೩೮-೬೩). ೨. ಮೂತಿ; ಮುಖ: ನೆಗಳ ಸೊಂಡಿಲ ಚಿನ್ನದಣಸಿನ ಪಲ್ಲಕ್ಕಿ ಸೊಗಯಿಪ ರತ್ನವಿಮಾನ . . . ಮುಂತಾದ ವಸ್ತುಗಳನಿತ್ತನು ಕೃಷ್ಣ ಮಗಗೆ (ಮೋಹಶ. ೧೫-೨೦). ೩. ಆನೆ; ಹಸ್ತಿ: ಸೊಂಡಿಲು ಕದಳಿಯ ವನವ ಪೊಕ್ಕಂದದಿ ಉದ್ದಂಡತನ ದಲ್ಲಾಡುತಿಹರು (ಚಂದ್ರಪಾ. ೩-೧೮). 'ಸುಂಡಾಲ' ಪರಾ.

ಸುಂಡಿಲ ಮೊಗ = ಸೊಂಡಿಲಿನಿಂದ ಕೂಡಿದ ಮುಖವುಳ್ಳವನು; ಗಣೇಶ: "ಸುಂಡಿಲ ಮೊಗಂ ವಿಘ್ನೇಶ್ವರಂ" (ಕಪಟ. ೧೦೯). ಸುಂಡಿಲವಾಳು = ಆನೆಯ ಸೊಂಡಿಲಿಗೆ ಕಟ್ಟಿದ ಕತ್ತಿ: ಸುಂಡಿಲವಾಳೆ ಸೂನಿಗೆವೆತ್ತ ಶೃಂಗವೇತಂಡಗಳುರವಣಿಸಲ್ಕೆ ಖಂಡಚಂದಿರ ಬಾಣದಿಂದೆಚ್ಚು ಕಡಿದ ಕೋದಂಡಶಿಕ್ಷಾದೀಕ್ಷಿತನು (ಮೋಹಶ. ೩೪-೩೯).

[?/ ಸಂ. ಶುಂಡಾಲ = ಆನೆ./ ತಮಿ. ತೊಣ್ಣಲ; ತುಳು. ಸುಂಡಿಲ್, ಸುಂದಿಲ್]

ಸುಂಡಿಲ 'ಸುಂಡಿಲ್' ನೋ.

ಸುಂಡಿಲಿ$_1$, ಚುಂಡಿಲಿ (ನಾ). ಸುಂಡೆ; ಮೂಗಿಲಿ: "ಚುಚುಂದರೀ, ಗಂಧಮೂಷಿಕಾ — ಈ ೨ ಸುಂಡಿಲಿ" (ಹಲಾಯು. ೩೯-೮೨); ಮಸಕದ ಸುಂಡಿಲಿಯ . . . ಬಸೆಯಂದದ ಗಂಧಮೆಸೆವೊಡಶಭಂ ತುರಗಂ (ಅಶ್ವಶಾ. ೩-೨೨). **ಚುಂಡಿಲಿ**: ಅಗೋ ಚುಂಡಿಲಿಯನ್ನು ಹಿಡಿಯುವುದಕ್ಕೆ ದೊಡ್ಡ ಬಂಡೆಯನ್ನು (ಕಥಾಮಂ. iv,-೮); ಆರ ಮನೆ ಸಂಡಿಗೆಯೊ ಚುಂಡಿಲಿಯೊ ಹುಳುವೊ (ಮಂಚಕ. ೬೪೨). [ಸುಂಡ + ಇಲಿ$_1$./ ತಮಿ. ಚುಣ್ಟೆಲಿ; ಮಲ. ಚುಂಡೆಲಿ; ತುಳು. ಸುಂಡೆಲಿ, ಸುನ್ನಲಿ; ತೆಲು. ಚುಂಡೆಲುಕ]

ಸುಂಡಿಲಿ$_2$ 'ಸುಂಡಿಲ್' ನೋ.

ಸುಂಡಿಲು 'ಸುಂಡಿಲ್' ನೋ.

ಸುಂಡಿಸು (ಕ್ರಿ). ೧. (ದ್ರವಪದಾರ್ಥವನ್ನು) ಕುದಿಸಿ ಕಡಿಮೆಯಾಗುವಂತೆ ಮಾಡು; ಅಟ್ಟಿಸು: (ಕ). ೨. ಸುಡು; ದಹಿಸು: ಅಂಡಿಸಿದ ಸದ್ಗುರುಚರಾದಿ ಸದ್ವಕ್ತರ್ಗೆ ಸುಂಡಿಸಿದ ಜ್ಞಾನಾಗ್ನಿಯಿಂ ಭವಾರ್ಣವವ ಮಿಗೆ ದಂಡಿಸಿದ ದಶವಿಧೇಂದ್ರಿಯಗಳುತ್ಪಾತಮಂ (ವಿಕೋಪು. ೮-೫೯). [ಸುಂಡು$_1$ + -ಇಸು$_3$./ ತೆಲು. ಚುಂದಿಂಚು]

ಸುಂಡು$_1$ (ಕ್ರಿ). ೧. ಆವಿಯಾಗು: (ಕ). 'ಸುಂಡಿಸು' ಪರಾ. ೨. (?): ಮಂಡಗೆಗೆ ತುಪ್ಪ ಸಕ್ಕರೆ ಬಟ್ಟನಾಲಿಕ್ಕಿಕೊಂಡು ಏಂಡಂ ಮಾಡಿ ಹೊಸಮಡಕೆಯೊಳಗೆ ನೆಯ್ ಸುಂಡ[ಪಾಠಾಂ. ನೆಯ್ಯುಂಡ]ದೊಡವಿಕ್ಕಿ ಅದನಿರಿಸಿ (ಸೂಪಶಾ. ೧-೨೧).

ಸುಂಡಿಕೊಳ್ಳು = ಮುದುಡಿಕೊಳ್ಳು; ಸುರುಟಿಕೊಳ್ಳು: ಕೈಕಾಲುಗಳು ಸುಂಡಿಕೊಂಡು ಅವರು ವಿಪರೀತಚಳಿಯಿಂದ . . . ಸಾಯುತ್ತಿದ್ದರು (ಪ್ರವಾಸ. ೧, ೭೨). ಸುಂಡಿಹೋಗು = ಒಣಗು; ಬಾಡು; ಶುಷ್ಕವಾಗು: ಕಂಡೆ ಸುರುಟಿ ಸುಂಡಿಹೋಗಿ ಜೋಲುಬಿದ್ದ ಮಾಂದಳಿರ (ಮಾಂದಳಿ. ೩೬-೧೬).

[ದೇ. ॥ ತಮಿ. ಚುಣ್ಣು; ಮಲ. ಚುಣ್ಣು; ತೆಲು. ಚುಂಡು]

ಸುಂಡು$_2$, ಸೊಂಡು (ನಾ). ತಲೆಯಲ್ಲಿ ಉಂಟಾಗುವ ಹೊಟ್ಟು: 'ಸುಂಡುತಲೆ' ಪರಾ. ಸೊಂಡು: ತಿಳಮದು . . . ಆಮಳಕಮನಿಂಬಾಗಿರೆ ತಲೆಯೊಳಗೆಲ್ಲಂ ಪೂಸೆ ಸೊಂಡು [ಪಾಠಾಂ. ಸೊಂದು] ತಡೆಯದೆ ಕಿಡುಗುಂ (ಲೋಕೋಪ. ೯-೫೪).

[ದೇ. ॥ ತಮಿ. ಚುಣ್ಣು; ತೆಲು. ಚುಂಡು]

ಸುಂಡು$_3$ (ನಾ). ಬಾಣ (?): ಈ ತುಂಬಿಗಳು ಮನ್ಮಥನ ಕಬ್ಬೆಂಬ ಬಿಲ್ಲಿನಲ್ಲಿ ಬಿಡುವ ಸಣ್ಣ ಸುಂಡುಗಳೆಂಬಂತೆ ಕಾಣಿಸುವವು (ಅಕ್ಕಮಾ. ೪೦). [?]

ಸುಂಡುತಲೆ (ನಾ). ಹೊಟ್ಟಿನಿಂದ ಕೂಡಿರುವ ತಲೆ: ಬೊಕ್ಕತಲೆ ಸುಂಡುತಲೆಗಳಿಗೆ ಇದರ ಪ್ರಯೋಗ ತುಂಬ ಗುಣಕರ (ಬಾಹೊ. ೬). [ಸುಂಡು$_2$ + ತಲೆ$_1$]

ಸುಂಡೆ$_1$, ಸೊಂಡೆ$_1$ (ನಾ). ೧. ಒಂದು ಬಗೆಯ ಸಸ್ಯ ಮತ್ತು ಅದರ ಕಾಯಿ: ತದುಕಿಲ ಸುಂಡೆ ಪಾಪಟೆಯ . . . ಉಪ್ಪುಗಾಯಿಗಳೆಲ್ಲ ಸುವ್ವಾರಿಯರು ಬಡಿಸಿದರತಿ ವಿಚಿತ್ರದಲಿ (ಆನಂಗಾ. ೬-೨೫-೩೮). **ಸೊಂಡೆ$_1$**: ೧. "ಚುಂಡಿ— ಸೊಂಡೆ" (ಬಸಪು. ೫೭); ಶಾಲ್ಮಲಿ ಸೊಂಡೆ [ಪಾಠಾಂ. ಹೊವೆ] ಸುರಹೊನ್ನೆ . . . ಕರ್ಣಿಕಾರದ ಮೊತ್ತವಿದೆ ನೋಡಬಲೆ (ತೊರಾ. ೩-೧-೨೭). ೨. ಒಂದು ಬಗೆಯ ಸಸ್ಯ: "ಗರುಗಮಂಗಾರಕಂ ಭೃಂಗಮದು ಸೊಂಡೆ" (ಮಂಗರಾ. ೩೯-೨೮).

[ದೇ. ॥ ತಮಿ. ಚುಣ್ಟೆ$_1$; ಮಲ. ಚುಂಟ; ಕೊಡ. ಚುಂಡ]

ಸುಂಡೆ$_2$, ಸೊಂಡೆ$_2$ (ನಾ). ೧. ಮೂತಿ; ಮುಖ; ಮೋರೆ: "ಚುಂಚ — ಸುಂಡೆ" (ಅಕಾವಿ. ೧೦-೪). **ಸೊಂಡೆ$_2$**: ೧. ಅದಕ್ಕೆ ಕಿರಿದಾದ್ದೊಂದು ಸೊಂಡೆಯುಂಟು (ಮುಂಟಯಾ. ೬-೨೬೬); ಅವರು ಅಪಜಯವಟ್ಟು ಸೊಂಡೆಯ ಒಣಗಿಸಿಕೊಂಡು ಬಂದಿದ್ದನ್ನು ನೋಡಿ ಅಸಮಾಧಾನಪಟ್ಟನು (ಭಾಮಾಕ. ೬೬೦). ೨. ಆನೆಯ ಸೊಂಡಿಲು; ಗಜಹಸ್ತ: ಒಂದು ಆನೆಯು ಗಡುತರವಾದದ್ದೊಂದು ಹಗ್ಗವನ್ನು ಸೊಂಡೆಯಲ್ಲಿ

ತಕ್ಕೊಂಡು ಹೋಗಿ (ಕಭಾಗ. ೫೭೭); ಆನೆಯ ವಿಶೇಷಲಕ್ಷಣವು ಅದರ ಸೊಂಡೆ.ಸೊಂಡೆಯ ತುದಿಗೆ ಎರಡು ಹೊರಳಿಗಳಿರುವುವು (ಮುಂಬಯಿ. ೪-೨೨). 'ತುಂಡ' ಹೋ.

[< ಸಂ. ಶುಂಡಾ]

ಸುಂಡ್ಕೆ (ನಾ). ಬೋರೆ; ಬುಗುಟೆ: ಅಯ್ಯಗಳಿದ್ದು ರೋಷದಲಿ ಹಿಂಡುಹಲಗೆಯ ನೇರಿ ನೆತ್ತಿಯ ಸುಂಡೆಯೇಳಲು ನೊಣೆದು (ಪ್ರಸ್ಥಾಚ. ೬-೬೧). 'ಬಾಸುಬ್' ಪರಾ.

[< ಬಾಸುಂಡೆ?]

ಸುಂತಿ, ಸುನತಿ, ಸುನ್ನತಿ (ನಾ). (ಯೆಹೂದ್ಯರು ಮತ್ತು ಮುಸಲ್ಮಾನರಲ್ಲಿ) ಗಂಡಸಿನ ಜನನಾಂಗದ ಮುಂದೊಗಲ ಭಾಗವನ್ನು ಕತ್ತರಿಸುವ ಒಂದು ಧಾರ್ಮಿಕ ವಿಧಿ,— ಮತಸಂಸ್ಕಾರ: ಯಾವತ್ತು ಮುಸಲ್ಮಾನರು ಯಂಟನೇ ವರ್ಷದ ನಂತರ ಗಂಡುಮಕ್ಕಳ ಸುಂತಿಯನ್ನು ಮಾಡುವರು (ಕಭಾಗ. ೨೨೯); ಹುಮಾಯೂನನು ಬಹಳ ಉತ್ಸವದಿಂದ ಮಗನ ಸುಂತಿಯನ್ನು (ಮುಂಜ)ಮಾಡಿದನು (ಅಕ್ಬರ. ೧೫೫). **ಸುನತಿ:** (೬). **ಸುನ್ನತಿ:** (೬).

[<— ಆರ. ಹಿಂ. ಸುನ್ನತ್; ಮರಾ. ಸುಂತಾ, ಸುನತ, ಸುನತಾ]

ಸುಂದ (ನಾ). ನಿರುತ್ಸಾಹದಿಂದ ಕೂಡಿರುವವನು; ಖಿನ್ನನಾದವನು: ಶಾಂತಾಬಾಯಿಯ ಚಿಂತನೆಯಿಂದರ್ಧ ಅವನು ಮಧ್ಯಾಹ್ನ ಊಟವಾಗುವವರೆಗೂ ಸುಂದನಾಗಿಯೇ ಅಲೆದಾಡಿದ (ಪ್ರೇಮಚ. ೧೫). [ಸುಂದು$_3$ + - ಅ$_7$]

ಸುಂದರ (ಗು). ೧. ಅಂದವಾದ; ಚೆಲುವಿನಿಂದ ಕೂಡಿದ: ಒಂದಲಿ ಮಾತುಗಳಂ ಪೆಱತೊಂದಱೊಳಱಿದಿಟ್ಟು ಕೂಡೆ ಪೇಳ್ವೊಡದಕ್ಕುಂ ಸುಂದರತರಂ ಸಮಾಹಿತಮೆಂದುಂ (ಕವಿಕಾ. ೨-೭೩); ವೃಷವಾಹನನಿಂದು ಕುಂದಸುಂ[ಪಾಠಾಂ. ಸೌಂ]ದರತರವರ್ಣನೀ ವೃಷಭನಾಥಕಥಾರಚನೋಕ್ತಿಯಲ್ಲಿ ಮಾಲ್ಕಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃ ಪ್ರವೃತ್ತಿಯಂ (ಆದಿಪು. ೧-೮). (ನಾ). ೨. ಸೊಗಸು; ಚೆಲುವು: ಏಕಾಂತದಿ ಯೊನದಾ ಕಾಂತೆಯ ಸುಂದರವ ತಾ ಕಂಡು ಭ್ರಮಿಸದೆ (ಮೃಚಾರ. ೭೨-೨೫೫); ಸುಂದರ ಎಂಬ ಪದ 'ಸುಂದ್' ಎಂಬುದರಿಂದ ಬಂದಿದೆಯಂತೆ. ಸುಂದ್ ಎಂದರೆ ಪ್ರಕಾಶಿಸುವುದು ಎಂದು ಅರ್ಥ (ಸೌಂದ. ೪೫). ೩. ಅಂದವಾದುದು; ಚೆಲುವಿನಿಂದ ಕೂಡಿರುವುದು: ಇಂತು ಸಮಾಸೋಕ್ತಿಯೊಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ ಸುಂದರಮಕ್ಕುಂ ಕವಿಪದವೊಂದಿದವೋಲ್ ಕನಕರಚನೆಯೊಳ್ ಮಣಿನಿಕರಂ (ಕವಿಕಾ. ೧-೬೧). ೪. ಸೌಂದರ್ಯದಿಂದ ಕೂಡಿದವನು; ಚೆಲುವ: ಇದೇಂ ಜಿನಂ ಸುಂದರನೋ (ಶಾಂತಿಪು. ೧೨-೧೬); ನೀರೆ ನೀ ಕರತಾರೆ . . . ಸುಕುಮಾರಸುಂದರನ (ಪುರಂದ. ೨-೧೪೬ ಪಲ್ಲವಿ). ೫. ಒಂದು ಬಗೆಯ ಸಸ್ಯ: "ರೇಚಕ— ತಿಲಕವೃಕ್ಷ, ಸುಂದರ" (ಓಷಧಿ. ೧೪೦). ೬. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪ್ರತಿಯೊಂದು ಪಾದದಲ್ಲಿ ಹದಿನಾಲ್ಕು ಅಕ್ಷರಗಳಿರುವ ಶಕ್ವರಿಛಂದಸ್ಸಿನ ಒಂದು ವೃತ್ತ: ಶೀತಕರದ್ಯುತಯಂ ಕೃಶಾನುಮರುಲ್ಲಗೋಪೇತ ಮಗೇಂದ್ರದೂಳಾಗೆ ವಿಶ್ರಮಣಂ ಜಗತ್ಖ್ಯಾತಮದಾ ಕವಿರಾಜಹಂಸವಿನಿರ್ಮಿತಂ ಸಾತಿಶ ಯೋಕ್ತಿಯೆ ಸುಂದರಂ (ಛಂದೋಬು. ೨-೧೫೦). 'ಸುಂದರವೃತ್ತ' ಪರಾ. [ಸಂ.]

ಸುಂದರತೆ (ನಾ). ಚೆಲುವು; ಅಂದ: ಆಲೋಕಪ್ರಿಯಜನನಯನಸುಂದರತೆಯುಂ . . . ಕರಮೊಪ್ಪೆ (ಶಾಂತಿಪು. ೧೨-೧೯ ವ). [ಸಂ. ಸುಂದರತಾ]

ಸುಂದರರೂಪ (ನಾ). ೧. ಅಂದವಾದ ರೂಪ: ಸುಂದರರೂಪದೆ ಪುಟ್ಟಿಯನಿಂದು ಕಲಾಮೌಲಿವಾಹನಂ ಪಾಯ್ತುತೆ ತಾನಂದು ನಡೆನೋಡಿ (ಹಾಕಾಸ್ಮ. ೨-೧೩-೧೮). ೨. ಚೆಲುವ; ಸೊಬಗ: ಪುರುಪರಮೇಶ್ವರಪುತ್ರಂ ಭರತೇಶ್ವರಚಕ್ರವರ್ತಿಗನುಜ ನೆನಲ್ ಸುಂದರರೂಪನೀ ಕುಮಾರನೆ ದೊರೆ ಚಕ್ರಿಗಮೆಸೆಯದಿನಿತು ತೇಜಸ್ಸುರಿತಂ (ಆದಿಪು. ೧೪-೪೫). [ಸಂ.]

ಸುಂದರವೃತ್ತ (ನಾ). = ಸುಂದರ ೬: ಕಂದಂಗಳ್ ಪರವಾಗಿರೆ ಸುಂದರವೃತ್ತಂಗಳ ಕ್ಕರಂ ಚವುಪದಿ ಮತ್ತಂ ದಲ್ ಗೀತಿಕೆ ತಿವದಿಗಳಂದಂಚೆತ್ತೆಸೆಯೆ ಪೇಳ್ವೊಡದು ಚತ್ರಾಣಂ (ಕವಿಕಾ. ೧-೬೫); ಸುಂದರವೃತ್ತಮದೊಪ್ಪೆ ಭಂಭರಸಂಲಗಂ (ಕೃಪಿ. ೮೩). [ಸಂ.]

ಸುಂದರವೇಷ (ನಾ). ಸೊಗಸಾದ ಅಲಂಕಾರವನ್ನು ಮಾಡಿಕೊಂಡವನು: ಹಿತಮಿತಮೃದುವಚನಂ ಲಲಿತಮಧುರಸುಂದರವೇಷಂ (ಆದಿಪು. ೧-೨೯). [ಸಂ.]

ಸುಂದರಾಂಗ (ನಾ).= ಸುಂದರರೂಪ ೨: ಬಂದ ಬಂದವರಿಗೆ ಹೇಳದಿರು ಸುಗಲವ್ವೆ ಸುಂದರಾಂಗನಿಗೆ ಸದರ ಆದೀತು (ಸಿದ್ಧಪ್ಪ. ೪-೧೭). [ಸಂ.]

ಸುಂದರಾಂಗಿ (ನಾ). ಚೆಲುವೆ; ಅಂದಗಾತಿ: ಒಂದು ವಹ್ನಿಯೊಳ್ ನಿಂದೊಡಾ ಲಗಂ ಸುಂದರಾಂಗಿ ಕೇಳ್ ಸಂದ ನಂದಕಂ (ಛಂದೋಬು. ೨-೬೭); ಸುಂದರಾಂಗಿಯಕ್ಕೆದಿ ಬಗೆಬಗೆಯಿಂದ ಪೂಜೆಯ ಮಾಡಿ (ಜಿನಧಾ. ೪೨-೨೭). [ಸಂ. ಸುಂದರಾಂಗೀ]

ಸುಂದರಾಕಾರ (ನಾ). ೧. ಅಂದವಾದ ರೂಪ; ಸುಂದರರೂಪ: ಸುಂದರಾಕಾರಸಂಪನ್ನನೆಂದುಮಾ ನೃಪನಂದನಂ ನಂದನಂ ಬುಧಕೀರಾಳಿವ್ಯಂದಕ್ಕೆ ಸಕಲರ್ತುಕಂ (ಕಾವ್ಯಾವ. ೫೭೧). ೨. ಸುಂದರ; ಚೆಲುವ: ತೃಣೀಕೃತತ್ರಿಧುವನಸಕಲ ಸೌಂದರ್ಯಾತಿಶಯಸುಂದರಾಕಾರನುಮಪ್ಪ ತೀರ್ಥಕರಕುಮಾರಂಗೆ ಸೌಧರ್ಮೇಂದ್ರಂ . . . ಪ್ರಸಾಧನಪ್ರಾರಂಭಂಗೆಯ್ದೆ (ಶಾಂತಿಪು. ೧೦-೫೭ವ). [ಸಂ.]

ಸುಂದರಿ (ನಾ). ೧. ಸೌಂದರ್ಯವನ್ನು ಹೊಂದಿದವಳು; ಚೆಲುವೆ: ಸುಂದರಿ ಜೀವಲೋಕದ ಸುಖಕ್ಕೆ ಪರಾಙ್ಮುಖಿಯರ್ಕಳಾಗಿ ನಿನ್ನೊಂದಿಗರೀ ತಪಕ್ಕೆಳಸಿದಂದು ಮನೋಜನ ಬಿಲ್ಲ ಬಲ್ಮೆ . . . ನಿರರ್ಥಕಮಾಗದಿರ್ಕುಮೆ (ಕಾದಂಬ. ೫೫೪); ಸುಂದರಿ ಮುರೀಚಿಯಂ ನೀಂ ತಂದೊಡೆಯಾಂ ನಿನಗೆ ದಾಸಿಯಾದಪೆಂ (ದಶಕು. ೮-೬೮). ೨. ಹೆಂಗಸು; ಸ್ತ್ರೀ: "ಭಾಮಿನಿ ನಿತಂಬಿನಿ ಪ್ರಮದೆ ಸುಂದರಿ ಲಲನೆ . . . ವರವರ್ಣಿನಿಯೆನಲ್ಕೆ ಹೆಂಗೂಸೆನಿಕ್ಕು" (ಮಂಗರಾ. ೪೯-೧). ೩. ಒಂದು ಬಗೆಯ ತಂತೀವಾದ್ಯ: ಬಳಿಕ ವಿಪಂಚಿಕೆ . . . ಸುಂದರಿ . . . ಕಾಲಕೀಯೆಂಬ ಮೂವತ್ತಮೂಱು ತಂತ್ರೀವಾದ್ಯಂಗಳಲ್ಲಿ (ಎವೇಕ. ೨೩೭). ೪. [ಜ್ಯೋತಿ] ಕನ್ಯಾರಾಶಿ: ಧನು ಝಷಂ ಸುಂದರಿ ಮಿಥುನಂ ದ್ವಿಸ್ವಭಾವರಾಶಿಗಳೆನಿಕುಂ (ಜಾತಕ. ೧-೨೩).

[ಸಂ. ಸುಂದರೀ]

ಸುಂದರಿಸು (ಕ್ರಿ). ಸೊಗಸಾಗುವಂತೆ ಮಾಡು; ಸಿಂಗರಿಸು: ತೊಟ್ಟು . . . ದಿವ್ಯಮಾಲ್ಯಂಬರಗಳಂ ಇಟ್ಟು ನೊಸಲಿಗೆ ತಿಲಕಮಂ ರಚಿಸಿ ಸುಂದರಿಸಿ ಪೊಂದೇರ್ಗ ಳನ್ನಡರ್ದು ದಿಟ್ಟರೆದೆ ಝಲ್ಲೆನಲ್ಸಂಗರಕೆ ಬರಲು (ತುರಂಗ. ೫೧-೪೬); ನವರತ್ನಾದಿ ಭೂಷಣದಿ ಸುಂದರಿಸಿ ಸುಕುಮಾರ ನಿನಗೆಮ್ಮಿಂದಲೇನಭಿಲಾಷೆವುಂಟೆಂದಿಂದುಮುಖಿ ಯರು ಕೇಳ್ದರು (ಜಿನಧಾ. ೪೨-೨೫). [ಸುಂದರ + - ಇಸು$_5$]

ಸುಂದು$_1$, ಚುಂದು (ಕ್ರಿ). ೧. ಮಲಗು; ಶಯನಮಾಡು: "ಸುಂದು— ಮೈಥುನೇ, ಶಯನೇ ಚ" (ಕಮಧಾ). ೨. ಕೂಡು; ಸಂಭೋಗಿಸು: "ಸುಂದು— ಮೈಥುನೇ, ಶಯನೇ ಚ" (ಕಮಧಾ); ತಪ್ಪಿದವರ ಹೆಂಡತಿಯನು ಹದಿನೆಂಟು ಜಾತಿಗಳು ಸುಂದು (ಸೌಗಾ. IX-ii. ೫೧೩-೫೦; 1521). 'ಮಱಿಸುಂದು$_1$' ಪರಾ. **ಚುಂದು:** ೨. ಬ್ರಾಂಬ್ರ ಹೆಂಗಳಿಗೆ ಮಂಗ ಚುಂದೋದುಂಟೆ (ಹಾಸ್ಯಮಂ. ೫೫).

ಸುಂದು$_2$ (ನಾ). ಕೂಟ; ಸಂಭೋಗ: (೬). 'ಮಱಿಸುಂದು$_2$' ಪರಾ.

[< ಸುಂದು$_1$]

ಸುಂದು$_3$ (ನಾ). ಮನಸ್ಸಿನ ಖಿನ್ನತೆ,— ನಿರುತ್ಸಾಹ: ನೀನು ಮುಚ್ಚೆ ಮೈ ಜುಮ್ಮು, ತಟ್ಟಕೋ ಅಗಲಹೂವ ತೆರೆದು ನೀಚಗಿರಿಯ ಕಡವಾಲ ಇಹವು ಹೋಗಲ್ಲಿ ಸುಂದು ಮರೆದು (ಮೀಳಾದೂ. ೭-೨೫).

ಸುಂದ ಬಡಿ, ಸುಂದು ಬಡಿ = ಮಂಕಾಗು; ಕಳೆಗುಂದು: ಕಂದನು ಹೋದ ದಾರಿ ಸುಂದ ಬಡಿದು ನೋಡಿ . . . ಹಿಂದಿರುಗಿ ತಾಯಿ ಮನಿಯಾಗ (ಸಿದ್ಧಪ್ಪ. ೬-೯೮); ಒಳಗಿನ ದೃಶ್ಯವನ್ನು ನೋಡಿ ಸುಂದುಬಡಿದಂತಾದಳು (ಮಾಲತಿ. ೧೪). ಸುಂದಾಗು = ಸುಂದಬಡಿ: ಮೈನಿ ಯಾಕೋ ಸುಂದಾಗಿದ್ದರು (ವ್ಯಸ. ೨೦೪). [ದೇ. ॥ ತುಳು. ಸುಂದು]

ಸುಂದುವಡೆ (ಕ್ರಿ). ಮಂಕಾಗು. ಕಳೆಗುಂದು: ನಗದೆ ಬಿನದಿಸದೆ ಪಗಲಿರುಳು ಸುಂದುವಡೆದಂತಿರಲು (ಮಹಾಂತೇ. ೧೩-೬). [ಸುಂದು$_3$ + ಪಡೆ$_1$]

ಸುಂಪುರೆ (ನಾ). ಮೆಚ್ಚಿಕೆಯನ್ನು ಸೂಚಿಸುವ ಒಂದು ಮಾತು; ಕೊಂಡಾಟದ ಒಂದು ನುಡಿ: "ಅರರೆ ದಣು . . . ಚಾಗು ಸಲೆ ಸುಂಪುರೆಯೆನೆ ಕೊಂಡಾಟದ ನುಡಿ" (ಭಾರಾ. ೪೬). 'ಪುರೆ$_1$' ಪರಾ.

ಸುಂಬ (ನಾ). ಒಬ್ಬ ರಾಕ್ಷಸನ ಹೆಸರು; ಶುಂಭಾಸುರ: ಶುಂಭ – ಸುಂಬ (ಕಮದ. ೨೫೫ ಪ್ರಯೋ). [< ಸಂ. ಶುಂಭ. / ಪ್ರಾ. ಸುಂಭ]

ಸುಂಬಳ 'ಸಿಂಬುಳ್' ನೋ.

ಸುಂಬಳಕಾರ 'ಸೋಮಲಕಾರ' ನೋ.

ಸುಂಬಳು 'ಸಿಂಬುಳ್' ನೋ.

ಸುಂಬ್ಬು$_1$ (ನಾ). (ಕರಾ) ಮಕ್ಕಳ ಆಟವನ್ನು ನಿಲ್ಲಿಸುವ ಒಂದು ಸೂಚನೆ.
[<— ತುಳು. ಸೂಂಬೊ]

ಸುಂಬ್ಬು$_2$ (ನಾ). ಸುರುಳಿ; ಸಿಂಬೆ: ತೆಗೆದು ಡೊಂಬನು ಹುರಿಯ ಸುಂಬನು, ಬಿಗಿದು ಬಟ್ಟಲನೇರಿಸಿ ಬೊಗರಿಯಂತೆಯ ತಿಗರಿಯಂತೆಯ ನೆಗದು ಕುಣಿದನು ಧಿಮಿಧಿಮಿ (ಕಏಪು. ೩೬-೮). [< ಪ್ರಾ. ಸುಂಬ = ಒಂದು ಬಗೆಯ ಹುಲ್ಲಿನ ಹಗ್ಗ]

ಸುಂಬುಳ 'ಸಿಂಬುಳ್' ನೋ.

ಸುಂಬುಳಗುಱಿ (ನಾ). ಒಂದು ಬಗೆಯ ಕುರಿ: ಇಂಬಾದ ಬ್ರಹ್ಮದಲ್ಲಿ ತುಂಬಿದ ಜಗವೆಲ್ಲಾ ಸಂಭ್ರಮಿಸುತ್ತಿದ ಸಂಸಾರದಲ್ಲಿ ಕುಂಭದೊಳಗಣ ಸುಧೆಯನುಂಬ ಭೇದವನಱಿಯದೆ ಸುಂಬುಳಗುಱಿಯಂತಾದರು ಜಗವೆಲ್ಲವು (ಪದಗೋ. ೨೮೯-೨೩೮).
[ಸುಂಬುಳ$_2$ + ಕುಱಿ$_3$]

ಸುಂಬೆ (ನಾ). ಒಂದು ಬಗೆಯ ಫಲವೃಕ್ಷ (?): ಈ ಭೂಮಿಗಳಿಗೆ ವುಳ್ಳ ಕರೆ ಮುರೆ ಮನೆ ಬಾವಿ ಹಲಸು ಮಾವು ಸುಂಬೆ ನಿಕ್ಕಿಲುರ್ಕರ್ಂದ್ರೆ ಕದಿರು ಜಲಪಾಶಾ(ಪಾ)ಣ ಸಹ ಮೂಲಧಾರೆಯನು ಯೆರ(ಎರೆದು)ಕೊಟ್ಟು ಯಿಸಿಕೊಂಡ ದೊಡ್ಡವರ(ರಾ)ಹ ಗ ೮೦ (ಪಾಗಾ. XX. ೯೪-೪೧: 1556). [?]

ಸುಕ್ಕ$_1$ (ನಾ). ಗಿಣಿ; ಗಿಳಿ: "ಕೀರ ಪರಿಣಾಮ ಸುಕ ಶಬ್ದ" (ಶಬ್ದಮಂ. ೭೯).
[< ಪ್ರಾ. ಸುಕ./ ಸಂ. ಶುಕ]

ಸುಕ್ಕ$_2$ 'ಸೊಗ' ನೋ.

ಸುಕಂಠ (ನಾ). ಉತ್ತಮವಾದ ಕೊರಳು, — ಕಂಠ: ನಗಗಣ್ಣೊಳು ಮತ್ಸ್ಯರೂಪಂ ಚರಣಯುಗಳದೊಳು ಕೂರ್ಮ್ಮರೂಪಂ ಸುಕಣ್ಣೋ[ಜ್ಜುಗ]ದಾದಿ ಕ್ರೋಡರೂಪಂ (ಸೌಇಾ. XX. ೧೦೭-೩೬: 1138). [ಸಂ.]

ಸುಕಂದಕ (ನಾ). ಒಂದು ಬಗೆಯ ಗಡ್ಡೆ; ಈರುಳ್ಳಿ: "ಪಲಾಂಡುಃ,ಸುಕಂದಕಃ — ೨ ನೀರುಳ್ಳೀ ಹೆಸರುಗಳು" (ಸಿದ್ಧಾಂತಿ. ೧೪೬). [ಸಂ.]

ಸುಕಂಬಾಟ್ 'ಸೊಗವಾಟ್' ನೋ.

ಸುಕನಾಸಿ 'ಸುಖನಾಸಿ' ನೋ.

ಸುಕನ್ಯೆ (ನಾ). ೧. ಒಳ್ಳೆಯ ಹುಡುಗಿ: ಇವಳೆ ಕೊಳೆ ಸೋಕದ ಸುಕನ್ಯೆಯು, ಇವಳೆ ದೊಂಬರ ಚೆನ್ನೆಯು (ಕಏಪು ೪೦-೩೫). ೨. ಚ್ಯವನಋಷಿಯ ಹೆಂಡತಿಯ ಹೆಸರು: ಧರಣೀಂದ್ರಶೇಖರನ ತನುಭವೆ ಸುಕನ್ಯೆ ಪರಿಪೂರ್ಣಲಾವಣ್ಯೆ (ಶಿವರಾ. ೮-೧೫).
[ಸಂ. ಸುಕನ್ಯಾ]

ಸುಕಬಾಳು 'ಸೊಗವಾಟ್' ನೋ.

ಸುಕಮಿರ್ 'ಸೊಗಮಿರ್' ನೋ.

ಸುಕರ (ಗು). ೧. (ಮಾಡಲು) ಸುಲಭವಾದ; ಶಕ್ಯವಾದ. ೨. ಸುಂದರವಾದ; ಮನೋಹರವಾದ: ಎಂದಿಂತು ಪೇಟ್ಟ ಮಾಟ್ಕೆಯೊಳೊಂದುವುದೋಜಸ್ವಿತಾಗುಣಂ ಕೈಕೊಳೆಯುಂ ಸುಂದರಮಾಗದು ಕವಿಪದಮೆಂದು ವ್ಯತ್ಯಯದಿನಿಡುವೊಡದು ಸುಕರತರಂ (ಕವಿಹಾ. ೨-೯೦); ಸಕಳಪಾಪಕ್ಷಯಮೆನಿಸಿ ವರಸುಕರಪೋಕ್ಷಾಂಗನೆಯನೊಂದುಗು ನಿಕಟಫಲಸಂಪ್ರಾಪ್ತಿಯಿದು (ಬಸಪು. ೩-೬೯). (ನಾ). ೩. ಸುಲಭವಾದುದು; ಸರಾಗವಾದುದು: ಮಾರಕಾಮಂ ರಣದೊಟ್ ಪೇಸೇಟೆ ಹೊಯ್ದು ಕೊನ್ದಿನ್ತಾ ಸುಕರಂಬೆರಸು ತವಿಸಿದಮ್ಮಾರ್ಪಡೆಯಂ (ಎಇ. VIII. ಸೊರಬ. ೨೫೦-೯; 1237); ಇಷ್ಟಾದರೂ ಆತನ ಸಿದ್ಧಾಂತಮಂಡನೆಯಿಂದ ಖಂಡನಕಾರರ ಕೆಲಸ ದುಷ್ಕರವಾಗುವ ಬದಲು ಸುಕರವೇ ಆಗಿದ್ದಂತೆ ತೋರುತ್ತದೆ (ಧ್ವನ್ಯಾಲೋ. XXVIII ಪೀಠಿಕೆ). ೪. ಸರಿಯಾದುದು; ನೇರ್ಪಾದುದು: ಅಕಟ ಜಡಮತಿಗೆ ಮರುಳುಮ್ಮತವನಿಕ್ಕಿದೊಡೆ ಸುಕರಮಪ್ಪುದೆ [ಪಾಠಾಂ. ಸುಕರೆಯಪ್ಪುದೆ] (ಜೈಮಿಭಾ. ೨-೩೬); ಸಕಲಜನಾನಂದ ಸುಖದೊಳಗಿರುವರು ಸುಕರಮಾಗಿದ ವೃಷ್ಟಿ ಸುಕಲಾಧಿಪನೆ (ನಳಾಸಾ.೩-೨೦). ೫. ಸುಂದರವಾದುದು; ಮನೋಹರವಾದುದು: ಸುಕರಮದಾಗಿರೆ ಕರ್ಣಾಟಕದಿಂ ಕಾವ್ಯಾವಲೋಕಮಂ ವಿರಚಿಸುವೆಂ (ಕಾವ್ಯಾವ. ೩); ಮಕರತೋರಣ ರತ್ನತೋರಣ ಮುಕುರತೋರಣಪಂಕ್ತಿಗಳನತಿಸುಕರವೆನಲೆತ್ತಿಸಿದನಾ ಪುರವೀಥಿವೀಥಿಯಲಿ (ಬಸಪು. ೪-೩). ೬. ಚೆಲುವಾದ ಕೈ, —ಹಸ್ತ. ೫, ೬: ನುತಸುಕರಪದ್ಮರಾಗಂ ಕ್ಷಿತಿಯೊಳ್ ರವಿಯಿಂದ ಮೆಱೆವುದುಚಿತಮದೀಗಳ್ನುತಸುಕರಪದ್ಮರಾಗಸ್ಥಿತಿಯಿಂ ರವಿರಾಗವಾಂಪುದಿದು ಚಿತ್ರತರಂ (ರಾಜಶೇ. ೮-೨೬). ೭. ಮನೋಹರವಾದ ಕಿರಣ. ೮. ಮಂಗಳಕರವಾದುದು. ೭, ೮: ಇಂದುಬಿಂಬದಂತಿರೆ ಸುಕರಪ್ರಸಿದ್ಧಮೆನಿಕುಂ ವಿಳಸತ್ಪತಿ ಸನ್ಮನೋಜ್ಞನಾ (ರಾಜಶೇ. ೧-೮೨). ೯. ಚೆಂಡಾಟದ ಒಂದು ವಿಧಾನ: ಒಳಗಂ ದಕ್ಷಿಣ ಸುಕರ ದುಷ್ಕರಮಂ ಪೊಱಗಣ ಸುಕರದುಷ್ಕರಭೇದಮಂ ಒಳಗೆ ವಾಮದ ವಿಷಮಮನಲ್ಲಿಯ ವಿಷಮದುಷ್ಕರಮನಿನ್ನದಱ ಪೊಱಗಗ್ಗಳಿಕೆಯೆನಿಪತಿವಿಷಮಮನದಱತಿವಿಷಮದುಷ್ಕರಮೆಂಬ ದುಷ್ಕರಮಂ ಎಳೆಯೊಳೊರ್ವನೆ ಚಾರಿಸಲ್ ಬಲ್ಲಂ ನಾಲ್ಕುಪ್ರಕರಣಮುಮನಿನ್ಪ್ರರಾಜಂ (ಎಕ. II (R). ೧೬೩-೭೭; 982). 'ದುಷ್ಕರ' ಪರಾ. ೧೦. ದಯಾಪರತೆ; ಉಪಕಾರಬುದ್ಧಿ: 'ಸುಕರತೆ'ಪರಾ. [ಸಂ.]

ಸುಕರಕವಿ (ನಾ). ಉತ್ತಮನಾದ ಕವಿ; ಶ್ರೇಷ್ಠಕವಿ: ಸುಕವಿ ಸುಕರಕವಿ . . . ನುತಮಹಾಕವೀಂದ್ರಂ ಸರಸ್ವತೀಮುಖಮುಕುರಂ (ಸುಕುಮಾ. ೧-೫೨); ಸುಕರಕವಿನೇಪಿರಂ ತಾರ್ಕಿಕತಿಲಕಂ . . . ಕವಿರಾಜಮಲ್ಲನಪ್ರತಿಮಲ್ಲಂ (ಅರ್ಥನೇ. ೧-೫೧). [ಸಂ.]

ಸುಕರತೆ (ನಾ). ೧. ಸುಲಭವಾಗಿರುವಿಕೆ; ಸರಳವಾಗಿರುವಿಕೆ: ಸುಕರತೆ, ಸ್ವಚ್ಛತೆ, ಶಾಂತಿ, ಸೊಬಗು— ಈ ಗುಣಗಳ ಒಂದು ಮಾದರಿಯನ್ನೇ ತನ್ನ ಗದ್ಯದ ಮೂಲಕ ಸ್ಥಾಪಿಸಿಕೊಟ್ಟ ಫ್ರಾನ್ಸಿನ ಪ್ರಭಾವ (ಸಾಹಿತ್ಯ ೫೧). ೨. ದಯಾಪರತೆ; ಉಪಕಾರಬುದ್ಧಿ: ಜ್ಞಾಪ್ರತಿಪಾಳನಮಂ ಧರ್ಮಪ್ರೀತಿಯನ್ನೆದೆ ಮಾಡಿದಂ ಸುಕರತೆಯಿಂ (ಚಂದ್ರಪ್ರ. ೨-೬೩).
[ಸಂ. ಸುಕರತಾ]

ಸುಕರಮಂತ್ರ (ನಾ). ಸರಿಯಾದ ಮಾತು; ಉಚಿತವಾದ ನುಡಿ: ಸುಕರಮಂತ್ರವನಱುಹು ನೀನಿನ್ನಂಜಬೇಡನೆಲು (ಕುಮಾಉ. ೬-೧೩). [ಸಂ.]

ಸುಕರಾಜ (ನಾ). ಒಂದು ಬಗೆಯ ಹೂವು: ಜಾಲದ ಪುಷ್ಪ . . . ಮೇಲಾದ ಸುಕರಾಜಪುಷ್ಪ ಲೀಲೆಯಿಂ ದೇವತಾಕುಸುಮಂಗಳೆಲ್ಲಾ ಕಾಲದೆ ರಾಜಿಸುತಿಹುವು (ಕಂನವಿ. ೫-೧೦೦). [< ಸುಗಂಧರಾಜ]

ಸುಕರೆ (ನಾ). ಸಾಧುಸ್ವಭಾವದ ಹಸು: "ಅಚಂಡೀ, ಸುಕರಾ — ೨ ಸಾಧುವಾಗಿ ಸಾತ್ವಿಕಸ್ವಭಾವವುಳ್ಳ ಆಕಳು" (ಸಿದ್ಧಾಂತಿ. ೨೯೫). [ಸಂ. ಸುಕರಾ]

ಸುಕರ್ಮ (ನಾ). ೧. ಒಳ್ಳೆಯ ಕಾರ್ಯ; ಸತ್ಕಾರ್ಯ: ಕಾಲದ್ರವ್ಯ ಸುಕರ್ಮಶುದ್ಧಿಯ ಪೇಳುವರು ಅಲ್ಪರಾಗೆ (ಹಸಾರ. ೧೯-೧೭). ೨. ಒಳ್ಳೆಯ ಕೆಲಸವನ್ನು ಮಾಡುವವನು; ಸತ್ಕಾರ್ಯವನ್ನು ಮಾಡುವವನು: ಕನಕಂ ವೃಶ್ಚಿಕ ಮೇಷದೊಳ್ ನಿಲೆ ಚಮೂನಾಥಂ ಸುಕರ್ಮಾಟನಂ . . . ಕ್ಷೀಣದೇಹನೆನಿಕ್ಕುಂ (ಜಾತಕ. ೧೭-೧೮). ೩. [ಜ್ಯೋತಿ]ಇಪ್ಪತ್ತೇಳು ಬಗೆಯ ಯೋಗಗಳಲ್ಲಿ ಏಳನೆಯದು: ವಿಷ್ಕಂಭ ಪ್ರೀತಿ . . . ಸುಕರ್ಮ ಧೃತಿ . . . ಐಂದ್ರ ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇಕ. ೨೬೨).
[ಸಂ. ಸುಕರ್ಮನ್]

ಸುಕಲೆ (ನಾ). ೧. ಉತ್ತಮವಾದ ಲಲಿತಕಲೆ,— ವಿದ್ಯೆ: ಸಕಲಸುಕಲಾಕುಶಲಂ ಭೂಸುತ ವಿಕ್ರಮವಿಜಯಂ ಭೂನಾಥನೆ ನಿನಗೆ ಪುತ್ರನಾದಪಂ (ಹಮ್ಮೀರ. ೨-೧೩). ೨. (ಮನೋಹರವಾದ) ಗುರುತು; ಚಿಹ್ನೆ: ಸುಕಲೆಗಳನಾಂತ ಮೊಲೆ . . . ಸೊಪ್ಪಾದಧರಮೊಪ್ಪಿತಾ ಕಾಂತೆಗೆ (ಜೈಮಿಭಾ. ೧೧-೨೫). [ಸಂ. ಸುಕಲಾ]

ಸುಕವಿ (ನಾ). ಉತ್ತಮಕವಿ; ಒಳ್ಳೆಯ ಕವಿ: ಕಣ್ಗೆ ವಂದಂ ಸುಕವಿಜನಮನೋಮಾನ ಸೋತ್ತಂಸಹಂಸಂ (ಆದಿಪು. ೧-೮೩).

ಸುಕವಿಶುಕಚೂತ = ಒಳ್ಳೆಯ ಕವಿಗಳೆಂಬ ಗಿಳಿಗಳಿಗೆ ಮಾವಿನಂತಿರುವವನು; ಒಂದು ಬಿರುದು: ವಾಜಿಕುಳಾರ್ಣ್ಣವಪಾರಿಜಾತ ಸುಕವಿಶುಕಚೂತ ಬನ್ಮುವನವಸನ್ತ (ಸೌಇಾ. XX. ೬೯-೩೫; 1107). [ಸಂ.]

ಸುಕಾಣ 'ಚುಕ್ಕಾಣಿ' ನೋ.

ಸುಕಾಣು 'ಚುಕ್ಕಾಣಿ' ನೋ.

ಸುಕಾರ (ನಾ). ಸು ಎಂಬ ಅಕ್ಷರ: ಇಸುವಿನ ಸುಕಾರಮಂ ಲೋಪಿಸುವರ್

ಕುಂ ಪರದೊಳಾಗ ಕುಂಮಿಂಗೆ ಕೆಲರ್ ಪೊಸಯಿಸುವರ್ ದ್ವಿರ್ಭಾವಮಂ (ಶಮಬ. ೨೨೮ ಪ್ರಯೋ). [ಸಂ.]

ಸುಕಾಲಿ (ನಾ). ಒಂದು ಅಲೆಮಾರಿ ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ; ಲಂಬಾಣಿ: ಪೈರುಗಳಂ ತಂದು ಸುರಿಯುವಂತೆ ಸುಕಾಲಿಯರು . . . ಮೊದಲಾದ ಬಿಡಿವರ್ತಕರಿಗೆ ನೇಮಿಸಿರುವೆನು (ಸೌಗಂಧಿ. ೧೩೫-೧೪); ಅವಳ ವೇಷಭೂಷಣಗಳನ್ನು ನೋಡಿದರೆ . . . ಸುಕಾಲಿಗಳ ಹೆಣ್ಣೆನಂತೆ ಕಾಣುತ್ತಿದ್ದಳು (ಶ್ರೀರಾಯಿ. ೫೪). [? ./ ತೆಲು. ಸುಕಾರಿ, ಸುಕಾಲಿ]

ಸುಕಾಲಿಗ, ಸುಕ್ಕಾಲಿಗ (ನಾ). ಸುಕಾಲಿ; ಲಂಬಾಣಿ: (ರೈತ್ಗ. II. ೫೬೨). **ಸುಕ್ಕಾಲಿಗ:** (ಮೃಗಚೆ IV. ೭೮೬). [< ಸುಕಾಲಿ]

ಸುಕಾಸೆ (ನಾ). ಉತ್ತಮವಾದ ಕಾಸೆ, — ಕಟಿವಸ್ತ್ರ: ರಾಜಿಸುವ ಬೆಳ್ಬಟ್ಟೆಯ ಸುಕಾಸೆಯನಲಂಕರಿಸಿ ಶಶಿ ರವಿಯ ಪಳಿವ ತಾಳವನೊತ್ತುತ್ತೆ . . . ಲಾಸ್ಯಮುಮನಾಡಿ ಭೃಂಗೀಶ ನಗಿಸುವ ಶಿವನ ಪಂಚಮುಖವ (ಏಕೋಪು. ೨-೫೭). [ಸ್ಯ-+ ಕಾಸೆ]

ಸುಕುಮ, ಸೂಕ್ಷ್ಮಮ (ಗು). ೧. ಸೂಕ್ಷ್ಮವಾದ; ನಾಜೂಕಾದ: ಒಂದು ಅಸಡಿಯ ಬೆಳಗು ದುಜ್ಜೋದನನು, ತನ್ನ ಸುಕುಮದೇಹದ ಕೋರನ ಕೂಡ, ಪಾಗಲದಲ್ಲಿ ಮೋರದ ಆಟವನ್ನು ಕಂಡು (ಭಾಪಾಶಾ. ೨೯೨). (ನಾ). ೨. ಸೂಕ್ಷ್ಮವಾದುದು; ನಾಜೂಕಾದುದು: ಸೂಕ್ಷ್ಮ — ಸುಕುಮ, ಹರ್ಷ — ಹರುಸ (ಶಮದ. ೨೫೪ ಪ್ರಯೋ). **ಸೂಕ್ಷ್ಮಮ:** ೧. ಮೃದುವೆನಿಪ ಪಕ್ಷಿಗಳ ಸೂಕ್ಷ್ಮಮವದನ ದವತಾರದವೊಲಕ್ಷಿಯ ಬೆದಳೆಕೆಯಲಾ ತಾಯಿತಂದೆಯರ ಬಳಿವಿಡಿದು (ನಿಘಾಗ. ೧೧-೧೩-೫೫). [< ಸಂ. ಸೂಕ್ಷ್ಮ./ ಪ್ರಾ. ಸುಖಮ]

ಸುಕುಮಾರ (ಗು). ೧. ಮೃದುವಾದ; ಕೋಮಲವಾದ: ಶೃಂಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತ[ದಿಂ] (ಕವಿರಾ. ೨-೯೯); ಸುಕುಮಾರಸುರಭಿಸಂತಾನಕಕುಸುಮದ ಬಣ್ಣವಾಸಿಗಂಗಳನೆತ್ತುತ್ತಕಳಂಕಮೂರ್ತಿಗಾ ಗಾಡಿಕಾರ್ತಿಗಮರಿಯರ ಮಾಲೆಗಾರ್ತಿಯರಾದರ್ (ಶಾಂಪು. ೯-೧೮೨). (ನಾ). ೨. ಕೋಮಲತೆ; ಮೃದುತ್ವ: "ಮೃದು ಸುಕುಮಾರಂ ಕೋಮಳಂ" (ಮಸ್ತಕೋ. ೪೫-೧೦೫); ಯಾವಾಗಲೂ ಗುಲಾಬಿಯಂತೆ ಸುಕುಮಾರವಾಗಿದ್ದ ನಿಮ್ಮ ಶರೀರ ಇದೇಕೆ ಹೀಗಾಯ್ತು? (ಪುನರು. ೨೮೩). ೩. ಕೋಮಲವಾದ ಶರೀರವನ್ನು ಹೊಂದಿದವನು; ಚೆಲುವ: ಸುಕುಮಾರನೆಂಬ ಪೆಸರೀ ಸುಕುಮಾರಂಗೀ ಸಮಸ್ತಧಾರಿಣಿಯೊಳ್ ಸಾರ್ಥಕಮಾದುದು (ಸುಕುಮಾ. ೧೧-೩೬); ನಿನ್ನ ಬಸುಱಲಿ ಬೆಳೆವ ಸುಕುಮಾರಂ ನಿಖಿಳಪಾವನನೆನಿಪ್ಪ ಜಗನ್ನುತೋನ್ನತಮೂರ್ತಿಯಲ್ಲದೆ ಚಾವಳನೆ ಕೇಳು (ಬಸವು. ೩-೧೯). ೪. ಒಳ್ಳೆಯ ಮಗ; ಸುಪುತ್ರ. ೫. [ಕಾವ್ಯಮೀ] ಕಾವ್ಯಗುಣಗಳಲ್ಲಿ ಒಂದು; ಮೃದುವಾದ ಅಕ್ಷರ ಅಥವಾ ಪದಗಳ ಪ್ರಯೋಗ: ಸುಕುಮಾರತರಾಕ್ಷರಪದನಿಕರವಿಶಿಷ್ಟ ಪ್ರಯೋಗಗತಮಪ್ಪುದದಾ ಸುಕುಮಾರಮೆಂಬುದಕ್ಕುಂ (ಕವಿರಾ. ೨-೭೦); ಸುಕುಮಾರಂ ಸುಕುಮಾರಶೋಭೆ ವಿಲಸತ್ಕಾಂತಿ ಸ್ಫುರತ್ಕಾಂತಿ . . . ಆಗೊಪ್ಪಿರ್ಪ ವಾಕ್ಕೀತಿಮಾಡಿ ಕರಂ ಪ್ರೇಮದೊಳರ್ಕೆ ಕೋಮಳ ಮದೀಯಾಸ್ಯಾಂಬುಜಾವಾಸದೊಳ್ (ಶಾಂತೀಶ್ವ. ೧-೧೩). ೬. [ನಾಟ್ಯ] ರೂಪಕಗಳಲ್ಲಿ ಒಂದು ಭೇದ; ಲಘು ಮತ್ತು ವಿನೋದಕರವಾದ, ಸುಖಾಂತವಾದ ಪ್ರಹಸನ: ನಾಟಕದಲ್ಲಿ ಸುಕುಮಾರ, ಆವಿದ್ಧ ಎಂದು ಎರಡು ಪ್ರಯೋಗಗಳಿವೆ (ಸಾಹಿವಿ. ೧೨೨). 'ಆವಿದ್ಧ' ಪರಾ. [ಸಂ.]

ಸುಕುಮಾರಕ (ನಾ). = ಸುಕುಮಾರ ೩: ಸುಕುಮಾರಕಂ ಕುಮಾರಕನೆಂದು ಜಯವಧುಗನಂತವೀರ್ಯಂ ಪ್ರಿಯನಾದೊಂ (ಶಾಂಪು. ೪-೪೭); ಸುಕುಮಾರಕನೊರ್ವಂ ಮಣಿಮಕುಟಮುಮಂ ತಿರ್ದುವೊಂದು ನೆವದಿಂದ ಭುಜಾಧಿಕಶೋಭೆಯನಾಕ್ಷಣದೊಳ್ ಪ್ರಕಟಿಸಿ ಮೆಚ್ಚಿದಂ ಸರೂಪಮಂ ವೈಭವಮಂ (ಬಾಧಪು. ೧೧-೯೧). [ಸಂ.]

ಸುಕುಮಾರತೆ (ನಾ). ೧. ಕೋಮಲತೆ; ಲಾಲಿತ್ಯ: ಹರನ ಮನೋಹರಂ ಗಿರಿಜೆಯಾ ನಡೆಯಾ . . . ಹರೆಯವೀ ಸುಕುಮಾರತೆಯಾ ಸುಧಾಮಯಂ (ಗಿರಿಜ. ೪-೫೭). ೨. = ಸುಕುಮಾರ ೫: ಶ್ಲೇಷ ಪ್ರಸಾದ ಸಮತೆ ಮಾಧುರ್ಯ ಸುಕುಮಾರತೆ . . . ಸಮಾಧಿಗಳೆಂಬ ದಶಪ್ರಾಣವಿಡಿದು (ಏವೇಕ. ೨೨೬); ಶ್ಲೇಷ ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ . . . ಸಮಾಧಿ — ಈ ಹತ್ತುಗುಣಗಳೇ ವೈದರ್ಭಮಾರ್ಗದ "ಪ್ರಾಣ" (ಭಾರಮಾ. ೨೯). [ಸಂ. ಸುಕುಮಾರತಾ]

ಸುಕುಮಾರಪ್ರಯೋಗ (ನಾ). = ಸುಕುಮಾರ ೬: ನಾಟಕ, ಪ್ರಕರಣ, ಭಾಣ, ವೀಥಿ, ಅಂಕ ಈ ಐದು ಸುಕುಮಾರಪ್ರಯೋಗಗಳು (ಸಾಹಿವಿ. ೧೨೨); ಸುಕುಮಾರಪ್ರಯೋಗದಲ್ಲಿ ರತಿ, ಹಾಸ, ಉತ್ಸಾಹ, ವಿಸ್ಮಯಗಳಿಗೆ ಸ್ಥಾನವಿದೆ (ಹೂಸಂಸಾ. ಮುನ್ನುಡಿ ೭). 'ಆವಿದ್ಧಪ್ರಯೋಗ' ಪರಾ. [ಸಂ.]

ಸುಕುಮಾರಾಂಗ (ನಾ). ಕೋಮಲವಾದ ದೇಹ; ಮೃದುವಾದ ಶರೀರ: ಅಂಗನಾಕುಸುಮಸುಕುಮಾರಾಂಗಸಮುಚಿತಮುಮಪ್ಪ ಲಾಸ್ಯಮಂ . . . ಪರಿಸ್ಫುಟಂ ಮಾಡಿ (ಶಾಂಶಿಪು. ೭-೩೨೮). [ಸಂ.]

ಸುಕುಮಾರಾಂಗಿ (ನಾ). ಕೋಮಲವಾದ ಶರೀರವನ್ನು ಹೊಂದಿದವಳು; ಚೆಲುವೆ: ಪ್ರಕಟಿತವಿಳಾಸನಧಿರಾಜಕುಮಾರಂ ನಳನಕೇತು ಕಂಡವರಂ ತತ್ಸುಕುಮಾರಾಂಗಿಗೆ ಸೋಲ್ತೆಚೆದುಕೊಂಡನನ್ಯಾಯವೃತ್ತಿಯಿಂ ಕೋಮಳೆಯಂ (ಶಾಂಶಿಪು. ೯-೧೦). [ಸಂ. ಸುಕುಮಾರಾಂಗೀ]

ಸುಕುಮಾರಿ (ನಾ). ೧. ಒಳ್ಳೆಯ ಮಗಳು; ಸುಪುತ್ರಿ: ಇತ್ತಲೀ ಮಮಕಾರನೆಂಬ ನೃಪೋತ್ತಮನ ಸುಕುಮಾರಿ ಮಿಗೆ ಬಳೆವುತ್ತಲಿರ್ದಳು ಗಳಿಗೆಸಂಖ್ಯೆಗೆ ಸಕಲಸುಖದಿಂದೆ (ಪ್ರಭುಲೀ. ೩-೨೩). ೨. ಕೋಮಲೆ; ಸುಂದರಿ: ಸುಕುಮಾರಿಯರಂ ನೀಳಾಳಕಿಯರ ನೆರೆದಂದು ತಂದು ಶುಭಲಗ್ನದೊಳಾ ನಕುಳ ಸಹದೇವರೊಳ್ ಸೋತ್ಸುಕಚಿತ್ತಂ ನೆರೆಪಿದಂ (ನೇಮಿಪು. ೧೦-೧೩); ಸನ್ನುತಸುಕುಮಾರಿಯರ್ . . . ಅರಸನ ಸಂಗಡಮುನ್ನತಜಳಕೇಳಿಗೆಂದು ನಿಂದರ್ ಕ್ರಮದಿಂ (ಪಮ್ಮಿರ. ೪-೨೧). [ಸಂ. ಸುಕುಮಾರೀ]

ಸುಕುಮಾರಿಕಾವಾಸ (ನಾ). ಒಂದು ಬಗೆಯ ಕೊಳಲು: ಜಾತಿವಾಸ ಸಜಾತಿವಾಸ ಸುಕುಮಾರಿಕಾ[ಜಾಂಾ. ಕ]ವಾಸ . . . ಭುವನಾಧಿಪತಿವಾಸವೆಂಬ ಹದಿನೆಂಟುತೆಱದ ವಾಸಂಗಳ ಲಕ್ಷಣವನಱಿದು (ಏವೇಕ. ೨೩೭). [ಸಂ.]

ಸುಕುಮಾರಿಕೆ (ನಾ). = ಸುಕುಮಾರಿ ೨: ದಾದಿಯುಮಾ ಸುಕುಮಾರಿಗಾದರದಿ ನವಂತಿನಾಥನಂ ತೋಱಿದಳ್ (ಶಾಂಶಿಪು. ೫-೧೧೭). [ಸಂ. ಸುಕುಮಾರಿಕಾ]

ಸುಕುಲೀನ (ನಾ). ಒಳ್ಳೆಯ ವಂಶದಲ್ಲಿ ಜನಿಸಿದವನು: ಸುಕುಲೀನಂ ವಿಬುಧಾನ್ವಿತಂ . . . ಎಸದಂ ಭೂಮಧ್ಯದೊಳ್ ಲಕ್ಷ್ಮಣಂ (ನೇಮಿಪು. ೧-೩೧). [ಸಂ.]

ಸುಕೃತ (ಗು). ೧. ಚೆನ್ನಾಗಿ ಮಾಡಿದ; ಯುಕ್ತವಾಗಿ ಮಾಡಿದ. ೨. ಮಂಗಳಕರವಾದ; ಶುಭಕರವಾದ: ಸುಕೃತಸುರದ್ರುಮವನಪಾಲಕನೆಂಬಿನಮತುಲ ವಿಚಕಿಲೋದ್ಗಮಮಂ ತಂದು . . . ಋಷಿನಿವೇದಕನಿತ್ತಂ (ಪಂಂಾಮಾ. ೬-೨೫). ೩. ಅನುಕಂಪದಿಂದ ನಡೆಸಿಕೊಂಡ. (ನಾ). ೪. ಪುಣ್ಯ; ಸೈಪು: ಅಂತು ಪೂರ್ವಜನ್ಮಸಂಚಿತಸುಕೃತದಿಂ ದಿವ್ಯಾಯುಧವಸ್ತ್ರವಾಹನಂಗಳುಮಂ ದಿವ್ಯಸ್ತ್ರೀಯರುಮಂ ಸ್ವೀಕರಿಸಿ (ಪಂಂಾಮಾ. ೧೫-೧೧ ಪ); ನೀನು ನೆರಹಿದ ಸುಕೃತಫಲವದನೇನ ಹೇಳುವೆನು (ಕುಮಾದ್ರೂ. ೮-೪೧). ೫. ಪವಿತ್ರವಾದ ಕಾರ್ಯ; ಸತ್ಕಾರ್ಯ: ಅಂಗವಂಬುದು ಪೂರ್ವಕರ್ಮಸಂಗಶೇಷವು ಪುಣ್ಯಪಾಪೋತ್ತುಂಗನಿಳಯಂ ಸುಕೃತ ದುಃಕೃತಗತಿಗಳಾಶ್ರಯವು (ಬಸವು. [illegible]); ಸುಕೃತವನೊಂದಿ ಕೀರ್ತಿ ಶುಭಶೀಲವನೊಂದಿ ಸುನೀತಿ . . . ನಡೆವಂದದಿಂ ನಿಜಾಭಿಕನೊಡಗೂಡಿ ಕೂರ್ತು ನಡೆದಳ್ ದಮಯಂತಿ (ನಳಚಂ. ೫೧೮). ೬. ಅದೃಷ್ಟ; ಭಾಗ್ಯ: ನಿಜವಾಗಿ ನನ್ನ ಸುಕೃತಪ್ರತಿಬಂಧಕವಾದ ಪುರಾಕೃತಕರ್ಮವು ಆಗ ಪರಿಣಮಿಸತೊಡಗಿತು (ಶಾಕುಂತ. ೧೧೦-೫); ಭಾವೆಯೂ ಸಹ ಅಲೌಕಿಕಮಾಧುರ್ಯಭಾವದಲ್ಲಿ ಕವಿಗೊದಗಿ ಬರುವುದೊಂದು ಸುಕೃತ (ಕಾವ್ಯಕಿ. ೪೫). ೭. ಅದೃಷ್ಟಶಾಲಿ; ಭಾಗ್ಯವಂತ: ಕಾಯಿರೇ ಸರ್ವಾಪರಾಧಿಗಳ ಪಿಸುಣರಂ ದುರ್ಮತಿಗಳಂ ಸ್ಥೆರಿಸಿ ಸುಕೃತರಂ ಮಾಡಿ ಎಮ್ಮುವಂ (ಬಸವು. ೩೨-೬೨); ಸಿರಿ ಹೋದ ಕಾಲಕೆ ಒಬ್ಬಿಬ್ಬರಾದರು ಬಂದರೆ ನೀವೆ ಸುಕೃತರು (ಇಂಚಾಪ. ೨೨೩-೫). ೮. ಪ್ರತಿಫಲ; ಪುರಸ್ಕಾರ. [ಸಂ.]

ಸುಕೃತಂಬೆಱು (ಕ್ರಿ). ಪುಣ್ಯವನ್ನು ಗಳಿಸು, — ಪಡೆ: ಈಗಳೆ ಜನ್ಮಾಭೀಷೇಕ ವಿಭೂತಿಯಂ ಸಮೆದು ಸುಕೃತಂಬೆತ್ತೆಟ್ಟಂದೆಂ (ಪುಷ್ಪಪು. ೧೨-೧೧). [ಸುಕೃತ + ಪೆಱು]

ಸುಕೃತಕರ್ಮಿ (ನಾ). ಒಳ್ಳೆಯ ಕೆಲಸವನ್ನು ಮಾಡುವವನು; ಸತ್ಕಾರ್ಯವನ್ನು

ಮಾಡುವವನು: ಸಕಲಕರ್ತನು ದೈವವಾದೊಡೆ ಸುಕೃತಕರ್ಮಿಯನೇಕೆ ದಕ್ಷನನಕಟ ಮಖದೊಳು ಪಾರವೆಯ್ದಿಸದಾಯ್ತು (ಬಸಪು. ೫೪-೧೬). [ಸಂ. ಸುಕೃತಕರ್ಮಿನ್]

ಸುಕೃತನಿಧಾನ (ನಾ). ೧. ಪುಣ್ಯಸ್ಥಾನ; ಮುಕ್ತಿ: ದರ್ಶನಮುಪಾತ್ತಜಿನತತ್ವಶ್ರದ್ಧಾನಂ ಚರಿತಂ ಸುಕೃತನಿಧಾನಂ ತಾನೆಂದು ಪೇಟ್ಬರಲ್ತೆ ಮಹಾತ್ಮರ್ (ಚಂದ್ರಪ್ರ. ೭-೨೩). ೨. ಮುಕ್ತಿಯನ್ನು ಸಾಧಿಸಿದವನು: ಸುಕೃತನಿಧಾನರ್ ಲೋಕಾಂತಿಕದೇವರ್ ದೇವದೇವನೊಳ್ ವೈರಾಗ್ಯಂ ವಿಕಸಿತಮಾದುದನವಧಿಪ್ರಕಾಶದಿಂದಱಿದು (ವರ್ಧಪು. ೧೪-೯೨). [ಸಂ.]

ಸುಕೃತಾಕಾರ (ನಾ). ಮಂಗಳಕರವಾದ ರೂಪವನ್ನು ಹೊಂದಿದವನು: ಸುಕೃತಾಕಾರಂ ತದ್ರೂಪಕುಮಾರಂ . . . ಶಾಸ್ತ್ರಪ್ರಕರಾಕರ್ಣನದಿನಿಂತು ನೆಱೆ ನುಡಿಗಲ್ತಂ (ಕಸುಮಾ. ೬-೧೫೨). [ಸಂ.]

ಸುಕೃತಿ₁ (ನಾ). ೧. ಅದೃಷ್ಟಶಾಲಿ; ಭಾಗ್ಯವಂತ: ಹರಸೇವೆಗೈವ ಸುಕೃತಿಗೆ ಸುರಸೇವೆಯನೊಲ್ಮೆ ಮಾಳ್ಪವಂ ಸಮನೆ (ವ್ಯಪಪ. ೩-೩೭). ೨. ಒಳ್ಳೆಯ ಕೆಲಸ ಮಾಡುವವನು; ಸತ್ಕಾರ್ಯ ಮಾಡುವವನು: ಸುಕೃತಿಗಲ್ಪಾಯುಷ್ಯಮಂ ನೀಡುವಂ ಸುಡು ಪಾಪಿಷ್ಠನ ಬೊಮ್ಮನಂ (ಸೋಮೇಶ. ೩೩); ಪಾಪಿಯಂ ಪ್ರೋತ್ಸಹಿಸಿ ಸುಕೃತಿಯ ಪರೀಕ್ಷಿಸುತ ವೇಪಿಪನು ವಿಧಿ ನಮ್ಮ (ಮಂಕುಶ. ೧೫೯). [ಸಂ. ಸುಕೃತಿನ್]

ಸುಕೃತಿ₂ (ನಾ). ೧. ಒಳ್ಳೆಯ ಕೆಲಸ; ಸತ್ಕಾರ್ಯ: ಸುಕೃತಿಯಾಯಿತು ನಿಮ್ಮಯ ನನಹಿಂದವೆ ಮುಕುತಿಯ ಫಲಗಳ ದಾಂಟಿಯೆ ಬಂದೆನು (ಮಹಾದೇ. ಬ. ೯೬-೨೨೩). ೨. ಒಳ್ಳೆಯ ಗುಣ; ಸಹೃದಯತೆ: ಆ ದೇವನುಜ್ಜ್ವಲತತ್ವಾಗಮನಕ್ಕೆ ತನ್ನ ತನುವಂ ತಂದಿರ್ದುವೇನೆಯ್ದೆ ಮಂಡಲನಾಥತ್ವಮನೆಯ್ದಿದಂ ಸುಕೃತಿಗಾ ಪಾಡ್ಗುಣ್ಮಮೇಂ ಬಾಟ್ಟೆಯೋ (ಶಾಂತಿಪು. ೧೦-೧೦೮); ಸುಕೃತಿನಿಳಯಂ ಸಹಸ್ರಾರಕಲ್ಪದೊಳ್ ರುಚಿರಮಾದ ರುಚಿಕಾಖ್ಯವಿಮಾನಕದೊಳ್ ಸೂರ್ಯಪ್ರಭಸಂಜ್ಞಿಕನನಿಮಿಷಮುಖ್ಯನಾದನಾ ಮುನಿಮುಖ್ಯಂ (ವರ್ಧಪು. ೧೨-೯೬). ೩. [ಛಂದ] ಅಕ್ಷರಛಂದಸ್ಸಿನಲ್ಲಿ ಇಪ್ಪತ್ನಾಲ್ಕನೆಯ ಛಂದಸ್ಸು; ಪ್ರತಿಯೊಂದು ಪಾದದಲ್ಲಿ ಇಪ್ಪತ್ತುನಾಲ್ಕು ಅಕ್ಷರಗಳಿರುವ ಸಮವೃತ್ತಗಳ ಛಂದಸ್ಸು: ಉಕ್ತಿ . . . ಸು[ಪಾಠಾ. ಸಂ]ಕೃತಿ ಅತಿಕೃತಿ ಉತ್ಕೃತಿ ಎಂದಿಪ್ಪತ್ತಾಱುಛಂದಂಗಳಕ್ಕುಂ (ಛಂದೋಂಬು. ೧-೪೬ ವ). [ಸಂ.]

ಸುಕೇಶಿ (ನಾ). ೧. ಸೊಗಸಾದ ಕೂದಲನ್ನು ಹೊಂದಿರುವವಳು: ವರಕಂಠೀರವಮಧ್ಯೆ . . . ಸುಕೇಶಿ ರಾಜಶುಕಸಲ್ಲಾಪಾಂಗಶೃಂಗಾರೆ ಭಾಸುರ ಬಿಂಬಾಧರೆ (ಹಮ್ಮೀರ. ೨-೭೨). ೨. ಒಬ್ಬ ಅಪ್ಸರೆಯ ಹೆಸರು; ದೇವಗಣಿಕೆಯರಲ್ಲಿ ಒಬ್ಬಳು: ಹೇಷಿತಘೋಷಣ ಶ್ರವಣಮಾತ್ರವಿತ್ರಾಸನರಚಿತಜಂಭಾರಿದೇಹಪರಿರಂಭರಂಭಾತಿಲೋತ್ತಮೋರ್ವಶೀ ಸುಕೇಶಿಯಂಬ ಕೇಶಿಯುಮಂ . . . ಕರೆದು (ಜಗವಿ. ೩-೨೨ ವ). [ಸಂ. ಸುಕೇಶೀ]

ಸುಕೇಸರ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪ್ರತಿಪಾದದಲ್ಲಿ ಹದಿನೈದು ಅಕ್ಷರಗಳಿರುವ ಅತಿಶಕ್ವರಿ ಛಂದಸ್ಸಿನ ಒಂದು ವೃತ್ತ: ಅಮರಗಣಾರ್ಕ ಶೀತಕರ ಭಾನು ಪಾವಕೋತ್ತಮ ಗಣ ಪಂಚಕಂ ನೆರೆಯೆ ಚೆಲ್ವುವೆತ್ತ ವೃತ್ತಂ . . . ಶುಭದಂ ಸುಕೇಸರಂ (ಛಂದೋಂಬು. ೨-೧೫೬). [ಸಂ.]

ಸುಕೋಶ (ನಾ). ಉತ್ತಮರೀತಿಯ ಅಂಡಕೋಶ(?): ಪೀನಾಯತಾಮ್ರ ಪಲ್ಲವಕೋಶ ಸುಕೋಶ[ಪಾಠಾ. ಶ್ರ]ಮೋಹನನುಂ . . . ಅಪ್ಪ ವಿಜಯಪರ್ವತ ಗಚೇಂದ್ರಂ ಬಂಬಾ ಮುಂದೆ ನಿಲ್ವುದುಂ (ಆದಿಪು. ೧೨-೫೬ ವ). [ಸಂ.]

ಸುಕ್ಕ (ನಾ). ಒಣಗಿದುದು; ಶುಷ್ಕವಾದುದು: "ಸುಕ್ಕಂ, ಶುಷ್ಕಂ" (ಕರ್ಣಾಸಿ. ೬೨). [< ಪ್ರಾ. ಸುಕ್ಕ, ಸುಕ್ಕ./ ಸಂ. ಶುಷ್ಕ]

ಸುಕ್ಕಟ (ನಾ). (ಮಚ್ಚುಗೆ, ಕೊಂಡಾಟಗಳನ್ನು ಸೂಚಿಸುವ) ಒಂದು ಉದ್ಗಾರವಾಚಕ ಶಬ್ದ (?): ಅಕ್ಕಟಕ್ಕಟ ಭೀಮನೊಬ್ಬನು ಸುಕ್ಕಟ ಸುಮಾನಿತನು ಕಡೆಯಲಿ ಮಕ್ಕಳಾಟಕೆ ನಮ್ಮದೆಂಬರಿ ಭಾವ ಪೇಳೆನಲು (ಕೃಷ್ಣಾಶಾ. ೨೬-೧೬). [?]

ಸುಕ್ಕರ, ಸುಕ್ರ (ನಾ). [ಜ್ಯೋತಿ] ಶುಕ್ರಗ್ರಹ: ಎತ್ತಲ್ಲಿ ಬಿಟ್ಟಿರಿ ಬುತ್ತೆಲ್ಲಿ ಉಂಡಿರಿ ಸುಕ್ಕರ ನಿಮಗೆಲ್ಲಿ ಉದಿಸಿದ (ನಾಪದ. ೧೨೨). ಸುಕ್ರ: 'ಸುಕ್ರವಾರ' ಪರಾ. [< ಸಂ. ಶುಕ್ರ./ ಪ್ರಾ. ಸುಕ್ಕ]

ಸುಕ್ಕಾಲಿಗ 'ಸುಕಾಲಿಗ' ನೋ.

ಸುಕ್ಕಿನುಂಡೆ 'ಸುಖಿನುಂಡೆ' ನೋ.

ಸುಕ್ಕಿಸು (ಕ್ರಿ). ೧. ಮುದುಡುವಂತೆ ಮಾಡು: ಸುಕ್ಕಿಸದಿರರ್ಧಚಂದ್ರಧ್ವಜವನೊಡೆಯಾ! (ಗಿಲಿಂ. ೧೮-೨೪). ೨. ಕುಗ್ಗಿಸು; ನಿವಾರಿಸು: ದೈತ್ಯನ ಮಾಯೆಯೆಲ್ಲವ ಸುಕ್ಕಿಸಿದನದಟಿಂದ ಮಾಯಾಸಂಜ್ಞಿಕಾಸ್ತ್ರದಲಿ (ಸಂಭಪ. ೧೯-೮). ೩. ನೆರಿಗೆಗಟ್ಟುವಂತೆ ಮಾಡು: ಬೇಜಾರಿನಿಂದ ಹಣೆಯನ್ನು ಸುಕ್ಕಿಸಿದನು (ರೂಢಿ). [ಸುಕ್ಕು₁ (< ಸುರ್ಕು₁) + - ಇಸು₃]

ಸುಕ್ಕು₁ 'ಸುರ್ಕು₁' ನೋ.

ಸುಕ್ಕು₂ 'ಸುರ್ಕು₂' ನೋ.

ಸುಕ್ಕು₃ 'ಸುಂಕು₃' ನೋ.

ಸುಕ್ಕುಂಗುರುಳು 'ಸುರ್ಕುಂಗುರುಳ್' ನೋ.

ಸುಕ್ಕುಂದುಱುಬು (ನಾ). ಗುಂಗುರುಕೂದಲಿನ ಮುಡಿ: ಕನ್ನಡಿಮೊಗದ ಸುಕ್ಕುಂದುಱುಬಿನ ಕಡುಚನ್ನೆಯರೆಸೆದರೊಗ್ಗಿನೊಳು (ಕುರಾಸಾಂ. ೨೦-೪೭). [ಸುಕ್ಕು₁ (< ಸುರ್ಕು₁) + ತುಱುಬು₂ (< ತುಱುಂಬು₂)]

ಸುಕ್ಕುಗಟ್ಟು (ಕ್ರಿ). ನೆರಿಗೆಯಾಗು; ನಿರಿಬೀಳು; ಸುಕ್ಕಾಗು: ಅವನ ಕಂದುಬಣ್ಣದ ಮೋರೆ ಸುಕ್ಕುಗಟ್ಟಿತ್ತು (ಮಹಾತ್ಮಾ. ೫); ಕುಣಿದು, ಕುಣಿದು ದೇಹ ಸುಕ್ಕುಗಟ್ಟಿತಲ್ಲ (ಮೂಕಜ್ಜಿ. ೨೪೮). [ಸುಕ್ಕು₁ (< ಸುರ್ಕು₁) + ಕಟ್ಟು₁]

ಸುಕ್ಕುಗುಪ್ಪಸ (ನಾ). ನೆರಿಗೆಯಿಂದ ಕೂಡಿರುವ ಒಂದು ಬಗೆಯ ಅಂಗಿ: ಸುಕ್ಕುಗುಪ್ಪಸ ಕಿಱುವೆರಲ ಚೊಕ್ಕಮುದ್ರಿಕೆ ಚೆಲ್ವುವೆತ್ತಿರಲಾಸ್ಥಾನವೊಕ್ಕನಾ ಮಂತ್ರಿತಿಲಕನು (ಕುರಾಸಾಂ. ೯-೧೦೬). [ಸುಕ್ಕು₁ (< ಸುರ್ಕು₁) + ಕುಪ್ಪಸ]

ಸುಕ್ಕುಗುರುಳು 'ಸುರ್ಕುಂಗುರುಳ್' ನೋ.

ಸುಕ್ಕುದಬ್ಬೆಹುಲ್ಲು 'ಸುಂಕುದಬ್ಬೆಹುಲ್ಲು' ನೋ.

ಸುಕ್ಕೆ 'ಚುಕ್ಕೆ₂' ನೋ.

ಸುಕ್ಕೆಸೊಪ್ಪು 'ಚುಕ್ಕೆಸೊಪ್ಪು' ನೋ.

ಸುಕ್ರ 'ಸುಕ್ಕರ' ನೋ.

ಸುಕ್ರಮ (ನಾ). ಶ್ರೇಷ್ಠವಾದ ಪಾದ: ಚಕ್ರಪಾಣೀ ರಂಗನಾಥ ಸೋಮೇಶ್ವರನ ಸುಕ್ರಮವ ಪೂರ್ದಿ ಶಿವಭಕ್ತಿಪರನಾದ ಭೂಚಕ್ರದೊಳಗೀತಂಗೆ ತೊಣೆಗಾಣೆವು (ಗುರುಚಾ. ೧೨-೩೨). [ಸಂ.]

ಸುಕ್ರವಾರ (ನಾ). ಒಂದು ವಾರದ ಹೆಸರು; ಶುಕ್ರವಾರ: ಸುಕ್ರವಾರಮುತ್ತರಾಯಣ ಸಂಕ್ರಾನ್ತಿಯನ್ದು . . . ಕೊಟ್ಟ ಪೊಂಗದ್ಯಾಣವಯ್ಯತ್ತಯ್ದು (ಮೃಅರಾ. ೧೯೯, ೭೮-೧೧; 964); ಫಾಲ್ಗುಣಮಾಸದ ಸುಕ್ರವಾರ (ಎಕ. VII. ಶಿಕಾರಿ. ೪-೭೮; 1122). [ಸುಕ್ರ (< ಸುಕ್ಕರ) + ವಾರ₃]

ಸುಕ್ರುಂಡೆ 'ಸುಖಿನುಂಡೆ' ನೋ.

ಸುಕ್ರುತ (ನಾ). ಪುಣ್ಯ; ಸೈಪು: ನಡಸೂದಕ್ಕೆ ಸಹಾಯವಾದವರು ವಾರಣಾಸಿಯಲಿ ಸಾವಿರಕವಿಲೆಯನು ಬ್ರಾ(ಂ)ಹ್ಮರಿಗೆ ಕೊಟ್ಟು ಸುಕ್ರುತವನೂ ಪಡೆಯಲುಳವರು (ಸೌಇಇ. XI-ii, ೪೭೬-೨೧; 1506). [< ಸಂ. ಸುಕೃತ]

ಸುಕ್ಷಣ (ನಾ). ಅಗ್ನಿ; ಬೆಂಕಿ (?): ಸಕ್ಷಮದಕ್ಷಶಿಕ್ಷಣವಿಚಕ್ಷಣಸುಕ್ಷಣ ಲಕ್ಷಣೇಕ್ಷಣಾರಕ್ಷಿತಲಕ್ಷಿತೇಶ್ವರ ಮುಮುಕ್ಷು . . . ಶಿವಾಕ್ಷಿಸಂಭವಾ (ರಾಜಶೇ. ೧-೧೦). [?]

ಸುಕ್ಷಣಿ (ನಾ). = ಸುಕ್ಷಣ (?): ವಿರೂಪಾಕ್ಷ ಕೋಪಂ ಮಸಗಿ ಫಣಿಗಣ್ ವಿಕಾಸಿಸಲ್ ಸುಕ್ಷಣಿ ಭುಗಿಲ್ ಭುಗಿಲೆನುತ್ತುರಿಯಲದಱೊಳಂ ಜನಿಸಿದಂ ವೀರಭದ್ರಂ (ಗುರುಚಾ. ೪-೨೦). [?]

ಸುಕ್ಷೇತ್ರ (ನಾ). ೧. ಸಾರವತ್ತಾದ ಭೂಮಿ; ಫಲವತ್ತಾದ ನೆಲ: ಮಹಾಸುಕ್ಷೇತ್ರವಾಸದ ವಾಲುಕದ ಮಱೆಯ ಅಪ್ಪುವಿನಂತೆ (ಮೋಳಮಾ. ೮೨-೩೨೭); "ನದಿಯ ಬಳಿಯಲ್ಲಿರುವ ಹೊಲ" (ಮೋಳಮಾ. ಕೋಶ). ೨. ಪುಣ್ಯಭೂಮಿ; ತೀರ್ಥಕ್ಷೇತ್ರ: ನಕ್ಷತ್ರವಾದರೂ ಸುಕ್ಷೇತ್ರದಲ್ಲಿರಬೇಕು (ಗಾದೆ). [ಸಂ.]

ಸುಕ್ಷೇಮ (ನಾ). ನೆಮ್ಮದಿ; ಸೌಖ್ಯ: ಪ್ರೇಮವೆಸೆಯಲು ಬಸವನಂ ಸನ್ನಾಮಿ ಕಿನ್ನರ

ಶರಣನಂ ಸುಕ್ಷೇಮದಿಂ ಜೀವಂತರಂ ಮಾಡಿದನು (ಬಸವ. ೩೭-೪೪); ಮಂದಿರದ ಸುಕ್ಷೇಮ ಕುಶಲವನಂದು ಕೇಳಿದು ವೀಳೆಯವನಾ ಮಂದಿಗಿತ್ತನು (ಕುವ್ಯಾಗ. ೭-೨೨). [ಸಂ.]

ಸುಕ್ಷೇಮಿ (ನಾ). ನೆಮ್ಮದಿಯಿಂದಿರುವವನು; ಕ್ಷೇಮವಾಗಿರುವವನು: ಈ ಮಹಿಯೊಳೀವರೆಗೆ ನಾವ್ ಸುಕ್ಷೇಮಿಗಳು (ಹರಿಶಾ. ೧೬). [ಸಂ. ಸುಕ್ಷೇಮಿನ್]

ಸುಕ್ಷ್ವೇಡನಗ್ರೀವ (ನಾ). ಕಂಠದಲ್ಲಿ ವಿಷವನ್ನು ಧರಿಸಿರುವವನು; ಶಿವ: ಅತುಳ ಚಕ್ಷುಶ್ರವಣಾಭರಣ ಸುಕ್ಷ್ವೇಡನಗ್ರೀವ ರಕ್ಷಿಸುಗೆ (ನವಮೋ. ೧೭-೧).

[ಸಂ.]

ಸುಖ (ಗು). ೧. ಆನಂದಭರಿತವಾದ; ಆಹ್ಲಾದಕರವಾದ. ೨. ಹಾಯಾದ; ನಿರಾಂತಕವಾದ. ೩. ತಕ್ಕ; ಯೋಗ್ಯವಾದ. (ನಾ). ೪. ಸಂತೋಷ; ನಲಿವು: ರಮಿಯಿಪುದಮರಿಯರೊಳ್ . . . ನಗೆ ಸಬ್ಬವಮಮರಿಯರೊಳ್ ನಡೆವುದಮರನೇಂ ಸುಖಮಯನೋ (ಶಾಂತಿಪು. ೭-೭೬); ನಂದನಿರ್ದಂ ಸುಖದಿಂ (ಜಗವಿ. ೩-೨೬). ೫. [ಜ್ಯೋತಿ] ಲಗ್ನದಿಂದ ನಾಲ್ಕನೆಯ ರಾಶಿ: ಚತುರ್ಥಕ್ಕೆ ವಲಂ ಮತ್ರಂ ಪಾತಾಳ ವೇಶ್ಮ ಸುಖ ಹಿಬುಕ ಬಂಧುವೆಂದ್ಪುದು ಪೆಸರ್ (ಜಾತಕ. ೧-೩೪).

ಸುಖದುಃಖ = ಸಂತೋಷ ಮತ್ತು ಅಳಲು: ಸಕಳಕ್ಕೆ ಕರ್ತನು ಆತ್ಮನಾದಡೆಯು ಅನವರತ ಸುಖದುಃಖಸಮಿತಿಯೊಳನುಭವಿಸುತಲಿಸುವನೆ (ಬಸವ. ೫೪-೧೩); ಸುಂಕದವನ ಕೂಡೆ ಸುಖದುಃಖ ಹೇಳಿದರೆ ಕಂಕುಳಲ್ಲಿ ಏನು ಅಂದನಂತೆ (ಗಾದೆ). **ಸುಖಸಂಕಥಾವಿನೋದ** = ಸಾಮಂತರು, ಅಧಿರಾಜರೊಡನೆ ದೊರೆಯು ನಡೆಸುವ ಸೌಹಾರ್ದಯುತವಾದ ಸರಸಸಂಭಾಷಣೆ; ರಾಜಯೋಗ್ಯವಾದ ಒಂದು ಬಗೆಯ ಮನರಂಜನೆಯ ಕಾಲಕ್ಷೇಪ: ಪೌದನಪುರಕ್ಕೆ ಪೋಗಿ ಸುಖಸಂಕಥಾವಿನೋದದಿನರಸುಗೆಯ್ಯುತ್ತುಮಿರ್ (ಶಾಂತಿಪು. ೬-೨೩ ವ); ದುಷ್ಟನಿಗ್ರಹ ವಿಶಿಷ್ಟಪ್ರತಿಪಾಳನದಿಂ ಸುಖಸಂಕಥಾವಿನೋದದಿನ್ಕಾಳುತ್ತಮಿರೆ (ಎಕ. XI, ಚತ್ರದು. ೪೭-೧೨; 1067). [ಸಂ.]

ಸುಖಂಗೆಯ್ (ಕ್ರಿ). ಸಂತೋಷವನ್ನುಂಟುಮಾಡು; ಸುಖವನ್ನು ನೀಡು: ''ಉಜೆ ಸುಖಂಗೆಯ್ಯವಂ[ಪಾಶಾಂ ಗೈವವಂ] ಶಿವಕಾರಿಯಕ್ಕುಂ'' (ಮಂಗರಾ. ೬೮-೯).

[ಸುಖ + ಕೆಯ್]

ಸುಖಿಂದಳೆ, ಸುಖದಳೆ (ಕ್ರಿ). ಸಂತೋಷವನ್ನು ಹೊಂದು; ನಲಿವನ್ನು ಪಡೆ: ಪುಳಕಿಪ ತನು . . . ಸುಖಿಂದಳೆವ ಮನಂ ಕಂಪಿಪ ಕೆಯ್ ಕಳವಳಿಸುವ ಗಳಮನೂನ ಮಸತೀಕುಳದೊಳ್ (ಗಿರಿಕ. ೪-೮೫). **ಸುಖದಳೆ:** ತಳುಗದಪಮಳಾಧರವ ಚುಂಬಿಸಿ ಸುಖದಳೆದಳು (ಕಂಸವಿ. ೧೦-೩೦). [ಸುಖ + ತಳೆ]

ಸುಖಿಂಬಡು, ಸುಖಿಪಡು, ಸುಖಿಬಡು, ಸುಖಿವಡು (ಕ್ರಿ). ಸಂತೋಷವನ್ನು ಅನುಭವಿಸು; ಆನಂದಪಡು: ಎನ್ನೆವರಂ ಜೀವಿಸುವನನ್ನೆವರಂ ಸುಖಂಬಡುವುದು (ಪಂಚತಂ. ೬೩-೬). **ಸುಖಿಪಡು:** ಅವಳು ಅದರಲ್ಲಿ ಸುಖಪಟ್ಟರೆ ತಾನೂ ಸುಖಪಡುವನು (ಸಮಾ. ೫೧); ಒಂದು ಹೆಂಡತಿಯನ್ನು ಸಾಯಿಸಿ ಎರಡನೆಯ ಮದುವೆಯಾಗಿ ಸುಖಪಡುವುದು ಅಷ್ಟು ಸುಲಭವೇ? (ಪದ್ಮಸ. ೧೪೬). **ಸುಖಿಬಡು:** 'ಸುಖಿಬಡಿಸು' ಪರಾ. **ಸುಖಿವಡು:** ಈ ವನಿತೆಯೊಳೊಂದಿ ಸುಖವಟ್ಟು ಮಡಿದಡೆ ಜೀವನ್ಮುಕ್ತಿ (ಮೋಹತ. ೩೩-೪೬). [ಸುಖ + ಪಡು]

ಸುಖಿಂಬಡೆ, ಸುಖಿವಡೆ (ಕ್ರಿ). = ಸುಖಿಂದಳೆ: ಬಹ್ವಾರಂಭಪರಿಗ್ರಹವಿಹ್ವಲನಿಂದ್ರಿಯ ಸುಖಾರ್ಥಿ ಸಂಸಾರಗುಹಾಗಹ್ವರದೊಳಗಿರುಳಿನ ಚಕ್ರಾಹ್ವದವೊಲ್ ಮಜ್ಜುಗದೇಂ ಸುಖಿಂಬಡೆದಪನೇ (ಆದಿಪು. ೩-೬೮); ಕೂಡಿ ಸುಖಿಂಬಡೆವುದು ಜಂಗಮಲಿಂಗದ ವಿಷಯ ಸುಖಿಂಬಡೆದು ಪರಿಣಾಮತೆಯನ್ಕೆದುವುದು ಪ್ರಸಾದಲಿಂಗದ ವಿಷಯ (ಆದಮ. ೫-೧೨). **ಸುಖಿವಡೆ:** ಘನವಾತಿನಿಂದ ಸೋಲಿಸಿ ಕೂಡಿಯವನಿಂದ ಘನಸುಖಿವಡೆಯಬೇಕಬಲೆ (ಕಂಸವಿ. ೯-೧೫೫). [ಸುಖ + ಪಡೆ]

ಸುಖಿಂಬಾಟು, ಸುಖಿಬಾಳು, ಸುಖಿವಾಳು (ಕ್ರಿ). ನೆಮ್ಮದಿಯಿಂದ ಜೀವಿಸು; ಸುಖವಾಗಿ ಬದುಕು: ಮೃಗಗಣಮ ಸುಖಂಬಾಟ್ಟುಂ ಸೊಗಯಿಸುವ ವನಾಂತರಾಳದೊಳ್ ಬಹುತೃಣದೊಳ್ (ಕವಿರಾ. ೩-೧೩೯); ನೀನೆನ್ನ ಬುದ್ಧಿಯಂ ಕೇಳ್ದು ಸುಖಿಂಬಾಬ್ಯೊಡೆ (ಪಂಚತಂ. ೫೪-೧೯). **ಸುಖಿಬಾಳು:** ಆಲಯದೊಳಗೆ ಎಂಗಡವಾಗಿ ಸುಖಿಬಾಳೆಂದ (ಮೋಹತ. ೧೧-೫೦). **ಸುಖಿವಾಳು:** ಮನೆಯೊಳು ಮನೆಗಟ್ಟಿಕೊಂಡೆಮ್ಮಾ ಸೆರೆಮನೆಯೊಳು ಸುಖಿವಾಳುತಹಳೆ (ಪ್ರಭಾಜ. ೩-೧೩೬). [ಸುಖ + ಬಾಟು]

ಸುಖಿಕರ (ಗು). ೧. ಸಂತೋಷವನ್ನುಂಟುಮಾಡುವ; ಆಹ್ಲಾದಕರವಾದ: ಮಲಯರುಹ ಶಿಶಿರಕರಶೀತಲಿಕಾ ಕರಕೇಂದುಕಾಂತಜಲಶೀತಳಮಾ ಲಲನಾಲಿಂಗನಸುಖಕರವಿಲಾಸಮೆಂಬುದು ಬಹೂಪಮಾನವಿಕಲ್ಪಂ (ಕವಿರಾ. ೩-೭೦). (ನಾ). ೨. ಸಂತೋಷವನ್ನು ಕೊಡುವಂಥದು; ಸುಖಪ್ರದವಾದುದು: ಹುಟ್ಟುವವಳವದರಿಂದೊ ಸಂಸ್ಕಾರದುಪಶಮವೆ ಸುಖಕರಂ (ವೃಕಾಖ. ೮೯-೬೯). ೩. ಅನುಕೂಲಕರವಾದುದು: ಎಷ್ಟೋ ಮಂದಿ ಗೃಹಿಣಿಯರು ಅಡುಗೆಮನೆಯನ್ನು ಕೆಲಸಕ್ಕೆ ಸುಖಕರವಾಗಿ ಹೇಗೆ ವ್ಯವಸ್ಥೆಗೊಳಿಸಬಹುದು . . . ಎಂದು ಯೋಚಿಸುತ್ತಿದ್ದಾರೆ (ಅಡುಸಿ. ೧೧). [ಸಂ.]

ಸುಖಿಕಾರಿ (ನಾ). ೧. ಸುಖಿಪ್ರದವಾದುದು: ಸಂತತಂ ಜನಸುಖಿಕಾರಿ . . . ಕೃಷ್ಣವೇಣಿ ನುತವಿಶಾಲಿ ಸೇವಿತಮಲಪ್ರಹರಿ ಸ್ಫುಟವಾಣಿ ರಾಜಿಕುಂ (ಹಮ್ಮೀರ. ೧-೫೫). ೨. ಸುಖದಾಯಕನಾದವನು: ನೀನು ಒಳ್ಳೆಯ ಮಿತ್ರನಂತೆ . . . ಸುಖಿಕಾರಿಯಾಗಿಯೂ ಇರುತ್ತೀಯೆ (ಋಷ್ಯಾಶ್ರ. ೨೨). [ಸಂ. ಸುಖಿಕಾರಿನ್]

ಸುಖಿಕೊಡು 'ಸುಖಿಗೊಡು' ನೋ.

ಸುಖಿಗೊಡು, ಸುಖಿಕೊಡು (ಕ್ರಿ). ಆನಂದವನ್ನು ನೀಡು; ಸುಖಿಪ್ರದವಾಗು: ಅಳಲಂಕರೂಪೆಯ ರದನಚ್ಛದ ವಿಟಶುಕಗಳ್ಗೆ ಸುಖಿಗೊಡುತಿಹುದು (ಕಂಸವಿ. ೯-೩೨). **ಸುಖಿಕೊಡು:** (ಕ). [ಸುಖ + ಕೊಡು]

ಸುಖಿಗೋಷ್ಠಿ (ನಾ). ಸುಖಿಕರವಾದ ಒಡನಾಟ: ಪರಿಕಿಸೆ ಪೆಂಡಿರಿರ್ವರೆನಗಂ ತವರೊಳ್ ಸುಖಿಗೋಷ್ಠಿಯಿಂ ನಗುತ್ತಿರೆಯವರೆಂದರ್ (ಧರ್ಮಪ. ೯-೧೮). [ಸಂ.]

ಸುಖಿಜಲ (ನಾ). ಸಂತೋಷದಿಂದ ಸುರಿಯುವ ಕಣ್ಣೀರು; ಆನಂದಬಾಷ್ಪ: ಕಡಗೋಡಿವರಿದುವೆನಗಯ್ಯ ನಯನದ ಸುಖಿಜಲಂಗಳು (ಬಸವ. ೬೪೭). [ಸಂ.]

ಸುಖಿಜೀವಿ (ನಾ). ಸಂತೋಷದಿಂದಿರುವವನು; ಸುಖಿವಾಗಿರುವವನು: ಅವನೊಬ್ಬ ಸುಖಿಜೀವಿ (ರೂಢಿ). [ಸಂ. ಸುಖಿಜೀವಿನ್]

ಸುಖಿದ (ನಾ). ಸಂತೋಷವನ್ನು ಕೊಡತಕ್ಕುದು; ಸುಖಿದಾಯಕವಾದುದು: ಅನುಭವದ ಪಾಲೊಳು ವಿಚಾರಮಂಥನವಾಗೆ ಜನಿಯಿಕುಂ ಜ್ಞಾನನವನೀತವದೆ ಸುಖಿದಂ (ಮಂಕುಶ. ೫೪೪). [ಸಂ.]

ಸುಖಿದಳೆ 'ಸುಖಿಂದಳೆ' ನೋ.

ಸುಖಿದಾಯಿ (ನಾ). ಸಂತೋಷವನ್ನುಂಟುಮಾಡತಕ್ಕುದು: ಶ್ರೀಪಾಲಸಿಂಹನ ಆ ಚಿತ್ರವು ನೀರಡಿಸಿದ ಆ ಹೃದಯಕ್ಕೆ ನೀರಿನಂತೆ ಸುಖಿದಾಯಿಯಾಯಿತು (ಚಮೂನ್ಯಾ. ೧೩೬).

[ಸಂ. ಸುಖಿದಾಯಿನ್]

ಸುಖಿಧಾಮ (ನಾ). ಆನಂದದ ತವರು; ಸಂತೋಷದ ನೆಲೆ: ಅಗಲಿ ಸ್ಮರಿಸಲಾಜದೇ ಮನ ಭಕುತರ ಪ್ರೇಮದಿಂದಲಿ ಪೊರೆಯುತಿಹ ಸುಖಿಧಾಮ ಪುರಂದರವಿಠಲನ (ಪುರಂದ. ಧಾ. ೨-೨೧-೫). [ಸಂ.]

ಸುಖಿನಾಸಿ, ಸುಕನಾಸಿ, ಸೊಖಿನಾಸಿ (ನಾ). [ವಾಸ್ತು] ದೇವಾಲಯದ ಗರ್ಭಗುಡಿಯಲ್ಲಿರುವ ಮುಂಭಾಗದ ಅಂಕಣ: ಸುಖಿನಾಸಿ ಗರ್ಭಗೃಹದಿಂ ರಂಗಮಂಟಪದ ಮುಖದ ಮೂಜುಂ ಕದವನಿಕ್ಕುತಂ (ಕಣ್ಣಾರ. ದೀ. ೧೩೫-೧); ಬರುತ ಮಿಗೆ ಪುಗಲಂಜಿ ಸುಖಿನಾಸಿಯೊಳು ನಿಂದಿಹನು (ಬಸವ. ೪೩-೪೧). **ಸುಕನಾಸಿ:** ಶಿವಗೃಹದಂತರಾಳಮನಣಂ ಪುಗಲಂಜಿ ಮುರಾರಿ ನಿಲ್ವನೊಪ್ಪುವ ಸುಕನಾಸಿಯೊಳ್ (ವೃಷವ. ೫೯-೮೩); ಸುಕನಾಸಿ ಅಥವಾ ಅರ್ಧಮಂಡವ: ಗರ್ಭಗುಡಿಗೂ ರಂಗ ಮಂಡಪಕ್ಕೂ ಮಧ್ಯೆ ಉತ್ಸವವಿಗ್ರಹಗಳನ್ನಿಡಲು ಸುಕನಾಸಿ ಇರುತ್ತದೆ (ಹೊಯ್ಸವಾ. ೧೮). **ಸೊಖಿನಾಸಿ:** ಕುಜುವರ ಬಾಗಿಯಕ್ಕ ದೇವರ ಗರ್ಭಗೃಹ ಸೊಖಿನಾಸಿಯ ಕೆಲಸಕ್ಕೆಂದು ಕೊಟ್ಟ ಗದ್ಯಾಣ ೧೫ (ಶಿಶಾ. XX, ೮೪-೫೨; 1123). [< ಸಂ. ಶುಕನಾಸ = ಮನೆಯ ಮೇಲಿರುವ ಒಂದು ಬಗೆಯ ಅಲಂಕಾರ. / ತೆಲು. ಶುಕನಾಶಿ = ದೇವಾಲಯದ ಮುಖ್ಯದ್ವಾರ]

ಸುಖಿನಿಕೇತನ (ನಾ). ಆನಂದದಾಯಕವಾದ ವಾಸಸ್ಥಾನ; ಸುಖಿಪ್ರದವಾದ ನಿವಾಸ: ಶ್ಲಾಘಿಸಿದ ಅಂಶಗಳನ್ನೆಲ್ಲಾ ಪುಂಜೀಕರಿಸಿ ನಿರ್ಮಿಸಿದ ಸುಖಿನಿಕೇತನ ಅದು (ನಂಬಿಯ. ೧೮). [ಸಂ.]

ಸುಖಿನಿಧಿ (ನಾ). ಆನಂದಕ್ಕೆ ಆಶ್ರಯನಾದವನು: ವಾರಿಧಿಯಿಂ ಸುಖಿನಿಧಿ

ಕಂಠೀರವವಿಷ್ಟರದಿನಧಿಕಂ . . . ಎಂದರಸಿಗಮೋಘಂಗಳಪ್ಪ ಕನಸಿನ ಫಲಂಗಳುಮಂ ನಿವೇದಿಸುವುದುಂ (ಶಾಂತಿಪು. ೯-೨೧೧); ಶರಣರ ಮನೋರಥವೆ ಸುಖನಿಧಿಯೆ [ಪಾಠಾಂ. ಮುಖವೆ] ಶಂಕರಾ (ನಂಬರ. ೧೧-೪೩). [ಸಂ.]

ಸುಖಪಡಿಸು 'ಸುಖವಡಿಸು' ನೋ.

ಸುಖಪಡು 'ಸುಖಂಬಡು' ನೋ.

ಸುಖಪ್ರವೃತ್ತಿ (ನಾ). ಸುಲಭವಾಗಿ ಆಗುವ ಮಲವಿಸರ್ಜನೆ; ಸರಾಗವಾದ ಕಾಲಪ್ರವೃತ್ತಿ: ಶುಂಠಿ, ಅಳಲೆಕಾಯಿ, ಸೈಂಧವ ಈ ಮೂರನು ಸಮನಾಗಿ ಚೂರ್ಣಂ ಮಾಡಿ ಬಿಸಿನೀರಿಂ ಕೊಡಲು ಸುಖಪ್ರವೃತ್ತಿಯಹುದು (ಸಚ್ಚ. ೩೦೧). [ಸಂ.]

ಸುಖಪ್ರಸವ (ನಾ). ಸುಲಭವಾಗಿ ಆಗುವ ಹೆರಿಗೆ; ಸರಾಗವಾಗಿ ಆಗುವ ಪ್ರಸವ: ಪೂರ್ಣಗರ್ಭಿಣಿಯಾದೀ ಹುಲ್ಲಿಗೆ ಯಾವಾಗ ಸುಖಪ್ರಸವವಾಗುವುದೋ ಆಗ ನನಗೆ ಕುಶಲಪತ್ರಿಕೆಯನ್ನು ಕಳುಹಿಸಬೇಕು (ಶಾಕುಂತ. ೫೫-೬). [ಸಂ.]

ಸುಖಪ್ರಸೂತಿ (ನಾ). = ಸುಖಪ್ರಸವ: ಅಂತು ಚಕ್ರವರ್ತಿಜನ್ಮೋತ್ಸವ ಸೂಚಕಮಪ್ಪನೇಕದೋಹಳಸಂದೋಹಂ ನೆಗಟ್ಟೆ ಸುಖಪ್ರಸೂತಿಸಮಯದೊಳ್ (ಆದಿಪು. ೮-೩೩ ವ). [ಸಂ.]

ಸುಖಬಡಿಸು 'ಸುಖವಡಿಸು' ನೋ.

ಸುಖಬಡು 'ಸುಖಂಬಡು' ನೋ.

ಸುಖಬಾಳು 'ಸುಖಂಬಾಟು' ನೋ.

ಸುಖಮಜ್ಜನ (ನಾ). ಹಿತಕರವಾದ ಸ್ನಾನ; ಸುಖಕರವಾದ ಸ್ನಾನ: ಎಲೆ ಸಖಿ, ನಿನಗೆ ಸುಖಮಜ್ಜನ ಬಳಿಯಿತೆ? (ಶಾಕುಂತ. ೫೦-೧೫). [ಸಂ.]

ಸುಖಮುಖ (ನಾ). ೧. ಸಂತೋಷಕರವಾದುದು; ಸುಮುಖವಾದುದು: ನಿನ್ನ ಬಾಳಾದರೂ ಸುಖಮುಖವಾಗಬಹುದೆಂದು ಆಸೆಯಿಂದಿದ್ದೆ (ಕುಸುಂ. ೧೪). ೨. ಪ್ರಸನ್ನತೆ; ಹರ್ಷದ ಭಾವ: ಸರ್ವಾಂಗಂ ಸದಿಲ್ದನುಭವದ ಜೊಮ್ಮು ಜಕ್ಕುಲಿಸೆ ಸುಖಮುಖದೊಳ್ ಮೂರ್ಛಿತರಾಗಿ (ನಂಬಿರ. ೧೪-೫೨); ಸುಖಿಗಳಗ್ರಣಿಯಲ್ತೆ ನಿಮ್ಮಣ್ಣನಾತಗೆ ಸುಖಮುಖದೋಱು (ಭರಚ. ೫೦-೪೪). [ಸಂ.]

ಸುಖಮುಖಿ (ನಾ). ಪ್ರಸನ್ನಳಾದವಳು; ಹರ್ಷಿತೆಯಾದವಳು: ಶುಭದ ಸಂದೇಶಕಾರಣವನರಿಯುವ ಕುತೂಹಲಕೆ ಕಣ್ದೆರೆದಳತಿಸುಖಮುಖೀ (ಶ್ರೀರಾಮಾ. ೫೦೫-೧೫೦). [ಸುಖಮುಖ + - ಇ]

ಸುಖಮುಱುಕ (ನಾ). ನೆಮ್ಮದಿಗೆ ಭಂಗತರುವವನು; ಸುಖವನ್ನು ಹಾಳುಮಾಡುವವನು: ಅಱಿದಱಿದಚ್ಚಮೋಹಿಗಳ ನೋಯಿಪ ಸುಖಮುಱುಕ ಹೋಗೆಂದಳು ಪ್ರಮದೆ (ಭರಚ. ೫೦-೫೬). [ಸುಖ + ಮುಱುಕ್]

ಸುಖರೂಪ (ನಾ). ೧. ಹಿತಕರವಾದ ಆಕಾರವನ್ನು ಹೊಂದಿರುವಿಕೆ. ೨. ಕ್ಷೇಮ; ಕುಶಲ: ಊರಿಗೆ ಸುಖರೂಪವಾಗಿ ಹೋಗಿ ತಲುಪಿದ್ದಕ್ಕೆ ಕಾಗದ ಬರಿ (ರೂಢಿ). [ಸಂ.]

ಸುಖಲೋಲಾಪ್ತಿ (ನಾ). ಸುಖಭೋಗದಲ್ಲಿ ಆಸಕ್ತಿಯನ್ನು ಹೊಂದಿರುವಿಕೆ: ನಿನ್ನ ಸ್ಥಳದಲ್ಲಿ ನಾನು ಇದ್ದರೆ ಸುಖಲೋಲಾಪ್ತಿಯಲ್ಲಿರುವುದರ ಹೊರತು ಮತ್ತೇನೂ ಮಾಡುತ್ತಿರಲಿಲ್ಲ (ಮಲಕಾ. ೧೩೨). [ಸುಖ + ಲೋಲಾಪ್ತಿ (< ಲೋಲುಪ್ತಿ)]

ಸುಖಲೋಲುಪ (ನಾ). ಸುಖಭೋಗದಲ್ಲಿ ಆಸಕ್ತಿಯುಳ್ಳವನು: ಅವರು ಸಹಕರಿಸದಿದ್ದರೆ, ಸುಖಲೋಲುಪರಾಗಿದ್ದಿದ್ದರೆ ಸ್ವರಾಜ್ಯವೆಲ್ಲಿ ! (ಭಾರದ.೪೯೯). [ಸಂ.]

ಸುಖವಡಿಸು, ಸುಖಪಡಿಸು, ಸುಖಬಡಿಸು (ಕ್ರಿ). ಸಂತೋಷವನ್ನು ಹೊಂದುವಂತೆ ಮಾಡು; ಆನಂದಪಡಿಸು: ಕೂಟಸ್ಥಿತಿಯಲ್ಲಿ ಸುಖವಡಿಸುತೆ ನರನಾಟಕವನು ಬಿತ್ತಿದನು (ಮೋಹತ. ೪-೩೦). **ಸುಖಪಡಿಸು:** ಮುಪ್ಪಿನ ತಂದೆತಾಯಿಗಳನ್ನು ಸುಖಪಡಿಸಲು ಅವನು ಬಹಳ ಶ್ರಮಪಡುತ್ತಿದ್ದಾನೆ (ರೂಢಿ). **ಸುಖಬಡಿಸು:** ಆತನ ತಂದೆನ್ನ ಸುಖಬಡಿಸುವುದೆಂದಳೊಲಿದು (ಮೋಹತ.೨೮-೨೫).

[ಸುಖವಡು (< ಸುಖಂಬಡು) + - ಇಸ್ಕು]

ಸುಖವಡು 'ಸುಖಂಬಡು' ನೋ.

ಸುಖವಡೆ 'ಸುಖಂಬಡೆ' ನೋ.

ಸುಖವರ್ಚಕ (ನಾ). ೧. ಹಿತಕರವಾದ ಕಾಂತಿಯನ್ನು ಹೊಂದಿರುವುದು. ೨. (ಸ್ವಭಾವಜನ್ಯವಾದ ಒಂದ ನಿರ್ದಿಷ್ಟ ಸಂಯುಕ್ತದ) ಸೋಡಾಕಾರ್ಬೋನೇಟು ಖನಿಜ, — ಕ್ಷಾರ: ''ಸರ್ಜಕಾಕ್ಷಾರಃ, ಕಾಪೋತಃ, ಸುಖವರ್ಚಕಃ, ಸೌವರ್ಚಲಂ, ರುಚಕಂ — ೫ ಸಸ್ಯಕ್ಷಾರದ ಹೆಸರುಗಳು'' (ಸದ್ಧಾನಿ. ೩೦೭). [ಸಂ.]

ಸುಖವಾಳು 'ಸುಖಂಬಾಟು' ನೋ.

ಸುಖವಿರೇಕ (ನಾ). = ಸುಖಪ್ರವೃತ್ತಿ: ಶುಂಠಿ, ಒಪ್ಪಲಿ, ಮೆಣಸು, ದಂತಿ, ತಿಗಡೆ, ಕಟ್ಟುವತ್ತಿಗೆ ಬೀಜ, ಒಂದೆಲಗ, ಅಳಲೆಕಾಯಿ, ತಾರೆಕಾಯಿ . . . ಚೂರ್ಣವಂ ಮಾಡಿ ಬೆಲ್ಲವೆರಸಿ ಜೇನುಗೂಡಿ ಸೇವಿಸೆ ಸುಖವಿರೇಕಮಾಗಿ ಉದರವ್ಯಾಧಿಯು ಕೆಡುಗುಂ (ಸಚ್ಚ. ೩೦೨). [ಸಂ.]

ಸುಖಸಂಗಿ (ನಾ). ವಿಷಯಾಸಕ್ತನಾದವನು: ಮಿಂದಂ ಮಿಯದನಂ ಗುಣನಿಂದಿತನಂ ಪವಡಿಸಿದನನೆಳ್ದಾತಂ ಸ್ವಚ್ಛಂದಚರಂ ಬದ್ಧನ ಕಾಣ್ಬಂದದೆ ಸುಖಸಂಗಿಯಾದ ಜನವಿದನರಿವೆಂ (ಶಾಕುಂತ. ೬೪-೧೧೧). [ಸಂ. ಸುಖಸಂಗಿನ್]

ಸುಖಸಂಪನ್ನ (ನಾ). ಆನಂದದಿಂದ ತುಂಬಿದವನು; ಹರ್ಷಭರಿತನಾದವನು: ಜಱಮರಣ ಶೋಕಾದಿ ಭಯಗಳ ಮಱೆದು ಸುಖಸಂಪನ್ನರಾದರು ಹರಸುತಿರ್ದುದು ರಾಮರಾಜ್ಯದೊಳಖಿಳಜನನಿವಹ (ಕಾಶಿರಾ. ೪೪-೫೭). [ಸಂ.]

ಸುಖಸನ್ನಿ (ನಾ). ಸ್ತ್ರೀಸಂಭೋಗದಿಂದುಂಟಾಗುವ ಸನ್ನಿದೋಷ: ಈ ಲಕ್ಷಣಂಗಳು ನವಜ್ವರದಲ್ಲಿ ಸ್ತ್ರೀಸಂಗದಿಂದುಂಟಾದ ಸನ್ನಿದೋಷವೆಂದು ತಿಳಿವುದು. ಇದನ್ನು ಸುಖಸನ್ನಿಯೆಂಬರು (ವೃಧ್ಯಸಾ. ೧, ೧೦೧). [ಸಂ.]

ಸುಖಸಾಧ್ಯ (ನಾ). ಸುಲಭವಾಗಿ ಶಮನಮಾಡಲು ಸಾಧ್ಯವಾದುದು: ಆ ಕ್ಷುದ್ರಕವೆಂಬ ಶ್ವಾಸವು ಔಷಧಸೇವನೆಯಿಂದಾದರು ತನ್ನಿಂತಾನೆಯಾದರೂ ಶಮನವಹುದು. ಈ ಶ್ವಾಸವು ಸುಖಸಾಧ್ಯ (ಸಚ್ಚ. ೨೨೮). [ಸಂ.]

ಸುಖಸಾರ (ನಾ). ಆನಂದದ ಸಾರ; ಹರ್ಷದ ತಿರುಳು: ನಿಮ್ಮೆಲ್ಲರುಂ ಪೋಗಿ ಮತ್ರ್ಯದೊಳ್ ಸಲೆ ಸಂದು . . . ಸಕಲಸುಖಸಾರದಿಂ ಪರಿಣಮಿಸಿ ಬರ್ಪುದೆನೆ (ನಂಬಿರ. ೧-೫೪). [ಸಂ.]

ಸುಖಸುಪ್ತಿ (ನಾ). ಹಿತಕರವಾದ ನಿದ್ರೆ; ನೆಮ್ಮದಿಯಿಂದ ಕೂಡಿರುವ ನಿದ್ರೆ: ಸುಖಸುಪ್ತಿ[ಪಾಠಾಂ. ಸುಮುಪ್ತಿ, ದ ಸೂಕ್ತಿ]ಯೊಳ್ ಕಿಱಿದುಬೇಗಮಿರ್ದು ಎಂತಕ್ಕೆ ಎಚ್ಚತ್ತು (ನಂಬಿರ. ೧೪-೫೬). [ಸಂ.]

ಸುಖಸೊಮ್ಮು (ನಾ). ಆನಂದದ ಆಧಿಕ್ಯ; ಅಧಿಕವಾದ ಸಂತೋಷ: ಸುಮ್ಮಾನ ಮಿಗಲಲ್ಲಿ ಕೆಲವು ದಿವಸ ಸುಖಸೊಮ್ಮನೊಳಿರೆ (ಭರಚ. ೪೬-೪). [ಸುಖ + ಸೊಮ್ಮು]

ಸುಖಾಂತ (ಗು).೧. ಆನಂದದೊಡನೆ ಕೊನೆಗೊಳ್ಳುವ; ಸುಖಪ್ರದವಾಗಿ ಮುಕ್ತಾಯವಾಗುವ: ಕೆಲವು ಸುಖಾಂತಕೃತಿಗಳು ನಮ್ಮನ್ನು ಹಿಗ್ಗಿಸಬಹುದು (ಸೌಂದಸ. ೯). ೨. ಸ್ನೇಹಭಾವದ; ಮೈತ್ರಿಯಿಂದ ಕೂಡಿದ. (ನಾ). ೩. ಆನಂದದೊಡನೆ ಕೊನೆಗೊಳ್ಳುವ ಕಥಾನಕ; ಸುಖಪ್ರದವಾಗಿ ಮುಕ್ತಾಯಗೊಳ್ಳುವ ಕಥೆ: ರಾಮಾಯಣ ಉತ್ತರರಾಮಚರಿತಗಳು ಸುಖಾಂತಗಳು (ಅಂಕಾ. ೧೬೭). ೪. ಸಂತೋಷ; ಆನಂದ: ''ವಾರಿಯೊಳು . . . ಸುಖಾಂತದೊಳು ಮಾರುತನೊಳೋರಂತೆ ಕಂ ಶಬ್ದಮಕ್ಕುಂ'' (ಮಂಗರಾ. ೧೪೫-೨೯). ೫. ಸಂತೋಷವನ್ನು ಹಾಳುಮಾಡುವುದು; ಸುಖವನ್ನು ನಾಶಮಾಡುವುದು. [ಸಂ.]

ಸುಖಾಂತನಾಟಕ (ನಾ). ಸಂತೋಷದಲ್ಲಿ ಕೊನೆಗೊಳ್ಳುವ ನಾಟಕ: ಸೋಪೋಕ್ಲಿಸನ ದುರಂತನಾಟಕ ಈಡಿಪಸ್ ಮತ್ತು ಯೂರಿಪಡೀಸನ ಸುಖಾಂತನಾಟಕ ಟೌರಸ್ಸಿನಲ್ಲಿ ಐಫಿಜನಿಯಗಳೆರಡನ್ನೂ ಉತ್ತಮವಾದ ರುದ್ರನಾಟಕಗಳೆಂದು ಮೆಚ್ಚದುದೇ ಅಲ್ಲದೆ . . . ಆದರ್ಶಕೃತಿಗಳನ್ನಾಗಿಯೂ ಪರಿಗಣಿಸಿದನು (ಅಂಕಾ. ೧೬೬). [ಸಂ.]

ಸುಖಾಕರ (ನಾ). ಆನಂದಕ್ಕೆ ನೆಲೆಯಾದವನು: ಬೋಧಾವಾಪ್ತಿಯಿಂದಂ ಸುಖಾಕರನಾಗೆಂದು ಫಲಪ್ರದೋಕ್ತಿ ತಳಿದಂ ಶೇಷಾಕ್ಷತೌಘಂಗಳಂ (ಆದಿಪು. ೯-೬೪). [ಸಂ.]

ಸುಖಾಗಮನ (ನಾ). ೧. ಕ್ಷೇಮವಾದ ಆಗಮನ, —ಬರವು: ಎಲೈ ಇಂದ್ರಸಾರಥಿಯಾದ ಮಾತಲಿಯೆ, ನಿನಗೆ ಸುಖಾಗಮನವೇ? (ಶಾಕುಂತ. ೯೭-೭): ಬಯಸುವೆನ್ ನಿನಗೆ, ಪೂಜ್ಯನೆ, ಸುಖಾಗಮನಮಂ (ಶ್ರೀರಾಮಾ. ೧೪-೩೭೧). ೨. ಆದರದಿಂದ

ಸ್ವಾಗತವನ್ನು ಬಯಸುವಿಕೆ; ಸುಸ್ವಾಗತ: ಮನೆಯವರೆಲ್ಲರೂ ಬಾಗಿಲಲ್ಲಿ ನಿಂತು ಅತಿಥಿಗಳಿಗೆ ಸುಖಾಗಮನವನ್ನು ಕೋರಿದರು (ರಾಪ್ರ). [ಸಂ.]

ಸುಖಾತ್ಮ (ನಾ). ಸುಖಿಸ್ವರೂಪನಾದವನು: ಪ್ರೀತಿಂಕರವಿಮಾನದೊಳ್ . . . ಅಹಮಿಂದ್ರಪರಮೈಶ್ವರ್ಯಮುಂ ದೊರಕೊಳೆ ಸುಖಾತ್ಮನಿರೆ (ಶಾಂತಿಪು. ೯-೬೦ ವ).

[ಸಂ. ಸುಖಾತ್ಮನ್]

ಸುಖಾಪ್ತಿ (ನಾ). ಆನಂದವನ್ನು ಹೊಂದುವುದು: ಭೂಭಾಗಿ ಸುಖಾಪ್ತಿಯಂ ಪಡೆದುದು (ಶಾಂತಿಪು. ೧೨-೨೪). [ಸಂ.]

ಸುಖಾವಾಪ್ತಿ (ನಾ). ಆನಂದವನ್ನು ಹೊಂದುವಿಕೆ; ಸಂತೋಷಪ್ರಾಪ್ತಿ: ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ . . . ದಯೆಗೆಯ್ಯನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ (ಆದಿಪು. ೧-೧). [ಸಂ.]

ಸುಖಾಶ್ರು (ನಾ). = ಸುಖಜಲ: ತನು ಪುಳಕಂಗಳಂ ತಳೆಯೆ ನೇತ್ರದೊಳುಕ್ಕೆ ಸುಖಾಶ್ರು (ರಾಜಶೇ. ೮-೭೪). [ಸಂ.]

ಸುಖಾಸನ (ನಾ). ೧. ಹಿತಕರವಾದ ಆಸನ; ಅನುಕೂಲಕರವಾದ ಪೀಠ: ಮನಮೊಸದಿಕ್ಕಿರ್ದ ಸುಖಾಸನದೊಳ್ ಕುಳ್ಳಿರಿಸುವಂತೆ ಸಿತಶಿಲತಲದೊಳ್ ಆ ಭೀಮಾಟವೀ ಸರಸ್ತೀರದೊಳಿರಿಸಿ ಪೋಪುದುಂ (ಶಾಂತಿಪು. ೪-೯೭); ರುದ್ರಾಕಾರನಂ ಬಿಜಯಂಗೆಯಿಸಿ . . . ಸುಖಾಸನದೊಳಿರಿಸಿ (ಜಿಪು. ೨೪-೨೨). ೨. ಆರಾಮಕುರ್ಚಿ: ನಾನು ಸುಖಾಸನದಲ್ಲಿ ಕುಳಿತು ಎರಡೂ ಕಡೆಗೆ ನೀಡಿ ನಿಂತ ಆಸನದ ಬದಿಪಟ್ಟಿಗಳ ಮೇಲೆ ಕಾಲೂಗದು . . . ಯೋಚಿಸಹತ್ತಿದೆನು (ಇಪ್ರತಿ. ೪೭೯). ೩. [ಯೋಗ] ಒಂದು ಬಗೆಯ ಆಸನ: ಸಿದ್ಧಾಸನ ಪದ್ಮಾಸನ . . . ಸುಖಾಸನಂಗಳೇ ಜಪಸಿದ್ಧಿಗೆ ಯೋಗ್ಯಗಳಾದ ಷಡಾಸನಂಗಳು (ವಿವಾಣ. ೯೫). [ಸಂ.]

ಸುಖಾಸೀನ (ನಾ). ಆರಾಮವಾಗಿ ಕುಳಿತುಕೊಂಡಿರುವವನು: ಸಿಂಧುರಸ್ಕಂಧ ಪೀಠದೊಳ್ ಸುಖಾಸೀನನಾಗಿರ್ದಾಗಳ್ (ಆದಿಪು. ೧೪-೧೦೨ ವ). [ಸಂ.]

ಸುಖಿ$_1$, **ಸುಗಿಯ** (ನಾ). (ಅಕ್ಕಿಹಿಟ್ಟು, ಬೆಲ್ಲ, ತೆಂಗಿನಕಾಯಿ ಇತ್ಯಾದಿಗಳನ್ನು ಬೆರಸಿ ಕರಿದು ಮಾಡುವ) ಒಂದು ಬಗೆಯ ಸಿಹಿಭಕ್ಷ್ಯ: ಪಂಚಪರ್ವ ಅಯಿದಕಂ ಸುಖಿ ಪಡಿಸ್ನವೇದ್ಯಕೆ ಚ [ಗ ೧೫೦|ತಿರುನಾಳು ೨ ಕಂ ಬಿ ೨೦ ಸುಖಿ ನೈವೇದ್ಯ ಗ ೬ (ಶೌಇ. IX-ii. ೬೦೭ ಕ; 1543). 'ಸುಖಿನಪ' ಪರಾ. **ಸುಗಿಯ**: ಅತಿರಸದ ಹರಿವಾಣ ೧ ವಡೆಯ ಹರಿವಾಣ ೧ ಸುಗಿಯದ ಹರಿವಾಣ ೧ (ಶೌಇ. IX-ii. ೪೫೯ ಕ; 1562).

[ದೇ. ॥ ತಮಿ. ಚುಕಿಯನ್; ಮಲ. ಸುಖಿಯ; ತೆಲು. ಸುಕಿಯ]

ಸುಖಿ$_2$ (ಗು). ೧. ಸಂತೋಷದಿಂದ ತುಂಬಿದ; ಸುಖವಾದ. ೨. ಸೌಕರ್ಯದಿಂದ ಕೂಡಿದ; ಅನುಕೂಲದಿಂದಿರುವ. (ನಾ). ೩. ಸಂತೋಷದಿಂದಿರುವವನು: ಚಕ್ರಯುಂ ಚತುರುತ್ಸಂಗವದಶೀತಿಲಕ್ಷಪೂರ್ವಂ ಬಬ್ದತ್ಯುತ್ತಮ ಸುಖಿ ವನಡಿಸಿ ತನ್ನುತ್ಸರ್ಯದುಕೂಲ ವಿಶದಶಯ್ಯಾತಳದೊಳ್ (ಶಾಂತಿಪು. ೪-೧೦೭); ಸೋಂಕಿನಲ್ಲಿ ಸುಖಿ ಸರ್ವಾಂಗಕಲಿಗಳು (ಜಿಪು. ೬.೫೩). ೪. (?): "ಅಜಾಜೀವಿ ಚಾಬಾಳನನೆ ಸುಖಿಯಕ್ಕು" (ಮಂಗರಾ. ೭೧-೧೪). 'ಅಜಾಜೀವಿ' ಹೋ. ೫. ತಪಸ್ವಿ; ಸಂನ್ಯಾಸಿ.

[ಸಂ. ಸುಖಿನ್]

ಸುಖಿತನ (ನಾ). ಆನಂದದ ಸ್ಥಿತಿ; ಸುಖಿ: ಕೆಳಿಯತನಂ. ಸುಖಿತನಂ (ಶಬ್ದಾನು. ೪೩ ಪ್ರಯೋ). [ಸುಖಿ$_2$ + - ತನ]

ಸುಖಿನಪ (ನಾ). = ಸುಖಿ$_1$: ಅತಿರಸ ೫ ಸುಖಿನಪ ೫ ::::ಣಹೂರಿಗೆ ೫ (ಶೌಇ. IV.೨೫೦ ಕ; 1921). [< ಸುಖಿ$_1$ + < ಅಪ್ಪ]

ಸುಖಿನುಂಡೆ, ಸುಂಕಿನುಂಡೆ, ಸುಕ್ಕಿನುಂಡೆ, ಸುಕ್ಕುಂಡೆ, ಸುಖಿಯನುಂಡೆ, ಸುಖಿವುಂಡೆ (ನಾ).= ಸುಖಿ$_1$: ಪೋಣೆ ಸುಖಿನುಂಡೆ ವಡೆ ಗಾರಿಗೆಯ . . . ಬಡಿಸಿದರೊಲವಿಂ (ಮೋಹತ. ೩-೫೮); ಸುಖಿನುಂಡೆಗೆ ಅಕ್ಕಿಗಂ ಹೆಸಱು ಪ ೧ ಬೆಲ್ಲ ೫ ತುಪ್ಪಂ (ಎಸ. VI.ಮೂಡಗ. ೪೦-೧೫, 1552). **ಸುಂಕಿನುಂಡೆ**: ಎಳ್ಳುಂಡೆ ಕಡಲೆಗಳುಂಡೆ ಪೋರುಂಡೆಯ ಒಳ್ಳೆಯ ಸುಂಕಿನುಂಡೆಗಳ (ಜ್ಞಾಸಮು. ೩೮-೧೨೨). **ಸುಕ್ಕಿನುಂಡೆ**: ಸುಕ್ಕಿನುಂಡೆ ಎಂಬುದು ಭಕ್ಷರಾಜನೆನಿಸಿಕೊಂಡಿದೆ ನಮ್ಮೂರಲ್ಲಿ (ಓಂಕೃ. ೨೫); ಸುಕ್ಕಿನುಂಡೆ ವಡೆಗಳೆಲ್ಲ ಶ್ರಾದ್ಧಕ್ಕೆ (ಮಂರಾಮ. ೭೯). **ಸುಕ್ಕುಂಡೆ** : ಒಡೆ, ಸುಕ್ಕುಂಡೆ, ಸುಟ್ಟವು, ಅಪ್ಪ (ಜಸಂಸ್ಕೃ. ೨೯೦). **ಸುಖಿಯನುಂಡೆ**: ಸುಖಿಯನುಂಡೆ ಪೋಣೆ ತಾರಂಗಪೋಣೆಯ ನೀಡುವರು (ಇಚಾಸಾ. ೧೧-೭೪). **ಸುಖಿವುಂಡೆ**: ತುಪ್ಪದಲ್ಲಿ ಮಾಡ್ಯಾರೆ ಇಪ್ಪತ್ತುಸಾವಿರ ತುಪ್ಪದ ಗಾರಿಗೆ ಸುಖಿವುಂಡೆ (ಜಗೀತ. ೯೭). [< ಸುಖಿ$_1$ + ಉಂಡೆ./ ತುಳು. ಸುಕ್ಕುಂಡೆ]

ಸುಖಿಯನುಂಡೆ 'ಸುಖಿನುಂಡೆ' ನೋ.

ಸುಖಿಯಿಸು 'ಸುಖಿಸು' ನೋ.

ಸುಖಿವುಂಡೆ 'ಸುಖಿನುಂಡೆ' ನೋ.

ಸುಖಿಸು, ಸುಖಿಯಿಸು (ಕ್ರಿ). ನಲಿವನ್ನು ಹೊಂದು; ಸುಖಿಪಡು: ಶಿವಗೋಷ್ಠಿಯೊಳು ನಲಿದು ಸುಖಿಸುತಿಪ್ಪರ್ಕಳಲರು (ತಿಮಾ. ೮೮-೬); ಧರ್ಮದಿಂದಾದುದು ಸರಿಯೆಂದು ಸುಖಿಸುತ್ತ ಧರ್ಮವ ಮಱೆಯರುತ್ತಮರು (ಭರಚ. ೨-೧೦). **ಸುಖಿಯಿಸು**: ದೇವಕಾರ್ಯದೊಳಿನಿಸುಂ ನೋಯದೆ ಸುಖಿಯಿಪ ಸವಣರುಪಾಯಮನಿಂ ನಿನ್ನೊಳಿನ್ನಾ ಭಾವಿಸಿ ನೋಡಾ (ಧರ್ಮಾಮೃ. ೧-೧೧೨). [ಸುಖಿ + - ಇಸು]

ಸುಖೀರಾಜ್ಯ (ನಾ). ನೆಮ್ಮದಿಯಿಂದ ಕೂಡಿರುವ ರಾಜ್ಯ : ತನ್ನ ಕಲ್ಪನೆಯ 'ಸುಖೀರಾಜ್ಯ'ದಲ್ಲಿ ಇರಬೇಕಾದ ಮೂಲತತ್ವಗಳನ್ನೂ ವಿವರಿಸಿದ್ದಾನೆ (ಭಾರದ. ೪೫೧); ಪ್ರಾಚೀನಕರ್ನಾಟಕವು 'ಸುಖೀರಾಜ್ಯ'ವಾಗಿದ್ದಿತೆ? (ಕಶಾಅ. ೪೦೬). [ಸುಖಿ + ರಾಜ್ಯ]

ಸುಖೋದಯ (ನಾ). ೧. ಆನಂದದ ಉದಯ; ಸಂತೋಷದ ಉತ್ಪತ್ತಿ: ಮನದಱಿವಂ ಕಳಲ್ಚುವ ರತಾಂತಸುಖೋದಯದಿಂದೆ ನಿದ್ರೆಯಂ ನೆನೆಯದೆ ಪೋದುವಂತವರ್ಗ ಚಿತ್ರಜಕೇಳಿಗಳಿಂದೆ ಪೊಲ್ತುಗಳ್ (ಚಂದ್ರಪ್ರ. ೬-೬೫). ೨. [ಜೈನ] ಐವತ್ತು ಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; IP ದೇವತೆಗಳಿಂದ ಸುತ್ತುವರಿಯಲ್ಪಟ್ಟು ಬಹಳಕಾಲ ದಿವ್ಯಸುಖವನ್ನು ಅನುಭವಿಸುವುದು : ಅಭಿಷೇಕವಿಧಿದಾನ ಸುಖೋದಯ . . . ಎಂಬಯ್ತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ). 'ದೀಕ್ಷೆ' ಪರಾ. [ಸಂ.]

ಸುಖೋಷ್ಣ (ನಾ). ಹಿತಕರವಾದ ಶಾಖ, — ಬಿಸುಪು: ಬೆಟ್ಟದ ಎಲ್ಲ ತೀರ್ಥ ನಿರ್ಝರಿಣಿಗಳನ್ನೂ ತಂದು ಒಟ್ಟಾಗಿ ಬೆರೆಯಿಸಿ ಸುಖೋಷ್ಣವಾಗಿ ಕಾಯಿಸಿಟ್ಟಿದ್ದೇನೆ (ಸಮಾ. ೨೮೫). [ಸಂ.]

ಸುಗಂಧ (ಗು). ೧. ಸುವಾಸನೆಯಿಂದ ಕೂಡಿದ; ಪರಿಮಳಭರಿತವಾದ: ನಿರ್ವಾಣಭೂಮಿಯನನೇಕಸುರಭಿಸುರತರುಕುಸುಮಸುಗಂಧಾಕ್ಷತಂ[ಪಾಠಾಂ.ಗಂಧಾಕ್ಷತಂ] ಗಳಿಂದಮರ್ಚಿಸಿ (ಆದಿಪು. ೧೬-೫೧ ವ). (ನಾ). ೨. ಸುವಾಸನೆ; ಕಂಪು; ಪರಿಮಳ: ನಿನಗೆ ಗಂಧವ ಹೂಸುವಲ್ಲಿ ನಾ ದುರ್ಗುಣಭಾವಿ ನೀ ಸುಗಂಧಭಾವಿ (ಮೋಹವಿ. ೬೭-೧೫೧); ಸುರತರು ಸುಗಂಧದ ತವರ್ಮನೆಯೆಂದೆನಿಪ ಪೂದೋಟಮಂ ದೂರದಿಂ ಕಂಡು (ಪುಪ್ರ. ಪ. ೫೨೨-೧೪). ೩. ಪರಿಮಳ : ಶಚಿ ವಿರಚಿಸಿದಳ್ ಸುಗಂಧಲೇಪನ ವಿಧಿಯಂ (ಪುಪ್ರ. ೧೧-೬೨); ಈ ಸೇವಕರು . . . ಮೈಗೆಲ್ಲ ಸುಗಂಧಗಳನ್ನು ಪೂಸಿಕೊಂಡಿದ್ದರು (ಪ್ರವಾ. I. ೭೯). ೪. ಒಂದು ಬಗೆಯ ರಾಸಾಯನಿಕವಸ್ತು; ಗಂಧಕ. ೫. ಒಂದು ಬಗೆಯ ಔಷಧೀಸಸ್ಯ : ಸುಗಂಧದ ಮೂಲದ ಬೇರಿನ ಗಂಧ ಎಲೆಬಳ್ಳಿಯನೇತಕ್ಕೆ ವೇಧಿಸದು (ಮಾದವ. ೨೮೫-೬೦). [ಸಂ.]

ಸುಗಂಧತೈಲ (ನಾ). ಸುಗಂಧದ್ರವ್ಯಗಳನ್ನು ಬೆರಸಿ ತಯಾರಿಸಿದ ಎಣ್ಣೆ, — ದ್ರವಪದಾರ್ಥ: ಬಣ್ಣದ ಕರವಸ್ತ್ರಕ್ಕೆ ಅತ್ತರದ ಸುಗಂಧತೈಲ ತೊಡೆದು ಬಹಳ ಜತನದಿಂದ ವೇಷಮಾಡಿಕೊಳ್ಳುತ್ತಿದ್ದೆನು (ಇಪ್ರತಿ. ೧೫೯). [ಸಂ.]

ಸುಗಂಧದ್ರವ್ಯ (ನಾ). (ಹೂವು ಮೊದಲಾದುವುಗಳಿಂದ ಭಟ್ಟಿಯಿಳಿಸುವ) ಪರಿಮಳದ್ರವ್ಯ: "ಸುರಭಿ ಸುಗಂಧದ್ರವ್ಯಂ" (ಮಪ್ರಕೋ. ೧೩೪-೧೨೧); ತನ್ನ ದೊಡ್ಡ ಟ್ರಂಕಿನಲ್ಲಿ ಸುಗಂಧದ್ರವ್ಯ ಉಂಟು (ಇಪ್ರತಿ. ೬೨). [ಸಂ.]

ಸುಗಂಧಪಾಲ, ಸುಗಂಧಿಪಾಲ (ನಾ). ಒಂದು ಬಗೆಯ ಔಷಧೀಸಸ್ಯ: "ಗೋಪೀ, ಶ್ಯಾಮಾ . . . ಉತ್ಪಲಶಾರಿಬಾ — ೫ ಸುಗಂಧಪಾಲಗಿಡದ ಹೆಸರು, ಸೂಗದೇಬೇರು ಪ್ರಸಿದ್ಧ" (ಸಿಡ್ಡಾಂಕಿ. ೧೩೭). **ಸುಗಂಧಿಪಾಲ** : ಸುಗಂಧಿಪಾಲ, ದ್ರಾಕ್ಷಿ ಹಣ್ಣು . . . ಹಿಪ್ಪಲಿ ಇವುಗಳನ್ನು ಲೆಕ್ಕದಲ್ಲಿ ಕೂಡಿಸಿ, ಶರ್ಕರೆಗೂಡಿ ಎಳನೀರಿನಲ್ಲಿ ಕಲಸಿ ತೆಗೆದುಕೊಳ್ಳಿ ವಿದಾಹ, ಛರ್ದಿಯಿಂದ ಕೂಡಿದ ಪೈತ್ಯಜ್ವರಂ ಮಾಣ್ಗುಂ (ಸಹ್ಯ. ೭೭).

[ದೇ. ॥ ತುಳು. ಸುಗಂಧಿಬೂರು; ತೆಲು. ಸುಗಂಧಪಾಲ]

ಸುಗಂಧಬಳ್ಳಿ (ನಾ). ಒಂದು ಬಗೆಯ ಔಷಧೀಸಸ್ಯ: "ಅನಂತಮೂಲ, ಕರಿಬಂಟ, ಸುಗಂಧಬಳ್ಳಿ, . . . ಕೆಂಪುಗಂಧಿ" (ಸಸ್ಯಸಿ. ೭೦). [ಸುಗಂಧ + ಬಳ್ಳಿ]

ಸುಗಂಧಬೇರು (ನಾ). = ಸುಗಂಧ ೫: [illegible] ಅಕ್ಕಿಕಚ್ಚನಿಂದರೆದು ಕುಡಿಯಲು ಗರ್ಭೋತ್ಪತ್ತಿಯಹುದು (ಕಾಮಶಾ. ೨೭೭).

[ಸುಗಂಧ + ಬೇರು (< ಬೇರ್$_1$)]

ಸುಗಂಧಭಂಡಾರ (ನಾ). ಪರಿಮಳದ್ರವ್ಯಗಳ ಕೋಶ: 'ಸುಗಂಧಭಂಡಾರಿಗ' ಪರಾ. [ಸುಗಂಧ + ಭಂಡಾರ]

ಸುಗಂಧಭಂಡಾರಿಗ (ನಾ). ಪರಿಮಳದ್ರವ್ಯಗಳ ಕೋಶದ ಮೇಲ್ವಿಚಾರಕ; ಸುಗಂಧದ್ರವ್ಯಗಳ ಭಂಡಾರವನ್ನು ನೋಡಿಕೊಳ್ಳುವವನು: ಸುಗಂಧ ಭಂಡಾರಿಗರ್ ವಿರಚಿಸಿ ತಂದು ಮುಂದಿಟ್ಟ ಘನಸಾರ . . . ಕಸ್ತೂರಿಕಾಸಾರ ವಿವಿಧಲೇಪನಂ ಗಳಂ ಮಯ್ಯಂ ತಿಮಿರ್ದು (ಸುಕುಮಾ. ೧೧-೩೨ ಪ). [ಸುಗಂಧಭಂಡಾರ + - ಇಗ]

ಸುಗಂಧಮುಸ್ತೆ (ನಾ). ಒಂದು ಬಗೆಯ ಔಷಧೀಸಸ್ಯ: ಜಟಾಮಾಂಸಿ, ಸುಗಂಧ ಮಒಮುತೆಸ್ತ (ಮೃಚ್ಛಿ. ೫೬-೧೧೨೦). [ಸಂ. ಸುಗಂಧಮುಸ್ತಾ]

ಸುಗಂಧರಸ (ನಾ). ಪರಿಮಳದ್ರವ್ಯಗಳ ರಸ: ಜಳದಿಂದಂ ಬಳಮಂ ಸುಗಂಧರಸದಿಂ ಸೌಗಂಧ್ಯಮಂ . . . ಫಲದಿನವ್ಯಾಬಾಧೆಯಂ ಮಾಡುಗುಂ (ಶಾಂತಿಪು. ೧೦-೫೫). [ಸಂ.]

ಸುಗಂಧರಾಜ (ನಾ). ಒಂದು ಬಗೆಯ ಸಸ್ಯ ಮತ್ತು ತೀವ್ರವಾದ ಪರಿಮಳವನ್ನು ಹೊಂದಿರುವ ಅದರ ಹೂವು: ಸುಗಂಧರಾಜ, ನೆಲಸಂಪಿಗೆ, ಸಂಧ್ಯಾರಾಗ (ಮೃಚ್ಛಿ. ೬೩-೧೨೮೨); ಸುಗಂಧರಾಜ ಹೇಮಳಿಗೆ ಪ್ರಿಯವಾದ ಹೂವು (ಮುಚ್ಛಿಪಾ. ೧೫೫).

ಸುಗಂಧರಾಜಗೆಡ್ಡೆ = (ಔಷಧಿಗೆ ಉಪಯೋಗವಾಗುವ) ಸುಗಂಧರಾಜಸಸ್ಯದ ಗೆಡ್ಡೆ: (ಕ). [ಸಂ.]

ಸುಗಂಧವರ್ತಿ (ನಾ). ಒಂದು ಸ್ಥಳದ ಹೆಸರು; ☞ ಈಗಿನ ಬೆಳಗಾವಿಜಿಲ್ಲೆಯ ಸವದತ್ತಿ ಅಥವಾ ಸೌಂದತ್ತಿ: ದ್ವಾದಶಗ್ರಾಮಾಧಿಷ್ಠಾನಸ್ಯ ಸುಗನ್ಧವರ್ತ್ತಿ ಸಮನ್ವಿತ ನಿಗ್ರಾಮೇ ಮುಳುಗುನ್ನಾಪ್ಯೇ ಸೀವಟೇ ಷಡ್ವಿವರ್ತನಂ (ಸೌಶಾ. XX. ೧೩-೧; 875).

[?]

ಸುಗಂಧವಾಳೆ (ನಾ). ಸುವಾಸನೆಯಿಂದ ಕೂಡಿರುವ ಒಂದು ಬಗೆಯ ಬಾಳೆ: ಮಿಸುಗುವ ಸುಗಂಧವಾಳೆಯ ಹಣ್ಣ ಕತ್ತರಿಸಿ ಹೊಸತುಪ್ಪಮಂ ಕೂಡಿ ಮತ್ತಮಾ ಹಾಲೊಳಗೆ ಹೊಸೆದದಂ ಹಾಕೆ ಕದಳಿಪಕ್ವಫಲಸಾರಪಾಯಸವೆನಿಸಿಕೊಂಬುದು. (ಸೂಪಶಾ. ೩-೧೪). [ಸುಗಂಧ + ಬಾಳೆ$_1$ (< ಬಾಟೆ) ./ ತಮಿ. ಚುಕನ್ತವಾಳೈ]

ಸುಗಂಧಾನಿಲ (ನಾ). ೧. ಪರಿಮಳಭರಿತವಾದ ಗಾಳಿ; ಸುವಾಸನೆಯಿಂದ ತುಂಬಿದ ಗಾಳಿ. ೨. ಸುವಾಸನೆ; ಪರಿಮಳ: "ಸೌರಭ್ಯಮಾಮೋದಮೆನೆ ಸುಗಂಧಾನಿಲಂ" (ಮಂಗರಾ. ೧೫-೧೧). [ಸಂ.]

ಸುಗಂಧಿ (ಗು). ೧. ಸುವಾಸನೆಯಿಂದ ಕೂಡಿದ; ಪರಿಮಳಭರಿತವಾದ. ೨. ಧರ್ಮನಿಷ್ಠನಾದ; ಸಾತ್ವಿಕಸ್ವಭಾವವುಳ್ಳ. (ನಾ). ೩. ಸುವಾಸನೆ; ಪರಿಮಳ. ೪. ಒಂದು ಬಗೆಯ ಪರಿಮಳದ್ರವ್ಯ; ಏಲಾವಾಲುಕ: "ಏಲಾವಾಲುಕಂ, ಐಲೇಯಂ, ಸುಗಂಧೀ, ಹರಿವಾಲುಕಂ, ವಾಲುಕಂ— ೫ ಸುರಸುರಕೀ ಹೆಸರು; ಕಿರಿಯಾಲಕ್ಕಿ ಹೆಸರೆಂತಲೂ ಅನ್ನುವರು" (ಸಿದ್ಧಾಂ. ೧೪೦). ೫. ಪರಿಮಳದಿಂದ ಕೂಡಿದ ಒಂದು ಬಗೆಯ ತೃಣಸಸ್ಯ; ಕೊನ್ನಾರಿಗೆಡ್ಡೆ. ೬. ಒಂದು ಬಗೆಯ ಔಷಧೀಸಸ್ಯ: "ಗೋಪೀ, ಶ್ಯಾಮಾ, ಶಾರಿಬಾ, ಅನಂತಾ, ಉತ್ಪಲಶಾರಿಬಾ — ಈ ೫ ಸುಗಂಧಿ" (ನಾಚಿಕಾ. ೧೧೦); ಸುಗಂಧಿಯ ಬೇರು, ಗುರುಗುಂಜಿಯ ಬೇರು, ಅಳಲೇಕಾಯ ಚೂರ್ಣ, ಇವು ಎಲ್ಲವನ್ನೂ ಸಮಾನಂಗೊಂಡು ಬೆಲ್ಲದಲ್ಲಿ ಇಕ್ಕಿ ಮೆಲ್ಲಲು ಗರ್ಭಿಣಿಯ ಬಸಿರುಬೇನೆ ಮಾಣ್ಗುಂ (ವಸ್ತುವಿ. ೧೯೬). ೭. ಒಂದು ಬಗೆಯ ಬಾಳೆ: ಬಾಳೆಯ ಕುಲದಲ್ಲಿ ಗುಜರಾಥಿ, ರಸಬಾಳೆ, ಸುಗಂಧಿ . . . ಏಣುಬಾಳೆ ಎಂದು ಈ ಪ್ರಕಾರ ಹಲವುವಿಧವಾದ ಬಾಳೆಯ ಕುಲಗಳುಂಟು (ಕೃಷಿಪ್ರ. ೧೫೬). 'ಸುಗಂಧವಾಳೆ' ಪರಾ. ೮. ಒಂದು ಬಗೆಯ ಸಸ್ಯ ಮತ್ತು ಅದರ ಹೂವು: "ಸೌಗಂಧಿಕ — ರಾತ್ರಿ ಅರಳುವ ಕಮಲ. ೨. ಸುಗಂಧೀಹೂವು. ೩. ಒಂದು ತರದ ಹುಲ್ಲು. ೪. ಗಂಧಕ" (ಗಂಗಾಮ. ೩೩೭); ಬಂಡೆಗಳ ಎಡೆಯಲ್ಲಿ ಒಂದು ಜಾತಿಯ ಸುಗಂಧಿ, ಬಿಳಿಯ ಹೂವರಳಿಸಿ ಕೊಂಡು ನಗುತ್ತಿರುತ್ತದೆ (ಕುಡಿಕೂ. ೧೬೧). ೯. ಹದಿನಾರು ಕುಲಪರ್ವತಗಳಲ್ಲಿ ಒಂದು: ಮತ್ತಂ ಸುಗಂಧಿ ಶಿಖೆ . . . ಪಾರಿಜಾತಮೆಂಬ ಹದಿನಾರು ಕುಲಾಚಲಂಗಳೇ . . . ಪಶ್ಚಿಮದಿಕ್ಕಿನಲ್ಲಿಹವು (ಏವೇಕ. ೧೭೨). [ಸಂ. ಸುಗಂಧಿ, ಸುಗಂಧೀ]

ಸುಗಂಧಿಕ (ನಾ). ೧. (ಹಾಲುಮಡ್ಡಿ, ಸಾಂಬ್ರಾಣಿ ಮುಂತಾದ) ಪರಿಮಳದ್ರವ್ಯ; ಸುಗಂಧದ್ರವ್ಯ. ೨. ಗಂಧಕ. ೩. (ದೊಡ್ಡ ಜಾತಿಯ) ಒಂದು ಬಗೆಯ ಅಕ್ಕಿ. ೪. ಬಿಳಿಯ ತಾವರೆ. ೫. ಒಂದು ಬಗೆಯ ಹೂವು; ಕನ್ನೈದಿಲೆ: "ಕಲ್ಹಾರಂ ಸುಗಂಧಿಕಂ ಕನ್ನೈದಿಲೆನಿಸಿಕ್ಕು" (ಮಂಗರಾ. ೧೨೪-೧೭). [ಸಂ.]

ಸುಗಂಧಿಗ (ನಾ). ಪರಿಮಳದ್ರವ್ಯಗಳಲ್ಲಿ ವ್ಯವಹರಿಸುವವನು: ಸಗಣಿಗನ ಸಹವಾಸಕಿಂತಲು ಮಿಗೆ ಸುಗಂಧಿಗನೊಡನೆ ಜಗಳವು ಸಿಗುವುದೇ ಮೇಲೆಂಬರು (ನೀಸಾರಾ. ೧೯-೧೦೯). [ಸುಗಂಧ + - ಇಗ]

ಸುಗಂಧಿತೆ (ನಾ). ಸುವಾಸನೆ; ಪರಿಮಳ: "ಆಮೋದಃ, ಪರಿಮಳಃ, ಸೌರಭ್ಯಂ, ಸುಗಂಧಿತಾ — ಈ ೪ ಕಂಪು" (ಹಲಾಯು. ೧೪-೭೭). [ಸಂ. ಸುಗಂಧಿತಾ]

ಸುಗಂಧಿಪಾಲ 'ಸುಗಂಧಪಾಲ' ನೋ.

ಸುಗಂಧೆ (ನಾ). ಒಂದು ಬಗೆಯ ಸಸ್ಯ: (ಕ). [ಸಂ. ಸುಗಂಧಾ]

ಸುಗತ (ಗು). ೧. ಒಳ್ಳೆಯ ರೀತಿಯಲ್ಲಿ ಮುಂದುವರಿದ,— ಚಲಿಸಿದ. ೨. ತೆರಳಿದ; ನಡೆದ. ೩. ಚೆನ್ನಾಗಿ ಅನುಗ್ರಹಗೊಂಡ,— ಅನುಗ್ರಹೀತವಾದ. (ನಾ). ೪. ಬುದ್ಧನ ಒಂದು ಹೆಸರು: ಬಾಗುವೆ ನಾ ಸುಗತನಿಗಾತನೆನ್ನ ತಥಾಗತ ಕರುಣಾಳು ಹಿತನು (ಸೌಂದ. ೧೫-೩೭); ಪಾಪಿ ಮಾರಂ ಬಂದು, ಪರಿನಿರ್ವೃತಿಸು ಸುಗತ, ಭಗವಂತ ಬದುಕಿಂದ ತೊಲಗೆಂದ (ವೃತಾಪಿ. ೬೬-೨೫). ೫. ಬೌದ್ಧಧರ್ಮದ ಅನುಯಾಯಿ: ತೆಗೆಯಲ್ ಜೈಮಿನಿ ತಿಪ್ಪಕೊಂಡು ಪರಿಯಲ್ ವೈಶೇಷಿಕಂ ಪೋಗದುಂಡಿಗೆಯೊತ್ತಲ್ಲುಗತಂ (ಎಕ. V, ಚನ್ನರಾ.೧೪೮-೩೯; 1094); ಸುಗತರ್ ತಾವಾವಡೆಯೊಳ್ ಬಗುಳುತಮಿರ್ದಪರುಮೇಶಶರಣರ್ ಭರದಿಂ ಪುಗುತಂ ಧರಾ ತಳಕ್ಕಂ ದಿಗಿಲನೆ ಕಾಣುತ್ತೆ ಬೌದ್ಧರುರಿದುರಿದೇಳ್ದರ್ (ಹಾಲಾಸ್ಯ. ೪-೧೩-೬೭). [ಸಂ.]

ಸುಗತಮತ (ನಾ). ಬೌದ್ಧಧರ್ಮ; ಬೌದ್ಧಮತ: ಸುಗತಮತಕ್ಕೆಣೆಯನೆ ಶೌಚಗುಣಂ ಕ್ಷಣಿಕಂ ಸರ್ವಚಾರ್ವಾಕಮತಕ್ಕೆ ಗಡೆಣೆಯೆಂದೆನೆ ಪೆಂಡಿರ ನೆಗಳ್ತೆ ಪರಲೋಕಸೌಖ್ಯಘಾತುಕಮಲ್ತೇ (ಪಾರ್ಶ್ವಪು. ೩-೧೦೮). [ಸಂ.]

ಸುಗತಿ (ನಾ). ೧. ಒಳ್ಳೆಯ ನಡಗೆ; ಮೋಹಕವಾದ ನಡೆ: ಮಣಿನೂಪುರದ ಝಣಝಣನಿನದಯುತಸುಗತಿಗಳ ಯುವತಿಯರು . . . ಬಂದರು (ಬಸಪು. ೫-೨೪). ೨. ಒಳ್ಳೆಯ ಸ್ಥಿತಿ; ಸುಸ್ಥಿತಿ: "ತನುವಿನೊಳು ದ್ರವ್ಯದೊಳು ಮುಕ್ತಿಯೊಳು ಸುಗತಿಯೊಳ್ . . . ಯೋಗಮೆನಿಸಿಕ್ಕು" (ಮಂಗರಾ. ೧೫೦-೫೦); ನಿನ್ನ ಭಕ್ತಿಯದೆಂಬುದೆಮಗೆ ಸುಗತಿ[ಶಾಂಕಾಂ. ಸದ್ಗತಿ]ಗೆ ಪಥವಹುದೆ (ಬಸಪು. ೪೨-೮). ೩. ಸದ್ಗತಿ; ಮೋಕ್ಷ: ಸುಗತಿಗೆ ಭಕ್ತಿ ದುರ್ಗತಿಗೆ ನಿನ್ನ ಪದಪ್ರತಿಕೂಳವೃತ್ತಿ (ಮಲ್ಲಿಪು. ೧೨-೧೭೬); ಸುಗತಿಯ ಬಟ್ಟೆಯ ಮುಳ್ಳಳ್ . . . ಸುಗತಿಯ ಬಾಗಿಲ ಪಡಿಗಳ್ ಮೃಗಾಕ್ಷಿಯರ್ (ಧರ್ಮಪು. ೭-೧೫೮); ಅಲ್ಲಿ ವರ್ತಿಸುತಿರ್ಪ ಜೀವಿಗಳೆಲ್ಲರಿಗೆ ಕೊಟ್ಟನು ಸುಗತಿಯಂ (ಬಸಪು. ೨-೨೯). ೪. ನೃತ್ಯದ ಮನೋಹರವಾದ ಲಯ: ಚಿಂದುಗಳ ಜತಿಗಳ ಹಾರವಿಪ ಸುಗತಿಗಳೊಳಾಡುವ ಪೂರಿಸುವ ವೀಣಾದಿ ವಾದ್ಯಧ್ವನಿಗೆ ಕುಣಿವವರ . . . ಅತ್ತಲೊತ್ತರಿಸಿ (ಬಸಪು. ೫-೪೨). [ಸಂ.]

ಸುಗತಿವಡೆ (ಕ್ರಿ). ಮೋಕ್ಷವನ್ನು ಹೊಂದು; ಸದ್ಗತಿಯನ್ನು ಪಡೆ: ಸುಗತಿವಡೆವುದಿನ್ನೆಂತು ಕುಗತಿಗೆ ಸಲೆ ಸಲ್ಲೆನೆಂಬವೊಲ್ಮೆಲನಂ ನೆಟ್ಟಗೆ ಮೆಚ್ಚರೆ (ಶಾಂತೀಶ್ವ. ೧೩-೧೦೦).

[ಸುಗತಿ + ಪಡೆ$_1$]

ಸುಗಮ (ಗು). ೧. ಪ್ರಯಾಣ ಮಾಡಲು ಸುಲಭವಾದ,— ಸರಾಗವಾದ. ೨. ಸುಲಭವಾದ; ಸರಾಗವಾದ. ೩. ಸರಳವಾದ; ತಿಳಿಯಲು ಸಾಧ್ಯವಾದ: ಇಂತಿವಾದಿಯಾಗಿರ್ಪ ಶಬ್ದಂಗಳಂ ಸಮನಿಸಿದ ಪೂರ್ವಪ್ರಸಿದ್ಧಕವಿಗಳ ಸುಗಮವಾಕ್ಯಂಗಳಿಂದಱಿವುದು (ಕಬ್ಬಿಕ್ಕ. ೯೯). (ನಾ). ೪. ಸುಲಭವಾದುದು; ಸರಾಗವಾದುದು: ನಾವು ಯಾವ ಅವಸ್ಥೆಯಲ್ಲಿಯೇ ಇರಲಿ, ಆಗಿನ ಕರ್ತವ್ಯಗಳಲ್ಲಿ ನಿರತರಾದರೆ ನಮಗೆ ಮುಕ್ತಿಮಾರ್ಗ ಸುಗಮ (ಜೀವಾತ್ಮ. ೨೬೯);

ಬಸವಂತಿಯೇ ಆ ಕಂಟಕಮಯ ದಾರಿಯನ್ನು ಸುಗಮವಾಗಿಸಿದ್ದಳು (ದೀಪಜ. II, ೩೦೪). [ಸಂ.]

ಸುಗಮತೆ (ನಾ). ಸುಲಭ; ಸರಾಗ: ಕೆಲಸದಲ್ಲಿ ಯಾಂತ್ರಿಕ ಸುಗಮತೆ ಬಂದಿತು (ಗಂಮಾಯಿ. ೫೩). [ಸಂ. ಸುಗಮತಾ]

ಸುಗಮಸಂಗೀತ (ನಾ). ಸರಳವಾದ ಗಾಯನ; ಲಘುಸಂಗೀತ: ನಿನ್ನ ಜೀನಿನ ಮಾತು ಬಹು ಹಿತವಾಗಿದೆ ಸುಗಮಸಂಗೀತದ ಹಾಗೆ (ಚಂದ್ರವೀ. ೩೩-೩೨). [ಸಂ.]

ಸುಗಹನಾವೃತಿ (ನಾ). ಯಜ್ಞಯಾಗಾದಿಗಳು ನಡೆಯುವ ಸ್ಥಳದಲ್ಲಿ, ಅಪವಿತ್ರವಾದ ವಸ್ತುಗಳನ್ನು ತಡೆಗಟ್ಟಲು, ಸುತ್ತಲೂ ರಚಿಸಿರುವ ಆವರಣ. [ಸಂ.]

ಸುಗಾಯಕ (ನಾ). ಒಳ್ಳೆಯ ಸಂಗೀತಗಾರ; ಉತ್ತಮಗಾಯಕ: ತೀವಿದರು ಹೊಱವಳಯದಲಿ ನಾನಾವಿಧದ ನಾಟಕದ ನರ್ತನ ಭಾವಕದ್ರಾವಕ ಸುಗಾಯಕಮಲ್ಲ ಚಿತ್ರಕರು (ಕುವ್ಯಾಲ. ೧೨-೨೧). [ಸಂ.]

ಸುಗ್ಗಿ$_1$ (ಕ್ರಿ). ೧. ಸೀಳು; ಸಿಗಿ: ಇಂದಿವನ ಸುಗಿದು ತೋರಣಗಟ್ಟಸದೆ ಮಾಣೆನೆಂದು ಶಪಥವನೆ ಮಾಡಿದ ನೃಪನ ನುಡಿಗೇಳಿ (ಸಮ್ಕೃಕಾ. ೨-೯೨). ೨. ಸೆಳೆ; ಎಳೆ: ಬಸವಂ ತನ್ನ ಹೆಟ್ಟುಗೆಯುಟ್ಟುದಂ ಸುಗಿವುತ್ತಮಿರಲಾ ಹುಟ್ಟಿಗೆಯದೊಂದುಡಿಯೊಳಗಲದ ಮಿಗೆ ಬೆಳೆವುತಿರಲು (ಬಸಪು. ೧೧-೩೩); ತದಂಗನೆಯಾವರಣಾಲಂಕಾರಂಗಳಂ ಕಳೆದುಕೊಳ್ಳುದುಂ . . . ಪುಣ್ಯದ ಫಲದಿಂ ಪರಿಭಾವಕ್ಕೊಳಗಾಗದೆ ವಸ್ತ್ರಾಭರಣಂಗಳುಂ ಪೂರ್ವಕ್ರಮದಿನಿರೆ ಸೂಱೆ ಸೂಱೊಳ್ ಸುಗಿದುಕೊಳುತ್ತುಮವಱ ಪುನರ್ಭವಾಶ್ಚರ್ಯಮಂ ಕಂಡು (ಮಹಾನಂ. ೭-೩೭ ವ). ೩. (ಚರ್ಮ, ಮರಗಿಡಗಳ ತೊಗಟೆ ಇತ್ಯಾದಿಗಳನ್ನು) ಸುಲಿ,—ಎಡೆ: ಬಸಿಱ ಬಗಿಯುಗಿ ಕರುಳ ಸುಗಿ[ಪಾಠಾಂ. ನುಗಿ] ಚರ್ಮಮಂ (ಪಚಕಾ. ೬-೧೪); ಸುಗಿದ ಫಲ ಪುಂಡ್ರೇಕ್ಷುನಾನಾಭಕ್ಷಣಾದಿಗಳ . . . ಸಿಂಪುಗಳಿನೆಸೆದುದು ನೋಡೆ ವಾರವಧೂಟಿಕಾನಿಳಯ (ಬಸಪು. ೧೨-೧೧). ೪. ಸುಲಿದು ಹೋಗು; ಬಿರಿ: ತಳದ ಪದ್ಮಾಸನಂ ಸುಗಿದ ತೊಗಲಂಗದಿಂ ಮೊಳೆತ ಹುತ್ತ . . . ಮೆಱೆವ ಘೋರ ತಪದಚಲಿತರನೀಕ್ಷಿಸಿದಂ (ಪಚಕಾ. ೯-೩೫). ೫. ಹೊರತೆಗೆ: ಸೌನಂದಕವಂಬ ಖಂಡೆಯವಾ ಕುಂದಣದೊರೆಯಿಂದ ಸುಗಿದನು ಫಣೆ ಹೆರೆಯಿಂದುಟ್ಟ ನಿಮಿರಿದಂತಾಯ್ತು (ಭರಚ. ೪೬-೩೪). ೬. ಚೂರುಮಾಡು; ತುಂಡುಮಾಡು: ಜಲಚರಂಗಳು . . . ಸುಗಿದು ತನುವೆಲ್ಲವಂ ತೆಗೆಯೆ ಜಪಿಯಿಸುತಿರ್ದ (ರುದ್ರರ. ದೇ. ೨೦೯-೬). ೭. ತುಂಡಾಗು; ಚೂರಾಗು: ಸುಗಿದು ತತ್ಪರ್ವತದ ತರುಗಳು ಚಿಗಿದು ಹಾಯ್ದುವು (ತೂರರಾ. ೪-೧೨-೩೫). ೮. ಇರಿ; ತಿವಿ; ಚುಚ್ಚು: ಸುಗಿವೆ ಬೆನ್ನೊಳು ಕರುಳ ಪಾಸರೆಗೊಗವೆನು (ನಾಗಚ. ೯-೫೦). [ದೇ. ॥ ಕುರುಬ್. ಚೊಖ್ಖಾ; ಮಲ್ಲೂ. ಚೊಗೆ, ಚೊಗ್ರೆ]

ಸುಗ್ಗಿ$_2$ (ಕ್ರಿ). ೧. ಹೆದರು; ಭಯಪಡು: "ಸುಗಿ — ಭಯೇ" (ಶಮಧಾ); ಯಮಪುತ್ರ ಮರುತ್ಸುತ ಯಜ್ಞಸೇನರುದ್ಧತಬಳರೆತ್ತಿ ಕಾದಿ ಸುಗಿದೋಡಿದರ್ (ಪಂಪಭಾ. ೧೧-೧೨೫); ವಾರಾಶಿಯ ಮಣಿಗಣಮಂ ಕ್ರೂರಕುಳೀರಕ್ಕೆ ಸುಗಿದು ಸಾಂಯಾತ್ರಿಕನೇಂ ತಾರನೆ (ಪಂರಾಮಾ. ೧-೩೦); ಸಮರೋತ್ಸವಕೆ ಸುಗಿದು . . . ಬಂದನೆಂದರಿಯದಿರೊ! (ಚತ್ರಾಂಗ. ೭೯ ೨೧೬೧). ೨. ಹೆದರಿಸು; ಅಂಜಿಸು: ಇತ್ತಲ್ ಭೂತಳದೊಳ್ ಹಿಮಮೊತ್ತರಿಸಿತು ಭುವನಜನಮನುಱೆ ನಡುಗಿಸುತುಂ ಸುತ್ತುತ್ತುಂ ಸುಗಿಯುತ್ತುಂ . . . ಬಂದನಮಮ ಶಿಶಿರನೃಪಾಲಂ (ಗಿರಿಕ. ೯-೬೮). ೩. ಹಿಂಜರಿ; ಹಿಮ್ಮೆಟ್ಟು: ಮಂತ್ರಪದಕ್ಕುರಗಂ ಸುಗಿವಂತೆವೊಲಗಿದು ಸುಗಿದು ತಲೆಗರೆದಿರ್ಪಂ (ಪಂಪಭಾ. ೭-೪೩); ಮದದಾನೆಯೊಂದು ಕಂಡತಿಭಯದಿಂ ಗಿಱ್ಱನೆ ಪರಿತರೆ ಬಡಗಿಯು ಸುಱ್ಱನೆ ಸುಗಿದಂಜಿ ನಡುಗಿ ವನದೊಳಗೆಲ್ಲಂ ತಿಱ್ಱನೆ ತಿರಿತಂದು (ಧರ್ಮಾಮೃ. ೧೨-೧೫೫); ಅಂತು ದಾನವಾಂತಕನಿಸುವಮೋಘ ನಿಶಿತಸಾಯಕಸಂಹತಿಯ ಸಂಹೃತಿತ್ರಾಸದಿಂ ವಾಸವಂ ನಿಜಜನನೀಗರ್ಭಾವಾಸವಂ ಪುಗುವನೆಂಬಂತೆ ಸುಗಿಯೆಯುಂ (ಜಗಪ. ೧೩-೨೭ ವ). ೪. ಕುಗ್ಗು; ಕುಂದು: ಸುಖಂ ಸುಗಿದು ಪೊಯ್ಯಡೆದಂತೆ ಹಾವಗಿದು ಬಿಟ್ಟಂತೆ ಬಗೆ ಬೆದಱೆ . . . ಇನ್ನೇಗೆಯ್ವೆನೆಂದನು ಹರಿಶ್ಚಂದ್ರನು (ಪಚಕಾ. ೬-೪೪); ಚಿಂತಾತಂಕಕೊಳಗಾಗಿ ನಡತಂದು ಗಣನಿಕರಮಂ ಕೂಡಿದಂ ಸುಗಿದ ಸಂತಸದೊಳು (ನಂದಿಮಾ. ೯-೫೦); ಕಂದಿನೊಳ್ ಕಂದಿಯುಂ ಆಸವೆಯೊಳಸಕಳಿದುಂ ಸುಯ್ಯೊಳ್ ಸುಗಿದುಂ . . . ಪಶ್ಚಿಮಾನಿಲಂ ಮೈದೋಱಲೊಡಂ (ರಾಮಾಶ್ವ. ೨-೨೨). ೫. ಕುಸಿ; ಕೆಳಕ್ಕೆ ಸರಿ: ಕೇಸರಿ ವೋಲೆವಾಯ್ದುದಂ ಸುಗಿಯೆ ತಳಪ್ರಹಾರದೊಳ್ ಮಗ್ಗಿಪಂ (ಎಕ. VII, ೫ಕಾಂ. ೪-೮೫; 1122); ಧರೆಯಂ ಪೊತ್ತಿರ್ದ ಶೇಷಂ ಸುಗಿಯೆ ಭಯದಿನೋರೊರ್ವರಂ ತಾಗುವ . . . ಪೊಡಪ್ಪರ್ವಿಗೆಯಣಕಮಗುರ್ವದ್ಭುತಂ ದುರ್ನಿವಾರಂ (ಜಗವಿ. ೬-೬೪); ದೆಸೆಗಳೊಡನಾಕಂಪಂಗೇಳ್ವನ್ನಮಾದವು ಭೀತಿಯಿಂ ವಸು[ಧೆ ಸುಗಿಯಲ್ ಸಾರ್ದತ್ತಳ್ಳಿ]ತ್ತು ಯಾದವಸೈನ್ಯಮೇಸಸದಳಮಗುರ್ವಾಯ್ತೋ ಚಕ್ರಾಗಮಂ ಸಮರಾಗ್ರದೊಳ್ (ಬಂಜಿ. ೧೨-೬೭). ೬. ಬೋಲು; ಜೋತುಬೀಳು: ಕುಸಿದ ತಲೆ ಹಣುಗಿದೊಡಲರಳ್ಳ ಬಾಯ್ ಸುಗಿದ ತಿವಿ . . . ಎಸೆಯೆ (ಪಚಕಾ. ೫-೩೧). ೭. ಮುದುಡು: ಮುದುರು; ಮುಚ್ಚು: ಸುಗಿವುವು ತಿಗ್ಮದೀಧಿತಿಯೆ ಗೆತ್ತವನಂ ನಡೆ ನೋಡಿ ನೋಡೆ ದಿಟ್ಟಗಳಮೃತಾಂಶುವಂ (ವರ್ಧಪು. ೪-೩೩); ಸುಗಿದಿವೆ ಕಮಳಂ ಕುಮುದಂ ನಗುತಿವೆ (ಗಿರಿಕ. ೧-೧೧೧ ವ); ಪಟ್ಟಿನೀ ಯುವತಿಯರು ಮುಖ ಸುಗಿದು ಮಧುಕರಧ್ವನಿಗಳಿಂ ತವೆ ಪಲುಂಬುವೊಲೆಸೆದುದಿದುವೆ ವರ್ಷಾಕಾಲವಾಹಾಹ (ಭಾವಚಿಂ. ೬-೩). ೮. ಅಡಗು; ಉಡುಗು: ಜೀಯ ಪಸಾದಮೆಂಬುದುಂ ನೋಡಿದ ದೃಷ್ಟಿಗಳ್ಳೆ ಸುಗಿ[ಪಾಠಾಂ. ಪುದಿ, ಪುಗಿ] ದಿರ್ಪುದುಮಾದಮೆ ಮಾನಭಂಗಮಂ ಮಾಡೆ ಮನಃಕ್ಷತಕ್ಕಳವಿಗಾಣೆವು ನೋಡಿರೆ ಪಾಂಡುರಾಜ[ನಾ] (ಪಂಪಭಾ. ೬-೧೬); ಜಡರಳ್ಳಿ ಬಳ್ಳಿ ನಡನಡನಡುಗಿ ಸುರುಳ್ದುಗಿದು ಸುಗಿದು ಬಂದತಿಭಯದಿಂ (ಸುಕುಮಾ. ೨-೧೬). ೯. ಪರಿತಪಿಸು: ಇನಿತುಂ ಕಾಮನ ಬೇಳ್ಪೆಯೆಂದು ಸುಗಿದಳ್ ತನ್ವಂಗಿ ಬೆಳ್ದಿಂಗಳೊಳ್ (ಪಂಪಭಾ. ೪-೫೯); ಏಕೆ ಸುಗಿವೈ ನೀನಿಂತು ಮೇಧಾವಿಳಾ (ಕುಸುಮಾ. ೧೦-೫೩); ನಾನು ನಮ್ಮಕ್ಕನು ಸುಗಿದೆವು ಸುಯ್ದವು ಬಿಕ್ಕಿದೆವತ್ತವು ದಿನವು (ಇಂಬಾಪ. ೨೨-೯೯). ೧೦. ಬತ್ತಿ ಹೋಗು; ಒಣಗು: ದೇವ ವಿನಯೋತ್ಕರಂ ಸಸ್ಯಾವಳಿ ಸುಗಿದುಗಿದು ಕೂಡೆ ಬಾಡಿರ್ದುದು (ಆದಿಪು. ೧೦-೬೬). ೧೧. ದಣಿ; ಬಳಲು: ಸುಡುವುದರಾಗ್ನಿಯುಮೊಡಲಂ ಮಿಡುಕುವಿನಂ ಕಡಿವ ಕಟ್ಟಿಱುಂಪಗಳುಮದಾವೆಡೆಯ ನುರಿಸುವುದೂ ನರಕದ ಕಡುದುಃಖದೊಳಗಿದು ಸುಗಿದು ನಮೆದನಗೀಗಳ್ (ಆದಿಪು. ೫-೧೩); ಕೈಕಾಲ್ ಬೆಂದು ಸುಕ್ಕಿ ಸುಗಿದು ಮಡವಿಸುತರಳಿವುದನು ಕಣ್ಣಾರೆ ಕಂಡು (ಪಚಕಾ. ೧೦-೧೫); ನೆಱೆ ಸುಗಿದ ಹುಲಿಯಂತೆ ಬರಿಕ್ಕೆ ಮುಱಿಡ ಮದಗಜದಂತೆ . . . ಮೆಱೆದಿರೆ ನಮ್ಮ ಬಲವೆಂದ (ಕುವ್ಯಾಧೀ. ೭-೭).

ಸುಗ್ಗಿ$_3$ (ನಾ). ೧. ಭಯ; ಹೆದರಿಕೆ: 'ಸುಗಿಗೊಳ್' ಪರಾ. ೨. ಸುಲಿಗೆ; ಲೂಟಿ: "ಸುಲಿಗೆಯೊಳಂಜಕೆಯೊಳು ಸುಗಿ [ಪಾಠಾಂ. ಸುಗಿಯು]" (ಶಬ್ದಮಂ. ೮೧). [< ಸುಗ್ಗಿ$_1$]

ಸುಗ್ಗಿ$_4$ (ನಾ). ಸುಗ್ಗಿ (?): ಆಸಡಿಯ ಹಬ್ಬ ೯ ಹಾನೆ ಸುಗಿಯ ಕಂಬಳಿಕೆ ೨ ಎತ್ತು ೨ . . . ಹಾನೆ ತುಪ ಸುಗಿಯ ಕಂಬಳಕೆ ೨ ಎತು (ಸೌಇ. ೧೯೩೨. ಉಡುಪಿ. ೩೩೬-೨೧; 1281); ನಾನು ಮೂಲವ ಮಾಡಿಕೊಂಡ ಮೇಲನೂರ ಪೊಂದರ್ದ್ರ ಸುಗಿ ಮಕ್ಕಿಯ ಗದ್ದೆ ಗಡಿ ಮೂಡಲು ಗಂಟ್ಟ ನಡವ ಹಾನಬ್ಬೆಯಲ್ಲಿ ನಟ್ಟ ಕಲ್ಲು (ಎಕ VIII. ಸಾಗರ. ೫೭-೧೫; 1562). [< ಸುಗ್ಗಿ?]

ಸುಗಿಗೊಳ್ (ಕ್ರಿ). ಭಯಗೊಳ್ಳು; ಹೆದರು: ಹಗರಣ ಬಂದುದು ಜಗಕೆಂದು ಹಮ್ಮೈಸಿ ಸುಗಿಗೊಂಡು ಹಳವಳಿಸಿದುದು (ಗೊಮ್ಮಟ. ೫-೬೨). [ಸುಗ್ಗಿ$_3$ + ಕೊಳ್$_1$]

ಸುಗಿತ (ನಾ). ಭಯ; ಹೆದರಿಕೆ: ಸುಗಿತಂ, ಸುಗಿತಂಗಳ್ (ಶಬ್ದಾನು. ೫೫೪ ಪ್ರಯೋ). [ಸುಗ್ಗಿ$_3$ + - ತ$_2$]

ಸುಗಿಯ 'ಸುಖಿ$_1$' ನೋ.

ಸುಗಿಯಿಸು, ಸುಗಿಸು (ಕ್ರಿ). ೧. ಕುಗ್ಗಿಸು; ಕುಗ್ಗಿಹೋಗುವಂತೆ ಮಾಡು: ನಗಂಗಳೇಱುಮಂ ನೆಗಪಲೊಡರ್ಚುವುಜ್ಜ್ವಳದ ತೋಳ್ಕಲಮಾ ನೆಗಟ್ಟರ್ಕಬಿಂಬಮಂ ಸುಗಿಯಿಪ ತೀವ್ರತೇಜಮಿವು ತನ್ನೊಳೆ ಸಮ್ಮತಮಾದುವು (ಎಕ. V, ಅರಸೀ. ೬೨-? ; 1177). ಸುಗಿಸು: ೨. ಹೆದರಿಸು; ಅಂಜಿಸು: ಬಿಟ್ಟ ಕಣೆ . . . ಬಿಡದೆ ನೋಟಕಜನವನು ಅಟ್ಟಿ ತತ್ಪುರಿಗಳಂ ಪುಗಿಸಿದುವು ಸುಗಿಸಿದುವು (ಚಿಬಪು. ೪೩-೧೮). [ಸುಗ್ಗಿ$_2$ + - ಇಸು$_3$]

ಸುಗಿವಡೆ (ಕ್ರಿ). ಸುಲಿಗೆಗೊಳಗಾಗು; ಲೂಟಿಗೊಳಗಾಗು: ಮತ್ತೂರ್ವಂ ಚೋರರಿಂದೆ ಸುಗಿವಡೆದಳಿವನಿತ್ತಱೊಳ್ . . . ಸೊಣಗನಾ ಸ್ಮಶಾನಭಸ್ಮದೊಳೊಂದಿ ಬಂದವನ ಪಣೆಯ ಮೆಟ್ಟಿ ಅತ್ತಲೆಯ್ದಲ್ (ಪದ್ಮರಾ. ೧೧-೧೩೪). [ಸುಗ್ಗಿ + ಪಡ$_1$]

ಸುಗಿಸು 'ಸುಗಿಯಿಸು' ನೋ.

ಸುಗುಂಟುತನ 'ಸುಗುಡುತನ' ನೋ.

ಸುಗುಡ (ನಾ). ೧. ಚತುರ; ಜಾಣ: ಸುಗುಡ ಸುವಿದ್ಯರ್ಗಿತ್ತ ಧನಂ ತನ್ನದು (ನೀತಿಸಾ. ೧೯೩). ೨. ವಿಷಯಾಸಕ್ತ; ರಸಿಕ: ಲಲನೆಯರನೊಡಗೂಡುತ್ತ ರಮಣಂಗಳಲ್ಲಿ ಬಡಿಹೋರಿಯಾಗುತ್ತ ಲಿಂಗವನಱಿದೆನೆಂಬ ಸುಗುಡರ ನೋಡಾ (ವೋಳಿವಾ. ೨೫-೯೯); ಬಗೆಯಱಿದೊಲ್ಲ ಮರಲ್ಲ ಕಾತರಿಸುವ ಸುಗುಡ [ಪಾಠಾಂ.ಣ]ನೆಲ್ಲಿದನೆಂಬಳೆನ್ನ (ಕುರಾಸಾಂ. ೨೮-೧೦೦); ಸವಿನುಡಿಯ ಸೊಗಸಿನೊಳ್ಸುಗುಡ [ಪಾಠಾಂ. ಣ]ರಡಿವಿಡದಂತೆ ತಗುವ ಜಾರಾನಿಕರವರ್ಪರ್ವಿಚಿತ್ರದಿಂ ಸೊಗಸಿನಿಂದ (ಏಕೋಪು. ೪-೬೦). (ಗು). ೩. ಚಾತುರ್ಯದಿಂದ ಕೂಡಿದ; ಕೌಶಲವನ್ನು ಹೊಂದಿದ: ಸುಗುಡ ತುಂಬುರ ನಾರದರ ಗಾನರಸವೆಯ್ದೆ ಸೊಗಸ ಬೀಱಲು (ಸೌಂದಪು. ೧೬-೫೪); ಮಿಗೆ ತೇಪು ಮಾಡದಿಹನರ್ಘ್ಯರತ್ನಗಳವೋಲ್ಸುಗುಡ ಪದ್ಮಿನಿ ಬೀಗಮುದ್ರೆಯೋಳ್ ಕುಳಿತವೊಲ್ . . . ದ್ರಾಕ್ಷಾಸುಪಾಕಗಾವ್ಯಂ (ಏಕೋಪು. ೪-೮೩).

[<— ಮರಾ. ಸುಗಡ, ಸುಗಡಾ./ ತೆಲು. ಸುಗ್ಗಡಿ = ನೀತಿಬಾಹಿರನಾದವನು]

ಸುಗುಡಿ (ನಾ). ವಿಲಾಸಿನಿ; ವೇಶ್ಯೆ: ಕಕ್ಕೆಯದು ಕಹಿಗಾಯಿ ಬಿಕ್ಕೆಯದು ಹುಳಿಗಾಯಿ ಸೊಕ್ಕಿ ಸುಗುಡಿಗೆ ಹಾಱೆ ಹೋಹುದರಿಂದ ಸಕ್ಕರೆಯನುಣ್ಣೊ (ಸರ್ವಜ್ಞ. ೧೭೯೬).

[ಸುಗುಡ + -ಇ$_2$]

ಸುಗುಡುತನ, ಸುಗುಂಟುತನ (ನಾ). ೧. ಜಾಣ್ಮೆ; ಚಾತುರ್ಯ: ಮಾಯೆಗಳ ಮದ್ದುಗಳಂ ಮಱಹುಗಳ ಸೊಕ್ಕನಿಕ್ಕಿಸಿ ಸುಗುಡುತನ [ಪಾಠಾಂ. ಗಂಡುತನ, ಸುಗುಡತನ] ಮಱೆದು (ಬಸಪು. ೪೨-೧೭); ಪಗಡೆಯಲ್ಲಿ ಪತ್ತಿಸುತೆ ಸುಗುಡುತನಮಂ ಪುದಿದ ಚತುರಂಗದತ್ತ ಚದುರಂ ಪೊದೆಯಿಸುತೆ . . . ಏಸೆದುದಬಲಾಜನಂ (ಪದ್ಮರಾ. ೮-೮೮). ೨. ವಿಷಯಾಸಕ್ತಿ; ಬಯಕೆ: ಮೊರೆವ ತುಂಬಿಯ ಸುಗುಡುತನ [ಪಾಠಾಂ. ಸುಗುಡತನ] ತಾವರೆಯೊಳೆಸದುದು ಶರದಸಮಯದಲಿ (ಕುವ್ಯಾಲ. ೧೪-೩). **ಸುಗುಂಟುತನ**: ೩. ಧೂರ್ತತನ; ಕಪಟಿ: ತನ್ನಜ್ಞತೆಗೆಯವನ ಸಿಕ್ಕು ಸುಗುಂಟು [ಪಾಠಾಂ. ಸುಗಂಟು]ತನಕೆ ತಾನೇ ನಾಣ್ಟೆ ವಿಮಲದಾಸಂ ತನ್ನ ಮನದೊಳೆಣಿಸುತ್ತಿರಲ್ (ಸಮ್ಯಕ್ತ. ೯-೨೬).

[ಸುಗುಡ್ಡು + -ತನ]

ಸುಗುಡೆ (ನಾ). ಜಾಣೆ; ಚತುರೆ: ಸುಗುಡೆ ರತಿಮಂಗಲೆಯನೇಕಸತಿಯರುವರಸಿ . . . ಸೊಗಯಿಪ ಬಳಲ್ಮುಡಿಯೊಳಾಮೋದವಿಡಿದ ಬಿರಿಮುಗುಳ ಮುಡಿಸಿದಳು (ಸೌಂದಪು. ೧೩-೩೬). [ಸುಗುಡ + -ಎ$_2$]

ಸುಗುಣ (ಗು). ೧. ಒಳ್ಳೆಯ ಗುಣಗಳಿಂದ ಕೂಡಿದ; ಗುಣಸಂಪನ್ನವಾದ. (ನಾ). ೨. ಒಳ್ಳೆಯ ಗುಣ; ಸದಾಚಾರ: ಪರಮಗುರು ಪರತಂತ್ರ ನಿರ್ಭರಚರಿತ ಸುಗುಣೋದ್ಯುಕ್ತ . . . ಮಹಿಮಾಸುಗುಣ ಗುರುಭಕ್ತ (ಬಸಪು. ೩೯-೬೯); ಸುಗುಣೋದ್ರೇಕಕೆ ಕರ್ತು ವೀರಚಿಕದೇವಂ ಬೀಣೆಯಂ ಲೀಲೆಯಿಂ ತೆಗೆದುತ್ಸಂಗದೊಳಿಟ್ಟು ನೇವರಿಸಿ (ಚಿಕವಿ. ೪-೧೩೨). ೩. ಒಳ್ಳೆಯ ಗುಣಗಳಿಂದ ಕೂಡಿರುವವನು; ಗುಣಸಂಪನ್ನ: ಮಿಗೆ ಕಾತರವ ಪುಟ್ಟಿಸುವ ಸುಗುಣನ ಸೋಂಕದವಳ ಜನ್ಮ ಸೊಗಸಲ್ಲ (ಕುರಾಸಾಂ. ೨೨-೨೫); ಮಲ್ಲಱಿಗಾರ್ತಿಯೆನೆ ಸುತ್ತಿಬರ್ಪಾಕೆಯೆಂದು ಪೇಟ್ಟರ್ ಸುಗುಣರು (ಕಬ್ಬಿಕೃ. ೨೬); ಸುಗುಣನಾವನು ಸುಚರಿತ್ರನಾವನು . . . ಎಂದು ಬಗೆದು ಭಾವಿಸಿ ಪಣ್ಣನೀವುದು (ಹದಿಬ. ೫-೧೫).

ಸುಗುಣಗಂಭೀರ = ಒಳ್ಳೆಯ ಗುಣ ಮತ್ತು ಗಾಂಭೀರ್ಯಗಳಿಂದ ಕೂಡಿದವನು; ಒಂದು ಬಿರುದು: ಚಾಮರಾಜಒಡೆಯರು ವೆಂಕಟಾದ್ರಿನಾಯಕನು ಒಪ್ಪಿಸಿಕೊಂಡಿದ್ದ "ಸುಗುಣಗಂಭೀರ"ನೆಂಬ ಬಿರುದನ್ನು ತಾವೇ ವಹಿಸಿದರು (ಒಡೆ. ೧೦); ಸುಗುಣಗಂಭೀರಾದಿ ಬಿರುದಾಂಕಿತ ರೇಮಟಿ ವೇಂಕಟಾದ್ರಿ ನಾಯಕಕೃತ ವಿಜ್ಞಾಪನಾ (ಸುಗುಗಂ. ೫೩-೯). [ಸಂ.]

ಸುಗುಣಾಪೋಹ (ನಾ). [ಕಾವ್ಯಮೀ] ಅಪಹ್ನುತಿ ಅಲಂಕಾರದ ಒಂದು ಪ್ರಭೇದ: ಸ್ಮರನೈದಂಬುಗಳಲ್ಲಿವು ಶರಕೋಟಿಗಳಿಲ್ಲದಾಗಳಿಂತೀ ಲೋಕಾಂತರವರ್ತಿ ವಿರಹಿಗಣಮಂ ನಿರುತಂ ಮರ್ದಿಸುವುವೆನೆ ಸುಗುಣಾಪೋಹಂ (ಕವಿರಾ. ೩-೧೮೬).

[ಸಂ.]

ಸುಗುಣಿ (ನಾ). ಒಳ್ಳೆಯ ಗುಣದಿಂದ ಕೂಡಿರುವವಳು; ಸದಾಚಾರಸಂಪನ್ನೆ: ಅರಳಿಯ ಮರದಂತೆ ಮೊರೆವಾಕೆ ಸುಗುಣಿಯೆ (ಸರ್ವಜ್ಞ. ೧೮೩೫).

[ಸುಗುಣ + -ಇ$_2$./ ಸಂ. ಸುಗುಣೀ]

ಸುಗುಣೆ (ನಾ). = ಸುಗುಣಿ: ಸುಗುಣೆ[ಪಾಠಾಂ. ಣಿ] ನಿನಗನಿಮಿತ್ತವೀಗಳು ಮೃಗನಯನೆ ನೀನೆನ್ನನೀಕ್ಷಿಸಿ ಮುಗುಳುನಗೆಯುಂ ಚಿಂತೆಯುಂ ನಿನಗೇಕೆ ಬೇಳೆನಲು (ಬಸಪು. ೪೧-೫); ಇನಿಯನ ಬಗೆಯ ತಿಳಿದು ಬಂದಿಗೊಂಬ ಸುಗುಣೆಯಲಿಹಪರದೊಳು ಸೂಱೆಗೊಂಬರು ಸೊಗದ ಸುಗ್ಗಿಯ ಸುಲಭದೊಳು (ಹದಿಬ. ೮-೫೦); ಸುಗುಣೆ ನಿನಗುಚಿತಮಲ್ತೀ ಬೆಗಡು (ಚಿಕವಿ. ೩-೩೩). [ಸಂ ಸುಗುಣಾ]

ಸುಗುರ್ (ಕ್ರಿ). ಸಡಿಲಗೊಳ್ಳು; ಜಾರು: ಪೊಗರ್ದವುರುಹರೆಗಲ್ದಯಲರಿಂ ಸುಗುರ್ದ ಚೇಲಮದೊಗರ್ದ ಕರ್ದಮ (ನಾಗವ. ೭-೨೨).

[?./ ತುಳು. ಸುಗುರು = ಸುರುಳಿ ಬಿಚ್ಚು]

ಸುಗೋತ್ರ (ನಾ). ೧. ಶ್ರೇಷ್ಠವಾದ ವಂಶ; ಸತ್ಕುಲ. ೨. ಶ್ರೇಷ್ಠವಾದ ಪರ್ವತ. ೧, ೨: ಕೃತ ಪದ್ಮಾನಂದನಾಲಂಬಿತರುಚಿವಿಭವಂ ಮಂಡಲಂಗೊಂಡು ಧಾತ್ರೀಪತಿ ಮಾರ್ತಾಂಡ ಸುಗೋತ್ರಸ್ಥಿತನೆಸೆಯೆ (ರಾಜಶೇ. ೫-೧೪). [ಸಂ.]

ಸುಗೋಮಯ (ನಾ). ಒಳ್ಳೆಯ ಸಗಣಿ; ಶುದ್ಧವಾದ ಗೋಮಯ: ಅಮಳಾಂಬುವಂ ತಾಂ ಪೊತ್ತು ತಂದು ಸುಗೋಮಯದಿ ಬೆರಸುತ್ತ ಶೋಧಿಸಿ ಸಾರಿಸಿದನಾದೇಗುಲವನೆಲ್ಲ (ಬಸಪು. ೧೮-೩೪). [ಸಂ.]

ಸುಗ್ಗಗಾವುಂಡ (ನಾ). ಒಬ್ಬಾತನ ಹೆಸರು: ಸುಗ್ಗಗಾವುಣ್ಣನ ಮಗ ಬಸವ (ಎಕ. V, ಅರಸೀ. ೧೭೫-೨; 908). [ಸುಗ್ಗ್ಯ + ಗಾವುಂಡ (< ಗಾಮುಂಡ)]

ಸುಗ್ಗಿ (ನಾ). ೧. ಬೆಳೆಯನ್ನು ಕೊಯ್ಯುವ ಕಾಲ; ವಸಂತಕಾಲ: "ಬಸಂತಂ, ಸುಗ್ಗಿ, ಹೂವಿನ ಹಬ್ಬಂ- ಈ ೩ ವಸಂತಂ" (ಕಶಾಸಾ. ೫೪-೧೭೨); ಸ್ವಸ್ತಿಶ್ರೀ ವಿಕ್ರಮಾದಿತ್ಯರಸಂ . . . ಸುಗ್ಗಿಯುಳ್ಳನ್ನು ಪೊನ್ನಿಟ್ಟು ಧರ್ಮ (ಮೈಆರಿ. ೧೯೩೩, ೫೯-೨; 800?); ಕಾವ್ಯಬಂಧಮೊಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಲಲ್ದು ತುಂಬಿಗಳೆನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (ಪಂಪಭಾ. ೧-೮); ಇಂತಿದೆ ಬಂದುದು ಸುಗ್ಗಿ (ಕಬ್ಬಿಕಾ. ೬೩); ಸುಗ್ಗಿಯ ಸಿರಿಯ ಹೊಸಬೆಳುದಿಂಗಳನು ಬಲುಮುಗಿಲು ಕವಿವಂತೆ (ಕುವ್ಯಾಸ. ೧೪-೫೧). ೨. ಹಬ್ಬ; ಪರ್ವ: "ಸುಗ್ಗಿಯೆನಲ್ ಹಬ್ಬಮೆಂದು ತಿಳಿಗೆ" (ಭಾರಾ. ೧೭); ಇದಕೊ ಸಾವಿನ ಸುಗ್ಗಿ ನಿನಗನುತೆಚ್ಚನಿಂದ್ರಾರಿಯನು ಸೌಮಿತ್ರಿ (ತೊರರಾ. ೬-೪೪-೧೩). ೩. ಹೆಚ್ಚಳ; ಸಮೃದ್ಧಿ; ಆಧಿಕ್ಯ: "ಸುಗ್ಗಿಯೆನಲ್ ಬಹಳಮೆಂಬುದು" (ಚಕುಸಿ. ೧೫೦); ಬಾಳಚಕೋರಮಾಗಿ ಬೆಳ್ದಿಂಗಳ ಸುಗ್ಗಿಗಂಡುವು ಕುಮಾರನ ಕಾಂತಿ ಮುಖೇಕ್ಷಣಂಗಳೊಳ್ (ಅರ್ಧನೇ. ೨-೩೫); ನೆನಹು ನಿಲುಕದ ಸುಖದ ಸುಗ್ಗಿಯಂ ಸವಿದನೀಶನ ಕುಮಾರಂ (ಸಿದ್ಧರಾ. ೨-೧೭); ಕಡಲಿಡುವ ರಕುತದ ಸುಗ್ಗಿ ಶಾಕಿನಿಯರಿಗೆ ಸೇರಿತು (ಕುವ್ಯಾಭೀ. ೪-೯). ೪. ಸಮೃದ್ಧಿಯ ಕಾಲ; ಹೆಚ್ಚಳದ ಕಾಲ: ಪೊಸತೆನಿಸಿರ್ಪ ಜವ್ವನದ ಸುಗ್ಗಿ ವಿವೇಕದ ಜನ್ಮಭೂಮಿ . . . ಕುಸುಮಶರಾಧಿದೇವತೆಯವೊಲ್ ಪರಿರಂಜಿಪ ರೂಪಮಾಕೆಯಾಗಸೆವುತಮಿರ್ದಳ್ (ಜಾಧಪು. ೬-೫೪); ಮಾವಿನ ಹಣ್ಣಿನ ಸುಗ್ಗಿಯಲ್ಲಿ ಭಟ್ಟರ ಮನೆಯ ಮುಂದೆ ಚಿಕ್ಕಮಕ್ಕಳ ಗುಂಪೇ ನೆರೆಯುತ್ತಿತ್ತು (ಹಬ್ಬಿಬ. ೭೭). ೫. ಪ್ರಾಯ; ಯೌವನ: ಎಡ್ಡಮಾದೊಡಲಿಂದ ಸುಗ್ಗಿಯಿಂ ಚೆಲ್ವಡೆದ ದೊಡ್ಡನೆಂಬವನೊಬ್ಬನಲ್ಲಿ ಬಂದಿರ್ದಂ (ಕಾಲೂರ. ೪೧-೫೦). ೬. (ಕರಾ) ಬತ್ತದ ಎರಡನೆ ಬೆಳೆಯ ಗದ್ದೆ: ಈ ವರ್ಷ ನಾವೇ ನಾಲ್ಕು ಮುಡಿ ಸುಗ್ಗಿ ಮೂರು ಮುಡಿ ಮಜಲನ್ನು ಸಾಗುವಳಿ ಮಾಡಿಸಿದೆವು (ಮುಗಿಯು. ೧೫೧).

ಸುಗ್ಗಿಯ ಕಣ = ಬೆಳೆಯನ್ನು ಕಟಾವು ಮಾಡಿ ಒಟ್ಟಿರುವ ಕಣ; ಒಕ್ಕಣೆಯ ಸ್ಥಳ: ಎಲ್ಲ ಜನರೂ ಸುಗ್ಗಿಯ ಕಣಕ್ಕೆ ಭಿಕ್ಷಕ್ಕೆಂದು ಹೋಗುವದು ಬೆಳುವಲದ ಎಲ್ಲ ಹಳ್ಳಿಗಳಲ್ಲಿಯೂ ಪ್ರತ್ಯಕ್ಷ ಕಾಣಬಹುದು (ಕನ್ನಜಾ. ೧೩೧). **ಸುಗ್ಗಿಯ ಕುಣಿತ** = ಸುಗ್ಗಿಯ ಕಾಲದಲ್ಲಿ ಕುಣಿಯುವ ಕುಣಿತ: ಈ ಧ್ವನಿಯನ್ನು ಕೇಳಿದ ಕೂಡಲೇ ಗ್ರಾಮದ ಜನರು ಸುಗ್ಗಿಯ ಕುಣಿತವನ್ನು ಎದುರುಗೊಳ್ಳಲು ಅಣಿಯಾಗುತ್ತಾರೆ (ಕಜಕ. ೧೭೧). **ಸುಗ್ಗಿಯ ಗದ್ದೆ** = ಬತ್ತದ ಎರಡನೆ ಬೆಳೆಯ ಗದ್ದೆ: ಏನಿಲ್ಲದೆ ಹೋದರೆ ಮಜಲುಭೂಮಿಯನ್ನು ಸುಗ್ಗಿಯ ಗದ್ದೆಯಾಗಿ ಮಾಡಬಹುದು (ಮುಗಿಯು. ೧೫೩). **ಸುಗ್ಗಿ ಹೊರಡಿಸು** = ಉತ್ಸವ ಮಾಡಿಸು: ಗ್ರಾಮಗಳಲ್ಲಿ 'ಸುಗ್ಗಿ'

ಹೊರಡಿಸುವುದರಿಂದ ರೋಗರುಜಿನಗಳು ತೊಲಗುತ್ತವೆ (ಕಜಕ. ೧೭೩).

[ದೇ. ॥ ತುಳು. ಸುಗ್ಗಿ]

ಸುಗ್ಗಿಕಾಲ (ನಾ). ೧. = ಸುಗ್ಗಿ ೧: ಸುಗ್ಗಿಕಾಲದಲ್ಲಿ ನುಗ್ಗ ತಿಂದರೆ ಕಾತಿಕೆಕಾಲದಲ್ಲಿ ಜಗಲಿ ತಿಂದಾನೆ? (ಗಾದೆ). ೨. ಸಮೃದ್ಧಿಯ ಕಾಲ: ಸುಗ್ಗಿಕಾಲದಲ್ಲಿ ಬಹಳವಾಗಿ ಸಿಕ್ಕುವ ಆಹಾರಪದಾರ್ಥಗಳನ್ನು ಗೃಹಿಣಿಯರು ಅಗ್ಗವಾಗಿ ಕೊಂಡು ಅವನ್ನು ಕೆಡದಂತೆ ಕೂಡಿಟ್ಟರೆ ತಮ್ಮ ಕುಟುಂಬಗಳಿಗೆ ಅವನ್ನು ಇಷ್ಟಪಟ್ಟಾಗ ಒದಗಿಸಬಹುದು (ಗೃಹವಿ. ೫೫).

[ಸುಗ್ಗಿ + ಕಾಲ]

ಸುಗ್ಗಿಗಂಪು (ನಾ). ಪರಿಮಳದ ಅತಿಶಯ: ಕಾವನ ದಾಟಿಗಳ್ಕುವಡವೋಪರ ಸುಯ್ಯಳ ಸುಗ್ಗಿಗಂಪಿನೊಳ್ ತೀವಿ ಪೊದಟ್ಟು ತೇಂಕುತೊಲವಿಂದಿದರ್ವಂದುದು ಮಂದಮಾರುತಂ (ಚಕವಿ. ೬-೩೩). [ಸುಗ್ಗಿ + ಕಂಪು]

ಸುಗ್ಗಿಗೆಳೆಯ (ನಾ). ವಸಂತನ ಸ್ನೇಹಿತ; ಕಾಮ; ಮನ್ಮಥ: "ಇಂಗೋಲ್ವಿಲ್ಲಂ . . . ಸುಗ್ಗಿಗೆಳೆಯಂ . . . ಅಯ್ಯರಳಂ, ಗಿಳಿದೇರಂ — ಇವು ೧೩ ಕಾಮದೇವಂಗೆ ಪೆಸರ್" (ಕಶಸಾ. ೪೭-೧೩). [ಸುಗ್ಗಿ + ಗೆಳೆಯ (< ಕೆಳೆಯ)]

ಸುಗ್ಗಿದಾಸೋಹ (ನಾ). ಬೆಳೆಗಳನ್ನು ಕೊಯ್ಯುವ ಕಾಲದಲ್ಲಿ ನಡೆಸುವ ಆರೋಗಣೆ,—ಸಂತರ್ಪಣೆ: ಇಳಿಹಾಳ ಬೊಮ್ಮಯ್ಯ, ಹೊಲಗೆಲಸಕಾಯಕವ ನಲುಮೆಯಲಿ ಸುಗ್ಗಿದಾಸೋಹ ಹರಸೇವೆ ಸಲಿಸಿ ಲಿಂಗದೊಳು ಬಯಲಾದ (ಕನ್ನಜಾ. ೧೩೧). [ಸುಗ್ಗಿ + ದಾಸೋಹ]

ಸುಗ್ಗಿದೋರು (ಕ್ರಿ). ಹೆಚ್ಚಾಗಿ ಕಾಣಿಸಿಕೊಳ್ಳು; ಅತಿಶಯವಾಗು: ಎಳೆಯ ತಳಿರ ಹೊಳೆವ ತಳಿರು ನುಣ್ದಪನು ಚುಂಬಿಸೆ ಸುಖದ ಭಾವ ಸುಗ್ಗಿದೋರಿ ತಳಿರು ಮುಖದಿ ಬಿಂಬಿಸೆ (ಕವಿಸೂ. ೨೩-೧೧). [ಸುಗ್ಗಿ + ತೋರು (< ತೋಱು)]

ಸುಗ್ಗಿವಕ್ಕಿ (ನಾ). ವಸಂತಕಾಲದ ಕೋಗಿಲೆ: "ಪಡಿಯಱವಕ್ಕಿ . . . ಸುಗ್ಗಿವಕ್ಕಿ ಪರಪುಟ್ಟಂ — ಈ ೫ ಪಿಕಂ" (ಕಶಸಾ. ೫೫-೨೦೫). [ಸುಗ್ಗಿ + ಪಕ್ಕಿ]

ಸುಗ್ಗಿವಡೆ (ಕ್ರಿ). ಸಮೃದ್ಧಿಯನ್ನು ಹೊಂದು; ಆಧಿಕ್ಯವನ್ನು ಹೊಂದು: ಸುಮನೋಗೃಹದೊಳ್ಪುಸಿಕರ ಶಿವಪತಿಯೊಳೊಡವೆರೆದಕಳಂಕಂ ಸುಖದ ಸುಗ್ಗಿವಡೆ ದಿರ್ದಪನೋ (ವ್ಯಪವಿ. ೨೩-೧೮). [ಸುಗ್ಗಿ + ಪಡೆ$_1$]

ಸುಗ್ಗಿವೆಱು (ಕ್ರಿ). = ಸುಗ್ಗಿವಡೆ: ಭೂಗ್ಗನಯ್ಯನ ಕಾಣಲೊಡನೆ ರೋಮಾಂಚದ ಸುಗ್ಗಿವೆತ್ತಣುಗರೆಯ್ದುದರು (ಭರಚಿ. ೫೮-೪೯). [ಸುಗ್ಗಿ + ಪೆಱು$_1$]

ಸುಗ್ರಾಸಭೋಜನ (ನಾ). ರುಚಿಕರವಾದ ಭೋಜನ; ಭರ್ಜರಿಯಾದ ಊಟ: ಅಮಲದಾರರಲ್ಲ . . . ಸುಗ್ರಾಸಭೋಜನ ಮಾಡಿದರು (ಗಂಮಾಯಿ. ೧೯೦); ದಾಮೋದರನಿಗೆ ಈ ದಿನ ಸುಗ್ರಾಸಭೋಜನವಾಯಿತು (ಚಿವಿರಾ. ೨೧೫). [ಸಂ.]

ಸುಗ್ರೀವ (ಗು). ೧. ಸುಂದರವಾದ ಕತ್ತನ್ನು ಹೊಂದಿದ; ಚೆಲುವಾದ ಕಂಠವುಳ್ಳ. (ನಾ). ೨. ಸುಂದರವಾದ ಕಂಠ; ಚೆಲುವಾದ ಕುತ್ತಿಗೆ: ಸಲ್ಲಸದ್ರಂಡಮಾಲಾಕಲಿತಮಾದ ಸುಗ್ರೀವದಿಂದ . . . ಸಿಂಹಾಸನಾಗ್ರದೊಳು ಕಣ್ಮೊಳಿರ್ದನು (ನಂದಿಮಾ. ೫-೮). ೩. (ಕಿಷ್ಕಿಂಧೆಯ ರಾಜನಾದ) ಕಪಿಗಳ ನಾಯಕನೊಬ್ಬನ ಹೆಸರು; ವಾಲಿಯ ಸಹೋದರ: ಬಂಧುಜನಂಗಳುಂಬೆರಸು ಸುಗ್ರೀವಂ ನಿಜಾಸ್ಥಾನಮಂಡಲದೊಳ್ ಕಿಂಕರಭಾವದಿಂದಿರೆ (ಪಂರಾಮಾ. ೧೦-೬೧); ಸುಗ್ರೀವನಂತ ನಿನ್ನ ಲೆಕ್ಕಿಸದಿರಬೇಕು (ಪುರಂದ. ಧಾ. ೩-೧೦೩-೪). ೨, ೩: ಮತ್ತಮಾ ತರುಣಿ . . . ಸುಗ್ರೀವಾಭಿರಾಮಯಾಗಿಯುಮಲಂಕಾರಾತಿಶೋಭಿತೆಯುಂ (ರಾಜಶೇ. ೭-೬೧ ವ). ೪. ಕೃಷ್ಣನ ನಾಲ್ಕು ಕುದುರೆಗಳಲ್ಲಿ ಒಂದು: ಈ ರಥಕ್ಕೆ ಬಲಗಡೆಯಲ್ಲಿ ಕಟ್ಟಿರುವ ಕುದುರೆ ಸುಗ್ರೀವವೆಂಬ ಕುದುರೆಗೆ ಸದೃಶವಾದದ್ದು (ವಚಭಾ. ೨೦೮). [ಸಂ.]

ಸುಗ್ರೀವಾಜ್ಞೆ (ನಾ). ೧. ಸುಗ್ರೀವನೆಂಬ ಕಪಿನಾಯಕನ ಕಟ್ಟಪ್ಪಣೆ,— ಆದೇಶ: ಮೂಱುದಿನದೊಳಗವನಿಜೇಶನ ಚರಣಸರಸಿರುಹವನು ಕಾಣಲು ಬೇಕು ಸುಗ್ರೀವಾಜ್ಞೆಯಿದು ನಮಗೆ (ತೂರರಾ. ೪-೧೨-೧೬). ೨. (ಆಲಂ) ವಿಶೇಷ ಸಂದರ್ಭದಲ್ಲಿ ತುರ್ತಾಗಿ ಹೊರಡಿಸುವ ಅಧಿಕೃತ ಆಜ್ಞೆ: ದಿನಕ್ಕೊಂದರಂತೆ ಆರ್ಡಿನೆನ್ಸಿನ ಸುಗ್ರೀವಾಜ್ಞೆಗಳನ್ನು ಜಾರಿಗೆ ತಂದರೂ ಜನರು ಮಣಿಯದಾದರು (ಕುಯಾ. ೧೩೩).

[ಸಂ. ಸುಗ್ರೀವಾಜ್ಞಾ]

ಸುಗ್ರೀವೆ (ನಾ). ಸುಂದರವಾದ ಕೊರಳನ್ನುಳ್ಳವಳು: ಎಲೆಗೆ ರಾಮಾಭಿರಾಮೆ! ಸುಗ್ರೀವೆ! ನೀಲಕುಂತಳೆ! (ರಾಮಾಶ್ವ. ೧೪೮-೩). [ಸಂ. ಸುಗ್ರೀವಾ]

ಸುಚರಿತ (ಗು). ೧. ಒಳ್ಳೆಯ ನಡತೆಯನ್ನು ಹೊಂದಿದ; ಉತ್ತಮವಾದ ಚಾರಿತ್ರ್ಯದ. (ನಾ). ೨. ಒಳ್ಳೆಯ ನಡತೆ; ಸಚ್ಚಾರಿತ್ರ್ಯ: ಸುಚರಿತದರ್ಶನ ಬೋಧೋಪಚಾರಮೆಂಬಿವಱೊಳುಚಿತವಿನಯದಿನಾದಂ ರಚಿಯಿಸಿ (ಸಕುಮಾ. ೪-೧೬). ೩. ಒಳ್ಳೆಯ ಚರಿತ್ರೆ: ಶ್ರುತಿಗಳು ಸುಚರಿತವನಾಲಿಸಲಿ (ಗಗತಾ. ೧೭-೬೩). ೪. ಒಳ್ಳೆಯ ನಡತೆಯನ್ನು ಹೊಂದಿದ ವ್ಯಕ್ತಿ: ಸುಚರಿತ ಸಜ್ಜನಸಂಗದೊಳು ನಾನರ್ಚಿಸುತ — ಜಾನಿಸುತ — ವಂದಿಸುತ (ಎಕೀಗೀ. ೧-೧೩). [ಸಂ.]

ಸುಚರಿತೆ (ನಾ). ಉತ್ತಮವಾದ ನಡತೆಯನ್ನು ಹೊಂದಿದ ಪತ್ನಿ; ಸಾಧ್ವಿ; ಪತಿವ್ರತೆ: "ಕುಲಪಾಲಿಕಾ . . . ಸುಚರಿತಾ, ಸತೀ, ಸಾಧ್ವೀ — ಈ ೬ ಪತಿವ್ರತೆ" (ಹಲಾಯು. ೮೧-೩೪೧); ಸುಚರಿತೆ ಸೀತೆ ನಿನ್ನೊಡನೆ ಬರ್ಪವಳಿರ್ಪವಳಲ್ಲಳ್ (ಪಂರಾಮಾ. ೬-೧೭೫). [ಸಂ. ಸುಚರಿತಾ]

ಸುಚರಿತ್ರ (ಗು). ೧. = ಸುಚರಿತ ೧. (ನಾ). ೨. = ಸುಚರಿತ ೨: ಸುಚರಿತ್ರದೊಳ್ ದಯಾಪರಿಣತಿಯೊಳ್ . . . ಶಾಂತಿವರ್ಮ ಸಾಕ್ಷರಸಮಯಾವಲಂಬಿ ನಿನಗಾರ್ ದೊರೆ (ಪುಪ್ರಪು. ೧-೮೦). ೩. = ಸುಚರಿತ ೪: ಸುಚರಿತ್ರರು ಎಂಡರ್ದೇನಯ್ಯಾ (ಬಸವ. ೭೧); ಸುಚರಿತ್ರರ್ ಸಲೆ ಕೀರ್ತಿಗೋಸುಗ ಮಹಾಕಷ್ಟಂಗಳಂ ತಾಳಿ . . . ಅಚಲಖ್ಯಾತಿಯ ತಾಳ್ದರ್ (ಸೋಮೇಶ. ೯೩). [ಸಂ.]

ಸುಚರಿತ್ರತೆ (ನಾ). ಒಳ್ಳೆಯ ನಡತೆ; ಉತ್ತಮವಾದ ನಡವಳಿಕೆ: ಹೃತ್ಸಮುದ್ಭೂತನಿನಾದ ಸೊರ್ಕು ಸುಚರಿತ್ರತೆಯಿಂ ಸಮಸಂದ ಸೌಷ್ಠವಂ ಚೇತದೊಳುಣ್ಮೆ ಕನ್ನೆ ತಳೆದಳ್ ಕಿಲಿಕಿಂಚಿತಭಾವಚೇಷ್ಟೆಯಂ (ಚಂದ್ರಪ್ರ. ೫-೧೨೨).

[ಸಂ. ಸುಚರಿತ್ರತಾ]

ಸುಚರಿತ್ರೆ$_1$ (ನಾ). = ಸುಚರಿತ ೨: ಸುಚರಿತ್ರಯೊಳ್ ದಯಾಪರಿಣತೆಯೊಳ್ . . . ನಿನಗಾರ್ ದೊರೆ (ಪುಪ್ರಪು. ೮-೬೬). [ಸಂ. ಸುಚರಿತ್ರ]

ಸುಚರಿತ್ರೆ$_2$ (ನಾ). = ಸುಚರಿತೆ: ಈ ಸುಚರಿತ್ರೆಯರೆಸಗಿದನ್ನವನುಣಲಾಸೆವಡುವರು ಪಿತೃಗಳು (ಪದಿಬ. ೨-೧೨). [ಸಂ. ಸುಚರಿತ್ರಾ]

ಸುಚಾಯಿಸು, ಸುಚಾಸು (ಕ್ರಿ). ತಿಳಿ; ಹೊಳೆ; ಅರಿವಿಗೆ ಬರು: ದಿನಾ ನಿನ್ನ ಈ ಲೆಕ್ಕರು ಕೇಳಿ ಕೇಳಿ ನನಗೆ ಏನೂ ಸುಚಾಯಿಸದಂಗ ಆಗೇದ (ಎತ್ರಿಕೃ. ೧೩); ನಾನು ಜಯಣ್ಣನ ಮುಖ ನೋಡಿದೆ. ಜಯಣ್ಣನಿಗೇನೂ ಸುಚಾಯಿಸಲಿಲ್ಲ (ವ್ಯನಿ. ೫೬). **ಸುಚಾಸು**: ಹಸಿವೆಯಾದರೆ ಮನಸ್ಸು ಉದ್ವಿಗ್ನವಾಗಿ ಬಿಡುತ್ತದೆ! ಏನೂ ಸುಚಾಸವದೇ ಇಲ್ಲ (ಹೂಸ್ಕೃ. ೧೯೪); ನೀ ಏನ ಹೇಳಿದರೂ ನನ್ನ ಮನಸ್ಸಿಗೆ ಸುಚಾಸಲಿಲ್ಲ (ನಡದಾ. ೧, ೨೬೩). [ಸುಚ್ಚಾ$_0$ (IP <— ಮರಾ. ಸುಚಣೇ) + - ಇಸ್ಸು$_5$]

ಸುಚಾರಿತ್ರ (ನಾ). = ಸುಚರಿತ ೩: ಅಯ್ಯನ ಸುಚಾರಿತ್ರವನೊಸದು ಪಠಿಸಿದಡೆ ಕೇಳಿದಡಹುದಭಿಮತಾರ್ಥ (ಬಸಪು. ೪೫-೫೫). [ಸಂ.]

ಸುಚಾಸು 'ಸುಚಾಯಿಸು' ನೋ.

ಸುಚಿ (ನಾ). ನಿರ್ಮಲತೆ; ಚೊಕ್ಕಟತನ: ಶುಚಿ — ಸುಚಿ, ಶುದ್ಧಿ — ಸುದ್ಧಿ (ಶಮದ. ೨೫೩ ಪ್ರಯೋ); ವಚನ ಮಂಟಪ ಬಳ್ಳಿ ಸುಚಿ ಮೊಗ್ಗೆ ಹೂ ಬಿಡಲು ರುಚಿಜೇನ ಹುಟ್ಟ ಹೊಸಮತವ ಕಟ್ಟಿದರು ವಚನಶಾಸ್ತ್ರಕರು ನಾಡೊಳಗೆ (ಕನ್ನಜಾ. ೩೦೪).

[< ಸಂ. ಶುಚಿ]

ಸುಚಿತ್ತ (ನಾ). ೧. ಒಳ್ಳೆಯ ಮನಸ್ಸು; ಶುದ್ಧವಾದ ಅಂತಃಕರಣ: ಸುಚಿತ್ತದಿಂದಲೆನ್ನ ಮನವು ನಿಮ್ಮ ನೆನೆಯಲೊಲ್ಲದು (ಬಸವ. ೪೭೬); ಪ್ರಾಣೇಶ್ವರಂ ಸುಚಿತ್ತದಲಿ . . . ಬೋನವಂ ಮಾಡಿ ಇತ್ತು (ಬಸಪು. ೨೭-೧೫). ೨. ಶುದ್ಧವಾದುದು; ತಿಳಿಯಾದುದು: ತೃಷೆಗೆ ಹಳ್ಳದಲ್ಲಿ ಸುಚಿತ್ತವಾದ ಆಗ್ಮವಣೆಯುಂಟು (ಮಹಾದೇ. ಬ. ೯೮-೨೨೬). ೩. [ವೀಶೈ] ಒಂಭತ್ತು ಬಗೆಯ ಹಸ್ತಗಳಲ್ಲಿ ಒಂದು; ಸಂಸಾರನಿಮಗ್ನತೆಯನ್ನು ಇಲ್ಲವಾಗಿಸಿ ವಿಶ್ವಬಂಧುತ್ವಭಾವವನ್ನು ಉಂಟುಮಾಡುವಿಕೆ: ಸುಚಿತ್ತವೇ ಮೊದಲು ನಿರವಯವೆ ಕಡಯಾದ ನವಹಸ್ತಂಗಳಿಂದ ಭಾವಪುಷ್ಪಂಗಳಲ್ಲಿ ಪೂಜೆಯಂ ಮಾಡಿ (ಪಿನವ. ೨೩-೧೯). [ಸಂ.]

ಸುಚಿತ್ತೆ (ನಾ). ಒಳ್ಳೆಯ ಮನಸ್ಸುಳ್ಳವಳು: ನಿಟಲಾಂಬಕಧ್ಯಾನಪ್ರಮತ್ತೆ ಸುಚಿತ್ತೆ . . . ಸಾರವೀರವ್ರತಭರಿತೆ ಚರಿತೆ (ಬಾಪು. ೨೪-೧). [ಸುಚಿತ್ತ + - ಎ೨]

ಸುಜಂಭ (ನಾ). ೧. ಗಟ್ಟಿಯಾದ ದವಡೆಗಳನ್ನುಳ್ಳವನು. ೨. (ಆಲಂ) ಗಟ್ಟಿಗ; ಪರಾಕ್ರಮಿ: ಜಮ್ಭಾರಿನಿಭಂ ಶಾಲಾಸ್ತಂಭಮಮನೊಳ್ಕೊದವ ನಿಜಿಸಿದಂ ಸುಜಕೀರ್ತಿ[ರ್ಜ]ಸ್ತಂಭಮನೆ ನಿಜಿಸುವನ್ನೆ ಸುಜಂಭಂ ಕಂಚಿಗನಚಂಚಲಾಂಚಿತಧೈರ್ಯಂ (ಎಗಾ. IV. ೯೪-೨೮; 945). [ಸಂ.]

ಸುಜನ (ಗು). ೧. ಸಜ್ಜನಿಕೆಯಿಂದ ಕೂಡಿದ; ಒಳ್ಳೆಯ. (ನಾ). ೨. ಒಳ್ಳೆಯವನು; ಸಜ್ಜನ: "ಕುಳಜಾತಂ ತಕ್ಕನಾರ್ಯಂ ಸುದನನಭಿಜನಂ ಸಾಧು ಸದ್ವೃತ್ತನಪ್ಪಂ" (ಮಪ್ರತೋ. ೧೦೦-೧೧); ಸುಜನಜನವನಜದಿನಕರ (ಸೌಗಾ. XX. ೫೫-೬೯; 1082); ಸುಜನಜನಪ್ರಮೋದ ಘನಕುಂಜನಿಕಾಯಮನೊತ್ತಿ ಮೆಟ್ಟುತ . . . ಬಂದುದು ದೈತ್ಯಕುಂಜರಂ (ಉದ್ಭಟ. ೪-೯೪); ಬಂದ ಸುಜನಮೃಗಧೀವರಂ ಕಪಟವಟು ಕೌಶಿಕಂ ವಾಸಿಷ್ಠಮುನಿ ಹೋದ ಹೊತ್ತನಱಿದು (ಪಚಾಂ. ೩-೫). ಸುಜನ ಕೈವಾರ = ಒಳ್ಳೆಯವರ ಪ್ರಶಂಸೆಗೆ ಪಾತ್ರನಾದವನು; ಒಂದು ಬಿರುದು: ವೈರಿಘಟಾಕೇಸರಿ ಸುಜನಕೈವಾರನಾರೋಹಕತ್ರಿನೇತ್ರಂ (ಇಆ. V. ೧೭-೨೦; 1019). ಸುಜನಪ್ರಸಂಗ = ಸಜ್ಜನರ ಸಹವಾಸದಲ್ಲಿರುವವನು; ಒಂದು ಬಿರುದು: ವೈರಿದಿಕ್ಕುಂಜರಂ ಸುಜನಪ್ರಸಂಗಂ ಸಾಹಸೋತ್ತುಂಗಂ (ಸೌಗಾ. XI-i. ೭೮-೪೫; 1045). ಸುಜನಪ್ರಸನ್ನ = ಒಳ್ಳೆಯವರನ್ನು ತೃಪ್ತಿಗೊಳಿಸುವವನು; ಒಂದು ಬಿರುದು: ಮಹಾಪ್ರಚಣ್ಡದಣ್ಡನಾಯಕಂ ಎಬ್ಬ ಬಳನಾಯಕಂ ಸುಜನಪ್ರಸನ್ನಂ (ಕಾ. IV. ೩-೬; 1114). ಸುಜನೋತ್ತಂಸ = ೧. ಸಜ್ಜನರಲ್ಲಿ ಶ್ರೇಷ್ಠನಾದವನು. ೨. ಸುಜನರು ತನಗೆ ಭೂಷಣಪ್ರಾಯರೆಂದು ತಿಳಿದವನು; ಕನ್ನಡದ ಕವಿ ಬೊಪ್ಪಣಪಂಡಿತನ ಬಿರುದು: ಸುಜನರ್ಬ್ಯಮ್ಮರೆ ತನಗವರಜಸ್ರಮುತ್ತಂಸಮಪ್ಪ ಪುರುಳಿಂ ಬೊಪ್ಪಂ ಸುಜನೋತ್ತಂಸನೆನಿಪ್ಪಂ ಸುಜನರ್ಗುತ್ತಂಸಮೆಂಬ ಪುರುಳಿಂದನಿಸಂ (ಎಕ. II (R), ೩೩೬-೭೬; 12ನೆಯ ಶತ); ಗಜಗನ ಗುಣನಂದಿಯ . . . ಸುಜನೋತ್ತಂಸನ ಸುಮಾರ್ಗಮಿದಱೊಳ್ ಲಕ್ಷ್ಯಂ (ಶಮಪ. ೫ ಪೀಠಿಕೆ). [ಸಂ.]

ಸುಜನತೆ (ನಾ). ಒಳ್ಳೆಯ ನಡತೆ; ಸದ್ಗುಣ: ಗಜತುರಗರತ್ನಮಿವು ಭೂಭುಜನಾವೊಂ ಪ್ರಬಲಪುಣ್ಯನವನೆ ಸಾರ್ಗುಂ ನಿಜದಿಂದಮೆಂದು ಮಾಣ್ಬುದು ಸುಜನತೆ (ಚಂದ್ರಪ್ರ. ೯-೧೦೦); ಇಲ್ಲದ ಗುಣಮಂ ಪೆಱರೊಳ್ ಸೊಲ್ಲಿಸುವಂ ತನ್ನೊಳುಳ್ಳ ಗುಣಮಂ ತಾನಿಲ್ಲೆಂದಾಡುವ ಪುಸಿಕಂಗಲ್ಗಿಂದಂ ಬಂದುದಮಮ ಸುಜನತೆ ಚಿತ್ರಂ (ಪುಷ್ಪ. ೧-೫೬). [ಸಂ. ಸುಜನತಾ]

ಸುಜನತ್ವ (ನಾ). ೧. = ಸುಜನತೆ: "ಸುಜನತ್ವ ಗಂಧದ್ರವ್ಯಂಗಳೊಳ್ ಸಾದಕ್ಕು" (ಕಬ್ಬಮಂ. ೧೦೦). ೨. ಕರುಣೆ; ದಯೆ. ೩. ಸಭ್ಯತೆ; ಸಂಭಾವಿತತನ. [ಸಂ.]

ಸುಜನವತ್ಸಲ, ಸುಜನವತ್ಸಳ (ನಾ). ಸದ್ಗುಣಿಗಳಲ್ಲಿ ಪ್ರೀತಿ ಇರುವವನು; ಸಜ್ಜನಪ್ರಿಯನಾದವನು: ಎನಗೆ ಸುತ ಸುಜನವತ್ಸಲ ನೆನವಿಗೆ ಗೋಚರನೆಯಾಗಿ ಪೋಗದ ಮತ್ತಂದಿನ್ದ ತೆಱದ ನಯನಗೋಚರನೆನಿಪ್ಪುದಂ ಪೇಟ ಪುಣ್ಯತರವಾಸರಮಂ (ಚಂದ್ರಪ್ರ. ೫-೧೬). ಸುಜನವತ್ಸಳ: ಸುಜನವತ್ಸಳನೆಲ್ಲಿಯುಮಿತನೆಂದು ಕೈವಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತ ನಾಗವರ್ಮನಂ (ಪ್ರಾಪ್ರೋ. ೧೧೭-೩೬). [ಸಂ.]

ಸುಜನವತ್ಸಳ 'ಸುಜನವತ್ಸಲ' ನೋ.

ಸುಜಾಣ (ನಾ). ಬುದ್ಧಿವಂತ; ಚತುರ: ಸಕಳದೊಳು ನಡೆಯದ ಸುಜಾಣನು ಸಕಳವಳಿಯಲು ಸಕಳದೊಳು ಕಾನಳಿಯದಿಹ ನಿತ್ಯ (ಬಾಪು. ೫೧-೪೪); ಕಾಂತ ಸುಜಾಣನೆಂಬುದು ಯತ್ನಸಿದ್ಧ (ಮೋಪತ. ೨೫-೨೮). [ಸ್ಮ - + ಜಾಣ]

ಸುಜಾಣೆ (ನಾ). ಬುದ್ಧಿವಂತೆ; ಚತುರೆ: ನರ್ತನದ ಸುಜಾಣೆಯರುಗಳ ಚಿತ್ತಸು . . . ಪೂಬಾಣ ಪರಾಕೆಂದರೊಲಿದು (ಮೋಪತ. ೧೭-೧೦); ಬಾಯ್ಗಳಂ ಬಿಡುವ ಬಿಡುಗಂಗಳ ಸುಜಾಣೆಯರ್ ಸಲೆ ದಶಾವಸ್ಥೆಯೊಳ್ ಕಣ್ಗೆಸೆದರು (ಚಿಬಾಪು. ೧೯-೩೧). [ಸ್ಮ - + ಜಾಣೆ]

ಸುಜಾತ (ಗು). ೧. ಶ್ರೇಷ್ಠವಾದ ಕುಲದಲ್ಲಿ ಹುಟ್ಟಿದ: ಸುಜಾತ ಕವಿತಾ ವಿಚಕ್ಷಣಜನರ್ . . . ನಿಜಾಗಮದೆ ಪುಟ್ಟುವರ್ (ಹಾಲಾಸ್ಯ. ೪-೩-೧೧). ೨. ಚೆನ್ನಾಗಿ ಅರಳಿದ: ಅಭಿನವ ಸುಜಾತ ಪಾರಿಜಾತ ಸುಮನಶ್ಶೇಖರಂ (ಶಾಂತಿಪು. ೭-೧೩ ವ). [ಸಂ.]

ಸುಜಾತಿ (ನಾ). ೧. ಒಳ್ಳೆಯ ವರ್ಗ; ಉತ್ತಮದರ್ಜೆ: ಸುಜಾತಿಯಪ್ಪ ಮಾಣಿಕ್ಯಮೆಂತುಂ ಕರ್ಬಿನೊಳಗಿರ್ದುಂ ಬೆಳಗುವಂತೆ (ಜೀವಸಂ. ೧-೪೭ ವ). ೨. [ವೀಶೈ] ಭಕ್ತರ ಪಂಗಡ: ಲಿಂಗಬಾಹ್ಯಂಗೆ ಲಿಂಗಬಾಹ್ಯನಾಗಬೇಕಲ್ಲದ ಸುಜಾತಿಯ ಬರಸಿ ದುದುಂಟೆ (ಮೋಸಮಾ. ೧೭೬-೬೨). [ಸಂ.]

ಸುಜ್ಜಲು, ಚುಚುಲು, ಚುಜ್ಜಲು, ಚುಜ್ಜುಲು, ಸುಜ್ಜಿಲ್, ಸುಜ್ಜುಲು (ನಾ). (ಸೊಪ್ಪನ್ನು ಒಣಗಿಸಿ ಪುಡಿಮಾಡಿ ಸೀಗೆಪುಡಿಯೊಂದಿಗೆ ಉಪಯೋಗಿಸುವ) ಒಂದು ಬಗೆಯ ಸಸ್ಯ; ಚಿಗರೆ: ಜಾಲ ಸುಜ್ಜ[ವಾಕಾಂ. ಜ್ಜು]ಲು ಮತ್ತಿ ಕಡವ ಹಾಲೆ ಹಾದರಿ ಬನ್ನಿ ಮೊದಲಾದ ತರುಗಳ ಜಾಲದಿಂದೆಸೆದುದಾ ವಿಪಿನ (ರಾಮವಿ. ೧೫-೫೯); ದೇವದಾರು ಚಕ್ಕೆ . . . ಸುಜ್ಜಲಬೀಜ, ಹಸುರುಹಾವು – ಇವು ಪ್ರತ್ಯೇಕ ಗ ೧ ತೂಕವಂ ಕಲ್ಕವಂ ಮಾಡಿ ಹಾಕಿ (ಸಕ್ಕ. ೧೫೩). ಚುಚುಲು: (ತ). ಚುಜ್ಜಲು: ಈ ಕಲ್ಲಿಗ ನೈಋತ್ಯದಲ್ಲೂ ಚುಜ್ಜಲಕಟ್ಟೆ ಕೆಳಗೆ ನೆಟ್ಟ ಕಲ್ಲು ೧ (ಎಕ. XIV. ಮ್ಯಸೂರು. ೧೧೫-೬೬;1674); ಕಗ್ಗಲ್ಲ ಕಣಿವೇಲಿ ಚುಜ್ಜಲ ಬೋರೇಲಿ ಕದ್ದು ಬತ್ತೀನಿ ನಿನಗಾಗಿ (ಚೆಸರ್ವ. ೧೩೧). 'ಚುಜ್ಜಲುಮರ' ಪರಾ. ಚುಜ್ಜುಲು: ಚುಜ್ಜುಲು ಗೇರು ದೇವದಾರು . . . ಮೊದಲಾದ ಗಗನವಂ ತುಡುಕುವ ವೃಕ್ಷಂಗಳ್ (ಸೌಗಂಧಿ. ೫೪-೬). ಸುಜ್ಜಿಲ್: ಸುಜ್ಜಿಲರಳಿ ಸಾಗಡೆಯುದಿಸಂಪಗೆ . . . ನೇಸಱವಳಗಿಗೆ ವಜ್ಜಗುಡದ ಬೆಳದಿರಲಾ ಬಿಂಜಂ ಭೀಕರತರಮಾಯ್ತು (ಜಯಾಕಾ. ೧೫-೨೪). ಸುಜ್ಜುಲು: ಹುಲುವೆ ಸುಜ್ಜುಲು ಹೊಂಗೆ ತಾರೆ ತವಸಿ ಕಗ್ಗಲಿ . . . ಮರಗಳಲ್ಲಿಹವು (ಚಂಪ್ರಶಾಂ. ೯-೮೫).

ಸುಜ್ಜಿಲ್ 'ಸುಜ್ಜಲು' ನೋ.

ಸುಜ್ಜುಲು 'ಸುಜ್ಜಲು' ನೋ.

ಸುಜ್ಞ (ಗು). ೧. ವಿವೇಕವನ್ನು ಹೊಂದಿದ; ಜ್ಞಾನಿಯಾದ. (ನಾ). ೨. ಜ್ಞಾನಿ; ಪ್ರಾಜ್ಞ; ವಿವೇಕಿ: ಆತನು ಅತ್ಯಂತ ಸುಜ್ಞನಾಗಿದ್ದು, ಶುಕ್ರಾಚಾರ್ಯನಂತೆ ಅತ್ಯಂತ ಹಿತೈಷಿಯಾಗಿದ್ದ (ತುಳಿಸ. ೪೩). [ಸಂ.]

ಸುಜ್ಞಾನ (ನಾ). ಉತ್ತಮವಾದ ತಿಳಿವಳಿಕೆ; ವಿಶೇಷವಾದ ಜ್ಞಾನ: ಜ್ಞಾನ ವಿಜ್ಞಾನ ಸುಜ್ಞಾನ ಮಹಾಜ್ಞಾನ ಅಪರಜ್ಞಾನ ಇಂತೀ ಪಂಚಜ್ಞಾನವ ದಹ್ಮಮಾಡಿ ಬ್ರಹ್ಮಲಿಖಿತವ ತೊಡವಂತೆ ಧರಿಸುವದೆ ತ್ರಿಪುಂಡ್ರ (ಮೋಸಮಾ. ೧೫೪-೫೮೧); ಕಾಮತಂತ್ರ ವಿಜ್ಞಾನಮಂ ಸುಜ್ಞಾನಂ ಮಾಡಿಯುಂ . . . ಕಾಲಮಂ ಸಲಿಸುತ್ತುಮಿರಯಿರ (ಚಂದ್ರಪ್ರ. ೨-೧೭); ತುರಗವಿತಾನವಿಲ್ಲದ ಮೋಹರಂ ಸುಜ್ಞಾನವಿಲ್ಲದ ಯೋಗಿ ಸೂನ್ಯತವಿಲ್ಲದಾಲಾಪ (ಬಾಪು. ೩೭-೩೧). [ಸಂ.]

ಸುಜ್ಞಾನದ (ನಾ). ವಿವೇಕವನ್ನು ನೀಡುವವನು: ಸುಜ್ಞಾನದನಂ ಲಕ್ಷಿಪೆನೀ ಕೃತಿಯ ಮೊತ್ತಮೊದಲೊಳಿ ನಯದಿಂ (ಹಾಲಾಸ್ಯ. ೧-೧-೯). [ಸಂ.]

ಸುಜ್ಞಾನಿ (ನಾ). ವಿಶೇಷವಾದ ಅರಿವುಳ್ಳವನು: ಇರ್ವರನುರು ಸಂಸಾರ ಮಾಯಾದರ್ಪ ವಿದಳನಮೂರ್ತಿ ಚರಲಿಂಗಾರ್ಪಿತಾರ್ಥಪ್ರಾಣವಪುರಭಿಮಾನಿ ಸುಜ್ಞಾನಿ (ಬಾಪು. ೩೧-೧). [ಸಂ. ಸುಜ್ಞಾನಿನ್]

ಸುಟಿ 'ಸೂಟಿ[1]' ನೋ.

ಸುಟಿಕರ (ನಾ). ಚತುರನಾದವನು; ನಿಪುಣ: ಸುಟಿ[ಪಾಕಾಂ. ಶುಟಿ, ಶೂಟಿ, ಶುಠಿ, ಶುಧಿ]ಕರನಂಬು ಗುಱಿಯನಂಟುಮ ತೆಱದಿ ದೃಷ್ಟಿ ಮುಟ್ಟಿಸು ಲಿಂಗದೊಳ್ ಕುಮಾರ (ಪತಿಲ. ೫-೫೬). [ಸುಟಿ (< ಸೂಟಿ[1]) + ಕರ್ಮ (<- ಕಾರ್ಮ)]

ಸುಟಿಯಳಿ (ಕ್ರಿ). ಕಾಂತಿಯನ್ನು ಕಳೆದುಕೊಳ್ಳು; ಬಾಡು; ಮುದುಡು: ಉರೆ ಸುಟಿಯಳಿದ ಕುಮುದಗಳ ನಲಿಸುತ್ತೆ (ಪರಮ. ೫-೩). [ಸುಟಿ (< ಸೂಟಿ[1]) + ಅಳಿ[1] (< ಅಟ್ಟಿ[1])]

ಸುಟಿವಂತ (ನಾ). ಚತುರ; ಕುಶಲನಾದವನು: ಸುಟಿವಂತ ಮೃದು ನಿನ್ನ ಕರ್ಮಗಳವು ಭೋಗ ಮಠದೊಳೊಯ್ಯನೆ ತೊಲಗುವುವು (ಭರಚ. ೨೪-೯೪). [ಸುಟಿ (< ಸೂಟಿ[1]) + -ವಂತ]

ಸುಟಿವೆಱು (ಕ್ರಿ). ವೇಗವಾಗು; ರಭಸವನ್ನು ಹೊಂದು; ಚುರುಕಾಗು: ಸುಟವೆತ್ತು ಮುಗಿಲಗಲದಿ ಪರಿವಾಕಾಶತಟಿನಿಯ ಬುದ್ಬುದದಂತೆ ಪಟುವಾಗಿ ನಿಖಿಲನಕ್ಷತ್ರ ಸಂದೋಹ ಸಂಘಟಿಸಿತು ಕೇಳಾಯತಾಕ್ಷಿ (ಮೋಪತ. ೧೫-೫).

[ಸುಟ (< ಸೂಟ್‌) + ಪೆಱು]

ಸುಟು (ಕ್ರಿ). ಕಟ್ಟು; ಅಳವಡಿಸು; ಜೋಡಿಸು(?): ಪೋತಬಮ್ಮ xxx ಯತನಂಗಳಿನ್ ಮಾಲೆಯಾ ಸುಟುವಾ ಬ[ಡಿ]ಗ ಮೊದಲಾಗಿಟ್ಟು ದೇವನ್ನ xx ಲೆಯವಮ್ ಮೊದಲಾಗಿ[ಟ್ಟು] ನಿಜಿಸಿ (ಪೌಗಾ. XI-i, ೧೩-೭; 869). [< ಸೂಡು,?]

ಸುಟ್ಟು, 'ಸುಡು' ಪರಾ.

ಸುಟ್ಟು, (ನಾ). ಮೇಲೋಗರ; ವ್ಯಂಜನಪದಾರ್ಥ: "ಸುಟ್ಟುಂ — ಮೇಲೋಗರಂ" (ಕಾಶಕ್ಕ. ೨೫೭). [< ಸುಡು]

ಸುಟ್ಟುರಗಾಳಿ 'ಸುಟ್ಟುರೆಗಾಳಿ' ನೋ.

ಸುಟ್ಟುರೆ 'ಸುಟ್ಟುರೆ' ನೋ.

ಸುಟ್ಟೆ, 'ಸಿಟ್ಟೆ' ನೋ.

ಸುಟ್ಟೆ, (ನಾ). [ಸಂಗೀತ] (?): ಗತಿಯೋಜೆ ಬಜಾವಣೆ ಠಾಯ ಸುಟ್ಟ ಕೋಮಳವಳಿ . . . ಸಂಗಳಿಸೆ ಸುಕಂಠೆ ಪಾಡಿ ಪುದಿದಳ್ ಮುದಮಂ ನರನಾಥ ಚಿತ್ರದೊಳ್ (ಕುಸುಮಾ. ೧-೩೭). 'ಸುಠಿ' ಪರಾ. [?]

ಸುಟ್ಟಿಸು, ಸೂಂಟಿಸು (ಕ್ರಿ). ೧. ಬೆರಳಿನಿಂದ ತೋರಿಸು,—ನಿರ್ದೇಶಿಸು: ಕುಸುಮಪುರದತ್ತ ಸುಟ್ಟಿಸಿ ತೋಱಿ (ಲೀಲಾವ. ೧೪-೧೫ ವ); ಅಂತಕ ಮನೋಜ . . . ಎಂದೊದವಿದತರ್ಕ್ಯರೆಂಬವರ್ಗ ಸುಟ್ಟಿಸಬಾರದು (ಪಂಪಾಶ. ೪೭); ಅಂತು ಸುಟ್ಟಿಸಿ ತೋಱುವ ಬೆರಲ್ಗುಡಿಯಿಂ ಮುಂದು ಬನ್ನಿಸುವ ನುಣ್ಗುಡಿಯಿಂ ಪಿಂದುಱಿಯೆ ಮುಂದುವರಿದು (ಅನಂಪು. ೫-೪೬ ವ). ೨. ಚಾಚು; ನೀಡು: ಸುಟ್ಟಿಪ ನುಣ್ಪೆರಲ್ಗೆ ನಿಮಿರ್ದೆಕಿಲನೀವ ತುಷಾರವಾರಿಯಿಂ . . . ನೆಟ್ಟಗೆ ಮಾಡುತೊರ್ಮೆಯೆ ನೃಪಂಗೆನಸುಂ ಶಿಶಿರೋಪಚಾರಮಂ (ಕುಸುಮಾ. ೧೦-೩೩). **ಸೂಂಟಿಸು**: ೧. ಧನುಜಂಗಂಜಿ ಭಿಲ್ಲನು ವನದ ಕಡೆಯೊಳು ನಿಂದು ಸೂಂಟಿಸಿ ವಿನುತ ಸುಕೃತಿಗೆ ತೋಱಿದಂ ಗದ ದೂರಪಥದಿಂದ (ಘಚಪ. ೩-೨೫).

[ಸುಟ್ಟು, + -ಇಸು]

ಸುಟ್ಟು, (ಕ್ರಿ). ಬೆರಳಿನಿಂದ ತೋರಿಸು,—ನಿರ್ದೇಶಿಸು: "ಸುಟ್ಟು—ಅಂಗುಲಿದರ್ಶನೇ (ಬೆರಳಿನಿಂದ ತೋರಿಸು)" (ಶಮಧಾ); ಇಂತಳವುಮವನ ದೋರ್ವಳಮುಮನರಸನಱಿಯಂ ನೀಮೇಕಱಿಯಿರೆ ಪೇಟ್ಮಿಂದು ಕೆಲದೊಳಿರ್ದವರಂ ಸುಟ್ಟಿ ನುಡಿದೊಡೆ (ಬಂಪಾರಿ. ೬-೩೪ ವ); ಸುಟ್ಟಿದುದೆ ತೋಱಿ ತಾಣದ ಕಟ್ಟಳೆಯಂ ಮಾಡಲಿಂದ್ರನಾಣತಿಯಿನಿರಲ್ಪಟ್ಟರ್ ದಿಕ್ಪತಿಗಳ್ ಸವಂಕಟ್ಟುಗಳಿಂ ಕೂಡಿ ಜಿನನ ಸವನೋತ್ಸವದೊಳ್ (ಶಬ್ದಾನು. ೪೪೩ ಪ್ರಯೋ); (ಆಕಾಶದ ಕಡೆಗೆ ಸುಟ್ಟಿ) ಮೇಲೊಬ್ಬನಿಹನಾತನೊಳಗೆ ಹೊರಗೆಲ್ಲವಂ ನೋಡುತಿಹನವನಿಗಿದನೊಟ್ಟಿಸಿಹೆ! (ಹಬ್ಬಿರ. ೩೪-೧೭).

ಸುಟ್ಟಿದೋರ್ಕೆ = ಬೆರಳನ್ನು ತೋರುವುದರ ಮೂಲಕ ಸೂಚಿಸುವಿಕೆ: ಬೀಸಾಟಮನೆ ಸುಟ್ಟಿದೋರ್ಕೆಗೆ ಗೆತ್ತು ನಾಮ್ ಬಂದೆವಿಲ್ಲಿಗೆ ಮಹೇಂದ್ರಾಚಲಕೆ! (ಶ್ರೀರಾಮಾ. ೩೩೩-೩೦೪). **ಸುಟ್ಟಿದೋಱು, ಸುಟ್ಟಿತೋರು, ಸುಟ್ಟಿತೋಱು, ಸುಟ್ಟಿದೋರು** = ಬೆರಳಿನಿಂದ ತೋರಿಸು: ತರಳತರತಾರಹಾರೋತ್ಕರರಚನೆಗೆ ಸುಟ್ಟಿದೋಱಿ ನೀರೇರುಹಬಂಧುರಗಂಧಿ ರವಿಣನಿಂದಂ ಸುರಹೊನ್ನೆಯ ನನೆಯನೆಸೆಯೆ ಕೊಯ್ದಿದಳೊರ್ವಳ್ (ಪುಪ್ಪಪು. ೮-೮೪); ಈತಂಗಸಾಧ್ಯಮಾವುದುಮಿಲ್ಲೆನುತ್ತು ಮಾತಂಗಳೊಡಗೊಂಡು ಪೋಗಿ ಬಳಾಕಗಿರಿಯ ಬಹಳ ಗುಹೆಯಂ ಸುಟ್ಟಿದೋಱುವುದುಂ (ಮಹಾಸೇ. ೭-೧೦೨ ವ); ಕೆಳಗೆ ಕಾಣಿಸುವ ಊರನ್ನು ನೋಡಿ ತನ್ನ ಹಿಂದಣ ತಾಣಗಳಲ್ಲಿ ಒಂದೊಂದನ್ನು ಸುಟ್ಟಿ ತೋರುವಳು (ಸವತಿ. ೨೪೧); ನಾರಾಯಣಂ ಬಲದೇವಂಗೆ ಸುಟ್ಟಿತೋಱಿ ಭೀಮಾರ್ಜುನರ್ಕಳಿವರಮೋಘಮಪ್ಪರೆಂದವರ ಸಾಹಸಕ್ಕೆ ಮೆಚ್ಚಿ ಸಂತಸಂಬಟ್ಟರ್ದಾಗಳ್ (ಪಂಪಭಾ. ೩-೭೧ ವ); ಲತಾಗಾರದ ಪುಟಿಲೆಡೆಯಂ ಸೀತಾರಮಣಂಗೆ ಸುಟ್ಟಿತೋಱಿದಂ ರಘುವೀರಂ (ಪಂರಾಮಾ. ೧೫-೨೪); ನೆನೆಯಲ್ಕಾರದು ಸುಟ್ಟಿತೋಱಲರಿದಾರ್ಗಂ ರಾಮಚಂದ್ರವ್ರತೀಂದ್ರನ ದುರ್ವಾರನಿಘೋರವೀರತಪಂ (ಅನಂಪು. ೧-೨೩); ಸುಟ್ಟಿದೋರಿದಳು ಪೀಂಚಲು (ಮಲಿಮ. ೬೫೫).

[ದೇ. ॥ ತಮಿ. ಚುಟ್ಟು; ಮಲ. ಚೊಂಡು; ತುಳು. ತೂಂಡು; ಕುಗಿ. ಸೂಟ; ಕುವಿ. ಹೂತಲಿ]

ಸುಟ್ಟು, 'ಸುಡು' ಪರಾ.

ಸುಟ್ಟುಂದೋಱು, ಸುಟ್ಟುದೋಱು (ಕ್ರಿ). = ಸುಟ್ಟಿಸು ೧: ನಿಟ್ಟಿಪರೆವ ಸೀವಂದದಿ ತನ್ನಂ ಸುಟ್ಟುಂದೋಱುವ ಬೆರಲುಡಿವಂದದೆ . . . ಎಚ್ಚ ಮಹಾಫಣನಾರಾಚಂ (ಜಯಕಾ. ೭-೩೮). **ಸುಟ್ಟುದೋಱು**: ಸುಟ್ಟುದೋಱಿದ [ಪಾಠಾಂ. ತೋಱಿದ] ಬೆರಳುರಿವುದಾ ದೆಸೆಯತ್ತ ಮೆಟ್ಟಿದ ಕಾಲ್ಮುರುಟುವುದು (ಶ್ರೀಪಾಲ. ೧೧-೫೮).

[ಸುಟ್ಟು, + ತೋಱು]

ಸುಟ್ಟುಂಬೆ (ನಾ). ೧. ತೋರುಬೆರಳು; ತರ್ಜನಿ: ಕಿಱುಕುಣಿಕೆಯ ಬೆರಲಿಂದೆಡವಱಿಯದೆ ಸುಟ್ಟುಂಬೆವರೆಗಮೆಯ್ದಿದ ಬರೆಯಿಂ ನೆಲೆ ನೂಱುವರ್ಷಂ (ಲೋಕೋಪ. ೧೧-೧೬); ಸುಟ್ಟುಂಬೆಯಂ ತೋಱಿ ನುಡಿಯುತ್ತುಮಿರ್ದ ಶ್ರೀದೇವಿಯ ಮಾತಂ ಕೇಳ್ದು (ಬಾಧಪ್ರ. ೬-೪೩ ವ); ಕವಿ ಸುಟ್ಟುಂಬೆಯಿಂದೆ ಸತ್ಕಮಂ ತೋರ್ಪನ್ (ಸಂಪಪ. ೪೦-೫). ೨. ಬೆರಳು; ಅಂಗುಲಿ: ಕೊರಲೊಳ್ಪೊಗಯಿಪ ಹಾರಮನೆರಡುಂ ಸುಟ್ಟುಂಬೆಯಿಂದವಡಿಗಡಿಗಾಗಳ್ ತಿರುಪುತ್ತುಂ . . . ಎಸೆದಳ್ (ಕಾದಂಬ. ೧೩೨). ೩. ನಡುವಣ ಬೆರಳು; ಮಧ್ಯಮೆ: ಕನಿಷ್ಠಿಕೆ ಸಮಂತು ಮುಟ್ಟುದಿರೆ ಪೃಥ್ವಿಯಂ ಅಂಡ ಮತ್ತನಾಮಿಕೆಯದುದ್ದಮಾಗೆ ಮಱುವಾಟ್ಟೆ ಸುಟ್ಟುಂಬೆಯೊಂದೆ ನೀಱ್ದು ನಿಲೆ ಕಡ್ಡ (ಲೋಕೋಪ. ೧೧-೫೧).

ಸುಟ್ಟುಂಬೆಯ ನೆಟಲ್ = (ಆಲಂ) ಮಾರ್ಗದರ್ಶನದ ಆಶ್ರಯ: ದಮಿತಾರಿಗೆ ಪುಟ್ಟಿ ಸುಟ್ಟುಂಬೆಯ ನೆಟಲೊಳ್ಪಂದು ಮುಗುಳಿನೊಳ್ ಪೊಱ್ದುಂ ಭೂಲತಾಪ್ರತಾನದೊಳ್ ಕಟ್ಟುಂ ಕಿಬ್ಬುಮಿರ್ಪುದುಚಿತಮಲ್ತು (ಶಾಂತಿಪು. ೪-೪೨ ವ). **ಸುಟ್ಟುಂಬೆಯ ಬೆರಲ್** = ಸುಟ್ಟುಂಬೆ ೧: ಸುಟ್ಟುಂಬೆಯ ಬೆರಲಗ್ರದೊಳಿಟ್ಟಾ ತ್ರಿಕಟುಕಮನೊರಸೆ ಕಿಱು ನಾಲಗೆಯಂ ಮೆಟ್ಟಲ್ದವಮತಿ(?)ವಿಷಂ ಬಿಟ್ಟಡಗುಗುಂ (ಏಮದ. ೧೬-೬೨).

[< ಸುಟ್ಟುಂಬೆರಲ್?]

ಸುಟ್ಟುಂಬೆಕ್ಕು (ನಾ). ಮುಟ್ಟಿದರೆ ಎಲೆಗಳನ್ನು ಮುರುಟಿಕೊಳ್ಳುವ ಒಂದು ಬಗೆಯ ಸಸ್ಯ; ಮುಟ್ಟಿದರೆ ಮುನಿ: "ನಮಸ್ಕಾರಿ, ಗಂಡಕಾರಿ, ಖದಿರ . . . ಎಂದೊಡೆ ಮುಟ್ಟಿದರೆ ಮುರುಟುಹ ಸುಟ್ಟುಂಬೆಕ್ಕೆಂದೂ ಎಂಬರು" (ನಾಚಿಕಾ. ೬). [ಸುಟ್ಟು, (< ಸುರುಂಟು) + ?]

ಸುಟ್ಟುಂಬೆಬೆರಲು (ನಾ). = ಸುಟ್ಟುಂಬೆ ೧: ತೂಗುವ ತಲೆ ತುಱುಗೆವೆಯಲುಗುದ ನೋಟ ಮೂಗಿಟ್ಟು ಸುಟ್ಟುಂಬೆಬೆರಲು ಭೂಗಧಿಪನ ಕೊಂಡಾಡುವ ನುಡಿಯಿಂ ರಾಗಿಸಿತಾ ಮೃತಜೀವಿ (ಶ್ರೀಪಾಲ. ೮-೭೫). [ಸುಟ್ಟುಂಬೆ + ಬೆರಲು (< ಬೆರಲ್)]

ಸುಟ್ಟುಂಬೆರಲ್, ಸುಟ್ಟುಬೆರಳು, ಸುಟ್ಟುವೆರಲ್ (ನಾ).= ಸುಟ್ಟುಂಬೆ ೧: ಕುರುಳ ಸುರ್ಬಿಂ ಪುರ್ಬಂಗಿಬಿವ ಬೆಮರ ಬರಿವೊನಲಂ ಸುಟ್ಟುಂಬೆರಲಿಂ ತೊಡೆದೀಡಾಡುತ್ತುಂ (ಲೀಲಾವ. ೬-೧೭ ವ); ಪುಸಿಯೆ ನೆಲೆ ಸುದುಗು ಸುಟ್ಟುಂಬೆರಲ್ ಸುದದಿರಲ್ ನಂಬಿ ಸಿದ್ಧಮಲ್ಲೇಶ್ವರನನು (ಸಿದ್ಧರಾ. ೭-೧೬). **ಸುಟ್ಟುಬೆರಳು**: ನೋವೆಂದರೆ 'ಇತ್ತಿಲ್ಲ ಇತ್ತ' ಎಂದು ಹಾದೀ ತೋರಿಸುವ ಸುಟ್ಟುಬೆರಳು (ವಿಜಾವಂ. ೬೫); (ಸುಟ್ಟುಬೆರಳಿಗೆ ಅವರನ್ನು ಗುರಿಮಾಡಿ) ನೋಡಿದಿರಾ (ಹೂಪಾ. ೧೦). **ಸುಟ್ಟುವೆರಲ್**: ಅರಸಿಗಂದು ರಕ್ಕಸವಕ್ಕಿಗಳ ಪೊಣರ್ಕೆಯ ವಿಪಿನಮಂ ತೋಱಿ ಸುಟ್ಟುವೆರಲಿಂ (ಶ್ರೀರಾಮಾ. ೩-೩೯). [ಸುಟ್ಟು, + ಬೆರಲ್]

ಸುಟ್ಟುಂಬೆಸಕಾಱಿ (ನಾ). (ಬೆರಳಿನಿಂದ) ನಿರ್ದೇಶಿಸಿದುದನ್ನು ನೆರವೇರಿಸುವವನು (?): ಸಸಿಯ ಬೆಸದಿನಸಿಯೇಱಿಂಗೆ ಬಂದ ಸುಟ್ಟುಂಬೆಸಕಾಱಿ ನಂತಸಿದನೆ ಸುಸಿರದಿಂ ಪೊಕ್ಕು ದೇವಕುಲಂಗಳಾದಲೆಯೊಳಿತ್ತುಂಗೊಂಡಿರ್ದ ಕಲ್ತಲೆಗೆ ಮಿಟ್ಟುವಾಗಿಯುಂ (ಚಂದ್ರಪ್ರ. ೮-೪೩ ವ). [ಸುಟ್ಟು, + ಬೆಸ, + - ಕಾಱಿ]

ಸುಟ್ಟುದೋಱು 'ಸುಟ್ಟುಂದೋಱು' ನೋ.

ಸುಟ್ಟುಬೆರಳು 'ಸುಟ್ಟುಂಬೆರಲ್' ನೋ.

ಸುಟ್ಟುರೆ, ಸುಂಟರ, ಸುಂಟುರೆ, ಸುಟ್ಟುರೆ (ನಾ). ವರ್ತುಲಾಕಾರವಾಗಿ ಸುತ್ತಿ

ಸುತ್ತಿ ರಭಸವಾಗಿ ಬೀಸುವ ಗಾಳಿ; ಚಕ್ರಗಾಳಿ; ಆವರ್ತಮಾರುತ: ಅಟ್ಟಿ ಗಳಿಂದಂಬರಂಬರಂ ನೆಗೆದು ಪಾಱುವ ನೆತ್ತರ ಸುಟ್ಟುರೆಗಳಿಂದಂ (ಪಂಪಭಾ. ೧೦-೭೦ ವ); ಆನುಂ ತೊಡೆಯೆಡೆಯೊಳರ್ದೊಡನಂದು ಸುಟ್ಟುರೆಯ ತಱಗೆಲೆಯಂತೆ ತಿಱ್ಱನೆ ತಿರುಗಿ ಬೀಳ್ವಲ್ಲಿ (ಕಾದಂಪೂ. ೧೮೫); ಪವನಂ ಸುಟ್ಟುರೆಯಾಗಿ ಸುತ್ತಿ ಶಿಶುವಂ ಕಾದಿರ್ಪುದುಂ (ನೇಮಿಪು. ೩-೫೯); ಗಾಳಿ ಸುಱಿದು ಸುಟ್ಟುರೆಗಳೊಗೆವೊಡಂ (ಅಜಿತ. ೨-೧). **ಸುಂಟರ:** ಸುಂಟರ. ಮೂಲದಲ್ಲಿ ಶುಟ್. ತರ್, ಸುಟ್ಟರ, ಟದ ದ್ವಿತ್ವದ ಸಂದರ್ಭದಲ್ಲಿ ಕೆಲವು ವೇಳೆ ಬರುವಂತೆ (ಎಟ್ಟು ಎಣ್‌ಟು) ಅನುನಾಸಿಕ ಬಂದು ಸುಣ್‌ಟರ ಆಗಿದೆ (ನಮ್ಮನು. ೧೦೫). **ಸುಂಟುರೆ:** ಆ ಕುವರನ ಪೂರ್ವಕೃತ ಪುಣ್ಯದೇವತೆ ಭೀಕರಮಪ್ಪ ಸುಂಟುರೆಯ ಆಕಾರದಿಂದ ಬಳಸಿ ರಕ್ಷಿಸುತಿರ್ದುದಾ ಕುಣಪಾಲಯದೊಳಗೆ (ನೇಮಿಸಂ. ೬-೩೯); ಸುಂಟುರೆಯಂತಿರೆ ಸುತ್ತಿ ಪತ್ತಿ ನಾಗಾಂತಕನಂತೆ ಪಾಱಿದುದು ತುಂಗತುರಂಗಮಿಳಾಧಿನಾಥನಾ (ರಾಜಶೇ. ೧೩-೭೮); ಒಮ್ಮೆ ಸುಂಟುರೆಯಾಗಿ ಸುಳಿಸುಳಿದು ಜೀವಗಳ ದೂಳಕಣಗಳ ಹಾಗೆ ತೂರಾಡಿ . . . ಮೆರೆವೆ ಲೋಕೈಕವೀರ! (ಬಾಸಿಗ. ೨೬-೧೨). **ಸುಟ್ಟರೆ:** ಉದಯಾದ್ರಿಶಿಖರದೊಳೂದುವ ಸುಟ್ಟರೆ ಕೆದಱೆದ ಕುಂಕುಮರಜವೋ . . . ಮೇಣ್ ತಾನಿದು ಶಶಿಯರುಣೋದಯವೋ (ನಾಗಕು. ೩೧-೫೦).

[ದೇ. ॥ ತಮಿ. ಚುಟಱ್ಱು; ಮಲ. ಚುಟಲು]

ಸುಟ್ಟುರೆಗಾಳಿ, ಸುಂಟರಗಾಳಿ, ಸುಂಟರುಗಾಳಿ, ಸುಂಟುರುಗಾಳಿ, ಸುಟ್ಟರಗಾಳಿ (ನಾ). = ಸುಟ್ಟುರೆ: ಸುಟ್ಟುರೆಗಾಳಿಯೊಳ್ ಸುಱಿಗೊಂಡು ತಱಗೆಲೆಗಳ್ ಪಾಱುವಂತೆ (ಗದಾಯು. ೮-೨೦ ವ); ಗಾಳಿಯೆಲ್ಲಂ ಸುಟ್ಟುರೆಗಾಳಿಯೆ ಗಿಡುವೆಲ್ಲಂ ಮುಳ್ಳುಗಿಡುಗಳೆ (ಬಂಕರಿ. ೯-೧೩ ವ); ಬಾಳಾಂತು ಬಳಸಿ ಬಟ್ಟಗೆ ಬಂದು ಸುಟ್ಟುರೆಗಾಳಿಯಂತೊದಗಿ ಸುತ್ತುವರು (ಭರಚ. ೬೩-೫೧). **ಸುಂಟರಗಾಳಿ:** ಉರುವ ಸುಂಟರಗಾಳಿ ವಹಿಲದಿ ಕರಿಯ ಮೇಘವನಟ್ಟುವಂದದಿ (ಕೌಶಿರಾ. ೧೮-೧೧); ಸುಂಟರಗಾಳಿಯು ಖಾಸರೋಗಹರವಾಗಿ ದಾಹವನ್ನು ಅತಿಭೀತಿಯನ್ನೂ ಉಂಟುಮಾಡುವುದು (ಸಕವೈ. ೫೭); ಸುಂಟರಗಾಳಿಗೆ ಸಿಕ್ಕಿದ ತರಗೆಲೆಯಂತಾಯಿತು, ನನ್ನ ಮನಸ್ಸು (ಮಗಮಾಂ. ೭೮). **ಸುಂಟರುಗಾಳಿ:** ಬಿಡದೆ ಕಡಿದಾಡಿದರು ಸೇನಾಗಡಲು ರಕುತದ ಕಡಲನುಗುಳಿತು ಬಿಡದೆ ಸುಂಟರುಗಾಳಿ ವಿಲಯದ ಮಳೆಯ ಪಡೆದಂತೆ (ಕುವ್ಯಾಧೀ. ೪-೮); ರಾತ್ರಿ ಸುಂಟರುಗಾಳಿಯೆದ್ದಿತು (ಹಸುಹೂ. ೩೪೦). **ಸುಂಟುರುಗಾಳಿ:** ಗಗನದ ಮುಗಿಲ ಮೋಹರವ ಧಾಳಿಯಲಿಯಱೆಯಟ್ಟಿ ಸುಂಟುರುಗಾಳಿಯುರವಣೆ ನಿಂದವೊಲು (ಕುವ್ಯಾದ್ರೋ. ೬-೬೦). **ಸುಟ್ಟರಗಾಳಿ:** ಸುಟ್ಟರಗಾಳಿ ಬಿಟ್ಟಾಗ ಅದರೊಳಗೆ ಕಸ, ಕಡ್ಡಿ, ಎಲೆ ಮುಂತಾದುವುಗಳು ಚಕ್ರಾಕಾರವಾಗಿ ತಿರುಗುತ್ತ ಮೇಲಕ್ಕೆ ಏರುವುದನ್ನು ಬಹು ಜನರು ನೋಡಿರಬಹುದು (ಮುಂಬಯಿ. ೫-೭). [ಸುಟ್ಟುರೆ + ಗಾಳಿ$_1$]

ಸುಟ್ಟುರೆಮಸಗು (ಕ್ರಿ). ೧. ಸುಂಟರಗಾಳಿ ಹರಡು, — ಆವರಿಸು. ೨. (ಆಲಂ) ಸುಂಟರಗಾಳಿಯ ಹಾಗೆ ಧಾವಿಸು: ಮುಂದನಾರಯ್ಯದೆ ಪಿಂದಂ ಪಾರದೆ ಮುಂದೆ ನಿಂದ ನಿಜಸ್ಕಂದನಮನೇಱಿ ಸುಟ್ಟುರೆಮಸಗಿ ನಿಟ್ಟುರಿಗೊಂಡಂ (ಅನಂಪು. ೧೧-೭೨ ವ).

[ಸುಟ್ಟುರೆ + ಮಸಗು]

ಸುಟ್ಟುರೆವಿಡು (ಕ್ರಿ). ಸುಂಟರಗಾಳಿಯಾಗು: ಯಕ್ಷಕರ್ದಮದಗರುವ ಕಪ್ಪುರದ ಕಂಪು ಸುಟ್ಟುರೆವಿಡುತುಂ ಮಗಮಗಿಸೆ (ಸುಕುಮಾ. ೧೦-೧೨೪). [ಸುಟ್ಟುರೆ + ಬಿಡು$_1$]

ಸುಟ್ಟುವೆರಲ್ 'ಸುಟ್ಟುಂಬೆರಲ್' ನೋ.

ಸುಠಿ (ನಾ). ೧. [ಸಂಗೀತ] (?): ಸುಠಿವೊಟ್ಟಜಿದಾಳವಾಳಂ ಪದಿರ್ಪೊಜೆ ಕೊಂಕು ಕಮ್ಮಣೆ ಪೆಸರಂ ಬೆಡಂಗುವಡೆಯೆ ಪಾಡುತ್ತಿರೆಯುಂ (ಶಾಂತೀಶ್ವ. ೧೬-೬೭ ವ). ೨. (?): ಸ್ಫುಟವೆನಲ್ಕೆ ತಿಳಿವುತಿರಲು ಸುಠಿ ಸಲಕ್ಷ ತನ್ನ ತಾನೆ ನಟಿಸಿ ಮುಂದೆ ತೋರ್ಪುದೆಂದು (ವೃಷಗಿ. ೮೪). 'ಸುಟ್ಟಿ$_2$' ಪರಾ. [?]

ಸುಡಗೆಣಸು (ನಾ). ಗೆಣಸಿನಲ್ಲಿ ಒಂದು ಬಗೆ: ಹಾಲಮಡ್ಡಿ, ಸುಡಗೆಣಸು, ಮಸ್ತಿ (ಮೃಬಿಗಿ. ೫೧-೧೦೧೫). [ಸುಡ$_2$ + ಗೆಣಸು (< ಗೆಬಸು)]

ಸುಡಾಬು (ನಾ). ಒಂದು ಬಗೆಯ ಸಸ್ಯ: ಸುರಹೊನ್ನೆ, ಪಿನ್ನೇಕಾಯಿ, ಪುನ್ನಾಗ, ಸುಡಾಬು, ಹೂಹೊಮ್ಮೆ (ಮೃಬಿಗಿ. ೧೬-೨೮೭). [?]

ಸುಡಾಳ, ಸುಢಾಳ (ನಾ). ೧. ಬಹಳ ಹೊಳಪು, — ಕಾಂತಿ: ಮುತ್ತಿನ ಬೈತಲೆಯ ಸುಡಾಳಮಾಲಿಕೆಯ ಕಟ್ಟಿದರು (ಮೋಹತ. ೨೩-೩೧). ೨. ಚೆಲುವು; ಅಂದ; ಸೊಬಗು: ಸುಡಾಳದಿಂಪು ನುಣ್ಪೊದವಿರೆ . . . ಸದಮಳವೀಣೆಯಂ ಪಡೆದು ಬಾಜಿಸುತಿರ್ದನನೇಕರೀತಿಯಿಂ (ದಶಕು. ೧೨-೫); ಬಾಳೆನ್ನ ಭಾಗ್ಯದ ನಿಧಿಯೆಂದೆನಿಪ ಸುಡಾಳ ಬಲ್ಮೊಲೆವೆತ್ತ ನೀಱೆ (ಮೋಹತ. ೧೧-೨). **ಸುಢಾಳ:** ೧. ಉದುರಿದವು ಧರಣಿಯಲಿ . . . ಖಂಡದ ಸುಢಾಳದ ಜಿಗಿಯ ಪೇಸಿಕೆನಿಕರ ನೂಱು (ಕುವ್ಯಾಆ. ೪-೪೨); ಸು[ಪಾಠಾಂ. ಚಿ]ಢಾಳದಲೊಲೆವ ಮಾಗಾಯಿಗಳ . . . ಮಾಯೆಗಿಕ್ಕಿದರು (ಪ್ರಭುಲೀ. ೩-೨೫). [ಸ್ಫು$_4$ - + ಡಾಳ್$_1$]

ಸುಡಿಗೆ 'ಸುಡುಗೆ' ನೋ.

ಸುಡಿಸು (ಕ್ರಿ). ೧. ಸುಡುವಂತೆ ಮಾಡು; ದಗ್ಧವಾಗುವಂತೆ ಮಾಡು: ಮುಂದೆ ಬಣ್ಣವ ಹಚ್ಚಿ ಹಿಂದೆ ಸುಣ್ಣವ ಸುಡಿಸಿ ಹೊಂದಿಕೆಯ ಮಾತನಾಡುವ ಮಾನವರ ಹೊಂದಿಕೆಯ ನೋಡು (ಕಾಲಸಂ. ೬೭-೧೦೭); ಕಿಡಿಗಣ್ಣನಿಂದಳಿದುಳಿದ ದೇಹವನಿನ್ನು ಸುಡಿಸದೆ ತಳರೆಂದ ನಗುತ (ಮೋಹತ. ೩೦-೮). ೨. ಸುಟ್ಟುಹಾಕು; ದಹಿಸು: ಸುಡಿಸು ಕೈಲಾಸಮಂ ಕೆಡಿಸು ಹರಸಾಸಮಂ (ಚಿಬಪು. ೪೭-೨೨).

ಸುಡಿಸಿಕೊಳ್, ಸುಡಿಸಿಕೊಳ್ಳು, ಸುಡಿಸಿಗೊಳ್ಳು = ೧. (ಮೈಮೇಲೆ) ಬರೆ ಹಾಕಿಸಿಕೊಳ್ಳು: ಪುಣ್ಸುಡಿಸಿಕೊಳ್ವರಂತೆ ಮಿಡುಮಿಡುಮಿಡುಕುವರ್ ಬಡಿವೆತ್ತರಂತೆ ಸುಯ್ಯರ್ (ಧರ್ಮಾಮೃ. ೩-೮೧); ಈ ಸ್ವಾಮಿಗೋಳ ಕೈಯ್ಯಿಂದ ಮೈ ಸುಡಿಸಿಗೊಂಬೋ ಸಂಕಟ ನನಗ್ಯಾಕ? (ಸಮಜೀ. ೩೧೧). ೨. ದಗ್ಧಮಾಡಿಸಿಕೊಳ್ಳು; ದಹನಗೊಳ್ಳು: ಉತ್ತ ಹೊಲ ಬಿತ್ತಿಸಿಕೊಂಡೀತು ಸತ್ತ ಹೆಣ ಸುಡಿಸಿಕೊಂಡೀತು (ಗಾದೆ).

[ಸುಡು + -ಇಸ್ಸು]

ಸುಡು (ಕ್ರಿ). ಸುಟ್ಟ$_1$ (ಭೂತಕೃ), ಸುಟ್ಟು (ಭೂತನ್ಯೂ) ೧. ಸುಟ್ಟುಹಾಕು; ದಗ್ಧಗೊಳಿಸು: "ಸುಡು—ದಾಹೇ" (ಶಮಧಾ); ಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟು ಕಿಚ್ಚನ ಬಣ್ಣದಂತಾಗಿ ಸಿಲೆಯಂ ಮಾಡಿ (ವಡ್ಡಾರಾ. ೧೧೪-೧೧); ಕಾಯ್ದ ಬೆನ್ನೀರ್ ಮನೆ ಸುಡದು (ಪಂಪಭಾ. ೯-೩೮); ತೊಱೆಯೆಂದು ಸಾರೆ ಮಾಯದ ತೊಱೆಗಳ್ಳಾಯ್ದೆಣ್ಣೆಯಾಗಿ ಪತ್ತಿ ಸುಡಲ್ (ಧರ್ಮಾಮೃ. ೩-೮೩); ಪರಮಗರುಡೋದ್ಗಾರಮಣಿಯನು ಗರಳ ಸುಡುವುದೆ (ಕುವ್ಯಾದ್ರೋ. ೪-೮). ೨. ಉರಿಯಲ್ಲಿ ಬೇಯುವಂತೆ ಮಾಡು; ಬೆಂಕಿಯಲ್ಲಿ ಬೇಯಿಸು: ಕಟ್ಟಿಗೆಯಲ್ಲಿ ಚುಚ್ಚಿ ಸುಡುವ ಮಾಂಸ — ಶೂಲ್ಯ (ನಾಚರಾ.೬); ಸುಟ್ಟ ಬಾಡ ತಿಂದಾರು ಹೆಡಿಗೆ ಐನೂರ ಖಂಡಾವ ತಿಂದರು (ಕರಿಕ. ೬೭-೫); ಜವಗೋಧಿಯ ಕಾಳುಗಳಿಂದ ಸಹ ರೊಟ್ಟೀ ಮಾಡಿ, ತೋಡಿದ ಎರಡು ಕಲ್ಲುಗಳೊಳಗೆ ಹಾಕಿ, ಸುಡುತ್ತಾರೆ (ಮುಂಬಯಿ. ೩-೧೧೨). ೩. ತೀವ್ರವಾದ ಶಾಖವನ್ನು ನೀಡು; ಬೇಗೆಯನ್ನುಂಟುಮಾಡು; ದಹಿಸು: ನಡುವಗಲ ಬಿಸಿಲ್ ತನ್ನಂ ಸುಡೆ (ಕವಿರಾ. ೩-೧೧೫); ಮದನದವಾನಲಾರ್ಚಿ ತನುವಂ ಸುಡೆ (ಪಂಪಭಾ. ೫-೯); ರವಿಯುಂ ನಡುವಗಲೊಳ್ನಿಂದು ಕೆದಱೆದಂ ಕರತತಿಯಿಂ ಕಿಡಿಗಳನೆನೆ ಬಿಱುವಿಸಿಲುಂ ಸುಡುತಿರೆ (ಕಾದಂಪೂ. ೧೯೮); ಬೆಳದಿಂಗಳಿನ ಬಿಱುಸಾರ ಸುಡುವುದು ಕೈದು ಹಿಡಿದರೆ ಕಲಿಗಳೇ ದ್ವಿಜರು (ಕುವ್ಯಾದ್ರೋ. ೫-೩೮). ೪. ಬಹಳ ಶಾಖವನ್ನು ಹೊಂದು; ಕಾದು ಹೋಗು: ಸುಡುದುಪ್ಪವೆಱೆದಿಹರೆ ಕೊಡನೆತ್ತಿ ಹೊಯ್ಯುವರೆ (ಸರ್ವಜ್ಞ. ೧೩೮); ಅವುಗಳ ಜಳದಿಂದ ಮೈ ಸುಡುವುದು (ಮುಂಬಯಿ. ೪-೬೦). ೫. ದಹಿಸಿಹೋಗು; ದಗ್ಧವಾಗು: ಅಡುವಂತಾದಪುದೀಗಳನ್ನವಯವಂ ಕೂಡೆ ಕಣ್ಣಾಲಿಗಳುಡುವಂತಾದ ಪುದೇವೆನೆಯ್ದೆ ಹೃದಯಂ ಬೇವಂತುಬಾದಪ್ಪುದು (ಕಾದಂಪೂ. ೧೫೩); ಪುಯ್ಯಲಿಡೆ ಸುಡವೊತ್ತಿಸಿಯುಂ (ಧರ್ಮಾಮೃ. ೩-೭೩); ದಳ್ಳುರಿ ಸುತ್ತಿ ಸ್ಮರನ ಬಿಗಿದ ಬತ್ತಳಿಕೆ ಕರ್ವಿಲ್ಲು ಸಹಿತೆ ಸುಟ್ಟುಗಿದುದು ಉರಿ ನಭಸ್ಥಳಕೆ (ಮೋಹತ. ೭-೩೯). ೬. (ಇಟ್ಟಿಗೆ, ಮಡಕೆ ಮುಂತಾದುವುಗಳನ್ನು ಬೆಂಕಿಯ ಶಾಖದಿಂದ) ಹದಗೊಳಿಸು, —ಒಣಗಿಸು: ಸುಣ್ಣಮುಮನಿಟ್ಟಗೆಯಂ ಸುಡುವಲ್ಲಿ ಸಾವ ಜೀವನಿಕರದೊಂದು ಹಿಂಸೆಯೊಳೆ ಪಾಪಮೆ ಮೊಕ್ಕಳಂ (ಸಮವ. ೪-೧೨೭). ೭. ಸೇದು; ಧೂಮಪಾನಮಾಡು: ಹೆಡ್‌ಕ್ವಾರ್ಟ್ ಹೊಗೆಬತ್ತಿ ಸುಡುತ್ತ ಕುಳಿತಿದ್ದ (ಚನ್ನುಹಿಂ. ೯). ೮. (ಆಲಂ) (ಗುಂಡಿಟ್ಟು) ಕೊಲ್ಲು; ಸಾಯಿಸು: ನಾಳೆ ದೊಡ್ಡ ಮಿಕಾನೆ ಸುಟ್ಟು — ತಂದು ಕೊಡ್ತೀನಿ (ಮಗಮಾಂ. ೨೮) ೯. ನಾಶಮಾಡು; ನಿವಾರಿಸು; ನೀಗು:

ಸುಡು ಸಂಸಾರಮನೊಲೆಯೊಳಗಿಡು ಸಂಸೃತಿಸುಖಮಂ (ಧರ್ಮಾಮೃ. ೮-೪೮): ಭವಮಂ ಸುಟ್ಟೇಱಿ ಲೋಕಾಗ್ರಮಂ ಸ್ಥಿರನಾಗಿರ್ದ ರಸ್ಕೃಕನೀಗ ಮುದಮಂ (ರಸ. ೧-೧): ಕಾಮ ಕ್ರೋಧವ ಬಿಡಬೇಕು . . . ಹೇಮದಾಸೆಯ ಸುಡಬೇಕು (ಪುರಂದ. ೧-೧೪೪-೩). **೧೫. ನಾಶವಾಗು; ಹಾಳಾಗು:** (೫). ೧೧. ದುಃಸ್ಥಿತಿಗೆ ಬರು: ಬಟ್ಟ ಮನೆಗೆ ಸುಟ್ಟು ಒಕ್ಕಲು (ಗಾದೆ).

ಸುಟ್ಟಮೊಗ = (ಆಲಂ) (ಕೋಪ, ಜುಗುಪ್ಸೆ, ತಿರಸ್ಕಾರ ಮುಂತಾದುವನ್ನು ಸೂಚಿಸುವ) ಕೆಟ್ಟ ಮುಖ; ಹಾಳಾದ ಮುಖ: ಸುಟ್ಟಮೊಗದ ವೊಲೆ ಈ ನಿನ್ನ ಕೆಟ್ಟ ನಾಲಗೆಯುಮಯ್ (ಬದ್ಧಪ್ರ. ೬-೯೬). **ಸುಟ್ಟಿಕ್ಕು** = ನಾಶಪಡಿಸು; ನಿವಾರಿಸು: ಸಕಲಪ್ರಾಣಿವ್ರಜಕ್ಕೀ ಜನನ ಮರಣಮೆಂತೆಂಬ ದುರ್ವಾರದುಃಖಪ್ರಕರಂ ತಾಂ ತಪ್ಪದಾನಿಂತಿದನನುಪಮನಂ ಶಂಭುವಂ . . . ಅನಘನಂ ಪೊರ್ದಿ ಸುಟ್ಟಿಕ್ಕಿ ನಿತ್ಯಾತ್ಮಕನಪ್ಪಂ (ಉದ್ಭಟ. ೧೧-೪೬). **ಸುಟ್ಟು ಸುಣ್ಣವಾಗು** = ಹೆಚ್ಚಾಗಿ ಬಳಲು,—ಆಯಾಸಗೊಳ್ಳು: ಅವನು ನೌಕರಿಗಾಗಿ ಅಲೆದು ಅಲೆದು ಸುಟ್ಟು ಸುಣ್ಣವಾದ (ಡೂಢಿ). **ಸುಟ್ಟುಹೋಗು** = ದಗ್ಧವಾಗು; ದಹಿಸಿ ಹೋಗು: ಭಾಸ್ಕರನ ಮನೆ ಸುಟ್ಟು ಹೋಯಿತು (ಬಸವ. ೫೬-೩೪). **ಸುಡುವತನ** = ದಗ್ಧಗೊಳಿಸುವ ಗುಣ; ದಹನಮಾಡುವ ಗುಣಧರ್ಮ: ಸೂರ್ಯನ ಸುಡುವತನವನಱಿಯದೆ ಬಂದು ಕೆಡುವ ಪುಳುವಿನವೋಲ್ (ಕೃಷ್ಣ. ೨-೭-೩). **ಸುಡುಸುಣ್ಣಮಾಗು, ಸುಡುಸುಣ್ಣವಾಗು** = ಅತಿಯಾಗಿ ಬಳಲು; ಆಯಾಸಗೊಳ್ಳು: ಸುಡುಸುಣ್ಣವಾಗೀ ಮತ್ತೀ ಸುಡುಗಾಡೊಳು ಮಡಿದು ಹೋಹವಳ ಜೀವನನು ಹಡದ ಹರಣದೆಯನ ಲೇಸ ಮಱೆದೀ ಕತುಪಾಪಿಯ ನಂಬಬಹುದ (ಸೇಮಿಹಂ. ೧೪-೫೯); ಒಡಲಾಜೆ ನವದು ಬಳಿಕ ಸತ್ತು ಸುಡುಸುಣ್ಣವಪ್ಪುದಱಿಂದಂ (ಸಮ್ಮಕ್ಕಿ. ೨-೬೩). [ದೇ. ॥ತಮಿ. ಚುಟು; ಮಲ. ಚುಡು; **ಕೊಡ.** ಚುಡ್; ತುಳು. ಸುಡು, ಸುಡ್, ತುಡು; **ತೆಲು.** ಚೂಡು; **ಕೋಲಾ.** ಸುಡ್; **ಗೊಂಡಿ.** ಸುಡ್ನಾ]

ಸುಡುಕ (ನಾ). ಸುಟ್ಟುಹಾಕುವವನು; ದಗ್ಧಗೊಳಿಸುವವನು: ಊರು ಸುಡುಕ [ಪಾಠಾಂ. ಸೂತ, ಸೂದ]ನ ಕದನಕೌತುಕಸಾರವನು ಚಿತ್ತೈಸೆನುತ ರಘುವೀರ ನಿದಿರಲಿ ಭುಜವ ಹೊಯ್ದಬ್ಬರಿಸಿದನು ಹನುಮ (ತೊರಾ. ೬-೩೧-೧೭).

[ಸುಡು + -ಕ]

ಸುಡುಗರ (ನಾ). (ಆಲಂ) ಕ್ರೂರಗ್ರಹ: ಕೀಳ್ಕೊರವರೆಂಜಲದೇಂ ಫಣಿಯೋ ಮದೇಭಮೋ ಸುಡುಗರಮೋ ಗಜಾರಿಯೊ . . . ಎಂದು ಗಳಪುತ್ತುಂ (ಪೃಷಾ. ೩೮-೯೨). 'ಮುದುಗರ' ಪರಾ. [ಸುಡು + ಗರ]

ಸುಡುಗಾಡಿಕ್ಕೆ (ನಾ). ಶ್ಮಶಾನಪ್ರದೇಶ; ಸುಡುಗಾಡು: ತಾಂ ಸುಡುಗಾಡಿಕ್ಕೆಗ ಭಂಟನಾಗನೆ ಹರಿಶ್ಚಂದ್ರಂ (ಸೋಮೇಶ. ೩.೨). [ಸುಡುಗಾಡು + ಇಕ್ಕೆ (< ಇರ್ಕೆ)]

ಸುಡುಗಾಡು (ನಾ). ೧. ಹೆಣಗಳನ್ನು ಸುಡುವ ಸ್ಥಳ; ಮಸಣ: ಅಸ್ಥಿಗಳ ನಾರಯ್ಯುತ್ತ ಹೊಕ್ಕನಾ ಸುಡುಗಾಡನವನೀಶನು (ಹಚಕಾ. ೧೧-೪೧); ಸುಡುಗಾಡಿಡು ಗಿರ್ಚಡುಗೂಬುಡುಗೂಳಯುಂ . . . ಪಡೆಯವು ಬಿಂದುವನುದಂತವೃತ್ತಿಯನಾಳ್ದುಂ (ಶಮದ. ನ. ೧೮೨); ಅತಿರಾಗದಿ ಪಾಡಿ ಕುಣಿವ ಮರುಳಸಂತತಿಯಿಂ ಸುಡುಗಾಡೆಸೆಯೆ (ಜೀವಂಪಾ. ೬-೬). ೨. (ಆಲಂ) ಹಾಳಾದುದು ಎಂಬರ್ಥದಲ್ಲಿ ಬಳಸುವ ತಿರಸ್ಕಾರಸೂಚಕ ಉದ್ಗಾರ: ಅದೇನೋ ಸುಡುಗಾಡು ಜ್ವರದ ಕಾಹಿಲೆ (ರಂಗಪ. ೧೧.೨).

ಸುಡುಗಾಡ ಸಿದ್ಧ = ಸುಡುಗಾಡುಸಿದ್ಧ: ಸುಡುಗಾಡ ಸಿದ್ಧನ ನಾಡಾವದು ಗೊತ್ತಿಲ್ಲ (ಸಿದ್ಧಪ. ೪-೫೮). [ಸುಡು + ಕಾಡು]

ಸುಡುಗಾಡುಸಿದ್ಧ (ನಾ). (ಆಲಂ) ಶ್ಮಶಾನದಲ್ಲಿ ವಾಸಿಸುವವನು: ಆ ಮುದಿಯೆತ್ತು ಎಲ್ಲಿಯೋ ಗಿಡದ ಹಸುರನ್ನು ನೋಡಿಬಿಟ್ಟಿದೆ. ಅವರ ಕೈಯಿಂದ ಕೊಸರಿಕೊಂಡು ಓಡಿಹೋಗಿ ಬಿಟ್ಟಿದೆ, 'ಸುಡುಗಾಡುಸಿದ್ಧ' ನ ಸಹವಾಸ ಸಾಕು ಎಂದು (ಸುವಸಂ. ೧೬). [ಸುಡುಗಾಡು + ಸಿದ್ಧ]

ಸುಡುಗಾಯ್ (ನಾ). ಸುಡಲು ಹದವಾಗಿರುವ ಕಾಯಿ: ಸುಡುಗಾಯ ಹದದ ಬದನೆಯ ಕಾಯಿಗೆಣ್ಣೆಯಂ ತಡಹಿ ಕೆಂಡದಿ ಸುಟ್ಟು ಸಿಪ್ಪೆದಗೆದಃ (ಸೂಪಶಾ. ೪-೨೫). [ಸುಡು + ಕಾಯ್]

ಸುಡುಗೆ, ಸುಡಿಗೆ (ನಾ). ೧. ಸುಡುವಿಕೆ; ದಹನ ಮಾಡುವಿಕೆ: ಅವನು ಕುದುರೆಯನ್ನೇರಿ ಈ ಸುಡುಗೆಯನ್ನು ನೋಡುತ್ತಾ ಬೀದಿಗುಂಟ ಹೋಗುತ್ತಿರಲು (ಇಂಗ್ಲಂಡ. ೨೯). **ಸುಡಿಗೆ: ೨.** ದಗ್ಧವಾಗುವಿಕೆ (?): ಸುಡಿಗೆಮಯ ಸುರಲೋಕ ರಕ್ತದ ಕಡಲಮಯ ರಣರಂಗ (ನಭಗ. ೮-೧೩-೩೦).

ಸುಡುಗೆಯ ಸುದು = (?): ದಟ್ಟುಮಾಡುತ್ತೆನ್ನೀ ಹುದುಹುಟ್ಟನಂ ಪೆತ್ತವಳು ಸುಡುಗೆಯ ಸುಟ್ಟಳಿನುತಾ ಕೈಯೊಳ್ ಹೆಟ್ಟುವಳು ಟೊಮ್ಮೆಯನು (ಪುದೇಪು. ೫-೩೭).

[ಸುಡು + -ಗೆ]

ಸುಡುನೀರು (ನಾ). ಬಹಳ ಬಿಸಿಯಾಗಿರುವ ನೀರು; ಕುದಿಯುತ್ತಿರುವ ನೀರು: ಅಭ್ಯಂಜನದಲ್ಲಿ ಬಿಸಿನೀರನ್ನು ಉಪಯೋಗಿಸುವುದೇ ಇಲ್ಲ; ಎಲ್ಲ ಸುಡುನೀರ! (ಪಾಲಚ. ೩೦). [ಸುಡು + ನೀರು (< ನೀರ್)]

ಸುಡುನುಡಿ (ನಾ). (ಆಲಂ) ತೀಕ್ಷ್ಣವಾದ ಮಾತು; ಕಟುವಾದ ನುಡಿ: ಜನ್ಮ ದ್ವೇಷಿಯಂ ಜಡಿದಾರುಹತನು ಸುಡುನುಡಿಗಳಿಂ ನುಡಿಯಲ್ (ವಾಗೀ. ದೇ. ೨೬೪-೯); ಛಾಂದಸ ಬಿಡುವೊಡಿನಿತು ಸುಡುನುಡಿಯೇಕೆ (ಅನಂಪು. ೪-೧೭ ವ). [ಸುಡು + ನುಡಿ]

ಸುಡುಬಾಡು (ನಾ). ಸುಟ್ಟ ಅಡಗು,—ಮಾಂಸ: "ಸುಂಟಗೆಯುಂದುಂ ಕೊಟ್ಟಸಮಂದುಂ ಸುಡುಬಾಡು" (ಕಶಾ. ೫೨-೧೨೪); ಸುಡುಬಾಡಂ ಸುಟ್ಟಾ ಸುಂಟಗೆಯಂ ತಡೆಯದೆ ಮೆಲ್ದು (ಜಜಚಾ. ೭-೨೫). [ಸುಡು + ಬಾಡು]

ಸುಡುಬಿಸಿಲು 'ಸುಡುವಿಸಿಲ್' ನೋ.

ಸುಡುಮಣ್ಣು (ನಾ). ಎಲೆ, ಕಸ, ಕಡ್ಡಿ ಮುಂತಾದುವುಗಳನ್ನು ಮಣ್ಣೆನೊಡನೆ ಸೇರಿಸಿ ಸುಟ್ಟು ತಯಾರಿಸುವ ಗೊಬ್ಬರ: ಸುಡುಗಾಡ ಕಿಚ್ಚಂತೆ ದಳ್ಳಿಸುವನೊಬ್ಬನೇಂ ನೋಡಿದೊಡೆ ಪೂಲದರೆಯ ಸುಡುಮಣ್ಣ ಗೆಯ್ಮೆ (ಕಾಲೂಢ. ೧೧೯-೨೨೩).

[ಸುಡು + ಮಣ್ಣು (< ಮಣ್)]

ಸುಡುಮಿಡು (ಕ್ರಿ). ಚಡಪಡಿಸು: ನಿಲಲೆಡೆಯಿಲ್ಲದಡಹಡಿಸಿ ಸುಡುಮಿಡುವಂದು ನಡನಡನಡುಗಿ (ಅಜಿಪು. ೧೧-೧೦ ವ). [?]

ಸುಡುಮೆಯ್ (ನಾ). (ಜ್ವರದಿಂದ) ಕಾವೇರಿದ ಶರೀರ: ಸುಡುಮೆಯ್ ಕುಷ್ಠಶರೀರಿಯಾಗಲೊಲಿವರ್ ಪೊನ್ನಿತ್ತೊಡಂ ಸೂಳೆಯರ್ (ಸೋಮೇಶ. ೭೧).

[ಸುಡು + ಮೆಯ್]

ಸುಡುರ್ದಲೆ (ನಾ). (?): ಸುಡುರ್ದಲೆ [ಪಾಠಾಂ. ದಲೆ] ಬಿಟ್ಟ ಕಣ್ ಕಲಿಪೊಗಂ ಕಡಿಗೊಂಡುಡೆ . . . ತುಪ್ಪಮಂ ತೊಡೆದವೊಲಪ್ಪ ಮಾಸೆ ಮಿಸುಗುತ್ತಿರೆ ಬಂದನ ದೊರ್ವನೆಂದು ಬಲ್ಮಡಿದು ಯುವಾನನಲ್ಲಿಗೆ ನವೀನನವೀನರದೋತ್ಕಟಂ ಭಟಂ (ಅರ್ಧನೇ. ೬-೫೦); "ಸುಡುದಲೆ-ಬೇವ ಸಿರ" (ಪ್ರಭಣ್ಣ); ಸುಡುರ್ದಲೆ ಸಣ್ಣವುರ್ಪಳು ಮೊಗಂ . . . ಮೆಲ್ಲಡಿ ಕೊಲ್ಲಿನೋಟಮುಗ್ಗಡದ ಸುವರ್ಣಮೆಂಬವೞೊಪ್ಪಿದುದಿರ್ದ ವನೇಚರೀಜನಂ (ಪುಷ್ಪಪು. ೫-೯೦). [?]

ಸುಡುವಿಸಿಲ್, ಸುಡುಬಿಸಿಲು (ನಾ). ತೀಕ್ಷ್ಣವಾದ ಬಿಸಿಲು; ರಣಬಿಸಿಲು: ಸುಡುವಿಸಿಲ್; ಅಳ್ಳೀಡಿ ಕಾಡೊಳಲೆದಿರ್ವರುಂ ಕರಕರೆದು ಹುಡುಕಿದರು ಸೀತೆಯಂ (ಶ್ರೀರಾಮಾ. ೨೫೬-೭೪೭). **ಸುಡುಬಿಸಿಲು:** ಎಲ್ಲಿಗೆ ಹೋದಳಪ್ಪ ಈ ಸುಡುಬಿಸಿಲಿನಲ್ಲಿ (ಪದ್ಮಪ. ೧೭೮). [ಸುಡು + ಬಿಸಿಲ್]

ಸುಡುವುಣ್ (ನಾ). ಸುಟ್ಟ ಹುಣ್ಣು,—ಗಾಯ: ಸುಡುವುಣ್ಣಾದಪುದಿಂದು ನಿನ್ನಧರಮಪ್ಪಿಂಗೆಯ್ವುದಂತಾಗಿ ಮೆಯ್ ಬಡವಾಯ್ತುಕ್ಕಟದಾರೊಳಾಯ್ತು ವಿರಹಂ (ಲೀಲಾವ. ೨-೬೮). [ಸುಡು + ಪುಣ್]

ಸುಡುಸುಡನೆ (ಅ). ತೀವ್ರವಾಗಿ; ಪ್ರಖರವಾಗಿ: ಸುಡುಸುಡನೆ ಸುಡುವ ಬಿಜುಬಿಸಿಲ ಸೆಕೆಯುಸುರ ಬಿಸಿ ಹೊಡೆದುದು (ಹಚಕಾ. ೭-೯). [ಸುಡುಸುಡು + -ಅನೆ]

ಸುಡುಹ (ನಾ). ದಗ್ಧಮಾಡುವಿಕೆ; ದಹನ: "ಭರ್ಜನಂ ದಹನಮೆನಲು ಸುಡುಹಂ" (ಮಂಗರಾ. ೧೪-೯). [ಸುಡು + -ಹ (< -ಪ)]

ಸುಡ್ಡಾಸುಡ್ಡಿ (ನಾ). (?): ದುಷ್ಕರ್ಮಿ ಹೋಗದಿರು ಮಿಜಿ ಹೋದರೆ . . . ಕೆಡಹಿ ನಿಜಿಗರುಳನುಗಿವೆಂ ನಂಬಿಯೆನುತ ಕಲಿಕಾಮ ಸುಡ್ಡಾಸುಡ್ಡಿಯಿಂದಟ್ಟಿದ (ಪಾಂಡಪು. ೧೭-೨೮). "ದಿಕ್ಕಾಪಾಲು" (ಪ್ರಾಸ). [?]

ಸುಢಾಳ 'ಸುಡಾಳ' ನೋ.

ಸುಣಸೊಕ್ಕು (ನಾ). (ಆಲಂ) ದುರಹಂಕಾರ; ಅತಿಯಾದ ಗರ್ವ(?): ಜಗುನೆಯಲ್ಲಿ ಪಠಿಪರಿದು ಬೇಗಂ ಮಾಣ್ದೆರಯುಂ ಮತ್ತಂ ಸುಣಸೊಕ್ಕೆ ಕೊಣಕುತುಂ ಪಾಱೆ ದೆಸದೆಸೆಗೆ ಪರಿದು ಪಿರಿಯ ಮರಂಗಳನುಱದೆ ಕೊಂಡು ನೂಂಕಿ (ಪಂಚತಂ. ೪೬-೩); ನೀನಿಂ ಸುಣಸೊಕ್ಕುಗೆಟ್ಟಿರವಿದೇಂ ನಡೆ ಗೆಲ್ದೊಳೊಳ್ಪಿತಕ್ಕುಮೇ (ಬಂಹಾ. ೧೨-೬೮).

[? + ಸೊಕ್ಕು$_2$ (< ಸೊರ್ಕು$_2$)]

ಸುಣ್ಣ (ನಾ). ೧. (ಒಂದು ಬಗೆಯ ಬಿಳಿಯ ಭಸ್ಮದಿಂದ ಕೂಡಿದ) ಕಲ್ಲು ಅಥವಾ ಕಪ್ಪೆಚಿಪ್ಪು ಇತ್ಯಾದಿಗಳನ್ನು (ಆವಿಗೆಯಲ್ಲಿ ಅಥವಾ ಒಲೆಯಲ್ಲಿ) ಸುಟ್ಟು ತಯಾರುಮಾಡಿದ ಪದಾರ್ಥ; ಚೂರ್ಣ: "ಚೂರ್ಣಮೆನಲು ಸುಣ್ಣಂ" (ಮಂಗರಾ. ೭೮-೪); ಸುಣ್ಣಮುಮನಿಟ್ಟಿಗೆಯಂ ಸುಡುವಲ್ಲಿ ಸಾವ ಜೀವನಿಕರದೊಂದು ಹಿಂಸೆಯೊಳ್ ಪಾಪಮೆ ಮೊಕ್ಕಳಂ (ಸಮಪ. ೪-೧೨೬); ಚೂರ್ಣ — ಸುಣ್ಣ, ಚೀಲ— ಸೇಲೆ (ಶಮಪ. ೨೬೩ ಪ್ರಯೋ). ೨. ನೀರಿನಲ್ಲಿ ಕುದ್ದು ಬಿಳುಪಾದ, ಚೊಕ್ಕವಾದ ಸುಣ್ಣ; ಬೆಂದ ಸುಣ್ಣ: ಅಲ್ಲಲ್ಲಿಗೆ ಸುಣ್ಣದ ಪೊನಲ್ಬಲ್ಲಿಗೆ ರಾಸಿಗೆಯ್ದು ಕೆಂಡಂಗಳ್ (ಧರ್ಮಾಮೃ. ೩-೭೬); ಸುಣ್ಣದ ಭಂಡಿ ಬನ್ದ ಪೆರ್ವ್ವಟ್ಟೆಯ ಪಳ್ಳಮಾದುವನೆ ಮಾಡಿಸಿದಂ ಜಿನರಾಜಗೇಹಮಂ (ಎಕ. II, ೧೪೩-೧೧; 1131); ಗೋಪಾಲನೊಬ್ಬನ ಹಿಡಿದು ಮೂಗಿನ ಮೇಲೆ ಸುಣ್ಣವ ಬರೆದು ಬಿಟ್ಟರು ಹಗೆಯ ಪಟ್ಟಣಕೆ (ಕುಮಾವಿ. ೫-೩). ೩. (ತಾಂಬೂಲದಲ್ಲಿ ಬಳಸುವ ಅಥವಾ ವೀಳೆಯದೆಲೆಗೆ ಹಚ್ಚುವ) ನೆನೆಹಾಕಿ ಮೆದುಮಾಡಿದ (ಕೆನೆಯಂಥ) ಸುಣ್ಣ: ಸುಣ್ಣಮಂ ಬಱೆದ ತಿಂಬೆಗ್ಗನಂ ಪೋಲ್ಕುಂ (ಧರ್ಮಾಮೃ. ೧೩-೧೩೪); ಅಖಂಡಿತವೆ ಅಡಕೆ ಏಕೋಭಾವವೆ ಎಲೆ ಶುದ್ಧಶಿವಾಚಾರವೆ ಸುಯಿಧಾನದ ಸುಣ್ಣ ವಿವೇಕವಿಚಾರದಿಂದ ವೀಳೆಯವನವ ಧರಿಸುವುದು (ಅವಚಂ. ೮೪-೩೭೪); ಸುಣ್ಣವನೆಲೆಗೆ ಪೂಸಿದಳು (ಮೋಹತ. ೧೬-೩೪); ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ (ಗಾಡ). ೪. (ಕಟ್ಟಡಗಳ ಶುಭ್ರತೆಗಾಗಿ) ಸುಣ್ಣ ಬಳಿಯುವಿಕೆ: ಇದಕ್ಕೆ ಸುಣ್ಣಕ್ಕೆ ಸೊತೆಗಮಲ್ಲದುಣ್ಡಾತ ವಾರಣಾಸಿಯುಂ ಕವಿಲೆಯನಟೆದ . . . ಅನ್ತ ಎಚ್ಚೆಯಂಗೇಶ್ವರದ ಸ್ಥಾನಿಕ ಇ ಲೇಖ ಬರೆದೂಂ (ಮೈಆರ. ೧೯೩೮, ೬೭-೯; 906?); ಸುಣ್ಣದ ಭೀಮ ತಳ್ತಿಱೆದು ತು[ಱು]ವಂ ಮಗುರ್ಚ್ಚಿ ಸುರಲೋಕಪ್ರಾಪ್ತನಾದ (ಎಕ. VIII, ಸೊರಬ. ೧೭೧-೭; 1207).

ಸುಣ್ಣದ ಕಲ್ಲು = ಸುಟ್ಟಾಗ ಸುಣ್ಣವನ್ನು ಬಿಡುವ ಒಂದು ಬಗೆಯ ಕಲ್ಲು: "ಉಪಲಃ- ಸುಣ್ಣದ ಕಲ್ಲು" (ಒಪಧಿ. ೧೫); ಅಲ್ಲಿಂ ಬಡಗ ಬೆಲಪುತ್ತಿನ ಸುಣ್ಣದ ಕಲ್ಲ ಕುಪ್ಪೆ ಕಡವರೆಯ ಕಲ್ಲ ಪುಣುಸೆಯ ಕಲ್ಲ ಕುಪ್ಪೆಯ ಕಿಱಿಯ ಕೆಱೆ (ಸೌಇಇ. XI-i, ೧೧೬-೨೮; 1075). ಸುಣ್ಣದ ಕಾಯಿ = (ತಾಂಬೂಲಕ್ಕೆ ಬಳಸುವ) ಸುಣ್ಣವನ್ನು ತುಂಬಿಡುವ ಸಣ್ಣ ಲೋಹದ ಡಬ್ಬಿ: ಬೀಸಣಿಗೆ ಚಂಚಿ ಸುಣ್ಣದ ಕಾಯಿ (ಗುಡಿಚಾ. ೩-೫೧); ಒಂದೀಟು ಸುಣ್ಣದ ಕಾಯಿ ಇತ್ತಾಗ ಒಗೀತೀಯೇನು? (ಆಮನಿ. ೨). ಸುಣ್ಣದ ಕುಡಿಕೆ = ತಾಂಬೂಲಕ್ಕೆ ಬಳಸುವ ಸುಣ್ಣವನ್ನಿಡುವ ಚಿಕ್ಕ ಪಾತ್ರೆ: ಭರಣ ಸುಣ್ಣದ ಕುಡಿಕೆ ಮಣಿವುಪಕರಣತತಿ . . . ಹಿರಿಯ ಚಿತ್ರದ ಭಿತ್ತಿಯಿಂ ಪೂಸ ಪರಿಯೆನಿಸಿ ರಾಜಿಸಿದಪುದು ಗಣಿಕಾನಿಕೇತನವು (ಬಸಪು. ೧೨-೧೨). ಸುಣ್ಣದ ಗೂಡು = ಸುಣ್ಣವನ್ನು ಸುಡಲು ಬಳಸುವ ಆವಿಗೆ: (ಕ). ಸುಣ್ಣದ ಚೋಯಿ = ಸುಣ್ಣವನ್ನು ತಯಾರಿಸುವವನು ಅಥವಾ ಮಾರುವವನು: (ಕ). ಸುಣ್ಣದೆಲೆ = ಸುಣ್ಣ ಹಚ್ಚಿದ ವೀಳೆಯದೆಲೆ: ಸುಣ್ಣದೆಲೆಯನೊತ್ತಯಿಟ್ಟು ಮದದಾನೆಯುಮಂ ಮಾಣಿಕಮುಮನೊತ್ತವಿಡಿಸಲಟ್ಟುವ ಚಿಕ್ಕ ಪೋರ್ಕಳಿಬೊಜಂಗರುಮಂ . . . ಕತ್ತುರಿ ಬೊಜಂಗರುಮಂ ನೋಡಿ (ಪಂಪಭಾ. ೪-೮೭ ಪ).

[< ಪ್ರಾ. ಚುಣ್ಣ./ ಸಂ. ಚೂರ್ಣ./ ತಮಿ. ಚುನ್ನ; ತೆಲು. ಸುನ್ನ]

ಸುಣ್ಣಕಟ್ಟು (ನಾ). ೧. ಅಕ್ಕಿ ಮುಂತಾದ ದವಸಧಾನ್ಯಗಳು ಕೆಡದಂತೆ ಇರಲು, ಒಂದು ಗೊತ್ತಾದ ಪ್ರಮಾಣದಲ್ಲಿ ಸುಣ್ಣ ಬೆರಸುವಿಕೆ: ಸುಣ್ಣಕಟ್ಟು ಅಕ್ಕಿಯ ಅನ್ನ ರುಚಿಯಾಗುವುದಿಲ್ಲ (ರೂಢಿ). ೨. ಒಣಶುಂಠಿಯ ಪುಡಿಗೆ ನೀರನ್ನು ಬೆರಸಿ, ಔಷಧವಾಗಿ ಉಪಯೋಗಿಸುವ ಅದರ ತಿಳಿ: (ಕ). [ಸುಣ್ಣ + ಕಟ್ಟು$_3$]

ಸುಣ್ಣಕಲ್ (ನಾ). ಸುಟ್ಟಾಗ ಸುಣ್ಣವನ್ನು ಬಿಡುವ ಒಂದು ಬಗೆಯ ಕಲ್ಲು: ಪೆತ್ತರೊಡಲೊಳು ಸುಣ್ಣಕಲ್ಗುದಿವಂತೆ ಮಾಳ್ಪೆ (ವರ್ಧಚಿ. ೭-೨೬); ಪನ್ನೀರ ಚೆಲ್ಲಿದಳ ವಳುರಸ್ಸ್ಥಳದಿ ಅಲ್ಲಿಯಬಲ್ಲಿ ಭೋರ್ಗರೆಯುತಿರ್ದುವು ಸುಣ್ಣಕಲ್ಲಿಗೆ ನೀರೆಚೆದಂತೆ (ಮೋಹತ. ೨೭-೬೦); ಮಳಲರಗು ಸಾಸಿವೆಗದಡು ಸುಣ್ಣಕಲ್ಲಂಬಲಿಗಳುಂ ಸುರಿದುವು (ಚಿಬಪು. ೪೨-೩೨). [ಸುಣ್ಣ + ಕಲ್$_3$]

ಸುಣ್ಣಕಾಯಿ (ನಾ). ತಾಂಬೂಲಕ್ಕೆ ಬಳಸುವ ಸುಣ್ಣವನ್ನು ತುಂಬಿಡುವ ಚಿಕ್ಕ ಲೋಹದ ಡಬ್ಬಿ: ಸೂಳೆಯ ಮನೆಗೋಗ್ಯಾಗ ಸುಣ್ಣಕಾಯ ಮರೆತಾನು (ಕಜಕಾ. ೭೭).

[ದೇ. ॥ ತುಳು. ಸುಣ್ಣದ ಕಾಯಿ; ತೆಲು. ಸುನ್ನಪುಕಾಯ]

ಸುಣ್ಣಕೊಲೆ 'ಸುಣ್ಣಕೊಲ್ಲಿ' ನೋ.

ಸುಣ್ಣಕೊಲ್ಲಿ, ಸುಣ್ಣಕೊಲೆ (ನಾ). ಒಂದು ಸ್ಥಳದ ಹೆಸರು (?): ಸುಣ್ಣಕ್ಕೊಲ್ಲಿಯೊಳ್ ಕು(ಕೂ)ಡಿತ್ತು (ಇಆ. XVIII, ೩೭೮-೨೬; 8ನೆಯ ಶತ). ಸುಣ್ಣಕೊಲೆ: ಅನ್ತೆ ಬನ್ದು ಸುಣ್ಣಕೊಲೆ ಮೂಡಣ ಬೇಲಿಯಿಂ ಅನ್ತೆ ಬನ್ದು ವಾಡಿಎರೆಯ ತೆಂಕಣ ಬೇಲಿಯಿಂ (ಎಕ. III, ನಂಜನ. ೧೫೯-೨೦; 915 ?). [?]

ಸುಣ್ಣಗತ್ತನೀರು (ನಾ). ಸುಣ್ಣ ಕುದಿಸಿದ ನೀರು (?): ಆ ಪುರರಕ್ಷಕನ ಪಿಡಿತರಿಸಿ ಚೇರುಬಂದ ಚಮ್ಮಟಿಗೆ ಕಕ್ಕಡ ಸುಣ್ಣಗತ್ತನೀರು ಮುಂತಾದವಂ ತರಿಸಿ (ನನ್ನಚಾ. ೩-೪೫ ಪ). [ಸುಣ್ಣ + ? + ನೀರು$_1$ (< ನೀರ್)]

ಸುಣ್ಣಗದಡು (ನಾ). ಸುಣ್ಣವನ್ನು ಕಲಕಿದ ನೀರು; ಸುಣ್ಣದ ರಾಡಿ: ಕರಗಿ ಕಾದ ಸೀಸವನ್ನು ಎಚ್ಚೆದು ಬಾಯೊಳಿರದೆ ಸುಣ್ಣಗದಡಂ ತುಂಬಿಸಿ (ಸುಸಾರ. ೭೫-೩).

[ಸುಣ್ಣ + ಕದಡು$_2$]

ಸುಣ್ಣಗಾರ$_1$ 'ಸುಣ್ಣಗಾಱ' ನೋ.

ಸುಣ್ಣಗಾರ$_2$ (ನಾ). ಸುಣ್ಣದ ತಿಳಿ; ಸುಣ್ಣದ ಕ್ವಾರ (?): ನೆಲಗಡಿವಡಿದು ಆಲಗಾಣದಲ್ಲಿ ಹಿಂಡುವಟ್ಟ ಕಬ್ಬಿನ ಜೀವರಸವದು ಸುಣ್ಣಗಾರಕ್ಕೆ ಮೆಯ್ಗೊಟ್ಟು ತನಿಗುದಿಪದಿಂದ ಸಕ್ಕರೆಯಾಗಿಯೇ ಅಣ್ಣೆವಾಲನ್ನು ಧನ್ಯಮಾಡಿಕೊಳ್ಳಬೇಕಾಗಿದೆ (ಮಂತ್ರಶ. ೧೫೯-೪). [ಸುಣ್ಣ + ಕಾರ$_2$]

ಸುಣ್ಣಗಾರ್ತಿ (ನಾ). ಸುಣ್ಣವನ್ನು ತಯಾರಿಸುವವಳು: ಮಣಗಾರ್ತಿ, ಆಳುಗಾರ್ತಿ, ಸುಣ್ಣಗಾರ್ತಿ (ಭಾಷಾಭೂ. ೧೯೪ ಪ್ರಯೋ). [ಸುಣ್ಣಗಾಱ + -ತಿ$_1$ (<— ಇತ್ತಿ)]

ಸುಣ್ಣಗಾಱ, ಸುಣ್ಣಗಾರ$_1$ (ನಾ). ಸುಣ್ಣವನ್ನು ತಯಾರಿಸುವವನು: ಕುಂಬಗಾಱಂ, ಸುಣ್ಣಗಾಱಂ (ಭಾಷಾಭೂ. ೧೯೧ ಪ್ರಯೋ). ಸುಣ್ಣಗಾರ$_1$: ಸುಣ್ಣಗಾರ ಸಿದ್ದನ ಹೊಲದ ಬಡಗ ತೆವರ ಮೂನಲ್ಮೂರ ದನದ ವೋಣೇ ಪ (ಎಕ. V (R), ತಿರುಮ. ೧೬-೯೦೯; 1749).

[ಸುಣ್ಣ + -ಕಾಱ]

ಸುಣ್ಣಗುದಿ (ನಾ). ಕುದಿಯುವ ಸುಣ್ಣ; ಮರಳುತ್ತಿರುವ ಸುಣ್ಣ: ದುಣ್ಣರನು ಬಂದೆನ್ನ ಸುಣ್ಣಗುದಿಯೊಳಗದ್ದಿ ಬಿಣ್ಣೆತ್ತುವೆಟ್ಟಗಳ ಪೊಱೆಸಿದವನು (ಪ್ರಭುಪು. ೩-೧೦೦).

[ಸುಣ್ಣ + ಕುದಿ$_3$]

ಸುಣ್ಣಗೆಲಸ (ನಾ). (ಕಟ್ಟಡಗಳಿಗೆ) ಸುಣ್ಣ, ಗಾರೆ ಮುಂತಾದುವನ್ನು ಬಳಿಯುವ ಕೆಲಸ: ಸುಣ್ಣಗೆಲಸವನು ಮಾಡಿಸಿ ಯಿ ದೇವಾಲ್ಯದ ಮುನ್ದಣ ಬಾಗಿಲ ಪಡಸಾಲೆ XXX ಮಾಡಿಸಿ (ಎಕ. XII, ಗುಬ್ಬಿ. ೨೯-೨೩; 1470). [ಸುಣ್ಣ + ಕೆಲಸ]

ಸುಣ್ಣಜಾಡ (ನಾ). ಸುಣ್ಣದ ರಾಡಿ: ಆಡಬಾರದ ಮಾತುಗಳನ್ನಾಡಿದ ತಪ್ಪಿಗಾಗಿ ಇವನ ಮುಖಕ್ಕೆ ಸುಣ್ಣಜಾಡವನ್ನು ಬಳಿದುಬಿಡಿ! (ಯಚ್ಚಮು. ೬).

[ಸುಣ್ಣ + ಜಾಡ$_7$]

ಸುಣ್ಣನೀರ್ (ನಾ). ಸುಣ್ಣವನ್ನು ಕಲಸಿದ ನೀರು; ಸುಣ್ಣದ ತಿಳಿ: ಒಳಲೆಗಳಂ ಕೌಚಿ ಮೇಣ್ ಸುಣ್ಣನೀರ್ ಮುನ್ನೆಲೆಯೊಳ್ ತೋರ್ಪಂತೆ ತುಂಬಿಟ್ಟು (ಚಕವಿ. ೩-೫೬).

[ಸುಣ್ಣ + ನೀರ್]

ಸುಣ್ಣಪಾರೆ (ನಾ). = ಸುಣ್ಣಕಲ್: "ಕಟುಶರ್ಕರಾ — ಸುಣ್ಣಪಾರೆ, ಸುಣ್ಣಕಲ್ಲು" (ಒಪಧಿ. ೨೭). [ಸುಣ್ಣ + ಪಾರ್$_2$]

ಸುಣ್ಣಬಳಿ (ಕ್ರಿ). (ಕಟ್ಟಡದ ಶುಭ್ರತೆಗಾಗಿ) ಸುಣ್ಣವನ್ನು ಬಳಿ,— ಹಚ್ಚು: ಕಟ್ಟಡಕ್ಕೆ ಸುಣ್ಣಬಳಿಯುವ ಕೆಲಸ ಇನ್ನೂ ಮುಗಿದಿಲ್ಲ (ರೂಢಿ).

[ಸುಣ್ಣ + ಬಳಿ$_1$ (< ಬಟ್ಟಿ$_1$)]

ಸುಣ್ಣಬೇವು (ನಾ). ಬೇಯುವ ಸುಣ್ಣ: ಕಲ್ ಸುಣ್ಣಬೇವಾಯ್ತು ಮಟಲ್ ಹುರಿಗಡಲೆಯ ಮುಮ್ಮುಱಿಯಾಯ್ತು (ರಾಮಾಶ್ವ. ೫೨-೩); "ಸುಣ್ಣ ಬೇಯುವಿಕೆ; ತೀವ್ರವಾದ ಬಿಸುಪು" (ರಾಮಾಶ್ವ. ತ. ೧೬೫). [ಸುಣ್ಣ + ಬೇವು]

ಸುಣ್ಣವರಲ್ (ನಾ). = ಸುಣ್ಣಕಲ್: ಎಣ್ಣೆಗೊಡ ಸುಣ್ಣವರಲ ಕೊಪ್ಪರಿಗೆ . . . ಬಿಡದೆಸೆದುವು ದುರ್ಗದೊಳಗೆ (ಕುರಾಸಾಂ. ೪೨-೩೮). [ಸುಣ್ಣ + ಪರಲ್]

ಸುಣ್ಣಸೊದೆ, ಸುಣ್ಣಸೋತೆ (ನಾ). (ಕಟ್ಟಿಡದ ಶುಭ್ರತೆಗಾಗಿ ಹಚ್ಚುವ) ಸುಣ್ಣ, ಗಾರೆ ಮುಂತಾದ ಲೇಪನವಸ್ತು: ಸುಣ್ಣಸೊದೆಯಂ ತಳೆದು ಮನೆಮನೆಯ ಗೋಡೆಗಳ್ ಬೆಳ್ಳಿಯಾದುವು ಚೈತ್ರದಾತಪದಿ (ಶ್ರೀರಾಮಾ. ೮೬೦-೨೫೮). **ಸುಣ್ಣಸೋತೆ:** ದೇಗುಲದ ಮಾಟ ಕೂಟ ಸುಣ್ಣಸೋತೆಗಂ ಉಕ್ಕುಳಗಾವೆಯ ಬಡಗವೊಲದ ಹೊಲಮೇರೆಯ ಹೊ[ಟ್ಟ]ಕರಿಯ ಕೆಯ ಘಳೆಯ ಮತ್ತರು ೪ (ನಾಂದೇಡ್. ೩೫-೯; 1149). [ಸುಣ್ಣ + ಸೊದೆ]

ಸುಣ್ಣಸೋತೆ 'ಸುಣ್ಣಸೊದೆ' ನೋ.

ಸುಣ್ಣಹಚ್ಚು (ಕ್ರಿ). ಸುಣ್ಣವನ್ನು ಬಳಿ,—ಲೇಪಿಸು: ಸುಣ್ಣ ಹಚ್ಚಿಕೊಂಡರೆ ತಣ್ಣಗಾದೀತೇ? (ಗಾದೆ). [ಸುಣ್ಣ + ಹಚ್ಚು$_1$ (< ಪಚ್ಚು$_3$)]

ಸುಣ್ಣಹುಯ್ಯು (ಕ್ರಿ). = ಸುಣ್ಣಬಳಿ: ಮನೆಗೆ ಸುಣ್ಣಹುಯ್ಯುವಾಗ ಅದನ್ನು ತೆಗೆದುಕೊಂಡು ಹೋಗಿ ಎಲ್ಲಿಯೋ ಒಳಗಡೆ ಅತ್ತೆಯ್ಯನು ಇಟ್ಟಿದ್ದರು (ಚಿಂಗಾಳ್ಳ. ೨೫೩). [ಸುಣ್ಣ + ಹುಯ್ಯು$_2$ (< ಪೊಯ್$_2$)]

ಸುಣ್ಣಹೊಡೆ (ಕ್ರಿ). = ಸುಣ್ಣಬಳಿ: ನಮ್ಮ ಮನೆಗೆ ಸುಣ್ಣಹೊಡೆದಿಲ್ಲ (ರೂಢಿ). [ಸುಣ್ಣ + ಹೊಡೆ$_1$ (< ಪೊಡೆ$_1$)]

ಸುತ (ಗು). ೧. ಸುರಿದ; ಚೆಲ್ಲಿದ. ೨. ಹುಟ್ಟಿದ; ಜನ್ಮತಳೆದ. (ನಾ). ೩. ಮಗು; ಶಿಶು: "ಸೂನುಃ . . . ಸುತಃ . . . ಅಪತ್ಯಂ — ಈ ೧೨ ಮಗುವು" (ಹಲಾಯು. ೮೨-೩೪೩); ಕಳಹಂಸಂ ಸುಱಿಯದ ಪೂಗೊಳಂ . . . ಸುತನಾಡದಂಗಳಂ ರಂಜಿಕುಮೇ (ಜಗವಿ. ೨-೬೬). ೪. ಮಗ; ತನುಜ: ಕೃಪೆಯಿಂದಂ ನಡೆತಂದು ನಂಬಿದ ಸುತಂ ಸಂಸಾರದೊಳ್ ನೋಯಲಿರ್ದ (ನಂಬಿರ. ೮ ಸೂಚನಾಪದ್ಯ); ಸುತನಿರ್ದೇಂ ಮುಪ್ಪಿನಲ್ಲಾಗದಾ (ಸೋಮೇಶ್ವ. ೧೬). ೫. ಪ್ರಭು; ಅರಸು. ೬. [ಜ್ಯೋತಿ] ಲಗ್ನದಿಂದ ಐದನೆಯ ಸ್ಥಾನ: ಅಮರೇಜ್ಯಂ . . . ಮಂದನಿಂ ತ್ರಿತಯಾರಾತಿ ಸುತಾಂತ್ಯದೊಳ್ . . . ಶುಭದಂ (ಜಾತಕ. ೧೦-೧೧). [ಸಂ.]

ಸುತದೋಹಳ (ನಾ). ಮಗನನ್ನು ಪಡೆಯುವ ಆಸೆ; ಪುತ್ರದೋಹಳ: ಸುತದೋಹಳಧೃತೆ ವಿಜಯಾವತಿಸತಿಯೊಕ್ಕಿಸೆ ಕಟಾಕ್ಷಸಂಜ್ಞೆಯೊಳರಸಂಗತಿಮುದದ ಬಿನ್ನವಿಸಲುದ್ಯತೆಯಾದಳ್ ನೆಗೆಟ್ಟ ಹರ್ಷವರ್ಧನೆಯಾಗಳ್ (ಕುಸುಮಾ. ೩-೫೨). [ಸಂ. ಸುತದೋಹಲ]

ಸುತಪ (ನಾ). ೧. ಒಳ್ಳೆಯ ತಪಸ್ಸು; ಶ್ರೇಷ್ಠವಾದ ತಪ: ದೀಕ್ಷೆಗೆ ಸುತಪಂ ಫಲಮೆನೆ ನೆಗಟ್ಟುದದೆ ಬೋಧಿ ವಲಂ (ಪುಷ್ಪಪು. ೧೩-೫೪). ೨. ಪರಮಾತ್ಮ: ಸುತಪ ಏಕೋತ್ತರ ಸುಪಂಚಾಶತವರಣಕರಣದಿ ಚತುರ್ವಿಂಶತಿಸುತತ್ವದಿ ಧಾತುಗಳೊಳಗಿದ್ದು ವಿರತಾನಿರುದ್ಧ (ಹಸಾರ. ೪-೨೩). [ಸಂ.]

ಸುತಮೋಹ (ನಾ). ಮಗನ ಮೇಲಿನ ಮೋಹ: ಸುತಮೋಹದೆ ಪಿತೃಮೋಹದೆ ಪಿತೃಸುತರೊಡವಂದರಶ್ರುಪೂರಿತನಯನರ್ (ಅಜಿಪು. ೬-೮೯); ಸುತಮೋಹದಿನೀ ವಧು ಪತಿಹಿತಮಂ ಭಾವಿಸಿದಳೆಲ್ಲ (ಪಂಪಾಮಾ. ೬-೧೧೮). [ಸಂ.]

ಸುತರಂಗೆ (ನಾ). ಒಳ್ಳೆಯ ಅಲೆಗಳುಳ್ಳವಳು; ಗಂಗೆ: ತರತರದ ಸೀಕರದ ಭೀಕರದತುಳಗಂಗೆ ಸುತರಂಗೆ ನೋಳ್ಪಂಗೆ ಸಲೆ ಕಣ್ಗೆಸೆದಳಂದು ದಿವಿಜಸಿಂಧು (ಚೈಮಿಭಾ. ೯-೨೪). [ಸಂ. ಸುತರಂಗಾ (ಸು + ತರಂಗ + -)]

ಸುತರಾಂ (ಅ). ೧. ಪೂರ್ತಿಯಾಗಿ; ಪೂರಾ: ಜಲವೂ ಮಲವೂ ಸುತರಾಂ ಬದ್ಧಿಸಿಹೋದರೆ ಶರೀರವು ಬಹಳ ಅನಾರೋಗ್ಯಸ್ಥಿತಿಯಲ್ಲಿರುತ್ತದೆಯೆಂದು ಗೊತ್ತಾಗುವುದು (ಗ್ರಾಮಾಕ. ೧೧೮); ಈಗಂತೂ ಸುತರಾಂ ಸೊನ್ನೆನೆ (ಚಿಂಗೂಲಿ. ೧೦). ೨. ಸರ್ವಥಾ; ಖಂಡಿತವಾಗಿ: ಇವಳನ್ನು ತುಮಕೂರಿಗೆ ಕಳಿಸುವುದಕ್ಕೆ ನಾನು ಸುತರಾಂ ಒಪ್ಪುವುದಿಲ್ಲ (ಮಹಾಗ. ೪೪); ಅಂತಹ ಕಟ್ಟುಮಸ್ತಾದ ಆಳಲ್ಲ. ಆ ಹುಡುಗಿಗೆ ಸುತರಾಂ ಲಾಯಕ್ಕಲ್ಲ (ಶಿವರಾ. ೧೦೯); ಪಾಂಡವರಿಗೆ ರಾಜ್ಯಕೊಡುವುದರಲ್ಲಿ ಅವನಿಗೆ ಸುತರಾಂ ಇಷ್ಟವಿಲ್ಲ (ಸಂನಾಟ. ೯೦). [ಸಂ./ ಮರಾ. ಸುತರಾಮ್, ಸುತಾರಾಮ್]

ಸುತಲ, ಸುತಳ (ನಾ). ಏಳು ಅಧೋಲೋಕಗಳಲ್ಲಿ ಒಂದು. ಸುತಳ: "ತಳ ಮತ್ತತಳ ವಿತಳ ಸುತಳಂ ರಸಾತಳ ತಳಾತಳಮು ಪಾತಾಳಮೆಂದು ವರ್ತಿಸುವ ತಳಲೋಕಮೇಟಕ್ಕು" (ಮಂಗರಾ. ೧೦-೩೨); ಪಾತಾಳ ಮಹಾತಳ ರಸಾತಳ ತಳಾತಳ ಸುತಳ ವಿತಳ . . . ಸಪ್ತಪಾತಾಳಂಗಳ್ (ವಿವೇಕ. ೧೬೦); ಅತಳದಾಶ್ಚರ್ಯಮಂ ವಿತಳದ ವಿಚಿತ್ರಮಂ ಸುತಳದ ಸುರುಚಿಯಂ . . . ಅಱಿಯುತ (ಚೈಮಿಭಾ. ೨೪-೧೨). [ಸಂ.]

ಸುತಲಾಭ (ನಾ). ಮಗನನ್ನು ಪಡೆಯುವುದು: ಅಪ್ರತಿಹತ ಸುತಲಾಭ ನಿವೇದಕವಾರ್ತೆ ತೀವೆ ಪುಳಕಮನಾಂತಳ್ (ಜಗವಿ. ೨-೮೬); ಆ ಶ್ವೇತಕೀರ್ತಿ ಸುತಲಾಭ ಶತ್ರುಕ್ಷಯಂ ಶಾಶ್ವತಸ್ವರ್ಗಭೋಗಂಗಳಾದುವು (ಚೈಮಿಭಾ. ೩೪-೪೨). [ಸಂ.]

ಸುತಲಾಭಾರ್ಥಿ (ನಾ). ಮಗನನ್ನು ಪಡೆಯಬೇಕೆಂಬ ಆಸೆಯುಳ್ಳ ವ್ಯಕ್ತಿ; ಪುತ್ರಾರ್ಥಿ: ಸುತಲಾಭಾರ್ಥಿ ವಿಶೇಷತೀರ್ಥಜಲದಿಂ . . . ಜಿನಪಾದಾಭ್ಯರ್ಚನಂ ಮಾಡಿದಳ್ (ಮಲ್ಲಿಪು. ೪-೨೬). [ಸಂ. ಸುತಲಾಭಾರ್ಥಿನ್]

ಸುತಶೋಕ (ನಾ). ಮಗನ ಅಗಲಿಕೆಯಿಂದ ಉಂಟಾಗುವ ದುಃಖ: ಸುತಶೋಕೋದ್ರೇಕದಿಂ ಸ್ಕಂಧವನನಱಿವೆನೆಂದರ್ಜುನಂ ಪೂಣ್ದಂ (ಪಂಪಭಾ. ೧೧-೧೨೬). [ಸಂ.]

ಸುತಶ್ರೇಣಿ (ನಾ). ಒಂದು ಬಗೆಯ ವನಸ್ಪತಿ; ಇಲಿಕಿವಿಗಿಡ: "ಚಿತ್ರಾ . . . ಸುತಶ್ರೇಣೀ, ರಂಡಾ, ಮೂಷಕಪರ್ಣೀ, ಎಲಿಯಾಲದ ಮರಕ್ಕೆ ಹೆಸರು, ಇಲಿಕಿಮಿಗಿಡ" (ಸಿದ್ಧಾಂತಿ. ೧೩೨). [ಸಂ. ಸುತಶ್ರೇಣೀ]

ಸುತಳ 'ಸುತಲ' ನೋ.

ಸುತಾನ (ನಾ). ಇಂಪಾದ ಸ್ವರ; ಮಧುರಸ್ವರ: ವೀಣೆಯಂ ಗಾನಿ ಬಾಜಿಸೆ ಸುತಾನಂ ತಾನತಾನಮಾಗುಣ್ಮದೊಡೆ ಬಂದ ಕೊಱತೆ ಗಾನಿಗೋ ವೀಣೆಗೋ (ಪದ್ಮರಾ. ೧-೩); ಸ್ಥಾಯಿ ಸಂಚಾರಿಗಳ ಸರಿಗಮಪಧನಿಯ ಸರದಾಯತದ ಶುದ್ಧ ಸಂಕೀರ್ಣ ಸಾಳಗದ ಪೂರಾಯತ ಸುತಾನಂಗಳಂ . . . ಸೊಗಸುಗೊಳಿಸಿ (ಚೈಮಿಭಾ. ೨೧-೫೮). [ಸಂ.]

ಸುತಾಹೃತಿ (ನಾ). ಮಗನನ್ನು ಅಪಹರಿಸುವುದು: ದಾನವನಿನಾದ ಸುತಾಹೃತಿಯೊಳ್ ಪೊದಟ್ಟ ನಿನ್ನಾಧಿಯನಾನಭೀಕ್ಷಿಸಿ ಗುಣಪ್ರಣಯಿತ್ವದ ಬಂದೆನಲ್ತೆ (ಚಂದ್ರಪು. ೫-೩೦). [ಸಂ.]

ಸುತಾಳಿಸು, ಸುತ್ತಾಳಿಸು (ಕ್ರಿ). ಬೀಸು (?): ತೋರಗದೆಯ ಸುತಾಳಿಸಿ ಮುಂಗಾರ ಮುಗಿಲಂತೆ ಮೊಳಗಿ (ನಾಗಕು. ೧೮-೧೧೩). **ಸುತ್ತಾಳಿಸು:** ಬಾಳೇಂದು ಕೈದು ವನುದ್ದಕಿಟ್ಟಾಂತು ಸುತ್ತಾಳಿಸಿ ಖಡ್ಗಖಡ್ಗದೊಳು ಏಳಿತಿ ಹಿಂದು ಮುಂದಕೆ ನಡೆದರು (ಭರಟ. ೬೩-೨೨). [ಸುತಾಳನ್ + - ಇಸು$_3$]

ಸುತಿ (ನಾ). ೧. ವೇದ; ಶ್ರುತಿ: "ಓದು, ಪಟವಾತು, ಬೇದಂ, ಸುತಿ — ಈ ೪ ವೇದಂ" (ಕಶಸಾ. ೫೭-೨೪೨); ನೆಲನೇ ತೇರ್ ಸಸಿ ಬಿಸುಗದಿರರೆ ಗಾಲಿ ಒಗ್ಗುವಡೆದ ಸುತಿಯೇ ಕುದುರೆಗಳ್ (ಉದ್ಧವ. ೪-೪೬); ಸುತಿಯೊರೆದ ಕಾರಣದಿನಿದಱಿಂ ಬಳಿಕೆ ನೀನತಿ ಶುಚಿರ್ಭೂತನಾಗೆಂದು ಕೊಡೆ (ಸಿದ್ಧೇಪು. ೬-೫೩). ೨. [ಸಂಗೀತ] ಗಾಯನ, ವಾದನಪ್ರಯೋಗಕ್ಕೆ ಆಧಾರವೆಂದು ಇಟ್ಟುಕೊಳ್ಳುವ ಸ್ವರ: ಪದಕೊರಲಿಂಪ ನಪ್ಪುಕೆಯೆ [ಕೊಂಕು ನ]ಯಂ ಗಮಕಂಗಳಿಂ ಪೊದರ್ಕೊದಳೆಱೆದಿಕ್ಕಿದಂತೆ ಸುತಿಯೊಳ್ ಸಮವಾಗಿರೆ ಜಾಣನಾಂತು . . . ಪಾಡಿದಳ್ (ಪಂಪಭಾ. ೭-೮೮); ಸಮಶುದ್ಧಸ್ಫುಟ ಮಪ್ಪುದೊಂದು ಸುತಿಯಂ ಪ್ರಾರಂಭಿಗಂ ಮಾಡೆ (ಶಾಂತಿಪು. ೧೦-೩೫). ೩. ಒಂದು ಬಗೆಯ ವಾದ್ಯ: ಸುತಿ ಮೌರಿ ಡೋಲು ತಂಬಟೆ . . . ಮಾರ್ದನಿಗುಟ್ಟಿದುದು (ಅದ್ಭುತ. ೩೨-೧೦). [< ಸಂ. ಶ್ರುತಿ]

ಸುತಿಗುಡು (ಕ್ರಿ). ಗಾಯನವಾದನ ವ್ಯವಹಾರದಲ್ಲಿ ಆಧಾರಸ್ವರವಾಗಿ ಸೇರು, — ಒಂದುಗೂಡು,— ಹೊಂದಿಕೊಳ್ಳು: ಪೂಗೊಯ್ಯ ಪುಳಿಂದಿ ಪಾಡುವ ಸಂಗೀತ ದಿಂಚರಕ್ಕೆ ಸು[ಪಾಠಾಂ. ಶ್ರು]ತಿಗುಡುವಂತೆಸೆವ ಪವನಪೂರಿತಕೀಚಕರಂಧ್ರನಿನದಕ್ಕೆ ಪೆಡೆಯೆತ್ತಿ ನಿಲುಂಬಿ ನಲಿವ ಫಣಿಗಳಿಂ (ರಾಜಶೇ. ೫ ೫೫ ವ). [ಸುತಿ + ಕುಡು$_1$ (< ಕೊಡು$_1$)]

ಸುತಿಗೂಡು (ಕ್ರಿ). ಗಾಯನವಾದನಗಳಲ್ಲಿ ಆಧಾರವೆಂದು ಇಟ್ಟುಕೊಂಡ ಸ್ವರಸ್ಥಾಯಿಯೊಡನೆ ಹೊಂದಿಕೊಳ್ಳು; ಶ್ರುತಿಗೂಡು: ಒಸೆದು ನೃಪಾಳನಾಡಿಸಿದ ಸೋಗೆಗಳಂತಿವು ಚಕ್ರಿ ಬೀಣೆ ಬಾಜಿಸೆ ಸುತಿಗೂಡಿ ತಾರಯಿಪ ತುಂಬಿಗಳಂತಿವು (ವರ್ಧಪು. ೫-೬೧); ಅಣಿಯಿಂ ನಾಲ್ವಡಿಕೃಷ್ಣರಾಜನೊಲವಿಂದಂ ಬೀಣೆಯಂ ಕೊಂಡು ಬಿನ್ನಣದಿಂದಂ ಸುತಿಗೂಡೆ ಕೂಡೆ ಲಯಮುಂ ತಾಳಂಗುಡಲ್ ಸ್ಥಾಯಿಯೊಳ್ (ಮೃಸೂಮ. ೫-೪೨). [ಸುತಿ + ಕೂಡು$_1$]

ಸುತೀಕ್ಷ್ಣ (ಗು). ೧. ಬಹಳ ತೀಕ್ಷ್ಣತೆಯುಳ್ಳ,— ಹರಿತವಾದ: ಆತನ ಮುಖದಲ್ಲಿ . . . ಯಾವ ಒಂದು ಉಜ್ವಲ ಸುತೀಕ್ಷ್ಣಶಕ್ತಿಯನ್ನು ನೋಡಿದೆನೋ ಅದನ್ನು ಇಂದಿಗೂ ಮರೆತಿಲ್ಲ (ಬಂಕಿಮ. ೨೫. ಮುನ್ನುಡಿ). (ನಾ). ೨. ಒಂದು ನರಕದ ಹೆಸರು: ಸದಮನ ಸುತೀಕ್ಷ್ಣ . . . ಶತಮಹಾಶನಮೆಂಬೈದು ಮಂತ್ರಿನರಕಂಗಳಂ ಪರಿವೇಷ್ಟಿಸಿ ಸುಘೋರವೆಂಬರಸುನರಕವಿಹುದು (ವಿವೇಕ. ೧೫೨). [ಸಂ.]

ಸುತೆ (ನಾ). ಮಗಳು; ತನುಜೆ: "ಪೆಣ್ ದುಹಿತನಂದನೆ ಪುತ್ರಿ ಸುತೆಯೆನಿಕ್ಕುಂ" (ಮಂಗರಾ. ೧೧-೯); ಸುತೆಯಂ ಕೊಟ್ಟೆನಗಮಿಳಕ್ಷಿತಿಯುಮನಾಳ್ದಿರದೆ ಸುಖದಿನತಿಚಪಳಂ ದುರ್ಮತಿಯಾಗಿ ಬೆಚ್ಚಿ ಪೋಪೊಂದತಿಶಯಮೇಕೆ (ಧರ್ಮಾಮೃ. ೧೦-೧೦೧); ಸುತೆಯುಂ ನುತೆಯುಂ ಜಿತಸುರಸತಿತತಿಯಂ ರಾಜಮತಿಯನತ್ಯೂರ್ಜಿತಭೂಪತಿಸುತೆಯರಂದು ಪಂಚಕಶತಮಿತೆಯರ್ವೆರಸು ತರಿಸಿದಂ ಹರಿ ಭರದಿಂ (ನೇಮಿಪು. ೧೩-೫೦); ಸುತೆಯ ನತಿಶಯ ಸುರೂಪೋನ್ನತಿಯಂ ಬರವೇಳ್ದು (ಶಾಂತೀಶ್ವ. ೯-೧೧). [ಸಂ. ಸುತಾ]

ಸುತ್ತ 'ಸುತ್ತುಂ' ನೋ.

ಸುತ್ತಂ 'ಸುತ್ತುಂ' ನೋ.

ಸುತ್ತಣ 'ಸುತ್ತು$_2$' ಪರಾ.

ಸುತ್ತಣಿ (ನಾ). (ವೀರೋಚಿತವಾದ) ಅಲಂಕಾರವಿಶೇಷ,— ಭೂಷಣ: ಮಣಿಕಟಿಯ ಸರಪಳಿಯ ಸರ ಮೊಚ್ಚೆಯದ ಸುತ್ತಣಿಯ . . . ಬಿರುದಿನ ಭಟ (ತೊರರಾ. ೬-೨೯-೧೩). [?]

ಸುತ್ತಮುತ್ತ 'ಸುತ್ತುಮುತ್ತು' ನೋ.

ಸುತ್ತಮುತ್ತಲು 'ಸುತ್ತುಮುತ್ತು' ಪರಾ.

ಸುತ್ತರಿ 'ಸುತ್ತುವರಿ' ನೋ.

ಸುತ್ತಲ್ 'ಸುತ್ತು$_2$' ಪರಾ.

ಸುತ್ತಲಿಸು (ಕ್ರಿ). ಬಳಸು; ಸುತ್ತುಗಟ್ಟು: ಕೆಲಬರು ಸುತ್ತಲಿಸಿಕೊಂಡು . . . ಗೋವರ ಕುಸುಱಿದಱಿದರು (ಕುವಾಮಿ.ಓರಾ. ೫-೪೩). [< ಸುತ್ತು$_1$ + - ಇಸು$_1$]

ಸುತ್ತಲು 'ಸುತ್ತು$_2$' ಪರಾ.

ಸುತ್ತಳತೆ (ನಾ). ಸುತ್ತಲಿನ ಅಳತೆ; ಪರಿಧಿ: ಈ ಕೋಡಿನ ಬುಡದ ಸುತ್ತಳತೆ ಸುಮಾರು ಅರ್ಧಮೊಳ ಇರುವುದು (ಮುಂಬಯಿ. ೪-೪೭). [ಸುತ್ತು$_2$ + ಅಳತೆ]

ಸುತ್ತಳಿ 'ಸುತ್ತಟಿ' ನೋ.

ಸುತ್ತಟಿ, ಸುತ್ತಳಿ (ಕ್ರಿ). ೧. ಅಳ್ಳಕವಾಗು; ಸಡಿಲವಾಗು: ಸವಿ ಸಮನಾಗೆ ಸುತ್ತಟಿದ ತೋಳ್ ಸತವಾದರ್ದೆಯಿಂಪಲಂಪನಪ್ಪುವ ಬಗೆ ಬೀಗಿ ಬಾಯೊಳಗೆ ಸಿಲ್ಕಿದ ಬಾಯ್ . . . ರತಾಂತದೊಳ್ (ಲೀಲಾವ. ೯-೪೬); ಜಳಕೇಳಿಯೊಳಾಗಳ್ ಸುತ್ತಟಿದ ಬಟಲ್ಮುಡಿಯ ಪೊಳೆಪನಸಿತೋರಗನೀ ಸ್ಥಳದೊಳಿದೆಯೆಂದು ಭಯದಿಂ ಕೆಳದಿಯ ಕಂಧರಮನಪ್ಪಿದಳ್ ಬೇಱೊರ್ವಳ್ (ಕುಸುಮಾ. ೫-೧೪೯). **ಸುತ್ತಳಿ:** ೨. ಸುತ್ತಲಿನ ಪರಿವಾರವು ಇಲ್ಲವಾಗು (?): ಹುತ್ತೇಱಿ ಹಲುಗಿರಿದು ಹುಲುಗಟ್ಟಿ ಹಸಗೆಟ್ಟು ಸು[ಪಾಠಾಂ. ಸ]ತ್ತಳಿದು ಬತ್ತಳಿಸಿ ಹಿರಿದು ಮಂಡೆಯ ಬಿಟ್ಟು ವಿಸ್ತರಿಸಲಾಱದೆ (ಸೋಮಚಿ. ೫-೫೨). [ಸುತ್ತು$_2$ + ಅಟಿ$_1$]

ಸುತ್ತಾಟ (ನಾ). ೧. ತಿರುಗುವುದು; ಸಂಚಾರ: ಹೂವೊಡವೆ ಹೆರರ ಕೈಯಿಂದೂಟ ಹೆರರ ಕೈಯ ಸುತ್ತಾಟ (ಕಾಲೂರ. ೨೬-೧೫). ೨. ಒಂದು ಬಗೆಯ ಖಡ್ಗದ ವರಸೆ: ಸಮ್ಮಾಪಸಮ್ಮದಿಂದ ಹೊಕ್ಕು ಭ್ರಮಣಉ ಮಾಡಲ್ಪಟ್ಟಿತು ಅದು ಸುತ್ತಾಟ ಎಂಬುದೂ ಮತ್ತೊಂದಾದ ಅಲ್ಪಭ್ರಮಣಂ ಕಿರಿಸುತ್ತಾಟ ಎಂದೂ . . . ಖಡ್ಗಶಾಸ್ತ್ರ ಬಲ್ಲವರಿಂದ ನುಡಿಯಲ್ಪಡುವುದು (ಖಡ್ಗಟೀ. ೪-೨೬). [ಸುತ್ತು$_2$ + ಆಟ]

ಸುತ್ತಾಡಿಸು (ಕ್ರಿ). ೧. ಸುತ್ತು ತಿರುಗಿಸು,— ಆಡಿಸು; ಸುತ್ತ ಚಲಿಸುವಂತೆ ಮಾಡು: ಕೈಯಲ್ಲಿ ದೊಣ್ಣೆಯನ್ನು ಸುತ್ತಾಡಿಸಿದರು (ರೂಢಿ). ೨. ತಿರುಗುವಂತೆ ಮಾಡು; ಅಲೆದಾಡಿಸು: ಅವರು ಮನೆಮನೆ ಸುತ್ತಾಡಿಸಿದರು (ರೂಢಿ).

[ಸುತ್ತು$_2$ + ಆಡಿಸು]

ಸುತ್ತಾಡು (ಕ್ರಿ). ತಿರುಗು; ಅಲೆದಾಡು: ರಚೆಯೊಳು ಹತ್ತೂರು ಸುತ್ತಾಡಿ ದೂರದ ಬೊಂಬಾಯಿಯನು ಕಂಡು ಬಂದೆ (ಇಂಚಾಪ. ೨೮-೩೦); ಬಯಲಿನಲ್ಲಿ ಬಹಳ ಸುತ್ತಾಡಬೇಕಾಗುವುದರಿಂದ . . . ಆರೋಗ್ಯಭಾಗ್ಯ ಸುಧಾರಿಸಬಹುದು (ಸಸ್ಯಕ. ೮೫). [ಸುತ್ತು$_2$ + ಆಡು$_1$]

ಸುತ್ತಾಲಯ (ನಾ). (ದೇವಾಲಯದ) ಸುತ್ತಲಿನ ಗೋಡೆ; ಪ್ರಾಕಾರ; ಪೌಳಿ: ಶ್ರೀಗಂಗರಾಜ ಸುತ್ತಾಲಯವಂ ಮಾಡಿಸಿದಂ (ಎಕ. II, ೧೭೭-೧; ಸು. 1177).

[ಸುತ್ತು$_2$ + ಆಲಯ]

ಸುತ್ತಾಳಿಸು 'ಸುತಾಳಿಸು' ನೋ.

ಸುತ್ತಿ$_1$ 'ಸುತ್ತಿಗೆ$_1$' ನೋ.

ಸುತ್ತಿ$_2$ (ನಾ). ಮುತ್ತಿನ ಚಿಪ್ಪು; ಶುಕ್ತಿ: "ಸುತ್ತಿಯೆನೆ ಶುಕ್ತಿಯೊಳೆ" (ಕರ್ಣಾ. ೩೮); ಕಕಾರಕ್ಕೆ ತಕಾರಂ . . . ಶುಕ್ತಿ — ಸುತ್ತಿ (ಶಮದ. ೨೬೪ ಪ್ರಯೋ).

[< ಪ್ರಾ. ಸುತ್ತಿ./ ಸಂ. ಶುಕ್ತಿ]

ಸುತ್ತಿಗುತ್ತಿಗೆ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದಂತೆ ಕೊಟ್ಟ ಭೂಮಿಯ ಗೊತ್ತುವಳಿ,— ಕರಾರು; ಶ್ರೋತ್ರಗುತ್ತಗೆ: ಮೂಱುಗ್ರಾಮವನು ನಿವಗೆ ಸುತ್ತಿಗುತ್ತಿಗೆಯಾಗಿ ಕಲುಪಟೆಯಾಗಿ ಕೊಟೆವು (ಮೃಆರಿ. ೧೯೩೦, ೨೧-೯; 1546). 'ಸ್ರೋತ್ರಗುತ್ತಿಗೆ' ಪರಾ.

[ಸುತ್ತಿ$_2$ (< ಸಂ. ಶ್ರೋತ್ರಿಯ) + ಗುತ್ತಿಗೆ (< ಗುತ್ತಗೆ)]

ಸುತ್ತಿಗೆ$_1$, ಸುತ್ತಿ$_1$ (ನಾ). (ಕಲ್ಲು, ಕಬ್ಬಿಣ ಮೊದಲಾದುವುಗಳನ್ನು ಕುಟ್ಟಲು ಬಳಸುವ) ಒಂದು ಬಗೆಯ ಕಬ್ಬಿಣದ ಸಾಧನ: "ಸುತ್ತಿಗೆ ಲೋಹ ಟಂಕಮಕ್ಕು" (ಮಂಗರಾ. ೧೧೩-೮); ನೊಂದ ಬೆರಳಿನ ಮೇಲೆ ಸುತ್ತಿಗೆ ಬಂದು ಬಿದ್ದವೊಲಾಯ್ತು (ಉತ್ತರಾ. ೨೯-೪೯). **ಸುತ್ತಿ$_1$:** ಸುತ್ತಿ ತೆಗೆದುಕೊಂಡು ಬಾ (ರೂಢಿ).

[ದೇ. ॥ ತಮಿ. ಚುತ್ತಿಯ, ಚುತ್ತಿ; ಮಲ. ಚುತ್ತಿಕ, ಚುತ್ತಿ; ತುಳು. ಸುತ್ತಿಗೆ, ಸುತ್ತಿಯೆ, ಸುತ್ತಿ, ಸುತ್ತೆ; ತೆಲು. ಸುತ್ತೆ./ ಮರಾ. ಸುತ್ಕೀ]

ಸುತ್ತಿಗೆ$_2$ (ನಾ). ದಾರ; ನೂಲು; ಸೂತ್ರ: ಸುತ್ತಿದ ರೇಖೆ ದಡ್ಡಕ್ಕರಮಾದುದರ್ಕೆ . . . ಸೂತ್ರಿಕಾ—ಸುತ್ತಿಗೆ (ಶಮದ. ೨೭೦ ಪ್ರಯೋ). [< ಸಂ. ಸೂತ್ರಿಕಾ]

ಸುತ್ತಿಗೆ$_3$ (ನಾ). (ಕರಾ) ಹಣವನ್ನು ಸಾಲಕೊಡುವಾಗ ಇಟ್ಟುಕೊಳ್ಳುವ ಆಧಾರ,— ಈಡು; ಒತ್ತೆ: (ಕಸಂಗ್ರಾ. ೬೫). [?]

ಸುತ್ತಿಡಿ (ಕ್ರಿ). ಸುತ್ತುವರಿ; ಹಬ್ಬು: ನಳನಳಿಸುತ್ತೆ ಸುತ್ತಿಡಿದು ತೋರ್ಪ ಕದಂಬದಿಂ (ಗಿರಿಕ. ೧-೫೨). [ಸುತ್ತು$_2$ + ಇಡಿ$_1$]

ಸುತ್ತಿಡು (ಕ್ರಿ). ಸುತ್ತಲೂ ಕಟ್ಟು,— ಸುತ್ತು: ಮೇರುನವನೇ ಪಟ್ಟೆವೊಯ್ದಾ ವಾರಿರುಹಭವನಾ ಪುರಶ್ರೀ ಚಾರುತೆರೆ ಸುತ್ತಿಟ್ಟನೆನೆ ಹೊಂಗೋಂಟೆ ರಂಜಿಪುದು (ಸಾಳ್ವಭಾ. ೨-೬). [ಸುತ್ತು$_2$ + ಇಡು$_1$]

ಸುತ್ತಿಸು (ಕ್ರಿ). ೧. ಸುತ್ತಲೂ ಕಟ್ಟು: ಕಂಭಂಗಳೊಳೆಲ್ಲಂ ಸುಯ್ಯಾಣದ ಚಿನ್ನದ ಪಟಿಯ ಸಕಳವಟ್ಟೆಗಳಂ ಸುತ್ತಿ[ಸಿ] (ಪಂಪಭಾ. ೩-೪೦ ವ). ೨. ಸುತ್ತಿಕೊಂಡಿರು; ಸಿಕ್ಕು ಹಾಕಿಕೊಂಡಿರು: ಅವನಿಜನರ್ಕಸುತಂ ಸಿಂಹವೃಷಾದ್ಯುದಯದೊಳೇಕಲಗ್ನಸ್ಥಿತರಾಗೆ ವಿಲಗ್ನಗ್ರಹನವಾಂಶಕದವಯವದೊಳ್ ಸುತ್ತಿಸುಗೆ ಕರುಳ್ಪೊಡಕಕ್ಕುಂ (ಜಾತಕ. ೪-೩೧). ೩. ತಿರುಗಿಸು; ಸುತ್ತುಹಾಕಿಸು: ನೋಟ ವಿಷಯದಿಂದೊಳಗಾದ ಪುರುಷರ ಕೋಟಲೆಗೊಳಿಸಿ ಸುತ್ತಿಸುತ ಆಟವಿದೆಂಬಂತೆ ತಿರುಗಿಸುತಿರ್ದರು ಊಟಳದುಯ್ಯಲೆಗಳನು (ಮೋಹತ. ೧೪-೮೯); ಅವರು ಹುಚ್ಚನನ್ನು . . . ಕೆಲವು ಬೀದಿಗಳಲ್ಲಿ ಬೇಗಬೇಗ ಸುತ್ತಿಸಿದರು (ರಾವಿಜ. ೨೩). ೪. ತೊಡಿಸು: ಆತನ ಕೈಯ ಪೂಮಾಲೆಯ ನಿನ್ನಯ ನೂತನವೇಣಿವಲ್ಲರಿಗೆ ಪ್ರೀತಿಯಿಂ ಸುತ್ತಿಸುವುದು (ಕಂನವಿ. ೬-೧೩೯).

[ಸುತ್ತು$_1$ + - ಇಸು$_3$]

ಸುತ್ತಿಱಿ (ಕ್ರಿ). ಬಳಸು; ಸುತ್ತುವರಿ: ಪರ್ಯಾಯಂದಪ್ಪದೇಂ ಸುತ್ತಿಱಿದುವೊ ವಲಯಾಕಾರದೊಂದೊಂದನತ್ಯಾಶ್ಚರ್ಯಂ (ಆದಿಪು. ೧-೪೮); ಅಸಂಖ್ಯಾತದ್ವೀಪಮುಮಬ್ಧಿಯುವೊಂದನೊಂದು ಸುತ್ತಿಱಿದಿರೆ (ಮಲ್ಲಿಪು. ೧-೬೧); ಸುತ್ತಿಱಿದಿರ್ಪುದು ಜಂಬೂದ್ವೀಪಮಂ ಕ್ಷಾರಪಯೋಧಿ (ಅನಂಪು. ೧-೭೨). [ಸುತ್ತು$_2$ + ಇಱಿ$_1$]

ಸುತ್ತು$_1$ (ಕ್ರಿ). ೧. ಬಳಸು; ಪ್ರದಕ್ಷಿಣಮಾಡು: "ಸುತ್ತು – ವೇಷ್ಟನೇ" (ಶಮಧಾ); ಸಬಾಗ್ರದಿಂ ತೊಟ್ಟು ನೆತ್ತಿವರೆಗಂ ಬಳಸಿಯುಂ ಮೆಯ್ಯಂ ಸುತ್ತಿ ಎಲ್ಲಾ ಎಡೆಗಳೊಳಂ ಕಿಚ್ಚಂ ತಗುಳ್ಚಿ (ಪಡ್ತಾರಾ. ೧೫೪-೭); ಪಲ್ಲಿಯಂತೆ ಕೇರಂ ಪತ್ತುತ್ತುಂ ಎಲೆವಳ್ಳಿಯಂತೆ ಕಂಬಮಂ ಸುತ್ತುತ್ತುಂ (ಧರ್ಮಾಮೃ. ೧-೧೭೦); ಬೆಟ್ಟಕ್ಕೆ ಬೆಳ್ಳಾರ ಸುತ್ತಿತಯ್ಯಾ . . . ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು ಕೂಡಲಸಂಗಮಂಗೆ ಓಗರವಾಯಿತಯ್ಯಾ (ಬಸವ. ೮೩೫); ನಗರವಿರ್ದುದು ಶರಧಿ ಸುತ್ತಿದ ನಗದವೊಲು ನಾನಾದಿಗಂತದ ಬಗೆಯ ಭಾರಿಯ ಬಹಳ ನರಸಾಗರದ ಮಧ್ಯದಲಿ ಸೊಗಸಿದುದು (ತೊರಾ. ೧-೧೨-೩೧); ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ (ಗಾದೆ). ೨. ತಿರುಗು; ಅಲೆದಾಡು; ಸಂಚರಿಸು: ದಾರಿಯೊಳು ಸುತ್ತಿ ಸುಳಿದಱಸಿದಂ (ಸಿದ್ರಾ. ೨-೩೬); ಶೋಕದ ಸುರುಳಿಯನು ಸುತ್ತದ ಸುಸಮ್ಮ ಜ್ಞಾನಿಯಾಗೆಂದ (ತೊರಾ. ೪-೪-೬೭). ೩. ಆವರಿಸು; ಮುತ್ತು: ಮಲೆಯುತ್ತೊಲೆಯುತ್ತೆ ಸುತ್ತಿ ಕೈಪಱಿದ ಗಜೇಂದ್ರದಂತೆ ಬರುತಿರ್ದುದು ಭೀಕರನೊಂದು ಸೂಕರಂ (ಕಾವ್ಯಸಾ. ೧೧೧೨ ಶೂದ್ರಕ); ಎಚ್ಚ ಶರಾಳಿಗಳ್ ಭಯಂಕರತರವಾಗಿ ಭೂಭುವನಮೆಲ್ಲಮನೊರ್ಮೆಯೆ ಸುತ್ತಿ ಮುತ್ತಿಕೊಂಡಿರೆ ದೆಸೆಗಾಣಲಾಗದು (ಪಂಪಭಾ. ೧೦-೧೧೬); ಕಣ್ಣುಗಳರಳಿದವು ಹೊಗೆ ಸುತ್ತಿ ಸುಯ್ಲಲಿ ಸುರಿದುದುರಿ (ಕುಸ್ವಾಪ್ರೋ. ೧೯-೧೩). ೪. ಸುರುಳಿಯಾಗು; ದುಂಡಾಗು: ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತ (ಕಾದಂಪೂ. ೧೨೦); ಆ ಪೊನ್ನ ನೊಂದು ಪನ್ನಗಂ ಸುತ್ತಿ ಪಟ್ಟರ್ದೂಡೆ ಕೊಳಲಂಜಿ ಪೋದಂ (ಪಂಚಕಾ. ೧೭೭-೧೪); ಸುತ್ತಿದುರಗನ ಮಂದರಾಚಲ ಕಿತ್ತು ಬೀಳ್ವಂದದಲಿ (ಕುಸ್ವಾಪ್ರೋ. ೩-೭೫). ೫. ಸುರುಳಿಮಾಡು; ದುಂಡಾಗಿಸು: ಎಳೆವೆರೆ ಸುತ್ತಿದಂತೆ ಮಿಱುಗುತ್ತಿರೆ ಕೇದಗೆಯೋಲೆ (ಕಾದಂಬಾ. ೧೪೯). ೬. ಕಟ್ಟುಹಾಕು: ಖಡುಗಶಿಖಿ ಪರಶುಮ್ಮುಗ ಪುಲಿದೊವಲು ಸುತ್ತಿ ಬಿಗಿದುಡಿಯ ಹರಿನಯನವರಸಿದ ಮೆಲ್ಲಡಿಯ ನಿಜದ ಮೂರ್ತಿಯಂ ತೋಱಿಸಿದನು (ಸಿದ್ರಾ. ೨-೨೬); ಗಳೆಗಳಲಿ ಸೀರೆಗಳ ಸುತ್ತಲಿಯೆಂದು ಕೈವೀಸಿದನು ಕಲಿದ್ರೋಣ (ಕುಸ್ವಾಪ್ರೋ. ೧೫-೩೨). ೭. ತೊಡರು; ಸಿಕ್ಕಿಕೊಳ್ಳು: ಅಱಸುವ ಬಳ್ಳಿ ಕಾಲ ಸುತ್ತಿತ್ತಂಬಂತೆ (ಅವಚಂ. ೧೬೬-೭೫೨). ೮. ಕೂಡು; ಸೇರು: ನಸುಗಂಜಿ ಸುತ್ತಿಹುದು ವೊಣಗಿಹುದು ದೋಷವಶನಕ್ಕೆಂಟು ತಱನಪ್ಪುದು (ಸುಪಶಾ. ೩-೧).

[ದೇ. ॥ ತಮಿ. ಮಲ. ಚುಱ್ಱು; ಕೊಡ. ಚುತ್ತ್; ತುಳು. ಸುತ್ತು, ಸುಂದು; ತೆಲು. ಚುಟ್ಟು; ಕೋಲಾ. ಸುತ್; ನಾಯ್ಕಿ. ಸುತ್ತ್; ಪರ್ಜಿ. ಚುತ್ತ್; ಕುವಿ. ಸೂತಾಲಿ]

ಸುತ್ತು$_2$ (ನಾ). ೧. ಬಳಸಿರುವುದು; ವೇಷ್ಟನ: "ವಳಯಿತಂ ವೇಷ್ಟಿತಂ ಪರಿವೇಷ್ಟಿತಂ ಪರಿಕ್ಷಿಪ್ತಮೆನೆ ಸುತ್ತಕ್ಕು" (ಮಂಗರಾ. ೧೨೯-೧೨); ಅಮರಾನೀಕದ ಸುತ್ತು ಪೋಲ್ ದಿನನಾಥಾವಂಧ್ಯಸಂಧ್ಯಾಭ್ರವಿಭ್ರಮಮಂ (ಶಾಂತಿಪು. ೪-೧೧೬); ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತ (ಕಾದಂಪೂ. ೧೨೦); ಸುತ್ತಿನ ದಾರಿಗಳ ನೋಡಿ (ಗಗಕಾ. ೧೪-೨). ೨. ಸುತ್ತಿರುವುದು; ಮಂಡಲ; ವಲಯ: ಬಿರಿಮುಗುಳ್ಗಳೊಳ್ ತುಱುಗಿದದಿರ್ಮುತ್ತೆಯ ಸುತ್ತಿನೊಳೆಸೆದುಪಾಶ್ರಯಂಬಡೆದ ಸಾಂದ್ರ ಚಂದ್ರಕಾಂತದ ಶಿಲೆ (ಪಂಪಭಾ. ೫-೫ ವ); ಕರುಣದ ಸುತ್ತಿನಂತೆ ಸತ್ಯದ ಸಾಲದಂತೆ ಭಕ್ತಿವನಿತೆಯ ಕರ್ಣಪತ್ರದಂತೆ (ನಂಬಿನ. ೧೬-೫೭); ಸುಖದ ತನಿರಸದ ಪೆರ್ಮಡು ಸುಖದೊತ್ತಿನ ಸುತ್ತು ಸುಖದ ತಣ್ಪುಳಿಲೆನಿಕುಂ (ಶ್ರೀಪಶಾ. ೬೭). ೩. (ಸುತ್ತಲೂ ಕಟ್ಟುವ) ಪಟ್ಟಿ; ಕಟ್ಟು: ಅರಸಂಗ ಮನೆವೆರ್ಗಡೆ ಮುದ್ರಾಂಕಿತಮಪ್ಪುಪಾಯನದ ಮುದ್ರೆಯಂ ಕಳೆದು ಸುತ್ತನಱಿದು ಬಿತ್ತರಿಸಿ ತೋಱುವುದುಂ (ಶಾಂತಿಪು. ೨-೨೨ ವ); ತುಱುಬ ಬಲಿದೊಳಗೌಕಿ ಮೊನೆ ಮುಂಜೆಱಗನಳವಡೆ ಸೆಕ್ಕಿ ಸುತ್ತಿನೊಳಿಱುಕಿ ಬಿಗಿದ ಕಠಾರಿ ದಾರದ ಗೊಂಡೆಯವ ಕೆದಱಿ (ಕುಸ್ವಾಪ್ರೋ. ೧೭-೧೯). ೪. ಸುರುಳಿಯಾಕಾರದ ಗುಂಡಾಗಿರುವ ಒಂದು ಬಗೆಯ ಆಭರಣ: ಕಾಮಿಗಳನಸಂಗನಾಜ್ಞೆಯೊಳ್ ಪೋಣಿಸಿದೋಲೆಯ ಸುತ್ತು ನೋಟ್ಪೊಡಂ ಬಗೆಗೊಳಿಸುತ್ತು (ಸೂಕ್ತಿಸು. ೮-೨೨೨); ತೊಟ್ಟು ಕುಪ್ಪಸ ಬಟ್ಟಿಹ ಸುತ್ತು . . . ಮಡಿಲೊಳಗೆ ಕಟ್ಟಿದ ಮಡಿಚೀಲವು ಹಡಪಗಳಿಂದ ಸೆಟ್ಟಿಗಳಿರುತಿಹರಲ್ಲಿ (ಅಂಜಚ. ೩-೮೦); ಮಣ್ಣು ಮೆತ್ತಿಕೊಂಡಿದ್ದ ಸುತ್ತು ಕಾಲುಂಗುರಗಳನ್ನು ಶುಚಿಮಾಡಿ ಮತ್ತೆ . . . ತೊಡಿಸಿದಳು (ಮಲೆಮ. ೬೭೨). ೫. ಅಗಲ; ಹರವು; ವಿಸ್ತೀರ್ಣ: "ಪರಿಣಾಹಃ, ವಿಶಾಲತಾ – ಈ ೨ ಸುತ್ತು" (ಹಲಾಯು. ೧೩೦-೧೦೧). ೬. ಬಳಸುಮಾತು; ನೇರವಲ್ಲದ ನುಡಿ: ಎಳಸುತ್ತಿರ್ದ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆ (ಕಾದಂಪೂ. ೭೭೯); ಸುತ್ತೇಕೆ ಬಳಸೇಕೆ ನೆಟ್ಟನೆ ಮಾತಾಡು ಬಂದಂಥ ಕಜ್ಜದ ಮೇಲೆ (ಇಂಬಾಪ. ೨೩೮-೭೬). ೭. ನೆರೆಹೊರೆ; ಪರಿಸರ: ಮನೆಯ ಒಳಗಿನಿಂದ ನೋಡಿದರೂ ಸುತ್ತಿನ ದೃಶ್ಯ ಬಲು ಸುಂದರವಾದದ್ದು (ಯೋಧಪು. ೨೪). ೮. (ಎಲೆ, ಪತ್ರ ಮೊದಲಾದುವುಗಳನ್ನು ಸುತ್ತಿಮಾಡಿದ) ಚುಟ್ಟಿ; ಹೊಗೆಸುತ್ತು: (ಕ).

ಸುತ್ತಣ = ಸುತ್ತ ಇರುವ: ಮರಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು (ಮಹಾದೇ. ಬ. ೬೯-೧೭೧); ಸುತ್ತಣ ಬೀದಿಯೊಳಗೆ ರಾಜಸುತಿಹ ಮೊತ್ತದಂಗಡಿಗೇರಿಯೊಳಗೆ (ಕಂಸವಿ. ೨-೮೨). ಸುತ್ತಲ್, ಸುತ್ತಲು = ಸುತ್ತ ಇರುವ ಪ್ರದೇಶ,— ಆವರಣ: ಪೂಸಕಾರೊಳಿಂತು ಬೆಳ್ಳಗೆ ಪಥಿಕಾಂಗನಾಜನಮನಂಜಿಸುವಂತಿರೆ ತೋಱೆ ಸುತ್ತಲುಂ (ಕವಿರಾ. ೧-೧೨೪); ಸುತ್ತಲುಂ ಪರಿವ ಜರಿವೊನಲ್ಗಳಿಂ (ಪಂಪಭಾ. ೩-೨೨ ರಗಳೆ); ಪಕ್ಷಿಮೃಗಕುಲವೆರಸಿ ಮೆಱೆದವು ಬನದ ಸುತ್ತಲು (ಕುಸ್ವಾಅ. ೩-೨). ಸುತ್ತಿನುಂಗುರ = ಬೆಳ್ಳಿ, ಬಂಗಾರಗಳಿಂದ ಮಾಡಿದ ಕಾಲಿನ ಬೆರಳಿಗೆ ಧರಿಸುವ ಉಂಗುರ: ಮುತ್ತಿನ ಮುಡಿಯ ಏಲಾಸಿನಿಯರು ಸೂಲಗಿತ್ತಿಯ ಕರೆ ಪುರೋಹಿತರ ಸುತ್ತಿನುಂಗುರ ಮದ್ದುಮಣಿಯಂತ್ರಗಳ ತಂದು ತೆತ್ತಿಸಿದರು ಕಾಲ್ದೆಸೆಯ (ಮೋಹತ. ೧೭-೧೩). ಸುತ್ತುಮಾತು = ನೇರವಲ್ಲದ ಮಾತು; ಬಳಸುಮಾತು: "ಪದರುನುಡಿ, ಮುಸುಕುಮಾತು, ಸುತ್ತುಮಾತು, ಕಟಕಿ" (ಕಂಸಾಹಿ. ೮೭). [< ಸುತ್ತು$_1$./ ಮಲ. ಚುಱ್ಱು; ಕೊಡ. ಚುತ್ತ್; ತುಳು. ಸುತ್ತ; ತೆಲು. ಚುಟ್ಟು, ಚುಟ್ಟ; ಕುವಿ. ಸೂತು]

ಸುತ್ತು$_3$ 'ಸುತ್ತುಂ' ನೋ.

ಸುತ್ತುಂ, ಸುತ್ತ, ಸುತ್ತಂ, ಸುತ್ತು$_3$ (ಅ). ಸುತ್ತಲು; ಬಳಸಿಕೊಂಡು: ಸುತ್ತುಂ ಕುಣಿವುವು ನಲಿದಾಡಿ ಗೃಹಮಯೂರನಿಕಾಯಂ (ಕಾದಂಪೂ. ೧೦೦೧). ಸುತ್ತ: ಜೋದರ ಡರಿದರಂದು ಸುತ್ತ ಮೆಱೆದವು ಮೇಲೆ ಪಲ್ಲವಸತ್ತಿಗೆಯ ಸಾಲುಗಳು (ಕುಸ್ವಾಪ್ರೋ. ೩-೬). ಸುತ್ತಂ: ಕಲಿ ತಾನೊಬ್ಬನೆಂದಾಳ್ವರಿಯ ಸುತ್ತಂ ಸುತ್ತಿ ಬರುತಿರಲು (ಬಸಪು. ೧೭-೨೦). ಸುತ್ತು: ಅಂಚೆಗಳಿಂಚರಮುಂ ಸುತ್ತು ಚಲ್ಪನಿರ್ದ ಗಂಧಶಾಲಿಗಳೇಂ ಮತ್ತಂ ಚಕ್ರವಾಕ ಹಂಸೀಸಂಚರವಿಂದೆಸೆವ ಬಹು ತಟಾಕದಿನೆಸಗುಂ (ಸೌಇ. IX-i, ೨೯೭-೧೭; 1177).

[< ಸುತ್ತು$_1$]

ಸುತ್ತುಂಗಾಱ, ಸುತ್ತುಗಾಱ (ನಾ). ತಿರುಗುವವನು; ಅಲೆಮಾರಿ: ಸೋಲದವನ ಸುತ್ತುಂಗಾಱನ . . . ಗಳಿಸಾಳಿವೆಂಗಳು ಬಯಸುವರೆ (ಇಚಿಸಾಂ. ೯-೮೯). ಸುತ್ತುಗಾಱ: ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತುಗಾಱನಂ (ಲೀಲಾವ. ೨-೧೦೭).

[ಸುತ್ತು$_2$ + - ಕಾಱ]

ಸುತ್ತುಂಗುರುಳ್ (ನಾ). ಸುರುಳಿಯಾದ ಕೂದಲು; ಗುಂಗುರುಕೂದಲು: ಸುತ್ತಲುಂ ನಿನ್ನನಾ ಕೋಮಳೆಯಂದಂಬೆತ್ತ ಸುತ್ತುಂಗುರುಳಳವಡಿಸಲ್ (ಆದಿಪು. ೪-೨೧); ಸುತ್ತುಂಗುರುಳಂತರದೊತ್ತುತ್ತುಂ ದೆಸೆದೆಸೆಯೊಳಲೆವ ಕಣ್ಮಲರ್ಗಳಿನುನ್ಮತ್ತಗಜ ಗಮನೆಯರ್ ಬಂದೊತ್ತೆಗೆ ನಿಲ್ಪರ್ ವಿಶಾಲದೊಂದಂಗಣದೊಳ್ (ಸುಕುಮಾ. ೯-೬೨).

[ಸುತ್ತು$_1$ + ಕುರುಳ್$_1$]

ಸುತ್ತುಂಗೊಳ್, ಸುತ್ತುಗೊಳ್ (ಕ್ರಿ). ೧. ಬಳಸು; ಸುತ್ತುವರಿ: ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸುರಿಗೆಯ ಮುತ್ತಿನ ಬುಂಭುಕಂಗಳ ನಡುವೆ (ಆದಿಪು. ೮-೧೫ ವ); ವೇತ್ರವತಿಯೆಂಬ ನದಿಯಿಂ ಸುತ್ತುಂಗೊಂಡಿರ್ಪುದಾ ರಾಜಧಾನಿ (ಕಾದಂಪೂ. ೧೭). ಸುತ್ತುಗೊಳ್: ೧. ಮರುತ್ಸುತಂ ಮುಳಿದು ಮಚ್ಚರದಿಂ ಗಜೆಗೊಂಡು ಸುತ್ತುಗೊಂಡಡಿಗಿಡೆ ನುರ್ಗಿ ಪೊಯ್ದು (ಪಂಪಭಾ. ೧೧-೭೪); ಅರಸರ ಪಕ್ಕದೊಳ್ ಸುತ್ತುಗೊಂಡು ಬೆರ್ಚಿ ಬಿಚ್ಚಳಿಸುತ್ತುಂ ಬರೆ (ಶಾಂತಿಪು. ೮-೬೫ ವ). ೨. ಆವರಿಸು; ಮುತ್ತು: ಬಳಸಿರ್ದುದ್ಯಾನಮುದ್ಯಾನದೊಳೊದವಿದ ಪದ್ಮಾಕರಂ

ಪದ್ಮಪಂಡಂಗಳೊಳೆತ್ತಂ ಸುತ್ತುಗೊಂಡಿರ್ದಳಿಕುಳಂ (ಸಕಮಾ. ೧-೭೧).

[ಸುತ್ತು$_2$ + ಕೊಳ್$_1$]

ಸುತ್ತುಂಬರ್, ಸುತ್ತುಬರು, ಸುತ್ತುವರು (ಕ್ರಿ). ಬಳಸಿಬರು; ಪ್ರದಕ್ಷಿಣೆ ಬರು: ವಿಮಾನಶ್ರೇಣಿ ಸುತ್ತುಂಬರ ಸುರಪತಿಗಳ್ ತಮ್ಮ ತಾಣಕ್ಕೆ ಪೋದರ್ (ಅಜಿಪು. ೬-೧೩೧). **ಸುತ್ತುಬರು:** ದೇವರಿಗೆ ಸುತ್ತುಬಂದು ಜನ್ನಯ್ಯ ತಿರುಗಿದಾಗ ವೆಂಕಮ್ಮ ಮುಂದೆ ನಿಂತಿದ್ದರು (ಪದ್ಮಸ. ೨೨೯). **ಸುತ್ತುವರು:** ಶಿವಭವನಮಂ ಮಂಟಪವನಭಿನವವೆಸೆಯ ಮಾಡಿಸಿಯದಱ ಸುತ್ತುವರೆ (ಬಸವು. ೧೬-೯).

[ಸುತ್ತು$_2$ + ಬರ್ (< ವರ್)]

ಸುತ್ತುಂಬರಿಸು (ಕ್ರಿ). ಬಳಸುವಂತೆ ಮಾಡು; ಪ್ರದಕ್ಷಿಣೆ ಹಾಕಿಸು: ಪಂತಿ ಗಟ್ಟಿದರಲ್ಲಿ ಮಿಗಗಳಂ . . . ಸುತ್ತುಂಬರಿಸಿ ಹರಸಿ (ಶ್ರೀರಾಮಾ. ೬೬೮-೧೯೯).

[ಸುತ್ತು$_2$ + ಬರಿಸು$_1$]

ಸುತ್ತುಕೆಲಸ 'ಸುತ್ತುಗೆಲಸ' ನೋ.

ಸುತ್ತುಗಂಭ (ನಾ). ಸುರುಳಿಯಾಕಾರದ ಕಂಬ; ದುಂಡಗಿರುವ ಕಂಬ: ಹೊನ್ನ ಸರಿಗೆದಗೆವ ಸುತ್ತುಗಂಭದೊಂದೆಸಕವಾಯಿತು ಮೇರುಶಿಖರಿ (ವೃಷಂಜ. ೧-೫೧).

[ಸುತ್ತು$_2$ + ಕಂಭ]

ಸುತ್ತುಗಟ್ಟು (ಕ್ರಿ). ೧. ಬಳಸಿಕೊಂಡಿರು; ಸುತ್ತುವರಿದಿರು: ವ್ಯಾಘ್ರಚರ್ಮದಿಂದ ಸುತ್ತುಗಟ್ಟಲ್‌ಪಟ್ಟದ್ದಾಗಿ ಕಿರಿಗಂಟೆಗಳ ಮನೋಹರವಾದ ಧ್ವನಿಯುಳ್ಳದ್ದಾಗಿ ಬೀಳ್ ಕುದುರೆಗಳನ್ನು ಕಟ್ಟಿದ (ಕೃಷ್ಣಾ. ೭೭೭). ೨. ಮುತ್ತು; ಆವರಿಸು; ಕವಿ: ಕೇವಲ ಹಲವೇ ಜನ ವಿದೇಶೀಯರು ನಮ್ಮ ವಿಸ್ತಾರವಾದ ಮಾತೃಭೂಮಿಯನ್ನು ಸುತ್ತುಗಟ್ಟಿರುವರು (ರಘಾಣಿ. ೨೩೧); ಎಲ್ಲರೂ ಸುತ್ತುಗಟ್ಟಿಕೊಂಡು ಅಂಜನಪ್ಪ ಧರಣಯ್ಯರನ್ನು ಹಿಂದಕ್ಕೆ ಕರದೊಯ್ದರು (ಮರಳ. ೧೮೭). [ಸುತ್ತು$_2$ + ಕಟ್ಟು$_1$]

ಸುತ್ತುಗತ್ತರಿಗೆ (ನಾ). (?): ಪಂಚಾಂಡಕ ಚತುರ್ವೃತ್ತಿ ಚತುರಶೀತಿ ಸ್ನಾನಕದೊಳುಚಿತ ನಿರ್ಗಮಕ್ಷಪಣಗಳನಳವಡಿಸಿ ಸುತ್ತುಗತ್ತರಿಂಗವರೆಗೊಯ್ದ ಕರುವೆಸನಿದನಿಸಿ ಸುವೃತ್ತ ಮಾದ ನಿಮ್ನೋನ್ನತಪ್ರಸಾರಿತ ನಿಕುಂಜಿತಪ್ರದೇಶಶುದ್ಧಿಯುಂ (ವರ್ಧಪು. ೭-೩ ವ).

[ಸುತ್ತು$_2$ + ಕತ್ತರಿಗೆ$_1$]

ಸುತ್ತುಗಾಱ 'ಸುತ್ತುಂಗಾಱ' ನೋ.

ಸುತ್ತುಗೆಲಸ, ಸುತ್ತುಕೆಲಸ (ನಾ). ಸುತ್ತಮುತ್ತಲ ಕೆಲಸ; ಮೇಲುಕೆಲಸ; ಸಣ್ಣಪುಟ್ಟ ಕೆಲಸ: ಸುತ್ತುಗೆಲಸವ ಸೊಲ್ಲಿಸದೆಸಗುವುದು (ಹದಿಬ. ೪-೧೭). **ಸುತ್ತುಕೆಲಸ:** ಈಗ ಅಡಿಗೆಯ ರಾಗಪ್ಪ ಸುತ್ತುಕೆಲಸಮಾಡುತ್ತಿದ್ದ (ವಂಶವೃ. ೩೩೯); ಸುತ್ತುಕೆಲಸ ಬೇಕಾದಷ್ಟಿರುತ್ತ (ಬಾಳಹೂ. ೨೪೭). [ಸುತ್ತು$_2$ + ಕೆಲಸ]

ಸುತ್ತುಗೊಳ್ 'ಸುತ್ತುಂಗೊಳ್' ನೋ.

ಸುತ್ತುಗೋಂಟೆ (ನಾ). (ಪಟ್ಟಣದ ಅಥವಾ ಊರಿನ) ಸುತ್ತಲೂ ಇರುವ ಕೋಟೆ; ವೃತ್ತಾಕಾರವಾಗಿರುವ ದುರ್ಗ: ಮುಂದಣ ಸುತ್ತುಗೋಂಟೆಯ ಕಲ್ಲನೊಂದಂ ಪಾದದುಂಗುಟದಲ್ಲಿಳೆಗೆ ಕೆಡನೂಂಕಿ (ಬಸವು. ೨೬-೩೧); ಎಡೆಗೋಂಟೆ ತಳಿಗೋಂಟೆಯು ಸುತ್ತುಗೋಂಟೆ (ಕಭೃಕೃ. ೯೮). [ಸುತ್ತು$_2$ + ಕೋಂಟೆ]

ಸುತ್ತುಗೋಡೆ (ನಾ). ಸುತ್ತಲೂ ಹಾಕಿರುವ ಗೋಡೆ; ವೃತ್ತಾಕಾರದ ಭಿತ್ತಿ; ಪೌಳಿ: ಸಂರಕ್ಷಕಸಾಧನಗಳಾಗಿದ್ದ ಕೋಟೆ, ಸುತ್ತುಗೋಡೆಗಳು ತುಂಬ ಅವಶ್ಯಕ ವೆನಿಸುತ್ತಿದ್ದುವು (ಕರ್ಣಾಜ. ೩). [ಸುತ್ತು$_2$ + ಗೋಡೆ]

ಸುತ್ತುಡಿಗೆ (ನಾ). ಸುತ್ತಿಕೊಂಡಿರುವ ಬಟ್ಟೆ; ಧರಿಸಿರುವ ವಸ್ತ್ರ (?): ಎತ್ತಿಕೊಂಡಾ ಕೂಸು ತಲೆಯಲಿ ಪೊತ್ತ ಗೂಡೆ ಮಲಿನವಸನದ ಸುತ್ತುಡಿಗೆ ತಲೆಜುಂಜು ಸೊಗಯಿಸೆ ಕೊರವಿಯಾಂ ಬಂದೆ (ಸಾಳ್ವಗಾ. ೩೧-೨೧).

[ಸುತ್ತು$_2$ + ಉಡಿಗೆ$_1$ (< ಉಡುಗು)]

ಸುತ್ತುತಾನಕ (ನಾ). ಕತ್ತಿವರಸೆಯಲ್ಲಿ ಒಂದು ಬಗೆ: ಪಾದಗಳಿಂದ ಸಮವಾಗಿ ನಿಂತು ಮುಂದುಗಡೆಯಲ್ಲೆ ಭ್ರಮಣದಿಂದ ಪಾದಗಳ ಗತಿಯು ಆವದು ಅದು ಸುತ್ತುತಾನಕಯಂದು ಮತಱ (ಖಡ್ಗಲೀ. ೫-೧೬). [ಸುತ್ತು$_2$ + ತಾನಕ]

ಸುತ್ತುಬರು 'ಸುತ್ತುಂಬರ್' ನೋ.

ಸುತ್ತುಬಳಸು 'ಸುತ್ತುವಳಸು' ನೋ.

ಸುತ್ತುಬೇಲಿ 'ಸುತ್ತುವೇಲಿ' ನೋ.

ಸುತ್ತುಮುತ್ತ 'ಸುತ್ತುಮುತ್ತು' ನೋ.

ಸುತ್ತುಮುತ್ತಲು 'ಸುತ್ತುಮುತ್ತು' ಪರಾ.

ಸುತ್ತುಮುತ್ತು, ಸುತ್ತಮುತ್ತ, ಸುತ್ತುಮುತ್ತ (ನಾ). ೧. ಸುತ್ತಲೂ ಇರುವ ಪರಿಸರ; ನೆರೆಹೊರೆ: ಕೊಳಚೆಯೇ ನೊಣಗಳ ಹುಟ್ಟು ಮತ್ತು ಬೆಳವಣಿಗೆಗೆ ತಕ್ಕ ಸ್ಥಳವಾಗಿರುವುದರಿಂದ ಮನೆಯ ಸುತ್ತುಮುತ್ತು ಎಲ್ಲಿಯೂ ಕೊಳಚೆ ತುಂಬಲು ಬಿಡಬಾರದು (ಅಡುಸಾ. ೫೦); ಯಾಲಕ್ಕಿಯ ಗಿಡಗಳು ಭರತಖಂಡದಲ್ಲಿಯೂ ಅದರ ಸುತ್ತುಮುತ್ತಿನ ಸೆಕೆಯುಳ್ಳ ನಡುಗಡ್ಡೆಗಳಲ್ಲಿಯೂ ಹುಟ್ಟುತ್ತವೆ (ಮುಂಬಯಿ. ೫. ೩-೨೯). ೨. (ಆಲಂ) ದಿಗ್ಬಂಧನ; ನಿರ್ಬಂಧ: ಬಂಧಿಸಿ ಧರೆಯ ದಿಕ್ಪಾಲಕರ ದಿಕ್ಕರಿಯ ಸುತ್ತುಮುತ್ತಿನಲಿರಿಸಿ (ಗಗಾ. ೫-೨೨). **ಸುತ್ತಮುತ್ತ:** ೧. ಹತ್ತಿರದ ಸುತ್ತಮುತ್ತ ಹಳ್ಳಿಗಳಲ್ಲಿ ತಾವೂ ಭಿಕ್ಷೆಗೆ ಪ್ರಾರಂಭಿಸಿದರು (ಚಿಕಸಿ. ೧೩೨); ಅವರ ಚರಿತ್ರೆ ರಾಂಪುರದ ಸುತ್ತಮುತ್ತ ಹಳ್ಳಿಗಳಲ್ಲೆಲ್ಲ ಜನಜನಿತವಾಗಿತ್ತು (ಮರಳ. ೪). **ಸುತ್ತುಮುತ್ತ:** (ಕ).

ಸುತ್ತುಮುತ್ತಲು, ಸುತ್ತಮುತ್ತಲು = ಸುತ್ತಲೂ ಇರುವ ಪ್ರದೇಶ; ನೆರೆಹೊರೆ: ಮನೆಯ ಸುತ್ತುಮುತ್ತಲು ಶಚಿಯಾಗಿರಬೇಕು (ರೂಢಿ); ನೊಳಂಬರು ವಿಶೇಷವಾಗಿ ಮಧುಗಿರಿ ಮತ್ತು ಸುತ್ತಮುತ್ತಲ ಪ್ರಾಂತ್ಯಗಳನ್ನು ಆಳಿದ ಮಹಾನಾಡ ಪ್ರಭುಗಳಾಗಿದ್ದರು (ನೊಳಂಬ. ೬೧). [ಸುತ್ತು$_2$ + ಮುತ್ತು$_2$]

ಸುತ್ತುವರಿ, ಸುತ್ತರಿ (ಕ್ರಿ). ಬಳಸು; ಸುತ್ತಿಕೊಳ್ಳು: ದುರದುರಿಪ ನೆತ್ತರಿನ ಕೋಡಿಯಿರದೊತ್ತರಿಸಿ ಸುತ್ತುವರಿಯೆ (ಚಿಬಪು. ೪೪-೪೧); ಅವಳು ತುಳಸಿಕಟ್ಟೆಯನ್ನು ಸುತ್ತುವರಿಯ ಹತ್ತಿದಳು (ಕೊಕಶಾ. ೬೫). **ಸುತ್ತರಿ:** ಅವನು ೧೧೨೪ ದಿವಸಗಳಲ್ಲಿ ಪೃಥ್ವಿಯನ್ನು ಸುತ್ತರಿದು ಬಂದನು (ಮುಂಬಯಿ. ೪-೬೯). [ಸುತ್ತು$_2$ + ಪರಿ$_1$]

ಸುತ್ತುವರು 'ಸುತ್ತುಂಬರ್' ನೋ.

ಸುತ್ತುವಲಗೆ (ನಾ). ದುಂಡಗಿರುವ ಹಲಗೆ; ಗುರಾಣಿ; ಢಾಲು: ಸುತ್ತುವಲಗೆಯ ಮೇಲೆ ಕಣಿಗಳ ತೆತ್ತಿಸಿದರೀಚಿನಲಿ ಸಬಳಿಗರೆತ್ತಿದರು ರಾವುತರು ಕೀಲಿಸಿದರು ರಥಧ್ವಜವ (ಕುಮಾಗ. ೧-೮). [ಸುತ್ತು$_2$ + ಪಲಗೆ]

ಸುತ್ತುವಲೆ (ನಾ). ಒಂದು ಬಗೆಯ ಬಲೆ; ಸುತ್ತಲೂ ಹರಡುವ ಬಲೆ: ಪಂಚನಾಕಾಶವಲೆ ಸುತ್ತುವಲೆ ಸುಲಭವಲೆ (ಕುಕ್ಕೂಂಗ. ೧೦-೧೯). [ಸುತ್ತು$_2$ + ಬಲೆ$_1$]

ಸುತ್ತುವಳಯ (ನಾ). ಸುತ್ತಲೂ ಇರುವ ಪ್ರದೇಶ; ವೃತ್ತ; ವರ್ತುಳ: "ಸುತ್ತುವಳಯಂ ತಿರುಪು" (ಮಂಗರಾ. ೨೫-೯); ಸೇನೆಯ ಸುತ್ತುವಳಯದ ಭರವ ಕೈಕೊಡೊಡ್ಡ ಮಱೆದನು ಗರುಡಿಯಾಚಾರ್ಯ (ಕುಮಾವ್ಯೂ. ೪-೧೮); ಪರಮಸತಿ ಸಾವಿತ್ರಿ ಸಂಧ್ಯಾತರುಣಿ ಮೊದಲಾದಖಿಳದೇವಿಯರಿರವು ಕಾಣಿಸಿತಾದಿಲಕ್ಷ್ಮಿಯ ಸುತ್ತುವಳಯದಲಿ (ತೊರರಾ. ೧-೮-೪೯); ಮೈರೋಚಿಬೆಳಗಿಂ ಕೋಂಟೆ ಸುತ್ತುವಳಯದಿ ಕುಳಿತ ತರದಿ (ನಪಪೋ. ೨-೨೫). [ಸುತ್ತು$_2$ + ವಳಯ (= ವಲಯ)]

ಸುತ್ತುವಳಸು, ಸುತ್ತುಬಳಸು (ನಾ). ೧. ಸುತ್ತಿಕೊಂಡಿರುವುದು; ಬಳಸಿರುವುದು: ಸುತ್ತುವಳಸಿನ ತೆರೆಸೀರೆ ಕಣ್ಗೆ ರಂಜಿಸಿತು (ಮೋಹತ. ೬೬-೬೯). **ಸುತ್ತುಬಳಸು:** ೨. ನೆರೆಹೊರೆ; ಪರಿಸರ: ಮನೆಯಲ್ಲಿ ಶಾಲೆಯಲ್ಲಿ ಮಕ್ಕಳ ಸುತ್ತುಬಳಸಿನಲ್ಲಿ ಉತ್ತಮ ರೀತಿ, ನೀತಿ, ನಡೆ, ನುಡಿ ಉಳ್ಳವರು ಇರಬೇಕು (ಗೃಹವಿ. ೧೩೦). ೩. ಸುತ್ತಿ, ಬಳಸಿ ಆಡುವ ಮಾತು; ಬಳಸುಮಾತು: ಸ್ನೇಹಿತರೊಡನೆ ಸಾರ್ವಜನಿಕರೊಡನೆ ವಿಳಂಬವಿಲ್ಲದೆ ಸುತ್ತುಬಳಸುಗಳಿಲ್ಲದೆ . . . ಪತ್ರವ್ಯವಹಾರ ನಡೆಸುತ್ತಿದ್ದನು (ಬಂಕಿಮ. ೪೮೮). [ಸುತ್ತು$_2$ + ಬಳಸು$_3$]

ಸುತ್ತುವೀಳೆಯ, ಸುತ್ತುವೀಳ್ಯ (ನಾ). ೧. ಅಡಿಕೆ ಮೊದಲಾದುವುಗಳನ್ನು ಸೇರಿಸಿ ಸುತ್ತಿದ ವೀಳೆಯದೆಲೆ: ಪುರುಷೋತ್ತಮಶಾಸ್ತ್ರಿಗಳು . . . ಸುತ್ತುವೀಳೆಯವನ್ನು ಸ್ವೀಕರಿಸಿ ಮನೆಗೆ ಹಿಂತಿರುಗಿದರು (ಶ್ರೀರಾಯ. ೭೧). ೨. (ಸವಿಯಲು ಸಿದ್ಧವಾದ) ತಾಂಬೂಲ; ಪಾನಪಟ್ಟಿ; ಬೀಡಾ: ಪರಿಪರಿಯ ಹಣ್ಣುಹಂಪಲುಗಳೂ, ಬಣ್ಣಗಟ್ಟಿದಡಕೆಯ ಸುತ್ತುವೀಳೆಯಗಳೂ . . . ಇಂತಿವನ್ನು ಅನುಗೆಯ್ದುಕೊಳ್ಳುತ್ತ ನೋಂತ ಭಾಗ್ಯರ ಉಪಭೋಗಕ್ಕಳವಡಿಸಿಯೊಪ್ಪಿಸುವ ತವಕಕ್ಕಾಗಿ ಪದವುಗಾರ್ತಿಯರು

ಸಿದ್ಧವಾಗಿರುವರು (ಬೆಟ್ಟಅ. ೮೩-೩). **ಸುತ್ತುವೀಳ್ಯ:** ೨. ಅರಸನೆಡೆಗೆ ಅನುಪಿದಳ್ ನವಮಲ್ಲಿಗೆಯಂಬ ಸತಿಕೈಲಿ ಸುತ್ತುವೀಳ್ಯ ಫಲಗಳನಿತ್ತು ಮುದದಿಂ (ಸೌಗಂಧಿ. ೧೨೧-೧೦).

[ಸುತ್ತು$_2$ + ವೀಳೆಯ]

ಸುತ್ತುವೀಳ್ಯ 'ಸುತ್ತುವೀಳೆಯ' ನೋ.

ಸುತ್ತುವೇಲಿ, ಸುತ್ತುಬೇಲಿ (ನಾ). ಸುತ್ತಲೂ ಇರುವ ಬೇಲಿ: ಕೇತಕಿ ಸುತ್ತುವೇಲಿ ಕಕ್ಕುಂದರಿಯಾಂತ ಕೋಟೆ ಮದನಂಗೆನೆ ಕಂಗೊಳಿಸಿರ್ದುದಾ ವನಂ (ವೃಷವಿ. ೪-೩೪); ಈ ಸುತ್ತುವೇಲಿಗಳನ್ನೂ ಈ ತಳಿಮೇರುವೆಗಳನ್ನೂ ಕಟ್ಟುತ್ತಿರುವ ಮುತ್ತಿಗೆಯ ಸನ್ನಾಹಗಳನ್ನು ಕಂಡು (ಬೆಟ್ಟಅ. ೬೬-೭). **ಸುತ್ತುಬೇಲಿ** : ಸುತ್ತುಬೇಲಿಯೊಳಗೆ ಕಟ್ಟುಗೊಂಡ ಕುದುರೆ ತನ್ನ ಕಾಲಡಿಯ ಹುಲ್ಲನ್ನೆಲ್ಲ . . . ತಿಂದು (ಪುನರು. ೨೮೯).

[ಸುತ್ತು$_2$ + ಬೇಲಿ]

ಸುತ್ತೇರು 'ಸುತ್ತೇಱು' ನೋ.

ಸುತ್ತೇಱು, ಸುತ್ತೇರು (ಕ್ರಿ). ಸುತ್ತುತ್ತಿರುವಾಗಲೇ (ವಾಹನವನ್ನು) ಏರು,— ಹತ್ತು: ಒಂದೆ ಮೆಯ್ಯೊಳ್ ಸೂಳಱಿದೇಱುವ ಸುತ್ತೇಱುವ ಬಿತ್ತರಂಬಡೆದ ವಾಹಳಿತನ (ರಾಜಶೇ. ೬-೧೧ ವ). **ಸುತ್ತೇರು** : ಜೋಡಣೆಯ ಸರದಾಟುತವೆ ಗಾಲ್ಗೂಡಿದಬ್ಬರ ಹಿರಿದು ಕಿರಿದಿನ ಗಾಡಿಯಿಂ ಸುತ್ತೇರಿ ತಿರುಪಿನ ಮರುಪಿನಂದಗಳು (ಆನಂರಾ. ೧-೧೯-೧೪). [ಸುತ್ತು$_1$ + ಏಱು$_1$ (< ಏಱ್$_1$)]

ಸುತ್ತೋಲೆ (ನಾ). ೧. ಸುರುಳಿ ಸುತ್ತಿದ ಓಲೆ,—ಪತ್ರ: ಉಕಾರಕ್ಕೆ — ಸುತ್ತೋಲೆ, ಹತ್ತೆಂಟು (ಶಮದ. ೫೨ ಪ್ರಯೋ); ಬಸವನ ಪತಾಕೆಯಂ ಪಿಡಿದು ಸುತ್ತೋಲೆಯಂ ಒಸೆದು ಕರದೊಳಗಾಂತು (ಪಾಸೋಪು. ೪-೧೧೯). ೨. ಸಾರ್ವಜನಿಕರ ತಿಳಿವಳಿಕೆಗಾಗಿ ಸರ್ಕಾರ ಅಥವಾ ಸಂಸ್ಥೆಗಳು ಹೊರಡಿಸುವ ಅಧಿಕೃತ ಪ್ರಕಟಣೆ; ಪರಿಪತ್ರ: ಸ್ಥಳೀಯ ಆಡಳಿತಗಾರರಿಗೆ ಸುತ್ತೋಲೆಗಳ . . . ಮೂಲಕ ವಿಶದವಾಗಿ ತಿಳಿಸುತ್ತಾರೆ (ಕವಿಕೋ. I, ೨೮೭). [ಸುತ್ತು$_2$ + ಓಲೆ]

ಸುತ್ಥಣೆ (ನಾ). ಪದಾತಿಬಲ; ಕಾಲ್ಬಲ; ಕಾಲಾಳು: ಬಲ್ಲಾಳ ಭೂಪಾಲಕಂ ಎರಡುಂ ಲಕ್ಕಂಬರಂ ಸುತ್ಥಣೆಯರಶನಿಸನ್ನಾಹದಿಂ . . . ಎಯ್ತರೆ (ಎಕ. XI, ದಾವಣ. ೨೫-೩೧; 1224); ವರ್ಗದ್ವಿತೀಯಾಕ್ಷರಂಗಳ್ಗೆ . . . ಥಟ್ಟು, ಥಾಪನೆ, ಸುತ್ಥಣೆ (ಸುತ್ಥಣೆಯಂ, ಸತ್ಥಣೆ) ಮತ್ಥವಟ್ಟಿಗೆ, ಕಥಾಯಂ (ಕತ್ಥಾಯಂ) (ಶಮದ. ೧೫ ವೃತ್ತಿ). [< ಸುತ್ತು$_1$ + ಅಣೆ$_2$ (< ಅಣ್ಣಿ$_3$)]

ಸುತ್ರಗುತ್ತಿಗೆ, ಸುತ್ರೆಗುತ್ತಗೆ (ನಾ). ಒಂದು ಬಗೆಯ ಗುತ್ತಗೆ; ನಿಶ್ಚಿತ ಅವಧಿಯ ಗುತ್ತಿಗೆ; ಪರ್ಯಾಯಗುತ್ತಿಗೆ: ಆ ಸೀಮೆಗೆ ಗದ್ದೆ ತೋಟ ಮರ ಮಗ್ಗವಣ ಕಿಱುಕುಳ ಸೊನ್ನಾದಾಯ ಸುತ್ರಗುತ್ತಿಗೆ ಯಿ ಯೊಳಗಾಗಿ (ಎಕ. VII (R), ಮಳವ. ೧೦-೧೦;1517). **ಸುತ್ರೆಗುತ್ತಗೆ:** ಸೀಮೆಯ ವೊಳಗಣ ಗಣ ಹಳನವು ನಿಮಗೆ ಸುತ್ರೆಗುತ್ತಗೆಯಗಿ ಕೊಟವಾಗಿ (ಎಕ. VII (R), ಮಳವ. ೧೧೮-೧೦; 13 ನೆಯ ಶತ).

[< ಸೂತ್ರಗುತ್ತಗೆ]

ಸುತ್ರಾಮ (ನಾ). ದೇವತೆಗಳ ಒಡೆಯ; ದೇವೇಂದ್ರ: ಸುತ್ರಾಮನ ಸೂತ್ರಧಾರನಾಗಿಯುಂ (ಆದಿಪು. ೬-೧೦೬ ವ); ನೀ ಮರುಳಲಾ ಶಲ್ಯ ಫಡ ಸುತ್ರಾಮನೇ ಸಮವರ್ತಿಯೇ . . . ಭೀಮನುಱುಬೆಗೆ ಖೇಡನಾದೆಯಲ (ಕುವ್ಯಾಕ. ೧೨-೧೭).

[ಸಂ. ಸುತ್ರಾಮನ್]

ಸುತ್ರಾಮಜಿತ (ನಾ). ಇಂದ್ರನನ್ನು ಗೆದ್ದವನು: ಸುತ್ರಾಮಜಿತನು . . . ಕೂಡಲಸಂಗಯ್ಯನು (ಬಸವ. ೯೫೪). [ಸಂ. ಸುತ್ರಾಮಜಿತ್]

ಸುತ್ರೆಗುತ್ತಗೆ 'ಸುತ್ರಗುತ್ತಿಗೆ' ನೋ.

ಸುತ್ವ (ನಾ). = ಸುಕಾರ: ಹೇತುವಿನೊಳಾದ ಇಸುವಿನ ಸುಕಾರಕ್ಕೆ ಕುಂ ಪರಮಾಗೆ ಆ ಸುತ್ವಕ್ಕೆ ಲೋಪಮಕ್ಕುಂ (ಶಮದ. ೨೨೮ ವೃತ್ತಿ). [ಸಂ.]

ಸುದತಿ (ನಾ). ಸುಂದರವಾದ ಹಲ್ಲುಗಳನ್ನುಳ್ಳವಳು; ಚೆಲುವೆ: ನೆರೆದೀತ ನೊಳವನಿಪ ಸುಂದರನೊಳ್ ಪುಗೆ ರಾಜಗೃಹ ಗೃಹಾಳಿಗವಾಕ್ಷಾಂತರಕೃತ ಸರೋಜ ಮೆನಿಸುವ ಪುರಾಂಗನಾನಯನಸುಖಮನೊದವಿಸು ಸುದತೀ (ಶಾಂತಿಪು. ೫-೧೦೯); ಸುದತಿ ನೋಡಧಿಕ ಗುರ್ವಾಜ್ಞೆಯಂ ಮಱೆದು ಮೀಱಿದ ಫಲಂ ಕಂಡ ದುಸ್ವಪ್ನದರ್ಥಂ ಬರುತ್ತಿದೆ ಮೂರ್ತಿಗೊಂಡು (ಹಚಕಾ. ೮-೨); ಇದಿರು ಬಂದರು ಮಂತ್ರಿಗಳು ವರ ಸುದತಿಯರು ಸೂಸಿದರು ಸೇಸೆಯ (ಕುವ್ಯಾವಿ. ೯-೨೪). [ಸಂ. ಸುದತೀ]

ಸುದರುಶನ (ನಾ). ವಿಷ್ಣುವಿನ ಕೈಯಲ್ಲಿರುವ ಆಯುಧ; ಚಕ್ರಾಯುಧ: ಕೊರಳ ತುಲಸಿಯ ಮಾಲೆಗಳ . . . ವರ ಸುದರುಶನ ಲಾಂಛನದ ಮೈಸಿರಿಯೊಳೆಲ್ಲರು ಹರಿಯ ನಾಮಸ್ಮರಣೆಯಲಿ ಮೈಮರೆದು ಕುಣಿವುತಲಿರ್ದರು (ಆನಂರಾ. ೧-೫-೪೩).

[< ಸಂ. ಸುದರ್ಶನ]

ಸುದರ್ಶನ (ನಾ). ೧. ಒಳ್ಳೆಯ ನೋಟ. ೨. ನೋಡಲು ಸುಂದರವಾಗಿರುವವನು; ಚೆಲುವ. ೩. ವಿಷ್ಣುವಿನ ಕೈಯಲ್ಲಿರುವ ಆಯುಧಗಳಲ್ಲಿ ಒಂದು; ಚಕ್ರಾಯುಧ: "ನಾರಾಯಣನ ಚಕ್ರಮಂ ಸುದರ್ಶನಮೆಂಬುದು" (ಹಲಾಯು. ೬-೨೭); ದೇವ ದನುಜಾಹತ ಸುದರ್ಶನೋದ್ಯಮನ ಜಯ (ಜಗವಿ. ೫-೧೧೩); ಧನುವ ಶಸ್ತ್ರಾಸ್ತ್ರವ ಸುದರ್ಶನ ಕನಕ ಕವಚ ಕೃಪಾಣವನು ಸ್ಯಂದನದೊಳಿಳುಹೆಂದಸುರರಿಪು ಸಾತ್ಯಕಿಗೆ ನೇಮಿಸಿದ (ಕುವ್ಯಾಉ. ೭-೬). ೧, ೩: ಸ್ವಸ್ತಿಶ್ರೀಪ್ರಿಯನರ್ಜುನೋರ್ಜಿತಯಶಂ . . . ಸೂಕ್ತಸುದರ್ಶನಾಂಕನೆಸೆದಂ ಶ್ರೀವಿಷ್ಣು ಸಾಮ್ಯಾನ್ವಯಂ (ಎಕ. V, ಬೇಲೂರು. ೧೧೪-೪; 1173). ೪. ರಣಹದ್ದು. ೫. ಹಂಸಧ್ವಜನ ಒಬ್ಬ ಮಗನ ಹೆಸರು: ಆತಂಗೆ . . . ಅನುಜರೇಳುಮಂದಿ ಜಾತರ್ಸುದರ್ಶನಸುಧನ್ವಸುಮನಸ್ಸುರಥರೀ ತೆಱದೆ ನಾಲ್ವರು (ಜೈಮಿಧಾ. ೧೦-೪೪). [ಸಂ.]

ಸುದರ್ಶನಪಾಣಿ (ನಾ). ಸುದರ್ಶನಚಕ್ರವನ್ನು ಕೈಯಲ್ಲಿ ಹಿಡಿದವನು; ವಿಷ್ಣು: ಜಾಣಪಣವಿದು ಶಿವ ಸುದರ್ಶನಪಾಣಿಗಳಿಗಹುದಮರಪತಿ ಪದದಾಣೆ ಹುಸಿಯಲ್ಲೆನುತ ಬೆಱಗಾಯ್ತು ಸುರಕಟಕ (ಕುವ್ಯಾವಿ. ೭-೪೫); ಕ್ಷೋಣಿಪತಿ ಸುಲಲಿತ ಸುದರ್ಶನಪಾಣಿ ಪಾಂಡವರಾಜಕಾರ್ಯಧುರೀಣ . . . ರಕ್ಷಿಸು (ಹರಿಸಾ. ೧೩). [ಸಂ.]

ಸುದರ್ಶನಬಳ್ಳಿ (ನಾ). ಒಂದು ಬಗೆಯ ಬಳ್ಳಿ: (ಮೃಜಿಗಿ. ೭೫-೧೫೨೭).

[ಸುದರ್ಶನ$_2$ + ಬಳ್ಳಿ]

ಸುದಾ, ಸುದ್ದಾ, ಸುದ್ಧಾ, ಸುಧ. ಸುಧಾ (ಅ). ಸಹಿತ; ಕೂಡ; ಸಂಗಡ: ನಾವು ಕಬೂಲಾಗಿ ಕಿಲ್ಲತ್ತು ಉಡುಗರೆ ರಸ್ತುಸಹ ಸುದಾ ವೀಳ್ಯಪ್ರಸ್ತವು ಚನ್ನಾಗಿ ದಸ್ತೂರಿ ಪ್ರಕಾರ ಮಾಡಿ ಇದ್ದೇವೆ (ರಾಜೇಂದ್ರ. ೧೧೩); ಇಂಥಾ ಹೆಂಗಸು ಸುದಾ ಲೋಕದಲ್ಲಿ ಉಂಟೋ ಎಂದು ನಿಟ್ಟುಸಿರುಬಿಟ್ಟು ಸುಮ್ಮನಾದನು (ಕಥಾಮಂ. IV, ೧೫); ಅರ್ಜಿಪಟ್ಟಿ ಸುದಾ ಪರಾಂಬರಿಸಿ (ಮಹಾವಂ. II, ೭೯). **ಸುದ್ದಾ:** ಅವರನು ಯಾರನೂ ನಾ ನೋಡಿಲ್ಲ ಸುದ್ದಾ ಧಾರವಾಡನೂ ನನಗೆ ಗೊತ್ತಿಲ್ಲ (ಬೀಳತೆ. ೩೦); ಅದು ರೇಶಿಮೆಯ ಹೆಸರು ಸುದ್ದಾ ಅಲ್ಲಾ ಆದರೆ ಅದು ಹುಟ್ಟಿಸುವವನ ಹೆಸರು (ಮುಂಬವ್ಯಾ. ೨೬ ಪ್ರಸ್ತಾವನೆ). **ಸುದ್ಧಾ:** (ಕಿ). **ಸುಧ** : ಅವನು ಹುಟ್ಟಿದ ಮನೆಯಿದ್ದ ವಠಾರವನ್ನೂ ಸುಧ ನೋಡಿದ್ದೆ (ಕೆಲನ. ೩೨೩). **ಸುಧಾ** : (ಕಿ). [<— ಹಿಂ. ಸುದ್ಧಾ; ಮರಾ. ಸುದ್ಧಾ, ಸುದ್ಧಾಂ./ ತುಳು. ಸುದ, ಸುದಾ./ ಸಂ. ಸಹ]

ಸುದಾಮ (ನಾ). ೧. ಕೊಡುಗೈಯವನು; ಧಾರಾಳಿ. ೨. ಮೋಡ; ಮೇಘ. ೩. ಕಡಲು; ಸಮುದ್ರ. ೪. ಬೆಟ್ಟ; ಪರ್ವತ. ೫. ಇಂದ್ರನ ಆನೆ. ೬. ಕೃಷ್ಣನ ಬಾಲ್ಯಮಿತ್ರನಾಗಿದ್ದ ಒಬ್ಬ ಬ್ರಾಹ್ಮಣನ ಹೆಸರು: ಹರುಷವಿಮ್ಮಡಿಸಿತು ಸುದಾಮಗೆ (ಸುದಾಮ. ೨-೧೫). 'ಕುಚೇಲ' ಪರಾ. [ಸಂ. ಸುದಾಮನ್]

ಸುದಾಯ (ನಾ). ಮದುಮಕ್ಕಳಿಗೆ ಕೊಡುವ ಬಳುವಳಿ,—ಉಡುಗೊರೆ: "ಯೌತಕಂ, ಸುದಾಯಃ . . . ಮಗಳಿಗೂ ಅಳಿಯನಿಗೂ ಕೊಡತಕ್ಕ ಬಳವಳಿ ಮುಂತಾದ ಬಹುಮಾನಕ್ಕೆ ಹೆಸರುಗಳು" (ಸಿದ್ಧಾಂತಿ. ೨೪೩). [ಸಂ.]

ಸುದಿನ (ನಾ). ೧. ಒಳ್ಳೆಯ ದಿನ; ಪವಿತ್ರವಾದ ದಿವಸ. ೨. ಸಂತೋಷದ ದಿನ; ಆನಂದದ ದಿವಸ: ಇದೇ ಮಹಾಸುದಿನ (ರೂಢಿ). ೩. ಒಳ್ಳೆಯ ವಾಯುಗುಣವಿರುವ ದಿನ; ಒಳ್ಳೆಯ ಹವಾಮಾನವಿರುವ ದಿವಸ. 'ದುರ್ದಿನ' ಪರಾ. [ಸಂ.]

ಸುದೀನ (ನಾ). ಬಹಳ ದೀನತೆಯಲ್ಲಿರುವವನು; ಅತಿದೀನ: ದುರ್ಮತಿಗಳಂ ಸೈರಿಸಿ ಸುಕೃತರಂ ಮಾಡಿ ಎಮ್ಮುವನಸಮಮಹಿಮೋದ್ಧಾರ ಸೂರ ಸುದೀನ ಜನಧಾರ [ಪಾಠಾಂ. ಸುಧೀಜನಾಧಾರ] (ಬಸಪು. ೩೨-೬೨). [ಸಂ.]

ಸುದೀಪ್ತಿ (ನಾ). ಬಹಳ ಕಾಂತಿ; ಅತಿಯಾದ ಪ್ರಭೆ: ಸೊಡರಂ ಪೊತ್ತಿಸಿದನೊಂದಂ ತದೀಯೋದಾತ್ತದೀಪ ಸುದೀಪ್ತಿಯಂ ತಾನಿದ್ದ ಮನೆಯಲ್ಲಿ (ಬಸವ. ೩-೬). [ಸಂ.]

ಸುದೀರ್ಘ (ಗು). ೧. ಬಹಳ ದೀರ್ಘವಾದ; ತುಂಬ ದೊಡ್ಡದಾದ: ಊರಿನಿಂದ ಒಂದು ಸುದೀರ್ಘ ಪತ್ರ ಬಂದಿತು (ರೂಢಿ). (ನಾ). ೨. ಒಂದು ನರಕದ ಹೆಸರು: ಸುದೀರ್ಘ . . . ಸುಮನವೆಂಬೈದು ಮಂತ್ರಿನರಕಂಗಳೊಡನೆ ಭಯೋತ್ಕಟವೆಂಬರಸುನರಕವಿಹುದು (ವಿಷ್ಣು. ೧೫೨). [ಸಂ.]

ಸುದುರ್ಗ (ನಾ). ಒಳ್ಳೆಯ ಕೋಟೆ; ಭದ್ರವಾದ ದುರ್ಗ: ದೇಶಂ ಧರ್ಮೋಪಪೀಡಂ ಶ್ರುತಬಲಮೆ ಬಲಂ ಕೋಶಮುದ್ಯೋಧಕೋಶಂ ಸೌಶೀಲ್ಯಂ ಸಚ್ಚಹಾಯಂ ಸಚಿವಸುಪಶಮಂ ಜೈನಮಾರ್ಗಂ ಸುದುರ್ಗಂ ಭೂ ಶಸ್ತ್ರಾಗಾರಮಾದತ್ತೆನೆ . . . ಎಸೆದಂ ವೀರನಂದಿವ್ರತೀಂದ್ರಂ (ಚಂದ್ರಪ್ರ. ೧-೨೯). [ಸಂ.]

ಸುದೂರ (ನಾ). ತುಂಬ ದೂರವಾದುದು; ಬಹಳ ದೂರ: ಒಡನೊಡನೆ ಪೂರ್ವದ ಸುದೂರದ ದಿಗಂತದೆಡೆ ಕತ್ತಲೆಯ ಕಾಡಿನಂಚಿಗೆ ಬೆಂಕಿ ಹತ್ತಿತು (ಚಿತ್ತಾಂಗ. ೨೦-೫೫೬). [ಸಂ.]

ಸುದೃಢ (ಗು). ೧. ಬಹಳ ಗಾಢವಾದ,—ಭದ್ರವಾದ: ಸುದೃಢೋದಗ್ರಚಿತ್ರ ಮೋಹನಿಗಳಂ ವೈರಾಗ್ಯಮೆಂಬೊಂದು ಚಾಣದ ವಿಚ್ಛೇದಮನೆಯ್ದೆ (ಶಾಕ್ಯಭಿ. ೬-೫೯). ೨. ಬಹಳ ಸ್ಥಿರವಾದ; ಅಚಲವಾದ: ಸುದೃಢಾಭ್ಯಾಸಪಟುತಿಪ್ರಕಾಶ ಲಘು ವಾತಾಧಾರದಿಂ ನಿತ್ಯಸೌಖ್ಯದಶಾಲಕ್ಷ್ಮಿಯ ಚಿತ್ರಮಂ ಪಡಪ ಮೂಜುಂ ರತ್ನಮಂ ಕೆಯ್ಗೆ ಮಾಡಿದನುಂ (ಆನಂದ. ೪-೧೧). [ಸಂ.]

ಸುದೃಷ್ಟಿ (ನಾ). ಒಳ್ಳೆಯ ನೋಟ; ಉತ್ತಮವಾದ ದೃಷ್ಟಿ: ಕಟ್ಟು ಕಡಗುವಗೆ ಸುದೃಷ್ಟಿ ಬಂದಂತಾಯ್ತು (ಕರ್ನಾಕ. ೨೫೬). [ಸಂ.]

ಸುದೆ 'ಸೊದೆ' ನೋ.

ಸುದ್ದೈವ (ನಾ). ಒಳ್ಳೆಯ ದೈವ; ಅದೃಷ್ಟ: ಭಯಂಕರ ವಿಪತ್ತಿನಿಂದ ಪಾರಾದದ್ದು ಅವರ ಸುದ್ದೈವ (ರೂಢಿ). [ಸಂ.]

ಸುದ್ದೈವಜ್ಞ (ನಾ). ಉತ್ತಮ ಜ್ಯೋತಿಷಿ: "ಸುದ್ದೈವಜ್ಞನುತ್ತಮಜ್ಯೋತಿಷನೆನಿಕ್ಕು" (ಮಂಗರಾ. ೭೫-೬). [ಸಂ.]

ಸುದ್ದ (ಗು). ೧. ನಿರ್ಮಲವಾದ; ಶುದ್ಧವಾದ: 'ಸುದ್ದಗನ್ನಡ' ಪರಾ. (ನಾ). ೨. ಶುದ್ಧತೆ; ಚೊಕ್ಕಟತನ: 'ಸುದ್ದಯಿಸು' ಪರಾ. ೩. ಲಕ್ಷಣವಾಗಿರುವುದು; ಶುಭವಾಗಿರುವುದು: ಬಾರಮ್ಮ ಗಿರಿಜಮ್ಮ ಭಾವಾ ನೋಡ್ಯಾರಂತೆ ಅಂಗಾಲಪದ್ಮಾ ಸುಳಿಸುದ್ದಾ (ಹುಟ್ಟಿಹ. ೫೬). [< ಸಂ. ಶುದ್ಧ]

ಸುದ್ದಂವಡೆಯ (ನಾ). ಒಬ್ಬಾತನ ಹೆಸರು: ಮಾಣಿಗ ಬಸುಣ್ಣಿ ಪೇಸುವ ಚಲಭೂಷಣನೆಬ್ಬು X ಪರಾಕ್ರಮನ ಪುಡಿದ ಕಲ್ಲು ಕೊತ್ತಟಿ ಸುದ್ದಂವಡೆಯರಂ ಮಂಗಳಂ (ಎಕ್ಷ. X, ಶಿಕ್ಷಳಿ. ೧೨-೫; ಸು. ೪೦೦). [ಸುದ್ದ? + < ಒಡೆಯ]

ಸುದ್ದಗನ್ನಡ (ನಾ). ಶುದ್ಧವಾದ ಕನ್ನಡ; ತಿಳಿಗನ್ನಡ: ಸಕ್ಕದಮಂ ಪೇಟ್ಪೊಡೆ ನೆಜಿ ಸಕ್ಕದಮಂ ಪೇಟ್ಪೆ ಸುದ್ದಗನ್ನಡದೊಳ್ಪಂದಿಕ್ಕುವುದೇ ಸಕ್ಕದಮಂ (ಧರ್ಮಾಮೃ. ೧-೪೨). [ಸುದ್ದ + ಕನ್ನಡ]

ಸುದ್ದಗೆ, ಶುದ್ಧಗೆ (ನಾ). ೧. [ವ್ಯಾಕ] ಮೂಲಾಕ್ಷರ; ಶುದ್ಧಾಕ್ಷರ: "ಅಕ್ಕರಮಂ ನುಡಿ ಸುದ್ದಗೆಯಂದು" (ಚಪಾ. ೧೧೨); ಬರೆಯದೆ ಬಂದ ಸುದ್ದಗ[ಯಿ] ಸೂತ್ರಮನೊಂದೆ ಮುಹೂರ್ತಮಾತ್ರದಿಂ ಬರಿಸಿದುದು (ಪಂಪಭಾ.೨-೩೪); ನೀನೋಡಲ್ಕೇಟ್ಟುದು ಸುದ್ದಗೆಯಂ ಬರೆಯಮೆಂದೊಡೆ ಆನೀ ಕಿಱುಗೂಸುಗಳಂತೆ ಸುದ್ದಗೆಯಂ ಬರೆವೆಂ ಗಡ (ಜೀವಸಂ. ೧೬೨-೧೩); ಷಡ್ವದನನಂ ಗದ್ದುಗೆಯೊಳಿರಿಸಿ ಸುದ್ದಗೆಯೊಳಗ್ಗದ ಬಿನ್ನನೋಂಕಾರಮಂ ಬರೆಯಲು (ಭಾವಚಿಂ. ೧-೩೮). **ಶುದ್ಧಗೆ**: ೧. ಪಿತೃವರ್ದೋದಿಸುವಂದು ಶುದ್ಧಗೆಯೊಳಾ ಸಿದ್ಧಂ ನಮೋಯೆಂಬ ವಿಶ್ರುತವರ್ಣಂಗಳನಾದೊಡಂ ಬರೆದಿರಿಲ್ಕೊಂ (ಸುಜಮಾ. ೨-೩೬); ಕವಿಗಳ್ ಸ್ವರದಿಂ ವರ್ಗದಿನವರ್ಗದಿಂ ಯೋಗವಾಹದಿಂ ದೇಶಿಯೊಳುದ್ಭವಮಪ್ಪ ವರ್ಣದಿಂ ಪಂಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ (ಕಮಾದ. ೩೧); ವಿರಹಿ ವಿಹಂಗದ ಕಾಲ್ಕಿಣಿಗಳೊ ಸ್ಮರಗುಣಿಸುವ ಶುದ್ಧಗೆಯೊ . . . ಕುರುಳೋಳಿಯಾ ಕೋಮಲೆಗೆ (ಶ್ರೀಪಾಲ. ೩-೭೭).

೨. (ಆಲಂ) ಅತಿಸುಲಭ: ಕನಸಂತರಿಕ್ಷಮಂಗಧ್ವನಿ ಕಾರೇಳು ಕಲಿಸಲಕ್ಷಣಂ ಮತ್ತಂ ಮೇದಿನಿ ಕಂಪಮೆಂಬವಷ್ಟಾಂಗ ನಿಮಿತ್ತಂ ಬಗವೊಡವರ್ಗೆ ಶುದ್ಧಗೆಯಲ್ತೆ (?) (ಧರ್ಮಾಮೃ. ೫-೧೫೮). [< ಸಂ. ಶುದ್ಧಕ]

ಸುದ್ದಯಿಸು, ಸುದ್ದೈಸು, ಸುದ್ದೈಸು (ಕ್ರಿ). ನಿರ್ಮಲಗೊಳಿಸು; ಶುದ್ಧಗೊಳಿಸು: ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲೆಬಾಗಿ ಬಿದ್ದ ನಾಗನ ತಂದು ಬುದ್ಧಿಯ ಕಾರುಕನ ಕೈಯಲ್ಲಿ ಸುಬುದ್ಧಿಸಿ ಬಂದಿ ಸುದ್ದಯಿಸಿ [ನಾಗಚಂ. ಶ ದೈಸಿ] (ಸರ್ವಪ. ೧೦೨-೫೬.೬ ; ಸಕಮ.ಕ. III, ೪೭-೯೮ ನೋ). **ಸುದ್ದೈಸು**: ಅಷ್ಟಕುಳಗಳ ಮೆಟ್ಟಿ ಸುಟ್ಟು ಸುದ್ದೈಸಲಾ ಬಟ್ಟ ಬಯಲಿನ ಪುಟ್ಟಿ ದುಷ್ಟನಾಗಿ (ಪರಗೋ. ೬-೫೦). **ಸುದ್ದೈಸು**: ಬುದ್ಧಿಮನಚಿತ್ತಗಳ ಸುದ್ದೈಸಿ - ಶರಣರು ತಿದ್ದಿ ಬರೆಸಿದರೆಂ ಪುರಾಣವ (ಸಿದ್ಧ ೧೦೦-೩ ಜಯಮಂಗಳ).

[ಸುದ್ದ + - ಇಸು]

ಸುದ್ದಾ 'ಸುದಾ' ನೋ.

ಸುದ್ದಿ, ಸುದ್ಧಿ, ಸೋದೆ (ನಾ). ೧. ನಿರ್ಮಲವಾದುದು; ತಿಳಿಯಾದುದು; ಶುದ್ಧವಾದುದು: ಶಕಾರಕ್ಕೆ . . . ಶುದ್ಧಿ -- ಸುದ್ಧಿ (ಸಮಾಜ. ೨೫೩ ಪ್ರಯೋ). ೨. ಸಂದರ್ಭಗಳ ಸರಿಯಾದ ತಿಳಿವಳಿಕೆ; ಸೂಕ್ತವಾದ ಸಾಂದರ್ಭಿಕಜ್ಞಾನ. ೩. ವಾರ್ತೆ; ಸಮಾಚಾರ: ವೇದವೆಂಬುದು ಓದಿನ ಮಾತು ರಾಸ್ಯವೆಂಬುದು ಸಂತೆಯ ಸು[ದ್ದಿ]ದ್ದಿ ಪುರಾಣವೆಂಬುದು ಪುಂಡರ ಗೋಷ್ಠಿ (ಅವಸ್ಥೆ. ೧೦೩-೪೬೫); ವಾದಿಯ ಗೀದಿಯ ಸುದ್ದಿ ಬರ್ಪುದಿದು ಚೋದ್ಯಮಲ್ತೆ (ಪದ್ಮರಾ. ೯-೫೫); ಏನು ಸುದ್ದಿ [ಪಾಠಾಂ. ಸಿದ್ಧು]ಯುಪಾಧ್ಯರೆದ್ದಿರಿ (ಸಂಪಪ. ೧೦-೧೧); ಸಿದ್ಧಾಂತಯೋಗದ ಸುದ್ದಿಯನು ತಿಳುಹುವೆನು (ಸರ್ವಜ್ಞ. ೫೬). ೪. (ಆಲಂ) ಗೊಡವೆ; ಗೋಜು: ನನ್ನ ಸುದ್ದಿಗೆ ಬಂದರೆ ಸುಮ್ಮನೆ ಬಿಡುವುದಿಲ್ಲ (ಗಾದೆ) **ಸುದ್ದಿ** : ೩. 'ಸುದ್ದಿಕಾಜಿ' ಪರಾ. **ಸೋದೆ**: ೪. ನಿತ್ಯನೈಮಿತ್ತಕರ್ಮಂಗಳಾ ಸೋದೆಯಿಂ ಬಿಟ್ಟು ದ್ವಿಜವೇಷದಿಂ ಸಂಚರಿಪರು (ವಂಶಾರಾ. ೫-೨೨-೧೧).

ಸುದ್ದಿಸೂರು = ವಾರ್ತೆ; ಸಮಾಚಾರ: ಇಂಥೆಲ್ಲ ಊರಿನ ಸುದ್ದಿಸೂರುಗಳ ಎಡೆಯಲ್ಲಿ ಮಹಾಯುದ್ಧದ ವಾರ್ತೆಯೂ ಸೇರಿಕೊಂಡು (ಜಾಯಾ. ೧೧೬); ಚೆನ್ನಪ್ಪನ ಮಾತು-ಕತೆ, ಸುದ್ದಿ— ಸೂರು ಇಂದು ದಿನಕ್ಕಿಂತ ಹೆಚ್ಚಾಗಿದ್ದುವು (ಜಪಜೀ. ೪೧); ಎಳೆಯದ ಹರಿವಾಣ ಮುಂದಕ್ಕಿರಿಸಿಕೊಂಡು, ಊರಿನ ಸುದ್ದಿ-ಸೂರುಗಳ ವಿಚಾರದಲ್ಲಿ ಮಾತನಾಡುತ್ತಿದ್ದು (ಸ್ಮಶಸೂ. ೧೨೧).

[< ಪ್ರಾ. ಸುದ್ಧಿ./ ಸಂ. ಶುದ್ಧಿ./ ತಮಿ. ಚುತ್ತಿ; ತೆಲು. ಸುದಿ; ಕೊಂಕಣಿ. ಸುದ್ದಿ]

ಸುದ್ದಿಗಾರ, ಸುದ್ದಿಕಾಜಿ (ನಾ). ವಾರ್ತೆಯನ್ನು ತರುವವನು; ದೂತ: ಸುದ್ದಿಗಾರಮ ಹುಟ್ಟುಹಾಕುತ್ತಿದ್ದ (ಮಹಾತ್ಮಾ. ೧೫೧); ಸುದ್ದಿಗಾರರಲ್ಲಿಯೂ ಇನ್ನೊಂದು ಜಾತಿ (ಹುಚ್ಚುಹು. ೯೯). **ಸುದ್ದಿಕಾಜಿ**: ವೀರನೊಳಂಬಂ ವೀರಮೇಳಾಪಕರೊಳ್ದುರ್ವಾರ್ತಾಪ್ರಪಂಚಮಂ ತಂತಮ್ಮ ಸುದ್ದಿಕಾಜಿರಿಂ ಕೇಟ್ದು (ಸೌಗಾ. XX, ೪೯-೩೩; 10767).

[ಸುದ್ದಿ + - ಗಾರ (< - ಕಾಜಿ)]

ಸುದ್ದಿಗೇಳ್ (ಕ್ರಿ). ವಾರ್ತೆಯನ್ನು ಕೇಳು; ಸಮಾಚಾರವನ್ನು ಆಲಿಸು: ಅರಸಿಯ ಸುದ್ದಿಗೇಳ್ದುಸಿರದಿರ್ಪುದು ಪಾಟಿಯೆ (ಪಂಡಾಮಾ. ೧೦-೬೨). [ಸುದ್ದಿ + ಕೇಳ್]

ಸುದ್ದಿಗೊಡು (ಕ್ರಿ). ವಾರ್ತೆಯನ್ನು ಕೊಡು; ಸಮಾಚಾರವನ್ನು ನೀಡು: ನೆಟ್ಟನೆ ಚಾವಡಿಗೆ ಹೋಗಿ, ಸುದ್ದಿಗೊಟ್ಟು ಬೇಹನ್ನು ಬರೆಯಿಸದೆ . . .ನಿಂತಿರಿ! (ಬಬ್ಬಿಳಿ. ೫೧-೫೧). [ಸುದ್ದಿ + ಕೊಡು]

ಸುದ್ದಿಬಡಿ (ಕ್ರಿ). (ಆಲಂ) ವಾರ್ತೆಯು ತಲುಪು; ಸಮಾಚಾರ ಮುಟ್ಟು: ಮುಂಜಾನೆ ತಿರುಗಿ ಹೋದ ಎಂದು ಆತನಿಗೆ ಸುದ್ದಿಬಡಿಯಿತು (ಜಪಮಾ. ೧೪೬).

[ಸುದ್ದಿ + ಬಡಿ]

ಸುದ್ದಿವಾಹಕ (ನಾ). ವಾರ್ತೆಯನ್ನು ತೆಗೆದುಕೊಂಡು ಹೋಗುವವನು: ಒಲಂಪಿಕ್ ಆಟಗಳು ಮುಕ್ತಾಯವಾದ ಮೇಲೆ ವಿಶೇಷ ಸುದ್ದಿವಾಹಕರು ಗ್ರೀಸಿನ ಊರೂರುಗಳಲ್ಲಿ ಸಂಚರಿಸುತ್ತಿದ್ದರು (ಕಪಪ್ರ. ೬-೧೨೬). [ಸುದ್ದಿ + ವಾಹಕ]

ಸುದ್ದೆ (ನಾ). (ಶುದ್ಧವಾದ) ಬಿಳುಪಾದ ಮಣ್ಣು: 'ಸುದ್ದೆಮಣ್ಣು' ಪರಾ.

[< ಸಂ. ಶುದ್ಧ./ ತೆಲು. ಸುದ್ದ]

ಸುದ್ದೆಮಣ್ಣು (ನಾ). ಬಿಳಿಯಬಣ್ಣದ ಒಂದು ರೀತಿಯ ಮೃದುವಾದ ಮಣ್ಣು: ಅದರಲ್ಲಿ ಸುದ್ದೆಮಣ್ಣು ಬೆರೆದಿರಬಾರದು (ಶಿಲಾ. ೨೮೪); ಇವಳು ಕಾಲುಚಾರಿ ಕೆಸರಿನಲ್ಲಿ ಬಿದ್ದಳು. ಬಟ್ಟೆಯೆಲ್ಲ ಸುದ್ದೆಮಣ್ಣಾಯಿತು (ಹಸುಹೊ. ೨೩).

[ಸುದ್ದೆ + ಮಣ್ಣು (< ಮಣ್)]

ಸುದ್ದೈಸು 'ಸುದ್ದಯಿಸು' ನೋ.

ಸುದ್ಧಾ 'ಸುದಾ' ನೋ.

ಸುದ್ಧಿ 'ಸುದ್ದಿ' ನೋ.

ಸುದ್ಧಿಕಾಱ 'ಸುದ್ದಿಗಾರ' ನೋ.

ಸುದ್ಧೈಸು 'ಸುದ್ದಯಿಸು' ನೋ.

ಸುದ್ರಕ (ನಾ). ಒಬ್ಬಾತನ ಹೆಸರು: ಗೊನ್ನಿಸುತರಿಂ ಪರಾಕ್ರಮನ್ ಬಲ್ಯಡೆ ಸು(ಶೂ)ದ್ರಕನ್ (ಎಇ. XXIV, ೧೧೬-೭; 892). 'ಸೂದ್ರಕಯ್ಯ' ಪರಾ.

[IP ಇದು 'ಶೂದ್ರಕ' ಎಂಬ ಶಬ್ದದ ಅಪಲಿಖಿತ]

ಸುಧ 'ಸುದಾ' ನೋ.

ಸುಧನ್ವ (ನಾ). ೧. ಒಳ್ಳೆಯ ಬಿಲ್ಲುಗಾರ. ೨. ಹಂಸಧ್ವಜನ ಒಬ್ಬ ಮಗನ ಹೆಸರು: ಜಾತರ್ಸುದರ್ಶನಸುಧನ್ವಸುಮನಸ್ಸುರಥರೀ ತೆಱದೆ ನಾಲ್ವರಿವರೆಲ್ಲರ್ ಸಮರ್ಥರ್ (ಚೈಮಿಭಾ. ೧೦-೪೪). [ಸಂ. ಸುಧನ್ವನ್]

ಸುಧರ್ಮ (ನಾ). ಒಳ್ಳೆಯ ಸಂಪ್ರದಾಯ; ಉತ್ತಮವಾದ ಆಚಾರ: ತನುವೆನಿತನಿತುಂ ಮನವೆನಿತನಿತುಂ ಮೃದುಮಧುರವಚನಮೆನಿತನಿತುಂ ತೆಕ್ಕನೆ ತೀವಿ ಸುಧರ್ಮ ರಸಾಯನಮೊದವಿದಂದಮನಾ ನೃಪೇಂದ್ರಂ ಪೋಲ್ವಂ (ಶಾಂತಿಪು. ೧-೬೧). [ಸಂ.]

ಸುಧರ್ಮಾಧಿಪ (ನಾ). ಉತ್ತಮಧರ್ಮದ ಒಡೆಯ.—ಪ್ರಭು: ಏನೆಂಬ ಜಿನನ ಸೇವನಮೇನೆಂಬನುರಾಗಮೇನದೇನೆಂಬ ಜಿನಾನುಷ್ಠಾನುಕ್ರಮಮೇನೇನಂ ಬಣ್ಣಿಪೆಂ ಸುಧರ್ಮಾಧಿಪನಂ (ಅಜಿಪು. ೫-೮೬). [ಸಂ.]

ಸುಧರ್ಮಾಧಿಷ್ಠಿತ (ನಾ). ೧. ಉತ್ತಮಧರ್ಮದಿಂದ ಕೂಡಿದವನು. ೨. 'ಸುಧರ್ಮಾ' ಎಂಬ ದೇವಸಭೆಯಲ್ಲಿ ಕುಳಿತವನು: ಇಂದ್ರ. ೧,೨: ಮಹಾ ಮಹಿಮಾಗಾಶಯಾಗಿಯುಂ ಸುರಾಗನುಂ ಸುಧರ್ಮಾಧಿಷ್ಠಿತನಾಗಿಯುಂ ಗೋತ್ರ ಪ್ರಿಯನುಂ (ರಾಜಶೇ. ೩-೯ ವ). [ಸಂ.]

ಸುಧರ್ಮಾನುವರ್ತಿನಿ (ನಾ). ೧. ಒಳ್ಳೆಯ ಧರ್ಮವನ್ನು ಅನುಸರಿಸುವವಳು. ೨. 'ಸುಧರ್ಮಾ' ಎಂಬ ದೇವಸಭೆಯನ್ನು ಅನುಸರಿಸುವವಳು. ೧, ೨: ಬಾಪಲತೆಯಂತೆ ದೃಢಗುಣಸಂಧಾನೆಯುಂ ಮಹೇಂದ್ರಲೀಲೆಯಂತೆ ಸುಧರ್ಮಾನುವರ್ತಿನಿಯುಮೆನಿಪಳ್ (ಚಂದ್ರಪ್ರ. ೧೧-೧೧೦ ವ). [ಸಂ. ಸುಧರ್ಮಾನುವರ್ತಿನೀ]

ಸುಧರ್ಮೆ (ನಾ). ದೇವಲೋಕದ ಸಭೆ; ಸುರರ ಸಭೆ: ಮಾಡಿಗ್ಗದ ಸಭೆ ಸುಧರ್ಮೆಯನೇಡಿಸುವ ಚೆಲುವಿನಲಿ ಪುರದಲಿ ರೂಢಿಸಿತು (ಕುಮಾಸ. ೧೨-೭೩).

[ಸಂ. ಸುಧರ್ಮಾ]

ಸುಧರ್ಮೇಶ (ನಾ). = ಸುಧರ್ಮಾಧಿಪ: ಕರ್ಮಹರ ಧರ್ಮನಗಕಾರ್ಮುಕ ಚತುರ್ಮುಖಿ ಸುಧರ್ಮೇಶ ಮುಖ್ಯನತ ಧರ್ಮಜಯಪಾದ . . . ಪಾಲಿಪುದೆನ್ನ (ಪ್ರೌಢರಾ. ೧೨-೧). [ಸಂ.]

ಸುಧಾ 'ಸುದಾ' ನೋ.

ಸುಧಾಂಗ (ನಾ). ೧. ಅಮೃತವನ್ನು ಅಂಗದಲ್ಲಿ ಹೊಂದಿರುವವನು; ಚಂದ್ರ; ಸುಧಾಕರ: ಸುಧಾಂಗನಿಂ ಪೊಂಗುವೆಳದಿಂಗಳ ತೊಡರ್ದ ಕಂಗಳ. . .ಲತಾಂಗಿಯರೆನಿಪ್ಪ ಪಣ್ಣಾಂಗನಾಜನವೆಸೆದುದು (ಹಚಕಾ. ೪-೪೦). ೨. ಚಂದ್ರಮಂಡಲ: ಕಣ್ಗೊಪ್ಪಿದುದಮೃತಕಳಾಪೂರಿತಾಂಗಂ ಸುಧಾಂಗಂ (ರಾಜಶೇ. ೧೧ ೫೧). [ಸಂ.]

ಸುಧಾಂಬರ (ನಾ). ಬಿಳಿಯ ಬಟ್ಟೆ; ಶ್ವೇತಾಂಬರ: ಗೌಳಗಜಂ ತುರುಷ್ಕ ತುರಗಂ ವರಸಿಂಹಳನಾಥಮೌಕ್ತಿಕಂ ಚೋಳಸುಧಾಂಬರಂ ಮಗಧಕತ್ತುರಿಯುಂ . . . ವಿಭುಸಂಕಮದೇವಭೂಪನಾ (ಎಇ. VII, ಶಿಕಾರಿ. ೯೬-೧೫; 1170). [ಸಂ.]

ಸುಧಾಂಶು (ನಾ). ೧. = ಸುಧಾಂಗ ೧: "ಚಂದ್ರಮಂ ವಿಧು . . . ದ್ವಿಜರಾಜನೆನೆ ಸುಧಾಂಶುವೆನಿಕ್ಕು" (ಮಂಗರಾ. ೧೧-೪); ತನ್ನ ಜೀವಾನಂದಸಾಗರ ಸುಧಾಂಶುವಿಗೆ ಭರತದೇವಗೆ ನೆಲದ ಸಿರಿಯಕ್ಕೆ (ಶ್ರೀರಾಮಾ. ೧೨೦-೨೫೯). ೨. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: ಶಶಾಂಕ ಸೋಮಂ ಸುಧಾಂಶು ರಜನಿಕರಂ . . . ಒಂದಱ ನಾಮಂ (ವೃತ್ತಜಾ. ೯-೧). 'ಹಿಮಾಂಶು' ಪರಾ. [ಸಂ.]

ಸುಧಾಂಶುಬಿಂಬ (ನಾ). ಚಂದ್ರಬಿಂಬ: ಬೆಂದನೆಂದು ನವಿಲಂ ಪಾಂಬೆ ಕನಲ್ಗಡಸಿ ಪೊಯ್ದ ಮೇಗಣ ನೆಲೆಯಿಂದಂ ಬಿರ್ಚುದು ಪಚ್ಚೆಯ ಪದಕಂ ಬೀಟ್ಟಂದದೆ ಸುಧಾಂಶುಬಿಂಬದ ಕೊರಲಿಂ (ಯಶೋಧ. ೩-೪೧); ಸಲ್ಲಲಿತಾಂಗಿ ನಿಶಾವಸಾನದೊಳ್ . . . ಸುಧಾಂಶುಬಿಂಬಮಂ . . . ಕಂಡಳ್ (ಪುಷ್ಪಪು. ೯-೯೯). [ಸಂ.]

ಸುಧಾಂಶುಲೇಖೆ (ನಾ). ಚಂದ್ರನ ಕಲೆ: ಹಾರಮರೀಚಿಮಂಜರಿ ಸುಧಾರಸಧಾರೆ ಸುಧಾಂಶುಲೇಖೆ ಕರ್ಪೂರಶಲಾಕೆ ನೇತ್ರಸುಖದಾಯಕಂ (ಪಂರಾಮಾ. ೯-೧೮೨); ಲಲನೆಯ ನುಡಿಯಿಂ ಹರ್ಷಂ ನೆಲೆವರ್ಚೆ ಸುಧಾಂಶುಲೇಖೆಯೆಳವೆಳಗಿಂದಂ ನೆಲೆವರ್ಚುವ ಪಾಲ್ಗಡಲಂ ಗೆಲೆವಂದಂ ನೃಪಗುಣಾಶ್ರಯ ವೈಶ್ರವಣಂ (ಮಲ್ಲಿಪು. ೪-೮೮).

[ಸಂ. ಸುಧಾಂಶುಲೇಖಾ]

ಸುಧಾಂಶುವಲ್ಲಭ (ನಾ). ಅಮೃತದಂತಹ ಕಿರಣಗಳಿಗೆ ಒಡೆಯನಾದವನು; ಚಂದ್ರ: ತನಗಿದಿರ್ವಂದು ನಿಂದ ರಜನೀವಧುವಂ . . . ಸುಧಾಂಶುವಲ್ಲಭಂ ಮನದೊಲವಿಂದೆ ತನ್ನ ವಿತತಾಂಶುಕಮಂ ಪೊದಿಸುತ್ತ ಕೂಡುತಿರ್ಪನಿತಱೊಳ್ (ರಾಜಶೇ. ೪-೧೪). [ಸಂ.]

ಸುಧಾಕರ (ನಾ). = ಸುಧಾಂಗ ೧: ಭೂರಿಕಳಾವಿಬೋಧಿತ ಸುಧಾಕರರೂರ್ಜಿತ . . . ಚಂದ್ರಕೀರ್ತಿಭಟ್ಟಾರಕರ್ (ಸುಕುಮಾ. ೧-೨೨); ಉದಯಾದ್ರಿಯಂ ಸುಧಾಕರನಡರ್ದಂ (ಪುಷ್ಪಪು. ೮-೧೦೩); ಮುಱಿದ ಮುತ್ತಿನ ದೇಶಿಕಾತಿಯರಾನನೇಂದುಗಳಾ ಸುಧಾಕರನೆನಲು ಗೆಲಿದುದು ಸಭೆ ನಭಸ್ಥಳವ. (ಕುಮಾಸ. ೧೩-೩೦). [ಸಂ.]

ಸುಧಾಕರಕಾಂತ (ನಾ). ಚಂದ್ರಪ್ರಕಾಶದಿಂದ ದ್ರವಿಸುವುದೆಂದು ಭಾವಿಸಲಾದ ಒಂದು ಬಗೆಯ ಬಿಳಿಯ ಕಲ್ಲು; ಚಂದ್ರಕಾಂತಶಿಲೆ: ಪಚ್ಚೆಯ ತೋರಣಂ ಕನಕದುಯ್ಯಲಪೂರ್ವ ಸುರೇಂದ್ರರತ್ನದಿಂದಚ್ಚರಿದರ್ದ ವೇದಿಕೆ ಸುಧಾಕರಕಾಂತದ ಸೆಜ್ಜೆ ಕಾಂತಿಯಂ ಬಿಚ್ಚಳಿಪಚ್ಚ ಬಜ್ಜರಗದಂ . . . ಸೂಳೆಗೇರಿಯೊಳ್ (ರಾಜಶೇ. ೨-೧೧೬). [ಸಂ.]

ಸುಧಾಕರಕುಲ (ನಾ). ಚಂದ್ರನು ಮೂಲಪುರುಷನಾಗಿರುವ ಕುಲ; ಚಂದ್ರವಂಶ: ರುಚಿಸೌಮ್ಯ ಪುರೂರವಚಕ್ರಿಯಾಯುಭೂವರನಹುಷಕ್ಷಿತೀಶ್ವರ ಯಯಾತಿ ನೃಪಾಳ ಯದೂರ್ಬ್ಬಿಪಂ ಸುಧಾಕರಕುಲನಾತನಿಂ ನೆಗಳ್ದ ಯಾದವವಂಶಲಲಾಮಂ (ಎಇ. VII (R), ನಾಗಮಂ. ೨೪-೩, 1271). 'ಸೋಮಕುಲ' ಪರಾ. [ಸಂ.]

ಸುಧಾಕರಧರ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಶಿವ; ಇಂದುಧರ: ಮತ್ತ ಪೊಡದಂ ನರನೀಶನ ವಕ್ಷಮಂ ಸುಧಾಕರಧರನಾರ್ದು ಮೇಣಱಗಿದಂ (ಶಪಶಂ. ೪ ೮೩). [ಸಂ.]

ಸುಧಾಕರಮೌಳಿ (ನಾ).= ಸುಧಾಕರಧರ: ಲೋಲನಾಪರಿಕರ್ಮತರು ನಿರ್ಮೂಲನೈಕಕ್ಷಮ ಸುಧಾಕರಮೌಳಿ ಕೇಳೀಕಲಿತವಿಸ್ತರಕಥಾಂತರವ (ಕುಮಾಕ. ೬-೧); ನನ್ನನಿಲ್ಲಿಗೆ ಕಳುಹಿದನ್ ಸುಧಾಕರಮೌಳಿ ನಿನ್ನ ಭಕ್ತಿಗೆ ಮೆಚ್ಚಿ (ಚತ್ರಾಂಗ. ೮೪-೨೫೦೨). [ಸಂ.]

ಸುಧಾಕಲಿತಾನ್ನ (ನಾ) ಹಾಲನ್ನು ಸೇರಿಸಿ ಕಲಸಿದ ಅನ್ನ: ಆ ಸುಧಾಕಲಿತಾನ್ನವೇ ಫಲರಾಸಿಯಾದುದು ಗೇಯರಸವಿನ್ಯಾಸವೇ ಮಧುಮಕ್ಷಿಕವ್ರಜ ಜಂಬುಕಧ್ವಾನ (ಕುಮಾಅ. ೧-೨೬). [ಸಂ.]

ಸುಧಾಕಾಂತ (ನಾ). ಅಮೃತದಿಂದ ಕೂಡಿದ ಚಂದ್ರ: ಜಿತ ಪಂಚೇಷುತ್ರದಿಂದೀಶ್ವರನ ನಿಸಿಯುಮುದ್ಯತ್ಸುಧಾಕಾಂತನತ್ಯೂರ್ಜಿತ ತೇಜೋಲಕ್ಷ್ಮಿಯಿಂ ತೀವ್ರಕರನೆನಿಸಿಯುಂ (ಎಇ. V, ಹಾಸನ. ೧೩೦-೮; 1147). [ಸಂ.]

ಸುಧಾಕಿರಣ (ನಾ). ಅಮೃತಕಿರಣಗಳುಳ್ಳವನು; ಚಂದ್ರ: ಸುಧಾಕಿರಣಂ ಕರ್ಕಿವಿಲಗ್ನದೊಳ್ ನಿಲೆ ಪಿಶಾಚಪ್ರಾಪ್ತನಕ್ಕುಂ ನರಂ (ಚಾತು. ೨೧-೧೮); ಬರ್ಹಿಯ ಸುಧಾಕಿರಣನ ದಿನಾಧಿಪನ . . . ಗುಣವಿರಬೇಕು ನೃಪರಿಗೆ (ಕುಮಾಸ. ೧-೫೪); ಮೆಲ್ಲನವತರಿಸುತಿರ್ದಂ ಸುಧಾಕಿರಣಂ (ವೈಶಾಖ. ೯೧-೭೬೨). [ಸಂ.]

ಸುಧಾಗೃಹ (ನಾ). ಸುಣ್ಣ, ಗಾರೆ ಮೊದಲಾದುವುಗಳನ್ನು ಬಳಿದ ಮನೆ;

ಧವಳಾಗಾರ; ಸೌಧ: ಆತನನಾಗಳ್ ನೋಡುವ ಕೌತೂಹಳದಿಂ ಸುಧಾಗೃಹಾಗ್ರಂಗಳೊಳಿರ್ದಾ ತರಳೇಕ್ಷಣೆಯರ್ಕಳ್ ವಾತಗವಾಕ್ಷಂಗಳಿಡೆಗೆ ತಡೆಯದೆ ನಡೆದರ್ (ಕಾಂತಿಪು. ೬-೫); ಕುಮಾರನೊಂದು ಕೊಳದೊಳ್ ಮಿಂದು ವನಫಲಂಗಳಂ ತಿಂದು . . . ತತ್ಸಮೀಪದ ಸುಧಾಗೃಹದಿಂ ರಾಜಕನ್ಯಕೆಯರಂತಱುವರ್ ಬಂದು (ಚಾವುಂಪು. ೭೩).

[ಸಂ.]

ಸುಧಾಜಾತ (ನಾ). ಕ್ಷೀರಸಾಗರದಲ್ಲಿ ಹುಟ್ಟಿದವನು; ಚಂದ್ರ: ದುಷ್ಕಚೇಷ್ಟ ಸುಧಾಜಾತ ಸುತಾಂಶದೊಳ್ (ಜಾತಿ. ೨೨-೯). [ಸಂ.]

ಸುಧಾತರ್ಪಣ (ನಾ). (ಸತ್ತವರ ತೃಪ್ತಿಗಾಗಿ, ಉತ್ತರಕ್ರಿಯೆಯ ಸಮಯದಲ್ಲಿ) ಹಾಲು ಎರೆಯುವುದು: ರಣದಿ ಕೆಡದವರೊಳ್ಪುಗೆಯ್ಮಗಳ್ ಸಫಲಮಪ್ಪಂತೆಸಗೆ ನಾಮ್, ಅದೆ ಸುಧಾತರ್ಪಣಂ ತಾನವರಾತ್ಮತೃಪ್ತಿಗೆ ತೃಪ್ತಿಯನೀವುದಲ್ತೆ (ಶ್ರೀರಾಮಾ. ೩೭೮-೧೮೧). [ಸಂ.]

ಸುಧಾತು (ನಾ). ಒಳ್ಳೆಯ ಲೋಹ; ಗೈರಿಕ: ಬಾಳಮರೀಚಿಮಾಳಿಕಿರಣಾವಳಿಗಳ್ ಮೊಳೆವೀ ಸುಧಾತು ಶೈಲಾಳಿ ತಟಾಭಿಘಾತಮನೊಡಂಬಡಿಸುತ್ತಿರೆ (ಕಾಂತಿಪು. ೫-೯೧).

[ಸಂ.]

ಸುಧಾದೀಧಿತಿ (ನಾ). = ಸುಧಾಕಿರಣ: ಷಟ್ಕರ್ಕಳುಮುದಿನೀವಿಕಶನ ಸುಧಾದೀಧಿತಿ (ಪೌಷ್ಕಾ. XX, ೪೬-೧೭; 1072); ರಣನೀಗಳಿ ಕಾಣಬಹುದೆಂಬಣಕಿಗರನೆಬ್ಬಿಸುವವೊಲು ಸುಳಿದಣೆದು ಹೊದಱೆದ್ದುದು ಸುಧಾದೀಧಿತಿಯ ಕರನಿಕರ (ಕುಮಾದ್ರೋ. ೧೭-೧೩). [ಸಂ.]

ಸುಧಾಧವಲಿತ, ಸುಧಾಧವಳಿತ (ಗು). ೧. ಸುಣ್ಣದಿಂದ ಬಿಳುಪಾದ. **ಸುಧಾಧವಳಿತ:** ೧. ಪರ್ವತದ ಮೇಲೆ ಕಱಂಗಿ ಕಲ್ತಲಿಸಿದ ಮರದುಱುಗಲ ನಡುವೆ ಸುಧಾಧವಳಿತೋತ್ತುಂಗ ರಮ್ಯಹರ್ಮ್ಯಂಗಳಂ ಕಾಣ್ಬರ್ (ಪಂಪಭಾ. ೩-೧೮ ವ); ಬೆಳಬೆಳಪ ಸುಧಾಧವಳಿತನಿಳಯಂಗಳ ಧವಳಕಾಂತಿಯಂ ಕೌಮುದಿಗೆತ್ತು (ಸಿರಿ. ೨-೯೭). (ನಾ). ೨. (ಸುಣ್ಣಬಳಿದುದರಿಂದ) ಬಿಳುಪಾಗಿರುವಂಥದು: ಸುಪ್ರದೇಶಮಪ್ಪ ಸ್ಥಾನದೊಳ್ ಸುಧಾಧವಳಿತಮಪ್ಪ ಧವಳಾಗಾರಂ (ಪಂಚತಂ. ೧೫೭-೧೦). ೩. ಸುಣ್ಣಬಳಿದ ಮನೆ; ಧವಳಾಗಾರ; ಸೌಧ: ''ಸುಧಾಧವಳಿತಂ, ಸೌಧಂ — ಈ ೩ ಧವಳಾರಂ'' (ಹಲಾಯು. ೪೯-೧೩೯). [ಸಂ.]

ಸುಧಾಧವಳಿತ 'ಸುಧಾಧವಲಿತ' ನೋ.

ಸುಧಾಧಾಮ (ನಾ). ಚಂದ್ರ: ವನದಂತಿಂದ್ರನ ಲೋಕದಂತೆ ಸುಮನೋವಾಸಂ ಸುಧಾಧಾಮನಂತಿನನಂತುತ್ಕಮಲಾಶ್ರಯಂ (ರಾಜಶೇ. ೩-೧೦). [ಸಂ.]

ಸುಧಾಪಿಂಡ (ನಾ). ಒಂದು ಬಗೆಯ ಭಕ್ಷ್ಯ: ಮತ್ತಮಾ ಕಣಿಕಮಂ ಗದುಗದಂದವ ಮಾಡಿಯೊತ್ತಿಯದಱೊಳಗೆ ಹಲಸವಿಯ ಹೂರಣಗಳನು ಪೊತ್ತರಿಸಿ ಹುದುಗಿ ತುಪ್ಪವನು ಬಾಳಿಲೆಯೊಳಗೆ ತೊಡೆದದಱ ಹದನನಱಿದು ಹೊತ್ತದಂದದೊಳು ಪಾಕಂ ಮಾಡಿ ತೆಗದುಕೊಂಡುತ್ತಮದ ಸಿರಿಪಚ್ಚೆ ಮೊದಲಾದ ಕಂಪ ಪೊರೆಯೊತ್ತಿ ತೆಗೆದವು ಸುಧಾಪಿಂಡವೆಂದೆಂಬ ಹೆಸರಂ ಪಡೆದು ರುಚಿಯಾದವು (ಸೂಪಶಾ. ೧-೩೨). [ಸಂ.]

ಸುಧಾಬ್ಧಿ (ನಾ). ಹಾಲಿನ ಕಡಲು; ಕ್ಷೀರಸಾಗರ: ಪುಟ್ಟದಂ . . . ಸುಧಾಬ್ಧಿಗೆ ಮಹಾಹಾಳಾಹಳಂ ಕಾನನಕ್ಕೆ ದವೋಗ್ರಾಗ್ನಿ ಕಡಂಗಿ ಪುಟ್ಟಿದವೊಲಂತಾ ಕಂಸದೈತ್ಯಂ (ಜಗವಿ. ೨-೩೮); ಸೊಗಯಿಪ ಸುಧಾಬ್ಧಿ ಮೋಹದೊಳಿಂದು ಬಂದೆನ್ನ ಮಗನು ದಟ್ಟಿಡಿಯಿಡುವ ರಾಜಾಂಗಣವಿದೆಂದು . . . ಮೃಗಧರಂ ಕಣ್ಗೆಸೆದುದು (ಹಚಕಾ. ೩-೮೧). [ಸಂ.]

ಸುಧಾಭವನ (ನಾ). = ಸುಧಾಗೃಹ: ಮತ್ತೊಂದು ಸುಧಾಭವನದೊಳನವರತ ದಹ್ಯಮಾನ ಕಾಳಾಗುರುಧೂಪಧೂಮದ ಪರಿಮಳಮಯಮಪ್ಪ ನೆಲೆವನೆಯ ಮೇಗೇಕಾಗ್ರಮನಃಪರಿಗ್ರಹೆಯಾಗಿ (ಶಾಂತಿಪು. ೮-೪೯ ವ). [ಸಂ.]

ಸುಧಾಭುಕ್ತ (ನಾ). ಅಮೃತವನ್ನು ಕುಡಿದವನು; ದೇವತೆ: ಲಿಂಗಾರ್ಚನಾಸಕ್ತಿಯಿಂ ಬೆಳೆದ ಪುಣ್ಯದೊಳರ್ಧಮಂ ಸುಧಾಭುಕ್ತರಱಿಯಲು ಕೊಡುವೆನಾ ಹರಿಶ್ಚಂದ್ರ ಹುಸಿಯಂ ನುಡಿಯದಿರಲೆಂದನು (ಹಚಕಾ. ೨-೨೭). [ಸಂ.]

ಸುಧಾಮ (ನಾ). ಪುಷ್ಪವಾದ ಶರೀರವುಳ್ಳುದು: ಕುಂಜರಶ್ಮಳಂ ತನ್ನಿಂದಂ ಜಗದೊಳ್ಪಿಗಟ್ಟುದಾ ಪಸರಿನೆಂಬವೊಲೇಂ ರಂಜಿಸಿ ಬಳೆಯುತ್ತಿರ್ದುದೊ ಕುಂಜರಮಾವಪ್ರಕ್ಷೋಷನಾಮಸುಧಾಮಂ (ಪಾರ್ಶ್ವಪು. ೪-೧೦೮). [ಸಂ. ಸುಧಾಮನ್]

ಸುಧಾಮಯೂಖ (ನಾ). = ಸುಧಾಕಿರಣ: ದಿಗ್ವಿತ್ರಿಗಳಂ ಧವಳಿಸುತಿರ್ದ ಸುಧಾಮಯೂಖನಂ ನೀಡುಂ ನೋಡಿ (ಕಾದಂಬ. ೫೬೧); ಅಂಬುಜಪ್ರಸರದಗಲ್ಕೆಯಿಂ ನೆಗೆದ ತುಂಬಿಗೆ ಮಲ್ಲಿಗೆಮಾಲೆಯಾದುದಾ ಪಸಿದ ಚಕೋರಿಗಳ್ಗೆ ಸುಧೆಯಾದುದು ಕಾಂತಿ ಸುಧಾಮಯೂಖನಾ (ರಾಜಶೇ. ೧೧-೬೫). [ಸಂ.]

ಸುಧಾಮರೀಚಿ (ನಾ). ಬೆಳದಿಂಗಳು; ಅಮೃತಕಿರಣ: ನಗಗಣ್ಣುರೆ ಸುಧಾಮರೀಚಿ ರುಚಿಯಂ ಘರ್ಮಾಂಭಸಂ ಪೊಣ್ಮೆ ನುಣ್ಗೊಗದೊಳ್ಚಿತ್ರದೊಳಾಗೆ ಕೌತುಕರಸಂ . . . ನಡೆನೋಡುತ್ತಿರ್ದಳಾ ಭೂಪನಂ (ರಾಜಶೇ. ೭-೨೧). [ಸಂ.]

ಸುಧಾರಕ (ನಾ). ಲೋಪದೋಷಗಳನ್ನು ಸರಿಪಡಿಸುವವನು, — ಸುಧಾರಿಸುವವನು: ಪೈಥಾನ್‌ನಗರದ ದೇಶಸ್ಥಬ್ರಾಹ್ಮಣಮನೆತನದಲ್ಲಿ ಹುಟ್ಟಿದ ಏಕನಾಥ ಸುಧಾರಕನಾಗಿ ಭಕ್ತನಾಗಿ ಕಂಗೊಳಿಸಿದ (ಭಾರದ. ೨೯೨).

[<– ಹಿಂ. ಮರಾ. ಸುಧಾರಕ]

ಸುಧಾರಣೆ (ನಾ). ೧. ತಿದ್ದುವುದು; ಸಂಸ್ಕರಿಸುವುದು: ಬಡಿದು ಕೊಂದರ ಸುಧಾರಣೆಯಾಗುವುದೇನು? (ರಂಗರೋ. ೧೦); ಸಾಮಾಜಿಕಸುಧಾರಣೆಗಳು ಆಗದೆ ರಾಜಕೀಯಸುಧಾರಣೆಗಳಿಗೆ ನಾವು ಅರ್ಹರಲ್ಲ (ಯುಕ್ತಪ್ರ. ೪೦). ೨. ಏಳಿಗೆ; ಅಭಿವೃದ್ಧಿ: ನಮ್ಮ ದೇಶದ ಸುಧಾರಣೆಗೂ ಘನತೆಗೂ ಬಹಳ ಪ್ರತಿಬಂಧಕವಾಗಿವೆ (ಪುಂಬುಪು. ೪-೧೦೫); ಅವನ ಸುಧಾರಣೆಯ ಎಲ್ಲ ಹೊಣೆಯನ್ನು ಅವರೇ ವಹಿಸಿಕೊಳ್ಳಬೇಕೆಂಬ ಬಯಕೆ ಅವರದಾಗಿತ್ತು (ರಂಗರೋ. ೧೨೪). ೩. ವಿಶ್ರಾಂತಿ; ಬಿಡುವು: (ಪ). ೪. ತಾಳ್ಮೆ; ಸಹನೆ: (ಪ).

[<– ಹಿಂ. ಸುಧಾರನಾ; ಮರಾ. ಸುಧಾರಣಾ, ಸುಧಾರಣೇ]

ಸುಧಾರಸ (ನಾ). ೧. ಅಮೃತ; ಸುಧೆ: ಹಾರಮರೀಚಿಮಂಜರಿ ಸುಧಾರಸಧಾರೆ ಸುಧಾಂಶುಲೇಖೆ ಕರ್ಪೂರಶಲಾಕೆ ನೇತ್ರಸುಖದಾಯಕಂ (ಪಂಠಾಮಾ. ೯-೮೨); ಸೆಧಾರಸ ಉಕ್ಕಿದುರಿಯಗ್ಗಳದ ಶೀತಳವಾಯ್ತು (ಕುವಾಬಾ. ೬-೧೧); ಸುಧಾರಸವನ್ನು ಪಾನಮಾಡಿದ ಅನುಭವವಾಗುತ್ತದೆ (ಧರ್ಮಾಸಾ. ೮೨). ೨. ಒಂದು ಬಗೆಯ ಪಕ್ವಾನ್ನ: ಅಂದು ಮನೆಯಲ್ಲಿ ಪುರಿ — ಸುಧಾರಸವಾಗಿತ್ತು (ಸಮಜೀ. ೧೦೦); ಸುಧಾರಸ ಮಾಡಲೇನು ಒಂದು ಸ್ಮಲ್ಲು (ಅಪನಾ. ೧೮೩). [ಸಂ./ ಮರಾ. ಸುಧಾರಸ]

ಸುಧಾರಿತ (ಗು). ೧. ಮಾರ್ಪಾಡು ಮಾಡಿದ; ಸಂಸ್ಕರಿಸಿದ: ಈಚೆಗೆ ನಮ್ಮ ರೈತರು ಸುಧಾರಿತ ಬೇಸಾಯಪದ್ಧತಿಯನ್ನು ಅನುಸರಿಸುತ್ತಿದ್ದಾರೆ (ಕೂಪ). (ನಾ). ೨. ತಿದ್ದುಪಾಡು; ಸಂಸ್ಕರಣ: ಈ ಹತೋಟಿ ಕಾರ್ಯಕ್ರಮದಿಂದ ಸಸ್ಯನಿಗಳ ಬಾಳು ಎಷ್ಟೋ ಸುಧಾರಿತವಾಯಿತು (ಮನೋನಂ. ೧೭೪). [< ಸುಧಾರಣೆ]

ಸುಧಾರಿಸು (ಕ್ರಿ). ೧. ನೇರಗೊಳಿಸು; ಸರಳಗೊಳಿಸು. ೨. ತಿದ್ದು; ಸಂಸ್ಕರಿಸು: ಕನ್ನಡದ ರಂಗಭೂಮಿ ಹೀಗೆ ಸುಧಾರಿಸಬೇಕು, ವಿಕಾಸಗೊಳ್ಳಬೇಕು (ಸಮೂರೋ. ೬೭); ಈಗ ಆಗಿಹೋದುದರ ಬಗ್ಗೆ ಮಾತನಾಡಿ ಏನು ಬಂದದ್ದು. ಆದುದನ್ನು ಸುಧಾರಿಸುವ ಉಪಾಯ ತೆಗೆಯಿರಿ (ಮೂಯದಾ. ೬೬); ಕೆಲವು ಶತಾಬ್ದಿಗಳ ಹಿಂದಿನ ಗೌತಮ, ಬೌಧಾಯನ ಮತ್ತು ಆಪಸ್ತಂಭ ಇವರ ಧರ್ಮಶಾಸ್ತ್ರಗ್ರಂಥಗಳಿಗಿಂತ ಹೆಚ್ಚು ವಿಸ್ತಾರವಾದ ಹಾಗೂ ಸುಧಾರಿಸಿದ ಗ್ರಂಥ (ತತ್ಪಪ್ರಾ. ೧೦೭). ೩. ಏಳಿಗೆಯಾಗು; ಅಭಿವೃದ್ಧಿಯಾಗು: ಸುಧಾರಿಸಿದ ರಾಷ್ಟ್ರಗಳ ಜನರು ತಮ್ಮ ಆಳುಮಕ್ಕಳ ಕೂಡ ಬಹಳ ಎನಯದಿಂದ ನಡೆಯುತ್ತಾರೆ (ಮುಂಬುಯಿ. ೪-೭೪); ಭಾರತದೇಶವು ಬಡಜನರ ಜೀವನಸ್ಥಿತಿಗಳನ್ನು ಸುಧಾರಿಸುವುದಕ್ಕಾಗಿ ಪ್ರಯತ್ನಿಸುತ್ತಿದೆ (ಅಡುಸಾ. ೩೧). ೪. ತಾಳು; ಸಹಿಸು: ಅವಸರ ಬೇಡ, ಸ್ವಲ್ಪ ಸುಧಾರಿಸಿಕೊ (ಕೂಪ). ೫. ಚೇತರಿಸಿಕೊಳ್ಳು: ಸ್ವಲ್ಪ ಸುಧಾರಿಸಿಕೊಳ್ಳಿರಾಯರೆ ಎಂದು ಸಮಾಧಾನಪಡಿಸಿ ಒಂದು ಲೋಟ ಹಾಲು ಕುಡಿಸಿದೆ (ರಾಯಕ. ೨೧). ೬. ಸಮಾಧಾನಪಡಿಸು; ಸಂಬಾಳಿಸು: ಅವರ ಕಣ್ಣೀರು ಒರಿಸಿ, ಅವರಿಗೆ ಸ್ಥಳಕೊಟ್ಟು ಸುಧಾರಿಸುತ್ತಿದ್ದೆವು (ಭಾರದ. ೮). [ಸುಧಾರಣೆ + - ಇಸ್ಸು]

ಸುಧಾರುಗ್ಧರ (ನಾ). = ಸುಧಾಕರಧರ: ಸುಧಾರುಗ್ಧರೋರುಕೃಪೆಯಿಂದೆ ಮೋಕ್ಷಸಮ್ಯಗ್ಚರಿತ್ರಿಗರಸಾಗಿ ರಂಜಿಪಂ (ವೃಪವಿ. ೯-೧೨೬). [ಸಂ.]

ಸುಧಾರುಚಿ (ನಾ). = ಸುಧಾಕಿರಣ: ಸುಧಾರುಚಿ ಪುಟ್ಟಿ ಪಾಲ್ವಡಲ್ . . . ಅಭಿಮೃತಮಪ್ಪವೊಲ್ (ಪುಷ್ಪಸ. ೧೨-೧೫). [ಸಂ.]

ಸುಧಾರೋಚಿ (ನಾ). = ಸುಧಾಕಿರಣ: ಧರೆಗಮೃತಸಾರಮಂ ತಾನೆನಲು ಸೂರಿಗಳು ಬಣ್ಣಿಸೆ ಸುಧಾರೋಚಿ ಕಣ್ಗೆಸೆದುದು (ಹಚಕಾ. ೩-೮೭). [ಸಂ.]

ಸುಧಾರ್ಣವ (ನಾ). = ಸುಧಾಬ್ಧಿ: ಸುಧಾರ್ಣವಮೊಪ್ಪಿದುದುದ್ಗತಾರ್ಣವಂ (ಜಗವಿ. ೧-೪೪); ಇವರಾರೆಂದಿರ್ದಪೆ ನೀಂ ಭುವನತ್ರಯತಿಳಕರಮಳಸದ್ಬೋಧ ಸುಧಾರ್ಣವಪೂರ್ಣಚಂದ್ರರವನತದಿವಿಜನರೋರಗನನ್ಯಸಾಮಾನ್ಯಗುಣರ್ (ಯಶೋಚ. ೪-೪೮). [ಸಂ.]

ಸುಧಾರ್ಮಿಕ (ನಾ). ಸದ್ಧರ್ಮದಲ್ಲಿ ನಡೆಯುವವನು; ಒಳ್ಳೆಯ ಧರ್ಮಿಷ್ಠ: ಈ ಧರ್ಮ್ಮರಕ್ಷಣೆಯ ಸುಧಾರ್ಮಿಕರೆಯ್ದುವರ್ಸುರೇಂದ್ರಾಸ್ಪದಮಂ (ಕಇ. IV. ೧೩-೭೮; 1165). [ಸಂ.]

ಸುಧಾಶ (ನಾ). ಅಮೃತವನ್ನು ಸೇವಿಸಿದವನು; ದೇವತೆ: ಉರ್ವೀಶನ ಯೋಷೆ ಸಂದಜಿತಸೇನೆ ಬಟಿಕ್ಕವರ್ಗಾ ಸುಧಾಶನಿರ್ದೇಶಿತವೇಶ್ಮನಪ್ಪಜಿತಸೇನಸಮಾಹ್ವಯ ನಾದನಾತ್ಮಜಂ (ಚಂದ್ರಪು. ೪-೮೦). [ಸಂ.]

ಸುಧಾಶನ (ನಾ). ೧. ಅಮೃತಾಹಾರ: ನೆನೆವರ್ ಸುಧಾಶನಮನೇಕಾಗ್ರಂ ತ್ರಯಸ್ತ್ರಿಂಶದುಕ್ತಿನಯೋಪೇತ ಸಹಸ್ರಹಾಯನದಿನಾ ಕಲ್ಪೋತ್ತರಾವಾಸಿಗಳ್ (ಶಾಂತಿಪು. ೯-೧೨೭). ೨. = ಸುಧಾಶ: ಆಯವಸರದೊಳಂಬುಜಾಂಬಕ ತೋಯಜಪ್ರಭವರು ಸುಧಾಶನನಾಯಕಾದಿ ದಿಶಾಧಿಪರು (ಬಸಪು. ೧-೪೧). [ಸಂ.]

ಸುಧಾಸಂಭೂತ (ನಾ). = ಸುಧಾಜಾತ: ನಿಲೆ ಸುಧಾಸಂಭೂತಂ ಕ್ರೂರದೊಳ್ . . . ಬಾಲಕಂಗೆ ಸದ್ಯೋಮರಣಂ (ಜಾತತಿ. ೬-೨). [ಸಂ.]

ಸುಧಾಸೂಕ್ತಿ (ನಾ). ಅಮೃತದಂತಹ ಮಾತು; ಹಿತವಚನ: ಸುಗಂಧಸುಖ ನಿಕರದ ಸುಧಾಸೂಕ್ತಿಗಳು ಸುಳಿವ ತಂಗಾಳಿಗಳು ಸೊಗಸವರಸಂಗೆ ಚಿಂತೆಯ ಕಯ್ಯೊಳು (ಹಚಕಾ. ೬-೫೧). [ಸಂ.]

ಸುಧಾಸೂತಿ (ನಾ). = ಸುಧಾಜಾತ: ದಿವ್ಯಾಂಬುವಿಂ ನಾಕಜನಾಥಂ ಮಜ್ಜನಕೆತ್ತಿದ ತೆಱದೆ ಸುಧಾಸೂತಿ ಕಣ್ಗೆಡ್ಡಮಾದಂ (ಆದಿಪು. ೧೨-೮); ಮಿಗೆ ಮೆಱೆದನುದಯಾಚಲದ ಚಾವಡಿಯಲಿ ಸುಧಾಸೂತಿ (ಕುವ್ಯಾದ್ರೋ. ೧೭-೧೭). [ಸಂ.]

ಸುಧಾಸ್ಯಂದಿ (ಗು). (ಆಲಂ) ಆನಂದವನ್ನುಂಟುಮಾಡುವ: ನಿರ್ಮಳಾಂಭ ಸ್ಸ್ವಯಂಭೂರಮಣಾಕೂಪಾರದೊಳ್ ಲೋಚನಹೃದಯಸುಧಾಸ್ಯಂದಿ ನಂದೀಶ್ವರದ್ವೀಪಮಹಾಚೈತ್ಯಾಳಿಯೊಳ್ (ಚಂದ್ರಪು. ೪-೭೬). [ಸಂ. ಸುಧಾಸ್ಯಂದಿನ್]

ಸುಧಿ (ನಾ). ೧. ಒಳ್ಳೆಯ ಜ್ಞಾನವನ್ನು ಹೊಂದಿರುವುದು; ಬುದ್ಧಿವಂತಿಕೆ. ೨. ಒಳ್ಳೆಯ ಜ್ಞಾನವನ್ನು ಹೊಂದಿರುವವನು; ಬುದ್ಧಿವಂತ: ಸುಧಿಯಾಗಿ ಶುದ್ಧನಡತೆಯಿಂದ ಸನ್ಮೃದುಮಧುರೋಕ್ತಿಯಿಂದಿರ್ದವಗೆ ಅಧಿಕವಾದೆಡರ್ವಂದು ಕುಳಿತಿರಲದು ವಿಧಿವಶವಲ್ತೆ ರಂಗೇಶ (ಶತಸಾಂ. ೪೯-೪೮). [ಸಂ. ಸುಧೀ]

ಸುಧೀಮಣಿ (ನಾ). = ಸುಧಿ ೨: ಭೋಗಿಧೇವ ಸುಧೀಮಣಿಯ ಸದುಭಕ್ತಿಗಿಂಬಾಯಿತ್ತು ಕೆಂಬಾವಿ (ಬಸಪು. ೫೭-೫೪). [ಸಂ.]

ಸುಧೀರ (ನಾ). ಒಳ್ಳೆಯ ವೀರ; ಮಹಾಶೂರ: ಸ್ಥಿರ ಸುಧೀರಾ ಕಿನ್ನರಯ್ಯಾ ವಿರಸದೂರ ಕಿನ್ನರಯ್ಯಾ . . . ಮುನಿದೆಯೆನ್ನೊಡನೆ (ಬಸಪು. ೩೬-೪); ಮಝು ಪೂತು ಭೀಮ ಸುಧೀರನ್ನೆ ಸದುಮತ್ಸರವೆ (ಕುವ್ಯಾಕ. ೧೫-೯). [ಸಂ.]

ಸುಧೀರತೆ (ನಾ). ಒಳ್ಳೆಯ ವೀರತನ; ಅತಿಶೌರ್ಯತನ: ಈ ಮಹಾವೀರತ್ವವೀ ಮಹಿಮಾಮಹತ್ವತೆಯಿಾ ಸುಧೀರತೆಯಿಾ ಮಧುರಮೃದುವಾಕ್ಯವೀ ಸಾಮರ್ಥ್ಯವೀ ಸತ್ವ ಭೂಮಿಯೊಳು ಕೇಳುವೆವೆ ಕಾಂಬೆವೆ (ಬಸಪು. ೪೬-೭೯). [ಸಂ. ಸುಧೀರತಾ]

ಸುಧೀರಾಜ (ನಾ). ೧. ಒಳ್ಳೆಯ ಜ್ಞಾನಕ್ಕೆ ಒಡೆಯನಾಗಿರುವವನು; ಪಂಡಿತಶ್ರೇಷ್ಠ. ೨. ಜ್ಞಾನಿಯಾದ ಬ್ರಹ್ಮ. ೧, ೨: ಆ ಮಂಟಪಂ . . . ಸತ್ಯಲೋಕದಂತೆ ಸುಧೀರಾಜಾನ್ವಿತಮುಂ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧಮಿಳಿತಮುಂ (ರಾಜಶೇ. ೮-೮ ವ).

[ಸಂ. ಸುಧೀರಾಜನ್ (ಸುಧೀ + ರಾಜನ್); ಸಂ. (ಸುಧೀರ + ಅಜ)]

ಸುಧೆ (ನಾ). ೧. ಅಮೃತ; ಸೊದೆ: ಕುಳಿರುತ್ತಿರ್ಪಮೃತಾಂಶುಮಂಡಲದೊಳಿರ್ದಾದಂ ಸುಧಾಮೋದಮಂ ತಳೆದು (ಕಾದಂಉ. ೭೯೨); ಮದನಂ ದೇಹವ ನೀಗಿದಂ . . . ಸುಧೆಯಂ ಕೊಟ್ಟು ಸುರೇಂದ್ರ ಸೋಲ್ತ . . . ವಿಧಿಯಂ ಮೀಱುವನಾವನ್ನೆ (ಸೋಮೇಶ. ೨೭); ಕಂದನೀತನ ರಕ್ಷೆಯೊಳ್ ಪ್ರಳಯಾಗ್ನಿ ಚಕ್ರಕೇಂದ್ರದೊಳಿರ್ಪ ಸುಧೆಯವೊಲ್ ನಿತ್ಯಂ ಸುರಕ್ಷಿತಂ (ಶ್ರೀರಾಮಾ. ೩೦-೭೩). ೨. ಸುಣ್ಣ: ದಧಿ ಜವೆ ದೂರ್ವೆ ಲಾಜೆ . . . ಬಾಸಿಗಂ ಸುಧೆ ಸಿರಿಗಂಪು . . . ಎಸೆದತ್ತು ವಿವಾಹಗೃಹಾಂತರಾಳದೊಳ್ (ರಾಜಶೇ. ೮-೧೧). ೩. ಹೂವಿನ ರಸ; ಮಧು. ೪. ಹಾಲು; ಕ್ಷೀರ. ೫. ರಸ; ಪಾನೀಯ. ೬. ನೀರು; ಜಲ. ೭. ಹಾಲು ತುಂಬಿರುವ ಸಸ್ಯ. ೮. ಅಲಸಂದೆ: "ಸುಧೆಯಲಸಂದೆ" (ಮಂಗರಾ. ೧೧೦-೫). ೯. ನೆಲ್ಲಿ; ಆಮಲಕ.

ಸುಧೆಗೊಬ್ಬುಗಳು = (ಆಲಂ) ದೇವತೆಗಳು: ತುಬ್ಬಿಕೊಟ್ಟುದವಿದ್ಯಯನು ಸುಧೆಗೊಬ್ಬುಗಳ ಗಂಡಿಗರ ಗಾಢದ ಗರ್ಭವನು ಹೊಳ್ಳಿಸಿತು ಗರಳಗ್ರೀವನುಪದೇಶ (ಕುವ್ಯಾಕ. ೬-೩೧). [ಸಂ. ಸುಧಾ]

ಸುಧೆಗೂಳ (ನಾ). ಅಮೃತವನ್ನು ಆಹಾರವನ್ನಾಗಿ ಉಳ್ಳವನು; ದೇವತೆ.

ಸುಧೆಗೂಳರೊಡೆಯ = ದೇವತೆಗಳ ಒಡೆಯ; ಇಂದ್ರ: ಸುಧೆಗೂಳರೊಡೆಯ ಪಿಡಿವಸಮವಜ್ರಾಯುಧದ ಯಿದಿರ ನಡೆಯಲುಬಹುದು (ನವಮೋ. ೨೪-೭೮).

[ಸುಧೆ + ಕೂಳ್ಳು$_2$ (< ಕೂಟ್$_1$) + - ಅ$_7$]

ಸುಧೆವಿಲ್ಲ (ನಾ). ರಸಪೂರಿತವಾದ ಕಬ್ಬನ್ನು ಬಿಲ್ಲಾಗಿ ಉಳ್ಳವನು; ಮನ್ಮಥ: ಹರಿಣಯದೆಗೆಟ್ಟು ಹಿಂಡೊಡೆದು ಚಲ್ಲವರಿದಂದದಿಂ ಸುಧೆವಿಲ್ಲನಾಜ್ಞೆಯಿಂ . . . ಮಂದಾನಿಲರಯಟ್ಟುಳಿಗಾರದೇ (ನವಮೋ. ೬-೨೩).

[ಸುಧೆ + ಬಿಲ್ಲು$_1$ (< ಬಿಲ್$_2$) + - ಅ$_7$]

ಸುನಕ 'ಸೊಣಗ' ನೋ.

ಸುನಕಾಯ (ನಾ). [ವಾಸ್ತು] ಮನೆ, ದೇವಾಲಯ ಮೊದಲಾದುವನ್ನು ಕಟ್ಟುವ ಎಂಟು ಆಯಗಳಲ್ಲಿ ಒಂದು: ವಿಸ್ತಾರವಾಗಿ ಉದ್ದ ಅಗಲವನು ಅಳಿದು ವೊಟ್ಟುಗೂಡಿ ಕೊಂಡಕೋಲು ಯೆಷ್ಟೋ ಅದನು ೩ ಹಚ್ಚಿ . . . ಅದಂ ೮ ರಿಂದ ಭಾಗಿಸಿ ಉಳಿದವು ಆಯಂಗಳೂ xxx ೪ ವುಳದರೆ ಸುನಕಾಯ (ಆಯಟೀ. ೧-೬). 'ವೃಷಭಾಯ' ಪರಾ. [< ಸಂ. ಶುನಕಾಯ]

ಸುನಗಿ 'ಸೂನಗೆ' ನೋ.

ಸುನತಿ 'ಸುಂತಿ' ನೋ.

ಸುನಫಾಪ್ರಸೂತ (ನಾ). [ಜ್ಯೋತಿ] ಸುನಫಾಯೋಗದಲ್ಲಿ ಹುಟ್ಟಿದವನು: ಸುನಫಾಪ್ರಸೂತ ನರನಾತ್ಮೋಪಾರ್ಜಿತೈಶ್ವರ್ಯಧೀಧನಕೀರ್ತ್ಯಾನ್ವಿತನಕ್ಕುಂ (ಜಾತತಿ. ೧೪-೩). [ಸಂ.]

ಸುನಫಾಯೋಗ (ನಾ). [ಜ್ಯೋತಿ] ಜನ್ಮಕಾಲದಲ್ಲಿ ಸೂರ್ಯನನ್ನು ಬಿಟ್ಟು ಉಳಿದ ಕುಜಾದಿ ಐದು ತಾರಾಗ್ರಹಗಳಲ್ಲೊಂದು ಚಂದ್ರನಿಗೆ ಎರಡನೆಯ ಸ್ಥಾನದಲ್ಲಿರುವುದು: ಇನವರ್ಜ್ಯಂ ಕ್ಷಿತಿಜಾದಿಗಳ್ ಹಿಮಮಯೂಖಂಗಂತ್ಯದೊಳ್ ಕೂಡಿದಂದನಫಾಯೋಗಮದಕ್ಕುಮೊಂದಿ ನಿಲೆ ಮತ್ತಂ ತದ್ದ್ವಿತೀಯರ್ಕ್ಷದೊಳ್ ಸುನಫಾಯೋಗಂ (ಜಾತತಿ. ೧೪-೧); ಸೂರ್ಯನನ್ನು ಬಿಟ್ಟು ಕುಜಾದಿ ಐದು ತಾರಾಗ್ರಹಗಳಲ್ಲೊಂದು ಚಂದ್ರನಿಗೆ . . . ಎರಡನೆಯ ಸ್ಥಾನದಲ್ಲಿದ್ದರೆ ಸುನಫಾಯೋಗ (ಜಾತತಿ. ೧೪-೧ ಟೀಕೆ). 'ಅನಫಾಯೋಗ' ಪರಾ. [ಸಂ.]

ಸುನಫೆ (ನಾ). = ಸುನಫಾಯೋಗ: ಅನಫಾ ಸುನಫಾ ದುರುಧುರಾ ಈ ಮೂರು ಯೋಗಗಳಲ್ಲೂ ಕುಜ ಯೋಗಕಾರಕನಾದರೆ ಜಾತಕನು . . . ಬಹುಕಾರ್ಯಾ ರಂಭಿಯಾಗುತ್ತಾನೆ (ಜಾತತಿ. ೧೪-೬ ಟೀಕೆ). [ಸಂ. ಸುನಫಾ]

ಸುನಯ(ನಾ). ಒಳ್ಳೆಯ ನಡತೆ; ಸುಚಾರಿತ್ರ: ಉಪನತ ಮೃತ್ಯೂದಯಂಗೆ ದುರ್ಣಯಮೆ ಸುನಯಮೆನಿಸುಗುಮೆ ವೊಲಂ (ಚಂದ್ರಪು. ೬-೧೭). [ಸಂ.]

ಸುನಾಕನಗ (ನಾ). ಸ್ವರ್ಗದಲ್ಲಿರುವ ಬೆಟ್ಟ; ಮೇರುಪರ್ವತ: ಮಂದರಂ ಮಱೆಗೆವಂದ ಸುನಾಕನಗಂಬೊಲೊಪ್ಪೆ ತೀವಿದುದು ಜಿನಾಭಿಷೇಕಸಲಿಲಂ ದೆಸೆಯಂ ನಭಮಂ ಧರಿತ್ರಿಯಂ (ಮಲ್ಲಿಪು. ೧೨-೧೫೩). [ಸಂ.]

ಸುನಾಣೆಯ 'ಸುನಾಣ್ಯ' ನೋ.

ಸುನಾಣ್ಯ, ಸುನಾಣೆಯ (ನಾ). ಒಳ್ಳೆಯ ನಾಣ್ಯ; ಚಲಾವಣೆಯಲ್ಲಿರುವ

ನಾಣ್ಯ: ಹಸ್ತಪೀಠದೊಳಿಹ ವಸ್ತು ಸುನಾಣ್ಯವ ಚಿತ್ತಪಲ್ಲಟವಾಗದೆ ತಿಳಿದಡೆ (ಶಿವಗೀ. ೧೯೧-೯೫೬). **ಸುನಾಣೆಯ:** ಇದು ರತ್ನಭಂಡಾರವಿದು ಹೇಮಭಂಡಾರವಿದು ಸುನಾಣೆಯ ವರ್ಗವಿದು ಪಟ್ಟಕರ್ಮಕುಲ (ಪಚಕಾ. ೯-೩).

[ಸು$_4$- + ನಾಣ್ಯ (< ನಾಣಯ)]

ಸುನಾದ (ನಾ). ಒಳ್ಳೆಯ ಧ್ವನಿ; ಇಂಚರ: ಸುನಾದಬಿಂದು ಪ್ರಣವಮಂತ್ರ ಅಗ್ರದ ಕೊನೆಯಲ್ಕೆದುವುದೆ (ಬಸವ. ೮೧೫); ಬಾಲೇಂದುಮೌಳಿ ಸುನಾದರಸಲೋಲಂ ದಯಾನಿಧಿ ಮೆಚ್ಚಿ (ಬಸಪು. ೨೮-೬). [ಸಂ.]

ಸುನಾಮವೆಱು (ಕ್ರಿ). ಒಳ್ಳೆಯ ಹೆಸರನ್ನು ಪಡೆ: ಸುನಾಮವೆತ್ತ ತಳ್ಳಲ್ಲಂ ಗಲ್ಲಸ್ಥಳಂ ಪೆಸರು ಲತವಳ್ಳಿಯೆಳಲತೆ ನವಲತೆಯುಮೆಂದು ಸಂತತಂ ತೋಱುತಿರ್ಕುಂ (ಕಬ್ಬಿಕ್ಕ. ೯೮). [ಸುನಾಮ್ಯ + ಪೆಱು$_1$]

ಸುನಾಯಾಸ (ನಾ). ಆಯಾಸವಿಲ್ಲದಿರುವುದು; ಸುಲಭತೆ: ಇಂದಿನಾಹವದಿನಾ ಸುನಾ[ಪಾಠಾಂ. ನಿರಾ]ಯಾಸದಿಂ ರಿಪುಬಲಂಗಳನ್ನೊರೆಸಿ ಬಳಿಕಾ ಯುಧಿಷ್ಠಿರನ ಪಿಡಿವೆನು (ಶುರಂಗ. ೫೦-೧೧); ರಾಜ್ಯದ ಈ ದೊಡ್ಡ ಹೊರೆಯನ್ನು ನಿಮ್ಮಂತೆ ಸುನಾಯಾಸವಾಗಿ ಹೊರಬಲ್ಲ ಎದೆ ಹರವಿನ ಉತ್ತರಾಧಿಕಾರಿಯನ್ನು ಕುರಿತದ್ದು (ಸವತಿ. ೨೪). [IP ಈ ಶಬ್ದವು 'ಅನಾಯಾಸ' ಎಂಬ ಶಬ್ದಸಾದೃಶ್ಯದಿಂದ ಬಳಕೆಯಾಗಿರಬಹುದು]

ಸುನಾಯಿತ (ನಾ). ಸೂಕ್ಷ್ಮ: ಈ ಗಿಡಗಳದು ಬಹಳ ಸುನಾಯಿತವಾದ ಒಡಲು. ಕಾಂಡ ಎಂದು ಹೇಳಬಹುದಾದ ಅಂಗವೇ ದಾರದಷ್ಟು ದಪ್ಪ (ಹಸುಹೂ. ೧೮೯).

[ದೇ. ॥ ತಮಿ. ಚುನ್ನಿತ; ತೆಲು. ಸುನ್ನಿತ]

ಸುನಾರಖಾನೆ (ನಾ). ಅಕ್ಕಸಾಲೆ ಕೆಲಸ ಮಾಡುವ ಸ್ಥಳ: ಖಾಸ ಬೊಕ್ಕಸದ ಲಿನ್ಗಾಚಾರಿ ಕೊಮರನಾದ ಸುನಾರಖಾನೆ ರನ್ಗಾಚಾರಿಯವರು ಮಾಡಿ ವಪ್ಪಿಸಿದ ತಾಣ್ಡವೇಶ್ವರ (ಎಕ. XIV. ಶ್ರೀರಂಗ. ೧೮೫-೩; 1852).

[ಸುನಾರ್ಯ (IP <— ಹಿಂ.ಸುನಾರ್) + ಖಾನೆ]

ಸುನಾವಣೆ, ಸುಲಾವಣೆ (ನಾ). ೧. (ಅರ್ಜಿದಾರರ ಅಹವಾಲು ಮುಂತಾದುವನ್ನು) ಓದಿ ಹೇಳುವಿಕೆ: ನಾನಾ ದೇಶಗಳಿಂದ ಬಂದ ಪತ್ರಗಳನ್ನು ಸುನಾವಣೆ ಮಾಡುತ್ತಿದ್ದುದನ್ನು ಕೇಳುತ್ತಿರುವಲ್ಲಿ (ಗುಣಸಾ. ೭೩); ಲಕ್ಕೋಟೆಯನ್ನೊಡೆದು ಸುನಾವಣೆ ಮಾಡುವ ಮುತ್ಸದ್ದಿಯೊಬ್ಬನಾಗಬೇಕಾಯಿತು (ಕಥವಿ. ೫೦೯). **ಸುಲಾವಣೆ:** ೧. ಭಕ್ಷಿಯವರು ತಂದು ಸುಲ್ತಾನರಲ್ಲಿ ಸುಲಾವಣೆ ಮಾಡಿದರು (ದೌಲತ್. ೮೧). ೨. (ಅರ್ಜಿ ಮುಂತಾದುವನ್ನು) ಓದಿಸಿ ಕೇಳುವಿಕೆ: ಅರ್ಜಿಗಳನ್ನು ಬಿನ್ನವಿಸಿಕೊಂಡರೂ ಅವುಗಳನ್ನು ಸುಲಾವಣೆ ಮಾಡಿ ಅಪ್ಪಣೆಯಾದಂತೆ ನಿರೂಪವನ್ನು ಬರೆದು . . . ನಿಬಂಧನೆ ಮಾಡಿದರು (ಮಹಾಸಂ. I. ೧೪೬); ಒಂದು ಅರ್ಜಿ ಕೊಟ್ಟರೆ ನಾಳೇನೇ ಈ ವಿಷಯವನ್ನು ಸುಲಾವಣೆಗೆ ತೆಗೆದುಕೊಳ್ಳುತ್ತೆ (ಚಂಗಾಳ್ವ. ೩೧೮); ಅರ್ಜಿ ಸುಲಾವಣೆ ಮುಂದುವರಿಯಿತು (ನನ್ನೂರು. ೧೬೬).

[<— ಹಿಂ. ಸುನವಾಈ; ಮರಾ. ಸುನಾವಣೇ./ ತೆಲು. ಸುನಾಮಣಿ]

ಸುನಾಸೀರ (ನಾ). ದೇವತೆಗಳ ಒಡೆಯ; ಇಂದ್ರ: ಪಂಚರತ್ನಚೂರ್ಣವಿರಚಿತ ರಂಗವಲ್ಲೀವಿಲಾಸವಿರಾಜಿತಸುನಾಸೀರಶರಾಸನದೊಳ್ (ಆದಿಪು.೮-೬೭೨); ನಾಸಿರದೊಳ್ ಸುನಾಸೀರನಂತೆಸೆವ ನಿನಗೆ ಸಕಲ ಸುಭಟ ಸಾಧಾರಣ ಕಪಿಧ್ವಜಂ (ಕಕುಮಾ. ೮-೧೧). [ಸಂ.]

ಸುನಿ (ನಾ). ಹೆಣ್ಣುನಾಯಿ: ತೋಳ ಚಿಕ್ಕೊತ್ತಿಗೆ ಪೊಕ್ಕೆಯಿಂತು ಸು[ಪಾಠಾಂ. ಶು]ನಿಯಂತಿರೆ ನಿಲ್ವರೆ ಸೂಳೆ ಕೇಣಯೇ ಒತ್ತಿಗೆ ನಾಣ್ಬೆಯುಂ (ಲೀಲಾವ. ೨-೧೨೧); ಸುಧೆಯಂ ಬಿಟ್ಟು ಗಂಜಿಗೆ ಮನಂದಂದವೊಲು ಕಾಮಧೇನುವನುಳಿದು ಸುನಿಯ ಮೊಲೆಯ ಕರೆದುಣ್ಬಂದದೆ (ಸಿದ್ಧೇಪು. ೧೬-೨೫); ಇವನ ಕೊಲುವೆನೆಂದು ವಿಷದ ಕಜ್ಜಾಯವಂ ಕಳುಹಲು ಮಂತ್ರಿ ಸುನಿಗಿಕ್ಕಿಸಿ ರಾಯಗೆ ತೋಱಲು (ಭೃಗುಹೂ. I. ೨೮೬). [< ಸಂ. ಶುನೀ]

ಸುನಿಶ್ಚಿತ (ನಾ). ೧. ಚೆನ್ನಾಗಿ ನಿಶ್ಚಯಸಿದುದು; ದೃಢನಿರ್ಧಾರ: ಭಾಷೆಯಲ್ಲಿ ನಿರಂತರವೂ ಮತ್ತು ಸುನಿಶ್ಚಿತವೂ ಆದದ್ದು ಆ ಭಾಷೆಯ ಕೋಶವಲ್ಲ; ವ್ಯಾಕರಣ (ಭಾಷಾಶಾ. ೩೩); ಸತ್ಯಕ್ಕೇ ಅಂತಿಮವಿಜಯ ಸುನಿಶ್ಚಿತ (ಧರ್ಮಸಾ. ೩). ೨. ದೃಢವಾದ ವ್ರತ: "ಸಂಶಿತಃ, ಸುನಿಶ್ಚಿತಃ — ಈ ೨ ದೃಢವ್ರತಂ" (ಹಲಾಯು. ೬೭-೨೪೮). ೩. ನಿಶ್ಚಲವಾದ ಮನಸ್ಸುಳ್ಳವನು; ದೃಢಚಿತ್ತ: "ಶಂಸಿತನಾ ಸುನಿಶ್ಚಿತಂ ದೃಢಚಿತ್ತನೆಂದೆನಿಕ್ಕುಂ" (ಮಂಗರಾ. ೭೫-೫). [ಸಂ.]

ಸುನಿಷ್ಕೃತಿ (ನಾ). ಸೂಕ್ತವಾದ ಪ್ರಾಯಶ್ಚಿತ್ತ, —ಪರಿಹಾರ: ಅದಱ ನೀತನ ಪೊಯ್ದು ಕೊಂದಲ್ಲದೆ ಸುನಿಷ್ಕೃತಿಯಿಲ್ಲ ಸತ್ಕಾಭ್ಯುದಯವೇ ತನ್ನುದಯ (ಕುಮಾಕ. ೧೭-೭). [ಸಂ.]

ಸುನೀತ$_1$ (ಗು). ೧. ಒಳ್ಳೆಯ ಚರಿತ್ರೆಯುಳ್ಳ; ಸಚ್ಚಾರಿತ್ರದ. ೨. ಒಳ್ಳೆಯ ವಿವೇಕವುಳ್ಳ. (ನಾ). ೩. ಒಳ್ಳೆಯ ಚರಿತ್ರೆ; ಸಚ್ಚಾರಿತ್ರ. ೪. ಚಾತುರ್ಯವುಳ್ಳವನು; ಚತುರ: ಊಟಉಡುಗೆಯಲ್ಲಿ ವಿನೀತರು ಓದುವಾದದಲಿ ಸುನೀತರು (ಮುಕ್ತಕಾಂ.೨೦೯೬). [ಸಂ.]

ಸುನೀತ$_2$ (ನಾ). = ಸಾನೆಟ್ಟು: ಅಷ್ಟಷಟ್ಪದಿಗೆ . . . 'ಚತುರ್ದಶಪದಿ', 'ಸುನೀತ' ಎಂಬ ಬೇರೆ ಹೆಸರುಗಳೂ ಕನ್ನಡದಲ್ಲಿ ರೂಢವಾಗಿವೆ (ಧಂದೋವಿ. ೩೦೦); ಇಂದಿನ ಕನ್ನಡಸಾಹಿತ್ಯದಲ್ಲೇ ಕಂಡುಬರುವ ಸುನೀತ, ಲಘುಕಥೆ . . . ಇಂಗ್ಲೀಷ್‌ದಿಂದ ಬಂದವುಗಳೇ (ಭಾಷಾಶಾ. ೧೭೩). [IP 'ಸಾನೆಟ್' ಎಂಬ ಇಂಗ್ಲಿಷ್ ಶಬ್ದದಿಂದ 'ಸುನೀತ' ಎಂಬ ಶಬ್ದವನ್ನು ಕಲ್ಪಿಸಿಕೊಳ್ಳಲಾಗಿದೆ]

ಸುನೀತಿ (ನಾ). ೧. ಒಳ್ಳೆಯ ನಡತೆ; ಸುಚಾರಿತ್ರ್ಯ. ೨. ಒಳ್ಳೆಯ ನೀತಿ: ಶರಣರ ಸುಭಕ್ತಿ ಸು[ಪಾಠಾಂ. ವಿ]ನೀತಿಯಂ ತಾಂ ಕೇಳೆ (ಬಸಪು ೪೦-೮೫); ಸುನೀತಿಯನಂದಗೆಡಿಸಿ ತದೀಯವಂಶಚ್ಛೇದಮಾರ್ಗವನು ಒಂದುಗೂಡಿ (ಕುಮಾಭ. ೮-೫೪). ೩. ಧ್ರುವನ ತಾಯಿಯ ಹೆಸರು: ಹಿರಿಯ ಪಟ್ಟದ ರಾಣಿ ನೃಪತಿಗೆ ವರ ಸುನೀತಿ ಲತಾಂಗಿ ಕಿಱಿಯಳು ಸುರುಚಿ (ನಿಭಾಗ. ೪-೬-೪). [ಸಂ.]

ಸುನೀಲ (ನಾ). ಅತಿನೀಲಿ; ಕಡುನೀಲಿ. [ಸಂ.]

ಸುನೀಲರತ್ನ (ನಾ). ಕಡುನೀಲಿಬಣ್ಣದ ರತ್ನ: ಸುನೀಲರತ್ನನಿಭವೇಣಿ . . . ದಯೆಯಿಂದೆಮಗೀಗೆ ವಚೋವಿಲಾಸಮಂ (ನಾನಾರಾ. ೨). [ಸಂ.]

ಸುನೀವಿ (ನಾ). ಒಳ್ಳೆಯ ನೆರಿಗೆ: ತಾವರೆಮೊಗ್ಗೆಯ ಗಂಟೆಗಳಿಂದಂ ಪಾವನಮಾದ ಸುನೀವಿಗಳಿಂದಂ ಮೆಚ್ಚಿದ ಮಹಾಪುಷ್ಪಕಮೊಂದೊಲವಿಂ ಪೆಱೆದಲೆಯಂಗೆ ನಿಯಾಮಿಸುತೊದವಿಂ (ಹಾಲಾಸ್ಯ. ೧-೨-೮೦ ರಗಳೆ). [ಸಂ. ಸುನೀವೀ]

ಸುನೇತ್ರಿ (ನಾ). ಕಣ್ಣಿನ ರೋಗದ ಉಪಶಮನಕ್ಕೆ ಬಳಸಲಾಗುವ ಒಂದು ಬಗೆಯ ಔಷಧಿ: ತ್ರಿಫಲ, ತ್ರಿಕಟುಕ . . . ತೇದು ಕಣ್ಣಿಗಿಕ್ಕಲು ಕಾಡು, ಪಟಲ, ಹಣ್ಣುಗಣ್ಣು, ನೀರುಸುರಿಯುತ್ತಿರುವುದು ಮಾಣುವುವು. ಇದು ಸುನೇತ್ರಿ (ವಿಷವಿ. ೫೬). [?]

ಸುನೇರಿ (ನಾ). ಒಂದು ಬಗೆಯ ಮಿಶ್ರಲೋಹದ ತಗಡು; ಬೆಳ್ಳಿ ಅಥವಾ ಚಿನ್ನದ ಬಣ್ಣದ ತಗಡು: ಸುನೇರಿಯನ್ನು ಬಳಿದುಕೊಂಡಿದ್ದ ಕೊಂಬುಗಳು (ಭೀಷ್ಮ. ೧೭೮); ಸುನೇರಿಬಣ್ಣದ ಕಲ್ಲು (ದಿಲ್ಲಿಪ. ೮೨).

[<— ಹಿಂ. ಸುನಹರಾ, ಸುನಹಲಾ]

ಸುನ್ನ$_1$ 'ಸೊನ್ನೆ$_3$' ನೋ.

ಸುನ್ನ$_2$ 'ಸೊನ್ನೆ$_4$' ನೋ.

ಸುನ್ನತಿ 'ಸುಂತಿ' ನೋ.

ಸುನ್ನವೆಸ (ನಾ). ಚಿನ್ನ ಬೆಳ್ಳಿಯ ಕೆಲಸ; ಅಕ್ಕಸಾಲೆತನ.

ಸುನ್ನವೆಸದವ = ಚಿನ್ನಬೆಳ್ಳಿ ಕೆಲಸಮಾಡುವವನು; ಅಕ್ಕಸಾಲಿ: ಸುನ್ನವೆಸದವಂಗೆ ಹಳಿಂಗಲುವೊಲದಲು ಮತ್ತರು ೧೨ (ಕಾಇ.೯-೩-೩೨೮; 1062).

[ಸುನ್ನ$_1$ (< ಸೊನ್ನೆ$_3$) + ಬೆಸ$_1$]

ಸುನ್ನಿ (ನಾ). ಮಹಮ್ಮದೀಯರಲ್ಲಿ ಒಂದು ಪ್ರಭೇದ: ಸುನ್ನಿಗಳು ಅಬೂಬಕರನ್ನು ಸರಿಯಾದ ಉತ್ತರಾಧಿಕಾರಿ ಎಂದು ಕಲೀಫನನ್ನಾಗಿ ಆಯ್ದರು (ಇಸ್ಲಾಸಂ. ೩೦).

[<— ಅರ. ಪಾರ. ಹಿಂ. ಸುನ್ನೀ ; ಮರಾ. ಸುನೀ, ಸುನ್ನೀ]

ಸುಪಂಡಿತ (ನಾ). ಒಳ್ಳೆಯ ವಿದ್ವಾಂಸ; ಮಹಾಪಂಡಿತ: ತನಗೆ ಮೃತ್ಯುವರವಾನಱೆದೆನ್ನು ಸುಪಣ್ಡಿತನ್ ಅನೇಕಶೀಲಗುಣಮಾಲೆಗಳಿನ್ನಗಿದೊಪ್ಪಿದೊನ್ (ಎಕ. II. ೧೧೩-೧; ಸು. 700). [ಸಂ.]

ಸುಪಕ್ಷ (ನಾ). ೧. ಒಳ್ಳೆಯ ರೆಕ್ಕೆ. ೨. ಶುಕ್ಲಪಕ್ಷ. ೧, ೨: ವಿಸರುಹದಂತೆ ಕೇಸರ ಮನಾಂತುದು . . . ಚಂದ್ರಮನಂತ ಸುಪಕ್ಷದಿಂದ ರಂಜಿಸಿದುದು ಪುಂಜನಗ್ನದ ಸುವಸ್ತುವಿನಂತಿರ ತಲ್ತು ಹಂಟೆಯೊಳ್ (ಯಶೋಚ. ೬-೭೮). ೩. ಕುಲಾಚಲಗಳಲ್ಲಿ ಒಂದು: ಶ್ಲೇಂದ್ರ . . . ಸುಪಕ್ಷ . . . ಪಾರಿಜಾತವಂಬ ಹದಿನಾಱು ಕುಲಾಚಲಂಗಳೇ ಪೂರ್ವೋಕ್ತವಿಪುಳವಂಬ ಕೀಲಕಪರ್ವತಕ್ಕೆ ಪಶ್ಚಿಮದಿಕ್ಕಿನಲ್ಲಿಹವು (ವಿಷೇ. ೨೧೨). [ಸಂ.]

ಸುಪಟ್ಟಿ (ನಾ). ಗೌರವಸೂಚಕವಾಗಿ ಕೊಟ್ಟಿ ಒಳ್ಳೆಯ ಪದವಿ: ಬಸವಂ ಭಕ್ತಿಗರಸಂ ತಾನೆಯಾನುದ್ಯುಕ್ತಲಿಂಗ ಸುಪಟ್ಟಸಿದ್ದನು ಬಸವ (ಬಸಪು. ೧೦-೪೨). [ಸಂ.]

ಸುಪತಿ , ಸುಪ್ತಿ (ನಾ). ಆಲಸ್ಯ; ಜಡತೆ: ವನಿತೆ ಸುಪತಿ ತುರ್ಯಪದದೊಳಡಗಿದಹ ಮನಿಸುವೆಲ್ಲಾ ವಿಷಯದ ತೋರ್ಕೆ (ಪರಮೋ. ೪-೨೦-೧೦). **ಸುಪ್ತಿ**: ಅಮಲಮತಿ ಕೇಳ್ ಸುಪ್ತಿಯಹುದಾ ತಮದ (ನಿಘಾಗ. ೧೯-೩೧-೧೬). [< ಸಂ. ಸುಪ್ತಿ]

ಸುಪಥ (ನಾ). ಸಚ್ಚಾರಿತ್ರದ ದಾರಿ; ಉತ್ತಮವಾದ ನಡತೆಯ ಮಾರ್ಗ: ಸುಪಥಮಂತ್ರದುಪದೇಶವ ಕಲಿತು ಯುಕ್ತಿಗಟ್ಟು ನಡೆವಿರಯ್ಯಾ (ಬಸವ. ೧೧); ಎನಗಿಮತ್ತಮ ಸುಪಥವಾದುದು (ಬಸಪು. ೪೩-೫); ಸುಪಥದಲಿ ನಡೆವಂಗ ರಕ್ಕಸಜನ್ಮ ವಂತಹುದು (ಕಾಶಿಕಾ. ೧೯-೨೧). [ಸಂ.]

ಸುಪದ (ನಾ). ಒಳ್ಳೆಯ ಪಾದ; ಸುಂದರವಾದ ಪಾದ: ಮಂದಭಕ್ತಿಯೊಳಿವರ ಸುಪದರವಿಂದ ಸಂಘಟರೇಣುಪಟಲಾಘಟಿತಶಿರರಾಗಿ (ಬಸಪು. ೩೬-೭). [ಸಂ.]

ಸುಪನಾತಿ 'ಸುಪ್ಪನಾತಿ' ನೋ.

ಸುಪರ್ಣ (ಗು). ೧. ಒಳ್ಳೆಯ ರೆಕ್ಕೆಯನ್ನು ಹೊಂದಿರುವ. ೨. ಒಳ್ಳೆಯ ಎಲೆಯನ್ನು ಹೊಂದಿರುವ. (ನಾ). ೩. ಒಳ್ಳೆಯ ರೆಕ್ಕೆಯನ್ನು ಹೊಂದಿರುವವನು; ಗರುಡ: "ವಿಹಂಗರಾಜಃ . . . ಸುಪರ್ಣಃ . . . ಕಶ್ಯಪನಂದನಃ - ಈ ೧೦ ಗರುಡನ ಪೆಸರ್" (ಹಲಾಯು. ೬-೩೧); ಸುಪರ್ಣಂಗೀಡೆ ಕಾಕಾಳಿ (ಸೋಮೇಶ. ೧೦); ಎಲೆ ಮುನೀಶ್ವರ ನಾನು ನನದರೆ ಒಲವಿನಿಂದ ಸುಪರ್ಣ ಬಹನೇ (ಕಾಶಿಕಾ. ೧೯-೫೩); ಮಿತವಚನನ ಹಿತವಚನಮನಾಕರ್ಣಿಸಿ ಸುಪರ್ಣಪರಾಕ್ರಮನಾಕರ್ಣಾಂತಮುಗಿದ ಕೂರ್ಗಣೆಯನುಪಸಂಹರಿಸಿದಾಗಳ್ (ರಾಜಶೇ. ೬-೧೧೧ ಪ). ೪. ದೇವತೆಗಳ ಒಂದು ವರ್ಗ: ಸುರಗಂಧರ್ವ ಸುಪರ್ಣ ಕಿನ್ನರ ಖಿಗ ಸ್ತ್ರೀಸದ್ಮದೊಳ್ (ಸುಕುಮಾ. ೫-೪೮). ೫. ಜೀವ. ೬. ಪರಮಾತ್ಮ: ಪರಮಾತ್ಮನಿಗ ಸುಪರ್ಣನಂದು ಹಸರು . . . ಸುಪರ್ಣನೆಂದು ಜೀವನಿಗೂ ಹಸರು (ಪಸಾರ. ೬-೩೦ ಕಾತ್ಪರ್ಯ). ೭. ಒಂದು ಬಗೆಯ ಮರ: ಸುಪರ್ಣಗಳು (Ferns) ಈ ಜಾತಿಯವು (ಬಾಲಪ್ರ. ೧. ೧೩೨). [ಸಂ.]

ಸುಪರ್ಣಕೇತು (ನಾ). ಧ್ವಜದಲ್ಲಿ ಗರುಡನ ಚಿಹ್ನೆಯನ್ನು ಉಳ್ಳವನು; ವಿಷ್ಣು: "ವಿಷ್ಣುಃ, ಸುಪರ್ಣಕೇತುಃ . . . ಗದಾಧರಃ — ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೩); ಅಂತು . . . ಸುಪರ್ಣಕೇತು-ಜೀಮೂತಪಥವಿಂದತಿವೇಗವಿಂ ಪೋಗೆ (ಜಗವಿ. ೧೨-೪ ಪ). [ಸಂ.]

ಸುಪರ್ಣರಥ (ನಾ). ಗರುಡನನ್ನು ವಾಹನವಾಗಿ ಉಳ್ಳವನು; ವಿಷ್ಣು: ಸುಪರ್ಣರಥಪೂಜಿತೇ ಸುಕರಕೀರ್ತಿವಿಭ್ರಾಜಿತೇ (ಪ್ರಪಮ. ೪೨-೧೧). [ಸಂ.]

ಸುಪರ್ಣೆ (ನಾ). ಗರುಡನ ತಾಯಿ; ವಿನತೆ. [ಸಂ. ಸುಪರ್ಣೀ]

ಸುಪರ್ಣೆಜ (ನಾ). ವಿನತೆಯ ಮಗ: ವೈನತೇಯ; ಗರುಡ: "ಸುಪರ್ಣಾ ಸುಪರ್ಣೆಜ ವ್ಯಾಳಾದಿ ವೈನತೇಯಂ ಸುರಪರಿಪು ಗರುತ್ಮನೆನಲ್ಕ ಗರುಡನಕ್ಕು" (ಮಂಗರಾ. ೭-೨೧). [ಸಂ.]

ಸುಪರ್ದು, ಸುಫರ್ದು, ಸುಬರ್ದು (ನಾ). ಅಧೀನ; ವಶ: ನಿನ್ನ ಸುಪರ್ದಿನಲ್ಲಿ ಖೈದಿಯನ್ನು . . . ಕೊಡುತ್ತೇನೆ (ಕಲನ. ೧೧೦): ನಿನ್ನ ಜ್ಞಾನ ನಿನ್ನ ಸುಪರ್ದಿನಲ್ಲಿರುವಾಗಲೇ ಬಂದುಬಿಡು (ಚಂಗೂರಿ. ೫೫). **ಸುಫರ್ದು**: ದೌಲತ್ತು ಕಂಪನಿಸರ್ಕಾರದ ಸುಫರ್ದಾಯಿತು (ಪ್ರಕಾಚ. ೪೩): ದೊಡ್ಡೀದಾರನು ರಾಸುಗಳನ್ನು ತನ್ನ ಸುಫರ್ದಿಗೆ ತೆಗದುಕೊಂಡು ಅವುಗಳಿಗೆ ಮೇವು ನೀರು ಇವುಗಳ ಪಿರ್ಯಾಡನ್ನು ವಹಿಸಿಕೊಳ್ಳುವನು (ಗ್ರಾಪಜೀ. ೧೦೬): ಸಾಹುಕಾರನು ಒಪ್ಪದ ಹೊಲವನ್ನು ಸುಫರ್ದುಮಾಡಿಕೊಂಡನು (ಕರ್ಕಾಸಂ. ೨೯). **ಸುಬರ್ದು**: ಕೋರ್ಟಿನ ಅಪ್ಪಣೆ ಮೇರಗ ಜಮೀನನ್ನು ಸುಬರ್ದಿಗೆ ತಗದುಕೊಂಡರು (ರೂಢಿ). [<— ಹಿಂ. ಸುಪುರ್ದ್; ಮರಾ. ಸುಪೂರ್ತ್, ಸುಪೂರ್ದ್]

ಸುಪರ್ಬ (ನಾ). ಸುರ; ದೇವತೆ: ತಿಳಿದು ಸಕಳಸುಪರ್ಬಜನವೆಱಗಿದುದು ಜಯಜಯ ಎನುತ ಪಶುವತಿಗ (ಕುವ್ಯಾಕ. ೬-೩೧): ಒಬ್ಬವಿಹನೀಕ್ಷಿಸುವೆನಿನ್ನು ಸುಪರ್ಬ ಲೋಕಾಧೀಶರೊಳಗನುತ್ತ (ನಿಘಾಗ. ೩-೮-೧೯). [< ಸಂ. ಸುಪರ್ವ]

ಸುಪರ್ವ (ನಾ). ೧. = ಸುಪರ್ಬ: "ಸುಪರ್ವ ನಾಕಸದನರ್ ನಿಳಿಂಪ ವಿಬುಧರು ಸುಮನಸರು ಲೇಖರನಲು ವಿಬುಧರ್ಗ ನಾಮಂ" (ಮಂಗರಾ. ೩-೮): ಸುಪರ್ವರ ಕುಜುಹುಗಳಸಲಿದಮರರಿಪುಗಳು ಹರಿದರರಮನೆಗ (ಕುವ್ಯಾಆ. ೧೨-೧೪); ಸುಪರ್ವನುತವೈಭವೇ . . . ಪಾಲಿಪುದು (ರಾಜಶೇ. ೪-೧೨೬). ೨. ಒಳ್ಳೆಯ ಗಿಣ್ಣು: 'ಸುಪರ್ವಲುಲಿತ' ಪರಾ. [ಸಂ.]

ಸುಪರ್ವಗುರು (ನಾ). ದೇವತೆಗಳ ಗುರು; ಬೃಹಸ್ಪತಿ: ಪ್ರೀತಿಯಿನಾ ಸುಪರ್ವ ಗುರು ಬಣ್ಣಿಸಿದಂ ಧ್ರುವನಂ (ವಿಷ್ಣುಪು. ೧-೩-೧೪೪). [ಸಂ.]

ಸುಪರ್ವನಾಥ (ನಾ). ದೇವತಗಳ ಒಡೆಯ; ಇಂದ್ರ: ಮೃಡನನೋಲ್ಕೆಸಲ್ಕೆ ಬಾಗಿಲ ಕಡಗೆ ಹೋಗಿ ಸುಪರ್ವನಾಥನು ಬಿಡದೆ ನೋಡುತಲಿವಯನಿಕ್ಕದ ಕಾಯ್ದುಕೊಂಡಿಹನು (ಬಸಪು. ೪೩-೪೨). [ಸಂ.]

ಸುಪರ್ವಲುಲಿತ (ನಾ): ೧. ದೇವತೆಗಳಿಂದ ಸುತ್ತುವರಿಯಲ್ಪಟ್ಟವನು. ೨. ಗಿಣ್ಣುಗಳಿಂದ ಸುಂದರವಾದುದು. ೧, ೨: ಸುಪರ್ವಲುಲಿತಂ . . . ತೋಪಾಯ್ತುವೇಂದ್ರಂಗ ಮಜ್ಜನಕಂಗೀ ಮರನೆಂದು ಮಾಮರಕೆ ಕಾವಂ ಕೊಟ್ಟ ನಾತಿಥ್ಯಮಂ (ಪುಪ್ರಪು. ೮-೮೦). [ಸಂ. (ಸುಪರ್ವ + ಲುಲಿತ; ಸು + ಪರ್ವ + ಲುಲಿತ)]

ಸುಪರ್ವಪಧು (ನಾ). ದೇವತಾಸ್ತ್ರೀ; ಅಪ್ಸರೆ: ಮುಡಿಸಿದಳಿಱದಿನೂರ್ವಳ್ ಸುಪರ್ವಪಧು ನೃಪಧುವಂ (ಪುಪ್ರಪು. ೯-೮೦). [ಸಂ. ಸುಪರ್ವವಧೂ]

ಸುಪರ್ವಾಗ್ರಣಿ (ನಾ). ೧. ದೇವತಗಳ ಒಡೆಯ; ಇಂದ್ರ; ದೇವೇಂದ್ರ: ಸುಪರ್ವಾಗ್ರಣಿಗಾಯ್ತು ವಜ್ರಿಗಾಸನಕಂಪಂ (ಪುಪ್ರಪು. ೯-೫೦). ೨. ದೇವತೆಗಳಲ್ಲಿ ಮುಖ್ಯನಾದವನು; ಪರಮಾತ್ಮ; ಶಿವ: ಶ್ರುತಿನಿವಹಪ್ರಣುತನೊಳಖಿಳ ಸುಪರ್ವಾಗ್ರಣಿಯೊಳ್ ಸೆಣಸಾಂತು ಮೃಡನೊಳೆಚ್ಚಾಡಿದನೇ (ಶಿಪು. ೪-೧೨೧).

[ಸಂ. ಸುಪರ್ವಾಗ್ರಣೀ]

ಸುಪರ್ವೇಂದ್ರ (ನಾ). '= ಸುಪರ್ವಾಗ್ರಣಿ ೧: ಸುಪರ್ವೇಂದ್ರಗೃಹಕ್ಕೆ ವೀಜಯದಾತ್ಮೀಯಕಳಾಸರ್ವಜ್ಞತೆಯಂ ಮೆಱೆದಂ ಗೀರ್ವಾಣಸ್ಥಪತಿ ನಿಮ್ಮ ಗೃಹವಿರಚನೆಯಿಂ (ಜಗವಿ. ೯-೧೩೧). [ಸಂ.]

ಸುಪಲೆ (ನಾ). ಕೇರುವ ಸಾಧನ; ಮೊರ: ಅಕ್ಕಿ ಕೇರೇನೌ ಅಕ್ಕಿ ಕೇರೇನೌ ಬಣ್ಣದ ಸುಪಲೀಲೆ (ಅನ್ನಪಾ. ೩೭). [< ಸೂರ್ಪ]

ಸುಪಾಕ (ನಾ). ೧. ಒಳ್ಳೆಯ ಅಡುಗೆ; ಉತ್ತಮವಾದ ಪಾಕ. ೨. ಒಂದು ನರಕದ ಹೆಸರು: ಕುಂಭೀಪಾಕ, ಸುಪಾಕ . . . ಅಂಗಾರಕವೆಂಬೈದು ಮಿತ್ರನರಕಂಗಳಿಂದಾವರಿಸಿ ತರಳತಾರವಂಬರಸುನರಕವಿಹುದು (ವಿವೇಚ. ೧೫೨). [ಸಂ.]

ಸುಪಾಣಿ, ಸುಪ್ಪಾಣಿ (ನಾ). ೧. ಶುಭ್ರವಾದ ನೀರಿರುವ ಮುತ್ತು; ಶ್ರೇಷ್ಠ ದರ್ಜೆಯ ವರ್ಗೀಕೃತ: ನಸುದಳೆಯುತ್ತಮಿರ್ದ ಪೊಸಮುತ್ತಿನ ಪಿಂಪಿನ ಸಂಪುಟಂಗಳಿಂ ನುಸುಳ್ದು ಸುಪಾಣಿಯಾಗಿ ಪೊಱಪೊಣ್ಮುವ ಮುತ್ತಿನ ಮಾಲೆಯಂದದಿಂ . . . ಪೊಣ್ಮೆದುವು ಕಣ್ಣನಿಗಳ್ (ಕಾದಂಪೂ. ೩೩೧). **ಸುಪ್ಪಾಣಿ**: ೧. ಹೊಸಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು (ಅಪಚಂ. ೧೩೭-೬೨೪): "ಆಭರಣವಿಶೇಷ" (ಅಮೀಃ. ಕೋಶ): ಒಂದು ಚಿಪ್ಪಿನಲ್ಲಿ ಮೂಱು ಮುತ್ತು ಹುಟ್ಟಿದವು ಒಂದು ಕಟ್ಟಾಣಿ ಒಂದು ಸುಪ್ಪಾಣಿ ಒಂದು ಮಣಿ ಉದಕವಿಲ್ಲದ ಸೂತೆ (ಸಣವ. ೪. ೨. ೨೬೮-೮೩): ಸರಪಣಿ ಮಣಿ ಸುಪ್ಪಾಣಿ ಸೂಸರವು ಕರವಲಯ ಉಡಿದಾರ ಕಾಲ್ಕಂಡೆ ಪ್ರಭೆಯು (ಪ್ರಸಾಪಾ. ೧೫೮). 'ಕಟ್ಟಾಣಿ' ಪರಾ. ೨. ಒಂದು ಬಗೆಯ ಭಕ್ಷ್ಯ: ಬಿಸಿನೀರನೆಱೆದು ಕಿವಿಚಿದ ಪುಲ್ಲ ಸೊಜ್ಜಿಗೆಯ . . . ತುಪ್ಪದೊಳಗೊಂದೊಂದು ಚೊಟ್ಟೆಯಂ ಬಿಡಲು ಮಿಸುವ ಸುಪ್ಪಾಣಿವೆಸರಂ ತಾಳಿ ವಸುಧಾ ಪರಗರ್ಗ ಪಾವನಮಾದುದು (ಸೂಪಶಾ. ೧-೩೬). ೩. (ಆಲಂ) ಒಳ್ಳೆಯವಳು; ಶ್ರೇಷ್ಠಳಾದವಳು: ಪಾಣಿ ಬೊಮ್ಮನ ರಾಣಿ . . . ಸತಿ ಸುಪ್ಪಾಣಿ ಪರ್ಗಶ್ಯಣ . . . ತಾಮಿತದಾನಿ ವರವೀಯೆ (ಕಾಶಿಕಾ. ೧-೨); ಚಂದ್ರಾಣಿ ಪುಷ್ಪಾಣಿ ಸುಪ್ಪಾಣಿ ಕಟ್ಟಾಣಿ

ಮಂದ್ರಾಣಿ ಮಧುರಾಣಿಯೆಂಬ ಚಂದ್ರನ ಷೋಡಶಕಲೆಗಳಂದದ ಪೆಣ್ಗಳಿಂದ್ರಾಭನಿದಿರೊಳಾಡಿದರು (ಭರಚ. ೧೩-೭೪); ಕ್ಷೋಣಿಯೊಳಗೆ ಸಗಿಗಾಣೆನೆ ನಿನಗೆ ಸುಪ್ಪಾಣಿಯೆ (ವಿದಾಕ್ಷ. ೭೨ ಅನುಪಲ್ಲವಿ). (ಗು). ೪. ಒಳ್ಳೆಯ; ಶ್ರೇಷ್ಠವಾದ: ವಕ್ಕೋರುಹಂಗಳುಂ ಸಿರಿಕರದ ಮಕರಿಕಾಪತ್ರಮುರುಭರಮಂದು ಸುಪ್ಪಾಣಿಮಾಲಿಕೆಗಳ ಧರಿಸದಾದುದು ಗಳಂ (ಪಂಶಾಕಾ. ೧-೯-೧೩). 'ಆಣ್ಣೆ' ಹೋ.

[ಸು + ಪಾಣಿ (< ಪಾಣೀಯ)?. /ತೆಲು. ಸುಪಾಣಿ, ಸುಪ್ಪಾಣಿ]

ಸುಪಾತ್ರ (ನಾ). ೧. ಒಳ್ಳೆಯದಕ್ಕೆ ಯೋಗ್ಯನಾದವನು,— ಅರ್ಹನಾದವನು. ೨. [ನಾಟ್ಯ] ಹತ್ತುಬಗೆಯ ನೃತ್ಯಭೇದಗಳಲ್ಲಿ ಒಂದು: ತಾಂಡವ . . . ಸುಪಾತ್ರ . . . ಸರ್ವತೋಭದ್ರವೆಂಬ ದಶಪಾತ್ರಂಗಳಂ ಬೀಱೆ (ವಿಕ್ರ. ೨೫೯); ತಾಂಡವ ನಾಂಟ್ಯ ನೃತ್ಯ ಲಾಸ್ಯ ಗುಂಡಿ ಪಿಕ್ಕಣ ಲಕ್ಷಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರ ಯೆಂಬ ದಶಪಾತ್ರಂಗಳಂ ತೋರಿ (ಭೃಂಗಿ. ೧-೭೧ವ). 'ಅಪರಿಪಾತ್ರ' ಪರಾ. [ಸಂ.]

ಸುಪಾರಿ (ನಾ). ಅಡಕೆ: ಬಾಯಲ್ಲಿ ಸುಪಾರಿಯಗಿಯುತ್ತಾ ತಮಾಷೆಯಾಗಿ ಮಾತನಾಡುತ್ತಿದ್ದರು (ಗೋಪುರ. ೧೧೨). 'ಪಾನ್‌ಸುಪಾರಿ' ಪರಾ.

[<— ಹಿಂ. ಮರಾ. ಸುಪಾರೀ]

ಸುಪೀಕ (ಗು). (ಉಕ) ಅತಿಶಯವಾದ; ಸಮೃದ್ಧವಾದ: ವೆಂಕಟರಮಣನ ಸುಪೀಕ ಕಲ್ಪಕಶಕ್ತಿ ಒಮ್ಮೆಲೇ ಚೇತರಿಸಿ . . . ಬಾಯಿ ಚಪ್ಪರಿಸಿದ (ಮೂಗುದಾ. ೧೫೬).

ಸುಪೀಕತಲೆ = (ಆಲಂ) ಅತಿ ಬುದ್ಧಿವಂತಿಕೆ: ಜನರಿದ್ದಲ್ಲಿ ಮಾತು ಇರುವವೇ. ಅದರಲ್ಲೂ ನಮ್ಮ ಜನರಂತಹ ಸುಪೀಕತಲೆಯವರಿದ್ದರೆ ಪಕ್ಕ ಹಾರಿದರೂ ಕಾಗೆ ಹಾರಿತೆಂದು ತೋರುವುದೇ (ಮೂಗುದಾ. ೧೯೧). [<— ಮರಾ. ಸುಪೀಕ್]

ಸುಪುತಿ 'ಸುಪತಿ' ನೋ.

ಸುಪುತ್ರ (ನಾ). ಒಳ್ಳೆಯ ಮಗ; ಸತ್ಪುತ್ರ: ವಿಳಸಿತ ಗುಣಗಣದಿಂ ನಿರ್ಮಳ ತನುಗೆಲ್ದು ಬೀಜದಿಂ ಬೆಳಸೆಂತಗ್ಗಳವಾಕ್ಕುಮಂತೆ ಗುರುಗಗ್ಗಳಮಾದನಿದೇಂ ಸುಪುತ್ರನೋ ಬಲದೇವಂ (ಶಾಂಪು. ೨-೪); ಅಧಿಕಶ್ರೀನಿಳಯಂ ಸುಪುತ್ರನೊಗತರ್ಕುಂ (ಪುಷ್ಪಸ. ೩-೧೨೨). [ಸಂ.]

ಸುಪುರೋಡಾಶ (ನಾ). ಯಜ್ಞಯಾಗಾದಿವಿಧಿಗಳಲ್ಲಿ ದೇವತಾಪ್ರೀತ್ಯರ್ಥವಾಗಿ ಕೊಡುವ ಒಳ್ಳೆಯ ಹವಿಸ್ಸು: ನೀ ಸಮಾಧಾನದಲಿ ಸುಪುರೋಡಾಶವಿದ ಸಮಿದಾಜ್ಯಸಹಿತ ಮಹಾಸುವಿಸ್ತಾರದಲಿ ಕೊಂಬುದು ಭೀತಿ ಬೇಡೆಂದ (ಕುಮಾಭ. ೨೦-೨೫). [ಸಂ.]

ಸುಪುಷ್ಪ (ಗು). ಚೆನ್ನಾಗಿ ಬೆಳೆದ; ದಷ್ಟಪುಷ್ಟವಾದ: ತನ್ನ ಮುಂದ ಬೆಂಕಿ ಗೇಡಿಯೊಟ್ಟು ತಿರುಗಾಡಿಸುತ್ತಿದ್ದ ಸುಪುಷ್ಟಗ್ರೀವದ . . . ಹೋರಿಗುದುರೆಯನ್ನವನು ಪರೀಕ್ಷಿಸುತ್ತಿದ್ದನು (ಪುನರು. ೪೫೦). [ಸಂ.]

ಸುಪುಷ್ಪವೃಷ್ಟಿ (ನಾ). ೧. ಮಂಗಳಕರವಾದ ಹೂವಿನ ಮಳೆ. ೨. [ಶಿಲ್ಪಶಾ] ದೇವತಾವಿಗ್ರಹಗಳ ಶಿರೋವೇಷ್ಟನಗಳಲ್ಲಿ ಒಂದುಬಗೆ; ಒಂದು ಬಗೆಯ ಕಿರೀಟ: ನರೇಂದ್ರರನೊತ್ತಿಕೊಂಡುಮಾತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ (ಪಂಪಭಾ. ೧-೧); P " 'ಸುಪುಷ್ಪವೃಷ್ಟಿಯಂ' ಇಲ್ಲಿ ಪಾಠಕ್ಲೇಶವಿದೆ. ಇದು 'ಸುಪುಷ್ಪ[ಪಟ್ಟ]ಮಂ' ಎಂದಿರಬೇಕು . . . ಪುಷ್ಪಪಟ್ಟವೆಂಬ ಶಬ್ದ ಶಿಲ್ಪ ಶಾಸ್ತ್ರಕ್ಕೆ ಸೇರಿದ್ದು. ರಾಜರೂ ದೇವತೆಗಳೂ ಧರಿಸುವ ಶಿರೋವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂಡಲ, ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮುಕುಟ, ಪಟ್ಟ—ಎಂಬ ಹನ್ನೆರಡು ವಿಧಾನಗಳಿವೆ. ಇವುಗಳಲ್ಲಿ ಪಟ್ಟವೆಂಬುದು ಪತ್ರಪಟ್ಟ, ರತ್ನಪಟ್ಟ, ಪುಷ್ಪಪಟ್ಟ ಎಂದು ಮೂರು ಬಗೆಯಾಗಿದೆ" (ಪಂಪಬೀ. ೧). [ಸಂ.]

ಸುಪ್ತ (ಗು). ೧. ನಿದ್ರೆಹೋದ; ಮಲಗಿದ: ತವುತಿರ್ದತ್ತಲ್ತೆ ತಾರಾಸಮುದಾಯ ಮಿದೂ ಪಂಪಾಸರಸ್ತೀರ ಸುಪ್ತೋತ್ಥವಿಹಂಗಧ್ವಾನವೀ ಪೊಣ್ಮುವುದು (ಕಾದಂಬ. ೭೦೪). ೨. ಮೈಮರೆತ; ಏಚ್ಚರವಿಲ್ಲದ: ಇತರ ಬಾಹ್ಯೇಂದ್ರಿಯಗಳೆಲ್ಲ ಸುಪ್ತಸ್ಥಿತಿಯಲ್ಲಿದ್ದವು (ಶಾಂತಕಾ. ೩೭೪). (ನಾ). ೩. ಮಲಗಿದುದು; ನಿದ್ರೆಹೋದುದು: ತೃಪ್ತಿಯರಿಯದ ವಾಂಛೆ . . . ಪ್ರಾಪ್ತಿಗೊಳಿಪುದು ಜೀವಕುನ್ಮಾದತಾಪಗಳ ಸುಪ್ತವಹುದೆಂತಿಚ್ಛೆ? (ಮಂಕಾಕ. ೩೭೯). ೪. ಮಲಗಿದವನು; ನಿದ್ರೆಹೋದವನು: ಸುಪ್ತಂ ಪ್ರಬುದ್ಧನೆನೆ ಪರ್ಯಾಪ್ತಿಯನಂತರ್ಮುಹೂರ್ತದಿಂ ಪಡೆದು (ಮಲ್ಲಿಪು. ೧೧-೬೩); ಸುಪ್ತಂಗೆ ಜಾಗೃತನ ಲೋಕಮುಂ ಸುಳ್ಳೇ (ಮಂಕಾಕ. ೮೯೩). ೫. [ಕಾವ್ಯಮೀ] ಸಂಚಾರಿಭಾವಗಳಲ್ಲಿ ಒಂದು; ನಿದ್ರೆಯಲ್ಲಿರುವುದು; ಸುಪ್ತಿ: ಮತಿ ನಿರ್ವೇದ . . . ಆಲಸ್ಯ ಸುಪ್ತಾವ ಬೋಧ ಸ್ಮೃತಿ . . . ಸಂಚಾರಿಭಾವಂ (ಕಾವ್ಯಾವ. ೭೯೫). [ಸಂ.]

ಸುಪ್ತಕೋಣಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೭೪. ಸುಪ್ತಕೋಣಾಸನ (ಭಾರದ. ೧೬೭). [ಸಂ.]

ಸುಪ್ತಚಿತ್ತ (ನಾ). ಮಲಗಿದಂತಿರುವ ಮನಸ್ಸು,—ಒಳಚಿತ್ತ: ಸಹಸ್ರಾರು ಸಂವೇದನೆಗಳು ಪ್ರಜ್ಞೆಯ ದ್ವಾರಾ ನಮ್ಮ ಸುಪ್ತಚಿತ್ತ (Subconscious)ವನ್ನು ಪ್ರವೇಶಿಸಿ ಅಲ್ಲಿ ಹುದುಗಿರುತ್ತವೆ (ಸೌಂದಸ. ೫). [ಸಂ.]

ಸುಪ್ತಚೇತನ (ನಾ). ಮಲಗಿದಂತಿರುವ ಶಕ್ತಿ; ಒಳಚೇತನ: ಮನುಷ್ಯನ ಮನಸ್ಸಿನ ಮಟ್ಟಗಳಲ್ಲಿ ಮೊದಲು ಪ್ರಜ್ಞಾಮಟ್ಟ, ನಂತರ ಉಪಪ್ರಜ್ಞಾಮಟ್ಟಗಳು ಬರುತ್ತವೆ. ಇದಕ್ಕಿಂತ ಆಳದಲ್ಲಿರುವ ಮಟ್ಟವನ್ನು ಸುಪ್ತಚೇತನವೆನ್ನುತ್ತಾರೆ (ದೂಯ. ೨೩೧). [ಸಂ.]

ಸುಪ್ತಪಾದಾಂಗುಷ್ಠಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೨೭. ಸುಪ್ತಪಾದಾಂಗುಷ್ಠಾಸನ (ಭಾರದ. ೧೬೭). [ಸಂ.]

ಸುಪ್ತಪಾರ್ಶ್ವಪಾದಾಂಗುಷ್ಠಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೭೫. ಸುಪ್ತಪಾರ್ಶ್ವಪಾದಾಂಗುಷ್ಠಾಸನ (ಭಾರದ. ೧೬೭). [ಸಂ.]

ಸುಪ್ತಪ್ರಜ್ಞೆ (ನಾ). = ಸುಪ್ತಚೇತನ: ಅಂತಯೆ ಸುಪ್ತಪ್ರಜ್ಞೆಯ ರಸಾತಲದಲ್ಲಿ ಹೂತುಕೊಂಡಿದ್ದ ಈ ನೆನಪುಗಳು ಹೊರಗೆ ಜಾರಿಹೋಗದಂತೆ ದ್ವಾರಪ್ರವೇಶವನ್ನು ಭದ್ರವಾಗಿ ಮುಚ್ಚಲಾಗಿತ್ತು (ಪುನರು. ೧೯೯). [ಸಂ. ಸುಪ್ತಪ್ರಜ್ಞಾ]

ಸುಪ್ತಪ್ರಣಮ (ನಾ). (ಚೇತನದ) ಒಳಗಿರುವ ಓಂಕಾರಮಂತ್ರ: ನಡುವಣಾ ಸುಪ್ತಪ್ರಣಮಕೊಂದು ಮನೆ ನಾಲ್ಕು ಕಡೆಯ ಬೀದಿಗಳೊಳ್ಕೈದುಮಿಪ್ಪತ್ತಲಾ (ವಿಶ್ವಸ. ೧-೪-೮). [< ಸಂ. ಸುಪ್ತಪ್ರಣವ]

ಸುಪ್ತವಜ್ರಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು: ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೩೮. ಸುಪ್ತವಜ್ರಾಸನ (ಭಾರದ. ೧೬೭). [ಸಂ.]

ಸುಪ್ತಸ್ಥಿತಿ (ನಾ). ನಿದ್ರಾವಸ್ಥೆ: ಸಾವಿರಾರುವರ್ಷ ಸುಪ್ತಸ್ಥಿತಿಯಲ್ಲಿದ್ದ ವೈಜ್ಞಾನಿಕ ಶೋಧನ . . . ಸತ್ವಶಾಲಿಯಾಯಿತು (ಋಷ್ಯಾರ. ೧೫ ಪೀಠಿಕೆ). [ಸಂ.]

ಸುಪ್ತಾವಸ್ಥೆ (ನಾ). = ಸುಪ್ತಸ್ಥಿತಿ: ಪಂಚಕಲಶಗಳನ್ನು ಸ್ಥಾಪಿಸಿ ಸುಪ್ತಾವಸ್ಥೆಯಲ್ಲಿದ್ದ ಶಿವಕಲೆಯನ್ನು . . . ಜಾಗ್ರದವಸ್ಥೆಗೊಳಿಸಿ . . . ನೆಲೆಗೊಳಿಸುವನು (ಭಾರದ. ೨೪೯); ತಾತ್ಕಾಲಿಕವಾಗಿ ಅದು ತಣ್ಣಗಾದರೂ ಸುಪ್ತಾವಸ್ಥೆಯಲ್ಲಿ ಅಡಗಿಯೇ ಇರುತ್ತದೆ (ಶಿಕ್ಷಿ. ೮೨). [ಸಂ.]

ಸುಪ್ತಿ (ನಾ). ೧. ಮಲಗಿರುವಿಕೆ; ನಿದ್ರೆ: "ಅಕ್ಕಿ ಮುದ್ರಿಸೆ ಸುಪ್ತಿ" (ಪಂಗರಾ. ೯೪-೩); ಮುನ್ನಿನ ನಿಜಲೀಲೆಯೋಲಗದ ಪರ್ಮೆಯ ಮಾತನದೊರ್ಮೆ ಸುಪ್ತಿಯೊಳ್ ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ನೆಗೞ್ಪಿದಂ (ಜಗವಿ. ೩-೫೯); ನಾಳಿನಾಹವ . . . ಅಸದಳವಚಲಬಲಗಾಂಡಿವಿಗೆ ಹರಿಯುದು ಸುಪ್ತಿಯೊಳಗವನ ಉಚಿತದಲಿ ಕೊಂಡೊಯ್ದು ರುದ್ರನ ವಚನದನುವನು ತಿಳಿವನು (ಕುಮಾದ್ರೂ. ೯-೫). ೨. ಮರೆವು; ಅಜ್ಞಾನ: ನಿರುತ ಹಮ್ಮಿದು ತಾಮಸದಲುಱೆ ಬೆರೆಯೆ ಸುಪ್ತಿ ರಜೋಗುಣದಿ ಸಂಚರಿಸ ಸ್ವಪ್ನವು (ಅಮೃತ. ೯-೧೧). ೩. [ಕಾವ್ಯಮೀ] ಮೂವತ್ತುಮೂರು ಸಂಚಾರಿಭಾವಗಳಲ್ಲಿ ಒಂದು: ಲಜ್ಜೆ . . . ಸುಪ್ತಿ . . . ಅಪಸ್ಮಾರಗಳೆಂಬ ಮೂವತ್ತುಮೂಱು ಸಂಚಾರಿಭಾವಂಗಳಿಂ (ವಿಪಕ. ೨೨೭); ನಿದ್ರಾಗಾಢಾವಸ್ಥೆಯೆ ಸುಪ್ತಿ (ಭಾರಮೀ. ೩೪೭). [ಸಂ.]

ಸುಪ್ತೆ (ನಾ). ಮಲಗಿರುವವಳು; ನಿದ್ರಿಸುತ್ತಿರುವವಳು: ಸುಪ್ತೆಯಾದ ಮಹಾಶ್ಚರ್ಯತೆಯಂ ನೋಡಿ ಚಂದ್ರಾಪೀಡಂ ಪಲ್ಲವಶಯನತಳದೊಳ್ ಮಯ್ಯನಿಕ್ಕಿ ಬೀಡಂ ನೆನೆದು (ಕಾದಂಪೂ. ೯೮೪); ಆತನ ಕೀರ್ತಿಲಕ್ಷ್ಮಿಯೆ ಮೂರ್ತಿಮತಿಯಾದಂ ತಾತ್ಮೀಯ ಪ್ರಾಣೇಶ್ವರನ ಮನಕ್ಕೆ ವರೆ ಸೂಳ್ಗೆವಂದು ಸುಪ್ತೆಯಾಗೆ ಯಾಮಿನೀವಿರಾಮ ಯಾಮದೊಳ್ (ಸುಕುಮಾ. ೯-೧೧೪ ವ). [ಸಂ. ಸುಪ್ತಾ]

ಸುಪ್ಪತಿಗೆ 'ಸುಪ್ಪತ್ತಿಗೆ' ನೋ.

ಸುಪ್ಪತ್ತಿಗೆ, ಸುಪ್ಪತಿಗೆ (ನಾ). ಶ್ರೇಷ್ಠವಾದ ಹತ್ತಿಯಿಂದ ಮಾಡಿದ ಮೆತ್ತನೆಯ ಹಾಸಿಗೆ; ತಲ್ಪ: ನಾಸು ಮುಂಚೆ ಸುಪ್ಪತ್ತಿಗೆಯ ಮೇಲೆ ಮಲಗಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ (ಚೆನ್ನವ.ಕ. ೨೫೯-೫೫೯); ಚಿತ್ರೈಸು ಸುಪ್ಪತ್ತಿ[ಪಾಠಾಂ. ರೂಪರಿ] ಗೆಯೊಳು ಬಿಳಿದ ಪಚ್ಚಡಿಸಿ ಮುತ್ತಿಯಾ ಪರಿಜನಂ ಬೆಱಗಾಗೆ (ಸಿದ್ಧರಾ. ೯-೯). ಸುಪ್ಪತಿಗೆ: "ತಳ್ಪಮನೆ ತಳಿಮಮನೆ ಸುಪ್ಪತಿಗೆಗಕ್ಕು ನಾಮಂ" (ಮಂಗರಾ. ೭೦-೧೫); ನೆಲವಾಸು ತಂಬುಲಂ ಪೆರ್ಮೊಲೆಗಳ ಸಱಿಮಿಂಡಿ ಸುಪ್ಪತಿಗೆ ಧವಳಾರಂ (ಸೂತ್ರಸು. ೧೦-೨೮೯); ಸುವರ್ಣದಡ್ಡಣೆ ಸುಪ್ಪತಿಗೆ ರನ್ನವಿಟ್ಟರ ರತ್ನಗಂಬಳಿ ತಲೆಗಿಂಬ ಹೊನ್ನಾಂ ಬರನಿತ್ತ ಮಗಗೆ (ಮೋಹತ. ೧೫-೧೭). [?./ ಮರಾ. ಸುಪತೀ, ಸುಪೇತೀ]

ಸುಪ್ಪತ್ತಿಗೆಹಿಂಡಿಬೇರು (ನಾ). ಒಂದು ಬಗೆಯ ಮೂಲಿಕೆ: ಹೊನ್ನಗನ್ನೆಬೇರು ಕಿರಕುಸಾಲೆಯ ಬೇರು ಸುಪ್ಪತ್ತಿಗೆಹಿಂಡಿಬೇರು . . . ೀವಂ ಕಷಾಯವಿಕ್ಕಿ . . . ಸೌತೆಯ ಬೀಜ ೀಷ್ಮನು ಅರದು ಕದಡಿ ಕುಡಿಯಲಾಕ್ಷಣವೆ ಮೂತ್ರಬಿಡುವುದು (ಸಹ. ೬೭೪).

[ಸುಪ್ಪತ್ತಿಗೆಹಿಂಡಿ + ಬೇರು (< ಬೇರ್)]

ಸುಪ್ಪನಾತಿ, ಸುಪನಾತಿ (ನಾ). ಬೆಡಗುಗಾತಿ; ಥಳುಕಿನವಳು: ನಿಮಗಿಷ್ಟೂ ತಿಳಿಯುವುದಿಲ್ಲವೇ? ಆ ಸುಪ್ಪನಾತಿಯೇ ಶಾಲೆಯ ವೈಷಮ್ಯದ ಮೂಲ (ಕಾಯಿಕ. ೧೧೯). ಸುಪನಾತಿ: ಸೋಬಾನೆ ಎನ್ನುವುದಕ್ಕೆ ಕೂಡ ಕೈಲಾಗದೇನರೆ ಸುಪನಾತೀರ ನಾನಲ್ಲೂ ಕಾಣೆ ನಮ್ಮವ್ವ (ಮಾಮಠಾ. ೬೭). [?./ ತೆಲು. ಚುಪ್ಪನಾಕ, ಚುಪ್ಪನಾತಿ, ಸುಪ್ಪನಾತಿ]

ಸುಪ್ಪರನ, ಸೂಪರಣ (ನಾ). ಒಳ್ಳೆಯ ರೆಕ್ಕೆಯುಳ್ಳುದು; ಗರುಡ: ಅಪ್ಪಾರ ಮಹಿಮ ಅನುಪಮ್ಯಚರಿತ ಸುಪ್ಪಾರಸನ್ನ ಸುಪ್ಪರನವಾಹನ್ನ ಅಪ್ಪಾ ತಿಮ್ಮಪ್ಪ ಎನ್ನಪ್ಪ (ತೀರ್ಥಮ. ೯೩). ಸೂಪರಣ: ಪರಣದ್ಯಾಸಿಗೆಯಲ್ಲಿ ಮಲಗಿದ ಶಿಶುವ ಸೂಪರಣಗಳು ನೋಡುತಾಗ ಕಿರಣ ಬೀಳದಲೆ ಸೂರ್ಯಗೆ ಮರೆಮಾಡುತ ತಮ್ಮ ರೆಕ್ಕೆ ಪಸರಿಸುತಾಗ (ಕರ್ನಾಕ. ೨೯೪). [< ಸಂ. ಸುಪರ್ಣ]

ಸುಪ್ಪಲ್ (ನಾ). "ಉಪ್ಪುಹಾಕಿದ ಖಾದ್ಯ; ಚಾಕಣ" (ಪಂಪದೀ. ೪೯೦): ಅರಾತಿನಾಥರಡಗಂ ಸುಪ್ಪಲ್ಲಿ ಕೆನ್ನೆತ್ತರಂ ಕೆನೆಗೊಂಡಾಱಿದ ಪಾಲ್ಲೆ ದೊಂಡೆಗರುಳಂ ಕರ್ಬಿಂಗೆ ಲೆಕ್ಕಕ್ಕೆ ತಂದು (ಪಂಪಭಾ. ೧೨-೧೬೦). 'ಉಪ್ಪಡ್ಡೆ' ಪರಾ.

[ಸುಪ್ಪು (< ಉಪ್ಪು) + - ಅಲ್/ತುಳು. ಉಪ್ಪುಡ = ಉಪ್ಪು ಹಾಕಿದ ಮೀನು; ಕೋರಾ. ಸುಪ್; ನಾಯ್ಕಿ. ಸುಪ್ಸ್; ಪರ್ಜಿ. ಚುಪ್; ಗಡಬ. ಸುಪ್ = ಉಪ್ಪು]

ಸುಪ್ಪವುಗು (ನಾ). ಒಂದು ಬಗೆಯ ಖಾರದ ಕಡುಬು: ಬಿಳಿಯ ಸೊಜ್ಜಿಗೆಯ ಹುಡಿ ಬೀಸಿದಕ್ಕಿಯ ಹಿಟ್ಟುಗಳನು ಸೋದಿಸಿಯವಂ ಸರಿಗೂಡಿ ಬಿಸಿಯುದಕದೊಳು ಕದಡಿ ಬೆಣ್ಣೆಯಂ ಜಡಿದರಿಸಿನವಯಿಕ್ಕಿ ಉಳ್ಳಿ ಸುಂಟಿಗಳ ಹಾಕಿ ಬಳಿಕ ಬೆರಳುಗಳನದ್ದಲು ಕದಿರ ತೋರದೊಳಗೆಳೆಯಾಗಲಾಯೆಳಿಗಳಂ ಕಾಯ್ಸ ತಿಳಿದುಪ್ಪದೊಳಗೆ ನಾಲ್ವೆದು ಸೂಳ್ ಬಿಡೆ ಗೀಜಗನ ಗೂಡಿನಂತೆ ಸುಪ್ಪವು[ಪಾಠಾಂ. ಸುಪ್ಪಯವ]ಗಾದುದು (ಸೂಪಶಾ. ೧-೪೨). [ಸುಪ್ಪು (< ಉಪ್ಪು) + ಅವುಗು]

ಸುಪ್ಪಾಣಿ 'ಸುಪಾಣಿ' ನೋ.

ಸುಪ್ಪಾಣಿಮಣಿ (ನಾ). ಒಳ್ಳೆಯ ಹರಳು; ಶ್ರೇಷ್ಠವಾದ ರತ್ನ: ಚಪ್ಪ ನೋಡದ ಸುಪ್ಪಾಣಿಮಣಿಯ ನೋಡಿ (ಜಿನರಾ. ೧-೫೯). [ಸುಪ್ಪಾಣಿ (< ಸುಪಾಣಿ) + ಮಣಿ]

ಸುಪ್ಪಾಣಿಮುತ್ತು (ನಾ). ಶ್ರೇಷ್ಠವಾದ ಮುತ್ತು, — ಮೌಕ್ತಿಕ: ಸುಪ್ಪಾಣಿಮುತ್ತಿಟ್ಟು ನೋಡುವೆ (ಪುರಂದ. ೧-೮೨-೨); ಚಿಪ್ಪಿನೊಳಗೆ ಬಿದ್ದ ಸ್ವಾತಿಯ ಸೀರ್ವನಿ ಸುಪ್ಪಾಣಿ ಮುತ್ತಾಗುವಂತೆ (ಭರಚ. ೩-೪೮); ಮಾಣಿಕವ ತತ್ತಿಸಿದ ರತ್ನಮಯ ಭಿತ್ತಿ ಕಟ್ಟಾಣಿ ಬಜ್ಜರಗಂಬ ಪವಳಬೋದಿಗೆಯು ಸುಪ್ಪಾಣಿಮುತ್ತಿನ ಲೋವೆ ಮರಕತದ ಪೊದಕೆ (ವಂಕಾರಾ. ೧-೨೧-೪). [ಸುಪ್ಪಾಣಿ (< ಸುಪಾಣಿ) + ಮುತ್ತು]

ಸುಪ್ಪಾಣಿಮೌಕ್ತಿಕ (ನಾ). = ಸುಪ್ಪಾಣಿಮುತ್ತು: ತಿಪ್ಪೆಯ ಮೇಲೊಂದು ಸುಪ್ಪಾಣಿಮೌಕ್ತಿಕವಿಪ್ಪುದ ಮಗನೆ ಲೋಕದೊಳು (ಕೂಡಲ. ೩-೧೦).

[ಸುಪ್ಪಾಣಿ (< ಸುಪಾಣಿ) + ಮೌಕ್ತಿಕ]

ಸುಪ್ರಣೀತ (ನಾ). ಚೆನ್ನಾಗಿ ಸಂಸ್ಕಾರಗೊಳಿಸಿದ ಅಗ್ನಿ; ಉತ್ತಮವಾದ ಮಂತ್ರಾಗ್ನಿ: ಬಳಸಿದರು ಪರಿಮಧ್ಯಮಾನಾನಳನನಗ್ಗದ ಸುಪ್ರಣೀತಾನಳನ ನಾಹವನೀಯಗಾರುಹಪತ್ಯ ದಕ್ಷಿಣದ ಜ್ವಲಿತವೆನೆ (ಕುವ್ಯಾಸ. ೭-೩೧). [ಸಂ.]

ಸುಪ್ರತಿಷ್ಠ (ನಾ). [ಜೈನ] ಅರುವತ್ತುಮೂರು ೀಂದ್ರಕಗಳಲ್ಲಿ ಒಂದು: ಚಂದ್ರ ಸುಪ್ರತಿಷ್ಠಮೆಂಬ ಕೂಟಾಷ್ಟಕಂಗಳೊಳ್ ರಮಿಯಿಸುವ . . . ಎನ್ನಿರುಂ ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮಂ ಪಿಡಿಯಲುಂ (ಆದಿಪು. ೭-೩ ವ). 'ಸುಪ್ರಬುದ್ಧ' ಪರಾ. [ಸಂ.]

ಸುಪ್ರತಿಷ್ಠಕ (ನಾ). [ಜೈನ] ಅಷ್ಟಮಂಗಲದ್ರವ್ಯಗಳಲ್ಲಿ ಒಂದು; ಪೂಜಾ ದ್ರವ್ಯಗಳನ್ನಿಡುವ ಒಂದು ಬಗೆಯ ಪಾತ್ರೆ: ಧೃಜದರ್ಪಣಚಂಚಚ್ಚಮರಜ ಮಣಿಭೃಂಗಾರಸುಪ್ರತಿಷ್ಠಿತಕಷ್ಟಕತಾಳವ್ಯಜನಕಳಶಾತಪತ್ರಂ ತ್ರಿಜಗತ್ಪತಿಗಷ್ಟಮಂಗಳಂ ಸೊಗಯಿಸುಗುಂ (ಅಜಪು. ೪-೪೧). [ಸಂ.]

ಸುಪ್ರತಿಷ್ಠಿತ (ನಾ). ಒಳ್ಳೆಯ ಸ್ಥಾನಮಾನದಲ್ಲಿರುವವನು; ಉತ್ತಮವಾದ ಸ್ಥಿತಿವಂತ: ಅಭಿಜಾತರುತ್ತಮರನ್ನತ್ತಮಾವರು ಗಣ್ಯರು ಸುಪ್ರತಿಷ್ಠಿತರು (ಇಂಚಾಪ. ೩೪-೫೬). [ಸಂ.]

ಸುಪ್ರತಿಷ್ಠೆ (ನಾ). ೧. ಒಳ್ಳೆಯ ೀರವು; ಉತ್ತಮವಾದ ಸ್ಥಿತಿ. ೨. ಒಳ್ಳೆಯ ಯಶಸ್ಸು; ಉತ್ತಮವಾದ ಕೀರ್ತಿ. ೩. ದೇವಾಲಯದಲ್ಲಿ ದೇವತಾಮೂರ್ತಿಯನ್ನು ಸ್ಥಾಪಿಸುವುದು: ಶ್ರೀಸತೀಶನ ಸುಪ್ರತಿಷ್ಠೆಗೆ ಭೂಸುರಾಮಾತ್ಯಾದಿ ಪರಿಜನವೆಯ್ದೆ ಬಂದಿರಲು (ಬಿಜಪು. ೫೪-೧). ೪. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ೀಪ್ಪತ್ತಾರು ಛಂದಸ್ಸುಗಳಲ್ಲಿ ಐದನೆಯದು; ಪ್ರತಿಪಾದದಲ್ಲಿಯೂ ಐದಕ್ಷರಗಳಿರುವ ವರ್ಣವೃತ್ತಗಳ ಸಮೂಹ: "ಉಕ್ತ ಅತ್ಯುಕ್ತ ಮಧ್ಯಮ ಪ್ರತಿಷ್ಠ ಸುಪ್ರತಿಷ್ಠೆ ಗಾಯತ್ರಿ . . . ಉತ್ಕೃತಿಗಳೆಂದಿಪ್ಪವಿಪ್ಪತ್ತಾಱು ಛಂದಂಗಳಕ್ಕುಂ" (ಮಂಗರಾ. ೧೦೬-೧೦೮); ಉಕ್ತೆ ಅತ್ಯುಕ್ತೆ ಮಧ್ಯೆ ಪ್ರತಿಷ್ಠೆ ಸುಪ್ರತಿಷ್ಠೆ ಗಾಯತ್ರಿ ಉಷ್ಣಿಕ್ . . . ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಂಬು. ೧-೪೬ ವ). [ಸಂ. ಸುಪ್ರತಿಷ್ಠಾ]

ಸುಪ್ರತೀಕ (ನಾ). ೧. ಒಳ್ಳೆಯ ಆಕಾರವನ್ನು ಹೊಂದಿರುವುದು; ಉತ್ತಮವಾದ ರೂಪವಿರುವುದು. ೨. ಸುಂದರನಾದವನು; ಬೆಲುವ: ಸುಪ್ರತೀಕನನಧಿಕ ಸನ್ನಾಹಪ್ರತಾಪನನಸಮರುದ್ರನಿಜಪ್ರತಿಮನಂ ತನ್ನಿ (ಬಿಜಪು. ೫೯-೩೪). ೩. ಎಂಟು ದಿಗ್ಗಜಗಳಲ್ಲಿ ಒಂದು; ಈಶಾನ್ಯದಿಕ್ಕಿನ ಆನೆ: "ಐರಾವತಃ, ಪುಂಡರೀಕಃ . . . ಸುಪ್ರತೀಕಃ - ಈ ೮ ಮೂಡಣಂ ಕ್ರಮದಿನಿರ್ದ ದೆಸೆಯಾನೆಗಳ್" (ಹಲಾಯು. ೧೮-೧೦೪); ಐರಾವತ . . . ಸುಪ್ರತೀಕವೆಂಬ ದಿಗ್ಗಜಗಳೆಂಟು (ವಿವಿಂ. ೧೭೭). ೪. ಭಗದತ್ತನ ಆನೆ: ಹರಿದುದಗ್ಗದ ಸುಪ್ರತೀಕದ್ವಿರದ ಭಗದತ್ತಾಂಕನವನಿಯೊಳುರುಳಿದನು (ಕುವ್ಯಾದ್ರೋ. ೩-೭೭). [ಸಂ.]

ಸುಪ್ರತೀಕಪತಿ (ನಾ). [ಜೈನ] ಈಶಾನಕಲ್ಪದ ಒಡೆಯ: ಸುಪ್ರತೀಕಪತಿ ಸಮೆಯಿಸಿದ ವಿಶಾಲಹ್ರೋದಶಾಲೆಗಳಿನಿಸಿದ ಚೆಂಬೊನ್ನ ಕಲಶದ ಮಾಡಶಾಲೆಗಳುಮಂ ನೋಡಿ ಪೊಗಟ್ಟು (ಶಾಂತಿಪು. ೩-೧೯ ವ). [ಸಂ.]

ಸುಪ್ರತೀಕಸಮನ್ವಿತೆ (ನಾ). ೧. ಸುಪ್ರತೀಕವೆಂಬ ಆನೆಯಿಂದ ಕೂಡಿದುದು. ೨. ಒಳ್ಳೆಯ ಅವಯವಗಳಿಂದ ಕೂಡಿದವಳು. ೧, ೨: ಈಶಾನದಿಸೆಯಂತೆ ಸುಪ್ರತೀಕಸಮನ್ವಿತೆಯುಂ (ರಾಜಶೇ. ೭-೭೧ ವ). [ಸಂ. ಸುಪ್ರತೀಕಸಮನ್ವಿತಾ]

ಸುಪ್ರಥಿತ (ಗು). ಬಹಳ ಪ್ರಸಿದ್ಧವಾದ; ಅತಿಖ್ಯಾತಿಯುಳ್ಳ: ಪ್ರಥಮದಿಗ್ಯನಿತೆಯ ಜಠರದೊಳಿರ್ದು ಸುಪ್ರಥಿತಸೂರಿಯನುದಿಪಂತೆ (ಮೋಹತ. ೧೭-೧೭). [ಸಂ.]

ಸುಪ್ರಬಂಧ (ನಾ). ಒಳ್ಳೆಯ ಪ್ರಬಂಧ; ಶ್ರೇಷ್ಠವಾದ ಪ್ರಬಂಧ: ತೊಂತಗವಿತೆಯ ಗುಣ್ಕೇಂ ವಿಹಿತ ನಿಜಲಲಿತ ಮಂಜುಲ ಮಹಿತಾತುಳ ಸುಪ್ರಬಂಧದೊಳ್ಪಿಂಗಣೆಯೇ (ಹಮ್ಮೀರ. ೧-೨೫). [ಸಂ.]

ಸುಪ್ರಬುದ್ಧ (ನಾ). [ಜೈನ] ಅರುವತ್ತುಮೂರು ಇಂದ್ರಕಗಳಲ್ಲಿ ಒಂದು: ತತ್ಕುಳದರಿಷ್ಟ ಪ್ರಾಗ್ವಿದ್ದೇಶದವೋಳ್ ಸುಪ್ರಬುದ್ಧ ರುಂದ್ರ ವಿಮಳ . . . ಕೂಟಾಷ್ಟಕಂಗಳೊಳ್ ರಮಿಯಿಸುವ . . . ಎಣ್ಬರುಂ ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮಂ ಪಿಡಿಯಲುಂ (ಆದಿಪು. ೭-೩ ವ); ೧. ಋತು . . . ೫೫. ಸುಪ್ರಬುದ್ಧ . . . ಅಱುವತ್ತಮೂಱು ಇಂದ್ರಕಂಗಳ ಪೆಸರ್ಗಳ್ (ತತ್ತ್ವಪ್ರ. ೨೧೩). [ಸಂ.]

ಸುಪ್ರಭಾತ (ನಾ). ೧. ಪ್ರಶಸ್ತವಾದ ಬೆಳಗಿನ ಸಮಯ; ಸುಂದರವಾದ ಉಷಃಕಾಲ: ಸುಪ್ರಭಾತ ಪಠನಧ್ಯಾನವನು ವಿಪ್ರರ ಮಂತ್ರಾಶೀರ್ವಾದವನು . . . ಆಲಿಸಿ ಕೇಳೀಳಿಲೆ ಸುಕುಮಾರ (ಪಚಿಕಾ. ೧೨-೩೦ ಗದ್ಯ); ಸುಪ್ರಭಾತದ ಸಮಯ ಪರಿಯಂತ ಪ್ರಹುಡನುಲಿದಾಗ ಬಸವನ ಸುಪ್ರತಿಷ್ಠಯಗೊಳಿಸಿದೆಲ್ಲರ ಸನ್ಮತಿಯೊಳರಸು (ಬಿಜ್ಜಳ. ೭೬.-೨). ೨. ಬೆಳಗಿನ ಕಾಲದಲ್ಲಿ ಮೊದಲ ಸಾರಿ ಕಂಡಾಗ ಹೇಳುವ ಶುಭಹಾರೈಕೆ: ಹೊತ್ತಿಗ ಮುಂಚೆ ಎದ್ದು ಅವನಿಗೆ ಸುಪ್ರಭಾತ ಹೇಳಬಾರದೆ (ನಿಶಬಾ. ೪೧); ಅಲೆಕ್ಸಿ ಪರದೆಯಿಂದಾಚೆಗೆ ಬಂದು ಅವರಿಗೆ ಸುಪ್ರಭಾತ ಬಯಸಿದನು (ಯೋಧಪ್ರ. ೨೦). ೩. ಬೆಳಗಿನ ಕಾಲದಲ್ಲಿ ಮಾಡುವ ಪ್ರಾರ್ಥನೆ; ಉಷಃಕಾಲದ ಪ್ರಾರ್ಥನೆ. [ಸಂ.]

ಸುಪ್ರಭಾತಸಮಯ (ನಾ). ಬೆಳಗಿನ ಕಾಲ; ಉಷಃಸಮಯ: ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ ತಪ್ಪುವುವು ಅಪಮೃತ್ಯು ಕಾಲಕರ್ಮಂಗಳಯ್ಯಾ (ಬಸವ. ೧೭೭); ಸುಪ್ರಭಾತಸಮಯದೊಳ್ ಶಿವಾರ್ಚನೆಯಂ ಮಾಡಿ ಸಂಗ್ರಾಮಸನ್ನದ್ಧನಾಗಿ ನಡೆಯಲ್ ಪ್ರಾರಂಭಿಸಿ (ಪಮ್ಮಾರ. ೩-೨೬ ವ). [ಸಂ.]

ಸುಪ್ರಭೆ (ನಾ). ೧. ತೀಕ್ಷ್ಣಪ್ರಕಾಶ; ಹೊಳಪು: ಸುಪ್ರಭೆಯಿನೆಸವ ಮಣಿರಚನಾ ಪ್ರಥಿತಮನುದ್ಧಜಿನಗೇಹಮನಾ ವೈಶ್ಯಪ್ರಭು ಬಲವರೆ ಕಂಡಂ (ನೇಮಿಪು. ೪-೭೮). ೨. ಅಗ್ನಿಯ ಏಳು ನಾಲಗೆಗಳಲ್ಲಿ ಒಂದು: ''ಹಿರಣ್ಯಾ . . . ಸುಪ್ರಭಾ . . . ಬಹುರೂಪಾ — ಈ ೭ ಅಗ್ನಿಯ ನಾಲಗೆಗಳ್'' (ತಲಾಯು. ೧೩-೭೮). [ಸಂ. ಸುಪ್ರಭಾ]

ಸುಪ್ರಮೇಯ (ನಾ). ಒಳ್ಳೆಯ ಸಂದರ್ಭ; ಉತ್ತಮವಾದ ಸನ್ನಿವೇಶ: ಕೊಡುವ ಪದ್ಮಕೆ ಸುಪ್ರಮೇಯದ ಗಡಣಕಬುಜಭವಾದಿ ವಿಭುಗಳು ಬಿಡಿಸಲರಿದೆನಿ ಪತುಳತಾರ್ಕಿಕಜನಗಳೊಪ್ಪಿದರು (ಕುವ್ಯಾಉ. ೮-೩೮); ಅಱಿಯಲ್ಪಡುವಡೆ ನೀನಱಿ ಸುಪ್ರಮೇಯಾಖ್ಯವಱಿವಾತನಾ ಪ್ರಮಾತೃವೆನಿಕ್ಕು (ಪರಮೋ. ೩-೧೭-೪). [ಸಂ.]

ಸುಪ್ರಯೋಗಿಸು (ಕ್ರಿ). ಚೆನ್ನಾಗಿ ಕೂಡಿಸು,—ಹೊಂದಿಸು,—ಬೆರಸು: ಬಪ್ಪುದು ಬಹುದಲ್ಲದೆ ಮಾಣ್ಪುದೆ ಗಟ್ಟದುಪ್ಪು ಬೆಟ್ಟದ ನೆಲ್ಲಿಕಾಯ್ಗೆ ಸುಪ್ರಯೋಗಿಸಿದಂತೆ ಸುಗುಣಾನಿರುದ್ಧಗೆ ಕಪ್ಪುರಗಂಧಿ ಸೇರಿದಳು (ಮೋಹತ. ೪೧-೪೫). [ಸ್ಕೃ - + ಪ್ರಯೋಗಿಸು]

ಸುಪ್ರವ್ಯಾಜರ (ನಾ). ಮೇಲ್ವಿಚಾರಕ; ಮುಖ್ಯಸ್ಥ: ಸುಪ್ರವ್ಯಾಜರ ಸ್ಥಾನ ಪರಿಪಾಲನೆ ಮಾಡುವದಕ್ಕಾಗಿಯೂ (ರಾಜೇಂದ್ರ. ೧೦೦). [<— ಇಂ. Supervisor]

ಸುಪ್ರಸನ್ನ (ನಾ). ಬಹಳ ಸಂತೋಷಗೊಂಡವನು: ಅಂತು ಮೂರ್ಧಿಯಿಂದೆಂತಾನುಮೆಚ್ಚುತ್ತು ಕದಡಿ ತಿಳಿದ ಮಾನಸಸರೋವರದಂತೆ ಸುಪ್ರಸನ್ನನುಂ (ಶಾಂತಿಪು. ೨-೨೫ ವ); ಸುಪ್ರಸನ್ನರು ನೀವು ನಿಮ್ಮುಭಯಪ್ರಕಟತರವಚನಪೀಯೂಷ ಪ್ರಮಥನಾಭಾವದಿಂದೀ ಶಿವಗಣಾವಳಿಯು (ಬಸವ. ೩೬-೪೮). [ಸಂ.]

ಸುಪ್ರಸನ್ನತೆ (ನಾ). ಬಹಳ ಸಂತೋಷದಿಂದಿರುವುದು,—ಉಲ್ಲಾಸವಾಗಿರುವುದು: ಶ್ರೀರಾಮನೊರ್ವನೆಯ ತನ್ನೊಸಗೆದೇರಿಳಿದು ನಡೆದಂ ಶರತ್ಕಾಲಸುಪ್ರಸನ್ನತೆಯಂತೆವೋಲ್ (ಶ್ರೀರಾಮಾ. ೫೨-೬೬೯). [ಸಂ. ಸುಪ್ರಸನ್ನತಾ]

ಸುಪ್ರಸಾದ (ನಾ). ೧. ಹೆಚ್ಚಿನ ಕರುಣೆ; ಅಪಾರ ದಯೆ. ೨. [ವೀಶೈ] ಗುರು, ಲಿಂಗ, ಜಂಗಮಕ್ಕೆ ಎಡೆಮಾಡಿ ಅವರಿಂದ ಅನುಗ್ರಹವಾಗಿ ಬಂದುದೆಂದು ಸ್ವೀಕರಿಸುವ ಭೋಜ್ಯಪದಾರ್ಥ: ಹಸನಹುದು ಭಕ್ತರ ಕರುಣವುಂ ವಸುಧೆಯೊಳು ಬರದರ್ಗ ಸಂಪ್ರಾಪ್ತಿಸುವುದಾದ್ಯರ ಸುಪ್ರಸಾದಾನಂದಸಂಸಿದ್ಧಿ (ಬಸವ. ೬೧-೪೦). [ಸಂ.]

ಸುಪ್ರಸಾದಿ (ನಾ). [ವೀಶೈ] ಪ್ರತಿಯೊಂದು ಭೋಗಪದಾರ್ಥವನ್ನು ಮೊದಲು ಲಿಂಗಕ್ಕೆ ಅರ್ಪಿಸಿ, ಆಮೇಲೆ ಅದನ್ನು ಭಕ್ತಿಪೂರ್ವಕವಾಗಿ ಪ್ರಸಾದರೂಪದಲ್ಲಿ ಸ್ವೀಕರಿಸುವವನು: ಚೆನ್ನಬಸವನ ಸುಪ್ರಸಾದಿಯೊ ಹೊನ್ನತಂದೆಯ ಕಂಬಿಕಾಱನೊ (ಬಸವ. ೪೭-೩೭). [ಸಂ. ಸುಪ್ರಸಾದಿನ್]

ಸುಪ್ರಸಿದ್ಧ (ಗು). ೧. ಬಹಳ ಖ್ಯಾತಿಯಾದ; ಅತಿ ಪರಿಚಯದ: ಪೆಸರೊಳಸಂಭವಮೆನಿಸುಗುಮಸಂಭವಂ ತದ್ವಿಶೇಷಣಂ ಪೃಥಗರ್ಥಂ ಪೊಸಯಿಸೆ ಭಿನ್ನರಸಂ ಸುಪ್ರಸಿದ್ಧವಾಚ್ಯದೊಳದಲ್ತೆ ವಕ್ರೋಕ್ತಿ ಕರಂ (ಕಾವ್ಯಾವ. ೭೭೫); ಜರ್ಮನಿಯ ಸುಪ್ರಸಿದ್ಧ ದಾರ್ಶನಿಕ . . . ಉಪನಿಷತ್ತುಗಳ . . . ಪರಿಚಯಮಾಡಿಸಿದನು (ಭಾರದ.೪೬). (ನಾ). ೨. ಖ್ಯಾತಿಯಾದುದು; ಹೆಸರುವಾಸಿಯಾದುದು: ಜನಕಮಹಾರಾಜನ ನಿಷ್ಕಾಮಯೋಗ ಸುಪ್ರಸಿದ್ಧವಿದೆ (ಧರ್ಮಸಾ. ೧೩೫). ೩. ಬಹಳ ಖ್ಯಾತನಾದವನು; ಕೀರ್ತಿವಂತ: ಕುರುವಂಶನಾಮದೊಂದರಸುಮನೆತಸಮಿಹುದು ಬಲ್ಲೆಯೇಂ ಸುಪ್ರಸಿದ್ಧನು ನೀನು (ಚಿತ್ರಾಂಗ. ೧೩-೩೫೮). [ಸಂ.]

ಸುಪ್ರಾಸುಕ (ಗು). [ಜೈನ] ಜೀವಜಂತುಗಳಿಲ್ಲದೆ ಪ್ರಶಸ್ತವಾಗಿರುವ; ಬಹಳ ಶುದ್ಧವಾದ: ಅಂತಾ ಮಹಾನುಭಾವನಾ ಮಹಾಕಾಳದೊಳ್ ಸುಪ್ರಾಸುಕಪ್ರದೇಶಮಂ ಕಂಡು (ಸುಕುಮಾ. ೧೨-೧೪ ವ). [ಸ್ಕೃ - + ಪ್ರಾಸುಕ]

ಸುಪ್ರೀತ (ನಾ). =ಸುಪ್ರಸನ್ನ: ಸುಪ್ರೀತನಾದೆನಾಂ ಶ್ಯೆಪ್ರಭು ನಿಮಗಂದಗಾಗ್ರದೊಳ್ ಹರಿ ನುಡಿದಂ (ಜಗಮ. ೪-೪೩). [ಸಂ.]

ಸುಪ್ರೀತಿ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಗರ್ಭಿಣಿಗೆ ಐದನೆಯ ತಿಂಗಳಲ್ಲಿ ಮಾಡಬೇಕಾದ ಸಂಸ್ಕಾರ: ದ್ಯಾದಶಾಂಗಂಗಳೊಳ್ ಪೇಟ್ಟುದಾನ ಪ್ರೀತಿ ಸುಪ್ರೀತಿ ಧೃತಿ ಮೋದ . . . ಎಂಬ ಯ್ತತ್ತುಮೂಱು ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ವ); ೫ ಅಥವಾ ೭ ಯೆಳೆಯುಳ್ಳ ಗೋಧಿಯಿಂ ನಿರ್ಮಿತವಾದ ಸರವಂ ಆ ಗರ್ಭವತಿಯ ಉದರದ ಮೇಲೆ ಬೀಳುವಂತೆ ಕಂಠದೊಳ್ ಪಾಕಿಸುವುದೇ ಸುಪ್ರೀತಿಯೆಂಬ ಮೂರನೆಯ ಕರ್ಮ (ಪುರುಚ. ೧೯೮). [ಸಂ.]

ಸುಪ್ರೌಢಿ (ನಾ). ಒಳ್ಳೆಯ ನೈಪುಣ್ಯ,—ಜಾಣ್ಮೆ: ಅಡಸಿದಾಪತ್ತಿನಲಿ ಧೈರ್ಯವ ಹಿಡಿವುದೇ ಸುಪ್ರೌಢಿ (ಕುವ್ಯಾದ್ಯೋ. ೭-೨೩); ಸಕಲಜನಕೆ ವ್ಯಾಪಿಸಿದ ಸುಪ್ರೌಢಿ ಮಱೆಯೆ ಕನ್ನಡದ ಭಾಷಾಪದ್ಧತಿಯೊಳ್ (ಕ್ರಮಿಭಾ. ೩೪-೩೧). [ಸಂ.]

ಸುಫರ್ದು 'ಸುಪರ್ದು' ನೋ.

ಸುಫಲ (ಗು). ೧. ಒಳ್ಳೆಯ ಫಲವನ್ನು ಹೊಂದಿರುವ. ೨. ತುಂಬ ಹಣ್ಣುಗಳಿಂದ ಕೂಡಿದ. (ನಾ). ೩. ಒಳ್ಳೆಯ ಹಣ್ಣು; ಉತ್ತಮವಾದ ಫಲ: ನಾನಾ ಜಾತೀಯವುಪ್ಪ ಸುಫಲತತಿಯನೀಯಲ್ಕೆ ಹಸ್ತಂಗಳಂ ತನ್ನಾನಂದೋದ್ರೇಕದಿಂದೆತ್ತಿ (ಚಾಧಪ್ರ. ೧-೧೦೪). [ಸಂ.]

ಸುಬ (ನಾ). ಒಳ್ಳೆಯದು; ಶುಭ; ಮಂಗಳ: ಶುಭ-ಸುಬ, ಶುಂಭ—ಸುಂಬ (ತಮದ. ೨೫೫ ಪ್ರಯೋ); ಕುಂಕುಮಗಂಧ ಸುಬದಿಂದ ತಂದೀವಿ ನಾವೆಲ್ಲರು (ಅೋಕಗೀ. ೬೬). [< ಸಂ. ಶುಭ./ ಪ್ರಾ. ಸುಭ]

ಸುಬಂತ (ನಾ). [ವ್ಯಾಕ] ನಾಮಪದ; ನಾಮವಾಚಕ: 'ಸುಬಂತಪದ' ಪರಾ. [ಸಂ.]

ಸುಬಂತಪದ (ನಾ). = ಸುಬಂತ: ಸುಬಂತಪದವು ನಾಮಪದವು, ತಿಙಂತಪದವು ಕ್ರಿಯಾಪದವು (ಹೂನುಗ. ೫). [ಸಂ.]

ಸುಬಕ (ನಾ). ಕೆನ್ನೆ; ಗಲ್ಲ: ಉತ್ಸಹದಿ ಶ್ರೀಕೃಷ್ಣರಾಯ ಮೊಮ್ಮಗನ . . . ಕರಕಮಲದೀ ತತ್ಸುಬಕಮಂ ಪಿಡಿದು ಮುಂಡಾಡಿ (ನವಮೋ. ೧೫-೬೦). [< ಸಂ. ಚುಬುಕ]

ಸುಬಗ 'ಸೊಬಗ' ನೋ.

ಸುಬಗು 'ಸೊಬಗು' ನೋ.

ಸುಬಟ್ಟಕ್ಕರ (ನಾ). ಅಷ್ಟಾಕ್ಷರಗಳಿಂದ ಕೂಡಿದ ಶುಭಮಂತ್ರ; ನಮಸ್ಕಾರ ಮಂತ್ರ: ಸವಣಂಗೆ ಸುಬಟ್ಟಕ್ಕರಮಂ ತೋಱಿದರೆಂಬಂತೆನ್ನ ಜಾತಿಸ್ಮರಮನಱ್ದು (ಧರ್ಮಾಮೃ. ೮-೪೭ ಅಡಿಟಿ). [ಸುಬ + ಅಟ್ಟಾ (P < ಪ್ರಾ. ಅಟ್ಠ) + ಅಕ್ಕರ]

ಸುಬದ್ಧಿಸು (ಕ್ರಿ). ಚೆನ್ನಾಗಿ ರಚಿಸು,—ನಿರ್ಮಿಸು: ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಬಾಗಿ ಬಿದ್ದ ಮರನ ತಂದು ಬದ್ಧಿಯ ಕಾರುಕನ·ಕೈಯಲ್ಲಿ ಸುಬ[ಪಾಠಾಂ. ಬು]ದ್ಧಿಸಿ

ಬಂಧಿಸಿ ಸುದ್ದಯಿಸಿ ಅನಾದಿ ಎಂಬ ಹುಗಿಲು ತೆಗೆದು (ಸರ್ವಜ. ೧೦೫-೫೬೭; ಸಕವ. ೯. III, ೪೭-೯೮ ನೋ). [?]

ಸುಬರ್ದು 'ಸುಪರ್ದು' ನೋ.

ಸುಬಲ (ನಾ). ಬಹಳ ಶಕ್ತಿಯುತವಾದುದು; ಸಮರ್ಥವಾದುದು: ಇದು ಸುಬಲವಿದಬಲವಿದಾಮ್ನಾಯದ ಸುನಿಶ್ಚಯ ನೀತಿಕಾರ್ಯ (ಕುಮ್ಯಾಉ. ೩-೭೨). [ಸಂ.]

ಸುಬಾದಾರ 'ಸುಬೇದಾರ' ನೋ.

ಸುಬಾಹು (ನಾ). ೧. ಶಕ್ತಿಯುತವಾದ ಮತ್ತು ಸುಂದರವಾದ ತೋಳುಗಳನ್ನು ಹೊಂದಿರುವುದು. ೨. ಒಂದು ನದಿ; ಶೋಣನದಿ: "ನರ್ಮಲೆ ಹಿರಣ್ಯ ಸುಬಾಹುವೆನೆ ಶೋಣನದಿಗೆ ಶೋಭಿಸುವ ನಿಜನಾಮಮಕ್ಕುಂ" (ಮಂಗರಾ. ೧೨೨-೧೧). ೩. ಒಬ್ಬ ರಾಕ್ಷಸನ ಹೆಸರು: ಮಾರೀಚ ಖಿನವಿಕ್ರಮ ಸುಬಾಹುಗಳೆಂಬ ರಾಕ್ಷಸರಮಣರಾ ಮುನಿಮಖಕೆ ಕಂಟಕರಾದರ್ (ತೊರಾ. ೧-೯-೧). [ಸಂ.]

ಸುಬುದ್ಧಿ (ನಾ). ಒಳ್ಳೆಯ ಅರಿವು; ಸುಜ್ಞಾನ: ವಿಷಯರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ ಸುಬುದ್ಧಿಯೆಂಬುದಕವನೆಱದು (ಬಸವ. ೫೧); ಪುಣ್ಯಕರ್ಮದಲ್ಲಿ ಪ್ರವರ್ತಿಸುವುದು ಸುಬುದ್ಧಿ ಪಾಪಕರ್ಮಪ್ರವರ್ತಿಯೇ ದುರ್ಬುದ್ಧಿ (ಪಸಾರ. ೫-೨೫ ತಾತ್ಪರ್ಯ). [ಸಂ.]

ಸುಬುದ್ಧಿಗೆಡು (ಕ್ರಿ). ಒಳ್ಳೆಯ ಅರಿವು ಕೆಟ್ಟುಹೋಗು; ಸುಜ್ಞಾನವಿಲ್ಲದಂತಾಗು: ಮಾಗಿಯೊಳಾದ ಶೀತದೊದವಿಂಗಿರಲಾಱದ ಸೇದಗಟ್ಟು ಬೇಳಾಗಿ ಸುಬುದ್ಧಿಗೆಟ್ಟು ಗುರುಗುಂಜಿಗಳಂ ಮುಸುಗಳ್ಳಿನೋದದಿಂ ಪೋಗದ ರಾಶಿಮಾಡಿ ಶಿಖಿಗತ್ತುಱೆ ಕಾಯ್ವುವೋಲ್ (ಧರ್ಮಾಮೃ. ೭-೭೮). [ಸುಬುದ್ಧಿ + ಕೆಡು$_1$]

ಸುಬೂದಗೊಳ? (ನಾ). ಒಂದು ಬಗೆಯ ತರಿಗೆ(?): ದಣ್ಣದೋಪಂ ತವುಕುರಿ ತವುಡಾಯ ಸುಬೂದಗೊಳ ಪ್ರಾ[ಯ]ಶ್ಚಿತ್ತಂ (ಎಕ. XI, ದಾಪಣ. ೧೫೯-೫೧; 1106). [?]

ಸುಬೆ, ಸುವೆ, ಸೂಬೆ (ನಾ). ೧. ಪ್ರಾಂತ: (ಕ). ೨. ಪ್ರಾಂತದ ಅಧಿಕಾರಿ: (ಕ). **ಸುವೆ**: ೧. ಡಿಳ್ಳಿಯ ಶಾಹನ ಸುವೆಯಂ ಜಳ್ಳೇಟಿಸುವಾರ್ಪಿದತ್ತಲಪ್ರತಿಮಾ ಕೇಳ್ (ಅಪ್ರತಿ. ೮೫-೧೩). **ಸೂಬೆ**: ೧. ಕಲ್ಬುರ್ಗಿ ಸೂಬೆಯಲ್ಲಿ ಸುರಪುರವನ್ನು ಒಂದು ಜಿಲ್ಲೆಯ ಸ್ಥಾನವನ್ನಾಗಿ ಮಾಡಲಾಯಿತು (ಕರ್ನಾಸಂ. ೨೧೪).

[<— ಪಾರ. ಹಿಂ. ಸೂಬಾ; ಮರಾ. ಸುಬಾ, ಸುಭಾ]

ಸುಬೇದಾರ್ 'ಸುಬೇದಾರ' ನೋ.

ಸುಬೇದಾರ, ಶುಭೇದಾರ, ಶುಭೇದಾರು, ಸುಬಾದಾರ, ಸುಬೇದಾರ್, ಸುಬೇದಾರು, ಸುಭದಾರ್, ಸುಭೇದಾರ, ಸೂಬಹದಾರ್ (ನಾ). ಪ್ರಾಂತಾಧಿಕಾರಿ: ಗಡಿಯೊಂದಕ್ಕೆ ಸುಬೇದಾರ ೧, ಚಿಕ್ಕಪಾರುಪತ್ಯಗಾರ ೧ . . . ಬಂದೋಬಸ್ತಾಗಿರಲು (ಪಹಾಪಂ. I, ೧೧೭). **ಶುಭೇದಾರ**: ಚಉಟ ಮಹಾಲ ಶುಭೇದಾರ ತುಕಪನ ಹೆಸರಲಿ ನಿರೂಪವಾದ ಪ್ರಕಾರ ಸಿಲಾಸ್ಥಾಪನೆ ಮಾಡಿಸಿತು (ಎಕ. VIII, ಸೊರಬ. ೪೦೯-೨೨; 1744). **ಶುಭೇದಾರು**: ಬ್ರಾಂಹಣ ವೆಂಕಪ್ಪಯ ಶುಭೇದಾರೂ ಕೊಡಂದೇರ ಮುದ್ದಯ (ಎಕ. I (R), ೯೯-೧೮; 1857). **ಸುಬಾದಾರ**: ಅವರಂಗಜೇಬನು ಮುತ್ತಿಗೆ ಹಾಕುವನೆಂದು ಕೇಳಿ ಅದರ ರಾಜನು ಓಡಿಹೋಗುತ್ತಾನೆ; ಸುಬಾದಾರನು ಅವನನ್ನು ಸರೆಹಾಕುತ್ತಾನೆ (ಬಂಕಿಮ. ೪೯೫). **ಸುಬೇದಾರ್**: ಮಠದ ಸುಬೇದಾರ್ ತಮ್ಮಯ್ಯನವರ ಮನೆಯಲ್ಲಿ ಮಂಗಳಾರತಿಯಾಗುತ್ತಿತ್ತು (ಕಳಹಾ. ೬೯). **ಸುಬೇದಾರು**: ಮಾಘ ಶು ೫ ಲ್ಲು ಸುಬೇದಾರು ಮುದ್ದೂರು ಪುಟ್ಟೈಯನ ತಾಯಿ ಜಯಮ್ಮನ ಶೇವೆ (ಎಕ. X (S), ಮುಳಬಾ. ೨೭೭-೫; 1866). **ಸುಭದಾರ್**: ಅಂಧಾ ಒಂದು ದೊಡ್ಡಪ್ರದೇಶಕ್ಕೆ ಸರ್‌ಸುಭ ಎಂದು ಹೆಸರು. ಅಂಧಾ ಕಡೆ ಸರ್ವಾಧಿಕಾರ ಮಾಡತಕ್ಕ ಅಧಿಕಾರಿಯೇ ಸುಭದಾರ್ (ವಾಳಗಾ. ೧೨). **ಸುಭೇದಾರ**: ಊರೂರ ಗೌಡರು ಸರದಾರ ದೇಸಾಯಿ ಹೊರಟಾರ ಕುದರಿಯ ಏರಿ ಭಕ್ತೀಲಿ ಬೆರಿಸಿ ಸುಭೇದಾರ ಮೊದಲಾಗಿ (ಸಿದ್ಧಪು. ೧೭-೮೨); ನಮ್ಮ ಕಕ್ಕ ಸುಶೀಲರಾಯನು ಲಷ್ಕರೀ ಸುಭೇದಾರನಿರುತ್ತಾನೆ (ಮೋಜಿನೀ. ೬೧). **ಸೂಬಹ್‌ದಾರ್**: (ರೃಸ್‌ಗ. IV, ೫೬೨).

[<— ಪಾರ. ಸೂಬಾದಾರ್; ಹಿಂ. ಸೂಬೆದಾರ್; ಮರಾ. ಸುಬೇದಾರ್]

ಸುಬೇದಾರಿಕೆ (ನಾ). ಪ್ರಾಂತಾಧಿಕಾರ: ಹಿಂದಿನ ಕಾಲದ ಸುಬೇದಾರಿಕೆ ಬಹಳ ಬಂದೋಬಸ್ತಾಗಿರುತ್ತಿತ್ತು (ರೂಢಿ). [ಸುಬೇದಾರ + - ಇಕೆ]

ಸುಬೇದಾರು 'ಸುಬೇದಾರ' ನೋ.

ಸುಬೋಧ (ನಾ). ಒಳ್ಳೆಯ ಉಪದೇಶವನ್ನು ಪಡೆದವನು; ಉತ್ತಮವಾದ ಉಪದೇಶವನ್ನು ಹೊಂದಿದವನು: ಜಿನ ನಿನ್ನ ವಿರುದ್ಧಮಾರ್ಗಿಯೆಂದಾವ ಸುಬೋಧರುಂ ಪೊಗಟ್ಟರೇಕೆಯೊ ಚಿತ್ರಮಿದಿಂದ್ರವಂದಿತಾ (ಪುಷ್ಪಪು. ೭-೯). [ಸಂ.]

ಸುಬ್ಬಡರ್ 'ಸುರ್ವಡರ್' ನೋ.

ಸುಬ್ಬನಸೂರೆ 'ಸುಬ್ಬರಸೂಜೆ' ನೋ.

ಸುಬ್ಬರಸೂಜೆ, ಸುಬ್ಬನಸೂರೆ, ಸುಬ್ಬಾನಸೂರೆ (ನಾ). ಅತಿಯಾಗಿ ದೋಚುವಿಕೆ; ಬಹಳವಾದ ಸುಲಿಗೆ: ಬಗವ ಕೆಯ್ಯಾವುದು ತೋಱಂದಸಗನರಡು ಕೆಯ್ಯಂ ಮುಱಿದಿಕ್ಕಿದನೂರ ಸೀರೆಗಸಗಂ ತದೆವಡೆದನನಿಪ್ಪ ನಾಡುನುಡಿ ಪರವಿನಗಂ ಮುಱಿದಿಕ್ಕಿ ಸುಬ್ಬ[ಪಾಠಾಂ. ಚಿ]ರಸೂಜೆಯಾಗೆ ಮಡಿವರ್ಗಮಂ ಗೋವರ್ಕಳ್ಗೆ ಸೂಱೆಗೊಟ್ಟು (ಅರ್ಧನೇ. ೮-೮೦ ಪ). **ಸುಬ್ಬನಸೂರೆ**: ಸುಬ್ಬನಸೂರೆಯಂತೆ ಪರರ ಅನ್ನವನುಂಡು ಮೊಬ್ಬಿನಲಿ ದಿನಗಳೆದ ದೀನ ಮನಸಿನಲಿ (ವಿದಾಕೃ. ೧೦೪-೫). **ಸುಬ್ಬಾನಸೂರೆ**: ರಮೇಶ ತಾಳಮೇಳ ಸುಸುಖ ಸುಬ್ಬಾನಸೂರೆ (ಪ್ರಸೇ. ೪೪-೫).

[ಸುಬ್ಬರ? + ಸೂಜೆ./ ತೆಲು. ಚುಬ್ಬನಚೂಪು, ಸುಬ್ಬನಚೂಪು]

ಸುಬ್ಬಲಕಾಟೆ (ನಾ). ಅನಿಷ್ಟ ಹೆಂಗಸು(?): ಅವಳ ಹುಬ್ಬನ್ನು ನಾನು ನೋಡಿದಾಗಲೆಲ್ಲಾ ಬೇವಿನಲ ತಿಂದರ ಹೇಗೆ ಅಸಹ್ಯವಾಗುತ್ತೋ ಹಾಗೆ ಆಗುತ್ತೆ. ಅದೇನು ಸುಬ್ಬಲಕಾಟೆಯೋ (ಮಾಮರಾ. ೧೨೬). [ಸುಬ್ಬಲ್ಲ + ಕಾಟೆ$_4$]

ಸುಬ್ಬಲು 'ಸುಬ್ಬುರು' ನೋ.

ಸುಬ್ಬಾನಸೂರೆ 'ಸುಬ್ಬರಸೂಜೆ' ನೋ.

ಸುಬ್ಬು 'ಸುರ್ವು$_3$' ನೋ.

ಸುಬ್ಬುರವಡೆ (ಕ್ರಿ). ಸುಕ್ಕಾಗು; ಸುಕ್ಕುಗಟ್ಟು: ಹಱದಿಲೆಯ ಬೆಂಗಡರ್ದ ಮುಸುಡ ಸುಬ್ಬು[ಪಾಠಾಂ. ಬ್ಬ]ರವಡೆದ ಗಲ್ಲ ಕೊಂಕಿದ ಕೊಡಕೆಯ (ಪಚಕಾ. ೪-೨೮).

[ಸುಬ್ಬುರ್ಕ + ಪಡೆ$_1$]

ಸುಬ್ಬುರು, ಸುಬ್ಬಲು, ಸುರ್ಬುರು (ನಾ). ೧. ಕೂದಲು; ಕೇಶ: ಮಂಡೆಯ ಮೃಯ ಸುಬ್ಬುರುಗಳು ಮುಟ್ಟುನಿಂದ ಬಿಳಿದಾದರೆ ಫಲಿತಮೆಂಬರು (ನಾಚಕಾ. ೧೧೯). **ಸುಬ್ಬಲು**: ೨. ಅತಿರೋಮವುಳ್ಳ ಪ್ರಾಣಿಗಳ ಚರ್ಮದ ಒರಟುತನ: (ಕ). **ಸುರ್ಬುರು**: ೩. ದಟ್ಟಣೆ; ನಿಬಿಡತೆ: 'ಸುರ್ಬುರುಗೊಳ್' ಪರಾ. [?]

ಸುಬ್ಬುರುವಾಲ (ನಾ). ಕೂದಲಿನಿಂದ ತುಂಬಿದ ಬಾಲವುಳ್ಳ ನಾಯಿಮರಿ: ಬರವೇಟ್ . . . ಭರದಿಂ ಸುಬ್ಬುರುವಾಲನಂ ಗದುಗನಂ ಮತ್ತುಳ್ಳ ಪೆರ್ನಾಯ್ಗಳಂ (ನಳಚಂ. ೬೬). 'ಸುರ್ಬುರುಬಾಲ' ಪರಾ. [ಸುಬ್ಬುರು + ಬಾಲ$_2$]

ಸುಬ್ರಹ್ಮಣ್ಯ (ನಾ). ೧. ಷಣ್ಮುಖ; ಕುಮಾರಸ್ವಾಮಿ: ಕಾಯುವವನೂ ಬಿಡುವವನೂ ಆ ಸುಬ್ರಹ್ಮಣ್ಯ (ಚಿಟ್ಟಜೇ. ೨೫); ಕಲ್ಮಡನೇ ಆದರೇನು? ಸುಬ್ರಹ್ಮಣ್ಯನ ಮುಂದೆ ಹಟಕಟ್ಟಿಯಾನೆಂದು ತಿಳಿಯುತ್ತೀಯಾ? (ಕುಡಿಕೂ. ೫೭). ೨. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ (ಉಪ್ಪಿನಂಗಡಿ ತಾಲ್ಲೂಕಿನ) ಒಂದು ಪುಣ್ಯಕ್ಷೇತ್ರ: ಎರಡನೆಯ ದಿನ ಸಂಜೆ ಸುಬ್ರಹ್ಮಣ್ಯ ಸೇರಿದೊಡನೆಯೆ ಅವನಿಗೆ ಹೋದ ಜೀವ ಬಂದಂತಾಯಿತು (ಕುಡಿಕೂ. ೫೫). ೩. ಯಾಗ ಮುಂತಾದ ಪವಿತ್ರಕಾರ್ಯಗಳಲ್ಲಿ ಭಾಗವಹಿಸುವ ಹದಿನಾರು ಋತ್ವಿಕ್ಕುಗಳಲ್ಲಿ ಒಬ್ಬ.

ಸುಬ್ರಹ್ಮಣ್ಯ ಷಷ್ಠಿ = ಮಾರ್ಗಶಿರಮಾಸದ ಆರನೆಯ ದಿನ ಮತ್ತು ಅಂದು ಆಚರಿಸುವ ಸುಬ್ರಹ್ಮಣ್ಯವ್ರತ: ಚಾನುವಾರುಸಂತೆ ಕಳೆದು ಸುಬ್ರಹ್ಮಣ್ಯ ಷಷ್ಠಿ ಮುಗಿಯದೆ ಯಾರೂ ಮನೆಯನ್ನು ಬಿಡಲಿಕ್ಕಿಲ್ಲ (ಚಿಟ್ಟಜೇ. ೨೧). [ಸಂ.]

ಸುಭಕ್ತಿ (ನಾ). ಒಳ್ಳೆಯ ಭಕ್ತಿ; ನಿಜವಾದ ಭಕ್ತಿ: ಶರಣರ ಸುಭಕ್ತಿವಿನೀತಿಯಂ ತಾಂ ಕೇಳಿಯಾದಡೆ ಮನವಲರದಿಹುದೆ (ಬಸಪು. ೪೦-೮೫). [ಸಂ.]

ಸುಭಕ್ಷ (ನಾ). ಒಳ್ಳೆಯ ಊಟ; ರುಚಿಕರವಾದ ಅನ್ನ; ಮೃಷ್ಟಾನ್ನ: ಕತ್ತ ಕರ್ಪುರವ ಬಲ್ಲುದೇ . . . ನಾಯಿ ಸುಭಕ್ಷವ ಬಲ್ಲುದೇ (ಮೋಳಿಮಾ. ೨೩-೮೯). [ಸಂ.]

ಸುಭಗ (ಗು). ೧. ಚೆಲುವಾದ; ಸುಂದರವಾದ: ಇದು ಪೂರ್ವದಿಕ್ಕಿನ ನೋಡಿದು . . . ಕಬ್ಬಿಗರ್ಪದೆಡೊಲವಿಂದೆ ನಿರ್ಮಿಸಿರ್ದೆನೀ ಸುಭಗಪ್ರಬಂಧಮಂ (ಶಬ್ದಂ. ೧-೨೬). ೨. ಗೌರವಾರ್ಹವಾದ; ಶ್ರೇಷ್ಠ: ಸುಭಗಕವಿ ಪಂಪನಿಂ ವಾಗ್ವಿಭವೋನ್ನತಿ ನೆಗಟ್ಟುದು (ಅಜಿಪು. ೧೨-೩೯): ಮಿಥ್ಯಾತ್ವಪ್ರಹರಕವಿ ಸುಭಗಕವಿ ಸುತಮಹಾಕವೀಂದ್ರಂ (ಸಜಮಾ. ೧-೪೨). (ನಾ). ೩. ಚೆಲುವಾದುದು; ಸುಂದರವಾದುದು: ದ್ವಿಪ್ರಾಸಂ ಸುಭಗಂ ದ್ವಂದ್ವಪ್ರಾಸಂ ಕಾವ್ಯರಚನೆಗುಚಿತಮನಿಪ್ಪ ತ್ರಿಪ್ರಾಸಂ ಸಲಯಂತಾವಿಪ್ರಾಸಂ ಬೀಱ ನಾಲ್ಕು ತೆಱನಾಗಿರ್ಕುಂ (ಕವಿಗ. ೩-೨೬,೨); ವ್ಯದುಪಾದಮಾದ ವಾಕ್ಯಸುಭಗಂ ಕಳಾಕಳಿತಮೆಂಬ ನೆಗಟ್ಟೆಯನಾಳ್ದ ಕಬ್ಬಮಂ ಕೂಸುಮನೀವುದು (ಪಂಪಭಾ. ೧-೯). ೪. ಇಂಪಾದುದು; ಹಿತವಾದುದು: ಶ್ರವಣಸುಭಗವಾದ ಪದಗಳಿಲ್ಲದ ಸಾಹಿತ್ಯಪ್ರಕಾರಗಳು ಬಹುಕಾಲ ಬಾಳಲಾರವು (ಕಾವ್ಯಕ. ೮೬). ೫. ಚೆಲುವ; ಸುಂದರ; ಸೊಬಗು: "ಚಕ್ಕುಷ್ಮಃ, ಸುಭಗಃ- ಈ ೨ ಸೊಬಗಂ" (ಪಲಾಮು. ೬೦-೨೦); ಮದೋನ್ಮತ್ತ ವಿಳಾಸಿನೀ ಸುಭಗನೆತ್ರಣನಯ್ಯೋ ನರೇಂದ್ರವಲ್ಲಭಂ (ವರ್ಧಮಾ. ೫-೮); ಸುಭಗ ನಿನ್ನಲ್ಲಿಗೀಬರ್ಪವಂದಶ್ರಮದಿಂ ಗೋಪೀಜನಂ ಕರ್ಮಿಡುವುಗ (ಜಗವಿ. ೩-೯೩). ೬. ಪುಣ್ಯವಂತ; ಅದೃಷ್ಟವಂತ: ಸುಭಗಂ . . . ಉಕ್ಕೋದ್ಭವಂ (ಜಾತಕ. ೧೭-೨): ಶ್ರೀ ಸೂನ್ಯತ ಸಂಪದಕ್ಕೆ ತೊಡವನೆ ಜಸಮಾಶಾಸುದತಿಗೆ ಸಾಹಿತ್ಯಕಳಾಸುಭಗಂ ಪಂಪುವತ್ತನಭಿನವಪಂಪಂ (ಪಂಡಾಮಾ. ೧೩-೧). ೭. ಯಜಮಾನ; ಒಡೆಯ: ಮೃಗ ಕುಂಭಂಗಳೊಳೊಂದಿದಂದು ಭೃಗುಜಂ . . . ಸುಭಗನುಂ ಪೂಜ್ಯನಕ್ಕುಂ ನರಂ (ಜಾತಕ. ೧೭-೩೧). ೮. [ಜೈನ] ನಾಮಪ್ರಕೃತಿಗಳಲ್ಲಿ ಒಂದು: ಶುಭಾಶುಭ ಸುಸ್ವರ ದುಸ್ವರ ಸುಭಗ ದುರ್ಭಗ . . . ಎಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೪ ಪ). [ಸಂ.]

ಸುಭಗತೆ (ನಾ). ಚೆಲುವು; ಸೌಂದರ್ಯ; ಸೊಬಗು: "ಗಾಡಿ ಸೊಬಗನಲ್ಕಸವ ಸುಭಗತೆಯಕ್ಕು" (ಕಬ್ಬಿಕೈ. ೫೩); ಮಹಾಲಕ್ಷ್ಮಿಯ ಸುಭಗತೆ . . . ಅವನನ್ನು ವೋಹಗೊಳಿಸಿದುವು (ಸಮಜೀ. ೭೦೨). [ಸಂ. ಸುಭಗತಾ]

ಸುಭಗತ್ವ (ನಾ). ೧. ಚೆಲುವು; ಸೌಂದರ್ಯ: ವಿಭವಂ ಕಾಮಂಗಿನಿತ್ತೆತ್ತಣ ದಿವನಮರೇಂದ್ರಂ ಸುರೇಂದ್ರಂಗಮಿಂತೀ ಸುಭಗತ್ವಂ ಮತ್ತಿನಿತ್ತೆತ್ತಣದು (ಚಂದ್ರಪ್ರ. ೭-೧೫೩). ೨. ಗೌರವ; ಮನ್ನಣೆ: ಭೂಮಿ ಸುಭಗತ್ವಂ ಯುಕ್ತಿ ಮಂತ್ರಜ್ಞಮೆಂಬಿನಿತಕ್ಕುಂ . . . ಐಂದವದಶೋಕ್ಕಾರೋಹಗೇಹಂಗಳೊಳ್ (ಜಾತಕ. ೯-೨೩). [ಸಂ.]

ಸುಭಗೆ (ನಾ). ೧. ಚೆಲುವೆ; ಸುಂದರಿ: ಕಣ್ಮೊಳಿಸುದು[ದೋ] ಸುಭಗೆಯಾದ ಸುದತಿಯ ಗರ್ಭಂ (ಪಂಪಭಾ. ೧-೧೪೩); ನೀನೀತನೊಳ್ಮೂರ್ವುದುಂಟೇ ಸಖಿಯೆಂದು ಬೆಸಗೊಂಡಾಳಿಯೊಡನೊರ್ವಳ್ ಸುಭಗೆ (ರಾಜಶೇ. ೧೧-೧೨೧ ಪ). ೨. ಗೌರವಾನ್ವಿತ ಸ್ತ್ರೀ; ಪೂಜ್ಯೆ: ಸುಭಗೆ, ಧರ್ಮವು ಬಹು ಸೂಕ್ಷ್ಮವಾದುದು (ಭೀಷ್ಮ ಚ. ೧೧೯).

[ಸಂ. ಸುಭಗಾ]

ಸುಭಟ (ನಾ). ಶ್ರೇಷ್ಠನಾದ ಕಲಿ; ವೀರಯೋಧ: ಸುಭಟರ್ ಸುಭಟ ರೊಳಾಜಿದಿಶಿದುಭಯಬಲಂ ಪೊಟ್ಟನಾದೂಡಿಂದ್ರನುಪೇಂದ್ರಂ (ಶಾಂತಿಪು. ೬-೮೨); ರಣರಂಗಭೈರವನುಭಯಬಳಸುಭಟಕೀರ್ತಿತಪ್ರತಾಪಂ (ಪೌಗ. XX. ೪೬-೪೪; 1072); ಸುಭಟರಹುದೋ ಜಾಗು ಜಾಗನುತೊಲೆದನಾ ದ್ರೋಣ (ಕುಪಾದ್ರೋ. ೨-೧೧).

ಸುಭಟಚೂಡಾಮಣಿ = ಕಲಿಗಳಲ್ಲಿ ಶ್ರೇಷ್ಠನಾದವನು; ಒಂದು ಬಿರುದು: ವಿದ್ಯಜ್ಜನಕಮಳಾರ್ತ್ತಿರ್ಣ್ಣಂ ಸುಭಟಚೂಡಾಮಣಿ ಭೃತ್ಯಚಿನ್ತಾಮಣಿ (ಪೌಗ. XX. ೧೩-೧೮; 875). [ಸಂ.]

ಸುಭಟತೆ (ನಾ). ಅತಿಶಯವಾದ ಶೌರ್ಯ,—ಕೆಚ್ಚು: ಸಾಹಸದೊಳ್ ಸುಭಟತೆಯೊಳ್ ಗೊಜ್ಜಿಗವಲ್ಲಭನಂ ಮಿಗಲುರ್ವ್ವಿ ನೃಪರನಾಂ ಕಂಡಡಿಯೆಂ (ಎಗ. XIII. ೩೩೦-೯; 939). [ಸುಭಟ + - ತ್ವ]

ಸುಭಟಬಾಹಿರ (ನಾ). (ಆಲಂ) ಹೇಡಿ; ಅಂಜುಕುಳಿ: ಎಲವೊ ಸಾತ್ಯಕಿ ಸುಭಟಬಾಹಿರ ಗಳಹದಿರು ವಿಟ ವೀರನೇ ಕೂರಲಗಿನಲಿ ಮಾತಾಡು ಬಜೀನು: ಭಂಡತನ (ಕುಪಾದ್ರೋ. ೧೪-೩). [ಸಂ.]

ಸುಭಟವೃತ್ತಿ (ನಾ). ಒಳ್ಳೆಯ ಭಟರಿಗಾಗಿ ಕೊಡುವ ಉಂಬಳಿ; ವೀರಯೋಧರಿಗಾಗಿ ಕೊಡುವ ಮಾನ್ಯ: ಎಂದನಿತಾನುಂ ಗರ್ಜಿಸಿ ಸುಭಟವೃತ್ತಿ ಯನಾವರ್ಜಿಸಿ ಮಾಣ (ಶಾಂತಿಪು. ೩-೬೯ ಪ). [ಸಂ.]

ಸುಭಟಾಂಗ (ನಾ). ಶೂರರ ಸೈನ್ಯ; ವೀರರ ಪಡೆ: ಕೇಳಿಲ ಖೂಳ ಸೂತನ ಮಗನೆ ಸುಭಟಾಂಗದಲಿ ಖರೆಯನಲ (ಕುವ್ಯಾವಿ. ೭-೧೧೫); ಮರುಳೆ ಸುಭಟಾಂಗದಲಿ ನೀನತಿ ಖರೆಯನ್ಕೆ (ಕಾಶಿರಾ. ೩೨-೪೩). [ಸಂ.]

ಸುಭಟಾಯತ (ನಾ). ಪೌರುಷ; ವೀರತ್ವ: ಕಾಯದೊಳ್ ಸರ್ವರಕ್ತಂಗಳನ್ನೊರಸಿ ಸುಭಟಾಯತವ ಮೆರೆಯುತ್ತಲುರವಣಿಸಿ (ತುರಂಗ. ೭೫-೪೩). [ಸಂ.]

ಸುಭತುಂಗದೇವ (ನಾ). ಒಬ್ಬ ರಾಷ್ಟ್ರಕೂಟ ಅರಸನ ಹೆಸರು: ಸ್ವಸ್ತಿಶ್ರೀ ಸುಭತುಂಗದೇವ [ರಾ]ಜ ರಾಜ್ಯಾಭಿವೃ XXX (ಪೌಗ. XX. ೧೪-೧; 878).

[< ಸಂ. ಶುಭತುಂಗದೇವ]

ಸುಭದಾರ್ 'ಸುಬೇದಾರ' ನೋ.

ಸುಭದ್ರ (ಗು). ೧. ಮಂಗಳಕರವಾದ; ಶುಭಕರವಾದ. (ನಾ). ೨. ಬಹಳ ಶುಭ ತರುವಂತಹುದು; ಅದೃಷ್ಟ. ೩. ಸುರಕ್ಷಿತವಾಗಿರುವುದು; ಶಾಶ್ವತ ವಾಗಿರುವುದು: ನಮ್ಮ ಸ್ಥಾನಗಳೀಗ ಸ್ಪಷ್ಟವಾಗಿ ಮತ್ತು ಸುಭದ್ರವಾಗಿರುತ್ತವ (ಶೀಮಂತ. ೨೪೯). ೪. ಒಂದು ಆನೆಯ ಹೆಸರು: ತನ್ನ ಸುಭದ್ರಹಸ್ತಿಯನು (ಬಸವ. ೪೯-೩೩). ೫. [ಸಂಗೀತ] ಒಂದು ಬಗೆಯ ತಾಳ: ಧ್ರುವ ಮಟಯ . . . ಸುಭದ್ರ ಸಂಗತ . . . ನೂಱೊಂದು ತಾಳಂಗಳ್ (ವಿವೇಕ. ೧೯೨). [ಸಂ.]

ಸುಭದ್ರೆ (ನಾ). ೧. ಉಪ್ಪಿನಕಾಯಿಗೆ ಬಳಸುವ ಒಂದು ಬಗೆಯ ಪದಾರ್ಥ: ಪಿಪ್ಪಲಿ ಚಿಲ್ಲಗಾಯ್ ಮೆಬಸು ಮಾಗುಳಿವೇರ್ಮೊಳೆಯಲ್ಲ ವೇಲೆ ಕಮ್ಮಿಪ್ಪ ಸುಭದ್ರ ಮಾಮಿಡಿ ಕರಂಜಿಕೆಯಂಬಟೆ ನಿಂಬೆ ನೆಲ್ಲಿಗಾಯ್ (ಲೀಲಾವ. ೫-೬೬). ೨. ಕೃಷ್ಣನ ತಂಗಿ; ಅರ್ಜುನನ ಹೆಂಡತಿ: ನಾರಾಯಣನ ತಂಗ ಸುಭದ್ರೆಯೆಂಬ ಕನ್ನೆ . . . ಬಾಗಿಲೊಳ್ ನಿಂದು (ಪಂಪಭಾ. ೪-೩೯ ಪ); ಪಾರ್ಥನ ಕರೆದುಪಾಯಾಂತರದೊಳೀವನು ಸರಸಿಜಾನನೆಯನು ಸುಭದ್ರೆಯನು (ಕುವ್ಯಾಆ. ೧೯-೨೩). [ಸಂ. ಸುಭದ್ರಾ]

ಸುಭಾಷಿಣಿ (ನಾ). ಹಿತವಾಗಿ ಮಾತನಾಡುವವಳು: ಅವಳು ಸುಭಾಷಿಣಿ ಮಾತ್ರವಲ್ಲ ಸುಹಾಸಿನಿಯೂ ಹೌದು (ಬಂಕಿಮ. ೧೧೯). [ಸಂ. ಸುಭಾಷಿಣೀ]

ಸುಭಾಷಿತ (ಗು). ೧. ಚೆನ್ನಾಗಿ ಮಾತನಾಡುವ; ವಾಕ್ಪಟುತ್ವವುಳ್ಳ: ಇದು ಸಕಲ ಸುಭಾಷಿತ ಕೋವಿದಂ (ಕಾದಂಪು. ೫೫). ೨. ಒಳ್ಳೆಯ ಮಾತನಾಡಿದ. (ನಾ). ೩. ಒಳ್ಳೆಯ ಮಾತು; ಹಿತವಚನ: ಪದ್ಮನ ಸುಭಾಷಿತದೊಳ್ ಪುದುವೊಕ್ಕು ಸೇಸಯಂ ಮನವ್ಯಾದಾಂತು (ಪಂಡಾಮಾ. ೬-೪೮); ಸಖಿಯ ಸುಭಾಷಿತರವದಿನಡಂಗಿದುದು ದೇವಕೀಹೃತ್ತಾಪಂ (ಜಗವಿ. ೨-೭೦); ಅತಿಮಾಧುರ್ಯ ಸುಭಾಷಿತಂಗಳ ಮಹಾಸತ್ಕೀರ್ತಿಯಂ ಬಾಳ್ಕೆಯಂ ಶತಕಾರ್ಥಂ ಕೊಡದಿರ್ಪುದೇ (ಸೋಮೇಶ. ೧೦೨). [ಸಂ.]

ಸುಭಾಷೆ (ನಾ). ೧. ಒಳ್ಳೆಯ ಮಾತು. ೨. ಕಾಲೋಚಿತವಾದ ಪ್ರತಿಜ್ಞೆ: ಪಡಿಪಾಱರಂ ಕರತರಿಸಿ ತನ್ನ ಸುಭಾಷೆಯಂ ಪತಿಕರಿಸಿ (ಬಸವ. ೪೪-೭೦). [ಸಂ. ಸುಭಾಷಾ]

ಸುಭಿಕ್ಷ (ನಾ). ೧. ಚೆನ್ನಾಗಿ ಭಿಕ್ಷೆ ಸಿಕ್ಕುವಿಕೆ; ಯಥೇಚ್ಛವಾಗಿ ಭಿಕ್ಷೆ ದೊರೆಯುವಿಕೆ. ೨. ದವಸ ಧಾನ್ಯಗಳ ಸಮೃದ್ಧಿ, ಕಾಳುಕಡ್ಡಿಗಳು ಅಗ್ಗದ ಬೆಲೆಯಲ್ಲಿ ಯಥೇಚ್ಛವಾಗಿ ದೊರೆಯುವಿಕೆ: ನಿನ್ನ ಕನ್ನಗುವರಿಯನ ಎನ್ನ ಸೇವೆಗೀವುದಱಿಂ ನಿನಗಂ ಸೇನೆಗಂ ಸುಭಿಕ್ಷಮಕ್ಕುಂ (ರಾಮಾಶ್ವ. ೬೬-೨೪); ದಾನಿಗಳು ದೇಶದ ಎಲ್ಲೆಡೆಯಲ್ಲಿಯೂ ಇದ್ದುದರಿಂದ ಲೋಕವು ಸುಭಿಕ್ಷವಾಗಿತ್ತು (ಭಾರಪ. ೧೦೫). ೩. [ಅಶ್ವಶಾ] ಕುದುರೆಗೆ ಬರುವ ಒಂದು ಬಗೆಯ ರೋಗ: ಪಸಿದಡಹಡಿಸುವ ಕುದಿರಗೆ ಬಸಿರಡವಿನ ಪೊಲ್ಲಖಾ(ಬಾ)ಣಮಂ ಕಟ್ಟದೊಡುಬ್ಬಸಮಾಗಿ ಬೇನೆಯೊಳ್ ಸೈನಿಸಲಾಱ(ಗ)ದೆ ಬೀಳ್ವುಮದು ಸುಭಿಕ್ಷಂ ಪೆಸರಿಂ (ಅಶ್ವಶಾ. ೧೧-೩). [ಸಂ.]

ಸುಭಿಕ್ಷತ್ವ (ನಾ). ೧. = ಸುಭಿಕ್ಷ ೧. ೨. [ಜೈನ] ಕೇವಲಜ್ಞಾನ ಉತ್ಪತ್ತಿ ಯಾದಾಗ ಉಂಟಾಗುವ ಹತ್ತು ಅತಿಶಯಗಳಲ್ಲಿ ಒಂದು: ಸುಭಿಕ್ಷತ್ವಮುಂ ಪ್ರಾಣಿವಧವಿಹೀನತ್ವಮುಂ . . . ಎಂಬ ಘಾತಿಕ್ಷಣಮಪ್ಪ ದಶಗುಣಂಗಳುಂ (ಚಾಸುಪು. ೮೨). [ಸಂ.]

ಸುಭಿಕ್ಷಶೂಲೆ (ನಾ). = ಸುಭಿಕ್ಷ ೩: ಪಡು(ಡ)ಗುಂ ಪೊರಳ್ಗುಂ (ಸಲೆ) ಸಿಡಿಮಿಡಿಯಕ್ಕುಂ ಬೆಮರ್ತುಮುಮ್ಮಳಿಸುಗುಮಾಗಡೆ(ಳೆ) ತಲೆಯಂ ಕೆಬಗಿಡುಗುಮದಡಿಗಡಿಗೆ ಸುಭಿಕ್ಷಶೂಲೆ ಕೆರಳ್ದೊಡೆ ತುರಗಂ (ಅಶ್ವಶಾ. ೧೧-೪). [ಸುಭಿಕ್ಷ + ಶೂಲೆ]

ಸುಭಿಕ್ಷೆ (ನಾ). ಒಂದು ಬಗೆಯ ಸಸ್ಯ: (ಪಂಡಿತ. ೨೫೪). [ಸಂ. ಸುಭಿಕ್ಷಾ]

ಸುಭೇದಾರ 'ಸುಬೇದಾರ' ನೋ.

ಸುಮ (ನಾ). ಹೂವು; ಪುಷ್ಪ: ದೈವರ್ಕಳೆಲ್ಲರುಂ ದಿವ್ಯಸುಮಗಳನೆರಚ (ಶ್ರೀರಾಮಾ. ೧೮-೪೯೦); ಕಮಲವುದಯದೊಳರಳಿ ಸಂಚೆಯಲಿ ಮುಗುಳಾಗಿ ಸುಮವಪ್ಪುದು (ಮುಂಡಕ. ೯೧). [ಸಂ.]

ಸುಮಂಗಲ, ಸುಮಂಗಳ (ನಾ). ಒಳ್ಳೆಯದು; ಕಲ್ಯಾಣಕರವಾದುದು: ''ಸುಮಂಗಲ[ಪಾಶಾ. ೪] ಸಮಾಚೀನವಾದ ಶುಭ'' (ನಾನಾರ್ಥ. ೧೦೦ ಟೀಕೆ). **ಸುಮಂಗಳ**: ಶ್ರೀಗುರೂಕ್ತ ಸದಾ ಸುಮಂಗಳ ಯೋಗಯೋಗದಲಿ ಅಗಮಾರ್ಥದೊಳಗೆ ಮಾಡುವ ಯಾಗಯಾಗದಲಿ (ಪುರಂದ. ೧-೧೩೬-೨). [ಸಂ.]

ಸುಮಂಗಲಿ (ನಾ). ೧. ಅದೃಷ್ಟವಂತೆ; ಭಾಗ್ಯಶಾಲಿನಿ. ೨. ಮುತ್ತೈದೆ; ಸೌಭಾಗ್ಯವತಿ: ಮಹಾಸತಿ ಚಂದಲೆ . . . ಸುಮಂಗಲಿಯ ಅಲಂಕಾರಗಳಲ್ಲಿ ಚಿತಾಗ್ನಿಗೆ ಬಲವಂದು ಅದರಲ್ಲಿ ದುಮುಕಿ ಮಹಾಸತಿಯಾದಳು (ಶಾಂತಲಾ. ೧೩). ೩. [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ೫೪ತ್ತಾರು ಛಂದಸ್ಸುಗಳಲ್ಲಿ, ಹದಿನೇಳು ಅಕ್ಷರಗಳುಳ್ಳ ಅತ್ಯಷ್ಟಿಯೆಂಬ ಛಂದಸ್ಸಿನ ಒಂದು ವೃತ್ತ: ೧೭ನೆಯ ಅತ್ಯಷ್ಟಿಯಲ್ಲಿ . . . ನಜಭಜಜಂಲಗಂ ಬರೆ ಸುಮಂಗಲಿಯೆಂಬರದಂ (ಕೃಪಿ. ೮೫). [ಸಂ. ಸುಮಂಗಲೀ]

ಸುಮಂಗಲೆ (ನಾ). = ಸುಮಂಗಳಿ ೨: ಪೂರ್ಣಕುಂಭ ಕಂಚು ಕನ್ನಡಿ ಕಲಶಗಳನ್ನು ಹೊತ್ತ ಸುಮಂಗಲೆಯರೂ ಬ್ರಾಹ್ಮಣರೂ . . . ಕಲ್ಯಾಣಮಂಟಪಕ್ಕೆ ಬಿಜಯ ಮಾಡಿಸಿದರು (ಶಾಂತಲಾ. ೧೦೨). [ಸಂ.]

ಸುಮಂಗಳ 'ಸುಮಂಗಲ' ನೋ.

ಸುಮತ (ನಾ). ೧. ಗೆಳೆತನ; ಸ್ನೇಹ. ೨. ಒಳ್ಳೆಯ ಮನಸ್ಸು: ಗುರು ಸುಮತ ಸತ್ಪ್ರಾಣವಂ . . . ನೋಡಿ (ಬಸವ. ೩೯-೫೩). ೩. ಒಳ್ಳೆಯ ತತ್ವ,—ಸಿದ್ಧಾಂತ: ಸುಮತಂ ಕುಮತಂ ವರತತ್ವಮತತ್ವಂ ಧರ್ಮಮುಂ ಕುಧರ್ಮಮೆನಿಪ್ಪೀ ಭ್ರಮೆಯಿಂ ಜೀವನೊಳುದಯಿಸಿ ಸಮಸ್ತಯೋನಿಯೊಳೆ ಬರಿಸುವುದು ಮಿಥ್ಯಾತ್ವಂ (ಶಾಂತೀಶ. ೧೩-೫೮). [ಸಂ.]

ಸುಮತಿ (ನಾ). ೧. ಒಳ್ಳೆಯ ಮನಸ್ಸು,—ಬುದ್ಧಿ: ಧೃತಿಬಿಡದೆ ರತಿಗೆಡದೆ ಭಕ್ತಿಸ್ಥಿತಿ ಮೀಱಿಯದೆ ಸುಮತಿ ದೊರೆಯದು (ಬಸವ. ೩೮-೩೧); ಮದನನ ಹಿಳುಕು ಸುಮತಿಯ ಸೀಳೆ ಬಳಿಕಿಂತೆಂದನವ ನಗುತ (ಕುವಾವಿ. ೨-೪೧). ೨. ಒಳ್ಳೆಯ ಮನಸ್ಸನ್ನು ಹೊಂದಿರುವವನು; ಸುಚಿತ್ತ: ಇದಕೆ ನೀವರ್ಥವಂ ವಿಸ್ತರಿಸಿದಡೆ ಸಾಕು ಸುಮತಿಗಳು (ಬಸವ. ೫೫-೩೯); ಭಕ್ತಿಬಲದಿಂದಧಿಕಮಿಲ್ಲಿಲೆ ಸುಮತಿ ಕೇಳೆಂದ (ಗಗಶಾ. ೧೦-೧೬). ೩. ಜ್ಞಾನಿ; ಬುದ್ಧಿವಂತ: ಸುಮತಿಗತಿಸುಮತಿ ಪುನರುಕ್ತಮೆನ್ನದರಸುಮತಿಯೆನಿಪ ದೃಢರಥನುಮನಾ ಸುಮತಿಯೊಡನೆರಪಿದಂ ಗುರು ಸುಮತಿಯ ಮತಿ ದೃಢರಥಂಗ ಮಿರ್ಮಡಿಸುವಿನಂ (ಶಾಂತಿಪು. ೯-೪೪). ೪. [ಜೈನ] ೫೪ಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಐದನೆಯವನು: ಸುಮತಿ . . . ವರ್ಧಮಾನರೆಂಬಿಪ್ಪತ್ತುನಾಲ್ಕು ತೀರ್ಥಕರರ್ (ಚಾವುಂಪು. ೪೦೨). [ಸಂ.]

ಸುಮಧುರ (ಗು). ಬಹಳ ಇಂಪಾದ,—ಇನಿದಾದ: ಶಾಸ್ತ್ರಿಗಳು . . . ಕೋಕಿಲೆಯ ಕಂಠಸ್ವರವನ್ನು ಹೋಲುವ ನಯವಾದ ಸುಮಧುರ ನವಿರುನಾದಗಳನ್ನೂ ಹೊರ ಹೊಮ್ಮಿಸುತ್ತಿದ್ದರು (ಸಂಗೀತ. ೭೮). [ಸಂ.]

ಸುಮನ (ನಾ). ೧. ಚೆಲುವು; ಅಂದ. ೨. ಒಳ್ಳೆಯ ಮನಸ್ಸು. ೩. ಒಳ್ಳೆಯ ಮನಸ್ಸಿನವನು. ೪. ದೇವತೆ: ಸುಮನರ್ ಗರ್ಭಾವತಾರಂ ಪೊದಲೆನೆ ಬಿಡದಾರಾಧಿಸುತ್ತಿರ್ದಪರ್ (ಚಂದ್ರಪ್ರ. ೧೩-೧೦೨). ೫. ಹೂವು; ಪುಷ್ಪ: ತಿಳಕಂ ವರವನಲಕ್ಷ್ಮೀತಿಳಕಂ ದತ್ತಪ್ರಿಯಾ ಸಮನ್ವಿತಜನಸತ್ಸುಳಕಂ ಸುಮನಃಕಳಮಂಜುಳಕಂ ತಾನಾದುದತನುಕೀರ್ತ್ಯುಜ್ಜ್ವಳಕಂ (ವರ್ಧಪು. ೨-೮); ಶ್ರೀಮದ್ಬ್ರಹ್ಮಚ್ಯುತೇಂದ್ರಾಸುರ ಗುರು ಸುಮನೋಮೌಳಿ ವಿನ್ಯಸ್ತಪಾದಂ (ಬಸವ. ೧-೧). ೨, ೫: ವಿಬುಧಸೇವ್ಯವಿಸ್ತೃತಚ್ಛಾಯನಸ್ಸಳಿತೌದಾರ್ಯ ವಿಳಾಸಭಾಸಿ ಸುಮನಸ್ಸಂಪೂರ್ಣನುದ್ಯದ್ಯಶಃಫಳದಿಂ ರೇಚಣದಂಡನಾಥನೆಸೆದಂ ಲೋಕೈಕ ಕಲ್ಪದ್ರುಮಂ (ಎಕ. VII, ೨೫೨. ೧೯೭; 1181). ೪, ೫: ಶ್ರೀಮಜ್ಜನಲಲಿತಂ ಸುಮನೋಮಾಳಾರಂಮ್ಯಮುದ್ಭವಸ್ಫುಬ್ರಜ ಶೋಭಾಮಂಡನ ವೆಣೆಯನಿಪುದು ಭೂಮಹಿಳೆಯ ಕುಂತಳಕ್ಕೆ ಕುಂತಳದೇಶಂ (ಎಸಾ. XV, ೬೪-೮; 1189). ೬. ಪಂಡಿತ; ವಿದ್ವಾಂಸ. ೪, ೫, ೬: ಆ ವನಂ . . . ಸುತ್ರಾಮನಂತೆ ಸುಜನನಂತೆ ಸುಮನೋಮನೋಜ್ಞಮುಂ (ರಾಜಶೇ. ೨-೭೮ ವ). ೭. ಆನಂದಪಡುವವನು. ೪, ೫, ೭: ಪರುಷತರಸ್ಪನೋನ್ಮುಖರನಂ ಖರನಂ ಖರನಂ ಮುರಾರಿ ಸಂಹರಿಸೆ ಜಯಪ್ರಮೋದಸುಮನರ್ ಸುಮನರ್ ಸುಮನಸ್ಸುವೃಷ್ಟಿಯಂ ಸುರಿಯೆ (ಜಗವಿ. ೪-೪೨). ೮. ಒಂದು ನರಕದ ಹೆಸರು: ನಿರುಚ್ಛ್ವಾಸ ಸುದೀರ್ಘ ಕೂಟಶಾಲ್ಮಲಿ ಅರಿಷ್ಟ ಸುಮನವೆಂಬೈದು ಮಂತ್ರಿನರಕಂಗಳೊಡನೆ ಭಯೋತ್ಕಟವೆಂಬರಸುನರಕವಿಹುದು (ವಿವೇಕ. ೧೫೦). ೯. ಗೋಧಿ. ೧೦. ಸಂಪತ್ತು; ಐಶ್ವರ್ಯ. ೧೧. ಗಾಳಿ; ವಾತ: ''ದೇವವ್ರಾತಲತಾಂತವಾತ ಕಮನೀಯಸ್ಯಾಂತಮೈಶ್ವರ್ಯಮಂಬೀ ವಾಕ್ಯಂ ಸುಮನಾಭಿಧಾನಂ'' (ನಾನಾರ್ಥ. ೬೯). [ಸಂ.]

ಸುಮನಶ್ಶರ (ನಾ). ಹೂವನ್ನೇ ಬಾಣವನ್ನಾಗಿ ಉಳ್ಳವನು; ಮನ್ಮಥ: ಸುಮನಶ್ಶರಂ ನಿರೀಕ್ಷಿಸಲಮಲಪ್ರಭೆ ತುಳ್ಕುವಂತೆ ರತಿ ಬೆಳಗಲ್ಕಿಭ್ರಮವಾಂತ ಮುಕುರದಂತಿರೆ ರಮಣಿಯ ನುಣ್ಗಲ್ಲವೆಸೆದುದು (ಉದ್ಭಟ. ೬-೧೦೩). [ಸಂ.]

ಸುಮನಶ್ಶೈಳ (ನಾ). ದೇವತೆಗಳ ಬೆಟ್ಟ,—ಮೇರು: ಸುಮನಶ್ಶೈಳವನಾ ಜಿನಾಭಿಷವಣ ಕ್ಷೀರಾಂಬು ಧಾರಾಳಿಯಿಂದೆ ಮುಟುಂಕಾಡಿಸಿದಂದದಿಂ (ಶಾಂತೀಶ. ೧೪-೧೭೫). [ಸಂ. ಸುಮನಶ್ಶೈಲ]

ಸುಮನಶ್ಶೇಖರ (ನಾ). ೧. ಹೂವನ್ನು ಮುಡಿದುಕೊಳ್ಳುವುದು: ರಾಮಂಗ ವೈದೇಹಿ ನೀರೇಜನಿಸರ್ಗಾಮೋದ ಗಂಧೋದಕಸವನಮನಿತ್ತಬ್ಜಿಂ ಬಾಹುಮೂಲಂ ಸ್ತನಮೂಲಂ ನಾಭಿಮೂಲಂ ತ್ರಿಗುಣಿಸೆ ಸುಮನಶ್ಶೇಖರಂ ಮಾಡಿ . . . ಸೌಂದರ್ಯಮಂ ಸೂಡಿಗೊಂಡಳ್ (ಪಂಡಾಮಾ. ೫-೯೬). ೨. ಹೂವನ್ನು ಮುಡಿದುಕೊಂಡವನು: ಸುಜಾತ ಪಾರಿಜಾತ ಸುಮನಶ್ಶೇಖರಂ . . . ಮೌಕ್ತಿಕಪದಬಂಧಂ ಆ ದೇವಂ ಶ್ರೀದೇವನಾಮಮಂ ತಾಳ್ದಿ (ಶಾಂತಿಪು. ೭-೧೩ ವ). [ಸಂ.]

ಸುಮನಸ (ನಾ). ೧. ಒಳ್ಳೆಯ ಮನಸ್ಸು: ಆರಡಿಯೆಂದು ಮುಟ್ಟದೆ ಚಂಪಕಗಳು ಸುಮನಸದಿ ಕೂಡಿಹವು (ಗೊಮ್ಮಚ. ೨-೪೦). ೨. ಒಳ್ಳೆಯ ಮನಸ್ಸಿನವನು: ರಾಮಪ್ಪ ಭಾವದಿಂದಭರಾಮರೂಪರು . . . ಸಭ್ಯರು ಸುಮನಸರವರು (ಇಂಚಾಪ. ೩೧-೪೧). ೩. ದೇವತೆ; ಸುರ: ''ವಿಬುಧರು ಸುಮನಸರು ಲೇಖಿರೆನಲು ವಿಬುಧರ್ಗೆ ನಾಮಂ'' (ಮಂಗರಾ. ೩-೮); ಕರುಳುಮಾಲೆಯನಾಂತು ಕುಣಿವುತಿರ್ದವು ಭೂತ ಸುರಿಯಲರಳೆ ಸುಮನಸರು (ಜೀವಂಧಾಂ. ೫-೬೬); ಬೊಬ್ಬೆಯಾದುದು ಬಳಿಕ ಸುಮನಸರೊಬ್ಬುಳಿಯ ಚೂಣಿಯಲಿ (ತೊರಣಾ. ೧-೧೧-೯). ೪. ಹೂವು; ಪುಷ್ಪ: ''ಪ್ರಸವಂ ಪ್ರಸೂನಕಂ ಸುಮನಸಂ ಪುಷ್ಪಮೆನೆ ಕುಸುಮಂ'' (ಮಂಗರಾ. ೩೨-೫); ಹಗೆ ತಣಿಯಲೆಂಬಂತೆ ಮನಸು ಸುಮನಸವಾಯ್ತು ಪರಿಕಾಂತವಾಯ್ತು (ಅಮತಂ. ೨೦-೯). ೫. ಗಾಳಿ; ವಾಯು. ೬. ಸಂಪತ್ತು; ಐಶ್ವರ್ಯ. ''ಕುಸುಮಂ ನಿರ್ಮಲಮನ ದಲ್ ಸ್ವಶನಂ ಸಿರಿ ಸುರರು ಪಂಚ ಸುಮನಸಮೆನಿಕುಂ'' (ನಾನಾಕಂ. ೯೯). [ಸಂ.]

ಸುಮನಸಾರ (ನಾ). ಹೂವಿನ ರಸ; ಬಂಡು; ಮಧು: ಸುರಪ ಸುಂದನು ಸುಮನಸಾರವ (ಕಾಶಿರಾ. ೨೭-೬೦). [ಸಂ.]

ಸುಮನಸಾವನಿ (ನಾ). ದೇವತೆಗಳ ಲೋಕ; ಸ್ವರ್ಗ: ವಿಮಲ ಸುಗತಿಯಿಂದ ಮಂದಾಕಿನಿಯೆನಿಸಿ ಸುಮನಸಾವನಿಯಲಿ ಮೆರೆದೆ ಸುರನದಿಯೆ (ವಿದಾಕ್ಕ. ೮೮-೧). [ಸಂ.]

ಸುಮನಸ್ವಿ (ನಾ). ಒಳ್ಳೆಯ ಮನಸ್ಸಿನವನು; ಸಹೃದಯ: ಹರಿಣಧರಂ ಸೊಗಯಿಸಿದಂತಿರೆ ಕುಸುಮಿತ ಚೂತವಿತತಿ ಸೊಗಯಿಸಿತೆನಸುಂ ಸುರಭಿ ಸುಮನಸ್ವಿ ದೋಷಾಕರವಿಲಸಿತಮಪ್ಪೊಡಿಂತು ಯುಕ್ತಾಯುಕ್ತಂ (ಕವಿಗಾ. ೩-೩೩). [ಸಂ. ಸುಮನಸ್ವಿನ್]

ಸುಮನಸ್ಸಿಂಧು (ನಾ). ದೇವಲೋಕದ ನದಿ; ದೇವಗಂಗೆ: ಸುಮನಸ್ಸಿಂಧುವ ರೂಪದಿಂ ಮಟಿಯ ಪಾಂಗಿಂದಿನ್ನುವೆಟ್ಟರ್ಪುದಂದು ಮಹಾವಾಲದ ಪೊಯ್ಗೊಳು ಚ್ಛಲಿಸಿದಾಗ ಮುನ್ನೀರ ನೀರ್ (ಜಗವ. ೧-೫೫). [ಸಂ.]

ಸುಮನಸ್ಸು (ನಾ). ೧. ಒಳ್ಳೆಯ ಮನಸ್ಸು; ನಿರ್ಮಲಚಿತ್ತ. ೨. ತೃಪ್ತಗೊಂಡ ಮನಸ್ಸು. ೩. ಸಂತೋಷ; ಆನಂದ. ೪. ದೇವತೆ; ಸುರ: "ಆದಿತ್ಯಃ, ತ್ರಿದಶೇಃ, ಸುರಃ, ಸುಮ(ನಾಃ)ನಸ್ . . . ದೈವತಂ - ಈ ೨೧ ದೇವರ್ಕಳ ಪೆಸರ್" (ಹಲಾಯು. ೨-೪). ೫. ಹೂವು; ಪುಷ್ಪ: "ಪುಷ್ಪಂ, ಪ್ರಸವಃ, ಕುಸುಮಂ, ಪ್ರಸೂನಕಂ, ಸುಮನಸ್-ಈ ೫ ಪೂವಿನ ಪೆಸರ್" (ಹಲಾಯು. ೩೧-೩೨). ೬. ಪಂಡಿತ; ವಿದ್ವಾಂಸ. ೭. ವೇದಗಳನ್ನು ಕಲಿಯುತ್ತಿರುವ ವಿದ್ಯಾರ್ಥಿ. ೮. ಒಂದು ಬಗೆಯ ಮಲ್ಲಿಗೆ. [ಸಂ. ಸುಮನಸ್]

ಸುಮನಸ್ಸ್ಥಿತಿ (ನಾ). ೧. ದೇವತೆಗಳ ಆಯುಷ್ಯ. ೨. ಹೂವಿನ ಆಯುಷ್ಯ. ೧, ೨: ಸುಮನಸ್ಸ್ಥಿತ್ಯನುಗಮದೊಳ್ ದ್ರುಮದಿಂದೆ ನೆಲಕ್ಕೆ ಬೀಳ್ವವೋಲಾಯು ರ್ಮ್ಯಕ್ಕ್ರಮದೊಳ್ ನಾಕಾನೋಕಹದೆ ಮಹೀಭಾಗಕ್ಕೆ ವಂದನಂದಾ ಸುಮನಂ (ಚಂದ್ರಪ್ರ. ೯-೬೧). [ಸಂ.]

ಸುಮನೆ (ನಾ). ೧. ಒಳ್ಳೆಯ ಮನಸ್ಸುಳ್ಳವಳು: ಸುಮನೆಯ ಸುಖದೊಳಗೆ ಲಯವಹರೆಲ್ಲರು ಆ ಸುಮನನ ಭಾವವ ವಿಳಿಟಿಸುವ ಪರಿಯಿನ್ನಾವುದು (ಕೋಲಶಾಂ. ೧೬-೨); "ಜಗನ್ಮೋಹಿಯಪ್ಪ ಮಾಯೆ" (ಕೋಲಶಾಂ. ಟೀಕು). ೨. ಅತ್ಯುತ್ತಮ ಜಾತಿಯ ಮಲ್ಲಿಗೆ. [ಸಂ. ಸುಮನಾ]

ಸುಮನೋಗಣ (ನಾ). ೧. ದೇವತೆಗಳ ಗುಂಪು. ೨. ವಿದ್ವಾಂಸರ ಸಮೂಹ. ೧, ೨: ಭ್ರಮರಹಿತಾಮೋದ ಸುಮನೋಗಣ ಹೃದ್ಯಮ ವಿಕಲ ಸ್ವಸ್ಮಮುರಗ್ರಮನೋಜ್ಞ ಫಲದಮಖಿಲಾಗಮವಿನುತಂ ನೀತಿಸುರಮಹೀರುಹಮರಸಾ (ರಾಜಶೇ. ೧೩-೧೬). [ಸಂ.]

ಸುಮನೋಗಣಕೆ (ನಾ).ದೇವತೆಗಳ ವೇಶ್ಯೆ; ಅಪ್ಸರೆ: ರಂಭೆ ಕೇಳ್ ಸುಮನೋಗಣಕೆಯರೊಳತಿವಿರಾಜಿತ ಕೀರ್ತಿಯುತೆ (ಬಸವ. ೪೧-೧೪). [ಸಂ. ಸುಮನೋಗಣಕಾ]

ಸುಮನೋಗೋಪ (ನಾ). ೧. ಒಳ್ಳೆಯ ಮನಸ್ಸಿನ ಗೋಪಾಲ. ೨. ಒಂದು ಬಗೆಯ ಹುಳು; ಇಂದ್ರಗೋಪ. ೧, ೨: ಸುಮನೋಗೋಪ ಸಮಾವೃತಂ ಜಲಧರಶ್ಯಾಮಂ . . . ಗೋಪಾಲಲೀಲಾಸ್ಪದಂ (ಜಗವ. ೪-೩೬). [ಸಂ.]

ಸುಮನೋಜಾತ (ನಾ). ದೇವತೆಯ ಮಗ: ಕುಬೇರ ಕಿನ್ನರ ಮಾತ್ಸುಗಣ ಕರ್ಣನಲಿ ಸುಮನೋಜಾತ ಚಿತ್ರರಥಾದಿ ಗಂಧರ್ವರು ವಿಪಕ್ಷದಲಿ (ಅಮ್ಮಾಕ. ೨೨-೮). [ಸಂ.]

ಸುಮನೋಜ್ಞ (ನಾ). ಸೌಮ್ಯವಾದುದು; ಪ್ರಶಾಂತತೆ: "ಕಮನಂ ಶುಭಂ ವೇಶಲಂ ಶೋಭನಂ ಮಂಜು ಸುಮನೋಜ್ಞಂ . . . ಪ್ರವೇಕಮೆನೆ ಸೌಮ್ಯಕ್ಕೆ ನಾಮಮಕ್ಕುಂ" (ಮಂಗರಾ. ೧೨೬-೨). [ಸಂ.]

ಸುಮನೋದಾಮ (ನಾ). ಹೂವಿನ ಹಾರ; ಪುಷ್ಪಮಾಲೆ: ಜಳಗಂಧಾಕ್ಷತ ಪಾರಿಜಾತ ಸುಮನೋದಾಮಂಗಳಿಂ ರಾಮಕೇವಳಿಯಂ ಪೂಜಿಸಿ ಭಕ್ತಿಯಿಂದೆಱಗಿ (ಪಂರಾಮಾ. ೧೬-೭೫); ತಳಿದ ಸುಮನೋದಾಮಂ ನೀರೋಡಿ ಬಾಡಿದುದಾಗಳಾಗುಳಿಯ ನೊಳಕೆಯ್ದುತ್ತು (ಚಂದ್ರಪ್ರ. ೪-೬೭). [ಸಂ. ಸುಮನೋದಾಮನ್]

ಸುಮನೋಧರ್ಮ (ನಾ). ೧. ಒಳ್ಳೆಯ ಸ್ವಭಾವ: ಸುಮನೋಧರ್ಮಗುಣಂಗಳೊಳಮರ್ದಮರ್ದಂ ಕಱಿವ ನೇಮಿಚಂದ್ರನ ಬಾಣಂ ಭ್ರಮರಹಿತಂ ಮೃದುಹೃದಯಂಗಮಮೆನಿಪುದಿದಾವ ಕೌತುಕಂ ಬುಧಜನದಾ (ಪಾರ್ಶ್ವಪು. ೧-೬೮). ೨. ಪುಷ್ಪಧನುಸ್ಸು. ೩. ವಿದ್ವದ್ಧರ್ಮ. ೨, ೩: ಸುಮನೋಧರ್ಮಯುತಂ ಸದಾಳಿಗುಣಯುಕ್ತಂ ಕಾವನೇಂ ಕಾಯ್ವುದಂದಮೆ ಬೆಂಗೊಟ್ಟ ವಿಯೋಗಿವೃಂದಕೆ (ವೃತವಿ. ೪-೫೬). [ಸಂ.]

ಸುಮನೋನಿವೇಶ (ನಾ). ೧. ಉತ್ತಮಹೂವುಗಳಿಗೆ ಆಶ್ರಯವಾದುದು. ೨. ಒಳ್ಳೆಯ ಮನಸ್ಸಿಗೆ ನೆಲೆಯಾದುದು. ೧, ೨ :ಆವನಂ . . . ನಿರಂತರ ಸುಮನೋನಿವೇಶಮಾಗಿಯುಂ ಚೇತನತ್ವಾಭ್ಯುಪೇತಮಲ್ತು (ಚಂದ್ರಪ್ರ. ೧೫-೪೦ ವ). [ಸಂ.]

ಸುಮನೋನುರಾಗ (ನಾ). ೧. ಒಳ್ಳೆಯ ಪ್ರೀತಿ; ಉತ್ತಮವಾದ ಅನುರಾಗ. ೨. ಹೂವಿನ ಬಣ್ಣ; ಪುಷ್ಪವರ್ಣ: ಸುಮನಿಸಿದ ಚಂದ್ರಿಕೆಯ ಸೊಗಸುವೆಳ ಮಾದಳದ ಸುಮನೋನುರಾಗದಿಂ ಪಲವು ಬಣ್ಣಂಗಳಂ ತೆಗೆದುಟ್ಟು ರಂಜಿಸಿದರು (ಚೈಮಿಪಾ. ೩೦-೧೬). [ಸಂ.]

ಸುಮನೋಬಾಣ (ನಾ). ೧. ಹೂವನ್ನೇ ಬಾಣವಾಗಿ ಉಳ್ಳವನು; ಮನ್ಮಥ: ಸುಮನೋಬಾಣ ಜಯಪ್ರದಾಯಕತಮಂ ನಿನ್ನೀ ತ್ರಿಲೋಕಾಭಿರಾಮಮೆನಿಪ್ಪಾಕೃತಿ (ಕಾದಂಬ. ೫೫೨); ಉಚಿತಕ್ರಮಮಂ ಕಾಮುಕರಱಿವರೆ ಸುಮನೋಬಾಣಂಗೆ ತಕ್ಕುಗಿಡದವರುಂಟೆ (ಪಂರಾಮಾ. ೧೧-೮೨). ೨. ಒಬ್ಬ ಕವಿಯ ಹೆಸರು: ಕವಿ ಸುಮನೋಬಾಣನ ಯಾದವ ಕಟಕಾಚಾರ್ಯನೆಸವ ದೌಹಿತ್ರನೆ ನಾಂ ಕವಿ ಕೇಶವನೆಂ (ಕಮದ. ೨ ಪೀಠಿಕೆ). [ಸಂ.]

ಸುಮನೋಬಾಣಕ್ರೀಡೆ (ನಾ). ಮನ್ಮಥಕ್ರೀಡೆ: ಸುಮನೋಬಾಣಕ್ರೀಡೆಗ ಸುಮನೋಮಿಥುನಂಗಳಿಳಿಸಿ ರಮಿಯಿಪ ನಾನಾ ಸುಮನೋಲತಾಗೃಹಂಗಳ ಸುಮನಶ್ಶಯ್ಯೆಗಳಿನೊಪ್ಪುಗುಂ ಸೌಮನಸಂ (ಮಲ್ಲಿಪು. ೧೨-೮೬).

[ಸಂ. ಸುಮನೋಬಾಣಕ್ರೀಡಾ]

ಸುಮನೋಮಂಜರಿ (ನಾ). ಹೂವಿನ ಗೊಂಚಲು; ಪುಷ್ಪಗುಚ್ಛ: ನವಸೌರಭಮಂ ರಂಜಿಸಿ ತೋಱುವ ಸುಮನೋಮಂಜರಿಯಿಂ (ಕಾದಂಪು. ೭೪೨); ಚಮರರುಹಗ್ರಾಹಿಣಿಯರ್ ಸುಮನೋಮಂಜರಿಯ ಭಾರದಿಂ ಬಳ್ಕುವ ಜಂಗಮಲತೆಗಳಿನೆ . . . ಬೆಡಂಗಂ ಪಡೆದರ್ (ಮಲ್ಲಿಪು. ೩-೧೦೦). [ಸಂ. ಸುಮನೋಮಂಜರೀ]

ಸುಮನೋಮಣಿ (ನಾ). ದೇವತೆಗಳ ಮಣಿ; ಚಿಂತಾಮಣಿ: ಸುಮನೋಮಣಿ ಸನ್ನಿಹಾರದಲ್ಲಿ ಬನ್ನೋರಣಮಾಗಿ ನಿನ್ನ ಪರಿವನ್ದಿಜನಕ್ಕೆನಿಪೊನ್ದುದಾನ ಗಮ್ಭೀರತೆಯಾದುದೇಂ ಪೊಗಳ್ವೆ ನಾಂ (ಎಕ. VIII, ಸೊರಬ. ೨೬೧-೨೭; 1408). [ಸಂ.]

ಸುಮನೋಮಾರ್ಗಣ (ನಾ). = ಸುಮನೋಬಾಣ ೧: ಸುಮನೋಮಾರ್ಗಣನಲ್ಲಿ ನಿರ್ಮಿಸಿದ ಭೃಂಗೀಡ್ಯಾಲಸತ್ಪುಷ್ಪಚಾಪಮಿದೆಂಬಂತುಲಿ ನಿಳ್ದ ಸತ್ಕುಸುಮಮಲ್ಲೀವಲ್ಲಿ ಪರ್ಬರ್ಪ ವಿಭ್ರಮದಿಂದಾಮ್ರಮಹೀರುಹಂ . . . ಅಂತಿರ್ದುದು ತಾಂ ಲತಾವ್ಯತಕ ಮೆಂದಾಲಿಂಗನಪ್ರೌಢಿಯಂ (ಶಾಂತೀಶ್ವ. ೧೦-೧೦೫). [ಸಂ.]

ಸುಮನೋಮಾಲೆ, ಸುಮನೋಮಾಳೆ (ನಾ). = ಸುಮನೋದಾಮ: ಸುಮನೋಮಾಲೆಯುಮೊರ್ಮೆಯುಂ ಹಿಮದೊಳೀಂ ಬಾಡಿರ್ದಗಲ್ದಿರ್ಕುಮಗ್ರಿಮ ಭೂಪಾಲಶಿರೋಗ್ರಮಂ (ಶಾಂತಿಪು. ೯-೧೫೧). **ಸುಮನೋಮಾಳೆ**: ಕಲಶಂ ಜಾಗಂ ಧ್ವಜಂ ಕನ್ನಡಿ ಗುಡಿ ಸುಮನೋಮಾಳೆ (ಸುಕುಮಾ. ೫-೬೧). [ಸಂ. ಸುಮನೋಮಾಲಾ]

ಸುಮನೋಮಾಳೆ 'ಸುಮನೋಮಾಲೆ' ನೋ.

ಸುಮನೋಮಿಥುನ (ನಾ). ದೇವದಂಪತಿಗಳು; ಸುರದಂಪತಿಗಳು: ಸುಮನೋಬಾಣಕ್ರೀಡೆಗೆ ಸುಮನೋಮಿಥುನಂಗಳಿಳಿಸಿ ರಮಿಯಿಪ ನಾನಾ ಸುಮನೋಲತಾ ಗೃಹಂಗಳ ಸುಮನಶ್ಶಯ್ಯೆಗಳಿನೊಪ್ಪುಗುಂ ಸೌಮನಸಂ (ಮಲ್ಲಿಪು. ೧೨-೬೬). [ಸಂ.]

ಸುಮನೋಮೂರ್ತಿ (ನಾ). ದೇವತೆಗಳ ಮೂರ್ತಿ,—ಆಕಾರ: ಸುಮನೋಮೂರ್ತಿಗಳಪ್ರತರ್ಕ್ಯಮಹಿಮರ್ ತೇಜಸ್ಸಿಗಳ್ ದಿವ್ಯಕಾಂತಿಮಯರ್ ನೋಡೆ . . . ತನ್ವಂಗಿ ಕಂಡಳ್ಮಿದಳ್ (ನಳಚಂ. ೬೯೫). [ಸಂ.]

ಸುಮನೋರತ (ನಾ). ೧. ಹೂವುಗಳಲ್ಲಿ ಇಷ್ಟವುಳ್ಳವನು. ೨. ದೇವರಲ್ಲಿ ಭಕ್ತಿಯುಳ್ಳವನು. ೧, ೨: ಎಲ್ಲರುಂ ಸುಮನೋರತರ್ ಮಧುವ್ರತರ್ (ಚೈಮಿಪಾ. ೨-೧೦). [ಸಂ.]

ಸುಮನೋರಾಜ (ನಾ). ೧. ದೇವತೆಗಳ ಒಡೆಯ; ಸುರರಾಜ. ೨. ಪಂಡಿತಜನರಿಗೆ ಒಡೆಯನಾದವನು: ಯಶಶ್ಶ್ರೀಸಮಾಜಂ ನೈಜೋನ್ಮಂತ್ರಾಬ್ಧಿ ರಾಜಂ ಸುವಿಭವಸುಮನೋರಾಜನೀ ರೇಚಿರಾಜಂ (ಎಸಿ. XIV, ೨೮೧-೬೫; 1181; ಶಾಪಮಂ. ೧೭೪ ನೋ). [ಸಂ. ಸುಮನೋರಾಜನ್]

ಸುಮನೋಲಲನೆ (ನಾ). ದೇವತಾಸ್ತ್ರೀ; ಅಪ್ಸರೆ: ನಾಕವನ್ಮೆದಿ ಸುಮನೋಲಲನೆಯರ ಕುಂತಳಕೆ ಹಾಯ್ದುದು ಬಲದ ಪದಹತಧೂಳಿ ಗೆಲಿದುದು ವಾಜಪೇಯಿಗಳ (ಅಮ್ಮಾಭೀ. ೪-೬). [ಸಂ. ಸುಮನೋಲಲನಾ]

ಸುಮನೋಲೋಕ (ನಾ). ದೇವಲೋಕ; ಸ್ವರ್ಗ: ಸುಮನೋಲೋಕ ಸ್ವವಿಬುಧ ಸಮಾಜ್ಯೆಗಂ ನಾಡೆ ಮಾಡಿದಂ ಸಾರ್ಥತೆಯಂ (ಚಂದ್ರಪ್ರ. ೯-೫೬). [ಸಂ.]

ಸುಮನೋವನ (ನಾ). ಇಂದ್ರನ ಉದ್ಯಾನ; ನಂದನವನ: ಶರತ್ಸಮಯದಂತೆ ಸುಮನೋವನಾಭಿರಾಮಮುಂ . . . ಎಂಬ ಮಹನೀಯಮಹಿಮೆಯಂ ತಳೆದು (ಪುಷ್ಪಸು. ೯-೩೦ ವ). [ಸಂ.]

ಸುಮನೋವರ್ಷ (ನಾ). ಹೂವಿನ ಮಳೆ; ಪುಷ್ಪವೃಷ್ಟಿ: ಸಮನಿಸಿದತ್ತು ಜಯಶ್ರೀರಮಣಗೆ ಪರಿಣಯನಮಪ್ಪುದುಂ ಲಕ್ಷ್ಮಣನೊಳ್ ಸುಮನೋವರ್ಷಸಮನ್ವಿತಂ (ಪಂರಾಮಾ. ೯-೧೩೧). [ಸಂ.]

ಸುಮನೋವಲ್ಲಭ (ನಾ).= ಸುಮನೋರಾಜ ೧: ಸುಮನೋವಲ್ಲಭನಿವನೆಂದ ಮರಗಣಕ್ಕೆಲ್ಲಮಱಿಪುವಂತಾಕ್ಷಣದೊಳ್ ಸುಮನೋವರ್ಷಂ ಸುರಿದುದು ನಮೇರು ಮಂದಾರ ಪಾರಿಜಾತಪ್ರಭವಂ (ಪಾರ್ಶ್ವಪು. ೫-೮೮). [ಸಂ.]

ಸುಮನೋವಾಸ (ನಾ). ೧. ಹೂವುಗಳಿಗೆ ಆಶ್ರಯಸ್ಥಾನವಾದುದು. ೨. ಪಂಡಿತಜನಕ್ಕೆ ಆಶ್ರಯವಾಗಿರುವವನು. ೧, ೨: ವನದಂತಿಂದ್ರನ ಲೋಕದಂತೆ ಸುಮನೋವಾಸಂ ಸುಧಾಧಾಮನಂತಿನನಂತುತ್ಕಮಲಾಶ್ರಯಂ (ರಾಜಶೇ. ೩-೧೦). [ಸಂ.]

ಸುಮನೋವಿಶಿಖ (ನಾ). = ಸುಮನೋಬಾಣ ೧: ಸುಮನೋವಿಶಿಖ ವಿಜಯನಂ ಸುಮನದಿನರ್ಚಿಸುವ ಭಕ್ತಿ ಮೆಯ್ಯೆರ್ಚಿ ಕರಂ ಸುಮನಸ್ಸಮಿತಿಯನಾಯರ್ಚಿಮನಸ್ಸತಿಯರ್ತದೀಯವಲ್ಲೀವನದೊಳ್ (ಶಾಂತೀಶ್ವ. ೧೬-೪೬). [ಸಂ.]

ಸುಮನೋಹರ (ನಾ). ೧. ಬಹಳ ಚೆಲುವಾದುದು; ಅತಿ ಮನೋಹರವಾದುದು: ಸುಮನೋಹರಮೆನಿಪ ಸನತ್ಕುಮಾರ ಮಾಹೇಂದ್ರಕಲ್ಪ ರುದ್ರಕಲ್ಪಂಗಳ್ ಸಂದಮರ ಪಟುಪಟಹನಿನದದಿನಮರೀಜನಗೀತವಾದ್ಯದಿಂ ಕರಮೆಸೆಗುಂ (ಸುಕುಮಾ. ೧೧-೬೨); ವಿಮಳ ತಚ್ಚಂದ್ರಕಾಂತದ ಶಿಲಾತಳದಲ್ಲಿ ಸುಮನೋಹರಾತಿಶಯ ವೈರಾಗ್ಯಪೀಠಿಕೆಯಿನಮಮ ಭದ್ರಾಸನದೆ ಕುಳ್ಳಿರ್ದ ವಿಲಸಿತಶ್ರೀಗುರು (ವೀಶ್ವಪು. ೭-೬-೪೩). ೨. ದೇವತೆಗಳನ್ನು ಸಂಹರಿಸುವವನು; ರಾಕ್ಷಸ: ಸುಮನೋಹರಾಸ್ಪದಂ ಭೂಸ್ವರ್ಗ ಮಧ್ಯಮನುಪಮಮಪ್ಪೆಮಗೆ ಸಾಟಿಯೆಂತೆನುತೆ (ಚಿಪು. ೪೧-೨೨). ೩. ಹೂವುಗಳನ್ನು ಕಟ್ಟುವವನು; ಮಾಲೆಗಾರ. ೧, ೨, ೩: ನಿರುತಂ ಕುಮುದಶೋಭಿ ನೈಋತ್ಯದಂತೆ ವಾನರಸೈನ್ಯದಂತೆ ಕಮಲೋದರೋದ್ಭಾಸಿ ಭಾಸುರ ಶುಕ್ಲಪಕ್ಷದಂತಹಿತಲ್ಪದಂತೆ ಕವಿಸೇವಿತಂ ಗಗನದಂತೆ ಧರಣಿಪಾಲಯದಂತೆ ಸುಮನೋಹರಂ ನಿಶಾಚರವಂಶದಂತೆ ಮಾಲಾಕಾರಜನದಂತೆ . . . ತತ್ಸರಂ ಕಂಗೊಳಿಸಿತು (ಚೈಮಿಭಾ. ೧೫-೧೧). ೪. ಶಿವ; ಈಶ್ವರ: ಸೂರಿವಿನುತ ಸುಮನೋಹರನ [ಪಾಠಾಂ. ಮನೋಹರನ] ಪದವಾರಿಯಂ ಮುನ್ನೀಂಟೆ ದಿಟ್ಮಶರೀರಿಯಾದೆನು (ಬಸಪು. ೧೨-೪೭). [ಸಂ.]

ಸುಮಬಾಣ (ನಾ). ಹೂವಿನ ಬಾಣ; ಪುಷ್ಪಚಾಪ: ಕುಸುಮಶರನೆಂದು ನಿನಗಾರ್ ಪೆಸರಿಟ್ಟರೊ ಕಾಣೆನಕಟ ಸುಮಬಾಣಮುಮಂ ಪೊಸತೆನೆ (ಶಾಕುಂತ. ೩೨ ಅಡಿಪದ್ಯ). [ಸಂ.]

ಸುಮಹತ್ವ (ನಾ). ಅತಿಮುಖ್ಯವಾದುದು; ಬಹಳ ಪ್ರಮುಖವಾದುದು: ಇದು ನಿಮಿತ್ತಂ ನಿಮ್ಮ ಸುಮಹತ್ವದ ಘನತೆಯಂ ನೆನೆದು ಕರುಣಾಹೃದಯದಿಂದಮ್ಮೆಲ್ಲರಂ ರಕ್ಷಿಸಲು (ಬಸಪು. ೩೮-೭೪). [ಸಂ.]

ಸುಮಾನ. 'ಸುಮ್ಮಾನ' ನೋ.

ಸುಮಾನಗರಿ (ನಾ). (?): ಸಾಲ್ಗುಡಿ ಮಕರಟಕ್ಕೆ ಸತ್ತಿಗೆ-ಸೀಗುರಿ ಸೂರೆಪಾನ ಕುಂಚ ಚವುರಿ ಬೀಸಣಿಗೆ ಸುಮಾನಗರಿ ಡವಕೆ ಚೆಂಬಿನ ಚೀಲ . . . ಮುಂತಾದುವನ್ನು ಹಿಡಿದು (ಚಟ್ಟಅ. ೩೦-೮). [?]

ಸುಮಾನಗಾತಿ 'ಸುಮ್ಮಾನಗಾತಿ' ನೋ.

ಸುಮಾನುಕೊಡು (ಕ್ರಿ). ಪುಷ್ಪಿಕೊಡು: ಆಟಗಾರರನ್ನು ಹೊಗಳುತಾ ಬರಲು, ಅವನ ಜೊತೆಗೆ ಇನ್ನೊಬ್ಬ ಪ್ರಾಯದವನು ಇನ್ನೊಂದು ಹೋಳನ್ನು ಹೊಡೆಯುತಾ ಆ ಮುದುಕನ ಹೊಗಳಿಕೆಗೆ ಸುಮಾನು ಕೊಡುತಾ ಬಂದನು (ಅದೂಟ. ೧೭೪).

[ಸುಮಾನ್ಕು + ಕೊಡ್ಕು]

ಸುಮಾರ 'ಸುಮಾರು' ನೋ.

ಸುಮಾರು, ಸುಮಾರ (ನಾ). ೧. ಹೆಚ್ಚುಕಡಮೆ; ಅಜಮಾಸು; ಅಂದಾಜು: ಅವು ಮಾಘಮಾಸದ ಸುಮಾರಿಗೆ ಹೂ ಬಿಡುತ್ತವೆ (ಮುಂಬಯಿ. ೪-೩೯); ಅದರ ಸಂಬಂಧವಾದ ಉತ್ಸವಗಳು ಸುಮಾರು ಎರಡು ತಿಂಗಳ ಕಾಲ ರಾಜಧಾನಿಯಲ್ಲಿ ನಡೆದವು (ಕೃದೇವ. ೧೫). ೨. ಸಾಧಾರಣವಾದುದು; ಸಾಮಾನ್ಯವಾದುದು: ರೇವಕ್ಕನ ಮನೆತನ ಸುಮಾರು (ಚಳುಮ. ೨೭). ೩. ಅಪಮಾನ; ಅಗೌರವ: ನಾಕು ಮಂದಿ ಮುಂದೆ ಸುಮಾರು ಮಾಡಬೇಡ (ರೂಢಿ). ೪. ಸಂಖ್ಯೆ; ಅಂಕಿ: (ಕ). ಸುಮಾರ: ೧. ನಿನ್ನೆ ಮಧ್ಯರಾತ್ರಿಯ ಸುಮಾರಕ್ಕೆ ಅದು ಆಯಿತು (ಮುಂಬಯಿ. ೬. ೪-೫೨). ೨. ಕೆಳಗೆ ಬಿದ್ದ ಯಳಿಕ್ಕಿಂತ ಮೇಲೆ ಘಾಳಿಯಲ್ಲಿ ಹೋದ ಯಳಿಗಳು ಹೆಚ್ಚಿದ್ದರೆ ಆ ಅರಳಿಯು ಶಕ್ತಿಯಿಲ್ಲದ್ದು ಎಂದು ಹಲಕಿ ಸುಮಾರವೆಂದು ತಿಳಿಯುವುದು (ಮುಂಬಯಾ. ೪೦). [<— ಪಾರ. ಹಿಂ. ಮರಾ. ಸುಮಾರ್]

ಸುಮಾರ್ಗ (ನಾ). ಶುದ್ಧವಾದ ಕ್ರಮ; ಉತ್ತಮವಾದ ಶೈಲಿ: ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾಟ್ಪೆನೆಂಬುದುಂ ತೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋಟ್ಪೆನೆಂಬುದಂ (ಕವಿರಾ. ೨-೧೦೩); ಹೊನ್ನನ ಹಂಪನ ಸುಜನೋತ್ತಂಸನ ಸುಮಾರ್ಗವಿದಱೊಳ್ ಲಕ್ಷಂ (ಶಮದ. ೫ ಪೀಠಿಕೆ). [ಸಂ.]

ಸುಮಾಲತಿ (ನಾ). [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪ್ರತಿಪಾದದಲ್ಲಿ ಎಂಟು ಅಕ್ಷರಗಳನ್ನುಳ್ಳ 'ಅನುಷ್ಟುಭ್' ಛಂದಸ್ಸಿನ ಒಂದು ವೃತ್ತ: ನರಲಗಂಗಳೊಂದಿಯಾದರದೊಳಿರ್ದೊಡಿಂತಿದುಂ ಧರೆಯೊಳಾ ಸುನಾಮದಿಂ ಗುರುಕುಚೇ ಸುಮಾಲತೀ (ಛಂದೋಂಬು. ೨-೯೬).

[ಸಂ. ಸುಮಾಲತೀ]

ಸುಮಾಸಾರ (ನಾ). = ಸುಮನೋವರ್ಷ: ಕರೆದರ್ ದೇವರ್ ಸುಮಾಸಾರಮಂ (ವಿಷ್ಣುಪು. ೫-೧-೧೨೬). [ಸಂ.]

ಸುಮಿತ್ರ (ನಾ). ೧. ಒಳ್ಳೆಯ ಸ್ನೇಹಿತ. ೨. ಸೂರ್ಯ: 'ಸುಮಿತ್ರೋದಯ' ಪರಾ. [ಸಂ.]

ಸುಮಿತ್ರೋದಯ (ನಾ). ಸೂರ್ಯೋದಯ: ಅರಳ್ದುದು ಸುಧನ್ವನ ಮುಖಂ ಸುಮಿತ್ರೋದಯ[ಪಾಠಾಂ. ಮುಖಾಂಬುಜಮಿನೋದಯ]ದ ಕಮಲದಂತೆ (ಚೈಮಿಭಾ. ೧೧-೩೭). [ಸಂ.]

ಸುಮಿಷ್ಟ (ಗು). ೧. ಬಹಳ ಪ್ರಿಯವಾದ: ಆ ಅಪರಿಚಿತ ನಿರ್ಜನಸ್ಥಳದಲ್ಲಿ ಆ ಸುಮಿಷ್ಟ ಸುಂದರ ಸುಕೋಮಲೆಯ ಆಕಸ್ಮಿಕ ಹಸ್ತಸ್ಪರ್ಶದಿಂದ ಅವನ ಮೈಯೆಲ್ಲ ಥರಗುಟ್ಟಿ ನಡುಗಿತು! (ಅಂಬಿಕ. ೧೨೩). (ನಾ). ೨. ಇಂಪು; ಇನಿದು: ಮೃಣ್ಮಯಿಯ ಕೌತುಕಮಯ ಆ ಹಾಸ್ಯಧ್ವನಿಯು ಅದೆಷ್ಟೇ ಇಷ್ಟವಾಗಿದ್ದರೂ ಸುಮಿಷ್ಟವಾಗಿದ್ದರೂ ಅಪೂರ್ವನ ದುರ್ಭಾಗ್ಯಕ್ಕೆ ಅದು ಆಗ ಕಿಂಚಿತ್ ಕ್ಲೇಶದಾಯಕವೇ ಆಗಿತ್ತು (ಇಪ್ರಕ. ೫೭). [ಸಂ.]

ಸುಮುಖ (ನಾ). ೧. ಸುಂದರವಾದ ಬಾಯಿ. ೨. ಸುಂದರವಾದ ಮುಖ. ೩. ಒಳ್ಳೆಯ ವಾಕ್ಶಕ್ತಿಯನ್ನು ಹೊಂದಿರುವವನು; ಉತ್ತಮವಾಗ್ಮಿ: "ನುಡಿಯ ಜಾಣಂ ಸುಮುಖನಕ್ಕು" (ಮಂಗರಾ. ೭೧-೨೦). ೪. ಒಳ್ಳೆಯ ಮುಖವನ್ನು ಹೊಂದಿರುವುದು; ಸುಂದರವಾದುದು. ೫. ನಗುಮುಖದಿಂದ ಕೂಡಿದವನು; ಹಸನ್ಮುಖಿ: ಮಾಟಿದೇವನು ಹೊಯ್ದ ನಾದಕ್ಕೆ ಸುಮುಖರಾಗುತ್ತಾಗಳೊಂದೆಸೆ ಸಮತೆಗಟ್ಟಿ . . . ನುಡಿದರು (ಬಸಪು. ೩೭-೪೫); ಗಿರಿಜಾಯೆಯು ಬಂದಾಗ ಸುಮುಖನಾಗಿದ್ದು ಅವಳೊಡನೆ ಬೆಸ್ತರ ಮನೆಯ ಮುಂದೆ ಇದ್ದ ಕೊಳದಲ್ಲಿ ಮೃಣಾಳಿನಿಯನ್ನು ಕಂಡನು (ಬಂಕಿಮ. ೧೮೧). ೬. ಪಂಡಿತ; ವಿದ್ವಾಂಸ. ೭. ಮಗ; ಸುತ. ೮. ಗರುಡ. ೯. ದೊಡ್ಡ ರಸ್ತೆ; ಹೆದ್ದಾರಿ. ೧೦. ನಗೆ; ಹಾಸ. ೧೧. ಬೆನಕ; ಗಣಪತಿ: ಕವಿಮಧುರನ ಮಾತುಗಳೇಂ ಸವಿಯೊ ಮದಪ್ಲವಗಮೊರೆವ ಮಱಿದುಂಬಿಗಳಂ ತವೆ ತೊಲಗಿಸಿ ತನ್ನಯ ಮೊಱಗಿವಿಯಿಂ ಮೊಗಮೊಗೆದು ಸುಮುಖನಾಸ್ವಾದಿಸುವಂ (ಧರ್ಮನಾ. ೧-೭೪). " ಗರುಡನಲಿ ಪುತ್ರನಲಿ ಪಣಭೇದದಲಿ ಪಂಡಿತರಲಿ ಸುಮುಖಮೆನಿಕ್ಕು" (ಮಂಗರಾ. ೧೫೩-೬೪); "ತನೂಭವಂ ಸುಪರ್ಣಂ ಪಂಡಿತ ರಾಜವೀಧಿ ಸ್ಮೇರಂ ಸುಮುಖಾಭಿಧಾನಂ" (ನಾನಾರ. ೧೨೭). [ಸಂ.]

ಸುಮುಖವೃತ್ತಿ (ನಾ). ಸುಪ್ರಸನ್ನತೆ: ಶ್ರೀಗರ್ದವತ್ತುಗೆ ವರವಾಕ್ಕ್ರೀಗೆ ನಿಜಂ ಸುಮುಖವೃತ್ತಿ ತೋಳ್ಪೆಜಗು ಜಯಶ್ರೀಗೊಲವನೀಯೆ ನೆಗಳ್ದಂ ಭೂಗಧಿಪತಿ ಜೈನಜನಮನೋಹರಚರಿತಂ (ಚಂದ್ರಪ್ರ. ೨ ೧). [ಸಂ.]

ಸುಮುಖಿ (ನಾ). ೧. ಚೆಲುವಾದ ಮುಖವನ್ನುಳ್ಳವಳು; ಸುಂದರಿ. ೨. [ಛಂದ]ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪ್ರತಿಪಾದದಲ್ಲಿ ಹನ್ನೊಂದು ಅಕ್ಷರಗಳುಳ್ಳ 'ತ್ರಿಷ್ಟುಭ್' ಛಂದಸ್ಸಿನ ಒಂದು ವೃತ್ತ: ಸುಮುಖಿ —ನಜಜಲಗಂ (ಛಂದೋಂಬು. ೨-೧೨೮ ಅಡಿಟಿ).

[ಸಂ. ಸುಮುಖೀ]

ಸುಮುಹೂರ್ತ (ನಾ). ಒಳ್ಳೆಯ ಕಾಲ; ಶುಭಗಳಿಗೆ: ಮುತ್ತು ಉದಕವಾಗದು ಉದಕ ಮುತ್ತಿನಲಾಗದು ತತ್ತ್ವ ಘಟಿಸಿದ ಸು[ಪಾಠಾಂ. ಶುಭ]ಮುಹೂರ್ತದಲ್ಲಲ್ಲದೆ ಚಿತ್ತ ವೇದ್ಯವಾಗದು (ಬಸವ. ೮೦೬); ಸುಮುಹೂರ್ತದುದಯದೊಳ್ ನಿಜಕುಮಾರಿಯಂ ಕುಡೆ ವಿವಾಹವಿಭವಂ ಲೋಕೋತ್ತಮಮಾಗೆ (ಪಾಪಾನೇ. ೫-೨೬); ಅರಸ ಸುಮುಹೂರ್ತದಲಿ ನಿಜಮಂದಿರವ ಹೊಕ್ಕನು (ಕೌಶಿಕಾ. ೪೪-೪೮). [ಸಂ.]

ಸುಮೇರು (ನಾ). ಶ್ರೇಷ್ಠವಾದ ಮೇರುಪರ್ವತ: "ಮೇರುಃ, ಸುರಪರ್ವತಃ, ಸುಮೇರುಃ- ಈ ಮೂಱು ಮೇರುಪರ್ವತಂ" (ಹಲಾಯು. ೨೨-೧೩೫); ಕೆಲದೊಳ್ ಬೀಳ್ವ ಪತಂಗಾಕಳಿತ ಸುಮೇರು ಪ್ರದೀಪಶಿಖಿಯೊಳ್ ಘನಕಜ್ಜಳಮಂ ಕೊಳಲ್ (ಜಾಧಪು. ೧-೬೭); ಪರ್ವತಗಳಲ್ಲೆಲ್ಲಾ ಸುಮೇರು ಉತ್ಕೃಷ್ಟವಾಗಿರುವಂತೆ . . . ಕಲೆಗಳಲ್ಲೆಲ್ಲಾ ಚಿತ್ರಕಲೆಯು ಅತ್ಯುತ್ತಮವಾದುದು (ಧಾರವ. ೫೨೪). [ಸಂ.]

ಸುಮೇರುಮೇಖಳೆ (ನಾ). ಮೇರುಪರ್ವತದ ತಪ್ಪಲು: ನಮೇರುಭೂಜಮಂ ತಳೆದ ಸುಮೇರುಮೇಖಳೆ ಸುಧಾರಸಮಂ ತಳೆದೋಷಧೀಶನಿರ್ಮಳಕಳೆ . . . ಎಂಬ ಲೀಲೆಯಿಂ ತಳೆದಳೆಳಾಧಿರಾಣ್ಮಹಿಳೆಯಂದು ಜಿನಾರ್ಭಕನಂ ಸ್ವಗರ್ಭದೊಳ್ (ಚಂದ್ರಪ್ರ. ೧೨-೨೮). [ಸಂ. ಸುಮೇರುಮೇಖಲಾ]

ಸುಮೇಷು (ನಾ). = ಸುಮನೋಬಾಣ ೧: ಸುಮೇಷುಸೂತ್ರಧಾರಂ ತಳೆದಾಡಿಪೊಂದು ಪೊಸಸೂತ್ರದ ಪುತ್ರಿಕೆಯಂತಿರಾದಿದಳ್ (ರಾಜಶೇ. ೧೨-೯೫). [ಸಂ.]

ಸುಮ್ಮಗೆ (ಅ). ೧. ಮಾತಿಲ್ಲದೆ; ಮೌನವಾಗಿ: ಸುಮ್ಮನೆ — ಸುಮ್ಮಗೆ (ತಮಚ. ೩೦೦ ಪ್ರಯೋ); ಲೋಕಕ್ಕೆ ಧರ್ಮಾಧರ್ಮ ತೋರಿಸಲಿಕ್ಕೆ ಸುಮ್ಮಗೆ ಇದ್ದನು (ತಾತ್ವಸಿ. ೬೨-೧೨); ಕೆಲಕೆಲವು ಪ್ರಸಂಗಗಳಲ್ಲಿ ಮಾತಾಡುವುದನ್ನೇ ಬಿಟ್ಟು ಸುಮ್ಮಗೆ ಕೂಡ್ರಬೇಕು (ಮುಂಬಯಿ. ೪-೪೮). ೨. ಪ್ರತಿಫಲವಿಲ್ಲದೆ; ಉಚಿತವಾಗಿ: ಮರಿಮಗನಾದರೆ ಹರಗೋಲು ಸುಮ್ಮಗೆ ದಾಟಿಸ್ಯಾನೇ? (ಗಾಡಿ).

ಸುಮ್ಮಸುಮ್ಮಗೆ (ದ್ವಿರುಕ್ತಿ): (೬).

[ಸುಮ್ಮ + - ಅಗ್ಗೆ ./ ತಮಿ. ಚುಮ್ಮ; ಮಲ. ಚುಮ್ಮ; ಕೊಲಾ. ಸುರ್ಮಿ; ನಾಯ್ಕಿ. ಸುರುಮ್]

ಸುಮ್ಮನ 'ಸುಮ್ಮಾನ' ನೋ.

ಸುಮ್ಮನಿಸು (ಕ್ರಿ). ಸುಮ್ಮನಾಗಿಸು: ದಶಾನನಂ ಸನ್ನೆಯಿಂ ಸಾರಣನ ಸುಮ್ಮನಿಸೆ ನೋಡಿದನು ಮಂಡೋದರಿಯ ಮುಖವನಿಂಗಿತಕಟಾಕ್ಷದಿಂ (ಶ್ರೀರಾಮಾ. ೬೫೬-೬೭೯).

[ಸುಮ್ಮನೆ + - ಇಸ್ಸು]

ಸುಮ್ಮನೆ (ಅ). ೧. = ಸುಮ್ಮಗೆ ೧: ನಿ[ಮ್ಮೊ]ಡತಿಯ ಮನೆ ಯಾವುದು ಘಮ್ಮನೆ ಪೇಳೆಂದು ನೃಪತಿ ಬೆಸಗೊಳಲವಳತ್ಯುಮ್ಮಹದಿಂ ಕಿವಿಯೆಡೆಯಂ ಸುಮ್ಮನೆ ತೋಱುತ್ತ ಪೋದಳತಿಮುದದಿಂದಂ (ಪಣ್ಣಾಸ್ತ್ರ. ೩-೧೭); ನಾವೀ ಮುನಿಗೆ ಸುಮ್ಮನೆ ಪೋಪೆವೆನೆ ಶಾಪವೀವನು (ಕಂನಿ. ೫-೧೬). ೨. ಉಚಿತವಾಗಿ; ಬಿಟ್ಟಿಯಾಗಿ: ಸುಮ್ಮನೀ ಸುಕ್ಷೇತ್ರವಾಸಿ ವಿಹರಿಸಿದುವೇ ಅಮ್ಮಮ್ಮ (ಪದ್ಮರಾ. ೧೩-೪೦); ಸುಮ್ಮನೆ ಬರುವುದೆ ಮುಕ್ತಿ (ಪುರಂದ. ೧-೧೮೪ ಪಲ್ಲವಿ); ತನುವ ದಂಡಿಸುತುಗ್ರತಪದೊಳಾಚರಿಸಿ ಸುಮ್ಮನೆ ಸರ್ವಶಾಸ್ತ್ರಗಳ ಪಠಿಸುವರು (ಜಿನಮು. ೪೩-೨೬). ೩. ಕಾರಣವಿಲ್ಲದೆ; ಅಕಾರಣವಾಗಿ: ಸುಮ್ಮನದು ತಾ ಬಂದು ಮಾಡುವ ಕರ್ಮವಾವುದು (ಸಂಭಪ. ೧೮-೨೭); ಸುಮ್ಮನಪಕೀರ್ತಿಗೊಳಗಾಗಲೇಕೆ (ಕೃಮಿಧಾ. ೧೮-೫೪); ಸುಮ್ಮನೇತಕೆ ಮುನಿಸು? (ಕಏಪ್ರ. ೩೨-೧೯). ೪. ತೆಪ್ಪಗೆ; ನಿಷ್ಕ್ರಿಯವಾಗಿ : ಬ್ರಾಹ್ಮಣನು ಗಂಡನ್ನು ಹುಡುಕಿ ಹುಡುಕಿ ಸಾಕಾಗಿ ಸುಮ್ಮನೆ ಮನೆಯಲ್ಲಿ ಕೂತುಬಿಟ್ಟನು (ಹುಟ್ಟಿಹ. ೬೦).

ಸುಮ್ಮಸುಮ್ಮನೆ, ಸುಮ್ಮಸುಮ್ಮ (ದ್ವಿರುಕ್ತಿ): ಹೊಟ್ಟೆ ತುಂಬಿದಾಗ್ಯೂ ಸುಮ್ಮಸುಮ್ಮನೆ ಮೃಗಗಳನ್ನು ಕೊಲ್ಲುತ್ತದೆ (ಮುಂಬಯಿ. ೪-೩೭); ಬಯ್ದಾಡುತ ಸುಮ್ಮಸುಮ್ಮ ಬಿದ್ದಿಹನಗೊ ಅಣ್ಣ, ತಮ್ಮ (ಮುಕ್ತಕಂ. ೬೨-೧೫). ಸುಕಾಸುಮ್ಮನೆ, ಸುಖಾಸುಮ್ಮನೆ = ಕಾರಣವಿಲ್ಲದೆ; ನಿಷ್ಕಾರಣವಾಗಿ: ನೀನು ಸುಕಾಸುಮ್ಮನೆ ಯಾಕೆ ಅಳುತ್ತೀ? (ಮಲೆಮ. ೭೯೦); ಸುಖಾಸುಮ್ಮನೆ ಅಕ್ಕಯ್ಯನಿಗೆ ಬೇಸರವಾಗುವುದು ಬೇಡವಷ್ಟೆ (ಹೊಕ್ಕಳ. ೮೦). ಸುಮ್ಮನಾಗು = ಮೌನವಾಗು; ತೆಪ್ಪಗಾಗು: ಎಮ್ಮಕಣ್ಗಳ ಚೆಲ್ವನೀಕೆಯ ಕಣ್ಗೆ ಪದ್ಮಜನಿತ್ತನೆಂಬುಮ್ಮಳಂ ಪಿರಿದಾಗೆ ಪುಲ್ಲೆಯ ವಿಂಡುಗಳ್ ಕಡು ಚಿಂತೆಯಿಂ ಸುಮ್ಮನಾಗಿ (ಧರ್ಮಾಮೃ. ೩-೧೩೩). ಸುಮ್ಮನಿರ್, ಸುಮ್ಮನಿರು, ಸುಮ್ಮಿರು = ಮಾತಾಡದಿರು; ಮೌನವಾಗಿರು: ಸುಮ್ಮನಿರದೆ ಪಾಳಿಯಂ ಪಾಳಿಸುವಂ ಬನ್ನಿ (ಪಂಚತಂ. ೧೪೪-೧೮); ಅಂಜಿದಂತೆ ಬೆದಱುತಂ ಜಾನಿಸುವಂತೆ ಸುಮ್ಮನಿರುತಂ ಮೆಚ್ಚದಂತೆ ನಗುತ್ತಂ ಬೆಚ್ಚದಂತೆ ಪರಿತಂದು (ಬಸರ. ೧೦-೧೧೯); ಸುಮ್ಮಿರು ಧೃತಿಗೆಟ್ಟು ಮಾತಾಡಬೇಡ (ಮೋಹತ. ೨೭-೫೭). ಸುಮ್ಮನಿರಿಸು = ಮಾತಾಡದಂತೆ ಮಾಡು; ಮೌನವಾಗಿರಿಸು: ಆತನಂ ಸುಮ್ಮನಿರಿಸಿ ನುಡಿದಂ ಶಂಖನೆಲೆ ಮಹೀಪಾಲ (ಕೃಮಿಧಾ. ೧೨-೩); ಅವರು ಪ್ರಭಾವತಿಯನ್ನು ಗದರಿಸಿಕೊಂಡು ಸುಮ್ಮನಿರಿಸಿದರು (ಚಿಂಗಾಳ್ವ. ೫). [ಸುಮ್ಮ + - ಅನ್ಪಿ]

ಸುಮ್ಮಹಿಮ (ನಾ). ಒಳ್ಳೆಯ ಮಹಿಮೆಯನ್ನು ಪಡೆದಿರುವವನು; ಮಹಿಮಾವಂತ: ಹಮ್ಮಿನ ತಾಯಿಯ ತೋಳ ಬಾಪುರಿಯೊಳ ಘಮ್ಮನೆ ಘಲ್ಲೆಂಬ ಗೆಜ್ಜೆಯ ಧ್ವನಿಯೊಳ ಸುಮ್ಮಹಿಮನ ಕಿವಿಯಲ್ಲಿ ಝೌಕುಲಿಯೊಳ ತಿಮ್ಮರಾಯನಿಟ್ಟ ಸೊಬಗಿನ ಬಗೆಯೊ (ಪುರಂದ. ೪-೪೮-೧). [< ಸಂ. ಸುಮಹಿಮನ್]

ಸುಮ್ಮಾನ, ಸುಮಾನ, ಸುಮ್ಮನ (ನಾ). ೧. ಸಂತೋಷ; ಹಿಗ್ಗು: ಕತ್ತಲೆಯಲ್ಲಿ ಗತಿಯ ಕಾಣದೆ ದುಮ್ಮಾನ ನೆಲೆಗೊಂಡಿತ್ತು ನೋಡಾ ಸುಮ್ಮಾನ ಹೋಯಿತ್ತು (ಅಮಚಂ. ೪೦-೧೭೧); ಈ ಶಕುನ ಸುಮ್ಮಾನವಿದಕೇನಹುದು ಫಲ (ಕುಮಾಅ. ೧೪-೪); ಸುಕವಿಗಳ ಸುಮ್ಮಾನ ಸೂರಿಪ್ರಕರದಮಲಜ್ಞಾನ (ತೊರಾ. ೧-೧-೧೧). ೨. ತಮಾಷೆ; ವಿನೋದ: ವಿನೆಲವೊ ರಘುರಾಯರಲಿ ಸುಮ್ಮಾನವೇ ನಿನಗೆ (ತೊರಾ. ೬-೧೮-೨೫); ವಿನಿದಚ್ಚರಿಯಂದು ನೆರವಿಗರ್ಬಳಿಕೆ ಸುಮ್ಮಾನದೆ ಮೇಗ ನಿಟ್ಟಿಸುತ (ಕಂನಿ. ೯-೮೯). ೩. ಅಹಂಕಾರ; ಗರ್ವ; ಕೊಬ್ಬು: ತನಗೀಗ ಬಂದ್ಯೆಸಿರಿಯ ಸುಮ್ಮಾನದಿಂದ ಬೇಡುವುದೀಗ ಬಲ್ಲವರ ಸಮ್ಮತವೆ (ಸಮ್ಯಕ್ತ. ೮-೧೬). ೪. ಸಮೃದ್ಧಿ; ಯಥೇಚ್ಛ: ಹುಣಿಸೆಯ ಮರಗಳು ಸುಮ್ಮಾನದೆ ಬೆಳೆದಿಹವು (ಅಂಜಚ. ೨-೪೦). ಸುಮಾನ: ೧. ಶೃಂಗಾರಸಾರದ ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೋ (ಪ್ರಭುಲಿಂ. ೩-೨); ಓಂಕಾರವೆಂಬ ಮೇವನೆ ಮೇದು . . . ಶಿವಧ್ಯಾನವೆಂಬ ಮೆಲುಕಿರಿವುತ್ತೆ ಸುಮಾನದಿಂದಿರೆ (ಧೃರಸಾ. I.೬೬). ೨. ತಮ್ಮತನದ ಹೆಮ್ಮೆ ಹುಮ್ಮಸ್ಸು ಸುಮಾನಗಳಿಂದ ಹೃಷ್ಟಪುಷ್ಟರಾಗುವರು (ಚಿಟ್ಟಿಅ. ೩೫-೧೭). ಸುಮ್ಮನ : ೧. ಸುಮ್ಮನದಿಂ ಸತಿಸಹಿತ ಚಂದದಿಂ ನೋಳ್ಪಂ (ಶಾಂತೀಚ. ೧-೮೨); ಅಂತರ್ಗೃಹದೀ ಸುಮ್ಮನದಿ ಮಲಗಿರ್ದ ಕೃಷ್ಣರಾಯಂ ಕೇಳ್ದು (ನವಮೋ. ೧೧-೫೦). [< ಸಂ. ಸುಮನಸ್ ?./ ತೆಲು. ಸುಮಾಳ]

ಸುಮ್ಮಾನಂಗುಂದು (ಕ್ರಿ). ಹರ್ಷವಿಲ್ಲದಂತಾಗು; ಸಂತೋಷ ಕುಗ್ಗು: ಸುಮ್ಮಾನಂಗುಂದಿ ದುಮ್ಮಾನಂ ಕವಿದು (ವಾಗೀರ. ದೇ. ೨೬೫-೨೪). [ಸುಮ್ಮಾನ + ಕುಂದು]

ಸುಮ್ಮಾನಗಾತಿ, ಸುಮಾನಗಾತಿ (ನಾ). ಒಯ್ಯಾರಿ; ಬೆಡಗಿ: ಆ ರಾಜನನ್ನು ಹಲವಾರು ಸುಮ್ಮಾನಗಾತಿಯರು ಸುತ್ತುವರಿದಿದ್ದರು (ರೂಢಿ). ಸುಮಾನಗಾತಿ: ಸುಗಂಧಮಹಾರಾಜೇಂದ್ರನು ಸುಮಾನಗಾತಿಯರಾದ ಸುಂದರಿಯರಂ ನೋಡುತ (ಸೌಗಂಧಿ. ೪೭೭-೧೭). [ಸುಮ್ಮಾನ + - ಕಾತ್ತಿ]

ಸುಮ್ಮಾನಗೊಳ್ಳು (ಕ್ರಿ). ಹಿಗ್ಗು; ಸಂತೋಷಿಸು: ನನ್ನ ಈ ನವನಾಗರಿಕ ಪ್ರಶ್ನೆಯನ್ನು ಕೇಳಿ ಸುಮ್ಮಾನಗೊಂಡ ಅವರು ನಕ್ಕು ಉತ್ತರವಿತ್ತರು (ಭಾರವ. ೫೬೪).

[ಸುಮ್ಮಾನ + ಕೊಳ್ಳು (< ಕೊಳ್)]

ಸುಮ್ಮಾನವಳಿ (ಕ್ರಿ). = ಸುಮ್ಮಾನಂಗುಂದು: ಒಮ್ಮೆ ನಿನ್ನೊಳಗೆ ಪತಿಯ ಬಗೆ ದುಮ್ಮಾನವಾಗೆ ಸಮ್ಮತಿಸುತ ಮೊದಲು ಸುಮ್ಮಾನವಳಿಯದೆ ಸುಮ್ಮನಿಹುದು ಗುಣ (ಶಾಕುಂತ. ೫೭ ಅಡಿಟಿ). [ಸುಮ್ಮಾನ + ಅಳ್ಳಿ (< ಅಟ್ಟಿ)]

ಸುಮ್ಮಾನಿ೧ (ನಾ). ಸಂತೋಷವಾಗಿರುವವಳು; ಪ್ರಸನ್ನೆ: ಎನ್ನ ಮಗಳಿಗಣಿಯಲ್ಲ ಸುಮ್ಮಾನಿ ಸನ್ಮಾನಿಯಭಿಮಾನಿ ಕಡುನೀಚೆ ಕಮಲಾನನೆ (ಹಚಕಾ. ೪-೨೦); ಸೂಸಕದ ಸುಮ್ಮಾನಿ ಅಲ್ಲಿವಿನ ಪರಮಾಯುಷ್ಮೆ (ಉದ್ಭಟ. ೫೫೩ ವ). 'ಸುಮ್ಮಾನೆ' ಪರಾ.

[ಸುಮ್ಮಾನ + - ಇ೨]

ಸುಮ್ಮಾನಿ೨ (ನಾ). ೧. ಪ್ರಸನ್ನತೆಯಿಂದಿರುವವನು; ಸಂತೋಷದಿಂದಿರುವವನು: ತನ್ನೊಳಗೆ ಹೊಣೆ ಹೊಕ್ಕು ಕುಂಬಳದ ಸೂಚಿಯ ಸುಮ್ಮಾನಿಶರಣನ ನಿಲವ ನೋಡಾ (ಚನ್ನವ.ಕ. ೬೦೯-೧೩೬೩). ೨. ಅನುಭಾವಿ; ಜ್ಞಾನಿ: ವೇದದ ಕಡೆ ಶಾಸ್ತ್ರದ ಮೊದಲು ಪುರಾಣದ ಸುದ್ದಿಯ ಬಲ್ಲ ಸುಮ್ಮಾನಿಗಳಲ್ಲಿ . . . ಮಹಾಜ್ಞಾನಿ (ಮೋಳಮಾ. ೧೦-೩೭).. ೩. ಮಾನವಂತ; ಮಾನಿಷ್ಠ: ಅಪ್ಪುವರ ಪುಣ್ಯದ ಸಂಗತಿ ಅರಳೆಲೆಯ ಸುಮ್ಮಾನಿ ಸುಳಿಗುರುಳ್ಗಳಭಿಮಾನಿ ಗುರುತರ ಶಿವಧ್ಯಾನಿ (ಒಸರ. ೧-೧೪೭). [ಸುಮ್ಮಾನ + - ಇ೩]

ಸುಮ್ಮಾನಿಸು (ಕ್ರಿ). ೧. ಆನಂದಪಡು; ಸಂತೋಷಿಸು: ಸುರರು ಸುಮ್ಮಾನಿಸಿದರು (ತೊರರಾ. ೬-೪-೬೩). ೨. (ಆಲಂ) ಉಕ್ಕು; ಉಬ್ಬು: ಶರಧಿ ಸುಮ್ಮಾನಿಸಿತು (ತೊರರಾ ೬-೩೭-೬೬). [ಸುಮ್ಮಾನ + - ಇಸು೩]

ಸುಮ್ಮಾನೆ (ನಾ). = ಸುಮ್ಮಾನಿ೧: ಮೂಗುತಿಯ ಮುಗುಳ್ಗೆ ಅಂಜನದಮ್ಮತಕ್ಕೆ ತಿಲಕದ ಲಲಿತೆಗೆ ಅರಳೆಲೆಯ ತರಳಿಗೆ ಸೂಸಕದ ಸುಮ್ಮಾನೆಗೆ ರುದ್ರಾಕ್ಷಿಯ ಭದ್ರಾಂಗಿಗೆ ವಿಭೂತಿಯ ವಿಳಾಸನಿಧಿಗೆ (ಗಿರಿ. ೩-೯೧ ವ). [ಸುಮ್ಮಾನ + - ಎ೨]

ಸುಯ್೧, ಸುಯಿ೧, ಸುಯ್ಯು೧ (ಕ್ರಿ). ಸುಯ್ದು (ಭೂತನ್ಯೂ), ಸುಯ್ವ (ಭವಿಷ್ಯ). ೧. ಉಸಿರಾಡು; ಶ್ವಾಸೋಚ್ಛ್ವಾಸಮಾಡು: ''ಸುಯ್-ಉಚ್ಛ್ವಾಸೇ'' (ಶಮಧಾ); ಸ್ಮರಿಯಿಪಿನಿರ್ಪತ್ತಿರ್ಚಾಸಿರ ಬರಿಸಕ್ಕೊರ್ಮೆ ಮನದೊಳುಣಿಸಂ ಸುಯ್ಯಂ ಸುರಯಿಯ ಕಂಪನೆ ಗೆಲೆ ತತ್ಸುರತತಿ ಪನ್ನೊಂದು ತಿಂಗಳಿಂಗೊರ್ಮೆ ಗಡಂ (ಆದಿಪು. ೬-೧೬); ಪದಿನಾಲ್ಕುವರೆ ತಿಂಗಳಿಗೊರ್ಮೆ ಸುಯ್ವರು (ಶಾಂತೀಚ. ೪-೧೦೦). ೨. (ಚಿಂತೆ, ಆಯಾಸ ಮೊದಲಾದುವುಗಳಿಂದ) ಏದುಸಿರು ಬಿಡು; ನಿಟ್ಟುಸಿರು ಬಿಡು: ಮತ್ತೊಂದೆಸೆಯೊಳ್ ಒರ್ವಂ ವಿರಹಪರಿತಾಪತೊಳ್ ಸ್ಮೆರಿಸಲಾಜದೆ ಮದನನಂ ಬಯ್ದು ಬೆಚ್ಚನೆ ಸುಯ್ದು ತನ್ನ ಕೆಳೆಯಂಗಿಂತೆಂದಂ (ಆದಿಪು. ೧೨-೬೨ ವ); ತನ್ನ ಮಡಗಿದ ಕೂಟಂ ನಾಂ ತಿಂಬುದನಱಿದು ಸುಯ್ಯುತ್ತಿರೆ (ಪಂಚತಂ. ೩೦೩-೮); ಅಗ್ಗಳೆಯರನು ಮೂದಲಿಸಿ ಬಯ್ದನು ಸುಯ್ದು ಕುರುರಾಯ (ಕುವಾಡ್ರೋ. ೫-೮೧). ೩. (ಆಲಂ) ಉರಿ; ನೋಯು: ನಿರಂತರಂ ಪೊಳೆವ ಬಾಳುಡಿ ಸುಯ್ವ ನವವ್ರಣಂಗಳೊಳ್ ಪೊಡರ (ಪಂಪಭಾ. ೧೧-೫೮). **ಸುಯಿ೧** : ೧. ಪನಿ ಮೂಗಿನೊಳವರೆ ಸುಯಿದನೊರ್ಮೆ ಜಿನ (ಸಾಳ್ವಭಾ. ೩೩-೬೪). ೨. ಅಱಸುತ್ತ ಅಳಲುತ್ತ ಕಾಣದೇ ಸುಯಿ[ಪಾಶಾಂ. ಳ]ದು ಬಂದು ಕಂಡೆ ಶರಣರ ಸಂಗದಿಂದ (ಮಹಾದೇ. ಬ.೨೯-೬೦); ಉಮ್ಮಳಿಸುತಸುಯಿವುತಲಿರ್ದವರಾನು ತಮ್ಮ ನಾನು ಹೇಳುವೆನು (ಧಸ್ಮಚ. ೩೪೪). **ಸುಯ್ಯು೧** : ೧. ಬೆಚ್ಚನುಸಿರು ಸುಯ್ಯುತಾ (ಕವಿಸೋ. ೨೩-೨). [ದೇ. ॥ ತುಳು. ತುಯಿಲು, ಸುಯಿ, ಸುಯಿಲು, ಸುಯ್ಯು. ಪರ್ಜ. ಚುಯ್ಯೆ]

ಸುಯ್೨, ಸುಯಿ೨, ಸುಯ್ಯು೨ (ನಾ). ೧. ಉಸಿರು; ಉಚ್ಛ್ವಾಸ: ಅವರ ಸುಯ್ಗಳ ಗಾಳಿಯೊಳೊಯ್ಯನೊಯ್ಯನಳ್ಳಾಡುವುದಾಯ್ತು ತತ್ಸುರತಮಂದಿರದುದ್ಯಳ ದೀಪಿಕಾಂಕುರಂ (ಪಂಪಭಾ. ೩-೧೩); ಆ ಪೀತ ಸೋಮರಸಗಂಧೋಪೇತಮೆನಿಪ್ಪ ಸುಯ್ಲೆ ಸುಳಿವಳಿನಿಕರಂ (ಕಾದಂಪು. ೨೩೫); ತಣ್ಪುವೆತ್ತ ವಿಜಯಾವತಿದೇವಿಯ ಮೆಯ್ಲೆ ಸುಯ್ಲೆ ಸಂಭ್ರಮದೊಳ್ ಬರ್ಪ ಷಟ್ಪದಸಮಾಜದ ಝಂಕೃತ ಮಂಗಳಾನಕಪ್ರಮುದಿತನಾದಮಾಗಿರೆ (ಕುಸುಮಾ. ೫-೧೨೭). ೨. ಚಿಂತೆ, ಆಯಾಸ ಮೊದಲಾದುವುಗಳಿಂದ ಬಿಡುವ ಉಸಿರು; ನಿಟ್ಟುಸಿರು: ಮನ್ಮಥಶಿವಿಜ್ಞಾಲಾಳಿ ತಳ್ತೀಜಿ ಬೇಯದೆ ಕಾಯ್ದೋಡಿನ ಜೋಳದಂತಲರ್ದೂಡಾ ಕಂಪುಂ ಮನಸ್ತಾಪಮುಂ ಪುದಿದತ್ತಂ ಬರೆ ಸುಯ್ ಪೊದಬ್ದು ಬಿಸಿದುಂ ಕಮ್ಮಿತ್ತುಮಾಯ್ತೋಪಳಾ (ಕಾವ್ಯಸಾ. ೫೮೮ ಕೂದ್ರಕ); ಮುಖವೇಂದು ಬಿಗುರ್ತಿರೆ ಸುಯ್ಯ ಬೆಂಕೆಯುಂ ನಿಡುಪಮಳುಂಬಮಪ್ಪಿನೆಗಂ (ಅಜಿಪು. ೬-೧೨೧); ಶ್ರಮಶ್ಯಾಂತ್ಯಾಕ್ರಾಂತನಾಗಿ ಮೇಗುಸಿರ್ವಟ್ಟ ಸುಯ್ಯುಂ (ಪಂಚತಂ. ೭೬-೫). **ಸುಯಿ೨** : ೧. ಭೀಮಸೇನನ ದಂಡಿಯನು ದಟ್ಟಿಯಿಸೆ ಸುಯಿ ದಳ್ಳುರಿಯ ಚೂಣಿಯಲಿ (ಕುವ್ಯಾಗ. ೮-೨೨); ಸೋಕು ಸುಯಿ ನುಡಿ ನೋಟಮನಮೇಕ್ಕೆಕಪರುಷಗಳಾಗಿ ವೇದಿಸಿ (ಪ್ರಭಲೀ. ೯-೨೯); ಸಿರಿಮೊಗವು ಬಾಡಿದೆ ಕಟಾಕ್ಷದೊಳರಳಿ ಸರಳಿಡೆಯಾಡದಿವೆ ಸುಯಿ ಸರಳವಾಗಿರೆ (ಸಾಳ್ವಭಾ. ೩-೧೮). **ಸುಯ್ಯು೨** : ೧. ಸೋಹಂ ಎಂದು ಸಾರುವ ಸುಯ್ಯನ್ನು ನಂಬದಾದನು (ನಾಡೋಜ. ೩೭೮).

ಸುಯ್ದಾಡು = ಆಯಾಸಗೊಳ್ಳು; ಸುಸ್ತಾಗು: ಎಲ್ಲಲ್ಲೂ ಸುಳಿದಾಡಿ ಸುಯ್ದಾಡಿ ಬಂದೆ (ಕಠಶ್ರಾ. ೨-೧೨). [< ಸುಯ್೧./ ತುಳು. ಸುಯ್ಯು]

ಸುಯ್ನಡುಗು (ಕ್ರಿ). ಉಸಿರು ನಡುಗು; ಶ್ವಾಸ ಕಂಪಿತವಾಗು: ಆ ತ್ರಿಜಟೆ ಸುಯ್ ನಡುಗುತಾಕೆಯಂ ಸಂತಯ್ಸುತಿರೆ (ಶ್ರೀರಾಮಾ. ೬೩೬-೨೪೬).

[ಸುಯ್೨ + ನಡುಗು೧]

ಸುಯಿ೧ 'ಸುಯ್೧' ನೋ.

ಸುಯಿ೨ 'ಸುಯ್೨' ನೋ.

ಸುಯಿಗಂಪು 'ಸುಯ್ಗಂಪು' ನೋ.

ಸುಯಿದಾನ, ಸುಯಿಧಾನ, ಸುಯ್ದಾನ, ಸುವಿದಾನ (ನಾ). ೧. ಕಾವಲು ಕಾಪು; ರಕ್ಷಣೆ: ಶಿವಸಾಮರ್ಥ್ಯಮಂ ನೋಡದೆ ಸೂರುಳಂ ಸುಯಿದಾನಂ ಮಾಡದೆ (ಸಂಬಿರ. ೧೪-೮೯); ಭಗೀರಥನಂದನರ ಸುಯಿದಾನ[ಪಾಶಾಂ. ಸುಯ್ದಾನ] ನಿನ್ನದು ಮುಂದನಱಿದಾಹವವನೆಸಗುವುದಣುಗ(ತೊರರಾ. ೬-೩೫-೧೭). ೨. ಎಚ್ಚರಿಕೆ; ಜಾಗರೂಕತೆ: ಭೈರವದೇವ ತಮ್ಮ ಶೀಲಕ್ಕೆ ತಿಲವ ಗಾಣವನಾಡುತ್ತಾ ಸುಯಿದಾನದಿಂದಿರೆ (ಭೈರೂ. I, ೮). ೩. ಕಾವಲುಗಾರ; ಪಹರೆಯವನು: ಪೂವಡಿಗರಂ ಬಾಗಿಲವರಂ ಸುಯಿದಾ[ಪಾಶಾಂ. ಧಾ] ನರಂ ಹಲವಾಳುಗಳನಾಯ್ದು (ಬಸಪು. ೧೬-೧೩). ೪. [ವೀಶೈ] ಗುರು, ಲಿಂಗ, ಜಂಗಮರಿಗೆ ಅರ್ಪಿಸುವ ನೈವೇದ್ಯ: ''ಸುಯಿದಾನ – ನೈವೇದ್ಯ ಪದಾರ್ಥಗಳು'' (ಶರಶಾ. ೨೪-೬); ನೀನಿಕ್ಕಿದ ಸುಯಿದಾನವನೊಲ್ಲದೆ ಬೇಱೆ ಬಯಸಿದೊಡೆಂತಹಾದಯ್ಯ (ಮಹಾದೇ. ಬ.೪೮-೧೧೬); ಶ್ವಪಚಯ್ಯನೇಕಾಂತದಡವಿಯೊಳಗೊಬ್ಬನೇ ತಪನನೇತ್ರಂಗೆ ಸುಯಿದಾ[ಪಾಶಾ. ಧಾ]ನ ಬೋನವ ಮಾಡೆ (ಲಕಿಟೀ. ೬೭-೧೬೦). **ಸುಯಿಧಾನ**: ೧. ಸೌಕುಮಾರ್ಯಮಂ ಸುಯಿಧಾನಂ ಮಾಳ್ಪಂತೆ ಸೊಬಗಂ ಸಂವರಿಸುವಂತೆ . . . ಪಾರ್ವತಿಯಂ ಸಲಹುತ್ತುಂ (ಗಿರಿ. ೩-೧೧೯ ವ); ರಾಯನ ಕೆಲಬಲದ ಸುಯಿಧಾನದಲಿ ರಿಪುವಳಯಧೂಳೀಪಟನು ಹೊಕ್ಕನು ರಣವನು (ಕುವಾಡ್ರೋ. ೪-೧೪). ೨. ಶುಚಿರುಚಿಯಪ್ಪಂತೆ ಸುಯಿಧಾನದೊಳ್ಪೆದೆ ಪಚನಗೈವುದು ಭಾವೆಯರು (ಪದಿಪು. ೮-೨೬). ೪. ಹೂಣೆದಾತನ ಮನೆಯ ಹೊಕ್ಕು ಸುಯಿಧಾನವ ಕೊಂಡರೆ ಕುಂಭೀಪಾಕ ನಾಯಕನರಕ ತಪ್ಪದಯ್ಯ (ಅದಮ. ೧೦-೧೪). ೫. ಮನಶ್ಶಾಂತಿ; ಚಿತ್ತಪ್ರಶಾಂತತೆ (?): ಸರ್ವಜೀವದೊಳಗೆ ಚೇತನಾತ್ಮಕ ಶಿವನೆಂದು ಮಾಡುವದು ಭೂತದೈವಕ್ಕಿಕ್ಕುವುದು ಸುಯಿಧಾನದ ಕೇಡು (ಚನ್ನವ. ೫೬-೧); ಚಿತ್ತದ ದೃಢನಿಷ್ಠೆಯ ಪೂಜೆಗಳಂ ಮಾಡುವದತಿ ಸುಯಿಧಾ[ಪಾಶಾಂ. ದಾ]ನಗಳಿಂದಂ ಕೂಡೆ ಭವಿಯತ್ಯಜಿಸುವುದಱಿಂದ (ದೀಕ್ಷಾಬೋ. ೭೬-೨೯). **ಸುಯ್ದಾನ**: ೧. ಕರೆದು ಸಾತ್ಯಕಿ ಭೀಮನನು ನೃಪವರನ ಸುಯ್ದಾನದಲಿ ನಿಲಿಸಿದನು (ಕುವಾಡ್ರೋ. ೯-೩೪); ಅಪ್ರರ್ಗೆರಣದ ಸುಯ್ದಾನಮಂ ಪೇಳ್ದು ನಿಜಬಲಸಹಿತ ಪಾರ್ಥಸುತನನುಮಾದನು (ಜೈಮಿಭಾ. ೨೪-೨೯). ೨. ನಾನೆ ಸುಯ್ದಾನದಿಂದಂ ಬಂದು ಕಳುಪುವೆಂ (ಇಪರ. ದೇ. ೪೦-೧); ಮೋಸವೋಗದಿರೆನುತ್ತಡಿಗಡಿಗೆ ಸುಯ್ದಾನವಂ ಮಾಳ್ಪ ಭಟರು (ಚಬಪು. ೪೨-೧೦). ೬. (?): ಶಿಕ್ಕರದ ತತ್ಸರೋವರವನೀಕ್ಷಿಸಿ . . . ತನ್ನ ಪ್ರತಿಬಿಂಬ ಶಶಿಯಕಾಂತ ಕಲ್ಗಳೊಳು ಮಾರ್ಪೊಳೆಯಲವನು ನೋಡುತ್ತ ಸುಯ್ದಾನದೊಡನೇ (ನವನೋ. ೮-೬೫). **ಸುವಿದಾನ**: (೬). [< ಸಂ. ಸುವಿಧಾನ]

ಸುಯಿದಾನಿ, ಸುಯಿಧಾನಿ, ಸುಯ್ದಾನಿ, ಸುವಿದಾನಿ (ನಾ). ಎಚ್ಚರಿಕೆಯಿಂದಿರುವವನು; ಜಾಗರೂಕ: ಗೆಯ್ಯಬಲ್ಲಹ ಕಮ್ಮಿತಿಗನಲ್ಲಯ್ಯನತಿ ಸುಯಿದಾ[ಪಾಶಾಂ. ಧಾ]ನಿ ತಾ ಕಕ್ಕೆಯ್ದನಂತರ್ವರ್ತಿ ಸಾಮಂತಂ ಮಲಯರಾದಂ (ಬಸಪು. ೯-೪೬). **ಸುಯಿಧಾನಿ**: ಸರ್ವಸುಯಿಧಾನಿ ಎಂದೆನಿಸಿಕೊಳಬಲ್ಲಡೆ ಬಂದ ಕಾಮಕ್ರೋಧವ ಲಿಂಗಾರ್ಪಿತವ ಮಾಡಬೇಕು (ಅವಚಂ. ೬೯-೧೬೮). **ಸುಯ್ದಾನಿ**: ಕಮಳದ ಪರಿಮಳ ನಿಳಯನು ಸುಯ್ದಾನಿಯಾದ ಶರಣ (ಅವಚಂ. ೨೮೬-೧೨೯೯); ಗುಣಕಮಳ

ಕುಸುಮ ಪರಿಮಳನಿಳಯನು ಸುಳುಹು ಸುಯ್ದಾನಿ ಮಹಿಮ ಶರಣ (ಶವಗೀ. ೫೨-೨೫೦); ಕುಲಛಲ ಮೊದಲಾದಪ್ಪವುದಗಳ ನೀಗಿದ ಸುಯ್ದಾನಿ (ಮೈಲಾರ. ೧೪೭-೪). **ಸುವಿದಾನಿ:** (ಕ). [ಸುಯಿದಾನ + - ಇ]

ಸುಯಿಧಾನ 'ಸುಯಿದಾನ' ನೋ.

ಸುಯಿಧಾನಿ 'ಸುಯಿಧಾನಿ' ನೋ

ಸುಯಿಲ್, ಸುಯಿಲು (ನಾ). ೧. ಉಸಿರು; ಶ್ವಾಸ: ಕೋಕಿಲಂ ಧ್ವನಿಗೆ ತಂಬೆಲರು ಸುಯಿಲ್ವೊಪ್ಪುವ ಗಿಳಿ ನುಡಿಗೆ ಲತೆ ನಡುಗೆ . . . ತಳಿರು ಪದತಳಕೆ ಹುರುಡಿಸುವ ರೂಪಂ ತಾಳ್ದ ವನಿತೆಯರು ಸುಳಿದರು (ಹಚಕಾ. ೪-೪೨). **ಸುಯಿಲು:** ೨. (ಕೋಪ, ದುಃಖ ಮುಂತಾದುವುಗಳನ್ನು ವ್ಯಕ್ತಪಡಿಸುವ) ನಿಡಿದಾದ ಉಸಿರು; ನಿಟ್ಟುಸಿರು: ಮೊಗದ ಹೊಗರವಗಡಿಸೆ ಸುಯಿಲಲಿ ಹೊಗೆಯ ಹೊದಱಂಕುರಿಸೆ ಬಿಡುಗಣ್ಣುಗಳೊಳೊಕ್ಕುದು ಕೆಂಪು (ಕುವ್ಯಾಭ. ೬-೨೦); ನಿಜಾಂತಃಕರಣದತುಳವ್ಯಥೆಯ ಸುಯಿಲಿ [ಪಾಠಾಂ. ಸುಯ್ಲಿ]ನ ಶರದ ತೂಗಿನ ತಳ್ಳವಾಜಿನಲಳಲಿದಳು ಕಾಂತೆ (ತೂರರಾ. ೨-೩-೪೦); ಸನ್ನೆಯ ನಸುವಾತುಗಳ ನೆಗಳ್ದ ಸುಯಿಲ ನಾಚಿಕೆಯ ಗುಹನೆಸುಗೆಯಿಂ ಸೀಳ್ದ ಮೆಯ್ಗಳ ಖಿಳರ್ ಬಂದು (ಚಿಬಪು. ೫೦-೩); ಹಿಡಿದೊತ್ತಿ ತಡೆದಿಹ ಸುಯಿಲನು ಕಿವಿಗೊಡುತ (ಗಾಥಾಸ. ೭-೨೬). 'ಸುಯ್ಯಲ್' ಪರಾ. [ಸುಯ್ + - ಇಲ್]

ಸುಯಿಲು 'ಸುಯಿಲ್' ನೋ.

ಸುಯಿಲ್ಗಂಪು (ನಾ). ಉಸಿರಿನ ಸುಗಂಧ: ಕರಕಮಲದಿಂ ಪುಷ್ಪವಿರದೆಯೇರಿಸಿ ಸುಯಿಲ್ಗಂಪಿನುರೆ ಧೂಪ ನೇತ್ರಜ್ಯೋತಿಯಂ ಬೆಳಗುತೆ (ಪವಮೋ. ೨೧-೬೨).

[ಸುಯಿಲ್ + ಕಂಪು]

ಸುಯಿಲ್ಗರೆ (ಕ್ರಿ). ನಿಟ್ಟುಸಿರು ಬಿಡು: ನೊಂದು ನೋಯದಲಿ ಮೊಗಗಂಟಿಕ್ಕಿ ತಿರುಹುತ್ತ ಸುಯಿಲ್ಗರೆವುತಿರಲಾಗಳು (ನವಮೋ. ೧೫-೧೩). [ಸುಯಿಲ್ + ಕರ್]

ಸುಯೋಗ (ನಾ). ಒಳ್ಳೆಯ ಯೋಗ; ಅದೃಷ್ಟ: ಆರಂಭದಲ್ಲಿಯೇ ಸೂತ್ರಗಳ ಮತ್ತು ಲಕ್ಷಣಗಳ . . . ಗೋಜಿಗೆ ಹೋಗಬೇಕಾಗಿಲ್ಲವೆನ್ನುವುದು ನಮ್ಮ ಸುಯೋಗ (ಸಾಹಿಪ್ರ. ೬೨); ತೊಳಿ ಜೇನುಗಳ ಸವಿಯ ಸುಯೋಗಪ್ರಾಪ್ತಿಗಾಗಿ ಹಾತೊರೆದರು (ಹಸುಹೂ. ೫೧). [ಸಂ.]

ಸುಯೋಧನ (ನಾ). ೧. ಚೆನ್ನಾಗಿ ಯುದ್ಧಮಾಡುವವನು. ೨. ಧೃತರಾಷ್ಟ್ರನ ಹಿರಿಯ ಮಗ; ದುರ್ಯೋಧನ: ಗುರುಗಳಂ ಕುಲವೃದ್ಧರನಾಜಿಗುಯ್ದು ಕೆಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ (ಪಂಪಭಾ. ೧೦-೧೬); ಸುಯೋಧನವಸುಮತೀಶನ ವೈಭವದಲಾಸ್ಥಾನ ಚೆಲುವಾಯ್ತು (ಕುವ್ಯಾಉ. ೮-೩೪).

[ಸಂ.]

ಸುಯ್ಗಂಪು, ಸುಯಿಗಂಪು (ನಾ). ಉಸಿರಿನ ಸುವಾಸನೆ; ಶ್ವಾಸೋಚ್ಛ್ವಾಸದ ಸುಗಂಧ: ಅಧರರಸದ ಸುಯ್ಗಂಪಿಂದಾಗಳ್ ಕವಿ ಮೆಯ್ಮಣ್ಣಾಲಗೆ ವಿಳಸನ್ಮಾಸಿಕಮನಲ್ಲಿ ತಣಿಪುತಿರ್ದಳ್ (ಗಿರಿ. ೪-೧೫೧); ನಳಿದೋಳ್ಗಳ್ ಶಾಖೆಯಂ . . . ಕುಚಂಗಳ್ ಫಲಮಂ ಸುಯ್ಗಂಪು ಕಂಪಂ ಮಿಗೆ ಸೊಗಯಿಸಿತು (ಪುಷ್ಪಪು. ೭-೨೯); ಅರೆವ ಚಂದನಕೆ ನಱುಸುಯ್ಗಂಪಿಗೆಱಪಳಿಗಳುರವಣೆಗೆ ಸತಿ ರನ್ನದೊಡದೋಳನೆತ್ತುತಿರೆ (ಭಾವಚಿಂ. ೨-೧೧). **ಸುಯಿಗಂಪು:** ಸಂಪಗೆಯರಲ್ಗಳ ಮಾಱಲೆಂದೊರ್ವಳು ಕೆಂಪಿನಿಂದಿರುತಿರಲವಳ ಸೊಂಪಿನ ನಾಸಾಪುಟದ ನಸು ಸುಯಿಗಂಪು ಸಂಪಗೆ ಪೂಗಂಪ ನಗಲು (ಅಂಚಿಚ. ೩-೫೫). [ಸುಯ್ + ಕಂಪು]

ಸುಯ್ಗರೆ$_1$ (ಕ್ರಿ). ನಿಟ್ಟುಸಿರು ಬಿಡು: ಮಡದಿಯರ ಮೋಹರವೆ ಪೇಳೆಂದು ಚಿಂತೆಯಮ್ಮಡಿಯಾಗಿ ಸುಯ್ಗರೆವುತಿರಲು ಆಳಿಯರೆಲ್ಲ ಬೆಬಗಾಗಿ ಚಿಂತಿಸುತಿರೆ (ಪ್ರಾಥರಾ. ೬-೫೧). [ಸುಯ್ + ಕರ್]

ಸುಯ್ಗರೆ$_2$ (ನಾ). ಉಸುರಿನ ಸದ್ದು: ಅವಳ ಕಾಲ ಹೆಜ್ಜೆ, ಬಳೆಯ ಸಪ್ಪಳ, ಬಾಯಿಯ ಸುಯ್ಗರೆ ಎಲ್ಲವೂ ಕೇಳದಾದವು (ಕನಕ. ೧೧೬). [ಸುಯ್ + ಕರ್]

ಸುಯ್ತ (ನಾ). ಉಸಿರು; ಶ್ವಾಸ: ಸುಯ್ತಂ, ಸುಯ್ತಂಗಳ್ (ಶಬ್ದಾನು. ೫೩ ಪ್ರಯೋ).

[ಸುಯ್ + - ತ]

ಸುಯ್ದನಿ (ನಾ). ಸುಯ್ ಎಂಬ ಧ್ವನಿ: ತೆರೆಯೆದ್ದು ತೆರೆ ಬಿದ್ದು ಬತ್ತ ಬತ್ತರ ಗದ್ದ ತೆನೆವುಲ್ಲೆ ತೆನೆಯುದ್ದುವುದು ಸುಯ್ದನಿಯ ಸೂಸಿ (ಚಕ್ರಾಗೀ. ೫೩-೧೪೬೮).

[ಸುಯ್ + ದನಿ]

ಸುಯ್ದಾಸ 'ಸುಯಿದಾನ' ನೋ.

ಸುಯ್ದಾನಿ 'ಸುಯಿದಾನಿ' ನೋ.

ಸುಯ್ದು 'ಸುಯ್' ಪರಾ.

ಸುಯ್ದೋರು (ಕ್ರಿ). ಶಬ್ದ ಕೇಳು; ದನಿಹೊಮ್ಮು: ಕಣ್ ತೊಯ್ದುದಿರ್ದಿನಿಂ ಸುಯ್ದೋರಿದತ್ತುಸಿರು (ಚಕ್ರಾಗೀ. ೬೮-೧೦೫೬). [ಸುಯ್ + ತೋರು (< ತೋಱು)]

ಸುಯ್ದನಿ (ನಾ). ನಿಟ್ಟುಸಿರಿನಿಂದ ಕೂಡಿದ ಕಣ್ಣೀರು; ಶೋಕಾಶ್ರು: ಸುಯ್ದನಿವೆರಸಿ ಬೀಳ್ಕೊಂಡರೊರ್ವರೊರ್ವರನಳಲ್‌ವಂಕೆಯಿಂ ದಹಿಸಿ (ಶ್ರೀರಾವಿ. ೧೭೪-೫೯೨). [ಸುಯ್ + ಪನಿ]

ಸುಯ್ಪು (ನಾ). ಉಸಿರು; ಶ್ವಾಸ: ಸುಯ್ಪಿನುಬ್ಬೇಗದಿಂ . ದಾಶರಥಿ: "ನೋಳ್ಪ ಮೆಲ್ಲಿರ್ಪುದಾ ಬೀಳ್ಕೆ!" (ಶ್ರೀರಾಮಾ. ೨೪೪-೨೬೧). [ಸುಯ್ + - ಪ್ಪು]

ಸುಯ್ಯತಾಣ (ನಾ). ಕಸೂತಿಬಟ್ಟೆ; ಅಲಂಕಾರದ ವಸ್ತ್ರವಿಶೇಷ: ಒಳ ದೋರಣಮಾಯ್ತು ಹಾರದ ಪಚ್ಚೆಸಾರದ ಮಾಲೆ ಸೌಧಾಳಿಯೊಳ್ಗುಡಿಯಾಯ್ತು ಚೀನದ ಸುಯ್ಯತಾಣದ ಪಟ್ಟೆ ಹರ್ಮ್ಯಾಳಿದಪ್ಪದೆ ರಯ್ಯಮಾಯ್ತುಸೆವಾಟಪಾಟದ ಗೀತಿ . . . ತತ್ಪುರಮಧ್ಯದೊಳ್ (ಪಂಪಭಾ. ೧೪-೧೫). **P** ಇದು 'ಸೂಯಿಯಾಣ' ಎಂದಿರಬಹುದು. [< ಪಂ. ಸೂಚೀಯಾನ?]

ಸುಯ್ಯಲ್, ಸುಯ್ಯಲು, ಸುಯ್ಲು (ನಾ). ೧. ಉಸಿರು; ಶ್ವಾಸ: ಸೂಳೇಱ ಸುಯ್ಯಲ್ ಚಲ್ಲಾಟಂಬೆತ್ತು ಕಾಂತಾಮಣಿಯುರುಸಿದಳ್ ತ್ರಿಲಮಂ ಬಾಲೆಗಾಗಳ್ (ಉದ್ಭಟ. ೪-೧೫). **ಸುಯ್ಯಲು** : ೧. ಸುಪ್ಪಿಗೆ ಸುಯ್ಯಲ ತಂದವಳು ನಮ ಕೃಷ್ಣನ ಹೃದಯದಿ ನಿಂದವಳು (ಗೋಈಸಾ. ೪೨-೨೫). ೨. (ಆಯಾಸ, ದುಃಖಿಗಳಿಂದ ಬಿಡುವ) ನಿಡಿದಾದ ಉಸಿರು; ನಿಟ್ಟುಸಿರು: ಅವರು ನಗುವ ನಗೆಯೊಂದೇ ಬಗೆ, ದುಃಖವುಂಟಾದರೆ ಒಂದೇ ತರದ ಅಳು, ಸುಯ್ಯಲು (ರಾಮಾನ. ೧೧೪). **ಸುಯ್ಲು:** ೧. ತನುವಿನ ಕಾಯ್ದಂ ಬೇಟದ ಮನಮಂ ಸುಯ್ದಂ ನೆಗಳ್ಚುವರ್ಕಪಟತೆಯಿಂ (ಮದತಿ ೧೧-೨೧); ಉನ್ನತಚಿಂತೆ ನಟ್ಟುನಿಲೆ ಚಿತ್ತದೊಳಾಕುಳೆ ಸುಯ್ದು ಸುಯ್ದುನಿಂ ತನ್ನ ಕರಾಗ್ರಪಂಕಜಮನೆಯ್ದೆ ಮುರುಂಟಿಸುತಿರ್ಪಳಾವಗಂ (ದಾಧಪು. ೬-೮). ೨. ಸುಯ್ದು ದುಗುಡದ ಜಾಗೆಗೆ (ಕುವ್ಯಾಉ. ೬೧೩. ೨೦-೧); ಪ್ರಾಣಕಾಂತರ ತಳ್ಕೆ ಸಡಿಲಿ ದುಃಖದಿಂದ ನಿಡುಸುಯ್ದ ಕಾಮಿನಿಯರ ಸುಯ್ದಂ ಸೀದಂತೆ ಬೆಳ್ದಿಂಗಳು ತಗ್ಗಿತು (ವಚಕಾ. ೭೩). ೩. (ರೋಷ ಅಥವಾ ಕೋಪದಿಂದ) ಬುಸುಗುಟ್ಟುವುದು: ಉರಿದನಗ್ಗದ ರೋಷದಲಿ ಹೊಗೆ ಹೊರಳಗಟ್ಟಿತು ಸುಯ್ದನಲಿ ಸಂವರಿಸಿಕೊಳು ಕೌಂತೇಯ ಎನುತೆಚ್ಚನು (ಕುವ್ಯಾಶ. ೨-೩೧). ೪. ದನಿ; ಶಬ್ದ: ಮೆಲುಗಾಳಿಯ ಸುಯ್ಲಿಗೆ ಈ ಕಣಿವೆ, ಬೆಟ್ಟಗಳೆಲ್ಲ ಸೇರಿ ಹಿರಿಯ ದೇಗುಲವೊಂದರ ಗರ್ಭಗುಡಿಯಂತೆ ಕಾಣಿಸುತ್ತದೆ (ಕುಡಿಕೂ. ೮೭). [ಸುಯ್ + - ಅಲ್]

ಸುಯ್ಯಲು 'ಸುಯ್ಯಲ್' ನೋ.

ಸುಯ್ಯಾಣ 'ಸೂಯಿಯಾಣ' ನೋ.

ಸುಯ್ಯಾಣವೆಸ (ನಾ). ಕಸೂತಿಕೆಲಸ: ಸುಯ್ಯಾ[ಪಾಠಾಂ. ಯ್ಯಾ]ಣವೆಸದ ಕತ್ತರಿವೆಸದ ಮಣಿವೆಸದ ಮೇಲ್ಬಟ್ಟನೊಳಂ (ವರ್ಧಪು. ೭-೩೨).

[ಸುಯ್ಯಾಣ (< ಸೂಯಿಯಾಣ) + ಬೆಸ]

ಸುಯ್ಯಾಱು (ಕ್ರಿ). 'ಸುಯ್' ಎಂಬ ಧ್ವನಿ ತಗ್ಲು,—ಕಡಮೆಯಾಗು: ತಿವಳಿಯೊಳ್ ಮಿಡುಕಾಱದ ವಾಣ್ಣಿಂದಿಕ್ಕಿದ ಲಂಡದ ಬೆಂಕೆಯಂ ಕವಿವ ಕಬ್ಮದದೊಳ್ಮಿನಲೊಳ್ ಸುಯ್ಯಾಱದ ಪೆರ್ನೊರೆಯಿಂ ತಗುಳ್ದ ವಿಹತಾಂಬುವ ಬಲ್ಮೊನಲಿಂದಿರ್ಪಾಱದ ಬಟ್ಟೆಯೊಳಿೞಕ್ಕ ಪಲ್ಲವನಿಕಾಯದಿನಂದಱಿವಂ ಕಾಡಾನೆಗಳಾಗಡೆ ಪೋದುದಂ (ಕಾವ್ಯಾವ. ೬೨೬). [ಸುಯ್ + ಆಱು]

ಸುಯ್ಯು$_1$ 'ಸುಯ್'$_1$ ನೋ.

ಸುಯ್ಯು$_2$ 'ಸುಯ್'$_2$ ನೋ.

ಸುಯ್ಯೆಲರ್ (ನಾ). ೧. ಉಸಿರಿನ ಗಾಳಿ: ಸುಯ್ಯೆಲರಿಂ ಪಾಱಿದವುವೆನಿಪ

ದುಕೂಲಂಗಳಂ ಪಿಡಿದು ನೆಲವನುಗ್ಗಡಿಪ ಕೇಯೂರಕನುಮೊಡವರೆ (ಕಾದಂಬ. ೧೦೫). ೨. ನಿಟ್ಟುಸಿರಿನ ಗಾಳಿ: ಮಯ್ಯ ಬಿಸುಪಿಂ ಸುಯ್ಯೆಲರ ಬೆಂಕೆಯಿಂ ವನಂ ಕೊರಗುತ್ತಮಿರೆ (ನಂಬರ. ೧೨-೧೧೯); ನೀಳ್ದೊಗೆತರ್ಪ ಸುಯ್ಯೆಲರ್ಗುಡಿದ ಗಾಳಿ ಸೋಂಕಿದವರಂ ಸುಡುತಿರ್ಪುದು (ಕಬ್ಬಿಗಾ. ೩೧೪); ಅಮರ್ದಪ್ಪಿ ಚುಂಬಿಸಿ ನೆರೆಯೆ ಬೆಮರ್ವನಿ ತೊಟ್ಟಿಟ್ಟು ಸು[ಪಾಶಾಂ. ಸೂ]ಯ್ಯೆಲರುಬ್ಬಿತೆಂದಮಮ ಕೋವಿದರಾಡಬಹುದೆ (ಭರಬ. ೧೦-೧೦೮). [ಸುಯ್ $_2$ + ಎಲರ್]

ಸುಯ್ಯೆಲರ್ಗಂಪು (ನಾ). = ಸುಯ್ಗಂಪು: ಉಣ್ಮುವ ಸುಯ್ಯೆಲರ್ಗಂಪುಗಳ್ ದಳಂಗಳನಧಿವಾಸಿಸುತ್ತುಮಿರೆ ಘಟ್ಟಿಮಗುಬ್ಬುವುದಂಗನಾಜನಂ (ಚಂದ್ರಪ್ರ. ೧-೧೩೦).

[ಸುಯ್ಯೆಲರ್ + ಕಂಪು]

ಸುಯ್ಯಾಡು (ಕ್ರಿ). ಉಸಿರಾಡು; ಶ್ವಾಸೋಚ್ಛ್ವಾಸ ಮಾಡು: ಜವಹುರವ ಪುಲುಗಳ್ಗೆ ಸುಯ್ಯಾಡುವ ಜೀವದ ಗಾಳಿಯಕ್ಕುಂ (ರಾಮಾಶ್ವ. ೮೬-೧೯); (ಸುಯ್ಯಾಡದೆ) ಹಾಗೇಕಾಯ್ತು? (ಬೆಟ್ಟಅ. ೬೮-೭). [ಸುಯ್ಯು (< ಸುಯ್ಯಲ್) + ಆಡು $_1$]

ಸುಯ್ಲಿಡು (ಕ್ರಿ). 'ಸುಯ್' ಎಂಬ ದನಿಮಾಡು: ಸುಯ್ಲಿಡುತಿಹ ಸರ್ಪ ಸುಮ್ಮನಾದುದ ಕಂಡೆ (ತಿವಗೀ. ೧೫೩-೭೮೯). ಕೆಸರ ಕುಂಟೆಯಲ್ಲಿಳಿದು ಮುಳುಗಿ ಮೂಗಿನ ಸೊಳ್ಳೆಯನ್ನು ಮೇಲೆತ್ತಿ ಸುಯ್ಲಿಟ್ಟು ಆನಂದಪ್ರದರ್ಶನವೆಸಗುವ ಅದೊಂದು ಪ್ರಾಣಿ (ನಾಡೋಜ. ೩೭೧). [ಸುಯ್ಯು (< ಸುಯ್ಯಲ್) + ಇಡು $_1$]

ಸುಯ್ಯು 'ಸುಯ್ಯಲ್' ನೋ.

ಸುಯ್ವ 'ಸುಯ್ $_1$' ಪರಾ.

ಸುಯ್ವಿಡು (ಕ್ರಿ). ನಿಟ್ಟುಸಿರು ಬಿಡು: ಕಕ್ಕುಗುರಿನೇರ್ಗಳಂ ಸುಯ್ವಿಟ್ಟು ಸುಗಿದಂ (ಕಾಲೂರ. ೯೮-೧೯೬). [ಸುಯ್ $_2$ + ಬಿಡು $_1$]

ಸುಯ್ವೆಂಕೆ (ನಾ). (ಆಲಂ) ನಿಟ್ಟುಸಿರಿನ ತಾಪ,—ಬಿಸಿ: ಅಳಕಸಂದೋಹಮಂ ಮಾಣದಳ್ಳಾಡುವ ಸುಯ್ ಸುಯ್ವೆಂಕೆಯಿಂದಿರ್ಪಳಿದಧರಮವಳ್ಗಿತ್ತುದಂದೊಂದು ಚೆಲ್ವಂ (ಜಗವಿ. ೧೧-೬); ವಿರಹಾವಸ್ಥೆಯನಪ್ಪುಕೆಯ್ದು ಪಿರಿದುಂ ಸುಯ್ವೆಂಕೆಯಿಂ ಪಂಕಜೋತ್ಕರಮಂ ಕಂದಿಸುತುಂ (ಕುಸುಮಾ. ೧೦-೪). [ಸುಯ್ $_2$ + ಬೆಂಕೆ]

ಸುಯ್ವೊಡರ್ (ಕ್ರಿ). ನಿಟ್ಟುಸಿರು ಸೂಸು,—ಹೊಮ್ಮು: ಅವಳ್ . . . ಸಾರ್ದು ಸುಯ್ವೊ [ಪಾಶಾಂ. ಯ್ಯ]ದರೆ ಸೀದ ಲತಾಳಿಯವಪ್ಪೆ ಬೆಂದು ಕಂದೊಗೆದಳಗೊಂಗಿವೆಂಬ ಕುಱುಪಂ ಪಲವಾಂತುವು ನಂದನಂಗಳೊಳ್ (ಚಂದ್ರಪ್ರ. ೫-೧೩೩).

[ಸುಯ್ $_2$ + ಪೊಡರ್]

ಸುಯ್ಸು (ಕ್ರಿ). ನಿಟ್ಟುಸಿರುಬಿಡುವಂತೆ ಮಾಡು; ದುಃಖಪಡಿಸು: ಕೇಳ್ವಿಳಾಸಿನಿಯನದೇಕೆ ಸುಯ್ಸಿದಪೆ ನೀನಿರದಾಱೆಸು ಕಾಮತಾಪಮಂ (ಶೃಂಗಾರ. ೪-೯).

[ಸುಯ್ $_2$ + - ಸು $_1$]

ಸುರ (ನಾ). ೧. ಅಮೃತವನ್ನು ಕುಡಿದವನು; ದೇವತೆ: ಸುರರ ಬೇಡದಡಿಲ್ಲ ಸರರ ಬೇಡದಡಿಲ್ಲ ಬಱೆದೆ ಧೃತಿಗೆಡಬೇಡ (ಬಸವ. ೨೬೬); ಸುರರ್ಗೆ ಗುರು ವಜ್ರಿ (ಜಗವಿ. ೧-೩೩) ೨. ನೇಸರು; ಸೂರ್ಯ. ೩. ಒಂದು ಬಗೆಯ ಸಸ್ಯ; ಸುರಹೊನ್ನೆ: ಸುರ — ಪರದೇಶದ್ದು . . . ಸಮುದ್ರತೀರದಲ್ಲಿ ಸರಸಾಗಿ ಬೆಳೆಯುತ್ತದೆ (ಕಭಾಗೆ. ೪೯). ೪. [ಗಣಿತ] ಮೂವತ್ತುಮೂರು ಎಂಬ ಸಂಖ್ಯೆಯ ಸಂಕೇತ: "ನಭಮದಿಪ್ಪತ್ತು ಸುರಮೆನಲು ಮೂವತ್ತೂಱು" (ಮಂಗರಾ. ೧೦೪-೯). ೫. [ಛಂದ] ಒಂದು ಅಕ್ಷರಗಣ; ಮೂರು ಲಘುವಿರುವ ಅಕ್ಷರಗಣ; ನಗಣ (UUU): ಸುರರ ನೆರವಿ ನೆರೆಯೆ ಪರಮೆ (ಛಂದೋಂಬು. ೨-೬೦). [ಸಂ.]

ಸುರಂಗ $_1$ (ನಾ). ೧. (ಕಳವು ಮೊದಲಾದುವುಗಳಿಗಾಗಿ ಗೋಡೆಯಲ್ಲಿ) ಕೊರೆಯುವ ಕಂಡಿ; ಕನ್ನ; ತೂತು: "ಸುರಂಗಮೆನೆ ಕನ್ನಂ" (ಮಂಗರಾ. ೬೬-೫). ೨. ಭೂಮಿಯಲ್ಲಿ ಕೊರೆದು ಮಾಡುವ ದಾರಿ,—ಮಾರ್ಗ: ಮಿಗೆ ಗಿರಿದುರ್ಗದ ನೆಲಗೋಂಟೆಗೆ ಸವೆಯೆ ಬಳಿಕ್ಕೆ ಸುರಂಗಂಗಳನೆರಡಂ (ಹಮ್ಮೀರ. ೩-೨೮); ಮುಱಿದರು ತಳಗಳ ಮೇರುವೆಗಳ ಸುಟ್ಟು ನೆಱೆ ಸುರಂಗಗಳ ದ್ವಾರದಲಿ ಕರಿಯ ಮದ್ದನು ತುಂಬಿ ಹೊತ್ತಿಸಿ (ಕಂನವಿ. ೧೪-೭೮); ಆ ಕೋಟೆ ಪಾಯಗಳಲ್ಲು ಸುರಂಗವನ್ನು ತೆಗೆಸುತ್ತಾ ಇದ್ದರು (ಶಾಚಂದ್ರ. ೭೧). ೩. ಒಳ್ಳೆಯ ಬಣ್ಣ; ಕಾಂತಿಯುತವಾದ ವರ್ಣ: ವಿಪ್ರಸಂಕುಳಕ್ಕುತ್ತಮದರ್ಪಣಂಗಳನಪೂ[ರ್ವ]ಸುರಂಗನವಾಂಬರಂಗಳಂ ವೃತ್ತಿಯನಿತ್ತು ಯಜ್ಞಮನೆ ಮಾಡೆ (ಎಇ. XIII, ೩೩೦-೧೫; 929); ಅಂಗನಾಮಣಿಗಂಗನೆಯರು ಸುರಂಗ ಮೌಕ್ತಿಕಹಾರ ಮಣಿಪದಕಂಗಳಂ ನೇವಳವನನುಸಂಧಿಸಿದರನುವಾಗಿ (ಬಸಪು. ೪-೩೭); ಕೃಷ್ಣಾಗರುವಿನೊಟ್ಟಿಲ ಸುರಂಗದ[ಪಾಶಾಂ. ಗಿನ] ಪಟ್ಟೆ ಪಟ್ಟಾವಳಿಯ . . . ಒಟ್ಟಿದರು (ಕುವ್ಯಾಸ. ೫-೪೭). ೪. ಸುಂದರವಾದ ಮಂಟಪ; ಒಳ್ಳೆಯ ರಂಗಮಂದಿರ: ಮಂಗಳೋದಯವೆತ್ತ ಮುತ್ತಿನ ರಂಗವಾಲಿಗಳಿಂದೆ ಕಂಗೆ ಸುರಂಗವೆನಿಸಿದ ಮೇಲು ಕಟ್ಟಿನ ಕಂಬಗಟ್ಟುಗಳಿಂ . . . ಪುಷ್ಪಕನಿಳಯ . . .ರಂಜಿಸಲು (ಬಸಪು. ೧೨-೧೩). ೫. ಹೆಚ್ಚಾದ ಪ್ರೀತಿ; ಅತಿಶಯವಾದ ಅನುರಾಗ: ಮಂಗಳದ ಲಿಂಗಾವತಾರದ ಸಂಗದಿಂ ಮಡಿವಳನ ಭಕ್ತಿ ಸುರಂಗಮಹಿಮೆಯನಱಿಯಲಾಱದೆ ಪಲವುರೂಪುಗಳ ಧರಿಸಿ (ಬಸಪು. ೨೨-೫೮).

ಸುರಂಗಹೊಡೆ = ನೀರಿನಲ್ಲಿ ಆಳವಾಗಿ ಮುಳುಗು: ನೀರೊಳಗೆ ಸುರಂಗ ಹೊಡೆದು ಬಾವಿಯ ಆಚೆಯ ಬದಿಗೆ ಹೋದನು (ದಾಸಹು. ೧೧). [ಸಂ.]

ಸುರಂಗ $_2$ (ನಾ). ಸಿಡಿಮದ್ದು; ಸ್ಫೋಟಕವಸ್ತು: ಕಲ್ಲುಗಳನ್ನು ದೊಡ್ಡ ಸುತ್ತಿಗೆಯಿಂದ ಚಾನಗಳಿಂದ ಅಥವಾ ಸುರಂಗದಿಂದ ಒಡೆದು (ಕೃಪ್ರ. ೪೧). [?]

ಸುರಂಗದ್ವಾರ (ನಾ). ಭೂಮಿಯಲ್ಲಿ ಕೊರೆದು ಮಾಡಿರುವ ಒಳದಾರಿಯ ಬಾಗಿಲು: ನೀರ ತುಂಬುವ ದಿಡ್ಡಿಯೊಳಸುರಂಗದ್ವಾರ ತೋಱಿತು ಕಣ್ಗೆ ಕೌತುಕವ (ಕಂನವಿ. ೧೧-೧೩೭). [ಸಂ.]

ಸುರಂಗಮಾರ್ಗ (ನಾ). ಭೂಮಿಯಲ್ಲಿ ಕೊರೆದು ಮಾಡಿರುವ ಒಳದಾರಿ, — ಮಾರ್ಗ: ವಿದುರನು ಕಳುಹಿಸಿದ ಕಾಮಾಟದವನ ಮುಖವಚನದಿಂದ ಅವನು ಮಾಡಿದ ಸುರಂಗಮಾರ್ಗದಿಂದ ಹೊರಟು (ಕುವಾಅ. ೮೬); ಉದ್ಯಾನದ ಬೇಲಿಯೊಳಗೆ ಇರುವ ಸುರಂಗಮಾರ್ಗದ ಬಾಗಿಲಿಂದ ಒಬ್ಬ ವೃದ್ಧನೂ ಒಬ್ಬ ಸ್ತ್ರೀಯೂ . . . ಹೋಗುತ್ತಿದ್ದಾರೆ (ಮುದ್ರಾಸಾಂ. ೨೦೧). [ಸಂ.]

ಸುರಂಗಿ (ನಾ). ಒಳ್ಳೆಯ ವರ್ಚಸ್ಸುಳ್ಳವನು; ಕಾಂತಿಯುತನಾದವನು: ಮೋಕ್ಷದೊಳ್ ವ್ಯಕ್ತವಾಗಿಹ ಸುರಂಗಿ ಶಿವತತ್ತ್ವವುಳ್ಳವನಾಗಿ (ವೀಶೃಪ್ರ. ೬-೨-೬೮).

[ಸಂ. ಸುರಂಗಿನ್]

ಸುರಂಗಿತ (ಗು). ೧. ಚೆನ್ನಾಗಿ ಬಣ್ಣಬಳಿದ; ಮೆರುಗುಕೊಟ್ಟ. (ನಾ). ೨. ಒಳ್ಳೆಯ ಕಾಂತಿ: ಸಾಂಗಮಾಗಲು ಸಿದ್ಧಮಂತ್ರ ಸುರಂಗಿತವನೊದವಿಸಿ ವಿಶುದ್ಧೋತ್ತುಂಗಚಿನ್ಮಯಸತ್ಪ್ರಭೆಯನಾತ್ಮದೊಳಗಳವಡಿಸಿ (ಬಸಪು. ೪೯-೩೩). ೩. [ಸಂಗೀತ] ವೀಣಾವಾದನದಲ್ಲಿ ಒಂದು ಬಗೆ: ಸಾರಿ ಸುರೀತಿ ರಕ್ತಿ ಪದಕ್ರಮಮಂ ವಳಿ ಸುರಂಗಿತಮಾಯತಂ ಮಣಿ ಕಂಪಿತಂ . . . ಬೆಡಂಗಮರೆ ಬಾಜಿಸುತೆ ಚಾರುವೀಣೆಯಂ (ಪ್ರಪಸಾ. ೧೧-೯). [ಸಂ.]

ಸುರಂಗಿಸು (ಕ್ರಿ). ಚೆನ್ನಾಗಿ ಹೊಳೆ; ಪ್ರಕಾಶಿಸು: ಗಂಗೆಯಾತನ ಕೆರ್ಪು ಸೋಂಕಿ ಜಗಂಗಳೊಳು ಸಲೆ ತೀರ್ಥಮಾಗಿ ಸುರಂಗಿಸಿದಳು (ಬಸಪು. ೧೮-೯೪); ಪರಿಮಿತಾನ್ನಂಗಳಂ ದಿನದಿನದೊಳುಂಡು ಸುರಂಗಿಸುವ ತನು ತಾನಿದಲ್ಲಾ ತಿಳಿದು ನೋಡಿದಡೆ (ಬಸಪು. ೪೬-೫೭). [ಸುರಂಗ $_1$ + - ಇಸು $_3$]

ಸುರಂಗು (ನಾ). ಒಳ್ಳೆಯ ಬಣ್ಣ; ಹೊಂಬಣ್ಣ: ಮಾಣಿಕ್ಯದೊಳಗಿಪ್ಪ ಸುರಂಗಿನಂತೆ ಚಿನ್ನದೊಳಗಿಪ್ಪ ಬಣ್ಣದಂತೆ ಭೇದವಿಲ್ಲದಚಲನಯ್ಯಾ (ಆದಪ. ಮು. ೧೮೬-೩೩೯).

[< ಸಂ. ಸುರಂಗ]

ಸುರಂಜ 'ಸುರಂಜಿ' ನೋ.

ಸುರಂಜಕಡ್ಡಿ (ನಾ). ಸುರಂಜಮರದ ಕಡ್ಡಿ: ಕಪೀಲಹಿಟ್ಟು ಸುರಂಜಕಡ್ಡಿ ಕಸಕಸಿ . . . ಈ ಮಾಲಿನ ಕಿಮ್ಮತ್ತು ಸೂರ್ತಿ ಚವಾಳಾಮಣದ ಮೇಲೆ ಇರುತ್ತದೆ (ಮುಂಬವ್ಯಾ. ೧೧೫). [ಸುರಂಜ (< ಸುರಂಜಿ) + ಕಡ್ಡಿ]

ಸುರಂಜಿ, ಸುರಂಜ (ನಾ). ಒಂದು ಬಗೆಯ ಮರ; ರಕ್ತಚಂದನದ ಮರ: ಸುರಗಿ (ಸುರಂಜಿ) ದೊಡ್ಡಮರ. ಕಟ್ಟಿಗೆ ಕೆಲಸದ್ದಲ್ಲ. ಹೂವಿನಿಂದ ಬಣ್ಣ ಹುಟ್ಟುತ್ತದೆ (ಕಭಾಗೆ. ೪೯). ಸುರಂಜ : 'ಸುರಂಜಕಡ್ಡಿ' ಪರಾ.

[<— ಮರಾ. ಸುರಂಜ = ರಕ್ತಚಂದನದ ಕಡ್ಡಿ; ಸುರಂಜಿ]

ಸುರಂದು (ನಾ). ಒಂದು ಬಗೆಯ ತೆರಿಗೆ (?): ತೌದೆ ಸುರಂದು ಕವರ್ತ್ತ ಸೇಸೆ ಒಸಗೆ ವುನಕರೆ ಕೂಟಕ ಕನ್ನ ಬೀರವಣ (ಮೈಆರಿ. ೧೯೩೨, ೧೭-೨೯; 1069). [?]

ಸುರಕನ್ನೆ (ನಾ). ದೇವಲೋಕದ ಹುಡುಗಿ; ಅಪ್ಸರೆ: ಸುರಕನ್ನೆಯರೀ ಕನ್ನೆಯರುರು ಸೌಂದರ್ಯಕ್ಕೆ ಸೋಲ್ತು ಬಟ್ಟರ್ ಧರೆಯಂ (ನೇಮಿಪು. ೩-೧೭೭); ಛತ್ರಚಾಮರವ ಚನ್ನಾಗಿ ಪಿಡಿದೋಲೈಸುವರಾ ಸುರಕನ್ನೆಯರತಿರಾಗದಲಿ (ತ್ರಿಪುಶಾಂ. ೮-೮೭).

[< ಸಂ. ಸುರಕನ್ಯಾ]

ಸುರಕನ್ಯಕೆ (ನಾ). = ಸುರಕನ್ನೆ: ಸುರಕನ್ಯಕೆ ಮನುಜಸತಿ ವರಮಾಕಾರತ್ಯಮಂ ಪ್ರಯೋಗಿಸಿ (ಸುಕುಮಾ. ೫-೫೯). [ಸಂ. ಸುರಕನ್ಯಕಾ]

ಸುರಕನ್ಯೆ (ನಾ). = ಸುರಕನ್ನೆ: ವಳಯರವಂಗಳುಣ್ಕೆ ಸುರಕನ್ಯೆಯರಿಕ್ಕುವ ಚಾಮರಂ ತೆಱಂಬೊಳೆಯೆ (ಜಗವಿ. ೧-೬೯). [ಸಂ. ಸುರಕನ್ಯಾ]

ಸುರಕರಿ (ನಾ). ದೇವತೆಗಳ ಆನೆ; ಐರಾವತ: "ಚೌದಂತ ಮಿಗೆ ಸುರಕರಿ" (ಶಬ್ದಮಂ. ೧೧); ಸುರಕರಿಗೆ ಮೊಗಂ ಮೂವತ್ತೆರಡು (ಶಾಂತಿಪು. ೧೦-೧೪). [ಸಂ.]

ಸುರಕಾಂತೆ (ನಾ). = ಸುರಕನ್ನೆ: ಸುರಕಾಂತಾನ್ಯತ್ಯಮೆತ್ತಂ ಪಸರಿಪಿರೆ ನಭೋರಂಗದೊಳ್ (ಆದಿಪು. ೮-೬೭); ಸುರಕಾಂತೆಯರೊರ್ಮೊದಲಾದರದಿಂದಂ ಪರಸಿ ಸೇಸೆಯಿಕ್ಕಿದರ್ (ನೇಮಿಪು. ೧೨-೨೫೯). [ಸಂ. ಸುರಕಾಂತಾ]

ಸುರಕಿ 'ಸುರ್ಕಿ' ನೋ.

ಸುರಕುಂಭಿ (ನಾ). = ಸುರಕರಿ: ನಗೆ ಸುಧೆಯೊಳ್ ನಿಶಾರಮಣನೊಳ್ ವದನಂ ಸುರಕುಂಭಿಕುಂಭದೊಳ್ ಬಿಗಿದ ಕುಚಂ (ಎಕ. V, ಬೇಲೂರು. ೧೭೧-೩೧; 1160).

[ಸಂ. ಸುರಕುಂಭಿನ್]

ಸುರಕುಜ (ನಾ). ೧. ದೇವಲೋಕದ ಮರ; ಕಲ್ಪವೃಕ್ಷ: ಸುರಕುಜಮಾಗಳುಂ ಬಗೆದ ವಸ್ತುವನೀಯೆ (ಧರ್ಮಾಮೃ. ೬-೧೬೪); ವನಮದು ಸುರಕುಜದಾರವ (ಚಂದ್ರಪ್ರ. ೭-೧೫೨). ೨. ಒಂದು ಬಗೆಯ ಮರ; ದೇವದಾರು: ಸುರಕುಜದ ಬೀಜಂ ಮದ್ಯಂ ರಜನಿ ಮಾಗಧ ಕೌಂಗು . . . ಇವಂ ಪರಿಕ್ಷಿನ್ನಂ ಮಾಡಿ (ಶೋಕೋಪ. ೮-೪೫). [ಸಂ.]

ಸುರಕುಧರ (ನಾ). ದೇವಲೋಕದ ಬೆಟ್ಟ; ಮೇರುಪರ್ವತ: ಸುರಕುಧರ ಮಧಿಷ್ಠಾನದ ಸಿರಿಯಂ ಪಡೆವಿನೆಗಂ (ಪಾರ್ಶ್ವಪು. ೫-೬೮). [ಸಂ.]

ಸುರಕುಸುಮ (ನಾ). ದೇವಲೋಕದ ಹೂವು; ಪಾರಿಜಾತ: ಸುರಕುಸುಮದ ಪೊಸವಾಸಿಗಮರಡುಂ ಕರತಳದೊಳಿಸೆದು ತನ್ನಯ ತೋಳೊಳ್ ದೊರೆಯೆನೆ ಬಂದತ್ತು . . . ದೇವಗಣಕಾನಿಕರಂ (ಆದಿಪು. ೧೦-೨೦). [ಸಂ.]

ಸುರಕ್ಷಿತ (ಗು). ೧. ಚೆನ್ನಾಗಿ ಕಾಪಾಡಿದ; ಉತ್ತಮವಾಗಿ ರಕ್ಷಿಸಿದ. (ನಾ). ೨. ಒಳ್ಳೆಯ ರಕ್ಷಣೆ; ಜೋಪಾನ: ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ (ಬಸವ. ೧೬೨). ೩. ಒಳ್ಳೆಯ ರಕ್ಷಣೆಯನ್ನು ಪಡೆದವನು, — ಹೊಂದಿದವನು: ಕಂದನೀತನ ರಕ್ಷೆಯೊಳ್ . . . ನಿತ್ಯಂ ಸುರಕ್ಷಿತಂ (ತ್ರೇರಾಮಾ. ೩೦-೭೪). [ಸಂ.]

ಸುರಖ (ನಾ). ಕಳ್ಳತನವನ್ನು ಪತ್ತೆಮಾಡುವ ವಿದ್ಯೆ: ಈತಂ ತಳಾಜನ ಮಗನಪ್ಪುದಱಿಂ ತನಗೆ ತಕ್ಕ ಕಳ್ಳರನಾರಯ್ವ ತೆಱನಂ ಪೇಟ್ಪ ಸುರಖಮೆಂಬೋದಂ ಕಲ್ತೊಂ (ವಡ್ಡಾರಾ. ೧೨೦-೨೫). [? ./ ಹಾರ. ಸುರಾಫ್; ಮರಾ. ಸುರಾಖ್]

ಸುರಗಂಗೆ (ನಾ). ದೇವಲೋಕದ ನದಿ; ದೇವಗಂಗೆ: ಶಿವಪಾದಭಕ್ತ ಮಹತ್ಯಮಂ ಸಮ್ಮೋದದಿಂ ಸುರಗಂಗೆಯಂ ಕೇಳಲ್ಕೆ ಬಂದಂತೆ (ಬಸವ. ೩೨-೩೫).

[ಸಂ. ಸುರಗಂಗಾ]

ಸುರಗಂಧವಾರಣ (ನಾ). = ಸುರಕರಿ: ನಟ್ಟನೆ ವಾಸವಂಗಮೃತವಾರಿಧಿಯೊಳ್ ಸುರಗಂಧವಾರಣಂ ಪುಟ್ಟೆ (ಗದಾಯು. ೧-೧೧). [ಸಂ.]

ಸುರಗಜ (ನಾ). = ಸುರಕರಿ: ಸುರಗಜಂ ಸುರಕುಜಂ ಸುರಧೇನುಗಳು ಪುಟ್ಟೆ (ನಂಬರ. ೧-೬); ಸುರಗಜವಮಂ ಶಚಿವೆರಸಾ ಸುರಪತಿ ನಲವಿಂದಮೇಱುತಂ (ತ್ರಿಪುವಿ. ೨೪-೩೬). [ಸಂ.]

ಸುರಗಣಾಧಿಪ (ನಾ). ದೇವತೆಗಳ ಒಡೆಯ; ದೇವೇಂದ್ರ: ಸುರಗಣಾಧಿಪನೋ ಫಣಿನಾಥನೋ (ಕವಿರಾ. ೧-೧೪೨). [ಸಂ.]

ಸುರಗಣಿಕೆ (ನಾ). ರಂಭೆ, ಊರ್ವಶಿ ಮುಂತಾದ ಅಪ್ಸರೆಯರಲ್ಲಿ ಒಬ್ಬಳು: ಸುರಗಣಿಕೆಯ ನುಡಿಗೇಳ್ದೀಶ್ವರನೊಲವಂ ಪಡೆದು (ವೃಷವಿ. ೨೮-೧೧೪). [ಸಂ. ಸುರಗಣಿಕಾ]

ಸುರಗತಿ (ನಾ). ದೇವತೆಗಳ ಸ್ಥಿತಿ; ಅಮರತ್ವ: ಸುರಗತಿಯುಂ ನಿರ್ವ್ಯತಿಯುಂ ದೊರೆಕೊಳ್ವುಡೆ ಧರ್ಮದಿಂದ ದೊರೆಕೊಳ್ಗೆ (ಧರ್ಮಾಮೃ. ೩-೨೧೧); ಸುರಗತಿ ಜೀವಿತಾಂತ್ಯ ಮಱುದಿಂಗಳದಿನ್ನೆನೆ ಮುನ್ನೆ ಶೋಕದಿಂ ಕೊರಗುವ ಸುಯ್ವ ಬಾಯಲ್ಬಿವ . . . ನಾರಕರೊಳ್ (ಪುಷ್ಪಪು. ೧೩-೪೦). [ಸಂ.]

ಸುರಗಿ$_1$, **ಸುರಯಿ**, **ಸುರಿಗೆ**$_1$ (ನಾ). (ಸುವಾಸನೆಯ ಹೂವುಗಳನ್ನು ಬಿಡುವ) ಒಂದು ಬಗೆಯ ಮರ ಮತ್ತು ಅದರ ಹೂವು: "ಪುನ್ನಾಗಃ, ಪುರುಷಃ, ತುಂಗಃ, ಕೇಸರಃ, ದೇವವಲ್ಲಭಃ — ಈ ೫ ಸುರಹೊನ್ನೆಯ ಮರ, ಸುರಗಿಯ ಮರವೆಂದೆಂಬರು" (ನಾಚರಾ. ೧೦೬); ಸುರಗಿ[ಪಾಠಾಂ. ಸರಿಗೆ]ಗಿವು ಲಂಬಣಕ್ಕಿವು ಬರಗಲೆಗಿವು ಮುಗುಳ್ಗಳೆಮ್ಮ ಮೇಖಲೆಗಿವು ನೂಪುರರಚನೆಗಿಂತಿವೆಂದಾದರದಿಂದಂ ಕೊಯ್ದರ್ (ಆದಿಪು. ೭-೬೯); ಸುರಗಿಯಲರ ಮುಗುಳ ಮುತ್ತಿನ ಮಾಲೆ (ಕಾದಂಬ. ೭೮೪); ಸುರಗಿ ಮಲ್ಲಿಗೆ ಜಾಜಿ ಸಂಪಿಗೆ ಮೊಲ್ಲೆ ಕೇದಗೆ ಸಂದ ಪಾದರಿಯ ಪೂಗಳನಾವಗಂ ನೆಲೆ ಸೂಳೆಗೊಂಡು (ಧರ್ಮಾಮೃ. ೨-೨೪). **ಸುರಯಿ**: ಪೊಸಮುತ್ತಿನ ಲಂಬಣದೊಳ್ ಮುಸುಂಕಿದಂತಿಡಿಯೆ ಪೂತ ಸುರಯಿಯ ಮುಗುಳಂ (ಆದಿಪು. ೧೧-೯೯); ನಂದನಂಗಳೊಳ್ ಸುಬೆವ ಬಿರಯಿಯಿಂ ಕಂಪು ಕಣ್ಮಲೆಯೆ ಪೂತ ಸುರಯಿಯಿಂ (ಪಂಪಭಾ. ೩-೨೨); ಸುರಯಿಯ ಮುಗುಳ ಮುಗುಳ್ ಕಿಂಕಿರಾತ ಕುಟ್ಮಳದ ನೂಪುರಂ (ಶಾಂತಿಪು. ೮-೨೦); ನಗುವಂತಿರೆ ಬಿಜ್ಜಿದುವು ಸುರಯಿ (ಜಗವಿ. ೧೪-೩೫). **ಸುರಿಗೆ**$_1$: ಸಿರಿಮುಡಿಯ ಸುಳಿಗುರುಳ ಸುರಿಗೆ ಸಂಪಿಗೆಯ ಬಹುಪರಿಮಳದ ಮಲ್ಲಿಗೆಯ ಮುಗುಳಿಗಂ ಸುಳಿವಳಿಯ (ಹರಿಂಗ. ೪೭-೨೭). [ದೇ. ॥ ತುಳು. ಸುರುಗಿ, ಸೊರಗೆ]

ಸುರಗಿ$_2$, **ಸುರಿಗೆ**$_2$ (ನಾ). ಮದುವೆಯಲ್ಲಿ (ವಧೂವರರಿಗೆ) ಓಕುಳಿನೀರನ್ನು ಎರೆಯುವ ಒಂದು ಶಾಸ್ತ್ರ; ಮಲನೀರು ಮಿಂಯುವಿಕೆ: ಸುರಗಿ ಸುತ್ಕಾರವರು ಹರದೆಯರೆಲ್ಲರು ಅರಿಸೀಣ ಹಚ್ಚಲು ನಡೆದಾರು (ಸಿದ್ಧಪು. ೧೦-೬೭); ಸುರಗಿಯ ಸುತ್ತುವುದು ಐರಾಣಿ ತರುವುದು ಗುಗ್ಗುಳ ಹೊರುವುದು (ಕನ್ನಜಾ. ೬೫); ಏಳ ಕಳಸಗಿತ್ತೀ ನೀನೂ ನದಿ ಮತ್ತ ನೀನೂ ಸುರಗಿ ಎರಕೋಬೇಕಲ್ಲಿ (ಮೃನ. ೯). **ಸುರಿಗೆ**$_2$: ಮದುವೆಯಲ್ಲಿ ಸುರಿಗೆಯಲ್ಲಿ ಹೋಗಿ ನಿಂತಿದ್ದ ರೇವಕ್ಕನನ್ನು ಮದುವೆಯ ಮನೆಯವರು ಸುರಿಗೆಯಿಂದ ಹೊರಕ್ಕೆ ನೂಕಿದರು (ಬಳುಮ. ೨೮).

ಸುರಗಿನೀರು, ಸುರಿಗೆನೀರು = ಮದುವೆಯಲ್ಲಿ (ವಧೂವರರಿಗೆ) ಎರೆಯುವ ಓಕುಳಿನೀರು; ಮಲನೀರು: ಈಗಿನ ಹುಡುಗರು. ಒಂಬತ್ತು ವರ್ಷ ಆಗೋದರಾಗ ಮುಗಿಲುದ್ದಾ ಆಗತಾವ. ಅದರಾಗ ಇಂಗ್ಲಿಷಸಾಲೆಗೆ ಹೋದರೆ ಸುರಗೀನೀರು ಎರದ್ಹಾಂಗ (ಸಮಜೀ. ೬೯); ಈಗ ಸುರಿಗೆನೀರು ಎರೆಯುವ ಶಾಸ್ತ್ರವಾಗಬೇಕು (ರೂಢಿ).

ಸುರಗಿ$_3$ 'ಸುರಿಗೆ$_2$' ನೋ.

ಸುರಗಿಎಣ್ಣೆ (ನಾ). ಸುರಗಿಯ ಹೂವಿನಿಂದ ತಯಾರಿಸಿದ ಸುವಾಸನೆಯ ಎಣ್ಣೆ: ಕೈತಾನನ ಮನೆಯಿಂದ ಗಾಣದಲ್ಲಿ ಹಿಂಡುತ್ತಿದ್ದ ಸುರಗೀಎಣ್ಣೆಯ ವಾಸನೆ ಬರುತ್ತಿತ್ತು (ಮೂರುದಾ. ೨೩೩). [ಸುರಗಿ$_1$ + ಎಣ್ಣೆ]

ಸುರಗಿಕಾಱ (ನಾ). ಕಠಾರಿಯನ್ನು ಹಿಡಿದಿರುವವನು: ಸುರಗಿಕಾಱಂ ಚೌಡರಾಯನು (ಬಸಪು. ೯-೪೭); ಸುರಗಿಕಾಱಂ ಚೌಡಯಂ (ವೃಷವಿ. ೬-೪೧).

[ಸುರಗಿ$_3$ (< ಸುರಿಗೆ$_2$) + - ಕಾಱ]

ಸುರಗಿಗಟ್ಟು (ಕ್ರಿ). ಕಠಾರಿಯನ್ನು ಕಟ್ಟು; ಚೂರಿಯನ್ನು ಸಿಕ್ಕಿಸಿಕೊಂಡಿರು: ಸುರಗಿಗಟ್ಟುವರಂತೆ ಅಮಳ್ಕಡಿಗೀಱುವರಂತೆ ಕಾವಡಿಗಾಱನಂತೆ (ಧರ್ಮಾಮೃ. ೨-೪).

[ಸುರಗಿ$_3$ (< ಸುರಿಗೆ$_2$) + ಕಟ್ಟು$_1$]

ಸುರಗಿರಿ (ನಾ). = ಸುರಕುಧರ: ಸುರಗಿರಿಯಂ ಸುರನಿಕರಂ ತರತರದಡರ್ವಾಗಳಮರ ಗಣಿಕೆಯರ ಮನಂ ವಿರುವದಲಿ ನಿಕರದೊಡನೊಡನಿರದೆಱಗಿದುವು (ಆದಿಪು. ೭-೬೮); ಸುರಗಿರಿಗೆ ಭಟ್ಟಂಗಳೆಣೆಯೆ (ಬಸಪು. ೫೫-೨೩). [ಸಂ.]

ಸುರಗೀತ (ನಾ). ದೇವತೆಗಳ ಹಾಡು, — ಗಾಯನ: ಸುರಗೀತಂ ಸುರದುಂದುಭಧ್ವನಿ ಸುರಸ್ತ್ರೀರಮ್ಯಸಂಗೀತಕಂ . . . ದೇವಸಭೆಯೊಳ್ (ಆದಿಪು. ೧೩-೯೨). [ಸಂ.]

ಸುರಗೀತೆ (ನಾ). ದೇವತೆಗಳಿಂದ ಹೊಗಳಲ್ಪಡುವವಳು: ಗಾನವಿಲೋಲೆ ಸುರಗೀತೆ ನೀನೆ ಗತಿ ಎನಗಾರೊಬ್ಬರ ಕಾಣೆ ದಾನಿ ಇಂದಿರಾದೇವಿ (ವಿದಾಕೃ. ೫೫-೩). [ಸಂ. ಸುರಗೀತಾ]

ಸುರಗುರು (ನಾ). ದೇವತೆಗಳ ಗುರು; ಬೃಹಸ್ಪತಿ: ಉಕ್ತಿಯಿಂ ಸುರಗುರುವಂ ಬೆಳಗಿಂ ದಿನಪನರ್ಚಿಪ ಜಡಮತಿಗಳ್ (ಆದಿಪು. ೧೪-೧೧); ಸುರಗುರುವಂ ಕಳಿಪುವುದಾದರದಿಂ ಸಂಧಾನಮಂ ನಿಮಿರ್ಚುವುದು (ಗಿರಿಕ. ೬-೧೪). [ಸಂ.]

ಸುರಗೆಯೂರ್ (ನಾ). ಒಂದು ಊರಿನ ಹೆಸರು: ಸುರಗೆಯೂರಾ ದಾಸಮ್ಮೆಚೆಯರ್ (ಎಇ. VI, ೧೬೧-೨; ಸು.765). [ಸುರಗೆ + ಊರ್]

ಸುರಗೆವೆಕ್ಕಣ (ನಾ). ಕಠಾರಿ ಹಿಡಿದು ಮಾಡುವ ನೃತ್ಯ (?): ಪೊಸತೆನಿಪ ಸುರಗೆವೆಕ್ಕಣಮೆಸೆದಿರೆ ಕಡುವೊಸತು ಬಣ್ಣರಸಮೆಸೆದಿರೆ ನಿಪ್ಪೊಸತೆನಿಪ ದೇಸೆ ಮಾಸಱಮೆಸೆದಿರೆ ಸಭೆ ಮೆಚ್ಚೆ ಪೊಚ್ಚಪೊಸತಾಯ್ತು ರಸಂ (ಅಜಿಪು. ೫-೩೧). 'ಗೊಂದಳವೆಕ್ಕಣ' ಪರಾ. [ಸುರಗೆ + ಪೆಕ್ಕಣ]

ಸುರಗೇಯ (ನಾ). ೧. = ಸುರಗೀತ: ಪಾಡಿ ಸುರಗೇಯ ಘೋಷಂಗಳಂ (ಶ್ರೀರಾಮಾ. ೧೮-೪೮೨). ೨. ದೇವತೆಗಳಿಂದ ಸ್ತುತಿಸಲ್ಪಡುವವನು: ಶ್ರೀಯನ್ನೀಯಲಿ ವಿರಹಿತಮಾಯಂ ಸುರಗೇಯನಪ್ರಮೇಯಂ ಸ್ಫಟಿಕಾಚ್ಛಾಯಂ ಭೂಧರಜಾವರ ಕಾಯಾಶ್ರಯನೊಲಿಯುತೆನಗೆ ಶ್ರೀಮಹಲಿಂಗಾ (ಪಂಚಶ. ೩-೧). [ಸಂ.]

ಸುರಗೋ (ನಾ). ೧. ದೇವಲೋಕದ ಹಸು; ಕಾಮಧೇನು. ೨. ಬೇಡಿದುದನ್ನು ನೀಡುವವನು; ಕಾಮಧೇನುವಿಗೆ ಸಮಾನನಾದವನು: ವಂದಿತ ಲೋಕವೃಂದ ಸುರಗೋ ರಾಜೇಂದ್ರ ಹಮ್ಮೀರ ಜೋ (ಹಮ್ಮೀರ. ೨-೨೬). [ಸಂ.]

ಸುರಗೋಪ (ನಾ). ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಒಂದು ಬಗೆಯ ಕೆಂಪುಬಣ್ಣದ ಮಿಂಚುಹುಳು; ಇಂದ್ರಗೋಪ: ಸುರಗೋಪಂಗಳು ಮಾಲಿಕಲ್ಲುಮೆಳವುಲ್ಲುಂ ಕೆಂಪಿನಿಂ ಬೆಳ್ಪಿನಿಂ ಹರಿತಚ್ಛಾಯೆಯಿನಲ್ಲಿಗಲ್ಲಿಗೆಸೆಗುಂ (ಜಗವಿ. ೪-೨೦); ಸುರಗೋಪಚ್ಛಲದಿಂ ಧರಾರಮಣಿ ರಾಗಂಬೆತ್ತು ಮಾದ್ಯನ್ಮನೋಹರ ಮಪ್ಪಾಸನಮಂಡಳೀಮಿಷದಿನೀಗಳ್ಳರ್ಕಿಸುತ್ತಿರ್ದಳ್ (ಶಾಂತೀಶ್ವ. ೧೨-೫೦). [ಸಂ.]

ಸುರಚಾಪ (ನಾ). ಕಾಮನ ಬಿಲ್ಲು; ಇಂದ್ರಧನುಸ್ಸು: ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಣ್ಣುವೋಲ್ತೋಱೆ ಬೇಗಂ ಪಿರಿಗುಂ ಶ್ರೀರೂಪಲೀಲಾಧನ ವಿಭವಮಹಾರಾಶಿಗಳ್ ನಿಲ್ಲವಾರ್ಗ್ಗಂ (ಎಕ. II, ೮೮-೧; 700); ಪರಿವೇಷಂ ನಾಡೆ ಭಯಂಕರಮಪ್ಪುದನರ್ಕಬಿಂಬದೊಳ್ ನಟ್ಟಿರುಳೊಳ್ ಸುರಚಾಪಂ ಮೂಡುವುದಂ . . . ಕಂಡು (ಪಂಚಾಮಾ. ೧೪-೧೨೦); ಪ್ರಿಯನ ಪಟ್ಟಾಭಿಷೇಕೋತ್ಸವದ ಸಂಭ್ರಮಕೆ, ಸುರಚಾಪಲತೆಗಳಂ ತಿರಿತಂದು (ಶ್ರೀರಾಮಾ. ೮೬-೨೨೨). [ಸಂ.]

ಸುರಚಾರಣ (ನಾ). ದೇವಲೋಕದ ನಟ,— ಗಾಯಕ: ಬಂದ ಸುರಚಾರಣರ ಹಾಹೆಯ ತೊಡರು ಪೆಂಡೆಯ ಮೆಚೆವ ಖಳಮಲ್ಲ (ಕೌಶಿಕಾ. ೩೬-೧೬). [ಸಂ.]

ಸುರಜನ (ನಾ). ದೇವಲೋಕದ ಜನ: ಸುರಜನಮುಂ ಪುರಜನಮುಂ ಪರಿಜನಮುಂ ಪರಮಪುರುಷಜನ್ಮೋತ್ಸವ ನಿರ್ಭರತರ ಹರ್ಷರಸಾಮೃತಶರಧಿಯೊಳೇಂ ಕೂಡೆ ಮೂಡಿ ಮುಳ್ಳೂಡಿದುದೋ (ಚಂದ್ರಪು. ೧೨-೧೭೪); ಸುರಜನಂಗಳುಂ ಪುರಜನಂಗಳುಂ ಪೊಗಟೆ (ಪುಷ್ಪಪು. ೧೨-೧೫ ವ). [ಸಂ.]

ಸುರಜಿತ (ನಾ). ದೇವತೆಗಳನ್ನು ಗೆದ್ದವನು: ಸುತನು ನೀನೆಂದಿದ್ದೆನಾ ಸುರಜಿತನು ಕಂಡರೆ ನಿನ್ನನುಳುಹನು . . . ಹೋಗು ಸಾಯದಿರು (ಕೌಶಿಕಾ. ೧೮-೧೭). [ಸಂ. ಸುರಜಿತ್]

ಸುರಜ್ಯೇಷ್ಠ (ನಾ). ದೇವತೆಗಳಲ್ಲಿ ಹಿರಿಯನಾದವನು; ಬ್ರಹ್ಮ: "ಬ್ರಹ್ಮಾ . . . ಸುರಜ್ಯೇಷ್ಠಾ . . . ಕಮಲಾಸನಃ—ಈ ೨೦ ಬ್ರಹ್ಮನ ಪೆಸರ್" (ಹಲಾಯು. ೨-೬); ಶ್ರೀಜಗನ್ನಾಥವಿಜಯಮಹಾಪ್ರಬಂಧದೊಳ್ ಸುರಜ್ಯೇಷ್ಠವಿಜ್ಞಾಪನಾಕರ್ಣನ . . . ವರ್ಣನಂ (ಜಗವಿ. ೧-೮೦ ವ). [ಸಂ.]

ಸುರಟಿ$_1$ 'ಸುರುಟಿ$_1$' ನೋ.

ಸುರಟಿ$_2$ (ನಾ). ಒಂದು ಬಗೆಯ ಸಸ್ಯ: ತೊರತ್ತಿ, ಸುರಟಿ, ಕಿಲ್ಲಂಗಿ, ಚೌಲ್‌ಮೂಗ್ರ, ಎಣ್ಣೆಮರ, ಹಾಲಪೆ (ಮೃಚಿಗಿ. ೪೫-೮೮೨). [?]

ಸುರಟ್ಟು$_1$ 'ಸುರುಟ್ಟು$_3$' ನೋ.

ಸುರಟ್ಟು$_2$ (ನಾ). ಒಂದು ಬಗೆಯ ಆಯುಧ (?): ಸು(ರು)ರಟಂದಾಂತರಂ ಕೊಲ್ವಂ . . . ಎಕ್ಕಲ ಕ್ಷೋಣಿಪಾಳಂ (ಎಕ. VIII, ಸೊರಬ. ೧೩೮-೨೬; 1145). [?]

ಸುರಡಿ (ನಾ). ಒಂದು ಬಗೆಯ ಭೂಮಿ (?): ಕೆಳ ಸುರಡಿ ಮೇಲಸುರಿಡೀ ಸಹರೇಖೆ ಭೂಮಿ ಖಂ ೫೪ ಕೆ (ಎಕ. VI, ಶೃಂಗೇರಿ. ೧೧-೯೨; 1652). [?]

ಸುರತ (ನಾ). ಸಂಭೋಗ; ಕೂಟ: ಸಮಸತ್ತ್ವಂಬಡುವಂತಿರಾಯ್ತು ಸುರತಪ್ರಾರಂಭಕೋಳಾಹಳಂ (ಕಾವ್ಯಸಾ. ೬೫೬ ಶೂದ್ರಕ); ಆಕೆಯ ಬೂದಿಯ ರೂಪನಳಿದು ಸ್ತ್ರೀರೂಪ ಮಾಡಿ ಸುರತದಲ್ಲಿರ್ದನು (ಭೃರಸೂ. I, ೮೩).

ಸುರತದಱಕೆಯವಳ್ = ಸಂಭೋಗದ ಬಯಕೆಯುಳ್ಳವಳು: "ವೃಷಸ್ಕಂತೀ, ರತಾರ್ಥಿನೀ - ಈ ೨ ಸುರತದಱಕೆಯವಳ್" (ಹಲಾಯು. ೮೦-೩೩೧). [ಸಂ.]

ಸುರತಕ್ರೀಡೆ (ನಾ). ರತಿಕೇಳಿ: ಚಿತ್ರಾಸನೆ ತಚ್ಚಿತ್ತಪ್ರಿಯಂಗೇಂ ಮೆಚ್ಚದಳೊ ಸುರತ ಕ್ರೀಡೆಯಂ ಪ್ರೌಢಿಯಿಂದಂ (ಕಾವ್ಯಸಾ. ೬೬೪); ಸುರತಕ್ರೀಡೆಗಳೊಳ್ ಸುಗೀತ ರಚನಾಳಾಪಂಗಳೊಳ್ . . . ಪೊತ್ತುಗಳೆವಂ (ತ್ರಿಪುವಿ. ೨೬-೧೦). [ಸಂ. ಸುರತಕ್ರೀಡಾ]

ಸುರತಧ್ವನಿ (ನಾ). ಸಂಭೋಗದ ಸಮಯದಲ್ಲಿ ಉಂಟಾಗುವ ಶಬ್ದ: "ಅಳಸು = ಸುರತಧ್ವನಿ" (ಶಮದ. ಪರಿ. ೨); "ಅಳಸೆಂದೆನಲ್ ಸುರತಧ್ವನಿ" (ಕಬ್ಬಿಕೃ. ೮೪). [ಸಂ.]

ಸುರತರಸ (ನಾ). ಸಂಭೋಗಕಾಲದಲ್ಲಿ ಉತ್ಪತ್ತಿಯಾಗುವ ದ್ರವ; ರೇತಸ್ಸು; ವೀರ್ಯ: "ಸುರತರಸದೊಳ್ ಕಣ್ಣೆನೊಳು ಬಳಿದಿನೊಳ್ ಕವಿಯೊಳಿರೆ ಶುಕ್ಲಮಕ್ಕು" (ಮಂಗರಾ. ೧೪೯-೪೪). [ಸಂ.]

ಸುರತರಾಗ (ನಾ). ಸಂಭೋಗಾಸಕ್ತಿ: ಬರಿಪೆಂ . . . ನಲ್ಲನಂ ತಗುಳ್ದಿರಿಪೆನನಾರತಂ ಸುರತರಾಗನಿರೂಪಣಕಾರಣಂಗಳಂ (ಕವಿರಾ. ೨-೧೦೫); ರಜನಿಸುರತರಾಗಂ ಮಹ ದ್ಬ್ರಹ್ಮಚರ್ಯಂ . . . ಅಱಿವುದೇಕಾದಶಂ ಖೇಚರೇಂದ್ರಾ (ಶಾಂತಿಪು. ೬-೫೦). [ಸಂ.]

ಸುರತರು (ನಾ). ೧. = ಸುರಕುಜ ೧: ಸುರತರುನಂದನಂಗಳಿರ ರತ್ನಖಚಿತದ್ದವಿಮಾನಕುಟ್ಟಿಮಾಂತರ ಸುರತಾಲಯಂಗಳಿರ . . . ನೋಡುತಿರ್ಪಿರೇ (ಆದಿಪು. ೩-೪); ದೇವಕಲ್ಪಲತೆಯನೆಳಸಿರ್ಪ ಸುರತರುವಿನಂತೆ (ನಂದಿರ. ೪-೧೭); ಔದಾರಿಯದ ಸುರತರುವ ಕುಂತೀನಾರಿ ಕಾಣಲು ಬಂದಳು (ಕುಮಾಸಂ. ೧೦-೨೬). ೨. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದವೊಂದಕ್ಕೆ ನಾಲ್ಕು ಅಕ್ಷರಗಳುಳ್ಳ 'ಪ್ರತಿಷ್ಠೆ' ಎಂಬ ಛಂದಸ್ಸಿನ ಒಂದು ವೃತ್ತ: ಸುರಹರಿ ನೆರೆದಿರ ವರವಧು ಸುರತರು (ಛಂದೋಂಬು. ೨-೬೫). [ಸಂ.]

ಸುರತರುಣಿ (ನಾ). = ಸುರಕನ್ನೆ: ಸುರತರುಣೀಕರಾವಚಯಪಲ್ಲವಪುಷ್ಪಫಳೋಪ ಶೋಭಿಗಳ್ (ವರ್ಧಪು. ೧೫-೧೦೦); ಸುರತರುಣೀಚಳಾಳಕ ಮೃಗೋದ್ಭವರೇಣು ತಟಿಲ್ಲ ತಾಂತ ಸುಂದರಮಕರಂದರೇಣು (ಅನಂಪು. ೫-೪೨). [ಸಂ. ಸುರತರುಣೀ]

ಸುರತವೆಸಗು (ಕ್ರಿ). ಸಂಭೋಗ ಮಾಡು; ರತಿಕ್ರೀಡೆಯಾಡು: ಗಳರವ ಚುಂಬನ ಕಾತರ ದೈನ್ಯ ಸಂಕಲಿತ ಸೀತ್ಕಾರಗಳಿಂದೆ . . . ಸುರತವೆಸಗುವ ಜಾಣ (ಇಚಿಸಾಂ. ೯-೬೫). [ಸುರತ + ಎಸಗು$_1$]

ಸುರತಾರವ (ನಾ). = ಸುರತಧ್ವನಿ: ಮನ್ಮಥ ಸೂತ್ರಧಾರ ನಾಟಕರವಮುಣ್ಮುವಂತೆ ಸುರತಾರವಮುಣ್ಮೆದುದೊಂದು ಗೇಹದೊಳ್ (ಶಾಂತಿಪು. ೮-೧೦೧). [ಸಂ.]

ಸುರತಾಲ 'ಸುಲ್ತಾನ್' ನೋ.

ಸುರತಾಲಯ (ನಾ). ಸಂಭೋಗ ಸ್ಥಳ: ಸುರತರುನಂದನಂಗಳಿರ ರತ್ನಖಚಿತದ್ದ ವಿಮಾನಕುಟ್ಟಿಮಾಂತರ ಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸೌಂದರ ಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿರ್ನ್ನೆರಮೆಚೆದುಯ್ಯೆ ಚಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ (ಆದಿಪು. ೩-೪); ಎಸೆವ ಪವಡಿಸುವ ಮನೆ ಚಿತ್ರಸಾಲೆ ಸುರತಾಲಯಂ ಮಹೀಗೃಹಮಾರೋಗಿಸುವ ಮನೆ ಮಂಡಪಂ ಗುಣನೆಸಾಲೆಯೆಂಬಿನಿತುಂ ಗೃಹಾಂಗಂ ಕುಡುಗುಂ (ಶಾಂತಿಪು. ೬-೧೧೬). [ಸಂ.]

ಸುರತಾಳ 'ಸುಲ್ತಾನ್' ನೋ.

ಸುರತಿಚೆಕ್ಕೆ (ನಾ). ಒಂದು ಬಗೆಯ ವನಸ್ಪತಿ: ಹಾರುಗೆ, ಸುರತಿಚೆಕ್ಕೆ (ಮೃಚಿಗಿ. ೭೭-೧೫೭೭). [?]

ಸುರತಿಸು (ಕ್ರಿ). ಕೂಡು; ಸಂಭೋಗಿಸು: ಮೊಳಿಜವ್ವನದ ಮೋಹಿನಿಯ ಸುರತಿಸ ಗರ್ಭ ಬೆಳೆವಂತೆ ಹಸುಳೆಗೆ ಗರ್ಭ ನಿಲ್ಲುವುದೇ (ಕೃಕವ. ೫-೧-೨). [ಸುರತ + - ಇಸು]

ಸುರತೂರ್ಯ (ನಾ). ದೇವದುಂದುಭಿ: ಸುರತೂರ್ಯರಾವಮೆಂಟುಂದಿಸೆಯೊಳ್ ವೆಸೆಯುತ್ತಿರ್ಪಿನಂ (ಅಜಿಪು. ೫-೨೮); ಸುರತೂರ್ಯಂ ತೂರ್ಯಂ ಸುರತರು ಕುಸುಮಾಸಾರಮರ್ಘ್ಯಂ (ಪಾರ್ಶ್ವಪು. ೧೬-೮೦). [ಸಂ.]

ಸುರತೆ (ನಾ). ೧. ಸುರತಕ್ಕೆ ಸಿದ್ಧವಾದವಳು: "ರತೆಯೆನಲು ಸುರತೆಯಕ್ಕುಂ" (ಮಂಗರಾ. ೮೯-೨). ೨. ಬೆದೆಗೆ ಬಂದಿರುವ ಹಸು; ಬೆದೆಯಾಕಳು: " ಅಚಂಡೀ, ಸುರತಾ -- ಈ ೨ ಬೆದೆಯಾವು" (ಹಲಾಯು. ೪೫-೧೧೬). [ಸಂ. ಸುರತಾ]

ಸುರತ್ರಾಣ 'ಸುಲ್ತಾನ್' ನೋ.

ಸುರತ್ವ (ನಾ). ದೇವನಾಗಿರುವಿಕೆ; ಅಮರತ್ವ: ಇರುಳುಂ ಪಗಲುಂ ಜಾನಿಸಿ ಸುರತ್ವಮಂ ಕೊಟ್ಟು (ಕಾಂತಿಪು. ೪-೬೯). [ಸಂ.]

ಸುರದಂತಿ (ನಾ). ದೇವಲೋಕದ ಆನೆ; ಐರಾವತ: ಸುರದನ್ತಿಯ ರಜತಗಿರಿಯ ಚನ್ನಿನ ಬೆಳ್ಪಂ ಪಿರಿದು (ಎಕ. II, ೭೧-೧೫೫; ಸು. 1180). [ಸಂ. ಸುರದಂತಿನ್]

ಸುರದಲ್ಲಣ (ನಾ). ದೇವತೆಗಳನ್ನು ಭಯಗೊಳಿಸುವವನು; ರಾಕ್ಷಸ: ಬಲ್ಲಿದರ್ ತಾಗಿ ಹಿಮ್ಮೆಟ್ಟಿದರ್ ಕೆಲಬರಲ್ಲಲ್ಲಿ ನಿಂದರ್ ಕೆಲಬರಳವಳಿಯೆ ಕಂಡು ಸುರದಲ್ಲಣಂ ವೀರನಾ ಬ್ರಹ್ಮನಿದಿರೊಳ್ ನಿಂದು ನುಡಿದನು (ಚಿಪು. ೩೧-೪೬).

[ಸುರ + ತಲ್ಲಣ (< ತಲ್ಗು)]

ಸುರದಾರು (ನಾ). ಒಂದು ಬಗೆಯ ವೃಕ್ಷ; ದೇವದಾರು: ಸುರದಾರು ಮಾಕ್ಷಿಕಂ ಶರ್ಕರೆ ಶೈಲಜಮಗುರು ಬಿಲ್ವಮಿವಱಿಂ ಪೊಗೆಗೊಳ್ ಭರಣಮನಂತದಱೊಳ್ ಪೊಯ್ದುರಿಸೆಣ್ಗೆಯನದು ವಿಶೇಷಗಂಧಮನೀಗು (ಆಯೋಪ. ೭-೨೬); ಕೈಲಾಸನಗದ ಸಮ್ಮೇದಗಿರಿಯ ನಡುವಣ ಸುರದಾರುವನೋಪಕಂಠದೊಳ್ ಬೀಡಂ ಬಿಟ್ಟು (ಪಂಡಾಮಾ.೧೦-೧೫೬ ವ). [ಸಂ.]

ಸುರದಿಕ್ಕು (ನಾ). ಇಂದ್ರನ ದಿಕ್ಕು; ಪೂರ್ವದಿಕ್ಕು; ಮೂಡಲು: ಸುರದಿಕ್ಕಾಮಿನಿ ಪೊಯ್ದ ಮೇಗೊಗೆದ ಶೋಣಂ ಕಂದುಕಂ ತಾನಿದೆಂಬರ ಮಾತಿರ್ಕೆ (ಚಂದ್ರಪ್ರ. ೮-೧೦೪); ಸುರದಿಕ್ಕಾಂತೆಯೊಳೋತು ಭಾನು ನೆರೆಯಲ್ (ಕುಸುಮಾ. ೪-೭೮). [< ಸಂ. ಸುರದಿಶ್]

ಸುರದೀರ್ಘಿಕೆ (ನಾ). ದೇವಲೋಕದ ನದಿ; ಅಮರಗಂಗೆ: ಸುರದೀರ್ಘಿಕೆಯೊಳ್ ಕರಪುಷ್ಕರದಿಂದಭ್ರಮುವನಭ್ರಮೂಪತಿ ತಳಿವಂತಿರೆ ಜಳಯಂತ್ರದೆ ತಳಿದಂ ಸರಸಿಯೊಳರಸಂ ಶಶಿಪ್ರಭಾವಲ್ಲಭೆಯಂ (ಚಂದ್ರಪ್ರ. ೭-೧೨೯). [ಸಂ. ಸುರದೀರ್ಘಿಕಾ]

ಸುರದುಂದುಭಿ (ನಾ). ೧. = ಸುರತೂರ್ಯ: ಸುರದುಂದುಭಿಸ್ವನಕೆ ಮುಯ್ಯಾಂತು (ನಂಬರ. ೧೯-೫೮). ೨. [ಜೈನ] ಅಷ್ಟಮಹಾಪ್ರಾತಿಹಾರ್ಯಗಳಲ್ಲಿ ಒಂದು; ದೇವದುಂದುಭಿ: ಪ್ರಕಟಯಶೋದುಂದುಭಿ ಸಿಂಹಾಸನ ಸುರದುಂದುಭಿಪತಿಚರಣ ಕಮಲಭೃಂಗಂ ಪಂಪಂ (ಆದಿಪು. ೧-೩೩). [ಸಂ.]

ಸುರದ್ರುಮ (ನಾ). = ಸುರಕುಜ ೧: ಪರಮಮುನಿ ತನುವನಡರ್ವುದು ಸುರದ್ರುಮಂಗೆತ್ತು ಯುವತಿರೂಪದಿನೆಂದಾದರದಿಂ ಬಿಡಿಸಿದರ್ (ಆದಿಪು. ೧೪-೧೪೩); ಸುರದ್ರುಮಕೆ ನವಪ್ರಸೂನವಿಭವಂ (ಕಾದಂಪೂ. ೪೪೨). [ಸಂ.]

ಸುರದ್ವಿಷ (ನಾ). ದೇವತೆಗಳ ಶತ್ರು; ರಾಕ್ಷಸ; ಅಸುರ: "ಅಸುರಾಃ, ದೈತ್ಯಾಃ . . . ಸುರದ್ವಿಷಃ, ಅಸುರನೆಂಬ ದೈತ್ಯರ ಹೆಸರುಗಳು" (ಸಿದ್ಧಾಂತಿ. ೧೫). [ಸಂ.]

ಸುರಧನು (ನಾ). = ಸುರಚಾಪ: ನೆನೆದ ಮನಂ ಪೆಱಗುಲಿದತ್ತನೆ ಬೆಳಗುವ ರತ್ನದೀಪ್ತಿ ಸುರಧನು ನೆಗೆದತ್ತನೆ ನೆಯ್ದಿಲ್ಲೊಳನಲರ್ದತ್ತನೆ . . . ಬಂದಂ (ಪಂಪಭಾ. ೧-೧೩೮); ಕೂಟವಾದುದು ಶರಣಸ್ಥಲ ಆ ಸ್ಥಲ ಸುರಧನುವಿನ ಕೆಲವಳಿಯಂತೆ ಮರೀಚಿಕಾಜಲದ ವಳಿಯಂತೆ (ನೋಳಮಾ. ೧೧೩-೪೪೬). [ಸಂ.]

ಸುರಧರೆ (ನಾ). ದೇವತೆಗಳ ಲೋಕ; ಸ್ವರ್ಗ: ಸುರಧರೆಯ ಸುರಭಿ ವಸ್ತೂತ್ಕರದಾಮೋದಂಗಳಭವನಂಗಾಮೋದಂ ಪರಿಯೆ ಪರಪುಡುಗಿ ಭಯದಿಂ ಶರಣ್ಗೆವಂದಂತೆ ಸುಳಿವುವಲೆವಲರಿಂದಂ (ಮಹಾನೇ. ೧೫-೭೪). [ಸಂ. ಸುರಧರಾ]

ಸುರಧಾಮ (ನಾ). = ಸುರಧರೆ: "ಸುರಧಾಮದೊಳು ಬೌದ್ಧತಪದೊಳು ಚರ್ಯವೆನಿಸಿರ್ಕು" (ಮಂಗರಾ. ೧೪೩-೨೧). [ಸಂ. ಸುರಧಾಮನ್]

ಸುರಧೂಪ (ನಾ). ಅಶ್ವಕರ್ಣ ಎಂಬ ಮರದ ರಾಳ,—ಅಂಟು: ಸುರಧೂಪ [ಪಾಠಾಂ. ಮ]ದ ಬಣ್ಣಂ ಮೇಣರ(ರೆ)ನೇಲಿಲ ಪಣ್ಣಿ ಬಣ್ಣವಾದೊಡೆ ಪುಣ್ಣಂ ಪರಿಸೇಕಿಪುದು ವೈಶ್ವಾನರಚೂರ್ಣಮನಿಡಲ್ಕೆವೇಡ ತದನಂತರದೊಳ್ (ಅಶ್ವಶಾ. ೧೨-೧೨).

[ಸಂ.]

ಸುರಧೇನು (ನಾ). ದೇವಲೋಕದ ಹಸು; ಕಾಮಧೇನು: "ಸುರಧೇನುಗಾಸಗ್ಗದುಱು" (ಶಬ್ದಮಂ. ೧೧); ಕಲ್ಪತರು ಸುರಧೇನುಗಳು ಬಂದ ಹರುಷದಿಂ . . ಮಾಳ್ಪೆ ನಾ ಕಜ್ಜಮಂ (ತಿರುಜ. ದೇ. ೧೧-೭); ಕಲ್ಲು ಪರುಷಗಳೆಲ್ಲ ಪುಟ್ಟಿದ ಹುಲ್ಲುಗಳು ರಾಜಾನ್ನ ಕೂಪವು ಯೆಲ್ಲ ಸಿದ್ಧರಸಂಗಳಾವುಗಳೆಲ್ಲ ಸುರಧೇನು (ಕಾಶಿಕಾ. ೧-೨೨). [ಸಂ.]

ಸುರನಂದನ (ನಾ). ದೇವಲೋಕದ ಉದ್ಯಾನವನ: ಈ ಬನಂ ಸಂದ ಸುರನಂದನಮನೇಳಿಕುಂ (ರಾಮಾಶ್ವ. ೫೫-೧). [ಸಂ.]

ಸುರನಗ (ನಾ). ದೇವಲೋಕದ ಬೆಟ್ಟ; ಮೇರುಪರ್ವತ: ಬಹುರತ್ನಖಚಿತ ಸುರನಗಮಹಿಮೆಯನಾಳ್ದತ್ತು ವಿನತಸುರಸಂದೋಹಾ (ಜಸಾಲ. ೩೩-೩೩); ಸುರನಗಮಂ ನಿರ್ಮಿರ್ಚಿ ತೆರಸುತ್ತಿದನಲ್ತೆ ಸರೋಜಸಂಭವಂ (ಚಂದ್ರಪ್ರ. ೧-೧೧೪). [ಸಂ.]

ಸುರನಚ್ಚಣಿ (ನಾ). ದೇವಲೋಕದ ನರ್ತಕಿ; ಅಪ್ಸರೆ: ಅಚ್ಚರಸಿಯರ ಮೇಳದಲಿ ಸುರನಚ್ಚಣಿಯು ಭೂಮಿಯನು ಮೆಟ್ಟಿದೆ ಮೆಟ್ಟುತಿರೆ (ಸಾಳ್ವಭಾ. ೩೨-೩೦).

[ಸುರ + ನಚ್ಚಣಿ]

ಸುರನದಿ (ನಾ). ದೇವಲೋಕದ ನದಿ; ದೇವಗಂಗೆ: ಸುರನದಿಯವಗಾಹದ ಸಿಂಧುರಮೆಲ್ಲಂ ತೊಳೆದು ಪೋಗೆ (ಕಾದಂಪೂ. ೨೪೦); ಅಲಲುಗೊಂಡಂಗೆ ಸುರನದಿಯರ್ಪಂತೆ (ನಂಬರ. ೧೮-೫೧). [ಸಂ. ಸುರನದೀ]

ಸುರನದೀಜ (ನಾ). ದೇವಗಂಗೆಯಲ್ಲಿ ಹುಟ್ಟಿದವನು; ಭೀಷ್ಮ: ಗುರುಕೃಪ ಸುರನದೀಜರು ಮುಳುಗಿದರು ಪುಳಕಾಂಬುಪೂರದಲಿ (ಕುವ್ಯಾಖ. ೭-೪೨). [ಸಂ.]

ಸುರನಾಥೇಜ್ಯ (ನಾ). [ಜ್ಯೋತಿ] ಗುರುಗ್ರಹ: ಸುರನಾಥೇಜ್ಯಾಂತದೊಳ್ ಜನಿಸಿದಳ್ ಸಾಧ್ವಿ (ಜಾತಕ. ೨೨-೩). [ಸಂ.]

ಸುರನಾರಿ (ನಾ). ದೇವಲೋಕದ ಹೆಂಗಸು; ಅಮರಸ್ತ್ರೀ: ಸುರನಾರಿಯರೆಲ್ಲಂ . . . ವರಷೋಡಶಕಲ್ಪದೊಳಂ ಚರಿಯಿಸುವರ್ (ಸುಕುಮಾ. ೧೧-೭೨); ಇಲ್ಲಿ ಮನುಜ ಸ್ತ್ರೀಯ ಮೇಳವಲ್ಲಿ ಸುರನಾರಿಯರ ರತಿ ನಿಮಗೆ (ಕುವ್ಯಾಗ. ೧-೫೧). [ಸಂ. ಸುರನಾರೀ]

ಸುರಪ (ನಾ). ೧. ದೇವತೆಗಳ ಒಡೆಯ; ಇಂದ್ರ: ಸುರಪಂ ಮಾಡಿದನೂನದಿವ್ಯ ಪರಿನಿರ್ವಾಣೋದ್ಯಕಲ್ಯಾಣವಿಸ್ತರಪೂಜಾತಿಶಯಕ್ಕಮಿಂತಿದೆನಸುಂ ಮೇಲಂಬಿನಂ ಮಾಡಿದಂ ಪರಮಾರ್ಹತ್ಪದಪೂಜೆಯಂ (ಪುಷ್ಪಪು. ೧೪-೫೫). ೨. [ಛಂದ]ಒಂದು ಮಾತ್ರಾಗಣ: ಸುರಪ ಶೀತಕರಾಗ್ನಿ ಮಾರುತ ಭಾನುಯುಗ್ಮಗಣಂಗಳಂ ಪರದೊಳೊಪ್ಪೆ . . . ತರಳಲೋಚನೆ ನಾಮದಿಂ ತರಳಂ (ಛಂದೋಂಬು. ೨-೧೭೧). [ಸಂ.]

ಸುರಪಟಹ (ನಾ). ದೇವಲೋಕದ, ಒಂದು ಬಗೆಯ ತಮಟೆಯಂತಹ ವಾದ್ಯ; ದೇವಪಟಹ: ಸುರಪಟಹ ಪೇಟಕಂ ಹೇಮಾಭ್ರಕ ಧೃತಿಯಿನಣ್ಕೆ ಗೆಯ್ದುದೆನಿಸೆಯುಂ (ಮಲ್ಲಿಪು. ೧೪-೨೦೨). [ಸಂ.]

ಸುರಪತಿ (ನಾ). ೧. = ಸುರಪ ೧: ಸುರಪತಿಯು ಪೊಗಲ್ತ್ತೆಗವಿನಾರನಾಥಂ ಸಚ್ಚರಿತ್ರದೊಳ್ ಭಾವಿಪೊಡುರ್ವರೆಯೊಳ್ ನೂರ್ಮಡಿ ಪಿರಿಯಂ (ಧರ್ಮಾಮೃ. ೪-೧೭೬); ಸುರಪತಿಗೆ ಕುಶಲಮೇ ಪಂಕರುಹಭವಂ ಕ್ಷೇಮಿಯೇ (ಗಿರಿಕ. ೬-೨೪). ೨. ಒಂದು ಬಗೆಯ ಪಕ್ಷಿ; ಗೂಬೆ: ಸುರಪತಿಯ ಬೆಳ್ಪಡಿಯ ರಥಚರಣದ . . . ಭಾಸುರವಾದ್ಯದ ಪೆಸರ ಪೊಗಕುಳಂ ಕರಮೆಸೆಗುಂ (ರಾಜಶೇ. ೫-೭೦). [ಸಂ.]

ಸುರಪಥ (ನಾ). ದೇವತೆಗಳು ಸಂಚರಿಸುವ ಮಾರ್ಗ; ಆಕಾಶ: ಶ್ರೀಶವ ಮಹೇಶ . . . ಸುರಪಥ[ಪಾಠಾಂ. ಸತ್‌ಪಥ]ಸುಕೇಶ (ಗುರುಚಾ. ೧-೧). [ಸಂ.]

ಸುರಪದ (ನಾ). ದೇವೇಂದ್ರನ ಪದವಿ; ಇಂದ್ರನ ಸ್ಥಾನ: ಕರುಳ ತಂತಿಯುಪದೇಶದಿಂದೆ ಅಸುರನಂದು ಹಡೆಯನೆ ಸುರಪದವ (ಬಸವ. ೬೫೬). [ಸಂ.]

ಸುರಪದವಿ (ನಾ). = ಸುರಪದ: ಆ ಕುಸುಮಮಂ ಪಾರ್ವತೀಶಂ ಸ್ವೀಕರಿಸಿ ತುಂಟಾದಡಾ ಪುಷ್ಪಾಕಲಿತಫಲದಿಂದ ಸುರಪದವಿಯಾ [ಪಾಠಾಂ. ಸುರಪದವಾ]ಯಿತು (ಬಸಪು. ೪೧-೧೬). [ಸಂ.]

ಸುರಪರಿಪು (ನಾ). ೧. ಇಂದ್ರನ ಶತ್ರು. ೨. ಗರುಡ: "ಸುಪರ್ಣಂ . . . ವೈನತೇಯಂ ಸುರಪರಿಪು ಗರುತ್ಮನೆನಲ್ಕೆ ಗರುಡನಕ್ಕುಂ" (ಮಂಗರಾ. ೭-೨೧). [ಸಂ.]

ಸುರಪರ್ಣೆ (ನಾ). ಒಂದು ಬಗೆಯ ಸಸ್ಯ; "ಕಂಪಿಲ್ಕ" (ಪಂಡಿತ. ೨೭೫). [ಸಂ. ಸುರಪರ್ಣೀ]

ಸುರಪರ್ಣಿಕೆ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು; ಸುರಹೊನ್ನೆ; ಪುನ್ನಾಗ: "ಪುನ್ನಾಗಃ, ಸುರಪರ್ಣಿಕಾ-ಈ ೨ ಸುರಹೊನ್ನೆ" (ಹಲಾಯು. ೩೫ -೫೫). [ಸಂ. ಸುರಪರ್ಣಿಕಾ]

ಸುರಪಾಲಕ (ನಾ). ದೇವಲೋಕದ ಪಾಲಕ; ಇಂದ್ರ: ವಿಕಳಬಲನಿವನೇನು ಭಾಳಾಂಬಕನೊ ಬಲಿಬಂಧಕನೊ ಸುರಪಾಲಕನೊ (ಕುಮಾಕ. ೧೨-೫). [ಸಂ.]

ಸುರಪುನ್ನಿಕೆ (ನಾ). = ಸುರಪರ್ಣಿ: ಮಾಲತೀ ಸುರಪುನ್ನಿಕಾ ನವಮಾಲಿಕಾ ಕರವೀರ . . . ಚಂದನದ್ರುಮತತಿಯ ಸಾಲ್ಪಿಡಿದು (ಬಸಪು. ೨೬-೩೭). [< ಸಂ. ಸುರಪರ್ಣಿಕಾ]

ಸುರಪುರ (ನಾ). ದೇವತೆಗಳ ಪಟ್ಟಣ; ಸ್ವರ್ಗ : ತಿಳಿದಿನಿತು ತೆಳ್ಳೆಯುಮಂ ಕಾದಳಿಪಿಲ್ಲದೆ ನೆಗಟ್ಟರೆಯ್ದುವರ್ಸ್ಸುರಪುರಮಂ (ಸೌಕಾ. XX, ೪೭-೩೯; 1074); ಸುರಪುರದಂತೆ ದಿವ್ಯಸುಮನೋಗಣನಂದಭಾಷಿ ದೈತ್ಯಸಂಹರ (ವೃಪವಿ. ೧೪-೫). [ಸಂ.]

ಸುರಪುರೋಹಿತ (ನಾ). ದೇವತೆಗಳ ಪುರೋಹಿತ; ಬೃಹಸ್ಪತಿ: ಸುರಪುರೋಹಿತನನುಜನಂಗಿರಸಸೂನು ಮುನಿವರಮೌಳಿ ಸಂವರ್ತನೆಂದಱಿದು ಬಂದು (ಜೈಮಿಭಾ. ೫-೩೨). [ಸಂ.]

ಸುರಪೂಜ್ಯ (ನಾ). ದೇವತೆಗಳಿಂದ ಪೂಜಿಸಲ್ಪಡುವವನು: ಸುರಪೂಜ್ಯಂಗಾಕ್ಷೇಮಂಕರಂಗೆ ಪುಟ್ಟಿದುದು ತನ್ನನಃಪರ್ಯಂದಿಂದರಡನೆಯ ಸಮಯದೊಳ್. . . ಕೇವಲಬೋಧಂ (ಶಾಂತಿಪು. ೮-೧೫೪); ಸುರಪೂಜ್ಯಲಿಂಗತತಿ ಸಿದ್ಧಪೂಜ್ಯಭಾಸುರಲಿಂಗ ಪೀಠದೊಳೆ ದೇವಪೂಜ್ಯ. . .ಸೌಂದರಲಿಂಗರಾಜಿ ನೆಲಸಿರ್ದುದು (ವೃಪವಿ. ೩೯-೨೨). [ಸಂ.]

ಸುರಭವನ (ನಾ). ದೇವಾಲಯ; ಗುಡಿ: ಶರನಿಧಿ ತನ್ನೊಳ್ ಪಿರಿದುಂ ಮಚ್ಚರಿಪುದುದ್ದ ಗುಣ್ಪೆಂದವರೊತ್ತರಿಪಂ ಸುಮಂತ್ರವೀರಂ ಸುರಭವನತಟಾಕದಿಂದಮಿದು ಮಂತ್ರಫಳಂ (ಎಕ. V, ಬೇಲೂರು. ೧೭೫-೫; 1186). [ಸಂ.]

ಸುರಭಿ (ಗು). ೧. ಒಳ್ಳೆಯ ವಾಸನೆಯ; ಸುಗಂಧಯುಕ್ತವಾದ: ಸುರಭಿಕುಸುಮದಾಮಂ ಬಾಡಿ ನೀರೋಡೆ (ಶಾಂತಿಪು. ೭-೩೮). ೨. ಒಪ್ಪಬಹುದಾದ; ಮೆಚ್ಚಬಹುದಾದ. ೩. ಪ್ರಕಾಶಮಾನವಾದ; ಸುಂದರವಾದ. ೪. ಸ್ನೇಹದ; ಮೈತ್ರಿಯ. ೫. ಪ್ರಖ್ಯಾತವಾದ. ೬. ತಿಳಿದ; ಅರಿವುಳ್ಳ. ೭. ಒಳ್ಳೆಯ; ಉತ್ತಮವಾದ. (ನಾ). ೮. ಸುಗಂಧ; ಸುವಾಸನೆ: ಹರಿಣಧರಂ ಸೊಗಯಿಸಿದಂತಿರೆ ಕುಸುಮಿತ ಚೂತವಿತತಿ ಸೊಗಯಿಸಿತೆನಸುಂ ಸುರಭಿಸುಮನಸ್ವಿ ದೋಷಾಕರವಿಲಸಿತಮಪ್ಪೊಡಿಂತು ಯುಕ್ತಾಯುಕ್ತಂ (ಕವಿರಾ. ೩-೩೩); ಅಭ್ಯುದಿತವಾದುದು ಸರಸಕ್ಕೆರವರಾಜಿ ಕೋಮಲ ಸರಸಿರುಹವನವಾದುದಾಕ್ಷಣ ಸುರಭಿ ನಿರ್ಮುಕ್ತ (ಕುಮಾಕ. ೮-೧೫). ೯. ದೇವಲೋಕದ ಹಸು; ಕಾಮಧೇನು: "ಸುರಭಿ ಸುರಪಶು ಧೇನುವೆನೆ ಕಾಮಧೇನುವಿಗೆ ಪೆಸರೆನಿಕ್ಕುಂ" (ಮಂಗರಾ. ೯-೩೦); ಸುರಭಿದೇವತೆಯೆಂಬ ಕಾಪಿನೆ ಮಾಣ್ದುದು (ಪಂಪಭಾ. ೧-೨೯); ಪರಿವಾರಸುರಭಿಯೆನಿಸುವ ನರಸಿಂಹ ನರೇಂದ್ರಮಹಿಷಿ ಚಾಗಲೆ (ಎಕ. V, ಬೇಲೂರು. ೧೯೩-೫೬; 1160); ಪರುಷವಂಗಣದ ಕಲು ಸುರಭಿ ಕಱಹಂ ಕಲ್ಪತರು ವನಂ (ಹಚಕಾ. ೨-೧). ೧೦. ಹಸು; ಗೋವು: "ರೋಹಿಣಿಯನಡ್ಡಿಯರ್ಜುನಿ ವೃಷೆ ಗೋ ವೃಷಭವಾಹಿನಿಯೆನೆ ಹಸು ಸೌರಭೇಯಿಯೆನೆ ಸುರಭಿಯದು" (ಮಂಗರಾ. ೫೩-೩); ಸುರಭಿಗಳ ತೊರೆದ ಮೊಲೆಗಳನುಣ್ಬವಱ ಮಱಿಗಳಂ ಪೋಗೆ ನೂಂಕಿ (ಪಂಪಭಾ. ೧-೧೧೫ ವ); ಕಱೆದ ಸುರಭಿಗಪ್ಪುದೆ ಕೊಱತೆ (ಜೈಮಿಭಾ. ೧-೭). ೧೧. ಚೆಲುವು; ಸೌಂದರ್ಯ. ೧೨. ತಿಳಿದವನು; ಜ್ಞಾನಿ. ೧೩. ಸರಸ್ವತಿ. ೧೪. ಒಳ್ಳೆಯ ಗುಣವಿರುವವನು. ೧೫. ವಸಂತಋತು: ಸುರಭಿಯಂದದೆ ಬಂದ ಸುರಭಿಸಮಯದ ಶ್ರೀಯ ಬರವಂ ವನಮಹತ್ತರನ ಬಿನ್ನಪದಿನಜಿತಸೇನ ಚಕ್ರವರ್ತಿಯಱಿದು (ಚಂದ್ರಪು. ೭-೬೯ ವ). ೧೬. ಕಾಮ; ಮನ್ಮಥ. ೧೭. ಹೂವು. ೧೮. ಕಾಡು. ೧೯. ಆಹಾರ. ೨೦. ಕಳ್ಳು; ಮದ್ಯ. ೨೧. ಸುವಾಸನೆಯ ಎಲೆಯುಳ್ಳ ಒಂದು ಬಗೆಯ ಸಸ್ಯ; ಮರುಗ: "ಮರುಗವದು ಸುರಭಿ ಗಂಧವತಿಯೆನಿಸಿಕ್ಕು" (ಮಂಗರಾ. ೩೯-೨೭). "ಮರುಗ ಸುಗಂಧ ಭಾರತಿ ಮನೋಜ್ಞ ವಸಂತ ಲತಾಂತ ಕಂತು ಸೌಂದರ ಪಶು ಕಾಮಧೇನು ವಿಪಿನಾನ್ನ ಗುಣಾಗ್ರಣಿ ಮದ್ಯಮೆಂಬಿವು ಸುರಭಿಯೆನಿಕ್ಕು" (ನಾನಾರ. ೩೧). [ಸಂ.]

ಸುರಭಿಗಂಧತ್ವ (ನಾ). ಪರಿಮಳಭರಿತವಾಗಿರುವಿಕೆ: ಸುರೂಪತೆಯುಂ ಸುರಭಿಗಂಧತ್ವಮುಂ . . . ಪ್ರಿಯ ಹಿತವಾದಿತ್ವಮುಮೆಂಬ ದಶವಿಧ ಸ್ವಭಾವಾತಿಶಯ ಸಂಪನ್ನನುಂ (ಅಜಿಪು. ೫-೯೧ ವ). [ಸಂ.]

ಸುರಭಿಜಲ, ಸುರಭಿಜಳ (ನಾ). ಸುವಾಸನೆಯ ನೀರು; ಪನ್ನೀರು: ಸುರಭಿ ಜಲಂಗಳಿಂದಮಭಿಷಿಕ್ತನನಾ ನೃಪರೂಪಚಂದ್ರನಂತರದೊಳೆ ಮಾಡಿ (ಕಾದಂಉ. ೭೮೩); ಸುರಭಿಜಲದಿಂದಮೇನಾ ತರುಣಿಯನೊಡಗೊಂಡು ಪೋಪುದು (ಪಂರಾಮಾ. ೧೪-೬೩); ಸುರಭಿಜಳ: ಕೋಮಳಿಯರ್ಜಳದೇವತೆಯರ ವಿಳಾಸಮಂ ತಳೆದು ಸುರಭಿಜಳಮಂ ಸುರಿದರ್ (ಕಾದಂಪೂ. ೭೬). [ಸಂ.]

ಸುರಭಿಜಳ 'ಸುರಭಿಜಲ' ನೋ.

ಸುರಭಿತನ (ನಾ). ಸುವಾಸನೆಯನ್ನು ಹೊಂದಿರುವಿಕೆ: ತರಣಿ ಪರಿಮಳಿಸಿದನು ಪವನನ ಸುರಭಿತನವಚ್ಚರಿಯೆ (ಕುಮಾವಿ. ೧೦-೮೩). [ಸುರಭಿ + - ತನ]

ಸುರಭಿದ್ರವ್ಯ (ನಾ). ಸುವಾಸನೆಯ ವಸ್ತು; ಸುಗಂಧದ್ರವ್ಯ: ಸುರಭಿದ್ರವ್ಯ ಪ್ರಮೋದಂಗಳೆಂಬಿವು ಸಾರ್ಗುಂ (ಜಾತಕ. ೯-೨೭); ದಿವ್ಯಸುರಭಿದ್ರವ್ಯ ಸಮ್ಮಿಶ್ರಿತಂಗಳನಪಾರಕನಕಭೃಂಗಾರಶತಂಗಳೊಳ್ ತೀವಿ ತಂದು ಸಂಧಿಸುವುದುಂ (ಮಲ್ಲಿಪು. ೧೨-೧೫೬). [ಸಂ.]

ಸುರಭಿದ್ರುಮ (ನಾ). ಸುಗಂಧಪೂರಿತವಾದ ಮರ (?): ಸುರಭಿದ್ರುಮಂಗಳಂ ಧನಪರಿಕರದಿಂ ದಹಿಸಿ ಚಕ್ರಿಯಂ ನೀರಿಟ್ಟಿದಾ ನರಪಾಲರ್ ದಹಿಸಿ ಸೀದ ಸುರಸಿಂಧು ಸುತಾದಿ ಸಕಲಮಹಿಭೃದ್ಗಣಮಂ (ಮಹಾನೇ. ೧೩-೯೩). [ಸಂ.]

ಸುರಭಿನಿಶ್ವಾಸ (ನಾ). ೧. ಪರಿಮಳಭರಿತವಾದ ಉಸಿರು: ಏಱುವರೆ ದಿವಸಮುಮಂ ಸುರಭಿನಿಶ್ವಾಸಾವಧಿಯಾಗೆಯುಂ (ಶಾಂತಿಪು. ೭-೩೭. ವ). ೨. ಸುಗಂಧಪೂರಿತವಾದ ಉಸಿರನ್ನು ಹೊಂದಿರುವವನು: ದಶಮಾಸಾವಧಿ ನಿರ್ಯತ್ಸುರಭಿನಿಶ್ವಾಸನುಂ . . . ಆಗಿ (ಶಾಂತಿಪು. ೧೦-೯೪ ವ). [ಸಂ.]

ಸುರಭಿನಿಶ್ವಾಸತೆ (ನಾ). ಪರಿಮಳಭರಿತವಾದ ಉಸಿರನ್ನು ಹೊಂದಿರುವಿಕೆ: ಅತಿಶಯರೂಪತೆಯುಂ ಅತ್ಯಂತಸುರಭಿನಿಶ್ವಾಸತೆಯುಂ . . . ತನಗನುಸಂಗತಮಾಗೆ (ಶಾಂತಿಪು. ೧೦-೯೪ ವ). [ಸಂ. ಸುರಭಿನಿಶ್ವಾಸತಾ]

ಸುರಭಿಪರಿಮಳ (ನಾ). ಸುವಾಸನೆ; ಸುಗಂಧ: ಜಳರುಹನಾಭನ ನಾಭಿಯ ಜಳಬುದ್ಬುದದೊಳಗೆ ಸುರಭಿಪರಿಮಳ ಮಿಳಿತೋಲ್ಲಳಿತಾಳಿಜಲ[ಜ]ಮಾಯ್ತು (ಪಂಪಭಾ. ೧-೫೯); ಮಾಲೆಗಾಱರ್ ತಂದವಟ್ಟೆಸಿದ ಸುರಭಿಪರಿಮಳಾಸವಾಸಕ್ತ ಭ್ರಮದ್ಭ್ರಮರಮಾಲಾವಿರಾಜಿತ ಸುಮನೋಹರ ಸುಮನೋಮಾಲೆಗಳಂ ತುಱುಂಬಿ ಕೊಂಡು (ಸುಕುಮಾ. ೧೧-೩೨ ವ). [ಸಂ. ಸುರಭಿಪರಿಮಲ]

ಸುರಭಿಮೃತ್ತಿಕೆ (ನಾ). ಸುವಾಸನೆಯ ಮಣ್ಣು (?): ಬಸಿಱ ಮಗಂಗಿಲ್ಲಿವರಂ ವಸುಧಾತಳಮೇಕಭೋಗ್ಯಮೆಂದಱುಪುವವೊಲ್ ವಸುಧೆಯ ನಾಲ್ಕುಂ ಕಡೆಯೆಡೆಯ ಸುರಭಿಮೃತ್ತಿಕೆಯನಟ್ಟಿಯಿಂ ಸೇವಿಸುವಳ್ (ಮಲ್ಲಿಪು. ೪-೧೦೨). [ಸಂ. ಸುರಭಿಮೃತ್ತಿಕಾ]

ಸುರಭಿಲಿತ, ಸುರಭಿಳಿತ (ಗು). ಸುವಾಸನೆಯಿಂದ ಕೂಡಿದ: ಸುರಭಿಲಿತ ಸುಯ್ಗಂಪಿನಧರರೋಚಿಯ ತಣ್ಪು ಬೆರೆದ ನೀರೀಂಟಲೆದೆಯಾರಿಬರಲಾ ಪಥಿಕ ಬೆರಗಿಂದ ದಿಟ್ಟಿಸಿದನು (ವಂಕಾರಾ. ೧-೫-೫೬). **ಸುರಭಿಳಿತ**: ಸುರಭಿಳಿತ ನಾಸಿಕದ ಗಂಧಪರಿಯಂ ಕಂಡು ಪೆರಸಾರಿ ರೋಲಂಬತತಿಗಳಿತ್ತರಗಳಲಿ ಮರುಗುತ್ತಲಿಹವೆಂಬ ತೆರದಿ ಕುಂತಲರಾಜ ರಾಜಿಸುತ್ತಿರ (ವಂಕಾರಾ. ೧-೪-೪೮). [ಸಂ. ?]

ಸುರಭಿಶರ (ನಾ). ಹೂವನ್ನು ಬಾಣವಾಗಿ ಉಳ್ಳವನು; ಮನ್ಮಥ: "ಸುರಭಿಶರಂ ಕಮ್ಮಂಗಣೆಯಂ" (ಚಕುಸಾ. ೧೬). [ಸಂ.]

ಸುರಭಿಶಾಲೆ (ನಾ). ಸುವಾಸನೆಯ ವಸ್ತುವಿರುವ ಮನೆ: ಆ ವನಂಗಳಲ್ಲಿಯ

ಚಿತ್ರಶಾಲೆ ಚಂದ್ರಶಾಲೆ ಶಿಶಿರಶಾಲೆ ಸುರಭಿಶಾಲೆಗಳಲ್ಲಿ. . . ತರುಗಳ ತಣ್ಣೆಳಲ್ಗಳಲ್ಲಿ (ವೀರ. ೧೭೦). [ಸಂ. ಸುರಭಿಶಾಲಾ]

ಸುರಭಿಳಿತ 'ಸುರಭಿಲಿತ' ನೋ.

ಸುರಭುವನ (ನಾ). ದೇವತೆಗಳ ಲೋಕ; ಸ್ವರ್ಗ: ಸುರಭುವನಭವನಮೂಲಸ್ತಂಭಾ (ಜೈಸಾಲ.೨೪). [ಸಂ.]

ಸುರಭೂಜ (ನಾ). ದೇವಲೋಕದ ವೃಕ್ಷ; ಕಲ್ಪವೃಕ್ಷ: ಅದು ಸುರಭೂಜ ವಲ್ಮವಸನದ್ವಯಂ (ಕಾದಂಪೂ. ೬೯೨); ಅತ್ಯುನ್ನತಸುರಭೂಜವನಿಲ್ಲಿ ನೆಲದಿ ಕಂಡೆನು (ಅಮತಂ. ೨೯-೧೬). [ಸಂ.]

ಸುರಭೂಧರ (ನಾ). ದೇವಲೋಕದ ಬೆಟ್ಟ; ಮೇರುಪರ್ವತ: ಸುರಭೂಧರಮಂ ಬೆಳ್ಕೆಯ ಗಿರಿಗಳ್ ಬಳಸಿರ್ದುವೆನಿಸಿ ಚೆಂಬೊನ್ನ ರಥೋತ್ಕರಮಂ ಸುತ್ತಿರ್ದುವು ಕರಮೊಪ್ಪಿರೆ ಖಚರರಾಜರೆಸೆವ ವಿಮಾನಂ (ಧರ್ಮಾಮೃ. ೮-೨೨೬); ವರಜಟಾಮಾರ್ಗದಿಂದವೆ ಧರಿಸಿದೊಡೆ ಪೋಗಿ ಸುರಭೂಧರಾಗ್ರದಿಂದವೆ ಚತುರ್ಮುಖನಾಗಿ (ವೀಶಿಪ್ರ. ೬-೨೬-೧೬). [ಸಂ.]

ಸುರಭೂರುಹ (ನಾ). ದೇವಲೋಕದ ವೃಕ್ಷ; ಕಲ್ಪವೃಕ್ಷ: ಸುರಭೂರುಹಮಿರೆ ಮತ್ತಿನ ಮರನಂ ಜಲರಾಶಿಯಿರೆ ಕುಳುಂಪೆಯ ನೆರೆವಂತೆ (ಆದಿಪು ೯-೧೦೮); ಚಿಂತಾಮಣಿ ಕಾಮಧೇನು ಸುರಭೂರುಹಮೆಂಬವನೇಕೆ ಮಾಡಿದಂ ತಾಮರಸೋದ್ಭವಂ (ಅಜಪು ೧-೬೨). [ಸಂ.]

ಸುರಭೇರಿ (ನಾ). ದೇವದುಂದುಭಿ; ಸುರತೂರ್ಯ: ಸುರಭೇರೀರವಮಾಶಾಂತರಮಂ ತೀವಲ್ಕೆ (ತ್ರಿಪುವಿ. ೬೨-೧೧). [ಸಂ. ಸುರಭೇರೀ]

ಸುರಮ, ಸುರಮಾ, ಸುರುಮ, ಸುರ್ಮಾ (ನಾ). ೧. (ಗಂಧಕದಂತಹ) ಒಂದು ಬಗೆಯ ಮೂಲಲೋಹ: ತಾಮ್ರ, ಸೀಸ, ಸತು, ಪಾಷಾಣ ಮತ್ತು ಸುರಮ (ಅಂಗಿಮೊನಿ) ಅದುರುಗಳನ್ನೂ . . . ಒಳಗೊಂಡಿದೆ (ಕಬೋ. I, ೯೬). ೨. ಕಾಡಿಗೆ; ಅಂಜನ: ಸುಣ್ಣ, ಸುರಮ, ಅಡಕೆ ಎಲೆ ದೊರೆಯ ಮನವಿ ಸೆಳೆವ ಆಟ (ಸುನೀತ. ೬೬-೧೦). **ಸುರಮಾ**: ೨. ಸುರಮಾ ಮುಖಚೂರ್ಣ . . . ತಲೆತಲಾಂತರಗಳಿಂದ ಇಳಿದುಬಂದವು (ಸುತ್ತುಮು. ೬೪). **ಸುರುಮ**: ೧. ಸುರುಮ ಸೇರು ೧ (ಸಚಿತ್ರ. ೨೦೯). **ಸುರ್ಮಾ**: ೨. ಕಣ್ಣೊಳಗ ಹಾಕುವ ಸುರ್ಮಾ ಎಂಬ ಕರಪುಡಿಯು ಗಲೀನವಿರುತ್ತದೆ (ಮುಜುಯು. ೪-೨೨); ದರಿಯಾಬೀಬಿಯು ಔರಂಗಜೇಬನ ಅಂತಃಪುರಕ್ಕೆ ಅತ್ತರು ಸುರ್ಮಾ ಮುಂತಾದುವುಗಳನ್ನು ಮಾರುವುದಕ್ಕೆ ಹೋಗುತ್ತ . . . ಇದ್ದಳು (ಬಂಚಮ. ೨೧೭). [<— ಮರಾ. ಸುರಮಾ, ಸುರ್ಮಾ]

ಸುರಮಣಿ (ನಾ). ದೇವಲೋಕದ ರತ್ನ; ಚಿಂತಾಮಣಿ: ಸುರಮಣಿಯಂ ಸುರತರುವಂ ಪರಿಶ್ರಮಂಗಳನುಮೆಱೆಯದೀವೆನೆನುತ್ತಂ ಹರಭಕ್ತರೆಱೆವ ಧನಮಂ ಪರಿದೀವುತ್ತಿರ್ಪನಚ್ಚುತಾಹ್ವಯಭಕ್ತಂ (ತ್ರಿಪುವಿ.೫೪-೪). [ಸಂ.]

ಸುರಮಹೀಜ (ನಾ). ೧. ದೇವಲೋಕದ ವೃಕ್ಷ; ಕಲ್ಪವೃಕ್ಷ. ೨. [ಗಣಿತ] ಐದು ಎಂಬ ಸಂಖ್ಯೆಯ ಸಂಕೇತ: (೫). [ಸಂ.]

ಸುರಮಹೀಜನ (ನಾ). ದೇವಲೋಕದ ಜನ; ದೇವತಾವರ್ಗ: ಸುರಮಹೀಜನ್ ರಾಜ ರುದ್ರರ ಚರಿತಗಳಿಗಿಮ್ಮಡಿಯೆನಿಸಿ ಸತ್ಪುರುಷನಿಲ್ಲಿಗೆ ಸಲಹ ಬಂದನು ಬಸವ ವಿಭುವೆನುತ (ಬಸಪು ೫-೬೪). [ಸಂ.]

ಸುರಮಹೀರುಹ (ನಾ). = ಸುರಮಹೀಜ ೧: ಸುರಮಹೀರುಹದೋಳಿಯಿಂ ಸಹಕಾರಭೂಜನಿಕಾಯದಿಂ ಸರಸಿಜಾಕರದಿಂ (ಧರ್ಮಾಮೃ. ೬-೨೬೬). [ಸಂ.]

ಸುರಮಾ 'ಸುರಮ' ನೋ.

ಸುರಮಾಯಿ (ನಾ). ಒಂದು ಬಗೆಯ ಬಣ್ಣ; ಬೂದುಬಣ್ಣ: ರಾಜಿಪ ಸುರಮಾಯಿ ಹಳದಿ ಕೆಂಪುಗಳ ಬೆರುದಿನ ಪಲ್ಲವ ಸತ್ತಿಗೆ ಮೆಱೆದುವು (ಕಂನವಿ. ೨೦-೨೧); ಸುರಮಾಯಿ ರುಂಲ್ಲಿಯ ಬೆರುದಿನ ಕುದುರೆಯ ನೆರವಿಯೊಳಗೆ ಬಹನಾರೆ (ಕಂನವಿ. ೨೫-೭೫). [<— ಹಿಂ. ಸುರಮಾಈ]

ಸುರಮಾರ್ಗ (ನಾ). ದೇವತೆಗಳ ಹಾದಿ; ಆಕಾಶ: ಸುರಮಾರ್ಗಪರಿಭ್ರಮಣ ದಿನರಿದೆನಿಕುಂ ತ್ರಿಪುರಮನಿತೆ ಬಹುರೂಪಗತಿಸ್ಫುರಿತಂ ಸೌಭಪುರಂ (ಜಗವಿ. ೧೮-೮೬); ಸುರನದಿಯಲ್ಲಿ ಮಿಂದು ಸುರಮಾರ್ಗಕಚೌಳಮನೆಯ್ದೆ ಬರ್ಚಿ. . .ನೆಲೆ ನಿಂದು ನಿಟ್ಟಿಪಳ್ (ರಾಜಶೇ. ೬-೫). [ಸಂ.]

ಸುರಮಿಥುನ (ನಾ). ದೇವದಂಪತಿಗಳು; ಅಮರ ದಂಪತಿಗಳು: ಸುರಮಿಥುನಂ ಸುರದ್ರುಮದ ತಣ್ಗೆಲರೊಳ್ ಖಚರದ್ವಯಂ ಮನೋಹರಮಣಿಕೂಟದೊಳ್ . . . ನಲಿದು (ಮಲ್ಲಿಪು. ೧೦-೧೦೯); ತೀವಿದ ತಾವರೆಗೊಳಗಳು ಪಲವಾ ಪಾವನವನದ ಮಧ್ಯದೊಳು ಆವ ದಿನವು ತೊಲಗದೆ ಸುರಮಿಥುನಕ್ಕೆ ತಾವಾವಾಸವಾಗಿಹವು (ತ್ರಿಪುಸಾಂ. ೭-೭೬). [ಸಂ.]

ಸುರಮುನಿ (ನಾ). ದೇವಲೋಕದ ಋಷಿ; ನಾರದ: ಸುರಮುನಿಯು ಪೇಳ ಪೋಗಲ್ಕೆ ನಿಶಿಯಲ್ಲಿ ಶಂಬರ ವಾಯುರೂಪದಿಂ ದ್ವಾರಕೆಯನೊಳಪೊಕ್ಕು (ಪ್ರಾಹರಾ. ೧೧-೬೧). [ಸಂ.]

ಸುರಮ್ಯ (ನಾ). ಚೆಲುವಾದುದು; ಮನೋಹರವಾದುದು: ಭರತಕ್ಷೇತ್ರಲಲಾಮ ಮಪ್ಪುದು ಸುರಮ್ಯಂ ನಾಡು ತತ್ಪೌದನಪುರಂ (ಶಾಂತಿಪು. ೫-೨೨). [ಸಂ.]

ಸುರಯಿ 'ಸುರಗಿ' ನೋ.

ಸುರಯಿಕ್ಕು (ಕ್ರಿ). (?): ಕಲ್ಲಿಂದಂ ನೀರು ಹರಿದ ಸಾಲಿಂದಂ [ಅಚ]ಳದೇವನ ಗಡಿಯಿಂದ ಸುರಯಿಕ್ಕಿದ ಕಲ್ಲಿಂದಂ ಬಡಗಲು ಪಡುವಲು ಮಕ್ಕಿಯ ಕುಂನ್ಮಂಣ್ಣ ಕೋಟಿನಾಥ ಭಟ್ಟಿ] . . . ಯಿಕ್ಕಿದ ಕಲ್ಲಿಂದಂ (ಸೌಇ. IX-II, ೪೬೦-೨೩; 1406). [?]

ಸುರರಮಣ (ನಾ). ದೇವತೆಗಳ ರಾಜ; ಇಂದ್ರ: ಸುರರಮಣ ನಳಕೂಬರಾಧಿಕ ಸರಸಕಾಮುಕರಂ . . . ಬಗೆಯದನುಮಿಷಸತಿಯರು ಸಹಸ್ರ ನೆರೆದು (ಬಸಪು.೪೧-೧೪). [ಸಂ.]

ಸುರರಮಣಿ (ನಾ). ದೇವತಾಸ್ತ್ರೀ: ಸುರರಮಣೀರಮಣೀಯಸ್ವರೂಪಮತಿ ತರಳತರಳವಿಲಸದ್ಭಿಮ್ಮುತ್‌ಸ್ಫುರಿತಮೆನೆ ಪೋಲ್ತು ಕರಗಿದುದರಗಿದು ದಹನೋಪ ತಪ್ತಮೆನೆ ತತ್‌ಕ್ಷಣದೊಳ್ (ಕಾವ್ಯಾವ.೫೮೨); ಸುರರಮಣೀಕದಂಬಕಬರೀಭರಕಾಂತಿಕಳಿಂದ ಜಾಂಬುವಿಸ್ಫುರಿತಪದಾಂಬುಜಾತೆ (ಶಬಶಂ.೧-೨). [ಸಂ. ಸುರರಮಣೀ]

ಸುರರಾಜ (ನಾ). ೧. = ಸುರರಮಣ: ನರ್ತಕಂ ಸುರರಾಜಂ ಸಭೆ ದೇವಮರ್ತ್ಯ ಸಭೆ (ಆದಿಪು.೬-೧೩೭). ೨. ಶಿವ; ಪರಮೇಶ್ವರ: ಸುರರಾಜ ವರತೇಜ ಸಿತಗಳನೆ ಯತಿಬಳನೆ (ಹಚಕಾ.೧-೫). [ಸಂ. ಸುರರಾಜನ್]

ಸುರರಿಪು (ನಾ). ದೇವತೆಗಳ ಶತ್ರು; ರಾಕ್ಷಸ: ಸುರರಿಪುಗಳಿನಿಪ ಮುದೇಹ ರನಿನನಸಿಯಿಂದ ತಱಿಯಲಂಬರವಿರ್ದಾವರಿಸಿದರುಣಾಂಬುರುಚಿಯೆನೆ ಪರಿದೆಸೆದುದು ಮೂಡದಸೆಯ ಸಂಧ್ಯಾರಾಗಂ (ತ್ರಿಪುವಿ.೨೪-೨೨೫); ಸುರರಿಪುಬಾಧೆಗಳ್ಕುತೆ ಮುರಾರಿ ಪುರಾರಿಪದಾರವಿಂದವಮಂ ಸರಸಿಜದಿಂ ಸಹಸ್ರದೆ ಸರ್ಚಿಪ ವೇಳೆಯೊಳ್ (ರಾಜಶೇ. ೬-೧೦೪). [ಸಂ.]

ಸುರಲೋಕ (ನಾ). = ಸುರಪುರ: ಅಕ್ಕಿ ಮಣಕ್ಕೆ ರಮ್ಮ ಸುರಲೋಕ ಸುಕಕ್ಕೆ ಭಾಗಿ (ಎಕ. II, ೨೧-೪; ಸಂ. 700); ತ್ರಿದಶಸುರಲೋಕವಾಸಾಸ್ಪದಮಂ ಪೆಱುಗುಂ ಮನುಷ್ಯ ಮನುಜಂ (ಕವಿಕಾ. ೧-೮೫); ಸುರಲೋಕದಲ್ಲಿ ಸುಖದಿಂದಿರುತುಂ ಬರವೆಂತು ನಿಮಗೆ ದೊರೆಕೊಂಡುದು (ಗಿರಿಕ. ೧೦-೨೩). [ಸಂ.]

ಸುರವಕ್ತ್ರ (ನಾ). ಅಗ್ನಿ: ಸುರವಕ್ತ್ರಪಾವನ ಸದಾಚಾರಂ . . . ನಂದನಂ ಪುಟ್ಟಿದಂ (ಪುಪ್ರಸ್ತಾ.೧೩-೧೦). [ಸಂ.]

ಸುರವಧು (ನಾ). ದೇವಲೋಕದ ಸ್ತ್ರೀ; ಅಪ್ಸರೆ: ಪರಮಜಿನಜನನಿಗೊರ್ವಳ್ ಸುರವಧು ಕೊಡೆವಿಡಿದು (ಶಾಂತಿಪು.೧-೧೭೮); ಸುರವಧುವೊರ್ವಳ್ದೇವಿಯ ಚರಣಕ್ಕೊಲಗಿಸೆ (ಶಾಂತೀಶ.೧೩-೨೧೪). [ಸಂ.ಸುರವಧೂ]

ಸುರವನಿತೆ (ನಾ). = ಸುರವಧು: ಸುರವನಿತಾವಿಳಾಸದಲರ್ಗೊಂಚಲನೀಕ್ಷಿಸಿ ಜೋಲ್ಕ ಕೊಂಬನೊಪ್ಪಿರೆ ಮುರಿದಪ್ಪಿದಂಗಲತೆ ನಾಗಿಣಿಯಂದಮನಾಗುಮಾಡೆ (ಲೀಲಾವ. ೧೩-೬೮); ಸುರವನಿತಾಜನಂಗಳೆ ಸುರೂಪವಿಳಾಸೆಯರೆಂದು ಬೀಗಿ ಧಿಕ್ಕರಿಸುವ ನಿಂದ್ರನೆಮ್ಮಮಂ (ಪುಷ್ಪಪ್ರ. ೧೨-೨೧). [ಸಂ. ಸುರವನಿತಾ]

ಸುರವರ್ತ್ಮ (ನಾ). = ಸುರಪಥ: "ಸುರವರ್ತ್ಮನ್. . . ಆಕಾಶದ ಹೆಸರುಗಳು" (ಸಿದ್ಧಾಂಶಿ. ೨೬). [ಸಂ. ಸುರವರ್ತ್ಮನ್]

ಸುರವರ್ಧಕಿ (ನಾ). ದೇವಲೋಕದ ಬಡಗಿ; ವಿಶ್ವಕರ್ಮ: ಮಯಂ ಬೆರಲ್ಮಿಡಿಯನೇ ಸುರವರ್ಧಕಿ ರೋಮಹರ್ಷದೊಳ್ ತೊಡರನೆ (ಚಂದ್ರಪು. ೧-೧೪೪); ವಿರಚಿಪ ಬಗೆಯ ಸುರವರ್ಧಕಿಗೆ ಪೇಳಲ್ಕಗಣಿತೋಪಮ ನಿರ್ಮಿಸಿದನಾಕ್ಷಣದಿ ಪುರವ (ಕೋಗಪು. ೨-೨೪). [ಸಂ.]

ಸುರವಲ್ಲಭ (ನಾ). ೧. ದೇವತೆಗಳ ಒಡೆಯ; ಇಂದ್ರ. ೨. ಶಿವ; ಪರಮೇಶ್ವರ: ವಲ್ಲಭಂ ಸಕಳಾಗಮಸ್ತುತಿದುರ್ಲಭಂ ಸುರವಲ್ಲಭನುಮಾವಲ್ಲಭಂ (ಬಸಪು. ೫೨-೩೪). [ಸಂ.]

ಸುರವಲ್ಲರಿ (ನಾ). ದೇವಲೋಕದ ಬಳ್ಳಿ; ಕಲ್ಪಲತೆ: ಸುರವಲ್ಲರಿಗಳ್ ಮುಗುಳಂ ಸುರಿತರ್ಪುವು ರಜತಶಿಖರಿಶಿಖರದೊಳಿನೆ ಖೇಚರಿಯರ್ ಮುತ್ತಿನ ಸೇಸೆಯನರಸಂಗಿಕ್ಕಿದರಪಾಂಗಮಾಲಾಸಹಿತಂ (ವಂಠಾಮಾ. ೧೨-೨೧); ಇದು ಮಧುಮಿತ್ರ ಮತ್ತಗಜರಾಜಿಯೊ ನೋಡಿದು ಪುಷ್ಪಚಾಪಸೌಖ್ಯದ ಸುರವಲ್ಲರೀತತಿಯೊ (ರಾಜಶೇ. ೧೦-೧೨). [ಸಂ. ಸುರವಲ್ಲರೀ]

ಸುರವಾಚಕಿ (ನಾ). ದೇವಲೋಕದಲ್ಲಿ ವಾಚನಮಾಡುವವಳು: ಸರಸಕವಿಕಾವ್ಯ ಮಧುಮತ್ತರಾಗದೊಳ್ ಪೊರೆದು ಪೊಂಗ ತನಿಗಂಪೊಗದಂತಿರ ನುಣ್ಣಾನಿಯಿಂ ದೋದುವ ಸುರವಾಚಕಿ ಸತಿಗೆ ಪುಳಕಮಂ ಪುಟ್ಟಿಸಿದಳ್ (ಚಂದ್ರಪು. ೧೧-೧೪೫).

[ಸಂ. ಸುರವಾಚಿಕಾ]

ಸುರವಾರಿ, ಸುರವಾಲ್, ಸುರವಾಲು, ಸುರ್ವಾಲ್ (ನಾ). ಒಂದು ಬಗೆಯ ಇಜಾರ; ಕಲ್ಲಿಯ ಇಜಾರ: ಮಹಾರಾಜರು ತಮ್ಮ ಸುರವಾರಿ ತುಮಾನವನ್ನು ಅಂದರ ಮೊಣಕಾಲವರೆಗೆ ಬಗಿಯಾಗಿದ್ದು ಮೇಲೆ ಸೈಲಾಗಿರುವ ಚಣ್ಣವನ್ನು ಹಾಕಿಕೊಂಡರು (ಹಮಲ. ೧೭೪). **ಸುರವಾಲ್**: ಉದ್ದಕ್ಕೆ ನೆರಿಗೆಗಳಿರುವ ಒಂದು ಕುರ್ತಾ, ಒಂದು ಸುರವಾಲ್ (ಆಭಾಸ್ವ. ೮೯). **ಸುರವಾಲು**: ಕಾಲಿಗೆ ಸುರವಾಲು. ಮೇಲೆ ಢಕ್ಕಾ ಮಜಲಿನ್ನಿನ ಅಳ್ಕವಾದ ಅಂಗಿ. ಅದರ ಮೇಲೆ ಕಲಾಪತ್ತಿನ ಸಣ್ಣ ಲುಂಗಿ (ದೌಲತ್. ೨೩). **ಸುರ್ವಾಲ್**: ಕೆಲವರು ಯೂರೋಪಿಯನ್ ಉಡುಪು, ಇನ್ನು ಕೆಲವರು ಉತ್ತರ ಹಿಂದೂಸ್ಥಾನದ ಷೆರ್ವಾನಿ ಮತ್ತು ಸುರ್ವಾಲ್ (ದಿಲ್ಲಿಪ. ೪೪).

[<— ಮರಾ. ಸುರವಾರೀ, ಸುರವಾರ್; ಪಾರ. ಶುಲ್ವಾರ್]

ಸುರವಾರುಣಿ (ನಾ). ಒಂದು ಬಗೆಯ ಸಸ್ಯ; ಹಾವುಮೆಕ್ಕೆ: ಸುರವಾರುಣಿ ಗಿಣಿ ಮೂಗೀಶ್ವರಿ ಖರಕರ್ಣಕೆಯೆನಿಪ್ಪವಂ ಕಿಱಿದಾನುಂ ಸೊರೆಯ ತಿರುಳ್ ರಸದೊಡನೆಱೆ ಗುರಗೋತ್ತರ ವಿಷಮನಲೆಯಲಿಂತಿದೆ ಸಾಲ್ಗುಂ (ಲೋಕೋಪ. ೧೦-೧೭).

[ಸಂ. ಸುರವಾರುಣೀ]

ಸುರವಾಲ್ 'ಸುರವಾರಿ' ನೋ.

ಸುರವಾಲು 'ಸುರವಾರಿ' ನೋ.

ಸುರವಿದಾರಣ (ನಾ). ಇಂದ್ರನನ್ನು ಸೋಲಿಸಿದವನು; ಇಂದ್ರಜಿತು: ಸುರವಿದಾರಣ ಕಟ್ಟಿ ಹೋದರೆ ಅರಸ ನೀನಜ್ಞಾನಿಯಪ್ಪುದೆ ಉರಗಕೋಲಾಹಲನ ಗರುಡನ ನೆನೆವುದು (ಕಾಖಂ. ೧೯-೫೪). [ಸಂ.]

ಸುರವಿಧ್ವಂಸಿ (ನಾ). ದೇವತೆಗಳನ್ನು ನಾಶಪಡಿಸುವವನು; ಕಂಸ: ಸುರ ವಿಧ್ವಂಸಿಯ ಬಿಲ್ಲನೊಂದೆ ಶರದಿಂ ಗಾತ್ರತ್ರಮಂ ಕೃಷ್ಣನಾರ್ದರಡಂಬಿಂ ತಱಿದಿಕ್ಕಿ . . . ತೆತ್ತಿಸಿದನತ್ಯಾಭೀಳಬಾಣಂಗಳಂ (ಜಗವಿ.೧೮-೧೦೬). [ಸಂ. ಸುರವಿಧ್ವಂಸಿನ್]

ಸುರವಿಲಾಸಿನಿ (ನಾ). ದೇವಲೋಕದ ಸ್ತ್ರೀ; ಅಪ್ಸರೆ: ಸುರವಿಲಾಸಿನಿಯರ್ ಮನೋಹರರೂಪೆಯರ್ ಗಜಯಾನೆಯರ್ . . . ನೆರೆದು ಕುಳ್ಳಿರೆ (ಧರ್ಮಾಮೃ. ೪-೧೬).

[ಸಂ. ಸುರವಿಲಾಸಿನೀ]

ಸುರವು 'ಸುರುವು' ನೋ.

ಸುರವೆಣ್ (ನಾ). = ಸುರವಿಲಾಸಿನಿ: ಸುರವೆಣ್ಣಿಂದಲಿ ಪುಷ್ಪದಂತವನದೊಳ್ ತಾಂ ಕ್ರೋದರೂಪಾಗನೇ (ಸೋಮೇಶ. ೮೯); ಭಾರತಿ ಮೊದಲಾದ ಸುರವೆಣ್ಣುಳುಳು . . . ರತಿ ಜಗನ್ಮೋಹನಮೂರುತಿ ಕಂಗೊಳಿಸಿದಳು (ಮೋಹತ. ೧೬-೨೨). [ಸುರ + ಪೆಣ್]

ಸುರವೈದ್ಯ (ನಾ). ದೇವಲೋಕದ ವೈದ್ಯ: ಸುರವೈದ್ಯನಪ್ಪ ಧನ್ವಂತರಿ ತರಿಸುವನಲ್ಲಿ ತನಗೆ ದೊರಕದ ತಂತ್ರೋತ್ಕರಮಂ (ಕುಸುಮಾ. ೨-೧೦೫). [ಸಂ.]

ಸುರವೈರಿ (ನಾ). ೧. ದೇವತೆಗಳ ಶತ್ರು; ರಾಕ್ಷಸ: "ಸುರವೈರಿಗಳು . . . ದೈತ್ಯರು" (ಮಂಗರಾ. ೩-೯). ೨. ಕಂಸ: ಸುರವೈರಿಯ ವಧದಿನದೊಳ್ ಧರಗುದಿರ್ದುವು ತಾರಕೆಗಳ್ (ಜಗವಿ ೬-೪೦). [ಸಂ. ಸುರವೈರಿನ್]

ಸುರವೊನ್ನೆ, ಸುರಹೊನ್ನೆ (ನಾ). ಒಂದು ಬಗೆಯ ಮರ ಮತ್ತು ಅದರ ಹೂವು; ಪುನ್ನಾಗ: "ನಾಗೀ-ಸುರವೊನ್ನೆ, ಗಂಧಿ, ಅಕ್ಕಿಹಡೆ" (ಓಷಧಿ.೨೫). **ಸುರಹೊನ್ನೆ**: ಪೂಗಳೊಳೀಂ ಸುರಹೊನ್ನೆ ಚೆನ್ನನೋ (ಆದಿಪು ೧೦-೧೧೪); ಸುರಹೊನ್ನೆಯ ರನ್ನವಟ್ಟಗೆಯಿಂ ರಕ್ತಾ ಶೋಕರಚಿತರತ್ನಕಟಕದಿಂ (ಕಾದಂಬ. ೭೮೪); ಪನಸಾಳಿ ಶಾಳಿ ಭಾಸುರ ಸುರಹೊನ್ನೆ ಜಂಬುಘನನಿಂಬಕುಳಂ ಬಕುಳಂ (ಗಿರಿಕ. ೨-೩೦). [ಸುರ + ಪೊನ್ನೆ]

ಸುರಶತ್ರು (ನಾ). = ಸುರವೈರಿ ೧: "ಅಸುರಃ . . . ಸುರಶತ್ರುಃ . . . ಪಾತಾಳನಿಲಯಃ (ಸ್ಮೃತಾಃ) – ಈ ೮ ಅಸುರರ ಪೆಸರ್" (ತಲಾಯು.೨-೫). [ಸಂ.]

ಸುರಶಿಖರಿ (ನಾ). ದೇವಲೋಕದ ಬೆಟ್ಟ; ಮೇರುಪರ್ವತ: ಸುರ ಶಿಖರಿ ಭಾಸ್ವರಜ್ಯೋತಿರಂಗಮಂ ಜಳಧಿ ವಿಮಳಮಣಿಯಂ . . . ತಳೆದು (ಚಂದ್ರಪು. ೧೪-೮೦). [ಸಂ. ಸುರಶಿಖರಿನ್]

ಸುರಶೈಲ, ಸುರಶೈಳ (ನಾ). = ಸುರಶಿಖರಿ: ಸುರಶೈಲಂ ಪೂಬ್ಮ ಪೊಂಗಟ್ಟಿನೊಲಿರೆ ಸಕಲೋದನ್ಯದಂತಸ್ಥಕೂರ್ಮೋತ್ಕರಮುರ್ವೀಚಕ್ರಮಂ ತಾಳ್ದಿದ ಕಮಠನವೊಲೊಪ್ಪೆ (ಚಂದ್ರಪು. ೧೦-೬೬). **ಸುರಶೈಳ**: ಪರಮಜಿನಸವನಜಲನಿರ್ಝರಮುಂ ಸುರಬಲ ಪಯೋಧಿಕಲಕಲಮುಂ ವಾರ್ಣ್ದರೆ ನೋಡೆ ಬಿನ್ನನಿರ್ದುದು ಸುರಶೈಳ [ಪಾಪಾ. ಲ]ಮದೊಂದು ಮದುವೆಗಳಿಪಿದ ಮನೆವೊಲ್ (ಆದಿಪು. ೭-೧೦೪). [ಸಂ.]

ಸುರಶೈಳ 'ಸುರಶೈಲ' ನೋ.

ಸುರಸ (ಗು). ೧. ಒಳ್ಳೆಯ ವಾಸನೆಯಿಂದ ಕೂಡಿದ; ಸುಗಂಧಯುಕ್ತವಾದ. ೨. ಒಳ್ಳೆಯ ರಸದಿಂದ ಕೂಡಿದ; ರಸಾರ್ದ್ರವಾದ: ಸುರಸಪಲಾಶ ಪುಷ್ಪಚಯದೊಳ್ ವನಲಕ್ಷ್ಮಿಯ ರತ್ನನೂಪುರಸ್ಫುರಮನೆ . . . ಪೂರ್ಮೆದತ್ತು ಮಧುರಂ ಮಧುಮತ್ತಮಧುವ್ರತಸ್ವರಂ (ಜಗವಿ. ೧೪-೪೦); ೩. ಚೆಲುವಾದ; ಸುಂದರವಾದ.(ನಾ). ೪. ಒಳ್ಳೆಯ ರಸ. ೫. ಒಂದು ಬಗೆಯ ರಾಳ. ೬. ಸುವಾಸನೆಯ ಹುಲ್ಲು. [ಸಂ.]

ಸುರಸದ್ಮ (ನಾ). ದೇವತೆಗಳ ವಾಸಸ್ಥಾನ; ಸ್ವರ್ಗ: ಗಿರಿಶಿಖರಂಗಳೊಳ್ ತರುಶಿಖಾಮುಖದೊಳ್ ಸುರಸದ್ಮಕೂಟದೊಳ್ ಪರಿಕಲಿಸಿರ್ದುವು . . . ತಮದೊಡ್ಡು (ಮಲ್ಲಿಪು. ೭-೩). [ಸಂ. ಸುರಸದ್ಮನ್]

ಸುರಸಮಿತಿ (ನಾ). ದೇವತೆಗಳ ಸಮೂಹ: ಇದೆ ಸಾರಂ ಸ್ವರ್ಗಲೋಕಕ್ಕಿದೆ ಸುರಸಮಿತಿ ಪ್ರಾರ್ಥಿತಂ ಯೌವರಾಜ್ಯಾಸ್ಪದಂ (ಶಾಂತಿಪು. ೭-೨೪). [ಸಂ.]

ಸುರಸರಿತ್ತು (ನಾ). ದೇವಲೋಕದ ನದಿ; ದೇವಗಂಗೆ: ಯುವತಿಜನಶಂಕೆಯುಂ ಮುನ್ನವಯವದೊಳೆ ಪೊಕ್ಕು ಕಳೆದು ಸುರಸರಿದಂಭಃಪ್ಲವದೊಳೆ ಚಕ್ರಧರಂ ದುಗ್ಧವಾರ್ಧಿಯೊಳ್ ನಿಂದ ಕನಕಗಿರಿಯನೆ ಪೋಲ್ತಂ (ಆದಿಪು. ೧೧-೧೩೬).

[ಸಂ. ಸುರಸರಿತ್]

ಸುರಸಿಂಧು (ನಾ). = ಸುರಸರಿತ್ತು: ಸುರಸಿಂಧುಪ್ರಿಯಪುತ್ರ ಕೇಳ್. . . ಬಗೆದರ್ತೀ ಕೌರವರ್ ಕೂಡೆ ನೂರ್ವರುಮಂ ಕೊಲ್ವೆಂ (ಪಂಪಭಾ. ೭-೧೫); ಸುರ ಸಿಂಧೂದಕ ಯಕ್ಷ ಕರ್ದಮ ಲಸನ್ಮುಕ್ತಾಕ್ಷತಾಮೋದ ಬಂಧುರ ಮಂದಾರ ಸುಧಾರಸಾನ್ನ . . . ಫಲದಿಂ . . . ಅರ್ಚಿಸಿದಂ (ಅಜಪು. ೪-೭೮). [ಸಂ.]

ಸುರಸಿಂಧುಜ (ನಾ). ದೇವಗಂಗೆಯ ಮಗ; ಭೀಷ್ಮ: ಸುರಸಿಂಧುಜ ಕುಂಭಜ ದುರ್ಧರಭುಜ ಗುರುತನುಜ (ನೇಮಿಪು. ೧೧-೧೩೩); ನುಡಿಯದಿರು ನಿನ್ನ ಹವಣಿನ ಮಾನಿಸನೆ ಸುರಸಿಂಧುಜನು (ಕುವಾಭೀ. ೧-೩೭). [ಸಂ.]

ಸುರಸುಂದರಿ (ನಾ). ೧. = ಸುರವಿಲಾಸಿನಿ: ಜನಾರ್ಧನನೆತ್ತಿಕೊಂಡು ಬರೆ ಸುರಸುಂದರಿಯರ ತಳ್ತು ಪಿಡಿದ ವಜ್ರದ ಕೊಡೆಗಳ ನೆಟಲ್ಗಳೊಳಂ (ಶಾಂತಿಪು ೧೦ ೪೨); ೨. ಲೋಕೋತ್ತರವಾದ ಸೌಂದರ್ಯವುಳ್ಳವಳು; ಅತಿಚೆಲುವೆ: ಓರ್ವ ಸುರಸುಂದರಿ ಹೂಮಾಲೆಗಳಿಂದಲಂಕೃತವಾಗಿ . . . ವಿರಾಜಮಾನಳಾಗಿರುವಳು (ಸುತ್ತುಮು. ೭೪). [ಸಂ. ಸುರಸುಂದರೀ]

ಸುರಸುರಕೆ 'ಸುರಸುರಿಕೆ' ನೋ.

ಸುರಸುರನೆ (ಅ). ಬೆಂಕಿಯಲ್ಲಿ ಸುಡುವಾಗ ಉಂಟಾಗುವ ಶಬ್ದವನ್ನು ಸೂಚಿಸುವ ಒಂದು ಅನುಕರಣಾವ್ಯಯ: ಲಂಕೆಯನ್ನು ಸುರಸುರನೆ ಬಾಲದಲಿ ಸುಟ್ಟ ರಣದಿಟ್ಟ (ವಾಪೀಕೀ. ೨೮-೨). [ಸುರಸುರ್ + - ಅನೆ]

ಸುರಸುರಲಿಕೆ 'ಸುರಸುರಿಕೆ' ನೋ.

ಸುರಸುರಿಕೆ, ಸುರಸುರಕೆ, ಸುರಸುರಲಿಕೆ, ಸುರುಸುರಿಕೆ, ಸುರುಸುರಿಗೆ, ಸುರುಸುರುಕೆ (ನಾ). ಒಂದು ಬಗೆಯ ಸಸ್ಯ: ''ಅರುಣಂಪು , ಸುರಸುರಿಕೆ'' (ಆಕಾ. ೧-೧೦); '' ಗುಪ್ತಗಂಧಿ - ಸುರಸುರಿಕೆ'' (ಓಷಧಿ. ೪೯). **ಸುರಸುರಕೆ:** ''ಹರಿವಾಲುಕಾ - ಸುರಸುರಕೆ'' (ಚಾಮುಂಡಾ. ೨೦-೧೧೨); ''ಅಲೂಕಂ - ಸುರಸುರಕೆ'' (ಓಷಧಿ. ೧೦); ಸುರಸುರಕೆಯ ಬೇರು ನೂರು ನೂರು ಹಲವನ್ನು ನಾಗಳನೀರಿನಲ್ಲಿ ಕಷಾಯವೆತ್ತಿ (ದ್ರಾಕ್ಷಾಚೂ. ೫-೫). **ಸುರಸುರಲಿಕೆ** : ''ಕರ್ಕಶಚ್ಛದಃ — ಸುರಸುರಲಿಕೆ, ತೇರು, ಮಿಟ್ಟಲಿ, ಸೌತೆ'' (ಓಷಧಿ. ೨೬). **ಸುರುಸುರಿಕೆ:** ''ಅರುವಾಳಕಂ — ಸುರುಸುರಿಕೆ'' (ಓಷಧಿ. ೯); ಸುರುಸುರಿಕೆ ಬೇರಿಗೂ ಇದೇ ಪ್ರಕಾರ ಆಗುವುದು (ವೈವಿ. ೪). **ಸುರುಸುರಿಗೆ:** ಹಬ್ಬುಲಿ, ಕಿರುಬುಲಿ, ಸುರುಸುರಿಗೆ ಈ ಸೊಪ್ಪುಗಳ ರಸ . . . ತೊಡಿಯಲು ಮೂರುದಿನಕ್ಕೆ ಶೀತಜ್ವರಂ ಗುಣಮಕ್ಕುಂ (ಸಚಿತ್ರ. ೭೦). **ಸುರುಸುರುಕೆ:** ''ಕಂಬಳಃ — ಸುರುಸುರುಕೆ, ಕಂಬಳಿ'' (ಓಷಧಿ. ೨೨); ತ್ರಿಫಲೆ . . . ಸುರುಸುರುಕೆಯ ಬೇರು (ವೈದ್ಯಸಾ. II. ೫೩). 'ಚುರುಚುರಕೆ ಗಿಡ' ಪರಾ. [?]

ಸುರಸೂದನ (ನಾ). ದೇವತೆಗಳನ್ನು ನಾಶಪಡಿಸುವವನು; ದೈತ್ಯ: ಖಳ ಸುರಸೂದನನ ತೆಗೆದಪ್ಪಿ ನಗುತ . . . ನೋಡಿದ (ಕಾಶಿರಾ. ೩೭-೨).

ಸುರಸೆ (ನಾ). ತುಳಸಿಯ ಗಿಡ: ''ತುಳಸಿಯದು ಸುರಸೆ [ಪಾಠಾಂ. ಸರಸಿ, ಸುರಸಿ] ಬಹುಮಂಜರಿಯೆನಿಕ್ಕು'' (ಮಂಗರಾ. ೩೯-೨೭). [ಸಂ. ಸುರಸಾ]

ಸುರಸ್ತ್ರೀ (ನಾ). = ಸುರವಿಳಾಸಿನಿ: ಲಲಿತಾಂಗ[ವಂಗ]ವಿಷಯಾಧೀಶಂ ಸುರಸ್ತ್ರೀಜನೋದಾತ್ತಪ್ರಾರ್ಥಿತಯೌವನಂ (ಶಾಂತಿಪು. ೫-೧೧೩); ಸುರಸ್ತ್ರೀಜಾಲ ನೆರೆಯದು (ಹರಿವಂಭ. ೬-೧೦). [ಸಂ.]

ಸುರಹಯ (ನಾ). ಇಂದ್ರನ ಕುದುರೆ; ಉಚ್ಚೈಶ್ರವ: ''ಉಚ್ಚೈಶ್ರವಂ ಸುರ ಹಯವೆನಲ್ಕಿಂದ್ರನಶ್ವಂ'' (ಮಂಗರಾ. ೧೩-೨). [ಸಂ.]

ಸುರಹೂ (ನಾ). ಒಂದು ಬಗೆಯ ಹೂಬಾಣ (?): ಅಲ್ಲಲ್ಲಿ ಬಾಣ ಬರಿಸು ಸುರಹೂಗಳು ಪಲ್ಲೈಸಿ ತುಡುಕಲಂಬರವ ಸಲ್ಲಲಿತಾಂಗ ಕಂಠೀರವನರಸ ಭೂವಲ್ಲಭನ್ಮತಂದನಾಗ (ಕಂಪಾ. ೨೨-೧೦೪). [ಸುರ + ಹ್ಯೂ (< ಪ್ಯೂ)]

ಸುರಹೊನ್ನೆ 'ಸುರವೊನ್ನೆ' ನೋ.

ಸುರಳ್ 'ಸುರುಳ್' ನೋ.

ಸುರಳಿ 'ಸುರುಳಿ' ನೋ.

ಸುರಳೀತ (ಗು). ೧. ಸರಾಗವಾದ; ಸಲೀಸಾದ: ಅವರು ಸುರಳೀತ ಬಾಳ್ವೆ ಮಾಡಲಿಲ್ಲ (ರೂಢಿ). (ನಾ). ೨. ಸರಾಗ; ಸಲೀಸು: ಹೀಗಾದರೆ ಹುಡುಗನ ಅಭ್ಯಾಸ ಸುರಳೀತವಾಗಿ ಸಾಗದು (ದೀಪಕ. I. ೨೮); ಈ ವ್ಯಾಪಾರ ಸುರಳೀತವಾಗಿ ಮುಗಿದಲ್ಲಿ . . . ಕೊಂಚವಾದರೂ ಕಮಿಶನ್ ಕೊಡದಿರಲಾರರು (ರತ್ನಗೋ. ೨೭).

[<— ಮರಾ. ಸುರಳೀತ]

ಸುರಾಂಗ (ನಾ). [ಜೈನ] ಭೋಗಭೂಮಿಯ ಹತ್ತು ಕಲ್ಪವೃಕ್ಷಗಳಲ್ಲಿ ಒಂದು; ನಾನಾ ವಿಧವಾದ ಮಾದಕಪಾನೀಯಗಳನ್ನು ನೀಡುವ ವೃಕ್ಷ: ವಸನಾಂಗಾತೋದ್ಯಾಂಗ ಪ್ರಸವಾಂಗ ಜ್ಯೋತಿರಂಗ ದೀಪಾಂಗಾನ್ನಾಂಗ ಸುರಾಂಗ ಭಾಜನಾಂಗಾವಸಥಾಂಗ ವಿಭೂಷಣಾಂಗ ದಶಕಲ್ಪಕುಜಂ ಸೊಗಯಿಸುವುವು (ಚಂದ್ರಪ್ರ. ೩-೩೪). 'ದಶಾಂಗಕಲ್ಪಕುಜ' ಪರಾ. [ಸಂ.]

ಸುರಾಂಗನೆ (ನಾ). ದೇವಲೋಕದ ಸ್ತ್ರೀ; ಅಪ್ಸರೆ: ಅಂಗ . . . ನಿಜಾಂಸಮಿತಿಗಳಿಂದಂ ನೆರದ ಜಯಂಗೊಂಡಾಗಡೆ ಸುರಾಂಗನಾಸುರತವಿಷಯಸುಖಮಂ ಕೊಟ್ಟುಂ (ಕವಿರಾ. ೩-೧೫೯). [ಸಂ. ಸುರಾಂಗನಾ]

ಸುರಾಕಾರ, ಸುರಾಖಾರ (ನಾ). ಒಂದು ಬಗೆಯ ಉಪ್ಪು; ಪೆಟ್ಟುಪ್ಪು; ಸೋರುಪ್ಪು: (ಕ). **ಸುರಾಖಾರ:** ಜೀನಸಗಳು . . . ಸುರಾಖಾರ (ಸೋರುಪ್ಪು) (ಮುಂಬಪ್ರಾ. ೧೧೯). [<— ಮರಾ. ಸುರಾಖಾರ್]

ಸುರಾಖಾರ 'ಸುರಾಕಾರ' ನೋ.

ಸುರಾಗ (ನಾ). [ಸಂಗೀತ] ಒಳ್ಳೆಯ ರಾಗ: ಶ್ರುತಿ ಗಮಕಂಗಳಿಂ ಪುಟ್ಟಿದ ಗೀತಮಾದೊಡೆ ಸ್ವರ ಸುಸ್ವರ ಸುರಾಗ ಮಧುರ ಅಕ್ಷರ ಅಲಂಕಾರವೆಂಬಾಱು ಲಕ್ಷಣಂಗಳುಳ್ಳದ್ದಾಗಿಹುದು (ವಿವೇಕ. ೨೩೨). [ಸಂ.]

ಸುರಾಘಟ (ನಾ). ಹೆಂಡದ ಗಡಿಗೆ; ಮದ್ಯದ ಪಾತ್ರೆ: ಪಂತಿರುಗಿ ಬಂದಾಮೇಲೆ ನಿನಗೀವೆನಾ ಮಾಂಸಭೂತೌದನ ಸುರಾಘಟಸಹಸ್ರದಾ . . . ನೈವೇದ್ಯಮಂ (ಶ್ರೀರಾಮಾ. ೧೨೬-೪೫). [ಸಂ.]

ಸುರಾಚಲ, ಸುರಾಚಳ (ನಾ). ದೇವಲೋಕದ ಬೆಟ್ಟ; ಮೇರುಪರ್ವತ: ಸುರಾಚಲದಿಂ ಸುರಾರ್ಣವಂಬರಮಮರಾದ್ರಿ ನೀಳ್ದು ಗೆಲವೆಂದುದು ಜಂಗಮ ಸೇತುಬಂಧಮಂ (ಅಜಿಪು. ೪-೪೫). **ಸುರಾಚಳ:** ಈವ ನೆಗಟ್ಟೆ ಕಳ್ಪಭೂಮಿರುಹದಿನಗ್ಗಳಂ ನುಡಿ ಸುರಾಚಳದಿಂದಚಳಂ (ಎಕ. II, ೧೩೩ — ೨೭; ೫೫೭). [ಸಂ.]

ಸುರಾಚಳ 'ಸುರಾಚಲ' ನೋ.

ಸುರಾಚಾರ್ಯ (ನಾ). ದೇವತೆಗಳ ಗುರು; ಬೃಹಸ್ಪತಿ: ''ಬೃಹಸ್ಪತಿಃ, ಸುರಾಚಾರ್ಯಃ . . . ಬೃಹಸ್ಪತಿಯ ಹೆಸರುಗಳು'' (ಸಿದ್ಧಾಂತ. ೩೧). [ಸಂ.]

ಸುರಾಡ (ನಾ). ಸುಖ, ಸಂತೋಷದ ಆಧಿಕ್ಯ, — ಹೆಚ್ಚಳ: ಸುಖದ ಸುರಾಡವಮ ಕೊಂಡೆಯರ ನುಡಿಗೆ ನಿವಾಡವನೆ ಮಾಡದಿರು ಕೂಡಧಿರಪಜಯಾಂಗನೆಯ (ತೊರಾ. ೩-೭-೩೯). [? ./ ಮರಾ. ಸುರವಾಡೇ = ಸುಖ; ಅನುಕೂಲತೆ]

ಸುರಾದ್ರಿ (ನಾ). = ಸುರಾಚಲ: ಸುರಾದ್ರಿಯಿಂ ಸ್ಥಿರತರಂ . . . ಪುಟ್ಟುಗುಂ ನಂದನಂ (ಜಗವಿ. ೨-೮೩); ಕಲಸಿ ಸುರಾದ್ರಿಗಳ್ಕೆಸು ತೋರದೊಳಿಸೆವ ತುತ್ತುಗಳಂ ಪಿಡಿವುತಾ ರೋಗಿಸುತ್ತಿರಲು (ಬುಸಪು. ೭-೪೩). [ಸಂ.]

ಸುರಾಧೀಶ (ನಾ). ದೇವತೆಗಳ ಒಡೆಯ; ಇಂದ್ರ: ಸುರಾಧೀಶನೆಟ್ಟಂದುದಂ ಕಂಡು (ಶಾಂತಿಪು. ೧೦-೯ ವ); ಬಹುವಕ್ಕಂ ಪದ್ಮಗರ್ಭಂ ದನುಜಗುರು ಗುರುದ್ವೇಷಿ ಜೇವಂ ಸುರಾಧೀಶಹಿತಾತ್ಮಂ . . . ಮನ್ಮಯುದ್ಧ ಪ್ರವೀಣಂ (ಎಕ. VIII, ಸೊರಬ ೧೪೦-೫೬; 1198). [ಸಂ.]

ಸುರಾನಕಸ್ವನ (ನಾ). ದೇವಲೋಕದ ಭೇರಿಯ ಧ್ವನಿ: ಏಱಿ ವಿಮಾನಮಂ ಬರೆ . . . ಸುರಾನಕಸ್ವನಂ ಮಿಱೆ (ಎಕ. XII, ತಿಪ್ಟೂ. ೧೩-೩೪; 1174?). [ಸಂ.]

ಸುರಾಪಗಾನಂದನ (ನಾ). ದೇವಗಂಗೆಯ ಮಗ; ಭೀಷ್ಮ: ಸುರಾಪಗಾನಂದನಂ ಮಹಾಜರ್ಜರನೇ (ಗದಾಯು. ೪-೫೮). [ಸಂ.]

ಸುರಾಪಗೆ (ನಾ). ದೇವಗಂಗೆ: ಚಂಚಳಧವಳಕೇತನಪ್ರತಾನದಿಂ ಸಸುರಾಪಗಾಫೇನ ಸಂತಾನದಂತೆಯುಂ (ಚಂದ್ರಪು. ೧೧-೭೮ ವ); ಉಡುಪತಿ ಸುರಾಪಗೆಗಳಂ ಮುಡಿದ ಪೂ ಮಾಡಿ (ಇಷರ. ದೇ. ೩೧-೧೪). [ಸಂ. ಸುರಾಪಗಾ]

ಸುರಾಪಾನ (ನಾ). ಹೆಂಡವನ್ನು ಕುಡಿಯುವುದು; ಮದ್ಯಪಾನ: ಸರ್ವಪಾತಕಿ ಸುರಾಪಾನಭುಂಜಕ ಪಣ್ಯಾಂಗನಾ ಸಂಗಿ (ಮೋಕ್ಷಮಾ. ೨೭-೧೧೦); ಸುರಾಪಾನಾದಿ ವ್ಯೂಹ . . . ತತ್ಸಂಯೋಗಿವ್ಯೂಹವೆಂಬೈದು ಮಹಾಪಾತಕವ್ಯೂಹಂಗಳಂ (ವಿವೇಕ. ೧೮೪). [ಸಂ.]

ಸುರಾಭಾಂಡ (ನಾ). ಹೆಂಡದ ಪಾತ್ರೆ: ಸುರಾಭಾಂಡಗತವಾರ್ವಿಶೇಷತೆಯಂತುಟಾಗಲ್ಕೆ ನಿಮಗನುತ ಶಾಪವಿತ್ತಂ ಗೌತಮಂ (ವೀಶ್ಯಪು. ೪-೨-೨೬). [ಸಂ.]

ಸುರಾಮಂಡ (ನಾ). ೧. ಹೆಂಡದ ನೊರೆ. ೨. ಹೆಂಡದ ತಿಳಿ: ''ಕಾರೋತ್ತಮಃ ಸುರಾಮಂಡಂ — ೨ ಹೆಂಡದ ಮೇಲಣ ತಿಳಿಯ ಪೆಸರುಗಳು'' (ಸಿದ್ಧಾಂತ. ೩೧೯). [ಸಂ.]

ಸುರಾಯು (ನಾ). ಒಂದು ಬಗೆಯ ಆಯುಧ: ಪಟ್ಟಾಕತ್ತಿ ಸುರಾಯು ಬಾಳು ಮೊದಲಾದ ಆಯುಧಗಳು (ಕೃವಾಸ. ೧೧೮). [?]

ಸುರಾರ್ಚಿತ (ನಾ). ದೇವತೆಗಳಿಂದ ಪೂಜಿಸಿಕೊಳ್ಳುವವನು; ದೇವಗುರು; ಬೃಹಸ್ಪತಿ: ಇಂದು ಸುರಾರ್ಚಿತರಸ್ಪರ್ಶಗ್ರಹದೊಳಿರೆ ನೃಪನಕ್ಕುಂ (ಜಾತಕ. ೧೨-೬); ಎಡಬಲದೊಳ್ಕೆದೆ ಷಣ್ಮುಖ ಗಣಪರೊಲ್ಕೆಸಿ ನಡೆಯಲಾ ಸೋಮವರ್ಣಂ ಸುರಾರ್ಚಿತ ರಮ್ಮನಡಿಯ ಸೇವಿಸುತ ಬರೆ (ವೀಶ್ಯಪು. ೩-೨-೨೮). [ಸಂ.]

ಸುರಾವನೀಜ (ನಾ). ದೇವಲೋಕದ ಮರ; ಕಲ್ಪವೃಕ್ಷ: ಸುರಭಯ ತಾಯ್ಯನೆಯಾ ಸಿದ್ಧರಸದ ಬಗರಗೆ ಸುರಾವನೀಜದ ಬೀಜಂ . . . ರಾಜವರ್ಯನಸೆವೌದಾರ್ಯಂ (ಚಂದ್ರಪ್ರ. ೧೧-೮೬). [ಸಂ.]

ಸುರಾಶೆ (ನಾ). ಇಂದ್ರನ ದಿಕ್ಕು; ಪೂರ್ವದಿಕ್ಕು: ನಿರುಪಮಸಿದ್ಧಿಯನೆಯ್ದಿದ ವರಲಿಂಗಂ ಮಜಿಗುಮಾ ಸುರಾಶೆಯೊಳನಿಶಂ (ಹಾಲಾಸ್ಯ. ೪-೮-೩೪). [ಸಂ. ಸುರಾಶಾ]

ಸುರಾಸನ (ನಾ). ಇಂದ್ರನ ಪೀಠ: ಸ್ಮರಹರನುದಯಮನಱಿಪುವ ಸುರವಿಪ್ಪರ ದೂಡನ ನಡುಗಿತಲರ್ವಿಲ್ಲುಮಿದಚ್ಚರಿ ನೇಣ ಭೇದವತನುವ ಶರಾಸನಕ್ಕಂ ಸುರಾಸನಕ್ಕಮದೊಂದೇ (ಪುಷ್ಪಸ್ತ. ೧೦-೧೪). [ಸಂ.]

ಸುರಾಸೆ (ನಾ). = ಸುರಾಶೆ: ಸುರಾಸೆಯ ಬೀಸಿದ ಗಾಳಿಯ ಮುಗಿಲ ಕಾಣ್ಕೆಯಿಂ ಬಱಿನಕ್ಕುಂ (ಅಜಿಮು. ೪-೧೨೯). [< ಸಂ. ಸುರಾಶಾ]

ಸುರಾಹಾರ (ನಾ). ದೇವತೆಗಳ ಆಹಾರ; ಅಮೃತ: "ಸುರಾಹಾರಮಮೃತಂ ಸುಧೆಯೆನಲ್ಕೆ ಪೀಯೂಷಂ" (ಮಂಗರಾ. ೯-೩೦). [ಸಂ.]

ಸುರಾಳ (ನಾ). ಸಾಕಾರ, ಸಗುಣ ಮುಂತಾದ ಸಕಲಕಲೆಯಿಂದ ಕೂಡಿದ ಸ್ಪಷ್ಟವಾದ ನಿಲವು: ಸರವಂಬ ಕುದುರೆಗ ವಿಷ್ಣುವೆಂಬ ಕಡಿವಾಣ ಚಂದ್ರ ಸೂರ್ಯರೆಂಬ ಅಂಕಣೆ ಬ್ರಹ್ಮನ ಹಲ್ಲಣ ಸುರಾಳವೆಂದಲ್ಲಿ ನಿರಾಳವಾಯಿತ್ತು ಗುಹೇಶ್ವರನೆಂಬ ರಾವುತಂಗೆ (ಅವಚ. ೫೯-೨೫೯); ಸುರಾಳವಿಲ್ಲದ ಪ್ರಸಾದ ನಿರಾಳವಿಲ್ಲದ ಪ್ರಸಾದ (ಅಪಂಡೀ. ೧೮೬-೭೪). 'ನಿರಾಳ' ಪರಾ.

ಸುರಾಳನಿರಾಳ = ಸಗುಣಾಕಾರ ಮತ್ತು ನಿರ್ಗುಣಾಕಾರ: ಆದಿಯಾಧಾರ ವಿಲ್ಲದಂದು . . . ಸುರಾಳನಿರಾಳವಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರ ನಿಮ್ಮ ಶರಣನುದಯಿಸಿದನು (ಅವಚಂ. ೧-೫); ಆದಿ ಅನಾದಿ ಸುರಾಳ ನಿರಾಳವಿಲ್ಲದಂದು . . .ಮಹಾದೇವ ತಾನೊಬ್ಬನೇ ಇದ್ದನೆಂಬುದು ಕಾಣಬಂದಿತ್ತು ನೋಡಾ ಶಿವಜ್ಞಾನದೃಷ್ಟಿಗೆ (ಷಡ್ಸ್ಥ. ೨೫-೭೭). [< ಸಂ. ಸುರಾವಿಲ ?]

ಸುರಿ[1], **ಜುರಿ**[1] (ಕ್ರಿ). ೧. (ಮಳೆ, ನೀರು ಮುಂತಾದುವುಗಳು) ಮೇಲಿನಿಂದ ಬೀಳು; ವರ್ಷಿಸು: "ಸುರಿ — ಗಲನೇ" (ಕಮುಧಾ); ನೆಗೆದ ಮುಗಿಲ್ಗಳುಂ ಸುರಿವ ಪರ್ಮಟೆಯುಂ ಮಿಗೆ ನುಣ್ಣನಪ್ಪ ಕೇಕಿಗಳ ಸರಂ (ಕವಿಪಾ. ೧-೧೨೪); ರಸದ ತೊಜೆ ಪಱಿದುದವರ್ದಿನ ಪೊಸ ಸೋನೆಯೆ ಸುರಿದುದು (ಸುಕುವಿಪಾ. ೧೦-೨೩). ೨. (ಬಾಣದಂತೆ) ಮೇಲೆ ಎರಗು; ಧಾರಾಕಾರವಾಗಿ ಬೀಳು: ಸುರಿವ ಸರಲ್ ನವಲ್ಲ ಭಟರೆತ್ತಮುರುಳ್ದ ದಟಂ (ಪಂಪಭಾ. ೯-೫೭). ೩. ಹೊರಬರು; ಹೊರಸೂಸು: ಕರುಳ್‌ಮಾಲೆಗಳ್ ನೆಲದೊಳ್ ಸುರಿಯೆ ಕುತ್ತುವುದುಂ (ವಡ್ಡಾರಾ. ೧೩೭-೧೪); ಸುರಿವ ಬಿಸುನೆತ್ತರ ಸರಿಯೊಳಮಂಬಿನ ಸರಿಯೊಳಮಂಬರಿವಿಟ್ಟು ಪಾಯ್ವ ಮದಗಜಂಗಳ ಮದಜಲದೊಳಂ (ಪಂಪಭಾ. ೧೦-೭೦ ಪ); ಸುರಿವ ಖಂಡದ ರಕ್ತಧಾರೆಗೆ ತರತರದಿ ಬಾಯ್ದೆಗದು (ಕುವಾದ್ರೋ. ೬-೪೧); ಸುರಿದುದು ಖಳನ ಗಾಯದಿ ರಕ್ತ ಕಣ್ಣೀರು ಸುರಿದುದವನ ಪೆಣ್ಣನಕೆ ಸುರಿದುದು ಪೂಮಳೆ ಕಾಮಗೆ ನೇತ್ರದ ಸುರಿದುದಾನಂದಾಶ್ರು ರತಿಗೆ (ಮೋಹತ. ೧೨-೭೦). ೪. ಸೋರು; ಸ್ರವಿಸು; ಹರಿ: ಮುದುಕರಂತೆ ಲೋಳೆ ಸುರಿವ ಬಾಯುಂ ಕೀವುಗಿವಿಯವರಂತೆ ಕೀವು ಸುರಿವ ಕಿವಿಯುಂ (ಧರ್ಮಾಮೃ. ೪-೬೫); ಜೊಲ್ಲು ಸುರಿವ ಮುದ್ದುಮೊಗದಲ್ಲಿ ನಗಯಾಂತು (ಮೋಹತ. ೧೭-೬೯). ೫. (ಬಾಣವನ್ನು) ಬಿಡು; ಎಸೆ: ಕಾರ ಸರಿವೋಲ್ ಸುರಿದಂ ಶರಸಂಕುಲಂಗಳಂ (ಧರ್ಮಾಮೃ. ೧೩-೧೪೬); ಸರಳ ಮಳೆಗಳ ಸುರಿದರಾನೆಯ ಮೇಲೆ (ಕುವಾದ್ರೋ. ೬-೨೬). ೬. ಹಾಕು; ಎರೆ: ಪೊಂಗಳಂ ಸುರಿವೊಡಮಾರೊ ಸೈರಿಸುವರಾತನ ಪಲ್ಲಿಲಿವಾಯ ನಾತಮಂ (ಪಂಪಭಾ. ೪-೧೦೦); ಬುದ್ಧಿಸಾಗರಂ ಸಗರನ ಮೇಲೆ ಸಿತಸರ್ಷಪಂಗಳನಿಱಿಯೆ ಸುರಿವುದುಂ (ಅಜಿಪು. ೧೦-೫೩ ವ); ಮಲ್ಲಿಗೆಯನಿಲ್ಲಿ ತಾ ಸುರಗಿಯಂ ಸುರಿ (ಬಿಜ್ಜ. ೭-೭೪); ಖರಕೆ ರತುನವ ಸುರಿದು ತೇರಿನ ತುರಗವನು ವಂದಿಸಿದನು (ಕುವಾದ್ರೋ. ೯-೭೭). ೭. ಕಾರು; ಉಗುಳು: ಹೊಗೆ ಸುತ್ತಿ ಸುಯ್ಲಲಿ ಸುರಿದುದುರಿ (ಕುವಾದ್ರೋ. ೧೯-೧೩); ನಿನ್ನಾಳ್ದನೆನ್ನಯ ತವಗೆಡಿಸಿದ ಕಾರಣದಿಂದೆ ಕಿಡಿ ಸುರಿವಕ್ಷಿಯಿಂದುರುಹಿದೆ (ಮೋಹತ. ೮-೨೯೦). ೮. ಸೋರಿಸು; ಸುರಿಸು: ಕಂಪವಾತ ರೋಗಿಗಳಂತೆ ಕಂಟಿಸುವರ್ ತೊನ್ನರಂತೆ ರಸಿಗೆ ಸುರಿವರ್ (ಧರ್ಮಾಮೃ. ೩-೮೧). ೯. ಮೇಲಕ್ಕೆ ಎಬ್ಬು; ಹೊರತೆಗೆ: ಬರಿಯಂ ಸುರಿಯೆಯುಂ ಗೊಂಕೆಯಂ ನುಱಿಯೆಯುಂ (ಅಜಿಪು. ೧೧-೧೦ ವ). **ಜುರಿ**[1]: ೪. ಜುಣಗುಗಿವಿಗಳ ಜುರಿತ ಹುನ್ನೆನ ಮಹಾಭೀಷಣದ . . . ರಕ್ಕಸಿ ಬಂದಳು (ತೊರರಾ. ೩-೭-೧೨).

ಜುರಿಜುರಿ (ದ್ವಿರುಕ್ತಿ): ಹಿರಿದು ಬಳಲಿದ ಭೀವು ಜುರಿಜುರಿವ ರಕ್ತದಿಂ ಸರಳುಗಳ ಕಾಯದಿಂದುರುಳಿಸುತ ಕಂಪಿಸುತ (ತುರಂಗ. ೫೯-೨೮).

[ದೇ. ॥ ತಮಿ. ಮಲ. ಚೊರಿ; ಕೊಡ. ತೊರ್, ತೊರಿ; ತುಳು. ಸೋರು, ತೋರು; ತೆಲು. ತೊರಾಗು, ತೊರ್ಗು; ಕುವಿ. ತೋರ]

ಸುರಿ[2] 'ಸುಱಿ'[1] ನೋ.

ಸುರಿಕಂಡ (ನಾ). (ದೇಹದಿಂದ) ಈಚೆಗೆ ಬಂದ ಮಾಂಸದ ಚೂರು,— ತುಂಡು: ಗಾರುಗಾರೆನೆ ಸುಟ್ಟು ಸುರಿಕಂಡವನೆ ಮಾಡಿ ಓರಂತೆ ತಿನುತಿಹನಾಮಿಕಗಲ್ಲದೆ (ಶಿವಗೀ. ೧೪೮-೯೪೦). [ಸುರಿ[1] + ಕಂಡ[1]]

ಸುರಿಗಾಯ (ನಾ). ಕೀತು ಸ್ರವಿಸುತ್ತಿರುವ ಗಾಯ,— ವ್ರಣ (?): ಹುಸಿದವನ ಒಡಲಿನ ಪ್ರತಿ ಮೂದಲೆಯಂತೆ . . . ಸುರಿಗಾಯ ಸುರಿವವನ ವಿಧಿಯಂತೆ (ಮಸಗುಂ. ೭೪). [ಸುರಿ[1] + ಗಾಯ]

ಸುರಿಗಿ 'ಸುರಿಗೆ'[2] ನೋ.

ಸುರಿಗಿವಿಡಿ 'ಸುರಿಗೆವಿಡಿ' ನೋ.

ಸುರಿಗಿಜ್ಜಿ (ಕ್ರಿ). ಕತ್ತಿಯಿಂದ ಇರಿ; ಖಡ್ಗದಿಂದ ಚುಚ್ಚು: ಅರಬರ್ ಮೇಲ್ಕಾಯ್ದು ಸುರಿಗಿಜ್ಜಿದರ್ (ಪಂಪಭಾ. ೧೦-೪೮); ನೊಬಂಬರಂ ಕಾದಿ ಗೆಲ್ದು ಕಾಳಗದೊಳ್ . . . ಸುರಿಗಿಜ್ಜಿದು ಕಾದಿ ಸತ್ತನ್ (ಎಕ. V, ಅರಸೀ. ೨೩೭-೮; 971); ಮಣಿಯದೆ ಕಿಟ್ಟಿಚ್ಚ ನಂತರಂ ಸುರಿಗಿಜ್ಜಿದಂ (ನೇಮಿಪು. ೧೧-೧೫೬). [ಸುರಿಗೆ[2] + ಇಜ್ಜಿ[1]]

ಸುರಿಗೆ[1] 'ಸುರಗಿ'[1] ನೋ.

ಸುರಿಗೆ[2], **ಸುರಗಿ**[3], **ಸುರಿಗಿ** (ನಾ). ಸಣ್ಣಕತ್ತಿ; ಚೂರಿ: ಪ್ರಾಣವಲ್ಲಭನ ಸುರಿಗೆಯಂ ಕೊಂಡು ತನ್ನ ತಾನಿಱಿದು ಸತ್ತಳ್ (ವಡ್ಡಾರಾ. ೩೬-೨೮); ಕಟ್ಟಿದುದೆ ಸುರಿಗೆ ಮಟ್ಟಿದುದೆ ಕಳಂ (ಆದಿಪು. ೩-೭೨); ಸುರಿಗೆಯ ಮೇಲೊಱಗಿ ನಾನಿಹೆನು (ಮಹಾದೇ.ಬ. ೬೦-೬೪). **ಸುರಗಿ**[3]: ಬೇಂಟೆವಱೆ ದೊರೆಯೊಳೊಡಂಬಟ್ಟಿಸಿಯ ಸುರಗಿ . . . ತನ್ನೊಳಮಱೆ (ಪಂಪಭಾ. ೫-೩೭); ಪಿರಿದಪ್ಪ ಶಕ್ತಿ ತನಗುಳ್ಳುಡಂ ಸುರಗಿಯಲ್ಲದ ಪಣೆದಗುರ್ವ ಪಱಿಯದು (ಧರ್ಮಾಮೃ. ೭-೫೦); ಓಯ್ಸಾರದಲಿ ಸುರಗಿಯ ತಿರುಹುತಿರುಳೊಬ್ಬನೆ ನಿಚಾಲಯದಿಂದ ಹೊಱವಂಟ (ಕುವ್ಯಾವಿ. ೩-೮೧). **ಸುರಿಗಿ**: ಚಕ್ರಂ ಶೂಲಂ ಸುರಿಗಿ ಮೊದಲಾಗ ಮೂವತ್ತೆರಡಾಯುಧಮಂ ಮಹೋತ್ಸವಂಬೆರಸಿನತಂ ನಿಲಿಸಿ ಪೂಜಿಸಿ (ಧರ್ಮಾಮೃ. ೨-೧೨೮). 'ಸೂರಿಗೆ' ಪರಾ. [< ಸಂ. ಛುರಿಕಾ]

ಸುರಿಗೆ[3] 'ಸುರಗಿ'[2] ನೋ.

ಸುರಿಗೆಕಾರ (ನಾ). ಕಠಾರಿಯನ್ನು ಹಿಡಿದಿರುವವನು: ರಣರಂಗದಲ್ಲಿ ಉರವಣೆಯಿಂದ ಇದಿರಾದ ಸುರಿಗೆಕಾರರನ್ನು ತೆರಪಿಲ್ಲದೆ ಕೊಂದು ಬೂತುಗನು ಭೂತಭೋಜನವನು ಮಾಡಿಸಿದನು (ಕವೀಶ. ೬೮). [ಸುರಿಗೆ[2] + - ಕಾರ[1] (< - ಕಾಱ)]

ಸುರಿಗೆಗಾಳಗ 'ಸುರಿಗೆಗಾಳಿಗ' ನೋ.

ಸುರಿಗೆಗಾಳಿಗ, ಸುರಿಗೆಗಾಳಗ (ನಾ). ಕತ್ತಿಯ ಕಾಳಗ; ಖಡ್ಗಯುದ್ಧ: ಎನ್ನ ಕಾಳಗಮಂ ಸುರಿಗೆಗಾಳಗಮಂ ನೋಟ್ಪಂತೆ (ಪಂಪಭಾ. ೧೨-೧೧೬ ಪ); ಸುರಿ [ಪಾಠಾಂ. ರ]ಗೆ ಗಾಳಿಗಂಗಾದುವಂಗೆ ಬಳಸಿಯುಂ ನೋಟ್ಪ ನೆರವಿ ನೆರವೆ (ಜೀವಸಂ. ೪೬-೧೯). **ಸುರಿಗೆಗಾಳಗ**: ಸುರಿಗೆಗಾಳಗಮಂ ಕಾದಿ ಗೆಲುಬನ್ನು (ಎಕ. XII, ತಿಪಟೂ. ೮೧-೬; 1114); ನನ್ನ ಕಾಳಗವನ್ನು ಸುರಿಗೆಗಾಳಗವನ್ನು ನೋಡುವಂತೆ (ಭಾಮಿಣಿ. ೨೬).

[ಸುರಿಗೆ[2] + ಕಾಳಗ]

ಸುರಿಗೆಗೀಟ್ (ಕ್ರಿ). (ಒರೆಯಿಂದ)ಕತ್ತಿಯನ್ನು ಹಿರಿ,—ಎಳೆ: ಒರ್ಬರೊರ್ಬರಂ ಬಯ್ದಡೆ ದಣ್ಣವೆರಡು ಪಣಂ ಬಡಿದಡೆ ಪನ್ನೆರಡು ಪಣಂ ಸುರಿಗೆಗೀಟ್ದಡೆ ಮೂಱುಗದ್ಯಾಣವಿಱಿದಡೆ ಪನ್ನೆರಡುಗದ್ಯಾಣಂ ಜಾತಿಭೇದವಲ್ಲದು ದಣ್ಣವಂ ವಿಶೇಷಂ ಮಾಟ್ಪ[ರ್] (ಎಇ. XX, ೬-೩೭; 1012); ಒರ್ಕೆಯ್ಸಿ ಬಿಲ್ಲನಂಬು ಮನುರ್ಕಾಳ್ಗಳ್ ಸುರಿಗೆ [ಪಾಠಾಂ. ರಗಿ] ಗಿಟ್ಟು (ಕಾವ್ಯಾವ. ೫೮). [ಸುರಿಗೆ[2] + ಕೀಟ್]

ಸುರಿಗೆತೇರ್ (ನಾ). (ಚಕ್ರಗಳಿಗೆ) ಕತ್ತಿ ಜೋಡಿಸಿರುವ ಬಂಡಿ, – ರಥ: ಎರಡುನೊಗದ, ಮೂರುನೊಗದ ಸುರಿಗೆತೇರನೇರಿದವರ್ (ಪಾರಿಜಾ. ೪-೫).

[ಸುರಿಗ್₂ + ತೇರ್₂]

ಸುರಿಗೆವಿಡಿ, ಸುರಿಗಿವಿಡಿ (ಕ್ರಿ). ಕತ್ತಿಯನ್ನು ಹಿಡಿ; ಖಡ್ಗವನ್ನು ಧರಿಸು: ಸುರಿಗೆವಿಡಿದು ತೆಗೆದಾ ಮಾಸನೂರ ನೆರೆದ ತರುಣಿಯರ ಹರಣಮಂ ಕಾಯ್ದು (ಪಿಡ್ಡರಾ. ೧-೩೫). ಸುರಿಗಿವಿಡಿ : ಕಾವಿಲ್ಲದೆ ಕೊಡೆವಿಡಿವೆನೆಂಬಂತೆ ಬಂದಿಗೆಯಿಲ್ಲದೆ ಸುರಿಗಿ[ಪಾಠಾಂ. ಹರಿಗೆ]ವಿಡಿವೆನೆಂಬಂತೆ (ಧರ್ಮಾಮೃ. ೪-೫೦). [ಸುರಿಗ್₂ + ಪಿಡಿ₁]

ಸುರಿತ (ನಾ). ಹರಿಯುವಿಕೆ; ಸ್ರಾವ : "ಧಾರಾ – ಎಡೆವಿಡದ ಸುರಿತಂ" (ಕಾಶಕೃ. ೭೫); ಮುಗ್ಗರಿಸಿ ಬಿದ್ದ ಪೆಟ್ಟಿನಿಂದ ಮೂಗಿನಲ್ಲಿ ರಕ್ತದ ಸುರಿತ ಹೆಚ್ಚಾಗಿ ಅವರು ಬಹಳ ನಿಶ್ಶಕ್ತರಾದರು (ರೂಢಿ). [ಸುರಿ₁ + - ತ]

ಸುರಿತಣ್ಣ (ನಾ). ಒಬ್ಬಾತನ ಹೆಸರು : ರೇವಂತ ನಡಗೌಡ ಸುರಿತಂಣ ಪಿರಿಯ ತಮ್ಮಗೌಡರು (ಎಕ. VII, ಶಿವಮೊ. ೧೦೪-೧೫; 9507). [? + ಅಣ್ಣ₂]

ಸುರಿತರ್ (ಕ್ರಿ). ಹರಿದುಬರು ; ಸ್ರವಿಸು : ಸಾರಸಹಕಾರಧಾರಾಸಾರಂ ಕೊಳದಳವೆಯಂತೆ ಸುರಿತರೆ (ಆದಿಪು. ೬-೯೫); ಸುರಿತರೆ ಬಾಷ್ಪಪೂರಮೆಮೆಯಿಕ್ಕದೆ . . . ನೋಡಿದಂ (ಕಾದಂಬ. ೫೪೯); ಸುರಿತರ್ಪ ಕಮ್ಮಲರೆ ಪೆರ್ಮಳೆಯಾಗಿಸೆ ಕಾರಲಕ್ಷ್ಮಿಯಂ ತೊಡನಡರ್ದಂಬುದಕ್ಕೆ ನೆಗೆವಚ್ಚರಿಯಚ್ಚರಿಯಂ ನಿಮಿರ್ಚಿದಳ್ (ಶಬರಂ. ೧-೪೫).

[ಸುರಿ₁ + ತರ್₁]

ಸುರಿತಾಣ 'ಸುಲ್ತಾನ್' ನೋ.

ಸುರಿತಾಳ 'ಸುಲ್ತಾನ್' ನೋ.

ಸುರಿತ್ರಾಣ 'ಸುಲ್ತಾನ್' ನೋ.

ಸುರಿಮಳೆ (ನಾ). ೧. ಎಡೆಬಿಡದೆ ಸುರಿಯುವ ಮಳೆ; ಧಾರಾಕಾರವಾದ ಮಳೆ: ಕಾರಮಳೆಯಿ, ಕಷ್ಟತಮಳೆಯಿ! ಸುರಿಮಳೆಯಿ! ಸುರಿಮಳೆಯಿ! (ನಿಲಮು. ೧೫-೩); ಅವನ ಮೇಲೆ ಶೃಂಗಕದ (ಪಿಚಕಾರಿ) ಬಣ್ಣದ ನೀರಿನ ಸುರಿಮಳೆಯಾಗುತ್ತಿತ್ತು (ಬಾಣಭ. ೧೨೧). ೨. (ಆಲಂ) ಯಥೇಚ್ಛವಾಗಿರುವಿಕೆ; ಸಮೃದ್ಧತೆ: ಲೇಖನಗಳ ಸುರಿಮಳೆ ಪ್ರಾರಂಭವಾಯಿತು (ಗ್ರಂಥಾಲ. ೨೮).

[ಸುರಿ₁ + ಮಳೆ (< ಮಳೆ)]

ಸುರಿಮುಳ್ಳು (ನಾ). ಒಂದು ಬಗೆಯ ಸಸ್ಯ: (ಮೃಷ್ಟಿ. ೬೯-೧೬೨).

[ಸುರಿ₇ + ಮುಳ್ಳು (< ಮುಳ್)]

ಸುರಿವಾಯ್ (ನಾ). ಜೊಲ್ಲು ಸುರಿಯುತ್ತಿರುವ ಬಾಯಿ : ಪಲರ್ಗ ಬರಿದಲೆ ಸುರಿವಾಯ್ ಪಲರ್ಗೆ (ಅದ್ಭುತ. ೨೫-೨೭). [ಸುರಿ₁ + ಬಾಯ್₂]

ಸುರಿವು (ನಾ). ಸುರಿಯುವಿಕೆ; ಧಾರೆ: ಜೇನ ಸುರಿವಿಗೆ ಪಾತ್ರೆಯಾಗುವುದರಲ್ಲೇ ಕಿವಿಗೆ ಆನಂದ (ಏಳಜೇ. ೧೫೦). [ಸುರಿ₁ + -ವು]

ಸುರಿಸು (ಕ್ರಿ). ೧. ಹರಿಯುವಂತೆ ಮಾಡು; ಸ್ರವಿಸು: ಉರಗನರಸಿಯ ಕಂಡು ತನ್ನಯ ತಿರುಪ ಮಾಣದೆ ಸೋತು ವೀರ್ಯವ ಸುರಿಸಲಾಕೆಯು ನೋಂತು ಧರಿಸಿದಳೊಬ್ಬ ಪುತ್ರನನು (ಸಂಭವ. ೨೬-೩); ತನಿಜೇನ ಸುರಿಸುಗುಂ (ಕಾಲೂರ. ೪೬-೬೪); ಪ್ರಯಾಣ ಹೊರಡುವಾಗ ಕಣ್ಣೀರು ಸುರಿಸಬಾರದು (ಚಿಂಗಾಳ್ಳ. ೩೦). ೨. ಕಾರು; ಸೂಸು; ಚೆಲ್ಲು : ಕಾರ್ಯದರ್ಶಿಯವರು ಕಣ್ಣಿನಿಂದ ಕೆಂಡಗಳನ್ನು ಸುರಿಸುತ್ತಾ . . . ಹೇಳಿದರು (ರಾಯಚ. ೪೬). [ಸುರಿ₁ + - ಇಸ್ಸು]

ಸುರು 'ಶುರು' ನೋ.

ಸುರುಂಟಿಸು, ಸುರುಟಿಸು (ಕ್ರಿ). ಮುರುಟಿಹೋಗುವಂತೆ ಮಾಡು; ಉಡುಗಿಸು: ಅವರ ಅಧಿಕಾರರಂಗವನ್ನು ಕರ್ತವ್ಯವಿವರಗಳನ್ನು ಸ್ವಲ್ಪಸ್ವಲ್ಪವಾಗಿ ಕಿರಿದುಗೆಯ್ದು ತಿರುಳ್ಗೆಡಿಸಿ ಸುರುಣ್ಗಿಸಿ ಅವಸ್ತುಮಾಡಿ (ಮಂತ್ರಶ. ೬೯-೨೧). ಸುರುಟಿಸು: ಯತಿಜನರ ಧೈರ್ಯಮಂ ಮುರುಟಿಪರ್ ಸುರುಟಿಪರ್ ನರಟಿಪರ್ ಸತಿಯರ್ (ಪತಿಲ. ೨-೬೯). [ಸುರುಂಟು + - ಇಸ್ಸು]

ಸುರುಂಟು, ಚಿರಿಟು, ಚಿರುಟು, ಸುರುಟು₁ (ಕ್ರಿ). ೧. ಮುದುರು; ಮುರುಟಿಕೊಳ್ಳು: "ಸುರುಂಟು – ಸಂಕೋಚನೇ" (ಶಮಧಾ); ಕೋಟ್ಲುದಿಗೊಳ್ಳ ಮೆಯ್ಗಂಡಮಂ ತಾಳಿಸೆ ಸುರುಂಟಿ ಬಗಿದಾ ಮೆಯ್ಯಂ ಸುಡೆ (ಶಾಂತಿಪು. ೬-೯೫ ವ); ಮುಂಗಾರ ಸಿಡಿಲ ಮೊಟಗಂ ಕೇಳ್ದು ಸುರುಂಟುವಣಂಬೆಯ ತಿಟ್ಟದಂತೆ (ರಾಮಾಶ್ವ. ೩೫-೪). ಚಿರಿಟು : ಗಿ. ಬಾಗಿಲಲ್ಲಿ ಕರೀದರೆಯೊಂದಿತ್ತು, ಅದೀಗ ಮುದ್ದೆಯಾಗಿ ಪಕ್ಕದಲ್ಲಿ ಚಿರಿಟಿಕೊಂಡಿತ್ತು (ಕಾಬಭಾ. ೨೪). ಚಿರುಟು : ತಿ. ತಿರುಚಿ ಅಮುಕು: ಹೂವಿನ ಪಾತ್ರೆಯ ಮಣ್ಣಿಗೆ ಸುಟ್ಟ ಸಿಗರೇಟನ್ನು ಚಿರುಟಿದಳು (ತಾಯಿ. ೨೭೭). ಸುರುಟು₁ : ಗಿ. ಜಿಹ್ವೆ ಸುರುಟುವುದು ಭೂಪೋನ್ನತನೆ (ಜಿನಮು. ೬-೩೯); ಕೃತಜ್ಞತೆಯ ಭಾವನೆಯು ಮುರುಟಿ, ಸುರುಟಿ, ಕಂದಿ ಕಮರಿಹೋಗುತ್ತದೆ (ಯಶ್ವಪ್ರ. ೧೩೨); ಕಂಡೆ ಸುರುಟಿ ಸುಂದಿ ಹೋಗಿ ಜೋಲುಬಿದ್ದ ಮಾಂದಳಿರ (ಮಾಂದಳೀ. ೩೭-೧೬). ೩. ಸರಿಪಡಿಸು : ಜಗುಳಿದ ಮೊಲೆಗಳ ಸುರುಟಿ ಅವಕೆಯಿಂದ ಬಿಗಿದು (ಮೋಳಪು. ೧-೭೮). [ದೇ. ॥ ತಮಿ. ಮಲ. ಚುರುಟ್ಟು; ತುಳು. ಚಿರಂಟ್, ಸುರುಂಟು; ಕೊಡ. ತುರೀಟ್, ತುರೀಡ್]

ಸುರುಕವಡೆ (ನಾ). ಒಂದು ಬಗೆಯ ಕಳ್ಳು, – ಮದ್ಯ (?) : ರಸವಣಿಯನುಂಡ ಗೊರವಿತಿ ಪೊಸತಾಶೀರ್ವಾದವುಳ್ಳದೊಂದೆಂದಾಗಳ್ ಬಸಿಗಳ್ಳಿಂಗೆ ಮಹೇಶರ ಪಸಾದ ಸುರುಕವಡೆ ಕವಡೆ ಹರಿವೋ ಎಂದಳ್? (ಸೂಕ್ತಿಸು. ೧೩-೨೦).

[?./ ಮರಾ. ಸುರಕವಡೀ = ಒಂದು ಆಟ]

ಸುರುಕಿ 'ಸುರ್ಕಿ' ನೋ.

ಸುರುಗು₂ 'ಸೊರಗು₁' ನೋ.

ಸುರುಗು₃ (ನಾ). ೧. ಒಣಗಿದ ಎಲೆ, – ಗರಿ: ರಂಗಪ್ಪಶೆಟ್ಟಿಯ ಮನೆ ಊರಿನ ಮಧ್ಯ ಇತ್ತು. ಅದನ್ನು ಸುರುಗಿನಿಂದ ಕಟ್ಟಿದ್ದನು (ಊರುಳ. ೮೧); ಸುರುಗು ಗುಡಿಸುವುದಕ್ಕೆ, ತರಗು ತೂರುವುದಕ್ಕೆ . . . ನಾಲ್ಕು ನಾಲ್ಕು ಹನಿ (ಬಾಲಪ್ರ. II, ೧೧೭). ೨. ಒಣಗಿದ ಬಾಳೆಯೆಲೆ : (ಕ). [< ಸೊರಗು₁?]

ಸುರುಗುಜಾಡ್ಯ (ನಾ). ಬತ್ತದ ಬೆಳೆಗೆ ಬರುವ ಒಂದು ಬಗೆಯ ರೋಗ: (ಎಸಮ್ಮ. XV, ೩೫). [ಸುರುಗು₂ + ಜಾಡ್ಯ]

ಸುರುಗುಮಾನ್ಯ (ನಾ). ದಾನವಾಗಿ ನೀಡಿದ ಒಣಭೂಮಿ: ಚಿನ ಅಪ್ಪಯಗೆ ಕೊಟ್ಟ ಸುರುಗುಮಾನ್ಯ (ಎಕ. IX, ಹೊಸಕೋ. ೫೮-೫; 1688?); ತೇಕಲು ಹೋಬಳಿಗೆ ಸಲುವ ಕೊಂಡರಾಜನ ಹಳಿಗ್ರಾಮಕ್ಕೆ ಸುರುಗುಮಾನ್ಯ (ಎಕ. X (S), ಮಾಲೂರು. ೨೨೪-೭; 1750); ಅಪ್ಪೆಗವುದನ ಹಳಿಸ್ಕಳದ ಗವುಡ ಮರಿಯಂಣನ ಸುರುಗು ಮಾನ್ಯ ಗದ್ದೆ (ಎಕ. X, ಶಿಷ್ಟಳ. ೬೨-೪; ?). [ಸುರುಗು₂ + ಮಾನ್ಯ]

ಸುರುಚಿರ (ಗು). ೧. ಹೊಳಪಿನ; ಪ್ರಕಾಶಮಾನವಾದ: ಕಾಶೀವಿಷಯದ ಸುರುಚಿರ ಸೌಭಾಗ್ಯಂಬಡೆದೊಪ್ಪುವ ವಾರಾಣಸಿಯೆಂಬ ಪುರ (ಜಯಾಕಾ. ೩-೧೬); ಸುರುಚಿರ ದೇವಾಗಾರ . . . ನಗರಿ ದುರ್ಗಂಗಳಿಂ (ಹಮ್ಮೀರ. ೧-೪೯ ವ); ಗಮಿಸಿದಂ ವರ ರಾಮನಾಥ ಲಿಂಗಾಲಯಕೆ ಸುರುಚಿರೇಕೋರಾಮರತಿಭಕ್ತಿಯಿಂ (ವಿಕೋಪು. ೮-೧೨). (ನಾ). ೨. ಕಾಂತಿ; ಹೊಳಪು: ವರವಶ್ಯದ ತಿಲಕವನಿಡುವುದು ಸುರುಚಿರದ ತಿಗುರನಿಕ್ಕುವುದು (ಜೀವಂಸಾಂ. ೯-೬೦). [ಸಂ.]

ಸುರುಚಿರಾಂಗ (ನಾ). ಹೊಳಪುಳ್ಳ ಮೈಯುಳ್ಳುದು; ಹುಲಿ: "ವ್ಯಾಘ್ರಂ ತರಕ್ಷುವೆನಲು ಸುರುಚಿರಾಂಗಂ" (ಮಂಗರಾ. ೪೬-೭). [ಸಂ.]

ಸುರುಟಿ₁, ಸುರಟಿ₁ (ನಾ). ೧. ಮೆರವಣಿಗೆಯಲ್ಲಿ ಹಿಡಿಯುವ ರಾಜಯೋಗ್ಯವಾದ ಸಾಧನಗಳಲ್ಲಿ ಒಂದು: ಧರಧರದೊಳು ಪರಿಪರಿ ಬಣ್ಣ ಬಳಿದಿನ ಸುರುಟಿ ನಿಶಾನಿ ಸತ್ತಿಗೆಯೂ ಧರೆ ತುಂಬಿ ಬರುವಂತೆ ದೊರೆ ದೊರೆಗಳ ಮುಂದೆ ಬಿರಿದೆತ್ತಿ ಪಾಟಕರ್ ಪೊಗಳೆ (ಸೌಂದಕಾ. ೬-೭೭); ಪಲ್ಲಕ್ಕಿಗಳು ಛತ್ರಿ ಚೂರಿಗಳು ಸುರುಟಿಗಳು ವಲ್ಲಿತಹ ಮಿಸುನಿ (ಕೃಷ್ಣವಿ. ೩-೧೬). ೨. [ಸಂಗೀತ] ಒಂದು ರಾಗದ ಹೆಸರು : ಸಾರಂಗ ಮೋಹನಮಿಂತು ಸಾವೇರಿ ಸುರುಟಿ ಭೈರವಿ (ವಿದಾಕೃ. ೮೭-೨); ಸುರುಟಿ ವಿಲನೇ ಮೇಳಕರ್ತ ಹರಿಕಾಂಭೋಜಯಲ್ಲಿ ಜನ್ಯ (ಸಂಗೀಚಂ. ೧೮೩). ಸುರಟಿ₁ : ೧. ಇರುಗಡೆಯ ಸಾಲ್ಗಿಡಿದ ರನ್ನದ ಸುರಟಿಗಳ ಸೌವರ್ಣಕಲಶೋತ್ಕರದ ಧವಳಚ್ಛತ್ರಗಳ . . . ಬಿರುದು ಪತಾಕೆಗಳ ಮೋಹರ ಗಳೆತರುತಿರ್ದವು (ಅನಂತಾ. ೧-೨೪-೩೪). ೨. ಹಾಡುಗಳಿಗೆ ಕಾಂಬೋಧಿ . . . ಸುರಟಿ,

ಮಧ್ಯಮಾವತಿ, ಆನಂದಭೈರವಿರಾಗಗಳೂ ಸೂಚಿತವಾಗಿವೆ (ಯಕ್ಷಗಾ. ೩೮).

[ದೇ. ॥ ತಮಿ. ಚುರುಟ್ಟಿ; ತೆಲು. ಸುರಟಿ]

ಸುರುಟ್ಟಿ $_3$ 'ಸುರುಟ್ಟು$_2$' ನೋ.

ಸುರುಟಿಸು 'ಸುರುಂಟಿಸು' ನೋ.

ಸುರುಟ್ಟು$_1$ 'ಸುರುಂಟು' ನೋ.

ಸುರುಟ್ಟು$_2$, ಸುರುಟ್ಟಿ$_2$, ಸೊರಂಟು, ಸೊರಟು (ನಾ). ೧. ಸುತ್ತಿಕೊಂಡಿರುವುದು; **ಸುರುಳಿ**: (೬). **ಸುರುಟ್ಟಿ**$_2$: ೨. ಸುರುಳಿಯಾಕಾರವಾಗಿರುವುದು: ಅರ ನೋಡಲು ಸುರುಟಿಯ ಕತ್ತಿಗಳ ಹುಯ್ಲು ಧಾರೆಗಿಕ್ಕಡಿಯಾದವರು (ಕಂನವಿ. ೧೫೫-೪೯). **ಸೊರಂಟು** : ೧. ಸೊರಂಟು, ಒಱಂಟು (ತಮಿದ. ೩೭ ಪ್ರಯೋ). **ಸೊರಟು**: ೩. (ಒಣಗಿದ ಎಲೆಯಂತೆ) ಮುರುಟಿಕೊಂಡಿರುವುದು : (೬). ೪. ಡೊಂಕಾದುದು ;ಸೊಟ್ಟಗಿರುವುದು: 'ಸೊರಟುದಲೆ', 'ಸೊರಟುಮೂಗು' ಪರಾ. [< ಸುರುಂಟು$_1$ ./ ತಮಿ. ಚುರುಟ್ಟು]

ಸುರುಟ್ಟು$_3$, ಸುರಟ್ಟು$_1$, ಸುರ್ಟು (ನಾ). (ವಿಶೇಷೋತ್ಸವಸಂದರ್ಭಗಳಲ್ಲಿ) ಗೌರವಸೂಚಕವಾಗಿ ಗುಂಡುಹಾರಿಸುವುದು: ಅಂತರಹಿತಾಹ್ಲಾದದಿಂದ ಜನರಲ್ಲುರುಟ ನೋಡಲ್ಕೆ ಪೊರಮಟ್ಟನು (ಅರ್ಜುವಿ. ೨೪-೪೬); ಎದೆ ಬಿರಿಯುವಂತೆ ಬೊಬ್ಬಿಡುತ್ತ ಅರ್ಧಭಾಗ ಅಂತರ್ಹಿತವಾಗಿದ್ದ ಚಂದ್ರಬಿಂಬಮುಖವಾಗಿ ಸುರುಟು ಗಳನ್ನು ಹಾರಿಸಿದರು (ಹೂಡಿವಿ. ೨೩೯); ಒಬ್ಬ ಸಿಪಾಯಿಯ ಕಳುಹುವ ಸುರುಟಿಲ್ಲ , ನಮ್ಮ ನಾಯಕನನು ಹೂಳುತಿದ್ದಾಗ (ಇಂಗೀತ. ೧೯-೩). **ಸುರಟ್ಟು**$_1$: ಶ್ರೀ ಚಾಮರಾಜೇಂದ್ರಒಡೆಯರ್ ಬಹದೂರವರು ಸಿಂಹಾಸನಾರೂಢರಾದರು . . . ಹೊರಗಡೆ ಮೈದಾನದಲ್ಲಿ ಸುರಟು ನಡೆದು ತೋಷಂಗಳು ಆದವು (ಮಹಾವಂ. II, ೧೪೪). **ಸುರ್ಟು** : (ಕಸಂಗ್ರಾ. ೧೧೫). [<— ಇಂ. Salute]

ಸುರುಟುಕಿವಿ (ನಾ). ಕೊಂಕಿದ ಕಿವಿ; ತಿರುಚಿಕೊಂಡಿರುವ ಕಿವಿ : ಕೊಱಟು ದಲೆಯ ಕೊಳೆನಾಱುವ ಕಬ್ಬಾಯ ಸುರುಟುಕಿವಿಯ ಸುಂಠಿವೆರಲ ಕಿಱಿದು ಕಿನಿಕೆ ಹತ್ತಿದ ಹಲ್ಗಳುಡುಗಿದೊಂದುರದ ಕುನುಂಗಿದ ಬೆನ್ನ . . . ಭೂತವೆ ನಡೆತಪ್ಪಂತೆ (ನೇಮಿಸಂ. ೭-೧೦೩). [ಸುರುಟ್ಟು$_1$ (< ಸುರುಂಟು) + ಕಿವಿ]

ಸುರುಟುಗಾಲು (ನಾ). ಕೊಂಕಿದ ಕಾಲು; ಡೊಂಕುಗಾಲು : ತರಟುದಲೆಯು ಮುರುಟುಕಿವಿಯು . . . ಸುರುಟುಗಾಲು . . . ಒರಟುಮ್ಮೆಯೊಳಿಸೆವರು (ಅರಿಷ. ೪-೪). [ಸುರುಟ್ಟು$_1$ (< ಸುರುಂಟು) + ಕಾಲು (< ಕಾಲ್$_1$)]

ಸುರುತಾಳ 'ಸುಲ್ತಾನ್' ನೋ.

ಸುರುತಿ (ನಾ). ಒಂದು ಬಗೆಯ ಸೀರೆ : ಕೃಷ್ಣ ನಾರಿದ್ರೌಪದಿಗೆ ವಸ್ತ್ರ ಅಕ್ಷಯ ವೆಂದನು ಸುರುತಿ ಕಂಭವತಿ ಸಣ್ಣ ಬಣ್ಣಸೀರೆಗಳು ಮೇರುವಿನ ಬೆಟ್ಟದಂತೆ ಮಹಿಮೆ ತೋಱಿದ (ಪುರಂದ. ೫-೭೨-೧೯). [?]

ಸುರುಮ 'ಸುರಮ' ನೋ.

ಸುರುವಾತು (ನಾ). ಮೊದಲು; ಪ್ರಾರಂಭ: ಸುರುವಾತಿನ ಒಂದು ಪತ್ರದಲ್ಲಿ ಸಹಜವಾಗಿ ಕಾಣಿಸಿದ್ದ (ತಳಕು. ೬೪). [<— ಮರಾ. ಸುರುವಾತ್, ಸುರವಾತ್]

ಸುರುವಾರ (ನಾ). ಒಂದು ಬಗೆಯ ಮರ : ದ್ರಾಕ್ಷಿಯ ಮಂಟಪಗಳನ್ನು ಸುರುವಾರದ ಗಿಡಗಳನ್ನು ವಪ್ಪಯಿಗಿಡಗಳನ್ನು . . . ಮಾಡಿಸಿ (ಕೃಪ್ರ ೧೪೩). [?]

ಸುರುವು$_1$, ಸುರವು$_1$, ಸುರುಹು (ಕ್ರಿ). ಸುರಿ; ಹೊಯ್ಯು: ಕರಗಿದ ಬೆಳ್ಳಿಯನ್ನು . . . ಮಣ್ಣಿನ ಹಲಿಗೆಗಳಲ್ಲಿ ಮಾಡಿದ ಕಾವಲಿಗಳಲ್ಲಿ ಸುರುವುವನು (ಕಥಾಗ. ೨೮೨); ಡಬ್ಬುಗೊಡದ ಮೇಲೆ ನೀರು ಸುರುವಿದಂತೆ ಆಗುತ್ತದೆ (ಮೋಹನೇ. ೨೯); ಕಾಫಿಯನ್ನು ದೊಡ್ಡಕಪ್ಪಿನಲ್ಲಿ ಸುರುವಿಕೊಂಡು ಅದಕ್ಕೆ ಸಕ್ಕರೆ ಸೇರಿಸುತ್ತಿದ್ದ (ಮಹಾತ್ಮಾ. ೧೭). **ಸುರವು**$_1$: ಆ ಶೇಠಜಿಯ ಎದೆಗೆ ತಣ್ಣೀರು ಸುರವಿದಂತಾಗಿ ಅದನ್ನೆ ಆರಾಣಿಗೆ ಕೊಟ್ಟುಬಿಡುವುದು ಖಂಡಿತ (ಮುಂಗಾಮು. ೧೧೨). **ಸುರುಹು** : ಎಂಧ್ಯದ ಗಿರಿಯ ಮೇಲ್ ಕಾರ್ಮೋಡಗಳು ಮಳೆಗರೆದ ತೆರದಲಿ ಸುರುಹಿ (ರಘುವಂ. ೧೩-೮). [< ಸು$_1$]

ಸುರುವು$_2$ 'ಶುರು' ನೋ.

ಸುರುಸುರ್, ಸುರುಸುರು (ನಾ). ಹೂಬಾಣದ ಪಟಾಕಿ ಮುಂತಾದುವು ಉರಿಯುವಾಗ ಉಂಟಾಗುವ ಶಬ್ದವನ್ನು ಸೂಚಿಸುವ ಒಂದು ಅನುಕರಣ ಶಬ್ದ : 'ಸುರುಸುರ್‌ಬಾಣ' ಪರಾ. **ಸುರುಸುರು** : 'ಸುರುಸುರುಬತ್ತಿ' ಪರಾ.

ಸುರುಸುರ್‌ಬಾಣ (ನಾ). ಸುರುಸುರ್ ಎಂದು ಶಬ್ದಮಾಡುವ ಒಂದು ಬಗೆಯ ಸಿಡಿಮದ್ದಿನ ಬಾಣ : ಭುಸುಗುಡುತ್ತ ಆಕಾಶಕ್ಕೆ ಬೆಂಕಿಯ ಬರೆಯೆಳೆದು ಕಣ್ಮರೆಯಾಗುವ ಸುರುಸುರ್‌ಬಾಣ (ಮೂಡುದಾ. ೨೧೬). [ಸುರುಸುರ್ + ಬಾಣ$_3$]

ಸುರುಸುರಿಕೆ 'ಸುರಸುರಿಕೆ' ನೋ.

ಸುರುಸುರಿಗೆ 'ಸುರಸುರಿಕೆ' ನೋ.

ಸುರುಸುರು 'ಸುರುಸುರ್' ನೋ.

ಸುರುಸುರುಕೆ 'ಸುರಸುರಿಕೆ' ನೋ.

ಸುರುಸುರುಬತ್ತಿ (ನಾ). = ಸುರುಸುರ್‌ಬಾಣ : ಹುಡುಗರು ಈಗಲೇ ಪಟಾಕಿ ಪಟಾಸು ಸುರುಸುರುಬತ್ತಿಗಳನ್ನು ಹತ್ತಿಸುತ್ತಿದ್ದರು (ಹುಟ್ಟಿಹ. ೭೨).

[ಸುರುಸುರು (< ಸುರುಸುರ್) + ಬತ್ತಿ]

ಸುರುಹು 'ಸುರುವು$_1$' ನೋ.

ಸುರುಳ್$_1$, ಸುರುಳು$_1$ (ಕ್ರಿ). ಸುರುಳ್ದು (ಭೂತನ್ಯೂ), ಸುರುಳ್ವ (ಭವಿಷ್ಯ). ೧. ಸುತ್ತಿಕೊಳ್ಳು ; ಸುರುಳಿಯಾಗು : ಬಾಳೆಯ ಸುರುಳ್ದಳೆಯೆಲೆಯಿಂ ತೆಗೆದು (ಜಯಕಾ. ೧-೫೯); ಮಣಿದುದಮರಾಚಲಂ ಬೆಳ್ಬಾಯ್ತು ರಜತಧಾರಿಣಿಧರಂ ಚಕ್ರವಾಳಂ ಸುರುಳ್ದುದು (ನಂದಿಮಾ. ೧೧-೨೭). ೨. ಮುದುಡು ; ಮುರುಟಿಕೊಳ್ಳು: ''ಸುರುಳ್ – ಸಂಕೋಚನೇ'' (ಶಮಧಾ); ಪೊಯ್ದೊಡೆ ಕೆಡೆದುಂ ತಿವಿದೊಡೆ ಸುರುಳ್ದು ಮೋದಿದೊಡಿರದೆಲ್ಲಡಗಾಗಿ ಮಡಿದು ಬಿದ್ದುವು (ಪಂಪಭಾ. ೧೧-೬೮); ಅಂತೆಚ್ಚ ಕೋಲಿಂ ಮುನ್ನಮ ಸುರುಳ್ದುರುಳ್ದು ಹಂಸಂ ವಿಧ್ವಂಸನವನೆಯ್ದಿತ್ತು (ಪಂಚತಂ. ೧೨೮-೮). ೩. ಸುತ್ತಿಹಿಡಿ; ತಬ್ಬಿಹಿಡಿ: ಭೂಮಿಯಂ ಸುರುಳ್ದು ಕದ್ದೊಯ್ದ ನರಕಾಸುರಂಗಾ ಮಾಧವನ ದೆಸೆಯೊಳಾಯ್ತು ಭಂಗಂ (ಭಾವಟಂ. ೬-೧೮). ೪. ಕೆಡೆ; ಬೀಳು: ನಡುವ ಸರಲ್ ಸರಲ್ಮೊಳೆ ಸುರುಳ್ವ ಹಯಂ (ಪಂಪಭಾ. ೧೦-೧೧೪); ವಿತ್ತೇಶನೀಶಂ ನಡುಕಂಗೊಳ್ವಂ ಸುರುಳ್ವಂ ಸುಗಿವನಗಿವಂ (ಜಗವಿ. ೬-೩೦); ಗರದ ಬಿಜುಹೊಯ್ಲಿಂದೆ ನರಳ್ವರಂ ಸುರುಳ್ವರಂ (ಚಿಬಪು. ೨೨-೧೮). ೫. ಭಯಪಡು; ಅಂಜು : ಧೈರ್ಯಮಂ ಪುದುಂಗೊಳಿಸಿ ಸುರುಳ್ದು ಕುರ್ಗಿದ ಕಱಂಗಿದ ಬೇಚರನಂಗಮಂ ಮೃಗಂಗಳುಮಿರದೆಯ್ದೆ ವಂದು ನಡೆ ನೋಡಿದುವು (ಅರಿಪು. ೨-೫೯); ಭೀಮಸೇನನ ಗದಾಘಾತದೊಳ್ . . . ಮಕುಟಭಂಗಮುಮಾಗೆ ಸುರುಳ್ದು ತೆರಳ್ದು ಸುಯೋಧನನಿರ (ಗದಾಯು. ೯-೧೬ ವ); ಸುರುಳ್ದರ್ಮಲೆಪರಹಿತಸಾಮನ್ತರಲ್ಲಾಡಿದರ್ (ಎಕ. VII, ೨೬೧. ೧೫೧-೨೯: 1047); ಅನೇಕಪರಾಜಿಗಳನೇಕಪರಾಜಯಮನೊಳಕೊಂಡು ಸುರುಳೆಯುಂ (ಜಗವಿ. ೧೩-೨೭ ವ). ೬. ಪರಿಹಾರವಾಗು; ಕಳೆದುಹೋಗು : ವಿದ್ಯನ್ನಿಕರಂ ಕರಂ ಮನದೆಗೊಳ್ವನವೊಂದಿದಱಂ ಸುರುಳ್ವನಂ ಕನ್ನೆಯುಮಾ ಮುನೀಶ್ವರರ ಪಕ್ಕದೆ ತಾಳ್ದದಳಂದು ದೀಕ್ಷೆಯಂ (ಸುಕುಮಾ. ೮-೪೦). **ಸುರುಳು**$_1$: ೩. ಒಂದು ಕಂಟಕದೊಳು ಸುರುಳಿದುದೀ ಹಸುಳಿಗೆಂದಳಲಿ ಪೇಳ್ದರವನೀಶಗಾ ದಂಪತಿಗಳು (ಸೌಂದಪು. ೬-೪೭); ಪುಜವಟ್ಟ ಕೊಂಡಗುಜ್ಜಿಯ ಹೊಡೆವ ಕಾಡುಕೋಣನ ಸುರುಳುವ ಕರುವಂಗಿಯ . . . ಕಂಡು (ದಶಾವ. ೭-೬೫). ೫. ಹರಿವುತುಂ ತೇರ್ಕೆಸುತುಂ ತೆರಳುತುರುಳುತುಂ ಹೊರಳುತುಂ ಸುರುಳುತುಂ ಮೊರೆವುತುಂ ನರಳುತುಂ (ಸಾನಂಚ. ೪-೨೦೪ ರಗಳೆ). ೭. ಗುಂಡಗೆ ಸುತ್ತು; ಸುರುಳಿಮಾಡು : ಹಪ್ಪಳದಂತೆ ಲತೆಯಿಱಿದು . . . ಆ ಹಲ್ಲೆಯಂ ಸಲೆ ಸುರುಳಿ (ಸೂಪಶಾ. ೧-೪೫); ಬೇಕಾದರಾಡಿಸಿ ಗಾಳಿಪಟವನರ್ತಿ ಸಾಕಾಗೆ ಸುರುಳುವನಂತೆ (ಭರಚ. ೮-೧೦೨).

ಸುರುಳ್ದ = ಭಯಗೊಂಡವನು ; ಅಂಜಿದವನು : ''ಸೆಡೆದನೆಂದುಂ, ನಡುಕಂಗೊಂಡನೆಂದುಂ, ಸುರುಳ್ದನೆಂದುಂ. . . ಭಯಂಗೊಂಡವಂ'' (ಕಶಾ. ೫೭-೨೨೫); ''ಸೆಡೆದಂ ನಡುಗಿದಂ ಸುರುಳ್ದಂ ನಡುಗಿದ ತಾನಗಿದನಳ್ಕಿದಂ . . . ಭಯಭರಿತನಕ್ಕುಂ'' (ಕವಿಕಂ. ೧೦೯).

[ದೇ. ॥ ತಮಿ. ಚುರುಳ್; ಮಲ. ಚೊಳು; ತೆಲು. ಸುರ್ಳ್; ಪರ್ಜ. ಚುರ್ಕ್]

ಸುರುಳ್‌₂ 'ಸೂರುಳ್‌₁' ನೋ.

ಸುರುಳ್‌₃, ಸುರಳ್‌, ಸುರುಳು₃ (ನಾ). ೧. ಸುರುಳಿ: ಸುರುಳಿನೆ ಸುತ್ತಿದಂತೆ ಕೊರಲೊಳ್ಕಿಱುಗುತ್ತಿರೆ ಮೂಱು ರೇಖೆಗಳ್ (ಕಾದಂಬ. ೬೦). ೨. ಭೀತಿ; ಸಂಶಯ: ಪಿಡಿದಳ್ ಸುರುಳಿಲ್ಲದೆ ಬಾದಿವಿಡಿವವೊಲ್ಕಿನಪದಮಂ (ಧರ್ಮಾಮೃ. ೩-೧೯೪). ೩. ನಾಶ; ಹಾಳು: 'ಸುರುಳ್ಗೊಳಿಸು' ಪರಾ. **ಸುರಳ್‌**: ೪. ಬಟ್ಟೆಯ ಸುರುಳಿ; ಸಿಂಬಿ: ಘಟ್ಟಿ ಪಟ್ಟಿಯ ಸೀಳ ಸುರಳ ತಲೆಯ ಮೇಲಿಟ್ಟು ಶಂಭುಕುಮಾರ . . . ಕಣ್ಗಗೆಗಳವಟ್ಟು ಬರಲು ಬಂದನಾಗ (ನೇಮಿಜಿ. ೫೧-೩೧). **ಸುರುಳು₃** : ೧. ಪಟ್ಟೆಯ ಸುರುಳು ಸೂರಿಯ ಪುಟ ಹೊಸ ಹೊನ್ನದಟ್ಟಿ ಬಿಳಿಯ ದುಕೂಲಗಳ . . . ಮಳಿಗಗಳು (ಕಂನವಿ. ೬-೭೦).

[< ಸುರುಳ್‌₁ / ತಮಿ. ಮಲ. ಚುರುಳ್; ತುಳು. ಸುರುಳ್]

ಸುರುಳಿ₁, ಸುರಳಿ, ಸುರುಳೆ (ನಾ). ೧. ಸುತ್ತಿಕೊಂಡಿರುವುದು; ಸಿಂಬೆ; ಇರಿಕೆ: ಶೋಕದ ಸುರುಳಿಯನು ಸುತ್ರದೆ (ತೂರರಾ. ೪-೪-೬೭); ಬಳುಕುವ ಎಳೆಯ ಬಳ್ಳಿಗಳ ಸುರುಳಿಗಳು, ಸುರುಳಿಗಳ ಮಧ್ಯದ ಜಾಗದಲ್ಲಿ . . . ಚಿತ್ರಗಳು (ನೂಳಂಬ. ೧೧೧); ಹಾಸಿಗೆಯ ಸುರುಳಿಯನ್ನು ಕಾಲಿನಿಂದ ಉರುಳಿಸಿ (ತೇಮಾಪ್ರ. ೧೦೭). ೨. (ಸ್ಥಿತಿಸ್ಥಾಪಕತೆಯುಳ್ಳ) ಲೋಹದ ಎಗರುಪಟ್ಟಿ; ಸ್ಪ್ರಿಂಗು: ಪಕ್ಕಕ್ಕೆ ಬಾಗಿಸುವ ಶಕ್ತಿಯನ್ನು ಒಂದೊಂದು ಕಂಡಿಯ ಪಕ್ಕಗಳಲ್ಲಿಯೂ ಇರುವ ಚಿಕ್ಕತಂತಿಯ ಸುರುಳಿಗಳು ಒದಗಿಸುತ್ತವೆ (ಕವಿಚೋ. ೧. ೬೫೫). ೩. ಒಂದು ಬಗೆಯ ಗಿಡ : ಒಬ್ಬಳೆ ಬಂದೆಯ ಸುರುಳಿಯ ಹೂವಿಗೆ ತೋಟದ ಈ ತುತ್ತತುದಿಗೆ (ಚಂದ್ರವೀ. ೧೧೧-೪೨). **ಸುರಳಿ** : ೧. ತಂದು ಕೊಟ್ಟರು ಬೆಳುಮಟ್ಟೆಯ ಸುರಳಿಯನಂದು ರಾಯನ ಹಸ್ತದಲ್ಲಿ (ಭರತ. ೩-೫೧). ೨. ಈ ಸುರಳಿಗಳ (coils) ವಿನ್ಯಾಸ . . . ಬೇಕಾದ ಹಾಗೆ ಬದಲಾಗುತ್ತದೆ (ತಿಲ್ಪಾ. ೨೪೧). **ಸುರುಳಿ** : ೧. ಮುನ್ನಾದಿನ ಸುತ್ತಿಟ್ಟ ಸುರುಳಿಯನ್ನು ಹಾಗೇ ಉರುಳಿಸಿದಿಟ್ಟನು (ಮುಂಬಯಿ. ೪-೧೫೦): [< ಸುರುಳ್‌₁]

ಸುರುಳಿ₂ (ನಾ). ಕುಗ್ಗಿದ ವ್ಯಕ್ತಿ; ದುಃಖಿ: ಕೇಡೆ ಪೆರ್ಚಪ್ಪುದುಂ ಮಾಡೆ ಕೇಡಪ್ಪುದುಂ ಅರಸಿ ತೊಟ್ಟಪ್ಪುದುಂ ಸುರುಳಿ[ಪಾಠಾಂ. ಮುರಳಿ] ಸುಖಿಯಪ್ಪುದುಂ (ಜೀವಸಂ. ೯೨-೩೭ ರಗಳೆ). [ಸುರುಳ್‌₁ + - ಇ₃]

ಸುರುಳಿಗುರುಳ್ (ನಾ). ಸುತ್ತಿಕೊಂಡಿರುವ ಕೂದಲು ; ಗುಂಗುರುಕೂದಲು: ಮೃಗಲೋಚನೆ ಸು[ಪಾಠಾಂ. ದು]ರುಳಿಗುರುಳಿ ಕುಡುವರ್ವಿನ ಕರ್ಪುಗಳ ಕಳೆಯೆಂಬಿನಂ ನಗಮೊಗದ ನೆಲೆಲ್ಗೆತ್ತು ನೋಡಿದಳ್ (ಅನಂವಿ. ೪-೧೧೫). [ಸುರುಳಿ₁ + ಕುರುಳ್]

ಸುರುಳಿದು 'ಸೂರುಳಿದು' ನೋ.

ಸುರುಳಿದೆಱೆ (ಕ್ರಿ). ಸುರುಳಿಯನ್ನು ಬಿಚ್ಚು : ಇರಿಸಿದ ಪಟದೊಳಿದೇನು ರೂಪೆನುತಲಿ ಸುರುಳಿದೆಱೆದು ನೋಡಿದರು (ನಾಗಕು. ೩-೪). [ಸುರುಳಿ₁ + ತೆಱೆ₁]

ಸುರುಳಿಸು (ಕ್ರಿ). ೧. ಭಯಪಡಿಸು; ಹೆದರಿಸು: ಕುಲಿಶದುಳಿ ಕಿರಿದಾದಡೇನದು ಹಳಚದಡೆ ಪರ್ವತದ ಚಂಪಕದಲರು ಮೃದುತರವಾದರಳಿಸಂತತಿಯ ಸುರುಳಿಸದೇ (ಅಂದಿಕಾ. ೫೫-೬೨). ೨. ನಾಶಪಡಿಸು; ಹಾಳುಮಾಡು : ಒಡಲ ಬಿಡದಾಪತ್ತು ಕೆಡಹಿ ಧರೆಯೊಳು ಕಾಡ ಹೊಡೆಗಿಚ್ಚಿನಂತೆನ್ನ ಸುಟ್ಟು ಸುರುಳಿಪುದು (ಕೃಕವ. ೧೭-೨). [ಸುರುಳ್‌₁ + - ಇಸು₃]

ಸುರುಳಿಸುತ್ತು (ಕ್ರಿ). ೧. ಗುಂಡಗೆ ಸುತ್ತು; ಸಿಂಬೆಮಾಡು: ಹಾಸಿಗೆಯನ್ನು ಸುರುಳಿಸುತ್ತಿ ಇಡು (ರೂಢಿ). ೨. ಸೊನ್ನೆ ಸುತ್ತು: ಲೆಕ್ಕ ತಪ್ಪು ಮಾಡಿದ್ದುದರಿಂದ ಮೇಷ್ಟು ಸುರುಳಿ ಸುತ್ತಿದರು (ರೂಢಿ). [ಸುರುಳಿ + ಸುತ್ತು₁]

ಸುರುಳು₁ 'ಸುರುಳ್‌₁' ನೋ.

ಸುರುಳು₂ 'ಸೂರುಳ್‌₂' ನೋ.

ಸುರುಳು₃ 'ಸುರುಳ್‌₃' ನೋ.

ಸುರುಳೆ 'ಸುರುಳಿ₁' ನೋ.

ಸುರುಳ್ಕೆ (ನಾ). ಮುದುಡಿಕೊಳ್ಳುವಿಕೆ; ಸಂಕೋಚನ : ಕುಚ . . . ಸುರುಳ್ಕೆಯೊಳಂ, ಕವಡಿನೊಳಂ, ಉರ್ಕೆಯೊಳಂ, ಒರೆತದೊಳಂ (ಕಾಶಕ. ೧೫೦).

[ಸುರುಳ್‌₁ + -ಕೆ]

ಸುರುಳ್ಗೊಳಿಸು (ಕ್ರಿ). ನಾಶಪಡಿಸು; ಹಾಳುಮಾಡು : ನಿಮಗ ಘಾತಕ ಮೃತ್ಯುವು ಆವರಿಸುತ ಬಂದು ನಿಮ್ಮನು ದಾವಾನಲನಂತೆ ಸುಟ್ಟು ಸುರುಳ್ಗೊಳಿಸುವುದ್ಕ (ಹಮಚ. ೧೯೮). [ಸುರುಳ್‌₂ + ಕೊಳಿಸು]

ಸುರುಳ್ಚು (ಕ್ರಿ). ಕುಗ್ಗಿಸು; ಸಂಕೋಚಗೊಳಿಸು : ''ಸುರುಳ್ಚು – ಸಂಕೋಚನೇ'' (ಶಮಥಾ); ಅಸುರಾರಿಯ ಪೊರ್ಕುವ ಪದ್ಮಮಂ ಖರದ್ಯೋತಿಯ ಕೆಯ್ಯ ಕಂಜಮ ನಿದೆಯ್ದೆ ಸುರುಳ್ಚುಗುಮೆಂದಿನಂ ಜಗತ್ಕೌತುಕಮಾಯ್ತನುಷ್ಣಮಹಿಮಂ . . . ಹಿಮಂ (ಪುಷ್ಪಸು. ೬-೪೭); ರಿಪುಭೂಪವಧೂಮುಖಚಂದ್ರಬಿಂಬಸಂಪನ್ನತೆಯಂ ಸುರುಳ್ಚಿ (ಬಾಧಪ್ರ. ೪-೩೫). [ಸುರುಳ್‌₁ + - ಚ್ಚು₁]

ಸುರುಳ್ತರ್ (ಕ್ರಿ). ಕುಗ್ಗು; ಕುಸಿ : ಕರಿಪದಘಾತದಿಂದರೆ ಸುರುಳ್ತರೆ ವಾಜಿಖುರ ಪ್ರಘಾತದಿಂ ಗಿರಿ ನೆಲೆ ನುಲ್ಲೆ (ಕುಸುಮಾ. ೪-೧೩). [ಸುರುಳ್‌₁ + ತರ್]

ಸುರುಳ್ದು 'ಸುರುಳ್‌₁' ಪರಾ.

ಸುರುಳ್ದೆಗೆ (ಕ್ರಿ). ಸುರುಳಿಯನ್ನು ಬಿಚ್ಚು : ಬಳಿಕೊಂದುತ್ತಮಪಟದ ಸುರುಳ್ದೆಗೆಯುತ ಮುಖವಸ್ತ್ರವನು (ಜಯಕಾ. ೩-೭). [ಸುರುಳ್‌₂ + ತೆಗೆ₁]

ಸುರುಳ್ದ್ 'ಸುರುಳ್‌₁' ಪರಾ.

ಸುರೂಪ (ಗು). ೧. ಅಂದವಾದ; ಸುಂದರವಾದ : ಸುರೂಪ ಸುರಸುಂದರೀ ಜನಮನಸರೋಜಾಕರೈಕರವ್ಯಸನಿಶಂ ಜಿನೇಂದ್ರಪದಪದ್ಮಸೇವಾರತಂ (ವರ್ಧಪು. ೧೩-೩೦). (ನಾ). ೨. ಒಳ್ಳೆಯ ರೂಪು ,— ಚೆಲುವು. [ಸಂ.]

ಸುರೂಪವೃತ್ತಿ (ನಾ). ಚೆಲುವು; ಸೌಂದರ್ಯ: ಪುಷ್ಪಸಾಯಕಂಗಿಂದೊಳ ಸೋರ್ದುದೇಸುವೆಸನಿಂದು ಸನಾಭಿಜನಕ್ಕೊಡರ್ಚತಾನಂದ . . . ಸುರೂಪವೃತ್ತಿ ದೂರವೆತ್ತುದು ನಾಡೆಯುಮಂದು ನೋಡಿದರ್ (ಚಂದ್ರಪ್ರ. ೬-೬೯). [ಸಂ.]

ಸುರೂಪಿ (ನಾ). ಒಳ್ಳೆಯ ರೂಪವುಳ್ಳವನು; ಸುಂದರ : ಸುರೂಪಿಗಳಲ್ಲಿಯ . . . ಚಾಗಿವ್ಯಂದವಲ್ಲಿಯ ಎನೆ ಸಾರಮಂದಿನೆಗಮಾ ಮಹಿ ಪೋಲ್ವುದು ಭೋಗ ಭೂಮಿಯಂ (ಪುಷ್ಪಸು. ೯-೧೬); ಆ ಗಾಡಿಯಲ್ಲಿ ಕುರೂಪಿಗಳು – ಸುರೂಪಿಗಳು ಬಡವರು – ಧನಿಕರು . . . ಕುಳಿತಿದ್ದರು (ರಾಮಾನ. ೧೧೧). [ಸಂ. ಸುರೂಪಿನ್]

ಸುರೂಪೆ (ನಾ). ಒಂದು ಬಗೆಯ ಮರ; ಚನ್ನಂಗಿ : ಸುರೂಪೆಯ ಪಾಕ್ಕಯ . . . ಕಪೋತದ ಬೊಟ್ಟಿನ . . . ಭೂರುಹಮೊಪ್ಪುಗುಮಾ ವನಾಂತದೊಳ್ (ರಾಜಶೇ. ೫-೩೭). [ಸಂ. ಸುರೂಪಾ]

ಸುರೆ (ನಾ). ಹೆಂಡ; ಮದ್ಯ: ಸುರೆಯಂ ಸೊರ್ಕಂ ಸುರೋರ್ವೀರುಹ ಕಿಸಲಯದಿಂ ರಾಗಮಂ . . . ತಾಳ್ದಿ (ಕಾದಂಪು. ೫೫೬); ತಾಳಮರದ ಕೆಳಗೆ ಒಂದು ಹಾಲ ಹರವಿಯಿರ್ದೊಡೆ ಅದ ಹಾಲ ಹರವಿಯೆನ್ನರು ಸುರೆಯ ಹರವಿಯೆಂಬರು (ಬಸವ. ೯೦); ನರಕಪಾಲದೊಳು ಸುರೆಯೆಱೆದು ಕುಡಿಯುತ ತೆಂಕಮುಖನಾಗಿ ಹೋಹೆಂ (ಪಚಕಾ. ೨-೨೨). [ಸಂ. ಸುರಾ]

ಸುರೆಗುಡಿ₁ (ಕ್ರಿ). ಹೆಂಡವನ್ನು ಕುಡಿ; ಮದ್ಯಪಾನಮಾಡು : ಸುರೆಗುಡಿವ ಮೊಗಮದಾಗಳ್ ನಿರುತಂ ಸಲೆ ಗುದ್ಯಿವಕ್ಕಿಯಾದುದು . . . ಧರೆಯೊಳಗಂ (ಪಾಲಾಸ್ಯ. ೧-೨-೨೪). [ಸುರೆ + ಕುಡಿ₁]

ಸುರೆಗುಡಿ₂ (ನಾ). ಹೆಂಡ ಕುಡಿಯುವವನು; ಮದ್ಯಪಾನಿ : ಪರಾಪೇಕ್ಷಣದಿಂದ ದ್ರವ್ಯವ ತಂದು ಗುರುಲಿಂಗಜಂಗಮಕ್ಕೆ ಮಾಡಿಹೆವೆಂದು ಮಱೆಯಲ್ಲಿ ಒಡಲ ಹೊರವ ಸುರೆಗುಡಿಗೆ ನೆಜೆ ಭಕ್ತಿ ವಿತಕ್ಕೆ (ಸರ್ವಜ್ಞ. ೧೯೦-೭೮೮). [< ಸುರೆಗುಡಿಹಿ]

ಸುರೆಗುಡಿಹಿ, ಸುರೆಗುಡುಹಿ (ನಾ). = ಸುರೆಗುಡಿ₂ : ಸುರೆಗುಡಿ[ಪಾಠಾಂ. ಡು]ಹಿಗಳ ಮಾಹು ಮಂಜಿನ ಹಲಗೆಯ ಬಿಸಿಲಂಬು ತಾಗಿದಂತಾಯಿತ್ತು (ಕೋಲಶಾಂ. ೧೨-೫೫). **ಸುರೆಗುಡುಹಿ** : ಬಿಡು ಸೆರೆಯನವಗಡೆಯತನವೆಮ್ಮೊಡನೆ ಸಲ್ಲದು ಸೂಳೆಯರ ಸುರೆಗುಡುಹಿಗಳ ರಸವಾದಿಗಳ ಸೇರುವೆಯಲೊಪ್ಪುವುದು (ಕುವಾಶ. ೨೦-೨೭).

[ಸುರೆ + ಕುಡಿಹಿ]

ಸುರೆಗುಡುಹಿ 'ಸುರೆಗುಡಿಹಿ' ನೋ.

ಸುರೇಂದ್ರ (ನಾ). ದೇವತೆಗಳ ಒಡೆಯ; ದೇವೇಂದ್ರ: ಸುರೇಂದ್ರಪರಿಪೂಜಿತ ಸುಗುಣರಾಜಿ ವಿಭ್ರಾಜಿತೆ (ರಾಜಶೇ. ೩-೧೧೬). [ಸಂ.]

ಸುರೇಂದ್ರಜ (ನಾ). ದೇವೇಂದ್ರನ ಮಗ; ಅರ್ಜುನ : ಸುರೇಂದ್ರಜ ಶರಾಸನ ಪ್ರಹತಿ ಸಾಂಖ್ಯ ಹಸ್ತಚ್ಯುತಸ್ಫುರದ್ಧನಶಿಲಾಹತಿಪ್ರತತಿಗಳ್ಳದೆ (ವೃಷಪ. ೧೦-೧೦೦). [ಸಂ.]

ಸುರೇಂದ್ರಜಿತ್ತು (ನಾ). ಇಂದ್ರನನ್ನು ಗೆದ್ದವನು; ಗರುಡ : "ವಿಹಂಗರಾಜ: . . . ಸುರೇಂದ್ರಜಿತ್ . . . ಈ ೧೦ ಗರುಡನ ಪೆಸರ್" (ಹಲಾಯು. ೬-೩೧).

[ಸಂ. ಸುರೇಂದ್ರಜಿತ್]

ಸುರೇಂದ್ರತ್ವ (ನಾ). [ಜೈನ] ಸಪ್ತಪರಮಸ್ಥಾನಗಳಲ್ಲಿ ಒಂದು ; ಇಂದ್ರಪದವಿ: ಸಜ್ಜಾತಿ ಸದ್ಗೃಹಿತ್ವ ಪರಿವ್ರಾಜ್ಯಪದ ಸುರೇಂದ್ರತ್ವ ಸಾಮ್ರಾಜ್ಯ ಪರಮಾರ್ಹಂತ್ಯ ಪರಿನಿರ್ವಾಣಮೆಂಬೇಳುಂ ಪರಮಸ್ಥಾನಂ (ಆದಿಪು. ೧೫-೧೭ ವ). [ಸಂ.]

ಸುರೇಂದ್ರಧನು (ನಾ). ಇಂದ್ರಚಾಪ; ಕಾಮನ ಬಿಲ್ಲು : ನವರತ್ನೋತ್ಕರದಿಂ ಸುರೇಂದ್ರಧನುವಂ . . . ಮಿಗುವ ಚಾತ್ಕಶ್ವಂಗಳಂ (ಪುಷ್ಪಪು. ೨-೫೮). [ಸಂ.]

ಸುರೇಂದ್ರಾರ್ಚಿತ (ನಾ). ದೇವತೆಗಳಿಂದ ಪೂಜಿಸಲ್ಪಡುವವನು; ಬೃಹಸ್ಪತಿ : ಚಾಂದ್ರಿಯೊಳೊಡಗೂಡಿದ . . . ಸುರೇಂದ್ರಾರ್ಚಿತನಿಂದ ಗೀತವಿದನಕ್ಕುಮವಂ (ಜಾತಕ. ೧೫-೪). [ಸಂ.]

ಸುರೇಂದ್ರಾಶೆ (ನಾ). ಇಂದ್ರನ ದಿಕ್ಕು; ಪೂರ್ವದಿಕ್ಕು : ಸಭೆಯನೆಟ್ಟಂ ತುಂಗವಂಶ ಸುರೇಂದ್ರಾಶಾದಂತಿಬಲಂ ಜಿತಾಹಿತಬಲಂ ದುರ್ವಾರ ಬಾಹಾಬಲಂ (ಪಂರಾಮಾ. ೫-೮೩); ಪುಟ್ಟೆ ಸುರೇಂದ್ರಾಶೆಗೆ ರಾಗಂ (ಪುಷ್ಪಪು. ೮-೨೩).

[ಸಂ. ಸುರೇಂದ್ರಾಶಾ]

ಸುರೇಖೆ (ನಾ). ಚೆಲುವಿನ ಮಾಟ; ಆಕಾರಸೌಷ್ಠವ : ಗುರುಶಿಷ್ಯಸಂಬಂಧ ಲೆಕ್ಕಣಿಕೆಯೊಳಡಗಿದ ಸುರೇಖೆಯ ಭಿತ್ತಿಯಂತಿರಬೇಕು (ವೋಳಿಮಾ. ೧೫೮-೫೯೫); ಸುಲಲಿತದ ಮುಖರಸದ ಸೌಷ್ಠವದಲಸಭಾವದ ವಿಭ್ರಮದ ನಿಶ್ಚಲದ ನೋಟದ . . . ನಿಜಸುರೇಖೆಯ ಲಲನೆಯಾ ಪರಿಯಿಂದ ನೃತ್ಯವ ಸಲಿಸೆ (ಬಸಪು. ೧೨-೪೫); ಸೂತರುರ ವಣಗಳ ಸುರೇಖೆಯ ಗತಿಯ ವಾಜಿಯ ರಥವ ನೋಡಿದರು (ಕುವ್ಯಾಉ. ೧೧-೧೭).

[ಸಂ. ಸುರೇಖಾ]

ಸುರೇಭ (ನಾ). ಇಂದ್ರನ ಆನೆ; ಐರಾವತ: ಸುರೇಭಮನಭ್ರಮೂಗಜಸ್ತ್ರೀ ರಮಣೇಚ್ಛೆಯಿಂದೆಳಸುವಂತೆ (ಶಾಂತಿಪು. ೬-೨); ಸುರೇಭಕಂದರದೊಳಿರ್ದ ಸಹಸ್ರ ವಿಳೋಚನಂ ಮನಂಗೊಳಿಸಿದಂ (ಜಗವಿ. ೧-೩೯). [ಸಂ.]

ಸುರೇಭೇಂದ್ರ (ನಾ). = ಸುರೇಭ: ತುಹಿನಕರಸುರೇಭೇಂದ್ರನೀಹಾರ ತಾರಾಚಳತಾರಾನೀಕ (ಸೌಂದ. XX, ೨೧-೩೫; 1019). [ಸಂ.]

ಸುರೇಶ್ವರ (ನಾ). ೧. ದೇವತೆಗಳ ಒಡೆಯ ; ದೇವೇಂದ್ರ : ನಿನ್ನಂತೆ ಸುರೇಶ್ವರ ನುತ್ಸನ್ನಮಹೈಶ್ವರ್ಯನೆಂಬುದುಂ (ಕವಿರಾ. ೩-೮೭); ಸುರೇಶ್ವರಂ ವಿಲೋಕನದಿಂ . . . ನೆರೆದರೇಂ ಸಲೆ ಮೇಘರಥಂ ಸಪುಣ್ಯನೋ (ಶಾಂತಿಪು. ೯-೪೩). ೨. ಶಿವ; ಈಶ್ವರ. [ಸಂ.]

ಸುರೋರ್ವಿಜ (ನಾ). ದೇವಲೋಕದ ಮರ; ಕಲ್ಪವೃಕ್ಷ: ತ್ರಿದಶಜನರ್ಗ ದೀವುದೆರೆದರ್ಥಮನೈದೆ ಸುರೋರ್ವಿಜಂ ಸಮಂತಿದು ಬಿಡದೊಂದೆ ಕಾವ್ಯನವಕಲ್ಪಕುಜಂ (ರಾಜಶೇ. ೧೪-೧೭೪). [< ಸಂ. ಸುರೋರ್ವೀಜ]

ಸುರೋರ್ವೀಜ (ನಾ). = ಸುರೋರ್ವಿಜ : ಸುರೋರ್ವೀಜಮಂ ಶೈಲಶೃಂಗಸ್ಥಿತ ಗರ್ಜತ್ಸಿಂಹಮಂ ಸ್ವಪ್ನದೊಳತಿ ಮುದದಿಂ ದೇವಕೀದೇವಿ ಕಂಡಳ್ (ಜಗವಿ. ೨-೭೬).

[ಸಂ.]

ಸುರ್ಕಿ, ಚುರ್ಕಿ, ಸುರಕಿ, ಸುರುಕಿ (ನಾ). ಇಟ್ಟಿಗೆ ಚೂರು ಸುಣ್ಣ ಬೆರಸಿ ಮನೆಯ ತಾರಸಿಯ ಮೇಲೆ (ನೀರು ಸೋರದಂತೆ) ಹಾಕುವ ಒಂದು ಬಗೆಯ ಗಾರೆ : ಗಾರೆಯನ್ನು ಸುಣ್ಣ ಇಲ್ಲವೇ ಸಿಮೆಂಟನೊಂದಿಗೆ ಸುರ್ಕಿ, ಮರಳು ಮೊದಲಾದುವನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಯಾಂತ್ರಿಕವಾಗಿ ಬೆರಸಿ ತಯಾರಿಸುತ್ತಾರೆ (ಶಿಲ್ಪನಾ. ೨೮೯). **ಚುರ್ಕಿ** : 'ಚುರ್ಕಿಗಾರೆ' ಪರಾ. **ಸುರಕಿ** : ಸುಣ್ಣ – ಸುರಕಿ ಇತ್ಯಾದಿಗಳ ಜಯಯಾತ್ರೆಯನ್ನು ವಸುಂಧರೆ ಯಾವೆಡೆಯೂ ತಡೆದಿಡಲಾರದೆ ಇದ್ದಾಳೆ (ನಿಬಂಧ. I, ೬೭). **ಸುರುಕಿ** : ಇಟ್ಟಿಗೆ, ಸುರುಕಿ, ಸಲಾಕಿ, ಹಲಗೆ, ಮರಳು (ನಿಬಂಧ. ೨೮೪). [<- ತಮಿ. ಚುರ್ಕ್ಕಿ = ಇಟ್ಟಿಗೆಯ ಪುಡಿ]

ಸುರ್ಕಿಗಾರೆ, ಚುರ್ಕಿಗಾರೆ (ನಾ). = ಸುರ್ಕಿ : ಈಚೆಗೆ ಸುರ್ಕಿಗಾರೆಗೆ ಬದಲಾಗಿ ಸಿಮೆಂಟ್‌ಗಾರೆಯ ಉಪಯೋಗವು ಹೆಚ್ಚುತ್ತಿದೆ (ಶಿಲ್ಪನಾ. ೨೮೦). **ಚುರ್ಕಿಗಾರೆ** : ಮಾಳಿಗೆಗೆ ಚುರ್ಕಿಗಾರೆಯನ್ನು ಹಾಕದಿದ್ದರೆ ನೀರು ಇಳಿಯುತ್ತದೆ (ರೂಢಿ).

[ಸುರ್ಕಿ + ಗಾರೆ]

ಸುರ್ಕು$_1$, ಸುಕ್ಕು$_1$ (ಕ್ರಿ). ೧. ಕುಗ್ಗು; ಸಂಕುಚಿತವಾಗು : "ಸುರ್ಕು – ಸಂಕೋಚೇ (ಕುಗ್ಗು)" (ಶಮಧಾ). ೨. ಕೊಂಕು : ಸುರ್ಕುವ ಕುರುಳ್ (ಶಬ್ದಾನು. ೯೬ ಪ್ರಯೋ). ೩. ಅಂಜು; ಭಯಪಡು : ಹುತವಹಶಿಖಾವಳಿಗೆ ಸುಗಿದು ಸುರ್ಕುವಂತಿರೆ (ವರ್ಧಪು. ೬-೨೩ ವ); ಪಂಬಲಿಸುತುಂ ಸುರ್ಕುತುಂ ಕಂಪಿಸುತೆ . . . ಬೇಳಾದನಾ ಭಕ್ತವರ್ಯಂ (ವೃಷಪ. ೩೦-೩೧); ಸಂಗರದೊಳ್ ಬಂಗಂಬಟ್ಟುದರ್ಕ ಸುರ್ಕದ (ಚಕವಿ. ೨-೫೪). ೪. ಮಂಕಾಗು; ನಿರುತ್ಸಾಹಗೊಳ್ಳು : ಸಾಯಕಂ ನಡೆ ನೊಂದೆಯ್ದೆ ಸುರುಳ್ಳುರುಳ್ದ ತುರಗಂ ಸುರ್ಕಿರ್ದ ಸೂತಂ (ಪಂಪಭಾ. ೧೦-೯೧); ಕವಿತಾನೀತಿಗೆ ಬಾಳ್ವೆವೆಂದೆ ಸುನುಜರ್ ಕೊಂಕಿಟ್ಟರಿಂತೆಂದು ಸುರ್ಕುವನಾ ಬ್ರಹ್ಮನ ತಿಟ್ಟ (ಸಂಸವ. ೧೫-[illegible]). **ಸುಕ್ಕು$_1$** : ೨. ಪೊಳೆವಲರ್ಗಣ್ಣ ನೀಳ್ದ ನಿಡುಪುರ್ವಿನ ಸುಕ್ಕಿದಮರ್ಕೆ ವೆತ್ತ ಕುಂತಳದ . . . ಅಂಗನಾವಳಿ (ಧರ್ಮಾಮೃ. ೧೩-೧೬). ೪. ವೀರಾಭ್ಯುದಯ ಕೈಸೆಜೆಯೋಯ್ದು ಸುಕ್ಕಿತು ಮನದ ಸುಮ್ಮಾನ (ಕುವ್ಯಾಭೀ. ೧೦-೧೩); ಚರಣಂಗಳಿಂದರೆಯ ಸುಕ್ಕುವರ್ ಕಕ್ಕುವರ್ ಮೂಗಿನಿಂ ಶೋಣಿತವನು (ಚಟಪು. ೨೮-೨೬). ೫. ಒಣಗು; ಶುಷ್ಕವಾಗು : ಹರಶರಣರಿಗೆ ಮುಂಬರಿದು ನೀಡರುಯೆಂದು ಕೊರಗಿ ಕೋಪದಿ ಸುಕ್ಕೆ ದ್ರಾಕ್ಷಿ (ಅಮುಸಾಂ. ೭-೫೦). ೬. ಸುಕ್ಕಾಗು; ಮುರುಟಿಕೊಳ್ಳು: ಕಾಯಿ ಸುಕ್ಕದಂ[ಪಾಠಾಂ. ಸುಕುವಂ]ತೆ ಅದಕೆ ಬಾಳೆಯ ಪಟ್ಟೆಯಂ ತುಂಬಿ (ಸೂಪಶಾ. ೫-೨೫). ೭. ತೆರೆಗಟ್ಟು ; ಪದರವಾಗು : ತಲೆ ನಡುಗೆ ಸುಕ್ಕಿದ ಮೆಯ್ಯೊಳಂ ಜಗುಳ್ಚುಡುಪನೆತ್ತುತೆ ಮುರುಡುಗೋಲ್ವಿಡಿದು ತಡವರಿಸಿ ನಡೆವ ಮುದುಪಂ (ಚಟಪು. ೧೦-೭೭). 'ಸೊರಗು$_1$' ಹೋ.

ಸುರ್ಕರ್, ಸುಕ್ಕಿರ್ = ಮುರುಟಿಕೊಂಡಿರು : ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕರ್ಣ ಮಿಕ್ಕು ಮಾರ್ನುಡಿಯದೆ ಮೂಗುವಟ್ಟಿರು (ಪಂಪಭಾ. ೭-೩೩); ಅಭಿಮನ್ಯು ಮಂಜು ಪಾಯದ ತಾವರೆಯಂತೆ ಸುಕ್ಕಿರೆ (ಬಂಹಾ. ೯-೨೦ ವ); ಬಾಡಿ ಬಿಸುಟೆಲೆಯ ಗಳಿಗೆಯಂ ಸುಕ್ಕಿರ್ದಣಲೊಳಡಸಿ ನೆರೆದಲೆಗೆ ಮಸಿದೊಡೆದು . . . ಹಣ್ಣುಮುದುಕಿಸೂಳೆಯರೆಸೆದರು (ಚಟಪು. ೧೦-೭೬).

ಸುರ್ಕು$_2$, ಸುಂಕು$_1$, ಸುಕ್ಕು$_2$ (ನಾ). ೧. ಗುಂಗುರಾದುದು; ಕೊಂಕಾದುದು: ಕರೆದುದು ಕಣ್ಣ ಬೆಳ್ಪನಧರಂ ಕುರುಳೋಳಿಗೆ ಸುರ್ಕಿನೋಲಗಂ ಪರವುದು (ಶಮದ. ೨೨೫ ಪ್ರಯೋ). ೨. (ಶರೀರವು) ಸುಕ್ಕುಗಟ್ಟುವ ಒಂದು ಬಗೆಯ ರೋಗ: ಸುರ್ಕಲ್ತ್ ಧನುರ್ವಾತದ ತಕ್ಕನವೋಲ್ ತೆಗೆದುಮಂಗಮಂ ಪೆಱಗಣ್ಗ(ಣ್ಣು)ಂ ಪಕ್ಕದೊಳೆ ಶೂಲೆಗಳಲೆಗಳಕ್ಕುಂ ಕೆಂಪುಗುರ್ಗಳೊಳ್ ಬಸಿಱ್ ತೆಗೆದಿರ್ಕ್ಕುಂ (ಏಮವ. ೧೫-೪೨). ೩. ತೆರೆಗಟ್ಟಿರುವುದು ; ಪದರವಾಗಿರುವುದು. **ಸುಂಕು$_1$** : ೩. 'ಸುಂಕಿಡು' ಪರಾ. **ಸುಕ್ಕು$_2$** : ೩. ಶರೀರದಲ್ಲಿ . . . ಸುಕ್ಕುಗಳೆಲ್ಲದೆ . . . ಶಾಮವರ್ಣವಾದ ನೇತ್ರಗಳುಳ್ಳ ಗಜಗಳು ಮಂದ್ರಚಾತಿ ಗಜವನಿಸುವವು (ಸೌಗಂಧಿ. ೨೬೮-೧೧); ಹರಿಸವುಕ್ಕುವ ಮೊಗಕ್ಕೆ ಸುಕ್ಕು ತೆರತೆರೆಯಾಗೆ . . . ಕಡುಬೆನ್ನ ಹಣ್ಣುದುಕಿ ಶಬರಜ್ಜಿ ನಡುಗಿ ನಡೆದಳ್ (ಶ್ರೀರಾಮಾ. ೨೬೭-೧೦೪). ೪. ನಿರಿಗೆ ; ಪದರ : ಶಕ್ಕೆದುಱುಬಿನ ತೊಂಡಿಲು ಮಣಿಬಲೆ ಚೊಕ್ಕ ಬೊಟ್ಟಿಕ್ಕಿದ ಜವಕೆ ಹಿಕ್ಕಿ ಲೆಕ್ಕಿಸಿ ತಿದ್ದಿ ನಿಱ್ಪಿವಿಡಿದುಡಿಸಿದ ಸುಕ್ಕಿನಂಬರದೊಳೆಸೆದರು (ಭರಪ. ೩೧ ೪೧); ಶ್ರೀನಿವಾಸಯ್ಯ ಹಾಸಿಗೆಯ ಸುಕ್ಕು ಸರಿ ಮಾಡುತ್ತಿದ್ದ (ದೂಬೆಟ್ಟು. ೧೪).

ಸುಕ್ಕಾಗು = ಮುದುಡೆಯಾಗು; ಮುದ್ದೆಯಾಗು : ರೆಯಾನ್ ಬಟ್ಟೆಗಳು . . . ಬಟ್ಟೆ ಬೇಗ ಸುಕ್ಕಾಗುತ್ತದೆ (ಗೃಪವಿ. ೭೦). [< ಸುರ್ಕು$_1$]

ಸುರ್ಕುಂಗುರುಳ್, ಸುಕ್ಕುಂಗುರುಳ್, ಸುಕ್ಕುಂಗುರುಳು, ಸುಕ್ಕುಗುರುಳು (ನಾ). ಗುಂಗುರುಕೂದಲು : ಭೃಂಗಾವಳಿ ಸುಯ್ದೆ ಸಾರ್ವ ತೆಱದಿಂ ಸುರ್ಕುಂಗುರುಳ್ಮಾಲೆ ನೀಳ್ದುವು (ಮಲ್ಲಿಪು. ೪-೯೬); ಸುರ್ಕುಂಗುರುಳ ಸುಱಿಗುರುಳ ನಿಡುಗುರುಳು ರುಳಿಗುರುಳ್ ತುಂಬಿಗುರುಳ ಗೋಪಸ್ತ್ರೀಯರ್ (ಜಗವಿ. ೪-೧೨೫); ಗಣಾಂ

ವರಮಾದುದರ್ಕೆ – ಪುಟ್ಟುಂಗುರುಡಂ, ಸುರ್ಕುಂಗುರುಳ್ (ಶಮದ. ೧೭೦ ಪ್ರಯೋ). **ಸುಕ್ಕುಂಗುರುಳ್** : ಒಕ್ಕುದಿತೆಗಂಗಳಬಲೆಯ ಸುಕ್ಕುಂಗುರುಳವಳ ಪಲ್ಲವಾಧರ ದವಳಂ . . . ತಾಂ ತಕ್ಕೈಸಲು (ಸೂಕ್ತಿಸು. ೧೦-೨೫೮); ಚಂಪಕದ ನಿಳುಮಾಲೆ ನಳತೋಳು ನಿಮಿರೆ ಸುಕ್ಕುಂಗುರುಳ್ ಚಳಿಸಲಳಿವೆಣ್ಗಳುಱೆ ದಿಟ್ಟನಾರತಿ ಮುತ್ತನಾರತಿ ಯನೆತ್ತಿ (ಚತುಪು. ೨-೬೨). **ಸುಕ್ಕುಂಗುರುಳು** : ಸನ್ಮಾರ್ಗಸಂಪನ್ನಗಾಱಂಗ ಸುಕ್ಕುಂಗುರುಳ ಸತಿಯರೊಪ್ಪುವರು (ಎಱೆಪು. ೩-೨-೩); **ಮಡಕಿಳಿದ ಕುರುಳ ನಿಱಿಗುರುಳ ಸುಕ್ಕುಂ[ಪಾಠಾಂ. ಸೀರ್ಕುಂ]ಗುರುಳ ನಿಡಿಗುರುಳ** . . . ಕೋಮಲೆಯರಡವಿದಡೊದಗಿ ಬರುತಿರ್ದರು (ಚಪಪು. ೩೭-೪೬). **ಸುಕ್ಕುಗುರುಳು**: ಇಕ್ಕೆಲದೊಳು ಚಾಮರವನು ಬೀಸುವ ಸುಕ್ಕುಗುರುಳ ನೀಜೆಯರು (ನೇಮಿಪು. ೬-೯೦); ಜೇನುತುಪ್ಪವನೆಱೆದು ಸುಕ್ಕುಗುರುಳೆಳೆವಣ್ಣು ಮೋಹದಿಂ ತುತ್ತುಮಾಡುಗಿಪ ಸವಿ ಕಿಱಿದೆನಿಸುತ (ಗುರುಚಾ. ೭-೩). [ಸುರ್ಕು$_1$ + ಕುರುಳ್]

ಸುರ್ಕುಂಗುರುಳಿ (ನಾ). ಗುಂಗುರುಕೂದಲುಳ್ಳವಳು : ನಿಡುಗಣ್ಣೆ, ನಿಡುವರಲಿ, ಸುರ್ಕುಂಗುರುಳಿ, ಕರಿಕಿ, ಬಿಳಿಕಿ, ಮುದುಕಿ (ಶಬ್ದಾನು. ೧೯೪ ಪ್ರಯೋ).

[ಸುರ್ಕುಂಗುರುಳ್ + – ೪$_3$]

ಸುರ್ಕುಂಬುಗೆ (ನಾ). ಕುಗ್ಗಿದ ಮನಸ್ಸು; ಸಂಕೋಚಗೊಂಡ ಮನಸ್ಸು : ಕಿಱುಮೊಗದ ಸುರ್ಕುಂಬುಗೆಯ ಭಾವದಿಂ ನಿಂದಿರ್ಪುದುಂ (ರಾಮಾಶ್ವ. ೪೯-೧೭).

[ಸುರ್ಕು$_1$ + ಬಗೆ$_2$]

ಸುರ್ಕುಗಿವಿ (ನಾ). ಮಡಿಸಿಕೊಂಡಿರುವ ಕಿವಿ : ಸುರ್ಕುಗಿವಿ ಭೂಮಿಯೊಳಾಡಿಪ ಬಾಲವೊಪ್ಪೆ ಘರ್ಜಿಸಿ ಎಗೆ ಪಾರಿ ಮೇಲ್ಮರಿವ ಬಗ್ಗಮನಿಕ್ಕಿದನುಗ್ರಲುಬ್ಧಕಂ (ಶಬಶಂ. ೩-೫೩). [ಸುರ್ಕು$_1$ + ಕಿವಿ$_1$]

ಸುರ್ಕುಗೊಳಿಸು (ಕ್ರಿ). ಕುಗ್ಗುವಂತೆ ಮಾಡು; ಕುಗ್ಗಿಸು : ಓಲು ಮಾಡುವ ಕಾಲವೇಳಾಭಾತಿಯಂ ತಪ್ಪಿಸಿದೂ ನಿತ್ಯಪುನೀತ ಶೀಲಬ್ರತಚರಿಯೆಯಂ ಸುರ್ಕು[ಪಾಠಾಂ. ಸಿಕ್ಕು]ಗೊಳಿಸಿದೆಯೊ (ಬಸಪು. ೪೭-೧೨). [ಸುರ್ಕು$_2$ + ಕೊಳ್$_1$ + – ಇಸು$_3$]

ಸುರ್ಕುವೆಱು (ಕ್ರಿ). ಸುಕ್ಕಾಗು; ಮುದುಡು : ಏಳುತ್ತಂ ಮಲ್ಲನಲ್ಲಿಂ ಮಱಿಯ ಮರ್ದಿರೆ ಕಿಳ್ಳೊಟ್ಟೆಯೊಳ್ ಸುರ್ಕುವೆತ್ತಾ ಬಾಳಂ ಮೇಣ್ಬಳ್ಕೆ (ರಾಜೋ. ೯-೨೯).

[ಸುರ್ಕು$_2$ + ಪೆಱು$_1$]

ಸುರ್ಕುಸಿರ್ (ನಾ). ಕುಗ್ಗಿದ ಉಸಿರು : ಕಲಶಕುಚಂ ಕದಕ್ಕದಿಸೆ ಸುರ್ಕುಸಿರಿಂ ನಡುಗಿತ್ತು ಚಿತ್ತಂ (ಪಂಡಾಮಾ. ೧೧-೮೮). [ಸುರ್ಕು$_1$ + ಉಸಿರ್$_2$]

ಸುರ್ಕುಳಿ (ಕ್ರಿ). (ಕೂದಲಿನ) ಗುಂಗುರು ಇಲ್ಲವಾಗು : **ಸುರ್ಕುಳಿದುರುಳಿ** ಗುರುಳ್ ನಸುಸುರ್ಕಿದ ಕುಚಚೂಚುಕಂ ಬೆಳರ್ತಧರಂ . . . ಏಂ ನೃಪನ ಮನಮನಳವಡಿಸಿದುದೋ (ಆದಿಪು. ೧೧-೧೮೩). [ಸುರ್ಕು$_2$ + ಉಳಿ$_1$]

ಸುರ್ಚುರಿಕೆ (ನಾ). ಒಂದು ಬಗೆಯ ಬಳ್ಳಿ : ಕಡಿಗೆ ಕಾಗದೊಂಡೆ ಈಹದೊಂಡೆ . . . ಮಾರುಡ ಮದದಾನೆ ಸುರ್ಚುರಿಕೆ[ಪಾಠಾಂ. ಸುಬ್ಬುಗರ] ಕಬ್ಬಳಿ . . . ಅಡರ್ದುವು ಬಳ್ಳಿವಳ್ಳಿ ಬನದೊಳ್ (ಸೂಕ್ತಿಸು. ೩-೩೬). [< ಸುರಸುರಿಕೆ]

ಸುರ್ಟು 'ಸುರುಟು$_3$' ನೋ.

ಸುರ್ಬಡರ್ 'ಸುರ್ವಡರ್' ನೋ.

ಸುರ್ಬು 'ಸುರ್ವು$_3$' ನೋ.

ಸುರ್ಬುಗೊಳ್ 'ಸುರ್ವುಗೊಳ್' ನೋ.

ಸುರ್ಬುರು 'ಸುಬ್ಬುರು' ನೋ.

ಸುರ್ಬುರುಗೊಳ್ (ಕ್ರಿ). ದಟ್ಟವಾಗು; ಸೊಂಪಾಗು : ಧರೆ ಪೊಗೆಯಿತುವೊಡೆ ಪುಲ್ ಸುರ್ಬುರುಗೊಂಡೆಳದಳಿ ಮೇಣ್ ತಳರ್ತಸೆದಿರೆ . . . ಕೆಲಗೆರಡು ಪುರುಷದೊಳ್ ನೀರಕ್ಕುಂ (ಕೋಕೋಶ. ೫-೧೨). 'ಸುರ್ವು$_3$' ಪರಾ.

[ಸುರ್ಬುರು (< ಸುಬ್ಬುರು) + ಕೊಳ್$_1$]

ಸುರ್ಬುರುಬಾಲ (ನಾ). (ದಟ್ಟವಾದ) ಕೂದಲುಳ್ಳ ಬಾಲ : ಸುರ್ಬುರು ಬಾಲವಾಗೆ ಶಾನಕಂ ವಾಟ್ಕುಂ ಶುಭಪ್ರಾಪ್ತಿಯುಂ (ಕೋಕೋಶ. ೧೧-೧೦೧). 'ಸುಬ್ಬುರುವಾಲ', 'ಸುರ್ವು$_3$' ಪರಾ. [ಸುರ್ಬುರು (< ಸುಬ್ಬುರು) + ಬಾಲ್$_1$]

ಸುರ್ಬುವಜ್ಜೆ (ನಾ). ಒತ್ತೊತ್ತಾದ ಹೆಜ್ಜೆಯ ಗುರುತು : ಪಳಂಚ ಧೂಳಿವಿಡುತ್ತಿರ ಪೋಪ ಪೆರ್ಬುಲಿಗಳ ಸುರ್ಬುವಜ್ಜೆಗಳುಮಂ . . . ಕಂಡು (ಕುಸುಮಾ. ೧೪-೨೯ ವ).

[ಸುರ್ಬು (< ಸುರ್ವು$_3$) + ಪಜ್ಜೆ]

ಸುರ್ಮಾ 'ಸುರಮ' ನೋ.

ಸುರ್ಮಾಡ (ನಾ). ಒಂದು ಬಗೆಯ ತಾಳೆಮರ (?) : ಬರಗಾಲದ ಆಹಾರ . . . ಮೊಳಕೆಗಳು. – ೧ ಬದರಿನ ಮೊಳಕೆ, ೨ ಸುರ್ಮಾಡವೆಂಬ ತಾಳೇಮರದ ಮೊಳಕೆ (ಕಭಾಗ. ೧೧ ಪಠ). [?]

ಸುರ್ಮಾಪದ (ನಾ). ಒಂದು ಬಗೆಯ ಹಾಡು : ಇವನ ಮೀನಪನ್ನು ಬೋಯಿಗಳು ಹೊತ್ತುಕೊಂಡು . . . ವಾಡಿಕೆಯಾಗಿ ಹೇಳುವ ಬೆಸ್ತರ ಸುರ್ಮಾಪದವನ್ನು ಹೇಳಿಕೊಂಡು (ಸುಮಚ. ೩೩). [ಸುರ್ಮಾ? + ಪದ್ಯ]

ಸುರ್ಮು 'ಸುಱು' ನೋ.

ಸುರ್ವಡರ್, ಸುರ್ಬಡರ್ (ಕ್ರಿ). ಒತ್ತಾಗು ; ನಿಬಿಡವಾಗು : ತದಕಿನ ತಾಳ . . . ಮರಂಗಳ ಕೊಂಬುಗಳಂಬರಂಬರಂ ಪುದಿದು ಪೊದಲ್ದು ಸುರ್ವ[ಪಾಠಾಂ. ಬರ್ಬ]ದರೆ (ಲೀಲಾವ. ೬-೨೨; ಸೂಕ್ತಿಸು. ೩-೨೫ ನೋ); ಕುವಲಯನೇತ್ರೆ ಸುರ್ವಡರ್ದ ವೇಣ ಸುಕೋಮಳದೇಹದೀಪ್ತಿಸಂಭವ ವಿಲಸತ್ಪಯೋಧರಿಯೆನಿಪ್ಪುದಱಿಂ (ದಶಕು. ೧೨-೧೬೬). **ಸುರ್ಬಡರ್** : ಕಿಱುಪುವ ಕಿವಿ ಕಡುವೊಗರಂ ಪೆಱುವ ಮೊಗಂ ಸುರ್ಬಡರ್ದ ವಾಳಾಗ್ರಂ ಮುಂದುಱುವಾಯ್ದು ತವಕಮೊಪ್ಪುವ ಕುಱುಪಿನ ಕುದುರೆಗಳನಾರ್ದು ಬಿಟ್ಟುರ್ ಸುಭಟರ್ (ದಶಕು. ೨-೧೮). [ಸುರ್ವು$_2$ + ಅಡರ್$_1$]

ಸುರ್ವಾಲ್ 'ಸುರವಾರಿ' ನೋ.

ಸುರ್ವು$_1$ (ಕ್ರಿ). ಸೊಕ್ಕು; ಅಹಂಕಾರಪಡು : ಉರ್ವಿದನೆ ಕೊರ್ವಿದನೆ ಜಗದೊಳು ಜರ್ವಿದನೆ ಸುರ್ವಿದನೆ ಚರ್ವಿತಚರ್ವಣವನೊರ್ವರೊಳು ಗರ್ವಿಸಿದನೆ ನಿಗರ್ವಿತನು (ಸಾನಾಚ. ೮-೮ ವ); ನಿಚ್ಚಗಾಳಿಗದೊಳುಬ್ಬಿಗಂಬಟ್ಟು, ಸುರ್ವಿಯಬ್ಬಿಪ ಪರಿಜನಂಗಳಿಂ (ಪುಷ್ಪಸ. ೭-೭೬ ವ). [?]

ಸುರ್ವು$_2$ (ಕ್ರಿ). (ಹುಲ್ಲು, ಸಸ್ಯ ಮುಂತಾದುವು) ಸೊಂಪಾಗಿ ಬೆಳೆ ; ಒತ್ತಾಗಿ ಬೆಳೆ : ಮಾವುಗಳಿವ ರಸಾಸಾರದಿಂ ಕರ್ವುಗಳ್ ಸುರ್ವುದು ಸೊಂಕಿಂದೊಕ್ಕ ಸಾಲಿಂ ಬಳೆದು (ಎಕ. VII, ಶಿಕಾ. ೨೩೬-೭೩; 1174). [?]

ಸುರ್ವು$_3$, ಸುರ್ಬು (ನಾ). ೧. ದಟ್ಟಣೆ; ನಿಬಿಡತೆ: ಕಣ್ಗೆಸವೆಲೆ ವಳ್ಳಿಯಾಗರದಗುರ್ವು ತಮಾಳದ ಸುರ್ವು[ಪಾಠಾಂ. ಪುರ್ವು] ಸುತ್ತಲುಂ (ಸುಚಪ್ರ. ೯-೪೮); ದಿವಕ್ಕಡರಲೇಣಿಯಂ ಸಮೆಯಲುಂ ವಲಂ ಬಾಟ್ಕೆಯೆಂಬವೊಲ್ ಬೆಳೆದುನಿಂದ ಪೆರ್ವಿದಿರ ಸುರ್ವಗುರ್ವೆಲ್ಲಿಯುಂ (ಕಾವ್ಯಾವ. ೧೯೩); ಬೆಳೆದು ಪೊಂಬಸುರ್ವೆತ್ತ ಪತ್ರಂಗಳ ಸುರ್ವಿನಗುರ್ವನೊಳಕೊಂಡು (ಮಹಾನೇ. ೧೪-೧೨ ವ). **ಸುರ್ಬು** : ೧. ನಡುವೊಲಕ್ಕೆ ತೊಡವೆನಿಸಿ ಪರ್ಬಿಕೊಂಡಲುಗುವ ಸು[ಪಾಠಾಂ.ಪೆ]ರ್ಬು ಪುರ್ಬಿಕ್ಕು ವಂತಿರ್ದ ಪೆರ್ಬಟ್ಟೆಯ ಪುರ್ಬಿನೊಳ್ (ಲೀಲಾವ. ೫-೫೪ ವ). ೨. ಒತ್ತು ; ರಾಶಿ: ತನ್ನನುಚಿತಾವೇಗಕ್ಕಂ ಯಥಾಯಥೋದ್ಯೋಗಕ್ಕಂ ಮನದೊಳೆ ನಕ್ಕು ಕರುಳ ಸುರ್ಬಿಂ ಪುರ್ಬಿಂಗಿಲಿವ ಬೆಮರ ಬರಿವೊನಲಂ (ಲೀಲಾವ. ೬-೧೭ ವ). [< ಸುರ್ವು$_2$]

ಸುರ್ವುಗೆಡು (ಕ್ರಿ). ದಟ್ಟಣೆ ಅಳಿ,– ಹಾಳಾಗು : ಒಂದೊಂದಡಯೊಳುಡಿದು ವಲ್ಲಟಂಬಿರ್ದು ಸುರ್ವುಗೆಟ್ಟು ಪುಲ್ಲಳಿಂ ಪರ್ವಿದ ಮೆಯ್ಯ ತೀನ್ಗೆ ಪೆರ್ವುಲಿಗಳ್ ಪೊರಳ್ದು (ಚಂದ್ರಪ್ರ. ೫-೬೫ ವ). [ಸುರ್ವು$_2$ + ಕೆಡು$_1$]

ಸುರ್ವುಗೊಳ್, ಸುರ್ಬುಗೊಳ್ (ಕ್ರಿ). ಒತ್ತಾಗು; ನಿಬಿಡವಾಗು: ಪರ್ವಿ ಕೊರ್ವಿ ಸುರ್ವುಗೊಂಡ ಮಾಧವಿಯ ಪೊದಱು (ಪಂಚತಂ. ೨೬೧-೭); ಸುರ್ವುಗೊಂಡಿರ್ದ ವೆರ್ಮಳೆ (ಜೀವಸಂ. ೧೨೦-೧೧). **ಸುರ್ಬುಗೊಳ್** : ತರತರಂಗೊಂಡು ತುಱುಗಿ ಕವಲ್ದ ಕಿಱುಗೊಂಬುಗಳ ಪರ್ಬಿಂ ಸುರ್ಬುಗೊಂದು (ಲೀಲಾವ. ೫-೫೯ ವ); ತಳ್ಪಂಕಗೊಳ್ಳ ಸಮಯದೊಳ್ತುತ್ತುದಿವರಗಂ ಸುರ್ಬುಗೊಂಡು ಪರ್ಬಿದ ಕರ್ಬಳ್ಳಿಯ ವೆರ್ಬಳ್ಳ (ರಾಜಶೇ. ೫-೨೫ ವ). [ಸುರ್ಬು$_3$ + ಕೊಳ್$_1$]

ಸುಲಕ್ಷಣ (ನಾ). ೧. ಒಳ್ಳೆಯ ಗುರುತು; ಶುಭಲಕ್ಷಣ : ವರ್ಣ ತೋಭಿತದಲಂಕಾರದ ಸುಲಕ್ಷಣದ . . . ವಾಜಿಯಂ ಕಂಡು (ಚಮಿಭಾ. ೪-೮).

೨. ಸೊಗಸಾದುದು; ಚೆನ್ನಾದುದು: ಸುಲಕ್ಷಣವಾದ ತರಕಾರಿಗಳನ್ನೂ ಧಂಡಿಯಾಗಿ ಕೊಂಡೆವು (ಬಾಳಹೂ. ೬೦). [ಸಂ.]

ಸುಲಗ್ನ (ನಾ). ಒಳ್ಳೆಯ ಕಾಲ; ಸುಮುಹೂರ್ತ: 'ಸುಲಗ್ನಾಸ್ಸಾವಧಾನ, ಸುಮುಹೂರ್ತಾಸ್ಸಾವಧಾನ' ಎಂದು ಪುರೋಹಿತರೂ ಬ್ರಾಹ್ಮಣರೂ ಶಾಂತಿವಾಚನ ಮಾಡುತ್ತಿರಲು (ಶಾಂತಲಾ. ೧೦೮). [ಸಂ.]

ಸುಲತಾನ 'ಸುಲ್ತಾನ್' ನೋ.

ಸುಲತಾನಿ 'ಸುಲ್ತಾನೀ' ನೋ.

ಸುಲತಾನಿವರಹ (ನಾ). ಒಂದು ನಾಣ್ಯ : (ಕ).

[ಸುಲತಾನಿ (< ಸುಲ್ತಾನೀ) + ವರಹ]

ಸುಲತಾನಿಹಣ (ನಾ). = ಸುಲತಾನಿವರಹ : (ಕ).

[ಸುಲತಾನಿ (< ಸುಲ್ತಾನೀ) + ಹಣ (< ಪಣವು)]

ಸುಲತಾನಿಹರದಾರಿ (ನಾ). ಭೂಮಿಯ ಒಂದು ನಿರ್ದಿಷ್ಟವಾದ ಅಳತೆ : (ಕ).

[ಸುಲತಾನಿ (< ಸುಲ್ತಾನೀ) + ಹರದಾರಿ]

ಸುಲದಿ (ನಾ). (?): ಕರ್ನಾಟಕಾ ಬಂಗಾಳ ಕೈರಳ ಕಾಶ್ಮೀರ ಸಚರತಾರಾದಾ ಐವತ್ತಾರ್ರು ದೇಶಾಧೀಶ್ವರರಾದ ಅನ್ಯಿಜ ಸುಲದಿ ಕಂಬುಕಂಟಿ ಕುಲಿಶಾವನಶಿತ್ರಾ ನಂದಿಕೋಲು (ಎಕ. XVI, ಗುಬ್ಬಿ. ೭೪-೨೦; 1672). [?]

ಸುಲಭ (ಗು). ೧. ಸರಾಗವಾದ; ಕಷ್ಟವಲ್ಲದ. (ನಾ). ೨. ಸಲೀಸು; ಕಷ್ಟವಲ್ಲದುದು: ಹಾವಿನ ಕೊಡನು ದೋಷಿಗೆ ಸುಲಭವೇ (ಕುವ್ಯಾಮ್ಲೂ. ೩-೨೮); ಎಲೆ ಕಂಚವೀರಾಖ್ಯ ಕೇಳೀ ಮತಂ ನಮ್ಮ ಸುಲಭವಷ ವೀರಶೈವಾಚರಣೆಯಿಲ್ಲವೆ (ವೀಶೈಪು. ೫-೩-೧೨); ಸುಲಭವಲ್ಲದ ಸ್ಥಾನವನ್ನು ಹೊಂದಿ ಜಾರಿದುದರಿಂದ ಈ ಉಂಗುರವು ದುಃಖಪಡಿಸತಕ್ಕುದಾಗಿದೆ (ಶಾಕುಂತ. ೧೬-೧೦). ೩. ಅಲ್ಪತೃಪ್ತನಾದವನು: ಸುಲಭನಲ್ಲದ ಶಿಷ್ಯನ . . . ವಿಚಾರಿಸಿ ಮಾಡದುಪದೇಶ ಅಂಧಕನ ಕಯ್ಯ ಅಂಧಕ ಹಿಡಿದಂತೆ (ದೇದಾವ. ೧೨-೧೯). ೪. ಕಷ್ಟವಿಲ್ಲದೆ ದೊರಕುವವನು : ಸುಲಭನು ನೀನೆಂದು ನಿನ್ನ ಬಳಿಗೆ ಬಳಲಿ ಬಂದೆನೂ ದೊರಯೆ ಸುಲಭ ನೀನಾದರೆ ಒಲಿದು ಸಲಹಬೇಕೊ (ಪುರಂದ. ೨-೧೯೯-೨). ೫. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದದಲ್ಲಿ ಏಳು ಅಕ್ಷರಗಳುಳ್ಳ 'ಉಷ್ಣಿಕ್' ಛಂದಸ್ಸಿನ ಒಂದು ವೃತ್ತ : ನನಭವಯುತದಿಂ ವನರುಹವದನೇ ನಿನಗಱಿಪುವೆ ನಾಂ ಜನನುತ ಸುಲಭಂ (ಛಂದೋಂಬು. ೨-೮೯). [ಸಂ.]

ಸುಲಭಕೋಪ (ನಾ). ಸ್ವಲ್ಪಕಾರಣಕ್ಕಾಗಿ ಕೋಪಗೊಳ್ಳುವವನು : ಈತನು ಸುಲಭಕೋಪನಾದ ದೂರ್ವಾಸನು! (ಶಾಕುಂತ. ೪೬-೧೨). [ಸಂ.]

ಸುಲಭಕೋಪಿ (ನಾ). ಸ್ವಲ್ಪಕಾರಣಕ್ಕಾಗಿ ಕೋಪಗೊಳ್ಳುವ ವ್ಯಕ್ತಿ : ಸುಲಭ ಕೋಪಿಗಳು ಉದ್ರೇಕಸ್ವಭಾವವರು (ಪುನರು. ೫೫೨). [ಸಂ. ಸುಲಭಕೋಪಿನ್]

ಸುಲಭಗ್ರಾಹ್ಯ (ನಾ). ಕಷ್ಟವಿಲ್ಲದೆ ತಿಳಿಯುವಂತಹುದು: ಮಕ್ಕಳಿಗೆ ಸುಲಭಗ್ರಾಹ್ಯವಾಗಿ ಕವಿತೆಯು ಅವರ ಚಿತ್ತಕ್ಕೆ ಸಂತೋಷಕರವಾಗುವುದೆಂದು ನಾನು ತಿಳಿಯುತ್ತೇನೆ (ಕವಿಪು. ಪೀಠಿಕೆ). [ಸಂ.]

ಸುಲಭತೆ (ನಾ). ಕಷ್ಟವಿಲ್ಲದಿರುವುದು; ಹಗುರವಾಗಿರುವುದು: ಲಲನೆಯರ ಹೃದಯದವೊಲೀಕ್ಷಿಸೆ ನೆಲೆಯನೀಯದ ಕೃತಕಸರಸಿಯ ಸುಲಭತೆಗೆ ಸಹದೇವನಣ್ಣನು ಸೋತು ನಡೆತಂದ (ಕುಪ್ಯಾಅ. ೨೩-೧೬); ಕಲಿತಱಿವರಾ ಮುನಿಯ ಶಿಕ್ಷೆಯ ಸುಲಭತೆಯಲಪಿಳಾಸ್ತ್ರಶಸ್ತ್ರದ ವಿಲಸದಭಿರಂಜನೆಯ (ತೊರಕ. ೧-೧೨-೨). [ಸಂ. ಸುಲಭತಾ]

ಸುಲಭವಲೆ (ನಾ). ಒಂದು ಬಗೆಯ ಬಲೆ : ಸುಲಭದಲೆ ನೀರುವಲೆ ಶಶಕವಲೆ (ರುಕ್ಮಾಂಗ. ೧೦-೧೯). [ಸುಲಭ + ಬಲೆ]

ಸುಲಭಸಾಧ್ಯ (ನಾ). ಕಷ್ಟವಿಲ್ಲದೆ ಪಡಯಬಹುದಾದುದು : ಈ ಪ್ರಶ್ನೆಗಳಿಗೆ ಉತ್ತರ ಸುಲಭಸಾಧ್ಯವಾಗಿ ದೊರೆಯುವುದೂ ಇಲ್ಲ (ಪ್ರಾವಿವಿ. ೨೧). [ಸಂ.]

ಸುಲಭೆ (ನಾ). ಕಷ್ಟವಿಲ್ಲದ ದೊರಕುವವಳು : ಸುಲಭೆ ನಾ ನಿನಗಲ್ಲ ನಿನ್ನನು ಕೆಲರು ನಗುವರು ಪರದ ಸದ್ಗತಿ ತೊಲಗುವುದು ಬೇಡಕಟಯೆಂದಳು (ಕುಪ್ಯಾವಿ. ೨-೧೮).

[ಸಂ. ಸುಲಭಾ]

ಸುಲಭೋಪಾಯ (ನಾ). ಕಷ್ಟವಿಲ್ಲದ ಉಪಾಯ : ಇದನ್ನು ಪತ್ತಹಚ್ಚಲು ಸುಲಭೋಪಾಯವೊಂದು ಇದೆ (ದ್ರಾವಿವಿ. ೨೬೯). [ಸಂ.]

ಸುಲಲಿತ (ಗು). ೧. ಸುಂದರವಾದ; ಮನೋಹರವಾದ : ಸುಲಲಿತವಲ್ಗನದಿಂ ಕಮಳಲೋಚನಂ ಸುಱಿದು ರಂಗದೊಳ್ (ಜಗವಿ. ೬-೭೦); ಸುಲಲಿತ ಶೃಂಗಾರಾಮೃತ ಸಲಿಲಾಕರವೇಲೆ ಮದನವಿಜಯ ಮಹಾಮಂಗಲ . . . ಸುವರ್ಣಮಾಲೆಯೆಂಬಳ್ (ಚಂದ್ರಪ್ರ. ೨-೧೩). ೨. ಹೆಚ್ಚು ಸಂತೋಷದ; ಅತಿ ಆನಂದದ. (ನಾ). ೩. ಚೆಲುವು. ೪. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದದಲ್ಲಿ ಆರು ಅಕ್ಷರಗಳುಳ್ಳ 'ಗಾಯತ್ರಿ' ಛಂದಸ್ಸಿನ ಒಂದು ವೃತ್ತ : ಕುಲಿಶ ಭೂಯುಗ್ಮಂ ನೆಲಸಿದಂದಕ್ಕುಂ ಜಲಜಪತ್ರಾಕ್ಷೀ ಸುಲಲಿತಂ ವೃತ್ತಂ (ಛಂದೋಂಬು. ೨-೮೧). [ಸಂ.]

ಸುಲಲಿತಗುಣ (ನಾ). [ಕಾವ್ಯಮಿಾ] ಮಹಾಕಾವ್ಯದ ಲಕ್ಷಣಗಳಲ್ಲಿ ಒಂದು ; ಸುಕುಮಾರಗುಣ : ವಿಲಸಿತ ಸದಲಂಕಾರಾದಿ ಸಂಸಾಧಿತಾರ್ಥಂ . . . ಸುಲ [ಪಾಠಾಂ. ಳ]ಲಿತಗುಣ ನಾನಾವೃತ್ತ ಜಾತಿಪ್ರವೃತ್ತಾಸ್ಪಲಿತ ರಸವಿಶೇಷೋಪಾಶ್ರಯ ಶ್ರೀನಿವೇಶಂ (ಕವಿಪಾ. ೩-೨೧೪). [ಸಂ.]

ಸುಲಲಿತವಿದ್ಯೆ (ನಾ). ಒಳ್ಳೆಯ ವಿದ್ಯೆ; ಉತ್ತಮವಾದ ವಿದ್ಯೆ : ಎಲ್ಲಿ ಸುಲಲಿತ ವಿದ್ಯೆ ಬಹುಗುಣವೆಲ್ಲಿ ಗಣಕಾನಿಕರ ಮಣಿಗಣವೆಲ್ಲಿ ಗಜ ಜಾತ್ಯಶ್ವವೆಲ್ಲಿ . . . ಅಲ್ಲಿ ತನ್ನಾಧೀನಮಾಡಲು ಬಲ್ಲವನೆ ನೃಪನು (ಕುವ್ಯಾಉ. ೩-೭೪).

[ಸಂ. ಸುಲಲಿತವಿದ್ಯಾ]

ಸುಲಲಿತೆ (ನಾ). ೧. ಚೆಲುವೆ; ಸುಂದರಿ: ತೋಳಬಂದಿಯ ಬೀಲಕಿಗೆ ಪುಲಿಯುಗುರ ಸುಲಲಿತೆಗೆ ನೇವಳದ ನಾಯಕಿಗೆ ರನ್ನದಾಳಿಯ ರಾಜಹಂಸೆಗೆ (ಗಿರಿಕ. ೩-೯೧ ವ). ೨. [ಸಂಗೀತ] ಒಂದು ರಾಗದ ಹೆಸರು : ಜಾಣೆ ವೀಣೆಯಂ ಶ್ರುತಿಗೈದು . . . ಸುಲಲಿತೆ ವರಾಳಿ ಕುಂತಳೆ ವಿಲಸತ್ಕಲ್ಯಾಣ ಶಂಕರಾಭರಣ ಸಮುಜ್ವಲವೇಣೆ ರಾಗರಂಜಿತೆ ಚಲಿಸದೆ ಪೊಸದೇಸಿ ಸೋಮಮುಖಿ ಬಾಜಿಸಿದಳ್ (ರಾಜಶೇ. ೧೧-೮೮). [ಸಂ. ಸುಲಲಿತಾ]

ಸುಲಾಕಿ 'ಸುಲಾಕು' ನೋ.

ಸುಲಾಕು, ಸುಲಾಕಿ (ನಾ). ಕುರುಹು; ಸೂಚನೆ : ಕಾರು ಅವನ್ದೇ ಆವ್ರೆ ನಾನು ಸುಲಾಕು ಕೊಡ್ತೀನಿ (ಭೀಮಕಾ. ೨೨೧). **ಸುಲಾಕಿ** : ಕಳ್ಳನ ಸುಲಾಕಿ ತಿಳಿಯಲಿಲ್ಲ (ರೂಢಿ).

[<— ಮರಾ. ಸುರಾಖ್]

ಸುಲಾಲಿತ (ನಾ). ಅಂದ; ಸೊಗಸು: ಜವನಿಕೆಯಂ ಪಿಡಿದು ಸಮ್ಮೇಳನ ದೊಳೆಯ್ತಂದು ನಿಂದು ಸುಲಾಲಿತಂ ಮಿಗೆ ನಟಿಸಿ ಪುಷ್ಪಾಂಜಲಿಯನಿತ್ತೆಸೆದು (ಬಸವು. ೧೨-೪೪). [ಸಂ.]

ಸುಲಾವಣೆ 'ಸುನಾವಣೆ' ನೋ.

ಸುಲಿ$_1$ (ಕ್ರಿ). ೧. (ಸಿಪ್ಪೆ, ತೊಗಟೆ, ಪೊರೆ, ಚರ್ಮ ಮೊದಲಾದುವುಗಳನ್ನು) ತೆಗೆ; ಎಡೆ; ಕಳಚು : "ಸುಲಿ — ಆವರಣಾಪನೋದನೇ" (ತಮಧಾ. ೫); ಭೀಮನನಿಬರ ಸದೆವ ತಾ ಸೊಪ್ಪಾಗಿ ಶತಕರ ತಿದಿಯ ಸುಲಿವನು (ಸಂಧವ. ೧೭-೮); ಸುಲಿದ ಬಾಳೆಯ ಹಣ್ಣೆನಂದದಿ ಲಲಿತವಹ ಕನ್ನಡದ ನುಡಿ (ಅಮೃತ. ೧-೫). ೨. (ಪೊರೆ, ಚರ್ಮ ಮೊದಲಾದುವು ತಾನಾಗಿ) ಕಳಚಿಕೊಳ್ಳು ; ಉಚ್ಚು : ದಂಡಕ ರಿಸಿಯರ ಮೆಯ್ಯ ತೊಗಲ್ ಪಾವಿನ ಪೆರೆ ಸುಲಿವಂತೆ ಸುಲಿದು ಪೋಗಿ (ವಡ್ಡಾರಾ. ೧೭೨-೨); ಘರ್ಮವ್ಯಾಜದಿನೋಸರಿಸಿದ ಪೆರೆ ಸುಲಿದ ಪಾವಿನಂತಾಕೃತಿಯಂ (ಶಾಂತಿಪು. ೪-೩೯). ೩. ಬಿರಿ; ಒಡೆ : ತಲೆಗಳ್ ಪಱಿಯೆ ಬರಿಗಳ್ ಮುಱಿಯೆ ತೊಡೆಗಳುಡಿಯೆ ಪುಣ್ಗಳ್ ಸುಲಿಯೆ (ಪಂಪಭಾ. ೧೧-೫೭ ವ). ೪. ಬಟ್ಟೆ ಮೊದಲಾದುವುಗಳನ್ನು ಬಿಚ್ಚು, — ತೆಗೆ: ಅಬ್ಬರವ ಕೇಳಿ ತಳವಾಜ ಉಟ್ಟ ಸೀರೆಯ ಸುಲಿದ (ಬಸವ. ೧೧೧); ಚಾರುಹತ್ತನುಟ್ಟ ವಸ್ತ್ರಮಂ ತೊಟ್ಟ ತೊಡಿಗೆಯಂ ಸುಲಿದುಕೊಂಡು (ಪುಣ್ಯಾಸ್ರ. ೪-೨೦ ವ); ದುರ್ಯೋಧನನು . . . ಸಭೆಯಲಿ ಸೀರೆಯನು ಸುಲಿಯಲ್ಕೆ (ಕುವ್ಯಾಸ. ೧೪-೧೩೨). ೫. (ಚರ್ಮವು) ಕಿತ್ತುಹೋಗು ; ತರಚು ; ಗಾಯವಾಗು: ಅಂತು ಬಿಟ್ಟು ಸುಲಿದ ಮೊಟಕಾಲ್ಗಳುಂ ಕಟಲ್ಪ ಪಲ್ಗಳುಂ (ಪಂಪಭಾ. ೨-೩೧ ವ);

ಮುಂಗೈ ಸುಲಿವನ್ನಂ ಕಾಮನೆಚ್ಚಂ (ಅರ್ಧನೇ. ೪-೧೪೫). ೬. (ಹಲ್ಲು ಮೊದಲಾದುವನ್ನು) ತಿಕ್ಕು; ಉಜ್ಜು; ತೊಳೆ: ತಮ್ಮ ಕೆಯ್ಯುಗಳನರ್ಚಿಸಿ ದರ್ಭಶಯನಂ ಮಾಡಿ ಪಲ್ಲಂ ಸುಲಿದು ಶಸ್ತ್ರಸಂಗ್ರಹರಾಗಿ (ಪಂಪಭಾ. ೧೦-೪೪ ವ); ಪಲ್ಲಂ ಸುಲಿಪೊಡಂ ಕಿವಿ ತೀಂಬೊಡೆ ತುಟಿಸುವೊಡಂ ಪುಲ್ಲಿಂದೆನಿತುಂ ಪ್ರಯೋಜನಮುಂಟು (ಪಂಚತಂ. ೩೪-೧೪); ಪಲ್ಲಂ ಸುಲಿಯದೆ ಮೀಯದೆ ಮಿಳ್ಕದೆ ಕುಲದಿಂ ಕೆಟ್ಟಪರನಣ್ಣ ನೀಂ ಮನ್ನಿಪುದೇ (ಧರ್ಮಾಮೃ. ೧-೧೧೩). ೭. ಕಿತ್ತುಕೊಳ್ಳು; ವಸೂಲಿ ಮಾಡು: ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತುಗಾಱನಂ ತಾಳಿಸು ತೇವನಂ (ಲೀಲಾವ. ೨-೧೦೭); ಸುಲಿವನ್ನರಾರ್ ಅವನಿಂದೆ ಆ ರಾಜದಂಡಮನ್ (ಬದ್ಧಪ್ರ. ೪೦-೮೭೫). ೮. ಬೇರೆಯವರ ಹಣ, ಆಭರಣ ಮುಂತಾದುವನ್ನು ಬಲಾತ್ಕಾರವಾಗಿ ದೋಚು ; ದರೋಡೆ ಮಾಡು : ನೆಱೆ ಸುಲಿವ ಖಳರ ಕಳಕಳದ ಕೋಳಾಹಳ (ಸಿದ್ಧರಾ. ೮-೨೯); ಜನಪ ಪಸಾಯಿತವ ದೂತಾಳಿಗಿತ್ತನು ಸುಲಿದರವದಿರು ರಾಯನೋಲಗವ (ಕುಮಾಎ. ೯-೯); ಕಾಲ್ಬಟ್ಟೆಯೊಳ್ ಸುಲಿದು ಪಾಂಥರ್ಕಳಂ (ದಿವ್ಯಚಿ. ೯-೪೦). ೯. ಉಂಟಾಗು; ಕಾಣಿಸಿಕೊಳ್ಳು : ಸುಲಿಯೆ ಬೆಮರೊಲೆಯೆ ನಡು ಕೊರಲುಲಿಯೆ . . . ನೆರೆದರ್ ನಲ್ಲರ್ (ಸೂಕ್ತಿಸು. ೧೪-೫೨).

[ದೇ. ॥ ತಮಿ. ಚೊಳಿ; ತುಳು. ಸುಲಿ, ತೊಲಿ]

ಸುಲಿ$_2$ (ನಾ). ೧. ಬಿಚ್ಚುವಿಕೆ: 'ಸುಲಿವಡೆ' ಪರಾ. ೨. ಸುಲಿಗೆ : 'ಸುಲಿಪಡು' ಪರಾ. [< ಸುಲಿ$_1$]

ಸುಲಿ$_3$ (ನಾ). ಹಸು; ಗೋವು: "ಸೆಳೆವುದಜೊಳ್ ದನದೊಳು ಸುಲಿ" (ಶಬ್ದಮಂ. ೧೦೬). [?]

ಸುಲಿಕೆ (ನಾ). ಸುಲಿದ ಭಾಗ; ನಾರು, ಸಿಪ್ಪೆ ಮುಂತಾದುವು: ನೆಯ್ದಿಲ ಸಣ್ಣಕಾವಿನೊಳಂ ಬಿಸತಂತುವಿನೊಳಂ ಕರ್ಬಾಳದ ಬಳ್ಳಿಯೊಳಂ ತಂಗಿನ ತಿರುಳೆಲೆಯ ಸುಲಿಕೆಯೊಳಂ . . . ಬೇಱೆವೇಱೆ ಸುತ್ತಿ (ಮಲ್ಲಿಪು. ೫-೪೯). [ಸುಲಿ$_1$ + - ಕೆ]

ಸುಲಿಗಬ್ಬು (ನಾ). ಸಿಪ್ಪೆತೆಗೆದ ಕಬ್ಬು : ನಾ ಪಂಚಕಂಧರನು ಲಂಕೇಶ ದಶವಕ್ತ್ರನಾ ಪುತ್ರ ವಂಶಜ ಮಹಾವೀರ ಸುಲಿಗಬ್ಬಿನೋಪಮರು ನೀವು (ಜಿನಮು. ೩೪-೩೩).

[ಸುಲಿ$_1$ + ಕಬ್ಬು (< ಕರ್ಬ್ಬು$_1$)]

ಸುಲಿಗೆ (ನಾ). ಬೇರೆಯವರಿಂದ ಹಣ, ವಸ್ತು ಮುಂತಾದುವನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುವುದು , — ದೋಚುವಿಕೆ: "ಸುಲಿಗಯಲ್ಲಿ ಯಾಕರುಸನ ನಖಕ್ಷತಗಳೊಳು ಜಿಹ್ವೆಯಿಂ ರಸವ ಬಿಡುವಲ್ಲಿಯುಗಿಯೆನಿಕ್ಕುಂ" (ಶಬ್ದಮಂ. ೮೨); ಬ್ರಿಟಿಷರ ಆಡಳಿತದಲ್ಲಿ ಹಿಂದಿನ ಮುಸಲ್ಮಾನರ ಕಾಲದಂತೆ ಕೊಲೆ ಸುಲಿಗೆಗಳಿಲ್ಲದೆ ದೇಶವು ಶಾಂತಿ ಸೌಖ್ಯಗಳ ತೌರೂರಾಗಿದೆ (ಯಕ್ಷಪ್ರ. ೩೯); ಕೊಲೆ ಸುಲಿಗೆ ಮೊದಲಾದ ಅನಾಚಾರ ಸ್ವೈರಾಚಾರಗಳಿಗೆ ಒಮ್ಮೆ ಆರಂಭವಾಯಿತೆಂದರೆ ಅವನ್ನು ತಡೆದು ಹಿಡಿಯುವುದು ಅಸಾಧ್ಯವಾಗುತ್ತದೆ (ಯಕ್ಷಪ್ರ. ೧೦೯).

[ಸುಲಿ$_1$ + - ಗೆ$_2$]

ಸುಲಿಗೆಗಾರ (ನಾ). ಬೇರೆಯವರಿಂದ ಹಣ, ವಸ್ತು ಮುಂತಾದುವನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುವವನು ; ದರೋಡೆಕೋರ : ಅವರ ಪ್ರಜೆಯಾದ ಕೇತಯನೆಂಬವನು ಹೆಸರುಗೊಂಡ ಸುಲಿಗೆಗಾರನೆಂಬುದು ಎಲ್ಲರಿಗೂ ಗೊತ್ತಿದೆ (ವೀರಬಂ. ೧೪). [ಸುಲಿಗೆ + - ಗಾರ (< - ಕಾಱ)]

ಸುಲಿಗೆಗಾರಿಕೆ (ನಾ). = ಸುಲಿಗೆ: ತಮ್ಮ ಪೂರ್ವಜರ ಸುಲಿಗೆಗಾರಿಕೆಯ ವೃತ್ತಿ ಬಾಬೂರಾಯರಲ್ಲೂ ಉಳಿದುಕೊಂಡಿದ್ದಿತು (ರತ್ನಗೂ. ೧೦). [ಸುಲಿಗೆಗಾರ + - ಇಕೆ]

ಸುಲಿಗೆವಡೆ (ಕ್ರಿ). ಸುಲಿಗೆಗೆ ಒಳಗಾಗು: ಧನಪತಿ ಸುಲಿಗೆವಡೆದಂತೆ . . . ಹಲವ ಹಂಬಲಿಸುತ್ತ ಹೆಂಪಳಿದಿರ್ದನಸುರೇಂದ್ರ (ತೊರರಾ. ೬-೨೬-೭); ಖಳನೊಡಲ ಕರಚರಣಹತಿಯಲಿ ಸುಲಿಗೆವಡೆದುದು ವಿಪಿನ (ನಿಘಾಗ. ೧೦-೧೫-೩೩).

[ಸುಲಿಗೆ + ಪಡೆ$_1$]

ಸುಲಿಗೆವೆಱು (ಕ್ರಿ). = ಸುಲಿಗೆವಡೆ: ಜಯಂಧರನೋಲಗದೊಳಿರ್ದಾಸ್ಥಾನ ಮಂಟಪಕ್ಕೆ ಸುಲಿಗೆ[ಪಾಠಾಂ. ಸುಲಿ]ವೆತ್ತಂತೆ ಬಂದಿರ್ದ ಪ್ರಧಾನವರ್ಗಮಂ ನೋಡಿ (ಪುಣ್ಯಾಸ್ರ. ೭-೫೩ ವ). [ಸುಲಿಗೆ + ಪೆಱು$_1$]

ಸುಲಿತಿನ್ (ಕ್ರಿ). ಸುಲಿಗೆ ಮಾಡು; ದರೋಡೆ ಮಾಡು: ಇಳೆಯಾಣ್ಮಂ ತನಗಲ್ತೆ ವೆಗ್ಗಳನೆನುತ್ತಂ ಪಾರುಪತ್ಯಂಗಳಂ ಖಳಗೀಯಲ್ ಸುಲಿತಿಂದು ರಾಜ್ಯವನಿತಂ . . . ಕಾಲಯಮನಂತತ್ಯುಗ್ರಮಂ ತಾಳ್ದಿದಾ ದಳವಾಯೇ ಬಳಿಮಾರಿಯೈ (ಸೋಮೇಶ. ೬೪).

[ಸುಲಿ$_1$ + ತಿನ್]

ಸುಲಿಪಡು (ಕ್ರಿ). = ಸುಲಿಗೆವಡೆ: ಬಟ್ಟೆಯೊಳ್ ಬರ್ಪಲ್ಲಿ ಬೇಡರಿಂ ಸುಲಿಪಟ್ಟ [ಪಾಠಾಂ. ಸುಲಿಸಿಕೊಂಡ]ನೆಂದುದು . . . ಉಂಟೋ ಇಲ್ಲವೋ ಪೇೞೆಂ (ಧರ್ಮಪ. ೪-೨೨ ವ). [ಸುಲಿ$_2$ + ಪಡು$_1$]

ಸುಲಿಪಲ್ 'ಸುಲಿವಲ್' ನೋ.

ಸುಲಿಪಲ್ಲು 'ಸುಲಿವಲ್' ನೋ.

ಸುಲಿಪಲ್ಬೆಳಗು (ನಾ). ಶುಭ್ರವಾದ ಹಲ್ಲಿನ ಹೊಳಪು; ದಂತಪ್ರಭೆ: ಮಿಸುಪ ಸುಲಿಪಲ್ಬೆಳಗೆಂಬ ಕಾರಮಿಂಚು (ಕಬ್ಬಿಗಾ. ೧೨೩).

[ಸುಲಿಪಲ್ (< ಸುಲಿವಲ್) + ಬೆಳಗು$_2$]

ಸುಲಿಪಾಕಲು (ನಾ). ಹೊಳೆಯುವ ಸುತ್ತುಗೋಡೆ , — ಪ್ರಾಕಾರ: ಆಕಾಶಕಡರಿ ಯುದ್ಧಕೆ ಪೋದಪನೊ ಎನಲನೇಕವಿಭವದೊಳು ಬಳಸಿದ ಪರಿಖೆಯಿಂದೆ ಸುಲಿಪಾಕಲಿಂ ದುರದೆ ರನ್ನದ ತೆನೆಗಳೆಸೆಯೆ ರಂಜಿಸಿ ತೋರ್ಪುದು ಪುರವರಂ (ಸಿದ್ರೇಪು. ೨-೨೨).

[ಸುಲಿ$_1$ + ಪಾಕಲು (< ಪಾಗಾರ)]

ಸುಲಿಯಿಸು, ಸುಲಿಸು (ಕ್ರಿ). ೧. ಸುಲಿದುಕೊಳ್ಳು; ಕಿತ್ತುಕೊಳ್ಳು: ಒಲಿಯದವನ ನತಿಚದುರಿಂದೊಲಿಯಿಸುವೊಲಿದ ಬಳಿಕ್ಕವನುಳ್ಳೊಡವೆಗಳಂ ಸುಲಿಯಿಸಿಕೊಂಡತಿದಾರಿದ್ರನುಮಾದವನಂ ನೀಂ ತಗುಳು (ಜಯಕಾ. ೧೪-೪೯). **ಸುಲಿಸು** : ೧. ಸುಲಿಸಿಕೊಳ್ಳಬಹುದು ಸುದ್ದಿ ಹೇಳಕೂಡದು (ಗಾದೆ). ೨. (ತೊಗಟೆ, ಸಿಪ್ಪೆ, ಚರ್ಮ ಮೊದಲಾದುವುಗಳನ್ನು) ತೆಗೆಯುವಂತೆ ಮಾಡು ; ತೆಗೆಸು : ಹರಿಯ ರಂಜಿಪ ತೂವಲನತ್ತಿ ಸುಲಿಸಿ ಗಿರಿಚಾವರಂ ಪೊದೆದು (ಶಾಸಂಚ. ೨-೧೭); ಎಲೆ ಪಾತಕಿ ನಿನ್ನ ದೆಸೆಯಿಂದ ಬಂದುದು ನೆಲದೊಳೆಮಗಪಕೀರ್ತಿ ಪಲವ ನುಡಿಯಲೇವುದು ನಿನ್ನ ತನುವನು ಸುಲಿಸಿದೊಡಳಲು ಪಿಂಗುವುದೆ (ಅಂಜಚಿ. ೩-೪೦). ೩. (ಬಟ್ಟೆ ಮೊದಲಾದುವುಗಳನ್ನು) ಬಲಾತ್ಕಾರದಿಂದ ಬಿಚ್ಚಿಸು, — ತೆಗೆಸು: ನಿರ್ಧೀತಿಯಲಿ ನಿಮ್ಮರಸಿಯುಟ್ಟುದನೀತ ಸುಲಿಸಿದನಿವನು ಸುಜನನೆ (ಕುಮಾಗ. ೫-೧೨); ಕಪಟದ ದಾಯದಲಿ ಸೋಲಿಸಿ ಯುಧಿಷ್ಠಿರರಾಯನರಸಿಯ ಸುಲಿಸಿತಕೆ ಫಲವಾಯ್ತೆ ಹೇಳು (ಕುಮಾಗ. ೮-೧೨). [ಸುಲಿ$_1$ + - ಇಸು$_3$]

ಸುಲಿವಡೆ (ಕ್ರಿ). ೧. ಪೋಪಾಕು ತೆಗೆ: ಕಂಡರ್ಗೆ ಕಾಕುಗಳು ತಟ್ಟುಗಳ ಘಟ್ಟೆಯರ ಹಿಂದು ಸರೆದುದು ನಾಡ ಮಲಧಾರಿಗಳ ಮೊತ್ತ ಸುಲಿವಡೆ[ಪಾಠಾಂ. ಡ]ದ ಮಲ್ಲರಂತೆ (ಸೋಮಚಿ. ೪-೪೦). ೨. ಕಳೆದುಹೋಗು ; ನಷ್ಟವಾಗು : ಜ್ವಲಿಸುವೊಡಲಿನ ಜೋಲ್ದಮ್ಮೆಗಳ ಸುಲಿವಡೆದ ಕಾಂತಿಗಳ ಮುಸುಡಿನಲಿಳಿವ ನಯನಾಂಬುಗಳ ನ್ಪಪರನಸುರಾರಿ ನೋಡಿ ತಲೆದೂಗಿದನು (ನಿಘಾಗ. ೧೦-೭೯-೩೭). ೩. (ಬಟ್ಟೆ ಮುಂತಾದುವನ್ನು) ಬಲಾತ್ಕಾರದಿಂದ ಬಿಚ್ಚುವಿಕೆಗೆ ಗುರಿಯಾಗು: ಕಮಲಮುಖಿ ಸುಲಿವಡೆದು ಲಕ್ಷ್ಮೀರಮಣ . . . ಎಂದೊಱಲಿದೊಡೆ ಸಂಜಯ ನೊಂದೆ ನಾನೆಂದ (ಕುಮಾಉ. ೫-೬). [ಸುಲಿ$_1$ + ಪಡೆ$_1$]

ಸುಲಿವಣ್ (ನಾ). ಸಿಪ್ಪೆಯನ್ನು ತೆಗೆದ ಹಣ್ಣು: ಅಪ್ಪ ಕೊಳ್ಳೆಲವೊ ಅಗ್ರಜ ಕೊಳ್ಳೊ ಹಿಂಡಿಯ ಸೊಪ್ಪ ಕೋ ಸುಲಿವಣ್ಗಳಿವೆ ಕೋ (ಮೋಹತ. ೧೮-೮೮).

[ಸುಲಿ$_1$ + ಪಣ್$_3$]

ಸುಲಿವಲ್, ಸುಲಿಪಲ್, ಸುಲಿಪಲ್ಲು, ಸುಲಿವಲ್ಲು, ಸುಲಿಹಲ್ಲು (ನಾ). ಚೊಕ್ಕಟಗೊಳಿಸಿದ ಹಲ್ಲು; ಶುಭ್ರಗೊಳಿಸಿದ ದಂತ: ಅಲರ್ಗಣ್ ಪೊಂಗಿದ ಲೋಳೆವಾಯ್ ನಗೆಮೊಗಂ ತೊಂಗಲ್ಗುರುಳ್ ಕೆಂದಳಂ ಸುಲಿವ[ಪಾಠಾಂ. ವ]ಲ್ ಸೋರ್ಮುಡಿ . . . ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂದಂ ಮಹೀವಲ್ಲಭಂ (ಕಾವ್ಯಾವ. ೨೦೬). **ಸುಲಿಪಲ್**: ಸುಲಿಪಲ್ ತಟ್ಟಲ ತಾರಕಾವಯವಮಂ ವೀಸಂ ಲಲಾಟಾಗ್ರದೊಳ್ ನೆಲೆಗೊಂಡೊಪ್ಪುವ ವೀರಪಟ್ಟಂ . . . ಪೋಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ (ಕಾವ್ಯಸಾ. ೫೨೧ ಶೂದ್ರಕ); ಸುಲಿಪಲ್ ಮಿಂಚಿನ

ಗೊಂಚಲುಟ್ಟು ದುಗುಲಂ . . . ಬೆಳ್ಸದನಂ ಕಣ್ಗೊಪ್ಪಿತಾ ಕಾಂತೆಯಾ (ಪಂಪಭಾ. ೧-೧೩೭); ಕಣ್ಗೊಳಿಪುವು ಯುವತಿಯ ಸುಲಿಪಲ್ಲುಮೆಸೆವ ಬಿಂಬಾಧರಮುಂ (ಕಾದಂಉ. ೧೫); ಮೆಱೆವ ನಾಸಿಕದ ತೊಳಗುವ ಸುಲಿಪಲ್ಲಳಿ ವಿಳಾಸಮಂ ತಳೆದ ಮುಖಮಂಡಲಂ (ನಂಬಿರ. ೪-೩೨). **ಸುಲಿಪಲ್ಲು** : ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ (ಮಹಾದೇ. ಬ. ೪೦-೬೭); ಎಡಗಱೆದೋಱುವ ಸುಲಿಪಲ್ಲು ಪೊಳೆವ ಪರ್ಜೆಡೆಯಲರ್ಮಾಲೆ ಹೊಂಗೆಜ್ಜೆ ಬಿಡಯವಿಲ್ಲದ ಹೊನ್ನಂಡೆಗಾತಿಯರು (ಮೋಹತ. ೧೪-೬೧). **ಸುಲಿವಲ್ಲು** : ಪಲ್ಲಕ್ಕಿ ಏಱಿದವರೆಲ್ಲಿಂದ ಬಂದಿಹರು ನೆಲ್ಲಕ್ಕಿಯಂತ ಸುಲಿವಲ್ಲ ಹಿರಿಯರು ನಲ್ಲಳಿಂದಲ್ಲ (ಸರ್ವಜ್ಞ. ೧೬೪೭). **ಸುಲಿಹಲ್ಲು** : ಬೆಣ್ಣೆ ಅಂತ ಮೈಯೋಳೆ ಎಣ್ಣೆ ತುರುಬೋಳೆ ಕೊಚ್ಚಕ್ಕಿ ಅಂತಾ ಸುಲಿಹಲ್ಲಿನೋಳೆ (ಗೌರಪ. ೭).

[ಸುಲಿ$_1$ + ಪಲ್]

ಸುಲಿವಲ್ಲ (ನಾ). ಒಂದು ಬಗೆಯ ಸಸ್ಯ: "ವಿತುನ್ನಂ, ಸುನಿಪಣ್ಣಕಂ — ೨ ನೀರುಚೆಂಚಲಿ, ಸುಲಿವಲ್ಲ" (ಸಿದ್ಧಾಂತಿ. ೧೫೬). [?]

ಸುಲಿವಲ್ಲು 'ಸುಲಿವಲ್' ನೋ.

ಸುಲಿಸು 'ಸುಲಿಯಿಸು' ನೋ.

ಸುಲಿಹ (ನಾ). ಸುಲಿದುಕೊಳ್ಳುವಿಕೆ; ಕೊಳ್ಳೆ; ದರೋಡೆ: "ಸುಗಿಪುವುಮೆನ ಪುಕಸುತಿಲಿಹಂ" (ರನ್ನಕಂ. ೪); "ಉಗಿಪದಂ = ಸುಲಿಹಂ" (ಶಮದ. ಪರಿ. ೨).

[ಸುಲಿ$_1$ + - ಹ$_3$ (< - ಪ$_3$)]

ಸುಲಿಹಕಾಱ (ನಾ). = ಸುಲಿಗೆಗಾರ : ಕೋನೆಕಾಱರ ಗುಡಿಗೆ ಪಣ ಸುಲಿಹಕಾಱರುಳಿಗೆ ಹಾಗ (ಪೊಂಕಶಾ. ೧೯೩೩, ಹಾವೇರಿ. ೬೦-೪೬; ?). [ಸುಲಿಹ + - ಕಾಱ]

ಸುಲಿಹಗೊಳ್ಳು (ಕ್ರಿ). = ಸುಲಿಗೆವಡೆ : ಈ ಗೌಡಂದಿರ ಸಂಪಾದನ ಸಂಚಿತಗಳನ್ನೂ ಸುಲಿಹಗೊಂಡು ಕೊಳ್ಳೆರುತ್ತಿರುವನು (ಮಂತ್ರಶ. ೬೯-೧೨).

[ಸುಲಿಹ + ಕೊಳ್ಳು$_1$ (< ಕೊಳ್$_1$)]

ಸುಲಿಹಲ್ಲು 'ಸುಲಿವಲ್' ನೋ.

ಸುಲಿಹಾಳೆ (ನಾ). "ಅಡಕೆ ಹಾಳೆ" (ಸೂಪಶಾ. ೬೯೯): ಬಾಳೆ ದೀಪದ್ರಾಕ್ಷೆ ಯರನೇಱಿಲಿಮ್ಮಾವು ದಾಳಂಬ ಬೇಲ ಖರ್ಜೂರ . . . ಮೇಳಗಳನಱಿದು ಸಕ್ಕರೆಯಿಕ್ಕಿ ಬಳಿಕ ಸುಲಿಹಾಳೆ[ಪಾಠಾಂ. ಸುಳಿಹಾಳೆ, ಸುಲಿಹಾಲೆ]ಗಳ ದೊನ್ನೆಯೊಳಗಿಟ್ಟು (ಸೂಪಶಾ. ೨-೩೨). [ಸುಲಿ$_1$ + ಹಾಳೆ$_1$ (< ಪಾಳೆ$_1$)]

ಸುಲು 'ಸುಲ್ವ' ನೋ.

ಸುಲುಗಳಸ (ನಾ). ತಾಮ್ರದ ಕಳಸ: ಜಪಾರುದ್ರಾದಿಯಾದ ಕೇಸಲದ ನಿಡುದಂಡೆಗಳು ಸುಲುಗಳಸ, ಕಿಸುಗೊಡೆ ತನಿ ಸಂಚೆವಣ್ಣದ ಪಳಯಿಗೆ ಮುಂತಾದುವು ಗಳಿಂದ ಅಲಂಕೃತವಾಗಿರುವ . . . ತುಂಗಮೂರ್ತಿ (ಮಂತ್ರಶ. ೧೦೯-೧೦).

[ಸುಲು (< ಸುಲ್ವ) + ಕಳಸ$_1$ (< ಕಲಸ)]

ಸುಲೋಚನ (ನಾ). ೧. ಸುಂದರವಾದ ಕಣ್ಣು. ೨. ಕಣ್ಣು : ನನ್ನ ಸುಲೋಚನಗಳು ಈ ಪ್ರೇಮಕಲಹವನ್ನು ಕಾಣಲು ಆತುರವುಳ್ಳವುಗಳಾದುವು (ಜಾಗಿನ. ೧೦೪). ೩. (ದೃಷ್ಟಿದೋಷಪರಿಹಾರಕ್ಕಾಗಿ ಹಾಕಿಕೊಳ್ಳುವ) ಕನ್ನಡಕ : ಮೂಗಿನ ಮೇಲಿನ ಸುಲೋಚನವನ್ನು ಸರಿಪಡಿಸಿಕೊಂಡು (ಕಂಕಕಾ. ೨); ವಿಲಾಯಿತಿ ಸುಲೋಚನ ಧರಿಸಿದರೂ ಕಣ್ಣಿಗೆ ಕಾಣಿಸದು (ನಿಬಂಧ. ೧. ೪೭೨). [ಸಂ.]

ಸುಲೋಚನಜಲ (ನಾ). ಕಣ್ಣೀರು; ಕಂಬನಿ: ಖಳಶಿರೋಮಣಿಗಳು ಮಹೀಶನ ನಿಳಯಕೈತಂದರು ಸುಲೋಚನಜಲವ ಸೆಱಗಿನೊಳೊರಸಿ ನುಡಿದರು ಖೇದವೇಕೆನುತ (ಕುಮಾಭಾ. ೧೭-೮). [ಸಂ.]

ಸುಲೋಚನಾಂಧಕ (ನಾ). ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡವನು; ಕುರುಡ : ಇನ್ನು ನೀನು ಸುಲೋಚನಾಂಧಕ ನಿನ್ನೊಡನೆ ಫಲವೇನು ಕದನಕೆ ಬನ್ನಿ ಬಿಡುಕುಳ್ಳವರನುತ ಗಜಱಿದನು ಸಹದೇವ (ಕುಮಾಸ. ೮-೪೨). [ಸಂ.]

ಸುಲೋವೆ (ನಾ). ಒಳ್ಳೆಯ ಸೂರು; ಉತ್ತಮವಾದ ಛಾವಣಿ : ನೀಲದಾ ಪರತರ ಜಂತೆ ಪಚ್ಚೆಯ ಸುಲೋವೆ ವೃಷಧ್ವಜ ಗೋಪುರ ಮುತ್ತಿನಾಲಕಂ ಮೆಱೆವ ಸುವರ್ಣದ ಪೌಳಿ (ಭೈರವು. ೮-೨೬). [ಸ್ಮ - + ಲೋವೆ]

ಸುಲ್ಗಿ (ನಾ). ಗೇಣಿದಾರನಿಗೆ ಸಲ್ಲುವ ಉತ್ಪನ್ನದ ಮೂರನೆಯ ಒಂದು ಭಾಗ ; ವಾರ : (ಕಸಂಗ್ರಾ. ೯೬). [?]

ಸುಲ್ತಾನ್, ಸುರತಾಲ, ಸುರತಾಳ, ಸುರತ್ರಾಣ, ಸುರಿತಾಣ, ಸುರಿತಾಳ, ಸುರಿತ್ರಾಣಿ, ಸುರುತಾಳ, ಸುಲತಾನ, ಸುಲ್ತಾನ (ನಾ). ಮಹಮ್ಮದೀಯ ದೊರೆ, — ರಾಜ: ಸುಲ್ತಾನ್‌ರವರು ಒಪ್ಪದೇ ಏನು? ಅವರನ್ನು ನಾನು ಒಪ್ಪಿಸುತ್ತೇನೆ (ದೌಲತ್. ೨೫೪). **ಸುರತಾಲ**: ಹಿನ್ದುರಾಯ ಸುರತಾಲ (ಮೃಅರಿ. ೧೯೨೯. ೯೦-೩೯; 1347). **ಸುರತಾಳ** : ಸುರೆಯ ತಾಳಿದನಾಗಿ ಸುರತಾಳನೆಂಬವಗೆ ಧರೆಯನಾಳುವ ಪಟ್ಟ ತ್ವರಿತವಾಗುವುದು (ಶರಲೀ. ೪೫೨-೭). **ಸುರತ್ರಾಣ** : ಧರೆ ಬೆಸಲಾದಂತೆ ಬಂದ ಸುರ[ಪಾಠಾಂ. ರು]ತ್ರಾಣನುರುಬಲಕಂಜದೆ (ಕುರಾಸಾಂ. ೧-೧೦೧). **ಸುರಿತಾಣ**: ಹೊಗಳುತಿರಲಾ ವಾರ್ತೆ ಸುರಿತಾಣ[ಪಾಠಾಂ. ಸುಲ್ತಾನ]ನು ಕೇಳೆ (ಗುರುಚಾ. ೧೧-೩೫); ವಿಜಯಾಪುರದ ಸುರಿತಾಣ ಮಹಮ್ಮದ ಪಾದುಶಾಹನೆಡೆಗೆ ನಡೆದು (ಚಕಪಂ. ೫೭-೬). **ಸುರಿತಾಳ** : ದಿಳ್ಳಿಯ ಸುರಿತಾಳ ಸುಖಸಂಕಥಾವಿನೋದದಿಂ ರಾಜ್ಯಂಗೆಣೆಉತ್ತಿರೆ (ಮೃಅರಿ. ೧೯೩೧, ೧-೩; 1310?); ತುರುಕಾಣ್ಯದೊಳಗನಾವೃಷ್ಟಿದೋಷಂ ಬಂದು ಪಸರಿಸೆ ಪವಾಡದಿಂದೆ ವರುಷಮಂ ಸುರಿಸಿ ಸುರಿತಾಳನಿಂ ಪೂಜೆಯಂ ಪಿರಿದಾಗಿ ಕೈಕೊಂಡು (ಚಬಪು. ೧-೧೯). **ಸುರಿತ್ರಾಣಿ**: ಡಿಳ್ಳಿಯಾ ಸುರಿತ್ರಾಣಿಯಾತ್ಮಜಂ ಮಡಿಯಲು (ಗುರುಚಾ. ೧೧-೪೧). **ಸುರುತಾಳ**: ಮುಂದುಗಡಿಸಿ ಸುರುತಾಳ[ಪಾಠಾಂ. ಸುರುತ್ರಾಣ, ಸುರತಾಳ]ಬಲವ (ಕುರಾಸಾಂ. ೯-೬೬). **ಸುಲತಾನ** : ದಿಲಾವರಖಾನ್ ಸಾಹೇಬರವರು XXX ದರಗಾ ಸುಲತಾನರು ತಮ್ಮ ಝಾನ್‌ಸಾಹೇಬರು (ಎಕ. IX. ಹೊಸಕೋ. ೧೯-೫; 1745). **ಸುಲ್ತಾನ**: ಸುಲ್ತಾನನು ಕತ್ತಿಯನ್ನು ಹಿರಿದು ಬೀಸಿದನು (ದೌಲತ್. ೧೩೧); ಶ್ರೀರಂಗಪಟ್ಟ — ಹೈದರು ಮತ್ತು ಟಿಪ್ಪುಸುಲ್ತಾನರವರ ವಾಸಸ್ಥಳವಾಗಿತ್ತು (ಭೂಗೋಳ. ೮೯). [<- ಪಾರ. ಹಿಂ. ಮರಾ. ಸುಲತಾನ್]

ಸುಲ್ತಾನ 'ಸುಲ್ತಾನ್' ನೋ.

ಸುಲ್ತಾನದ್ರಾಕ್ಷಿ (ನಾ). ಬೀಜವಿಲ್ಲದ ದ್ರಾಕ್ಷಿ: ಸುಲ್ತಾನದ್ರಾಕ್ಷಿ ಬಹಳ ರುಚಿಯಾಗಿರುತ್ತದೆ (ರೂಢಿ). [ಸುಲ್ತಾನ? + ದ್ರಾಕ್ಷಿ]

ಸುಲ್ತಾನದ್ರಾಕ್ಷೆ (ನಾ). = ಸುಲ್ತಾನದ್ರಾಕ್ಷಿ: ೧ ಸಣ್ಣ ಚಮಚ ಹುಡಿಮಾಡಿದ ಯಾಲಕ್ಕಿ ಅಥವಾ ಜಾಯಿಕಾಯಿ, ೧ ದೊಡ್ಡ ಚಮಚ ಸುಲ್ತಾನದ್ರಾಕ್ಷೆ (ಅಡುಸೌ. ೯೭).

[ಸುಲ್ತಾನ ? + ದ್ರಾಕ್ಷೆ]

ಸುಲ್ತಾನಿ 'ಸುಲ್ತಾನೀ' ನೋ.

ಸುಲ್ತಾನಿಕೊಳಗ (ನಾ). (ಟಿಪ್ಪುಸುಲ್ತಾನನ ಕಾಲದಲ್ಲಿದ್ದ) ಹದಿನಾರು ಸೇರಿನ ಒಂದು ಅಳತೆ : (ಕಸಂಗ್ರಾ. ೧೬೩). [ಸುಲ್ತಾನಿ (< ಸುಲ್ತಾನೀ) + ಕೊಳಗ]

ಸುಲ್ತಾನಿತೋಟ (ನಾ). ಬಂದೂಕಕ್ಕೆ ಉಪಯೋಗಿಸುವ ಒಂದು ಬಗೆಯ ತೋಟಾ, — ಗುಂಡು : ಸುಲ್ತಾನಿತೋಟ ತುಂಬಿದಂತ ತೋಸ್ತಾನಿ ವಂದು, ಖಾಸಾ ಮದ್ದು ಕತ್ತಿ ಒಂದು (ರಾಚೇಂದ್ರ. ೫೬). [ಸುಲ್ತಾನಿ (< ಸುಲ್ತಾನೀ) + ತೋಟ]

ಸುಲ್ತಾನೀ, ಸುಲತಾನಿ, ಸುಲ್ತಾನಿ (ನಾ). (ಟಿಪ್ಪುಸುಲ್ತಾನನು ಹೊರಡಿಸಿದ) ಹದಿನೆಂಟು ವರಹ ತೂಕದ ಒಂದು ನಾಣ್ಯ : ಸುಲ್ತಾನೀ (ಟೀಪೂನದು) ರೂ ೪ (ಕಭಾಗ. ೨೮೦). **ಸುಲತಾನಿ**: 'ಸುಲತಾನಿವರಹ' ಪರಾ. **ಸುಲ್ತಾನಿ**: 'ಸುಲ್ತಾನಿಕೊಳಗ' ಪರಾ. [<- ಪಾರ. ಹಿಂ. ಮರಾ. ಸುಲ್ತಾನೀ]

ಸುಲ್ವ 'ಸುಲ್ವ' ನೋ.

ಸುಲ್ವ, ಸುಲು, ಸುಲ್ಪ, ಸುಲ್ಬು (ನಾ). ೧. ಒಂದು ಬಗೆಯ ಲೋಹ ; ತಾಮ್ರ: "ಸುಲ್ವಂ — ಸುಲು, ಸುಲುವೆಂದು ಕಿಸುವೊನ್" (ಶಮದ. ನ. ೨೯೨). ೨. ಪೂಜಾಸಾಮಗ್ರಿ: ಚಂದನಂ ಸ್ವಸ್ತಿಕಂ ಸುಲ್ವಮೆಂಬೀ ಮಂಗಳದ್ರವ್ಯದ ರಚನೆಯಿಂ (ಸಕುಮಾ. ೫-೬೧). **ಸುಲು** : ೧ "ಸುಲುವೆಂದುಂ ಕಿಸುವೆಂದುಂ ಕೆಂಪೆಂದುಂ — ತಾಮ್ರಂ" (ಕಶಸಾ. ೫೦-೬೩). **ಸುಲ್ಪ** : ೧ "ಕಿಸು ಸುಲ್ಪಮುದುಂಬರಂ ತಾಮ್ರಂ" (ಮಂಗರಾ. ೩೦-೫). **ಸುಲ್ಬು** : ೧. ಅರುಣತೆವೆತ್ತು ಕಿಂಶುಕದ ಪೂವಿನ ಬಣ್ಣಮೆ ಬಣ್ಣವಾಗೆಯುಂ ಕರಗುವ ಸುಲ್ಬಿನಾಕೃತಿಯೊಳಾಗಿರೆಯುಜ್ವಲಲಕ್ಷನಾಗೆಯುಂ . . . ಅಭಿವೃದ್ಧಿಯಕ್ಕುಂ (ಜಟ್ಟಿಮಾ. ೭-೭೭). [< ಸಂ. ಶುಲ್ವ, ಶುಲ್ಬ]

ಸುಲ್ಬು 'ಸುಲ್ವ' ನೋ.

ಸುವಕ್ಕ (ನಾ). ಒಂದು ನರಕದ ಹೆಸರು: ಏಕರಾಳ ಪ್ರಕಂಪ ಪದ್ಮ ಸುವಕ್ಕ ಕಾಲವಂಬೈದು ಮಂತ್ರಿನರಕಂಗಳಿಂ ಕೂಡಿ ಅಘೋರವೆಂಬರಸುನರಕವಿಹುದು (ವೀರೇ. ೧೫೨). [ಸಂ.]

ಸುವರ್ಚಲವಣ (ನಾ). ಒಂದು ಬಗೆಯ ಉಪ್ಪು: "ತಿಲಕಂ – ಕಾಡುವಿಟ್ಟ, ಸುವರ್ಚಲವಣ" (ಓಷಧಿ. ೬೮); ವಾಯುವಿಳಂಗ, ಸುವರ್ಚಲವಣ . . . ಸೇವಿಸಲು . . . ಸಕಲಜ್ವರಂ ಮಾಣ್ಗುಂ (ಸಕ್ಕ. ೧೧೪). 'ಸಂವತ್ಸರಲವಣ' ಪರಾ. [ಸಂ.]

ಸುವರ್ಣ (ನಾ). ೧. ಒಳ್ಳೆಯ ಬಣ್ಣ ; ಉತ್ತಮವಾದ ವರ್ಣ. ೨, ಒಳ್ಳೆಯ ಅಕ್ಷರ; ಉತ್ತಮವಾದ ವರ್ಣ. ೩. ಒಳ್ಳೆಯ ಬಣ್ಣವುಳ್ಳ ಒಂದು ಲೋಹ; ಚಿನ್ನ: ಸುವರ್ಣಕಗ್ನಿಸಂಯೋಗವರ್ಣೋತ್ಕರ್ಷಮಂ ಪಡೆವಂತೆ (ಪಾರ್ಶ್ವಪು. ೫-೪೯ ವ). ೧, ೩: ಸಸಿಯೊಡನೊಂದಿ ರೋಹಿಣಿಯ ಮಸಕದಂತೆ ಸುವರ್ಣಯುತಮಾಗಿ ಪರದನಂತೊಪ್ಪುಗುಂ ಶಾಲಿಯ ವನಂ (ಪದ್ಮರಾ. ೮-೧೩). ೨, ೩: ಸಲ ನಿಲೆ ಸುಕವಿ ಸುವರ್ಣದ ನೆಲೆಯಲಿದೊರೆದೊರೆದು ನೋಡಿ ಬಗೆಯೊರಗಲ್ಕೊಳ್ ತಲೆದೂಗದಂತೆ ಸಭೆಯೊಳ್ ತಲೆದೂಗುವಂ ಪರೀಕ್ಷಿಸಲ್ ಬಲ್ಲವನೇ (ಧರ್ಮನಾ. ೧-೪೫). ೪. ಸಂಪತ್ತು; ಐಶ್ವರ್ಯ: ಎನಗೆನಗೀವನಾಪ ತೆಱದಿಂ ವರವಸ್ತ್ರ ಸುವರ್ಣಮಂ (ಪುಷ್ಪ. ೧-೭೯). ೫. ಒಂದು ಚಿನ್ನದ ನಾಣ್ಯ. ೬. ಒಂದು ನಿರ್ದಿಷ್ಟವಾದ ಪ್ರಮಾಣ: ನಾಲ್ಕು ಸುವರ್ಣಕರ್ಷಂ (ವೃಪಾ. ೪-೨೦); ೧ ಪಲ = ೪ ಕರ್ಷ, ೧ ಕರ್ಷ = ೪ ಸುವರ್ಣ (ಕಶಾಖ. ೩೯೫).

ಸುವರ್ಣಗರುಡಧ್ವಜ = ಶಿಲಾಹಾರ ರಾಜರ ಒಂದು ಬಿರುದು: ಮಹಾಸಾಮನ್ತಂ ಸುವರ್ಣ್ಣಗರುಡಧ್ವಜಂ (ಶಾಇ. XX, ೨೧-೪೪; 1019); ಸಮರ್ಕಕಭೀಷಣಂ ಸುವರ್ಣ್ಣಗರುಡಧ್ವಜಂ (ಶಾಇ. XX, ೫೧-೧೨; 1077). [ಸಂ.]

ಸುವರ್ಣಕ (ನಾ). ಒಂದು ಬಗೆಯ ಸಸ್ಯ; ಕಕ್ಕೆಗಿಡ: "ಕೃತಮೂಲಃ, ಸುವರ್ಣಕಃ– ಕಕ್ಕೇಗಿಡದ ಹೆಸರು, ಕಕ್ಕೇಕಾಯಿ" (ಸಿದ್ಧಾಂತ. ೧೧೭). [ಸಂ.]

ಸುವರ್ಣಕಾರ (ನಾ). ಚಿನ್ನದ ಕೆಲಸಮಾಡುವವನು ; ಅಕ್ಕಸಾಲೆ: "ನಾಡಿಂಧಮಃ, ಕಳಾಪಃ, ಸುವರ್ಣಕಾರಃ, ಮುಷ್ಟಿಕಃ – ಈ ೪ ಅಕ್ಕಸಾಲೆ" (ಪಲಾಮ್ಯ. ೯೬-೪೩೪); ಸುವರ್ಣಕಾರ . . . ತ್ಕೆಲಕಾರಾದಿ . . . ತಪಶ್ಚರಣಕ್ಕೆ ಅಯೋಗ್ಯಂ (ಪಸಾರ. ೧೦೦); ಸುವರ್ಣಕಾರರ ಕೌಶಲ್ಯವನ್ನು . . . ತಿಳಿಯಬಹುದು (ಭಾರದ. ೧೪). [ಸಂ.]

ಸುವರ್ಣಕಾಲ (ನಾ). (ಆಲಂ) ಒಳ್ಳೆಯ ಕಾಲ ; ಸಮೃದ್ಧಿಯ ಕಾಲ : ಇಂತಹ ಸುವರ್ಣಕಾಲದಲ್ಲಿ ಸಂಸ್ಕೃತಕವಿಗಳು . . . ಇಡಿಯ ದೇಶವನ್ನು ರಸಮಯವನ್ನಾಗಿ ಮಾಡಲು ಮೊದಲು ಮಾಡಿದರು (ಭಾರದ. ೪೪೫). 'ಸುವರ್ಣಯುಗ' ಪರಾ. [ಸಂ.]

ಸುವರ್ಣಕ್ರೌಂಚ (ನಾ). (ನೀರುಕೊಕ್ಕರೆಯ ಆಕಾರದಲ್ಲಿ ಮಾಡಲ್ಪಟ್ಟ) ಚಿನ್ನೆದ ಡಬ್ಬಿ; ಸುವರ್ಣಗಿಂಡಿ (?) : ಅನುರೂಪಂ ಸ್ಫಟಿಕಾಚ್ಛದೊಳ್ದಧಿ ಸುವರ್ಣಕ್ರೌಂಚದೊಳ್ ರೋಚನಂ ಘನಹಾರಿತಕಹಂಸಯೊಳ್ ಹರಿತದೌರ್ವಂ . . . ಏಂ ಪಡೆದುದೋ ಮಾಂಗಲ್ಯಸಾಕಲ್ಯಮಂ (ಪಂರಾಮಾ. ೫-೧೨೫). [ಸಂ.]

ಸುವರ್ಣಗಡ್ಡೆ, ಸುವರ್ಣಗೆಡ್ಡೆ (ನಾ). ಒಂದು ಬಗೆಯ ಗಡ್ಡೆ : ಶುಂಠಿ ಕೂವ ಸುವರ್ಣಗಡ್ಡೆ ಮೊದಲಾದವು ಈ ವರ್ಗದವು (ಜಾಲಪ್ರ. I, ೩೭೦). ಸುವರ್ಣಗೆಡ್ಡೆ: ಸುವರ್ಣಗಡ್ಡೆ , ಚೂರ್ಣಗಡ್ಡೆ , ಸೂರ್ಯನ ದಂಟು (ಮೃಡಿಗಿ. ೬-೧೦೧).

[< ಸೂರಣ + ಗಡ್ಡೆ]

ಸುವರ್ಣಗೆಡ್ಡೆ 'ಸುವರ್ಣಗಡ್ಡೆ' ನೋ.

ಸುವರ್ಣಚೂರ್ಣ (ನಾ). ಚಿನ್ನದ ಬಣ್ಣದ ಪುಡಿ ; ಹಳದಿಚೂರ್ಣ: ಎಸಟ್ಟಳನೆಯ್ದಿ ಕಂಡರಿಸಿ ಮುತ್ತಿನೊಳಲ್ಲಿ ಸುವರ್ಣಚೂರ್ಣಮಂ ಪಸರಿಸಿ (ಅದಪು. ೧೧-೧೧೨). [ಸಂ.]

ಸುವರ್ಣತ್ವ (ನಾ). ೧. ಒಳ್ಳೆಯ ಸ್ವರದಿಂದ ಕೂಡಿರುವುದು; ಸುಸ್ವರ. ೨. ಒಳ್ಳೆಯ ಬಣ್ಣದಿಂದ ಕೂಡಿರುವುದು; ಚಿನ್ನ. ೧, ೨ : ಪರುಷದಂತಾವೇದದಳತಗೋಲಂತೆ ನಿರ್ಜರಧೇನುವಂತೆ ಪತಿಭಕ್ತಿಯಂತವ್ಯತಸುವರ್ಣತ್ವದಿಂ ಶ್ರುತಿಕಾಷ್ಠ ಜೀವಾಳದಿಂ . . . ದಂಡಿಗವಿಡಿದು ಚಾಣಗಾಣಂ ಪಾಡಿದಂ (ಭಾವಚಂ. ೬-೭). [ಸಂ.]

ಸುವರ್ಣಪಟ್ಟೆ (ನಾ). ಜರತಾರಿ ಬಟ್ಟೆ : "ದಸರಿಗಬ್ಬುಳ ನೀಲಿಗಂಧ ಸಂಧ್ಯಾರಾಗ . . . ಸುವರ್ಣಪಟ್ಟೆ ಮದವಿ ಮಂಜಿಷ್ಠೆ ದೇವಾಂಗವೆಂದು ಪಟುಭೇದಮಕ್ಕುಂ" (ಮುಂಗರಾ. ೧೦೧-೨೮). [ಸುವರ್ಣ + ಪಟ್ಟೆ]

ಸುವರ್ಣಪಾಷಾಣ (ನಾ). ಚಿನ್ನದ ಕಣಗಳನ್ನು ಒಳಗೊಂಡ ಖನಿಜದ್ರವ್ಯ: ಜೀವಾ ನೀಂ ಧಾತುವಾದೋಪಾಧ್ಯಾಯನ ಕೆಯ್ಗೊವಂದ ಸುವರ್ಣಪಾಷಾಣಮೆಂತು ಪಿಂಡೀಬದ್ಧ ದಹನತಾಪನಕ್ರಿಯೆಗಳಿಂ ಶುದ್ಧಲೋಹಮಕ್ಕುಂ (ಜೀವಸಂ. ೪ ೬). [ಸಂ.]

ಸುವರ್ಣಮಾಧ್ಯಮ (ನಾ). (ಆಲಂ) ಉಭಯಪಕ್ಷಗಳು ಸ್ವೀಕರಿಸಲು ತಕ್ಕುದಾದ ಮಾರ್ಗ: ಭೋಗವನ್ನು ನಿರಾಕರಿಸದ ಯೋಗವನ್ನು ಸಾಧಿಸುವಂಥ ಒಂದು ಸುವರ್ಣಮಾಧ್ಯಮಕ್ಕೆ ಹಾರೈಸುತ್ತಿದ್ದ (ಪರಿಷೆ. ೧೩೮). [ಸಂ.]

ಸುವರ್ಣಮುಖಿ (ನಾ). ಒಂದು ಬಗೆಯ ಖನಿಜದ್ರವ್ಯ (?) : ಸುವರ್ಣಮುಖಿ ಹಿರಾಕಾಸ ಇವು ಗಂಧಕ ಕೂಡಿದ ಕಬ್ಬಿಣದ ರೂಪಾಂತರಗಳುಂಟು (ಮುಂಬಯಿ. ೬-೧೪). [ಸಂ. ಸುವರ್ಣಮುಖೀ]

ಸುವರ್ಣಮೃಗ (ನಾ). ಚಿನ್ನದಂತೆ ಹೊಳೆಯುವ ಜಿಂಕೆ : ಕಸ್ತೂರಿಮೃಗ . . . ಸುವರ್ಣಮೃಗ . . . ಸಾಧುಪವಿತ್ರಮೃಗಜಾತಿಗಳುಂ (ವೀರೇ. ೫೧೨). [ಸಂ.]

ಸುವರ್ಣಯುಗ (ನಾ). (ಆಲಂ) ಒಳ್ಳೆಯ ಕಾಲ; ಉಚ್ಛ್ರಾಯಕಾಲ: ಗುಪ್ತರ ಕಾಲದ ಸುವರ್ಣಯುಗದಲ್ಲಿ ಭಾರತೀಯಚಿತ್ರಕಲೆ ಅಜಂತೆಯಲ್ಲಿ ಅತ್ಯುಚ್ಛ್ರಾಯ ಸ್ಥಿತಿಗೇರಿತ್ತು (ಭಾರದ. ೫೩೨); ಈ ಕಾಲವನ್ನು ನೊಳಂಬರ ಇತಿಹಾಸದ ಧರ್ಮಯುಗ, ಸುವರ್ಣಯುಗವೆಂದೂ . . . ಹೇಳಬಹುದು (ನೊಳಂಬ. ೪೪). [ಸಂ.]

ಸುವರ್ಣವರ್ಣ (ನಾ). ೧. ಚಿನ್ನದ ಬಣ್ಣ; ಹಳದಿವರ್ಣ: ಪಕ್ಕಶಾಳಿ ಕಣಶಾಳೀನವ್ರೀಮೊಪ್ಪಿರ್ದದೇಂ ಗೆಲವಂದತ್ತೊ ಸುವರ್ಣವರ್ಣದಿನಿಳಾಶ್ರೀಯುಟ್ಟ ಪೊಂಬಟ್ಟೆಪೋಲ್ (ಜಗಪ. ೨-೫). ೨. ಚಿನ್ನದ ಬಣ್ಣವುಳ್ಳವನು : ಸಲಕ್ಷ ಸಂವತ್ಸರ ಸಂಖ್ಯಾಪರಮಾಯುಷ್ಮನುಮುತ್ತಪ್ತ ಸುವರ್ಣವರ್ಣನುಂ . . . ಅಪ್ಪ ಶಾಂತೀಶ್ವರನಂ (ಶಾಂತಿಪು. ೧೨-೨ ವ). [ಸಂ.]

ಸುವರ್ಣವ್ಯವಹಾರ (ನಾ). ಚಿನ್ನದ ವ್ಯಾಪಾರ ಮಾಡುವವನು: ದಿವಸೇಂದ್ರಂ . . . ತೊಳಿಯೊಳಿರೆ ಗಮನಾಸಕ್ತಚಿತ್ತಂ ಸುವರ್ಣವ್ಯವಹಾರಂ (ಶಾಇತಿ. ೧೭-೧೬). [ಸಂ.]

ಸುವರ್ಣಶಾಖಿ (ನಾ). ಒಂದು ಬಗೆಯ ಸಸ್ಯ : "ಭೂರಿಜಃ – ಸುವರ್ಣಶಾಖಿ" (ಓಷಧಿ. ೧೧೨). [?]

ಸುವರ್ಣಾಂಬರ (ನಾ). ಜರತಾರಿ ಬಟ್ಟೆ; ಪೀತಾಂಬರ: ಬಿಗಿದುಟ್ಟು ಸುವರ್ಣಾಂಬರದ ಸೆಱಂಗು ನಿತಿತಮೆನೆ ಕೊಂಕಿದ ನಿಜಕಂಟಕದೊಳ್ ತೊಡರ್ದು (ಕಬಾಶಂ. ೩-೩೫ ವ). [ಸಂ.]

ಸುವರ್ಣಾಂಬುಜ (ನಾ). ಚಿನ್ನದ ಬಣ್ಣದ ಕಮಲ; ಹೊಂದಾವರೆ: ಆಂಬರಮದಮರೆ ನಾಂದು ನಿರಂಬರೆಯಂತಿರ್ದ ಯುವತಿಗಿತ್ತಪಳಿನೆ ಪೀತಾಂಬರಮಂ ಸರಸಿ ಸುವರ್ಣಾಂಬುಜರಜಮೆಲರ ಪೊಯ್ಲಳಿಂ ನೆಗೆದಸೆಗುಂ (ರಾಜಶೇ. ೧೦-೧೦೩). [ಸಂ.]

ಸುವರ್ಣಾಕ್ಷರ (ನಾ). (ಆಲಂ) ವಿಶೇಷಸಂದರ್ಭದಲ್ಲಿ, ವಿಶೇಷ ಘಟನೆ ಅಥವಾ ಸಾಧನೆಗಳನ್ನು ದಾಖಲಿಸುವ ಬರಹವನ್ನುಳ್ಳ ಲಿಪಿ : ಎಂತಹ ಸುವರ್ಣಾಕ್ಷರದ ಬರಹ – ಅದು! (ವೀರಯೋ. ೯೫). [ಸಂ.]

ಸುವರ್ಣಾದಾಯ (ನಾ). ಚಿನ್ನದ ರೂಪದಲ್ಲಿ ಬರುವ ಆದಾಯ : ಸಕಲ ಸುಂಕ ಸುವರ್ಣ್ಣಾದಾಯ ಬೆಟ್ಟ ನೀಡುವಡಕೆರೆ ಕಟ್ಟೆ ಕಾಲುವೆ (ಎಕ. III, ಮಳವ. ೯೫-೩೫; 1506); ಅದು ಮಗ್ಗ ಮನೆಪಣ ಸುವರ್ಣ್ಣಾದಾಯ ಕಾಡಾರಂಭ (ಮೈಆರ. ೧೯೬, ೨೯-೧೦; 1530). [ಸಂ.]

ಸುವರ್ಣೋತ್ಸವ (ನಾ). ಐವತ್ತುವರ್ಷಗಳಿಗೆ ಮಾಡುವ ಉತ್ಸವ: ಏವತ್ತನೆಯ ವಾರ್ಷಿಕೋತ್ಸವಸಮಾರಂಭ ; ಚಿನ್ನದ ಹಬ್ಬ : ಸುವರ್ಣೋತ್ಸವ . . . ಮುಂತಾದ ಸ್ಮಾರಕಗಳನ್ನಾಚರಿಸುವುದು (ಶಕ್ಷದ. ೩೨೦). [ಸಂ.]

ಸುವರ್ತಕ (ನಾ). ಪ್ರಪಂಚವನ್ನು ನಾಶಪಡಿಸುವ ಒಂದು ಬಗೆಯ ಮೋಡಗಳ ವರ್ಗ, — ಗುಂಪು: ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸುವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್ (ಪಂಪಭಾ. ೫-೯೫ ವ).

[IP ಇದು 'ಸಂವರ್ತಕ' ಎಂಬುದರ ಅಪಲಿಖಿತವಿರಬಹುದು]

ಸುವರ್ನಾದಾಯ (ನಾ). = ಸುವರ್ಣಾದಾಯ: ಅಡುಮನೆ ಕಳ ಕೊಟಾರ ಸುವರ್ನಾದಾಯ ಅಡ್ಡದರಿಗೆ ಚೌದೆರಿಗೆ (ಎಕ. III (R). ಗುಂಡ್ಲುಪೇ. ೭೫-೧೦; 1576).

[IP ಇದು 'ಸುವರ್ಣಾದಾಯ' ಎಂಬುದರ ಅಪಲಿಖಿತ]

ಸುವರ್ಲೋಕ (ನಾ). ಮೇಲಿನ ಏಳು ಲೋಕಗಳಲ್ಲಿ ಒಂದು: ಪಾತಾಳದಿಂ ಕಳಗೆ ಪಾದ ಸುವರ್ಲೋಕದಿಂ ಮೇಲೆ ಉತ್ತಮಾಂಗ (ಆದಿಪ. ೧-೩).

[ಸಂ.]

ಸುವಲ್ಲಿ (ನಾ). ಒಂದು ಬಗೆಯ ಸಸ್ಯ; ಬಾಹುಜಿಗೆ: "ಅವಲ್ಗುಜಃ, ಸೋಮರಾಜೀ, ಸುವಲ್ಲೀ . . . ಬಾಹುಜಿಗೆಯ ಪೆಸರುಗಳು" (ಸಿದ್ಧಾಂತಿ. ೧೩೩).

[ಸಂ. ಸುವಲ್ಲೀ]

ಸುವಸ್ತು (ನಾ). ಒಳ್ಳೆಯ ವಸ್ತು; ಉತ್ತಮ ವಸ್ತು: ಕೊಱಚಾಡೆಲ್ಲರ ಮುಂದೆ ರಚ್ಚೆಗಳೆಯುತ್ತಂ ಕಿತ್ತು ಮೆಯ್ಯೆಲ್ಲವಂ ಹರಿತಿಂದುಳ್ಳ ಸುವಸ್ತುವಂ . . . ಇರುವಳ್ ತಾಂ ನೆಱೆ ಸೂಳೆಯ್ಯೆ (ಸೋಮೇಶ. ೭೩); ಬರುತಮಿರ್ದುವು ದೇಶದೇಶದ ಸುವಸ್ತುಗಳು (ಸಂಬರ. ೫-೧೭); ಜನಿಯಿಸುವಟ್ಟೊಗಲ್ಲದ ಸುವಸ್ತುಗಳಿಲ್ಲ (ಪುಷ್ಪಸ್ರ. ೩-೭೧).

[ಸಂ.]

ಸುವಹೆ (ನಾ). ಕರೀಲಕ್ಕಿಲಿ, ಮುಂಗಿಮೇವು, ಹಂಸಪಾದಿ, ಆನೆಬೇಲ ಮತ್ತು ರಾಶ್ಮೆ ಮುಂತಾದ ಗಿಡಗಳ ಹೆಸರು: "ಶೇಫಾಲಿಕಾ, ಸುವಹಾ . . . ಕರೀಲಕ್ಕಿಲಿ" (ಸಿದ್ಧಾಂತಿ. ೧೨೮); "ಛತ್ರಾಕೀ, ಸುವಹಾ . . . ಹಾವುಕಣ್ಣಿನ ಗಿಡ, ನಂಜಾರೇಗಿಡ, ಮುಂಗಿಮೇವುಗಿಡ" (ಸಿದ್ಧಾಂತಿ. ೧೩೮); "ಗೋಧಾಪದೀ, ಸುವಹಾ — ೨ ಹಂಸಪಾದೀ ಗಿಡದ ಹೆಸರುಗಳು" (ಸಿದ್ಧಾಂತಿ. ೧೩೯); "ಗಜಭಕ್ಷ್ಯಾ, ಸುವಹಾ . . . ತದುಕಿನ ಗಿಡದ ಹೆಸರು, ಆನೇಬ್ಯಾಲ" (ಸಿದ್ಧಾಂತಿ. ೧೪೦); "ಏಲಾಪರ್ಣೀ, ಸುವಹಾ . . .೪ ಸಣ್ಣದುಂಪರಾಸ್ಯೆ, ರಾಶ್ಮೆ" (ಸಿದ್ಧಾಂತಿ. ೧೪೪).

[ಸಂ. ಸುವಹಾ]

ಸುವಾಂಛಿತ (ನಾ). ಒಳ್ಳೆಯ ಆಸೆ; ಉತ್ತಮವಾದ ಬಯಕೆ: ತ್ರಿಜಗಮಂ ಕಾವನ ಸುವಾಂಛಿತವನೀವನ ಹಿಮಾಂಶುಧರನ . . . ಭಜಿಸಿದಳಗಜೆ (ಶ್ರೀಮಭಾ. ೧೫-೭೩).

[ಸಂ.]

ಸುವಾಡ (ನಾ). (?) : ಸಂಜಯಂ ರಣದಿ ಮುರಿದೋಡಿದಂ ನೃಪನನರಸುತಿರಲ್ ಸಾತ್ಯಕಿ ಸುವಾಡವನ್ನರಿತು ಕಡುವೇಗದೋಳ್ ಸಂಜಯನ ಪಿಡಿದನು (ತುರಂಗ. ೭೩-೮೪೪). "ಒಳ್ಳೆಯ ನೆಲೆ" (ತುರಂಗ. ಕೋಶ). [?]

ಸುವಾರ, ಸುವ್ವಾರ, ಸೂವಾರ (ನಾ). ಅಡುಗೆಯವನು; ಬಾಣಸಿಗ: ಬಳಿಕವನಟ್ಟ ಕೈಕರಣದ ಸುವಾರದ ವಿದ್ಯವೇನರಿದೂ ಕೊಟ್ಟರೀತಂಗೆಲ್ಲವನು (ಕುಮಾಲ. ೬-೧೪); ಕೊರಳಂ ಕೊಯಿದಲ್ಲಿ ರಕ್ತಮಾಂಸವನಟ್ಟು ನರಪತಿಗಿಕ್ಕೆ ಸುವಾರರು (ನನ್ನಚಾ. ೫-೨೨). **ಸುವ್ವಾರ:** ಎಂದಿನಂದದೊಳು ಸಂಪೂರ್ಣಭೋಜನವಡೆಯದಂದಮಂ ಸುವ್ವಾರರೊಳ್ಬೇಳ್ಪುದಂ (ಸಮ್ಯಕ್ತ. ೪-೧೨). **ಸೂವಾರ:** ಗಂಗೆಯ ತಡಿಯಲ್ಲಿ ತನಗೇಕಭುಕ್ತಿಗನ್ನಂಗೈಯೆ ಸೂವಾರಗೊರೆದು ಜಂಗುಳಿ ಪರಿಸೆಯ ತೃಪ್ತಿಗುಜ್ಜುಗಿಸೆಂದು ಹಿಂಗಿಸಿದನು ಗೃಹಪತಿಯ (ಭರಚ. ೭೩-೨೭).

[< ಸಂ. ಸೂಪಕಾರ ./ ಪ್ರಾ. ಸೂವ./ ಮರಾ. ಸುವಾರ್]

ಸುವಾರಾಹಿ (ನಾ). ಸಪ್ತಮಾತೃಕೆಯರಲ್ಲಿ ಒಬ್ಬಳು: "ಬ್ರಾಹ್ಮಿ ಮಾಹೇಶ್ವರಿ ಕೌಮಾರಿ ವೈಷ್ಣವಿ ಸುವಾರಾಹಿ ಮಾಹೇಂದ್ರಿ ಚಾಮುಂಡಿಯೆನೆ ಸಪ್ತಮಾತೃಕೆಯರು" (ಮಂಗರಾ. ೫-೧೪). [ಸಂ. ಸುವಾರಾಹೀ]

ಸುವಾರಿ (ನಾ). ನಿರ್ಮಲವಾದ ನೀರು: ನೂತನ ಸುವಾರಿಗಳ ನಡೆಗುಡದ ದಾರಿಗಳ ಭೂತಳದ ಸಿರಿ ಮೆಱೆಯೆ . . . ವರ್ಷರ್ತು ಚೆಲ್ವಾದುದು (ಶ್ರೀಮಭಾ. ೧೭-೪).

[ಸಂ.]

ಸುವಾರ್ತೆ (ನಾ). ೧. ಒಳ್ಳೆಯ ಸುದ್ದಿ; ಶುಭಸಮಾಚಾರ. ೨. (ಕ್ರಿಸ್ತನು ಉಪದೇಶಿಸಿದ) ಸಂದೇಶ: ಪುರೋಹಿತ ಸಂತ ಮಾರ್ಕನ ಸುವಾರ್ತೆಗಳನ್ನು ಸುಸ್ಪಷ್ಟವಾಗಿ ವಾಚಿಸಿದನು (ಪುನರು. ೧೭೬). [ಸಂ. ಸುವಾರ್ತಾ]

ಸುವಾಲಿ 'ಸುವ್ವಲಾಲೆ' ನೋ.

ಸುವಾಸನೆ (ನಾ). ಸುಗಂಧ; ಪರಿಮಳ: ಉಮಾಪತಿಯ ಮುಂದೆಸೆಯೊಳುದಿತ ವ್ಯಾಪಿತಾಂತರ್ಗತಸುವಾಸನೆ ರಂಜಿಸುತ್ತಿರಲು (ಬಸಪು. ೩೩-೭). [ಸಂ. ಸುವಾಸನಾ]

ಸುವಾಸಿತ (ಗು). ೧. ಒಳ್ಳೆಯ ವಾಸನೆಯಿಂದ ಕೂಡಿದ; ಪರಿಮಳಯುಕ್ತವಾದ. ೨. ಸುಗಂಧದಂತೆ ವ್ಯಾಪ್ತವಾದ, — ಹರಡಿದ: ಸಕಲ ಸುರಾಸುರಗಣಂಗಳರ್ತಿ ದೇಶವಿದೇಶಸುವಾಸಿತಕೀರ್ತಿ (ಗಣೇಶ. ೨-೪೬). (ನಾ). ೩. (ಆಲಂ) ಹಿತವಾದುದು: ಫಾಲ್ಗುಣದ ಸುವಾಸಿತವಾದ ಬಿಸಿಲು ದಿನದಲ್ಲಿ ಅರಣ್ಯಮಧ್ಯದ ದಾರಿಯಲ್ಲಿ ಅವನು ಬರುತಲಿರುವನು (ಧರ್ಮಸಾ. ೮೪).

[ಸಂ.]

ಸುವಾಸಿನಿ (ನಾ). ೧. ಗೌರವಸ್ಥ ಮನೆಯ ಹೆಣ್ಣು; ಕುಲೀನೆ. ೨. ತಂದೆಯ ಮನೆಯಲ್ಲಿಯೇ ವಾಸವಾಗಿರುವ ಮದುವೆಯಾಗದ ಅಥವಾ ಮದುವೆಯಾದ ಹೆಣ್ಣು. ೩. ಕನ್ಯೆ: "ಕಿಂಚಿತ್ಪ್ರೌಢಾ, ಸುವಾಸಿನೀ - ಈ ೨ ಸೋವಾಸಿಣಿ" (ಹಲಾಯು. ೭೯-೩೨೯). ೪. ಮುತ್ತೈದೆ; ಸುಮಂಗಲಿ: ಕಲಶಕನ್ನಡಿ ಕರಿ ತುರಗ ಗೋಕುಲ ವೃಷಭ ಬುಧನಿಚಯ ಗಿರಿಸಂಕುಳ ಸುವಾಸಿನಿ (ಕುಮ್ಯಾಉ. ೩-೧೦೮); ರತಿಯ ಸುವಾಸಿನಿಕಾಂತೆಯರುಮರಿಸಿನಸುಗಂಧಪುಷ್ಪಂಗಳಿಂದಲಂಕರಿಸುತ್ತಿರಲು (ಸಪಮೋ. ೧೩-೫೧); ತಿಂಗಳಲ್ಲಿ ಒಂದೆರಡು ಬಾರಿಯಾದರೂ ಸುವಾಸಿನಿಯರನ್ನು ಮನೆಗೆ ಬರಮಾಡಿಕೊಂಡು ಉಡಿತುಂಬಿ ಕಳಿಸುತ್ತಿದ್ದಳು (ರಂಗರೂ. ೭೧). ೫. ಹೆಂಡತಿ; ಪತ್ನಿ: ರಾಮನ ಸುವಾಸಿನಿಯನೊರ್ಕಯ್ಯೊಳವುಂಚಿಟ್ಟು ಘೋರವಿಷವಚ್ರಾಸಿಯಂ ಕೊಂಡು ಖೇಚರಂ ಪಾಯ್ದನ್ (ಶ್ರೀರಾಮಾ. ೨೪೯-೫೭೩). [ಸಂ. ಸುವಾಸಿನೀ]

ಸುವಿಚಾರ (ನಾ). ಒಳ್ಳೆಯ ಯೋಚನೆ; ಯೋಗ್ಯವಾದ ವಿಚಾರ: ಸುವಿಚಾರಂ ತನಗಾಗಲೀ ನುಡಿಯುಮಂ ಸಿಂಧೂಧ್ವವಂಗಟ್ಟಿ ಪಾಂಡುವೊಳಾಳೋಚಿಸೆ ತನ್ನೃಪಂ ಕುಡುವೊಡೆ (ಮಹಾನೇ. ೩-೧೩೧); ನೇರಿತಹ ಶರಣ ಸಂಚಾರಮಾರ್ಗದೊಳು ಸುವಿಚಾರದಿಂದಡಿಯನಿಡದೆ ತಲೆಯೊಳು ನಡೆದಾ ಕಾರಿಕಾಲಮ್ಮ ಶರಣಾಗು (ಅಜುತ್ರಿ. ೭೨).

[ಸಂ.]

ಸುವಿಚಾರಿತ (ನಾ). ಚೆನ್ನಾಗಿ ವಿಮರ್ಶೆಗೊಂಡುದು, — ಪರಿಶೀಲನೆಗೊಂಡುದು: ಇವು ದುಷ್ಕರಕಾವ್ಯಂಗಳ್ ಸವಿಶೇಷವಿವರ್ತಿಗಳ್ ಸುವಿಚಾರಿತಮಿ ತೋರ್ಪೆ[ನಿ]ವಱ ಲಕ್ಷ್ಯಭೇದಮಂ (ಕವಿರಾ. ೨-೧೧೩). [ಸಂ.]

ಸುವಿತರಣ (ನಾ). ಒಳ್ಳೆಯ ಉದಾರತೆ; ಪರಮೌದಾರ್ಯ: ಪರಮ ಮಹಿಮಾನಿಧ್ರನಂ ಸುವಿತರಣಗುಣಮಣಿಗಣಸಮುದ್ರನನರಿದನತಿಬಲ ವೀರಭದ್ರನನಾದಿರುದ್ರನನು (ಭಸಪು. ೫-೪೭). [ಸಂ.]

ಸುವಿದಾನ 'ಸುಯಿದಾನ' ನೋ.

ಸುವಿದಾನಿ 'ಸುಯಿದಾನಿ' ನೋ.

ಸುವಿದಿತ (ಗು). ಚೆನ್ನಾಗಿ ತಿಳಿದ, — ಮನವರಿಕೆಯಾದ: ಸುವಿದಿತಯತಿಭಂಗಂ ಭಿನ್ನವೃತ್ತಮೆಂದಿಂತು ವಾಕ್ಯದೋಷಮಿವಕ್ಕುಂ (ಕಾವ್ಯಾವ. ೪೫೫). [ಸಂ.]

ಸುವಿಧಾನ (ನಾ). ಅಚ್ಚುಕಟ್ಟು; ಸುವ್ಯವಸ್ಥೆ: ನಾಳೆ ನೇಸರ್ಮೂಡದ ಮುನ್ನಮೆ ವಿಷಾಪಹಾರಂ ಮಾಡಿದಪ್ಪೆನಿಂದಿನೊಂದು ರಾತ್ರಿಯುಮಂ ಪರೇತವನ ಸ್ಥಾನದಿಂ ತೊಲಗಲೀಯದೆ ಕಾಪಂ ಸುವಿಧಾನಮಾಗೆ ಮಾಡಿಂ (ಸುಕುಮಾ. ೭-೮ ವ).

[ಸಂ.]

ಸುವಿಧಾನಿ 'ಸುಯಿದಾನಿ' ನೋ.

ಸುವಿಭಕ್ತಿ (ನಾ). ವಿಭಕ್ತಿಪ್ರತ್ಯಯಗಳ ಒಳ್ಳೆಯ ಸಮುಚಿತಪ್ರಯೋಗ: ವರರುಚಿಯ ಚಾಣ್ಮೆ ಗೋಪಾಲಿಕನ ಬೆಡಗು ಭಾಗುರಿಯ ಗೂಢತೆ ಧನಂಜಯನ ಪರ್ಯಾಯ ಮುರಹರಿಯ ಸುವಿಭಕ್ತಿ ವಿಶ್ವಪ್ರಕಾಶನ ಚದುರು ನಾಗವರ್ಮನ ಕನ್ನಡಂ (ಮಂಗರಾ. ೨-೪). [ಸಂ.]

ಸುವಿಸಿ (ನಾ). ಒಳ್ಳೆಯ ಬಿಸಿ, — ಶಾಖ: ವಡ್ಡಿ ಕಿರುವಲ್ಲೆಯಂ ಪಡ್ಡಗಜವನಿಡಿಗಿಡ್ಡ ಪ್ರಮಾಣದಿಂ ಪಚನಿಸಿ ಕಡಗಿ ಜವದಿ ರುಡ್ಡಿನ ಸುವಿಸಿಯಿಂದ ಬಡಿಸಿ ಘೃತಮಂ ನೀಡೆ ಲಡ್ಡುಗೆಯನರ್ಪಿಸುವುದು (ಲಿಂಗಪು. ೮-೧೩). [ಸ್ವಿ - + ಬಿಸಿ]

ಸುವೃತ್ತ (ನಾ). ೧. ಉತ್ತಮವಾದ ವೃತ್ತ: "ಸುವೃತ್ತ = ಅತಿ ವರ್ತುಲ" (ಸಾಸಾರ. ೭೧ ಟೀಟಿ). ೨. ಒಳ್ಳೆಯ ನಡತೆ.

ಸುವೃತ್ತರ್ (ಬಹುವ) = ೧. ಒಳ್ಳೆಯ ನಡತೆಯುಳ್ಳವರು. ೨. ಚೆನ್ನಾಗಿದುಂಡಾಗಿರುವ ಮೊಲೆಯುಳ್ಳವರು. ೧, ೨: ಹರನುರಿಗಣ್ ಸುಡೆ ಮಱೆವೊಕ್ಕರಲಂಬನ ಬಿಸುಪುಗಳೆದು ಪೊರೆದುದು ತರುಣೇಗುರುಕುಚಮಿದು ಬಿಗಿಗಳೆದುದು ವರಂಗ ಮಱೆವುಗೆ ಸುವೃತ್ತರೇಗೆಯ್ಯರೊ ಪೇಳ್ (ರಾಜಶೇ. ೯-೧೪). [ಸಂ.]

ಸುವೃತ್ತಪ್ರಸ್ತಾರ (ನಾ). (?) : ನಿಮ್ನನಾಭಿಯುಂ ಹ್ರಸ್ವಚೂಚುಕನುಂ ಸುವೃತ್ತ ಪ್ರಸ್ತಾರನುಂ . . . ಅಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ (ಆದಿಪು. ೧೨-೫೭ ವ). [ಸಂ.]

ಸುವೃಷ್ಟಿ (ನಾ). ಒಳ್ಳೆಯ ಮಳೆ: ಸುವೃಷ್ಟಿ ಸೊಂಪಚ್ಚರಿಯಾಗೆ (ಪುಪ್ರಸ್ಥ. ೧-೫೦); ಪರಿಪರಿಯ ಯಜ್ಞವನು ವಿರಚಿಸಿ ಸುರಪತಿಯ ಸಂತುಷ್ಟಿಬಡಿಸಲು ಸುರಿವನವ ಸಂಪೂರ್ಣವಾಗಿ ಸುವೃಷ್ಟಿಯನು ಜಗಕೆ (ಕುವಾಉ. ೪-೬೦). [ಸಂ.]

ಸುವೆ 'ಸುಬೆ' ನೋ.

ಸುವೇದಿಸು (ಕ್ರಿ). ಚೆನ್ನಾಗಿ ತಿಳಿಯುವಂತಾಗು: ಮೂದಲಿಸಲುಂ ಪ್ರಾಣವಂಚಕನಾದವಂಗಂ ಲಿಂಗಭಕ್ತಿ ಸುವೇದಿ[ಕಾಕಾ. ಧಿ]ಸದು ಧನವಂಚಕಂಗೆ ಸುಸಾಧ್ಯವಾಗದದು (ಬಸಪು. ೩೯-೧೯). [ಸು + ವೇದಿಸು]

ಸುವ್ಯಕ್ತ (ನಾ). ೧. ಚೆನ್ನಾಗಿ ತಿಳಿಯಲ್ಪಡುವುದು ,— ವ್ಯಕ್ತವಾಗುವುದು: ಗುಪ್ತವ್ಯಯ ವಿನಿರ್ಮಳಭಕ್ತಿ ಸರ್ವಜನಂಗಳೊಳು ಸುವ್ಯಕ್ತವಾಯಿತು (ಬಸಪು. ೫೮-೬೬). ೨. ಪ್ರತ್ಯಕ್ಷವಾಗಿ ಗೋಚರಿಸುವವನು: ದನುಜರಿಪು ಸುವ್ಯಕ್ತನವ್ಯಕ್ತನು ಸದಸದ್ರೂಪನವ್ಯಯನೆನಿಪ ವಿಷ್ಣುವ ನೆನೆದು ವಿಸ್ತರಿಸಿದನು ಕಥೆಯ (ಕುವಾಳ. ೨-೧೦). [ಸಂ.]

ಸುವ್ಯವಸ್ಥಿತ (ಗು). ೧. ಚೆನ್ನಾಗಿ ವ್ಯವಸ್ಥೆಯಾದ ,— ಏರ್ಪಾಡಾದ . (ನಾ). ೨. ಚೆನ್ನಾಗಿ ವ್ಯವಸ್ಥೆಗೊಂಡುದು ,— ವ್ಯವಸ್ಥಿತವಾದುದು: ಚಿತ್ರಕಲಾ ಪ್ರದರ್ಶನವು ಸುವ್ಯವಸ್ಥಿತವಾಗಿ ಪ್ರದರ್ಶಿಸಲ್ಪಟ್ಟಿತು (ರೂಢಿ). [ಸಂ.]

ಸುವ್ಯವಸ್ಥೆ (ನಾ). ಒಳ್ಳೆಯ ಏರ್ಪಾಟು; ಉತ್ತಮವಾದ ವ್ಯವಸ್ಥೆ: ವ್ಯವಸ್ಥಿತವಾಗಿ ಅಡುಗೆ ಮಾಡಿದರಷ್ಟೆ ಸಾಲದು, ಅದನ್ನು ಬಡಿಸುವುದರಲ್ಲೂ ಸುವ್ಯವಸ್ಥೆಯಿರಬೇಕು (ಅಡುಗಾ. ೧೧೯). [ಸಂ. ಸುವ್ಯವಸ್ಥಾ]

ಸುವ್ರತ (ನಾ). ೧. ಧಾರ್ಮಿಕವಿಧಿಯನ್ನು ಸರಿಯಾದ ರೀತಿಯಲ್ಲಿ ಆಚರಿಸುವುದು. ೨. ಒಳ್ಳೆಯ ವಿಧಿ ; ಉತ್ತಮವಾದ ನೇಮ . ೩. ಧಾರ್ಮಿಕ ವಿಧಿಯನ್ನು ಸರಿಯಾದ ರೀತಿಯಲ್ಲಿ ಆಚರಿಸುವವನು; ನೇಮಸ್ಥ. ೪. [ಜೈನ] ಇಪ್ಪತ್ನಾಲ್ಕು ತೀರ್ಥಂಕರರಲ್ಲಿ ಇಪ್ಪತ್ತನೆಯ ತೀರ್ಥಂಕರನ ಹೆಸರು. ೨, ೪ : ವದನಂ ಚಂದ್ರಪ್ರಭಂ ವಿಕ್ರಮಭುಜನುಜಿತಂ ಪಾಣಿ ಪದ್ಮಪ್ರಭಂ . . . ಮತಿ ಪುರುಚರಿತಂ ಶೀತಲಂ ಸುವ್ರತಂ ತಾನದಱಿಂ ಪ್ರತ್ಯಕ್ಷತೀರ್ಥೇಶ್ವರನೆನೆ ನೆಗಟ್ಟಂ ಪದ್ಮನಾಭಪ್ರಧಾನಂ (ಅರ್ಧನೇ. ೧-೪೩); ಪುರುದೇವಾದಿಗಳೊಲಿಸಿದ ಪರಮ ಶ್ರೀವಧುವನೊಲಿಸಿಯುಂ ಪರವನಿತಾನಿರಪೇಕ್ಷನೆನಿಸಿದ ದೇವರ ದೇವಂ ಕುಡುಗೆ ಸುವ್ರತಂ ಸುವ್ರತಮಂ (ಯಶೋಚ. ೧-೧). [ಸಂ.]

ಸುವ್ರತೆ (ನಾ). ೧. ನೇಮವನ್ನು ನಿಷ್ಠೆಯಿಂದ ಆಚರಿಸುವವಳು. ೨. ಸಲೀಸಾಗಿ ಹಾಲು ಕೊಡುವ ಹಸು: "ಸುವ್ರತಾ, ಸುಖಸಂದೋಹ್ಯಾ — ೨ ಸುಲಭವಾಗಿ ಹಾಲು ಕರಿಯಲೀಸುವ ಆಕಳು, ಕಾಡದೇ ಕರಿಯುವ ಹಸುವು" (ಸಿದ್ಧಾಂಶಿ. ೨೯೫). ೩. [ಜೈನ] ಜಿನನ ತಾಯಿಯ ಹೆಸರು. ೨, ೩ : ಶ್ರೀಮದ್ವಯಾಮೂಲಧರ್ಮದವೊಲ್ ವಿಶ್ರುತ ಸುವ್ರತಾಚರಿತಮೇಂ ಚೆಲ್ವಾಯ್ತೊ ಗರ್ವಾಶ್ರಯಂ (ಲೀಲಾವ. ೫-೧೦೩). [ಸಂ. ಸುವ್ರತಾ]

ಸುವ್ವಲಾಲೆ , ಸುವಾಲಿ , ಸುವ್ವಲೆ , ಸುವ್ವಾಲೆ (ನಾ). ೧. ಶುಭಕಾರ್ಯಗಳಲ್ಲಿ ಹೆಂಗಸರು ಒಟ್ಟಿಗೆ ಹಾಡುವ ಹಾಡು; ಸೋಬಾನೆ: ಅವ್ವ ನೀವೇನನಾಡಿರಿ ಚಕ್ರವರ್ತಿಯ ಸುವ್ವಲಾಲೆಯನಾಡಿಸುವರು (ಭರಚ. ೫-೧೫೫). **ಸುವಾಲಿ**: ೨. ಒಂದು ಬಗೆಯ ಪದ,— ಹಾಡು: 'ತತ್ತ್ವಸುವಾಲಿ' ಪರಾ. **ಸುವ್ವಲೆ**: ೨. ಮೇಹುಗಾಡಿನೊಳವರ ಮೈ ಮಿಗೆ ಸೋಹಿದರೆ ಸುವ್ವಲೆಯ ಸುಬ್ಬಲೆಯಾಹವದಲೇ ತೋಳ ತೆಕ್ಕೆಯ ತೋಟಿ ತೇಗುಪೊಡೆ (ಕುವಾಉ.೧೩-೧೭). **ಸುವ್ವಾಲೆ**: ೨. ವಾದಿರಾಜನಾಳ್ವ ಹಯವದನ ತಾನೆ ಬೇಳ್ವ ಜಗ ಬಿರುದಿನ ಸುವ್ವಾಲೆಯ ಪದವಿದು (ವಾದೀ. ೧೫೩-೬೫). ೩. [ಸಂಗೀತ] ಒಂದು ರಾಗದ ಹೆಸರು: ಶ್ರೀರಾಗ ಸಾಳಂಗ ಭೂಪಾಳಿ ಕಾಂಬೋಧಿ ಭೈರವಿದ್ಯುಯ ದೇಶಿ ಕಲ್ಯಾಣಿ ಸುವ್ವಾಲಿ ಮಾಧವಿ ಶ್ರೀ ಶಂಕರಾಭರಣ . . . ಬತ್ತೀಸರಾಗಮಂ ಪಾಡುತ್ತಲೊಪ್ಪಿದರ್ಗಾಯಕಜನಂ (ಸಿದ್ಧಕಾ. ೩-೫).

[<— ತೆಲು. ಸುವಾಲ, ಸುವ್ವಾಲ, ಸುವ್ವಾಲು]

ಸುವ್ವಲೆ 'ಸುವ್ವಲಾಲೆ' ನೋ.

ಸುವ್ವಳಿಸು (ಕ್ರಿ). ಶಬ್ದಮಾಡು; ಕೂಗು(?) : ತೇರು ಶೃಂಗಾರವಾಗಿ ಬಾಗಿಲಿಗ ಬಂದಿದೆ ತಾಯಿ ನಿಮ ಪಯಣ ಕಳುವ(ಲಿ)ಬೇಕೆನುತಲೆ ಕಾಳಿ ಸುವ್ವಳಿಸಿ ಹಿಡಿದವೆ (ಸಾಪದ. ೨೦೦). [? + - ಇಸು]

ಸುವ್ವಾರ 'ಸುವಾರ' ನೋ.

ಸುವ್ವಾರಿ (ನಾ). ಅಡುಗೆ ಮಾಡುವವಳು; ಬೋನಗಿತ್ತಿ: ಕಿತ್ತಿದ ರತ್ನಾಭರಣ ಭೂಷಿತ ಬೋನಗಿತ್ತಿಯರ್ಸುವ್ವಾರಿಗಳಿಗೆ ಅತ್ಯಧಿಕಾರದಿ ನೀನಿರ್ಪುದೆಂದು ಕೈವರ್ತಿಸಿ ಕೊಟ್ಟಳಾಯಕಗೆ (ಮೋಹತ. ೧೦-೪೨); ತದುಕಿಲ ಸುಂಡೆ . . . ಗುಳ್ಳ ತಿಂತ್ರಿಣಿಯುಪ್ಪು ಗಾಯಿಗಳೆಲ್ಲ ಸುವ್ವಾರಿಯರು ಬಡಿಸಿದರು (ಆನಂದಾ. ೬-೨೫-೩೮).

[ಸುವ್ವಾರ (< ಸುವಾರ) + - ಇ]

ಸುವ್ವಾಲೆ 'ಸುವ್ವಲಾಲೆ' ನೋ.

ಸುವ್ವಿ (ನಾ). (ಕುಟ್ಟುವಾಗ, ಕೇರುವಾಗ ಮುಂತಾದ) ಸಂದರ್ಭಗಳಲ್ಲಿ ಹಾಡುವಾಗ ಬಳಸುವ ಹಾಡಿನ ಒಂದು ಸೊಲ್ಲು: ಚಂದನದೂರಳಲ್ಲಿ ಪೊಯ್ದು ಬಿದಿರಕ್ಕಿಯನುನ್ಮದದಂತಿದಂತದೊಂದೊನಕೆಯನೆತ್ತಿ ನುಣ್ಣನಿಯ ಸುವ್ವಿಯ ಗಾವರದೊಳ್ ತೊಡರ್ಚಿದೋಪನಿಗೆ ಪುಳಿಂದಿ ಪಾಡಿದಳ್ (ಲೀಲಾವ. ೬-೩೦); ಒರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿಚ್ಚಳಮನ ಸುವ್ವಿ ಕಾಡೊಡೆಯ ಸುವ್ವಿ ಮನೋಹರ ಸುವ್ವಿ ಸುವ್ವಿಯಂದಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂದಕಾಂತೆಯರ್ (ಗಿರಿ. ೧-೧೩೩); ಸುವ್ವಿ ಅಂದರೆ ತಿಳೀದೇ ಒನಕೇರಾಗ (ಗಾದ). 'ಸುವ್ವಾಲೆ' ಪರಾ.

[<— ತೆಲು. ಸುವ್ವಿ]

ಸುವ್ವಿಗೆಯ್ (ಕ್ರಿ). ಹಾಡು; ಪದಹೇಳು: ನನ್ನ ಭಾವನೆಯ ಕುಸುಮಗಳ ಮುಡ್ದಿಟ್ಟೆ ಮೂಸಿ ಸುವ್ವಿಗೆಯ್ಯುತಲಿದ್ದೆನಾಗ ನಿನ್ನನು ಮನದ ಕುಂಚಗಳ ಬೀಸಿ (ಪಯಣ. ೭೨-೪). [ಸುವ್ವಿ + ಕೆಯ್]

ಸುಶಬ್ದ (ನಾ). ೧. ಒಳ್ಳೆಯ ಶಬ್ದ. ೨. ವ್ಯಾಕರಣಶುದ್ಧವಾದ ಶಬ್ದ. ೧, ೨: ಅಡರ್ದ ಪಿತನಂತೆ ಲಕ್ಷಣ ಸುಶಬ್ದಮನೀವುದು (ಮಂಗರಾ. ೨-೬). [ಸಂ.]

ಸುಶಿಕ್ಷಿತ (ಗು). ೧. ಚೆನ್ನಾಗಿ ತರಬೇತಿ ಹೊಂದಿದ ,— ಪಳಗಿದ: ಚಿತ್ಕಾಲರು ಈಗಿನ ಕಾಲದ ಸುಶಿಕ್ಷಿತ ಕಲಾವಿದರು ಒಪ್ಪಲಿ, ಒಪ್ಪದಿರಲಿ ನವೀನಪ್ರಚ್ಛೆ ಅವರನ್ನು ಆಪರಿಸಿದ (ಅಪೋಲೀ. V ಮುಸ್ನುಡಿ). (ನಾ). ೨. ಚೆನ್ನಾಗಿ ತಿಳಿದವನು; ಉತ್ತಮ ಶಿಕ್ಷಣವನ್ನು ಪಡೆದವನು: "ಚತುರಂ ಪ್ರವೀಣಂ ಕುಶಲನಧಿಜ್ಞಂ ಸುಶಿಕ್ಷಿತನೆನಲ್ ದಕ್ಷಂ" (ವಂಗರಾ. ೬೬-೩); ಅವನು ಚಮತ್ಕಾರಶೂನ್ಯನಾದ ಬಡಾಯಿಗಾರ ಮಾತ್ರವಲ್ಲ, ಸುಶಿಕ್ಷಿತನಲ್ಲದ . . . ಆಡಂಬರವ್ಯಕ್ತಿಯೆಂದು ಆಗ ಪ್ರತಿಯೊಬ್ಬರಿಗೂ ಪುನದಟ್ಟಾಯಿತು (ಪುವರು. ೩೩೩). ೩. ಬಿಲ್ಲುವಿದ್ಯೆಯನ್ನು ಬಲ್ಲವನು; ಧನುರ್ವಿದ್ಯಾಪಾರಂಗತ: "ಕೃತಪುಂಖಃ, ಸುಶಿಕ್ಷಿತಃ — ಈ ೨ ಬಿಲ್ಲುವಿದ್ಯೆಯಂ ಬಲ್ಲವಂ" (ಪಲಾಯು. ೭೭-೩೧೭). [ಸಂ.]

ಸುಶಿಕ್ಷೆ (ನಾ). ಒಳ್ಳೆಯ ಶಿಕ್ಷಣ; ಉತ್ತಮವಾದ ತರಬೇತು: ಗುರುವೆ ದೀಕ್ಷೆ ಸುಶಿಕ್ಷೆಪೋಕ್ಕ ಕಾರಣಕರ್ತವಲ್ಲದಿನ್ನೋರ್ವರಿಲ್ಲ (ಮೃಲಾರ. ೧-೩). [ಸಂ. ಸುಶಿಕ್ಷಾ]

ಸುಶೀಲ (ಗು). ೧. ಒಳ್ಳೆಯ ನಡತೆಯ; ಸಚ್ಚಾರಿತ್ರದ. (ನಾ). ೨. ಒಳ್ಳೆಯ ನಡತೆ; ಸಚ್ಚಾರಿತ್ರ. ೩. ವ್ರತ; ನೇಮ: ಲೀಲೆಯಿಂ ಮಾಡುತ್ತ ಹಿಡಿದ ಸುಶೀಲಮಂ ನಡೆಸಲ್ (ಬಸಪು. ೨೭-೧೬). ೪. ಒಳ್ಳೆಯ ನಡತೆಯುಳ್ಳವನು: ಪವಿತ್ರಭಕ್ತಿ ಸುಶೀಲರಪ್ಪರು ಕೀರ್ತಿವೆತ್ತಿಹರು (ಬಸಪು. ೫೪-೮೫); ಸಿರಿಯನುಳ್ಳವನೇ ಸುಶೀಲನು (ಕುವಾಉ. ೩-೩೮). [ಸಂ.]

ಸುಶೀಲೆ (ನಾ). ಒಳ್ಳೆಯ ನಡತೆಯುಳ್ಳವಳು; ಸಚ್ಚಾರಿತ್ರ: ಸಂಗನ ಬಸವಂ ಕೆಲವು ದಿನಂಗಳಂ ಕಳೆದು ಸತ್ಕುಲ ಸಾದೃಶ್ಯ ಸುಶೀಲೆಯಪ್ಪ ಗಂಗಾದೇವಿ ಮಾಯಾದೇವಿಯರೊಡತಣ ವಿವಾಹಸಂಪದದಿಂ ಸಂತಸಸುಖಮಿರ್ದು (ಬಸರ. ೬-೨); ಮೇಲೆ ಬಿದ್ದು ಪೊರಳ್ದು ಭಕ್ತಿ ಸುಶೀಲೆ ಮುನಿನಾಥನ ಪದಪ್ರಕ್ಷಾಲನಂಗಯ್ದು (ಬಸಪು. ೫೨-೪). [ಸಂ. ಸುಶೀಲಾ]

ಸುಶೌಚಿ (ನಾ). ತುಂಬ ಶುಚಿಯಾಗಿರುವವನು; ಅತಿ ಶುಭ್ರತೆಯಿಂದ ಕೂಡಿರುವವನು: ಸುಶೌಚಿಗಳುಱ . . . ಶಿವನನೊಲಿಸಿದ ಮುನೀಶ್ವರರು ಕಣ್ಗೆಸೆದರು (ಪಚಕಾ. ೬-೩೬). [ಸಂ. ಸುಶೌಚಿನ್]

ಸುಶ್ರಾವ್ಯ (ಗು). ೧. ಕೇಳಲು ಹಿತಕರವಾದ: ಈತಂ ಸುಶ್ರಾವ್ಯಚರಿತ ನಖಿಳಮಂಗಳನಿಲಯಂ (ತತ್ವಪ್ರ. ೬-೪೧). (ನಾ). ೨. ಕಿವಿಗೆ ಇಂಪಾಗಿರುವುದು: ಕಾವ್ಯಮಿದು ಭುವನದೋಳ್ ಸಕಲಜನರಿಂದ ಸುಶ್ರಾವ್ಯಮಪ್ಪುದೆನ್ನ ವದನಾಬ್ಜದಲ್ಲಿ ನೀನೆ ವ್ಯಾಪಿಸಿರ್ದಮಲಸುಮತಿಯಂ ತಾಯೆನಗೆ ತಾಯೆ (ಚೈಮಿಭಾ. ೧-೪). [ಸಂ.]

ಸುಶ್ರುತ (ಗು). ೧. ಚೆನ್ನಾಗಿ ಕೇಳಿದ. (ನಾ). ೨. ವೇದಪಾರಂಗತ. ೩. ಆಯುರ್ವೇದಚಿಕಿತ್ಸಾಶಾಸ್ತ್ರವನ್ನು ಬರೆದ ಒಬ್ಬ ಋಷಿಯ ಹೆಸರು. 'ಚರಕ' ಹೋ. [ಸಂ.]

ಸುಶ್ರೋಣಿ (ನಾ). ಸುಂದರವಾದ ನಿತಂಬವುಳ್ಳವಳು; ಚೆಲುವೆ: ವಾಣಿ ಬೊಮ್ಮನ ರಾಣಿ . . . ಸುಶ್ರೋಣಿ . . . ಕಾಮಿತದಾನಿ ವರವೀಯೆ (ಕೌಶಿಕಾ. ೧-೨); ಬಂದಳಂಗಜನ ಜಯಸಿರಿ ತಾನೆನಲ್ಪ್ರಭಾವತಿಯೆನಿಪವನ ರಾಣಿ ಸುಶ್ರೋಣಿ ಸರ್ವವೇಣಿ (ಚೈಮಿಭಾ. ೧೧-೬). [ಸಂ. ಸುಶ್ರೋಣೀ]

ಸುಶ್ಲಕ್ಷ್ಣ (ಗು). ಒಳ್ಳೆಯ ನಯ, ನುಣುಪುಗಳಿಂದ ಕೂಡಿದ; ಚೆನ್ನಾಗಿ ಮೆರುಗುಗೊಂಡ: ಅಸಾಧ್ಯಶ್ಯಮುಂ ಧೃಶ್ಯಮುಮಾದ ಸುಶ್ಲಕ್ಷ್ಣ ಸುಧಾಭಿತ್ತಿ ಭಾಗಂಗಳಿಂದಮಪೂರ್ವಭಿತ್ತಿಯಂ ತಳೆದು (ಚಂದ್ರಪ್ರ. ೧೫-೭೦ ವ). [ಸಂ.]

ಸುಶ್ಲೋಕ (ನಾ). ಹೆಚ್ಚಿನ ಸ್ತುತಿಗೆ ಪಾತ್ರನಾದವನು: ಶ್ರೀಕರದಮಳದಿಗ್ಭರಿತ ಸುಶ್ಲೋಕನೆನಲೇಕಾಂತರಾಮಶಿವೈಕನಿಷ್ಠನು (ಬಸಪು. ೪೯-೨). [ಸಂ.]

ಸುಷಮ (ಗು). ೧. ಸಮನಾದ; ಸಮಾನವಾದ. ೨. ಸುಂದರವಾದ; ಚೆಲುವಾದ. (ನಾ). ೩. ಒಳ್ಳೆಯದು; ಶುಭವಾದುದು: "ಪ್ರಾಗ್ಯಂ . . . ಸುಷಮಂ, ವಾಮಂ, ಶುಭಂ, ಪೇಶಲಂ – ಈ ೨೯ ಒಳ್ಳಿತು" (ಪಲಾಯು. ೧೧೪-೪). ೪. [ಜೈನ] ಅವಸರ್ಪಿಣಿ ಕಾಲಭೇದಗಳಲ್ಲಿ ಒಂದು; ಸುಖವುಳ್ಳ ಕಾಲ: ಮಧ್ಯಮಭೋಗಭೂಮಿಸ್ಥಿತಿಯೊಳ್ ಮೂಱುಕೋಟಾಕೋಟಿ ಸಾಗರೋಪಮಪ್ರಮಾಣಂ ಸುಷಮಮೆಂಬ ಕಾಲಮುಂ (ಆದಿಪು. ೬-೪೮ ವ); ಒಂದರೊಳಗಾರಾರು ಕಾಲವು ಸಂದು ಸುಷಸುಷ ಸುಷಮ ಸುಷದುಷ . . . ಎಂಬ ಕಾಲಗಳು (ಬಿಜ್ಜಪು. ೮-೩೨); ಅವಸರ್ಪಿಣಿಕಾಲ. ಇದನ್ನು ಆರು ವಿಭಾಗಗಳಾಗಿ ವಿಂಗಡಿಸಲಾಗಿದೆ . . . ೨. ಸುಖವುಳ್ಳದು (ಸುಷಮ) (ಭಾರದ. ೧೭೧). 'ದುಷ್ಷಮ' ಪರಾ. [ಸಂ.]

ಸುಷಮದುಷ್ಷಮ (ನಾ). [ಜೈನ] ಅವಸರ್ಪಿಣಿ ಕಾಲದ ಒಂದು ಭಾಗ; ಹೆಚ್ಚು ಸುಖ ಮತ್ತು ಕಡಿಮೆ ದುಃಖವುಳ್ಳ ಕಾಲ: ಜಘನ್ಯಭೋಗಭೂಮಿ ಸ್ಥಿತಿಯೊಳು ಎರಡು ಕೋಟಾಕೋಟಿ ಸಾಗರೋಪಪ್ರಮಾಣಂ ಸುಷಮದುಷ್ಷಮವೆಂಬ ಕಾಲಮುಂ (ಆದಿಪು. ೬-೪೮ ವ); ಎರಡನೆಯ ಸುಷಮಕಾಲದ ಪೊರಯೊಳ್ ಮೂಱನೆಯ ಸುಷಮದುಷ್ಷಮಕಾಲಂ (ಪಂರಾಮಾ. ೧-೫೬). [ಸಂ.]

ಸುಷಮಸುಷಮ (ನಾ). [ಜೈನ] ಅವಸರ್ಪಿಣಿಕಾಲದ ಒಂದು ಭಾಗ; ಅತಿಸುಖವುಳ್ಳ ಕಾಲ: ನಾಲ್ಕುಕೋಟಾಕೋಟಿ ಸಾಗರೋಪಮ ಪ್ರಮಾಣಂ ಸುಷಮಸುಷಮಮೆಂಬ ಕಾಲಮುಂ (ಆದಿಪು. ೬-೪೮ ವ); ಕಾಲಂ ಪ್ರವರ್ತಿಕುಂ ಸುಷಮಸುಷಮಮೆಂಬೀ ಪೆಸರಿಂ (ಪಂರಾಮಾ. ೧-೫೫); ಅವಸರ್ಪಿಣಿಕಾಲ. ಇದನ್ನು ಈ ಕೆಳಗೆ ಕಂಡಂತೆ ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ೧. ಅತಿಸುಖವುಳ್ಳದು (ಸುಷಮಸುಷಮ) (ಭಾರದ. ೧೭೧). 'ದುಷಮದುಷಮ' ಪರಾ. [ಸಂ.]

ಸುಷಮಸುಷಮೆ (ನಾ). = ಸುಷಮಸುಷಮ: ಅವಸರ್ಪಿಣಿಯ ಕಾಲಂ ಸುಷಮಸುಷಮೆಯುಂ ಸುಷಮದುಷ್ಷಮೆಯುಂ . . . ಅಕ್ಕುಂ (ಅಜಿಪು. ೩-೧೫ ವ); ಉತ್ಸರ್ಪಿಣಿ ಸುಷಮಸುಷಮೆಯುಂ ಸುಷಮೆಯುಂ ಸುಷಮದುಷ್ಷಮೆಯುಂ . . . ಅಕ್ಕುಂ (ಚಂದ್ರಪ್ರ. ೧೬-೧೬ ವ). [ಸಂ. ಸುಷಮಸುಷಮಾ]

ಸುಷಮೆ (ನಾ). ೧. ಅತ್ಯಂತ ಚೆಲುವು, — ಶೋಭೆ: "ದಾ(ಧಾ)ರಾ, ಶೋಭಾ . . . ಸುಷಮಾ – ಈ ೫ ಶೋಭೆ" (ಪಲಾಯು. ೧೩-೪೧೧). ೨. = ಸುಷಮ ೪: ಉತ್ಸರ್ಪಿಣಿ ಸುಷಮಸುಷಮೆಯುಂ ಸುಷಮೆಯುಂ ಸುಷಮದುಷ್ಷಮೆಯುಂ . . . ಅಕ್ಕುಂ (ಚಂದ್ರಪ್ರ. ೧೬-೧೬ ವ). 'ದುಷ್ಷಮೆ' ಪರಾ. [ಸಂ. ಸುಷಮಾ]

ಸುಷಿರ (ಗು). ೧. ತೂತಿರುವ; ರಂಧ್ರದಿಂದ ಕೂಡಿದ. (ನಾ). ೨. ರಂಧ್ರ; ತೂತು: "ನಿಮ್ಮಂ . . . ಸುಷಿರಂ . . . ದರಃ– ಈ ೧೫ ಕುಳಿ" (ಪಲಾಯು. ೧೦೩-೨); ನಿನ್ನಂತುಸ್ಸುಷಿರದಿನುತ್ಸನ್ನಂಗಳ್ ಪ್ರಾಣವಾಯುಗಳ್ (ಎಷ್ಟಪ್ರ. ೧-೩-೧೨೩). ೩. ಕೊಳಲು, ನಾಗಸ್ವರ ಮೊದಲಾದ, ಬಾಯಿಂದ ಊದಿ ನುಡಿಸುವ ವಾದ್ಯವಿಶೇಷ: ತತ ಘನ ಸುಷಿರಾನದ್ಧವಾದ್ಯಂಗಳ್ (ಆದಿಪು. ೫-೩೫); ತತ ವಿತತ ಘನ ಸುಷಿರ ಭೇದದಿಂ ಚತುರ್ವಿಧಂ ವಂಶ ಶಂಖ ಕಾಹಲಾದಿ ನಿಮಿತ್ತಂ ಸುಷಿರಮೆಂಬುದಕ್ಕುಂ (ತತ್ತ್ವಪ್ರ. ೨೪೩). [ಸಂ.]

ಸುಷಿರವಾದ್ಯ (ನಾ). = ಸುಷಿರ ೩: ಸುಷಿರವಾದ್ಯಮೆನೆ ಮೊಱಗಿದುವಮರರ ವಿತತತತಘನಾನಕಂ (ಶಾಂತಿಪು. ೪-೫೬). [ಸಂ.]

ಸುಷುಪ್ತ (ಗು). ೧. ಗಾಢವಾಗಿ ನಿದ್ರಿಸಿರುವ. (ನಾ). ೨. ಜಾಗ್ರತೆ, ಸ್ವಪ್ನ, ಸುಷುಪ್ತಿ ಎಂಬ ಮೂರುಅವಸ್ಥೆಗಳಲ್ಲಿ ಒಂದು; ಮೈಮರೆತ ಸ್ಥಿತಿ; ನಿದ್ರಾವಸ್ಥೆ: ಗರ್ಭಾಂಡಜ ಮೂರ್ಛಿತ ಸುಷುಪ್ತಾದ್ಯವಸ್ಥೆಗಳ್ (ತತ್ತ್ವಪ್ರ. ೯೯). [ಸಂ.]

ಸುಷುಪ್ತಿ (ನಾ). = ಸುಷುಪ್ತ ೨: ಜಾಗ್ರತ್‌ಸ್ವಪ್ನಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ ತಲೆದಂಡ (ಬಸವ. ೬೯೩); ಜಾಗ್ರತ್ಸ್ವಪ್ನಸುಷುಪ್ತಿಯವಸ್ಥಾತ್ರಯಂಗಳೊಳು (ಬಸರ. ೮-೧೪); ಪ್ರಾಣಿಯು ಮಲಗಿರುವಾಗ ಆಶೆ ಸ್ವಪ್ನ ಇತ್ಯಾದಿ ಯಾವುದನ್ನೂ ಅನುಭವಿಸದ ಅವಸ್ಥೆಯೇ ಸುಷುಪ್ತಿ (ಜೀವಾತ್ಮ. ೧೨೮). [ಸಂ.]

ಸುಷುಪ್ತಿಗೊಳ್ (ಕ್ರಿ). ಗಾಢವಾಗಿ ಅಡಗಿರು: ಪ್ರಸಾದಿಯಾದಡೆ ವಹ್ನಿಯಂತಿರಬೇಕು ಪ್ರಾಣಲಿಂಗಿಯಾದಡೆ ಸುಷುಪ್ತಿಗೊಂಡ ವಿಷದಂತಿರಬೇಕು (ಮೋಳಿಗೆ. ೧೪೩-೫೪೮). [ಸುಷುಪ್ತಿ + ಕೊಳ್]

ಸುಷುಮ್ನೆ (ನಾ). ಇಡಾ, ಪಿಂಗಳಾ, ಸುಷುಮ್ನಾ ಎಂಬ ದೇಹದ ಪ್ರಮುಖ ನಾಡಿಗಳಲ್ಲಿ ಒಂದು; ಬೆನ್ನುಹುರಿಯಲ್ಲಿರುವ ನಾಡಿ: "ಇಡಾ ಪಿಂಗಳ ಸುಷುಮ್ನಮಕ್ಕುಂ" (ಪಂಗರಾ. ೧೬-೧೩); ಆಸನವ ಬಲಿದಸು ಸುಷುಮ್ನದಿ ಸೂಸೆ ಸಿರದಲಿ ನಡೆಸಿ ಮೆಲ್ಲನೆ ಲೇಸನಿಪ ನಿಜಬ್ರಹ್ಮರಂಧ್ರದಿ ನಡೆದು (ಅಮೃತ. ೨-೯೯). [ಸಂ. ಸುಷುಮ್ನಾ]

ಸುಷುಮ್ನನಾಳ (ನಾ). = ಸುಷುಮ್ನೆ: ಮತಿಗೆ ಮಹಾಘನವಪ್ಪ ಸುಷುಮ್ನನಾಳದ ಸುಯಿಧಾನವ ಪ್ರಮಾಣಿಸಬಾರದು (ಅಪಚಂ. ೬೨-೨೭೩). [< ಸಂ. ಸುಷುಮ್ನಾನಾಲ]

ಸುಷುಮ್ನಾನಾಡಿ (ನಾ). = ಸುಷುಮ್ನೆ: ಆ ಸುಷುಮ್ನಾನಾಡಿಯಲಿ ಕಾಳಾಶಿಸಿದ ಪವನನ ಸಮಾಧಿವಿಳಾಸನೆಸೆದನು ಸೌಖ್ಯಭಾವದ ಜಡಿವ ಝೊಮ್ಮಿನಲಿ (ಕುವ್ವಾದ್ರೂ. ೧೮-೬೯). [ಸಂ.]

ಸುಷುಮ್ನಾನಾಳ (ನಾ). = ಸುಷುಮ್ನೆ: ಇಡಾ ಪಿಂಗಳಾ ಸುಷುಮ್ನಾನಾಳವಿಡಿದು ಅಱಿದೆಹನೆಂದಡೆ ಕೂಡಲಸಂಗಮದೇವ ಮೂಗ ಕೊಯ್ದ ಮಾಣ್ಪನೆ (ಬಸವ. ಕ. ೭೯೯). [ಸಂ. ಸುಷುಮ್ನಾನಾಲ]

ಸುಷುಮ್ನೆ (ನಾ). ೧. = ಸುಷುಮ್ನೆ: ಸುಷುಮ್ನೆಯೆಂಬ ಮಧ್ಯನಾಡಿಯೇ ಅಗ್ನಿಯೆಂದು ಸರಸ್ವತಿನದಿಯೆಂದು ಪೇಳಲ್ಪಡುವುದು (ಅಖಂಡೇ. ೨೧೮-೫೮); ಎಡದ ಹಿಂಬಡವನ್ನು ವೃಷಣ ಗುದಗಳ ಮಧ್ಯದಲ್ಲಿರುವ ಆಧಾರಚಕ್ರದಲ್ಲಿಯ ಸುಷುಮ್ನೆಗೆ ಒತ್ತಬೇಕು (ಪರಪ. ೯೪). ೨. (ಚಂದ್ರನಿಗೆ ಶಾಖವನ್ನು ಕೊಡುವುದೆಂದು ನಂಬಲಾದ) ಸೂರ್ಯನ ಏಳು ಪ್ರಮುಖ ಕಿರಣಗಳಲ್ಲಿ ಒಂದು: ಸುಷುಮ್ನೆಯೆಂಬ ಕರದಿಂ ಗಡ ಚಂದ್ರಕಲಾಕಲಾಪಮಂ ಕಾಲದೊಳಂಶುಮಾಲಿ ತೆಗೆದೀಂಟುವನೆಂಬುದಸತ್ಯಂ (ಕಾದಂಪೂ. ೭೪೪); ಸೂರ್ಯನು ಸುಷುಮ್ನೆಯೆಂಬ ಕಿರಣದಿಂದ ಪಾನವ ಮಾಡುವನು (ಪಚಕಾ. ೧೫). [ಸಂ. ಸುಷುಮ್ನಾ]

ಸುಪೆ (ನಾ). ತಾಯಿ; ಜನನಿ: "ಜನನಿ ಮಾತೃ ಸವಿತ್ರಿಯಂಬೆ ಸುಪೆಯೆನೆ ತಾಯಿ" (ಮಂಗರಾ. ೯೧-೯). [ಸಂ.?]

ಸುಪೇಣಿ (ನಾ). ಒಂದು ಬಗೆಯ ಸಸ್ಯ. [ಸಂ. ಸುಪೇಣೇ]

ಸುಪೇಣಿಕೆ (ನಾ). ಒಂದು ಬಗೆಯ ಸಸ್ಯ; ಕರಿಯ ತಿಗಡೆ: "ಶ್ಯಾಮಾ . . . ಸುಪೇಣಿಕಾ . . . ಕಾಲಮೇಷಿಕಾ – ೭ ಕರಲಾಲ್ ತಿಗಡೆ" (ಸಿದ್ಧಾಂತಿ. ೧೩೬).

[ಸಂ. ಸುಪೇಣಿಕಾ]

ಸುಪ್ತು$_1$ (ನಾ). ೧. ತಕ್ಕವನು; ಸಮರ್ಥ: ನಮ್ಮ ಪಡೆಯಂ ಕಾವನ್ನರಿನ್ನಾರೊ ಸು[ಪ್ತೀ]ತಂ[ವಾಶಾಂ. ಪ್ಸಯ್ತಂ, ಪ್ಸೈತಂ, ಪ್ಸೇತಂ] ಕಾವೊಡೆ ಕರ್ಣನಕ್ಕುಂ (ಪಂಪಭಾ. ೧೧-೫೨). ೨. ದಕ್ಷತೆಯಿಂದ ಕೂಡಿದುದು: ಯಾವ ಹಣದ ಪೇಟೆಯಾಗಲಿ ಸುಪ್ತುವಾಗಿದೆಯೆ (ಹಣಪ್ರ. ೩೧೨). [ಸಂ.]

ಸುಪ್ತು$_2$ (ಅ). ೧. ಚೆನ್ನಾಗಿ; ಸರಿಯಾಗಿ: ಮರುತಾತ್ಮಜನನಿಂಗಿತದಿ ನೋಡಿ ನಸುನಗುತೆ, ಮತ್ತೆ ಮರ್ತ್ಯತ್ವದೊಳ್ ಸುಪ್ತು ಸಂಸ್ಥಿತನಾಗಿ ಕೇಳ್ದನ್ ಕಪೀಂದ್ರನಂ (ಶ್ರೀರಾಮಾ. ೮೧೪-೯೯). ೨. ಅಧಿಕವಾಗಿ. ೩. ಯೋಗ್ಯವಾಗಿ. ೪. ನಿಶ್ಚಯವಾಗಿ.

[< ಸುಪ್ತು$_1$]

ಸುಸಂಗ (ನಾ). ೧. ಒಳ್ಳೆಯ ಒಡನಾಟ, — ಸಹವಾಸ: ದೇಹ ಹುಟ್ಟುವಾಗ . . . ಕಸ್ತುರಿಯ ಶುಕ್ಲದ ತೆಱ ಕದಳಿಯ ಕರ್ಪೂರದ ತೆಱ ಬಂದುದಕ್ಕೆ ಸಂದೇಹವ ಮಾಡಲಿಲ್ಲ ನಿರಂಗ ನಿರಂತ ಸುಸಂಗ (ಮೋಳಿಮಾ. ೪-೧೨). ೨. ಒಳ್ಳೆಯ ಸಮಾಜ, — ಸಂಘ: (ಕ). [ಸಂ.]

ಸುಸಂಗಿ (ನಾ). ಒಳ್ಳೆಯ ಸಂಗವನ್ನು ಹೊಂದಿರುವವನು: ಕುಚಿತ್ತರ ಸಂಗ ಸುಸಂಗಿಗೆ ಸಂಗಡವಿಲ್ಲ (ಬಸವ. ೬೩೭); ಲಿಂಗವು ಭಕ್ತಿಯ ಶ್ರದ್ಧೆಗೆ ವಿಶ್ವಾಸದ ಸುಸಂಗಿಗೆ ನಿಶ್ಚಯವಪ್ಪ ಲಿಂಗಿಗೆ ದೃಷ್ಟವಪ್ಪುದು (ಮದೇವ. ೨೮೧-೪೭). [ಸಂ. ಸುಸಂಗಿನ್]

ಸುಸಂಧಿ (ನಾ). ಒಳ್ಳೆಯ ಅವಕಾಶ, — ಸಮಯ: ನೀನು ಇಷ್ಟಬಂದ ಹಾಗೆ ಪ್ರಾಬಲ್ಯ ನಡೆಯಿಸಬಹುದು. ಇಂಥವನೇಕ ಸುಸಂಧಿಗಳನ್ನು ನೀನು ದೊರಕಿಸಿಕೊಳ್ಳಬಹುದು (ಹೇಮಂತ. ೨೩೪). [ಸಂ.]

ಸುಸಂಬದ್ಧ (ಗು). ೧. ಒಪ್ಪವಾಗಿ ಕೂಡಿಸಿದ; ಸೂಕ್ತವಾಗಿ ಜೋಡಿಸಿದ. (ನಾ). ೨. ಸರಿಯಾದ ಹೊಂದಿಕೆ, — ಜೋಡಣೆ; ತರ್ಕಶುದ್ಧವಾದುದು: ಒಂದರಡು ಪದಗಳಲ್ಲಿನ ಒಂದೋ ಎರಡೋ ಪ್ರಾಚೀನ ಪದಗಳಿಗೆ ಅಲ್ಪ ಸ್ವಲ್ಪ ಸಾಮ್ಯ ಅಥವಾ ಸಾದೃಶ್ಯವಿರುವಂತೆ ತೋರಿದರೂ ಅವುಗಳಲ್ಲಿ ಸುಸಂಬದ್ಧವಾದ ಕ್ರಮವಿರುವುದಿಲ್ಲ (ದ್ರಾವಿವಿ. ೨೬೪). [ಸಂ.]

ಸುಸಂಸ್ಕೃತ (ಗು). ೧. ಉತ್ತಮವಾದ ಸಂಸ್ಕಾರವುಳ್ಳ: ಸುಂದರ ಸುಸಂಸ್ಕೃತ ಲತಾಂಗಿಯರ ಸಿರಿಗೈಯ ಹೊಂಗೊಡದ ಪನ್ನೀರ ತುಂತುರೆರಚುಗಳಿಂದ . . . ಮೆರೆದುದಯ್ (ಶ್ರೀರಾಮಾ. ೭-೧೭೦). (ನಾ). ೨. ಒಳ್ಳೆಯ ಸಂಸ್ಕೃತಿಯಿಂದ ಕೂಡಿದವನು: ಸುಸಂಸ್ಕೃತರು ಆತ್ಮಶಕ್ತಿಯನ್ನು ಮರೆತು ಪೂರ್ಣವಾಗಿ ದೈವವನ್ನೇ ನಂಬಬೇಕಾಯಿತು (ಋಕ್ಸಾರ. ೧೦೧ ಪೀಠಿಕೆ). [ಸಂ.]

ಸುಸಜ್ಜಿತ (ಗು). ೧. ಉತ್ತಮವಾಗಿ ಸಜ್ಜಾದ. (ನಾ). ೨. ಚೆನ್ನಾಗಿ ಸಜ್ಜಾದುದು: ವಿಶೇಷ ಪರಿವಾರವೂ ಸುಸಜ್ಜಿತವಾಗಿ ಹುರಿಗೊಂಡ ಪೌಜೂ ಇಲ್ಲದೆ ಎಂದೂ ಅತ್ತ ಬಂದುದಿಲ್ಲ (ಬಿರುಗಂ. ೩೩-೨೪); ತಾನೊಂದು ಸುಸಜ್ಜಿತವಾದ ಕೊಠಡಿಯಲ್ಲಿ . . . ಮಲಗಿದ್ದಳು (ಕಮಕು. ೮೮). [ಸಂ.]

ಸುಸಜ್ಜಿತೆ (ನಾ). ಚೆನ್ನಾಗಿ ಶೃಂಗಾರಗೊಂಡವಳು: ಸುಂದರಿಯು ಸುಸಜ್ಜಿತೆಯಾಗಿದ್ದಳು (ದೇಪೀಚೌ. ೭೮). [ಸಂ. ಸುಸಜ್ಜಿತಾ]

ಸುಸಮಯ (ನಾ). = ಸುಸಂಧಿ: ಮನೋಹರವಾದ ಸುಸಮಯದಲ್ಲಿ . . . ಬಂದನು (ಮಂಜುಕ. ೩). [ಸಂ.]

ಸುಸರ$_1$ (ನಾ). ಇಂಪಾದ ಧ್ವನಿ; ಮಧುರವಾದ ಧ್ವನಿ: 'ಸುಸರಿಕೆ' ಪರಾ.

[< ಸಂ. ಸುಸ್ವರ]

ಸುಸರ$_2$ (ನಾ). ೧. ಸುಗಮ; ಸುಲಭ; ಸರಾಗ: ಆನಿವಂದಿರನಾದರಿಸಿ ಪಸರಂಗೊಟ್ಟೆನಪ್ಪೊಡೆನಗೆ ಸುಸರಮಾಗಿ ಬೆಸಕೆಯ್ಯಲಱಿಯರ್ (ಸುಕುಮಾ. ೨-೫೨ ವ); ತಿದ್ದುವ ಸುಂಕ ಸುಸರ (ಶಿವಗೀ. ೧೮೯-೬೪೬); ಸುಸರದಿಂದಾಧ್ಯಾತ್ಮವಿದ್ಯೆಯನಱಿಯಬೇಕು (ನಿಘಾಗ. ೧೧-೧೬-೪೩). ೨. ಪರಸ್ಪರ ಸ್ನೇಹ, — ಹೊಂದಾಣಿಕೆ: ಅಸಗರಿಗೆ ಸವಣರಿಗೆ ಸಂಬಂಧಿಸುವುದೇ ಕೆಳೆ ಹುಳಿಗ ಹಾಲಿಗೆ ಸುಸರವಹುದೆ (ಬಸಪು. ೨೮-೩೮). ೩. ಒಡನಾಡಿ; ಬಂಧು: ದಸರಸುಜನರ ಸುಸರ ಭಕ್ತಪ್ರಸರ ಸೇವಾವಸರಶಕ್ತ (ಬಸಪು. ೩೮-೫೨). [ಸಂ.?]

ಸುಸರತನ (ನಾ). ಧ್ವನಿಯ ಮಾಧುರ್ಯ: ವೀಣೆಯ ಕೆಳೆಯ ಕೆಳೆಯೊಳ್ಪಳವೇಱಿ ಲುಳಿಯಿಸಿ ಪಿರಿಯ ದನಿಯೊಳ್ತಸರಿಯ ಸುಸರತನಮುಂ ಮುಹರಿಯ ಮಧುರತೆಯುಂ ಬೀಣೆಯ ಬಹುಲಿಕೆಯುಂ ಎಸೆಯೆ (ಪರ್ಧಪು. ೯-೩೪). [ಸುಸರ$_1$ + - ತನ]

ಸುಸರಿಕೆ (ನಾ). ಇಂಪಾದ ಧ್ವನಿ, — ಶಬ್ದ: ವಾಹಕರ ಪಾಣಿಪಲ್ಲವದಿಂ ನೇತ್ರವಟ್ಟೆಯ ನೇಣನೊಯ್ಯನಿಪ್ಪೆ ತೆಗೆದು ಝಂಕಾರದ ಸುಸಿಸಱರಿಕೆಯಂ ನೋಡಿ (ಶಾಂಶಿಶ. ೭-೯೩ ವ). [ಸುಸರ$_1$ + - ಇಕೆ]

ಸುಸಾಧ್ಯ (ಗು). ೧. ಸುಲಭವಾಗಿ ಪರಿಣಾಮವನ್ನುಂಟುಮಾಡುವ. (ನಾ). ೨. ಕಷ್ಟವಿಲ್ಲದೆ ಸಾಧಿಸಬಹುದಾದುದು: ಧನವಂಚಕರಿಗೆ ಸುಸಾಧ್ಯವಾಗದುದು ಆದಿ ಜಂಗಮಭಕ್ತಿ (ಬಸಪು. ೩೯-೧೯). [ಸಂ.]

ಸುಸಿರ (ನಾ). ರಂಧ್ರ; ತೂತು: ಸಸಿಯ ಬೆಸದಿನಸಿಯೇಱಿಂಗೆ ಬಂದ ಸುಟ್ಟುಂಬೆಸಕಾಱನಂತಸಿದನೆ ಸುಸಿರದಿಂ ಪೊಕ್ಕು (ಚಂದ್ರಪು. ೮-೪೩ ವ). [< ಸಂ. ಸುಷಿರ]

ಸುಸಿಲ್, ಸುಸಿಲು (ನಾ). ೧. ಕೂಟ; ಸಂಭೋಗ: "ಸುಸಿಲ್ – ಸಂಭೋಗಂ, ಪ್ರಭಾತಕಾಲಂ" (ಶಮದ. ಪರಿ. ೨); ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ಪೊಂದು ಗೇಯಮುಂ . . . ಮನಂಗೊಂಡಿರ (ಪಂಪಭಾ. ೪-೩೧); ಮೆಯ್ಯೇದೆಯ ದಾಱದಿಂತು ಸುಸಿಲಿಂದಾ ಪಾಣ್ಟೆಯರ್ ಪಿಂಗಿದರ್ (ಕುಸುಮಾ. ೪-೩೭). ೨. ಬೆಳಗಿನ ಸಮಯ; ಉಷಃಕಾಲ: "ಸುಸಿಲ್ – ಸಂಭೋಗಂ; ಪ್ರಭಾತಕಾಲಂ" (ಶಮದ. ಪರಿ.೨). **ಸುಸಿಲು**: ೧. ಸವಿಸುಸಿಲನುಂಡು ವಿಲಾಸಿಗಳು ನಾನಾವಿನೋದದಿ ಸುಖದಲಿರುತಿಹರು (ಸಾಳ್ವಭಾ. ೨೩-೬೫); ಹೊಸ ಹರೆಯ ಹೊಸ ಸುಸಿಲ ಹುಚ್ಚು ಸಂಗತಿಗಳನು (ಕರುಶ್ರಾ. ೧೧-೯). ೨. "ಸುಸಿಲು ಪೊಟ್ಟಱೆಯೆನಲ್ಕಿವು ಪೆಸರಿಂ ಕವಿಯುದಯಕಾಲ" (ಕವಿಕಂ. ೨೬೨); ನೋಡು ಎಂತಿದೆ ಸುಸಿಲು! ಹಸುರ ಮೇಲೆಳಬಿಸಿಲು (ಪಾಂಚಜ. ೫೧-೧).

ಸುಸಿಲಾಡು (ಕ್ರಿ). (ಆಲಂ) ಸರಸವಾಡು: ನೊಸಲು ನೊಸಲಿನಲಿರಿಸಿ ಸುಸಿಲಾಡುವುವು ಹೂವು ಹೊಳೆನೀರ ಬಳಿಗೆ (ಉಯ್ಯಾಲೆ. ೯-೧).

[ಸುಸಿಲು (< ಸುಸಿಲ್) + ಆಡು$_1$]

ಸುಸಿಲು 'ಸುಸಿಲ್' ನೋ.

ಸುಸಿಲುಣ್ (ಕ್ರಿ). ಸಂಭೋಗಸುಖವನ್ನು ಅನುಭವಿಸು; ರತಿಸುಖವನ್ನು ಪಡೆ: ತರುಣಿ ವನಜನಾಭನ ಸೂಳ್ಗೆ ಸತ್ಯೆಯ ವಿನುತರೂಪಿಂ ಪೋಗಿ ಮಿಗೆ ತಣ್ಣನೆ ತಣಿಯೆ ಸುಸಿಲುಂಡು ಮುದ್ರಿಕೆದೆಗೆಯೆ ಹರಿ ಕಂಡ (ಸಾಳ್ವಭಾ. ೩೧-೩).

[ಸುಸಿಲು (< ಸುಸಿಲ್) + ಉಣ್]

ಸುಸಿಲೆಸಗು (ಕ್ರಿ). ಕೂಡು; ಸಂಭೋಗಿಸು: ಸುಸಿಲಸಗಿ ಬಳಲ್ದು ಬಸವಳಿದು (ರಾಜಶೇ. ೨-೮ ವ); ಚುಂಬಿಸಿ ನಾಣಳಿಯೆ ಸುಸಿಲೆಸಗುವ ಚಾಣ (ಇಚಸಾಂ. ೯-೬೩).

[ಸುಸಿಲು (< ಸುಸಿಲ್) + ಎಸಗು$_1$]

ಸುಸೂತ್ರ (ಗು). ೧. ಅಡೆತಡೆಯಿಲ್ಲದ; ಸರಾಗವಾದ: ದೇಹದ ಸುಸೂತ್ರ ಕಾರ್ಯಕ್ರಮಕ್ಕೆ ಭಂಗ ತರಬಹುದು (ಮನೋಸಂ. ೨೨೦). (ನಾ). ೨. ತೊಡಕಿಲ್ಲದಿರುವುದು; ಸುಲಭ; ಸಲೀಸು: ನಿನ್ನಿಂದ ನಮಗೆ ಸುಸೂತ್ರವಹುದು (ತೊರರಾ. ೧-೯-೨೧); ಅದನ್ನು ಸುಸೂತ್ರವಾಗಿ ಸಾಧಿಸಬಹುದು (ಇಪ್ರಕ. ೩೫೫).

[ಸಂ.]

ಸುಸ್ಕ (ನಾ). ಶುಲ್ಕ (?): ಅಲ್ಲಿ ನುಡಿದ ಮಳೆಯೊಳಗಿಹನಿವನಾರೂ ಇಲ್ಲಿ ಸುಸ್ಕದ ಪೊರೆಯಾಕೆ ಮೆಲ್ಲನೆ ಮಾತನಾಡಿದನು ಸುಸ್ಕವ ತಂದಿಲ್ಲದೆ ಉಣವಿಲ್ಲವೆಮಗೆ (ನನ್ನಕಾ. ೯-೫೨). [?]

ಸುಸ್ಕಾರ (ನಾ). ನಿಟ್ಟುಸಿರು: ತಾಯ ಬಾಯಿಂದ ದೊಡ್ಡ ಸುಸ್ಕಾರವೊಂದು ಹೊರಟಿತು (ಮೂರುದಾ. ೧೧೬). [<— ಮರಾ. ಸುಸ್ಕಾರ, ಸುಸಕಾರ]

ಸುಸ್ತಿ (ನಾ). ೧. ನಿಧಾನ; ತಡಮಾಡುವಿಕೆ: "ಸುಸ್ತಿ-ತಡ, ಆಲಸ್ಯತನ" (ಚಾನಕೋ. ೫೦); ನೀವು ಬಹಳ ತಡಮಾಡುತ್ತೀರಿ; ಇಷ್ಟು ಸುಸ್ತಿ ಯಾಕೆ? (ಮುಂಬಯ್ಯಾ. ೨೨೦). ೨. ಸಾಲ ಕಟ್ಟಲು ತಡಮಾಡಿದುದಕ್ಕಾಗಿ ಕೊಡುವ ಬಡ್ಡಿ: 'ಸುಸ್ತಿಬಡ್ಡಿ' ಪರಾ. [< ಪ್ರಾ. ಸುಸ್ತ, ಸುಸ್ತೀ; ಮರಾ. ಸುಸ್ತ, ಸುಸ್ತಾ, ಸುಸ್ತೀ, ಸುಸ್ತಾಈ]

ಸುಸ್ತಿಗಾರ (ನಾ). ನಿಧಾನಮಾಡುವವನು; ಆಲಸಿ: (ಕ).

[ಸುಸ್ತಿ + - ಗಾರ (< - ಕಾಱ)]

ಸುಸ್ತಿಗೊಳ್ (ಕ್ರಿ). ಆಯಾಸ ಹೊಂದು; ದಣಿ: ಚಾಪಾರ್ಧದಿಂ ತಿರುಹಿ ಪೂಡೆಯ ವಜ್ರಾಯುಧದಿ ಗಿರಿಯ ಪೊಯ್ದಂತೆ ಮಸ್ತಕವಡೆದು ಸುಸ್ತಿಗೊಂಡು (ನವಮೋ. ೧೨-೮೦).

[ಸುಸ್ತಿ + ಕೊಳ್]

ಸುಸ್ತಿಬಡ್ಡಿ (ನಾ). ಸಾಲ ಕಟ್ಟಲು ತಡಮಾಡಿದುದಕ್ಕಾಗಿ (ಅಸಲಿನ ಮೇಲೆ) ಕೊಡುವ ಬಡ್ಡಿ: ಸುಸ್ತಿಬಡ್ಡಿಯನ್ನು ವಸೂಲಿ ಮಾಡಿಕೊಂಡು (ಗ್ರಾಮಾಕ. ೭೭).

[ಸುಸ್ತಿ + ಬಡ್ಡಿ]

ಸುಸ್ತು (ನಾ). ೧. ಚಲಿಸದಿರುವುದು; ಜಡತೆ; ಆಲಸ್ಯ. ೨. ಆಯಾಸ; ಬಳಲಿಕೆ; ದಣಿವು: ಪಾಪ ಅವರ ಸುಸ್ತು ಆ ಚೆಂಡು ಬಂದ ನಿಧಾನದಲ್ಲಿಯೇ ಗೊತ್ತಾಗುತ್ತಿದ್ದಿತು (ಕೊನಷ್ಟ. ೨೧); ದ್ರುಪದನ ಬಿಲ್ಲುಪಣವನ್ನು ಗೆಲ್ಲಲು ಕ್ಷತ್ರಿಯರೆಲ್ಲಾ ಸೆಣಸಿ ಸುಸ್ತುಹೊಡೆದು ನಿಸ್ತೇಜರಾದಾಗ (ಜಗದಾ. ೨೪೬).

[<— ಪಾರ. ಹಿಂ. ಮರಾ. ಸುಸ್ತ್]

ಸುಸ್ತೆ (ನಾ). (?): ಮಾರೆ ಹಿಡಿದು ಸುಸ್ತೆವ ವನ್ದುವಲು ಈಯರ್ಧಕೆ ಮೀರಿದರಾದಡೆ ಚಕ್ರವರ್ತ್ತಿ ಶ್ರೀವೀರನಾರಸಿಂಹದೇವರಸರಾಣೆ (ಎಕ. VI, ತರೀಕೆ. ೭-೭; ಸು. 1260?). [?]

ಸುಸ್ಥ (ಗು). ೧. ಒಳ್ಳೆಯ ಸ್ಥಿತಿಯಲ್ಲಿರುವ; ಭದ್ರವಾಗಿ ನೆಲೆಯೂರಿರುವ. ೨. ಉತ್ತಮ ಆರೋಗ್ಯದ; ಸ್ವಸ್ಥವಿರುವ: ಅದಱಿನಾಮಿನ್ನೆಂತುಮಿಂತಿಲ್ಲಿ ಸುಸ್ಥಂ ನಿತ್ತರಿಸಲಾಱೆವು (ನೇಮಿಪು. ೩-೧೩೧ ವ); ನಿತ್ಯನಿಯಮದಿಂ ನಿರವಿಸಿ ಸುಸ್ಥಮಿರಿಸಿಯುಂ (ಪುಷ್ಪಪು. ೩-೫೯ ವ). [ಸಂ.]

ಸುಸ್ಥತೆ (ನಾ). ೧. ಒಳ್ಳೆಯ ಸ್ಥಿತಿಯಲ್ಲಿರುವುದು; ಭದ್ರವಾಗಿ ನೆಲೆಸಿರುವುದು. ೨. ಉತ್ತಮ ಆರೋಗ್ಯ; ಸ್ವಸ್ಥತೆ: ಅಂಗನೆಯಂ ಕಂಡನಂಗಶರಪ್ರಹತಿಯಿಂ ಸುಸ್ಥತೆಗೆಟ್ಟು (ನೇಮಿಪು. ೬-೨೩ ವ); ನಿವೃತ್ತಿಪರಿಣತಿಯೊಳ್ ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಚಂದ್ರಪು. ೪-೧೮ ವ). [ಸಂ.]

ಸುಸ್ಥಲ (ನಾ). ಒಳ್ಳೆಯ ಜಾಗ; ಉತ್ತಮವಾದ ಸ್ಥಳ: ಶೀತೋಷ್ಣದಾಸರಿಲ್ಲದ ಸುಸ್ಥಲ[ಜಾಠಾಂ. ೪]ಗಳಿಂ (ಚೈಮಿಭಾ. ೧೯-೪೩); ಅಕಲಂಕ ಸುಸ್ಥಲವನಱಿಯದ ಕವೀಂದ್ರರ ಕವಿತ್ವವೇತಕೈ ಬಾರ್ತ (ಏಕೋಪು. ೧-೩೮). [ಸಂ.]

ಸುಸ್ಥಿತಿ (ನಾ). ೧. ಉತ್ತಮವಾದ ಸ್ಥಿತಿ, — ಅವಸ್ಥೆ: ಬಸವ ಶರಣನೆ ಭಕ್ತಿ ದೊರಕುಗು ಬಸವ ಶರಣನೆ ಸಾರ್ಗು ಸುಸ್ಥಿತಿ (ಬಸಪು. ೧-೨೫). ೨. ಆರೋಗ್ಯ ವಾಗಿರುವುದು; ಸ್ವಸ್ಥತೆ. [ಸಂ.]

ಸುಸ್ಥಿರ (ಗು). ೧. ಅಚಲವಾದ; ದೃಢವಾದ: ವೃಷಭನಾನಂದವಾರಾಸಿ ವರದನಾಗಿ ನಿರಂತರಂ ಸುಸ್ಥಿರಪದದೊಳಿರೆ (ಬಸಪು. ೪-೪೪); ಶಂಕರಯೋಗಧ್ಯಾನದೆ ಸುಸ್ಥಿರ ನಂದನಸಿದ್ಧಿಯಕ್ಕುಮಿದು ಸಿದ್ಧಾಂತಂ (ಪಮ್ಪೂರ. ೨-೪). (ನಾ). ೨. ಶಾಶ್ವತನಾದವನು; ಅಚಲ: ಶ್ರೀರಾಮನಾಹ್ವಾದರೂಪಿ . . . ಸುಸ್ಥಿರಂ (ಶ್ರೀರಾಮಾ. ೫೭-೯೮); ಸಾವಿಲ್ಲ ಮುಪ್ಪಿಲ್ಲ ಸುಸ್ಥಿರನೆಂಬಂತೆ ಕಲಿವುದು ಸದ್ದಿದ್ಯೆಗಳನು (ಇಂಚಾಪ. ೧೫೮-೭೯). [ಸಂ.]

ಸುಸ್ವಪ್ನ (ನಾ). ಒಳ್ಳೆಯ ಕನಸು; ಶುಭಸೂಚಕವಾದ ಸ್ವಪ್ನ: ಸುಸ್ವಪ್ನಂಗಾಣುತ ಮಂಗಲಗೀತಸ್ವನಮಂ ಕೇಳ್ದು (ಜಯಕಾ. ೨-೫೫). [ಸಂ.]

ಸುಸ್ವರ (ನಾ). ೧. ಇಂಪಾದ ಧ್ವನಿ; ಉತ್ತಮವಾದ ಧ್ವನಿ: ಕಾಗೆ ಸಾಕಿದ ಕೋಗಿಲೆಯ ಮಱೆ ಕೂಗುವುದು ಸುಸ್ವರದೊಳಲ್ಲದೆ ಕಾಗೆಯಂದದಿ ಕಾವು ಕಾವೆಂದಱಚುವುದೆ (ಬಸಪು. ೩-೭೯); ಸ್ಫುಟ, ಸುಸ್ವರ, ಯಥಾಸ್ಥಾನ ವಾಕ್ಯಪ್ರಧಾನವಾದ . . . ಉದ್ಗ್ರಂಥಗಳು ಅನೇಕ ರಾಜ್ಯತತ್ವಗಳನ್ನು ಶಾಸ್ತ್ರರೀತಿಯಾಗಿ ಪ್ರತಿಪಾದಿಸಿವೆ (ಭಾರದ. ೩೬೯). ೨. [ಸಂಗೀತ] ರಾಗದ ಲಕ್ಷಣಗಳಲ್ಲಿ ಒಂದು: ಸ್ವರ ಶ್ರುತಿ ಗಮಕಂಗಳಿಂ ಪುಟ್ಟಿದ ಗೀತಮಾದೊಡೆ ಸ್ವರ ಸುಸ್ವರ ಸುರಾಗ ಮಧುರ ಅಕ್ಷರ ಅಲಂಕಾರವಂಬಾಱು ಲಕ್ಷಣಮುಳ್ಳುದಾಗಿಹುದು (ಏವೇಕ. ೧೮೭). ೩. [ಜೈನ] ನಾಮಕರ್ಮಪ್ರಕೃತಿಗಳಲ್ಲಿ ಒಂದು: ಸ್ಥಿರಾಸ್ಥಿರ ಶುಭಾಶುಭ ಸುಸ್ವರದುಸ್ವರ . . . ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ ವ); ಸುಭಗ ದುರ್ಭಗ ಸುಸ್ವರ ದುಃಸ್ವರ . . . ಗತಿನಾಮಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೭). [ಸಂ.]

ಸುಸ್ವಸ್ಥ (ನಾ). ಚೆನ್ನಾಗಿರುವವನು; ಆರೋಗ್ಯದಿಂದಿರುವವನು: ಖಡ್ಗದಿಂ ಸುಸ್ವಸ್ಥರ್ ಕೆಲರೆಂಬ ಕೌತುಕಮಿದೇಂ ಪ್ರೋದ್ದಾಮನೋ ಬಾಳೆಯಂ (ಎಕ. VIII, ಸಾಗರ. ೧೫-೩೦; 1218). [ಸಂ.]

ಸುಸ್ವಾಗತ (ನಾ). ಬಂದವರಿಗೆ ಶುಭ ಕೋರಿ ಬರಮಾಡಿಕೊಳ್ಳುವುದು; ಸಂತೋಷದಿಂದ ಸ್ವಾಗತಿಸುವುದು: ಸನ್ಮಾನ್ಯನೆನಗೆ ನೀಂ . . . ನಾಂ ತಪಸ್ವಿನಿಯಿಲ್ಲಿ, ನಿನಗೆ ಸುಸ್ವಾಗತಂ! (ಚಿತ್ರಾಂಗ. ೩೫-೯೫೬). [ಸಂ.]

ಸುಹರಿ (ನಾ). [ಸಂಗೀತ] ಒಂದು ಬಗೆಯ ರಾಗ: ಕೌಶಿಕಿ ವೇಳಾವಳಿ . . . ಸುಹರಿ . . . ಮೂವತ್ತುನಾಲ್ಕು ರಾಗಂಗಳ್ (ಏವೇಕ. ೨೩೩). [ಸಂ.]

ಸುಹಸ್ತ (ನಾ). ೧. ಶುಭಹಸ್ತ: ಸಂಗಮದೇವಗಳ ವಿದ್ವಾಂಸುಗಳ ಸುಹಸ್ತದ ಬರಹಂಗಳು (ಸೌಂದ. XX, ೨೩೨-೬೩; 1412); ನೋಡಿದಳುಭಯಸುಹಸ್ತರೇಖೆಯಂ (ಪೋಪತ. ೨೬-೭). ೨. ಜಾಗ್ರತೆಯಿಂದ ಬಾಣಬಿಡುವವನು; ಬಿಲ್ವಿದ್ಯೆಯಲ್ಲಿ ಕುಶಲ: "ಬೇಗಸುವಂ ಸುಹಸ್ತನಕ್ಕುಂ" (ಮಂಗರಾ. ೮೮-೩೬). [ಸಂ.]

ಸುಹಾಸಿನಿ (ನಾ). ಮೋಹಕವಾದ ನಗೆಯುಳ್ಳವಳು: ಅವಳು ಸುಭಾಷಿಣಿ ಮಾತ್ರವಲ್ಲ, ಸುಹಾಸಿನಿಯೂ ಹೌದು (ಬಂಕಿಮ. ೧೧೯). [ಸಂ. ಸುಹಾಸಿನೀ]

ಸುಹಾಹೆ (ನಾ). = ಸುಹರಿ(?): ಗಹಗಹಿಕೆವಡೆದ ವಹಣಿಯ ಸು[ಜಾಠಾಂ. ೫]ಹಾಡೆ ಝುಂಪೆಯದೊಳಮರೆ . . . ಮೂರ್ತಿವಡೆದುದು ರಾಗಂ (ಯಶೋಚ. ೨-೨೯). [?]

ಸುಹಿತ (ಗು). ೧. ಒಳ್ಳೆಯ; ಯೋಗ್ಯವಾದ. ೨. ವಂದಿಸಲು ಯೋಗ್ಯವಾದ. ೩. ಆತ್ಮೀಯವಾದ; ಗಾಢತೆಯ. ೪. ತಣಿದ; ತೃಪ್ತಿಹೊಂದಿದ. (ನಾ). ೫. ಅರ್ಹನಾದವನು; ಯೋಗ್ಯ: ಅಹಿತರಾದಡೆ ಲಿಂಗಸಂಗದೊಳಿಹಡೆ ಸುಹಿತರ ಭಾವದಿಂ ಕಂಡಿಹುದು (ಬಸಪು. ೪-೬೩). [ಸಂ.]

ಸುಹೃಜ್ಜನ (ನಾ). ಮಿತ್ರವರ್ಗ; ಆತ್ಮೀಯ ಜನ: ಪುಟ್ಟತೋ ಮತ್ಸುಹೃಜ್ಜನದಿಂ ಮೇಣ್ ತೊಡರ್ದತ್ತೊ ವಿಸ್ಮಯಮಿದೇಂ ಪೇಳೆಂಬುದುಂ (ಆದಿಪು. ೩-೨೪); ಸುಹೃಜ್ಜನದಯಿತಂ . . . ಕುಳೀರಸಂಭವಂ (ಜಾತಕ. ೧೭-೪). [ಸಂ.]

ಸುಹೃತ್ತು (ನಾ). ೧. ಮಿತ್ರ; ಗೆಳೆಯ: ಪೂಲಲೊಳ್ ಸಂದಿರ್ದ ಭಾಸ್ವತ್ಸುಹೃದ್ಬಲಕಂ ಮಾರ್ವಲಕಂ . . . ತೋಱುವಂ (ಪಂಪಭಾ. ೩-೩೩). ೨. [ಜ್ಯೋತಿ] ಲಗ್ನದಿಂದ ನಾಲ್ಕನೆಯ ಸ್ಥಾನ: ಸುಹೃದ್ಗೃಹಸ್ಥಾಯಿಯಾಗ ತತ್ಕಾಲದೊಳಾ ಗ್ರಹಮಂತದು ತಾತ್ಕಾಲಿಕ ಸುಹೃದ್ಗ್ರಹಂ (ಜಾತಕ. ೨-೧೭). [ಸಂ. ಸುಹೃತ್]

ಸುಹೃತ್ವ (ನಾ). ಗೆಳೆತನ; ಸಖ್ಯ: ಅರುಣಾಬ್ಜಪತ್ರದ ತದಕ್ಷಿಸುಹೃತ್ವ ಮನಾಂತುದಂತದುಂ ಕುಸುಮಕಳಂಬನಂಬು ಬಗೆಗುಂದಿಸಿದತ್ತದುಮಬ್ಜಗಂಧಿಯಾ (ರಾಜಶೇ. ೧೧-೧೩೯). [ಸಂ.]

ಸುಹೃದ (ನಾ). ಒಳ್ಳೆಯ ಹೃದಯವುಳ್ಳವನು; ಸಹೃದಯ: ಪ್ರಳಯವು ನೀನಿರದಿರೆ; ನೀನಿದ್ದುದು ಪ್ರಣಯವಿಧೀ ಸುಹೃದನೆ ಬಾ ಉದಯಿಸು ನೀ; ನೀನೇ ಹೃದಯನಿಧೀ (ಅರಳು. ೪೨-೧೧). [ಸಂ.]

ಸುಹೃದಯ (ನಾ). = ಸುಹೃದ: ಶೋಕಂ ಸುಹೃದಯರಿಂದಕ್ಕುಮುಶನನವ ರೋಹಿಣಿಯೊಳ್ (ಜಾತಕ. ೯-೨೮). [ಸಂ.]

ಸುಹೃದ್ಯ (ಗು). ೧. ಆತ್ಮೀಯವಾದ. (ನಾ). ೨. ಆತ್ಮೀಯವಾದುದು: ಗದ್ಯಪದ್ಯಾನಿಕರದಿಂದನವದ್ಯಕಾವ್ಯಂಗಳಿನಲರ್ದು ಸುಹೃದ್ಯಮಾಗಲು ಸತ್ಕವೀಂದ್ರರು ಕೀರ್ತಿಸುತ್ತಿರಲು (ಬಸಪು. ೨೬ ೭). [ಸಂ.]

ಸುಹೇತಿ (ನಾ). ಬೆಂಕಿ; ಅಗ್ನಿ: "ಅಗ್ನಿಯ ವಿಶಾಲ ಕಾಂತಿ ದ್ಯೋತಿ ಜ್ಯೋತಿಸ್ಸುಹೇತಿ ಶಿಖೆಯರ್ಚಿ ಪ್ರಭಾಖ್ಯಮಕ್ಕುಂ" (ಮಂಗರಾ. ೧೪-೮). [ಸಂ.]

ಸುಳರಂಬೆಱು (ಕ್ರಿ). ಮುದುಡಿಕೊಳ್ಳು: ಪಾಂಡವರೆಂಬರೇಗಹನವೆಂಬಾ ದರ್ಪದಂತಾಜಿಯೊಳ್ ಸುಳರಂಬೆತ್ತಿರೆ ಸತ್ತರನ್ನಿನಿಬರುಂ ತಮ್ಮಂದಿರುಂ ಮಕ್ಕಳುಂ (ಗದಾಯು. ೨-೧೨). [P ಇದು ಪ್ರಾಸಕ್ಕಾಗಿ ಮಾಡಿಕೊಂಡಿರುವ 'ಸುರುಳಂಬೆಱು' ಎಂಬುದರ ಅಕ್ಷರಪಲ್ಲಟ ರೂಪ]

ಸುಳಾದಿ 'ಸೂಳಾದಿ' ನೋ.

ಸುಳಿ₁ 'ಸುಟಿ₁' ನೋ.

ಸುಳಿ₂ 'ಸುಟಿ₂' ನೋ.

ಸುಳಿಗಾಳಿ 'ಸುಟಿಗಾಳಿ' ನೋ.

ಸುಳಿಗುರುಳ್ 'ಸುಟಿಗುರುಳ್' ನೋ.

ಸುಳಿಗುರುಳು 'ಸುಟಿಗುರುಳ್' ನೋ.

ಸುಳಿಗೊಳ್ 'ಸುಟಿಗೊಳ್' ನೋ.

ಸುಳಿಗೊಳು 'ಸುಟಿಗೊಳ್' ನೋ.

ಸುಳಿಗಾಳಿ 'ಸುಟಿಗಾಳಿ' ನೋ.

ಸುಳಿತರ್ 'ಸುಟಿತರ್' ನೋ.

ಸುಳಿದಿರುಗಿಸು (ಕ್ರಿ). ಸುರುಳಿ ಸುತ್ತಿಸು: ಚಿತ್ರಭವನದನರಿದು ಭೇರುಂಡನಂ ಕಳುಹಲತ್ರಣಿಂದತ್ತ ಪಿಡಿದೆತ್ತಿ ಗಗನಾಂಗಣದಿ ಸುತ್ತಿ ಸುಳಿದಿರುಗಿಸುತೆ ಖಗಮ್ಯಗ ಸಮೂಹಕ್ಕೆ ತುಚ್ಛನಾಗಿಸಿ (ಸವಮೋ. ೧೨-೮೫). [ಸುಳಿ₂ (< ಸುಟಿ₂) + ತಿರುಗಿಸು]

ಸುಳಿದಿರುಗು (ಕ್ರಿ). ಸುರುಳಿ ಸುತ್ತು: ಕಳಯೇರುತಿಹ ಕರಣವಿಳವಶ್ರುದಳದ ಝರಿ ಸುಳಿದಿರುಗಿ ಹೊಡೆಮುರಿವ ಪುಳಕಂ (ಕೃಪ. ೧-೫-೪).

[ಸುಳಿ₂ (< ಸುಟಿ₂) + ತಿರುಗು₁]

ಸುಳಿದೆಗೆ (ಕ್ರಿ). ಕುಡಿಯಾಗು; ವೃದ್ಧಿಯಾಗು: ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ ಸುಳಿದೆಗದು ಬೆಳವೆನು (ಬಸವ. ೫೦); ನಳಿದೋಳಿನಾಕೆ ತಾ ಸುಳಿದೆಗದು ಬೆಳೆದಿಹಳು (ಪರ್ಮಾಭ್ಯು. ೨೦೯೮). [ಸುಳಿ₂ (< ಸುಟಿ₂) + ತೆಗೆ₁]

ಸುಳಿನಾಗ (ನಾ). ನಾಗರದಲ್ಲಿ ಒಂದು ಬಗೆ: ನಾಲೀಗೇ ಮೇಲೇ ಗಜಲಿಕ್ಕಿ ಹುತ್ತಿಕ್ಕಿ ನಿನ್ನೆತ್ತಿಲ್ಯಾಡಾನೇ ಎಳೆನಾಗಾ ಸುಳಿನಾಗಾ ಮುತ್ತೀನ ನಾಮಾದಾ ಮುದಿನಾಗಾ (ಪುಟ್ಟಸ. ೬೭). [ಸುಳಿ₂ (< ಸುಟಿ₂) + ನಾಗ]

ಸುಳಿನಾಭಿ (ನಾ). ಸುಳಿಯಂತಿರುವ ಹೊಕ್ಕುಳು; ವರ್ತುಲಾಕಾರದ ನಾಭಿ: ಬೆಳಗಾಯ್ಕೊಲೆಯ ಬೆಳಂತಿಗೆಗಣ್ಗಳ ಸುಳಿನಾಭಿಯ . . . ಲಲನೆಯರ ವಿಲಾಸಂ (ಜಯಕಾ. ೨-೩); ರಾಮಣೀಯತೆವೆತ್ತ ಸುಳಿನಾಭಿ ಕುಚಮಧ್ಯಸೀಮೆಯನೊಲಿದೀಕ್ಷಿಸಲು (ವೃಷಪ. ೨೩-೨೧). [ಸುಳಿ₂ (< ಸುಟಿ₂) + ನಾಭಿ]

ಸುಳಿನುಡಿ (ನಾ). ಸುತ್ತಿ ಬಳಸಿ ಆಡುವ ಮಾತು; ಬಳಸುಮಾತು: ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು ಸುಳಿನುಡಿ ಕುಹಕ ಕುಮಂತ್ರವನು ತಾಳು (ಜಗದಾ. ೧೧೧). [ಸುಳಿ₂ (< ಸುಟಿ₂) + ನುಡಿ₂]

ಸುಳಿಮಿಂಚು (ನಾ). ಸುಳಿದು ಬರುವ ಮಿಂಚು: ಸುಳಿಮಿಂಚುಮಾವರಿಸೆವಪ್ಪ ಮಿಟ್ಟಂತೆನ್ನ ಲಲಿತಪುತ್ರಳಿಯ ಪೊಂಬಿಸಿಲಿನೊಳಿಡಲು (ಸವಮೋ. ೨-೩).

[ಸುಳಿ₁ (< ಸುಟಿ₁) + ಮಿಂಚು₂]

ಸುಳಿಯೆಲೆ 'ಸುಟಿಯೆಲೆ' ನೋ.

ಸುಳಿಯೇಱು 'ಸುಟಿಯೇಱು' ನೋ.

ಸುಳಿರ್ವಾಯು (ನಾ). ಸುಳಿಯಾಗುವಂತೆ ಸುತ್ತಿ ಬೀಸುವ ಗಾಳಿ; ಸುಂಟರಗಾಳಿ: ಶಿವನಿರ್ವ ವನವಂ ಪೊಕ್ಕು ಸುಳಿರ್ವಾಯು ಸುತ್ತಿ ಸುರಗಣರ ಕಣುದೆರೆಯಲೀಸದೆ (ಸವಮೋ. ೨೯-೬೩). [< ಸುಳಿವಾಯು]

ಸುಳಿವಟ್ಟಿಗ (ನಾ). (ಆಲಂ) ಮೋಸಗಾರ; ವಂಚಕ: ನಿಲ್ಲಂ ಸುಳಿವಟ್ಟಿಗರಿರ್ಪಡೆಯೊಳ್ಗಿಲ್ಲಂ ಸತ್ತಿಗರಂ ಮಜಿದೆಂದು ಕೊಲ್ಲಂ ಜಱುಚಂ ಬಾಂದಲೆಯಂಗೀಯದೆ ನಲ್ಲಮರ್ದುಣಿಸಂ ಒಲ್ಲಂ (ಉದ್ಭಟ. ೨-೮೫). [ಸುಳಿ₂ (< ಸುಟಿ₂) + ಬಟ್ಟಿಗ₂]

ಸುಳಿವಳಿ (ನಾ). ಸುಳಿದಾಟ; ಓಡಾಟ: ಮಾನಿಸರ ಸುಳಿವಳಿಯಿಲ್ಲ (ಗುಯಚಾ. ೮-೩೪). [ಸುಳಿ₂ (< ಸುಟಿ₂) + ಬಳಿ₂ (< ಬಟಿ₃)]

ಸುಳಿವಾಯು (ನಾ). = ಸುಳಿರ್ವಾಯು: ಕೆದರಿ ತರುನೀಕ ಸುಳಿವಾಯುವಿಂ ಮೊರೆದೆದ್ದು . . . ಗಗನಾಂಗಣದಿ ಸುತ್ತಿವರಿವುತಿರ್ದುವು (ನವಮೋ. ೨೯-೬೨).

[ಸುಳಿ₂ (< ಸುಟಿ₂) + ವಾಯು]

ಸುಳಿವಾಳೆ (ನಾ). ೧. ಸುಳಿಯೊಡೆದ ಬಾಳೆ; ಎಳೆಯ ಬಾಳೆ; P ಗೊನೆ ಹೊರಡದ ಚಿಗುರುಬಾಳೆ: ಸುಳಿವಾಳೆ ಝಳ ತಾಗಿದವೊಲುದರಜ್ಯಾಲೆ ನತ್ತಿಗ ನಿಲುಕೆ ಹಲುಬಿದಳಬಲೆ ಬಿಸುಸುಯ್ದು (ಕುಮ್ಯಾವಿ. ೩-೫೪); ಎಳೆಯ ಬಿದಿರಿನ ಬಣ್ಣ ಸುಳಿವಾಳೆಲೆಯ ಬಣ್ಣ ಮೊಳಿಗಱಿಕೆವಣ್ಣ ಪೊಂಬಣ್ಣ ಮೆಯ್ಯಬಲೆಯರ್ ಸುಳಿಯ (ಚಿಬಪು. ೩೭-೪೭). ೨. ಎಳೆಯ ಬಾಳೆಯ ಎಲೆ: ಸುಳಿವಾ[ವಾಕಾಂ. ಹಾ]ಳೆಯಂ ಹರಹಿ ಸಂಪಳಿಯನೊದಗಾಗಿಯೆಱೆದು ಮಡಕೆಯ ಮುಚ್ಚಿಯಟ್ಟೊಡುದ್ದಿನ ಕಡುಬುವೆಸರ ಹಡೆದು ಮೃದುವಹುದು (ಸೂಪಶಾ. ೧೦-೭೨).

[ಸುಳಿ₂ (< ಸುಟಿ₂) + ಬಾಳೆ₁ (< ಬಾಳೆ)]

ಸುಳಿವು 'ಸುಟಿವು' ನೋ.

ಸುಳಿವೊಕ್ಕುಳು 'ಸುಟಿವೊರ್ಕುಟು' ನೋ.

ಸುಳಿಸು 'ಸುಟಿಯಿಸು' ನೋ.

ಸುಳಿಸುತ್ತು (ಕ್ರಿ). ತಿರ್ರನೆ ತಿರುಗು; ವರ್ತುಲವಾಗಿ ಚಲಿಸು: ವಿಪರೀತವಾದ ನಕ್ಷತ್ರರಾಶಿ ಒಂದೆಡೆ ನೆಲಸಿ ಸುಳಿಸುತ್ತುವಂತೆ ಸುತ್ತುತ್ತಿದ್ದರೆ ನಾವು 'ತೇಜೋರಾಶಿ' ಎನ್ನುತ್ತೇವೆ (ಆಕಾಶ. ೬೩). [ಸುಳಿ₂ (< ಸುಟಿ₂) + ಸುತ್ತು₁]

ಸುಳು₁ 'ಸುಳುವು₂' ನೋ.

ಸುಳು₂ (ನಾ). ಜಾಡು; ಗುರುತು: 'ಸುಳುವಾತು' ಪರಾ. [< ಸುಟಿವು]

ಸುಳುದಾರಿ (ನಾ). ಸುಲಭವಾದ ಹಾದಿ, — ಮಾರ್ಗ: ಹೊರಜಗವನೊಳಕೊಳುವ ಸುಳುದಾರಿಯಳುನಗುವು (ಮಂಜುಕ. ೪೩೩). [ಸುಳು₁ (< ಸುಳುವು₂) + ದಾರಿ]

ಸುಳುಜ್ವರ (ನಾ). ಬಿಟ್ಟುಬಿಟ್ಟು ಬರುವ ಜ್ವರ: ಬಿಟ್ಟು ಬಿಟ್ಟು ಬರುವ ಜ್ವರಕ್ಕೆ:- ಬೇವಿನ ಒಳನಾರು ಶುಂಠಿ ವಿಷ್ಣುಕ್ರಾಂತಿ ಇವ ಕಷಾಯವಂ ಕಾಸಿ ಹಿಪ್ಪಲಿಯ ಪ್ರತಿಪಾಕವಿಕ್ಕಿ ಕುಡಿಯ ಸುಳುಜ್ವರ ಮಾಣ್ಗುಂ (ವೈದ್ಯವಿ. ೧೧೩). 'ಸೂಟ್ಟಜ್ವರ' ಪರಾ.

[P ಇದು 'ಸೂಳುಜ್ವರ' ಎಂಬುದರ ಅಪಲಿಖಿತ]

ಸುಳುವಾತು (ನಾ). ಸುಳಿವಿನ ನುಡಿ; ಗೊತ್ತುಹಚ್ಚುವ ಮಾತು: ಇವನಾರಿವ ತಳಕಾಡ ಮನ್ನೆಯ ಮತ್ತಿವನಾರು ಸೋಸಲೆಯವನು ಇವನಾರು ರಂಗಸಮುದ್ರವಾಳುವ ನೆಂದವರೊಳಾದುದು ಸುಳುವಾತು (ಕಂನಮ. ೨೫-೭೧). [ಸುಳು₂ + ಮಾತು₁]

ಸುಳುವು₁ 'ಸುಟಿವು' ನೋ.

ಸುಳುವು₂, ಸುಳು₁ (ನಾ). ಸುಲಭ: (೬). **ಸುಳು₁**: ಸುಲಭ – ಸುಳು (ಹೊನ್ನಗ. ೧೧೮).

ಸುಳುವಾಗಿ = ಸುಲಭವಾಗಿ: ನೂರೈವತ್ತು ಹೊನ್ನು ಬೆಲೆಯಾಗುವ ಜಾತಿಯ ಕುದುರೆಯನ್ನು ಮಂಕುಬೂದಿ ಹಾಕಿ ಎತ್ತಿಕೊಂಡು ಹೋಗುವ ಹಾಗೆ ನಾವು ಎಷ್ಟು ಸುಳುವಾಗಿ ಐದು ಹೊನ್ನಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ (ನಗಗ. ೨೦).

[ದೇ. ॥ ತಮಿ. ಚುಳುವು; ತೆಲು. ಚುಲುಕ, ಸುಳುವು, ಸುಲುವು; ಕೋತ. ಚುಳ್ವ್]

ಸುಳುವುಗೇಡಿ (ನಾ). (ಆಲಂ) ದಡ್ಡ; ಬುದ್ಧಿಗೇಡಿ: ಸುಳುವುಗೇಡಿ ಕೈಯ್ಯಲ್ಲಿ ಸುಣ್ಣ ಕೊಟ್ಟರೆ ಬೆಣ್ಣೆಯೆಂದು ಬಾಯಲ್ಲಿ ಹಾಕಿಕೊಂಡ (ಗಾದ).

[ಸುಳುವು₁ (< ಸುಟಿವು) + ಕೇಡಿ₁]

ಸುಳುಹು 'ಸುಟಿವು' ನೋ.

ಸುಳುಹುದಾರಿ (ನಾ). ಗುರುತಿನ ದಾರಿ, — ಜಾಡು: ನೀರಿನಲ್ಲಿ ಸುಳುಹುದಾರಿಯೇ ಅವಶ್ಯವಾದಾಗ ಹೆದ್ದಾರಿಯನ್ನು ಕಾಣುವುದಾದರೂ ಸಾಧ್ಯವೆಲ್ಲಿ? (ಬಾಳಬ. ೨೫).

[ಸುಳುಹು (< ಸುಟಿವು) + ದಾರಿ]

ಸುಳುಹುದೆಗೆ (ಕ್ರಿ). ಸುಳಿವಿಲ್ಲದಂತಾಗು; ಮರೆಯಾಗು: ಯಾರಿಗೂ ಕಾಣದಂತೆ ಯಾವಾಗಲೋ ಸುಳುಹುದೆಗೆದಿದ್ದರು (ದಶಮ. ೨೨೧).

[ಸುಳುಹು (< ಸುಟಿವು) + ತೆಗೆ₁]

ಸುಳ್ನಾಲಗೆ 'ಸುಳ್ನುನಾಲಗೆ' ನೋ.

ಸುಳ್ಳ₁ (ನಾ). ಸುಳ್ಳು ಹೇಳುವವನು; ಹುಸಿಕ: ಪಳ್ಳಿಯೊಳು ಕನ್ನವಿಕ್ಕಿದ

ಸುಳ್ಳ ನಿನಡಹಡಿಸಿ ಚಂಡಕರ್ಮಂ ಪಿಡಿದಂ (ಪುಣ್ಯಾಸ್ತ. ೯-೫೧); ಕಳ್ಳರಿಗೆ ಸುಳ್ಳರಿಗೆ . . . ಕೊಡುವವರು ಧರ್ಮಕ್ಕೆ ಎಳ್ಳಷ್ಟು ಕೊಡರು (ಸರ್ವಜ್ಞ. ೬೭೩); ಕಳ್ಳ ಸುಳ್ಳರ ಗುರುವಾರು (ಇಂಚಾಪ. ೭೧-೪೨). [ಸುಳ್ಳು + - ಅ$_2$]

ಸುಳ್ಳ್ಯ$_2$ (ನಾ). ಒಂದು ಊರಿನ ಹೆಸರು: ಸುಳ್ಳಂ ಪರ್ಬಳ್ಳಿ ನಾಮಗ್ರಾಮಾನಾಂ ಮಧ್ಯೇ ಬೆಪ್ಪಟ್ಟಿ ನಾಮಗ್ರಾಮೋ (ಎಇ. IX, ೨೦೪-೬೦; 750). [?]

ಸುಳ್ಳಾಡು (ಕ್ರಿ). ಸುಳ್ಳು ಹೇಳು: ಸುಳ್ಳಾಡುವುದು ಅದನಿಗೆ ಅನ್ನ ನೀರು (ಚಿಕರಾ. ೧೮೪); ನೀವು ಸುಳ್ಳಾಡುವಿರಾ, ದೇವರು? (ಬೆಟ್ಟಅ. ೫೪-೨೫). [ಸುಳ್ಳು + ಆಡು$_1$]

ಸುಳ್ಳಿ (ನಾ). ಸುಳ್ಳು ಹೇಳುವವಳು: ಅವಳು ಬಹಳ ಸುಳ್ಳಿ (ರೂಢಿ).
[ಸುಳ್ಳು + - ಇ$_2$]

ಸುಳ್ಳಿಗೋಡು (ನಾ). ಒಂದು ಊರಿನ ಹೆಸರು: ಬಲಕನಾಡ ಸುಳ್ಳಿಗೋಡಂ ದೇವಾರಕ್ಕೆ (ಎಕ. VIII, ಸಾಗರ. ೪೫-೧೦; ಸು. 950). [?]

ಸುಳ್ಳಿಯೂರ್ (ನಾ). ಒಂದು ಊರಿನ ಹೆಸರು: ನೆಂಗಿಯೂರ್ನ್ನಿವಳ್ಳಿಸಹಿತ ಸ್ಸುಳ್ಳಿಯೂರ್ನ್ನಾಮಗ್ರಾಮೋ (ಎಇ. V, ೨೦೫-೬೯; 737). [ಸುಳ್ಳಿ? + ಊರ್]

ಸುಳ್ಳಿವರ್ (ಕ್ರಿ). (?): ಬಡಗಿಯಂತೆ ಮರಕುಟಿಗಂ ಬುದ್ಧಿಗೆಟ್ಟಳಂತೆ ಮರಳಿ ಸುಳ್ಳಿವಂದ ನೆರವಿಯಂತೆ ಬಱುಳಿ (ಬಂಹಾ. ೨-೩೮ ವ). [?]

ಸುಳ್ಳಿವೊಲೆಯ (ನಾ). ಕ್ಷುದ್ರನಾದ ಚಂಡಾಲ (?): ಅಂತಸ್ತಮಯಮಾಗೆ ಸ್ಕಂಧವನುಮೊಳ್ಳೇಱಿದ ಸುಳ್ಳಿವೊಲೆಯ [ಪಾಠಾಂ. ಪೊಳ್ಳೆವೊಳೆಯ]ನಂತೆ ಪೊಚ್ಚಬದ್ದವಣಂ ಬೊಯಿಸಿದೆಂ (ನೇಮಿಪು. ೧೨-೫೨ ವ). [ಸುಳ್ಳಿ? + ಪೊಲೆಯ]

ಸುಳ್ಳು (ನಾ). ಹುಸಿ; ಅನೃತ: "ತೊದಳೆಂದುಂ ಸುಳ್ಳೆಂದುಂ ಅನೃತಂ" (ಕಶಸಾ. ೬೮-೫೪೧); ಉನ್ನತವಾದಾಭರಣವ ಕೊಡುವೆನು ನನ್ನಾಣೆ ಸುಳ್ಳ ನಾ ಪೇಳೆ (ಕಂನವಿ. ೯-೪೧); ದೆವ್ವ ಅನ್ನುವುದೇ ಸುಳ್ಳು (ಕಳಹು. ೫೮). [ದೇ. ॥ ತುಳು. ಸುಳ್ಳು]

ಸುಳ್ಳುಂಗಾಱ, ಸುಳ್ಳುಗಾರ (ನಾ). ಸುಳ್ಳು ಹೇಳುವವನು; ಹುಸಿಕ: ಕಳ್ಳುಣಿಗೆ ತತ್ವಸಾರಂ ಸುಳ್ಳುಂಗಾಱಂಗೆ ಸವಣರೊಡನಾಟಂ (ತಮಪಾ. ೮೨). **ಸುಳ್ಳುಗಾರ:** ಅವನೊಬ್ಬ ಸುಳ್ಳುಗಾರ (ರೂಢಿ). [ಸುಳ್ಳು + - ಕಾಱ]

ಸುಳ್ಳುಕಾಳಗ (ನಾ). (ಕಲಿಕೆಗಾಗಿ ಮಾಡುವ) ನಿಜವಲ್ಲದ ಯುದ್ಧ; ಹುಸಿಗಾಳಗ: ಊರ ಹೊರಗಿನ ಬಯಲಿನಲ್ಲಿ ನಡೆದಿರುವ ಸುಳ್ಳುಕಾಳಗವನ್ನು ನೋಡಹೋದನು (ಯದುರಾ. ೯೨). [ಸುಳ್ಳು + ಕಾಳಗ (< ಕಾಳಗ)]

ಸುಳ್ಳುಗಾತಿ (ನಾ). ಸುಳ್ಳು ಹೇಳುವವಳು: ಅವಳು ಮಹಾ ಸುಳ್ಳುಗಾತಿ (ರೂಢಿ).
[ಸುಳ್ಳು + - ಕಾತಿ$_3$]

ಸುಳ್ಳುಗಾರ 'ಸುಳ್ಳುಂಗಾಱ' ನೋ.

ಸುಳ್ಳುಗೊರವ (ನಾ). ವೇಷಧಾರಿಯಾದ ತಪಸ್ವಿ; ಕಳ್ಳಸಂನ್ಯಾಸಿ: ಡೊಂಬರಿಗೆ ಸುಳ್ಳುಗೊರವರಿಗೆ ಕೊಡುವವರು ಧರ್ಮಕ್ಕೆ ಎಳ್ಳಷ್ಟು ಕೊಡರು (ಸರ್ವಜ್ಞ. ೬೭೩).
[ಸುಳ್ಳು + ಗೊರವ]

ಸುಳ್ಳುತನ (ನಾ). ನಿಜವಲ್ಲದುದು; ಕಪಟ: ಪಾಠಕ್ಕೆ ಬರುವ ರಾಕ್ಷಸರನ್ನು ತಾಳ್ಮೆಯಿಂದ ಸ್ವಾಗತಿಸುವ ಸುಳ್ಳುತನವಾದರೂ ಇದಕ್ಕೋಸ್ಕರವೇ (ಹೊಸಕ್ಷಿ. ೧೨೫).
[ಸುಳ್ಳು + - ತನ]

ಸುಳ್ಳುನಾಲಗೆ, ಸುಳ್ನಾಲಗೆ (ನಾ). ಸುಳ್ಳಾಡುವ ನಾಲಗೆ: ಸುಳ್ಳುನಾಲಗೆಯ ನಡುಗಿಸುತರವನೊರೆಗುಂ (ಕಾಲೂರ. ೭೭-೧೪೧). **ಸುಳ್ನಾಲಗೆ:** ನಾನೂ ಅಲ್ಲಿದ್ದಿದ್ದರ ಅವನ ಸುಳ್ನಾಲಗೆ ಕಿತ್ತುಕೊಳ್ಳುತ್ತಿದ್ದೆ (ಸುಗುಗಂ. ೧೭೫-೧೬). [ಸುಳ್ಳು + ನಾಲಗೆ]

ಸುಳ್ಳುಸಾಕ್ಷಿ (ನಾ). ನಿಜವಲ್ಲದ ಪುರಾವೆ; ಮೋಸದ ಪ್ರಮಾಣ: ಅವರು ಕೇಸಿನಲ್ಲಿ ಸುಳ್ಳುಸಾಕ್ಷಿ ಹೇಳಿಸಿ ಸಿಕ್ಕಿಬಿದ್ದರು (ರೂಢಿ). [ಸುಳ್ಳು + ಸಾಕ್ಷಿ]

ಸುಳ್ಳುಹೇಳು (ಕ್ರಿ). ಹುಸಿ ನುಡಿ: ಆಗ್ಗೆ ಹಿಂದುಗಳು ಸುಳ್ಳುಹೇಳುತ್ತಿರಲಿಲ್ಲ (ಭಾರದ. ೩೮೮); ಸಾವಿರ ಸುಳ್ಳುಹೇಳಿ ಒಂದು ಮದುವೆ ಮಾಡು (ಗಾದೆ).
[ಸುಳ್ಳು + ಹೇಳು (< ಪೇೞ್)]

ಸುಳ್ಳೆತ್ತು (ಕ್ರಿ). ಸುರುಳಿಯಾಗಿ ಎತ್ತು (?): ಬಾಲಮಂ ಸುಳ್ಳೆತ್ತಿಕೊಂಡು ಭೋರನೆ ಬರಲು (ಚಂಡೇರ. ದೇ. ೨೪೬-೫). [ಸುಳ್ಳು$_0$ (< ಸುರುಳಿ$_1$) + ಎತ್ತು$_1$]

ಸುಱ್, ಸುರ್ರು (ನಾ). ಒಂದು ಅನುಕರಣ ಶಬ್ದ: ಸುಱ್ಱೆಂದು ಬಾಣಗಳ್ಳಂದರಿಗಳನೆತ್ತಿ . . . ಚುಱ್ಱನೆ ಕೊಂದಿಕ್ಕಿದವು (ಚಂಪ್ರಸಾಂ. ೮-೫೨). **ಸುರ್ರು:** ರಕ್ತಂಗಳಂ ಸುರ್ರು ಸುರ್ರೆಂದು ಸುರಿದು . . . ಘರ್ರೆಂದು ತೇಗಿ ಪರಸಿದವು ಶಿವದೂತರಂ (ವೀತ್ಯಪು. ೨-೭-೪೮).

ಸುಱಿ, ಸುರಿ$_2$, ಸೊಱೆ (ಕ್ರಿ). ಶಬ್ದವಾಗುವಂತೆ ಕುಡಿ; ಸಶಬ್ದವಾಗಿ ಹೀರು: "ಸುಱಿ - ಚೋಷಣೇ" (ತಮಧಾ. ಮ); ಬೈಚಿಟ್ಟಮೃತವ ಸುಱಿಯಬೇಕು (ಶಿವಗೀ. ೧೮೬-೯೫೫); ಚಿದಮೃತಮಂ ಸುಱಿದು (ಉದ್ಭಟ. ೧೧-೫೬ ವ); ಅಹಿತನ ತಿಳಿರಕುತವನು ಸುಱಿಯೆನುತ (ಕುವ್ಯಾದ್ರೋ. ೧೭-೧೧). **ಸುರಿ$_2$:** ಪಾಯಸ ಚೆನ್ನಾಗಿತ್ತೆಂದು ಬಿಮ್ಮಗೆ ಸುರಿದಿದ್ದನು (ಸರಸ. ೯೨). **ಸೊಱೆ:** ಸೊಜ್ಜಿಗೆಯ ಪಾಯಸವ ಸೊಱೆ[ಪಾಠಾಂ. ಸುಱಿ]ದು (ಸಮ್ಮಕೌ. ೭-೨೮); ಪಂಬಲಿಸುವರು ಶಾಲ್ಯನ್ನವನೊಲ್ಲದೆ ಯಂಬಲಿಯನು ಸೊಱೆವಂತೆ (ಕೃಷ್ಣಗೋ. ೧-೧೨).
[ದೇ. ॥ ತಮಿ. ಉಱಿಂಞ್ಚು; ಮಲ. ಉಱಿಂಜು; ತೆಲು. ಜುಱ್ಱು; ಕುರುಱ್. ಸುರುಪ್ನ]

ಸುಱಿಗ (ನಾ). ಒಂದು ವಂಶದ ಹೆಸರು: ಸತ್ಯ ಸೌಚಾಚಾರ ಶೀಲಸಂಪನ್ನ ನಿಷ್ಪಜನವತ್ಸಲ . . . ಶ್ರೀ [ಸುಱಿಗ] ಚಾಮುಣ್ಡಂ (ಕಇ. I, ೧೬-೭; 919). [?]

ಸುಱುಕಲ್ದನಿ (ನಾ). (ದ್ರವ ಪದಾರ್ಥಗಳನ್ನು) ಕುಡಿಯುವಾಗ ಉಂಟಾಗುವ 'ಸೊರ್' ಎಂಬ ಧ್ವನಿ: ಬಾಯ್ದೆಱೆಯೊಳ್ ರಸನಾಗ್ರಪಲ್ಲವಂ ಮಲೆದು ಮಠಲ್ದು ಸುತ್ತಿ ಸುಱುಕಲ್ದನಿ ಪೆರ್ಚರೆ ನೃಪನೊಲ್ದು ನೋಡಿದಂ (ಲೀಲಾವ. ೫-೧೦೧).
[ಸುಱುಕು + - ಅಲ್$_2$ + ದನಿ$_1$]

ಸುಱುಕಿ (ನಾ). ಒಂದು ಪ್ರದೇಶದ ಹೆಸರು: ಶ್ರೀ ಲೊಕ್ಕಿಗುಣ್ಡಿಯೊಳ್ಸಸದಿಯಂ ಮಾಡಿಸಿಯದಕ್ಕೆ ತಳವೃತ್ತಿಯೆಂದು ಕೊಟ್ಟ ಸುಱುಕಿಯ ಸೀಮೆ (ಸೌಇಇ. XI-4, ೫೨-೫೬; ಸು. 1007). [?]

ಸುಱುಕಿಡು (ಕ್ರಿ). 'ಸುರುಕ್' ಎಂದು ಶಬ್ದಮಾಡು: ಕೋಣ . . . ದಿಟ್ಟಿಸುವ ಕಣು ನಟ್ಟ ಕಿವಿ ಮರಳ್ದ ಮುಸುಡು ಸುಱುಕಿಟ್ಟು ಗುಱುಗುಱಿಪ ಮೂಗು . . . ಮಹಿಷಾಸುರನನದು ಪೋಲ್ತುದು (ಪಚಕಾ. ೫-೪೦); ಮೂಗಲರುತ್ತುಂ ಸುಱುಕಿಟ್ಟು ಸೂಸ ನೊರೆ ಬಾಯಿಂ . . . ಪಾಯ್ದುದಿದಿರೊಳ್ ತೈಲಪ್ರಭಂ ಸೈರಿಭಂ (ತಬತಂ. ೩-೫೫). [ಸುಱುಕು + ಇಡು$_1$]

ಸುಱುಕು (ನಾ). (ದ್ರವಪದಾರ್ಥಗಳನ್ನು) ಕುಡಿಯುವಾಗ ಅಥವಾ ಹೀರುವಾಗ ಉಂಟಾಗುವ ಶಬ್ದ: ಹಱುಕು ಹೋಳಿಗೆ ಲೇಸು ಮುಱುಕು ಹಪ್ಪಳ ಲೇಸು ಕುಱುಕುಱು ಕಡಲೆ ಬಲು ಲೇಸು ಪಾಯಸದ ಸುಱುಕು ಲೇಸು (ಸರ್ವಜ್ಞ. ೧೫೩೦).
[< ಸುಱಿ + - ಕು$_0$]

ಸುಱೂರ್ (ನಾ). ಒಂದು ಊರಿನ ಹೆಸರು: ಮಹೇನ್ದ್ರಮ್ ಅಜಯತ್ ಬಿರಿಯೂರ್ ಸುಱೂರ್ (ಮೈಆರಿ. ೧೯೨೧, ೧೦-೫೬; 983). [? + ಊರ್]

ಸುಱ್ಱನೆ (ಅ). ತಟ್ಟನೆ, ಸರಕ್ಕನೆ, ಬೇಗನೆ ಎಂಬರ್ಥದಲ್ಲಿ ಬಳಕೆಯಾಗುವ ಒಂದು ಅನುಕರಣಾವ್ಯಯ: ಭರದಿಂ ಸುಱ್ಱನೆ ಸುಯ್ಯ (ಶೋಕೋಪ. ೯-೨೦೭); ಬಡಗಿಯು ಸುಱ್ಱನೆ ಸುಗಿದಂಜಿ . . . ಭಯವತದಿಂದಂ ಓಡಲಾಱದೊಂದು ಪರ್ಮರನನೇಱುವುದುಂ (ಧರ್ಮಾಮೃ. ೧೨-೧೫೫); ದಿಸುನೆತ್ತರುಚ್ಚಳಿಸೆ ಸುಱ್ಱನೆ ಪಾಯಿದಡೆ (ಎಕ. VIII, ಸಾಗರ. ೪-೧೬; 1193). [ಸುಱ್ + - ಅನ್$_1$]

ಸುಱಬಂಟ (ನಾ). ಚಂಚಲಸ್ವಭಾವದ ಯೋಧ; ಹೇಡಿ (?): ಶ್ರೀ ಪಱಕಱ ಮಾರುಗಬಲರ ಚಟ್ಟ ಸುಱಬಣ್ಣರ ಸುಲ (ಎಕ. II, ೬೦-೩; 1100). 'ಸೂಳೆವಂಟ' ಪಠಾ. [IP ಇದು 'ಸೂಳೆಬಂಟ' ಎಂಬುದರ ಅಪಲಿಖಿತ?]

ಸುಱಿ$_1$, ಸುಳಿ$_1$ (ಕ್ರಿ). ೧. ಗುಂಡಾಗಿ ಸುತ್ತು; ಚಕ್ರಾಕಾರವಾಗಿ ತಿರುಗು: "ಸುಱಿ, ಭ್ರಮಣೇ, ಪರಿಭ್ರಮಣೇ— ಜಲಾವರ್ತೇ ಚೆ" (ತಮಧಾ); ಈ ಮುಗುಳೊಳಮಾ ಮಾಱ್ಕೆಯನಱಿಸಿ ಸುಱಿವುದಳಿ ಕೆಲಕೆಲದೊಳ್ (ಕವಿರಾ. ೩-೧೨೭); ಲತೆಯ ಮನೆಗಳೊಳೆ ತೆಱಂಬೊಳೆವಲರ ಬಸದೆ ಸುಱಿದಳಿಗಳ ಬಳಗದ ದನಿಗೆ ಕಿನಿಸಿ ಕಿಂಕಿಱೆವೋದಳ್ (ಪಂಪಭಾ. ೫-೪). ೨. ಕಾಣಿಸಿಕೊಳ್ಳು; ಗೋಚರವಾಗು: ದಂತಿಗಳ ತರೀರದೊಳ್ ಸುಱಿದು ಕೆತ್ತುವ ಪುಣ್ಣಳ ಬಾಯ್ಲಱೆಂದ ಮೆಲ್ಲೊಗವರುಣಾಂಬುಧಾರೆಗಳ

(ಜಗಿ. ೭-೮೩). ೩. ತೀಡು; ಬೀಸು: ಮುತ್ತುಗಳಂತಿರ ಸೂಸಿ ಪಾಯ್ವ ತೀಕ್ಷಣದೊಳೆ ನಾಂದು ಸೇಡುಗೊಳುತಂ ಸುಲಿದೊದುವ ಗಾಳಿ (ಕಾವ್ಯಾ. ೭೮ ಶಬ್ದಕ); ಪೆರ್ಚಿ ಸುಲಿದತ್ಯಂದೊಂದು ಜಂಝಾನಿಲಂ (ಉದ್ಭಟ. ೭-೮೨); ಸುಲಿದು ಕುರುಳ್ಗಳೊಳ್ಕೊಳಗಿ (ಚಕವಿ. ೧-೧೩). ೪. ಸುತ್ತಾಡು; ತಿರುಗಾಡು: ನಂದನಂಗಳೊಳ್ ಸುಲಿವ ಬಿರಯಿಯಿಂ ಕಂಪು ಕಣ್ಮರೆಯೆ ಪೂತ ಸುರಭಿಯಿಂ (ಪಂಪಭಾ. ೩-೨೨ ರಗಳೆ); ಭವನನಂದನದೊಳ್ ಸುಲಿಯುತ್ತಿರಲ್ಕೆ ಪಿಂತನೆ ವಜ್ರಿಯಕ್ಕಿ ಬಂದು ಕಡುಗೂರ್ತವೊಲೆನ್ನಯ ಬೆನ್ನನಪ್ಪುವಂ (ಕಾದಂಬ. ೩೦೪). ೫. ಮುತ್ತು; ಆವರಿಸು; ಕವಿ: ಮಾಯೆಯಿಂದಂ ಸುಲಿಯದ ತಪಮಂ ಮಾಟ್ಪ, ನಿರ್ಮಾಯೆಯಿಂದಂ (ಧರ್ಮಾಮೃ. ೬-೨೩೩); ನಜುಸುಯ್ಲೆ ಸುಲಿವ ತುಂಬಿಯ ಪಜ್ಜಿಪಕ್ಕಿಯೋ (ಪುಪ್ಪಸು. ೯-೬೫). **ಸುಳಿ**[1] : ೧. ಸುಳುವಿನೊಳಗೆ ಸುಳಿಯುತ್ತಲಿದ್ದೇನೆ ಸಿಲುಕಿಸದಿರಯ್ಯಾ (ಬಸವ. ೪೮); ಸುಳಿಯಬಹುದಂಬುಧಿಯ ನಡುವಣ ಸುಳಿಯೊಳಗೆ (ಕುವ್ಯಾದ್ಯೂ. ೪-೩೭). ೨. ಎಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿದವಯ್ಯ (ಅಪ್ರ. ೧೩-೩೭); ಸಿರಿ ನಡೆವಂತೆಯಿಂದು ನಡೆವಂತೆ ಸುಖಂ ಸುಳಿವಂತೆ (ಪಂಪಾಶ. ೪೮); ನನ್ನ ಕಣ್ಮನೆರು ಸುಳಿದಿರಿ ಅಂದ್ರ ಪೋಲೀಸನ ಪೆನ್ನಟ್ಟಿಸ್ತೀನಿ (ನಡದಾ. I, ೩೫೨). ೩. ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ಯಾ (ಮಹಾದೇ. ಬ. ೪೩-೧೦೦): ಎರಲು ಸುಳಿದುದು ದೀಪಶಿಖೆಯ ಪರಿಹರಿಸಿದತಿಬಲದಬ್ಬರದ ನಿಷ್ಕಂಪತೆಗಂಜದೆ (ಕುವ್ಯಾಕ. ೮-೧೪); ಗಿರಿಜೆಯ . . . ನಾಸಾನಿಲನ ಕಂಪು ಸುಳಿಯೆ (ಚಲಪು. ೧-೨). ೪. ನಸುಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪಜಯಂ ಮಧುವಿನ ಜಯಂ (ಪದ್ಮರಾ. ೮-೨); ಬಡಿಸರೊಗ್ಗರಣೆಯಿಂಗಿಸ ಕಂಪು ಸುಳಿದುದು ಬಿಡುಸ್ಸಳಕೆ (ಪೋಪತ. ೩-೫೪).

[ಪೇ. ‖ ತಮಿ. ಮಲ. ಚುಟಿ; ತುಳು. ಸುಳಿ, ಸುಲಿ; ತೆಲು. ಸುಡಿ]

ಸುಲ್ಲಿ[3], **ಸುಳಿ**[2] (ನಾ). ೧. ಸುತ್ತುವುದು; ತಿರುಗುವುದು. ೨. ಸಮುದ್ರ, ನದಿ, ತೊರೆಗಳಲ್ಲಿಯ ಆಳವಾದ ಕಡೆಯಲ್ಲಿರುವ ತಿರುಗಣಿ; ಜಲಾವರ್ತ: ''ಸುಲಿಯೆಂದು ಜಲಾವರ್ತಂ'' (ಚಕಾ. ೨೩-೧೪೨); ಸುಲಿಯೊಳಗಿರ್ದು ಬೆಟ್ಟು ಪೊಱ ಪೊಣ್ಮುವಿನಂ ಲವಣಾಂಬುರಾಶಿ ಕುಕ್ಕುಬಗುದಿವಲ್ಲಿ (ಪಂಪಭಾ. ೧೧-೧೫೩); ಸುಲಿಯಂ ಪಲಿದೊಪ್ಪುವ ಪೊರ್ಕುಟ್ (ಕಬ್ಬಿಕಾ. ೧೨೧); ಘಳಿಘಳಿನೇಲ್ವ ಬೊಬ್ಬುಳಿಯನೀ ಸುಲಿಯಂ (ಚಕವಿ. ೧-೩೭). ೩. ದೇಹದಲ್ಲಿ ಕಾಣಿಸಿಕೊಳ್ಳುವ ಕೂದಲಿನ ಸುತ್ತು, — ಆವರ್ತ: ಮುಂದಲೆಯ ಸುಲಿಯಿಂದಕ್ಕುಂ ಕಳ್ಳಂ (ಲೋಕೋಪ. ೧೧-೨೫); ಅಪ್ಪುವು ಸುಲಿಗಳ್ ನೂಱುಭೇದದಿಂದಂ ತುರಗಕ್ಕೆ (ಅಶ್ವಶಾ. ೪-೧). ೪. ತೆಂಗು, ಬಾಳೆ ಮೊದಲಾದ ಸಸ್ಯಗಳ ಕುಡಿ, — ಎಳೆಯ ಚಿಗುರು: ''ಸುಲಿ – ಕೆಲಸಗಳ್ಗಂ ; ಸಸಿಯ ಸುಲಿ'' (ಶಮಪ. ಪರಿ. ೧); ತಿಳಿನೀರ ತುಂತುರ್ಪನಿಗಳಿಂ ಪೊರದಳೆವಾಟೆಯ ಸುಲಿಯ ಬಿಚ್ಚಣಿಗೆಗಳನಡಿಗಡಿಗೆ ಬೀಸಿಯುಂ (ಕಾದಂಪೂ. ೦೫೫). ೫. ಗುರುತು; ಬಾಡು: ಮೇಳದಂಕದಂತೆ ಸುಲಿಯಱಿದು[೦] ಡೊಂಬರ ಕೋದಗದಂತಾಡಿ (ಪಂಪಭಾ. ೬-೭೨ ವ). ೬. ಸೋಮಾರಿ; ಆಲಸಿ: ''ಸುಲಿ – ಕೆಲಸಗಳ್ಗಂ; ಸಸಿಯ ಸುಲಿ'' (ಶಮಪ. ಪರಿ. ೧). **ಸುಳ್ಳಿ**[2] : ೨. ಎಳೆಕಬಿಲ ಬಿಜುವೊಯಿಲೊ ಸಿಡಿಲಿನ ಸುಳಿಯೊ ಮೈಮಸೆಯಲುಣವಾರಿಯೊ ಪುಳಿಗಳಿಲ್ಲದ ಹೊನಲೊ ರಣದಲಿ ಚಿತ್ರವಾಯ್ತು (ಕುವ್ಯಾದ್ಯೂ. ೧೪-೭); ಶರಧಿಯ ಸುಳಿಗೆಣೆಯೆನಿಸುವ ನಾಭಿ (ಅಂಜಚ. ೭-೧೦೬); ಗಳೆಯ ಡೊಂಬತಿಯಾಟದಾ ಪರಿ . . . ಸುಳಿಯ ನೀರಿನ ತಲೆಯ ಹೂಗರಿ (ಕವಪ್ರ. ೮೯-೧೫). ೩. ದನವಿನ ಬೆಂನ ಸುಳಿಯ ಮೇಲೆ ಬರೆದರೆ ಮೂಣುದು (ಎಳ. XI, ಹೂಳ್ಳ. ೯೭-೩; ?); ಸಿಂಧೂದೇಶದ ಕುದುರೆಗಳನ್ನು ಆರಿಸಿಕೊಂಡನು . . . ಲಕ್ಷಣವಾದ ಹತ್ತು ಸುಳಿಗಳುಳ್ಳವು (ಪಚಾ. ೧೪೦). ೪. ಸಸಿ ಬಲಿದು ಹೊಸ ಸುಳಿ ತೋಲ್ದಿದಲ್ಲಿಯಲ್ಲದೆ ಆ ತುಷ ಪರ್ಣ ಬಿಡದು (ಪೋಳಮಾ. ೧೪೧-೩೪೦); ಎಳೆಯ ಬಾಳೆಯ ಸುಳಿಗೆ ಸೀಗೆಯ ಮೆಳೆಯೊಡನೆ ಸರಸವೆ (ಋವ್ಯಾದ್ಯೂ. ೧೨-೩೯); ಎಳೆಯ ಬಾಳೆಯ ಸುಳಿಯು ಅನಲನ ಪೊಯ್ಲಲಿ ನೊಂದವೋಲ್ (ನಳಚ. ೫-೨). ೬. ಸಂತಾನ; ಸಂತತಿ: ಸತ್ತು ಹುಟ್ಟುವ ಸುಳಿಯಲ್ಲದೆ ಮತ್ತೊಂದು ಗೊತ್ತು ಇಲ್ಲದೆ ಹೋಯಿತು (ಪುರಂದ. ೧೦೬೧೦-೨). ೮. [ವ್ಯಾಕ] ಋಕಾರಕ್ಕೆ ಕಾಗುಣಿತದಲ್ಲಿ ಬರುವ ಚಿಹ್ನೆ ; ವಟ್ಟ್ಯಕ್ಷರ ಸುಳಿ (ಪ): ಇದು ಋಕಾರದ ಸುಳಿ (ಸಂಶೋಧ. ೩೬); ಒತ್ತಕ್ಷರ 'ರ'ಕಾರವು' ಕೆಳಗೆ ಸುಳಿಯೊಂದಿಗೆ ಪ್ರತ್ಯೇಕವಾಗಿ ಬಲಬದಿಯೆರಿದ ಆರಂಭವಾಗಿ ಎಡಬದಿಯಲ್ಲಿ ಮೇಲೇರುತ್ತದೆ (ಸೂಳಂಬ. ೮೦). [< ಸುಲ್[1]./ ತಮಿ. ಮಲ. ಚುಟಿ; ಕೊಡ. ಚುಳಿ; ತುಳು. ಸುಳಿ; ತೆಲು. ಸುಡಿ]

ಸುಲಿಗಾಳಿ, ಸುಳಿಗಾಳಿ, ಸುಳಿಘಾಳಿ (ನಾ). ೧. ಸುಂಟರಗಾಳಿ; ಸುಳ್ಸುರಿ: ಇದು ಸುಲಿಗಾಳಿಯಂ ನೆಗೆದು ತೋಱುವ ಕಿರಿಶುಕಶುಷ್ಮಪಕ್ಷಂ (ಚಂದ್ರಪ್ರ. ೯-೫). ೨. ಮೆಲ್ಲನೆ ಬೀಸುವ ಗಾಳಿ; ಮೊಂದವಮಿರುತ: ಪುಣ್ಯದೇವತಾ ದೂತನವೋಲ್ ಸುಲಿಗಾಳಿಯೊಡನೆ ಹರ್ಷದ ಮಲೆ ಬರೆ (ಪಂಡಾಮಾ. ೯-೧೭); ತಣ್ಪುವೇಱಿದ ಸುಲಿಗಾಳಿ (ಪುಷ್ಪಸ್ತ. ೨-೨೦). **ಸುಳಿಗಾಳಿ**: ೧. ನರರಥ ಸುಳಿಗಾಳಿಯಂತಿರೆ ತಿರುತಿರುಗಿದುದು ವಿಶ್ವತೋಮುಖದಿ (ಋವ್ಯಾಕ. ೧೪-೩೬); ಅಲೆವುದ ಸುಳಿಗಾಳಿಗೆ ಶ್ಮಲ (ಜೀವಂಧಾ. ೧೭-೪೪); ವಿಶೇಷ ಸುಳಿಗಾಳಿ ಎದ್ದಾಗ ಸ್ನಾನವ ಮಾಡಲಾಗದು (ಸಣೆ. ೬೨). ೨. ಕಂಪುಗಳ ಜಾತಿಯಂ ಬೇಱೆಬೇಱ್ಪಿಸುತೆ ಸುಳಿಗಾಳಿ ಪೂವಸರದೊಳ್ ಮೆಱೆದುದು (ಚಲಪು. ೧೦-೩); ಅರಳಿತು ಹೂ ಸುಳಿಗಾಳಿಯ ಕಚಿಗುಳಿಗೆ (ಆಡೂಲ. ೭೨-೧೧). **ಸುಳಿಘಾಳಿ** : ೧. ಹಳಚಿದರು ಸುಳಿಘಾಳಿಯಂತಿರೆ ಸುಳಿದು ಖಗಪತಿಯಂತೆ ಹೊಯ್ದಲಿ ಬಳಸಿ ಬಿಗಿದೞಗಿದರು ಬಿಡೆಯದ ಮತ್ಕಗಜದಂತೆ (ಋವ್ಯಾಗ. ೭-೨).

[ಸುಲ್ಲಿ + ಗಾಳಿ]

ಸುಲಿಗುರುಳ್, ಸುಳಿಗುರುಳ್, ಸುಳಿಗುರುಳು (ನಾ). ಗುಂಗುರುಕೂದಲು; ಅಲೆಅಲೆಯಾದ ಕೇಶ: ಸುಲಿಗುರುಳ್ ಸೋರ್ಮುಡಿ ನೋಡಲ್ಮಾಡೆ ಸೂಗಯಿಕುಂ ದ್ರೌಪದಿಯಾ (ಗದಾಯು. ೮-೫೧); ಮೆಱೆವರ್ ಸುರ್ಕುಂಗುರುಳ ಸುಲಿಗುರುಳ ನಿಡುಗುರುಳುರುಳಿಗುರುಳ ತುಂಬಿಗುರುಳ ಗೋಪಿಸ್ತ್ರೀಯರ್ (ಜಗಿ. ೪-೧೩೫). **ಸುಳಿಗುರುಳ್**: ಸುಳಿಗುರುಳಾಡೆ ತೋಳ್ಗಳೆಡೆಯಾಡೆ ಬೆಮರ್ ಪಿಗೆ ಮೂಡೆ . . . ಗಟ್ಟಿಗಳನಂದು ಮಗುಳ್ದಿದರ್ (ಗಿರಿ. ೨-೯೦); ತುರುಬಿಗಳ ಪೋಲ್ವ ಸುಳಿಗುರುಳ್ಗಳ ಪೆಣ್ಗಳಿರ್ದರು (ಚಲಪು. ೭-೧೨). **ಸುಳಿಗುರುಳು**: ಅಳಿಕುಳಿಲಗಳ ಕಪ್ಪನಣಿಪ ಸುಳಿಗುರುಳು ರಂಜಿಸುಗು ತರುಣಿಯ (ಬಸವ. ೪-೨೯); ಸುಳಿಗುರುಳಿ ನಿಚ್ಚಿಸಳುಗಂಗಳ . . . ಬಲುಮೊಲೆಯ ಮೋಹರ ನೂತಿತವುರೀವಾರನಾರಿಯರ (ಋವ್ಯಾಆ. ೭-೮೮); ಮಘಮಘಿಸುವ ಸೊಬಗಿನ ಸುಳಿಗುರುಳು (ಪುರಂದ. ೧-೮-೨). [ಸುಲ್ಲಿ + ಕುರುಳ್]

ಸುಲಿಗೊಳ್, ಸುಳಿಗೊಳ್, ಸುಳಿಗೊಳು (ಕ್ರಿ). ೧. ತಿರ್ಪನೆ ತಿರುಗು; ಗಿರ್ಪನೆ ಸುತ್ತು: ಭೀತಿಯಿಂ ಮಱುಗಿ ತರಳ್ತು ತೂಳ್ದಿ ಸುಲಿಗೊಂಡುದು ಪಾಂಡವಸೈನ್ಯಸಾಗರಂ (ಪಂಪಭಾ. ೧೨-೧೩). ೨. ಸುತ್ತುವರಿ ; **ಮರ್ತುಲವಾಗು**: ಘನಸ್ತನಂಗಳೊಳಿಡಪಿಯುಂ ಗಂಭೀರನಾಭಿಯೊಳ್ ಸುಲಿಗೊಂಡುಂ . . . ನಾಟ್ಯರಸಮ ತೀವಿ (ಆದಿಪು. ೭-೧೨೬ ವ); ಸುಟ್ಟುಜಿಗಾಳಿಯೊಳ್ ಸುಲಿಗೊಂಡು ತಲಗೆಲೆಗಳ್ ಪಾಱುವಂತೆ ದಸದಸಗೆ ಪಾಱುವ ಘನಾಘನಚಕ್ರದಿಂದುಳ್ಕುಲ್ಕಾಕಾರಮಾಗೆ (ಗದಾಯು. ೮-೨೦ ವ); ಸುಲಿಗೊಂಡ ನಾಭಿಕೂಪದ ಸುಲಿಯಿಂ ಪೊಱಮಡದ ಸುಱಿವ ನಯನಂಗಳ ಬೆಂಬಱಿವಿಡಿದು ಪರಿದು ಸುಲಿದುದು ಸುಲಿಯೊಳಗಣ ಪಜ್ಜಿಗುಲಂತೆ ಪಾತಕನ ಮನಂ (ಪಂಪಾಮಾ. ೯-೮೧). **ಸುಳಿಗೊಳ್**: ೩. ಕುಡಿಯನ್ನು ಹೊಂದು; ಚಿಗುರಿನಿಂದ ಕೂಡಿರು: ಅಳಿಯೞಿಗದನಿಲನಲುಗದ ರವಿಕರಂ ಪೊಗದ ಸುಳಿಗೊಂಡು ದಳವೇಱಿ ಹಸುರಳಿದು ಬೆಳುವೞಿದ ಸುರುಚಿರಮನಿಪ್ಪ ಮಾಸಲ ಮೊಗ್ಗೆಯಂ ಕೊಂಡು (ಬಸರ. ೩-೨೦). **ಸುಳಿಗೊಳು**: ೨. ಬೆಮರ್ ಶರಂ ಪರಿಯಿಡೆ ಗಡ್ಡವಂ ಸುಳಿಗೊಳುತ್ತಿರೆ ಕಂಪನಮರ್ಕಿ (ಪಂಪಾತ. ೬).

[ಸುಲ್ಲಿ + ಕೊಳ್]

ಸುಲಿತರ್, ಸುಳಿತರ್ (ಕ್ರಿ). ೧. ಸುಳಿದು ಬೀಸು; ಸುತ್ತಿ ತೀಡು: ಸುಲಿತರ್ವ ಲರಿಂದೆ ಬಿಲ್ದ ಪೂಗಳ್ (ಕಬ್ಬಿಕಾ. ೧೨೬). **ಸುಳಿತರ್**: ೫. ತಿರುಗು; ಸಂಚರಿಸು: ಪುರದ ಪಲವು ರಾಜವೀಥಿಗಳೊಳು ಸುಳಿತಪ್ಪಾಗಳು (ಬಸರ. ೮-೨೧).

[ಸುಲ್ಲಿ + ತರ್]

ಸುಲಿದಳಿರ್ (ನಾ). ಎಳೆಯ ಚಿಗುರು: ಸುಲಿದಳಿರಾಯ್ತು ಪೂಗೞಗೆ ಕಂಗಳ್ ಕೈಪೊಡೆಯಾಯ್ತು . . . ಅಶೋಕೆಯ ಕಂದಳಿರ್ (ಪುಷ್ಪಸ್ತ. ೫-೨೦). [ಸುಲ್ಲಿ + ತಳಿರ್]

ಸುಲೆಯಿಸು, ಸುಳಿಸು, ಸುಲಿಸು (ಕ್ರಿ). ೧. ಸುತ್ತುವಂತೆ ಮಾಡು; ತಿರುಗಿಸು: ಆ ಜಗತ್ಪತಿಯ ಮನೋಯಾನಪಾತ್ರಮಂ ತಮ್ಮ ತಲೋದರ ಜಲಧಿನಾಭಿಗಂಭೀರಾ

ವರ್ತದೊಳ್ ಸುಬಿಯ್ಗುಸಿ[ಪಾಕಾಂ. ಸುಬಿಗೊಳಿಸಿ]ಯುಂ (ಆದಿಪು. ೮-೨೪ ವ); ಸುಬಿಯಿಸುತಾಜಿಯಂ ಪೊಳಯಿಸುತ್ತೊಲವಿಂದೆಡಕಂ ಬಲಕ್ಕಮಾಗಳೆ ತಿರುಪುತ್ತನೇಕ ವಿಧಮಪ್ಪ ಸುಶಿಕ್ಷೆಗಳಂ . . . ತೋಱಿದಂ (ಕುಸುಮಾ. ೮-೭೨). **ಸುಳಿಸು** : ೧. ಅತಿಕಾಯ . . . ಬಿಳಿಯ ತೇಜಿಯ ಹೇಮರಥವನು ಸುಳಿಸಿದನು (ಕಾಶಿರಾ. ೨೭-೨). ೨. ಬೀರು; ಸೂಸು: ಸುಳಿಸಿದಳು ಸುಮ್ಮಾನದಲಿ ಕಡೆಗಂಗಳನು ಸೀತೆ (ತೊರಾ. ೧-೧೫-೩೮); ಮಗು . . . ಕಣ್ಣ ಬಿಚ್ಚಿ ಸುಳಿಸಿತೊಂದು ನಗೆಯನು (ರಾಮಾನ. ೮೭). **ಸುಬಿಸು** : ೧. ಕಾಡ ಬೇಲಿಯಂ ಮಾರ್ಕಾಡನಱಿಯಲುಂ ಮೂಡಿಗೆ ಕಕ್ಕುಂಬಂ ಸುಬಿಸಿ (ಪಂಪಭಾ. ೫-೪೧).

[ಸುಬಿ$_2$ + - ಇಸು$_3$]

ಸುಬಿಯೆಲೆ, ಸುಳಿಯೆಲೆ (ನಾ). ತೆಂಗು, ಬಾಳೆ ಮೊದಲಾದುವುಗಳಲ್ಲಿ ಸುರುಳಿಯಾಗಿ ಸುತ್ತಿಕೊಂಡಿರುವ ಎಲೆ: ಎಳವಾಬೆಯ ಸುಬಿಯೆಲೆಯ ತಳತಳಿಪ ಮೇಲ್ಕುಟ್ಟು (ಚಂದ್ರಪ್ರ. ೭-೯೫ ವ); ಎಳವಾಬೆಯ ಸುಬಿಯೆಲೆಯನುಡಿಯೊಳಮರ್ಚಿಯುಂ (ಕಬ್ಬಿಕಾ. ೧೫೫). **ಸುಳಿಯೆಲೆ**: ಸುಳಿಯಲೆಯೊಳಗಿಂದ ಬಾಳೆಗೊನೆ ಹೊರಬೀಳುವಂತೆ (ಪ್ರಣಸ. ೧). [ಸುಬಿ$_2$ + ಎಲೆ$_1$]

ಸುಬಿಯೇಱು, ಸುಳಿಯೇಱು (ಕ್ರಿ). ಬಿಗುರು; ಸುಳಿ ಬರು: ಕೇದಗೆ ಸುಬಿಯೇಱೆ (ಜಗಪ. ೪-೪). **ಸುಳಿಯೇಱು** : ಕೇತಕೀವನಂ ಸುಳಿಯೇಱೆ (ಸಾಳ್ವಭಾ. ೨೬-೧೪).

[ಸುಬಿ$_2$ + ಏಱು$_1$ (< ಏಱ್$_1$)]

ಸುಬಿವಡೆ (ಕ್ರಿ). ತಿರುಗಣಿಯನ್ನು ಹೊಂದು; ಜಲಾವರ್ತವನ್ನು ಪಡೆ: ಮಿಱುಪ ಸುಬಿವಡೆದ ಸಿಂಗರದೊಱೆಯೊಳ್ ತಲೆದೋರ್ಪ ತೆರೆಗಳ್ (ಕಬ್ಬಿಕಾ. ೭೬).

[ಸುಬಿ$_2$ + ಪಡೆ$_1$]

ಸುಬಿವರ್ (ಕ್ರಿ). ಸುತ್ತಿ ಬರು; ತಿರುಗಿ ಬರು: ಒಂದೊಂದಡಿಯೊಳ್ ಮರದ ಮಱೆಗಳೊಳ್ ಬಲಿದಪ್ಪಿದ ಮಱಿಯನಱಸಿ ಮಱುಕದಿಂ ಸುಬಿವರ್ಪ[ಪಾಕಾಂ. ಸೂಬ್ಪರ್ಪ] ಖಡ್ಗಧೇನುಗಳ ತೊರೆದ ಮೊಲೆಯಿಂದಂ ಬರಿವಿಡಿದು ಸುರಿವ ಪಾಲ್ (ಚಂದ್ರಪ್ರ. ೫-೬೫ ವ). [ಸುಬಿ$_2$ + ಬರ್ (< ವರ್)]

ಸುಬಿವು, ಸುಳಿವು, ಸುಳುವು$_1$, ಸುಳುಹು, ಸುಬುವು (ನಾ). ೧. ಗುರುತು; ಕುರುಹು; ಜಾಡು: ಚಕ್ರವ್ಯೂಹದ ಸುಬಿವಿನೊಳಗಳಿಟ್ಟಿಡೆಯ ಕೃಪ ಕೃತ ವರ್ಮರೆಂಬ ನಚ್ಚಿನ ನಾಯಕರಿರ್ವರುಮೆರಟ್ಟೆಸೆಯೊಳೊಡನೆ ಬಂದು ತಾಗಿದಾಗಳ್ (ಬಂಹರಿ. ೧೨-೧೦ ವ). **ಸುಳಿವು** : ೧. ಕಂದನ ಸುಳಿವ ಕಾಣನು (ಕುವಾಧೂ. ೮-೧೯); ಇಂದುಮತಿಯ ತಾಯಿಗೆ ಅದಱ ಸುಳಿವು ಹತ್ತದಂತೆ ಉತ್ತರಿಸಿದ (ಅಪನಾ. ೨೪೭); ಸುಳಿವನ್ನು ಅರಿತ ರಾಜನೂ ಮಂತಣಚಾವಡಿಯನ್ನು ಸೇರಿದನು (ಸವಚ. ೩೮). ೨. ನೀರಿನ ಸುಳಿ; ಆವರ್ತ: ಸುಳಿವಿಗೆ ಮಿನ ನಡುನೀರ ಹೊಗುವಂತೆ ಸ್ವಲ್ಪಚೇತನೆ (ಉಷ್ಕಾಅ. ೧೪-೧೦). ೩. ಬೀಸುವಿಕೆ; ತೀಡುವಿಕೆ: ಅಲರ್ವಿಜ್ಜಣದೆ ತಣ್ಗಲರ ಸುಳಿವನೊದವಿಸುತ (ಪದ್ಮರಾ. ೮-೧೩); ಸಿಂಧ ಸೆಳೆ ಸೀಗುರಿಯ ಸುಳಿವುಗಳ ಕಳಕಳಿಕೆ ಕಡುಹೇಱೆ (ಕುವಾಭೀ. ೮-೨೦). ೪. ಅವಕಾಶ; ಆಸ್ಪದ: ತಂದದ್ದರೊಳಗರ್ಧ ಕದ್ದಾಳೊ ತನ್ನ ಸಂದು ಸುಳಿವು ನೋಡಿ ಮದ್ದಾಳೊ (ಪುರಂದ. ೧-೧೮೨-೩). ೫. ಕುಣಿತ; ನೃತ್ಯ: ಸೋಗೆಗಳ ಸುಳಿವುಗಳ ಕಪಿಗಳ ಲಾಗುಗಳ ಲಂಘನೆಯಲೆಸೆದುದು . . . ಉದ್ಯಾನ (ತೊರಾ. ೧-೯-೧೩). ೬. ಮಲ್ಲಯುದ್ಧದ ಒಂದು ವರಸೆ, — ಪಟ್ಟು: ಗಳಹತ್ತ ಡೊಕ್ಕರ ತಳಮೇಲು ಪೈಸರ ಸುಳಿವು ವಂಚನೆ ಪತನದಲಿ . . . ಹೋರಿದರು (ಕಂಸವಿ. ೨೧-೯೨). **ಸುಳುವು**$_1$: ೧. ಸಾರಭೂತಾಧಿಕದ ಸುಳು[ಪಾಕಾಂ. ಳಿ]ವಿನ ಪಂಚವಾಯುಗಳ . . . ಬೇಳಂಬದಲಿ ಬೆಂಡಾದೆ ನೀನೆಂದ (ಕುವ್ಯಾಅ. ೩-೭೫); ಕುಂಡಲಿಯ ಭೇದದ ಕಂದನಾಡಿಯ ನಡುವೆ ಮಂಡಿಸುತಿರ್ಪ ಹಂಸನ ಹತ್ತಿರವೆ ಕಂಡಿಹುದು ಸುಳುವು (ಸರ್ವಜ್ಞ. ೪೭೪); ಇದರ ಸುಳುವು ಪುಟ್ಟಾಚಾರಿಗೂ ಹತ್ತಿತ್ತು (ಭಾರಥಿ. ೫೦). ೨. ಸುಳುವಿನೊಳಗೆ ಸುಳಿಯುತ್ತಿರ್ದೆನೆ ಸಿಲುಕಿಸದಿರಯ್ಯಾ (ಬಸವ. ೪೮). **ಸುಳುಹು** : ೧. ಕಾಯಕ್ಕೆ ಮಚ್ಚನ ಪ್ರಾಣಕ್ಕೆ ಓಗರ . . . ಸುಳಿವ ಸುಳುಹುಳ್ಳನ್ನಕ್ಕ ಇವ ಮಾಡಲೇಬೇಕು (ಅಪಚಂ. ೨೦-೮೨); ಕಾಯದೊಳಾತ್ಮನ ಕಾಣ್ಬರು ಕಾಂತಿಯ ಕಾಯಸುಖಿವೆ ಸುಳುಹಾಗಿ (ಧರಚ. ೨-೭೫); ಜನಕಾತ್ಮಜೆಯ ಸುಳುಹ ಕಾಣದೆ ಬಳಲಿ (ಪಂಕಾರಾ. ೫-೫-೮). ೨. ಕ್ರೋಧವೆಂಬ ಸುಳುಹಿನೊಳಗೆ ಬಿದ್ದೆನಂಬಗ ಎನ್ನ ಸೆಳೆದುಕೊಳ್ಳೋ ನೀನಂಬಿಗ (ಶಿಮಗೀ. ೧೩೧-೬೫೬); ಭರದಲಿ ತಿರುಗುವ ಸುಳುಹಿನ ಅರೆಬಿರಿದಿನವರು ಅಯ್ಯಗಳೆ (ಮೋಳಮಾ. ೧೬೫-೬೧೬). **ಸುಬುವು** : ೧. ವ್ಯೂಹದ ಸುಬುವಿನಿಟ್ಟೆಡೆಯೊಳುಭಯವೀಥಿಗಳ ವಿಷಮಮಪ್ಪೆಡೆಗಳೊಳ್ . . . ಸಾರವಂದು (ಮಹಾನೇ. ೧೨-೧೦೩ ವ).

ಸುಳಿವು ಹಿಡಿ = ಜಾಡನ್ನು ತಿಳಿ; ಪತ್ತೆ ಹಚ್ಚು: ನೆಳಲು, ಬೆಳಕಿನ ಹಿಂದೆ ಸುಳಿವುಹಿಡಿಯುತ ಬಂತು ಕೊಳಲ ಕಣ್ಣಿಗೆ ತಾಗಿ ಮಿಂಚುವೆರಳು (ನಲಮು. ೪೩-೪). ಸುಳುಹುಗಾಣಿಸು = ಗುರುತು ತೋರಿಸು; ಜಾಡು ತೋರಿಸು: ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಸುಳುಹುಗಾಣಿಸಿದ ನಿಜಗುಣ ಶಿವಯೋಗಿ (ಶರೀಪ. i, ಮೊದಲಮಾತು.).

[ಸುಬಿ$_2$ + - ವು]

ಸುಬಿವೊರ್ಕುಟ್, ಸುಳಿವೊಕ್ಕುಳು (ನಾ). ಗುಂಡಾಗಿರುವ ಹೊಕ್ಕಳು; ಸುಳಿನಾಭಿ: ನಿಜಿಗುರುಳ್ . . . ಸುಬಿವೊರ್ಕುಟ್, ಬಟ್ಟದೊಡೆ . . . ಸೊರ್ಕುಂ ಗೋಗಿಲೆ – ಇವು ಉಪಸರ್ಗಂಬೆರಸಿದ ಶಬ್ದಂಗಳ್ (ಕಶಸಾ. ೬೩-೪೧೬); ಸುಬಿವೊರ್ಕುಟ ತಾವರೆಯಲರುಗಳಿಗಳ ಬಳಗದ ನೆರವಿನಿಂ ನಿಮಿರ್ದು (ಚಕವಿ. ೩೨-೮). **ಸುಳಿವೊಕ್ಕುಳು**: ಸತ್ಯಮಲಮುಖಿ ಸುಳಿವೊಕ್ಕುಳಬಲೆ . . . ಕಣ್ಣುದೆನಮರ್ದಳೋ (ಚಬಪ್ರ. ೪೫-೫೧).

[ಸುಬಿ$_2$ + ಪೊರ್ಕುಟ್ (< ಪೊಕ್ಕುಟ್)]

ಸುಬಿಸು 'ಸುಬಿಯಿಸು' ನೋ.

ಸುಬುವು 'ಸುಬಿವು' ನೋ.

ಸುಬ್ಲಲ್‌ನಾಡು (ನಾ). ಒಂದು ನಾಡಿನ ಹೆಸರು: ಸುಬ್ಲಲ್‌ನಾಡುಂ ಪಟ್ಟಗೆಜೆ ಪನ್ನೆರಡು ಗಾಮುಣ್ಣ ಪ್ರಜೆ ಸಕ್ಕಿ (ಎಇ. XI, ಚತ್ರದು. ೨೪-೧; ಸು. 500?).

[ಸುಬ್ಲಲ್$_0$ + ನಾಡು]

ಸೂಂಖ (ನಾ). ಒಂದು ಊರಿನ ಹೆಸರು: ಶ್ರೀಮತ್ಕಪ್ಪಯ್ಯಂ ಬೆಳ್ಪೊಲ ಮೂನೂಱಱ ಸೂಂ[ಖ]ಮನಾಳುತ್ತು xx ನ್ನು ಕೊಂ[ಡಿಟ್ಟು] . . . ದೇಗುಲಕ್ಕಂ ಬಿಟ್ಟೋಮ್ (ಪೌಶಾ. XI-i, ೨೭-೮; 904). [?]

ಸೂಂಟಗೆ 'ಸುಂಟಗೆ' ನೋ.

ಸೂಂಟಗೆಗೊಳ್ (ಕ್ರಿ). (ಸುಟ್ಟ) ಮಾಂಸವಾಗುವಂತೆ ಮಾಡು; ಧ್ವಂಸಮಾಡು: ಇಭಘಟೆಯಂ ಪಡಲ್ವಡಿಸಿ ಘೋಟಕಸಂಕುಳಮಂ ಮರಳ್ಚಿ ಪೂಣ್ದಾಭಮುಖರಾದ ವೀರಭಟರಂ ನೆಲೆ ಸೂಂಟಗೆಗೂ[ಂ]ಡು ವೈರಿಭೂಪ್ರಭುಗಳ ಮಸ್ತಕಾವಳಿಗಳಂ ಮುಳ್ಗಿಂ(ಳಿಸಿಂ) ಪೊದಸಂದುವೊಯ್ದಂ (ಕಾ. IV, ೧-೬೪; 1204).

[ಸೂಂಟಗೆ (< ಸುಂಟಗೆ) + ಕೊಳ್$_1$]

ಸೂಂಟಿಸು 'ಸುಟ್ಟಿಸು' ನೋ.

ಸೂಂತಿಕಾಗಾರ (ನಾ). ಬಾಣಂತಿಯ ಕೋಣೆ; ಹೆರಿಗೆಮನೆ: ಅರವೆ ಸೂಂತಿಕಾಗಾರ ಜೀರ್ನಾಲಯಂ ದೂರದಾವೇಶ ಗೋಸಾಲೆ ಮನಕಿನಿದಿನ ತಾಣವೆನಿಸಿರಲಲ್ಲಿಗೋರ್ವನು ಬರೆ (ಭೃರವೇ. ೨-೭೩). [< ಸಂ. ಸೂತಿಕಾಗಾರ]

ಸೂಕ 'ಸುಂಕ್ಕು' ನೋ.

ಸೂಕರ (ನಾ). ೧. ಹಂದಿ; ವರಾಹ: "ಕೋಳಃ, ಕ್ರೋಡಃ, ಸೂಕರಃ, ವರಾಹಃ . . . ಕಿರಿಃ – ಈ ೮ ಹಂದಿ" (ಪಲಾಯು. ೩೮-೭೩); ವನಾಶ್ವ ಸೂಕರಮನಿತುಂ ಮುನಿಸಂ ಪರಿಹರಿಸಿರ್ದುವು (ಆಜಪು. ೭-೨); ಸೂಕರನವೊಲು ಕೋಡೆತ್ತಿ ಹಾಯ್ದುದರು (ಕುವಾಭೀ. ೪-೩೫); ನಡುಂಗಿದತ್ತಡವಿ ಸೂಕರಂಗಳ ಘೋರ ಹೂಂಕಾರದಿಂದೆ (ಶ್ರೀರಾಮಾ. ೧೫೭-೧೨೯). ೨. ಒಂದು ನರಕದ ಹೆಸರು: ಸೂಕರ . . . ಅವಿಕವೆಂಬೈದು ಮಂತ್ರಿ ನರಕಂಗಳ ನಡುವೆ ಚಂಡಕೋಲಾಹಲವೆಂಬರಸುನರಕವಿಹುದು (ವವೇ. ೧೮೦). [ಸಂ.]

ಸೂಕರಕಂದ (ನಾ). ಒಂದು ಬಗೆಯ ಗಡ್ಡೆ; ವರಾಹಗೆಡ್ಡೆ; ವಾರಾಹಿ: "ಕುಷ್ಮನಾಶನಃ – ಸೂಕರಕಂದ, ಬಿಳಿಯ ಸಾಸಿವೆ" (ಓಷಧಿ. ೩೭). [ಸಂ.]

ಸೂಕರಗಂಧ (ನಾ). = ಸೂಕರಕಂದ : "ಕ್ರೋಡಾ – ಸೂಕರಗಂಧ" (ಓಷಧಿ. ೪೧).

[< ಸೂಕರಕಂದ]

ಸೂಕರಮದ್ದವ (ನಾ). "ಸೂಕರ ಮದ್ದವ ಎಂದರೆ ಕಾಡುಹಂದಿಯ ಒಣ ಮಾಂಸ (Dried boar's flesh) ಎಂದು ಒಮ್ಮೆ ಬಗೆಯಲ್ಪಟ್ಟಿತ್ತಾದರೂ

ಈಚೀಚೆ ಅದು ಮಾಂಸವೇ ಅಲ್ಲ, ಒಂದು ಬಗೆಯ ಅಣಬೆ (fungus) ಅತಪವ ಶಾಕ ಎಂದು ಗೊತ್ತಾಗಿದೆ'' (ಮೃಶಾಖಿ. ಟಿಪ್ಪಗೆ): ನಿನ್ನೆ ಕಮ್ಮಾರ ಚುಂದನ ಮನೆಯೊಳಟ್ಟು ಸೂಕರಮದ್ದವವನುಂದ ಬಳಿಕ ಬಸುಗುತ್ತ ದಿಂದಣಯಥಂ ಬಳಲುತಿಹೆ, ಬಸಿರು ನೋನೋಯುತಿದೆ (ಮೃಶಾಖಿ. ೬೫-೭).

[<— ಪಾಲಿ. ಸೂಕರಮದ್ದವ]

ಸೂಕರವದನ (ನಾ). ೧. ಹಂದಿಯ ಮುಖ. ೨. ಹಂದಿಯಂತಿರುವ ಮುಖವುಳ್ಳವನು: ತುರಗಗಳಂ . . . ಸ್ಥೂಲಾಂಗಂ ಸೂಕರವದನಂ ಕರ್ಕಟಾದಿ ಮದ್ರೇಕ್ಷಾಣಂ (ಜಾತಕ. ೧೯-೧೦). [ಸಂ.]

ಸೂಕರಿ (ನಾ). ಹೆಣ್ಣುಹಂದಿ: ಈ ಕರಿ ಸೂಕರಿಯಲ್ತೆ ಪತ್ತಿ ಗಂಟಲನೊಡೆಯಿತ್ತಿ ಕೊಂದಪೆಂ (ಪಂಪಭಾ. ೧೧-೭೩); ಸೂಕರಿ ಸೂಕರರೂಪಮಮದಂ ಸಲೆ ಬಿಟ್ಟು ಮಹೇಂದ್ರನ ಪಟ್ಟಣಮಂ ಶ್ರೀಕರದೇವತೆಯಾಗುತೆ ಪುಷ್ಕರವಾಸಿನಿಯೆಯ್ದುತಿರಲ್ (ಹಾಲಾಸ್ಯ. ೩-೧೩. ಕಖ).

[ಸಂ. ಸೂಕರೀ]

ಸೂಕಳ (ನಾ). ತುಂಟುಕುದುರೆ; ಅಗಡುಗುದುರೆ: ''ಸಿಲ್ಮಾದ ಕುದುರೆ ಸೂಕಳನೆನಿಕ್ಕುಂ'' (ಮಂಗರಾ. ೮೨-೧೫); ಸೂಕಳಮಲ್ತಿದು ಸಕಲಗುಣಾಕಾರವೆನೆ ವಾಹಕರಾ ಕುಟಿಲಾಶ್ವಕ್ಕೆ ಖರಖಿಲೀನಮನಿಟ್ಟುರ್ (ಪಂಪಾಮಾ. ೪-೧೧೪).

[< ಸಂ. ಶೂಕಲ]

ಸೂಕಳತುರಂಗ (ನಾ). ತುಂಟುಕುದುರೆ; ಸೂಕಳ: ಅಂತಾ ಸೂಕಳತುರಂಗ ಮತಿವಿಷಮಗಹನಮಂ ಪುಗುವುದುಂ (ಪಂಂಪಾಮಾ. ೧೬-೬೫ವ). ℙ ಇದು ಯಮಳ ಶಬ್ದ.

[ಸೂಕಳ + ತುರಂಗ]

ಸೂಕಳತೆ (ನಾ). ತುಂಟತನ; ತುಂಟಾಟ: ಮುಳಿವ ಫೋಳಿಗೆಯಿರ್ದ ಠಾವಿಂ ತಳರದಿರ್ಪಾ ಕಡವಗಳ ಬಿಡದಳಲಿಸುವ ಸೂಕಳತೆಯಂ ಕೈಕೊಂಡುದಾ ತುರಗಂ (ಕುಮುರಾ. ೪-೬೦). [ಸೂಕಳ + -ತೆ]

ಸೂಕಳತ್ವ (ನಾ). = ಸೂಕಳತೆ: ಕಟ್ಟಿರ್ದ ದುಷ್ಟವಾಜಿಯಂ ಕಂಡು . . . ದೇವ ನಿಮ್ಮಡಿಗಳ್ಳಚಾರಿಸುವೊಡೆ ಲೋಕದ ಸೂಕಳತ್ವಮಂ ಮೂಷೆಯೊಳಿಟ್ಟೆಱೆದಂತೆ ದುಷ್ಟತನದ ಪಟ್ಟುಮನಾಂತಿಪ್ಪುದು (ಪುಣ್ಯಾಸ್ರ. ೭-೫೧ ವ). [ಸೂಕಳ + -ತ್ವ]

ಸೂಕಳಾಶ್ವ (ನಾ). = ಸೂಕಳತುರಂಗ: ಸೂಕಳಾಶ್ವದಂತೆ ಶಿಕ್ಷೆಯನೆಂತುಂ ಕೈಕೊಳ್ಳದಿರೆ (ಪಂಚತಂ. ೧೯-೩); ತತ್ಪುರಮಲ್ಲಮಲ್ಲಕಲ್ಲೋಲಮಕಾಲವ್ಯತ್ಯುತ್ಪಭಯ ವಿಹ್ವಲಮಾದುದು ಸೂಕಳಾಶ್ವದಿಂ (ಪಂಂಪಾಮಾ. ೪-೧೧೨). [ಸೂಕಳ + ಅಶ್ವ]

ಸೂಕಳಿ (ನಾ). ಖೋಟಾನಾಣ್ಯ: ''ಸೂಕಳಿ[ಶಾಕಾಂ. ೪]ಯೊಳು ಭಂಡನೊಳ್ ಕೊಟ್ಟಿ'' (ಶಬ್ದಮಂ. ೯೦). [?]

ಸೂಕುಳಿ (ನಾ). ದುಷ್ಟ; ಭಂಡ; ''ಜಡತೆ'' (ಶಮದ. ನ. ೩೭ ಅಡಿಟಿ): ಇಳಿದಳಿಯ ನೇಳಿದಂ ಸೂಕುಳಿಯೋಕುಳಿ . . . ಇವಾದಿಯಾಗಜೆ ಕುಳನಂ (ಶಮದ. ೨೬); ಓಕುಳಿ. ಸೂಕುಳಿ. ಈಳಿಗೆ. ಮಾಳಿಗೆ . . . ನಿಸರ್ಗಸಿದ್ಧಾ ಳಕಾರಾಃ ಕುಳವ್ಯಪದೇಶಭಾಜಃ (ಶಬ್ದಾನು. ೧೪೦ ವ್ಯಾಖ್ಯಾ). [?]

ಸೂಕ್ತ (ಗು). ೧. ಯುಕ್ತವಾಗಿ ತಿಳಿಸಿದ; ಸರಿಯಾಗಿ ಹೇಳಿದ. ೨. ಯೋಗ್ಯವಾದ; ತಕ್ಕುದಾದ: ಕವಿಭಾವಕೃತಾನೇಕ ಪ್ರವಿಭಾಗವಿವಿಕ್ತಸೂಕ್ತಮಾರ್ಗಂ ಕಾವ್ಯಂ (ಕವಿರಾ. ೧-೨೨); ಆದಷ್ಟು ಜಾಗ್ರತೆ ಸೂಕ್ತಗೌರವದೊಡನೆ ಕಳುಹಿಸಿ ಕೊಡುವುದಾಗಿ ಭರವಸೆ ಕೊಟ್ಟ ಚಕ್ರವರ್ತಿ ಕಾಲತಳ್ಳುತ್ತಾ ಬಂದ (ಪ್ರವಾ. II, ೧೯೮). (ನಾ). ೩. ಒಳ್ಳೆಯ ಮಾತು; ಹಿತವಚನ: ಬಾನು ಬೆಳಕಿನ ಸೂಕ್ತ ಹಾಡಿತು ಜೊತೆಗೆ ಹಾಡಿತು ಸಾಗರ (ಸ್ಪರ್ಶ. ೧೫-೫). ೪. ಯೋಗ್ಯವಾದುದು; ಉಚಿತವಾದುದು: ಸೂಕ್ತಂ ಭವ್ಯಜನಪ್ರಮ್ಯಕ್ತಂ ಜೈನಾಗಮೋಕ್ತಮಿಂ ನಿನಗೆ ಮದೀಯೋಕ್ತಮಿದರ್ದಯೊಳ್ ನೆಲಸುಗೆ (ಆದಿಪು. ೫-೬೧); ಪ್ರತಿಭಾಸಂಸ್ಕೃತಿಯಿಂದ ಳಂಕೃತಿಯಿನರ್ಥವ್ಯಕ್ತಿಯಿಂ ಸೂಕ್ತಮಾ ಕೃತಿ (ಸುಕುಮಾ. ೧-೪೫); ಇತರರು ಹೊರಿಸಿದ ಗೈಮೆಯಲ್ಲಿ ತೊಡಗುವುದು ಮಕ್ಕಳ ಬೆಳವಣಿಗೆಗೆ ಸೂಕ್ತವಲ್ಲ (ಶಿಕ್ಷದ. ೬೨೦). ೫. ಒಳ್ಳೆಯ ವ್ಯಕ್ತಿ; ಯೋಗ್ಯ: ''ಸೂಕ್ತನತಿಪ್ರಿಯವಾದಿ ಸಜ್ಜನಂ'' (ಪಸ್ತುಕೋ. ೧೧೧-೧೪). ೬. ವೇದದಲ್ಲಿಯ ಸ್ತೋತ್ರಭಾಗ: ಆನಲಸೂಕ್ತಗಳಿಂದೆ ನುತಿಗ್ಯದು ಭೂತಳಕೊಂದಿ ಸಾಷ್ಟಾಂಗದಿಂದೆಱಗಿ ನಿಂದು (ಜೈಮಿಭಾ. ೮-೪೨); ಈ ಸಂಹಿತೆಯಲ್ಲಿ ಒಂದೊಂದು ಸೂಕ್ತವೂ ಸಾಧಾರಣವಾಗಿ ಒಬ್ಬ ದೇವತೆಯನ್ನು ಕುರಿತು ಮಾಡಿದ ಸ್ತೋತ್ರ (ಭಾರದ. ೨೦). [ಸಂ.]

ಸೂಕ್ತತೆ (ನಾ). ಯೋಗ್ಯತೆ; ಉಚಿತತೆ: ವಿವೇಚಿಸುವ ಸೂಕ್ತತೆಯನ್ನು ಅರಿತುಕೊಳ್ಳಬೇಕು (ಶಿಕ್ಷದ. ೨೦). [ಸಂ. ಸೂಕ್ತತಾ]

ಸೂಕ್ತಸತ್ಯ (ನಾ). ಯುಕ್ತವಾದ ಸತ್ಯವನ್ನು ನುಡಿಯುವವನು: ನಿರುಪಮತರ ಸೂತ್ಯಾರ್ಥತತ್ವಪ್ರವೀಣಂ ಕೃತಕೃತ್ಯಂ ಸೂಕ್ತಸತ್ಯಂ ಪರಹಿತಚರಿತೋದಾತ್ತಕೀರ್ತಿಪ್ರಭಾವಂ (ಸುಕುಮಾ. ೨-೫೧). [ಸಂ.]

ಸೂಕ್ತಿ (ನಾ). ೧. ಒಳ್ಳೆಯ ಮಾತು; ಹಿತವಚನ: ಕನ್ನನೊಲ್ದಾ ಶ್ರೀಲೋಕ ಶ್ರೀಯೆಲ್ಲಂ ಪೊರ್ದಿದಂತೇನೊಸೆದನೊ ಮನದೊಳ್ ಸೂಕ್ತಿ ಕರ್ಣಾವತಂಸಂ ಶ್ರೇಯಾಂಸಂ (ಆದಿಪು. ೯-೧೩೨); ಒಜೆಯೊಳುದಾತ್ತತೆ ಸೂಕ್ತಿಯೊಳರ್ಥಯುಕ್ತಿ . . . ಪೊಸದೇಸೆಯೊಳೊಂದಿದೆ ಮಾರ್ಗವೊಳ್ಪುವೆತ್ತಸೆದಿರೆ ಪೇಟ್ದು (ಸುಕುಮಾ. ೧-೪೪); ವಿನುತ ಸುಕವಿಯ ಸೂಕ್ತಿ ತಾಗಿದ ಮುನಿಗಳಂತಃಕರಣದಂತಿರೆ ಹೊನಲು ವರಿದವು ಚಂದ್ರಕಾಂತದ ಸಾಲ ಶಿಲೆ ಕರಗಿ (ಕುವಾಡ್ಯೂ. ೧೭-೧೬). ೨. ವೇದದಲ್ಲಿಯ ಸ್ತೋತ್ರಭಾಗ: ಯುಕ್ತಿಸುವಡಿದು ದಿಟವೆನುತ ಶ್ರುತಿ ಸೂಕ್ತಿ ಸಾಱುವುದಾಗಿ ವಿಶ್ವಳ . . . ಭಕ್ತಿಗೊಲಿದಿಪ್ಪೆಂ ಪ್ರಸಿದ್ಧಂ ಕೇಳು (ಬಸವ. ೨೬-೪೯).

[ಸಂ.]

ಸೂಕ್ತಿಕಾರ (ನಾ). ಹಿತವಚನಗಳನ್ನು ಹೇಳುವವನು,— ಬಲ್ಲವನು: ನುತಗುಣರು ಭಾವುಕರು ವರಪಂಡಿತರು ಸುಜನರು ಸೂಕ್ತಿಕಾರರು ಮತಿಯನೀವುದು ವೀರನಾರಾಯಣನ ಕಿಂಕರಗೆ (ಕುವಾಖ. ೧-೧೬). [ಸಂ.]

ಸೂಕ್ತಿಗರ್ಭ (ನಾ). ಸುಭಾಷಿತಗಳನ್ನು ಒಳಗೊಂಡುದು: ಕೋಮಳ ಮತಿಸುಭಗಂ ಸುಂದರಂ ಸೂಕ್ತಿಗರ್ಭಂ . . . ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚಿ (ಆದಿಪು. ೧-೨೬). [ಸಂ.]

ಸೂಕ್ಷುಮ 'ಸುಕುಮ' ನೋ.

ಸೂಕ್ಷ್ಮ (ಗು). ೧. ಅತ್ಯಂತ ಚಿಕ್ಕದಾದ, — ಸಣ್ಣದಾದ. ೨. ತೆಳ್ಳಗಿರುವ; ಸ್ಥೂಲವಲ್ಲದ. ೩. ಕೋಮಲವಾದ; ಮೃದುವಾದ. ೪. ಹರಿತವಾದ; ತೀಕ್ಷ್ಣವಾದ. ೫. ಕುಶಲತೆಯಿಂದ ಕೂಡಿದ. ೬. ಕರಾರುವಾಕ್ಕಾದ; ನಿರ್ದಿಷ್ಟವಾದ: ಇಪ್ಪತ್ತುನಾಲ್ಕು ತಿಥಿಯಿಂದ ವಗ್ಗಳ ಗ್ರಹಣಸಂಕ್ರಾಂತಿಯಿಂದ ವಗ್ಗಳ . . . ಸೂಕ್ಷ್ಮ ಶಿವಪಥವಲ್ಲಿದವಂಗೆ (ಬಸವ. ೬೧೧). (ನಾ). ೭. ಅತ್ಯಂತ ಚಿಕ್ಕದಾಗಿರುವಂಥದು; ಅತಿ ಚಿಕ್ಕದಾದ ಕಣ; ಅಣು: ''ಅಣು ಸೂಕ್ಷ್ಮಂ ಲೇಶಂ ತ್ರುಟಿ ಕಣಾ. . . ಕಿಱಿದಪ್ಪುದದು'' (ವಸ್ತುಕೋ. ೧೦೭-೫೬). ೮. ಕ್ಷುದ್ರವಾದುದು; ಕ್ಷುಲ್ಲಕವಾದುದು: ''ಸೂಕ್ಷ್ಮದೊಳು ಪಾಮರಕುಲದೊಳು ಗುಳ್ಳೆಯೊಳು ಕ್ಷುಲ್ಲಕಮೆನಿಕ್ಕು'' (ಮಂಗರಾ. ೧೫೧-೨೩). ೯. ಕೋಮಲ; ನಾಜೂಕು: ಇಲ್ಲಮ್ಮ ಅಮ್ಮ ಸೂಕ್ಷ್ಮವಲ್ಲ ನಾನು. ಏನೋ ಮಾತನಾಡುತ್ತಾ ನಡೆಯತೊಡಗಿದಾಗ ಕಾಲು ನಿಧಾನವಾಯಿತು (ಕುಸುಸಂ. ೧೫೯). ೧೦. ಚತುರತೆ; ಜಾಣ್ಮೆ; ಕುಶಲತೆ: ಅವುಗಳಲ್ಲಿ ಆಧುನಿಕ ಭಾಷಾಶಾಸ್ತ್ರಜ್ಞರಿಗೂ ಆಶ್ಚರ್ಯವಾಗುವಂಥ ನುಡಿ ಸೂಕ್ಷ್ಮಗಳ ಮತ್ತು ನಯಗಳ ದರ್ಶನ ಕಂಡುಬರುತ್ತದೆ (ದ್ರಾವಿಪ್ರ. ೧೦೬). ೧೧. ಪರಮಾತ್ಮ; ದೇವರು. ೧೨. ವಂಚನೆ; ಮೋಸ. ೧೩. ಉತ್ತಮವಾದ ನೂಲು,— ದಾರ. ೧೪. [ಕಾವ್ಯಮೀ] ಅರ್ಥಾಲಂಕಾರದ ಒಂದು ಭೇದ; ಹೇಳುವುದನ್ನು ಸಂಜ್ಞೆಯ ಮೂಲಕ ಚುಟುಕಾಗಿ ತಿಳಿಸುವಿಕೆ : ಜಾತಿಸಹೋಕ್ತಿ. . . ಸೂಕ್ಷ್ಮಲವ ವ್ಯತಿರೇಕ ದೀಪಕಾಖ್ಯಾತಿ ಸಮಾಹಿತಾವೃತಿ ಪರಸ್ಪರ ಸಾರ ನಿಮೀಲನಂಗಳೆಂದೀ ತೆಱದಿಂದ ಮೊಂದಿ ನೆಗಟ್ಟುಂ ನೆಲೆ ವಾಸ್ತವಭೇದವೃತ್ತಿಗಳ್ (ಕಾವ್ಯಾವ. ೬೦೭); ಇಂಗಿತ ಲಕ್ಷ್ಯಂ ಸೂಕ್ಷ್ಮಂ ಸಂಗಮವಾವಾಗಳೆಂದು ನೋಡುವನಲ್ಲಂ (ಉದಯಾ. ೯-೪೩); ಪರರಾಶಯ ತಿಳಿವುತ್ತ ಗೂಢದಿ ಸಂಜ್ಞೆಯು ತೋಱೆ ಕರಸಿಕೊಂಬುದು ಸೂಕ್ಷ್ಮವೆಂದು (ಕುವಲ. ೧೫೩-೧). ೧೫. [ತತ್ತ್ವಶಾ] ಸ್ಥೂಲ, ಸೂಕ್ಷ್ಮ, ಪರಗಳೆಂಬ ಮೂರು ಬಗೆಯ ತತ್ವಗಳಲ್ಲಿ ಒಂದು : ಸ್ಥೂಲಸೂಕ್ಷ್ಮಪರತತ್ವವೆಂಬ ಮೂಱು ತತ್ವವೇ

ಆಯಾದ ಭೇದಮಂ ಪೇಳ್ದೆ (ಸಿದ್ಧೇ. ೧೭೯-೫೮೫); ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ ಇವುಗಳು ಕ್ರಮವಾಗಿ ಪರ, ಸೂಕ್ಷ್ಮ ಮತ್ತು ಸ್ಥೂಲವೆಂದು ಉಕ್ತವಾಗಿರುವುವು (ಶಿವಾಪ. ೩೬). ೧೬. ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಬಗೆಯ ತನು ಅಥವಾ ಶರೀರಗಳಲ್ಲಿ ಒಂದು: ಸ್ಥೂಲ ಸೂಕ್ಷ್ಮ ಕಾರಣ ಎಂದೆಂಬ ತಸುತ್ರಯ ನೀನಲ್ಲ (ಸಿದ್ಧೇ. ೪೭-೧೩೩). 'ಸೂಕ್ಷ್ಮತನು' ಪರಾ. ೧೭. [ಜೈನ] ನಾಮಕರ್ಮಪ್ರಕೃತಿಗಳಲ್ಲಿ ಒಂದು: ಸ್ಥಾವರ ಸೂಕ್ಷ್ಮ ಅಪರಿಯಾಪ್ತ ಸಾಧಾರಣ ಶರೀರ ಅಸ್ಥಿರ ಅಶುಭ ದುರ್ಭಗ ದುಃಸ್ವರ ಅನಾಮಧೇಯ ಅಯಶಸ್ಕೀರ್ತಿನಾಮಕರ್ಮಮೆಂದಿಂತು ನಾಮಕರ್ಮದುತ್ತರಪ್ರಕೃತಿಗಳು (ಗೊಮ್ಮಸಾ. ೪-೨). ೧೮. ಮುಕ್ತಜೀವರಿಗೆ ಇರುವ ಎಂಟು ಗುಣಗಳಲ್ಲಿ ಒಂದು: ಸಮ್ಯಜ್ಞಾನ ದರ್ಶನಾನಂತವೀರ್ಯ ಸೂಕ್ಷ್ಮಾಗುರುಲಘುತ್ವಾವಗಾಹಾವ್ಯಾಬಾಧಂಗಳೆಂಬ ಸಿದ್ಧ ಪರಮೇಷ್ಠಿಗಳಷ್ಟಗುಣಂಗಳಂ ನೆನೆಯುತ್ತಂ (ಆದಿಪು. ೧೦-೧೪ ವ). [ಸಂ.]

ಸೂಕ್ಷ್ಮಕಾಯಯೋಗ (ನಾ). [ಜೈನ] ಪಾಪವಿಹರಣಾತ್ಮಕಕ್ರಿಯೆಯಿಲ್ಲದ ಪದ್ಮಾಸನದಿಂದಲೇ ಗಮನಕ್ರಿಯೆ ಸಾಗುವಿಕೆ: ಅಂತರ್ಮುಹೂರ್ತ ನಿರುದ್ಧಾಶೇಷಮನೋವಾಗ್ಯಾದರಕಾಯಯೋಗಸೂಕ್ಷ್ಮಕಾಯಯೋಗಪರಿಣತಂ (ಆದಿಪು. ೧೬-೪೪ ವ); ಉದಗ್ರ ಮಂದಿರಶಿಖರಿಶಿಖರದೊಳ್ ಪ್ರತಿಮಾಯೋಗಂ ನಿಂದು ಸೂಕ್ಷ್ಮಕಾಯಯೋಗಯೋಗಂ . . . ದಂಡಕವಾಟಪ್ರತರ ಲೋಕಪೂರಣಕ್ರಿಯೆಗಳಂ ಸಮಯ ಪ್ರತಿಸಮಯಂಗಳಂ ಮಾಡಿ (ಸುಕುಮಾ. ೯-೧ ವ); ಪ್ರತಿಮಾಯೋಗದೊಳ್ ನಿಂದು ಸೂಕ್ಷ್ಮಕಾಯಯೋಗದಿಂ . . . ಲೋಕಪೂರಣಕ್ರಿಯೆಗಳೊಳನಂತರ ಪ್ರತಿಸಮಯಂಗಳಂ ಮಾಡಿ (ಪರ್ಧಮಾ. ೧೬-೧೬ ವ). [ಸಂ.]

ಸೂಕ್ಷ್ಮಕಾರ್ಯ (ನಾ). ನಾಜೂಕಾಗಿ ಮಾಡಬೇಕಾದ ಕೆಲಸ: ಹೆಂಗಸರಿಂದಲೇ ಮಾಡಿಸಬಹುದಾದ ಕೆಲವು ಸೂಕ್ಷ್ಮಕಾರ್ಯಗಳೂ ಇರುತ್ತವೆ (ರೂಢಿ). [ಸಂ.]

ಸೂಕ್ಷ್ಮಕ್ರಿಯಾಪ್ರತಿಪಾತಿ (ನಾ). [ಜೈನ] ಶುಕ್ಲಧ್ಯಾನದ ಮೂರನೆಯ ಭೇದ: ಸೂಕ್ಷ್ಮಕ್ರಿಯಾಪ್ರತಿಪಾತಿಯೆಂಬ ಚರಮ ಶುಕ್ಲಧ್ಯಾನದಿಂ . . . ದಂಡಕವಾಟಪ್ರತರಲೋಕಪೂರಣಕ್ರಿಯೆಗಳಂ ಸಮಯ ಪ್ರತಿಸಮಯಗಳಂ ಮಾಡಿ (ಸುಕುಮಾ. ೯-೧ ವ); ಸೂಕ್ಷ್ಮಕ್ರಿಯಾಪ್ರತಿಪಾ[ಪಾಠಾಂ. ಜಾ]ತಿಯೆಂಬಪರXXXಳು ಕರ್ಮಪರಿಪಾವನದತ್ತಿ ಸ್ವಾಭಾವ್ಯನಿಮಿತ್ತಂ ದಂಡಕವಾಟಪ್ರತರ ::: ಕಪೂರಣಕ್ರಿಯೆಗಳೊಳನಂತರ ಪ್ರತಿಸಮಯಂಗಳಂ ಮಾಡಿ (ಪರ್ಧಮಾ. ೧೬-೧೬ ::: ಸೂಕ್ಷ್ಮಶರೀರ ಯೋಗದಿಂ ಸೂಕ್ಷ್ಮಕ್ರಿಯಾಪ್ರತಿಪಾತಿಯೆಂಬ ಪರಮಶುಕ್ಲಫಲಧ್ಯಾನದೊಳ್ ನೆಲಸಿ (ಪಂಧಾಮಾ. ೧೬-೭೯ ವ). [ಸಂ.]

ಸೂಕ್ಷ್ಮಕ್ರಿಯೆ (ನಾ). ಗುಟ್ಟು; ರಹಸ್ಯ: ಎಲ್ಲಿಯುಮಜಸಿಯುಂ ದುರ್ಯೋಧನನ ರೂಪುಗಾಣದಿದೇನಾನುಮೊಂದು ಕಾರಣಮಾಗಲ್ಕೇಟ್ಟುಮೆಂದು ಸೂಕ್ಷ್ಮಕ್ರಿಯೆಯಿನಂತಕತನಯಂ ಗರುಡಧ್ವಜನೊಳಾಳೋಚಿಸುವುದುಂ (ಗದಾಯು. ೬-೧೫ ವ). [ಸಂ. ಸೂಕ್ಷ್ಮಕ್ರಿಯಾ]

ಸೂಕ್ಷ್ಮಗ್ರಾಹಿ (ನಾ). ತೀಕ್ಷ್ಣವಾದ ಗ್ರಹಣಶಕ್ತಿಯುಳ್ಳುದು: ಕುಡಿಮಿಶವ್ವಂದ್ಯ, ಬಗ್ಗುತ್ತವೆ, ಸೂಕ್ಷ್ಮಗ್ರಾಹಿ. ಈ ಸ್ಪರ್ಶಾಂಗಗಳಿಂದ ಕೀಟ ಸನ್ನಿವೇಶವನ್ನು ಮುಂದಾಗಿ ಗ್ರಹಿಸುತ್ತದೆ (ಕೀಚಪ್ರ. ೧೩). [ಸಂ. ಸೂಕ್ಷ್ಮಗ್ರಾಹಿನ್]

ಸೂಕ್ಷ್ಮತತ್ವ (ನಾ). [ತತ್ವಶಾ] ಸೂಕ್ಷ್ಮ, ಸ್ಥೂಲ, ಪರಗಳೆಂಬ ಮೂರು ಬಗೆಯ ತತ್ವಗಳಲ್ಲಿ ಒಂದು: ಸೂಕ್ಷ್ಮತತ್ವವೂ ಪ್ರಾಣವೂ ಪರವನಪ್ಪ ಪರಾಪರನಾಗಿ ಪ್ರಪಂಚವನೇನುವ ಮುಟ್ಟದೆ ಪರಮಮಾಹೇಶ್ವರನಾದೆನು ಕಾಣಾ (ಸಿದ್ಧೇ. ೧೦೧-೩೧೩). [ಸಂ.]

ಸೂಕ್ಷ್ಮತನು (ನಾ). [ತತ್ವಶಾ] ಸೂಕ್ಷ್ಮ, ಸ್ಥೂಲ, ಕಾರಣಗಳೆಂಬ ಮೂರು ಬಗೆಯ ಶರೀರಗಳಲ್ಲಿ ಒಂದು: ಭೂತಮೈದಱಿಂದ ಸ್ಥೂಲತನು ಮನ ಬುದ್ಧಿ ಅಹಂಕಾರದಿಂದ ಸೂಕ್ಷ್ಮತನು (ಅಪಚಂ. ೧೭೨-೭೭೪); ಪಾಂಚಭೌತಿಕವಾದುದೇ ಸ್ಥೂಲತನು ವಾಯುಪಂಚಕ ಇಂದ್ರಿಯ ದಶಕ ಮನ ಬುದ್ಧಿಗಳಿರದು ಇಂತೀ ಹದಿನೇಳು ಕೂಡಿದ ಲಿಂಗಭೌತಿಕವೆ ಸೂಕ್ಷ್ಮತನು (ದೀಕ್ಷಾಪ್ರೋ. ೪. ೧೭೧-೧೫೫); ಎನ್ನ ಸೂಕ್ಷ್ಮತನುವೆಂಬ ಕೈಲಾಸದ ಮೇಲೆ ಮನೋಮಂಟಪದಲ್ಲಿ ಕುಳ್ಳಿರ್ದು ದೃಶ್ಯಾದೃಶ್ಯದ ಲೀಲೆಯನಾಡುವಾತನು ನೀನೆ ಅಯ್ಯಾ (ಅಖಂಡೇ. ೨೪೦-೪೬). [ಸಂ.]

ಸೂಕ್ಷ್ಮತ್ವ (ನಾ). ೧. ತೀಕ್ಷ್ಣತೆ; ಚುರುಕು: ಅವನ ಬುದ್ಧಿಯಲ್ಲಿ ಸೂಕ್ಷ್ಮತ್ವವೆಂಬುದಿಲ್ಲವೇ ಇಲ್ಲ (ರೂಢಿ). ೨. [ಜೈನ] ಮುಕ್ತಜೀವರಿಗೆ ಇರುವ ಎಂಟು ಗುಣಗಳಲ್ಲಿ ಒಂದು: ಕ್ಷಾಯಿಕ ಸಮ್ಯಕ್ತ್ವಮುಮನಂತಜ್ಞಾನಮುಮನಂತ ದರ್ಶನಮುಮನಂತವೀರ್ಯಮುಂ ಸೂಕ್ಷ್ಮತ್ವ(ಮು)ಮವಗಹನಮುಮುವ್ಯಾಬಾಧಂ ಗಳೆಂಟುಗುಣಂಗಳಾತ್ಮಾಯತ್ತಮಾಗೆ (ಶಾಂತಿಪು. ೧೨-೫೧ ವ). [ಸಂ.]

ಸೂಕ್ಷ್ಮದರ್ಶಕ (ನಾ). ಸಣ್ಣವಸ್ತುಗಳನ್ನು ದೊಡ್ಡದಾಗಿ ಕಾಣಿಸುವಂತೆ ಮಾಡುವ ಒಂದು ಸಲಕರಣೆ: ಸೂಕ್ಷ್ಮದರ್ಶಕ (Microscope) ಬಿಂಬಗ್ರಾಹಕ (Photographic Camera) ಮುಂತಾದುವುಗಳಲ್ಲಿ ವರ್ಣ ಮತ್ತು ಗೋಳಪಲ್ಲಟಗಳನ್ನು ಆದಷ್ಟು ಕಡಮೆ ಮಾಡಲೋಸುಗ ಅನೇಕ ಮಸೂರಗಳನ್ನು ಜೋಡಿಸಿರುತ್ತಾರೆ (ಫೌವಿ. ೧೮೯). [ಸಂ.]

ಸೂಕ್ಷ್ಮದರ್ಶಿ (ಗು). ೧. ತೀಕ್ಷ್ಣವಾದ ನೋಟದಿಂದ ಕೂಡಿದ. (ನಾ). ೨. = ಸೂಕ್ಷ್ಮದರ್ಶಕ: ಭೂತಗನ್ನಡಿಗಳನ್ನು ಉಪಯೋಗಿಸಿ ೧೫೯೦ರಲ್ಲಿಯೇ ಸೂಕ್ಷ್ಮದರ್ಶಿಯನ್ನು (Microscope)ತಯಾರು ಮಾಡಿದರು (ಶಬ್ದನಾ. ೧೫೨). ೩. ತೀಕ್ಷ್ಣವಾದ ಗ್ರಹಣಶಕ್ತಿಯುಳ್ಳವನು; ಕುಶಾಗ್ರಮತಿ: ''ಕುಶಾಗ್ರೀಯಮತಿಃ, ಸೂಕ್ಷ್ಮದರ್ಶೀ – ಈ ೨ ಸೂಕ್ಷ್ಮಬುದ್ಧಿಯನುಳ್ಳವಂ'' (ಪಲಾಯು. ೬೧-೨೧೮). [ಸಂ. ಸೂಕ್ಷ್ಮದರ್ಶಿನ್]

ಸೂಕ್ಷ್ಮದೃಷ್ಟಿ (ನಾ). ೧. ಚುರುಕುನೋಟ; ತೀಕ್ಷ್ಣವಾದ ದೃಷ್ಟಿ: ಅವನ ವೋರೆಯ ಮೇಲಾದ ಬದಲು ಅಕ್ಕನ ಸೂಕ್ಷ್ಮದೃಷ್ಟಿಯಿಂದ ಮರೆಯಾಗಲಿಲ್ಲ (ಮೂರುದಾ. ೧೩೮). ೨. ಚುರುಕಾದ ನೋಟವುಳ್ಳವನು; ಸೂಕ್ಷ್ಮದರ್ಶಿ: ಕರ್ಣಾಂತಾಕ್ಷರಾಗಿಯುಂ ಸೂಕ್ಷ್ಮದೃಷ್ಟಿಗಳು ಕುಲಗೋತ್ರಮಧ್ಯಸ್ಥಿತಿಗಳಾಗಿಯುಂ ಸೊಗಯಿಪೇಕಾಕಿಗಳೆನಿಸಿ ಶಿವನನೊಲಿಸಿದ ಮುನೀಶ್ವರರು ಕಣ್ಗೆಸದರು (ಪಚಕಾ. ೬-೩೬). [ಸಂ.]

ಸೂಕ್ಷ್ಮಪ್ರಕೃತಿ (ನಾ). ನಾಜೂಕಾಗಿರುವ ಸ್ವಭಾವ, – ಗುಣ: ಅವನ ಕಣ್ಣು ದಡದಡನೆ ಮಹಡಿಯಿಂದಿಳಿಯುತ್ತಿದ್ದ ಸೂಕ್ಷ್ಮಪ್ರಕೃತಿಯ ನವಿರುಮೆಯ್ಯ ಮಹಿಳೆಯನ್ನೆ ಹಿಂಬಾಲಿಸುತ್ತಿದ್ದುವು (ಹುಸರು. ೩೩೬). [ಸಂ.]

ಸೂಕ್ಷ್ಮಬಾದರ (ನಾ). [ಜೈನ] ಪುದ್ಗಲಸ್ಕಂಧದ ಬಾದರಬಾದರ, ಬಾದರ, ಬಾದರಸೂಕ್ಷ್ಮ, ಸೂಕ್ಷ್ಮಬಾದರ, ಸೂಕ್ಷ್ಮ, ಸೂಕ್ಷ್ಮಸೂಕ್ಷ್ಮಗಳೆಂಬ ಆರು ಪ್ರಕಾರಗಳಲ್ಲಿ ಒಂದು; ಸೂಕ್ಷ್ಮವಾಗಿದ್ದರೂ ಸ್ಥೂಲದಂತೆ ತೋರುವುದು: ::: ತಾಂಕುರಮಪ್ಪ ಪಲ್ಲವಾದಿಗಳೇಕೇಂದ್ರಿಯಶರೀರಂಗಳವಱೊಳು ಸೂಕ್ಷ್ಮಬಾದರ[ಪಾಠಾಂ. ಬೋಧರ] ನಿರೋಧ ಪ್ರಾಣಿಗಳು ಪ್ರತಿಕ್ಷಣಮನಂತಾನಂತಂ ಸಾವುತ ಪುಟ್ಟುತಮಿರ್ಕುಂ (ಚಾವುಪು. ೫೨); ಪುದ್ಗಲಸ್ಕಂಧಗಳಲ್ಲಿ ಬಾದರಬಾದರ, ಬಾದರ, ಬಾದರಸೂಕ್ಷ್ಮ, ಸೂಕ್ಷ್ಮಬಾದರ, ಸೂಕ್ಷ್ಮ, ಸೂಕ್ಷ್ಮಸೂಕ್ಷ್ಮ – ಎಂದು ಆರು ಪ್ರಕಾರಗಳುಂಟು . . . ಸೂಕ್ಷ್ಮವಾಗಿದ್ದರೂ ಸ್ಥೂಲದಂತೆ ತೋರುವುವು ಸೂಕ್ಷ್ಮಬಾದರಗಳು (ಚೃಸಧ. ೫೫). [ಸಂ.]

ಸೂಕ್ಷ್ಮಬುದ್ಧಿ (ನಾ). ಕುಶಾಗ್ರಮತಿ; ಚುರುಕುಬುದ್ಧಿ: ''ಕುಶಾಗ್ರಬುದ್ಧಿಯನೆ ಸೂಕ್ಷ್ಮಬುದ್ಧಿ[ಪಾಠಾಂ. ಮತಿ]ಯುಳ್ಳವನೆನಿಕ್ಕುಂ'' (ಮಂಗರಾ. ೭೨-೨೧); ಹುಡುಗನ ಸೂಕ್ಷ್ಮಬುದ್ಧಿಗೆ ಒಂದು ತೊಟ್ಟು ಸಾಕಾಗಿತ್ತು (ಸವತಿ. ೩೩). [ಸಂ.]

ಸೂಕ್ಷ್ಮಮಧ್ಯೆ (ನಾ). ಚಿಕ್ಕದಾದ ಸೊಂಟವುಳ್ಳವಳು: ಅದೇಂ ಪೊದಳ್ದು ತೋಱಿದುದೋ ಸೂಕ್ಷ್ಮಮಧ್ಯೆಯ ಮಧ್ಯಂ (ಸುಕುಮಾ. ೧೦-೧೦). [ಸಂ. ಸೂಕ್ಷ್ಮಮಧ್ಯಾ]

ಸೂಕ್ಷ್ಮರೂಪ (ನಾ). [ಜೈನ] ಕರ್ಮನಾಶದಿಂದ ಆತ್ಮನಿಗೆ ಉಂಟಾಗುವ ಸೂಕ್ಷ್ಮಸ್ವಭಾವ ಮತ್ತು ಆ ಸೂಕ್ಷ್ಮಸ್ವಭಾವವನ್ನು ಹೊಂದಿದ ನಂತರ ಅಮೂರ್ತಿಕಸೂಕ್ಷ್ಮನಾಗುವ ಆತ್ಮ: ಸೂಕ್ಷ್ಮರೂಪನನುಮನಂತಜ್ಞಾನಾದಿ ಗುಣಸಂಪೂರ್ಣನುಂ . . . ತ್ರಿಲೋಕಶಿಖರಿಶೇಖರನುಮಪ್ಪ ಜೀವನುಂಟೆಂದು . . . ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ (ಆದಿಪು. ೨-೧೦ ವ). [ಸಂ.]

ಸೂಕ್ಷ್ಮಲೋಭ (ನಾ). [ಜೈನ] ''ಂಂನೆಯ ಗುಣಸ್ಥಾನದಲ್ಲಿರುವ ಬಹು ಮರಿದಿತರವಾದ ಲೋಭಕಷಾಯ'' (ವರ್ಧಮಾ. ಕೋಶ): ಸೂಕ್ಷ್ಮಸಾಂಪರಾಯಸ್ಥಾನಪ್ರವಿಷ್ಟಕ್ಷಪಕಂ ಯಥೋಕ್ತಪರಿಣಾಮದಿಂ ಸೂಕ್ಷ್ಮಲೋಭಕ್ಕೆ ವಿಳಯಮಂ ಮಾಡಿ (ವರ್ಧಮಾ. ೧೩-೩೨ ವ). [ಸಂ.]

ಸೂಕ್ಷ್ಮವಸ್ತು (ನಾ). ಬಾಹ್ಯಕಣ್ಣುಗಳಿಗೆ ಗೋಚರಿಸದೆ ಇರುವಂಥ ಪದಾರ್ಥ: ಜ್ಞಾನವನೂ ಮಾಱಿ ತೋಱುವ ನಿರಂಜನ ಸೂಕ್ಷ್ಮವಸ್ತುವೆಂದು ಭಾವಿಸುವದೆಂದನಯ್ಯ (ಷಡ್ದೇವ. ೩೩-೮೩). [ಸಂ.]

ಸೂಕ್ಷ್ಮಶರೀರ (ನಾ). = ಸೂಕ್ಷ್ಮತನು: ಮಸ. ಬುದ್ಧಿ ಇವುಗಳುಳ್ಳುದೇ ಸೂಕ್ಷ್ಮಶರೀರವು (ಶಿವಾಕೋ. ೩); ವಿಜ್ಞಾನಮಯಕೋಶವು ಮನೋಮಯಕೋಶವು ಪ್ರಾಣಮಯಕೋಶವು ಕೂಡಿ ಸೂಕ್ಷ್ಮಶರೀರವೆಂದು ಹೇಳಲ್ಪಡುವುದು (ತೈತ್ತಿಸ್ಯ. ೧೫-೧೩). [ಸಂ.]

ಸೂಕ್ಷ್ಮಸಾಂಪರಾಯ (ನಾ). [ಜೈನ] ಗುಣಸ್ಥಾನಗಳಲ್ಲಿ ಒಂದು ; ಹತ್ತನೆಯ ಗುಣಸ್ಥಾನ: ಅದು ಸಾಮಾಯಿಕಚ್ಛೇದೋಪಸ್ಥಾಪನಾ ಪರಿಹಾರಶುದ್ಧಿ ಸೂಕ್ಷ್ಮಸಾಂಪರಾಯ ಯಥಾಖ್ಯಾತಚಾರಿತ್ರಭೇದದಿಂ ಪಂಚವಿಧಂ (ಆದಿಪು. ೧೦-೬೩ ವ); ಸ್ಥಾವರಕಾಯಂ ಮೊದಲ್ಗೊಂಡು . . . ಚತುರ್ಥಭಾಗಪರ್ಯಂತಂ ಮಾಯಮುಂ ಸೂಕ್ಷ್ಮಸಾಂಪರಾಯಪರ್ಯಂತ ಲೋಭಕಷಾಯವುಮಕ್ಕುಂ (ತಸಾರ. ೫೬೭); ಕಷಾಯಗಳು ನಷ್ಟವಾದಾಗ ಅವನು ಹತ್ತನೆಯ ಗುಣಸ್ಥಾನಕ್ಕೆ ಏರುವನು. ಅದೇ ಸೂಕ್ಷ್ಮಸಾಂಪರಾಯವು (ಜೈನಪ. ೫೦೦). [ಸಂ.]

ಸೂಕ್ಷ್ಮಸಾಂಪರಾಯಕೃಷ್ಟಿ (ನಾ). [ಜೈನ] ಹತ್ತನೆಯ ಗುಣಸ್ಥಾನಕ್ಕೆ ಏರಿದ ನಂತರ ಉಳಿಯುವ ಸೂಕ್ಷ್ಮಸಂಜ್ವಲನಲೋಭವೆಂಬ ಕಷಾಯವನ್ನು ನಾಶಮಾಡುವುದು, – ಶಕ್ತಿಹೀನಗೊಳಿಸುವುದು: ಸೂಕ್ಷ್ಮಸಾಂಪರಾಯಕ್ಷಪಕನಾಗಿ ಯಥೋಕ್ತಪರಿಣಾಮದಿಂ ಸೂಕ್ಷ್ಮಸಾಂಪರಾಯಕೃಷ್ಟಿಗಳಂ ಮಾಡುತ್ತುಂ (ಆದಿಪು. ೧೦-೧೪ ವ); ಸೂಕ್ಷ್ಮಸಾಂಪರಾಯಕೃಷ್ಟಿವಿಧಾನಾನಂತರಂ ಬಾದರಲೋಭ ಸಂಜ್ವಲನಮಂ ನಿಶ್ಶೇಷಂಗೆಯ್ದು (ಶಾಂತಿಪು. ೧೦-೧೧೧ ವ). [ಸಂ.]

ಸೂಕ್ಷ್ಮಸಾಂಪರಾಯಕ್ಷಪಕ (ನಾ). [ಜೈನ] ಕ್ಷಪಕಶ್ರೇಣಿಯನ್ನು ಏರಿ ಹತ್ತನೆಯ ಗುಣಸ್ಥಾನದಲ್ಲಿರುವ ಆತ್ಮ: ಸೂಕ್ಷ್ಮಸಾಂಪರಾಯಸಮನ್ವಿತ ಸೂಕ್ಷ್ಮಸಾಂಪರಾಯಕ್ಷಪಕನಾಗಿ ಯಥೋಕ್ತಪರಿಣಾಮದಿಂ ಸೂಕ್ಷ್ಮಸಾಂಪರಾಯ ಕೃಷ್ಟಿಗಳಂ ಮಾಡುತ್ತುಂ (ಆದಿಪು. ೧೦-೧೪ ವ). [ಸಂ.]

ಸೂಕ್ಷ್ಮಸಾಂಪರಾಯಸ್ಥಿತ (ನಾ). = ಸೂಕ್ಷ್ಮಸಾಂಪರಾಯಕ್ಷಪಕ: ಯತಿ ಸೂಕ್ಷ್ಮಸಾಂಪರಾಯಸ್ಥಿತಂ ಯಥೋಕ್ತ ಪ್ರಶಸ್ತ ಪರಿಣಾಮಗದಾಹತಿಯಿಂದೆ ಸೂಕ್ಷ್ಮ ಲೋಭಪ್ರಕೃತಿಪಕ್ಷಕ್ಷಯಮನಿತ್ತಂ (ಮಲ್ಲಿಪು. ೧೪-೮೭). [ಸಂ.]

ಸೂಕ್ಷ್ಮಸೂಕ್ಷ್ಮ (ನಾ). [ಜೈನ] ಪುದ್ಗಲಸ್ಕಂಧದ ಬಾದರಬಾದರ, ಬಾದರ, ಬಾದರಸೂಕ್ಷ್ಮ, ಸೂಕ್ಷ್ಮಬಾದರ, ಸೂಕ್ಷ್ಮ, ಸೂಕ್ಷ್ಮಸೂಕ್ಷ್ಮಗಳೆಂಬ ಆರು ಪ್ರಕಾರಗಳಲ್ಲಿ ಒಂದು; ಸೂಕ್ಷ್ಮ ಅಥವಾ ಕರ್ಮವರ್ಗಣೆಗಿಂತ ಸೂಕ್ಷ್ಮವಾದುದು: ಪುದ್ಗಲಸ್ಕಂಧಗಳಲ್ಲಿ ಬಾದರಬಾದರ, ಬಾದರ, ಬಾದರ ಸೂಕ್ಷ್ಮ, ಸೂಕ್ಷ್ಮಬಾದರ, ಸೂಕ್ಷ್ಮ, ಸೂಕ್ಷ್ಮಸೂಕ್ಷ್ಮ ಎಂದು ಆರು ಪ್ರಕಾರಗಳುಂಟು . . . ಕರ್ಮವರ್ಗಣೆಗಿಂತ ಸೂಕ್ಷ್ಮವಾದವುಗಳಿಗೆ ಸೂಕ್ಷ್ಮಸೂಕ್ಷ್ಮ ಎಂಬ ಹೆಸರು (ಜೈಸಿದ್ಧ. ೪೮). [ಸಂ.]

ಸೂಕ್ಷ್ಮಾನುಗತಾಳಂಕಾರ (ನಾ). [ಕಾವ್ಯಮೀ] ಅಲಂಕಾರಗಳಲ್ಲಿ ಒಂದು; ಮನಸ್ಸಿನ ರಹಸ್ಯವಾದ ಆಲೋಚನೆ ಮುಂತಾದುವನ್ನು ಇಂಗಿತ, ಚೇಷ್ಟೆ, ಮುಂತಾದ ಸೂಕ್ಷ್ಮಸಂಜ್ಞೆಗಳ ಮೂಲಕ ಸೂಚಿಸುವುದು: ಬಗೆದಿಂಗಿತಚೇಷ್ಟಾಕಾರಗತಂಗಳಿನಂತರಂಗದೊಳ್ ಮಱೆಸಿದುದಂ ಮಿಗೆ ಸೂಚಿಸುವುದು ಸೂಕ್ಷ್ಮಾನುಗತಾಳಂಕಾರಂ (ಕವಿಕಾ. ೬-೧೧೬). [ಸಂ.ಸೂಕ್ಷ್ಮಾನುಗತಾಲಂಕಾರ]

ಸೂಕ್ಷ್ಮಿತ (ನಾ). [ಸಂಗೀತ] ಇಪ್ಪತ್ತೆರಡು ಬಗೆಯ ಶ್ರುತಿಗಮಕಗಳಲ್ಲಿ ಒಂದು: ಸ್ಫುರಿತ ಪ್ರಮಿತ ದೀರ್ಘ ಲಲಿತೋಚ್ಛ್ರಿತ . . . ಸೂಕ್ಷ್ಮಿತ . . . ಕೋಮಲ ವೆಂಬವಿಪ್ಪತ್ತೆರಡೇ ಶ್ರುತಿಗಮಕಂಗಳು (ವಿವೇಕ. ೧೪೬). [ಸಂ.]

ಸೂಗಲಿ (ನಾ). ಒಂದು ಬಗೆಯ ಆಯುಧ: ಹಿಡಿಯಂಬು ಶೂಲ ಭಲ್ಲಿಯು ಪ್ರಬಲ ಸೂಗಲಿ ಒಡನೆ ನಾರಾಚತೋಡಗಳ (ದೇವಾಂಪು. ೩-೨೦೩). [?]

ಸೂಗುದಿ (ನಾ). (?) : ಸೋಗಮುಡಿಯವಳ ಚೆಲ್ವಂ ಸೂಗುದಿಯಂ ಹಾವಭಾವಮಂ ಕಂಡಾತಂ ಬೇಗುದಿಗೊಂಡವ್ವಳಿಸುತ್ತಾಗಳ್ಪೇವಸವಸನಾಂತು ತಳವೆಳಗಾದಂ (ವೀರವಿ. ೬-೪೭). [?]

ಸೂಗುರಿಸು₁ (ಕ್ರಿ). ೧. ಬೆದರು ; ಗಾಬರಿಗೊಳ್ಳು : ''ಸೂ[ಪ್ರಾಕಾ. ಸೀ]ಗುರಿಸಿತೆನಲ್ಕೆ ವಿಭ್ರಮಾರ್ಥಮದಕ್ಕುಂ'' (ಚಚೂವಿ. ೯೧); ಉರಗಪ್ರತಾನಮಾತುರಿಸಿ ಬಿಗುರ್ತು ನಿಂದು ಶಿವಧೋ ಶಿವಧೋ ಎನುತುಂ ಸುರುಳ್ದು ಸೂಗುರಿಸಿ ತೆರಳ್ದು ತಲ್ಲಣಿಸಿ ಮಲ್ಲಳಿಗೊಂಡುದು ಮೇರುಭಾಗದೊಳ್ (ಗಿರಿಕ. ೬-೬); ಸೂಗುರಿಸಿ ಝೊಮ್ಮಿನಲಿ ಮುಂದಕೆ ಬಾಗಿ ಬಿದ್ದನು ಸಾರಥಿಯ ಕೈಲಾಗಿನಲಿ ತಿರುಗಿದನು ನಕುಳನು ರಾಜಮೋಹರಕೆ (ಕುವಾಕ. ೪-೧೫೫). ೨. ತಬ್ಬಿಬ್ಬುಗೊಳಿಸು; ದಿಗ್ಭ್ರಮೆಗೊಳಿಸು: ನಿಹಾರದಲಿ ಸೂಗುರಿಸೆ ತುದಿವಾಲವಮರರ ಕೂಗುಗಳ ಕಹಳೆಗಳ ಹಲಗೆಗಳ ತಾಗುಗಳ ತನಿಹರುಷದಲಿ ಹಾಱಿದನು ಹನುಮಂತ (ತೊರಾ. ೪-೧೨-೩೩). ೩. (ಗಾಬರಿಯಿಂದ) ಕೊದಲು ಕೆದರಿ ಉಬ್ಬೇಳು: ತನು ತನಿಗತ್ತ ಚಂಚು ಮಿಡುಕುತ್ತಿರ ಪೊತ್ತಳೆ ಗೊಂಬನುಳ್ಳುರುರ್ ಸೊನೆವಿಡೆ ತಾಗಿ ಸೂಗುರಿಸೆ ಕಂಠದ ತುಪ್ಪುಟಪಾಂಗಕಾಂತಿ ಕೆಂಪಿನ ಪಸರಕ್ಕೆ ಪಕ್ಕುಗುಡೆ ಪಕ್ಕದಿನೊತ್ತುತೆ ಮಾಱಿ ಪಾಯ್ವ ಕಣ್ಣಿನಿಗಳೆ ನಾಗಕೇಸರಿಗೆ ಸಾರಿಗೆ ಸಾರಿಗೆಯಾಯ್ತು ಕೋಪದಿಂ (ಲೀಲಾವ. ೬-೯೯). [? + - ಇಸ್ಕು]

ಸೂಗುರಿಸು₂ 'ಜೂಗರಿಸು' ನೋ.

ಸೂಚಿ (ನಾ). ಹುಲ್ಲುಗರಿಕೆಯ ಚೂಪಾದ ತುದಿ; ಹುಲ್ಲಿನ ಊಬು: ಸೂಚಿಮನುರ್ಚಿ ಪುಲ್ಲೆಗಾಟಿಸಿ ಮಲೆತರ್ಪರಲೆಯ ಸೋಲಮನಲ್ಕೆಯೊಳರಿಕೇಸರಿ ನಿಂದು ನೋಲ್ಪುದೊಂದರಸಲ್ರೇ (ಪಂಚಭಾ. ೫-೪೪). [ಸಂ.]

ಸೂಚಕ (ಗು). ೧. ಸೂಚನೆಯನ್ನು ಕೊಡುವ; ಸೂಚಿಸುವ: 'ಅರ' ಎಂಬ ಆಶ್ಚರ್ಯಸೂಚಕಉದ್ಗಾರವು ತಂತಾನೆ ಹೊರಟಿತು (ಅಜೋಲೀ. ೮೭). ೨. ಸುಳಿವನ್ನು ಕೊಡುವ; ಜಾಡನ್ನು ತಿಳಿಸುವ. (ನಾ). ೩. ತಿಳಿಸುವಿಕೆ; ಸೂಚಿಸುವಿಕೆ. ೪. ಸೂಚನೆಯನ್ನು ಕೊಡುವ ವಸ್ತು ,– ಸಾಧನ: ಇದನ್ನು ಅಮ್ಮ ಪ್ರತ್ಯಮ್ಮಗಳ ಗಾತ್ರನಿರ್ಧರಣೆಯಲ್ಲಿ ಒಂದು ಸೂಚಕದಂತೆ (ಇಂಡಿಕೇಟರ್) ಬಳಸುತ್ತಾರೆ (ಕವಿಕೋ. I, ೭೦೮). ೫. ಸೂಚನೆ; ಸುಳಿವು: ಹಂಸಕೇತು ನೀಲಧ್ವಜಾದಿಗಳೆಲ್ಲರುಂ ಸಮಸ್ಮಯರಾಗಿ ಚಿಂತಿಸಿ ಕರಗಿದರತಿಕರುಣಾರಸಭಾವದಿಂದೇನೆಂಬೆನಪಕೃತದ ಸೂಚಕವನು(ಪ್ರಮಿಧಾ.೧೭-೫೦); ಅಕ್ಕ ಬಂದರೆ ತುಂಬ ಸಹಾಯವಾಗುವುದು ಎಂದು ಸೂಚಕವಾಗಿಯೇ ಬರೆದಿದ್ದ (ಮೂಕುದಾ. ೧೧೭). ೬.ಸೂಚನೆಯನ್ನು ಕೊಡುವವನು; ಬೇಹುಗಾರ; ಗೂಢಚಾರ: ಎಲ್ಲೆ ಸೂಚಕನೆ, ಎಲ್ಲವನ್ನೂ ಕ್ರಮವಾಗಿ ಹೇಳಲಿ. ಅವ್ಳರೊಳಗೆ ಇವನನ್ನು ಪ್ರತಿಬಂಧಪಡಿಸಬೇಡ (ಶಾಕುಂತ. ೬೫-೧೨). ೭. ಚಾಡಿಹೇಳುವವನು; ಪಿಸುಣ: ''ನೀಚಂ ಕ್ಷುದ್ರಂ ಪಿಶುನಂ ಸೂಚಕನೆಂದಱಿದುಕೊಳ್ಗೆ ಕರ್ಣೇಜಪನಂ''(ಪಸ್ಮಕೋ. ೧೦೦-೧೩). ೮. ಬೋಧಕ; ಉಪಾಧ್ಯಾಯ. ೯. ಒಂದು ಸಂಸ್ಥೆಯ ಕಾರ್ಯನಿರ್ವಾಹಕ. ೧೦. ಜ್ಞಾನಿ. ೧೧. ಸಿದ್ಧಿಯನ್ನು ಪಡೆದವನು; ಸಿದ್ಧ. ೧೨. ದುಷ್ಟ. ೧೩. ಪಿಶಾಚಿ. ೧೪. ನಾಯಿ. ೧೫. ಕಾಗೆ. ೧೬. ಬೆಕ್ಕು. ೧೭. ಒಂದು ಬಗೆಯ ಉತ್ತಮವಾದ ಅಕ್ಕಿ. ೧೮. ತೋರಣ. ೧೯. ಕಾಡು. ೨೦. ಆಸ್ತಿ. ೨೧. ಕಪಿ. ೨೨. ಶಿವ. ''ಕಪಿಯೊಳು ಬೆಕ್ಕಿನೊಳು ಶುನಕನೊಳು ವನದೊಳು ವೃತ್ತದೊಳು ಬೋಧಕನೋಶನೊಳು ಸೂಚಕಂ ವರ್ತಿಸಿಕ್ಕು'' (ಜುಂಗರಾ. ೧೫೩-೬೨); ''ಕಪಿ ಶುನಕ ಬಡಾಲಂ ವನಂ ಪೇಳ್ವನುಂ ತೋರಣಮುಂ ಶೈನೇತ್ರನುಂ ಸೂಚಕ ಮೆನಿಕು'' (ನಾನಾರ. ೧೫೩). [ಸಂ.]

ಸೂಚಕಾಭರಣರಸ (ನಾ). [ವೈದ್ಯಶಾ] ಸನ್ನಿಪಾತಜ್ವರ, ತ್ರಿದೋಷಜ್ವರ ಮುಂತಾದುವುಗಳ ಉಪಶಮನಕ್ಕೆ ಕೊಡುವ ಒಂದು ಬಗೆಯ ಔಷಧಿ: ಸನ್ನಿಪಾತಜ್ವರ, ತ್ರಿದೋಷಜ್ವರದಿಂದ ಕೈಕಾಲು ತಣ್ಣಗೆ ಆಗಿ ಕಣ್ಣುಮುಚ್ಚಿ ನಾಡಿ ನಿಂತು ಹಲ್ಲುಹಲ್ಲಿಗೆ ಗಟ್ಟಿಯಾಗಿ ಕಟ್ಟಿಹೋಗಿರುವಂತಹವನಿಗೆ ಕಾಲಿನ ಹೆಬ್ಬೆರಳಿನ

ಉಂಗುಷ್ಠದಲ್ಲಿ ಸೂಜಿಯಂ ಹೊಯ್ದು ಆ ಸ್ಥಾನದಲ್ಲಿ ಸೂಜಿಯ ಮೊನೆಯಲ್ಲೂ ಆ ತಳಿಗೆಯ ರಸವಂ ತೆಗೆದು ಇಕ್ಕ ಬೆರಳಿಂದ ಆ ಸ್ಥಾನವನ್ನೊರಸುವುದು . . . ಇದು ಸೂಚಿಕಾಭರಣರಸ (ವೈದ್ಯ. ೫೭). [P ಇದು 'ಸೂಚಿಕಾಭರಣರಸ' ಎಂದಿರಬಹುದು]

ಸೂಚನ (ನಾ). ೧. ತೂತುಕೊರೆಯುವಿಕೆ; ರಂಧ್ರಮಾಡುವಿಕೆ. ೨. ನಿರ್ದೇಶಿಸುವಿಕೆ. ೩. ತಿಳಿವಳಿಕೆ; ಸೂಚನೆ: ಪತ್ರವ್ಯವಹಾರದ ೨ನೇ ಸೂಚನವೇನೆಂದರೆ (ಮುಂಬಪ್ರಾ. ೩೦ ಪ್ರಸ್ತಾವನೆ). ೪. ಚಾಡಿ ಹೇಳುವುದು; ಚಾಡಿ ಕೋರತನ. ೫. ಸಂಜ್ಞೆ ಅಥವಾ ಸನ್ನೆಗಳ ಮೂಲಕ ಸೂಚಿಸುವುದು, — ತಿಳಿಸುವುದು. ೬. ಗುಪ್ತವಾಗಿ ಕೊಡುವ ಸಲಹೆ, — ಸುಳಿವು. ೭. ಹೇಳುವುದು; ತಿಳಿಸುವುದು. ೮. ಸುದ್ದಿ; ಸಮಾಚಾರ. ೯. ಬೋಧಿಸುವುದು; ಬೋಧನೆ. ೧೦. ಬೇಹುಗಾರಿಕೆ. ೧೧. ದುಷ್ಟತನ; ಕೆಟ್ಟತನ. [ಸಂ.]

ಸೂಚನೆ (ನಾ). ೧. ತಿಳಿಸುವಿಕೆ; ನಿರ್ದೇಶಿಸುವಿಕೆ. ೨. ನಿರ್ದೇಶನ: ವೇದವಿಪ್ರರ ವಿಚಾರಿಸಿ ನೋಡಲು ಉಪದೇಶಪರೀಕ್ಷೆ ನಾಯಕನರಕ ಎಂದುದು ಕೂಡಲಸಂಗನ ವಚನದ ಸೂಚನೆ (ಬಸವ. ೯೧). ೩. ಸಂಜ್ಞೆಗಳ ಮೂಲಕ ತಿಳಿಯಪಡಿಸುವಿಕೆ: ಅವಳು ಕಣ್ಣು ಮಿಟುಕಿಸಿ ಮಾಡಿದ ಸೂಚನೆಯನ್ನು ತಿಳಿಯಲಾಗಲಿಲ್ಲ (ರೂಢಿ). ೪. ಗುರುತು; ಸುಳಿವು; ಜಾಡು: ಬೆಲೆ ಏರುತ್ತಿರುವ ಅಥವಾ ಬೀಳುತ್ತಿರುವ ಸೂಚನೆಯನ್ನು ಅನುಸರಿಸಿ ಹೆಚ್ಚು ಹಣವನ್ನೂ ಕಡಿಮೆಯನ್ನೂ ಚಲಾವಣೆಗೆ ತರಬಹುದು (ಹಣಪ್ರ. ೧೯). ೫. ಸುದ್ದಿ; ಸಮಾಚಾರ: ಅವರು ಬರೆದಿರುವ ಪತ್ರದಲ್ಲಿ ಸದ್ಯದಲ್ಲಿ ಬರುವ ಸೂಚನೆಯೇನೂ ಇಲ್ಲ (ರೂಢಿ). ೬. ಎಚ್ಚರಿಕೆ: ಮನೆಯವರಿಗೆ ಸೂಚನೆ ಎಂಬಂತೆ ದಿಬ್ಬಣದ ವಾದ್ಯವಾಯಿತು (ಕಾಲೂರ. ಕಥಾಸಾರ. ೧೪). ೭. [ಕಾವ್ಯಮೀ] ದೇಶೀಕಾವ್ಯದ ಪ್ರತಿ ಸಂಧಿ ಅಥವಾ ಅಧ್ಯಾಯಗಳ ಪ್ರಾರಂಭದಲ್ಲಿ ಬರುವ ಸಾಮಾನ್ಯವಾಗಿ ಅಧ್ಯಾಯದ ಇಡೀ ಸಾರಾಂಶವನ್ನು ಸೂಚಿಸುವ ಪದ್ಯ; ಸೂಚನಾಪದ್ಯ: ಸೂಚನೆ: ಇಂದುಧರನನುಮತದೊಳಾದಿಯ ನಂದಿನಾಥನು ಬಸವನಾಮದಿ ಬಂದಪಂ ಶಿವಭಕ್ತಿಯಂ ವಸುಮತಿಗೆ ಪಸರಿಸಲು (ಬಸಪು. ೨. ಸೂಚನೆ). [ಸಂ. ಸೂಚನಾ]

ಸೂಚನೆಗೆಯ್, ಸೂಚನೆಗೈ (ಕ್ರಿ). ೧. ಸೂಚನೆ ನೀಡು; ಸೂಚಿಸು: ಪ್ರತಿಬುದ್ಧರಂ ಕುಜ್ಞಿತ್ತೀ ಸ್ಥಿತಿಯಿಂದಂ ಕಿಱಿದು ಮಾರ್ಗಸೂಚನೆಗೆಯ್ದುಂ (ಕಾವ್ಯಾವ. ೪೨೧); ಸಕಲಪರಿಮಳದ್ರವ್ಯಂಗಳ ಗಂಧೋದಕದಲ್ಲಿ ಹದಮಾಡಲೊಡನೆ ವಿಕಸಿತಕಮಲದಳಾಕ್ಷ ತನ್ನಯ ವಧೂನಿಕರಕೆ ಸೂಚನೆಗೆಯ್ದ (ಮೋಹತ. ೧೪-೩೮). **ಸೂಚನೆಗೈ** : ೧. ಎನಗಮರಾತಿಗಳೊಳರಂದಿನಿತು ಪರಾಭವಮನೀಗಳೀ ಚಕ್ರಂ ಸೂಚನೆಗೈದುದು (ಆದಿಪು. ೧೪-೯). ೨. ಸಂಜ್ಞೆಯ ಮೂಲಕ ತಿಳಿಸು; ಸಂಜ್ಞೆ ಮಾಡು: ಲೋಚನಯುಗ್ಮದಿಂದೆಡಬಲಂಗಳನೀಕ್ಷಿಸಿ ತನ್ನ ನಲ್ಲನಂ ಸೂಚನೆಗೈದು ಕೂಡೆ ಕರೆದೊಯ್ಯನೆ . . . ಒಡಗೂಡಿದಳತ್ಯಧಿಕಪ್ರಮೋದದಿಂ (ಉದ್ಯಟ. ೨-೮೦). [ಸೂಚನೆ + ಕೆಯ್$_1$]

ಸೂಚನೆಗೈ 'ಸೂಚನೆಗೆಯ್' ನೋ.

ಸೂಚಿ (ನಾ). ೧. ತೂತು ಕೊರೆಯುವಿಕೆ; ರಂಧ್ರಮಾಡುವಿಕೆ. ೨. ಚೂಪಾದ ತುದಿಯಿಂದ ಕೂಡಿದ, ಮೇಲ್ಭಾಗದಲ್ಲಿ ದಾರವನ್ನು ತೂರಿಸಲು ಅನುಕೂಲವಾಗುವಂತೆ ಸಣ್ಣರಂಧ್ರವನ್ನುಳ್ಳ, ಬಟ್ಟೆ ಹೊಲಿಯುವ ಒಂದು ಲೋಹದ ಸಾಧನ; ಸೂಜಿ: "ಸೂಚಿಯು ಸೂಜಿಯುಮೆನಿಕ್ಕು" (ಕವಿಕಂ. ೨೫೮); ಪೊಲ್ಲದಂ ಮಾಡಿದ ಸೂಚಿಯಂತೆ ನಿಂದೆಯೊಳಂ ಬಡಿಹದ ಮಕ್ಕಳಂತೆ ಅಟಲ್ಪೆಯೊಳಂ ನೀರ್ ಮುಟ್ಟದ ಕೆಂದದಂತುಪಶಮದೊಳಂ . . . ನೆರೆದಿರ್ಪುದುಂ (ಧರ್ಮಾಮೃ. ೫-೧೨೫); ಮೊನೆಯಪ್ಪ ಸೂಚಿಯಂ ಕೀಲಿಸಿದ ವೇದನೆಯ (ಲಶಿಟಿ. ೩೯-೩೯). ೩. (ಹುಲ್ಲು, ಹೂವಿನ ಮೊಗ್ಗು, ಗರಿ ಮುಂತಾದುವುಗಳ) ಚೂಪಾದ ತುದಿ. ೪. ಸೈನ್ಯದ ಒಂದು ಬಗೆಯ ರಚನೆ; ಬಟ್ಟೆಯನ್ನು ಹೊಲಿಯುವಾಗ ಸೂಜಿಯು ಸಾಗುವ ಹಾಗೆ, ಸೈನ್ಯವು ಸಾಲಾಗಿ ನಿಲ್ಲುವಂತೆ ರಚಿಸುವ ಸೇನಾವ್ಯೂಹ. ೫. ಮೂರು ಅಥವಾ ಹೆಚ್ಚು ಭುಜಗಳ ತಳಹದಿಯುಳ್ಳ ಗೋಪುರಾಕಾರದ ಘನಾಕೃತಿ. ೬. ಸಂಜ್ಞೆಯ ಮೂಲಕ ತಿಳಿಸುವಿಕೆ; ಸಂಜ್ಞೆಮಾಡುವಿಕೆ. ೭. ಅಭಿನಯ; ನಟನೆ. ೮. ಅಕಾರಾದಿಯಾಗಿ ಅಥವಾ ವಿಷಯಾನುಕ್ರಮವಾಗಿ ರಚಿಸುವ ಪಟ್ಟಿ: ಪ್ರತಿ ಗ್ರಂಥಕ್ಕೆ ಅನಾವಶ್ಯಕವಾದ ಆರೆಂಟು ಪತ್ರಕಗಳನ್ನು ಬರೆಯುತ್ತ ಹೋದರೆ ಸೂಚಿಯ ಆಕಾರ ಅಂಕೆ ಮೀರಿ ಬೆಳೆಯುವುದರಲ್ಲಿ ಸಂಶಯವಿಲ್ಲ (ಗ್ರಂಥಾಲ. ೩೬). ೯. ಕಬ್ಬಿಣವನ್ನು ಸೆಳೆಯುವ ಶಕ್ತಿಯುಳ್ಳ ಕಲ್ಲು; ಅಯಸ್ಕಾಂತ: 'ಸೂಚಿಕಲ್' ಪರಾ. ೧೦. [ನಾಟ್ಯ] ಹದಿನಾರು ಬಗೆಯ ಮಾರ್ಗಆಕಾಶಚಾರಿಗಳಲ್ಲಿ ಒಂದು; P "ಒಂದು ಕಾಲನ್ನು ಕುಂಚಿತ ಮಾಡಿ ಎತ್ತಿ, ಮೊಣಕಾಲಿನಿಂದ ತೊಡೆಯವರೆಗೂ ಮೊಣಕಾಲಿನಿಂದ ಮೇಲಕ್ಕೆ ಚಲಿಸಿ, ಮುಂದೆ ತುದಿಗಾಲಿನಿಂದ ನೆಲವನ್ನು ತಟ್ಟುವುದು" (ಲಾಸ್ಯರಂ. ೩೧೯ ಗದ್ಯಾನುವಾದ): ಪಿರಿದೆಸೆವ ಸೂಚಿಯುಂ ನೂಪುರಪಾದಿಕೆ ಡೋಲಪಾದ ದಂಡಪದಂಗಳ್ (ಲಾಸ್ಯರಂ. ೬-೬).

ಸೂಚಿಯಗ್ರಪ್ರಮಿತ = (ಆಲಂ) ಸೂಜಿಯ ಮೊನೆಯ ಅಳತೆಯಷ್ಟು: ಸೂಚಿಯಗ್ರಪ್ರಮಿತಧಾರುಣಿಯ ಕೂಡೆ ನೀ ಕೊಡೆನೆಂದು ದರ್ಪವ ಮಾಡಿ ಸಕಲ ಮಹೀತಳವ ಹೋಗಾಡಿ ಹೊಕ್ಕೈ ಜಲವನು (ಕುಮಾಗ. ೫-೧೬). ಸೂಚಿಯಾನೆ, ಸೂಚೀಯಾನೆ = ಸೇನೆಯ ಮುಂಭಾಗದಲ್ಲಿರುವ ಆನೆ; ಮಾರ್ಗದರ್ಶಕ ಆನೆ: ತನ್ನಯ ಸೂಚಿಯಾನೆ ತೊಟ್ಟಗೆ ಸಮರಾಗ್ರದೊಳ್ಪರಿಯೆ ಪಿಂತನೆ ಸಂದುವ ರಾಜಪುತ್ರರಾನೆಗಳ್ (ಗದಾಯು. ೧-೧೬); ಅವರ ಮುಂದೆ ಸಾಹಣೌಘದೊಳಗಿರಿಸುವ ಪಂಚಕಲ್ಯಾಣದ ಸೂಚೀಯಾನೆಗಳ್ಗೆಂದು ನಿಱಿಸಿದ ನಡೆಮಾಡಸಾಲೆಗಳಿಂದಂ (ಶಾಂತಿಪು. ೧೦-೧೫೭ ವ). [ಸಂ.]

ಸೂಚಿಕ (ನಾ). ಬಟ್ಟೆಗಳನ್ನು ಹೊಲಿಯುವವನು; ಸಿಂಪಿಗ; ದರ್ಜಿ: "ಚಿಪ್ಪಿಗನು ಚೇಳಿಕಂ ಸೂಚಿಕಂ ತುನ್ನವಾಯನೆನಿಕ್ಕು" (ಮಂಗರಾ. ೧೧೧-೨). [ಸಂ.]

ಸೂಚಿಕಲ್, ಸೂಚಿಕಲ್ಲು$_1$ (ನಾ). ಕಬ್ಬಿಣವನ್ನು ಸೆಳೆಯುವ ಶಕ್ತಿಯುಳ್ಳ ಕಲ್ಲು; ಅಯಸ್ಕಾಂತ; ಸೂಜಿಗಲ್ಲು: (ಚತುಸಾ. ಕಿ. I, ೧೧೭). **ಸೂಚಿಕಲ್ಲು$_1$** : "ಆ ಕರ್ಬೋನ್ಸಲ್ ಸಲೆ ಸೂಚಿ[ಪಾಠಾಂ. ಜಿ]ಕಲ್ಲುಮೆನಿಕುಂ" (ಕವಿಕಂ. ೫೧). [ಸೂಚಿ + ಕಲ್$_3$]

ಸೂಚಿಕಲ್ಲು$_1$ 'ಸೂಚಿಕಲ್' ನೋ.

ಸೂಚಿಕಲ್ಲು$_2$ (ನಾ). ಒಂದು ಬಗೆಯ ಖನಿಜ; ಔಷಧಿಸಾಮಗ್ರಿ: ಕೆಂದಂಗಿನ ಎಳನೀರಿನಲ್ಲಿ ಸೂಚಿಕಲ್ಲು ಬೇವಿನ ಹಗಿನು ಇವರಡನ್ನೂ ತೆಗೆದುಕೊಳ್ಳಲು ಹೆನ್ನತ್ತರು ಬಿಡುವುದು (ಸಕವೃ. ೧೯೭). [ಸೂಚಿ + ಕಲ್ಲು (< ಕಲ್$_3$)]

ಸೂಚಿಕಾರೋಗ (ನಾ). ವಾಂತಿಭೇದಿ ರೋಗ; ಕಾಲರ: ಆ ಅರಸಿನ ಸತಿಯು ಸೂಚಿಕಾರೋಗದಿಂದ ಪರಲೋಕವನೈದಲು (ಶಿವದ. ೨೮೬-೧೬). [ಸಂ.]

ಸೂಚಿತ (ಗು). ೧. ಚುಚ್ಚಿದ; ತೂತು ಕೊರೆದ. ೨. ತಿಳಿಸಿದ; ಹೇಳಿದ. ೩. ಸಂಜ್ಞೆಯ ಮೂಲಕ ತಿಳಿಸಿದ, — ಹೇಳಿದ. ೪. ಗುರುತಿಸಿದ; ಕಂಡುಹಿಡಿದ. ೫. ತಲೆದೋರಿದ; ಗೋಚರವಾದ; ವ್ಯಕ್ತವಾದ: ಹಯವರಸಮಾರೂಢನಾಗಿ ಸೇವಕಚತುಷ್ಟಯದೊಡನೆ ಸೂಚಿತ ಶುಭೋದಯದ ಶಕುನಾವಳಿಯನಾಲಿಸುತ ಬಟ್ಟೆವಿಡಿದು . . . ಬರಲು (ಜೈಮಿಭಾ. ೨೯-೪೪).

ಸೂಚಿತವಾಗು = ೧. ತಿಳಿಸು; ಹೇಳು: ನಾಗರಿಕತೆಯ ಅವಶೇಷಗಳು ಮೇಲೆ ಸೂಚಿತವಾಗಿರುವಂತೆ . . . ನಿರ್ಧಾರವಾಗಿದೆ (ಭಾರದ. ೩೮೦). ೨. ಗೋಚರವಾಗು; ವ್ಯಕ್ತವಾಗು: ಅವಶೇಷಗಳಿಂದ ಸೂಚಿತವಾಗುವ ಸಾಮಾಜಿಕ ಜೀವನ (ಭಾರದ. ೩೭೮). ೩. ಹೊಳೆ; ಸ್ಫುರಿಸು: ನನಗೆ ಕವಿತೆ ಸೂಚಿತವಾಗುವುದು ವಿಶೇಷವಾಗಿ ರಾತ್ರಿಯ ಕಾಳಿಮೆಯಲ್ಲಿ (ಸ್ಫೃಚಿಟ. ೩೮೦). [ಸಂ.]

ಸೂಚಿಪರ್ಣ (ನಾ). ಚೂಪಾದ ತುದಿಯುಳ್ಳ ಎಲೆ: ಸೂಚಿಪರ್ಣದ ಪೈರು ಹೆಣೆದಿವೆ ಹಸಿರು ರೇಶಿಮೆ ಸೀರೆಯ (ಚಿಂತನ. ೪೮-೧೭); ಸೂಚಿಪರ್ಣ ಸಂಪಿಗೆ ಕೇದಗಿ ತೆಗೆದುಕೊಂಡು ಏನು ಮಾಡುವುದು? (ಸುತ್ತುಮು. ೯೧). [ಸಂ.]

ಸೂಚಿಮುಖ (ನಾ). ಸೂಜಿಯ ಚೂಪಾದ ತುದಿ, — ಮೊನೆ: ನೀಲಗಪ್ಪಡದುಡಿಗೆ . . . ಒಂದಟ್ಟೆಯ ಕೆರಹು ನಾಯಿಗಳ ಬಾಯ್ಕುಟ್ಟು ಒಳಿಯಿಂದಿವು ಮೆಟ್ಟೆಯ ನಡೆದಾಭೀಳ ಎಸೆಯಲು ಸೂಚಿ[ಪಾಠಾಂ. ಜಿ]ಮುಖಮಂ ಕೀಲಿಸುವದಟ್ಟೆದೆನಿಸಿದುಟ್ಟೆ ಕತ್ತಲೆಯ ಮೊತ್ತದೊಳು (ಬಸಪು. ೩೧-೪). [ಸಂ.]

ಸೂಚಿಶಕ್ತಿ (ನಾ). ಸೇನಾವ್ಯೂಹರಚನೆಯ ಸಾಮರ್ಥ್ಯ, — ಬಲ: ಸಮರಾಗ್ರದೊಳ್ . . . ಸೂಚಿಶಕ್ತಿಗೆ ನೃಪರಾನೆ ದಾರದವೊಲಾದುವು ರಾಜಕುಮಾರ ರಾನೆಗಳ್ (ಗದಾಯು. ೧-೧೬). [ಸಂ.]

ಸೂಚಿಸು (ಕ್ರಿ). ೧. ತೋರಿಸಿ ಕೊಡು ; ತೋರಿಸು ; ಸುಳಿವು ನೀಡು : ಮುಂತೆ ಬಂದು ನೀನೆನಗೆ ವಸಂತನಾಗಮನಮಂ ನೆಱೆ ಸೂಚಿಸಿ ಕೊಟ್ಟೆಯೆಂದು . . . ಇತ್ತ ಪಸಾಯದಚ್ಚಮುತ್ತಿನ ಪೊಸಪಚ್ಚಮಂ ತಳೆದವೋಲದಿರ್ಮುತ್ತೆ ಮುಗುಳ್ಳುದು (ಚಂದ್ರಪ್ರ. ೭-೮೧); ಮನುಕುಲಲಲಾಮರ ಮುಂದೆ ಸೂಚಿಸಿ ಸುಳಿದವೈ ಹರಿಣಾಳಿ ಸೀತೆಯನೊಯ್ದು ಪಥವಿಡಿದು (ತೊರರಾ. ೩-೧೨-೨); ನಿಶೆ ವ್ಯರ್ಥಮೆನೆ ಪೋಯಿತು ಧರಣೀತನೂಭವೆಯ ಕುರುಹ ಸೂಚಿಸದಾದುದು (ವಂಕಾರಾ. ೫-೫-೪). ೨. ತಿಳಿಸು; ಹೇಳು: ಗಂಧೇಭಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂ ತಳ್ಪೊಯ್ದು ಕಟ್ಟೇಱೆ ಸೂಚಿಸಲಾರ್ಗಂ [ವಶ]ಮಾಗದಂತು ಕವಿದತ್ತುದ್ದಾಮಧೀಮಂ ತಮಂ (ಪಂಪಭಾ. ೪-೪೯); ಸೂಚಿಸುವೆನಾ ಅಯ್ಯನಾಡಿದ ವಾಚನಂಗಳಂ (ಬಸಪು. ೩೭-೧೪); ಕೆಲವು ಹೆಗ್ಗುರುತುಗಳನ್ನು ಮಾತ್ರ ಇಲ್ಲಿ ಸೂಚಿಸಬಹುದು (ಶಿಕ್ಷದ. ೧೭೪). ೩. ಸಂಜ್ಞೆಗಳ ಮೂಲಕ ತಿಳಿಯಪಡಿಸು, — ಹೇಳು: ಅಂತರಂಗದೊಳ್ ಮಱಸಿದುದಂ ಮಿಗೆ ಸೂಚಿಸುವುದು ಸೂಕ್ಷ್ಮಾನುಗತಾಳಂಕಾರಂ (ಕವಿರಾ. ೩-೧೧೭); ಕಣ್ಣಿಂದಲೆ 'ಗುಟ್ಟಾಗಿರಬೇಕಾದುದನ್ನು ಇತರರೆದುರು ಕೇಳಬ್ಯಾಡ!' ಎಂದು ಸೂಚಿಸಿದ್ದನು (ಮಲಪ. ೫೯೬). ೪. ವ್ಯಕ್ತಪಡಿಸು; ಪ್ರಕಟಿಸು: ಕನಸುಗಳಿವು . . . ಆದಿದೇವಂ ಪಲಬರ್ ಮುನಿಪತಿಗಳ್ಕೆರಸರ್ದರ್ಪನನಶ್ವರಾಸ್ಪದಮನೆಂಬುದಂ ಸೂಚಿಸುಗುಂ (ಆದಿಪು. ೧೬-೪೯); ಮಾತು ತಾನೇ ಮನದೊಳಗೆ ಸೂಚಿಸುವುದೆಂದಾತ ನೆನೆದನೆದೆಯೊಳಗೆ (ಭರಚ. ೨-೮೮). ೫. ವ್ಯಕ್ತಗೊಳ್ಳು; ಪ್ರಕಟವಾಗು: ದಕ್ಷಿಣಾಕ್ಷಿಸ್ಪಂದನದೊಳಂ ಸೂಚಿಸುವ ಶುಭಸೂಚನೆಯೊಳಂ ನಾರಾಯಣನುದಾತ್ತ ನಾರಾಯಣನ ಬರವನಱಿದು (ಪಂಪಭಾ. ೪-೩೩ ವ). ೬. ನಿರ್ದೇಶಿಸು; ಮಾರ್ಗ ದರ್ಶನಮಾಡು: ತೂಗುವ ಮಕುಟದೊಲಹಿನ ಬೆರಳ ಕುಡಿ ಚಿಮ್ಮಟಿಗೆಯಲಿ ಸೂಚಿಸಿದ ನರ್ಜುನಗೆ (ಕುವ್ಯಾಕ. ೧೪-೮); ಭೋಗಿಭೂಷನ ಜಯಿಸುವೊಡುಷಾದೇವಿಯೊಳ್ ಪೋಗಿ ತಾ ಕೈಮಾಡಲೆನುತೆ ವಾಗೀಶನೊಡಹುಟ್ಟಿದಂಗೆ ಸೂಚಿಸುವಂತೆ ಕೂಗಿತು ಕಲಕಂಠನಿಚಯ (ಪೋಹಿತ. ೨೪-೫೯). [ಸೂಚನ + - ಇಸ್ಸು]

ಸೂಚೀಕರಣ (ನಾ). (ಗ್ರಂಥಾಲಯಗಳಲ್ಲಿ) ಗ್ರಂಥಗಳ ಬಗ್ಗೆ ಸೂಚಿಕೆಗಳನ್ನು ಬರೆದು ಕ್ರಮಬದ್ಧವಾಗಿ ಗ್ರಂಥಗಳು ದೊರಕುವಂತೆ ಮಾಡುವ ಕಾರ್ಯ: ವರ್ಗೀಕರಣದ ನಂತರ ಗ್ರಂಥದ ಬಗ್ಗೆ ಬರೆಯುವ ಪ್ರಾಮುಖ್ಯವಾದ ವಿಧಾನ. ಸೂಚೀಕರಣ (ಗ್ರಂಥಾಲ. ೩೩). [ಸಂ.]

ಸೂಚೀಕರ್ಮ (ನಾ). ಹೊಲಿಗೆಯ ಕೆಲಸ: 'ಸೂಚೀಕರ್ಮಾಯ್ತೆ' ಪರಾ.

[ಸಂ. ಸೂಚೀಕರ್ಮನ್]

ಸೂಚೀಕರ್ಮಾಯ್ತೆ (ನಾ). ಹೊಲಿಗೆಯ ಕೆಲಸವನ್ನು ಬಲ್ಲವಳು, — ತಿಳಿದಿರುವವಳು: ಅನವದ್ಯೆ ಪತಿವ್ರತೆ . . . ಸೂಚೀಕರ್ಮಾಯ್ತೆ [ಪಾಠಾಂ.ಶುಚಿ ಕರ್ಮಾಇತೆಯ, ಶುಚಿಕರ್ಮಾಯಿತೆ] ನಿಪುಣೆ ಮಿಥುನಾಲಯಾದಿಮದ್ರೇಕ್ಕಾಣಂ (ಚಾಶತಿ. ೧೯-೭).

[ಸೂಚೀಕರ್ಮ + - ಆಯ್ತೆ]

ಸೂಚೀಘಾತ (ನಾ). (ಚೂಪಾದ ತುದಿಯನ್ನು ಹೊಂದಿರುವ) ಅಂಕುಶದಿಂದ (ಆನೆಗೆ) ಕೊಡುವ ಹೊಡೆತ, — ಪೆಟ್ಟು: ಸೊಂಡಿಲ ಮಧ್ಯಪ್ರದೇಶದಲ್ಲಿ ತಿಮಿಯೋಣವೆ ಸೂಚೀಘಾತವೆನಿಸಿಕೊಳ್ಳುವದು (ಸೌಂದಿ. ೨೬೮-೧೩). [ಸಂ.]

ಸೂಚೀನಾಟ್ಯ (ನಾ). [ನಾಟ್ಯ] ಒಂದು ಬಗೆಯ ನೃತ್ಯ; P ನೆಲದಲ್ಲಿ ಒಂದು ಕ್ರಮವಾಗಿ ಹಲವಾರು ವಿಷಪೂರಿತವಾದ ಮೊನೆಗಳುಳ್ಳ ಸೂಜಿಗಳನ್ನು ನೆಟ್ಟಿರುತ್ತಾರೆ. ನರ್ತಕಿಯು ಬಹಳ ಎಚ್ಚರಿಕೆಯಿಂದ, ಚಮತ್ಕಾರದಿಂದ ಆ ಸೂಜಿಗಳನ್ನು ಮೆಟ್ಟದ ಹಾಗೆ ಮಾಡುವ ನರ್ತನ: ಮತ್ತಂ ಕೆಲರ್ ನೋಡಿ ಸೂಚೀನಾಟ್ಯಂಗಳನಾಡಿದರ್ ಖರನಖಪ್ರಾಂತಂಗಳೊಳ್ ಶಕ್ರನಾ (ಆದಿಪು. ೭-೧೨೪). [ಸಂ.]

ಸೂಚೀಮುಖ (ನಾ). ೧. ಸೂಜಿಯ ಚೂಪಾದ ತುದಿ, — ಮೊನೆ. ೨. ಸೂಜಿಯ ಮೊನೆಯಂತೆ ಚೂಪಾದ ಮುಖವನ್ನುಳ್ಳದು: ಸಮರಾಂಗಣ ಮುಮನುಲೂಕನಿಕರಸೂಚೀಮುಖಿಚಂಚುಚರಣಪಕ್ಷಘಾತಕ್ಕಧಿರದಿದಿರಾಂತು ಕಾದಿ ಸತ್ತ ವಾಯಸವೀರನಿಕಾಯಮುಮ್ಮಂ (ಪಂಚತಂ. ೮. ೧೪೯-೨೫); ಕಾಗೆಯ ಹಾಗೆ ಸೂಚೀಮುಖ ವಾಗಿರಬಾರದು ಕರಾಳಿಯಾಗಬಾರದು (ಅಶ್ವಟೀ. ೧೭-೯). ೩. ಸೂಚೀವ್ಯೂಹದಂತೆ ರಚಿಸಿದ ಸೇನೆಯ ಮುಂಭಾಗ: ಆ ಸೂಚೀಮುಖದಲ್ಲಿ ಕೃತವರ್ಮ, ಕಾಂಭೋಜ . . . ಅದರ ಹಿಂದೆ ಜಯದ್ರಥನನ್ನು ನಿಲ್ಲಿಸಿದನು (ವಚಭಾ. ೨೦೬). ೪. [ನಾಟ್ಯ] ಅಸಂಯುತಹಸ್ತಗಳಲ್ಲಿ ಒಂದು : ಉರಗಶಿರಂಗಳ್ ಪೆರ್ಪರಲುರುತರ ಮಧ್ಯಮೆಯನೊಂದಿ ಚತುರಸ್ರದೆ ಮೇಣ್ ತಿರುಗಲ್ ತರ್ಜನಿ ಪಲವುಂ ಪರಿಯಿಂ ತಿರುಗಲ್ಕೆ ತಿಳಿಗೆ ಸೂಚೀಮುಖಮಂ (ಲಾಸ್ಯರಂ. ೨-೫೨); ನಾಟ್ಯಶಾಸ್ತ್ರಗಳಲ್ಲಿ ಹೇಳಿರುವ ಅಸಂಯುತಹಸ್ತಗಳು ಯಾವುವೆಂದರೆ ೧. ಪತಾಕ, ೨. ತ್ರಿಪತಾಕ . . . ೧೧. ಸೂಚೀಮುಖ . . . ೨೪. ತಾಮ್ರಚೂಡ (ಅಭಿನ. ೪೮). [ಸಂ.]

ಸೂಚೀಮುಖರಸ (ನಾ). [ವೈದ್ಯಶಾ] ಧನುರ್ವಾತ, ವಾಯು, ಅಪಸ್ಮಾರ, ಸನ್ನಿಪಾತ ಮುಂತಾದ ರೋಗಗಳ ಉಪಶಮನಕ್ಕೆ ಕೊಡುವ ಔಷಧಿ: ರಸ, ಗಂಧಕ, ತಾಳಕ . . . ಇವನ್ನು . . . ಗಾಜಿನ ಕುಪ್ಪಿಗೆಯಲ್ಲಿ ತುಂಬಿ ಬ್ರಹ್ಮಸ್ಥಾನದಲ್ಲಿ ಸೂಜಿಯಂ ಹೊಯ್ದು ಗುಂಜಿಯ ತೂಕವಿಕ್ಕಿ ಉರಿಸಲು ವಾಡೆಬಂಧ . . . ಹದಿಮೂಱು ಪ್ರಕಾರದ ಸನ್ನಿಪಾತ ಹರ, ಶೈತ್ಯೋಪಚಾರ ಮಾಡುವುದು. ಇದು ಸೂಚೀಮುಖರಸ (ವೈಪ್ರ. ೫೭). [ಸಂ.]

ಸೂಚೀವಿದ್ಧ (ನಾ). ೧. [ನಾಟ್ಯ] ಮೂವತ್ತೆರಡು ಅಂಗಹಾರಗಳಲ್ಲಿ ಒಂದು: ಅರಸೂಚೀ ವಿಕ್ಷಿಪ್ತಂ ಪಿರಿದಾವರ್ತಂ ನಿಕುಟ್ಟಮೂರೂದ್ವೃತ್ತಂ ಶಿರದಾಕ್ಷಿಪ್ತಾಹ್ವಯಮುಂ ಪರಿಕಿಸಲಿಂತುರದ ಮಂಡಲಂ ಕರಿಹಸ್ತಂ ಮಿಗೆ ಕಟೀಭಿನ್ನಮಂ ಕೇಳ್ ನಗೆಮೊಗದಳೆ ಮಾಡಿ ತೋಱೆ ಸೂಚೀವಿದ್ದದ ನೆಗಳ್ದಂಗಹಾರವೆನಿಕುಂ (ಲಾಸ್ಯರಂ. ೫-೧೩). ೨. ನೂರೆಂಟು ಕರಣಗಳಲ್ಲಿ ಒಂದು: ತಲಪುಷ್ಪಪುಟ, ಲೀನ, ವಿವರ್ತಿತ . . . ಸೂಚೀವಿದ್ಧ, ಹರಿಣಪ್ಲುತ . . . ಗಂಗಾವತರಣ - ಈ ನೂಱೆಂಟು ಕರಣಂಗಳ್ (ಲಾಸ್ಯರಂ. ೪-೪೨ ವ). [ಸಂ.]

ಸೂಚೀವ್ಯೂಹ (ನಾ). = ಸೂಚಿ ೪: ಆ ಮಹಾಬಾಹುಕನನಶ್ವತ್ಥಾಮನನು ಕೃತವರ್ಮಕರೆನಿಪ ಸನಾಮರನು ನಿಲಿಸಿದನು ಸೂಚೀವ್ಯೂಹವಳಯದಲಿ (ಕುವ್ಯಾದ್ರೋ. ೯-೨೩); ಅವನು ಕೌರವಸೇನೆಯನ್ನು ಶಕಟವ್ಯೂಹವಾಗಿ ರಚಿಸಿ ಅದರ ಹಿಂದೆ ಪದ್ಮವ್ಯೂಹವನ್ನು ಮಾಡಿ ಅದರೊಳಗೆ ಸೂಚೀವ್ಯೂಹವನ್ನು ಗರ್ಭೀಕರಿಸಿದನು (ವಚಭಾ. ೨೬೬). [ಸಂ.]

ಸೂಚೀಹಸ್ತ (ನಾ). [ನಾಟ್ಯ] ನಿರ್ದಿಷ್ಟವಿಷಯವನ್ನು ಅನುಮೋದಿಸಲು ಬಳಸುವ ಒಂದು ಹಸ್ತಮುದ್ರೆ: ನಾಗರಕಂ ವಿನೋದವಿಲಾಸಂಗೆ ನೀನೆಂದಂತೆ ದರ್ಪಕನ ದರ್ಪಂ ಬೆಂಗೆಯಿತ್ತಲಭಿವ್ಯಂಜಕಮಾದಪ್ಪುದೆಂದು ಸೂಚೀಹಸ್ತದಿಂ ಸೂಚಿಸಿ ತೋಱೆ (ಅನಂಪು. ೭-೯ ವ). 'ಸೂಚ್ಯಾಸ್ಯ' ಪರಾ. [ಸಂ.]

ಸೂಚ್ಯ (ಗು). ೧. ತಿಳಿಯುವಂತೆ ಮಾಡುವ; ತಿಳಿಸುವ. (ನಾ). ೨. ತಿಳಿಯ ಪಡಿಸುವುದು; ಸೂಚಿಸುವುದು. ೩. ಪ್ರಕಟಪಡಿಸುವುದು; ವ್ಯಕ್ತತೆ : ಕ್ರಿಯಾಗಿ ಯಿಂದ ತಿಳಿದ ಸುದ್ದಿಯನ್ನು ಸೂಚ್ಯವಾಗಿಯೇ ತಿಳಿಸಿದ್ದೇನೆ (ಮೂರುದಾ. ೧೩೬); ಬೇರೆ ಅರ್ಥಗಳು ವಾಚ್ಯಾರ್ಥಗಳಿಂದ 'ಸೂಚ್ಯ'ವಾಗಿ ಲಕ್ಷ್ಯಾರ್ಥವೆನಿಸುವುವು (ಕೈಪಿದಿ. ೧೭೬).

[ಸಂ.]

ಸೂಚ್ಯಗ್ರ (ಗು). ೧. ತುದಿಯು ಮೊನಚಾಗಿರುವ; ಚೂಪಾದ ತುದಿಯಿಂದ ಕೂಡಿದ. (ನಾ). ೨. ಸೂಜಿಯ ತುದಿ, — ಮೊನೆ: ಊರ ಬೇಡಿದಡೈದ ನಾವೆರಡೂರುಗಳನೇ ಕೊಡೆವೈ ನಿಜಧಾರುಣಿಯ ಕೊಡೆನೆಂದಲ್ಕೆ ಸೂಚ್ಯಗ್ರಸಮ್ಮತವ (ಕುವ್ಯಾಗ. ೮-೮). ೩. ಮುಳ್ಳು. [ಸಂ.]

ಸೂಚ್ಯಾಸ್ಯ (ನಾ). [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತಗಳಲ್ಲಿ ಒಂದು; ಹಾಗೆಯೇ ಸರಿ ಎಂದು ತೋರಿಸುವ ಸಂಕೇತ: ಚತುರಸ್ರ, ಉದ್ವೃತ್ತ, ತಲಮುಖ, ಸ್ವಸ್ತಿಕ, ವಿಪ್ರಕೀರ್ಣ, ಅರಾಳಕಟಕಾಮುಖ, ಅವಿದ್ಧವಕ್ತ್ರ, ಸೂಚ್ಯಾಸ್ಯ . . . ಲಲಿತ - ಈ ಮೂವತ್ತು ನೃತ್ತಹಸ್ತಂಗಳ್ (ಲಾಸ್ಯರಂ. ೨-೪೪ ವ). [ಸಂ.]

ಸೂಜಿ (ನಾ). ೧. ಚೂಪಾದ ತುದಿಯಿಂದ ಕೂಡಿದ, ಮೇಲ್ಭಾಗದಲ್ಲಿ ದಾರವನ್ನು ತೂರಿಸಲು ಅನುಕೂಲವಾಗುವಂತೆ ಸಣ್ಣರಂಧ್ರವನ್ನು ಉಳ್ಳ, ಬಟ್ಟೆಯನ್ನು ಹೊಲಿಯುವ ಲೋಹದ ಸಾಧನ; ಸೀವನಿ: "ಸೂಜಿಯದು ವಸನಬಂಧಿನಿಯಕ್ಕು" (ಮಂಗರಾ. ೬೧-೧೯); ಕಾಯ್ದು ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ (ಆದಿಪು. ೫-೮೫ ವ); ಸೂಜಿ ಹಿಂದ ಧಾರಧಾಂಗ ಕೊಳ್ಳದೊಳಗ ಜಾರಿಧಾಂಗ (ಗಂಗಾಶ. ೭೨-೧೨); ಬಂಗಾರದ ಸೂಜಿಯೆಂದು ಹಿಂಗದೆ ಕಣ್ಣು ಕುಕ್ಕಿಕೊಳ್ಳಬಹುದೇ? (ಗಾದೆ). ೨. ಚೂಪು ; ತೀಕ್ಷ್ಣತೆ: 'ಸೂಜಿಗೊಂಬು' ಪರಾ.೩. ಅಯಸ್ಕಾಂತ: 'ಸೂಜಿಗಲ್' ಪರಾ.೪. [ಅಶ್ವಶಾ] (ಕುದುರೆಯ) ನಾಲಿಗೆಯ ಕೆಳಭಾಗ (?): ತಾಲುಗೆಯುಂ ಕೆಬಗೆ ಸೂಜಿ(ಚಿ)ಯೆಂಬ ಪೆಸರಕ್ಕುಂ (ಅಶ್ವಶಾ. ೮೭-೫). [< ಸಂ. ಸೂಚಿ, ಸೂಚೀ]

ಸೂಜಿಕಲ್ 'ಸೂಜಿಗಲ್' ನೋ.

ಸೂಜಿಕಲ್ಲು 'ಸೂಜಿಗಲ್' ನೋ.

ಸೂಜಿಕಾಯಕ (ನಾ). ಬಟ್ಟೆ ಹೊಲಿಯುವ ಕೆಲಸ, — ಕಸುಬು: ಶಂಕರದಾಸಯ್ಯನಂತೆ ಸೂಜಿಕಾಯಕವಂ ಮಾಡಿ ಜಂಗಮಾರ್ಚನೆಯ ಮಾಡಬೇಕೆಂದು (ಭೈರಸೂ. I, ೧೦); ಸೂಜಿಕಾಯಕದ ಕುಶಲಕರ್ಮವು ಚುಚ್ಚುಮದ್ದಿನಂತೆ ಚುಟಕಿಯ ಕೆಲಸವಲ್ಲ (ನಲಮು. vii, ನಾಲ್ಕುಮಾತು). [ಸೂಜಿ + ಕಾಯಕ]

ಸೂಜಿಗ (ನಾ). ಒಂದು ಬಗೆಯ ಮೀನು: ಸೂಜಿಗ ನಗಲು ಹೆಲ್ಲರಂ . . . ಬೋಟೆ ಗಿಱಿಲುಗಳೆಂಬ ಹೊಳವಳಿಯ ಮೀನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು (ಹಚಕಾ. ೫-೪೬). [ಸೂಜಿ + - ಗ್ಗ]

ಸೂಜಿಗಣ್ಣು (ನಾ). (ದಾರವನ್ನು ಪೋಣಿಸಲು ಅನುಕೂಲವಾಗುವಂತೆ) ಸೂಜಿಯ ಮೇಲ್ಭಾಗದಲ್ಲಿರುವ ಅತಿಸಣ್ಣರಂಧ್ರ: "ಸೂಜಿಗಣ್ಣು ; ಅತಿ ಸಣ್ಣ ರಂಧ್ರ" (Needle's eye. ಇಂಕಸಾ). [ಸೂಜಿ + ಕಣ್ಣು (< ಕಣ್)]

ಸೂಜಿಗಲ್, ಸೂಜಿಕಲ್, ಸೂಜಿಕಲ್ಲು, ಸೂಜಿಗಲ್ಲು (ನಾ). ೧. ಕಬ್ಬಿಣವನ್ನು ಸೆಳೆಯುವ ಶಕ್ತಿಯುಳ್ಳ ಕಲ್ಲು; ಅಯಸ್ಕಾಂತ: "ಕರ್ಬೊನ್ನಲ್ಲೆಂದು ಸೂಜಿಗಲ್" (ಚತುನಿ. ೧೧೦). ೨. ಒಂದು ಊರಿನ ಹೆಸರು : ಅಯ್ಯವಗಾವುಣ್ಣುನ ತಮ್ಮಂ ಚಂಗಗಾವುಣ್ಣುಂ ಪುಸಿಗೆ ಪೇಸುವೊಂ ಪಿಸುಣ್ಗೆ ಕಾಯ್ದು ಸೂಜಿಗಲ್ಲ ಪಡುವಣ ದೆಸೆಯೊಳ್ . . . ಒಂದು ತೋಂಟವುವಂ ವಿದ್ಯಾದಾನ ಸತ್ರವಾಗೆ ಮಠಕ್ಕೆ ಕೊಟ್ಟುಂ (ಶಿಶಾ. IX-i, ೬೭-೧೦; 984). **ಸೂಜಿಕಲ್** : ೧. "ಕರ್ಬೊನ್ನಲ್ಲೆಂದು ಸೂಜಿಕಲ್" (ಕಶಪಾ. ೫೦-೫೬). **ಸೂಜಿಕಲ್ಲು** : ೧. ಸೂಜಿಕಲ್ಲು ಸೂಜಿಯನಱಸುವಂತೆ ಉಭಯಕ್ಕೆ ಬಾಯಿಲ್ಲದ ಕಚ್ಚುವ ತೆಱನ ನೋಡಾ (ಸಕವ. ಕ. I, ೧೧೦-೪೨೨); ಪೂರ್ವರೊರ್ವರ ಮನದಿಚ್ಛೆಗಿರದೊದಗುವ ದೇಹದಾಟ ಕರಮಸೆದುದು ಸೂಜಿ[ಪಾಶಾ. ಚ]ಕಲ್ಲ ಪುತ್ತಳಿಗಂಡ ಕರುವಿನ ಕರ್ಬೊನ್ನ ತೆಱದಿ (ಶ್ರೀಪಾಲ. ೨-೫೮); ಎರಡು ಸೂಜಿಕಲ್ಲುಗಳನ್ನು ತೂಗುಹಾಕಿ ಒಂದರ ಉತ್ತರಧ್ರುವವನ್ನು ಇನ್ನೊಂದು ಉತ್ತರ ಧ್ರುವದ ಬಳಿಗೆ ಒಯ್ದರೆ ಅದು ತಿರುಗಿಕೊಂಡು ದೂರ ಹೋಗುತ್ತದೆ (ಶಿಲ್ಪನಾ. ೨೨೨). ೩. ಒಂದು ಬಗೆಯ ಔಷಧಸಾಮಗ್ರಿ: ಆವರೆಕಡ್ಡಿಯನು ಸಣ್ಣನಾಗಿ ಕತ್ತರಿಸಿ ಜಜ್ಜುಗುಟ್ಟಿ . . . ಆ ಕಷಾಯದಲ್ಲಿ . . . ಕಲ್ನಾರು, ಸೂಜಿಕಲ್ಲು ಇವು ಪ್ರತ್ಯೇಕ ಗ ೪ ತೂಕವಂ ಚೂರ್ಣಿಸಿ ಹಾಕಿ (ಸಕವೈ. ೩೯೪); ಸೂಜಿಕಲ್ಲಂ ಸಿಂದೂರ ಮಾಡುವ ಕ್ರಮ — ಸೂಜೀ ಹಿಡಿಯುವಂತಹ ಸೂಜೀಕಲ್ಲನ್ನು ಮೂಱುದಿವಸ ನೆನೆಯಿಕ್ಕಿ (ಏವೈವಿ. ೫೭). **ಸೂಜಿಗಲ್ಲು** : ೧. ಸೂಜಿಗಲ್ಲಿದಿರ ಕಾರ್ಬೊನ್ನಂತೆ ತಿರುಗಿದೆಡೆಗಾ ಜವದೊಳೊಡದಿರುಗಿ ಬೆಂಡಾಗಿ ನಾರೀಸಮಾಜಮೆಸೆದುದು (ಚಲಪು. ೨೦-೨೧); ಶ್ರೀಮಹಾದೇವನ ಚರಣಾರವಿಂದಗಳಲ್ಲಿ ಸೂಜಿಗಲ್ಲಿನಂತೆ ಏರಕತ್ವವನುಳ್ಳಂತಹದೇ ಮಹಾತ್ಮನೆಂಬ ಶಬ್ದಕ್ಕರ್ಥ (ವಚಶಾ. II, ೧೮೫); ಲೋಹ ಚುಂಬಕಧರ್ಮವು ಒಂದು ಜಾತಿಯ ಕಬ್ಬಿಣದಲ್ಲಿರುತ್ತದೆ . . . ಈ ಜಾತಿಯ ಕಬ್ಬಿಣವು ಬೇರೆ ಕಬ್ಬಿಣದಂತೆ ಕಲ್ಲುಗಳಿಂದ ಹುಟ್ಟುತ್ತದೆ. ಆ ಕಲ್ಲುಗಳಿಗೆ ಸೂಜಿಗಲ್ಲೆಂದನ್ನುತ್ತಾರೆ (ಮುಂಬಯಿ. ೫-೨೨೯). [ಸೂಜಿ + ಕಲ್ಲ್]

ಸೂಜಿಗೊಂಬು (ನಾ). (ಸೂಜಿಯ ಹಾಗೆ) ಚೂಪಾಗಿರುವ ಕೊಂಬು, — ಕೋಡು: ಬಸಿದಸಿಯ ದಸಿಯನನುಕರಿಪ ಸೂಜಿಗೊಂಬುರ್ಚ ಸೀಟ್ಟ ಬಸುಱಿಂ ನಿಸದಂ ಬಿಸುನೆತ್ತರ ಪೊನಲುಂ ಕರುಳ ಸೋಗೆಯುಂ ಕವಿದುವವನಿಗಾ ಯತಿಪತಿಯಾ (ವರ್ಧಪು. ೩-೭). [ಸೂಜಿ + ಕೊಂಬು]

ಸೂಜಿಗೊಳ್ (ಕ್ರಿ). ಸೂಜಿಯಿಂದ ಚುಚ್ಚಲ್ಪಡು: ಸೂಜಿಗೊಂಡ ಪುಣ್ಣಿನಂತೆ ಕಣ್ಣ ಶೂಲೆಯಂತೆ ನಾಲಗೆಯ ಪುಗುಳಂತೆ . . . ಮಮ್ಮಲ ಮಱುಗಿಸುವ ಮಕ್ಕಳುಮಂ (ಧರ್ಮಾಮೃ. ೯-೨೩). [ಸೂಜಿ + ಕೊಳ್]

ಸೂಜಿಚುಚ್ಚು (ಕ್ರಿ). ೧. ಸೂಜಿಯನ್ನು ನಾಟಿಸು : ಸತ್ತ ಮೇಲೂ ಸಹ ಅವುಗಳಿಗೆ ಸೂಜಿ ಚುಚ್ಚುವುದು ಬಹು ಕಷ್ಟ (ಕೀಟಚಿ. ೬). ೨. ಸೂಜಿಯ ಮೂಲಕ ಔಷಧಿಯನ್ನು ಶರೀರದ ಒಳಹೊಗಿಸು; ಸೂಜಿಮದ್ದು ಹಾಕು: ಡಾಕ್ಟರನ್ನು ಕಂಡಕೂಡಲೆ ಸೂಜಿಚುಚ್ಚುವರೆಂದು ತಿಳಿದು ಮಗು ರಂಪಮಾಡಿತು (ರೂಢಿ). [ಸೂಜಿ + ಚುಚ್ಚು (< ಚುರ್ಚ್)]

ಸೂಜಿಮದ್ದು (ನಾ). ದೇಹಕ್ಕೆ ಸೂಜಿಯ ಮೂಲಕ ಕೊಡುವ ಔಷಧ; ಚುಚ್ಚುಮದ್ದು; ಇಂಜೆಕ್ಷನ್ನು: ಮನೆಯ ಹುಡುಗರೆಲ್ಲರು ಮತ್ತೊಮ್ಮೆ ಸೂಜಿಮದ್ದು ಮಾಡಿಸಿಕೊಂಡರು (ಊರುಕ. ೬೮); ಎಲ್ಲಕ್ಕೂ ಸೂಜಿಮದ್ದು ಚುಚ್ಚುವಂತೆ ಇದಕ್ಕೂ ಚುಟ್ಟ ಚರ್ಮದ ರಂಧ್ರಗಳನ್ನು ಹೆಚ್ಚಿಸುವ ವಿಧಾನವೂ ಅಲ್ಲಲ್ಲಿ ಬಳಕೆಗೆ ಬಂದಿದೆ (ನಂಬರು. ೩೯). [ಸೂಜಿ + ಮದ್ದು (< ಮರ್ದು)]

ಸೂಜಿಮಲ್ಲಿಗೆ (ನಾ). ಸಣ್ಣ ಆಕಾರದ, ಸೂಜಿಯ ಮೊನೆಯಂತೆ ಚೂಪಾಗಿರುವ ತುದಿಯುಳ್ಳ, ಒಂದು ಬಗೆಯ ಮಲ್ಲಿಗೆ: "ನವವಲ್ಲೀ - ಸೂಜಿಮಲ್ಲಿಗೆ, ಕುಟಜ" (ಒಪಧಿ. ೮೪); ದೇವದಾರಚಕ್ಕೆ . . . ಬಿಳಿ ಸೂಜಿಮಲ್ಲಿಗೆ ಬೇರು, ಗೋರೋಜನ, ಸುಜ್ಜಲ ಬೀಜ, ಹಸುರುಹಾವು - ಇವು ಪ್ರತ್ಯೇಕ ಗ ೧ ತೂಕವಂ ಕಲ್ಕವಂ ಮಾಡಿ ಹಾಕಿ ಕರವಾಕದಿಂದಿಳುಹಿ ಸರ್ವಾಂಗಲೇಪಂಗೈಯಲು . . . ಸಕಲ ಸನ್ನಿಪಾತವೂ ಗುಣವಕ್ಕುಂ (ಸಕವೈ. ೧೫೩). [ಸೂಜಿ + ಮಲ್ಲಿಗೆ]

ಸೂಜಿವಳೆಗಾಱ (ನಾ). ಸೂಜಿ, ಬಳೆ ಮುಂತಾದುವನ್ನು ಮಾರುವವನು: ಉಜ್ಜುಗಿಗರಂ ಗುರಿಗರುಟ್ಟಿಗರ್ಸುಪ್ಪಾಣಿಗರ್ಸೂಜಿವಳೆಗಾಱರು ಬೆಜ್ಜರ್ಪುರಾಣ ಪುರು ಷೋತ್ತಮರು ನೆರೆದರ್ಪ ಗುಜ್ಜರಿಯ ನಿಟ್ಟಿಸುತ್ತೈದಿದಳ್ಕಹದೇವಿ (ಮಹದೇಪು. ೨೮-೭). [ಸೂಜಿ + ಬಳೆಗಾಱ]

ಸೂಜಿವಾಲ (ನಾ). ಸೂಜಿಯಂತೆ ಚೂಪಾಗಿರುವ ಬಾಲ: ಹಿಡಿಕೆಯ ನಡು ಸೂಜಿವಾಲವಗ್ಗಡಕೋಪಂ ಸಿಡಿಲರವವಸಿಯ ಮೋಱೆಗಳಡಿಮುಂಚುವ ನಾಯ್ಗಳಂ ನೃಪಾಲಂ ಕಂಡಂ (ನಳಚಂ. ೬೭). [ಸೂಜಿ + ಬಾಲ]

ಸೂಜಿವಾಲಿಗ (ನಾ). ಸೂಜಿಯಂತೆ ಚೂಪಾದ ಬಾಲವುಳ್ಳದು : ಸಾಳುವನಭಂಗಂ ಜಾಯಿಲಂ ಸೂಜಿವಾಲಿಗಂ . . . ವೇಗಾಯ್ಕನೆಂದೆಂಬ ಕುನ್ನಿಗಳಂ ಹಾಸದೊಳಿಟ್ಟು ಕಾಡೊಡೆಯರಂದೆಯ್ದುತ್ತು ಕಾಂತಾರಮಂ (ದಶಕು. ೨-೧೦೮). [ಸೂಜಿವಾಲ + - ಇಗ]

ಸೂಜಿವೆಳಗು (ನಾ). (ಸೂಜಿಯಂತೆ) ತೀಕ್ಷ್ಣವಾಗಿ ಹೊಳೆಯುವ ಬೆಳಕು; ಕಣ್ಣು ಚುಚ್ಚುವ ಹೊಳಪು: ತೊರೆ ಹಾಡುತಿರೆ ಚುಕ್ಕಿ ಸೂಜಿವಳಗಿಂ ಚುಟ್ಟ ಮನಕೆ ಬಗೆಬಗೆ ಭಾವಗಳ ಹಚ್ಚೆಯೊತ್ತೆ (ಮಲೆದೇ. ೨೬-೧). [ಸೂಜಿ + ಬೆಳಗು]

ಸೂಜ್ಞ (ನಾ). ಚೆನ್ನಾಗಿ ತಿಳಿದವನು; ಬುದ್ಧಿವಂತ: ಈ ಪ್ರಶ್ನೆಯ ಅರ್ಥವನ್ನು ಸೂಜ್ಞರಿಗೆ ವಿಸ್ತರಿಸಿ ಬರೆಯುವ ಕಾರಣವಿಲ್ಲ (ಗಂಮಾಯಿ. ೨೧೧). [< ಸಂ. ಸುಜ್ಞ]

ಸೂಟ್ಟ, ಚುಟಿ, ಚೂಟ್ಟ, ಚೂಟ್ಟು, ಚೂಡ್ಡ, ಸುಟಿ, ಸೂಟ್ಟು, ಸೂಠಿ (ನಾ). ೧. ವೇಗ; ರಭಸ: "ಸೂಟಿಯೆನೆ ವೇಗಾರ್ಥಂ" (ಭಾರನಿ. ೩೩); ಕಟ್ಟಿದ ಗೆಜ್ಜೆಯ ಸೂಟಿಯ ರವದ ಪೊರ್ಕುಳ ಗಂಟೆಯ . . . ಚಾರುತರ ಭೂಪಣಂ ಭೀಷಣಮಾಗೆ . . . ಗಗನಮನಡರ್ವ ಜಾತ್ಯಶ್ವಂಗಳ ವಳಯಮಂ (ಗಿರಿಕ. ೬-೫೫ ವ); ಸುರನಿವಹ ಸುಡಲಾಹವವನೆನುತ್ತಿದಿರು ಸೂಟಿಯಲಿ (ಕುಮಾಕ. ೧೮-೩೯); ಸಾರತಿಗಯ್ಮೆಯೊಂದು ಜಾಣ್ಮೆಯಿಂ ಸೂಟಿಯಿಂ ನೂಂಕೆ ಪಾಱೆ ನಾಡಿಂಗೆ ಧೀಂಕಿಟ್ಟುವೋ ಎನೆ ವೆವನಜವಮಂ ಮುಂಚಿ ವಾಜಿಗಳೋಟಂಗೊಂಡುವು (ರಾಮಾಶ್ವ. ೩೦-೧). ೨. ಚುರುಕು; ಲವಲವಿಕೆ: ನೋಡು, ಎಷ್ಟು ಸೂಟಿಯಾಗಿದ್ದಾನೆ ಹುಡುಗ! (ನಿಶಉ. ೩೯); ತಂದೆಗೆ

ತನ್ನ ನಡತೆಯಿಂದ ಅಸಮಾಧಾನವಾಯಿತೇನೋ ಎಂದು ಕುಗ್ಗಿದ ವೆಂಕಟಸುಬ್ಬಯ್ಯ ಮತ್ತೆ ಸೂಟಿಯಾಗಿರುವನು (ಹಂಗೀತ. ೮೩). ೩. ಉಪಾಯ ; ಯುಕ್ತಿ : ತೋಟಿಯರ್ ತಜ್ಜಿದಿಕ್ಕಿದಿರಾಂಪ ದೈತ್ಯವಧೂಟಿಯ ಕರೆದು ತನ್ನೊಡನೆ ಸೂಟಿಯೊಳ್ ಸಾವಂಚೆಕೆಯ್ಯ ಖಡ್ಗವನಿಕ್ಕಿ ದಾಟಿಸಿಕೊಂಡಳೆಲ್ಲರನು (ಮೋಹತ. ೩೩-೩೮); ಸೂಟಿಯರಿದಡಿಗಡಿಗೆ ಸೂಟಿಸುವ ಮಾತುಗಳೊ ಸುಧೆಯ ಜೈವಾತಪಗಳೊ . . . ಎಂದು ವಿಟಜನರು ಮೆಚ್ಚುವೊಲು (ವಂಕಾರಾ. ೫-೬-೩೪); ಇಂದು ಸೂಟಿ ತಪ್ಪಿ, ಸಿಕ್ಕಿಬಿದ್ದು ಸಪ್ಪಗಾಗಿ ಮನೆಗೆ ಬಂದಿದ್ದರು (ಬಳುಮ. ೧೭). ೪. ಚಳಕ ; ಕೌಶಲ : ಸರಳ ಸೂಟಿಯ ತೋಲಿಸಿದಡಬ್ಬರಿಸಿ ಫಲುಗುಣನ್ಮೈದುಬಾಣದಲರಿಭಟನ ಚಾಪವನು ಕಡಿ ಮೂಱಾಗಿ ಖಂಡಿಸಿದ (ಕುವ್ಯಾಭೀ. ೯-೪೬). ೫. ಹರಿತವಾದುದು; ತೀಕ್ಷ್ಣವಾದುದು : ಕೋಟಿಯ ತೆನೆಯೆಡೆಗಂಡಿಯೊಳ್ ತಲೆಯಿಟ್ಟು ನೀಟಲಿ ನೋಡುವರುಗಳ ಸೂಟಿಯ ಬಾಣಗಳಿಂದಿಟ್ಟು ಜೀವವ ದಾಟಿಸಿದರು ಯಮಪುರಿಗೆ (ತಂಸವಿ. ೧೮-೭೬). ಚುಟಿ : ೫. ಇಪತ್ತಿನ ಬಿಸಿಲು ತುಂಬಾ ಚುಟಿಯಾಗಿದೆಯಲ್ಲಾ? (ಗಂಗಾವ. ೧೩೯). ಚೊಟ್ಟಿ₁ : ೨. ಚೊಟಿಯಲಿ ಉದರದಾ ಯಾತ್ರೆಯೇ ಮಹಾಯಾತ್ರೆ ಬೂಟಕಾತನದಿ ಅನ್ಯತ ವೇಳ್ಪುದೇ ವಂತ್ತಾ (ವಾದೀ. ೧೨-೩); ಈಗ ಮಾತ್ರ ನೀವು ಚೂಟಿಯಾಗಿ ಓಡಾಡಬೇಕು (ಪುನರು. ೨೦೫); ಮಗು ಅಸಾಧ್ಯ ಚೂಟಿ (ತಾಯಿಕ. ೧೦೩). ಚೊಟ್ಟು₂ : (ಪ). ಚೊಡ್ಡಿ₂ : ೧. ಚೂಡಿಯೊಳ್ಕಿಡಲು ಪೊಂದೇರು ಸತ್ಕರದಿ ಹಾರಿ ಧಾಟಿಯಿಂದ್ಮತಂದು (ವಂಕಾರಾ. ೬-೩೯-೯). ಸುಟಿ : ೧. ಅಖಂಡಿತ ಬಲಂಬೆರಸು ಬಿಟ್ಟ ಸುಟಿ[ಪಾಠಾಂ. ೮]ಯಲ್ಲಿ ಬಿಡುದಾಣಮಂ ಬಿಡಲೊಲ್ಲದೆ (ಸಮ್ಮೇ. ೮-೨೬); ಲಘು ಲಕ್ಷ ಸು[ಪಾಠಾಂ. ಶೂ]ಟಿಯೊಳಿೂದಗಿ ಪೊಕ್ಕು ಪೊಡದಿಜಿದೊಗೆದು ಸಂಗ್ರಾವಮುಖದೊಳು ಬಗೆಗುಂದಿಸುವನು (ಭೂರಿ. ೩-೧೦). ೨. ಕುಟಿಲಾಳಕಿಯರ . . . ಮೆಯ್ಯನಿರ ಸುಟಿಯಿಂದ ಗುಡಿಗಟ್ಟಿಸುವ ಮಾಗಿಯ ಹಿಮ ವಿಟನಂತೆ ಕಣ್ಗೆ ರಂಜಿಸಿತು (ಮೋಹತ. ೪-೪೫); ಹುಡುಗ ಬಹಳ ಸುಟಿಯಾಗಿದ್ದಾನೆ (ಅಲಮ. ೬೬); ಚಿಗರೆಯ ಸುಟಿ, ಹಾವಿನ ನಯ, ಗರುಡನ ಠೀವಿ . . . ಇಂಥ ಯಾವ ಬೆಲೆ ಯಾವ ಗುಣ ಇದೆ ಮನುಷ್ಯನಲ್ಲಿ? (ವಿಚಾವಾ. ೧೦). ೬. ತ್ವರಿತ; ಶೀಘ್ರ : ನನ್ನ ಸೋದರಳಿಯ ಚಿ. ಶಂಕರನು 'ನೆಲ – ಮುಗಿಲ'ನ ಮುಖಪುಟವನ್ನು ಸುಟಿಯಾಗಿ ರೇಖಿಸಿಕೊಟ್ಟನು (ನಲಮು. XI, ನನಸಿಯ ನುಡಿ). ೭. ಕುರುಹು; ಚಿಹ್ನೆ; ಲಕ್ಷಣ : ಎಟ ವಿದೂಷಕ ನಾಗರಿಕ ಪೀಠಮರ್ದನ ಪಟುವಹ ನಾಲ್ಕು ಜಾತಕದ ಸುಟಿಯುಳ್ಳ ಶೃಂಗಾರಪುರುಷರು ಹರುಮೋತ್ಕಟದೊಳಗ್ಮತಂದರಾಗ (ಕಂಸವಿ. ೨೦-೬೨); ಕಠಿಣಧೂಮವು ಪುರದೊಳಿಸಗಲು ಲಟಕಟಿಸಿ ಜನನಿವಹಗೂಳಿಯ ಸುಟಿಯಳಿದು ತಮತಮಗೆ ಪೊತ್ತಿದು ದಿಗುದಿಗಾಂತರಕೆ (ಅಂಬಿಕಾ. ೪೪-೩೬). ಸೂಟಿ₂ : ೮. ಸುಳಿವು : ತಂಗಾಳಿಯ ಸೂಟಿನಿಂದ ನೀರಿನ ಸ್ಥಳದ ಕಡೆಗೆ ಕುದುರೆಯು ಧಾವಿಸಿ ಕೆರೆಯ ದಂಡಿಯನ್ನು ಹತ್ತಿ ಹಾಗೇ ಕೆಳಗೆ ಇಳಿಯಹತ್ತಿತು (ಬಳಭಾ. ೪೪). ಸೂಠಿ : ೧. ಗರುಡಿಯೊಳಂಕದೋಜೆಗಳ ತೋಳ ಲಯಂಗಳ ಸೂಠಿ ವಾಹಳೀತುರಗಖುರ ಪ್ರಹಾರಗತಿಯೊಳ್ (ಅಸಂಪು. ೧-೭೯); ತೆರಳಿದನು ನಿನ್ನಾತ ಸೂಠಿಯೊಳುರವಣಿಸಿತಾ ತೇರು (ಕುವ್ಯಾದ್ರೋ. ೯-೪೦); ಬಿಟ್ಟ ಸೂಠಿಯೊಳಾ ನೇಮಿಯ ಬಲ ಬೆಂಗೊಟ್ಟೋಡೆ ರಾಮನ ಭಟರು ತಟ್ಟುಗೆಡಹಿ ರಾವುತರ ಹಿಡಿದರು (ಕುರಾಸಾಂ. ೨೦-೭೧).

ಸೂಟಾಸೂಟಿ, ಸುಟಿಸುಟಿ, ಸುಟುಸುಟಿ, ಸುಟ್ಟಾಸುಟ್ಟಿ, ಸೂಠಾಸೂಠಿ (ದ್ವಿರುಕ್ತಿ) : ೧. ವೇಗ; ರಭಸ : ತೇರುಗಳ ಸೂಟಾಸೂಟಿಯಲಿ ಮಿಗೆ ಚಾರಿವರಿಸುತ ಹೊಕ್ಕ ಮೈಯಲಿ ಕಾರಮಳೆ ಕವಿವಂತೆ ರಕ್ಕಸ ರಥಿಕರುರವಣಿಸಿ (ತೊರಾ. ೬-೨೧-೧೫). ೨. ಚುರುಕು; ಲವಲವಿಕೆ : ನೀಳಕಾಯನಾದ ಸುಟಿಸುಟಿಯಾದ ತಳ್ಕಿನ ಒಬ್ಬ ಸಾಧುವನ್ನು ತಮ್ಮ ಮುಂದಿರಿಸಿಕೊಂಡು . . . ಭಕ್ತರು ಭಜನೆ ಮಾಡುತ್ತ ಬಂದರು (ಅಳಿ. ೬); ಒಡನೊಯ್ಯನೆ ಗಜವೇಡೆಯದೊಳಗದ ಬಿಡದಬ್ಬಿಸಿಕೊಂಡು ಬಂದು ತಡೆಯದೆ ಸುಟ್ಟಾಸುಟ್ಟಿ[ಪಾಠಾಂ. ಸೂಠಾಸೂಠಿ]ಯೊಳಗೆ ಬಿಟ್ಟು ಪೊಡವಿಯ ಬರದ ಬೆರಲೊಳು (ಕುರಾಸಾಂ. ೯-೯೪); ಸೂಠಾಸೂಠಿಯಲಿ ಕೈದೋಱಿದನು ಪಾರ್ಥ (ಕುವ್ಯಾಕ. ೨೩-೧೨). ೩. ಓರಣ; ಅಚ್ಚುಕಟ್ಟು : ಅನಂತಕೃಷ್ಣ ಸುಟುಸುಟಿ ಉಡುಗೆಯಲ್ಲಿ ಪ್ರತ್ಯಕ್ಷನಾದ (ಒಂಚಿದ. ೧೬೯). ಸೂಟಿಮಾಡು = ಈಡುಮಾಡು; ಗುರಿಮಾಡು : ರನ್ನದ ಕಾಲುಂಗುರರವಗಳಿಂದ ರಾಜೇಂದ್ರನನ್ನು ರತಿಪತಿಯಾದ ಸುಮಶರನ ಸುಮಬಾಣಗಳಿಗೆ ಸೂಟಿಮಾಡುತ್ತ (ಸೌಗಂಧಿ. ೪೮೮-೨). [ದೇ. ॥ ತಮಿ. ಚುಟ್ = ಬುದ್ಧಿವಂತ; ಚೂಟ್ಟಿಕ್ಕೈ; ಮಲ. ಚುಟ್ಟಿ; ತುಳು. ಚುಟಿ, ಸುಟಿ; ತೆಲು. ಸೂಟಿ]

ಸೂಟಿ₂, ಚೊಟ್ಟಿ₃, ಸೂಟು₂ (ನಾ). ೧. ರಜೆ; ಬಿಡುವು : ನಾಳೆಯಿಂದ ಸಾಲೆಗೆ ಸೂಟಿಯಲ್ಲವೆ? (ಮೂಸುದಾ. ೧೨೮); ಇಂದು ಸಾಲೆಗೆ ಸೂಟಿ (ಜಯಂತ. ೨); ಮೇ ತಿಂಗಳ ಸೂಟಿಯಲ್ಲಿ ನಾನು ಪರೀಕ್ಷೆಯನ್ನು ತೀರಿಸಿಕೊಂಡು ಊರಿಗೆ ಬಂದ (ಚಲುನ. ೩೦). ಚೊಟ್ಟಿ₃ : ೨. (ಸಾಲ, ದಂಡ ಮೊದಲಾದುವನ್ನು) ಬಿಟ್ಟು ಬಿಡುವುದು; ಸೋಡಿ ಬಿಡುವುದು : (ಪ). ಸೂಟು₂ : ೨. ರೈತಗು ಅವನಿಗೆ ಹೆದರಿ ಲಾವಣಿಯಲ್ಲಿ ಸೂಟು ಕೂಡ ಬೇಡುತ್ತಿರಲಿಲ್ಲ (ಗಂವಾಯು. ೫೪); ಅವನು ದಯಾಳುವಾದ್ದರಿಂದ ಎಷ್ಟೋ ಕುಳಗಳಿಗೆ ಸೂಟುಬಿಟ್ಟನು (ಗುರುಪ್ರ. ೬). 'ಸೋಡಿ' ಪರಾ. [← ಹಿಂ. ಛುಟ್ಟೀ; ಮರಾ. ಸುಟೀ, ಸೂಟ್]

ಸೂಟಿವರ್ (ಕ್ರಿ). ಚುರುಕಾಗಿ ಬರು; ಲವಲವಿಕೆಯಿಂದ ಬರು : ಭೂಪಾಳ ಲೋಳ ದ್ಯುಗ್ಮೀನಂ ತನ್ನ ಲಾವಣ್ಯದ ತಿಳಿಗಡಲೊಳ್ಮುಟ[ಪಾಠಾಂ. ಳು]ವಂದಾಡ ಬಂದಳ್ . . . ಕಾಂತೆಯೊರ್ಬಳ್ (ಲೀಲಾವ. ೬-೫೦). [ಸೂಟಿ₁ + ವರ್]

ಸೂಟು₁ 'ಸೂಟಿ₁' ನೋ.

ಸೂಟು₂ 'ಸೂಟಿ₂' ನೋ.

ಸೂಟಿ, ಚೂಡಿ₁, ಸೂಡಿ₁ (ನಾ). ೧. (ಒಣಗಿದ ತೆಂಗಿನ ಗರಿ ಮೊದಲಾದುವುಗಳಿಂದ ಮಾಡಿದ) ದೀವಟಿಗೆ; ದೊಂದಿ; ಪಂಜು : ಗೊರವಯ ಕಟ್ಟೆ ಸೂಟಿಗಳು ಉರುವುತಿಹವು (ಜ್ಞಾನಚ. ೧೨-೧೦೦); ಬೇಗ ಬೇಗನೆ ತೆಂಗಿನ ಮಡಲಿನ ಸೂಟೆಯೊಂದನ್ನು ಉರಿಸಿಕೊಂಡು ರಾತ್ರೋರಾತ್ರಿ ಹೊರಟೇ ಬಿಟ್ಟಿದ್ದರು (ಚಾಯು. ೬೧); ಬೆಳಗಿನ ಮೂರು ಗಂಟೆಗೇನೆ ನಾವು ಕೈಯಲ್ಲಿ ಸೂಟೆ ಹಿಡಿದು ಹೊರಟೆವು (ಮುಲಿಮಾ. ೧೦). ೨. ಪಂಜಿಗಾಗಿ ಉಪಯೋಗಿಸುವ ತೆಂಗಿನ ಗರಿಯ ಮೇಲ್ಭಾಗ : ಒಂದು ಐದಾರು ತೆಪ್ಪರಿಗೆಯ ಸೂಟೆಯನ್ನೂ ಒಯ್ಯುವ (ಕೃಮೂಸ. ೫೪). ಚೂಡಿ₁ : ೧. ಕಗ್ಗತ್ತಲೆಯಲ್ಲಿ ಕೈಯೊಳಗೆ ಉರಿಯುವ ಚೂಡಿಗಳನ್ನು ಹಿಡುಕೊಂಡು ಡವಿಗೆಯ ಮೇಲೆಯೇರಿ ಹುಟ್ಟುಗಳನ್ನು ಸಮಾಪಿಸುವರು (ಕಭಾಗ. ೬೬). ಸೂಡಿ₁ : ೧. ಸಮ್ಮಲಿ ಥಾಳೀವ – ಸೂಡಿವೊತ್ತಿಸಪಟ್ಟನಂತೆ . . . ಬೇಯುತ್ತಿರ್ದೊನಾಗಿ (ಪಡ್ತಾರಾ. ೧೩೬-೬); ಗುರುದತ್ತಮುನೀಶ್ವರನಂ ಕರಮಲ್ಲದೆ ಮುನಿದು ಸೂಡಿ ಪೊತ್ತಿಸಿ ಸುಟ್ಟುರಿ (ಧರ್ಮಾಮೃ. ೮-೯೦); ಒಂದು ಸೂಡಿ ಹಿಡಿದು ನಿಮ್ಮನ್ನು ನಮ್ಮ ಭಟ್ಟರ ಮನೆಯವರೆಗೆ ಮುಟ್ಟಿಸಿ ಬರುತ್ತೇನೆ (ಚಟ್ಟಜೀ. ೪); ಅವರಿಬ್ಬರೂ ಹಿಡಿದ ಸೂಡಿಯ ಬೆಳಕಿನಲ್ಲಿ ನಮ್ಮ ಪಯಣ ಮುಂದುವರಿಯಿತು (ಮೂಕಜ್ಜಿ. ೭೧).

[ದೇ. ॥ ತಮಿ. ಚೂಟ್ಟು; ಮಲ. ಚೂಟ್ಟಿ, ಚೂಟ್ಟು; ತುಳು. ಚೂಟಿ, ತೂಟೆ. / ಪ್ರಾ. ಚುಡುಲೀ./ ಮರಾ. ಚುಡಾ, ಚುಡೀ, ಸೂಂಡೆ]

ಸೂಠಿ 'ಸೂಟಿ₁' ನೋ.

ಸೂಡ₁ (ನಾ). ಧರಿಸಿರುವವನು : ಪಿತ್ತನೆ ವೆಲೆಸೂಡನೆ . . . ಸತ್ಯನೆ ಜಯವೆಂದು ನಂಬಿ ಪಾಡಿದನಾಗಳ್ (ಕ್ರಿಪು. ೨-೧೦೯). [ಸೂಡು₁ + -ಅ]

ಸೂಡ₂ (ನಾ). [ಸಂಗೀತ] ಹಾಡು; ಗೀತ : ಸೂಡ ಎಂಬ ಈ ದೇಶೀಶಬ್ದವು ಹಾಡನ್ನು ನಿರ್ದೇಶಿಸುತ್ತದೆ (ಚತುಪ್ರ. ೭೦). [ದೇ. ॥ ತೆಲು. ಸೂಳ]

Δ ಸೂಡಂಗ 'ಸೂಡಗ' ನೋ.

ಸೂಡಗ, ಸೂಡಂಗ (ನಾ). ಒಂದು ಬಗೆಯ ಬಳೆ, -- ಕಡಗ (?) : ನೇವುರದ ಭಾವಕಿಗೆ ಸೂ[ಪಾಠಾಂ. ಪಾ]ಡಗದ ಪರುವಕ್ಕೆ ಉಡಿಗೆಯ ಮೃಡಾಣಿಗೆ (ಗಿಂಕ. ೩-೯೧ ವ); ಬಿಗಿದು ಕಾಂಚೀದಾಮಮಂ ಲಲನೆಗೆ ಮಿಸುಪ ಭುಜವಳಿಯ ಭುಜಕೀರ್ತಿಗಳನಂಕಿಸಿ ಕಡಗ ಕಂಕಣ ಸ್ಫೂಡಗವನಿಕ್ಕಿ (ಬಸವ. ೪-೩೬); ಉಡಿದು ಬಿದ್ದವು ಸೂಡಗವು ಬಿಗುವಡಗಿ ಕಳೆದವು ತೋಳಬಂದಿಗಳು (ಕುವ್ಯಾಗ. ೧೧-೧೯). Δ ಸೂಡಂಗ : ದಾಡಿಮದ ಸೂಡಂಗದೊಳಂ ಕರ್ಣಕಾರದ ಪೂರದೊಳಂ ಪದ್ಮಕರ್ಣಿಕೆಯ ಮುದ್ರಿಕೆಯೊಳಂ (ನಾಗಕು. ೩೦-೮೭ ವ); ಹೂವಿನ ಸೂಡಂಗ ಮೊದಲಾದ ತೊಡಿಗೆಯ ಭೂವರನಿಗೆ ತೊಡಿಸಿದರು (ಆಚಾಸಾಂ. ೮-೧೧೫). 'ಚೂಡಕ' ಪರಾ. [ದೇ. ॥ತಮಿ. ಚೂಟಕಮ್; ತೆಲು. ಸೂಡಿಗ; ತುಳು. ಚೂಡ, ಚೂಡಗ./ ಪ್ರಾ. ಚೂಡ./ ಸಂ. ಚೂಡಾ]

ಸೂಡಿ₁ 'ಸೂಟೆ' ನೋ.

ಸೂಡಿ₂ 'ಸೂಡು₂' ನೋ.

ಸೂಡಿಕಟ್ಟು 'ಸೂಡುಕಟ್ಟು' ನೋ.

ಸೂಡಿಗ (ನಾ). (?): ಶ್ರೀವಿಮಲಚಿತ್ತಂಬ ಲಕ್ಷಣಿಕೆಯಂ ಕೊಳ್ಳುತೀ ವಿಶೇಷದ ಜಗತ್ತೆಂಬ ಚಿತ್ರವನೊಲ್ದಹೋ ವಿರಚಿಸುತ್ತ ಕಂದೆಱವ ಸೂಡಿಗನು ತಾನೆಂಬ ಸಮದೃಷ್ಟಿ ಪ್ರಭೆ (ವೀತಪು. ೫-೧-೮). [ಸೂಡು, + - ಇಗ]

ಸೂಡಿಗಂಟು (ನಾ). (?) : ಸೂಡಿಗಂಟು, ಕೋಡಿನೀರ್ (ಶಬ್ದಾಸು. ೮೨ ಪ್ರಯೋ) [ಸೂಡಿ, + ಗಂಟು]

ಸೂಡಿಸು (ಕ್ರಿ). ೧. ತೊಡಿಸು ; ಧಾರಣೆ ಮಾಡಿಸು : ತನಗೊಲ್ದು ಮಾಲೆಯಂ ಸೂಡಿಸಿದಾತನೀತಂ (ಪಂಪಾಮಾ. ೩-೬೧). ೨. (ಛತ್ರಿಯನ್ನು ಬಿಚ್ಚಿ) ಹಿಡಿದು ಕೊಳ್ಳು : ಗಾಡಿ ನಿಂತಿತು, ಹಿಂಭಾಗದಿಂದ ದೇವಯ್ಯನೂ ಮುಕುಂದಯ್ಯನೂ ಕೊಡೆ ಸೂಡಿಸಿಕೊಳ್ಳುತ್ತಲೆ ಹಾರಿದರು (ಮಲೆಮ. ೫೪೬). [ಸೂಡು, + - ಇಸು,]

ಸೂಡು₁ (ಕ್ರಿ). ೧. (ಹೂವು ಮುಂತಾದುವುಗಳನ್ನು) ಮುಡಿ ; ಧರಿಸು; ತಾಳು : ''ಸೂಡು – ಪುಷ್ಪಧಾರಣೇ, ತೃಣಾದಿ ಪೂರೇ ಚ (ಹುಲ್ಲು ಮೊದಲಾದವುಗಳ ಕಂತೆ)'' (ಶಮಧಾ); ಸೂಡುವೆನೆಂಬುದಲ್ಲದಣಮಾಗದು ಸೂಬ್ಸನಮೋಘಮೆಂಬುದುಂ (ಕವಿರಾ. ೨-೧೦೩); ಮಗಮಗಿಸುವ ನವಮೃಗಮದದಗುರುವ ಮಳಯಜದ ಕಂವುಮಂ ಸೂಡಿದ ಬಾಸಿಗದ ಪೊಸಗಂಪುಮಂ ನೆಱೆದುಗಿಬಗಿವಾಡಿದುವು ಚಮರರುಹ ಪವನಂಗಳ್ (ಆದಿಪು. ೯-೪). ೨. ಇಟ್ಟುಕೊಳ್ಳು; ಇರಿಸಿಕೊಳ್ಳು: ಮಸೆ ಮುಟ್ಟದ ಮಹಂತನ ಬೇಡುವೆನಾತನ ಕರುಣವನು ಪಾದವ ನೊಸಲಲ್ಲಿ ಸೂಡುವೆ (ಅವಚಂ. ೫೫೧-೧೧೪೫); ಮುಕುಳಿತಕರಾಬ್ಜಮಂ ಮಸ್ತಕದಿ ಸೂಡಿ ನಡೆಯಡಿಗಳಿಂ ಬರೆ ಬರುತ್ತೆ (ನವಮೋ. ೨೧-೫೮). ೩. (ಮಾಲೆ, ಹಾರ ಮೊದಲಾದುವನ್ನು) ತೊಡಿಸು; ಹಾಕು: ಬಡವಂಗೇನುಮಲ್ಲದೊಂಗೆ ಮಾಲೆಯಂ ಸೂಡಿದಳೆಂದು ಸಭಾಕ್ಷೋಭಮಾಗಿ (ವಡ್ಡಾರಾ. ೪೧-೬); ಬೆಲ್ಲಿದಿರ್ದ ರೂಪು ದೃಷ್ಟಿಗೆ ವರೆ ಪಾಂಡು ರಾಜನನೆ ಕುಂತಿ ಮನಂಬುಗೆ ಮಾಲೆಸೂಡಿದಳ್ (ಪಂಪಭಾ. ೧-೧೦೬); ಹೂಮಾಲೆ ಸೂಡುವೆವು ಕೊರಳಿಂಗೆ (ಕೋಗಿಲ. ೪೧-೧೯). ೪. ಹೊಂದು; ಪಡೆ : ನಿರ್ವಿನೀತರಾ ಕಿಯೂ ಮಗನ್ದಿರ್ಕಾಡುವಟ್ಟಿಯರಿನ್ದಮ ವಲ್ಲವಂಸರಿಂದಂ ಕೊಂಗೂಣೆ ಪಟ ಸೂಡಿದೋರ್ (ಎಇ. VI, ಚಿಕ್ಕಮ. ೫೦-೨; ಸು. 480?); ಅಮೃತಕಲೆಯ ಸೂಡಿದವನಂಬಲಿ ಯನುಂಬನೇ (ಅವಚಂ. ೧೫೬-೧೯೦); ದೈನ್ಯಮಂ ಸೂಡದೆ ಪರವಧುವಂ ನೋಡದೇ ನೊಂದುಮಂ ಬೇಡದೆ (ರಕ್ಕಾಶ. ೭೨); ಗಣಪರ್ವಮಂ ರಚಿಸಿ ಸೂಡಿದರು ಸತ್ಕೀರ್ತಿಯ (ಧಾವಚಂ. ೫-೨೭). ೫. ಹೊತ್ತುಕೊಳ್ಳು; ಹೊರು: ಈಡಿಲಿದ ಪಕ್ಕದಲಿ ಸೇನೆಯ ಸೂಡಿ ತಂದಿಳುಹಿದನು ನಾಯಕವಾಡಿಗಳುಸಹಿತುಬ್ಬರಿವ ಸಾಗರದ ತೀರದಲಿ (ತೂರಾ. ೪-೧೧-೨೧). ೬. ಗಂಟು ಕಟ್ಟು; ಸೇರಿಸಿ ಕಟ್ಟು : ಅಂತು ಕಾಡುಗುಮೆ ಲೋಕಮನಿಂದ್ರಂಗಂತು ಮಾಡುಗುಮೆ ಬನ್ನಮನೋವೋ ಅಂತು ಸೂಡುಗುಮ ಕೇಸುರಿಯಂ ಪೇಟಂತು ಕೂಡುಗುಮ ಬೀರಮದಾರ್ಗಂ (ಕಾವ್ಯಾವ. ೩೬೧); ಸೂಡುತಲಿ ಬಿಡುಜಡೆಗಳನು . . . ಜಪತಪಸಮಾಧಿಯ ಮಾಡುವವರಾ ಮಾಯೆ ಬರಲೆದ್ದೊಡಿದರು ಹುಲಿಗಂಡ ಹುಲ್ಲೆಗಳಂತೆ (ಪ್ರಭುಲೀ. ೭-೪೫). ೭. (ಛತ್ರಿಯನ್ನು ಬಿಚ್ಚಿ) ಹಿಡಿ : ಬಿಸಿಲಿನ ಡಾವರ ಅತಿಯಾಗಿದ್ದರೂ ಆತನು ತಲಗೆ ಟೋಪಿಯನ್ನೂ ಹಾಕಿರಲಿಲ್ಲ ; ಕೊಡೆಯನ್ನೂ ಸೂಡಿರಲಿಲ್ಲ (ಕಾವೂರು. ೧). ೮. ಮೂಡು; ಕಾಣಿಸಿಕೊಳ್ಳು: ಸೂಡಲುದಯಾದ್ರಿಯೊಳ್ ಸೂರ್ಯ ಕತ್ತಲೆವೊತ್ತವೋಡಲಾ ಕೌರವಂ ಸರ್ವಸನ್ನಾಹದಿಂ ನಾಡೆರೆಯರೆಲ್ಲರಂ ಬರಿಸಿ ಪೇರೊಡ್ಡೋಲಗವನಿತ್ತನು (ಲಕ್ಷ್ಮೀಭಾ. ೫-೩-೨೩); ನೆನೆವೆ ಹಕ್ಕಿ ಹಾಡೆ ಇರುಳು ಚುಕ್ಕಿ ಸೂಡೆ ಹೊನಲು ದನಿಗ್ಯೆಯೆ ಹಳುವು ಮರ್ಮರಿಸೆ ಸುಗ್ಗಿ ಗಾಳಿಯಾಡೆ (ಗೋಕುನಿ. ೫೨-೨೨).

[ದೇ. ॥ ತಮಿ. ಚೂಟು, ಚೂಟ್ಟು; ಮಲ. ಚೂಟುಕ; ಕೊಡ. ಚುಡ್; ಪರ್ಜಿ. ಚೂಂಡೆ]

ಸೂಡು₂, ಸೂಡಿ₂ (ನಾ). ೧. ಕಂತೆ ; ಕಟ್ಟು ; ಹೊರೆ : ನಕುಳಸಹದೇವರುಮಂ ಶಲ್ಯಂ ವಿರಥರ್ಮಾಡಿ ಪಿಡಿದುಕೊಂಡು ಪುಲ್ಲ ಸೂಡನೀಡಾಡುವಂತೆ ತನ್ನಳಿಯಂದಿರಿ ರ್ವರುಮನೀಡಾಡಿ (ಪಂಪಭಾ. ೧೩-೪೧); ಎಳೆಯ ಕೀರೆಯ ಸೊಪ್ಪಂ ಕೊಯ್ದು ಸೂಡಂ ಕಟ್ಟಿ ಕೈಯೊಳ್ ಪಿಡಿದು (ತ್ರಿಪುವಿ. ೮-೫೭ ವ); ಆ ಮೂರ್ತಿಯ ಕೈಯಲ್ಲಿ ಬತ್ತದ ಸೂಡು ಇರುತ್ತದೆ (ಕನ್ನಚಾ. ೧೭೧). ೨. ಗುಂಪು ; ಸಮೂಹ : ಮೋಡಗಳ ನಡುವಿಂದ ಮಿಂಚಿನ ಸೂಡುಗಳ ಮಾಳ್ಕೆಯೊಳು ಮತ್ತಾ ಕಾಡಿನೆಡೆಯಿಂದೋಡಿ ಮರೆಯಾ ದಚ್ಚರಸಿಯರನು (ಪೌನಂದ. ೧೦-೩೯). **ಸೂಡಿ₂** : ೧. ವೆಂಕಮ್ಮ . . . ಮೊದಲು ಹುಲ್ಲುಕುತ್ತರೆಯನ್ನು ನೋಡಿದರು. ಪುಣ್ಯಕ್ಕೆ ಯಾರೂ ಸೂಡಿಗಳನ್ನು ಕದ್ದಿರಲಿಲ್ಲ (ಪದ್ಮನ. ೨೬೩); ಮೂವರು ಹೆಂಗಸರು, ಮಳೆಯಲ್ಲಿ ನೆನೆಯುತ್ತ ಅಗೆಯನ್ನು ಕಿತ್ತರು. ಸೂಡಿ ಮಾಡಿ ಎಸೆದರು (ಮರಮ. ೩೭). ೩. (ತಲೆಯ ಕೂದಲುಗಳನ್ನು) ಸೇರಿಸಿ ಕಟ್ಟುವ ಗಂಟು: ತಲೆ ಸೂಡಿ ಬಿಚ್ಚಿ ಒಮ್ಮೆ ಕೊಡವಿ ಸೆರಗಿನಿಂದಲೇ ಚೆನ್ನಾಗಿ ಒರಸಿಕೊಂಡಳು (ಹೊಸಕ್ಕ. ೪೭). 'ಸಿವುಡು' ಪರಾ.

[< ಸೂಡು₁-/ ತಮಿ. ಚೂಟು; ಮಲ. ಚೂಟ್ಟು; ತುಳು. ಚೂಡಿ, ಸೂಡಿ]

ಸೂಡು₃ (ನಾ). ೧. ಸುಡುವಿಕೆ; ದಹನ: ಪುಷ್ಕಕವಿವಾನದ ರತ್ನವಿಚಿತ್ರ ಪುತ್ರಿಕಾಸಂಕುಳಮಬ್ಬೊಡಟ್ಟುವು ದೆಮರ್ತೊಡೆ ಕೂಡೆ ದೆಮರ್ತುಪಾಗಳಾ ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್ (ಪಂಪಾಮಾ. ೯-೧೦೯); ಪೊಸಸುಣ್ಣ ಸೂಮ ಬಾಡಿರೆ ಬಸಮಬೆದು ಬಲುಲ್ದು ನೆಲುಲ ಕಳವಳದಿಂ ಪೊಕ್ಕಸಿಪತ್ರವನದ ಕೂರಲೆ ಕುಸುಮದ ಕೊನೆಕೊಯ್ದು ಕೊಱೆದು ಕುಱಿದಱಿಯಪ್ಪರ್ (ಆನಂಪು. ೯-೩೩). ೨. ಬೆಂಕಿ; ಉರಿ: ರಾಜಕುಮಾರರ ಮನದೊಳ್ ಸೂಡ[ಪಾಠಾಂ. ಡಿ]ರ್ದಂತಾಗ . . . ವಸುದೇವನ ಮೇಲೆ ರಾಜಕುಮಾರರೊಡ್ಡು ಕವಿದು ಮುಸುಱೆ ಮುತ್ತಿದಾಗಳ್ (ಅರ್ಧನೇ. ೬-೪೦೪); ಎತ್ತಂ ಬಿಸಿಲ್ ಕಾಯೆ ಸೂಡೊಳಬರ್ದಂತೆ ಬಲುಲ್ದೆಲ್ಲು ನಡೆದರ್ (ಬಂಪಾ. ೧೪-೨೮); ಎಷ್ಟು ವರುಷವಾಯ್ತು, ನನ್ನ ಜೀವಕ್ಕೆ ಬೆಂಕಿಯಿಟ್ಟು? ಇನ್ನೂ ಉರಿಯುತ್ತಿದೆಯಲ್ಲಾ ಆ ಸೂಡು! (ಮಲೆಮ. ೫೧೩). ೩. ಉಷ್ಣ ; ಕಾವು ; ತಾಪ : ಬಕವೇಷಿತನದಿಂದೊಡಲ ಸೂಡಿಂಗಿರಲಾಜಿದೆ ಪುಸಿಗೂರ್ಮೆಯಿಂದೋಪಳನಪ್ಪಿಕೊಂಡು ಮೆಲ್ಲನಿಂತೆಂದಂ (ಧರ್ಮಾಮೃ. ೩-೬೫); ಗರುಡಿಯಲಾಡಿದಂತಿರದಾಜಿರಂಗದ ಸೂಡು ತಾನದು ಬೇರೆ (ಕೋಗಯು. ೨೨-೨೦); ಗ್ರೀಷ್ಮರಾದಂ ತಲೆದೋಱಿದಂ . . . ನಾಡುಂ ಕಾಡುಂ ಬೀಡುಂ ಸೂಡಿಂ ಸೀಕರಿವೋಯ್ತು (ರಾಮಾಶ್ವ. ೫೨-೨). ೪. ಚಿತೆ : ನೀ ಸತ್ತು ಸೂಡಿನಲಿ ಹೆಣ ಬೂದಿಯಾದಂದು ನಿನಗೆ ಇಂದ್ರಿಯಜಯವು (ಕೋಗಿಲ. ೬೫-೮); ನನ್ನ ದಿಬ್ಬಣವರ ಭುಜದಲಿ ಮಸಣ ಸೂಡಿಗೆ ನಡೆಯಲಿ (ಅನುಪ. ೪೫). ೫. ಕಬ್ಬಿಣ, ಬಳೆಯ ಚೂರು ಮುಂತಾದುವನ್ನು ಕಾಯಿಸಿ ಎಳೆಯುವ ಬರೆ ; ಚಿಟಿಕೆ : ಅಲಿಗೆ ಸನ್ನಿ ಮಾಡಿದರೆ ಗೈಬುಗೆ ಸೂಡಿಟ್ಟರು (ಗಾಡ).

ಸೂಡಿನ ಕಾಳಗ = ಪಂಜಿನ ಯುದ್ಧ : ಸೂಡಿನ ಕಾಳಗದವರ ಕೊಱತೆ ವಾತನಾತೆ ವಹಿಸಿ ಕಾದುವರ ಪಾಡಿನ ಕಾಳಗದವರ ಕೋಳಾಹಳವೀಡಱಿದುದು ದೆಸೆಗಳನು (ಕುರಾಸಾಂ. ೪-೭೭). 'ಸೂಟೆ' ಪರಾ. [< ಸುಡು,]

ಸೂಡುಕಟ್ಟು, ಸೂಡಿಕಟ್ಟು (ಕ್ರಿ). ೧. (ಹುಲ್ಲು ಮೊದಲಾದುವನ್ನು) ಸೇರಿಸಿ ಕಂತೆ ಕಟ್ಟು : ನೀಲಿಯ ಗಿಡಗಳಿಗೆ ಹೂವಾದ ಕೂಡಲೆ ಆ ಗಿಡಗಳನ್ನು ಕೊಯಿದು ಸೂಡುಕಟ್ಟುತ್ತಾರೆ (ಮುಂಬಯಿ. ೪-೫೫). **ಸೂಡಿಕಟ್ಟು** : ೧. ಅನಂತರ ಅಗ ಕಿತ್ತಳು ; ಸೂಡಿಕಟ್ಟಿದಳು (ಜಾನಗೀ. ೯೦). ೨. (ಕೂದಲನ್ನು ಒಟ್ಟಿಗೆ ಸೇರಿಸಿ) ಗಂಟು ಕಟ್ಟು; ಗಂಟುಹಾಕು : ಮಿಾನಿನ ಕುಕ್ಕೆಯಿಂದ ಕೆಳಗಿಳಿದ ಉಪ್ಪುನೀರು ಪಾಳಿಯನ್ನು (ಅಡಕೆಯ ಸೋಗೆಯ ಬುಡ) ದಾಟಿ ಸೂಡಿಕಟ್ಟಿದ್ದ ತಲೆಕೂದಲನ್ನು ನೆನೆಯಿಸಿ, ಬೆವರಿನ ಜೊತೆ ಸೇರಿ ಮಿಾನಿನ ಆಹ್ಲಾದಕರವಾಸನೆಯ ಮಧ್ಯೆ ಕಮರುನಾತವನ್ನು ಹುಟ್ಟಿಸಿತ್ತು (ಹೊಸಕ್ಕ. ೪೭). [ಸೂಡು₂ + ಕಟ್ಟು,]

ಸೂಡುಗಾದು (ಕ್ರಿ). (ಉತ್ಸಾಹದ) ಕಾವಿನಿಂದ ಹೋರಾಡು; ಪೌರುಷದಿಂದ ಕಾದು (?) : ಹರನೊಳು ಸೂಡುಗಾದು[ಪಾಠಾಂ. ಡು]ವೆನೆಂದು ಮನಸಿಜ ಭರದಿ ಕೂಡಿದ ಬಲದಂತೆ ನೆರೆದಿರ್ದ ಪೆಣ್ಗಳ ಬಳಗದ ನಡುವೆಸೆವರಮಗಳೊಡ್ಡೋಲಗಕೆ (ಚಂಪ್ರಸಾಂ. ೯-೩೩). [ಸೂಡು, + ಕಾದು,]

ಸೂಡುಗುಯ್ಯಲ್ (ನಾ). ಒಂದು ಬಗೆಯ ಗದ್ದೆ : ಧರ್ಮ್ಯಕೊಳಗ ಮೇಂಟಿಯ ಸೂಡುಗುಯ್ಯಲ ಭತ್ತ ಒನ್ದು ಪೊXXXರೆಯಿಂ ನಡಸುವರು (ಪೌಣಾ. IX-i, ೧೭೪-೪; 1111). [ಸೂಡು? + ಗುಯ್ಯಲ್]

ಸೂಡುದಱೆ (ಕ್ರಿ). ಕಂತೆಯನ್ನು ಕತ್ತರಿಸುವಂತೆ ಕತ್ತರಿಸಿ ಹಾಕು; ಕೊಲ್ಲು: ನೋಡುತಿರಲೀ ಬಲವರಡು ಹೋಗಾಡು ನಮ್ಮನು ಮೇಣ್ ನಿನ್ನನು ಸೂಡುದಱೆವೆನು ಸತ್ವದಳತೆಯ ಕಾಣಲಹುದು (ಕುವಾ೫. ೧೯-೩೦). [ಸೂಡು + ತಱೆ]

ಸೂಡುಪಾಡು (ನಾ). ನಾಶಮಾಡುವ ಪ್ರತಿಜ್ಞೆ; ಕೊಲ್ಲುವ ಶಪಥ: ಪೂರಯೇಱಲಡಿಗಡಿಗತಿಪಾನಪಾನರು ನೆರದು ಸರಳ ಸರಿವಳೆಯ ಸುರಿದರು ಸೂಡುಪಾಡಿಂದ ರಾಮನ ಮೇಲೆ (ಕುರಾಸಾಂ. ೪೫-೯೧); ಮೃಡನೊಳು ಸೂಡುಪಾಡಿಗ ಕಾದಲೆಂದಾ ಕುಮಿವಿಲ್ಲ, ರತ್ನದಿಂ ಸಮದು ಪಿಡಿದ ಪೆಡೆಯುವಂಬಂತೆಸಬುದು ಮೂಡಗಡೆಯ ಮುಸುಪುವ ಚಂದ್ರಬಿಂಬ (ರಾಮವಿ. ೧೦-೧೬); ಅವರ ಪಾಳೆಯಮಂ ದಲದುಬವಾಯ್ದು ಸೂಡುಪಾಡಂ ಮರಲ್ಚುವೆವು (ಚಕವಂ. ೪೫-೩).

[ಸೂಡು + ಪಾಡು]

ಸೂಡುಬೆಂಕಿ (ನಾ). ಶ್ಮಶಾನದಲ್ಲಿ ಹೆಣವನ್ನು ಸುಟ್ಟು ಉರಿಯುವ ಬೆಂಕಿ, — ಉರಿ; ಚಿತೆಯ ಬೆಂಕಿ: ಸುಡುಗಾಡಿನಲ್ಲಿ ಧಗಧಗಿಸುತ್ತಿದ್ದ ಸೂಡುಬೆಂಕಿಯನ್ನು ಕಂಡ ಅವನಿಗೆ ತನ್ನ ಸುತ್ತಲೂ ದೆವ್ವಗಳು ನಿಂತು ತನ್ನನ್ನೇ ಅಳಿಯಾಸೆಯಿಂದ ನೋಡುತ್ತಿದ್ದಂತೆ ಭಾಸವಾಯಿತು (ಕಾನೂಹು. ೧೦೮). [ಸೂಡು + ಬೆಂಕಿ (< ಬೆಂಕೆ)]

ಸೂತ (ಗು). ೧. ಹೆತ್ತ; ಪ್ರಸವಿಸಿದ. ೨. ಮುಂದಕ್ಕೆ ದೂಡಿದ; ಪ್ರಚೋದಿಸಿದ. ೩. ಹೊರಟುಹೋದ; ಅಗಲಿದ. (ನಾ). ೪. ರಥವನ್ನು ನಡೆಸುವವನು; ಸಾರಥಿ: ತಱಿದು ಸೂತನನಾತನ ವಾಜಿಯಂ ಮಹೀಶಂ ತೆಗದಚ್ಚಂ (ಪಂಪಭಾ. ೧೦-೯೮); ಸೂತರುರವಣಿಗಳ ಸುರೇಖೆಯ ಗತಿಯ ವಾಜಿಯ ರಥವ ನೋಡಿದರು (ಕುವಾಉ. ೧೧-೧೬); ಸೇನಸಹಿತವೆ ಕನಕಪತ್ತಿಗ ಮುಱಿದು ಬಿದ್ದುದು ಸೂತನುರುಳಿದನು (ಕಾಶಿಕಾ. ೨೦-೩೭). ೫. ಕ್ಷತ್ರಿಯನಿಗೆ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದ ಮಗ; ℙ ಸಾರಥಿತನವನ್ನು ವೃತ್ತಿಯಾಗಿ ಉಳ್ಳವನು: ವಂದಿಗಳ್ ನಿಂದ್ಯಮನೆ ಮಾಗಧರಾಗದನೆ ಸೂತರನೀತಿಯನೆ . . . ಪಾಸಱೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೩ ವ); ಬ್ರಾಹ್ಮಣಸ್ತ್ರೀಯಲ್ಲಿ ಕ್ಷತ್ರಿಯನ ದೆಸೆಯಿಂದ ಹುಟ್ಟಿದವನು ಸೂತನೆನಿಸಿಕೊಂಬುವನು (ಕೃವಾಪ. ೬೪); ಬ್ರಾಹ್ಮಣಗಳ ಕಾಲದಿಂದಲೂ ಸೂತರು ರಾಜವಂಶಗಳ ನಿಕಟಸಂಬಂಧವನ್ನು ಹೊಂದಿದ್ದರಲ್ಲದೆ ಅವುಗಳ ವಿಷಯ ವಲ್ಲವನ್ನೂ ಚೆನ್ನಾಗಿ ಬಲ್ಲವರಾಗಿದ್ದರು (ಭಾರದ. ೧೩೮). ೬. ವೈಶ್ಯನಿಗೆ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದ ಮಗ; ℙ ವಂದಿಮಾಗಧವೃತ್ತಿಯನ್ನು ಅವಲಂಬಿಸಿರುವವನು. ೭. ಹೊಗಳುಭಟ್ಟ; ವಂದಿಮಾಗಧ : ಸೂತ ನಟ ವಂದಿಮಾಗಧ . . . ಪುಣ್ಯಪಾಠಕವಿಪ್ರೋದ್ಘೂತರವಮೆಸೆಯೆ (ಪಂಪಭಾ. ೧೨-೧೦೬); ಅಸುರಪತಿಯುಪ್ಪವಡಿಸಿದನಿದ್ದೆಸೆಯ ಮಂಗಳರವದ ಪಾಠಕ ಸೂತ ಮಾಗಧರುಗಳ ಸೂಕ್ತಿಯಲಿ (ತೂರಾ. ೬-೨೦-೧೧). ೮. ಮರಗೆಲಸ ಮಾಡುವವನು; ಬಡಗಿ. ೯. ರವಿ; ಸೂರ್ಯ. ೧೦. ನೈಮಿಷಾರಣ್ಯದಲ್ಲಿ ಮುನಿಸಮೂಹಕ್ಕೆ ಪುರಾಣೇತಿಹಾಸಗಳನ್ನು ಹೇಳಿದ ಒಬ್ಬ ಮಹರ್ಷಿ; ವ್ಯಾಸಮಹರ್ಷಿಯ ಶಿಷ್ಯ: ಸುಮೇಘಪರ್ವತದಲಿ ಅತ್ರಿ . . . ಸೂತ . . . ಉಪಮನ್ಯು ಮೊದಲಾದ ಅಷ್ಟಾಶೀತಿಸಹಸ್ರಋಷಿಗಳನಂತಾಶ್ರಯಂಗಳುಂ (ವಿವೇಕ. ೨೧೬); ಸಕಲ ಋಷಿಗಳ ಮತದಿ ಶೌನಕ ಪ್ರಕಟದಲಿ ಸೂತಂಗ ಪಂದಿಸಿ ಭಕುತಿಯೊಳು ಕೇಳಿದನು ಕೃಷ್ಣಾರ್ಜುನರ ಕಾಳಗವ (ಕೃಷ್ಣಾಕಾ. ೨ ಸೂಚನೆ). ೭, ೧೦ : ಪರಮ ಮೈತ್ರೇಯರಿಂ ಪುಂಡರೀಕಾಕ್ಷಿಯರ ತರದಿಂದ ಸೂತರಿಂ . . . ಸುರಪತಿಯ ಸಭೆಯಂತೆ ಮಱೆದುದಾ ರಾಯನೊಡ್ಡೋಲಗಂ (ಭಾವಚಂ. ೬ :೫). ೧೧. ರಥದಲ್ಲಿ ಕುಳಿತು ಯುದ್ಧಮಾಡುವವನು; ರಥಿಕ. ೧೨. ಪಾದರಸ. ೧೩. ತಿಳಿಯುವಂತೆ ಮಾಡುವುದು; ತಿಳಿಸುವುದು. ೧೪. ಶಕ್ತಿ; ಸಾಮರ್ಥ್ಯ. ೧೫. ಮಾನುಹಿಡಿಯುವವನು; ಬೆಸ್ತ : ಗಂಗಗ ಕೆಯ್ಮೆಡೆಯೆಂದುತ್ತುಂಗಸ್ಪನಿ ಕೊಟ್ಟು ಪೋಗೆ ಸೂತಂ ಕಂಡಾತ್ಮಾಂಗನೆಗೆ ರಾಧೆಗಿತ್ತು (ಪಂಪಭಾ. ೯-೬೫); ಕೈಗಳ ಕೊಡಹಿ ಭೋಯಂದೊದಱುತಿರ್ದನು ಶಿಶುಗಳರಸನು . . . ಇದನು ಕಂಡನು ಸೂತನೊಬ್ಬನು (ಕುವಾಉ. ೬-೨೩). ೧೬. ಯುದ್ಧ ಭೇದಗಳಲ್ಲಿ ಒಂದು : "ರಸದಲ್ಲಿ ಹಡೆವಲ್ಲಿ ವಂದಿಯಲಿ ಸಾರಥಿಯ ಅಱುಹುವಲ್ಲಿ ಕ್ರಮದಿಂದ ಸೂತಮನಿಸಿಕ್ಕು" (ಮಂಗರಾ. ೧೫೪-೬೫); ರಥಿಯೋಳ್ ಸೂತದೊಳಾ ಹವಂಗಳೊಳು ವಂದಿವ್ರಾತದೋಳ್ ಜಾಲಿ ಸಾರಥಿ ಪೌರಾಣಿಕ ಶಕ್ತಿ ಸಂಭವದೊಳುಂ ಸೂತಾಖ್ಯೆ" (ನಾನಾರ. ೩೩). ೧೭. ಕರ್ಣ : ಸೀತೆಯಿಂ ಹೆಣ್ಣಲ್ಲ ಸೂತನಿಂದಾಳಿಲ್ಲ (ಸರ್ವಜ್ಞ. ೧೦೦೭). ೧೮. ಒಂದು ಬಗೆಯ ಸಸ್ಯ : ದಿವ್ಯರಸ-ಸೂತ" (ಓಷಧಿ. ೭೫).

[ಸಂ.]

ಸೂತಕ (ನಾ). ೧. ಹುಟ್ಟು; ಜನನ : ಎತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡಾಕೆ ರಾಗಿಸಿ ಸುತನ ಸೂತಕವುಂ ಕೊಂಡಾ[ಡೆ] (ಪಂಪಭಾ. ೧-೪೬ ವ); ಎನ್ನ ಲಿಂಗವಂ ತೆಗೆ ಸೂತಕ ಮಾಸ ತಡದಲ್ಲಿ ಗರ್ಭಪೆಂಬುದು ತಲೆದೋಱಿದಲ್ಲಿಯೆ (ವೀರೇಶ್ವ. ೮೧). ೨. ಹೊಲೆ; ಮೈಲಿಗೆ: ಸುಖವೆ ಪರಬ್ರಹ್ಮಾನಂದವಾಗಿ ಶೂನ್ಯತೃಪ್ತಿಗೆ ಸೂತಕವಿಲ್ಲ (ಅವಚಂ. ೨೫೭-೧೧೬೯); ಕಣ್ಣಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ (ಬಸಪ. ೨೪); ಋಣವೆಂಬ ಸೂತಕವು ಬಾಧಿಸುತ್ತಿದೆ (ಕಎವು. ೨೨-೧೫). ೩. ಜನನ, ಮರಣಗಳಿಂದುಂಟಾಗುವ ಮೈಲಿಗೆ, — ಅಶೌಚ : ಪ್ರಾಯಶ್ಚಿತ್ತ ಪ್ರಸೂತಿಕ ವೈವಾಹಿಕ ಮಾರಣಾಂತಿಕದೊಳಾ ಮಾದ ಸೂತಕ ಭಾವಸಲ್ಲೇಖನೆಯೆಂಬುದು (ಪಸಾರ. ೭೦೫); ಮೃತಮನಿವ ಸೂತಕಕೆ ಮನೆಯಾಗತಿರುಚೆಯ ಶರಧಿಯೊಳು ಮುಳುಗುವನ್ಯತ ನಿಜಸ್ಥಿತಿಯಾಂತುದೀ ದೇಹಂ ತ್ರಿಕಾಲದಲಿ (ವಿಷೇಭ. ೪-೮); ಹೆತ್ತ ಸೂತಕ ಹತ್ತು ದಿನಗಳಿಗೆ ಪರಿಹಾರ. ಮೃತ್ಯು ಸೂತಕವು ಹನ್ನೊಂದುದಿನಕೆ (ಕಎವು. ೨೩-೯). ೪. ಮುಟ್ಟು; ರಜಸ್ಸು : "ಮುಟ್ಟುವ ಮಾನಿಕವೆನುತುಂ ಮುಟ್ಟಲುಮೆನೆ ಸೂತಕಾಭಿಧಾನಂ" (ಕವಿಕಂ. ೨೩೦); ಇನ್ನೇತಕಾದವು ನಿನ್ನ ತಾಯಿಗೆ ಸೂತಕಂಗಳು (ಪಜ್ಞಾಚಂ. ೬-೯); ಸಪ್ಪೆದುಪ್ಪ, ಅನ್ನ, ಹಸುವಿನ ಹಾಲು ಈ ಪ್ರಕಾರ ಪಥ್ಯದಿಂದ ೩ ಸಾರಿ ಸೂತಕವಾಗಿ ಸ್ನಾನವಾದ ಕೂಡಲೆ ತಗೆದುಕೊಳ್ಳೆ ಸ್ತ್ರೀಯರಿಗೆ ಸೂತಕದಲ್ಲಿ ರಕ್ತ ನಿಲ್ಲುವುದು (ಸಕವ್ಯ. ೧೯೮). ೫. ಪಾದರಸ: ರಸಪಾರದ ಸೂತಕ ಚಪಲ[ಸಂ]ಜ್ಞಿತಂ ಗಿರಿಶವೀರ್ಯಮದು ಪಾದರಸಂ" (ವಸ್ತುಕೋ. ೯೪-೧೩). ೬. ದೋಷ; ರುಚಿ : ಕೊಡಸಿಗೆ, ಅತಿಬಚೆ . . . ಎಂಬಿವುಗಳ ಕಷಾಯವಂ ಕಾಸಿ ಕುಡಿಯಲು ನೆತ್ತರು, ಹಲವುಕಾಲದ ಅತಿಸಾರ, ಎಲ್ಲಾ ಬಸಿಱು ಸೂತಕಂಗಳಿಗೂ ಒಳ್ಳೆಯದು (ವಿಷವೈ. ೧೯). [ಸಂ.]

ಸೂತಕನಿವಾರಣೆ (ನಾ). ಮೈಲಿಗೆಯ ಪರಿಹಾರ : ಸೂತಕನಿವಾರಣೆಯಾಗುವವರೆಗೆ ಪರಊರಲ್ಲಿರಲಿಕ್ಕೆ ಮನಸ್ಸಿಲ್ಲದೆ ಅವನು ಬೈಸಾರಿ ಸಮಯ ಗುರುದರ್ಶನಕ್ಕೆ ಹೊರಟನು (ವಾಗ್ಗೇವಿ. ೬೪). [ಸಂ. ಸೂತಕನಿವಾರಣ]

ಸೂತಕರ್ಮಾಭ್ಯಾಸಿ (ನಾ). ಸಾರಥಿತನದ ಅಭ್ಯಾಸವುಳ್ಳವನು; ಅತಿಶಯವಾದ ಸಾಮರ್ಥ್ಯದಿಂದ ಕೂಡಿದ ಸಾರಥಿ : ಈ ಸಮಸ್ತ ನೃಪಾಲವರ್ಗದೊಳಾಸೆಯಾರಲಿ ಸೂತಕರ್ಮಾಭ್ಯಾಸಿಯನು ಜೋಡಿಸುವೆನೆಂದನು ಕೌರವರ ರಾಯ (ಕುವಾಕ. ೫-೯).

[ಸಂ. ಸೂತಕರ್ಮಾಭ್ಯಾಸಿನ್]

ಸೂತಕಾರಿ (ನಾ). [ಸಂಗೀತ] "ಉಸ್ ಎಂದು ನಿಟ್ಟುಸಿರಿನಿಂದ ಹಾಡುವವನು": (ಸಂಗೀಚಂ. ೧೦೩); ℙ ಸಂಗೀತದಲ್ಲಿ ಹೀಗೆ ಹಾಡುವುದು ಒಂದು ದೋಷ.

[ಸಂ. ಸೂತಕಾರಿನ್]

ಸೂತಕಿ$_1$ (ನಾ). ೧. ಹೆತ್ತವಳು; ಬಾಣಂತಿ. ೨. ಮುಟ್ಟಾದವಳು; ರಜಸ್ವಲೆ: ನರ್ತಕಿಯ ನಾಪಿತೆಯ . . . ಸೂತಕಿಯ ಸೈರಂಧ್ರಿಯ ಕರ್ತವ್ಯದಿಂದಿನಿಬರೊಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿವರು (ಜೈಮಿಭಾ. ೫-೫೮). ೩. ಹೆರಿಗೆಯನ್ನು ಮಾಡಿಸುವವಳು; ಸೂಲಗಿತ್ತಿ: ಕಂದರ್ಪನಂಗನೆಗೆ ಯಳಿಬ್ಯಾನೆ ಸೂಚಿಸಲು . . . ಸಂದುಯಾಳಿಯರರಿದು ನೆರದು ಸೂತಕಿಯ ಕರೆತಂದು (ನಪಮೋ. ೧೫-೧೩).

[< ಸಂ. ಸೂತಕಾ, ಸೂತಿಕಾ]

ಸೂತಕಿ$_2$ (ನಾ). ಮೈಲಿಗೆಯಿಂದ ಕೂಡಿದವನು; ಕಳಂಕಿತನಾದವನು: ಗುಹೇಶ್ವರನೊಬ್ಬನೆ ಅಚಲ ಉಳಿದವರೆಲ್ಲರೂ ಸೂತಕಿಗಳು (ಅವಚಂ. ೩೪-೧೪೬); ಭವಕ್ಕೆ ಹುಟ್ಟುವನಲ್ಲ ಸಂದೇಹಿ ಸೂತಕಿಯಲ್ಲ ಆಕಾರ ನಿರಾಕಾರನಲ್ಲ ನೋಡಯ್ಯಾ (ಬಸವ. ೮೭೪); ಸರ್ವಾಂಗಲಿಂಗಸಂಬಂಧವಹ ಭೇದವನಱಿಯದೆ ಬಹಿರಂಗದಲ್ಲಿ ದುಸ್ಸೀಲ ಹಿಡಿದವರೆಲ್ಲಾ ಸೂತಕಿಗಳಾದರು (ಪದಗೋ. ೫೭-೨೦೬). [ಸಂ. ಸೂತಕಿನ್]

ಸೂತಕುಲ (ನಾ). ೧. ಸಾರಥಿತನವನ್ನು ಮಾಡುವವರ ಕುಲ, — ವಂಶ.

೨. ಅಂಬಿಗರ ಜಾತಿ; ಬೆಸ್ತರ ಜಾತಿ: ಸೂತಕುಲಸಂಭವನೆ ಭುವನಖ್ಯಾತ ಕರ್ಣನು ಸಾಽದಾತನು ಸೂತನಾದಡೆ ಮಾವ ಕೇಳನ್ನಯಕೆ ಹಳಿವುಂಟೆ (ಕುವ್ಯಾಕ. ೮-೩).

[ಸಂ.]

ಸೂತಕೃತೆ (ನಾ). ಹೆರಿಗೆಯನ್ನು ಮಾಡಿಸುವವಳು ; ಸೂಲಗಿತ್ತಿ: "ಸೂತಕೃತ [ಪಾಠಾಂ. ಸೂತಿಕೃತಿ]ಯೆನೆ ಸೂಲಗಿತ್ತಿಯಕ್ಕುಂ" (ಮಂಗರಾ. ೯೧-೮). [ಸಂ. ಸೂತಕೃತಾ]

ಸೂತಗ (ನಾ). ಸಂತಾನ: ಸಹಳಿಯ ಬೊಂಮದೇವಹಗ್ಗಡೆ XX ಮನಾಯಕ ಅರಸ XXX ಣಗೆ ತೃತೀಯ ಸೂತಗದ ಬಲಾಡಿ ಗಱುಂಡ . . . ಮಲ್ಲಿನಾಥಭಟ್ಟರ ಮಕ್ಕಳು (ಎಕ. VIII. ತೀರ್ಥಹ. ೧೦೭-೮: 1419). [< ಸೂತಕ]

ಸೂತಜ (ನಾ). ೧. ಸೂತಕುಲದಲ್ಲಿ ಜನಿಸಿದವನು: ಗಂಗೆಗೆ ಕೆಯ್ಮಡೆಯೆಂದುತ್ತುಂಗಸ್ತನಿ ಕೊಟ್ಟು ಪೋಗೆ ಸೂತಂ ಕಂಡಾತ್ಮಾಂಗನೆಗೆ ರಾಧೆಗಿತ್ತು ಮನಂಗೊಳೆ ರಾಧೇಯನೆನಿಸಿ ಸೂತಜನಾದ್ಯೆ (ಪಂವಭಾ. ೯-೬೫); ಗಗನಸ್ಥಳಕೆ ರಥವನು ಬಿಸುಡೆ ಯೋಜನದಳವಿಯಲಿ ಲಂಘಿಸಿತು ಹಯತತಿ ಸೂತಜರು ಸಹಿತ (ಕುವ್ಯಾದ್ರೋ. ೧೩-೧೭). ೨. ಕರ್ಣ: ಸೂತಜನ ರಥದ ಗಾಲಿಗೆ ಸಿಲ್ಕನಿಕ್ಕಿದ ಮಹೀತಳದೊಳೆತರಿಲ್ಲಿವಂಗ ನಾಂ ಮುಳಿದೊಡೆ (ಚೈಮಿಭಾ. ೨೭-೪೨). [ಸಂ.]

ಸೂತಜಾತಿ (ನಾ). = ಸೂತಕುಲ ೨ : ಸೂತಜಾತಿಯೊಳೀ ಧನುರ್ವೇದಾತಿಶಯವೆಂತಾಯ್ತು (ಕುವ್ಯಾಕ. ೨೨-೨೨). [ಸಂ.]

ಸೂತತನ (ನಾ). ಸಾರಥಿಯಾಗಿರುವಿಕೆ; ಸಾರಥಿತನ: ಮುರಾಂತಕ ಸೂತತನಕಲಸಿದರೆ ಕಾದಲಿ ಕೌರವನ ಕೂಡೆ (ಕುವ್ಯಾದ್ರೋ. ೩-೬೨). [ಸೂತ + - ತನ]

ಸೂತತ್ಯ (ನಾ). = ಸೂತತನ : ಬೊಮ್ಮಂಗಾಯಿತೇ ಸೂತತ್ಯವಾದಡೆ ರಾಯ ಹೇಳ್ಕೆ ತ್ರಿಪುರದಹನದ ಕಥೆಯ (ಕುವ್ಯಾಕ. ೫-೩೭). [ಸಂ.]

ಸೂತನಂದನ (ನಾ). ೧. ಸೂತಕುಲದಲ್ಲಿ ಜನಿಸಿದವನು. ೨. ಕರ್ಣ : ಪೂತು ಮಱುರೇ ಸೈರಿಸಾದಡೆ ಸೂತನಂದನ ಎನುತ ಬಾಣವ್ರಾತದಲಿ ಹೊದಿಸಿದನು ಕರ್ಣನ ರಥವನಾ ಪಾರ್ಥ (ಕುವ್ಯಾಕ. ೨೨-೨೨). [ಸಂ.]

ಸೂತಸುತ (ನಾ). ೧. ಸೂತನ ಮಗ. ೨. ಕರ್ಣ : ಬೀರವಟ್ಟಮನಾನಿರೆ ನೀನೀ ಸೂತಸುತಂಗೆಡೆಗೊಂಡು ಕೈವಾರದಿಂದೊಸದಿತ್ತೊಡಮೇನಾಯ್ತು (ಪಂಪಭಾ. ೧೨-೮೩); ಪೂತುರೇ ಕಲಿ ಪಾರ್ಥ . . . ದ್ರೋಣನ ಸೂತಸುತ ಕೃಪ ಗುರುತನೂಜರ ಗೆಲಿದ ಬಳಿಕೇನು (ಕುವ್ಯಾವಿ. ೮-೫೨). [ಸಂ.]

ಸೂತಿ (ನಾ). ೧. ಹುಟ್ಟು ; ಜನನ : "ಜನನಂ ಜನ್ಮಂ ಪ್ರಸವಂ ಜನಿಜನರುತ್ಪತ್ತಿ ಸೂತಿಯೇಕಾರ್ಥಮಿವಿಂತಿನಿತುಂ" (ವಪ್ರಕೋ. ೧೪-೩); ಸೂತಿಯಿಂ ಕಪ್ಪಾದ ಹಲ್ಲುಗಳು ಮಱುವುತಿರ್ಪಾತನೇ ಮುನ್ನ ಸುರೆಯಂ ಕುಡಿದನೆಂದಱಿವುದು (ವೀಕೃಪು. ೪-೨೨-೪). ೨. ಹೆರಿಗೆ ; ಪ್ರಸವ. ೩. ಮಗು; ಕೂಸು : "ಸೂತಿ ತಾನೆನಿಕುಮಪತ್ಯಶಬ್ದಮದು ಕೇವಲಮಾತ್ಮಜವರ್ಗವಾಚಕಂ" (ವಪ್ರಕೋ. ೫೪-೧೭). [ಸಂ.]

ಸೂತಿಕಸೂಲೆ (ನಾ). ಹೆರಿಗೆಯ ಕಾಲದಲ್ಲಿ ಉಂಟಾಗುವ ನೋವು; ಪ್ರಸವವೇದನೆ : ಅತುಳ ಸೂತಿಕಸೂಲೆ ವೆಗ್ಗಳಿಸಿ (ನವವಿ. ೧೫-೧೪).

[ಸೂತಿಕ್ಕ + ಸೂಲೆ]

ಸೂತಿಕಾಗೃಹ (ನಾ). ಬಾಣಂತಿಯ ಕೋಣೆ; ಹೆರಿಗೆಮನೆ : ಎಸವ ಸೂತಿಕಾಗೃಹಮಂ ತಾರಾಪೀಡನರೇಂದ್ರಂ ಪುಗುವುದುಂ (ಕಾದಂಪೂ. ೪೧೩); ಕಂಸಂ ತದೀಯ ಬಾಲಹಿಂಸಾಪರನಾಗಿ ಸೂತಿಕಾಗೃಹ[ಪಾಠಾಂ. ಸದನ]ಮಂ ಪೊಕ್ಕು (ಜಗವಿ. ೨-೫೩ ವ). [ಸಂ.]

ಸೂತಿಕಾಗೇಹ (ನಾ). = ಸೂತಿಕಾಗೃಹ: ರಂಜಿಸುವ ಸೂತಿಕಾಗೇಹದೊಳು ಭೂಪನ ಕುಮಾರನೆಸೆದಂ (ಭಾವಚಂ. ೩-೫೮). [ಸಂ.]

ಸೂತಿಕಾಮಂದಿರ (ನಾ). = ಸೂತಿಕಾಗೃಹ: ವಿನಯನಿಭೃತೆ ಪೊಕ್ಕಿಂದ್ರಾಣಿ ಸೂತಿಕಾಮಂದಿರಮಂ (ಪುಪ್ರಸ. ೧೦-೧೫). [ಸಂ.]

ಸೂತಿಕಾಮರುತ (ನಾ). ಹೆರಿಗೆಯ ಸಮಯದಲ್ಲಿ ಉಂಟಾಗುವ ಒತ್ತಡ; ಪ್ರಸೂತಿಕಾಲದ ವಾಯು : ಸೂತಿಕಾಮರುತ ಬೀಸಿದಾತುರಕೆ ಬೆಸಸುವ ಯಾತನೆಗೆ ಕಾಣೆ ಲಿಪ್ಪೆ (ಎದಾಕೃ. ೫೪-೪). [ಸಂ.]

ಸೂತಿಕಾರೋಗ (ನಾ). ಹೆರಿಗೆಯ ನಂತರ ಉಂಟಾಗುವ ರೋಗ ; ಬಾಣಂತಿವಾಯಿಲೆ : ಕುಂಡಲಾದಿ(ಪ್ರೇತ)ಲೇಹ್ಯ . . . ಸೇವಿಸಲು ಐದು ಬಗೆಯ ಕಾಸಗಳು . . . ಕೃತ್ರಿಮವಿಷಗಳು, ಸೂತಿಕಾರೋಗಗಳು . . . ಇವೆಲ್ಲಾ ಮಾಣುವುವು (ಸಕವ್ಯ. ೪೪೨ ಪಠಿ). [ಸಂ.]

ಸೂತಿಕಾವಾಯು (ನಾ). ೧. = ಸೂತಿಕಾಮರುತ : ಒರಳಿನೊಳಗಡಸಿ ಹಿಂಡುವ ಕಬ್ಬಿಸಂತೆಳ್ಳ ಭರದಿ ಗಾಣದೊಳಿಟ್ಟು ತಿರುಪುವವೊಲಿಡಿದಡಿಸಿ ಹುರಿಗಳಂ ಬಿಗಿದು ಡಾಣೆಯಲೆಜಗುವಂತೊಗೆವ ಸೂತಿಕಾವಾಯುವಿಂದ ಇರದೆ ತಲೆಕೆಳಗಾಗಿ ಬಿದ್ದು (ಲಕಚಂ. ೩೯-೪೯). ೨. ಹೆರಿಗೆಯ ನಂತರ ಉಂಟಾಗುವ ನೋವು ; ಬಾಣಂತಿವಾಯಿಲೆ: ವಿಷಖಡ್ಡಿಬೇರು, ಈಶ್ವರೀಬೇರು . . . ಇವನ್ನೆಲ್ಲಾ ಸಮಭಾಗ ಹಾಕಿ ಚೂರ್ಣ ಮಾಡಿ ಬಿಸಿನೀರಿನಲ್ಲಿ ಕೊಟ್ಟರೆ ಸನ್ನಿಪಾತಗಳು . . . ಸೂತಿಕಾವಾಯುಗಳು . . . ಇವೆಲ್ಲಾ ಗುಣವಾಗುವುವು (ಸಕವ್ಯ. ೪೨೧ ಪಠಿ). [ಸಂ.]

ಸೂತಿಕಾಸದನ (ನಾ). = ಸೂತಿಕಾಗೃಹ : ದಶರಥಂ ಸುತಮುಖದರ್ಶನೋತ್ಸುಕಂ . . . ಸುಮಿತ್ರಾದೇವಿಯ ಸೂತಿಕಾಸದನಮಂ ಪೊಕ್ಕು (ಪಂಂರಾಮಾ. ೩-೧೩೪ ವ); ಕಂಸಂ . . . ಸೂತಿಕಾಸದನಮಂ ಪೊಕ್ಕು (ಜಗವಿ. ೩-೧೩ ವ). [ಸಂ.]

ಸೂತಿಕೆ (ನಾ). ಹಡೆದವಳು; ಬಾಣಂತಿ: ಉದಯಮಜಾಳಿ ತೌಳ ಘಟ ಕರ್ಕಟಕಾಲಯಮಾಗೆ ಮೂಡಲಿರ್ದುದು . . . ದಂಪತಿ ಮಿಾನಜೌಪಭೃತ್ಸುದತಿಗಳಾಗಯುಂ ಬಡಗಲಿರ್ದುದು ಸೂತಿಕೆಯಿರ್ದ ಗೇಹದೊಳ್ (ಜಾತಕ. ೪-೧೭).

[ಸಂ. ಸೂತಿಕಾ]

ಸೂತಿಮಸಗು (ಕ್ರಿ). ಹೆರಿಗೆಯ ನೋವು ಹೆಚ್ಚಾಗು: ಮಱುಗಿದನೋವೂ ಸೂತಿಮಸಗಿತ್ತೆನಲಂತವಳೊರ್ವಳಿರ್ದು ಕೂರ್ತಿರದೆ ಕುಕಿಲ್ದು (ಪದ್ಮಸಾ. II, ೮೨೪).

[ಸೂತಿ + ಮಸಗು]

ಸೂತಿಮಾಸ (ನಾ). ಗರ್ಭಿಣಿಗೆ ತಿಂಗಳು ತುಂಬುವುದು; ಪ್ರಸವವು ಸನ್ನಿಹಿತವಾದ ತಿಂಗಳು: "ಸೂತಿಮಾಸಃ, ವೈಜನನಃ — ಈ ೨ ಪೊಱ್ತು (ಹೊತ್ತು) ಸೀಪುವುದು", (ಪಲಾಯು. ೮೨-೩೪೫); "ಸೂತಿಮಾಸಂ ಹೊತ್ತಿನೊಳಗಕ್ಕುಂ" (ಮಂಗರಾ. ೯೧-೮). [ಸಂ.]

ಸೂತೀಜನ (ನಾ). ಹೆರಿಗೆಯನ್ನು ಮಾಡಿಸಬಲ್ಲ ಸ್ತ್ರೀಯರು; ಸೂಲಗಿತ್ತಿಯರು: ವನಿತೆಯ ತನುರಕ್ಷೆಗೆ ತಕ್ಕನುಚರಜನ . . . ಸೂತೀಜನ ಸಖಿಜನಮೆನಿತ ನಿತುಮನವನಿಪತಿ ನಿಯೋಜಿಸಿ ತಳರ್ದಂ (ಪುಪ್ರಸ. ೪-೧೪). [ಸಂ.]

ಸೂತ್ಕೃತ (ನಾ). ೧. [ನಾಟ್ಯ] ಉಸಿರಾಡುವುದರಲ್ಲಿ ಒಂದು ಬಗೆ; "ವೇದನೆಯನ್ನು ತೋರಿಸುವಂತೆ ಉಸುರು ಬಿಡುವುದು" (ಲಾಸ್ಮರಂ. ೨೭೮ ಗದ್ಯಾನುವಾದ): ಸಮಮುಂ ಭ್ರಾಂತವಿಲೀನಂ ಕ್ರಮದಾಂದೋಳಿತಮುಮಿಸೆವ ಕಂಪಿತಮುಂ ಸಂಭ್ರ[ಮ]ದ ಸ್ತಂಭಿತಮುಚ್ಛ್ವಾಸಮುಮುಲಿ ನಿಃಶ್ವಾಸ ಸೂತ್ಕೃತಂ ಸೀತ್ಕೃತಮುಂ (ಲಾಸ್ಮರಂ. ೩-೭೭). ೨. [ಕಾಮಶಾ] ರತಿಕ್ರೀಡೆಯಲ್ಲಿ ಉಂಟಾಗುವ ಒಂದು ಬಗೆಯ ಧ್ವನಿ: ಬಿದಿರಗಣ್ಣೊಡೆದ ದನಿಯದು ಸೂತ್ಕೃತಂ (ಜನವ. ೧೦-೨೩). [ಸಂ.]

ಸೂತ್ತುಂಗ (ಗು). ೧. ಉಬ್ಬಿದ; ಉಬ್ಬಿರುವ. (ನಾ). ೨. ಉಬ್ಬಿರುವುದು: ಶರದೊಡನೆ ಗಭೀರಂ ಬಂಧುರಂ ನಾಭಿನೇತ್ರಾಂಬುರುಹದೊಡನೆ ದೀರ್ಘಂ ಬಾಹು ಸೂತ್ತುಂಗಮಾಗಿಪ್ಪುರದೊಡನೆ ವಿಶಾಳಂಬೆತ್ತುಮಾರಕ್ತಭಾಸ್ಯತ್ಕರಜದೊಡನೆ ಸುಸ್ನಿಗ್ಧಂ ಕನತ್ಕಾಂತಿದಂತಂ (ವರ್ಧಮಾ. ೬-೬೫). [ಸಂ.]

ಸೂತ್ರ (ನಾ). ೧. ದಾರ; ನೂಲು : "ತಂತು ಗುಣಂ ಸೂತ್ರಂ" (ವಪ್ರಕೋ. ೬೬-೮೭); ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯ (ದೇದಾವ. ೨-೩); ಮಾಲೆಯ ಮಣಿಗಳಲ್ಲಿ ಸೂತ್ರವು ಸೇರಿಕೊಂಡಿರುವಂತೆ . . . ಆ ಸ್ಥಿರತತ್ತ್ವವು ಜ್ಞಾನಧಾರಗಳಲ್ಲಿ ಓತಪ್ರೋತವಾಗಿ ಹಾಸುಹೊಕ್ಕಿನಂತೆ ಹೊಂದಿಕೊಂಡಿರುತ್ತದೆ (ಜೀವಾತ್ಮ. ೪೩). ೨. ಜನಿವಾರ; ಯಜ್ಞೋಪವೀತ. ೩. ಬೊಂಬೆಯನ್ನು ಹಿಡಿದಲೆದು ಆಡಿಸಲು ಉಪಯೋಗಿಸುವ ದಾರ. ೪. ಸಾರವತ್ತಾದ ನಾನಾರ್ಥಕವಾದ ಅರ್ಥಗಳನ್ನು ಹೊಂದಿರುವ ಸಂಕ್ಷಿಪ್ತಹೇಳಿಕೆ : ಅಲ್ಪಾಕ್ಷರಮುಂ ಅಸಂದೇಹಮುಂ ಸಾರಮುಳ್ಳುದುಂ ಪಲವುಂ ಪದಾರ್ಥಂಗಳನೊಳಕೊಂಡುಂ . . . ಅರ್ಥೋತ್ಪತ್ತಿ

ನಿಮಿತ್ತಮುಂ ಅಪ್ಪುದು ಸೂತ್ರಮೆಂಬುದು (ತತ್ತ್ವಪ್ರ ೩); ವೃತ್ತಿವ್ಯಾಸಂ ತದ್ವ್ಯಾಕುಲಮೆಂದಾ ಸೂತ್ರಕೃತ್ಯರ್ಥವೃತ್ತಿ ವರ್ತಿಸೆ ಪೇಳ್ದೆಂ (ಶಮದ. ನ. ೬); ಸೂತ್ರಗಳನ್ನು ಕಂದಪದ್ಯರೂಪವಾಗಿಯೂ ವೃತ್ತಿಗಳನ್ನು ಗದ್ಯರೂಪವಾಗಿಯೂ ಬರೆದಿದೆ (ಕೃಷಿ. ೨). ೫. ವಿಧಿ; ನಿಯಮ; ಕಟ್ಟಳೆ. ೬. ಸೂತ್ರರೂಪದಲ್ಲಿರುವ ಸಂಕ್ಷಿಪ್ತವಾದ ಹೇಳಿಕೆಯ ಅರ್ಥ, — ಸಾರಾಂಶ : ನಿರುಪಮತರ ಸೂತ್ರಾರ್ಥತತ್ತ್ವಪ್ರವೀಣಂ (ಸಿಕಾಪು. ೨-೫೧). ೭. (ಆಲಂ) ಹಿಡಿತ; ಹತೋಟಿ : ನಿನ್ನ ಸೂತ್ರದೊಳಾಡುವುವು ಚೈತನ್ಯ ಸಚರಾಚರಗಳೆಲ್ಲವು (ಹರಿಹಾ. ೬೯); ವಾದ್ಯಕಾರರ ಸೂತ್ರ ಗಾಯಕನ ಕೈಯಲ್ಲಿ, ಗಾಯಕ ವಾದಕರೆಲ್ಲರ ಸೂತ್ರ, ತಂಬೂರಿಯ ಕೈಯಲ್ಲಿ (ಭಾರದ. ೫೩೫). ೮. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ : ಯಮನಯನ ಕರ್ಣ . . . ನೇತ್ರಂ ಸೂತ್ರಂ ಕ್ರಮ ಚರಣಂ ಪದ ಯುಗಳಂ ಸಮ ಉಭಯಂ ಬಾಹು ಕಿವಿಗಳರಡಱ ನಾಮಂ (ವ್ಯವಹಾ. ೯-೨). ೯. [ಶೈವ] ವೈದಿಕಧರ್ಮದ ಕಟ್ಟಳೆಗಳನ್ನು ವಿಧಿಸುವ ಸೂತ್ರಶೈಲಿಯ ರಚನೆ (?): ಶೈವಾಗಮಾನುಷ್ಠಾನ ಮಾಡಲು . . . ದೀಕ್ಷಾಕ್ರಮವು ಶಾಖಾ, ಸೂತ್ರ, ಗೋತ್ರಪರಂಪರೆಯಲ್ಲಿ . . . ವಿವಿಧರೂಪಗಳಿಂದ ನಿರೂಪಿತವಾಗಿದೆ (ಭಾರದ.೭೫).

ಸೂತ್ರದ ಗೊಂಬೆ, ಸೂತ್ರದ ಬೊಂಬೆ = ೧. ದಾರವನ್ನು ಕಟ್ಟಿ ಮರೆಯಲ್ಲಿ ಹಿಡಿದೆಳೆಯುತ್ತ ಆಡಿಸುವ ಗೊಂಬೆ, — ಬೊಂಬೆ : ಸೂತ್ರದ ಗೊಂಬೆಯ ಆಟ ನೋಡಲು ಹೋಗಿದ್ದೆವು (ರೂಢಿ); ಸೂತ್ರದ ಬೊಂಬೆಯಂದದಿ ಕೆಡೆದರದಟರು (ಸಾಳ್ವಭಾ. ೨೩-೨೪); ವೆಂಗಡಾಚಾರ್ಯನೆಂಬವನು ಸೂತ್ರದ ಬೊಂಬೆಯಂತಾಡಿಸಿದೊಡಂತೆ ಭುವಿಯೊಳಾಡಿದ (ತಿರುಶ. ೧-೨೪೩). ೨. ಬೇರೆಯವರು ಹೇಳಿದಂತೆ ನಡೆಯುವವನು; ಅಸ್ವತಂತ್ರ: ಅವರ ನಡುವ ತಾನೊಂದು ಸೂತ್ರದ ಬೊಂಬೆ (ಮೂಪ್ರೇಮ. ೧೭೨). [ಸಂ.]

ಸೂತ್ರಕೃತ (ನಾ). [ಜೈನ] ಜೈನರ ದ್ವಾದಶಾಂಗವೇದಗಳಲ್ಲಿ ಒಂದು: ಆಚಾರ, ಸೂತ್ರಕೃತ, ಸ್ಥಾನ, ಸಮವಾಯ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಧರ್ಮಕಥಾ, ಉಪಾಸಕಾಧ್ಯಯನ, ಅಂತಕೃದ್ದಶ, ಔಪಪಾದಿಕದಶ, ಪ್ರಶ್ನವ್ಯಾಕರಣ, ವಿಪಾಕಸೂತ್ರ, ದೃಷ್ಟಿವಾದ ಎಂಬುವು ಹನ್ನೆರಡು ಅಂಗಗಳು (ಧಾತತ್ತ್ವ. ೨೨೮); ಅಂಗಶ್ರುತಜ್ಞಾನವು ಆಚಾರ, ಸೂತ್ರಕೃತ, ಸ್ಥಾನ . . . ವಿಪಾಕಸೂತ್ರ, ದೃಷ್ಟಿವಾದ ಎಂದು ಹನ್ನೆರಡು ಬಗೆಯಾಗಿದೆ (ಚೈನಧ. ೧೦೪). [ಸಂ.]

ಸೂತ್ರಕೃತಾಂಗ (ನಾ). = ಸೂತ್ರಕೃತ; ಇ "ಶ್ರುತಾಂಗಗಳಲ್ಲಿ ಒಂದು — ಇದರಲ್ಲಿ ಜ್ಞಾನವಿನಯ ಪ್ರಜ್ಞಾಪನಾ, ಕಲ್ಪಾಕಲ್ಪಭೇದೋಪಸ್ಥಾಪನಾ ಮತ್ತು ವ್ಯವಹಾರಧರ್ಮಕ್ರಿಯೆಗಳ ನಿರೂಪಣೆ ಇದೆ. ಇದಲ್ಲದೆ ಜೈನಶಾಸ್ತ್ರ ಮತ್ತು ಅನ್ಯಶಾಸ್ತ್ರಗಳ ನಿರೂಪಣೆಯೂ ಸಮಾವೇಶವಾಗಿದೆ. ಇದು ಮೂವತ್ತಾರುಸಾವಿರ ಪದಗಳುಳ್ಳುದು" (ಚೈನಕೋ. ೨೨೯): ಈ ವೇದಗಳಿಗೆ ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾ ಪ್ರಜ್ಞಪ್ತ್ಯಂಗ, ಜ್ಞಾತೃಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಔಪಪಾದಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ, ದೃಷ್ಟಿವಾದಾಂಗಗಳೆಂಬ ಹನ್ನೆರಡು ಅಂಗಗಳಿವೆ (ಭಾರದ.೧೭೯); (೧) ಆಚಾರಾಂಗ (ಚಾರಿತ್ರ್ಯ ಯಾವ ರೀತಿ ಇರಬೇಕೆಂದು ಹೇಳುವ ಶಾಸ್ತ್ರದ ವಿಭಾಗ), (೨) ಸೂತ್ರಕೃತಾಂಗ (ಶಾಸ್ತ್ರದ ಸೂತ್ರ ರಚಿಸುವಿಕೆ) . . . ಇವಲ್ಲದೆ ಉಪಾಧ್ಯಾಯರಿಗೆ ಹದಿನಾಲ್ಕು 'ಪೂರ್ವ'ಗಳ ಜ್ಞಾನವಿರುತ್ತದೆ (ಚೈನಪ್ರ. ೪೯೮). [ಸಂ.]

ಸೂತ್ರಕ್ಷೇತ್ರ (ನಾ). (ಕಟ್ಟಡಕ್ಕೆಂದು) ದಾರದಿಂದ ಅಳೆದು ಗೊತ್ತುಪಡಿಸಿದ ಸ್ಥಳ (?): ದ್ವಾರಶಾಖೆಯ ಕಾಳಾಗರುಧೂಪಧೂಮವಿಸರದ್ಧ್ಯಂಗೀನಿಸ್ಯಷ್ಟಾರ್ಥ ದೂತಿಯರಂ ಸೃಷ್ಟಿಸುತಿರ್ಪುದಾ ಪುರದ ಸೂತ್ರಕ್ಷೇತ್ರದೊಳ್ ಕೇರಿಕೇರಿಯ ಸೌಧೋತ್ತರ ಭೂಮಿಕಾಪ್ರಕರಬಿಭ್ರತ್ತುತ್ರಿಕಾವಿಭ್ರಮಂ (ಅನಂಪು. ೩-೧೭). [ಸಂ.]

ಸೂತ್ರಗಿಂಡಿ (ನಾ). ದಾರದಿಂದ ಸುತ್ತಿದ ಕಳಶ: ಚತುರ್ಮುಖತನು ಹೇಮದಂಡಕುಂಡಲಸೃಷ್ಟಿ ಚತುರ್ಭುಜ ಸೂತ್ರಗಿಂಡಿಗಳು (ದೇವಾಂಪು. ೨-೬೩).

[ಸೂತ್ರ? + ಗಿಂಡಿ?]

ಸೂತ್ರಗುತ್ತಗೆ (ನಾ). ನಿಗದಿಯಾಗಿ ಪಡೆದ ಭೂಮಿ: ನರಸಂಣನಯಕರು ಯೆಱಮನಯಕರು ಗಣಚಾರಿ ಲಿಂಗಯಿಗೆ ಸೂತ್ರಗುತ್ತಗೆ ಗ ೩೦ ಯಿ ಹುಣಸಹಳ್ಳಿ ಚತ್ರುಸೀಮೆ ಒಳಗಾಗಿ (ಎಕ.III (R), ಹೆಗ್ಗಡ. ೬೭-೬: 1497). 'ಕಟ್ಟುಗುತ್ತಗೆ', 'ಸ್ರೋತ್ರಗುತ್ತಿಗೆ' ಪರಾ. [ಸೂತ್ರ + ಗುತ್ತಗೆ]

ಸೂತ್ರಗುತ್ತಿ (ನಾ). = ಸೂತ್ರಗುತ್ತಗೆ: ಚೆಂನ್ನಿಗಯ್ಯನವರ ತಂಮ ಸಣ್ಣಪಗವುಡನವರು ತಂಮ ಸೂತ್ರಗುತ್ತಿಯ ಗ್ರಾಮಕ್ಕೆ ಸಲುವ ಕಪ್ಪಿನ ಮೂಲೆಯ ಹೊಲನ್ನು ಅತಿತಿವಾಲ್ಲಕ್ಕೆ ಕೊಟ್ಟ ಕೊಡಗೆ (ಮೃಅರಿ. ೧೯೩೧, ೫೫-೯; 1656).

[ಸೂತ್ರ + ಗುತ್ತಿ]

ಸೂತ್ರಗೊಂಬೆ (ನಾ). ದಾರವನ್ನು ಕಟ್ಟಿ (ತೆರೆಯ ಮರೆಯಲ್ಲಿ ನಿಂತು ಹಿಡಿದೆಳೆಯುತ್ತ) ಆಡಿಸುವ ಬೊಂಬೆ ; ಮಂಥರ ಸೀತೆ ರಾಮರಾವಣರೆಲ್ಲರುಂ ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ ? (ಶ್ರೀರಾಮಾ. ೫೯-೧೩೫). 'ಸೂತ್ರಬೊಂಬೆ' ಪರಾ. [ಸೂತ್ರ + ಗೊಂಬೆ]

ಸೂತ್ರಗೋಲು (ನಾ). ಹುರಿಯನ್ನು ಸೇರಿಸಿ ಕಟ್ಟಿರುವ ಕೋಲು; ಚಾಟಿ: ಕಕ್ಕಸದ ಕಡಿಯಾಣವನು ತಂದಿಕ್ಕಿದರು ಮಝು ಸೂತ್ರಗೋಲೊಳುಯಕ್ಕಸದ ಜಿಂಜಿರಿಯ ಕಡಿಯಲು ಕಂಡು ಹೆಬ್ಬರಗ ಪೊಕ್ಕ ಬೋನಿಂ ಪೊರಡುವಂದದಿಯಿಕ್ಕಡಿಯ ಮಾಡುತ್ತ ಹೊರಟಿತು (ನಾಗಪ. ೮-೧೧). [ಸೂತ್ರ + ಕೋಲು$_1$ (< ಕೋಲ್$_1$)]

ಸೂತ್ರಧರ (ನಾ). (ಆಲಂ) ಜಗತ್ತಿನ ಸೂತ್ರಧಾರ; ಪರಮಾತ್ಮ: ಸೂತ್ರವನಲುಗಿದೊಡೆ ತಕ್ಕುಣ್ಮ ಪಾಪಾವಳಿಗಳಾ ಹಾಹೆಗಳಿಗುಂಟೇ ಸೂತ್ರಧರನಿರಲು (ಕುಮಾಉ. ೯-೭೨). [ಸಂ.]

ಸೂತ್ರಧಾರ (ನಾ). ೧. ನಾಟಕದ ನಿರೂಪಕ, ನಿರ್ದೇಶಕ, ವ್ಯವಸ್ಥಾಪಕ ಅಥವಾ ನಟಿ: ಯುವತೀವ್ರಾತಮನೇಕಭೇದರಸಭಾವಂಗಳ್ ಪೂದಟ್ಟುಣ್ಮೆ ಪೂಣ್ಮುವಿನಂ ನರ್ತಿಸೆ ಸೂತ್ರಧಾರವಿಧಿಯಿಂ ಸುತ್ರಾಮನಂದಿಂತು ತಾಂಡವಲಾಸ್ಯಂಗಳ ಚೆಲ್ವನೊರ್ಮೆಯ ತದೀಯಾಸ್ಥಾನದೊಳ್ ತೋಱೆದಂ (ಆದಿಪು. ೭-೧೨೬); ಅಂಗಜನೆ ಸೂತ್ರಧಾರಂ ಶೃಂಗಾರಮೆ ನಾಟಕಂ ತದಂಕಂಗಳ್ ನಾಲ್ಕಂಗಂಗಳಾಗೆ ಕಾಮಿಜನಂಗಳ್ ವರ್ಗಿಗರ ತೆಱದೆ ನಟಿಯಿಸುತಿರ್ದರ್ (ಚಂದ್ರಪ್ರ. ೮-೯೨); ಸೂತ್ರಧಾರ —ವಿದೂಷಕ - ಕೆಲವು ನೀಚಪಾತ್ರಗಳು . . . ರಂಗಭೂಮಿಯ ಮೇಲೆ ನಡೆಯದೆ ಇದ್ದ ವಿವರಗಳನ್ನು ಪ್ರೇಕ್ಷಕರಿಗೆ ಹೇಳಿಕೊಡುತ್ತಿದ್ದರು (ಭಾರದ. ೫೭೩). ೨. ಬೊಂಬೆಗಳಿಗೆ ದಾರವನ್ನು ಕಟ್ಟಿ ತೆರೆಯ ಮರೆಯಲ್ಲಿ ನಿಂತು ಆಡಿಸುವವನು: ಸೂತ್ರಧಾರನಿಲ್ಲದೆ ಬೊಂಬೆಯಾಟ ನಿಂತಿತು (ರೂಢಿ). ೩. ದೇವಾಲಯ, ಸೌಧ ಮೊದಲಾದ ಕಟ್ಟಡಗಳಿಗೆ ರೇಖಾವಿನ್ಯಾಸವನ್ನು ಹಾಕಿ ನಿರ್ದೇಶನವನ್ನು ನೀಡುವ ವಾಸ್ತುಶಿಲ್ಪಿ: ಸುರಪತಿ ಸೂತ್ರಧಾರನಮರಾವಳಿ ಶಿಲ್ಪಿಗಣಂ (ಶಾಂತಿಪು. ೯-೧೫೮); ಮುಖ್ಯ ಸೂತ್ರಧಾರನು ದೇವಾಲಯದ ವಿನ್ಯಾಸವನ್ನು ಬರೆದು ಪ್ರತಿಯೊಂದು ಭಾಗದ ಅಳತೆಯನ್ನೂ ನಿರ್ಧರಿಸಿದ ಮೇಲೆ . . . ಓಜರು . . . ತಮ್ಮ ಚಿಹ್ನೆಗಳನ್ನು ಹಾಕುತ್ತಿದ್ದರು (ಹೊಯ್ಸಲಾ. ೧೪). ೪. ಇಂದ್ರ. ೫. (ಆಲಂ) ಸೂತ್ರವನ್ನು ಹಿಡಿದಿರುವವನು; ಮೊದಲಿಗ : ಕೃತಯುಗಾರಂಭಸೂತ್ರಧಾರನೆನಿಸಿದಾದಿಬ್ರಹ್ಮಂಗೆ ರಾಜ್ಯಾಭಿಷೇಕಂಗೆಯ್ದು ಬಗೆಯಂ ಬಗೆದು (ಆದಿಪು. ೮-೬೬ ವ). ೬. ಜಗತ್ತಿನ ಜೀವರನ್ನು ಬೊಂಬೆಗಳಂತೆ ಆಡಿಸುವವನು; ಪರಮಾತ್ಮ : ಶಿವಶಿವ ಸಲ್ಬುದೇ ಸಮರಮಿಂತೆನಗೆ . . . ಜಗದ ಜೀವರನಾಡಿಪ ಸೂತ್ರಧಾರನೊಳ್ (ಶಬಶಂ.೪-೧೨೩). [ಸಂ.]

ಸೂತ್ರಧಾರಕ (ನಾ). = ಸೂತ್ರಧಾರ ೬ : ಸುತ್ತುವನು ನಾನಾತೆಱದಲಿ ವಿಚಿತ್ರಚರಿತನು ಕಪಟನಾಟಕಸೂತ್ರಧಾರಕನೆಂದೆಱಿಸು ಸುಖಿಯಾಗು ನೀನು (ಕುಮಾಉ. ೪-೩೭). [ಸಂ.]

ಸೂತ್ರಧಾರಿ (ನಾ). = ಸೂತ್ರಧಾರ ೬ : ಸಂಸಾರನಾಟಕಸೂತ್ರಧಾರಿ ಮುರಾರಿ ಕೈವಱೆಗಾಡಿದಂ (ಜಗವಿ.೩-೫೩); ಎಷ್ಟಾದರೂ ನೀನು ಕಪಟನಾಟಕಸೂತ್ರಧಾರಿಯಲ್ಲವೇ! (ಹೇಮಕೂ. ೩). [ಸಂ. ಸೂತ್ರಧಾರಿನ್]

ಸೂತ್ರಧಾರಿತನ (ನಾ). ದೇವಾಲಯದ ಕಟ್ಟಡಕ್ಕೆ ನಿರ್ದೇಶನ ನೀಡುವ ಹೊಣೆಯನ್ನು ವಹಿಸಿಕೊಂಡಿರುವಿಕೆ : ಉಬ್ಬೋಜನ ಮಗ ಅಬ್ಬೋಜಗೆ ಮತ್ತ ಕಟ್ಟುXಕೆಱೆಯ ಕೆಳಗೆ ಸೂತ್ರಧಾರಿತನಕ್ಕೆ ಕೊಟ್ಟ ಗದ್ದೆ ಮತ್ತರೊನ್ದು ಬೆರ್ದ್ದಲೆ ಮತ್ತರು ಪನ್ನೆರಡು (ಎಕ. XI, ಜಗಳೂ. ೧೦-೩೪; 1054). [ಸೂತ್ರಧಾರಿ + - ತನ]

ಸೂತ್ರನಾಡಿ (ನಾ). ಶರೀರದ ನಾಡಿಗಳಲ್ಲಿ ಒಂದು : ಮಯೂರನಾಡಿ . . . ಸೂತ್ರನಾಡಿ . . . ಸಂತೋಷನಾಡಿ ಇಂತೀ ಪ್ರಥಮನಾಡಿಯೊಳಗಾದ ಶರೀರದಲ್ಲಿ ತೋಱುವ ನಾಡಿ ಜೀರ್ಣಪರ್ಣದಂತೆ (ಸರ್ವವ. ೨೦-೯೮). [ಸಂ.]

ಸೂತ್ರನಾಭಿ (ನಾ). ಒಂದು ಬಗೆಯ ಸಸ್ಯ; ಸರ್ಪಗಂಧಿ: ಸೂತ್ರನಾಭಿ, ಸರ್ಪಗಂಧಿ, ಪಾತಾಳಗಂಧಿ, ಶಿವನಾಭಬಳ್ಳಿ (ಮೃಗಿ. ೬೬-೧೩೧೧). [?]

ಸೂತ್ರಪಿಟಕ (ನಾ). [ಬೌದ್ಧ] ಮೂರು ಪಿಟಕಗಳಲ್ಲಿ ಒಂದು; ಸೂತ್ರ ರೂಪದಲ್ಲಿರುವ ಗ್ರಂಥಗಳ ರಾಶಿ: ಸೂತ್ರಪಿಟಕ, ವಿನಯಪಿಟಕ, ಅಭಿಧರ್ಮ ಪಿಟಕ ಎಂದು ಮೂರುಪಿಟಕಗಳು (ಒಂದಸಾ. ೨೪). [ಸಂ.]

ಸೂತ್ರಪ್ರಾಯ (ನಾ). ಪರಂಪರಾಗತವಾದ ಶಾಸ್ತ್ರಸ್ವರೂಪನಾದವನು: ಸದಸದ್ಭೇದಂಗಳಂ ಪೇಳ್ವವರ್ಸೂತ್ರಪ್ರಾಯರಜೇಯರೀಗಮಗುಪಾಧ್ಯಾಯರ್ಸುಖೋಪಾಯಮಂ (ಪಂರಾಮಾ. ೧-೪). [ಸಂ.]

ಸೂತ್ರಬದ್ಧತೆ (ನಾ). ನಿಯಮಬದ್ಧತೆ ; ಹೊಂದಾಣಿಕೆ : ಮಾಸ್ತರರ ಕತೆಯಲ್ಲಿ ಒಂದು ರೀತಿಯ ಸೂತ್ರಬದ್ಧತೆ ತೋರಹತ್ತಿತು (ಮೂರುದಾ. ೬೭). [ಸಂ. ಸೂತ್ರಬದ್ಧತಾ]

ಸೂತ್ರಬಳ್ಳಿ (ನಾ). ಪ್ರಾಣಿಗಳ ಬೇಟೆಯಾಡಲು ಶಿಸ್ತು, ಕಟ್ಟು, ಕ್ರಮವನ್ನನುಸರಿಸುವಾಗ ಮೃಗವು ಬರುವ ದಾರಿಗೆ ಅಡ್ಡವಾಗಿ ಕಟ್ಟುವ ಒಂದು ಬಗೆಯ ಬಳ್ಳಿ: ಕೋವಿಯ ಬಾಯಿ ಮೃಗಗಳು ಬರುವ ದಾರಿಯ ಕಡೆಗಿರುವಂತೆ ಮಾಡಿ, ಕೋವಿಯನ್ನು ಗೂಟಗಳ ಮೇಲಿಟ್ಟು ಬಳ್ಳಿಗಳಿಂದ ಅದನ್ನು ಕಟ್ಟಿ ಕೋವಿಯ ಬಿಲ್ಲಿಗೆ ಸಂಪರ್ಕವಿರುವಂತೆ ಮೃಗ ಬರುವ ದಾರಿಗೆ ಅಡ್ಡಲಾಗಿ ಉದ್ದವಾದ ಸೂತ್ರಬಳ್ಳಿಯೊಂದನ್ನು ಕಟ್ಟುತ್ತಾರೆ (ಪಂಜಪಂ. ೨೨). [ಸೂತ್ರ + ಬಳ್ಳಿ]

ಸೂತ್ರಬೊಂಬೆ (ನಾ). = ಸೂತ್ರಗೊಂಬೆ : ಚಿತ್ತಜನ ಸೂತ್ರಬೊಂಬೆಗಳಂತೆ ನಾರಿಯರು ವೂಳಿಗಮನಾಂತರ್ದರು (ಸವಮೋ. ೩-೨೪). [ಸೂತ್ರ + ಬೊಂಬೆ]

ಸೂತ್ರಮಾರ್ಗ (ನಾ). ಸಂಕ್ಷಿಪ್ತವಾದುದರಲ್ಲಿ ಸಂಪೂರ್ಣ ಹೇಳಿಕೆಯನ್ನು ನೀಡುವ ರೀತಿ : ಸೂತ್ರಮಾರ್ಗದೊಳೊರೆದನಾಂಜನೇಯಂ ಕಿರಿದುಬೇಗದಿ ತನ್ನ ಪರಿಚಯವನ್ (ಶ್ರೀರಾಮಾ. ೪೩೦-೨೭೭). [ಸಂ.]

ಸೂತ್ರರತ್ನ (ನಾ). ಹಾರದಲ್ಲಿ ಇರುವ ಮಣಿಯಂತಿರುವವನು: ವನಿತಾನಾಯಕರತ್ನಂ ತನೂದರೀಕನಕಸೂತ್ರರತ್ನಂ . . . ಎನಿಸಿದಂ ಕವಿರತ್ನಂ (ಗದಾಯು. ೧-೪೬). [ಸಂ.]

ಸೂತ್ರರುಚಿ (ನಾ). [ಜೈನ] ಹತ್ತು ಪ್ರಕಾರದ ದರ್ಶನಾರ್ಯರಲ್ಲಿ ಒಬ್ಬನು; ಸಮ್ಯಗ್ದರ್ಶನದ ಆಚಾರಗಳನ್ನು ಮುನಿಗಳ ಮೂಲಕ ಸೂತ್ರರೂಪದಲ್ಲಿ ಕೇಳಿ ಅರಿತು, ಶ್ರವಣಮಾತ್ರದಿಂದಲೇ ಸಮ್ಯಗ್ದರ್ಶನಾಧಿಕಾರವನ್ನು ಪಡೆಯಬಲ್ಲವನು: ದರ್ಶನಾರ್ಯರ್ ಆಜ್ಞಾಮಾರ್ಗೋಪದೇಶ ಸೂತ್ರಬೀಜ ಸಂಕ್ಷೇಪ ವಿಸ್ತಾರಾರ್ಥ ಅವಗಾಢಪರಮಾವಗಾಢರುಚಿಭೇದದಿಂ ದಶವಿಧಂ . . . ಮುನಿಚರಣವಿಧಾನ ಸೂಚಕಾಚಾರಾದಿ ಸೂತ್ರಶ್ರವಣಮಾತ್ರೋದ್ಭೂತ ಸಮ್ಯಗ್ದರ್ಶನೋಪೇತರ್ ಸೂತ್ರರುಚಿಗಳೆಂಬರ್ (ತತ್ತ್ವಪ್ರ. ೧೭೩). [ಸಂ.]

ಸೂತ್ರವೇಷ್ಟನ (ನಾ). ನೆಯ್ಗೆಯವರ ಲಾಳಿ : "ತ್ರಸರಃ, ಸೂತ್ರವೇಷ್ಟನಂ - ೨ ನೇಯಿಗೆಯವರು ನೂಲು ಸುತ್ತುವ ಅರಟೆ" (ಸಿದ್ಧಾಂತಿ. ೩೬೪). [ಸಂ.]

ಸೂತ್ರಾಭ್ರ (ನಾ). ರಂಗಸ್ಥಳದ ಮೇಲೆ ದಾರಕ್ಕೆ ಅಳವಡಿಸಿದ ಕೃತ್ರಿಮವಾದ ಮೋಡ,— ಮುಗಿಲು: ಗಿರಿಸುತೆ ಶಚಿಶಾರದೆಯರಂಗನೆಯರ ಬಿರುದಿನ ಪಾತ್ರಕ್ಕೆ ಮೆಚ್ಚಿ ಕರವ ಪೂಮಳೆಯನೆ ಸೂತ್ರಾಭ್ರಗಳಿಂದ ಪರಿಮಳಪುಷ್ಪ ಸೂಸಿದುವು (ಕಂಸವ. ೮-೬೭). [ಸಂ.]

ಸೂತ್ರಾರ್ಥಂಬೆಱು (ಕ್ರಿ). ಸೂತ್ರದ ಅರ್ಥವನ್ನು ಪಡೆ,— ಹೊಂದು : ಧಾತ್ರೀ ಚಂದ್ರೇಂದುಧರಂ ಸೂತ್ರಾರ್ಥಂಬೆತ್ತ ಗಣಂ ಧಾತ್ರೀಪೂಜ್ಯಂ (ಛಂದೋಲಂ. ೨-೮೬).

[ಸೂತ್ರಾರ್ಥ + ಪಱು]

ಸೂತ್ರಾವೇಷ್ಟಿತ (ನಾ). ದಾರದಿಂದ ಸುತ್ತಿದುದು,— ಕಟ್ಟಿದುದು: ಕರ್ಪೂರಗಂಧ ಶಾಲ್ಯಕ್ಷತಂಗಳಂ ಮುನ್ನಿನ ದಿವಸಮಮ್ಮ ಗೃಹೋದ್ಯಾನವನದ ಕನಕ ಸರೋರುಹಂಗಳೆಸಟ್ಟಳೊಳಗೆ ತೀವಿ ಪೊಯ್ದು ಸೂತ್ರಾವೇಷ್ಟಿತಮಾತ್ರಂಗಳಾಗಿ ಮಾಡಿ . . . ಕಂಪಿಸಲ್ ಪೊಂಪುಱಿವೋಗುತ್ತಿರ್ದ ತಂಡುಲಂಗಳಂ ಕಳೆದುಕೊಂಡು ಬಾಗಿದೋಗರಮನಾರೋಗಿಸುವಂ (ಸುಕುಮಾ. ೧೧-೩೫ ವ). [ಸಂ.]

ಸೂತ್ರಿಕ (ನಾ). ಸೂತ್ರವನ್ನು ಹಿಡಿದು ಆಡಿಸುವವನು; ಸೂತ್ರಧಾರ : ಬೊಮ್ಮನೆ ನಿಸುವ ಸೂತ್ರಿಕಂ ದೇವತೆಗಳೆಂಬ ಹಂಸೆಗಳನಾಡಿಪ ಕಂಭಮೋ (ಭಾವಚಿಂ. ೧-೨೪); ಕಾಷ್ಠದಲ್ಲಿ ಬೊಂಬೆಯ ಮಾಡಿ ಪಟ್ಟುನೂಲ ಸೂತ್ರವ ಹೂಡಿ ತೆರಯ ಮಱೆಯಲ್ಲಿ ನಿಂದು ಸೂತ್ರಿಕನು ಕುಣಿಸಿದಡೆ ಕುಣಿಯುತಿರ್ಪುದು (ಅಖಂಡೇ. ೩೦೭-೯೧). [ಸಂ.]

ಸೂತ್ರಿಕೆ (ನಾ). ೧. ದಾರ; ನೂಲು: ಉಡಿದ ಮಿಣಿ ಮೂಗರಂಬ ಗದ್ದುಗೆ ಬಡಿಗಗಳ ಸೂತ್ರಿಕೆಯ ಕಬ್ಬಿಯ ಕಡಿಯಣದ ಕುಸುರಿಗಳಲೆಸೆದುದು ಕೂಡೆ ರಣಭೂಮಿ (ಕುವ್ಯಾಕ. ೧೫-೩೧). ೨. ಒಂದು ಬಗೆಯ ಖಾದ್ಯ; ಶಾವಿಗೆ. [ಸಂ. ಸೂತ್ರಿಕಾ]

ಸೂತ್ರಿಸು (ಕ್ರಿ). ೧. ಅಳತೆಗಾಗಿ ನೂಲನ್ನು (ನೇರವಾಗಿ) ಇಡು: "ಸೂತ್ರಿಸು - ಮಾನಸೂತ್ರಸ್ಥಾಪನೇ (ಅಳಿಯುವ ನೂಲನ್ನು ಇಡು)" (ಶಮಧಾ). ೨. ಗೆರೆಯನ್ನು ಎಳೆ : ಚಿತ್ರಿಸಬಾರದವನ ರೂಪು ಕರುವಿಟ್ಟು ಸೂತ್ರಿಸಿಯೆರೆಯಲಶಕ್ಯ (ಭರಚಿ. ೧-೪೯). ೩. ಪೋಣಿಸು; ಸೇರಿಸಿ ಕಟ್ಟು: ಸರಳ ಸೂತ್ರದಲಹಿತವೀರರ ಶಿರವ ಸೂತ್ರಿಸಿ ಕಾಲಕಂಠನ ಕೊರಳಲಿಕ್ಕುವೆನೆನುತ ಬಿಲುದುಡುಕಿದನು (ತೋರಾ. ೩-೫೫-೧೨). ೪. ಜೋಡಿಸು; ಸೇರಿಸು: ತಳರ್ತ ಕಲ್ಪಲತೆಯ ಕಾವಣದಂತಿರ್ದ ವಿತರಣಮಣಿಮಂಡಪದಿಂ ಸೂತ್ರಿಸಿದ ಚಿತ್ರಪುತ್ರಿಕೆಯ ಲಾವಣ್ಯರಸಮೊಸರ್ವಂತೆ ಚಾಮರದೆಲರಲಪಿನೊಳ್ಗೂಱುವ ಸಣ್ಣಧಾರೆಯಂ ಸೂಸುವ ಧಾರಾಗೃಹದಿಂ (ಮಲ್ಲಿಪು. ೨-೭೪); ಸೂತ್ರಿಸಿದ ನೇತ್ರಾವಳಿಯ [ಪಾಶಾಂ. ಪೊಣ್ಮೆದ ಪುಷ್ಪಾವಳಿಯ] ಹವಣಿಸಿದ ಹಂಸಾವಳಿಯ ಸಕಲಸೌಂದರ್ಯಮನೊಳಕೊಂಡ ಮೇಲ್ಕಟ್ಟಿನ ಬೆರಕೆವಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವೆ (ಗಿರಿಕ. ೧೦-೨೮ ವ); ಬೆಳಸಿ ನಿಜಬಾಲವನು ಶರಧಿಯ ವಲಯದಿತ್ತಡಿಗಳನು ಸೂತ್ರಿಸಿ ಅಳೆದನಗ್ಗದ ವೀರರೆಲ್ಲರು ಕಂಡು ಬೆಱಗಾಗೆ (ಕೌಶಾ. ೧೬-೬). ೫. ಸೂತ್ರವನ್ನು ರಚಿಸಿ ಹೇಳು ; ಸೂತ್ರರೂಪದಲ್ಲಿ ಹೇಳು: ಅಂತು ಸೂತ್ರಿಸಿದ ಸೂತ್ರ[ದ] ವೃತ್ತಿ ನಿಜಾತ್ಮವೃತ್ತಿವೋಲ್ ಪರಿಣಮಿಸಿತ್ತು (ಪಂಪಭಾ. ೨-೭೪); ಸೂತ್ರಮನೆ ಮುನ್ನ ಪಾಣಿನಿ ಸೂತ್ರಿಸೆ ಜೈನೇಂದ್ರಬುದ್ಧಿ ಮಾಡಿದಂ (ಸಮಪ. ೨-೭೮). ೬. ಅಪ್ಪಣೆಮಾಡು; ನಿರ್ದೇಶಿಸು: ಕೃಷ್ಣ ನೃತ್ಯಮಂ ಸೂತ್ರಿಸುವುದುಮೊಲವಿಂ ಪಾಡುತುಂ ಗೋಪಿಯರ್ ನರ್ತಿಸಿದರ್ ಚೈತ್ರಾನಿಳಂ ಸೂತ್ರಿಸೆ ವನಲತೆಗಳ್ ನರ್ತಿಪೊಂದಂದದಿಂದಂ (ಜಗವಿ. ೫-೭); ಪತ್ರಮನಿದನವನೀಪತಿ ಸೂತ್ರಿಸಿದವೊಲುತ್ತಮಾಂಗದೊಳ್ ತಾಳ್ದಿ ಭವದ್ಧಾತ್ರಿಯನಾಳಲ್ಲದೊಡಸಿಪತ್ರಂ ನಿಜಮಸ್ತಕಕ್ಕೆ ತಡೆಯದೆ ಬರ್ಕುಂ (ಶಾಶ್ವಪು. ೨-೭೮). ೭. ತೀರ್ಮಾನಿಸು; ನಿಶ್ಚಯಿಸು: ಪುತ್ರಕಳತ್ರಪರಿಗ್ರಹಗಾತ್ರಧನೈಶ್ವರ್ಯಮೆಂಬಿವರ್ಗಮನಿತ್ಯಂ ಧಾತ್ರಿಯೊಳ್ತೆಂಬುದನೀಗಳ್ ಸೂತ್ರಿಸಿತೆನ್ನರ್ದೆಯೊಳುಳ್ಳೆ ಬಿಟ್ಟೀಯುಳ್ಕಂ (ಪುಷ್ಪಪು. ೧೩-೨೬). ೮. ಧರಿಸು; ತಳೆ: ಧೈರ್ಯದೊಳು ಕ್ಷತ್ರಿಯಕಾಂತೆಯರಲ್ಲವೆ ಬಿಸುಟರು ಸೂತ್ರಿಸಿದಖಿಲಭೂಷಣವ (ಭರಚಿ. ೬೭-೧೨೨). [ಸೂತ್ರ + - ಇಸ್ಸು]

ಸೂತ್ರೀಕರಿಸು (ಕ್ರಿ). ಒಟ್ಟುಗೂಡಿಸು; ಸಂಯೋಜಿಸು: ಭಿನ್ನಭಿನ್ನ ಕಡೆಗೆ ವಿಭಕ್ತರಾದ ಭಾರತೀಯರನ್ನು ಏಕತ್ರ ಸೂತ್ರೀಕರಿಸುತ್ತ ಜಗದಗಲವನ್ನು ಕಿರಿದುಗೊಳಿಸಿ (ಮುಂಗಾಪು. ೩೧); ಸಮನ್ವಯಸಿದ್ಧಾಂತವನ್ನೇ . . . ಪ್ರತಿಷ್ಠಾಪಿಸುವ ಭಗವದ್ಭಾಣ ಮೊದಲ ಮಾತಿನಲ್ಲಿಯೇ ಧರ್ಮಕರ್ಮಗಳನ್ನು ಸಮನ್ವಯಿಸಿ ಸೂತ್ರೀಕರಿಸಿರುವುದನ್ನು ಕಾಣುತ್ತೇವೆ (ಭಾರದ. ೧೧೧). [ಸೂತ್ರೀಕರಣ + - ಇಸ್ಸು]

ಸೂತ್ರೆಯ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣನಿಗೆ ತೆರಿಗೆಯಿಲ್ಲದೆ ಕೊಡುವ ಭೂಮಿ (?): ಹುರದ ಚೆಂನೊಡೆಯರು ಮಲ್ಲರಾಜೊಡೆಯರು ಮಯಿಸೂರ ತಿಂಮರಾಜವಡೆಯರಿಗೆ ನಂಮ ಸಂನ್ನಿಗಹಳ್ಳಿ ಮಿಂಣನ ಹಳ್ಳಿಯ ಗ್ರಾಮ ೨ ನೂ ನಿಮಗೆ ಸೂತ್ರೆಯವಾಗಿ ಕಲ್ಲ ನೆಡಿಶಿ ಕೊಟ್ಟೆವಾಗಿ (ಎಕ. V (R), ಮೈಸೂರು. ೨೦೦-೬; ಸು. 17 ನೆಯ ಶತ). [< ಸಂ. ಶ್ರೋತ್ರಿಯ?]

ಸೂತ್ಸವ (ನಾ). ಒಳ್ಳೆಯ ಉತ್ಸವ; ಶ್ರೇಷ್ಠವಾದ ಉತ್ಸವ: ಬಳೆಯ ಸರ್ವವಿಭೂಷಣಕ್ಕೆ ಮೊದಲ್ಕೆ ಪುತ್ರೋತ್ಸವಂ ಸೂತ್ಸವಂ (ಸೋಮೇಶ. ೧೪). [ಸಂ.]

ಸೂದ (ನಾ). ೧. ನಾಶ; ಧ್ವಂಸ. ೨. ಅಡುಗೆಯನ್ನು ಮಾಡುವುದು : (ಕ).

೩. ಅಡುಗೆಯನ್ನು ಮಾಡುವವನು; ಬಾಣಸಿಗ: "ಆರಾಳಿಕಃ, ಸೂಪಕಾರಃ, ಸೂದಃ, ವಲ್ಲವಃ- ಈ ೪ ಬಾಣಸಿಗಂ" (ಹಲಾಯು. ೭೧-೨೭೭). ೪. ಅನ್ನದೊಂದಿಗೆ ಕಲಸಿಕೊಳ್ಳುವ ವ್ಯಂಜನಪದಾರ್ಥ; ಮೇಲೋಗರ: "ಸೂದ ೧. ಅನ್ನದ ಪರಿಕರ, ಅಡಿಗೆಯವನು ೨"(ಸಿದ್ಧಾಂತಿ. ೩೯೮). ೫. ಪಕ್ವವಾದ ಯಾವುದೇ ಬಗೆಯ ಭಕ್ಷ್ಯ. ೬. ಕೆಸರು; ಕೊಚ್ಚೆ. ೭. ಪಾಪ; ಕಳಂಕ. ೮. ಒಂದು ಬಗೆಯ ಔಷಧದ್ರವ್ಯ: ಸರ್ವರೋಗಕ್ಕೆ:- ಶುದ್ಧರಸ, ಬಿಳುಗಾರ, ಗಂಧಕ, ಸೂದ, ಸಾಂಬೆ . . . ಕೊಡಲು ಸರ್ವರೋಗಹರ (ವೈದ್ಯವಿ. ೯೬). [ಸಂ.]

ಸೂದಕರ್ಮ (ನಾ). ಅಡುಗೆಯನ್ನು ಮಾಡುವುದು; ಬಾಣಸಿಗನ ಕೆಲಸ.

[ಸಂ. ಸೂದಕರ್ಮನ್]

ಸೂದಕರ್ಮಜ್ಞ (ನಾ). ಅಡುಗೆಯ ಕೆಲಸವನ್ನು ಬಲ್ಲವನು; ಬಾಣಸಿಗನ ಕೆಲಸವನ್ನು ಅರಿತಿರುವವನು: ಪೂರಯೊಳಿಹ ಸೂದಕರ್ಮಜ್ಞರೊಡನೆ ಪೊತ್ತು ಕಳೆಯದೆ ತನ್ನ ತನುವನೆರಡಾಗಿ ಮಸೆವೆತ್ತ ಕರಪತ್ರದಿಂ ಸೀಳ್ಬುದೆಂದಾಜ್ಞಾಪಿಸುತ್ತಿರೆ (ಚೈಮಿಭಾ. ೨೬-೫೫). [ಸಂ.]

ಸೂದನ (ನಾ). ೧. ವಿನಾಶಗೊಳಿಸುವಿಕೆ; ಧ್ವಂಸಗೊಳಿಸುವಿಕೆ. ೨. ಕೊಲ್ಲುವಿಕೆ; ಕೊಲೆ: "ವಿಶಸನ ಮಾರಣ ವಿಶರಣ ನಿಶುಂಭನ ಕ್ಷಣನ ಸೂದನ . . . ಹಿಂಸಾರ್ಥಕಂ ವಧಂ ತಾನಕ್ಕುಂ" (ವಸ್ತುಕೋ. ೮೨-೪). ೩. ಕೊಲ್ಲುವವನು; ಹಗೆ; ವೈರಿ : ಬಳಸೂದನ ಸದನನಪ್ಪೆನಗೆ ನಂದನಂದನನೊಳ್ ಸಂಧಾನಂ ನೀತಿನಿಂದಿತಮುಂ (ಜಗವಿ. ೫-೬೧ ವ); ಖರಸೂದನಂ ಕಂದನಾ ಕಡಿದ ಪೆರ್ಮಱನ ತೆರನ ಜಟಾಯುಖಗವರನ (ಶ್ರೀರಾಮಾ. ೨೫೯-೮೪೫). [ಸಂ.]

ಸೂದಾಧ್ಯಕ್ಷ (ನಾ). ಅಡುಗೆಯ ಕಾರ್ಯದ ಮುಖ್ಯಸ್ಥ: "ಪೌರೋಗವಃ, ಸೂದಾಧ್ಯಕ್ಷಃ- ಈ ೨ ಬಾಣಸುವೆಗ್ಗಡೆ" (ಹಲಾಯು. ೭೧-೨೭೭). [ಸಂ.]

ಸೂದೂಱು (ನಾ). ಒಂದು ಊರಿನ ಹೆಸರು : ಇದುವೆ ಸೂದೂಱು ಸೊಯ್ಯವಾಲರ ಯ್ಯಂಮನ್ಗೆ ಧರ್ಮ್ಮ ತೂಂಬುಂ ಕೊಟ್ಟರ್ (ಎಕ.XIV, ತಿರುಮ. ೨೫೩-೧೧; ಸು. 800).

[? + ಊಱು ? (< ಊರ್)]

ಸೂದ್ರಕಯ್ಯ (ನಾ). ಒಬ್ಬಾತನ ಹೆಸರು: ಶ್ರೀಮತ್ ಸೂದ್ರಕಯ್ಯಕರಮ್ಬಳಿಗೆ ಸಾಯಿರಮುಮನ್ . . . ಸುಖದಿನಾಳುತ್ತಿರೆ (ಎಕ. XI, ಹೊಳೆಶ್ವ. ೨೩-೮; 968). 'ಸುದ್ರಕ' ಪರಾ. [ಸೂದ್ರಕ + ಅಯ್ಯ]

ಸೂದ್ರಿತಿ (ನಾ). ಶೂದ್ರರ ಹೆಂಗಸು: ಬೆಂದ ಮನೆಬಾಗಿಲಿಗೆ ಮುಂದ ತೋರಣವೇಕೆ ಸಂದ ಸೂದ್ರಿ[ಪಾಠಾಂ. ಶೂದ್ರ]ತಿಯ ಒಡನುಂಬ ಹಾರುವಗ ಮಿಂದೂಟವೇಕೆ (ಸರ್ವಜ್ಞ. ೯೧೯). [ಸೂದ್ರ + - ಇತ್ತಿ₁(< - ಇತ್ತಿ)]

ಸೂನ (ಗು). ೧. ಹುಟ್ಟಿದ; ಉತ್ಪತ್ತಿಯಾದ. ೨. ಅರಳಿದ; ವಿಕಸಿಸಿದ. ೩. ಹಡೆದ; ಪ್ರಸವಿಸಿದ. (ನಾ). ೪. ಅರಳಿದ ಹೂವು, — ಪುಷ್ಪ: ಸೂನದ ತಾಳವೃಂತದಿಂ ಬೀಸು (ನರಚ. ೧೧೫-೩೧೦). [ಸಂ.]

ಸೂನಂಗಿ₁ 'ಸೂನಗೆ' ನೋ.

ಸೂನಂಗಿ₂ 'ಸೂಲಂಗಿ₂' ನೋ.

ಸೂನಗಿ 'ಸೂನಗೆ' ನೋ.

ಸೂನಗಿಗಟ್ಟು (ಕ್ರಿ). ಕಠಾರಿಯನ್ನು ಕಟ್ಟು: ಕೊರಳ ಜೊತ್ತಗೆ ಸುರುಚಿರ ಬೆನ್ನ ಮಿಣಿ ಮತ್ತುರದೊಳು ಪೊನ್ನಘಂಟೆಗಳು ನಿರುಪಮವಾದ ಸೂನಗಿಗಟ್ಟಿ ಬಂದವು ಧರೆ ತೆಱಪಿಲ್ಲವೆಂಬಂತೆ (ಅಂಜಚ. ೬-೯೮). [ಸೂನಗಿ (< ಸೂನಗೆ) + ಕಟ್ಟು₁]

ಸೂನಗಿಗತ್ತಿ (ನಾ). ಒಂದು ಬಗೆಯ ಕತ್ತಿ, — ಕಠಾರಿ : ಕೋಡ ಮೊನೆಯೊಳ್ತಗುಳ್ಚಿದ ಸೂನಗಿಗತ್ತಿಯ [ಪಾಠಾಂ. ಸೂನಗತ್ತಿಯ, ಸೂನುಗಿಗತ್ತಿಯ] ಕೊನೆ ಗೊಡಂಕೆಯೊಳ್ ತೊನೆವ ಬಿಳಿಯ ಚಾಮರದ . . . ಗಂಧಸಿಂಧುರಸಂದೋಹದಿಂ (ರಾಜಶೇ. ೬-೧೧ ವ). [ಸೂನಗಿ (< ಸೂನಗೆ) + ಕತ್ತಿ]

ಸೂನಗಿಬಿಲ್ಲು 'ಸೂನಗಿವಿಲ್ಲು' ನೋ.

ಸೂನಗಿವಿಲ್ಲು, ಸೂನಗಿಬಿಲ್ಲು, ಸೂನಿಗೆವಿಲ್ಲು (ನಾ). ಕಠಾರಿಯಂತೆ ಚೂಪಾದ ಅಂಚನ್ನು ಉಳ್ಳ ಬಿಲ್ಲು: ಪಿಡಿದಂಬುಗಳು ತೀರೆ ಸೂನಗಿ ವಿಲ್ಲಂದುಡಿಯಲುಡಿಯ ಸುರಗಿಯೊಳು ಬಿಡದಿಱಿದಾಡಿ ಬಿಲ್ಲಡೆ ಮಡಿದುದು (ಕುರಾಸಾಂ. ೧೨-೬೦). ಸೂನಗಿಬಿಲ್ಲು : ಕಣಗಳು ತೀರೆ ಸೂನಗಿಬಿಲ್ಲುಗಳಿಂದೆಣಸದ ಪೊಕ್ಕಿಱಿದಾಡಿ (ಕುರಾಸಾಂ. ೧೨-೫೯). ಸೂನಿಗೆವಿಲ್ಲು: ತರಕಸ ಸಿಂಗಾಡಿ . . . ಸುರಗಿ ಸೂನಿಗ[ಪಾಠಾಂ. ನಗಿ]ವಿಲ್ಲು ಪರಿಗೆ ಪಕ್ಕರೆಗಳಿಂ ಕರಮೆಸೆದುದು ರಣಭೂಮಿ (ಕುರಾಸಾಂ. ೪೦-೪೨). [ಸೂನಗಿ (< ಸೂನಗೆ) + ಬಿಲ್ಲು₁ (< ಬಿಲ್₂)]

ಸೂನಗೆ, ಶೂಲಿಗೆ, ಸುನಗಿ, ಸೂನಂಗಿ₁, ಸೂನಗಿ, ಸೂನಿಗೆ, ಸೂಲಂಗಿ₁, ಸೂಲಗಿ, ಸೂಲಿಗೆ (ನಾ). ೧. ಒಂದು ಬಗೆಯ ಆಯುಧ: ಪಚ್ಚಡಮಂ ದುಂಡನಾಗಿ ದಂಡೆಯಂ ಸುತ್ತಿ ಸೂನ[ಪಾಠಾಂ. ನಿ]ಗೆಯನೆತ್ತಿ ಪರಿವ ತತ್ತಿಗವೀರರುಮಂ (ಲೀಲಾವ. ೫-೧೧ ವ); ಬೀಸುನೇಣನ ಸೆಳೆವ ನೇಗಿಲ ಸೂಸುಗಣೆಗಳ ಕಡಿವ ಕೊಡಲಿಯ ಕೈ ಸುರಗಿ ಸೂನಗೆಯ ನಾನಾಯುಧದ ಗಡಣೆಗಳ (ಕುವ್ಯಾಭೀ. ೪-೬೨). ಶೂಲಿಗೆ: ೧. ತೂಕಿ ತಾಗುವ ಶೂಲಿಗೆಯ ತುಂಡಿಸುವ ವಂಕಿಯ ನೆಡುವ ಬಲ್ಲೆಹದ ಸೀಳುವಿಟ್ಟಿಯ . . . ಧಾಳಾಧೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಸಿನಲಿ (ಕುವ್ಯಾಕ. ೧೧-೯); ನಿಲಿಸಿದನು ಶೂಲಿಗೆ[ಪಾಠಾಂ. ಸೂನಿಗೆ]ಯ ಬಂಡಿಯ (ತೂರರಾ.೬-೧೯-೧೮). ಸುನಗಿ : ೨. ಜಯಸೂಚಕ ಪತಾಕೆ: ರಥದಲಿ ತತ್ತಿಸಿದ ಸುನಗಿಯಾ ಸೀಗುರಿ ಪತಾಕೆಗಳಾ . . . ಕಾಲಾಳೊತ್ತರಿಸಿ ಬರೆ ಕಮಟ ಕೂರ್ಮರ ನೆತ್ತಿನೆಗ್ಗಲು ನಡೆದುದಗಣಿತಸೇನೆ ವಹಿಲದಲಿ (ರಾಮಚ. ೮೭). ಸೂನಂಗಿ₁ : ೧. ಕಾಯ್ದು ಕಡು ಕೆಂಬಾದ ಹಿರಿಯ ಸೂನಂಗಿಗಳ ಹಾರೆಯಂ ನೆತ್ತಿತನಕಂ ಹಾಯಿಸಿ (ವೀಶೃಪು. ೪-೧೯-೫೩); ಕೊರಳ ರತುನದ ದಂಡೆಗಳ ಮೊಗಸಿರಿಯ ಹಲ್ಲಣ ಹಕ್ಕರಿಕೆಗಳ ಶಿರದ ಸೂನಂಗಿಗಳ . . . ತುರಗಗಳ ಜೋಡಣೆಯ ಕುಣಿಕುಣಿಸಿದರು ರಾವುತರು (ಆನಂರಾ. ೬-೨-೧೬). ಸೂನಗಿ : ೧. ಕೋಡುಗಳಿಗೆ ಸೂನಗಿಗಳ ಸೇರಿಸಿ ಜೋಡಿಸಿ ಪಣೆಗೆ ಕೂರಲಗ ಕೂಡೆ ಕಾದಿಸುವರು ಕೋಣಗಳನು (ಕುರಾಸಾಂ. ೪-೭೮); ಸುರಗಿ ಸೂನಗಿ ಶಕ್ತಿ ಕರವಾಳು . . . ತೋಮರ ಮಾರಿವದನ ಮುದ್ಗರ ಮೊದಲಾದಾಯುಧದೊಳು (ಭೃರವೇ. ೩-೯). ಸೂನಿಗೆ : ೧. ಕಂಡೆನೊಂದು ನೆಟ್ಟ ಶೂಲದ ಮೊದಲೊಂದು ತುದಿ ಮೂಱು ಆ ಮೂಱರ ತುದಿಯಲ್ಲಿ ಆಱು ಸೂನಿಗೆ ಆಱು ಸೂನಿಗೆಯ ಮೇಲೆ ಇಪ್ಪತ್ತೈದು ಹೆಣ (ವೋಳಮಾ. ೨೨೪-೭೭೭); ಹೊಗರೊಗುವ ಸೂನಿಗೆಯ ಸುಪತಾಕೆಗಳ ಸಿಂಧದ ಹೊಳೆವ ಹೊಂಗಂಬುಗೆಯ ಹೂಡಿದ ಹಯದ ಸೂತರ ಗಳದ ಗರ್ಜನೆಯ (ಕುವ್ಯಾಭೀ. ೩-೧೯). ಸೂಲಂಗಿ₁ : ೧. ಒಡ್ಡಿದ ಸೂಲಂಗಿಗಳಿಂದೊಡ್ಡಿಹ ಡೆಂಕಣಿಯ ಮೇಲೆ ಆಲುವ ಹೆಣ (ನನ್ನಚಾ. ೪-೧೭೨); ಕೊಂಬಿಗೆ ಸೂಲಂಗಿ ಸುಂಡಿಲ ಪಟ್ಟೆ ಮೈತುಂಬಿದ ಅಂಚಿಕೆಯಾನೆ ಮುಂಬರಿದೊತ್ತಿ (ನಾಗಕು. ೧೭-೭೪). ೩. ಮೊಲ : ಆನೆ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟಿದ ಹಾಗೆ ಅಂತಾರಲ್ಲಾ ಹಾಗೆ ತಾತನ ಹೆಸರು ಹಾಳು ಮಾಡೋದಕ್ಕೆ ಹುಟ್ಟಿದಳು ನಮ್ಮ ಅತ್ತೆ (ಮರಳ.೯೧). ಸೂಲಗಿ : ೧. ಬಾಳರಚನೆಯ ಸುತ್ತ ಹೊದಿಸಿದ ಸೂಲಗಿಯ ಕಡಿತಲೆಯನವನೀಪಾಲ ಸುತರಗ್ರದಲಿ ನಿಲಿಸಿದ ನೂರ್ವರು ಕುಮಾರಕರ (ಕುವ್ಯಾಮ್ಯೂ. ೬೦೧. ೪-೧೮೮ ಅಧಿಕಪದ್ಯ). ಸೂಲಿಗೆ : ೧. ಕುದುರೆಯ ಮೇಲೆ ಬಿಲ್ಲರಸು ಸೂಲಿಗೆ ತೀರಿಕೆ ಭಿಣ್ಣವಾಳಮತ್ತಿದ ಕರವಾಳ (ಎಕ.VII, ಶಿಕಾರಿ. ೧೩೬-೨೮; 1063). ೪. ಶೂಲ: ಥಳಥಳಿಪ ಸೂಲಿ[ಪಾಠಾಂ. ನಿ]ಗೆಯ ಮುಮ್ಮೊನೆಗಳ ರಥಾಂಗದ ಮೇಲುಪಸರದ ಪಳಹರದ ಖುರಗತಿಯಿ ಜೋಡ ಜವಾಯ್ಲ ಕುದುರೆಗಳ (ಕುವ್ಯಾಉ. ೧೧-೧೭). 'ಸೂಲಿಗೆಗೊಳ್' ಪರಾ.

ಸೂಲಿಗೆಯ ಭೈರವ = ೧. ಶೂಲವನ್ನು ಧರಿಸಿರುವವನು; ರುದ್ರ. ೨. ಒಂದು ಬಿರುದು : ಕಲಿಗಳಾಭರಣಂ ಸೂಲಿಗೆಯ ಭೈರವಂ (ಎಕ. VI, ಕಡೂರು. ೩೪-೧೮; 1148).

[ಸಂ. ಶೂಲಿಕ, ಶೂಲಿಕಾ]

ಸೂನಿ (ನಾ). ಮಾಂಸವನ್ನು ಮಾರುವವನು; ಕಸಾಯಿಗಾರ : ಕೀವು ನೆತ್ತರು ಸುರಿವ ನಾಯ ತೊಗಲನು ಕಚ್ಚಿ ಜೀವನರಕಿಗಳು ಅಱಿವಱತು ಮೈಮಱದು ತಾವು ತಿರುಗುವರು ಸೂನಿಯಾಗಿ (ಗುರುಚೋ. ೧೧-೧೧೪). [ಸಂ. ಸೂನಿನ್]

ಸೂನಿಗೆ 'ಸೂನಗೆ' ನೋ.

ಸೂನಿಗೆವಿಲ್ಲು 'ಸೂನಗಿವಿಲ್ಲು' ನೋ.

ಸೂನಿಗೆವೆಱು (ಕ್ರಿ). ಕಠಾರಿಯನ್ನು ಹಿಡಿ, — ಹೊಂದು: ಸುಂಡಿಲವಾಳ್

ಸೂನಿಗೆವೆತ್ತ ಶೃಂಗ ವೇತಂಡಗಳುರವಣಿಸಲ್ಕೆ ಖಂಡಚಂದಿರಬಾಣದಿಂದೆಚ್ಚು ಕಡಿದ ಕೋದಂಡಶಿಖ್ನಾದೀಕ್ಷಿತನೆ (ಮೋಹತ. ೩೪-೩೯). [ಸೂನಿಗೆ (< ಸೂನಗೆ) + ಪೆಱ್ಚು]

ಸೂನಿತವಸನ (ನಾ). ಮಗುವಿನ ಜನನಕಾಲದಲ್ಲಿ ಉಪಯೋಗಿಸುವ ಬಟ್ಟೆ, — ವಸ್ತ್ರ (?): ಜಾನಿಸಿ ನೋಡು ನೀವೆಲ್ಲ ಮಾತೃಕೆಯರ ಯೋನಿಯೊಳ್ ಪೊಜಮಟ್ಟು ಬರುತೆ ಸೂನಿತವಸನದಿಂದೇಕೆ ಬಂದವವಹಮಾನಿಕೆಗಳ ನೋಡಿದಪರಿ (ಮೋಹತ. ೩೯-೫). [ಸಂ.]

ಸೂನು (ನಾ). ೧. ಮಗ; ಪುತ್ರ: ಸೂನುಗಳಬೀವಂ ಪ್ರಿಯಮಿತ್ರಾನುಜರಬೀವಂ ವಿಧಾತ್ರ ನೀಂ ಕಾಣಿಸಿಯನ್ನೇನಂ ಕಾಣಸಲಿರ್ದಪೆ (ಗದಾಯು. ೫-೨೯); ನೀರೇಚಾಂಬಕನೊಲ್ದು ರಾಜಧರನಿಂದಂ ಸೂನುವಂ . . . ಪಡೆದಂ (ಹಮ್ಮೀರ. ೨-೬). ೨. ಮಗು; ಕೂಸು. ೩. ಮಗಳ ಮಗ; ಮೊಮ್ಮಗ. ೪. ಕಿರಿಯ ಸಹೋದರ; ತಮ್ಮ. ೫. ರವಿ; ಸೂರ್ಯ. ೬. ಪುತ್ರಿ; ಮಗಳು. [ಸಂ.]

ಸೂನುತೆ (ನಾ). ಮಗನಾಗಿರುವಿಕೆ; ತನಯನಾಗಿರುವಿಕೆ: ಕಾನನದಾಶ್ರಮದೊಳ್ ವೈಖಾನಸ ಕುಲಪತಿ ಮಹಾಜಟಂ ತಂದೆ ಜಯಾಮಾನಿನಿ ತಾಯ್ ತನ್ನಿಳುನದ ಸೂನುತೆಗೆ ವಿಶಾಖನಂದಿ ಭಾಜನನಾದೊಂ (ಶಾಂತಿಪು. ೭-೬೩). [ಸಂ. ಸೂನುತಾ]

ಸೂನೃತ (ಗು). ೧. ಒಪ್ಪುವಂಥ; ಸತ್ಯವಾಗಿಯೂ ಪ್ರಿಯವಾಗಿಯೂ ಇರುವ. (ನಾ). ೨. ಒಪ್ಪುವಂಥ ನುಡಿ; ಪ್ರಿಯವಾಗಿಯೂ ಸತ್ಯವಾಗಿಯೂ ಇರುವ ಮಾತು : ಶ್ರೀಸುಕೃತಕ್ಕಾತ್ಮವಚಃಶ್ರೀಸೂನೃತಸಂಪದಕ್ಕೆ ತೊಡವೆನೆ ಜಸವಾಶಾಸುದತಿಗೆ ಸಾಹಿತ್ಯಕಲಾಸುಭಗಂ ಪೆಂಪುವೆತ್ತನಭಿನವಪಂಪಂ (ಪಂಠಾಮಾ. ೧೩-೧); ಸೂನೃತವನಾಡೆನದೇಕೆ ಪರೋಪಕಾರಮಂ ಮಾಡೆನದೇಕೆ (ತಂಕತ.೪೧). ೩. [ಜೈನ] ಸಮ್ಯಕ್ಚಾರಿತ್ರದ ಐದುಪ್ರಕಾರಗಳಲ್ಲಿ ಒಂದು; ಮನಸ್ಸಿಗೆ ಹಿತವಾಗುವಂತೆ ಸತ್ಯವನ್ನು ನುಡಿಯುವುದು,— ಹೇಳುವುದು: ಸಮ್ಯಕ್ಚಾರಿತ್ರವೆಂಬುದು ಅಹಿಂಸೆ, ಸೂನೃತ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹವೆಂದು ಮುಖ್ಯವಾಗಿ ಐದು ವಿಧ . . . ಸೂನೃತವೆಂದರೆ ಮನಸ್ಸಿಗೆ ಹಿತವನ್ನೂ ಪರ್ಯವಸಾನದಲ್ಲಿ ಸುಖವನ್ನೂ ಉಂಟುಮಾಡುವ ಮಾತಾಡುವುದು (ಧಾತತ್ತ್ವ. ೨೫೫). [ಸಂ.]

ಸೂನೃತಚರಿತ (ನಾ). ಸತ್ಯವಾಗಿ ನಡೆದುಕೊಳ್ಳುವವನು; ಪ್ರಾಮಾಣಿಕ : ಅರಸ ನಾಗಧಿರಾಜನಾಗೂರ್ವರೆಗೆ ಪತಿಯಾಗಧಿಕಸೂನೃತಚರಿತನಾಗು (ತೂರರಾ. ೨-೨-೧೮). [ಸಂ.]

ಸೂನೃತಭಾಷಣ (ನಾ). ಸತ್ಯವನ್ನು ಪ್ರಿಯವಾದ ರೀತಿಯಲ್ಲಿ ಹೇಳುವವನು: ವರಗುಣಭೂಷಣ ಸೂನೃತಭಾಷಣ ದುರಿತಕರ್ದಮಶೋಷಣನೆ (ಇಚಾಸಾ. ೧೭-೬೬). [ಸಂ.]

ಸೂನೃತವಚನ (ನಾ). ಸತ್ಯವೂ ಮನೋಹರವೂ ಆದ ಮಾತು,— ನುಡಿ: ಏಮಗಂ ಸಮ್ಮೋಹನಮಾದುದಕ್ಕುಮಂದಣ್ಣನ ಸೂನೃತವಚನಮೆಂಬ ಮಂತ್ರಾಕ್ಷರದಿಂ (ಗದಾಯು. ೧-೬೨). [ಸಂ.]

ಸೂನೆ (ನಾ). ೧. ಪ್ರಾಣಿಗಳನ್ನು ಕೊಲ್ಲುವ ಸ್ಥಳ ; ಕಸಾಯಿಖಾನೆ. ೨. ಕಟುಕತನ; ಕ್ರೂರತೆ : ಕೊಂಗರ ಹೇಡಿಯಾಟ ಇದು - ಈ ಸೂನೆಯ ಕೊಲೆ! (ಮಂತ್ರಶ. ೧೧೩-೧೦). ೩. ಕಿರುನಾಲಗೆ; ಮೃದುತಾಲು. ೪. ಮಗಳು; ಪುತ್ರಿ. ೫. ಪ್ರಾಣಹಿಂಸೆಗೆ ಕಾರಣವಾಗುವ, ಗೃಹಸ್ಥನು ಮನೆಯಲ್ಲಿ ಪ್ರತಿನಿತ್ಯವೂ ವಿಧಿಯಿಲ್ಲದೆ ಮಾಡಲೇಬೇಕಾದ (ಐದು) ಕ್ರಿಯೆಗಳು. 'ಪಂಚಸೂನ', 'ಪಂಚಸೂನಾದೋಷ' ಪರಾ. [ಸಂ. ಸೂನಾ]

ಸೂನೆಗಾಱ (ನಾ). ೧. ಕೊಲ್ಲುವವನು; ಮಾಂಸವನ್ನು ಮಾರಾಟ ಮಾಡುವವನು; ಕಟುಕ: ಮಿಗೆ ಬಸನದಿಂದೆ ಕೊಲೆ ಕೊಂದು ಗಡಂ ಸಗ್ಗಕ್ಕೆ ಪಾಪಿ ಸಲುವಡೆ ಮತ್ತೀ ಜಗದೊಳ್ಪಿಱತಿಕ್ಕೆಮ ಸೂನೆಗಾಱನುಂ ಚಾಲಗಾಱನುಂ ಮಾಣ್ಬಪರೇ (ಸಮಪ. ೧೪-೮೭); ಹಲವು ಕಾಲ ಕೊಂದ ಸೂನೆಗಾಱನ ಕತ್ತಿಯಾದರೇನು ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ (ಬಸವ. ೭೩); ಕಂಡು ಮಱುಗದೆ ಸೂನೆಗಾಱನ ದಂಡಿಯಲಿ ಮಗನಂ ವಧಿಸಿ . . . ತಂಡತಂಡದ ನೃಶಾಕಂಗಳನೊಲಿದು ಮಾಡಿ (ಬಸಪು.೨೪-೨೧); ಅಡಗು ಮೆಚ್ಚಿದುದು ಸೂನೆಗಾಱರ ಹಸರದಂದದಲಿ (ಕುವ್ಯಾಕ.೧೯-೯೦). ೨. ಘಾತಕಿ; ಮೋಸಗಾರ : ಭಕ್ತರೆಂಬವರೆಲ್ಲರು ಲೆಕ್ಕಕ್ಕೆ ಹಾಯ್ದು ದೃಷ್ಟವಪ್ಪ ಜಂಗಮದ ಕೈಯಲು ಕೃತ್ರಿಮನವಹ ಈಳಿಗವ . . . ಕೊಡುಂಬ ಚಿಕ್ಕ ಸೂನೆಗಾಱರ ನೋಡಾ (ಮೋಳಿಮಾ. ೪೨-೧೬೪). [ಸೂನೆ + - ಕಾಱ]

ಸೂನ್ಯಾಸ (ನಾ). ಒಳ್ಳೆಯ ರಚನೆ : ಅಪೂರ್ವಮಪ್ಪ ಶ್ಲೋಕ ಸೂನ್ಯಾಸ ಸಮಾಸ ಸಂಸಾರವಚನರಚನೆಗಳಿನತಿಬಳನುಮಂ ತತ್ಸಭಾಜನಮುಮಂ ಮನಂಗೊಳಿಸಿ (ಸುಕುಮಾ. ೨-೧೪ ವ). [< ಸಂ. ಸುನ್ಯಾಸ]

ಸೂಪ$_1$ (ನಾ). ೧. ಅನ್ನದೊಂದಿಗೆ ಕಲಸಿಕೊಳ್ಳುವ ವ್ಯಂಜನಪದಾರ್ಥ; ಸಾರು, ತೊವ್ವೆ ಮುಂತಾದ ಮೇಲೋಗರ : ಸುಡು ಸೂಪಂ ಘೃತಮಿಲ್ಲದೂಟವ (ಸೋಮೇಶ. ೨೧); ಬಹು ಭಕ್ಷ್ಯ ಪರಡಿಪಾಯಸ ಮೋದಕಾಜ್ಯ ದಧಿ ಶಾಲ್ಯನ್ನ ಸೂಪಂಗಳಿಂದ . . . ಭೂಮಿಪಂ ಗಿರಿಜಾಧವನನರ್ಚಿಪನಿತಜೊಳ್ (ಚಟಪು. ೫೧-೨೨); ಮಿಸುನಿಯವಣ್ಣದ ತೊಗರಿಯ ಬೇಳೆಯ ಕುಶಲದ ಸೂಪಶಾಕಗಳ ಶಶಿಮುಖಿಯರು ಸಂತೋಷದೆ ಬಡಿಸಿದರೊಸೆದು ಭೂಪಾಲನಿಗಾಗ (ಕಂನಿ. ೮-೮೬). ೨. ಭಕ್ಷ್ಯ; ಪಕ್ವಾನ್ನ: "ಸೂಪಂ ಪೂಪಸಮಾಯತದ ಪಕ್ವಾನ್ನಮಕ್ಕುಂ" (ಮಂಗರಾ.೬೪-೨). ೩. ಅಡುಗೆಮಾಡುವವನು; ಬಾಣಸಿಗ. ೪. ಒಡೆದ ಬಟಾಣಿ. [ಸಂ.]

ಸೂಪ$_2$ (ನಾ). ತೋಪು; ಉಪವನ (?): ಮೇರುವಿನ ನಡುಗಂಕಣದಿ ಶಿವನದಿಕ್ಕಿನ ಪರುಷ ಗವಿಯ ಮುಂಬಿನೊಳು ಕಲ್ಪದ್ರುಮದ ಸೂಪವಿಹುದೌ ಆ ಸೂಪ ಮಧ್ಯದೊಳು ನವರತ್ನ ತೆತ್ತಿಸಿದ ಭಾಸುರದ ಕುಟ್ಟಿಮಂ (ಪ್ರಭುಪು. ೫-೧೩೫); ಮತ್ತೋರ್ವ ವೈಷ್ಣವಂ ಚೋಳನ ಸುಭಟರುಂ ಚಿತ್ರಜಾರಿಯ ಸೂಪಮಂ ಕೆಡಿಸೆ (ಪ್ರಭುಪು. ೭-೧೩). [?]

ಸೂಪಕ$_1$ (ನಾ). ಅಡುಗೆಯವನು; ಬಾಣಸಿಗ : ಜಿನದತ್ತರಾಯನ ಬೀಳ್ಕೊಂಡು ಶಬರಿಯ ತನಯನ ನಿಂಬೆಯ ಹಣ್ಣ ಕೊಂಡು ಘನವೇಗದೊಳು ಬಂದು ಸೂಪಕಗೀಯಲು ಅನುಮಾನವಿಲ್ಲದೆ ಕೊಂದು (ಪದ್ಮಾಚ. ೫-೬೧). [ಸಂ.]

ಸೂಪಕ$_2$ (ನಾ). ಮೊರ; ಶೂರ್ಪ : ಬಾಲಚಿಂತಾಮಣಿಯ ಮೈದೊಳೆದು ಮಡಿಯೋದಿಸಿ ಲೀಲೆಯಿಂ ಘಂಟಾರವದಿ ಸೂಪಕದೊಳಿರಿಸಿ ಲೋಲಲೋಚನೆ ರತಿಗೆ . . . ಸಲ್ಲೀಲೆಯಿಂದಾಗ ಸಕಲೋಪಚಾರಂಗಳಂ ಗೈವುತಿರ್ದರು ತವಕದಿ (ನವಮಾ. ೧೫-೧೯). [< ಸಂ. ಶೂರ್ಪ?]

ಸೂಪಕಾತಿ (ನಾ). ಅಡುಗೆಯವಳು ; ಬಾಣಸಗಿತ್ತಿ : ಕಾತ್ಯೂಪ ಮುದುಕಿಯರನ್ನು ಮಲಗಿಸಿ, ಸೂಪಕಾತಿಯ ಸಣ್ಣ ಹುಡುಗಿ ಮಾಪ್ಪಾಳನ್ನು ಚೊತೆಯಲ್ಲಿ ಬರುವಂತೆ ಒಡಂಬಡಿಸಿ . . . ಸ್ವೇಪನ್ನಿನ ಕಡೆಗೆ ಓಡಿದಳು (ಪುನರು. ೧೬೯). [ಸೂಪ + - ಕಾತ್ತಿ]

ಸೂಪಕಾರ (ನಾ). ಅಡುಗೆಯವನು; ಬಾಣಸಿಗ : ಬುಧಜನಪಾರಿಚಾತನಾಗಿ ಯುವಪಾರಿಚಾತನುಂ ವನ್ದಿಜನಸೂಪಕಾರನಾಗಿ ಯುವಸೂಪಕಾರಭೂತನುಂ (ಎಕ. VI. ಚಿಕ್ಕಮ. ೧೩೭-೫೦; 1130); ಇರವ ಕಂಡರು ಪಾಕದಲಿ ಕೈ ಕರಣವನು ನೆಚ್ಚಿ ಸೂಪಕಾರನ ಪರಿಯ ಹೊಗಳುತ ಬಂದು ಬಿನ್ನೈಸಿದರು ಭಾಮಿನಿಗೆ (ನಳಚ. ೮-೪೫). [ಸಂ.]

ಸೂಪಕಾರಕಿ (ನಾ). ಒಂದು ಬಗೆಯ ಸಸ್ಯ : "ಕೊಂದಸು ಸೂಪಕಾರಕಿ [ಪಾಠಾಂ. ಸೂಪ ತಾಳಿರಕಿ]ಯೆನಿಕ್ಕು" (ಮಂಗರಾ. ೩೭-೧೯). [ಸಂ.]

ಸೂಪಕಾರತೆ (ನಾ). ಅಡುಗೆಯ ಕೆಲಸ; ಬಾಣಸಿಗವೃತ್ತಿ: ಪತಿಹಿತನ ಪಡುರಸವಿಶೇಷಾನ್ವಿತನನಿತರಾಲಯವಿದೂರ ಪತಿಕರಿಸುವುದು ಸೂಪಕಾರತೆಗೆ (ಕುವ್ಯಾಉ.೩-೯೨). [ಸೂಪಕಾರ + - ತ್ತೆ]

ಸೂಪಧೂಪನ (ನಾ). ಇಂಗು; ಹಿಂಗು. [ಸಂ.]

ಸೂಪರಣ 'ಸುಪ್ಪರನ' ನೋ.

ಸೂಪಶಾಸ್ತ್ರ (ನಾ). ೧. ಅಡುಗೆ ಮಾಡುವ ವಿದ್ಯೆ,— ಕಲೆ; ಪಾಕಶಾಸ್ತ್ರ : ವರಸೂಪಶಾಸ್ತ್ರ ಭೃಗು ಚಿತ್ರ ರಸಾಳಂಕಾರ ಗಣಿತ ಗಜಹಯವೈದ್ಯಂ . . . ಕಳಾವಿದನೆನಿಪ್ಪುದತಿಚದುರವಿಟಂ (ಮದಕಿ. ೧೦-೧೮); ಹಯಶಾಸ್ತ್ರಂ ಸೂಪಶಾಸ್ತ್ರಂ . . . ಎಂಬಿನಿತಜೊಳಂ ಪಡೆದನತಿಕೌಶಲಮಂ (ಪುಷ್ಪಪು.೪-೫೯); ಪಿತೃಪಿತಾಮಹಾ ಸೂಪಶಾಸ್ತ್ರಪ್ರತತಿ ಕೈಕರಣಗಳೊಳಧಿಕನ . . . ಪತಿಕರಿಸುವುದು ಸೂಪಕಾರತೆಗೆ

(ಕುಮಾಸ. ೬೧೨. ೧-೮೪). ೨. ಮಂಗರಸ ಎಂಬುವನಿಂದ ಪಾಕಶಾಸ್ತ್ರದ ಮೇಲೆ ರಚಿತವಾದ ಒಂದು ಗ್ರಂಥದ ಹೆಸರು : ಕೋಗಿಲೆಯ ನವಪಂಚಮಂಬೊರೆದ ದನಿಯಂತೆ ಸೊಗಯಿಸಿತು ಸೂಪಶಾಸ್ತ್ರದ ಕವಿತೆಯೊಳ್ನುಡಿಗಳು (ಸೂಪಶಾ. ೮ ಪೀಠಿಕೆ).

[ಸಂ.]

ಸೂಪು (ನಾ). ಒಂದು ಬಗೆಯ ಕಂಬಳಿ: ಮೇಲುತರದ ಪಟ್ಟೆ ವರಸೂಪು ಸಕಲಾತಿ ಜೂಲುಗಳಿಂದೆ ರಂಜಿಸುವ ಕಾಲುವೇಗದ ಶುನಿವಿಡಿದ ಕಿರಾತರು ಸಾಲಿಟ್ಟು ನಡೆದರೊಗ್ಗಿನಲಿ (ಮೋಹತ. ೧೯-೧೦); ಸೂಪು ಸಕಲಾತಿ ಕುತ್ತಿಗಳ ಗದ್ದುಗೆಗೆ ಒಪ್ಪುವ ರತ್ನಗಂಬಳಿಗಳ . . . ಸಾಗಿಸಿದನು (ಶರಲೀ. ೫೧೬).

[ದೇ. ॥ ?./ ಹಿಂ. ಸೂಫ್; ಮರಾ. ಸೂಫವತೀ = ಗಾದಿ; ಹಾಸುಗೆ]

ಸೂಫಿ (ನಾ). ೧. ಮುಸಲ್ಮಾನ ಅನುಭಾವಿಗಳ ಒಂದು ಪಂಥ: ಸೂಫೀತತ್ವ ಇಸ್ಲಾಮಿಗೆ ಪರ್ಷಿಯದ ಕಾಣಿಕೆ ಇರಬಹುದೆ (ಭಾರದ. ೪೦೭). ೨. ಸೂಫಿಪಂಥವನ್ನು ಅನುಸರಿಸುವವನು; ಸೂಫಿಧರ್ಮದ ಅನುಯಾಯಿ: ಈತನ ತತ್ವಗಳ ಮೇಲೆ ರಾಮಾನಂದನ ತತ್ವಗಳೂ ಮುಸಲ್ಮಾನ ಸೂಫಿಗಳ ತತ್ವಗಳೂ ಪ್ರಭಾವವನ್ನು ಬೀರಿವೆ (ಭಾರದ.೩೧೨); ಇವರನ್ನೇ ಪರ್ಷಿಯದ ಜನತೆ ಸೂಫಿಗಳು - ಎಂದು ಕರೆಯುವುದು (ಭಾರದ. ೪೬೦). [<- ಅರ. ಹಿಂ. ಸೂಫೀ]

ಸೂಬಹ್‌ದಾರ್ 'ಸುಬೇದಾರ್' ನೋ.

ಸೂಬೆ 'ಸುಬೆ' ನೋ.

ಸೂಯಣ$_1$ 'ಸೂಯಾಣ$_1$' ನೋ.

ಸೂಯಣ$_2$ 'ಸೂಯಿಯಾಣ' ನೋ.

ಸೂಯಾಣ$_1$, ಸೂಯಣ$_1$ (ನಾ). ಅಡುಗೆ ಮಾಡುವ ಸ್ಥಳ; ಪಾಕಶಾಲೆ: ಸೂಯಾಣಂ ಸೂಪಸ್ಥಾನಂ (ಶಬ್ದಾನು. ೩೭೮ ವ್ಯಾಖ್ಯಾ).ಸೂಯಣ$_1$: "ಸೂಯಣ-ಸೂಪಸ್ಥಾನ" (ತದ್ಭವಕೋ.೪೬). [< ಸಂ. ಸೂಪಸ್ಥಾನ]

ಸೂಯಾಣ$_2$ 'ಸೂಯಿಯಾಣ' ನೋ.

ಸೂಯಿಯಾಣ, ಸುಯ್ಯಾಣ, ಸೂಯಣ$_2$, ಸೂಯಾಣ$_2$ (ನಾ). ೧. ಸೂಜಿಯಿಂದ ಮಾಡುವ ಕೆಲಸ; ಕಸೂತಿಕೆಲಸ: ತಾಮ್ರಕೃಷ್ಣ ಪೀತಸಿತಶ್ರೀಧೃತಮಾಗಿ ಸೂಯಿಯಾಣದ ವಿತಾನಮಂ ಪೋಲ್ತುದಖಿಳಧರಣೀಮಾರ್ಗಂ (ಶಾಂತಿಪು. ೧೦-೨೨). ಸುಯ್ಯಾಣ : ೧. ಕಂಬಗಳೊಳೆಲ್ಲಂ ಸುಯ್ಯಾಣದ ಚಿನ್ನದ ಪಟೆಯ ಸಕಳವಟ್ಟೆಗಳಂ ಸುತ್ತಿಸಿ (ಪಂಪಭಾ.೩-೪೦ ವ); ಸುಟ್ಟುರಗಾಳಿಗೆ ಸುಯ್ಯಾಣದ ತೆರೆಯಂ ಹೊತ್ತೆತ್ತಿ ಬಿಚ್ಚಿದಂತಿರೆ ನಭದೊಳ್ (ಅನಂಪು. ೫-೩೭). ಸೂಯಣ$_2$: ೧. ಮಂಗಲಾಪಾತ್ರ ಚೂಡಾಮಣಿಯಂಬ ನರ್ತಕಿ ಉಟ್ಟ ಚಲ್ಲಣದ ತೊಟ್ಟ ಸೂಯಣದ ಕಂಚುಳಿಕೆಯಯಿಟ್ಟ ಕಸ್ತೂರಿಯ ತಿಲಕ (ಧರ್ಮಾಭ್ಯು. ೨-೨೬). ಸೂಯಾಣ$_2$: ೧. ಕಟ್ಟಿದ ಸೂಯಾಣದ ಮೇಲ್ಗಟ್ಟೋ ನವಪದದ ಮಣಿವಿತಾನಮೊ . . . ಏನೆ ದಿಟ್ಟಿಗೆ ಚೆಲ್ಪಾಯ್ತು ನಭದೊಳಮರಾಗಮನಂ (ಚಂದ್ರಪ್ರ. ೧೨-೪೭); ಹಸುರ್ವಂದರವ ಮುಸುಕಿ ನೆಗೆದ ಮೇಲ್ಕಟ್ಟುಗಳ ಸೂಯಾಣ ಪಂಚವರ್ಣದ ಚೂಳಿಕೆಗಳೊಪ್ಪಲು . . . ವಿವಾಹಗೃಹವೆಸೆಯಿತ್ತು (ಸಿದ್ಧರಾ. ೮-೫೩); ಕುಲಸತಿಯರು . . . ನಗರದ ಬೀದಿಯೊಳಡಿದಳಿರಿಡುವೆಡೆಯೊಳು ಸೂಯಾಣದ ಬೆಳುಪದವಿಯ ಪಾಸಿ (ಜ್ಞಾನಚಂ. ೬-೭೧). ೨. ಸೂಜಿಯಲ್ಲಿ ಪೋಣಿಸಿದಂತೆ ಸಾಲಾಗಿ ಸಾಗುವ ಸೈನ್ಯ: ಸೂಚಿಯಾನ — ಸೂಯಾಣ (ಶಮದ. ೨೯೪ ಪ್ರಯೋ). [ಸಂ. ಸೂಚೀಯಾನ]

ಸೂರ್, ಚೂರು$_2$, ಸೂರು$_2$ (ನಾ). ೧. (ಮನೆಯ) ಮೇಲಿನ ಛಾವಣಿ ಮತ್ತು ಅದರ ಇಳಿಜಾರಾದ ಪಕ್ಕ,— ಭಾಗ : "ನೀವ್ರಂ, ವಳೀಕಂ (ಪಟಲಾಂತಂ) - ಈ ೨ ಸೂ(ಱು)ರು" (ಪಲಾಯು. ೫೧-೧೪೮); ನೇರ್ಗಳ್ ಸೀರ್ಗಳ್ ತಾರ್ಗಳ್ ಸೂರ್ಗಳ್ ಕಾರ್ಗಳ್ ಗುರೂಪಧಾರ್ಥಮೆನಿಕ್ಕುಂ (ಶಮದ. ೪೧); ಪೊಱಮಡುವ ಸಡಗರದಿಂ ಸೂರ್ತಾಗೆ ಸುಲಿದ ನೊಸಲೊಳ್ ನೆಲಸೆಕಮನಿಕ್ಕಿ ಪೆಂಡಿರ್ ಪಿಡಿಯ ಪಿಡಿಯೆ ಪರಿವೊಱಂಟರುಮಂ (ಲೀಲಾವ. ೫-೧೧೪ ವ). ೨. (?): ಕರಪಲ್ಲವಂ ಬಿರುಗೆ ಬಾಸಿನ ಸೂರ್ ನನೆವೊಗ್ಗೆ ಜಾಗರಲ್ ಪಸರಿಸಿ ಕೊಯ್ದು ಮಲ್ಲಿಗೆಯೊಳರ್ಚಿಸಿದಳ್ ಸಹಕಾರಪಾದಮಂ (ಅನಂಪು. ೬-೧೨). **ಚೂರು$_2$** : ೧. "ವಲೀಕಂ, ನೀವ್ರಂ, ಪಟಲಪ್ರಾಂತಂ —೩ ಒಪ್ಪಾರದ ಚೂರು, ಲೋವೆಚೂರು . . . ಇದನ್ನು ಸೂರ್ಗಿತಲೂ ಅನ್ನುವರು" (ಸಿದ್ಧಾಂತಿ. ೧೦೩). **ಸೂರು$_2$**: ೧. ಸುರಪಥನು ಸೂರ ಮುಂಬನಿಯಾಲಿಕಲ್ಲು ಬಹುತರಮಾದ ಗಂಧರ್ವನಗರಮುಂ ಸುಳಿಗಾಳಿ ಚರಿಪ ವಾಯುವಿನಿದಿರ ದೀಪಮುಂ ಬೊಬ್ಬುಳಿಕೆಯಂತನಿತ್ಯತೆಯಂ ಪಡೆದಾ ನೆಱೆ ಹೇಸಿಕೆಯ . . . ಕಳೇವರವದುಂ ತಾನಲ್ಲ ತನ್ನದಲ್ಲ (ಸಿದ್ಧೇಪು. ೨೨-೧೩); ಆಕೆ ತಲೆಯಂ ಬಾಚಿಕೊಂಡ ಕೂದಲು ಸೂರೊಳು ಸಿಕ್ಕಿರಲು ಗೋವು ಆ ಸೂರ ಹುಲ್ಲು ಹಿರಿದು ಮೇವಲ್ಲಿ (ಪೃಥಸೂ. I. ೧೬೧); ಹಸಿದ ಹೊಟ್ಟೆಯ ಮೇಲೆ ಉಟ್ಟ ಚಿಂದಿಯ ಮೇಲೆ ಮುರಿದ ಸೂರು (ಶಿಲಾಲ. ೮೬-೧೨). [ದೇ. ॥ ತುಳು. ಸೂರಿ ; ತೆಲು. ಚೂರು]

ಸೂರ$_1$ (ನಾ). ೧. ವೀರ; ಶೂರ; ಪರಾಕ್ರಮಿ : ಯದುಕುಲೋತ್ತಮ . . . ಮದನಾಪರಾವತಾರಂ ಸೂರಸಮುದಾರನಧಿಕಬಲವಂತ ದಾಸಾರ್ಹನೆಂದಂಬ ಕಿಱುವರೆಯದವನೀನಾಥನು (ರಾಘಚ. ೧೦-೧೪); ವೀರಗಾಸೆಯ ಸೊಗಸಿಂದಲಿಳಿಯ ಬಿಟ್ಟು ಸೂರ ಚಿಮ್ಮುರಿ ಸುತ್ತಿ ಶಿರಕೆ (ಜ್ಞಾನಚ. ೪-೪); ಆರಯೆ ವಿಷಯಾವಳಿಯೊಳ್ ವೈರಾಗ್ಯಸುಲಭಮೊಳ್ಸನಱಿವರ್ಗಂದಾ ಸೂರವಡೆ ಸೂಱೆಗಾಱಂ ಸಾರಸಭವಸನ್ನುತಂಗೆ ಬಿನ್ನತಿಗೆಯ್ದಂ (ಚಕಬಿ. ೪೦). ೨. ಕಾಡುಹಂದಿ: ಕಂಠೀರವಂ . . . ಭಲ್ಲೂಕ ಜಂಬುಕಂ ಚೇಳ್ಕೃಗ ಸೂರ ಕೆನ್ನಾಯಿ ತೋಳಂ . . . ಜಲ್ಲಿಮಿಗಗಳಿಂದಾ ವಿಪಿನ ಜಸವೆತ್ತುದು (ವಿಕೋಪು. ೧೦-೩೦). [< ಪ್ರಾ. ಸೂರ./ ಸಂ. ಶೂರ]

ಸೂರ$_2$ (ನಾ). ನೇಸರು; ಸೂರ್ಯ: "ರವಿ ಮಾರ್ತಂಡಂ . . . ಸೂರನರ್ಕಂ ತರಣಿ ಸಪ್ತಾಶ್ವನಾದಿತ್ಯನಕ್ಕುಂ" (ವಸ್ತುಕೋ. ೧೧-೬೪); ವಹ್ನಿರಹಿತಂ ಧೂಮಾರ್ಚಿಗಳ್ ದ್ಯುಮಣಿ ಪುಟ್ಟೆ, ಮೇಣ್ ಸೂರೇಂದುದ್ಯುತಿಗಳ್ ಕವಲ್ತಿರೆ (ಲೋಕೋಪ. ೪-೬೩); ಸೂರನಾ ಪುರದವರಂತೆ ರಾಗದೊದವಂ ತಳೆದೆಯ್ದುದನಸ್ತಶೈಲಮಂ (ನೇಮಿಪು. ೯-೭೭).

[ಸಂ.]

ಸೂರಂಬಡೆ (ಕ್ರಿ). ವಿರಮಿಸು (?) : ಆ ಸಹಸ್ರಾಮ್ರವನಮಧ್ಯದೊಳ್ಸೂರಂಬಡೆಯೆ ಶಚೀದೇವಿ ವಿರಚಿಸಿದ ವಿಚಿತ್ರವರ್ಣಪೂರಪುಷ್ಪೋಪಹಾರಭೃಂಗಾರಾದಿಮಂಗಳದ್ರವ್ಯ ಶೋಭಾಂಗಸಂಗತಿವೆತ್ತ ವಿಶಾಳಶಶಿಕಾಂತಶಿಳಾತಳದೊಳ್ಪಿಬಿಕೆಯಂ ತಂದಿಟ್ಟಿ (ಶಾಂತೀಶ್ವ. ೧೬-೪ ವ). [ಸೂರ್? + ಪಡೆ$_1$]

ಸೂರಕತ್ತಿಗೆ (ನಾ). ಒಂದು ಬಗೆಯ ಆಯುಧ ; ಚಿಕ್ಕದಾದ ಚೂರಿ : ಕಡಿತಲೆ ಕಠಾರಿ ಬಲಭದ್ರ ಚಕ್ರಂ ಮದ್ದು ನಿಡುಸುರಗಿ ಸೂರ[ಜಾಂಗಾ. ಶೂಲ]ಕತ್ತಿಗೆಯೆಂಬ ಕೈದುವಂ ಹಿಡಿದು ಕಾಲಾಳ್ಗಳೋವದೆ ನೆರೆದುದು (ಸೋಮಚ. ೫-೨೬). 'ಸೂರಕತ್ತಿ' ಪರಾ. [ಸೂರ$_3$ (< ಸೂರು$_3$) + ಕತ್ತಿಗೆ./ ತೆಲು. ಸೂರಕತ್ತಿ = ಚಿಕ್ಕಚೂರಿ]

ಸೂರಣ (ನಾ). ತರಕಾರಿಯಾಗಿಯೂ ಔಷಧವಾಗಿಯೂ ಉಪಯೋಗಿಸುವ ಒಂದು ಬಗೆಯ ಗಡ್ಡೆ; ಸುವರ್ಣಗೆಡ್ಡೆ: "ಸೂರಣಾಹ್ವಯಂ ಕಂದಂ" (ವಸ್ತುಕೋ. ೩೭-೨೬); ತಗರಂ ಕೊಳ್ಳಿಳಿ ನುಗ್ಗಿ ಕಗ್ಗೊಱೆ ಹೊಟ್ಟೆಲ್ ಸೂರಣಂ ಶುಂಠಿ . . . ಈ ಪೇಟ್ಟ ಮರ್ದುಗಳಂ ಪುತ್ತಿನ ಮಣ್ಣುಮಂ ಕದಡಿ ಕಾಸಿಟ್ಟೆಯ್ದೆ ಪೊಯ್ಯುವ ಬಾವುಗಳುಂ ತೀರ್ಚುಗುಂ (ಲೋಕೋಪ. ೯-೨೪೦); ಈ ಚೂರ್ಣಕ್ಕೆ ಸೂರಣದ ಗೆಡ್ಡೆಯ ಚೂರ್ಣವಂ ಕೂಡಿಸಿ ಹನ್ನೆರಡುದಿವಸ ಸೇವಿಸಿದಲ್ಲಿ ಮೂಲವ್ಯಾಧಿಯು ಪರಿಹಾರ ವಾಗುವುದು (ಸಕವೈ. ೧೧೩). [ಸಂ.]

ಸೂರಣಕಂದ (ನಾ). = ಸೂರಣ : "ವೀರಃ— ಸೂರಣಕಂದ, ಕಿಱುನೆಲ್ಲಿ, ಕಳವಿ, ವೃಷಭಕ, ವಡಮರ, ಕಣಗಿಲು" (ಓಷಧಿ. ೧೫೪). [ಸಂ.]

ಸೂರಣಗಡ್ಡೆ (ನಾ).= ಸೂರಣ: ಶಾವಗಡ್ಡೆ, ಸೂರಣಗಡ್ಡೆಗಳನ್ನು ಕುಚ್ಚಿ ತಿನ್ನಬಹುದು (ಕುಂಬೊ. ೫೧). [ಸೂರಣ + ಗಡ್ಡೆ]

ಸೂರಬಿಂಬ (ನಾ). ಸೂರ್ಯನ ಬಿಂಬ,— ಮಂಡಲ : ಸೂರಬಿಂಬವೆ ಪೋಪ ವೀರಾರಿ ಸಗ್ಗದ ದಾರಿ ಗಡೆಂದದ ಬಿಟ್ಟು ನಾರಿಯೊಳ್ ಮಲಗಿ ಮೋಹದ ಚಂದ್ರಬಿಂಬದ ವಾರಿಯ ತೆಗೆದಯಿದೆಂತೊ (ವರ್ಧಚ. ೮-೩೬). [ಸಂ.]

ಸೂರಲು (ನಾ). ನೀರಿನ ಚಿಲುಮೆ : ಇಷ್ಟೊಂದು ಮಾತುಗಳು ಅವಳ ಬಾಯಿಂದ ಸೂರಲುನೀರಿನಂತೆ ಧಾರೆಯಾಗಿ ಬಂದುವು (ಮಾರಮ. ೬೫). 'ತೂರಲು' ಪರಾ.

[ಸೂರು$_2$ + - ಅಲು (< - ಅಲ್$_2$)]

ಸೂರಳಿಡು 'ಸೂರುಳಿಡು' ನೋ.

ಸೂರಳು 'ಸೂರುಳ್‌₂' ನೋ.

ಸೂರಾಡು 'ಸೂಜಿಯಾಡು' ನೋ.

ಸೂರಾಪತ್ಯ (ನಾ). [ಜ್ಯೋತಿ] ಸೂರ್ಯಪುತ್ರ; ಶನಿ: ಸಿತಂ ಧಾತ್ರೀತನೂಜಾತನಂ ಸೂರಾ[ಪಾಠಾಂ. ಸುರಾ, ಸೂರ್ಯಾ]ಪತ್ಯನನಕ್ಕೆ ವೀಕ್ಷಿಸೆ ಪರಸ್ತ್ರೀಲೋಲನಾ ಮಾನವಂ (ಜಾತಕ. ೨೧-೬). [ಸಂ.]

ಸೂರಿ₁ (ನಾ). ೧. ಪಂಡಿತ; ವಿದ್ವಾಂಸ : "ಸೂರಿ ಮೇಧಾವಿ . . . ಭಾರತಿಯನಲ್ಕೆ ವಿದ್ವಾಂಸನೆನಿಸಿಕ್ಕುಂ" (ಮಂಗರಾ. ೬೬-೨); ತಾರೇಶಂ ನಿಲೆ ಮೇಷದೊಳಾರಂ ಮೊದಲಾಗೆ ಷಡ್ಗ್ರಹಂ ನೋಡೆ ನೃಪಂ ಸೂರಿನೃಪಪ್ರತಿಮಗುಣಾಂ ಚೋರಂ ನಿರ್ಧನನೆನಿಕ್ಕುಮಾತಂ ಕ್ರಮದಿಂ (ಜಾತಕ. ೨೦-೧); ಸೂರಿಗಳು ಬಣ್ಣಿಸೆ ಸುಧಾರೋಚಿ ಕಣ್ಗೆಸದುದು (ಹಚಾ. ೩-೬೭); ವೀರನಾರಾಯಣನೆ ಕವಿ ಲಿಪಿಕಾಱ ಕುವರವ್ಯಾಸ ಕೇಳುವ ಸೂರಿಗಳು ಸನಕಾದಿಗಳು ಜಂಗಮಜನಾರ್ದನರು (ಕುವ್ಯಾಆ. ೧-೭). ೨. [ಜೈನ] ಮುನಿಗಳನ್ನು ಗೌರವಸೂಚಕವಾಗಿ ಸಂಬೋಧಿಸುವ ನುಡಿ : ವೀರಸೇನಾಚಾರ್ಯರೊಪ್ಪುವ ಸೂರಿ ಜಿನಸೇನರ ಜಿನಾಗಮಸಾರಸಿದ್ಧಾಂತಿಗಳಿನಿಪ ವರನೇಮಿಚಂದ್ರಮರ . . . ಪದಕೆ ನಮೋ (ಸಾಳ್ವಭಾ. ೧-೧೭). [ಸಂ.]

ಸೂರಿ₂ (ನಾ). ಬೀಡಿ, ಸಿಗರೇಟು ಮೊದಲಾದುವುಗಳ ಹೊಗೆಯನ್ನು ದೀರ್ಘವಾಗಿ ಎಳೆದುಕೊಳ್ಳುವಿಕೆ : ಸೋಹಮ್ಮುಯೆಂದಂಬ ಕೊಳವಿಯನೆ ಹಚ್ಚಿ ಬಾಹಪೂರಕ ಸೂರಿಯನೆ ಸೇದುತಾ ಆಹ ರೇಚಕವೆಂಬ ಹೊಗೆಯನೆ ಬಿಡುವುತಮಾಹ ಕುಂಭಕವೆಂಬವುಸುರನೆ ಹಿಡಿವುತ್ತ (ಚದಾವ. ೫೮-೯). [< ಜುರ್ಕಿ]

ಸೂರಿಗೆ (ನಾ). ಸಣ್ಣ ಕತ್ತಿ; ಚೂರಿ : ಪುಡಿ ಬಾಣ ಸೂರಿಗೆ ಕೋಲೀಟಿಯು ಜವದಂಡೆ ವುಡಿಸಸ್ತ್ರ ಹೊಗೆ ಬಾಣವುರಿಯಾ (ದೇವಾಂಪು. ೩-೨೦೩); ಸುರಿಗೆ ಸೂರಿಗೆ ಸಬಳ ಸಬಳಿಗರುಬ್ಬಿ ಸರಿಬೆಸನದಿ ಹೊಯಿದಾಡಿದರು (ದೇವಪು. ೪-೪೯). 'ಸುರಿಗೆ' ಪರಾ. [< ಸಂ. ಛುರಿಕಾ./ ತೆಲು. ಸೂರಿ]

ಸೂರಿಜನ (ನಾ). ವಿದ್ವಾಂಸರಾದ ಜನ; ಪಂಡಿತಜನ: ರಾರಾಜಿಸಿದತ್ತಾ ರಾಜಸಭೆಗೆ ನಿರುಪಮಸೂರಿಜನಂ ಪರಸೆ ಧರ್ಮವೃದ್ಧಿಯ ಘೋಷಂ (ಪುಷ್ಪಪು. ೯-೬).

[ಸಂ.]

ಸೂರಿದ 'ಸೂರಿಯ' ನೋ.

ಸೂರಿಪಾನ 'ಸೂರೆಪಾನ₁' ನೋ.

ಸೂರಿಪಾನಿ 'ಸೂರೆಪಾನ₁' ನೋ.

ಸೂರಿಪಾನೆ 'ಸೂರೆಪಾನ₁' ನೋ.

ಸೂರಿಯ, ಸೂರಿದ (ನಾ). ನೇಸರು; ಸೂರ್ಯ: ಮಿಂಚುಬುಳುವಿನ ಕಿರಣವತ್ತಲು ಹೊಳಹಿದತ್ತಲು ಕೋಟಸೂರಿಯರ (ಕುವ್ಯಾಭೀ. ೩-೭೦); ನೀರಡಿಸಿದ ಕುದುರೆಗೆ ನೀರ್ಗುಡಿಸಲು ಸೂರಿಯನಂಬುಧಿಗಿಳಿದ (ಪೂಪಚ. ೨೮-೪೦); ಇಂದುಧರನ ಎಡಬಲದಲ್ಲಿ ಸೂರಿಯಚಂದ್ರರು ಮೆರೆದು ರಾಜಿಪರು (ಕಪೂಚ. ೫). **ಸೂರಿದ** : ಹರಿಯಾಗು ಹರನಾಗು ಕರಿಮುಖನಂತಾಗು ಸುರಪ ಸೂರಿದನಂದವಾಗು (ಅಮುಸಾಂ. ೩-೧೩); ವನಲೋಕಜನನಿ ಸೂರಿದನೆಂಬ ದೇವಗೆ ಅನುದಿನ ಬೆಳಗುವಾರತಿಯೋ ಎನಲೊಪ್ಪುವ ಸಂಪಿಗೆಯ ಪೂದೊಂಬೆಯ (ಚ್ಯಾನಚ. ೨೫-೬೦).

[< ಸಂ. ಸೂರ್ಯ]

ಸೂರಿಯಕಾಂತಿ (ನಾ). ಒಂದು ಬಗೆಯ ಆಭರಣ: ಜಡೆಸರ ಸೂರಿಯಕಾಂತಿ ಮೌಕ್ತಿಕಗಳ ಮುಡಿವಲೆ ಮಲ್ಲವ ಬಾವುಲಿಯ ನಿಡುಗುರುಳಿನ ಮುತ್ತಿನ ಕುಚ್ಚಿನಿಂದ ಬಲ್ಪಿಡಗಾಗಿ ಮೆಲ್ದೆರು (ಕಂನವ. ೨೪-೪೨). [< ಸಂ. ಸೂರ್ಯಕಾಂತಿ]

ಸೂರಿಯಗ್ರಹಣ (ನಾ). ಸೂರ್ಯಗ್ರಹಣ : ಪ್ರಚೋತ್ಪತ್ತಿಸಂವತ್ಸರದ ಚಯಿತ್ರ ಬ ೩೦ ಲು ಸೂರಿಯಗ್ರಹಣದಲು . . . ಕೊಟ್ಟ ದಾನಶಿಲಾಶಾಸನ (ಎಕ. IV (R), ಕೊಳ್ಳೇಗಾ. ೬೩-೧೩೧; 1392). [< ಸಂ. ಸೂರ್ಯಗ್ರಹಣ]

ಸೂರಿಯಪುಟ, ಸೂರ್ಯಪುಟ₁ (ನಾ). ಒಂದು ಬಗೆಯ ಬಟ್ಟೆ; ಮಕಮಲ್ಲು: ಪಟ್ಟೆಯ ಸುರುಳು ಸೂರಿಯಪುಟ ಹೊಸ ಹೊನ್ನ ದಟ್ಟಿ ಬಿಳಿಯ ದುಕೂಲಗಳ ಪಟ್ಟಿಗೆಗಳ ಚಲುವಾಂತ ಮಳಿಗೆಗಳು (ಕಂನವ. ೬-೭೦). **ಸೂರ್ಯಪುಟ₁** : ಸೂರ್ಯಪುಟಾದಿ ಧತ್ರವನ್ನುಪಯೋಗಿಸುವುದರಿಂದ . . . ಮನಸ್ಸಿನ ವಿಲಾಸಕ್ಕೆ ಸ್ನೇಹಗೂಡಿರುವುದು (ಸಕವೃ. ೫೬); ಪೊಸಮುತ್ತಿನೊಚ್ಚರದ ಜಲ್ಲರಿಗಳಿಂದೆ ಶೋಭಿಸುವ ಸೂರ್ಯಪುಟದ ಮೇಲುಕಟ್ಟಿಮ್ಮೆರೆಯೆ (ನವಮೋ. ೧೪-೧೬): ಊಳಿಗದ ಹೆಣ್ಣುಗಳು ತಂದು ಮಡಗಿದ ಸೂರ್ಯಪುಟದ ಸುಪ್ಪತ್ತಿಗೆಯಲ್ಲಿ ಚಂದ್ರಾಪೀಡನು ಕುಳಿತುಕೊಂಡನು (ಮಚಿಕಾ. ೫೭).

ಸೂರೀಪುಟದ ಹುಳು = (ಆಲಂ) ಹೊಳಪಿನಿಂದ ಕೂಡಿರುವ ಹುಳು : ಸೂರೀಪುಟದ ಹುಳುವಿನ ವರ್ಣವಾಗಿಯಿರುವ ವಜ್ರಗಳಿಗೆ ಸೂರ್ಯನೆ ದೇವತೆ (ಸಾಗಂಧಿ. ೩೬-೪). [< ಸಂ. ಸೂರ್ಯಪಟ?./ ತೆಲು. ಸೂರಪುಟ, ಸೂರ್ಯಪಟ]

ಸೂರಿಯಸೂನು (ನಾ). ೧. ಸೂರ್ಯನ ಮಗ. ೨. ಸುಗ್ರೀವ : ಏನನೆಂಬನು ಸುರಪ ಸೂರಿಯ[ಪಾಠಾಂ. ಸೂರ್ಯರ]ಸೂನುಗಳ ಸಂಗರದ ಸಮಯದನೂನ ಸಾಹಸವನು (ತೂರರಾ. ೪-೪-೧೬). [< ಸಂ. ಸೂರ್ಯಸೂನು]

ಸೂರಿಸು (ಕ್ರಿ). ಸೂರೆಮಾಡು (?) : ಹಾರಿ ತುರವೀರ ತತ್ತರಿಸೆ ಕರಚರಣ ಮನ ಸೂರಿಸಿತು ಸಲ್ಯುದಹಿಜಾತನೆಂಬಾಖ್ಯಂ (ಜಿನಮು. ೪-೫೦).

[ಸೂರ (< ಸೂಜಿ)? + - ಇಸು]

ಸೂರಿಹಣ್ಣು (ನಾ). ಒಂದು ಬಗೆಯ ಹಣ್ಣು : ಕಾರಿಹಣ್ಣು ಸೂರಿಹಣ್ಣು ಕಿಸ್ಕಾರದ ಹಣ್ಣು ನೇರಳೆಹಣ್ಣುಗಳಿವೆ (ಸ್ವಪ್ನಪೂ. ೧೩).

[ಸೂರಿ, + ಹಣ್ಣು (< ಪಣ್)]

ಸೂರು₁ (ಕ್ರಿ). ಹರಡು; ಸಾರು; ಪ್ರಚಾರಮಾಡು : ಸುದ್ದೀ ಸೂರುವವರು ಸುದ್ದೀ ಹುಟ್ಟಿಸುವವರಪ್ಪೇ ಕೆಟ್ಟವರು (ವೀಹನೀ. ೮); ಅಂತರಂಗದಧಿನಾಯಕನು ಸುದ್ದಿಯನು ಸೂರುವೊಲು ಬುದ್ಧಿಯನು ಮಿರುವೊಲು ಎದ್ದು ಹೇಳಿದನೊ (ಗಂ. ೧೪-೪). [< ಸಾಜು?]

ಸೂರು₂ 'ಸೂರ್' ನೋ.

ಸೂರು₃ (ನಾ). ಸಣ್ಣ ಕೈಗತ್ತಿ : 'ಸೂರುಕತ್ತಿ' ಪರಾ. [< ಸಂ. ಛುರೀ]

ಸೂರು₄ (ನಾ). ೧. ಧ್ವನಿ; ಉಲಿ; ಸ್ವರ : ಅವರಲ್ಲಿ ಮುಂದಿನವರಿಬ್ಬರಿಗೆ ಹಾಡುಗರೆಂದು ಹೇಳಿದರೆ ಹಿಂದಿನವನಿಗೆ 'ಜೀ' ಅಥವಾ 'ಗೀಗೀ'ಯವನೆಂದೋ ಸೂರಿನವನೆಂದೋ ಹೇಳುವರು (ಸುವರ್ಣ. ೪೧). ೨. ಒಂದು ಬಗೆಯ ವಾದ್ಯ: ಎಲ್ಲವ್ವದೇವತೆಯ ಭಕ್ತರು 'ಜಗ' ಹೊತ್ತು ಮಲಗವಾಡಿ, ಚೌಡಕಿ, ತುಂತುಣಿ, ಸೂರು, ಗೆಜ್ಜೆ, ತಾಳ ಮೊದಲಾದುವುಗಳ ಸಂಗ ಜೋದಣೆಯೊಡನೆ ಹಾಡಿ (ಕನ್ನಚಾ.೩೧). 'ಸರ₂' ಪರಾ. [<– ಮರಾ. ಸೂರ್./ ಸಂ. ಸ್ವರ]

ಸೂರು₅ (ನಾ). ಶಿಷ್ಯ; ಭಾತ್ರ (?) : ಹರಿತವಿಟ್ಟಾಪಜ್ಯರ ಕೂಚಗಳು ಹರಿತವಿಟ್ಟಾಪಜ್ಯರ ಸೂರುಗಳು . . . ಕಪಿನೂಕನವಜ್ಯರ ಅಣ್ಣಮದೇವರು ಜಾಮದಗ್ನ ಪಿಲ್ಲುಗಳ ಕೇಶವದೀಕ್ಷಿತರು (ಎಕ.V (R), ಶಿರಮು.೧೭-೪೯; 1397). [?]

ಸೂರುಕತ್ತಿ (ನಾ). = ಸೂರು₃ : "ಶಸ್ತ್ರೀ, ಅಸಿಪುತ್ರೀ, ಛುರಿಕಾ, ಅಸಿಧೇನುಕಾಳ ಸುರಿಪು ಕತ್ತಿ, ಸೂರುಕತ್ತಿ, ಚೂರಿ, ಬಾಕು, ಸುರಿಗಿಕತ್ತಿ" (ಸಿಧ್ಧಾಂತಿ. ೨೬೬). 'ಸೂರಕತ್ತಿಗೆ' ಪರಾ. [ಸೂರು₃ + ಕತ್ತಿ]

ಸೂರುಗಲ್ಲು (ನಾ). ಮೇಲ್ಛಾವಣಿಯ ಇಳಿಜಾರಾದ ಭಾಗಕ್ಕೆ ಉಪಯೋಗಿಸುವ ಕಲ್ಲು; ಲೋವೆಗಲ್ಲು : ಕರ್ನಾಟಕರೀತಿಯ ಶಿಲ್ಪಿಗಳು ಎರಡು ತರದ ಸೂರುಗಲ್ಲನ್ನು (ಲೋವೆಕಲ್ಲನ್ನು) ಉಪಯೋಗಿಸಿರುತ್ತಾರೆ (ಮೃವಾಸ್ತು. ೪೦).

[ಸೂರು₂ (< ಸೂರ್) + ಕಲ್ಲು (< ಕಲ್)]

ಸೂರುಳ್‌₁, ಸುರುಳ್‌₂ (ಕ್ರಿ). ಸೂರುಳ್ತು, ಸೂರುಳ್ದು (ಭೂತನ್ಯೂ) ಆಣೆಯಿಡು ; ಶಪಥಮಾಡು: "ಸೂರುಳ್ - ಶಪಥೇ (ಪ್ರತಿಜ್ಞೆಮಾಡು)" (ಶಮಧಾ); ನೀನೆನಗೆ ಸೂರುಳ್ತು ಪೋಗೆನೆ ಪಂಚಮಹಾಪಾತಕದೊಳಗಾವುದಂ ಸೂರುಳ್ದೊಡನಂಬುವೆಯೆಂದೊಡೆ (ಚಾವುಂಪು. ೨೫೭); ತನ್ನ ಮೇಲೆ ಸೂರುಳ್ದು ಮಾರ್ನುಡಿಯದಂತು ಮಾಡಿ (ಪಂರಾಮಾ. ೧೫-೭೧ ವ); ನೊಂದ ಮನದ ಕಂದಂ ಕಳೆಯಲೆಂದು ಸೂರುಳ್ತು ಕಾಲ್ಮಡಿವ ಕಾದಲಂಗಟಲ್ದು (ಅನಂಪು. ೮-೧೬ ವ). **ಸುರುಳ್‌₂** : ಮದನಂ

ತಂಗೆಯನೀವೆನೆಂದು ಸುರುಳ್ದಂ (ಚಂದ್ರಪ್ಪ.೧೫-೭೦).

[ದೇ. ॥ ತಮಿ. ಚೂಳ್, ಚೂಳುಱು; ಮಲ. ಚುಟಱು; ತುಳು. ಸೂಲು = ಪ್ರತಿಜ್ಞೆ ಮಾಡುವಿಕೆ; ಆಣೆಯಿಡುವಿಕೆ]

ಸೂರುಳ್$_2$, ಸುರುಳ್ಳು$_2$, ಸೂರಳು, ಸೂರುಳು (ನಾ). ಆಣೆ; ಶಪಥ; ಪ್ರತಿಜ್ಞೆ: "ಶಪಥಂ ಸೂರುಳ್" (ವಸ್ತುಕೋ.೮೦-೩೪); ತೊಜೆ ತೊಜೆಯೆಂಬ ಮಾತನನಿತಿಲ್ಲದೊಡಾಂ ತೊಜೆವೆಂ ದಲೆಂದೊಡಾ ತೊಜೆಯೊಳೆ ಪೋಯ್ತು ಸೂರುಳೆನೆ ಸೂರುಳವೇವುವೊ ನಂಬೆನೆಂಬುದುಂ (ಪಂಪಭಾ. ೭-೭೫); ಸೂರುಳಂ ಸೂರುಳಿಡು ಬೇಗ ಕಾದದೆ ಕಳುಹಿದವೆನೆಂದನು (ಹಚಕಾ. ೮-೫೬). **ಸುರುಳ್ಳು$_2$** : "ಶವನಂ, ಶಪಥಃ . . . ಸುರುಳಿನ ಪೆಸರು" (ನಾಚರಿ. ೯೫). 'ಸುರುಳಿಡು' ಪರಾ. **ಸೂರಳು** : ತಾಪಸೋತ್ತಮ ಮೂಹುರ್ಮುಖವದಯ್ಯನ ನೇಮವೇ ಪರಣವಾಗಿ ಗಮನಿಸದಂತೆಯಾಗಸದಿ ಗೋಪನಿಂದಂ ಹರೀಶ್ವರನಿಟ್ಟ ಸೂರಳಂ ಮೀಱ ಲಸಮರ್ಥನಾಗಿ (ರಾಘಚ. ೧೪-೫೩). **ಸೂರುಳು** : ಎನಗುಬೀದ ನಲ್ಲರೆಂಬರ್ ತನುಜಾನುಜರಗ್ರಜನ್ಮರಪ್ಪರ್ ಕೇಳೆಂದೆನುತಂ . . . ಸೂರುಳನಿತ್ತಳ್ (ಪುಣ್ಯಾಸ್ರ. ೪-೨೦); ಇವರ್ಗೆ ತಿರುವಾರೂರೊಳೊರ್ವ ವರವನಿತೆಯುಂಟವಳತ್ತ ಪೋಗೆನೆಂದೆಮಗೆ ಸೂರುಳನಿಟ್ಟು ಶಿವಸನ್ನಿಧಿಯೊಳು ಸಂಕಿಲೆಯ ಪರಿಣಯನವಹುದು (ಸೌಂದಪು. ೧೩-೨೨); ನಿಮ್ಮೊಳು ನೂಱುನಾಲ್ವರು ಆ ಕುಮಾರರು ಬೇಱೆ ನೀನಿಹುದೊಬ್ಬ ಬೇಱೆಂದು ನೂಕಿ ಸೂರುಳುಮಾಡಿಬಿಟ್ಟರೆ ನಾಕುಜಾವದೊಳಿಹರು ಮಱುದಿನವಾ ಕುಮಾರರು ತಮ್ಮೊಳೊಂದಾಗಿಹರು ಗೆಳೆಯಾಗಿ (ಕುಮಾಅ. ೬-೭). [< ಸೂರುಳ್$_1$]

ಸೂರುಳಿಡಿಸು (ಕ್ರಿ). ಆಣೆ ಇಡಿಸು ; ಪ್ರತಿಜ್ಞೆಮಾಡಿಸು : ಸುಂದರಿ ನವೇಂದುಮಣಿ ಮುಕುರಂದಳೆದೊತ್ತಿರ್ದಳುರದೊಳಿನ್ನುದಯಂಗೆಯ್ವಂದೆನ್ನ ಕೊಂದೆ ನೀನೆಂದಿಂದುವಿ ನೆರ್ದೆಯಂಟೆ ಸೂರುಳಿಡಿಸುವ ತೆಱದಿಂ (ಕಾದಂಉ. ೨೨೯). [ಸೂರುಳಿಡು + - ಇಸ್ತು$_3$]

ಸೂರುಳಿಡು, ಸುರುಳಿಡು, ಸೂರಳಿಡು (ಕ್ರಿ). ಆಣೆಯಿಡು; ಪ್ರತಿಜ್ಞೆಮಾಡು: ಸೂರುಳಿಟ್ಟು ಪುಸಿಯಲ್ ಭಾಷಾಪರಿಪಾಲಕಂ . . . ದುಷ್ಕಲಂ ಧನಿಕಂ ಸತ್ಕುಲಜಾತನ್ನೆ (ಸೋಮೇಶ. ೫೨); ಇಲ್ಲದ ದೋಷಮಂ ಬಱೆದೆ ಕಲ್ಪಿಪನಲ್ಪಮೆನಿಪ್ಪ ತಪ್ಪನೊಲ್ದೆಲ್ಲ ರೊಳಾಡುವಂ . . . ಸೂರುಳಿಟ್ಟಲ್ಲದೆ ನಂಬದೀ ದುರುಳನಂ ನೆಱೆ ನೀಗುವೆನೆಂದು ಪೇಳ್ ಸಱೀ (ರಾಜಶೇ. ೧೧-೧೬೭); ತೂಂಕಡಿಸುತೆ ಸುಯ್ಯುತಾಗುಳಿಸುತಂಜುತ ಸೂರುಳಿಡುತ್ತ . . . ಶಂಕರ ಶಂಕರಾಯೆನಲ್ತಡೆಯದು ಜಿಹ್ವೆ (ಶಂಕಶ. ೨೭). **ಸುರುಳಿಡು:** ಈ ಪಡೆಯ ನಾಯಕರೆಂದಹಿತಂಬೆಡಹುಕಲ್ಗಳ ಶೇಷವನು ಕಿತ್ತಡಿಗೆಯೊಪ್ಪಿಸದಿರಲು ನಾವಲ್ಲೆಂದು ಸುರುಳಿಡಲು (ಜಿನಾಮಾ. ೪೫೪-೭). **ಸೂರಳಿಡು:** ವೈರಮಂ ಬಿಟ್ಟೀ ಮಹಾಲಿಂಗದಡಿಮುಡಿಯನಾರು ಕಂಡವರಧಿಕವೆಂದು ಹರಿವಿಧಿಗಳುಂ ಸೂರಳಿಟ್ಟುಂ (ಗುರುಚಾ. ೪-೪೨). [ಸೂರುಳ್$_2$ + ಇಡು$_1$]

ಸೂರುಳಿಸು (ಕ್ರಿ). ೧. ಆಣೆಯಿಡುವಂತೆ ಮಾಡು; ಆಣೆಯಿಡಿಸು : ಮುಂ ಕಾಣದುದರ್ಕೆ ಕಾರಣಮಂ ಪೇಱೆಂದು ಬೆಸಗೊಂಡಳ್ಗೆ ಕಾರಣಮಂ ನಿನಗೆ ಪೇೞ್ವೆವೆಂ ನೀನಾರ್ಗಂ ಪೇಱೆಯಪ್ಪೊಡೆಂದು ಸೂರುಳಿಸಿ ಇಂತೆಂದು ಪೇೞ್ದಳ್ (ವಡ್ಡಾರಾ. ೪೪-೧೦); ಸೂರುಳಿಸಿ ನೆಱೆ ಬಾಯ ಕಟ್ಟಿ ಹಣವಂ ಕೊಳಲು ಕಲಿವುದೆಂದೊಬ್ಬ ಕುಂಟಣಿ ಮಗಳ ಬೋಧಿಸಿದಳು (ಸೋಮಚಿಶ. ೨-೪೦); ಮಿಗೆ ಕನಲುತರ್ಜುನನಱೆದನಾ ದ್ರೌಪದಿಯ ಸೂರುಳಿಸಿ (ಕುಮಾವಿ. ೯-೩೫). ೨. ಆಣೆಯಿಡು; ಪ್ರತಿಜ್ಞೆಮಾಡು : ಇನಿತಾನುಂ ಸೂಱ್ ಸೂರುಳಿಸಿ ನಿರ್ಧಯಂ ಕೊಂಡು ಬಿಲ್ಲನಪ್ರತಿಮಲ್ಲಂ ಏಱಿಸಿ ನೀವಿ ಜೇವೊಡೆಯೆ (ಶಾಂತಿಪು. ೪-೩); ಬೇಗದಿಂದೀ ಗುಂಡದೊಳು ಮುಳುಗಿ ಸೂರುಳಿಸಲಾಗಿ ಬಿಟ್ಟಪೆವು (ಸಿದ್ಧೇಪು. ೧೪-೪೧); ನಾರಿ ನಿನಗೆ ಕೂರ್ಪೆನೆಂದು ಸೂರುಳಿಪುದು ಕೂಡೆ [ಪಾಠಾಂ. ಸುರುಳಿಡಿಪುದಾಕೆ] ಪೊಯ್ಯೆ ದೂರ ಪೋಪುದೊಡನೆ ಬರ್ಪುದಪ್ಪಿಕೊಳ್ಪುದು (ಜಸವ. ೧೧-೫೩). [ಸೂರುಳ್$_2$ + - ಇಸ್ತು$_3$]

ಸೂರುಳು 'ಸೂರುಳ್$_2$' ನೋ.

ಸೂರುಳುಗೆಯ್ (ಕ್ರಿ). ಪ್ರತಿಜ್ಞೆ ಮಾಡು; ಆಣೆಯಿಡು : ಅಡಗಂ ತಿಂಬವರುಂ ಕೆಲವಡೆಯೊಳ್ಗೋಮಾಂಸಮೆಂದು ಸೂರುಳುಗೆಯ್ವರ್ (ಸಮಪ. ೬-೧೯).

[ಸೂರುಳು (< ಸೂರುಳ್$_2$) + ಕೆಯ್$_1$]

ಸೂರುಳ್ಗೊಳ್ (ಕ್ರಿ). ಪ್ರತಿಜ್ಞೆಮಾಡಿಸು; ಆಣೆಯಿಡಿಸು : ಎಮ್ಮ ಪಿರಿದಪ್ಪ ಭೋಗಕ್ಕಂತರಾಯಮಕ್ಕುಮದಱಿಂ ಮುನ್ನಮೆ ಪೇೞ್ವೆನೆಂದು ಕೈಯಂ ಮುಗಿದು ಸೂರುಳ್ಗೊಂಡೊಡಂಬಡಿಸಿ (ಧರ್ಮಾಮೃ. ೨.೧೬೯). [ಸೂರುಳ್$_2$ + ಕೊಳ್$_1$]

ಸೂರುಳ್ತು 'ಸೂರುಳ್$_1$' ಪರಾ.

ಸೂರುಳ್ದು 'ಸೂರುಳ್$_1$' ಪರಾ.

ಸೂರೂರ್ (ನಾ). ಒಂದು ಊರಿನ ಹೆಸರು : ನೊಳಮ್ಬಾಧಿರಾಜಬಿನ್ನಪದಿನ್ನ ನೀತಿ ಮಾರ್ಗ್ಗ ಪೆರ್ಮ್ಮಾನಡಿಗಳು ನೊಳಮ್ಬಾಧಿರಾಜರು ಸೂರೂರಂ ಬಾಳ್ಗಱ್ಚುಗೊಟ್ಟರ್ (ಎಕ. X, ಕೋಲಾರ.೭೯-೧೩; ಸು. 890). [? + ಊರ್]

ಸೂರೆ 'ಸೂಱೆ' ನೋ.

ಸೂರೆಕಾರ 'ಸೂಱೆಗಾಱ' ನೋ.

ಸೂರೆಕೊಳ್ 'ಸೂಱೆಗೊಳ್' ನೋ.

ಸೂರೆಗ 'ಸೂಱೆಗ' ನೋ.

ಸೂರೆಗಳ್ಳ (ನಾ). ಸುಲಿಗೆ ಮಾಡುವವನು: ದುರಾಶೆಯ ದುರುದುಂಬಿಗಳಲ್ಲ ಸೂರೆಗಳ್ಳರಲ್ಲ (ಬೆಟ್ಟಅ. ೭೪-೨೬). [ಸೂರೆ (< ಸೂಱೆ) + ಕಳ್ಳ$_1$]

ಸೂರೆಗೈ 'ಸೂಱೆಗೈ' ನೋ.

ಸೂರೆಗೊಡು 'ಸೂಱೆಗೊಡು' ನೋ.

ಸೂರೆಗೊಳ್ 'ಸೂಱೆಗೊಳ್' ನೋ.

ಸೂರೆಗೊಳಿಸು (ಕ್ರಿ). ೧. ಲೂಟಿಯಾಗುವಂತೆ ಮಾಡು. ೨. (ಆಲಂ) ವಿಶೇಷವಾಗಿ ಪ್ರದರ್ಶಿಸು : 'ಕೈಗಣ್ಮೆ ಪೊಣ್ಮೆ' . . . 'ಮಾಂಜಿಯಂಜಿ' ಇಂಥ ತುಣಕುನುಡಿಗಳು ಅವೆಷ್ಟೋ ಅಂದವಾಗಿ ಬಂದಿವೆ, ಕನ್ನಡಗದ್ಯಪ್ರತಿಭೆ ಕುಣಿಕುಣಿಯುತ್ತ ತನ್ನ ಬೆದಗಿನ ಬಿಂಕವನ್ನೆಲ್ಲ ಸೂರೆಗೊಳಿಸುತ್ತಿರುವಳೇನೊ ಎಂಬಂತೆ (ತಪನಿ. ೧೭೯).

[ಸೂರೆಗೊಳ್ (< ಸೂಱೆಗೊಳ್) + - ಇಸ್ತು$_3$]

ಸೂರೆಗೊಳ್ಳು 'ಸೂಱೆಗೊಳ್' ನೋ.

ಸೂರೆಪಾನ$_1$, ಸೂರಿಪಾನ, ಸೂರಿಪಾನಿ, ಸೂರಿಪಾನೆ, ಸೂರ್ಯಪಾನ$_1$ (ನಾ). ದೇವರ ಅಥವಾ ರಾಜರ ಮೆರವಣಿಗೆಯಲ್ಲಿ ಗೌರವಾರ್ಥವಾಗಿ ಕೊಂಡೊಯ್ಯುವ ಒಂದು ಬಗೆಯ ಫಲಕ ಅಥವಾ ಚಾಮರ : ಸತ್ತಿಗೆ ಸೂರಿಪಾನ ಚಾಮರ ಮೊದಲಾದ ಬಿರುದುಗಳಿಂದಲೂ ಒಡಗೂಡಿ ಅರಮನೆಯಿಂದ ಹೊರಟು ಕಿಮ್ಮಣ್ಣುಮಟ್ಟಿಯಲ್ಲಿ ದೊರೆಗಳವರಿಗೆ ನಮಸ್ಕರಿಸಿ (ಮಹಾವಂ. I, ೩೫). **ಸೂರಿಪಾನ:** (ಕ). **ಸೂರಿಪಾನಿ:** ಪಲ್ಲಕ್ಕಿ ಛತ್ರಿ ಚೌರಿ ಸೂರಿಪಾನಿ ಮೋರ್ಚಾಲ್ ಬೆಳ್ಳಕ್ಕೆಬಸವ ಬಣ್ಣದ ಆನೆ ಕುದುರೆ . . . ಅನೇಕ ವಾಹನಗಳನ್ನು ಒಪ್ಪಿಸಿದರು (ಚಾಮವಂ. ೨೮೦). **ಸೂರಿಪಾನೆ** : ಉದ್ದರಣೆ ದೊಣ್ಣೆ ಕಲಾಬತ್ತು ಛತ್ರ ಚೌರಿ ಸೂರಿಪಾನೆ ಪಲ್ಲಕ್ಕಿ ಆನೆ ಕುದುರೆ ಅಂಬಾರಿ ಹಿತ್ತಾಳೆ ತಾಂಬ್ರಗಳಿಂದ ಮಾಡಿದ ಅನೇಕ ಪದಾರ್ಥಗಳು (ಚಾಮವಂ. ೩೧೨); ರಥೋತ್ಸವಕ್ಕೆ ಬೊಂಬೆಯ ರಥವನ್ನೂ . . . ಪಲ್ಲಕ್ಕಿ, ಛತ್ರ, ಚಾಮರ, ಸೂರಿಪಾನೆ ಮುಂತಾದ ಸೇವೋಪಕರಣಗಳನ್ನೂ ಒಪ್ಪಿಸಿದರು (ಮಹಾವಂ. II, ೧೪೪). **ಸೂರ್ಯಪಾನ$_1$** : ಸುವರ್ಣವಾದ ಗದ್ದಿಗೆ ಮಂಟಪ ಕೆತ್ತಿಗೆ ಸೂರ್ಯಪಾನ . . . ನಾನಾಪರಿ ವಾದ್ಯ ದುಂದುಭಿ ನೌಬತ್ತು ನಾ ಮುಂದೆ ಹೊಯ್ದುದ್ದೆ (ಪುರಂದ. ೫-೬೯-೮). [ದೇ. ॥ ತೆಲು. ಸೂರೇಪಾನು, ಸೂರ್ಯಪಾನು]

ಸೂರೆಪಾನ$_2$ (ನಾ). ಒಂದು ಬಗೆಯ ಹೂವು; ಸೂರ್ಯಕಾಂತಿಪುಷ್ಪ: ಸೂರೆಪಾನದ ಹೂವ ಪುಷ್ಪಕವಿಮಾನದಲಿ ಕುಳಿತು ಬಾಂದಳದಲ್ಲಿ ಏರಬಹುದು (ಭಾವಜೀ. ೨೮-೫೪೯). [< ಸೂರ್ಯಪಾನ$_2$]

ಸೂರೆಹೋಗು 'ಸೂಱೆಪೋಗು' ನೋ.

ಸೂರ್ಚು (ಕ್ರಿ). ಚುಚ್ಚು; ನಾಟು : ಅವಳೆರಡು ಕರ್ಣರಂಧ್ರದಿ ತಪ್ಪಸರಲುಯುಗಳ ಸೂರ್ಚಿದಂತೆ (ನವಮೋ. ೬-೫೨). [< ಚುರ್ಚು$_1$]

ಸೂರ್ತಿಖಾರ (ನಾ). ಒಂದು ಬಗೆಯ ಕ್ಷಾರ: ಸೂರ್ತಿ ಚವಾಳಾಮಣದ ಮೇಲೆ ಕಿಮ್ಮತ್ತು ಇರತಕ್ಕ ಜೀನಸುಗಳು ೧ ಅಕ್ಕಲಖಾರ, ಹಲಕಿ (ಸಂಬಂಧ) . . . ೫೮ ಸೂರ್ತಿಖಾರ (ಮುಂಬಾಮ್ಯಾ.೧೨೫). [ಸೂರ್ತಿ$_0$ + ಖಾರ$_1$ (< ಕಾರ$_2$)]

ಸೂರ್ತಿಭಾರ (ನಾ). ಅಳತೆಯ ಒಂದು ಪ್ರಮಾಣ: ಆ ಗುಜರಾತಿ ಪುಸ್ತಕದಲ್ಲಿ ತೂಕ ಮತ್ತು ಅಳತೆಯ ವಿಷಯಕ್ಕೆ ಎಷ್ಟು ಮಾಹಿತಿ ಅದೆ, ಅದರಲ್ಲಿ ತೂಕವು ಎಷ್ಟು ಸೂರ್ತಿಭಾರ ಇರುತ್ತದೆ (ಮುಂಬ್ಯಾ.೧೩ ಪ್ರಸ್ತಾವನೆ). [ಸೂರ್ತಿ + ಭಾರ]

ಸೂರ್ತಿಮುತ್ತು (ನಾ). ಒಂದು ಬಗೆಯ ಶ್ರೇಷ್ಠವಾದ ಮುತ್ತು; ಸೂರತ್ ದೇಶದ ಮುತ್ತು: ನವರತ್ನಖಚಿತಮಕುಟಾಗ್ರದೊಳ್ಪಭ್ರಾಜಿಸುವ ಸೂರ್ತಿ ಮುತ್ತಿನ ತುರಾಯಿಗಳ ಕಾಂತಿಗಳ್ ತವೆ ಗುಂಪುಗೂಡಿ . . . ರಾಜಿಸುವವು (ಅರ್ಜಾವಿ. ೨೪-೨೬).

[ಸೂರ್ತಿ + ಮುತ್ತು]

ಸೂರ್ತಿರೂಪಾಯಿ (ನಾ). ಸೂರತ್‌ದೇಶದ ನಾಣ್ಯ: ಆ ಖಂಡುಗ ಎಷ್ಟು ಸೂರ್ತಿ ರೂಪಾಯಿ ತೂಕ (ಇಂಗ್ಲೀಜಿ ರೂಪಾಯಿ ತೂಕ) ಇರುತ್ತದೆ? (ಮುಂಬ್ಯಾ.೮ ಪ್ರಸ್ತಾವನೆ).

[ಸೂರ್ತಿ + ರೂಪಾಯಿ]

ಸೂರ್ತಿವರಹ (ನಾ). = ಸೂರ್ತಿರೂಪಾಯಿ: ಇದು ಸೂರ್ತಿವರಹ,ಇದು ಸೂರ್ತಿಹಣ . . . ಇದರ ಸಂಗಡ ಕಂಠಿರಾಯವರಹಾ, ಹಣ ಸಹಾ ಸೇರಿಕೊಂಡಿದೆ (ಅದೂಬು.೧೦). [ಸೂರ್ತಿ + ವರಹ]

ಸೂರ್ತಿಹಣ (ನಾ). = ಸೂರ್ತಿರೂಪಾಯಿ: ಇದು ಸೂರ್ತಿವರಹ, ಇದು ಸೂರ್ತಿಹಣ . . . ಇದರ ಸಂಗಡ ಕಂಠಿರಾಯವರಹಾ, ಹಣ ಸಹಾ ಸೇರಿಕೊಂಡಿದೆ (ಅದೂಬು. ೧೦). [ಸೂರ್ತಿ + ಹಣ (< ಪಣವು)]

ಸೂರ್ಪ (ನಾ). ಕೇರುವ ಸಾಧನ; ಮೊರ: ಬಸವಭೃತ್ಯಂ ದಲನಿಸಿಂತು ರಾಜಿಸುತಿರ್ಪ ಕುಸುಮಶರಹರಭಕ್ತ ಮೊಜಿನ ವೇಮಾರ್ಯನುಲ್ಲಸದ ಸೂರ್ಪಂಗಳಂ ತಾಂ ವಿರಚಿಸುತ್ತುಂ (ಆರಾಚ.೨-೧೩-೫). [< ಸಂ. ಶೂರ್ಪ]

ಸೂರ್ಪುಲ್ಲಡ್ಡಿ (ನಾ). ಸೂರಿನಲ್ಲಿ ಬೆಳೆದ ಹುಲ್ಲಿನ ಕಡ್ಡಿ : ಓರ್ವಳು ಚೇಟಿ ಭಕ್ತೆ ನಿರ್ಧರಿಸಿ ತರಿಸಿದಳು ಸೂರ್ಪುಲ್ಲಡ್ಡಿಯ (ವೀಶ್ಚಪು.೬-೨-೨೬).

[ಸೂರ್ + ಪುಲ್ + ಕಡ್ಡಿ]

ಸೂರ್ಮಿ (ನಾ). ಲೋಹದ ಪ್ರತಿಮೆ: "ಸೂರ್ಮಿ ಸ್ಥಾಣಮಂದೆನಲು ಲೋಹದಾ ಪ್ರತಿಮೆಯಕ್ಕುಂ" (ಮಂಗರಾ.೯-೨೦). [ಸಂ.]

ಸೂರ್ಯ (ನಾ). ೧. ನೇಸರು; ರವಿ: ಸೂರ್ಯನುದಯ ತಾವರೆಗೆ ಜೀವಾಳ (ಬಸವ.೩೭೬); ಪೃಥಿವಿ - ಅಪ್ಪು- ತೇಜಸ್ಸು - ವಾಯು - ಆಕಾಶ- ಸೂರ್ಯ ಚಂದ್ರ - ಜೀವಾತ್ಮ ಇವು ಅವನ ಎಂಟು ಅವಯವಗಳು (ಶಕ್ತಿವಿ.೩೩); ಸೂರ್ಯನ ಮೇಲೆ ಮಣ್ಣು ತೂರಿದರೆ ಮೋರೆ ಮೇಲೆ ಬೀಳುವುದು (ಗಾದೆ). ೨. ಬಿಳಿಯ ಎಕ್ಕದ ಗಿಡ; ಅರ್ಕ: "ಅರ್ಕಃ- ಎಕ್ಕೆ; ಸೂರ್ಯಕಾಂತ; ಸೂರ್ಯ" (ಓಷಧಿ. ೧). ೩. ಮಹಾಮಂತ್ರಗಳಲ್ಲಿ ಒಂದು: ಬ್ರಹ್ಮ ಎಷ್ಟು ಸೂರ್ಯ ಭೈರವಾದಿ ಮಹಾಮಂತ್ರಂಗಳಂ (ವೀಚಿ.೭೫). ೪. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ. ೫. [ಜ್ಯೋತಿ] ಆಕಾಶದಲ್ಲಿ ಕಾಣುವ ಗ್ರಹಗಳಲ್ಲಿ ಒಂದು: ಆಕಾಶದಲ್ಲಿ ಕಾಣುವ ಗ್ರಹಗಳಲ್ಲೆಲ್ಲಾ ಗಾತ್ರದಲ್ಲಿ, ಪ್ರಕಾಶದಲ್ಲಿ, ಸೂರ್ಯನೇ ಅತ್ಯಂತ ಹಿರಿಯ ಗ್ರಹ (ಆಕಾಶ.೯). ೬. [ಛಂದ] ಒಂದು ಅಂಶಗಣದ ಹೆಸರು; ಎರಡಂಶದ ಬ್ರಹ್ಮಗಣ: ಮಹಾಕ್ಕರದ ಪ್ರತಿಚರಣದ ಮೊದಲಲ್ಲಿ ಒಬ್ಬ ಸೂರ್ಯ (ಒಂದು ಬ್ರಹ್ಮಗಣ) . . . ಕೊನೆಯಲ್ಲಿ ಒಬ್ಬ ಚಂದ್ರ (ಒಂದು ರುದ್ರ) ಹೀಗೆ ಗಣಗಳು ಬರುತ್ತವೆ (ಛಂದೋವಿ.೧೩೩); ಇವಕ್ಕೆ ತಲುಗಿನಲ್ಲಿ ಕ್ರಮವಾಗಿ ಸೂರ್ಯ ಇಂದ್ರ ಚಂದ್ರಗಣಗಳೆಂದು ಹೆಸರು ಕೊಟ್ಟಿದ್ದಾರೆ (ಕೃಪಿ. ೧೧೮). [ಸಂ.]

ಸೂರ್ಯಕಾಂತ (ನಾ). ಬಿಸಿಲಿಗೆ ಕಿಡಿ ಕಾರುವುದೆಂದು ನಂಬಲಾದ ಒಂದು ಬಗೆಯ ಕಲ್ಲು; ಅರ್ಕಾಶ್ಮ: ಖರಕಿರಣಸ್ಫುರಿತಕ್ಕಿದಿರುರಿವಂತಿರೆ ಸೂರ್ಯಕಾಂತ ಮನ್ನೀ ತೇಜಸ್ಫುರಿತಕ್ಕೆ ಸಣಸಿನೊಳ್ ಮಾಱುರಿಗುಂ ಸ್ಮರಿಸಿದು ತೇಜಮಾ ಭುಜಬಲಿಯಾ (ಆದಿಪು.೧೪-೪೨); ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ ಉಷ್ಣವ ತೋಱುವ ಪರಿಯನ್ನೆಂತೊ (ಬಸವ.೬೦೬); ಮಿಂಚಿನ ಬಗೆಯ ಸಕ್ಕೆಯೊ ಸೂರ್ಯಕಾಂತಚ್ಛವಿಯ ತಕ್ಕೆಗಳೊ (ಕುಮ್ಮಭೀ.೧-೪೭). 'ಚಂದ್ರಕಾಂತ' ಪರಾ.

[ಸಂ.]

ಸೂರ್ಯಕಾಂತಮಣಿ (ನಾ). = ಸೂರ್ಯಕಾಂತ : ಅಲ್ಲಿಂಮೇಲೆ ದಶಯೋಜನಾಂತರದೊಳ್ ಕಿಂಚಿನ್ಮೂನಯೋಜನವಳಯದಿಂ ಸೂರ್ಯಕಾಂತಮಣಿಮಯಮಾಗಿ ಸೂರ್ಯವಿಮಾನಮುಂ (ಸುಕುಮಾ.೧೧-೫೯ ವ). [ಸಂ.]

ಸೂರ್ಯಕಾಂತಶಿಲೆ (ನಾ). = ಸೂರ್ಯಕಾಂತ: "ತಪನಮಣಿಃ-ಸೂರ್ಯ ಕಾಂತಶಿಲೆ" (ಓಷಧಿ. ೬೬); ಅದು ಹಗಲು ಸೂರ್ಯಕಾಂತಶಿಲೆ. ರಾತ್ರಿ ಚಂದ್ರಕಾಂತಶಿಲೆ (ಜಯಂತ.೧೫೬). 'ಚಂದ್ರಕಾಂತಶಿಲೆ' ಪರಾ. [ಸಂ. ಸೂರ್ಯಕಾಂತಶಿಲಾ]

ಸೂರ್ಯಕಾಂತಿ (ನಾ). ೧. ರವಿಯ ಬೆಳಕು,– ಕಾಂತಿ. ೨. ರವಿಯ ಬೆಳಕಿಗನುಗುಣವಾಗಿ ತಿರುಗುವ ಸ್ವಭಾವವನ್ನುಳ್ಳ ಅಥವಾ ಸೂರ್ಯನ ಕಡೆ ಮುಖಮಾಡಿ ನಿಲ್ಲುವ ಹಳದಿ ಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು: ಸೂರ್ಯಕಾಂತಿ, ಹೊತ್ತು ತಿರುಗ ಹೂ, ಅರ್ಕಪುಷ್ಪ (ಮೃಡಿಗಿ. ೪೨-೪೫); ಅಲ್ಲಿ ಪಂಕ್ತಿ, ಸೂರ್ಯಕಾಂತಿ; ಇಲ್ಲಿ ಪನ್ನೇರಿಳೆ, ಅಲ್ಲಿ ಹೊಂಗುಲಾಬಿ ಹಂತಿ ; ಇಲ್ಲಿ ಚಿನ್ನಪೂಮಳೆ (ಅನಕೃ.೨೦-೯). [ಸಂ.]

ಸೂರ್ಯಕುಲ (ನಾ). ಸೂರ್ಯನು ಮೂಲಪುರುಷನೆಂದು ಭಾವಿಸಲಾದ ಒಂದು ವಂಶ: ಸೂರ್ಯಕುಲಪ್ರಸೂತರಾದ ವೆನುಗೊಂಡ ಚಕ್ರೇಸ್ವರಾದ್ಯನೇಕ ಬಿರಿದ ಪ್ರಸಸ್ತರಾದ ಸಕಲರಾಜಾಧಿಪತಿಗಳಾದ ದೇವಣಂಣವೊಡೆಯರ ಕುಮಾರರು (ಎಕ.III (R), ಗುಂಡ್ಲುಪೇ.೨೬-೧೩;1506); ನಿಡುಗಲ್ಲ ಚೋಳರಸರು ತಾವು "ಸೂರ್ಯ ಕುಲ"ದವರೆಂದು ಶಾಸನಗಳಲ್ಲಿ ಹೇಳಿಕೊಳ್ಳುವರು (ಕರ್ನಾಸಂ.೨೩೮). [ಸಂ.]

ಸೂರ್ಯಗ್ರಹಣ (ನಾ). (ಅಮಾವಾಸ್ಯೆಯ ದಿನಗಳಲ್ಲಿ) ಚಂದ್ರನು ಸೂರ್ಯ ಮತ್ತು ಭೂಮಿಗಳ ಮಧ್ಯೆ ಬರುವಿಕೆ; ಭೂಮಿಯ ಮೇಲೆ ಚಂದ್ರನ ನೆರಳು ಬೀಳುವಿಕೆ; ಉಪರಾಗ: ೧೦೦೧ ಸಿದ್ಧಾರ್ತಿಸಂವತ್ಸರದ ಮಾರ್ಗಸಿರಮಾಸದ ಅಮಾವಾಸ್ಯೆಯುಂ ಶಂಕ್ರಾನ್ತಿಯುಂ ಸೂರ್ಯ್ಯಗ್ರಹಣದನ್ನು . . . ಬಿಟ್ಟು ದತ್ತಿ (ಎಕ. III (R), ಹಗ್ಗಡ.೧೨೩-೨೩; 1079); ಇಂದು ಪಿತೃದಿನವಿಂದು ಸಂಕ್ರಮಣಂದು ಸೂರ್ಯಗ್ರಹಣ ಹರಿದಿನವಿಂದು ಯಜ್ಞಾರಂಭದಿನ ವಡ್ಡಂತಿ ಲೇಸೆಂದು (ಕುಮ್ಮಾವಿ.೬-೧೩); ಸೂರ್ಯಗ್ರಹಣ ಆಗುವುದು ಅಮಾವಾಸ್ಯೆಯ ದಿನಗಳಲ್ಲಿ ಮಾತ್ರ, ಕಾರಣ ಚಂದ್ರ, ಸೂರ್ಯ- ಭೂಮಿಗಳ ಮಧ್ಯೆ ಬರುವುದು ಆ ದಿವಸಗಳಲ್ಲಿ ಮಾತ್ರ, ಸಾಧ್ಯ (ಆಕಾಶ.೪೨). 'ಚಂದ್ರಗ್ರಹಣ' ಪರಾ. [ಸಂ.]

ಸೂರ್ಯಜ್ಯೋತಿ (ನಾ). ರವಿಯ ಪ್ರಕಾಶವನ್ನು ಹೊಂದಿರುವ ದೀವಟಿಗೆ,– ಹಿಲಾಲು: ಕರದ ದಿವಟಿ ಹಿಲಾಲುಗಳ ಭಾಸುರ ಜಗಂಜ್ಯೋತಿಗಳ ಕಾಂತಿಸ್ಫುರಿತ ಸೂರ್ಯಜ್ಯೋತಿಗಳ ಸಾಲುಗಳು ಬೆಳಬೆಳಗೆ (ಆನಂರಾ.೧೦-೨೪-೩೫).

[ಸಂ. ಸೂರ್ಯಜ್ಯೋತಿಸ್]

ಸೂರ್ಯತನಯ (ನಾ). ೧. ಆದಿತ್ಯನ ಪುತ್ರ. ೨. ಶನಿ. ೩. ಯಮ. ೪. ಕರ್ಣ. ೫. ಸುಗ್ರೀವ. ೬. ವರುಣ. [ಸಂ.]

ಸೂರ್ಯತನಯೆ (ನಾ).೧. ಆದಿತ್ಯನ ಪುತ್ರಿ. ೨. ಯಮುನಾನದಿ; ಯಮುನೆ: ಸೂರ್ಯತನಯೆಯನುತ್ತರಿಸಿ ಮತ್ತೆ ದಾಂಟಿ ಸುರನಿಮ್ನಗೆಯನಾ ಶೃಂಗಿಬೇರಮಂ ಪೊಕ್ಕು (ಶ್ರೀರಾಮಾ.೧೭೪-೬೦೪). [ಸಂ. ಸೂರ್ಯತನಯಾ]

ಸೂರ್ಯನಕ್ಷತ್ರ (ನಾ). ಇಪ್ಪತ್ತೈಳು ನಕ್ಷತ್ರರಾಶಿಗಳಲ್ಲಿ ಸೂರ್ಯನು ಇರಬೇಕಾಗಿದ್ದ ನಕ್ಷತ್ರರಾಶಿ. [ಸಂ.]

ಸೂರ್ಯನಮಸ್ಕಾರ (ನಾ). (ಆದಿತ್ಯವಾರದಂದು, ಉದಯವಾಗುತ್ತಿರುವ) ಸೂರ್ಯನಿಗೆ ಮಾಡುವ ಸಾಷ್ಟಾಂಗನಮಸ್ಕಾರ: ಮುಂಚಾನೆ ಕುಸ್ತಿಯಾಡುವವರ ಗುಂಪುಗಳೂ ಸೂರ್ಯನಮಸ್ಕಾರ ಹಾಕುವವರೂ ಅಲ್ಲಲ್ಲಿ ಕಾಣಸಿಗುವರು (ಚಟ್ಟಹೂ. ೧). [ಸಂ.]

ಸೂರ್ಯನಾಡಿ (ನಾ). ಶರೀರದ ಒಂದು ನಾಡಿ: ದಕ್ಷಿಣಭಾಗದ ಪಿಂಗಳನಾಡಿಯೇ ಸೂರ್ಯನಾಡಿಯೆಂದು ಗಂಗಾನದಿಯೆಂದು ಪೇಳಲ್ಪಡುವುದು (ಅಖಂಡೇ.೨೧೮-೫೮).

[ಸಂ.]

ಸೂರ್ಯಪಾನ$_{1}$ 'ಸೂರೆಪಾನ' ನೋ.

ಸೂರ್ಯಪಾನ$_{2}$ (ನಾ). ೧. ಬಿಸಿಲನ್ನು ಅನುಭವಿಸುವುದು. ೨. = ಸೂರ್ಯಕಾಂತಿ ೨ : ಸೂರ್ಯಪಾನವೆಂಬ ಪುಷ್ಪವು ಸೂರ್ಯೋದಯವಾದ ಕೂಡಲೆ ಪೂರ್ವಕ್ಕೆ

ತಿರುಗಿ ಸೂರ್ಯನ ಸಂಗಡ ಸಾಯಂಕಾಲದವರೆಗೆ ತಾನೂ ತಿರುಗುತ್ತದೆ (ಮುಂಬಯಿ. ೬-೨೭೪); ಆ ಕೋಣನ ಮುಂಡದ ಮೇಲೆ ಸೂರ್ಯಪಾನ ಹೂವಿನಂತೆ ಬಿಳಿ ಹಳದಿ ಕೂದಲಿನ ದೊಡ್ಡ ದಾಸೆ(ಮಚ್ಚೆ)ಯಿತ್ತು (ಕಂಬಹಾ.೪೫); ಸೂರ್ಯಪಾನವ ನೋಡು ಹೇಗೆ ನಿಂತಿಹುದು (ಸೂರ್ಯಪಾ.೧-೯). [ಸಂ.]

ಸೂರ್ಯಪುಟ$_1$ 'ಸೂರಿಯಪುಟ' ನೋ.

ಸೂರ್ಯಪುಟ$_2$ (ನಾ). ಸೂರ್ಯನ ಕಿರಣಗಳಿಂದ ಕಾಯಿಸುವುದು: ಕಗ್ಗಲಿ ಬೇರು, ಉಳ್ಳಿ, ಬಜೆ . . . ಜಜ್ಜಿ, ಕುಟ್ಟಿ, ಎಳ್ಳೆಣ್ಣೆ, ಇಪ್ಪೆಯೆಣ್ಣೆ . . . ಒಂದು ಸೊಲಿಗೆಯಲ್ಲಿ ಕೂಡಿಸಿ . . . ಸೂರ್ಯಪುಟದಲ್ಲಿಟ್ಟು ಮೈಗೆ ಲೇಪನ ಮಾಡಲು ಸನ್ನಿಪಾತ ಗುಣಮಕ್ಕುಂ (ಸಕವೈ.೧೭೮); ಆಯತದಿಂ ಗಂಗುಂಗೇಕಾಯಂ ತಾ ತಂದು ಸೂರ್ಯಪುಟದೊಳ್ ಸಪ್ತೋಪಾಯದಿ ತೆಗೆದೆಣ್ಣೆಯನು (ಕರ್ನಾಕ. ೫೬). [ಸಂ.]

ಸೂರ್ಯಪುತ್ರ (ನಾ). ೧. ಆದಿತ್ಯನ ಮಗ. ೨. ಶನಿ. ೩. ಯಮ. ೪. ಕರ್ಣ. ೫. ಸುಗ್ರೀವ. ೬. ವರುಣ. [ಸಂ.]

ಸೂರ್ಯಪ್ರದಕ್ಷಿಣೆ (ನಾ). ರವಿಯನ್ನು ಸುತ್ತುಹಾಕುವಿಕೆ; ಸೂರ್ಯನ ಸುತ್ತಲೂ ಚಲಿಸುವಿಕೆ: ಅದರಿಂದ ಭೂಮಿ ಸೂರ್ಯನನ್ನು ಸುತ್ತುತ್ತಲೇ ಇದೆ. ಸೂರ್ಯಪ್ರದಕ್ಷಿಣೆ ಮಾಡುತ್ತಿದೆ (ಆಕಾಶ.೪೪). [ಸಂ. ಸೂರ್ಯಪ್ರದಕ್ಷಿಣ]

ಸೂರ್ಯಬಂಧು (ನಾ). ಒಂದು ಬಗೆಯ ಕೆಂಪುಹೂವು; ಸೂರ್ಯಕಾಂತಿ ಪುಷ್ಪ: "ರಾಗಪುಷ್ಪಃ— ಸೂರ್ಯಬಂಧು" (ಓಷಧಿ.೧೩೮). [ಸಂ.]

ಸೂರ್ಯಬಿಂಬ (ನಾ). ರವಿಯ ಆಕೃತಿ,- ಬಿಂಬ: 'ಚಂದ್ರಬಿಂಬ' ಪರಾ. [ಸಂ.]

ಸೂರ್ಯಭಕ್ತ (ನಾ). ೧. ಆದಿತ್ಯನನ್ನು ಪೂಜಿಸುವವನು; ಸೂರ್ಯನ ಭಕ್ತ. ೨. ಒಂದು ಬಗೆಯ ಔಷಧೀಮೂಲಿಕೆ: "ಬ್ರಾಹ್ಮೀ- ಹೊನ್ನಗನ್ನೆ, ಒಂದೆಲಗ, ಸೂರ್ಯಭಕ್ತ, ಗಂಧರ್ವದೂರ್ವೆ" (ಓಷಧಿ.೧೦೮); ಅವರೆಯ ಬೇರು . . . ಸೂರ್ಯಭಕ್ತನ ಬೇರು ಶಂಠಿ ಮೆಣಸು ಹಿಪ್ಪಲಿ ಎಂಬ ತ್ರಿಕಟುಕ ಇವುಗಳಲ್ಲಾವುದಾದರೊಂದನು ಹಾಲಿಂದ ಅರೆದು ಪಾನ ಲೇಪನಂಗಳ ಮಾಡಿಸಲು ಕಳ್ಳಿಯ ಹಾಲ ವಿಷ ಪರಿಹರವಹುದು (ಪ್ರಸ್ತಾ.II, ೨೨೭). [ಸಂ.]

ಸೂರ್ಯಭೇದನ (ನಾ). ೧. [ಯೋಗ] ಎಂಟು ವಿಧವಾದ ಕುಂಭಕಗಳಲ್ಲಿ ಒಂದು: ಸೂರ್ಯಭೇದನ ಉಜ್ಜಾಯಿ ಸೀತ್ಕಾರಿ ಶೀತಳಿ ಭಸ್ತ್ರಿಕೆ ಭ್ರಾಮರಿ ಮೂರ್ಛ ಕೇವಲಮೆಂಬಷ್ಟಕುಂಭಕಪ್ರಕಾರಂಗಳುಂ (ವಿವೇಕ.೧೩೨). ೨. ಒಂದು ಬಗೆಯ ಆಸನ: ಸೂರ್ಯಭೇದನ ವ್ಯಾಯಾಮದಲ್ಲಿ ೧೫ ಪ್ರಕಾರ ಆಸನಗಳಿರುತ್ತವೆ (ಬ್ರಹ್ಮಜೇ.೨೧೫). [ಸಂ.]

ಸೂರ್ಯಮಂಡಲ (ನಾ). ರವಿಯ ವರ್ತುಲ; ಸೂರ್ಯಬಿಂಬ: ತ್ರಿಕೋಣಮಂಡಲವು ಅಗ್ನಿಮಂಡಲವೆಂತಲೂ ಷಟ್ಕೋಣ ವಾಯುಮಂಡಲವೆಂತಲೂ ದ್ವಾದಶಕೋಣ ಸೂರ್ಯಮಂಡಲವೆಂತಲೂ . . . ಹೀಗೆ ೬ ಮಂಡಲಗಳೂ ಇರುವುವು (ಪಸಾರ.೮-೪ ತಾತ್ಪರ್ಯ). [ಸಂ.]

ಸೂರ್ಯಲೋಕ (ನಾ). ಆದಿತ್ಯನ ಪ್ರಭುತ್ವದಲ್ಲಿ ಇರುವ, ರವಿಯ ಸುತ್ತ ಆವೃತ್ತವಾದ ಪ್ರದೇಶದಲ್ಲಿರುವುದೆಂದು ನಂಬಲಾದ ಸ್ವರ್ಗಲೋಕ. 'ಚಂದ್ರಲೋಕ' ಪರಾ. [ಸಂ.]

ಸೂರ್ಯವಂಶ (ನಾ).= ಸೂರ್ಯಕುಲ: ಸೂರ್ಯವಂಶದ ಕ್ಷತ್ರಿಯಂ ದಿಳೀಪನಾತನ ಮಗಂ ರಘು (ಕೊಲ್ಹಾಶಾ. ೧೫-೩೨; 1186); ಉದಯಪುರದ ಮಹಾರಾಜನು ಸೂರ್ಯವಂಶದವನೆಂದು . . . ಎಣಿಸಲ್ಪಟ್ಟಿದ್ದಾನೆ (ಭೂಗೋಳ. ೬೪). 'ಚಂದ್ರವಂಶ' ಪರಾ. [ಸಂ.]

ಸೂರ್ಯವಾದ್ಯ (ನಾ). ೧. (ತಮಟೆ ಅಥವಾ ಮದ್ದಲೆಯಂಥ) ಒಂದು ಬಗೆಯ ಚರ್ಮವಾದ್ಯ. ೨. ಒಂದು ಬಗೆಯ ಧ್ವಜ: ಬಿಳಿ, ಕೆಂಪು, ಹಸುರು ಮತ್ತು ಹಳದಿ ಛತ್ರಿಗಳು, ಸೂರ್ಯವಾದ್ಯ, ಚಂದ್ರವಾದ್ಯ, ಒಂಟೆ ಮೇಲೆ ನಿಶಾನಿ (ಗುರುಚ.೧೦). 'ಚಂದ್ರವಾದ್ಯ' ಪರಾ. [ಸಂ./ ತೆಲು. ಸೂರ್ಯವಾದ್ಯ]

ಸೂರ್ಯವಿಮಾನ (ನಾ). [ಜೈನ] ಸ್ವರ್ಗಗಳಲ್ಲಿ ಒಂದು: ಅಲ್ಲಿಂ ಮೇಲೆ ದಶಯೋಜನಾಂತರದೊಳ್ ಕಿಂಚಿನ್ಯೂನಯೋಜನವಳಯದಿಂ ಸೂರ್ಯಕಾಂತ ಮಣಿಮಯಮಾಗಿ ಸೂರ್ಯವಿಮಾನಮುಂ . . . ಇರ್ಕುಂ (ಸುಕುಮಾ.೧೧-೫೯ ವ). 'ಚಂದ್ರವಿಮಾನ' ಪರಾ. [ಸಂ.]

ಸೂರ್ಯವೀಥಿ (ನಾ). ಪಟ್ಟಣದ ಪೂರ್ವದಿಂದ ಪಶ್ಚಿಮದಿಕ್ಕಿಗೆ ಹೋಗುವ ಹೆದ್ದಾರಿ: ಇದಿರ್ಗೊಂಡು ಕೊಂಡುಬರುತಿರೆ ನಂದಿಯಣ್ಣನಂ . . . ಎಸೆದು ರವಿಯೋಲ್ಮೆಪ ಸೂರ್ಯವೀಥಿಯ ನಡುವೆ (ಸಂಬರ. ೯-೮೬); ಸೂರ್ಯವೀಥಿಯೊಳವಂ ತಳ್ವದೈತರುತ್ತಮಿರೆಯಿರೆ (ರಾಜಶೇ.೧೪-೬೧ ವ); ಅಲ್ಲಿಂದ ಮುಂದಕ್ಕೆ ಹೋಗಿ ಸೂರ್ಯವೀಥಿಯ ಕಂಡು ಪೊಕ್ಕು (ಅಖಂಡೇ.೨೦೬-೪೬). [ಸಂ.]

ಸೂರ್ಯವೀಥಿ (ನಾ). = ಸೂರ್ಯವೀಥಿ: ತಳರ್ವೆಳವೆಣ್ಗಳ ನಯನಾಂಚಳರುಚಿ ಚಂದ್ರಿಕೆಯನಾಂತು ಪೊಂದೊಡಿಗೆಗಳುಜ್ವಳಕಿರಣಮೆಂಬ ಬಿಸಿಲಂ ತಳದಲ್ಲಿಯ ಸೋಮಸೂರ್ಯವೀಥಿ[ಪಾಠಾಂ. ಥಿ]ಗಳೆಸೆಗುಂ (ರಾಜಶೇ.೨-೧೦). 'ಚಂದ್ರವೀಥಿ' ಪರಾ. [ಸಂ.]

ಸೂರ್ಯವೃಕ್ಷ (ನಾ). ಎಕ್ಕದ ಗಿಡ; ಅರ್ಕ: "ಅರ್ಕಾಹ್ವಃ, ವಸುಕಃ . . . ಅರ್ಕಪರ್ಣಃ-೭ ಎಕ್ಕಗಿಡ, ಯಕ್ಕೇಗಿಡ, ಸೂರ್ಯವೃಕ್ಷ" (ಸಿದ್ಧಾಂಶಿ.೧೩೧). [ಸಂ.]

ಸೂರ್ಯಸಿದ್ಧಾಂತ (ನಾ). ಪ್ರಸಿದ್ಧವಾದ ಒಂದು ಜ್ಯೋತಿಶ್ಶಾಸ್ತ್ರಗ್ರಂಥ. [ಸಂ.]

ಸೂರ್ಯಸುತ (ನಾ). ೧. ಆದಿತ್ಯನ ಪುತ್ರ. ೨. ಶನಿ. ೩.ಯಮ: ಸೂರ್ಯಸುತಂ . . . ಇವರ್ ಮುಕ್ತರಪ್ಪರ್. ಸಂದೆಯಂ ಬೇಡಮೆಂದಂ (ರಾಮಾಶ್ವ.೧೦೭-೨). ೪. ಕರ್ಣ. ೫. ಸುಗ್ರೀವ. ೬. ವರುಣ. [ಸಂ.]

ಸೂರ್ಯಸ್ನಾನ (ನಾ). (ರೋಗಚಿಕಿತ್ಸೆಗಾಗಿ) ಬಿಸಿಲಿಗೆ ಮೈಯೊಡ್ಡುವುದು: ಸೂರ್ಯಸ್ನಾನ ಮಾಡುವುದರಿಂದ ಶರೀರದ ತ್ವಚೆಯು ಕಾಯ್ದು ರಕ್ತಶುದ್ಧಿ ಮತ್ತು ವೃದ್ಧಿಯಾಗುತ್ತದೆ (ಬ್ರಹ್ಮಜೇ.೧೭೮). [ಸಂ.]

ಸೂರ್ಯಸ್ವರ (ನಾ). [ಯೋಗ] ಮೂಗಿನ ಬಲಹೊರಳೆಯಲ್ಲಿರುವ ಸೂರ್ಯ ಎಂಬ ವಾಯುವಿನ ಸಂಚಾರ: ದೂರಪ್ರಯಾಣಕ್ಕೆ ಚಂದ್ರಸ್ವರ ಸಮೀಪಪ್ರಯಾಣಕ್ಕೆ ಸೂರ್ಯಸ್ವರ . . . ಮೊದಲಾದುವುಗಳಂ ತಿಳಿದು (ವಿವೇ.೧೪೩). 'ಚಂದ್ರಸ್ವರ' ಪರಾ. [ಸಂ.]

ಸೂರ್ಯಾಗ್ನಿ (ನಾ). ಪಂಚಾಗ್ನಿಗಳಲ್ಲಿ ಒಂದು; ಸೂರ್ಯನಿಂದ ಉಂಟಾಗುವ ಉಷ್ಣತೆ; ಬಿಸಿಲು: ಕಾಲಾಗ್ನಿ ಬಾಡಬಾಗ್ನಿ ಪಾಷಾಣಾಗ್ನಿ ವೈದ್ಯುತಾಗ್ನಿ ಸೂರ್ಯಾಗ್ನಿ ಎಂಬ ಸೂಕ್ಷ್ಮಬಿಂದುರೂಪ ಪಂಚಾಗ್ನಿಧ್ಯಾನಯುಕ್ತನಾಗಿ (ವಿವೇ.೧೨೬). [ಸಂ.]

ಸೂರ್ಯಾತಪ (ನಾ). ರವಿಯ ಶಾಖ ; ಬಿಸಿಲು: " ಬಿಸಿಲೆಂದು ಸೂರ್ಯಾತಪಂ" (ಕಬ್ಬಮಾಂ.೧೬); ರಾಕ್ಷಸರುಧಿರಸಿಕ್ತವಲ್ಮಲವನಾರಿಸಲ್ಕೆಲ್ಲಿ ಪೇಳ್ ಸೂರ್ಯಾತಪಂ? (ಶ್ರೀರಾಮಾ.೨೩೦-೬೩). [ಸಂ.]

ಸೂರ್ಯಾವರ್ತನ (ನಾ). ಒಂದು ಬಗೆಯ ಸನ್ನಿಪಾತರೋಗ: ತಲೆ ಅತ್ಯಂತ ಬಾವುದುಂ . . . ಹಣೆಗಣ್ಣು ಹಾರುವುದುಂ, ಇನಿತು ಸನ್ನಿಪಾತರೋಗಲಕ್ಷಣಂ. ಇದನ್ನು ಸೂರ್ಯಾವರ್ತನವೆಂಬುವರು (ವೈದ್ಯವಿ. ೧೯೦). 'ಚಂದ್ರಾವರ್ತ' ಪರಾ. [ಸಂ.]

ಸೂರ್ಯಾಶ್ವ (ನಾ). ಆದಿತ್ಯನ ಕುದುರೆ : ಪವಮಾನಾತ್ಮಜನಂ ಜವಪ್ರಸರದಿಂ ಸೂರ್ಯಾಶ್ವಮಂ ಶಕ್ರವಾಹವನಕ್ಷೂಣಗುಣಂಗಳಿಂ ಮಿಗುವ ಜಾತ್ಯಶ್ವಂಗಳಂ (ಪುಷ್ಪಸು. ೨-೫೮). [ಸಂ.]

ಸೂರ್ಯಾಸ್ತ (ನಾ). ಹೊತ್ತು ಮುಳುಗುವುದು; ರವಿಯು ಅಸ್ತನಾಗುವಿಕೆ: ಮಧ್ಯಬಿಂದುವ ಮರೆತು ತಿರುಗದಿರಲೀ ಚಕ್ರ . . . ಶಿಶುಪಾಲವಧೆಗಿರಲಿ, ಸೂರ್ಯಾಸ್ತ ಒದಗಿರಲಿ ಪಾರ್ಥಪ್ರತಿಜ್ಞೆಗಿದು ಮರುಗದಿರಲಿ (ನಲಮು. ೨೩-೧೫). [ಸಂ.]

ಸೂರ್ಯಾಸ್ತಸಮಯ (ನಾ). ರವಿಯು ಮುಳುಗುವ ಹೊತ್ತು ; ಸಾಯಂಕಾಲ; ಸಂಜೆ: ಅಶ್ವತ್ಥಾಮ ಕೃಪ ಕೃತವರ್ಮರು . . . ಸೂರ್ಯಾಸ್ತಸಮಯಕ್ಕೆ ಹತ್ತಿರದಲ್ಲಿದ್ದ ಒಂದು ಕಾಡನ್ನು ಸೇರಿದರು (ವಚಭಾ.೩೧೪). [ಸಂ.]

ಸೂರ್ಯೋದಯ (ನಾ). (ಪೂರ್ವದಿಕ್ಕಿನಲ್ಲಿ) ರವಿಯು ಕಾಣಿಸಿಕೊಳ್ಳುವುದು; ಹೊತ್ತು ಮೂಡುವುದು; ಬೆಳಗು : ಪೂರ್ಣಶಶಿಶುಚಿಗಳಸುವ ಚಕೋರಕುಲದವೊಲು

ಸೂರ್ಯೋದಯಕೆ ಮನವಲರ್ವ ಚಕ್ರಂಗಳವೊಲಾಗಳಪಿಳ ಶಿವ್ಮೈಕ್ಯರು ನಿನ್ನ ಬರವಂ ಬಯಸುವರು (ಬಸವ.೩೭-೫೪); ಪರಿವಾಸರದ ಸೂರ್ಯೋದಯದೊಳ್ಗಿಂದ ಯಾದವರ ದಂಡು ನಡೆದುದು ಪಥದೊಳು (ಚಿಮಿಭಾ. ೭-೧೨). 'ಚಂದ್ರೋದಯ' ಪರಾ. [ಸಂ.]

ಸೂರ್ಯೋಪರಾಗ (ನಾ). = ಸೂರ್ಯಗ್ರಹಣ: ತಾ(ಆ) ಶ್ರಾವಣ ಬ ೩೦ ಸ್ಥಿರವಾರ ಸೂರ್ಯೋಪರಾಗಪರ್ವಣಿ ಪುಣ್ಯಕಾಲದಲ್ಲಿ . . . ರುದ್ರಮುನಿದೇವಾರಾಧ್ಯರ ವಶಕ್ಕೆ ಬರೆಶಿ ಕೊಟ ಶಾಸನಕ್ರಮವೆಂತೆಂದರೆ (ಎಕ. VII (R), ಮಳವ. ೧೨೪-೧೪;1673); ಸೂರ್ಯೋಪರಾಗಮೇನಿಂದು ಹುಣ್ಣಿಮೆಯೊಳಿನೆ ನಕ್ಷತ್ರವೊಂದಿಲ್ಲ (ಗೂಳ್ಕೊಥಾ. ೧೨-೩೧೪). [ಸಂ.]

ಸೂರ್ಯೋಪಲ (ನಾ). = ಸೂರ್ಯಕಾಂತ: ವಿಭವಶರಧಿ ಚಂದ್ರೋದ್ಗಮಂ ಶೌರ್ಯಸೂರ್ಯೋಪಲಭಾಸ್ವತ್ಪಂಪದಂ ತನ್ನೃಪತನಯನೊಳೊಂದಿ ಚಿತ್ತಕ್ಕೆ ಮಾಡಿತ್ತೊಲವಂ (ಚಂದ್ರಪ್ರ.೪-೬). [ಸಂ.]

ಸೂಲ್, ಸೂಲ₁, ಸೂಲು₁ (ನಾ). ೧. (ಪ್ರಾಣಿಗಳು) ಗರ್ಭಧಾರಣೆ ಮಾಡುವುದು,– ಗಬ್ಬವಾಗುವಿಕೆ: 'ಸೂಲಾಕಳು', 'ಸೂಲಾವು' ಪರಾ. ೨. ಹೆರಿಗೆ; ಪ್ರಸವ: 'ಸೂಲಳಲ್', 'ಸೂಲ್ಮಲುಕು' ಪರಾ. ೩. ಸಂತತಿ; ಸಂತಾನ: ತೋಳ ವಾಯಸದ ಮೊಲದ ಕರಡಿಯಾ ಸೂಲದೊಂದಿರದ ಬೆಂದ ವೊರಡಿಯ . . . ಪೋಲ್ವ ಮುಗಿಲ ಕಣ್ಣ ಮಲೆಯನಾ(ಲಾ)ರ್ವೊಡಂ ಕಲ್ದುಸ್ಥಿತಿಯ ಮೇಘರೂಪಮಂ (ಜೈಮಿ.೮-೧೨). ಸೂಲ₁ : ೨. ಬಾಳೆಯು ಒಂದೇ ಸೂಲ, ಒಂದೇ ಗೊನೆ ಈಯುತ್ತದೆ (ಮುಂಬಯಿ. ೨-೪೭); ಒಂದು ಸೂಲದ ಹೈನವು ಸುಮಾರು ಒಂದು ವರ್ಷ ನಡೆಯುತ್ತದೆ (ವಿಜ್ಞಾ.ಭೂ.೨೪). 'ಸೂಲಗಿತ್ತಿ', 'ಸೂಲಮನೆ' ಪರಾ. ೩. ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು ಮೂವತ್ತುಮೂರುಕೋಟಿ! ಸೂಲಗಳು ಮೂವತ್ತುಮೂರುಕೋಟಿ! (ಗರ.೫೦-೧೧). ಸೂಲು₁: ೧. "ಸೂಲು = ಆಕಳ ಗಬ್ಬ" (ಜಾನಪೋ.೫೦); ಸೂಲು ತಪ್ಪಿದರೆ ಗೊಡ್ಡೇ? (ಗಾಡ). ೨. ವನಿತೆಯ್ದಾಜು ಸೂಲಂ ಗೆಲಿದಳುಜೆ ತನ್ನ ತನುವಿನ್ಗೆದಾಜವಗುಣಂಗಳಂ ಗೆಲಿದಂತೆ (ಪದ್ಮರಾ.೧-೩೪); ಒಳ್ಳಸಿರ ಕಾಲಕ್ಕೆ ಸೊಗದ ಸೂಲನು ನಡಸಿ ಕಲ್ಲ ಬಾಯನು ನುಡಿವ ಕಲಿಯೊಪ್ಪಿಗೆ (ಧ್ರಾಕ್ಷಿರಾ.೭೦-೧). [ದೇ. ॥ತಮಿ. ಮಲ. ಚೂಲ್; ತೆಲು. ಚೂಲು]

ಸೂಲ₁ 'ಸೂಲ್' ನೋ.

ಸೂಲ₂, ಸೂಳೆ (ನಾ). ಚೂಪಾದ ತುದಿಯಿಂದ ಕೂಡಿದ ಒಂದು ಬಗೆಯ ಆಯುಧ; ಶೂಲ: ಮಹಿಷಾಸುರನಂತೆ ಸೂಲದೊಳ್ ನೊಂದು ನರಳ್ದ ಕಳ್ಳರಿಂ (ಕಾವ್ಮಸಾ. ೨೭೯ ಶೂದ್ರಕ); ಅರಸಂ ಶ್ಮಶಾನದ ಸೂಲದೊಳ್ ಯಮದಂಡನನಿಕ್ಕಿ ಮೆಂದಾಳ್ಗಳ್ಗೆ ಬಸವೇಟ್ಟೊಡೆ (ವಡ್ಡಾರಾ. ೧೨೪-೨೮); ಇಂತೀಗಳೆ ಪಿಡಿದುಯ್ದು ಸೂಲದೊಳೊತ್ತಿಂ ಪೋಲ್ದುಂ . . . ಕೊಳನೆಳವುಬುಗಳ್ಗೆ ತಿನಬಡಿಸುವವು (ರಾಮಾಶ್ವ.೮೦-೧೨); ತಾಟಗಿತ್ತಿ ತಿರುಮಲದೇವಿ . . . ನಿಮ್ಮ ಸೂಲಕೆ ಹಾಕಿಸುತಾಳೆ (ನಾಪದ. ೧೬೩). ಸೂಳೆ: ಕಡಿತಲೆಯ ಸುರಗಿಯ ಕೊಂತದ ಸೂಳೆದ ಬಲ್ಲಣೆಯ ಮೂಡಿಗೆಯ ಭಟರ ದಿಬ್ಬಾಳಂ ನೇರಮಾಗೆ (ರಾಮಾಶ್ವ.೫೦-೬). [< ಸಂ. ಶೂಲ]

ಸೂಲಂಗಿ₁ 'ಸೂನಗೆ' ನೋ.

ಸೂಲಂಗಿ₂, ಸೂನಂಗಿ₂ (ನಾ). ಕಬ್ಬಿನ ಹೂವು: ಪ್ರಕೃತಿಪೂಚಿಗೆ ಹಿಡಿದ ಚಾಮರಗಳಂತೆ ಕಬ್ಬಿನ ಸೂಲಂಗಿ(ಹೂವು)ಗಳು ಬೀಸಾಡುತ್ತಿದ್ದವು (ಅವತಂ.೧೨); ಕಬ್ಬಿನಲ್ಲಿ ಸೂಲಂಗಿ ಹೊರಟ ಹಾಗೆ (ಗಾಡ). ಸೂನಂಗಿ₂ : ಮಹಿತಾಮೃತೋಪಮಾದ್ಭುತ ಇಕ್ಷುದಂಡದೋಳ್ ಪ್ರಬಲ ಸೂನಂಗಿ ಸಂಭವಿಸಿದಂತೆ (ಪನುಮ.೭೮). [?]

ಸೂಲಗಾತಿ (ನಾ). ಹೆರಿಗೆಯನ್ನು ಮಾಡಿಸುವವಳು; ಮಗುವಿನ ಜನನಕ್ಕೆ ಸಹಾಯ ಮಾಡುವ ಹೆಂಗಸು; ಸೂಲಗಿತ್ತಿ: (೬).

[ಸೂಲ₁ (< ಸೂಲ್)+ - ಕಾತಿ₅]

ಸೂಲಗಿ 'ಸೂನಗೆ' ನೋ.

ಸೂಲಗಿತಿ 'ಸೂಲಗಿತ್ತಿ' ನೋ.

ಸೂಲಗಿತ್ತಿ, ಸೂಲಗಿತಿ (ನಾ).= ಸೂಲಗಾತಿ: "ಸೂತಕೃತಯೆನೆ ಸೂಲಗಿತ್ತಿಯಕ್ಕುಂ" (ಮಂಗರಾ. ೯೧-೪); ಸಂಗಸಂಯೋಗವಿಲ್ಲದೆ ಬಸುಱಾಯಿತ್ತು ಕೂಸೆದ್ದು ಕುಣಿದಾಡಿ ಸೂಲಗಿತ್ತಿಯನವಗ್ರಹಿಸಿತ್ತು (ಅವಚಂ.೧೩೭-೬೨೮): ಬಾಲಗೆ ಬೆಚ್ಚುನೀರಂ ಸೂಸಿ . . . ಸೂಲಗಿತ್ತಿಯರು ಪೊಕ್ಕುಳ್ಗೊಯ್ದು ಮೇಲೆ ನಿವಾಳಿಸಿದರು ರತ್ನದಾರತಿಗಳ (ಸೂಬಸೋ.೪-೧೪); ಅಲ್ಲಿಂದ ನೇರವಾಗಿ ಹಳ್ಳಿಯ ಸೂಲಗಿತ್ತಿಯೊಬ್ಬಳ ಮನೆಗೆ ಹೋದಳು (ಪುಸರು.೮). ಸೂಲಗಿತಿ: ಸೂಲಗಿತಿಯರುತ್ಸವದಿಂದ ಮಿಂದು ದುಕೂಲವ ನಿಜೆವಿಡಿದುಡಲು (ಮೋಹತ.೧೭-೨೫).

[ಸೂಲ₁ (< ಸೂಲ್) + - ಗಿತ್ತಿ₂/ ತುಳು. ಸೂಲಗಿತ್ತಿ]

ಸೂಲಪಾಣಿ, ಸೂಳಪಾಣಿ (ನಾ). ಶೂಲವನ್ನು ಹಿಡಿದಿರುವವನು; ಶಿವ. ಸೂಳಪಾಣಿ: ಪೂರ್ವಪದಂ ತದ್ಭವಮಾದುದರ್ಕೆ — ಶೂಲಪಾಣಿ – ಸೂಳಪಾಣಿ (ಶಮದ.೨೪೯ ಪ್ರಯೋ). [< ಸಂ. ಶೂಲಪಾಣಿನ್]

ಸೂಲಮನೆ (ನಾ). ಹೆರಿಗೆಯ ಕೋಣೆ; ಸೂತಿಕಾಗೃಹ: ರಾಯಂ ಮಿತಪರಿಜನದೊಡನಂತಃಪುರಮಂ ಪೊಕ್ಕು ಸೂಲಮನೆವಾಗಿಲ ಪೊಜಜಗಲಿಯೊಳ್ ಮಿಸುಪ ಮಿಸುನಿಮಂಚದೊಳ್ ಕುಳ್ಳಿರ್ದಿನಂ (ಚಕವಿ.೪-೬೧).

[ಸೂಲ₁(< ಸೂಲ್) + ಮನೆ]

ಸೂಲವೇಱು (ಕ್ರಿ). ಶೂಲವನ್ನು ಏರು: ಸೂಲವೇಱಿದನಂತ ಕಾಲಂ ನೀಡುತ್ತುಂ (ಧರ್ಮಾಮೃ.೧-೧೪೪). [ಸೂಲ₂ + ಏಱು₁ (< ಏಱ್₁)]

ಸೂಲಳಲ್ (ನಾ). ಹೆರಿಗೆಯಾಗುವಾಗ ಉಂಟಾಗುವ ನೋವು; ಪ್ರಸವ ವೇದನೆ: ತಿಳಿದವರೆ ಬಂಜೆಯರ್ ಸೂಲಳಲಂ (ನೀತಿಮಂ.೧-೧೩೭).

[ಸೂಲ್ + ಅಳಲ್₂ (< ಅಟಲ್)]

ಸೂಲಾಕಳು (ನಾ). ಗಬ್ಬವಾದ ಹಸು; ಗಬ್ಬ ಕಟ್ಟಿದ ದನ: "ಹಲವು ಸೂಲಾ [ಪಾಕಾಂ. ಳಾ]ಕಳು ವರೇಷ್ಟಿಕೆಯನಿಕ್ಕು" (ಮಂಗರಾ.೫೪-೪).

[ಸೂಲ್ + ಆಕಳು (< ಆಕಳ್)]

ಸೂಲಾವು (ನಾ). = ಸೂಲಾಕಳು: "ವರೇಷ್ಮುಕಾ. ಪ್ರಚುರಪ್ರಸೂತಿಃ - ಈ ೨ ಹಲವು ಸೂಲಾವು" (ಹಲಾಯು.೪೫-೧೧೭). [ಸೂಲ್ + ಆವು]

ಸೂಲಿ₁, ಸೂಳಿ₂ (ನಾ). ತ್ರಿಶೂಲವನ್ನು ಹಿಡಿದಿರುವವನು; ಶಿವ: ಹತ್ತೈದು ಗಣನಾಥರ್ವೆರಸಿ ತನ್ನ ಪಟ್ಟದಂಗನೆ ಸಹಿತ ಸುಖದ ಸುಗ್ಗಿಯ ಮೇಲೆ ಸೂ[ಪಾಕಾಂ. ಶೂ]ಲಿ ಪರಿಣಾಮವಿರಲು (ಸೋಮಚ.೧-೩೪); ಕಡೆಗಾಲದ ಸೂಲಿ ತೆಱೆದ ನೊಸಲ ಕಣ್ಣ ಕಡುಗಿಚ್ಚಿನಂತೆ ಭೂತಳವ ಸುಡುವ ಬೇಸಿಗೆಯೊಳು ಕಾದ ಕಲ್ಲಿನ ಮೇಲೆ ಯಡಿದೆಗೆಯನು ಮುನಿವರನು (ನೇಮಿಪು.೩-೧೦೩). ಸೂಳಿ₂: ಚೋಳನರಮನೆ ಯೊಳಿತ್ತಿದ ಕಳನೊಳಗೆ ಪೊಕ್ಕು ಸೂಳಿಯಣುಗಂ ಭುಜಾಸ್ಫಾಳದಿಂ ಕಯ್ಮಿಕ್ಕು (ವಿಜಾಪ. ದೇ. ೧೧೭-೨೨). [< ಸಂ. ಶೂಲಿನ್]

ಸೂಲಿ₂ (ನಾ). ಬಿಳಿಯ ಕಾಯಿಗಳನ್ನು ಬಿಡುವ ಒಂದು ಬಗೆಯ ಗಿಡ: ಸೂಲಿ, ಹೂಲಿ (ಮೈಜಿಗ. ೩೭-೭೪೪). 'ಬಿಳಿಸೂಲಿ' ಪರಾ. [?]

ಸೂಲಿಗೆ 'ಸೂನಗೆ' ನೋ.

ಸೂಲಿಗೆಗೊಳ್ (ಕ್ರಿ). ಶೂಲವನ್ನು ಹಿಡಿ: ಅಹಿತೋದ್ಯದ್ಬಳಜಾಳಕಂ ಕದನ ದೊಳ್ಮಾಱುತ್ತು ತಾಗಲ್ಮಹಾಮಹಿಮಂ ಸೂಲಿಗೆಗೊಣ್ಮು ಕೋಪದೊದವಿಂ ಕೊಂದಿಕ್ಕೆ . . . ಎಸೆವಂ ಶ್ರೀ ಸಿಂದವಂಶೋದ್ಭವಂ (ಎಇ. XX. ೧೧೫-೧೧; 1167).

[ಸೂಲಿಗೆ (< ಸೂನಗೆ) + ಕೊಳ್₁]

ಸೂಲಿಸು (ಕ್ರಿ). ೧. ಹೆರಿಗೆಯಾಗು; ಪ್ರಸವವಾಗು: ತಟಭೂಜದೊಳೊಂದು ಕರೇಣು ಸೂಲಿಸುತ್ತೇನಣವಲ್ಲಿ ಮಾಡಿದುದೂ ಬೇಡರೊಳಂ ಕರುಣಾನುಭವಮಂ (ಪುಷ್ಪಸ್ಥ.೫-೮೨). ೨. ಹೆರಿಗೆಯಾಗುವುದಕ್ಕೆ ಸಹಾಯವನ್ನು ಮಾಡು; ಹೆರಿಗೆ ಮಾಡಿಸು: ಸೂಲಿಸುವ ಬಗ್ಗಿಸುವ ನೋಯಿಸುವ ನುಲಿವ ಮರ್ಮಸ್ಥಾನಮಂ ನಿಗುಚುವ ಬಾಲೆಯರ ಹಂಗಿಲ್ಲ (ಪದ್ಮರಾ.೧-೫೫). [ಸೂಲ್ + - ಇಸು₅]

ಸೂಲು₁ 'ಸೂಲ್₁' ನೋ.

ಸೂಲು₂ (ನಾ). ಅಭ್ಯಾಸ; ರೀತಿ; ಕ್ರಮ: ಈವರಿಗೆ . . . ದೀರ್ಘಕಾವ್ಯಗಳನ್ನು . . . .ರಚಿಸಿಲ್ಲದುದರಿಂದ ಅವನ್ನು ಬರೆಯತಕ್ಕ ಸೂಲಚ್ಚೇ ತಪ್ಪಿದೆಯೊ ಅಲ್ಲ ಕೆಯ್ಯಾಡವೂ ಬರಡಾಗಿದೆಯೊ ನೋಡೋಣ (ಹೆಬ್ಬರ.೫, ಮುನ್ನುಡಿ). [< ಸೂಟು?]

ಸೂಲೆ (ನಾ). ತೀವ್ರವಾದ ನೋವು, — ಯಾತನೆ: ಪಸಿವು ನೀರಟ್ಟೆ ದಾಹ ವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ (ವರ್ಧಮಾ.೫೨-೯); ಸೂಲೆಯುಳ್ಳವನಂತೆ ಕವಿದು ಬೀಳುತ್ತುಂ (ಧರ್ಮಾಮೃ.೧-೧೪೪); ಎನ್ನ ಪೊಟ್ಟೆಯೊಳ್ ಪಿರಿದಪ್ಪ ಸೂಲೆ ಪುಟ್ಟರ್ದಪುದು (ಪುಣ್ಯಾಸ್ರ.೪-೨೪). [< ಸಂ. ಶೂಲಾ]

ಸೂಲೆಯೇಟು (ಕ್ರಿ). ನೋವುಂಟಾಗು; ಶೂಲೆಯೇಳು : ಅಲ್ಲಿಯ ಜಿನಾಲಯದ ಪರಸ್ಥಿತಭದ್ರದೊಳ್ ಭೋಂಕಲ್ ಸೂಲೆಯೆತ್ತಿದಂತೆ ಪಟ್ಟರ್ದು (ನೇಮಿಪು.೪-೭೭ ವ).

[ಸೂಲೆ + ಏಟು]

ಸೂಲೆಪೆಱು (ಕ್ರಿ). ನೋವನ್ನು ಹೊಂದು; ಯಾತನೆಗೆ ಸಿಲುಕು: ಸೂಲೆವೆತ್ತರಂತೆ ಪೊರಳುತ್ತುಂ ಕಳ್ಳುಡಿದರಂತೆ ಮತಿಗೆಡುತ್ತುಂ (ಧರ್ಮಾಮೃ. ೧-೧೭೦).

[ಸೂಲೆ +ಪೆಱು]

ಸೂಲ್ಮುಲುಕು (ನಾ). ಹೆರಿಗೆಯ ನೋವು,—ಯಾತನೆ ; ಪ್ರಸವವೇದನೆ: ನಿನ್ನ ತಾಯ್ ಸೂಲ್ಮುಲುಕು ಮಱೆದು ನಿನ್ನನ್ ವರಿಸಿ ಬಾಯ್ ನೂಱನ್ ಅಣುಗ ಪಿರಿಯ ಪೆಸರಾಗೆಂದು ಮುತ್ತಿಟ್ಟು ನಡೆದಳ್ (ಅಕ್ಕತ್ತಾ.೨೧-೪೧೬); ಸೂಲ್ಮುಲುಕು ಮಾಯ್ವಂತೆ ಕಂದನಾನಂದವನು ಕಾಣಿಸದ ಪಾಪಿ ನಾನಮ್ಮ (ನಡದಾ.I. ೪೫೮). [ಸೂಲ್+ಮುಲುಕು]

ಸೂಲ್ಲಿ (ನಾ). ಒಂದು ಬಗೆಯ ಆಯುಧ; ಮೊನಚಾಗಿರುವ ಕಬ್ಬಿಣದ ಅಸ್ತ್ರ: ನಾರಾಚ ಗದ ಸೂಲ್ಲಿ ಚಕ್ರ ವಂಕಿ ಚೂರಿ ಜಯಬಾಡಿ ಶೃಂಗಾರ ತೊಡುಪೂ ಸಂಣ ಚಂದ್ರಾಯುಧಾ ಚಿಲುತಲಿ (ಎಕ. XVI, ಗುಬ್ಬಿ.೩೪-೨೨; ಸು. 1672).

[?./ ಸಂ. ಶೂಲ]

ಸೂವ (ನಾ). ಅನ್ನದೊಂದಿಗೆ ಕಲಸಿಕೊಳ್ಳುವ ವ್ಯಂಜನಪದಾರ್ಥ; ಮೇಲೋಗರ ; ಸೂಪ : ವಾಪಿ-ಬಾವಿ, ಸೂಪ-ಸೂವ (ಶಮದ.೨೫೮ ಪ್ರಯೋ).

[< ಸಂ. ಸೂಪ]

ಸೂವಾರ 'ಸುವಾರ' ನೋ.

ಸೂವಾರವಿದ್ಯೆ (ನಾ). ಅಡಿಗೆಯನ್ನು ಮಾಡುವ ವಿದ್ಯೆ; ಪಾಕಕಲೆ: ಆರಲಱಿದನೊ ಭೀಮನೀ ಸೂವಾರವಿದ್ಯೆಯ(ಕುವ್ಯಾ.೬-೬೮); ರಕ್ಕಸನ ತಮ್ಮಂ ಮನುಜರೂಪನಾಂತು ಭರದೆ ಬಂದು ಸೂವಾರವಿದ್ಯೆಯ ಬಲ್ಲೆನೆನಲು (ಪಾಪೋಪು.೧೩-೪೨). [ಸೂವಾರ (< ಸುವಾರ) + ವಿದ್ಯೆ]

ಸೂಸಕ, ಚೂಚಕ[1], ಸೂಸುಕ (ನಾ). ೧. ಒಂದು ಬಗೆಯ ಆಭರಣ; ಬೈತಲೆಮಣಿ; ಬೈತಲೆಬೊಟ್ಟು: ಹೊನ್ನೋಲೆಯ ಚೆನ್ನಿಗ ಮೂಗುತಿಯ ಮುಗುಳ್ಗೆ . . . ಸೂಸಕದ ಸುಮ್ಮಾನೆಗೆ ರುದ್ರಾಕ್ಷಿಯ ಭದ್ರಾಂಗಿಗೆ (ಗಿಂಶಿ.೬-೯೧ ವ); ಬೈತಲೆಯನೊಡನಮರ್ಚ ಪೊಳೆವ ಸೂಸಕಮನೊಪ್ಪಗೊಳಿಸಿ (ಪದ್ಮರಾ.೩-೪೭); ಪ್ರಕಟಿಸುತಿರ್ಪ ತಾರಕಿ ನಿಶಾಂಗನೆಯ ಸೂಸಕಮೆನಿಪಂತೆ ರಾಜಿಪವು (ಭೈರಸೂ.I. ೨೯೧). ೨. ಗೊಂಡೆ; ಕುಚ್ಚು; ಗೊಂಚಲು: ದೇವಾಂಗವಸ್ತ್ರದುಳ್ಳುಡೆಯೊಳುಲಿವ ಸೂಸಕದ ನೂಲ ತೊಂಗಲ್ಪೆರಸಲ್ಬಲ್ಲ ಮುಂದಣ ಸೋಗೆ ಕಾರ್ಗಾಲದ ಸೋಗೆಯಂತೆ ಸೊಗಯಿಸೆ (ಪಂಪಭಾ.೨-೪೧ ವ); ಸೂಸಕದ ಮುತ್ತುಗಳು ತಾರಾರಾಶಿಗಳ ಹಬ್ಬುಗೆಯ ನೀಲದ ಹಾಸಳಿಗಳು ಹೋಲುತಿದ್ದವು ಗಗನಮಂಡಲವ (ಕುವ್ಯಾ.೧೩-೩೦); ಹಿಡಿದ ಮುತ್ತಿನ ಸೂಸಕದ ಬೆಳುಗೊಡೆಯ . . . ರಾಜಕುಮಾರಕರು ನಡೆತಂದರೊಲವಿನಲಿ (ತೂರರಾ.೧-೧೬-೪೧). **ಚೂಚಕ[1]** : ೩. ಗೊನೆ; ಗುದಿ: ಚೂಚಕಂಗಳ ಭರದಿನೊಂದಿನಿಸು ತೂಗುತುಂ . . . ಕಣ್ಗೆ ಮಂಗಳವಾದ ತೆಂಗುಗಳ ಸಾಲ್ಗಳಂ (ಉದ್ಭಟ.೩-೪೭). **ಸೂಸುಕ** : ೨. ನವಕಿಸಲಯ ಲೋವೆಯ ಸುಂದರದಿಂ ದವನದ ಸೂಸುಕಗಳ ಬಂಧುರದಿಂ (ಉದ್ಭಟ.೫-೨೧); ಎಸೆವ ಮಾಣಿಕಂಗಳ ಲೋವೆ ; ಮುತ್ತುಗಳ ಸೂಸುಕಂ (ಚಾಂದ್ರಸ.೬೫). [ದೇ. ॥ ತೆಲು. ಸೂಸಕ]

ಸೂಸಕಂಬಿಡಿ (ಕ್ರಿ). ಹಣೆಯ ಮೇಲಿನ ಆಭರಣವನ್ನು ಹಿಡಿದುಕೊಳ್ಳು : ಪತ್ತೆ ಸಾರ್ದು ಸೂಸಕಂಬಿಡಿದೊಂದು ಮುಟ್ಟಿಯೊಳಗೆ ಬೆಂಗವಾಯ್ದು (ಚಂದ್ರಪ್ರ.೯-೪೪ ವ).

[ಸೂಸಕ + ಪಿಡಿ]

ಸೂಸಲ್, ಸೂಸಲು (ನಾ). ೧. (ನಗೆ ಮುಂತಾದುವು) ಕಾಣಿಸಿಕೊಳ್ಳುವುದು; ಗೋಚರಿಸುವಿಕೆ: (೬). ೨. ಎಳ್ಳು, ಕಡಲೆ ಮುಂತಾದುವನ್ನು ಸೇರಿಸಿ ಮಾಡಿದ ಒಂದು ಬಗೆಯ ಖಾದ್ಯ,— ತಿಂಡಿ: "ಕಿಲೌದನ ಎನ್ನಡೆ ಎಳ್ಳ ಹುಗ್ಗೆ; ಸೂಸಲೆಂದೂ ಎಂಬರು" (ನಾಚರಾ. ೬); ಸವಳದೆ ಸಿತಘೃತಮಿಶ್ರಿತಮವುಂಗುರುಂ ಸೂಸಲಂಬವಂ ಸೇವಿಸೆ ಪುಷ್ಟಿವಿವರ್ಧನಮಕ್ಕುಂ (ಶೋಕೋವ.೯-೭); ಈಂದಿರ್ದ ಗೋವು ಮಾಸಂ ತಿಂದೊಡೆ ಕಲಸಿಕ್ಕುಗೆ ಸೂಸಲಂ ಬೆಲ್ಲಮುಮಂ (ತೂರರಾ.೯-೧೯೩). ೩. ಸಿಂಚನ; ಸೇಚನ: ಶಿಖಿಂದಶನದ್ಯುತಿಯ ಬೆಳ್ಪಗೆಯ ಸೂಸಲನೆ ನಖರುಚಿಯ ತೆರಳಿಕೆಯ ಹೊರಳಿಯೆನೆ . . . ಬೆಲ್ಪ ತಿಳಿನೀರ ತುಂತುರ್ವನಿಗಳಿಸೆದಿರ್ದುವು (ಜೈಮಿಭಾ.೩೦-೧೧). **ಸೂಸಲು** : ೨. ವ್ಯಾಧನು ಸೂಸಲ ಚಲ್ಲಿ ಜಂತ್ರವ ಹಣ್ಣ ಅಡಿಗಲ್ಲನೊಡ್ಡಿ ಹೋದ ಬಳಿಕ ಸೂಸಲ ತಂಪಿಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದಿರಲ್ಕಾ ಮಾಯದ ಬಲೆಯಲ್ಲಿ (ಅಷ್ಟಮಂ.೧೫೫-೬೩); ಬಲವಿದನು ನೀವ್ ನಚ್ಚಿರಿಪುವನು ಗೆಲ ಸಮರ್ಥರೆ ಸೂಸಲಿನ ಪರಿಮಳಕೆ ಸಿಕ್ಕಿರ್ದಿಲಿಯ ತೆಱದುದೆಂದರರಸಂಗೆ (ತೂರರಾ.೬-೬-೩೪); ಅರಳಂ ಸೂಸಲುಮಂ . . . ಕಡಲೆಯಂ ನಾನಾ ಪರೀ ಚೀಲಮುಂ ಬೆರಸುಂ ಮದ್ಯವ ಮಾಱುವರ್ ಪ್ರತಿದಿನಂ (ದಶಾವ.೫-೬೨). ೩. ಮಾಗಿ ಮುಗಿಯ ಮೊದಲ ಮಳಗೆ ಸೂಸಿ ಬರುವ ಸೂಸಲಿನೊಲು (ಅಪಕ್ಕ.೧೨೦-೧೮); ಮಿಸಲ ತೊರೆಯಾಗಿ ಈ ಸಲ ಬಂದಿದೆ ಸೂಸಲ ನೆರೆಯಲ್ಲಿ ರಾಮಾರಾಮಾ (ಸೂರ್ಯವಾ.೮೫-೬); ಆ ಭಾವವೂ ಶ್ಮಲಿಯಲ್ಲೇ, ನೆಲದೊಳಗಿನ ಒಸರಿನಂತೆ ಸೂಸುತ್ತಿದೆ . . . ಆ ಸೂಸಲನ್ನುಳಿದು, ಹರಿವ ಹೊನಲಾದೊಡನೆ ಅದು 'ರಸ'ವೆನ್ನಿಸುತ್ತದೆ (ನಾಡೋಜ.೩೪೦). ೪. ಎರಚುವಿಕೆ; ಚಿಮ್ಮುವಿಕೆ : 'ಸೂಸಲಾಡು' ಪರಾ.

ಸೂಸಲ ಕಡುಬು = ಅಕ್ಕಿಯ ಹಿಟ್ಟಿನ ಪದರದೊಳಗೆ ಸೂಸಲು ಅಥವಾ ಎಳ್ಳುಪುಡಿಯ ಹೂರಣವನ್ನಿಟ್ಟು ಹೆಬೆಯಲ್ಲಿ ಬೇಯಿಸಿ ಮಾಡುವ ಒಂದು ಬಗೆಯ ಕಡುಬು: ದೋಷದೂರನ ನಾಮ ಸೂಸಲ ಕಡುಬು (ಪುರಂದ.೨-೯೯-೨).

[ಸೂಸು[1] + - ಅಲ್[2]]

ಸೂಸಲಾಡು (ಕ್ರಿ). ಎರಚಾಡು; ಚೆಲ್ಲಾಡು: ನೋಡುವರ್ ಪೂಡುವರ್ ಜಂತ್ರಮಂ ನೀರ್ ಸೂಸಲಾಡುವರ್ ತೀಡುವರ್ ನಗಯನಗಚೆಗೆ (ಚಲುಪು.೪೫-೫೯).

[ಸೂಸಲು (< ಸೂಸಲ್) + ಆಡು[1]]

ಸೂಸಲು 'ಸೂಸಲ್' ನೋ.

ಸೂಸಲುಂಡಲಿಗೆ (ನಾ). ಎಳ್ಳಿನ ಪುಡಿಯ ಹೂರಣ ಅಥವಾ ಸೂಸಲನ್ನು ಇಟ್ಟು ಮಾಡಿದ ಕಡುಬು; ಸೂಸಲ ಕಡುಬು: ಸೂಸಲುಂಡಲಿಗ ಪಾಲೊಗು ಪಾಯಸ ಬೆಣ್ಣಗಾಸಿದ ತುಪ್ಪ (ಕುರಾಸಾಂ.೨೬-೨); ಹುಗ್ಗಿ ಕಿಚ್ಚಡಿಯರೆಯಪ್ಪ ಸೇವಗ ಹಿಂಡಿ ಗುಗ್ಗುರಿ ಸೂಸಲುಂಡಲಿಗೆ . . . ದೋಸೆಯ ಸಚ್ಚಲಗ್ಗೆಯಾಹುತಿಯೊಪ್ಪಿತಲ್ಲಿ (ಭರಚ.೨೦-೧೨೭); ಹುಗ್ಗಿ ಅಶನ ಸೂಸಲುಂಡಲಿಗೆ ಹೋಳಿಗೆ ಅಚ್ಚಂಬಲಿ ಕೆಂಪಿನ ಪುಷ್ಪ . . . ನಿವಾಳಿಸಿ (ಬಾಲಚ. ೧೨೮-೯). [ಸೂಸಲು (< ಸೂಸಲ್) + ಉಂಡಲಿಗೆ]

ಸೂಸಲುಸಕ್ಕರೆ (ನಾ). ೧. "ಪೂರಿ ಮೊದಲಾದ ರವೆ ಪದಾರ್ಥಗಳ ಮೇಲೆ ಸವರುವ ಪುಡಿಸಕ್ಕರೆ" (ಸೂಪಶಾ. ೬೫೪). ೨. ಒಂದು ಬಗೆಯ ಭಕ್ಷ್ಯ: ಪದನಾಗಿ ಕಾಯ್ದು ಹಾಲಿನ ಗಟ್ಟಿಕೆನೆದಗೆವುತ . . . ತುಱುವೆಯ ಬೇರಿನಿಂ ತೊಳಸಿ ಮುದ್ದೆಯಹುದು ಅದನಾ ತಳಿಗೆಯೊಳಗೆ ಹರಹಿಕೊಂಡರ್ಧಮಂ ಮಿದುಡಿ ಕಚ್ಚಾಯಮಂ ಮಾಡುವುದು ಮತ್ತಯುಳಿದುದ ಗಾಳಿಗಿರಿಸಿ ಸಕ್ಕರೆ ಹುಯಿದದಕೆ ಸೂಸಲುಸಕ್ಕರೆವೆಸರಿಡುವುದು (ಸೂಪಶಾ.೧-೫೯). [ಸೂಸಲು (< ಸೂಸಲ್) + ಸಕ್ಕರೆ]

ಸೂಸಾಟ (ನಾ). ಎರಚುವುದು; ಚೆಲ್ಲಾಟ: "ಸೀಜುಂಬುಳುಯೆಂದು ಕವಿಗಳಂ ಸೂಸಾಟಂ" (ಕವಿಕಂ.೨೨೫). [ಸೂಸು[1] + ಆಟ]

ಸೂಸಿ (ನಾ). ಹೆಂಗಸರ ಸಾಮಾನ್ಯ ಉಡುಪು(?): ಸರಕಾರೀ ತುರಂಗದಲ್ಲಿ ಮೇಲಾದ ಜಮ್ಮಖಾನೆಗಳೂ ನಾನಾ ಪ್ರಕಾರದ ಸೂಸಿಗಳೂ, ಖುರ್ಚಿ, ಮೇಜು, ಪೆಟ್ಟಿಗೆ, ಮುಂತಾದ ಕಟ್ಟಿಗೆಯ ಸಾಮಾನುಗಳೂ ಹುಟ್ಟುತ್ತವೆ (ಕಭಾಗ.೪೫೨).

[<— ತುಳು. ಸೂಸಿ]

ಸೂಸಿಕೆ (ನಾ). ಎರಚಾಟಚ ಚೆಲ್ಲಾಡುವುದು: ಸುಳಿದವಾರತಿ ಕರ್ಪೂರದ ಪ್ರಜ್ವಲಿಪ ಮಾಣಿಕದೀಪ್ತಿಗಳ ಪಸ್ರುಗಳವೆಗೊಳಿನ ಬಳುವೆಗಳಲುಪ್ಪುಗಳ ಸೂಸಿಕೆಯ (ತೂರರಾ.೬-೫೫-೧೬). [ಸೂಸು[1] + -ಇಕೆ]

ಸೂಸಿಸು (ಕ್ರಿ). ತಿಳಿಸು; ಸೂಚಿಸು: ಆ ವಿದುರನೊಳು ಸೂಸಿಸಿದೆನೀ ಹದನ (ಜಿನಭಾ. ೧೩-೬೬). 'ಸೂಚಿಸು' ಪರಾ. [ಸೂಸು$_1$? + -ಇಸು$_3$]

ಸೂಸು$_1$ (ಕ್ರಿ). ೧. ಎರಚು; ಚೆಲ್ಲು: "ಸೂಸು — ಪರಿತ್ಯಾಗೇ" (ಶಮಧಾ); ಕವಿವರರುಂ ಪೆಂಡವಾಸದೊಳ್ಪೆಂಡಿರ್ಕಳುಂ ವಿಮಾನಂಗಳ ಮುಂದಾಡುತ್ತಂ ದಮ್ಮಮುಮಂ ಪೊನ್ನುಮಂ ಕೇಳಿ ಮಾಡಿ ಮುಂದೆ ಸೂಸುತ್ತಮೊಯ್ಯುದಂ . . . ಕಂಡು (ವಡ್ಡಾರಾ. ೮೪-೬); ದಿಕ್ಕನ್ಯಕೆಯರ ಸೂಸುವ ಲಾಜಾಂಜಳಿನಿಚಯಮೆನಿಸುವ ಮದಕರಿಕರ ಶೀಕರನಿಕರಮುಮಂ (ಆದಿಪು. ೧೩-೪೪ ವ); ಚಾಮರದೆಲರಲಪಿನೊಬ್ಬುಱುವ ಸಣ್ಣಧಾರೆಯಂ ಸೂಸುವ ಧಾರಾಗೃಹದಿಂ (ಮಲ್ಲಿಪು. ೩-೭೪); ದರ್ಪದಾಭರಣಕ್ಕೆ ಸೂಸಿದ ಪೊಪ್ಪ ಸಲಿಗೆಗಳೆನಲು ಗಱಿಗಳು ಚಪ್ಪರಿಸಿ ತುಱುಗಿದವು ರಿಪುಸೇನಾಸಮುದ್ರದಲಿ (ಕುಮಾರ್ಯೂ. ೨-೫೩). ೨. ಚಿಮ್ಮು; ಸಿಡಿ: ಸೂಸಿ ಪಾಯ್ದ ಶೀಕರದೊಳೆ ನಾಂದು ಸೇಡುಗೊಳುತಂ ಸುಱಿದೂದುವ ಗಾಳಿ ಬರ್ಪ ದೇವರ ವರಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್ (ಕಾವ್ಯಸಾ. ೭೮ ಶೂದ್ರಕ); ತಣ್ಣಾಳಿಯ ಸೋಂಕಿಂ ವಿರಳಮಾಗಿ ಸೂಸುವ ತುಷಾರವರ್ಷದೊಳಂ (ಮಲ್ಲಿಪು. ೬-೧೦೧); ಕರ್ಣ ಶಕುನಿಗಳೊಲಿದು ತಂಬುಲ ಸೂಸೆ ನಕ್ಕರು ಹೊಯ್ದು ಕರತಳವ (ಕುಮಾಭ. ೧೭-೮). ೩. ಎಸೆ; ಬಿಸುಡು: ಮಧುವುಂ ಮನೋಭವನುಮಟ್ಟಿಯೊಳಾಡುವ ಪೊನ್ನ ಬಟ್ಟನೊರ್ಮೊದಲೆ ಮನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮಂ (ಶಾಂತಿಪು. ೧-೫೮); ಪಲರುಂ ಚೀಯೆಂದಿನಂ ಸೂಸಿದೆಂಜಲವುಬ್ಬಳನಾವಗಂ ಬೆದಕಿ ತಿಂದು (ಸುಕುಮಾ. ೪-೫೭); ಹಿಡಿದ ಕನ್ನಡಿ ಕಳಸಗಳ ಕೆಲಕಿಡುತ ಹೊಂದಳಿಗೆಯ ನಿವಾಳಿಯ ಸೊಡರ ಸೂಸುತ ಬಿಸುಡುತಮಲಾಕ್ಷತೆಯ ದೆಸೆದೆಸೆಗೆ (ತೂರರಾ. ೨-೬-೨); ಈಶಪ್ರಸಾದವನು ಸೂಸದೆಲೆ ಶಾ ಕೊಳ್ಳೆ ಶಾಶ್ವತವಪ್ಪ ಪದವಕ್ಕು (ಸರ್ವಜ್ಞ. ೧೬೨). ೪. ಕೊಡು; ನೀಡು: ಮಣಿಮಯಭಾಜನಂಗಳೊಳ್ತೆಕ್ಕನೆ ತೀವಿದ ಪಂಚರತ್ನದ [ಕೇಸರಿಯ] ಕತ್ತುರಿಯ ಕೊಳತದ ಕಪ್ಪುರದ ಪಳಿಕಿನ ಬಾಯಿನಂಗಳಂ ಬೀಱಿ . . . ಕಕ್ಕರವಟಿಯಿಗೆಯ ಚಿತ್ರಾವಟಿಯ ಪಟಿವೆಡೆಯ ತುಟಿವೆಡೆಯ ನೆಳಲ ಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್ (ಆದಿಪು. ೪-೬೪ ವ); ಬೆನಕಂಗಿಕ್ಕಿದೊಡಂ ಭೂತನಿಕಾಯಕ್ಕೊಯ್ದು ಬಲಿಯುಮಂ ಸೂಸಿದೊಡಂ [ಪಾಶಾಂ. ಸರುಗಮಂ ಪೂಸಿದೊಡಂ] . . . ಘನಮಾಗದು ಬೆಳಸು ನಿಯತಮೆಂಬರುಮೊಳರ (ಸಮಪ. ೯-೪೧); ನರನ ತೋಱಿಸಿದವಗೆ ಶತಸಾಸಿರವ ಸೂಸುವೆನು (ಕುಮಾಕ. ೯-೯). ೫. ಹರಿ; ಪ್ರವಹಿಸು: ಗಗನಂ ಘನೀಭೂತಮಾದುದೆಂಬಂದದಿಂ ಮಿಗೆ ತೀವಿ ಸೂಸಿದುವು ಸಲಿಲಮುತ್ಸಾಹದಿಂ (ಇಳಿ. ದೇ. ೫೧-೨೪); ಸೂಸುವ ನದಿಯಲ್ಲಿ ಬಿದ್ದು ಮುಂದೆ ಈಸಲಾಱದೆ ಮುಳುಗೆದ್ದು (ಪುರಂದ. ೧-೧೯-೨). ೬. ರಭಸದಿಂದ ನುಗ್ಗು, — ಹರಿ: ಬಿಟ್ಟ ಭರದಿಂದೆ ವಾರಿಯೆರಟ್ಟೆಸಗಂ ಪಚ್ಚು ಸೂಸ ಕೊಳದೊಳಗೆ ಬಯಲ್ ಬಿಟ್ಟುದು ತದ್ರಭಸಕ್ಕುರ್ಚೆಟ್ಟು ಕಡಂಗಿದುವು ಜಳಚರಪ್ರಕರಂಗಳ್ (ಚಂದ್ರಪ್ರ. ೫-೪೬); ಕರಿಘಟೆಯ ಕೆಲಬಲಕೆ ಸೂಸುವ ತುರಗರಾಜಿಯ (ಕುಮಾರ್ಯೂ. ೨-೨೪). ೭. ಕೆದರು; ಚೆಲ್ಲಾಪಿಲ್ಲಿಯಾಗು; ಇಟ್ಟಾಡು: ಒಡವಂದಂಕದ ಕೌರವರ್ ದ್ರುಪದನಂ ಬೇಱೀಂಗೆ ಮೆಯ್ಯೊತ್ತದೊಡ್ಡೊಡೆದೋಡುತ್ತಿರೆ ಸೂಸೆ ಬೀಟ್ಟ ತಲೆಗಳ್ (ಪಂಪಭಾ. ೨-೬೨); ವಿರಚಿಸು ಹಾರಮಂ ಪಱಿದು ಸೂಸಿದು ದೊಯ್ಯನೆ ಸೈತು ಮಾಡಿವಂ ಪರದ ಕುರುಳ್ಗಳಂ (ಶೃಂಗಾರ. ೬-೫೨); ಬೊಚ್ಚೆಗಳ ಪಟಹದ ಮೃದಂಗದ ಸರ್ಬಲಗ್ಗೆಯ ಸೋಹಿನಲಿ ಸುಳಿವಬ್ಬರಕೆ ಹಿಂಡೊಡೆದು ಹಾಯ್ದವು ಸೂಸಿದವು ದೆಸೆಗೆ (ಕುಮಾಕ. ೧೩-೨೫). ೮. ಬಿಚ್ಚಿಕೊಳ್ಳು; ಸಡಿಲವಾಗು: ಕದನದೊಳಾರ್ದು ಸಾರ್ದಿಸೆ ಮಹಾರಥದಚ್ಚು ಸಿಡಿಲ್ದುದೀಸು ಸೂಸಿದುದರಗೀಲ್ ಕಟಲ್ದುದು (ಪಂರಾಮಾ. ೧೩-೬೯); ತರುಣಿಯ ಮಾಸಿದಂಗಲತೆ ಸೂಸಿದ ಕುಂತಳಂ . . . ಜಾಡ್ಯದ ಮೆಯ್ ಕಡುಲಚ್ಚೆ ಕಜ್ಜಳಂ ಪರದಲರ್ಗಣ್ಗಳೆಂಬಿನಿತು ಪೇಟವೆ ಮಾಣಕವಾಂತ ಭಾವಮಂ (ದಶಕು. ೧-೬೦); ಬಿಟ್ಟ ಕಂಗಳ್ಬಿಗಿದ ಪುರ್ಬುಗಳ್ಪೆಱೆನೊಸಲ ಬಟ್ಟು ಸೂಸಿದ ಕುರುಳ ಥಳಥಳಿಪ ಕುಂಡಲಂ (ಚಕ್ರಮಿಭಾ. ೨೬-೨೬). ೯. ತೂಗು; ಒಲೆ: ಗಗನಂಬರಂ ನೆಗೆದು ಸೂಸದೆ ಬಾಹುಪರಿಭ್ರಮಂಗಳೊಳ್ ಬೆದಱದೆ ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯವಧೂಕದಂಬಕಂ (ಆದಿಪು. ೭-೧೨೫); ಹೆದಱು ಹಿಂಗಿದು ನೆಲಕೆ ಮಾಱುದ್ದಿದನು ಕರವನು ಸೂಸಿ ಹಾಱಿದ ಗದೆಯ ಕೊಂಡನು (ಕುಮಾಗ. ೭-೧೧). ೧೦. ಅಸ್ಥಿರವಾಗು; ಚಂಚಲಗೊಳ್ಳು; ಹೊಯ್ದಾಡು: ಶಿವಜ್ಞಾನಾರೂಢನುಮಾಗಿ ನಿಲಿಸಿ ಮನವ ಲಿಂಗದಲ್ಲಿ ಅತ್ತಲಿತ್ತ ಸೂಸಲೀಯದೆ (ಶಿವಗೀ. ೨೭-೧೨೦); ಕೃತಪರ್ಯಂಕಾಸನಂ ಸೂಸದೆ ನಿಲೆ ಕರಮುತ್ತಾನಕ ಸ್ವಸ್ತಿಕಂ ನಾಭಿತಟನ್ಯಸ್ತಂ ಬೆಡಂಗಾಗಿರೆ (ಚಂದ್ರಪ್ರ. ೧೪-೫೯); ಸೂಸಲೀಯದೆ ಮನನನೀಶನಾಸ ದೊಳಿರಿಸಿ ಬೇಸಱಾಗದೆ ಚಿತ್ತಮಂ ಮಾಸಲಾಗಿರಿಸಿ (ದೀಪ್ತಾಲೋ. ೧೬-೯). ೧೧. ನಿವಾರಣೆಯಾಗು; ಪರಿಹಾರವಾಗು: ಏಸನೀಂಟಿದಡೆನ್ನ ಬಳಲಿಕೆ ಸೂಸದೆನುತಂ ಕೊಪ್ಪರಿಗೆಗಳಿಗೋ ಸರಿಸದುಲ್ಲಂಘಿಸುತ ಕೈಕೊಳ್ಳಿ ನೀವೆನುತ (ಬಸಪು. ೫೯-೨೫). ೧೨. ದೊರೆ; ಲಭಿಸು; ಪ್ರಾಪ್ತವಾಗು: ಅಱುಹಿಲ್ಲವಾಗಿ ಸುಜ್ಞಾನವಿಲ್ಲ ಸುಜ್ಞಾನವಿಲ್ಲವಾಗಿ ಪಾರಮಾರ್ಥ ಸೂಸದು (ಅದವ. ೨೮-೮೧); ಮಾಸೂರ ಬಸವರಸ ಕೂಸನೀಶನ ಕೇಳಿ ಕಾಶಿಯ ಅಭವನೊಳು ಪಡೆದ ವರವದುವೆ ಸೂಸಿತೆಂತೆನಲು (ಸರ್ವಜ್ಞ. ೬). ೧೩. ದೃಷ್ಟಿ ತೆಗೆ; ನಿವಾಳಿಸು: ಆರತಿಯನೆತ್ತಿದರು ತಂದುಪ್ಪಾರತಿಯ ಸೂಸಿದರು ನೃಪಪರಿವಾರವೆಲ್ಲವು ಬಂದು ಕಂಡುದು ಕಾಣಿಕೆಯ ನೀಡಿ (ಕುಮಾಭಾ. ೧-೬೨); ಈ ಪುರದೊಳು ತನ್ನ ಮಗಳಿಗೆ ಸಮವಹ ರೂಪಜೀವೆಯರಿಲ್ಲೆಂದು ಚಾಪಳಿ ಮನೆಗೆ ಬಂದಿಹ ವಿಟನೊಳು ಪೇಳಿ ತೂಪಿಱಿದುಪ್ಪ ಸೂಸುವಳು (ಅಂಜಚ. ೬-೧೪೫). ೧೪. ಅರ್ಘ್ಯಕೊಡು; ಅರ್ಪಿಸು: ನಿನ್ನೆ ನೀನಾದಿತ್ಯಂಗೆ ನೀರಂ ಸೂಸಿ ಪೊಡೆಮಡುವಾಗಳಾ ನೀರ್ವೆರಸು ಸೂಸಿ ತಾಮರೆಗಱೆಯೊಳಗೆ ಮುಱುಗಿರ್ದ ಮುಗುಳ ಮೇಗೆ ತಗುಳ್ದಿರ್ದುದು (ವಡ್ಡಾರಾ. ೫-೧೪); ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ (ಪಂಪಭಾ. ೯-೭೨ ವ); ಹೊಳೆವ ಹೊಂಬಟ್ಟಲಲಿ ಸೂಸಿದನರ್ಘ್ಯಜಲವನು ಜನಕನಿದಿರಿನಲಿ (ಕುಮಾಕ. ೫-೧೬). ೧೫. ಹೇಳು; ತಿಳಿಸು; ನಿರೂಪಿಸು: ವಾಸಿಗಳ ಪೈಸರವನೆನ್ನಲಿ ಸೂಸಬಾರದೆ ನಿನ್ನ ಹರುಷಕೆ ಪೈಸರವದೇನೆಂದು ಬೆಸಗೊಂಡನು ಸುಯೋಧನನ (ಕುಮಾಸ. ೧೨-೨೮); ಸಾಸಿರವಗೆಯ ಬೋಳಿಯ ಮಾತ ಕಿವಿಯೊಳು ಸೂಸಿ (ಪೋಷತ. ೧೦-೨೦); ಏನು ಪೇಳಲಯ್ಯೋ ನಾನು ಸೂಸಿದಂಥ ನುಡಿಯ ಪಿಡಿದು ವೋಸಪಮಾಡುತೆನ್ನ ಮುನಿರಾಯ ಓಲಕ್ಷ್ಯೋಕಾಂತ ಘಾಸಿಪಡಿಸಿದನು (ಹಮಚ. ೧೩೧). ೧೬. ಕಳೆ; ತೀರು; ಮುಗಿ: ಆಸುರದ ಸಂಗ್ರಾಮವಾದುದು ಭಾಸುರದಿ ಹದಿನೆಂಟುವತ್ಸರ ಸೂಸಿದವು ಯುದ್ಧದಲಿ (ಸಂಭಪ. ೬-೨೭). ೧೭. ಬಾಡು; ಕಂದು: ಪಂದಿಯಿಂ ಕೆದಱಿದುತ್ಪಳಮುಂ ವನದಂತಿಯಿಂ ನೊಂದು ಸೂಸಿದ ಸರೋಜಮುಮೊಯ್ಯನೆ ನೀರುಣಲ್ ಬಂದು ಪೋದ ಮೃಗದಗ್ರಖುರಚ್ಯುತವಾರಿಯಿಂ ನಾಂದು (ಕಾವ್ಯಾವ. ೬೨೬); ಸೆಡದೆನುಡುಗಿದಂ ಮಾಸಿದಂ ಸೂಸಿದಂ ಕಿರ್ಗಯ್ಯಾದಂ ಕಂದಿದಂ (ರಕ್ಷಾಶ. ೨೫). ೧೮. ಚಲಿಸು; ಬೀಸು: ಹೊಳೆವಡಾಯುಧ ಹೊಡೆಗಳ ಸತ್ತಿಗೆಯ ಸೂಸುವ ಚಮರ ಸೀಗುರಿಯ (ಕುಮಾರ್ಯೂ. ೧೦-೫೯); ಹಸಿರ ಗಿಡದಾಸರಕೆ ಹೋದೇನು ನನ ದೇವ ಸೂಸುವ ಗಾಳಿಗೆ ಕುಳಿತಿಹನೆ (ಸಿದ್ಧಪು. ೪-೫). ೧೯. ಕಾಣಿಸು; ತೋರಿಸು: ಖರಮಂ ನಾಸಿಕೆ ಸೂಸುವಂದದೆ ಬೆಡಂಗಂ ತ್ರಾಸಿನೊಳ್ತೂಗಿದಂತಿರೆ . . . ಮೆಱೆದರ್ ವಾಹಂಗಳಂ ವಾಹಕರ್ (ಅಣಪು. ೨-೭೧). ೨೦. ಚಿಮುಕಿಸು; ತಳಿ; ಪ್ರೋಕ್ಷಿಸು: ನವವಿರಹ ಶಿಖಿಗೆ ಹವಿಯಾದುವಲ್ಲದಳುರ್ವಂಗಂತಾಪಮಂ ಮಳ್ಗಿಸಲಾಱವೆ ತಳಿವ ಮಲಯಜಂ ಸೂಸುವಾಲಿನೀರ್ ಮೇಲೆ ಸುರಿವ ಕಪ್ಪುರದ ರಜಂ (ವರ್ಧಪು. ೪-೪೭); ಅವಿರಳ ವಾದುದಂತವುರದೊಳ್ ಕಡೆಯಿಕ್ಕುವ ತೋರಮುತ್ತು ಸೂಸುವ ಪಟವಾಸಮಾವರಿಪ ಪೂವಲಿ ಪೊಣ್ಮುವ ಮಂಗಳೋಕ್ತಿ (ಪುಷ್ಪಪು. ೪-೨೫); ಸೂಸಿದುವು ಸಾರಸಂಗಳ್ ತಮ್ಮ ಗಱಿಗಳಂ ತೋದು ತಂದಂಬುಗಳನು (ಚಕ್ರಮಿಭಾ. ೧೯-೬೪). ೨೧. ತುಂಬಿ ತುಳುಕು; ಹೊರಚೆಲ್ಲು: "ಸೂಸಿದುದೆನೆ ತುಳ್ಕಿತೆಂಬುದುಂ" (ರನ್ನಕಂ. ೭); ದಾಸಿಯ ಕೊಡದಂತೆ ಸೂಸದಿಪ್ಪುದೆ ಯೋಗ ದಾಸಿ ಸಾಸಿರದ ನುಡಿ ಹಾಡುತಾ ಕೊಡನೊಳಾಸ ಇಪ್ಪಂತೆ (ಸರ್ವಜ್ಞ. ೪೬೯). ೨೨. ಹೆಚ್ಚಾಗು; ಅತಿಶಯವಾಗು: ಕಾಶಿ ಪ್ರಯಾಗೆ ಗಯಾಕ್ಷೇತ್ರವೊಡ್ಡಿಯ ಭಾಸುರ ತ್ರಿಜಗತ್ಪತಿಯ ಸೂಸುವ ಹರುಷದೆ ಸೇವಿಸಿ ಶ್ರೀರಂಗೇಶನ ಪುರಕ್ಕೆತಂದ (ಕಂನಿ. ೫ ೨೧). ೨೩. ಕೆದರಿಸು; ಚೆಲ್ಲಾಪಿಲ್ಲಿಮಾಡು: ಮೃಗಾಜಿನಾಸ್ತರಣಮಂ ಕೊಡೆಯಂ ಮುಱಿದಿಕ್ಕಿ ಸೂಸಿ ನೀವಾರದ ರಾಶಿಯಂ ಬಿಡದೆ ಕಾಡಿದುದಾ ಕಪಿ ತಾಪಸರ್ಕಳಂ (ಪಂಚತಂ. ೨೬೧-೩). ೨೪. (ಆಲಂ) ಮರುಗು; ವ್ಯಥೆಪಡು: ಅವರ ದುಃಖ ತಡೆಯಲಿಲ್ಲ. ಹೃದಯ ಸೂಸಿತು (ಮುಗಿಮ. ೩೧).

ಸೂಸು$_2$ (ನಾ). ೧. ಎರಚುವಿಕೆ; ಚೆಲ್ಲುವಿಕೆ: ಇಳಿದರಾನೆಯನಬಲೆಯರ ಹೊಂದಳಿಗೆಗಳ ಪಸ್ರುಗೂಳ ದೀಪಾವಳಿಯ ಸಾಲಿನ ಸೇಸೆಗಳ ಸೂಸುಗಳ ಸೊಗಸಿನಲಿ [ಪಾಶಾಂ. ಹರಕೆಗಳ ಕೈಕೊಳುತ, ಸೊಗಸಿನಲಿ ರಂಜಿಸುತ] . . . ಹೊಕ್ಕರು ನಿಳಯವನು (ತೊರರಾ. ೧-೧೬-೪೪). ೨. (ನೀರನ್ನು) ಚಿಮುಕಿಸುವುದು; ತಳಿಯುವಿಕೆ: "ಜಲಸೇಚನೆಗೆ ಸೂಸಿಕ್ಕುಂ" (ಕಶರ. ೧೧೦). ೩. ಚೆಲ್ಲಾಪಿಲ್ಲಿಯಾಗಿರುವಿಕೆ; ಚೆದರಿರುವಿಕೆ; "ಪರಿಕೀರ್ಣ" (ಚತುಸಿ. ೬, ೮೭). ೪. ತೋರಿಕೆ; ಪ್ರದರ್ಶನ: (ಕ). [< ಸೂಸು$_1$]

ಸೂಸುಕ 'ಸೂಸಕ' ನೋ.

ಸೂಸುಗಣೆ (ನಾ). ಚಿಮ್ಮಿ ಬರುವ ಬಾಣ: ಸೂಸುಗಣೆಗಳ ಸೊಗಡು ಹೊಯ್ದು ಪಹಾಸಕೊಳಗಾದರು (ಕುವಾದ್ರೋ. ೧೫-೨೨); ಸೂಸುಗಣೆಗಳ ಸೊಗಡಿನೋಳ್ಮಲಗೆ ಕರ್ಣ ಕೈವೀಸಿದನು (ತುರಂಗ. ೬೨-೪೯). [ಸೂಸು$_1$ + ಕಣೆ$_1$]

ಸೂಸುಗಲ್ಲು (ನಾ). ಎಸೆಯುವ ಸಣ್ಣಗಾತ್ರದ ಕಲ್ಲು: ಎತ್ತುಗಲ್ಲು ಕವಣೆಯ ಕಲ್ಲು ಸೂಸುಗ [ಪಾಶಾಂ. ಕ]ಲ್ಲು (ಗುಭಚಿ. ೧-೩೧). [ಸೂಸು$_1$ + ಕಲ್ಲು (< ಕಲ್$_3$)]

ಸೂಸುಗಿಡಿ (ನಾ). ಚಿಮ್ಮುವ ಅಥವಾ ಸಿಡಿಯುವ ಕಿಡಿ: ಮುರಿಮುರಿದು ಕಬ್ಬೊಗೆಯ ಹೊದಱಿನ ಹೊರಳಿ ಹರದುದು ಸೂಸುಗಿಡಿಗಳ ನೆರವಿ ನಸಿದುದು ನಿಮಿರ್ದ ಹೊಂಗಱಿಯಂಬು ಹೊಳೆಹೊಳೆದು (ಕುವಾದ್ರೋ. ೧೯-೫೦). [ಸೂಸು$_1$ + ಕಿಡಿ]

ಸೂಸುಗುರುಳ್, ಸೂಸುಗುರುಳು (ನಾ). ಕೆದರಿದ ಕೂದಲು,—ಮುಡಿ: ನೊಸಲೊಳಮರ್ಕೆವೆತ್ತಲೆವ ಸೂಸುಗುರುಳ್ ನಿಡುಸುಯ್ ಕಬಲ್ವ ಮೆಯ್ ಪೂಸ ದಲರಂತೆ ಬಾಡಿದ ಮೊಗಂ (ಧರ್ಮನಾ. ೬-೧೨೭). **ಸೂಸುಗುರುಳು:** ಸೂಸುಗುರುಳನುಗುರ್ಗೂನೆಗಳಿಂದೊಯ್ಯನೆ ಬಾಸಣಿಸುತ (ಕುರಾಶಾಂ. ೩೪-೩೬). [ಸೂಸು$_1$ + ಕುರುಳ್$_1$]

ಸೂಸುಗುರುಳು 'ಸೂಸುಗುರುಳ್' ನೋ.

ಸೂಸುಗೂಳ್ (ನಾ). ಚೆಲ್ಲುವ ಅಥವಾ ಎರಚುವ ಅನ್ನ: ನಿರೀಕ್ಷಿಸಿ ತಾಣ ಮಱದು ಪರೀಕ್ಷಿಸಿ ಸೂಸುಗೂಳಂ ತಳಿದು ತಳ್ಳದೆ ಬರ್ಪ ಧರಮನಱದು . . . ಪಲವುಂ ಬಗೆಯ ಗಾಣಂಗಳಂ . . . ಬಿರ್ಚಿ ಬೀಸಿದಾಗಳ್ (ರಾಜಶೇ. ೫-೧೧೪ ವ).

[ಸೂಸು$_1$ + ಕೂಳ್ (< ಕೂಳ್$_1$)]

ಸೂಸುಜವ್ವನ (ನಾ). ಉಕ್ಕೇರುವ ಪ್ರಾಯ; ಏರುಜವ್ವನ: ಆ ಸಿಂಧುರಾವತಿ ಬಂಧುರಾವತಿಯರ ಸೂಸುಜವ್ವನದ ಸೊಕ್ಕಱಿದು ಆಸೆ ತೀರ್ವಂತೆ ಕೂಡಿದನು (ಭರತ. ೬೨-೫೮). [ಸೂಸು$_1$ + ಜವ್ವನ]

ಸೂಸುಡೆಂಕಣಿ (ನಾ). ಕೋಟೆಯ ಬುರುಜಿನ ಮೇಲೆ, ಕಲ್ಲುಗುಂಡುಗಳನ್ನು ತೂರುವುದಕ್ಕಾಗಿ ಇಡುವ ಒಂದು ಯಂತ್ರ: ಎತ್ತುಗಲ್ಲಿರಿಯ ಡೆಂಕಣಿ ಸೂಸುಡೆಂಕಣಿ . . . ಪೆಟಲುಪ್ಪು ಗುಂಡುದಸಿ ಬಿತ್ತರಿಸಲೇಂ ಮರುಳ ಕಯ್ಯವಣೆಯಿಡುಗಲ್ಲ ಮೊತ್ತವಾ ಪುರದೊಳು (ಪದ್ಮರಾ. ೩-೨೧); ನಡೆಡೆಂಕಣಿ ಸೂಸುಡೆಂಕಣಿ ಬಲುಗುಂಡನಿಡುವ ಡೆಂಕಣಿ ತೋಱಿದೆಡೆಗೆ ಸಿಡಿವ ಡೆಂಕಣಿ ರಾಯಡೆಂಕಣಿಗಳ ಸಾಲು ಬಿಡದೊಪ್ಪಿದವು ದುರ್ಗದೊಳು (ಕುರಾಶಾಂ. ೪೨-೯೯). 'ನಡೆಡೆಂಕಣಿ' ಪರಾ. [ಸೂಸು$_1$ + ಡೆಂಕಣಿ]

ಸೂಸುನೀರ್ (ನಾ). ಚಿಮುಕಿಸುವ ನೀರು; ಸಿಂಪಡಿಸುವ ನೀರು: ತರುಣಿಯರಾ ವಿಲಾಸ ಕುಸುಮಾಸ್ತ್ರನನೀಕ್ಷಿಸೆ ಕಾಮತಾಪದಿಂ . . . ಮೃಣಾಳನಾಳಿಕೆಗೆ ಚಂದನದಣ್ಣಿಗೆ ತಣ್ಬುಟಱಲ್ಗೆ ತಣ್ಗಾರಗದ ಸೂಸುನೀರ್ಗೆ ಕೊಳವೇರ್ಗೊಡಲಂ ಗುಱಿಯಾಗೆ ಮಾಡುವರ್ (ಪಲ್ಲಿಪು. ೩ ೨೫); ವಿಯೋಗಮಂ ಮಾಡಿದ ವಾಮಲೋಚನೆಯರಂಗದೊಳಾಲಿಯ ಸೂಸುನೀರ್ಗಳಟ್ಟೂಡದೆ ತಂದು (ಚಂದ್ರಪು. ೨-೨೫). [ಸೂಸು$_1$ + ನೀರ್]

ಸೂಸುಮಣ್ಣು (ನಾ). ಕಲ್ಲುಹರಳುಗಳು ಇಲ್ಲದ ನಯವಾದ ಮತ್ತು ಹಗುರವಾದ ಮಣ್ಣು: ಚಳಿಯಿಂದ ಮಣ್ಣಿನೊಳಗಿನ ಸಣ್ಣ ಹರಳುಗಳು ಸೋಸಿದ ಹಾಗಾಗಿ ಬುಡಕ್ಕೆ ಕೂತು ಸೂಸುಮಣ್ಣು ಮಾತ್ರ ಉಳಿಯುತ್ತದೆ (ಮುಯುಯು. ೬-೧೭೬); ನನ್ನ ಪರಮಮಿತ್ರರೊಬ್ಬರು . . . ಎಲ್ಲಿಯೂ ನಸ್ಯ ದೊರಕದೆ ಮೂಗಿನಲ್ಲಿ ಸೂಸುಮಣ್ಣು ಸೇದಿ ಸಮಾಧಾನ ಪಟ್ಟುಕೊಳ್ಳುವುದನ್ನು . . . ಕಂಡಿದ್ದೇನೆ (ಮುಂಗಾಪು. ೩೬).

[ಸೂಸು$_1$ + ಮಣ್ಣು (< ಮಣ್)]

ಸೂಸುಮೋಹನ (ನಾ). ತುಂಬಿದ ಚೆಲುವು; ಎದ್ದುಕಾಣುವ ಸೌಂದರ್ಯ: ಸೂಸುಮೋಹನದ ಸಿಂಗರದೊಟ್ಟು ತನ್ನ ವಿಲಾಸಿನಿಯರ ಬಳಸಿನೊಳು ಪೂಸರಲನ ಪುಣ್ಯದೇವತೆಯಂತಿರ್ದ ಭಾಸುರಾಂಗಿಯ ಕಂಡರಾಗ (ಭರತ. ೪೦-೪೪).

[ಸೂಸು$_1$ + ಮೋಹನ]

ಸೂಸುವಲೆ (ನಾ). ಒಂದು ಬಗೆಯ ಬಲೆ; ಚಿಮ್ಮಿ ಬೀಸುವ ಬಲೆ: ಸೂಸುವಲೆಗಳಿಂದೆ ಬೇಂಟೆಯ ಜನರಲ್ಲಿ ಘಾಸಿಮಾಡುವರು ಮೃಗಗಳ (ರಾಮವಿ. ೧೫-೬೫). [ಸೂಸು$_1$ + ಬಲೆ$_1$]

ಸೂಸುವೆಳಗು (ನಾ). ಹೊರಚೆಲ್ಲುವ ಕಾಂತಿ: ಬಿಂಬಾಧರದ ಕೆಂಬೆಳಗು ಸುಲಿಪಲ್ಲ ಸೂಸುವೆಳಗಿನೊಳವೆರದು ವದನವಿಧುಮಂಡಳದ ಪಾಟಲದ್ಯುತಿಯಂತೆ ಪಸರಿಸಿ ಬೀದಿವರಿಯೆ (ರಾಜಶೇ. ೫-೧೯ ವ). [ಸೂಸು$_1$ + ಬೆಳಗು$_2$]

ಸೂಸುವೆಳ್ಪು (ನಾ). = ಸೂಸುವೆಳಗು: ಸುಲಿಪಲ್ಲಳ ಸೂಸುವೆಳ್ಪಿನಿಂದೆಸೆವ ದುಕೂಲದೊಂದುಡೆಯಿನಂದಮೃತಾಂಶುಮರೀಚಿಯಿಂದೆ ನಿರ್ಮಿಸಿದವೊಲೊಪ್ಪಿದಳ್ ಧವಳಲೋಚನೆ ವಾಸವದತ್ತೆ ದೇಸೆಯಿಂ (ಲೀಲಾವ. ೧೦-೬೬). [ಸೂಸು$_1$ + ಬೆಳ್ಪು$_1$]

ಸೂಸೂಕರಿಸು (ಕ್ರಿ). ಸೂ ಎಂದು ಶಬ್ದ ಮಾಡು; ಸುಯ್ಯೆನ್ನು: ಬುಸುಗುಟ್ಟುವ ಪಾತಾಳದ ಹಾವೂ? . . . ಹೊಸತಿದು ಕಾಲನ ಕೋಣನ — ಓವೊ! ಉಸಿರಿನ ಸುಯ್ಯೋ? — ಸೂಸೂಕರಿಸುತ ಬರುವುದು! (ಕಏಪು. ೨೬-೧). [? + - ಇಸು$_3$]

ಸೂಳ್$_1$ 'ಸೂಱ್' ನೋ.

ಸೂಳ್$_2$, ಸೂಳು$_2$ (ನಾ). ೧. ಜೋರಾದ ಧ್ವನಿ; ಆರ್ಭಟ; ಬೊಬ್ಬೆ: ಮೊಳಗಿತು ಸೂಳಡರಿ ಸನ್ನಾಹ ಪುದುಭೇರಿ (ಸಾಳ್ವಭಾ. ೧೮-೬೬). **ಸೂಳು$_2$:** ೧. ಸೂಳು ಮಿಗೆ ಗರ್ಜಿಸುವ ಘನನಿಸ್ವಾಳಕೋಟಿಯ ಗಡಣದೊಳು ಕೆಂಗೋಲ ಮಳೆಗಱೆಯುತ್ತ ಗಂಗಾಸುತನ ಕೆಣಕಿದರು (ಕುವಾಭೀ. ೫-೧೮); ಸೂಳು ಮಿಗೆ ಸಂಗರದ ರವ ದುಬ್ಬಾಳಿನಲಿ ತಿರುಹಿಟ್ಟನರುಣಜಲಾಳಿ ಝೋರಿಡೆ ಋಷ್ಯಮೂಕಮಹಾಮಹೀಧರಕೆ (ತೊರರಾ. ೪-೨೬-೬೬). ೨. ಆಧಿಕ್ಯ; ಹೆಚ್ಚಳ: "ಕಣಾಳಂ ಪರ್ಬುಗೆಯೊಳಂ ಸೂಳಿನಿಕ್ಕು" (ಕಶರ. ೧೧೦); ಪರಿಗತವಾದ ಲಜ್ಜೆಯ ಸುಯ್ಯ ಸೂಳಿನಲಿ ಬೆಕ್ಕಸಂಬಡುತ ಸುರಪತಿ ತನ್ನಿಕ್ಕೆಲದ ಕರತಳದ ಮುಸುಕಿನ ದುಕ್ಕಡಿಯ ದುಮ್ಮಾನದಲಿ ಹೊಕ್ಕನು ವನಾಂತರವ (ತೊರರಾ. ೬-೨೬-೨). [?]

ಸೂಳ 'ಸೂಲ$_2$' ನೋ.

ಸೂಳಗಿ (ಕ್ರಿ). ೧. ಶಬ್ದಮಾಡು; ಅಬ್ಬರಿಸು: ರಣದ ಮುಂಗುಡಿಗಹಳೆಗಳ ಸಂದಣಿಯ ಸೂಳಗಿವಖಿಲಗ್ಗೆಯ ರಣವಱೆಯನೊಡೆಬಡಿದು ಬೆರಸಿದರರಿವರೂಥಿನಿಯ (ತೊರರಾ. ೬-೨೧-೪); ಸೂಳಗಿವ ಕಹಳೆಗಳ ರವ ನಿಸ್ವಾಳಭೇರೀಶಂಖ ರವ ದಿಗುಜಾಲವನು ಬಿಡೆ (ಸಿಭಾಗ. ೧೦-೫೯-೬೫). ೨. ತೀವ್ರವಾಗು; ಅಧಿಕವಾಗು: ಸೂಳಗಿವ ಬಲು ಚಿಂತೆಯಲಿ ಭೂಪಾಲ ಮರಣದ ಮೇಲೆ . . . ಅವನೀಪಾಲಪದವಿಗೆ ಕೈಕೆಯ ಕ್ಷಿತಿಪಾಲಕನ ಮೊಮ್ಮಗನ ಕರೆಸಲು ಮಾಡಿದರು ಮನವ (ತೊರರಾ. ೨-೫-೬೨).

[ಸೂಳು$_2$ (< ಸೂಳ್$_2$) + ಅಗಿ$_1$]

ಸೂಳಡಸು (ಕ್ರಿ). ಶಬ್ದವು ಆವರಿಸು,— ತುಂಬು: ನಡೆಧುದುರುಸನ್ನಾಹದಲಿ ಸೂಳಡಸಿ ಮೊಱೆವ ಗಭೀರಭೇರಿಯ . . . ತೇರಿನ ನಿಡುವರಿಯ ಕಾಲಾಳ ಕಳಕಳವಾಯ್ತು ರಣದೊಳಗೆ (ಕುವಾದ್ರೋ. ೯-೧೨); ಸೂಳಡಸಿ ಪೊಡೆವ ಬಹುವಿಧವಾದ್ಯದ ಮುದದಿ ಮುಂದುಲಿವ ಕಂಚುಕಿಯ ಕಳಕಳದಲೆಯ್ದುದನು . . . ಸೌಂದರಧೂಪನು (ಸೌಂದಪು. ೪-೮೦). [ಸೂಳು$_2$ (< ಸೂಳ್$_2$) + ಅಡಸು]

ಸೂಳಪಾಣಿ 'ಸೂಲಪಾಣಿ' ನೋ.

ಸೂಳಯಿಸು, ಸೂಳಯ್ಸು, ಸೂಳವಿಸು, ಸೂಳೈಸು (ಕ್ರಿ). ೧. (ಕೆಲವು ವಾದ್ಯಗಳಂತೆ) ಜೋರಾದ ಧ್ವನಿ ಮಾಡು; ಭೋರಿಡು; ಅಬ್ಬರಿಸು: ಸೂಳಯಿಸಲ್ ನಿಸ್ವಾಳಮನದಱಾಭೀಳಧ್ವನಿ ಸರ್ವೋರ್ವೀತಳಮಂ ತಾಳಿದನಾ ನರನಾರಾಯಣನೊಱಗಿದ ಹಕ್ಕೆಯ ಹಾವ (ಜಯಕಾ. ೬-೧೪); ಊಳಿದುವು ಪೇರ್ಗಹಳೆಗಳು ನಿಸ್ವಾಳ ದುಂದುಭಿ ಮೊಳಗೆ ಪೆರ್ಬಱೆ ಸೂಳಯಿಸಿದುವು ಘಂಟೆ ಜಯಘಂಟೆಗಳುಲಿದವಾಗ (ಶಾಕದಾ. ೨-೫೩). ೨. ಕಿರಿಚಿಕೊಳ್ಳು; ಕೂಗು: ಸೀಳುತಿಹ ದನಿಯನೀ ಸಣ್ಣೊಡಲಿನ ಆಳದಿಂದೆಳೆಯುತ್ತ ಸೂಳಯಿಸುತಿಹುದೆನ್ನ ಚಾಳಿಯನು ನೆಮ್ಮಲಾರದೆ ಅಳಲಿದು (ಅರುಣಾ. ೧೩-೧೧). ೩. ಶಬ್ದವಾಗುವಂತೆ ಮಾಡು; ಧ್ವನಿಯನ್ನುಂಟುಮಾಡು: ದಾರಿಯಲ್ಲಿ ಸಾಲಾಗಿ ಇರಿಸಿದ್ದ ಮೃದಂಗ ಭೇರಿ ನಗಾರಿಗಳ ಕುಡುಹುಗಳನ್ನು ಹಿಡಿದು ನೋಡಿ, ಮೆಲ್ಲಗೆ ಬಡಿದು

ಸೂಳಯಿಸಿ ಆಲಿಸಿ ಕೇಳಿದಳು (ಸವಕ. ೮೪). ೪. ಹೊಡೆ; ಬಡಿ; ತಟ್ಟು: "ಸೂಳಯಿಸಿತೆನಲ್ ಪೊಯ್ದುದು" (ಭಾರಸಿ. ೪೦). **ಸೂಳಯ್ಸು** : ೧. ಪೊಡೆವ ಭೇರಿಯ ಸೂಳಯ್ಸು ನಿಸ್ವಾಳದ ಪೂರಯಿಪ ಶಂಖದ ಬಿರುದೆತ್ತಿ ಕರೆವ ಕಹಳೆಗಳ (ಗಿರಿಕ. ೧೦-೭೯ ವ); ಸೂಳಯ್ಸಿ [ಪಾಠಾಂ. ಳೈಸಿ] ದವು ನಿಸ್ವಾಳಕೋಟಿಗಳು (ಕುಮಾಸ. ೩-೩೭). **ಸೂಳವಿಸು**: ೧. ಸೂಳವಿಸಿದುವು ಲಗ್ಗೆಯಲಿ ನಿಸ್ವಾಳ ಕೋಟಿಗಳು (ಕುಮಾಭೀ. ೧-೪೩); ಹೇಳಲಱಿಯೆನು ಭೇರಿ ನಿಸ್ವಳ ಸೂಳವಿಸಿದವನಂತರಾಯರ ಮೌಳಿಮಣಿಗಣಖಚಿತ ಪಾದಪಯೋಜವೊಪ್ಪಿದುದು (ಕೌಶಿಕಾ. ೨-೬೦). ೪. ಬೋಳವಿಸಿದನು ಶಲ್ಯನನು ಮಿಗೆ ಸೂಳವಿಸಿದನು ಭುಜವನು . . . ಅಹಿತನ ಪಾಳಿಸುವಡಂಬಿದೆಯೆನುತ ತೂಗಿದನು ಮಾರ್ಗಣಿಯ (ಕುಮಾಕ. ೨೪-೪೯); ಬಾಲೆಯರ ನಿಡುಮುಡಿಯ ನೀರೊಱೆವಾಲಿಗಳ ಕರತಳದಿ ಜಠರವ ಸೂಳವಿಪ ಹಾಹಾರವದ ಕಳಕಳದ ಕಳವಳವ ಕೇಳಿ (ತೊರಾ. ೫-೮-೩೭). **ಸೂಳೈಸು**: ೧. ಪಱಿದುಲಿವ ಕಹಳೆ ಮಿಳ್ಪಿಪ ಪಱಯಿಗೆ ಸೂಳೈಪ ತಮ್ಮಟಂ (ವರ್ಧಪು. ೨-೪೯); ಸೂಳೈಸಿದವು ನಿಸ್ವಾಳ ಬಿರಿದುದಾ ಗಿರಿ . . . ಕುರುಗಳೆದೆ ಜರ್ಝರಿತವಾಯ್ತುಬ್ಬರಕೆ (ಕುಮಾಸ. ೩-೬೨). ೪. ಕಟ್ಟವೇಱ್ಪುದುರೆಯಂ ಸೂಳೈಸವೇಟ್ಟೇರಿಯಂ (ಅರ್ಧನೇ. ೨-೫೩). ೫. ನೀಡು; ಚಾಚು (?) : ಕಾಳಂಗಸರ್ಪ . . . ಅಡಿಗಡಿಗೆ ನಾಲಿಗೆಯ ಸೂಳೈಸಿ ತೆಗತೆಗದು ಬಲುಬೇಗದಿಂ ಹರಿದು ಬೆನ್ನಟ್ಟಿ ಬರಲು (ನಿಜಶ. ೯೪). [ಸೂಳ್ಳು$_2$ (< ಸೂಳ್$_2$) + - ಇಸು$_3$]

ಸೂಳಯ್ಸು 'ಸೂಳಯಿಸು' ನೋ.

ಸೂಳವಿಸು 'ಸೂಳಯಿಸು' ನೋ.

ಸೂಳಱಿ 'ಸೂಟಱಿ' ನೋ.

ಸೂಳಾಡು (ಕ್ರಿ). ಶಬ್ದವಾಗುವಂತೆ ಮಾಡು(?): ಕಾಳಂಜಿವಿಡಿದು ಕೈಗುದಕವನೆಱೆಯೆ ಪಾಂಚಾಳಿಕೆ ಮೊದಲ ತಂಬುಲವಾ ಸೂಳಾಡಿಯುಗುಳ್ದು ವೀಳೆಯಗೊಂಡು ಗಾನದೊಳೋಲಾಡುತಿದ್ದರೇನೆಂಬೆ (ಭರಚಿ. ೧೧-೫೬).

[ಸೂಳ್$_2$? + ಆಡು$_1$]

ಸೂಳಾದಿ, ಸುಳಾದಿ (ನಾ). ೧. [ಸಂಗೀತ] ಹಾಡಿನ ಒಂದು ಪ್ರಕಾರ. ೨. ಈಗ ಪ್ರಚಾರದಲ್ಲಿರುವ ಏಳು ತಾಳಗಳಲ್ಲಿ ಪ್ರತಿಯೊಂದು: ಪುರಂದರದಾಸರು . . . ಅಲಂಕಾರಗಳನ್ನೂ ಗೀತಗಳನ್ನೂ ಕೀರ್ತನೆಗಳನ್ನೂ ಸುಳಾದಿಗಳನ್ನೂ ರಚಿಸಿದ್ದಾರೆ, ಈ ಕಾರಣ ಈಗ ಪ್ರಚಾರದಲ್ಲಿರುವ ಸಪ್ತತಾಳಗಳಿಗೆ ಸೂಳಾದಿತಾಳಗಳೆಂದು ಹೆಸರು ಬಂದಿದೆ (ಸಂಗೀಚಂ. ೫೯). ೩. ಒಂದು ರಾಗದ ಹೆಸರು(?) : ಸೌರಾಷ್ಟ್ರ ಗುಂಡಕ್ರಿಯಾ ಲಲಿತ ಸೂಳಾದಿಯಲಿ ನಾಮಕೀರ್ತನೆಗಳ ಪಾಡಿ (ಕನಕ. ಧಾ. ೧೬೯-೫). **ಸುಳಾದಿ** : ೧. ಕೀರ್ತನೆಗಳು, ಉಗಾಭೋಗ, ಸುಳಾದಿ, ಪಿಳ್ಳಾರಿಗೀತಗಳು ಎಂದು ನಾಲ್ಕು ರೂಪಗಳು ಕಾಣಿಸುತ್ತವೆ (ಪೇಮಕೂ. ೧೦೪); ಶ್ರೀಪಾದರಾಯರು ಕನ್ನಡದಲ್ಲಿ ನೂರಾರು ಸುಳಾದಿಗಳನ್ನೂ ದೇವರನಾಮಗಳನ್ನೂ . . . ರಚಿಸಿದ್ದಾರೆ (ಸಂಗೀಚಂ. ೬೨೪). ೨. ನರಸಿಂಹಸ್ತುತಿ ಗೀತಪ್ರಬಂಧವ ಪಿಡಿದು ಸುಳಾದಿತಾಳದಲಿ ಕರದಭಿನಯಗೂಡಿ ಕಡುಕುಶಲದೆ ನಾಟ್ಯದಿರವ ಮೆಱೆದರಂಗನೆಯರು (ಕಂಸವಿ. ೮-೬೧). [?]

ಸೂಳಾಯತ 'ಸೂಟಾಯ್ತ' ನೋ.

ಸೂಳಾಯಿತ 'ಸೂಟಾಯ್ತ' ನೋ.

ಸುಳಾಯಿತ್ತ 'ಸೂಟಾಯ್ತ' ನೋ.

ಸೂಳಾಯ್ತ 'ಸೂಟಾಯ್ತ' ನೋ.

ಸೂಳಾಳ್ಕೆ (ನಾ). ಆಳ್ಪಿಕೆಯ ಸರದಿ, — ಪಾಳಿ: ಪಾಳಿಯಿಂದೋರ್ವರೆಯ್ತಂದು ತಂತಮ್ಮ ಸೂಳಾಳ್ಕೆಗಮರ್ದಸವಳದೆ . . . ಆವಾವವಸ್ಥೆಗಳ್ಗೆಂತೆಂತು ಪಕ್ಕಾಗಿ (ಸಂಸಪ. ೨೮-೧೫). [ಸೂಳ್$_1$ (< ಸೂಟ್) + ಆಳ್ಕೆ]

ಸೂಳಿ$_1$ (ನಾ). ಬಾಳೆಯ ಗಿಡದಲ್ಲಿ ಸುರುಳಿಯಾಗಿ ಸುತ್ತಿಕೊಂಡಿರುವ ಚಿಗುರೆಲೆ: ಬಾಳಮೃಣಾಳಹಾರಲತೆ ಬಾಚೆಯ ಸೂಳಿಯ ತಾಲವೃಂತಂ (ಅನಂಪು. ೭-೨೬).

[IP ಇದು 'ಸುಟಿ' ಎಂದಿರಬಹುದೆ?]

ಸೂಳಿ$_2$ 'ಸೂಲಿ$_1$' ನೋ.

ಸೂಳಿಭಕ್ತ (ನಾ). ಶಿವನ ಭಕ್ತ: ಚೋಳದೇಶಪ್ರಾಂತಮಂ ಹರುಷದಿಂ ಪೊಕ್ಕು ಸೂಳಿಭಕ್ತರ ಮನಂ ನೋಡಲ್ ಮನಂ ಮಿಕ್ಕು (ಇಳಿ. ದೇ. ೫೧-೧೨). [ಸೂಳಿ$_2$ (< ಸೂಲಿ$_1$) + ಭಕ್ತ]

ಸೂಳಿವರ್ (ಕ್ರಿ). ಸುತ್ತಿಬರು; ತಿರುಗಿಬರು: ದೊಡ್ಡ ಬಲಂಗಳೊಳೋಡಿ ಪೊಕ್ಕು ಮೈಗರೆವುದು ಸೂಳಿವಪ್ಪ ಮೊಲಗಳ್ ನೆರೆದೊಪ್ಪಿದುವಲ್ಲಿ ಬೇಂಟೆಯೊಳ್ (ಸೂಕ್ತಿಸು. ೩-೧೧೯). [IP ಇದು 'ಸುಟಿವರ್' ಎಂದಿರಬಹುದೇ?]

ಸೂಳು$_1$ 'ಸೂಟು' ನೋ.

ಸೂಳು$_2$ 'ಸೂಳ್$_2$' ನೋ.

ಸೂಳು$_3$ (ನಾ). ಒಂದು ಬಗೆಯ ವ್ರಣ,—ಗಾಯ(?): ಮಣಿಸಿಲ . . . ನಲಅರಳ ಪುಡಿಯನ್ನು ಜೇನುತುವ್ವವಲ್ಲಿ ಕಲಸಿ ನಕ್ಕಲು ಛಳ ಹೆಚ್ಚಾದ ಜ್ವರದರ್ಶಿಯಂ ಹಲವು ಸೂಳುಗಳಂ ಕೆಡಿಸುಗುಂ (ವೈದ್ಯವಿ. ೧೫೮). 'ಸೂಳುಕಿವಿ' ಪರಾ. [?]

ಸೂಳುಂಡೆ (ನಾ). ಒಂದು ಸಲಕ್ಕೆ ಕೊಪ್ಪರಿಗೆಯಿಂದ ಸಿದ್ಧವಾಗುವ (ಬೆಲ್ಲದ) ಉಂಡೆ: ಆಲೇಮನೆ ಸೂಳುಂಡೆ ದಿನ ೧ಕ್ಕೆ ಕಡಿಗೆ ಬೆಲ್ಲ ೫೦೦ ಹಾಲೇಮನೆ ೧ಕ್ಕೆ ವರ್ತನೆ ಗ ೧೧೦ (ಎಕ. XI, ಹಿರಿಯೂ.೮೮-೨೧; 1589). [ಸೂಳ್$_1$ (< ಸೂಟ್) + ಉಂಡೆ]

ಸೂಳುಕಿವಿ (ನಾ). ಹುಣ್ಣಾಗಿರುವ ಕಿವಿ: ಚಿತ್ರಮೂಲ, ಸಮುದ್ರಫಲ . . . ತುಪ್ಪಮಂ ಬಿಸಿ ಮಾಡಿ ಸೂಳುಕಿವಿಯಲೆರೆದು ಕಿವಿಗೆ ಅರಳೆಯಂ ಮುಚ್ಚಿ ಗಾಳಿ ಹೋಗದ ಹಾಗೆ ಅರಳೆಯನಿಕ್ಕಿ ತುಪ್ಪಮಂ ಬಿಡಲು . . . ಕೀವುರಸಿಗೆ ಸುರಿಯುವುದು ಮಾಣ್ಪುಂ (ವೈದ್ಯವಿ. ೨೦೬). [ಸೂಳು$_3$ + ಕಿವಿ$_3$]

ಸೂಳುಗಂಕಣ (ನಾ). (ಕಿಣಿಕಿಣಿಯೆಂದು) ಶಬ್ದವನ್ನುಂಟುಮಾಡುವ ಬಳೆ, — ಕಂಕಣ: ಕೇಳಿದಳು ಬಿನ್ನಹವನಾ ಸಿರಿಲೋಲ ಮಾಧವರಾಣಿ ಸಭೆಯಲಿ ಸೂಳುಗಂಕಣ ಕಡಗಹಸ್ತದಲಭಯವನು ಕೊಡುತ (ಕವಿಚ. II, ೪೧೨ ಶುಲೀಮಹಾತ್ಮ).

[ಸೂಳ್$_2$ (< ಸೂಳ್$_2$) + ಕಂಕಣ]

ಸೂಳುಗರೆ 'ಸೂಟ್ಗರೆ' ನೋ.

ಸೂಳುಗಹಳೆ 'ಸೂಟುಗಾಳೆ' ನೋ.

ಸೂಳುಗಾಱ (ನಾ). ಸರದಿಯ ಪ್ರಕಾರ ಕೆಲಸ ಮಾಡುವವನು: ಚಿತ್ರವಂಬ ಸೂಳುಗಾಱ ಒಪ್ಪದ ಚೀಟ ತೋಱೆಯೆಂದಲ್ಲಿ ಸಿಕ್ಕಿದ ಜೀವವೆಂಬ ಸೆಟ್ಟಿ (ಸಕವ. ಕ. II, ೬೫೪-೨೪). [ಸೂಳು$_1$ (< ಸೂಟ್) + - ಕಾಱ]

ಸೂಳುಚಿಂತೆ (ನಾ). ಒಂದರ ಹಿಂದೆ ಒಂದು ಬರುವ ನಿರಂತರವಾದ ಯೋಚನೆ, —ಚಿಂತೆ: ಹೂಳಿದುಬ್ಬಿನ ಹುದಿದ ಮೋನದ ಸೂಳುಚಿಂತೆಯ ಬಲಿದ ಭೀತಿಯ ಮೇಲುದುಗುಡದ ದಡಿಯ ವದನದಲಿದ್ದುದಖಿಳಜನ (ಕುಮಾಗ. ೧೧-೧).

[ಸೂಳು$_1$ (< ಸೂಟ್) + ಚಿಂತೆ]

ಸೂಳುತ್ತರ (ನಾ). ಪ್ರತಿಯಾಗಿ ಕೊಡುವ ಉತ್ತರ; ಪ್ರತ್ಯುತ್ತರ: ತಾಳ ಮೇಳದ ಕೆಳೆಯರ ಮೇಳಾಪದೊಳ್ ಸೂಳುತ್ತರಂಗುಡುತ್ತಂ . . . ಪಜ್ಜೆಯಿಡುವ ಬಿಜ್ಜೋದರಿಯರಂ ಪಳವಚ್ಚರಿಯ ನಚ್ಚಣಿಯರಿಂ (ರಾಜಶೇ. ೧೨-೧೦೬ ವ).

[ಸೂಳ್$_1$ (< ಸೂಟ್) + ಉತ್ತರ]

ಸೂಳುನಗೆ (ನಾ). ಜೋರಾದ ನಗು; ಅಟ್ಟಹಾಸ: ಸೂಳುನಗೆ ಬಿಳಿನಗೆಯಲಡಿಗಡಿಗಾಳಿ ಮುಸುಗುಬ್ಬಸದಲಿದ್ದು ಕರಾಳಮತಿ ಸಂತೈಸಿ ನೆಱೆ ತನ್ನವರಿಗಿಂತೆಂದ (ಕುಮಾಸ. ೨-೭೬). [ಸೂಳ್ಳು$_2$ (< ಸೂಳ್$_2$) + ನಗೆ]

ಸೂಳುನುಡಿ 'ಸೂಳ್ನುಡಿ$_1$' ನೋ.

ಸೂಳುನೆನಹು (ನಾ). = ಸೂಳುಚಿಂತೆ: ಸೂಳುನೆನಹಿನ ಸುಳಿಮನದ ಸಮಪಾಳಿ ಕೋಪದಲಳಿದ ಮೌನದ ಮೇಲುಬುದ್ಧಿಯ ಜೋಡಿ ಬೇಱೊಂದಾಯ್ತು ಭಾವದಲಿ (ಕುಮಾಸ. ೧೦-೧). [ಸೂಳು$_1$ (< ಸೂಟ್) + ನೆನಹು (< ನೆನಪು)]

ಸೂಳುಪಾಡು 'ಸೂಟ್ಪಾಡು' ನೋ.

ಸೂಳುಪಾಳಿ (ನಾ).(ಒಂದು ಕ್ರಮಕ್ಕೆ ಅಳವಟ್ಟು) ಸರದಿ,—ಪಾಳಿ: ಜಾಣನ ಮೇಳದುದ್ದಂಡೆಯರು ಜೊತ್ತಿನ ಸೂಳುಪಾಳಿಯೊಳಂಗನೆಯರೈದಿದರು ಗೋಪತಿಯ (ಅಕ್ಕಾಪ. ೪-೧೫). 'ಸೂಟ್ಪಾಡು' ಪರಾ.

[ಸೂಳು$_1$ (< ಸೂಟ್) + ಪಾಳ್$_3$ (< ಪಾಟ್$_2$)]

ಸೂಳುಪಾಳು (ನಾ). = ಸೂಳುಪಾಳಿ: ಕರಡಿಯಲಿ ಕಪಿಗಳನು ಕಪಿಯಲಿ ಕರಡಿಗಳನಾ ಕರಡಿ ಕೋಡಗವೆರಡಱಲಿ ಮುಸು ಸಿಂಗಳೀಕವ ಸೂಳುಪಾಳಿನಲಿ ತಿರುಹಿಡುತ

(ತೂರರಾ. ೬-೩೦-೭); ತರುಬಿ ಸುರಗಿಗಳಿಂದೆ ಶರಗಳ ತರಿದು ಚಂಡಾಡಿದರು ಶೂಲ ದೊಳಿರಿದು ಕೊಂದರು ಸೂಳುಪಾಳಿಂದಾಗ ಹುರಿಕಟಿಸಿ (ಅಂಬಿಕಾ. ೫-೨೫). [<ಸೂಟ್ಸುಡು]

ಸೂಳುಪಾಳೆಯ (ನಾ). ಸರದಿಯ ಪ್ರಕಾರ ಹೂಡುವ ಬಿಡಾರ: ತರುಣ ದಿಟ ಕೇಳಿಂದುಮೊದಲಾಗರಸಿ ನೀ ನಾಲ್ವರಿಗೆ ನಾವೆಡೆಮುಱಿದವರು ಬಿಟ್ಟವರು ನಿನ್ನಯ ಸೂಳುಪಾಳೆಯವ (ಬಿಜ್ಜಾವಿ. ೬-೫೬). [ಸೂಳು$_1$ (< ಸೂಟ್) + ಪಾಳೆಯ]

ಸೂಳುಬಂಟ (ನಾ). ಸರದಿಯ ಪ್ರಕಾರ ಕೆಲಸ ಮಾಡುವ ಸೇವಕ; ಸರದಿಯಾಳು: ನೆರೆದುದಲ್ಲಿಯದಲ್ಲಿ ಸೂಱೆಗೆ ಹರಿದುದಲ್ಲಿಯದಲ್ಲಿ ಮನ ಮತ್ಸರದ ಜಗಳಕೆ ಸೂಳುಬಂಟರು ಹೊಯ್ದುರೊಳಗೊಳಗೆ (ಕುವ್ಯಾಕ. ೧-೬).

[ಸೂಳು$_1$ (< ಸೂಟ್) + ಬಂಟು$_1$]

ಸೂಳುಭಂಟಿಕೆ (ನಾ). ವೇಶ್ಯಾಸಾಹಚರ್ಯಕ್ಕಾಗಿ ಮಾಡುವ ಸ್ಪರ್ಧೆ,— ಹೋರಾಟ: ಉಬ್ಬುನಗೆಯಲಿ ಮಾಯೆ ಹುಬ್ಬನೊಳ್ಬರಿಗು ಸನ್ನೆಯನು ಮಾಡುತ ಹಬ್ಬಿಸಿದಳವರವರಿಗುನ್ನತ ಸೂಳುಭಂಟಿಕೆಯ (ಅಂಬಿಕಾ. ೩೪-೯೧).

[P ಇದು 'ಸೂಳಿಬಂಟಿಕೆ' ಎಂಬುದರ ಅಪಲಿಖಿತವಿರಬಹುದು]

ಸೂಳುಮಿಹ (ನಾ). ಸರದಿಯ ಪ್ರಕಾರ ಮಾಡಿಸುವ ಸ್ನಾನ: ನಿನ್ನ ಕತ್ತಿಯನ್ನೂ ಆ ಬಲಿಮರವನ್ನೂ ತಮ್ಮ ನೊರೆನೆತ್ತರ ಸೂಳುಮಿಹದಿಂದ ತೊಳೆತೊಳೆದು ಸಿದ್ಧಮಾಡಿರಲಿ! (ಮಂತ್ರಶ. ೧೧೨-೧೯). [ಸೂಳು$_1$ (< ಸೂಟ್) + ಮಿಹ]

ಸೂಳುರಿ (ನಾ). ಅಧಿಕವಾದ ತಾಪ; ಅತಿಶಯವಾದ ಸಂತಾಪ: ಸೂಳುರಿಯ ನಿಡುಸುಯ್ಲು ಕಡ್ಡೊಗೆ ಜಾಳಿಗೆಯಲೇಕಾವಳಿಯ ಮುಕ್ತಾಳಿ ಕಂದಿತು ಖತಿಯ ಮೊನೆಯಲಿ ಮಸಗಿದನು ಭೀಮ (ಕುವ್ಯಾಸ. ೧೦-೨೬). [ಸೂಳು$_2$ (< ಸೂಳ್$_2$) + ಉರಿ]

ಸೂಳುವಚನ (ನಾ). ಸರದಿಯ ಪ್ರಕಾರ ಆಡುವ ಮಾತು; ಸಂಭಾಷಣೆ: ಅಂತಾಡಿದ ಗಿಳಿಯ ಸೂಳುವಚನಮಂ ಮದನವಿಜಯರಾಯಂ ಸಕಲಪ್ರಾಣಿಗಳ ನುಡಿಯಂ ಕಲಿತು ಬಲ್ಲುದಱಿಂದಿಂತೆಂದಂ (ನಚ್ಚಚಾ. ೪-೨೩೫ ವ). 'ಸೂಳ್ನುಡಿ$_2$' ಪರಾ.

[ಸೂಳು$_1$ (< ಸೂಟ್) + ವಚನ]

ಸೂಳುವರು 'ಸೂಟ್ವರು' ನೋ.

ಸೂಳುವಾತು 'ಸೂಟ್ಮಾತು' ನೋ.

ಸೂಳುವೀಳೆಯ (ನಾ). ಸರದಿಯ ಪ್ರಕಾರ ಕೊಡುವ ತಾಂಬೂಲ,— ವೀಳೆಯ: ಘನಶೀತಳೋಪಚಾರಗಳ ಅನುಭವಿಸುತ ಸೂಳುವೀಳೆಯಗೊಳುತ ಮೋಹನಶೀಲರಿದ್ದರೇನೆಂಬೆ (ಭರಚ. ೧೧-೧೧೩). [ಸೂಳು$_1$ (< ಸೂಟ್) + ವೀಳೆಯ]

ಸೂಳುವೊಯಿಲು (ನಾ). (ವಾದ್ಯಗಳ) ಕ್ರಮವಾದ ಹೊಡೆತ,— ಬಡಿತ: ಲಗ್ಗೆ ಮಸಗಿತು ಸೂಳುವೊಯಿಲಿನ ಬೊಗ್ಗಿನಲಿ ಮುಂಕೊಂಡು ವೋಹರವೊಗ್ಗೊಡೆದು ಹೆಣಗಿದುದು ಕೇಶಾಕೇಶಿಯುದ್ಧದಲಿ (ಕುವ್ಯಾಭೀ. ೪-೯).

[ಸೂಳು$_1$ (< ಸೂಟ್)+ ಪೊಯಿಲು(< ಪೊಯಿಲ್)]

ಸೂಳುವೊಯ್ಲು (ನಾ). = ಸೂಳುವೊಯಿಲು: ಒದಱೆ ಮೇಲಿಕ್ಕಿದರು ನಿಸ್ಸಾಳದ ನಿರಂತರ ಸೂಳುವೊಯ್ಲಿನ ಹೊದಱುಗಳ ಹೊಸಮಸೆಯಡಾಯ್ದದ ಸಾಲ ಸಂದಣಿಯ ಸದರವೀ ಹೊತ್ತೆನುತ (ಕುವ್ಯಾಭೋ. ೧೨-೩೦).

[ಸೂಳು$_1$ (< ಸೂಟ್) + ಪೊಯ್ಲು(< ಪೊಯಿಲ್)]

ಸೂಳುಸುಯ್ಲು (ನಾ). ದೀರ್ಘವಾದ ಉಸಿರು; ಮೇಲಿಂದ ಮೇಲೆ ಬರುವ ನಿಟ್ಟುಸಿರು: ಮೇಲುದುಗುಡದ ಮುಖದ ಚಿಂತೆಯ ಜಾಳಿಗೆಯ ಜಡಮನದಲಿದ್ದರು ಸೂಳುಸುಯ್ಲಿನ ಹೊಯ್ಲು ನಾಸಾಪುಟದ ಬೆರಳಿನಲಿ (ಕುವ್ಯಾಕ. ೧೭-೧).

[ಸೂಳು$_2$ (< ಸೂಳ್$_2$) + ಸುಯ್ಲು (< ಸುಯ್ಯಲ್)]

ಸೂಳ್$_1$ (ನಾ). ವ್ಯಭಿಚಾರವನ್ನು ಮಾಡುವವಳು; ಹಾದರಗಿತ್ತಿ: "ವಾರಸ್ತ್ರೀ, ಗಣಿಕಾ, ವೇಶ್ಯಾ, ರೂಪಾಜೀವಾ — ಈ ೪ ಸೂಳೆ" (ನಾಚರಾ. ೧೧೬); ಟೋ(ಲೋ)ಕ ಮಹಾದೇವಿಯರ ದೇಗುಲದ ಸೂಳೆ ಗೋಯಿನ್ನಪೊಡ್ಡಿಯ ವಂಗಳು (ಇಂ. XI, ೧೨೫-೪; 778); ಸೋಂಬನಂ ಮೆಚ್ಚಿ ಬೇಡೂರ್ಗೆ ಪೋದ ಸೂಳೆಯಂತೆ (ಕಾವ್ಯಸಾ. ೪೧೯ ಶೂದ್ರಕ); ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ ಅಯ್ಯಾ ಎನಲಾಜೆ (ಬಸವ. ೬೪೬); ದೇವತೆಯಾಗಿ ಸೂಳೆಯಾಗಿರುವುದಕ್ಕಿಂತ ಮಾನವಿಯಾಗಿ ಸತಿಯಾಗಿರುವುದೇ ನನಗೆ ಹಿತ (ಮಹಾಭಾ. ೨೯೦); ಸೂಳೆ ಮುಪ್ಪಾಗಿ ಜೋಗಿತಿಯಾದಳು (ಗಾದ). [<— ತಮಿ. ಚೂಳೈ; ಮಲ. ಚೂಳ; ತುಳು. ಸೂಳೆ; ಕೊಡ. ಚುಳೆ; ಕೋತ. ಚುಳ್]

ಸೂಳ್$_2$ (ನಾ). ಒಂದು ಬಗೆಯ ಸಸ್ಯ: (ಮೃಚ್ಛಿ. ೬-೪೬). [?]

ಸೂಳೆಕೇರಿ 'ಸೂಳೆಗೇರಿ' ನೋ.

ಸೂಳೆಗ (ನಾ). ಜಾರ; ವ್ಯಭಿಚಾರಿ: ಸೂಳೆ ಪಲರ್ವರೊಳ್ಪರಿಯರ್ದುಂ ದಾಳಪರೊಲ್ಲ ವೊಲೆಲ್ಲರುಮಂ ಭೂಪಾಲನುಮಂತೆ ನಿಜಾಂಗನೆಯರ್ಗುಂ ಸೂಳೆಗನಾಗೆ ಸುಖಂ ದೊರೆ ಕೊಳ್ಗುಂ (ಮಜಪ. ೮-೬೦); ಭಂಡಾರದರ್ಥಮಂ ಸೂಳೆಗಂಗಿತ್ತು ಮುಂಕೊಂಡದ ರ್ಕೊಂದು ಬಗೆಯಂ ಬೇಡೆ ನೆಗಳದುದ್ದಂಡವೃತ್ತಿಯೊಳಿಳಾಪತಿಯನಿನಿಸುಂ ಲೆಕ್ಕಿಕ್ಕದ (ಪದ್ಮರಾ. ೬-೩). [ಸೂಳೆ$_1$ + -ಗ$_2$]

ಸೂಳೆಗಾರ 'ಸೂಳೆಗಾಱಿ' ನೋ.

ಸೂಳೆಗಾರಿಕೆ (ನಾ). ವೇಶ್ಯಾವೃತ್ತಿ; ವ್ಯಭಿಚಾರ: ಕಾತ್ಯೂಷ ತನ್ನ ಬಂಧನಕ್ಕಾಗಿ ಲಜ್ಜೆಗೊಂಡಿದ್ದಳೇ ಹೊರತು ಸೂಳೆಗಾರಿಕೆಗಲ್ಲ (ಪುನರು. ೧೫೬); ನಮ್ಮ ಸಮಾಜದಲ್ಲಿ ಗಂಡಸು ಕೆಟ್ಟರೂ ಚಿಂತೆಯಿಲ್ಲ . . . ಸೂಳೆಗಾರಿಕೆ ನಡೆಸಿ ಒಳ್ಳೆಯವನಾಗಿ ಸನ್ಯಾಸ ತೆಗೆದು ದೇವರಾಗುತ್ತಾನೆ (ಆಲಹೂ. ೧೦೧). [ಸೂಳೆಗಾರ(< ಸೂಳೆಗಾಱಿ) + -ಇಕೆ]

ಸೂಳೆಗಾಱಿ, ಸೂಳೆಗಾರ (ನಾ). = ಸೂಳೆಗ: ಸೂಳೆಗಾಱಿಯಿಗೆ ತುಳಸಿಮಾಲೆಯ ಶೃಂಗಾರವೇಕೊ (ಪುರಂದ. ಧಾ. ೨-೧೦೦-೪); ನಂಬೆ ನಾಂ ಬಲಗಯ್ಯ ಕೊಡು ಸೂಳೆಗಾಱಿಗೆತ್ರಣ ಸತ್ಯ (ಚೀರಮು. ೮-೧); ಸೂಳೆಗಾಱಿಂಗೆ ಸೊಗಸಕ್ಕೆ (ಚಕವಿ. ೬-೧೭೨). **ಸೂಳೆಗಾರ:** 'ಸೂಳೆಗಾರಿಕೆ' ಪರಾ. [ಸೂಳೆ$_1$ + -ಕಾಱಿ]

ಸೂಳೆಗೆಯ್ (ಕ್ರಿ). ಜಾರತನವನ್ನು ಮಾಡು; ವ್ಯಭಿಚಾರ ಮಾಡು: ಜಾತಿಭೇದವಱಿದು ದಣ್ಣವಂ ವಿಶೇಷಂ ಮಾಬ್ಬರ್ ಮಾಣ ಸೂಳೆಗೇದಡೆ ಮೂಱು ಗದ್ಯಾಣಂ ಪ್ರಾಯಶ್ಚಿತ್ತಂಗೊಳ್ವನ್ನಂ (ಎಇ. XX, ೬-೩೮; 1012); ಪಣವುಂಡೆಂ ಬಂದಿಯೊಳ್ಪಾಲಕನೆ ವಲಗಜೂಜಾಡಿದೆಂ ಸೂಳೆಗೆಯ್ದೆಂ (ಅರ್ಜುನ. ೫-೩೬); ಸೂಳೆಗೆಯ್ವಾ ವೇಶದ ಸೊಂದಿಗೆ ನಾನು ಕೇವಲ ತನ್ನಿ (ಮಂತ್ರಶ. ೩೩-೨೫). [ಸೂಳೆ$_1$ + ಕೆಯ್$_1$]

ಸೂಳೆಗೆಯ್ತ (ನಾ). ಸೂಳೆಗಾರಿಕೆ ನಡೆಸುವುದು; ಹಾದರ; ವ್ಯಭಿಚಾರ: ಮುಗ್ಗಸಂಗಯ್ಯಂ . . . ಅನುಂ ಸೂಳೆಗೆಯ್ತಕ್ಕೆ ಪೋದಪನೆನ್ನಂ ಕಳುಪಲ್ವೇಳ್ಕುಮೆನೆ ಕೇಳ್ದು ಬಸವಂ ತನ್ಮುಗ್ಧತೆಗೆ ಮುಗುಳ್ನಗೆ ನಕ್ಕು (ವೃಷವಿ. ೯-೩ ವ); ಸೂಳೆಗೆಯ್ತಕ್ಕೆ ಪೋಪನೆನ್ನಂ ಕಳುಪು ನೀಂ (ಕುಮಾಪು. ೪-೨೬೩). [ಸೂಳೆ$_1$ + ಕೆಯ್ತ$_1$]

ಸೂಳೆಗೇರಿ, ಸೂಳೆಕೇರಿ (ನಾ). ಗಣಿಕೆಯರು ವಾಸಿಸುವ ಸ್ಥಳ; ವೇಶ್ಯಾವಾಟಿಕೆ: "ವೇಶ: ,—ಸೂಳೆಗೇರಿಯ ಹೆಸರು" (ನಾಚರಾ. ೧೦೩); ಏರಿದೊಂದು ಪೊಬಲುಂ ಧವಳಾರಂಗಳುಂ ನೆಲೆಯ ಮಾಡಂಗಳುಂ ಸೂಳೆಗೇರಿಗಳುಂ . . .ಮಾನಸರ ಬರುವುಮಂ ಪೋಗುಮಂ ಕಂಡು (ವಡ್ಡಾರಾ. ೮೯-೨೧); ಮೇಳದ ನಾಗರೀ ವಿಟ ವಿದೂಷಕ ಪೀಠ ಮರ್ದಕರ್ಕಳ್ಕೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ (ಪಂಪಭಾ. ೪-೭೯ ವ); ಸುಮನೋಪಾಲನಗರದ ಸೊಗಸಿನಗ್ಗಳ ಸೂಳೆಗೇರಿಯ ನಡುವೆ ಬಿದ್ದಳು ಬೆದಱೆಪೌರಜನ (ತೂರರಾ. ೫-೧-೪). **ಸೂಳೆಕೇರಿ:** ಪುರುಷನಿಧಿಯೆನಿಪನನ್ತಂ ಧರೆ ನಿಲ್ಪಿನಮಾ ಸ್ವಯಂಭು ಸೋಮೇಶ್ವರ ದೇವರ ಮುನ್ದೆ ಭಕ್ತಿಯಿಂದಚ್ಚರಿಯಾಗಿರೆ ಸೂಳೆಕೇರಿಯಂ ಮಾಡಿಸಿದ (ಶಿಸಾ. XX, ೭೪-೨೭; 1112). [ಸೂಳೆ$_1$ + ಕೇರಿ]

ಸೂಳೆಗೊಟ್ಟಿ (ನಾ). ವೇಶ್ಯೆಯರ ಗುಂಪು,—ಗೋಷ್ಠಿ: ಮತ್ತಮೊರ್ವಳ್ ಸೂಳೆಗೊಟ್ಟಿಯೊಳ್ ಜೊಜಂಗವಾತಾಗಿ ತನ್ನ ಕೆಳದಿಗಿಂತೆಂದಳ್ (ಲೀಶಾವ. ೨-೬೯ ವ).

[ಸೂಳೆ$_1$ + ಗೊಟ್ಟಿ$_1$]

ಸೂಳೆತನ (ನಾ). ವೇಶ್ಯೆಯಾಗಿರುವಿಕೆ; ವ್ಯಭಿಚಾರ: ನುಡಿದುದು ಫಲಿಸಲಱಿಯದು ದೈವಗತಿಯಲಿ ಫಲಿಸಿತಾದಡೆ ರಾಜ್ಯಲಕ್ಷ್ಮಿಗೆ ಸೂಳೆತನವಹುದೆ (ಕುವ್ಯಾಕ. ೫-೧೦); ಎಳವರೆಯದೊಳಗೆ ಧನಮಂ ಗಳಿಸದ ಸೂಳೆತನದಂಗದಿಂದೇಂ ಫಲಂ (ಚಿಬಪ್ಪ. ೧೦-೬೯).

[ಸೂಳೆ$_1$ + -ತನ]

ಸೂಳೆದೆಱೆ (ನಾ). ವೇಶ್ಯಾವೃತ್ತಿಯ ಮೇಲೆ ಹಾಕುತ್ತಿದ್ದ ತೆರಿಗೆ,— ಸುಂಕ: ಮತ್ತಂ ದೇವರ್ಗ್ಗೂರ್ಮ್ಮಧ್ಯದೊಳ್ ನಡೆವೆತ್ತುಗಾಣವೊನ್ದು ಕೈಗಾಣವೊನ್ದು ಸೂಳೆದೆಱೆ ನಾಲ್ಕುಂ ಮಾನ್ಯ (ಎಇ. IX. ದಾವಣ. ೧೩೩-೨೫; 1071). [ಸೂಳೆ$_1$ + ತೆಱೆ$_1$]

ಸೂಳೆಬಂಟ 'ಸೂಳೆವಂಟ' ನೋ.

ಸೂಳೆಬಂಟಿಕೆ (ನಾ). ವೇಶ್ಯೆಯರ ಸಾಹಚರ್ಯಕ್ಕಾಗಿ ಮಾಡುವ ಸ್ಪರ್ಧೆ,— ಹೋರಾಟ: ಮೇಲಮೇಲ್ಕೆತಪ್ಪ ವೀರಭಟಾಳಿಯೊಡನಲ್ಲಿಂದ ಸುಭಟರು ಸೂಳೆಬಂಟಿಕೆಯಿಂದ ಹೊಯ್ದಾಡಿದರು ನಾಕದಲಿ (ಕುಸ್ಕಾಭೀ. ೫-೨೦); ಸಗ್ಗದ ಸೂಳೆಬಂಟಿಕೆ ಮಿಗಿಲಾದುದಂದು (ಕುರಾಸಾಂ. ೧೬-೧೦೯); ಜೂಜಾಟಿಕೆ ಸೂಳೆಬಂಟಿಕೆ ರುಣದ ಸಂವಾಜ . . . ಮಾಜದು ನಿತ್ಯಕೃತ್ಯದಲಿ (ವೀಸಹತ. ೨೦-೨೬); ತೊಟ್ಟು ಪೂಗಣ್ಣೆಗಳಂ ಮನಸಿಜಂ ಹೊಂಚಿ ನಿಲೆ ಮುಟ್ಟಿ ತಮ್ಮೊಳ್ ಎಟರ್ ಸೂಳೆಬಂಟಿಕೆಗೆ ನಿಲೆ (ಚಿಬಿಪು. ೧೨-೧೪). [ಸೂಳೆಬಂಟ (< ಸೂಳೆವಂಟ) + -ಇಕೆ]

ಸೂಳೆಬಾಟಿಕೆ (ನಾ). = ಸೂಳೆಬಂಟಿಕೆ: ಸೂಳೆಬಾಟಿಕೆಯ ಜಗಳಕಾಗ ರತಿಶಾಸ್ತ್ರ ದಾಳಾಪದ ನ್ಯಾಯಗಳ ಹೇಳಿ ಬಿಡಿಸಿ ಕಲಹವ ನಿಲಿಸುವರ ಸಮ್ಮೇಳದೆ ಬೀದಿಯೊಪ್ಪಿದುದು (ಕಾನವಿ. ೬-೧೯೬). [< ಸೂಳೆಬಂಟಿಕೆ]

ಸೂಳೆಬೊಟ್ಟುಗಿಡ (ನಾ). ಒಂದು ಬಗೆಯ ಗಿಡ: ಪಾಪಟೆ, ಪಾವಟೆ, ತರಣಿ, ಸೂಳೆಬೊಟ್ಟುಗಿಡ (ಮೃಡಿಗಿ.೬೦-೧೨೦೩). [? + ಗಿಡ (< ಗಿಡು)]

ಸೂಳೆಮನೆ 'ಸೂಳೆವನೆ' ನೋ.

ಸೂಳೆಮಾತು (ನಾ). (ಆಲಂ) ಬೆಡಗಿನ ನುಡಿ; ಒಯ್ಯಾರದ ಮಾತು: ಪಂಜರ ದೊಳ್ ಗಿಳಿಯನಿರಿಸಿ ನಾನಾ ಪ್ರಕಾರದ ಸೂಳೆಮಾತುಗಳಂ ಶೃಂಗಾರ ವೃತ್ತಂಗಳುಮಂ ಕಲಿಸುತ್ತುಂ ಪೊನ್ನ ವರಮಸ್ನೇಹದಿಂ (ಧರ್ಮಾಮೃ. ೧೨-೧೩೯).

[ಸೂಳೆ$_1$ + ಮಾತು$_1$]

ಸೂಳೆಯ (ನಾ). ಹಾದರವನ್ನು ಮಾಡುವವನು; ವ್ಯಭಿಚಾರಿ: ತಮ್ಮಸ್ಯಯ ತಮ್ಮ ರುದ್ರದತ್ತನೆಂಬೊಂ ಕರಂ ವ್ಯಾಳನುಂ ಸೂಳೆಯನುಮಾಗಿಪ್ಪೊನಾತನಂ ಕರದಿಂತೆಂದಳ್ (ಬಾಪು. ೬-೨೫ ವ). [ಸೂಳೆ$_1$ + -ಅ$_7$]

ಸೂಳೆಯಾಡು (ಕ್ರಿ). ಜಾರತನ ನಡೆಸು; ವ್ಯಭಿಚಾರ ಮಾಡು (?): ಇಲಿ ಮೇಗೆ ಬಿದ್ದುದು ಕವ್ಪೆಯೆಂದು ನಾಯ್ಗೆಅಗಿ ಪೋ ಜೋಗಮ್ಮ ಬಾಳುಬಾಳೆನುತದೊರ್ವಳ್ ಕುಡಿಚಿ ಸೂಳೆಯಾಡುತ್ತಿದ್ದಳು (ಚಿಬಿಪು. ೧೨-೭೪). [ಸೂಳೆ$_1$ + ಆಡು$_1$]

ಸೂಳೆವಂಟ, ಸೂಳೆಬಂಟ (ನಾ). ವೇಶ್ಯೆಯರ ನಿರ್ವಾಹಕ,— ಮೇಲ್ವಿಚಾರಕ: ಬಿರುದರ ಬಿಂಕಮಂ ಪೊಗಟ್ಟ ಕೂಂಟಣತೋಳ್ಗೆಳಸಿರ್ಪ ಸೂಳೆವಂಟರ ಸೊಬಗಿಂಗೆ ಮೈಮಱೆದು ಮೆಚ್ಚುವ ಬಿಂಕದ ಬರ್ದಗೆಯ್ತದೊಳ್ (ಲೀಶಾವ. ೨-೭೨). **ಸೂಳೆಬಂಟ:** ಪಂದಿ ಕೆಯ್ಯಂ ತಿಂದೊಡೆ ಕತ್ತೆಯ ಕಿವಿಯಂ ಕೊಯ್ದರೆಂಬಂತೆ ಸೂಳೆಬಂಟಂಗಾಱದೆ ಶಂಖಿದ ಗೊರವನಂ ಬಡಿದರೆಂಬಂತೆ (ಧರ್ಮಾಮೃ. ೭-೭೩). [ಸೂಳೆ$_1$ + ಬಂಟ$_1$]

ಸೂಳೆವನೆ, ಸೂಳೆಮನೆ (ನಾ). ವ್ಯಭಿಚಾರ ನಡೆಸುವವಳ ಮನೆ ; ವೇಶ್ಯಾಗೃಹ: ಲತಾಗೃಹಮಿಲ್ಲದ ಗೊಟ್ಟಿಗಾಣರಿಲ್ಲದ ಕಡಪಟ್ಟ ಸೂಳೆವನೆಯಲ್ಲದವಿಲ್ಲವು ಸೂಳೆಗೇರಿಯೊಳ್ (ಮಲ್ಲಿಪು. ೨-೪೭). **ಸೂಳೆಮನೆ:** ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬಲ್ಲರ ಬಗೆಗಲ್ತು ವಸ್ತುಕೃತಿಯಂ ಸಲೆ ಪೇಟ್ಟುದು (ಸೂಕ್ತಿಸು. ೧-೬೧); ಸುರರಿಂ ವಂದ್ಯನ ಸುತ್ತದ ಕಾಲು ಸೂಳೆಮನೆ ಮಂಚದ ಕಾಲು (ಪುರಂದ. ೨-೧೭೫-೧). [ಸೂಳೆ$_1$ + ಮನೆ]

ಸೂಳೆವಳ, ಸೂಳೆವಳ್ಳ, ಸೂಳೆವಾಳ (ನಾ). (ದೇವಸ್ಥಾನದ) ಸೂಳೆಯರ ಮೇಲ್ವಿಚಾರಕ; ಗಣಿಕೆಯರ ಗೃಹಕಾರ್ಯನಿರ್ವಾಹಕ: ತಪೋಧನಸತ್ಕ್ರಂ ಪ(೦)ನ್ನಿರ್ವ್ಯರ್ಘ್ಯಳಿಯರ್ಗ್ಗಂ ಸ್ಥೂಳೆವಳಗಂ ವಂಚಿಗಂಗಂ ಪಜೆಕಾಱರ್ಗ್ಗಂ ಪಾತ್ರಕ್ಕಂ . . . ಸರ್ವ್ವನಮಸ್ಯಮಾಗೆ ಕುಡೆ (ಶಾಸಾ. IX-i, ೮೦-೧೫; 1018); ಕಳೆ ಕರ್ಪೂರದ ಕಸವಂ ತಳೆ ಕತ್ತುರಿನೀರನಿಕ್ಕು ಮುತ್ತಿನ ಕಡೆಯಂ ಬೆಳಗು ಮಣಿದೀಪಮಂ ಪೊಗೆಗೊಳಿಸಗುವನೆಂಬರಲ್ಲಿ ಸೂಳೆವಳರ್ಕಳ್ (ಜಗವಿ. ೯-೧೦೦); ಪಡೆಯ ಮೇಲ್ವಿಚಾರಕ 'ಪಡೆವಳ' ಇದ್ದಂತೆ, ದೇವಸ್ಥಾನದ ಸೂಳೆಯರ ಮೇಲ್ವಿಚಾರಕ ಸೂಳೆವಳ ಇರಬಹುದು (ಕಶಾಖ. ೧೪೬). **ಸೂಳೆವಳ್ಳ:** ಆತಂಗಂ ನಡಮಚ್ಚೆ ಪನ್ನಿರ್ಮ್ಮತ್ತರ್ನ್ನೆರ್ಲ್ಲ ಮಚ್ಚೆ ಖ XXX ವಕ ಸೂಳೆವಳ್ಳ XX ಟು ಇದನಲ್ಪಿದ ಪಞ್ಚಮಹಾಪಾ XXX ಬೆಸಗೆಯ್ದವನ್ (ಎಕ. XI, ದಾವಣ. ೧೧೯-೮; 930); ಸಂಘ = ಸೂಳೆವಳ್ಳರು ಮೊದಲಾಗೂಡೆಯವರ್ಗಳಾ ನೆರವಿಗಳುಂ (ನೀತಿವಾ. ೨೨-೧೪). **ಸೂಳೆವಾಳ:** ಸೂಳೆವಾಳಂಗಂ ಮತ್ತರ್ಪ್ಪರ್ನ್ನೆರಡು (ಶಾಸಾ. IX-i, ೧೭೧-೫೨; 1045); ಸೂಳೆವಾಳ ಮಾರಮಯ್ಯ ಶ್ರೀಮನ್ಮಹಾಮಣ್ಡಳೇಶ್ವರಂ ಬಿಜ್ಜಲದೇವಗ್ಗೆ[ರ್] ಬಿನ್ನಪಂಗೆಯ್ದು (ಶಾಸಾ. VI, ೫೭೫-೧೬; 1064); ಕುಳ್ಳಿರ್ದರಂದೋಳಿಗಳಿಂ ದಂಡಾಧಿಪರ್ . . . ನಗೆಕಾಱರ್ ವಾದ್ಯಕರ್ ಚಿತ್ರಕರಣುಗಿನವರ್ ಸೂಳೆವಾಳರ್ ಪಯಾಳರ್ (ಆನಂಪು. ೨-೨೬).

[ಸೂಳೆ$_1$ + -ವಳ]

ಸೂಳೆವಳ್ಳ 'ಸೂಳೆವಳ' ನೋ.

ಸೂಳೆವಾದ (ನಾ). ವೇಶ್ಯೆಯರನ್ನು ಕುರಿತ ವಿವರಣೆ,—ವ್ಯಾಖ್ಯಾನ: ಚಟುಲತರಘಟಚೇಟೀವಿಚೇಷ್ಟಿತಂಗಳಂ ಪೆಱತಪ್ಪ ಸೂಳೆವಾದದ ನಾಟ್ಯಾಡುಗಳೊಳ್ ಕೇಳ್ದು (ಚಕವಿ. ೬-೧೫೭ ವ, ಪುಟ ೧೭೭). [ಸೂಳೆ$_1$ + ವಾದ]

ಸೂಳೆವಾಳ 'ಸೂಳೆವಳ' ನೋ.

ಸೂಳೆವಿಜ್ಜೆ (ನಾ). ಹಾದರದ ವಿದ್ಯೆ; ವ್ಯಭಿಚಾರ: ನಗ ಬಗೆಯೊಲ್ಮೆ ನಲ್ಮೆ ಪೊಸಜಾಣ್ಮುಡಿ ನಾಣ್ಮುಡಿ . . . ಎಂಬಗಣಿತ ಚೇಷ್ಟಗಳ್ ಮೆಱೆದಿರಲ್ ತಱಿಸಲ್ಕುದು ಸೂಳೆವಿಜ್ಜೆಯೊಳ್ (ದಶಕು. ೯-೩೨). [ಸೂಳೆ$_1$ + ವಿಜ್ಜೆ]

ಸೂಳೆವಿನ್ನಣ 'ಸೂಳೆವಿನ್ನಾಣ' ನೋ.

ಸೂಳೆವಿನ್ನಾಣ, ಸೂಳೆವಿನ್ನಣ (ನಾ). ವೇಶ್ಯೆಯ ಒನಪು,— ಒಯ್ಯಾರ: ಬೆಲಗು ಚುಂಬನವಪ್ಪು ಸೀತ್ಕೃತವೆಱಗ ಜಾಣ್ಮುಡಿ ನೋಟ ಬೇಟವು ನೆಲೆ ಸೊಬಗಿಯೇ ಸೂಳೆವಿನ್ನಾ[ಪಾಕಾಂ. ನ್ನ]ಣದೋಱೆ ಸಿಲುಕಿದನು (ಸಾಳ್ಕಥಾ. ೧೭-೩೬). **ಸೂಳೆವಿನ್ನಣ:** ಸುಂದರಿಯರು ಕುಳ್ಳಿರ್ದು ಧಂದಧಂದದ ಸೂಳೆವಿನ್ನಣಗಳನಿಂತೆಂದು ಬಿತ್ತರಿಸಿದರಲ್ಲಿ (ಚಂಪ್ರಶಾಂ. ೧೪-೧೨೯). [ಸೂಳೆ$_1$ + ವಿನ್ನಾಣ]

ಸೂಳೆವೆಂಡತಿ (ನಾ). ಹಾದರಗಿತ್ತಿ; ಸೂಳೆ: ಸೂಳೆವಂಡತಿಯಂತೊಲ್ದೊಲಿಸದ ಗೃಹದಂತೆ ದೇಡಿಕೊಂಡುಣ್ಮದೆ (ಧರ್ಮಾಮೃ. ೫-೧೯). [ಸೂಳೆ$_1$ + ಪೆಂಡತಿ (< ಪೆಂಡತಿ)]

ಸೂಳೆವೆಣ್ (ನಾ). = ಸೂಳೆವೆಂಡತಿ: ಈ ಮನೆಯ ಸೂಳೆವೆಣ್ಗಳ್ ಸಾಂಗತ್ಯಮಂ ಪಾಡುವರ್ (ಚಕವಿ. ೬-೧೫೪ ವ).

ಸೂಳೆವೆಂಡಿರ್ (ಬಹುವ): ಸೂಳೆವೆಂಡಿರ ಸಂಗದೊಳಗಿರ್ಪ ಧರಣಿಪತಿಯಂ ಹಿಂಗದಿರ್ಪಳೇ ಜಯಲಕ್ಷ್ಮಿ (ಚಿಬಿಪು. ೮-೧೪). [ಸೂಳೆ$_1$ + ಪೆಣ್]

ಸೂಳೆವೇಂಟ (ನಾ). ಹಾದರದ ಕಾಮಾತುರತೆ: ವೇಶ್ಯಾಗೃಹದಲ್ಲಿ ನಿಶ್ಶಂಕೆಯಿಂದ ನಿದ್ರಿಸುತ್ತಿರುವಾತನು ಸೂಳೆವೇಂಟದ ಅಂತಹ ಗ್ರಾಮ್ಯಕಾಮರಚೇಷ್ಟೆಯನ್ನೇ ಆದರೂ ಆಕ್ಷೇಪಿಸುವ ಅಧಿಕಾರವುಳ್ಳವನಲ್ಲ (ಮಂತ್ರಶ. ೯೪-೧೭). [ಸೂಳೆ$_1$ + ವೇಂಟ]

ಸೂಳೆಸೊಪ್ಪು (ನಾ). ಒಂದು ಬಗೆಯ ಸಸ್ಯ: ಅಂಟುಹಣ್ಣುಗಿಡ, ಸೂಳೆಸೊಪ್ಪು (ಮೃಡಿಗಿ. ೬೨-೧೨೫೫). [ಸೂಳೆ$_2$ + ಸೊಪ್ಪು]

ಸೂಳೇಳು (ಕ್ರಿ). ಮೇಲೆ ಏಳು (?): ದಿಗಿದ ಕೆಚ್ಚಲ ತೊರೆದುಗುವ ಹಾಲುಗಳ ಮಿಗೆ ಸೂಳೆದ್ದ ಬಾಲದ ಮೊಗ ನೆಗಹಿ ದೆಸೆದೆಸೆಯ ನೋಡುತ . . . ಗೋವರು ತೆಗೆದ ಪಥದಲಿ ತೆಕ್ಕೆವರಿದವು ಹಿಂಡುಹಿಂಡಿನಲಿ (ಕುವ್ಯಾವಿ. ೭-೫೦). [ಸೂಳ್$_2$ + ಏಳು$_1$ (< ಏಱ್$_1$)]

ಸೂಳೇಱು$_1$ (ಕ್ರಿ). ಅಧಿಕವಾಗು; ಹೆಚ್ಚಾಗು: ಕೇಶಪಾಶಂ ಸಿತಜಲಧರದೊಳ್ಪೆರ್ಚಿ ಸೂಳೇಱೆ ಸುಯ್ಯಲ್ ಬೆಲ್ಲಾಟಂಬೆತ್ತು ಕಾಂತಾಮಣಿಯುಗುರಿಸಿದಳ್ ತೈಲಮಂ ಬಾಲೆಗಾಗಳ್ (ಉದ್ಭಟ. ೮-೧೫೫). [ಸೂಳ್$_2$ + ಏಱು$_1$ (< ಏಱ್$_1$)]

ಸೂಳೇಱು$_2$ (ನಾ). ಸರದಿಯ ಮೇರೆಗೆ ಮಾಡುವ ಯುದ್ಧ: ಕವಿದುರ್ಗ್ಗಂ ಚಾತುರಂಗಂ ಬವಸ ದಳವುಳಂ ಧಾಳಿ ಸೂಳೇಱೆನಿಪ್ಪಾಹವದೊಳ್ಕಾಳುಕ್ಕರಾಮಂ (ಎಕ. VII, ಶಿಕಾರಿ. ೧೭೬-೨೬; 1068). [ಸೂಳ್$_1$ (< ಸೂಟು$_1$) + ಏಱು$_5$ (< ಏಱ್$_3$)]

ಸೂಳ್ಕೆಸು 'ಸೂಳಯಿಸು' ನೋ.

ಸೂಳ್ಕಟ್ಟು (ಕ್ರಿ). ಕ್ರಮವಾಗಿ ಹೊಂದಿಸು; ಸಂಯೋಜಿಸು: ಆ ಲೇಶ್ಮಗಳೆಲ್ಲ ಮಿಪ್ಪತ್ತಾಱುಭೇದಮಕ್ಕುಮವಱೊಳು ಮಧ್ಯಮಂಗಳೆಂಟು ಆಯುಷ್ಮಬಂಧಯೋಗ್ಯಗಳೆಂಟು ಸೂಳ್ಕಟ್ಟುವಲ್ಲಿಯೊಳವಪ್ಪು ಉಳಿದ ವದಿನೆಂಟು (ಶಾಸ್ಕಟೀ. ೧೨೧-೬).

[ಸೂಳ್$_1$ (< ಸೂಟು$_1$) + ಕಟ್ಟು$_1$]

ಸೂಳ್ಗರೆ (ಕ್ರಿ). ಅಧಿಕವಾದ ಶಬ್ದವನ್ನುಂಟುಮಾಡು; ಜೋರಾದ ಧ್ವನಿಯನ್ನು ಉಂಟುಮಾಡು: (ಮಹಾರಾಜವಾದ್ಯಗಳೂ ಫಿರಂಗಿಗಳೂ ಸೂಳ್ಗರೆವುವು) (ಚಿಬಿಪು. ೪೨-೧೩). [ಸೂಳ್$_2$ + ಕರೆ$_1$]

ಸೂಳ್ಸೈ (ಕ್ರಿ). = ಸೂಳ್ಸರೆ: ಸೂಳ್ಸೈದುವಾಗ ತಂಬಟಭೇರಿನಿಸ್ಸಾಳಕಹಳಾದಿ ವಾದ್ಯಂಗಳು (ಜೈಮಿಭಾ. ೧೨-೫). [ಸೂಳ್$_2$ + ಕೈ$_1$ (< ಕೆಯ್$_1$)]

ಸೂಳ್ನುಡಿ$_1$, ಸೂಳುನುಡಿ (ಕ್ರಿ). ಸರದಿಯ ಪ್ರಕಾರ ಮಾತನಾಡು; ಸಂಭಾಷಿಸು: ಬಡವರ ನಡೆ ಬಲ್ಲಿದರ್ಗೊಪ್ಪದೆಂದು ಸೂಳ್ನುಡಿದರವರು ಭಾವನೊಡನೆ (ಭರತ. ೫೮-೬೨). **ಸೂಳುನುಡಿ:** ನೀನೀ ಗಿಳಿಯೊಡನೆ ಸೂಳುನುಡಿವುತಿರೆ ಬಂದೆನಾ ನುಡಿಗಳ ಕೇಳಲೆನಗೆ ಪ್ರೀತಿಯಾಗಿ (ಭರತ. ೭-೫೪). [ಸೂಳ್$_1$ (< ಸೂಱ್) + ನುಡಿ$_1$]

ಸೂಳ್ನುಡಿ$_2$ 'ಸೂಱ್ನುಡಿ' ನೋ.

ಸೂಳ್ನುಡಿಗೊಡು (ಕ್ರಿ). ಪರಸ್ಪರ ಜವಾಬು ಕೊಡು; ಪ್ರತ್ಯುತ್ತರ ಕೊಡು: ದಾನಿಗಳ ಬಲ್ಲಹನು ಮುನಿಯೊಡನೆ ಸೂಳ್ನುಡಿಗೊಟ್ಟನು (ಹಚಕಾ. ೮-೬೬).

[ಸೂಳ್ನುಡಿ$_2$ (< ಸೂಱ್ನುಡಿ) + ಕೊಡು$_1$]

ಸೂಳ್ಪೆಚ್ಚು (ಕ್ರಿ). ಸರದಿಯು ಹೆಚ್ಚಾಗು; ಒಂದರ ಮೇಲೊಂದು ಬರು: ವೀರನೆಚ್ಚಂಬುಗಳ್ ಸೂಳ್ಪೆಚ್ಚ ಸೂತಾಶ್ವಮಂ ಕೊಚ್ಚ ವಿಧಿಕಾಯದೊಳ್ ಪೊಕ್ಕು ತಟ್ಟುಚ್ಚಲು (ಚಿಬಪು. ೬೧-೪೯). [ಸೂಳ್$_1$ (< ಸೂಱ್) + ಪೆಚ್ಚು$_1$ (< ಪೆರ್ಚು$_1$)]

ಸೂಳ್ಮೊಱೆ (ಕ್ರಿ). ಜೋರುಧ್ವನಿಯಲ್ಲಿ ಕೂಗು; ಆರ್ಭಟಿಸು: ಸೂಳ್ಮೊಱೆಯ ನಿಸ್ಸಾಳಕೋಟಿ ಕಲಿಯೌವನಾಶ್ವಕ್ಷಿತಿಪನ್ನೆತಂದನು (ಜೈಮಿಭಾ. ೪-೩೦).

[ಸೂಳ್$_2$ + ಮೊಱೆ$_1$]

ಸೂಳ್ವರಿ 'ಸೂಱ್ವರಿ' ನೋ.

ಸೂಳ್ವಳೆ (ನಾ). ಸರದಿಯ ಪ್ರಕಾರ ಬೀಳುವ ಮಳೆ: ಸುರಿದುದಲರ ಸೂಳ್ವಳೆ ಬಿಡದೆಱಗಿತು ಬಿರಿಮೊಗ್ಗೆಯ ತಂದಲು ನನೆಗಳ ಬೆಳ್ಸರಿ ಬಿಳ್ದುದು (ಜಯಕಾ. ೧೬-೩೫).

[ಸೂಳ್$_1$ (< ಸೂಱ್) + ಮಳೆ (< ಮಱೆ)]

ಸೂಳ್ಸರಿ 'ಸೂಱ್ಸರಿ' ನೋ.

ಸೂಳ್ಳಿಗೆರೆ (ನಾ). ಒಂದು ಊರಿನ ಹೆಸರು: ಸೂಳ್ಳಿಗೆರೆಗಾಳೊಳ್ಪಾಜಮಾನಂ ಪನ್ನಿರ್ಮ್ಮತ್ತಲ್ಕೆಯ್ಯುವುರಿಚ್ಚೆ X ತಿಯದು (ಎಕ. XI, ಚಳ್ಳಕೆ. ೩೪-೪೧; ಸು 815).

[? + ಕೆರೆ$_2$ (< ಕೆಱೆ)]

ಸೂಱುಡು 'ಸೂಱೆಯಾಡು' ನೋ.

ಸೂಱುಳ್ಗ (ನಾ). ಒಂದು ಸ್ಥಳದ ಹೆಸರು: ಗಾವುಣ್ಡುಗಳ ಸೀಮೆದೋಱೆದ ಕ್ರಮ ತೊಳಂಚೆಯದ ವೆರ್ಗ್ಗೆಯ್ವಾಡಿಯ ಸೂಱುಳ್ಗದ ಪೆಂಬಿದಿರಿನ (ಎಕ. XII, ನಂಜನ. ೨೬೯-೯೧; 904). [?]

ಸೂಱೆ, ಸೂರೆ (ನಾ). ೧. ಕೊಳ್ಳೆ; ಲೂಟಿ; ಸುಲಿಗೆ: ಸೂಱೆ ಲೇಸು ಪೂಱೆಯರಿದೆಂಬಂತೆ ಪ್ರತಾಪಂ ಲೇಸು ನಿತ್ರರಿಸಲರಿದೆಂಬಂತೆ (ಧರ್ಮಾಮೃ. ೮-೮೦); ನೆತ್ತರ ಸೂಱೆ ಶಾಕಿನಿಯರಿಗೆ ನಿಮಗುಱೆ ಸೂಱೆಯೋ ಭಂಡಾರ (ಕುಮಾಕ. ೮-೩೭); ಊರೊಳಗಣ ಭಟರ್ಕೆತಂದು ಮಧುರೆಯ ಧಾರಿಣೀಶ್ವರನ ಪಾಳೆಯವ ಸೂಱೆಯನಾಡಿ ಗೂಡಾರಗಳನು ಕಿತ್ತು ಜಾರಿಸಿದರು ದೆಸೆದೆಸೆಗೆ (ಕಂನವಿ. ೧೭-೮೦). ೨. (ಆಲಂ) ಅತಿಶಯ; ಆಧಿಕ್ಯ: ಆಹ ದೆಸೆದೆಸೆಗೆ ಬೀಱುವ ಸುಗಂಧದ ಸೂಱೆ ಆಹ ಕೇತಕಿ ನಿನ್ನ ಪರಿಮಳದ ಪರಿ ಬೇಱೆ (ಪುಷ್ಪರ. ೯-೧೭); ಬಿಗಿದ ಭೀತಿಯ ಸೂಱೆಗಳೊ ಸವಿವಾತುಗಳ ಸೋನೆಯ ಸೂಗಸುಕಾಱರು ನಿಂದ ನಿಲವನು ಕರ್ಣ ನೋಡೆಂದ (ಕುಮಾದ್ರೋ. ೧೬-೨೪); ಪಾಳೆಯ ಪಾಳೆಯದೊಳಗೆ ಚೆಲ್ಲಿತು ಸೂಱೆ ಎಳೆಯ ಹಿಡಿಹೊನ್ನುವರಹ (ಮೋಹತ. ೧೭-೩೮). **ಸೂರೆ:** ೧. ಪೂರ್ದಿರ್ಪ ಬೆಳ್ಳಿ ಕಣಜದ ತಿರುಳ ಸೂರೆಯುಂ ಮೆದ್ದು ಪೋಗುವೆನೆಂದು ನೆಗೆಯ ಬಲೆ ಬಿಗಿಯೆ (ಕಾಲುರ. ೬೨-೧೨೦); ಸಂಗಡಿಗರೊಡನೆ ಸೂರೆ ಸುಲಿಗೆ ಮಾಡಿ ಅದೇ ಕಾಡಿಗೆ ಅವಿತುಕೊಳ್ಳುವುದಕ್ಕಾಗಿ ಬಂದೆ (ನಡದಾ. I. ೫೪೬). [ದೇ. ॥ ತಮಿ. ಚೂಱೈ ; ತೊದ. ಸುರಿ ; ತುಳು. ಸೂರೆ; ತೆಲು. ಚೂಱ]

ಸೂಱೆಕಾಱ 'ಸೂಱೆಗಾಱ' ನೋ.

ಸೂಱೆಗ, ಸೂರೆಗ (ನಾ). ಲೂಟಿ ಹೊಡೆಯುವವನು; ದರೋಡೆಗಾರ: ಕೇರಿಕೇರಿಗೆ ಕೈದುಕಾಱರು ನೆರೆದು ನಿಂದರು ಸೂಱೆಗರ ಕೆಡಹಿ (ಕುಮಾಕ. ೧-೧೦); ಸಾಱುತಿಹ ಕಹಳೆಗಳ ಗರ್ಜನೆಗೆ ಪರಿಪರಿವ ಸೂಱೆಗರ್ ಕೈಗುಂದಲಂಧಾಸುರಂ ತೇರನೇಱೆ ನಡೆದಂ ವಿಲಯಕಾಲದಂತಕನಂತೆ (ಚಿಬಪು. ೫೦-೨೯). **ಸೂರೆಗ :** ದುಡುಕಿದಾ ಸೂರೆಗರ ಹಾವಳಿಗೆ ನೊಂದೆ! (ಕಬಪು. ೬೨-೪). [ಸೂಱೆ + -ಗ$_2$]

ಸೂಱೆಗಳೆ (ಕ್ರಿ). ಇಲ್ಲದಂತೆ ಮಾಡು; ಅಪಹರಿಸು: ಜವ್ವನಮಂ ಜಾಱಿಸಿ ಸುಖಮಂ ಸೂಱೆಗಳೆದು ರೂಪಂ ರೂಪುಗೆಡಿಸಿ . . . ಹೋದಂ (ನಂಚರ. ೧೬-೨೮).

[ಸೂಱೆ + ಕಳೆ$_1$]

ಸೂಱೆಗಾಱ, ಚೂಱಕಾಱ, ಸೂರೆಕಾರ, ಸೂಱೆಕಾಱ (ನಾ). ಲೂಟಿ ಮಾಡುವವನು; ಕೊಳ್ಳೆಹೊಡೆಯುವನು; ದರೋಡೆಗಾರ: ಸೂಱೆಗಾಱನಂತೆ ಪೆಱರಂ ಕ್ಲೇಶಂಗೊಳಿಸದೆ (ಧರ್ಮಾಮೃ. ೫-೯೯); ಏಱುವಡೆದವರನು ಪಲಾಯನ ಸೂಱೆಗಾ [ಱಾಂಗಾ. ಕಾ]ಱರನವರ ದಳದಲಿ ತೋಱೆ ಹೇಳುವರೆನ್ನ ಹವಣೇ (ಕುಮಾದ್ರೋ. ೧೭-೨೮); ಎಱಗಿ ಮುಂಬಱೆವ ಸೂಱೆಗಾಱನಂ ಶಕ್ತ್ಯಾಯುಧದಿನಿಟ್ಟಂ (ರಾಮಾಶ್ವ. ೯೭-೨೬). **ಚೂಱಕಾಱ:** ಕದನಪ್ರಚಂಡ ಗಂಡಮಾರ್ತ್ತಂಡ ನುಡಿದಂತೆ ಗಂಡ ಅತಿಗರ್ವ್ವವ ನುಡಿವ ಮಂಡಳಿಕರ ಗರ್ಬಸರ್ವ್ವಸ್ವಚೂಱಕಾಱ (ಸೌಂಗಾ. IX-i. ೩೩೬-೯;1225). **ಸೂರೆಕಾರ:** ಲಂಚಗೊಳ್ಳುವ ಸೂರೆಕಾರರ ನ್ಯಾಯನೀತಿಗಳೇ ಹೀಗೆ! (ಮಾತ್ರಶ. ೮೪-೨೧). **ಸೂಱೆಕಾಱ :** ಸೂಱೆಕಾಱ ಕಾದಿಯಣ್ಣಂಗೆ ಕೊಟ್ಟೊಡೆ (ಎಕ. X. ಮುಳಬಾ. ೨೦೮-೧೨; 1000); ವಿತರಣವಿನೋದಂ ಮಾವನಂಕಕಾಱಂ ವನಗಜ ಸೂಱೆಕಾಱಂ (ಸೌಂಗಾ. IX-i.೨೮೭-೮; 1200); ರಾಯದಳದುಳಕಾಱ ಕೌರವರಾಯಸೇನಾಸೂಱೆಕಾಱನಜೇಯನೋ ಕಲಿಭೀಮ (ಕುಮಾಕ. ೧೨ ಸೂಚನೆ); ಮೂಱುದಿಕ್ಕಿನಲಮರವೈಭವಸೂಱೆಕಾಱನನಱಸಿ ಕಾಣದೆ ಬೇಱೆ ಬೇಱ್ಕೆತಂದು ಬಿನ್ನೈಸಿದರು ರಘುಪತಿಗೆ (ತೊರರಾ. ೪-೯ ಸೂಚನೆ). [ಸೂಱೆ + - ಕಾಱ]

ಸೂಱೆಗೂಳು (ನಾ). ೧. ಲೂಟಿ ಮಾಡಿದ ಆಹಾರ; ಕೊಳ್ಳೆಹೊಡೆದ ಕೂಳು: ರಣದ ಬೀರರ ಹಾಗೆ ಬಾಚಿಸಿಕೊಂಡು ಕೊಂಬಮ್ಮು ಕೊಂಡು ಬಿಡುವಮ್ಮ ಬಿಟ್ಟು ಸೂಱೆಗೂಳಾಗಿ ಚೆಲ್ಲಿಯಾಡುವುದು ಇದಾವ (ಇದಾರ) ಪ್ರಸಾದ ಹೇಳಾ (ಸಿದ್ರೇವ. ೧೭೫-೫೩೬. ೨. (ಆಲಂ) (ತಿಂದು ಬಿಸಾಡಿದ) ಆಹಾರ: ಸಾರ್ವಭೂಪಾಲನ ಸೂನು ಎನಿಸಿದವಗೆ ಸೂಱೆಗೂಳಿನ ತಿರುಕೆ (ಪುರಂದ. ೧-೫೫-೨).

[ಸೂಱೆ + ಕೂಳು$_2$ (< ಕೂಱ್$_1$)]

ಸೂಱೆಗ್ಗೆ, ಸೂರೆಗ್ಗೆ (ಕ್ರಿ). ೧. ಲೂಟಿಹೊಡೆ; ಕೊಳ್ಳೆಹೊಡೆ; ದರೋಡೆಮಾಡು: 'ಸೂಱೆಗ್ಗೆಸು' ಪರಾ. **ಸೂರೆಗ್ಗೆ:** ೧. ಸಿಡಿಲ ಪಳಗಿಸುವರಿವು ರವಿಯ ಸೆರೆಹಿಡಿವರಿವು ಸಾಗರದ ತಳಮಗುಚಿ ಸೂರೆಗ್ಗೆವರಿವು (ಮಲೆದೇ. ೪೮-೨). ೨. ಯಥೇಚ್ಛವಾಗಿ ಪಡೆ, —ಹೊಂದು: ರಾಜರಾಜೇಶ್ವರರ ಸಿರಿಯನಿಳಿಕೆಗ್ಗೆದು ಕವಿಯ ಋಷಿಯ ಆಶೀರ್ವಾದಗಳ ಸೂರೆಗ್ಗೆದು . . . ಬಾಳರಳಿದರೆ ಧನ್ಯನಲ್ಲ! (ಅನಿಕೆ. ೨೩-೧೭).

[ಸೂಱೆ + ಕೈ$_1$ (< ಕೆಯ್$_1$)]

ಸೂಱೆಗ್ಗೆಸು (ಕ್ರಿ). ಲೂಟಿ ಮಾಡಿಸು; ದರೋಡೆ ಮಾಡಿಸು: ಒಂದು ದಿನದ ಜಕ್ಕಮನ್ನೆಯ ಬಲಗೂಡಿ ಬಂದಾಗ ಹಂಚೆಯದೊಳಗೆ ನಿಂದಾಗ ಸೂಱೆಗ್ಗೆಸುತಲಿರೆ ಬಲ ಬೇಕು ಸಂದುದು ನೃಪನಿಗಾಕ್ಷಣದೆ (ಕಂನವಿ. ೩-೬೨). [ಸೂಱೆ + ಕೈಸು (< ಕೆಯ್ಸು)]

ಸೂಱೆಗೊಡು, ಸೂರೆಗೊಡು (ಕ್ರಿ). ೧. ಯಥೇಚ್ಛವಾಗಿ ಕೊಡು; ಧಾರಾಳವಾಗಿ ನೀಡು: ಸಮಸ್ತವಸ್ತುಗಳಂ ದೀನಾನಾಥಜನಂಗಳ್ಗೆ ಸೂಱೆಗೊಟ್ಟು (ವಂಪಭಾ. ೧-೧೧೪ ವ); ಸಮಸ್ತವಸ್ತುವಾಹನಂಗಳಂ ತನ್ನೊಡನಾಡಿಗಳಪ್ಪ ಭಂಡಮಂಡಲಿಗೆ ಸೂಱೆಗೊಟ್ಟು (ಪಂಚತಂ. ೨೮-೧೫); ಸೂಱೆಗೊಟ್ಟಂದದೆ ಪರಳ್ಗಾಯ ಮುಂತಾದ ತಾಱಕಿ ನೆಲಕುದುರಿದುವು (ಮೋಹತ. ೪-೪೩). ೨. ಅರ್ಪಣೆಮಾಡು; ಅರ್ಪಿಸು: ನಿಮಗೆನ್ನಂ ಸೂಱೆಗೊಟ್ಟೆಂ (ರಕ್ಷಾಶ. ೭೮); ಮನವನಂಬಿಕಾವರಂಗೆ ಸೂಱೆಗೊಟ್ಟು (ನಮುಂ. ದೇ. ೧೧-೧೯೬). **ಸೂರೆಗೊಡು:** ೧. ಲಾವಣ್ಯಧನವನ್ನು ಸೂರೆಗೊಟ್ಟೆಣಿಸದೆಯೆ ಬಿರಿದಾದ ಶ್ರಮವನ್ನು ತಾನೆ ಕೈಕೊಂಡು ಸ್ವೇಚ್ಛೆಯಿಂ ಸುಖವಾಗಿ ತಾವಿದ್ದ ಜನಕೆಲ್ಲ ಚಿಂತಾಗ್ನಿ ಹೊತ್ತಿಕೊಂಡುರಿವಂತೆ ಮಾಡಿ (ಧ್ವನ್ಯಾಲೋ. ೨೨೨). ೨. ಈಜಿಪ್ಟಿನ ಚಕ್ರವರ್ತಿ ಪ್ರತಿನಿಧಿಗಳು ಸುಲ್ತಾನನಿಂದ ಅನೇಕ ಅಧಿಕಾರಗಳನ್ನು ಗಳಿಸುತ್ತ ಬಂದರು. ಆದರೂ ಇವೆಲ್ಲವನ್ನೂ ಫ್ರಾನ್ಸ್ ಮತ್ತು ಇಂಗ್ಲೆಂಡಿಗೆ ಸೂರೆಗೊಟ್ಟರು (ಇಸ್ಲಾಂಸಂ. ೫೮). ೩. ಆಕರ್ಷಿಸು; ಸೆಳೆ: ಹೃದಯವನ್ನು ಸೂರೆಗೊಳ್ಳುವಂತಹ ಪ್ರಾಕೃತಗಾಥೆಗಳಲ್ಲಿ ಕೂಡ ಇವುಗಳನ್ನು ಬರೆದವರು ಷಟ್‌ಪ್ರಜ್ಞರು ಅಥವಾ ಅಪಾರವಾದ ಅನುಭವವುಳ್ಳವರು (ಧ್ವನ್ಯಾಲೋ. ೨೨೯). [ಸೂಱೆ + ಕೊಡು$_1$]

ಸೂಱೆಗೊಳ್, ಸೂರೆಕೊಳ್, ಸೂರೆಗೊಳ್, ಸೂರೆಗೊಳ್ಳು, ಸೂಱೆಗೊಳು (ಕ್ರಿ). ೧. ಲೂಟಿ ಮಾಡು; ಕೊಳ್ಳೆಹೊಡೆ: ಪ್ರದ್ಯೋತಂ ಮುಳಿದವರ ನಾಡಂ

ಸೂಜಿಗೊಳುತ್ತಂ ಸುಡುತ್ತಂ ಕಿಡಿಸುತ್ತಂ ಉಪಶ್ರೇಣಿಕನ ಮೇಗೆ ಪೋಗೆ (ವಡ್ಡಾರಾ. ೧೬೫-೧೫); ಚಂದ್ರಮತೀಮಹಾದೇವಿಯ ಕೀಲಾರದ ಧೇನುಗಳಂ ಸೂಜಿಗೊಳ್ಳಂತ ಕೊಂಡು ಪೋದೊಡೆ (ಸುಕುಮಾ. ೭-೬೫ ವ); ಧನಪನ ಪುರವನಾತನ ನವನಿಧಿಗಳನು ಸೂಜಿಗೊಂಡು (ತೊರರಾ. ೬-೨೭-೬೯). ೨. (ಆಲಂ) ಆಕರ್ಷಿಸು; ವಶಪಡಿಸಿಕೊಳ್ಳು: ಎನ್ನ ಮನವ ಮಾಱುಗೊಂಡನವ್ವ, ಎನ್ನ ತನುವ ಸೂಜಿಗೊಂಡನವ್ವ (ಮಹಾದೇ. ಬ. ೪೧ ೮೪). ೩. ಎತ್ತಿಹಿಡಿ; ಪಟ್ಟುಹಿಡಿ: ಏಱನೆ ಸೂಜಿಗೊಂಡು ನುಡಿವೀ ನುಡಿಯಲ್ಲದೆ ಮತ್ರಮಾಸನಂದೋಱುವ ಬಲ್ಲುದೋಱುವರ್ದೆದೋಱುವ ಕಯ್ಯೆಸರಂಗಳೆನ್ನುನುತೇಱುವು (ಪಂಪಭಾ. ೪-೨೦). ಸೂರೆಕೊಳ್: ೧. ವೀರಪದೇವರು ಊರ ತುಱುವಂ ಸೂರೆಕೊಳ್ವಾಗ ಪಲರನಿರಿಚ್ಚಿ ಕೊನ್ದು (ಮೈಆರಿ. ೧೪೫,೪೨-೨;?). ಸೂರೆಗೊಳ್: ೧. ಇದು ಕಣಾ ಪುರುಷಾರ್ಥಮೆಂಬುದು ಇದುವೆ ಪರಮಂ ಸೂರೆಗೊಂಬುದು (ಗಗಕಾ. ೧೭-೪೪). ಸೂರೆಗೊಳ್ಳು: ೧. ಪ್ರೇಮನಿಧಿ ಪ್ರಾಣೇಶ ಸೂರೆಗೊಳ್ಳಿನ್ನ ಸರ್ವಸ್ವಮಂ ಮೇಣೆನ್ನನಿಲ್ಲಗ್ಗೆ (ಚಕ್ತಾಗ. ೪೧-೧೧೧೦); ಕಂಪಿಲರಾಜ್ಯದಲ್ಲಿ ದೊರೆತ ಎಲ್ಲಾ ವಸ್ತುಗಳನ್ನೂ ಸೂರೆಗೊಂಡ ಸುಲ್ತಾನನ ಸೈನ್ಯ ವಿಜಯೋತ್ಸಾಹದಿಂದ ದೆಹಲಿಗೆ ಹಿಂತಿರುಗಿತು (ಸಡದಾ. II. ೯೯೫). ಸೂಜಿಗೊಳು: ೧. ಬೇಱೆ ತಮಗೊಂದಾಳುತನವುರಿ ಸೂಜಿಗೊಳುತಿದೆ ಜಗವನಿತ್ರಲು ಕೌಱಿಡುವ ಕಾಲಾಗ್ನಿಯದೆ ಕಬ್ಬೊಗೆಯ ಕವಚದಲಿ (ಕುವ್ಯಾಭೀ. ೯-೪೦); ರಾಜ್ಯವ ಸೂಜಿಗೊಳುತ ಸಡಗರದೊಳು ಬಂದು ಕಂಡನು ಬಹು ರಮ್ಯವಡೆದಿರ್ದ ಭಾಗೀರಥಿಯ (ಮೋಹತ. ೬-೩೧). [ಸೂಜಿ + ಕೊಳ್,]

ಸೂಜಿಗೊಳು 'ಸೂಜಿಗೊಳ್' ನೋ.

ಸೂಜಿಚಾಗ (ನಾ). ಧಾರಾಳವಾದ ತ್ಯಾಗ; ಯಥೇಚ್ಛವಾದ ದಾನ: ಅವರವರಂಗವನೆಱಿದು ವಿದ್ಯಾಧಿಕನಿವಹಕೆ ಸೂಜಿಚಾಗವನು ನವನಿಧಿಯಾಗಿ ಕೊಟ್ಟನು (ಭರಚ. ೨೨-೪೭). [ಸೂಜಿ + ಚಾಗ್ಯ]

ಸೂಜಿಯಾಡು, ಸೂರಾಡು, ಸೂಜಾಡು (ಕ್ರಿ). ಲೂಟಿ ಹೊಡೆ; ಕೊಳ್ಳೆಹೊಡೆ: ಊರು ಕೆಟ್ಟು ಸೂಜಿಯಾಡುವಲ್ಲಿ ಆರಿಗಾರೂ ಇಲ್ಲ (ವೀಳಿಪಾ. ೧೧೪-೪೪೮); ಇಂದುಮಂಡಲದ ಸಿರಿಯಂ ಸೂಜಿಯಾಡಿದರ್ (ಜೈಮಿಭಾ. ೧೦-೫೩); ನಿಲ್ಲದೈತಂದು ಸತ್ಯಾಗಾಲದ ಪಾಳ್ಯವೆಲ್ಲವ ಸೂಜಿಯಾಡಿದನು (ಕಬಸವ. ೬-೫೬). ಸೂರಾಡು: ಧನವ ಸೂರಾಡುವರೆ ಇಚ್ಛಾನುರಾಗದಿಂದೊಲಿಸಿ ಗಣಿಕನಾರಿಯರಾಲಯದಲಿ (ಜಸಮು. ೪೯-೬೭). ಸೂಜಾಡು: ಸುಲಭದಿಂದ ಸ್ವರ್ಗ ಸೂಜಾಡಬೇಕು (ಪುರಂದ. ಧಾ. ೨-೫೬-೧); ತುರುಕರ್ಕತಂದು ಸೆಱೆಗಳ ಪಿಡಿದು ಸೂಜಾಡಿ ಭರದಿಂದೆ ಸಕಲರಂ ಸಂಹರಿಪರು (ಚಬಪು. ೬೩-೬೨). [ಸೂಜಿ + ಆಡು,]

ಸೂಜಿವಿಡು (ಕ್ರಿ). (ಆಲಂ) ಅತಿಶಯವಾಗಿ ಕೊಡು; ಧಾರಾಳವಾಗಿ ನೀಡು: ಈ ಧರೆ ಬಣ್ಣಿಸೆ ಸೂಜಿವಿಟ್ಟುನರ್ಥಾರ್ಥಿಗೆ ಪೊನ್ನ ಪುಟ್ಟಿಗೆಯ ರನ್ನದ ರಾಶಿಗಳಂ ಮಹೀಭುಜಂ (ಪುಷ್ಪಪು. ೪-೪೩); ತುಂಬಿಗಳ ದಳಕೆ ಕಮ್ಮಲರ್ಗಳಂ ಸೂಜಿವಿಡುತೆ (ಜೈಮಿಭಾ. ೭-೬). [ಸೂಜಿ + ಬಿಡು,]

ಸೂಜಿವೋಗು, ಸೂರೆಹೋಗು, ಸೂಜಿಹೋಗು (ಕ್ರಿ). ೧. ಲೂಟಿಯಾಗು; ಕೊಳ್ಳೆಯಾಗು: ಈ ಜ್ಞಾನನಿಧಿ ಸೂಜಿವೋದಪುದಾನಿನ್ನೇಗಯ್ವೆನೆಂದು ತಳವೆಳಗಾದೆಂ (ಕಾದಂಪೂ. ೮೩೮); ಸೂಜಿವೋಯಿತು [ಪಾಠಾಂ. ಯೋದುದು, ಹೋದುದು] ಸುರಪತಿಯ ಭಂಡಾರ ಹೆಂಡಿರುಸಹಿತ (ಕುವ್ಯಾಕ. ೬-೧೧); ಕೀರಿ ರನ್ನಂಗಳ ಪಡೆದು ಬರೆ ತಾರಲೊತ್ತಿನ ಶಬರರಿಂದದು ಸೂಜಿವೋದುದು ದ್ರವ್ಯವಾರಿಗೆ ಕೆಡದು (ಶಾಳ್ಕಭಾ. ೧೭-೪೧). ೨. ಧ್ವಂಸವಾಗು; ನಾಶವಾಗು: ಪಸುಗೆವೋಗದ ಶೌರ್ಯಮುಮಂ ಸೂಜಿವೋಗ ದೇಱುಮಂ . . . ಪೊಗಳಿಸುವೆನೆಂದು ತಱಿಸಂದು (ಶಾಂಕಪ್ರ. ೪-೫೬ ವ). ಸೂರೆಹೋಗು: ೧. ಎಚ್ಚರೆಚ್ಚರು! ಏಳು! ನಿದ್ದೆಹೋಗದಿರೆಚ್ಚರ, ಸೂರೆಹೋದೀತೆಲ್ಲ! (ಆರಳು. ೧೫೭-೬); ಹೋಗದಿದ್ದರೆ ಏನು ಸೂರೆಹೋಗುತ್ತಿದ್ದುದು? (ಕುಸುಸಂ. ೧೯೨); ಸೂರೆ ಹೋದರೂ ಮಾರಿ ಬಿಡಲಿಲ್ಲ (ಗಾಡ). ಸೂಜಿಹೋಗು: ೧. ಮೂಜುಲೋಕವೆಲ್ಲವು ಬಲಿ ಸೂಜಿಹೋ [ಪಾಠಾಂ. ವೋ]ಯಿತ್ತು (ಅವಚಂ. ೪-೩೦); ತೋಱುವ ಕುಲಗಿರಿಯನೇಱಿ ತಪದೊಳಗಿದ್ದು ಬೇಱೊಂದ ಮನವು ನೆನೆದಿಹರೆ ಬೆಳೆದ ಹೊಲ ಸೂಜಿಹೋದಂತೆ (ಸರ್ವಜ್ಞ. ೫೭೯). ೨. ತುರಗದಳದಸು ಸೂಜಿಹೋದುದು ಸಮರದಲಿ ಹದಿನೆಂಟು ಸಾವಿರವು (ಕುವ್ಯಾಭೀ. ೪-೪೭). ೩. ಅರ್ಪಣೆಯಾಗು; ಅರ್ಪಿತವಾಗು: ಸೂಜಿ ಹೋದುದು ನಿನ್ನ ಮನವೆಲ್ಲವಾ ಗಾವಿಕಾಜಿಗೆ ಭರತೇಶಗಕ್ಕ (ಭರಚ. ೭-೪೨).

[ಸೂಜಿ + ಪೋಗು,(< ಪೋ,)]

ಸೂಜಿಹೋಗು 'ಸೂಜಿವೋಗು' ನೋ.

ಸೂಟ್, ಸೂಳ್,, ಸೂಳು,, ಸೂಟು (ನಾ). ೧. ಹೊತ್ತು; ಸಮಯ: ಒರ್ವ ಸೊಕ್ಕಿದ ತೊಟ್ಟು ತೊಟ್ಟುಗೆಲಸಕ್ಕರಮನೆಯಂ ಪುಗುವ ಪೊಜಮದುವ ಸೂಟೊಳೆಲ್ಲಂ ಒಂದು ತಗರಂ ಬಗೆಯದೆ ಬಡಿಯುತ್ತುಮಿಪ್ಪುದುಂ (ಪಂಚತಂ. ೧೭೯-೫). ೨. ಆವೃತ್ತಿ; ಬಾರಿ: ''ಸೂಟಿಂದು ಬಾರಿ'' (ಕಶಾಸಾ. ೭೧-೬೧೧); ಒಳ್ಳಿತ್ತಪ್ಪ ವಸ್ತು ನಿನಗಕ್ಕುಮಂದೊಡೆ ಅರಸನೆನಗಕ್ಕುಂ ಬಲಮೆಂದು ಮೂಱು ಸೂಟ್ಗರಂ ಸಾಱಿ ನುಡಿದೊಡಂಬಡಿಸಿ (ವಡ್ಡಾರಾ. ೧೧೬- ೬); ಮೂಱು ಸೂಟ್ ಬಲವಂದು ಪೊಡಮಟ್ಟು (ಪಂಪಭಾ. ೬-೫೮ ವ); ದೇವಿಯರಂ ಮೂಱುಂ ಸೂಟ್ ಬಲವಂದು ಮಣಿದು ೞ್ತುದಂ ಮಹಾಪ್ರಸಾದಮೆಂದು ಭಕ್ತಿಯಿಂ ಸ್ವೀಕರಿಸಿದಂ (ರಾಮಾಶ್ವ. ೬೨-೧). ೩. (ರತಿಸುಖದ) ಸರದಿ; ಸಮಯ: ಎನಗಿಂದಿನೊಂದು ಸೂಟುಮನಿನಿಯಂ ದಯೆಗೆಯ್ದನೆನ್ನ ಸೂಟಂ ನಿನಗಾನೆನಿತಾದೊಡಮಿವನೆ (ಪಂಪಭಾ. ೨-೨೬); ಬಂದಳಾ ಜಗತೀನಾಥನ ಸೂಟ್ಗೆ ತತ್ಸುದತಿ ಹಂಸೀಯಾನೆ ಸಾನಂದದಿಂ (ನೇಮಿಪು. ೧-೧೬೨); ರಮಣೆ ರಂಜಿಸಿ ಭೂಪನ ಸೂಟ್ಗೆವಂದಪಳ್ (ಪುಷ್ಪಪು. ೯-೯೫). ೪. ಗತಿ; ಲಯ: ಮೊದಲೊಳ್ ಮೆಲ್ಲನೆ ಸೆರೆಡನಿಟ್ಟು ನಗೆಯಿಲ್ ಮೆಲ್ರಿಂದವಳ್ ಪೊಯ್ದು ಪೊಣ್ಮಿದ ಸೆಂಡಂ ನಖಿದೀಪ್ತಿ ರಂಜಿಸುವಿನಂ ಮೇಗಯ್ಯೊಳಾಂತು . . . ತಾಳದ ಸೂಟಂ ತಿಳಿದಾಡಿದಳ್ (ದಶಕು. ೧೨-೨೯). ೫. ಯೋಗ್ಯವಾದ ಮಾರ್ಗ; ಉಚಿತವಾದ ಕ್ರಮ: ಎಮ್ಮ ದಾಯಾದನುಂ ಕೋಪದಿನೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾಣ್ಬುದು ಸೂಟಲ್ತು (ಆದಿಪು. ೧೪-೮೫); ನಮಗಾವುದು ಸೂಟಕ್ಕ ಪೇೞಿಮಿನ್ನೇಗೆಯ್ವೊಂ (ಅಜಿಪು. ೬-೯೯). ೬. ಗಾತ್ರ; ಪ್ರಮಾಣ: ಏ಴ೆ ಧನು ಮೂಱುಮೊಱನಿಂ ಪೇೞ್ ಷಡಂಗುಲಮ ಮೊದಲ ನಾರಕರೂಡಲಂತೇಱುವರಂ ತದ್ಗುಣಮೆ ಸೂಟೊಳ್ ನಾರಕರ ಕಱಿನದೇಹೋತ್ಸೇಧಂ (ಆದಿಪು. ೫-೯೨). ೭. ವರ್ಷ; ಸಂವತ್ಸರ: ಈ ಸೂಟೆಂದು ವರ್ತಮಾನವರ್ಷಂ (ಶಮದ. ನ. ೧೧೪ ಪ್ರಮೋ. ಆಡಿಟ). ೮. ಕದನ; ಯುದ್ಧ: 'ಸೂಳ್ಗರೆ' ಪರಾ. ೯. ಗಮನ; ಲಕ್ಷ್ಯ: ದಿಟ್ಟಿ ಸೂಟ್ಕಿ ಕೆಕ್ಕಳಿಪನ್ನಂ ಕಿವಿಸೋಂಕಿನಿಂ ಕೊಣಕಿಡುತ್ತುಂ ಬರ್ಪಿನಂ . . . ಕಾಳಿಂದಿಯೊಳ್ ತಿಳಿನೀರೊಡಿ ಮುರಾರಿ ವತ್ಸಕುಲಮಂ ಕಾದಂ ಮಹೋತ್ಸಾಹದಿಂ (ಜಗಪ. ೬-೭೧). ೧೦. (ಕುಸ್ತಿಯ) ಒಂದು ಪಟ್ಟು. — ವರಸೆ: ಮಲ್ಲಮಲ್ಲಿಯ ಸೂಟನೆಲ್ಲರ ಪೊಗಟ್ಟನ್ನು ಮಲ್ಲಗಾಯದೊಳ್ ಪಿಡಿದೊತ್ತಿ ಕಟ್ಟುಲ್ಕೆ ಬಲ್ಲನೀ ಖಿಚರಚೂಡಾಮಣಿ (ಎಕ. VI, ಚಕ್ಕಮ. ೯೪-೨೧; ಸು. 1080?). ಸೂಳ್,: ೧. ಶ್ರೀಮತ್ ಸಕಲೇಶ್ವರದೇವರ್ಗ್ಗೆ ಫಕರಂ ಕೊಟ್ಟು ಸೊಂಟಿಗೆಯೊನ್ನು ವೆಜುವೊಕ್ಕಲು ಪೇೞೆ ಬನ್ದ ಸೂಳೊಳ್ ಒಕ್ಕಲು ಬಳ್ಳವೊನ್ದು (ಸಿಾಇ. XI-i, ೧೧೨-೧೨; 1072). ೨. ''ಸೂಳಿಂದು ಬಾರಿ'' (ಕವಿಕಾ. ೨೪೧); ಅಖಿಳ ಧರೆ ಗತಕ್ಷತ್ರಮಪ್ಪನ್ನು ಧಾತ್ರೀಶರನಿರ್ಪ್ಪತೊನ್ನು ಸೂಳ್ ಕೊನ್ವನ ಚಲಮೆ ಚಲಂ (ಮೈಆರಿ. ೧೪೫, ೬೫-೨೪; 1025); ತೋಳ್ಗಳ್ ನೆನೆವರ ಚಿತ್ತದ ಬಾಳ್ಗಳ್ ವರವೀಯಲೆಂದು ಮಿಗೆ ಮತ್ಸರಿಪಾ ಸೂಳ್ಗಳ್ ರುದ್ರನ ನಚ್ಚಿನ ಬಾಳ್ಗಳ್ ಗಿರಿರಾಜಪುತ್ರಿಯಪ್ಪಿಂಗಾಳ್ಗಳ್ (ಗಿರಿಕ. ೧೦-೫೫). ೩. ಪಳುಕಿನಲಿ ಮನಸಿಜ ಸಮೆದ ಪುತ್ಥಳಿಯೊಯೆನೆ ಬೆಳಗುವ ಸದನದ ತನಿವೆಳಗಿನಲಿ ಶಿವದೇವಿ ಬಂದಳು ಸೂಳ್ಗೆ ನಿಜಪತಿಯ (ಶಾಳ್ಕಭಾ. ೩೨-೪೫). ಸೂಳು,: ೨. ಬವರಮುಖದಲಿ ಹಿಂಗಿದನು ಹದಿನೆಂಟು ಸೂಳಿನಲಿ (ಕುವ್ಯಾಭೀ. ೧೩-೫೦); ಹದಿನಾಲ್ಕು ಸೂಳಲಿ ಸುಳಿದು ಸುರರಲಿ ಸಂದುದರಿಸೇನೆ (ತೊರರಾ. ೬-೩೭-೬೫); ಬೋಕಿಮಯ್ಯ ಪ್ರಭುಗಳಲ್ಲಿಗೆ ಬಂದು ಅಡ್ಡಬಿದ್ದು, ಬಳಿಕ ರಣರಂಗಕ್ಕೆ ಮೂರು ಸೂಳು ಬಲವಂದು, ಬಲವಾಗಿ ಕೇಕೆ ಹಾಕಿದ (ಶಾಂತಲಾ. ೧೪೮). ೩. ಮೂವರಿಗಾದ ಸೂಳೆ ಸೂಳ ಕೊಡುವ ಪರಿಯನ್ನೆಂತೂ (ಗುಪ್ತಮಂ. ೪. ೨೨೯-೭೪); ಸವಿವ ಬಾಯುಗಿಯಡಗೆ ಮೈ ಮಿಗೆ ಬೆವರೆ ಸೂಳೋಸರಿಸೆ ಕೆಡಪಿದ ಜವಳಿಜಂತ್ರದ ಬೊಂಬೆಯೆನಲೀರ್ವರು ಮಲೆದರೊಡಲ (ಶಾಳ್ಕಭಾ. ೧೨-೩೭). ೪. 'ಸೂಳುಗರೆ' ಪರಾ. ಸೂಟು: ೧. 'ಸೂಟುಗಾಳೆ' ಪರಾ. ೨. 'ಸೂಟುನುಡಿ' ಪರಾ. ೩. 'ಸೂಟುಗರೆ' ಪರಾ.

ಸೂಟ್ಟೂಟ್, ಸೂಳುಸೂಳು, ಸೂಟುಸೂಟು (ದ್ವಿರುಕ್ತಿ): ೧. ಬಾರಿಬಾರಿ; ಸಲಸಲ: ಪೂಟಲಂ ಪುಗಿಸಿ ಮುನ್ನಮೆ ಸಮೆದ ಬೀಡುಗಳೊಳ್ ಬೀಡಂ ಬಿಡಿಸಿ ಸೂಟ್ಟೂಟೊಳ್ ಬರ್ದನಿಕ್ಕಿ (ಪಂಪಭಾ. ೪-೫೫ ವ); ನೂಟುನೂಟು ಲೋಹ ಭಾರವಂತೆ ಸೂಳುಸೂಳಿಗೊಮ್ಮೆ ನಡುವನಟಿಯೆ ನೂಟುಯೋಜನಾಂತವಾಡೆ ತೂಗಿತಮ್ಮ (ಸಾನಂಚ. ೬-೧ ರಗಳೆ, ಸಾಲು೭). ೨. ಅನುಕ್ರಮ: ಮುರರಿಪುಗೆ ಸೂಟುಸೂಟೊಳೆ ಬರೆ ಕರದೊಳು ಶಂಖಚಕ್ರಮುದ್ಗರ ಪದ್ಮಂ ಪರಿವಡಿಯಿಂ ಪೆಸರ್ಗಳ್ನನ್ನೆರಡಾದವು ಮೂರ್ತಿಭೇದಮಾ ವೈಷ್ಣವರೊಳ್ (ಸಮಪ. ೮-೧೩೬). ಸೂಟಪಾಟಿ = (ರತಿಸುಖದ) ಸರದಿ; ಸಮಯ: ವ್ರಾಣೇಶ್ವರನೊಳ್ ಮನ್ನಣೆಗಾಣೆಗೆ ಗೋಸನೆಗೆ ಸೂಟಪಾಟಿಗೆ ನಮ್ಮೊಳ್ ಮಾಣದೆ ಮಚ್ಚರಿಪಂತಿರೆ ಹೂಣಿಸಿ ಮುಂಚಲ್ಕೆವೇಲ್ಮುಮೊರ್ವರಿನೊರ್ವರ್ (ಅನಂಪು. ೧೨-೧೫). ಸೂಟಸುಂದು = ೧. ಸರದಿಯ ಪ್ರಕಾರ ನಡೆಸುವ ರತಿಕ್ರೀಡೆ. ೨. (ಯುದ್ಧದಲ್ಲಿ) ಬಾರಿಬಾರಿಗೆ ಮೈಮರೆಯುವಿಕೆ. ೧, ೨: ಮಚ್ಚರದ ಸೂಟಸುಂದಿನ ಪೊಚ್ಚರನಾಂತಿರ್ದು ಬಿರುದಿನೆಸಕದ ಪೆಱವುಂ ಕಚ್ಚಕಳಿಗಳ ತೊಡರ್ಪಿನ ಮೆಚ್ಚವಣಿಗೆಯಂಕಮಂ ಮಹೀಶಂ ನೋಟ್ಟುಂ (ಕಾವ್ಯಾವ. ೪೪೯). ಸೂಟಸೂಟದೆ, ಸೂಟುಸೂಟದೆ = ೧. ಬಾರಿಬಾರಿಗೂ: ಸೂಟಸೂಟದೇಂ ಸವಿದುವೊ ಬಣ್ಣವಣ್ಣಿಗೆಯ ಪೂಗಳ ಸೌರಭಮಂ ಮದಾಳಿಗಳ್ (ಆದಿಪು. ೧೧-೧೨೬). ೨. ಕ್ರಮಕ್ರಮವಾಗಿ; ಅನುಕ್ರಮವಾಗಿ: ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಸಾಮರ್ಥ್ಯಮಂ ಸೂಟುಸೂಟದೆ ಪೇಟಲ್ ಪರಿವಂತೆ ಪೊಣ್ಕೆ ಪಲವುಂ ಧೂಮಂಗಳ್ (ಪಂಪಭಾ. ೬-೬೮). ಸೂಟ್ಟಡಂಬರ್ = ಸರದಿ ತಪ್ಪಿ ಬರು; ಕ್ರಮ ತಪ್ಪಿ ಬರು: ಮತ್ತೊಂದಿರುಳುಂ ನೃಪಂ ಪೆಱರ ಸೂಟ ದಿನಂ ಮಱೆದಿರ್ದು ಸೂಟ್ಟಡಂಬಂದಳ ಸೂಳ್ಗೆ ಬಂದು ಬಿಡೆ (ಮಲ್ಲಿಪು. ೬-೪೫). ಸೂಟ್ಟಡಮಾಗು = ಸರದಿ ತಡವಾಗು; ಕ್ರಮ ತಪ್ಪು: ಮರಣಕ್ಕೆನ್ನಿಂದೆ ನೀಂ ಮುಂಚಿದಯ್ ಮೊನೆಯೊಳ್ಸೂಟ್ಟಡಮಾಯ್ತುದೊಂದೆಡೆಯೊಳಂ ಹಾವತ್ಸ ದುಶ್ಶಾಸನಾ (ಗದಾಯು. ೫-೭). [ದೇ. ‖ ತಮಿ. ಊಟಿ; ಮಲ. ಊಟ, ಚುಟಱು]

ಸೂಟ (ನಾ). (ಜಾರತನದ) ಸರದಿಯನ್ನು ಪಡೆಯುವವನು; ಜಾರ: ಮನುಕುಲದೆ ಪುಟ್ಟಿ ನಿಟ್ಟುರದ ಬೊಡ್ಡಿತನಮಿಂತೇಂ ಸೂಟನನಾಯ್ದು ಬಾಟ್ಟೆ ನೀಂ ಮಗಳೇ! (ರಾಮಾಶ್ವ. ೭೦-೬). [ಸೂಟ್ + - ಅ$_7$]

ಸೂಟನೆ (ಅ). "ಸೂಳ್ ಎಂದು ಶಬ್ದಮಾಡುತ್ತ" (ಪಂಪದೀ. ೨೦೮): ಮಳವಂ ಶಚಿ ಪೂತ ಚೂತಮಂ ನೆರ್ಮಿರ್ದಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ ಸೂಟನೆ ಬಾರಿಸಿದಂ (ಪಂಪಭಾ. ೫-೮೨). "ಆಗಲೇ, ಆ ಸಲವೇ" (ಪಂಪಭಾ. ಕೋಶ). [IP ಇದು 'ಸೌಳನೆ' ಎಂದಿರಬಹುದೇ?]

ಸೂಟರಸಿ (ನಾ). (ರತಿಸುಖದ) ಸರದಿಯನ್ನು ಪಡೆದ ರಾಣಿ; ಸರದಿಯ ಅರಸಿ: ಕಪಿಲಾಕರೇಣುವೆರಸಿ ಪುಂಡರೀಕಗಜಮೇಟ್ಟಂತೆ ಸೂಟರಸಿವೆರಸು ಸೆಜ್ಜೆಯನೆಟ್ಟು (ಶಾಂತಿಪು. ೫-೯೨ ವ); ಧವಳಧಾಮಶಯನದೊಳಮರ್ದಿರೆ ಸೂಟರಸಿವೆರಸು (ಪುಷ್ಪಪು. ೮-೧೬). [ಸೂಟ್ + ಅರಸಿ]

ಸೂಟಱಿ, ಸೂಳಱಿ (ಕ್ರಿ). ೧. (ಸರಿಯಾದ) ಸಮಯವನ್ನು ತಿಳಿ; ಹೊತ್ತನ್ನು ತಿಳಿ: ಪ್ರಮದೆಯರಂ ಮನೋಭವನೆ ಸೂಟಱಿದೆಚ್ಚಪನಗ್ನಿಬಾಣದಿಂ ಹಿಮಕರಬಾಣದಿಂ ತಿಮಿರಬಾಣದಿನೆಂಬಿನಂ (ಚಂದ್ರಪು. ೭-೧೩೬); ವಾರಿಜೋದ್ಭವನಲ್ಲಿ ಸೂಟಱಿತು ಪೊಗಟುತಿರೆ ವೇದಸೂಕ್ತಂಗಳಿಂದ (ಶ್ರೀರಾಮ. ೪೫-೫೪). ೨. ಸರದಿಯನ್ನು ತಿಳಿ; ಕ್ರಮವನ್ನು ಅರಿ: ನಱುಸುಯ್ಗಂ ಮಾಲೆಗಂ ಸೂಟಱಿದೆಱಗುವಿನಂ ತುಂಬಿಗಳ್ (ಪಂರಾಮಾ. ೧-೧೨೦). ಸೂಳಱಿ: ೧. ಅಡ್ಡಂಬರಿಯಿಪ ವಾಳೆಯೊಳ್ಸರಿಸಂಗೊಂಡೊಂದೆ ಮೆಯ್ಯೊಳ್ಸೂಳಱಿದೇಱುವ . . . ಘೋಳಾಯಿಲರ್ ನೆರೆದು (ರಾಜಶೇ. ೬-೧೧ ವ). ೨. ಕಂಕಣಝಣಝಣತ್ಕಾರದಿಂ ಸಭೆಯ ಕಿವಿಗೆ ಸವಿಗಳಂ ಸಾಲಿಡೆ ಸೂಳಱಿದಿಕ್ಕುವ ಚಾಮರಗ್ರಾಹಿಣಿಯರೊಳಂ (ಗಿರಿಕ. ೨-೧೦೫ ವ); ಸೂಳಱಿದು ತೋಳಂ ನೆಗಪಿ ಚಾಮರಮಂ ಬೀಸುವ ಚಾಮರಗ್ರಾಹಿಣಿಯರಿಂ (ರಾಜಶೇ. ೫-೧೯ ವ). [ಸೂಟ್ + ಅಱಿ]

ಸೂಟೂಯಿತ 'ಸೂಟೂಯ್ತ' ನೋ.

ಸೂಟೂಯ್ತ, ಚೂಳಾಯ್ತ, ಸೂಳಾಯತ, ಸೂಳಾಯಿತ, ಸೂಳಾಯಿತ್ತ, ಸೂಳಾಯ್ತ, ಸೂಟೂಯಿತ (ನಾ). ೧. ಸರದಿಯ ಪ್ರಕಾರ ಕೂಗುವವನು, — ಸಾರುವವನು: ಕರಗದವರಂತೆ ಸೂಟೂಯ್ತರಂತೆ . . . ಮೇಳದವರಂತೆ ನೆರೆದೋಲಗಿಕುಂ (ಶಾಂತಿಪು. ೬-೧೧೯); ಇರದೊಗೆದುದಲ್ಲಿ ಸೂಟೂಯ್ತರ ಕಳಕಳಂ (ಜಗವಿ. ೧೧-೭೩). ೨. ಮಂಗಳಪಾಠಕ; ವಂದಿ: ಸೂಟೂಯ್ತರ ಕರೆಹಮಂ ಸನ್ನೆಗೆಯ್ಯಂತೆ ರಾಜಾಂಗಣದೊಳಗೆ ಮಂಗಳಾಚಾರಸಂಗೀತಕಮಂ ನೆಗಟ್ಟ ಮುಖರೀಗಾಣರ ತಾಳವಾದ್ಯಕೋಳಾಹಳದೊಳಂ (ಅನಂಪು. ೫-೫ ವ). ೩. ಯುದ್ಧಕ್ಕೆ ಕರೆಯುವವನು: "ಸೂಟೂಯ್ತರೆನಲ್ಕೆ ಸೂಟ್ಗೆ ಕರೆವರೊಳಪ್ಪರ್" (ಕರ್ಣಾನಿ. ೩೪); "ಸೂಟೂಯ್ತಂ = ಸೂಟ್ಗರೆವಂ" ಶಮದ. ಪರಿ. ೧). ಚೂಳಾಯ್ತ: ೧. "ಚೂಳಾಯ್ತ = ಪರಿಚಾರಕ" (ಪ್ರಭಣ್ಣ). ಸೂಳಾಯತ: ೧. ಸೂಳಿಗೇರಿಯೋಲಗದ ವೇಳೆಯನಟಿತು ಕರವೆತ್ತಿ ಕರೆವ ಸೂಳಾಯತದವರ ದನಿಗೇಳುತ್ತ (ವಿರೂಪಾ. ೬೨ ವ). ೨. ಪಾಯವಧಾರು ಸೂಳಾಯತರ ಮಂಗಳವಚನದೈದೆಯರ ದೂರದಲಿ ನಿಲಿಸಿದನು (ಕುವ್ಯಾಸ. ೧೨-೨). ೪. ದೂತಕಾರ್ಯ; ದೂತಕೆಲಸ: ಹೇಳಬಹುದೆ ಸುರೇಂದ್ರಭವನದ ಸೂಳಿಯರ ಸೂಳಾಯತದ ವಾಚಾಳತನವೇ ನೆರವೆ ನಟರಿಗೆ ಮುಖ್ಯವಿದ್ಯೆಯಲ (ಕುವ್ಯಾಶ. ೧೯-೧೯). ಸೂಳಾಯಿತ: ೫. ಓಲೆಕಾರ; ಹರಿಕಾರ: ಸಮಸ್ತ ಪ್ರಜೆಗಾವುಣ್ಮುಗಳುಂ ಸೂಳಾಯಿತ ಬಲಯನ ಕಾಲದಲು . . . ಬಿಟ್ಟುದು (ಎಕ. XVI, ಚಿಕ್ಕನಾ. ೬೯-೬೭; 1177); ಅರಮನೆಯ ಸೂಳಾಯಿತನು ಬಂದ ಸುದ್ದಿ ಊರ್ವಶಿಗೆ ಅರಿಕೆಯಾಯಿತು (ಭಾಮಿಣಿ. ೧೧೯). ಸೂಳಾಯಿತ್ತ: ೬. ಖಡ್ಗಯುದ್ಧದ ಒಂದು ವರಸೆ: ವೈರಿಯ ಮೇಲೆ ಹನ್ನೆರಡು ಪೆಟ್ಟಿನಿಂದಲು ವಂದೆ ಬಾರಿ ಸಾಧನೆಯನ್ನು ಮಾಡುವನಾದರೆ ಅದು ಸೂಳಾಯಿತ್ತಯೆಂದು ನುಡಿಯಲ್ಪಡುವುದು (ಖಡ್ಗಲಿ. ೫-೭೧). ಸೂಳಾಯ್ತ: ೧. ಶ್ರೀಮನ್ಮಹಾಪಸಾಯಿತಂ ಸೂಳಾಯ್ತರಾಧಿಷ್ಠಾಯಕಂ (ಎಇ. XXVII, ೭೬-೫೦; 1114); ಗೋಳಾಯ್ತ, ಸೂಳಾಯ್ತ . . . ಕಂಚುಗಾಱರ ಕೇರಿ ಮೆಱೆದಿಹವು (ಸಾಳ್ವಭಾ. ೨-೮). ೨. ಎಚ್ಚರಿಸಿ ಸಿದ್ಧಂ ಮಾಳ್ಪರ್ ಸೂಳಾಯ್ತರುದಯರಾಗವ ಪಾಡುತುಂ (ಸಂಸಪ. ೮-೧೭). ಸೂಟೂಯಿತ: ೧. ಪರಸುವಜ್ಜರುಂ ಪರಿದುರುಳ್ಳ ಗುಜ್ಜರುಂ ಸುಟಿವ ಸೂಟೂಯಿತರುಂ (ಲೀಲಾವ. ೭-೬೮ ವ). [ಸೂಟ್ + - ಆಯ್ತ]

ಸೂಟೂಯ್ತೆ (ನಾ). ಸೇವಕಿ; ದಾಸಿ; ಪರಿಚಾರಿಕೆ: ವರಮಂ ಬೇಡೆಂದಂಬಿಕೆಗೆ ಪೇಳ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಟೂಯ್ತೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡೆ (ಪಂಪಭಾ. ೧-೮೫ ವ). [ಸೂಟೂಯ್ತ + - ಎ$_2$]

ಸೂಟೊಱಿ (ಕ್ರಿ). ಮತ್ತೆ ಮತ್ತೆ ಕಾದಾಡು; ಪುನಃ ಪುನಃ ಹೋರಾಡು: ಪರಿವಡಿಯಂಕದಂತೆ ಪೊಱಮೆಟ್ಟದೆ ಸೂಟೊಱೊಳ್ಪಿದುಳ್ ಸಿಡಿಲ್ತರೆ ಪೊಱಸಾರ್ದು ಸನ್ನೆದಗರಂದದೆ ತಾಗುವ ಝಟ್ಟಿಮಲ್ಲರಂತಿರೆ . . . ಪೋರ್ದುವಾನೆಗಳ್ (ವರ್ಧಪು. ೮-೫೬).

[ಸೂಟ್ + ಇಱಿ$_1$]

ಸೂಟು 'ಸೂಟ್' ನೋ.

ಸೂಟುಗರೆ 'ಸೂಟ್ಗರೆ' ನೋ.

ಸೂಟುಗಾಳೆ, ಸೂಳುಗಹಳೆ (ನಾ). ಸೂಚನೆಯನ್ನು ಕೊಡಲು ಊದುವ ಕಹಳೆ: ನಿಶಾವಸಾನಸಮಯದೊಳ್ ಪಯಣದ ಸೂಟುಗಾಳೆಗಳಂ ಪಿಡಿದು ಬೀಡೆತ್ತಲುದ್ಯೋಗಂಗೆಯ್ಯುದಂ ಕಂಡು (ಪಂಚತಂ. ೧೨೬-೧೨). ಸೂಳುಗಹಳೆ: ಕೇಳುತವೆ ಹರಿಬಲರ ಸನ್ನೆಯ ಸೂಳುಗಹ[ಪಾಠಂ. ಗಾ]ಳೆಯ ದನಿಯನಾ ಗೋಪಾಲಬಾಲವ್ರಾತ ಹೊಱವಂಟುದು ತತುಕ್ಷಣಕೆ (ನಿಭಾಗ. ೧೦-೧೨-೩). [ಸೂಟು(< ಸೂಟ್) + ಕಾಳೆ(< ಕಹಳೆ)]

ಸೂಟುನುಡಿ 'ಸೂಟ್ನುಡಿ' ನೋ.

ಸೂಟುಲಿಗೆಲೆ (ಕ್ರಿ). ಪರಸ್ಪರ ಮಾತನಾಡು; ಹರಟು: ಸೂಟುಲಿಗೆಲೆಯುತ್ತು ಮರ್ಪ ತರುಣೀಜನಮಂ ನೃಪನೊಲ್ದು ನೋಡಿದಂ (ಲೀಲಾವ. ೫-೧೦೧).

[ಸೂಟ್ + ಉಲ್$_2$ + ಕೆಲೆ]

ಸೂಟುವರಿ 'ಸೂಟ್ವರಿ' ನೋ.

ಸೂಟುವಾಳ 'ಸೂಟ್ವಳ' ನೋ.

ಸೂಟೇಸು (ನಾ). ಮತ್ತೆ ಮತ್ತೆ ಮಾಡುವ ಬಾಣಪ್ರಹಾರ; ಬಾರಿಬಾರಿ ಬೀಳುವ ಅಂಬಿನ ಹೊಡೆತ: ಪಾಯ್ತರಾತಿಯ ಮೆಯ್ಯ ನೆತ್ತರಂ ಕಂಡು ಸೂಟೇಸಿನೊಳಿವನ ನೆತ್ತರೊಕ್ಕೊಡಂ ತನಗೆ ಬಸಿಱಾಱೆ ಕುಡಿಯಲುಂ ದ್ರೌಪದಿಯ ಕೇಶಪಾಶಮಂ ತೊಯ್ದು ಮುಡಿಯಲುಂ ನೆಱೆಯದೆಂದು (ಪಂಪಭಾ. ೧೨-೧೪೮ ವ). [ಸೂಟ್ + ಏಸು$_2$]

ಸೂಟ್ಕೈಸು (ಕ್ರಿ). ಸರದಿಯಂತಾಗು; ಕ್ರಮವಾಗು: ಸೂಟ್ಕೈಸೆಚ್ಚೆಚ್ಚು ಬಿಲ್ಲಂ ರಥದ ಕುದುರೆಯಂ ಸೂತನಂ . . . ಪಾರ್ದಾರ್ದುಱದಿಸೆ ಮುಳಿಸಿಂ ನೂರ್ವರುಂ ಪೊನ್ನ ತಾಟ್ಗಳ್ ಸೂಟೊಳ್ ಬೀಟ್ಟುಂತೆ ಬಿಟ್ಟರ್ (ಪಂಪಭಾ. ೧೧-೯೫). [< ಸೂಟ್ + -ಇಸು$_3$]

ಸೂಟ್ಗರೆ, ಸೂಳುಗರೆ, ಸೂಟುಗರೆ (ಕ್ರಿ). ೧. ಸುದ್ದಿಯನ್ನು ಒಯ್ಯು; ದೂತಕಾರ್ಯವನ್ನು ಮಾಡು: "ಸೂಟ್ಗರೆವನೆನಲ್ಕೆ ದೂದವಂ" (ಚತುಸಿ. ೬. ೨. ೪೫). ೨. ಯುದ್ಧವನ್ನು ಘೋಷಿಸು; ಕದನಕ್ಕೆ ಕರೆ: ಸೂಟೂಯ್ತಂ = ಸೂಟ್ಗರೆವಂ (ಶಮದ. ಪರಿ. ೧). **ಸೂಳುಗರೆ:** ೨. "ರಣಕೆ ಕರೆವವನಕ್ಕು ಸೂಳುಗರೆವವನೆನಲ್" (ಕಶರ. ೧೧೦). **ಸೂಟುಗರೆ:** ೨. "ಪುಯ್ಮಲ್ಗೆ ಕರೆವವಂ ಸೂಟುಗರೆವವನೆನಿಕು" (ಶಬ್ದಮಂ. ೪೬). [ಸೂಟ್ + ಕರೆ$_1$]

ಸೂಟ್ಗಲ್ (ನಾ). ಒಂದು ಊರಿನ ಹೆಸರು: ವಟವೃಕ್ಷಂ ಪ್ರಾಪ್ತಃ ಅಪರೋಗ್ರಾಮಃ ಸೂಟ್ಗಲ್ ಸಪ್ತತ್ಯಭ್ಯನ್ತರೆ ನಿಗುಂಬೂರು ನಾಮಗ್ರಾಮಃ ಸ್ವಕೀಯನಾಮಾಂಕಿತ ರಾಜಾದಿತ್ಯ ಮಂಗಳಮಿತಿ (ಮೈಶಿ. ೧೯೬೫, ೪೦-೬೬; 951?). [ಸೂಟ್ ? + ಕಲ್$_3$]

ಸೂಟ್ಗಿಡು (ಕ್ರಿ). ಕ್ರಮತಪ್ಪು; ರೀತಿಗೆಡು: ಎಯ್ದೆ ಸೂಟ್ಗಿಡದೆ ಪಂಚಪದಂಗಳನೋದುತಿರ್ಪ ನಾಲಗೆ ಗಡಮೇಂ ಸಮಾಧಿವಿಧಿಯಂ ನೆಱೆ ತಾಳ್ದಿದನೋ ಮಹಾಬಲಂ (ಆದಿಪು. ೨-೬೦). [ಸೂಟ್ + ಕಿಡು (< ಕೆಡು$_1$)]

ಸೂಟ್ಗೆಯ್ (ನಾ). ಒಂದರ ನಂತರ ಒಂದು ಸರದಿಯಂತೆ ಚಲಿಸುವ ಕೈ: ತುಡುವ ಬಿಡುವ ಸೂಟ್ಗೆಯ್ಯ ಬೇಗಂಗಳಂ ನಿಟ್ಟಿಸಲಾರ್ಗಂ ಬಾರದಂತಾಗಸದಳಮಿಸೆ ತದ್ರಾಜಚಕ್ರಂ ಪೊದಟ್ಟ[ರ್ಬಿ]ಸಿದತ್ತು (ಪಂಪಭಾ. ೧೨-೨೦). [ಸೂಟ್ + ಕೆಯ್$_2$]

ಸೂಟ್ಗೊಳ್ (ಕ್ರಿ). ಸರದಿಯನ್ನು ಹೊಂದು,—ಪಡೆ: ಈ ಸೂಳೆವಾಡಂ ನೀಮುಮಾಮುಂ ಸೂಟ್ಗೊಂಡು ಪಾಡುವಂ (ಚಕವಿ. ೬-೧೫೪ ವ). [ಸೂಟ್ + ಕೊಳ್$_1$]

ಸೂಟ್ಜ್ವರ (ನಾ). ಅವಧಿ ಮುಗಿಯುವವರೆಗೂ ಬಿಡದಿರುವ ಜ್ವರ; ಗಡುವಿನ ಜ್ವರ: ಪೆಡೆಯಕ್ಕಿಯ ಬೇರಂ ಕಟ್ಟಿಡುವುದು ಕರ್ಣದೊಳೆ ಪಿಂಗುಗುಂ ಸೂಟ್ಜ್ವರಮುಂ (ಲೋಕೋಪ. ೯-೨೩); ಕೂಡಿ[ರೆ]ಚಾಯಾಶುಷ್ಕಂ ಮಾಡಿ ನೃಮೂತ್ರದೊಳೆ ನಸ್ಯಲೇಪನ ವಿಧಿಯಿಂ ಪೀಡಿಸುವಖಿಲವಿಷಂ ಬಿಟ್ಟೋಡುಗುಮಾ ಸೂಟ್ಜ್ವ[ಪಾಠಾಂ. ಸೂಳ್ವ, ಸೂದ್ವಿ] ರಂಗಳನಿತುಂ (ಖಮದ. ೮-೫). [ಸೂಟ್ + ಜ್ವರ]

ಸೂಟ್ನುಡಿ, ಸೂಳ್ನುಡಿ$_2$, ಸೂಟುನುಡಿ (ನಾ). ಸರದಿಯ ಪ್ರಕಾರ ಆಡುವ ಮಾತು; ಸಂಭಾಷಣೆ: ಜಾರರಂ ಸೆಱೆಯಿಡುವಾನನಂ ಪದಿರನಾಡುವ ಸೂಟ್ನುಡಿ ದುಷ್ಪಚೇಷ್ಟೆಯಂ ಮೆಱೆಯಿಪ ತಮ್ಮ ಭಂಗಿ . . . ರಜನಿರಂಜನಮಾದುದು ಬಂಧಕೀಜನಂ (ಸೂಕ್ತಿಸು. ೮-೮೫). **ಸೂಳ್ನುಡ್ಡಿ:** ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತ ಕಾಣಾ ರಾಮನಾಥಾ (ದೇವಾವ. ೧-೧); ಚಂಡವೇಗದಿನೊರ್ವ ಪಾಂಥನೆಯ್ತರುತೆ ಸಱೆವಿಂಡಿಯಾಗೆಸೆವ ಗೋಪಿಯನಿಕ್ಕುವಾಟಿಯೊಳ್ ಕಂಡೊಂದೆರಳ್ಮೊಱು ಸೂಳ್ನುಡಿಗಳಿಂದೊಲಿಸಿಕೊಂಡು (ಪದ್ಮರಾ. ೮-೧೯); ಮೆಱೆನುಡಿ ಯಾವಾಗ ಸೂಳ್ನುಡಿ ಯಾವಾಗ . . . ಮುದ್ದುನುಡಿಗಾವ ಹೊತ್ತೆಂದು ಕಿಱುನುಡಿಯಿಂದ ಪಾಡಿದಳು (ಧರಚಿ. ೧೧-೩೨); ಅವನ ಪರಿಪಕ್ವವಾದ ಅನುಭವರಸಾಮೃತಪೂರಿತವಾದ ಸೂಳ್ನುಡಿಗಳು . . . ಹತ್ತನೆಯ ಶತಮಾನದ ಸಾಲಿಗೆ ಬಂದಿದ್ದಿರಬಹುದೆಂಬುದರಲ್ಲಿ ಸಂದೇಹವಿಲ್ಲ (ಸಾಹಿಸ. ೩೬). **ಸೂಟುನುಡಿ:** "ಸೂಟುನುಡಿ ಸಲ್ಲಾಪವೆಂಬುದು" (ಹಲಾಯು. ೨೪-೧೪೯); "ವ್ಯಾಪಿಸುವ ಸೂಟುನುಡಿ ಸಲ್ಲಾಪಮಕ್ಕುಂ" (ಮಂಗರಾ. ೨೭-೫). [ಸೂಟ್ + ನುಡಿ$_2$]

ಸೂಟ್ಪಡು (ಕ್ರಿ). ಸರದಿಯನ್ನು ಹೊಂದು, — ಪಡೆ: ಸೂಟ್ಪಟ್ಟ [ಪಾಠಾಂ. ಕೈಪಟ್ಟ] ನಾಗಳ್ ಜವಂ ಪಿಡಿದೀಡಾಡುವ ಮಾಟ್ಕೆಯಂತೆ ಪಲರಂ ಕೊಂದಿಕ್ಕಿ . . . ಉರುಳ್ಳಿ ಕಟ್ಟಿರಿಪುವಂ ಮುಂದಿಕ್ಕಿದಂ ದ್ರೋಣನಾ (ಪಂಪಭಾ. ೨-೬೨). [ಸೂಟ್ + ಪಡು$_1$]

ಸೂಟ್ಪಡೆ 'ಸೂಟ್ಪಡೆ' ನೋ.

ಸೂಟ್ಪಾಡು, ಸೂಳುಪಾಡು (ನಾ). (ಒಂದು ಕ್ರಮ ಅಥವಾ ಏರ್ಪಾಡಿಗೆ ಅಳವಟ್ಟ) ಸರದಿ,— ಪಾಳಿ: ಬಿಡದುರವಣಿಸುವ ಬಿಜುಬನೊಳಿನಿಯನ ಮಿಡುಕ ಸ್ಫರಿಸದೆ ಮೇಲ್ಮೆಯೊಳು ಪಡಿಬರಿಸುತ ಸೂಟ್ಪಾಡುವಿದಿದು ಪಾಯ್ದೊಡನೆ ಪಲ್ಲಟ ಕುಜ್ಜುಗಿಪುದು (ಚಕವಿ. ೬-೧೫೭ ಸಾಂಗತ್ಯ ೬೦). **ಸೂಳುಪಾಡು:** ಒಡೆದರಿಱಿದರು . . . ಕೋಳಾಹಳದ ಬಲುಗಡಿಯ ಭಟರಬ್ಬರಿಸಿ ಸದೆದರು ಸೂಳುಪಾಡಿನ [ಪಾಠಾಂ. ಳಿನ]ಲಿ (ತೊರರಾ. ೫-೭-೨); ಡೋಳು ತಮ್ಮಟದಿಂದ ಸೂಳುಪಾಡಿನಲೂದುತಿಹ ಹೆಗ್ಗಾಳೆಯಿಂದಲಿ (ದೇವೀಮಾ. ೩-೫೩). 'ಸೂಳುಪಾಳಿ', 'ಸೂಳುಪಾಳು' ಪರಾ.

[ಸೂಟ್ + ಪಾಡು$_3$]

ಸೂಟ್ಪೊಯ್ (ನಾ). ಸರದಿಯ ಪ್ರಕಾರ ಪರಸ್ಪರ ಹೊಡೆಯುವ ಏಟು,— ಹೊಡೆತ: ಯುದ್ಧಕೇಳಿಧುರೀಣರ್ ದನುಜಾರಿಯುಂ ದನುಜನುಂ ಸೂಟ್ಪೊಯ್ಗಳಿಂ . . . ಪೊಯ್ದರ್ ಗದಾದಂಡದಿಂ (ಜಗಪ. ೯-೭೫). [ಸೂಟ್ + ಪೊಯ್$_2$]

ಸೂಟ್ಮಾತು, ಸೂಳುವಾತು (ನಾ). ಸರದಿಯ ಪ್ರಕಾರ ಆಡುವ ಮಾತು; ಪರಸ್ಪರಾಲಾಪ; ಸಂಭಾಷಣೆ: ಇರ್ವರ್ ಪದಿರಿನಿಂ ನುಡಿವ ಸೂಟ್ಮಾತುಗಳಂ ಕಾಪಿನವರುಂ ಪೊಟಲ ಜನಮುಂ ಕೇಳ್ದು (ವಡ್ಡಾರಾ. ೧೨೫-೧೦); ಸೂಟ್ಮಾತನಾಡಿ ಸೋಲ್ತುಂ ಕಂದರ್ಪದೇವಕಟಾಕ್ಷಪ್ರೇಷಿತ ಪೀಡಮರ್ದಕನಿಂದರ್ಧಚಂದ್ರನಂ ಪಡೆವುದುಂ (ಲೀಲಾವ. ೨-೧೨೪ ವ). **ಸೂಳುವಾತು:** ಸೂಳುವಾತಿನ ಹೆಂಬಳಿಯ ಹೀಹಾಳಿಕೆಯ ಹೇವಗಳ ಮನದುಬ್ಬಾಳಿನಿಂದೆಚ್ಚಾಡಿದರು ಮೆಚ್ಚಲು ಸುರವ್ರಾತ (ತೊರರಾ. ೬-೫೦-೧೨).

[ಸೂಟ್ + ಮಾತು$_1$]

ಸೂಟ್ಮೆಟ್ಟು (ನಾ). ಸರದಿಯ ಪ್ರಕಾರ ತುಳಿಯುವ ತುಳಿತ: ಮೆಟ್ಟಿದ ಸೂಟ್ಮೆಟ್ಟುಗಳಿಂದೆ ಬೆಟ್ಟು ಕಟಲಲ್ಕಳ್ಳಾಡೆ ಭೂಭಾಗಮಾದುದು ದುರ್ಯೋಧನ ಭೀಮಸೇನರ ಗದಾಯುದ್ಧಂ ಮಹಾಭೈರವಂ (ಪಂಪಭಾ. ೧೩-೯೪). [ಸೂಟ್ + ಮೆಟ್ಟು$_2$]

ಸೂಟ್ಪಗೆ (ನಾ). ಎದುರಾಳಿತನ; ಪ್ರತಿಸ್ಪರ್ಧೆ: ಆತಂ ಮನದೊಳ್ ಮಚ್ಚರಿಪನೆಂಬ ಸೂಟ್ಪಗೆ [ಪಾಠಾಂ. ಪುಳ್ಪಗೆ, ಹಳಿವಗೆ] ಬಗೆಯೊಳ್ ನನೆಕೊನೆವೋದಂತಿರೆ ನಿಡುನನೆಗಳ ನಾಯ್ಕುಕೊಂಡು ಮನಸಿಜನೆಚ್ಚಂ (ಲೀಲಾವ. ೩-೫೧). [ಸೂಟ್ + ಪಗೆ$_2$]

ಸೂಟ್ಪಡೆ, ಸೂಟ್ಪಡೆ (ಕ್ರಿ). ೧. ಸರದಿಯನ್ನು ಪಡೆ,—ಹೊಂದು. ೨. ಅವಕಾಶವನ್ನು ಪಡೆ,—ಹೊಂದು: ಸೂಟ್ಪಡೆದ ಕೂಟಂ ಪಲ್ಲಟಂಬಾಯ್ಯ ಬಾಯ್ಮಱುಕಂ ತಾಂಗಿಗಟಲ್ಕ ನಾಣಿಲಿತನಂ ಬೆಂಡೇಟ್ಟ ಕಣ್ . . . ಕೂಟದೊಳ್ ನಲ್ಲರಾ (ಚಂದ್ರಪ್ರ. ೮-೬೮). **ಸೂಟ್ಪಡೆ:** ೧. ಭಾರತಂ ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂಚಲೆದಪೆಯಣ್ಣ ಸೂಟ್ಪ[ಪಾಠಾಂ. ಟ್ಟ]ಡೆಯಲಪ್ಪುದು ಕಾಣ ಮಹಾಜಿರಂಗದೊಳ್ (ಪಂಪಭಾ. ೧೦-೨೩). ೨. ಪಲದಿವಸಂ ಸೂಟ್ಪಡೆಯದೆ ಕರೆವುದರ್ಕಾಸೆವಟ್ಟು ಮಾತಟ್ಟದ ಕೆಳೆಯನನೆಮ್ಮಬ್ಬೆಯನೊಡಂಬಡಿಸಲಣ್ಮೆನೆಂದು ಪೋಗಲ್ವೇಟ್ಟು (ಶಾಂತಿಪು. ೮-೭೭ ವ); ಏಕೆಂದೊಡೆಂದುಮೇನ್ ತಿರಿತರ್ಪಟಲ್ ತನ್ನಿಚ್ಛೆಯಿನ್ ಸೂಟ್ಪಡೆದು ಬಂದಪುದು ಎಲ್ಲ ಎರ್ದೆಗಳ್ಗಂ (ಬಿಜ್ಜಪ್ರ. ೧೬-೩೨೩). [ಸೂಟ್ + ಪಡೆ$_1$]

ಸೂಟ್ಪನೆ (ನಾ). ಒಂದಾದನಂತರ ಒಂದಿರುವ ತಾಳೆವೃಕ್ಷ; ಕ್ರಮವಾಗಿರುವ ತಾಳೆಮರ: ಪಲವುಂ ಬಿಲ್ವಿಲ್ಲಗಳೊಳ್ ಬಿಲ್ಲನೊಂದನೆ ಕೊಂಡೇಱಿಸಿ ನೀವಿ ಜೇವೊಡೆದಡುರ್ತೊಂದಂಬಿನಿಂದೊಂದು ಸೂಟ್ಪನೆಯಂ ಪಾವಿನ ಬೆನ್ನೊಳಾದುವನತಿಪ್ರಾರಂಭದಿಂದೇಱುಮಂ ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂದ್ರಾಂತಕಂ (ಕಾವ್ಯಾವ. ೬೫೧). [ಸೂಟ್ + ಪನೆ]

ಸೂಟ್ಪರಿ, ಸೂಳ್ಪರಿ, ಸೂಟುವರಿ (ಕ್ರಿ). ಸರದಿಯ ಪ್ರಕಾರ ಓಡು,— ಧಾವಿಸು: ಕೆನ್ನೆತ್ತರೊಳೊರ್ವರೊರ್ವರಂ ತಳ್ಳಿಱಿದುಂ ಬೊಬ್ಬಿಱಿದುಂ . . . ಸೂಟ್ಪರಿದುಮಾಡುವಾಗಳ್ (ಪಂಪಭಾ. ೧೨-೧೫೮ ವ). **ಸೂಳ್ಪರಿ:** ಬಂಗಾರದ ಕಾವಿನ ಚಾಮರಗಳನ್ನು ಹಿಡಿದು ಸೂಳ್ಪರಿದು ತೋಳುಗಳನ್ನು ನೆಗಹಿ ಢಾಳಿಸುತ್ತಿದ್ದರು (ಮುಂಬಯಿ. ೫-೨೯೯). **ಸೂಟುವರಿ:** ಸೂಟಿಓಟುತೆವರಿವಾಗಳ್ ಕಣ್ಗಳ ಬೆಳಂತಿಗೆ ಬೆಳ್ಪು ಪರಿಮಳಂ ಪರಿವರಲ್ಕೊಂಚಲ್ಗೆ ದುಕೂಲಚೇಲವಂ ಬಾಸಣಿಸೆಯುಂ (ಅನಂಪು. ೭-೧೧ ವ). [ಸೂಟ್ + ಪರಿ$_2$]

ಸೂಟ್ಪರು, ಸೂಳುವರು (ಕ್ರಿ). ಮತ್ತೆ ಮತ್ತೆ ಬರು: ಪೂಗೆ ಸೂಟ್ಪರುತಿರೆ ತುಂದಿ ಕಣ್ ಮನಸಿಜಾತನ ಶಾತಶರಾಧಿದೇವತಾಪರಿಕರದಂತಿರ್ದರಲರೋಳಿಯನೆತ್ತಿದ ಮಾಲೆಗಾರ್ತಿಯರ್ (ಕುಸುಮಾ. ೨-೧೦೯). **ಸೂಳುವರು:** ೨. (ರತಿಸುಖದ ಸರದಿಗಾಗಿ) ಕಾಂತನ ಬಳಿ ಬರು: ಅಂತು ಬೆಳುವಸದನವನಳ್ತಿಯೊಳಾಂತು ಕಾಂತನ ಸೂಳು [ಪಾಠಾಂ. ಳೆ]ವಂದಾ ಕಂತುಕೇಳಿಸುಖಸುಧಾರಸಕಡಲೊಳೋಲಾಡೆ (ಸಾಳ್ವಭಾ. ೩-೩೭).

[ಸೂಟ್ + ಬರು$_1$ (< ವರ್)]

ಸೂಬ್ಳಳ, ಸೂಬುವಾಳ (ನಾ). (ಓಲಗದಲ್ಲಿ) ಸಮಯ ಸಂದರ್ಭಗಳನ್ನು ಸಾರುವವನು, – ಘೋಷಿಸುವವನು: ಮಧುಡೂತಿ ನಾಗಲತೆ ಮಲ್ಲಿಗೆ ಮಾಲತಿ ಬನ್ನಿಮೆಂದು ಸೂಬ್ಳಳನವೊಲೆತ್ತಲುಂ ಕರೆಗುಮಾ ಬನದೊಳ್ ಕಸುಗಣ್ಣೆ ಕೋಕಿಲಂ (ಅಸಪು. ೬-೧೯). **ಸೂಬುವಾಳ**: ಪುರಜನಪರಿಜನವಾಪ್ತಜನಂಬೆರಸು ಒಪ್ಪೋಲಗಂಗೊಟ್ಟು ಕುಳಿತೀ ಸಮಯಂಬಾರ್ದು ಕರೆವ ಸೂಬುವಾಳ[ಪಾಠಾಂ. ಸೂಳೆವಳ್ಳ]ರ ಕೊರಳ ಸರದ ಬಳಿವಿಡಿದು ನೂತ್ನರತ್ನದಂತೆ ಬಂದೋಲಗದೊಳು . . . ವಿರಾಜಿಸುತ್ತಿರಲು (ಧರ್ಮಪ. ೨-೧೮ ವ). [ಸೂಬು + -ವಳ]

ಸೂಬ್ಸರಿ, ಸೂಳ್ಸರಿ (ನಾ). ಕಾಲಕಾಲಕ್ಕನುಗುಣವಾಗಿ ಬರುವ ಮಳೆ: ಬೇಸಗೆಯ ನೇಸಱ ಸೂಡೆನ್ನದೆ . . . ಕಜೆವ ಕಾರ ಸೂಬ್ಸರಿಯ ಜಿನುಂಗೆನ್ನದೆ ಮರವಟ್ಟು ಮೋನದಿಂ ಪುರ್ಚುಗೊಂಡನಂತುಮಿರ್ಪ ಕಾಡಾಡಿ ರಾಯನೊಂದು ಗೆಯ್ಮೆಯಂ! (ರಾಮಾಶ್ವ. ೬೦-೨). **ಸೂಳ್ಸರಿ** : ಮೆಲ್ಸರಿ ಸೂಳ್ಸರಿ . . . ಬಲ್ಸರಿ ಕಾಲ್ಸರಿ ಸಾಲ್ಸರಿ ಸಲೆ ಸುರಿದು ಕಜೆದುವಿರುಳುಂ ಪಗಲುಂ (ರಾಜಶೇ. ೮-೧೧೨); ಸಾಲ್ಸರಿ ಸೂಳ್ಸರಿ ಕಾಲ್ಸರಿ ಸುರಿದವು (ಕ್ರೌಚಪ್ರ. ೫೨-೧೭). [ಸೂಬು + ಸರಿ]

ಸೃಕ್ಕಂದನ (ನಾ). ಹೂವಿನ ಹಾರ ಮತ್ತು ಸುಗಂಧ: ಘನಸಾರ ತಾಂಬೂಲ ಸೃಕ್ಕಂದನಾದಿಗಳನನುಗೊಳಿಸಿ (ದುರಪು. ೨೬-೮); ಇಹಲೋಕದ ಸೃಕ್ಕಂದನ ವನಿತಾದಿ ಸಕಲವಿಷಯಭೋಗಗಳು ಕರ್ಮಜನ್ಯವಾಗಿ ಅನಿತ್ಯವಾಯಿತು (ಅಶ್ವಸ್ಯ. ೯-೧೪). [ಸಂ.]

ಸೃಕ್ವ (ನಾ). ಬಾಯಿಯ ಕೊನೆ; ಕಟವಾಯಿ: "ಸೃಕ್ವಮೆಂಬುದು ಕಡೆವಾಯ್" (ಹಲಾಯು. ೮೭-೩೭೬ ವ); ಆ ಬಾಲಶಾರ್ದೂಲಮುಖರೋಮಕರಾಲಸೃಕ್ವೋಪಾಂತ ಪ್ರರೂಢಶ್ಮಶ್ರುಜಾಲಂ (ಆದಿಪು. ೧೩-೪೫ ವ); ಮೃಗಶಿಶುಗೆ ನಗಾಂತರದಲ್ಲಿ ಹರಿಣನಿತ್ತುದು ಕರುಣಿಸಿ ನಿಜಸೃಕ್ವದೂರ್ವೆಯಂ (ಜಗಪ. ೪-೨೩); ವಿತತ ಸೃಕ್ವದ ಲೋಳಿಗಳ ಸಂಸೃತ ಜಠರಜ ಸ್ವೇದಜಲಲಾಲಿತಹಯಾವಳಿ ಕಳನ ಗೆಲಿದುವು ಹರಿಯ ನೇಮದಲಿ (ಕುವಾಭೀ. ೬-೪). [ಸಂ.]

ಸೃಕ್ವಿಣಿ (ನಾ). [ಅಶ್ವಶಾ] ಕುದುರೆಯ ಕಟವಾಯಿಯ ಸಂದು: ಕಟವಾಯಂ ಸಂಧಿಗಳಂ ಘಟಿಯಿಸುಗುಂ ಸೃಕ್ವಿಣಿಯದೆಂಬ ಪೆಸರುಂ (ಅಶ್ವಶಾ. ೯-೪); ಕಟವಾಯ ಸಂದುಗಳಿಗೆ ಸೃಕ್ವಿಣಿಯೆಂಬ ಪೆಸರು (ಅಶ್ವಟೀ. ೫೮-೭). [ಸಂ. ಸೃಕ್ವಿನೀ]

ಸೃಗಾಲ, ಸೃಗಾಳ (ನಾ). ನರಿ; ಜಂಬುಕ: ಕಾಕೋಳೂಕ ಸೃಗಾಲ ಶಾರ್ದೂಲೋಷ್ಟ್ರ ಖರಮುಖಂಗಳನನುಕರಿಸುವ ಮಹಾಬೀಭತ್ಸುಕುತ್ಪಿತೋತ್ಪತ್ತಿಸ್ಥಾನಂಗಳೊಳ್ (ಪುಚಮಾ. ೧೧-೪೧ ವ); ಸಂಗೀತದ ರಸದ ಮಧುವಿಂಗಾಂತ ಕಿವಿ ವಾಯಸ ಸೃಗಾಲಧ್ವನಿಗೆ ಸೊಗಸಿತೆ ತಂದೆ (ಕುವಾಗ. ೬-೨೦). **ಸೃಗಾಳ**: "ಘೇರವಂ . . . ಘೇರು ಸೃಗಾಳ ಮಾಕ್ರೋಷ್ಟುವೆನೆ ನರಿಯಕ್ಕುಂ" (ಮಂಗರಾ. ೪೮-೧೦); ಆ ಬಿಲಂಗಳ ಮೇಗಣಟ್ಟುಗಳೊಳ್ ತಲೆಕೆಳಗಾಗಿರ್ದ ಖರಕರಭ ಸೃಗಾಳ ಸಾರಮೇಯಾಕಾರಂಗಳಪ್ಪುತ್ಪತ್ತಿಸ್ಥಾನಂಗಳೊಳ್ ಪುಟ್ಟಿ (ಶಾಂಪು. ೭-೪೩ ವ). [ಸಂ.]

ಸೃಗಾಳ 'ಸೃಗಾಲ' ನೋ.

ಸೃಜನ (ನಾ). ಉತ್ಪತ್ತಿ; ಹುಟ್ಟು: ಕಾಣ್ಬುದು ದಿವ್ಯೋದ್ದೇಶದ ಪೂರಣನವಸೃಷ್ಟಿಯ ಜನನ ನವಶೋಭೆಯ ಸೃಜನ (ಕರುಶ್ರಾ. ೯೬-೮). [< ಸಂ. ಸೃಜ್]

ಸೃಜನಶಕ್ತಿ (ನಾ). ಉತ್ಪತ್ತಿಮಾಡುವ ಶಕ್ತಿ; ಸೃಷ್ಟಿಶಕ್ತಿ: ಮಾನವೀಯಪ್ರಜ್ಞೆಯ ಸೃಜನಶಕ್ತಿಯ (Creative) ಆವಿರ್ಭಾವವನ್ನು ಇಲ್ಲಿ ಕಾಣಬಹುದಾಗಿದೆ (ಕರ್ನಾಬು. ೫೪೨). [ಸೃಜನ + ಶಕ್ತಿ]

ಸೃಜನಶೀಲ (ಗು). ೧. ಉತ್ಪತ್ತಿ ಮಾಡುವ ಗುಣವುಳ್ಳ. (ನಾ). ೨. ಉತ್ಪತ್ತಿ ಮಾಡುವ ಗುಣವುಳ್ಳುದು; ಸೃಷ್ಟಿಸುವ ಸ್ವಭಾವವನ್ನು ಹೊಂದಿರುವುದು: ಸಾಮಾನ್ಯವಾಗಿ ಮಗುವಿನಲ್ಲಿ ಸೃಜನಶೀಲವಾದ ಕಲ್ಪನಾಶಕ್ತಿಯು ಸಮೃದ್ಧವಾಗಿರುವುದೆಂದು ಭಾವಿಸುವುದು ತಪ್ಪು (ಕಥಶ. ೯೬). [ಸೃಜನ + ಶೀಲ]

ಸೃಜನಾತ್ಮಕ (ಗು). (ಹೊಸದಾಗಿ) ಸೃಷ್ಟಿಯಾದ; ಕ್ರಿಯಾತ್ಮಕವಾದ: ವ್ಯಾಖ್ಯಾನಗಳ ಅಡಿಯಲ್ಲಿ ಸಿಕ್ಕಿ ಸೃಜನಾತ್ಮಕಸಾಹಿತ್ಯವು ಸಮಾಧಿಯಾಗುವಂತಹ ಅಪಾಯವಿರುವ ಈ ಯುಗದಲ್ಲಿ, ಅವುಗಳಿಗೆ ನಿಶ್ಚಯವಾಗಿಯೂ ತಕ್ಕ ಬೆಲೆ ಕೊಡಬೇಕು (ಸಾಹಿಪ್ರ. ೨೫೮). [ಸೃಜನ + ಆತ್ಮಕ]

ಸೃಜಯಿಸು 'ಸೃಜಿಸು' ನೋ.

ಸೃಜೆಯಿಸು 'ಸೃಜಿಸು' ನೋ.

ಸೃಜಿಸು, ಸೃಜಯಿಸು, ಸೃಜೆಯಿಸು (ಕ್ರಿ). ೧. ಉಂಟುಮಾಡು; ಉತ್ಪತ್ತಿ ಮಾಡು; ಸೃಷ್ಟಿಸು: ಇನಿವಿರಿದವಸ್ಥೆಗಳ ನೀನನಿಮಿತ್ತಂ ಸೃಜಿಸಿಯುಂ ನಿಜಂ ನಿಷ್ಕರುಣಾತ್ಮನೆಯಾಗಿ (ಕಾದಾಬಾ. ೩೪೩); ಒಮ್ಮೆ ಸಂಹರಿಸುವನು ಸೃಜಿಸುವನೊಮ್ಮೆ (ಕಾಶಿರಾ. ೨೩-೧೭); ಅಜನ ರೂಪಿಂದಮಿಳಲೋಕವ ಸೃಜಿಸುವನು (ತೊರರಾ. ೧-೯-೩೬). ೨. ರಚಿಸು; ನಿರ್ಮಿಸು: ಬಂಡೆಯ ಕೊರೆದು ವರಶಿಲ್ಪಿ ಭುವನಸುಂದರಕಲಾಲಕ್ಷ್ಮಿಯಂ ಸೃಜಿಪಂತೆ (ಶ್ರೀರಾಮಾ. ೨೫-೬೭ಗ); ಋಷ್ಯಾಶ್ರಮದ ಶಾಂತಿಯ ಆವರಣವನ್ನು ಸೃಜಿಸಲೂಬಹುದು (ಪಾಂದಸ. ೩೩೩). **ಸೃಜಯಿಸು**: ೧. ಸೃಜಯಿಸೆ ನನಮುಂ ಮಾದ್ಯದ್ಗಜಪತಿಗಮನೇ ವೃತ್ತಂ . . . ಭುಜಗ ಶಿಶುಸೃತಂ ನಾಮಂ (ಛಂದೋಬು. ೨-೧೦೪). **ಸೃಜೆಯಿಸು**: ೧. ಧರೆಯೊಳ್ ಧರ್ಮಾರ್ಥದಿಂ ನೀಂ ಸೃಜೆಯಿಸಿ ನೆಗಟ್ದೀ ವಿಪ್ರಸಂತಾಸದೊಂದಾಚರಣಂ ನೀನಂದ ಪಾಂಗಿಂ ಕೃತಯುಗದೊಳ್ ದೆಲ್ಲಲ್ಲುಂ (ಆದಿಪು. ೧೫-೨೬); ನಿನ್ನೀ ಶರೀರದಿಂ ಮಕ್ಕಳಂ ಪಡೆದು ಸೃಜೆಯಿಸುವುದೆಂದೊರೆದು ನಿರವಯನಾಗಲು (ಚಿಪು. ೧೩-೧೨). [< ಸಂ. ಸೃಜ್ + -ಇಸ್ಕು]

ಸೃಜ್ಯ (ನಾ). ಹುಟ್ಟಿದುದು; ಉತ್ಪತ್ತಿಯಾದುದು: ಎರಡು ವಿಧದಲಿ ಲೋಕದೊಳು ಜೀವರುಗಳಿಪ್ಪರು ಸಂತತ ಕ್ಷರಾಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯಭೇದದಲಿ (ಪಸಾಸ. ೧೪-೩೬). [ಸಂ.]

ಸೃಜ್ಯಾಪ್ರಪಂಚ (ನಾ). (ಆಲಂ) ಸೃಷ್ಟಿಯ ಆಗುಹೋಗು: ಎನ್ನ ಕೃಪೆಯಲಿ ಕಾಂಚ ಸಕಲವ ನಿನ್ನೊಳಗೆ ಸೃಜ್ಯಾಪ್ರಪಂಚವ ಭಿನ್ನನಾಗಿದಿರಿಲ್ಲ ರಾಜಸಗುಣದ ಭಯವೆಂದ (ನಿಪಾಗ. ೩-೯-೪೨). [ಸಂ.]

ಸೃಣಿ (ನಾ). ಆನೆಯನ್ನು ಅಂಕೆಯಲ್ಲಿಡಲು ಉಪಯೋಗಿಸುವ ಲೋಹದ ಸಾಧನ; ಅಂಕುಶ: ಮಹಾಮಾತ್ರವರ್ತನಂ ಸೃಣಿಯೊಳಲ್ಲದಿಲ್ಲಮಲ್ಲಿಯುಂ (ಚಂದ್ರಪು. ೩-೯ ವ); ಘನಶುಂಡಾದಂಡಪಾತಚ್ಯುತಖರಕರಬಿಂಬಂಬೊಲಿಂಬಾಗೆ ಶುಂಭತ್ಸೃಣದುದ್ದಂಡರ್ಪಣಂ ಫಾಲದೊಳೆ ಸೃಣಿ ಚಲತ್ಕುಂಭಕೂಟಾಗ್ರಸಂಘಟ್ಟನದಿಂ ಬಿದ್ಧರ್ಧಚಂದ್ರಂಬೊಲಿರೆ . . . ಕಣ್ಕೊಪ್ಪಿ ಬಲದತ್ತಿಭೇಂದ್ರಂ (ರಾಜಶೇ. ೬-೪೧). [ಸಂ.]

ಸೃಪ್ಟ (ಗು). ೧. ಸೃಷ್ಟಿಸಿದ; ಉತ್ಪತ್ತಿ ಮಾಡಿದ. ೨. ಹೊರಬೆಳ್ಳಿದ. ೩. ಸಡಿಲ ಬಿಟ್ಟ. ೪. ಬಿಟ್ಟುಬಿಟ್ಟ; ತ್ಯಜಿಸಿದ. ೫. ತೆಗೆದುಹಾಕಿದ; ವಜಾಮಾಡಿದ. ೬. ಗೊತ್ತುಮಾಡಿದ; ನಿಶ್ಚಯಿಸಿದ. ೭. ಕೂಡಿಸಿದ; ಸೇರಿಸಿದ. ೮. ಬಹಳವಾದ; ಹೆಚ್ಚಾದ. ೯. ಅಲಂಕೃತವಾದ; ಸಿಂಗಾರಗೊಂಡ. (ನಾ). ೧೦. ಸೃಷ್ಟಿಯಾದುದು; ಉತ್ಪತ್ತಿಯಾದುದು: ರೂಪ ರಸ ಗಂಧ ಸ್ಪರ್ಶಗಳೆಲ್ಲವೂ ದೇವಸೃಪ್ಟಗಳೇ (ಬಂಕವಾ. ೨೬೭). [ಸಂ.]

ಸೃಪ್ಟನೆ (ನಾ). ೧. ಕೃತಕಕಲ್ಪನೆ; ಖೋಟಾ ತಯಾರಿಕೆ. ೨. ಕಳ್ಳರುಜು ಹಾಕುವುದು; ಸುಳ್ಳುಪತ್ರ ತಯಾರಿಸುವುದು: 'ಸೃಪ್ಟನೆಪತ್ರ' ಪರಾ. [< ಸೃಷ್ಟಿ]

ಸೃಪ್ಟನೆಪತ್ರ (ನಾ). ಕಳ್ಳರುಜು ಹಾಕಿದ ಪತ್ರ; ಕೃತಕದಾಖಲೆ: (ಕ).

[ಸೃಪ್ಟನೆ + ಪತ್ರ]

ಸೃಪ್ಟನೆಸಾಕ್ಷಿ (ನಾ). ಕಳ್ಳಸಾಕ್ಷಿ; ಸುಳ್ಳುಸಾಕ್ಷಿ: (ಕ). [ಸೃಷ್ಟಿನೆ + ಸಾಕ್ಷಿ]

ಸೃಷ್ಟಿ (ನಾ). ೧. ಉತ್ಪತ್ತಿ; ಹುಟ್ಟು: ಸೃಷ್ಟಿಸಮಯದೊಳಿದರ್ಕಿದು ಚೇಷ್ಟಿತಮೆಂದಮಿಳಜಾತಿಯೊಳ್ ಕಲ್ಪಿಸೆ (ಜಗಪ. ೬-೧೧೬); ಜಲಶಯನನಿನ್ನೊಂದು ಕರುಣದ ಬಲದಿ ಸೃಷ್ಟಿಯನುಂಟುಮಾಡಿದೆ ಹಳೆಯ ಹೆಮ್ಮಗ ನಾನು ನಿಮಗೆಲೆ ತಂದೆ (ಕಾಶಿರಾ. ೪೭-೪೪); ನಿಂದುದ ಹರಿವ ಕಾಲಮಂತೆ ನಿಂದುದು ಸೃಷ್ಟಿ (ಚಿತ್ರಾಂಗ. ೪೦-೧೧೦೪). ೨. ರಚನೆ; ನಿರ್ಮಾಣ. ೩. ಜಗತ್ತು; ಪ್ರಪಂಚ: ಇಚ್ಛೆಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ ಮಟ್ಟಿಯನಿಟ್ಟ ದ್ವಿಜರ ಮಾತದೇಕೆ (ಬಸವ. ೫೭೮.); ಸೃಷ್ಟಿಯ ಪ್ರತಿಯೊಂದು ಅಣು ಚಲಿಸಬೇಕಾದರೂ ಪರಮಾತ್ಮನ ಆಣತಿ ಬೇಕು (ಧರ್ಮಸಾ. ೧೦೭). ೪. ನೆಲ; ಭೂಮಿ: ಇಷ್ಟಲಿಂಗನಿದ್ರೆಯಲ್ಲಿ ಸೃಷ್ಟಿಯ ಮೇಲೆ ಬದ್ದು ಹೊರಳುವಾಗ ನಿಷ್ಠೆವಂತ ರೆಂತಾದಿರೋ (ವೋಮಾ. ೧೪-೭೧). ೫. ನಿಸರ್ಗ; ಪ್ರಕೃತಿ. [ಸಂ.]

ಸೃಷ್ಟಿಕರ್ತ (ನಾ). ಸೃಷ್ಟಿ ಮಾಡುವವನು; ಪರಮಾತ್ಮ; ಬ್ರಹ್ಮ: ಎಷ್ಟು ವರ್ಣವೆನು ಸೃಷ್ಟಿಕರ್ತನ ಮಹಿಮೆ (ಪುರಂದ. ೩-೯೧-೨). [ಸಂ.]

ಸೃಷ್ಟಿಕ್ಷಮ (ನಾ). ನಿರ್ಮಾಣಕಾರ್ಯದಲ್ಲಿ ಸಮರ್ಥನಾದವನು; ಸೃಷ್ಟಿಸುವ ಸಾಮರ್ಥ್ಯವುಳ್ಳವನು: ಜಗತ್ತ್ರಯಸೃಷ್ಟಿಕ್ಷಮನಾದ ಕೃಷ್ಣನ ಮಹತ್ತ್ವಕ್ಕೇ ನಿದಾರ್ಶಯಮೇ (ಜಗವಿ. ೬-೬೮). [ಸಂ.]

ಸೃಷ್ಟಿಪತಿ (ನಾ). ೧. ಸೃಷ್ಟಿಯ ಒಡೆಯ; ಜಗತ್ತಿನ ಅಧಿಪತಿ; ಬ್ರಹ್ಮ. ೨. ಭೂಮಿಯ ಒಡೆಯ; ರಾಜ; ದೊರೆ: ಆಟ್ಟಿಗಳು ಹೊಳಲೇಳಿ ಪಡೆ ನಡೆಗೆಟ್ಟು ಕಾದುವ ಭರವು ನಿಂದುದು ಸೃಷ್ಟಿಪತಿ ಮನಗುಂದೆ ಬಿದ್ದುದು ಬಹಳ ಮರ್ಕಟರು (ಕೌಶಿರಾ. ೩೪-೯); ಸೃಷ್ಟಿಪತಿ ವ್ಯಾಕುಲಂಬಡುತಿರಲ್ಕರಿದು ಶ್ರೀಕೃಷ್ಣದೇವರು ಮುನಿಗಳಂ ಮೊಗವ ನೋಡಿ ನಾವೆಷ್ಟು ಪೇಳ್ದರು ರಾಯ ಕೇಳನವ ನೀವಾದಡಂ ಬುದ್ಧಿಗಲಿಸಿರೆನಲು (ತುರಂಗ. ೭೯-೭). [ಸಂ.]

ಸೃಷ್ಟಿವಿರಿಂಚ (ನಾ). ಸೃಷ್ಟಿಗೆ ಕಾರಣಭೂತನಾದವನು; ಸೃಷ್ಟಿಕರ್ತ; ಬ್ರಹ್ಮ: ವಿಕಳರುಳಿದಿರಲಾಗದೀ ಸಾಯಕದ ಸೃಷ್ಟಿವಿರಿಂಚ ಸುಭಟಪ್ರಕರದೊಳು ತಾನೆನುತ ತೆಗೆದೆಚ್ಚನು ವೃಕೋದರನ (ಕುಮಾಕ. ೨೦-೧೬). [ಸಂ.]

ಸೃಷ್ಟಿಶೀಲ (ಗು). ೧. ಸೃಷ್ಟಿಸುವ ಗುಣವುಳ್ಳ; ಸೃಜನಶೀಲವಾದ. (ನಾ). ೨. ಸೃಷ್ಟಿಸುವ ಗುಣವುಳ್ಳುದು; ಸೃಜನಶೀಲವಾದುದು: ಯಾವುದು ಈ ಸೃಷ್ಟಿಯಾಗಿ ಅಭಿವ್ಯಕ್ತವಾಗಿದೆಯೋ ಅದೆಲ್ಲವೂ ಸಚ್ಚಿದಾನಂದವೆ. ಅದು ಸ್ವರೂಪತಃ ಸೃಷ್ಟಿಶೀಲವಾದುದು (ಸೌಂದಸ. ೧೦೧). [ಸಂ.]

ಸೃಷ್ಟಿಸು (ಕ್ರಿ). ೧. ಉತ್ಪತ್ತಿ ಮಾಡು; ಹುಟ್ಟಿಸು: ಸೃಷ್ಟಿಸುವ ರಕ್ಷಿಸುವ ಕೆಡಿಸುವ . . . ದೃಷ್ಟವಾಗದವಂ ಸವಿಗಳಂ ಬಿಟ್ಟಡೊಲಿವವನು (ಬಸಪು. ೫೧-೪೯); ಸೃಷ್ಟಿಸುವ ಪಾಲಿಸುವ ಪೊಂದಿಸುವಿಷ್ಟದೈವವು ನಮ್ಮ ಮತವನು ಮುಟ್ಟಿ ನಿಂದಿದೆ ನಿಮಗೆ ಸ್ವಲ್ಪವೆ ನಮ್ಮ ಮಾತುಗಳು (ಕೃಷ್ಣಾಕಾ. ೨೫-೧೪); ಭಗವಂತ ಸೃಷ್ಟಿಸಿದ ಈ ಸುಂದರವಾದ ಭೂತಲದ ಮೇಲೆ . . . ಮಸಿಯ ಒಂದು ಕರ್ಕಶಮಚ್ಚೆಯಂತಿದ್ದ! (ವೀರಯೋ. ೫೩). ೨. ಹೊಸದಾಗಿ ಬಳಕೆಗೆ ತರು,—ಬಳಸು: ನವೋಪಮೆಗಳಂ ತನ್ನೊಳಾವನಿತ ಸೃಷ್ಟಿಸುತ್ತಿರವೇಳ್ಕುಂ ಬಾಣೋಚ್ಛಿಷ್ಟಮೆಂಬ ಜಗತ್ರಯದೊಳೀ ಕಪ್ಪಮೇ ಸಾಲದೆ ವಿಚಾರಿಸೆ ಸತ್ಕವೀಂದ್ರರಿಗೆ (ಬಸಪು. ೧-೧೩). [ಸೃಷ್ಟಿ + - ಇಸ್ಕು]

ಸೃಷ್ಟೀಶ (ನಾ). ಜಗತ್ತಿನ ಒಡೆಯ; ಪರಮಾತ್ಮ: ಸೃಷ್ಟೀಶ ಪುರಂದರವಿಟ್ಠಲನ ನೆನೆನೆನೆದು ಮುಟ್ಟಿ ಭಜಿಸುವುದು ಈ ಮುದ್ದು ಅರಗಿಣಿಯ (ಪುರಂದ. ೪-೯೫-೩). [ಸಂ.]

ಸೆಂಕಣಿ (ನಾ). ಒಂದು ಬಗೆಯ ಮರ: ಸೆಂಕಣಿ (ಸೋನಗರ್ಭಿ) - ಮಧ್ಯಮ ಆಕಾರದ್ದು. ನೀರಿನ ಆಸರಕ್ಕೆ ಹುಟ್ಟುತ್ತದೆ (ಕಭಾಗೆ. ೪೯). [?]

ಸೆಂಗೆನಿ (ನಾ). ಒಂದು ಬಗೆಯ ಸಸ್ಯ: ಹೊಳೆಲಕ್ಕಿ, ಸೆಂಗನಿ (ಮೃಡಿಗಿ. ೭೮-೧೫೯೭). 'ಸೆಂಕಣಿ' ಪರಾ. [?]

ಸೆಂಡಾಟ, ಚೆಂಡಾಟ (ನಾ). ಚೆಂಡಿನ ಆಟ: ಒಪ್ಪುವ ಮಲ್ಲಿಗೆದುಱುಬಿನ ಮದದಿಯರೊಪ್ಪುವ ಸೆಂಡಾಟವನಾಡಲ್ (ಅಶಿರ. ೧೫೯-೧೪). **ಚೆಂಡಾಟ:** ಹುಡುಗರು ಬಯಲಿನಲ್ಲಿ ಚೆಂಡಾಟವಾಡುತ್ತಿದ್ದಾರೆ (ರೂಢಿ). [ಸೆಂಡು + ಆಟ]

ಸೆಂಡಾಡಿಸು (ಕ್ರಿ). ಚೆಂಡಿನಿಂದ ಆಟವಾಡುವಂತೆ ಆಡಿಸು: ಬ್ರಹ್ಮಾಂಡವಂ ಸೆಂಡಾಡಿಸಲು ಶಿಷ್ಟರುಗಳಂ ಕೃಪೆಮಾಡಿ ಸಲಹಲು (ಬಸಪು. ೩೬-೮೩).

[ಸೆಂಡು + ಆಡಿಸು]

ಸೆಂಡಾಡು, ಚಂಡಾಡು, ಚೆಂಡಾಡು (ಕ್ರಿ). ೧. ಚೆಂಡಿನ ಆಟವನ್ನು ಆಡು; ಕಂದುಕ ಕ್ರೀಡೆಯಾಡು: ಸೆಂಡಾಡುವ ತಟಿಯುಮಾನೆಯನೇಱುವ ವಿನೋದಂ ಮೊದಲಾಗೂಡೆಯ ವಿನೋದ ಸ್ಥಾನಂಗಳೆಲ್ಲಮಂ ಮಾಡಿಸಿ (ವಡ್ಡಾರಾ. ೪೫-೨೧); ಸೆಂಡಾಡುತಿರೆಯುಮಾನೆಯನೇಱುತ್ತಿರೆಯುಂ . . . ಬಿನ್ನವಿಸಲಾಗದು (ಪಂಚತಂ. ೩೨-೨); ಸಮ್ಮೋದದೆ ಸೆಂಡಾಡುವ ಪೊಟ್ಟು (ದಶಕು. ೧೨-೧೪೧). ೨. (ಆಲಂ) ಕತ್ತರಿಸಿ ಎಸೆದಾಡು: ದಣ್ಣಾಧಿನಾಥಂ ತಲೆಯಂ ಸೆಣ್ಡಾಡುಗುಂ (ಮೃಅರಿ. ೧೯೨೯, ೬೫-೪೪; 1081); ಕೌರವಕುಲದ ತಲೆ ಸೆಂಡಾಡಿದವ ನೀನೋ ಮದಗ್ರಜನೋ (ಕುಮಾಗ. ೨-೨೬); ಚಕ್ರಶಕ್ತಿಯಿಂದಸುರಚಮೂಪರ ಶಿರವ ಸೆಂಡಾಡಿ (ಮೋಹತ. ೨೯-೩೧). **ಚೆಂಡಾಡು:** ೨. ಕುಲಯುತರ ಕೊಂಡಾಡುವಾ ರಿಪುಬಲದ ತಲೆ ಚಂ [ಪಾಠಾಂ. ಚೆಂ]ಡಾಡುವಾ (ಕುಮಾಸ. ೧-೩೦); ಹರಿಬಕೊದಗಿದ ದೂಷಣಾದ್ಯರ ಶಿರವ ಚಂಡಾಡಿದನು (ತೋರರಾ. ೫-೩-೨೮). **ಚೆಂಡಾಡು:** ೧. ಓಯಾರದಿಂ ಚೆಂಡಾಡುವ ತಾಣಕೆ ರಾಯಕುವರನೆಯ್ದಿದನು (ಕುರಾಸಾಂ. ೩೧-೨೬). ೨. ಮಱೆವೊಕ್ಕರ ಕಾವ ತನಗಿದಿರ ಆಱೆಯಱ ತಲೆಯ ಚೆಂಡಾಡುವ ಕುದುರೆವೆಂಡಳಿವ . . . ಕುಮಾರ ಜಯ (ಶಾಇಗ. IX-i, ೩೬೬-೧೧; 1225); ಅಮರಾರಿಗಳ ಖಂಡಿಸಿ ತಲೆಯ ಚೆಂಡಾಡಿ (ಕುವಾಕ. ೧೪-೧೧೨); ಬೆಳಗಾಗುವುದರೊಳಗಾಗಿ ಅವನ ತಲೆಯನ್ನು ಚೆಂಡಾಡಿ ಬರುವೆನು (ಪಶಾಪ. ೨೭). [ಸೆಂಡು + ಆಡು]

ಸೆಂಡು, ಚಂಡು, ಚೆಂಡು, ಸೆಂದು (ನಾ). ೧. ಆಟವಾಡುವ ಗುಂಡನೆಯ ಒಂದು ವಸ್ತು; ಕಂದುಕ: ಬಟ್ಟುಳಿಸೆಂಡುಂ ಪೊಡೆಸೆಂಡೆಂಬಿವನಾಡುತ್ತೊಡವಳೆದರ್ (ಪಂಪಭಾ. ೨-೩೦); ರಂಜಿಪ ಸೆಂಡನಿಟ್ಟಳಿದಿರೊಳ್ ತತ್ಕಾಂತೆ ತನ್ನೋಪನಾ (ದಶಕು. ೧೨-೧೪೪); ವಿರಹಿಜನರ್ದೆರ್ದೆಯ ಲಗ್ಗೆಯನಿಡುವ ಮನಸಿಜನ ಕರದ ಮೌಕ್ತಿಕದ ಸೆಂಡೊ (ಸಮ್ಮಕಾ. ೧-೩೯); ಪೂವಿನ ಸೆಂಡಿಂಗೆ ಬಯಸಿ ಪಾಯ್ದುಪುವಳಿಗಳ್ (ಚಕವಿ. ೬-೪೪). ೨. ತಲೆ; ಶಿರಸ್ಸು: 'ಸೆಂಡಾಡು' ಪರಾ. **ಚಂಡು:** ೧. ಪಟ್ಟೆಯಂ ಪಱಿದು ಚಂಡಂ ಮಾಡುವ ಕಟ್ಟೆಗ್ಗರಂತೆ (ಧರ್ಮಾಮೃ. ೯-೧೬೨); ಚಿತ್ತಜಸುಕುಮಾರ ನಲಿದಿಟ್ಟಾಡುವ ಮುತ್ತಿನ ಚಂಡುಗಳೆನಲು ಅತ್ಯುನ್ನತದೊಳು ರಾಜಿಸಿ ತರುಣಿಯ ವೃತ್ತಕುಚಗಳೊಪ್ಪಿದುವು (ಕಂಸಾ. ೯-೨೨). ೨. ಭರದಿಂದ ಹಿಡಿದು ಕೊಳ್ಳಿಯ ಬೀಸಿದಂತಾಯಿತುರವಣಿಸಿ ಗಜವೇಧೆಯಂ ಮಾಡಲಾ ಚಂ[ಪಾಠಾಂ. ಚೆಂ]ಡನುರುಭರದಿ ಹೊಯ್ದ ತೆಱನಾಗೆ (ಸಮ್ಮಕಾ. ೧೧-೩೪); ಚಂಡು ಕಳಕೊಂಡ ಮರಿ ಅರಸ (ಕನ್ನಡಾ. ೨೫೩). ೩. ಜೋಳ, ನವಣೆ, ಮೊದಲಾದುವುಗಳ ತೆನೆ. ೪. ಕತ್ತಿನ ಹಿಂಭಾಗ; ಹೆಕ್ಕತ್ತು: ಅವನ ಚಂಡು ಹಿಡಿದು ಹೊರಗೆ ದಬ್ಬಲಿಕ್ಕೆ ಹೋಗುತ್ತಿದ್ದರು (ಮೊಂಬಯಿ. ೪-೧೫೨); ಚಂಡಿಗೆ ಕೈಕೊಟ್ಟು . . . ಅವನನ್ನು ನುಗಿಸಿದನು (ರಕ್ತಧ್ವ. ೧೯೨). ೫. ಭಾರ ಹೊರಲು ತಲೆಯ ಮೇಲಿಟ್ಟುಕೊಳ್ಳುವ ಸುರುಳಿ; ಸಿಂಬೆ: ತನ್ನ ಕುಕ್ಕೆಯನ್ನು ನಿಧಾನವಾಗಿ ಮಂಡೆಯ ಮೇಲಿನ ಚಂಡಿನ ಮೇಲೆ ಪೇರಿಕೊಂಡಳು (ಪೊಸಕ್ಷ. ೫೩). **ಚೆಂಡು** : ೧. "ಸೆಂದುಕಃ, ಕಂದುಕಃ - ಈ ೨ ಚೆಂಡು" (ನಾಚಿರಾ. ೧೨೫); ಚೆಂಡಿನ ಹೊಣಕೆ ಚಿಣಕೋಲಾಳು ಗೊತ್ತಿನ ದಂಡೆಯನೆ ನಾನಾವಿನೋದದಲಿ . . . ಆಡಿದರು ಪಂಗಡದಲ್ಕೈವರು ನೂರ್ವರಿವರಿತ್ತಂಡವೊಂದಾಗಿ (ಕುಮಾಆ. ೬-೧); ಕಂಡೆಯ ಪಂಡಿತೆ ಕುಸುಮಾಜಿ ಕುಸುಮದ ಚೆಂಡಿನಂತೆದ್ದ ಲಂಘನವ (ಭರಚ. ೬-೧೮); ಇಂದುಮಂಡಲ ಚೆಂಡ ಭಾವಜ ಪಿಡಿದಾಡುವಂತೆ (ಕಂಸಾ. ೧೦-೪೨). ೨. ಭೂತಪಿಪಾಚಿಕೋಟಿಯುಂ ನೆಱೆ ತಣಿಯುಣ್ಣು ಚೆಣ್ಣುಮರಲ್ದಿನ್ನುಮದಕ್ಕಿಸಲಾಱೆ ವೆನ್ದೊಡೇನಱಿಯೆರೇ ವಿಕ್ರಮಮಂ (ಎಕ. XVI, ಚಕ್ರನಾ. ೯೫-೨೬; 1169); ಅರಸುಗಿರಸುಗಳ ಚೆಂಡು ಕಳೆದ ಗಾಂಡೀವಧನ್ವ (ಮೋಕೂಡಾ. ೧೩-೪೦). **ಸೆಂದು:** ೧. ಭಾಸ್ಕರನಂ ಮಾಯದ ಮಾಣಿ ಸೆಂದೊಡೆದನಂ [ಪಾಠಾಂ. ಸೆಂಡೊಡೆದನಾ, ಸೇರ್ದೊಡೆದನೇ] ಇಲ್ಲೆಂಬಿಸಂ ನೀಡಿದಂತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ದಾ ಮನಂ ವಾಮನಂ (ಅರ್ಧನೇ. ೬-೨೫).

ಸೆಂದಿನ ವಾಹಳಿ = ಕುದುರೆಯ ಮೇಲೆ ಕುಳಿತು ಆಡುವ ಚಂದಿನ ಆಟ: ಸರ್ವ್ವಬಾಧಾಪರಿಹಾರಮಾಗೆ ನಮಸ್ಕಂಬಿಟ್ಟಾ ಸೆಣ್ಡನ ವಾಹಳಿಯ ಕೆಯಿ (ಸೌಇಗ. XI-i, ೧೧೦-೧೪; 1070). [ದೇ. ॥ ತಮಿ. ಚೆಣ್ಡು; ಮಲ. ಚೆಂಟು; ಕೋತ. ಚೆಂಡ್; ತೊದ. ಸೆಡ್; ತುಳು. ಚೆಂಡ್, ಚಂಡು; ತೆಲು. ಚೆಂಡು]

ಸೆಂದುಕೋಲ್ 'ಸೆಂಡುಗೋಲ್' ನೋ.

ಸೆಂಡುಗೋಲ್, ಸೆಂದುಕೋಲ್, ಸೆಂದುಕೋಲ್ (ನಾ). ಒಂದು ಬಗೆಯ ಆಯುಧ: ಸೆಂಡುಗೋಲನುಡಿಗಟ್ಟುವ ಪೀಲಿಗಳಿಂ ತರಂಗಮಂ ಪೊಸೆಯಿಪ . . . ಪುಳಿಂದಸಂಕುಳದ ಪೆರ್ಕಣದಿಂದೆಸೆದತ್ತು ಪಕ್ಕಣಂ (ಚಂದ್ರಪ್ರ. ೫-೫೪).

ಸೆಂಡುಕೋಲ್: ಬಡಿಕೋಲ ತೋಮರದ ಚಕ್ರದ ಕೊಂತದ ಸೆಂಡುಕೋಲ ಶಕ್ತಿಯ ಸರಿಯಂ ಶರಾನಿಳ ವಿಘಾತದೆ ತೂಟ್ಟಿದಂ (ವರ್ಧಪು. ೮-೫೮); ಅಳವಿ ಯೊಳಿರ್ದ ಪೆರ್ಮೊಲನನಾ ನೃಪನಿಟ್ಟೊಡೆ ಸೆಂಡುಕೋಲ ಬೆಳ್ಳೊಳಗೊಳಪೊಯ್ದು ಸುತ್ತುವೆಡೆಯೊಳ್ (ಸೂಕ್ತಿಸು. ೩-೧೨೨); ಶರಾಳಿಗಳಿಂದಿಡೆ ಸೆಂಡುಕೋಲ್ಗಳಿಂದಿಡೆ (ಧರ್ಮಪ. ೫-೨೬). **ಸೆಂದುಕೋಲ್:** ಜಾಲಮಂ ಬಿಸಿಲೊಳಿಕ್ಕುವ ಬೆಂಕಿಯೊಳೊಡ್ಡಿ ಕಾಸಿಕೊಂಡಾಳಿಸಿ ಸೆಂದುಕೋಲನುಡಿಗಟ್ಟುವ . . . ಶಬರರ್ಕಳಿನಿಂತೆಸೆದತ್ತು ಪಕ್ಕಣಂ (ಶಾಂತೀಶ್ವ. ೩-೭೪).

[ಸೆಂದು + ಕೋಲ್]

ಸೆಂಡುವೊಯ್ (ಕ್ರಿ). ಚೆಂಡನ್ನು ಹೊಡೆ; ಚೆಂಡು ಒಗೆ: ಕರವಾಳಂ ಪೊಯ್ಯೆ ಮಾಱುಂತಹಿತರ ತಲೆಗಳು ಸೆಂಡುವೊಯ್ದಂತೆ ಪಾರುತ್ತಿರೆ (ಎಕ. VIII, ಸೂರಬ. ೧೩೮-೨೭; 1145). [ಸೆಂಡು + ಪೊಯ್$_1$]

ಸೆಂದರ 'ಸೆಂದುರ' ನೋ.

ಸೆಂದವ (ನಾ). ಒಂದು ಜಾತಿಯ ಕುದುರೆ: "ಸ್ಕಂಧವ - ಸೆಂದವ" (ಶಮದ. ೨೭೧ ಪ್ರಯೋ). [< ಸಂ. ಸ್ಕಂಧವ]

ಸೆಂದು$_1$, ಸಿಂದು (ಕ್ರಿ). ತಿಕ್ಕು; ಒರಸು; ಉಜ್ಜು: "ಒರಸೆಂದು ಸೆಂದಕ್ಕು" (ಶಬ್ದಮಂ. ೫೨). ಸಿಂದು: ಜವನಾಳಂತಪ್ಪ ಕಣೆ ರೋಮರೋಮಂದಪ್ಪದೆ ನಾಂಟಿದುವು ಸಿಂದಿ[ಪಾಠಾಂ. ಸೀಂಟಿ]ದುವು ವಿಧಿಲಿಪಿಯಂ (ಪಂಡಾಮಾ. ೧೩-೭೧); ಹಯವಂಂ ಬಂದಿಗೊಂಡೊಂದಬೆಗೆಯ್ಯೆಯೆ ಸಿಂದಿದಂದಕ್ಕುಂ (ರಾಮಾಶ್ವ. ೯೧-೧೫).

ಸೆಂದು$_2$ (ನಾ). ೧. ಉಜ್ಜಿ ಹಾಕುವುದು: (ಕ). ೨. ನಾಶಪಡಿಸುವುದು: (ಕ). ೩. ಕೊಲೆ: (ಕ). ೪. ಕಾಟ; ಹಿಂಸೆ; ಉಪದ್ರವ: "ಒರಸೆಂದು ಸೆಂದುವೆಂದೊಡೆ ಹಿಂಸೆಯಕ್ಕು" (ಕಬ್ಬಿಕ್ಕ. ೬೭). [< ಸೆಂದು$_1$]

ಸೆಂದು$_3$ 'ಸೆಂಡು' ನೋ.

ಸೆಂದುಕೋಲ್ 'ಸೆಂಡುಗೋಲ್' ನೋ.

ಸೆಂದುರ, ಚಂದಿರ$_1$, ಚಂದ್ರ$_1$, ಸಿಂದುರ$_1$, ಸಿಂಧೂರ, ಸೆಂದರ (ನಾ). ೧. (ಮಂಗಳದ್ರವ್ಯವಾಗಿ ಬಳಸುವ) ಒಂದು ಬಗೆಯ ಕೆಂಪುಬಣ್ಣದ ಪುಡಿ; ಸಿಂದೂರ: "ಸಿಂದೂರದೊಳ್ ಸೆಂದುರಂ" (ಕರ್ಣಾನಿ. ೫); ಸೆಂ[ಪಾಠಾಂ. ಸಿಂ]ದುರದ ಬೊಟ್ಟು ನುಣ್ಣನೆ ಮಿಂದರಿಸಿನಂ (ಲೀಲಾವ. ೪-೮೭); ಸಿಂದೂರ — ಸೆಂದುರ (ಶಮದ. ೨೭೧ ಪ್ರಯೋ); ಲಲಾಮಕವನ್ನೋಸರಿಸಿ ಸೆಂದುರದ ಚೂಳಯವನ್ನು ತಿದ್ದಿ (ಮಂತ್ರಶ. ೧೪೨-೨). ೨. ಕೆಂಪುಬಣ್ಣ; ಸಿಂದೂರವರ್ಣ: ಪ್ರೀತಿಯನೀವ ಸೆಂದುರದ ವಸ್ತ್ರಮನೊಲ್ಲದ ದೊಂದು ವಸ್ತ್ರಮಂ ಶ್ವೇತವಮನುಟ್ಟಳ್ (ಜಗವಿ. ೧೨-೭೭). **ಚಂದಿರ$_1$**: ೨. 'ಚಂದಿರವಟ್ಟು' ಪರಾ. **ಚಂದ್ರ$_1$**: ೧. ಚಂದ್ರ, ಹಿಂಗುಲ, ಅರಿದಾಳ ಮುಂತಾದುವುಗಳಿಂದ ಬಣ್ಣದ ಮಸಿಗಳಾಗುತ್ತಿದ್ದುವು (ಕನ್ನಸಂ. ೪೪). **ಸಿಂದುರ$_1$**: ೩. ಕೆಂಪುಬಣ್ಣದ ಒಂದು ಬಗೆಯ ಕಲ್ಲು; ಗೈರಿಕಶಿಲೆ: ನವರುಧಿರ ಜಳಚಳತ್ಸೇಚನದೊಳ್ ಘಟ್ಟಿಸಿ ಸಿಂದು[ಪಾಠಾಂ. ಧು]ರದೊಳ್ ನೆಲಗಟ್ಟಿಸಿದಂತಿರ್ದ ರಂಗಭೂಮಿಯೊಳ್ . . . ಕಾದುವಾಗಳ್ (ಪಂಪಭಾ. ೧೦-೭೦ ವ). **ಸಿಂಧೂರ**: ೧. ವರದಿಗಂಗನೆಯರಿಗೆ ಬೈತಲೆಗೆಸೆವ ಸಿಂಧೂರ . . . ಎನಲುರವಣಿಸಿ ಕೆಂದೂಳಿ ನಭಕುಪ್ಪರಿಸೆ ಹೊಯ್ದಾಡಿದರುಭಯ ಚತುರಂಗಬಲ ಹಳಚಿ (ಕುವ್ಯಾಧೀ. ೪-೭); ಆ ಸಿಂಧೂರ ೧ ಹಣ ತೂಕ . . . ಅಳಲೆಕಾಯ ಕರುಕು ಸಹ . . . ತೆಗೆದುಕೊಳ್ಳಲು ಬಹುಮೂತ್ರಂ ನಿಲ್ಲುವುದು (ಸಚಿತ್ರ. ೩೮೬); ನೀಲಪರ್ವತಂ . . . ಸಿಂಧೂರ ವಿಲಿಪ್ತಮದಸಿಂಧುರಗಂಡ ಮಂಡಲದೊಂದು ಪಾಂಗಿನಿಂ ತೋರ್ಪ ತಟ್ಟಲಿಂ . . . ಮನೋಜ್ಞಂ (ರಾಮಾಶ್ವ. ೭೨-೨೧). **ಸೆಂದರ**: ೧. ಶಿರಂ ಸೆಂದರದುಂಡಿಗೆ ಧರೆಗೆನಿಸಿ ಮುಂದೆ ಬಿಟ್ಟುದು ಹರಿಯಾ (ಶಾಂತಿಪು. ೫-೬೩).

ಸೆಂದೂರಲಾಂಛನ = ಸಿಂದೂರವನ್ನು ಲಾಂಛನವಾಗಿ ಉಳ್ಳವನು; ಒಂದು ಬಿರುದು: ರಟ್ಟಕುಳಭೂಷಣಂ ಸೆನ್ದೂರಲಾಞ್ಛನಂ ವಿವೇಕವಿರಿಂಚನಂ (ಸೌಗಾ. XX. ೬೨-೪; 1098). [< ಸಂ. ಸಿಂದೂರ]

ಸೆಂಬ (ನಾ). ಕುದುರೆಗೆ ಬರುವ ಒಂದು ಬಗೆಯ ರೋಗ: ಮೂಗಿನೊಳನಿಲಪಿತ್ತಕಫ, ಸಂಜನಿತಂ ತುರಗಕ್ಕೆ ಸೆಂಬಮೆಂಬುದದಕ್ಕುಂ (ಲೋಕೋಪ. ೯-೨೨೫). 'ಶಂಭ' ಪರಾ.

[?]

ಸೆಂಬಕ (ನಾ). ಒಂದು ಬಗೆಯ ಚರ್ಮವಾದ್ಯ: ಕೊಂಬು ಡಮರುಗ ಡೌಡೆ ಸೆಂಬಕ ಕಹಳೆ ಧಕ್ಕೆ (ಕುಮುರಾ. ೭-೫೬). [< ಚೆಂಬಕ]

ಸೆಂಬಕ್ಕ (ನಾ). ಒಬ್ಬಾಕೆಯ ಹೆಸರು: ಪೊರವಕ್ಕನುಂ ಸೆಮ್ಬಕ್ಕನುಂ ಪಾಟಿಯಕ್ಕನ ಕೆಳದಿಯೆ ಮಟೆಯಣ್ಣನ್ (ಎಕ. VIII, ನಗರ. ೪೫-೧೭; ಸು. 950). [? + ಅಕ್ಕ$_1$]

ಸೆಂಬನೂರ್ (ನಾ). ಒಂದು ಊರಿನ ಹೆಸರು: ಸೆಂಬನೂರ ನಾಗಣನ್ದ ಪಿರಿಯಯ್ಯಂಗಳುಂ (ಎಕ. XI, ಚಿತ್ರದು. ೭೪-೩೦; 968). [? + ಊರ್]

ಸೆಂಬಳತ್ತೂರ್ (ನಾ). ಒಂದು ಊರಿನ ಹೆಸರು: ಮೂಡ ಸೆಮ್ಬಳತ್ತೂರ ಬೆಟ್ಟದ [ಕೆ]ಳಗಣ ಪೇರಟ್ಟಿನ ತೆಂಕಣ ಕುಱುಕಿ (ಎಇ. X, ೬೬-೫೬; 892). [? + ಊರ್]

ಸೆಂಬಳಿ 'ಸಂಬಳಿ$_1$' ನೋ.

ಸೆಂಬಳಿಗೋಲ್ 'ಸಂಬಳಿಗೋಲ್' ನೋ.

ಸೆಂಬುಳಿ 'ಸಂಬಳಿ$_1$' ನೋ.

ಸೆಂಬುಳಿಗೋಲ್ 'ಸಂಬಳಿಗೋಲ್' ನೋ.

ಸೆಂಬೆ$_1$, ಚಂಬೆ$_1$ (ನಾ). ಉಪ್ಪಿನಕಾಯಿಗೆ ಉಪಯೋಗಿಸುವ ಒಂದು ಬಗೆಯ ಕಾಯಿ: ಮಾಮಿಡಿ ಕರಂಜಿಗೆಯಂಬಟೆ ಸೆಂ[ಪಾಠಾಂ. ನಿಂ]ಬೆ ನೆಲ್ಲಿಗಾಯ್ . . . ಆದಿಯಾದುಪ್ಪಿನ ಕಾಯ್ಗಳಂ ಮಗಮಗಿಪ್ಪುವನಿಕ್ಕಿದನಬ್ಬಪತ್ರದೊಳ್ (ಲೀಲಾವ. ೫-೬೩). **ಚೆಂಬೆ$_1$**: ಗೆಣಸು ಶಾವೆಯ ದಂಟು ಗುಳ್ಳದ ಕಾಯಂ ಚೆಂಬೆ ಕೂಗುರಿ ಕೊತ್ತುಂಬರಿಯ ನೀಡಿ (ಶರಲೀ. ೫೦೯); ಪಲಸು ತಡುಗುಣಿ ಬಾಳೆ ಚಪ್ಪರದವರೆ ಚಂಬೆಗಳ . . ಘಮಘಮಿಸಲಿಕೆ ಬಡಿಸಿದರು (ಆಸಂರಾ. ೬-೨೫೩-೫೯).

ಸೆಂಬೆ$_2$ 'ಸಂಬೆ$_1$' ನೋ.

ಸೆಂಬೆಬತ್ತ (ನಾ). ಒಂದು ಬಗೆಯ ಉತ್ತಮಜಾತಿಯ ಬತ್ತ: ಕೋಳಿಸಾರು ಮಾಡಿ ಸೆಂಬೆಬತ್ತದ ಸಣ್ಣಕ್ಕಿ ಅನ್ನ ಬಸಿದು . . . ಊಟ ಮಾಡಿದರು (ನನ್ನೂರು. ೨೦೯). 'ಸಂಬೆನೆಲ್ಲು' ಪರಾ. [ಸೆಂಬೆ$_2$ (< ಸಂಬೆ$_1$) + ಬತ್ತ]

ಸೆಂಬೊಳಲು (ನಾ). ಒಂದು ಊರಿನ ಹೆಸರು: ನಗರಾಧ್ಯಕ್ಷಿಣಸ್ಯಾಂದಿಶಿ ಸೆಂಬೊಳಲ ನಾಮಗ್ರಾಮಂ (ಸೌಗಾ. XX, ೬-೨೭; 723). [ಸೆಂಬ? + ಪೊಳಲು (< ಪೊಟಲ್)]

ಸೆಕಳಿ 'ಸೆಗಳಿ' ನೋ.

ಸೆಕಳೆ 'ಸೆಗಳಿ' ನೋ.

ಸೆಕುಕಡಮೆ (ನಾ). ಒಂದು ಬಗೆಯ ತೆರಿಗೆ; ಎಣ್ಣೆ ಅಂಗಡಿಗಳ ಮೇಲೆ ಹಾಕುವ ತೆರಿಗೆ: ವಾಲುವರಿ ಸೆಕುಕಡಮೆ ತಱಿಕಡಮೆ . . . ಉಂಟಾವ ಹಲ ಉಪಾಧಿಗಳೂ ಸಹ ಸೇರ್ಸಿಕೊಟ್ಟೆವು (ಸೌಗಾ. IX-ii, ೪೬೩-೫; 1470). [<— ತಮಿ. ಚೆಕ್ಕುಕ್ಕಟಮೈ]

ಸೆಕೆ, ಶಖೆ, ಸೆಖೆ, ಸೆಗೆ (ನಾ). ೧. ಬಿಸುಪು; ಶಾಖ; ಕಾವು: ಹರಿದ ಮೈಗಳ ಸೆಕೆಯ ಸುಯ್ಗಳ . . . ಕಳಕಳವ ಕೇಳಿದನು ಕಲಿಪಾರ್ಥ (ಕುವ್ಯಾಭ. ೧೯-೨); ಸೆಕೆಯಲ್ಲದಾವಗಮುರಿವ ಕೆಂಗಿಡಿಯ ಮಾಲಿಕೆಯಂತೆ (ಪೂಹತ. ೨೩-೪೭); ರಜತಗಿರಿ ತ್ರಿಪುರದಹನ ಸೆಕೆಯಂ ಕರಗಿ ರಸಮಾಗಿ ಪರಿದುದೋ (ನಂದಿಮಾ. ೧೦-೨೪); ಅಗಲ್ಮೆಗಿರ್ಚಿನ ಸೆಕೆ ಪತ್ತೆ ತಾಳಲಳವಲ್ಲದೆ ವಾಸರಲಕ್ಷ್ಮಿ ಕಣ್ಣ ನೀರ್ಪನಿಗಳನೆಯ್ದೆ ಸೆಳ್ಳುಗುರ್ಗಳಿಂ ಮಿಡಿಯಲ್ (ರಾಜಶೇ. ೧೧-೪೧). ೨. ಬೇಸಗೆ; ಗ್ರೀಷ್ಮ: ಮುಸುಱಿದ ಕುಳಿರೊಳ್ ದೆಸೆಯಾಗಸಮಿಳೆ ಬೆಟ್ಟಡವಿಯೆಂಬಿವೆಂತಾನುಂ ಕಾಣಿಸಲಾರ್ತುವಿಲ್ಲಮೆನೆ ಮಾಮಸಗಿರ್ದುದು ಮಾಗೆ ಸೆಕೆವೆಸರಿಳೆಯೊಳ್ (ಶಬ್ದಾನು. ೬೫ ಪ್ರಯೋ). ೩. ಬೇಸಗೆಯ ಝಳ,— ಧಗೆ: ಧಗಧಗಿತ ಶಖಿ ಸೆಕೆಯ ಕೊಳೆ (ಇಅ. XX, ೭೦-೧೯; 9ನೆದು ಶತ); ಸೂರ್ಯಾತಪದ ಸೆಕೆಯಂ ಸೈರಿಸಲಾರದೆ (ಮುಗ್ಧಾಮಂ. ೫೨); ಇಂದು ಸ್ವಲ್ಪ ಸೆಕೆಯಲ್ಲವೆ? (ಅಮೋಲೀ. ೨೬). ೪. ಹಬೆ; ಆವಿ: ಸಂದಿನಲಿ ಸೆಕೆ ಹೋಗದ ಹಾಗೆ ಹಿಟ್ಟಾಗಲಿ ಕಣಿಕವಾಗಲಿ ಮೆತ್ತಿ, ಆ ಇಡ್ಡಲಿಗೆ ಬೆಂದ ಹದದಲಿ ತೆಗೆದು ನೋಡಲಾಗಿ (ಧೀಮಸೂ. ೨೦). **ಶಖೆ** : ೧. ಉರಿ, ಶಖೆ, ತಾಪ; ಹೊರಗೆ ರಣರಣಬಿಸಿಲು (ಚಂಡಮ. ೩-೪). ೩. ಗಾಡಿಯಲ್ಲಿದ್ದ ಪ್ರಯಾಣಿಕನಿಗೆ ಶಖಯಾಯಿತು (ಮಲನಾ. ೬). **ಸೆಖೆ**: ೧. ಬಿಱುವರಿಯ ಸೆಖೆ[ಪಾಠಾಂ. ಶಿಖಿ]ಗೆ ತಾರಗೆ ತಱತಱಿಸುತಮಿರ್ದುವು (ಬಂಹರಿ. ೧೦-೪೦); ಚೂಣಿಯ ಕೊಳುಗಿಡಿಯ ಸೆಖೆ ತಾಗಿ ಸುಭಟಾವಳಿಯ ಮಿಸೆಗಳುರಿಯೆ (ಕುವ್ಯಾದ್ರೋ. ೧೯-೩೫). ೪: ಒಲೆಯೊಳಿಟ್ಟು ಸೆಖೆ[ಪಾಠಾಂ. ಕೆ]ಯಳಗೆಯೊಳು ಗಂಗಳವನಿರಿಸಿ (ಸೂಪಶಾ. ೨-೩). **ಸೆಗೆ**: ೧. ಮಟೆಗೊದವಿದ ದಿವಸಂ ಪಿರಿದು ಸೆಗೆಯನೊಡರಿಪ ತೆಱದೊಳ್ (ಮಿತ್ರಗೋ. ೫೭). 'ಸೇಕ$_1$' ಪರಾ.

[ದೇ. ॥ ತೆಲು. ಸೆಕ, ಸೆಗ; ತುಳು. ಶಕೆ, ಶಖೆ, ಸಿಕೆ, ಸೆಕೆ./ ಸಂ. ಶಖಾ]

ಸೆಕೆಕಡುಬು (ನಾ). ಹಬೆಯಲ್ಲಿ ಬೇಯಿಸಿದ ಕಡುಬು: ತಿಂಡಿಗಳಲ್ಲಿನ ವೈವಿಧ್ಯಗಳು . . . ಕಾಯಿಕಡುಬು, ಸೆಕೆಕಡುಬು (ಕಸಂಕ್ಷ. ೨೯೫). [ಸೆಕೆ + ಕಡುಬು(< ಕಡುಂಬು)]

ಸೆಕೆಗಾಲ, ಸೆಖೆಕಾಲ (ನಾ). ಬೇಸಗೆಯ ಕಾಲ: ಸೆಕೆಗಾಲದ ರಾತ್ರಿಯಲ್ಲಿ ಕೋಳಿಕೂಗು

ಹೊತ್ತಿಗೆ ಮುಂಚೆಯೇ ಆರಂಭವಾಗುತ್ತದೆ (ಪುನರು. ೨೯೭). **ಸೆಬೆಕಾಲ:** ಸೆಬೆಕಾಲದ ಸುಡುತ್ತಿರುವ ಬಿಸಿಲಲ್ಲಿ ಮತ್ತು ಗಾಳಿಯಲ್ಲಿ ತಿರುತಿರುಗಿ ಹಳ್ಳಿಗರನ್ನು ನೋಡಿದ್ದೇನೆ (ಪ್ರಕಾಶ. ೧೩೬). [ಸೆಕೆ + ಕಾಲ]

ಸೆಕೆಯುಸಿರ್ (ನಾ). ಬಿಸಿಯುಸಿರು; ನಿಟ್ಟುಸಿರು: ಕೊಳನಂ ಪುಗಿಸೆ ಮೆಯ್ಯ ಬೆಂಕೆಯಿಂ ಚುಯ್ಯೆಂದು ನೊರೆಗಟ್ಟಿ ಬಿಸಿಯ ತೆರೆ ತಾರ್ಮುಟ್ಟಿ ಸೆಕೆಯುಸಿರ್ ಭುಗಿಲನೊಗೆದು (ಗಿರಿಕ. ೪-೧೧೫ ವ). [ಸೆಕೆ + ಉಸಿರ್$_2$]

ಸೆಕ್ಕಿಡು (ಕ್ರಿ). ಅಳವಡಿಸು; ಸಿಕ್ಕಿಸು: ತಲೆಯಂ ಬೋಳಿಸಿ ಪೂಗಳಂ ಕಿವಿಗಳೊಳ್ ಸೆಕ್ಕಿಟ್ಟು ಕಣ್ಗಳ್ಗೆ ಕಜ್ಜಳಮಂ ತೀವಿ (ದಶಕು. ೮-೫೯). [ಸೆಕ್ಕು$_1$ (< ಸೆರ್ಕು$_1$) + ಇಡು$_1$]

ಸೆಕ್ಕಿಸು (ಕ್ರಿ). = ಸೆಕ್ಕಿಡು: ಉದಧಿಯ ಹೊಕ್ಕು ಮಂದರಗಿರಿಯ ಬೆನ್ನಲಿ ಸೆಕ್ಕಿಸುವುದಲೆ ಕೂರ್ಮಮಹಿಮೆಯನಾರು ಹೊಗಳುವರು (ಸಂಭವ. ೬-೫೩); ಎಲ್ಲರ ಕೈಯಲ್ಲೂ ದವನ ಸೆಕ್ಕಿಸಿದ ಬಾಳೆಯ ಹಣ್ಣು (ಅಲಿಮ. ೧೫೯). [ಸೆಕ್ಕು$_1$ (< ಸೆರ್ಕು$_1$) + - ಇಸು$_5$]

ಸೆಕ್ಕು$_1$ 'ಸೆರ್ಕು$_1$' ನೋ.

ಸೆಕ್ಕು$_2$ 'ಸೆರ್ಕು$_2$' ನೋ.

ಸೆಕ್ಕುಂದುಱುಂಬು, ಸೆಕ್ಕುಂದುಱುಬು (ನಾ). ಒಂದು ಬಗೆಯ ಕೇಶಾಲಂಕಾರ; ಕೂದಲನ್ನು ವಿಶಿಷ್ಟವಾಗಿ ಸಿಕ್ಕಿಸಿ ಅಲಂಕರಿಸಿದ ತುರುಬು: ನಾಡೆ ಕದುಬೆಲ್ಲು ಮಿಕ್ಕು ಪೊಗರುಗುವ ಹೊಂಬಣ್ಣ ಮೊಲೆಯಾಯತದ ಸೆಕ್ಕುಂದುಱುಂಬಿನ . . . ಪೆಣ್ಮಕ್ಕಳೆಯ್ತಂದರೊಸೆದು (ಪದ್ಮರಾ. ೩-೬೭). **ಸೆಕ್ಕುಂದುಱುಬು:** ಸೆಕ್ಕುಂದುಱುದಿನ ಸೆರಗ್ಗೆಗಣ್ಗಳ ಕಕ್ಕಸಮೊಲೆಯ . . . ಪೆಣ್ಮಕ್ಕಳ ತಂಡಂ ನಡೆತಂದುದು (ಜಯಕಾ. ೫-೬೭); ಸಳಿನದು ಬಳುಕೆ ಸೆಕ್ಕುಂದುಱುಬಿಳಿದೊಯ್ಯನೆಳಲೆ ಬೆನ್ನೊಳಗೆ (ಕುರಾಸಾಂ. ೪೦-೭೫).

[ಸೆಕ್ಕು$_1$ (< ಸೆರ್ಕು$_1$) + ತುಱುಂಬು$_2$]

ಸೆಕ್ಕುಂದುಱುಬು 'ಸೆಕ್ಕುಂದುಱುಂಬು' ನೋ.

ಸೆಕ್ಕೆ$_1$, ಚಕ್ಕು$_2$, ಚಕ್ಕೆ, ಚೆಕ್ಕು$_1$, ಚೆಕ್ಕೆ, ಸೆರ್ಕೆ (ನಾ). ೧. ಮರದ ಅಥವಾ ಕಲ್ಲಿನ ತೆಳ್ಳಗಿನ ಚೂರು; ಸಿವುರು: ಸಿಡಿಲ ಸೆಕ್ಕೆಗಳನೊಂದಾಗಿ ಕೂಡಿದ ತೆಱದಿ ಘುಡುಘುಡಿಪ ಫಳಕಮಂ ಕೊಂಡು (ವಸಾಡ. ದೇ. ೧೧೬-೧೩); ಪರಿಮಳಿಪ ಮಲಯರುಹವೃಕ್ಷಂಗಳಂ ಕಂಡು ಹೊಳಚಿತಂದಾ ಸೆ[ಪಾಠಾಂ. ಸಿ]ಕ್ಕೆಗಳನೊಳಗೊಳಗೆ ಶೋಧಿಸಿ (ಬಸವ. ೪೬-೨೫); ಪಗಲ ತಗಡೋ ಮೇಣು ಮಿಂಚಿನ ಬಗೆಯ ಸೆಕ್ಕೆಯೊ ಸೂರ್ಯಕಾಂತಚ್ಛಾಯೆಯ ತೆಕ್ಕೆಗಳೊ (ಕುವಾಭೀ. ೧-೪೭); ಸಿರಿಕಂಡಸೆಕ್ಕೆಯ ಸವುದೆಯ ಕಮರಿಂ ಪೊರೆದಲ್ಲೆಡೆಯೊಳಿತ್ತಂ ಪಳಂಚುವೆಲರಿಂ (ರಾಮಾಶ್ವ. ೬೪-೪). **ಚೆಕ್ಕು$_2$:** ೧. ವೆಣಸೇಲೆಯಕ್ಕಿಪುಡಿ ಚಕ್ಕಾದಲ್ಲಮುಪ್ಪೊಂದೆ ಕಟ್ಟಿದುದಂ ಕಾಮಿನಿ ತಂದು ನೀಡೆ ಕಲಸುಂಗೂಟಂ ಕರಂ ರಾಗದಿಂ (ಮಹಾಸೇ. ೧೬-೪೯). **ಚಕ್ಕೆ:** ೧. ಬಲ್ಯದ ಚಕ್ಕೆಯಲ್ಲಿ ಗಂಧವಂ ತೆಗೆದು (ಸಾಗಂಧಿ. ೬೭-೧೧); ಸುಕ್ಕುಸುಕ್ಕಾಗಿ ಚಕ್ಕೆಯನು ಹೋಲುತಿಹ ಚರ್ಮ (ನಸ್ನರ. ೬). ೨. ಒಂದು ಬಗೆಯ ಸಂಬಾರಪದಾರ್ಥ; ದಾಲ್ಚಿನ್ನಿ: ಪಲಾವ್ ಮಾಡಲು ಚಕ್ಕೆ, ಲವಂಗ ಮುಂತಾದ ಮಸಾಲೆಗಳನ್ನು ಬಳಸುತ್ತಾರೆ (ರೂಢಿ). ೩. ಗಾರೆಯನ್ನು ಗೋಡೆಗೆ ಬಳಿಯಲು ಉಪಯೋಗಿಸುವ ಚೌಕವಾಗಿರ ಎವ, ಹಿಡಿಯುಳ್ಳ ತೆಳ್ಳನೆಯ ಮಣೆ; ಗಾರೆಮಣೆ: ಚಕ್ಕೆ ಬಿಟ್ಟು ಬಂದು ಗಾರೆಕೆಲಸ ನಿಂತುಹೋಯಿತು (ರೂಢಿ). **ಚೆಕ್ಕು:** ೧. 'ಚೆಕ್ಕುದಱಿ' ಪರಾ. **ಚೆಕ್ಕೆ:** ೧. ಹಂದರದಾಗ ಚಂದುಳ್ಳ ಒಲಿಹೂಡಿ ಗಂಧದ ಚೆಕ್ಕೆ ಪಟುಮಾಡಿ (ಲೋಕಗೀ. ೪೨). Δ **ಸೆರ್ಕೆ:** ೧. ನೆಲೆ ಬಳಿವೋಗಿ ಮೇಗೊಗೆವ ಕೋಟ್ಯಳ ಸೆರ್ಕೆಗಳರ್ಕಬಿಂಬಮಂ ಮಱೆಯಿಸಿ (ವರ್ಧಪು. ೭-೪೯).

[< ಪ್ರಾ. ಸಕ್ಕ ./ ಸಂ. ಶಲ್ಕ]

ಸೆಕ್ಕೆ$_2$ (ನಾ). ಒಂದು ಮರದ ಹೆಸರು: "ಚಬುಕಂ — ಹುಣಿಸೆ, ಸೆಕ್ಕೆ, ಗುಳ್ಳೆ" (ಓಷಧಿ. ೫೭). [?]

ಸೆಕ್ಕೆಗಂಡ (ನಾ). ಮಾಂಸದ ತುಂಡು,— ತುಣುಕು: ದೆಸೆದೆಸೆಯೊಳ್ಪರಂ ಬಿಡಿದು ಪಾಱುವ ವೀರರ ಸೆಕ್ಕೆಗಂಡದಿಂ (ಎಕ. VII, ಶಕಾಂ. ೨೪೨-೨೨; 1163).

[ಸೆಕ್ಕೆ$_1$ + ಕಂಡ$_1$]

ಸೆಕ್ಕೆಗಳೆ (ಕ್ರಿ). ಚಕ್ಕೆ ಎಬ್ಬಿಸು; ಸೀಳಿ ಚೂರುಮಾಡು: ಬಳವೆತ್ತ ಬೆಟ್ಟುವ ಸೀಳ್ದು ಸೆಕ್ಕೆಗಳೆವುತ್ತ (ಹಚಕಾ. ೧೦-೫). [ಸೆಕ್ಕೆ$_1$ + ಕಳೆ$_1$]

ಸೆಕ್ಕೆವೋಗು (ಕ್ರಿ). ಚಕ್ಕೆ ಏಳು; ಚೂರಾಗು: ನತ್ತರ್ ಸುರ್ರೆನುತ್ತುಂ ನಿಮಿರೆ ಕೆದಱೆ ಖಂಡಂ ಕೊರಲ್ ಸೆಕ್ಕೆವೋಗುತ್ತಿರೆ ತೋಳ್ ಬೇಱುಗೆ (ಜಗವಿ. ೭-೫೭).

[ಸೆಕ್ಕೆ$_1$ + ವೋಗು$_1$ (< ವೋ$_1$)]

ಸೆಕ್ಕೆಹಾಱು (ಕ್ರಿ). ಚಕ್ಕೆ ಹಾರು; ಸಿಡಿ: ಗಿರಿ ಸಿಡಿದು ಸೆಕ್ಕೆಹಾಱಿದುವು [ಪಾಠಾಂ. ಸೆಟೆಗಾವರಿಸಿದವು] (ಸೋಮಚ. ೨-೭೧). [ಸೆಕ್ಕೆ$_1$ + ಹಾಱು$_1$ (< ಪಾಱು$_1$)]

ಸೆಕೆ 'ಸೆಕೆ' ನೋ.

ಸೆಬೆಕಾಲ 'ಸೆಕೆಗಾಲ' ನೋ.

ಸೆಗಣ 'ಸಗಣ$_1$' ನೋ.

ಸೆಗಣಿ 'ಸಗಣ$_1$' ನೋ.

ಸೆಗಣಿನೀರು 'ಸಗಣನೀರ್' ನೋ.

ಸೆಗಳಿ, ಸೆಕಳಿ, ಸೆಕಳೆ (ನಾ). ಉಷ್ಣ; ಬಿಸುಪು; ಕಾವು: "ಕಾವಿಂತುಷ್ಣಕ್ಕೆ ಸೆಗಳ ಜಳಮುಮ್ಮೆಂದುಂ" (ಕವಿಕಂ. ೪೧); ಬೀಱುಬಿಸಿಲ ಬೇಗೆಯ ಸೆಗಳ ಹೊಡೆಯಲುರಿಯೆತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾವಡಸುತಿದೆ (ಹಚಕಾ. ೭-೯); ಹಿಮಕೆ ಹಿಮವಂಜುವದ ಮಿಗ್ಗೆ ಶ್ರಮವ ಕೊಡುವುದೆಸೆ [ಪಾಠಾಂ. ಶೆ]ಗಳಿ (ಸಭಾಗ. ೧೧-೫೯-೪೪). **ಸೆಕಳಿ:** ಪರಸಮಯಿಗಳ ಕುಲಕೆ ಸೆಕಳಿ[ಪಾಠಾಂ. ಸೆಮಳಿ, ಸಕಳಿ, ಸೆಕಳೆ]ಒಪ್ಪಂತೆ ಬೇಸಗೆ ಮೊಳೆತು ತಲೆದೋಱಿತು (ಸೋಮಚ. ೨-೭೧); ಆ ಸೊಡರ ಸೆಕಳಿ [ಪಾಠಾಂ. ಬೆಳಗಿ, ಸಬಳಿ]ಗಾ ಚಂದ್ರನೊಳಗಿಪ್ಪೆರಳೆ ಬೇಸತ್ತು ಬೆಂಬಿದ್ದು ಧರೆಗಿಳಿದು ಬಂದು (ಸಿದ್ಧರಾ. ೪-೨೮). **ಸೆಕಳೆ:** "ಪೇಳಲುಷ್ಣಂ ಬಾಷ್ಪಮನೆ ಸೆಕಳೆ[ಪಾಠಾಂ. ಸೆಗಳಿ]ಯಕ್ಕುಂ" (ಮಂಗರಾ. ೧೪-೮); ಕೀಱಿದುವು ಸೆಕಳೆಯಿಂ [ಪಾಠಾಂ. ಶಕೆಗಳಿಂ ಸಿಕಳಿ] ಭೂತಂಗಳು (ಚಿಲಪು. ೨೫-೨೩). [< ಸೆಕೆ]

ಸೆಗಳಿಕೆ, ಸೆಗಳಿಗೆ, ಸಿಗಳಿಗೆ (ನಾ). = ಸೆಗಳಿ: ಸೆಗಳಿಕೆ[ಪಾಠಾಂ. ಗೆ] ಪೆಂದಿರ ಮೊಲೆ ಕಿಚ್ಚಗರುವ ಪೊಗೆ ಕುಂಕುಮಾಂಕಮೋವರಿ ನೆಲವಾಳಿಗೆ ದಡ್ಡಿ (ಪುಷ್ಪಪ. ೬-೫೩); ಮುನಿಯುಗ್ರದೋಷದ ಸೆಗಳಿಕೆಗೆ ಪಾಂಡವರು ಸವಿದುತ್ತಾದರು (ಕುವಾಳ. ೧೬-೯); ತೆಗೆದು ನಿಂದುದು ರಾವಣನ ಮೈ ಸೆಗಳಿಕೆಗೆ ನಿಮ್ಮವರ ಬಲ (ತೊರಣ. ೬-೨೦-೬೮); ಝಳದ ಸೆಗಳಿಕೆ ಧಾತುಗಿಡಿಸಿತು (ಉತ್ತರಾ. ೧೫-೪೬). **ಸೆಗಳಿಗೆ:** "ಸೆಗಳಿಗೆ ಜಳಮಂದೆನೆ ಪಿಂಗದುಷ್ಣಿಗೆ" (ಕಬ್ಬಿಕೃ. ೧೧); ಬಗೆಗೆ ಬೆಜಗೀವುತೀ ತೆಱದೊಳ್ ನಿದಾಘರುತು ಸೆಗಳಿಗೆಯ ಸಸಿಯನಾಗಿಸೆ (ಸಜಿಮಾ. ೧೫-೧೨). **ಸಿಗಳಿಗೆ:** ಪೆರ್ಮೊಲೆಗಳ ಸಜಿಮಿಂದಿ ಸುಪ್ಪತ್ತಿಗೆ ಧವಳಾರಂ ಕೆಲದ ಸಿಗಳಿಗೆಯನಿಂಬಂ ಸಲೆ ಸವಿವೊಡೆ ಮಾಗಿಗೀಗಿಯೇಗೆಯ್ವುವುದೋ (ಸೂಕ್ತಿಸು. ೧೦-೨೫೯). IP ಇದು 'ಸೆಗಳಿಗೆ' ಎಂಬುದರ ಅಪಲಿಖಿತ. [< ಸೆಗಳಿ]

ಸೆಗಳಿಗದಿರ (ನಾ). ಬಿಸಿಯ ಕಿರಣಗಳುಳ್ಳವನು; ಬಿಸಿಗದಿರ; ಸೂರ್ಯ: "ಜಗದಿಟ್ಟಿ . . . ಸೆ[ಪಾಠಾಂ. ಶೆ]ಗಳಿಗದಿರ ಬೆಂಗದಿರ ಪಗಲೆಱೆಯ . . . ಸೂರ್ಯನಾಮಂ" (ಶಬ್ದಮಂ. ೧೫೩); ಮೂಡಿವರ್ಪ ಸೆಗಳಿಗದಿರನ ತೇಜಮುಂ ಪಡಿತಳಿಸಿ (ರಾಮಾಶ್ವ. ೭೫-೧೪). [ಸೆಗಳಿ + ಕದಿರ್$_2$ + - ಅ$_7$]

ಸೆಗಳಿಗೆ 'ಸೆಗಳಿಕೆ' ನೋ.

ಸೆಗುಣ್ಣ (ನಾ). ಒಬ್ಬಾತನ ಹೆಸರು: ಇರ್ವತ್ತಾ ಏಟೂನ ವರ್ಷದುಳ್ ಪುಲಿಕಲ್ಲದಿ ಆತ್ತದ ವಾರ್ಕೆಲುಳ್ ಸೆಗುಣ್ಣನೊಳ್ ಎಜಿದುವಿಟ್ಟೊ (ಎಕ. X (S), ಕೋಲಾರ. ೭೮-೬; ಸು. 752). 'ಸೇಗುಣ' ಪರಾ. [?]

ಸೆಗೆ 'ಸೆಕೆ' ನೋ.

ಸೆಜೋಜ (ನಾ). ಒಬ್ಬಾತನ ಹೆಸರು: ಸೆಜೋಜನ ಲಿಖಿತಮ್ (ಇಆ. VI. ೧೦೭-೧೨; 887). [?]

ಸೆಜ್ಜರ 'ಸೆಜ್ಜಾರ' ನೋ.

ಸೆಜ್ಜಾಗೃಹ (ನಾ). ಮಲಗುವ ಮನೆ; ಶಯ್ಯಾಗಾರ: ಮತ್ತಿದು ಸೆಜ್ಜಾಗೃಹ ಇದು ವಿರೂಪಾಕ್ಷನ ಗುಡಿಯು (ಪಂಸಾಂ. ೪೬-೨). [< ಸಂ. ಶಯ್ಯಾಗೃಹ]

ಸೆಜ್ಜಾನಿಳಯ (ನಾ). = ಸೆಜ್ಜಾಗೃಹ: ತಳುವದೆಯ್ದಿಸಲು ನಿಟ್ಟಿಸಿದನು ಸೆಜ್ಜಾನಿಳಯದ ಶೃಂಗಾರವನು (ಜೀವಂಸಾಂ. ೨-೬೮). [< ಸಂ. ಶಯ್ಯಾನಿಲಯ]

ಸೆಜ್ಜಾರ, ಸಜ್ಜರ, ಸಜ್ಜಾರ, ಸೆಜ್ಜರ, ಸೆಜ್ಜೆರ (ನಾ). ೧. ಮಲಗುವ ಮನೆ; ಶಯ್ಯಾಗಾರ. ೨. ಹಾಸಿಗೆ; ಶಯ್ಯೆ. ೩. ಆನೆಯನ್ನು ಕಟ್ಟುವ ಸ್ಥಳ; ಕರೋಟಿ (?):

ಸೆಜ್ಜಾರದಿಂದೇಳ್ವ ಮಾದ್ಯಚ್ಛುಂಡಾಳೋಚ್ಛುಂಖಳಾಶಿಂಜಿತವನೆಡೆಗೆ ಪೊಯ್ದುಣ್ಮೆ ಪೊಣ್ಮೆತ್ತು . . . ತೂರ್ಯಪ್ರಣಾದಂ (ಲೀಲಾವ. ೬-೫೮); ಗುರುಪಯೋಧರಮಧ್ಯ ಸೆಜ್ಜಾರದಿಂದೆ ಮದಭರಿತಮಾರುತಕರಿಯ ಸ್ಮರಜೋದಮಾಂದ್ಯದಿಂ ಸ್ಫುರಿಪ ಸನ್ನಾಭಿಕಾ ಸಾರಕ್ಕೆದಿಸಲು ಹಿಂಗಾಲ್ಗೆ ಸನ್ನೀಲಮಣಿಯ ಸರಪಣಿಯಮರ್ಚಲು (ನಂದಿಮಾ. ೮-೨೫). **ಸಜ್ಜರ:** ೩. ದಿವಿಜಗಜಂ ಸಜ್ಜ[ಪಾಠಾಂ. ಜ್ಜೆ]ರದಿಂದವೆಟ್ಟುವೆನೆ ಕಾಣಲದ್ರಿಯಾ ದಂತಿಗೆ ಕಟ್ಟುವ ಚೆಮ್ಮೊಗವಡಮೆನೆ ಚೆಲ್ಲುವೆತ್ತುದಂದುದಯಸಮಯಸಂಧ್ಯಾರಾಗಂ (ಜಗವಿ. ೧೬-೧೩೮). **ಸಜ್ಜಾರ:** ೩. ಆನೆಯ ಸಜ್ಜಾರ ನಡುಕೇರಿಯೊಳಗೊಪ್ಪುತಿಹುದು (ಕಂನವಿ. ೬-೬೨); ಭೂಮಿಯೊಳನಂಗವೀರನ ಶಸ್ತ್ರದಾಲಯಮೊ ನಾಮವೆತ್ತಿರ್ದ ಪ್ರದ್ಯುಮ್ನರಾಜನ ಪಟ್ಟದಾನೆಗಳ ಸಜ್ಜಾರಮೊ (ಚತುಪು. ೧-೭-೭). **ಸೆಜ್ಜರ:** ೩. ದಿಗಿಭವ್ರಜಕ್ಕೆ ಸೆಜ್ಜರದ ಬೆಡಂಗನೀವ ಕಟಕಂ (ಜಗವಿ.೮-೨೨); ಅಮೃತಮತಿಸಹಿತಮಾ ಚಂದ್ರಮತಿಯ ಸುತನೆಯ್ದೆ ಮೆಱೆವ ದವಳಾರದೊಳಭ್ರಮುವೆರಸಭ್ರಗಜಂ ವಿಭ್ರಮದಿಂದಂ ಸೆಜ್ಜರಕ್ಕೆ ಬಂದವೊಲೆಸೆಗುಂ (ಯಶೋಚ. ೨-೨೧); ಮೇಳಿಸಿದ ಸೆಜ್ಜರದಿನೇಲಲುಜ್ಜುಗಂಗೆಯ್ವ ವಿಜಯಕುಂಜರದ ಮಂಜೀರಸಿಂಜಿತಕ್ಕೆ ಪಕ್ಕಾಗಿಯುಂ (ಪುಷ್ಪಪು. ೮-೧೯ ವ); ಮನಸಿಜನ ಶಸ್ತ್ರಾಸ್ತ್ರಶಾಲೆಯೋ ಕಾವದೇವನ ಪಟ್ಟದಾನೆಗಳ ಸೆಜ್ಜರಮೊ . . . ಎನಲೆಸೆದುದಾ ಸೂಳೆಗೇರಿ (ಚಪಪು. ೧೦-೮). **ಸೆಜ್ಜೆರ:** ೩. ಸೆಜ್ಜೆ [ಪಾಠಾಂ. ಜ್ಜ] ರದಿಂ ಗಜರಾಜಿಯಶ್ವಮೆಟ್ಟುಱೆ ದನಿದೋಱೆದೊ (ಸೂಕ್ತಿಸು. ೯-೫೯).

[< ಪ್ರಾ. ಸೆಜ್ಜಾಹರ./ ತೆಲು. ಸಜ್ಜಾರ./ ಸಂ. ಶಯ್ಯಾಗಾರ]

ಸೆಜ್ಜೆ₁, ಸಜ್ಜೆ₁ (ನಾ). ಒಂದು ಬಗೆಯ ತೃಣಧಾನ್ಯ: "ಧಾನ್ಯದೊಳ್ ಶಯ್ಯೆಯಲ್ಲೀ ಪೆಸರಕ್ಕು ಸೆಜ್ಜೆಯೆಂಬುದಕೆ" (ಶಬ್ದಮಂ. ೮೮); ಸೆಜ್ಜೆಯನ್ನು ಸ್ವಲ್ಪು ಜೋಳವನ್ನು ಕೂಡಿಸಿ ಬಿತ್ತಬೇಕು (ಕೃಷಿಪ್ರ. ೬೩). **ಸೆಜ್ಜೆ₁:** ರಾಗಿ ಗೋಧಿ ಜೋಳ ಸಜ್ಜೆಯ ಬೀಸ್ವಾರ (ಸಿದ್ಧಪು. ೧೭-೩೭); ಸಾಮೆ, ನವಣೆ, ಸಜ್ಜೆ, ಹಾರಕ - ಇವು ಹೆಚ್ಚು ಅದಾಯಕರವಾದ ಪೈರುಗಳಲ್ಲ (ವೃವಮ. ೪೪). [ದೇ. ॥ ತೆಲು. ಸಜ್ಜೆ]

ಸೆಜ್ಜೆ₂, ಸಜ್ಜೆ₂ (ನಾ). ೧. ಹಾಸಿಗೆ; ತಲ್ಪ: "ಪಟ್ಟೆ ಸೆಜ್ಜೆಯೆನಲಾದರಿಪ ಶಯ್ಯೆಗೊಪ್ಪುವ ಪೆಸರ್" (ಕಬ್ಬಕ. ೨೯); ಮೃತಕ ಸೆಜ್ಜೆಯೊಳರ್ದು . . . ಧ್ಯಾನಿಸುತಿರ್ಪನ್ನೆಗಂ (ವಡ್ಡಾರಾ. ೨೯-೧); ಪಿರಿಯ ಮರಂಗಳೆ ಮಾಡಮಾಗೆ ಪೊಳೆವೆಳದಳಿರ್ಗಳೆ ಸೆಜ್ಜೆಯಾಗೆ (ಪಂಪಭಾ. ೭-೨೮). ೨. ಮಲಗುವ ಮನೆ; ಶಯ್ಯಾಗೃಹ: ಜಿನಜನನಿಯ ಸೆಜ್ಜೆಯನುಜ್ವಲಂ ಮಾಡಲುಂ (ಆದಿಪು. ೭-೨೧ ವ); ಸೆಜ್ಜೆಯ ಕಾಪಿನವರ್ ಪರಿತಂದು ಶೋಧಿಸಿ ನೋಡಿ (ಪಂಚತಂ. ೧೩೦-೧೪); ತಿಂಗಳ ಪೆತ್ತ ತಂದೆ ವಾಡವಶಿಖಿಗಂ ನಿವಾಸಮಸುರಾರಿಯ ಸೆಜ್ಜೆ ಶುಭಂ ಮಹಾರ್ಣವಂ (ಸೂಕ್ತಿಸು. ೨-೩೮). ೩. ಮನೆಯ ಮಹಡಿಯಲ್ಲಿ ಮುಂದಕ್ಕೆ ಚಾಚಿರುವಂತೆ ಕಟ್ಟಿರುವ ಭಾಗ; ಉಪ್ಪರಿಗೆಯ ಮೊಗಸಾಲೆ: ಪ್ರೇಮದೊಳೆಸೆದುವು ನಾಟಕಶಾಲೆಯ ಕಾಮಿನಿಯರ ಸೆಜ್ಜೆಗಳು (ಕಂನವಿ. ೨೦-೩೮); ಸೆಜ್ಜೆಯಲ್ಲಿ ಹೆಂಗಸರು ನಿಂತು ನೋಡುತ್ತಿದ್ದರು (ಚಿಂಗಾಳ್ವ. ೫೫೮). ೪. ಆಧಾರ; ಆನಿಕೆ: 'ಸೆಜ್ಜೆಗೊಡು' ಪರಾ. ೫. "ಸಂನ್ಯಾಸಿಯ ಉಪಕರಣ [ಕಂತೆ - ಕೌದಿ]" (ಜೀವಸಂ. ಕೋಶ): ವೇಷದೋಜೆಯ(ಯಿ)ಂ ಕೆಯ್ಯೊಂಡು ಸೆಜ್ಜೆಯಂ ಪಿಡಿದು ಪೊಬಲಂ ಪೊಜವಮಟ್ಟು (ಜೀವಸಂ. ೮೯-೩೨ ವ). ೬. [ವೀಶೈ] ಇಷ್ಟಲಿಂಗವನ್ನು ಇಡುವ ಭರಣಿ; ಕರಡಿಗೆ; ಲಿಂಗವತ್ತಿಗೆ: ಸೆಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ (ಮಹಾದೇ. ಬ. ೧೦೬-೨೪೦); ಮಾರಾರಿ ಲಿಂಗಮಂ ಕಾಶಿಯೊಳು ಸೆಜ್ಜೆಯೊಳು ದಾರಂಗಳಂ ಹೊಲಿದು ಕಂಠದೊಳು ವಸ್ತ್ರದೊಳು . . . ಧರಿಸಿ (ಗುರುಚಾ. ೩-೪೯). **ಸೆಜ್ಜೆ₂:** ೧. ಏಂ ಮೆಱೆದಿರ್ದುದೊ ಸೆಜ್ಜೆಯಾಲಯಂ (ದಶಕು. ೮-೨೯೨); ಮೈಮರೆತಳಡವಿಯಾ ತೊಯ್ದ ನೆಲವುಲ್ಲಿನಾ ತರಗು ಸೆಜ್ಜೆಯಲಿ (ಚತ್ರಾಂಗ. ೫೫-೨೮); ಅಲರ ಸೆಜ್ಜೆಯೊಳೊರಗಿ ತಂಗಾಳಿಗೆದೆಯೊಡ್ಡಿ . . . ಹಾಡಿ ಗೋಳಾಡುತಿಹೆ! (ಕವಿಕಾ. ೯-೧). ೨. ಸೆಜ್ಜೆಯ ಕಾಪಿನ ಬೆಸನಂ ಕುಡೆ ಪಡೆದು (ಪಂಚತಂ. ೧೯೪-೧೮); ಈಸುದಿನ ಪರಿಯಂತ ವಿಭವದ ವಾಸ ಸೊಬಗಿನ ಸೆಜ್ಜೆ (ತೊರರಾ. ೨-೨-೩೫). ೩. ಭೋಜನಶಾಲೆ ಮಂತಣಗೃಹ ಚೆಲ್ವಿಂದ ರಾಜಿಪ ಸೆಜ್ಜೆಯ ಸದನ (ಕಂನವಿ. ೨-೮೦); ತುಡುಕಿ ಸೆಜ್ಜೆಗಳಡರಿ . . . ವಾತಾಯನದ ಮಾರ್ಗವಿಡಿದು ಪೊರಮಟ್ಟನು (ವಂಜಾರಾ. ೫-೩-೨೩); ಆ ಪಟ್ಟಣವು . . . ಮನೆಗಳು, ಉಪ್ಪರಿಗೆಗಳು, ಸೆಜ್ಜೆಗಳು ಉಳ್ಳದ್ದಾಗಿ (ಕೃವಾಅ. ೨೦೩). ೬. ಉರದ ಸೆಜ್ಜೆಯಲ್ಲಿ ಲಿಂಗವ ಧರಿಸಿದ ಮತ್ತೆ ಪರಸ್ತ್ರೀಯರ ಸಂಗವ ಬಿಡಬೇಕು (ಮೋಳಿಮಾ. ೧೩೫-೫೨೨); ಶಿವದಾರ ಸೆಜ್ಜೆಗಳಳವಡುವೊಡೆ (ಪ್ರಭುಲೀ. ೧೬-೨೩); ಸೆಜ್ಜೆಯಲಿ ಶಿವನ ಧರಿಸಿಪ್ಪ ಶರಣರ ಹೆಜ್ಜೆಯಲಿ ನಡೆಯೊ (ಸರ್ವಜ್ಞ. ೨೫೬). ೭. ಮನೆಯ ಗೋಡೆಯ ಹೊರಭಾಗದಲ್ಲಿ ಮುಂಚಾಚಿದಂತೆ ಕಟ್ಟಿದ ಭಾಗ: ಸೆಜ್ಜೆ ಕೋಣೆಗೆ ಚೆಂದ ಗೆಜ್ಜೆ ಕುಣಿತಕೆ ಚೆಂದ (ಇಂಚಾಪ. ೯೪-೫೬). [< ಪ್ರಾ. ಸೆಜ್ಜಾ, ಸಿಜ್ಜಾ./ ಸಂ. ಶಯ್ಯಾ]

ಸೆಜ್ಜೆಗದ್ದೆ (ನಾ). ಸೆಜ್ಜೆಯನ್ನು ಬೆಳೆಯುವ ಗದ್ದೆ: ನಿವೇದ್ಯಕ್ಕೆ ಸೆಜ್ಜೆಗದ್ದೆ ಒನ್ದು ಮತ್ತಲು (ಎಕ. VIII, ಸೊರಬ. ೪೭೬-೧೬; 939); ಕೆಜೆಯ ಕೆಳಗೆ ಗುಣಿಗಗಳೆಯೊಳ್ಕಮ್ಮ ೫೦ ಸೆಜ್ಜೆಗದ್ದೆ ಮತ್ತ ೧ ಕಮ್ಮ ೨೫ (ಎಕ. VIII, ಸೊರಬ.೧೮೪-೨೩; 1033).

[ಸೆಜ್ಜೆ₁ + ಗದ್ದೆ (< ಗಟ್ಟೆ)]

ಸೆಜ್ಜೆಗೊಡು (ಕ್ರಿ). ಆಧಾರವಾಗಿಸು; ಆನಿಸು: ಚಿತ್ರಮಂ ವಿಸ್ಮಯಮಯರಸದಿಂ ನಾಂದುತುಂ ಸೆಜ್ಜೆಗೊಟ್ಟುಂಗಯ್ಯಂ ಗಲ್ಲಕ್ಕೆ (ಲೀಲಾವ. ೩-೭೧). [ಸೆಜ್ಜೆ₂ + ಕೊಡು₁]

ಸೆಜ್ಜೆಗೊಳಿಸು, ಸಜ್ಜೆಗೊಳಿಸು₁ (ಕ್ರಿ). ಮಲಗಿಸು; ನಿದ್ರೆಮಾಡಿಸು: ಆ ಪರಮನನು ಮಜ್ಜನಗೊಳಿಸುವರು ಸೆಜ್ಜೆಗೊಳಿಸುವರು (ಸಾಳ್ವಭಾ. ೩೩-೧೧೫). **ಸೆಜ್ಜೆಗೊಳಿಸು₁:** ಚತುರೆ ನಿಜಸಖಿ ಸೆಜ್ಜೆಗೊಳಿಸಿ ಸಮಸ್ತರನು ತೇದು (ಸಾಳ್ವಭಾ. ೨೯-೪).

[ಸೆಜ್ಜೆ₂ + ಕೊಳ್₁ + - ಇಸು₃]

ಸೆಜ್ಜೆದುಂಬು (ಕ್ರಿ). ಕರಡಿಗೆ ತುಂಬು; ಲಿಂಗದ ಭರಣಿಯಲ್ಲಿ ಸೇರಿಸು: ನವಪರಿಮಳದ ಬಿರಿಮುಗುಳ್ಗಳನವಿಕಳಾತ್ಮನು ಸೆಜ್ಜೆದುಂಬಲು ತವಕದಿಂ ತವೆ ಕೊಯ್ದುಕೊಂಡಾ ಮದಕರಿಯ ಮುಂದೆ (ಬಸಪು. ೨೨-೯). [ಸೆಜ್ಜೆ₂ + ತುಂಬು₁]

ಸೆಜ್ಜೆಮನೆ 'ಸೆಜ್ಜೆವನೆ' ನೋ.

ಸೆಜ್ಜೆಮಾಡ 'ಸೆಜ್ಜೆವಾಡ' ನೋ.

ಸೆಜ್ಜೆಯೋವರಿ (ನಾ). ಮಲಗುವ ಕೋಣೆ; ಶಯ್ಯಾಗೃಹ: ಎಮ್ಮ ಸೆಜ್ಜೆಯೋವರಿಯಲಿ ಕಳ್ಳಂ ಪೊಕ್ಕು ಪುಡಿಕೆಯಂ ತೆಗೆದು (ವಡ್ಡಾರಾ. ೧೨೩-೧೯); ಮಿಣ್ಣನೆ ಹೊಕ್ಕನಾತನ ಸೆಜ್ಜೆಯೋವರಿಯ (ಕುವಾಗ. ೯-೨೭). [ಸೆಜ್ಜೆ₂ + ಓವರಿ]

ಸೆಜ್ಜೆರ 'ಸೆಜ್ಜಾರ' ನೋ.

ಸೆಜ್ಜೆವನೆ, ಸಜ್ಜೆಮನೆ, ಸಜ್ಜೆವನೆ, ಸೆಜ್ಜೆಮನೆ (ನಾ). ಮಲಗುವ ಮನೆ; ಶಯ್ಯಾಗೃಹ: "ಸೆಜ್ಜೆವನೆ, ಪಟ್ಟೆವನೆ — ಈ ೨ ಶಯ್ಯಾಗೃಹಂ" (ಕಶಾ. ೬೦-೩೧೭); ಪುಷ್ಪಳಾವತಿಯೆಂಬ ಸೆಜ್ಜೆವನೆಯಿಂದಂ ಜೀಮೂತಮೆಂಬ ಮಜ್ಜನನಿಕೇತನದಿಂದಂ (ಶಾಂತಿಪು. ೧೧-೮೪ ವ); ಅಮೃತಾಂಭೋನಿಧಿಯೆಮ್ಬು ಸೆಜ್ಜೆವನೆಯೊಳ್. . . ಕಮಳಾವಲ್ಲಭನಿರ್ದ್ದು (ಎಕ. XI, ದಾವಣ. ೩೫-೪; ಸು. 1160); ಪರಿತಂದು ಸೆಜ್ಜೆವನೆಯ ಸಿರಿಮಂಚದೊಳ್ ಕುಳ್ಳಿರ್ದು (ಗಿರಿಕ. ೨-೧೦೫ ವ). **ಸೆಜ್ಜೆಮನೆ:** ಪವಡಿಸು ಪರಮಾತ್ಮನೆ . . . ಕುಂದಣದಿ ರಚಿಸಿದ ಸೆಜ್ಜೆಮನೆಯಲ್ಲಿ (ಪುರಂದ. ೩-೧೩೧-೧); ಉಪ್ಪರಿಗೆಗಳು, ಸೆಜ್ಜೆಮನೆಗಳು . . . ಹಜಾರಗಳು (ಕೃವಾಅ. ೧೩೪). **ಸೆಜ್ಜೆವನೆ:** ನಿಮ್ಮಡಿಗಳಂ ನೋಡಲಾಸ್ಥಾನಮಂಟಪಕ್ಕೆ ಬಂದು ಕಾಣದೆ ಸೆಜ್ಜೆವನೆಯಂ ನೋಡಿಯಲ್ಲಿಯು ಕಾಣದೆ (ದಶಕು. ೪-೧೪ ವ); ನುಣ್ಣರದ ತಾಯ್ಯನೆಯೆನಿಸಿದುದು ಸೆಜ್ಜೆವನೆಯಂದು (ಸಾಳ್ವಭಾ. ೩-೩೬); ಆರೊಳಮೇನುಮನಾಡದೆ ನೋಡದೆ ಸೆಜ್ಜೆವನೆಗಾಗಿ ಪೋಪುದುಂ (ರಾಮಾಶ್ವ. ೧೯-೧೧). **ಸೆಜ್ಜೆಮನೆ:** "ಸೆಜ್ಜೆ[ಪಾಠಾಂ. ಶಯ್ಯೆ]ಮನೆಗಳೊಳ್ ಪಕ್ಕೆ" (ಶಬ್ದಮಂ. ೮೦). [ಸೆಜ್ಜೆ₂ + ಮನೆ]

ಸೆಜ್ಜೆವಳ, ಸಜ್ಜೆವಳ, ಸೆಜ್ಜೆವಳ್ಳ, ಸೆಜ್ಜೆವಾಳ (ನಾ). ೧. ಮಲಗುವ ಮನೆಯ ಮೇಲ್ವಿಚಾರಕ; ಶಯ್ಯಾಗಾರದ ಪರಿಚಾರಕ: "ಸೆಜ್ಜೆವಳನೆಂದು ಶಯ್ಯಾಗೃಹ ರಕ್ಷಕಂ" (ಕಶಾ. ೬೧-೩೪೮); ಸೂರ್ಯಕಾಂತದ ಧೂಪಗುಂಡಿಗೆಯೊಳಳವಱೆಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರ ಕಾಲಾಗರುಧೂಪಂ (ಆದಿಪು. ೫-೨೨ ವ); ಸೆಜ್ಜೆವಳರ್ ಬಾಣಸಿಗರ್ ಮಜ್ಜನವಳರ್ (ಪುಷ್ಪಪು. ೧೨-೫೬); ಸೆಜ್ಜೆವಳರಂ . . . ಮಧುರೋಕ್ತಿಗಳಿಂ ಸಂತಸವಡಿಸುತ್ತೆ (ಚಿಕಪಂ. ೭೪-೮). **ಸೆಜ್ಜೆವಳ:** ೧. "ಸೆಜ್ಜೆವಳಂ ಶಯನಗೃಹವ ರಕ್ಷಿಸುವಾತಂ" (ಕವಿಕಂ. ೧೫೭); ಪಡೆವಳರ ಸ[ಪಾಠಾಂ. ಸೆ]ಜ್ಜೆವಳ ಗಂಧಿಗ . . . ಕಂಚುಗಾಱರ ಕೇರಿ ಮೆಱೆದಿಹವು (ಸಾಳ್ವಭಾ. ೨-೮). **ಸೆಜ್ಜೆವಳ್ಳ:** ೧. ಪಡೆವಳ್ಳಂ ಮಡಿವಳ್ಳಂ ಸೆಜ್ಜೆವಳ್ಳಂ (ಕಾವ್ಯಾವ. ೩೨೬); ಸೆಜ್ಜೆವಳಂ, ಸೆಜ್ಜೆವಳ್ಳಂ (ಶಬ್ದಾನು. ೪೨೬ ಪ್ರಯೋ).

೨. ಒಂದು ಮನೆತನದ ಹೆಸರು: ಮಹಾಪ್ರಧಾನ ಸೆಜ್ಜೆವಳ್ಳ ಪದ್ಮನಾಭದೇವ (ಅರ್ಥಪ್ರ. ೧-೧೨೦ ವ). **ಸೆಜ್ಜೆವಾಳ:** 'ಸೆಜ್ಜೆವಾಳುಕ' ಪರಾ. [ಸೆಜ್ಜೆ$_2$ + - ವಳ]

ಸೆಜ್ಜೆವಳಿಗೆ (ನಾ). = ಸೆಜ್ಜೆವನೆ: ಪುರವನಿತೆಯರು ನೋಳ್ಪೊಡೆ ಸೆಜ್ಜೆವಳಿಗೆ ಮಂದಿರಗಳ ಮಚ್ಚನೇಱಿದರು (ಕಂಪವಿ. ೨೨-೧೦೦). [ಸೆಜ್ಜೆ$_2$ + ಮಳಿಗೆ (< ಮಱಿಗೆ)]

ಸೆಜ್ಜೆವಳ್ತಿ (ನಾ). ಮಲಗುವ ಮನೆಯ ಸೇವಕಿ; ಶಯ್ಯಾಗೃಹದ ರಕ್ಷಕಿ: ಳಿಟ್ಟವಳ್ತಿ, ಸೆಜ್ಜೆವಳ್ತಿ (ಶಮದ. ೨೦೩ ಪ್ರಯೋ); ಸೇವಿಸುತ್ತಿರೆ ಸೆ [ಪಾಕಾಂ. ಸ]ಜ್ಜೆವಳ್ತಿಯರ್ ಕೆಲಬಲದೊಳ್ (ಶಪರಾ. ೧೫-೪೯). [< ಸೆಜ್ಜೆವಳ + - ತಿ$_1$ (< - ಇತ್ತಿ)]

ಸೆಜ್ಜೆವಳ್ಳ 'ಸೆಜ್ಜೆವಳ' ನೋ.

ಸೆಜ್ಜೆವಾಡ, ಸೆಜ್ಜೆಮಾಡ (ನಾ). ಮೊಗಸಾಲೆಯಿರುವ ಮಹಡಿಮನೆ: ದೀಪಕಾಂತಿಗ ತನುಕಾಂತಿ ಮಾರ್ಮಲೆಯೆ ಪೊಕ್ಕಳಿಳಾನುತೆ ಸೆಜ್ಜೆವಾಡಮಂ[ಪಾಕಾಂ. ಶಯ್ಯೆಗೇಹಮಂ] (ಜಗವಿ. ೨-೭೩). **ಸೆಜ್ಜೆಮಾಡ:** ಪೌರನಾರಿಯರ್ ಗಡಣದೆ ಸೆಜ್ಜೆಮಾಡದೆಡೆಗಯ್ದಿ ವೃಷೇಂದ್ರನನೆಂದು ನೋಡಿದರ್ (ವೃಪವಿ. ೫-೮). [ಸೆಜ್ಜೆ$_2$ + ಮಾಡ$_1$]

ಸೆಜ್ಜೆವಾಳ 'ಸೆಜ್ಜೆವಳ' ನೋ.

ಸೆಜ್ಜೆವಾಳುಕ (ನಾ). = ಸೆಜ್ಜೆವಳ: ಮಜ್ಜನಿಗನವಸರಿಗ . . . ಸೆಜ್ಜೆವಾಳುಕನುಭಯ ಭಾಸಿಕ (ಕೊಲ್ಹಾಪ. ೨೧೦). [ಸೆಜ್ಜೆವಾಳ (< ಸೆಜ್ಜೆವಳ) + - ಉಕ (<- ಉಗ)]

ಸೆಟಕೊಳ್ಳು 'ಸೆಟೆಗೊಳ್ಳು' ನೋ.

ಸೆಟಗೊಳ್ಳು 'ಸೆಟೆಗೊಳ್ಳು' ನೋ.

ಸೆಟವಿ (ನಾ). ಸೆಟೆಯುವ ಸ್ವಭಾವದವಳು; ಜಂಭಗಾರ್ತಿ; ದುರಹಂಕಾರಿ: ಅಷ್ಟು ತಿಳೀಬಾರದು ಆ ಸೆಟವಿಗೆ (ಜಪಾಂ. ೧೭). [< ಸೆಡೆ$_1$]

ಸೆಟವಿ$_2$, ಶಟವಿ, ಸಟವಾಯಿ (ನಾ). ೧. ಮಕ್ಕಳು ಹುಟ್ಟಿದ ಆರನೆಯ ದಿನ ಪೂಜಿಸುವ ದೇವತೆ; ಮಾನವರ ಹಣೆಯ ಬರಹವನ್ನು ಬರೆಯುವವಳೆಂದು ನಂಬಲಾದ ಒಬ್ಬ ಗ್ರಾಮದೇವತೆ: ಸಟವಿದೇವಿಯ ನೆನೆದು ಮುಡಪು ಕಟ್ಟಿದಳಂದು (ಕನ್ನಜಾ. ೧೯೦); ಸೆಟವಿಯ ಬರಹಕ್ಕಿಂತ ಅದರಲ್ಲಿಯ ಸಾಹೇಬರ ಬರಹವು ಬಹಳೇ ಜೋರಾಗಿರುವುದೆಂದು ಆತನ ನಂಬುಗೆ (ಜೀವಪ್ರ. ೧೪). **ಶಟವಿ:** ೧. ಅದೃಷ್ಟವನ್ನು ಬದಲಾಯಿಸಿದ ಹಾಗೆ ಈ ಕೆಲಸ 'ಶಟವಿ'ಯ ಬರವಣಿಗೆಯನ್ನೇ ಅಳಿಸಿದ ಹಾಗೆ ಈ ಕೆಲಸ (ಬನಸಿ. ೧೩೦); ತೆಲಗು ಬ್ರಾಹ್ಮಣರು . . . ಇವರೊಳಗೆ ಹಡೆದ ಮೇಲೆ ಕೂಸಿನ ಹೊಕ್ಕಳ ಹುರಿಯನ್ನು ಹುಗಿಯದೆ ಬಾಣಂತಿಯ ಕೋಣೆಯಲ್ಲಿ ವೊಣಗಿಸುವರು. ಐದನೇ ದಿವಸ ಮಧ್ಯಾಹ್ನದಲ್ಲಿ ನೆಲದ ಮೇಲೆ ಬೀಸುವ ಕಲ್ಲು, ಇಟ್ಟು, ಶಟವಿಯ ಪ್ರತಿಮೆಯನ್ನೂ ಹೊಕ್ಕಳ ಹುರಿಯನ್ನೂ ಇರಿಸಿ ಪೂಜಿಸುವರು (ಕಭಾಗ. ೮೭). ೨. ಒಂದು ಕ್ಷುದ್ರದೇವತೆ: ಜೋಕುಮಾರ ಕರಿಯಾ ಶೀರಿಯಾ ಶಟವಿ ಗುಳ್ಳಕಿ ಪೊಳಕಾಯಿ ಅಗಸರ ಮನೆ ಕೊಡತಿ ಹೊಲ್ಲಿ . . . ಜಂಪೆ ಜಡದ್ಯವ (ವಿಸಾಪು. ೫೮-೨). **ಸಟವಾಯಿ:** ೧. ಅಥಣಿಯ ಪಶ್ಚಿಮಕ್ಕೆ . . . ಬ್ರಹ್ಮನಾಥ, ಸಟವಾಯಿಯೆಂಬೆರಡು ಗುಡಿಗಳುಂಟು . . . ಸಟವಾಯಿಯನ್ನು ಮಕ್ಕಳು ಹುಟ್ಟಿದ ಬಳಿಕ ಮೂರು ತಿಂಗಳಿನವರೆಗೆ ಪೂಜಿಸುವರು (ಕಭಾಗ. ೫೦೨). [<— ಮರಾ. ಸಟವಾಈ, ಸಟವಿಣ/ಸಂ. ಷಷ್ಠೀ]

ಸೆಟಿಸು (ಕ್ರಿ). ಸೆಟೆಯುವಂತೆ ಮಾಡು; ನೇರಗೊಳಿಸು: ಎದೆ ಸೆಟಿಸಿ ನೋಡುತ್ತ . . . ಬಾಗಿಲು ಬಡಿಯುವನು (ಪ್ರತಿಮಂ. ೩). [ಸೆಟೆ$_1$ (< ಸೆಡೆ$_1$) + - ಇಸು$_3$]

ಸೆಟೆ$_1$ 'ಸೆಡೆ$_1$' ನೋ.

ಸೆಟೆ$_2$ 'ಸೆಡೆ$_2$' ನೋ.

ಸೆಟೆಗೊಳ್ಳು, ಸೆಟಕೊಳ್ಳು, ಸೆಟಗೊಳ್ಳು (ಕ್ರಿ). ೧. ನಿಮಿರು; ನೆಟ್ಟಗಾಗು: ಚಳಿಗ ಕೈಕಾಲುಗಳ ರೋಮಗಳೆಲ್ಲ ಸೆಟೆಗೊಂಡಿವೆ (ಕೂಥ). **ಸೆಟಕೊಳ್ಳು:** ೨. ಸಿಟ್ಟಾಗು; ಕೋಪಗೊಳ್ಳು: ಅದಕ್ಕೇನು ಅಷ್ಟು ಸಿಟ್ಟು . . . ಅಲ್ಲಿ ಹೋಗಿ ಸೆಟಕೊಂಡು ಕೂತಿದೆಯಲ್ಲಾ! (ಗಂಗಾವ. ೪). ೩. ಬೀಗು; ಗರ್ವಿಸು: ತನ್ನ ಪ್ರಶಂಸೆ ಕೇಳಿ ಕಾಗೆಯು ತಾನು ಯಾರು ಎಂಬ ಎಚ್ಚರ ಮರೆತು ಸೆಟಕೊಂಡು . . . ಗಾಯನಕ್ಕೆ ಆರಂಭಮಾಡಿತು (ಮುಬಮು. ೬-೧೨). **ಸೆಟಗೊಳ್ಳು:** ೨. ಏನೋ ನಿಮಿತ್ತದ ಮೂಲಕ ಸೆಟಗೊಂಡ ಗಂಡ (ಕನ್ನಜಾ. ೧೨೨); ಸೆಟ್ಟರ ಹುಡುಗ ಸೆಟಗೊಂಡ್ಹೋದಾ (ಸಖೀಗೀ. ೯೩-೪). [ಸೆಟೆ$_1$ (< ಸೆಡೆ$_1$) + ಕೊಳ್ಳು$_1$ (< ಕೊಳ್$_1$)]

ಸೆಟೆಬೇನೆ (ನಾ). ಸ್ನಾಯುಗಳು ಸೆಡೆತುಕೊಳ್ಳುವ ಒಂದು ಬಗೆಯ ರೋಗ; ಧನುರ್ವಾಯು: ಚೀರಿ ಮೈಸೆಟಸಿ ಕಳೆಗುಂದಿ ಸೆಟೆಬೇನೆ ತೋರಿಸಿತು (ಕನ್ನಜಾ. ೧೯೯); ಇವನಿಗೆ ಸೆಟೆಬೇನೆ (ಧನುರ್ವಾಯು) ಬರಲಿ ಎಂದು ಅಳತೊಡಗಿದಳು (ಬೀರಬು೪೬). [ಸೆಟೆ$_1$ (< ಸೆಡೆ$_1$) + ಬೇನೆ]

ಸೆಟೆಮಾತು (ನಾ). ಅಹಂಕಾರದ ಮಾತು; ಗರ್ವದ ನುಡಿ: ನಟರಾಯ ತಾನೆಂದು ಕಟುಮದವು ಅಚ್ಯುತಗೆ ಸೆಟೆಮಾತು ಕೇಳಿ ಬೌಡಯ್ಯ . . . ಕುಣಿದು ತೋರಿಸಲು (ಕನ್ನಜಾ.೨೯೧). [ಸೆಟೆ$_1$ (< ಸೆಡೆ$_1$) + ಮಾತು$_1$]

ಸೆಟೆಯ (ನಾ). ಸೆಡೆತುಕೊಂಡವನು; ಅಹಂಕಾರಿ; ಗರ್ವಿಷ್ಠ: ಅವರ ಶಾಂತಮುಖಮುದ್ರೆಯನ್ನೂ ಸಾತ್ಯಕಿಗುಣವನ್ನೂ ಕಂಡು ಎಂತಹ ಸೆಟೆಯನಾದರೂ ಮಣಿಯಲೇಬೇಕು (ಬಳುಮು.೩೦). [ಸೆಟೆ$_1$ (< ಸೆಡೆ$_1$) + - ಅ$_7$]

ಸೆಟೆರೋಗ (ನಾ). = ಸೆಟೆಬೇನೆ: ಸಟೆರೋಗವು ಕ್ಷಾಸ್ತ್ರಿಡಿಯಂ ಟೆಟಾನಿ ಎಂಬ ರೋಗಾಣುವಿನಿಂದ ಬರುತ್ತದೆ (ಕಲೋ. ೬೨). [ಸೆಟೆ$_1$ (< ಸೆಡೆ$_1$) + ರೋಗ]

ಸೆಟ್ಟಪಯ್ಯ (ನಾ). ಒಬ್ಬಾತನ ಹೆಸರು: ಸೆಟ್ಟಪಯ್ಯ (ಎಕ. II, ೪೧೪; ೪೬೦). [ಸೆಟ್ಟಪ್ಪ + ಅಯ್ಯ$_1$]

ಸೆಟ್ಟಿ, ಶೆಟ್ಟಿ (ನಾ). ೧. ವ್ಯಾಪಾರಿ; ಶ್ರೇಷ್ಠಿ: ಆ ನಾಡೊಳ್ ಸಾರ್ಥಾಧಿಪತಿ ನಂದಿಮಿತ್ರನೆಂಬೊಂ ಸೆಟ್ಟಿ ಸಾರ್ಥಂಬೆರಸು ಪರದಿಂಗ ಪೋಗುತ್ತ (ವಡ್ಡಾರಾ. ೧೬೩-೨೧); ಸೆಟ್ಟಿಯ ಬಳ್ಳಂ ಕಿಲ್ದಿದು (ಪಂಪಭಾ. ೧೨-೧೭೫); ಹೇರಿನ ಸೆಟ್ಟಿಗಳು ತಾನೊಬ್ಬರೊಬ್ಬರನು ಕರೆದು (ಬಸವೃ.೯-೪); ಪಟ್ಟೆಚೀನಾಂಬರಗಳನು ಸೃಷ್ಟೀಶನ ಮೈಭೋಗಕೆ ತಂದೀವ ಸೆಟ್ಟಿಗಳು (ಕಂಪವಿ.೨೫-೧೦೧). ೨. ಮುಖಿಂಡ; ಮುಖ್ಯಸ್ಥ: ನಾನು ನಿನ್ನೆಮೊನ್ನೆಯ ಸೆಟ್ಟಿಯನ್ನು ರಾಜಾಧಿರಾಜನೆಂದು ಒಲ್ಪೆಸುವೆನೆಂದು ಬಗೆದಿದ್ದೀಯಾ? (ಬಾಣಜ. ೬೨೮). **ಶೆಟ್ಟಿ:** ೧. ದಲಾಲೀವ್ಯಾಪಾರಸ್ಥರಾದ ಒರ್ವ ಶೆಟ್ಟಿರ ಗುರುತಾಗಿತ್ತು (ಗಂಮಾಯಿ. ೧೭೭); ನಾನಾತರದ ಜನರು ಬ್ರಾಹ್ಮಣರು, ಶೆಟ್ಟಿರು, ಗೌಡರು (ರಾಮಾನ. ೧೧೦); ಶೆಟ್ಟಿ ಬಟ್ಟಲ್ಲೇ ಪಟ್ಟಣ (ಗಾಪ). [< ಸಂ. ಶ್ರೇಷ್ಠಿನ್]

ಸೆಟ್ಟಿಕಾತಿ (ನಾ). ಸೆಟ್ಟಿರ ಹೆಂಗಸು; ವೈಶ್ಯಸ್ತ್ರೀ: ದೊಡ್ಡ ಸೆಟ್ಟಿಕಾತಿಯ ಪಟ್ಟವಳೆಯ ಬೇಕು (ಶವಗೀ. ೧೪೬-೯೨೮). [ಸೆಟ್ಟಿ + - ಕಾತಿ$_3$]

ಸೆಟ್ಟಿಕಾರ 'ಸೆಟ್ಟಿಕಾಜಿ' ನೋ.

ಸೆಟ್ಟಿಕಾಜಿ, ಶೆಟ್ಟಿಗಾರ, ಸೆಟ್ಟಿಕಾರ (ನಾ). = ಸೆಟ್ಟಿ ೧: ಬಸುರೂರ ಸೆಟ್ಟಿಕಾಜಿ ಮಾದಂಣಸೆಟ್ಟಿ ಕೊಟ್ಟ ಶಿಲಾ ಶಾಸನದ ಕ್ರಮ (ಸೌಇ. IX-ii, ೪೨೩-೧೧; 1400); ನವಿರದವೊಳಗೆ ಸೆಟ್ಟಿಕಾಜಿ ಮಾಣಕಣಸೆಟ್ಟಿ . . . ಯಿಂತಿವರು ಧರ್ಮ್ಮಸಾಕ್ಷಿಗಳು (ಕೀ. I, ೨೮-೨೩; 1446). **ಶೆಟ್ಟಿಗಾರ:** ಎಲೆ ಶೆಟ್ಟಿಗಾರನೆ ನಿನ್ನ ಅಭೀಷ್ಟೆಯಂತೆ ಋಣವಂ ತೀರಿಸಿಕೊ (ಶರಲೀ.೧೮೫). **ಸೆಟ್ಟಿಕಾರ:** ಈ ಧರ್ಮಕ್ಕೆ ಪ್ರಭು ಪಂಚಮಟಿ ಸ್ಥಾನ ನಗರ ನಾಲ್ವತ್ತೊಕ್ಕಲುಂ ನಾಲ್ಕೂರ ಸೆಟ್ಟಿಕಾರರು (ಕಾಇ. ೧೯-೧-೭೬; 1127); ಬಟ್ಟಕಳದ ಸೆಟ್ಟಿಕಾರರೊಳು ಮುಖ್ಯ (ಎಕ. VIII, ಸಾಗರ. ೫೫-೮೫; 1560). [ಸೆಟ್ಟಿ + - ಕಾಜಿ]

ಸೆಟ್ಟಿಕಾಜಿತಿ (ನಾ). ಸೆಟ್ಟಿರ ಹೆಂಗಸು; ವೈಶ್ಯಸ್ತ್ರೀ: ಪಟ್ಟಣದ ಪಾಳೆಯದೊಳಗೆ ವ್ಯವಹರಿಸುತಿರ್ಪ ಸೆಟ್ಟಿಕಾಜಿತಿಗೆ ಒಬ್ಬ ಹುಟ್ಟುಗುರುಡನು ಗಂಡನಾಗಿದ್ದನು (ಪದ್ಮಪ. ೪೬-೧೨೦). [ಸೆಟ್ಟಿಕಾಜಿ + - ಇತಿ$_1$ (< - ಇತ್ತಿ)]

ಸೆಟ್ಟಿಗ (ನಾ). ವ್ಯಾಪಾರಿ; ಸೆಟ್ಟಿ : ವಿಜಸೆಟ್ಟಿಗರಾ ದರ್ಮ್ಮನಾಯ್ಕನ್ (ಎಇ IX, ೨೬-೧೩; 800); ಜಟ್ಟಿಗ ಗೀತಪಾಠಕರು ಸೆಟ್ಟಿಗ ಬಲುಚೆನ್ನವರದರು (ಮೋಹತ. ೩೬-೪೩). [ಸೆಟ್ಟಿ + - ಗ$_2$]

ಸೆಟ್ಟಿಗುತ್ತ (ನಾ). ವ್ಯಾಪಾರೀಸಂಘ ಮತ್ತು ಅದರ ಸದಸ್ಯ: ವರಿಷಪ್ರತಿ ಕುಡುವರಾಗಿ ಇದಾಗವಜೆ ಗದ್ದೆ ಸೆಟ್ಟಿಗುತ್ತ ನಾಡಗಾವ್ಗೂನು ಎತ್ತಿಕೊಳುವರ್ (ಎಕ. III (R), ನಂಜನ, ೨೪೧-೧೫; 1027); ಎರಡಱುನೂಱಱೆಂಟುಂ ಪಟ್ಟಣದ ಸೆಟ್ಟಿಗುತ್ತರುಂ (ಕೊಲ್ಹಾಶಾ. ೧೫-೮೫; 1186); ಶಶಾಂಕನೊಲವಿಂದಂ ರಾಜಯಕ್ಕಕ್ಕೆ ಮಾಡಿದ ಮರ್ದಂ ಪಡವುಚ್ಚುಗಂದಳಿವರಂತಾ ಸೆಟ್ಟಿಗುತ್ತರ್ಕಳೊಳ್ (ದಶಕು. ೧-೩೯). [ಸೆಟ್ಟಿ + ಗುತ್ತ?]

ಸೆಟ್ಟಿಗೆಹೆ (ನಾ). ಒಂದು ಊರಿನ ಹೆಸರು: ಸೀಮಾನ್ತರಂ ಪಡುವಾಯ್ಮಾವೇರಿಯ ಸೆಟ್ಟಿಗೆಱೆಯ (ಎಕ. IV. ಪ್ರೀರಂಗ. ೧೬೦-೩೬; ಸು. 900). [ಸೆಟ್ಟಿ + ಕೆಱೆ]

ಸೆಟ್ಟಿತಿ 'ಸೆಟ್ಟಿತ್ತಿ' ನೋ.

ಸೆಟ್ಟಿತ್ತಿ, ಸೆಟ್ಟಿತಿ, ಸೆಟ್ಟಿತ್ತಿ (ನಾ). ೧. = ಸೆಟ್ಟಿಕಾಱಿತಿ: ಬನ್ನುದತ್ತನು ಸೆಟ್ಟಿತ್ತಿದೆವಿಯಬ್ಬೆಯು ನಿಱಿಸಿ (ಎಕ. VI, ಮೂಡಗ. ೧೯-೯; 1025?). **ಸೆಟ್ಟಿತಿ** : ೧. ನೋಡಾ ಎಮ್ಮ ಸೆಟ್ಟಿತಿ ಜಯಾವತಿ ಬೆಸಲೆಯಾದಳ್ (ವಡ್ಡಾರಾ. ೪೪-೧೨); ಚಂದನೆಯ ಚೆಂದಮಂ ಸೆಟ್ಟಿತಿ ದಿಟ್ಟಿಸಿ ನೋಡಿ (ಪರ್ಧಾಪು. ೧೫-೫೩ ಪ). ೨. ಸೆಟ್ಟಿಯ ಹೆಂಡತಿ: ಗಂಡುಕೂಸಂ ಕಂಡತ್ತಿಕೊಂಡು ಪೋಗಿ ತನ್ನ ಸೆಟ್ಟಿತಿಗೆ ಕೊಟ್ಟೊಡೆ (ಜೀವಸಂ. ೩೧-೬). **ಸೆಟ್ಟಿತ್ತಿ**: ೧. ಶಾದಿ ಸತ್ತು ದಿವನೇಱಿದಾ ಸೆಟ್ಟಿತ್ತಿಯು ಮಗಳ ಗಣ್ಣ (ಎಕ. II, ೩೯೪-೧೩; 884?).

[ಸೆಟ್ಟಿ + - ಇತ್ತಿ]

ಸೆಟ್ಟಿವಟ್ಟ (ನಾ). ವ್ಯಾಪಾರಸ್ಥರ ಮುಖಂಡನ ಪದವಿ; ರಾಜಶ್ರೇಷ್ಠಿಯ ಪಟ್ಟ: ಸೆಟ್ಟಿವಟ್ಟಮಂ ಕಟ್ಟಿಸಿಕೊಂಡಲ್ಲಿಯೆ ರಾಜಶ್ರೇಷ್ಠಿಯಾಗಿ (ಜೀವಸಂ. ೫೯-೧೭); ಈ ನೆಲದೊಳ್ ಮುನ್ನಿನ ಸೆಟ್ಟಿವಟ್ಟಮೆನೆ ಕಣ್ಗಂಬಾದಂ (ಎಕ. V, ಅರಸೀ. ೨೧-೨೨; 1254).

ಸೆಟ್ಟಿವಟ್ಟದನ್ = ಸೆಟ್ಟಿಪಟ್ಟವನ್ನು ಹೊಂದಿದವನು; ರಾಜಶ್ರೇಷ್ಠಿ: ಕಿಱುಬರೆಲ್ಲಂ ಪಂಡಿತರ್ ಸೆಟ್ಟಿವಟ್ಟ [ಪಾಠಾಂ. ಲ್ಲಿ]ದರೆಲ್ಲಂ ಕಡುಚಾಗಿಗಳ್ (ಅನಂಪು. ೧೧-೧೨). [ಸೆಟ್ಟಿ + ಪಟ್ಟ$_2$]

ಸೆಟ್ಟಿವಟ್ಟಂಗಟ್ಟು (ಕ್ರಿ). ರಾಜಶ್ರೇಷ್ಠಿಯ ಪಟ್ಟವನ್ನು ಕಟ್ಟು: ಕೂಸಿಂಗ ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ (ವಡ್ಡಾರಾ. ೪೪-೨೫); ನಿರ್ವೇಗಮಾಗಿ ಕುಬೇರಕಾಂತಂಗೆ ಸೆಟ್ಟಿವಟ್ಟಂಗಟ್ಟಿ . . . ಬೀಳ್ಕೊಂಡು (ಚಾವುಂಪು. ೬೧). [ಸೆಟ್ಟಿವಟ್ಟ + ಕಟ್ಟು$_1$]

ಸೆಟ್ಟಿವಾಳ (ನಾ). = ಸೆಟ್ಟಿಗುತ್ತ: ಕಿಸುವ ಹಲಮಾ ಸೆಟ್ಟಿವಾಳರು [o] ಕಲಿದೇವಸೆಟ್ಟಿಯುಂ (ಎಇ. XIX, ೧೫೬-೨೯; 1134). [ಸೆಟ್ಟಿ + - ವಾಳ್$_3$ (<- ವಳ)]

ಸೆಟ್ಟಿವಾಟು (ನಾ). = ಸೆಟ್ಟಿವಟ್ಟ (?): ತನ್ನ ಮಗಳುಮಂ ಸರ್ವಸ್ವಮುಮಂ ಸೆಟ್ಟಿವಾಟುಮಂ ಜಿತಶತ್ರುಗೆ ಕೊಟ್ಟು (ಚಾವುಂಪು. ೮೦).

[ಸೆಟ್ಟಿ + ಬಾಟ್ಟು$_0$ (< ಬಾಟ್ಟ್$_3$)]

ಸೆಟ್ಟಿವಾಟ್ಕೆ (ನಾ). = ಸೆಟ್ಟಿವಟ್ಟ (?): ಭದ್ರಮಿತ್ರಂಗೆ ಸತ್ಯಘೋಷನೆಂಬ ಪೆಸರುಮಂ ಸೆಟ್ಟಿವಾಟ್ಕೆಯುಮಂ ಕೊಟ್ಟು (ಚಾವುಂಪು. ೧೫೬). [ಸೆಟ್ಟಿ + ಬಾಟ್ಕೆ]

ಸೆಟ್ಟು$_1$ 'ಸಟ್ಟುಗ$_1$' ನೋ.

ಸೆಟ್ಟು$_2$ (ನಾ). ಬೀಜ ತೆಗೆದು ಒಣಗಿಸಿಟ್ಟ ಕಾಯಿ; ಚಟ್ಟು: ನಲ್ಲಿಯ ಸೆಟ್ಟು ಬಾಳಮಸಿತಾಂಜನ ವೊಳ್ಳಿಹ ಮುಸ್ತೆ (ಅಬುಮ.೧೧-೬೩). [< ಚಟ್ಟು$_1$]

ಸೆಟ್ಟೆ (ನಾ). ೧. ಮೆಕ್ಕಲುಮಣ್ಣು; ಗೊಬ್ಬರ: ನಮ್ಮ ಗದ್ದೆಗಳಿಗೆ ನಾವು ಸೆಟ್ಟೆಹೊತ್ತರೆ ಅವಮಾನವೇನಿಲ್ಲ (ಸ್ವಪ್ನಹೊ.೧೫೪); ಸೆಟ್ಟೆಗಳನ್ನು ಹೊತ್ತು ತಂದು . . . ಮಡಿಗದ್ದೆಗಳಿಗೆ ಹಾಕಬಹುದು (ಮರಮ. ೧೨). ೨. (ಆಲಂ) ವ್ಯರ್ಥವಾದ ಮಾತು: ಕೊಬ್ಬುಮಾತಿನ ಸೆಟ್ಟೆ ಸಾಕು ನಿಲ್ಲಿಸು (ಕೋಡಿಹಾ. ೧೦೨).

[ದೇ. ॥ ತಮಿ. ಚೆಟ್ಟೈ; ಮಲ. ಚಟ್ಟ; ತುಳು. ಸೆದ; ತೆಲು. ಚಟ್ಟ]

ಸೆಟ್ಟಿತ್ತಿ 'ಸೆಟ್ಟಿತ್ತಿ' ನೋ.

ಸೆಡಕು (ನಾ). ೧. ಸೆಟೆದುಕೊಂಡುದು; ಸೆಟೆದಿರುವುದು: ಸೆಡಕಾದ ಕಾಲವಳು ಮುಖವಿಕಾರತೆಯವಳು (ವೀಶ್ವಪು. ೪-೨೩-೩೪). ೨. ಗರ್ವ; ಅಹಂಕಾರ; ಜಂಭ: ಜನ್ನಕೈಡರಂ ತರ್ಪೊಂದು ಸೆಡಕಿಂ ದುಡುಕಿಂ ಪೋಪ ಹಯಮಂ (ರಾಮಾಶ್ವ. ೯೧-೧೫); ಭಿಕ್ಷಾನ್ನದ ಹುಡುಗನಿಗೂ ಎಷ್ಟೊಂದು ಸೆಡಕು (ಧರ್ಮಶ್ರೀ.೬೫). ೨. ಮುನಿಸು; ಕೋಪ: ಬಿಡೆಯ ಮಾಯೆಯ ಸೆಡಕಿನೊಳು ಸಿಲುಕಿ (ಮದೇಪು.೨೬-೪); ಎಂದಿಗೂ ಮಾಡೋನಲ್ಲ ಎಂದು ಸೆಡಕಾಗಿ ಹೇಳಿದಳು (ಮುನಿಮಾ. ೨೦೧); ಕಿಡಿಗಣ್ಣಳಂ ತೂರಿ ಹಸಿವಿನಂ ಬರ್ಪ ಸೆಡಕ ಕಂಡಳ್ಕಿದುವು (ಕಾಲೂರ. ೧೫೬-೬೪೭). [ಸೆಡೆ$_1$ + - ಕ್ಕು]

ಸೆಡಕುಗಾತಿ (ನಾ). ಸೊಕ್ಕಿನವಳು; ಗರ್ವಿಷ್ಠೆ: ಸೆಡಕುಗಾತಿಯಾದ ಈ ಐಶ್ವರ್ಯವಂತಳ ಮನೆಯಿಂದ ಇವಳಿಗೆ ಔತಣ ಬಂತು (ನೀತಿಚಿಂ. ೧೪). [ಸೆಡಕು + - ಕಾತ್ತಿ$_5$]

ಸೆಡಕುಗಾರ್ತಿ (ನಾ). = ಸೆಡಕುಗಾತಿ: ಮಿಡುಕಿನ ಸೆಡಕುಗಾರ್ತಿ (ರಾಮಾಶ್ವ.೧೧೩-೨).

[ಸೆಡಕು + - ಕಾಱ + - ತ್ತಿ$_1$ (<- ಇತ್ತಿ)]

ಸೆಡಕುನೋಟ (ನಾ). ಬಿಂಕದ ನೋಟ; ಓರೆದೃಷ್ಟಿ: ಕಣ್ಣುಮಾಡುವ ಮಧುರೆ ಹೆಂಗಳ ಸೆಡಕುನೋಟವ ಸೊಕ್ಕಿಸಿ (ಗೋಕುನಿ.೪೬-೧೩). [ಸೆಡಕು + ನೋಟ]

ಸೆಡಕುವಗ್ಗ (ನಾ). ಅಲಂಕಾರದ ಹಗ್ಗ; ಕುಚ್ಚುಗಳಿರುವ ಹಗ್ಗ (?): ಸಿಡಿಲುವಕ್ಕಿಗೆ ಜವಿಯ ಬಲೆಯೆ ಮದ್ದಾನೆಗಂ ಸೆಡಕುವಗ್ಗವೆ . . . ಸಿಂಹಕ್ಕೆ ಸಿಡಿಯೆ (ನಂದಿಮಾ.೯-೬೫). [ಸೆಡಕು? + ಹಗ್ಗ (< ವಗ್ಗ)]

ಸೆಡಪು (ಕ್ರಿ). ಸೆಡೆದುಕೊಳ್ಳು; ಮುದುರಿಕೊಳ್ಳು: ಮಯ್ ಸೆಡಪಿ, ನೆತ್ತರ್ ಕುಳಿರ್ಪ ಕಟ್ಟಿಸಕಕ್ಕೆ ನೀನ್ ಬೆಂಕೆಯರ್ದೆಯಯ್ (ಅಂತಿಗೂ.೪-೭೩). [ಸೆಡೆ$_1$ + - ಪ್ಪು$_1$]

ಸೆಡವು (ನಾ). ೧. ಗರ್ವ; ಅಹಂಕಾರ: ಬಳಿಕ್ಕೆಡವಲದೊಳುರುಬುವಹಿತರ ಸೆಡವಂ ಮುರಿದಾ ಧರಿತ್ರಿಯಂ ಸಾಧಿಸಿದಂ (ಕಳಸ್ವ.೩-೮೬); ಆನಂದನೂ ಅಷ್ಟೇ ಸೆಡವಿನಲ್ಲಿ ಹೇಳಿದ (ಮರಳಿ. ೭೭). ೨. ಬಿಗಿ; ಬಿಗುವು: ರಾಯಪ್ಪನ ದೇಹದ ಈ ಸೆಡವು ಹೇಗೆ ಸಾಧ್ಯ (ಬೆಳಗಾ.೯೬). ೩. ಮುನಿಸು; ಕೋಪ: ಸೆಡವು ಬಂದರೆ ಸುತ್ತಿ ಬೀಸುವ ಪ್ರಭಂಜನ! (ನೆಲಮು.೫-೨೨); ಸೆಡವು ಬಂದು ಹೊರಟುಹೋದ ಊರ್ವಶಿ ಶಾಪಗ್ರಸ್ತಲತಿಕೆಯಾಗಿ (ಗಾಳಿ. ೯). ೪. ತಂಟೆ; ಹಟಮಾರಿತನ: ಸಿಟ್ಟೆಪ್ಪೂ ಸೆಡವೆಪ್ಪೂ (ಸಖೀಗೀ. ೧೧-೯); ಅಕ್ಕರತೆಯಿಂದ ಬೆಳೆಸಿದರೆ ಅದಕ್ಕೆ ಪ್ರತಿಫಲವಾಗಿ ಈ ಸೊಕ್ಕು - ಈ ಸೆಡವು (ಜನನಾ. ೪೯). ೫. ಬಿಗುಮಾನ; ಬಿಂಕ: ಏನು ಆ ಹುಡುಗಿಯ ಸೆಡವು (ಪ್ರಭಸ.೫); ಗಂಗಾಸಾನಿಯ ಮಾತಿನ ಸೆಡವು ಹೆಚ್ಚಿತು (ಗಂಗಾಸಾ. ೧೪೦). [ಸೆಡೆ$_1$ + - ವು]

ಸೆಡಹು (ನಾ). ೧. ಗರ್ವ; ಅಹಂಕಾರ: ಸೆಡಹಿಂಗೆ ಕತ್ತರಿ ತುಱುಬಿಂಗೆ ಬೆಳೆದುದಕ್ಕೆ ಕೊಱೆಗುರಳ (ಸರ್ವವ.೧೨೫-೬೩೬). ೨. ಬಿಗುಹು; ಬಲ್ಮೆ: ತರುಣಿಯರ ಗುರುಕುಚಂಗಳೊಳು ಸೆಡಹುಂಟು (ಸೌಂದಪು.೨-೭); ನೀವು ತಪದ ಸೆಡಹಿನೊಳು ಮನ ಶ್ಯಾಂತಿಯ್ಯೆದದೆ ಇರಲು (ಪ್ರಭುಪು.೮-೧೮೯). [ಸೆಡೆ$_1$ + - ಹು$_2$ (<- ಪ್ಪು$_2$)]

ಸೆಡು (ಕ್ರಿ). ಬಟ್ಟೆ ಮೊದಲಾದುವನ್ನು ಹೊಲಿ; ಹೊಲಿಗೆಹಾಕು: "ಸೆಡು — ಸ್ಯೂತೇ, (ಹೊಲಿ, ಪೋಣಿಸು)" (ಶಮಧಾ).

ಸೆಡ್ಲೆಲೆ = ಕಡ್ಡಿಯನ್ನು ಚುಚ್ಚಿ ಜೋಡಿಸಿದ ಎಲೆ; ಹಚ್ಚಿದ ಎಲೆ: ಲಕ್ಷ್ಮಣಂ ನೆರೆಯೊಳೊಬ್ಬುವರ್ಬಿಯ ನೀರಂ ಸೆಟ್ಟಿಲೆಯೊಳ್ ತಂದು (ರಾಮಾಶ್ವ.೩೫-೯). [?]

ಸೆಡೆ$_1$, ಸೆಟೆ$_1$ (ಕ್ರಿ). ೧. ದಪ್ಪಗಾಗು; ಸ್ಥೂಲವಾಗು: "ಸೆಡ-ಆಸ್ಥೌಲ್ಯೇ, (ಹೆಚ್ಚು), ರಸಧಾನ್ಯಾಕರ್ಷಣ ಪಾತ್ರೇ ಚ" (ಶಮಧಾ). ೨. ಗರ್ವಿಸು; ಅಹಂಕರಿಸು: ದೀಕ್ಷೆಗೊಂಡೀಗಳ್ . . . ಸೆಡೆದು ಬಂದೊಡೆ (ಸುಕುಮಾ. ೧೨-೫೭ ಪ); ನೀನುಂ ವಿಕ್ರಾಂತದಿಂದಂ ನೆನೆಯ ಸೆಡೆದು ನಿಂದಿರ್ಪುದಲ್ಲು (ನೇಮಿಪು. ೧೨-೧೭೩); ಕುಡಲು ಬಲ್ಲಿದನೆಂದು ಸೆಡೆದು ಬಂದವನೊಳು ನಡೆದು ಯುದ್ಧಮನೊಡರಿಸಲು (ಅಂಚಚ. ೬-೨೦೦). ೩. ನಿಗುರು; ನೆಟ್ಟಗಾಗು: ಅಯ್ಯೋ! ಕಿವಿಯಲ್ಲಿ ಕೇಳಲಾರೆನೆಲ್ಲ! ಎಂದು ಸರೋಜ ಸೆಡೆತು ನಿಂತುಬಿಟ್ಟಳು (ಮಾಹಾಗ. ೨೭೧); ಅತಿ ಸೆಡೆತು ಮಣಿಯವಾ ಎರ್ದೆಗಳ್ (ಅಂತಿಗೂ. ೨೨ ೪೫೬); ಒಂದು ನಾಗರಹಾವು ಹೆಡೆಯೆತ್ತಿದೆ . . . ಕಾಲಯಮನ ಬಿಲ್ಲಿನಂತೆ ಸೆಡೆದು ನಿಂತಿದೆ! (ಸುವಸಂ. ೧೭). **ಸೆಟೆ$_1$**: ೨. ತಲೆ ದಿಮ್ಮು ಇಳಿಸೀತು ಸುಮ್ಮನೇ ನೀ ಸೆಟೆದರೆ ತಾಗಿ ಎಲ್ಲೋ ಕ್ಷುದ್ರತ್ವಾಗಿ (ಅರಳಿ. ೪೧೪). ೪. ನಿಗುರಿಸು: ಕಟೀಲು ಕುಳಿತಲ್ಲಿಂದಲೇ ಕೈ ಸೆಟೆದಳು (ರತ್ನರಾ. ೮೦).

ಸೆಟೆಸೆಟೆ (ದ್ವಿರುಕ್ತಿ): ಸೆಟೆಸೆಟೆದು ನೀ ಹೋಗಿ ಅಡ್ಡಬೀಳುವೆ (ಕನ್ನಡಾ.೫೭). **ಸೆಟೆದುಕೊಳ್ಳು** = ೧. ನೆಟ್ಟಗಾಗಿರು; ನಿಗುರು: ಅವರು ಎಂದಿಗಿಂತ ಇನ್ನೂ ಹೆಚ್ಚು ಧೈರ್ಯವಾಗಿ ಸೆಟೆದುಕೊಂಡು ನಡೆಯುತ್ತಾರೆ (ಬಂಕಮ.೧೫೪); ತನ್ನಪ್ಪಕ್ಕೆ ತಾನೇ ಮೈ ಸೆಟೆದುಕೊಂಡಿತು (ರೂಪಸ. ೨೬). ೨. (ಕೋಪ, ಅಸಮಾಧಾನಗಳಿಂದ) ಬೀಗಿರು; ಗಂಭೀರವಾಗಿರು: ಸೂಸ್ಕಟಿ ಇನ್‌ಸ್ಪೆಕ್ಟರು ಸೆಟೆದುಕೊಂಡೇ ಹೇಳಿದರು (ಮರಗೆ. ೧೧೧); ಮಧ್ಯಾಹ್ನ ಸಿಕ್ಕಿದಾಗ ಅವನು ಯಾಕೋ ಮತ್ತೆ ಸೆಟೆದುಕೊಂಡಿದ್ದ (ಅಲಹಾ. ೫೫). **ಸೆಟೆದು ನಿಲ್ಲು** = ಪ್ರತಿಭಟಿಸಿ ನಿಲ್ಲು; ಎದುರಿಸು: ಮೃತ್ಯುವಿನ ಎದುರಲಿ ಸೆಟೆದು ನಿಂತಿರೋ ಆಸಾಮಿನ ಇದುವರೆಗೆ ನೋಡಲೇ ಇಲ್ಲ (ಎರಂಯೋ. ೧೨); ಇಂಥ ಯತ್ನ ಶೀಲನಿಗೆ ಪ್ರತಿಭೆ ಬಹುಕಾಲ ಸೆಟೆದು ನಿಲ್ಲದು (ಕಾವ್ಯಕು. ೧೬). **ಸೆಟೆದು ನುಡಿ** = ಕೋಪದಿಂದ ಮಾತನಾಡು; ಬೀಗಿಕೊಂಡು ಹೇಳು: ಕೊತವಾಲನು ಗರ್ವದಿಂದ ಸೆಟೆದು ನುಡಿದ (ಕೊತಕಾ. ೫೫); ನನಗಂತೂ ಇವರೊಡನೆ ಬಾಳ್ವೆಮಾಡಿ ಸಾಕಾಗಿದೆ ಎಂದು ಸೆಟೆದು ನುಡಿದಳು (ಕುಡಿಹಾ. ೫೧).

ಸೆಡೆ$_2$, ಸೆಟೆ$_2$ (ಕ್ರಿ). ೧. ಕುಗ್ಗು; ವಕ್ರವಾಗು: ಒಡೆಯಲಜಾಂಡ ಕೆಡೆಯ ಕುಲಗಿರಿಗಳು

ಸೆಡೆಯ ದಿಶಾದಂತಿಗಳು (ಕುರಾಸಾಂ. ೪೧-೭೦); ಪಾದಘಟ್ಟಣೆಗೆ ನೆಲನೊಡೆಯ ಫಣಿಗಳ್ ಸೆಡೆಯ (ಚಟಪು. ೧೭-೧೪); ಕಣ್ಣೋಟಂ ಕುಡಿವರಿಯೆ ಕುಡಿವುರ್ವು ಸೆಡೆಯೆ (ರಾಮಾಶ್ವ. ೭೩-೯). ೨. ಸಂಕೋಚಗೊಳ್ಳು; ಮುದುಡು: ಸೆಜ್ಜೆಯನೇಱಿ ಸೆಡೆದಿರ್ದ ನಲ್ಲಳಂ ನೋಡಿ (ಪಂಪಭಾ. ೬-೮೧ ವ); ಉನ್ನತಿಕೆಯನು ಕಂಡು ನಾಚಿ ಸಿಗ್ಗಾಗಿ ಸೆಡೆದು ಮರನಾಯ್ತು ಚಂದನಂ (ಹಚಕಾ. ೧-೪೩). ೩. ನಡುಗು; ಆದುರು: ಭುಗಿಲೆಂಬ ರಭಸಕಂಬರತಳಂ ಸೆಡೆವುತಿರೆ (ವೀರರ. ಹ. ೪೯೧-೪); ಪೊಡವೀಶಭ್ಯರ್ಚಿಯಿಂದಂ ಸೆಡೆವರಡಗುವರ್ಕ್ಕೋಡುವರ್ಕೊಂಕಿ ಬಿಂಕಂಗೆಡುವರ್ (ಎಕ. XI. ಚಿತ್ರದು. ೨-೮; 1355). ೪. ಬಳುಕು; ತೊನೆ: ಸೆಡೆವ ನಡೆ ತೊಡೆಯ ತಡೆಗಾಲ್ . . . ಸೊಗಯಿಸಿತ್ತು ಪಂಕಜಮುಖಿಯೊಳ್ (ಗಿರಿಕ. ೬-೨೨); ಘನನಿತಂಬಂ ಜಡಿಯೆ ತನುಮಧ್ಯಮದು ಸೆಡೆಯೆ (ರಾಜಶೇ. ೨-೧೧೭ ವ). ೫. ಹೆದರು; ಭಯಪಡು: "ಸೆಡೆದನೆಂದುಂ . . . ತೆಮರ್ತನೆಂದುಂ — ಈ ೮ ಭಯಂಗೊಂಡವಂ" (ಕಶಾ. ೫೬-೨೨೫); ಎನ್ನ ದೋರ್ವಳದಳವಿಂಗಮಿಂ ಸೆಡೆದಿರಲ್ ದೊರೆಯಲ್ತೆನಗೆಂದು (ಪಂಪಭಾ. ೧೧-೧೪೯); ಶ್ರೀವಿಷ್ಣುಭೂಪಾಳನಾರ್ದ್ದೆಬ್ಬಟ್ಟಲ್ ಸೆಡೆದೋಡಿ ಪೋಗಿ (ಎಕ. VI. ಕಡೂರು. ೧೬-೩೦; 1171); ಸರಳಿನುದ್ಬೆಗೆ ಸೆಡೆದು ಸಮರಕೆ ತಿರುಗಿ ನಿಂದುದು (ಕುಮಾಭ. ೨೦-೨೧). ೬. ಹಿಂಜರಿ; ಹಿಮ್ಮೆಟ್ಟು: ಸಂಸಾರಂ ಶಾಶ್ವತಮಲ್ಲಂ ಸೆಡೆಯದೆ ತಪದೊಳಾದ ಕಡುಚೆಲ್ವಿಂದಂ ತಾಂ ಸಂದಳಮಂ ಹರಿಸಿ (ಧರ್ಮಾಮೃ. ೬-೩೨). ಸೆಟ್ಟೆ: ೧. ಛಳಿಯಿಂದ ಸೆಟೆದ ನವಿಲುಗಳ ಕೊರಗಿನ ಕೂಗು (ಮುಗುಕು. ೧). ೩. ಸುಳಿರ್ಗಾಳಿ ಅವರನ್ನು ಸೆಟೆಯುವಂತೆ ಮಾಡುತ್ತಲಿದ್ದಿತು (ಕೃಷ್ಣಕ್ಷ. ೨).

[ದೇ. ॥ ತಮಿ. ಮಲ. ಚಿಱುಗು; ತೆಲು. ತೆಟುಕು]

ಸೆಡ್ಡ$_3$ (ನಾ). ಧಾನ್ಯ ಅಥವಾ ದ್ರವವನ್ನು ಅಳೆಯುವ ಸಾಧನ; ಅಳತೆಪಾತ್ರೆ: ಬಡಗಳಲುವೊಂದೊಂದು ಸೆಡೆ ಹಸುಬೆಗೆ ಹತ್ತಡಕೆ ತೆಂಗಿನಕಾಯೊಂದು . . . ಧಾರಾಪೂರ್ವ್ವಕಮ್ಮಾಡಿಕೊಟ್ಟರು (ಎಕ. XV. ಬೇಲೂರು. ೩೩೫-೬; 1138); ತೆಲಿಗರು ಸೆಡೆಯಂ ಬಿಟ್ಟರು ನಖರ ಸೆಡೆಯಂ ಬಿಟ್ಟರು (ಎಕ. V. ಬೇಲೂರು. ೧೭೬-೨೮; 1162).

ಸೆಡ್ಡ$_4$ 'ಸೆಳ್ಳ$_4$' ನೋ.

ಸೆಡ್ಡ$_5$; ಸೇಡೆ (ನಾ). ಭಾಗ; ಸೀಳು: ಒಂದು ಸೆಡೆ ಹಲಸಿನ ಹಣ್ಣಿನಲ್ಲಿ ಮೂರೇ ತೊಳೆಯಿದ್ದವು (ರೂಢಿ). ಸೇಡೆ: ಭಾಗಮಾಡಿದ್ದ ಹಲಸಿನ ಕಡಿಗಳನ್ನೂ ಸೇಡೆಗಳಾಗಿ ಕತ್ತರಿಸಿ (ಬಾಳಿವೃ. ೨೧೪); ಒಗೆದಿದ್ದ ಹಲಸಿನ ಸೇಡೆಗಳು (ಪ್ರಶ್ನ.೩೫). [<— ಮರಾ. ಶೇಡ್]

ಸೆಡ್ಡೆ (ನಾ). ಒಂದು ಬಗೆಯ ಮರ: "ಓಡೆಯನೆ ಸ[ಪಾಠಾಂ. ಸ]ಡೆಯಕ್ಕು" (ಮಂಗರಾ. ೪೦-೬೨); ಬಾಳೆ ಚಳ್ಳಿಪ್ಪೆಯರುಟಾಳ ಸೆಡೆ ಗೇರಾಲ ತಾರೆ . . . ಹೊನ್ನೆಯಿಂದಾ ಬನಂ ಕಣ್ಗೆಸೆದುದು (ನಂದಿಮಾ. ೩-೧೮). [?]

ಸೆಡೆಪು (ನಾ). ನಡುಗುವಿಕೆ; ಕಂಪನ: "ತೊನೆ, ಒಲೆ, ತೂಗು, ಸೆಡೆಪು [ಪಾಠಾಂ. ಕೆಡವು], ಅಲ್ಲಾಡು, ನಡುಕಂ — ಈ ೬ ಕಂಪನಂ" (ಕಶಾ. ೨೨-೬೫೦).

[ಸೆಡ್ಡ$_2$ + - ಪು$_1$]

ಸೆಡೆಮೂಗು (ನಾ). ದಪ್ಪಮೂಗು: ಗುಬ್ಬಿಗಣ್ ಕೆಲರ್ಗೆ, ಸೆಡೆಮೂಗು ಕೆಲರ್ಗೆ, ಪಲರ್ಗೆ ಬರಿದಲೆ (ಅದ್ಭುತ. ೨೫-೨೬). [ಸೆಡ್ಡ$_1$ + ಮೂಗು]

ಸೆಡೆವಿಡು (ಕ್ರಿ). ವಕ್ರತೆಯನ್ನು ಬಿಡು; ನೆಟ್ಟಗಾಗು: ಅಂಗಜದೇವನ ವಾಮಹಸ್ತದೊಳಪ್ಪ ಸಿಂಗಾಡಿ ಸೆಡೆವಿಡಲೊಡನೆ ತುಂಗಕಜ್ಜಲವ ಲೇಪಿಸಿದಂತೆ ಕಾಶ್ಮೀರ ಮಂಗಳತಿಲಕವಿಕ್ಕಿದರು (ಮೋಹತ. ೨೩-೬೨). [ಸೆಡ್ಡ$_2$ + ಬಿಡು$_1$]

ಸೆಡ್ಡು$_1$ (ಕ್ರಿ). (ಉಕ) ಕುಡಿ; ಹೀರು; ಪಾನಮಾಡು: ಹಿಟ್ಟುಮುಕ್ಕುವುದು, ತಂಬಿಗೆರಡು ತಂಬಿಗೆ ನೀರು ಸೆಡ್ಡುವುದು (ಸಮಪೇ. ೬೭); ಅರ್ಧರ್ಧ ತಂಬಿಗೆ ಹಾಲು ಸೆಡ್ಡಿ ಮತ್ತೆ ಹರಟೆಗೆ ತಯಾರಾದರು (ದೀಪಹ. II. ೧೧೫); ಬರೆ ಚಹಾ ಸೆಡ್ಡಿ ಮೋಜು ನೋಡಲಿಕ್ಕೆ ಬರತೀವಿ ಅಂತ ತಿಳದಾರೇನು? (ವೃನಿ. ೨೩೩). [< ಸೇದು$_1$?]

ಸೆಡ್ಡು$_2$ 'ಸಡ್ಡು$_1$' ನೋ.

ಸೆಡ್ಡುಹೊಡೆ 'ಸಡ್ಡುಹೊಡೆ' ನೋ.

ಸೆಡ್ಡೆ 'ಸಡ್ಡೆ$_2$' ನೋ.

ಸೆಣಂಬು 'ಸಣಂಬು' ನೋ.

ಸೆಣಬು 'ಸಣಂಬು' ನೋ.

ಸೆಣಸಾಟ (ನಾ). ೧. ಸ್ಪರ್ಧೆ; ಮೇಲಾಟ; ಪೈಪೋಟಿ: ಬುದ್ಧಿಯ ಸೆಣಸಾಟ ಮೇಲುಗೈ ಆಗಿ ವಾಸ್ತವಿಕ ನಿಲವಿನಿಂದ ದೂರಸರಿಯುವರು (ಪ್ರಾವಿಪ. ೭೬); ಹುಲೀ ಕೂಡ ನರಿಗೆ ಸೆಣಸಾಟವೇ? (ಗಾದೆ). ೨. ಹೋರಾಟ; ಜಗಳ: ಸೆಣಸಾಟವನ್ನು ಮಾಡಿಕೊಳುತ್ತಲಾಗ ಕೋಪಿಸಿಕೊಂಡು ನುಡಿದಳು (ಕುರಂಗ. ೧-೨೨); ಹೆಜ್ಜೆ ಹೆಜ್ಜೆಗೂ ತಮ್ಮ ಸೆಣಸಾಟವನ್ನು ನಡೆಸಿದ್ದವು (ಕಮನ. ೨೨). [ಸೆಣಸು$_1$ + ಆಟ]

ಸೆಣಸಾಡು (ಕ್ರಿ). ೧. ಸ್ಪರ್ಧಮಾಡು; ಪೈಪೋಟಿಮಾಡು: ಕಡಲೊಡನೆ ಸೆಣಸಾಡಿ ಮೀನಿನ ರಾಶಿಯನ್ನೇ ದಿನ ಸಂಜೆ ಮನೆಗೆ ತರುತ್ತಿದ್ದರು (ಮಂಗಾಮು. ೬೮) ೨. ಜಗಳವಾಡು; ಕಿತ್ತಾಡು: ಬಿಡುಗಣ್ಣವರ್ ಮಬ್ಬಿಗರ ನೂಂಕಿ ಸೆಣಸಾಡಿ (ಕಾಲೂರ. ೧೪೦-೩೦೬); ಸಾಕಿದ ದನಕರುಗಳು ಒಮ್ಮೊಮ್ಮೆ ಅಡವಿಯ ದನಗಳೊಡನೆ ಸೆಣಸಾಡುವ ಪ್ರಸಂಗಗಳೂ ಬರುತ್ತಿದ್ದವು (ಬಂಗಾಹ. ೧೬). [ಸೆಣಸು$_1$ + ಆಡು$_1$]

ಸೆಣಸಿಕೆ (ನಾ). ಹೋರಾಟ; ಕಾದಾಟ: ತಿರಸ್ಕಾರವು, ಕಟ್ಟಣಕವು, ಸೆಣಸಿಕೆಯು, ಕೊರಚಾಟವು, ಬಯ್ಗಳು (ಚಟ್ಟು. ೧೩-೬). [ಸೆಣಸು$_2$ + - ಇಕೆ]

ಸೆಣಸು$_1$, ಸೆಳಸು$_1$ (ಕ್ರಿ). ೧. ಸ್ಪರ್ಧಿಸು; ಪೈಪೋಟಿಮಾಡು: ಇದಱ ದನಿ ಮದವದಲಿಕಲಮ್ಮದುನಿನದದೊಳಂ ಮನೋಜಕಾರ್ಮ್ಮುಕ ಗುಣನಾದದೊಳಂ ಸೆಣಸುವುದು (ಆದಿಪು. ೭-೨೦); ಬೆಳ್ದಿಂಗಳ ಬೆಳಗುಂ ಕಣ್ಗಳ ಬೆಳಗುಂ ತಮ್ಮೊಳ್ ಸೆಣಸೆ (ನಂಬಿರ. ೧೦-೬೫); ಸುಮುಕ್ತಾಫಲಕೆ ಸೆಣಸುವ ದಂತಪಂಕ್ತಿಗಳ್ (ಕುಮಾಭಾ. ೩-೭೭); ಸೆಣಸುವುದು ಸುವ್ಯಾಕರಣ ಪರಿಗಣಿತಶಾಸ್ತ್ರಜ್ಞರಲಿ (ತೊರರಾ. ೧-೧೭-೯). ೨. ಕಾದಾಡು; ಹೋರಾಡು: ಅಂತಿರ್ವರುಮೊರ್ವರೊರ್ವರೊಳ್ ಸೆಣಸಿ ಬಹುಪ್ರಯೋಗ ಗದಾಕೌಶಲಮಂ ತೋಱಲ್ (ಪಂಪಭಾ. ೨-೭೨ ವ); ಸೆಣಸುವ ಸಾಹಣಿ ಸರಭಭೇರುಣ್ಡನುಂ (ಸೌಗಾ. XI-I; ೧೦೭-೧೧; 1068); ಮದಗಜವು ಸಿಂಹದೊಳು ಸೆಣಸಿ ಬದುಕುವುದುಂಟೆ (ಪಾಂಡವ. ೨೮-೧೦). ೩. ಕೋಪಗೊಳ್ಳು; ಸಿಡಿಮಿಡಿಗೊಳ್ಳು: ಭವಿಯ ಸೋಂಕಿದ ಭಕ್ತನಂತೆ ಸೆಣಸುವಳ್ (ಸೌಂದಪು. ೧೫-೧೯); ಬಲ್ಲಿದರೊಡನೆ ಸೆಣಸಿ ಮಾತಾಡಿದರೆ ಅಲ್ಲಿಯೇ ಕೇಡು (ನೀತಿಚಂ. IV. ೧೬). ೪. ಹೊಟ್ಟೆಕಿಚ್ಚು ಪಡು; ಕರುಬು: "ಸೆಣಸು — ಈರ್ಷ್ಯಾಯಾಂ" (ಶಮಧಾ); ತನ್ನಯ ರೂಪಿಂಗೆ ಸೆಣಸುವ ಸತಿಯರ ಬೆನ್ನ ಪಟ್ಟಿಯನೆತ್ತುವಂತೆ (ಮೋಹತ. ೧೬-೩೨). ಸೆಳಸು$_1$: ೨. ಹೊಳಲ ಹೊಱಶೂಲದಲಿ ರಿಪುಗಳ ಸೆಳಸುವೆನು (ಕುಮಾಭಾ. ೧-೭); ಪಾರ್ಥಿಯಂ ಬಳಸಿದರ್ಸೆಳಸಿದರು (ಚೈಮಿಭಾ. ೨೨-೩೫).

ಸೆಣಸು$_2$, ಸೆಳಸು$_2$ (ನಾ). ೧. ಸ್ಪರ್ಧೆ; ಮೇಲಾಟ: ಅತಿಶಯವಿಶದ ಕಲಾಪರಿಣತಿಯೊಳ್ ಸೆಣಸಾಗೆ ನೆರೆವವೊಲ್ ಯೌವನದುನ್ನತಿ ನೆರೆಯೆ (ಶಾಂತಿಪು. ೫-೧೮); ಸರಸಿಜಸನ್ನಿಭನಯನೆಯ ಬೆರಳ್ಗೆ ಮನುಮಥ ಸರಳ್ಗೆ ಸೆಣಸಾಗಿ ಸಮಂಬರಲುಂ ನೆಱೆಯದೆ (ಬಂಹಾ. ೭-೩೫). ೨. ವಿರೋಧ; ಪ್ರತಿಭಟನೆ: ಸೆಣಸ ಮಾಡಿದೆ ದೈವದಲಿ (ಕುಮಾಗಾ. ೬-೧೯); ಹರನ ಚಾಪವ ಮುಱಿದು ಗೆಲಿದನ . . . ಅಬ್ಧಿಯ ಬಿಗಿದ ರಾಮನ ಸೆಣಸು ಬೇಡ (ಕೌಶಿರಾ. ೧೮-೩೪); ಸೆಣಸಿಂಗೆ ಸೆಣಸು ಮೂದಲೆಗೆ ಮೂದಲೆ (ಚಟಪು. ೪೯-೪೩). ೩. ಕೋಪ; ಸಿಟ್ಟು: "ಕಿಸುಗಣ್ಣು, ಕಿನಿಸು . . . ಸೆಣಸು -ಈ ೮ ಕೋಪಂ" (ಕಶಾ.೬೫-೪೪೬); ಕೆಳಲ್ದು ಜಗಳವಾಡುವ ಸೆಣಸಿಂ ಸಲೆ ಬಯ್ಯ [ಪಾಠಾಂ.ಕೆರಳ್ದ ಜಗಳವಾಡುವನುಂ ತಾಂ ಸಲೆ ಬೈಸಿಸಿಕೊಳ್ವಂ] (ಸಮಪ. ೩-೫೬); ಅದೇನೋ ಸಂಕಟ, ಅದೇನೋ ಸೆಣಸು (ಹಸುಹೂ. ೩೮೧). ೪. ಮತ್ಸರ; ಈರ್ಷ್ಯೆ; ಅಸೂಯೆ: ಗಳಪರ್ ಪವಣಱಿಯದೆ ಬೆಸಗೊಳೆ ಸೆಣಸಿಂ (ಚಂದ್ರಪ್ರ. ೧-೫೭); ಸೆಣಸು ಮಿಗಲೊಳಗೊಳಗೆ ಖತಿಯಲಿ ಕೆಣಕಿ ಬೈದಾಡಿದರು (ಕುಮಾಕ. ೯ ಸೂಚನೆ). ಸೆಳಸು$_2$: ೩. ಬಱಿದೆಯೆನ್ನೊಳು ಸೆಳಸಿದೇಕೆ (ಜೀವಂಚ. ೫-೧೭). [< ಸೆಣಸು$_1$]

ಸೆಣಸುಕಾಱ (ನಾ). ಹೋರಾಡುವವನು; ಯೋಧ: ಕುಣಿದವಿಬ್ಬರ ಕುದುರೆ ಸಮರಾಂಗಣದ ಸೌರಂಭದ ಸಗಾಢದ ಸೆಣಸುಕಾ[ಪಾಠಾಂ.ಗಾ]ಱರ ಸೂತರೋಡೆಯಲಾಜಿ ರಂಗದಲಿ (ತೊರರಾ. ೬-೫೦-೩). [ಸೆಣಸು$_1$ + - ಕಾಱ]

ಸೆಣಸುಗ (ನಾ). ಸ್ಪರ್ಧಿಸುವವನು; ಹುರುಡಿಸುವವನು: "ಸ್ಪರ್ಧಮಾನಃ = ಸೆಣಸುಗಂ" (ಕಾಶಕ್ಷ. ೮೧). ೨. ಕೋಪಿಸುವವನು; ರೇಗುವವನು: ರೋಷ್ಟಾ (ರೋಷ್ಟಾ) = ಸೆಣಸುಗಂ" (ಕಾಶಕ್ಷ. ೫೮). [ಸೆಣಸು$_1$ + - ಗ$_2$]

ಸೆಣೆಯ ಹುಲ್ಲು (ನಾ). ಒಂದು ಬಗೆಯ ಸಸ್ಯ: " ಶ್ಯೇಣಕಾ - ಸೆಣೆಯ ಹುಲ್ಲು (ಚೇಣೆಯ ಹುಲ್ಲು?)" (ಓಷಧಿ. ೧೭೦). [? + ಹುಲ್ಲು (< ಪುಲ್)]

ಸೆಣೆ₁ (ಕ್ರಿ). ಕೋಪಗೊಳ್ಳು; ಸಿಟ್ಟಾಗು: "ಸೆಣೆ - ಕ್ರೋಧೇ" (ಶಮಧಾ); ಲೋಗರೇನಾನುಮನೊಂದಣಕದಿನೆಂದೊಡೆ ಮನದೊಳ್ ಸೆಣೆಯದಿರೊಳ್ತಪ ದೊಳರ್ತಿಗುಂದದಿರಿನಿಸುಂ (ಧರ್ಮಾಮೃ. ೫-೧೫೪); ಸೆಣೆಯದಿರು ತಾತ ಗುರುದೇವನಲಿ (ಹಟ್ಟಿರ. ೩೬-೧೬); ಕಿನಿಸಿನಿಂ ಹಿರಿಯರೇನೋ ತೋರ್ಪರಿನಿತಂ ಮುಡಿಕಟ್ಟಿ ಮೇಣು ಮರ್ದನಲ್ಕೊಬ್ಬನಂ ಸೆಣೆದು ಮುಡಿಪಿಕ್ಕದೇಂ ಬೇಡಮೆಂದನಿನ್ನೊಬ್ಬಂ (ಕಾಲೂರ. ೧೫೪-೩೪೦).

ಸೆಣೆ₂ 'ಸೆಳೆ₂' ನೋ.

ಸೆತ್ತೆ, ಸತ್ತೆ₁, ಸದೆ₃, ಸೆದೆ (ನಾ). ೧. ಒಣಗಿದ ಕಸ; ತರಗು: ಊರ ದೇವತೆಗಳನಾರಾಧಿಸಲು ನಿತ್ಯ ನೀರೊಳು ಯಜ್ಞವ ಮಾಡಿದ ತೆರನಂತೆ ಆರನು ಹೊಂದದೆ ಹಾರಿ ಹೋಗುವದ್ಯೆಯ ನೀರಾಡಿ ಸೆತ್ತೆಯ ವಾರೆ ತೋಡಿದಂತೆ (ಎದಾಕ್ಷ. ೧೦೬-೭). ೨. (ಪ್ರಾಣಿಗಳ) ಗರ್ಭದಲ್ಲಿರುವ ಕೂಸಿನ ಚೀಲ; ಮಾಸು: ಸತ್ತೆ ಹೊಟ್ಟೆಯೊಳಗೇ ಉಳಿದು ಹಸು ಸತ್ತಿತು (ರೂಢಿ). ೩. ಪಾಪ; ದೋಷ: ತ್ರಿವಿಧಸೆತ್ತೆಯ ಸರ್ವೇಂದ್ರಿಯ ಬೆಳೆದ ಪಾಂಸೆಯ ಮಱೆಯಲಿ ತಪ್ಪಿಹೋಯಿತ್ತು ಮತ್ಸ್ಯ (ಸರ್ವಜ. ೬೦-೩೧೬).

ಸತ್ತೆ₁: ೪. ಪೊದೆ; ಮೆಳೆ: ಗಿಡಗಂಡಸತ್ತೆ ದಟ್ಟವಾಗಿ ಬೆಳೆದಿದ್ದ . . . ದಾರಿಯ ಮೂಲಕ ಅವಳು ಬರುತ್ತಿದ್ದಳು (ಪುನರು. ೨೭೫). **ಸದೆ₃**: ೧. ಹುಲುಕಡ್ಡಿ ಮೊದಲಹ ಕಸವು ಸದೆಯೆಲೆ ಸೊಪ್ಪುಸೊಡಗುವಿನಿಸುವಱಸಿ ಕಾಣದೆ (ಬಸಪು. ೧೬-೨೨). ೩. ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯನು ಕಳದು (ಸರ್ವಜ. ೧೦೬-೫೬೮). ೪. ಆ ಸದೆಯಲ್ಲಿ ಎಲ್ಲಿಯಾದರೂ ಅಡಗಿದ್ದ ಹಾವುಗೀವು ಕಚ್ಚಿತೊ (ಮಲೆಮ. ೮೪೦). ೫. ಅನಗತ್ಯವಾಗಿ ಬೆಳೆದ ಪೈರು; ಕಳೆ: ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ ಮುನಿದವರುಂಟೆ (ಸಕವ ಕ. I, ೧೭೩-೨೬೫); ಅವು ಜಾಗರೂಕತೆಯಿಂದ ಆ ಹುಲ್ಲಿನ ಸುತ್ತಮುತ್ತಲಿನ ಸದೆ ತೆಗೆಯುತ್ತವೆ (ಮತಂಓ. ೫೬). ೬. ಹಿಪ್ಪೆ; ಚರಟಿ: ಸಿಹಿಗಬ್ಬಿನ ರಸಗೊಂಡಾ ಸದೆಯಂ ಬಿಸುಡುವಂತೆ (ನೀತಿಸಾ. ೨೭೭). **ಸೆದೆ**: ೧. ಗುರುತು ಕಾಣದಂತೆ ಮೇಲೆ ಕಡ್ಡಿಗಳನ್ನು ಹಾಸಿ ಸೊಪ್ಪುಸೆದೆಗಳಿಂದ ಮುಚ್ಚುತ್ತಾರೆ (ಪ್ರವಾಸಾ. I, ೩೪೭). ೭. ಗೊದೆ: ಪದೇ ಪದೇ ಮುಕ್ಕರಿಸುವುದರಿಂದ ಆಸನದ ಸೆದೆಯು ಹೊರಗೆ ಹೊರಟುಕೊಳ್ಳುವುದು (ಗ್ರಾಮಾಕ. ೧೬೯).

ಸದೆಸಟ್ಟು = ಸೊಪ್ಪುಸದೆ; ಕಸ; ಗೊಬ್ಬರ: ವಾಯವಾಯ್ತುಹಿಪಾಶ ಪದ್ಮಜ ಸಾಯಕವು ಸಱೆಯಾಯ್ತು ಸದೆಸಟ್ಟಾಯಿತನುಜನ ಬಿಣ್ಪು (ತೊರರಾ. ೬-೪೧-೩); ಕಲ್ಕೊರಡು ಸದೆಸಟ್ಟು ಪುಲ್ಕೊರೆಗಳಾಂತವರ್ ನಿಲ್ಕಿದರ್ ಪುರದಗಳನು (ಚಿಬಪು. ೪೨-೫೯). ಸದೆಸೊಪ್ಪು = ಸದೆಸಟ್ಟು: ಬಿಗಿದೆವೆಯುದಿರ್ದ ಕಣ್ಗೆ ಕಾಡಿಗಯೆಚ್ಚಿ ಸದೆಸೊಪ್ಪನಣಲೊಳಡಸಿ . . . ಮುದುವಾಱರ್ದಳು (ಹಚಕಾ. ೪-೨೭).

[ದೇ. ॥ ತಮಿ. ಚೆತ್ತೆ, ಚೆತ್ತಲ್, ಚೆತುಕು; ಮಲ. ಚೆತ್ತ, ಚೆಱ್ಱ; ತುಳು. ಸೆದೆ; ತೆಲು. ಚೆತ್ತ]

ಸೆದಗೆ (ನಾ). = ಸೆತ್ತೆ ೧: ಕುಡಿವಾಗಳಮೃತಶರಧಿಯನೆಡೆಸಿಲ್ಕಿರೆ ಸದಗೆಯಂತೆ ಕೊರಲೊಳ್ (ವೃಷವಿ. ೩೭-೯೨). [< ಸೆತ್ತೆ]

ಸೆದೆ 'ಸೆತ್ತೆ' ನೋ.

ಸೆನಿಗ (ನಾ). ಒಂದು ಬಗೆಯ ಸಸ್ಯ: (ಪ್ರಜೆಗಿ. ೬೩-೧೨೮೮). [?]

ಸೆಬೆ, ಶಬೆ (ನಾ). ಒಂದು ಬಗೆಯ ಉರುಳು; ಬೇಟೆಯ ಒಂದು ಸಾಧನ: ಸೆಬೆ ಒಡ್ಡಿ ಕಾಡುಕೋಳಿ, ಚಟ್ಟುಕೋಳಿ ಹಿಡಿಯುವುದು (ಮಲೆಮ. ೧೩); ಹೋಗಿ ನೋಡುತ್ತಾರೆ, ಸೆಬೆಗೆ ಹಕ್ಕಿ ಸಿಕ್ಕಿಬಿದ್ದಿದೆ (ಕಾನೂರು. ೬೪). **ಶಬೆ**: ಕೋವಿಯ ಬಿಲ್ಲಿಗೆ ಸಂಪರ್ಕವಿರುವಂತೆ ಮೃಗ ಬರುವ ದಾರಿಗೆ ಅಡ್ಡಲಾಗಿ ಉದ್ದವಾದ ಸೂತ್ರಬಳ್ಳಿಯೊಂದನ್ನು ಕಟ್ಟುತ್ತಾರೆ. ಸೂತ್ರದ ಬಳ್ಳಿಯನ್ನು ಮೃಗ ಎಡವಿದೊಡನೆ ಶಬೆ ಸಿಡಿದು ಬಿಲ್ಲು ತನ್ನಷ್ಟಕ್ಕೆ ತಾನೆ ಅಮುಕುವಂತಾಗುವ ವ್ಯವಸ್ಥೆ ಮಾಡುತ್ತಾರೆ (ಪಂಜಪಂ. ೨೨). [?]

ಸೆಬೆಯೊಡ್ಡು (ಕ್ರಿ). (ಹಕ್ಕಿಗಳನ್ನು ಹಿಡಿಯಲು) ಬಲೆ, ಉರುಳು ಮೊದಲಾದುವನ್ನು ಅಳವಡಿಸು: ಗಂಗ ಸೆಬೆಯೊಡ್ಡತೊಡಗಿದನು. ಸೆಬೆಯೊಡ್ಡಿ ಪೂರೈಸಿತೆಂದು ತಿಳಿದು ವಾಸು ಕೈಬಿಟ್ಟುಕೂಡಲೆ ಅಕಸ್ಮಾತ್ತಾಗಿ ಕಣೆಯ ಕಡ್ಡಿ ಸಿಡಿಯಿತು (ಕಾನೂರು. ೬೫). [ಸೆಬೆ + ಒಡ್ಡು₁]

ಸೆಬ್ಬಿ, ಸೆಬ್ಬೆ₁ (ನಾ). ಒಂದು ನಾಡಿನ ಹೆಸರು: ಸೆಬ್ಬಿ ಮೂವತ್ತನಾಳುತ್ತಂ (ಇಅ. XII, ೨೫೬-೧೪; 971). **ಸೆಬ್ಬೆ₁**: ಸ್ವಸ್ತಿಶ್ರೀ ಸೆಬ್ಬೆಣ್ಣಾಡ ಮಾಡನ (ಎಕ. X (S), ಮುಳಬಾ. ೧೫೬-೧; 8 ನೆಯ ಶತ). [?]

ಸೆಬ್ಬೆ₁ 'ಸೆಬ್ಬಿ' ನೋ.

ಸೆಬ್ಬೆ₂ 'ಶಬ್ಬಿ' ನೋ.

ಸೆಮ್ಮು (ನಾ). ಆಸ್ತಿ; ಸ್ವತ್ತು: ಅಂತಯ್ದು ಸ್ಥಳಂಗಳಾಗಿ ಬೀಚರಸಯ್ಯಂಗಳು ತ(ಂ)ಮ್ಮ ಸೆಮ್ಮಿನ ಒಂದು ವೃತ್ತಿಗೆ ಆ ದಶಕದ ಮಹಾಜನಂಗಳನೊಡಂಬಡಿಸಿ ಹಸುಗೆಯಂ ಧ್ರುವಉಂಡಿಗೆಯಾಗಿ ಹಿಡಿದ ದೋ X ಯ ಗದ್ದೆ ಕಂಬಂ ನೂಱಯಿವತ್ತುಮಂ . . . ಕೊಟ್ಟರು (ಸೌಇಸಾ. IX-i, ೨೯೫-೨೫; 1172).

[IP ಇದು 'ಸೊಮ್ಮು' ಎಂಬುದರ ಅಪಲಿಖಿತವಿರಬಹುದೆ?]

ಸೆರಗು₁ 'ಸೆಱಂಗು' ನೋ.

ಸೆರಗು₂ (ನಾ). ೧. ಅಪಾಯದಶಂಕೆ; ಭೀತಿ: ಎಮ್ಮರಸರ ನಚ್ಚಿನೆಚ್ಚ ಶರಮಂ ಸೆರಗಿಲ್ಲದೆ ಕೊಂಡು ಬರ್ಪಿರೇ (ಪಂಪಭಾ. ೮-೧೭); ಸೆರಗುಮಂ ಬೆರಗುಮಂ ಬಗೆಯದೆ ಸದ್ರತ್ನಮಂ ಕೊಳ್ಳೆಂ (ಧರ್ಮಾಮೃ. ೬-೬೮); ಭೋಗಂ ನಿರ್ವೇಗಮಂ ಪುಟ್ಟಿಸೆ ಸೆರಗನಣಂ ಪಾರದೆ (ವರ್ಧಮಾ. ೧೦-೫೭); ಸೆರಗುಂ ಬೆರಗಿಲ್ಲದ ವೀರವೆಮ್ಮಬರ್ಮ್ಮಂಗೆ ನಿಜಂ (ಎಕ.XI, ದಾವಣ.೪೨-೫೯; ಸು.1162). ೨. ಅಪರಾಧ; ಪಾಪ: ಸೆರಗಕ್ಕುಂ ಮೆಯ್ಗರೆದಾ ನಿರಲೆಂದು ನಿಜಸ್ವರೂಪಮಂ ತೋಱುವುದುಂ (ಪಂರಾಮಾ. ೧೧-೯೨).

ಸೆರಗಂ ಪಾರು, ಸೆರಗುವಾರು = ಅಪಾಯವನ್ನು ನಿರೀಕ್ಷಿಸು: ಸೆರಗಂ ಪಾರದೆ ಮತಿ ಮಱೆದಿರದೆ . . . ಖಚರಶ್ರೀಯನುಟೀದನಾ ಜಿನಚಂದ್ರಂ (ಶಾಂಪು. ೭-೬೯); ಸೆರಗುವಾರದೆ ಚಕ್ಕನೆ ಬಿಟ್ಟು ರಾಜ್ಯಮಂ (ಧರ್ಮಾಮೃ. ೧೧-೧೯೭). ಸೆರಗಂ ಬೆರಗಂ ಪಾರು = ಅಪಾಯ, ಉಪಾಯಗಳನ್ನು ನಿರೀಕ್ಷಿಸು: ಅಗರ್ವಿಸುವ ಸೆರಗಂ ಬೆರಗಂ ಪಾರದ ಬಲ್ಲೆಯ ಬಂಟರ ಪೆರ್ವಡೆಯಂ ಜರ್ವಿ ಕೆತ್ತಿಸುತುಂ (ರಾಮಾಶ್ವ. ೯೦-೨೬). ಸೆರಗಂ ಬೆರಗಂ ಬಗೆ = ಅಪಾಯ, ಉಪಾಯಗಳನ್ನು ಎಣಿಸು,— ಆಲೋಚಿಸು: ಇಲ್ಲಿ ಸೆರಗಂ ಬೆರಗಂ ಬಗೆಯಂ ದ್ವಿಜೋತ್ತಮಾ (ಪಂಪಭಾ ೩-೬); ಸೆರಗಂ ಬೆರಗಂ ಬಗೆಯದೆ . . . ಕರಿಯ ದಂಡೆಯಂ ತೂಂಕಿದವೊಲ್ (ಗದಾಯು. ೨-೨೨); ಸೆರಗಂ ಬೆರಗಂ ಬಗೆಯದೆ ಪುರಮಂ ಪೊಱಮಟ್ಟು (ಪಂರಾಮಾ. ೧೦-೧೯). [ದೇ. ॥ ತೆಲು. ಸೆರಗು]

ಸೆರಗುವಾಟ್? (ಕ್ರಿ). (?): ನರಪತಿ ಬೆನ್ನೊಳಟ್ಟೊನಿದಿರಾನ್ತುದು ವೈರಿಸಮೂಹಮಿಲ್ಲಿ ಮಚ್ಚರಿಸುವರೆಲ್ಲರುಂ ಸೆರಗುವಾಟ್ಟಪೊರ್ (ಎಕ. III, ಮಂಡ್ಯ. ೪೧-೧೭; 950).

[IP ಇದು 'ಸೆರಗುವಾರ್' ಎಂಬುದರ ಅಪಲಿಖಿತವಿರಬಹುದು]

ಸೆರಗುಹಿಡಿ 'ಸೆಱಗುವಿಡಿ' ನೋ.

ಸೆರಗೊಡ್ಡು 'ಸೆಱಗೊಡ್ಡು' ನೋ.

ಸೆರಪು 'ಸೆಱಪು' ನೋ.

ಸೆರವಟ್ಟಣೆ (ನಾ). ಮಲ್ಲಯುದ್ಧದ ಒಂದು ಪಟ್ಟು: ಆಂ ಪಿಡಿದುದೆ ಕತ್ತರಂ ಕರವಳಂ ಸೆರವಟ್ಟಣೆ ಹತ್ತೆ ಡೊಕ್ಕರಂ ಚಡಿಕೆ ತುಳಾಡಿ ಪೊಟ್ಟುಮುಡುಹಂ ಮುಹಡಂ ದಣುವಟ್ಟಿ ಪಟ್ಟಿಸಂ (ಅನಂಪು. ೨-೨೭). 'ಸಿರಣವಟ್ಟೆ' ಪರಾ. [?]

ಸೆರೆ₁ (ಕ್ರಿ). ತುರಿ; ಹೆರೆ: ಉಂಡೆಗುಂಬಳಕಾಯ ಮೇಲಣ ಹಸುರ ಕೆತ್ತಿಕೊಂಡು . . . ಬಿತ್ತಮಂ ಸೆ[ಪಾಶಾ. ನೆ]ರೆದದಱೊಳನಿಸಿಲ್ಲದಂತೆ ತೆಗೆದು (ಸೂಪಶಾ. ೫-೨೩); ತೆಂಗಿನ ಹಣ್ಣುಕಾಯ ಸಣ್ಣನಾಗಿ ಸೆರೆದು ತನಿರಸವ ತೆಗೆದುಕೊಂಡು . . . ಅಣೆಲೆಕಾಯ ಚೂರ್ಣವ ಹಾಕಿ ತೆಗೆದುಕೊಳ್ಳಲು ಸರ್ವಾತಿಸಾರ ಹರ (ವೃಧಸಾ. I, ೨೧೩). [< ಹೆರೆ₂]

ಸೆರೆ₂ 'ಸೇರೆ₁' ನೋ.

ಸೆರೆ₃ 'ಸೆಱೆ₂' ನೋ.

ಸೆರೆ₄, ಸೆಲೆ₇ (ನಾ). ೧. ನರ; ರಕ್ತನಾಳ: "ನಾಳೀಪತ್ರಂ, ಸಿರಾ-ಈ ೨ ಸೆರೆ" (ಹಲಾಯು. ೧೯೯-೯೮); ಕೊರಳ ಸೆರೆ ಹಿಗ್ಗಿದವು . . . ಪಾರ್ಥಂಗೆ (ಕುಸ್ಯಾದ್ಯೂ. ೮-೭); ಗಂಟಲ ಸೆರೆಗಳುಬ್ಬಿ ಕೇಳುವ ಸಂಕಟ (ಪುರಂದ. ೧-೧೬೪-೨); ಎರಡೂ ಗಂಡಸ್ಥಲಗಳ ಮೇಲಿನ ಸೆರೆಗಳು ಉಬ್ಬಿ ಪಟಪಟನೆ ಹಾರಿಕೊಳ್ಳುತ್ತಿದ್ದವು (ಆಚೋಲೀ. ೯೦). ೨. ಮರ್ಮ: ಆಯ: ಸೆರೆ ನೋಡಿ ಕೀಲು ಹೊಡೆದ (ಒಡ್ಡಿಉ. ೮೦). **ಸೆಲೆ₇**: ೧. ಆಚಾರ್ಯರ ನೆನಪಾಗಿ ದಾಸರ ಕುತ್ತಿಗೆಯ ಸೆಲೆ ಬಿಗಿದುಬಂದಿತು (ರೂಪಸ.೧೬). ೩. ಗ್ರಂಥಿ:

ಧೂಪಹಾಕಿದರೂ ಮಾನಿನ ವಾಸನೆ ಮನೆಯಿಂದ ಹೋಗಿಲ್ಲ. ಅದರ ಹತ್ತಿರಕ್ಕೆ ಹೋದರೆ ಮೂಗಿನ ಸೆಲೆ ಒಡೆದುಹೋಗುತ್ತದೆ (ಪಪಕಾ.೧೮); ದುರ್ನಾತದ ಗಾಳಿ ಅವನ ಮೂಗಿನ ಸೆಲೆಗೇರಿತು (ಪುನರು. ೫೨೫).

ಸೆರೆಯಂ ಬಿಡಿಸು = ರಕ್ತನಾಳವನ್ನು ಕತ್ತರಿಸು: ನಡೆ ನಾರಾಚದ ನೋವಿನ ನಡುಕಂ ಪರಿದಾಯ್ತು ಸ[ರ್ಪಯೋನಿ]ಯ ಸೆರೆಯಂ ಬಿಡಿಸಿದವೊಲೆಚ್ಚು ಪಾಯ್ದ ತ್ತೊಡನೊಡನೆ ಕದುಷ್ಣಕೃತ್ಸ್ರರುಧಿರಜಲೌಘಂ (ಪಂಪಭಾ. ೧೨-೭೧). ಸೆರೆಯಂ ಬಿಡು = ಸೆರೆಯಂ ಬಿಡಿಸು: ಅನುಕ್ರಮದಿಂ ಸೆರೆಯಂ ಬಿಡುವುದು ಕುಷ್ಠರೋಗಮಿವಱಿಂ ಕಿಡುಗುಂ (ಲೋಕೋಪ. ೯-೧೧೨). [< ಸಂ. ಏರಾ]

ಸೆರೆ೫, ಸೇರೆ೨ (ನಾ). ಒಟ್ಟಲು; ರಾಶಿ(?): ಅದಱ ತದನಂತ್ರ ಕಗ್ಗಲ್ಲ ಸೆರೆಯ ನಿಟ್ಟಱಿ ಅದಱ ತದನಾನ್ತರ ಕುಂಟೆಯ ತಡಗೋಡ ಮೇಕಱಿಯಾಲ (ಶಾಸ್ತ್ರಾ. IX - i ೪೧-೨೪; 11ನಯ ಶತ). ಸೇರೆ೨: ಅನ್ತು ಬಱೆ ಕೋಲೇರಿಯ ಪಡುವಣದೆಸೆಯ ಕಲ್ಲುಸೇರೆ (ಶಾಸ್ತ್ರಾ. IX - i ೪೧-೧೪; 11 ನಯ ಶತ). [< ಸರಿ೫]

ಸೆರೆ೬, ಶರೆ (ನಾ). ಹೆಂಡ; ಮದ್ಯ: ಕಾಮಭಕ್ಷ ಶಹಾಜಾದರು ಹಗಲೆಲ್ಲ ಸೆರೆಯ ಗುಂಗಿನಲ್ಲಿರುತ್ತಾರೆ (ಹಂಸಾ. ೧೬೧); ಸೆರೆಯ ಮಬ್ಬಿನಲ್ಲಿ ಮನುಷ್ಯ ಏನೇನೋ ಒದರಾಡುತ್ತಾನೆ (ಹೂಸಬ. ೧೦); ಮಾಡದಲಿ ಈಗ ಸೆರೆಯ ಬರಿದಾದ ಬಾಟಲಿಗಳು ಅವುಗಳ ಬೂಚುಗಳು ಮಲಗಿವೆ (ಹೂಲಮ. ೨೨೫). ಶರೆ: ತಿರಿಕನನು ಕರತಂದು ಧರಣಿಯ ಚರಿತದೊಳಗಿರಿಸಿದರೆ ಮರ್ಕಟ ಶರೆಯ ಸೇವಿಸಿದಂತೆ ಕುಣಿವರೆ (ಬಜ್ಜಹ. ೬೨-೫೪); (ಇಪ್ಪೆ) . . . ಇದರ ಹೂವಿನಿಂದ ಶರೆಯನ್ನು ಮಾಡುವರು (ಕಭಾಗ. ೩೭). [< ಸಂ. ಸುರಾ?]

ಸೆರೆಗಣ್ಣು 'ಸೇರೆಗಣ್' ನೋ.

ಸೆರೆಗತ್ತಿ (ನಾ). ಹೆರೆಯುವ ಕತ್ತಿ,—ಚೂರಿ: ತೋಪಿ ಗುಂಡಿಯಂ ಮಾಡಿ ಸೆರೆಗತ್ತಿಯೊಳು ಮತ್ತದಱ ದಿಂಡುಮಂ ಪೂರಿಸಿದ ದತ್ತಮಂ ಸೆರೆದದಱೊಳಿನಿಸಿಲ್ಲದಂತೆ ತೆಗೆದು (ಸೂಪಶಾ. ೫-೨೩). [ಸೆರೆ೧ + ಕತ್ತಿ]

ಸೆರೆಗಾಲ್ (ನಾ). ನರಗಳು ಉಬ್ಬಿರುವ ಕಾಲು: ಕರಿಗೂರದನುಡುವಡರ್ದವೆನಿಪ ಸರೆಗಾಲ್ಗಳಿಂ ಬಿಡದ ಪೊಡವಡೆ (ಜಾದಂಪು. ೨೭೧). [ಸೆರೆ೪ + ಕಾಲ್೧]

ಸೆರೆಗಾವಲು (ನಾ). ಸೆರೆಯಾಳುಗಳನ್ನು ಕಾಯುವಿಕೆ: ತಾವು ಅತನಿಗೆ ಸೆರೆಗಾವಲ ಬಂದಿಕಾರರಂಬುದನ್ನು ಎಂತೂ ಬಿಟ್ಟುಕುಡದಿರಬೇಕು (ಬಿಟ್ಟುಅ. ೧೩೭-೧೬).

[ಸೆರೆ೩ (< ಸೆಱೆ೨) + ಕಾವಲು (< ಕಾವಲ್೧)]

ಸೆರೆಗುಡುಕ (ನಾ) ಮದ್ಯಪಾನ ಮಾಡುವವನು; ಹೆಂಡಕುಡುಕ: ಸೆರೆಗುಡುಕರ ಪರಿಭಾಷೆ ಸಹ ಅವನಿಗೆ ಪರಿಚಿತವಾಗಿದೆ (ತವಸಿ. ೯೪); ನನ್ನ ತಂದೆ ಸೆರೆಗುಡುಕ (ಆಶ್ರಮ. ೫೦). [ಸೆರೆ೬ + ಕುಡುಕ (< ಕುಡಿಕ)]

ಸೆರೆಗೈ೧ 'ಸೆಱೆಗೆಯ್' ನೋ.

ಸೆರೆಗೈ೨ 'ಸೇರೆಗೆಯ್' ನೋ.

ಸೆರೆಗೈಗಣ್ (ನಾ). ಬೊಗಸೆಗಣ್ಣು; ದೊಡ್ಡಕಣ್ಣು: ಸಕ್ಕುಂದುಱುಬಿನ ಸೆರೆಗೈಗಣ್ಗಳ . . . ಪೆಣ್ಮಕ್ಕಳ ತಂಡಂ ನಡತಂದುದು (ಜಯಕಾ. ೫-೩೭).

[ಸರಗೈ೨ (< ಸೇರೆಗೆಯ್) + ಕಣ್]

ಸೆರೆತುಂಬು (ಕ್ರಿ). ಬೊಗಸೆ ಭರ್ತಿಯಾಗು; ಅಂಗೈತುಂಬು: ಬಿದ್ದಕ್ಕಿಗಳ ಸೆರತುಂಬಲಾಯ್ದು ತಂದು (ಗುರುಚಾ. ೮-೭೪). [ಸೆರೆ೨ (< ಸೇರೆ೧) + ತುಂಬು೧]

ಸೆರೆತುಪ್ಪ 'ಸೆರೆದುಪ್ಪ' ನೋ.

ಸೆರೆದುಪ್ಪ, ಸೆರೆತುಪ್ಪ (ನಾ). ಒಂದು ಬೊಗಸೆ ತುಂಬುವಷ್ಟು ತುಪ್ಪ: ಹೀರಯೆಳಿಗಾಯ ಕುಯಿದಾಕ್ಷಣದಿ ತಂದದಱ ಧಾರೆಯಂ ಕೆತ್ತಿ ಸಂಬಳಿಸಿ ಸೆರೆದುಪ್ಪ ಸೆರನೀರು[ಪ್ಪು] ನೀರುಳ್ಳಿ ಕರಿಬೇವು ಕೊತ್ತುಂಬರಿಯನಿಕ್ಕಿ (ಸೂಪಶಾ. ೫-೧). ಸೆರೆತುಪ್ಪ: ನೆಲ್ಲಕ್ಕಿ ಅನ್ನ ಸೆರತುಪ್ಪ ಉಂಡೋಗ್ರಿ (ಗ್ರಾಪಚ .೫-೧). [ಸೆರೆ೨ (< ಸೇರೆ೧) + ತುಪ್ಪ]

ಸೆರೆದುಱುಗಲ್ (ನಾ). ನರಗಳ ಸಮೂಹ; ರಕ್ತನಾಳಗಳ ಗುಚ್ಛ: ಸೆರೆದುಱುಗಲ್ಮೆಯ್ಯೆಲ್ಲಮನಿರದದರೆ ಜರಲ್ಲತಾವಿತಾನದಿನೆತ್ತಂ ಪರಿವೇಷ್ಟಿಸಿರ್ದ ಪರಿಣತ ಸುರತರುವಂ ಪೋಲ್ತು ಸೊಗಯಿಸಿರ್ದಂ ಮುನಿಪಂ (ಕಾದಂಪೂ. ೨೪೩). [ಸೆರೆ೪ + ತುಱುಗಲ್]

ಸೆರೆದೆಗೆ (ಕ್ರಿ). ನರ ಸೆಳೆದುಕೊಳ್ಳು: ಕೆಮ್ಮನಿಟ್ಟಗೆಗಳಿಂದಿಡಲುಡಿದ ಕಯ್ಗಳಿಂ ಸೆರೆದೆಗೆಯೆ ಸೂಜಿಯಿಂ ಪೊಲ್ತಿರ್ದ ಕಯ್ಗಳಿಂ ಅಱಿಯದಸಗಿದ ರಸಾಯನದ ಸೇವನೆಯಿಂದ (ಕಾದಂಪು. ೨೭೧). [ಸೆರೆ೪ + ತೆಗೆ೧]

ಸೆರೆನಾಡು (ನಾ). ಒಂದು ಪ್ರದೇಶದ ಹೆಸರು: ಅರಸ ಸೆರೆನಾಡೊಳ್ ಬೆಳಚವ್ಯಾಡಿಯ ಮಹಾಜನಕ್ಕೆ ನೆಲ್ಲಕ್ಕಿಯ ಬಟ್ಟನ್ (ಎಕ. IV. ಗುಂಡ್ಲುಪೇ. ೨೦-೫; 720). [ಸೆರೆ೨ + ನಾಡು]

ಸೆರೆನೆಗೆ (ಕ್ರಿ). ನರ ಉಬ್ಬು; ರಕ್ತನಾಳ ಬಪ್ಪವಾಗು: ಕೆಲಬರನ ನೋದಿ ಬೆಚ್ಚುವ ದೃಷ್ಟಿ ಸೆರೆನೆಗೆದ ಗಂಟಲ್. . . ಕೂಡೆ ತೋಱಲು (ಹಚಕಾ. ೬-೫೩). [ಸೆರೆ೪ + ನೆಗೆ೧]

ಸೆರೆಬಡಕ (ನಾ). ಹೆಂಡದ ಗೀಳು ಹಿಡಿದವನು; ಹೆಂಡಗುಡುಕ: ಕರುಣವು ಸೆರೆಬಡಕರ ಹೆಂಡರುಮಕ್ಕಳ ಕಣ್ಣಿನೊಳಗದಗಿಕೊಂಡಿತ್ತು (ಸಾಹಸಂ. ೧೭೬).

[ಸೆರೆ೬ + - ಬಡಕ೨ (< - ಬಡಿಕ೨)]

ಸೆರೆಬಿಗಿ (ಕ್ರಿ). (ಕೊರಳಿನ) ನರಗಳು ಎಳೆದುಕೊಳ್ಳು,—ಸೇದಿಕೊಳ್ಳು: ಶೋಕಜಲಬಿಂದು ತೆರಳೆ ಸೆರೆಬಿಗಿದು ಗದುಗದಿಸಿ ಬಿಕ್ಕುತೆ ಬಿದ್ದು (ಬಸಪ. ೫-೧೯); ಆನಂದಾಶ್ರು ಕಣ್ಗಳೋಳ್ಮಳೆದಳನೆ ಸುರಿಯೆ ನುಣ್ಗೊರಳ ಸೆರೆಬಿಗಿಯೆ (ಪದ್ಮಕಾ. ೭-೨೮); ದೃಗುಯುಗಳ ನೀರೇಱಿದವು ಸೆರೆಬಿಗಿದು ಹಲುಬಿದನಕಟ (ಕುವಾದ್ಯೂ. ೧೨-೧). [ಸೆರೆ೪ + ಬಿಗಿ೧]

ಸೆರೆಬಿಡಿಸು (ಕ್ರಿ). ಬಂಧನದಿಂದ ಮುಕ್ತಿಗೊಳಿಸು; ಸೆರೆತಪ್ಪಿಸು: ಪಾಪಿಗಳ ಸೆರಬಿಡಿಸಿದ ಶರಣಾಗತವಜ್ರಪಂಜರ ಪರಶಿವನೆ (ಸೌಂದಕಾ. ೩-೨); ಒಲಿದೊಮ್ಮೆ ಸೆರೆಬಿಡಿಸು, ನಿಲದೋಡುವೆನು (ಕವಷ. ೩೩-೩). [ಸೆರೆ೨ (< ಸೆಱೆ೨) + ಬಿಡಿಸು]

ಸೆರೆಬಿದು (ಕ್ರಿ). ಬಿರುಕುಬಿಡು; ಸೀಳು: ಸಾವಿರಾರು ವರುಷಗಳ ಬಿಸಿಲು ಮಳೆಗಳಿಂದ ಹವೆಯ ಬದಲಾವಣೆಯಿಂದ ಈ ಬಂಡೆಗಳು ಸೆರೆಬಿಟ್ಟುವು (ಬಾಲಪ್ರ. I. ೨೩೯).

[ಸೆರೆ೨ + ಬಿದು೧]

ಸೆರೆಮನೆ 'ಸೆಱೆವನೆ' ನೋ.

ಸೆರೆಯಂಗಡಿ (ನಾ). ಹೆಂಡ ಮಾರುವ ಅಂಗಡಿ; ಪಡಖಾನೆ: ಸೆರೆಯಂಗಡಿಯ ಉನ್ಮತ್ತ ಪರಿವೇಷದಲ್ಲಿ ವರ್ಣದ್ವೇಷದ ಅಮಾನುಷಚಿತ್ರ ಅವನಿಗೆ ಕಾಣುತ್ತದೆ (ಹೂಸಕ್ಷ.೨೯೦). [ಸೆರೆ೬ + ಅಂಗಡಿ (< ಅಂಗಾಡಿ)]

ಸೆರೆಯಾಳ್, ಸೆರೆಯಾಳು (ನಾ). ಬಂಧನಕ್ಕೆ ಸಿಕ್ಕಿದ ವ್ಯಕ್ತಿ; ಬಂದಿ; ಖೈದಿ: ದೇವರು ಸೆರೆಯಾಳ್, ದೇಗುಲ ಸೆರೆಮನೆ, ಕಾವಲು ಪೂಜಾರಿ (ಕೋಗಿಲ. ೭೬-೧). ಸೆರೆಯಾಳು: ಹೆಣ್ಣಾಗಿ ಹುಟ್ಟಬಾರದು ಹುಟ್ಟಿದರೂ ಗಂಡಿನ ಸೆರೆಯಾಳಾಗಬಾರದು (ಕಾವೇಂ. ೧೯೪); ಈ ರೋಗವು ತನ್ನ ಸೆರೆಯಾಳಿಗೆ ಇತರರಿಂದ ಸಹಾನುಭೂತಿಯನ್ನು ಆಮಂತ್ರಿಸುತ್ತದೆ (ರಚಸ್ಮ. ೫೫). [ಸೆರೆ೩ (< ಸೆಱೆ೨) + ಆಳ್೩]

ಸೆರೆಯಾಳು 'ಸೆರೆಯಾಳ್' ನೋ.

ಸೆರೆಯಿಂಗು (ನಾ). ಒಂದು ಬಗೆಯ ಇಂಗು: ಪುರಮಿಂಗು . . . ಪಂಚಭಾಗಮೇರಂಡಫಲಂ ದೊರೆಕೊಳೆ ಭಾಗಕ್ಷೀರದೊಳರೆದಾಸವದಿಂದಂ ಪೊರೆಯ ಸೆರೆಯಿಂಗಕ್ಕುಂ (ಲೋಕೋಪ. ೭-೬೯). "ಅಡುಗೆಯ ಇಂಗು" (ಲೋಕೋಪ. ೬೫೫).

[ಸೆರೆ೨ + ಇಂಗು೨]

ಸೆರೆವಿಡಿ 'ಸೆಱೆವಿಡಿ' ನೋ.

ಸೆರೆವಿಡು (ಕ್ರಿ). ನರವನ್ನು ಕತ್ತರಿಸು: ಉರಗಂ ಕೊಂಡಲ್ಲೀ ನಾಲ್ಕೆರಲನಿತಂ ಕಳೆದು ಕಟ್ಟ ಮೇಗಂ ಬೇಗಂ ಸೆರೆವಿಡುಗೆ ಸುಡುಗೆ (ಕಾವ್ಮಾವ. ೨೭೭); ಸುಡುವೊಡಮೆತ್ತಾನುಂ ಸೆರೆವಿಡುವೊಡಮೇಗೆ(ಗಿ)ಟ್ಟುದೆಂದು ನೆಗಟ್ಟುದಯುಕ್ತಂ (ಅಶ್ವಶಾ. ೧೦-೬೦).

[ಸೆರೆ೪ + ಬಿಡು೧]

ಸೆರೆವೀಗು (ಕ್ರಿ). = ಸೆರೆಬಿಗಿ: ಘನಸಂಕ್ಲೇಶಕಲಾಪಮೆಯ್ದೆ ಸೆರೆವೀಗಲ್ಕಂಠದಿಂ ವಿಹ್ವಲಸ್ವನಮೆಯ್ದುರ್ದು (ಕುಸುಮಾ. ೧-೪೩). [ಸೆರೆ೪ + ಬೀಗು೨]

ಸೆರೆಹಿಡಿ 'ಸೆಱೆವಿಡಿ' ನೋ.

ಸೆರ್ಕು೧, ಸೆಕ್ಕು೧ (ಕ್ರಿ). ೧. ಒಳಸೇರಿಸು; ಸಿಕ್ಕಿಸು; ತುರುಕು: "ಸೆರ್ಕು—ವಸ್ತ್ರಾಂತರಪ್ರವೇಶೇ (ಸೆಕ್ಕು)" (ಶಮಧಾ): ನಿಲಿಯಂ ತತ್ಕಾಂಚಿಯೊಳ್ ಸೆರ್ಕಿ . . . ನಿಂದೊಪ್ಪಿದರ್ (ಹಾಂತಿಷ್ಣು. ೪-೨೨೧). ಸೆಕ್ಕು೧: ೧. ಮುಂಜೆಱಗನೊಯ್ಯನೆ ಸೆಕ್ಕ (ರಶಕು. ೧೨-೩೭); ಮೊನೆಮುಂಜೆಱಗನಳವಡೆ ಸೆಕ್ಕಿ ಸುತ್ತಿನೊಳಱುಕಿ (ಕುವಾದ್ಯೂ. ೧೭-೧೯). ೨. ನೆಡು; ನಾಟು: ಆ ಬಸವನೊಂದು ದಿನಂ ಸೋಮಶರ್ಮನ ಮನೆಯ

ಬಾಗಿಲೊಳ್ಪಂದಿರೆ . . . ಪಿಡಿತಂದವಜಿ ಕೋಡೊಳ್ ಸಕ್ಕಲಂದಿನ ದಿನಂ [ಪಾಠಾಂ. ಸಿಕ್ಕೆಲದಿನದಿಂ] ಮೊದಲಾಗಿ (ಪುಣ್ಯಾಸ್ರ. ೩-೭೮ ವ); ಸರಳ ಪುನರಪಿ ಸವರಿ ಸಿಕ್ಕಿದ ನೊಡಲೊಳಂಬುಗಳ (ಕುಮಾರೋದ್ಭ. ೧೮-೨೭);ಉರದೊಳಗೆ ಸಿಕ್ಕಿದಂ [ಪಾಠಾಂ. ಸೇರಿಸಿದ] ಸರಳ್ಗಳಂ (ಚಿಬಪ್ರ. ೩೯-೮); ರಾವುತರ ಮೈಯಲಿ ಬಲು ಸುರಗಿಗಳನು ಸಿಕ್ಕಿದರು (ಕಂಚಿವಿ. ೬-೭೮). ೩. ಹೊಂದಿಸು; ಜೋಡಿಸು: ನನೆಯಂಬಂ ಬಿಸುಟಿಕ್ಕುಚಾಪಲತೆಯಂ ಬಾಟ್ಟೊಂಪದೊಳ್ಪಿಕ್ಕಿ (ಅನಂಪು. ೩-೫೧); ತೇರಿಗೆ ಕಾಡುಹೂ ತಂದು ಸಿಕ್ಕಿದರ ಚೆನ್ನ (ಪಂಚಾಮೃ. ೧). ೪. ಸಿಕ್ಕಿಕೊಳ್ಳು; ತೊಡರು: ಅಲದ ಬೀಳಲೊಳ್ ಸಿಕ್ಕಿದ ಗಾಲಿಯಂ ತೆಗೆದು (ದಶಕು. ೨-೬೧ ವ). ೫. ಹಿಡಿದಿಳಿ; ಜೀರು: ಜುಣುಗಿದಾಹವ ಸತಿ[ಪಾಠಾಂ. ಸಿರಿ]ಯ ಹಾರದ ಕುಣಿಕೆಯನು ಸಿಕ್ಕುವುದು ಸ್ವಾಮಿಯ ಋಣವ ತಿದ್ದುವುದು (ತೊರಾ. ೬-೪೫-೪೬).

[ದೇ. ॥ ತಮಿ. ಚೆರುಕು, ಚೊರುಕು; ಮಲ. ಚೆರುತು; ತುಳು. ಚುಚ್ಚು; ತೆಲು. ಚಿಕ್ಕು]

ಸೆರ್ಕು$_3$, ಸೆಕ್ಕು$_2$ (ನಾ). ಒಳಸೇರುವಿಕೆ; ಕುಗ್ಗುವಿಕೆ: ಎಮ್ಮ ಲವನಂ ಕೊಂಡು ಯ್ವನವಂ ಸೂರ್ಕು ಸರ್ಕಟ್ಟಿನೆಗಂ ಬಡಿದು ಪಿಡಿದಸುವೆರಸು ನಿನ್ನಡಿಗೊಪ್ಪಿಸದಿರೆ ನಿನ್ನ ಮುದ್ದಿನ ಕಂದನೆ! (ರಾಮಾಶ್ವ.೧೫೬-೪). **ಸೆಕ್ಕು$_2$**: ಹೊಕ್ಕುದಾ ಸಮಯದಲಿ ಸುಂಡಿಲ ಸೆಕ್ಕುಗಳ ಖಂಡೆಯದ ಗಜದಳ ಬಿಕ್ಕಲಿಳಿ ಬೆರಸಿದುದು ರಣರಥರಾಜಿ ಲೊಡೆಗಳ (ತೊರಾ. ೫-೬-೧೩). [< ಸೆರ್ಕು$_1$]

Δಸೆರ್ಕೆ 'ಸೆಕ್ಕೆ' ನೋ.

ಸೆಲ (ನಾ). (?): ತನುವಿನ ಸ್ವಲ್ಪಸುಖಕೆ ಸೆಲ ನುಡಿದಿಂತನುಸಾರಿಯಹರೆ ಪಾತಕಕೆ (ಜೀವಂಸಾಂ. ೧೪-೫೫); ಸಲೆ ಕನ್ಯಾಭಿಕ್ಷಕೆ ಸೆಲ ನಾವಿಲ್ಲಿಗೊಲಿದಯದಿದೆವು (ಜೀವಂಸಾಂ. ೧೬-೬೫); ಉಡೆನೂಲಂ ಪೊಳಿಲನೆ ಪಜೀವ ಸೆಲಂ ಬೇಡುವ ಭುಜಬಲಶಾಲಿಗಳುಗ್ರತೆಯಿನುಲಿವ ಕಲಕಲಮುಭಯವ್ಯೂಹದ ದೊರೆದೊರೆಗಳ ಬಳಸಿನೊಳುಣ್ಮೆದುದು (ಜಯಕಾ. ೬-೨೭). [?]

ಸೆಲಂದಿ, ಚೆಲದಿ, ಶಲದಿ$_1$, ಸೆಲದಿ (ನಾ). ಜೇಡರ ಹುಳು; ಜೇಡ: ಸೆಲಂದಿ ಪೊಸ ನೂಲಿಂ ನೆಯ್ದ ಪೊಂಬಟ್ಟೆಯಂ ತರ್ಕುಂ (ಶಬಶಂ. ೨-೭೩); ತಲ್ಲಿಂಗಾಗ್ರದೊಳ್ಪತ್ತಿ ಮೇಣ್ ಪರಿತರ್ಪೊಂದು ಸೆಲಂದಿಯಂ ಜವದಿನಾಗಳ್ಕಂಡು (ಸೃಷ್ಟಿ. ೯-೫೭). **ಚೆಲದಿ**: ಆ ಲಿಂಗದ ಮೇಲೆ ಕಸ ಬೀಳದಿರುವಂತೆ ಒಂದು ಚೆಲದಿ ಹುಳುವು ನೂಲಿನಿಂದ ಹಂದರವನ್ನು ನಿರ್ಮಿಸಿತು (ಪುರಾವಿ. ೨೩೩). **ಶಲದಿ$_1$**: ವರಶಲದಿಯಾಗಿ ಶಂಕರಪೂಜೆಗೈದು ಭಾಸುರಗಣನಿಕಾಯದೊಳು ಸಂದ ಕಳಚೆಂಗಪೆರುಮಾಳೆಯೆನಗೆ ಕೃಪೆದೋಱು (ಅಜಪು. ೪೦); ಶಿವನಿಗೆ ಪುಳ್ಕೆಂದು ಶಲದಿಯ ಮಂತ್ರಿಸಿದವ ನೆಲೆ ನಕ್ಕನಯನಾಜು (ಮೋಹಪು. ೨-೨೧೬); ಲಿಂಗದಂಗದೊಳು ಶಲದಿಗಳು ವ್ಯಾಪಿಸಲೆನ್ನ ಕಂಗಳೀಕ್ಷಿಸಲಾದವೇ ಶಿವಶಿವಾ (ಮಲ್ಲಚ. ೧೮-೯). **ಸೆಲದಿ** : ಸೆಲದಿಯ ಹೃದಯದಲ್ಲಿಯೇ ನೂಲುಂಟು (ಸರ್ವಜ್ಞ. ೫೦-೨೭೦); ಸೆಲದಿ ಈ ಪರಿಯಲಿ ತ್ರಿಕಾಲದೊಳಿಲಿದು ಭಜಿಸುತಮಿರಲು (ಬಸಪು. ೧೮-೪೦); ಲಿಂಗದಡದಂಗದೊಳ್ ಸಲದಿ ತತ್ತಿಯನಿಕ್ಕೆ (ಲಕ್ಷಪ. ೩೫-೨೬).

[ದೇ. ॥ ತಮಿ. ಚಿಲನ್ರಿ; ಮಲ. ಚಿಲನ್ನಿ; ತೆಲು. ಚೆಲಂದಿ, ಚೆಲದಿ, ಚೆಲಿದಿ, ಚೆಲ್ದಿ]

ಸೆಲಂಬೆ , ಸೆಲಬೆ, ಸೆಲಿಬೆ (ನಾ). ೧. = ಸೆಲಂದಿ: ತಿಲಸಂಯುಕ್ತಮನಾಗಳೆ . . . ಪೂಸಲೊಡಂ ತಾಂ ತೊಲಗುಗುಮಂತಾಕ್ಷಣದೊಳ್ ಸೆಲಂಬೆ(ದೆ) [ಪಾಠಾಂ. ಶಲಂಬೆ, ಸೀಲಂಬೆ]ಗಳ ವಿಷಕುಲಂ (ಏಮದ. ೧೩-೧೧೮). **ಸೆಲಬೆ** : ೨. ಜೇಡರಹುಳುವಿನ ಬಲೆ: ಕೆಲ ಕಾಯ ಸೆ [ಪಾಠಾಂ. ಸಿ]ಲಬೆಯ ತೆಱದಿ ತೆಳುಪಾಗಿ ಕೆತ್ತಿ (ಸೂಪಶಾ. ೨-೩೯). **ಸೆಲಿಬೆ**: ೨. ಮನೆಯ ತುಂಬಾ ಎಲ್ಲೆಲ್ಲೂ ಸೆಲಿಬೆ ಕಟ್ಟಿದೆ (ಡೂಪಿ).

[< ಸೆಲಂದಿ./ ತಮಿ. ಚಿಲಮ್ಬಿ]

ಸೆಲಗು (ನಾ). ಶಲಾಕೆಯ ಆಕಾರದ ಬಾಣ (?): ಮನ್ಮಥಂ ಚಿತ್ರಿತಶಾಖಾಲೇಖೆಯೊಳ್ಮೀಲಿಸಿದ ಸೆಲಗಿನಂಬಂ ಗೆಲಲ್ವಾಲ್ದುದಾಗಳ್ (ಮಲ್ಲಿಪು. ೬-೧೧೬); ಕುಸುಮ ಕಾರ್ಮುಕನ ಪೊಡೆಗೆ ಪದವಡಿಸಿ ಕಾಸಿ ಕಂದಿಸಿದ ಸೆಲಗಿನಂದಿನಲಗುಗಳಿವೆನಿಸಿ ಕಡುಗಂದಿ ಸೂಸಿದ ಪಾಸಿದೆಳೆದಳಿರ್ಗಳುಂ (ವರ್ಧಪು. ೫-೭೩ ವ). [?]

ಸೆಲದಿ 'ಸೆಲಂದಿ' ನೋ.

ಸೆಲದಿನೂಲ್ (ನಾ). ಜೇಡರ ಬಲೆಯ ಎಳೆ: ತವ ಸೆಲದಿನೂಲಿಂದಮರ್ಚಿದಭವನ ಮೇಲಣ ಪೂಜೆಯಂ ಕಳೆದು (ಬಸಪು. ೪೩-೩೮). [ಸೆಲದಿ (< ಸೆಲಂದಿ) + ನೂಲ್]

ಸೆಲದಿಪುಳು (ನಾ). ಜೇಡರಹುಳು: ಒಲಿದು ಶಿವನಂ ಪೂಜಪಡೆಯಲಿ ಸೆಲದಿಪುಳುವಾ ಲಿಂಗತನುವಂ ಪರ್ಬುತಿರಲು (ಬಸಪು. ೧೩-೧೯).

[ಸೆಲದಿ (< ಸೆಲಂದಿ) + ಪುಳು (< ಪುಱು)]

ಸೆಲಬೆ 'ಸೆಲಂಬೆ' ನೋ.

ಸೆಲವಿಕ್ಕು (ಕ್ರಿ). ಅಪ್ಪಣೆಮಾಡು; ಆಜ್ಞೆನೀಡು: ಸುರರೋಡುತಿರೆ ಕಂಡು ಕಾಮ ಹರನಿರದೊಡನ ಹರಗಣಕೆ ಸೆಲವಿಕ್ಕೆ ಮುಂಕೊಡರಾಕ್ಷಣಮೊಳು (ಚಿಬಪ್ರ. ೨೬-೨೧); ಲಕ್ಕಕುದುರೆಯನೆನ್ನೊಂದೆ ಲೌಡಿಗ ಸೆ[ಪಾಠಾಂ. ಶ]ಲವಿಕ್ಕೆಂದು ನೃಪತಿಯೊಳ್ನುಡಿವ ಎಕ್ಕಲರಾವುತ ಪೂಜಮಟ್ಟಸು (ಜಪಾಸಾಂ. ೧೧-೬೦). [ಸೆಲವು$_1$ (< ಸಲವ್ಮು) + ಇಕ್ಕು]

ಸೆಲವೀ (ಕ್ರಿ). ಅನುಮತಿಕೊಡು; ಅಪ್ಪಣೆ ನೀಡು: ಸುಗ್ಗಿಯುಮಾ ತಂಗಾಳಿಯು ಮಿರ್ವರುಂ ಸಜ್ಜುವಂ ಪಡೆದು ಚೌವಂದದ ದಟಕಂ ಸೆಲವಿತ್ತೊದಗೊಂಡು ಬರೆ (ಕಬ್ಬಕಾ. ೧೯೬); ದಿಕ್ಪಾಲಕರ್ ಮುಖ್ಯರಾದ ದೊರೆದೊರೆಗಳಂ ಕರೆದು ಸೆಲವಿತ್ತು ತ್ರಿಪುರಮಂ ಪರಿದ್ಮದಿ ಮುತ್ತಿದೊಳ್ಪೋಂಟೆಯಂ ಕೊಂಬುದೆನೆ (ಜಬಪು. ೪೨-೨೩); ಬಳಿಕನಿಬರೆಲ್ಲರಂ ಕರೆಸಿ ಹಂಸಧ್ವಜಂ ಸೆಲವಿತ್ತು ಫಲುಗುಣನ ತುರಗಮಂ ಪಿಡಿತಂದು (ಜೈಮಿಭಾ. ೧೦-೪೭). [ಸೆಲವು$_1$ (< ಸಲವ್ಮು) + ಈ$_3$]

ಸೆಲವು$_1$ 'ಸಲವ್ಮು$_2$' ನೋ.

ಸೆಲವ್ಮು$_2$ (ನಾ). ಸೆಲೆ; ನೀರು ಒಸರುವಿಕೆ ,— ಜಿನುಗುವಿಕೆ: ತುಂಬಿದೊಲುಮೆಯ ಬಾವಿ . . . ಬತ್ತದಿರಬಹುದು ಸೆಲವೇನು? (ಇಂಗಿತ. ೪೩-೧೫೯). [ಸೆಲೆ$_4$ + - ವ್ಮು]

ಸೆಲವ್ಮುಗೊಳ್ (ಕ್ರಿ). ಅಪ್ಪಣೆ ಪಡೆದುಕೊಳ್ಳು: ಸೆಲೆ ಬಡಿದು ಪಡೆಗಳಂ ಕೆಡಹುತಿರೆ ನಡೆತಂದು ಸೆಲವ್ಮುಗೊಂಡೂರ್ಮಿಳಾಕಾಂತನಂ ಪೆಱಗಿಕ್ಕಿ (ಜೈಮಿಭಾ. ೨೦-೫೬).

[ಸೆಲವ್ಮು$_1$ (< ಸಲವ್ಮು$_2$) + ಕೊಳ್$_1$]

ಸೆಲಿಬೆ 'ಸೆಲಂಬೆ' ನೋ.

ಸೆಲುವಾರದಮರ (ನಾ). ಒಂದು ಬಗೆಯ ಮರ: ಸೆಲುವಾರದ ಮರ, ಕರಿಬಸುರಿ (ಮೃಪಿಗಿ. ೩೭-೭೫೮). [? + ಮರ$_1$]

ಸೆಲೆ$_1$ (ಕ್ರಿ). ಪ್ರತಿಧ್ವನಿಯಾಗು; ಮರುಧ್ವನಿಯುಂಟಾಗು: ತುಕಾರಾಮ ನಾಮದೇವರಿಲ್ಲಿ ಕುಣಿದ ರಂಗುಲೆಯಂ ಸೆಲೆವಲ್ಲಿ ನಿನ್ನ ನಾಮಮದೆಯೊತ್ತುವನಲ್ಲಿ (ಗಿಂವಿಂ. ೭೩-೬); ಸೆಲೆಯುವುದು ಹುದುವನೊಳಗೊಂಡು ತಾನೆ ತಿಳಿಯಾಗಿ ಗುಂಭವಾಗಿ (ಹೃದಸ. ೫-೮). [ದೇ. ॥ ತಮಿ. ಚಿಲ್ಕೆ; ಮಲ. ಚಿಲೆ; ತೆಲು. ಚೆಲಾಗು]

ಸೆಲೆ$_2$ (ಕ್ರಿ). ತೇವದಿಂದ ಚರ್ಮ ಕೊಳೆತಂತಾಗು: ಅವನ ಪಾದ ನೀರಿನಲ್ಲಿ ಇದ್ದೂ ಇದ್ದೂ ಕಾಲೆಲ್ಲ ಸಲತರೂ . . . ಅವನಿಗೆ ಎಚ್ಚರಿಕೆಯಿರುತ್ತಿರಲಿಲ್ಲ (ಫಲಸಂ. ೧೬). [?]

ಸೆಲೆ$_3$ (ನಾ). ೧. ಶಬ್ದ; ಧ್ವನಿ: ನಗೆಯಮೃತದ ಜೀಯಾ ಕೇಳ್ನಿರಾಶಯಾ ಸೆಲೆಯಾ (ಗಿಂವಿಂ. ೬೬-೧೨); ಅದರ ತಲೆಯೆ ಕಾಣದೆ! ಅದರ ಸೆಲೆಯೆ ಕೇಳದೆ! (ಪಾರಿ. ೨-೨೭). ೨. ಪ್ರತಿಧ್ವನಿ; ಮಾರ್ದನಿ: "ಪ್ರತಿ ಶ್ರುತ್, ಪ್ರತಿಧ್ವನಿ - ೨ ಪ್ರತಿಧ್ವನಿಯ ಹೆಸರುಗಳು, ಅಂಬರೆ ಶಬ್ದದಿಂದ ಹುಟ್ಟುವ ಸೆಲೆ" (ಸಿದ್ಧಾಂತಿ. ೫೭); ನಿನ್ನಯ ಸೊಲ್ಲ ಸೆಲೆಯಿಂದ ಹಾಡುಲಿಯ ಬಲ್ಲುದೇನನ್ನ? (ಗಿಂವಿಂ. ೨೭-೬.). [< ಸೆಲೆ$_1$]

ಸೆಲೆ$_4$, ಶಲೆ, ಶಲೆ (ನಾ). ೧.(ನೀರು) ಒಸರುವಿಕೆ; ಜಿನುಗುವಿಕೆ: ಮೂಡಲ್ ಧಾರೆಯತ್ತಲ್ ಬರ್ಪ ಪಚ್ಚನೆ ಸೆಲೆಯಾ ಸೆಲೆಯಿಂ ಬಡಗಲ್ (ಅಚ್ಚುಮ. ೧೧-೧೬); ನೀರ ಸೆಲೆ[ಪಾಠಾಂ. ಸಿಲೆ, ಸೆರೆ]ಯಿದಱ ಮೇಲೆ ವಿಚಾರಿಸದೆ ನೃಪೇಂದ್ರ ಶಸ್ತ್ರವಿಕ್ಕಿದಡೆ (ಪುಣ್ಯಾಸ್ರ. ೨-೬೮); ಕಳನೊಳುದಕದ ಸೈವಳಿಯ ಸಲೆಯಱಿದು ಚೌಕಕೆ ಸೀಳಿದನು ನೆಲನ (ಕುಮಾರೋದ್ಭ. ೧೦-೨೮); ತಲೆಯೊಡೆದು ಬಲು ಸೆಲೆಯಾಗಿ ನೆತ್ತರು ಸೂಸೆ (ಉತ್ತರಾ. ೩೧-೧೦). ೨. ಮೂಲ; ಆಶ್ರಯ: ನಲುಮೆಯಾ ಸೆಲೆಯೆಲ್ಲ ಬತ್ತಿ ಹೋಗೆ (ಜಪಾಸ. ೬೯-೧೯); ಎಂಕು ಅವನ ಪ್ರೋತ್ಸಾಹದ ಸೆಲೆಯಾಗಿದ್ದಳು (ಒಡ್ಡೂ. ೧೭); ಅವುಗಳ ಅರ್ಥದ ಸೆಲೆಯನ್ನು ಶೋಧಿಸುವುದಕ್ಕೆ ಈ ಭಾಷೆಯ ಪರಿಜ್ಞಾನವು ಸಹಾಯಕವಾಗುವುದು (ಸಂಶೋಧ.೧೮೨). ೩. ಆಕರ; ಮೂಲ: ಅವರ ಕಾರ್ಯಸಾಹಸಗಳು ಮುಂದಿನವರಿಗೆ . . . ಸೆಲೆಗಳಾದವು (ಪ್ರಬಂಧ.೬೭); ಸಂತಸದ ಸೆಲೆಯ ತಾರ (ಮಾನಸ. ೨೫-೧೨).

೪. ಗುರುತು; ಕುರುಹು: ನಾನಾಗಲಿ ನಮ್ಮ ಹೆಣ್ಣಾಗಲಿ ಅದರ ಸೆಲೆ ಹೇಗೆ ಇದೆಯೋ ಕಾಣೆವು (ಮೂಮರಾ. ೧೦೬); ಅಯ್ಯೊ ದೊರೆಯೆ, ನಾನು ಇವರ ಒಂಟೆಯ ಸೆಲೆಯನ್ನೇ ಕಾಣೆ (ನೀತಿಚಂ. III, ೭). ೫. ಪ್ರವಾಹ; ಝರಿ: ಅಮೃತದ ಸೆಲೆಯಂತೆ ಅವನ ಉತ್ತರ ಹೊರಹೊಮ್ಮಿತು (ಶರಚ. ೩೦೫). ೬. ದನಗಳಿಗೆ ಬರುವ ಒಂದು ಬಗೆಯ ಬಾಯಿಹುಣ್ಣು: ಆ ಕರುವಿಗೆ ಸೆಲೆ ಆಗಿದೆ (ರೂಢಿ). **ಶಲೆ:** ೧. ಯಾವ ಭೂಮಿಯಂ ತೋಡಲು ಪಾತಾಳದಿಂ ಎಂಟು ದಿಕ್ಕಿನಲ್ಲಿಯೂ ನೀರು ಬರುವ ಶಲೆಗಳು ಕಾಣುತಲಿವೆಯೊ ಆ ಸ್ಥಳದಲ್ಲಿ ಕೊಳವಂ ತೋಡಿಸಬೇಕು (ಸೌಗಂಧಿ. ೪೩೦-೧೧); ನೀರು ಬಹಳವಾಗಿ ನೆಲದೊಳಗೆ ಇಂಗಿ ಶಲೆಗಳ ಮಾರ್ಗದಿಂದ ಮತ್ತೆ ಹೊರಗೆ ಬರುತ್ತದೆ (ಮುಂಬಯಿ. ೬-೧೬೬); ಈ ಹಳ್ಳಗಳ ದಂಡೆಗುಂಟ ಬಾವಿಗಳನ್ನು ತೋಡಿಸಿದರೆ ಸ್ವಲ್ಪ ಅಂತರದಲ್ಲಿಯೇ ಶಾಶ್ವತವಾದ ನೀರಿನ ಶಲೆಗಳು ಹತ್ತುವವು (ಏಚಾಭೂ. ೧೬). ೫. ಎತ್ತರವಾದ ಗುಡ್ಡದೊಳಗಿಂದ ಗುರುತರವಾದದ್ದೊಂದು ಶಲೆಯು ಹರಿದು ಬಂದು ಕುಂಡದೊಳಗೆ ಬೀಳುತ್ತದೆ (ಕಭಾಗ. ೫೭೪). **ಶೆಲೆ:** ೧. ನಮ್ಮ ರಾಯರ ಬಾವಿಗೆ ಕೃಷ್ಣಾನದಿಯ ಶೆಲೆಯೇ ಇರುವಾಗ ನದೀತೀರಕ್ಕೆ ಹೋಗಬೇಕೆಂಬ ಹಟವೇಕೆ? (ಹಬುಬ. ೩೦); ಎಲ್ಲಿಂದಲೋ ಆನಂದದ ಶೆಲೆಯೊಂದು ಹರಿದುಬಂದು ಹೃದಯದಲ್ಲಿ ಮಡುವುಗೊಂಡಂತೆ ಭಾಸವಾಗುತ್ತಿತ್ತು (ಮೇದಿಮ. ೧೬೫). ೬. ಕೆಲವು ಕಾಲಗಳಲ್ಲಿ ದನಕರುಗಳಿಗೆ ದೊಡ್ಡಜಾಡ್ಯ . . . ನರಡಿ ಶೆಲೆ ವಗೈರೆ ಅಂಟು ಜಾಡ್ಯಗಳು ವ್ಯಾಪಿಸಿರುವುದುಂಟು (ಗ್ರಾಮಾಕ. ೧೧೫). [< ಸೆಲ್ಕೆ₂/ ತೆಲು. ಜಿಲೆ, ಸೆಲೆ]

ಸೆಲ್ಕೆ₅ 'ಸಿಲೆ₁' ನೋ.

ಸೆಲ್ಕೆ₆ 'ಸಿಲೆ₂' ನೋ.

ಸೆಲ್ಕೆ₇ 'ಸೆರೆ₄' ನೋ.

ಸೆಲೆಕೊಡು (ಕ್ರಿ). ಪ್ರತಿಧ್ವನಿಸು; ಮಾರ್ದನಿಕೊಡು: ಆ ಮಾತು ಅವನ ಮನಸ್ಸಿನ ಗುಹೆಯಲ್ಲಿ ಸೆಲೆಕೊಟ್ಟಿತು (ರೂಪಶ.೪). [ಸೆಲ್ಕೆ₃ + ಕೊಡು₁]

ಸೆಲೆಯಾಡು (ಕ್ರಿ). ಒಸರು; ಸ್ರವಿಸು: ರೋಮರೋಮಗಳಲ್ಲಿ ಸವಿಜೇನು ಸೆಲೆಯಾಡುತ್ತಿದ್ದಿತು (ಅಪವಾ. ೧೭೭). [ಸೆಲ್ಕೆ₄ + ಆಡು₁]

ಸೆಲೆಯೊಡೆ, ಸೆಲೆವೊಡೆ (ಕ್ರಿ). ೧. ಒಸರು; ಸ್ರವಿಸು: ತಿಳಿವಿನ ಶೀತಲಜಲವು ಸೆಲೆಯೊಡೆದುಗುತಂದು ಮನವೆಂಬ ಕೊಳದೊಳು ತುಂಬುವುದು (ಇಂಚಾಪ. ೫-೫೩). ೨. ಮೂಡು; ಕಾಣಿಸಿಕೊಳ್ಳು: ಅನಿರ್ವಚನೀಯವಾದ ಪ್ರೀತಿ ಅವನ ಹೃದಯದ ಆಳದಲ್ಲಿ ಸೆಲೆಯೊಡೆಯಿತು (ಮೂರುದಾ. ೧೧೧); ಮಧ್ವಾಚಾರ್ಯರು ಕೃಷ್ಣನನ್ನು ಉಡುಪಿಯಲ್ಲಿ ನಿಲ್ಲಿಸಿದ ಮೇಲೆ ಭಕ್ತಿಪಂಥ ಸೆಲೆಯೊಡೆದು . . . ವ್ಯಾಪಿಸಿತು (ಭಾರದ. ೨೮೭). **ಸೆಲೆವೊಡೆ:** ೧. ಎಡೆವಿಡದೆ ನೇತ್ರಾಶ್ರುಗಳು ಸೆಲೆವೊ[ಪಾಠಾಂ. ಯೊ]ಡದೊಗುತ್ತಿರೆ (ಬಸಪು. ೧೮-೬೩). ೨. ಇರವಿನತ್ಯುಚ್ಚದೊಳು ಸೆಲೆವೊಡೆವುದಾನಂದ (ಮಲೆದೇ. ೨೩-೧). [ಸೆಲ್ಕೆ₄ + ಒಡೆ₁]

ಸೆಲೆವೇಱು (ಕ್ರಿ). ಒತ್ತಾಗಿರು; ದಟ್ಟವಾಗಿರು (?): ಮೂಡಿಗೆಯಂತೆ ಕೂಡೆ ಕಣ ನಟ್ಟ ಭಟರ್ ಸೆಲೆವೇಱಿದಂತೆ ಕೋಲ್ಮೂಡೆ ನಡಲ್ಕೆ ಬಿಟ್ಟ ಹಯಂ (ಮಹಾನೇ. ೧೨-೧೯೦). [ಸೆಲ್ಕೆ? + ಏಱು₁ (< ಏಱ್₁]

ಸೆಲೆವೊಡೆ 'ಸೆಲೆಯೊಡೆ' ನೋ.

ಸೆಲ್ಯ 'ಸೆಲ್ಲೆಹ' ನೋ.

ಸೆಲ್ಲ 'ಸೆಲ್ಲೆಹ' ನೋ.

ಸೆಲ್ಲಹ 'ಸೆಲ್ಲೆಹ' ನೋ.

ಸೆಲ್ಲಿಸು (ಕ್ರಿ). (?): ಮೇಲೆವಾಯ್ದು ಪಂಟಿಸುವ ಕೆಲಕ್ಕೆ ಸಾರ್ವ ಮಿರದಿಂ ಪೊಡೆ ದೆತ್ತುವ ಚಪ್ಪರಿಪ ಸೆಲ್ಲಿಸುವ ತಱುಂಬುವಬ್ಬುಳಿಪ . . . ದುಷ್ಟಮಪ್ಪ ಹಯಮಂ ಕುಡಲುಂ ಪಡೆದೀಯೆ (ಧರ್ಮಪ.೮-೧೩); ರಾವುತರು ಸೆಲ್ಲಿಸಿದರಗ್ಗದ ಮಾವುತರನಾನೆಗಳ ತುಡುಕಿ ಹಯಾವಳಿಯ ಬೀಸಿದರು (ಕುಮಾಶ. ೨-೧೫). [ಸೆಲ್ಲ್ಯ₀ + - ಇಸು₃]

ಸೆಲ್ಲೆ 'ಶಲ್ಯ₁' ನೋ.

ಸೆಲ್ಲೆಯ₁ 'ಶಲ್ಯ₁' ನೋ.

ಸೆಲ್ಲೆಯ₂ 'ಸೆಲ್ಲೆಹ' ನೋ.

ಸೆಲ್ಲೆವನೆ (ನಾ). (?): ಉತ್ಪಲದುಪಗೃಹಂಗಳಿಂ ಸೇವಂತಿಗೆಯ ಸೆಲ್ಲೆವನೆಗಳಿಂ . . . ಕಂಪಿನ ಕಡಾರಮುಂ ತಣ್ಪಿನ ತಾಣಮುಮೆನಿಸರ್ಪ ಲತಾಮಂಟಪಮಂ ಪೊಕ್ಕು (ಕುಸುಮಾ. ೧೨-೧೫೭ ವ). [ಸೆಲ್ಲ್ಯ₂ + ಮನೆ]

ಸೆಲ್ಲೆಹ, ಚಲ್ಲೆಹ, ಚೆಲ್ಲೆಯ, ಚೆಲ್ಲೆಹ, ಶಲ್ಲೆಯ, ಶಲ್ಲೆಹ, ಶೆಲ್ಲೆಹ, ಸಲ್ಲೆಯ, ಸಲ್ಲೆಹ, ಸಳ್ಳ, ಸೆಲ್ಕ, ಸೆಲ್ಲ, ಸೆಲ್ಲಹ, ಸೆಲ್ಲೆಯ₂ (ನಾ). ಒಂದು ಬಗೆಯ ಆಯುಧ; ಈಟಿ; ಶಲ್ಯ: ಲತಾವಳಿಯ ಸೆಲ್ಲೆಹಂಗಳ ಪೊಸಪಾದರಿಗಳ ಬಲ್ಲೆಹ ದೆಸೆವಂಕುರವೀಧಿಯ ವಜ್ರಮುಷ್ಟಿಯಂಗನೆಯರ್ಕಳ್ (ಗಿಂಕ. ೭-೫೪); ತೋಮರ ಪರಶು ಸೆಲ್ಲೆಹ ಚಕ್ರ ಸಬಳ ಮುಸುಂಡಿ ಲೌಡೆಗಳ . . . ಹೇರಾಳದಲಿ ರಂಜಿಸಿತು ರಣಭೂಮಿ (ಕುಮಾಕ. ೧೫-೩೨). **ಚೆಲ್ಲೆಹ:** ಚಲ್ಲೆಹ . . . ಜವದಾಡೆಗಳಂಬ ಬತ್ತಿಸಾಯುಧಗಳಿಂ (ವಿವೇಕ. ೨೬೨). **ಚೆಲ್ಲೆಯ :** ಚೆಲ್ಲೆಯದಿಂ ಕದುಕೇಱನಿಱಿದು (ಜಯಕಾ. ೧೩-೪೧). **ಚೆಲ್ಲೆಹ:** ಚಾಪ ಚೆ[ಪಾಠಾಂ. ಸೆ]ಲ್ಲೆಹ ಬಲ್ಲೆಹ ಕತ್ತಿಗೆ ಕಠಾರಾದಿಯಾದ . . . ಪಲವುಂ ತೆಱದ ಕೈದುಗಳಿಂದಿಱಿವ (ಧರ್ಮಪ. ೧-೮೬ ವ); ಕಕ್ಕಡ ಸಬಳ ಚೆಲ್ಲೆಹಂ ಸುರಗಿಯಿಂದ . . . ಪೋರ್ದರಾ ದನುಜಪತಿ ಹರಿಗಳು (ವೀಶ್ವಪ್ರ. ೨-೧೨-೪೦). **ಶಲ್ಲೆಯ:** ಶಲ್ಲೆಯ ಕೃಪಾಣ ತೋಮರ . . . ಮುಸಲಾದಿ ಪರಿಪರಿಯ ಕೈದುಗಳಿಂದೆ ಸುರಸೇನೆಯಂ ಪೊಕ್ಕು ಸವಱಿದರ್ (ಚಪುಪು. ೪೭-೩೪). **ಶಲ್ಲೆಹ:** ಜಡಿವ ಕಕ್ಕಡೆ ಶ[ಪಾಠಾಂ. ಸ]ಲ್ಲೆಹ ಬಲ್ಲೆಯಂಗಳತ್ಯುತ್ಕಟಮಾಗೆ ಬಂದು (ಪುಣ್ಯಾಸ್ರ. ೨-೫೬); ಸರಳ ಸರಿ ಶಲ್ಲೆಹ[ಪಾಠಾಂ. ಯ]ದ ಮಳೆ ಮುದ್ಗರದ ವೃಷ್ಟಿ (ತೂರಾ. ೩-೬-೯); ಹರಿಗೆ ಪಟ್ಟಿಯ ಶೂಲ ಶಲ್ಲೆಹ ಭಲ್ಲೆಯ ಬಲವಂತೆಯರ ಎಲ್ಲರ ತಱುಬಿ (ಮೋಹಶ . ೩೩-೩೯). **ಶೆಲ್ಲೆಹ :** ಕೊಂತ ಕೋದಂಡ ಶೆಲ್ಲೆಹ (ರುಕ್ಮಾಂಗ. ೧೩-೩೧). **ಸಲ್ಲೆಯ :** ಸಾರೆ ಬರೆ ಬರೆ ಕಂಡನಲ್ಲಿ . . . ಹೊದೆಯಂಬು ಚಾಪ ಕಠಾರಿ ಸಲ್ಲೆಯ[ಪಾಠಾಂ. ಹ] ಸಬಳಗಳ (ಕುಮಾಅ. ೬ರಾ. ೧೧-೪೬). **ಸೆಲ್ಲೆಹ:** ಕವಣೆ ಕಡಿತಲೆ ಸೆಲ್ಲೆಹವು ವರಶೂಲ ಪಟ್ಟಸದಿಂದಲಿಡುತಿರಲು (ಕೌಶಿರಾ. ೪೨-೧); ಠೆಕ್ಕೆಯು ಬೀಳೆ ಕತ್ತರಿಸಿ ಧಿಕ್ಕನೆ ತೂಗಿ ಸೆಲ್ಲೆಹದೊಳಿಟ್ಟನು (ನಾಗಚಂ. ೧೫ -೭೮). **ಸಳ್ಳ :** 'ಅಭಿಮಾನಸಳ್ಳ' ಪರಾ. **ಸೆಲ್ಕ :** ಹಲಗೆ ತೋಮರ ಸೆಲ್ಕ ಕರವಾಳು (ದೇವಾಂಪು. ೩-೨೦೧). **ಸೆಲ್ಲ:** ಕರಯುಗ್ಮದಿಂ ಕಱ್ ದ ಭಲ್ಲದ ಸೆಲ್ಲದ ಪಿಂಡಿ ವಾಳದ . . . ಸರಿಯಂ ಶರಾನಿಳವಿಘಾತದೆ ತೂಳ್ದಿದಂ (ವರ್ಧಪು. ೮-೫೮); ಗದಾದಂಡ ಸೆಲ್ಲ ಸಬಳ ಕುಂತ ಕಕ್ಕಡೆ ಕಟಾರಿ . . . ಪಟ್ಟಿಯ ಪ್ರಮುಖ ಬತ್ತಿಸಾಯುಧಭಯಂಕರರ್ ಪರಿತಂದು (ಮಹಾನೇ. ೧೨-೨೩ ವ). **ಸೆಲ್ಲಹ:** ಸಬಳದ ಸೆಲ್ಲಹದ ಕುಂತದ . . . ಭಿಂನಣದೊಳು (ಸೌಇ. IX - i, ೩೪೩-೨೦; 1226); ಸಕುತಿ ಸೆಲ್ಲಹ ಪರಶು ಕವಿದವು (ಕುಮಾದ್ರೋ. ೫-೮); ಸುರಗಿ ಸೆಲ್ಲಹ ಚಕ್ರ . . . ಗದಾಘಾತಂಗಳಿಂ ಗಾಯಂಬಡೆದು (ಸಕವ್ಯ. ೨). **ಸೆಲ್ಲೆಯ₂:** ಭರದೆಸೆವ ಹೊಗರಂಬಿನಿಂದಿಡುವ ಸೆಲ್ಲೆಯದಿ ಶಿರವುಡಿಯೆ (ಸಾಳ್ವಭಾ. ೨೫-೧೩); ಸೆಲ್ಲೆಯ ಬಲ್ಲೆಯ . . . ಬಾಣಾದಿ ರಾಜಿಸುವ ಬತ್ತಿಸಾಯುಧಂಗಳಿಂದಿಱಿದು (ಚಪುಪು. ೫೬-೪೩).

ಸೆಲ್ಲೆಹವಾಗು = (ಆಲಂ) ಈಟಿಯಿಂದ ಚುಚ್ಚಿದಂತೆ ಕಠಿನವಾಗು: ಧರ್ಮಪುತ್ರನ ಕಿವಿಗೆ ಸೆಲ್ಲೆಹವಾಯ್ತು ರಣರೌರವದೊಳು (ಕುಮಾದ್ರೋ. ೧೧-೧). [< ಸಂ. ಶಲ್ಯ]

ಸೆವೆ (ನಾ). (?): ಭಣ್ಣಿಗೆ ದಣ್ಣಿಗೆ ವೊಂದು ಸೆವೆಯಯ್ದು ಹತೆಯೆರಡರ್ಕಂ ದಣ್ಣಿಗೆ ವೊಂಡು[ದು] ಸೆವೆಯೆರಡು (ಎಇ. XIX, ೩೪-೩೨; 1135). [?]

ಸೆಳಕಿ 'ಸಲಗೆ₂' ನೋ.

ಸೆಳಕು (ನಾ). ೧. ಎಳೆತ; ಆಕರ್ಷಣೆ: ನಿನ್ನ ದಾರಿಯಲೆಲ್ಲ ಕಾರ್ತಿಕೋತ್ಸವವಿರಲು ಬಗೆಬಗೆಯ ರಾಗದಲಿ ಸುಳಿದಿತ್ತು ಸೆಳಕು (ಪಿಪಾಸ. ೪-೧೦); ಅಂತಃಕರಣದ ಮೊದಲ ಸೆಳಕು ಒಮ್ಮೆ ಇಳಿದ ಮೇಲೆ ತನ್ನ ಕುರಿಮರಿ ಇಷ್ಟು ಚಿಕ್ಕದು ಹೇಗಾಯಿತು ? ಎಂದು ಕೇಳೋಣವೆನ್ನಿಸಿತು (ನಡೆದಾ. II, ೯೯೨); ಇಂತು ನಿಸ್ವಾರ್ಥಹೃದಯಿಯಾಗಿ ದುಡಿಯುತ್ತಿರುವಾಗ ಈಗ ಈ ಸ್ವಾರ್ಥದ ಸೆಳಕು ಹುಯಿಲೆಬ್ಬಿಸಬೇಕು ? (ರತ್ನಧ್ವ. ೯೩). ೨. ಮಿಂಚಿನಂತೆ ಹೊಳೆಯುವ ಕಿರಣ: ಎದ್ದು ತಿಂಗಳಿನ ಸೆಳಕುಗಳನ್ನು ಹೊರಗೆ ದಬ್ಬಿ ಕಿಡಕಿಯ ಬಾಗಿಲುಗಳನ್ನು ಹಾಕಿಕೊಂಡು ಮಲಗಿದೆ (ಚಿಂದುಟಿ.೧೮) ೩. ಕೋಲಿನಂತೆ ಮೂಡಿ ಒಂದು ಕ್ಷಣ ಕಣ್ಣು ಕೋರೈಸುವಿಕೆ: ಒಂದೊಂದು ಘನವಾದ ವಿಚಾರ

ಮಿಂಚಿನ ಸೆಳಕಿನಂತೆ ಹೊಳೆಯುತ್ತದೆ (ಕಲ್ಯೋಲ. ii ,ಮುನ್ನುಡಿ). ೪. ಒಂದು ಸಲಕ್ಕೆ ಆಗುವಷ್ಟು; ಒಂದು ಹದ: ಆಗಲೆ ಒಂದು ಮಳೆಯ ಸೆಳಕು ಹೊಡೆದು ಹೋಗಿತ್ತು (ರಕ್ತಧ್ವ. ೧೧); ಒಂದೆರಡು ಸೆಳಕು ಮಳೆ ಬಿತ್ತು (ಮಣ್ಣುಹ. ೧೫೯); ಬಳುಕಿ ಬಾಗುವ ಮಳೆಯ ಸೆಳಕುಗಳ ಸೇವಿಗೆಯ ಸಿವುಡು ಕಟ್ಟಿಡು (ನೆಲಮು. ೧೬-೪). ೫. ಸ್ಪರ್ಶ; ಸೋಂಕು: ತಮ್ಮ ಮಾತಿನಲ್ಲಿ ಎಲ್ಲಿಯೂ ಅವಿನಯದ ಸೆಳಕಿಲ್ಲವೆಂಬ ಅರಿವಿದ್ದರೂ . . . ಅಳುಕಿ (ಚಿತಂದಾ. ೫). ೬. ಹೊಡೆತ; ಪೆಟ್ಟು: ಕೊಡು ಇವನಿಗೆ ನಾಲ್ಕು ಬಾರಕೋಲಿನ ಸೆಳಕು (ಮೋಮ. ೧೦). ೭. ಪರಿಣಾಮ: ಆಕೆ ಕೂಗಿಕೊಂಡಳು; ಮಂದಿ ಕೂಡಿತು; ಓಡಿಹೋದರು. ಇದರ ಸೆಳಕು ಮರುದಿನ ಬಡಿದುಕೊಂಡಿತು (ಪ್ರಮಾಶ್ರ. ೨೦೧). ೮. ಶೀತದಿಂದ ಉಂಟಾಗುವ ಸ್ನಾಯುವಿನ ಬಿಗಿತ: ಆಕಾಶವೆಲ್ಲವೂ ಹನಿ ಮೋಡಗಳಿಂದ ಮುಚ್ಚಿ ಗಾಳಿಯನ್ನು ಮಂಜಿನಿಂದ ತುಂಬಿಬಿಟ್ಟಿತು. ಚಳಿ ಸೆಳಕುಗಳು ಮೈಗೆ ಉಗ್ಗಹತ್ತಿದವು (ರಕ್ತಧ್ವ. ೧೩೨). [< ಸೆಳೆ$_1$]

ಸೆಳಕೆ 'ಸಲಗ್ಗೆ$_2$' ನೋ.

ಸೆಳಕೊಳ್ಳು 'ಸೆಳೆಗೊಳ್' ನೋ.

ಸೆಳತ 'ಸೆಳೆತ$_1$' ನೋ.

ಸೆಳಪು (ನಾ). ಸೆಳೆಯುವಿಕೆ; ಸೆಳೆತ: ಸುಂದರವಾದ ಆಕರ್ಷಕ ಮತ್ತು ಸೆಳಪುಳ್ಳ ವ್ಯಕ್ತಿತ್ವವಿದ್ದ . . . ಆದರ್ಶವ್ಯಕ್ತಿಯಾಗಿದ್ದರು (ಸಂಗೀತ. ೧೨೦). [ಸೆಳೆ$_1$ + - ಪು$_2$]

ಸೆಳಮೆ (ನಾ). = ಸೆಳಪು: ಕಾವಾಗಿ ಬೆಳಕಾಗಿ ಮಿಂಚಾಗಿ ಸೆಳಮೆಯಲಿ ತಾನು ವಿಶ್ವಂಕರ್ಷ ಪವನವಾಗಿ (ಪ್ರದಸ. ೪೮-೫). [ಸೆಳೆ$_1$ + - ಮೆ$_1$]

ಸೆಳವಲ (ನಾ). ಒಂದು ಊರಿನ ಹೆಸರು: ಸ್ವಸ್ತಿಶ್ರೀ ಸೆಳವಲದ ಶಾಲೆಯುಂ ಸೊಡರುಂ ಕೊಟ್ಟುದು ಆಚನ್ದ್ರಾರಕ್ಕಂ ಕಾವೊನ್ (ಎಕ. VII, ಶಿಕಾರಿ. ೪೫-೩೨; ೫೦).

[?]

ಸೆಳವು (ನಾ). ೧. ಪ್ರವಾಹದ ಎಳೆತ,— ಸೆಳೆತ: ಅವನು ಸೆಳವಿಗೆ ಸಿಕ್ಕಿ ಹರಿದು ಹೋಗಿ ತಿರುಗಣೀ ಮಡುವಿಗೆ ಬಿದ್ದನು (ಮುಂಬಯಿ. ೪-೩೮); ಹೊನಲಿನಲಿ ಸಿಕ್ಕಿ ಸೆಳವಿನಲಿ ಸುಕ್ಕಿ (ಪಾಂಚಜ. ೨೫-೭); ಹೇಮಾವತೀನದಿಯಲ್ಲಿ ಸೆಳವು ಬಹಳ ಹೆಚ್ಚು (ತುರಾಯಿ. ೯೨). ೨. ಆಕರ್ಷಣೆ; ಸೆಳೆತ: ಆಕೆಗೆ ತೌರುಮನೆಯ ಸೆಳವು ಜಾಸ್ತಿ (ರೂಢಿ). ೩. ಶೀತದಿಂದ ಉಂಟಾಗುವ ನರಗಳ ಬಿಗಿತ,— ಸ್ನಾಯುಸಂಕೋಚನ: ನರ ಮಂಡಲದಲ್ಲೆಲ್ಲಾ ಸೆಳವು ಉಂಟಾಗಿ ಅವು ನಿಸ್ಸತ್ವವಾಗಿ ಸಾಯುತ್ತವೆ (ವಿಜ್ಞಾವಿ. ೧೩೮). ೪. ಒಂದು ಬಗೆಯ ರೋಗ; ಸೆಟೆರೋಗ: ಮಕ್ಕಳಲ್ಲಿ ಸೆಳವು (ಕನ್‌ವಲ್ಸನ್) ಇದರ ಮುನ್ಸೂಚಕವಾಗಿ ಬರಬಹುದು (ಕವಿಕೋ. I, ೮೨೭). [ಸೆಳೆ$_1$ + - ವು]

ಸೆಳವುರೋಗ (ನಾ).= ಸೆಳವು ೪: ಎಳೆಯ ಮಕ್ಕಳಿಗೆ ಶೀತ ಹೆಚ್ಚಾದರೆ ಸಾಮಾನ್ಯವಾಗಿ ಸೆಳವುರೋಗ ಬರುವುದುಂಟು (ರೂಢಿ). [ಸೆಳವು + ರೋಗ]

ಸೆಳವೆ (ನಾ). ಬೆತ್ತ; ಕೋಲು: 'ಕೈಸೆಳವೆ' ಪರಾ. [< ಸೆಳೆ$_4$]

ಸೆಳಸು$_1$ 'ಸೆಣಸು$_1$' ನೋ.

ಸೆಳಸು$_2$ 'ಸೆಣಸು$_2$' ನೋ.

ಸೆಳಹು (ನಾ). ಪ್ರವಾಹದ ಸೆಳೆತ,— ಎಳೆತ: ಹೊಳೆಯ ಬರವ ನೋಡಂಬಿಗ ಸೆಳಹು ಬಹಳ ಕಾಣಂಬಿಗ (ಶಿವಗೀ. ೧೩೧-೬೫೬). [ಸೆಳೆ$_1$ + - ಹು$_2$(< - ಪು$_2$)]

ಸೆಳಱ 'ಸಿಯಳಾಱ' ನೋ.

ಸೆಳಿಕೆ 'ಸಲಗ್ಗೆ$_2$' ನೋ.

ಸೆಳೆ$_1$ (ಕ್ರಿ). ೧. ಜಗ್ಗು; ಎಳೆ: ಕುಸುಮಸಂಕುಳಂ ಸುರಿಯೆ ಸೆಳವ ಸೆಳಿಗೊಂಬುಗಳಿಂ (ಆದಿಪು. ೯-೯೬); ಬೆನ್ನನೇಱಿ ಮಂಡೆಯ ಚಂಡಿಕೆಯಂ ಕರ್ಚಿ ಸೆಳವ ಸೋಗೆಯ ಮಱಿಯ ಮುದ್ದುತನಮಂ (ಅರ್ಧನೇ. ೧-೯೨ ವ); ಬಳಿಕ ತಿರುವಿಟ್ಟಾಗಲಸ್ತ್ರವ ಸೆಳೆದು ಬಿಲುವಿದ್ಯಾಚಮತ್ಕೃತಿಯಳವ ತೋಱಿದಡೆ (ಕುಮಾದ್ರೋ ೯-೯). ೨. ಆಕರ್ಷಿಸು: "ಸೆಳೆ -- ಆಕರ್ಷಣೇ, ಬಾಲಶಿಕ್ಷಾದಂಡೇ ಚ" (ಶಮಧಾ); ಸೆಳೆದು ನೋಡಿದ ದಿಟ್ಟ ತೆಮಟ್ಟನ್ನೆಗಂ ನುಣ್ಪಂ ತಿಣ್ಪುಮನೊಳಕೊಂಡು (ಶಾಂತಿಪು. ೯-೧೮೩. ವ); ಸಿಂಗರದತ್ತ ಮನಂ ಸೆಳೆದಾಭರಣಂಗಳ ಪೆಟ್ಟಿಗೆಯಂ ತರಿಸಿ (ಬಸಾ. ೮-೧೬); ನಿನ್ನಂತೆ ಪರಕವಿಯ ನಾಲಗೆ ಕಿವಿ ಮನಂಗಳಂ ಸೆಳೆವವಂ ಕವಿಯಲ್ತೆ ಭೂತಳದೊಳು (ಚಬಪು. ೧-೨೭). ೩. ಕೀಳು; ಹೊರತೆಗೆ: ಕೋಪಿಸುತೆದ್ದು ಸೆಳೆದು ಸಱನೆ ಸೀಳೆ (ನಂಬರಿ. ೭-೮೫); ಕೆಲದ ಖಡ್ಗವ ಸೆಳೆದು . . . ಕಟ್ಟಳವಿಯಲಿ ಹೊಕ್ಕನು ಭೀಮ (ಕುಮಾದ್ರೋ. ೧೩-೧೨); ಗಾಳಿ ಮೇಲುದ ಸೆಳೆಯಲಮ್ಮದು (ಸಾಳ್ವಭಾ. ೪-೧೬). ೪. ವಶಪಡಿಸಿಕೊಳ್ಳು: ತಳಕಾಡಂ ಸೆಳದನ್ತೆ ಕೊಂಗನೊಳಕೊಣ್ಡ (ಎಕ. II, ೩೮೪-೧೯; ಸು. 1135); ಹಯ ವೃಷಭಂಗಳಂ ಸೆಳೆದು ತಹನು ತತ್ತಡೆ ಹರಿಶ್ಚಂದ್ರನೃಪನು (ಹಚಕಾ. ೧-೪೪); ವೀರಸುತಸೋಮಾದಿ ನಿಖಿಳ ಕುಮಾರ ರಂಘವಣಗಳ ಸೆಳೆದುದು ಭೀತಿರಸಜಲಧಿ (ಕುಮಾಕ. ೨೦-೨೨); ಸಿಕ್ಕಲು ಸೆಳೆವರು ಸೆಳೆದೊಳಹುಗುವರು (ಮೋಪತ. ೩೮-೨೯).

ಸೆಳೆಸೆಳೆ (ದ್ವಿರುಕ್ತಿ): ಸಿಂಗಾಡಿಗಳ ತುಂಡಿಸಿ ನೇಜೆಯಗಳ ಲಂಗಿಸಿ ಸೆಳೆಸೆಳೆದಿಡುತ (ಕಂನವಿ. ೧೫-೪೭). **ಸೆಳೆದುಕೊಳ್, ಸೆಳೆದುಕೊಳ್ಳು** = ೧. ಎಳೆದುಕೊಳ್ಳು: ಈ ನೀರಂ ನೀಂ ಸೆಳೆದುಕೊಳೆ ವಿಚಾರಮದುಂಟೇ (ಉದ್ಯಟ. ೩-೩೦). ೨. ಸ್ವಾಧೀನಪಡಿಸಿಕೊಳ್ಳು; ವಶಪಡಿಸಿಕೊಳ್ಳು: ಕರ್ನಾಟಕರಾಜ್ಯವನ್ನು ಸೆಳೆದುಕೊಂಡನು (ನಾಡೋಜ. ೨೨).

[ದೇ. ∥ ತೆಲು. ಚೆಲುಕು]

ಸೆಳ್ಳೆ$_2$, ಸೆಣ್ಣೆ$_2$ (ಕ್ರಿ). ೧. ಕೋಲಿನಿಂದ ಹೊಡೆ; ಥಳಿಸು: ಎಷ್ಟೊಂದು ಹೇಳಿದರ ಹಟವ ನೀ ಬಿಡವಲ್ಲಿ ನಾಗಬೆತ್ತದಲಿ ಸೆಳೆದಾನ (ಲೋಕೋಗೀ. ೧೩೨); ಒಂದು ಕೋಲಿನ ತುಂಡು ತಕ್ಕೊಂಡು . . . ಮೂರು ನಾಲ್ಕು ಪೆಟ್ಟು ಸೆಳೆದಳು (ಉತ್ತಗ್ಗ. ೪೧). ೨. ಬಟ್ಟೆ ಮೊದಲಾದುವನ್ನು ಒಗೆ,— ತೊಳೆ: ಕೆಲಜನರ ದೋತರಗಳನ್ನು ಸೆಳೆಯುತ್ತಿದ್ದಳು (ರಕ್ತಧ್ವ. ೪೪); ಹಾವೊಂದು ಮೇಲಿನಿಂದ ತೂರಿಬಂದು ಅವಳ ಮುಂಗೈಗೆ ತಡೆಹಾಯುತ್ತಾ ಸೆಳೆಯುವ ಸೀರೆಯ ಮೇಲೆ ಬಿದ್ದಿತು (ಹೇಮಂತ. ೧೪೪). ೩. ಬಳುಕು; ನಡುಗು: ಅಳುಕುವ ನಡು ಘನಕುಚಯುಗನೊಳು ನಸುಸೆಳೆಯುತ್ತಮಿರ್ಪನಂ . . . ನೋಡಿದಳೊಲ್ದು ರೂಪವಿದ್ಯಾಧರನಂ (ಸುಕುಮಾ. ೧೧-೧೩). ೪. ಉಳುಕು; ನರ ಹೊರಳು: ಒಳದೊಡೆ ಸೆಳೆದೊಡೆ ಸಂದುಗಳುಳಿದೊಡೆ . . . ಶೀತಳಜಳಮಿಶ್ರಿತವಸ್ತ್ರವನಳವಟ್ಟರೆ ಸುತ್ತಲಿನಿಸು ಬೇನೆಗಳಬೀಗುಂ (ಲೋಕೋಪ. ೯-೧೬೬). ೫. [ಗಣಿತ] ಭಾಗಿಸು; ಭಾಗಾಹಾರಮಾಡು: ತವಿಸು, ಭಾಗಿಸು . . . ಸೆಳೆ, ಉಚ್ಛೈಂ ಇಂತಿನಿತುಂ ಭಾಗಂಗೊಂಬುದಕ್ಕೆ ಪೆಸರು (ವ್ಯವಹಾ. ೧೨). **ಸೆಣ್ಣೆ$_3$**: ೨. ಕೆರೆಯಲ್ಲಿ ಸ್ನಾನಮಾಡಿ ಪಂಚೆ ಸೆಣೆದುಕೊಂಡು ಬರುವುದು ಇಷ್ಟು ಹೊತ್ತಾಯಿತೆಂದ (ಚಂಗಾಳ್ವ. ೨೯೨); ಸೀರೆ ಸೆಣೆದು ಸೂರಿಗೆ ಕಟ್ಟಿದ್ದೆ (ಕಜಕಾ. ೧೮೧). ೩. ಬೀಸು; ಏಸೆ: ಅವಿರಳಮಾದ ತುಂಗಕುಚಭಾರದೆ ತೋಳ್ಸೆಣೆದಿಟ್ಟ ತಕ್ಕಿನೊಳ್ ಕವಣೆಯ ಗುಂಡು ಪಾಯವು (ಅನಂಪು. ೧-೮೨). [?]

ಸೆಳ್ಳೆ$_3$ (ನಾ). ೧. ಎಳೆತ; ಸೆಳೆತ: ಥಳಥಳಿಸುವ ಕಂಬು ಕಂಜಕುಟ್ಮಲ ಬಲುಸುಳಿ ಸೆಳೆತರೆ ತಿಳಿನೀರ ತಳೆದು . . . ಸರಸಿಯಂತಿಹರು (ಕಂನವಿ. ೨೪-೧೯). ೨. ಆಕರ್ಷಣೆ: ಟಾಂಗ ರಿಕ್ಷಾಗಳ ಸೆಳೆಗೊಳಗಾಗದೆ ನಿಂತೆ, ತಾಸಿನ ತವಗ್ಗದೆ (ಇಂಬಾಪ. ೧೦೩-೫). ೩. ಬೇಟೆಯಲ್ಲಿ ಪ್ರಾಣಿಗಳನ್ನು ಆಕರ್ಷಿಸಿ ಹಿಡಿಯಲು ತರಪೇತು ಕೊಟ್ಟಿರುವ ಪ್ರಾಣಿ: ದೀಹದ ಪ್ರಾಣಿ ಸಿಡಿ ಸೆಳೆ ಗಾಣ ಬೆಳ್ಳಾರ ತಡಿಕೆ ದೀವದ ಖಗಮೃಗಸಂತತಿಗೂಡಿ ನಡೆತಂದನಾ ವನಚರನು (ನೇಮಿಸಾ. ೨-೩೮). ೪. ದೋಚುವಿಕೆ; ಲೂಟಿ: ಒತ್ತಾಯದಿಂದೆ ದುರ್ಗಂಗಳ ಕೈಕೊಂಡರೊದಗಿದರ್ಸೆಳೆ ಸೂಱೆಗಾತುರದೊಳು (ಚೈಮಿಭಾ. ೧೦-೫೩). [< ಸೆಳೆ$_1$]

ಸೆಳ್ಳೆ$_4$, ಚಳ್ಳೆ$_3$, ಸೆಡ್ಡೆ$_4$ (ನಾ). ೧. ಕಂಬಿ; ಸರಳು; ಸಲಾಕೆ: ಕತ್ತುರಿಯ ಸೆಳೆಯನಳ್ಳಾಡಿದೊಂದಂದದಿಂ ವಾಸನೆಯಾದತ್ತಂಬಿನಂ (ಜಗವಿ. ೫-೮); ಗಿಳಿಯಂ ಸೆಳೆಯಲೆನುತ್ತವರೆತ್ತಿದ ತೆಳುವಳುಕಿನ ಸೆಳೆಯೋ (ಜಯಕಾ. ೧-೪೧); ಲಲನೆಯಾಕ್ಷಿಸೆ ಕಟಾಕ್ಷದ ರುಚಿ ಪಳುಕಿನ ಸೆಳೆಯತ್ತಿ ತೀವಿದಂತಾಯ್ತು (ಅನಂಚಿ. ೧-೮೦); ಅವನ ಕೈಯೊಳಗೆ ಬಂಗಾರದ ಸೆಳೆಗಳಿಂದ ಮಾಡಿದಂಥಾದೊಂದು ಪಂಜರವಿತ್ತು (ಮುಂಬಯಿ. ೫-೩೦೦). ೨. (ಮಕ್ಕಳನ್ನು ವಿದ್ಯಾಭ್ಯಾಸಕಾಲದಲ್ಲಿ ದಂಡಿಸುವ) ಬೆತ್ತ; ಕೋಲು: ಪೊಂಬೆತ್ತದ ಸೆಳೆಗೆ ತಳಿರ್ಮೂಡಿದಂತಾಗೆ (ಲೀಲಾವ. ೪-೭೬); ಸಿದ್ಧಂ ದಯೆಯಿಂದೆ ಕೊಟ್ಟ ಸೆಳೆಯಿಂ ಪುಲಿಯಂ ಮಿಗೆ ಪೊಯ್ಸುಳಿಂದೊಡೆ (ಸೌಇಇ. IX - i, ೩೨೯-೧೨; 1209); ತುಱುಗಿ ತೂಳುವ ಸಿಂಧ ಸೆಳೆ ಮಡಲಿಱಿವ ಝಲ್ಲರಿ (ಕುಮಾಕ. ೩-೧೩); ಅಲರ್ವಿಲ್ಲನ ಪಡಿಯಱತಿಯ ಕೈಯೊಳಗೊಪ್ಪುವ ಸೆಳೆಯಂತೆ ವಿರಾಜಿಸಿತು (ಜಯಕಾ. ೨-೪೭); ಸೆಳೆಗೆ ಹೆದರದ ಮಗು ಬಳೆಗೆ ಹೆದರೀತೆ? (ಗಾದೆ).

೩. ಸಣ್ಣರಂಬೆ: ವಕುಳದ ಪೂತ ಸೆಳಿಯ ಸೆಳವಿಲ್ಲಂ ಗೊಲೆಗೊತ್ತಿ ಪೊಸನನೆಯ ಪುಳುಂಬಂ ಪೊಸೆದು ಸಲಿಸಿ (ಅರ್ಜನ. ೫-೫೫ ವ); ಸೆಳಿಗೆ ಸೆಡವುದೆ ಭದ್ರಮದದಂತಿ (ಕುವ್ವಾಅ. ೬೦೧. ೧-೩೩); ಎಸೆಯೆ ಕರದೊಳು ಮಾಧವೀಲತೆಯಸಿಯ ಸೆಳಿ (ಹಮುರಾ. ೨-೬೬). (ಗು). ೪. ತೆಳುವಾದ; ತೆಳ್ಳಗಿರುವ: ನುಣ್ಪೊಗೆದ ಕದಂಪು ನೀಳ್ದಸಿಯ ಕಣ್ ಸೆಳಿಯೊಳ್ನಡು . . ಕರಮೊಪ್ಪರೆ (ಲೀಗಾವ. ೪-೭೭). **ಚಳೆ**$_3$: ೧. ಇನ್ನೇನು ಗಾಳದ ಚಳೆಯನ್ನು ಎಳೆದರೆ ಸೈಮಿನು ದಡಕ್ಕೆ ಬಿದ್ದು ಕೈಸೇರುತ್ತದೆ (ಕಾನೂಯ. ೫೧೦). **ಸೆಡೆ**$_1$: ೨. ನಾಯ ಬಾಲ ಸೆಡೆಯಂ ಕಟ್ಟಲ್ಕೆ ಚೆನ್ನಪ್ಪುದೇ (ಸೋಮೇಶ. ೪೭). [< ಸೆಳ್$_2$]

ಸೆಳಿಕೊಳ್ 'ಸೆಳಿಗೊಳ್' ನೋ.

ಸೆಳಿಪಾನೆ (ನಾ). ಮೇಜು, ಪೆಟಾರಿ ಮೊದಲಾದುವುಗಳಲ್ಲಿ ಸಾಮಾನುಗಳನ್ನು ಇಡಲು ಮಾಡಿರುವ, ಮುಂದೆ ಹಿಂದೆ ಸರಿಸಬಹುದಾದ ಖಾನೆ: ಅದರ ತಳಭಾಗದಲ್ಲಿದ್ದ ಸೆಳಿಖಾನೆಯಲ್ಲಿ ಹಲವು ಕಾಗದ ಪತ್ರಗಳಿದ್ದವು (ಪುನಕು. ೬೦೮): ಮೇಜಿನ ಎಲ್ಲ ಸೆಳಿಖಾನೆಗಳನ್ನೂ ಹುಡುಕಿ ಮೋಂಬತ್ತಿಗಳನ್ನು ತೆಗೆದು . . . ಹೊತ್ತಿಸಿದಳು (ಎಳಜೀ. ೭೨). [ಸೆಳಿ$_1$ + ಖಾನೆ]

ಸೆಳೆಗತ್ತಿ (ನಾ). ಒಂದು ಬಗೆಯ ಕತ್ತಿ; ಒರೆಯಲ್ಲಿಟ್ಟು ತೆಗೆಯಬಹುದಾದ ಖಡ್ಗ: ಮೊಳೆಗತ್ತಿ ಕೊಲ್ಲುತ್ತಿ ಕೊಂಕಣ ಬಿಡೆಗತ್ತಿ ಸೆಳೆಗತ್ತಿ (ರನ್ನಾಪು. ೩-೨೦೧); ಖಡ್ಗಂ ಕರಾಟೂರಿ ಕಕ್ಕಡಂ ಸಬಳ ಸೆಳೆಗತ್ತಿ ಕಡುಗತ್ತಿ . . . ಮೂವತ್ತೆರಡು ಪರಿಯ ಶಸ್ತ್ರಗಳಾಂತು (ಚಾಪು. ೫-೨-೪೩). [ಸೆಳಿ$_1$ + ಕತ್ತಿ]

ಸೆಳೆಗಾಲ (ನಾ). ಕಾಲನ್ನು ಎಳೆದೆಳೆದು ಹೆಜ್ಜೆಯಿಡುವವನು; ಕುಂಟ: ''ಕುಂಟಃ — ಸೆಳೆಗಾಲಂ'' (ಕಾಶಕ್ಕ. ೧೭). [ಸೆಳಿ$_1$ + ಕಾಲ್$_1$ + - ಅ್]

ಸೆಳೆಗೊಂಬು (ನಾ). ತೆಳುವಾದ ಕೊಂಬೆ; ಸಣ್ಣರೆಂಬೆ: ನಳತೋಳಿಂ ಸೆಳೆಗೊಂಬಂ ತೆಗೆದೊರ್ವಳ್ ವಿಳಾಸವತಿ ತಿಱ್ದೆಳಾವ್ಯನವಕಿಸಲಯಮಂ (ಆದಿಪು. ೧೧-೧೦೧); ಮೆಲ್ಲಲರ್ಗೊಲೆವ ಸೆಳೆಗೊಂಬುಗಳ್ (ಉಷ್ಕಲ. ೩-೪೯); ಸೆಳೆಗೊಂಬು ಸೊಂದಿಲ್ ಕವಲ್ದೊಂಬು ಕೊಂಬುಗಳ್ ಬಳಿದ ಗ್ರಂಥಿಗಳಿಸವ ಕುಂಭಸ್ಥಳಂ . . . ಆಗ ಕಂಗೊಳಿಸಿತಾ ಮಾಮರಂ ಸ್ಮರನ ಸೊಕ್ಕಾನೆಯೆಂಬಂತೆ (ಚಿಬಪು. ೪೬-೩); ಏನೀ ಮಾಮರದ ಸೆಳೆಗೊಂಬಿನೊಳ್ ಮೂಗುವಟ್ಟರ್ಪಯ್ (ರಾಮಾಶ್ವ. ೨-೧). [ಸೆಳಿ$_1$ + ಕೊಂಬು$_1$]

ಸೆಳೆಗೊಕ್ಕೆ (ನಾ). ಮರಗಿಡಗಳ ಕೊಂಬೆಗಳನ್ನು ಬಗ್ಗಿಸಲು ಬಳಸುವ ಕೊಕ್ಕೆ: ಭಾವೆಯೊರ್ವಳು ಸಣ್ಣ ಸೆಳೆಗೊಕ್ಕೆಯಿಂ ಕೊಯ್ವ ಪೂವುದರಲು ಮುಂದಲೆಗ (ಶ್ರೀಪಾಲ. ೫-೩೧). [ಸೆಳಿ$_1$ + ಕೊಕ್ಕೆ$_1$]

ಸೆಳೆಗೊಡು (ಕ್ರ). ಬೆತ್ತವನ್ನು ಕೊಡು; ಕೋಲನ್ನು ನೀಡು: ಜಗದ ಹೆಂಗಳ ಮಾಣಿಕವು ಸಿರಿಮಿಗುವ ಮಾಣಿಕಗಂಡಳೆಂಬುದ ಬಗೆದು ಸಖಿ ಸೆಳೆಗೊಟ್ಟಳು (ಸಾಳ್ವಭಾ. ೩-೩೩). [ಸೆಳ್ + ಕೊಡು$_1$]

ಸೆಳೆಗೊನೆ (ನಾ). = ಸೆಳೆಗೊಂಬು: ಅಡರು ಹೋ ಹೋ ನಿಲ್ಲು ಸೆಳಗೊನೆ ಪಿಡಿಯೆ ಮೇಲ್ಗೊನೆಗಳನು ಹಿಮ್ಮೆಟ್ಟು . . . ಎಂಬ ಪೆಣ್ಗಳ ನುಡಿ ಪೂಣ್ಮತೆಲ್ದೆಡೆಯ ವನಗಳ ಸುತ್ತುವಳಿಸಿನೊಳು (ನಾಗಚ. ೩೦-೬೦). [ಸೆಳ್ + ಕೊನೆ$_2$]

ಸೆಳೆಗೊಳ್, ಸೆಳಕೊಳ್ಳು, ಸೆಳೆಕೊಳ್ (ಕ್ರ). ೧. ಆಕರ್ಷಿಸಲ್ಪಡು: ಎಮ್ಮಯ ನಣ್ಪೆಂದಾನ್ ಸೆಳಗೊಂಡನ್ (ಬದ್ಧಪ್ರ. ೧೭-೩೪೦). **ಸೆಳಕೊಳ್ಳು**: ೨. ವಶಪಡಿಸಿಕೊಳ್ಳು: ಒಂದುಗೂಡಿದರೆ ಪ್ರಾಣವನು ಸೆಳಕೊಂಬುದು (ಕವಪು. ೨೧-೧). **ಸೆಳೆಕೊಳ್**: ೨. ಅಸಮಾಸ್ತ್ರ ತಾಯ ಮಗ್ಗುಲೊಳೊಱಗಿರಲು ರಕ್ಕಸ ಮಾಯದಲಿ ಸೆಳೆಕೊಂಡ (ಮೋಹತ. ೧೧-೨೪); ಮುದ್ದುಮಾತಿಂ ಪೊನ್ನ ಸೆಳೆಕೊಂಡು ಜಾಳಿಗೆಯನು ಕಟ್ಟು ಮಗಳೆ (ಕಂಸವ. ೬-೧೪೯). ೩. ಎಳೆದುಕೊಳ್ಳು: ಶಾಲೆಯ ಸೆಳೆಕೊಂಡು ಹೇಳದೋಡಿದ ಕೃಷ್ಣ (ಪುರಂದ. ೧-೯೧-೧); ತಲೆಯೆತ್ತೆ ಕೂದಲ ಸೆಳೆಕೊಳ್ವ ಮುಳ್ಳು (ಕಂಸವ. ೧೮-೪೭). [ಸೆಳಿ$_1$ + ಕೊಳ್$_1$]

ಸೆಳೆಗೋಲು (ನಾ). ತೆಳುವಾದ ಕೋಲು; ಬೆತ್ತ: ಗುರೂಪದೇಶವೆಂಬ ನೇಗಿಲಂ ಹಿಡಿದು ಅಂತಃಕರಣಚತುಷ್ಟಯವೆಂಬ ಪಶುವಂ ಕಟ್ಟಿ ಓಂಕಾರನಾದವೆಂಬ ಸೆಳಿಗೋಲಂ ಪಿಡಿದು (ಸರ್ವಜ್ಞ. ೧೦೫-೫೬೮); ಸೆಳಿಗೋಲು ಒಂದಟ್ಟಿಯ ಕೆರಹು ನಾಯಿಗಳ ಬಾಯ್ಕಟ್ಟು ಒಳಿಯಿಂದಿವು ಮೆಲೆಯೆ (ಬಸಪು. ೩೧-೪). [ಸೆಳ್ + ಕೋಲ್$_1$ (< ಕೋಲ್$_1$)]

ಸೆಳೆತ್ತ$_1$, ಸೆಳತ (ನಾ). ೧. ಎಳೆಯುವಿಕೆ; ಎಳೆತ. ೨. ನೀರಿನ ಪ್ರವಾಹದ ವೇಗ: ನದಿಯ ಮಧ್ಯಭಾಗದಲ್ಲಿ ನೀರಿನ ಸೆಳೆತ ಹೆಚ್ಚಾಗಿದೆ (ರೂಢಿ). ೩. ಆಕರ್ಷಣೆ: ನನಗೆ ಸೌಂದರ್ಯದ ಸೆಳೆತವಿದೆಯೆಂದೇ ನಾನದನ್ನು ನಿಷ್ಠೆಯಿಂದ ಪ್ರೀತಿಸುತ್ತೇನೆ (ಸ್ವತಿಚ. ೪೮೫); ಸ್ವಾಮಿಗೆ ಆಕೆಯ ಮೇಲೆ ಯಾವ ಬಗೆಯ ಸೆಳೆತವಿರದಿದ್ದರೂ ಮತ್ಸರವಿರಲಿಲ್ಲ (ಛೂಮಿತಾ. ೯). ೪. ಕಣ್ಣನ್ನು ಕೋರೈಸುವ ಕಾಂತಿ, —ಹೊಳಪು: ಬಲಬದಿಯಿಂದ ಮಿಂಚಿನ ಸೆಳೆತಗಳು ಚಿಮ್ಮುವುವು. ಕ್ರಮೇಣ ಈ ಸೆಳೆತಗಳ ಪ್ರಕಾಶವನ್ನು ಹೆಚ್ಚಿಸುತ್ತ ಹೋಗಬೇಕು (ಅಶ್ರಮೀ. ೨೮) **ಸೆಳೆತ**: ೩. ಅವನಿಗೆ ಕುಡಿತದ ಸೆಳೆತ ಜಾಸ್ತಿಯಾಗಿದೆ (ರೂಢಿ). [ಸೆಳಿ$_1$ + - ತ್ತ$_1$]

ಸೆಳೆತ್ತ$_2$ (ನಾ). ಹೊಡೆತ; ಪೆಟ್ಟು; ಏಟು: ''ತರ್ಜನಂ-ಸೆಳೆತಂ'' (ಕಾಶಕ್ಕ. ೧೪); ಮನೆಗೆ ತಡಮಾಡಿ ಹೋದರೆ ಬೆನ್ನ ಮೇಲೆ ಸೆಳೆತ (ನಿರಾಭ. ೪೯). [ಸೆಳ್$_2$ + - ತ್ತ$_1$]

ಸೆಳೆತರು (ಕ್ರಿ). ಎಳೆದು ತರು; ಹಿಡಿದು ತರು: ಆನೆಯ ಕೆಯ್ಯ ಕಬ್ಬಿನ ಕೋಲ ಸೆಳೆತಂದು (ಮೋಹತ. ೪೨-೫೪); ಧುರದೊಳು ವೈರಿಭೂಪಾಲರ ಖಂಡಿಸಿ ಹರುಷದಿಂದಲಿ ಸೆಳೆತಂದ ಬಿರುದಿನ ತುರಗಗಳನು (ಕಂಸವ. ೬-೨೫); ಮುನ್ನಡೆದ ಸುಕೃತದ ಫಲದ ಪಾಶವೆ ಪಿಡಿದು ಸೆಳೆತಂದಂತೆ ಬಂದನು ಕಡುವಿರಾಗತೆಯಿಂ (ಗಗತಾ. ೨-೧೯).

[ಸೆಳಿ$_1$ + ತರು$_1$ (< ತರ್)]

ಸೆಳೆತೆಗೆ (ಕ್ರಿ). ಎಳೆದು ತೆಗೆ; ಕಿತ್ತುಹಾಕು: ಕಾವಲರ ದಳವೆಲ್ಲ ಸುತ್ತುನಿಂದಿರಲವನ ಬಟ್ಟೆ ಸೆಳೆತೆಗದು, ಕಿಸುಸೇಲೆಯಂ ಹೊದಿಸಿ (ಗೂಳ್ಕೂಥಾ. ೯-೨೪೩). [ಸೆಳಿ$_1$ + ತೆಗೆ$_1$]

ಸೆಳೆನಡು (ನಾ). ತೆಳುವಾದ ಸೊಂಟ,: ಆಕೆಯ ಸೆಳನಡು ನೋಡಿದರ ಮನ ಮನಲ್ಲಾಡಿಸುಗುಂ (ಪಾಪು. ೩-೬೫); ನೀಳ್ದ ಕಣ್ಗಳುಂ ಸೆಳೆನಡುವಿನಲ್ಲಾಟಮಂ ಕಂಡು ಪೊಱವಾಱೆಂದೆಱಲಾರ್ತುವಿಲ್ಲ (ಕಬ್ಬಿಕಾ. ೭೮); ಮಡದಿಯ ಸೆಳೆನಡು ತನ್ನಯ ಬಡತನದಿಂ ಹರಿಯ ಮಧ್ಯಮಂ ನಯದಿಂ ಕೀಳ್ಬಡಿಸುತ್ತಿರ್ಪುದು (ದಶಕು. ೬-೩೭).

[ಸೆಳಿ$_1$ + ನಡು$_2$]

ಸೆಳೆನೀರು (ನಾ). ರಭಸವಾಗಿ ಹರಿಯುವ ನೀರು: ವೃತ್ತಸ್ತನದುನ್ನತ ಗುಣಭೂಷಣ ಪತ್ತಿಯವನ ಪರ್ಯಂತಮನದರ್ದೊಲವೆತ್ತು ನಿರೀಕ್ಷಿಸಲಾ ಮಡುವಿನ ಸೆಳೆನೀರೀ ತೆಱನಾಯ್ತು (ಜಯಾಕಾ. ೯-೩೨); ಸೆಳೆನೀರಿನ ಕುಲ್ಲೆಯೊಳೊಂದೇ ಭಲ್ಲೆಯೊಳೆಳೆ ಸಸಿಲೆಯ ನಿಕ್ಕಡಿಗೆಯ್ವೆ (ಪಚ್ಚಿದ. ೧-೧೯). [ಸೆಳಿ$_1$ + ನೀರು$_1$ (< ನೀರ್)]

ಸೆಳೆಬೆತ್ತ (ನಾ). ತೆಳುವಾದ ಕೋಲು, —ಬೆತ್ತ: ಗಳರವವೆಂಬ ಮಂತ್ರದ ಮಂತ್ರಿಸಿ ಜಡೆ ಸೆಳೆಬೆತ್ತದಲಿ ಮಿಗೆ ಬಡಿದು (ಕಂಸವ. ೨-೧೦೦). [ಸೆಳ್ + ಬೆತ್ತ]

ಸೆಳೆಮಂಚ (ನಾ). ಉಯ್ಯಾಲೆಮಂಚ; ತೂಗುಮಂಚ: ರಂಜಿಪ ರನ್ನದ ಸೆಳೆಮಂಚದ ಮೇಲೆ ಲೀಲೆಯಿಂ ಕುಳ್ದರ್ದಳ್ (ಹಂರಾಮಾ. ೩-೬೫); ಕೋಡಗ ಬಲ್ಲುದೆ ಸೆಳೆಮಂಚದ ಸುಖವ (ಬಸವ. ೯೮); ಸೆಳೆಮಂಚದ ಕಳನಿನದಂ ಬಳಸಿದ ಶಕುನಿಗಳ ನುಣ್ಪಾರಂ (ಗಿರಿಕ. ೪-೧೪೯); ರಮ್ಯಮಂದಿರದ ಸೆಳೆಮಂಚದೊಳ್ ಮಲಂಗಿರೆ (ಚಿಬಪು. ೪೬-೧). [ಸೆಳಿ$_1$ + ಮಂಚ]

ಸೆಳೆಮಾವು (ನಾ). ಮಾವಿನ ಮರದ ರೆಂಬೆ (?): ಸೆಳಮಾವಂ ನೆಮ್ಮಿ ಪೂಗಂಟಿನೊಳ್ ಪೊರದಲ್ಲಾಡುವ ತುಂಬಿವಾಡನೊಲವಿಂ ಕೇಳ್ವಂದದಿಂ ನಿಂದು (ಕಬ್ಬಿಕಾ. ೬೯).

[ಸೆಳ್? + ಮಾವು]

ಸೆಳೆಮಿಂಚು (ನಾ). ಕೋಲಿನಂತೆ ಮೂಡಿ, ಕಣ್ಣು ಕೋರೈಸುವ ಮಿಂಚು; ಕೋಲ್ಮಿಂಚು: ಪಳಚ್ಚನೆ ಸೆಳೆಮಿಂಚು ಕಣ್ಕೋರಿರೊಳುಳ್ಕೆ (ಶಬಶಂ. ೧-೪೬); ಮಳೆವಿಲ್ಲ ಹಿಡಿದುಡುಗಿ ಸೆಳೆಮಿಂಚ ಮುಸೆಮುಸೆದು (ಕಾಲೂರ. ೪೫-೬೦). [ಸೆಳೆ$_1$ + ಮಿಂಚು$_2$]

ಸೆಳೆರೂಪು (ನಾ). ಆಕರ್ಷಿಸುವ ಚೆಲುವು; ಮನಮೋಹಿಸುವ ಸೌಂದರ್ಯ: ಹರೆಯದಲಹೊಗರಿಂದ ಕಳಿತೀವಿ ಇಹರು ಸೆಳೆರೂಪಿನಿವರಿಗಾರೊಲಿಯದಿಹರು (ಗೋಕುನಿ. ೧೩-೨೬). [ಸೆಳಿ$_1$ + ರೂಪು]

ಸೆಳೆವಲೆ (ನಾ). ಪ್ರಾಣಿಗಳನ್ನು ಆಕರ್ಷಿಸಿ ಹಿಡಿಯುವುದಕ್ಕೆ ಅನುಕೂಲವಾಗುವಂತೆ ಪದಾರ್ಥಗಳನ್ನು ಅಥವಾ ಜಂತುಗಳನ್ನು ಅಳವಡಿಸಿರುವ ಬಲೆ: ಪಿಡಿವಲೆ ಸೆಳವಲೆ ಕಾಲ್ವಲೆ . . . ಬಲುವಲೆಗಾಱರು ಕೂಗಿ ಬೊಬ್ಬಿಡುತಲ್ಕೆದಿರು (ಮೋಹತ. ೧೯-೧೬). [ಸೆಳಿ$_1$ + ಬಲೆ$_1$]

ಸೆಳೆವಿಡಿ (ಕ್ರಿ). ಕೋಲನ್ನು ಹಿಡಿ; ಬೆತ್ತವನ್ನು ಹಿಡಿ: ಅಜ್ಜನಾಳಮಂ ಸೆಳೆವಿಡಿದಂಗ ಜನ್ಮ ಜಯಲಕ್ಷ್ಮಿಯ ಲಾಸಿಕೆಯಿಾಕೆಯೆಂಬಿನಂ (ಪಾಲ್ಗಪ್ಪ. ೪-೫೨); ಸೆಳೆವಿಡಿದು ತುಱುಗಾಹಿ ಪಶುಸಂಕುಲವ ತೆವಱುವವೋಲು (ಕುವಾದ್ಯೋ. ೩-೨೪); ಮಾಧವೀಲತೆಯ ಸೆಳೆವಿಡಿದ ಕೈ . . . ಸಿಂಗರಕೆ ಮಿಗಿಲಾಯ್ತವನಿಸುತೆಗೆ ಋತುಮತಿಯಾಗಲು (ಜೈಮಿಭಾ. ೧೪-೨೫).

[ಸೆಳೆ$_4$ + ಪಿಡಿ$_1$]

ಸೆಳೆಸೀರೆ (ನಾ). ಸೀರೆಯನ್ನು ಹಿಡಿದು ಎಳೆದಿದ್ದ ಸ್ಥಿತಿ: ಮಱದಿರ್ಕೆ ಸೆಳೆಸೀರೆಯಲಿ ಸತಿಯೊಡಲಲಕ್ಷಯವಿತ್ತು ತನ್ನನು ಮೆಱೆದ ಮಹಿಮಾರ್ಣವನ ಭಜಿಸುವುದು (ಕುವ್ಯಾಖ. ೧೭-೧೪). [ಸೆಳೆ$_1$ + ಸೀರೆ]

ಸೆಳೆಸುಂದು (ನಾ). (?): [ಸು]ದ[ಗ್ಗ]ನುಬಿದೋ(೦) ಸೆಳೆಸುನ್ದುಬಿ[ಪೋ]೦ ತನ್ದೆಯ ತಾಯ್ಯುರಾ ಸನ್ತಾನಮ(೦)ನುಳಿದು ಬಿಸುಟೋ (ಸೌಶಾ. XI-i, ೧೧-೫; 865). [?]

ಸೆಳ್ಳ, ಚಲ್ಲ್ಲ್$_2$, ಚಳ್ಳ, ಚಳ್ಳಿ, ಚೆಲ್ಲ್ಲ್$_2$, ಚೆಳ್ಳ, ಚೆಳ್ಳು$_1$, ಚೆಳ್ಳಿ, ಚೊಳ್ಳೆ, ಸೆಳ್ಳು$_1$, ಸೆಳ್ಳಿ, ಸೊಳ್ಳೆ$_3$ (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ: ಸೆಳ್ಳ ತಮಾಳದ ಪಾರಿವಾಳದ . . . ಕಾನನವೆತ್ತ ನೋಟ್ಪೊಡಂ (ಲೀಲಾವ. ೬-೨೧); ತಱಿದರೆದು ಸೆಳ್ಳತಿಗುಡಂ ಕಿಱುಕುಸಾಲೆಯ ಬೇರುಮಂ (ಅಶ್ವಶಾ. ೧೬-೫). **ಚೆಲ್ಲ್ಲ್$_2$**: ಮರಗಳು . . . ಗೋರಂಟಿ, ಚಲ್ಲ, ಮರುವ (ಸಮ್ಮನು. ೨೩೬). **ಚಳ್ಳ**: ಚಳ್ಳ (ಭೋಕರ) - ಮಧ್ಯಮ ತರದ ವೃಕ್ಷ . . . ತೋಟಿ, ಬೇರು, ಹಣ್ಣುಗಳು ಔಷಧಕ್ಕೆ ಬರುತ್ತವೆ (ಕಭಾಗ. ೩೯). **ಚಳ್ಳಿ**: ಸಾರತರಮೆನಿಪ ಬೇಳೆ (ಚಳ್ಳಿ)ಯ ಬೇರಂ . . . ಪೂಸೆ (ಖಮದ. ೧೨-೪೦); ಅಂಬಟೆಯರನೆಲ್ಲಿ ಚಳ್ಳಿ ಬಿಲ್ವದ ಮರ . . . ತಮಾಲಗಳ್ತುಂಬಿಹುವಾರಾಮದೊಳಗೆ (ಕಂಸವ. ೫-೮೯); ಚಳ್ಳೆ ಸುರಹೊನ್ನೆ ಕಿಂಶುಕ ಗೋಣಿ (ಸಿದ್ಧಕಾ. ೬-೧೭). **ಚೆಲ್ಲ್ಲ್$_2$**: ಚೆಲ್ಲ, ಚಿಳ್ಳೆ, ಮರುವಾಚಲು ಮರ, ಹೊಳೆದಾಸವಾಳ (ಮೃಜಿಾ. ೪೯-೯೭೩). **ಚೆಳ್ಳ**: ಬೇರೊಳ್ ಚೆಳ್ಳಮುಳ್ಳನೂಱುಗೆ (ಲೋಕೋಪ. ೬-೫೮). **ಚೆಳ್ಳು$_1$**: "ಶ್ಲೇಷ್ಮಾತಕಂ ಜಾತಿ ಚೆಳ್ಳಕ್ಕು [ಪಾಠಾಂ. ಜಳ್ಳಕ್ಕು, ಜೇಳಕ್ಕು]" (ಮಂಗರಾ. ೩೭-೨೨); ಚೆಳ್ಳು ತಿಲಕವಶೋಕೆ . . . ಕದಳಿಗಳಲ್ಲಿ ನೋಡಿವ (ತೊರಾ. ೩-೧-೨೯). **ಚೆಳ್ಳೆ**: ಚೆಳ್ಳೆಯಾ ಕಾಯಿ ನಿಂಬೆಯ ಹುಳಿಹಣ್ಣಾನು . . . ತಂದು ತಳೋದರಿಯರಿಕ್ಕಿದರು (ಕ್ಷಾನಚ. ೨-೧೩೫). **ಚೊಳ್ಳೆ**: ಚೊಳ್ಳೆಯ ಹಣ್ಣಿನ ಬೇರು ಔಷಧಕ್ಕೆ ಉಪಯೋಗವಾಗುತ್ತದೆ (ರೂಢಿ). **ಸೆಳ್ಳು$_1$**: ಅಮರ್ದುವಳ್ಳಿ ಸೆಳ್ಳಿಂಬವಱೊಳ್ ಭಾವಿಪ ಗುಡಂ . . . ಅಡಸಿ ಮೆಲೆ ವಿಷಾಪಹಮಕ್ಕುಂ (ಖಮದ. ೧೭-೫೧); ಬೇವತ್ತಿ ಸೆಳ್ಳಲವಂ ಸಂಪಗೆ . . . ಎಂಬೀ ಮರದುಜುಗಲಿಜುಂಬಿನಿಂದತಿಗಹನ ಮೆನಿಪ ಗಹನಾಂತರದೊಳಗೆ (ಪಾರ್ಶ್ವಪು. ೧೨-೫೮); ಅಂಬಟೆ ತುಂಬುರು ಬೇಲ ಸೆ[ಪಾಠಾಂ. ಸಿ]ಳ್ಳು ಸೀಗುರಿ . . . ಪಾದರಿಯಾದಿಯಾದ ಪೆರ್ಮರಗಳ ಕಾಡೊಳ್ಕಿತರುತಮಿರ್ದರು (ಪುಣ್ಯಾಸ್ರ. ೩-೭೩). **ಸೆಳ್ಳೆ**: ಶಿವಧರ್ಮದೊಳು ಮದ್ಯ ಮಾಂಸವೆಂದುಳ್ಳಿ ನುಗ್ಗೆಗಳು ಸೆಳ್ಳೆ, ಆ ಬಣಗೆನಿಪ ಹಂದಿ ಕೋಳಿಗಳು . . . ಇವಯೋಗ್ಯವೈ (ವೀಶೈಪು. ೭-೧೭-೨೩). **ಸೊಳ್ಳೆ$_3$**: ಮರಗಳು . . . ದಿಂಡಿಗ, ಬೂರಗ, ಹುರಗಲು, ಸೊಳ್ಳೆ (ಸಮ್ಮನು. ೨೩೬).

ಚಳ್ಳಿಹಣ್ಣು ತಿನ್ನಿಸು = ೧. (ಆಲಂ) ಮೋಸಮಾಡು; ವಂಚಿಸು: ಸಮಯ ನೋಡಿ ಪೋಲಿಸರಿಗೆ ಚಳ್ಳಿಹಣ್ಣು ತಿನ್ನಿಸಿ ಪರಾರಿಯಾದರು (ರೂಢಿ). ೨. ಸತಾಯಿಸು; ಹಿಂಸಿಸು: ನಿನಗೆ ಚಳ್ಳಿಹಣ್ಣು ತಿನ್ನಿಸಿಬಿಟ್ಟೇನು, ಜೋಕೆ (ರೂಢಿ).

ಸೆಳ್ಳಂಬಟೆ (ನಾ). ಚೆಳ್ಳು ಮತ್ತು ಅಮಟೆಕಾಯಿ: ಉಪ್ಪು ಸಾಸವೆಯ ಮಾಗಾಯ ಸೆಳ್ಳಂಬಟೆಯ [ಪಾಠಾಂ. ಸೆಳಬಟ್ಟೆಯ] ಹಪ್ಪಳಂ ಕುಂಬಳದ ಸಂಡಗೆಯ ಸೇವಗೆಯೆನಿಪ್ಪವಿವು ಮೊದಲಾಗಿ ನೊರೆಸಂಡಗೆಯನು ಹುರಿಸಂಡಗೆಯ ಬಾಳಕವನು . . . ಸಂವರಿಸಿ (ಸಿದ್ಧರಾ. ೮-೫೨). [ಸೆಳ್ಳ + ಅಂಬಟೆ]

ಸೆಳ್ಳಗೊಂಬು, ಸೆಳ್ಳಿಗೊಂಬು (ನಾ). ತುದಿಯ ಕೊಂಬೆ: ತೂಜಲ ಸೆಳ್ಳ [ಪಾಠಾಂ. ಳ್ಳಿ]ಗೊಂಬುವರಂ ನನೆ ಪೇೞ್ದಿದ ಮಾವು ಮೊಗ್ಗೆಯಿಂ ಪೇೞ್ದಿದ ಮಲ್ಲಿಕಾಲತೆ (ಅನಂಪು. ೧-೭೮). **ಸೆಳ್ಳಿಗೊಂಬು**: ಮಲೆವ ಮಲೆಯ ಪವನನಿಂದಮಲುವ ಸೆಳ್ಳಿಗೊಂಬಿನಿಂದಮುದಿರ್ವ ಕುಸುಮರಜದ ಧೂಳಿ (ಆಪು. ೨-೭ ರಗಳೆ).

[< ಸೆಳ್ಳು$_1$ + ಕೊಂಬು$_1$]

ಸೆಳ್ಳು$_1$ 'ಸೆಳ್ಳ' ನೋ.

ಸೆಳ್ಳು$_2$, ಚಲ್ಲು$_2$, ಚಳ್ಳು, ಚೆಳ್ಳು (ನಾ). ೧. ತೀಕ್ಷ್ಣವಾದುದು; ಮೊನಚಾದುದು: 'ಸೆಳ್ಳುಗುರ್' ಪರಾ. ೨. ಉದ್ದವಾದ ತೆಳುರೆಂಬೆ. ೩. ವ್ಯವಸಾಯದ ಒಂದು ಉಪಕರಣ: ಸೆಳ್ಳು, ರಾಫೋಲು, ಜಂತೆ, ಗುಂಟೆ, ಹತಿಗಣೆ, ಮೆಟ್ಟು (ಕನ್ನಬಾ. ೨೫). **ಚಲ್ಲು$_2$**: ೨. ನಾಯಿಗೆ ಚಲ್ಲು, ಕಾಗೆಗೆ ಕಲ್ಲು (ಗಾಡ). **ಚಳ್ಳು**: ೧. 'ಚಳ್ಳುಗುರ್' ಪರಾ. **ಚೆಳ್ಳು**: ೧. 'ಚೆಳ್ಳುಗುರ್' ಪರಾ.

[ದೇ. ॥ ತಮಿ. ಚವಳ್; ಮಲ. ಚವಳು; ಕೊಡ. ಜಳೆ; ತೆಲು. ಸೆಲ]

ಸೆಳ್ಳುಗುರ್, ಚಳ್ಳುಗುರ್, ಚಳ್ಳುಗುರು, ಚೆಳ್ಳುಗುರ್, ಚೆಳ್ಳುಗುರು, ಸಳ್ಳುಗುರು, ಸೆಳ್ಳುಗುರು (ನಾ). ಉದ್ದವೂ ಚೂಪೂ ಆದ ಉಗುರು; ಮೊನಚಾದ ಉಗುರು: ಮೊಗಮಂ ತಾವರೆ ಕಣ್ಗನುತ್ಪಲದಲಂ ಧಮ್ಮಿಲ್ಲಮಂ ಸೋಗೆ ಸೆಳ್ಳುಗುರಂ ಕೇದಗೆ . . . ಪೋಲ್ತು (ಆದಿಪು. ೬-೮೫); ಕಿಱುವರೆಯದ ಸೆಳ್ಳುರ್ವರಲ ಗಣಿಕೆಯರೆಸೆದರಲ್ಲಿ (ವಡ್ಡಾರಾ. ೮-೯೯); ಬೆಡಂಗಿನ ಬಾಲೆಯೊರ್ವಳ್ ತನ್ನ ಕಿಱುವರಲ ಸೆಳ್ಳುಗುರ್ಗೊನೆಯಿಂ ಮುಂಗುರುಳನೇಱೊತ್ತುತುಂ (ಗಾಮಾಶ್ಲ. ೪೮-೨೫). **ಚಳ್ಳುಗುರ್**: ಚಳ್ಳುಗುರ್ಗಳುಂ ಬೆಳಗನೀಯೆ (ಪ್ರಭುವಿ. ೫-೨೮). **ಚಳ್ಳುಗುರು**: ಬಿಲ್ಲು ಮುರಿದ ಹಸ್ತ ಚಳ್ಳುಗುರಿನ ಹಸ್ತ (ತೀರ್ಥಮ. ೧೩೫); ಕಂಬನಿಯ ತುದಿಯ ಚಳ್ಳುಗುರಿನಿಂ ಚಿಮ್ಮುತ್ತೆ (ನವಮೋ. ೬-೬೨). **ಚೆಳ್ಳುಗುರ್**: ನಳತೋಳ ಸಿರಿಸಮಂ ಚಿ[ಪಾಠಾಂ. ಸೆ]ಳ್ಳುಗುರ ಕೇತಕಿಯನಾನನದ ತಾವರೆಯನು . . . ಅವಯವದೊಳಳವಡಿಸಿ (ಜೈಮಿಭಾ. ೮-೨೧); ವಲ್ಲಕಿಯ ಚೆಳ್ಳುಗುರ್ಗೂನೆಗಳಿಂ ತಾಗಿಸುತೆ (ಪರಕು. ೭-೧೯). **ಚೆಳ್ಳುಗುರು** : ಕೇತಕಿಯೆಸಳ ಜಱಿವ ಚೆಳ್ಳುಗುರಿಂದ (ಕಂಸವ. ೯-೧೯೩); ವಾಕಾರವನೆ ಚೆಳ್ಳುಗುರಿಂದಲಿ ತಿದ್ದಿ ಏಕಾರವನೆ ಮಾಡಿದಳು (ಚಂದ್ರಹಾ. ೩-೩೪). **ಸಳ್ಳುಗುರು**: ಸನುಮತದೊಳಿರಲು ಸಳ್ಳುಗುರಿಂದಲವಳುರದ ಮೊನೆಜು ಚದನಿರಿದು ಕಬರಿಯ ಪಿಡಿದು ಬಾಯ ಚುಂಬನ ಗೈದ ಬಳಿಕ (ನವಮೋ. ೯-೪೨). **ಸೆಳ್ಳುಗುರು**: ಸೆಳನಡುವ ಸೆಳ್ಳುಗುರ ಬೆಡಗಿನ ಕಾಂತೆ ರಂಜಿಸುತಿರ್ಪಳಾ ಪುರದಿ (ನಳಚ. ೨-೨೪); ನಳತೋಳ ಸೆಳ್ಳುಗುರ ತೆಳುವಸುಜ . . . ಶಬರಿಯರು ಕಾಳರಾತ್ರಿಯ ಸಿರಿಗಳೆನಿಸಿದರು (ಸಾಳ್ವಭಾ. ೧೭-೭); ಮೆಲ್ಲದೆಗನುಲೇಪನವ ಸೆಳ್ಳುಗುರೊಳು ತೀಡಿ (ಕಂಸವ. ೨೫-೧೩೫). [ಸೆಳ್ಳು + ಉಗುರ್$_1$]

ಸೆಳ್ಳುಗುರು 'ಸೆಳ್ಳುಗುರ್' ನೋ.

ಸೆಳ್ಳೆ 'ಸೆಳ್ಳ' ನೋ.

ಸೆಳ್ಳಿಗೊಂಬು 'ಸೆಳ್ಳಗೊಂಬು' ನೋ.

ಸೆಱಂಗು, ಸೆರಗು$_1$, ಸೆಱಗು (ನಾ). ೧. ಸೀರೆಯಲ್ಲಿ ಹೊದೆಯುವ ಭಾಗ; ಸೀರೆಯ ಮೇಲುಹೊದಿಕೆಯ ಅಂಚು, — ತುದಿ: "ಸೆಱಂಗೆಂದು ಚೇಲಾಂಚಲಂ" (ಶಶಾ. ೭೩-೩೭); ನಱುಸುಯ್ಯಲರಿಂಗೆಱಗುವ ಮೞಿದುಂಬಿಗಳಂ ಸೆಱಂಗಿನಿಂ ಸೋವುತಂ (ಕಾದಂಬ. ೧೨೯); ಆ ಗೃಹಸ್ಥನ ಪೆಂಡತಿ ಮುಖದೊಳ್ ಸೆಱಂಗ[ಪಾಠಾಂ. ಸೀರೆಯ] ನಿಕ್ಕಿಕೊಂಡು ಮಗಂಗೆ ಮೊಲೆಯೂಡುವುದಂ ಕಂಡು (ಪಂಚತಂ. ೨೫೯-೨); ತೆಂಗಾಳಿಯನಂಶುಕದ ಸೆಱಂಗು ತೆಱಂಬೊಳೆಯೆ ಪಿಡಿಯಿನಿಲ್ದಿದಳದೊರ್ವಳ್ (ಜಗವಿ. ೧೪-೫೬). ೨. ಉತ್ತರೀಯ ಮುಂತಾದ ಮೇಲುಹೊದಿಕೆಯ ಅಂಚು, —ತುದಿ: ತನ್ನ ಮೇಲುದಱ ಸೆಱಂಗಿಂದಾತನ ತಲೆಯ ಮೇಲೆ ಕೆದಱಿರ್ದ ಭೀಮಸೇನನ ಚರಣರಜಮಂ ತೊಡೆದು (ಗದಾಯು. ೯-೨೨ ವ); ಉತ್ತರಿಗೆಯ ಸೆಱಂಗಿನಿಂ ಕಣ್ಣೀರ್ದೊಡೆದು (ಚಱಪ. ೬-೧೪೨ ವ). ೩. ಕೊನೆ; ಕಡೆ; ತುದಿ: ಪುದಿದೆಳಗಾಯ್ ಬಸಂತದ ಮೊದಲ್ ನೆಱೆದೊಪ್ಪುವ ದೋರೆಗಾಯ್ ಬಸಂತದ ನಡು ವರ್ಣ ಬಸಂತದ ಸೆಱಂಗನೆ (ಶಾಂತಿಪು. ೨-೧೪೩). **ಸೆರಗು$_1$**: ೧. ಕಣ್ಣಿನಲ್ಲಿರುವ ಬಿಸಿನೀರನ್ನು ತನ್ನ ಸೆರಗಿನಿಂದ ಒರಸಿದಳು (ವಾರಾಶ್ಲ. ೪೧). ೨. ಪಂಥ ಮಿಗಲಾ ಖಳರು ಸೆರಗಿನಲಾಂತು ವೀಳೆಯಗಳನು (ದೀವಮು. ೩-೩). ೩. ಮೇಲಕ್ಕೆ ಹತ್ತಿ . . . ನಿಡಿದಾದ ಕಾಡಿನ ಸೆರಗಿಗೆ ಬಂದರು (ಯೋಧಪ್ರ. ೬೩); ಘಟ್ಟದ ಸೆರಗಾದುದರಿಂದ ಒಳ್ಳೆಯ ಮಳೆ ಬೀಳುತ್ತಿದ್ದಾಗಲೆಲ್ಲ (ಪಾತ್ಪಲ್ಯ. ೧೩೦). ೪. ಸಹಾಯ; ಆಶ್ರಯ: ನಿನ್ನ ಸೆರಗನೆ ಹಿಡಿವಾಂ ಬಿಡೆ ನಿನ್ನ (ಗೀವಿ. ೧೪-೫೮). ೫. ಭಾಗ; ಶಾಖೆ: ಭಾರತಕ್ಕೆ ಈ ಸೆರಗಿನಿಂದ ಬಂದ ಜನರಲ್ಲಿ ಕ್ರೂರಿಗಳೂ ಇದ್ದರು, ಸಭ್ಯರೂ ಇದ್ದರು (ಭಾರದ. ೪೦೫); ಹೂಗ್ಲಿ . . . ಗಂಗಾನದಿಯದೇ ಒಂದು ಸೆರಗು (ಅಳಾ. ೧೦೬). **ಸೆಱಗು**: ೧. "ಸೆಱಗ ಚೇಲಾಂಚಲಂ" (ಕವಿಕಂ. ೧೭೫);

ಸೊಗಯಿಪ ದುಗುಲದ ಸೆಱಗಂ ಮೊಗಕ್ಕೆ ತೆಗೆದಾಗಳಿರದೆ ಗೋಳಿಟ್ಟಳ್ (ಕಾದಂಪೂ. ೯೫೮): ಉಟ್ಟ ಸೆಱಗು ಸೋಂಕಲು ನಿನ್ನ ಮುಟ್ಟು ಭೇದಿಸಿತು (ದೀಕ್ಷಾಬೋ. ೧೧೬-೭). ೨. ಉತ್ತರೀಯವಸನದ ಸೆಱಗಿನಿಂ ಸುರಿವ ಬಾಷ್ಪೋದಕದ ಬಿಂದು ಸಂದೋಹಮಂ ತೊಡೆದು (ಪುಣ್ಯಾಸ್ರ. ೧-೬೨ ವ); ಖಳಶಿರೋಮಣಿಗಳು . . . ಸುಲೋಚನದಲವ ಸೆಱಗಿನೊಳೊರಸಿ ನುಡಿದರು (ಕುಮ್ಮಿ. ೧೭-೮); ಪೊಂಬಟ್ಟೆಸೆಱಗಿನಿಂ ತೊಡೆದ ಲೋಚನವ (ಮೋಹತ. ೪-೮೭). ೪. ಆಲಿವು ಮಱೆದವಕೀರ್ತಿನಾರಿಯ ಸೆಱಗ ಹಿಡಿದರು (ಕುಮ್ಮಾದ್ರ್ಯ. ೬-೨೬); ಜಸವೆಣ್ಣು ನಮ್ಮ ಸೆಱಗ ಪಿಡಿವಳೆಂದು ನುಡಿದು (ಕಂನವಿ. ೧೫-೨೮). ೫. ತ್ರಿಖಂಡಾವನೀಮಂಡಲದೊಳ್ ನೆಲದೊಂದು ಸೆಱಗಿನೊಳಪ್ಪುದಂ ಕೇಳಲಾಗದಪವಾದಮಿಂದು . . . ಕಾಣಲಾದುದು (ಶಾಂತಿಪು. ೩-೭೦ ವ).

ಸೆಱಗಂ ಗಂಟಿಕ್ಕಿಕೊಳ್, ಸೆರಗಿಗೆ ಗಂಟುಹಾಕಿಕೊಳ್ಳು = (ಆಲಂ) ನೆನಪಿನಲ್ಲಿಟ್ಟುಕೊಳ್ಳು: ತನ್ನ ಬಗೆ ತೀರ್ದುದೆಂದು ರಾಗಿಸಿ ಶಕುನಮೆಂದು ಸೆಱಗಂ ಗಂಟಿಕ್ಕಿಕೊಂಡು ಮಾಳವೇಶ್ವರಂಗಿಂತೆಂದಳ್ (ಧರ್ಮಾಮೃ. ೪-೨೦೯); ಈ ಮಾತನ್ನು ಅವನು ಸೆರಗಿಗೆ ಗಂಟುಹಾಕಿಕೊಂಡು ಕುಳಿತುಬಿಟ್ಟನು (ಇಪ್ಪಪ್ರ. ೬೫೮). ಸೆರಗುಹಾಸು = (ಆಲಂ) ಹಾದರ ಮಾಡು; ವ್ಯಭಿಚಾರಕ್ಕೆ ಇಳಿ: ಕಂಡವರಿಗೆ ಸೆರಗುಹಾಸುವ ಹೆಣ್ಣನ್ನು ಬಯಸುವ ಹೆಗಡೆ ನಾನಲ್ಲ (ದೇವಪಂ. ೨೦೨).

[ದೇ. ‖ ತುಳು. ಸೆರಂಗು; ತೆಲು. ಚೆಲಗು]

ಸೆಱಗು ‘ಸೆಱಂಗು’ ನೋ.

ಸೆಱಗುವಿಡಿ, ಸೆರಗುಹಿಡಿ (ಕ್ರಿ). ೧. (ವಸ್ತ್ರದ) ಅಂಚನ್ನು ಹಿಡಿ; (ಬಟ್ಟೆಯ) ತುದಿಯನ್ನು ಹಿಡಿ: ಚಲಿಸುವ ರಥಧ್ವಜದ ಸೆಱಗುವಿಡಿದೆಳೆದು (ಚಿಬಪು. ೪೬-೨೬); ಸೆಱಗುವಿಡಿಯೆ ಸಾರ್ಸಾರೆಂಬ ಕರವನು ಭರದೆ ತುದುಕಲೊಡೆಮುರಿವ . . . ತರಳೆವೆಣ್ಣುಗಳೊಪ್ಪಿದರು (ಕಂಸವ. ೬-೧೭೫). ೨. ಪಕ್ಕದಿಂದ ಆರಂಭಿಸು; ಬದಿಯಿಂದ ತೊಡಗು: ಅಲ್ಲಿನ್ನೆಂಕಲು ಹೆಬ್ಬೆಟ್ಟಿದ ಸೆಱಗುವಿಡಿದು ಹಬ್ಬಳ್ಳವ ಪೋಗಿ (ಎಕ. XIV, ಮಂಡ್ಯ. ೩೦-೪೪; 1261). **ಸೆರಗುಹಿಡಿ**: ೩. ಆಶ್ರಯಿಸು: ಪ್ರಯನಾಥಬಾಬು ಬನಾರಸ ನಗರಸಭೆಯ ಸೆರಗುಹಿಡಿದರು (ಪ್ರಮಾಶ್ರ. ೨೪೯). [ಸೆಱಗು (< ಸೆಱಂಗು) + ಪಿಡಿ,]

ಸೆಱಗುಸೋಂಕು (ಕ್ರಿ). (ಆಲಂ) ಪ್ರಭಾವ ತಾಕು: ವಿಜಯಲಕ್ಷ್ಮಿಯ ಸೆಱಗು ಸೋಂಕಿತು (ಕುಮ್ಮಾಶ. ೧೪-೭). [ಸೆಱಗು (< ಸೆಱಂಗು) + ಸೋಂಕು,]

ಸೆಱಗೊಡ್ಡು, ಸೆರಗೊಡ್ಡು (ಕ್ರಿ). ೧. ಸೆರಗನ್ನು ಮುಂದೆ ಹಿಡಿ. ೨. (ಆಲಂ) ಬೇಡು; ಯಾಚಿಸು. **ಸೆರಗೊಡ್ಡು**: ೨. ತಮ್ಮಲ್ಲಿ ಸೆರಗೊಡ್ಡಿ ಪತಿಭಿಕ್ಷೆಯನ್ನು ಬೇಡುವವಳಾಗಿರುವನು (ಚಿನ್ನಪ. ೭೦); ಸೆರಗೊಡ್ಡಿ ಅವರನ್ನು ಪ್ರಾರ್ಥಿಸಿಕೊಳ್ಳು (ಪ್ರಬಂಧ. ೫೫೫); ಮನೆದ ಮೊಳಕಾಲಿನಲ್ಲಿ ಸೆರಗೊಡ್ಡಿ ಶರಣಾರ್ಥಿಯಾಗಿರುವನರ್ಜುನಂ (ಚತ್ಕಾಂಗ. ೩೮ · ೧೦೨೪).

ಸೆಱಗೊಡ್ಡಿ ಬೇಡು, ಸೆರಗೊಡ್ಡಿ ಬೇಡು = ಅತ್ಯಂತ ದೈನ್ಯದಿಂದ ಬೇಡು, — ಯಾಚಿಸು: ಎಂತಾದೊಡಮೆನ್ನ ಕೆಳೆಯನಸುವಂ ಪಿಡಿವುದು ಸೆಱಗೊಡ್ಡಿ ಬೇಡಿದೆಂ ಮೃಗನಯನೇ (ಕಾದಂಪೂ. ೮೬೯): ನಿಮ್ಮ ಚರಣವ ನೆನೆವಂತೆ ಕರುಣಿಸು ಸೆಱಗೊಡ್ಡಿ ಬೇಡುವ ನಿಮ್ಮ ಧರ್ಮ (ಬಸವ. ೩೪); ದೇವರ ಬಳಿ ತಾಯಿ ಸೆರಗೊಡ್ಡಿ ಬೇಡಿಕೊಂಡಳು (ಶ್ಯಾಮತಾ. ೧೫೫). [ಸೆಱಗು (< ಸೆಱಂಗು) + ಒಡ್ಡು,]

ಸೆಱಪು , ಚರಪು, ಚರುಪು, ಚಱಪು, ಚಿರಪು, ಚೆರಪು, ಚೆಱಪು, ಸೆರಪು (ನಾ). ೧. ಅತಿಥ್ಯ; ಸತ್ಕಾರ; ಉಪಚಾರ: ವಿಖ್ಯಾತಂಗೆ ನರಂಗೆ ಸೆಱಪುಗೆಯ್ದನನಂತಂ (ಪಂಪಭಾ. ೪ ೪೪): ತನ್ನ ಸೆಱಪೇ ಸೆಱಪು, ತನ್ನ ತೇಜಮೆ ತೇಜಮ್ ಎನೆ ಬೆಳಪ ಪಂಪನ್ (ಪೊಂಗಳ್ಳು. ೩೯-೫). ೨. ಉತ್ಸವ; ಹಬ್ಬ. ೩. ನೈವೇದ್ಯ; ಪ್ರಸಾದ. **ಚರಪು**: ೨. ದೀಪಾರಾಧನೆ ವುತ್ಸಾಹ ಚರಪು ಸಹಾ (ಮ್ಯಅಂ. ೧೯೪೬, ೫೦-೨೬; 1082). ೩. ಶನಿವಾರ ಸಂಜೆಯ ಭಜನೆಯೇ ನಿಜವಾದ ಸಾರವತ್ತಾದ ಭಜನೆ. ಅಂದೇ ಚರಪು ಸಿಕ್ಕುತ್ತಿದ್ದುದು (ಸಂಧ್ಯಾರಾ. ೩೧). **ಚರುಪು**: ೨. ಪರಿಪರಿ ಚರುಪ ಚರಿಸಿದೆ ಹರಿಯಾಚರಿಸು (ಪ್ರಸಕೀ. ೪೭-೪). ೩. ಜನ ತುಂಬಿಸಲಿಕ್ಕೆ ಚರುಪೇ ರಾಜಮಾರ್ಗವೆಂದು . . . ದೊಡ್ಡದಾಗಿ ಚರುಪು ಕಡಲೇಗುಗ್ಗುರಿ ಎಂದು ಬರೆದ (ವೃದ್ಧಾ. ೧೦೦); ಚರುಪು ಹಂಚುವ ವೇಳೆಗೆ ನನ್ನನ್ನು ಹೊರಹಾಕುತ್ತಿರುವುದು ಸರಿಯೆ? (ದಾನಚಿಂ. ೨೧). **ಚೆಱಪು**: ೨. ತೆಪ್ಪ ತಿರುನಾಳು ಚೆಱಪು ತಿರುನನ್ನಾವನ ಮೊದಲಾದ ಕೈಂಕರ್ಯದ ಶೆಲವಾಗಿ (ಎಕ. XIV. ಶ್ರೀರಂಗ. ೯೫-೨; 1535). **ಚಿರಪು** : ೨. ಚಿರಪು ಪುಳುಗಾಮೆಗೆ ಸಮರ್ಪಿಸಿದ ಚತ್ರ ಗ ೧೫೦ (ಸೌಇ. IX-ii, ೫೪೭-೩; 1532). **ಚೆರಪು** : ೨. ಉತ್ಸವ ಚೆರಪು ಮುಂತಾದ್ದ ಮಾಡುವ ವಿವರ (ಮ್ಯಅಂ. ೧೯೪೩, ೨-೨೩; 1708). **ಚೆಱಪು** : ೨. ಚೆಱಪಿನ ಕಟ್ಟಳೆ ದಿನ ೧ಕ್ಕಂ ಅಕ್ಕಿ ಮಣವ ೧ (ಎಕ. XV, ಬೇಲೂರು. ೭೦-೩೧; 1485). **ಸೆರಪು** : ೧. ಸೆರಪಿನಿಂ ಬೀಳ್ಕೊಡುವ ಕಾಡೊಳ್ಪನುಂಡಂ (ಕಾಲೂರ. ೬೦-೯೯). [ದೇ. ‖ ತಮಿ. ಚಿಱಪ್ಪು; ತುಳು. ಚೆರಪು, ಚರ್ಪು; ತೆಲು. ಚರುವು./ ಸಂ. ಚರು]

ಸೆಱೆ, (ಕ್ರಿ). ಸೆಡೆ; ಸಂಕೋಚಗೊಳ್ಳು; ಕುಗ್ಗು: ತೆಱೆದ ಬಾಯ್ಗೆ ಸೆಱೆ [ಪಾಕಾಂ. ಪೆಱ]ತ ಕಂಗಳ ಕೆದರ್ದ ಕೇಶದ ಶಬವ ಕಂಡು (ಸನತ್ಕು. ೧೧-೧೦); ಗೌಡದೇಶದ ರಾಯನಿವನೆನೆ ಹಳ್ಳಿಯ ಗೌಡನೆಂದಣಿಸಿ ಸಾಗಿದಳು ಪಿಡುಗಬ್ಬಿದನವ ಸೆಱತು ನೋಡಿದ ತನ್ನ ಗೌಡಿಯೊ ಬೆದಱಿ ಬಹಾಗ (ಭರಚ. ೫೫-೯೩). ‘ಸೆಡೆ,’ ಪರಾ.

[ದೇ. ‖ ತಮಿ. ಮಲ. ಚೆಱಿ, ಚೆಱು]

ಸೆಱೆ,, ಸೆರೆ, (ನಾ). ೧. ಬಂಧನ; ಕಟ್ಟು: ಪಿಡಿದುಯ್ದುದು ಗಂಧರ್ವರ ಪಡೆ ಗಡ ನಿಮ್ಮಣ್ಣನಂ . . . ಬೇಗಂ ಬಿಡಿಸಿ ತರ್ಪುದಾತನ ಸೆಱೆಯಂ (ಪಂಪಭಾ. ೨-೨೨); ಮದವತ್ಕರಿ ಸೆಱೆಯಂ ಪಱಿದೊದವಿದ ಮುಳಿಸಿಂದೆ ಭೋರನೆಯ್ತಂದೊಡೆ (ಸೌಇ. IX - i, ೫೨-೨೧: 1007); ಧನವನಾರ್ಜಿಸಿ ತಂದು ಸೆಱೆಯ ಬಿಡಿಸುವೆಂ (ಹಚಕಾ. ೧೨-೪೭); ರಕ್ಕಸಕೋಟಿ ಜೀಯೆನುತ ಸಿದಿಲ ಸೆಱೆ ಬಿಟ್ಟಂತೆ ಭುಜವನು ಹೊಡೆದು ಮುಂಚಿತು (ಕುಮ್ಮಾದ್ರ್ಯ. ೧೫-೪೬). ೨. ಬಂಧಿಸಿಡುವ ಸ್ಥಳ, --ಜಾಗ; ಕಾರಾಗೃಹ: ಸೆಱೆಯೊಳ್ ಮತ್ತೇಕಿಕ್ಕಿದಳ್ (ಕಾದಂಪೂ. ೭೭೧); ಅರಸನಾತನ ಕೈಯೊಳಿರ್ದ ವಸ್ತುಗಳೆಲ್ಲಮಂ ಕೊಂಡು ಬಟ್ಟೊಕ್ಕೆ ಸೆಱೆಯೊಳಕ್ಕೆ (ಪಂಚಚಂ. ೧೨೨-೧೮); ರಸದೊಱೆಯ ಸೆಱೆಯಂತಿರ್ಪ ವಣ್ಣ ಸೆರೆಯಂ ಕಂಡು ಕಣ್ಮೊಳಾಲಿಂಗಿಸುತೆ ಸವಿಸವಿದು ನೋಡಿ (ಗಿಸಂ. ೩-೧೦೩ವ). ೩. ಸೆರೆಯಾಳು; ಬಂದಿ; ಖೈದಿ: ಕೊಳ್ ನಿನ್ನ ನಚ್ಚಿನ ಸೆಱೆಯನೆಂದು ಬಿಸುಟ್ಟೊಡೆ (ಪಂಪಭಾ. ೭-೩೮೨); ಪರಿತಂದು ಶಿವಭೂತಿಯಂ ಸೆಱೆಯಂ ಬಿಟ್ಟೊಡಗೊಂಡು ಪೋಪುದುಂ (ಪಂಚಚಂ. ೧೧೩-೧೭); ಸೆಱೆಸಹಿತ ತಾನೈದುವನು ನಿಜಪುರಿಗೆ (ಕುಮ್ಮಾಶ. ೬೧೧. ೨೪-೨೭). ೪. (ಆಲಂ) ಪಗಡೆಯಾಟದಲ್ಲಿ ಕಾಯಿಗಳನ್ನು ಜೊತೆಕಟ್ಟುವುದು: ಸೆಱೆಯುಮೇಱುಂ ನೆತ್ತಮಾಡುವರೊಳ್ (ಎಕ. XIII. ೬೬೨-೪೪; 929); ಸಮರದ್ಯೂತ ಕೇಳಿಯಲಿ ಹಲಗೆಯ್ಕೆ ಕುರುಭೂಮಿ ಕೌರವಕುಲದ ತಲೆ ಸಾರಿಗಳು ಸೆಱೆಯಲಿ ಗೆಲಲು ಬಂದೆನು ಕೊಳ್ಳು ಹಾಸಂಗಿಗಳನೆನುತೆಚ್ಚ (ಕುಮ್ಮಾದ್ರ್ಯ. ೧೦-೪೯). **ಸೆರೆ,**: ೧. ತುಂಬುಗಣ್ಣೊಳವನ ರಾಮು ಸೆರೆಯ ಕೊಳುವನು (ರಾಮಾಸ. ೮೯). ೨. ಕಳ್ಳನನ್ನು ಸೆರೆಯಲ್ಲಿಟ್ಟಿದ್ದಾರೆ (ರೂಢಿ). ೩. ರಾಜೇಂದ್ರನು ಸೆರೆಯಂ ಪಿಡಿಸಿ ತಂದನೆಂದು ಕೇಳಿ (ಸೌಗಂಧಿ. ೪೬೦-೨೧).

ಸೆಱೆಯಾಗು, ಸೆರೆಯಾಗು = ಬಂಧನಕ್ಕೆ ಸಿಗು; ಬಂಧನಕ್ಕೊಳಗಾಗು: ಅರವಿಂದ ದಲರ್ಗಳೊಳ್ಪಱೆಯಾದುವಾಜಿಡಿಗಳು (ಚೈಮಿಬಾ. ೧೭-೭೦): ಕಾಡುತಿಹ ಹಸಿವಿಂದ ಬೇಡುತಿದೆ ಕಿರುಕಂದ ಹೂಡಿದ್ದ ಚಕ್ಕುಲಿಗೆ ಸೆರೆಯಾದೆನಮ್ಮ (ಕಎಪ್ರ. ೬೨-೧೬).

[ದೇ. ‖ ತಮಿ. ಚಿಱೈ; ಕೋಲಾ. ಚೆರ್; ತೊದ. ಸೆರ್; ತುಳು. ಸೆರೆ; ತೆಲು. ಚೆಱ]

ಸೆಱೆಕೊಳ್ಳು (ನಾ). ಬಂಧನ ಮತ್ತು ಹಿಡಿತ: ವಿಪತ್ತಿಯಲ್ಲ ರುಜೆಯಲ್ಲು, ತ್ರಾತಮಿಲ್ಲಾವಗಂ ಸೆಱೆಕೊಳ್ಪಿಲ್ಲ ನಿರೋಧಮಿಲ್ಲ ಪಿಡಿಕಟ್ಟಿಲ್ಲ (ಬಾಧಪ್ರ. ೪-೭).

[ಸೆಱೆ, + ಕೊಳ್ಳು (< ಕೋಳ್)]

ಸೆಱೆಕೋಲ್, ‘ಸೆಱೆಗೋಲ್’ ನೋ.

ಸೆಱೆಕೋಲ್, (ನಾ). ಯತಿಗಳ ದಂಡ (?): ಉಜದಾನ್ತೀ ಶಿವಸಕ್ತಿಯ ಸೆಱೆಕೋಲಿಂಗಳ್ಕೆ ಮನ್ಮಥಂ . . . ಸೆಱೆಯೊಳಡಂಗಿದನಿದೇಂ ಕರಂ ವಿಸ್ಮಯಮೋ (ಎಕ. XII, ಚಿಕ್ಕನಾ. ೩೦-೨೬; 1149). [ಸೆಱೆ, + ಕೋಲ್,]

ಸೆಱೆಗಟ್ಟು, (ಕ್ರಿ). ಸೆರೆಹಿಡಿ; ಬಂಧಿಸು: ಮಹೀಕಾಂತವರೇಣ್ಯ ಮಾಣ್ಬುದೆನಗೀ ಬೆಸನಂ ಸೆಱೆಗಟ್ಟಿ ತಂದಪೆಂ (ರಾಜಶೇ. ೫-೧೩೦). [ಸೆಱೆ, + ಕಟ್ಟು,]

ಸೆಱೆಗೆಯ್, ಸೆರೆಗೈ (ಕ್ರಿ). = ಸೆಱೆಗಟ್ಟು: ಕಾರ್ಮುಕಾಚಾರ್ಯನನುಜೆ ಸೆಱೆಗೆಯ್ದೆ ವಿನಯಾಸ್ತ್ರಮನೆಚ್ಚು . . . ಪೊಡೆಮಟ್ಟು (ಪಂಪಭಾ. ೧೧-೧೩೩ ವ);

ವಿಶ್ರಮಸ್ಥಾನಮನಾ ಮಹೀಭುಜನ ಮೆಯ್ಸಿರಿಯಂ ಸೆಜೆಗೆಯ್ಯೆ (ಪಂಂಾಮಾ. ೩-೪೪); ವಾನರಾಳಿ ನಡುಗುತ್ತಿರ್ದತ್ತು ಶಾಖಾಗ್ರದೊಳ್ ಸೆಜೆಗೆಯ್ದಂದದೆ (ಕುಸುಮಾ. ೭-೧೩). **ಸೆರೆಗೈ**: ಸುಮ್ಮನೆ ಮನಸ್ಸನ್ನು ಸೆರೆಗೈದರೆ, ಕರಗಿಸಿದರೆ ಸಾಲದು, ಅವು ನಮ್ಮನ್ನು ರಸವಶತೆಗೆ ಒಯ್ಯಬೇಕು (ಸೌಂದ. ೭೫). [ಸೆಜ್ $_2$ + ಕೆಯ್ $_1$]

ಸೆಜೆಗೊಳ್ (ಕ್ರಿ). ೧. ಬಂಧನಕ್ಕೊಳಪಡಿಸು; ಸೆರೆಹಿಡಿ: ಗೆಲ್ದು ನಾಕದ ನರಲೋಕದೊಳ್ಪನದು ಪೇಟುಂ ಸೆಜೆಗೊಂಡುದೊ ಸೂಜೆಗೊಂಡುದೊ (ಶಾಂತಿಪು. ೧-೬೬); ಮನೋಹರಿಯವಳ್ಗೆಜೆಗೊಂಡಳೋ ನೆಜೆ ಸೂಜೆಗೊಂಡಳೋ ಪೇಲಿದಂ (ಧರ್ಮಾಮೃ. ೩-೪೩); ಪತಿಚಿತ್ತದಿರವ ಸೆಜೆಗೊಂಡು (ಪದಬ. ೪-೬). ೨. ಮುಚ್ಚಿಕೊಳ್ಳು: ತಣ್ಣೆಲರ ಸೊಗಸಿಂದೆ ಕಣ್ಣೆವೆಗಳು ಸೆಜೆಗೊಂಡವು (ಜೈಮಿಭಾ. ೫೯-೪೯). [ಸೆಜ್ $_2$ + ಕೊಳ್ $_1$]

ಸೆಜೆಗೋಲ್, ಸೆಜಕೋಲ್ $_1$ (ನಾ). (ಸ್ಯೆನ್ಯದ) ಮಗ್ಗುಲು; ಪಾರ್ಶ್ವ; ಪಕ್ಕ: ಅಂತುಭಯಬಲದ ಸೆಜೆ[ಪಾಠಾಂ.ರೆ]ಗೋಲ್ಗಳೊಂದೊಂದಂ ಮುಟ್ಟುವಿನಂ (ಆದಿಪು. ೧೪-೪೪ ವ). **ಸೆಜಕೋಲ್** $_1$: ಸೆಜಕೋಲ್ ಸೆಜಕೋಲಿಂ ಪತ್ರಜುಗಾವುದ ಬಲದ ಪವನನನಿತಿನಿತೆಂದಾನಜಿಯೆಂ (ಪಂಚಭಾ. ೧೦-೫೯). [<—ತಮಿ. ಚಜ್ಕೆಕ್ಕೋಲ್]

ಸೆಜೆತುಜು (ನಾ). ಸೆರೆಹಿಡಿದ ಪಶು: ಸೆಜೆತುಜುಸಹಿತ ಸೋಸಲೆಯ ಕಡುವ ದಾಟಿ (ಕಂಸವಿ. ೩-೫೭). [ಸೆಜ್ $_2$ + ತುಜು]

ಸೆಜೆದನ (ನಾ). = ಸೆಜೆತುಜು: ಕುಪ್ಪಟೂರಗ್ರಹಾರವನಿಜಿದು ಸೆಜೆದನವ ಕೊಣ್ಮು (ಎಕ. VIII, ಸೊರಬ. ೨೮೪-೬; 1283). [ಸೆಜ್ $_2$ + ದನ]

ಸೆಜೆಮನೆ 'ಸೆಜೆವನೆ' ನೋ.

ಸೆಜೆಯಾಳ್ (ಕ್ರಿ). ಬಂದಿಯಾಗಿಟ್ಟುಕೊಳ್ಳು; ಸೆರೆಗೊಳ್ಳು: ಶ್ರೀಪರಮೇಶನ ಸೆಜೆಯಾಳ್ದ ಶರಣಂಗ ತಾಪತ್ರಯವೇಕೆ (ಮೋಪತ. ೩೩-೨೬). [ಸೆಜ್ $_2$ + ಅಳ್ $_1$]

ಸೆಜೆಯಿಕ್ಕು (ಕ್ರಿ).ಬಂಧನದಲ್ಲಿಡು: ಅನ್ನೆಗಮಿಗಳ್ಗೆಜೆಯಿಕ್ಕಿಯಿಂ ನಿಲಿಪುದಂದನ್ನಲ್ಲಿ ಗಿಂತಟ್ಟಿದಂ (ಕಾದಂಜಾ. ೭೭೪); ಅವರರಸಿಯರನೆಲ್ಲರನೆಳೆತರಿಸಿ ಸೆಜೆಯಿಕ್ಕಿ (ಸಂಭವ. ೨೫-೪೦). [ಸೆಜ್ $_2$ + ಇಕ್ಕು]

ಸೆಜೆಯಿಡು (ಕ್ರಿ). = ಸೆಜೆಯಿಕ್ಕು: ಪ್ರದ್ಯೋತಂ ಕಾಳಿಗಮಂ ಗೆಲ್ದೊದ್ದಾಯನನಂ ಪಿಡಿದು ಕಟ್ಟಿ ಸೆಜೆಯಿಟ್ಟಂ (ವಡ್ಡಾರಾ. ೧೭೨-೧೫); ಸಂಳಿವ ನೀಲಮೇಘಾವಳಿಯಂತರದಿಂ ಸೆಜೆಯಿಟ್ಟಂತೆ (ಗಿರಿಕ. ೨-೭೫); ಧುರದಿ ನಿನ್ನನು ಕಾರ್ತವೀರ್ಯನು ಹಿಂದ ಸೆಜೆಯಿಡಲು (ಕಾಶಿಕಾ. ೧೪-೨೦). [ಸೆಜ್ $_2$ + ಇಡು $_1$]

ಸೆಜೆಯಿರ್ (ಕ್ರಿ). ಬಂಧನದಲ್ಲಿರು; ಸೆರೆಯಲ್ಲಿರು: ಮೈ ಜಯಶ್ರೀ ಸೆಜೆಯಿರೆ ಭೂರಿಭುಜಾಂತರದೊಳ್ (ಶಾಂತಿಪು. ೩-೩೫); ಸೆಜೆಯಿರ್ದ ಸೀತೆಯಂ ಪಾವಕನ ಮುಖದಿಂ ಪರಿಗ್ರಹಿಸಿ (ಜೈಮಿಭಾ. ೧೪-೮). [ಸೆಜ್ $_2$ + ಇರ್ $_1$]

ಸೆಜೆಯೋಗು (ಕ್ರಿ). ಬಂಧನಕ್ಕೆ ಸಿಲುಕು; ಸೆರೆಸಿಕ್ಕು: ನಿಮ್ಮಣ್ಣನಾಡಿ ದುಹಾರದಲಿ ಸೆಜೆಯೋದನಾತನ ಹರಿಬವೇ ನಿಮಗೆ (ಕುವ್ಯಾಶ. ೨೦-೧೩).

[ಸೆಜ್ $_2$ + ಪೋಗು $_1$(< ಪೋ $_1$)]

ಸೆಜೆವನೆ, ಸೆರೆಮನೆ, ಸೆಜೆಮನೆ (ನಾ). ಕಾರಾಗೃಹ; ಬಂದೀಖಾನೆ; ಜೈಲು: ಸೆಜೆವನೆಯಿಂದಂ ಭೋಂಕೆನೆ ಪೊಱಮಟ್ಟು (ಆದಿಪು. ೧೩-೫೪); ಸುನಂದಾ ದೇವಿಯಿರ್ದ ಸೆಜೆವನೆಗೆ ತಾನೆ ವಂದು (ಅನಂಪು. ೧೨-೨); ಭೋಂಕನೆ ಹೊಕ್ಕರು ಸೆಜೆವನೆಯೊಳು ಹೊನ್ನ ಸಂಕಲೆವಡೆದ ಬಾಲಕನ ಸಂಕಟವನು ಕಂಡು (ಮೋಪತ. ೪೧-೫೯). **ಸೆರೆಮನೆ**: ಈ ಅರಮನೆಯ ಸೋಗಿನ ಜೀವನ ಅವನಿಗೆ ಸೆರೆಮನೆಯೇ ಆಯಿತು (ಮುಷಿ. ೪೨); ವಂಚಕರನ್ನು ವಿಚಾರಣೆಯಿಲ್ಲದೆ ಸೆರೆಮನೆಗೆ ತಳ್ಳಿರಿ (ರೂಪಸೂ. ೫೫). **ಸೆಜೆಮನೆ**: ಕುಳಿಂದನಂ ದಂಡಿಸಿದನಾ ದುಷ್ಟಬುದ್ಧಿ . . . ಸೆಜೆಮನೆಗಿಕ್ಕಿ ನಿಗಳಮಂ ಕಾಲ್ಗೆ ಪೂಡಿ (ಜೈಮಿಭಾ. ೩೧-೨೬). [ಸೆಜ್ $_2$ + ಮನೆ]

ಸೆಜೆವಿಂಡು (ನಾ). ಸೆರೆಯಾಳುಗಳ ಸಮೂಹ; ಬಂದಿಗಳ ಗುಂಪು: ಸುರರ ಸೆಜೆವಿಂಡುಗಳನಾಳ್ದನೆ ಸುರಪನಭಿಮಾನವನು ಕೊಂಡನೆ (ಕಾಶಿಕಾ. ೩೭-೯).

[ಸೆಜ್ $_2$ + ಪಿಂಡು $_2$]

ಸೆಜೆವಿಡಿ, ಸೆರೆವಿಡಿ, ಸೆರೆಹಿಡಿ (ಕ್ರಿ). ೧. = ಸೆಜೆಗೊಳ್ ೧: ಶಿವಶಿವಾ ನಿರ್ಬಂಧವಿದು ಕೌರವನಲಾಯಿತೆ ಮದ್ಮಮಯಗಂಧವನು ಕುಡಿಸುವ ಪರಿಯಲ್ತಾ ತುಂಬಿಗಳ ಸೆಜೆವಿಡಿದು (ಕುವ್ಯಾಶ. ೫-೩೬); ತುಜುವನು ಸೆಜೆವಿಡಿದು . . . ಮುಂದಕ್ಕೆ ತೆರಳಿದನಾ ಖಾನನು (ಕಂಸವಿ. ೧೧-೫೬). ೨. ಆಕರ್ಷಿಸು; ಸೆಳೆ: ತನ್ನ ಮನಮುಮನೆರ್ದೆಯುಮನುಜೆ ಸೆಜೆವಿಡಿದಿರ್ದಪೂರ್ವರೂಪೆಯ ರೂಪಮಂ ಮನದೊಳ್ ಬಗೆದು ಭಾವಿಸಿ (ಪಂಪಭಾ. ೪-೭೧ ವ); ಆಕೆಯ ಪರಭಾಗಂ ಪತಿಯ ಮನಮನುಜೆ ಸೆಜೆವಿಡಿಗುಂ (ಜಗವಿ. ೧೦-೪೭); ಮನವ ಸೆಜೆವಿಡಿದು ಸೋಲಿಪ ವಿದಗ್ಧೆಯರು . . . ನಡತಂದರು (ಸೌಂದ. ೭-೩೯). **ಸೆರೆವಿಡಿ**: ೨. ಸಾರಿದರೆ ನೂರಾಗಿ ಹರಿದೋಡುತಿಹನು ಸೇರಿದರೆ ಸೆರೆವಿಡಿದು ಮರಳಿ ಪೋಗೊಡನು (ಕವಪ. ೧೧-೭). **ಸೆರೆಹಿಡಿ**: ೧. ಸಿಡಿಲ ಪಳಗಿಸುವರಿವು, ರವಿಯ ಸೆರೆಹಿಡಿವರಿವು (ಮಲಿದೇ. ೪೮-೧); ಅಬ್ಬಾ! ಸುಖಾರು ಶೂರನೇ ಸರಿ, ಮೇಘರಾಜನನ್ನು ಸೆರೆಹಿಡಿದಿರುವನಲ್ಲ! (ಮಾಣಸ. ೫೬). ೨. ಮಕ್ಕಳ ಮನಸ್ಸನ್ನು ಸೆರೆಹಿಡಿಯಬೇಕಾದರೆ ಕಥೆಯನ್ನು ಸಮಿಚೀನವಾಗಿ ಹೇಳಬೇಕಾಗುವುದು (ಕಥಕ. ಅಂಕ); ನಿಮ್ಮ ಸಹಾನುಭೂತಿ ನನ್ನನ್ನು ಸೆರೆಹಿಡಿಯಿತು (ಕಮನ. ೨೬೪). ೩. ಸಂಗ್ರಹಿಸು; ಕಲೆಹಾಕು: ನಿಸರ್ಗದಲ್ಲಿರುವ ಆಕಾರವನ್ನು ವರ್ಣಗಳನ್ನೂ ಅವನು ಸೆರೆಹಿಡಿಯುತ್ತಾನೆ (ದೂರಸ. ೫೯); ಕಾವ್ಯಮಾರ್ಗದ ಹದಿನೆಂಟು ವರ್ಣನೆಗಳನ್ನೂ ಹಲವು ರಸಗಳನ್ನೂ ಕನಕದಾಸರು ತಮ್ಮ ಸಂಗ್ರಹಾಲಯದಲ್ಲಿ ಸೆರೆಹಿಡಿಯಲು ಹವಣಿಸಿದ್ದಾರೆ (ತವನಿ. ೧೭೬).

[ಸೆಜ್ $_2$ + ಪಿಡಿ $_1$]

ಸೆಜೆವೊಯ್ (ಕ್ರಿ). ಬಂಧಿಸಿ ಒಯ್ಯು; ಸೆರೆಹಿಡಿದು ಕರೆದುಕೊಂಡು ಹೋಗು: ಭೂಪಾಲಂ ನಮ್ಮೆಲ್ಲರುಮಂ ಸೆಜೆವೊಯ್ದಪನ್ (ಧರ್ಮಾಮೃ. ೨-೫೦).

[ಸೆಜ್ $_2$ + ಒಯ್ $_1$]

ಸೆಜೆವೋಗು (ಕ್ರಿ). ಬಂಧನ ಕಳಚು: ವಾಯದಲಿ ಕೌರವನ ವಿಜಯಶ್ರೀಯ ಸೆಜೆವೋಯಿತ್ತು (ಕುವ್ಯಾಶ. ೧೩-೪೭). [ಸೆಜ್ $_2$ + ಪೋಗು $_1$ (< ಪೋ)]

ಸೆಜೆಸಾಲೆ (ನಾ). = ಸೆಜೆವನೆ: ಸಿಕ್ಕಿದ ಚಿತ್ರವಂಬ ಸೆಟ್ಟಿ ಭವದ ತಕ್ಕೆಯ ಸೆಜೆಸಾಲೆ [ಪಾಠಾಂ. ಲಿ]ಯಲಿ ಕೆಟ್ಟಿತ್ತು ಸುಂಕ (ಸಭಾ. ಕ. II. ೬೫೪-೨೪). [ಸೆಜ್ $_2$ + ಸಾಲೆ $_1$]

ಸೆಜೆಸಿಕ್ಕು $_1$ (ಕ್ರಿ). ಬಂಧನಕ್ಕೊಳಪಡು; ಬಂದಿಯಾಗು: ಸೆಜೆಸಿಕ್ಕಿದನಂತುಮ್ಮಳಿಸಿ ನೆರವಿಲ್ಲದನಂತೆ ಕುಂದಿ (ಧರ್ಮಾಮೃ. ೧-೧೬೮). [ಸೆಜ್ $_2$ + ಸಿಕ್ಕು $_1$ (< ಸಿಲ್ಕು $_1$)]

ಸೆಜೆಸಿಕ್ಕು $_2$ (ನಾ). ಸೆರೆಯಾಗಿ ಸಿಕ್ಕಿರುವುದು: ಸೆಜೆಸಿಕ್ಕಿಂ ಪಿಡಿತಂದ ದೇಸಿಗಿತಿಯಂ ಭೋಗೋಪಭೋಗಂಗಳಂ ಮಜ್ದುಂ ಕಾಣದನಾಥೆಯಂ ನುಡಿವವೊಲ್ನಿನ್ನೊಂದು ಸಂಪತ್ತಿಯಿಂ ಜಜಚುತ್ತಿರ್ದಪೆ (ಅನಂಪು. ೧೧-೯೦). [ಸೆಜ್ $_2$ + ಸಿಕ್ಕು $_3$ (< ಸಿಲ್ಕು $_2$)]

ಸೆಜೆಸೂಜೆ (ನಾ). ಬಂಧನ ಮತ್ತು ಕೊಳ್ಳೆ: ಈ ಸುದ್ದಿ ಪಟ್ಟಣ ಸೆಜೆಸೂಜೆ ಹೋದೀತು ಹುಯ್ಯಲೊ ಡಂಗುರವ (ಎಬಣಾ. ೧೧೯-೧); ಧಾಳಿಮಾಡುವರಕಟಕಟ ಸೆಜೆಸೂಜೆಗಳ ಪಿಡಿದು ಹಾಳುಮಾಡುವರು (ಹರಿಸಾ. ೯೦). [ಸೆಜ್ $_2$ + ಸೂಜೆ]

ಸೆಟಿವೆಣ್ಣೆ (ನಾ). ಒಂದು ಊರಿನ ಹೆಸರು: ಉತ್ತರತಃ ನೇಸಱುಪಳ್ಳಂ ಸೆಟಿವೆಣ್ಣೆ ಕಿಱುಬಳ್ಳಿಯೂರ್ಕಿಜೆ ಸೆಳ್ಳಕೆಜೆ ನಿಡುವೆತ್ತ ಕೆಜೆ (ಎಕ. III, ಮಂಡ್ಯ. ೧೧೩-೫೯; 713). [?]

ಸೇಂಗ 'ಶೇಂಗಾ' ನೋ.

ಸೇಂಗಾ 'ಶೇಂಗಾ' ನೋ.

ಸೇಂದಿ 'ಸಿಂದಿ' ನೋ.

ಸೇಂದು, ಸೇದು (ಕ್ರಿ). ೧. ಬಾವಿ ಮೊದಲಾದವುಗಳಿಂದ ನೀರನ್ನು ಮೇಲಕ್ಕೆ ಎತ್ತು: "ಸೇಂದು - ಜಲನಿಷ್ಕ್ರಮಣೇ" (ಶಮಧಾ); ನಿಜಕಾಂತೆಯುಮಾ ಪೆರಿಯ ನಂಬಿಯಾಬಲೆಯುಮಿರ್ವರ್ ನೀರಂ ಸೇಂದುತ್ತಿರೆ (ದಿವ್ಯಚ. ೧೧-೪೦). ೨. ಉಸಿರನ್ನು ಒಳಗೆ ಎಳೆದುಕೊಳ್ಳು: ನಿತ್ಯಬಿಂದುಗೆ . . . ಸೇಂದು ನಾಂದು (ಶಮದ. ೩೬ ಪ್ರಯೋ). ೩. ದ್ರವಪದಾರ್ಥವನ್ನು ಹೀರಿಕೊಳ್ಳು; ಕುಡಿ: ಪೆರ್ಬದಿರನಾಳಿಯನಾರ್ಟನೆ ಕಟ್ಟಿ ಮೆಲ್ಲನಲ್ಲಿಯ ಲಲಿತಾಂಬುವಂ ಪದೆದು ಸೇಂದಿದನಾಗಳ್ (ದಶಕು. ೧೪-೧೫ ವಿಕ್ರಾಪ್ತಿಕ). ೪. ಎಳೆ; ಜಗ್ಗು: ನೇಣಂ ಸಾರ್ಚಿ ಮತ್ತಾತನಂ ಸೇಂದುವ ವೇಳಿಯೊಳ್ (ದಿವ್ಯಚ. ೯-೬೪). **ಸೇದು**: ೧. ನೀರಂ ಸೇದಿಕೊಂಡು ಬಂದು (ವಡ್ಡಾರಾ. ೧೧೧-೬); ನೀರಾ ಸೇದಲೆಂದು ಬಾವಿಯೊಳಗಿಕ್ಕುವುದುಂ (ಧರ್ಮಾಮೃ. ೧೨-೧೭೧); ಸುರಿಸುರಿದು ಸೇದುವ ಜಾಟಳಂಗಳ (ಕುವ್ಯಾಶ. ೭-೧೪). ೩. ಭದ್ರಗಜ ನೀರ ಸೇದಿ ಸೊಂಡಿಲೊಳೀವ

ತಲಿದೆ (ಮೋಹತ. ೧೪-೬೬); ಒಡೆದು ಬ್ರಹ್ಮಾಂಡಮಾ ಮೇಲಣ ಜಲಂ ಚುಯ್ಯನಡಿಗಡಿಗೆ ಸೇದಿಂಗುತಿರ್ದುದೇಂ ವರ್ಣಿಸುವೆನು (ಚಿಬಪು. ೪೬-೨೫); ಹರಿನಂದನನು ನಿನ್ನ ಸುತನಂ ಸೀಳಿ ರಕ್ತಮಂ ಸೇದಿದಂ ಮನದಣಿಯಲು (ತುರಂಗ. ೬೬-೩೦). ೪. ಸೆಳೆವ ಸೇದುವ ಬೀಸುವೊಗೆವ . . . ಖಳರ ಕಳಕಳದ ಕೋಳಾಹಳದೊಳು (ಸಿದ್ಧರಾ. ೮-೨೯); ಸವಡಿವೆರಳಲಿ ಸೇದುವಂಬನ ತವಕಿಗರು ತಱುಬಿದರು (ಕುಮಾಗ. ೧-೬); ಹೂಡಿದ ಸರಳ ಕೆನ್ನೆಗೆ ಸೇದಿ ಬಿಡೆ ಕತ್ತರಿಸಿ ಬಿಸುಟುದು (ನಳಚ. ೯-೨೯). ೫. ಮುದುಡು; ಸಂಕೋಚಗೊಳ್ಳು: ನಿಜೋಷ್ಮ ಸ್ಪಂದನಸ್ಫೂರ್ತಿ ಮಾಣದೆ ಮೆಯ್ಗೇದೆ (ಹುಸುಮಾ. ೪-೩೭); ಒಗುವ ಕಂಬನಿಗಳಲಿ ಕಂಠದ ಬಿಗಿದ ಸೆರೆ[ಪಾಠಾಂ. ಲಿ]ಗಳ ಸೇದುವಕ್ಕೆಯ ವಿಗತಪರಿತೋಷಿತನು (ತೂರರಾ. ೧-೪-೭); ನಾಲಗೆ ಸೇದಿತ್ತು (ಗ್ರಾಮಾಯ. ೧೫೯). ೬. ಬೀಡಿ, ಸಿಗರೇಟು ಮೊದಲಾದವುಗಳ ಹೊಗೆಯನ್ನು ಎಳೆದುಕೊಳ್ಳು: ಕೆಲವರು ಅದನ್ನು ತಂಬಾಕ ಸೇದುವ ಹಾಗೆ ಸೇದುತ್ತಾರೆ (ಮುಂಬಯಿ. ೪-೪೦); ಅವರ ಬೆನ್ನಹಿಂದ ಸಿಗರೇಟು ಸೇದುತ್ತಾರೆ (ಹುಂಹೊ. ೨). ೭. ಸೆಳೆ; ದೋಚು: ಧನಾಢ್ಯರ ಮುರಿದು ಸೆರೆವಿಡಿದು ಸೇದಿದನು ಕಸಕಂಗಳ (ತುರಂಗ. ೧೯-೩೨).

ಸೇಂದಿಕೊಳ್, ಸೇಂದಿಕೊಳು, ಸೇದಿಕೊಳ್ಳು = ೧. ಸೆಳೆದುಕೊಳ್ಳು; ತೆಗೆದುಕೊಳ್ಳು: ಕಸ್ತೂರಿಗಂಧಿಯರ್ ಬನದೊಳು ಬಹುವಿಧ ವಸ್ತುಗಳನು ಸೇಂದಿಕೊಂಡು (ಮೋಹತ. ೪-೭೧). ೨. ಎಳೆದುಕೊಳ್ಳು; ಜಗ್ಗಿಕೊಳ್ಳು: ರಜ್ಜುವಂ ಪೊಸೆದು ಕೊರಲ್ಗೆ ಸೇಂದಿಕೊಳುತಿರ್ಪ. . . ಬಲಾಢ್ಯನೊರ್ವನಿರಲು (ದಶಕು. ೯-೧೪); ಬಳ್ಳಿಗೆ ಪುದುಗಿ ನೀಡಲು ಸೇದಿಕೊಂಬೆನು ಮುದದಿ ಹಗ್ಗವನಿಳುಹಿ ನಿನ್ನನು ಸೇದಿತಹೆ ಬಳಿಕ (ಸಾಳ್ವಭಾ. ೧೭-೬೨). **ಸೇದಿಹೋಗು** = ಸೆಟೆದುಕೊಳ್ಳು; ಜಡವಾಗು: ಏನೋ ಹೇಳಬೇಕೆಂದಳು, ನಾಲಿಗೆ ಸೇದಿಹೋಯಿತು (ಕೂತಕಾ. ೪೯); ನನ್ನ ಕೈಕಾಲು ಸೇದಿಹೋಗಿಲ್ಲ (ವಚಭಾ. ೨೪೩). [ದೇ. ॥ ತಮಿ. ಚೇನ್ದು; ತೆಲು. ಚೇದು]

ಸೇಂದ್ರಕ (ನಾ). ಒಂದು ರಾಜವಂಶದ ಹೆಸರು: ಸೇನ್ದ್ರಕಬಣೋಭಯದೇಶದಾ ವೀರಾಪುರಪ ಸಮಕ್ಷದೆ (ಮೃಚ. ೧೫೩೬, ೧೬-೧೦ ; 450). [?]

ಸೇಂದ್ರಿಯ (ಗು). ಇಂದ್ರಿಯಗಳಿಂದ ಕೂಡಿದ; ಇಂದ್ರಿಯಸಹಿತವಾದ: ಸೇಂದ್ರಿಯ ಸೃಷ್ಟಿಯಲ್ಲಿ ಮನುಷ್ಯಪ್ರಾಣಿಯೆ ಎಲ್ಲಕ್ಕೂ ಹೆಚ್ಚಿನವನು (ವಚಚ. ೧೫೫). [ಸಂ.]

ಸೇಕ$_{1}$, **ಶಾಕ**$_{1}$, **ಶಾಖಿ**$_{1}$, **ಶೇಕ** (ನಾ). ಕಾವು; ಬಿಸುಪು; ತಾಪ: ಕೆಂದಳಿರ್ವಾಸ ಸೇಕ[ಪಾಠಾಂ. ಸೆರ್ಕ]ದ ತೊವಲ್ಗಳೆಯಾಯ್ತು . . . ಇದೇಂ ಬಿಸಿದೊ ಬೇಟದ ಬೆಂಕೆ (ಪಂಪಭಾ. ೫-೭); ತುರಗದ ಸೋಬ(ಫ)ಕ್ಕೆ ಮಳಲ ಸೇಕಂ ಯೋಗ್ಯಂ (ಅಶ್ವಶಾ. ೧೦-೨೨); ಶೀತವೇರಿದ ರಾಮನೆದೆಗೆ ಬೆಚ್ಚನೆ ಸೇಕವನ್ನೊತ್ತಿದಂತಾಯಿತು (ಪಾರ್ಶ್ವ. ೬೮). **ಶಾಕ**$_{1}$: ಶಾಕವಿಲ್ಲದ ಪಾಕವ ಮಾಡಿ ತಮ್ಮ ಗಂಡರಿಗಿಕ್ಕಿ ತಾವು ಮೆಲುವರಯ್ಯ (ಶಿವಗೀ. ೭೧-೩೪). **ಶಾಖಿ**$_{1}$: ಸೂರ್ಯನೇ ಅತ್ಯಂತ ಹಿರಿಯ ಗ್ರಹ . . . ಅದರಿಂದ ಶಾಖ ಹಾಗೂ ಬೆಳಕು ದೊರೆಯುತ್ತವೆ (ಆಕಾಶ. ೯); ಸ್ವಲ್ಪ ಬಿಸಿನೀರಿನ ಶಾಖ ಕೊಡಲೇ ? (ದೀಪದ .೧೩೯). **ಶೇಕ**: ಮಾನವನ ಬರಿಯಡಗು ಶೇಕದಿ ಬೇನೆ ಮಾಣುವುದು • (ಸಾಳ್ವಭಾ. ೧೭-೫೪).

ಸೇಕಂಮಾಡು = ಶಾಖಿಕೊಡು: ಮನುಷ್ಯರ ತೊಡೆಯ ಮಾಂಸದಿಂ ಸೇಕಂ ಮಾಡೆ ಮಾಣ್ಬುದು (ಪುಣ್ಯಾಸ್ರ. ೪-೨೪ ವ). [ದೇ. ॥ ತುಳು. ಸೆಕೆ, ಸಿಕೆ, ಶಕೆ, ಶಖೆ]

ಸೇಕ್ಷ (ನಾ). ಚಿಮುಕಿಸುವಿಕೆ; ಸಿಂಪಡಿಸುವಿಕೆ; ಸೇಚನ: ಮಾಬ್ಬುದು ಸೇಕಮನಕ್ಕಿ ಶೂಲೆಯಿರದುಪಶಮಿಕುಂ (ಲೋಕೋಪ. ೯-೭೦); ಇನ್ನಾರ್ಮಧುಬಿಂದು ಸೇಕದೊಳೆ ಕೇಸರದೊಳ್ ಪಡೆವರ್ ವಿಕಾಸಮಂ (ಪಂಡಾಮಾ. ೧೪-೧೯೫); ಈ ಕಮಲಲೋಚನೆಯ ಸೆಜಗಿಗೆ ಸೇಕವಾಯಿತು ರಕುತ (ಕುವ್ಯಾವಿ. ೯-೩೭). [ಸಂ.]

ಸೇಕಂಗೆಯ್, ಸೇಕಗೆಯ್ (ಕ್ರಿ). ಶಾಖಿಕೊಡು: ಪುಂವುದು ಕಡುವಿಸಿಯಪ್ಪಂತಿರೆ ಮಳಲಂ ನಾಂದ ಸೀರೆಯೊಳ್ ಪೊಯಿದು ನಯಂಬೆರಸಿರೆ ಸೇಕಂಗಯ್ಯುದು ತುರಗದ ಸೋಬ(ಫ)ಕ್ಕೆ ಮಳಲ ಸೇಕಂ ಯೋಗ(ಗ್ಯ)ಂ (ಅಶ್ವಶಾ. ೧೦-೨೨). **ಸೇಕಗೆಯ್**: ಮುಳ್ಳು ಸಿವುರುಗಳುಂ ನಟ್ಟಲ್ಲಿಯ ಪೊಱವಂಡದಿರ್ದು ಬಾತೊಡೆ ಮತ್ತಂ ಕಲ್ಮೊತ್ತೆಗರ್ಕ ದುಗ್ಧವ ಮಳ್ಪಿಸಿಯೊಲೆಗಲ್ಲ ಸೇಕಗೆಯ್ಮಲ್ ಮಾಣ್ಗುಂ (ಲೋಕೋಪ. ೯-೧೬೫).

[ಸೇಕ$_{1}$ + ಕೆಯ್$_{1}$]

ಸೇಕಂಗೊಳ್ (ಕ್ರಿ). ಶಾಖವನ್ನು ತೆಗೆದುಕೊಳ್ಳು; ಕಾವು ಹೊಂದು: ಈ ವೇದನೆ . . . ಸೇಕಂಗೊಳೆ ಪೋಕುಂ (ನೇಮಿಪು. ೪-೭೯ ವ). [ಸೇಕ$_{1}$ + ಕೊಳ್$_{1}$]

ಸೇಕಗೆಯ್ 'ಸೇಕಂಗೆಯ್' ನೋ.

ಸೇಕಡಾ 'ಶೇಕಡಾ' ನೋ.

ಸೇಕಪಾತ್ರ (ನಾ). ನೀರು ಹೊಯ್ಯಲು (ಅಥವಾ ತುಂಬಿಡಲು) ಬಳಸುವ ಪಾತ್ರೆ: (೪). [ಸಂ.]

ಸೇಕರ (ನಾ). = ಶೇಖರ: 'ಜಾಣಸೇಕರ' ಪರಾ. [< ಸಂ. ಶೇಖರ]

ಸೇಕಾಗು (ಕ್ರಿ). (?): ಮೊಲೆಗಳ್ ಬಿಟ್ಟೊಡಿರುಳ್ ಬಲಲ್ಮೊಡೆ ಪಗಲ್ ಸೇಕಾಗೆ ಮಧ್ಯಾಹ್ನಮರ್ಕಿಲದೊಳ್ ಪಾರ್ದೊಡೆ ಬಯ್ಲು ಮೆಯ್ನೆರ(ಱಿ)ದ ಪೊಬ್ಬೆಂದಂತದಂ ಪೇಟೆ ನೋಡಲೊಡಂ ನಕ್ಕೊಡೆ ಬೆಳ್ಪು ನಾಣ್ಬೆದೊಡೆ ಕರಿದೇನಂ ಮುಚ್ಚೆಯುಂ ಕೆಂಪು ಕೇವಲಮಕ್ಕಂತವಳುಟ್ಟ ಪುಟ್ಟಿಗೆಯ ಬಣ್ಣಂ ಮಿಶ್ರದಿಂ ಮಿಶ್ರಕಂ (ಲೋಕೋಪ. ೨-೨೩); ''ಚೆನ್ನಾಗಿ ನಿಲ್ಲು'' (ಲೋಕೋಪ. ಟೀ). [ಸೇಕ$_{2}$ + ಆಗು$_{1}$]

ಸೇಕಿಸು$_{1}$ (ಕ್ರಿ). = ಸೇಕಂಗೆಯ್: ಕಡುಮಳಿಯೊಳ್ ಕಡುಗಾಳಿಯೊಳಿಡೆಯುಡುಗದ ಸುರಿವ ಸೋನೆಯೊಳ್ ಕಪ್ಪುರ(ದಿ)ಮಂ ಸುಡುವುದು ತುರಗಂ ಬಾಹಾದೆಡೆಯೊಳ್ ಸೇಕಿಸುಗೆ (ಅಶ್ವಶಾ. ೧೦-೨೩). [ಸೇಕ$_{1}$ + - ಇಸು$_{3}$]

ಸೇಕಿಸು$_{2}$ (ಕ್ರಿ). ಸಿಂಪಡಿಸು; ಚಿಮುಕಿಸು: ಮರನ ಮೊದಲೊಳದಂ ಸೇಕಿಸುವುದು ಮೇಣಜಮಾಂಸದ ರಸಮಂ ತಳಿವುದು (ಲೋಕೋಪ. ೬-೧೪). [ಸೇಕ$_{2}$ + - ಇಸು$_{3}$]

ಸೇಗು (ನಾ). ೧. ಕೆಚ್ಚು; ಸತ್ತ್ವ: ಮಾರುತಿ . . . ಈರೇಟುಂ ಭುವನಂಗಳನಾರಯ್ಮದೆ ತರ್ಗವೊಯ್ವ ಸೇಗಿಂ[ಪಾಠಾಂ. ಸಿಗ್ಗಿರ, ಸೋಗಿಂ]ದಿರ್ದಂ (ನೇಮಿಪು. ೧೦-೯೫). ೨. ಜಂಬ; ಅಹಂಕಾರ: ಮಬ್ಬು ಹರಿದರು ಹರಿಯದಿದರ ಸರಪಣಿಕೂಗು, ಸೇಗು (ಚಂಡಮ. ೩೭-೬). [< ಚೇಗು$_{2}$]

ಸೇಗುಡಿತೆ, ಸೇಗುಡುತೆ (ನಾ). ಒಂದು ಬಗೆಯ ಔಷಧೀಸಸ್ಯ: ಒಡಲೊಡವಿ ಬಾತು ತೋರ್ವೊಡೆ . . . ಸೇ[ಪಾಠಾಂ. ಸೆ]ಗುಡಿತೆಯಾಡಿನ ಪಾಲಂ . . . ತೊವರಿಯಶನಮೆ ಪಥ್ಯ (ಲೋಕೋಪ. ೯-೧೬೪); ಸೇ[ಪಾಠಾಂ. ಸೀ]ಗುಡಿತೆಯೊಪ್ಪು ವಂಬಲದಿಂದಂ ಭರದಿಂ ಕುಡಿಸಲ್ಕುರಗೋತ್ಕರದ ವಿಷಂ ಪಜಿಗುಂ (ಖಮದ. ೫-೮೬). **ಸೇಗುಡುತೆ**: ''ತ್ಯಗ್ನೀವಿ ಸೇಗುಡುತೆ[ಪಾಠಾಂ. ಡಿತೆ]'' (ಮಂಗರಾ. ೪೨-೩೭). [?]

ಸೇಗುಡುತೆ 'ಸೇಗುಡಿತೆ' ನೋ.

ಸೇಗುಣ 'ಸೇವುಣ' ನೋ.

ಸೇಚನ (ನಾ). = ಸೇಕ್ಷ$_{2}$: ನವರುಧಿರಜಳಚಳಚ್ಚೇಚನ [ಪಾಠಾಂ. ಪಾಟಣ]ದೊಳ್ ಘಟ್ಟಿಸಿ (ಪಂಪಭಾ. ೧೦-೭೦ ವ); ಸಲೀಲಸೇಚನದಿಂ . . . ವಲ್ಲರಿ ಫಲಿತಮಾದುದು (ಜಗಮ. ೨-೫೨ ವ); ದೇವರೀತನ ಲಲಿತವಚನಸುಧಾವಸೇಚನದಿಂದ ಭಟರುಜೀವಿಸುವುದೇನರಿದೆ (ಕುವ್ಯಾದ್ಯೂ. ೧೫-೪೦). [ಸಂ.]

ಸೇಚನಂಗೈ (ಕ್ರಿ). ಚಿಮುಕಿಸು; ಸಿಂಪಡಿಸು: ಪುಣ್ಯಸಲಿಲದೊಳ್ಸೇಚನಂಗೈದೆಸೆವ ಯೂಪದೊಳ್ಕಟ್ಟಿ ಪೂಜಿಸಿದರಮಲಾಶ್ವಮಂ (ಚೈಮಭಾ. ೩೪-೫).

[ಸೇಚನ + ಗೈ (< ಕೆಯ್$_{1}$)]

ಸೇಚನಘಟ (ನಾ). (ಗಿಡಗಳಿಗೆ) ನೀರು ಹೊಯ್ಯಲು ಬಳಸುವ ಪಾತ್ರೆ: ತಪಸ್ವಿಕನ್ಯೆಯರು ತಮ್ಮ ತಮ್ಮ ಪ್ರಮಾಣಕ್ಕೆ ತಕ್ಕ ಸೇಚನಘಟಗಳಿಂದ ಎಳೆಸಸಿಗಳಿಗೆ ನೀರೆರೆಯುವುದಕ್ಕೆ ಇಲ್ಲೇ ಸಂಚರಿಸುತ್ತಿರುವರು (ಶಾಕುಂತ. ೮-೪). [ಸಂ.]

ಸೇಚನೆ (ನಾ). = ಸೇಕ್ಷ$_{2}$: ಪಸರಿಸುವ ಗರ್ಭ ಸಂಪ್ರಾಪ್ತಿಸುಧಾಸೇಚನೆಯ ಹೃದಯ ಶೋಕಾಗ್ನಿಯ ನಂದಿಸೆ (ಕಾದಂಪೂ. ೪೦೨); ಈ ಸೇಚನೆಯಿಂದ ಕಲ್ಪನೆಗಳು ಬಳ್ಕಿವರಿದು ಧ್ಯಾತ ವಿಷಯಗಳನ್ನೂ ಸೃಷ್ಟಿಸುವ ಕ್ರಮ (ಕಾವ್ಮಕು. ೧೦). [ಸಂ. ಸೇಚನ]

ಸೇಚಿಸು (ಕ್ರಿ). = ಸೇಚನಂಗೈ: ಜಲವನ್ನು ಸೇಚಿಸುತ್ತಿದ್ದಾಗ ಅವನ ಚಿತ್ತದಲ್ಲಿ ಪೂವಿಯ ಆಲೋಚನೆ ಸುಳಿದಿತು (ಹುಲಿಹಾ. ೨೬೬). [ಸೇಚನ + - ಇಸು$_{3}$]

ಸೇಡ (ನಾ). (?): ಎಡಂ ಪೊಕ್ಕೊಡ ಚಿತ್ರವೃಷ್ಟಿ ಕುರುಡಂ ಮುಂ ಪೊಕ್ಕೊಡರ್ಫ ಕ್ಷಯಂ ಸೇಡಂ ಪೊಕ್ಕೊಡೆ ಡಾವರಂ . . . ಕಡೆ ಫಲಂ ಕೆಂದಂ ಪುಗಲ್ ಸತ್ಪಲಂ (ಅಜ್ಜುನ. ೪-೭). [?]

ಸೇಡಿಡಿ (ಕ್ರಿ). ಸೆಡೆತುಕೊಳ್ಳು; ಜಡವಾಗು: ಕರಚರಣಮೈಕಿಲದಿ ನಾಂದು ಸೇಡಿಡಿದು ಮುಂದಿರುವ ಮರನಂ ಪತ್ತಲಾರದೆ (ಮಹಾವಿ. ೨೮-೧೩). [ಸೇಡು + ಇಡಿ$_1$]

ಸೇಡು$_1$ (ಕ್ರಿ). ಕೆದರು; ಚೆದರು (?): ನೀಳ್ದ ನಖವ್ರಣವೀಳ್ದು ಪೊಯ್ಯೆ ಸೇಡಿದ ತಲೆ ತನ್ನೊಳೊಪ್ಪೆ ಸುರತಾಂತದೊಳೆನ್ನಯ ಮುಂದೆ ನಿಂದು ಮೇಲುದಱೊಳೆ ಬೀಸುತುಂ ಬೆಮರನಾಱಿಸುವೋಪಲನೆಲ್ಲಿ ಕಾಣ್ಬೆನೋ (ಶೃಂಗಾರ. ೨-೭೩). [?]

ಸೇಡು$_2$ (ನಾ). ೧. ಸೆಡೆಯುವಿಕೆ; ಮುದುಡುವಿಕೆ: ತಳರ ಜೊಂಪಂ ಕೂಡೆ ಸೇಡಾಗಿರಲ್ ಕೆಯ್ ಕೊಳೆ ಕುಳಿರ್ವುವು (ಶಾಂತಿಪು. ೮-೧೪); ಕೊಳದೊಳ್ ಮುಱುಗಿರ್ದಕ್ಕಟಾ ಕೋಡ ಸೇಡಿಂಗೊಳಗಾದ್ದೆ (ಗದಾಯು. ೩-೧೩); ಒಡಲೊಡರಿಸುವೊಡಂ ತೊಡೆ ಸೇಡೊಡರಿಸಿದಪ್ಪುದು (ಪಂರಾಮಾ. ೪-೬೯); ನಡುಕದ ಮೆಯ್ಯ ಕಡು ಸೇಡುಗಳ ಶೀತದ ಸಕಲ ಜನ ಹುದುಗಿದುದರಣ್ಯದಲಿ (ಕುಮಾಅ. ೧೯-೨೪). ೨. ಬಾಗಿರುವಿಕೆ; ವಕ್ರತೆ: 'ಸೇಡುಗೋಲ್' ಪರಾ.

ಸೇಡುಹಿಡಿ = ಚಳಿಯಿಂದ ಜಡವಾಗು; ಜೋಮುಹಿಡಿ: ಪ್ರಚಂಡವಾದ ಮಳೆಯ ಹೊಡೆತದಿಂದ ಅವಳ ಮೈಕೈಗಳು ಸೇಡುಹಿಡಿದುದರಿಂದ . . . ಶ್ರಮವು ಅವಳಿಗಾಯಿತು (ಅಂಬಿಕ. ೪). [< ಸೆಡೆ$_1$]

ಸೇಡು$_3$ (ನಾ). ೧. ವೈರ; ಹಗೆ; ಮತ್ಸರ: ಖರದೂಷಣರ ಸಂಹರಿಸಿದಾ ಸೇಡ ತೀರ್ಚದಿರೆ . . . ಫಲಮಿಲ್ಲೆಂದಳು (ಭರತ. ೫-೯೬); ನೊಸಲ ಬರೆಹದ ಸೇಡಿನಿಂದಾಯ್ತು ಮಾಳ್ಪುದೇಂ (ಕಾಲೂರ. ೧೬೨-೩೫೯). ೨. ಪ್ರತೀಕಾರ; ಮುಯ್ಯಿ: ಹುಸೇನಿಯಿಂದ ಒದೆಗಳನ್ನು ತಿಂದ ಗುಂಡನಲ್ಲಿ ಸೇಡಿನ ಬುದ್ಧಿ ಕಳಕಳಿಸಿ ನಿಂತಿತು (ರಂಗರೂ. ೧೮೨); ಪ್ರಪಂಚಕ್ಕೆಲ್ಲಾ ತಿಳಿಯುವಂತೆ ನನ್ನ ಸೇಡು ತೀರಿಸಿಕೊಳ್ಳುತ್ತೇನೆ (ಅರ್ಯಾಕ. ೫೫). [?]

ಸೇಡುಂಗೊಳ್, ಸೇಡುಗೊಳ್ (ಕ್ರಿ). (ಚಳಿಯಿಂದ) ಸೆಡೆತುಕೊಳ್ಳು; ಮುದುಡಿಕೊಳ್ಳು: ಗಱಿಗೆದಱಿ ಬಿದಿರ್ದು ಕೊಕ್ಕಿಂದಿಱಿದಿಱಿದೆಳೆವಿಸಿಲನೆಳಸಿ ಸೇಡುಂಗೊಂಡೇಂ ತುಱುಗಿರ್ದುವೊ ತುದಿಗೋಡೊಳ್ಕಱಿ ಬೆಱೆತಿರೆ ನೋಡಿ ಬಾಡುತಂ ವಿಹಗಂಗಳ್ (ರಾಜಶೇ. ೯-೨೯). **ಸೇಡುಗೊಳ್**: ಮುತ್ತುಗಳಂತಿರೆ ಸೂಸಿ ಪಾಯ್ವ ಶೀಕರದೊಳೆ ನಾಂದು ಸೇಡುಗೊಳುತಂ (ಕಾವ್ಯಸಾ. ೭೮ ಪ್ರಾರ್ಥ); ಕ್ರೀಡಾನಿಮಿತ್ತಂ ಪೋಗಿ ಅಕಾಲವೃಷ್ಟಿಯಾಗೆ ಸೇಡುಗೊಂಡು ಸಿಂಹದ ಬಲನಂ ಪುಗೆ (ಪುಣ್ಯಾಸ್ರ. ೧೨-೫೫ ವ); ಮಹಾವೃಷ್ಟಿಯಿಂ ನನೆದು ಸೇಡುಗೊಂಡೆಂ ನಡೆದು ಪೋಗಲಾಱೆ (ಚಟುಪು. ೫೨-೪೯).

[ಸೇಡು$_2$ + ಕೊಳ್$_1$]

ಸೇಡುಗೊಳ್ 'ಸೇಡುಂಗೊಳ್' ನೋ.

ಸೇಡುಗೋಲ್ (ನಾ). ಬಾಗಿರುವ ಕೋಲು; ವಕ್ರವಾದ ಕೋಲು: ಮೊಲನಂ ಸೇಡುಗೋಲಿಂದಲಂಬಿಂ ಬಿಡು ಸಾರಂಗಕ್ಕೆ ಚೊಪ್ಪಂಬುಗಲೆಡೆಗೊಡದಿರ್ (ಸೂಕ್ತಿಸು. ೩-೧೧೮); ನೊಸಲೊಳಗಿಟ್ಟ ಚೆಲ್ವ ತಿಲಕಂ ಪಿಡಿದಗ್ಗದ ಸೇಡುಗೋಲ್ ವಿಲಂಬಿಸುವುಪವೀತಂ (ದಶಕು. ೩-೧೧). [ಸೇಡು$_3$ + ಕೋಲ್$_1$]

ಸೇಡುತೀರಿಸು (ಕ್ರಿ). ಪ್ರತೀಕಾರಮಾಡು; ದ್ವೇಷಸಾಧಿಸು: ಅವನ ಮೇಲೆ ಸೇಡು ತೀರಿಸಿಕೊಳ್ಳಲೆಂಬಂತೆ ಮೊಕದ್ದಮೆ ಬಹು ದೀರ್ಘಕಾಲ ಎಳೆಯಿತು (ಪುನರು. ೮೭); ನಮ್ಮ ಅಣ್ಣನಿಗಾಗಿ ನಾನು ಸೇಡುತೀರಿಸಿಕೊಳ್ಳುತ್ತೇನೆ (ಯೋಧಪು. ೧೬). [ಸೇಡು$_3$ + ತೀರಿಸು]

ಸೇಡುಪಡು 'ಸೇಡುವಡು' ನೋ.

ಸೇಡುವಡು, ಸೇಡುಪಡು (ಕ್ರಿ). = ಸೇಡುಂಗೊಳ್: ಕೋಡಿಸುವ ಚಂದ್ರಕಾಂತದ ಕೋಡುಂಗಲ್ಗಳಿನೊಸರ್ವ ರಸದ ಪೊನಲ್ಗಳ್ ಸೇಡುವಡೆ ಕವಿಯೆ . . . ನನೆದು ಹಿಮಕರನಾದಂ (ಸೂಕ್ತಿಸು. ೩-೧೫). **ಸೇಡುಪಡು**: ಸೇಡುಪಟ್ಟಂ, ಸೇಟ್ಪಟ್ಟಂ (ಶಮದ. ೧೯ ಪ್ರಯೋ). 'ಸೇಟ್ಪಡು' ಪರಾ. [ಸೇಡು$_2$ + ಪಡು$_1$]

ಸೇಡುವಡೆ (ಕ್ರಿ). = ಸೇಡುಂಗೊಳ್: ಇಳೆ ಮಳೆಯಿಂ ನಾಂದು ಸೇಡುವಡೆದಿರೆ (ರಾಜಶೇ. ೮-೧೨೫). [ಸೇಡು$_2$ + ಪಡೆ$_1$]

ಸೇಡೆ 'ಸೆಡೆ$_5$' ನೋ.

ಸೇಣ (ನಾ). ೧. ಗುಂಪು; ಸಮೂಹ: "ಬಂಬಲ್ . . . ಸೇಣ, ತಂಡಂ . . . ಗೊಂದಲ್ (ಉಂದಲ್)-ಈ ೪ಂ ಸಮೂಹಂ" (ಕಶಸಾ. ೫೬-೨೨೨); ಚರಿಪ ಚಂದಳಿರಂ ಕರ್ದುಂಕುವ ಕೋಕಿಲಂಗಳ ಸೇಣಿಯಿಂ . . . ವನಮೊಪ್ಪಿರಲ್ (ಹಾಲಾಸ್ಯ. ೧-೧೧-೪); ಪರಮೆಗಳ ಸೇಣ ಹರಿನೀಲಮಣಿತೋರಣದ ಸಿರಿವಡೆಯೆ (ಶಪಾರಾ. ೭-೩೧). ೨. ಸಾಲು; ಪಂಕ್ತಿ: 'ಸೇಣಿಗೊಳ್' ಪರಾ. ೩. ಕಸುಬುದಾರರ ಮುಖ್ಯಸ್ಥರು ಸೇರಿ ನಡೆಸುವ ಸಭೆ: ಅ[ಪು]ತ್ರ ಧನಮೆನ್ನೊದು ತಾನೆ ಇಲ್ಲಿ ಸ[ೇ]ಣಿಗೆ ಕಾರ್ತಿಕ ಮಾಸದುಳ್ ಕೊಡುವದು (ಎಇ XIV. ೧೯೧-೨೧; 725); ಸೇಣಿಗೆ ಮಲೆವರ ಗಂಡಂ . . . ಸೇಣಿಗೆ ಕೂರ್ಪರ ನಂಟಂ (ಎಕ. V. ಚನ್ನರಾ. ೨೦೯-೩೩; 1178).

ಸೇಣಿಗ (ನಾ). ವ್ಯಾಪಾರಿ; ವರ್ತಕ: ದೀಪಾವಳಿಯ ಪರ್ವದಲು ಬೆಳಗುವ ಸೊಡರಣ್ಣಿಗೆ ಉ(ಊ)ರೊಳಗಣ ಸೇಣಿಗರು . . . ಬಿಟ್ಟ ಹಾಗವೊಂದು (ಎಇ XIX. ೩೮-೩೩; 1144); ಕುರುಬ ಸೇಣಿಗ ದಾಸಗೌಡ ಸಿವಸಕ್ತಿಗುರುಗಳುಂ ಸಮಸ್ತ ಕೊತ್ತಳಿಗಳುಂ (ಸೌಇ. XV. ೧೬೯-೧೩; 1223); ಸರವ ತಿದ್ದಿಡುವ ಸರವಂದಿಗರ ಗಂದಿಗರ ಪಿರಿದು ತೈಲವ ತೆಗೆವ ಗಾಣಿಗರ ಸೇ[ಪಾಶಾಂ. ಶ್ರೇ]ಣಿಗರ . . . ಪಸರಮೆಸಗುಂ (ಗುರುಚಾ. ೧-೩೪). [< ಸಂ. ಶ್ರೇಣಿಕ]

ಸೇಣಿಗೊಳ್ (ಕ್ರಿ). ಸಾಲುಗೊಳ್ಳು; ಪಂಕ್ತಿಗೊಳ್ಳು: ಚತುರಂಗಬಲಂ . . . ಸೇಣಿಗೊಂಡು ಮೆಲ್ಲಮೆಲ್ಲನೆಯ್ದುತಿರೆಯುಂ (ಮರಾಚ. ೧೨-೮೪). [ಸೇಣಿ + ಕೊಳ್$_1$]

ಸೇಣಿಪತಿ (ನಾ). ಗುಂಪಿನ ನಾಯಕ,—ಒಡೆಯ: ಶ್ರೀಮನ್ಮಹಾಪ್ರಧಾನಂ ಸೇಣಿಪತಿ ಕಡಿತವರ್ಗ್ಗಡೆ ಕನ್ನಡಸಂಧಿವಿಗ್ರ[ಹಿ] . . . . [ದಾನಂ]ಗಳಂ ಮಾಡಿ (ಸೌಇ. XV. ೩೧-೪೦; 1146). [< ಸಂ. ಶ್ರೇಣಿಪತಿ]

ಸೇಣೆ 'ಸೇನ$_1$' ನೋ.

ಸೇತ (ನಾ). ಬಿಳುಪು; ಶ್ವೇತ: ವತ್ಸಲೋಪಕ್ಕೆ . . . ಶ್ವೇತ - ಸೇತ, ಸರಸ್ವತಿ—ಸರಸತಿ (ಶಮದ. ೨೮೧ ಪ್ರಯೋ). [< ಸಂ. ಶ್ವೇತ]

ಸೇತಮಾಲೆ (ನಾ). ಬಿಳಿಯ ಬಣ್ಣದ ಸರ; ಮುತ್ತಿನ ಹಾರ: ಅದೊಂದು ಬೆಡಂಗಿನ ಸೇತ[ಪಾಶಾ. ಶ್ವೇತ, ಸೇತು]ಮಾಲೆ ಪಟ್ಟಗೆ ಕಟಸೂತ್ರಮೆಂಬವು ಮನಂಗೊಳೆ (ಆದಿಪು. ೧೨-೧೨); ಸ[ರಿ]ಗೆಗೆ ಸೇತಮಾಲೆಗೆ ಬೆಡಂಗಿನ ಕನ್ನವುರಕ್ಕೆ . . . ಇವು ತಕ್ಕವು (ವರ್ಧಮಾ. ೮-೬೯). [ಸೇತ + ಮಾಲೆ]

ಸೇತು (ನಾ). ೧. ನದಿ, ಹಳ್ಳ ಮುಂತಾದುವನ್ನು ದಾಟಲು ನಿರ್ಮಿಸುವ ಕಟ್ಟೆ; ಸೇತುವೆ; ಸಂಕ: ವಿಷಯಸುಖಸುಧಾರಸಕ್ಕೆ ಸೇತುವುಂ . . . ಎನಿಪ ಪುರವರದ ಸೂಳಿಗೇರಿಯೊಳ್ (ಮಲ್ಲಿಪು. ೨-೫೪); ಬಹುಖೇದಜಲಧಿಗೆ ಸೇತುವಾದೆಲೆ ನೀನು (ಕುಮಾಸ. ೧೫-೫೪); ಕವಿರಸಾನುಭವದ ಸೇತುವಿಂ ಪ್ರವಾಹವಿಳಿದು ಬನ್ನಿ (ಅನಿಕೆ. ೨೧-೧೦). ೨. ಅಣೆಕಟ್ಟು; ಒಡ್ಡು: "ವಾರಣಂ ಸೇತುವನೆ ಕಟ್ಟೆಯೆನಿಸಿಕ್ಕು" (ಮಂಗರಾ. ೧೨-೧೩). ೩. (ಹೊಲ, ಗದ್ದೆಗಳಲ್ಲಿರುವ) ಮಣ್ಣಿನ ಕಟ್ಟೆ; ಬದು. ೪. ರಾಮೇಶ್ವರದಿಂದ ಲಂಕೆಗೆ ಹನುಮಂತನು ಕಟ್ಟಿದನೆಂದುಭಾವಿಸಲಾಗುವ ಪವಿತ್ರಸೇತುವೆ: ಉದಯಾಸ್ತೋನ್ನತಶೈಲಸೇತು ಹಿಮವತ್ಕುಟ್ಟಿಕೇಳಪರ್ಯಂತ ಸಂಪದೆಯಂ . . . ಸಾಧಿಸಿ (ಕಾವ್ಯಾವ. ೧೭೩). ೫. ಹಿಂದು ಬಗೆಯ ಮರ: "ವರುಣಃ, ವರಣಃ, ಸೇತುಃ, ತಿಕ್ತಶಾಕಃ, ಕುಮಾರಕಃ — ೫ ವಸಲೇಗಿಡ" (ಸಿದ್ಧಾಂಜಿ. ೧೧೭). [ಸಂ.]

ಸೇತುಗಟ್ಟು$_1$ (ಕ್ರಿ). ೧. ಸೇತುವೆಯನ್ನು ನಿರ್ಮಿಸು: ಅನಲಂ ಸ್ವರ್ಗಕ್ಕೆ ಸೇತುಗಟ್ಟಿದನೆನೆ ಪಾವನಹೋಮಧೂಮಮೊಗೆಯಲ್(ಕಾದಂಪು. ೨೧೨); ತ್ರಿದಶಸ್ತ್ರೀಜನ ಹಸ್ತಪಾತ್ರಮಣಿಮಾಳಾದೀಪಧೂಪಾಂಶುಜಾಲದೊಳಂ . . . ಅಮರಾಗಮಕ್ಕೆ ಸುರಚಾಪ ಶ್ರೇಣಿಯಂ ಸೇತುಗಟ್ಟಿದವೊಲಾಯ್ತೆಲರ್ವಟ್ಟೆ ಶಕ್ರಪುರದಿಂದಂ ಧೂಳಿಶಾಳಂಬರಂ (ಅನಂಪು. ೧೦-೧೪); ಸೇತುಗಟ್ಟಲುಬೇಕು ಶರಧಿ ದಾಟಲುಬೇಕು (ಪುರಂದ. ೧-೧೭೦-೧). ೨. (ಅಲಂ) ಒಂದೆಡೆ ಸೇರು; ಒಟ್ಟಾಗು: ಭಕ್ತಿರಸಂ ಸೇತುಗಟ್ಟೆ ಸತ್ಕದ ನುಡಿ ಕೆಚ್ಚುಗಟ್ಟೆ (ನಂಬಿರ. ೮-೫೮). [ಸೇತು + ಕಟ್ಟು$_1$]

ಸೇತುಗಟ್ಟು$_2$ (ನಾ). ಸೇತುವೆ; ಸಂಕ: ನಡೆದು ಗಂಗಾನದಿಯೊತ್ತಿನೊಳ್ಬಾಳೆಯ ಬಿಡಿಸಿದನಾ ಚಕ್ರವರ್ತಿ ಹಿಡಿದುದುಲುಪೆ ಸೇತುಗಟ್ಟಾಗಿ ಭಾವನ ಪಡೆಯನಾ ಸುಖಿ ತಣಿಸಿದನು (ಭರತ. ೩೬-೨೮). [ಸೇತು + ಕಟ್ಟು$_2$]

ಸೇತುಬಂಧ (ನಾ). ೧. ಅಣೆಕಟ್ಟು; ಒಡ್ಡು: ರಿಪುದರ್ಪಾರ್ಣವಸೇತುಬಂಧವಂ ನೃಪಂ ನಿರ್ಮಿಸಿದಂ (ಪುಷ್ಪಪು. ೪-೧೩). ೨. = ಸೇತು ೪: ಸೇತುಬಂಧಮಂ ತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀ ಮಾಳ್ಪುದು (ಪಂಪಭಾ. ೪-೮ ವ). [ಸಂ.]

ಸೇತುಬಂಧನ (ನಾ). = ಸೇತುಬಂಧ ೧: ನಿರ್ಜಿತವಿಶ್ರುತ ಹಸ್ತಿಮಸ್ತಮನಂಗ ರಾಗರಸಪೂರ ಸುನಿರ್ಭರ ಸೇತುಬಂಧನಂ ಮಾಸರಮೊಪ್ಪಿ ತೋಱುವುದು ಸಿಂಹಕಟೀ ತಟಮಾ ನೃಸಿಂಹನಾ (ವರ್ಧಮಾ. ೩-೧೩). [ಸಂ.]

ಸೇತುಬಂಧಾಸನ (ನಾ). [ಯೋಗ] ಒಂದು ಬಗೆಯ ಆಸನ; P "ದೇಹವನ್ನು ಕಮಾನಿನಂತೆ ಬಗ್ಗಿಸಿ, ಅದಕ್ಕೆ ಹೆಗಲುಗಳು, ಅಂಗಾಲು, ಹಿಮ್ಮಡಿ ಇವುಗಳ ಆಧಾರ ಕೊಟ್ಟು, ಅದನ್ನು ನಿಲ್ಲಿಸುವುದು" (ಯೋಗದೀ. ೧೭೧): ಮುಖ್ಯವಾದ ಕೆಲವು ಆಸನಗಳು. ಅಷ್ಟವಿನ್ಯಾಸಗಳು. ೧. ಉತ್ತಾನಾಸನ . . . ೪೮. ಸೇತುಬಂಧಾಸನ (ಭಾರದ್ವ. ೧೭೭). [ಸಂ.]

ಸೇತುಮಾರ್ಗ (ನಾ). ಸೇತುವೆಯ ಮೇಲಿನ ದಾರಿ: ಸ್ಥಪತಿರತ್ನಪ್ರಯತ್ನನಿರ್ಮಿತ ಸೇತುಮಾರ್ಗಂಗಳೊಳ್ ಜಂಗಮಗಿರಿದುರ್ಗಂಬೆರಸು ನಡೆದಂತೆ ಕರಿಕರೇಣುಪರೀತಂ ಚಕ್ರವರ್ತಿ ನಡೆವುದುಂ (ಶಾಂತಿಪು. ೧೧-೫೦ ವ). [ಸಂ.]

ಸೇತುವೆ (ನಾ). ೧. = ಸೇತು ೧: ಅದರ ಮೇಲೆ ದೊಡ್ಡ ದೊಡ್ಡ ಕಲ್ಲುಗಳಿಂದ ಕತ್ತರಿಸಿ ಒಂದು ಸೇತುವೆಯಂತೆ ಮಾಡಿದ್ದರು (ಬಾಣಾಭ. ೩೮೬): ಸೇತುವೆಯಲ್ಲಿ ಜನರಿಗಾಗಿ ಹಾದು ಹೋಗಲು ಪ್ರತ್ಯೇಕ ಕಾಲುದಾರಿ ಇದೆ (ನಾಟಕ. ೧). ೨. (ಆಲಂ) ಸಂಬಂಧವನ್ನು ಕಲ್ಪಿಸುವ ಸಾಧನ; ಸಂಪರ್ಕಸಾಧನ: ಕವಿ, ಸಾಮಾನ್ಯಜೀವಿಗೂ ಅನುಭಾವಿಗೂ ನಡುವಿರುವ ಸೇತುವೆ (ಧರ್ಮಸಾ. ೯೭). [ಸೇತು + - ವ]

ಸೇತುಸ್ನಾನ (ನಾ). ರಾಮೇಶ್ವರದಲ್ಲಿರುವ ಪ್ರಸಿದ್ಧತೀರ್ಥಘಟ್ಟದಲ್ಲಿ ಮಾಡುವ ಸ್ನಾನ: ಅವರು ಮೂರುಸಾರಿ ಸೇತುಸ್ನಾನವನ್ನೂ, ಇಪ್ಪತ್ತೇಳುಸಾರಿ ಭೂಮೈಕುಂಠವಾದ ತಿರುಪತಿಯಾತ್ರೆಯನ್ನೂ ಮಾಡಿದರು (ವಿದಾಕೃ. ೪ ಮುಮ್ಮಡಿ). [ಸಂ.]

ಸೇದಿಕಲ್ಲು (ನಾ). ಕೆಂಪುಕಲ್ಲು; ಜಾದು: ಮಂಟಪದ ಎದುರಿನ ಕಟ್ಟೆಯ ಮೇಲೆ ಎರಡು ಕಲ್ಲುಗಳಿವೆ. ಇವು ಕೆಂಪುಜಾತಿಯ ಅರೆಗಲ್ಲುಗಳು (ಇತ್ತಕಡೆಯ ಜನರು ಸೇದಿಕಲ್ಲು ಎನ್ನುವರು) (ಕರ್ನಾಸಂ. ೨೫೮).

[ಸೇದಿ (P <—ತಮಿ. ಚೇತು, ಚೇತ್ತು) + ಕಲ್ಲು (< ಕಲ್ ೨)]

ಸೇದು 'ಸೇಂದು' ನೋ.

ಸೇದುಬತ್ತಿ (ನಾ). ಹೊಗೆಯನ್ನು ಒಳಗೆ ಎಳೆದುಕೊಳ್ಳುವ ಬೀಡಿ, ಚುಟ್ಟಿ ಮೊದಲಾದುವು: ಸೇದುಬತ್ತಿಯನ್ನು ಸೆಳೆಯುತ್ತಿದ್ದ ಮನೆಯ ಮುದುಕನ ಹೊದರುಗಡ್ಡಕ್ಕೆ ಹೇಗೋ ಬೆಂಕಿ ತಗಲಿ ಜ್ವಲಿಸಲಾರಂಭಿಸಿತು (ಎಂಠಬು. ೫೦).

[ಸೇದು (< ಸೇಂದು) + ಬತ್ತಿ]

ಸೇದುಬಾವಿ (ನಾ). ನೀರನ್ನು ಮೇಲಕ್ಕೆತ್ತಿ ತೆಗೆಯಲು ಅನುಕೂಲವಾಗಿರುವ ಬಾವಿ: ಸೇದುಬಾವಿ ಕಂಡು ನಾಯಿ ಸಂತೋಷಪಟ್ಟು ಹಾಗೆ (ಗಾದೆ).

[ಸೇದು (< ಸೇಂದು) + ಬಾವಿ]

ಸೇದುವಕ್ಕೆ (ನಾ). ಸೆಳೆದುಕೊಳ್ಳುವ ಪಕ್ಕೆ: ಒಗುವ ಕಂಬನಿಗಳಲಿ ಕಂಠವ ಬಿಗಿದ ಸೆರಗಳ ಸೇದುವಕ್ಕೆಯ ವಿಗತಪರಿತೋಷಿತನು (ಕೂರಾ. ೧-೪-೭).

[ಸೇದು (< ಸೇಂದು) + ಪಕ್ಕೆ (< ಪಕ್ಕ)]

ಸೇದೆ$_1$ (ನಾ). ೧. ಜಗ್ಗುವಂಥದು; ಸೇದುವಂಥದು: ಹಲವುಬಣ್ಣದ ನೂಲ ಹುರಿಮಡಿ ತವ ಕಾವಿನೊಳಗೊಂದಮೃತದ ಸೇದೆಯ ಬಾವಿ ತೊಲಗಲೀಯದು ಡಾಲ ಗಾಜಿನನು (ಶೂನ್ಯಸಂ. ೩೮೨-೪); ಸೇದೆಯ ನೇಣಂ ಕರಗಮನೊಲ್ವಿತ್ತು ಸೇದಿ ನೀರ್ಗುಡಿಯೆಂದಳ್ (ದಶಕು. ೧೨-೮೧). ೨. ಸೇದುವ ಸಾಧನ; ಹಗ್ಗ: ಬಾವಿಯೊಳಗೆ ಸೇದೆಯನಿಕ್ಕಲ್ (ಧರ್ಮಾಮೃ. ೧೨-೧೭೮). [ಸೇದು (< ಸೇಂದು) + - ಎ]

ಸೇದೆ$_2$ (ನಾ). ದಣಿವು; ಆಯಾಸ; ಬಳಲಿಕೆ: ಇಂದಿನ ದಿವಸಮಿಲ್ಲಿರ್ದು ಚಿಂಗೆವೊಕ್ಕು ಸೇದೆಯನಾಲಿಸಿ ನಾಳೆ ಪೋಕೆಂದೊಡೆ (ವಡ್ಡಾರಾ. ೯೦-೨೮); ಭಯಂಕರಾಟವಿಯೊಳ್ನೆವರಂ ನೆಲಸಿರ್ದ ಸೇದೆ ನೀಂ ಕರುಣಿಸಿದಾಗಳಲ್ಲದವರ್ಗಾಱದು (ಪಂಪಭಾ. ೯-೪೨); ಇವರ್ಕತಿಭಾರದೊಳಾದ ಸೇದೆಯಂ ಕಿಡಿಸಿ ತನೂಜ ನೀಂ ತಳೆವುದೀ ನೆಲನಂ ನಿಜಬಾಹುದಂಡದೊಳ್ (ಪಂಠಾಮಾ. ೬-೮೩); ಕೂಡುವ ನೆಲ್ಲರ ನೀಳ್ದ ಸೇದೆಯ ಸಳಿದಲರಲ್ಲಿ ತೀಡುವದು ಮೆಲ್ಲನೆ ಮೆಲ್ಲನೆ (ಕಬ್ಬಿಗಾ. ೩೩).

[ದೇ. ॥ ತೆಲು. ಸೇದ./ ಹ್ರಾ. ಸೇಅ, ಸೇದ./ ಸಂ. ಸ್ವೇದ]

ಸೇದೆಗಳೆ (ಕ್ರಿ). ಆಯಾಸವನ್ನು ನೀಗು; ದಣಿವಾರಿಸಿಕೊಳ್ಳು: ಪದ್ಮಿನಿಯೊಳ್ ತುಂಬಿ ಪುಲಂಗಿ ಸೇದೆಗಳೆ[ವಾಶಾಂ.೪]ಗುಂ (ಅನಂಪು. ೩-೧೦). [ಸೇದ$_2$ + ಕಳೆ$_1$]

ಸೇದೆಗಿಡು 'ಸೇದೆಗೆಡು' ನೋ.

ಸೇದೆಗೆಡಿಸು (ಕ್ರಿ). ಆಯಾಸದಿಂದ ಬಳಲಿಸು: ಆನೆಯಂ ಸೇದಗೆಡಿಸಿ ತನ್ನ ಬಸಕ್ಕೆ ಮಾಡಿ (ವಡ್ಡಾರಾ. ೩೪-೧೫೫). [ಸೇದೆಗೆಡು + - ಇಸ್ಸು]

ಸೇದೆಗೆಡು, ಸೇದೆಗಿಡು (ಕ್ರಿ). ಆಯಾಸದಿಂದ ಬಳಲು; ಅಶಕ್ತವಾಗು: ಕಾಷ್ಠಕೂಟಂ ಸೇದೆಗೆಟ್ಟು ಪುಳ್ಕಿಯ ಪೊಱೆಯನಿಲೊಪಿ ಪಟ್ಟರ್ದೊಡೆ (ವಡ್ಡಾರಾ. ೭೭-೨೫); ಬಟ್ಟೆವೋಪ ಕುತ್ತಂಗುಳಿಯಂತೆ ಸೇದೆಗೆಟ್ಟು (ಧರ್ಮಪ್ಯ. ೧೩-೬೯): ಖರಾಂಶು ತಂನೊಡಲನಾವರಿಸಲು ಸೆಜೆ ಸೇದೆಗೆಟ್ಟು (ಕೌ. I, ೨೫-೨೭; 1186 ?). **ಸೇದೆಗಿಡು**: ಪರಲೋಕ ಸುಖಾರ್ಥ ಮಾತ್ಮಾಸ್ತಿತ್ಯಾಭಿನಿವೇಶದಿಂ ತನುಧನನಿಧನಂಮಾಡಿ ಸೇದೆಗಿಡಲ್ವೇಡ (ಆದಿಪು. ೨-೯೪); ಪಾಯ್ದ ಕರಿಯುಂ ಹರಿಯುಂ ಪೊಸ ಪೋರ್ತಮನಜಿಯಮೆ ಪುಟ್ಟಿಸೆ ನೆಲಲೊಳ್ ಪೋರ್ದು ಸೇದೆಗಿಡುವುವು ನಗದೊಳ್ (ಶಾಂತಿಪು. ೨-೧೦೩); ಅವನೊಳ್ ಕರಮೆ ಚಲಂಗೆಯ್ದು [ಸೇದೆ][ವಾಶಾಂ. ಸಡೆ]ಗಿಡದಿರು ಮರುಳೇ (ಬಂಪಾ. ೪-೧೪). [ಸೇದೆ$_2$ + ಕೆಡು$_1$]

ಸೇದೆದಳಿ (ಕ್ರಿ). ದಣಿವುಹೊಂದು; ಬಳಲು: ಸುಸಿಲಸಗುತ್ತ ಸೇದೆದಳಿದಾಗಳ ಭಿಲ್ಲಿಯುಮಲ್ಲಿ ಭಿಲ್ಲನುಂ (ರಾಜಶೇ. ೫-೧೦೧). [ಸೇದೆ$_2$ + ತಳಿ$_1$]

ಸೇದೆನೀರ್, ಸೇದೆನೀರು (ನಾ). ಆಯಾಸದಿಂದ ದೇಹದಲ್ಲಿ ಉಂಟಾಗುವ ನೀರು; ಬೆವರು: ರಕ್ಕಸನ ಸಹಸ್ರಮುಖಂಗಳೊಳಂ ಸೇದನೀರ್ ಪುಟ್ಟಿತ್ತು (ಅರ್ಜುನ. ೫೦-೬). **ಸೇದೆನೀರು**: ಏದುತ್ತೇದುತ್ತ ಸೇದನೀರಲ್ಲಿ ಮಿಂದ ಚೆಮ್ಮೊಗವನ್ನು ಚೇಲಾಂಚಲದಿಂದ ತೊಡೆದುಕೊಂಡು (ಮಂತ್ರಿಶ. ೬೪-೧೫). [ಸೇದ$_2$ + ನೀರ್]

ಸೇದೆನೀರು 'ಸೇದೆನೀರ್' ನೋ.

ಸೇದೆವಡು (ಕ್ರಿ). = ಸೇದೆಗೆಡು: ಭಟಾರಾ ನಿನ್ನ ಬಟ್ಟೆವಂದುಪವಾಸಂಗೆಯ್ದು ಸೇದೆವಟ್ಟಿರ್ (ವಡ್ಡಾರಾ. ೯೦-೨೬); ವಲಿವಲಿಯಾಗಿ ಬಿರ್ದು ಸೇದವಟ್ಟ ನವನಾರಕರಂ ಪುರಾಣನಾರಕರ್ಕಂಡು (ಸುಜಾಪ್ರ. ೧೧-೪೧ ವ); ಲತಾಮಂಟಪಂಗಳೊಳ್ನೆರೆದು ಸೇದೆವಟ್ಟ ಕಾದಲರ ಸುಯ್ಲಲರ ನಲುಗಂಟಿನೊಡವೆರೆದು . . . ಬರ್ಪ ಮಂದಾನಿಲಂಗ ಕರುಣಿಸಿ (ರಾಜಶೇ. ೨-೭೭ ವ). [ಸೇದೆ$_2$ + ಪಡು$_1$]

ಸೇದೆವಡೆ (ಕ್ರಿ). ಆಯಾಸಗೊಳ್ಳು; ದಣಿ: ಬಳಿದೊಟ್ಟುಂ, ಸೇದವಡದಂ (ಭಾಷಾಧೂ. ೧೩೩ ಉದಾ); ಸೇದವಡದಂಗೆ ತಂಗಾಳಿ . . . ದೊರಕೊಂಡೊಲಾಯ್ತುಮಗೆ ಶಿವನಡಿಗಳಂ ಕಾಣಲೊಡನೆ (ಚಿಪ್ರ. ೩೬-೧೨). [ಸೇದೆ$_2$ + ಪಡೆ$_1$]

ಸೇದೆವುಗು (ಕ್ರಿ). ಆಯಾಸವುಂಟಾಗು: ಆಟಂ ಬಗದೋಱೆ ಸೇದವುಗೆ ತಾಂ ಸೋಂಕಿ (ಕಮಮಾ. ೨-೧೫೦). [ಸೇದೆ$_2$ + ಪುಗು (< ಪೊಗು)]

ಸೇನ$_1$, **ಸೇಣ** (ನಾ). ಗಿಡುಗ; ಡೇಗೆ: ಕಾಗೆ ಪೂಣರ್ವಕ್ಕಿ ಪೊಂಗುರು ಗೂಗ ಮುಕುಂದಂ ಬಲಾಕೆ ಲಾವುಗೆ ಸೇನಂ (ಕಾವ್ಯಸಾ. ೧೦೪೪ ಶೂದ್ರಕ). **ಸೇಣೆ** : ಅಂಟು ಸಾಳುವ ಸೇಣ ತಡಿಕೆ ಗಾಣಗಳಿಂದ ಉಂಟಾಗಿ ನಡಸಂದ ರಾಯ (ಹರಿಸಾ. ೧೦೬೧).

[< ಸಂ. ಶ್ಯೇನ./ ಪ್ರಾ. ಸೇಣ]

ಸೇನ$_2$ (ನಾ). 'ಕೆಲವು' ಅಂಕಿತನಾಮಗಳ ಕೊನೆಯಲ್ಲಿ ಸೇರುವ ಶಬ್ದ: 'ಮಾಸೇನ' ಪರಾ. [ಸಂ.]

ಸೇನಬೋಕೆ 'ಸೇನಬೋಯಿಕೆ' ನೋ.

ಸೇನಬೋಗ 'ಸೇನಬೋವ' ನೋ

ಸೇನಬೋಯಿಕೆ, ಶಾನುಭೋಗಿಕೆ, ಶೇನಭಾವಿಕೆ, ಸೇನಬೋಕೆ (ನಾ). ಗ್ರಾಮದ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಬರೆಯುವ ವೃತ್ತಿ; ಶ್ಯಾನುಭೋಗಪದವಿ: ಅಧಿಕಾರಿಯ ಉಡುಗೊಡೆ ಸೇನಬೋಯಿಕೆ ಬಾದಿನ ವರ್ತನೆ . . . ನೀಱು ಆಗುಮಾಡಿಕೊಂಡು (ಸೌಂಶಾ. IX-ii, ೪೪೦-೨೭; 1419). **ಶಾನುಭೋಗಿಕೆ** : ಶಾನುಭೋಗಿಕೆ ಮುಂತಾದುವುಗಳಿಂದ ಹೊಟ್ಟೆಹೊರೆದುಕೊಳ್ಳುತ್ತಿದ್ದವರ ಅರ್ಜಿಗಳನ್ನು ಜಾಗ್ರತೆಯಾಗಿ ಮಂಜೂರುಮಾಡಲಾಯಿತು (ಧಾರಾಶಾ. ೧೫೭). ಆಮಿಷವನ್ನು ಒಡ್ಡುವುದು ಶಾನುಭೋಗಿಕೆಯಾಗಿದೆ (ರಂಗರೂ. ೮೧). **ಶೇನಭಾವಿಕೆ**: ಕಳದಿಸ್ಥಳದ ಶೇನಭಾವಿಕೆ ವರ್ತನಿ ಸಮ್ಮಳೆ (ಮೈಅಂ. ೧೯೨೮,೬೫-೨೪; 1509). **ಸೇನಬೋಕೆ** : ನಾಡ ಸೇನಬೋಕೆಯನೂ

ಆಚಂದ್ರಾರ್ಕಸ್ಥಾಯಿಯಾಗಿ XXX ನಡಸಿ ಬಹುದು (ಸೌಇ. IX.-ii. ೪೩೩-೭೫; 1408); ಉಭಯಂಸ್ಥಳ ಸೇನಬೋಕೆಯ ಸಂಪ್ರತಿ ಎರಡು (ಸೌಇ. IV. ೨೫೪-೧೦೬; 1513).

[ಸೇನಬೋವ + - ಇಕೆ]

ಸೇನಬೋವ, ಶಾನಬಾಗ, ಶಾನಬಾವ, ಶಾನಬೋವ, ಶಾನಭಾಗ, ಶಾನಭೋಗ, ಶಾನಭೋವ, ಶಾನುಭಾಗ, ಶಾನುಭಾವ, ಶಾನುಭೋಗ, ಶೇನಭೋಗ, ಶ್ಯಾನಭಾಗ, ಶ್ಯಾನಭಾವ, ಶ್ಯಾನಭೋಗ, ಶ್ಯಾನುಭಾಗ, ಶ್ಯಾನುಭೋಗ, ಸೇನಬೋಗ, ಸೇನಭಾಗ, ಸೇನಭೋಗ, ಸೇನಭೋವ, ಸೇನುಬೋವ, ಸೇನುಭೋಗ (ನಾ). ಗ್ರಾಮದ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಬರೆಯುವವನು: "ಕಾಯಸ್ಥಃ, ಅಕ್ಷರಜೀವಕಃ—ಈ ೨ ಸೇನಬೋವಂ" (ಜಲಾಯು. ೯೬-೪೩೨); ಸೇನಬೋವಂ ಗುಣವರ್ಮ್ಮಂ ಬರೆದಂ (ಎಇ. X. ೧೫೨-೬೬, 915); ಗುಣಮಱಸುವುದ ಸೇನಬೋವ [ಪಾಠಾಂ. ಶೈವಬೋಧ] ರೊಳೆಂತುಂ (ಸಮಪ. ೧೪-೨೩); ವರವವಂಗೆ ಕುಟುಂಬರಕ್ಷಾಕರಣಕಾರಣವಾದ ಹಿಂಸಾಚರಣೆಯೆಂದೇ ಬರಹ ಧರ್ಮನ ಸೇನಬೋವನಲಿ (ಕಬ್ಬಾಕ. ೧೭-೧೯). **ಶಾನಬಾಗ:** ಶಾನಬಾಗನ ಹಗ ಕಳ್ಳರ್ಕಡಯಲೂಳಿಗವಿಂತಿದು ಸೈತುವೊಟವತಪ್ಪುದೇ (ನೀತಿಸಾ. ೧೪೧). **ಶಾನಬಾವ:** ಕಡಬೂರಗ್ರಾಮ ಶಾನಬಾವರು ಸೂರಿಗರ ಕಾಡಪರವರಿಗೆ ಕೊಟ್ಟ ಗ್ರಾಮ (ಎಕ. X. ಗೋರಿಬಿ. ೬೩ ೫. ?). **ಶಾನಬೋವ:** ತ್ರಿಕರಣವೆಂಬ ಪ್ರಧಾನಿ ವಶೀಕರಣವೆಂಬ ಶಾನಬೋವ (ಚನ್ನವ. ೭೫-೧೫); ಶಾನಬೋವ ತಿಂಮರಸರ ಮಗ ಲಕ್ಕೆಯನು (ಸೌಇ. VIII. ೩೬೨-೩; 1507). **ಶಾನಭಾಗ:** ಶಾನಭಾಗರ ಕಡಿತಕ್ಕೆ ಬರಿಸಿ - ಮ್ಯಾಂ. ೧೯೩೦; ೪೪-೯; 1768). **ಶಾನಭೋಗ:** (ರೃಸಗ. II. ೫೬೧); ಶಾನಭೋಗನ ಸಂಬಳ ಸಂತೋ ಎಂದು ಕೇಳಬೇಡ, ಹೆಂಡತಿ ದೆಸೆಯವರು ಉಂಡರೋ ಎಂದು ಕೇಳಬೇಡ (ಗಾದೆ). **ಶಾನಭೋವ:** ಸ್ವಳದ ಗೌಡ ಶಾನಭೋವ ಮೊದಲಾದವರ ಸನ್ಮತದಲ್ಲು ಶಿಲಾಶಾಸನಕ್ಕೆ ಪಾಲ್ಸಿಕ್ಕೊಣ್ಡೆಱ (ಎಕ. XI. ಹೊಳೆಕೆ. ೯೮-೧೧; 1672). **ಶಾನುಭಾಗ:** ಒಕ್ಕಲ್ಗಡಿಪ್ರೀತಿಪಾತ್ರನಿಳೆ ಮಚ್ಚಲ್ ಶಾನುಭಾಗಾಖ್ಯ ನೀ ಮಹಿವಾರಾಣಸಿಯಪ್ಪೆ (ಸೋಮೇಶ. ೬೨); ಶಾನುಭಾಗರು ಸುರಪನೋಲೆಯನೋದಿದರು (ಸಂಭವ. ೨೦-೭೦). **ಶಾನುಭಾವ:** ಶಾನುಭಾವ ಹಳ್ಳಿತಿಂಮಪಗ ಗೌಡ ಚೌಗ್ಗೆಯ್ಯ ತಳವಾರ ಚಿಂಣಗೆ ಸಹ ತಾಕಿತಿಮಾಡಿಸಿ (ಮ್ಯಾಂ. ೧೯೨೯, ೭-೨೩; 1673). **ಶಾನುಭೋಗ:** ಶೇಕ್ಕಾರ ಶಾನುಭೋಗರನು ಕರದುಕೊಂಡು (ಅರ್ಜಾವಿ. ೩೧-೪೦); ಅವರು ಶಾನುಭೋಗರ ಮನೆಗೆ ಬಂದರು (ಕಳಹಾ. ೯). **ಶೇನಭೋಗ:** ಮೂಲದ ಭೂಮಿ ಸ್ಥಳದ ಶೇನಭೋಗ ಬರಕೊಟ್ಟ ಪಟ್ಟೆಪ್ರಮಾಣ (ಮ್ಯಾಂ. ೧೯೩೪, ೯-೭; 1690). **ಶ್ಯಾನಭಾಗ:** ವಿಚಾರದ ಚಾವಡಿ ಶ್ಯಾನಭಾಗ ಸ್ಥಳದ ಶ್ಯಾನಭಾಗ ಸಹ ಬರದುಕೊಣ್ಡು ಬನ್ದ ಲೆಖ ಪ್ರಕಾರ (ಮ್ಯಾಂ. ೧೯೨೮, ೪೫-೧೩; 1761); ಪಣ್ಣದ ಅಂಗಡಿಗೆ ಶ್ಯಾನಭಾಗನನ್ನೂ ವ್ಯಾಪಾರ ಮಾಡುವದಕ್ಕೆ ಗೊಲ್ಲನನ್ನೂ . . . ನೇಮಕ ಮಾಡಿಸಿ (ಮಹಾವಂ. I, ೨೭). **ಶ್ಯಾನಭಾವ:** ಶ್ಯಾನಭಾವ [ಪಾಠಾಂ. ಸೇನಬೋಪ]ರುಗಳಿಂ ಸೇರುವೆಗಾಱರಿಂ . . . ಮನ್ನಣವಡೆದುದಂದಾ ನರನಾಥನಾಸ್ಥಾನ (ರಾಮಾವಿ. ೧೦-೮೦). **ಶ್ಯಾನಭೋಗ:** ಊರು ಮೇಲ ಊರು ಬಿದ್ದರೆ ಶ್ಯಾನಭೋಗನಿಗೆ ಕೆಟ್ಟದ್ದೇನು? (ಗಾದೆ). **ಶ್ಯಾನುಭಾಗ:** ಆ ಶ್ಯಾನುಭಾಗರ ಹಾಗೆ ಆಸ್ತಿಕರು ಮಾಸ್ತಿಯನ್ನು ಬರಿಯ ಬನವಾಗಿ ಎಣಿಸುವಂತಿಲ್ಲ (ಸರಸ. ೭). **ಶ್ಯಾನುಭೋಗ:** ಶ್ಯಾನುಭೋಗ ಅಥವಾ ಮೆನನ್ ಎಂಬುದನ್ನು ಬೊಂಬೈಪ್ರಾಂತ್ಯದಲ್ಲಿ ದೇಶಾಯಿ, ದೇಶಪಾಂಡೆಯಂತಲೂ ಗ್ರಾಮದ ಆಕೌಂಟಂಟನ ಹೆಸರುಂಟು (ಗ್ರಾಮಾಕ. ೧). **ಸೇನಬೋಗ:** ಸಾಸನವ ಬರದ ಸೇನಬೋಗ ದಯಣಂಗೆ ವೃತ್ತಿ (ನಾಂದೇಡ. ೩೯-೧೫; 12ನೆಯ ಶತ). **ಸೇನಭಾಗ:** ಮಂಡಿಸಿದರು ಮಂತ್ರಿಗಳು ಸೇನಭಾಗರು ಪಂಡಿತ ಪಂಚಾಂಗಿಗಳು (ಮೋಹತ. ೩೬-೪೧). **ಸೇನಭೋಗ:** ಯಾ ಸ್ಥಳದ ಸೇನಭೋಗ ಸಿಂಗಪೆರುಮಾಳ (ಎಕ. V. ಬೇಲೂರು. ೨೧-೩; 1180); ತದಗ್ರಹಾರಸ್ವರ್ ದುರೋದರರ್ ಸೇನಭೋಗರ್ ಮಲ್ಲರಾಮನಾಮಾಂಕಿತರ್ ಸಹಜಾತರು (ಮಹಾವಿ. ೫-೬). **ಸೇನಭೋವ:** ಈ ಕಾಗದವ ಸೇನಭೋವರ ಕಡಿತಕೆ ಬರಿಸಿ (ಎಕ. VIII. ಶಿವಮೊ. ೧೭-೧೫; 1696). **ಸೇನುಬೋವ:** ಸೇನುಬೋವ ಸ XXX . . . ಮಗ ಸೇನಬೋವ ಬಿಟ್ಟಯ (ಎಕ. XVI. ಚಿಕ್ಕನಾ. ೫೯-೩೭; ?); ಲೆಕ್ಕಿಗ ಎಂದರೆ ಸೇನುಬೋವ (ಇಂದಿನ 'ಶಾನುಭೋಗ') ನೆಂದು ತಿಳಿಯುವುದಕ್ಕಿಂತ ಪಂಡಿತನೆಂದು ತಿಳಿಯುವುದು ಅವನ ವ್ಯಕ್ತಿತ್ವದ ಚಿತ್ರಕ್ಕೆ ಹೆಚ್ಚು ಒಪ್ಪುತ್ತದೆ (ತವನಿ. ೧೨೧). **ಸೇನುಭೋಗ:** ಆ ಸೇನುಭೋಗರ ಸಮ್ಮತಿಯಿಂದ ನಡೆದುಕೊಳ್ಳುವುದೆಂದು ನೇಮಕಮಾಡಿದ್ದೂ ಅಲ್ಲದೆ (ಚತ್ರಪಾ. ೮).

ಸೇನಭಾಗ 'ಸೇನಬೋವ' ನೋ.

ಸೇನಭೋಗ 'ಸೇನಬೋವ' ನೋ.

ಸೇನಭೋಗತನ, ಶಾನಭೋಗತನ (ನಾ). = ಸೇನಬೋಯಿಕೆ: ೧೬ ಗ್ರಾಮದ ಸೇನಭೋಗತನಕ್ಕೆ ಪರಶುರಾಮಪ್ಪನನ್ನು ನೇಮಿಸಿ (ಚತ್ರಪಾ. ೮). **ಶಾನಭೋಗತನ:** (ಕ).

[ಸೇನಭೋಗ (< ಸೇನಬೋವ) + - ತನ]

ಸೇನಭೋವ 'ಸೇನಬೋವ' ನೋ.

ಸೇನವರಸ (ನಾ). ಒಬ್ಬಾತನ ಹೆಸರು: ಅರ್ಚ್ಚಕಮ್ಮೆನ್ತಿಯೆಕಿ ಕೊಟ್ಟ ಸೇನವರಸರುಂ ಧರ್ಮ್ಮಗರಣಿಗರುಂ (ಎಕ. VI. ಕೊಪ್ಪ. ೩೭-೧೦; ಸು 675 ?). [? + ಅರಸ$_1$]

ಸೇನಾಗ್ರಗಣ್ಯ (ನಾ). ಸೈನ್ಯದ ಮುಖ್ಯಸ್ಥ; ದಳವಾಯಿ; ಸೇನಾಧಿಪತಿ: ಸಂಭ್ರಮಾಕುಳನುಮವನತೋತ್ತಮಾಂಗನುಮಾಗಿ ಬಂದು ಮುಂದೆ ನಿಂದು ಸೇನಾಗ್ರಗಣ್ಯಂ ಬೆಸನಂ ಪಾರುತ್ತುಮಿರೆ (ಶಾಂತಿಪು. ೫-೪೫ ಪ). [ಸಂ.]

ಸೇನಾಚಕ್ರ (ನಾ). ಸೇನೆಯ ಗುಂಪು; ಸೈನ್ಯಸಮೂಹ: ತ್ರಿದಶೌಧೀಶನ ಮುಂದೆ ಸಿಂಧುರಘಟಾಸಂದೋಹದಿಂ . . . ಗಂಧರ್ವಸಂದೋಹದಿಂದಿದು ಸಪ್ತಾಬ್ಧಿಯೆನಲ್ಕೆ ಸಪ್ತವಿಧಸೇನಾಚಕ್ರಮೇನೊಪ್ಪಿತೋ (ಪುಪ್ಪಪು. ೧೪-೪೬). [ಸಂ.]

ಸೇನಾಧವ (ನಾ). = ಸೇನಾಗ್ರಗಣ್ಯ: ಕವಿ ಗಮಕಿ ವಾದಿ ವಾಗ್ಮಿಯು ಭುವನಪತಿಗಳು ಮಂತ್ರಿ ಸೇನಾಧವರು ನಾಟಕವೇತ್ರಗೀತರು . . . ಒಪ್ಪಿಹುದು (ಬಿಜ್ಜಪು. ೨-೩೪). [ಸಂ.]

ಸೇನಾಧಿನಾಥ (ನಾ). = ಸೇನಾಗ್ರಗಣ್ಯ: ಅಂತು ಕೃತಕಚತುರ್ದ್ವಾರಮುಮಂತರ್ಭಾಗದೊಳ್ ಸೇನಾಧಿನಾಥರಕ್ಷಿತಮುಮಪ್ಪ ಕಟಕಕ್ಕೆ ವಜ್ರಪ್ರಾಕಾರರೂಪನಾಗಿ . . . ಜಯಕುಮಾರಂ . . . ಕಾದುವಾಗಳ್ (ಆದಿಪು. ೧೩-೬೦ ಪ). [ಸಂ.]

ಸೇನಾಧಿಪ (ನಾ). = ಸೇನಾಗ್ರಗಣ್ಯ: ಉದಾತ್ತಮತಿ ಕರೆದು ಬೆಸಸೆ ಸೇನಾಧಿಪನಂ (ಶಾಂತಿಪು. ೩-೯೪). [ಸಂ.]

ಸೇನಾಧಿಪತಿ (ನಾ). = ಸೇನಾಗ್ರಗಣ್ಯ: ಭಾರತಯುದ್ಧದ ಹದಿನೆಂಟನೆಯ ದಿನದ ಸೇನಾಧಿಪತಿ ಶಲ್ಯನಾಗುತ್ತಾನೆ (ಭಾರದ. ೧೧). [ಸಂ.]

ಸೇನಾನಾಯಕ (ನಾ). = ಸೇನಾಗ್ರಗಣ್ಯ: ಸೇನಾನಾಯಕಂ ಶೂರಪದಾತಿ . . . ಹಯೋತ್ಕರಂ ನೆರೆದು ನಿಲ್ವಿನವೊಡ್ಡಿ ನಿಡೇಶನಾಜ್ಞೆಯಂ ಪಾರುತುಮಿರ್ದಂ (ಶಾಂತಿಪು. ೩-೧೧೩ ಪ); ಅಮರೇಜ್ಯಂ ಕುಜಗೇಹದೊಳ್ ನಿಲೆ . . . ಸುಭೃತ್ಯಪತಿ ಸೇನಾ [ಪಾಠಾಂ. ಪರಸೇವಾ]ನಾಯಕಂ (ಜಾತಕ. ೧೩-೨೬). [ಸಂ.]

ಸೇನಾನಿ (ನಾ). ೧. = ಸೇನಾಗ್ರಗಣ್ಯ: ಅದಱಿಂ ಮುನ್ನಂ ಸೇನಾನಿ ದಂಡರತ್ನಂ ನಿಜಾಗ್ರದೊಳ್ ಬರೆ (ಶಾಂತಿಪು. ೧೦-೧೫೨); ನೀಂ ಬಣ್ಣಿಸಿದ ಬಲಸಮುದ್ರರಾ ಸೇನಾನಿಗಳ ನೇಹಮಿರ್ದೂಡಂ . . . ವಾಲಿಯೇಂ ಪಾಪದಿಂ ಕಲಿಯಾದನೇಂ? (ತ್ರಿರಾಮಾ. ೨೯೦-೧೫೦). ೨. ಷಣ್ಮುಖ; ಕಾರ್ತಿಕೇಯ: ಶಿವಮಹೋಕ್ಷಾವೀರಸೇನಾನಿ ನಿರ್ಮಾಯ ಯುವತಿ ಯಭಿಮಾನವನು ಕಾಯ್ದುದು (ಪ್ರೌಢರಾ. ೮-೬೬). [ಸಂ. ಸೇನಾನೀ]

ಸೇನಾನಿರತ್ನ (ನಾ). [ಜೈನ] ಏಳುಬಗೆಯ ಜೀವರತ್ನಗಳಲ್ಲಿ ಒಂದು; "ಚಕ್ರವರ್ತಿಯ ಸೇನಾಪತಿ. ಆರ್ಯಖಂಡವನ್ನೂ ಉತ್ತಮ ಮಧ್ಯಮ ಮ್ಲೇಚ್ಛಖಂಡ ಹೊರತಾಗಿ ಉಳಿದ ದಿಗ್ವಿಷ್ಟರನ್ನು ಸಾಧಿಸುವವನು" (ಜೈನಕೋ. ೨೬೯): ಷಡ್ವಿಧಸೇನಾನಾಯಕಪರಾಯಣನುಮಪ್ಪಯೋಧನೆಂಬ ಸೇನಾನಿ [ಪಾಠಾಂ. ಸೇನಾಪತಿ]ರತ್ನಮುಂ (ಆದಿಪು. ೧೧-೩ ಪ). [ಸಂ.]

ಸೇನಾಪ (ನಾ). = ಸೇನಾಗ್ರಗಣ್ಯ: ಶಶಿ ಕನ್ನೆಯೊಳಿರೆ ವೀಕ್ಷಿಸೆ ಶಶಾಂಕಜಾದಿತ್ರಯಂ ನೃಪಂ ಸೇನಾಪಂ ಕುಶಲನೆನಿಕ್ಕುಂ (ಜಾತಕ. ೨೦-೬). [ಸಂ.]

ಸೇನಾಪಟ್ಟ (ನಾ). ಸೈನ್ಯಾಧಿಕಾರಿಯ ಪದವಿ: ರಾಯಕಟಕಾಚಾರ್ಯನಾತಱುವಾಯ ಸೇನಾಪಟ್ಟವನು ರಾಧೇಯನಲಿ ರಚಿಸಿದನು (ಕುಮಾಕ. ೧ ಸೂಚನೆ). [ಸಂ.]

ಸೇನಾಪತಿ (ನಾ). = ಸೇನಾಗ್ರಗಣ್ಯ: "ಪಡೆವಳನೆಂದು ಸೇನಾಪತಿ" (ಕಶಸಾ. ೬೧-೩೪೫); ಪತಿಹಿತನ ಸಂಗರಸದಾರನನೂರ್ಧ್ವರೋಮನನಿರದೆ ಸೇನಾಪತಿಯ ಮಾಡುವುದು (ಕುಮಾಉ. ೩-೮೮); [ಸಂ.]

ಸೇನಾಪತಿರತ್ನ (ನಾ). = ಸೇನಾನಿರತ್ನ: ಆವ ದಿಶಾಭಾಗಕ್ಕಟ್ಟಡೊಡ ಆ ದಿಶಾ ಭಾಗದೊಳ್ ಎಂತಪ್ಪ. ಕಲೆಯಂ ಬಲ್ಲಾಳುಮಂ ಸಾಧ್ಯಂ ಮಾಡಿ ತರ್ಪ ಸೇನಾಪತಿ ರತ್ನಮುಂ (ಜೀಪಂ. ೧೭-೨೨). [ಸಂ.]

ಸೇನಾಪತ್ಯ (ನಾ). = ಸೇನಾಪಟ್ಟ: ಕರೆಸಿ ಧೃಷ್ಟದ್ಯುಮ್ನನನು ಸಂಗರದ ಸೇನಾ ಪತ್ಯವನು ಓಸ್ತರಿಸಲಳವಡಿಸಿದರು (ಕುವ್ಯಾಜ. ೧೧: ೩೩); ಅಶ್ವತ್ಥಾಮನಿಗೆ ಸೇನಾಪತ್ಯದಲ್ಲಿ ಅಭಿಷೇಕಮಾಡು (ಮಚಿಭಾ. ೩೧೩). [ಸಂ.]

ಸೇನಾಭಂಗ (ನಾ). ಸೈನ್ಯದ ಸೋಲು: ಮುನ್ನ ಬಂದೀತನೆನಗೆ ಸೇನಾಭಂಗಮುಂ ಮಸೋಭಂಗಮುಮಪ್ಪಂತು ಪುಸಿವಾರ್ತೆಯಂ ಪೇಳ್ದಂ (ಸುಕುಮಾ. ೭-೫ ವ). [ಸಂ.]

ಸೇನಾಮುಖ (ನಾ). ೧. ಸೈನ್ಯದ ಎದುರು, — ಸಮ್ಮುಖ: ಸೇನಾಮುಖದೊಳ್ ಭಂಗಮನಾನೆಯ್ದುವೆನೆಂದು ಎಶ್ರುತಂ ವೈಶ್ರವಣಂ . . . ಜೈನದೀಕ್ಷೆಯಂ ಕೈಕೊಂಡಂ (ಪಾರಾಮಾ. ೧೮:೧೫೫). ೨. ಮೂರು ಆನೆಗಳು, ಮೂರು ರಥಗಳು, ಒಂಬತ್ತು ಕುದುರೆಗಳು ಮತ್ತು ಹದಿನೈದು ಜನ ಕಾಲಾಳುಗಳಿಂದ ಕೂಡಿದ ಸೇನೆಯ ಒಂದು ವಿಭಾಗ: ಆನೆ ೩ ರಥ ೩ ಕುದುರೆ ೯ ಕಾಲಾಳು ೧೫ ಇದು ಸೇನಾಮುಖವೆಂಬ ಬಲವಹುದು (ವ್ಯವಪಾ. ಆನುಬಂಧ. ೧. ೯): ಮೊಗಲಸರಾಯಿ ಎಂಬುದು ಎರಡನೆಯ ಸೇನಾಮುಖವೆಂದು ಬಗೆಯಲಾಯಿತು (ಪರಪ. ೩೭). [ಸಂ.]

ಸೇನಾಯ 'ಶಾನಾಯ' ನೋ.

ಸೇನಾಯಮುದ್ರೆ 'ಶಾನಾಯಮುದ್ರೆ' ನೋ.

ಸೇನಾರಕ್ಷ (ನಾ). ಸೈನ್ಯವನ್ನು ಕಾಯುವವನು. [ಸಂ.]

ಸೇನುಬೋವ 'ಸೇನಬೋವ' ನೋ.

ಸೇನುಭೋಗ 'ಸೇನಬೋವ' ನೋ.

ಸೇನೆ (ನಾ). ೧. ಪಡೆ; ದಂಡು: ನರಪತಿತ್ಕಲಪಂ ಬಿಸಸ ಭೂರ್ಜರಸೇನೆಗ ಸೂಚಿಯಾನೆಯಂ ಪರಿಯಿಸಿ ಗೆಲ್ದಂ (ಗದಾಯು. ೨-೪೭); ಅದಱಲಿ ತುಱುಗಿ ಬಿಟ್ಟಿತು ಸೇನೆ (ಕುವ್ಯಾಸ. ೩-೬೨); ಪುರೋದ್ಯಾನವೀಧಿಯೊಳ್ ಪಾಳಿಯಂಬಿಟ್ಟುದರ್ಜುನನ ಸೇನೆ (ಚಿಸ್ಯಾಂಗ. ೭೨-೧೯೬೫). ೨. = ಸೇನಾಮುಖ ೨: ಮತ್ತಗಜವೊಂದೊಂದ ರಥದೆಡೆಯುತ್ತಮಾಶ್ವವು ಮೂರು ಆಳ್ಕೆದತ್ತ ಕೂಡಲು ಪತ್ತಿಯೆನಿಸುವುದರಸ ಚಿತ್ತಿಸು ಅದನು ತ್ರಿಗುಣಿಸ ಸೇನೆಯಕ್ಕು (ಜಿಪಾಮಾ. ೪೩೬-೧೭). [ಸಂ. ಸೇನಾ]

ಸೇನೆದಿವಾನ (ನಾ). ಸೈನ್ಯದ ಆಡಳಿತಾಧಿಕಾರಿ: ಸೇನದಿವಾನ ಪುಟ್ಟಣ್ಣಂ ಮುಂತಾದ ಕುಹಕಿಜನರ್ಕುಮಂತ್ರಮಂ ನೆನೆಯಲ್ (ಕಳಸ್ಥ. ೬-೩೭).

[ಸೇನೆ + ದಿವಾನ (< ದಿವಾಣ)]

ಸೇನೆವಳ, ಸೇನವಳ್ಳ (ನಾ). ಸೇನಾಪತಿ; ಪಡೆವಳ: ಪಡೆಯೊಳಧಿಕೃತಂ, ಪಡೆವಳಂ, ಪಡೆವಳ್ಳಂ . . . ಸೇನವಳಂ, ಸೇನವಳ್ಳಂ (ಶಬ್ದಾನು. ೪೨೬ ಪ್ರಯೋ). **ಸೇನೆವಳ್ಳ**: ಮೇಲಿನ ಪ್ರಯೋಗವನ್ನು ನೋಡಿ. [ಸೇನ + - ವಳ]

ಸೇನೆವಳ್ಳ 'ಸೇನವಳ' ನೋ.

ಸೇಪು 'ಚೇಪ್ಪು' ನೋ.

ಸೇಪುಬಿಡು 'ಚೇಪುಬಿಡು' ನೋ.

ಸೇಬು, ಸೇವ್ಪು (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು: ಖರ್ಜುರ ದ್ರಾಕ್ಷೆ ಸೇಬಿನಿದಪ್ಪೆಲಚಿ (ಮದೀಪು. ೬-೩); ಬೇಲಿಯ ಪಕ್ಕದಲ್ಲಿ ಚಿರಿ ಮತ್ತು ಸೇಬಿನ ಮರಗಳನ್ನೂ . . . ಕಾಣಬಹುದಿತ್ತು (ಪೂಸು. ೨೭೩). **ಸೇವ್ಪು**: ಸೇವು, ಆಪಲ್ (ಪ್ಲಷಿಗಿ. ೭೫-೧೩೨೮). [<— ಪಾರ. ಹಿಂ. ಸೇಬ್; ಮರಾ. ಸೇವ್]

ಸೇಬೆ, ಶಾಪ (ನಾ). ಕೈಂಕರ್ಯ; ಸೇವೆ: ವಡಿರುನ್ ಸ್ವರ್ಗಸ್ಥಿತಿಆಯ ಮರಿಯಾದಿ ಕೊಟ್ಟಾನ್ ಸೇಬೆಗೆ ವಿಟ್ಟಾರ್ (ಎಇ IV. ಪಗ್ಗತ..೪೭-೪: ಸು. 700 ?). **ಶಾವೆ**: ನೀರಿಲೆಯಲಿ ಬಂಡಿದೇವರ ಶಾವಗೆ ಸಲಿಸುವಂಥ ಕಡಲಗ್ರಾಮ (ಮೈಆರಿ. ೧೯೪೬. ೨೫-೭: 1495). ಕಳಿಲೆ ಕಾಂತಮ್ಮ ಕೊಮಾರ ನಂಜರಾಜೈಯ್ಯನವರ ಶಾವೆ (ಮೈಆರಿ. ೧೯೪೬.೩೩: ೨: 1650); ದೇವರ ಶಾವ ಅಂತ ಮಾಡಿದ (ಚಿಕರಾ. ೧೮೯). [< ಸಂ. ಸೇವಾ]

ಸೇಬ್ಯ (ನಾ). ಸೇವಗೆ ಅರ್ಹವಾದುದು; ಪೂಜಾಯೋಗ್ಯವಾದುದು: ಅದು ಬಸ್ಮಮದು ಸೇಬ್ಯಮದು ಸೌಮ್ಯಮದು ರಮ್ಯಂ (ಸುಕುಮಾ. ೧೨-೫೧). [< ಸಂ. ಸೇವ್ಯ]

ಸೇಮ (ನಾ). ಸುಖ; ಸಂತೋಷ: ಕ್ಷೇಮ - ಸೇಮ (ಶಮದ. ೩೬೨ ಪ್ರಯೋ): ಎಮ್ಮಯ ತಾಯ್ತಂದೆಗಳ್ಗೆ ಸೇಮದ ಸೊಗಮೇ (ಚಂಗ್ರಮ್ಮ. ೧೩-೧೨): ಮರದಿ ನನೆ ನೈದಿಂದರಳಿ ಸೊಗವೆಲ್ಲರ್ಗ ಸರೆಮನೆಯ ಸೇಮವೇಂ? (ಮಂಜುಕ. ೮೪೫). 'ಕೇಮ್ಮ' ಪರಾ.

[< ಸಂ. ಕ್ಷೇಮ]

ಸೇಮಿಗೆ 'ಸೇವಗೆ' ನೋ.

ಸೇಯ (ನಾ). ನೀಳ; ನಿಡಿದು: ಕಡುಸೇಯಮಾಗಿ ಮಾಂಸದಿನಿಡಿದೊಪ್ಪುವ ಕಿವಿಗಳರ್ಧ ಚಂದ್ರಾಕೃತಿಯಂ ಪಡೆದಿರ್ದರ್ಧನೊಸಲ್ . . . ಶುಭದಂ (ಲೋಕೋಪ. ೧೧-೨೨).

[<— ತಮಿ. ಚೇಯ್]

ಸೇಯು (ಕ್ರಿ). ಸೇದು; ಎಳೆದುಕೊಳ್ಳು: ಸಾವಧಾನವಾಗಿ ನಶ್ಯ ಸೇಯುವ ಬಹಿಃಕ್ರಿಯೆಯಲ್ಲಿ ತೊಡಗಿದ್ದಂತೆ ತೋರುತ್ತಿದ್ದರೂ ಗೌಡರ ಮನಸ್ಸು ತನ್ನ ಅಂತರ್ಮುಖ ಪ್ರಪಂಚದಲ್ಲಿ ಅಲೆಯತೊಡಗಿತ್ತು (ಮರಮ. ೧೪೧). [< ಸೇಂದು]

ಸೇರ್, ಸೇರು (ಕ್ರಿ). ೧. ತಲುಪು; ಮುಟ್ಟು; ಸಮೀಪಿಸು: ಮಂತ್ರಿ ನಿಜ ಸದನಮಂ ಸೇರ್ದು ಹೊನ್ನಂದಣಮನಿಳಿದಾತ್ಮಜಾತನಂ ನೋಡಿ (ಪ್ರಮಿಭಾ. ೩೧-೩೦). ೨. ಕೂಡು; ಬೆರೆ: (೬). ೩. ಹೊಂದಿಕೊಳ್ಳು; ಜೊತೆಯಾಗು: (೬). ೪. ಒಂದಾಗು; ಒಟ್ಟುಗೂಡು: (೬). ೫. ಸಂಗ್ರಹವಾಗು; ಕೂಡಿಕೊಳ್ಳು: ಅತಿಲೋಭಗಳ್ಗೆ ವಸ್ತು ಸೇರುವುದು (ಪಂಚತಂ. ೧೩೭-೮). ೬. ಒಗ್ಗು; ಹಿಡಿಸು: "ಸೇರ್—ಸಾನುಮತೇ (ಅನುಮತಿಸು)" (ಶಮಧಾ). **ಸೇರು**: ೧. ಜಯಮುಖದಿಂದ ಲಂಕಾಪುರಿಗೆ ಸೇರಿತು ಮಂದಿ (ತೊರರಾ. ೧-೮-೪೧); ಎಚ್ಚ ಕೋಲ್ಗಳ ಸೇರಲೀಸದ ಕಡಿದು (ಮೋಹತ. ೩೪-೨೭); ಮಾರ್ಗದಲ್ಲಿ ಜನರಿಲ್ಲದಂಥ ಒಂದು ನಡುಗಡ್ಡೆಗೆ ಸೇರಿ (ಮುಂಬಯಿ. ೪-೨೯). ೨. ಗೃಹ ಗೃಹಂ ಚೆನ್ನಾಗಿರಲ್ ಸೇರದೇಂ (ಸೋಮೇಶ. ೧೪): ಇರುಳುಗಳ್ಗನ ಕೂಡೆ ಸೇರಿದ ಮರುಳಿನಂತಿರೆ ನೀವು ರಣದಲಿ ತಲೆಸಿಕೊಂಬಿರಿ (ಕುವ್ಯಾದ್ರೋ. ೧೭-೩೨); ನಮ್ಮ ಪುರಂದರವಿಠಲನ ಸೇರೋ ಸೇರೋ (ಪುರಂದ. ೧೦೧೫೪-೩). ೩. ಸುವಿಚಾರಕ್ಕೊರ್ಮೆಯುಂ ಸೇರದು ನಡೆಯಿಪುದತ್ಯಾಗ್ರಹವ್ಯಾಪ್ತಿಯಿಂ (ರಕ್ಷಾಶ. ೧೫): ಎನಿತು ಬಾರಿ ಪಲಾಯನದ ಸಿರಿ ನಿನಗೆ ಸೇರಿತು ವೀರ (ಕುವ್ಯಾದ್ರೋ. ೧೮-೪೩). ೪. ನೇಮಿಯ ಕನ್ನಡದೊಳ್ಪಭನವಪಂಪನ ಬಗೆಯನ್ನೀ ಪೇಳ್ದ ಕೃತಿಗೆ ಪಿರಿದುಂ ಸೇರುಗೆ ನಿರ್ವಿಘ್ನತೆಯಿಂ (ಜಯಿಕಾ. ೧-೧೧); ಶಿವನೆ ದೈವವೆನುತ್ತೆ ಪೂಜಾದಿಗಳ ಮಾಡುವರೀಶತತ್ತ್ವದಿ. ಜವದಿ ಸೇರುವರು (ಗಗಕಾ. ೮-೬೬). ೬. ಗರಳಾಂಬುಜದ ಪರಿಮಳಕೆ ಗರುಡನು ತುಂಬಿಯಾದರೆ ಸೇರುವುದಲೇ (ಕುವ್ಯಾದ್ರೋ. ೯-೪೪). ೭. ನೆಲಸು; ನಿಲ್ಲು: ವಾರಿಜಭವ ಶಕ್ರಾದಿದೇವತೆಗಳು ನಾರಿಯ ಕುಚಮಂಡಲವ ಸೇರಿ ಬರ್ದುಕಲಿ (ಮೋಹತ. ೬-೧೫); ಕ್ಷೀರಾಂಬುನಿಧಿ ತನ್ನ ಮಗಳೇ ಪುರದೊಳು ಸೇರಿಹಳ್ಳೋಡಬೇಕೆಂದು ಕಾರುಣ್ಯದಿಂ ಬಂದಂತಿರೆ ಧವಳಮಾರು ಮಂದಿರಗಳೊಪ್ಪುವುವು (ಕಂಸವ. ೨-೭೦). ೮. ಪ್ರವೇಶ ಪಡೆ; ದಾಖಿಲಾಗು: ನಾವು ಕಾಲೇಜಿಗೆ ಸೇರುವಾಗ ಯಾವ ಯಾವ ವಿಷಯ (Subject) ತೆಗೆದುಕೊಳ್ಳಬೇಕೆಂದು ಚರ್ಚೆ ನಡೆಸುತ್ತಿದ್ದೆವು (ಆಲಹೂ. ೧೧). ೯. ಸಂಬಂಧಿಸಿರು; ಸಂಬಂಧಪಟ್ಟಿರು: ಕೃಷ್ಣದೇವರಾಯನು ತುಳುವಸಂತತಿಗೆ ಸೇರಿದವನು (ಕ್ರದೀವ. ೨). ೧೦. ಇಷ್ಟವಾಗು; ಪ್ರಿಯವಾಗು: ಎನಗೆ ಭಸಿತವನಿಡದ ಹಣೆ ಕಣ್ಣೆ ಸೇರದ್ದೆ (ಇಶಿರ. ದೇ. ೧೦೯-೧೪); ಎರಡನೆಯವರು ನಮಗೆ ಸೇರದಿದ್ದರೆ ನಾವೂ ಎರಡನೆಯವರಿಗೆ ಸೇರುವದಿಲ್ಲ (ಮುಂಬಯಿ. ೬. ೩-೧೦೫); ಸೇರದ ಗಂಡನಿಗೆ ಮೊಸರಲ್ಲಿ ಕಲ್ಲು (ಗಾದ).

ಸೇರಿಕೊಳ್ಳು = ದಾಖಿಲಾಗು; ಪ್ರವೇಶಪಡೆ: ಚರಮಶ್ಲೋಕಗಳಲ್ಲಿ ಪ್ರತಾಪಕುಮಾರಿಯ ಹೆಸರೂ ಸೇರಿಕೊಳ್ಳಲಿ (ಆರ್ಯಕ. ೯೮): ಆ ದೊರೆಯ ಅರಮನೆಯಲ್ಲಿ ಚಾಕರಿಗೆ ಸೇರಿಕೊಂಡರು (ನೀಕಿಪಂ. IX, ೫). [ದೇ. || ತಮಿ. ಕೋತ. ಚೇರ್; ಮಲ. ಚೇರು; ತುಳು. ಶೇರು; ಕೊಡ. ಸೇರ್; ತೆಲು. ಚೇರು; ನಾಯ್ಕಿ. ಶೇರ್]

ಸೇರಣೆ (ನಾ). ಜೋಡಣೆ: ಬಿಲ್ಲನೊರೆ ಕೂರಂಬ ಮಸೆ ಕೊಂಕನನುಮಾಡಿ ಗಣೆಗೆ ಗಲೆಗಳನು ಹಸನಾಗಿ ಕಟ್ಟು ಸೇರಣೆಯ ಮಾಡು (ಸಮ್ಮಕಾ. ೧೦-೩೨).

[ಸೇರು (< ಸೇರ್) + - ಅಣ್ಣೆ]

ಸೇರಿಕೆ, ಸೇರ್ಕೆ (ನಾ). ೧. ಹೊಂದಿಕೆ; ಮೇಳ: ಆವ ಸೇರಿಕೆ[ಶಾಕಾಂ. ರುವೆ] ಜಪಕೆ ಚಾಪಶರಾವಳಿಗೆ (ಕುವ್ಯಾಳ. ೪-೪೩). ೨. ಕೂಡಿದುದು; ಸೇರ್ಪಡೆ: ಮಹಾಭಾರತದ

ಇತರ ಭಾಗಗಳಂತೆ . . . ಗೀತೆಯೂ ಸಹ ಹೊಸ ಸೇರಿಕೆಗಳಿಗೆ ಎಡೆಕೊಟ್ಟಿರಬಹುದು (ತತ್ತ್ವಪ್ರಾ. ೯೨). ೩. ಇಷ್ಟ; ಹಿತ: ನಮ್ಮ ಜೀವನ ಆಸೆ, ಸೇರಿಕೆ, ಹೇಸಿಕೆ, ರಸಿಕತೆ, ಮೋಹ, ಬೆಡಗು – ಎಲ್ಲವೂ ಕನ್ನಡದಲ್ಲಿದೆ (ವಿಚಾಮಂ. ೬); ಮನುಷ್ಯನಿಗೆ ಒಳ್ಳೆಯದನ್ನು ಮಾಡುವುದು ದೇವರಿಗೆ ಅತ್ಯಂತ ಸೇರಿಕೆಯಾಗುವಂಥ ಸೇವೆಯಾಗಿರುತ್ತದೆ (ಬೋಜಾಂ. ೧೫೩). **ಸೇರ್ಕೆ: 'ಸೇರ್ಕೆಗೊಳ್ಳು'** ಪರಾ.

[ಸೇರು೨ (< ಸೇರ್) + - ಇಕೆ./ ತಮಿ. ಚೇರ್ಕೈ; ತುಳು. ಶೇರಿಗೆ; ತೆಲು. ಚೇರಿಕ]

ಸೇರಿಗೆ 'ಸೇರುಗೆ' ನೋ.

ಸೇರಿಸು, ಚೇರಿಸು (ಕ್ರಿ). ೧. ತಲಪಿಸು; ಮುಟ್ಟಿಸು: ಎಂದೋ ಮಹೇಶರ್ಗೆ ಸೇರಿಸುವೆನಿಂತಿದಂ (ಬಸರ. ೫-೧೫೯); ಘೋರಪಾಪಗಳನು ನೀಗಿ ಸೇರಿಪುದುತ್ತಮಗತಿಗೆ (ಕಂನಿ. ೫-೨೭). ೨. ಬೆರಸು; ಕೂಡಿಸು: ನಾರಿಯರ ರೂಹುಗಳನಂಜನರಜವಿ ಪುಟವಿಟ್ಟು ಕಾರಮಿಂಚುಮನವರ ಕಣ್ಣೊಳು ಸೇರಿಸಿದನೆನೆ . . . ಮೆಚ್ಚಿದರಲ್ಲಿ ಪುಳಿಂದರು (ಸಾಳ್ವಭಾ. ೫-೭). ೩. ಹೊಂದಿಸು; ಅಳವಡಿಸು; ಜೋಡಿಸು: ಒಡಲೊಳುಳಿಗಳಂ ಸೇರಿಸಿಯುಂ ನಾಲಗೆಯಂ ಪೆಡತಲೆಯೊಳುರ್ಚಿಯುಂ (ಧರ್ಮಾಮೃ. ೩-೭೩); ವರ ಭೂಷಣಂಗಳ ತೊಡು ದುಕೂಲವನುಡು ಸುಮಾಲ್ಯವ ಮುಡಿಗೆ ಸೇರಿಸು ತರುಣಿ (ನಳಚಿ. ೫-೫೭); ನೀಲಕುಂತಳಗಳ ತಿದ್ದುತ ಮೊಲೆಗಳ ಮೇಲುದು ಜಾಱೆ ಸೇರಿಸುತ . . . ಲೋಲಲೋಚನೆಯೈದಿದಳು (ಕಂನಿ. ೯ ೮೪). ೪. ಒಪ್ಪಿಸು; ವಹಿಸು: ಬಲುಗಾಳೆಗವ ಭೀಮಂಗೆ ಸೇರಿಸಿ ಪಾಳೆಯಕೆ ತಿರುಗಿದರು ಕೃಷ್ಣಾರ್ಜುನರು (ಕುಮಾಕ. ೧೬-೧). ೫. ದಾಖಲುಮಾಡು: ನಮ್ಮ ಮಗುವನ್ನು ಶಾಲೆಗೆ ಸೇರಿಸಬೇಕು (ರೂಢಿ). **ಚೇರಿಸು:** ೨. ಶಿವನೊಳು ಸುವ್ಯಕ್ತದಿ ಚೇರಿಸುವ ಕಾರಣವಿದು ಯೋಗಾಂಗವಿಭೂಷಣವು (ಯೋಗಾಂವಿ. ೬-೨೮).

ಸೇರಿಸಿಕೊಳ್ಳು = ತನ್ನದನ್ನಾಗಿ ಮಾಡಿಕೊಳ್ಳು: ಸೇರಿಸಿಕೊಂಡವನೊಡವೆಯ ನಗುತ ಪಕೀರನ ಮಾಡಿ ಬಿಡುವರು (ಕಂನಿ. ೨-೯೮). [ಸೇರ್೨ + - ಇಸು೩]

ಸೇರು೧ 'ಸೇರ್' ನೋ.

ಸೇರು೨ 'ಸೀಱು೩' ನೋ.

ಸೇರು೩ (ನಾ). ನಾಲ್ಕು ಪಾವುಗಳ ಒಂದು ಅಳತೆ ಮತ್ತು ಅದನ್ನು ಅಳೆಯುವ ಒಂದು ಸಾಧನ: ಸೇರಿಂಗಂ ಪಾವು ನಾಲ್ಕು ತಪ್ಪದು ನಿರುತಂ (ವ್ಯಮಹಾ. ಅನುಬಂಧ. I. ೨); ಕಂಡೆ . . . ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯಮಾಡಿ ಕೊಡಿಸುವ . . . ವೇಂಕಟರಮಣನಂಘ್ರಿಯ (ಪುರಂದ. ೧-೧೧೯-೨); ಶ್ರೀರಾಮದೇವರಿಗೆ ಚುನ್ನನಗಣ್ಣಿಗೆ ಮಿರಲೆ ಮೋರಿ ಲಕ್ಷ್ಮಣ ಸೇವೆ ತೂ ೪೦ ಸೇರು (ಎಕ. XIV. ಎಡತೂ. ೭೦-೩; ?).

ಸೇರಿಗೆ ಸವ್ವಾಸೇರು = (ಆಲಂ) ಒಂದು ವಸ್ತು ಅಥವಾ ವ್ಯಕ್ತಿಯನ್ನು ಮೀರಿಸಿದ ಮತ್ತೊಂದು ವಸ್ತು ಅಥವಾ ವ್ಯಕ್ತಿ: ನಾರಾಯಣರಾಯರು ಸೇರಿಗೆ ಸವ್ವಾಸೇರು! (ಮನದ. ೩೪). [ದೇ. ॥ ತಮಿ. ಚೇರ್; ತುಳು.ಸೇರ್; ತೆಲು. ಸೇರು./ ಹಿಂ. ಸೇರ್; ಮರಾ. ಶೇರ್./ ಸಂ. ಸೇರ]

ಸೇರುಗಾರ 'ಸೇರುವೆಗಾಱ' ನೋ.

ಸೇರುಗೆ, ಸೇರಿಗೆ (ನಾ). ೧. ಸಹವಾಸ; ಸಂಗ: ಕೌರವನ ಜಯವಧುವಿನೊಡನೆಯ ಸೇರುಗೆಯ ಕೂಟಣೆಯೊ ಶರವಿನ್ನಾರಿಗೊಱಲುವೆವಕಟೆನುತ ತಲ್ಲಣಿಸಿತರಿಸೇನೆ (ಕುಮಾಕ. ೨೫-೨೫). **ಸೇರಿಗೆ:** ೨. ಹತ್ತಿರ ಬರುವಿಕೆ; ಸಮೀಪಿಸುವಿಕೆ: "ಉಪಸನ್ನಮುಪನತಮುಪಸ್ಥಿತಂ ಸೇರಿಗೆಯದು" (ಮಂಗರಾ. ೧೩೪-೩೫).

[ಸೇರು೧ (< ಸೇರ್) + - ಗೆ]

ಸೇರುಪಡಿ (ನಾ). ಒಂದುಗೂಡುವಿಕೆ; ಜೊತೆಗೂಡುವಿಕೆ: ವಾನರರ ಸೇರುಪಡಿ ತಾನೆತ್ತ ದೈವಪ್ರೇರಣೆಯದ್ಯಸಲ್ಲದಿದು ನಾವಾರು ಮಾಡುವುದಲ್ಲ (ತೊರರಾ. ೬-೫೦-೮೪). 'ಸೇರ್ಪಡೆ' ಪರಾ. [ಸೇರು೧ (< ಸೇರ್) + - ಪಡಿ೬]

ಸೇರುಮಣ್ಣು 'ಸೀಱುಮಣ್ಣು' ನೋ.

ಸೇರುವೆ (ನಾ). ೧. ಹೊಂದಿಕೆ; ಮೇಳ: ಶೈವಕಥಾವಿತಾನದೊಳ್ ಕುಂದಿನಿತಿಲ್ಲ ಸೇರುವೆ ಚಮತ್ಕೃತಿಯಾದುದು (ಸಾನಂಚಿ. ೧೭ ಕಥಾಗರ್ಭಸಂಧಿ); ಭಸ್ಮಾವಲೇಪನ ಚಂದನಂಗಳಿಗಾವ ಸೇರುವೆ (ನಿಘಾಗ. ೪-೫-೪೧); ಬಾಲಕಿಯರಲ್ಲಿ ಪರಿಶೋಭಿಸಿದರೆಸವ ನಕ್ಷತ್ರಗಣದಂತೆ ಮೊಗಸಸಿಯ ಸೇರುವೆಯೊಳು (ಚೈಮಿಭಾ. ೬-೨೨). ೨. ಸಹವಾಸ; ಒಡನಾಟ: ಕಾತರಿಸಿ ಕವಿವ ಬಲದ ಬಿರುದರಿಗಮರನಾರಿಯರೊಳಗೆ ಸೇರುವೆಯಾಯ್ತು (ಕುಮಾದ್ರೋ. ೬ ೫); ಜಳನಿಧಿಸುತೆಯ ಸೇರುವೆಯಿಂದೊಪ್ಪುವ ನಳಿನಾಕ್ಷಗೆ ನಮಿಸುವೆನು (ಕರ್ಣಾಪ. ೧-೨೪). ೩. ಗುಂಪು; ಸಮೂಹ: ಬಿಡು ಸೆಱೆಯನವಗಡೆಯತನವೆಮ್ಮೊಡನೆ ಸಲ್ಲದು ಸೂಳೆಯರ ಸುರೆಗುಡುಹಿಗಳ ಸರವಾದಿಗಳ ಸೇರುವೆಯಲೊಪ್ಪುವುದು ಪಡ (ಕುಮಾಅ. ೨೦-೨೭); ಕಾಲಾಳು ಮೇಲಾಳು ಸೇರುವೆಯ ವಾಲಿಕಾರರು (ಇಚಸಾಂ. ೧೩-೩). ೪. ಹಸುಗಳ ಮಂದೆ.— ಹಿಂದು: 'ಸೇರುವೆಗಾರ' ಪರಾ.

[ಸೇರು೧ (< ಸೇರ್) + - ವೆ./ ತಮಿ. ಚೇರ್ವೈ; ಮಲ. ಚೇರ್ವೈ; ತುಳು. ಶೇರ್ವೆ]

ಸೇರುವೆಗಾರ 'ಸೇರುವೆಗಾಱ' ನೋ.

ಸೇರುವೆಗಾಱ, ಸೇರುಗಾರ, ಸೇರುವೆಗಾರ, ಸೇರೆಗಾರ, ಸೇರ್ವೆಗಾರ (ನಾ). ೧. ಮುಖ್ಯಸ್ಥ; ಮೇಲ್ವಿಚಾರಕ; ಮುಖಂಡ: ಎಕ್ಕಟಗರ ಪಡಕಣದ ಸೇರುವೆಗಾಱರುಕ್ಕಡ ತಲೆಗಾವಲುಗಳ ತಕ್ಕಿನ ತಳವಾಱರ ತಿಂಥಿಣಿ ಕಟಕಕ್ಕೆ ರಕ್ಷಣೆಯಾಗಲು (ಶ್ರೀಪಾಲ. ೧೩-೧೧೨); ಆಳೆಸಗಿದೂಳಿಗಮನರಸಂಗಂ ಅರಸನಿತ್ತ ಜೀವನಮನಾಳ್ಗೊಪ್ಪಿಸುವ ಸೇರುವೆಗಾಱನಂತೆ (ಚಿಕಪಿ. ೨೫). **ಸೇರುಗಾರ:** ೨. ಹಸುಗಳ ಮಂದೆಯನ್ನು ಪೋಷಿಸುವ ಕಚೇರಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಸ್ಥಳೀಯ ಅಧಿಕಾರಿ: ಅರಮನೆಯ ಬಾಗಿಲ ಬಳಿಗೆ ಬಂದು, ಕಾವಲ ಕಾದಿರುವ ಗೊಲ್ಲರ ಸೇರುಗಾರನಂ ಕರೆದು (ಬತ್ತೀಸ. ೩೯). **ಸೇರುವೆಗಾರ:** ೨. ಅಮೃತಮಹಲ್ ಆಡಳಿತದ ಕಡತಗಳನ್ನು ತೆರೆದರೆ ಅದರ ಸೇರುವೆಗಾರರು ತಮ್ಮ ಮಂದೆಗಳ ಹಸುಗಳಿಗೆ ಕೊಡುತ್ತಿದ್ದ ನಾನೂರು ಹೆಸರು ದೊರೆಯುತ್ತವೆ (ನಮ್ಮನು. ೨೩೫). **ಸೇರೆಗಾರ:** ೩. ಕಟ್ಟಡ ನಿರ್ಮಾಣದ ಮೇಲ್ವಿಚಾರಕ; ಮೇಸ್ತ್ರಿ: ದಕ್ಷಿಣಕನ್ನಡಜಿಲ್ಲೆಯಿಂದ ಬರುವ ಮೇಸ್ತ್ರಿಗಳನ್ನು ಸೇರೆಗಾರರೆಂದು ಕರೆಯುತ್ತಾರೆ (ಕಾನೂರು. ೪೫); ತುಕ್ರನು . . . ತನ್ನ ಊರಿಗೆ ಓಡಿಹೋಗಿರಬೇಕೆಂದು ಅವನ ಸೇಗೆಗಾರರು ಭಾವಿಸಿದರು (ಪಂಜಪಂ. ೨೫) **ಸೇರ್ವೆಗಾರ:** ೧. ಸಾಮಂತ, ಸೇರ್ವೆಗಾರ (ತುಳುನಾ ೧೭೧).

[ಸೇರುವೆ + - ಕಾಱ./ ತಮಿ. ಚೇರ್ವೈಕಾರನ್, ಚೇರ್ವೈಕ್ಕಾರನ್; ತುಳು. ಶೇರಿಗಾರ, ಶೇರುಗಾರ, ಸೇರಿಗಾರ, ಸೇರೆಗಾರ]

ಸೇರುವೆಗೆಯ್ (ಕ್ರಿ). ಒಂದುಗೂಡು; ಜೊತೆಯಾಗು: ಬಿರಿದ ಪೂಂಬಾಳೆ ನಗಪಿ ಸೇರುವೆಗೆಯ್ದ ಬಾಳ್ಗಳೇಳ್ಗೆಯ ಬೀಱೆ (ಪಡ್ಡರಾ. ೮-೩೪). [ಸೇರುವೆ + ಕೆಯ್೧]

ಸೇರುವೆದಪ್ಪು (ಕ್ರಿ). ಹೊಂದಾಣಿಕೆ ಇಲ್ಲವಾಗು; ಮೇಳತಪ್ಪು: ಬಲುಭಾರಿಯ ಗುಡಿಗಳ ಸಾಲು ಸೇರುವೆದಪ್ಪದೆತ್ತಿದವು (ಕುರಾಸಾ. ೪೨-೫೮). [ಸೇರುವೆ + - ತಪ್ಪು೧]

ಸೇರ್೧, ಶಾರೆ, ಸಾರ್೨, ಸೆರ್೨ (ನಾ). ೧. ಬೊಗಸೆ; ಅಂಜಲಿ: ಎರಡು ಸೇರೆಯ ತುಂಬಿ ರತ್ನವ ಸುರಿದು ಮೃಯಿಕ್ಕಿದನು ಭೂಪತಿ (ಕುಮಾವಿ. ೧೧-೫೬); ಜನಮಜಿಯೆ ಬೆರ್ಗವತೆ ಸೇರೆ ಪಿಡಿ ಕರಭೃಂಗಳಿನಿಪವರೊಳಭಿನಯಿಸಿ ತೋಱಿಸಲ್ (ಚೈಮಿಭಾ. ೬-೨೧); ಸೂತ್ರಧಾರಂ ಸೇರೆಯೊಳ್ ಪೂರೈಸಿದ ಕುಸುಮಂಗಳಂ ರಂಗದೊಳ್ಬಲ್ಲಿ (ಮಿತ್ರಗೋ. ೧-೫). ೨. ಬೊಗಸೆಯಲ್ಲಿ ತುಂಬುವಷ್ಟು ಅಳತೆ: ಕಬ್ಬಿನ ಕಟ್ಟುಗೆಯ ಪುಡಿಯೊಂದು ಸೇರೆಯನು [ಪಾಠಾಂ. ಸೆರೆಯೆನಲು, ಸೆರೆಯದನು] ದೇವರಿಗೆ ಕೊಟ್ಟು (ಬಸಪು. ೧೨-೨೮); ಅದರ ಮಾಲೆಯಲೆಗಳನ್ನೂ, ಉರುಳಿ ಹೊರಳಿ ಅವು ಒಂದರೊಡನೊಂದು ಹೋರಾಡುತ್ತ ನೊರೆಯ ಸೇರೆಗಳನ್ನೆತ್ತಿ ಎಸೆಯುತ್ತ ಬರುವುದನ್ನು ನೋಡಿದರೆ (ಪಂಯಾತ್ರ. ೩೨). **ಶಾರೆ:** ೧. ಬಲಗೈಯಿಂದ ಒಂದು ಶಾರೆ ಎಣ್ಣೆಯನ್ನು ಅವರ ತಲೆಯ ಮೇಲೆ ಹಾಕಿ ತಿಕ್ಕಲು ಆರಂಭಿಸಿದ್ದಾಳೆ (ವಂಶವೃ. ೧೬). 'ಶಾರೆಗಣ್ಣು' ಪರಾ. ೨. ಶಾರೆ ಹೊನ್ನಿಗೆ ಭತ್ತ ಶಾರೆಯಾದರೆ ಏನು (ವಿದಾಕೃ. ೧೩೫-೨). **ಸಾರ್೨:** ೩. ಬೊಗಸೆಯಷ್ಟು ವಿಶಾಲವಾದುದು: ಸತ್ತ ಮಗುವಿನ ಕಣ್ಣು ಸಾರೆ (ಗಾದೆ). **ಸೆರ್೨:** ೧. ಎಳೆಯ ಬದನೆಯ ಕಾಯ ಕೊಯಿದು . . . ಸೆರೆನೀರು ಸೆರೆತುಪ್ಪವಿಳುಹಿ ನೀರುಳ್ಳಿ ಹಸಿಯಲ್ಲಮಂ ಹಾಕಿ ಬೇಯ್ಸುವುದು (ಸೂಪಶಾ. ೪-೨); ಒಂದು ಸೆರೆ ತಾರೆಕಾಯಿರಸದಲ್ಲಿ ಕಲಸಿ (ಸಕವೃ. ೪೯೫). ೨. ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ (ಕನ್ನಬಾ. ೭೯). 'ಮುಚ್ಚೆರೆ' ಪರಾ.

[ದೇ. ॥ ತಮಿ. ಚೇರ್ಕೆ; ತುಳು. ಸೇರೆ, ಸೆರೆ; ತೆಲು. ಚೇರ; ಕೊಡ. ಸೇರ; ತೊದ. ತೆಱ್]

ಇತರ ಭಾಗಗಳಂತೆ . . . ಗೀತೆಯೂ ಸಹ ಹೊಸ ಸೇರಿಕೆಗಳಿಗೆ ಎಡೆಕೊಟ್ಟಿರಬಹುದು (ತತ್ತ್ವಪ್ರಾ. ೯೨). ೩. ಇಷ್ಟ; ಹಿತ: ನಮ್ಮ ಜೀವನ ಆಸೆ, ಸೇರಿಕೆ, ಹೇಸಿಕೆ, ರಸಿಕತೆ, ಮೋಹ, ಬೆಡಗು – ಎಲ್ಲವೂ ಕನ್ನಡದಲ್ಲಿದೆ (ಏಚಾಮಂ. ೬); ಮನುಷ್ಯನಿಗೆ ಒಳ್ಳೆಯದನ್ನು ಮಾಡುವುದು ದೇವರಿಗೆ ಅತ್ಯಂತ ಸೇರಿಕೆಯಾಗುವಂಥ ಸೇವೆಯಾಗಿರುತ್ತದೆ (ಬೌಜನ್. ೧೫೩). **ಸೇರ್ಕೆ: 'ಸೇರ್ಕೆಗೊಳ್ಳು'** ಪರಾ.

[ಸೇರು₁ (< ಸೇರ್) + - ಇಕೆ./ ತಮಿ. ಚೇರ್ಕೈ; ತುಳು. ಶೇರಿಗೆ; ತೆಲು. ಚೇರಿಕ]

ಸೇರಿಗೆ 'ಸೇರುಗೆ' ನೋ.

ಸೇರಿಸು, ಚೇರಿಸು (ಕ್ರಿ). ೧. ತಲಪಿಸು; ಮುಟ್ಟಿಸು: ಎಂದೋ ಮಹೇಶರ್ಗೆ ಸೇರಿಸುವೆನೆಂತಿದಂ (ಬಸರ. ೫-೧೯೯); ಘೋರಪಾಪಗಳನು ನೀಗಿ ಸೇರಿಪುದುತ್ತಮಗತಿಗೆ (ಕಂನವಿ. ೫-೨೭). ೨. ಬೆರಸು; ಕೂಡಿಸು: ನಾರಿಯರ ರೂಹುಗಳನಂಜನರಜವಿ ಪುಟವಿಟ್ಟು ಕಾರಮಿಂಚುಮನವರ ಕಣ್ಣೊಳು ಸೇರಿಸಿದನೆನೆ . . . ಮೆಚ್ಚಿದರಲ್ಲಿ ಪುಳಿಂದರು (ಸಾಳ್ವಭಾ. ೫-೭). ೩. ಹೊಂದಿಸು; ಅಳವಡಿಸು; ಜೋಡಿಸು: ಒಡಲೊಳುಳಿಗಳಂ ಸೇರಿಸಿಯುಂ ನಾಲಗೆಯಂ ಪೆಡತಲೆಯೊಳುರ್ಚಿಯುಂ (ಧರ್ಮಾಮೃ. ೩-೭೩); ವರ ಭೂಷಣಂಗಳ ತೊಡು ದುಕೂಲವನುಡು ಸುಮಾಲ್ಯವ ಮುಡಿಗೆ ಸೇರಿಸು ತರುಣಿ (ನಳಚ. ೫-೫೭); ನೀಲಕುಂತಳಗಳ ತಿದ್ದುತ ಮೊಲೆಗಳ ಮೇಲುದು ಜಾಱೆ ಸೇರಿಸುತ . . . ಲೋಲಲೋಚನೆಯ್ದೆದಿದಳು (ಕಂನವಿ. ೯-೮೪). ೪. ಒಪ್ಪಿಸು; ವಹಿಸು: ಬಲುಗಾಳಿಗವ ಭೀಮಂಗೆ ಸೇರಿಸಿ ಪಾಳೆಯಕೆ ತಿರುಗಿದರು ಕೃಷ್ಣಾರ್ಜುನರು (ಕುಮಾಕ. ೧೬-೧). ೫. ದಾಖಲುಮಾಡು: ನಮ್ಮ ಮಗುವನ್ನು ಶಾಲೆಗೆ ಸೇರಿಸಬೇಕು (ರೂಢಿ). **ಚೇರಿಸು:** ೨. ಶಿವನೊಳು ಸುವ್ಯಕ್ತದಿ ಚೇರಿಸುವ ಕಾರಣವಿದು ಯೋಗಾಂಗವಿಭೂಷಣವು (ಯೋಗಾಂವಿ. ೬-೨೮).

ಸೇರಿಸಿಕೊಳ್ಳು = ತನ್ನದನ್ನಾಗಿ ಮಾಡಿಕೊಳ್ಳು: ಸೇರಿಸಿಕೊಂಡವನೊಡವೆಯ ನಗುತ ಪಕೀರನ ಮಾಡಿ ಬಿಡುವರು (ಕಂನವಿ. ೨-೯೮). [ಸೇರ್₁ + - ಇಸು₃]

ಸೇರು₁ 'ಸೇರ್' ನೋ.

ಸೇರು₂ 'ಸೀಱು₃' ನೋ.

ಸೇರು₃ (ನಾ). ನಾಲ್ಕು ಪಾವುಗಳ ಒಂದು ಅಳತೆ ಮತ್ತು ಅದನ್ನು ಅಳೆಯುವ ಒಂದು ಸಾಧನ: ಸೇರಿಂಗಂ ಪಾವು ನಾಲ್ಕು ತಪ್ಪದು ನಿರುತಂ (ವ್ಯವಹಾ. ಅನುಬಂಧ. ೩, ೨); ಕಂಡೆ . . . ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯಮಾಡಿ ಕೊಡಿಸುವ . . . ವೇಂಕಟರಮಣನಂಘ್ರಿಯ (ಪುರಂದ. ೧-೧೧೯-೨); ಶ್ರೀರಾಮದೇವರಿಗೆ ಚುನ್ನಗನಗಣ್ಣಿಗೆ ಮಿರಲೆ ಮೋರಿ ಲಕ್ಷ್ಮಣ ಸೇವೆ ತೂ ೪೦ ಸೇರು (ಎಕ. XIV, ಎಡತೂ. ೭೦-೩; ?).

ಸೇರಿಗೆ ಸವ್ವಾಸೇರು = (ಆಲಂ) ಒಂದು ವಸ್ತು ಅಥವಾ ವ್ಯಕ್ತಿಯನ್ನು ಮೀರಿಸಿದ ಮತ್ತೊಂದು ವಸ್ತು ಅಥವಾ ವ್ಯಕ್ತಿ: ನಾರಾಯಣರಾಯರು ಸೇರಿಗೆ ಸವ್ವಾಸೇರು! (ಮನಚಿ. ೩೪). [ದೇ. ॥ ತಮಿ. ಚೇರ್; ತುಳು.ಸೇರ್; ತೆಲು. ಸೇರು./ ಹಿಂ. ಸೇರ್; ಮರಾ. ಶೇರ್./ ಸಂ. ಸೇರ]

ಸೇರುಗಾರ 'ಸೇರುವೆಗಾಱ' ನೋ.

ಸೇರುಗೆ, ಸೇರಿಗೆ (ನಾ). ೧. ಸಹವಾಸ; ಸಂಗ: ಕೌರವನ ಜಯವಧುವಿನೊಡನೆಯ ಸೇರುಗೆಯ ಕೂಟಣೆಯೊ ಶರವಿನ್ನಾರಿಗೊಱಲುವೆವಕಟೆನುತ ತಲ್ಲಣಿಸಿತರಿಸೇನೆ (ಕುಮಾಕ. ೨೫-೨೫). **ಸೇರಿಗೆ:** ೨. ಹತ್ತಿರ ಬರುವಿಕೆ; ಸಮೀಪಿಸುವಿಕೆ: "ಉಪಸನ್ನಮುಪನತಮುಪಸ್ಥಿತಂ ಸೇರಿಗೆಯದು" (ಮಂಗರಾ. ೧೩೪-೩೫).

[ಸೇರು₁ (< ಸೇರ್) + - ಗೆ]

ಸೇರುಪಡಿ (ನಾ). ಒಂದುಗೂಡುವಿಕೆ; ಜೊತೆಗೂಡುವಿಕೆ: ವಾನರರ ಸೇರುಪಡಿ ತಾನೆತ್ತ ದೈವಪ್ರೇರಣೆಯದೈಸಲ್ಲದಿದು ನಾವಾರು ಮಾಡುವುದಲ್ಲ (ತೊರರಾ. ೬-೫೧-೮೪). 'ಸೇರ್ಪಡೆ' ಪರಾ. [ಸೇರು₁ (< ಸೇರ್) + - ಪಡಿ₆]

ಸೇರುಮಣ್ಣು 'ಸೀಱುಮಣ್ಣು' ನೋ.

ಸೇರುವೆ (ನಾ). ೧. ಹೊಂದಿಕೆ; ಮೇಳ: ಶೈವಕಥಾವಿತಾನದೊಳ್ ಕುಂದಿನಿತಿಲ್ಲ ಸೇರುವೆ ಚಮತ್ಕೃತಿಯಾದುದು (ಸಾನಂಚ. ೧೭ ಕಥಾಗರ್ಭಸಂಧಿ); ಭಸ್ಮಾವಲೇಪನ ಚಂದನಂಗಳಿಗಾವ ಸೇರುವೆ (ನಿಭಾಗ. ೪-೫-೪೧); ಬಾಲಕಿಯರಲ್ಲಿ ಪರಿಶೋಭಿಸಿದರೆಸವ ನಕ್ಷತ್ರಗಣದಂತೆ ಮೊಗಸಸಿಯ ಸೇರುವೆಯೊಳು (ಜೈಮಿಭಾ. ೬-೨೨). ೨. ಸಹವಾಸ; ಒಡನಾಟ: ಕಾತರಿಸಿ ಕವಿವ ಬಲದ ಬಿರುದರಿಗಮರನಾರಿಯರೊಳಗೆ ಸೇರುವೆಯಾಯ್ತು (ಕುಮಾದ್ರೋ. ೬ ೫); ಜಳನಿಧಿಸುತೆಯ ಸೇರುವೆಯಿಂದೊಪ್ಪುವ ನಳಿನಾಕ್ಷಗೆ ನಮಿಸುವೆನು (ಕರ್ಣಪ. ೧-೨೪). ೩. ಗುಂಪು; ಸಮೂಹ: ಬಿಡು ಸಜ್ಜೆಯನವಗಡೆಯತನವಮ್ಮೊಡನೆ ಸಲ್ಲದು ಸೂಳೆಯರ ಸುರೆಗುಡುಹಿಗಳ ಸರವಾದಿಗಳ ಸೇರುವೆಯಲೊಪ್ಪುವುದು ಫಡ (ಕುಮಾಂ. ೨೦-೨೬); ಕಾಲಾಳು ಮೇಲಾಳು ಸೇರುವೆಯ ವಾಲೆಕಾರರು (ಇಚಸಾಂ. ೧೫-೩). ೪. ಹಸುಗಳ ಮಂದೆ,-- ಹಿಂಡು: 'ಸೇರುವೆಗಾರ' ಪರಾ.

[ಸೇರು₁ (< ಸೇರ್) + - ವೆ./ ತಮಿ. ಚೇರ್ವೈ; ಮಲ. ಚೇರ್ವೈ; ತುಳು. ಶೇರ್ವೆ]

ಸೇರುವೆಗಾರ 'ಸೇರುವೆಗಾಱ' ನೋ.

ಸೇರುವೆಗಾಱ, ಸೇರುಗಾರ, ಸೇರುವೆಗಾರ, ಸೇರೆಗಾರ, ಸೇರ್ವೆಗಾರ (ನಾ). ೧. ಮುಖ್ಯಸ್ಥ; ಮೇಲ್ವಿಚಾರಕ; ಮುಖಂಡ: ಎಕ್ಕಟಿಗರ ಪಡಕಣದ ಸೇರುವೆಗಾಱರುಕೃಡ ತಲೆಗಾವಲುಗಳ ತಕ್ಕಿನ ತಳವಾಱರ ತಿಂಥಿಣಿ ಕಟಕಕ್ಕೆ ರಕ್ಷಣೆಯಾಗಲು (ಶ್ರೀಪಾಲ. ೧೩-೧೧೨); ಅಳೆಸಗಿದೂಳಿಗಮನರಸಂಗಂ ಅರಸನಿತ್ತ ಜೀವನಮನಾಳ್ಗಮೊಪ್ಪಿಸುವ ಸೇರುವೆಗಾಱನಂತೆ (ಚಕಪಿ. ೨೫). **ಸೇರುಗಾರ:** ೨. ಹಸುಗಳ ಮಂದೆಯನ್ನು ಪೋಷಿಸುವ ಕಚೇರಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಸ್ಥಳೀಯ ಅಧಿಕಾರಿ: ಅರಮನೆಯ ಬಾಗಿಲ ಬಳಿಗೆ ಬಂದು, ಕಾವಲ ಕಾದಿರುವ ಗೊಲ್ಲರ ಸೇರುಗಾರನಂ ಕರೆದು (ಬತ್ತಿಸ. ೩೯). **ಸೇರುವೆಗಾರ:** ೨. ಅಮೃತಮಹಲ್ ಆಡಳಿತದ ಕಡತಗಳನ್ನು ತೆರೆದರೆ ಅದರ ಸೇರುವೆಗಾರರು ತಮ್ಮ ಮಂದೆಗಳ ಹಸುಗಳಿಗೆ ಕೊಡುತ್ತಿದ್ದ ನಾನೂರು ಹೆಸರು ದೊರೆಯುತ್ತವೆ (ನಮ್ಮನು. ೨೩೫). **ಸೇರೆಗಾರ:** ೩. ಕಟ್ಟಿಡ ನಿರ್ಮಾಣದ ಮೇಲ್ವಿಚಾರಕ; ಮೇಸ್ತ್ರಿ: ದಕ್ಷಿಣಕನ್ನಡಜಿಲ್ಲೆಯಿಂದ ಬರುವ ಮೇಸ್ತ್ರಿಗಳನ್ನು ಸೇರಗಾರರೆಂದು ಕರೆಯುತ್ತಾರೆ (ಕಾನೂರು. ೪೫); ತುಕ್ರನು . . . ತನ್ನ ಊರಿಗೆ ಓಡಿಹೋಗಿರಬೇಕೆಂದು ಅವನ ಸೇಗೆಗಾರರು ಭಾವಿಸಿದರು (ಪಂಜಪಂ. ೨೫) **ಸೇರ್ವೆಗಾರ:** ೧. ಸಾಮಂತ, ಸೇರ್ವೆಗಾರ (ತುಳುನಾ ೧೭೧).

[ಸೇರುವೆ + - ಕಾಱ./ ತಮಿ. ಚೇರ್ವೈಕಾರನ್, ಚೇರ್ವೈಕ್ಕಾರನ್; ತುಳು. ಶೇರಿಗಾರೆ, ಶೇರುಗಾರೆ, ಸೇರಿಗಾರೆ, ಸೇರಗಾರೆ]

ಸೇರುವೆಗೆಯ್ (ಕ್ರಿ). ಒಂದುಗೂಡು; ಜೊತೆಯಾಗು: ಬಿರಿದ ಪೂಂಬಾಳೆ ನಗಪಿ ಸೇರುವೆಗೆಯ್ದು ಬಾಳ್ಗಳೇಳ್ಗೆಯ ಬೀಱೆ (ಪದ್ಮರಾ. ೮-೩೪). [ಸೇರುವೆ + ಕೆಯ್₁]

ಸೇರುವೆದಪ್ಪು (ಕ್ರಿ). ಹೊಂದಾಣಿಕೆ ಇಲ್ಲವಾಗು; ಮೇಳತಪ್ಪು: ಬಲುಭಾರಿಯ ಗುಡಿಗಳ ಸಾಲು ಸೇರುವೆದಪ್ಪದೆತ್ತಿದವು (ಕುರಾಸಾಂ. ೪೨-೫೮). [ಸೇರುವೆ + - ತಪ್ಪು₁]

ಸೇರೆ₁, ಶಾರೆ, ಸಾರ್ಕೆ₃, ಸೆರ್ಕೆ₂ (ನಾ). ೧. ಬೊಗಸೆ; ಅಂಜಲಿ: ಎರಡು ಸೇರೆಯ ತುಂಬಿ ರತ್ನವ ಸುರಿದು ಮೈಯಿಕ್ಕಿದನು ಭೂಪತಿ (ಕುಮಾವಿ. ೧೧-೫೬); ಜನಮಜಿಯೆ ಪರ್ಗವತೆ ಸೇರೆ ಪಿಡಿ ಕರಭಂಗಳೆನಿಪವರೊಳಭಿನಯಿಸಿ ತೋಱಿಸಲ್ (ಜೈಮಿಭಾ. ೬-೨೧); ಸೂತ್ರಧಾರಂ ಸೇರೆಯೊಳ್ ಪೂರೈಸಿದ ಕುಸುಮಂಗಳಂ ರಂಗದೊಳ್ಬಲ್ಲಿ (ಮಿತ್ರಗೋ. ೧-೫). ೨. ಬೊಗಸೆಯಲ್ಲಿ ತುಂಬುವಷ್ಟು ಅಳತೆ: ಕಬ್ಬಿನ ಕಟ್ಟಿಗೆಯ ಪುಡಿಯೊಂದು ಸೇರೆಯನು [ಪಾಠಾಂ. ಸೆರೆಯನಲು, ಸೆರೆಯದನು] ದೇವರಿಗೆ ಕೊಟ್ಟು (ಬಸಪು. ೧೨-೨೮); ಅದರ ಮಾಲೆಯಲೆಗಳನ್ನೂ, ಉರುಳಿ ಹೊರಳಿ ಅವು ಒಂದರೊಡನೊಂದು ಹೋರಾಡುತ್ತ ನೊರೆಯ ಸೇರೆಗಳನ್ನೆತ್ತಿ ಎಸೆಯುತ್ತ ಬರುವುದನ್ನು ನೋಡಿದರೆ (ಪಂಯಾತ್ರ. ೩೨). **ಶಾರೆ:** ೧. ಬಲಗೈಯಿಂದ ಒಂದು ಶಾರೆ ಎಣ್ಣೆಯನ್ನು ಅವರ ತಲೆಯ ಮೇಲೆ ಹಾಕಿ ತಿಕ್ಕಲು ಆರಂಭಿಸಿದ್ದಾಳೆ (ವಂಶವೃ. ೧೬). 'ಶಾರೆಗಣ್ಣು' ಪರಾ. ೨. ಶಾರೆ ಹೊನ್ನಿಗೆ ಭತ್ತ ಶಾರೆಯಾದರೆ ಏನು (ಏಚಾಕೃ. ೧೩೫-೨). **ಸಾರ್ಕೆ:** ೩. ಬೊಗಸೆಯಷ್ಟು ವಿಶಾಲವಾದುದು: ಸತ್ತ ಮಗುವಿನ ಕಣ್ಣು ಸಾರೆ (ಗಾಡೆ). **ಸೆರ್ಕೆ₂:** ೧. ಎಳೆಯ ಬದನೆಯ ಕಾಯ ಕೊಯಿದು . . . ಸೆರೆನೀರು ಸೆರೆತುಪ್ಪವಿಳುಹಿ ನೀರುಳ್ಳಿ ಹಸಿಯಲ್ಲಮಂ ಹಾಕಿ ಬೇಯ್ಸುವುದು (ಸೂಪಶಾ. ೪-೨); ಒಂದು ಸೆರೆ ತಾರೆಕಾಯಿರಸದಲ್ಲಿ ಕಲಸಿ (ಸಕವೃ. ೪೯೫). ೨. ಕೆರೆಯೊಂದ ಕಟ್ಟಿಸ್ಕಾನು ಸೆರೆಮುಕ್ಕ ನೀರಿಲ್ಲ (ಕನ್ನಬಾ. ೭೯). 'ಮುಚ್ಚೆರೆ' ಪರಾ.

[ದೇ. ॥ ತಮಿ. ಚೇರ್ಕೆ; ತುಳು. ಸೇರೆ, ಸೆರೆ; ತೆಲು. ಚೇರ; ಕೊಡ. ಸೇರ; ತೊದ. ತೆಱ್]

ಹಾಲೋಗರೊಡೆ ಸಣ್ಣಸೇವಗೆಗಳಲ್ಲಲ್ಲಿ (ಬಸರ. ೭-೧೨). **ಶಾವಿಗೆ:** ೧. ಪರಡಿಯ ಶಾವಿಗೆಯ ಪರಿಪರಿಯ ಪಾಯಸದ ಪುಲ್ಲಿಗೆಯ ತತ್ವವಿಯ ಮಂಡಿಗೆಯಲ್ಲಿ . . . ನೋಡಲಿ ನಮ್ಮನು (ಕುಮಾಆ. ೧೫-೭); ಪರಿಪರಿಯ ಪರಮಾನ್ನ ಪರಡಿ ಶಾವಿಗೆಗಳಿಂದ (ಪರಶು. ೮-೨೭). ೨. ಹನುಮಂತರಾಯ ಹಗ್ಗ ತಿನ್ನುವಾಗ ಪೂಜಾರಯ್ಯ ಶಾವಿಗೆ ಬೇಡಿದ (ಗಾಡ). **ಸೇಮಿಗೆ:** ೨. ಗಂಗಕ್ಕ ಚಿಕ್ಕಪ್ಪನಲ್ಲಿಗೆ ಹೊರಟುದು ಸೇಮಿಗೆಯ ಮಣಿ ತರುವುದಕ್ಕಾಗಿ (ಒಡ್ಡಲು. ೨). **ಸೇವಿಗೆ:** ೧. ಬಳುಕಿ ಬಾಗುವ ಮಳೆಯ ಸೆಳಕುಗಳ ಸೇವಿಗೆಯ ಸಿವುಡು ಕಟ್ಟಿಡು (ನೆಲಮು. ೧೭ ೫).

ಸೇವಗೆಯೊರಳು = ಸೇವಗೆಯನ್ನು ಒತ್ತುವ ಒಂದು ಬಗೆಯ ಸಾಧನ: ಗಗನವಂದಂಭ ಸೇವಗೆಯೊರಳಿಂದ ಸೇವಗೆಯಿಳಿವೊಲು ಮಳೆಯಾಯ್ತು (ಭರಚಿ. ೩೪-೫೮). [ದೇ. ‖ತಮಿ. ಚೇಮಿಕ್ಕೆ, ಚೇಮಿಯಾ; ತುಳು. ಸೇಮೆ; ತೆಲು. ಸೇವಿಯ./ ಸಂ. ಸೇವಿಕಾ./ ಗ್ರೀಕ್. Seo]

ಸೇವತಿಗೆ 'ಸೇವಂತಿಗೆ' ನೋ.

ಸೇವನ (ನಾ). ೧. ಶುಶ್ರೂಷೆ; ಉಪಚಾರ: "ಸೇವನಂ . . . ಸ್ವೈರಂ – ಈ ೬ ಬಳಿಗಲಸಂ" (ಕಾಶಕ್ಷ. ೧೧೫). ೨. ಹೊಲಿಯುವಿಕೆ. [ಸಂ.]

ಸೇವನೆ (ನಾ). ೧. = ಸೇವನ ೧. ೨. ಪೂಜೆ; ಉಪಾಸನೆ: ಸಾಲದೆ ಮುಕ್ತಾಂಗನೆಯಂ ಸೋಲಿಸುವಡೆ ಜಿನಪದಾಬ್ಜಸೇವನೆ (ಸಮಪ. ೧-೧೨೮). ೩. ತಿನ್ನುವಿಕೆ: 'ಸೇವನೆಗೆಯ್' ಪರಾ. ೪. ಕುಡಿಯುವಿಕೆ; ಪಾನ: ಜನನೀಸ್ತನ್ಯಾಮೃತಸೇವನೆ ಮಾಣ್ದ ಬಟೊಕ್ಕಮಖಿಳವಿದ್ಯಾಮೃತಸೇವನೆಯೊಳೆ ಯೋಜಿಪುದುಚಿತಂ ತನಯನಂ (ಚಂದ್ರಪ್ರ. ೪-೩); ಕಾವೇರಿಯ ದರ್ಶನವು ಕೃತಯುಗದಲ್ಲಿ . . . ಕಲಿಯುಗದಲ್ಲಿ ಸೇವನೆಯು ಪುಣ್ಯಪ್ರದ (ಕಾವೇಮಾ. ೮-೧೪). ೫. ಅನುಭವಿಸುವಿಕೆ; ಸಂಗಮಾಡುವಿಕೆ: ವನಿತಾಸೇವನೆ ರೂಕ್ಷಮಕ್ಕೆ ಪಸಿವಾಗುಟ್ ಚಿಂತೆ ವಿಣ್ಮೂತ್ರವೇಗ ನಿರೋಧಂ . . . ಇವಱಂ . . . ಮಾರುತಂ ಜನಿಯಿಕ್ಕುಂ (ಲೋಕೋಪ. ೯-೪). [ಸಂ. ಸೇವನ]

ಸೇವನೆಗೆಯ್ (ಕ್ರಿ). ತಿನ್ನು; ಸೇವಿಸು: ಆಯಶ್ಶೂರ್ಣ ಸೇವನೆಗೆಯ್ದಾ ಫಲದಿಂದ ಪೆತ್ತ ತನಯಂಗಸ್ತ್ರೌಘಮೇನಾರ್ಕುಮೇ (ಜಗಿ. ೯-೩೮). [ಸೇವನೆ + ಕೆಯ್$_1$]

ಸೇವರಿಸು (ಕ್ರಿ). ಕವಿ; ಮುತ್ತು (?): ಇಮುಗಳಂ ಖಂಡಿಸುತ ತುಂಡಿಸುತ ಗಹಿಸಿ ಬಹ ಸೇನೆಗಂ ಆವರಿಸಿ ಸೇವರಿಸಿ ಸಹಸದೋಲಂಗಾಂಗ ತಾಟಿಸುತ ತೂಟಿಸುತ (ಜಸಾಮು. ೨೭-೨೨). [? + – ಇಸ್ಸು$_3$]

ಸೇವಳ 'ಸೇವಾಳ' ನೋ.

ಸೇವಳರೇಕೆ (ನಾ). ಹಾವಸೆಯ ಸಾಲು; ಪಾಚಿಯ ಸಾಲು: ಪೊಣರ್ವಕ್ಕಿ ಪಯೋಧರದ್ವಯಂ ಸೇವಳರೇಕೆ ಬಾಸೆ ಪುಳಿನಂ ಜಘನಂ (ಜಗವಿ. ೧೪-೯೧).

[ಸೇವಳ (< ಸೇವಾಳ) + ರೇಕೆ]

ಸೇವಾಕಾಂಕ್ಷೆ (ನಾ). ಸೇವೆ ಮಾಡುವ ಇಚ್ಛೆ: ಏನಾಯ್ತು ನಿನ್ನ ಪವಿತ್ರ ಸೇವಾಕಾಂಕ್ಷೆ? (ನಿಶಉ. ೧೨೫). [ಸಂ. ಸೇವಾಕಾಂಕ್ಷಾ]

ಸೇವಾರತಿ (ನಾ). = ಸೇವಾಕಾಂಕ್ಷೆ: ಸಮುಚಿತಸೇವಾರತಿಯೊಳ್ ನೆಱೆದು ನೆಗೞೆ ನಿರವಿಸಿ (ಪುಷ್ಪಪ್ರ. ೧೨-೫೫). [ಸಂ.]

ಸೇವಾಲ 'ಸೇವಾಳ' ನೋ.

ಸೇವಾವಿಚಕ್ಷಣ (ನಾ). ಸೇವೆಮಾಡುವುದರಲ್ಲಿ ಚತುರನಾದವನು: ಲೋಕಜ್ಞರುಂ ಸೇವಾವಿಚಕ್ಷಣರುಮಪ್ಪುದಱಿಂದಮಿಾ ಕುಕ್ಕುಟಯುದ್ಧನಿರೀಕ್ಷಣರಸಕ್ಕೆ ಭಂಗಂ ಮಾಡದೆ (ಶಾಂತಿಪು. ೯-೫೫ ವ). [ಸಂ.]

ಸೇವಾವಿದ (ನಾ). = ಸೇವಾವಿಚಕ್ಷಣ: ಸೇವಾವಿದಂ . . . ಮಾನಾನ್ವಿತಂ ಮೇಷಜಂ (ಜಾತಕ. ೧೭-೧). [ಸಂ. ಸೇವಾವಿದ್]

ಸೇವಾಳ, ಸೇವಳ, ಸೇವಾಲ (ನಾ). ಪಾಚಿ; ಹಾವಸೆ: "ಸೇವಾಳಮೆಂದು ಹಾವಸೆ ಪುಷ್ಪನಾಮಂ" (ಕಶಸಾ. ೫೩-೧೬೧); ಕುಸುಂಬೆಯ ಪೊಸಪೂವಂ . . . ಖದಿರದ ಸೇವಾಳದ ರಸದೊಳ್ ಕುದಿಯಿಸೆ (ಲೋಕೋಪ. ೭-೬೨). **ಸೇವಳ:** 'ಸೇವಳರೇಕೆ' ಪರಾ. **ಸೇವಾಲ:** ಸೇವಾ[ಪಾಠಾಂ. ವ]ಲದೊಳು ಸಿಕ್ಕಿ ನಿಲುವುದೆ ಮದದಂತಾವಲ (ರಾಮವಿ. ೧೮-೧೪೮). [< ಸಂ. ಶೈವಾಲ]

ಸೇವಾಳಂಬೊರೆ (ಕ್ರಿ). ಹಾವಸೆಯು ಆವರಿಸು, — ಹಬ್ಬು: ಮರಕತಮಣಿಕುಂಡಲ ರಶ್ಮಿರೇಖೆಯಿಂ ಗಂಡಮಂಡಳಂ ಸೇವಾಳಂಬೊರೆದ ಸಿತಕಮಲದಂತಿರೆ ಕರಮೆಸೆದಿರ್ದಂ ನೃಪಕುಮಾರಚೂಡಾರತ್ನಂ (ಪಂಠಾಮಾ. ೫-೧೩೪). [ಸೇವಾಳ + ಪೊರೆ$_2$]

ಸೇವಾಳಿ (ನಾ). ಸೇವೆಮಾಡುವವಳು; ಪರಿಚಾರಿಕೆ: ಪಿಂದು ಮುಂದೆಡಬಲದೊಳಮರ್ದ ಸೇವಾಳೀಜನಂಗಳ್ ನಿಲೆ (ಚಿಬಪು. ೧೦-೧೮). [ಸಂ. ಸೇವಾಲೀ]

ಸೇವಿಕೆ (ನಾ). ಸೇವಕಿ; ದಾಸಿ: ತರುಣಿ . . . ಬೆಸಸಿದಳಲ್ಲಿಗನಿತರೊಳ್ ಬೇಗನುಬ್ಬೇಗದಿಂ ಬಂದೊರ್ವ ಸೇವಿಕೆಗೆ ತನ್ನ ಕಂದನ ತಂದೆಯಂ ಕರೆದುತರುವಂತೆ (ಶ್ರೀರಾಮಾ. ೪೫೦-೧೪೫)

[ಸಂ. ಸೇವಿಕಾ]

ಸೇವಿಗೆ 'ಸೇವಗೆ' ನೋ.

ಸೇವಿತ (ನಾ). ಸೇವಿಸುವಂಥದು: ಸುರಪತಿಪೂಜಿತಂ ನೃಪತಿಸೇವಿತಂ (ಅಜಿಪು. ೧-೭); ಕುಮುದ್ವತಿ ಗಂಧವತಿ ಭೋಗವತಿ ಅಭಯವತಿ ಎಂಬ ಹೆಸರುಳ್ಳ ತಪ್ಪಲುಗಳು ನಾಲ್ಕುದಿಕ್ಕುಗಳಲ್ಲಿಯೂ ದೇವಋಷಿಗಳಿಂದ ಸೇವಿತಮಾಗಿರುವುವು (ಕಕುಮಾ. ೨೪೪-೧).

[ಸಂ.]

ಸೇವಿಸು (ಕ್ರಿ). ೧. ಸೇವೆಮಾಡು; ಶುಶ್ರೂಷೆಮಾಡು: ಜೈನಾಗಮವಿದರಂ ಸಾರದೆ ಪೋಗಿ ಕುಲಿಂಗಿಗಳನೀ ಜನಂ ಸೇವಿಸುಗುಂ (ಆದಿಪು. ೧೫-೩೮); ಮಾಹೇಶ್ವರರ ಚರಣಾಬ್ಜಮಂ ಭಾವಶುದ್ಧಿಯಿಂ ಸೇವಿಸುತೆ . . . ಶರಣಾನುಭವಸೌಖ್ಯದಿಂದೊಪ್ಪುತಿರಲ್ (ಪದ್ಮರಾ. ೪-೨೭); ಕ್ಷೋಣೀಶನಂ . . . ಮಣಿಮಕುಟವರ್ಧನರು ಸೇವಿಸುತಿರ್ಪರ್ (ಭಾವಚಿಂ. ೫-೨೩). ೨. ತಿನ್ನು; ಸೇವನೆಮಾಡು: ಬೇಂಟೆಯಾಡುವರುಂ ಮಧುಮದ್ಯಮಾಂಸಂಗಳಂ ಸೇವಿಸುವರುಂ . . . ನಾರಕರಾಗಿ ಪುಟ್ಟಿ (ಪಚ್ಚಾರಾ. ೧೬-೨೨); ಆ ವಿಕಚಾಂಬುಜ ಸೌರಭಮನೊಸೆದು ಸೇವಿಸುವಾ ಪೆಣ್ಣುಂಬಿಗಳ ಸರಮನೆತ್ತಿ ತಱುಂಬುತ್ತುಂ ಬಂದುದಾ ಪ್ರಭಾತಸಮೀರಂ (ಪಂಪಭಾ.೧೨-೧೦೫); ಮಧುರಸುಗಂಧದಿಂ ತಿಳಿದು ಸೇವಿಸಿದಳ್ ಮಧುವಂ ನಿಜೇಚ್ಛೆಯಿಂ (ಕಾವ್ಯಸಾ. ೧೬೩).

[ಸೇವನ + – ಇಸ್ಸು$_3$]

ಸೇವ್ಯ$_1$ 'ಸೇಬು' ನೋ.

ಸೇವ್ಯ$_2$ 'ಸೇವೆ$_2$' ನೋ.

ಸೇವುಣ, ಸೇಗುಣ, ಸೇಹುಣ (ನಾ). ಒಂದು ರಾಜವಂಶದ ಹೆಸರು; ಯಾದವವಂಶ: ಇದಿರಾನ್ತುದ್ಧತ ಸೇವುಣಾಧಿಪನ ಸೇನಾನಾಥರಂ ಕಂಡು (ಎಕ. VI, ಚಿಕ್ಕಮ. ೨೦-೧೩: 1249); ಸೇವುಣರು ಹೊಯ್ಸಳರಾಜ್ಯದ ಮೇಲೆ ಅಧಿಯೋಗವನ್ನು ನಡೆಸುವ ಹಂಚಿಕೆಯನ್ನು ಕೈಗೊಂಡರು (ಹಾಹುತ್ರ. ೫೪). **ಸೇಗುಣ:** ಸೇಗುಣಧ್ವಂಸಕಂ ಚೇರಭಯಭ್ರಾನ್ತಿಪ್ರದಂ (ಎಇ. XV, ೮೮-೧೫: 1060); ಸೇಗುಣಧೀಮಂ ಸಂಗ್ರಾಮಪರಶುರಾಮಂ (ಸೌಇಇ. XI-ii,೧೭೫-೧೦: 1113). **ಸೇಹುಣ:** ತುರಗಂ ಸೇಹುಣಮಾದಿಯಾಗಲಿನಿತುಂ ಕ್ಷೇತ್ರಂಗಳೊಳ್ ಪುಟ್ಟುಗುಂ (ಅಶ್ವಶಾ. ೬-೭೭). [?]

ಸೇವೆ$_1$ (ನಾ). ೧. ಊಳಿಗ; ಚಾಕರಿ: ಸೊಗಯಿಪ ದೃಕ್ಕಕೋರಚಯಸೇವೆಗೆ ಮೆಚ್ಚಿ ಮುಖೇಂದುಮಂಡಲಂ ಮಿಗೆ ಮುದದಿಂದೆ ಜೊನ್ನದ ಪಸಾಯಮನಿತ್ತಪುದೆಂಬವೋಲ್ ಮುಗುಳ್ನಗೆ ಪದೆಪಿಂ ಪೊದಳ್ದುದು (ಕುಸುಮಾ. ೬-೧೨೩); ನೀವು ನಮಿಸಲು ನಿಮಗೆ ಮುನ್ನವೆ ಸೇವೆಯಂ ಮಾಡುವನು (ಬಸಪು. ೪೮-೨೩); ಎನಗೆಲ್ಲ ಬಂದುದು ನೀನು ಮಾಡುವ ಸೇವೆಯಿಂದೆ (ಕಾಶಿರಾ. ೪೪-೪). ೨. ಉಪಚಾರ; ಶುಶ್ರೂಷೆ: ಪಾವನವ್ರತ ನಿಜಪುರಂಧ್ರಿಯ ಸೇವೆ ಸತ್ಯಾಸ್ತೇಯಶೌಚಗುಣಾವಳಿಗಳುಳ್ಳಾತ ಗೃಹಪತಿ (ಕುಮಾಆ. ೬೧೧. ೧೫-೪೬); ಪುರ್ಬುಗಂಟಿಕ್ಕದೆ ಪುಸಿಯದೆ ಸೇರಿ ಸೇವೆಯನೆಸಗುವುದು (ಪದಿಬ. ೩-೨೫); ಸೇವೆಗಿಲ್ಲದ ಬಂಟ, ಭಾವಕ್ಕಿಲ್ಲದ ಭಕ್ತಿ (ಗಾದೆ). ೩. ಪೂಜೆ; ಉಪಾಸನೆ: ಐದು ಕ್ಷೇತ್ರಗಳಲ್ಲಿ ಹರಿಯ ಸೇವೆಯಂ ಹರನು ಮಾಡುವನು (ತೀರ್ಥಮ. ೨೦೭); ಮಂತ್ರಾಲಯಕ್ಕೆ ಹೋಗಿ ರಾಯರ ಸೇವೆ ಮಾಡಿ ಬರ್ರಿ (ಹೊಸ್ಕೆ. ೧೮೪). ೪. ಕುಡಿಯುವಿಕೆ; ಸೇವಿಸುವಿಕೆ: 'ಸೇವೆಗೆಯ್' ಪರಾ. [ಸಂ. ಸೇವಾ]

ಸೇವ್ಯ$_2$, ಸೇವ್ಯ$_2$ (ನಾ). ಅಕ್ಕಿಹಿಟ್ಟು, ಕಡಲೆಹಿಟ್ಟು ಮುಂತಾದುವಕ್ಕೆ ಉಪ್ಪು, ಕಾರ ಮುಂತಾದುವನ್ನು ಸೇರಿಸಿ ನೀರಲ್ಲಿ ಕಲಸಿ, ಎಳೆಎಳೆಯಾಗಿ ಸೇವಗೆಯಂತೆ ಒತ್ತಿ ಎಣ್ಣೆಯಲ್ಲಿ ಕರಿದು ಮಾಡುವ ಒಂದು ಬಗೆಯ ತಿನಿಸು:

'ಕಲ್ಯಾಣಸೇವೆ', 'ಕಾರಾಸೇವೆ' ಪರಾ. ಸೇವ್ಯ: ಒಂದು ತಟ್ಟೆಯಲ್ಲಿ ಪೇಡೆ, ಸೇವು ತಂದಿಟ್ಟಳು (ರೂಢಿ). [< ಸೇವಗೆ./ ಮರಾ. ಶೇವ್]

ಸೇವೆಗಾಯ್ (ಕ್ರಿ). ಸೇವೆಯನ್ನು ಮಾಡಲು ಸಮಯ ಕಾಯು,—ನಿರೀಕ್ಷೆಯಲ್ಲಿರು: ಪೂಂಬಡೆದ ಸೂಳೆಯಂತೆ ಸೇವೆಗಾದುವೂಕ್ಕ ಬಂದಿಗಾಜನಂತೆ . . . ಚಿತ್ತದೊಳಾನಂದಂ ಬೆರಸಿರ್ಪುದು (ಧರ್ಮಾಮೃ. ೯-೩). [ಸೇವ್ + ಕಾಯ್ (< ಕಾ)]

ಸೇವೆಗೆಯ್, ಸೇವೆಗೆಯ್ಯು, ಸೇವೆಗೈ (ಕ್ರಿ). ೧. ಪೂಜಿಸು; ಆರಾಧಿಸು: ಪದಕಮಲಂ ಪದುಳಂಗೊಳಿಪುದು ನಲ್ಲೆಯಿನೊಲ್ದು ಸೇವೆಗೆಯ್ಯರ್ಗೆ (ಪಸ್ತಪಂ. ೧-೬). ೨. ಕುಡಿ; ಪಾನಮಾಡು: ಆಯುಷ್ಯಂ ಪೆಚ್ಚುಗುಮಂದಾಯೌಷಧ ಸೇವೆಗೆಯ್ಯರ್ (ಸಮಾಪ. ೧೨-೨೦). ಸೇವೆಗೆಯ್ಯು: ೧. ಸುವಿಲಾಸದೆ ವಿಷ್ಣುಪದ ಸೇವೆಗೆಯ್ಯುತ ತವ ಪಾಲ್ಗಡಲೊಪ್ಪಿದುದು (ಕಂನಪಿ. ೪-೨೨). ಸೇವೆಗೈ: ೧. ವರಪುಣ್ಯನದಿಯ ಕಾಲಂ ಚಿರಕಾಲಂ ಸೇವೆಗೈದ ಪುಣ್ಯದೆ ಪೋಪಂತಿರೆ ಸಗ್ಗಕೆ ಗರ್ದೆಗಳಂಬರಕೊಗೆದಾಡುವ ಶುಕಾಳಿಯೇನೊಪ್ಪಿದುದೋ (ಪ್ರಪಪಿ. ೪-೧೭). ೩. ಉಪಚರಿಸು: ಮುನಿದೊಡೆ ಕಡುತವಕದಿಂ ತಿಳಪುವಂ ಸೇವೆಗೈವಂ (ಚಟಪು. ೧೦-೨೯). [ಸೇವ್ + ಕೆಯ್]

ಸೇವೆಗೆಯ್ಯು 'ಸೇವೆಗೆಯ್' ನೋ.

ಸೇವೆಗೈ 'ಸೇವೆಗೆಯ್' ನೋ.

ಸೇವ್ಯ (ಗು). ೧. ಪೂಜಿಸಲು ಯೋಗ್ಯವಾದ. ೨. ಅನುಭವಿಸಲು ಅರ್ಹವಾದ. (ನಾ). ೩. ಪೂಜಿಸಲು ಯೋಗ್ಯವಾದುದು,—ತಕ್ಕುದು: ಸೇವ್ಯನ್ನವ್ಯಂ ಭೂತಳಕಿದು ಪೂಜ್ಯಂ (ಧಂದೋಂಬು. ೨-೧೦೯). ೪. ಅನುಭವಿಸಲು ಯೋಗ್ಯವಾದುದು: ಬೆಳದೂರಂತಱಗಿರ್ದ ಶಾಳಿವನದಿಂ ಸೇವ್ಯಂ ನಗೋಪತ್ಯಕಂ (ಆದಿಪು. ೧-೬೪). ೫. ಊಳಿಗ; ಕೆಲಸ: "ಸೇವನಂ, ಸೇವನೀಯಂ . . . ಸೇವ್ಯಂ, ಸೈವ್ಯಂ — ಈ ೬ ಬಳಿಗೆಲಸಂ" (ಕಾಶಕ್ರ. ೧೧೫). ೬. ಪೂಜ್ಯನಾದವನು; ಪೂಜ್ಯ: ಸೇವ್ಯರಸೇವ್ಯ ಮೆನೆ . . . ಕೈಕೊಳ್ಳದೆ . . . ಪಾಸಱೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೩ ವ). [ಸಂ.]

ಸೇವ್ಯತೆ (ನಾ). ಸೇವೆ; ಉಪಚಾರ: ಸಕಲಮಹೀಚರಖೇಚರನಿಕಾಯಸೇವ್ಯತೆಗೆ ವೃದ್ಧಸೇವಿತ್ವಮೆ ಯೋಜಕಮಾದುದು (ಶಾಂತಿಪು. ೨-೩೯). [ಸಂ. ಸೇವ್ಯತಾ]

ಸೇವ್ಯತ್ವ (ನಾ). ಅನುಭವಿಸುವಂಥದು; ಹಿತಕರವಾಗಿರುವಂಥದು: ಶರದಿಂದು ಪ್ರಭೆಯೊಳ್ ಪ್ರಕಾಶನಮುಮಾ ಸೇವ್ಯತ್ವಮುಂ . . . ತೋರ್ಪೂಂದಂದದಿಂ ನಾಡ ಬಂಧುರಮಾಯ್ತಾ ನೃಪಕಾಂತೆಯೊಳ್ ಬಹುಕಲಾನೈಪುಣ್ಯಮುಂ ಪುಣ್ಯಮುಂ (ಚಂದ್ರಪ್ರ. ೩-೨೭). [ಸಂ.]

ಸೇಶ್ವರಸಾಂಖ್ಯ (ನಾ). ಈಶ್ವರನ ಅಸ್ತಿತ್ವವನ್ನು ಒಪ್ಪುವ ಒಂದು ಪಂಗಡ ಮತ್ತು ಆ ಪಂಗಡಕ್ಕೆ ಸೇರಿದವನು: ಈ ಯೋಗದರ್ಶನವು ಈಶ್ವರನನ್ನು ಒಪ್ಪುವುದರಿಂದ . . . ಇದನ್ನು 'ಸೇಶ್ವರಸಾಂಖ್ಯ' ವೆಂದೂ ಕರೆದಿದ್ದಾರೆ (ಭಾರದ. ೧೨೭); ಇವರಲ್ಲಿ ಕೆಲವರು ಶಾಶ್ವತವಾದ ಈಶ್ವರನನ್ನು ಅಂಗೀಕರಿಸಿರುವುದರಿಂದ ಸೇಶ್ವರಸಾಂಖ್ಯರೆಂದು ಅವರಿಗೆ ಪ್ರಸಿದ್ಧಿ (ಹಿಂದೂಸಾ. ೪೯). [ಸಂ.]

ಸೇಸ (ನಾ). ೧. ಉಳಿಕೆ; ಬಾಕಿ: ಶೇಷ - ಸೇಸ, ಶೇಷೆ - ಸೇಸೆ (ಶಮದ. ೨೫೩ ಪ್ರಯೋ). ೨. ಆದಿಶೇಷ: ವಿಸವಂತಂ ಸೇಸಂ, ಜೊಕ್ಕೆವಂತಂ ಗರುಡಂ (ಶಪ್ಪಾನು. ೪೦೨ ಪ್ರಯೋ); ರಾಮರಾಜ್ಯವಂ ಸೇಸಂ ಬಣ್ಣಿಸಲಾರ್ತನಿಲ್ಲಂ (ರಾಮಾಶ್ವ. ೮-೪). [< ಸಂ. ಶೇಷ]

ಸೇಸಕ್ಕಿ (ನಾ). ಮಂಗಳಕಾರ್ಯಗಳಲ್ಲಿ ಉಪಯೋಗಿಸುವ ಅಕ್ಷತೆ; ಮಂತ್ರಾಕ್ಷತೆ: ಬೈತಲೆಯೊಳ್ ಕುಂದದ ಸೇಸಕ್ಕಿ ಸೊಗಯಿಕುಂ ಜೋಗಿಣಿಯಾ (ಲೀಲಾವ.೪-೭೮); ದೆಸೆವಲಿಗೊಟ್ಟು ದಿಗ್ಬಂಧನವನೆ ಮಾಡಿ ಎಸೆವ ನೀರ್ಗಂಪು ಸೇಸಕ್ಕಿ . . . ಹೊಸಹಣ್ಣಳಿಂದರ್ಚಿಸಿದನು (ಶ್ರೀಪಾಲ. ೮-೪೦). [ಸೇಸ + ಅಕ್ಕಿ]

ಸೇಸಿಕ್ಕು 'ಸೇಸೆಯಿಕ್ಕು' ನೋ.

ಸೇಸೆ, ಶಾಸೆ (ನಾ). ಮಂಗಳಾಕ್ಷತೆ; ಮಂತ್ರಾಕ್ಷತೆ: ಪೊಡವಟ್ಟು ಸೇಸೆಗಳನಿಕ್ಕಿದ ಬಟಿಕೆ (ವಡ್ಡಾರಾ. ೧೩೧-೧೯); ಮುತ್ತಿನ ಸೇಸೆಗಳನಿಕ್ಕಿದರ್ ಮಾನಿನಿಯರ್ (ಪಂರಾಮಾ. ೫-೯೨); ಪರಮಹರುಷದಿ ಶಂಭುಗಾ ದಿನ ಸುರರು ಸೇಸೆಯನಿಕ್ಕ . . . ತುತಿಸಲ್ಕೆ (ಸಂಭವ. ೧೦-೨೯); ನೆಟ್ಟನೆ ರಣವ ಜಯಿಸು ಎಂದು ಸೇಸೆಯನಿಟ್ಟಳು ಸಿರಿಮುಡಿಯಲ್ಲಿ (ಮೋಹತ. ೫೩-೬೧); ಮದುವೆಗೆ ತಂದ ಅಕ್ಕಿ ಸೇಸೆಗೆ ತೀರಿ ಹೋಯಿತು (ಗಾಡೆ). ಶಾಸೆ: ಇರದೆ ಬಿಡಿಮುತ್ತುಗಳ ಶಾಸೆಯಂ ಸೂಸುವೊಲ್ (ನವಮೋ. ೧೩-೫೩); ನವರತ್ನದಾರತಿಯಂ ಬೆಳಗಿ ಮುತ್ತಿನ ಶಾಸೆಯನಿಟ್ಟು (ಹಮಚ. ೨೪೯). [< ಸಂ. ಶೇಷಾ]

ಸೇಸೆ (ನಾ). ಒಂದು ಬಗೆಯ ತೆರಿಗೆ: ಅರಸರ್ಗ್ಗೆ ಸೇಸೆಯೆನ್ದರಸರ ಕಾಣಿಕೆಯೆನ್ದು ದಾಯಧರ್ಮ್ಮದ ತೆಱೆಯೆನ್ದು (ಎಇ. XV. ೩೪೧-೪೨; 1071); ತೆಱೆಕಾಣಿಕೆ ಸೇಸೆಯಾಸಗಳ್ಳಂನೆಯ ವಾಯದಾಯಮಿವು ಸಲ್ಲವು (ಕಾಇ. II, ೧೨-೫೭; 1114); ಪಾಳುಮೇಂಟೆ ಸೇಸೆ ಸಿದ್ಧಾಯ ಹೊದಕೆ ಹದಿಕೆ . . . ಮೊ[ದ]ಲಾಗಿ ಱವುದೂಂದು ಯಿಲ್ಲದೆ (ಸೌಇಇ. IX-ii, ೨೦೮-೩೦; 1364) [?]

ಸೇಸೆಗಱೆ (ಕ್ರಿ). ಮಂಗಳಾಕ್ಷತೆಯನ್ನು ತಳೆ: ಮೊಱೆದವು ಮಂಗಳವಾದ್ಯ ಮುತ್ತಿನ ಸೇಸೆಗಱೆದರಂಗನೆಯರರ್ತಿಯಲಿ (ಕಂನಪಿ. ೪-೬೩). [ಸೇಸೆ + ಕಱೆ]

ಸೇಸೆಗೊಡು (ಕ್ರಿ). ಅಕ್ಷತೆಯನ್ನು ಹಾಕು: ಅಲ್ಲಿಗೆ ಮಿಗೆ ಪರಿತಂದು ಸೇಸೆಗೊಟ್ಟು (ಸಮಪ. ೧೪-೧೬೮). [ಸೇಸೆ + ಕೊಡು]

ಸೇಸೆಗೊಳ್ (ಕ್ರಿ). ಮಂಗಳಾಕ್ಷತೆಯನ್ನು ಪಡೆ,—ಸ್ವೀಕರಿಸು: ಶೇಷಾಕ್ಷತಂಗಳ ನೀಶ್ವರನ[ಂ] ಗೆಲ್ಲ ಗೆಲ್ಲಕ್ಕೆ ಸೇಸೆಗೊಳ್ಳಂತೆ ಸೇಸೆಗೊಳುತ್ತುಂ (ಪಂಪಭಾ. ೮-೨೭ ವ); ಅರ್ತ್ತಿಯಿಂ ಸೇಸೆಗೊಣ್ಡು ಬಲಂಗೊಣ್ಡು ಸಮನ್ತು ಪೋದಂ (ಸೌಇಇ. XI-i, ೫೨-೬೫; 1007). [ಸೇಸೆ + ಕೊಳ್]

ಸೇಸೆದಳಿ (ಕ್ರಿ). = ಸೇಸೆಗಱೆ: ಅವನಿಪತಿ ನೀ ಸೇಸೆದಳಿ (ಕುವ್ಯಾಗ. ೪-೩೭); ಭೀಮನೃಪ ಸಂತೋಷದಲಿ ಕರಸಿದನು ಮುನಿಗಳ ಸೇಸೆದಳಿದರು ಸತಿಪತಿಯರಿಗೆ ಹರಸಿ ಅಕ್ಷತೆಯ (ನಳಚ. ೩-೭೮); ಹೊಳೆವ ಮುತ್ತಿನ ಸೇಸೆದಳಿದು (ಕಂನಪಿ. ೪-೭೦) [ಸೇಸೆ + ತಳಿ]

ಸೇಸೆಯಿಕ್ಕು, ಸೇಸಿಕ್ಕು (ಕ್ರಿ). ಅಕ್ಷತೆಯನ್ನು ಹಾಕು; ಮಂತ್ರಾಕ್ಷತೆಯನ್ನು ತಳೆ: ಇದಿರ್ಗೊಣ್ಡು ರಿಪುನ್ರಿಪಶ್ರೀ ಮುದದಿಂದಂ ಸೇಸೆಯಿಕ್ಕೆ ಪರಸೆ (ಸೌಇಇ. XX, ೪೯-೨೨; 1076 ?); ಆ ರಘುತನೂಭವನೇಟ್ಟರೆ ಸೇಸೆಯಿಕ್ಕಿದಂತಿರೆ ತರೆಗೈಯೊಳುಚ್ಚಳಿಸಿ ಸೂಸಿದುವಬ್ಧಿಯ ತೋರಮುತ್ತುಗಳ್ (ಪಂರಾಮಾ. ೧೨-೮೭); ಗಗನಶ್ರೀದೇವಿ ತಾಂ ಸೇಸೆಯಿಕ್ಕಿದಳೆಂಬಂತೆ ನಿರಂತರಂ ತೆನೆಗಳೊಳ್ ತಳ್ಪೊಪ್ಪುಗುಂ ತಾರೆಗಳ್ (ಕುಸುಮಾ. ೨-೮೫). ಸೇಸಿಕ್ಕು: ಮಾಗಧನಂ ಗೆಲ್ದೊಸಗಗೆ ರಾಗಿಸಿ ಜಲರಾಶಿ ನಿನಗೆ ಸೇಸಿಕ್ಕುವವೋಲ್ ಈಗಳ್ ಸೊಗಯಿಸಿದುದು (ಆದಿಪು. ೧೨-೧೨೧); ದೈವದಗಣ್ಮ ಪುಣ್ಯವಧುವರ್ ಸೇಸಿಕ್ಕಿ ಬಂದಾಡಿದರ್ (ಕಾವ್ಯಾವ. ೧೭೨); ರಾಗದೆ ಸೇಸಿಕ್ಕಿ ಪರಸೆ ವಾರಾಂಗನೆಯರ್ (ಸೇಮಿಪು. ೧೨-೧೫೧). [ಸೇಸೆ + ಇಕ್ಕು]

ಸೇಸೆಯಿಡು (ಕ್ರಿ). = ಸೇಸೆಯಿಕ್ಕು: ಮದನವಾಣಗಳು ಪರಸಿ ಮುತ್ತಿನ ಸೇಸೆಯಿಟ್ಟರು (ಪಚಕಾ. ೩-೩೦). [ಸೇಸೆ + ಇಡು]

ಸೇಸೆವಿಡಿ (ಕ್ರಿ). ಮಂಗಳಾಕ್ಷತೆಯನ್ನು ಕೈಯಲ್ಲಿ ಹಿಡಿ: ಮಂಗಳಾರತಿವಿಡಿದು ಸೇಸೆವಿಡಿದಮರಕಾಮಿನಿಯರ್ಕೆದೆ (ಸಿದ್ಧರಾ. ೧-೫೬). [ಸೇಸೆ + ಪಿಡಿ]

ಸೇಹುಣ 'ಸೇವುಣ' ನೋ.

ಸೇಳೆ (ನಾ). (ಕರಾ) ಬೆಡಗು; ಒಯ್ಯಾರ; ಬಿನ್ನಾಣ: ಅವಳು ಸೇಳೆಮಾಡಿ ಹೊರಟುಹೋದಳು (ಮಕಮ. ೧೦೮); ಮುಟ್ಟನಿಂದ ಮಾತಾಡಿಸಿದರೆ ಇದೇನು ನಿನ್ನ ಸೇಳೆ (ಪ್ರಶ್ನ. ೯೪); ನಮ್ಮ ಹುಡುಗಿಯರೋ ? ಅವರ ನಾಚಿಕೆಯೇನು, ಅವರ ಸೇಳೆಯೇನು ? (ಹೊಸಕ್ತಿ. ೨೧೮). [<— ತುಳು. ಶೇಲೆ, ಸೇಳೆ]

ಸೇಱು 'ಸೀಱು' ನೋ.

ಸೇಟ್ಟಡು (ಕ್ರಿ). ಸೆಟೆ; ಸೆಡೆದುಕೊಳ್ಳು: "ಸೇಡುಪಟ್ಟಂಗೆ ಸೇಟ್ಟುಟ್ಟನೆಂಬುದು" (ಸಂಜೀವ. ೨೨); ಡಕಾರಕ್ಕಾದೇಶಮಾದ ಱಟಕ್ಕಂ ಪ್ರಯೋಗಂ - ಕಾಟ್ಟೆಟ್ಟು . . . ಸೆ[ಲ]ಟ್ಟಟ್ಟಂ, ನೀರಟ್ಟೆ (ಶಮದ. ನ. ೨೯ ಪ್ರಯೋ). [< ಸೇಡುವಡು]

ಸ್ಯೆ$_1$ 'ಸಯ್'$_2$ ನೋ.

ಸ್ಯೆ$_2$ 'ಸಹಿ' ನೋ.

ಸ್ಯೆ$_3$ 'ಸಯ್'$_3$ ನೋ.

ಸ್ಯೆಂದವ (ನಾ). ಸಿಂಧುದೇಶಕ್ಕೆ ಸಂಬಂಧಿಸಿದುದು: ಧಕಾರಕ್ಕೆ ದಕಾರಂ . . . ಸ್ಯೆಂಧವ - ಸ್ಯೆಂದವ (ಶಮದ. ೨೫೫ ಪ್ರಯೋ). [< ಸಂ. ಸ್ಯೆಂಧವ]

ಸ್ಯೆಂದುಪ್ಪು (ನಾ). ಒಂದು ಬಗೆಯ ಉಪ್ಪು: ಇವಕ್ಕೆ ಮಜ್ಜಿಗ ಮತ್ತು ಚೂರು

ಸೈಂದುಪ್ಪು ಹಾಕಿ ಹಸಿವೆಗೆ ತಕ್ಕಷ್ಟು ಕೊಡುವುದು ಲೇಸು (ಮನಮ. ೧೭).

[< ಸೈಂದವ + ಉಪ್ಪು$_1$]

ಸೈಂಧವ (ಗು). ೧. ಸಮುದ್ರಕ್ಕೆ ಸೇರಿದ; ಕಡಲಿನ. ೨. ಸಿಂಧುದೇಶಕ್ಕೆ ಸಂಬಂಧಪಟ್ಟ: ಸೈಂಧವ ಸಂಸ್ಕೃತಿಯೆಂಬುದು . . . ಎರಡು ಮಹಾನಗರಗಳಲ್ಲಿ ಸಿತ್ತು (ದ್ರಾವಿವಿ. ೨೨). (ನಾ). ೩. ಒಂದು ಬಗೆಯ ಉಪ್ಪು: ಭವದೀಯ ವನಾಯುಜ ಹಯನಿವಹಂ ಕೇಳ್ ಮೂರಿವಿಟ್ಟು ನಿಶ್ವಾಸಂ ಸೈಂಧವಮಂ ಮಾಸಿಸೆ ಸೊಗಯಿಸಿತು (ಶಾಂತಿಪು. ೫-೯೨) ಲೊಕ್ಕಿಚಿಗುರು, ಸೈಂಧವ, ಮೆಣಸು ಈ ಮೂರನ್ನೂ ಸಮಭಾಗವಾಗಿ ಅರೆದು ಬಿಸಿನೀರಿನಿಂದ ಕೊಡಲು ವಾತಜ್ವರ ಪರಿಹಾರವಾಗುವುದು (ಸಕನೈ.೭೩). ೪. ಸಿಂಧೂದೇಶ ಮತ್ತು ಅಲ್ಲಿಯ ಜನ: ಸೈಂಧವರ ಲಾವಣ್ಯ ಮಣ್ಮಾಣಸು (ಸೂರ್ಯಜಾ. ೪೯-೧೬). ೫. ಸಿಂಧುದೇಶದ ಕುದುರೆ: ಬಿಸ ಕಾಂಭೋಜಕ ಬಾಹ್ಲೀಕ ಸೈಂಧವಾರಟ್ಟ ತೈತಿಲಂ ವಾನೇಯಂ ಪೆಸರ ಕ್ಷೇತ್ರದ ಹಯಕಾ ಪೆಸರೆ ಪೆಸರ್ (ಅಶ್ವಶಾ. ೬-೭೭); ಸಂಜೋಗದಮಳಸೈಂಧವಗಳಂ ಪಿಡಿದರಿಕ್ಕೆಲದಲ್ಲಿ (ಭಾವಚಿಂ. ೮-೩). ೬. ಮಹಾಭಾರತದ ಒಬ್ಬ ವೀರ; ಜಯದ್ರಥ: ತನತನಗೆ ಸೈಂಧವನ ಬೆಂಗಾಹಿನ ಭಟರು ಭಾರಣೆಯಲೊದಗಿದರು (ಕುವ್ಯಾಅ. ೨೨-೩೧). ೭. ಚಂದ್ರ; ತಿಂಗಳು. ೮. ಗಿಳಿ; ಶುಕ. ೯. ವಿಷ: "ಲವಣಂ ರಾಕೇಂದು ವಿಷ ತುರಂಗಂ ತಾ ಕೀರಕ್ಕೆಯು ಸಲುವ ಸೈಂಧವಶಬ್ದಂ" (ನಾನಾಕಂ. ೨೩). ೧೦. ಒಂದು ಬಗೆಯ ಸಸ್ಯ: "ನದೀಜಃ- ತೊಱೆಗಣಿಗಿಲು, ಮತ್ತಿ, ಸೈಂಧವ, ಕಡವ" (ಒಪಧಿ. ೮೩). ೧೧. (ಆಲಂ) ದಷ್ಟಪುಷ್ಟವಾಗಿ ಎತ್ತರವಾಗಿರುವವನು; ಆಜಾನುಬಾಹು: ಅವನಿಗೇನು ಒಳ್ಳೆಯ ಸೈಂಧವನಾಗಿ ಬೆಳೆದಿದ್ದಾನೆ (ರೂಢಿ). [ಸಂ.]

ಸೈಂಧವಲವಣ (ನಾ). ಒಂದು ಬಗೆಯ ಉಪ್ಪು: ಆಡುಸೋಗೆ - ಈ ಚಿಗುರಂ ಸೈಂಧವಲವಣ ಸಹ ಅರೆದು ನುಂಗಲು ಶ್ಲೇಷ್ಮ ಕಳೆದು ಬೀಳುವುದು (ವಿವೈವಿ. ೧).

[ಸಂ.]

ಸೈಂಧವಿ (ನಾ). [ಸಂಗೀತ] ಒಂದು ರಾಗದ ಹೆಸರು: ಠಕ್ಕೆ ಸೈಂಧವಿ . . . ಉಪಾಂಗವೆಂಬಂತು ಷಟ್‌ಸ್ವರಜಾತಿಯಿಂದಾದ ರಾಗಂಗಳು (ವಿವೇಕ. ೧೮೭).

[ಸಂ. ಸೈಂಧವೀ]

ಸೈಂಹಿಕೇಯ (ನಾ). ಸಿಂಹಿಕೆಯ ಮಗ; ರಾಹು: ಅಂತು ನೀಡೆ ನೀರನೀಂಟಿ ಶಶಿಕಳೆಗಳಂ ಮೆಲ್ಲ ಸೈಂಹಿಕೇಯನಂತೆ (ಕಾದಂಪು. ೧೭೪); ದಶಮುಖಂ . . . ಜನಕಸುತೆಯಂ . . . ಶಶಿಕಲೆಯಂ ಸೈಂಹಿಕೇಯನುಯ್ಯಂತುಯ್ದಂ (ಪಂಪಾಮಾ. ೯-೧೦೨). [ಸಂ.]

ಸೈಕ 'ಸಯ್ಕ' ನೋ.

ಸೈಕತ (ಗು). ೧. ಮರಳಿನಿಂದ ತುಂಬಿದ; ಉಸುಕಿನ: ಆ ವಾರಿಧಿಯ ತೀರದಲ್ಲಿ ಆ ಸೈಕತಭೂಮಿಯಲ್ಲಿ . . . ಆ ಮೂರ್ತಿಯು ನಿಂತಿತ್ತು (ಕಪಾಕಂ. ೧೮). (ನಾ). ೨. ಮರಳು; ಉಸುಕು: ಸೈಕತದ ಲಿಂಗಮನೆಯ್ದೆ ಭರದೆ ಪೂಜಿಸಿ (ಅಗಾಚ. ೪-೨೫); ಎಣಿಸಬಹುದಾಗಸದ ತಾರಾಗಣಗಳನು ತ್ರೈಭುವನದೊಳಗಿಹ ತೃಣಗಳನು ಬಹುನದಿಯ ಸೈಕತಗಳನು (ಉತ್ತಕ. ೩೩-೧೨). ೩. ನೀರಿನ ಮಧ್ಯದ ಮರಳಿನ ದಿಣ್ಣೆ: "ಪುಳಿನಮೆನೆ ಸೈಕತಮೆನಲು ದ್ವೀಪಮೆಂದೆನಲು ಮಳಲೊಟ್ಟಲಕ್ಕುಂ" (ಮಂಗರಾ. ೧೨೨-೧೧). [ಸಂ.]

ಸೈಕತಮಣಿ (ನಾ). ಮರಳಿನ ಕಣ: ಎಣಿಸಬಹುದೂರ್ವರೆಯ ಸೈಕತಮಣಿಯನೊಯ್ಯಾರದಲಿ (ಕುವ್ಯಾಉ. ೪-೫೨) [ಸಂ.]

ಸೈಕತಸ್ಥಳ (ನಾ). ಮರಳಿನಿಂದ ತುಂಬಿದ ಸ್ಥಳ: ತೊಱೆಯ ಸೈಕತಸ್ಥಳದೊಳ್ ರತ್ನಮಂಟಪಮನೆತ್ತಿಸಿ (ಪಂಪಾಮಾ. ೧೦-೧೭೯ ವ). [ಸಂ. ಸೈಕತಸ್ಥಲ]

ಸೈಕತೋದ್ದೇಶ (ನಾ). = ಸೈಕತಸ್ಥಳ: ಅತಿಮನೋಹರತರ ಸೈಕತೋದ್ದೇಶದೊಳರಸಿಯರುಂ ತಾನುಂ ಕುಳ್ಳಿರ್ದು (ಶಾಂತಿಪು. ೯-೭೯ ವ). [ಸಂ.]

ಸೈಕನೆ 'ಸಯ್ಕನೆ' ನೋ.

ಸೈಕಲ್ 'ಸೈಕಲ್ಲು' ನೋ.

ಸೈಕಲ್‌ಕಚ್ಚೆ (ನಾ). ಸೈಕಲ್ಲು ಹತ್ತಲು ಅನುಕೂಲವಾಗುವಂತೆ ಹಾಕಿಕೊಳ್ಳುವ ಕಚ್ಚೆ: ಹಳಬರಲ್ಲಿ ಕೆಲವರು ಈಗಲೂ ಸೈಕಲ್‌ಕಚ್ಚೆ ಹಾಕಿಯೇ ಸೈಕಲ್ ತುಳಿಯುತ್ತಾರೆ (ರೂಢಿ). [ಸೈಕಲ್ (< ಸೈಕಲ್ಲು) + ಕಚ್ಚೆ]

ಸೈಕಲ್‌ರಿಕ್ಷಾ (ನಾ). ಸೈಕಲ್ಲಿನಂತೆ ಪೆಡಲು ತುಳಿಯುವುದರಿಂದ ಮುಂದೆ ಹೋಗುವ, ಹಿಂಭಾಗದಲ್ಲಿ ಸಾಮಾನುಗಳನ್ನಿಡಲು ಅಥವಾ ಜನರು ಕೂರಲು ಅನುಕೂಲವಿರುವ, ಮೂರುಚಕ್ರಗಳುಳ್ಳ ಒಂದು ಬಗೆಯ ವಾಹನ: ಕಂಡಕ್ಟರ್ ಸೂರಪ್ಪ . . . ಹೊರಟ, ಒಂದು ಸೈಕಲ್‌ರಿಕ್ಷಾ ತರಿಸಿಕೊಂಡು (ಬೆಂಗಬ. ೭.) [ಸೈಕಲ್ (< ಸೈಕಲ್ಲು) + ರಿಕ್ಷಾ]

ಸೈಕಲ್ಲು, ಸೈಕಲ್ (ನಾ). ಕಾಲುಗಳನ್ನು ಪೆಡಲುಗಳ ಮೇಲೆ ಒತ್ತಿ ನಡೆಸುವ ಎರಡು ಚಕ್ರಗಳ ವಾಹನ; ಬೈಸಿಕಲ್ಲು: ಸೈಕಲ್ಲು ಕೂಡ ಏನೋ ಕೆಟ್ಟುಹೋಗಿತ್ತು (ಆಲಘಾ. ೪೯). **ಸೈಕಲ್**: ಸೈಕಲ್‌ನಲ್ಲಿ ಹೋಗಿ ಬನ್ನಿ (ರೂಪಸಂ. ೬).

[<— ಇಂ. cycle]

ಸೈಕಾಗ್ರಮನಸ್ಕ (ನಾ). ಒಂದೇ ವಿಷಯದಲ್ಲಿ ಮನಸ್ಸನ್ನು ಕೇಂದ್ರೀಕರಿಸಿದವನು; ಏಕಾಗ್ರಚಿತ್ತದಿಂದಿರುವವನು: ಕೈಕಾಲ್ ಸುರುಳ್ಳು ನಡುಗದೆ ಸೈಕಾಗ್ರಮನಸ್ಕನಾಗಿ ಭರವಸದಿಂ ಬಪ್ಪಯ್ಯಿಲ್ಲಳ್ಳದೆ ಪಲ್ಯಂಕೈಕಾಸನದಿರ್ಪ ಸಾಹಸಂ ಪಱರ್ಗುಂಟೇ (ಸುಕುಮಾ. ೪-೧೨). [ಸಂ.]

ಸೈಗರೆ 'ಸಯ್ಗಱೆ' ನೋ.

ಸೈಗಱೆ 'ಸಯ್ಗಱೆ' ನೋ.

ಸೈಗುಟ್ಟು (ಕ್ರಿ). ಸರಿಯೆಂದು ಹೇಳು; ಒಪ್ಪು: ಊರಿಗೆ ಹೋಗುವುದೇ ಒಳ್ಳೇದು ಎಂದು ಸೈಗುಟ್ಟಿಬಿಟ್ಟರು (ಪತಿ. ೧೦); ವ್ಯಾಪಾರದ ಯೋಚನೆಗೆ ಸಾಂಬನೆಂದುದಕ್ಕೆ ಸೈಗುಟ್ಟಿದೆ (ಶ್ಯಾಗಮ. ೬೭). [ಸೈ$_1$ (< ಸಯ್$_2$) + ಕುಟ್ಟು$_1$]

ಸೈಗುಡು (ಕ್ರಿ). ಒಪ್ಪಿಗೆ ನೀಡು; ಸಮ್ಮತಿಸು: ತಪಿಪ ಕಾಮನ ಕರೆಗೆ ಸೈಗುಡುವಳಂತೆ! (ನಡದಾ. I, ೪೦೬). [ಸೈ$_1$ (< ಸಯ್$_2$) + ಕುಡು$_1$ (< ಕೊಡು$_1$)]

ಸೈಗೆ 'ಸಯ್ಗೆ' ನೋ.

ಸೈಗೆಡಪು 'ಸಯ್ಗೆಡಪು' ನೋ.

ಸೈಗೆಡಹು 'ಸಯ್ಗೆಡಪು' ನೋ.

ಸೈಗೆಡೆ 'ಸಯ್ಗೆಡೆ' ನೋ.

ಸೈಗೆವಾತು (ನಾ). ಸನ್ನೆಮಾತು: ತನ್ನ ದನಿಯಲಿ ಕರೆದು ಹತ್ತಿರ ಸಾರಿ ಎನ್ನಲಿ ತನ್ನ ಆ ಸೈಗೆವಾತಲಿ ಒರೆದ; ಬಲ್ಲೆನು ನಾನು ಅವನಾ ಸನ್ನೆಯ (ಮೂಕಮ. ೮).

[ಸೈಗೆ (< ಸಯ್ಗೆ) + ಮಾತು$_1$]

ಸೈಗೈ (ಕ್ರಿ). ಸರಿಮಾಡು; ಋಜುಗೊಳಿಸು: ಇನಿತಿನಿತು ದೋಷಂಗಳಿರೆ ಸಾಧನಗಳಂ ಸೈಗೈದು ಸತ್ಪತಿಯೆನಿಸಿ ಘನತೆಯ ಮೆರೆವ ಬುಧಕವಿಗಳಿಗೆ ವಂದಿಸುವೆ (ಆನಂರಾ. ೧-೧-೮). [ಸೈ$_1$ (< ಸಯ್$_2$) + ಕೈ$_1$ (< ಕೆಯ್$_1$)]

ಸೈಗೊಟ್ಟ, ಸಯಿಗೊಟ್ಟ (ನಾ). ಗಂಗವಂಶದ ಒಬ್ಬ ರಾಜನ ಹೆಸರು; P ಸು.೮೦೦ರಲ್ಲಿದ್ದು ಶಿವಮಾರಮತವೆಂಬ ಗಜಶಾಸ್ತ್ರವನ್ನು ಬರೆದ ಶಿವಮಾರನ ಇನ್ನೊಂದು ಹೆಸರು: ಶ್ರೀಶಿವಮಾರದೈವ ಪ್ರಥಮನಾಮಧೇಯಃ ಸೈಗೊಟ್ಟಾ ಪರ ನಾಮಾ ಕನೀಯಾನ್ ವಿಜಯಾದಿತ್ಯಃ (ಮೈಅಂ. ೧೯೨೧, ೧೦-೪೧; 963); ವೀರಮಾರ್ತ್ತಂಡದೇವನೆನಿಸಿದಾತನ ಮಗಂ ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ ಶಿವಮಾರಮತಮೆಂದು ಗಜಶಾಸ್ತ್ರಮಂ ಮಾಡಿ (ಎಕ. VIII, ನಗರ. ೩೫-೩೩; 1077). **ಸಯಿಗೊಟ್ಟ**: ಶ್ರೀಪುರುಷಂ ಶಿವಮಾರಂ ಭೂಪಾಳ ಕೃತಾಂತಭೂಪನಾ ಸಯಿಗೊಟ್ಟಂ (ಎಕ. VII, ಶಿಕಾರಿ. ೫೭ ೮; 1115). [?]

ಸೈಗೋಡು 'ಸಯ್ಗೋಡು' ನೋ.

ಸೈಗೋಲ್ 'ಸಯಿಗೋಲ್' ನೋ.

ಸೈಗೋಲ (ನಾ). ನಿಪುಣನಾದ ಬಿಲ್ಗಾರ: ತೆಗೆದಿಸೆ ಸೈಗೋಲರ್ ಸೆಱೆಗೋಲುಂ ಪೆಣನುಮೊಡನೆ ಕೆಡೆದುವು (ಪಾರ್ಶ್ವಪು. ೩-೧೧೫).

ಸೈಗೋಲ ಪಾರ್ಥ = ಬಾಣಪ್ರಯೋಗದಲ್ಲಿ ಅರ್ಜುನನಂತೆ ನಿಪುಣನಾದವನು; ಒಂದು ಬಿರುದು: ಸೈಗೋಲ ಪಾರ್ಥ ಎಸುವರಾ ದಿವ್ಯತೇ ಭಾವ ಸಂವಚ್ಛರೇ ಜ್ಯೇಷ್ಠಮಾಸೇ . . . ದತ್ತಮ್ (ಇಆ. XIV, ೧೪೧-೧೯; 12ನೆಯ ಶತ).

[ಸೈಗೋಲ್ (< ಸಯಿಗೋಲ್) + - ಅ$_7$]

ಸೈಟು (ನಾ). ಮನೆಕಟ್ಟುವ ನಿವೇಶನ: ಖಾಲಿ ನಿವೇಶನವನ್ನು ಯಾರೋ ಕೊಂಡು ಸೈಟುಗಳಾಗಿ ವಿಂಗಡಿಸುತ್ತಿದ್ದರು (ತಾಯಿಕ. ೨೦೧). [<— ಇಂ. Site]

ಸೈತಕ್ಕರ (ನಾ). [ಛಂದ] ನೇರವಾದ ಗೆರೆಯ ಚಿಹ್ನೆ (ಲಘುಚಿಹ್ನೆ)ಯುಳ್ಳ ಅಕ್ಷರ; ಲಘು ಅಕ್ಷರ: P ಇಂಗ್ಲಿಷ್ ಸಾಹಿತ್ಯವು ನಮ್ಮಲ್ಲಿ ಪ್ರಚಲಿತವಾಗುವುದಕ್ಕೆ ಮೊದಲು, ಕನ್ನಡಛಂದಸ್ಸಿನಲ್ಲಿ ಗುರುವಿಗೆ U ಚಿಹ್ನೆಯು, ಲಘುವಿಗೆ I ಚಿಹ್ನೆಯು ಬಳಕೆಯಲ್ಲಿ ಇತ್ತು: ಗುರುವಕ್ಕುಂ ಮುಂತೊತ್ತಕ್ಕರಮಾಗಿರೆ ಪಿಂತೆ ನಿಂದ ಸೈತಕ್ಕರಮುಂ ಗುರುವೊತ್ತುಗಳಿಂದಕ್ಕುಂ ಪರಮಾರ್ಥಂ (ಛಂದೋಂಬು. ೧-೩೪).

[ಸೈತು$_1$ (< ಸಯ್ತು$_1$) + ಅಕ್ಕರ$_2$]

ಸೈತನೆ 'ಸಯ್ತನೆ' ನೋ.

ಸೈತಾನ್ 'ಸೈತಾನ' ನೋ.

ಸೈತಾನ, ಸೈತಾನ್ (ಗು). ೧. ದುಷ್ಟತನದ; ನೀಚಸ್ವಭಾವದ: ಈ ಸೈತಾನ ಮಂಗೋಲರನ್ನು ಯೂರೋಪಿಯನರು ಟಾರ್ಟರರೆಂದು ಕರೆದರು (ಪ್ರವಾಸ. II, ೧); ಹೆಣ್ಣಾದವಳು ಸೈತಾನವಂಶಕ್ಕೆ ಸೇರಿದರೂ ಚಿಂತೆಯಿಲ್ಲ (ಕಾವೇರಿ. ೧೯೪). (ನಾ). ೨. ಭೂತ, ಪಿಶಾಚಿ ಮುಂತಾದ ದುಷ್ಟಶಕ್ತಿ; ಪಾಪಪ್ರೇರಕಶಕ್ತಿ: ಮನಸ್ಸೆಂದರೆ ಸೈತಾನನ ಕಾರಖಾನೆ (ನಾಪೋಲೀ. ೨೭೧). ೩. ಕ್ರೈಸ್ತಧರ್ಮದ ಪ್ರಕಾರ ಮನುಷ್ಯನನ್ನು ಪಾಪಕ್ಕೆ ಪ್ರೇರಿಸಿ ದೈವಭಕ್ತಿಯನ್ನು ತಪ್ಪಿಸಿ ಭ್ರಷ್ಟನನ್ನಾಗಿ ಮಾಡುವ ಭಗವದ್ವೈರಿ; ಪಾಪಪುರುಷ: ಸೈತಾನನ (Satan) ಶೋಧನೆಗೆ ಒಳಗಾಗಿ ಅದರಲ್ಲಿ ಗೆದ್ದು ಬಂದನು (ಗೊಲ್ಗೊಥಾ. iv, ಮುನ್ನುಡಿ). ೪. ದುಷ್ಟವ್ಯಕ್ತಿ; ನೀಚಸ್ವಭಾವದ ವ್ಯಕ್ತಿ: ಅವನೊಬ್ಬ ಸೈತಾನ, ಯಾವ ಕೆಟ್ಟ ಕೆಲಸಕ್ಕೂ ಹೇಸುವುದಿಲ್ಲ (ರೂಢಿ). **ಸೈತಾನ್**: ೨. ಕಲ್ಲು ಮಣ್ಣೂ ಪೂಜಿಪ ಜನರ ಸಭ್ಯರ ಮಾಡಲು ಒಟ್ಟಿಗೆ ಮಾಡಲು ದೇವರು ಯೋಚಿಸಿ ಹೊರಟನು ಮುಂದೆ ಒಡನೆಯೆ ಸೈತಾನ್ ಹೊರಟನು ಹಿಂದೆ (ಕವಿಸೋ. ೫-೮). ೪. ಅಯ್ಯೋ! ನರಸಿಂಹನಾಯಕ . . . ಸೈತಾನ್, ಸೈತಾನ್ (ರಾಜಯೋ. ೧೪೧). [<— ಅರ. ಹಿಂ. ಶೈತಾನ್; ಮರಾ. ಸೈತಾನ್. / ಇಂ. Satan]

ಸೈತಾನಿ (ಗು). ೧. = ಸೈತಾನ್ ೧: ಸೈತಾನಿಶಕ್ತಿಗಳ ಸಂಪೂರ್ಣ ಸದಬಡಿದು (ಮಾನಸ. ೫೬-೧); ವಿಷ್ಣುನಿಗಾಗುವ ಪರಿತಾಪ ಹಾಗೂ ಕುಡಚಿಯ ಸೈತಾನೀ ನಗೆ (ಸಮಜೀ. ೩೯. ಬೀಠಿಕೆ). (ನಾ). ೨. = ಸೈತಾನ ೨: ಗಂಭೀರಸ್ವರದಿಂದ ಅರಚುತ್ತ ಹಾ! ಸೈತಾನಿ (ಪಿಶಾಚಿಯೆ) ಎಂದು ಕೂಗಿದನು (ಕೋಟಿನಾ. ೬೬).

[<— ಹಿಂ. ಶೈತಾನೀ]

ಸೈತಿಕ್ಕು (ಕ್ರಿ). ನೇರಮಾಡು; ಸರಿಯಾಗಿಡು: ಮಹಾಶ್ವೇತೆ . . . ಷಟ್ಚರಣ ವ್ಯಾರೋಲಕರ್ಣೋತ್ಪಲಮನಮರೆ ಸೈತಿಕ್ಕುತಂ (ಕಾದಂಬ. ೪೯); ಯೋಗಪಟ್ಟೋದರಮಂ ಸೈತಿಕ್ಕುತುಂ . . . ಬಂದು ಪೊಕ್ಕಂ ನೃಪಸಭೆಯನಹಂಕಾರಿ ಮಾಯಾಭುಜಂಗಂ (ಕಾವ್ಯಸಾ. ೪೦೩). [ಸೈತು$_2$ (< ಸಯ್ತು$_2$) + ಇಕ್ಕು]

ಸೈತಿಡು 'ಸಯ್ತಿಡು' ನೋ.

ಸೈತಿರ್ 'ಸಯ್ತಿರ್' ನೋ.

ಸೈತಿರಿಸು 'ಸಯ್ತಿರಿಸು' ನೋ.

ಸೈತಿರು 'ಸಯ್ತಿರ್' ನೋ.

ಸೈತು$_1$ 'ಸಯ್ತು$_1$' ನೋ.

ಸೈತು$_2$ 'ಸಯ್ತು$_2$' ನೋ.

ಸೈತುವೋಗು (ಕ್ರಿ). ನಿರರ್ಥಕವಾಗು; ವ್ಯರ್ಥವಾಗು.

ಸೈತುವೋದನ್ = ಅಪ್ರಯೋಜಕನಾದವನು: ಕವಿಕುಲ ಜಾತಿಗೀತಿಯ ನೀಕ್ಷಿಸುವುದೆ ಮಾತಂಗಿಯನಭಿವರ್ಣಿಸಿದಾ ಬಾಣ ಸೈತುವೋದನೆ ಕೇಳ್ಬಜೆಯ (ಕುರಾಸಾಂ. ೧-೯೬). [ಸೈತು$_2$ (< ಸಯ್ತು$_2$) + ಪೋಗು$_1$ (< ಪೋ$_1$)]

ಸೈತೊರಗು (ಕ್ರಿ). ನೇರವಾಗಿ ಬೀಳು: ಪೊರೆಗೆ ಮಂಡೆಯ ಬಾಗಿ ಕಳಮೆಯ ಪೈರು ಸೈತೊರಗಿಹುದಲ್ಲಿ ನೋಡಿದರು (ಗೂಮ್ಮಟ. ೧-೨೧).

[ಸೈತು$_2$ (< ಸಯ್ತು$_2$) + ಒರಗು$_1$ (< ಒಱಂಗು)]

ಸೈದಾಣಿ, ಸೈದಾನ$_1$ (ನಾ). (ಉಕ) ಪಾಯಸ ಮುಂತಾದುವನ್ನು ತಯಾರಿಸಲು ಬಳಸುವ ಒಂದು ಬಗೆಯ ಕಾಳು; ಸೀಮೆಅಕ್ಕಿ; ಸಾಬೂದಾಣ: ಶಾವಿಗೆ ಸೈದಾಣಿ ಸೌತಿಬೀಜ ಉಗರೊತ್ತು ಬೇವಿನ ಹೂ ಪರಡೀಯ ಮಾಡಿದರು ನವಯುವತಿಯರು ಸಂಭ್ರಮದಿ (ಸಿದ್ಧಪು. ೧೭-೩೧). **ಸೈದಾನ$_1$**: ಶಾಂವೀಗಿ ಸೈದಾನ ಮಾವಿನುಪ್ಪಿನಕಾಯಿ ಮ್ಯಾಲ ಕುರಡೀಯ ಇಡವೂದ (ಮಲ್ಲಿಗೆ. ೬೩). 'ಸಾಬೂದಾಣಿ' ಪರಾ. [<— ಮರಾ. ಸಾಗೂದಾಣಾ, ಸಾಬೂದಾಣಾ]

ಸೈದಾನ$_1$ 'ಸೈದಾಣಿ' ನೋ.

ಸೈದಾನ$_2$ 'ಸಯದಾನ' ನೋ.

ಸೈದಾರಿ (ನಾ). ನೇರವಾದ ದಾರಿ; ಸರಿಯಾದ ಮಾರ್ಗ: 'ಸೈದಾರಿದೆಗೆ' ಪರಾ.

[ಸೈ$_1$ (< ಸಯ್$_2$) + ದಾರಿ]

ಸೈದಾರಿದೆಗೆ (ಕ್ರಿ). ನೇರವಾದದಾರಿಯಲ್ಲಿ ಹೊರಡು; ನೆಟ್ಟಗೆ ಹೋಗು: ಮುರಾರಿವದನವನೀಕ್ಷಿಸದೆ ಸೈದಾರಿದೆಗೆದನು ನಿಳಯದತ್ತಲು (ನಿಭಾಗ. ೧೦-೭೧-೪೪).

[ಸೈದಾರಿ + ತೆಗೆ$_1$]

ಸೈದ್ಧಾಂತಿ (ನಾ). ಸಿದ್ಧಾಂತಗಳನ್ನು ಪ್ರತಿಪಾದಿಸುವವನು: ತ್ರೈವಿದ್ಯಾಸ್ಪದರಂದೀ ಧರೆ ಬಣ್ಣಿಪುದು ದಿವಾಕರನಂದಿದೇವಸೈದ್ಧಾಂತಿಗಳಂ (ಸುಕುಮಾ. ೧-೨೮). [ಸಂ.]

ಸೈದ್ಧಾಂತಿಕ (ಗು). ೧. ಸಿದ್ಧಾಂತಕ್ಕೆ ಸಂಬಂಧಿಸಿದ. (ನಾ). ೨. = ಸೈದ್ಧಾಂತಿ: ಮಿಕ್ಕರನೆಣೆಯೆಂಬುದೆ ವೀರಣಂದಿಸೈದ್ಧಾಂತಿಕರೊಳ್ (ಪಂಚಾಮಾ. ೧-೨೬). [ಸಂ.]

ಸೈದ್ಧಾಂತಿಕಚಕ್ರವರ್ತಿ (ನಾ). [ಜೈನ] ಷಟ್‌ಖಂಡಾಗಮವನ್ನು ಪೂರ್ಣವಾಗಿ ಅಭ್ಯಾಸಮಾಡಿದವನು; ಜೈನಸಿದ್ಧಾಂತದಲ್ಲಿ ಸ್ವಾಮಿತ್ವವನ್ನು ಪಡೆದವನು: ಸೈದ್ಧಾಂತಿಕಚಕ್ರವರ್ತಿ ಮುನಿಚಂದ್ರಮುನೀಂದ್ರನ್ ವಂದ್ಯನುರ್ವಿಯೊಳ್ (ಚಂದ್ರಪ್ರ. ೧-೨೬). [ಸಂ. ಸೈದ್ಧಾಂತಿ ಚಕ್ರವರ್ತಿನ್]

ಸೈದ್ಯ (ನಾ). ಸಾಗುವಳಿ; ಜಮೀನನ್ನು ಹಸನುಮಾಡುವುದು: ಈ ೧೦೦ ಎಕರೆ ಇರುವ ಹೊಲ ನನ್ನದು. ನಾನೇ ಈ ಭೂಮಿ ಸೈದ್ಯಮಾಡುತ್ತೇನೆ (ವಿಜಯ. ೨೧೯).

[<— ತೆಲು. ಸೇದ್ಯ]

ಸೈಧನ 'ಸಯದಾನ' ನೋ.

ಸೈಧಾನ 'ಸಯದಾನ' ನೋ.

ಸೈಧಾರೆ (ನಾ). ಧಾರಾಕಾರವಾಗಿ ಸುರಿಯುವ ಮಳೆ: ಸರಳ ಸೈ[ಪಾಶಾಂ. ಚೌ] ಧಾರಯಲಿ ಹಾಯ್ದವು ಕರುಳು ಕಬ್ಬುನ ಕೋಲಿನಲಿ ಕತ್ತರಿಸಿದವು ಕಾಲುಗಳು (ಕುವ್ಯಾಭಾ. ೮-೧೭). [ಸೈ$_1$ (< ಸಯ್$_2$) + ಧಾರೆ]

ಸೈನಡೆ (ಕ್ರಿ). ನೇರವಾಗಿ ಸಾಗು; ನೆಟ್ಟಗೆ ಹೋಗು: ಬಳಿಕುತ್ತರೋತ್ತರಸರಣಿಯಲಿ ಸೈನಡೆದು ಹೊಕ್ಕನು . . . ಮಹಾವನಾಂತರವ (ಕುವ್ಯಾಅ. ೫-೩೫); ಹಲಧರನ ಮೂರ್ತಿಯನು ಹೆಗಲಲಿ ಧರಿಸಿ ಸೈನಡೆಯೆ (ನಿಭಾಗ. ೧೦-೧೮-೨೮).

[ಸೈ$_3$ (< ಸಯ್$_3$) + ನಡೆ$_1$]

ಸೈನಿಕ (ಗು). ೧. ಸೇನೆಗೆ ಸಂಬಂಧಿಸಿದ. (ನಾ). ೨. ಸೈನ್ಯ; ಪಡೆ: ಚರಿಸಿದಂ ಸೈನಿಕವನಾಕ್ಷಣಂ ನಾಲ್ದೆಸೆಯ ಧರಣಿ ತಗ್ಗಲು (ತುರಂಗ. ೮೨-೧೫). ೩. ಸೈನ್ಯದ ಆಳು; ಭಟ; ಯೋಧ: ಸೈನಿಕನೊಬ್ಬನು ಹಾಲಿನ ಹರವಿಯನ್ನು ಹೊರುತ್ತಿದ್ದನು (ಜೀವಾತ್ಮ. ೨೦೫). ೪. [ಛಂದ] ಅಕ್ಷರಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದವೊಂದಕ್ಕೆ ಹನ್ನೊಂದು ಅಕ್ಷರಗಳುಳ್ಳ 'ತ್ರಿಷ್ಟುಪ್' ಛಂದಸ್ಸಿನ ಒಂದು ವೃತ್ತದ ಹೆಸರು: ಪಾದಪಾಶನಾರ್ಕಪಾವಕಂ ಲಗಂ . . . ನಿಂದೊಡಾಮೋದಗಂಧಿ ಕೇಳಿದೊಂದು ಸೈನಿಕಂ (ಛಂದೋಂಬು. ೨-೧೧೫). [ಸಂ.]

ಸೈನಿಮಿರು (ಕ್ರಿ). ನೆಟ್ಟಗೆ ನಿಲ್ಲು; ಸೆಟೆದು ನಿಲ್ಲು: ದಳ್ಳುರಿದಿರುಳನಕ್ಷಿಗಳೊಳಗೆ ಪಸರಿಸಿ ಘುಡುಘುಡಿಸಿ ರೋಮಾಳಿ ಸೈನಿಮಿರೆ ಹಲುಮೊರೆದು (ಕುವ್ರಾರ್ಜು. ೧೩-೫೧); ಸಣ್ಣ ನಡು ಸೈನಿಮಿರೆ ತೋಳ ಮೊದಲೊಳ್ಪೆಸೆಯೆ (ಚೈಮಿಭಾ. ೮-೧೮).

[ಸೈ$_3$ (< ಸಯ್$_3$) + ನಿಮಿರು$_1$ (< ನಿಮಿರ್$_1$)]

ಸೈನೆಗಳ್ (ಕ್ರಿ). ಸರಿಯಾಗಿ ಮಾಡು; ಸಮರ್ಪಕವಾಗಿ ನೆರವೇರಿಸು: ವೈಷ್ಣವಸಮುಚಿತದಿವ್ಯಪ್ರಬಂಧಂಗಳಂ ಸೈನೆಗಳ್ದಾ ಪನ್ನೀರ್ವರಾಳ್ವಾರ್ಗಳ ಚರಿತೆಯ ನಾರ್ಕಣಿಪೊಳ್ವಾಗೆ (ದಿವ್ಯಚ. ೧-೯೦). [ಸೈ$_3$ (< ಸಯ್$_3$) + ನೆಗಳ್$_1$ (< ನೆಗೆಳ್$_1$)]

ಸೈನೆಗೆ (ಕ್ರಿ). ೧. ನೇರವಾಗಿ ಹಾರು: ಅಭ್ರವ ತೋಡಿ ನಿಲಿಸಿದವೊಲು ಗಗನಾಂಗಣಕೆ ಸೈ[ಪಾಠಾಂ. ತನಿ]ನೆಗದು ಓಡುವಸುರನ ಭೀಕರಾಂಗವ ನೋಡಿ (ನಿಭಾಗ. ೧೦-೧೮-೨೯). ೨. = ಸೈನಿಮಿರು: ಹಗಲ ಕೊಯ್ಲಿನ ತಗ್ಗಿನಲಿ ಸೈನೆಗದ ರೋಮದ ವಿಕ್ರಮಾಗ್ನಿಯ ತಗಹು ಗಿಡದಭಿಮುನ್ನು ಮೆಱೆದನು ಶಸ್ಯಶಯನದಲಿ (ಕುವ್ಯಾದ್ರೋ. ೬-೬೨).

[ಸೈ (< ಸಯ್) + ನೆಗ]

ಸೈನ್ಯ (ನಾ). ೧. ರಾಜನ ಸಪ್ತಾಂಗಗಳಲ್ಲಿ ಒಂದು: ಸೇನೆ; ಪಡೆ: "ಪೃತನಾ, ಸೇನಾ . . . ಸೈನ್ಯಂ . . . ಅನೀಕಂ -- ಈ ೧೦ ಪದೆ" (ಪಲಾಯು. ೭೫-೩೦೩); ಉಭಯಸೈನ್ಯಂಗಳಂ ಕಂಡತ್ತ . . . ಕೆಯ್ಯಾಸಿದಾಗಳ್ (ಪಂಪಭಾ. ೧೦-೬೫ ವ): ಕಾದಿದನು ಬಳಿಕಣ್ಣನಲಿ ಗತವಾದುದಾತನ ಸೈನ್ಯ (ತೊರಾ. ೧೦-೮-೩೧). ೨. ಭಟಿ; ಸೈನಿಕ. [ಸಂ.]

ಸೈನ್ಯಗುಪ್ತಿ (ನಾ). ಸೈನ್ಯದ ರಹಸ್ಯ: ಸೈನ್ಯಗುಪ್ತಿಯನರಿಯಲಾಟಪೆನ್ (ಶ್ರೀರಾಮಾ. ೬೫-೧೦೦). [ಸಂ.]

ಸೈನ್ಯಘಾತ (ನಾ). ಸೈನ್ಯದಿಂದ ಉಂಟಾದ ಘಾತ; ಪಡೆಯ ಹೊಡೆತ: ನಿಜಮೇರುವನಿಂದ್ರನೆಗತ್ತು ಬೆಟ್ಟುಗಳ್ ನೆಲದೊಳಡಂಗುವಂತೆ ನೆಲದೊಳ್ ಸಮನಾದುವು ಸೈನ್ಯಘಾತದಿಂ (ಕಾವ್ಯಕಾ. ೪೭೪). [ಸಂ.]

ಸೈನ್ಯಜ (ನಾ). ಐದು ಬಗೆಯ ಉತ್ಪಾತಗಳಲ್ಲಿ ಒಂದು; ಸೈನ್ಯದಲ್ಲಿ ಕಾಣಿಸಿಕೊಳ್ಳುವ ಅಪಶಕುನ: ಅಂತು ವ್ಯಹಾಯಸ ಭೌಮ ದಿಗ್ಭವ ಸೈನ್ಯಜ ಗ್ರಹೋದ್ಭವಿತಂಗಳಯ್ದು ತಱದುತ್ಪಾತಂಗಳೊಡನೊಡನೆ ನಗದುವಾಗಳ್ (ಶಾಂತಿಪು. ೬-೧೦೬ ವ). [ಸಂ.]

ಸೈನ್ಯಾಧಿನಾಥ (ನಾ). ಸೇನೆಯ ಅಧಿಪತಿ; ಸೇನಾನಿ: ಆಗಳ್ ಸೈನ್ಯಾ[ಪಾಠಾಂ. ಸೇನಾ]ಧಿನಾಥನಧಿನಾಥನ ಕೆಲದೊಳ್ ಪಕ್ಷಗಚಾಧಿರೂಢನಾಗಿ (ಆದಿಪು. ೧೩-೪೫ ವ).

[ಸಂ.]

ಸೈನ್ಯಾಧಿಪತಿ (ನಾ). = ಸೈನ್ಯಾಧಿನಾಥ: ಆದರೆ ಸೈನ್ಯಾಧಿಪತಿಗಿಂತ ಅವನು ಹೆಚ್ಚು ಮುಖ್ಯನಾದವನು (ಮಲನಾ. ೬೮). [ಸಂ.]

ಸೈಪರೆ (ಕ್ರಿ). ನೇರವಾಗಿ ಹರಡು: ತರಗಳಿಲ್ಲದ ಮಡುಗಳೊಲು ಸೈಪರೆದು ಚಲಿಸದೆ ಪರಮಹರ್ಷದೆ ಬೆರಸುತಪರೋಕ್ಷವನದರಿನಾಕ್ಷಣದೊಳ್ಕೆದಿದರು (ಕಾವೇಮಾ. ೫೩-೨೦).

[ಸೈ (< ಸಯ್) + ಪರ]

ಸೈಪು 'ಸಯ್ಪು' ನೋ.

ಸೈಪುಗಱೆ (ಕ್ರಿ). ಸೊಗಸನ್ನು ಹರಡು; ಸೊಬಗನ್ನು ಸೂಸು: ಚೋಳಭೂಪತಿಯ ಸುಕುಮಾರರ್ತಪರ್ದೆಡೆಯೊಳಾ ಸೈಪುಗಱೆದು ಸಿಂಗರವ ಮೆಱೆದು (ಭಾವಚಂ. ೬-೨೦).

[ಸೈಪು (< ಸಯ್ಪು) + ಕಱೆ]

ಸೈಪುಗಾಱಿ (ನಾ). ಪ್ರಾಮಾಣಿಕನಾದವನು: ಧರೆ ಲೇಸಂಬಾಸಗಾಱಿಂ ಪರಪುರುಷ ಗುಣಾನ್ವೇಷದೊಳ್ ಸೈಪುಗಾಱಿಂ ಸಿರಿಯೊಳ್ ಕಟ್ಟಣ್ಮುಕಾಱಿಂ ವಿತತ ವಿತರಣೋತ್ಸಾಹದೊಳ್ ಗಲ್ಪುಗಾಱಿಂ (ಆರ್ಜನೇ. ೧-೩೭). [ಸೈಪು (< ಸಯ್ಪು) + - ಕಾಱಿ]

ಸೈಪುದಳೆ (ಕ್ರಿ). ಪುಣ್ಯವನ್ನು ಪಡೆ: ಮನ್ನಿಸಿ ಬೇಡಿ ಸೈಪುದಳೆವೆನು (ಅಜಿತ. ೨೨).

[ಸೈಪು (< ಸಯ್ಪು) + ತಳೆ]

ಸೈಪುದಾಣ (ನಾ). ಪುಣ್ಯಸ್ಥಳ: ಪಡದರಾ ಸೈಪುದಾಣಮಂ (ರೇವಣ. ೭೧-೪೯).

[ಸೈಪು (< ಸಯ್ಪು) + ತಾಣ]

ಸೈಪುದೋಱು (ಕ್ರಿ). ಬೆಡಗನ್ನು ತೋರು; ಬಿನ್ನಾಣವನ್ನು ಪ್ರದರ್ಶಿಸು: ಕಲುಬು ಕುಹಕದ ಕಣಜ ಈಡುಪಾಡಿನ ಪಸರ ಕರವ ಕೊಸರುವ ವೈಪು ಸೈಪುದೋಱುವ ಸೂಳೆಗೇರಿ ಸೂಗಸಾದುದಲ್ಲಿ (ನಂದಿಮಾ. ೨೩-೧೭). [ಸೈಪು (< ಸಯ್ಪು) + ತೋಱು]

ಸೈಮಱುಗು (ಕ್ರಿ). ಅತಿಶಯವಾಗಿ ಸಂತಾಪಿಸು; ಹೆಚ್ಚಾಗಿ ಕಳವಳಪಡು: ಕುಜುಪಿನಜನನು ಕಾಣದೆ ಸೈಮಱುಗಿದಾ ಮುನ್ನಿನ ಜಗಂಗಳ ನಿಜುಗೆಯನು ಲೇಸಾಗಿ . . . ಕಂಡ (ನಿಭಾಗ. ೧೨-೨-೩೧). [ಸೈ (< ಸಯ್) + ಮಱುಗು]

ಸೈಮಿನಿ (ನಾ). ಯಮನ ಪಟ್ಟಣ; ಯಮಪುರ: ಬಂಡಣದೊಳನಿಬರಂ ಸೈಮಿನಿಗಟ್ಟಿದುದು (ರಾಮಾಶ್ವ. ೧೪-೧೧); ಖಿಳರ ಸೈಮಿನಿಗಟ್ಟಿ (ಶ್ರೀರಾಮಾ. ೮-೧೦).

[< ಸಂ. ಸಂಯಮನೀ]

ಸೈಯಡಿ, ಸಯ್ಯಡಿ (ನಾ). ಒಂದು ಸ್ಥಳದ ಹೆಸರು; ℙ ಈಗಿನ ಧಾರವಾಡಜಿಲ್ಲೆಯ ರೋಣತಾಲ್ಲೂಕಿನ ಸವಡಿ ಎಂಬ ಊರು: ತಸ್ಯ ಸೀಮಾ ಸಮಾಖ್ಯಾಯತೇ ಪೂರ್ವಸ್ಯಾನ್ದಿಶಿ ಕುರಡಿಗೆ ಗ್ರಾಮತ ಸೈಯ್ಯಡಿಗ್ರಾಮ (ಪೌಾ. XX. ೪-೧೨: 683). **ಸಯ್ಯಡಿ**: ಬಿಂದು ವಿಸರ್ಗಂ ವ್ಯಂಜನಮೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ ಬಂದೊಡಲಿ . . . ಗುರುವೆಂದುಂ ಸಯ್ಯ[ಪಾಠಾಂ. ಸೈಯ]ಡಿಯ ನಾಗವರ್ಮನ ಮತದಿಂ (ಛಂದೋಂಬು. ೧-೩೫); ಆ ನಾಡೊಳಗ್ರಹಾರಂ . . . ಶ್ರೀನಿಳಯ ಮೆನಿಸಿ ಸಯ್ಯಡಿ ನಾನಾವಸ್ತ್ರೋತ್ಕರಾಕರಂ ಕರಮೆಸೆಗುಂ (ಪಂಚತಂ. ೪. ೬-೪೭). [?]

ಸೈರಂಧ್ರಿ (ನಾ). ೧. ಅರಮನೆಯ ಅಂತಃಪುರದ ದಾಸಿ; ರಾಣೀವಾಸದ ಸೇವಕಿ: ಪಾಂಚಾಳರಾಜತನೂಜೆಯುಂ ರೂಪುಗರೆದು ಸೈರಂಧ್ರೀವೇಷದೊಳ್ ಪೋಗಿ (ಪಂಪಭಾ. ೮-೪೫ ವ); ಸುಗಂಧವಸ್ತುಸಂದೋಹಮಂ ಪಿಡಿದು . . . ಕುಬ್ಜೆಯೆಂಬ ಸೈರಂಧ್ರಿ ನಡತರೆ (ಜಗವಿ. ೬-೧೮ ವ); ಲಲನೆ ಬಿನ್ನಹ ಮಾಡಿದಳು ಸೈರಂಧ್ರಿವೇಷವನು (ಕುವ್ಯಾವಿ. ೧-೭). ೨. ದ್ರೌಪದಿಯು ಅಜ್ಞಾತವಾಸಸಮಯದಲ್ಲಿ ಧರಿಸಿದ್ದ ವೇಷ ಮತ್ತು ಹೆಸರು: ಸೈರಂಧ್ರಿಯಂ ನೋಡಿ ಸೈರಿಸಲಾಱದ ಸಿಂಹಬಲಂ . . . ತಮ್ಮಕ್ಕನನೀಕೆ ಯಾರ್ಗಂದು ಬೆಸಗೊಂಡೊಡೆ (ಪಂಪಭಾ. ೮-೬೩ ವ); ಎನ್ನವೊಲ ನಿಮಿಷರೊಳಾರುಂಟು ಚೆಲುವರು ಮನುಜರೆನ್ನನು ಹೋಲುವರೆ ಸೈರಂಧ್ರಿ (ಕುವ್ಯಾವಿ. ೬-೮೩). ೩. ಗಂಧವನ್ನು ಅರೆಯುವವಳು; ಸುಗಂಧವಸ್ತುಗಳನ್ನು ಸಿದ್ಧಪಡಿಸುವವಳು: "ಸೈರಂಧ್ರೀ, ಗಂಧಕಾರಿಕಾ — ಈ ೨ ಪಟ್ಟವಲ್ತೆ" (ಪಲಾಯು. ೮೧-೩೩೮). [ಸಂ. ಸೈರಂಧ್ರೀ]

ಸೈರಂಧ್ರಿತನ (ನಾ). ಸೇವಕಿತನ; ದಾಸಿಯಾಗಿರುವಿಕೆ: ಆಕೆಯ ಮನೆಯೊಳಿರು ಸೈರಂಧ್ರಿತನದಿಂದನವರತ ನೀನೆಂದು ನೇಮಿಸಿ ಕಳುಹಿಂದಳು ಮನೆಗೆ (ನಳಚ. ೫-೫೯).

[ಸೈರಂಧ್ರಿ + - ತನ]

ಸೈರಣೆ (ನಾ). ತಾಳ್ಮೆ; ಸಹನೆ; ಸಂಯಮ: ಆ ಕಾಂತೆಯಂ ವಿಧಾತ್ರಂ ಮಾಡುವಂದು . . . ರತಿಯ ಸೌಭಾಗ್ಯಮುಮಂ ಸೀತೆಯ ಸೈರಣೆಯುಮಂ . . . ಕಾಮದೇವ ನಯ್ದಲರಂಬಿನ ಶಕ್ತಿಗಳುಮನೊಂದುಮಾಡಿ ಲೋಕಮೆಲ್ಲಮಂ ಮರುಳ್ಮಾಡಲೆಂದು ಪೆಣ್ಮಾಡಿದನಕ್ಕುಂ (ಪಂಪಭಾ. ೪-೭೫ ವ); ಪಸರಿತತುಳಶೋಕದ ಜಲಧಿ ಭೂಪಾಲಕನ ಸೈರಣೆಗಾಯ್ತು ಮಹನವಮಿ (ಕುವ್ಯಾದ್ರೋ. ೬-೮); ಕೋಪ ಬಂದಾಗ ಸೈರಣೆ ಬಿಡದಿರಬೇಕು (ಪುರಂದ. ೧-೧೮೪-೩). [ಸೈರಿಸು + - ಅಣೆ]

ಸೈರಣೆಗುಂದು (ಕ್ರಿ). ಸಹನೆಯನ್ನು ಕಳೆದುಕೊಳ್ಳು; ತಾಳ್ಮೆಗೆಡು: ಅಟುವೀಸಂಗದಲಿ ಸೈವರಿದು ಸೈರಣೆಗುಂದಿದನು ರಾಮ (ತೊರಾ. ೩-೮-೬೮). [ಸೈರಣೆ + ಕುಂದು]

ಸೈರಣೆಗೆಡು (ಕ್ರಿ). = ಸೈರಣೆಗುಂದು: ತಳಮಳಗಾಗಿ ಸೈರಣೆಗಟ್ಟು ಬಾಯಬಿದಲುತುಂ (ಶಾಂತಿಪು. ೧-೯೪ ವ): ಕಂಡಕಂಡರಂ ಸೈರಣೆಗಟ್ಟು ಬೇಡದೆ (ಧರ್ಮಾಮೃ. ೪-೮೮).

[ಸೈರಣೆ + ಕೆಡು]

ಸೈರಣೆಗೊಳ್ (ಕ್ರಿ). ತಾಳ್ಮೆಯನ್ನು ಹೊಂದು; ಸಹನೆಯನ್ನು ಪಡೆ: ನೊಂದು ಸೈರಣೆಗೊಂಡುದಿಲ್ಲ ಕೇಳೀಶ್ವರ ಕಂದರ್ಪನನೆಂತು ಮುಱಿದೆ (ಮೋಪಶ. ೮-೩೧).

[ಸೈರಣೆ + ಕೊಳ್]

ಸೈರಣೆವಂತ (ನಾ). ತಾಳ್ಮೆಯುಳ್ಳವನು; ಸಹನಶೀಲ: ಕನಲ್ದುಂ ಸೈರಣೆವಂತನುದ್ಗುಣಯುತಂ ತಾಂ ನಿರ್ಗುಣಂ ದುರ್ಮುಲಂ ಧನಿಕಂ ಸತ್ಕುಲಜಾತನೈ (ಸೋಮೇಶ. ೫೨). [ಸೈರಣೆ + - ವಂತ]

ಸೈರಿಭ (ನಾ). ಕೋಣ; ಮಹಿಷ: ತೋಱುತ್ತು ಮದಾಂಧಸೈರಿಭ ಖುರಪ್ರೋದ್ಧೂತ ರೇಣುವ್ರಜಂ (ಕಾದಂಪೂ. ೧೫೫); ಸೈರಿಭಮನಂಬುಜಮಿತ್ರಸುತಂ . . . ವೃಷಭನಂ ಹರನೇಱಿ ನಭಕ್ಕೆ ಸಲ್ದುದುಂ (ಜಗವಿ. ೧-೩೬); ತಾಗಲಿದಿರ್ಚಿ ಕೋಡುಡಿದ ಕಾಲನ ಸೈರಿಭದಂತ ಬರ್ಪಿನಂ (ರಾಜಶೇ. ೫-೯೦). [ಸಂ.]

ಸೈರಿಸು (ಕ್ರಿ). ತಾಳು; ಸಹಿಸು: "ಸೈರಿಸು — ಸಹನೇ" (ಶಮಧಾ); ಪರೀಷಹಂಗಳಂ ಸೈರಿಸಿ (ಪಜ್ಜಾರಾ. ೯೪-೨); ನಿನ್ನ ಕಣ್ಣೊಳ್ ಪಸರಿಸೆ ಕಡುಗಂಪು ನೋಡಿಯುಂ ಸೈರಿಪವೇ (ಆದಿಪು. ೧೨-೯೪); ಚಿಪ್ಪರಣೆಯೊಳಾದೊಡಂ ವಣ್ಣಿಂಬುದಂ ಸೈರಿಸಂ (ಕಬ್ಬಕಾ. ೧೪೮); ಮಹಾರಥರಿಸುಗೆಯನು ನೀನೆಂತು ಸೈರಿಸಲಾದೆ (ಕುವ್ಯಾದ್ರೋ. ೪-೩೬). [? + - ಇಸು]

ಸೈಲ 'ಸೈಲು' ನೋ.

ಸೈಲಂಗಿ (ನಾ). ಸಡಿಲವಾದ ಅಂಗಿ: ಮೈಯಲಿ ಹಳದಿಯ ಸೈಲಂಗಿಯನ್ನು ಹಾಕಿಕೊಂಡು ಡೊಗ್ಗಾಲೂರಿ ನಡೆಯುವ ರಾಮನ ರೂಪ (ತುಳೀ. ೫೮).

[ಸೈಲು + ಅಂಗಿ]

ಸೈಲಿಸು (ಕ್ರಿ). ಸರಿಪಡಿಸು; ಸಂವರಿಸು (?): ಬಿಡುಮುಡಿಯ ಬಂಧಿಸದ ಮೇಲುದನು ಪೊದೆಯದ ಸಡಿಲ್ದುಡಿಗೆ ಸೈಲಿಸದೆ (ಸಪಮೋ. ೭-೬). [? ← - ಇಸು]

ಸೈಲು, ಸೈಲ (ನಾ). ೧. ಸಡಿಲ; ದೊಗಲೆ; ಅಳ್ಳಕ: ಸಣ್ಣವನು ತೊಟ್ಟುಕೊಂಡಿದ್ದು ಅವನಿಗೆ ಬಹಳ ಸೈಲು ಆಗುತ್ತಿತ್ತು (ಮುಂಬಯಿ. ೪-೮೮). ೨. ಬಿಗುವಿಲ್ಲದಿರುವಿಕೆ; ಸದರ; ಸಲಿಗೆ: ಆಳಿಕೆಯಲ್ಲಿ ವಿರುದ್ಧಪಕ್ಷದವರಿಗೆ ಸೈಲುಸಿಕ್ಕಿತು (ಇಂಗ್ಲಂಡ ೧೯). **ಸೈಲ**: ೧. ಅವರು ಮೆಲ್ಲನೆ ಕಾಲು ತಿಕ್ಕಿಕೊಂಡು ಸೈಲಮಾಡಿಕೊಳ್ಳುತ್ತ . . . ಸಂಬಾಳಿಸಿ ಮೇಲಕ್ಕೆದ್ದರು (ಕಲಿಕು. ೮೮):

ಸೈಲ ಬಿಡು = ಸಡಿಲಬಿಡು: ದುಡ್ಡಿನ ವಿಷಯದಾಗ ಸೈಲಬಿಟ್ಟು ಉಪಯೋಗವಿಲ್ಲ (ಗಂಮಾಯಿ. ೧೯೨). **ಸೈಲಾಗು** = ಸಡಿಲವಾಗು: ಅನುವಾಗಿ ತಿಕ್ಕಿ ಒರಿಸುವದರಿಂದ ಯೂವತ್ರೂ ನರಗಳು ಸೈಲಾಗಿ ಸಮಧಾತು ಬರುವದು (ಕೃಪ್ರ. ೧೯): ಮೊಣಕಾಲವರೆಗೆ ಬಿಗಿಯಾಗಿದ್ದು ಮೇಲೆ ಸೈಲಾಗಿರುವ ಚಣ್ಣವನ್ನು ಹಾಕಿಕೊಂಡರು (ಕಮಲ. ೧೭೫). **ಸೈಲುಬೀಳು, ಸೈಲಬೀಳು** = ಸಡಿಲವಾಗು; ಜೋತುಬೀಳು: ತೂಗುತ್ತಿರುವ ರಶ್ಮಿಯದು ಸೈಲುಬೀಳಲು ಭೀತಿಯಿಂದುರೆ ನೀಲವೇಣಿಯರಾಗ ತಮ್ಮಯ ತೋಳು ಗಳನು ನೃಪನ ಕಂಠಕೆ ಸುತ್ತಿಬಿಟ್ಟರು (ರಘುವಂ. ೨೨೬); ಒಂದರ ಫಳಿಗೀ ಅನ್ನವಿಲ್ಲದಿರೆ ಸೈಲ ಬೀಳತೈತ್ಕೋ ಈ ತೊಗಲಾ (ಬಿರಕೂ. ೨೪೮-೧೨). [<– ಮರಾ. ಸೈಲ]

ಸೈಲುಗೈ (ಕ್ರಿ). ಸಡಿಲಗೊಳಿಸು; ಅಳ್ಳಕಮಾಡು: ಬಾಲೆಯರು ಜೋಕಾಲಿಯಾಡುವ ಕಾಲದಲಿ ತಮ್ಮಿನಿಯರನು ಕಣ್ಣಾಲಿಯಿಂ ನೆರೆ ನೋಡಿ ಪ್ರಿಯತಮರನ್ನು ತಕ್ಕೈಸ್ದೆದೋಲೆ ನೇಣುಗಳನ್ನು ಧರಿಸಿದ ಲೋಲಹಸ್ತಗಳನ್ನು ಬೇಗನೆ ಸೈಲುಗೈದಂತಾಗ ನಟಿಸಿದರೇನು ಪೇಳುವೆನು (ರಘುವಂ. ೯೫-೪೬). [ಸೈಲು + ಕೈ$_1$ (< ಕೆಯ್$_1$)]

ಸೈಲೆ (ನಾ). (?): ಕ್ಷರ್ದುಗಿನ ಪೊಲದ ಮೇರಯ ದಾಸನ ಸೈಲೆ ತೆಂಕ ಕರ್ದುಗಿನ ಪೊಲದ ಕಲ್ಪೆಲೆವಾತದ ಪೊಲದ . . . [ಮ]ತ್ತುರೊಳಗಣ ಸೈಲೆ ಇನ್ತೀ ಮುಗುಡ್ಪೆಯಾಗೆ ಕೊಟ್ಪದು (ಶಿಶಾ.XI-i,೪೮-೧೪; 1002). [?]

ಸೈವ (ನಾ). ಶಿವನಿಗೆ ಸಂಬಂಧಿಸಿದುದು: ಭೈರವ-ಬೈರವ; ಶೈವ –ಸೈವ (ಶಮದ. ೨೭೧ ಪ್ರಯೋ). [< ಸಂ. ಶೈವ]

ಸೈವಟ್ಟೆ (ನಾ). ಸರಿಯಾದ ದಾರಿ; ಯೋಗ್ಯವಾದ ಮಾರ್ಗ: ತೋರಿದಂ ಶಿವನಲ್ಲಿಗುಯ್ವ ಸೈವಟ್ಟಿಯಂ (ಆಪ್ರಭು. ೧೧೭). [ಸೈ$_1$ (< ಸಯ್$_2$) + ಬಟ್ಟೆ$_1$]

ಸೈವರಿ 'ಸಯ್ವರಿ' ನೋ.

ಸೈವಳಿ 'ಸಯ್ವಳಿ' ನೋ.

ಸೈವಳಿವಿಡಿ (ಕ್ರಿ). ಸರಿಯಾದ ದಾರಿಯನ್ನು ಹಿಡಿ: ವಿಮಲ ಗಂಗಾಸಾಗರದ ಸಂಗಮದ ಸೈವಳಿವಿಡಿದು (ತೂರಾ. ೪-೧೦-೨). [ಸೈವಳಿ (< ಸಯ್ವಳಿ) + ಪಿಡಿ$_1$]

ಸೈವಳಿ (ನಾ). ಧಾರಾಕಾರವಾದ ಮಳೆ: 'ಸೈವಳಿಗಜೆ' ಪರಾ.

[ಸೈ$_1$ (< ಸಯ್$_2$) + ಮಳೆ (< ಮಟೆ)]

ಸೈವಳಿಗಜೆ (ಕ್ರಿ). ಮಳೆಯಂತೆ ಧಾರಾಕಾರವಾಗಿ ಸುರಿಸು ; ವರ್ಷಧಾರೆಯಂತೆ ಬೀಳಿಸು: ಸರಳ ಸೈವಳಿಗಜೆವುತ ಮೂದಲಿಸುತ . . . ಕೆರಳಿಸಿದರು ರಾಮನನು (ಕುರಾಸಾ. ೪೪-೧೩೦); ವಿವಿಧಗುಣಗಣನಿಳಯೆ ಸೂಬಗಿನ ಸವಿಯ ಸೈವಳಿಗಜೆವ ಮತ್ಕೃತಿ ಚದುರರ ಮನವನಿರ್ಕುಳಿಗೊಳುವುದಚ್ಚರಿಯೇ (ಸಾಳ್ವಭಾ. ೧-೪೪). [ಸೈವಳಿ + ಕಜೆ$_1$]

ಸೈವಿಡಿಸು (ಕ್ರಿ). ಸಂತೈಸು; ಸಮಾಧಾನಪಡಿಸು: ಅನಿಲನಂದನ ಕೌರವಾನುಜರ ನೂದೆದು ರಕುತವ ಹಿಂಡಿ ಹೀಱುತ ಸುದತಿಯಳ ಸೈವಿಡಿಸಿ ಕದನದೊಳದಟವೆಳೆದನು (ಕೃಷ್ಣಾಕಾ. ೨೯-೨೨). [ಸೈವಿಡು + - ಇಸು]

ಸೈವಿಡು (ಕ್ರಿ). ೧. ಹತೋಟಿಯಲ್ಲಿಡು; ಅಂಕೆಯಲ್ಲಿರಿಸು: ಮದನಪಿತ ನಸುನಗುತ ಮುನಿಸನು ಹದುಳಿಮಿಗೆ ಸೈವಿಟ್ಟು (ಕುವಾಖ. ೬೦೩ ೪-೫೧). ೨. ಸರಿ ಎನ್ನು; ಒಪ್ಪಿಗೆಯನ್ನು ಸೂಚಿಸು: ನರ ವೃಕೋದರನ ನಕುಲ ಸಹದೇವರಂ ಭೂಪ ಕರೆದು ಕೇಳಲ್ಕಿವರು ಸೈವಿಡಲು ಪಾಳೆಯಂ ಮರಳಿ ತಿರುಗಿತು ಹಸ್ತಿನಾಪುರಿಗೆ (ತುರಂಗ. ೨೫-೪೩). [ಸೈ$_1$ (< ಸಯ್$_2$) + ಬಿಡು$_1$]

ಸೈವೆರಗು 'ಸಯ್ವೆಱಗು' ನೋ.

ಸೈವೆಳಗು (ಕ್ರಿ). ಚೆನ್ನಾಗಿ ಪ್ರಕಾಶಿಸು: ಭುವನಭವನದ ಸೊಂಪು ಸೈವೆಳಗಿತ್ತು ನೃಪ ಕೃಷ್ಣಾವತಾರದಲಿ (ನಭಾಗ. ೧೦-೩-೩೩). [ಸೈ$_1$ (< ಸಯ್$_2$) + ಬೆಳಗು]

ಸೈವೇಱಗು 'ಸಯ್ವೆಱಗು' ನೋ.

ಸೈವೇಱಗುವಡು (ಕ್ರಿ). ಆತ್ಮಾರ್ಪಣೆಯನ್ನು ಹೊಂದು: ಸೂಗಸಿನ ಸೂಕ್ಮಮಿಕ್ಕು ಹೂಱಗಂ ಮಱೆದು ಸೈವೇಱಗುವಟ್ಟು (ಸಿದ್ಧರಾ. ೨-೬೭).

[ಸೈವೇಱಗು (< ಸಯ್ವೆಱಗು) + ಪಡು$_1$]

ಸೈಸು 'ಸಯಿಸು' ನೋ.

ಸೈಳಾಕ್ಷರ (ನಾ). ಶಿಲೆಯ ಮೇಲೆ ಕೆತ್ತಿದ ಅಕ್ಷರ; ಶಿಲಾಶಾಸನ: ಯಿದಂ ಕಾಯದೆ ಕೊಯ್ವ ಪಾಪಿಗೆ . . . ಕವಿಲೆಯಂ ವೇದಾಧ್ವರಂ ಕೊಂದದೊಂದಯಸಂ ಪೂರ್ದುಗುಯೆಂದು ಸಾಱಿದಪುವೀ ಸೈಳಾಕ್ಷರಂ ಧಾತ್ರಿಯೊಳು (ಕಾ.V, ೪೨-೧೫೪; 1239).

[< ಸಂ. ಶೈಲಾಕ್ಷರ]

ಸೈಳೇಂದ್ರಿ (ನಾ). = ಸೈರಂಧ್ರಿ ೧: ನ್ಯವಸಭೆಯೊಳಿದ್ದ್ರತಂದಳಾ ಸೈಳೇಂದ್ರಿವೇಷದ ಮಾಯೆ ವಹಿಲದಲಿ (ತೂರಾ. ೨-೧-೨೩); ಭಾವಮೈದುನತನದ ಕೃತ್ಯದಿಂದಚ್ಯುತಂ ಸೂಚಿಸಲ್ಪಡೆದಳೌಚಿತ್ಯಮಲ್ಲೊಳಪುಗುಪೊಡಾರೋಗಣೆಯ ಸಮಯಮಂದು ಸೈಳೇಂದ್ರಿ ಬಂದು (ಪ್ರಮಿಭಾ. ೬-೫೦). [< ಸಂ. ಸೈರಂಧ್ರೀ./ ತುಳು. ಸೈಲಂದ್ರಿ, ಸೈಳೇಂದ್ರಿ]

ಸೊಂಕು 'ಸೋಂಕು$_2$' ನೋ.

ಸೊಂಕುರೋಗ 'ಸೋಂಕುರೋಗ' ನೋ.

ಸೊಂಗ (ನಾ). ಒಂದು ಬಗೆಯ ಪಕ್ಷಿ: ಆ ವನಂಗಳೊಳು ಶುಕ ಪಿಕ ಕೇಕಿ . . . ಗೀಜುಗ ಸೊಂಗ ಬೈರಗ . . . ವಾಸಕ ಮೊದಲಾದ ಚಿತ್ರರೂಪಶಕ್ತಿಗಳುಳ್ಳ ಪಕ್ಷಿಕುಲಂಗಳುಂ (ವಿವೇ. ೨೧೨). [?]

ಸೊಂಚಿಳೆ (ನಾ). (?): ಕರದಿ ಸೊಂಚಳವಿಡಿದು ಪದದೊಳು ಧರಿಸಿ ಪಾವುಗೆಗಳನು ಪೊಕ್ಕ ಧರಣಿಯೊಳು ನೆಲವಾಸಿನಲಿ ನಿದ್ರಿಸುತ (ಉತ್ತಕ. ೪೦-೪೮). [?]

ಸೊಂಟ (ನಾ). ದೇಹದ ಮಧ್ಯಭಾಗ; ಟೊಂಕ; ನಡು: ಸೊಂಟದ ಮುಪ್ಪಿಡಿಯನು ಕಿತ್ತುಕೊಂಡು ದರ್ಪಕನೆರ್ದೆಯಲ್ಲಿ ತಿವಿದು ರಕ್ಕಸ ಬಹುದರ್ಪವಡೆದು ನಿಂದಿರ್ದ (ಪೋಪತ. ೧೨-೬೬); ಅವನು ತಾನು ಉಟ್ಟಿದ್ದ ಧೋತ್ರವನ್ನು ಸೊಂಟದ ವರೆಗೂ ಎತ್ತಿ ನಡುವಿಗೆ ಸಿಕ್ಕಿಸಿಕೊಂಡಿದ್ದನು (ನಡದಾ. II. ೯೦೦); ಬಲಗೈಯನ್ನು ಸೊಂಟದ ಮೇಲಿಟ್ಟು ಅವಳನ್ನು ದಿಟ್ಟಿಸುತ್ತ ನಿಲ್ಲುವನು (ಕಮ್ಮಟ. ೨).

[ದೇ. ॥ ತುಳು. ಸೊಂಟ; ತೆಲು. ತುಂಟಿ, ತೊಂಟಿ]

ಸೊಂಟಕಟ್ಟು 'ಸೊಂಟಗಟ್ಟು' ನೋ.

ಸೊಂಟಗಟ್ಟು, ಸೊಂಟಕಟ್ಟು (ಕ್ರಿ). ೧. (ಆಲಂ) ಅಣಿಯಾಗು; ಸನ್ನದ್ಧಗೊಳ್ಳು; ಕಾರ್ಯಪ್ರವೃತ್ತವಾಗು: ಮಂತ್ರಿಗಳು ಸ್ವಯಂಬುದ್ಧನ ಹೇಳಿಕೆಗಳನ್ನೆಲ್ಲ ಖಂಡಿಸಲು ಸೊಂಟಗಟ್ಟಿದರು (ನಾಡೋಜ. ೩೬೦). **ಸೊಂಟಿಕಟ್ಟು**: ೧. ಒಂಟೆ ಕುದುರೆ ಆನೆ ತರಿಸೋದು ರೊಕ್ಕ ಸೊಂಟಕಟ್ಟಿ ಮುಂದೆ ನಿಲಿಸೋದು ರೊಕ್ಕ (ಪುರಂದ. ೨-೪೯-೪); ಅಚ್ಚಾನವನ್ನು ತೊಲಗಿಸಲು ಸೊಂಟಕಟ್ಟಿದನು (ಪ್ರಮಪ್ರ. ೧೮). ೨. ಪೈಪೋಟಿಮಾಡು; ಹುರುಡಿಸು; ಸ್ಪರ್ಧಿಸು: ಸಮರ್ಥರ ಮೇಲೆ ಸೊಂಟಕಟ್ಟಿದರೆ ಬಡವರಿಗೆ ಎಂದಾದರೂ ಜಯ ಸಿಕ್ಕುವುದುಂಟೆ (ವಾಗ್ಬಲ. ೧೦೩).

ಸೊಂಟಕಟ್ಟಿ ನಿಲ್ಲು = ಸಿದ್ಧವಾಗಿರು; ಕಂಕಣಬದ್ಧವಾಗು: ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಸೊಂಟಕಟ್ಟಿ ನಿಂತು ಅಹೋರಾತ್ರಿ ದುಡಿದ (ಭಾಗ್ಯಶ್ರೀ. ೪೫).

[ಸೊಂಟ + ಕಟ್ಟು$_1$]

ಸೊಂಟದಟ್ಟಿ (ನಾ). ನಡುವಿಗೆ ಸುತ್ತುವ ಬಟ್ಟೆ ,— ವಸ್ತ್ರ: ಸೊಂಟದಟ್ಟಿಯ ಬಿಗಿದು ಕಟ್ಟಿ, ತೋಳ್ತೊಡೆಗಳಂ ಚಪ್ಪರಿಸಿ ನೆಲನಡುಗೆ ಕಾಲ್ ಕುಟ್ಟಿ ತಾಗಿದತ್ತಮ್ಮ ಸೈನ್ಯದ ಸಿಡಿಲ್ (ಶ್ರೀರಾಮಾ. ೩೭೧-೨೬೨). [ಸೊಂಟ + ದಟ್ಟಿ$_1$]

ಸೊಂಟಪಟ್ಟಿ (ನಾ). ನಡುವಿಗೆ ಕಟ್ಟುವ ಬಟ್ಟೆ, ಚರ್ಮ, ಲೋಹ

ಮುಂತಾದುವುಗಳ ಪಟ್ಟೆ; ನಡುಪಟ್ಟೆ: ವಿಮಾನವು ಏರುವಾಗಲೂ ಇಳಿಯುವಾಗಲೂ ಕುಳಿತವರು ಅಲುಗಾಡಿ ಬಿದ್ದುಬಡದಂತೆ ಕಟ್ಟಿಕೊಳ್ಳಲು ಸೊಂಟಪಟ್ಟಿಗಳನ್ನು ಕುರ್ಚಿಗಳಿಗೆ ತಗಲಿಹಾಕಿರುತ್ತಾರೆ (ಕಪಪು. ೬-೧೦೪).

[ಸೊಂಟ + ಪಟ್ಟಿ₂]

ಸೊಂಟಮುರಿ₁ (ಕ್ರಿ). (ವೃದ್ಧಾಪ್ಯದಿಂದ) ನಡುವು ಬಗ್ಗಿಹೋಗು; ಟೊಂಕವು ಬಾಗು: ಸೊಂಟಮುರಿದ ಮೇಲೆ ನೆಂಟನಿಲ್ಲ, ಗಂಟ್ಲುಮುರಿದ ಮೇಲೆ ರಾಗವಿಲ್ಲ (ಗಾದೆ).

[ಸೊಂಟ + ಮುರಿ₁]

ಸೊಂಟಮುರಿ₂ (ಕ್ರಿ). ೧. ಟೊಂಕವನ್ನು ಮುರಿದು ಹಾಕು. ೨. (ಆಲಂ) ಸದೆ; ಬಗ್ಗುಬಡಿ: ಬಣವೆ ಸುಟ್ಟರೆ ಸೊಂಟಮುರಿದರಾಯಿತು (ಜೀವವ್ರ. ೯೦).

[ಸೊಂಟ + ಮುರಿ₂ (< ಮುಱಿ₁)]

ಸೊಂಟಿ 'ಸುಂಟಿ' ನೋ.

ಸೊಂಟಿಗೆ, ಸೊಟಗೆ₁, ಸೊಟಿಗೆ, ಸೊಟ್ಟಿಗೆ, ಸೊಂಟಿಗೆ, ಸೋಟಿಗೆ₂, ಸೌಟಿಗ (ನಾ). ಧಾನ್ಯ ಅಥವಾ ದ್ರವಗಳನ್ನು ಅಳೆಯುವ ಒಂದು ನಿರ್ದಿಷ್ಟ ಪ್ರಮಾಣ, –ಅಳತೆ: ಒಂದು ಗಾಣದುಳ್ ಒನ್ದು ಸೊಂಟಿಗೆ ತೇ(ತ್ಕೆ)ಲಮಾಗೆ (ಇಅ. VIII, ೨೮೫-೪; 706); ತೆಲ್ಲಿಗರಯ್ವತ್ತೊಕ್ಕಲುಗಳು . . . ಒಂದು ಸೊಂಟಿಗೆಯೆಣ್ಣೆಯಂ ಪ್ರತಿದಿನಮಾಚಂದ್ರಾರ್ಕ್ಕಕಾರಂ ಕೊಟ್ಟರು (ಸೌಇಇ. XX, ೧೯೧-೨೫; 1215). **ಸೊಟಿಗೆ₁**: ಮಣಿಗುಂದಗೆಯ ತೆಲ್ಲಿಗರು ಐವತ್ತೊಕ್ಕಲು ಗಾಣಕೆ ಸೊಟಿಗೆಯೆಂಣೆಯಂ . . . ಕೊಟ್ಟರು (ಕಇ. V, ೩೨-೬೧; 1215). **ಸೊಟಿಗೆ**: ಅಯ್ನೂರ್ವರುಮಿಟ್ಟು ಪಸುಂಬೆಯ ಸೇಸೆಯಲು ಪಾಗಮುಮಂ ಅಂಗಡಿಯಲು ಸೊಟಿಗೆ ಭತ್ತಮ ಬಿಟ್ಟರ್ (ಸೌಇಇ. IX-i, ೧೩೯-೪೦; 1074); ಶ್ರೀಮದಯಿನೂರ್ಬ್ಬರು . . . ಸಮಸ್ತ [ಮನ್ನ] ಕ್ಕೆ [ಖಂಡುಗ]ಕ್ಕೆ ಒಂದು ಸೊಟಿಗೆಯಂ ಕೊಟ್ಟರು (ಸೌಇಇ. XX, ೧೩೦-೧೩; 1187); ತೆಲಿಗರೈವತ್ತೊಕ್ಕಲುಂ ಗಾಣಕೊಂದು ಸೊಟಿಗೆಯೆಣ್ಣೆಯಂ ಬಿಟ್ಟರು (ಎಕ. VI, ಕಡೂರು. ೯೫-೬೮; 1224). **ಸೊಟ್ಟಿಗೆ**: ಗಾಣಗೊಟ್ಟಿಗೆಯ್ಮಂ ಊರೊಳಗಣ ಗಾಣಗಳ ಸೊಟ್ಟಿಗೆ ಯಣ್ಣೆಯ್ಮಂ ಇನ್ತಿನಿತುಮಂ (ಕಇ. V, ೬೪-೩೨; 1173). **ಸೋಂಟಿಗೆ**: ಅಯ್ವತ್ತೊಕ್ಕಲುಮಿಟ್ಟು ದೇವರ ನಂದಾದಿವಿಗಗಂ ಮಠದ ಸೊಡರಿಂಗಂ ಗಾಣಂಗಳೊಳೆಣ್ಣೆ ಸೋಂಟಿಗೆ ೧ . . . ಕೊಟ್ಟರ್ (ಇಅ. V, ೩೪೩-೩೬; 1093). **ಸೋಟಿಗೆ₂**: ಅಲ್ಲಿಯ ತೆಲ್ಲಿಗರು ಬಿಟ್ಟ ಧರ್ಮವೆಂತೆಂದಡೆ ತಾವು ಕೊಂಡ ಹೊಂಗೆ ಇಮ್ಮಾನೆಳ್ಳಂ ಬಿಟ್ಟರು ಸೋಟಿಗೆಯೆಣ್ಣೆಯಂ ಬಿಟ್ಟರು (ಎಕ. VIII (S), ಶಿಕಾರಿ. ೩೩೪-೨೮; ಸು. 1100); ಗಾಣಂಗಳಲ್ ಸೋಟಿಗೆಯೆಣ್ಣೆ (ಮುಂಬರಾ. ೨೪೯-೭೫; 1219). **ಸೌಟಿಗೆ**: ಹೇಱೊಂಗೊಬ್ಬಳುಪ್ಪು ಗಾಣದ ೧ ಸೌಟಿಗೆಣ್ಣೆ ಇನ್ತೀ ಧರ್ಮ್ಮಮಂ ಮಾಡಿ (ಎಕ. VI, ತರೀಕೆ. ೧೯-೬೯; 1158). 'ಸಟ್ಟುಗೆ₂', 'ಸೊಲ್ಲಗೆ₁' ಪರಾ.

ಸೊಂಡಗೆ 'ಸಂಡಗೆ' ನೋ.

ಸೊಂಡಿಗೆ 'ಸಂಡಗೆ' ನೋ.

ಸೊಂಡಿಲ್ 'ಸುಂಡಿಲ್' ನೋ.

ಸೊಂಡಿಲು 'ಸುಂಡಿಲ್' ನೋ.

ಸೊಂಡು 'ಸುಂಡು₂' ನೋ.

ಸೊಂಡೆ₁ 'ಸುಂಡೆ₁' ನೋ.

ಸೊಂಡೆ₂ 'ಸುಂಡೆ₂' ನೋ.

ಸೊಂಡೆಕಾಯಿ (ನಾ). ತರಕಾರಿಯಾಗಿ ಬಳಸುವ ಒಂದು ಬಗೆಯ ಕಾಯಿ: ಸೊಂಡೆಕಾಯಿಗ ಸಣ್ಣಮಗುವ ಹಿಡಿತಕ್ಕಿನಿತು ಬಲಮ್ಮಾಕೆ (ನವಮೋ. ೧೨-೪೨).

[ಸೊಂಡೆ₁ (< ಸುಂಡೆ₁) + ಕಾಯಿ₄ (< ಕಾಯ್₄)]

ಸೊಂಡೆಗಿಡ (ನಾ). ಒಂದು ಬಗೆಯ ಸಸ್ಯ: ತೊಂಡೆ ತೊಟ್ಟಿಯು ಸೊಂಡೆಗಿಡ . . . ತಂಡತಂಡದಿ ಮೆರೆದುವು (ಗೋಹಾಡು. ೨-೭). [ಸೊಂಡೆ₁ (< ಸುಂಡೆ₁) + ಗಿಡ (< ಗಿಡು)]

ಸೊಂಡ್ಲಗಿಡ, ಸೊಂಡ್ಲಿಗಿಡ (ನಾ). ಒಂದು ಬಗೆಯ ಸಸ್ಯ: "ಬರಿಗೆ . . . ಪುರಗಿ, ಸೊಂಡ್ಲಗಿಡ, ಕನ್ನೇರಿ" (ಸಸ್ಯನಿ. ೧೩೮). **ಸೊಂಡ್ಲಿಗಿಡ**: ಸುರಿಮುಳ್ಳು, ಸೊಂಡ್ಲಿಗಿಡ (ಮೃಚ್ಛಕಿ. ೭೯-೧೬೨೯). [? + ಗಿಡ (< ಗಿಡು)]

ಸೊಂಡ್ಲಿಗಿಡ 'ಸೊಂಡ್ಲಗಿಡ' ನೋ.

ಸೊಂತ 'ಸ್ವಂತ₁' ನೋ.

ಸೊಂದಿ (ನಾ). ೧. ಚಾರಸ್ವಭಾವವುಳ್ಳ ವ್ಯಕ್ತಿ: "ಸೊಂದಿ = ಸಿತಗಂ" (ಶಮದ. ಪರಿ. ೨); ನಾಣಲಿ, ಮಾತಾಳಿ, ಸೊಂದಿ (ಭಾಷಾಭೂ. ೧೯೧ ಉದಾ); ತಿರೆವೆಣ್ಗ ಮುಗಿಲ್ಪೊಂದಿಯೊಳ್ ಬಳ್ಳಿವರಿವ ನೇಹದಿಂ ಬೆಳ್ಪಂಗಡೆವ ಸೊಗದಾಲಿನೀರೆನೆ ಪೊಚ್ಚಂ ಪೆರ್ಚಿ ಪರಿದುದು (ರಾಮಾಶ್ವ. ೩-೧೩). 'ಕಡುಸೊಂದಿ' ಪರಾ. ೨. ತುಂಟ; ತಂಟೆಕೋರ: ಸೊಂದಿಯವನೆನ್ನ ಮಗನಲ್ಲಂ ದೇವರ ಪಾದದಾಣೆ ಬಿನ್ನಪಮಾ ಕಾಳಿಂದಿಯೊಳಿರ್ದೀ ಕಂಚಿನ ಮಂದಸಿನೊಳ್ ಪುಟ್ಟಿ ಕಂಸವೆಸರಂ ಪಡೆದಂ (ಅರ್ಧನೇ. ೬-೭೦); "ಸೊಂದಿಯವನ್ = ವ್ಯಭಿಚಾರದಿಂದ ಹುಟ್ಟಿದವನು" (ಅರ್ಧನೇ. ಕೋಶ). (ಗು). ೩. ತುಂಟ ತನದ; ತಂಟೆಕೋರಸ್ವಭಾವದ: 'ಸೊಂದಿಗೋಡಗ' ಪರಾ.

ಸೊಂದಿಗಿಳಿ (ನಾ). ತುಂಟಗಿಳಿ: ಪರಿವಿಡಿಗೆಯ್ಮೆ ಸೊಂದಿಗಿಳಿ ತಂದೆಯ ತಾಯ ಸಮೀಪದೊಳ್ ತನೂದರಿಯ ರತೋಪಯುಕ್ತರುತಮಂ (ಶಾಂಕಿಪು. ೮-೮೫); ಸುಸಿಲೆಳ್ದ ಸೊಂಡಿEದಿ3ಗಿಳಿಗಳ ರಸಿಕಾಳಾಪಂಗಳುಣ್ಮೆ ಪೊಣ್ಮೆದವು (ವರ್ಧಮಾ. ೮-೯೯).

[ಸೊಂದಿ + ಗಿಳಿ]

ಸೊಂದಿಗೋಗಿಲೆ (ನಾ). ತುಂಟಕೋಗಿಲೆ: ನಲಿದಪೆಯೆನ್ನ ನಲ್ಲಳ ಕಲಧ್ವನಿ ನಂದಿದುದಾಗಿ ಸೊಂದಿಗೋಗಿಲೆ ಬಗೆ ನಿನ್ನ ದರ್ಪಮನಡಂಗಿಪೆನೀಗಳೆ (ಲೀಲಾವ. ೧೪-೭೫). [ಸೊಂದಿ + ಕೋಗಿಲೆ]

ಸೊಂದಿಗೋಡಗ (ನಾ). ೧. ತುಂಟಕೋತಿ: ಸೊಂದಿಗೋಡಗಂಗಳ ಕಾಲಾಟ ದಿನಲೊಕ್ಕಲರಿನುದಿರ್ದ ದೂಳಿಗಳನಮರ್ಚಿಯುಂ (ಕಬ್ಬಿಕಾ. ೫೪). ೨. ಒಂದು ಜಾತಿಯ ಕೋತಿ: "ಪೇರಂಗಿಲೆನೆ ಸೊಂದಿಗೋಡಗಂ" (ಚತುನಿ. ೭೬). [ಸೊಂದಿ + ಕೋಡಗ]

ಸೊಂದಿತನ (ನಾ). ಹಾದರ; ವ್ಯಭಿಚಾರ: ಕುಲಟಾಭಿಸರಣಮಂ ಸೊಬಗೆಂದುಂ ಸೊಂದಿತನಮಂ ಪ್ರಗಲ್ಭ[ತೆ]ಯೆಂದುಂ ಮುಯ್ಯಾಂತು ದೆಸೆಗೆ ಬಿಲ್ಪೆಸವೆಸುವೊಂ (ವರ್ಧಮಾ. ೨-೨೭). [ಸೊಂದಿ + - ತನ]

ಸೊಂಪಡಗು (ಕ್ರಿ). ಕಳೆಗುಂದು; ಕಾಂತಿಯಿಲ್ಲದಾಗು: ಕಂಬನಿಗಳಾಲಿಯೊಳೀಡಿಱಿದು ಸೋರಿದವು ಸೊಂಪಡಗಿತು ಮುಖಾಂಬುಜದ (ಕುವಾಕ. ೧-೮).

[ಸೊಂಪು₁ + ಅಡಗು₁ (< ಅಡಂಗು₁)]

ಸೊಂಪಲು, ಸೊಂಪ್ಪು (ನಾ). ಅತ್ಯಂತ ಕಿರಿದಾದ ಹಾದಿ; "ಎರಡು ಬೇಲಿಗಳ ಮಧ್ಯೆ ಅಥವಾ ಗೋಡೆಗಳ ಮಧ್ಯೆ ಹೋಗುವ ಕಿರುದಾರಿ" (ನನ್ನೂರು. ಚಿಪ್ಪಗಳು): ಇದ್ದುದರಲ್ಲಿ ಇದೇ ಚೆನ್ನಾದ ಬೀದಿ ಎನ್ನಬಹುದು. ಉಳಿದವುಗಳನ್ನು ಹಟ್ಟಿ, ಸೊಂಪಲು, ಓಣಿ ಮತ್ತು ಗಲ್ಲಿಗಳೆಂದು ಕರೆಯಬಹುದು (ನನ್ನೂರು. ೭). **ಸೊಂಪ್ಪು**: ನಮ್ಮನೇ ಗಡ್ಡ ಆಗ್ಲೇ ಓಣೋಣಿ, ಸೊಂಪ್ಪು ಸೊಂಪ್ಪು ಹುಡ್ಕಾಡ್ತಾನೆ (ಹುಟ್ಟಿಪ. ೧೫೯).

ಸೊಂಪಿಗ (ನಾ). ನಿಧಿಯನ್ನು ಹೊಂದಿದವನು; ಶ್ರೀಮಂತ: ಭಕ್ತಾನುಕಂಪಿ ಭಕ್ತಿಯ ಸಿರಿಯ ಸೊಂಪಿಗಂ ಭಕ್ತಲೋಲಂ ತ್ರಿವಿಧಭಕ್ತಿಪರಿಪಾಲಕಂ (ಕೊಟ್ಟೂಪು. ೧-೭೪).

[ಸೊಂಪು + - ಇಗ]

ಸೊಂಪಿಡಿ (ಕ್ರಿ). ಅತಿಶಯವಾಗು; ಮೇಲ್ಮೈಯಿಂದ ತುಂಬಿರು: ದೇವಕುಸುಮಗಳಿಂದೆ ಕಂಪಿಡಿದು, ಸೊಂಪಿಡಿದು, ಮರ್ತ್ಯದಿಂ ಸ್ವರ್ಗಕ್ಕೆ ಕೊಂಡೊಯ್ಯುವೊಂದು ಬೃಂದಾರಕವಿಮಾನವೆನೆ, ಚಿತೆ ಹೂಡಿ ನಿಂದುದು (ಚಿತ್ರಾಂಗ. ೧೯-೨೪೫).

[ಸೊಂಪು + ಇಡಿ₂]

ಸೊಂಪು, ಸಂಪು₁ (ನಾ). ೧. ಸೊಗಸು; ಚೆಲುವು; ಮನೋಹರತೆ: ಕತ್ತುರಿಯ ಕಂಪಿನಿಂ ಸೊಂಪಂ ತಳೆದ ಮಲಯಜವಿಲೇಪನಮುಮನರಸಂಗೆ ತೋಱೆ (ಕಾದಂಬಿ. ೧೮೮); ಸಂಪೂರ್ಣಮಾದ ವಿಧುಬಿಂಬಂ ಪೂರ್ವದಿಗಂಗನಾಲಲಾಟದೊಳೆಟ್ಟಾ ಸೊಂಪಿನ ಚಂದನತಿಲಕದ ಪೆಂಪಂ ತಳೆದಿರ್ದುದು (ಬಾಧಪು. ೫-೬); ಮಗಮಗಿಪ ಹೊಂದೊಡರ ಹಾರಾದಿಗಳೊಪ್ಪಂಬಡೆದು ನಸುನಗೆಮೊಗದ ಸೊಂಪಿನಲಾಹವಕ್ಕನುವಾದನಭಿಮನ್ಯು (ಕುವ್ಯಾಮ್ರೂ. ೪-೪೯). ೨. ಕಾಂತಿ; ಹೊಳಪು; ತೇಜಸ್ಸು: ಇನಬಿಂಬಂ ಕಣ್ಗಳುಂಬಂ ತೊಳಗಿ ಬೆಳಗೆ ಬಾಲಾತಪಂ ಸುತ್ತಲುಂ ಕಂಪಿನ ಸೊಂಪಂ

ಬೀಱೆ (ಕಾದಂಪೂ. ೩೫೪); ಮಾತೆಯ ಮನೋರಾಜ್ಯ ಪಿತನ ಕಣ್ಗಳ ಸೊಂಪು ಆತುರದೆ ಪಾಡುತ್ತಲಿಹರ ಚೋಗುಳ ಚೊಂಪು (ಬಸರ. ೧-೧೫೯); ಶ್ರೀಗಿರಿಜೆಯಾಸ್ಯಕಮಳದ ಸೊಂಪು ಪೊಳೆಯೆ (ಚಿಬಪು. ೧-೨). ೩. ಹುಲುಸು; ಹೊರವು; ಸಮೃದ್ಧಿ: ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು (ಬಸರ. ೩-೨೩); ಬೆಱೆನೊಸಲಿನ ಸುಳಿಗುರುಳ ಸೊಂಪಿನ ಚೆಲುವರಳುಗಣ್ಣ ಬಲೆಯೊಪ್ಪಿದಳು (ಕಂನಮಿ. ೯-೩೬); ತೆಂಕಣದೆಲರ ತಂಪು ಪೊಸಮಾಂದಳಿರ ಸೊಂಪು (ಚಿತ್ರಾಂಗ. ೨೯-೮೦೮). ೪. ಹೆಚ್ಚಳ; ಅತಿಶಯ; ಆಧಿಕ್ಯ: ಕೃತವರ್ಮನು ಕೃಪಾಚಾರ್ಯಾದಿಗಳು ಮಸಗಿ ಘೃತಸಮುದ್ರದ ಸೆಱಗ ಸೋಂಕಿದ ಹುತವಹನ ಸೊಂಪಿನಲಿ ವೈರಿಪ್ರತತಿಯನು ತಱುಬಿದರು (ಕುಮಾಶ. ೩-೩). ೫. ಹಿಗ್ಗು; ಸಂತೋಷ: ಹರನಿಂದುರ್ವಿಗೆ ದೈವವೇ ಕಿರಣಕಿಂದುಂ ಬಿಟ್ಟು ಸೊಂಪುಂಟೆ (ಸೋಮೇಶ. ೬); ಸೊಂಪಿನ ನಗೆ ಸರೋರುಹಕೊಗೆಯೆ . . . ರವಿಯುದಯಾಚಳಕೆ ಬಂದ (ಕುಮಾಕ. ೨-೧); ಬುಧಜನಮನದಿಂಪು ಭಾವಜ್ಞರ ಸೊಂಪು ಸದಮಲನುಡಿಗಳ ತಂಪು ಒದವಿ ರಂಜಿಪ ಜೀವಂಧರಕೃತಿ (ಜೀವಂಸಾಂ. ೩-೫೪). ೬. ಇಂಪು; ಇನಿದು; ಮಧುರವಾದುದು: 'ಸೊಂಪೆಸೆ' ಪರಾ. ೭. ನಿಧಿ; ಐಶ್ವರ್ಯ: ಎನಗೆ ಸುಗತಿ ಸುಮತಿ ಸೊಂಪು ಬಿಣ್ಪು ನುಣ್ಪುತಣ್ಪು ನೀನೆ (ಹಂಪರ. ಹ. ೫೧೨-೨೨). ೮. ದಷ್ಟಪುಷ್ಟತೆ; ಕಟ್ಟುಮಸ್ತು: ದೇಹದಲ್ಲಿ ಪ್ರೋಟೀನುಗಳು ಮಾಡುವ ಕೆಲಸಗಳು : ೧) ದೇಹವನ್ನು ಸೊಂಪಾಗಿ ಬೆಳೆಸುವುದು (ಗೃಪಿ. ೧೦). ೯. ಸತ್ತ್ವ; ಶಕ್ತಿ; ತ್ರಾಣ: ನಾವು ಹಲವು ರಾಜ್ಯವ ತಿರುಗಿ ದೇಹವೆಲ್ಲವು ಸುಟ್ಟು ಸೊಂಪಿಲ್ಲಯನಗೆ (ಕೊಲ್ಹಾಪು. ೫೯-೧). ೧೦. [ಸಂಗೀತ] (?): ಗತಿ ಗಹಗಹಿಸಲ್ ಕಳಸೋನ್ನತಿ ಗಮಕಂ . . . ನೇವಣಿ ಮಿಗೆ ಸೊಂಪಾಹತ ಕಂಪಿತಮುಣ್ಮೆ ಪಾಡಿದಂ ಮುನಿಋಷಭಂ (ವೀರವಿ. ೬-೯೦). ಸಂಪು₁ : ೧. ಮಂದಗಮನೆಯರ ಬಲು ಸೋಲಿಸುವ ಸಂಪಿನಲಿ ಒಂದೊಂದು ಬೆರಗಿನ ಸ್ವರಮಣನ ಕಂಡೆನಾ (ತೀರ್ಥಮಾ. ೧೨೯); ಸಂಪೀಗಿ ಈ ಹೂವು ಸಂಪು ಇದ್ದರೇನ ಸಂಪನ್ನ ಶಿವನ ನೆನಿಯಾದ ಸೋಬಾನ ನಿಂತು ಹಾಡಿದ ಫಲವೇನ (ಲೋಕಗೀ. ೧೧). ೩. ಕೊಳದ ತೀರದೊಳಿರ್ದ ಪಲ್ಲವಾನ್ವಿತದ ತಣ್ಣೆಳಲ ತಂಪಿನ ಸಂಪಿನಿಂ ಕಂಗೊಳಿಸುವ (ನವಮೋ. ೮-೪೬). ೧೧. ಭರ್ಜರಿಯಾದುದು; ಪೊಗದಸ್ತು: ಅಂದು ಸಂಪು ಮೇಜವಾನಿಯ ಭೋಜನಕ್ಕೆ ನಿಲ್ಲಬೇಕಾಯಿತು (ದೀಪಹ. II, ೧೨೨). ೧೨. ಸೊಕ್ಕು; ಗರ್ವ: ಲಂಪಟದೊಳು ಬಿದ್ದು ಓಡ್ಯಾಡುವಿ ಎಂದು ಸಂಪಿನಲ್ಲಿ ನಗುವದು ಜಾಣತನವೊ (ವಿಸಾಸು. ೪೭-೧); ರಾವಣಾಸುರಗತ್ತ ದೂಷಿಸಿದರೆಲೆಯಾಳ್ವನೇ ಸಂಪಿನಿಂ ಕಾರ್ತವೀರ್ಯಾರ್ಜುನನದೆಂಬರಂ (ಪರಶು. ೧೩-೩೩). ೧೩. (?): ರತಿಪತಿಗಳನು ಸೋಲಿಸುವಾ ಗಾಡಿ ಬೆಡಗಿನ ಬಿಂಕಪಂಕವ ಗೂಡಿಸುತ ಮಿತ್ರಾದಿ ಸಂಪೊಡಗೂಡಿದರೆ ಆ ದೇಶದಗಲದಿ ನೋಡೆ ನಗರಗಳಾ (ಬಜ್ಜಪು. ೧೭-೬).

ಸೊಂಪಾಗು = ೧. ಹುಲುಸಾಗು; ಹೊರವಾಗಿ ಬೆಳೆ: ಸೊಂಪಾಗುತ್ತಂಕುರಿಸುತ್ತುಂ . . . ನೆಱೆದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ (ಗಿರಿಕ. ೨-೧೩). ೨. ಹಿಗ್ಗು; ಆನಂದಪಡು: ಮೇಲುರತದಲಿ ಪರಿಮಳದ ವೈಹಾಳಿಯಲಿ ಸಲೆ ಬೀದಿವರಿದು ಚಡಾಳಿಸುವ ಸೊಗಸಿನಲಿ ಸೊಂಪಾದಳು ಸರೋಜಮುಖಿ (ಕುಮಾಅ. ೧೦-೪).

[ದೇ. ॥ ತಮಿ. ಚೊಮ್ಮು ; ತುಳು. ಸಂಪು, ಸೊಂಪು; ತೆಲು. ಸೊಂಪು]

ಸೊಂಪುಂಗಾಱ, ಸೊಂಪುಗಾಱ (ನಾ). ಚೆಲುವ; ಸೊಗಸುಗಾರ: ಸೊಂಪುಗಾಱಂ, ಸೊಂಪುಂಗಾಱಂ (ಭಾಷಾಭೂ. ೧೯೨ ಪ್ರಯೋ). ಸೊಂಪುಗಾಱ : ಮೇಲಿನ ಪ್ರಯೋಗವನ್ನು ನೋಡಿ. [ಸೊಂಪು + - ಕಾಱ]

ಸೊಂಪುಗೞ್ (ಕ್ರಿ). ಚೆಲುವನ್ನು ಬೀರು; ಸೊಗಸಾಗಿರು: ಅಲರ್ವುಡಿಯಂ ಸೂಸುವ ಕನಕರುಚಿನಿಚಿತಸುಮನೋಗಣದಿನಲಂಕೃತಿವೆತ್ತು ಸೊಂಪುಗೞೆವ ಚಂಪಕ ಪ್ರತಾನಮುಂ . . . ಕಣ್ಗೊಳಿಸಿರ್ದುದು (ಶಬಶಂ. ೨-೪೨ ವ). [ಸೊಂಪು + ಕೞ್₁]

ಸೊಂಪುಗಾಱ 'ಸೊಂಪುಂಗಾಱ' ನೋ.

ಸೊಂಪುಗೆಡು (ಕ್ರಿ). ೧. ಅಂದಗೆಡು; ಹಾಳಾಗು: ದಂಪತಿಗಳ ಪಗೆತನದಿಂದಿರ್ವರ ಪೆಂಪಿನ ಬೇರು ಪರಿವುದು ಸೊಂಪುಗೆಡುವುದು ಸೊಬಗು (ಹದಿಬ. ೬-೮). ೨. ಕಾಂತಿಯಿಲ್ಲದಾಗು; ಕಳಾಹೀನವಾಗು: ಸೊಂಪುಗೆಟ್ಟುದು ಸಿರಿವದನ ಮನದಿಂಪು ಬೀತುದು ಭಕ್ತಮೋಹದಲಂಪು ಮಸಳಿತು (ಕುಮಾಭೀ. ೬-೨೬). [ಸೊಂಪು + ಕೆಡು₁]

ಸೊಂಪುಗೊಳ್ (ಕ್ರಿ). ೧. ಚೆನ್ನಾಗು; ಸೊಗಸಿನಿಂದ ಕೂಡು: ನಯಂಬಡೆವ ನಿಡಿದೆನಿಸುವ ಸೊಂಪುಗೊಳ್ಳ ಪೆಂಪುವಡೆವ ಜೀವಸ್ವರಂಗಳೊಳ್ ನಿಂದು ನಿಂದು ನೆರೆವೇಱುವ ಸೊಗಸು ನಿರವಿಸಲರಿದು (ಚಿಕಪಂ. ೧೬೦-೧). ೨. ಹಿಗ್ಗು; ಸಂತೋಷಿಸು: ಹುಲ್ಲುಗಳು ತಗುಲಿದಾಗೆಲ್ಲ ಅವರ ಮೈಗಳಂ ಸೊಂಕಿದಂತೆ ಸೊಂಪುಗೊಂಡು (ಸೌಗಂಧಿ. ೨೩೦-೧೫). [ಸೊಂಪು + ಕೊಳ್₁]

ಸೊಂಪುಡಿ (ನಾ). ಒಂದು ಬಗೆಯ ವಾದ್ಯ (?): ನಿಡುಸರದ ಸೊಂಪುಡಿಯ ಶಂಖದ ಮಣಿಯ ಭೂಷಣದ ಬಿಡದೆ ಬೀಸುವ ನವಿಲ ಚಾಮರದಡಿಕೆಗಳ ಬಿಚ್ಚೋಲೆ ರಾಗಟೆಗೆಡೆದ ಭೋರೆಂದೆಂಬ ನಿಡುನೆರವಿಗಳನೀಕ್ಷಿಸಿದ (ಮೃರಾಕಾ. ೨-೩೭). [?]

ಸೊಂಪುತನ (ನಾ). ಚೆಲುವು; ಸೊಬಗು: ಜವ್ವನಂ ಗರಗರನಪ್ಪ ಸೊಂಪುತನವುಳ್ಳವಳಾದೊಡೆ ಬಂದು ಮುಂದೆ ಸಂಚರಿಸುಗೆ (ಸೂಕ್ತಿಸು. ೮-೪೧೭). [ಸೊಂಪು + - ತನ]

ಸೊಂಪುದೋಱಿಸು (ಕ್ರಿ). ಚೆಲುವನ್ನು ಪ್ರದರ್ಶಿಸು; ಸೊಬಗನ್ನು ತೋರ್ಪಡಿಸು: ಒಸೆದು ಕೋಮಲದ ತನುವಲ್ಲರಿಯ ಸೊಂಪಿಂದೆ ಸೊಂಪು ದೋಱಿಸುತಿರ್ಪರು (ಚೈಮಿಭಾ. ೬-೧೯). [ಸೊಂಪು + ತೋಱಿಸು]

ಸೊಂಪುನಡೆ (ನಾ). ಅಂದವಾದ ನಡಗೆ; ಒಯ್ಯಾರದ ಗತಿ,—ಚಲನೆ: ಒಳ್ಳಡೆಯ ಸಲೆ ಸೊಂಪುನಡೆಯ ಸೋಲ್ಪಡೆಯ ಸೊಬಗಿಯರಿರದೆ ತಳರ್ದರ್ (ಚಿಬಪು. ೩೭-೧). [ಸೊಂಪು + ನಡೆ₂]

ಸೊಂಪುವಡೆ (ಕ್ರಿ). ಹುಲುಸಾಗಿರು; ಹೊರವಾಗಿರು: ಸೊಂಪುವಡೆದ ಪಾದರಿಗಳು ಕಂಪ ಬೀಱುವ ಬಕುಳದ ಕುಜಸಂಕುಳ ಸಂಪತ್ತಿನಲಿ ಬೆಳೆದಿಹವು (ಅಂಜಚ. ೨-೪೭); ಅದಱ ಪರಿಸರದೊಳ್ಸೊಂಪುವಡೆದಲರ್ದ ಚಂಪಕಮಂ ತೋಱೆ (ರಾಜಶೇ. ೧೦-೨೯ ವ).

[ಸೊಂಪು + ಪಡೆ₁]

ಸೊಂಪುವೆರು 'ಸೊಂಪುವೆಱು' ನೋ.

ಸೊಂಪುವೆಱು, ಸೊಂಪುವೆರು (ಕ್ರಿ). ೧. ಸೊಗಸಿನಿಂದ ಕೂಡಿರು; ಮನೋಹರವಾಗಿರು: ಪದವಿನ್ಯಾಸವಿಶೇಷದೊಳ್ ಪದವಿಲಾಸಂ ಸೊಂ[ಪಾರಾಂ. ಪಂ] ಪುವೆತ್ತಿರ್ದ ಕಾವ್ಯದ ಮೆಯ್ಯೊಳ್ ಸಮುದಾಯಶೋಭೆ (ಅನಂಪು. ೧-೮); ನಗರಿದುರ್ಗಂಗಳಿಂ ಸೊಂಪುವೆತ್ತ ಪೆಂಪಿನ ಕುಂಭಿನಿಯೊಳ್ ಮುಖ್ಯವಾದ ಶಾಳಿವನವಿರ್ದುದು (ಹಮ್ಮೀರ. ೧-೪೯ ವ). ೨. ಅಧಿಕವಾಗು; ಹೆಚ್ಚಳವನ್ನು ಹೊಂದು: ದೇವದ್ವಿಜನ್ಮೋತ್ಕಾರಾರ್ಚ್ಚನದಿಂದಂ ಸಲೆ ಸೊಂ[ಪು][ವೆತ್ತ] ವಿಭವಂ (ಎಇ. XXVIII, ೩೪-೨೦: 1082). ಸೊಂಪುವೆರು: ೧. ಇದು ಸೊಂಪುವೆತ್ತೆಸದರ್ಥ (ಇಚಸಾಂ. ೧-೮೯).

[ಸೊಂಪು + ಪೆಱು₁]

ಸೊಂಪುಱಿ (ನಾ). (?): ಸೊಂಪುಱಿ, ಪೊಂಪುಱಿ (ಶಬ್ದಾಸು. ೧೪೦ ವ್ಯಾಖ್ಯಾ). [?]

ಸೊಂಪೆರೆ (ಕ್ರಿ). ಕಾಂತಿಯನ್ನು ಸೂಸು,—ಚೆಲ್ಲು: ಶಾಂತಲೆ, ನಿನ್ನ ಮುಖ ಸೊಂಪೆರೆಯುತ್ತದೆ (ಶಾಂತಲಾ. ೬). [ಸೊಂಪು + ಎರೆ₁ (< ಎಱ್₁)]

ಸೊಂಪೆಸೆ (ಕ್ರಿ). ೧. ಚೆಲುವಾಗಿರು; ಸೊಗಸನ್ನು ಬೀರು: ಸೊಂಪೆಸೆವ ಕಿಂಪುರುಷನಿತಂಬಿನಿಯ ಸಡಿಲ್ದೆಳಲ್ಲ ಕಡುನಿಡಿದಾದ ಕೇಶಪಾಶದಿಂ ತೊಡರ್ದು (ಶಬಶಂ. ೩-೩೫ ವ). ೨. ಮಾಧುರ್ಯದಿಂದ ಶೋಭಿಸು; ಇಂಪಾಗಿರು: ಸೊಂಪೆಸೆವ ಕೋಗಿಲೆಯ ಸರ . . . ವನದ ಸೊಗಸಿನ ಸೊಂಪು ಸೆಳೆದುದು ಮನವನು (ಕುಮಾಅ. ೪-೩೭). [ಸೊಂಪು + ಎಸೆ₂]

ಸೊಂಪೇರು 'ಸೊಂಪೇಱು' ನೋ.

ಸೊಂಪೇಳು (ಕ್ರಿ). ಹಿಗ್ಗು; ಸಂತೋಷದಿಂದ ಉಬ್ಬು: ಕೇಳವನಿಬರ ಮಾತು ಕಿವಿ ಕಣ್ಗಾಲಿಗಳು ಕಡೆಗಣಿಸಲೆಳಸವು . . . ನಾಲಗೆಗೆ ನುಡಿ ಹೊಗದು ತನು ಸೊಂಪೇಳದಿನ್ನುಳಿದಿಂದ್ರಿಯದ ಸಮ್ಮೇಳವೇತಱದು (ತೂರರಾ. ೫-೩-೩೮).

[ಸೊಂಪು + ಏಳು₁ (< ಏಱ್₁)]

ಸೊಂಪೇಱು, ಸೊಂಪೇರು (ಕ್ರಿ). ೧. ಅತಿಶಯವಾಗು: ಪಾರಿವಗಳ ದನಿ ಕೊಳರ್ವಕ್ಕಿಯ ಲಲ್ಲೆ . . . ನಾರಿ ಮದನಮೋಹಿನಿ ಜಯಂತರೊಳು ಸೊಂಪೇಱಿದುವು (ಕಂನಮಿ. ೧೦-೪೩). ೨. ಹುಲುಸಾಗು; ಹೊರವಾಗಿರು: ಬಗ್ಗಿಸುತ್ತಿರ್ದುವುಗ್ಗಡದಿಂ ಕೋಗಿಲೆ ಮೊಗ್ಗೆಯಿಂ ಮಿಡಿಗಳಿಂ ಸೊಂಪೇಱಿದಿಮ್ಮಾವಿನೊಳ್ (ಕಬ್ಬಿಕಾ. ೫೫);

ಬಳ್ಳಿವೊದರ್ಮಡಲ್ತು ಸೊಂಪೇಱಿದುದು (ರಾಮಾಶ್ವ. ೩-೧೬). ೩. ಹಿಗ್ಗು; ಸಂತೋಷಿಸು: ಗಿರಿಜೆಗೆ ಶಿವಲಿಂಗಮನಧಿಕಮನಃಪ್ರಮೋದದಿಂ ತೋಱುವುದುಂ . . . ಸೊಂಪೇಱಿದಳಭವನೊಳಗೆ ಬೇರೂಱಿದಳ್ (ಗಿರಿಕ. ೩-೫೪); ಸುರತರು ಸುಗಂಧದ ತವರ್ಮನೆಯಿದೆಂದೆನಿಪ ಪೂದೋಟಮಂ ದೂರದಿಂ ಕಂಡು ಸೊಂಪೇಱಿ (ಪುಷ್ಪರ. ಹ. ೫೨೩-೨೩). ಸೊಂಪೇರು : ೪. ಚೆಲುವಾಗು; ಸೊಗಸಾಗು: ಸೂರ್ಯನ ಶಶಿಬೀದಿ ಕೇರಿ ಬಾಗಿಲವಾಡ ಕೇರಿ ಸೊಂಪೇರಿ ಮೆರೆದವು (ಗುಂಡುಸು. ೨-೨).

[ಸೊಂಪು + ಏಱು$_1$ (< ಏಱ್$_1$)]

ಸೊಂಪೊಗೆ (ಕ್ರಿ). ಅಧಿಕಗೊಳ್ಳು; ಅತಿಶಯವಾಗು: ಆ ಮುದ್ರಿಕೆಯ ಶಿರದಲಿ . . . ಕುಚಮಧ್ಯದಲಿ ಸೊಂಪೂಗೆವ[ಪಾಠಾಂ. ಪಗಿವ] ಸಂತೋಷದಲಿ ಸೇರಿಸಿ (ತೊರರಾ. ೫-೩-೯೪). [ಸೊಂಪು + ಒಗೆ$_1$]

ಸೊಂಪ್ಪು 'ಸೊಂಪಲು' ನೋ.

ಸೊಕ 'ಸೊಗ' ನೋ.

ಸೊಕಗೊಳಿಸು (ಕ್ರಿ). ಸಂತೋಷಪಡಿಸು: ಸಕಲ ಜೀವರ್ಕಳೆಲ್ಲರನು ದುರ್ವಿಷಯದ ಸೊಕಗೊಳಿಸಿದ ಪಾಪವೆನಗೆ ಪ್ರಕಟತವಾಗಿರ್ದು ಪೋವುದು (ಮೋಹತ. ೬-೪೩).

[ಸೊಕ (< ಸೊಗ) + ಕೊಳ್$_1$ + - ಇಸು$_3$]

ಸೊಕಮಿರು 'ಸೊಗಮಿರ್' ನೋ.

ಸೊಕವಡೆ 'ಸೊಗಂಬಡೆ' ನೋ.

ಸೊಕ್ಕಟಿ 'ಸೊರ್ಕಟಿ' ನೋ.

ಸೊಕ್ಕಾನ್ 'ಸೊರ್ಕಾನ್' ನೋ.

ಸೊಕ್ಕಾನೆ 'ಸೊರ್ಕಾನೆ' ನೋ.

ಸೊಕ್ಕಾನೆದಲೆಗ (ನಾ). ಮದಿಸಿದ ಆನೆಯ ತಲೆಯನ್ನು ಉಳ್ಳವನು; ಗಜಾನನ; ಗಣಪತಿ: ಇಕ್ಕಡಿವಡೆದ ಕಾರ್ಮುಕವ ನಿವಾರಿಸಿ ತಕ್ಕೊಂಡು ಭಾರಿಯ ಹಲವ ಒಕ್ಕಯ್ಯೊಳಾಂತ ಪೇರೊನಕೆಯಿಂದಿಕ್ಕಿದ ಸೊಕ್ಕಾನೆದಲೆಗನ ಮೇಲೆ (ಮೋಹತ. ೩೮-೫೯). [ಸೊಕ್ಕಾನೆ (< ಸೊರ್ಕಾನೆ) + ತಲೆ$_1$ + - ಗ$_2$]

ಸೊಕ್ಕಾನೆನಡೆ (ನಾ). ಮತ್ತಗಜದ ನಡಗೆಯಂತಹ ನಿಧಾನವಾದ ನಡೆ: 'ಸೊಕ್ಕಾನೆನಡೆವೆಱು' ಪರಾ.

ಸೊಕ್ಕಾನೆನಡೆಯವರ್ (ಬಹುವ) = ಮತ್ತಗಜದಂತೆ ನಡೆಯುವವರು; ಮಂದಗಮನೆಯರು: ಪೊಂಬಾಳೆದೊಡೆಯ ಪೊಸ ಪೊಂಗೊಡದ ಪೊಱವಾಱ ಸೊಕ್ಕಾನೆನಡೆಯವರ್ ನಡೆತಂದರು (ಚಟಪು. ೪೫-೩೩).

[ಸೊಕ್ಕಾನೆ (< ಸೊರ್ಕಾನೆ) + ನಡೆ$_2$]

ಸೊಕ್ಕಾನೆನಡೆವೆಱು (ಕ್ರಿ). ಮದಿಸಿದ ಆನೆಯಂತೆ ಚಲಿಸು; ಮಂದಗತಿಯಲ್ಲಿ ಸಾಗು: ಸೊಕ್ಕಾನೆನಡೆವ್‌ತ್ತ ಸೊಬಗಿಯರ್ ಎಱರ್ದೆರ್ದೆ ಬಿಕ್ಕನೆ ಬರಿಯು ವಂದದಲಿ ಅಕ್ಕಱಿಂದಾಲೋಕನಗೆಯ್ದು ಮದನನ ಮೊಕ್ಕಳಕೊಳಗುಮಾಡಿದರು (ಮೋಹತ. ೨೪-೧೬). [ಸೊಕ್ಕಾನೆನಡೆ + ಪೆಱು$_1$]

ಸೊಕ್ಕಾಹಾರ (ನಾ). ಮತ್ತುಬರಿಸುವ ಆಹಾರಪದಾರ್ಥ; ಮೈಮರೆಯುವಂತೆ ಮಾಡುವ ಉಣಿಸು: ಒಂದು ದಿವಸಂ ವಸಂತಮಾಲೆಯವರಿರ್ವರ್ಗಂ ಪಿರಿದಪ್ಪ ನಿದ್ರೆಯಪ್ಪ ಸೊಕ್ಕಾಹಾರಮನಿಕ್ಕಿ ಮೈಯಱಿಯದವಸರದೊಳು (ಪುಣ್ಯಾಸ್ರ. ೪-೨೦ ವ).

[ಸೊಕ್ಕು$_2$ (< ಸೊರ್ಕು$_2$) + ಆಹಾರ]

ಸೊಕ್ಕಿನಗಿಡ (ನಾ). ಒಂದು ಬಗೆಯ ಸಸ್ಯ: ಇಂಗಳದ ಮರ, ಇಂಗಳೀಕ, ಮೊಸುಮರ, ಸೊಕ್ಕಿನ ಗಿಡ (ಮ್ಯಾಪಿ. ೧೧-೧೯೦). [? + ಗಿಡ (< ಗಿಡು)]

ಸೊಕ್ಕಿಸು 'ಸೊರ್ಕಿಸು' ನೋ.

ಸೊಕ್ಕಿಸೆಟ್ಟಿ (ನಾ). ಒಬ್ಬಾತನ ಹೆಸರು: ಸೊಕ್ಕಿಸೆಟ್ಟಿ ಪದುಮಸೆಟ್ಟಿ (ಎಕ. VII, ಶಿವಮೊ. ೧೧೪-೧೯; 950?). [? + ಸೆಟ್ಟಿ]

ಸೊಕ್ಕು$_1$ 'ಸೊರ್ಕು$_1$' ನೋ.

ಸೊಕ್ಕು$_2$ 'ಸೊರ್ಕು$_2$' ನೋ.

ಸೊಕ್ಕುಂಜವ್ವನ 'ಸೊರ್ಕುಂಜವ್ವನ' ನೋ.

ಸೊಕ್ಕುಂಜವ್ವನೆ, ಸೊಕ್ಕುಜವ್ವನೆ (ನಾ). ಉಕ್ಕುತ್ತಿರುವ ಹರೆಯವುಳ್ಳವಳು; ನವತರುಣಿ: ಸೊಕ್ಕುಂಜವ್ವನೆಯರ ತಕ್ಕೆಗೆ ನೂತ್ನಯೌವನಿಗರಂ ಚಕ್ಕನೆ ಸಿಲ್ಕಿಸಿ ಮಿಕ್ಕು ಮನಂಗೊಳಿಪ ಹೇಮಂತದೊಳ್ (ಉದ್ಧಟ. ೪-೩೬ ವ); ಘಟ್ಟಿಮಗುಳ್ಳುತ್ತಿರ್ದೆರ್ ಸೊಕ್ಕುಂಜವ್ವನೆಯರು ಮುದದಿಂ (ಉದ್ಧದೇ. ೨-೩೫). ಸೊಕ್ಕುಜವ್ವನೆ : ಸೊಕ್ಕುಜವ್ವನೆಯ ತಕ್ಕೆಯ ಸವಿಯಂದದೆ . . . ಕೇಳುವರಿಗತಿಹರುಷವ ಮಿಕ್ಕೆಸಗುವುದೀ ಕಾವ್ಯ (ಕಂನವಿ. ೧-೧೬); ಮನ್ಮಥನ ಸಾಣೆವಿಡಿದಲಗಿನಂತಲ್ಲಲ್ಲಿ ಮರೆದೊರಗಿದ ಸೊಕ್ಕು ಜವ್ವನೆಯರೋ ಶೃಂಗಾರರಸಮೂರ್ತಿ ಇಕ್ಕೆಗ್ಗೆದುದೊ ಭೂತಳದೊಳಂಬೊಲಿರೆ (ವಂಕಾರಾ. ೫-೪-೧೯). [ಸೊಕ್ಕುಂಜವ್ವನ (< ಸೊರ್ಕುಂಜವ್ವನ) + - ಎ$_2$]

ಸೊಕ್ಕುಗಣ್ 'ಸೊರ್ಕುಂಗಣ್' ನೋ.

ಸೊಕ್ಕುಗತ್ತಲೆ (ನಾ). ಗಾಢಾಂಧಕಾರ: ಸೊಕ್ಕುಗತ್ತಲೆಯೊಳಗೆ ಜಾರೆಯರ್ ತಮತಮಗೆ ತಕ್ಕರೆಡೆಗ್ಗೆದುವೆಡೆಯೊಳ್ (ಚಟಪು. ೯-೧೪).

[ಸೊಕ್ಕು$_2$ (< ಸೊರ್ಕು$_2$) + ಕತ್ತಲೆ$_1$ (< ಕಟ್ಟಲೆ)]

ಸೊಕ್ಕುಗಳ್ (ನಾ). ಅಮಲೇರಿಸುವ ಮದ್ಯ; ತೀಕ್ಷ್ಣವಾದ ಕಳ್ಳು: ಸೊಕ್ಕಿಸಿ ನೋಟ್ಬುವಂಬ ನೆವದಿಂ ಸೊಕ್ಕುಗಳ್ಳನೆಱೆಯಿಸಿ ಪಲವುಂ ಭಕ್ಷಸಮೇತಮುಣಲಿಕ್ಕಿಸಿ . . . ಅವಂದಿರ್ ಪರವಶತೆಯಿಂ ನಿದ್ರೆಗೆಯ್ದುದುಂ (ಮಹಾನೇ. ೯-೫೪ ವ).

[ಸೊಕ್ಕು$_2$ (< ಸೊರ್ಕು$_2$) + ಕಳ್$_3$]

ಸೊಕ್ಕುಗೋಗಿಲೆ 'ಸೊರ್ಕುಂಗೋಗಿಲೆ' ನೋ.

ಸೊಕ್ಕುಜವ್ವನ 'ಸೊರ್ಕುಂಜವ್ವನ' ನೋ.

ಸೊಕ್ಕುಜವ್ವನೆ 'ಸೊಕ್ಕುಂಜವ್ವನೆ' ನೋ.

ಸೊಕ್ಕುದಕ್ಕೆ 'ಸೊಕ್ಕುದಳ್ಕೆ' ನೋ.

ಸೊಕ್ಕುದಳ್ಕೆ, ಸೊಕ್ಕುದಕ್ಕೆ (ನಾ). ಮೈಮರೆಸುವಂತಹ ಅಪ್ಪುಗೆ; ಗಾಢಾಲಿಂಗನ: ಉರುವ ಕಾಂತೆಯರ ಕೂಟದ ಸೊಕ್ಕುದಳ್ಕೆಯೊಳ್ಮಿಱುಗುವಧರಾಮೃತವ ನೀಂಟಿ ಸೊಗಸುವ ಸುಖಿಗಳುಱೆ ಜಱೆವ ತನಿವೇಸಗೆಯ ದಿನದೊಳಧ್ವರಾಶ್ವದ ಕೂಡೆ ಪಡೆ ನಡೆದುದು (ಚೈಮಿಭಾ. ೧೫-೫). ಸೊಕ್ಕುದಕ್ಕೆ: ಸೊಕ್ಕುದ[ಪಾಠಾಂ. ತ]ಕ್ಕೆಯ ಸೊಗಸುವಡೆದಳಾ ಕಾಂತೆ ಪ್ರಿಯನಂಗದೊಳ್ಮೋಹನೋತ್ಸಂಗದೊಳ್ (ಚೈಮಿಭಾ. ೧೧-೧೭). [ಸೊಕ್ಕು$_2$ (< ಸೊರ್ಕು$_2$) + ತಳ್ಕೆ (< ತಟ್ಕೆ)]

ಸೊಕ್ಕುನಡೆ (ನಾ). ಗರ್ವದಿಂದ ಕೂಡಿದ ನಡತೆ; ಅಹಂಕಾರದ ಸ್ವಭಾವ: ಸೊಕ್ಕುನಡೆಯ ಸಣ್ಣತನದ ಮೇಲಧಿಕಾರಿಗೂ ತನಗೂ ಆಗಾಗ್ಗೆ ನಡೆಯುತ್ತಿದ್ದ ತಿಕ್ಕಾಟದಿಂದ ಅವನ ಅತೃಪ್ತಿ ತೀವ್ರಗೊಂಡಿತು (ಪುನರು. ೩೭೦).

[ಸೊಕ್ಕು$_2$ (< ಸೊರ್ಕು$_2$) + ನಡೆ$_2$]

ಸೊಕ್ಕುಮದ್ದು 'ಸೊರ್ಕುಮರ್ದು' ನೋ.

ಸೊಕ್ಕುಮುರಿ 'ಸೊಕ್ಕುಮುಱಿ' ನೋ.

ಸೊಕ್ಕುಮುಱಿ, ಸೊಕ್ಕುಮುರಿ (ಕ್ರಿ). ಜಂಬವನ್ನು ಇಳಿಸು; ಗರ್ವಭಂಗಮಾಡು: ಸಿರಿಮದದೊಳಗಿಹುದಿಲ್ಲಿ ಸೊಕ್ಕುಮುಱಿದು ನಿನ್ನ ಹಲ್ಲ ಕಳಚುವರಲ್ಲಿ (ಪುರಂದ. ೨-೩೯-೫). ಸೊಕ್ಕುಮುರಿ : ಅವನ ಸೊಕ್ಕುಮುರಿಯಲು ಮಿಕ್ಕವರು ಕಾದಿದ್ದರು (ರೂಢಿ). [ಸೊಕ್ಕು$_2$ (< ಸೊರ್ಕು$_2$) + ಮುಱಿ$_1$]

ಸೊಕ್ಕುವಾರಿ (ನಾ). ಉಕ್ಕಿ ಹರಿಯುವ (ರಕ್ತದ) ಧಾರೆ,—ಪ್ರವಾಹ: ತೋರಿಯ ಹಯ ಹಸ್ತಿ ಕುಱಿ ಕೋಣಗಳ ಸೊಕ್ಕುವಾರಿ ರೋಹಿತ ಮಿದುಳುಗಳು ಭೂರಿಭೇತಾಳಾದಿ ಗಳುಂಡು . . . ನರ್ತಿಸಿತು (ಮೋಹತ. ೪೦-೬೯). [ಸೊಕ್ಕು$_2$ (< ಸೊರ್ಕು$_2$) + ವಾರಿ$_2$]

ಸೊಕ್ಕುಹ (ನಾ). ಸೊಕ್ಕುವಿಕೆ; ಮತ್ತೇರುವಿಕೆ: "ಮಾದ, ಮದ-ಸೊಕ್ಕುಹ" (ನಾಚಿರಾ. ೬.) [ಸೊಕ್ಕು$_2$ (< ಸೊರ್ಕು$_2$) + - ಹ$_2$ (< - ಪ$_2$)]

ಸೊಕ್ಕೂಡು (ಕ್ರಿ) . ಎಚ್ಚರ ತಪ್ಪಿಸುವ ಮದ್ದನ್ನು ನೀಡು; ಸೊಕ್ಕುಮದ್ದನ್ನು ಉಣಿಸು : ಎಳೆನೀರಿನೊಳು ಸೊಕ್ಕೂಡಿ ಗಣಿಕೆಯಟ್ಟಲು ಚಾರುದತ್ತನು ಎಣಸದೊಲಿದು ವಸಂತತಿಲಕೆಯು ತಣಿಯೆ ಪೀರ್ದೊಱಗಿದರು ಮೃದುಶಯ್ಯೆಯಲಿ ಮದಭರದಿ (ಸಾಳ್ವಭಾ. ೧೭-೩೨). [ಸೊಕ್ಕು$_2$ (< ಸೊರ್ಕು$_2$) + ಊಡು$_1$]

ಸೊಕ್ಕೇರು 'ಸೊರ್ಕೇಱು' ನೋ.

ಸೊಕ್ಕೇಱು 'ಸೊರ್ಕೇಱು' ನೋ.

ಸೊಖನಾಸಿ 'ಸುಖನಾಸಿ' ನೋ.

ಸೊಗ, ಸುಕ$_2$, ಸೊಕ (ನಾ). ೧. ದೈಹಿಕವಾಗಿ ಮತ್ತು ಮಾನಸಿಕವಾಗಿ ಪಡೆಯುವ ಆನಂದಾನುಭವ; ಸುಖ; ಸಂತೋಷ: "ಸೊಕಮಂದುಂ ಸೊಗಮಂದುಂ ಸುಖಂ" (ಕಶಾ. ೬೪-೪೨೧); ಪೊಡೆಮಟ್ಟೋಲೈಸದೆ ನಿಚ್ಚವಯಣಮಿಲ್ಲದೆ ತನ್ನಿರ್ದಾಲಯದೊಳಿರ್ದು ಬಾಳ್ವುದೆ ಭೂಲೋಕಮನಾಳ್ವ ಸೊಗದಿನಗ್ಗಳಮಲ್ತೇ (ಪಂಚತಂ. ೪೪-೨೩); ಅರೆಮೆಯ್ಯೆಣ್ಗರೆಭೋಗಮೆಲ್ಲ ಸೊಗಮುಂ ವೇಶ್ಯಾಜನಕ್ಕೀಕ್ಷಿಸಲ್ ದೊರೆಗಳ್ಗೆತ್ತಣ ನೀತಿಯೈ (ಸೋಮೇಶ. ೬೦); ಭಾವಿಸೆ ಸೊಗದ ಸುಗ್ಗಿಯ ತನಿಸೊಕ್ಕೆನ್ನನಾವರಿಪುದು ಮತ್ತೇವೆ (ಹರಿಹ. ೧-೪೩). ೨. ಕ್ಷೇಮ; ಸೌಖ್ಯ; ಕುಶಲ: ಚೆಂದವೇ ಅಯ್ಯ . . . ನೀವು ಸೊಗವೆ? (ಸವತಿ. ೭೩). **ಸುಕ್ಕ** : ೧. ಈ ಮಹಾಪರೂತದುಳ್ ಅಕ್ಷಯಕೀರ್ತ್ತಿನುನ್ತಕದ ವಾರ್ದ್ಧಿಯ್ಯ ಮೇಲದು ನೋನ್ತು ಭಕ್ತಿಯಿಂ ಅಕ್ಷಿಮಣಕ್ಕೆ ರಮ್ಮ ಸುರಲೋಕಸುಕಕ್ಕೆ ಭಾಗಿ (ಎಕ. II. ೨೧-೪; ಸು. 700); ಸುಕದ ಕಣಯೆನಿಸಿ ಮಾಪುಬ್ಬಕೋಟಿಪರಮಾಯು ನಾಭಿನಾಮಮುಮಾಯ್ತರ್ಭಕನಿಕರ ನಾಭಿನಾಳಪ್ರಕರನಿಕರ್ತನಮನಱಿಯೆ ಪೇಳ್ದುದಱಿಂದಂ (ಆದಿಪು. ೬-೬೭); ದೇವರಾಯರು ಸುಕದಿಂ ರಾಜ್ಯಂಗೆಯ್ಯುತ್ತಿರ್ದ್ದಲ್ಲು (ಎಇ. XXIII. ೧೮೫-೩; 1407). **ಸೊಕ**: ೧. ಸುಖ-ಸೊಕ, ಸೊಗ (ಶಮದ. ೨೭೦ ಪ್ರಯೋ); ಸೊಕಮಿರ್ಕಕ್ಕಟ ದರ್ಭಪಾಣಿಯಮಜಂ ದರ್ವೀಕರಂ ವಾಯುಪುತ್ರಕನುಂ (ಗದಾಯು. ೩-೩೪); ಸೋಂಕಿನ ಸೊಕದ ಸೀತ್ಕಾರಮೆ ವೇದನಾಸೀತ್ಕಾರಮೆಂಬ ಸಂದೆಗಮನೀವ ಪುರಸೌಂದರಿಯರ ಪಂದೆಮೊಗದ ಮುದ್ದುಗೆಯ್ತಕ್ಕೆ . . . ಸಹಾಯನಾಗಿಯುಂ (ಲೀಲಾವ. ೩-೨೦ ವ); ಮಂದಾನಿಳಂ ಸೊಕಮಂ ಮಾಡುತೆ ತೀಡೆ ನೀಡುಮೆಸವತ್ಸಾಸ್ಥಾನಭೂಮಂಡಳಂ (ಪಾರ್ಶ್ವಪು. ೧೨-೧೬). ೨. ಶುಕ ನೀಂ ಸೊಕಮೇ ರಜನಿ[illegible] ಸೈಪಿಂದಮೆ ಬಂದಿರೇ (ಅಜಿಪು. ೬-೧೪).

ಸೊಗವಾಗು = ಸುಖವಾಗಿರು; ಸಂತೋಷದಿಂದ ಕೂಡಿರು: ಎಲ್ಲರ್ ಸೊಗವಾಗೆ ನಂಬುಗೆಗಪೋಹಂ ಬಾರದಂತಾಳೆ ತಾಂ ಬಲುಭಾಗ್ಯಂ ದೊರೆಗಪ್ಪುದೈ (ಸೋಮೇಶ. ೫೬).

[< ಸಂ. ಸುಖ ./ IP ಈ ಶಬ್ದವು ದೇಶ್ಯಮೂಲವಾಗಿರುವ ಸಾಧ್ಯತೆಯೂ ಇದೆ]

ಸೊಗಂಬಡಿಸು, ಸೊಗವಡಿಸು (ಕ್ರಿ). ಸಂತೋಷಪಡಿಸು; ಹಿಗ್ಗುವಂತೆ ಮಾಡು: ಮನಮಂ ಸೋಲಿಸಿ ಸೊರಗಿಸಿ ಸೊರ್ಕೇಱಿಸಿ ಸೊಗಂಬಡಿಸಿ (ಚಕವಂ. ೧೬೦-೯). **ಸೊಗವಡಿಸು**: ಕೊಳಲ ದನಿಯಿಂದ ಗೋವಳಗುವರಿಯರ . . . ಕೆಳೆಯೊಡಂಬಡ ರಾಸಕೇಳಿಯೊಳು ಸೊಗವಡಿಸಿ (ಗೀತಗೋ. ೩-೫). [ಸೊಗಂಬಡು + - ಇಸ್ಸು]

ಸೊಗಂಬಡು, ಸೊಗಪಡು, ಸೊಗವಡು (ಕ್ರಿ). ಹಿಗ್ಗು; ಆನಂದಿಸು; ಸುಖಿಸು: ಮಣಿವ ಮನಗರಗುವ . . . ಸೊರ್ಕುವ ಸೊಗಂಬಡುವ ಭಕ್ತರನುಗೆಯ್ತಂಗಳಂ ಭಕ್ತಿಮಯಮುಂ (ಚಿಪಂ. ೧೨೨-೧೦). **ಸೊಗಪಡು**: ಅರಿವರಿತು ತೀರದಿಹ ಸೊಗಪಟ್ಟು ತೀರದಿಹ ಅಳಲ ತಾಳುತ (ಮಲೆದೇ. ೧೧-೩). **ಸೊಗವಡು**: ಶ್ರೀಶನ ಪಾದಪದ್ಮವ ಕೂರ್ತು ಕೃತಿವೇಳು ನಾ ಸೊಗವಟ್ಟು ಲಾಲಿಸುವೆ (ಮೋಹತ. ೩೭-೧); ಸೊಗವಟ್ಟು ಸೊರಗಿ ಮಲರ್ಗಣ್ ಮುಗಿವನ್ನಂ ಬನ್ನವಡಿಸಿ . . . ಬಗೆವಂದುದು ಬಿರುದು ಬೊಜಗನಂತೆ ಸಮೀರಂ (ಚಕವಿ. ೬-೩೫). [ಸೊಗ + ಪಡು$_1$]

ಸೊಗಂಬಡೆ, ಸೊಕವಡೆ (ಕ್ರಿ). ೧. = ಸೊಗಂಬಡು: ಶಿವನೊಳಪೊಕ್ಕು ಮಿಕ್ಕಲರ್ದು ಸೊರ್ಕಿ ಸೊಗಂಬಡೆದು . . . ಸುಖಮಿರ್ದನೊಱಲ್ದು ವ್ಯಸಾಧಿನಾಯಕಂ (ವೃಪ. ೨೩-೬). ೨. ಸಂತೋಷದಿಂದ ಅರಳು ,— ಅಗಲವಾಗು: ಸಂಚು ನೋಟದಿಂ ಮಿಸುಪ ಮೊಗಂ ಸೊಗಂಬಡೆಯೆ (ಚಕವಿ. ೬-೫೩). **ಸೊಕವಡೆ**: ೧. ವಿಕಸಿತವದನಾಂಭೋರುಹಭರಿತ ಸನ್ಮಕರಂದಜಲವ ಚೀತ್ಕರಿಸಿ ಸೊಕವಡೆದಲರ್ವಕ್ಕಿ ಗಳಂತೆ ನೀಲಾಳಕವಿರ್ದುದವಳ ಮಸ್ತಕದಿ (ಮೋಹತ. ೨೩-೨೮). [ಸೊಗ + ಪಡೆ$_1$]

ಸೊಗಂಬರಿ (ಕ್ರಿ). ಸಂತೋಷದಿಂದ ಸಾಗು. —ಮುನ್ನಡೆ: ಆಕೆ ಪೆರ್ಚುತ ಸೊಗಂಬರಿದು ತಮ್ಮಿರ್ವರನಿತುಮಂ ಕರೆಕರೆದು ಪಸುಗೆ ತೊಡಗಿದಳಮಿತಸಂಭ್ರಮದಿ! (ಶ್ರೀರಾಮಾ. ೯೦-೩೮೮). [ಸೊಗ + ಪರ್ಚಿ$_2$]

ಸೊಗಗಂಬನಿ (ನಾ). ಸಂತೋಷದಿಂದ ಬರುವ ಕಣ್ಣೀರು; ಆನಂದಬಾಷ್ಪ: ಪೊಗೞ್ವನೊಲ್ದು ಕಱೆವಂ ಸೊಗಗಂಬನಿಯಂ ಮನೋಬ್ಜದೊಳ್ಮಪ್ಪುರಿಗೊಂಡ ಭಕ್ತಿಭರನೋಹಿಲಂ (ಉದ್ಯಟ. ೧೧-೬೪). [ಸೊಗ + ಕಂಬನಿ (< ಕಣ್ಣನಿ)]

ಸೊಗಡಗಿಲು (ನಾ). ಅಗಿಲುಮರದಲ್ಲಿ ಒಂದು ಬಗೆ; ಅತ್ಯಂತ ಸುಗಂಧವುಳ್ಳ ಅಗಿಲುಮರ: ಬನ್ನಿ ಹೊನ್ನೆ ಸೊಗಡಗಿಲು . . . ತುಂಬುರಿಂಗಾಲಯವೆನಿಪ್ಪ ನಾನಾ ಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದು (ಹಚಕಾ. ೫-೧೫).

[ಸೊಗಡು (< ಸೊವಡು) + ಅಗಿಲು (< ಅಗಿಲ್)]

ಸೊಗಡಿಸು (ಕ್ರಿ). ಉದಾಸೀನ ಮಾಡು; ಆಲಸ್ಯ ತೋರು; ಹಿಂಜರಿ: ಸೊಗಸಿ ಶಿವನ ಮಂತ್ರವನ್ನು ನೆಗಳುವದಕೆಯೆನ್ನ ಜಿಹ್ವೆ ಸೊಗಡಿಸುವುದು ಕೀಳುನುಡಿಯೆ ಒಲಿವುದು (ಸುಸಾರ. ೫೨-೨); ಅವಳೊಳ್ ಮುನ್ನು ತನಗೊಗೆದು ಪೊಸಜವ್ವನದೊಳೊಪ್ಪುವ ಮೀನಾಕ್ಷಿಯರ ಕೂಡಿದಂ ಸುತಯರಿವರೆಂದು ತಾನಂಜಲಿಲ್ಲ ಸೊಗಡಿಸಲಿಲ್ಲ (ಮಲ್ಲಚ. ೯-೨೭). [ಸೊಗಡು (< ಸೊವಡು) + - ಇಸ್ಸು]

ಸೊಗಡು 'ಸೊವಡು' ನೋ.

ಸೊಗಡುಗಂಪು (ನಾ). ೧. ಸುವಾಸನೆ; ನರುಗಂಪು: ಆರು ನೀನೆಲೆ ಹರುಷ ಮೂರುತಿ . . . ಸೊಗಡುಗಂಪನು ಸುರಿಯುತ, ಹಸಿದ ಜೇನಿನ ಹೊರೆಯ ಕಳ್ಳರ ಸೊಕ್ಕಿಸಿಡುವ ಗುಲಾಬಿಯೋ! (ಇಂಗೀತ. ೧೬-೯). ೨. ಮಾದಕವಾದ ವಾಸನೆ: ಮೊದವಿ ಮೂಡಿದ ಮೊಗಂ ಸೊಗಡುಗಂಪೊಗೆದ ಮೈ . . . ಕುಡಿವರಿದ ಲಜ್ಜೆ ಸಿಂಗರಕೆ ಮಿಗಿಲಾಯ್ತವನಿಸುತೆಗೆ ಋತುಮತಿಯಾಗಲು (ಚೈಮಿಭಾ. ೧೮-೨೫).

[ಸೊಗಡು (< ಸೊವಡು) + ಕಂಪು]

ಸೊಗಡುಗೂಡು (ಕ್ರಿ). ಮಾದಕವಾದ ವಾಸನೆಯಿಂದ ಕೂಡಿರು: ಬಡವಿಡಿದ ವಿಮಲಾಂಗ ಸೊಗಡುಗೂಡಿದ ಕಕ್ಷ . . . ಎಡೆವಱಿತವಿಲ್ಲದಿಹ ಬಾಯಿದೆಱೆಯಿಂದ ಗರ್ಭಿಣಿ ಮಿಗೆ ವಿರಾಜಿಸಿದಳು (ವಿಕೋಪಿ. ೬-೩೯). [ಸೊಗಡು (< ಸೊವಡು) + ಕೂಡು$_1$]

ಸೊಗಡುಗೊಳ್ಳು (ಕ್ರಿ). ಆಲಸ್ಯಗೊಳ್ಳು; ದಣಿ: ಶ್ರೀತಳೋದರಿಯಯಾತ್ಮದಿ ಸೊಗಡುಗೊಂಡು ಸೊಗಸಂದಪ್ಪಿಯರುಮರುಹಿನಿಂ ಚೇತನಂಗುಂದಿ ಭ್ರಮಣೆಯೊಳೊಂದಿ ಮಲಗುತ್ತೆ (ಸವಮೋ. ೧೫-೬). [ಸೊಗಡು (< ಸೊವಡು) + ಕೊಳ್ಳು$_1$ (< ಕೊಳ್$_1$)]

ಸೊಗಡುತಗಚೆ, ಸೊಗಡುತಗಸಿ (ನಾ). ಒಂದು ಬಗೆಯ ಸಸ್ಯ: ಮಲೆಯಾವರಿಕೆ, ಸೊಗಡುತಗಚೆ (ಪ್ರಾಜಿಗಿ. ೭೦-೧೪೫೪). **ಸೊಗಡುತಗಸಿ**: "ದೊಡ್ಡ ತಗಚೆ, ಸೊಗಡುತಗಸಿ" (ಸಸ್ಯನಿ. ೩೦). [ಸೊಗಡು (< ಸೊವಡು) + ತಗಚೆ]

ಸೊಗಡುತಗಸಿ 'ಸೊಗಡುತಗಚೆ' ನೋ.

ಸೊಗಡುದೋರು (ಕ್ರಿ). ಅನಾದರ ಮಾಡು; ಹೀಗಳೆ: ದುಗುಡದಿಂ ಗುರುಸೂನು ಕೌರವೇಶ್ವರನ ಸಿರಿ ಸೊಗಡುದೋರಿತ್ತೆನುತ ಪಾಳ್ಕಂ ಸರಿಯೆ (ತುರಂಗ. ೫೮-೭೧).

[ಸೊಗಡು (< ಸೊವಡು) + ತೋರು (< ತೋಱು)]

ಸೊಗಡೇಱು (ಕ್ರಿ). ಮತ್ತು ಬರು; ಅಮಲೇರು: ಏರಂಡಮಂ ಮೆಯ್ದು ಸೊಗಡೇಱಿ ಸತ್ತೊಂದು ಹೋರಿ ಬಿದ್ದಿರಲು (ಗುರುಜಾ. ೮-೪೦).

[ಸೊಗಡು (< ಸೊವಡು) + ಏಱು$_1$ (< ಏಱ್$_1$)]

ಸೊಗದಾಣ (ನಾ). ಸುಖದ ನೆಲೆ; ಸಂತೋಷದ ಆಕರ: ಸರಸ ಬೊಜಂಗರ ಸೊಗದಾಣಮೆನಿಸುತೆ ಕರಮೆಸೆದುದು ಸೂಳೆಗೇರಿ (ಇಚಸಾಂ. ೯-೩೬). [ಸೊಗ + ತಾಣ]

ಸೊಗದ (ನಾ). ಒಂದು ಬಗೆಯ ಸಸ್ಯ ಮತ್ತು ಔಷಧೀಯಗುಣವುಳ್ಳ, ಸುವಾಸನಾಯುಕ್ತವಾದ ಅದರ ಬೇರು; ಅಶ್ವಗಂಧಿ(?): ಕೋಳಿಕುಟುಮನ ಗೆಣಸು, ಇಲಿಕಿವಿಯ ಬೇರು, ಸೊಗದೆಬೇರು, ಹಾವುಮೆಕ್ಕೆಯ ಬೇರು ಇವಿಷ್ಟನ್ನು ಸಮಾಂಶವಾಗಿ ನೀರಲ್ಲಿ ಅರೆದು ಲೇಪಿಸಲು ಶ್ಲೇಷ್ಮದಿಂದ ಹುಟ್ಟಿದ ಉಪದಂಶ ಶಮನವಹುದು (ವೃದ್ಧಸಾ. II. ೧೬೬); ಸೊಗದೆ:- ಈ ಬೇರಂ ಹಾಲಲ್ಲಿ ಅರೆದು . . . ತೆಗೆದುಕೊಳ್ಳೆ ದಿನ ೧೫ಕ್ಕೆ ಸ್ತನವೃದ್ಧಿಯಾಗುವುದು (ವೈದ್ಯವಿ. ೭). [< ಸಂ. ಸುಗಂಧಿ?]

ಸೊಗದೋಱು (ಕ್ರಿ). ಸುಖವನ್ನುಂಟುಮಾಡು: ಕ್ಷಣಮಾತ್ರಂ ನಿಜನಾಮ ನಾಲಗೆಗೆ ಬಂದಂಗಕ್ಕುಮಿಂದ್ರತ್ವ ಮತ್ತಣುಮಾತ್ರಂ ಸೊಗದೋಱೆ ಪೋಕುಮದಱಿಂ ನಾನೊಲ್ಲೆನೈ ಶ್ರೀಯನು (ಶಾಂತೀಶ. ೧೧-೧೧ ವೃತ್ತ-೨). [ಸೊಗ + ತೋಱು]

ಸೊಗಪಡು 'ಸೊಗಂಬಡು' ನೋ.

ಸೊಗಬಾಳ್ 'ಸೊಗವಾಟು' ನೋ.

ಸೊಗಮಿರ್, ಸುಕಮಿರ್, ಸೊಕಮಿರು (ಕ್ರಿ). ಸಂತೋಷದಿಂದಿರು; ಸುಖವಾಗಿರು: ಅವರಿಂದೆ ಸತ್ಕೃತನಾಗಿ ಮುಂದಳರ್ದು ರಾಜಧಾನಿಯಂ ಸೇರ್ದು ಸೊಗಮಿರ್ಪಾಗಳ್ (ಮಾಚಿ. ೬-೬೬ ಪ). **ಸುಕಮಿರ್**ಂ ಕೂಸಿಂಗೆ ದುರ್ಯೋಧನನೆಂದು ಪೆಸರನಿಟ್ಟು . . . ಪರಕೆಯಂ ಕೊಟ್ಟು ಸುಕಮಿರ್ಪನ್ನೆಗಂ (ಪಂಪಭಾ. ೧-೧೩೪); ರಾಗದಿನೆನ್ನೊಳ್ ಸುಕಮಿರ್ಪುದು (ಪಂಪಭಾ. ೮-೬೬). **ಸೊಕಮಿರು**: ವರದುರ್ಗಿ ಪಿಷ್ಪಮಯಲಿಂಗವಮಂ ತಾಳ್ದು ಭಾಸುರಪೂಜೆಗೆಯ್ದು ನಿಜಪದವಿಯಂ ಪಡೆದು ಸೊ[ಪಾಠಾಂ. ಸು]ಕಮಿರುತಿರೆದಳು (ಆರಾಚ. ೧-೪-೨೫). [ಸೊಗ + ಇರ್]

ಸೊಗಮುಣ್ (ಕ್ರಿ). ಸಂತೋಷವನ್ನು ಅನುಭವಿಸು: ಆ ಸೌಮನಸ ವಿಮಾನದೊಳು ರೇಸಾಗಿ ಇಪ್ಪತ್ತೊಂಬತ್ತುಸಾಗರ ತಾ ಸೊಗಮುಂದು (ಶಾಂತಿಚ. ೫-೩). [ಸೊಗ + ಉಣ್]

ಸೊಗಯಿಸು, ಸೊಗಸು[1] (ಕ್ರಿ). ೧. ಅಂದವಾಗಿ ಕಾಣು; ಒಪ್ಪು ; ಶೋಭಿಸು: ''ಸೊಗಯಿಸು - ಶೋಭಾಯಾಂ'' (ಶಮಧಾ); ನೆಗಳ್ದಿರ್ದ ಕನ್ನಡಂಗಳೊಳಗಣಿತಗುಣ ಪದಿತಸಂಸ್ಕೃತೋಕ್ತಕ್ರಮಮಂ ಬಗೆದೊಂದುಮಾಡಿ ಪೇಳ್ವೊಡೆ ಸೊಗಯಿಸುಗುಂ ಕಾವ್ಯಬಂಧಂ (ಸವಿರಾ. ೧-೫೬); ಸೊಗಯಿಸಿ ಬಂದ ಮಾಮರನೆ ತಳ್ತಲೆವಳ್ಳಿಯ ಪೂತ ಜಾತಿಸಂಪಗೆಯೆ . . . ನೋಟ್ಪೊಡಾವ ಬೆಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ಪಂಪಭಾ. ೪-೨೮); ಕಂದಂಗಳ್ . . . ತನಿರಸದುಕ್ಕಂದಂಗಳ್ ಸೊಗಯಿಸಿರ್ಪುವೀ ಸತ್ಕೃತಿಯೊಳ್ (ಗಿರಿ. ೧-೧೨). ೨. ಸಂತೋಷಗೊಳ್ಳು; ಹಿಗ್ಗು: ಪಲತಱದ ಪುಷ್ಪದಿಂ ನಾನಾಪತ್ರಗಳಿಂ ಪೂಜಿಸಿ ನಿಚ್ಚಂ ಸೊಗಯಿಸಿ ಮೆಯ್ಮಿಕ್ಕಿ ನಾಡೆ ಬಡವಾದಪರೋ (ಧರ್ಮಾಪ್ಯ. ೧-೧೦೭). ೩. ಸುಖವನ್ನುಂಟುಮಾಡು; ಆನಂದಪಡಿಸು: ಸೊಗಯಿಸುವ ಕಬ್ಬುಮಂ ಕಬ್ಬಿಗರಲ್ಲದೆ ಮೆಚ್ಚರುಬ್ಬಿದರೇನಱಿವರೆ (ಕಬ್ಬಿಕಾ. ೮). ೪. ಇಷ್ಟವಾಗು; ರುಚಿಸು: ಚ್ಯುತಿತಂಗೆ ದುಗ್ಧಪಾನಂ ಪಿಂದುಂ ಸೊಗಯಿಸದ ತೆಱದೆ ಮಿಥ್ಯಾತ್ವಮಹಾಜ್ವರಿತಂಗೆ ಸುಧಾಪ್ರತಿಮಂ ಪರಮಜಿನೇಂದ್ರಾಗಮೋಕ್ತಿ ಸೊಗಯಿಸದೆಂತುಂ (ಸಮಪ. ೩-೬೫); ಸೊಗಯಿಸಲ್ ತೊಡಗಿತ್ತು ಪರಿಮಳಂ ನಾಸಿಕಕೆ ಬಗೆಗೊಳಿಸತೊಡಗಿತ್ತು ಮಿಗೆ ರೂಪು ಲೋಚನಕೆ (ನಂದಿಶ. ೩-೯). ೫. ನೆಮ್ಮದಿಯಿಂದಿರು; ಸುಖಿಕರವಾಗಿರು: ಮನೆಗೆ ಅವಳೇ ರಾಣಿಯಾದರೂ ಹೆಂಡತಿ ಚನ್ನಿ ಇದ್ದುದರಿಂದ ಅವಳ ಬಾಳು ಅಷ್ಟು ಸೊಗಯಿಸಲಿಲ್ಲ (ಕುಡಿಕೂ. ೧೬೩).

ಸೊಗಸು[1]: ೧. ನವಕೇಯೂರಂ ಸೊಗಸಿತು ನಭಶ್ಚರೇಂದ್ರನ ತೋಳೊಳ್ (ಶಾಂಪು. ೩-೩೫); ಕೋಗಿಲೆಗಳ ಕಹಳೆಯಿನಪಿಳಪಕ್ಷಿರವವಾದ್ಯದಿಂ ಸೊಗಸಿ ವನಲಕ್ಷ್ಮಿ ಗುನುಪರಸನಿದಿರ್ಗೊಂಡಪಳೊ (ಪದ್ಮಾ. ೮-೩೩); ತಮ್ಮೋದರರ ಕೋಲ ಮೊನೆಯಲಿ ಕೊಂಡು ನೆತ್ತರಗೂಳನುಂಬವೊಲಖಿಳರಾಜ್ಯದ ಮೇಲೆ ಸೊಗಸುವ ಸಿರಿಯನೊಲ್ಲೆನು (ಕುವಾಭೀ. ೩-೪೨). ೨. ಮಗನೆ ನಿನ್ನಯ ಮನದ ನಿಷ್ಠೆಗೆ ಸೊಗಸಿದೆನು (ಕುವಾಳ. ೪-೪೭). ೪. ಕಳ್ಪಂಗೆ ಬೆಲ್ಲಿಂಗಳ್ ಸೊಗಸದು (ಧರ್ಮಾಮೃ. ೨-೧೨೪); ನಿನಗರೋಚಕವೆಮ್ಮ ಮಾತುಗಳನಿಬರಿಗೆ ಸೊಗಸುವುದು (ಕುವಾಭೀ. ೧೦-೩೧); ಜ್ಞಾನವೇ ಅಧಿಕವೆಂಬ ದದ್ಧವೇದಾಂತಿಗಳ ಮಾತು ಸೊಗಸದಯ್ಯ ಎನಗೆ (ಅಖಿಂಡೇ. ೧೧೧-೫೪). ೬. ಬಯಸು; ಇಷ್ಟಪಡು: ಸೊಗಸಿದೆನೆ ನಾ ನನ್ನ ಕೀರ್ತಿಗೆ (ಬಸಪು. ೪೫-೧೯); ದೂರದಲಿ ರಾಜೀವಗಂಧಸಮೀರಣನ ಸಂಭಾವನೆಗೆ ಸೊಗಸಿದಳು ಸತಿಯಾಕೆಯ ವಚಸ್ಸಿನಲಿ ತಾವರೆಯ ತಹೆನು (ಕುವಾಳ. ೧೦-೧೫). ೭. ರುಚಿಕಟ್ಟಾಗಿರು; ಸವಿಯಾಗಿರು: ಸೊಗಸುವ ಬೋನಮಂ ಸಮೆವ ಕಾರ್ಯದೊಳಂ ಪೆಸರ್ಗಂ . . . ಮಾದೇವಿಯಪ್ಪೈಸಿದಳ್ (ಬಾಧಪು. ೬ ೬೪). ೮. ಮಧುರಧ್ವನಿಯಿಂದ ಕೂಡಿರು; ಇಂಪಾಗಿರು: ಗಿಳಿಯಂತೆ ಸೊಗಸಿ ನುಡಿವಳೆ (ಧಂದೋಂಬು. ೧-೪೯ ವ ಅಡಿಪದ್ಯ).

[ಸೊಗ + -ಇಸ್ಯು-/ ತುಳು. ಸೊಗಸು, ಸೊಗಪು ; ತೆಲು. ಸೊಗಯಿಂಚು, ಸೊಗಿಯು]

ಸೊಗಪಡಿಸು 'ಸೊಗಂಬಡಿಸು' ನೋ.

ಸೊಗವಡು 'ಸೊಗಂಬಡು' ನೋ.

ಸೊಗವಾಳು 'ಸೊಗವಾಟು' ನೋ.

ಸೊಗವಾಳ್ತೆ (ನಾ). ಸುಖವಾದ ಬದುಕು; ಸಂತೋಷವಾದ ಜೀವನ: ಆರಿಂದಲಾದೊಡಂ ಕೇಡಡಸದೊಲ್ ಸೊಗವಾಳ್ತೆಗೆ . . . ನಾಮೆಳ್ಪರಿಂ ನಡೆವುದುತ್ತಮಂ (ಶ್ರೀರಾಮಾ. ೫೭೩-೫೮೪). [ಸೊಗ + ಬಾಳ್ತೆ (< ಬಾಳ್)]

ಸೊಗವಾಟು, ಸುಕಂಬಾಟು, ಸುಕಬಾಳು, ಸೊಗಬಾಳ್, ಸೊಗವಾಳು (ಕ್ರಿ). ಸಂತೋಷದಿಂದ ಬದುಕು; ಸುಖವಾಗಿ ಜೀವಿಸು: ಚಿಕದೇವನೃಪನಂದು ಮಿಗೆ ವೈಜಸಮನೊಂದಿ ಸೊಗವಾಟ್ಟಂ (ಅಪ್ರಕಾ. ೧-೨೧); ನೀನುಂ ಮಡದಿ ಮಕ್ಕಳ್ಕೆರಸು ಕಟ್ಟೈಸಿರಿಯೊಳ್ ನೂಱುಂ ಬರಿಸಂ ಸೊಗವಾಟ್ (ಚಿಕವಂ. ೪೮-೧೫). **ಸುಕಂಬಾಟು**: ಶ್ರೀನೊಬಮ್ಮಾಧಿರಾಜಂ ಸುಕಂಬಾಟುತ್ತಿರೆ (ಎಕ. X, ಮುಳಬಾ. ೨೪೮-೨; ಸು. 860?). **ಸುಕಬಾಳು** : ಸಕಲಭೂಮಿಪಾಲಕನಾಗಿ ಬಹುಶತ್ರುನಿಕರವ ಜಯಿಸಿ ಸಂತಸದ . . . ಸುಕಬಾಳುವನು (ಕಂನವಿ. ೪-೫೬). **ಸೊಗಬಾಳ್** : ಅಂದಮಿಲ್ಲದ ಗೃಹಂ ಗೃಹದಿ ಸೊಗಬಾಳ್ವ ಬಹುಮಂದಿಯಿಲ್ಲದ ಪುರಂ . . . ಇಲ್ಲದಾ ಠಾವಿಲ್ಲಮಾ ನಾಡೊಳು (ಭರಚ. ೧-೬). **ಸೊಗವಾಳು** : ದ್ವಿತೀಯಾವತಾರದ ಶ್ರೀದೇವಿ ನೀನು ಒರಂತೆ ಸೊಗವಾಳುವುದು (ಮೋಹತ. ೧೩-೮೨); ಲಕ್ಷ್ಮೀಮತಿಯ ಕಲ್ಯಾಣುರುತರದ ವೈಭವ ವನೊರೆವೆನು ಪರಮಪುರುಷರು ಕೇಳಿ ಹರುಷವ ತಾಳಿ ಸೊಗವಾಳಿ (ನಾಗಚ. ೨೬ ಸೂಚನೆ); ಚಂದ್ರಾರ್ಕತಾರೆಗಳುಳ್ಳನ್ನೆಗಂ ಸೊಗವಾಳು (ಶಾರ್ಙಕಾ. ೨೨೧). [ಸೊಗ + ಬಾಳ್]

ಸೊಗಸಿಕೆ (ನಾ). ಅಂದ; ಚೆಲುವು: ದೆಯ್ವಬಲಂ ಸೊಗಸಿಕೆ[ಪಾಠಾಂ. ಯಿಕೆ, ಯಿಸೆ] ಮುಂಗೆಯ್ವ ಬಲಂ ಬಾಳಕಾಲದೊಳ್ ತೊಡರ್ದ ಪೊಡರ್ದಯ್ಯರ ಬಾಲಕ್ರಿಯೆಯುಂ ಮುಯ್ಯುಂ ನೋಡಿಸಿತು ತಾಯುಮಂ ತಂದೆಯುಮಂ (ಪಂಪಭಾ. ೨-೧೧); ತನ್ನಲಿ ಪಾಪಕರ್ಮದಲಿ ನಗುವರನ್ಯರೆನುತ್ತ ಮನದಲಿ ಸೊಗಸಿಕೆಯ ಬಿಡೆ ಲಜ್ಜೆ ತಾನತಿ ದುಗುಡ ಮುಖದಲಿ ಪರರ ಯಾಚಿಸದಿಹುದೆ ಸಿರಿ (ನಿಭಾಗ. ೧೧-೩೬-೪೧).

[ಸೊಗಸು[2] + -ಇಕೆ]

ಸೊಗಸಿತು (ನಾ). ಅಂದವಾಗಿರುವುದು; ಚೆನ್ನಾದುದು: ಒಳ್ಪಿತಂ ಸೊಗಸಿತಂ ಶಿವನ ಭಕ್ತರ್ಗಿವಂ (ಇಳಿ. ದೇ. ೪೯-೯). [< ಸೊಗಸು[1]]

ಸೊಗಸ್ಯು 'ಸೊಗಯಿಸು' ನೋ.

ಸೊಗಸ್ಯು (ನಾ). ೧. ಚೆಲುವು; ಅಂದ: ಮೊಗಮಬ್ಜಂ . . . ಅಂಘ್ರಿ ಪ್ರವಾಳಂ ಸೊಗಸಿಂ ತಾವಾಗೆ ತನ್ನಂದನಮೆ ಘನವನಸ್ಥಿಗೆ ರೂಪಾಗೆ ತೋರ್ಕುಂ (ಗಿರಿ. ೨-೭೨); ಎಲ್ಲರಕ್ಷಿಗೆ ಸೊಗಸಂ ತುಳುಂಕುತಮವಳ್ ನಡೆತಂದಳ್ (ನಳಚಂ. ೩೫೯); ಅಲರ್ದ ಬಯಲ್ದಾವರೆಗಳ್ . . . ಸತ್ತಿಗೆಗಳ ತೆಱದಿಂ ಕಣ್ಗೆ ಸೊಗಸನೀವುವವೆಂದುಂ (ಜಾಧಪು. ೧-೮೯). ೨. ವಿಲಾಸ; ಒನಪು: ಮಾಯಾಸತಿಯ ಸೊಬಗಿನ ಸೊಗಸು [ಪಾಠಾಂ. ಡು] ಸೋಂಕದ ಸಕಲ ಸೌಮ್ಯಜ್ಞಾನಿಗಳ ಮತಿಯ . . . ದೇವರ ದೇವನಿದ್ದನು (ತೂರರಾ. ೧-೨-೧). ೩. ಸಂತೋಷ; ಸುಖ: ಸಹಜಾಮೋದಂ ಸೊಗಸನೀಯೆ ನೀಡಾಗದೆ ಗಾಢಾಲಿಂಗನಕ್ಕಾತುರಿಸುವಲ್ಲಿ (ಗಿರಿಕ. ೩-೨೬ ವ); ಜಗತಿಶಯವಹ ಮೋಹವಾರಿಧಿಯಲಿ ಸೊಗಸಿನಲೋಲಾಡಿದರು (ಕಂನವಿ. ೧೦-೫೪); ಬಹು ಸೊಗಸಿನಿಂದ ಕಾಲ ಕಳೆದೆನು (ಮುಂಬಯಿ. ೪-೨). ೪. ಮೆಚ್ಚುಗೆಗೆ ಪಾತ್ರವಾದುದು; ಇಷ್ಟವಾದುದು: ತ್ರಿಕಟುಕದ ಕಜ್ಜಾಯವಿದು ಬಾಲಕರ ಸೊಗಸೇ (ಕುವಾಶ. ೧೨-೧೪). ೫. ಒಲವು; ಪ್ರೀತಿ: ಚಾಪಲನೇತ್ರೆಯೊರ್ವಳುಪವಲ್ಲಭನೊಳ್ ಸೊಗಸುಗ್ಕೆ ಕೂಡಿದಳ್ (ಉದ್ಭಟ. ೧೦-೧೦೬); ಅರಸಗೆ ಸೊಗಸು ಬನದಲಿ ಬಱಿಯ ವನವೀ ಕದನಕೇಳಿಯಲಿ (ಕುವಾಭೀ. ೭-೧೨). ೬. ರುಚಿ; ಸವಿ: ಸಣ್ಣಕ್ಕಿಯೋಗರವು ಸೊಗಸಾದ ಕೆನೆವೊಸರು ಬಣ್ಣಿಸುತ ನಾನುಣಿಸೆ ಒಲ್ಲದಾಯ್ತು (ಪುರಂದ.೧-೮೯-೪). ೭. ಇಂಪು; ಹಿತ: ಹಾಡಿದರು ಚೆನ್ನಾಯ್ತು ಸೊಬಗಾಯ್ತು ಸೊಗಸಾಯ್ತು ಲೇಸು ಲೇಸಿನ್ನೊಮ್ಮೆಯೆಂದು ಕೇಳ್ವಂತೆ (ಭರಚ. ೧-೮೪). ೮. ನೆಮ್ಮದಿ; ಸ್ವಾಸ್ಥ್ಯ: ಮನಸ್ಸಿನಲ್ಲಿ ಸೊಗಸು ಇಲ್ಲವಯ್ಯಾ (ಕುಂಹಿಂ. ೨); ವಾಸಂತಿಯ ಮನಸ್ಸಿಗೆ ಸೊಗಸಿಲ್ಲ (ತೇವೋಡ. ೧೦೧). ೯. ಆಧಿಕ್ಯ; ಹೆಚ್ಚಳ: ನೆರೆದಿರ್ದ ಹರನ ಸಭೆ ಸುಖದ ಸೊಗಸಿನ ಜೊಮ್ಮುವಿಡಿದು ಮೆಱೆದಿರಲು (ಪದ್ಮರಾ. ೧-೨೩); ಜಗದ ಹುಯ್ಯಲು ಜಡಿಯಲಭ್ರದಲಗಿದು ಕೌರವಸೇನೆ ಹರುಷದ ಸೊಗಸಿನಲಿ ಮೈಪಡೆಯೆ (ಕುವಾದ್ರೋ. ೧೪-೩೩). ೧೦. ಹುರುಡು; ಮೇಲಾಟ; ಸ್ಪರ್ಧೆ(?): ತೆಗೆವೆನೇ ಸಾರಿಗಳ . . . ಸೊಗಸು ಬೀಯದು ರಪಣವಿಲ್ಲದ ಬೆಗಡು ನೋಯದು

ಕ್ಷತ್ರಧರ್ಮದ ತಗಹು ಸಾಯದು ನಿನಗೆನುತ ಗಹಗಹಿಸಿದನು ಶಕುನಿ (ಕುವ್ಯಾಸ. ೧೪-೨).
[< ಸೊಗಸು₁ / ತಮಿ. ಚೊಕುಚು; ತುಳು. ಸೊಗಸ್, ಸೊಗಸು; ತೆಲು. ಸೊಗಸು]

ಸೊಗಸುಕಾಱಿ 'ಸೊಗಸುಗಾಱಿ' ನೋ.

ಸೊಗಸುಗಡಲ್ (ನಾ). (ಆಲಂ) ಇಂಗಡಲು; ಕ್ಷೀರಸಾಗರ: ಸೊಗಸುಗಡಲೊಳು ದೇವಕರಿ ಪೂರ್ವದಿಗಧೀಶನೆಡೆಗೆಯ್ದುವಂತೆ ಅಗಣಿತಮಹಿಮನ ಬಳಿಗಾವನಕರಿ ಮಿಗೆ ಹರುಷದಿ ಬಂದುದಾಗ (ಶ್ರೀಪಾಲ. ೧೩-೧೧). [ಸೊಗಸು₂ + ಕಡಲ್₂]

ಸೊಗಸುಗಾತಿ (ನಾ). ಅಂದಗಾತಿ; ಚೆಲುವೆ: ಹದಿನಾಱುಸಾವಿರ ಸೊಗಸುಗಾತಿಯವರವರ ಮೋಹದ ಬಲೆಗೆ ಎಟನಾಗಿ . . . ಮೆಱೆದು (ಪರಿಶಾ. ೬೯); ಒಗುಮಿಗೆ ಹರುಷದೆ ಸೊಗಸುಗಾತಿಯರಾಗ ನಗುತ ಕೋಲಾಟಕ್ಕೆದಿದರು (ಕಂಪವಿ. ೨೧-೧೦೮); ಕಾಡಿನಲ್ಲಿ ಮೃಗದಂತೆ ಏನನು ಅರಿಯದ ಇವನೆಲ್ಲಿ, ನೆರೆ ಸೊಗಸುಗಾತಿಯಾದ ಈ ಗಂಧರ್ವರಾಜನ ಮಗಳೆಲ್ಲಿ (ವಚಕಾ. ೨೯). [ಸೊಗಸು₃ + - ಕಾತಿ₃]

ಸೊಗಸುಗಾರ 'ಸೊಗಸುಗಾಱಿ' ನೋ.

ಸೊಗಸುಗಾರಿಕೆ (ನಾ). ಸುಖ; ಸಂತೋಷ: ನನ್ನ ಮನ ಸಂತೈಸಲೆಂದು ಬಗೆವವಳು ನೀನು ನಾನದನೆ ಬಯಸುತಿಹ ಸೊಗಸುಗಾರಿಕೆಯವನೆ ನಾನೆದೆಯ ಕಟುಕನೇನು? (ಗಂ. ೭೦-೭). [ಸೊಗಸುಗಾರ (< ಸೊಗಸುಗಾಱಿ) + - ಇಕೆ]

ಸೊಗಸುಗಾರ್ತಿ (ನಾ). = ಸೊಗಸುಗಾತಿ: ಸೊಗಸುಗಾರ್ತಿಯರೊಡನೆ ಬೇಸಗೆಗಳಿವ ಭೋಗಿಜನವಾ ವನದೊಳಿಸೆದುದು (ಪದ್ಮರಾ. ೮-೨೭); ಬರುತಿರ್ದರತಿ ಸೊಗಸುಗಾರ್ತಿಯರ್ ಮದನಶರಮೂರ್ತಿಯರ್ ತವಕದಿಂದೆ (ಚಲಪ. ೩೭-೫೦).
[ಸೊಗಸುಗಾಱಿ + - ತಿ₁ (< - ಇತ್ತಿ)]

ಸೊಗಸುಗಾಱಿ, ಸೊಗಸುಕಾಱಿ, ಸೊಗಸುಗಾರ (ನಾ). ೧. ಚೆಲುವ; ಅಂದಗಾರ. ೨. ರಸಿಕ: ಬಗೆಬಗೆಯಲಿ ಸಿಂಗರಿಸಿಯಾ ಬೀದಿಯೊಳ್ ಸೊಗಸುಗಾಱರು ಚರಿಸುವರು (ಕಂಪನಿ. ೬-೧೪೭). **ಸೊಗಸುಕಾಱಿ**: ೧. ಸವಿವಾತುಗಳ ಸೋನೆಯ ಸೊಗಸುಕಾಱರು ನಿಂದ ನಿಲವನು ಕರ್ಣ ನೋಡು (ಕುವ್ಯಾದ್ಯೂ. ೧೭-೨೪). **ಸೊಗಸುಗಾರ**: ೧. ಕಳಾಸಾಂದ್ರನಾದ ಚಂದ್ರನು ಹುಟ್ಟು ಸೊಗಸುಗಾರ (ಸೌಗಂಧಿ. ೧೪೦-೬).

ಸೊಗಸುಗಾರ ಪುಟ್ಟುಸ್ವಾಮಿ = ಉಡುಗೆ ತೊಡುಗೆಗಳ ವಿಷಯದಲ್ಲಿ ಬಹಳ ಆಸಕ್ತಿಯಿರುವವನು: ಏನು ಬರುಬರುತ್ತಾ ಸೊಗಸುಗಾರ ಪುಟ್ಟುಸ್ವಾಮಿಯಾಗುತ್ತಾ ಇದ್ದೀಯೆ? (ಮೂರ್ಗದ. ೧೩.). [ಸೊಗಸು₂ + - ಕಾಱಿ]

ಸೊಗಸುಗುಂದು (ಕ್ರಿ). ಸಂತೋಷವನ್ನು ಕಳೆದುಕೊಳ್ಳು: ಚೆಂದುಟಿಯ ಬಾಯ್ದೆಱೆಯನೈದೆ ಚುಂಬಿಸಿ ಸೊಗಸುಗುಂದದಾಯೆಂದು ಪಂಚೇಂದ್ರಿಯಪ್ರೀತಿಯಂ ಪಡೆವರಿನ್ನಾವಕ್ಕತರೊ (ಜ್ಞಮಿಭಾ. ೧೪-೨೦). [ಸೊಗಸು₂ + ಕುಂದು₁]

ಸೊಗಸುಗೊಳಿಸು (ಕ್ರಿ). ೧. ಸಂತೋಷಪಡಿಸು: ಮಿಥಿಳೇಂದ್ರಸುತೆಯ ಸಂಭೋಗದಿಂ ರಘುಕುಲಲಲಾಮನೆಸೆದಂ . . . ಸಕಲರತಿಕಲೆಗಳಿಂಪಾಗಲ್ಪರಸ್ಪರ ವಿಚಾರಮಂ ಮಱೆದ್ಯೆಕ್ಯಭಾವದಿಂ ಸೊಗಸುಗೊಳಿಸಿ (ಜ್ಞಮಿಭಾ. ೧೪-೩೧). ೨. ಇಂಪಾಗಿಸು; ಮಧುರಗೊಳಿಸು: ಪೂರಾಯತ ಸುತಾನಂಗಳಂ ತಾರಮಧ್ಯ ಮಂದ್ರಗಳಿಂದೆ ಸೊಗಸುಗೊಳಿಸಿ ಗೇಯರಸಮೊಸರೆ ಪಾಡಿದರ್ (ಜ್ಞಮಿಭಾ. ೨೧-೫೮); ಕೀರ್ತನೆಗಳನ್ನು ಸೊಗಸುಗೊಳಿಸಿ ವಿಸ್ತರಿಸಿ ಹಾಡುವುದರಲ್ಲಿ ನಿಮ್ಮ ಸಮಾನರಿಲ್ಲ (ಸಂಗೀತ. ೩೧). [ಸೊಗಸು₂ + ಕೊಳ್₁ + - ಇಸು₃]

ಸೊಗಸುದಂಬುಲ (ನಾ). ಸವಿಯಾದ ತಾಂಬೂಲ: ಚುಬುಕಾಗ್ರಮನೊಯ್ಯನೆ ಪಿಡಿದಲುಗಿಸಿ ಕಬಳಂಗೊಂಡು ಸೊಗಸುದಂಬುಲಮಂ (ಜಯಕಾ. ೮-೪೬).
[ಸೊಗಸು₂ + ತಂಬುಲ]

ಸೊಗಸುದೊಡವು (ನಾ). ಅಂದವಾದ ಒಡವೆ; ಶೋಭಿಸುವ ಆಭರಣ: ಸೊಗಸುದೊಡವ[ಪಾಠಾಂ. ಗೊಡುವ] ಸಂತಸದಿಂ ಬಗೆಮಿಗೆದೊಟ್ಟ ರನ್ನದ ರಮಣಿಯ ವೊಲು ಮುಗುದೆ ಬಂದಳು ರಾಯನೆಡೆಗೆ (ಶ್ರೀಪಾಲ. ೨-೬೪). [ಸೊಗಸು₂ + ತೊಡವು]

ಸೊಗಸುದೋಱು (ಕ್ರಿ). ೧. ಸಂತೋಷವನ್ನುಂಟುಮಾಡು; ಆನಂದಗೊಳಿಸು: ಈ ಕಱುತ್ತೞ್ದಜನ್ಯಪನ ಕಂಗಳಿಗೆ ಸೊಗಸುದೋಱುವೆನು (ತೊರರಾ. ೬-೩೧-೧೯). ೨. ಒಪ್ಪು; ಶೋಭಿಸು: ಸೊಗಸುದೋಱುವ ಭಟರ ನೆಱೆ ಕೈದುಗಳ ಹೊಳಹಿನ ನೃಪರ ಬಳಿಯಲಿ ನೆಗಹಿ ಬೀಸುವ ಚೌರಿಗಳ ಸಂಭ್ರಮದೊಳೊದಗಿದರು (ನಳಚ. ೯-೫೭). [ಸೊಗಸು₂ + ತೋಱು]

ಸೊಗಸುನುಡಿ (ನಾ). ಇಂಪಾದ ಮಾತು; ಮಧುರವಾದ ನುಡಿ: ಸೊಗಸುನುಡಿಯಂಗನೆಯರ್ ಮೆಲ್ಲಡಿಯ ಚೆಲ್ಲಿಗಂಗಳ ಚೆಲ್ಲಗಾರ್ತಿಯರ್ . . . ಅಲ್ಲಿಗಲ್ಲಿಗೆ ಸಂಚರಿಸಿ (ರಾಮಾಶ್ವ. ೧೨೨-೨೫). [ಸೊಗಸು₂ + ನುಡಿ₂]

ಸೊಗಸುನೋಟ (ನಾ). ಆಕರ್ಷಕವಾದ ನೋಟ: ಅವನನೊಡಂಬಡಿಪುದರ್ಕೆ ನೀನಾವ ಬಗೆಯ ಸೊಗಸುನೋಟಂಗಳಂ . . . ಎಸಗುವೆಯೋ (ಚಕವಂ. ೧೧೭-೧೦).
[ಸೊಗಸು₂ + ನೋಟ]

ಸೊಗಸುವಡೆ (ಕ್ರಿ). ೧. ಶೋಭೆಯನ್ನು ಹೊಂದು; ಚೆಲುವಾಗು: ಬಲು ಸೊಗಸುವಡೆದು ಅತಿಮನೋಹರವಾದ ಯುಗ್ಮನಕ್ಷತ್ರಗಳು ಗಗನಾಂಗಣಮಧ್ಯದಲ್ಲಿ . . . ಗಿರಿಗಿರಿ ಸುತ್ತುತ್ತಲಿರುವುವು (ಜ್ಯೋರ್ವಿ. ೬೫). ೨. ಸಂತೋಷವನ್ನು ಹೊಂದು; ಸುಖಿಸು: ಸೊಕ್ಕುದಕ್ಕೆಯ ಸೊಗಸುವಡೆದಳಾ ಕಾಂತೆ ಪ್ರಿಯನಂಗದೊಳ್ಮೋಹನೋತ್ಸಂಗದೊಳ್ಪಗೆಗೊಳಿಸುತೆ (ಜ್ಞಮಿಭಾ. ೧೧-೧೭). [ಸೊಗಸು₂ + ಪಡೆ₁]

ಸೊಗಸುವಾಯ್ದೆಱೆ (ಕ್ರಿ). ಅಂದವಾದ ಬಾಯನ್ನು ಬಿಡು, —ತೆರೆ: ಸುಗುಣಯ ಮುಕ್ತಿಯ ದೂತಿಯೆಂಬ ಶಾರದೆಯವಳಗಣಿತಗುಣವನಾ ನೃಪಗೆ ಸೊಗಸುವಾಯ್ದೆಱೆದಾಡುವಂತೆ ಸರಂಗೊಟ್ಟು ತೆಗೆದವು ಪಡಿ ದೇಗುಲದ (ಶ್ರೀಪಾಲ. ೬-೬೬).
[ಸೊಗಸು₃ + ಬಾಯ್ದೆಱೆ₁]

ಸೊಗಸುವಾೞ್ವೆ (ನಾ). ಸುಖವಾದ ಜೀವನ: ಬಗೆದು ನೇಹಿಗರೊಳು ಭಾವಿಸಿ ನೇಹವ ಪಗವರೊಡನೆ ಪಗಗೊಂಡು . . . ಸೊಗಸುವಾೞ್ವೆಯೊಳು ಸೊರ್ಕುವುದು (ಚಕವಿ. ೬-೧೫೬ ಸಾಂಗತ್ಯ ೨೪). [ಸೊಗಸು₂ + ಬಾೞ್ವೆ]

ಸೊಗಸುವೆಣ್ (ನಾ). ಚೆಲುವೆ; ಸುಂದರಿ.

ಸೊಗಸುವೆಂಗಳ್ (ಬಹುವ): ಅಲಸಿದ ತನ್ನ ಸೊಗಸುವೆಂಗಳ ಮನಕರ್ತಿ ಮಾಡಿದನೇನು ಸುಗುಣನೊ ಭರತರಾಜೇಂದ್ರ (ಭರಚ. ೬೫-೬). [ಸೊಗಸು₂ + ಪೆಣ್]

ಸೊಗಸುವೆರು 'ಸೊಗಸುವೆಱು' ನೋ.

ಸೊಗಸುವೆಱು, ಸೊಗಸುವೆರು (ಕ್ರಿ). ಚೆಲುವನ್ನು ಹೊಂದು; ಶೋಭೆಯನ್ನು ಪಡೆ: ಮಗಮಗಿಸುವ ಪೊಸಮಲ್ಲಿಗೆಯರಳಿನ ಸೊಗಸುವೆತ್ತೆಸೆವ ಪೂಸರವ ಮಿಗೆ ಶಿಖಿಗಮರಿಸಿ (ಕಂಪವಿ. ೧೦-೧೪). **ಸೊಗಸುವೆರು**: ಕನಕಮಯ ಪಡಗದಂದದಿ ಸೊಗಸುವೆತ್ತು . . . ಧಾರುಣಿಗೆವುಭಯ ವೈಕುಂಠಮಿದೆಯೆನಿಸಿ (ನವಮೋ. ೧೦-೮).
[ಸೊಗಸು₂ + ಪೆಱು₁]

ಸೊಗಸೇರ್, ಸೊಗಸೇರು (ಕ್ರಿ). ೧. ಸಂತೋಷವು ಹೆಚ್ಚಾಗು, —ಮಿರು: ನಗುತ ಮಾತಾಡುತಿಹ ನುಡಿಯ ಕವಿಯಿಂ ಕೇಳಿ ಸೊಗಸೇರ್ದು ಕರಸೆ (ಕೃಷ್ಣವಿ. ೧-೧೫). **ಸೊಗಸೇರು**: ೨. ಶೋಭಿಸು; ಮೆರೆ: ಬುಧರ ವಿದ್ಯಾಬುದ್ಧಿ ಸೊಗಸೇರುವಂದದೆ ವೇದ್ಯತತ್ವಾವಬೋಧದೊಳು ಕಳೆಗೊಂಡು ಮೆರೆವುವು ಉಚಿತ ವಿಚಾರದ ಕವಿಗಣರಚಿತಸೂಕ್ತಿಗಳು (ಇಚಾಪ. ೧೪೩-೨). [ಸೊಗಸು₂ + ಏರ್₀ (< ಏಱು₁)]

ಸೊಗಸೇರು 'ಸೊಗಸೇರ್' ನೋ.

ಸೊಗುಳಿ, ಸೋಗಳೆ, ಸೋಗುಳಿ (ನಾ). ಪಣವನ್ನೊಡ್ಡಿ ಆಡುವ ಒಂದು ಬಗೆಯ ಆಟ: ನೆತ್ತ ಚದುರಂಗ ಪಗಡೆಯು ಚತ್ತಾಯಂಬೈದು ದಾಯ ಬಡಿಬಿಲ್ ಸೊಗುಳಿಯುತ್ತಮರಾದರು ಆಡಲ್ ಬತ್ತಲೆಯ ಭಂಗ ಬಪ್ಪನೆಂಬುದು ಪುಸಿಯೇ (ನೀತಿಸಾ. ೪೧೦). **ಸೋಗಳೆ**: ಜಾಣಜಾಣೆಯರಾಟವೆಂಬುದು ಚದುರಂಗದಾಟ ದಂತಿಹುದು ಬದಗರ ಲೀಲೆಯಹುದು ಟೊಳ್ಳಿಗವಡೆಯ ಕೆದರ್ವ ಸೋಗಳೆಯಾಟದಂತೆ (ಭರಚ. ೧೦-೧೯). **ಸೋಗುಳಿ** : ಪಗಡೆ ಸೋಗುಳಿ ನೆತ್ತ ಚದುರಂಗ ಸೊಳ್ಳೆದೊಂಪಗಳಾಟಕಾಱಿರೊಪ್ಪಿಪರು (ಮೋಳಪ್ಪ. ೧-೫೨).
[ದೇ. ॥ ತಮಿ. ಚೊಕ್ಕಟಾನ್; ಮಲ. ಚೊಕ್ಕಟ್ಟಾಡ್ಡಳಿ; ತೆಲು. ಸೊಗಟ]

ಸೊಚ್ಚಯ (ನಾ). (?): ಮಚ್ಚರವಿಲ್ಲದ ಕಲಹಂ ಕಣ್ಣಂ ಮುಚ್ಚದ ತೆಳುನಿದ್ರೆ ಬೆಚ್ಚದ ನಡುಕಂ ಕುಂದೊಂದದ ಕವಿ ಸೊಚ್ಚಯವಿಲ್ಲದ ದೈನ್ಯಂ ತನುವಂ ಮುಚ್ಚಿಯು ಮುಚ್ಚದ ದನಿವಿಂದೆಸೆವಳ್ ಸುಸಿಲೊಳ್ತರಳಾಕ್ಷಿ (ಉದ್ಭದೇ. ೨-೬೪). [?]

ಸೊಜ್ಜ$_1$ (ನಾ). ಒಂದು ಬಗೆಯ ಸುಂಕ(?): ಹಾಂಬುಳಿಗೆಯ ದಾರಿಯಲಿ ೬೦ ಮತ್ತರು ಕೆಯ್ಯುಮಂ ಅಡಕೆಯಲ್ಲಿ ಸೊಜ್ಜಮುಮಂ ಎಲೆ ಹೇಱಿಂಗೆ ೧೦೦ ಮಂ . . . ಕೊಟ್ಟರ್ (ಸೌಕಾ. IX-i, ೨೬೯-೨೯: 1169); ನೆಲವರ್ತ್ತಿಗೆ ಸಾಸಿರಕ್ಕೆ ಪನ್ನೊಂದಡಕೆಯ ಸೊಜ್ಜಮುಮಂ ಚಂಡಾವುರಂ ಬೆಲೆ ಮೊದಲಾಗುಳಿದಡಕೆಗೆಳ್ಗೆಲ್ಲಂ ಸಾಸಿರಕ್ಕೆ ಇರ್ಪತ್ತೊಂದಡಕೆಯ ಸೊಜ್ಜಮುಮಂ . . . ಬಿಟ್ಟಾರ್ (ಎಇ. XVIII. ೯೨-೩೪; 1186).

[?./ ತಮಿ. ಚೊಚ್ಚಮ್ = ಉಳಿಕೆ, ಬಡ್ಡಿ]

ಸೊಜ್ಜ$_2$ (ನಾ). ಆಧಿಕ್ಯ; ಅತಿಶಯ(?): ಅಜ್ಜರಾಯರ ಖ್ಯಾತಿಯೊಳು ಮಿಗೆ ಸೊಜ್ಜವೆನಿಸಿತು ನಿಮ್ಮ ಖ್ಯಾತಿಯು (ಕೊಲ್ಲಾಚ. ೧೪೨). [?./ ತೆಲು. ಸೊಚ್ಚ]

ಸೊಜ್ಜಿಗೆ 'ಸಜ್ಜಿಗೆ' ನೋ.

ಸೊಜ್ಜಿಗೆವೆರೆ (ಕ್ರಿ). ರವೆಯಿಂದ ಕೂಡಿರು: ಸೊಜ್ಜಿಗೆವೆರೆದ ಸಕ್ಕರೆಯ ಪಾಯಸವ . . . ಸರಸಿಜಾಕ್ಷಿಯರು ನೀಡಿದರು (ಕಂನಮ. ೮-೯೦). [ಸೊಜ್ಜಿಗೆ (< ಸಜ್ಜಿಗೆ) + ಬೆರೆ$_1$]

ಸೊಟಕ 'ಸಟ್ಟುಗ$_1$' ನೋ.

ಸೊಟಗ 'ಸಟ್ಟುಗ$_1$' ನೋ.

ಸೊಟಗೆ$_1$ 'ಸೊಂಟಿಗೆ' ನೋ.

ಸೊಟಗೆ$_2$ (ನಾ). ಒಂದುಬಗೆಯ ಸಸ್ಯ: ಸೊಟಗೆ, ಬಾಲೆ (ಮೃಡಿಗಿ. ೫೮-೧೧೭೩). [?]

ಸೊಟಿಗೆ 'ಸೊಂಟಿಗೆ' ನೋ.

ಸೊಟ್ಟ, ಚೊಂಟ, ಚೊಟ್ಟ, ಚೊಟ್ಟಿ$_1$ (ನಾ). ೧. ಓರೆ; ಡೊಂಕು; ವಕ್ರತೆ: ಸೊಟ್ಟವಾಗಿದ್ದುದೊಂದನ್ನು ನೆಟ್ಟಗಾಗಿಸಿದ ಆನಂದವು ಅವನಲ್ಲಿ ಮೂಡಿದ್ದಿತು (ಮುನಿಮಾ. ೧೭೩); ಮುಖವು ತ್ರಿಕೋಣಾಕೃತಿಯಲ್ಲಾಗಲಿ, ಸೊಟ್ಟವಾಗಾಗಲಿ, ಅಂಡಾಕೃತಿ, ವೃತ್ತಾಕೃತಿಗಳಲ್ಲಾಗಲಿ ಇರಬಾರದು (ಭಾಚತ್ರ. ೨೦). ೨. ಅಂಗವಿಕಲ; ಹೆಳವ: "ಕುಣಿಃ = ಸೊಟ್ಟಂ" (ಕಾಶಕ್ಯ. ೨೭೧). (ಗು). ೩. ಓರೆಯಾದ; ಡೊಂಕಾದ: 'ಸೊಟ್ಟಗಾಲು' ಪರಾ. ೪. (ಆಲಂ) ಕೆಲಸಕ್ಕೆ ಬಾರದ; ತುಚ್ಛವಾದ : ಈ ನಿನ್ನ ಸೊಟ್ಟ ಮೆಣಶಿನಕಾಯಿ ಮಾರಿದರ ಬರೂದೆಷ್ಟೋ ಮೂಳಾ! (ಮಣ್ಣುಹ. ೮೯); ಈ ಸೌಸವವನ್ನು ಸೇವಿಸದ ಭೃಂಗ ಸೊಟ್ಟ ಕಮಲದ ಹೂವಿಗೆ ಏಕೆ ತಿರುಗಿ ಹೋದೀತು? (ಗಾಶಿ. ೨೧೦). ಚೊಂಟಿ: ೨. ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾಱರು ಇಬ್ಬರು ಚೊಂಟರು ಒಬ್ಬಗೆ ಕೈಯೆ ಇಲ್ಲ (ಪುರಂದ. ೩-೨೭-೨). ಚೊಟ್ಟ : ೨. ತಿರುಕರು ತೊನ್ನರು ಮೋಂಟರು ಚೊಟ್ಟರು ಕರಿಕಾಂಗರು ದುರ್ಗಂಧಿಗಳು (ಜ್ಞಾನಚಿ. ೪೪-೧೧೫). ಚೊಟ್ಟಿ$_1$: (ಕ). [ದೇ. ॥ ತಮಿ. ಚೊಟ್ಟೈ; ತುಳು. ಸೊಟ್ಟ, ಚೊಟ್ಟ, ಚೊಟ್ಟೆ; ತೆಲು. ಚೊಟ್ಟ, ಸೊಟ್ಟ]

ಸೊಟ್ಟಕಾಲು 'ಸೊಟ್ಟಗಾಲು' ನೋ.

ಸೊಟ್ಟಕೈ 'ಸೊಟ್ಟಗೆಯ್' ನೋ.

ಸೊಟ್ಟಗ 'ಸಟ್ಟುಗ$_1$' ನೋ.

ಸೊಟ್ಟಗಣ್ಣು (ನಾ). ೧. ಮೆಳ್ಳಗಣ್ಣು; ಕೋಸುಗಣ್ಣು; ವರಸೆಗಣ್ಣು: ಸೊಟ್ಟಗಣ್ಣನ್ನು ಶಸ್ತ್ರಚಿಕಿತ್ಸೆಯಿಂದ ನೆಟ್ಟಗೆ ನೋಡುವಂತೆ ಮಾಡಿದರೂ ದೃಷ್ಟಿಯು ಮಟ್ಟಿಗೆ ಹಿಂದಿರುಗಲಾರದು (ನಿಮ್ಮಧ. ೭೨). ೨. (ಆಲಂ) ಅಮಂಗಳಕರವಾದ ದೃಷ್ಟಿ; ವಕ್ರದೃಷ್ಟಿ: ಅವನ ಸೊಟ್ಟಗಣ್ಣು ಬಿದ್ದರೆ ಆಗುವ ಕೆಲಸವೂ ಹಾಳಾಗುತ್ತದೆ (ರೂಢಿ). [ಸೊಟ್ಟ + ಕಣ್ಣು (< ಕಣ್)]

ಸೊಟ್ಟಗಾಲು, ಚೊಟ್ಟಗಾಲು, ಸೊಟ್ಟಕಾಲು (ನಾ). ಡೊಂಕಾಗಿರುವ ಕಾಲು: ಆತ ತನ್ನ ಸೊಟ್ಟಗಾಲನ್ನು ನಿಧಾನವಾಗಿ ಎಳೆದುಹಾಕುತ್ತಾ ಬರುತ್ತಿದ್ದಾನೆ (ರೂಢಿ). ಚೊಟ್ಟಗಾಲು: (ಕ). ಸೊಟ್ಟಕಾಲು : ಕುಂಟು ಕೆಲವಕ್ಕೆ . . . ಉಳಿದವಕ್ಕೆ ಸೊಟ್ಟಕೈ, ಸೊಟ್ಟಕಾಲು (ಏಳಜೇ. ೩). [ಸೊಟ್ಟ + ಕಾಲು$_1$ (< ಕಾಲ್$_1$)]

ಸೊಟ್ಟಗೆ (ಅ). ಓರೆಯಾಗಿ; ಡೊಂಕಾಗಿ: ಪುಡಿ ಹಾಕುವಾಗ ಚಮಚ ಸೊಟ್ಟಗೆ ಹಿಡಿದುಕೊಂಡರೆ ಕಾಫಿ ಗತಿ ಏನು? (ರಾಯಕ. ೧೮); ಸುಂದರಮ್ಮ ಒಳಗೆ ಬಂದು ಮಗಳ ಪಕ್ಕದಲ್ಲಿ ಕುಳಿತು . . . ಸೊಟ್ಟಗಿದ್ದ ಹೂವು ಸರಿಮಾಡಿದರು (ದೂಟ್ಟು. ೨೪).

ಸೊಟ್ಟಸೊಟ್ಟಗೆ (ದ್ವಿರುಕ್ತಿ): ನಿನ್ನ ಅಕ್ಷರವೇಕೆ ಹೀಗಿದೆ? ನೋಡು ಎಷ್ಟು ಸೊಟ್ಟಸೊಟ್ಟಗೆ ಬರೆದಿದ್ದೀಯೆ? (ಶಾಲಮ. ೧೯೩). [ಸೊಟ್ಟ + - ಅಗ್ಗೆ$_3$]

ಸೊಟ್ಟಗೆಯ್, ಚೊಟ್ಟಗೆಯ್, ಸೊಟ್ಟಕೈ, ಸೊಟ್ಟಗೈ (ನಾ). ತಿರುಚಿಕೊಂಡಿರುವ ಕೈ; ಡೊಂಕಾಗಿರುವ ಕೈ: (ಕ). ಚೊಟ್ಟಗೆಯ್: (ಕ). ಸೊಟ್ಟಕೈ : ಕುಂಟು ಕೆಲವಕ್ಕೆ . . . ಉಳಿದವಕ್ಕೆ ಸೊಟ್ಟಕೈ, ಸೊಟ್ಟಕಾಲು (ಏಳಜೇ. ೩). ಸೊಟ್ಟಗೈ : ಅವನು ತನ್ನ ಸೊಟ್ಟಗೈಯನ್ನು ನೀಡಿ ಭಿಕ್ಷೆ ಬೇಡುತ್ತಿದ್ದನು (ರೂಢಿ).

ಸೊಟ್ಟಗೈ ಇಡು = (ಆಲಂ) ಯಾವುದೇ ವಿಚಾರದಲ್ಲಿ ಅನಾವಶ್ಯಕವಾಗಿ ಪ್ರವೇಶಿಸು: ಅವನು ಎಲ್ಲರ ವ್ಯವಹಾರಗಳಲ್ಲಿ ತನ್ನ ಸೊಟ್ಟಗೈ ಇಡುವ ಅಧಿಕ ಪ್ರಸಂಗತನ ಮಾಡುತ್ತಾನೆ (ರೂಢಿ). [ಸೊಟ್ಟ + ಕೆಯ್$_2$]

ಸೊಟ್ಟಗೆಯ್ಯ, ಚೊಟ್ಟಗೆಯ್ಯ (ನಾ). ವಕ್ರವಾದ ಕೈಯುಳ್ಳವನು: "ಕುಣಃ = ಸೊಟ್ಟಗೆಯ್ಯಂ" (ಕಾಶಕ್ಯ. ೩೪). ಚೊಟ್ಟಗೆಯ್ಯ : "ಕುಕರ, ಕುಣಿ-ಚೊಟ್ಟಗೆಯ್ಯ" (ನಾಚಿರಾ. ೬). [ಸೊಟ್ಟಗೆಯ್ + - ಅ$_7$]

ಸೊಟ್ಟಗೈ 'ಸೊಟ್ಟಗೆಯ್' ನೋ.

ಸೊಟ್ಟಮಾತು (ನಾ). (ಆಲಂ) ಕೊಂಕುನುಡಿ; ಚುಚ್ಚುಮಾತು: ಈ ಕಹಿನೆನಪುಗಳು ಬಗೆಗಣ್ಣಿನ ಮುಂದೆ ಬಂದು ನಿಲ್ಲುತ್ತವೆ. ಅದರಲ್ಲಿಯೂ ಉಗಾದಿದಿನದ ಸೊಟ್ಟಮಾತಿನ ಕೂರಂಬುಗಳು (ಬೆಳುಮ. ೯). [ಸೊಟ್ಟ + ಮಾತು$_1$]

ಸೊಟ್ಟಮುಖ (ನಾ). (ಬೇಸರ, ಕೋಪ, ಅಸಹನೆ ಮುಂತಾದುವುಗಳಿಂದ) ತಿರುಚಿಕೊಂಡಿರುವ ಮುಖ; ವಕ್ರವಾದ ಮುಖ: ಆತನು ಹೇಳಿದ ಹಾಗೆ ಕುಣಿಯುತ್ತಾ ಬಂದರೆ ನಮ್ಮ ಪಾಡು ನಾಯಪಾಡಾಗುವುದರಲ್ಲಿ ಆವ ಸಂಶಯವೂ ಇರುವದಿಲ್ಲ, ಎಂದು ಸೊಟ್ಟಮುಖದಿಂದ ಮಾತನಾಡಿದನು (ಬೆನ್ನಬೇ. ೫೯).

[ಸೊಟ್ಟ + ಮುಖ]

ಸೊಟ್ಟಮೋರೆ (ನಾ). ೧. = ಸೊಟ್ಟಮುಖ: ಈಗೇನು ಮಾಡುವದು ಉಪಾಯವಿಲ್ಲ ಎಂದು ಸೊಟ್ಟಮೋರೆ ಮಾಡಿ ರಾಯರಂದರು (ದಾಸಕು. ೬೫). ೨. (ಆಲಂ) ಅಮಂಗಳಕರವಾದ ಮುಖ: ಯಾರ ಸೊಟ್ಟಮೋರೆಯನ್ನು ಕಂಡೆನೊ ಹೊತ್ತಾರೆಯನ್ನ? (ಗಿಳಿಎಂ. ೭೭-೧೭). [ಸೊಟ್ಟ + ಮೋರೆ (< ಮೋಱೆ)]

ಸೊಟ್ಟಹೆಜ್ಜೆ (ನಾ). (ಆಲಂ) ತಪ್ಪುದಾರಿಯಲ್ಲಿ ಇಡುವ ಹೆಜ್ಜೆ ; ತಪ್ಪಾದ ನಡವಳಿಕೆ: ಸೊಟ್ಟಹೆಜ್ಜೆಯಿಡತೊಡಗಿರುವಿರೆಂದು ಯಾರೋ ಸುರೇಂದ್ರರಾಯನಿಗೆ ಹೇಳಿರುವರು (ಸ್ಕೂಲಮು. ೧೭೭). [ಸೊಟ್ಟ + ಹೆಜ್ಜೆ (< ಪಜ್ಜೆ)]

ಸೊಟ್ಟಿಗೆ 'ಸೊಂಟಿಗೆ' ನೋ.

ಸೊಟ್ಟು$_1$ (ಕ್ರಿ). (?): ಪುದಿದುಪಧಾನ ತಳ್ತ ರುಚಿ ಪಾಸಿನ ಬೆಳ್ಳುಗಳೊಳ್ ಪಳಂಚೆ ಮಂಚದ ಕಡುಗಪ್ಪಿನೊಳ್ ಬೆರಸಿ ಮಿಂಚುವ ಸೊಟ್ಟಿ[ಪಾಶಾಂ. ಜ್ಞಿ]ದ ಸೆಜ್ಜೆಯೊಳೆ ವಿನೋದದೆ ಗುಡಿಗಟ್ಟಿ ದೇವಿಯರನೂನಜಿನಾಂಬಿಕೆ ಸೂಕ್ತಿ ಕಂ[ಡ]ಳಭ್ಯುದಯಕರಂಗಳಪ್ಪ ಕನಸಂ ಪದಿನಾಱುಮನಂದು ಬೈಗಿನೊಳ್ (ಸೂಕ್ತಿಸು. ೭-೩೫). [?]

ಸೊಟ್ಟು$_2$, ಚೊಟ್ಟು (ನಾ). ೧. ಡೊಂಕು; ನೇರವಲ್ಲದುದು: ಕೆಲವು ಜನರ ಕೆಯ್‌ಕಾಲು ಸೊಟ್ಟಾಗುತ್ತವೆ (ಮುಂಬಯಿ. ೬. ೪-೨೨೩); ಒಲೆ ಸೊಟ್ಟಾದರೆ ಬದನೆಕಾಯಿ ಬೇಯದೇ? (ಗಾದೆ). ೨. (ಆಲಂ) ತಪ್ಪು; ದೋಷ: ಮಿರ್‌ಸಾದಕನು ಸುಲ್ತಾನರ ಗೆಳೆಯ, ಅವರ ಸೊಟ್ಟು ಗುಟ್ಟುಗಳನ್ನು ಬಲ್ಲವನು (ದೌಲತ್. ೨೮); ಸೊಟ್ಟನ್ನು ಸರಿಪಡಿಸಿದರೆ ಕೆಲವರು ಕೋಪ ಮಾಡಿಕೊಂಡು 'ಇದೇನು ಇವನ ಪ್ರತಿಷ್ಠೆ' ಎನ್ನುತ್ತಾರೆ (ಕನ್ನನು. ೧, ೫). ಚೊಟ್ಟು : ೧. ಚೊಟ್ಟು ಕಾಲ್ಮೆ ಕೊರಟುದಲೆ ಬಸುರ್ವಟ್ಟೆ ಬಾಗಿದ ಬೆನ್ನು (ಆದಿಪ. ೨೨-೭); ಗಾಣ್ಗೆತ್ತಿ ಕೈ ಹುಟ್ಟೋವಾಗಲೇ ಚೊಟ್ಟು (ಹುಟ್ಟಹ. ೧೩೭).

ಸೊಟ್ಟುಸೊಟ್ಟು (ದ್ವಿರುಕ್ತಿ): ಅವನ ಅಭ್ಯಾಸಗಳು ಆರಂಭದಲ್ಲಿ ಅಂದವಾಗಿ ಬರೆಯಲ್ಪಟ್ಟು ಕೊನೆಕೊನೆಗೆ ಸೊಟ್ಟುಸೊಟ್ಟಾಗಿ ಕುಡಿದು ಮತ್ತೇರಿದವರಂತೆ ತೂರಾಡುತ್ತಿದ್ದವು (ಶಾಲಮ. ೧೯೪). [ಸೊಟ್ಟ + - ಉ$_4$./ ತುಳು. ಚೊಟ್ಟು]

ಸೊಟ್ಟುಹೊರಿಸು (ಕ್ರಿ). ದೋಷಾರೋಪಣೆ ಮಾಡು; ತಪ್ಪುಹಾಕು: ನಿಮ್ಮ ಮೇಲೆ ಸೊಟ್ಟುಹೊರಿಸಿ ವೈರಿಗಳನ್ನು ಕೂಡಿ ಸರ್ವಥಾ ನಿಮಗೆ ಕೇಡುಬಗೆಯುವುದಿಲ್ಲ (ಕುಮುದಿ. ೧೦೫). [ಸೊಟ್ಟು$_2$ + ಹೊರಿಸು$_1$ (< ಪೊಱಿಸು)]

ಸೊಟ್ಟೆ 'ಚೊಟ್ಟೆ$_3$' ನೋ.

ಸೊಡಗೆ 'ಸೋಡಗೆ' ನೋ.

ಸೊಡಬಲಿ (ನಾ). ಹೆಣಗಳನ್ನು ಸುಡುವ ಸ್ಥಳ; ಸುಡುಗಾಡು; ಶ್ಮಶಾನ: ''ಸೊಡಬಲಿಯೆಂದು ಮಸಣವಟ್ಟಿಗೆ'' (ಶಮದ. ಪರಿ. ೨); ''ಸೊಡಬಲಿಯೆಂದು ಶ್ಮಶಾನಂ'' (ಕಶಸಾ. ೭೭-೫೧೮); ಮನಕದಿಂದ ಸೊಡಬಲಿಯೊಳೇತರ್ಕೆ ನಟಿಸಿದಂ ಸಸಿಧರಂ (ಆರಾಚ. ೩-೧೮-೨); ಆ ಶಿವಂ ಬ್ರಹ್ಮಾಂಡಕೋಟಿಗಳ ಚೆನ್ನಾಗಿ ಸಂಹರಿಸಿ ತಪ್ಪಸಿತಮಂ ತೆಗೆದು ತನ್ನ ಮೆಯ್ಯೊಳ್ಸೂಸಿಯಾಗಳಾ ಸೊಡಬಲಿಯೊಳ್ . . . ತಾಂಡವಕುದ್ಯುಗಿಸ (ಪಾಸೋಪು. ೧೦-೯೩). 'ಸೊಡಲೆ' ಪರಾ. [< ಸುಡು?]

ಸೊಡಬಲಿವನೆಯ (ನಾ). ಸುಡುಗಾಡನ್ನೇ ಮನೆಯನ್ನಾಗಿ ಉಳ್ಳವನು; ಶಿವ: ''ಎಣ್ಮಯ್ಯಂ . . . ಸೊಡಬಲಿವನೆಯಂ . . . ಅಯ್ಯೊಗಂ . . . ಈ ೩೩ ಈಶ್ವರಂಗೆ ಪೆಸರ್'' (ಕಶಸಾ. ೪೭-೧). [ಸೊಡಬಲಿ + ಮನೆ + -ಅ]

ಸೊಡರ್, ಸೊಡರು, ಸೊಡಲು, ಸೊಡಱ್, ಸೊಡಿಲು (ನಾ). ೧. ದೀವಿಗೆ; ದೀಪ: ಸೊಡರ ಬೆಳಗಿಂಗಂ ಸೈರಿಸದೆ ಕಣ್ಣ ನೀರ್ ಬರ್ಕುಂ (ವಡ್ಡಾರಾ. ೨೭-೫); ಪರಸ್ಪನ್ಯಭ್ಯರವನ ಬರವಿಂಗಳ್ಕಿ ಗಾಳಿಗೊಡ್ಡಿದ ಸೊಡರಂತೆ ನಡನಡನಡುಗುವ ಕುರುಧ್ವಜಿನಿಯಂ ಕಂಡು (ಪಂಪಭಾ. ೮-೧೦೧ ವ); ಬೆಳಗುವ ಸೊಡರೊಳ್ ಸೊಡರಂ ಬೆಳಗಿ ಪಲರ್ಕೊಂಡುಪೊಗೆಯುಂ ಕುಂದದೆ ಪಚ್ಚಳಿಸುವವೋಲ್ ಜಗಮೆಲ್ಲಂ ಕೊಳಲುಂ ತವದಿತ್ತು, ಮೆಱೆವನಿಱಿವಬೆಡಂಗಂ (ಗದಾಯು. ೧-೩೦). **ಸೊಡರು**: ೧. ಸಂಸಾರವೆಂಬುದೊಂದು ಗಾಳಿಯ ಸೊಡರು . . . ಇದ ನೆಚ್ಚಿ ಕೆಡಬೇಡ (ಬಸವ. ೧೭೪); ಬಡವರ ಮನೆಯ ಸೊಡರು ಕುಂದುವುದೆ (ಹಚಕಾ. ೧-೨೧); ಎನ್ನ ಪುಣ್ಯವು ಗಾಳಿಗೊಡ್ಡಿದ ಸೊಡರೊಲಾದುದು ನೃಪನ ಮರಣದಲಿ (ಸಂಭವ. ೨೦-೩೦). **ಸೊಡಲು** : ೧. ಎಳೆಯ ಬೆಳಕನು ಮೊಗದು ಹೊತ್ತರೆ ಬೆಳ್ಗತ್ತಲು ತುಳುಕಲು ಕಳಿಯ ಸೊಡಲನು ಕುಗ್ಗುತಡಗುವ ಬೆಳ್ಬಿಂಬದ ಬಗೆಯೊಳು (ಇಂಗಿತ. ೧೨-೩). Δ **ಸೊಡಱ್** : ೧. ಅಪ್ಪಗೌಡನ ಮಗ ಚೋಳರಾಮನಾಥಂಗೆ ಸೊಡಱಗಳಿಗೆ . . . ಎಣ್ಮೆಯ xಡುವಲ್ಲಿಗ ಹುಯ್ದ ಗಾಣ (ಎಕ. III (R). ಗುಂಡ್ಲು ಪೇ. ೧೭೫-೪; ?). **ಸೊಡಿಲು** : ೨. ದೀಪವನ್ನು ಹಚ್ಚುವ ಕಂಬ: ಅರ್ಚಕರು ಆ ಆರತಿಯಲ್ಲಿ ಎರಡು ಚಿನ್ನದ ಸೊಡಿಲುಗಳಲ್ಲಿ ದೀಪವನ್ನು ಹಚ್ಚಿದರು (ಶ್ರೀರಾಯ. ೩೪೬). [ದೇ. ॥ತಮಿ. ಚುಟರ್. ಚುಟಲ್; ಮಲ. ಚುಟರ್: ತುಳು. ಸುದರು, ತುಡರ್, ತುಡಾರ]

ಸೊಡರಿ, ಸೊಡಲಿ[1], **ಸೋಡಲಿ** (ನಾ). ಒಂದು ಬಗೆಯ ವಿಷಧೀಸಸ್ಯ: ''ಕಾಂತವ್ಯಕ್ಷಾ- ಯುಕ್ಷಾ, ಸೊಡರಿ'' (ವಿಷವಿ.೩೦); ಸೊಡ[ಪಾಠಾಂ. ಸೋದ]ರಿಯ ಬೇರರುತಾಳಂ ಗುಡೂಚಿಯಾಡುಳಿಚಮಂಬಿವಂ ಕಟಿಯಿಂದಂ ಕುಡಿಯಿಸಲಹಿ ನಿಷಮಟಿಗುಂ (ವಿಷವಿ. ೫-೬೭). **ಸೊಡಲಿ**[1] : ''ಕಟಾಲಃ - ಸೊಡಲಿ'' (ವಿಷವಿ. ೨೩); ಸೊಡಲಿ ಬೆಂಡುಗ ಸೀಗೆ . . . ಕೆಂಜಿಗೆಯ ಗಿಡುಮುಳ್ಳುವೆಳಗಳ ಗಡಣದಿಂದಾ ಕಾಡು ಕಡುಗುರ್ವುಪಡೆದು ರಾಜಿಪುದು (ರಾಮವಿ. ೧೫-೬೧). **ಸೋಡಲಿ** : ಆ ಪಡುವ ಸೋಡಲಿಯ ಮೇಲೆಯಲ್ಲಿ ನಟ್ಟ ಕಲ್ಲು (ಎಕ. III. ತಿರುಮ. ೬೪-೯೪; 1397). [?]

ಸೊಡರಿಡು (ಕ್ರಿ). ದೀಪವನ್ನು ಹಚ್ಚು; ದೀವಿಗೆಯನ್ನಿಡು: ಆದಿತ್ಯಂಗ ಸೊಡರಿಡಲುಮಿಂದ್ರಂಗೆ ದೇವಲೋಕಮಂ ಬಣ್ಣಿಸುವಂತೆಯುಂ ನಿನಗೇನೆಂದು ಕಜ್ಜಂಬೇಟ್ಟುಮ (ಪಂಪಭಾ. ೯-೧೪ ವ); ಭಾನುಬಿಂಬಕೆ ಸೊಡರಿಡುವರೆ ಜಗದೊಳು (ಅಂಜಚ. ೭-೩). [ಸೊಡರ್ + ಇಡು]

ಸೊಡರು 'ಸೊಡರ್' ನೋ.

ಸೊಡರುರಿ (ನಾ). ದೀಪದ ಕುಡಿ .— ಜ್ವಾಲೆ: ಬಲವರಸಿ ಪರಭೂಮಿಶರಂ ತಾಗೆ ಸೊಡರುರಿಯ ಮೇಲೆ ಬಿಜುಗಾಳಿ ಬೀಸಿದವೊಲಹುದು (ಸಮ್ಮಕಾ. ೮-೨೪).

[ಸೊಡರ್ + ಉರಿ]

ಸೊಡರುಹಬ್ಬ (ನಾ). ದೀಪಗಳ ಹಬ್ಬ; ದೀಪಾವಳಿ: ಪಟ್ಟಣದಲ್ಲಿ ಬಂಡಿಬಂಡಿಯಿಂದ ಸಕ್ಕರೆ ಸಂಚಿದರು. ಊರಲ್ಲೆಲ್ಲ ಸೊಡರುಹಬ್ಬವಾಯಿತು (ವೀರಬ.೫೭).

[ಸೊಡರು (< ಸೊಡರ್) + ಹಬ್ಬ (< ಪರ್ವ)]

ಸೊಡರೆಣ್ಣೆ (ನಾ). ದೀಪವನ್ನು ಉರಿಸುವುದಕ್ಕಾಗಿ ಹಾಕುವ ಎಣ್ಣೆ: ನನ್ನಾದೀವಿಗೆಗೆ ಸೊಡರೆಣ್ಣೆಗೆ ಘಾಣ ೧ (ಪಾಶಾ. XX. ೨೬-೧೮; 1040); ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಸುರಿಪಹರೆ (ಸರ್ವಜ್ಞ. ೬೩೭). [ಸೊಡರ್ + ಎಣ್ಣೆ]

ಸೊಡರೆತ್ತು (ಕ್ರಿ). ಆರತಿ ಮಾಡು; ನೀರಾಜನವೆತ್ತು: ಸಂಗತಜಿನಧರ್ಮಮತಿಗೆ ನಾಂಗಳ್ ನಿಜಿಯ ತೆಱೆಯೆ ಬಣ್ಣಿಸೆಮಾದಿತ್ಯಂಗೆ ಸೊಡರೆತ್ತುವೀ ಗಾಂಪಿಂಗಾಗರಮಾಗಿ ತೊಜೆಗೆ. ನೀರಡುಕುವವೋಲ್ (ಅಜಿಪು. ೭-೭೯); ಭೂತಳಾಧಿಪತಿಗೆ ಯಮಜಾತನಿಗೆ ಸಹಿತ ಸೊಡರೆತ್ತಿತು ಸುವಾಸಿನಿಯರು (ತುರಂಗ. ೮೦-೪೮). [ಸೊಡರ್ + ಎತ್ತು]

ಸೊಡರ್ಕುಡಿ 'ಸೊಡರ್ಗುಡಿ' ನೋ.

ಸೊಡರ್ಗಂಬ 'ಸೊಡರ್ಗಂಭ' ನೋ.

ಸೊಡರ್ಗಂಭ, ಸೊಡರ್ಗಂಬ (ನಾ). ದೀಪದ ಕಂಬ; ಸೊಡಲು: ನಾರಿಯರು . . . ಸಹಸ್ರ ಸೊಡರ್ಗಂಭಗಳ ನಿಲಿಸಿ (ನವಮೋ. ೧೬-೪೧). **ಸೊಡರ್ಗಂಬ**: ನೋಟಕಚ್ಚರಿವೆತ್ತ ಸೊಡರ್ಗಂಬದಲ್ಲಿ ವಿರಾಟಪೀಪ್ತಿಗಳೊಪ್ಪಿದುವು (ಮೋಹತ. ೨೧-೪).

[ಸೊಡರ್ + ಕಂಭ]

ಸೊಡರ್ಗುಡಿ, ಸೊಡರ್ಕುಡಿ (ನಾ). ಉರಿಯುತ್ತಿರುವ ದೀಪದ ತುದಿ,— ಜ್ವಾಲೆ: ಶುಂಗಗಿರಿಶಿಖರದಿಂದಂ ಲಂಗಿಸಿ . . . ಪೊಂಗಿ ಸೊಡರ್ಗುಡಿಯ ಮೇಲೆ ಪತಂಗಂ ವಾಯ್ಯಂತೆ ವಾಯ್ದು ಬರ್ಮದು ಸಿಂಗಂ (ಕಾವ್ಯಸಾ. ೧೧೧೪ ಕೂದ್ರಕ); ಬೆಳಗುವ ಸೊಡರ್ಗುಡಿ ಕಿಡೆ ಮನೆಯೊಳಗೆ ತಮಂ ಪರ್ವುವಂತೆ ಜೀವಂ ತನುವಿಂ ತಳರಲೊಡಂ ವಿಜ್ಞಾಯತೆಗೊಳಗಾದುವು ತೊಳಗುವವರ ಸೌಂದರತನುಗಳ್ (ಆದಿಪು. ೫-೩೭); ಪೊನ್ನೆಂದೊಡೆ . . . ಮರಂಗಳುಂ ಸೊಡರ್ಗುಡಿಯುಂ ತಾನ್ನಿರುತಮಱಗುಂ (ಪಂಚತಂ. ೧೫೬- ೪೫೫). **ಸೊಡರ್ಕುಡಿ** : ಕಣ್ಗೆನೆಯಿರ್ಪವನಿದಿರ್ ಸೊಡರ್ಕುಡಿವಿಡಿಯದಿರ್! (ಶ್ರೀರಾಮಾ. ೮೪೩-೪೫೫). [ಸೊಡರ್ + ಕುಡಿ]

ಸೊಡರ್ಗುಡಿಕಪ್ಪು (ನಾ). ದೀಪದ ಕುಡಿಯಿಂದ ಹೊರಡುವ ಹೊಗೆಯ ಕಪ್ಪು,— ಮಸಿ; ಕಾಡಿಗೆ: ಕುಡಿವೆರಳೊಳಂಟುವಕ್ಕಿಂದಿಡುವರ್ ಬಾಳರ್ಗೆಯಾ ಸೊಡರ್ಗುಡಿಕಪ್ಪಂ (ಸೂಕ್ತಿಸು. ೪-೧೪೬). [ಸೊಡರ್ಗುಡಿ + ಕಪ್ಪು (< ಕರ್ಪು)]

ಸೊಡರ್ಗೆಡು (ಕ್ರಿ). ದೀಪವು ನಂದಿಹೋಗು; ಕತ್ತಲಾಗು: ಅಂಗಡಿ ಸೊಡರ್ಗೆಟ್ಟು ದೇಗುಲದೆಡೆಯ ದುಸ್ಸಂಗದಂಪತಿಗಳೊಪ್ಪಿದರು (ಮೋಹತ. ೧೪-೨೩).

[ಸೊಡರ್ + ಕೆಡು]

ಸೊಡರ್ಗೊಳ್ (ಕ್ರಿ). ದೀಪವನ್ನು ಹಿಡಿದುಕೊಳ್ಳು: ಲೀಲೆಯಿರ್ದಮ್ಮೆಱೆಯನ ನದೇಕೆ ಸೊಡರ್ಗೊಂಡಱಸುತ್ತುಂ ಬಂದು ಕೊಂದೆಯಕಟ ವಿಧಾತ್ರಾ (ಜಗವಿ. ೬-೧೦೦). [ಸೊಡರ್ + ಕೊಳ್]

ಸೊಡರ್ಮದ್ದಿ (ನಾ). ಒಂದು ಬಗೆಯ ಬೇಟೆಯ ಸಾಧನ (?) ; ''ಸೊಡರ್ = ಭ್ರಾಂತಿಯನ್ನುಂಟುಮಾಡುವ ದೀವಿಗೆ'' (ಶಬಶಂ. ಬೇಟೆ): ಗಾಳಂ ಕಿಱುಗೂಳಿ ಬಿಲಸುವಲೆ ಬೆಳ್ಳಾರಂ ಸೊಡರ್ಮದ್ದಿ ಕರ್ವಡಂ . . . ಪೇರಡಿ ಖಡ್ಗಂ ಬಡಿಕೋಲ್ಗಳೊಪ್ಪೆ ಜವದಿಂದಲ್ಕೆಂಡರಾ ಧೀವಗರ್ (ಶಬಶಂ. ೩-೨೩). [ಸೊಡರ್ + ಮದ್ದಿ]

ಸೊಡರ್ವಕ್ಕು (ನಾ). = ಸೊಡರ್ಗುಡಿಕಪ್ಪು: ಲಲಾಟದೊಳ್ ತಿಲಕಮಂ ಸೊಡರ್ವಕ್ಕಿ ನೊಳಿಟ್ಟು (ಮಲ್ಲಿನಾ. ೩-೧೧೩); ಸೊಡರ್ವಕ್ಕು ನೂಸಲೊಳಿಸೆದಿರೆ . . . ಮಗಂ ಜಗುಟುತ್ತೆಂದೊ ತೊಟ್ಟಿಲಂ ಪಟ್ಟೊದವಂ (ಪುಷ್ಪಸಾ. ೩-೯೧); ಸೊಡರ್ವಕ್ಕಿನ ಬೊಟ್ಟು ಸುತನ ಪಣೆಯೊಳಗೆ ಇಟ್ಟು ತೂಬಿಲ್ದೆದು (ಚಂಪ್ರಸಾ. ೩-೧೧೪).

ಸೊಡರ್ವಕ್ಕನಿಡು = (ದೃಷ್ಟಿದೋಷಪರಿಹಾರಕ್ಕಾಗಿ ಮಕ್ಕಳಿಗೆ) ದೀಪದ ಮಸಿಯಿಂದ ಬೊಟ್ಟನ್ನಿಡು; ರಕ್ಷೆ ಇಡು: ಪುಟ್ಟಿಮದೀ ಶುಕಶಾಬಂ . . . ನಿವಳಿಸಾದರದಿಂ ಸೊಡರ್ವಕ್ಕನಿ[ಪಾಠಾಂ. ರಕ್ಕೆಯಿ]ಟ್ಟು ತೂಬಿಲ್ದೆ (ವೀರಾವ. ೧೪-೧೨೦).

[ಸೊಡರ್ + ಪಕ್ಕು]

ಸೊಡರ್ವಟ್ಟು (ನಾ). ದೀಪದ ಕಾಡಿಗೆಯಿಂದ ಹಣೆಗೆ ಇಡುವ ಬೊಟ್ಟು: ಕಣ್ಣಿಗೆ ಕಜ್ಜಳವೆಚ್ಚಿ ಬಣ್ಣಿಸಿ ಸೊಡರ್ವಟ್ಟನಿಟ್ಟು ಪಾಲೆಱೆದೋವಿ ಚಿಣ್ಣನ ಪಕ್ಕೆಗೈಸಿದಳು (ಮೋಹತ. ೪-೭೪). [ಸೊಡರ್ + ಬಟ್ಟು]

ಸೊಡರ್ವಾವು (ನಾ). ದೀಪವನ್ನು ತಲೆಯಲ್ಲಿ ಧರಿಸಿರುವಂತೆ ಕಾಣುವ ಹಾವು; ಹೆಡೆಯಲ್ಲಿ ರತ್ನವಿರುವ ಹಾವು: ಸೊಡರ್ವಾವಿನಿಪ್ಪ ಪೆಡೆವಣಿಯ ಸರ್ಪಂಗಳಿಂದಾರಾಧ್ಯಮಾನೆಯವೊಲಂತೆಸೆದು ತೋರ್ಪಳಂ . . . ಚಂಡಿಕಾದೇವಿಯಂ ಕಂಡನುರ್ವೀಶ್ವರಂ (ಕಾದಂಬ. ೨೭೧). [ಸೊಡರ್ + ಪಾವು]

ಸೊಡರ್ವಿಡಿ (ಕ್ರಿ). ದೀಪವನ್ನು ಹಿಡಿ: ಇತ್ತೆಱದೊಳು ನಿಂದಿಹ ಜೀವರನ್ನದ ಪುತ್ರಳಿಗಳು ಸೊಡರ್ವಿಡಿದು . . . ಚಿತ್ರಯಿಸಿದುವಲ್ಲಲ್ಲಿ (ವೋಹತ. ೨೨-೯).

[ಸೊಡರ್ + ಪಿಡಿ$_1$]

ಸೊಡರ್ವೆಳಗು (ನಾ). ದೀಪದ ಬೆಳಕು, — ಕಾಂತಿ: ಸೊಡರ್ವೆಳಗಂ ಮುಸುಕಿದನಾಗಡೆ ತನ್ನಯ ತನು ತಮಾಳರುಚಿಯಿಂದಂ (ಅರ್ಧನೇ. ೭-೪೪); ಸೊಡರ್ವೆಳಗ ನೀಕ್ಷಿಸಿ ನಗುವನಮಲಚಿತ್ರಕಾಶಂ (ಪದ್ಮರಾ. ೨-೬೭); ಸೂಸಿದರಲ ನಿಕರುಂಬಂಗಳೇ ಮೂಱುವಾಲಿವರಲು ಆರತಿಯ ಸೊಡರ್ವೆಳಗು ಬಳ್ಳಿಮಿಂಚು (ಸೌಂದಪು. ೧೨-೩೫).

[ಸೊಡರ್ + ಬೆಳಗ್ಗು$_2$]

ಸೊಡಲಿ$_1$ 'ಸೊಡರಿ' ನೋ.

ಸೊಡಲಿ$_2$ (ನಾ). ದೀಪದ ಕಂಬ; ಸೊಡಲು(?): ರತ್ನಾವಲಿ ಮಾಡಿಸಿ ನನ್ದಿಯೊಳ್ ಶಿವಾಲಯಂ ಕೊಟ್ಟುದು ದೇವಭೋಗಂ ಸೊಡಲಿಯಮನಾ ವೈಶಾಖಪೌರ್ಣಮಿಯೊಳ್ (ಎಕ. X (S), ಚಿಕ್ಕಬ. ೬೬-೧೫; ಸು. 850). [< ಸೊಡರ್?]

ಸೊಡಲು 'ಸೊಡರ್' ನೋ.

ಸೊಡಲೆ (ನಾ). ಹೆಣಗಳನ್ನು ಸುಡುವ ಸ್ಥಳ; ಸುಡುಗಾಡು: 'ಸೊಡಲೆಸಿದ್ಧ' ಪರಾ. [ದೇ. ॥ ತಮಿ. ಚುಟಲೈ; ಮಲ. ಚುಟಲ, ಸುಡಲೆ = ಹೆಣವನ್ನು ಸುಡುವುದು]

ಸೊಡಲೆಗುಡ್ಡೆ (ನಾ). (ಕರಾ) ಶ್ಮಶಾನ. [ಸೊಡಲೆ + ಗುಡ್ಡೆ$_1$(< ಗುಡ್ಡ$_2$)]

ಸೊಡಲೆಸಿದ್ಧ (ನಾ). ಶ್ಮಶಾನದಲ್ಲಿ ವಾಸಿಸುವ ಸಿದ್ಧ; ಭೈರಾಗಿ: ಬರಿಯ ಜಾತಕದ ಬೆನ್ನುಹತ್ತಿ ಈ ಸೊಡಲೆಸಿದ್ಧನ ಕೊರಳಿಗೆ ಕಟ್ಟಿದರು (ಮೂರುದಾ. ೬೫).

[ಸೊಡಲೆ + ಸಿದ್ಧ]

ಸೊಡಸಿ 'ಸೊಳಸಿ' ನೋ.

Δ ಸೊಡಱ್ 'ಸೊಡರ್' ನೋ.

ಸೊಡಿಗೆ 'ಸೋಡಿಗೆ' ನೋ.

ಸೊಡಿಲು 'ಸೊಡರ್' ನೋ.

ಸೊಡೆ (ನಾ). ಕಾವು; ಬಿಸುಪು; ಶಾಖ: ಬೇಗೆಯ ಅಳವಿನಲಿ ಹೊಕ್ಕು ಮತ್ತೆ ಸೊಡೆಗಂಜಲೇಕೆ (ಮೋಮಾ. ೫೦-೨೦೭). [< ಸೂಡ್ಡು$_3$?]

ಸೊಡ್ಡಳ (ನಾ). ಶಿವ: (ಕ). [?]

ಸೊಡ್ಡು$_1$ (ಗು). ವಿಕಾರವಾದ; ನ್ಯೂನತೆಯಿಂದ ಕೂಡಿದ: ಗುಜ್ಜುಗೊರಲಿನ ಸೊ[ಪಾಠಾಂ. ಗಿ]ಡ್ಡುರೂಪಿನ ಹಱುಕುಗಡ್ಡದ ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ (ನಳಚ. ೬-೧೪). [<— ತೆಲು. ಸೊಡ್ಡು = ನ್ಯೂನತೆ, ಕೊರತೆ]

ಸೊಡ್ಡು$_2$ 'ಸಡ್ಡು$_1$' ನೋ.

ಸೊಡ್ಡು$_3$ (ನಾ). ಮುಖ; ಮೋರೆ; ಮುಸುಡಿ: ದೇವರು ನನ್ನ ಮಗಳಿಗೆ ದುಂಡಗಿನ ಸೊಡ್ಡನ್ನು ಕೊಡುವ ಬದಲು ದುಡ್ಡಿನ ಸೊಡ್ಡನ್ನು ಕೊಡಬಾರದಿತ್ತೇಕೆ? (ಹಸಿವು ೭೦); ಇದು ತನ್ನ ಸೊಡ್ಡಿನಿಂದ ಯಾವುದಾದರೂ ಪ್ರಾಣಿಯನ್ನು ಸೊಣೆಯಿತೆಂದರೆ, ದೊಡ್ಡ ಸುತ್ತಿಗೆಯ ಏಟಿಗಿಂತಲೂ ಬಲವಾದ ಏಟು ಬೀಳುವುದು (ಬಾಲಪ್ರ. I, ೧೯); ತಗ್ಗಿಸಿದ ಸೊಡ್ಡು ನೋಡಿ 'ಭೇಷ್' ಎನ್ನಬೇಕೆನಿಸಿತು (ಪ್ರಶ್ನ. ೨೫). [< ಸೊಂಡೆ$_2$]

ಸೊಣಕ 'ಸೊಣಗ' ನೋ.

ಸೊಣಗ, ಸುನಕ, ಸೊಣಕ (ನಾ). ನಾಯಿ; ಶ್ವಾನ: "ಪೇರಡಿ, ಸೊಣಗಂ, ಜಾಯಿಲಂ — ಈ ೩ ಕುಕ್ಕುರಂ" (ಕಶಾ. ೫೧-೧೦೮); ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ (ಬಸವ. ೩೫); ಇವನೇ ವಿಧಿಯೊಳು ಸೊಣಗನುಣಿಸಾದನಲ್ಲಾ (ಸಮ್ಯಕ್ಕೌ. ೪-೬೨). ಸುನಕ : ಮುಂಗುರಿ ಬೆಕ್ಕು ಸುನಕ[ಪಾಠಾಂ. ಮಾರ್ಜಾರಂ, ಸಾರಂಗಂ] . . . ಗಿಡಿಗನೆಂಬಿವೆ ದಲ್ಲೀವಂಗಳ್ಗೆ ಬಾಧೆ ಮಾಟ್ಟುವು (ಸಮಪ.೫೫-೧೩). ಸೊಣಕ: ಶಾರ್ದೂಲಮಂ ತೋರೆ . . . ಬೆಂಬತ್ತಿ ಪಿಡಿದರ್ಪ ಸೊಣಕಗಳ ಸಂತೆಗಳ್ ಕಂಗೊಳಿಪುವು (ವಂಕಾರಾ. ೩-೬-೪೧). ಸೊಣಕನು ಬೆದಕುತೆ ಮೊಲವನು ಕಂಡು ರೋಷದಿಂ ಬಿಡದಟ್ಟಿ ತರನು (ಇಚಸಾಂ. ೬-೬೦). [< ಪ್ರಾ. ಸುಣಗ, ಸುಣಯ./ ಸಂ. ಶುನಕ./ ಪಾಲಿ. ಸುನಖ]

ಸೊಣಱು, ಸೊನರು (ನಾ). ೧. "ಪೃಷ್ಠಭಾಗ" (ಯಶೋಧ. ೩-೬೯ ಟೀಕು): ಸೊಣಱಂ[ಪಾಠಾಂ. ಡರಿಂ] ಮುಡುಪಿಂದಂ ಪಿಂತಣ ಮುಂತಣ ಕಾಲ್ಗಳಲ್ಲಿ ಬೆಟ್ಟಿಸಿ ದಸಿಯಂ ನೆಣಮುರ್ಕೆ ಬೆಂಕಿಯಿಂ ಕೆಟಗಣ ಮೆಯ್ಯಂದುರುಪಿ ಬರಿಯ ಬಾಡಂ ತೆಗೆದಂ (ಯಶೋಧ. ೩-೬೯); ತೃಣಕೆ ಲೆಕ್ಕಿಸದಸುರನವನನು ಸೊಣಱು[ಪಾಠಾಂ. ಸು,ಲು] ಮುಱಿಯಲು ತಿವಿದನಾಯುಧದಣಸಿನಲಿ (ತೋರಾ.೬-೨೭-೪೬). **ಸೊನರು** : ೨. (ಕರಾ) ಸೊಂಟ. [?]

ಸೊಣೆ$_1$ (ಕ್ರಿ). ೧. ಮುಷ್ಟಿಯಿಂದ ಹೊಡೆ, — ಪೊಟ್ಟು: "ಸೊಣೆ - ಅಂಗುಲಿಪ್ರಪರಣೇ" (ಶಮಧಾ); ಕರತಳದಿಂದೆ ತಡಕಿ ಕಂಡನ್ನ ತಲೆಯಂ ಸೊಣೆದುದಕವ ಪೊಱಸಿದನಾತನು (ಪಾಸೋಪು. ೧೧-೨೯); ನೆತ್ತಿಯನು ಸೊಣೆದೆಲ್ಲಿಯವ ಹರಿ ಚಿತ್ತವಿಟ್ಟೋದೆಂದು . . . ಬರಸುತಲಿರ್ದನಾಚಾರ್ಯ (ಪ್ರಹ್ಲಾಚ. ೬-೪೪). ೨. ಹೊಡೆದುಕೊಳ್ಳು; ಚಚ್ಚಿಕೊಳ್ಳು: ದುರುಳರಕ್ಕಸರೆಲ್ಲ ಪರಿದ ಶಿರ ಕಾಲ್ಗಳಿಂದುರುಳಿರಲು ಧರಣಿಯೊಳು ಕಂಡವರ ಸತಿಯರುಂ ತಲೆಗೆದರಿ ತಲೆಯ ಸೊಣದು ತರತರದೊಳಳುತಳುತ (ವಂಕಾರಾ. ೫-೯-೨೮). ೩. ಇರಿ; ತಿವಿ; ಚುಚ್ಚು: ನಿದ್ರಿಸುವ ಮೃತ್ಯುವಂ ಸೊಣೆದೆಬ್ಬಿಸಿದ ರೀತಿಯಾಯ್ತು (ವಂಕಾರಾ. ೬-೨೯-೧೭); ಶಲ್ಯ ಕಡುಗೋಪದಿಂ ತೂರಿದಂ ಶರಗಳಂ . . . ಭಟರ ಹೃದಯಂಗಳಂ ಸೊಣದು ಹಾಯ್ದುವು (ತುರಂಗ. ೭೧-೩೫); ಮಾವಯ್ಯ ಎಮ್ಮೆ ಸೊಣೆದಾವೊ (ಹಳ್ಳಿಪ. ೧೦೯). ೪. ಕುಟುಕು; ಕುಕ್ಕು: ಸಿಟ್ಟು ಬಂದಾಗ ಅದು ತನ್ನ ಹೆಡೆಯಿಂದ ಇತರ ಪ್ರಾಣಿಗಳ ಮೈಯನ್ನು ಸೊಣೆದು ಬಿಡುವುದು. ಆಗ ಅದರ ಮುಂದಿನ ದವಡೆಯ ಮೊನಚಾದ ಎರಡು ಹಲ್ಲುಗಳು ಗಾಯಮಾಡುವುವು (ಬಾಲಪ್ರ. I, ೧೭). ೫. ತೋರುಬೆರಳುಗಳೆರಡನ್ನು ಸೋಟೆಯಲ್ಲಿಟ್ಟುಕೊಂಡು ಅವುಗಳಿಂದ ಯಾರನ್ನಾದರೂ ನಿರ್ದೇಶಿಸಿ ಅಣಕಿಸು, — ಹಾಸ್ಯಮಾಡು: (ಕ). ೬. ನೂಕು; ತಳ್ಳು: ಕಣಕಾಲಿಡುವಡೆಯಿಂ ಸೂಣಗಂಗಳ ಸೊಣವುತ ಮರುಳ್ಕಣಗುಗಳು ಒಣದಲೆವೋಡ ಹಿಡಿದು ರಕ್ಕಸರುಂಬ ಹೆಣನ ಭಿಕ್ಷವ ಬೇಡುತಿಹುವು (ಶ್ರೀಪಾಲ. ೮-೧೬).

ಸೊಣೆ$_2$ (ನಾ). (ಬೆಟ್ಟದ ಮೇಲಿರುವ) ಸ್ವಾಭಾವಿಕವಾದ ಹೊಂಡ; ದೊಣೆ: ಕೊಲಿಗನ್ಮೇಲ ಹಾರಜೆಏ ಇಟ್ಟಗೆ ಸೊಣೆ ಏ ಬಡಗ್ಗೆ ನಿಟ್ಟುರುಳಿ ಏ ಕರದಿ ಗುಱುಕಿ ಮೇಲ ಕೋಡುಜ್ಜಲ್ ಮೂಡ್ಯೆ ನೋಡಿ (ಎಕ. X (S), ಚಿಕ್ಕಬ. ೬೬-೨೦; ಸು. 850); ಆ ಪಳ್ಳದಿಂ ಮೂಡಣ ಕಱುವಟ ತೆಂಕ ಬಣ್ಣಲ್ಕಱಲ ಸೊಣೆ (ಎಇ X. ೬೬-೯೩; 892). 'ದೊಣೆ$_1$' ಪರಾ. [ದೇ. ॥ ತಮಿ. ಚುಣ್ಣೆ, ಚುನೈ; ತೆಲು. ಸೊನ]

ಸೊಣೆಗಲ್ಲು (ನಾ). ಕಲ್ಲನ್ನು ಮೇಲಕ್ಕೆ ಎಸೆದು ಹಿಡಿಯುವ ಒಂದು ಬಗೆಯ ಆಟ(?): ಎಳೆವೆಣ್ಣುಗಳು ಕಣುಮನ ದಣವಂತು ಸೊಣೆಗಲ್ಲು ಮೊದಲಾಗೆಸವ ಗಣನೆಗಳಿಯೊಳೊಂದಿ ಸುಖದೊಳಗಂಜನೆಯಿರುತಿರಲು (ಅಂಜಚ. ೪-೫೮). 'ಅಣ್ಣೆಕಲ್$_1$' ಪರಾ. [ಸೊಣೆ$_1$? (IP <— ತಮಿ. ಚುಣ್ಣು = ಗೋಲಿ ಮುಂತಾದುವನ್ನು ಬೆರಳಿನಿಂದ ಎಸೆ,- ಚಿಮ್ಮು) + ಕಲ್ಲು(< ಕಲ್$_3$)]

ಸೊತೆ 'ಸೊದೆ' ನೋ.

ಸೊತೆವಳಿ 'ಸೊದೆವಟಿ' ನೋ.

ಸೊತೆವಳಿಯಿಸು (ಕ್ರಿ). ಸುಣ್ಣಹಚ್ಚಿಸು, — ಬಳಿಸು: ಮುದದೆ ವಿರೂಪಾಕ್ಷಗೃಹಕ್ಕೆ . . . ಭೈರವಗೃಹಕ್ಕುದಾರಿ ಬೌಡಯ್ಯನೆಸೆಯೆ ಸೊತೆವಳಿಯಿಸಿದಂ (ಸೌಇ. IV, ೨೬೦-೬೪; 1199). [ಸೊತೆವಳಿ (< ಸೊದೆವಟಿ) + - ಇಸು$_3$]

ಸೊತ್ತ, ಚೊತ್ತ (ನಾ). ಸೊಟ್ಟ ಕೈಕಾಲುಳ್ಳವನು; ಅಂಗಹೀನ: ಕುರುಡನು ಕಿವುಡನು ಸೊತ್ತನು (ಹೊನುಗ. ೯೯); ಹಲ್ಲಿಲ್ಲದ ಮನುಷ್ಯನೊಬ್ಬ . . . ಉದ್ದನೆಯ ಬಿಳಿಯ ಸೊತ್ತ ಮತ್ತೊಬ್ಬ (ಪುನರು. ೩೦೧). **ಚೊತ್ತ** : (ಕ).

[ಸೊತ್ತು$_1$ + - ಅ$_7$]

ಸೊತ್ತಿ, ಚೊತ್ತಿ (ನಾ). ಸೊಟ್ಟ ಕೈಕಾಲುಳ್ಳವಳು; ಅಂಗಹೀನೆ: ಕುರುಡಿ ಕಿವುಡಿ ಸೊತ್ತಿ (ಹೊನುಗ. ೯೯). **ಚೊತ್ತಿ** : (ಕ). [ಸೊತ್ತ + - ಇ$_2$]

ಸೊತ್ತಿಯೂರ್ (ನಾ). ಒಂದು ಸ್ಥಳದ ಹೆಸರು: ಸೊತ್ತಿಯೂರರೆಯಮ ದಮ್ಮಯ್ಯನ ಮಗ ಶ್ರೀವರ್ಮಯ್ಯ ಕಣ್ಣಮಜ್ಜಲದೊಳ್ ಬಸದಿ ಮಾಡಿಸಿ (ಎಕ. X, ಕೋಲಾರ. ೯೦-೮೮; 903). [? + ಊರ್]

ಸೊತ್ತು$_1$, ಚೊತ್ತು (ನಾ). ಕೈಕಾಲು ಸೊಟ್ಟಗಿರುವುದು; ಅಂಗವಿಕಲತೆ:

ಕುಂಟು ಕುರುಡು ಕಿವುಡು ಸೊತ್ತು (ಹೂನುಗ. ೯೯); ಓಡು ಒಡಕು ಹುರುಳಿ ಪೋಟೆ ಹುರಿವಾಕೆಯ ಕೈ ಸೊತ್ತು (ಕನಸ. ೩೫-೨೭). **ಚೊತ್ತು** : ಅವನ ಕೈ ಚೊತ್ತಾಗಿದೆ (ಡೂಢಿ). 'ಸೊಟ್ಟು೨' ಪರಾ. [ದೇ. ॥ ತಮಿ. ಚೊತ್ತು, ಚೊತ್ತಿ, ಚೊತ್ತೈ]

ಸೊತ್ತು೨, ಸ್ವತ್ತು (ನಾ). ಸ್ವಂತ ಆಸ್ತಿ,— ಸಂಪತ್ತು,— ಐಶ್ವರ್ಯ: ಕನಸಿನೋಳ್ಮೊನ್ನ ರಾಶಿಯಂ ಚನ್ನಾಗಿ ಕಂಡುದಾ ಸೊತ್ತದೆಂದಳಲುವರೆ (ತುರಂಗ. ೯೬-೨); ದೇವಾಲಯಗಳು ವ್ಯಕ್ತಿಯ ಆಸ್ತಿಗಳಲ್ಲ. ಸಮಾಜದ ಸೊತ್ತು (ಪಬ್ಲಿಬು. ೨೭). **ಸ್ವತ್ತು**: ಇವಿಷ್ಟು ಅಮರನಾಯಕನ ಸ್ವತ್ತು (ವೀರಯೋ. ೨೦); ಉತ್ತಮಶಿಕ್ಷಣ ವ್ಯಕ್ತಿಯ ವೈಯಕ್ತಿಕಜೀವನದ ದಾರಿದೀಪವಾಗಿ ನಾಡಿಗೆ, ನುಡಿಗೆ ಸ್ವತ್ತಾಗುತ್ತದೆ (ಸೊಳಂಬ. ೯೫).

[< ಸಂ. ಸ್ವವತ್./ ತಮಿ. ಚೊತ್ತೈ, ಚೊತ್ತು, ಸೊತ್ತು; ತುಳು. ತೆಲು. ಸೊತ್ತು]

ಸೊತ್ತುಗಾರ (ನಾ). ಆಸ್ತಿಯ ಯಜಮಾನ: ಡ್ರೈವರಿಗೆ ಅದರ ಸೊತ್ತುಗಾರನ ನೆನಪು ಬಂದಿತು (ಹಸುಹೂ. ೧೪೩). [ಸೊತ್ತು೨ + - ಗಾರ (< - ಕಾಱ)]

ಸೊತ್ರ, ಶೊತ್ರ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದೆ ದಾನವಾಗಿ ಕೊಡುವ ಭೂಮಿ: ಶ್ರೀಸಿದ್ಧಸೋಮನಾಥದೇವರಿಗೆ ೫೦ ಚತ್ರಕ್ಕೆ XX ಯಿಹದ ಸೊತ್ರವ ಕೊಟ ಅಯಿವರು (ಶಿಶಾ. IX-i, ೬೭೦-೧೧; 1255). **ಶೊತ್ರ**: ಮತ್ತವೂರ ಮಲ್ಲಿಕಾರ್ಜುನದೇವರ ಶೊತ್ರವನು ಅಂಗಭೋಗ ಅಮೃತವಡಿಗೆ ಲಿಂಗದೇವರಾಣೆಯನ ನಿರೂಪದಿಂ ಶ್ರೀಮತು ಸರ್ವಾಧಿಕಾರ ಜಕ್ಕರಸರು . . . ಕೊಟ್ಟರು (ಶಿಶಾ. IX-i, ೬೮೩-೬; 1286).

[< ಸಂ. ಶೋತ್ರಿಯಸ್ವಮ್./ ತಮಿ. ಚೋತ್ರಿಯಮ್, ಚುರೋತ್ರಿಯಮ್]

ಸೊಥೆ೧ 'ಸತ್ತ೪' ನೋ.

ಸೊಥೆ೨ 'ಸೊದೆ' ನೋ.

ಸೊಥೆವೊಯ್ (ಕ್ರಿ). ಗಾಯವಾಗುವಂತೆ ಪೆಟ್ಟುಕೊಡು: ಸತ್ತವನಿವನೆಂಬ ಪದದೊಳ್ ನೆತ್ತಿಯೊಳಂ ಶಸ್ತ್ರದಿಂದೆ ಸೊದೆEಥೆತವೊಯ್ದೆಡೆ [ಪಾಶಾಂ. ಶತವೊಯಿದೆಡೆ] ಯೊಳ್ ನೆತ್ತರುಮುಣ್ಮನಮದನಿರದೊತ್ತುಗೆ (ಏಮುದ. ೮-೫೪); ಸೊದೆEಥೆತ [ಪಾಶಾಂ. ಶತೆ]ವೊಯ್ದಾಮ್ರಸಮೇತಂ ವ್ಯಥಿತನ ನೆತ್ತಿಯೊಳಮೊತ್ತಲಂತಾ ವಿಷಮುಂ ವೃಥೆಯಾಗಿಯ ಪೋಕುಂ (ಏಮುದ. ೮-೫೭); ಸತ್ತನಹಿಕೊಂಡುದೆಂದಾ ಪೊತ್ತೊಯ್ದು ಚಿತಾಗ್ನಿಯಲ್ಲಿ ಸಂಧಿಸುವೆಡೆಯೊಳ್ ಮತ್ತೆನಿಸದೊಂದು ನಯಮಂ ಬಿತ್ತರಿಸುವನೆವನ ತಲೆಗೆ ಸೊಥೆ[ಪಾಶಾಂ. ಶತೆ]ವೊಯ್ದೊಲವಿಂ (ಏಮುದ. ೮-೬೦).

[ಸೊಥೆ೧ (< ಸತ್ತ೪) + ಪೊಯ್೧]

ಸೊದೆ, ಶೋತೆ, ಸುದೆ, ಸೊತೆ, ಸೊಥೆ೨, ಸೋತೆ (ನಾ). ೧. ಅಮೃತ; ಪೀಯೂಷ: ''ಅಮರ್ದುರ್, ಸೊದೆ, ಇನಿದು, ಉಣ್ಣದರ ಬೀಯಂ- ಈ ೪ ಅಮೃತಂ''(ಕಶಸಾ. ೪೮-೧೪); ಪೊಸಸೊದೆ ಕೌಮುದಿಯಂ ಪಸರಿಸೆ . . . ತರತರದಿಂದಂ ರಾಜಿಸುತಿರ್ಪುವು ಸೋಮಸೂರ್ಯವೀಥಿಗಳದಱೊಳ್ (ಗಿರಿಕ. ೨-೮೨); ಲಭಿಸಿದ ಸೊದೆಯಂ ಮಾಣ್ಮೂಷರಾಂಬುವಂ ಕಾಮಿಪರೇ (ಎಷ್ಟುಪು. ೧-೧-೧೪); ಸೊದೆಯಂ ಸಪ್ಪೆಯೆನಿಪ್ಪ ತಾನದಿರವಂ ಕೇಳ್ವಾ ರಸಾವೇಶದೊಳ್ ಪದಪಿಂ ಮೆಯ್ಯೊಡೆಗೆಲ್ಲ ಮಣ್ಗಡಲುಂ ಮಗುಟ್ಟಿಂಟಲುಂ . . . ಪೂಣ್ದಪರ್ (ಚಚಮಿ. ೪-೧೨೮). ೨. ಹಾಲು; ಕ್ಷೀರ: ''ಸೊದೆ ಪಾಲೊಳ್'' (ಕರ್ಣಾ. ೧೧); ಸೊದೆಯನೀಂಟುವ ರಾಜಹಂಸನ ಮಱಿಗೆ ಮೇವಿದೆಯ ತೋಱಿದಡೆ ಪೀರ್ದವುದೆ (ಮೋಹತ. ೩೦-೨೧). ೩. ಸುಣ್ಣ, ಗಾರೆ, ಗಚ್ಚು ಮುಂತಾದ ಲೇಪನವಸ್ತು: ''ಸೊದೆ ಲೇಪಂ'' (ವಸ್ತುಕೋ. ೧೨೦-೧೪); ಪರ್ವಪರ್ವಕ್ಕೆಯಿಕ್ಕುವ ಸೊದೆವೊಳಗಾದ ಜೇನ್ನೋರ್ದ್ದಾರಕ್ಕೆ ಗ ೫ ಕ್ಕೆ ತೆಱುವ ವೃತ್ತಿ ೨ (ಎಕ. XV, ಹೊನ್ನ. ೧೧೨-೬೧; 1282); ಬಳಿದ ಸೊದೆಗಳ ಬಾವಿ ನೂಱಱಿ ವಳಯ ತುಂಬಿತು ತೈಲ ಘೃತ ಮಧುಗಳಲಿ (ಕವ್ಯಾಸ. ೬-೧೬). **ಶೋತೆ** : ೩. ಅಯ್ದುವರಿಸ ಕಂಮ್ಮೆ ಶೋತೆ ಇಕ್ಕದೆ ಸ್ಥಾನಮನಾಳ್ವೊರು . . . ಪಞ್ಚಮಹಾಪಾತಕರಪ್ಪೊರ್ (ಎಕ. XIV, ಮಂಡ್ಯ. ೧೩-೧೪; 885). **ಸುದೆ**: ೩. ''ಸೊದೆ (ಸುದೆ)- ಸುಧಾ = ಸುಣ್ಣ, ಗಾರೆ'' (ತದ್ಭವಕೋ. ೪೭). ೪. ಜೇನು; ಮಕರಂದ: 'ಸುದೆವೆರೆ' ಪರಾ. **ಸೊತೆ**: ೩. ಇದಕ್ಕೆ ಸುಣ್ಣಕ್ಕೆ ಸೊತೆಗಮಲ್ಲದುಣ್ಮಾತ ವಾರಣಾಸಿಯುಂ ಕವಿಲೆಯನಲ್ಪಿದ ಕೆಱೆಯ ಬಿತ್ತುವಾಟಮಂ ಕೆಱೆಗೆ ಕೊಡದುಣ್ಮಮನುಮನ್ತೆ (ಮುಆರಿ. ೧೫೩೪, ೬೭-೧೦; ಸು. 848); ಸೋಮೇಶ್ವರದೇವರ ದೇಗುಲವ [ಅ]ಳಿವಂ [ಸೋ]ದಿಸಿ ಸೊತೆಯನಿಕ್ಕಿಸಲ್ (ಎಸಾ. V, ೨೦೭-೧೧; 1048); ದೇವರ ಅಂಗಭೋಗ [ಸೊ]ತೆ ಸುಣ್ಣಕ್ಕೆ ಕೊಟ್ಟರು (ಶಿಶಾ. XI-ii, ೧೯೪-೬; 1120). **ಸೊಥೆ೨** : ೩. ರಂಗಮಂಟಪವನೂ ಮರವೆಸನಾಗಿ ಮಾಡಿಸಿ ಸೊಥೆಯನಿಕ್ಕಿಸಿ (ಎಕ. V, ಅರಸೀ.೮-೩೯; 1286). **ಸೋತೆ**: ೩. 'ಸೋತೆವೆಸ' ಪರಾ. [< ಸಂ. ಸುಧಾ]

ಸೊದೆಗಡಲ್ (ನಾ). ಹಾಲಿನ ಕಡಲು; ಕ್ಷೀರಸಾಗರ: ಸುರರ್ ಸೊದೆ [ಪಾಶಾಂ. ಸುಧ]ಗಡಲಂ ಕರಂ ಕಡೆಯೆ ಪೇಟ್ ವಿಷಮೇಟದೆ (ಆದಿನೇ. ೬-೧೬); ಸಿರಿರಾಣಿಯ ಪೆತ್ತ ಸೊದೆಗಡಲಿಳಿಯ ತಾ ತ್ಪರಿಯದಿ ನೋಡಬಂದಂತೆ . . . ಪರಿದಳು ತುಂಗಬೆಳ್ಗಂಗೆ (ಮೋಹತ. ೬-೩೫). [ಸೊದೆ + ಕಡಲ್೨]

ಸೊದೆಗಡಲ್ಗಡೆ (ಕ್ರಿ). ಕ್ಷೀರಸಮುದ್ರವನ್ನು ಮಥಿಸು ,— ಕಡೆ: ಸೊದೆಗಡಲ್ಗಡೆಯೆ ಮಂದರಗಿರಿ ಮುಳುಗಿದಡೆ ಕಚ್ಛಪರೂಪಿನಿಂದ್ಧ ಬೆಂಗೊಟ್ಟಾತನೀತ (ಮೋಹತ. ೬೭-೨೩). [ಸೊದೆಗಡಲ್ + ಕಡೆ೧]

ಸೊದೆಗದಿರ (ನಾ). ಅಮೃತಕಿರಣಗಳನ್ನು ಹೊಂದಿದವನು; ಸುಧಾಕರ; ಚಂದ್ರ: ''ತಣ್ಗದಿರನೆನಲ್ಕೆ ಚಂದಿರಂ ಸೊದೆಗದಿರಂ'' (ಕರ್ಣಾನಾ. ೯). [ಸೊದೆ + ಕದಿರ್೨ + - ಅ೭]

ಸೊದೆಗರೆ (ಕ್ರಿ). ೧. ಅಮೃತವನ್ನು ಸುರಿಸು ,— ವರ್ಷಿಸು: ಎದೆಯತ್ತರ ಬೆಳೆ ಬೆಳೆಯಲಿ ತನೆ ತೂಗಲಿ ತುಂಬಿ ಸೊದೆಗರೆಯಲಿ ಹೊನ್ನಿನ ಬೆಳೆ ತುಳುಕಲಿ ಕೈತುಂದಿ (ವಿಜಿದ. ೩೮-೨೦). ೨. (ಆಲಂ) ಇಂಪನ್ನು ಸೂಸು: ಸೊದೆಗರವ ಕಂಠಮಾಧುರ್ಯ ಉಳ್ಳ ಅಪ್ಸರೆಯರೂ ಗಂಧರ್ವರೂ ದನಿಗೂಡಿಸಿ ಹಾಡಿದರು (ಶಾಂತಲಾ. ೨೫೩). [ಸೊದೆ + ಕರೆ೨ (< ಕಱೆ೧)]

ಸೊದೆಗೂಳು (ನಾ). ಅಮೃತದ ಆಹಾರ; ಅಮೃತಾನ್ನ: ನಿರ್ಜರರ ಹೊಡೆಗೋಲಿನಿಂದೆ ಮನ್ಮಥನೆಚ್ಚ ಪಾತ್ರದ ಸೊದೆಗೂಳು ಶೋಧಿಸಿತವಗೆ (ಮೋಹತ. ೨೫-೨೯). [ಸೊದೆ + ಕೂಳು೨ (< ಕೂಟ್೧)]

ಸೊದೆಗೆಯ್ (ಕ್ರಿ). ಸುಣ್ಣವನ್ನು ಹಚ್ಚು ,— ಬಳಿ: ವೀಳಿಗೆಯ ಚರ್ವಣಾಂಗೆಯ್ವುತನು ವಿನಿಂ ಕೇರ್ಗ ಕೈಪತ್ತಿರ್ದ ಸುಣ್ಣಮಂ ತೊಡೆಯ ಸೊದೆಗೆಯ್ದಪEವೊತಿಲವು ಆದುದು (ಪಾಸೋಪು. ೩-೮೩). [ಸೊದೆ + ಕೆಯ್೧]

ಸೊದೆಗೆಲಸ (ನಾ). ಅಮೃತವನ್ನು ಪಡೆಯಲು ಮಾಡಿದ ಕಾರ್ಯ: ತತ್ಕೀಸಕೋಟಿ ವ್ಯಂದಾರಕರುಗಳ ನೆಗ್ಗೊತ್ತಿದ ಸೊದೆಗೆಲಸದಲಿ ಅತ್ಯಂತ ಬಲವಂತ ಖಗರಾದನೊಡನೆ ಈ ಹೊತ್ತಿಗೆ ಸಮರ ಸಾಕು (ಮೋಹತ. ೩೮-೩೯). [ಸೊದ + ಕೆಲಸ]

ಸೊದೆಗೊಡು (ಕ್ರಿ). ಅಮೃತವನ್ನು ನೀಡು ,— ಕೊಡು: ಮರಣೋನ್ಮುಖಂಗೆ ಸೊದೆಗೊಟ್ಟು ಕಾವಂತೆ ನುಡಿಸೊದೆಯೊಳೆನ್ನಂ ಪೊರೆಯಲುಜ್ಜುಗಿಪೆ ನೀನಾವನ್ಯೆ (ಶ್ರೀರಾಮ. ೪-೨). [ಸೊದೆ + ಕೊಡು೧]

ಸೊದೆಗೊಳ್ (ಕ್ರಿ). ಅಮೃತವನ್ನು ಪಡೆ ,— ಹೊಂದು: ಕಡಲಂ ಕಡೆದು ಸೊದೆಗೊಂಬಂತೆ ಶಾಸ್ತ್ರದೊಳ್ . . . ಮೂಲಮಂತ್ರದರ್ಥಂಗಳಂ ಸಂಗ್ರಹಿಸಿ (ಚಕವಂ. ೭೬-೧೪). [ಸೊದೆ + ಕೊಳ್೧]

ಸೊದೆಯುಣ್ (ಕ್ರಿ). ಅಮೃತವನ್ನು ಪಾನಮಾಡು ,— ಸೇವಿಸು: ಸೊದೆಯುಂಡು ಸೊಕ್ಕುವ ಜೊನ್ನವಕ್ಕಿಗೆ ಬಿಸುಗದಿರನೂದುವ ಗೈಮೆಯಂತೆ (ಹದಿಬ. ೬-೨೫); ಇದೆ ಬಂದನರಸನೆಂಬೀ ನುಡಿಗೇಳಿ . . . ಸೊದೆಯುಂಡವೊಲು ಗಾಳಿ ಸೊಂಕಿದವೊಲು . . . ಮುದದ ಮುನ್ನೀರೊಳು ಮುಬುಗಿ ತೇಲುತಿದೆ (ಗೀತಗೋ. ೩೨-೧).

[ಸೊದೆ + ಉಣ್]

ಸೊದೆಯುಣಿ (ನಾ). ಅಮೃತಪಾನ ಮಾಡುವವನು; ದೇವತೆ: ಸೊದೆಯನುಪ್ಪೆಸರ್ಗೆತ್ತು ಸೊದೆಯುಣಿಗಳಂ ಗಣಿಸದಿರ್ವೆಂ (ಚಚವಂ. ೧೧೭-೩).

[ಸೊದೆಯುಣ್ + - ಇ೩]

ಸೊದೆವನೆ (ನಾ). ಸುಣ್ಣವನ್ನು ಬಳಿದ ಮನೆ; ಧವಳಾಗಾರ; ಸೌಧ: ಅಸುರನ ಗದೆ ಭೂತಪಿಶಾಚಸಮಿತಿಗೆ . . . ತೆತ್ತಿಸಿದೆಲ್ಲಿನ ಸೊದೆವನೆ (ಜಗವಿ. ೯-೬೦).

[ಸೊದೆ + ಮನೆ]

ಸೊದೆವಟಿ, ಸೊತೆವಳಿ (ಕ್ರಿ). (ಗೋಡೆ ಮೊದಲಾದುವುಗಳಿಗೆ) ಸುಣ್ಣವನ್ನು ಹಚ್ಚು ,— ಬಳಿ: ಮದಜಳನಿರ್ಝರವಾರಣದಿಂ ಸೊದೆವಟಿದರಮನೆಯಂ ಬಳಸಿದಾನೆಸಾಲಿಗಳಿಸಗುಂ (ಮಲ್ಲಿಪು. ೨-೬೫); ಸೊದೆವಟಿದ ಭಿತ್ತಿ . . . ರನ್ನದ ದೀವಿಗೆಯವಱಿಂದಮೃತದ ಕಡಲಂ ಪೋಲ್ತುದನ್ನವಾಸವಿಳಾಸಂ (ಪಾರ್ಶ್ವಪು. ೮-೪೯). **ಸೊತೆವಳಿ:** 'ಸೊತೆವಳಿಯಿಸು' ಪರಾ. [ಸೊದೆ + ಬಳ್[1]]

ಸೊದೆವೆಳಗು (ನಾ). ಸುಣ್ಣ ಬಳಿದುದರಿಂದುಂಟಾದ ಹೊಳಪು ,— ಬಿಳುಪು: ಪಗಲುಂ ಬೆಳ್ಪಿಂಗಳಂ ಬೀಱುವ ಸೊದೆವೆಳಗಂ ತಾಳ್ದು ನೀಳ್ದಿಂದಮೆತ್ತಂ ಮುಗಿಲಂ ಪೊತ್ತಿರ್ಪ ಕೂಟಪ್ರಕಾರದಿಂ (ಚಂದ್ರಪು. ೩-೪೧); ಸೊ[ಪಾಠಾಂ. ಸು]ದೆವೆಳಗಂ ಸುಧೆಗೆತ್ತಾ ಬಿದಿಯ ಮರಾಳಂ ಸರಾಗಮುರುತರ ಸೌಧಾಗ್ರದೆ ನಿಂದುವು (ರಾಜಶೇ. ೨-೧೩೯).

[ಸೊದೆ+ ಬೆಳಗು[3]]

ಸೊನ, ಸನ (ನಾ). ೧. ಸಪ್ಪುಳು; ಶಬ್ದ; ನಾದ: ವರಕಂಕಣಂಗಳ ಸೊನಂ [ಪಾಠಾಂ. ನೂಪುರ ಕಂಕಣಸ್ವನಂ] ದೆಸೆಗಳೊಳ್ ಪೊಣ್ಮೆ . . . ಬರುತಿರ್ದರಖಿಳ ಸ್ತ್ರೀಯರು (ಚಿಬಪು. ೫-೧೨). ೨. ಕಂಠಧ್ವನಿ; ಸ್ವರ: ಜನಕನಂದಿನಿತನಯರೀರ್ವರು ಘನಮನೋಹರಸೊನದೆ ಪಾಡುವ ಧ್ವನಿಯ ಕೇಳುತ್ತ (ರಘುವಂ. ೧೭೧-೩೭). **ಸನ:** ೨. ಕವಿಯೊಳಿರ್ದಿವಾಸಱಂ ಕಳೆಯದ ಸನಂಗಳಂ . . . ಅಱಸಲಾಂ ಕಾಣೆನಾ ಮಹೀಮಂಡಲದೊಳು (ಜೈಮಿಭಾ. ೩-೪). [< ಸಂ. ಸ್ವನ]

ಸೊನಗಾರ 'ಸೊನ್ನೆಗಾಱ' ನೋ.

ಸೊನಯಿ, ಸನಾದಿ, ಸನಾಯಿ, ಸನ್ನಾಯಿ, ಸೋನಾಯ, ಸ್ವನಾಯ, ಸ್ವನಾಯಿ (ನಾ). ನಾಗಸ್ವರದಂತೆ ಊದುವ ಒಂದು ಬಗೆಯ ವಾದ್ಯ; ಶಹನಾಯಿ: ಸಾಱುವ ಕಹಳೆ ಸೊನಯಿಯ . . . ನಾದ ಭೋರನೆ ಕೇಳಿ (ಅಖಂಡೇ. ೩೪೮-೪). **ಸನಾದಿ:** ಪಲ್ಲಕ್ಕಿಯ ಮುಂದೆ ಕರಡಿಮೇಳದವರೂ ಸನಾದಿಯವರೂ ತಮ್ಮ ತಮ್ಮ ವಾದ್ಯಗಳನ್ನು ಬಾರಿಸುತ್ತ ಹೊರಡುವರು (ಕಪಪು ೬-೧೬); ಸಾಲ ಸನಾದಿ ನೌಬತ್ತು ಹಂದರಕ ಮೊಳಗ್ಯಾವ (ಲೋಚಗೀ. ೬೩). **ಸನಾಯಿ:** ಹೂಗಾರ ಬಸ್ಸಣ್ಣನು ಸನಾಯಿ ನುಡಿಸುತ್ತಿದ್ದಾನೆ (ಅಬಲಾ. ೯); ಆ ಹಳ್ಳಿಯ ಕಲಾವಿದರು 'ಹಲಿಗೆ', ಸನಾಯಿವಾದ್ಯಗಳನ್ನು ಬಾರಿಸುತ್ತಿದ್ದರು (ಬರಹಾ. ೧೮೭); ಬ್ಯಾಂಡಿನವರು, ಸನಾಯಿಯವರು, ಕರಡೀಮಜಲಿನವರು ಕೂಡಿದರು (ಅನಂತ. ೩). **ಸನ್ನಾಯಿ:** ರಂಧ್ರಗಳಲ್ಲಿ ವಾಯುಸಂಚಾರದ ಮೂಲಕ ನಾದವನ್ನು ಸೃಷ್ಟಿಸುವವು . . . ಕೊಳಲು, ಸನ್ನಾಯಿ, ಮುಖವೀಣು ಮೊದಲಾದವು (ಗಾನಕ. ೯೫). **ಸೋನಾಯ:** ಶಂಖ ಸೋನಾಯವು . . . ಹೆಗ್ಗಾಳೆ ಮುಂಕೊಂಡು ಧ್ವನಿದೋಱೆ (ಕರಚಾ. ೭-೬೩). **ಸ್ವನಾಯ:** ಸ್ವರಗೈವ ನಾಗಸ್ವರ ಕೊಳಲು ಸ್ವನಾಯದ ನಾದ (ಅಖಿಂಡೇ. ೨೦೬-೪೬); ಶಂಖ ಸ್ವನಾಯ . . . ಚಂದ್ರಕಾಳೆ ಮೊದಲಾದ ಶಬ್ದಗಳು (ನಿರಾಗೋ. ೭-೨೧). **ಸ್ವನಾಯಿ:** ತಾಳ ಕಂಸಾಳ ಗಂಟೆ ಕಹಳೆ ಕರ್ನೆ ನಪೂರಿ ಸ್ವನಾಯಿ (ಪಚಸಂ. ೪೧೫-೮೯). [<— ಪಾರ. ಸುನಾಈ; ಮರಾ. ಸನಈ, ಸನಯ, ಸನಯಾ]

ಸೊನರು 'ಸೊಣಲು' ನೋ.

ಸೊನೆ (ನಾ). ೧. ವಿಶೇಷವಾಗಿ ಮಾವಿನ ಕಾಯಿ, ಹೂವು ಮುಂತಾದುವುಗಳ ತೊಟ್ಟಿನಿಂದ ಸುರಿಯುವ ಅಂಟಿಲ್ಲದ ರಸ: ಅಂತಃಪುರಸ್ತ್ರೀಯರಿಮ್ಮಾವಿನ ಸೊನೆಯ ಸೋನೆಯೊಳ್ ತಳಿದೆಳದಳಿರ ಜೊಂಪಂಗಳೊಳಂ . . . ವಿಶ್ರಮಿಸಿ (ಆದಿಪು. ೧೧-೬೨ ವ); ಕಾಯ ಸೊನೆಯಱತಲ್ಲದೆ ಹಣ್ಣಿನ ರಸ ಚಿಹ್ನದೋಱದು (ಸದ್ಭ.ವ. ೪. ೨೧೯-೭೧೯); ಪಿಕಾಳಿ ಕುಟುಕಲ್ ಸೊನೆ ಬಿಂದುಗಳೊಪ್ಪುವಾಮ್ರಧಾತ್ರೀಜದಿಂ . . . ಮೆಱೆಗುಂ ಪುರದಾ ಬಹಿರ್ವನಂ (ದಶಕು. ೬-೮). ೨. ಕೆಲವು ಮರಗಳ ತೊಗಟೆಗಳಿಂದ ಸುರಿಯುವ ಹಾಲು ,— ರಸ: ರಬ್ಬರು ಕೆಲವು ಜಾತಿಯ ಮರಗಳ ತೊಗಟೆಗಳಿಂದ ಸಿಗುವ ಸೊನೆ (ಬಾಲಪ್ರ. I. ೪೮). ೩. ಆನೆಯ ಕುಂಭಸ್ಥಳದಿಂದ ಸುರಿಯುವ ದ್ರವ; ಮದೋದಕ: ಮನಸಿಜಕರೀಂದ್ರಕಟದೊಳ್ ಸೂಸೆ ತೊಟ್ಟನೆ ಪುಟ್ಟುವಂತೆ ವಕುಳಕ್ಕೆ ಪಸುರ್ನನೆ ಪುಟ್ಟಿ (ಮಲ್ಲಿಪು. ೫-೧೬). ೪. ಹುಣ್ಣು, ಗಾಯಗಳಿಂದ ಒಸರುವ ನೀರು; ರಸಿಕೆ: ಈ ರೋಗಾಣುಗಳು . . . ಗಾಯದಿಂದ ಹೊರಬರಬಹುದಾದ ಸೊನೆಯಿಂದ ಒಬ್ಬರಿಗೊಬ್ಬರಿಗೆ ಹರಡಬಹುದು (ಕಲರೋ. ೧೫).

[ದೇ. ‖ ಮಲ. ಚುನ, ಚುನೆ = ಸ್ರವಿಸು ; ತುಳು. ಸುನೆ; ತೆಲು. ಸೊನ]

ಸೊನೆಗಣ್ಣು (ನಾ). ಯಾವಾಗಲೂ ನೀರು ಸೋರುವ ಕಣ್ಣು: ಸೊನೆಗಣ್ಣ ಸೊಣ್ಣಕ್ಕ ಮನೆಗಳ್ ಮಾಚಕ್ಕ (ಕರಕ. ೯೪-೧೦). [ಸೊನೆ + ಕಣ್ಣು (< ಕಣ್)]

ಸೊನೆಗಳೆ (ಕ್ರಿ). ಕಾಯಿ, ಹಣ್ಣು ಮುಂತಾದುವುಗಳಿಂದ ಜಿನುಗುವ ಸೊನೆಯನ್ನು ತೆಗದುಹಾಕು: ಸೊನೆಗಳೆದ ನಿಂಬೆಹುಳಿ ಕೆಲವಕ್ಕೆ ಸಕ್ಕರೆಯ ನನುವಱಿದು ಕೂಡಿ (ಸೂಪಶಾ.೨-೩೩). [ಸೊನೆ + ಕಳ್[1]]

ಸೊನೆಗಾರ 'ಸೊನ್ನೆಗಾಱ' ನೋ.

ಸೊನೆಪಟ್ಟ (ನಾ). ಒಂದು ಬಗೆಯ ಸಸ್ಯ: ಪಟಗಣಿ, ಸೊನೆಪಟ್ಟ, ತಿಗುಡು (ಮೃಔಗಿ. ೫೮-೧೧೬೮). [?]

ಸೊನೆಬೆಮರ್ 'ಸೊನೆವೆಮರ್' ನೋ.

ಸೊನೆವನಿ (ನಾ). ಹಣ್ಣು, ಹೂವು ಮುಂತಾದುವುಗಳ ಸೊನೆಯ ತುಂತುರು: ಸೊನೆವನಿ ಚಂಚುವಿಂ ಪನಿಯೆ ಮಾಂಗೊನರಂ ನಸುಗರ್ಚಿ . . . ಪುಗಲೆಂದುದು ಕೋಕಿಲವ್ರಜಂ (ಜಗವಿ. ೧೪-೩೮); ಪಿಕ ಕರ್ದುಕಿದ ಕೋರಕದಿ ಸುರಿವ ಸೊನೆವನಿ ಮಳೆಯದಾಗೆ (ನಂದಿಮಾ.೩-೨೦). [ಸೊನೆ + ಪನ್ನಿ]

ಸೊನೆವಿಡು (ಕ್ರಿ). ಹೂವು, ಕಾಯಿಗಳ ತೊಟ್ಟಿನಿಂದ ಸೊನೆಯು ಸೂಸು: ಪೊತ್ತಳಗೊಂಬನುಳ್ಳುಗುರ್ ಸೊ[ಪಾಠಾಂ. ಗೊ]ನೆವಿಡೆ ತಾಗಿ ಸೂಗುರಿಸೆ (ಲೀಲಾವ. ೬-೯೯). [ಸೊನೆ + ಬಿಡು[1]]

ಸೊನೆವೆಮರ್, ಸೊನೆಬೆಮರ್ (ನಾ). ವಾಸನೆಯಿಂದ ಕೂಡಿದ ಜಿಗುಟಾದ ಬೆವರು; ಸೊಗಡಿನಿಂದ ಕೂಡಿದ ಬೆವರು: ಸೊನೆವೆಮರಾಂತು ಕತ್ತುರಿಗಂಧಿ ಬರದಳು ನನೆಯಂಬನ ಚಿತ್ರಪಠವ (ಮೋಹತ. ೨೪-೫೩). **ಸೊನೆಬೆಮರ್:** ಮೊದವಿಯ ಮೊಳೆಯನೊತ್ತುತ ಕಕ್ಷ ಸೊನೆಬೆಮರ್ವಡೆದ ಸೊಗಡ ವಾಸಿಸುತ . . . ಪುಷ್ಪಿಣಿಯರೊಪ್ಪಿದರು (ಮೋಹತ. ೧೮-೫೨). [ಸೊನೆ + ಬೆಮರ್[2]]

ಸೊನೆಹುಣ್ಣು (ನಾ). ಹೂವು, ಕಾಯಿಗಳ ತೊಟ್ಟಿನಿಂದ ಒಸರುವ ರಸದ ಸಂಪರ್ಕದಿಂದಾಗುವ ಹುಣ್ಣು ,— ವ್ರಣ: ಸೊನೆಹುಣ್ಣಿಗೆ:- ಮುರುದಾರಶೃಂಗಿಯಂ ತಂದು ನಿಂಬೇಹುಳಿಯಲ್ಲಿ ತೇದು ತೊಡೆಯಲು ಎನಿತಪ್ಪ ಸೊನೆಹುಣ್ಣು ಮಾಣ್ಗುಂ (ವಿಷವಿ. ೭೭); ಈ ವರ್ಗವು ಕೈಕಾಲು ತಣ್ಣಗಾಗುವ ವಿಸರ್ಪ, ಮೈನವೆ, ಸೊನೆಹುಣ್ಣು, ತಲೆಯ ಕೂದಲು ಉದುರುವುದು . . . ಇಂಥವುಗಳಲ್ಲಿ ತುಂಬ ಪ್ರಯೋಜನ (ಬಚಿಕಿ.೪).

[ಸೊನೆ + ಹುಣ್ಣು (< ಪುಣ್)]

ಸೊನ್ನ 'ಸೊನ್ನೆ[3]' ನೋ.

ಸೊನ್ನಗದಿರ (ನಾ). ಚಿನ್ನದಂತೆ ಹೊಳೆಯುವ ಕಿರಣಗಳುಳ್ಳವನು; ಸೂರ್ಯ: ಭಕ್ತದೊಳು ಸೊನ್ನಗದಿರನು ಮಾಧವನು ಶ್ರುತಿಸನ್ನುತ ಶ್ರೀ ಲಕ್ಷ್ಮೀಪ್ರತದೊಳು ಮಾನ್ಯ ಗೋವಿಂದಾಭಿಧನು ಇರುತಿಪ್ಪನೆಂದೆಂದು (ಪಸಾರ. ೩೧-೧೪).

[ಸೊನ್ನ (< ಸೊನ್ನೆ[3])+ ಕದಿರ್[2] + - ಅ್]

ಸೊನ್ನಗಾರ 'ಸೊನ್ನೆಗಾಱ' ನೋ.

ಸೊನ್ನಗಾರಿಕೆ (ನಾ). ಚಿನ್ನದ ಕೆಲಸ; ಅಕ್ಕಸಾಲಿಯ ಕೆಲಸ,— ಕಸುಬು: ಶೀಲವಂತರ ಸಂಖ್ಯವು ಬಹು ಸ್ವಲ್ಪವಿರುತ್ತದೆ. ಇವರು ಅಂಗಡಿಯ ವ್ಯಾಪಾರ, ಸೊನ್ನಗಾರಿಕೆ ಮುಂತಾದ ಹೋರೆಗಳನ್ನು ಮಾಡುವರು (ಕಭಾಗ. ೯೫).

[ಸೊನ್ನಗಾರ (< ಸೊನ್ನೆಗಾಱ) + - ಇಕೆ]

ಸೊನ್ನಗೇದಗೆ 'ಸೊನ್ನೆಗೇದಗೆ' ನೋ.

ಸೊನ್ನರ 'ಸೊನ್ನಾರ್[2]' ನೋ.

ಸೊನ್ನಲಿಗೆ, ಸನ್ನಲಿಗೆ (ನಾ). ೧. ದುಂಡಗೆ ಇರುವುದು; ವೃತ್ತಾಕಾರವಾಗಿ ಇರುವುದು: "ಸೊನ್ನಲಿಗೆಯನೆ ಬಟ್ಟಿತಕ್ಕು" (ಕಬ್ಬಕ್ಕಿ. ೪೭). ೨. ದುಂಡಾಗಿರುವ ಬಟ್ಟಲು, ಕಲಶ ಮುಂತಾದುವು: "ಸೂ[ಪಾಠಾಂ. ಸ]ನ್ನಲಿಗೆಯೆಂದು ಬಟ್ಟಲ್" (ಕಶಸಾ. ೬೫-೪೫೯); ನೆಲೆಮೊಲೆ ಪೊನ್ನ ಸೊನ್ನಲಿ[ಪಾಠಾಂ. ರಿ]ಗೆಯಾಗೆ ಮೊಗಂ ಸರಸೀಜಮಾಗೆ . . . ದರಹಾಸಮೆ ಸೂಸುವ ಲಾಜೆಯಾಗೆ ಕೋಮಲ ಲಲಿತಾಂಗಿಯರ್ ನೆರೆದು (ಕಾವ್ಯಾವ. ೬೮೭); ಪೊಳಪೊಳೆವ ನುಣ್ಪಳುಕಿನ ಸೊನ್ನಲಿಗೆಗಳಂ ಪಿಡಿದಲರ್ಗಂಪಿನ ಸವಿಗಳ್ಗಂ ಕುಡಿದು (ಮರಾಚ. ೭-೬ ವ). ೩. ದೇವಾಲಯದ

ಗೋಪುರದಲ್ಲಿರುವ ಲೋಹದ ಗುಂಡನೆಯ ಶಿಖರ; ಕಲಶ : ತ್ರಿದಶಶರಾಸನಂ ತಳಿರ ತೋರಣಮಾಗಿರೆ ಕುಕ್ಕನೋಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ (ಆದಿಪು. ೬-೭೧); ಹರಿಸ್ನೀಲದ ಬಜ್ಜರದಿಂ ಮರಕತಸೊನ್ನಲಿಗೆಯ ಸಾಲಿಂ ಚೆನ್ನೆಸೆದವು . . . ಶ್ರೀನೀಡಂ ಕರುಮಾಡಂ (ಉದ್ಧವೋ. ೨-೩೩). ಸನ್ನಲಿಗೆ : ೧. "ಸನ್ನಲಿಗೆಯೆಂದು ಬಟ್ಟಿತು" (ಕಬೊಂ. ೧೯೮). [< ಸೊನ್ನೆ₂?]

ಸೊನ್ನಾದಾಯ (ನಾ). ಚಿನ್ನದ ರೂಪದಲ್ಲಿ ಕೊಡುವ ಒಂದು ಬಗೆಯ ತೆರಿಗೆ; ಸುವರ್ಣಾದಾಯ: ಮಗ್ಗವಣ ಕಿಱುಕುಳ ಸೊನ್ನಾದಾಯ ಸುತ್ರಗುತ್ತಿಗೆ ಯಿಯೊಳಗಾಗಿ ೯ ವರಹ ತೆತ್ತು ಸುಖದಲಿಯಿಹುದು (ಎಕ. VII(R), ಮಳವ. ೧೦-೧೦; 1517).

[ಸೊನ್ನ (< ಸೊನ್ನೆ₃) + ಆದಾಯ./ ಸಂ. ಸುವರ್ಣಾದಾಯ]

ಸೊನ್ನಾರ₁ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲಿ; ಚಿನಿವಾರ: ಸ್ಮರನೆಂಬಾ ಸೊನ್ನಾರಂ ಕೀಲಿಸಲಿರದೊಪ್ಪುವ ಪೊಸ ಚಿನ್ನದ ತಗಡೆನೆ ಕರಮೆಸೆದುದು ಮೆಯ್ಯೊಳಗು . . . ನಂದನೆಗೆ (ಜಯಕಾ. ೩-೫೩); ರಾರಾಜಿಪ ರತ್ನಭೂಷಣಂಗೆಯ್ದು ಸೊನ್ನಾರರಂಗಡಿಗಳೊಪ್ಪಿದುವು (ಮೋಹತ. ೩-೨೫).

[< ಸಂ. ಸ್ವರ್ಣಕಾರ./ ಹಿಂ. ಸುನಾರ್, ಸೋನಾರ್; ಮರಾ. ಸೋನಾರ]

ಸೊನ್ನಾರ₂, ಸೊನ್ನರ (ನಾ). ಬಿಂಕ; ಬಿನ್ನಾಣ; ಒಯ್ಯಾರ: ತೋರವಲ್ಲಸಿದಲ್ಲದ ವಳನಾ ಚದುರ ಸೊನ್ನಾರದೊಳಪ್ಪಿ ನೆರೆದನು (ಧರಚ. ೧೫-೮೫); ಎನ್ನಿಂದ ನೀ ಬಂದೆ ನಿನ್ನಿಂದ ನಾ ಬಂದೆ ಚನ್ನಬಸವ ಶ್ರೀಪಾದವ ಬಿನ್ನಾಣದಿ ಕಟ್ಟಿಕೊ ಸೊನ್ನಾರ ಬೇಡೆಂದು ಮನ್ನಿಸಿ ಮಣಿಸಿ ಕುಣಿಸಿದ (ಕೋಡಚ. ೩-೫೧); ಚೆನ್ನಿಗ ಲೀಲಾಮಾತ್ರದೊಳು ಸೊನ್ನಾರದಿಂದ ಶಬ್ದಾಗಮನಯವ ಪ್ರಸನ್ನಹೃದಯ ಪಠಿಸಿದನು (ಜ್ಞಾನಚ. ೩-೧೭೧). ಸೊನ್ನರ: ಚೆನ್ನೆ ಚೆನ್ನರು ನೆರೆದರು ತಮ್ಮ ತನುವಿನ ಸೊನ್ನರ ಸೊಬಗಿಗರ್ತಿಸುತ (ಧರಚ. ೪೧-೧೩೧). [?]

ಸೊನ್ನಾರಗೆಲಸ (ನಾ). ಚಿನ್ನದ ಕುಸುರಿಗೆಲಸ: ಸೊನ್ನಾರಗೆಲಸ ಶೋಭಿಸುತಿಪ್ಪ ಕಡೆಯಾಣಿ ಚಿನ್ನದ ಕೋಟೆ ರಂಜಿಸಿತು (ಮೋಹತ. ೨೪-೩೦). [ಸೊನ್ನಾರ₁ + ಕೆಲಸ]

ಸೊನ್ನಾರವಿದ್ಯೆ (ನಾ). ಚಿನ್ನದ ಕೆಲಸ ಮಾಡುವ ಕಲೆ; ಅಕ್ಕಸಾಲಿಗನ ಕೆಲಸ: ಹೂಸಿಕದ ಹೂಣಿಗತನವ ಸೊನ್ನಾರವಿದ್ಯೆಯ ಸಾಹಸೋನ್ನತಿಯ ಸೊಗಸ ಹುಟ್ಟಿಸಿ ಸುಲಿವ ರಸವಾದಿಗಳನಿವರ . . . ನೋಡು (ಕುಮಾರ್ಯೂ. ೧೬-೨೫).

[ಸೊನ್ನಾರ₁ + ವಿದ್ಯೆ]

ಸೊನ್ನಾರಿ₁ (ನಾ).= ಸೊನ್ನಾರ₁: ಹೊಂಬೆಸವEದತಿ ಸೊನ್ನಾರಿಗಳ ಸಾಲುಸಾಲಿಗಳೆ ಸಕಗಳಂ ನೋಡುತ್ತೇಳ್ತಂದ (ಮದೇಪು. ೨೦-೧೯); ಸೊನ್ನಾರಿಯಂತೆ ಕೊಟ್ಟೊಡವೆಯಂ ಛಿದ್ರಿಸುತ (ಲಿಂಗಪು. ೨೫-೫). [ಸೊನ್ನಾರ₁ + - ಇ₃./ ಸಂ. ಸ್ವರ್ಣಕಾರಿನ್]

ಸೊನ್ನಾರಿ₂ (ನಾ). ಬಿನ್ನಾಣಗಿತ್ತಿ: ಅಣ್ಣಾನ ಗಿರಿ ಮೇಲೆ ಎಣ್ಣೇಯ ಜಾರೀಕೆ ಸೊನ್ನಾರೀ ನೆರುಗೇ ಬಿಗಿದೂಡೇ ಸೈಯ (ಹುಟ್ಟಿಹ. ೪೫). [ಸೊನ್ನಾರ₂ + - ಇ₂]

ಸೊನ್ನೆ₁ 'ಸನ್ನೆ₁' ನೋ.

ಸೊನ್ನೆ₂ 'ಸನ್ನೆ₂' ನೋ.

ಸೊನ್ನೆ₃, ಸನೆ, ಸುನ್ನ₁, ಸೊನ್ನ, ಸೋನ₂ (ನಾ). ಚಿನ್ನ; ಬಂಗಾರ: "ಸೊನ್ನೆ, ಕಸವರಂ, ಚೆಂಬೊನ್, ಮಿಸುನಿ- ಈ ೪ ಸುವರ್ಣಂ" (ಕಶಾ.೫೦-೬೧); ಸ್ವರ್ಣ- ಸೊನ್ನೆ (ಶಮದ. ೨೬೦ ಪ್ರಯೋ); ಪುಟವಿಳಿದ ಸೊನ್ನೆಯ ತಿರಸ್ಕರಿಪ ಚೆನ್ನೆಯರ್ (ನಂದಿಮಾ. ೪-೪). ಸನೆ: 'ಸನೆಗಾರ' ಪರಾ. ಸುನ್ನ₁: 'ಸುನ್ನವೆಸ' ಪರಾ. ಸೊನ್ನ: ಕನ್ನೀರು ಮೌಕ್ತಿಕ ಸೊನ್ನ ರಮಣೀಯವಾಗಿ ಉನ್ನತಹರ್ಮ್ಯವೊಪ್ಪಿಹುದು (ಕೋಡಚ. ೧-೫೨); ಸೊನ್ನದಂದಣ ಇಳಿದು . . . ಶರಣೆಂದು ಬಾಗಿಹರು ಸನ್ನುತ ಶಿವರೇವಣಸಿದ್ಧರು (ಸಿದ್ಧಪು. ೨-೬೫). ಸೋನ್ನ: 'ಸೋನಗಾರ' ಪರಾ.

[< ಸಂ. ಸ್ವರ್ಣ./ ಪ್ರಾ. ಸೋಣ್ಣ]

ಸೊನ್ನೆ₄, ಸುನ್ನ₂ (ಗು). ೧. ಬರಿದಾದ; ಖಾಲಿಯಾದ. (ನಾ). ೨. ಏನೂ ಇಲ್ಲದಿರುವಿಕೆ; ಬರಿದು; ಶೂನ್ಯ: "ಶೂನ್ಯಕ್ಕೆ ಸೊನ್ನೆಯುಮೆನಿಕ್ಕುಂ" (ಶಬ್ದಮಂ. ೧೮); ಇನ್ನೂ ತಿರುಗಿ ಬೆಳೆಯಿಸಿದ್ದು ಯಾಕೆ? ನಮ್ಮ ಋಣ ಸೊನ್ನೆಯೆಂದು ತಿಳಿದ ಮೇಲೆಯೂ? (ಬೆಟ್ಟಜೀ. ೧೪೯); ಸಂಬಳ ಮಾತ್ರ ಸೊನ್ನೆ! (ದೀಪದ. ೧೬೬). ೩. [ವ್ಯಾಕ] ಯೋಗವಾಹಗಳಲ್ಲಿ ಒಂದಾದ ಬಿಂದುವಿನ ಚಿಹ್ನೆಯಿಂದ ಗುರುತಿಸುವ ವರ್ಣ; ಅನುಸ್ವಾರ: "ಮುಚ್ಚಱೆಂದುಂ, ಸೊನ್ನೆಯಂದುಂ ಶೂನ್ಯಂ" (ಕಶಸಾ. ೫೯-೨೮೭); ಒತ್ವದಲ್ಲಿ ತೆಗೆದು ಓತ್ವದಲ್ಲಿ ಒಡಗೂಡಿ ಕುರುಕಿನಲ್ಲಿ ಸುಳಿದು ಸೊನ್ನೆಯಲಿ ಸಂಜ್ಞೆಗೊಟ್ಟು ಸೂಜಿಯ ಮೊನೆಯೊಡಗೂಡುದಕ್ಕೆ ಎರಡಿಲ್ಲ (ಸಕಸಾ. ೨. III, ೩೨೭-೭೦೭); ಬಿಂದುವನುಸ್ವಾರಂ ತಾನೆಂದಕ್ಕುಂ ಸೊನ್ನೆ ಮುತ್ತು ವೋಲ್ ವೃತ್ತತೆಯಿಂ ಸಂದಿರ್ಪುದು (ಶಮದ. ೧೧). ೪. [ಗಣಿತ] ಪೂಜ್ಯ; ಶೂನ್ಯ. ಎಂಡು ಸಮವಾದ ಮತ್ತು ವಿರೋಧವಾದ ಸಂಖ್ಯೆಗಳ ಮೊತ್ತ ಸೊನ್ನೆ (ತತ್ವಪ್ರಾ. ೪೭೮): ಭಾರತೀಯರು ಸೊನ್ನೆಯನ್ನೂ ದಶಮಾಂಶಪದ್ಧತಿಯೇ ಮುಂತಾದುವುಗಳನ್ನೂ ಕಂಡು ಹಿಡಿದುದರಿಂದ . . . ಇಂದಿನ ಮೇಧಾವಿಶ್ರೇಷ್ಠರು ಕೂಡ ಕೊಂಡಾಡುತ್ತಿದ್ದಾರೆ (ಭಾರದ. 385). ಸುನ್ನ₂: ೧. ವೆಂಕಣ್ಣಮಾಸ್ತರರು ಸುನ್ನಮನಸ್ಥಿತಿಯಲ್ಲಿಯೇ ಬಾಯಿಲೆಕ್ಕದ ರಿಂಗಮಾಷ್ಟರ ಆಗಿ ಸರ್ಕಸ್ ಸುರುವು ಮಾಡಿದರು (ದೀಪಹ. I, ೪೮). ೨. ಕ್ಲಾಸಿನಲ್ಲಿ ಕೂತಾಗ ತಲೆಯಲ್ಲ ಸುನ್ನವಾಗಿತ್ತು (ಮೂರುದಾ. ೨೬೩). ೩. "ಸುನ್ನಂ = ಶೂನ್ಯಂ" (ಶಮದ. ಪರಿ ೨).

ಸೊನ್ನೆಬೀಳು = ಇಲ್ಲವಾಗು; ಅಭಾವವುಂಟಾಗು: ಹುಲ್ಲುಗಾವಲಿಗೆ ಭಾರಿ ನಷ್ಟವಾಗಿದೆ. ನಾನೀಗ ತಪ್ಪು ವಸೂಲು ಮಾಡದಿದ್ದರೆ ನಾಳೆ ಒಣಮೇವಿಗೆ ಸೊನ್ನೆ ಬೀಳುತ್ತದೆ (ಪುನರು. ೨೮೭). ಸೊನ್ನೆ ಸುತ್ತು = ೧. ಏನೂ ಅಂಕಗಳನ್ನು ಕೊಡದೆ ಪೂಜ್ಯವನ್ನು ಕೊಡು; ಸೊನ್ನೆಹಾಕು: ಯಾವ ಪ್ರಶ್ನೆಗೂ ಅವನು ಉತ್ತರಿಸದಿದ್ದುದರಿಂದ ಅವನ ಉತ್ತರ ಪತ್ರಿಕೆಯಲ್ಲಿ ಉಪಾಧ್ಯಾಯರು ಸೊನ್ನೆಸುತ್ತಿದ್ದರು (ರೂಢಿ). ೨. (ಆಲಂ) ಇಲ್ಲದಂತೆ ಮಾಡು; ಮೋಸಗೊಳಿಸು: ಶಿಷ್ಯನು ಗುರುದಕ್ಷಿಣೆಗೆ ಸೊನ್ನೇಸುತ್ತುವ ಯೋಚನೆಯನ್ನೆಂದಿಗೂ ಮಾಡಬಾರದು (ನೀಗಟ್ಟು. ೪೪). ಸೊನ್ನೇಬಾಣ = "ಬಿಟ್ಟು ಕೂಡಲೇ ಸುತ್ತಿಕೊಂಡು ಸುತ್ತಿಕೊಂಡು ಹೋಗಿ ಹೆಚ್ಚಾದ. ಅಪಾಯವನ್ನುಂಟುಮಾಡುವ ಬಾಣ" (ಚಿತ್ರಪ್ರಾ. ಅನುಬಂಧ.೨): ದೊರೆಯು . . . ಆನೆಯನ್ನೇರಿ ಸೊನ್ನೇಬಾಣಗಳನ್ನು ಹೊಡೆಯಿಸಿ ಸ್ವಾರಿಫಿರಂಗಿ ಹೊಡೆದು ಎದುರುದಂಡಿನ ಮೇಲೆ ಬಿದ್ದು ಕಡಿಯಲಾಗಿ (ಚಿತ್ರಪ್ರಾ. ೫೫).

[< ಸಂ. ಶೂನ್ಯ./ ಪ್ರಾ. ಸುಣ್ಣ; ಪಾಲಿ. ಸುಞ್ಞ]

ಸೊನ್ನೆಕೋಲು 'ಸನ್ನೆಗೋಲು' ನೋ.

ಸೊನ್ನೆಗಾರ 'ಸೊನ್ನೆಗಾಱ' ನೋ.

ಸೊನ್ನೆಗಾಱ, ಸನೆಗಾರ, ಸೊನಗಾರ, ಸೊನೆಗಾರ, ಸೊನ್ನಗಾರ, ಸೊನ್ನೆಗಾರ, ಸೋನಗಾರ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲಿ; ಚಿನಿವಾರ: ಕೊಟ್ಟಂ ಕೆಟ್ಟನೆಂಬೊಂದು ಸನ್ನೆಯ ಸಬುದಮೊಗವಂತಿರೆ ಬಡಿವ ಸೊನ್ನೆಗಾಱರ ಸಾಲೆಯಿಂ . . . ಪುರಂ ಕಣ್ಗೆಂಬಾದುದು (ರಾಮಾಶ್ವ. ೧೦೩-೨೨). ಸನೆಗಾರ: ಇವರು ನಮ್ಮ ಬಳೆಗಾರರು, ಇವರು ನಮ್ಮ ಸನೆಗಾರರು (ಬೆಳಭಾ. ೧೫೭). ಸೊನಗಾರ: ಸಹಸ್ರಾವಧಿ ಸೊನಗಾರರು ವಿವಿಧ ಕಲಾಕುಶಲರಾಗಿ ಆಯಾವೃತ್ತಿಗಳಿಂದ ಜೀವನ ಮಾಡುತ್ತಿದ್ದರು (ಕಥವಿ. ೧೨೯); ಎಂಟುವರ್ಷ ಸೊನಗಾರ ಶಂಕರಪ್ಪನಿಗೆ ಬಾಡಿಗೆ ಕೊಟ್ಟು ನೂರಾರು ರೂಪಾಯಿ ಬಾಡಿಗೆಯನ್ನೂ ಎತ್ತಿಕೊಂಡೆ (ಬೆಳುಮ. ೧೫೨); ಎಡಕ್ಕೆ ಸೊನಗಾರರು ಗಾಣಿಗರ ಕೇರಿಗಳು (ಮೂರುದಾ. ೯೦). ಸೊನೆಗಾರ: ನಾಲ್ಕು ಗುಡಿಗಾರರ ಮನೆಗಳಿವೆ; ಸೊನೆಗಾರರ ಮನೆಗಳಿವೆ (ಜಾರುದಾ. ೨೯); ನಾನೊಬ್ಬ ಸೊನೆಗಾರನನ್ನು ನೋಡಬೇಕು (ಸಂಸ್ಕಾರ. ೧೨೫). ಸೊನ್ನಗಾರ: ಬೆಳ್ಳಿ ಬಂಗಾರಗಳ ಪೆಟ್ಟಿಗೆಯನು ತಕ್ಕೊಂಡವನ ವಂಶದವರೇ ಸೊನ್ನಗಾರರಾದರು (ಕಭಾಗೆ. ೧೫೦); ಅರಸನು ಒಬ್ಬ ಸೊನ್ನಗಾರನ ಕೈಯಿಂದ ತನಗಾಗಿ ಒಂದು ಮೇಲಾದ ಚಿನ್ನದ ಕಿರೀಟವನ್ನು ಮಾಡಿಸಿದನು (ಮುಂಬಯಿ. ೫-೬೫). ಸೊನ್ನೆಗಾರ: "ಸೊನ್ನೆಗಾರ (ಸೊನ್ನಗಾರ, ಸೊನಗಾರ, ಸೋನಾರ)= ಸ್ವರ್ಣಕಾರ" (ತದ್ಭವಕೋ. ೪೭). ಸೋನೆಗಾರ: ಹೊಸದಾಗಿ ಮದುವೆಯಾಗಿದ್ದ ದಂಪತಿಗಳು - ಸೋನಗಾರರಂತೆ! (ಮಲೆಮ. ೬೧೭). 'ಸೊನ್ನಾರ₁' ಪರಾ. [ಸೊನ್ನೆ₃ + - ಕಾಱ]

ಸೊನ್ನೆಗೇದಗೆ, ಸೊನ್ನಗೇದಗೆ (ನಾ). ಚಿನ್ನದ ಬಣ್ಣದ ಕೇದಗೆ, ಹೊಂಗೇದಗೆ: ಘಮಘಮಿಸುವ ಸೊನ್ನೆಗೇದಗೆಯೆಸಳೆಂಬ ಜವದಾಡೆಯವಳೊಪ್ಪಿದಳು (ಮೋಹತ.೫-೩೮). ಸೊನ್ನಗೇದಗೆ: ರತಿದೇವಿಯಳಿಗೆ ಸೊನ್ನಗೇದಗೆಯ ಪೂವೊಡೆಯಂತೆ ಬಸಿಱಿನ ಚಿನ್ನೆದೋಱಿದುದು ಮೆಯ್ಯೊಳಗೆ (ಮೋಹತ. ೧೭-೨). [ಸೊನ್ನೆ₃ + ಕೇದಗೆ]

ಸೊನ್ನೆಟೆಂಕೆ (ನಾ). ಚಿನ್ನದ ನಾಣ್ಯ; ಸುವರ್ಣದ ವರಹ: ಸೊನ್ನೆಟೆಂಕೆಯೊಳು ಹಿತ್ತಾಳೆಯಂ ಬೆರಸಲುಂ ಚಿನ್ನವೆಂತುಂ ಕೆಡುವುದು (ಪ್ರಭುಪು. ೯-೧೧೬).

[ಸೊನ್ನೆ₃ + ಟೆಂಕೆ (< ಟಂಕಿ₂)]

ಸೊನ್ನೆನೂಲ್ (ನಾ). ಚಿನ್ನದ ಉಡಿದಾರ: ಪಕ್ಕಮಂ ಕೆಳೆಗೊಳೆ ಸೆಕ್ಕಿದೊತ್ತರದ ಬಜ್ಜರವಂಕಿ ತೊಡಂಕುಸೊನ್ನೆನೂಲ್ (ಚಕಪಿ. ೩-೯೦). [ಸೊನ್ನೆ₃ + ನೂಲ್₂]

ಸೊನ್ನೆವರದ (ನಾ). ಚಿನ್ನದ ವ್ಯಾಪಾರಿ; ಸರಾಫ: "ಸೊನ್ನವರದನೆಂದುಂ, ಪೊಂಬರದನೆಂದುಂ, ಚಿನ್ನವರದಂ" (ಕಶಸಾ. ೭೦-೩೩೫). [ಸೊನ್ನೆ₃ + ಪರದ₂]

ಸೊನ್ನೆವೆಟ್ಟು (ನಾ). ಚಿನ್ನದ ಬೆಟ್ಟ; ಮೇರುಪರ್ವತ: "ಸಗ್ಗಿಗವೆಟ್ಟೆಂದುಂ, ಸೊನ್ನವೆಟ್ಟೆಂದುಂ, ಮೇರುಗಿರಿ" (ಕಶಸಾ. ೪೯-೪೪); ಎಂತಾನುಂ ನಿಲ್ಪೊಡೆ ಸೊನ್ನೆ ವೆಟ್ಟನಡರಲ್ಕೇಟ್ಟುಂ (ಗೀತಗೋ. ೪೭-೫); ಪಂತಂದೊಟ್ಟೊಡೆ ಮೆಟ್ಟುವಂ ನೆಲದೊಳೆಟ್ಟಾ ಸೊನ್ನೆವೆಟ್ಟಾದೊಡಂ (ಚಕಪಿ. ೫-೭೯).

ಸೊನ್ನೆವೆಟ್ಟುವಿಲ್ಲ = ಮೇರುಪರ್ವತವನ್ನೇ ಬಿಲ್ಲಾಗಿ ಉಳ್ಳವನು; ಶಿವ: "ಗೊರವಂ . . . ಬಾನ್ನವಿರ ಸೊನ್ನೆವೆಟ್ಟುವಿಲ್ಲಂ . . . ಬೆಳ್ಳಡಿಯನೆನೆ ಶಿವಗೆ ಪೆಸರ್" (ಕಬ್ಬಿಕ್ಕೆ. ೪). [ಸೊನ್ನೆ₃ + ಬೆಟ್ಟು₂ (< ಬೆಟ್ಟ)]

ಸೊನ್ನೆಸಾರ (ನಾ). ಚಿನ್ನದ ಎಳೆ; ಬಂಗಾರದ ಸರಿಗೆ: ಪೀತಾಂಬರನೆಂಬ ತನ್ನ ಪೆಸರಂ ನನ್ನಿಮಾಡುವಂತೆ ಚಿನ್ನನಪ್ಪ ಸೊನ್ನೆಸಾರದಂ[ಪಾಶಾಂ. ವಂ]ಗಿಗೆಯಂ ತೊಟ್ಟು (ಪಾರ್ಶ್ವಪು. ೧೨-೬ ವ). [ಸೊನ್ನೆ₃ + ಸಾರ₂]

ಸೊಪಚಿ (ನಾ). ತೀರ ಕೀಳುಜಾತಿಯವನು; ಚಂಡಾಲ: ಈ ಸೊ[ಪಾಶಾಂ. ಶ್ವ] ಪಚನಿಂತಡುವುದಡಗಕಟಾ ದುರುಳನೆಮ್ಮಂ ಕಾಣುತವೆ ಕಾಲ್ಗೆರಹಿನಲಿ ಮುಚ್ಚಿದನು ಮಾಂಸವಂ (ಬಸಪು. ೫೭-೨). [< ಸಂ. ಶ್ವಪಚಿ]

ಸೊಪನ (ನಾ). ಕನಸು; ಸ್ವಪ್ನ: ಸೊಪನಂ ನಿಜವೆದಾಯಿತೆಂದು ಒಗುಮಿಗೆಯೊಳು ಕಣ್ಣೆಱದು ನೋಡಿ (ಸಿದ್ಧೇಪು. ೭-೬೮). [< ಸಂ. ಸ್ವಪ್ನ]

ಸೊಪೆ (ನಾ). ಪೈರಿನ ಕೂಳೆ(?): ಬಾಣರಾವಿ ಕಸಬೇ ಗ್ರಾಮಾನುಗ್ರಾಮಗಳ ಆಯ ಬೆಳೆಸಿ ಮೆದೆ ಹೊರೆ ಸೊಪೆ ಆಳಿತ್ತಿ ಕಾಳು ಹಳಿಗಳ ವಳಗೆಯಿದನ್ತೆ ಮಾನ್ಯಗಳು (ಎಕ. XI, ಮೊಳಕಾ. ೨೫-೧೨೬; 1665).

[IP ಇದು 'ಸೊಪ್ಪೆ' ಎಂಬುದರ ಅಪಲಿಖಿತವಿರಬಹುದು]

ಸೊಪ್ಪಡಗು₁ (ಕ್ರಿ). ೧. ನಿಶ್ಶಕ್ತಿಯುಂಟಾಗು; ಶಕ್ತಿಗುಂದು; ಕುಗ್ಗು: ಸೊಪ್ಪಡಗಿರ್ದ ಕಾದಲನ ತಳ್ಪಿನ ಕಾಳೆಸಗಾಟೆ ಪೊಕ್ಕ ಮೆಯ್ಯೊಪ್ಪಿರೆ (ಲೀಲಾವ. ೧೩-೧೭); ಎಂಟು ಬಂಟರು ಕಂಟಕನಾಶವಾದರು ಇಪ್ಪತ್ತೈದು ಮಂದಿ ಸೊಪ್ಪಡಗಿದರು (ಮೋಳಿಮಾ. ೨೩೦-೭೩೩); ಕರ್ಪುರದ ಹೆಣ್ಣಾಗ್ನಿಪುರುಷನನಪ್ಪಿದಾಕ್ಷಣ ನೋಡಲೊಡಲುಂ ಸೊಪ್ಪಡಗಿ ಸಂದಳಿದು ನಿರ್ವಯಲಪ್ಪ ತೆಱನಂತೆ (ಸದ್ಗುರು. ೧-೯). ೨. ಸತ್ವದಿಂದ ಕೂಡಿರು (?): ಚಪ್ಪನ್ನದೇಶದ ಶೃಂಗಾರವಿದಱ ಮುಂದೊಪ್ಪಲಱಿಯದೆಂದವಳು ಒಪ್ಪಿದಳಾ ಕರ್ನಾಟಶೃಂಗಾರದ ಸೊಪ್ಪಡಗಿದ ಸೊಂಪಿನಿರವ (ಕುರಾಸಾಂ. ೪೧-೯೯).

[ಸೊಪ್ಪು₃ + ಅಡಗು₁ (< ಅಡಂಗು₁)]

ಸೊಪ್ಪಡಗು₂ (ಕ್ರಿ). [ವೀಶೈ] ಸೊಕ್ಕು ಇಲ್ಲವಾಗು; ಅಹಂಕಾರವಳಿ (?): ಸೊಪ್ಪಡಗಿದ ಸುಮ್ಮಾನಿಗಳವರಲ್ಲಿ ಗತಿಯನಱಸುವರೆ ಅವರಲ್ಲಿ ಮತಿಯನಱಸುವರೆ (ಅವಚಂ. ೧೫೦-೬೮೪); "ಸಮಾಧಾನದಿಂದಿರು; ಶಾಂತವಾಗಿರು; ಉತ್ಸುಕ ವಾಗಿರು" (ಅವಚಂ. ಕೋಶ); ಇಂತೀ ಉಭಯದಾಟದ ಕಾಟ ಸ್ವಸ್ಥಲವಾಗಿ ಭಕ್ತಂಗೆ ಸೊಪ್ಪಡಗಿ ವಿರಕ್ತಂಗೆ ಹೆಚ್ಚು ಕುಂದೆಂಬ ಉಭಯ ನಿಶ್ಚಯವಾದಲ್ಲಿ ಆತ ನಿಃಕಳಂಕ ನಿರತ ಸರ್ವನಿರ್ವಾಣಿ ನಿಃಕಳಂಕ (ಮೋಳಿಮಾ. ೪೭-೧೯೫); ನಿಜೇಂದ್ರಿಯ ವಾಗಿಯರ್ಪಣದೊಳರ್ಪಣದ ವಿವರಾರ್ಪಿತದ ಭೇದವಱೆದು ಸೊಪ್ಪಡಗಿರ್ದನವ ನಿಪ್ಪತಿಯ ಇರವದೆಂತು (ವೀಶೈಪು. ೮-೧೮-೨೮). [ಸೊಪ್ಪು₃ + ಅಡಗು₁ (< ಅಡಂಗು₁)]

ಸೊಪ್ಪಡಸು (ಕ್ರಿ). ನಿಶ್ಶಕ್ತಗೊಳ್ಳು; ಸತ್ತ್ವಹೀನವಾಗು: ನಡೆಗೆಟ್ಟು ಸುಯ್ಯುತ . . . ತಲ್ಲಣಿಸಿ ಸೊಪ್ಪಡಸಿ ಕೆಡೆಯಲೊಡನೆ (ನವಮೋ. ೭-೬); ತರಹರದಿ ಕರಚರಣ ಸೊಪ್ಪಡಸಿ ತಮ್ಮ ತಮ್ಮ ಮೈಯನುರೆ ಮರೆದು (ನವಮೋ. ೨೬-೮೦).

[ಸೊಪ್ಪು₃ + ಅಡಸು]

ಸೊಪ್ಪನೆ (ಅ). ಒಂದು ಅನುಕರಣಾವ್ಯಯ.

ಸೊಪ್ಪುಸೊಪ್ಪನೆ (ದ್ವಿರುಕ್ತಿ): ದೊಪ್ಪುದೊಪ್ಪನೆ ಪಚ್ಚೆಯಿಡುವಳು ದುಗುಡವ ಸೊಪ್ಪುಸೊಪ್ಪನೆ ತುಳಿವಂತೆ (ಭರಚಿ. ೧೩-೬೫). [ಸೊಪ್ಪು₃ + - ಅನೆ₂]

ಸೊಪ್ಪರಿ (ನಾ). ಒಂದು ಬಗೆಯ ಆಯುಧ: ಬಿಲ್ಲು ತೀರು . . . ಸೊಪ್ಪರಿ . . . ಖೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿ ಸಾಧನವಿಶೇಷಂಗಳಿಂದಲೂ (ವಿವೇಶ. ೨೬೩). [?]

ಸೊಪ್ಪರೆ (ಕ್ರಿ). (ಆಲಂ) ನಾಶಮಾಡು; ಧ್ವಂಸಗೊಳಿಸು: ಪರದಳವನೊಳಪೊಕ್ಕು ಸುಭಟರಂ ಸದೆದು ಸೊಪ್ಪರೆದಳವಳಿಸಲು (ಚೈಮಿಭಾ. ೨೨-೨೫); ಬೊಪ್ಪ ನೀ ಬಿಡು ಬಿಡು ಚಿಂತೆಯ ರಿಪುಗಳ ಸೊಪ್ಪರಿಸೆರೆತೆವನು (ಅಭಿಕಾ. ೬). [ಸೊಪ್ಪು₃ + ಅರ₂]

ಸೊಪ್ಪಳಿ (ಕ್ರಿ). ಅಹಂಕಾರವು ನಾಶವಾಗು; ಸೊಕ್ಕು ಇಲ್ಲವಾಗು(?): ಗೊಹೇಶ್ವರ ನಿಮ್ಮ ಶರಣ ಶಿವಯೋಗಿ ಸಿದ್ಧರಾಮಯ್ಯನನಪ್ಪಿ ಸೊಪ್ಪಳಿದು [ಪಾಶಾಂ. ಸೊಪ್ಪಡಗಿ] ನಮೋ ನಮೋ ಎನುತಿರ್ದೆನು (ಅವಚಂ. ೨೧೭-೯೮೩).

[ಸೊಪ್ಪು₃ + ಅಳಿ₂ (< ಅಱಿ₂)]

ಸೊಪ್ಪಾಗು₁ 'ಸೊಪ್ಪು₃' ಪರಾ.

ಸೊಪ್ಪಾಗು₂ 'ಸೊಪ್ಪು₄' ಪರಾ.

ಸೊಪ್ಪಿ 'ಸೊಪ್ಪೆ' ನೋ.

ಸೊಪ್ಪಿಸು₁ (ಕ್ರಿ). ೧. ಪುಡಿಮಾಡು; ಚೂರ್ಣಿಸು: ಸೊಪ್ಪಿಸಿದ ಮಣಸುಳ್ಳ ಶುಂಠಿಯನಿಟ್ಟು ಹೂರಣವನು ಬಿಳಿಯುದ್ದಿನಿಂದ ಚಾರಿಸಿಕೊಂಡ ಸಣ್ಣಸಂಪಳೆಯೊಳಗೆ ತುಂಬಿ (ಸೂಪಶಾ ೧-೬೫). ೨. (ಆಲಂ) ನಾಶಮಾಡು; ಹುಡಿಯೆಬ್ಬಿಸು: ಅವನಟ್ಟೆ ತೋಳ್ಗಳಂ ಚಪ್ಪರಿಸಿಕೊಂಡೆದ್ದು . . . ಮೆಟ್ಟಿ ಸೊಪ್ಪಿಸಿ ಪೊರಳ್ದರೆದು ತೆವರಿ ಪರಿದರೆಯಟ್ಟಿ ಚಿಪ್ಪುಚೀರಾಗಿಸಿತು ಸಕಲಪರಿವಾರಮಂ (ಚೈಮಿಭಾ. ೧೩-೫೦).

[ಸೊಪ್ಪು₃ + - ಇಸು₃]

ಸೊಪ್ಪಿಸು₂ (ಕ್ರಿ). ಶಕ್ತಿಗುಂದಿಸು; ಮೆತ್ತಗಾಗುವಂತೆ ಮಾಡು: ಪೊಂಗಿಸಿದಂ, ಸೊಪ್ಪಿಸಿದಂ (ಶಮದ. ೨೩೧ ಪ್ರಯೋ); ಮುಪ್ಪಿರದೆ ತೋಱೆ ಮೆಯ್ಯಂ ಸೊಪ್ಪಿಸಿದಂತಾಗೆ (ಬಾಧಪು ೫-೩೧); ಸೊಕ್ಕಾನೆಗಳ ಸುಂಡಿಲ ಸೊಪ್ಪಿಸಲು ರಾಮ ದಿಕ್ಕರಿಗಳಿಗವು ಮೊಱೆಯ ಇಕ್ಕುವಂದದೊಳು ಕಣ್ಗೆಟ್ಟೋಡಿದವು (ಕುರಾಸಾಂ. ೪೩-೧೧೧).

[ಸೊಪ್ಪು₃ + - ಇಸು₃]

ಸೊಪ್ಪು₁ (ಕ್ರಿ). ೧. ತಡೆ; ನಿವಾರಿಸು; ಅಡ್ಡಿಪಡಿಸು: "ಸೊಪ್ಪು- ನಿವಾರಣೇ" (ಶಬಧಾ.). ೨. ಸದೆಬಡಿ; ನಾಶಗೊಳಿಸು: ರಾವಣಂ ಮುಂತಪ್ಪ ದೆಸೆಮುಟ್ಟಿನ ಜಸದ ದೃತ್ಯರಂ ಱೆಪ್ಪಿ ಸೊಪ್ಪಿ ಸೋವಿದ ಶ್ರೀರಾಮಂ ಬೇಳ್ಪ ಜನ್ನದ ಹಸುವಂ ಕಳ್ದುಯ್ದುಂ ಬಾಟ್ಟೆನೆಂದು ಬಗೆವ ನೀನಾವೊಂ? (ರಾಮಾಶ್ವ. ೧೧೨-೨೦).

[ದೇ. ॥ ತಮಿ. ಚೋಪ್ಪು]

ಸೊಪ್ಪು₂ (ನಾ). ೧. ಎಲೆ; ತೊಪ್ಪಲು; ಪರ್ಣ: ಅಱುಹು ಕುಱುಹ ನುಂಗಿ ಕುಱುಹು ಅಱುವಿನಲ್ಲಿ ಲೇಪವಾಗಬೇಕು . . . ಸೊಪ್ಪನೊಳಕೊಂಡ ಬಿತ್ತಿನಂತೆ ಕರ್ಪುರವನೊಳಕೊಂಡ ಕಿಚ್ಚಿನಂತೆ (ಮೋಳಿಮಾ. ೮೪-೩೩೧); ದಿವಸಕರಾಪಸಾರಣ ದೊಳ್ಕೆದಿಸಿ ಬೆನ್ನನೆ ಬರ್ಪ ಪೆರ್ವಲಕ್ಕವತಮಸ ಪ್ರಚಂಡಚರರಿಕ್ಕಿದ ಸೊಪ್ಪೆನೆ ಬೆಂದಱುಂಬಿನೊಳ್ ಕಪಿಲ ಬಿಸಿಲ್ಗಳೇಂ ಮಱಸಲಾರ್ತುವೊ (ಅನಂಪು. ೭-೬೦); ಜೀವವುಳ್ಳಡೆ ತಂದು ಕಾರೆಯ ಸೊಪ್ಪನಾದಡೆ ತಿಂದು ಬದುಕಲು ಬಹುದಲಾ (ಬಸಪು. ೫೮-೪೩); ಅಱಸಿದರು ನಟ್ಟಡವಿಯಲಿ ಮುಂದುಱುಬಿದರು ಬೆಳ್ಳಾರಬಲೆಗಳ ಹರಹಿ ಸೊಪ್ಪಿನ ತೋಹಿನಲಿ ಸಿಲುಕಿಸಿದರಾ ಮೃಗವ (ಕುವ್ಯಾಅ. ೨೩-೧೦). ೨. ತರಕಾರಿಯಾಗಿ ಬಳಸುವ ಚಕ್ಕೋತ, ದಂಟು ಮುಂತಾದ ಸಸ್ಯ: ಎಲೆಯ ಹೇಱಿಂಗೆ ಬೇಳೆ . . . ಹೊತ್ತಳಕ್ಕೆ ವೀಸಂ ಕಾಣ ಸೊಪ್ಪಿಂಗೆ ಅರವೀಸ (ಸೌಇಾ. XI-ii, ೧೨೨-೧೫; 1072); ಕೀರೆ ನಱುವಲು ಚಕ್ಕವತ್ತ ಸೊಲೆ ಸಬ್ಬಸೀಗೆ ಮೊದಲಾದ ಸೊಪ್ಪುಗಳ ಬೇಱೆಬೇಱುಕ್ಕರಿಸಿದುದುರೆಯಂ . . . ತಾಳಿಸಿದೊಡಂ (ಸೂಪಶಾ. ೪-೧೬). 'ಸೊಪ್ಪುಗುಟ್ಟು₁' ಪರಾ.

ಸೊಪ್ಪುಸೊಪ್ಪು (ದ್ವಿರುಕ್ತಿ): ಸೊಪ್ಪುಸೊಪ್ಪುಗಳ ಮೆಳೆಮೆಳೆಗಳಂ ಸೋವುತ್ತ . . . ಮೃಗಮೃಗಂಗಳಂ ಕೆಡಹಿದರ್ (ಚೈಮಿಭಾ. ೨೮-೪೧). ಸೊಪ್ಪಿನ ಬೆಟ್ಟ = ಎಲೆ, ಕೊಳೆತ

ಗಿಡ ಮುಂತಾದುವುಗಳಿಂದ ರೈತರು ತಮ್ಮ ಭೂಮಿಗೆ ಗೊಬ್ಬರ ಮಾಡಿಕೊಳ್ಳುವುದಕ್ಕಾಗಿ ಬಳಸುವ ಹಾಗು ಕಂದಾಯವನ್ನು ತೆರಬೇಕಾಗಿಲ್ಲದಿರುವ ಭೂಮಿ : (ಮೃಗಜ. IV, ೭೪೭); ಪಕ್ಕದಲ್ಲೂ ಹಿಂದುಗಡೆಗೂ ಸೊಪ್ಪಿನ ಬೆಟ್ಟ (ತುಂಬಿಕೂ. ೮೨). **ಸೊಪ್ಪುನಾರಾಗಿ ಬಡಿ = ಸೊಪ್ಪು, ನಾರುಗಳನ್ನು ಬಡಿಯುವಂತೆ ಹೊಡೆ; ನಿತ್ರಾಣಗೊಳ್ಳುವಂತೆ ಹೊಡೆ:** ಮುಳಿದು ಮನೆಗ ವೋಗಿ . . . ಪೆಂಡತಿಯಂ ಸೊಪ್ಪುನಾರಾಗಿ ಬಡಿಯೆ (ವಡ್ಡಾರಾ. ೧೫೩-೨). **ಸೊಪ್ಪುಸದೆ, ಸೊಪ್ಪುಸವದಿ, ಸೊಪ್ಪುಸೆದ = ಎಲೆ, ತರಗು, ಬೇರು ಮುಂತಾದುವು:** ಒಂದು ದೊಡ್ಡ ಹೋತವು ಸೊಪ್ಪುಸದೆ ತಿನ್ನುತ್ತಿತ್ತು (ಪ್ರತಾಪ. ೨೧); ಒಣಎಲೆ ಹುಡಿ- ಮಣ್ಣು ಸೊಪ್ಪು- ಸವದಿಗಳೆಲ್ಲ ಮೋಡಗಳಾಡುವ ಎಡೆ ಕಂಡವು (ಸುದೀಪ. ೩೦-೫೫೫); ಗೌಡಿತಿಯು ಹೋಗಿ ಸೊಪ್ಪುಸೆದೆ ತಂದು ಕಷಾಯಮಾಡಿಕೊಟ್ಟಳು (ದೇಶಾಂಶ. ೮೧). **ಸೊಪ್ಪು ಸೊಗಡು = ಸೊಪ್ಪುಸದೆ :** ನೇತ್ರಕಪಾಲದಲ್ಲಿ ಕಾಳಿಕೆ ಹೊದ್ದದೆ ಶ್ರೋತ್ರಕಪಾಲದಲ್ಲಿ ಸೊಪ್ಪುಸೊಗಡು ಹೊದ್ದದೆ (ಚನ್ನವ. ೪. ೫೩೬-೧೪೪); ಚಂದಚಂದದ ಸೊಪ್ಪುಸೊಗಡಂ ಹಲವು ಸೆಕ್ಕೆಗಳ ಹೊತ್ತುಕೊಂಡ್ಕೆತಹನು (ಬಸಪು. ೪೩-೩೭). **ಸೊಪ್ಪುಹಾಕು = ೧.** (ಕರಾ) ಲೊಕ್ಕಿಸೊಪ್ಪಿನಿಂದ ಮಂತ್ರಪೂರ್ವಕವಾಗಿ ಭೂತೋಚ್ಚಾಟನೆ ಮಾಡು. **೨.** (ಆಲಂ) ಬೆಲೆಕೊಡು; ಲಕ್ಷ್ಯವಿಡು: ನೂರಜಹಾನಳು ಈ ವಿಚಾರಗಳ ಕಡೆಗೆ ಸೊಪ್ಪುಹಾಕುತ್ತಿರಲಿಲ್ಲ (ನೂರಜ. ೩೪); ಮೋಹಿನಿಗೆ ಮಾರುಹೋದ ಆ ಗಂಡ ಯಾರ ಮಾತಿಗೂ ಸೊಪ್ಪುಹಾಕುವ ಮನಃಸ್ಥಿತಿಯಲ್ಲಿರಲಿಲ್ಲ (ಕಮನೆ. ೧೦೨).

[ದೇ. ॥ ತಮಿ. ಚುಪ್ಪಲ್, ಚುಪ್ಪಿ = ಒಣಗಿದ ಎಲೆ, ಪುಳ್ಳಿ; ಮಲ. ಚಪ್ಪು; ತುಳು. ಸೊಪ್ಪು, ಚೊಪ್ಪು; ಕೊಡ. ಚಪ್ಪಲ]

ಸೊಪ್ಪು₃ (ನಾ). **೧.** ನಿಶ್ಶಕ್ತಿ; ಆಲಸ್ಯ; ಕುಗ್ಗಿದ ಸ್ಥಿತಿ: (೬). **೨.** (ಚಿಂತೆ, ಮುಪ್ಪು ಮುಂತಾದುವುಗಳಿಂದ) ಮುಖದ ಮೇಲೆ ಉಂಟಾಗುವ ಗೆರೆ , —ಸುಕ್ಕು: (ಚತುನಿ.೬. ೧. ೬೬).

ಸೊಪ್ಪಾಗು₁ = ೧. ಕುಗ್ಗು; ಶಕ್ತಿಗುಂದು; ಸೊರಗು: ಒಪ್ಪಿಸಿ ಮನಮಂ ಮಾನಿನಿಗೊಪ್ಪಿಸಿ ತನುವಂ ತಪಕ್ಕೆ ಮುನಿ ಮನಸಿಜನಿಂ ಸೊಪ್ಪಾಗಿರ್ದು (ಪಂರಾಮಾ. ೪-೧೩); ಪವನವ್ಯಾಘಾತದಿಂದುಗ್ರಭೀಮವ್ಯೂಗವ್ಯೂಹದಿನಪ್ಪಪಾಯಚಯದಿಂ ಸೊಪ್ಪಾಗೆಯುಂ ದೇಹಂ . . . ನಿಂದನಶ್ರಮದಿಂ ಯೋಗದಿಂ (ನೇಮಿಪು. ೨-೬೫). **೨.** ಅಸ್ತವ್ಯಸ್ತವಾಗು; ಕೆದರು; ಚೆಲ್ಲಾಪಿಲ್ಲಿಯಾಗಿರು: ನರಿ ಬಂದು ಬಾಗಿಲೊಳ್ ನಿಂದು ಪುಲಿಯ ಪಜ್ಜೆಯುಮಂ ಸೊಪ್ಪಾದ ಬಿಲನುಮಂ ಕಂಡು (ಪಂಚತಂ. ೩೮-೫); ಮುಡಿ ಸೊಪ್ಪಾಗದು ನೀವಿ ಬಿರ್ಚದು (ಜಗವಿ. ೧೭-೧೩೬); ಸೊಪ್ಪಾದ ತಿಲಕದ ಕೆದರ್ದ ಕಾಡಿಗೆಯ . . . ಕೋಮಲೆಯರ್ (ಚೆಮಿಭಾ. ೧೦-೫೦). **೩.** (ಬಟ್ಟೆ, ಕಾಗದ ಮುಂತಾದುವುಗಳಂತೆ) ಮುದುಡು; ಸುಕ್ಕಾಗು: ಗಂಜಿಮಡಿಯಂ ಸೊಪ್ಪಾಗದಂತುಟ್ಟು (ಸಮಪ. ೬-೩೬). **೪.** ಬಾಡು; ಕಂದು: ನಸುಸೊಪ್ಪಾದಧರಂ ಸಡಿಲ್ದ ವಸನಂ (ಅನುಮು. ೬೯); ಅಳಿದ ತಿಲಕಂ ಪರಿದ ಕುರುಳ್ಗೊಪ್ಪಾದಧರಮೊಪ್ಪಿತಾ ಕಾಂತೆಗೆ (ಚೆಮಿಭಾ. ೧೧-೨೫). **೫.** ನುಗ್ಗಾಗು; ಶಿಥಿಲಗೊಳ್ಳು: ಕುಂತದ ಧಾರೆಗಳ ಧಾಳಿಸುವ ನೆಲೆ ಸೊಪ್ಪಾದ ಹಿಳುಕಿನ ಗಱಿಯ ಕೀಲಿಸುವ . . . ವೀರಭಟರೊಪ್ಪಿದರು (ಕುವಾಭೀ. ೫-೩೮); ಉಱೆ ಸೊಪ್ಪಾದ ಶಕಟನಿಕಾಯವನು ಪೂರಾಯದೇಱಿನ ನಾಯಕರ ಕರಕರದು ಬವರಕೆ ಕಳುಹಿದನು ದ್ರೋಣ (ಕುವಾದ್ರೋ. ೧೫-೧೭). **೬.** ಮಂಕಾಗು; ಹೊಳಪಿಲ್ಲದಿರು: ಸೊಪ್ಪಾದ ಪೊನ್ನುಮಂ ಕಪ್ಪಾದ ರತ್ನಮುಮಂ . . . ಲೋಕಂ ಕೈಕೊಳ್ಳರ್ (ಧರ್ಮಾಮೃ. ೯-೧೦೮); ತಪ್ಪಿನಿಸುಮಿಲ್ಲದೆಲ್ಲರುಮೊಪ್ಪಿದ ಕೃತಿಯಂ ಕುತರ್ಕೆ ಪಲ್ದೊಡೆ ತನಗೇನುಪ್ಪಾದುದೆ ಸೊಪ್ಪಾದುದೆ (ಧರ್ಮನಾ. ೧-೬೦). **ಸೊಪ್ಪುಸೊಪ್ಪಾಗು = ೧.** ತುಳಿತದಿಂದ ಸವೆದುಹೋಗು: ಪುರುದೇವಂ ಮೊದಲೊಳ್ ನೀನೆರಡನೆಯೊಳ್ ನಡೆಯ ಸೊಪ್ಪುಸೊಪ್ಪಾದ ಪದಾಂತರದೊಳ್ ನಡೆದಿಪ್ಪತ್ತಿರ್ವರು ಮಿನ್ನಾ ಶಂಭವಾದಿಗಳ್ ತೀರ್ಥಕರರ್ (ಅಜಿಪು. ೬-೮೩). **೨.** ಮೆತ್ತಗಾಗು; ಮೆದುವಾಗು: ಅಂತು ಪಿಟಿಯೆ ಕಕ್ಕ[ಬ]ಗಲಲ್ದು ಸೊಪ್ಪುಸೊಪ್ಪಪ್ಪೆಲ್ವಂ ಕುದಿಯಿಸೆ ತತ್ಪಟಗುದಿದು . . . ಜೀವನ್ಮತಾವಸ್ಥೆಯೊಳಲ್ಲಿಂದಂ ತೆಗದು (ಶಾಂತಿಪು. ೬-೯೫ ವ). **ಸೊಪ್ಪುಸೊವಡಾಗು = ೧.** ನಜ್ಜುಗುಜ್ಜಾಗು; ನುಗ್ಗಾಗು: ಗದೆಗಳ್ ಸೊಪ್ಪುಸೊವಡಪ್ಪಿನಂ ಸೂಬ್ರಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್ (ಗದಾಯು. ೮-೧೧); ವೈಶ್ಯಜಂ ಮುನಿಕುಂಜರನಂ . . . ಪುಳ್ಳಿಗಳಂ ಕೊಂಡು ಸೊಪ್ಪು ಸೊವಡಪ್ಪಿನಮಟ್ಟಿ ಬಡಿಯೆ (ಧರ್ಮಾಮೃ. ೧೨-೨೨೦). **೨.** ಸೋತುಹೋಗು: ತಪ್ಪದೆಲೆ ನಾಳೆ ಮೃತಿ ನಿನಗವ್ವುದು ಪೋಗೆನೆ ನೃಪಾತ್ಮಜಂ ಕೇಳ್ದು ಮನಂ ಸೊಪ್ಪುಸೊವಡಾಗೆ (ವೃಷವಿ. ೩೧-೧೯). [ದೇ. ॥ ತಮಿ. ಚೊಪ್ಪ, ಚೋಪ]

ಸೊಪ್ಪು₄ (ನಾ). ಸಪ್ಪಳ; ಶಬ್ದ: ನಡೆವಡಿಗಳ ಸೊಪ್ಪುಣ್ಮದ ತೆಱದಿ ಪಡಿಯಂ ದನಿಗೊಡದಂತೆ ತೆಱೆದು ಪೊಱಮಡುತ (ಜಯಕಾ. ೧೩-೭೦).

ಸೊಪ್ಪಾಗು₃ = ಸದ್ದಾಗು; ಶಬ್ದವುಂಟಾಗು: ತಾಗದ ಚುಂಬನಮುಱಿ ಸೊಪ್ಪಾಗದ ಕರಘಾತಮಗಲದಿರ್ಪನುಭವದೊಳ್ ಸಾಗಿಸುವ ಸರಭಸಂ ಮಿಗೆ ರಾಗಿಸುವ ಮನಂ ಮನೋಹರಂ ಜಾರೆಯರೊಳ್ (ಗಿರಿ. ೪-೬೩). [< ಸಪ್ಪು₄]

ಸೊಪ್ಪು₅ (ನಾ). [ವೀಶೈ] ಸೊಕ್ಕು; ಗರ್ವ; ಅಹಂಕಾರ: 'ಸೊಪ್ಪಡಗು₂', 'ಸೊಪ್ಪಳಿ' ಪರಾ. [?]

ಸೊಪ್ಪುಕುರಿ 'ಸೊಪ್ಪುಗುರಿ' ನೋ.

ಸೊಪ್ಪುಗತ್ತಿ (ನಾ). ಸೊಪ್ಪು ಕೊಯ್ಯಲು ಬಳಸುವ ಕತ್ತಿ: ಗೌಡರು . . . ಕೈಯ್ಯಲ್ಲೊಂದು ಸೊಪ್ಪುಗತ್ತಿಯನ್ನು ಹಿಡಿದುಕೊಂಡು, ತೋಟಕ್ಕೆ ಹೋಗುವ ದಾರಿಯಲ್ಲಿ ಹೊರಟರು (ಪಂಜಪಂ. ೨೯). [ಸೊಪ್ಪು₂ + ಕತ್ತಿ]

ಸೊಪ್ಪುಗಾಣ್ (ಕ್ರಿ). (ಆಲಂ) ನಿಸ್ಸಾರವಾಗಿ ಕಾಣು; ಹುರುಳಿಲ್ಲವೆಂದು ಭಾವಿಸು: ಇಂದ್ರಿಯಮ್ಮೆದಱ ಸೋಂಕಿಲ್ಲವಾಗ ಸುರೇಂದ್ರಸುಖವ ಸೊಪ್ಪುಗಂಡು ತಂದ್ರವಳಿದು ಱುಮ್ಮಱುಮ್ಮನೆ ರಾಯಗತೀಂದ್ರಿಯಸುಖದೋಱುತಿಹುದು (ಧರಚಿ. ೧೮-೫೮). [ಸೊಪ್ಪು₂ + ಕಾಣ್]

ಸೊಪ್ಪುಗಿಳಿ (ನಾ). ಒಂದು ಬಗೆಯ ಗಿಣಿ: ಇವುಗಳಲ್ಲಿ ತೀರ ಪುಟ್ಟದಾದ ಒಂದು ಜಾತಿಯನ್ನು 'ಸೊಪ್ಪುಗಿಳಿ' ಯೆಂದು ಕರೆಯುತ್ತಾರೆ (ಜಾಲಶ್ರ. III, ೧೪೩೪).

[ಸೊಪ್ಪು₂ + ಗಿಳಿ]

ಸೊಪ್ಪುಗುಟ್ಟು₁ (ಕ್ರಿ). ಬೇಟೆಯಲ್ಲಿ ಪೊದೆಗಳನ್ನು ಬಡಿದು ಬೇಟೆಯ ಪ್ರಾಣಿಯು ಹೊರಗೆ ಬರುವಂತೆ ಮಾಡು, —ಎಬ್ಬಿಸು; ಸೋವು: "ಪಪ್ಪುಕವೆಂದನೆಲ್ ಸೊಪ್ಪುಗುಟ್ಟುವುದಕರ್ಮರ್ದ ನಾಮಂ" (ಶಬ್ದಮಂ. ೩೧).

[ಸೊಪ್ಪು₂ + ಕುಟ್ಟು₁]

ಸೊಪ್ಪುಗುಟ್ಟು₂ (ಕ್ರಿ). ಸೊಪ್ಪನ್ನು ಜಜ್ಜುವಂತೆ ಕುಟ್ಟು, — ಚಚ್ಚು, — ತದೆ: ಅಂದುಗೆಯಂತೆ ಮೇಗಾಲಂ ಪತ್ತಿ ಸೊಪ್ಪುಗುಟ್ಟುವರ್ (ಧರ್ಮಾಮೃ. ೩-೭೩); ಕೊಲೆವಾವಾಗಿ ಪುಟ್ಟಿದೊಡಾತನೆ ಕಂಡು ಸೊಪ್ಪುಗುಟ್ಟಿದೊಡೆ ಮಿಡುಮಿಡುಕಿ ಸತ್ತು (ಬಂಪರಿ. ೧೩-೩೪ ವ); ಕೆಲರಂ ಬೃಹತ್ಕಂ ಸೊಪ್ಪುಗುಟ್ಟುತಂತರೆಬರಂ ಕುಡಿಯಳ್ಳಿಗಳನಿಱಿದು (ವೀಶೈಪು. ೪-೧೪-೩೨). [ಸೊಪ್ಪು₂ + ಕುಟ್ಟು₁]

ಸೊಪ್ಪುಗುಟ್ಟುಹ (ನಾ). ಬೇಟೆಯಲ್ಲಿ ಪ್ರಾಣಿಗಳನ್ನು ಎಬ್ಬಿಸಲು ಪೊದೆಗಳನ್ನು ಬಡಿಯುವುದು; ಸೋವುವುದು: "ಪೊಪ್ಪುಕಂ — ಸೊಪ್ಪುಗುಟ್ಟುಹಂ" (ಶಮದ. ಪರಿ. ೨).

ಸೊಪ್ಪುಗುರಿ, ಸೊಪ್ಪುಕುರಿ (ನಾ). ಒಂದು ಜಾತಿಯ ಕುರಿ: ಅವರು ಚರ್ಮ ಸುಲಿಯುತ್ತಿದ್ದ ಕುರಿಯ ತಲೆಯಿಂದ ಅದು 'ಸೊಪ್ಪುಗುರಿ' ಎಂದೂ ಗೊತ್ತಾಗುವಂತಿತ್ತು (ಮಲಿಮ. ೪೪೭). **ಸೊಪ್ಪುಕುರಿ :** ಅವನ ರೊಪ್ಪದಲ್ಲಿ ಸೊಪ್ಪುಕುರಿಗಳಿವೆ (ರೂಢಿ).

[ಸೊಪ್ಪು₂ + ಕುರಿ₂(< ಕುಜ್₃)]

ಸೊಪ್ಪುಗೊಲೆ (ನಾ). ಸೊಪ್ಪು ಕತ್ತರಿಸುವಂತೆ ಕಡಿಯುವಿಕೆ: ಸೊಪ್ಪುಗೊಲೆ ಗೊಲ್ಲನೀಗಳೆ (ಚಚಿ. ೬-೨೪೧). [ಸೊಪ್ಪು₂ + ಕೊಲ್₂]

ಸೊಪ್ಪುಡಿಗೆ (ನಾ). ಎಲೆಗಳಿಂದ ಮಾಡಿದ ಉಡುಪು.

ಸೊಪ್ಪುಡಿಗೆಯರ್ (ಬಹುವ) = ಎಲೆಗಳಿಂದ ಮಾಡಿದ ಉಡುಪನ್ನು ಧರಿಸಿದವರು: ಪೀಲಿಯುಡಿಗೆಯರ್ ಕೆಲರ್ ಸೊಪ್ಪುಡಿಗೆಯರ್ ಕೆಲರ್ (ಅಬ್ಬಲೂ. ೩-೨೯). [ಸೊಪ್ಪು₂ + ಉಡಿಗೆ₁ (< ಉಡುಗೆ)]

ಸೊಪ್ಪುವಡು (ಕ್ರಿ). (ಆಲಂ) ಸಾರವಿಲ್ಲದಾಗು; ನೀರಸವಾಗಿರು: ಪ್ರವಿದಿತಸಾಹ

ಸೋರ್ಜಿತ ಮಹಾವುರುಮೋದ್ಧತರಾ ರಸಂಗಳಂ ಸವಿಗಿಡೆ ಸೊಪ್ಪುವಟ್ಟ ಬಗೆಯಿಂದಟೆ ಗನ್ನಡಗಬ್ಬದೊಳ್ ತಗುಳ್ವುವ ಬೆಸನೇಕೆ (ಬಂಹರಿ. ೧-೧೨). [ಸೊಪ್ಪು + ಪಡು೧]

ಸೊಪ್ಪುಳ್ 'ಸಪ್ಪುಳ್' ನೋ.

ಸೊಪ್ಪುಳ 'ಸಪ್ಪುಳ್' ನೋ.

ಸೊಪ್ಪುಳಾಲಿಸು (ಕ್ರಿ). ಸದ್ದನ್ನು ಕೇಳು; ಶಬ್ದವನ್ನು ಆಲಿಸು: ವಿತ್ತಮುಳ್ಳ ರಾಲಯಂಗಳಲ್ಲಿ ರಾಗಿಸುತ್ತೆ ಸಾರ್ದು ಸೊಪ್ಪುಳಾಲಿಸುತ್ತೆ ನೋಡಿ (ವೃಷವಿ. ೨೦-೭).

[ಸೊಪ್ಪುಳ್ (< ಸಪ್ಪುಳ್) + ಆಲಿಸು೧]

ಸೊಪ್ಪುಳಿಡು (ಕ್ರಿ). ಸದ್ದು ಮಾಡು; ಶಬ್ದಮಾಡು: ಕಾಲ್ಗಳ ಸೊಪ್ಪುಳಿಡದಂದವೆ ನಡತಂದು (ಶ್ರೀಪಾಲ. ೮-೪೪). [ಸೊಪ್ಪುಳ್ (< ಸಪ್ಪುಳ್) + ಇಡು೧]

ಸೊಪ್ಪುಳ್ದೋಱು (ಕ್ರಿ). = ಸೊಪ್ಪುಳಿಡು: ಅಡಿ ಸೊಪ್ಪುಳ್ದೋಱಿದಂತೊಯ್ಯನೆ ಕಡವೆಡೆಯೊಳ್ ಕಂದಲಂ ಸಾರ್ದು (ಚಳವಿ. ೩-೫೫).

[ಸೊಪ್ಪುಳ್ (< ಸಪ್ಪುಳ್) + ತೋಱು]

ಸೊಪ್ಪೆ, ಸೊಪ್ಪಿ, ಸೋಪಿ (ನಾ). ೧. ಜೋಳ ಮುಂತಾದ ತೆನೆಗಳನ್ನು ಕೊಯ್ದ ಮೇಲೆ ಉಳಿಯುವ ಗಿಡದ ಭಾಗ; ದನಗಳಿಗೆ ಮೇವಿನಂತೆ ಉಪಯೋಗಿಸುವ ದಂಟು: ಎಸವ ಬಾಜಾರದೊಳಂ ಸೊಪ್ಪಿಯ[illegible]ಯುಲ್ಲಿ ಬಸವಣ್ಣಯ್ಯಂ ಕುಳಿತು ಸೊಪ್ಪೆಯಂ ವಿಕ್ರಯಿಸಿ ಪಶುಗಳ್ಗೆ ಕೊಡುತಿರಲು (ಗುರುಚಾ. ೧೧-೬೪); ಸಾರಂಗವು . . . ದನದ ಹಕ್ಕೆಯೊಳಗೆ ಒಟ್ಟಿದ ಸೊಪ್ಪೆಯ ಮರೆಗ ಅಡಗಿಕೊಂಡಿತು (ಮುಂಬಯ. ೪-೪೨); ಈ ಸೊಪ್ಪೆಯ ಸೂಡಿನಂತಹ ಕಾಗದವನ್ನು ಓದಲು ನನಗೆ ಅವಕಾಶವಿಲ್ಲ (ಪ್ರಬಮ. ೩೩). **ಸೊಪ್ಪಿ** : ೧. ಸೊಪ್ಪಿಯಂ ಕೊಂಡು ದಿನಚರಿಯದಿಂ ಬಸವಂಗೆ ಹಾಯ್ಕುತಿರೆ (ಚಲು. ೬೨-೭೧). ೨. ನಿಸ್ಸಾರವಾದ ಭಾಗ; ಜೊಳ್ಳು: ಕಾಳುಗಳೊಳಗೆ ಶೆಂಗದ ಸೊಪ್ಪಿ ಕೂಡಿದ್ದಿರಬಾರದು (ಮುಂಬವ್ಯಾ. ೩೭). ೩. ನಾರು; ಜುಂಗು: ಸುಂಠಿಯ ಮೇಲೆ, ನಿರಗಿಗಳಿರುತ್ತವೆ. ಕುಟ್ಟಿ ನೋಡಿದರೆ . . . ಧಾರಧಾರದ ಸೊಪ್ಪಿಗಳು ಉಳಿಯುತ್ತವೆ (ಮುಂಬವ್ಯಾ. ೫೯). **ಸೋಪಿ** : ೩. ಇವರು . . . ತೆಂಗಿನಕಾಯಿಯ ಮೇಲಿನ ಸೋಪಿಯನ್ನು ತೆಗೆಯುವದು ಮುಂತಾದ ಬೇರೆ ಹೋರಗಳನ್ನು ಮಾಡುವರು (ಕಭಾಗ. ೧೬೭).

[ದೇ. ॥ ತೆಲು. ಕೋಲಾ. ಚೊಪ್ಪ./ ಮರಾ. ಸೋಪ್ = ಬಾಳೆಯ ಪಟ್ಟೆ]

ಸೊಬಂಗ 'ಸೊಬಗ' ನೋ.

ಸೊಬಗ, ಸುಬಗ, ಸೊಬಂಗ (ನಾ). ೧. ಚೆಲುವ; ಸುಂದರ: "ನೀಱರೆಸಲ್ ಸೊಬಗರ್" (ಕವಿಕಂ. ೧೯೫); ಸೊಬಗಂ ಮಹಿಮಾನ್ವಿತನತಿಧನ್ಯಂ (ಶೋಕೋಪ. ೧೧-೩೭); ಎಲೆ ಸೊಬಗ ನಿನ್ನಂ . . . ಅಂದೊರ್ಮೆ ಕಂಡೆನಂದು ಮೊದಲ್ಗೊಂಡಲರಂಬನೆನ್ನನುಜೆ ಕೋಟಲೆಗೊಳಿಸುತ್ತಿರ್ಪಂ (ದಶಕು.೪-೯೮). **ಸುಬಗ** : ೨. ಒಬ್ಬಾತನ ಹೆಸರು: ಶ್ರೀಕುಮಾರ ಕೀರ್ತಿದೇವರ ಗುಡ್ಡಂ ಸುಬಗಂ ಬರೆದಂ (ಎಕ. XI, ಚಿತ್ರದು.೭೪-೩೯: 968). **ಸೊಬಂಗ** : ೧. ಮಂಗಳಾರ್ಧಾಂಗ ತ್ರಿಗುಣಂಗಳುತ್ತುಂಗ ನೇತ್ರಂಗಳ ಸೊಬಂಗ (ಚಲು.೩೭-೧). P ಇದು ಛಂದಸ್ಸಿಗಾಗಿ ಮಾಡಿಕೊಂಡಿರುವ ರೂಪ.

[ಸೊಬಗು + - ಅ೨]

ಸೊಬಗಿ (ನಾ). ಚೆಲುವೆ; ಸುಂದರಿ : ನೃಪನ ವ್ಯಗ್ರತೆಯಿನಿತರ ವನಿತೆಯರಾಗ್ರಹಮಂ ಬಿಟ್ಟನೇನವರ್ ಸೊಬಗಿಯರೋ (ಶಾಂಪು. ೧-೭೩); ಸೊಬಗಿಯ ಗಾಂಪಿನಂತೆ ಸುಡಿ ಚಾಣನ ಮೋನದಂತೆ . . . ಕಡುಲೇಸವ್ವ ಸನ್ಮಾರ್ಗಮಂ ಬಿಟ್ಟು (ಧರ್ಮಾಮೃ. ೮-೯೪); ಸೂಕ್ಕಾನೆನಡವೆತ್ತ ಸೊಬಗಿಯರ್ ವಿಟರರ್ದ ಬಿಕ್ಕನೆ ಬರಿಯುವಂದದಲಿ ಅಕ್ಕಜಂದಾ ಲೋಕನಗೆಯ್ದು (ಮೋಹತ. ೨೪-೧೬). [ಸೊಬಗು + - ಇ೩]

ಸೊಬಗು, ಸುಬಗು (ನಾ). ೧. ಅಂದ; ಚೆಲುವು: ಸುಕುಮಾರಸ್ವಾಮಿಯ ರೂಪಮಂ . . . ಸಂಪತ್ತಂ ಸೊಬಗಂ ಒಲ್ಮೆಯಂ . . . ನೆನೆನೆನೆದು (ವಡ್ಡಾರಾ. ೩೦-೧೦); ಎಲ್ಲಿದಂ ವಿನೋದದ ಮೊದಲಲ್ಲಿದಂ ಸೊಬಗಿನಾಗರಂ (ಆದಿಪು. ೩-೧೫); ನೀವು ಸೊಬಗಿನ ನಿಧಿಯಲೇ (ಕುವ್ಯಾಳ. ೧೫-೨೬). ೨. ಅತಿಶಯ; ಹೆಚ್ಚುಗಾರಿಕೆ: ಹೊಜಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿಯುವುದಯ್ಯಾ ಇಜಿಯದ ವೀರ ಇಲ್ಲದ ಸೊಬಗುವ ಹೇಳುವುದೇ ನಾಚಿಗೆ (ಬಸವ. ೩೦೪). **ಸುಬಗು**: ೩. ಸಂಪತ್ತು; ಐಶ್ವರ್ಯ: ದಾನಪ್ರಿಯಗಂ ಜಯಾಪ್ರಮದೆಗಂ ದೋರ್ಮ್ಮಂಡಳಂ ತಾನೆಸಲ್ ನೆಲೆಯಾದಂ ಸುಬಗಿಂಗಮುದ್ಭಳಯಶಶ್ರೀಕಾಂತೆಗಂ ಕೇಶವ[೦] (ಸೌಂಶಾ. XI-ii, ೧೬೯-೧೨; 1119).

[< ಸಂ. ಸುಭಗ-/ ತುಳು. ಸೊಬಗ್; ತೆಲು. ಸೊಬಗು]

ಸೊಬಗುಗಾತಿ (ನಾ). = ಸೊಬಗಿ: ಕಡುಚೆಲ್ವುವಡೆದ ಸೊಬಗುಗಾತಿ ಮೆಲ್ಲನೆ ನಡತಂದಳಾ ನೃಪನೆಡೆಗೆ (ನೇಮಿಸಂ. ೧೨-೫೧). [ಸೊಬಗು + - ಕಾತಿ೩]

ಸೊಬಗುಗಾರ (ನಾ). = ಸೊಬಗ ೧: ಅಹಹ! ಹುಟ್ಟಾ ಗೆಲ್ಲಬಲ್ಲ ಸೋಲದ ಸೊಬಗುಗಾರ! (ಉಯ್ಕಾಲ. ೧೦೦-೯). [ಸೊಬಗು + - ಗಾರ (< - ಕಾಱ)]

ಸೊಬಗುವಡು (ಕ್ರಿ). ಅಂದವಾಗು; ಶೋಭೆಯನ್ನು ಹೊಂದು: ತೊಡವೆಲ್ಲಮುಂ ತೊಟ್ಟು ಪಣಗೆ ತಿಲಕಮನಿಟ್ಟು ತಿಗುರಿಂದ ಸೊಬಗುವಟ್ಟು . . . ಸೊಗಯಿಸಿದರು (ಜೈಮಿಭಾ. ೩೦-೧೭). [ಸೊಬಗು + ಪಡು೧]

ಸೊಬಗುವಡೆ (ಕ್ರಿ). = ಸೊಬಗುವಡು: ಸತ್ಪತಿ . . . ಕರ್ಣಾಟದೊಳಂ ಸತ್ಕವಿ ನಿವಹಂ ಪೊಗಟೆ ಚಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್ (ಕಾದಂಪು. ೫); ತನಿ ಸೊಬಗುವಡೆದ ಸನ್ಮೋಹನದ ಕಣಯೆ ಬಾ (ಜೈಮಿಭಾ. ೬-೨೫). [ಸೊಬಗು + ಪಡೆ೧]

ಸೊಬಗುವೆಱು (ಕ್ರಿ). = ಸೊಬಗುವಡು: ವಿಳಾಸವಾಂತ ನಿತ್ಯವ್ರತಮಾಕೆಯೊಳ್ ಸೊಬಗುವೆತ್ತ ಗುಣವ್ರತಮುಂ ಜಗಂ ವಿಳಾಸವ್ರತಿ ಕೊಂಡದೇ ಸವಿರತಿವ್ರತಮಾ ನೃಪನೆತ್ತಿದೇಕವತ್ನೀವ್ರತಮೆಯ್ದೆ ಸೂಚಿಸವೆ ಕಾಂತೆಯ ರೂಪಿನ ಪೆಂಪಿನೊಲ್ಮೆಯಂ (ಅರ್ಧನೇ. ೧-೭೬); ಸಿಂಗರದೊಳ್ ಸೊಬಗುವೆತ್ತು ವಿಳಾಸದೊಳ್ ವಿವೇಕಂಬಡೆದು ನಡೆದು ಬಂದು (ಗಿರಿಕ. ೨-೧೦೫ ಪ); ಧರಣಿ . . . ಸೊಬಗುವೆತ್ತಳು ಸತಿಯ ಕಣುಸನ್ನೆಯಲೆ ನಡೆದು (ಬಸವ. ೧೧-೪೦). [ಸೊಬಗು + ಪೆಱು೧]

ಸೊಬಗೆ (ನಾ). ಚೆಲುವೆ; ಸುಂದರಿ: ತದುರ್ವೀಪಾಲಕಂಗಿಷ್ಟಸುಂದರಿಯರ್ ಸುಂದರರೂಪಯರ್ ಸೊಬಗೆಯರ್ ಕೂರ್ತಿರ್ಪರ್ (ಶಾಂಪು. ೫-೩೨); ಸೊಬಗೆಯಾದಳ್ ಜಾಣೆಯಾದಳ್ ಸರಸ್ವತಿ (ಅನಂಪು. ೧-೫೧). [ಸೊಬಗ + - ಎ೩]

ಸೊಬಗೆರ (ನಾ). (?): ಕಂಡು ಸೊಬಾರ ಕಾರ್ಬೊಗೆಯ ಪೋಲ್ವೊಡಲಿಂಗಳ ಕೆಂಡಂಗಳಾ ತುಂಡದ ಕೋರೆವಲ್ಲಗಳ . . . ಸೋರೆಮೂಗಿನ ಭೂತಗಣೇಂದ್ರನಂ (ಹಾಲಾಸ್ಯ.೧-೮-೧೦); ಕಬಂಧಯುತಜಿಹ್ವೆ ಶಶ್ವನ್ಮಿದು ಪುಷ್ಪಜಂಘಾದ್ಯಯಂ ಸೊ[ಪಾಠಾಂ. ಸೋ]ಬಾರಮಿವು ನಾಲ್ಕು ಹ್ರಸ್ವಗತಲಕ್ಷಣಂಗಳ್ ಕರಂ (ಹಾಲಾಸ್ಯ. ೧-೧೨-೩೬); ದೇವರ ದೇವ ನೀನೆನ್ನ ತಪ್ಪನಿದಂ ಸೊಬಾ[ಪಾಠಾಂ. ಸಭಾ]ರಮನೀಗ ಸೈರಿಪುದೆಂದೆನಲ್ (ಹಾಲಾಸ್ಯ. ೨-೩-೩೮); ಆಗಳನೇಕಹೇಮಸುಮಮೌಕ್ತಿಕವೃಷ್ಟಿಗಳಂ ಸೊಬಾರಮಂ ಭೋಗಿಗಳೆಯ್ದೆ ತಮ್ಮೊಳುಜೆ ಸೂಸೆ (ಹಾಲಾಸ್ಯ. ೩-೩-೧೦). [?]

ಸೊಬ್ಬಣ (ನಾ). ಒಂದು ಬಗೆಯ ತೆರಿಗೆ: ೧ ಮರಿಯಾದಯಲು ಸೊಬ್ಬಣ ಬನವೆ ಪಂಡಿ XX ಹಳ್ಳಿ ಹಳ್ಳವೂ ತಿಂಗಳ ಮಂನ್ನೆಯ ನಿಬಂಧ ಮುಂತಾದ ಎಲ್ಲಾ ಕಿಱುಕು XXX ಳನು (ಮೈಆರ್.೧೪೪೨.೨೬-೮; ಸು. 1270). 'ಸೊಬಣ' ಪರಾ. [?]

ಸೊಮ್ಮಳಿಸು (ಕ್ರಿ). ನೋಯು; ಹಿಂಸೆಪಡು(?): ಕಮ್ಮಿ ಹೆಗ್ಗೂರಿಟ್ಟು ಸುಯಿವುತೆ ದಿಮ್ಮುವಿಡಿದಂತುಸುರುವಿಡಿವುತೆ ಸೊಮ್ಮಳಿಸುತೋರೊರ್ಮೆ ನರವಿಯ ಬಱಿದೆ ಬೈವುತ್ತೆ (ಮದಪು. ೭-೫೫). [ಸೊಮ್ಮಳಿ + - ಇಸು೨]

ಸೊಮ್ಮಳಿ (ಕ್ರಿ). ಸೊಕ್ಕಡಗು; ಗರ್ವವು ನಾಶವಾಗು: ಇಂತಿರೊಂದು ಬೞುನುಡಿಗ ಸೊಮ್ಮಳಿದು ಮೆಯ್ಗೆಟ್ಟು ವಾರ್ವಂ . . . ನಿಮ್ಮ ಕುದುರೆಯಂ ನಡಗಿಡಿಸಿದಂ (ರಾಮಾಶ್ವ. ೧೩೮-೫೫). [ಸೊಮ್ಮು೨ + ಅಳ್೧]

ಸೊಮ್ಮು೧ (ಕ್ರಿ). ಸೇರಿಸಿ ಹೊಲಿ; ಕೂಡಿಸಿ ಹೊಲಿ: ಆ ತೊವಲುಗಳ ಒತ್ತಿ ಮಗುಚಿ ತಿದಿಯನು ಮಾಡಿಯಾ ಚಾರುದತ್ತನನದಱೊಳು ಹೊಗಿಸಿ ಅದಱ ಬಾಯನು ಸೊಮ್ಮಿ ಬಳಿಕುಳಿದಾಡಿನ ತಿದಿಯೊಳಗಱುವರು ಹೊಕ್ಕು (ನೇಮಿಸಂ. ೧೦-೨೪೧). [?]

ಸೊಮ್ಮು೨ (ನಾ). ೧. ಸಂಬಂಧ; ನೆಂಟಿಸ್ತಿಕೆ; ಬಂಧುತ್ವ: ರಾಯನ ಸೊಮ್ಮಿನವರಲಿ ಸೀಳಿದನು ಹದಿನೆಂಟುಸಾವಿರವ (ಕುವ್ಯಾಕ.೧೦-೨೯); ಈ ಲೋಕದಱೊಳೆಯೊಳು ನಿಮ್ಮೊಡೆಯನೀಗ ವಿವರಿಸಿ ನೋಡಿದೊಡೆ ನಮ್ಮ ರವಿಕುಲದ ಸೋಮಕುಲದ ಸೊಮ್ಮಿನವನಲ್ಲ (ಸಮ್ಮಳಿ.೮-೧೬). ೨. ಸೇರಿದುದು; ಸಂಬಂಧಪಟ್ಟುದು: ನೀಂ ಮಗುಳೆ ಹೀನದಶಯೋನಿಗಳೊಳೊಗೆದವಱ ಸೊಮ್ಮಿನಿಸುವಾಹಾರಮಂ ಕೊಂಡು ಜೀವಿಸು (ಪದ್ಮರಾ. ೧೦-೧೩೬).

ಸೊಮ್ಮುಸಂಬಂಧ = ಬಂಧುತ್ವ; ನಂಟುತನ: ಸಾಮಾನ್ಯ ಸಂದೇಹಕ್ಕೆ ಕರ್ತೃಭೃತ್ಯತ್ವವಲ್ಲದೆ ಜ್ಞಾನಾತ್ಮಂಗೆ ಸೊಮ್ಮುಸಂಬಂಧವ ಭಾವಿಸಲಿಲ್ಲ (ವೋಳಿಮಾ. ೪೦-೧೬೬); ನಮಗೆಯು ನಿಮಗೆಯು ಸೊಮ್ಮುಸಂಬಂಧವಿಲ್ಲ ನೀವೆಲ್ಲಂ ನಿಮ್ಮರಸ ನಲ್ಲಿಗಿರದೆ ಪೋಪುದು (ನಂಬಿ. ೮-೮). [< ಸೊಮ್ಮು$_1$?]

ಸೊಮ್ಮು$_3$ (ನಾ). ೧. ಸೊತ್ತು; ಸಂಪತ್ತು: ಶಿವನ ಸೊಮ್ಮ ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದೊಡೆ ತನ್ನ ಭಕ್ತಿ ತನ್ನನೆ ಕೆಡಿಸುವಮ (ಬಸವ. ೨೦೩); ಸುಮ್ಮನಿವನಲಿ ನಮ್ಮ ವಿದ್ಯೆಯ ಸೊಮ್ಮ ತುಂಬಿಡಬೇಕು (ಸಂಭಪ. ೧೮-೨೭); ಸಮ್ಮಾನಕೆಂದು ಕರೆದರೆ ಮನೆಯೊಳಿದ್ದ ಸೊಮ್ಮ ಕದ್ದೊಯ್ಯರಂದದೊಳು (ಭರಚ. ೧೧-೬೬). ೨. ಹಣ, ಒಡವೆ ಮುಂತಾದ ವಸ್ತು: ಸತಿ . . . ಇದಿರ್ವಂದು ಪಾದಯುಗಕ್ಕೆಱಗಿ ಕನ್ನದಗಳಿಯವಂ ಕೈಯ ಸೊಮ್ಮುಗಳ ಈಸಿಕೊಳುತ (ಬಸಪು. ೩೧-೨೯). ೩. ಒಂದು ಬಗೆಯ ತೆರಿಗೆ: ತೋಟ ತುಡಿಕೆ ಮಗ್ಗ ಮನೆಹಣ ಸುಂಕ ಸೊಂಮು ಸುವರ್ನಾದಾಯ ಮೊದಲಾದ್ದು (ಎಕ. XIV, ಚಾಮರಾ. ೨೬೮-೨೪; ಸು. 1397). [ದೇ. ॥ ತಮಿ. ಚೊಮ್ ; ತೆಲು. ಸೊಮ್ಮು]

ಸೊಮ್ಮು$_4$ (ನಾ). ೧. ಠೀವಿ; ಗತ್ತು: ನಮ್ಮನೊಬ್ಬರನು ನೋಡದೆ ಕಣ್ಣ ಮುಚ್ಚಿಹ ಸೊಮ್ಮೇನು (ಭರಚ. ೪೩-೫೮); ಮಹಾಸ್ವಾಮಿಯವರ ಸೊಮ್ಮಿನ ಸಯ್ಯಿನ ಬಿರುದು ಕುಬೇರನನ್ನೂ . . . ಚಿನ್ತಾಮಣಿಗಳನ್ನೂ ನಾಚಿಸುತ್ತ ಪುರುಳ್ಗೊಂಡಿರುವುದು (ಚಿಬಿಅ. ೪೨-೫). ೨. ಸೊಕ್ಕು; ಗರ್ವ: ನಮ್ಮ ಬೆಂಬಲವಿಡಿದು ಪಾರ್ಥನ ಸೊಮ್ಮ ಮುಱಿವೆನೆನುತ್ತ ಬಂದಿಹ ಕರ್ಮಿ ಕೌರವಕುನ್ನಿಗಾವೇನೆಂಬೆವು (ಕೃಷ್ಣಾಕಾ. ೧೯-೪೨); ಸುರ್ಕಿಯುಮಿಱಿದುಮಱಿದುಂ ಪೋಪೀ ಮೆಯ್ಯಂ ನಿಚ್ಚಮೆಂದೆ ನಂಬಿ ಸೊಮ್ಮಿಂ ಪರ್ಕಳಿಸುವಂ ಗಾಂಪನಲೇ! (ರಾಮಾಶ್ವ. ೭೫-೭). ೩. ಅಂದ; ಸೊಗಸು: ಸ್ವರಮನಱಿಗೆ ತಾಂ ಭರತಜ್ಞನಂದದಿಂ . . . ಸದ್ವಿಟಂ ಸೊಮ್ಮನಱಿಗೆವೋದಾಳಿಯಂತೆ (ಮದತಿ. ೧೦-೬೬); ಶಿಲ್ಪಿಗಳ ಒಮ್ಮೆಗಂ ಕರೆಸೆಲ್ಲರಂ ಯಾಗಶಾಲೆಗಳ ಸೊಮ್ಮಿನಿಂ ರಚಿಸಲೀಕ್ಷಣ (ತುರಂಗ. ೮೩-೧೩). ೪. ಮೇಲ್ಮೆ; ಅತಿಶಯ; ಆಧಿಕ್ಯ: ಉಮ್ಮಳಿಸುವರು ಸುರರ ಸಭೆಯೊಳಗೆಮ್ಮ ರಾಯರು ಪಿತನ ಸತ್ಯದ ಸೊಮ್ಮನಳಿದರೆ ಬಳಿಕ ಬಹುದಪಕೀರ್ತಿ (ತೊರರಾ. ೨-೩-೧೫); ನಮ್ಮ ವಿಧಿಯಿಂತಾಯ್ತು . . . ಹೋಗಲಿಂದಿಗೆ ನಮ್ಮ ಜೀವವೆನುತ್ತ ದುಃಖದ ಸೊಮ್ಮಿನಳಲುರಿಯೇಱಿ ನುಡಿದರು (ಕೃಷ್ಣಾಕಾ. ೧೭-೩೩). ೫. ಹಿಗ್ಗು; ಸಂತೋಷ: ಬ್ರಹ್ಮಯೋಗವು ಪುಟ್ಟಿಸಿದುದಱಿಂದಪ್ಪ ಸೊಮ್ಮನದೇನ ಬಣ್ಣಿಪೆನು (ಅಂಜಚ. ೧೦-೧೧೩); ತಮ್ಮ ತಮ್ಮಿಂದತ್ತಲಳಿದರು ಹಗೆಯರೆಂದೆನಿಸಿ ಧರ್ಮವುಳ್ಳವ ಕುರುನೃಪತಿ ಹಗೆ ನಿರ್ಮಯವದಾಯ್ತೆಂದು ಜಗವತಿ ಸೊಮ್ಮಿನಿಂದಾಡುವದು (ಕೃಷ್ಣಾಕಾ. ೧೬-೩೧). [?]

ಸೊಮ್ಮುಗಿಡಿಸು (ಕ್ರಿ). ಸಂತೋಷವನ್ನು ಹಾಳುಮಾಡು ; ಕುಗ್ಗಿಸು : ಸೋದರಂ ಸೊಮ್ಮುಗಿಡಿಸಿದುದು, ಅಗಸ್ತ್ಯನಂ ನಲೆದಪ್ಪಿಸಿದುದು ; ಸಾಜಮಲ್ತೇ ಪತಿಪತ್ನಿಗಳೊಳ್ ವಿಯೋಗದುಃಖಂ (ರಾಮಾಶ್ವ. ೪೬-೧೯). [ಸೊಮ್ಮು$_4$ + ಕಿಡಿಸು(< ಕೆಡಿಸು$_1$)]

ಸೊಮ್ಮುಗೊಳ್ (ಕ್ರಿ). ಸೊಗಸಿನಿಂದ ಕೂಡಿರು; ಚೆಲುವಾಗು: ಸೊಮ್ಮುಗೊಂಡಿಹ ಪಾಕಶಾಲೆ ಸಜ್ಜಾದ್ವಾರ ಪೆರ್ಮೆಯಿಂದೊಪ್ಪುಗೊಂಡಿಹವು (ಗೂಮ್ಮಚ. ೨-೨೪).

[ಸೊಮ್ಮು$_4$ + ಕೊಳ್$_1$]

ಸೊಮ್ಮುವೆರ್ಚು (ಕ್ರಿ). ಸಂತೋಷವು ಹೆಚ್ಚಾಗು; ಉತ್ಸಾಹ ಹೆಚ್ಚಾಗು: ಹಯಂ ತಾಂ ತನಗೆ ತೂಪಿಱಿದ ಕೂರ್ಪಿನ ಪೆರ್ಮೆಯಿಂ ಸೊಮ್ಮುವೆರ್ಚಿ ದೊಮ್ಮಳಿಸಿ . . . ಪೊಱೆಯಂ ಮಿಕ್ಕು ಪೊಕ್ಕು ದಿಕ್ಕುಗೆಟ್ಟು ಮುಱುಂಗಿ ಕಣ್ಮಾಯಮಾಯ್ತು (ರಾಮಾಶ್ವ. ೧೨೦-೨೨). [ಸೊಮ್ಮು$_4$ + ಪೆರ್ಚು$_1$]

ಸೊಯ 'ಸಯ$_1$' ನೋ.

ಸೊಯಂದಪ್ಪು (ಕ್ರಿ). ಸ್ವಾಧೀನವನ್ನು ಕಳೆದುಕೊಳ್ಳು; ಮೈಮರೆ; ವಿವಶಗೊಳ್ಳು: ಏಂ ಕಾಣೆನೆ? ಸೊಯಂದಪ್ಪಿದೆನೆ? (ರಾಮಾಶ್ವ. ೮೭-೧೨).

[ಸೊಯ (< ಸಯ$_1$) + ತಪ್ಪು$_1$]

ಸೊಯಂಬರ, ಸಯ್ಯಂಬರ, ಸೊಯಂವರ, ಸ್ವಯಂಬರ (ನಾ). ಒಂದು ವ್ಯವಸ್ಥಿತವಾದ ಸಂದರ್ಭದಲ್ಲಿ (ಕ್ಷತ್ರಿಯ)ವಧುವು ತನ್ನ ಪತಿಯನ್ನು ತಾನೇ ಆರಿಸಿಕೊಳ್ಳುವಿಕೆ; ಸ್ವಯಂವರ: ಸುರಕುಸುಮದ ಪೊಸವಾಸಿಗಮೆರಡುಂ ಕರತಳದೊಳೆಸೆದು ತನ್ನಯ ತೋಳೊಳ್ ದೊರೆಯೆನೆ ಬಂದತ್ತು ಸೊ[ಪಾಠಾಂ. ಸ್ವ]ಯಂಬರಕ್ಕೆ ಬರ್ಪಂತೆ ದೇವಗಣಿಕಾನಿಕರಂ (ಆದಿಪು. ೧೦-೨೧); ನಾಳೆ ಸೊಯಂಬರಂ ಕರಂ ನಿರುತಮೆನುತ್ತೆ ಸಾಱೆ (ನೇಮಿಪು. ೯-೭೭); ತನ್ನ ತನುಚೆಯ ಸೊ[ಪಾಠಾಂ.ಸ್ವ]ಯಂಬರಕೆ ಸಕಲರಸುಗಳು ಬಹುದು (ಜೀವಂಚ. ೭ ಸೂಚನೆ). **ಸಯಂಬರ** : ಆ ಕೂಸಿಂಗೆ ಸ[ಪಾಠಾಂ. ಸ್ವ]ಯಂಬರವಂ ಮಾಡಲೆಂದು ನೆಲದೊಳುಳ್ಳರಸುವಕ್ಕಳೆಲ್ಲರ್ಗಂ ಬಱೆಯನಟ್ಟಿದೊಡೆ (ಪಂಪಭಾ. ೩-೩೨ ವ): ದ್ರುಪದ್ಮನಪರೊಳೊಂದುವಚ್ಚರಸೆಯರ್ಗ್ಗೆ ಸಯಂಬರಮಾಗೆ (ಎಕ.VII, ಶಿಕಾರಿ. ೧೯೭-೩೪; 1181); ಜನಕನರೇಂದ್ರ ಸೀತೆಯ ಸಯಂಬರ ಕಾವುದು ಯುಕ್ತಿಯೆಂದು ಚಿಂತನೆಯ ಮಾಡುತಿರ್ಪ ಸಮನಂತರದೊಳ್ (ದಶಾವ. ೮-೧೫೯). **ಸೊಯಂವರ**: ಸೊ[ಪಾಠಾಂ. ಸ್ವ]ಯಂವರಕಮಿತಬಲನೃಪರೈದಿ ಬರುತಿದೆ ಧರಣಿಯಗಲದಲಿ (ನಳಚ. ೩-೧೨). **ಸ್ವಯಂಬರ**: ಕೂಸಿಂಗೆ ಸ್ವಯಂಬರಮಂ ಪಣ್ಣುವಂ (ವಡ್ಡಾರಾ. ೪೦-೨೬); ಇತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ (ಪಂಪಭಾ. ೧-೧೦೫ ವ). [< ಸಂ. ಸ್ವಯಂವರ]

ಸೊಯಂಬರಸಾಲೆ, ಸಯಂಬರಸಾಲೆ, ಸ್ವಯಂಬರಸಾಲೆ (ನಾ). (ಕ್ಷತ್ರಿಯ)ವಧುವು ತನ್ನ ಪತಿಯನ್ನು ತಾನೇ ಆರಿಸಿಕೊಳ್ಳುವುದಕ್ಕಾಗಿ ರಚಿತವಾದ ಮಂಟಪ; ಸ್ವಯಂವರಮಂಟಪ: ಭೂಲಲನಾಧೀಶನಂದು ಕಂಡಂ ಮಣಿಮಾಳಾಲಲಿತಮಂ ಸೊಯಂಬರಸಾಲೆಯಂ (ನೇಮಿಪು. ೪-೧೬). **ಸಯಂಬರಸಾಲೆ**: ನೆರೆದ ಸಮಸ್ತರಾಜಕಮನಾದರದಿಂದಿದಿರ್ಗೊಂಡನೇಕರತ್ನರಚಿತಮಾಗೆ ಮಾಡಿಸಿ ಸ[ಪಾಠಾಂ. ಸ್ವ]ಯಂಬರಸಾ[ಪಾಠಾಂ. ಶಾ]ಲೆಯಂ (ಪಂಪಭಾ. ೩-೪೦); ನರಪಾಲಕನಂದನ ವಿತತಿ ಸಯಂಬರಸಾಲೆಯೊಳಿರಲ್ (ಜಯಕಾ. ೫-೧). **ಸ್ವಯಂಬರಸಾಲೆ**: ಸ್ವಯಂಬರ ಸಾಲೆಯಂ ಮಾಡಿಸಿ ಅರಸುಗಳ್ಗೆಲ್ಲಂ ಬಱೆಯನಟ್ಟಿ ಬರಿಸೆ (ವಡ್ಡಾರಾ. ೪೦-೨೮).

[< ಸಂ. ಸ್ವಯಂವರಶಾಲಾ]

ಸೊಯಂಬರಸೇಸೆ (ನಾ). ಸ್ವಯಂವರಕಾಲದಲ್ಲಿ ವಧೂವರರಿಗೆ ತಳೆಯುವ ಅಕ್ಷತೆ: ದಶರಥಂ . . . ಬೀರಸೇನೆಯೊಡನೆ ಸೊ[ಪಾಠಾಂ. ಸ್ವ]ಯಂಬರ ಸೇಸೆಯನಾಂತು ಪೌರಜನದ ಮನದೊಡನೆ ಕೌತುಕಮಂಗಳಪುರಮಂ ಪುಗುವಾಗಳ್ (ಪಂರಾಮಾ. ೩-೬೦ ವ). [ಸೊಯಂಬರ + ಸೇಸೆ$_1$]

ಸೊಯಂವರ 'ಸೊಯಂಬರ' ನೋ.

ಸೊಯಗೆಡು (ಕ್ರಿ). ಸ್ವಾಧೀನವನ್ನು ಕಳೆದುಕೊಳ್ಳು; ಮೈಮರೆ: ಆಚೀಚಿನ ಮರಗಳು ಕುಡಿದು ಸೊಯ ಗೆಟ್ಟವುಗಳಂತೆ ತಲೆದೂಗುತ್ತಿದ್ದುವು (ಮೂಕಜ್ಜಿ. ೧೮೯).

[ಸೊಯ (< ಸಯ$_1$) + ಕೆಡು$_1$]

ಸೊರ 'ಸೊರೆ$_2$' ನೋ.

ಸೊರಂಟು 'ಸುರುಟು$_2$' ನೋ.

ಸೊರಗು$_1$, ಸುರುಗು$_1$, ಸೊರಹು$_1$ (ಕ್ರಿ). ೧. ಬಾಡು; ಒಣಗು; ಬತ್ತು: ವೃಕ್ಷಲತೆಗಳ್ಬಾಡಿ ಸೊರಗುತಿರ್ದುವು ಶೋಕಭಾರದಿಂ (ಚೈಮಿಭಾ. ೧೯-೩೨); ಕಿತ್ತೆಸೆದ ಲತೆಯಂತೆ ಅತ್ತಿಮಬ್ಬೆ ಸೊರಗಿದಳು (ದಾನಚಿಂ. ೧೫೯). ೨. ಸಣ್ಣಗಾಗು; ಕೃಶವಾಗು; ಕ್ಷೀಣಗೊಳ್ಳು: ಸೊರಗಿ ಸಾಯಲಾಗಿದ್ದಾರೆ (ಪ್ರಣಸ. ೭೪). ೩. ಬಸವಳಿ; ಕಂಗಾಲಾಗು; ಕಂಗೆಡು: ಕಡು ಸೊರಗಿ ಮೂರ್ಛಿಸುವ ಸುಧೆಯುಂಡುದರಿನುಸುರ್ ಮಿಡುಕುತಿಹ ಗಳಗತಪ್ರಾಣೆಯರ್ . . . ಕಣ್ಗೆಸೆದರು (ಚಿಬಪು. ೧೯-೩೧); ಅವನು ಕಪ್ಪಕ್ಕೆ ಸಿಕ್ಕಿ ಸೊರಗದಂತೆ ನೋಡಿಕೋ! (ವಚಭಾ. ೧೦೯). **ಸುರುಗು$_1$** : ೧. ಹುಬ್ಬುಗಂಟಿನಿಂದ ಸುರುಗಿದ ಮುಖದ ಮೇಲೆ ತಲೆಯ ಜಟೆಗಳು ಕವಿದುಕೊಂಡಿದ್ದವು (ಕೋಟಿಸಾ. ೮೮). **ಸೊರಹು$_1$** : ೩. ಗುರುವು ಹೇಳಿದ ತೆರದಿಯಿಂದ್ರಿಗಳಿರಲು ಜೀವನದ ಸೊರಹಬಹುದೇ (ಜ್ಞಾನಸಿಂ. ೧೨-೪೪).

ಸೊರಗಿ ಹೋಗು = ಬಡವಾಗು; ಇಳಿದು ಹೋಗು: ನೀವು ಬಹಳ ಸೊರಗಿ ಹೋಗಿದ್ದೀರಲ್ಲಮ್ಮ (ತ್ಯಾಗಮ. ೫೪). 'ಸುರ್ಕು$_1$' ಹೋ.

[ದೇ. ॥ ತಮಿ. ಮಲ.ಚುರುಙ್ಬು, ಚುರುಕ್ಕು, ಚುಕ್ಕು; ತುಳು. ಸುರುಗು; ತೆಲು. ಸೊರುಗು, ಸುರುಂಗು]

ಸೊರಗು$_2$ 'ಸೊರ್ಕು$_1$' ನೋ.

ಸೊರಟಿ, ಸೋರಾಟ (ನಾ). ೧. ಒಂದು ಸ್ಥಳದ ಹೆಸರು; ಸೌರಾಷ್ಟ್ರ: ಪಾಣ್ಡ್ಯ ಸಿಳಾಮೇಘ ಕೇರಳ ಸೊರಟ . . . ಮಹೀಪಾಳರಾಸ್ಥಾನದಲೆ ಕೇಳ ತನ್ನನೆ ನಟವನ್ದಿ ಮಾಗಧರ್ ಕೈಕೊಣ್ಡು ಪೊಗಟಲ್ಕೆ (ಎಕ. III (R). ಹೆಗ್ಗಡ. ೬೦-೮; 1057); ಸೌರಾಷ್ಟ್ರ-ಸೊರಟಿ (ಶಮದ. ೨೮೩ ಪ್ರಯೋ); ಕನ್ನಡ ಹುರುಮುಂಜಿ ಸೊರಟ ಗುಜ್ಜರಾದಿ ನಾಡಿನೊಳು (ಭರಟ. ೫೯-೭). **ಸೋರಾಟ** : ೨. ಸೌರಾಷ್ಟ್ರದೇಶದ ದೊರೆ: ಲಾಟ ಪರವಶನಾದ . . . ವರ ಸೋರಾಟ ಸೆಡೆದನು (ಜೀವಂಚಿ. ೧೫-೨೪).

[< ಸಂ. ಸೌರಾಷ್ಟ್ರ./ ಪ್ರಾ. ಸೋರಟ್ಠ]

ಸೊರಟಿ₁ (ನಾ). ಹೆಳವಿ; ಚೊತ್ತಿ: ನಾಣಿಲಿ ಸೊಂದಿ ಸೊರಟಿ ಮಾತಾಳಿ (ಭಾವಾಭೂ. ೧೯೬ ಪ್ರಯೋ). 'ಸೊತ್ತಿ', 'ಸೊರಟು' ಹೋ. [ಸೊರಟ್ಟ + - ಇ₂]

ಸೊರಟಿ₂ (ನಾ). ಒಂದು ಬಗೆಯ ಆಯುಧ(?): ಒರೆಗಳನುಗಿದ ಖಂಡೆಯ ಕೈಸುರಗಿಯ ಸೊರಟಿಯ ಕತ್ತಿ ಬಾಕುಗಳ ಪರಿವಿಡಿಗಾಱರು ಪುರದಾಳುವೇರಿಯೊಳ್ ಚರಿಸುತಿರ್ದರು (ಕಂನಪಿ. ೧೧-೧೪೭). [?]

ಸೊರಟು 'ಸುರುಟು₂' ನೋ.

ಸೊರಟುದಲೆ (ನಾ). ಸೊಟ್ಟ ತಲೆ: ಸೊರಟುದಲೆಯ ತಿರುವೃತ್ತಗಣ್ಣಿನ ಹೆಣ್ಣ ತುರಗಮುಖಿಯ ದೊಡ್ಡಮೂಗ (ಪುಜ್ಜಚ.೮-೩೭). [ಸೊರಟು(< ಸುರಟ್ಟು₂) + ತಲೆ₁]

ಸೊರಟುಮೂಗು (ನಾ). ಡೊಂಕಾದ ಮೂಗು; ಸೊಟ್ಟಮೂಗು: ತರಟುದಲೆ ಬಿರಿತ ಮೈ ಸೊರಟುಮೂಗಿನ ಜಾಣೆ (ಶರಲೀ. ೩೭೩-೩).

[ಸೊರಟು (< ಸುರುಟ್ಟು₂) + ಮೂಗು]

ಸೊರಟೆ (ನಾ). ಒಂದು ಬಗೆಯ ಸಸ್ಯ: "ಗರಳೆಯನೆ ಸೊರಟೆ" (ಮಂಗರಾ. ೪೧-೩೩); ಸೊರಟೆಕೆಟೆತೆಯ ಮೊರಟೆಯ ಹರಡಿ . . . ಲಿಂಗಕ್ಕೆ ಮಜ್ಜನಕ್ಕೆಱೆಯ ಬೇಕೆಂಬಿರಿ . . . ಈ ಹರಡಿಕೊಂಡಿರುವ ಸೊರಟೆ ಮೊರಟೆಗಳೆ ದೇವರೋ (ಪಚಸಂ. ೧೯೩-೩೮); ಸೊರೆಕೆರತೆಟೆಯ ಬೀಜ, ಹುಲಿಗಿಲ ಬೀಜ . . . ಕೊಂಡು ಚೂರ್ಣಂ ಮಾಡಿ (ವೈದ್ಯವಿ. ೯೨). [ದೇ. ॥ ತುಳು. ಸೋರಂಟೆ]

ಸೊರಬಾಣ (ನಾ). ಒಂದು ಬಗೆಯ ಬಾಣ: ಬಲ್ಲು ತೀರು . . . ಸೊರಬಾಣ . . . ಪೇಟಕ ಮುಂತಾದ ಶತ್ರುಜಯಾತ್ಮರಕ್ಷಾದಿ ಸಾಧನವಿಶೇಷಂಗಳಿಂದಲುಂ (ವೀರೇ. ೨೬೩). 'ಸುರುಸುರ್‌ಬಾಣ' ಪರಾ. [? + ಬಾಣ₃]

ಸೊರಬಿಡು 'ಸೊರೆಬಿಡು' ನೋ.

ಸೊರಲ್ಮೊರಡಿ (ನಾ). ಒಂದು ಪ್ರದೇಶ ಹೆಸರು: ಬಾಚೊಟ್ಟೆಎ ಸನ್ದು ಸೊರಲ್‌ಮೊರಡಿಎ ಅನ್ತೆ ಬನ್ದು . . . ಕೂಡಿತ್ತು ಸೀಮೆ (ಮೃಅರಿ.೧೯೨೬, ೧೧೮-೪೯; 726).

[ಸೊರಲ್? + ಮೊರಡಿ₁ (< ಮೊರಡ್ಡು₂)]

ಸೊರವು (ಕ್ರಿ). ಸುರಿ; ವರ್ಷಿಸು: ನೀನು ಮಕ್ಕಳೊಡನೆ ಆಡಿ ಮನೆಗೆ ಬರೆ ನಿನಗೆ ಅರ್ಘ್ಯಮಂ ಕೊಡುವವೊಲು ಸೊರವುತ್ತಿದ್ದಾವು (ಕಾಶೀಮ. ೯೯-೫).

[ಸೊರೆ₁ + - ವು]

ಸೊರಸು (ಕ್ರಿ). ಕೆಚ್ಚಲಿನಿಂದ ಹಾಲನ್ನು ಸ್ರವಿಸು; ಸೊರೆಬಿಡು: ಕರುವ್ಮತರೆ ಅಕ್ಕರೆಗುಕ್ಕಿ ಹಾಲ್ ಸೊರಸುವ ಸುರಭಿಯ ತೆರದಿ, ಸಂಭವಿಸಿತು ರಸಸತ್ವಂ ಆ ಮರದಿ! (ಅನಿಕೇ. ೨೭-೧೦). [ಸೊರೆ₁ + - ಸು₁]

ಸೊರಹ (ನಾ). ಹೆಚ್ಚು ಮಾತನಾಡುವವನು; ಮಾತುಗಾರ; ವಾಚಾಳಿ: ಎಲೆಯೆಲೆ ಸೊರಹರರಸನೆ ಕಾಯ್ದೆಲಾ ಸಂಕರುಷಣಾಚ್ಯುತ ಕಾಮ ತತ್ಸುತರಲ್ಲ ನೀನಲ್ಲ (ನಿಭಾಗ. ೧೦-೯೯-೩೫). [ಸೊರಹು₂ + - ಅ₂]

ಸೊರಹು₁ 'ಸೊರಗು₁' ನೋ.

ಸೊರಹು₂ (ಕ್ರಿ). ಅತಿಯಾಗಿ ಮಾತನಾಡು; ಗಳಹು: ಬೇಸಱದೆ ಕೇಳ್ಳ ದೇವೇಂದ್ರ ನುಂಟೆಂದಿಂತು ನೀಂ ಹೇಸದಕಟಕಟ ಸೊರಹುವರೆ (ಪಚಕಾ. ೨-೯); ದ್ವಿಮೂರ್ತಿ ತ್ರಿಮೂರ್ತಿವಾದಿಗಳಿರಾ ಸೊರಹದಿರಿಂ (ಪದ್ಮರಾ. ೧೧-೧೯೬); ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತೆ (ಕುಮಾವಿ. ೬-೧೯). [?]

ಸೊರಹು₃ (ನಾ). ಮಾತುಗಾರಿಕೆ; ಗಳಹುವಿಕೆ: ತನುಜನ ಮರಣ ಹುಸಿಯೋ ದಿಟವೋ ಭೀಮನ ಸೊರಹ ನಂಬೆನು (ಕುಮಾದ್ರೋ. ೧೮-೬೧). [< ಸೊರಹು₂]

ಸೊರಹು₄ (ನಾ). ಕೆಚ್ಚಲಿನಲ್ಲಿ ಹಾಲು ತುಂಬಿಕೊಳ್ಳುವಿಕೆ: ಎಳೆಗಱು ತುಡುಕೆ ಕೆಚ್ಚಲ ಚಾಚಿ ನೆಕ್ಕುತಲಿಳುಹಿ ಸೊರಹನು . . . ಮಱುಕದೊಳೆಳೆಗಂದಿಯದೆ ನೋಡು (ವರ್ಧಚಿ. ೩-೨೧): ಕಪಿಲೆಯೊಂದು ಕಱೆಯದೆ ಕಱುವಿಗಂ ಕೊಡದೆ ಸೊರಹನಿಱುಕಿ ಮುದದಿಂದೆ ಬಂದು ಪುತ್ತುವಿನಗ್ರದೊಳು . . . ಕಱೆವುತ (ಸಿದ್ಧೇಪು. ೯-೩೬).

[ಸೊರೆ₁ + — ಹು₂ (< — ಪ್ಪು₂)]

ಸೊರಹುಗಾಱ (ನಾ). ಮಾತುಗಾರ; ವಾಚಾಳಿ: (ಚತುನಿ. ೬. 1, ೫೯).

[ಸೊರಹು₃ + - ಕಾಱ]

ಸೊರಿಗ (ನಾ). ಒಂದು ಅಳತೆಯ ಪ್ರಮಾಣ: ಅಯ್ವತ್ತೊಕ್ಕಲು ಬಿಟ್ಟ ಸೊರಿಗವೊಂದು ೧ ಮತ್ತಂ (ಎಕ. VII, ಶಕಾರಿ.೨೩೬-೮೪; 1174). [?]

ಸೊರು 'ಸೊರೆ₂' ನೋ.

ಸೊರುಬಿಡು 'ಸೊರೆಬಿಡು' ನೋ.

ಸೊರೂಪ 'ಸರೂಪ₁'ನೋ.

ಸೊರೆ₁ (ಕ್ರಿ). ೧. ಕೆಚ್ಚಲಿನಲ್ಲಿ ಹಾಲು ತುಂಬಿಕೊಳ್ಳು: ಎಮ್ಮೆಯ ತರಲೆಂದು ಮಾರಿದನೋಲೆಯ ಸೊರೆದಿಲ್ಲ ಕರದಿಲ್ಲ ಹಾಲು (ಇಂಚಾಪ. ೧೪೮-೨೮). ೨. (ಆಲಂ) ಹೆಚ್ಚು; ಅಧಿಕವಾಗು: ಇಂತು ಸೊರೆದಿರೆ ಆಸೆ, ತಾವರೆಯ ನೀರಂತೆ (ಗೌಮಲ್ಲಿ. ೧೪). 'ತೊರೆ₂' ಪರಾ. [ದೇ. ॥ ತಮಿ. ಚುರ; ಮಲ. ಚೊರಿಯು, ಚುರ]

ಸೊರೆ₂, ಸೊರ, ಸೊರು, ಸೋರು₂ (ನಾ). (ಹಸು, ಎಮ್ಮೆ ಮುಂತಾದುವು) ಕೆಚ್ಚಲಿನಿಂದ ಹಾಲನ್ನು ಇಳಿಯಬಿಡುವಿಕೆ: ಸೊರೆ ಗೋತ್ರವ ಸುರಿದೆತ್ತಿ ಬಾಲವ ತಮ್ಮ ಕಱುಗಳ ನೆಕ್ಕಿ ಮೊಲೆಗಳ ಹರುಷದೊಳೀವ ಸುರಭಿಗಳ ನಿಟ್ಟಿಸುತಿರುತಿರ್ದ ಜೀವಂಧರನು (ಜೀವಂಸಾಂ. ೮-೭೬). **ಸೊರ**: ಎಮ್ಮೆಗೆ ಸೊರವನ್ನು ಇರುಕಿಸುವ ಅಭ್ಯಾಸವೇ ಇಲ್ಲ. ಹಸುವಾದರೋ ಸೊರವನ್ನು ಇರುಕಿಸಿ ತನ್ನ ಕರುವನ್ನು ಸಾಕಿಕೊಳ್ಳುವುದು (ಚಂಗಾಳ್ವ. ೧೭). **ಸೊರು**: 'ಸೊರುಬಿಡು' ಪರಾ. **ಸೋರು₂**: 'ಸೋರುಬಿಡು' ಪರಾ. [< ಸೊರೆ₁]

ಸೊರೆ₃, ಸೋರೆ₁ (ನಾ). ೧. ತರಕಾರಿಯಾಗಿ ಬಳಸುವ ಒಂದು ಬಗೆಯ ಕಾಯಿ ಮತ್ತು ಅದರ ಬಳ್ಳಿ: ಅರೆದಿಡುಗೆ ಕೀತ ಪುಣ್ಣೊಳ್ ಸೊರೆಯೆಲೆಯಂ ಮೂಱು ನಾಲ್ಕುದೆಮಸಂ . . . ನಾಳಿವುಣ್ಗಳ್ ಕೆಡುಗುಂ (ಅಶ್ವಶಾ. ೧೨-೨೫). ೨. ತಿರುಳನ್ನು ತೆಗೆದು ಒಣಗಿಸಿದ ಸೋರೆಯ ಕಾಯಿ; ಸೋರೆಬುರುಡೆ: ತಮ್ಮಂ ನಂಬಿದರಂ ಸೊರೆಯ ಕಾಯ್ ಮುಂತಾಗಿ ನದಿಯ ತಡಿಯಂ ಸಾರ್ಚುವುದು (ಪಂಚತಂ. ೮೪-೧೪); ಸೊರೆಯೊಳಗೆ ತೀವಿ ಮಣ್ಣಂ ಸರದಿಯೊಳಿಕ್ಕಿದೊಡೆ ನೆಗೆಯಲಾರ್ಪುದೆ (ಧರ್ಮಾಮೃ. ೯-೧೨೫); ಕುಂದಾಗೆ ಗುಣಕೆ . . . ಕೆಱಹಂ ಸೊರೆಯಂ ತಂದಾ ಚೆಂಡಿಕೆಯೊಳ್ ತರದಿಂದಮವಂಗುಚಿತಮೆನಿಸೆ ಕಟ್ಟಿದರ್ (ಪಾರ್ಶ್ವಪು. ೪-೨೪). ೩. ವೀಣೆ, ತಂಬೂರಿ ಮೊದಲಾದುವುಗಳ ಬುರುಡೆ: ಊಱೆ ಕುಚಾಗ್ರದೊಳ್ ಸೊರೆಯನೆತ್ತಿದ ಕೆಂದಳದಿಂದಮೊಂಕಿ ಪೊಯ್ದೇಱೆ ವೆರಲ್ಗಳಿಂದಿಱೆಯೆ ತಂತಿಗಳಂ ಮಿಡಿದು . . . ಧಾತು ಮೈದೋಱೆದ ಮೆಯ್ಯೊಳಾ ಲವಣಿಯಿಂ ವನಜಾನನೆ ಬಾಜಿಸೆ (ಲೀಲಾವ.೨-೩೧); ಬೀಣೆಯಂ ಮಿಡಿದು ನೋಡಿ ತಂತಿಯೊಳ್ತನುರೋಮಮುಮಂ ಸೂ[ಪಾಶಾಂ. ಸೋ]ರೆಯೊಳ್ ಶಲ್ಯಮಂ ಪ್ರವಾಳದೊಳ್ಬಾಷಾಣಮಂ ತೋಱೆ ಕುಡುವಡೆ ನಿರ್ದೋಷಮಪ್ಪ ವೀಣೆಯಂ ಕುಡಿಮೆನೆ (ಅರ್ಧನೇ. ೬-೧೦ ೮); ಅರಿಭೂಪಾಳ ಸಿರಂಗಳಿಂದೆ ಸೊರೆಯಂ ತದ್ಬಾಹು ಸಂದೋಹದಿಂ ಕರೆಯಂ ದಂಡಿಗೆ ಮಾಡಿ (ಎಕ. VI, ಕಡೂರು. ೧೫೬-೩೬; ಸು. 1191). ೪. ಸೋರೆಬುರುಡೆಯಿಂದ ಮಾಡಿದ ಅಥವಾ ಸೋರೆಕಾಯಿ ಆಕಾರದ ಪಾತ್ರೆ: ಕೊಂಡನವಂ ತಪಮಂ ಗೆಡೆಗೊಂಡಿರೆ ದಂಡು ಬೂದಿ ಸೊರೆರುದ್ರಾಕ್ಷಂ (ಪಾರ್ಶ್ವಪು. ೪-೩೬); ಗುಜುಱುಮಂಡೆಯ ತಿರಿವ ಸೊರೆಗಳಿಟ್ಟಗೆಯ ಹಂಡಿಯಂ ಪೂಸಿದಂಗದ . . . ಚೋಗಿಗಳ್ಪಂತಸದೊಳು . . . ಸಿದ್ದಲಿಂಗೇಶ್ವರನ ಕಂಡು (ಸಿದ್ದೇಪು. ೫-೬). **ಸೋರೆ₁** : ೧. "ತುಂಬೀ, ಅಲಾಬೂಃ, ದುಗ್ಧಿಕಾ- ಈ ೩ ಸೋರೆ" (ಹಲಾಯು. ೩೫-೫೬); ನಡುವಿರ್ದ ನರಿ ಕರಿ ಮೆಟ್ಟದ ಸೋರೆಯ ಕಾಯಂತೆ ಜಿಗಿಜಿಗಿಯಾಗಿ ಸತ್ತೊಡೆ (ಪಂಚತಂ. ೭೨-೧೭); ಜೊತೆಗೆ ಮೆಣಸಿನಕಾಯಿ, ಸೋರೆ, ಸಾಸುವೆ, ಬಾಳೆ ಮುಂತಾದುವನ್ನೂ ಬೆಳೆಯುತ್ತಾರೆ (ಕವಿಕೋ. 1, ೭೬೦). ೨. ಕರ್ಮಕ್ಕೆ

ಕರ್ಮವನಿತ್ತು ತಾ ವರ್ಮಿಗನಾಗಬಲ್ಲಡೆ ಹೊಳೆಯಲ್ಲಿ ಹಾಕಿದ ಸೋರೆಯಂತೆ (ಮೋಳಿಮಾ. ೧೯೭-೭೩೩); ಆ ಕೂಪಾಂತರದೊಳೊಂದು ಪಿರಿದಪ್ಪ ಮಿಳಿಯೊಳ್ ಚೌರುದತ್ತನಿಂ ತೊಡರ್ಚಿ ಸೋರೆಯ ಕಾಯಂ ಕೊಟ್ಟು ಬಾವಿಯೊಳಗೆ ಚೋಲುವಿಡೆ (ಪುಣ್ಯಾಸ್ರ. ೪-೨೫ ವ). ೩. ಎನ್ನ ಕಾಯವ ದಂಡಿಗೆಯ ಮಾಡಯ್ಯ ಎನ್ನ ಸಿರವ ಸೋರೆಯ ಮಾಡಯ್ಯ (ಬಸವ. ೫೦೦); ಅಲ್ಲಿ ಪೆಱಳೊರ್ವಳ್ ಜಾಣೆ ವೀಣೆಯಂ ಶ್ರುತಿಗೆಯ್ದು ಸೋರೆಯಂ ಸ್ತನಾಗ್ರದೊಳೊಂಕಿ ಸರಳತರಕರಾಂಗುಲಿಯನಿಟ್ಟು (ರಾಜಶೇ. ೧೧-೮೭ ವ). ೪. ಆಂ ಪೊನ್ನ ಲೋಭದಿಂದಂ ಬಾವಿಯಂ ಪೊಕ್ಕು ರಸಮಂ ಸೋರೆಯಿಂ ತೀವಿ ಬೇಟ್ಟನಿತುಮಂ ಮೊಗೆದು ಕೊಟ್ಟೊಡೆ (ವಡ್ಡಾರಾ. ೧೫೭-೧೩); ಶಿವನೇ ನಿಮ್ಮನೆಱಿಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೆಯ್ಯ ಒಡೆದ ಸೋರೆ ಕಾಣಾ (ಮಡಿವಾ. ೧೩-೧೬); ಹಿಡಿದ ಚಕ್ರದ ಗುಜುಱುದಲೆಯ ಶಂಖದ ಮಣಿಯ ತೊಡಿಗೆಗಳ ತಿರಿವ ಸೋರೆಯ ಹೂಸಿದಿಟ್ಟಗೆಯ . . . ನಾನಾ ಜೋಗಿವಡೆವೆರಸು ಖರ್ಪರಂ ಶಿವಸಿದ್ಧರಾಮಯ್ಯನೆಡೆಗೆ ಬಂದಂ (ಸಿದ್ಧರಾ. ೭-೨೭). ೫. (ಸೋರೆಯ ಬುರುಡೆಯಿಂದ ಮಾಡಿದ) ಹಾವಾಡಿಗನ ವಾದ್ಯ; ಪುಂಗಿ: ಸಾಲದೇಂ ಕಂದ ಹಾವಿನ ಬಿಲದ ಬಳಿಗಯ್ದಿ ಸೋರೆಯನ್ನೂದಿದುದೆ? (ಹಚ್ಚರ. ೨೬-೭).

ಸೊರೆಯ ಗುಂಡಿ = ಸೋರೆಬುರುಡೆಯಿಂದ ಮಾಡಿದ ಪಾತ್ರೆ: ಈ ನೇಣಂ ಪಿಡಿದೆಱೆದು ಬಱಿಕೀ ಸೊರೆಯ ಗುಂಡಿ[ಪಾಠಾಂ. ಸೋರೆಯ ಗುಂಡಿಗೆ]ಯೊಳ್ ರಸಮಂ ಮುಟ್ಟದೋಸರಿಸಿ ನೀಡುವುದು (ನೇಮಿಪು. ೪-೮೭ ವ). **ಸೊರೆಯ ಗುಂಡಿಗೆ = ಸೊರೆಯ ಗುಂಡಿ:** ಆ ರಸವನು ಸೊರೆಯ ಗುಂಡಿಗೆಯೊಳು ತುಂಬಿ ಭರದಿಂದಾ ಹಗ್ಗದ ತುದಿಯೊಳು ಕಟ್ಟಿ ಪಿರಿದಾಗಿಯಲುಗಾಡಿಸಿದನು (ನೇಮಿಸಂ. ೧೦-೨೧೪). **ಸೋರೆಯ ಬಟ್ಟಲು = ಸೊರೆಯ ಗುಂಡಿ:** ಸೋರೆಯ ಬಟ್ಟಲಂ ನಂಬಿ ಕಂಚಿನ ಬಟ್ಟಲನೊಡೆವ ಗೊರವನುಮಂ (ಧರ್ಮಾಮೃ. ೬-೫೧). **ಸೋರೆಯ ಮಣಿ = (ಅಲಂ) ಬೆಲೆಯಿಲ್ಲದ ಮಣಿ:** ಆಱುಖಂಡವ ಗೆಲ್ದರೇನಾಯ್ತು ಕರ್ಮದ ಮೂಱು ಕಾಂಡವ ಗೆಲ್ದೆನಗೆ ಮೂಱು ರನ್ನವೆ ಜೀವಹಿತವೈಸೆ ಹದಿನಾಲ್ಕು ಸೋರೆಯ ಮಣಿಯೊಳೇನೆಂದ (ಧರಚಿ. ೭೬-೩೭). [ದೇ. ॥ ತಮಿ. ಚುರೈ; ಮಲ. ಚುರ; ತುಳು. ತುರೆ, ಸುರೆ; ತೆಲು. ಸೊರ, ಸೊರ್ರ, ಸೋರ; ಕೊಡ. ತೊರೆ]

ಸೊರೆ₄ 'ಸೋರೆ₂' ನೋ.

ಸೊರೆಕಾಯಿ 'ಸೊರೆಗಾಯ್' ನೋ.

ಸೊರೆಗಟ್ಟು (ಕ್ರಿ). (ವೀಣೆಗೆ) ಸೋರೆಬುರುಡೆಯನ್ನು ಕಟ್ಟುವಂತೆ ಕಟ್ಟು,-ಜೋಡಿಸು: ಕರಿಯ ರದನಂಗಳ್ಗೆ ತಲೆಯೋಡ ಸೊರೆಗಟ್ಟಿ ನರದ ತಂತ್ರಿಯ ಪೂಡಿ ದಂಡಿಗೆವಿಡಿದು ಪಾಡಿದುವು ಕೆಲವು . . . ಮರುಳ್ಗಳ್ (ಚೈಮಿಭಾ. ೨೨-೨೪).

[ಸೊರೆ₃ + ಕಟ್ಟು₁]

ಸೊರೆಗಾಯ್, ಸೊರೆಕಾಯಿ, ಸೋರೆಕಾಯಿ, ಸೋರೆಗಾಯಿ (ನಾ). ೧. ತರಕಾರಿಯಾಗಿ ಉಪಯೋಗಿಸುವ ಒಂದು ಬಗೆಯ ಕಾಯಿ: ಅವನಿಪಬಾಹುಪೀಠ ಜಯಲಕ್ಷಿಯನೀಲ್ದೆಳೆವಾಗಳಂತವೇವುವೊ . . . ಸೊರೆಗಾಯ ಬಂಬಲಲ್ಲವೆ ತಲೆ ಪತ್ತೆನುತ್ತೆ ದಶಕಂಠನನಂಡಲೆವಂ ನಿಶಾಚರಂ (ಜಗಮಿ. ೧೮-೮೩). **ಸೊರೆಕಾಯಿ** : ೧. ಸೊರೆಕಾಯಿ, ಬಾಳೆಹಣ್ಣು, ಹಲಸಿನ ಹಣ್ಣು . . . ಹೊಸಅಕ್ಕಿ ಅನ್ನ, ಇವು ಜ್ವರದವರಿಗೆ ಅಪಥ್ಯ (ವೈದ್ಯಸಾ. I, ೫೬). ೨. ವೀಣೆ, ತಂಬೂರಿ ಮೊದಲಾದುವುಗಳ (ಸೋರೆ)ಬುರುಡೆ: ಬೆರಲೆ ಬಿರಿಡೆಯು . . . ಮೊಲೆಯು ಸೊರೆಕಾಯಿ ನರ ತಂತಿಯಾಗಿ ಬಾಜಿಸಿದನು (ಗುರುಚಾ. ೨-೧೬). **ಸೋರೆಕಾಯಿ** : ೧. ಕಯ್ ಸೋರೆಕಾಯ ಕಾಶಿಯ ಹೊಳೆಯೊಳಗದ್ದೆ ಸ್ವಯವಲ್ಲದಮೃತವಾಗುವುದೆ (ಅಮುಸಾಂ. ೪-೮೭); ಸಿಹಿತಿಂಡಿಗಳಿಗೂ ಪ್ರಯೋಜನಕಾರಿ ಸೋರೆಕಾಯಿ (ತರಚಿ. ೨೬). **ಸೋರೆಗಾಯಿ**: ೧. ಲಲನೆ ಪೇಳ್ದಿರುಳಿಗವನ ತಾರದಿರೆಯಿವು ಮೊಲೆಯಲ್ಲ ಮುದಿಸೋರೆಗಾಯಿ (ಕಂನಮಿ. ೯-೧೬೨). [ಸೋರೆ₃ + ಕಾಯ್ಮಿ (< ಕಾಯ್₄)]

ಸೊರೆಬಿಡು, ಸೊರಬಿಡು, ಸೊರುಬಿಡು, ಸೋರುಬಿಡು (ಕ್ರಿ). ಕೆಚ್ಚಲು ತುಂಬಿ ಹಾಲನ್ನು ಸುರಿಸು; ತೊರೆಬಿಡು: ಸೊರೆಬಿಡದಾಕಳು ಕಡೆಗೆ ಮೈಯ ಕೆಚ್ಚಲುಗಳ ಮುಟ್ಟಿ ಕೈಯಾಡಿಸೆ ಕರೆದಳು ಕೊಡಹಾಲನೈಸೆ (ಗಾಥಾಸ. ೭-೩೭). **ಸೊರಬಿಡು**: ದೊಡ್ಡೆಮ್ಮೆಯ ಕರು ಬಿಟ್ಟಿದ್ದರು. ಎಮ್ಮೆಯು ಸೊರಬಿಟ್ಟಿತ್ತು (ಚಂಗಾಳ್ವ. ೧೭). **ಸೊರುಬಿಡು** : ಹಸು 'ಸೊರು' ಬಿಟ್ಟು ಹಾಗಾಯಿತು - ಇನ್ನು ಎಷ್ಟು ಹಾಲು ಕರೆದರೂ ಬರುವುದು (ಶ್ರೀಕಥಾ. ೮೪); ಶಾಮಾಚಾರ್ರ ಎಮ್ಮೆ ಸೊರುಬಿಡಲಿಲ್ಲ (ಚಿಸ್ತಕ. ೪೫). **ಸೋರುಬಿಡು** : ಐದನೆಯದರ 'ಹಾಲು ನೀರು, ಅದರಲ್ಲಿ ಬನಿಯಿಲ್ಲ' - ಆರನೆಯದು 'ಸೋರುಬಿಡುವುದು ಬಹಳ ನಿಧಾನ' (ಶಿವರಾ. ೧೮). 'ತೊರೆಬಿಡು' ಪರಾ.

[ಸೊರೆ₂ + ಬಿಡು₁]

ಸೊರೆವಾತು (ನಾ). ಸೋರೆಬುರುಡೆಯಿಂದ ಹೊರಡುವ ಧ್ವನಿ: ಶ್ರುತಿಕಾಷ್ಠ ಜೀವಾಳದಿಂ ಸೊರೆವಾತಿನಿಂ . . . ರಂಜಿಸುವ ಕರಮೂ ಪ್ರವಾಳದಿಂದೆಸೆವ ದಂಡಿಗೆವಿಡಿದು ಜಾಣಗಾಣಂ ಪಾಡಿದಂ (ಭಾವಚಿಂ. ೭-೭). [ಸೊರೆ₃ + ಮಾತು₁]

ಸೊರೆವೊಱು (ಕ್ರಿ). ಸೋರೆಬುರುಡೆಯನ್ನು ಹೊತ್ತುಕೊಳ್ಳು: ಅವನ ನಿನ್ನ ಹೊರೆಗೆಯ್ದುಸದಿರ್ದೊಡಾನು ಸೊರೆವೊ[ಪಾಠಾಂ. ಹೊ]ತ್ತೆನಲ್ಲದೆ ಮೊಲೆವೊತ್ತುದಿಲ್ಲ (ಕುರಾಸಾಂ. ೨೫-೧೧೪). [ಸೊರೆ₃ + ಪೊಱು]

ಸೊರ್ಕಗಾಮುಂಡ (ನಾ). ಒಬ್ಬಾತನ ಹೆಸರು: ಆಲವಳ್ಳಿಯರಾ ರವಿಚನ್ದನುಂ ಸೊರ್ಕಗಾಮುಣ್ಡರುಂ ಎದೆಯ ಗಾಮುಣ್ಡರುಂ . . . ಪ್ರಸಾದಂ ಕೆಯ್ದಾರ್ (ಇಅ. XIX. ೧೪೪-೮; 696). [ಸೊರ್ಕ₀ + ಗಾಮುಂಡ]

ಸೊರ್ಕಳಿ 'ಸೊರ್ಕಟಿ' ನೋ.

ಸೊರ್ಕಟಿ, ಸೊಕ್ಕಟಿ, ಸೊರ್ಕಳಿ (ಕ್ರಿ). ೧. ಶಕ್ತಿಯನ್ನು ಕಳೆದುಕೊಳ್ಳು; ಕುಗ್ಗು: ಸಿಂಗದುಲಿಗೇಳ್ದು ಬೆರ್ಚಿ ಬೀದಿವರಿದುರ್ಕಡಗಿ ಸೊರ್ಕಟಿದು . . . ಬಸವಟಿದಿರ್ವಾನೆ . . . ತಾವರೆವಡುವಂ ಕಂಡೊಡನದಂ ಪೊಕ್ಕು (ಚಕಸಂ. ೯೦-೬). **ಸೊಕ್ಕಟಿ** : ೨. ಗರ್ವವಿಳಿ; ಸೊಕ್ಕು ಇಲ್ಲವಾಗು: ಆ ಕಾವನ ಬರವಱಿದ ಬಱಿಕ್ಕಾವನ ಸೊಕ್ಕಟಿಯದಿನಿಸುಮೇನಿರ್ದಪುದೇ (ಕಬ್ಬಿಕಾ. ೧೭೩). **ಸೊರ್ಕಳಿ** : ೨. ತ್ರಿದಶರ್ . . . ಅನುಗೆಟ್ಟರಳ್ಕಿದರ್ ಸೊರ್ಕ[ಪಾಠಾಂ. ರ್ಕಿ]ಳಿದರ್ (ಗಿರಿಕ. ೬-೭೯).

[ಸೊರ್ಕು₂ + ಅಱಿ₁]

ಸೊರ್ಕಾಟ (ನಾ). ಸಂತೋಷದಿಂದಾಡುವ ಕುಣಿತ: ಸೋಗೆಯ ಸೊರ್ಕಾ[ಪಾಠಾಂ. ಕ್ಕಾ]ಟದ ಸೊಂಪಿಂಗನುರಾಗಿಸುತ . . . ನಿಂದವೆಂಬಂತೆಸೆದಿಹವಭ್ರಪೂಗವಾಗಿರಿದುರ್ಗದೊಳಗೆ (ಕುರಾಸಾಂ. ೪-೨೦). [ಸೊರ್ಕು₂ + ಆಟ]

ಸೊರ್ಕಾನ್, ಸೊಕ್ಕಾನ್ (ಕ್ರಿ). ೧. ಮದವೇರು; ಮದಿಸು: ತಪೋವಿಘ್ನವೇ ಮೂರ್ತಿವೆತ್ತಂತಿರೆ ಸೊರ್ಕಾಂತಾನೆಯ್ತೆತಂದಪುದು (ಶಾಕುಂತ. ೧೭-೨೩). **ಸೊಕ್ಕಾನ್**: ೨. ಅಧಿಕ್ಯದಿಂದ ಕೂಡಿರು; ಅತಿಶಯದಿಂದ ಕೂಡಿರು: ಮುಕ್ಕುಳಿಸುವ ಜೊಲ್ಲುವಾಯಿಗೆ ಕಡುನೇಹ ಸೊಕ್ಕಾಂತು ಮುತ್ತನಿಕ್ಕುವಳು (ಮೋಪತ. ೧೭-೬೭).

[ಸೊರ್ಕು₂ + ಆನ್₁]

ಸೊರ್ಕಾನೆ, ಸೊಕ್ಕಾನೆ (ನಾ). ಮದಿಸಿದ ಆನೆ; ಮತ್ತಗಜ: ಕೋಡಗವೇಱಿರ್ದ ಸೊರ್ಕಾನೆಯುಮಂ ಕಸಕುಪ್ಪೆಯೊಳ್ ತಾಮರೆ ಮೂಡಿದುದಂ . . . ಕಂಡೆಂ (ವಡ್ಡಾರಾ. ೮೫-೨೯); ಗಿಜ್ಜನೆಯ್ದುವ ಸೊರ್ಕಾನೆಗಳ ಕಾಲ ಸಂಕಲೆಯ ಗೋಸದೊಳಂ (ಕಬ್ಬಿಕಾ. ೪೪). **ಸೊಕ್ಕಾನೆ**: ಪಿರಿದುಂ ತೀಂಟೆತ್ತಿ ಗಂಡಸ್ಥಳಮನನುದಿನಂ ಕಾದ ಸೊಕ್ಕಾನೆಗಳ್ ಬಂದೊರಸಲ್ (ಕಾಡಂಪೂ. ೧೨೨); ಸೊಕ್ಕಾನೆ ಕುದುರೆಯ ವೈಹಾಳಿಯಂಕಣದಿಕ್ಕೆ ಕಣ್ಣಾನಕೆ ರಂಜಿಸಿತು (ಮೋಪತ. ೨-೫೫). [ಸೊರ್ಕು₂ + ಆನೆ₁]

ಸೊರ್ಕಾಳ್ತನ (ನಾ). ಅತಿಶಯವಾದ ಪರಾಕ್ರಮ, — ಶೌರ್ಯ: ಆಗಳುರ್ಕಿನ ಸೊರ್ಕಾಳ್ತನದಿಂ ನೀಳ್ದಂಗದಂಗದಂ . . . ದೂಡ್ಡೆದಿವಂದು ರಾಯಂಗೆ ಕಾಣಿಸಿಕೊಂಡು (ರಾಮಾಶ್ವ. ೧೪೨-೫). [ಸೊರ್ಕು₂ + ಆಳ್ತನ]

ಸೊರ್ಕಿಸು, ಸೊಕ್ಕಿಸು (ಕ್ರಿ). ೧. ಮತ್ತುಬರಿಸು; ಮದವೇರಿಸು: ಕುಡಿದೊಡೆ ಸೊರ್ಕಿಸದವು ನಾಣ್ಗೆಡಿಸದವು ಮನಕ್ಕಲಂಪನೀವುವು (ಆದಿಪು. ೫-೩೨); ಸಮಸ್ತಜನಮಂ ಪುಷ್ಪಾಸವಾಸಾರದುರ್ದಿನದಿಂ ಸೊರ್ಕಿಸುತಂ ಪೊದಟ್ಟುದು ಜಗತ್ಕಾಂತಂ ವಸಂತಾಗಮಂ (ಕಾದಂಉ. ೭೭೯). **ಸೊಕ್ಕಿಸು**: ೧. ನಿನ್ನಧರಾಮೃತಪಾನ ಸೊಕ್ಕಿಸದೆ ಮಾಣ್ದಪುದೇ (ಮೋಪತ. ೧೮-೯೧). ೨. ಬೀಗುವಂತೆ ಮಾಡು; ಗರ್ವಿಸುವಂತೆ ಮಾಡು: ಐಶ್ವರ್ಯವೆಂತಹನನುಂ ಸೊಕ್ಕಿಸುವುದು (ಪಂಚತಂ. ೧೬೮-೧೦); ನರರ ಸೊಕ್ಕಿಸುವ

ಸೌಭಾಗ್ಯ ಸೊಕ್ಕಿಸಿತಿಲ್ಲ ಹರೆಯ ಸೊಕ್ಕಿಸಿತಿಲ್ಲ ನಿನ್ನ (ಭರಚ. ೩-೧೧೮). ೩. ಎಚ್ಚರ ತಪ್ಪಿಸು; ಮೈಮರೆಯುವಂತೆ ಮಾಡು : ಆತನವಳಂ ತತ್ಸುತ್ರರ್ಮವರ್ವರಸು ಪಾಂಡವಶಾವಾಸಕ್ಕೆ ತಂದು ವಿನೋದದಿಂ ಸೊಕ್ಕಿಸಿ ನೋಟ್ಪವೆಂಬ ನೆವದಿಂ ಸೊಕ್ಕುಗಳ್ಳನೆಱೆಯಿಸಿ . . . ಅವಂದಿರ್ ಪರವಶತೆಯಿಂ ನಿದ್ರೆಗೆಯ್ದುದುಂ (ಮಹಾನೇ. ೯-೫೪ ವ); ಕೂಟದಿ ನಾಗರಿಕನ ಮಱೆದೊಱಗಿಸಿ ಪೀಠಮರ್ದನನ ಸೊಕ್ಕಿಪರು (ಮೋಹತ. ೧೮-೪೮). ೪. ಸಂತೋಷಗೊಳಿಸು: ಷೋಡಶವಿಧದ ದಾನಂಗಳ ಕುಡುವ ಕೈವಾಡ ಭೂಸುರರ ಸೊಕ್ಕಿಸಿತು (ಮೋಹತ. ೧೭-೩೫). [ಸೊರ್ಕು$_2$ + – ಇಸು]

ಸೊರ್ಕು$_1$, ಸೊಕ್ಕು$_1$, ಸೊರಗು$_2$ (ಕ್ರಿ). ೧. ಅಮಲೇರು; ಮತ್ತುಬರು; ಉನ್ಮತ್ತಗೊಳ್ಳು: "ಸೊರ್ಕು - ಉನ್ಮಾದೇ" (ಶಮಧಾ); ಎನ್ನ ನಿನ್ನ ಪತ್ತುಗೆಯ ತೊಡರ್ಪದಿಂದು ಪಱಿದತ್ತು ಮನಂ ಬಱಿಕೆಯ್ದೆ ಸೊರ್ಕಿದಾನೆಗೆ ಪಱಿವಂತಿರಿಂದು ಪಱಿದತ್ತೆನಗಂ ನಿನಗಂ (ಆದಿಪು. ೧೨-೩೭). ೨. ಬೀಗು; ಗರ್ವಿಸು: ಮಲೆಮಲೆದುರ್ಕಿ ಸೊರ್ಕಿ ಸಭೆಯೊಳ್ ಕುಲಪಾಂಸುಲನೀ ಶಿರೀಷಕೋಮಲೆಯ ವಿಲೋಲನೀಲಕಬರೀ ಭರಮಂ ತೆಗೆವಾಗಳ್ (ಪಂಪಭಾ. ೭-೫೭); ಪಿರಿಯರಿವರ್ ಸರ್ವಜ್ಞರ ದೊರೆಯೆನ್ನದೆ ಸೊರ್ಕಿ ಮೂರ್ಖತನದಿಂ ಕಾಣಂ (ಧರ್ಮಾಮೃ. ೯-೧೩೩). ೩. ಮೈಮರೆ; ಎಚ್ಚರವಿಲ್ಲದಿರು; ವಿಸ್ಮೃತಿಗೊಳ್ಳು: ಅಗರುವ ಧೂಪಧೂಮದೊಳೆ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊಟ್ಟಿಗೆ ತಿಳಿದಂತೆ (ಆದಿಪು. ೫-೪೩). ೪. ಜಡವಾಗು; ಆಲಸ್ಯಹೊಂದು: ತುಂಗಭದ್ರನೆಂಬ ಪೋಡುಂಗಾಱಂ ಸೊರ್ಕಿ ತೂಂಕಡಿಂದಿರುಳ್ ಕಟ್ಟಿಂಗಳ್ ಕಡುಗತ್ತಲೆಯೊಳ್ ಬಂದು ಕಿಚ್ಚಂ ತಗುಳ್ಚಿ ಪೋದೊಂ (ವಡ್ಡಾರಾ. ೧೫೬-೯); ಪಗೆಗೊಳೆ ಸೊರ್ಕೆ . . . ನೆರೆದೆಡೆಯೊಳ್ ಕಾ(ನಾ)ಡೆ ಪಾವು ಕೊಳ್ಗುಂ ನರನಂ (ಲೋಕೋಪ. ೧೦-೨). ೫. ಸಂತೋಷಗೊಳ್ಳು; ಉಬ್ಬು: ಸೋಗೆ ಮುಗಿಲ ಕಂಡು ಸೊರ್ಕುವಂದದೊಳು (ಹದಿಬ. ೩-೧೪). **ಸೊಕ್ಕು$_1$** : ೧. ಕಮಳಮಧುಪಾನದಿಂ ಸೊಕ್ಕಿದ ಮುತ್ತಂಚೆಯ ಧ್ವನಿಗಳಂತೆ ಜರ್ಝರಮಾದ ಪೊಂಗಱೆಜ್ಜೆಗಳ ಮೆಲ್ಲುಲಿಯೊಳಂ (ಕಾದಂಪೂ. ೬೭); ಸೊಕ್ಕಿದಿಭಂ ಮೃಗಾಧಿಪತಿಯರ್ಕೆಗೆ ಬಂದವೊಲಾಂತು ಸೀಟ್ಟು ಪೋಟ್ಟಿಕ್ಕದೆ ಮಾಣ್ಕೆನೇ (ದಶಕು. ೨-೮); ರಾವ್ತರು ಗಜಱಿ ಮಸ್ತಕ ಹಿಳಿಯಲಂಕುಶವಿಕ್ಕಿ ಬಿಟ್ಟರು ಸೊಕ್ಕಿದಾನೆಗಳ (ಕುವ್ಯಾದ್ರೋ. ೨-೨೭). ೨. ಮಾಱೂನ್ತ ವಿದ್ಧಿಷ್ಟರನದಟಲೆ ಯಲ್ದಣ್ಡಸಲ್ಪಣ್ಡಸಲ್ಪ[ಕ್ಕ]ನ ಚಕ್ರಂ ಸೊಕ್ಕೆ (ಪಾಇಇ. XX, ೩೧-೨೬;1044); ಮಹಾಪರಾಧದಲುಕ್ಕಿ ಸೊಕ್ಕುವ ಪಾಪಿಗಹುದೇ ಭಕ್ತಿಯೆಂಬುದು (ಪ್ರಭುಲಿಂ. ೧೬-೩೯); ಸೊಕ್ಕಿದ ಕುಂಭಾಂಡ ರಣದೊಳು . . . ಸಿಕ್ಕಿದನೆನಲಾಗಿ ಜುಣುಗಿ ಮೆಯ್ಯಿಕ್ಕಿದ ಗಗನಸ್ಥಳಕೆ (ಮೋಹತ. ೪೦-೬೨). ೩. ಮರ್ದುಗಳಂ ಕೂಟೊಳ್ ಬೆರಸಿ ಕೆಯ್ಯಲಿಕ್ಕುವುದುಂ ಶ್ರೀಧರಮುನಿನಾಥನವರ ಕಪಟವೃತ್ತಿಯನಱಿಯದುಂಡು ಸೊಕ್ಕಿ . . . ನಿದ್ರೆಗೆಯ್ದುದುಂ (ಧರ್ಮಾಮೃ. ೧೧-೧೨೬); ಏನರಿಪುವೆಂ ಧರಣಿಚೆಯ ಕಾಣೆನೆನಲು ಸೊಕ್ಕುತ (ವೆಂಕಾರಾ. ೫-೫-೧೩). ೪. ತವಕಿಸಿ ಹಂಸಮಂಡಳಿ ಮೃಣಾಳದ ಕೋಮಳದಂಡಕಾಂಡಮಂ ಸವಿದುಱೆ ಸೊಕ್ಕಿದತ್ತು (ಜಾಧಪು. ೪-೬೬); ಭಕ್ಷ್ಯಗಳ ಬಡ್ಡಿಸಿಕೊಳುತುಂಡರು ನೆಱೆ ಸೊಕ್ಕುವನಕ (ಮೋಹತ. ೧೮-೩೭). ೬. ಉಲ್ಬಣಿಸು; ಹೆಚ್ಚಾಗು; ತೀವ್ರವಾಗು : ಇಕ್ಕೆಲನ ನೋಡಿ ನಡೆಯಲು ಸೊಕ್ಕಿದುದಾ ಗಾಯ (ನನ್ನಚಾ. ೬-೧೪೯). ೭. ಚಿಮ್ಮು; ಉಕ್ಕು; ನೆಗೆ: ಅಂಬನಗಲಿಸುತೆದ್ದನಬುಧಿಯ ಸುಱಿದು ಸೊಕ್ಕುವ ಶಿಖಿಯವೊಲು ನೀಲ (ತೊರರಾ. ೬-೧೯-೫೬). **ಸೊರಗು$_2$** : ೬. ಸದಮಲಗುಣಿ ತನ್ನ ಬರಿಯ ಪದೆದು ತಿವಿದುಕೊಂಡಾ ತನ್ನ ರಕ್ತಮಾನದಿರದೆ ಬಲಿಗೊಟ್ಟನಾಗ ಆ ವೇಳೆಯೊಳಾ ಗಾಯ ಸೊರಗಿ ಮೂರ್ಛೆಯಾವರಿಸಲು ನೆಲಕೊಱಗಿ (ನೇಮಿಸಂ. ೧೦-೧೯೯).

[ದೇ. ॥ ತಮಿ. ಚೊಕ್ಕು, ಚೆರುಕ್ಕು, ಚೊರುಕು; ಮಲ. ಚೊರುಕು; ತುಳು. ಸೊರ್ಕು, ಸೊಕ್ಕು; ತೆಲು. ಸೊಕ್ಕು, ಚೊಕ್ಕು]

ಸೊರ್ಕು$_2$, ಸೊಕ್ಕು$_2$ (ನಾ). ೧. ಅಮಲು; ಮತ್ತು; ಮದ: ಪಾಲ್ಗಡಲೊಳಮಮರ್ದಿನೊಳಂ ಪುಟ್ಟಿದ ಕಳ್ಳ ಸೊರ್ಕಿನೊಳಮುಂತೆ ನಡುಗುವ ಬಡನಡುಗಳ್ಗೆ ನಡುಕಮುಮಂ . . . ನುಡಿಗಳ್ಗೆ ತೊದಳುಮನೆಕ್ಕೆಯಿಂ ತಳೆಯೆ (ಪಂಪಭಾ. ೭-೮೧ ವ); ಕಳ್ಳೊಡನೆ ಪುಟ್ಟಿದುದಱಿಂ ಸೊರ್ಕುಂ ಅಚ್ಚರಸಿಯರೊಡನೆ ಪುಟ್ಟಿದುದಱಿಂ ಪಾಱುಗೆಯ್ತಮುಂ ನಿನಗೆ ಸಹಜಮಾಗಿರ್ದುವು (ಗದಾಯು. ೯-೭ ವ). ೨. ಹೆಮ್ಮೆ; ಕೊಬ್ಬು; ಗರ್ವ: ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು . . . ಕರ್ಣ ನಿನಗುಳ್ಳನಿತೇನೆನಗುಂಟೆ (ಪಂಪಭಾ. ೧೦-೨೩); ಕೌಂತೇಯರಂ ಮಚ್ಚರದಿಂ ಕಾರುಂಕರದೊಳ್ತಿಱ್ಪನೆ ತಿರಿಪಿದ ಸೊರ್ಕಿಗಳೇನಾಮದು (ಗದಾಯು. ೭-೧೪). ೩. ಮೈಮರವು; ವಿಸ್ಮೃತಿ: ಅವರ್ಗೆಲ್ಲಮುಣಿಸಂ ಮಾಡಿ ಸೊರ್ಕಪ್ಪಾಹಾರಮನೂಡಿ (ವಡ್ಡಾರಾ. ೧೯೦-೪); ಅಗರುವ ಧೂಪಧೂಮದೊಳ್ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊಟ್ಟಿಗೆ ತಿಳಿದಂತೆ (ಆದಿಪು. ೫-೪೩). ೪. ಮತ್ತುಬರಿಸುವ ಔಷಧ; ಸೊಕ್ಕುಮದ್ದು: ಗೇಯದೊಳೇಕೆ ಸೊರ್ಕನಿಕ್ಕಿದಳೆನೆ ಕಳ್ಳ ಚಕ್ಕಣಮೆನಿಪ್ಪುದು (ಪಂಪಭಾ. ೭-೯೦); ಕಾಡೊಡೆಯಂ ತೋಡಿಲ್ಲದ ತೊಱೆವೇಂಟೆಯಾಡಲೆಳಸುತಿಱಿಗೊಳ ಹಂಜರಗೊಳಿಡುಗಾಣಂ ಸೊರ್ಕು . . . ಸೂಸುಗೊಳ್ಗಳೆಂಬಿವಂ ಕೊಂಡು . . . ಪೆರ್ದೊಱೆಗೆಯ್ದು (ರಾಜಶೇ. ೫-೧೧೪ ವ) ೫. ಮದೋದಕ; ಮದಜಲ: ಬಿಡುತಂದುಗ್ರದ್ವಿಪಂ ಬಂದು ತಾಂಗುವುದೆಂಬಂದೆಳಮಾವಿನೊಳ್ ದ್ವಿಪಮೆ ಗತ್ತೇಂ ಸೊರ್ಕು ಸೈತಿರ್ಕುಮೇ (ಶಾಂತಿಪು. ೯-೧೪೨); ಅಡಸಿದರಿಕರಿಯ ಘಟೆಯಂ ಪೊಡೆದೊಡೆ ಬಿಡದಳಿಗಳಡರ ಸೊರ್ಕಿನ ಸೊವಡಿಂದಡಕಿಲಿಡೆ ಪಣ್ತ ನೇಱಿಲ ನಿಡುಗೊಂಬೆನಿಸಿದುದು ತೋಳ ಬಾಳ್ ತೈಲಪನಾ (ಕಾವ್ಯಸಾ. ೨೪೬). ೬. ಸಂತೋಷ; ಹಿಗ್ಗು: ಪಿಕಕುಲದ ಸೊರ್ಕು ಮಧುಕರನಿಕರದ ಮದವರಗಿಳಿಗಳ ಗರ್ವಂ (ಗಿರಿಕ. ೨-೪೫). ೭. ಠೀವಿ; ಗತ್ತು: ಮದೋತ್ಸವದೆ ಕೋಗಿಲೆವೆಣ್ ಗಟಪಂ ನೆಗೆಟ್ಟುವಂತನುವಿಪ ಸೊರ್ಕಿನಿಂ ಪಿಕನಿನಾದೆ ಪೆಱಱ್ ಗಟಪಂ ನೆಗೆಟ್ಟಿದಳ್ (ಕಾವ್ಯಸಾ. ೯೬೪). ೮. ಅತಿಶಯ; ಹೆಚ್ಚಳ: ಮೃದನಿಂ ಬೀಳ್ಕೊಳುತ್ತೆ ತತ್ಸುಖದ ಸೊರ್ಕಿಂ ದಿವಿಜಕುಜಮಡಿಯಿಡುವ ತೆಱದಿನಲ್ಲಿಂ ತಳರ್ದು (ಪದ್ಮರಾ. ೨-೬೧). ೯. ಶಕ್ತಿ; ಕಸುವು: 'ಸೊರ್ಕಱಿ' ಪರಾ. **ಸೊಕ್ಕು$_2$**: ೧. ಚರಿಯಿಪ ವನದೇವತೆಯರ ಚರಣಾಲಕ್ತಕದೆ ಪೊರೆದುವೆನಿಪುವು ಮಧುವಿಂದುಱೆ ಸೊಕ್ಕನಾಳ್ದ ಕೇರಳಿಯರ ಕದಪಿನ ಬಣ್ಣಮಪ್ಪ ಚೆಂದಳಿರ್ದುಱುಗಲ್ (ಕಾದಂಪೂ. ೧೬); ತಲೆಗೇಱಿ ಸೊಕ್ಕು ತೊನೆವರ್ (ಸೋಮೇಶ. ೪೮). ೨. ರಾಜ್ಯದ ಸೊಕ್ಕಿನಲಿ ನೆಱೆ ಬಂದು ಬ್ರಾಹ್ಮಣರ ಮಕ್ಕಳಾಟಿಕೆಯಾಡಿ (ಸಂಭವ. ೨೬-೧೧೫); ಕಡುಗುದುರೆಯ ಸೊಕ್ಕ ಮುಱಿಯೆಂದು ಚದುರಂಗದಡಿಯ ಮೇಲ್ಮಾಯ ಪೇಳಿದಳು (ಕಂನಪ. ೬-೧೨೦); ಇಪ್ಪು ಸೊಕ್ಕು ಒಳ್ಳೆಯದಕ್ಕಲ್ಲ (ತೇಮೋಡ. ೯೯). ೩. ಸೊಕ್ಕು ಮುಕ್ಕುಳಿಸಿದಂತಿರ್ದಿರವುಂ ಬಟಲ್ದಂತೆ ಚೋಲ್ದಂದಮುಂ . . . ಎಂತು ದೊರೆಕೊಳ್ಗುಂ (ಕಾದಂಪೂ. ೭೫೯); ನಿನ್ನವಗೆ ತಿಳಿದುದು ಸೊಕ್ಕು ಚಿತ್ತದ ಬವಣೆ ಬೀತುದು (ಕುವಾಕ. ೨೦-೧). ೪. ತ್ರಿವಿಧ ಸೋಂಕ ತಂದು ಆ ಮಡುವಿನ ಉದಕದಲ್ಲಿ ಒಡಗೂಡಿದಡೆ ಆ ಸೊಕ್ಕು (ಸೋಂಕು) ಮತ್ಸ್ಯವ ಮುಟ್ಟಿದುದಿಲ್ಲ (ಸರ್ವಜ. ೫೫-೩೧೩); ನೀನಿಂತು ತಲೆಕೆಳಗಾಗಿ ನಡೆಯುತಿಹೆ . . . ಮಱಹುಗಳ ಸೊಕ್ಕನಿಕ್ಕಿಸಿ ಸುಗುಡತನ ಮೆಱೆದು (ಬಸಪು. ೪೨-೧೭); ನಿನಗೆ ವಿಷ ತಿನ್ನಿಸೋದಕ್ಕೆ, ಸೊಕ್ಕು ತಿನ್ನಿಸೋದಕ್ಕೆ ನೀನು ಯಾರಿಗೆ ಏನು ಮಾಡಿದ್ದೆ ನಂದಿ? (ಪಳುಮ. ೧೯೫). ೫. ಸೊಕ್ಕು ಸರಿಯೆ ಕುಂಭಸ್ಥಲ ಬಿರಿಯಲಂಕುಶದ ಹೊಯಿಲಿಂದ ಬರಿಸುತಿಹರು ಸಾಧನೆಯನಂಕದ ಮದಕರಿಗಳಿಗಲ್ಲಿ ಕೋವಿದರು (ಕುರಾಸಾಂ. ೪-೭೦); ಮೆಯ್ಗೊಱೆದಾನೆ ಸೊಕ್ಕು ಮಾವಿನ ಪಚ್ಚೆಲೆದುಪ್ಪಟಿಯುಡಿಗೆಯೊಳಾ ವನಚರಿಯ ರೊಪ್ಪಿದರು (ಶ್ರೀಪಾಲ. ೭-೩೬). ೬. ಸೊಗಸಿನ ಸೊಕ್ಕು ಮಿಕ್ಕು ಹೊಱಗಂ ಮಱೆದು (ಸಿದ್ಧರಾ. ೨-೬೭); ಕಮಳದ ಸೊಕ್ಕು ಸೋರೆ . . . ಭಾನು ಪಶ್ಚಿಮಪಯೋಧಿಯೊಳೊಯ್ಯನೆ ಮೆಯ್ಯನಿಕ್ಕಿದಂ (ಪುಣ್ಯಾಸ್ರ. ೧-೧೧೫). ೮. ನಿಮ್ಮ ಜವ್ವನದ ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇತಕ್ಕೆ ಯೋಗ್ಯಂ ರಮಿಸಿದವರುಂಟೆ (ಹಚಕಾ. ೭-೧೮); ಲಾವಣ್ಯಲಹರಿಯ ಸೊಕ್ಕುಗಳ ಸುರಸೂಳೆಗೇರಿಗಳೊಳಗೆ ನಡೆತಂದ (ಕುವ್ಯಾಅ. ೭-೮೨). ೧೦. ಮೈಮರೆಸುವ ಸಾಮರ್ಥ್ಯ; ಮೂರ್ಛೆಗೊಳಿಸುವ ಶಕ್ತಿ: ಸರಳ ಸೊಕ್ಕವಗಡಿಸೆ ಕೃಪ ಮೈಮಱೆದನತ್ತಲು ದ್ರೋಣನಿತ್ತಲು ಪರಮನಿದ್ರಾಸಕ್ತನಾದನು (ಕುವ್ಯಾಏ. ೬ರಾ. ೯-೮೭). ೧೧. ಒಂದು ಬಗೆಯ ಸುಗಂಧದ್ರವ್ಯ: 'ಮಿಗಸೊಕ್ಕು' ಪರಾ.

[< ಸೊರ್ಕು$_1$./ತಮಿ. ಚೆರುಕ್ಕು, ಚೊಕ್ಕು; ಮಲ. ಚೊರುಕ್ಕು; ತುಳು. ಸೊರ್ಕ್, ಸೊರ್ಕು; ತೆಲು. ಚೊಕ್ಕು, ಸೊಕ್ಕು; ಕೊಡ. ಚೊಕ್ಕ್]

ಸೊರ್ಕುಂಗಣ್, ಸೊಕ್ಕುಗಣ್ (ನಾ). ಮಾದಕವಾದ ಕಣ್ಣು: ಸೊಗಯಿಪ ಸೊರ್ಕುಂಗಣ್ಗಳ ಸುದತಿಯರೀಕ್ಷಿಸಿದರ್ ನೃಪನ (ಜಯಕಾ. ೧೦-೫೪). **ಸೊಕ್ಕುಗಣ್**:

ಸುಕ್ಕುಗುರುಳ ನೀಲಿಯರ ಸೊಕ್ಕುಗಂಗಳ ರುಚಿ ಸೂಸಲು ನೃಪ ಮುತ್ತನಿಕ್ಕಿದಂದದಿ ನೊಪ್ಪಿದನು (ನೇಮಿಜಿ. ೩-೯೦). [ಸೊರ್ಕು$_1$ + ಕಣ್]

ಸೊರ್ಕುಂಗೋಗಿಲೆ, ಸೊಕ್ಕುಗೋಗಿಲೆ, ಸೊರ್ಕುಕೋಗಿಲೆ, ಸೊರ್ಕುಗೋಗಿಲೆ (ನಾ). ಮದಿಸಿದ ಕೋಗಿಲೆ; ಮತ್ತವಾದ ಕೋಗಿಲೆ: ತುಂಬೆಲರ್, ಎಳಮಾವು, ಸೊರ್ಕುಂಗೋಗಿಲೆ - ಇವು ಉಪಸರ್ಗದಿಂ ಬೆರಸಿದ ಶಬ್ದಂಗಳ್ (ಕಶಾ. ೬೨-೪೩೬). **ಸೊಕ್ಕುಗೋಗಿಲೆ:** (ಕ). **ಸೊರ್ಕುಕೋಗಿಲೆ:** ಸೊರ್ಕುಕೋಗಿಲೆಯೆಂದುಂ . . . ಕೆಂಬಾಯ್ ತೆಳ್ಗದಂಪನಲ್ಕ ತಾಮಿವುಪಸರ್ಗಂಗಳ್ (ಕವಿ. ೧೮೩). **ಸೊರ್ಕುಗೋಗಿಲೆ:** ಎಳಲತೆಯಿಮ್ಮಾವು ಸೊರ್ಕುಗೋಗಿಲೆಯೆಂದಿಂತಳವಡಲುಪಸರ್ಗಾಖ್ಯಂ (ಚತುಸಾ. ೭೨).

[ಸೊರ್ಕು$_1$ + ಕೋಗಿಲೆ]

ಸೊರ್ಕುಂಜವ್ವನ, ಸೊಕ್ಕುಂಜವ್ವನ, ಸೊಕ್ಕುಜವ್ವನ, ಸೊರ್ಕುಜವ್ವನ (ನಾ). ಉಕ್ಕುತ್ತಿರುವ ಹರೆಯ; ನವತಾರುಣ್ಯ: ಈತನಂತವುರದ ಸೊರ್ಕುಂಜವ್ವನದ ಕನ್ನೆವೆಣ್ಗಳೊಡವೆರೆದು ವನವಿಹಾರದೊಳಿರ್ದಂ (ರಾಮಾಶ್ವ. ೧೨೨-೨೧). **ಸೊಕ್ಕುಂಜವ್ವನ:** 'ಸೊಕ್ಕುಂಜವ್ವನೆ' ಪರಾ. **ಸೊಕ್ಕುಜವ್ವನ:** ಚಿಕ್ಕಪ್ರಾಯದ ಚೆನ್ನೆ ಸೊಕ್ಕುಜವ್ವನ ರನ್ನೆ (ನವಮೋ. ೩-೪); ಸೊಕ್ಕುಜವ್ವನದ ರಾತ್ರಿರಾಣಿ ಮುಸುಗುಡಿಸೆ ಆಯ್ತು ಹಗಲು (ಸೂರ್ಯಶಾ. ೩೪-೧೪). **ಸೊರ್ಕುಜವ್ವನ:** ನಿನ್ನ ಸೊರ್ಕುಜವ್ವನದ ಸೊಬಗನ್ನೊಡ್ಡಿ ಹೀಗೆ ಬೀಸಿರುವ ಕೆಣಕುಕಣ್ಣುಳ್ಳವನನ್ನು ಎರ್ದಗಲಂಕಿ ಗಾಳುಂಗಂಡಿಕೆಗುಬ್ಬಿಸುತ್ತಿದೆ (ಚಿಬ್ಬಿಅ. ೧೦-೧೪). [ಸೊರ್ಕು$_1$ + ಜವ್ವನ]

ಸೊರ್ಕುಂಜೆರ್ಕು (ನಾ). ಗರ್ವದ ನಾಶ; ದರ್ಪವು ಭಂಗವಾಗುವಿಕೆ: ಇಂತಪ್ಪುದುಮುರ್ಕಿನ ಕೇಣಿಯ ಚೂಣಿ ಸೊರ್ಕುಂಜೆರ್ಕಾಗಲೊಡಂ ಕಂಡು ಮಿಂಡೆಟ್ಟ ಪಡಿವಳರ್ . . . ಜವಹರದ ಪಡಿವಳರಾದರ್ (ರಾಮಾಶ್ವ. ೧೪೩-೨೭).

[ಸೊರ್ಕು$_2$ + ಜೆರ್ಕು$_1$]

ಸೊರ್ಕುಕದಡು (ನಾ). ಮದಜಲದ ಕದಡು,— ಬಗ್ಗಡ : ಆ ವಾರಣದ . . . ಉಭಯಕಟತಟದ ಸೊರ್ಕುಕದಡಿನ ತೆರ್ಕೆಗಡಲ್ಗಳೊಕ್ಕೈಸಿ ಜಗಮನಿಕ್ಕಲೆಂದು ಮಹಾವ್ರತವನೆತ್ತಿಕೊಂಡ ಕಲ್ಪಾಂತಕಾಳನ ಕೂರ್ಚಜಾಳಂ ಪೆರ್ಚಿಕ್ಕಿ ಬೇಱೆ ಬೆರ್ಚಿದಂತಿರ್ಪುದು (ಆನಂಪು. ೧೩-೨೮ ವ). [ಸೊರ್ಕು$_2$ + ಕದಡು$_2$]

ಸೊರ್ಕುಕೋಗಿಲೆ 'ಸೊರ್ಕುಂಗೋಗಿಲೆ' ನೋ.

ಸೊರ್ಕುಗಂಪು (ನಾ). ಮತ್ತೇರಿಸುವಂಥ ಸುವಾಸನೆ: ಅದಿರ್ಗಂತಿಯ ಸೊರ್ಕುಗಂಪು . . . ಕೇತಕಿಯ ಕೆಂಪೆಸಗುಂ ಸಲೆ ಪುಷ್ಪವಾಟಿಯೊಳ್ (ಗಿಂಕ. ೨-೬೧); ಸುರಯಿಯ ಸೊರ್ಕುಗಂಪು . . . ಚೂತವಲ್ಲರಿಯಲರಚ್ಚಗಂಪು ಬಗೆಗೊಂಡುದು ತದ್ವನದೊಳ್ (ರಾಜಶೇ. ೧೦-೧೯). [ಸೊರ್ಕು$_1$ + ಕಂಪು]

ಸೊರ್ಕುಗೋಗಿಲೆ 'ಸೊರ್ಕುಗೋಗಿಲೆ' ನೋ.

ಸೊರ್ಕುಜವ್ವನ 'ಸೊರ್ಕುಂಜವ್ವನ' ನೋ.

ಸೊರ್ಕುಜವ್ವನಿಗ (ನಾ). ಕೊಬ್ಬಿದ ಯುವಕ; ಉದ್ಧತನಾದ ತರುಣ: ಮಿಕ್ಕುಬೆದ ನಿಮ್ಮ ಸೊರ್ಕುಜವ್ವನಿಗರಂ ತಿಕ್ಕಿ ತೆಕ್ಕೆಯಾಡುವೆಂ (ರಾಮಾಶ್ವ. ೧೪೨-೨೭).

[ಸೊರ್ಕುಜವ್ವನ (< ಸೊರ್ಕುಂಜವ್ವನ) + - ಇಗ]

ಸೊರ್ಕುದವಕ (ನಾ). ಹೆಚ್ಚಾದ ವೇಗ,— ತ್ವರೆ; ಅತಿಶಯವಾದ ರಭಸ: ದ್ಯುಮಣಿಯಸ್ತಾಂಬುಧಿಯೊಳಳ್ದುವಾ ಮೊದಲೆ ನಾಂ ದೈತ್ಯಲಂಕಾದ್ವೀಪತಟಿಗ ಸೇರ್ದಪೆನೆಂದು ಸೊರ್ಕುದವಕದೊಳೆಯ್ದುತಿರೆ (ಶ್ರೀರಾಮಾ. ೪೧೪-೩೭೪).

[ಸೊರ್ಕು$_2$ + ತವಕ$_1$]

ಸೊರ್ಕುನೀರ್ (ನಾ). ೧. ಮದಜಲ; ಮದೋದಕ: ''ಸೊರ್ಕುನೀರೆಂದು ಮದಜಲಂ'' (ಕಶಾ. ೫೧-೮೩); ಗಲ್ಲದ ಸೊರ್ಕುನೀರ ಪೊನಲಿಂ ನೆಲೆವೆರ್ಚಿ ಕಡಲ್ ತುಳುಂಕೆ . . . ಜಲ್ಲನೆ ತುಂಬಿಗಳ್ ಕೆದಱೆ ಬಂದುವು ಬಂಕದಿನಂಕದಾನೆಗಳ್ (ಕಬ್ಬಿಾ. ೭೦೩). ೨. ಹೆಚ್ಚಾದ ನೀರು; ಯಥೇಚ್ಛವಾದ ನೀರು: ಆ ನಳಿನಾಕ್ಷಿಯ ಲಾವಣ್ಯಾಮೃತಪಾನದಿಂ ಜನದ ಕಣ್ಬಳಗ ಏನೆಂಬೆ ಸೊರ್ಕು[ಪಾಠಾಂ. ಕ್ಕು]ನೀರುಂಡ ಬಾಳಿಗಳ ಸಂತಾನದಂತುಱೆ ಮೈಮಱೆದವು (ಕರಾಪಾಂ. ೨೧-೬೪). [ಸೊರ್ಕು$_2$ + ನೀರ್]

ಸೊರ್ಕುನುಡಿ (ನಾ). ಗರ್ವದ ಮಾತು; ಸೊಕ್ಕಿನ ನುಡಿ: ದೈವದೊಳ್ ಸೊರ್ಕುನುಡಿ ನುಡಿಯದಿರ್ (ಅಶ್ವತ್ಥಾ. ೬-೧೧೩); ಗರ್ವದಿಂದುರ್ಬಿ ಸೊರ್ಕುನುಡಿಯಾಡುವಯ್ (ಬುದ್ಧಪ್ರ. ೫೦-೧೦೯). [ಸೊರ್ಕು$_2$ + ನುಡಿ$_2$]

ಸೊರ್ಕುಮರ್ದು, ಸೊಕ್ಕುಮದ್ದು (ನಾ). (ದತ್ತೂರಿ ಮುಂತಾದುವುಗಳ) ಮೈಮರೆಯುವಂತೆ ಮಾಡುವ ಮದ್ದು , — ವಿಸ್ಮೃತಿಯನ್ನುಂಟುಮಾಡುವ ಔಷಧ: ಬಿಡುವಲೆ ಸೊರ್ಕುಮರ್ದು . . . ಗಿಡಗಮೆನಿಪ್ಪಿವಂ ಪಿಡಿದು ಬೇಂಟೆಗೆ ಸಂದ ಪುಳಿಂದರೆಯ್ದಿದರ್ (ರಾಜಶೇ. ೫-೫೨). **ಸೊಕ್ಕುಮದ್ದು:** ಕುಕ್ಕುಟಗಳ ಕಾಲ್ಗೆ ಚೀಲಾಯುಧವಿಕ್ಕಿ ಸೊಕ್ಕುಮದ್ದಿನ ಗುಟುಕಿತ್ತು ಉಕ್ಕಂದದೆ ಕಾದಿಪರಸುಮಕ್ಕಳ ಮೊತ್ತ ಕಿಕ್ಕಿಜಿದೆಸೆದುದು (ಕಂನವಿ. ೭-೧೨). [ಸೊರ್ಕು$_2$ + ಮರ್ದು]

ಸೊರ್ಕುವೆಱು (ಕ್ರಿ). ಅಮಲೇರುವಂತೆ ಮಾಡು; ಮತ್ತೇರಿಸು: ಕಡುಗಾಡಿವೆತ್ತಲಿವ ತೆಂಕಣಗಾಳಿಯ ಸೋಂಕು ಸೊರ್ಕುವೆತ್ತುದು (ಧರ್ಮನಾ. ೧-೭೨).

[ಸೊರ್ಕು$_2$ + ಪೆಱು$_1$]

ಸೊರ್ಕೇಱಿಸು (ಕ್ರಿ). ಪರವಶಗೊಳಿಸು; ಮೈಮರೆಸು: ತಂತಿಯನಲೆಗೆಯ್ದ ಬೆರಲ್ಗಳ್ . . . ಮನಮಂ ಸೋಲಿಸಿ ಸೂರಗಿಸಿ ಸೊರ್ಕೇಱಿಸಿ ಸೊಗಂಬಡಿಸೆ (ಚಿಕವಂ. ೧೬೦-೯). [ಸೊರ್ಕು$_2$ + ಏಱಿಸು]

ಸೊರ್ಕೇಱು, ಸೊಕ್ಕೇರು, ಸೊಕ್ಕೇಱು (ಕ್ರಿ). ೧. ಅಮಲೇರು; ಮದಿಸು; ವಶಿತ್ವವಾಗು: ಅಲರ್ವಂಡನುಂಡು ಸೊರ್ಕೇಱಿಯೊಂದಿನಿಸು ಮೆಲ್ಲುಲಿನುಣ್ಗೂರಲೊಳುಣ್ಮಲಿಂಚರಂಗೆಯ್ತುತಿರ್ಪಲರ್ವಕ್ಕಿವಳಗದಿಂ . . . ಕೊಳಂಗಳ್ ಮೆಱೆದುವು (ಪದ್ಮರಾ. ೮-೩೯); ಅಮರ್ದಂ ಪೀರ್ದು ಪೊದಳ್ದು ಕಾರ್ಮುಗಿಲೊ ಮೇಣ್ ಸೊರ್ಕೇಱಿ ಬಂದಾನೆಯೋ (ಚಿಪ. ೩-೮೪). **ಸೊಕ್ಕೇರು:** ೨. ಗರ್ವವು ಹೆಚ್ಚಾಗು; ಅಹಂಕಾರ ಹೆಚ್ಚಾಗು: ನಿನಗೆ ಈಚೆಗೆ ತುಂಬಾ ಸೊಕ್ಕೇರಿದೆ (ಕೂಛ). **ಸೊಕ್ಕೇಱು:** ೧. ಮನ್ಮಥಗಜಂ ಸೊಕ್ಕೇಱಿ . . . ಬಂದುದು ವಸಂತಂ (ಧರ್ಮಾಮೃ. ೧೩-೧೧); ಸೊಕ್ಕೇಱುವ ಚೇತನಂ ಮಱೆವ ಮೈ ನಸುದೇಲ್ದ ವಿಲೋಲಲೋಚನಂ (ಉದ್ಭಟ. ೫-೮೦). ೨. ಚಕ್ರಪಾಣಿಯ ದಂಡು ಸೊಕ್ಕೇಱಿ ಬರುವಾಗ ರಕ್ಕಸರು ಕರಿಯನೊಡಗೂಡಿ ದೊರೆಯನ್ನು ತಿಕ್ಕಿಬಿಟ್ಟಾರು (ಸರ್ವಜ್ಞ. ೧೦೭೦). ೩. ಅತಿಯಾಗಿ ಸಂತೋಷಗೊಳ್ಳು,— ಹಿಗ್ಗು: ಲಿಂಗದಂಪ್ರಿಯ ಮುಂದೆ ತುರಗದಿಂದೊಲಿದಿಳಿದು ತಕ್ಕೈಸಿ ಮುಂಡಾಡಿ ಸೊಕ್ಕೇಱಿ ನೋಡುತಂ (ಮಜಾರ. ಡೇ. ೭೩-೫). [ಸೊರ್ಕು$_2$ + ಏಱು$_1$ (< ಏಱ್$_1$)]

ಸೊರ್ಕೊಗೆ (ಕ್ರಿ). ಉಬ್ಬು; ಹೆಚ್ಚು: ಸೊರ್ಕಗೆದಬ್ಬಿಯ ಮಧ್ಯದೊಳುರ್ಕಿದ ಸಿಂಹಳನ ಮದಕಿದೌಷಧಮೆಸಕುಂ (ರಾಜಶೇ. ೫-೧೨೬). [ಸೊರ್ಕು$_2$ + ಒಗೆ$_1$]

ಸೊಲ್$_1$, ಸೊಲ್ಲು$_1$ (ಕ್ರಿ). ೧. ಹೇಳು; ನುಡಿ; ಮಾತಾಡು: ಬಜುಜಜುಚನ ಸೊಲ್ಲಂ ಸೊಲ್ಲುದು ನಿನಗೇಂ ಮೊಗ್ಗೆ (ಉದ್ಭದೇ. ೩-೭೧); ಚೆಲ್ಲ, ಶಿಶು . . . ಸೊಲ್ಲ ಮಾತುಗಳನಾಲಿಸಿ ಮುದ್ದಿಸುವರ್ (ಚೈಮಿಭಾ. ೨೮-೨೦). ೨. ವರ್ಣಿಸು; ವಿವರಿಸು: ಭಾಳನಯನಾತುಳಾಮಳಲೀಲೆಗಳಂ ಸೊಲ್ವೆನೊಲ್ಲು ಚೌಷಷ್ಟಿಗಳಂ (ಹಾಲಾಸ್ಯ. ೧-೧-೮೮). ೩. ಪರಸ್ಪರ ಸಂಭಾಷಿಸು: ಕೆಳದಿಯರೊಳ್ ಸೊಲ್ಲದೇಕಾಂತದೊಳ್ ನಿಲ್ದದಿರ್ (ಜಗವಿ. ೧೬-೧೨೬). ೪. ಹೊಗಳು; ಕೊಂಡಾಡು: ಆ ವಿಕ್ರಮಮಂ ಸೊಲ್ಲಿನಮಾವರ್ಜಿಸಿದಂ ನಾಲ್ವತ್ತೆರಡಱಿಕೆಗಾಳಿಗಂಗಳೊಳೀತಂ (ಪಂಪಭಾ. ೧-೨೫). **ಸೊಲ್ಲು$_1$:** ೧. ಸೊಲ್ಲಬೇಕಿನಿತೊಂದನೆನ್ನಂ ಭುಲ್ಲವಿಸಿ ಮರ್ತ್ಯಕೆ ಜಗತ್ಪ್ರಯವಲ್ಲಭನೆ ನೀವಲ್ಲದೊರ್ಬನು ಕರ್ತನಿದ್ದಹನೆ (ಬಸಪು. ೨-೪೦); ಬಲ್ಲಿದರುಂಟು ಮುಂಗುಲಿದೇವನೊಳಗೆಂದು ಸೊಲ್ಲಿದರವರಸುರನಿಗೆ (ಕುರಾಸಾಂ. ೧೮-೫೯).

[ದೇ. ॥ ತಮಿ. ಚೊಲ್; ಮಲ. ಚೊಲ್ಲು; ಪರ್ಜಿ. ಚುಲ್]

ಸೊಲ್$_2$, ಸೊಲ್ಲು$_2$ (ನಾ). ೧. ಮಾತು ; ನುಡಿ : ನೀವೇ ಬಲ್ಲಿರಿ ನಾನಱಿಯೆನಯ್ಯಾ ಸೊಲ್ಲಿಂಗತೀತನ ಕಲ್ಲಿಂದಾಹನೆಂಬಯ್ಯಾ (ಮೋಳಮಾ. ೫-೧೮); ನೀವುಂ ನಿರ್ಲಜ್ಜರಪ್ಪ ಸವಣರ ಸೊಲ್ಲಿಂಗೊಳಗಾದುದಕ್ಕೆ ನಾಂ ಬೆಜಗಾದೆಂ (ಧರ್ಮಾಮೃ. ೧ ೧೧೧); ಪ್ರತಿಕಿಗೆ ನುಡಿವ ಸೊಲ್ ಪುಸಿಯಹುದು (ಚೈಮಿಭಾ. ೪-೪). ೨. ಕಟ್ಟಳೆ; ಅಪ್ಪಣೆ: ಲಕ್ಷ್ಮಣನದಾವೆಡೆಯೊಳಿನ್ನ ಸೊಲ್ಲಲಿಸುವನದಾವೆಡೆಯೊಳು ಹಳುವಿನೊಳ್ಪಸಗಾಗಿ ನವೆದನುಜನಾವೆಡೆಯೊಳಿಳಿದನೇ ಸೌಮಿತ್ರಿ (ಚೈಮಿಭಾ. ೨೧-೪). **ಸೊಲ್ಲು$_2$:** ೧. ನಲ್ಲನವ ಕೇಳಿಂದ ವಲ್ಲಭಗೆ ಶಿವನೊರೆದ ಸೊಲ್ಲನಾ ಶಿವರಹಸ್ಯಾದಿಗಳೊಳಂ (ಪಾನಂಚ. ೩-೫೭);

ಇಲ್ಲಿಹನು ಅಲ್ಲಿಲ್ಲವೆಂಬೀ ಸೊಲ್ಲು ಸಲ್ಲದು (ಹರಿಹ. ೪೭). ೨. ಪುಲ್ಲಶರಾತ್ಮಸಂಭವ ಕೇಳ್ದು ಗುರುಗಳ ಸೊಲ್ಲನುಲ್ಲಂಘಿಸದೊಡನೆ ಸಲ್ಲಲಿತಾಂಗಿಯ ವರಪಾಣಿವಿಡಿದು ಪೊಂಬಲ್ಲಕ್ಕಿಯೊಳಗೆ ಮಂಡಿಸಿದ (ಮೋಹಶ. ೪೧-೩೪). ೩. ನಾದ; ಧ್ವನಿ: ವಾಸಂತಿಕಾ ದೇವಿಯ ಆಲಯದಿಂದ ಪ್ರಭಾತಸೂಚಕ ಮಂಗಳವಾದ್ಯಗಳ ಸೊಲ್ಲು ಕೇಳಬಂದಿತು (ಶಾಂತಲಾ. ೧೦೨): ಸೊಲ್ಲು ಎಂಬುದು ನಾದ, ಭಾವದಲ್ಲಿದೆ ಸ್ಪಾದ (ಅರಳು. ೪೦೧-೯). ೪. ಶಬ್ದ; ಪದ: ಒಲಿದೊಮ್ಮೆ ಶಿವ ಶರಣೆನ್ನಿರಯ್ಯಾ ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ (ಬಸವ. ೧೮೦): ಸೌಂದರಪುರಾಣದೊಳಗಣೊಂದೊಂದು ಸೊಲ್ಲ ಕ್ರಮದೊಳಾವ ವನೊರ್ವನಾಲಿಸಿದೊಡಾತಂಗೆ . . . ಮೋಕ್ಷ ಸಮನಿಪುದು (ಸೌಂದಪು. ೧೩-೫೬). ೫. ಹೊಗಳಿಕೆ; ಪ್ರಶಂಸೆ: ಸೊಲ್ಲಿಗೆ ತಕ್ಕವನಿಳೆಗೊಬ್ಬ ಭರತೇಶನಲ್ಲವೆ ಹೇಳರಗಿಳಿಯೆ (ಭರಚಿ. ೬-೯೩). ೬. ಕೂಗುವಿಕೆ; ಕರೆ: ಜಗನ್ನಾಥವಿಠಲ ಸೊಲ್ಲನಾಲಿಸಿ ಕಂಬದಿಂದಲಿ ಬಂದ ಭಕುತನಿಗೆ (ಜಗದಾ. ೨೩೯). ೭. ವಿಷಯ; ಸಂಗತಿ: ಅರ್ಜುನನ ವೋಲೆಯ ಸೊಲ್ಲುಗಳನವಧರಿಸು (ಸಂಭವ. ೨೦-೫೧). ೮. ಜನಪದಗೀತೆ, ದಾಸರ ಕೀರ್ತನೆ ಮೊದಲಾದ ಹಾಡಿನ ಒಂದು ನುಡಿ: ಅರಸನಾದ ದಾವೀದನ ಒಂದು ಕೀರ್ತನೆಯ ಮೊದಲನೆಯ ಸೊಲ್ಲು (ಗೂಳ್ಳೋಥಾ. ೫೪ ಟಿಪ್ಪಣಿ): ಜನಪದ ಹಾಡಿಗೆ ಪಲ್ಲವಿ ಅಥವಾ ಸೊಲ್ಲು ಅನಿವಾರ್ಯ (ಕಜಾ. ೧೭ ಪ್ರಸ್ತಾವನೆ).

ಸೊಲ್ಲುಸೊಲ್ಲು (ದ್ವಿರುಕ್ತಿ): ಸೊಲ್ಲು ಸೊಲ್ಲಿಗೆ ಮತ್ಸರಿಸಿ . . . ಬೆಜೆತು ಬೀಗುವ ಖಿಲ್ಲಗಹುದೇ ಭಕ್ತಿಯೆಂಬುದು (ಪ್ರಭುಲೀ. ೧೬-೩೮); ತಂತಮ್ಮ ಸೊಲ್ಲುಸೊಲ್ಲುಗಳೊಳಿನಿದೊಸರೆ . . . ಅಬಲೆಯರ್ ಕಣ್ಗೆಸೆದರು (ಚಿಬಪು. ೧೧-೩೯). ಸೊಲ್ಲುಕರೆ = ಕೂಗು ಹಾಕು; ಬೊಬ್ಬೆ ಹಾಕು: ಬೈರ ಹೊರಅಂಗಳದಿಂದ 'ಅಯ್ಯಾ, ಅಯ್ಯಾ' ! ಎಂದು ಎರಡು ಮೂರು ಸೊಲ್ಲು ಕರೆದನು (ಕಾನೂರು. ೪೫೮).

[< ಸೊಲ್ $_1$./ ತಮಿ. ಮಲ. ಕೊತ. ಚೊಲ್; ಕೊಡ. ಚೊಲ್]

ಸೊಲಗೆ 'ಸೊಲ್ಲಗೆ $_1$' ನೋ.

ಸೊಲಪು (ನಾ). ೧. ಒಯ್ಯಾರ; ಬೆಡಗು: ಒರೆದುರುಬಿನ ಒಲಪು ಸೊಲಪಿಗೆ ಯಾರು ಮನವಿಡರು (ಶರಲೀ. ೩೭೩-೫); ಯಾವ ಸೊಲಪಿನ ಸೊಂಪು . . . ಆವ ದೇಸಿಯ ಮಾರ್ಗವೆಂದು ಗಿಳಿ ವಿಸ್ತರಿಸಿ ಕೋವಿದೆಯ ಕೊಂಡಾಡಲು (ಲಿಂಗಪು. ೨೫-೩೪). ೨. ಸೋಕು ಹೋಗುವಿಕೆ (?): 'ಕಾಲ್ಪೊಲಪು' ಪರಾ. [?]

ಸೊಲಿಗೆ 'ಸೊಲ್ಲಗೆ $_1$' ನೋ.

ಸೊಲ್ಲ 'ಸೋಲ' ನೋ.

ಸೊಲ್ಲಗೆ $_1$, ಸಲಗೆ $_1$, ಸಲಿಗೆ $_2$, ಸಲುಕೆ, ಸಲೆಗೆ, ಸಲ್ಲಗೆ, ಸೊಲಗೆ, ಸೊಲಿಗೆ, ಸೊಲ್ಲಿಗೆ, ಸೊಲ್ಲೆಗ, ಸೊಳಗ (ನಾ). ೧. ಧಾನ್ಯ, ದ್ರವಪದಾರ್ಥ ಮುಂತಾದುವನ್ನು ಅಳೆಯುವ ಒಂದು ಅಳತೆಯ ಪ್ರಮಾಣ; ಮಾನದ ನಾಲ್ಕನೆಯ ಒಂದು ಭಾಗ: "ನಾಲ್ಕು ಸೊಲ್ಲಗೆಗೆ ಮಾನಂ" (ಮಂಗರಾ. ೧೦೪-೧೧); ಎಜೆಯರ್ ನೆಲ್ಲಕ್ಕಿ ಸೊಲ್ಲಗೆವಿಟ್ಟು [ಬಿ]ದಿರೂರ್ಸ್ವರ್ಗ್ಗಸ್ತೆಜೆಯ ಮರಿಯಾಗಿ ಕೊಟ್ಟರ್ (ಎಕ. III (R), ನಂಜನ. ೧೨೯-೩; ೩ನೆಯ ಶತ). ೨. ಒಂದು ಬಗೆಯ ತೆರಿಗೆ(?): ಗ್ರಾಮವೆಚ ಬಿಟ ಬಿರಾಡ ಸೊಲ್ಲಗೆ ಆಉಮೂ ಯಿಲ್ಲ (ಎಕ. X. ಮುಳಬಾ. ೧೭೨-೧೫ : 1496); ಬಂಕದೆಜೆ ಸಿದ್ಧಾಯ ಬಿಟ್ಟ ಕೊಟ್ಟಣವನುಪ ಸುಂಕ ಮಲವದಿಕೆ ಸೊಲ್ಲಗೆ . . . ದಂಡ ವುಂಡಿಗೆಗಳು (ಸಿಂಗಿರಾ. ೨೨-೨೬). **ಸಲಗೆ $_1$** : ೧. ಕಮ್ಮಂ ನಾಲ್ವತ್ತಕ್ಕಂ ಬೀಜಂ ಸಲಗೆ ಯೊಂದಱ ಲೆಕ್ಕದಿಂ ವಿಟ್ಟ ಗದ್ದೆ ಸಲಿಗೆಯರ್ಪ್ಪತ್ತು (ಎಕ. VI, ಕಡೂರು. ೯೬-೭೨ ; 1141). ೩. ಒಂದು ಸೊಲಗೆಯಷ್ಟು ಬೀಜವರಿಯುಳ್ಳ ಭೂಮಿ: ಕೆಜೆಯ ಕೆಳಗಣ ಕೆಬನುಂ ಮೇಲುಮಕ್ಕಿಯುಂ ಸಲಗೆ ಎರಡು ಕೊಳಗ ಹತು ಅಲ್ಲಿಂ ತೆಂಕ ಮಣಲ ಗದೆ ಸಲಗೆ ಮೂಱು (ಎಕ.VI, ಕಡೂರು. ೨-೧೮ : ಸು. 1070?); ಮೊದಲೇರಿಯ ತೋಟಮಂ ಯಾಱು ಸಲಗೆ ಗದ್ದೆಯುಂ (ಎಕ. II,೩೩೫-೫೪ ; 1195). ೪. ಅಳತೆ ; ಪ್ರಮಾಣ(?): ಎಲೆ ಬಲದೇವ ನೀನೆ ವಲಮಾತನನೀ ತೆಜದಿಂದಮಿಲ್ಲಿ ತಂದ ಲಸದತೀತ ಕಾಲನಿವಹಂಗಳೊಳಿಂತೆ ಸುಡಲ್ಕೆ ಲೆಕ್ಕದಿಂ ಸಲಗೆಯಿದಾದುದು (ಸೇಮಪು. ೧೪-೧೦೭). **ಸಲಿಗೆ $_2$**: ೧. ಹೆಱುಹೆ ಕೆಱೆಯ ಕೆಳಗೆ ಸಲಿಗೆ ೯ (ಎಕ. XII, ಗುಬ್ಬಿ. ೧೧-೪೪; 1226). **ಸಲುಕೆ**: ೪. ನಿಲುಕಡೆಯೊಳವಟ್ಟೆಸುವ ಸಲುಕೆಗಳಂತರ್ಗ ಮೊದಲೊಳಂತ್ಯದರಿಕೆಯ ಸಲುಕೆಗಳರ್ಘಂ ನಡುವಿರೆ ಸಲುಕೆಯ ವಟಕ್ಕೆ ದೊಡರಾಜನನುಮತದಿಂ (ಭಾಸ್ಕರ. ೩೩-೩). **ಸಲೆಗೆ**: ೪. ಕೃಷ್ಣಶಬಮಂ ಪಿಡಿದೆತ್ತಿಕೊಂಡು . . . ಸಂಸ್ಕರಿಸುವಾಗಳ್ ಈಯಂದದೆ ಮುನ್ನಂ ನೀನೀಯೆಡೆಯೊಳೆ ಸುಟ್ಟೆಯೊಂದು ಸಲೆಗೆ ವರಂ ನಾರಾಯಣರ ನೆಂದುದಂ . . . ಬಲಭದ್ರಂ ಕೇಳ್ದು (ಮಹಾನೇ. ೧೬-೭೭). **ಸಲ್ಲಗೆ**: ೧. ತೋಟಸ್ಥಳಗೂಡಿದ ಗದ್ದೆ ಸಲ್ಲಗೆ ಆಱು (ಎಕ. V, ಹಾಸನ. ೩-೧೧; 1294). **ಸೊಲಗೆ**: ೧. ಯೆಂಣ್ಣೆಯ ಸೊಡರು ಅತ್ತಿ ಸೊಲಗೆ ಎಂಣ್ಣೆ (ಎಕ. VI, ತರೀಕೆ. ೮೦-೨೯; 1278); ಮಲಹರನ ಬೋನಕ್ಕೆ ನಿಚ್ಚಂ ಹಲಗೆಗಳ ಮೇಲಾಯ್ದು ಕೊಡುವವು ಹಳೆಯ ರಾಜನದಕ್ಕಿಯೇ ಮುನ್ನೂರದಱುವತ್ತು ಸೊಲಗೆ (ಬಸಪು. ೩೩-೧೩). ೨. ಮನೆವಣ ಸೊಲಗೆ ಬಿಟ ಯಿನ್ನಿಷ್ಟು ಸರ್ವ್ವಮಾನ್ಯವಾಗಿ ಸ್ವರುಚಿಯಿನ್ದ ಕೊಟ್ಟರು (ಎಕ. IX, ಕೊಡಗು. ೫೪-೮; ಸು. 1280). **ಸೊಲಿಗೆ**: ೧. ಲಿಂಗಕ್ಕೆ ಹನ್ನೆರಡು ಸಾವಿರ ಸೊಲಿ[ಪಾಠಾಂ. ಸಲ]ಗೆ ತುಪ್ಪವಂ ನೆರಪಿ ತಂದು (ಸಿದ್ಧರಾ. ೮-೩೯) ; ಒಂದು ಸೊಲಿಗೆ ಮೆಣಸನ್ನು ಅರೆಪಡಿ ನೀರೊಳಗೆ ಹಾಕಿ ಸೊಲಿಗೆಯಾಗುವ ಹಾಗೆ ಕಾಸಿ (ಸಕವೃ. ೩೬೦); ಒಂದು ಸೊಲಿಗೆ ಅಕ್ಕಿಯಾದರು ಇಲ್ಲ (ಶಿವದ. ೨೦೭-೬). ೨. ಅಱುವಣ ಮನೆವಣ ಬಿಟ್ಟ ಸೊಲಿಗೆ ಪಾಣ . . . ತೆತ್ತು ಪರಿಹರಿಸಿ ಕೊಟ್ಟು . . . ಯೀ ಧರ್ಮವ ನಡೆಸಿ ಕೊಡುವರು (ಎಕ. III, ತಿರುಮ. ೨೭-೪೬; 1290). **ಸೊಲ್ಲಿಗೆ** : ೧. ಅಧಿಕಾರಿ ಸಜ್ಜನರು ರಾಯರುಂ ಕಂಡುಗ ಕೊಳಗ ಬಳ್ಳ ಸೊಲ್ಲಿಗೆಯಿನಿತು ಮೊದಲಾಗಿ ಸ್ಥಪನಕೆಂದು ಕೊಂಡು ಬಂದು (ಸಿದ್ಧರಾ. ೮-೭೧); ಎಣ್ಣೆಯನು ಗಾಣಕ್ಕೆ ನಿಚ್ಚಲು ಅರ್ಧ್ಧ ಸೊಲ್ಲಿಗೆಯನು ಆದಿತಕ್ಕೆ ಎಜೆವರು (ಸೌಇಇ. IX-i , ೩೩೬-೨೭; 1219). ೨. ಕಾಣಿಕೆಯು ಸೊಲ್ಲಿಗೆ ಪಟ್ಟವಾಸೆಯು ಸುಂಕ ಸೋದಿಗೆ ಪಾಣ ಕಡ್ಡಾಯ ಕೊಟ್ಟ ಗುತ್ತಗೆ ವಾರವುಂಟೆಂದು (ಬಸಪು. ೨೭-೫೨). **ಸೊಲ್ಲೆಗ**: ೧. ಸೊಲ್ಲೆಗಕ್ಕೆ ಮಾರಣ್ಣನುಂ ಜಂಗಮಕೆ ಮೃಷ್ಟಾನ್ನವಿಕ್ಕಲು (ಚಿಬಪು . ೫೭-೨೯). **ಸೊಳಗ** : ೧. ಎಂಣ್ಣೆಯ ಕೊಡಕ್ಕಂ ಸೊಳಗವೆರಡು (ಎಕ. VI, ಕಡೂರು. ೯೬-೮೭; 1141). 'ಸಟ್ಟುಗ $_2$', 'ಸೊಂಟಿಗೆ', 'ಸೊಳಸಿಗೆ' ಪರಾ.

[ದೇ. ॥ ತಮಿ. ಚಲಕ್ಕೆ; ತೆಲು. ಸಲಕ; ಕೊತ. ಸಲ್ಗ್]

ಸೊಲ್ಲಗೆ $_3$ (ನಾ). ಪಗಡೆಯ ದಾಳ: ಕರದ ದಂತದ ಸೊಲ್ಲಗೆಯಲಿ ಯಿಡಲು ಭೂತಳಾಧಿಪನ ನೊಸಲೊಡೆದು ಕೆನ್ನೀರ್ಸೂಸೆ (ಲಕ್ಷ್ಮಭಾ. ೪-೩೬). 'ಸೊಲ್ಲೆಹ' ಪರಾ.

[?]

ಸೊಲ್ಲಡಗು (ಕ್ರಿ). ಮಾತು ನಿಂತುಹೋಗು: ನಿಮ್ಮ ಸೊಲ್ಲಡಗದೇ ಕೆಡದುಕೊಳ್ಳಿ (ಚಿಬಪು. ೬-೨೦); ಪುಲ್ಲಮಣಿಯು ಕೂಗಿ ಕೂಗಿ ಗಂಟ್ಲು ಕುಗ್ಗಿ ಸೊಲ್ಲಡಗಿ ಅಳುವುದಕ್ಕೆ ತೊಡಗಿದಳು (ದೇವಿಚೌ. ೪೦). [ಸೊಲ್ $_2$ + ಅಡಗು $_1$ (< ಅಡಂಗು $_1$)]

ಸೊಲ್ಲಣ (ನಾ). ಬೊಬ್ಬೆ; ಕೂಗಾಟ: ತಡಬಡಿಪ ಕಿನ್ನರರ ತಲ್ಲಣದ ಸೊಲ್ಲಣದ ಪಡೆಗಳ ಪಲಾಯನದ ಪರವಶದ (ಲಕ್ಷ್ಮಭಾ. ೭-೧೯). [ಸೊಲ್ $_2$ + - ಅಣ]

ಸೊಲ್ಲಣಗು (ಕ್ರಿ). = ಸೊಲ್ಲಡಗು: ಬೆರಗಾಗಿಪುವವೆಲ್ಲ ಪಿರಿತನದ ನೋಟಗಳು ಬೆರಗೆ, ಮೈಮರವೆ, ಸೊಲ್ಲಣಗುವುದೆ ಸೊಗಸು (ಮಂಕುಕ. ೪೯೬).

[ಸೊಲ್ $_2$ + ಅಣಗು]

ಸೊಲ್ಲಣಿಗೆ (ನಾ). ಮಾತು; ನುಡಿ: ರಾಜೇಂದ್ರಸುತೆ ಚಲ್ಲಗಣ್ಣಬಲೆ ದಣ್ಣನೆ ದಣಿದು ಸೊಲ್ಲಣಿಗೆಯುಳಿದು ಬೇಸರದಿ ನಿಲಲು (ಚತುಪು. ೨-೬-೬೩). [ಸೊಲ್ $_2$ + - ಅಣಿಗೆ]

ಸೊಲ್ಲಮೆ (ನಾ). ಮಾತನಾಡದಿರುವಿಕೆ ; ಮೌನ : ನಯವಿರದುವಂ ಸೊಲ್ಲೊಡಂ ಸೊಲ್ಗೆ ಸಂಪನ್ನರ್ ಫಲವಿರದುವಂ ಸೊಲ್ಲಮೆಯೆ ಲೇಸು (ಕುಜಿಳ್. ೧-೨೦-೭).

[ಸೊಲ್ $_1$ + - ಅಮೆ $_2$]

ಸೊಲ್ಲಱಿ (ಕ್ರಿ). ಮಾತನ್ನು ಅರ್ಥಮಾಡಿಕೊಳ್ಳು ; ಪ್ರಾರ್ಥನೆಯನ್ನು ಆಲಿಸು: ಸೊಲ್ಲಱಿವ ಶಿವನ ಬೇಡಿದಡೆ ಬಯಸಿದುದೆಲ್ಲವನು ಕೊಡುವ (ಸರ್ವಜ್ಞ. ೨೪೧).

[ಸೊಲ್ $_2$ + ಅಱಿ]

ಸೊಲ್ಲಿಗೆ 'ಸೊಲ್ಲಗೆ $_1$' ನೋ.

ಸೊಲ್ಲಿಡು (ಕ್ರಿ). ಹೇಳು; ನುಡಿ: ಎಲ್ಲಿಯ ಶಾಸನಮಿನಿತುಮನಿಲ್ಲದುದಂ ಬರೆದರೆಂದು ಧರ್ಮ್ಮದ ಕೇಡಂ ಸೊಲ್ಲಿಡುವ ಪಾಪಿ ಪುಳುಗಳವ XX ಗೆ ಬಾಯೊಳಗೆ ಸತ್ತು ನರಕಕ್ಕಿಳುಗುಂ (ಸೌಇಇ. IX - i, ೨೪೯-೧೦೨;1147); ಸೊಲ್ಲಿಡಬಾರದ ಪವಣಿಸೆ

ನಿಲ್ಲದ . . . ಸಲ್ಲಲಿತಶಿವೈಕ್ಯಸೌಖ್ಯಮಂ ತಾಳ್ದಿದನೋ (ವೃಷಪ. ೨೩-೨೮).

[ಸೊಲ್ + ಇಡು.]

ಸೊಲ್ಲಿಸು (ಕ್ರಿ). ೧. ಹೇಳು; ನುಡಿ; ಮಾತನಾಡು: ವಿಷಮಶರನದಟಲಿದ ಗೆಲ್ಲಂ ನಿನ್ನೊಳಲ್ಲದ ಸಲ್ಲದೆಂದು ಸೊಲ್ಲಿಸಲ್ ಪೋಪಂತೆ . . . ಜಿನಾಲಯಕ್ಕೆ ಪೋಗಿ (ಲೀಲಾವ. ೩-೭೮ ವ); ಜೊಲ್ಲು ಸುರಿವ ಮುದ್ದುಮೊಗದಲ್ಲಿ ನಗೆಯಾಂತು ಸೊಲ್ಲಿಸುವನು ತೊದಳ್ನುಡಿಯ (ಮೋಹಶ. ೧೭-೬೯). ೨. ಹೇಳುವಂತೆ ಮಾಡು; ಹೇಳಿಸು: (೬). ೩. ವಾಚನಮಾಡು; ಪಠನಮಾಡು: ಅತ್ಯಂತ ಜಾಣಗಾತಿಯರು ಸೊಲ್ಲಿಸುವ ಸಾಹಿತ್ಯಪಾಠಕಪ್ರಮದೆಯರು ನೃತ್ಯದವರು ತಾಳಮೇಳಸಹಿತ ಬಂತು ಮತ್ತೇಭಗಮನೆಯರ್ದೆಡೆಗೆ (ಮೋಪತ. ೨೭-೧೦). [ಸೊಲ್ + - ಇಸು.]

ಸೊಲ್ಲು₁ 'ಸೊಲ್₁' ನೋ.

ಸೊಲ್ಲು₂ 'ಸೊಲ್₂' ನೋ.

ಸೊಲ್ಲುಕಟ್ಟು (ನಾ). ಸಂಗೀತ, ನೃತ್ಯಗಳಲ್ಲಿ ಗೀತೆಗಳೊಂದಿಗೆ ಹೇಳುವ (ಥಕಥೈ ಮುಂತಾದ) ಶಬ್ದಸಮೂಹ, – ನುಡಿಗಟ್ಟು: ಸುಗಂಧರಾಜೇಂದ್ರ ನೊಬ್ಬನೆ ದೊರೆಯೆಂದು ಬರುದುವುಳ್ಳ ಪದಪಲ್ಲವಿಗಳ ಸೊಲ್ಲುಕಟ್ಟಿನಿಂ ಕೂಡಿ (ಸೌಗಂಧಿ. ೬೭೭-೧೬).

[ಸೊಲ್ಲು₂ (< ಸೊಲ್₂) + ಕಟ್ಟು₂./ ತಮಿ. ಚೊಲ್ಕಟ್ಟು; ತೆಲು. ಸೋಲ್ಕಟ್ಟು.]

ಸೊಲ್ಲುಗಾತಿ (ನಾ). ಬಹಳ ಮಾತನಾಡುವವಳು; ವಾಚಾಳಿ: ಬಲೆ ಸೊಲ್ಲುಗಾತಿಯಂದೆನ್ನ ಮಾತಿಗೆ ಚಿತ್ತ ಕರಗದೆ ಬಾರದಿರ್ದಪೆಯೋ (ಮೋಹಶ. ೨೭-೪೫).

[ಸೊಲ್ಲು₂ (< ಸೊಲ್₂) + - ಕಾತಿ.]

ಸೊಲ್ಲುಗೊಡು (ಕ್ರಿ). ಹೇಳು; ತಿಳಿಯಪಡಿಸು: ಬಲ್ಲವಿಕೆಯಿಂದಿದನು ಅರಿಯೆ ಸೊಲ್ಲುಗೊಡಲಿಕಶಕ್ಯಂ (ಜ್ಞಾಸೂಂ. ೧೫-೧೭); ನೀನರಿತೆಯಾದಡೆ ಕಾಲಹರ ನೀನಾಗ್ಯೆ ಕೇಳ್ಕೆ ಸೊಲ್ಲುಗೊಡಲಿಕೆಯಿಲ್ಲ (ತಾಪಾ. ೬-೭). [ಸೊಲ್ಲು₂ (< ಸೊಲ್₂) + ಕೊಡು.]

ಸೊಲ್ಲುಜಾಣ (ನಾ). ಮಾತನ್ನು ತಿಳಿದವನು; ವಾಗ್ಮಿ: ಸೊಲ್ಲುಜಾಣರು ಭಾಗ್ಯವಂತರು ವಿವೇಕಿಗಳು (ಪ್ರಾಥರಾ. ೧-೩೮). [ಸೊಲ್ಲು₂ (< ಸೊಲ್₂) + ಜಾಣ]

ಸೊಲ್ಲುದೋಱು (ಕ್ರಿ). = ಸೊಲ್ಲುಗೊಡು: ಇಂಬಿನ ಕೃತಿಗಳ ನೋಡಲೀ ಕೃತಿ . . . ಪೊಂಬೆಟ್ಟದೊತ್ತಿನ ಪರುಷದ ಕಣ್.ತಾನೆಂಬಂತೆ ಸೊಲ್ಲುದೋಱುವೆನು (ನಾಗಕು. ೧-೬೦).

[ಸೊಲ್ಲು₂ (< ಸೊಲ್₂) + ತೋಱು.]

ಸೊಲ್ಲೆಗ 'ಸೊಲ್ಲಗೆ₁' ನೋ.

ಸೊಲ್ಲೆತ್ತು (ಕ್ರಿ). ಸ್ವರವೆತ್ತು; ದನಿಯೇರಿಸು: ನನ್ನ ಕಣ್ಣಿಗೆ ಬೀಳು ಬಾ! ನೀನು ಮತ್ತೆ ಸೊಲ್ಲೆತ್ತದಂತೆ ಮಾಡುತ್ತೇನೆ! (ವಚಭಾ. ೧೭೯); ನಾಡೊಳಗೆ ಸೊಲ್ಲೆತ್ತಿ ಜನವು ಹಾಡುವರು (ಕನ್ನವಾ. ೨೩೫). [ಸೊಲ್ + ಎತ್ತು.]

ಸೊಲ್ಲೆಹ (ನಾ). ಒಂದು ಬಗೆಯ ಕ್ರೀಡೆ; ಜೂಜಾಟ: ಪಗಡೆ ರಾಯ ಬೊಗರಿ ಸೊಲ್ಲೆಹ ಬಾರುಗುತ್ತದೊಪ್ಪಿಯ ಸರಿಬೆಸದಿ ವಿತ್ತನಾಶವ ಮಾಡುವ ಜೂದುಗಾಱರ ಮೊತ್ತವಿರ್ದುದು (ಮೋಹಶ. ೨೦-೨೫). 'ಸೊಲ್ಲಗೆ₂' ಪರಾ. [?]

ಸೊಲ್ವಿಡಿ (ಕ್ರಿ). ಮಾತನ್ನು ಅನುಸರಿಸು; ಮಾತಿಗೆ ಗಮನಕೊಡು: ಸೊಲ್ವಿಡಿದು ಕೇಳ್ ಮುನಿಪ (ಶ್ರೀರಾಮ. ೪-೪೦). [ಸೊಲ್ + ಪಿಡಿ.]

ಸೊಲ್ವೆಣ್ (ನಾ). ಮಾತಿನ ಅಧಿದೇವತೆ; ಸರಸ್ವತಿ: "ನುಡಿವೆಣ್, ಬಾಸೆವೆಣ್, ಸೊಲ್ವೆಣ್ [ಪಾಠಾಂ. ಸೊಲ್ಲುವೆಣ್ಣು] . . . ಸರಸತಿ – ಈ ೬ ಸರಸ್ವತಿಗೆ ಪೆಸರ್" (ಕಸಂಪ. ೪೮-೧೬).

ಸೊಲ್ವೆಣ್ಣನಾಣ್ಮ = ಸರಸ್ವತಿಯ ಒಡೆಯ; ಬ್ರಹ್ಮ: ಸೊಲ್ವೆಣ್ಣನಾಣ್ಮ ನಮರ್ದುಣಿಯೆಲೆಯನುಂ ಕರ್ವುವಿಲ್ಲೊತ್ತನೆಯ ಮೊದಲಾದ ಸಗ್ಗಿಗರ್ಕೆದೆ ಸಾಲ್ವಿಡಿದು ನಿಂದೋಲಗ೦(ಭಾವಚಂ ೧-೩೦). ಸೊಲ್ವೆಣ್ಣೆರೆಯ = ಸೊಲ್ವೆಣ್ಣನಾಣ್ಮ: ಬಾಂಬೊಳೆದಲೆಯ ಕಾರೊಡಲ ಕಳಿಯ ಸೊಲ್ವೆಣ್ಣೆರೆಯ . . . ಪೊರೆಗೆಮ್ಮನು (ನವಮೋ. ೬೨-೧). [ಸೊಲ್ + ಪೆಣ್]

ಸೊವಡು, ಸವಡು₁, **ಸೊಗಡು** (ನಾ). ೧. ಕಂಪು; ವಾಸನೆ: ನಿಂದು ನಿಂದು ನೆಲದ ಸೊವಡನಾರಯ್ದು ಮಸಗಿ ದಸೆದಸೆಗೆ ವಿಸಟಂಬರಿದು . . . ಗಿಜ್ಜನೆಯ್ದುವ ಸೊರ್ಕಾನೆಗಳ ಕಾಲ ಸಂಕಲೆಯ ಗೋಸದೊಳಂ (ಕಬ್ಬಕಾ. ೪೪); ಇವಱ ದನಿಯೊಳೆ ಕಿವಿಗಳನಿವಱ ಸೊವಡೊಳೆ ಮೂಗಂ . . . ಇವಱ ಸವಿಯೊಳೆ ರಸನೆಯಂ ಸವಿಗಾಣಿಸಿ (ಚಚವಂ. ೯-೬). ೨. ಕಟುವಾದ ವಾಸನೆ; ತೀಕ್ಷ್ಣಗಂಧ: ಅದಱ ಪೂಱಿವೊಬಲ ಸಪ್ಪಚ್ಚದಗಂಧವ ಸೊವಡು ಮುಟ್ಟೆ ಮದಕರಿಕುಳಮೋವದೆ . . . ಮರವಾಯ್ಕುರ್ಕುಂ (ಶಾಂತಿಪು. ೯-೧೪೦); ವನಗಜವೊಕ್ಕವೋಲ್ಮದದ ಕೋಟ್ಲೆಸಱೊಳ್ ಕೆಸಱುಟವಾಡಿ ಸೊರ್ಕಿನ ಸೊವಡಿಂಗೆ ಮುತ್ತಿ ಮಱಿದುಂಬಿಗಳಿಂಬಿಸೆ (ಅರ್ಧನೇ. ೩-೬೫). ೩. ಸುವಾಸನೆ; ಸುಗಂಧ: "ಸೌಸವಂ, ನಱು, ಕಮ್ಮಿತು, ಸೊವಡು, ಕಂಪು, ನಾತಂ, ಮಗಮಗಿಸು – ಈ ೭ ಪರಿಮಳಕ್ಕೆ ಪೆಸರ್" (ಕಶಪಾ. ೫೪-೧೬೭); ಕತ್ತುರಿಯ ತಗುಳ್ದು ಪೊಯ್ದ ಸೊವಡಾ ಸೊವಡೊಳ್ ಕಡುಸೊರ್ಕು ಸೊರ್ಕಿಗಾವರಿಸುವ ತುಂಬಿ (ಆದಿಪು. ೨-೫); ತುಂಬಿ ಮಲ್ಲಿಗೆಗೆ ಕೂರ್ಪವೊಲೊಪ್ಪೆ ವಿಚಿತ್ರಬಂಧದಿಂದಸೆದಿರೆ ಕಟ್ಟಿತಂದು ಸೊವಡಿಲ್ಲದ ಮಾಲೆಗೆ ಕೂಡಲಾರ್ಕುಮೇ (ಅರ್ಧನೇ. ೩-೧೦೪). ೪. ದುರ್ವಾಸನೆ; ದುರ್ಗಂಧ: "ಸೊವಡೆನಲ್ಕೆ ಸೊಗಡೆನಲ್ ದುರ್ವಾಸನೆಯು" (ಕಶಾ. ೧೧೧); ಆ ನಾಗಪತಿ ತುಚ್ಛಸಾಮಜ ಪೂಗದೆ ತಾಂ ಸೊವಡು ನಾರ್ದು ಚರಿಸುತ್ತಿರೆ (ಹಾಲಾಸ್ಕ. ೧-೩-೧೪). ೫. ಬೆವರು ಮುಂತಾದುವುಗಳಿಂದ ಬೆರೆತು ದೇಹದಿಂದಿ ಹೊಮ್ಮುವ ವಾಸನೆ: ಪೊಸನಸೆಯ ಸೊವಡನಾಘ್ರಾಣಿಸಿ ಮಣಿಕದ ಮಿಡುಕು ಗಚ್ಚೆಯೊಳ್ ಮೊಗವೆಮ್ಮೆತ್ತೆಸದುದು ವ್ಯಸಂ (ಲೀಲಾವ. ೫-೯೩); ತರುಣಿಯ ಮಾಸಿದಂಗಲತೆ . . . ಅಚ್ಚರಿಯೆನಿಪ್ಪಂಗದಾ ಸೊವಡು ಜಾಡ್ಯದ ಮೈ . . . ಪೇಟವೆ ಮಾಣಿಕವಾಂತ ಭಾವಮಂ (ದಶಕು. ೧-೬೦). ೬.(ಆಲಂ) ಸುಳಿವು; ಕುರುಹು; ಜಾಡು: ಸಾಮದದ ಸೊವಡು ಮುಟ್ಟಿದ ಸಾಮಜಶತ್ರುವಿನ ತೆಱದೆ ಗದೆಯಂ ಭರದಿಂ ಭೀಮನಳವಡಿಸಿ ಪಿಡಿದು ಮಹಾಮಸಕದಿನೆಯ್ದೆವರ್ಪುದುಂ (ಮಹಾನೇ. ೧೩-೨೧); ಸೊವಡನಾಲಿಸಿ ಬೆರ್ಚಿ ಬಿಗುರ್ತು ಬೇಗದಿಂ ಸರಳಿಸಿ ಮತ್ತೆ ನಿಂದು ಪೆಱಗಂ ನಡ ನೋಟ್ಪತಿಭೀತಿ ತಮ್ಮೊಳಚ್ಚರಿವಡೆದಿರ್ಪ ಪುಲ್ಲೆಗಳನೀಕ್ಷಿಸಿದಂ ಭುವನಾಧಿನಾಯಕಂ (ದಶಕು. ೨-೧೧೧). ೭. ನೆನಪು; ಸ್ಮರಣೆ: ಹಳುವೊಳು ಹೊಳಲಿನ ಸೊವಡನು ತರುವೀ ಹರಿಣದೊಳಾಯ್ತೆ ಮನ (ಹಂಸದ. ೭೩). ೮. ಕಲ್ಮಷ; ಕಳಂಕ: ವಿಗಡರಜದೊಳಿದ್ದು ಸೊವಡು ತಗಲದ ಮನ ನಿನ್ನದೊ (ಅಮತಂ. ೨೮-೫). ೯. ಅನಾದರ; ಉದಾಸೀನ: ಒರ್ವಂಗಂ ಮನಮಿಕ್ಕದಿರ್ ಸೊವಡನೆಂದುಂ ಮಾಡದಿರ್ಕೂಟದೊಳ್ (ರಾಜಶೇ. ೧೧-೧೦೯). ೧೦. ಗೀಳು; ವ್ಯಸನ: ಮೃಗಭಕ್ಷಣಂಗೆಯ್ದ ಸೊವಡಿನಿಂದಂ ಪಿರಿದು ನಾಲಗತೀಂಟೆ ಮಸಗೆ ಬಸವಣ್ಣನಂ ಹರಿಸದಿಂ ನುಂಗಿದೆಯೊ (ಆರಾಚ. ೪-೧೦-೬೯). **ಸವಡು**₁: ೩. ವಿಕಸಿತಕೇತಕೀತಕೀಹುಸುಮದೊಳ್ಪವಡಿಂಗೆಳದುಂಬಿ ಪಾರೆ (ಶ್ರೀಮಪಾ. ೧-೯೬). **ಸೊಗಡು**: ೧. ಅಡಿಗಡಿಗೆ ಮಾನಿಸರ ಸೊಗಡವಗಡಿಸುತಿದೆ (ಕುವಾಳ. ೧-೨೬). ೨. ಮಡುವಿಡುವ ಮದಸಮುದ್ರದ ಸೊಗಡ ಸೊನೆಗೆ ತಲೆಗೊಡಹಿ ಕೊಕ್ಕರಿಸಿ (ಪಚಕಾ. ೫-೩೬); ಸೊಕ್ಕಾನೆಗಳ ಸೊಗಡನುರ್ವಕತ್ತುರಿಯ ಮೃಗದಿಕ್ಕೆಗಳಂ . . . ಅಱಿಸುವ ಕಿರಾತರ್ (ಚೆಮಿಭಾ. ೨೮-೪೩). ೪. "ಸೊವಡೆನಲ್ಕೆ ಸೊಗಡೆನಲ್ ದುರ್ವಾಸನೆಯು" (ಕಶಾ. ೧೧೧); ಹೀನಸ್ವರದಿಂದಱುಗುಂ . . . ಸೊಗಡು ನಾಱುಗುಂ ಪೊಟ್ಟೆಯುಬ್ಬರಿಸುಗುಂ (ಬಾಲಟಿ. ೧೨೭-೪). ೫. ಅವನಿಜೇಶನ ಸೊಗಡನಾಸ್ಯಾದಿಸುವುದಂಜುವುದನಿಲದುಱುಬೆಯಲಿ (ತೊರರಾ. ೩-೮-೬೫); ಒಗಡಿಪ ಗಂಧಮುಂ ಸೊಗಡು ನಾಜಿ ರಜಸ್ಸಲೆಯಪ್ಪ ಭಾವಮಂ ಬಗೆಗೊಳುತಿರ್ಪ ಭಾವಕಿಯಂ ಬಣ್ಣಿಸಿದಂ (ಕಾವ್ಯಸಾ. ೩೭೯). ೬. ಕರಿಯ ಸೊಗಡಿನ ಮೃಗಪತಿಗೆ . . . ನೊಂದ ಹಾವಿಂಗರಸ ಮೈಟಾಚದೆಯಲಾ ನೀನು (ಕುವ್ಯಾಸ. ೧೭-೪); ಹುಲಿಯಿದ್ದಾಗ ಗಾಳಿ ಅದರ ಮೇಲಿಂದ ಹಸುವಿನ ಕಡೆಗೆ ಬೀಸುತ್ತದೆ. ಇದರಿಂದ ಹಸುವಿಗೆ ಹುಲಿಯ ಸೊಗಡು ಗೊತ್ತಾಗಿ ಅದು ಓಡಿಹೋಗಬಹುದು (ಶಬ್ದಮ ೮). ೮. ರಾಜಕುಲದ ನೃಪರ ಸಾಧುಚಾರಿತ್ರಮೆನ್ನಿಂದ ಸೊಗಡಾಗದಂತಾದರಿಸಿ ನೀವ ಕಾರುಣ್ಯದಿಂ ಮಾಳ್ಪುದು (ಚೆಮಿಭಾ. ೨-೨೪). ೯. ಈ ಇಷ್ಟಸಿದ್ಧಿಯಂ ಭರವಸದಿ ಮಾಡಿಕೊಡುವೀ ಫಲಕ್ಕೆಲೆ ಸೊಗಡು ಮಾಳ್ಪುದೆ (ಸಮ್ಮಕಾ. ೧೦-೫೦). ೧೦. ಬಗೆಯನವ ಶಕುನವ ಮೃಗವ್ಯದ ಸೊಗಡಿ[ಪಾಠಾಂ. ಸಿ]ನಲಿ ಸಿಲುಕಿದ ಮನೋವೃತ್ತಿಗಳೊಳುಂಟೆ ವಿವೇಕಧರ್ಮವಿಚಾರವಿಸ್ತಾರ (ಕುವ್ಯಾಳ. ೧೩-೨೨). ೧೧. ತಾಜಾ ಅವರೆಕಾಯಿಯ ಸೊನೆಯ ಕಂಪು: ಅವರೆಯ ಕಾಯ ಸೊಗಡು ಎನ್ನುವಲ್ಲಿ ಇದರ ಮೂಲ ಅರ್ಥ

ಉಳಿದಿದೆ (ಸಮ್ಮನು. ೧೩೭); ಸೊನೆ ಅವರೇಕಾಯಿಯ ಸೊಗಡು ಅಲ್ಲಿಯ ಗಾಳಿಯಲ್ಲೆಲ್ಲಾ ಹರಡಿತ್ತು (ಇಣನೋ. ೧೩). ೧೨. ಬನಿ; ಸಾರ; ಸತ್ತ್ವ: ಮೂಲದ ಸೊಗಸು ಸೊಗಡುಗಳು ಆವಿಯಾಗಿ ತೇಲಿಹೋಗದಂತೆ . . . ಈ ಕಾರ್ಯವನ್ನು ಸಾಂಗಗೊಳಿಸಿ ಸಫಲರಾಗಿದ್ದಾರೆ (ಸಾಹಿಪ್ರ. XIII, ಪ್ರಸ್ತಾವನೆ); ಆಡುನುಡಿಯ ಸೊಗಡನ್ನು ಹೊತ್ತ ಈ ಸಾಹಿತ್ಯ ಎಷ್ಟು ಪ್ರಾಚೀನ ? (ದ್ರಾವಿವಿ. ೭೬). ೧೩. ಸೋಂಕು; ಸಂಪರ್ಕ: ಮೋಹಕೆ ತೆಱಹಿಲ್ಲ ಮದದ ಸೊಗಡು ಹೊದ್ದದು ಮತ್ಸರಕ್ಕಿಂಬಿಲ್ಲ (ಚಾಸಿ. ೯-೫೬); ಕರ್ಮಗಳ ಸೊಗಡಳಿದು ನಿತ್ಯಸುಖ ಸಂಭವಿಪುದದರಿಂದ ಜಗದೀಶನಂ ಬಿಡದೆ ನೆನೆ ಮನವೆ (ವಂಕಾರಾ. ೨-೧೯-೪೨). ೧೪. ಗಾಢತೆ; ತೀವ್ರತೆ; ಆಧಿಕ್ಯ: ದುರಿತದ ಸೊಗಡಿಗಂಜಿದರೋ ಪೃಥಾಸುತರ್ (ಕುವ್ಯಾಸ. ೧೫-೪೭); ಅಷ್ಟಮದಗಳ ಸೊಗಡ ಸೊಕ್ಕಿನ ದಷ್ಟವಿಲ್ಲದ ಮೂಱವಸ್ಥೆಯ . . . ಖಂಡಿಸಿದ (ಪ್ರಭುಲಿಂ. ೨೩-೫೨); ಸಿಟ್ಟು ಸಿಡುಕಿನ ಸೊಗಡು ತಾಕಿ ತಾಕಿ ಬಹಳಾಯ್ತು ನನಗೆ (ಕನಕ. ೧೦೨). ೧೫. ಪ್ರಖರತೆ; ತೀಕ್ಷ್ಣತೆ: ಬಾಯಂ ತೆಗೆಯ ಭುಗಿಲಿಡುವ ರೌದ್ರತೆಗೆ ಬಳಸಿ ಕವಿದು ಮುಂದುಗೆಡಸುವ ಸೊಗಡ ಸೋಂಕಿಂಗೆ . . . ಹೆದಱಿ (ಸಿದ್ಧರಾ. ೫-೧೫); ಬಿಗಿದ ತಿಮಿರದ ಕೆಟ್ಟು ಸೂರ್ಯನ ಸೊಗಡು ಹೊಯ್ದರೆ ಮುರಿಯದೇ (ಕುವ್ಯಾಕ. ೧-೨೨). ೧೬. ಶೌರ್ಯ; ಬಲ: ಮದನಹರ ಶ್ರೀಕಾಂತ ಬ್ರಹ್ಮರು ಹುದುಗಿ ಕೆಡದಪರೆಮ್ಮ ಸೊಗಡಿಗೆ (ಅಂಬಿಕಾ. ೧೮-೨೦). ೧೭. ಬಿಂಕ; ಬಿಗುಮಾನ: ಬೇಸಱದೆ ಬೆಂಬಿಡದೆ ಕಂಗೆಟ್ಟೋಸರಿಸದೊಲು ಸೊಗಡು ಮಾಡದೆ (ಸದ್ಗುರು. ೩-೧); ಜನಪನಾಗುತ ನೀನು ಶೌರ್ಯ ಮಾತಾಡದೆನ್ನೊಳಗೆ ಸೊಗಡು ಏನು (ಹಮಚಿ. ೧೬೯). [ದೇ. ॥ ತಮಿ. ಚುವಟು; ಮಲ. ಚುವಡು]

ಸೊವಡುವಸೆ (ನಾ). ವಾಸನೆಯುಳ್ಳ ಕೊಬ್ಬು, —ನೆಣ: ಕಿಮುಟ್ಟಿ ಸೊವಡುವಸೆಯಂ ಪಿಂಡಿ ಜವನೆರ್ಮವೂರಿಗೆಱೆತಂಗುಡುವೆವು (ರಾಮಾಶ್ವ. ೮೦-೧೫). [ಸೊವಡು + ಬಸೆ]

ಸೊಸಣಿ (ನಾ). ಒಂದು ಕ್ಷುದ್ರದೇವತೆಯ ಹೆಸರು: ಮಾರಿ ಮಸಣಿ ಸೊಸಣಿ ಮೊದಲಾದ ದೈತ್ಯರುಂ ವರಮನೀಗುಮೆಂಬಾಸೆಯೊಳ್ ಓರ್ವರಂ ಕಂಡೊರ್ವರೆಱಗುವುದುಂ . . . ದೇವತಾಮೂಢಂ (ಪದ್ಮಸಾ. II, ೮೨೦ ವ). [?]

ಸೊಸನಕಬ್ಬೆ (ನಾ). ಒಂದು ಕ್ಷುದ್ರದೇವತೆಯ ಹೆಸರು: ಮಾರಿಕಬ್ಬೆ ಮಸಣಕಬ್ಬೆ ಸೊಸನಕಬ್ಬೆ ಮೊದಲಾದ ವ್ಯಂತರಂಗಳುಂ (ಶ್ರಾವಕಾ. ೧೦೪-೨೨). 'ಸೊಸಣಿ' ಪರಾ.

[? + ಅಬ್ಬೆ]

ಸೊಸಿವಿಸೆ (ನಾ).(?): ಸೋಜಿಗಮಾಗಿದೆ ಸೊಸಿವಿಸೆ ಮೂಜಗದೊಳಮಿಲ್ಲವೆಮ್ಮ ಪಿರಿಯರಮನೆಯೊಳ್ ರಾಜರಸರ ಮುದುಪರಸರ ತೇಜದ ರಾಣಿಯರೊಳಿಲ್ಲವೀಪರಿ ಪದುಳಂ (ಚಕವಿ. ೪-೩೧); "ಹೆರಿಗೆ" (ಪ್ರಭಣ್ಣ). [?]

ಸೊಸೆ (ನಾ). ಮಗನ ಹೆಂಡತಿ: "ಸ್ನುಷಾ, ಜನೀ, ಪುತ್ರವಧೂಃ, ವಧೂಃ - ಈ ೪ ಸೊಸೆ" (ಪಲಾಯು. ೮೩-೩೦); ರತ್ನಕಂಬಳಂಗಳಂ . . . ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆವರ್ಕಳ್ಗೆ ಪಚ್ಚುಗೊಟ್ಟೊಡೆ (ವಡ್ಡಾರಾ. ೨೫-೨೮); ನಿಮ್ಮ ಸೊಸೆ ಸಾಕ್ಷಾತ್ ಲಕ್ಷ್ಮಿಯ ಹಾಗಿದಾಳಮ್ಮ (ದೂಚಟ್ಟು. ೫೭); ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ (ಗಾದೆ).

ಸೊಸೆಮುದ್ದು = ಪ್ರೀತಿಯ ಸೊಸೆ: ಅತ್ತೆಯ ಸೊಸೆಮುದ್ದು ಚೊಚ್ಚಿಲ ಬಸಿರಿ ನೀ ಎದೆ ತೆರದೆ (ಸಬೇಗೀ. ೯-೬೯). [< ಸಂ. ಸ್ನುಷಾ]

ಸೊಸೆತನ (ನಾ). ಸೊಸೆಯಾಗಿರುವಿಕೆ: ದ್ರೌಪದಿ . . . ಕುಂತಿಯ ಬಳಿಯ ಕುಳಿತುಱೆ ಕಾಲನೂತ್ತಿದಳಾಗ ಸೊಸೆತನದಿ (ಸಂಭವ. ೩೨-೧೮).

ಸೊಸೆತನ ಮಾಡು = ಸೊಸೆಯಾಗಿ ಬಾಳು; ಸೊಸೆಯಾಗಿರು: ತಂದೋರ ಮನೇಲಿ ಚೆನ್ನಾಗಿ ಸೊಸೆತನ ಮಾಡುತ್ತಿ (ಚಂಗಾಳ್ವ. ೨೩೦). [ಸೊಸೆ + - ತನ]

ಸೊಸ್ತ (ನಾ). ನೆಮ್ಮದಿ; ಸುಖ: ಸೊಸ್ತದೊಳೂಟವ ಮಾಡಿ ಕೈದೊಳೆವನ್ನಕಸ್ತ ಮಿಸಿದ ಕರ್ಮಸಾಕ್ಷಿ (ಮೋಹತ. ೨೨-೩). [< ಸಂ. ಸ್ವಸ್ತ]

ಸೊಸ್ತಿ (ನಾ). ಒಳ್ಳೆಯದು, ಕ್ಷೇಮ, ಮಂಗಳ ಮುಂತಾದ ಶುಭವನ್ನು ಸೂಚಿಸುವ ಮಾತು: ಸೊಸ್ತಿ ಶ್ರೀ[ಮ]ತು . . . ಶ್ರೀವೀರಕುಲಶೇಖರದೇವರಸರು (ಕಇ. III, ೫-೧; 1346); ಸೊಸ್ತಿಯಲ್ಲಿ ಕೇಳುವನು ಕಲ್ಲುನು ಕಟ್ಟುದ್ದು ನಿಲ್ಲಿಸಿ (ಎಕ.VII, ಶಿವಮೊ.೧೦೮-೨೨; 1558). [< ಸಂ. ಸ್ವಸ್ತಿ./ ಪ್ರಾ. ಸತ್ಥಿ, ಸೋತ್ಥಿ]

ಸೊಸ್ಥಿರ (ನಾ). ಶಾಶ್ವತವಾದುದು: ನಿರಂತರವಾದುದು: ಈ ಸುಖವು ನಮಗೇನು ಸೊಸ್ಥಿರ ಮೋಸವಿದು ನಂಬಲ್ಕಿದಾಗದು (ಯಚೋರ. ೧೨೩).

[< ಸಂ. ಸುಸ್ಥಿರ]

ಸೊಳಕ 'ತೊಳಂಕು' ನೋ.

ಸೊಳಗ 'ಸೊಲ್ಲಗೆ$_1$' ನೋ.

ಸೊಳಸ 'ಸೊಳಸಿ' ನೋ.

ಸೊಳಸಗೆ 'ಸೊಳಸಿಗೆ' ನೋ.

ಸೊಳಸಿ, ಸೊಡಸಿ, ಸೊಳಸ (ನಾ). ಒಂದು ಅಳತೆಯ ಪ್ರಮಾಣ: ನಂದಾದೀವಿಗೆಗೆ ಸೊಳಸಿಯ ಪ್ರಮಾಣದ ಸೊಂಟಿಗೆಯ ಗಾಣದಲೊಂದು ಸೊಂಟಿಗೆಯೆಣ್ಣೆಯಂ . . . ಕೊಟ್ಟರ್ (ಶಾಸಾ. XI-ii, ೧೪೪-೧೭; 1098); ಕೋಟೀಶ್ವರದೇವರ ನಾವೇದ್ಯಕೆ ದಿನ ಒಂದಕ್ಕಂ ಅಕ್ಕಿ ನಾಡ ಹಾನಿ ಮೂಱಱ ಲೆಕ್ಕದಲು ತುಪ್ಪ ಸೊಳಸಿ (ಶಾಸಾ. IX- ii, ೪೧೭-೨೫; 1377). **ಸೊಡಸಿ** : ತುಪ್ಪ ದಿನ ಒಂದಕ್ಕಂ ಸೊಡಸಿಯ ಲೆಕ್ಕದಲು ವರ್ಷ ಒಂದಕೆ ತುಪ್ಪ ತೆಂಗು ತೊಂಬತ್ತಕ್ಕಂ ಕಾಟ ಗದ್ಯಾಣ ಆಗದು (ಶಾಸಾ. IX-ii, ೪೧೭-೨೭; 1377). **ಸೊಳಸ**: ಕೇದಾರದೇವರ ನಂದಾದೀವಿಗೆಗೆ ಗಾಣದೊಳು ಸೊಳಸ ೧ ಯೆಣ್ಣೆಯೆಲ್ಲಾ ಕಾಲಕಂ ನಡೆವಂತಾಗಿ ಬಿಟ್ಟರು (ಶಾಸಾ, XX .೪೪-೨೪; ಸು. 1069); ಎಣ್ಣೆಯ ಕೊಡಕ್ಕೆ ಸೊಳಸವೆರಡು ತುಪ್ಪದ ಕೊಡಕ್ಕೆ ಸೊ[ಳಸ]ವೆರಡು (ಎಇ. XIX, ೨೮-೨೫;1144); ಸಮಸ್ತ ದವಸದಲುಂ ಕೊಟ್ಟಲ್ಲಿ ಹೊಂಗೆ ಸೊಳಸ ೨ ಕೊಂಡಲ್ಲಿ ಸೊಳಸ ೨ (ಶಾಸಾ. IX-i, ೨೯೭-೫೬; 1177). [?]

ಸೊಳಸಿಂಗೆ 'ಸೊಳಸಿಗೆ' ನೋ.

ಸೊಳಸಿಗೆ, ಸೊಳಸಗೆ, ಸೊಳಸಿಂಗೆ (ನಾ). = ಸೊಳಸಿ : [ಮ]ಹಾಜನಮುಮಿರ್ದ್ದು ಮೂಱು ಸೊಳಸಿಗೆ ಗೊ XXX (ಶಾಸಾ. XI- i, ೭೨-೬೨; 1037); ಗಾಣದಲು ಸೊಳಸಿಗೆ ಯೆಂಣೆಯಂ ಸಲಿಸುವರು (ಎಕ. VII, ಸೊರಬ. ೨೪೯-೪೬; 1065); ಗಾಣದಲೆಣ್ಣೆ ಸೊಳಸಿಗೆ ೧ ಮೂಲಸ್ಥಾನದೇವರಿಗೆ ಗದ್ದೆ ಖಂಡುಗ ೧ (ಶಾಸಾ. IX- i, ೨೫೫-೬೫; 1139). **ಸೊಳಸಗೆ** : ಸೋಮವಾರದಲಿ ನಿವಾಳಿಗೆ ಗಾಣಕ್ಕೆ ಯೆಣ್ಣೆ ಸೊಳಸಗೆ ಯೆರಡು (ಮುಂಬರಾ. XII, ೧೫-೪೭;1223). **ಸೊಳಸಿಂಗೆ** : ನಖರೇಸ್ವರದೇವರ ನನ್ನಾದೀವಿಗೆಗೆ [ಊ]ರಲು ಮೂಱು ಗಾಣ [ಪೂರಗಾಗೆ]ನಿತು ಗಾಣಮಾದೊಡೆ ಗಾಣದಲೆಣ್ಣೆ ಸೊಳಸಿಂಗೆವೊನ್ದು (ಶಾಸಾ. IX-i, ೧೧೨-೨೦; 1072). 'ಸೊಲ್ಲಗೆ$_1$' ಪರಾ. [< ಸೊಳಸಿ]

ಸೊಳ್ಳೆ$_1$ 'ಸೊಳ್ಳೆ$_1$' ನೋ.

ಸೊಳ್ಳೆ$_2$ 'ತೊಳ್ಳೆ$_2$' ನೋ.

ಸೊಳ್ಳೆ$_1$, ತೊಳ್ಳೆ, ಸೊಳ್ಳೆ$_1$ (ನಾ). ೧. ಮೂಗಿನ ಹೊರಳೆ,— ಹೊಳ್ಳೆ; ನಾಸಾರಂಧ್ರ: ಕೋಪದಿಂದ ಕಬಳಿಸುವಂತೆ ಮೂಗು ಸೊಳ್ಳೆಗಳಿಂದ ಉಸುರುಗಳಂ ಬಿಟ್ಟು (ಸೌಗಂಧಿ. ೨೦೦-೯೦); ದುಃಖಾವೇಶದಿಂದ . . . ಮೂಗಿನ ಸೊಳ್ಳೆಗಳು ದೊಡ್ಡವಾದವು (ಸುಂದರಿ. ೭). **ತೊಳ್ಳೆ** : ೧. ನರವಾಸನೆಯಿಂದ ನನ್ನ ಮೂಗಿನ ತೊಳೆ ಒಡೆದು ಹೋಗುತ್ತಿದೆ (ವಚಭಾ. ೩೬). ೨. ತೂತು; ರಂಧ್ರ: (ಕ). **ಸೊಳ್ಳೆ$_1$** : ೧. ಮೂಗಿನ ಸೊಳೆ, ಹೊಳ್ಳೆ (ಮುಂಬಯಾ. ಕ. ೪-೮೩). [ದೇ. ॥ ತಮಿ. ತೊಳ್ಳೆ$_1$; ಕೊಡ. ಚೊಳ್ಳೆ]

ಸೊಳ್ಳೆ$_2$ (ನಾ). ಒಂದು ಬಗೆಯ ಕೀಟ ಮಶಕ: ತಗುಣಿ, ಸೊಳ್ಳೆ ಮೊದಲಾದುವು ನಿದ್ರೋಪಾಸಕರನ್ನು ಚೆನ್ನಾಗಿಯೇ ಬಾಧಿಸುತ್ತಿದ್ದರಬೇಕು (ಸಂಬರಿ. ೪೨); ತಿಲಕರು . . . ಚರ್ಚೆ ನಡೆಯಿಸುತ್ತಿದ್ದರೆಂದರೆ, ಅವರಿಗೆ ಜೈಲಿನಲ್ಲಿದ್ದ ತಿಗಣೆ, ಸೊಳ್ಳೆಗಳ ಕಾಟ ಗೊತ್ತಾಗುತ್ತಲೆ ಇರಲಿಲ್ಲ (ಸ್ವಾವೀರ. ೫೨).

ಸೊಳ್ಳೆಯ ಪರದೆ = ಸೊಳ್ಳೆಪರದೆ: ಶುಭ್ರವಾದ ಸೊಳ್ಳೆಯ ಪರದೆ (ರಂಗಕ. ೬೦).

[← ತಮಿ . ಚುಳ್ಳಾನ್ = ಒಂಗು ಬಗೆಯ ಸೊಳ್ಳೆ]

ಸೊಳ್ಳೆ$_3$ 'ಸೆಳ್ಳ' ನೋ.

ಸೊಳ್ಳೆ$_4$ (ನಾ). ಒಂದು ಬಗೆಯ ಆಟ: ಪಗಡೆ ಸೋಗುಳಿ ನೆತ್ತ ಚದುರಂಗ ಸೊಳ್ಳೆ ಡೊಂಪೆಗಳಾಟಕಾಱರೊಪ್ಪಿಹರು (ಮೋಕಾಪು. ೧-೫೨). [?]

ಸೊಳ್ಳೆಪರದೆ (ನಾ). ಸೊಳ್ಳೆಗಳನ್ನು ನಿವಾರಿಸಲು ಹಾಸಿಗೆಯ ಸುತ್ತಲೂ ಕಟ್ಟುವ, ಸಣ್ಣಸಣ್ಣ ರಂಧ್ರಗಳಿಂದ ಕೂಡಿರುವ ಪರದೆ; ಮಚ್ಚರದಾನಿ:

ರಾತ್ರಿವೇಳೆಯಲ್ಲಿ ಸೊಳ್ಳೆಪರದೆ ಕಟ್ಟಿಕೊಂಡು ಮಲಗಬೇಕು (ಗೃಹವಿ. ೧೮೬); ಆಳು ಬಂದು ಬಂದು ಮಂಚದ ಮೇಲೆ ದಪ್ಪನ್ನ ಗಾದಿ ಹಾಕಿ . . . ಸೊಳ್ಳೆಪರದೆ ಕಟ್ಟಿ ಸಿದ್ಧ ಮಾಡಿದ್ದಾನೆ (ಅನ್ನ. ೨೪೩). [ಸೊಳ್ಳೆ$_2$ + ಪರದೆ]

ಸೊಱ್ 'ಸುಱ್' ನೋ.

ಸೋ$_1$, ಸೋಯು, ಸೋವ್ವು, ಸೋಹು (ಕ್ರಿ). ಸೋದು (ಭೂತನ್ನೂ). ೧. ಅಟ್ಟು; ಓಡಿಸು; ನಿವಾರಿಸು: "ಸೋದುದೆ ಸೋಹಿದುದು" (ಚಕುನಿ. ೧೧೫); ಲೀಲಾಕಮಲಮನೆ ಲೀಲೆಯಿಂ ತಿರಿಪಿದಾಗಲ್ ಮುಸುಱುವ ಮಧುಕರಂಗಳಂ ಸೋಯೆ (ಆಚಿಪ್ರ. ೪-೭೦); ಪಥಿಕರ್ ಗಿಳಿ ಸೋವಬಲಾಜನಂಗಳಂ ಕಣ್ಣೆಮೆಯಿಕ್ಕದೀಕ್ಷಿಸೆ (ತೊರಾ. ೨-೧೦೭); ಮದಾಳಿಯನೋವದೆ ಸೋವುತುಂ (ಪುಪ್ಪನು. ೧೦-೬೭). ೨. (ಬೇಟೆಗಾಗಿ ಪ್ರಾಣಿಗಳನ್ನು) ಅಡಗಿರುವ ಪೊದೆ ಇತ್ಯಾದಿ ಸ್ಥಳಗಳಿಂದ ಎಬ್ಬಿಸಿ ಹೊರಡಿಸು: ಅಗಲ್ದಿದಪನೆನ್ನಂ ಭಾತ್ರನವ್ವಾಜದಿಂ ಮೃಗಮಂ ಸೋಯೆ ಬಟಲ್ಬುವಂತೆ ಮೃಗತೃಷ್ಣಾದರ್ಶನವ್ಯಾಜದಿಂ (ಲೀಲಾವ. ೫-೩); ಅಬ್ಬರದ ಕಾಂತಾರ ಮೊಳಗಿವರಬ್ಬರಿಸುತ್ತೆದಿದರು ಸೋವು[ಪಾಠಾಂ. ಹು]ತ ಸಕಲಮೃಗಕುಲವ (ತೊರಾ. ೩-೧೦೭). ೩. ಕಳೆ; ಹೋಗಲಾಡಿಸು: ತರಣಿಂದು ಕಂಡರಂ ಕರುಣದಿಂ ಕಾವರುಂ ಬಿರುದಿಂಗೆ ಬೀಗುವರ ಹರಣವಂ ಸೋವರುಂ (ಸೌಂದ. IX-i, ೨೯೭-೨೩; 1178); ತೀವಿದಾ ದ್ವಾಂತಮಂ ಸೋವಿದಂ ಮೂಡಿ ಚಂದ್ರಂ (ಉದ್ಧವ. ೫-೧೪). **ಸೋಯು:** ೨. ಹುಲಿಯನ್ನು ಸೋಯುವವರು ಬಿಲ್ಲಿನವರ ಕತೆಗೆ ಅದನ್ನು ಅಟ್ಟುವುದೆಂದೂ . . . ಸೋಯುವವರ ರಕ್ಷಣೆಗಾಗಿ ಕೋವಿಯಿದ್ದವರು ಕೆಲವರು ಅವರನ್ನು ಹಿಂಬಾಲಿಸಬೇಕೆಂದೂ ತೀರ್ಮಾನ ಮಾಡಿದರು (ಪಂಪಭಾ. ೩೨). **ಸೋವ್ವು$_1$:** ೧. ಬಾಲಚಂದ್ರನೆಂಬ ಕವಣೆಯಂ ಪಿಡಿದು ಪ್ರಪಂಚುವೆಂಬ ಹಕ್ಕಿಯಂ ಸೋವಿ (ಸರ್ವಜ. ೧೦೬-೫೬೮); ತನುಗಂಪಿಗಳಿ ಬಂದಱಗುವಳಿತತಿಯ ಕರವನಜದೊಳ್ಪಿಡಿದ ನೀಲಾಬ್ಜದಿಂ ಸೋವುತ (ಚಟುಪು. ೭-೧೪). ೨. ಕುತ್ತುಱಂ ಸೋವಿ[ಪಾಠಾಂ. ದಿ] ಸೆಱೆಗೆದಱು ಬೆಳ್ಗಾರ ದಿಗಿ (ಸೂಮಚ. ೩-೬); ಬಂದುದು ಶಬರಸೇನ ಬಳಿಕ ಸೊಪ್ಪುಸೊಪ್ಪುಗಳ ಮೆಳೆಮೆಳೆಗಳಂ ಸೋವುತ್ತೆ . . . ಮೃಗಮೃಗಂಗಳಂ ಕೆಡಹಿದರ್ಕಾಣನದೊಳ್ (ಕೃಷ್ಣಭಾ. ೨೮-೪೧). ೩. ಶಲಭ ಸೋವುವರಾರೊ ದೀಪ ಬೆಳಗುವರಾರೊ (ಕರುಶ್ರಾ. ೮೫-೩). **ಸೋಹು$_1$:** ೧. ಗೊಲ್ಲವೆಣ್ಣುಗಳು ಕಡುಗಾಡಿಯಿಂ ಬಂದು ಸೋಹುತಿಹರು ನೆಲ್ಲ ಮಡಿಗಳಿಗಿಳಿವ ಗಿಳಿಗಳ (ಕುರಾಸಾಂ. ೨-೩೬); ಪಾಮರಿ ಗಿಳಿಗಳ ಸೋಹಲು ನಭಗಳ ಕೋಮಲಕಿರಣ ಪಸರಿಸೆ ತಾಮರಸದ ಬಳ್ಳಿಯೊಂದಂತವಱಿಗಳು ತಾ ಮುಸುಕಿದವು ಕೆಯ್ಯೊಲದಿ (ವರ್ಧಜ. ೧-೫೫). ೨. ತೊಪ್ಪತೊಪ್ಪನೆ ಪಿರಿಯ ಕಲ್ಲೊಳು ತಪ್ಪಲಿಡುತಂ ಸೋಹುತಂ ಹರಿತಪ್ಪ ಕೆಲವಾಡುಗಳನು . . . ಹೊಡೆದು (ಬಸವಪು. ೨೦-೧೪); ಮೇಹುಗಾಡಿನೊಳವಗ ಮೈ ಮಿಗೆ ಸೋಹಿದರೆ ಸುತ್ತಲೆಯ ಸುಟ್ಟಲೆಯಾಹವದಲೇ ತೋಳ ತಕ್ಕಯ ತೋಟ ತೇಗುವರೆ (ಕುಮಾಭಾ. ೧೩-೧೭); ಅಡ್ಡವಿಸಿ ಸೋಹಿದರು ಕೋಣನ ದೊಡ್ಡುಗಳ ದಂತಿಗಳ (ತೊರಾ. ೩-೩-೧೨). ೪. ತಿರುಗಿಸು; ಓಡುವಂತೆ ಮಾಡು: ತಜ್ಜಗದ ಜೀವದ ಸುಕೃತ ದುಷ್ಕೃತವ ಓಹರಿಯಲಿ ತಂದು ಭವದಲಿ ಸೋಹಿ ಸುಳಿಸುವನೀ ಚರಾಚರ ಜೋಹವಿದು ನಿಜಲೀಲೆಯಿಂ ಹರಿಗೆಂದನಾ ಭೀಷ್ಮ (ಕುಮಾಸ. ೯-೯). ೫. ತಿಳಿ; ಅರಿ: ಆ ಹರಿಯ ವರಮಹಿಮೆಯಾದುದು ಸೋಹಿ ಮುನಿಕುಲ ಸ್ತುತಿಸಲಱಿಯದು (ಸಂಭಪ. ೪-೩೧).

[ದೇ. ॥ ತೆಲು. ಚೋವು; ಪರ್ಜಿ. ಚೋದ್ರ್; ಗದಬ. ಚೋಯ್]

ಸೋ$_2$ (ನಾ). ೧. ಸೋಬಾನೆ ಎಂಬ ನುಡಿಯ ಸಂಕ್ಷಿಪ್ತರೂಪ; ಸೋಬಾನೆಪದಗಳ ಕೊನೆಯಲ್ಲಿ ಗುಂಪಾಗಿ ಹೇಳುವ ಮಾತು: ಮಲ್ಲಿಗಿ ಈ ಹೂವು ಎಲ್ಲಿದ್ದು ಬೆಳದರೇನ ಮಲ್ಲಿಕಾರ್ಜುನನ ನೆನೆಯಾದ ಸೋ! (ಲೋಕಗೀ. ೧೧); ನಮ್ಮ ದನಿ ಮುತ್ತೀನ ಸರವ ತೆಗೆದಂತೆ ಸೋ (ನನ್ನೂರು. ೭೫). ೨. (ಆಲಂ) ಒಪ್ಪಿಗೆ; ಅನುಮತಿ: 'ಸೋಗೊಡು' ಪರಾ.

ಸೋ ಅನ್ನು = (ಆಲಂ) ಅನುಮತಿಸು; ದನಿಗೂಡಿಸು: ನಾವೂ ದನಿಗೂಟ್ಟು ಸೋ ಅಂದೆ (ಸುವಸಂ. ೧೦).

ಸೋಂಕಿತ (ನಾ). ಮುಟ್ಟಿದುದು; ಸ್ಪರ್ಶವಾದುದು: ಸೋಂಕಿ[ಪಾಠಾಂ. ಶೋಭಿ]ತವೇನೊ ಅಸೋಂಕಿತವೇನೊ ಹುಟ್ಟುವುದಿಲ್ಲಾಗಿ ಹೊಂದುವುದಿಲ್ಲ (ಅವಚಂ.ಕ. ೨೦೬-೫೭೫); ಆ ಪರಿಮಳಗಳೆನ್ನ ನಾಸಿಕವ ಮುಟ್ಟಿದವು ಎಪರಿಯಲ ರ್ಪಿಸಲು ಬಹುದಂಗ ಸೋಂಕಿದವು ಅಂಗ ಸೋಂ[ಪಾಠಾಂ. ಸೊಂ]ಕಿತ ಲಿಂಗ ನೊಲ್ಲನರ್ಪಿತವಹುದೆ (ದೀಕ್ಷಾಚೋ. ೯೯-೨೩). [< ಸೋಂಕು$_1$]

ಸೋಂಕಿಲ್, ಸೋಗಲು, ಸೋಗಿಲ್, ಸೋಗಿಲು, ಸೋವಿಲು (ನಾ). ೧. ಮಡಿಲು; ಉಡಿ: ಜಯಾವತಿ ತನ್ನ ಸೋಂಕಿಲ ಮೇಗಿಟ್ಟಾಡಿಸುತಿರ್ಪ ಕೂಸಂ . . . ಕಂಡು (ವಡ್ಡಾರಾ. ೪೪-೨೧); ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಟ್ಟೊಡೆ (ಪಂಪಭಾ. ೧-೯೬ ವ). ೨. ಉಟ್ಟ ಸೀರೆ, ಪಂಚೆ ಮೊದಲಾದುವುಗಳ ಮುಂಭಾಗದಲ್ಲಿ ಚೀಲದಂತೆ ಮಾಡಿದ ಸೆರಗಿನ ಭಾಗ: ಆಲದ ಪಣ್ಣಳಂ ತಾನೆಯಾಯ್ದು ಸೋಂಕಿಲಂ ತೀವಿಕೊಂಡಾಗಳ್ (ವಡ್ಡಾರಾ. ೧೫೯-೯); ಅವರೆಯ ಪಂದಳಿರ್ಗಳ್ಪಡೆಗೇಡು ಮಾಡೆ ಸೋಂಕಿಲ ಕೊಱೆತೀವಿ ಕಟ್ಟಿ (ಲೀಲಾವ. ೫-೧೦೦). **ಸೋಗಲು:** ೧. ಪಾಪಿ ಹೊಟ್ಟೆಯಲ್ಲಿ ಬೆಳೆಯುವುದು ಪುಣ್ಯಾತಗಿತ್ತಿ ಸೋಗಲಲ್ಲಿ ಬೆಳೆಯಲಿ (ಗಾದೆ). **ಸೋಗಿಲ್:** ೧. "ತೆರೆಪೊಡೆಯಂದುಂ ಸೋಗಿಲೆಂದುಂ ಮಡಿಲ್" (ಕಶಾ. ೬೩-೫೯೬); ಒಂದು ಬಾಳರವಿ ತನ್ನಯ ಸೋಗಿಲ ಮೇಗೆ ರಾಗದಿಂ ಪೊಡರ್ವುದಂ . . . ಸತಿ ಕಂಡೊಸೆದಳ್ ನಿಶಾಂತದೊಳ್ (ಪಂಪಭಾ. ೧-೧೪೦). ೩. ನಡು; ಟೊಂಕ: ಮುನ್ನಿನಂತೋಲೆಯಂ ಮುದ್ರಿಸಿ ಧನಕೀರ್ತಿಯ ಸೋಗಿಲೊಳಿಕ್ಕಿ ತನ್ನ ವಾಸಕ್ಕೆ ಪೋದಳ್ (ಧರ್ಮಾಮೃ. ೧೦-೧೭೧). **ಸೋಗಿಲು:** ೧. ಶಿಶುವ ಸೋಗಿಲೊಳಿಟ್ಟು ಮಾತೆಯ ಬಲಗೊಂಡಳೊಸೆದು ಮೂವಳಸಂ (ಶಾಂತೀಚ. ೭-೩೮); ಶಿಶುವನಾ ತಾಯ್ ಸೋಗಿಲಿಗೆ ಸೇರಿಸುವವೊಲು ತಕ್ಕೈಸಿ ತಂದನು (ತೊರಾ. ೬-೨೪-೪೭). ೩. ಸೋಗಿಲಿನ ಈ ಸಬಳದಿಂದ ಗೋಣನ್ನು ಕರಕರನೆ ನಾನೆ ಕೊಯ್ದುಕೊಂಡು ದಂಡನೆಯನ್ನು ವಿಧಿಸಿಕೊಂಡೇನು? (ಸಪಚ. ೧೯೭). **ಸೋವಿಲು:** ೧. ಸೋವಿಲೊಳಿರ್ದ ಮಗುವ ಕಾಣದಾ ಸತಿ . . . ಶೋಕಾವೇಶದೊಳಗಿರುತಿರಲು (ನೇಮಿಸಂ. ೧೮-೨೩). ೨. ಆ ರತ್ನಸಮಿತಿಯಲ್ಲಿಗೆ ತರಲ್ಕಿಂತುರಿವ ಕೆಂಡವಾಯ್ತೆನಲವಂ ಕುಡೆ ಮುನ್ನಿನಂತವನ ಸೋವಿಲೊಳು ದೇದೀಪ್ಯಮಾನಮಂ ಪಡೆದ ರತ್ನಗಳಾದುವು (ಸಮ್ಯಕೌ. ೭-೩೯).

ಸೋಂಕಿಲ ಕಿಡಿ = (ಆಲಂ) ಮಡಿಲಿನಲ್ಲಿರುವ ಬೆಂಕಿ; ಸೆರಗಿನ ಕೆಂಡ; ಸಮೀಪದಲ್ಲೇ ಇರುವ ಆಪತ್ತು: ಎನಗೆ ವಸುದೇವಂ . . . ಸೋಂಕಿಲ ಕಿಡಿ ನಣ್ಣೆನ ಮೃತ್ಯು (ಬಾಗವಿ. ೫-೬೦).

ಸೋಂಕು$_1$, ಸೋಕು$_1$ (ಕ್ರಿ). ೧. ತಾಗು; ಮುಟ್ಟು; ಸ್ಪರ್ಶಿಸು: ಆಂ ಸಂಧ್ಯಾರಾಗದೊಳಱಿಯದೆ ಮದವಾರಣಮಂ ಸೋಂಕಿ ಕೆಲದೊಳೊಯ್ಯನೆ ಪೋದಂ (ಕವಿರಾ. ೩-೧೩); ತೆಂಕಣಗಾಳಿ ಸೋಂಕಿದೊಡಮೊಳ್ಳುಡಿಗೇಳ್ದೊಡಂ . . . ನೆನೆವುದೆನ್ನ ಮನಂ ವನವಾಸಿದೇಶಮಂ (ಪಂಪಭಾ. ೪-೩೦). ೨. ಹಾಯು; ಅಪ್ಪಳಿಸು; ಬಡಿ: ಆ ಶೃಂಗಿಯಂ ಶ್ರಿಂಗಿಯಂ ಸೋಕುವಂತೆ ಸೋಂಕಿ ಪೋಪಾಗಳ್ (ಕಾ. I, ೨೫-೨೩; 1186); ಸಿಡಿಲು ಸೋಂಕಿ ಬರ್ದುಂಕಿದ ಮೊಲ್ಲೆಯ ಮುಗುಳೆ (ನಂಬರ. ೨-೫೮). ೩. ಮೆಟ್ಟು; ಹಿಡಿ; ತಗುಲಿಕೊಳ್ಳು: ಪಿಡಿದುದು ಪುಲಿ ಗಾಳಿ ಸೋಂಕಿದತ್ತು ಪಿಶಾಚಂ ತೊಡರ್ದುದು . . . ಎನೆ ಸಿರಿಯೊಳರಸುಗಳ್ ಮೆಯ್ಯಱಿಯರ್ (ಕಾಂದಪು. ೫೬೩); ತೆಱಪುವಡೆದಡಸಿ ರುಚಿ ಮೆಯ್ಯಱುಗುವಿನಮವುಂಕಿ ಸೋಂಕಿ ನಿಃಕರುಣತೆಯಿಂ (ಸುಕುಮಾ. ೨-೧೧). ೪. ನಡೆ; ಸಂಚರಿಸು: ಆ ಬಾಲಕಂ ಬಾಲದುಡಿಗೆಗಳಂ ತೊಟ್ಟು ನಡೆಗೊಂದು ದಿವಸಂ ಗೋವ್ರಜಂಗಳೊಳ್ ಸೋಂಕುವುದನಾಂ ಕಂಡು (ಪಂಚತಂ. ೧೮೭-೯); ಎಡದತ್ತ ಸಲ್ವೊಡದು ನಾಡಿಯೊಳಂ ಕೆಟಗೊತ್ತಿ ಸೋಂಕಿ ಮಧ್ಯದೊಳಿಸಗುತ್ತಮಿರ್ಪೊಡೆ ಶುಭಾವಹಂ (ಲೋಕೋಪ. ೧೦-೭). ೫. ಕೂಡು; ಸಂಭೋಗಿಸು: ಱಂಕಿದ ಕುಚ ತೋಳುಗಳ ಗಲ್ಲದೆಡೆಯ ನಖಾಂಕಿತ ಪಲ್ಲರ್ಚಿದುವೇ ಸೋಂಕಿದ ಖಳನದಾವನೊ ತೋಱೆಂದು ಝಂಕಿಸಿದಳು ತಾಯಿ ಮಗಳ (ಮೋಹತ. ೧೮-೭೭). **ಸೋಕು$_1$:** ೧. ಚರಣ ಸೋಕಲು ಸತಿಯಹಲ್ಯೆಯನಿರದೆ ಕಾಯ್ದೆ (ಕುಮಾಸ. ೬೧೩ ೨೭); ಕೆಂಡಗಣ್ಣ ನೊಸಲೊಳಗಿಟ್ಟ ನಮ್ಮ ಶಿವ ಕೆಂಡವ ಸೋಕಲು ಅಳುವ್ಯಲ್ಲೊ ಪೋಡಿ (ಪುರಂದ. ೧-೧೮೭-೪); ಸೋಕಿ ದವರ ದುರಿತವ ಪರಿಹರಿಸುತ ಶ್ರೀಕಾವೇರಿಯೊಪ್ಪಿಹಳು (ಕಂನವಿ. ೨-೧೭). ೨. ಆ ಶೃಂಗಿಯಂ ಶ್ರಿಂಗಿಯಂ ಸೋಕುವಂತೆ ಸೋಂಕಿ ಪೋಪಾಗಳ್ (ಕಾ. I, ೨೫-೨೩; 1186). ೩. ನಿನ್ನ ನಾವನು ಪೂರ್ವಕಾಲದಲಿ ನೆನೆದ ಮನುಜನ ಮನದೆ ತಾ ಕಲಿ ತನಗೆ ಸೋಕದೆ ಪೋಗಲಿ

(ಸಂಭವ. ೫-೬೨); ಮಾನಿನಿ ಒಬ್ಬ ಸಂನ್ಯಾಸಿಯ ಕಂಡು ಧೇನಿಸಿ ಕೂಸೆಂದೆತ್ತ ಬರಲು ಏನು ಗಾಳಿ ಅವರಿಗೆ ಸೋಕಿತೆ ಎಂದು ಪುರಂದರವಿಠಲ ತನ್ನೊಳು ನಗುತಿದ್ದನು (ಪುರಂದ. ೧-೧೪೫-೯). ೬. ಉಂಟಾಗು; ಒದಗು: ಸೋಕುವುದು ಮಯ್ಮಱವೆ ಮಱೆಯ ಸೋಕರುಸುವುದು ಚಿತ್ತವೃತ್ತಿ (ಕುಮಾಸಂ. ೯-೮೬); ಏಕಪತ್ನೀವ್ರತ ಸುಭಾಷಿತ ಸೋಕಿಹುದು ನಮ್ಮವನು (ತೊರಣಾ. ೩-೪-೧೩).

[ಪೋ. ॥ ತುಳು. ಸೋಂಕು, ಸೋಕು; ತೆಲು. ಸೋಂಕು, ಚೋಂಕು; ಪರ್ಜ. ಚೊರ್ಕ್]

ಸೋಂಕ್ಕು, ಸುಂಕ್ಕು, ಸೊಂಕ್ಕು, ಸೋಕ್ಕು₂ (ನಾ). ೧. ಸ್ಪರ್ಶ ಮುಟ್ಟುವಿಕೆ: ಸೋಂಕಿನೊಳ್ ನಲಿವ ನಲ್ಲಳಲಂಪನೊಡರ್ಚಿ (ಆದಿಪು. ೨-೪೧); ಕಾಬುದಿಗೆ ಕಂಗಳಿಗೆ ಅಸಾಧ್ಯ ಮುಟ್ಟುವರೆ ಸೋಂಕಿಂಗಸಾಧ್ಯ (ಶೂನ್ಯಸಂ. ೧೫-೧೨); **ಹಾಡಸೊಲಿದಾಲಿಸಿದ ಕಿವಿಗ ಹೂಲೆಯಿಲ್ಲ . . . ಸೋಂಕಿಂಗೆ ಹೊಲೆಯುಂಟಾಯ್ತೆ** (ಹರಿಹ. ೭-೧೯). ೨. (ದವ್ವ ಮುಂತಾದುವು) ಹಿಡಿಯುವಿಕೆ; ಮೆಟ್ಟುವಿಕೆ: ದರ್ಪಕನೆಂದೆನಿಸುವ ಗ್ರಹ ಸೋಂಕಿಂದಲೊಪ್ಪುವಡಗಿ ಧೃತಿಗುಂದಿ ಕರ್ಪುರಗಂಧಿಯರಲು (ಅಂಚೆ. ೨-೧೫೯) ೩. ಒಡನಾಟ; ಸಂಪರ್ಕ: ತಮಗೀಕೆ ರಂಭಾದಿಗಳ ಸೋಂಕೆಂದುದು ಸುರಸ್ತೋಮ (ಕುಮಾಸಂ. ೭-೮೭); ಆ ತರುಣಿಯರ ತನುಪರಿಮಳದ ಸೋಂಕಿನಲಿ ಸುತ್ತಲು ಪರಿಮಳಿಸಿದುದು ತರು (ತೊರಣಾ. ೧-೫-೪೫); ನನ್ನೂರು ಯಾವ ಹೊರಗಡೆಯ ಸೋಂಕೂ ಇಲ್ಲದೆ . . . ಸ್ವಾತಂತ್ರ್ಯಾನಂತರದ ಮಹಾಮಾರ್ಪಾಟಿಗಾಗಿ ಕಾಯುತ್ತಾ ನಿಂತಿದೆ (ನನ್ನೂರು. ೬). ೪. ಗಾಳಿ, ನೀರು ಮುಂತಾದುವುಗಳ ಮೂಲಕ ಹರಡುವ ರೋಗದ ಸಂಸರ್ಗ,— ಅಂಟು: ಸ್ಮನ್ಯಕ್ಕೆ ರೋಗದ ಸೋಂಕು ತಗುಲಿತು (ಶ್ರೀರಾಯಿ. ೩೭೩); ಸೋಂಕಿನ ತಾಣವನ್ನು ಗುರುತಿಸಲು 'ಕ್ಷ' ಕಿರಣಗಳು ಮಹತ್ತರವಾಗಿ ಸಹಾಯಮಾಡುತ್ತವೆ (ಕಲರೂಸ. ೮೬). ೫. ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯಿಂದ ಮಿಕ್ಕವುಗಳಿಗೆ ಹರಡುವ ರೋಗ; ಸಾಂಕ್ರಾಮಿಕ ರೋಗ; ಅಂಟುಜಾಡ್ಯ: ಮೊಟ್ಟೆಗಳಿರುವ ಮಣ್ಣು ತಿನ್ನುವುದರಿಂದಲೂ ಕೊಳಕುನೀರನ್ನು ಕುಡಿಯುವುದರಿಂದಲೂ ಸೋಂಕು ಹರಡುತ್ತದೆ (ಶಬ್ದಮಣಿ. ೧೭೦); ದ್ವಾರಕಾನಾಥನಿಗೆ ಏನೋ ಸೋಂಕಿನಂತಾಗಿದೆ (ವಿಧಿವಿ. ೧೫೩). ೬. ಮುಟ್ಟುವಷ್ಟು ಹತ್ತಿರ; ಅತ್ಯಂತ ಸಮೀಪ: ತಾಯ್ತಿಡಿದು ಸೋಂಕಿನೊಳಿಯ್ಯನೆ ಸೋಂಕಿ ನಿಲ್ಲ ಮುದ್ದೊರ್ಮೆಯುಮೊಪ್ಪಿತೋಱೆ ಕಲಭವ್ರಜಮಿರ್ದುದು (ಜಗ. ೧೭-೧೧). **ಸುಂಕು₃**: ೪. ಕ್ಷಯರೋಗದ ಸುಂಕು ವಾಯುನಾಳಗಳ ಮೂಲಕವಾಗಲೀ . . . ದೇಹವನ್ನು ಸೇರುವುದು (ವಿಜ್ಞಾನ. ೧೬೫). ೫. "ಸುಂಕು - ಮಾರಿಕಾ ಉಪದ್ರವ" (ಗುಪಪೋ. ೧೭೩). ೬. ಪ್ರಭಾವ; ಪರಿಣಾಮ: ಕವಿಯ ಪ್ರತೀತಿಯ ಸುಂಕು ಸಹೃದಯನಿಗೆ ತಗಲದೆ ಹೋಗುವದಿಲ್ಲ (ಸಾಹಿ. ೫೨). **ಸೊಂಕು₃**: ೧. ಶಿವಪಾದಾಬ್ಜದ ಸೊಂಕಿನಿ೦ ೦ಪರಿತೇಜಸ್ಸೂರ್ತಿ ಮೆಯ್ವೆರ್ಚಿ (ಕಬಾಂ. ೫-೫೪); ಸೊಂಕಿಗೆ ಹೇಸುವ ದೈವಭಕ್ತರ ಕೀಕರ ನಾನು ಎನುತಿಹನಗ್ನಿ (ಚೀಲುಪು ೫೧-೮). ೨. ಚಿತ್ರಭವಗ್ರಹದ ಸೊಂಕೆ ಸುಜನೋತ್ಪಂಸಾ (ಶಮದ. ೧೩೪ ಪ್ರಯೋ). ೩. ಏನೂ ತಪ್ಪಿಲ್ಲದಿದ್ದರೆ ಅಪವಾದದ ಸೊಂಕೇ ಇಲ್ಲ (ಡಾಲತ್. ೧೦೫). ೪. ಅಮಶಂಕೆಯಲ್ಲಿ . . . ಸೊಂಕು ತುಸುವಾಗಿದ್ದರೆ ಯಾವ ರೋಗಲಕ್ಷಣಗಳೂ ಹೊರಗೋರದೆ ಇರಬಹುದು (ಕವಿಕೋ. ೨. ೮೨೬). **ಸೋಕು₂**: ೧. ಸರಳಿನ ಸೋಕುಗಳ ಸೈರಣೆಯಲಿದ್ದನು ಗಣಸದರಿಬಲವ (ತೊರಣಾ ೫-೫-೧೮). ೩. ಲೋಕದೂಷಣವನ್ಯನಾರಿಯ ಸೋಕು (ತೊರಣಾ.೬-೪೫-೩೬).

[< ಸೋಂಕು₂/ ತುಳು. ತೆಲು . ಸೋಂಕು. ಚೋಂಕು]

ಸೋಂಕುರೋಗ, ಸುಂಕುರೋಗ, ಸೊಂಕುರೋಗ (ನಾ). ೧. ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯಿಂದ ಮಿಕ್ಕವುಗಳಿಗೆ ಹರಡುವ ರೋಗ; ಸಾಂಕ್ರಾಮಿಕ ರೋಗ; ಅಂಟುಜಾಡ್ಯ: ಮನೆಯಲ್ಲಿ ಒಬ್ಬರಿಗೆ ಸೋಂಕುರೋಗ ಕಾಣಿಸಿಕೊಂಡರೆ ಉಳಿದವರು ಕೂಡಲೆ ವೈದ್ಯಪರೀಕ್ಷೆ ಮಾಡಿಸಿಕೊಳ್ಳಬೇಕು (ರೂಢಿ). **ಸುಂಕುರೋಗ**: ೨. (ಆಲಂ) ಸಾಂಕ್ರಾಮಿಕವಾಗಿ ಹಬ್ಬುವ ದುಷ್ಪ್ರವೃತ್ತಿ: ಇದು ಮೂರ್ತಿಭಂಜಕರೊಳಗಿನದೇ ಸುಂಕುರೋಗ, ತಿಳಿಯತೇ? (ಹೊಸಂಸಾ. ೧೦). **ಸೊಂಕುರೋಗ**: ೧. ಮಾನವನಲ್ಲೂ, ಪ್ರಾಣಿಗಳಲ್ಲೂ, ಐವತ್ತಕ್ಕೂ ಮಿಗಿಲಾದ ಬಗೆಗಳ ಅಣುಜೀವಿ (ಬೂಜು, ಬೂಷ್ಮು, ಶಿಲೀಂಧ್ರ)ಗಳಿಂದ ಸೊಂಕುರೋಗಗಳು ಕಾಣಿಸಿಕೊಳ್ಳುತ್ತವೆ (ಕವಿಕೋ. ೨, ೨೨೭). [ಸೋಂಕು₂ + ರೋಗ]

ಸೋಂಕುವಡೆ (ಕ್ರಿ). ಸ್ಪರ್ಶವನ್ನು ಹೊಂದು; ಮುಟ್ಟು: ಅಜ್ಞಾನದಿಂ ಸೋಂಕುವಡೆದಾತ ಸುರನಿತ್ತುದೇ ನಿಧಿ ನಿರೀಕ್ಷಿಸಿತೆ ಪೊಡವಿ ಪಾವನಂ (ಪದ್ಮಪು. ೨-೨೮).

[ಸೋಂಕು₂ + ಪಡೆ]

ಸೋಂಗು 'ಸೋಗು' ನೋ.

ಸೋಂಟಿಗ 'ಸೊಂಟಿಗ' ನೋ.

ಸೋಂಟೆ 'ಸೋಟೆ' ನೋ.

ಸೋಂಪು, ಸೋಪ್ಪು (ನಾ). ಒಂದು ಬಗೆಯ ಸಸ್ಯ ಮತ್ತು ಸುವಾಸನೆಯಿಂದ ಕೂಡಿದ ಅದರ ಬೀಜ; ☞ ಈ ಬೀಜವು ಜೀರಿಗೆಯಾಕಾರದಲ್ಲಿದ್ದು, ಸಾಂಬಾರ ಪದಾರ್ಥವಾಗಿಯೂ ಅಡಕೆಯಂತೆ ತಾಂಬೂಲದೊಂದಿಗೆ ಸೇವಿಸಲೂ ಬಳಕೆಯಾಗುತ್ತದೆ: "ಸೋಂಪುಗಿಡ, ಸಂಪು, ಶತಪುಷ್ಪಿ" (ಕ್ಯೈನಿ. ೧೦೫). **ಸೋಪ್ಪು**: ಇಂಥ ತಂಪು ಎರೆಗಳಲ್ಲಿ ಜೀರಿಗಿ . . . ಸೋಪು ಗಜರೀಬೀಜಗಳನ್ನಾದರೂ ಬಿತ್ತಿದರೂ ಬರುತ್ತದೆ (ಕೃಷಿಪ್ರ. ೭೩). [ದೇ. ॥ ತಮಿ. ಚೋಮ್ಪು; ತೆಲು. ಸೋಪು]

ಸೋಂಬ, ಜೋಬ, ಶುಂಭ, ಸಾಂಬ (ನಾ). ೧. ಮೈಗಳ್ಳ; ಆಲಸಿ; ಸೋಮಾರಿ: "ಆಲಸಃ . . . ಮಂಥರಃ - ಈ ೬ ಸೋಂಬಂ" (ಪಲಾಮು. ೬೪- ೨೩೩); ಸೋಂಬನಂ ಮೆಚ್ಚಿ ಬೇಱೂರ್ಗೆ ಪೋದ ಸೂಳೆಯಂತೆ (ಕಾವ್ಯಸಾ. ೫೫೯ ಶೂದ್ರಕ); ಸೋಂಬರಭವ್ಯರನ್ಯ ವನಿತಾಸಕ್ತರ್ . . . ನೋಟ್ಪುಡಮಿಲ್ಲ (ವರ್ಧಮಾ. ೧-೪೭). ೨. ಮೊರ್ಖ; ದಡ್ಡ: ಕಂತೆಗಳವದ್ಯತನರೊಳ್ ಕವನಂ ದಿಗ್ಯಾನ್ತಿಕರಮೆಂಬವನೊಳೇಂ? ತನತೆ ಕಾಲಕ್ಕುಂತೆ ಕರುಬಿಂ ಜರೆದು ಕೀಳ್ಪಡಿಪ ಸೋಂಬಂ (ಸಂಪ್ರ. ೭-೧೩). **ಜೋಬ**: ೧. "ಆಲಸಂ ಜಡಂ ಮಂಥರಂ ಜಿಂಹ್ಮನೆನೆ ಜೋಬ[ಪಾಠಾಂ. ಜೋಪ, ಸೋಂಬ]ನಕ್ಕುಂ" (ಮುಗರಾ ೭೩-೨೪); ಈಗ ನಾಮ್ಮಡಿ ಜೋಬನಾಗಿದ್ದೇನೆ . . . ಮಾಡಬೇಕಾಗಿದ್ದ ಎಷ್ಟೋ ಕೆಲಸ ಮಾಡದೆ ಹೋಯಿತು (ಕಂನಾಸಾ. ೧೫೩). **ಶುಂಭ**: ೧. ತನ್ನ ಗಂಡನಾದವನು ಶುಂಭನಂತೆ ಕಾಲಹಾಕುವುದನ್ನು ಅವಳು ನೋಡದಾದಳು (ಮಗ್ನಮ. ೧೭). ೨. ಅಂಬರಕೆ ಹೋದ ಹೊಗೆ ಕುಂಭನಿಗೆ ಮರಳುವುದೆ ಶುಂಭಮಾನವನೆ ಕೇಳು (ಮ್ಯೂಲಾ. ೮-೮). **ಸಾಂಬ**: ೨. ನೀನಂದರ ಏನೂ ಅರೀದ ಸಾಂಬನಂಗ ಅಂತ ಮಾಡಿದ್ದಿನಿ ನಾ (ಮಣ್ಣುತ. ೧೫೩).

[ಸೋಂಬು + - ಅ]

ಸೋಂಬತನ (ನಾ). ಸೋಮಾರಿತನ; ಜಡತೆ: ಪಿದ್ಪಾಂತಮನಱಿಯದ ಪರಿದುದ್ಧತೆಯಿಂ ಸೂಂEಸೋಂತಬತನದಿನಧ್ಯಾತ್ಮಮುಮಂ ಶ್ರದ್ಧೆಯಿನೋದುವ ಕಡುನಿರ್ಬುದ್ಧಿ ಮಹಾಸುಖಮನ್ಯೆದಲಾಱಂ ಕಡೆಯೊಳ್ (ಧರ್ಮಾಮೃ. ೬-೧೦೦); ಪೇಱ್ ಬಲುಲ್ದಿರವಿಂ ಪೇಱ್ದಿ ಪಣ್ಣೊನೆಯನಿಟ್ಟಿಪಲೊಡನೆ ನಿಮಿತ್ತಂ ಬೇಱುಂಟೆ ಫಲಕೆ ಮೈವರಲಾಱದ ಕಡುಸೋಂಬ[ಪಾಠಾಂ. ಸೊಬಗು]ತನಕೆ ಪೊಂಬಾಲ್‌ಗಳೊಳ್ (ಲೀಲಾವ. ೬-೧೬೧). [ಸೋಂಬ + - ತನ]

ಸೋಂಬತೆ (ನಾ). ಆಲಸ್ಯ; ಸೋಮಾರಿತನ: ಮೈ ಸೋಂಬತೆಯ [ಪಾಠಾಂ. ಸೋಂಭತೆಯ, ಶೋಭತೆಯ] ದೆಸೆಯಿಂದ . . . ಭಕ್ಷಾಂದೇಹಿಯಾದ ಸಂದೇಹಗಳ ಶಿವನೊಲ್ಸನು (ತವನೀ. ೫೫-೨೬೧). [ಸೋಂಬ + - ತೆ]

ಸೋಂಬು (ನಾ). ೧. ಆಲಸ್ಯ; ಮೈಗಳ್ಳತನ: ಆ ಗ್ರಾಮದೊಳ್ ಸೋಂಬಂ ಬಿಟ್ಟಿಕಿ ದಕ್ಕಸಪ್ಪ ಪರದಂ ಯಕ್ಕಾಂಕಂ (ನೇಮಿಪು. ೧೪-೨೨). ೨. ನಿಧಾನ; ತಡೆ; ಸಾವಕಾಶ: ತುಂಬಿದ ಸೇನೆಯಿಂದಗಲಿ ವೃಷಭರಾಜ ಸೋಂಬಿಲ್ಲದತ್ತ ಸಾಗಿದನು (ಭರಚ. ೩೦-೬೦). ೩. ನವುರಾಗಿರುವುದು; ಸೂಕ್ಷ್ಮ; ಹಗುರ: ಚೌಮೂಲೆಗಳಲ್ಲಿಯೂ ಸೋಂಬನಿಂದ ಪಲವಾಕೃತಿಗಳಿಂದ ತಳ್ಳೊಗೆಯ ಸಂಪದವನ್ನೊಯ್ಯನೆ ಏರಿಸಿ ಕುಡುತ್ತಿರುವ ಅಗುರು ದಶಾಂಗ (ಚಿಟ್ಟಿಉ. ೬೨-೧೭). [ದೇ. ॥ ತಮಿ. ಚೋಮ್ಬು, ಚೋಮ್ಬಲ್]

ಸೋಂಬೆ (ನಾ). ದಡ್ಡ ಹೆಂಗಸು: ನಲಿಗಚ್ಚು ಕಚ್ಚಿ ಕುಡಿಯಾಗಡೆಯಾಳನೆ ಸೀಳ್ದು ಸಿಜುಂಬುಳಾಡದಂಬದೆ ನೆಜನೆಂದು ಭಾವದೊಳೆ ಬಳ್ಕುವ ಸೋಂಬೆಯನಿಕ್ಕು ಕಚ್ಚನೊಳ್ (?) (ಸೂಕ್ತಿಸು. ೮-೪೩೪). [ಸೋಂಬ + - ಎ]

ಸೋಂಬೇರಿ (ನಾ). ಜಡಸ್ವಭಾವದ ವ್ಯಕ್ತಿ; ಆಲಸಿ: ಆ ನಗರದಲ್ಲಿಯ ಒಕ್ಕಲಿಗರ ಕೇರಿಯಲ್ಲಿರುವವರಲ್ಲ ಬರಿಯ ಸೋಂಬೇರಿಗಳಾಗಿ ವೇಳೆಗಳೆಯುವವರಲ್ಲ (ಕರ್ಕಾಜ. ೧೫೭). 'ಸೋಮಾರಿ' ಪರಾ.

ಸೋಂಬೇರಿಯಾಗು = ಜಡವಾಗು; ನಿಷ್ಕ್ರಿಯವಾಗು: ಐಕಿಲಿಂ ಕುರ್ಗಿರಲೊಂದಲ್ಲಾನು ಕೂರ್ಚಂ ಸೆಡೆದು ಮಲಗಿ ಸೋಂಬೇರಿಯಾದತ್ತು ಲೋಕಂ (ಚಂದ್ರಭ್ಯು. ೬-೪೫). [ದೇ. ॥ ತಮಿ. ಚೋಮ್ಬೇಱ್]

ಸೋಕ (ನಾ). ದುಃಖ; ಸಂಕಟ: ಸೋಗೆಯ ಸೋಕಕ್ಕೆಂದುಂ ಪೋಗದ ಬಹುರತ್ನ ರುಚಿರರುಚಿ ಸುರಚಾಪಶ್ರೀಗಂ ಬಯಸಿರ್ಪಂತೆವೊಲಾಗಳುಮಗಲವು ಮುಗಿಲ್ಗಳಾ ನಗತಟಮಂ (ಲೀಲಾವ. ೯-೩೨); ಸಾರಂಗವೆಲ್ಲಾ ಸೋಕಾ ಮಾಡಿದವೂ (ಹುಚ್ಚಿಸ. ೪೮).

[< ಸಂ. ಶೋಕ]

ಸೋಕಿಸು (ಕ್ರಿ). ಸ್ಪರ್ಶಮಾಡಿಸು; ಮುಟ್ಟಿಸು: ಪಶದ ಕಟ್ಟಿಗೆ ಸೋಕಿಸಿದನು (ಮುನಿಮಾ. ೨೪).

ಸೋಕಿಸಿಕೊಳ್ಳು = ಮುಟ್ಟಿಸಿಕೊಳ್ಳು: ಪ್ರಭುಗಳು ಅದನ್ನೂ ಕಣ್ಣಿಗೆ ಸೋಕಿಸಿಕೊಂಡು, ಅನಂತರ ಕುಡಿದರು (ಶಾಂತಲಾ. ೧೭೭). [ಸೋಕ್ಕು$_3$ (< ಸೋಂಕು$_2$) + - ಇಸು$_3$]

ಸೋಕ್ಕು$_1$ 'ಸೋಂಕು$_1$' ನೋ.

ಸೋಕ್ಕು$_2$ 'ಸೋಂಕು$_2$' ನೋ.

ಸೋಕುವರೆಯ (ನಾ). ಆಗತಾನೇ ಕಾಣಿಸಿಕೊಂಡ ಪ್ರಾಯ: ಕಿರುವರೆಯದಿಂ ಸಂತತಮ್ಮಿಂಡಿವರೆಯದ ಸೋಕುವರೆಯ ನಡುವರೆಯದವರು . . . ಸಲೆ ಸೊಗಸುತಿರಲು (ನಪಮೂ. ೨೪-೧೯). [ಸೋಕ್ಕು$_3$ (< ಸೋಂಕು$_2$) + ಪರೆಯ$_2$ (< ಪರಯ)]

ಸೋಕುಳಿ (ನಾ). ಆಲಸ್ಯ; ನಿರುತ್ಸಾಹ: "ಜಡತೆ ಸೋಕುಳಿ" (ಸಂಜೀವ. ೨೫).

[< ಸೋಂಬು + - ಕುಳಿ$_3$]

ಸೋಕ್ಷಮೋಕ್ಷ (ನಾ). ೧. ಇತ್ಯರ್ಥ; ತೀರ್ಮಾನ; ನಿರ್ಣಯ: ಈ ವಿಷಯದ ಸೋಕ್ಷ-ಮೋಕ್ಷ ಇಂದು ಆಗಿಯೇ ತೀರಬೇಕು (ಮೂರುದಾ. ೩೬). ೨. ಪರಿಣಾಮ; ಫಲ: ಅಂತೂ ಸೋಕ್ಷಮೋಕ್ಷದ ವಿಚಾರ ಮಾಡಿ ಕೊನೆಗೆ ಒಬ್ಬನೇ ಹೋಗಬೇಕೆಂದೂ ನಿಶ್ಚಯಿಸಿಕೊಂಡನು (ಗಂಯಾಯಿ. ೧೦೧). ೩. ನೆಲೆ; ಅಸ್ತಿತ್ವ: ಅಗ್ನಿದಿವ್ಯದೊಳಗಿಂದ ಹಾಯ್ದ ವ್ಯಕ್ತಿಗಳು ಇಲ್ಲಿ ತಮ್ಮ ಸೋಕ್ಷಮೋಕ್ಷಗಳನ್ನು ಕಂಡುಕೊಳ್ಳುತ್ತಾರೆ (ಸಮಜೀ. ೨೦ ಪೀಠಿಕೆ). ೪. ಕೊನೆ; ಅಂತ್ಯ: ಇಂಥ ಮಹತ್ವವುಳ್ಳ ಅವಧಿಯಲ್ಲಿ ಅನೇಕ ಬಾಲಬಾಲಿಕೆಯರು ತಮ್ಮ ಸೋಕ್ಷಮೋಕ್ಷಗಳನ್ನು ಮಾಡಿಕೊಂಡುಬಿಡುವರು (ಬ್ರಹ್ಮಜೀ. ೫೯). [<— ಮರಾ. ಸೋಕ್ಷಮೋಕ್ಷ]

ಸೋಗಲಕ್ಕಿ 'ಸೋಗಿಲಕ್ಕಿ' ನೋ.

ಸೋಗಲಾಡಿ (ನಾ). ೧. ಸೋಗು ಮಾಡುವವಳು; ಒಯ್ಯಾರಿ; ಒನಪುಗಾತಿ: ಈ ಸೋಗಿನ ಮಾತುಗಳನ್ನು ಸೋಗಲಾಡಿಯರ ಮುಂದೆ ಹೇಳಿದಂತೆ ನನ್ನ ಮುಂದೆಯೂ ಹೇಳಬೇಡ (ಮಣ್ಣಿಮ. ೨೬೬); ನೀನು ಪಾರಾಗಿ ಮುಂದೆ ಹೋದ ಮೇಲೆ ಆ ಸೋಗಲಾಡಿ-ಮಾಟಗಾತಿಯರ ರೂಪವು ಬಯಲಿಗೆ ಬೀಳುವದು (ಧರ್ಮಸ. ೧೧). (ಗು) ೨. ಬೆಡಗಿನ; ಒಯ್ಯಾರದ: ಆ ಸೋಗಲಾಡಿ ಉಷೆಯದ್ದರೆ ಇಲ್ಲಿಗೆ ಬರಬೇಕಲ್ಲವೇ? (ಸುದರ್ಶ. ೧೧೦); ಅನಿಷ್ಟ ಸೋಗಲಾಡಿ ಹುಡುಗಿ (ಪರೀಕ್ಷೆ. ೩೧). [< ಸೋಗು + - ಆಡಿ$_1$]

ಸೋಗಲು 'ಸೋಂಕಿಲ್' ನೋ.

ಸೋಗಲುದುಂಬು, ಸೋವಿಲುದುಂಬು (ಕ್ರಿ). ಮಡಿಲಲ್ಲಿ ಸೋಗಲಕ್ಕಿಯನ್ನು ತುಂಬು: ಸೋಗಲುದುಂಬಿ ಪುಟ್ಟಮಾಳಿಗೇಲಿ ಇರು ಗೌರಿ (ಕಜಕಾ. ೧೩೩). ಸೋವಿಲುದುಂಬು: ವರಮುತ್ತಿನಕ್ಷತೆಯನ್ನು ಸೋವಿಲುದುಂಬಿ (ಜ್ಞಾನಚಿ. ೩-೧೫೬).

[ಸೋಗಲು (< ಸೋಂಕಿಲ್) + ತುಂಬು$_1$]

ಸೋಗಳೆ 'ಸೊಗುಳಿ' ನೋ.

ಸೋಗಿಗ (ನಾ). ವೇಷ ಹಾಕುವವನು; ವೇಷಧಾರಿ: ಜಗದೊಳಗಣ ಮನುಜರು ಸೋಗಿಗನಂತಿಪ್ಪರು ಸೋಗಿಗನಾಡಿಸುವರ ಪೂಜೆ ಬೇಜ್ಯೆ (ಬೆದಾವ. ೭೦-೧೪೫).

[ಸೋಗು + - ಇಗ]

ಸೋಗಿಲ್ 'ಸೋಂಕಿಲ್' ನೋ.

ಸೋಗಿಲಕ್ಕಿ, ಸವಲಕ್ಕಿ, ಸೋಗಲಕ್ಕಿ, ಸೋಬಲಕ್ಕಿ, ಸೌಲಕ್ಕಿ (ನಾ). ಮನೆಯ ಹೆಣ್ಣುಮಕ್ಕಳನ್ನು ಕಳುಹಿಸಿಕೊಡುವಾಗ ಅಥವಾ ಗೌರಿಹಬ್ಬ ಮುಂತಾದ ಸಂಧರ್ಭಗಳಲ್ಲಿ ದೇವರಿಗೆ, ಮಡಿಲನ್ನು ತುಂಬುವ ಅಕ್ಕಿ, ಬೆಲ್ಲ, ತೆಂಗಿನಕಾಯಿ, ಕುಪ್ಪುಸದ ಬಟ್ಟೆ, ಎಲೆಯಡಿಕೆ, ಅರಿಸಿನಕುಂಕುಮ ಮುಂತಾದುವು; ಮಡಿಲಕ್ಕಿ; ಉಡಿಯಕ್ಕಿ: ಆಕೆ ಮಗಳಿಗೆ ಸೋಗಿಲಕ್ಕಿಯನ್ನು ಹಾಕಿ ಗಂಡನ ಮನೆಗೆ ಕಳುಹಿಸಿಕೊಟ್ಟರು (ರೂಢಿ). ಸವಲಕ್ಕಿ: ತನ್ನ ಕೈಯಲಿದ್ದ ಸವಲಕ್ಕಿಯ ಮರವನ್ನಲ್ಲಿರಿಸಿ ಅಲ್ಲಿಂದೊಮ್ಮೆಯೇ ಚಿಮ್ಮಿದ್ದಳು (ಬಂಗಾಡಾ. ೧೪). ಸೋಗಲಕ್ಕಿ: ಎಲ್ಲರಿಂದಲೂ ಸೋಗಲಕ್ಕಿ ಇಡಿಸಿಕೊಂಡ ಗೌರಮ್ಮನ ಹಂಗೆ ನಿಮ್ಮ ಹಿಂದೆ ಬಂದುಬಿಡುತೇನಿ (ಮಲ್ಲಿ. ೨೮೩). ಸೋಬಲಕ್ಕಿ: ಹೆಣ್ಣುಮಕ್ಕಳನ್ನು ತೌರಿನಿಂದ ಕಳುಹಿಸಿಕೊಡುವಾಗ ಸೋಬಲಕ್ಕಿ ಹಾಕುವುದು ಒಂದು ಸಂಪ್ರದಾಯ (ರೂಢಿ). ಸೌಲಕ್ಕಿ: ಅಗ್ರಹಾರದ ಸುಮಂಗಲಿಸ್ತ್ರೀಯರಿಗೆ ಸೌಲಕ್ಕಿಗಾಗಿ ಕೊಡಲು ಇಪ್ಪತ್ತೈದು ರೇಶ್ಮೆಕಣಗಳನ್ನು ತೆಗೆಯಲಾಯಿತು (ಮೂಲಾನ. ೧೧೩). [ಸೋಗಿಲು (< ಸೋಂಕಿಲ್) + ಅಕ್ಕಿ$_1$]

ಸೋಗಿಲು 'ಸೋಂಕಿಲ್' ನೋ.

ಸೋಗು, ಸೋಂಗು, ಸೋಗೆ$_2$ (ನಾ). ೧. ತೋರಿಕೆಯ ರೂಪ; ವೇಷ: ನನಗೆ ಬಹಳೇ ವ್ಯಸನವಾಗಿ . . . ಬೇನೆಯವನ ಸೋಗು ತೆಗೆದುಕೊಂಡಿದ್ದೇನೆ (ಮುಂಬಯಿ. ೪-೭೭); ಈ ಎರಡನೆಯ ಕಾರ್ಯವನ್ನು ನೆರವೇರಿಸಲು ಈ ಹುಚ್ಚನ ಸೋಗೇ ಸರಿ (ರಾವಿಜ. ೧೬). ೨. ಧರ್ಮವೇಷ; ಮಾರುವೇಷ: ಬೋಯರ ಸೋಗಿಂದ ಮೇಣಗಳನ್ನು ಎತ್ತಿಕೊಂಡು ಹೋಗಹತ್ತಿದರು (ಮುಂಬಯಿ. ೬. ೫-೪೦). ೩. ನಟನೆ; ತೋರಿಕೆ: ನಾನು ಸೋಗಿನ ನಿದ್ದೆಯಲ್ಲೇ ಬಡಬಡಿಸಿದೆ (ಸ್ವತಿಚಿ. ೧೧೪); ಎಲ್ಲವೂ ಅಂತರ್ಯಾಮಿಯ ಸೋಗಿನ ರೂಪದಂತೆ ತೋರುತ್ತದೆ (ಸೌಂದಸ. ೩೬). ೪. ನೆವ; ನೆಪ: ಸ್ವಾರ್ಥಬುದ್ಧಿಯು . . . ಲೋಕಸೇವೆಯ ಸೋಗಿನಲ್ಲಿ ಅದು ತನ್ನ ಕಾಯಕವನ್ನು ನಡಿಸಿಯೇ ಇದೆ (ಯಕ್ಷಪ್ರ. ೩೬); ಪ್ರೇಮಯೆನ್ನುವ ಸೋಗಿನಲ್ಲಿ ಕಂಡಕಂಡ ಹೆಣ್ಣುಗಳ ಮೇಲೆ ಕಣ್ಣು ಹಾಕುವ ಕಾಮಿ (ಆಲಹೂ. ೧೪೯). ೫. ಪಾತ್ರ; ಪಾತ್ರಧಾರಿ; ವೇಷಕಟ್ಟುವ ವ್ಯಕ್ತಿ: ಮೊದಮೊದಲು ಸೋಗು ಆಗಲಿಕ್ಕೆ ನಾಚಿ ಒಲ್ಲೆನೆಂದನು (ಚಿಟ್ಟುಹೂ. ೧೬); ನನ್ನ ನಾಟಕದಲ್ಲಿ ಕುಣಿಸಿರುವೆ ಇಂತಹ ಸಾವಿರಾರು ಸೋಗುಗಳನ್ನು (ಪ್ರೇಮರಾ. ೩). ಸೋಂಗು: ೧. ಬಾಂಬೊಲದಲ್ಲಿ ಹುಂಬಗಾಳಿಗುರುಬ ತರುಬಿದುಣ್ಣೆ ಕುರಿಮರಿಗಳ ಕಿರಿಹಿಂಡು:- ಇದೂ ಒಂದು ಸೋಂಗು! (ದ್ರೌಪದಿ. ೧-೮). ಸೋಗೆ$_2$: ೩. ಕೋಮಟಶೆಟ್ಟಿ ಯುಕ್ತಿಯುಳ್ಳವನಾದ್ದರಿಂದ ಕಳ್ಳನ ಸೋಗೆ ತಿಳಿದು . . . ಮೋಸಹೋಗದೆ ಇದ್ದನು (ಕಥಾಮಂ. IV, ೨೬).

ಸೋಗಿನವನು = ತೋರಿಕೆಯ ವೇಷಕಟ್ಟುವವನು: ಸರಸಭಾಷಿಗೆ ಮೋಸಗಾರನೆಂಬುವರಮಲತರ ವಸ್ತ್ರಭೂಷಿತಗೆ ಸೋಗಿನವನೆಂಬುವರು (ಮಲ್ಲಚ. ೨-೧೮).

[<— ಮರಾ. ಸೊಂಗ್ ./ ಸಂ. ಯೋಗ]

ಸೋಗುಗಾರ (ನಾ). ತೋರಿಕೆಯ ವೇಷಹಾಕುವವನು: "(ಮೋಸ ಮಾಡಲು) ಇನ್ನೊಬ್ಬನಂತೆ ವೇಷತಾಳಿದವನು . . . ಸೋಗುಗಾರ; ಠಕ್ಕ; ಮೋಸಗಾರ" (Imposter. ಇಂಕಾ). [ಸೋಗು + - ಗಾರ (<- ಕಾಱ)]

ಸೋಗುಡು 'ಸೋಗೊಡು' ನೋ.

ಸೋಗುಳಿ 'ಸೊಗುಳಿ' ನೋ.

ಸೋಗೆ$_1$, ತೋಕೆ (ನಾ). ೧. (ಸಾಮಾನ್ಯವಾಗಿ ಗಂಡು) ನವಿಲು; ಮಯೂರ: "ಮೋರವೆಂದುಂ ಸೋಗೆಯೆಂದುಂ ನವಿಲ್" (ಕಶಸಾ. ೫೧-೯೬); ಕಾರ್ಗಾಲಮಂ ಸೋಗೆ . . . ನೆನೆವಂತಾಂ ನೆನೆವೆಂ ಸರೋಜಮುಖಿಯಂ (ಆದಿಪು. ೧೨-೩೧); ಪಾಡುವ ಹಂಸ ರಾಗದಿಂದಾಡುವ ಸೋಗೆ (ಸೌಇಾ. IX-i. ೧೧೮-೨೪; 1057); ಸೋಗೆಗಳ ಸುಳಿವುಗಳ ಕಪಿಗಳ ಲಾಗುಗಳ ಲಂಘನೆಯಲೆಸೆದುದು . . . ತತ್ಪುರೋದ್ಯಾನ (ತೋರಾ. ೧-೯-೧೩). ೨. ನವಿಲಿನ ನೀಳವಾದ ಪುಚ್ಛ; ಬರ್ಹ: "ಕಳಾಪಃ, ಬರ್ಹಃ - ಈ ೨ ಸೋಗೆ" (ಹಲಾಯು. ೪೧-೮೯); ಕೋಮಳತನುಯಷ್ಟಿ ಕಲ್ಪಲತಿಕಾಂಕುರವೊಳ್ಮುಡಿ ಸೋಗೆ ಮನ್ಮಥಾನಳಶಿಖಿ ಬೇಗೆಯಾಗೆ ಮದನಾಟವಿಯಂತೆವೊಲೊಪ್ಪಿ ತೋಱಿದಳ್ (ಕಾವ್ಯಸಾ. ೬೧೨ ಶೂದ್ರಕ); ಪೊಳೆವಿನಕಿರಣಂ ಮೆಯ್ಗಳನಳುರೆ ಕನಲ್ದಗಿದು ಸೋಗೆಯಂ ಪರಪಿ ನೆಟಲ್ಗಳನಾಸೆವಡೆ ಶಿಖಾವಳಿಕುಳತಾಂಡವಮೆಸೆದುದಾ ಶರತ್ಸಮಯದೊಳಂ (ಆದಿಪು. ೧೧-೪೯). ೩. ತಾಳೆ, ತೆಂಗು, ಅಡಕೆ ಮುಂತಾದ ಮರಗಳ ಎಲೆ; ಗರಿ: ಎಸೆವ ಸೋಗೆಗಳ ಸೀಗುರಿಗಳಿಂ ಮಿಗೆ ಮೆಱೆವ ತೆಂಗುಗಳ ಸತ್ತಿಗೆಗಳಿಂ . . .

ವನಮೆಸೆದುದು (ಪದ್ಮರಾ. ೮-೨೩); ಮೂಲೆಮೂಲೆಗೂ ತುಂಬುವ ಹಾಗೆ ಸೋಗೆಯನ್ನೆಲ್ಲಾ ಹರಡಿದ್ದಲ್ಲದೆ ಅಂಗಳವೆಲ್ಲಾ ಕಸ ಮಾಡಿಬಿಟ್ಟನು (ಕಥಾಮಂ. IV,೧೩). ೪. ಕಬ್ಬಿನ ಬುಡ ಹಾಗೂ ತುದಿಯಲ್ಲಿ ಪೊರೆಯಂತೆ ಚೂಪಾಗಿರುವ ಎಲೆ: ನೀಳ್ದಱೆ ಬೆಳೆದ ರಸದಾಳಿಗರ್ವಗಳ ಸೋಗೆಗಳ ಪಸುರುವೊಗರಾಗಸಕೆ ಪರ್ವತಿಹುದು (ಚಿಮಭಾ. ೩-೫); ಗಗನದೆ ಚರಿಸುವ ಗಿಳಿಯ ದೇಹಚ್ಛವಿ ಮಿಗೆ ನಮ್ಮ ಪಸುರ್ಗಣೆಯಹುವೆ ನಗವೈರಿ ನೋಡೆಂದು ತೋರ್ಪೊಲಿಕ್ಕುವ ಸೋಗೆ ಸೊಗಸಲುನ್ನತವಾಗಿಹುದು (ಕಂನವಿ. ೫-೭೫). ೫. ಉಟ್ಟ ಸೀರೆಯ ಉದ್ದವಾದ ನೆರಿಗೆ : ಒಳ್ಳಿಱಿಯಸೆಡದ ತೋಳ್ ಸೋಗೆಯಂ ನೂಲ ತೊಂಗಲ್ . . . ಉರಮಂ ಸಂಚಳತ್ಕಾರಹಾರಂ ಪಸರಂಬೆತ್ತೆತ್ತಮೋರಂತಲೆಯೆ ಭರತನಂ ನೋಡಲ್ಕೆತಂದಳೊರ್ವಳ್ (ಆದಿಪು. ೧೧-೧೬); ಅಚ್ಚರಸೆಯ ಕನಕಕಾಂಚೀಕಳಾಪದೊಳ್ ತೊಡರ್ದ ದೇವಾಂಗವಸ್ತ್ರದುಳ್ಳುಡೆಯೊಳುಲಿವ ಸೂಸಕದ ನೂಲ ತೊಂಗಲ್ಕೆ ರಸಲುಲ್ಲ ಮುಂದಣ ಸೋಗ ಕಾರ್ಗಾಲದ ಸೋಗೆಯಂತೆ ಸೊಗಯಿಸೆ (ವಂಪಭಾ. ೨-೪೧ವ). ೬. ಉದ್ದ; ನೀಳ: 'ಸೋಗೆಮೊಗ' ಪರಾ. ೭. (ಸೀರೆಯನ್ನು ಉಡುವಾಗ) ನಿರಿಗೆಗಳನ್ನು ಬಾಳೆಕಾಯಿಯ ಆಕಾರದಲ್ಲಿ ಮೇಲಕ್ಕೆ ತಿರುವಿ, ಸೊಂಟದಲ್ಲಿ ಮಡಿಸಿ ಸಿಕ್ಕಿಸಿದ ಸೀರೆಯ ಅಂಚು; ಬಾಳೆಕಾಯಿ: "ನೀವಿಯುಚ್ಚಯಂ ಸೋಗೆಯಕ್ಕುಂ" (ವಂಗರಾ.೧೦೧-೨೯). ೮. "ಕೊರಳಿನಲ್ಲಿ ಶಾಲಿನಂತೆ ಹಾಕಿಕೊಳ್ಳುವುದು. ಇದು ಉಡಿಗೆಯೊಳಗಿನದು" (ಪಾರಿಸಿ. ೪೬). ೯. ಕಣ್ಣಿನ ತುದಿ ,– ಕುಡಿ; ಕಡೆಗಣ್ಣು : ಬೆಳತಿಗೆಗಣ್ಗೆರಡಱ ಸೋಗೆಗಳಿಂದಿಳಿತಹ ನವಜಲಧಾರಾದ್ವಿತಯಂ ತೊಳಗಿದುವಲರ್ಗಣೆಯನ ಮಿಡಿವಿಲ್ಲಮಳ್ಪೆದೆಯಂಬಂದದೊಳು (ಜಯಕಾ. ೪-೨೯). ೧೦. ಕಣ್ಣಿನ ತುದಿಗೆ ತಿದ್ದುವ ಕಾಡಿಗೆಯ ರೇಖೆ, – ಗೆರೆ : ಕೆಲವರು ಕಣ್ಣಿನ ತುದಿಗೆ ಸೋಗೆಯನ್ನು ಎಳೆಯುತ್ತಾರೆ (ಠೂಫ). ೧೧. ಹಡಗಿನ ತುದಿ,– ಚೂಣಿ: "ಅರಿತ್ರಂ, ಕೋಟಿಪತ್ರಂ - ಈ ೨ ನಾವೆಯ ಸೋಗೆ" (ಹಲಾಯು. ೧೧೧-೫೦). ೧೨. ಒಳಭಾಗ; ಮಡಿಲು: ತಾಯ ಸೋಂಕಿಲೊಳ್ ಸಿತಕಾಯಂ ಶುಕ್ತಿಕೆಯ ಸೋಗೆಯೊಳ್ ನವಮುಕ್ತಾಫಲದಂತೆ ತೊಳಗುತಿರ್ದಂ ತನಯಂ (ಅಸಂವ. ೧೨-೮೦). ೧೩. ಜೊಂಪೆ; ಗೊಂಚಲು: ಉರ್ಚ ಸೀಬ್ಬ ಬಸುಱಿಂ ನಿಸದಂ ಬಿಸುನೆತ್ತರ ಪೊನಲುಂ ಕರುಳ ಸೋಗೆಯುಂ ಕವಿದವವನಿಗಾ ಯತಿಪತಿಯಾ (ವರ್ಧಪು. ೩-೭). ೧೪. ಒಂದು ಬಗೆಯ ಮರ ಮತ್ತು ಅದರ ತಳಿರು : ಮತ್ತೊಂಬೆಡೆಯೊಳ್ಪೊಗೆ ಮಾವು ಮೊದಲಾದ ತಳಿರ್ದೊಂಬಗಳಿಂ ಮತ್ತೊಂದೆಡೆಯೊಳ್ ರನ್ನವೊನ್ಗಳಿಂ ಸಮೆದ ಸಜ್ಜೆವನೆಗಳುಮಂ . . . ಭಾವಿಸಿದಂ (ಚಚವಂ. ೮೫-೩). ೧೫. (?) : ನೋಡಿರಿ ಸೋಗೆ ಹಗನಂ ಹಿಡಿದಾಡಿಸಿ ಪರಿಗೊಳುವ ನರರ ಭಂಗಿಯೆ ಕೆಲಬರ್ಮಾಡುವ ತಪಮುಂ ಶ್ರುತಮುಂ ಕೂಡವು ವಿದ್ವಜ್ಜನಕ್ಕೆ ಪೊಕ್ಕಾರಯ್ಯಲ್ (ಪಸಾರ. ೫೦೨). **ತೋಕೆ:** ೨. ಭಾರದ ತೋಕೆಯನಾವ ಪುರುಷಾರ್ಥಕೆ ಹೊತ್ತು ನವಿಲಿಂತು ನೋವುದೂ (ಇಷಾಪ್ರ. ೧೫೦-೩೬). ೪. ಕಾಕುತ್ಸ್ಥಕುಲಸಕ್ಕೆ ಸೋಕಿದೊಡೆ ಸಾಕೆಲಾ ಈ ಕೋಲು ಕಬ್ಬಿನ ತೋಕೆಯನಿಸುವುದ್ಯಸೆ (ಹಂಪದ. ೨೯೩). ೧೬. ಗಿಣಿ ಮುಂತಾದ ಪಕ್ಷಿಗಳಿಗಿರುವ ಬಾಲದಂತೆ ಉದ್ದವಾದ ಪುಚ್ಛ : ಚಿಕ್ಕ ಮೃಗ ಸ್ವಲ್ಪ ಹಿಂದು; ಚಿಕ್ಕದಲ್ಲ ತೋಕೆ ಕೂಡ; ಹಕ್ಕಿ ನಿನಗೆ ಕೋಪ ಬೇಡ ನಿಜವ ನುಡಿದರೆ (ತಾವರ. ೫೧-೧೦); ಹಕ್ಕಿಗಿಂತಲು ತೋಕೆ ಮಿಕ್ಕಿತು (ನವರಾ. ೭೯-೪). ೧೭. ತುದಿ; ಕೊನೆ: ಮುಗಿಲ ತುದುಕುವ ತಲೆಯ ತೋಕೆ [ಪಾಠಾಂ.ಜೋಕೆ, ತೆಕ್ಕೆ]ಯ ತೋರಹತ್ರನ ಕಂಡು ಕುರುಸೇನೆ ಕಳವಳಿಸಿದರು (ಕುವಾದ್ರೋ. ೧೫-೫೧).

[ದೇ. ॥ ತಮಿ. ತೋಕ್ಕೈ; ಮಲ. ತೆಲು. ನಾಯ್ಕಾ. ಪರ್ಜ. ತೋಕ; ತುಳು. ಸೋಗೆ, ಚೋಗೆ; ಗೊಂಡಿ. ತೊಕಾ ./ ಪುರಾ. ಸೋಗಾ]

ಸೋಗೆ₂ 'ಸೋಗು' ನೋ.

ಸೋಗೆಕಣ್ಣು 'ಸೋಗೆಗಣ್' ನೋ.

ಸೋಗೆಗಣ್, ಸೋಗೆಕಣ್ಣು, ಸೋಗೆಗಣ್ಣು (ನಾ). (ನವಿಲಿನ ಗರಿಯ ಕಣ್ಣಿನಂತೆ) ನೀಳವಾದ ಕಣ್ಣು; ಚೆಲುವಾದ ಕಣ್ಣು : ಬಾಗಿಲಲಿ ಬಾಗಿಲಲಿ ನಿಂದರು ಸೋಗೆಗಣ್ಣಬಲೆಯರು (ಕುವಾಅ. ೮-೧೪); ಸೋಗೆಗಣ್ಣಬಲೆ ಸಂತೋಷವಯ್ದುಧಳು ಭೂಭಾಗವೆಲ್ಲವನಾಳಿದಂತೆ (ಭರಚ. ೩೫-೮೩). **ಸೋಗೆಕಣ್ಣು :** ಸೋಗೆಮೊಗದ ಸೋಗೆಕಣ್ಣಿನ ಚೆಲುವೆ ಶಾಂತಲೆ (ಶಾಂತಲಾ. ೭೯). **ಸೋಗೆಗಣ್ಣು :** ಸೋಗೆಗಣ್ಣುಗಳ ಹೆಂಗಳ ಸಾಲು ಟೀವಿಯ ತೋಱುತೊಪ್ಪಿದುದು (ಕಂನವಿ. ೬-೧೧೨); ಚೆಂದುಟಿಯ . . . ಬೆಳಗುವ ಸೋಗೆಗಣ್ಣುಗಳ ಮಂದಹಾಸದಲಿಂದು ಸೌಖ್ಯವೆಂದೆಂದು ಕೊಱಚಾಡುವರು (ಅಮೃತ. ೨-೭೯). [ಸೋಗೆ₁ + ಕಣ್]

ಸೋಗೆಗಣ್ಣೊನೆ (ನಾ). ನೀಳವಾದ ಕಣ್ಣಿನ ಕುಡಿ , – ತುದಿ: ಸೋಗೆಗಣ್ಣೊನೆಯ ಬೆಳಗು ಕುಡಿವರಿದುದೆಳೆಮುತ್ತಿನ ಕೀಲಣದ ಕನಕಪೂರಕಗಳಂ ಕೆಳೆಗೊಳಿಸಿ (ಶಾಂದಪು. ೭-೨೪). [ಸೋಗೆಗಣ್ + ಕೊನೆ]

ಸೋಗೆಗಣ್ಣು 'ಸೋಗೆಗಣ್' ನೋ.

ಸೋಗೆಗರಿ (ನಾ). ತೆಂಗು, ತಾಳೆ, ಅಡಕೆ ಮೊದಲಾದ ಮರಗಳ ಎಲೆ,– ಗರಿ: ಅಡಕೆಯ ಸೋಗೆಗರಿ ಹೊದಿಸಿದ್ದ ಮಾಡಿನಿಂದ ಇರಿಚಲು ಬೀಸಿದಾಗ ಅಭ್ಯಾಸಬಲದಿಂದ ಸ್ವಲ್ಪ ದೂರ ಸರಿದು ಕುಳಿತಿದ್ದರೇ ವಿನಾ (ಮಲಮ. ೯). [ಸೋಗೆ₁ + ಗರಿ (< ಗಱಿ)]

ಸೋಗೆದುರುಂಬು 'ಸೋಗೆದುಱುಬು' ನೋ.

ಸೋಗೆದುರುಬು 'ಸೋಗೆದುಱುಬು' ನೋ.

ಸೋಗೆದುಱುಬು, ಸೋಗೆದುರುಂಬು, ಸೋಗೆದುರುಬು (ನಾ). ೧. ನವಿಲಿನ ಸೋಗೆಯಂತೆ ಜೋಲಾಡುವ ಮುಡಿ; ಸಡಿಲವಾಗಿ ಕಟ್ಟಿದ ಮುಡಿ: ಸೋಗೆದುಱುಬಿನ ಸರಸವಚನದ . . . ಸುರರ ಸೂಳೆಯರಿರ್ದರು (ತೊರಾ. ೬-೧೦-೧೧); ಸೋಗೆದುಱುಬಿನ ಶೃಂಗಾರದಾಭರಣದ . . . ಪೂಗಣೆಯನ ಮಸೆದಲಗಿನಂತೆಸೆದಳು ನಾಗಮಂಗಲದ ಚೆಲ್ವಾಜಿ (ಕಂನವಿ. ೨೧-೬೯). **ಸೋಗೆದುರುಂಬು:** ೨. ನವಿಲುಗರಿಗಳಿಂದ ಅಲಂಕರಿಸಿದ ಮುಡಿ: (ಅ). **ಸೋಗೆದುರುಬು:**. ೧. ತೊಳಗುವ ಫಣಿವೇಣಿಯ ಸೋಗೆದುರುಬಿನ ಲಲನೆ (ಇಚಪಾಂ. ೪-೯೯).

[ಸೋಗೆ₁ + ತುಱುಬ್₂ (< ತುಱುಂಬ್₂)]

ಸೋಗೆನವಿಲ್, ಸೋಗೆನವಿಲು (ನಾ). ನೀಳವಾದ ಪುಚ್ಛವನ್ನು ಹೊಂದಿರುವ ನವಿಲು; ಗಂಡುನವಿಲು: ವಿದಗ್ಧೆ . . . ನರ್ತಕೀಲೀಲೆಯಿಂದದೊಂದು ಪೊಸಗಾರ ಸೋಗೆನವಿಲಾಟಮಂ ತಾಳ್ದಿದಳ್ (ಆದಿಪು. ೧೨-೧೪); ಮಣಿಭವನಂಗಳ ರುಚಿಗಳ್ ಪೆಣೆದು ನಭೋಂಗಣದೊಳಮರಚಾಪವಿಳಾಸಕ್ಕೆಣೆಯಾಗಿರೆ ಬಹುವಿಧದಿಂ ಕುಣಿವುವು ಕಾರ್ಗತ್ತು ಕೇಗಿ ಸೋಗೆನವಿಲ್ಗಳ್ (ಕಾವ್ಯಾವ. ೫೧೪). **ಸೋಗೆನವಿಲು:** ರಕ್ತಪ್ರವಾಹದ ಕಡುಪಳೆಯ ನೃತ್ಯತ್ಕಬಂಧದ ಸೋಗೆನವಿಲುಗಳ . . . ನವಖಿಂಡದೊಳು ಹೆಣನಡವಿ ತಳಿತಿರೆ ಮೆಱೆದುದ್ಧ ಸಂಗ್ರಾಮಕಾರ್ಗಾಲ (ಕುವ್ಯಾಭೀ. ೪-೩೬); ಸೋಗೆನವಿಲು ಬಣ್ಣ ಗೋಗಿಲೆ ಹರಿ ರಥಾಂಗದ ಪ್ರತಿಮೆಗಳು ಮೆಱೆದುವು (ಕಂನವಿ. ೭-೨೮); ಎಲೆಲೆ ಸೋಗೆನವಿಲೆ! ಏಂ ನಲಿವ್ಯೆ! (ರಾಮಾಶ್ವ. ೧-೮). [ಸೋಗೆ₁ + ನವಿಲ್]

ಸೋಗೆನವಿಲು 'ಸೋಗೆನವಿಲ್' ನೋ.

ಸೋಗೆನಿಱಿ (ನಾ). ಉಟ್ಟ ಸೀರೆಯ ಉದ್ದವಾದ ನಿರಿಗೆ: ಸೆಳೆದು ಮರಳ್ಚಿ ಸೋಗೆನಿಱಿಯಂ ಮೃದುಜಂಘೆಯನೊಯ್ಯನಂಟಿ . . . ಮಳಯಸಮಿರಣಂ ಸರಸವಾಡಿದನಗ್ಗದ ಪಿಂಡವಾಸಮಂ (ಅಸಂವ. ೭-೩೩). [ಸೋಗೆ₁ + ನಿಱಿ]

ಸೋಗೆಪಣ (ನಾ). ನವಿಲಿನ ಮುದ್ರೆಯಿರುವ ನಾಣ್ಯ(?): ಶ್ರೀಭೋಗೇಶ್ವರ ದೇವರಂಗಭೋಗಕೆ ಆ ದೇವರ ತೋಟದ ದರಿಸಿನ ಸೋಗೆಪಣವನಾಚಂದ್ರಾರ್ಕ್ಕ ತಾರಂಬರಂ ಬಿಟ್ಟರು (ಪೌಶಾ. XV. ೨೫-೧೬; 1144). [ಸೋಗೆ₁ + ಪಣ್₂]

ಸೋಗೆಮುಡಿ (ನಾ). = ಸೋಗೆದುಱುಬು ೧: ಸೋಗೆಮುಡಿಗೆ ಸೋಲ್ತೊಡನೆ ನವಿಲೋಲಗಿಸಿ ಬರೆ (ಚಿಬಪು. ೧೯-೨೩); ಆಗಸದೊಳು ಚರಿಸುವ ಸುರಸತಿಯರ ಸೋಗೆಮುಡಿಗೆ ಪೂಜ್ಯವಾಗಿ ಆಗರಳಿದ ಕಸ್ತೂರಿ ಹೊಂಬಾಳೆಯ ಪೂಗವೃಕ್ಷಗಳೊಪ್ಪುತಿಹುವು (ಕುನವ. ೨-೪೧). [ಸೋಗೆ₁ + ಮುಡಿ₂]

ಸೋಗೆಮೊಗ (ನಾ). ನೀಳವಾದ ಮುಖ; ಉದ್ದನೆಯ ಮುಖ: ಸೋಗೆಮೊಗದ ಸೋಗಕಣ್ಣಿನ ಚೆಲುವೆ ಶಾಂತಲೆ (ಶಾಂತಲಾ. ೭೯). [ಸೋಗೆ₁ + ಮೊಗ]

ಸೋಗೆವಸುರ್ (ನಾ). ಕಬ್ಬಿನ ಜಲ್ಲೆಯ ತುದಿಯಲ್ಲಿರುವ ಎಲೆಯ ಪಸೆಸುರುಬಣ್ಣಾ : ಸಂಕೋದಂಡರೂಪಿಂ ಸ್ವಾಮಿಹಿತಕಿನ್ನು ತವ್ಮೊಳುದ್ದಂಡತೆಯ ಬರುದೆತ್ತಿತೆನೆ ಸೋಗೆವಸುರ ಕಬ್ಬಿನ ಕೊರ್ಬು ಕಣ್ಗೆಸೆದುದು (ಚಿಬಪು. ೧೧-೧೧).

[ಸೋಗೆ₁ + ಪಸುರ್₂]

ಸೋಗೆವಿಂಡು (ನಾ). ನವಿಲುಗಳ ಗುಂಪು,— ಸಮೂಹ: ಅಂಚೆವಿಂಡಿಂ ಗಿಳಿವಿಂಡಿಂ ಸೋಗೆವಿಂಡಿಂ ಸೊಗಯಿಸಲೆಸೆಗುಂ ತತ್ಪುರೋದ್ಯಾನಮೆಂದುಂ (ಕಾವ್ಯಸಾ. ೧೪೦).

[ಸೋಗೆ$_1$ + ಪಿಂಡು$_2$]

ಸೋಗೆವಿರ್ಚು (ಕ್ರಿ). (ನವಿಲು) ಗರಿಯನ್ನು ಹರಡು,— ಅಗಲ ಮಾಡು: ಮುನಿಬಾಲಿಕೆಯರ್ ಮಧ್ಯಂದಿನದೊಳ್ ಬಂದರ್ಘ್ಯಜಲಮನುಯ್ಯೆಡೆಯೊಳ್ ಮೇಲೆ ನೆಟಲ್ ಪುದಿದೊದವಿರ್ ಸೋಗೆನವಿಲ್ಗಳ್ ಸೋಗೆವಿರ್ಚ ಬರ್ಪುವು ನಭದೊಳ್ (ಜಗವಿ. ೧೭ ೫೨). [ಸೋಗೆ$_1$ + ಬಿರ್ಚು]

ಸೋಗೆವೀಲಿ (ನಾ). ನವಿಲುಗರಿ: ಸೋಗೆವೀಲಿಯಂ ಬಿಗಿದು ಬಸಂತಂ ನಟ್ಟ ಕಾವನ ಗೆಲ್ಲಗಂಬಮೆನೆ ಕಾಯ್ದೊನ ಪಣ್ಣೊನಯಿಂ ಕಣ್ಗೆಡ್ಡಮಾಗಿರ್ಕುಂ ಕೊಂಗುದೋಂಟಂ (ರಾಮಾಶ್ವ. ೮-೨೩). [ಸೋಗೆ$_1$ + ಪೀಲಿ]

ಸೋಗೆವೆಣ್ (ನಾ). ಹೆಣ್ಣುನವಿಲು: ವಿರಿಂಚನಂಚೆಯಂ ಪಳಂಚಲೆಯದಂಚೆಯಿಲ್ಲ ಕುಮಾರನ ಮಯೂರಮಂ ಕೂರಿಸದ ಸೋಗೆವೆಣ್ಣೆಲ್ಲ (ಪುಷ್ಪಸ. ೯-೨೧ ವ).

[ಸೋಗೆ$_1$ + ಪೆಣ್]

ಸೋಗೆವೊದಱು (ನಾ). ನವಿಲಿನ ಸೋಗೆಗಳ ಸಮೂಹ,— ಮೊತ್ತ: ಪಿಡಿವುದು ಸೋಗೆ ಸೋಗೆವೊದಱಿಂ ನೆಟಲಂ ಜರತಾಪಸರ್ಗೆ (ಸೂಕ್ತಿಸು. ೩-೧೭೩).

[ಸೋಗೆ$_1$ + ಪೊದಱು]

ಸೋಗೊಡು, ಸೋಗುಡು (ಕ್ರಿ). ೧. (ಹಾಡುವವರೊಂದಿಗೆ) 'ಸೋ' ಎಂದು ದನಿಗೂಡಿಸು; ಸೋ ಎನ್ನು: ಸೋಬಾನೆಪದ ಹೇಳುತ್ತಿದ್ದವಳೊಂದಿಗೆ ಉಳಿದವರೂ ಸೇರಿ ಸೋಗೊಡುತ್ತಿದ್ದರು (ರೂಢಿ). ೨. (ಆಲಂ) ಒಪ್ಪು; ಸಮ್ಮತಿಸು: ಒಂದು ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ . . . ಪಂಥವಾಗಲಿ - ಈ ಕಲ್ಲಿನ ಕಥೆಗೆ ಸೋಗೊಡುತ್ತದೆ (ಮೂರ್ತಿಕಾ. ೫-೧೧). **ಸೋಗುಡು**: ೧. ಚುಚ್ಚುವ ಸೂಜಿಯ ನೋವು ಮರಯಲೆಂದು ಅವಳು ಹಾಗೆ ಸೋಗುಡುವುದು ಮತ್ತು ಹಾಡುವುದು (ಸರ್ವಮಂ. ೭೧).

[ಸೋ$_2$ + ಕೊಡು$_1$]

ಸೋಗೋಲು (ನಾ). ಪಶು, ಪ್ರಾಣಿಗಳನ್ನು ಓಡಿಸುವ ಕೋಲು: ಬಾಗಿದ ಬೆನ್ನು . . . ಸೋಗೋಲು ಕಂಪಿಸುತಿರಲು ತೂಗುವ ತಲೆಯೆಸೆದಿರೆ ಹಣ್ಣುಮುದುಕರು ಸಾಗುತಿದ್ದರು (ನಾಗಕು. ೧೫-೫೨). [ಸೋ$_1$ + ಕೋಲು$_1$ (< ಕೋಲ್$_1$)]

ಸೋಚಿ (ನಾ). ಪವಿತ್ರನಾದವನು: ಚಾಗಕ್ಕೆ ಮುಯ್ಯಾಂಪರೀವಡೆ ಪಲ್ಗಚ್ಚುವರಾಮೆ ಸೋಚಿಗಳೆಮೆನ್ದಿರ್ಪರ್ (ಎಕ. II, ೧೩೩-೬೮; 982). [< ಸಂ. ಶೌಚಿನ್]

ಸೋಚ್ಛ್ವಾಸ (ನಾ). [ನಾಟ್ಯ] "ಸುವಾಸನೆಯನ್ನು ಆಘ್ರಾಣಿಸುವಂತೆ ಅಥವಾ ನಿರ್ವೇದ[ಖೇದ]ಭಾವವನ್ನು ತೋರಿಸುವಂತೆ ಉಸುರನ್ನು ಒಳಕ್ಕೆ ಎಳೆಯುವುದು" (ಲಾಸ್ಯರಂ. ೨೭೬ ಗದ್ಯಾನುವಾದ): ಪರಿಮಳಮಂ ತೆಗೆವುದಱಿಂ ಉರುತರ ನಿರ್ವೇದಭಾವದಿಂ ಪುಟ್ಟಿದುಸುರ್ ತರುಣೀ ಸೋಚ್ಛ್ವಾ[ಸಾ]ಖ್ಯವ ಧರಿಸುವ ನಾಸಿಕಮದಾಱು ತೆಱನೆನಿಸಿರ್ಕುಂ (ಲಾಸ್ಯರಂ. ೩-೭೫). [ಸಂ.]

ಸೋಜಿ (ನಾ). ರವೆ; ಸಜ್ಜಿಗೆ: (ಕ). [← ಮರಾ. ಸೋಜೀ; ಹಿಂ. ಸೂಜೀ]

ಸೋಜಿಗ 'ಚೋಜಿಗ' ನೋ.

ಸೋಜಿಗಗೊಳ್ಳು (ಕ್ರಿ). ಆಶ್ಚರ್ಯಪಡು; ವಿಸ್ಮಯಗೊಳ್ಳು: ಮಾರ್ಗದರ್ಶಿಯ ಕೂಡೆ ನಡೆದು ಮುಂದೆ ಕಂಡು ಸೋಜಿಗಗೊಂಡು ನಾನೆಂದೆ (ಕೋಗಿಲೆ. ೨-೩೭).

[ಸೋಜಿಗ (< ಚೋಜಿಗ) + ಕೊಳ್ಳು$_1$ (< ಕೊಳ್$_1$)]

ಸೋಜಿಗಪಡು 'ಚೋಜಿಗಂಬಡು' ನೋ.

ಸೋಜಿಗವಡು 'ಚೋಜಿಗಂಬಡು' ನೋ.

ಸೋಜಿಗವಡೆ (ಕ್ರಿ). ಆಶ್ಚರ್ಯಕರವಾಗಿರು; ವಿಸ್ಮಯವಾಗಿರು: ಸೋಜಿಗವಡೆದ ಸುಗಂಧದಂಗಡಿಗಳು ರಾಜಿಸುತಿರ್ದುವಿಕ್ಕೆಲದಿ (ಮೋಹತ. ೩-೧೮).

[ಸೋಜಿಗ (< ಚೋಜಿಗ) + ಪಡೆ$_1$]

ಸೋಜಿಗೆ 'ಸೋಡಿಗೆ' ನೋ.

ಸೋಜ್ಯ (ನಾ). ಶೌರ್ಯ; ಪರಾಕ್ರಮ: ಭೋಜ್ಯವಸ್ತುಗಳೊಳು ಮುಖ್ಯವಾದುದು ಲಲಿತಾಜ್ಯನಿರ್ಜರಜನರೊಳಗೆ ಸೋಜ್ಯಗುಣಾವಲಂಬನ [ಜಾಕಾಂ. ಸುಖಾಢ್ಯ ಪಾಲಕ] ಕೃಷ್ಣ ಸುಖಸಾಮ್ರಾಜ್ಯವನಾಳಿದ ಮುದದೆ (ಮೋಹತ. ೪೨-೭೫). 'ಸೌರಿಯ' ಪರಾ.

[< ಪ್ರಾ. ಸೋಜ್ಜ./ ಸಂ. ಶೌರ್ಯ]

ಸೋಟ 'ಸೋಟೆ$_1$' ನೋ.

ಸೋಟಕ 'ಸಟ್ಟುಗ$_1$' ನೋ.

ಸೋಟಾ 'ಸೋಟೆ$_1$' ನೋ.

ಸೋಟಾಜಮಾದಾರ (ನಾ). (ಕೈಯಲ್ಲಿ ಲಾಠಿ ಹಿಡಿದಿರುವ) ಪೋಲೀಸು ಖಾತೆಯ ಒಬ್ಬ ಅಧಿಕಾರಿ: ಸೋಟಾಜಮಾದಾರನು ಮರ್ಯಾದೆಯಾಗಿ ಜನಸಂದಣಿಯನ್ನು ಬಿಡಿಸಿಕೊಂಡು ಹೊರಟನು (ಮಲ್ಲಿ. ೯೯).

[ಸೋಟಾ (< ಸೋಟೆ$_1$) + ಜಮಾದಾರ]

ಸೋಟಾಧಾರಿ (ನಾ). ಕೈಯಲ್ಲಿ ದೊಣ್ಣೆಯನ್ನು ಹಿಡಿದಿರುವವನು: ಸೋಟಾಧಾರಿ ಜಡಿಯಪ್ಪ ಎತ್ತರವಾದ ಬಲಶಾಲಿಯಾದ ಆಳು (ಜರತಾ. ೧೧೧).

[ಸೋಟಾ (< ಸೋಟೆ$_1$) + - ಧಾರಿ]

ಸೋಟಿಗೆ$_1$ 'ಸಟ್ಟುಗ$_1$' ನೋ.

ಸೋಟಿಗೆ$_2$ 'ಸೋಂಟಿಗೆ' ನೋ.

ಸೋಟೆ$_1$, ಸೋಂಟೆ, ಸೋಟ, ಸೋಟಾ (ಗು). ೧. ಹೊಣೆಯಿಲ್ಲದ; ಉಡಾಳತನದ. (ನಾ). ೨. ದಪ್ಪವಾದ ಮರದ ತುಂಡು: ಕರಿಮರದ ಸೋಟೆಯ ಹಾಗೆ ಇದ್ದಾನೆ ಆಳು (ಹಹಸ. ೭೪); ಅವರದು ಕರಿಯ ಸೋಟೆಯಂತಹ ದೇಹ (ಸ್ವಪ್ನಹೂ. ೬೬). ೩. ದೊಣ್ಣೆ; ಬಡಿಗೆ: ಇರುಳ ಚಕ್ರವ್ಯೂಹದಲ್ಲಿ ಬೀಸುತ್ತಲಿದೆ ಕರ್ಣಕ್ಕೆ ಕುರುಡು ಸೋಟೆ (ಚಂಡಿಮ. ೧೮-೧೧). **ಸೋಂಟೆ**: ೪. (ಕರಾ) ಉರುವಲು; ಕಟ್ಟಿಗೆ: ನೂರು ಸೋಂಟೆಗಳಿಗೆ ಇಪ್ಪತ್ತೈದು ರೂಪಾಯಿಗಳು (ರೂಢಿ). **ಸೋಟಿ**: ೧. ಊರ ಸೋಟ ಪಟಿಂಗರ ಸಲುವಾಗಿ ನನ್ನಲ್ಲಿ ಅನ್ನವಿಲ್ಲ (ಪವನ. ೭); ವಿರುದ್ಧಪಕ್ಷದವರನ್ನು ಮೆತ್ತಗೆ ಮಾಡುವ ಮಸಲತ್ತು, ಅದಕ್ಕಾಗಿ ಸೋಟಜನರಿಗೆ ಆಶ್ರಯ, ಹೀಗಾಗಿ ಊರಲ್ಲಿಯ ಉಂಡಾಡಿಗರಿಗೆ ಒಳ್ಳೆಕೆಲಸ ಸಿಕ್ಕಂತಾಯಿತು (ಮನಸಿ. ೨೧). ೩. ಸೋಟ ಹಿಡಿದು ಬೀಸಾಡಿಯೇ ಬೀಸಾಡುತ್ತಿದ್ದಳು . . . ಅವಳ ಒಂದೂ ಏಟು ಬಾಡುವಿಗೆ ತಗುಲಲೇ ಇಲ್ಲ (ದಂಬನಾ. ೭೯). ೫. ಹೊಣೆಗೇಡಿ; ಉಡಾಳ: ಊರಾಗಿನ ಸೋಟರಿಗೆಲ್ಲ ಪಡದಪ್ಪನ ಮಠಾನ ಆಶ್ರಯ (ಗ್ರಾಮಾಯ. ೨೯೧); ಒಬ್ಬರೇ ಇದ್ದಿಭಟ್ಟಿಯವರ ಹತ್ರ ಹೋಗಬೇಡ್ರಿ. ಮೊದಲ ಕೆಟ್ಟ ಜನಾ, ಸೋಟರು (ನಡದಾ. II. ೧೧೫೯). **ಸೋಟಾ**: ೩. ಕೈಹಿಡಿದ ಹೆಂಡತಿಯನ್ನು ಸೋಟಾದಿಂದ ಥಳಿಸಿ ಕೊಂದನಂತೆ (ಜರತಾ. ೧೮೨); ಆಗ ವಸಂತರಾಯರು ಎದುರಿಗೆ ಸಿಗಬೇಕಾಗಿತ್ತು; ಅಂದರ ಅಪ್ಪನ ಸೋಟಾಕ್ಕ ತುತ್ತಾಗ್ತಿದ್ದರು (ಜೂಜು. ೧೮). ೬. ಮರದಿಂದ ಮಾಡುವ ಒಂದು ಬಗೆಯ ವಾದ್ಯ: ಜಾಕಾಯಿಪೆಟ್ಟಿಯಲ್ಲಿ ಮಾಡಿದ ಸೋಟಾ ಎಂಬ ಒಂದು ತರಹ ತಂಬೂರಿ ಪ್ರಚಾರಕ್ಕೆ ಬಂತು (ಕಲಾವಿ. ೧೧೮). ೭. (ಗೌರವಸೂಚಕವಾಗಿ ಹಿಡಿಯುವ ಚಿನ್ನ, ಬೆಳ್ಳಿ ಮುಂತಾದುವುಗಳಿಂದ ಮಾಡಿದ) ದಂಡ: ಕೈಯಲ್ಲಿ ಚಿನ್ನದ ಸೋಟಾಗಳನ್ನು ಹಿಡಿದುಕೊಂಡು ಮರ್ಯಾದೆಯಿಂದ ಕಾಯುತ್ತಿದ್ದರು (ಶ್ರೀರಾಯ. ೧೪೫).

ಸೋಟೆಯವರು (ಬಹುವ) = ದಂಡವನ್ನು ಹಿಡಿದಿರುವವರು; ವೇತ್ರಧಾರಿಗಳು: ಚಿನ್ನ ಬೆಳ್ಳೀ ಸೋಟೆಯವರು, ಓಲಗದವರು . . . ಇವರಿಗೆಲ್ಲಾ ಗೊತ್ತುಗಾರರನ್ನೂ ಶಾನುಭೋಗರನ್ನೂ ನೇಮಕಮಾಡಿದರು (ಮಹಾವಂ. I. ೧೨೬).

[← ಹಿಂ. ಸೋಂಟಾ; ಮರಾ. ಸೋಟಾ, ಸೋಂಟಾ]

ಸೋಟೆ$_2$ (ನಾ). ಬಾಯಿಯ ಕೊನೆಭಾಗ; ಕಟಬಾಯಿ: ಮುಳಿದು ಸೋಟ ಎಟೆತಿಗೆ ತಿವಿದು . . . ನೂಕಿದರು ಕಾಮಿನಿಯರತಿರಭಸದಿಂ ಮುದುಕಯತಿಯ (ಸುಲ್ಲಚಿ. ೩-೨೨); ಅವನ ಸೋಟೆಯನ್ನು ಅದುಮಿ ಹಿಡಿದು ಕನ್ನಡಿಗೆ ಅಡ್ಡವಾಗಿ ತಾನೆ ನಿಲ್ಲುತ್ತಾನೆ (ದೇಕನ್ನ. ೬೯).

ಸೋಟೆ ತಿವಿ = ೧. ಮೂತಿಯನ್ನು ತಿವಿ: ಕೋಪದ ಭರದಲ್ಲಿ ಆಕೆ ಮಗುವಿನ ಸೋಟೆ ತಿವಿದಳು (ರೂಢಿ). ೨. (ಆಲಂ) ಮುಖಭಂಗ ಮಾಡು; ಅವಮಾನಿಸು: ನಾಲ್ಕಾರು ಜನರ ಮುಂದೆ ಅವನು ಮಾಡಿದ ಕೆಲಸಕ್ಕೆ ಸೋಟೆ ತಿವಿದರು (ರೂಢಿ). **ಸೋಟೆ ಸಿಗಿ** = **ಸೋಟೆತಿವಿ** ೧ : ಈಗ ಅದೆಲ್ಲವನ್ನೂ ಗುಡಿಸಿ ಎತ್ತು. ಇಲ್ಲದಿದ್ದರೆ

ಚೆನ್ನಾಗಿ ಸೋಟೆ ಸಿಗಿದು ಬಿಟ್ಟೇನು (ಮಾಮರಾ. ೮೧). ಸೋಟೆ ಹಿಂಡು = ಸೋಟೆತಿವಿ ೧: ಅವ್ವ ಅಬ್ಬರಿಸಿ ಜಯಣ್ಣನ ಸೋಟೆ ಹಿಂಡಿದಳು (ವೃನಿ. ೪೫). [?]

ಸೋಡ, ಸೋಡಾ (ನಾ). ೧. ಅಡುಗೆಗೆ ಉಪಯೋಗಿಸುವ ಒಂದು ಬಗೆಯ ಕ್ಷಾರ: ಅಡುಗೆಯಲ್ಲಿ ಸೋಡದ ಉಪಯೋಗವನ್ನು ಆದಷ್ಟು ಕಡಿಮೆ ಮಾಡಬೇಕು (ಅಮಸೌ.೮೮). ೨. "ಇಂಗಾಲಾಮ್ಲ ಅನಿಲವನ್ನು ಹುದುಗಿಸಿ ನೊರೆಯುಕ್ಕುವಂತೆ ಮಾಡಿದ ಪಾನೀಯ" (soda. ಇಂಕನ). ೩. ಬಟ್ಟೆಯನ್ನು ಒಗೆಯಲು ಉಪಯೋಗಿಸುವ ಒಂದು ಬಗೆಯ ಕ್ಷಾರ: ಬಟ್ಟೆ ಒಗೆಯುವಾಗ ಸೋಪಿನೊಂದಿಗೆ ಸೋಡ ಬೆರಸಿ ಒಗೆದರೆ ಹೆಚ್ಚು ಶುಭ್ರವಾಗುತ್ತದೆ (ರೂಢಿ). ಸೋಡಾ: ೨. ಪುಟ್ಟನಿಗೊಂದು ಸೋಡಾ - ಅಂಗಡಿ ಕಂಡದ್ದೆ . . . ಎಂದ (ಸಂಸ್ಕಾರ . ೧೨೧); ಸೋಡಾ, ಬೀಡಾ, ಕಳ್ಳ ಶರಾಬು - ಇವೆಲ್ಲ ಬರುತ್ತವೆ (ನನ್ನೂರು. ೩೧೩). [← ಇಂ. Soda]

ಸೋಡಂಬಾಡ 'ಸೋಡಂಬಾಡಂ$_2$' ನೋ.

ಸೋಡಂಬಾಡಂ$_1$ (ನಾ). ೧. ಹಿರಿದು; ದೊಡ್ಡದು: "ಸೋಡಂಬಾಡಂ-ಪಿರಿದು" (ಶಮದ.ಪರಿ ೨); "ನೀಡು ಸೋಡಂಬಾಡಮೆಂದುಣ್ಣಾವಳಿಯದೆನೆ ಪಿರಿದೆನಿಪ್ಪರ್ಥಮಕ್ಕು" (ಕಬ್ಬಿಕ್ಕ. ೮೮). (ಗು). ೨. ಅತಿಶಯವಾದ: ಮುದದಿಂ ಸೋಡಂ ಬಾಡಮಲಂಪಿನ ಪೆಂಪಿನ ಗಾಡಿಯನಾಂತೆಸೆದುದಂದು ಗಣಕಾನಿವಹಂ (ಉದ್ಭ.ಪು. ೧೦-೪೪). [?]

ಸೋಡಂಬಾಡಂ$_2$, ಸೋಡಂಬಾಡ (ಅ). ೧. ಅತಿಶಯವಾಗಿ: [ಸೋಡಂಬಾಡಂ] ಕರಿಯ ಮುಗಿ[ಲಂ] ದಂತಿಗಳ್ಗೆತ್ತು (ವರ್ಧಮಾ ೯-೫); ಕೊಂಡಾಡುತುಬ್ಬ ಕೊಬ್ಬುತ್ತೆ ರತಿ ಮೂಡಿ ಸೋಡಂಬಾಡಮೆನೆ ತೇನತೇನಮುಱ್ ಕೂಡೆ ಪೊಗಳುತ್ತಿರ್ದನಾದಿ ವೃಷಭೇಶ (ಪಾಸೋಪು. ೩-೧೮). ಸೋಡಂಬಾಡ: ೨. ತೀವ್ರವಾಗಿ; ರಭಸವಾಗಿ: 'ಸೋಡಂಬಾಡನೆ' ಪರಾ. [< ಸೋಡಂಬಾಡಂ$_1$]

ಸೋಡಂಬಾಡನೆ (ಅ). ತೀವ್ರವಾಗಿ; ರಭಸವಾಗಿ: ಸೋಡಂಬಾಡನೆ ಬಂದು ಕಾಲ್ವಿಡಿವುದುಂ ಪೂಮಾಲೆಯಿಂ ನಲ್ಲನಂ ನೀಡುಂ ಮೋದಿ ಕನಲ್ದು . . . ರತಪ್ರಾಗಲ್ಭ್ಯಮಂ ಬೀಱ್ದಿರ್ಳ್ (ಮಲ್ಲಿಪು. ೭-೮೨).

[ಸೋಡಂಬಾಡ (< ಸೋಡಂಬಾಡಂ$_2$) + - ಅನೆ$_1$]

ಸೋಡಗೆ, ಸೊಡಗೆ (ನಾ). ೧. ತರಕಾರಿಯಾಗಿ ಬಳಸುವ ಹುರುಳಿಕಾಯಿ, ಅಲಸಂದೆ ಮುಂತಾದುವುಗಳನ್ನು ಹೋಲುವ ಒಂದು ಬಗೆಯ ಕಾಯಿ: ಇಂದು ಅವರ ಮನೆಯಲ್ಲಿ ಸೋಡಗೆಯ ಹುಳಿ ಮಾಡಿದ್ದರು (ರೂಢಿ). ೨. ಸೋಡಗೆಯಿಂದ ತಯಾರಿಸುವ ಒಂದು ಬಗೆಯ ಮೇಲೋಗರ: ಬಿಸಿಬಿಸಿಯೋಗರಂ ಕೆಲದ ಸೋಡಗೆ ತೆಳ್ಪೊಳುದುಪ್ಪಂ . . . ತಾವೆ ಬಗ್ಗಿಸದ ಹಿಮಾಗಮೋಕ್ತಿಕಜಡೋದಯಮಂ ಸುಕೃತಾತ್ಮರಪ್ಪರಾ (ಸೂಕ್ತಿಸು.೧೦-೨೬೫). ಸೊಡಗೆ: ೧. ಹೂಲದವರೆಯ ನೆಟ್ಟು ಸೊಡಗೆಯ ಸುಲಿದಲ್ಲಿ ತಳಲು ಬಲಿದು ಒಡೆದುದಿಲ್ಲ (ಮೋಳಿಮಾ. ೨೬೫-೮೧೭). ೨. ಇಮ್ಮನದ ಸೊಡಗೆಯ ಮೆದ್ದು ಕರ್ಮಕ್ಕೀಡಾದವರ ನುಡಿಯೆಂದಡೆ ಎನ್ನ ಹಮ್ಮಿಗನೆಂಬರು (ಮೋಳಿಮಾ. ೨೬೫-೮೧೭); ಕಡುನೇಹದಿಂ ಸೊಗಡಿಸುವ ಪಾಂಗಿನಿಂ ಸೊಡಗೆಯನಿಕ್ಕುತಂ (ಲಿಂಗಪು. ೩೧-೪೩).

ಸೋಡಚೀಟಿ, ಸೋಡಚೀಟು (ನಾ). ೧. ಗಂಡಹೆಂಡಿರ ನಡುವಿನ ವೈವಾಹಿಕಸಂಬಂಧವನ್ನು ಕಡಿದುಹಾಕುವ ಪತ್ರ; ವಿವಾಹವಿಚ್ಛೇದನದ ಪತ್ರ: ಗಂಡನ ಸಂಗಾತ ಸಂಸಾರ ಮಾಡೂದು ಬ್ಯಾಡಾಗಿದ್ದರ ಎಲ್ಲಾರ ಹಂಗ ಸೋಡಚೀಟಿ ತಗೊಂಡ ಇನ್ನೊಬ್ಬನ್ನ ಮಾಡಿಕೊಂಡು ಹೋಗೂದು ಚಲೋ ಅಲ್ಲೇನ? (ಮಣ್ಣುಹ. ೧೦೧); ಮೊದಲೇ ಹಾದಿ ತಪ್ಪಿ ತವರವರೇ ಹೆಣ್ಣಿನಿಂದ 'ಸೋಡಚೀಟಿ' ಯನ್ನು ಕೊಡಿಸಿದ್ದೂ ಉಂಟು (ಕನ್ನಚಾ. ೧೦೮). ಸೋಡಚೀಟು: ೧. ಮದುವೆಯ ಸೋಡಚೀಟಲ್ಲವೆ ಇದು? (ಧೂಮಕೇ. ೫೭). ೨. ತಮ್ಮ ವಶದಲ್ಲಿರುವ ವಸ್ತುವಿನ ಹಕ್ಕನ್ನು ಬಿಟ್ಟುಕೊಡುವುದನ್ನು ಸೂಚಿಸುವ ದಾಖಲೆ,– ಪತ್ರ: (ಕ).

ಸೋಡಚೀಟಿ ಕೊಡು = ೧. ಬಿಡು; ತ್ಯಜಿಸು: ಬಹುದಿನಗಳ ಹಿಂದೆಯೆ ಅದಕ್ಕೆ ಸೋಡಚೀಟಿ ಕೊಟ್ಟುಬಿಟ್ಟುದರಿಂದ ಪುನರ್ವಿವಾಹಕ್ಕೆ ಮನಸ್ಸು ಒಗ್ಗದಾಗಿದೆ (ಗಾಳವ. ೧೩೧). ೨. ಗಂಡಹೆಂಡಿರ ನಡುವಿನ ವಿವಾಹಸಂಬಂಧವನ್ನು ಕಡಿದುಕೊಳ್ಳು; ಘಟಸ್ಫೋಟ ಮಾಡಿಕೊಳ್ಳು: ಲಲಿತೆಯು ತನ್ನ ಮೊದಲಿನ ಗಂಡನಿಗೆ ಸೋಡಚೀಟಿ ಕೊಡುವ ವಿಚಾರದಿಂದ ಕೋರ್ಟ ಕಛೇರಿ ಹತ್ತಬೇಕೆಂದಿದ್ದಾಳೆ (ಬೇಚನಾ. ೨೨೨). [← ಮರಾ. ಸೋಡಚಿಠ್ಠೀ]

ಸೋಡಚೀಟು 'ಸೋಡಚೀಟಿ' ನೋ.

ಸೋಡಪತ್ರ (ನಾ). ವಿವಾಹವಿಚ್ಛೇದನ; ಘಟಸ್ಫೋಟ: ಸೋಡಪತ್ರಗಳ ಖಟ್ಲೆಯಲ್ಲಂತೂ ಅವನು ಎತ್ತಿದ ಕೈ (ಮೊಪಾಸಾ. ೪೧); -ಸೋಡಪತ್ರವನ್ನು ಕೊಡಿಸಿ ರೆಂದು ಸರಕಾರಕ್ಕೆ ಮೊರೆಹೋಗಿ ಬೇಡಿಕೊಂಡಳು (ಹೂಬಿಸಿ. ೮೬).

[← ಮರಾ. ಸೋಡಪತ್ರ, ಸೂಟಪತ್ರ]

ಸೋಡಮುಂಜಿ, ಸೋಡಮುಂಜಿವಿ, ಸೋಡಮುಂಜೆ (ನಾ). ಮದುವೆಗೆ ಮುಂಚೆ ಮೌಂಜಿಯನ್ನು ಬಿಟ್ಟುಬಿಡುವುದರೊಂದಿಗೆ ಬ್ರಹ್ಮಚರ್ಯದ ಸಮಾಪನೆಯನ್ನು ಮಾಡುವ ವಿಧಿ, – ವೈದಿಕಕ್ರಿಯೆ; ಸಮಾವರ್ತನ: ಸ್ನಾತಕ - ಸೋಡ ಮುಂಜಿಯಾದ ಬ್ರಹ್ಮಚಾರಿ (ಗಂಗಾಮ. ೬). ಸೋಡಮುಂಜಿವಿ: ಸೋಡಮುಂಜಿವಿಯಲ್ಲಿ ಮಾಮನ ಆಗ್ರಹದಿಂದ ಕಾಶೀಯಾತ್ರೆಯನ್ನು ರದ್ದುಪಡಿಸಿದಂತಾಯಿತು ನನ್ನ ಪಾಡು (ಸ್ವತಿಚಿ . ೨೧೨). ಸೋಡಮುಂಜೆ: ಸೋಡಮುಂಜೆ ದೇವರೂಟಗಳನ್ನು ತೀರಿಸಿಕೊಂಡು ನಿಬ್ಬಣವು . . . ನಾಲ್ಕುಗಂಟೆಗೆ ಬಂದು ತಲುಪಿತು (ಅನಂತ. ೪).

[← ಮರಾ. ಸೋಡಮುಂಜ]

ಸೋಡಮುಂಜಿವಿ 'ಸೋಡಮುಂಜಿ' ನೋ.

ಸೋಡಮುಂಜೆ 'ಸೋಡಮುಂಜಿ' ನೋ.

ಸೋಡಲಿ* 'ಸೊಡರಿ' ನೋ.

ಸೋಡಾ 'ಸೋಡ' ನೋ.

ಸೋಡಿ$_1$ (ನಾ). ೧. ವಸೂಲಾಗಬೇಕಿರುವ ಮೊಬಲಗಿನಲ್ಲಿ ತೋರಿಸುವ ರಿಯಾಯಿತಿ; ತಳ್ಳುಪಡಿ: ಆ ಶಾಂತಿಗ್ರಾಮದ ಸಿದ್ದಾಯದ ಮೊದಲ ಹೊಂನೊಳಗೆ ಅಯ್ದುಹೊಂನನು ಅವಱ ಸಮಸ್ತ ಬಳಿವಟ ಸೋಡಿ ಬಲಹಕುಮಾನೆ ಬಂದ . . . ಬಳಿಯ ಹೊನ್ನು ಸಹಿತ (ಮೃಅರಿ. ೧೯೪೦, ೩-೨೪; 1215). ೨. ನಿರ್ಬಂಧದಿಂದ ಬಿಡುಗಡೆ ಮಾಡುವುದು: (ಕ). 'ಸೂಟ್ಟಿ' ಪರಾ. [← ಮರಾ. ಸೋಡ್]

ಸೋಡಿ$_2$ (ನಾ). ಒಂದು ಬಗೆಯ ಆಟ: ಉತ್ಸಾಹಿತರುಣರು ಗುಡಿಯ ಮಗ್ಗಲ ತುಣುಕುಮೈದಾನಿನಲ್ಲಿ - ಸೋಡಿ, ಕಾಲ್ಚಂಡುಗಳ ಆಟವಾಡುತ್ತಿರುತ್ತಾರೆ (ಜಾರುದಾ. ೩೭).

[?]

ಸೋಡಿಗೆ, ಸೊಡಿಗೆ, ಸೊದಿಗೆ, ಸೋಜಿಗೆ, ಸೋದಿಗೆ$_1$ (ನಾ). ೧. ಒಂದು ಅಳತೆಯ ಪ್ರಮಾಣ: ಹಸುಬೆಗ ಅಡಿಕೆ ೨ ಭತ್ತಕೆ ಸೋಡಿಗೆ ಭತಂ (ಎಕ. VII, ಹೊನ್ನಾಳಿ. ೧೦೮-೫೭;1203). ೨. ಒಂದು ಬಗೆಯ ತೆರಿಗೆ: ಸಭೆಯ ಸಂಜೆಯ ಚಿಲುವಾನ ಸುಂಕ ಸೋಡಿಗೆ ಇವು ಮೊದಲು ಸರ್ವ್ವಮಾನ್ಯವಾಗಿ . . . ದಾನಸಾಸನ ಪ್ರತಿಷ್ಠೆಯನು ಮಾಡಿದರು (ಎಕ. V, ಹಾಸನ. ೨-೧೮; 1563). ಸೊಡಿಗೆ: ೨. ಮಣುದೆರೆ ಮಗ್ಗದೆರೆ ಸುಂಕ ಸೊಡಿಗೆ . . . ಧಾರೆಯನೆರದು ಕೊಟ್ಟ (ಎಕ. X, ಕೋಲಾರ. ೨೪೭-೨೮; 1637?). ಸೊದಿಗೆ: ೨. ಮಠ ಮನೆವಣ ಸುಂಕ ಸೊದಿಗೆ ಸೋವಣ ಸಂದೂ ಸಕಲಸ್ವಾಮ್ಯವನು ಅನುಭವಿಸಿಕೊಂಬರಿ (ಎಕ. III (R), ಗುಂಡ್ಲುಪೇ. ೫೪-೬; 16ನೆಯ ಶತ); ತೆಱ್ ಹೊಱ್ಸುಂಕ ಸೊದಿಗೆ ಕಾಣಿಕೆ ಕಡ್ಡಾಯ (ಭೈರಪೂ. I. ೨೦೩). ಸೋಜಿಗೆ: ೧. ಸೋಜಿಗೆ ಭತ್ತ ಹಡಿಕದ ಬಂಡಿಯಲೊಕುಳ ಭತ್ತ (ಎಕ. XI, ಚಿಕ್ಕಬಳ್ಳಿ. ೨೧-೩೯; 1087). ೨. ಬಿಟ್ಟಿ ಬಿಡಾರ ಸೊಲ್ಲಗೆ ಮಲಿಗೆ ಸುಂಕ ಸೋಜಿಗೆ (ಎಕ. IV (R), ಚಾಮರಾ. ೧೬೦-೮; 1517). ಸೋದಿಗೆ$_1$: ೨. ತೆಱ್ ಹೊಱ್ ಸೋದಿಗೆ ನರರ್ಗಿವು ಮಾನ್ಯಗಳೈಸೆ (ಶಂಕಶ. ೯೮). [?]

ಸೋಡ್ತಿ (ನಾ). ೧. ಹಣ ಕೊಟ್ಟು ಪಡೆದ ಟಿಕೆಟ್ಟುಗಳ ಮೂಲಕ ಕೇವಲ ಅದೃಷ್ಟದಿಂದ ಬಹುಮಾನ ದೊರೆಯುವಂತೆ ಏರ್ಪಡಿಸುವ ಅದೃಷ್ಟದ ಆಯ್ಕೆ; ಲಾಟರಿ: ಧರಮ್‌ಸಿಂಗಪ್ರಭುಜೀವಿದ್ಯಾಲಯಕ್ಕಾಗಿ ನಡೆಯಿಸುತ್ತಿದ್ದ ಸೋಡ್ತಿ ಅದು! ಅದರ ಪ್ರಥಮಬಹುಮಾನವೇ ಐವತ್ತುಸಾವಿರ (ಪಿದಾಉ. ೫೨೦); ಸೋಡ್ತಿಯಲ್ಲಿ ಏನಾದರೂ ಇನಾಮು ದೊರೆಯಿತೇ? (ಬಾಲಪ್ರ. II, ೭೪೦). ೨. ಅದೃಷ್ಟ; ವಿಧಿ: ಯಾರು ಉಳಿದರು, ಯಾರು ಅಳಿದರು ಅದು ಸೋಡ್ತಿಯ ಮಾತು (ಹಂಕೋ. ೪೨). ೩. "ಒಂದು ವಸ್ತುವಿನ ಮಾರಾಟಕ್ಕಾಗಿ ಹಲವರಿಂದ ಸ್ವಲ್ಪ

ಮೊತ್ತದ ಪ್ರವೇಶಧನ ಪಡೆದು, ಚೀಟಿ ಹಾಕುವುದರ (ಲಾಟರಿಯ) ಮೂಲಕ ಬರುವ ಅವರಲ್ಲೊಬ್ಬರಿಗೆ ಆ ವಸ್ತುವನ್ನು ಕೊಡುವುದು: ಅದೃಷ್ಟದ ಚೀಟಿಯ ಮಾರಾಟ; ಸೋಡ್ತಿ'' (Raffle. ಇಂಕನಿ).

[← ಮರಾ. ಸೋಡತ]

ಸೋಣ 'ಸಾವಣ' ನೋ.

ಸೋಣತಿಂಗಳು 'ಸೋಣತಿಂಗಳು' ನೋ.

ಸೋಣ್ಣ$_1$ (ನಾ). ಜಘನ; ನಿತಂಬ: ಶ್ರೋಣಿ · ಸೋಣಿ (ಶಮದ. ೨೬೧ ಪ್ರಯೋ).

[< ಪ್ರಾ. ಸೋಣಿ./ಸಂ. ಶ್ರೋಣಿ]

ಸೋಣ್ಣ$_2$ 'ಸಾವಣ' ನೋ.

ಸೋಣೆ 'ಸಾವಣ' ನೋ.

ಸೋಣತಿಂಗಳು, ಸೋಣತಿಂಗಳು (ನಾ). ಶ್ರಾವಣಮಾಸ : ಆಸಾಡಿ, ಸೋಣತಿಂಗಳ ಕಾಲಗಳು ಹೇಗೆ ಕಳೆದವು ಎಂಬುದು ಅವರಿಗೆ ತಿಳಿಯಲೇ ಇಲ್ಲ (ಮರಮ. ೩೯); ಸೋಣತಿಂಗಳಲ್ಲಿ ನಮ್ಮ ಮನೆಯದೆ ರಂಗಪೂಜೆಯಿದೆ (ದೇವಹಂ. ೧೧೭). **ಸೋಣ ತಿಂಗಳು**: ಕಳೆದ ಸೋಣತಿಂಗಳಿಗೆ ಮೂವತ್ತರಡೊ, ಮೂವತ್ಮೂರೊ ಕಳೆದ ಜ್ಞಾಪಕ (ಹೊಸಕ್ತಿ. ೫೧). [ಸೋಣೆ (< ಸಾವಣ) + ತಿಂಗಳು (< ತಿಂಗಳ್)]

ಸೋಣೆಧರ್ಮ (ನಾ). ಶ್ರಾವಣಮಾಸದಲ್ಲಿ ಮಾಡುವ ದಾನ ,— ದತ್ತಿ: ನಿತ್ಯಚತ್ರ ಸೋಣೆಧರ್ಮ ಹಗ್ಗುವಿನ ಧರ್ಮ (ಶಾಇ. ೧೯೩೨, ಉಡುಪಿ. ೩೪೦-೮; ?).

[ಸೋಣೆ (< ಸಾವಣ) + ಧರ್ಮ]

ಸೋಣೆಮರಿಯಾದೆ, ಸೋನೆಮರಿಯಾದೆ (ನಾ). ದೇವಸ್ಥಾನಗಳಲ್ಲಿ ಶ್ರಾವಣಮಾಸದಲ್ಲಿ ನಡೆಸುವ ಪೂಜೆ, ಉತ್ಸವ ಮುಂತಾದ ಕಟ್ಟಳೆ: ನಖರೇಶ್ವರದ ಶ್ರೀಮಹಾದೇವರಿಗೆ . . . ಸೋಣೆಮರಿಯಾದೆಯ ಬಗೆಯ ಹೊನ ಕಾಟ ಗ ೧೦ (ಶಾಇ. IX-ii, ೪೫೬-೧೦; 1451). **ಸೋನೆಮರಿಯಾದೆ** : ಸೋನೆಯ ತಿಂಗಳಲಿ ಸೋನೆಮರಿಯಾದೆ ಸಲುವುದು (ಶಾಇ. ೧೯೩೧, ಕೊಂಡಾಪುರ್. ೩೫೭-೧೫; 1308). [ಸೋಣೆ (< ಸಾವಣ) + ಮರಿಯಾದೆ]

ಸೋಣೆಯಾರತಿ (ನಾ). ಶ್ರಾವಣಮಾಸದಲ್ಲಿ ದೇವರಿಗೆ ಎತ್ತುವ ವಿಶೇಷವಾದ ಮಂಗಳಾರತಿ: ಊರಿನ ದೇವಾಲಯದಲ್ಲಿ ಸೋಣೆಯಾರತಿ ವೇಳೆಯಲ್ಲಿ ಹತ್ತಾರು ಘಂಟೆಗಳನ್ನು ಪೂಜೆ ಮುಗಿಯುವ ತನಕವೂ ಬಾರಿಸಿದಂತಾಗುತ್ತದೆ (ಸ್ವಪ್ನಹೂ. ೯೯).

[ಸೋಣೆ (< ಸಾವಣ) + ಆರತಿ$_1$]

ಸೋತ 'ಸೋಲ್' ಪರಾ.

ಸೋತು 'ಸೋಲ್' ಪರಾ.

ಸೋತುವಲ್ಲಿ (ನಾ). ಒಂದು ಬಗೆಯ ಬಳ್ಳಿ: ''ಋಕ್ಷಸಂಕಿಕಾ - ಸೋತುವಲ್ಲಿ'' (ಓಷಧಿ. ೧೮). [?]

ಸೋತೆ 'ಸೊದೆ' ನೋ.

ಸೋತೆವೆಸ (ನಾ). ಸುಣ್ಣಬಳಿಯುವ ಕೆಲಸ; ಸುಣ್ಣ ತೊಡೆಯುವಿಕೆ: ದಿವಾಕರೇಶ್ವರದೇವರಂಗಭೂಗಕೃವಿಟ್ಟಗೆ ಸೋತೆವೆಸದ ಖಂಡಸ್ಫುಟತಂಗಳಂ ಮಾಡಲುಂ ಬಿಟ್ಟ ಮಾಣಿಕೇಶ್ವರದ ಮತ್ತರಱುವತ್ತು (ಶಾಇ. XX, ೯೩-೫೬; ?).

[ಸೋತೆ (< ಸೊದೆ) + ಬೆಸ$_1$]

ಸೋತ್ಕಂಠ (ಗು). ೧. ಕಾತರದಿಂದ ಕೂಡಿರುವ. (ನಾ). ೨. ಕಾತರತೆಯುಳ್ಳ ವ್ಯಕ್ತಿ: ''ಸೋತ್ಕಂಠಂ ಕರಮುನ್ನನನುತ್ಕಂ ವಿಮನಸ್ಕನುತ್ತವಳನವನಕ್ಕುಂ'' (ವಸ್ತುಕೋ. ೧೧೪-೨೩). [ಸಂ.].

ಸೋತ್ಪಾದನ (ನಾ). ಬಳಿಯುವುದು; ಲೇಪಿಸುವುದು : ''ಉದ್ವರ್ತನಂ, ಉನ್ಮರ್ದನಂ, ಸೋತ್ಪಾದನಂ, ಛುರಿತಂ - ಈ ೪ ತಿಮಿರುವುದು'' (ಹಲಾಯು. ೧೨೧-೪೬). [ಸಂ.]

ಸೋತ್ರಗುತ್ತಿಗೆ (ನಾ). ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆಯಿಲ್ಲದಂತೆ ಕೊಟ್ಟ ಭೂಮಿಯ ಗೊತ್ತುವಳಿ ,— ಕರಾರು; **ಶ್ರೋತ್ರಗುತ್ತಗೆ**: ದತ್ತಿವಾಳಗ್ರಾಮವನೂ ನಿಮಗೆ ಸೋತ್ರಗುತ್ತಿಗೆಯಾಗಿ ಕೊಟ್ಟ ಸಂಮಂದ . . . ಸಾಮ್ಯವನು ಆಗುಮಾಡಿಕೊಂಡು (ಮೃಆರಿ. ೧೯೪೦, ೪೮-೭; 1502). 'ಶ್ರೋತ್ರಿಯಗುತ್ತಗೆ' ಪರಾ. [< ಶ್ರೋತ್ರಗುತ್ತಗೆ]

ಸೋತ್ಪ್ರಾಸ (ಗು). ೧. ಅತಿಶಯೋಕ್ತಿಯಿಂದ ಕೂಡಿದ. (ನಾ). ೨. ವ್ಯಂಗ್ಯ; ಅಣಕ: ''ಸೋಲ್ಲುಂಠಃ, ಸೋತ್ಪ್ರಾಸಃ, ಸೋಪಹಾಸಃ - ಈ ಮೂಱು ಚುನ್ನಂ'' (ಹಲಾಯು. ೨೪-೧೪೮). ೩. ಅಬ್ಬರದ ನಗು; ಅಟ್ಟಹಾಸ. [ಸಂ.]

ಸೋದ (ನಾ.) ೧. ಹತ್ತಿಯನ್ನು ಶುದ್ಧಪಡಿಸುವ ಕೋಲು; ಕುಡುಹು: 'ಪಿಚುಸೋದ' ಪರಾ. ೨. ಪರಿಶೋಧನೆ: ವಾದದಿಂ ಖೇದದಿಂ ಸೋದದಿಂ ಭೇದಿಸುವ ತಂತ್ರಮಂತ್ರಗಳಿಂದಲಿ (ಜಿನಮು. ೨೬-೧೯). [< ಸಂ. ಶೋಧ]

ಸೋದನ, ಸೋದನೆ, ಸೋಧನೆ (ನಾ). ೧. ಹುಡುಕುವಿಕೆ; ಶೋಧನೆ: 'ಸೋದನದೀವಿಗೆ' ಪರಾ. **ಸೋದನೆ**: ೧. ''ಸೋದನೆ - ಶೋಧನ = ಹುಡುಕುವಿಕೆ'' (ತದ್ಭವಕೋ. ೪೭). **ಸೋಧನೆ**: ೨. ಪರಿಶುದ್ಧತೆ; ಶುದ್ಧಿ: 'ಸೋಧನೆವೋಗು' ಪರಾ. [< ಸಂ. ಶೋಧನ]

ಸೋದನದೀವಿಗೆ (ನಾ). ಹುಡುಕುವುದಕ್ಕಾಗಿ ಬಳಸುವ ದೀಪ: ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ (ಪಂಪಭಾ. ೪-೫೨).

[ಸೋದನ + ದೀವಿಗೆ]

ಸೋದನೆ 'ಸೋದನ' ನೋ.

ಸೋದರ (ಗು). ೧. ಒಂದೇ ಗರ್ಭದಿಂದ ಹುಟ್ಟಿದ; ಒಡಹುಟ್ಟಿದ: 'ಸೋದರತಂಗೆ', 'ಸೋದರತಮ್ಮ' ಪರಾ. (ನಾ). ೨. ಒಡಹುಟ್ಟು: ಹಗಯೇಱಿದಿವನಲಿ ಸೇರುವುದು ಸೋದರದ ಸಂಬಂಧ (ಕುವ್ಯಾಕ. ೨೬-೨೯). ೩. ಒಡಹುಟ್ಟಿದುದು; ಜೊತೆಯಲ್ಲಿರುವುದು : ಕರಭದ ರೇಖೆ ಸೋದರದ ರೇಖೆ ಕನಿಷ್ಠಿಕೆಯಾದಿರೇಖೆ ಸೌಂದರಿಯರ ರೇಖೆ (ಲೋಕೋಪ. ೧೧-೧೫); ಆದುದಾವಿರ್ಭಾವ ಸಿಡಿಲಿನ ಸೋದರದ ಕಣ್ಣುಗಳ ಭಾಳದ ಬೀದಿಗಿಟ್ಟಿನ ರೌದ್ರದಲಿ ನರಸಿಂಹರೂಪಾಗಿ (ಕುವ್ಯಾಸ. ೯-೪೩). ೪. ಒಡಹುಟ್ಟಿದ ತಮ್ಮ ಅಥವಾ ಅಣ್ಣ; ಸಹೋದರ: ಕಾದದೆ ಪನ್ನಗಧ್ವಜನಿಳಾತಳಮಂ ಕುಡನಾನುಮಿರ್ಪುದುಂ ಸೋದರರೆಂದು ನಾಣ್ಕೆ ಸೆಡೆದಿರ್ದಪೆಂ (ಪಂಪಭಾ. ೯-೧೮); ಇಱಿಯಿಸುವೆ ಸೋದರರ್ಕಳಂ . . . ಅಱುಲಿ ನಿನ್ನಿಂ ನಿಕೃಷ್ಟರಾದರುಮೊಳರೇ (ಗದಾಯು. ೯-೭).

ಸೋದರದತ್ತಿಗೆ = ಸೋದರಸಂಬಂಧದ ಅತ್ತಿಗೆ; ನಾನೊತ್ತಸೂಳೆಯೊ ನಿನಗೆ ಸೋದರದತ್ತಿಗೆಯೊ ನಾದುನಿಯೊ (ಬಸವು. ೪೦-೪೬). **ಸೋದರದಳಿಯ** = ಒಬ್ಬನ ಅಕ್ಕ ಅಥವಾ ತಂಗಿಯ ಮಗ; ಒಬ್ಬಳ ಅಣ್ಣ ಅಥವಾ ತಮ್ಮನ ಮಗ: ಎನ್ನ ತಂಗಿಯ ಮಗನಯ್ ಸೋದರದಳಿಯನಯ್ (ವಡ್ಡಾರಾ. ೧೩೧-೨); ಕರೆಸಿ ಸೋದರದಳಿಯನನು ಕುಳ್ಳಿರಿಸಿಕೊಂಡನು ಸಿಂಹಪೀಠದಿ (ಕೌಶಿಾ. ೩೯-೧೬). [ಸಂ.]

ಸೋದರಅತ್ತೆ 'ಸೋದರತ್ತೆ' ನೋ.

ಸೋದರಅಳಿಯ 'ಸೋದರಳಿಯ' ನೋ.

ಸೋದರತಂಗೆ (ನಾ). ಒಡಹುಟ್ಟಿದ ತಂಗಿ: ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರತಂಗೆ ಸುಮತಿಯೆಂಬೊಳಂ ಕೊಟ್ಟರ್ (ವಡ್ಡಾರಾ. ೪೨-೨೬). [ಸೋದರ + ತಂಗೆ]

ಸೋದರತಮ್ಮ (ನಾ). ಒಡಹುಟ್ಟಿದ ತಮ್ಮ: ವಿದ್ಯುಲ್ಲತೆಯ ಸೋದರತಮ್ಮಂ ಮೇಘಕೂಟಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರಂ (ವಡ್ಡಾರಾ. ೪೧-೨೨).

[ಸೋದರ + ತಮ್ಮ]

ಸೋದರತ್ತೆ, ಸೋದರಅತ್ತೆ (ನಾ). ತಂದೆಯ ಒಡಹುಟ್ಟಿದವಳು; ತಂದೆಯ ಸೋದರಿ: ನಿಮ್ಮ ಸೋದರತ್ತೆಯಾದ ನಮ್ಮ ತಾಯಿಯನ್ನು ಕಂಡು (ಕೃವಾಉ. ೧೪೦); ಸೋದರತ್ತೆಯ ಮಕ್ಕಳೆಂದು ಅನಾದಿಸ್ನೇಹವ ಮಾಡಿದೆನು (ಕೃಪ್ಪಾಕಾ. ೧೪-೨೪). **ಸೋದರಅತ್ತೆ** : (ಕ). [ಸೋದರ + ಅತ್ತೆ$_1$]

ಸೋದರಭಾವ (ನಾ). ಹೆಂಡತಿಯ ಸಹೋದರ: ಯದುಗಳನ್ವಯದಾತ ನಮಗೊಳ್ಳಿದನು ಸೋದರಭಾವನೆಂದೇ ಮದಮುಖದಿ ಕಡುಗೇಡ ಕೆಟ್ಟೆನು (ಕುವ್ಯಾಭೀ. ೩-೬೮). [ಸಂ.]

ಸೋದರಮಯ್ಯುನ (ನಾ). ಸೋದರಿಕೆಯ ಸಂಬಂಧದ ಮೈದುನ: ಬರಿಸಿದೊ ಸೋದರಮಯ್ಯುನನಮಿತತೇಜನಂ ಶ್ರೀ ವಿಜಯಂ (ಶಾಂತಿಪು. ೫-೭೬).

[ಸೋದರ + ಮಯ್ಯುನ (< ಮೆಯ್ಯುನ)]

ಸೋದರಮಾವ (ನಾ). ತಾಯಿಯ ಒಡಹುಟ್ಟಿದವನು; ಮಾತುಲ: "ಮಾತುಳನೆನಲ್ಕೆ ಸೋದರಮಾವನಕ್ಕು" (ಮಂಗರಾ. ೯೨-೧೩); ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರಮಾವಂ (ವಡ್ಡಾರಾ. ೪೨-೪); ಸೋದರಮಾವನ ಮಗಳೆನೆ ನಾದುನಿಯೆಂದಂದು ನಿನ್ನನಾಂ ಕಾಡಿದೆಂ (ಸುಕುಮಾ. ೭-೨೩); ದಂಡಿನಲ್ಲಿಯೂ ಸೋದರಮಾವನೇ ? (ಗಾದೆ). [ಸೋದರ + ಮಾವ (< ಮಾಮ)]

ಸೋದರಸೊಸೆ (ನಾ). ಒಬ್ಬನ ಅಕ್ಕ ಅಥವಾ ತಂಗಿಯ ಮಗಳು; ಒಬ್ಬಳ ಅಣ್ಣ ಅಥವಾ ತಮ್ಮನ ಮಗಳು: ಬೇಡುವೆ ಯತಿಯ ಪುರಂದರವಿಠಲನ ಸೋದರಸೊಸೆಯ (ಪುರಂದ. ೫೬-೬೨); ಸೋದರಸೊಸೆಗೆ ಒಂದಿಲ್ಲೊಂದು ಇನಾಮು ದಿನಾಲು ಇದ್ದುದೇ (ಹೂಬಿಸಿ. ೧೦). [ಸೋದರ + ಸೊಸೆ]

ಸೋದರಸ್ನೇಹ (ನಾ). ಒಡಹುಟ್ಟಿದ ಸಂಬಂಧ; ಭ್ರಾತೃಭಾವ: ಈ ವೃಕ್ಷಗಳಲ್ಲಿ ನನಗೂ ಸೋದರಸ್ನೇಹವಿರುವುದು (ಶಾಕುಂತ. ೮-೨೧). [ಸಂ.]

ಸೋದರಳಿಯ, ಸೋದರಅಳಿಯ (ನಾ). ಒಬ್ಬನ ಅಕ್ಕ ಅಥವಾ ತಂಗಿಯ ಮಗ; ಒಬ್ಬಳ ಅಣ್ಣ ಅಥವಾ ತಮ್ಮನ ಮಗ: "ಭಗಿನಿಜಂ ಸ್ವಸ್ರೀಯ ಸೋದರಳಿಯಂ" (ಮಂಗರಾ. ೯೩-೧೪); ಅನಂತವೀರ್ಯನುಮೆನ್ನ ಮುನ್ನಿನ ತಂದೆಗೆ ಸೋದರಳಿಯಂ ಶ್ರೀವಿಜಯನೆಂಬೊನಾದಂ (ಶಾಂತಿಪು. ೨-೨೬ ವ); ಮಗಳಂ . . . ತನ್ನ ಸೋದರಳಿಯಂ ಶ್ರುತಸಾಗರಂಗೆ ಕುಡಲ್ಕೇಡಿ (ಧರ್ಮಾಮೃ. ೩-೨೫೦). **ಸೋದರಅಳಿಯ:** ಆ ಮದ್ರಪತಿಯು ತನ್ನ ಸೋದರಅಳಿಯಂದರ ಪರಾಕ್ರಮಾತಿಶಯಗಳಿಗೆ ಸಂತೋಷಪಡುತ (ಕೃಷ್ಣಾಭೀ. ೧೨೮). [ಸೋದರ + ಅಳಿಯ]

ಸೋದರಿ (ನಾ). ಒಡಹುಟ್ಟಿದ ಅಕ್ಕ ಅಥವಾ ತಂಗಿ; ಸಹೋದರಿ: ಎನ್ನ ಶಿವಸೋದರಿಯ ಮಠದಲಿ ಚನ್ನಪಾಯಸವುಂಟು (ಬಸಪು. ೧೪-೩). [ಸಂ.ಸೋದರೀ]

ಸೋದರಿಕೆ (ನಾ). ಒಡಹುಟ್ಟಿದುದರಿಂದುಂಟಾದ ಬಾಂಧವ್ಯ ,– ನಂಟು : ಎನಿತಱಿಯದಿರ್ದೊಡಂ ಸೋದರಿಕೆಯ ಮಿಕ್ಕು ಬರ್ಕುಂ (ಪಂಪಭಾ. ೧೨-೨೦೭ ವ); ದುಷ್ಟಸ್ವಭಾವದವಳಾಗಿದ್ದರೆ ಸೋದರಿಕೆಯಾದರೂ ತಾನದಕ್ಕೆ ಅಂಗೀಕರಿಸುತ್ತಿದ್ದೆನೆ ? (ಲಕ್ಷ್ಮೀಪ್ರ. ೭೨).

ಸೋದರಿಕೆಯವನು = ವಾವೆಯಲ್ಲಿ ಸೋದರಸಂಬಂಧವನ್ನು ಹೊಂದಿದವನು : ಇವರಿಗೆ ವಾವೆಯಲ್ಲಿ ಮಹಾರಾಜನು ಸೋದರಿಕೆಯವನು (ಸವತ. ೧೩೭).

[ಸೋದರ + - ಇಕೆ]

ಸೋದರಿಗ (ನಾ). ಒಡಹುಟ್ಟಿದವನು; ಸೋದರಿಕೆಯುಳ್ಳವನು: ಆಕೆಯಾ ಶ್ರೇಣಿಯ ನಂದಪುರಮನಾಳ್ದ ತಮ್ಮ ಸೋದರಿಗನಪ್ಪ ಹರಿಷೇಣಂಗಂ ಶ್ರೀಕಾಂತೆಗಂ ಪುಟ್ಟಿದ ಹರಿವಾಹನಂಗೆ ಮಾಲೆಯಂ ಸೂಡೆ (ಮಹಾನೇ. ೧೫-೧೪೧ ವ); ಕ್ರೋಧವನ್ನು ಬೆಳೆಸುವ ಸೋದರಿಗರಿದ್ದರೇನು (ಪುರಂದ. ೨-೧೮೩-೧). [ಸೋದರ + - ಇಗ]

ಸೋದರೀಭಾವ (ನಾ). ತನ್ನ ಒಡಹುಟ್ಟಿದವಳು ಎಂಬ ಭಾವನೆ: ವೆಂಕಣ್ಣ ಲಲಿತೆಯನ್ನು ಎಂಥ ಸೋದರೀಭಾವದಿಂದ ಕಾಣುತ್ತಾನೆ! (ನಿಶಉ. ೪೬). [ಸಂ.]

ಸೋದರ್ಯ (ಗು). ೧. ಒಡಹುಟ್ಟಿದುದರಿಂದುಂಟಾದ: ಸೋದರ್ಯವಿಮೋಹ ಮಾರ್ಗಮೇನಾಗಿಸದೋ (ಸುಕುಮಾ. ೪-೬೨). (ನಾ). ೨. ಒಡಹುಟ್ಟಿದವನು; ಸಹೋದರ: "ಸಮಾನೋದರ್ಯಃ, ಸೋದರ್ಯಃ, ಸಗರ್ಭಃ, ಸೋದರಃ – ಈ ೪ ಒಡಹುಟ್ಟಿದಂ" (ಹಲಾಯು. ೮೪-೩೫೪). ೩. ಸಹೋದರತ್ವ; ಸೋದರಿಕೆ: ಜಗತ್ತಿಗೆಲ್ಲ 'ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರ್ಯ!' ಎಂಬ ಸ್ವಾತಂತ್ರ್ಯ ಮಂತ್ರವನ್ನು ಪಾಠ ಹೇಳಿದ ಫ್ರಾನ್ಸ್ ದೇಶವೇ ವಿಯೆಟಮಿನದ ನೆತ್ತರು ಹೀರುವುದರಲ್ಲಿ ಮಗ್ನವಾಯಿತು (ವಿಸಂ. ೨೧). [ಸಂ.]

ಸೋದರ್ಯೆ (ನಾ). ಅಕ್ಕ ಅಥವಾ ತಂಗಿ; ಸೋದರಿ: ತನ್ನ ಸತಿಯುಂ ತನ್ನ ಸೋದರ್ಯೆಯುಂ ತಾನುಮೊಲವಿನಿಂದಂ ನಡೆತಂದು (ಆರಾಚ. ೧-೧೩-೧೧).

[ಸಂ. ಸೋದರ್ಯಾ]

ಸೋದಲಿಸು (ಕ್ರಿ). (?): ಮೂದಲಿಸಿ ಸೋದಲಿಸಿ ತದ್ವಿಮಾನದ ಸುತ್ತ ಹೊದ್ದಿಸುತ ಬದ್ದಿಸುತಲುದ್ವಾದ ದಿಕ್ಚಕ್ರ ತೋರದೊಲ್ ಖಚರೇಂದ್ರ ಹಿಳುಕನಾವರಿಸಿ ವರಿಸೆ (ಜಿನಮು. ೨೯-೩೩). [? + - ಇಸ್ಸು$_3$]

ಸೋದಾಹರಣ (ಗು). ೧. ಉದಾಹರಣೆಯಿಂದ ಕೂಡಿದ; ಉದಾಹರಣೆ ಸಹಿತವಾದ. (ನಾ). ೨. ಉದಾಹರಣೆಯಿಂದ ಕೂಡಿದುದು: ನೋಡಿದ ಹಿಡಿತಗಳನ್ನೂ ಡಾವು – ಪೇಚುಗಳನ್ನೂ ಬಣ್ಣಿಸುವ ರಭಸದಲ್ಲಿ ಎದುರಿಗಿದ್ದವನನ್ನು ಎಳೆದು ಸೋದಾಹರಣವಾಗಿ ಅವನನ್ನು ನೆಲಕ್ಕೆ ಅಪ್ಪಳಿಸುವರು (ಗಾಳಿಪ. ೬೫). [ಸಂ.]

ಸೋದಿಗೆ$_1$ 'ಸೋಡಿಗೆ' ನೋ.

ಸೋದಿಗೆ$_2$ (ನಾ). ಒಂದು ಬಗೆಯ ಭಕ್ಷ್ಯ: ಪೂರಿಗೆಯಿಡ್ಡಲಿಗೆ ಸೋದಿ [ಪಾಠಾಂ. ಸೊಂದಿ]ಗೆ ಲಾವಣಿಗೆ ಘೃತಪೂರಂ ಲಡ್ಡುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ್ಯರೂಪಂಗಳುಮಂ . . . ಬಡ್ಡಿಸಿದೊಡೆ (ವಡ್ಡಾರಾ. ೭೮-೧೬).

[?]

ಸೋದಿಸು (ಕ್ರಿ). ೧. ಹುಡುಕು; ಅರಸು; ಪತ್ತೆಹಚ್ಚು: ನಾಮಿದನಱಿಯದಂತು ಬೇಂಟೆಯ ನೆವದೊಳ್ ಬಟ್ಟೆಗಳಂ ಸೋದಿಸುವಂ (ಪಂಪಭಾ. ೩-೪ ವ); ಕುಱಿತುದ ಕುಱುಹಿಡುವನ್ನಕ್ಕ ಭೇದವಿವರವ ಸೋದಿಸಬೇಕು (ಸರ್ವವ. ೮೦-೧೪೩); ಬಟ್ಟವೆಱೆಯ ಬೆಳ್ದಿಂಗಳ ಹೊಂದಾವರೆವಟ್ಟಲೊಳ್ ಸೋದಿಪರುಂಟೇ (ಮೋಹಿ. ೧-೨೪). ೨. ಹುಡುಕಿ ತೆಗೆ; ಹೆಕ್ಕು; ಆರಿಸು: ಆ ಮಣಲೆಲ್ಲಮಂ ಮಗುಱೆ ಪಾರಾವಾರದೊಳ್ ಪೊಯ್ದು ಮತ್ತಮದಂ ಸೋದಿಸಿ ಕಾಣ್ಬವೊಲ್ (ಸುಕುಮಾ. ೫-೩೩); ಸೋದಿಸಿದ ಪರಿಮಳದ ಪಡ್ಡಳಿಗಳಂ ಕೊಂಡು (ಬಸರ. ೩-೨೮). ೩. ಪರೀಕ್ಷಿಸು; ಪರಿಶೀಲಿಸು; ಬೆದಕು: ತನ್ನ ನಿಷ್ಠುರಚರಣಸಂಘಟ್ಟದೊಳ್ ಪಡಲ್ಬಟ್ಟ ವೀರಭಟರ ಮಕುಟಂಗಳೊಳ್ ತಲೆಗರೆದಿರ್ದನೆಗೆತ್ತು ಸೋದಿಸಿ ನೋಡಿಯುಂ (ಗದಾಯು. ೬-೨೮ ವ); ನೀನಿಪ್ಪ ಸದನಮಂ ಸೋದಿಸಿ ನೋಟ್ಟೆಂ (ಲೀಲಾವ. ೧೪-೭೯ ವ). ೪. ಗಮನಿಸು; ಎಚ್ಚರವಹಿಸು: ಗಡಣಹೆಣದೆಱಹುಗಳೊಳಗೆ ಕಾಲಿಡುತ ಸೋದಿಸಿ ಮುಂದೆ ಹೆಜ್ಜೆಯನಿಡುತ (ಕುಮಾರಾ. ೩-೧೩). ೫. ಹಸನುಮಾಡು; ಸ್ವಚ್ಛಗೊಳಿಸು: ನೀಂ ಪರಿಕಿಸಿ ಸೋದಿಸಿ ಬಡ್ಡಿಸು ವರಮುನಿಪರ್ಗೆ (ನೇಮಿಪು. ೧೪-೧೨೧); ಚೆನ್ನವಪ್ಪುಳ್ಳಿಗಳ ಮೇಲೋಗರಕ್ಕೆಂದು ತರಿಸಿ ಸುಖಮುಖದಿಂದ ಸೋದಿಸುತ್ತಿರ್ಪಲ್ಲಿ (ಬಸರ. ೧೧-೪೧); ಬೆಳತಿಗಕ್ಕಿಯ ಸಣ್ಣ ಹಿಟ್ಟ ಸೋದಿಸಿ ಹುರಿದುಕೊಳುತ ಬೆಲ್ಲದ ಪಾಕದೊಳು ಹಾಕಿ (ಸೂಪಶಾ. ೧-೨೪). ೬. ಕಸ, ಕಡ್ಡಿ ಮುಂತಾದುವುಗಳನ್ನು ತೆಗೆದುಹಾಕು; ಚೊಕ್ಕಟಮಾಡು: ಪೊಱವೊಱಲೊಳುತ್ತರದಿಶಾಭಾಗದೊಳೆ ಸಮಚತುರಸ್ರಮಾಗೆ ನೆಲನನಳೆದು ಕಲ್ಲಂ ಪುಲ್ಲುಮಂ ಸೋದಿಸಿ (ಪಂಪಭಾ. ೨-೬೫ ವ); ಅಸವಸದಿಂ ಪಟಗೆಯ್ಯಂ ಕಸಮಂ ಸೋದಿಸದೆ ಬಿತ್ತಿದೊಕ್ಕಲಿಗನವೋಲ್ (ಕಾವ್ಯಾವ. ೪೫೪). ೭. ಗಷ್ಟು ಉಳಿದು ದ್ರವವು ತಿಳಿಯಾಗುವಂತೆ ಮಾಡು; ಶೋಧಿಸು; ಸೋಸು: ರಸಮಂ ಸೋದಿಸೆಯುರ್ಕಿನ ಪುಡಿಯೆನಿಪಾ ದುಷ್ಕವಿತೆಗಳನೆಣಿಸಲೇಕೀ ಕೃತಿಯೊಳ್ (ಗಿರಿಕ. ೧-೨೨); ಪೊಸತಪ್ಪ ಸುಣ್ಣಮಂ ಸೋದಿಸಿ (ಅಶ್ವ. ಶಾ. ೧೨-೬); ಪೊಸ ಮೊಸರಿನೊಳು ಹದನನಱಿದುಪ್ಪುಳ್ಳಿ ಯಾಲಕ್ಕಿಯೆಂಬವಂ ಸದಗುಟ್ಟಿಹಾಕಿ ಸೋದಿಸಿ (ಸೂಪಶಾ. ೩-೨೬). ೮. ನಿರ್ಮಲಗೊಳಿಸು; ಶುದ್ಧಿಗೊಳಿಸು: ಪರಿಮಳೋದಕದಿಂ ಮಜ್ಜನಂ ಮಾಡಿ ಸೋದಿಸಿದ ಸುಖಂ ಪೊಱಮಡುವಂತೆ ಪೊಱಮಟ್ಟು (ನಂಬರ. ೧೦-೩೩). ೯. ಪುಟವಿಡು; ಮೆರುಗು ಕೊಡು: ಬೆಳಗೆ ಕನ್ನಡಿ ಸೋದಿಸೆ ಪೊನ್ ವಿರಾಜಿಪಂತೆಸೆದು ಬಱೆಕ್ಕೆ ಮತ್ಪತಿ ಚಮತ್ಪತಿಯಂ ಧರೆಗುಂಟುಮಾಡುಗುಂ (ಜಗವಿ. ೧-೧೫). ೧೦. ತಿದ್ದು; ಸರಿಪಡಿಸು: ಪೆಱರಿಂದಂ ಸೋದಿಸದ ಪೆಱಂಗಿನಿಸೆಡೆಗುಡದ ಸಹಾಯಕವೀಶ್ವರಂ ಕುರುಳ್ಗಳ ಸವಣಂ (ಶಾಂತಿಪು. ೧೨-೭೫). ೧೧. ಜೀರ್ಣೋದ್ಧಾರ ಮಾಡು; ದುರಸ್ತಿಗೊಳಿಸು: ಹೊಸ ಕೆಱೆಯ ಕಟ್ಟಿಸಿ ತೂಬನಿಕ್ಕಿಸಿ . . . ಸೋಮೇಶ್ವರದೇವರ ದೇಗುಲವ ಅಳಿವಂ ಸೋದಿಸಿ ಸೊತೆಯನಿಕ್ಕಿಸಲ್ (ಎಕ. X. ಚಂತಾಮ. ೩೦-೧೧; 1047). ೧೨. (ಆಲಂ) ಸಿಕ್ಕುಬಿಡಿಸು; ಹಿಕ್ಕು: ಸೋದು ಕರಾಬ್ಜದಿಂ ಮುಗಿದ ಕಣ್ಮಲರಂ ಕಚಭಾರಬಂಧಮಂ ಸೋದಿಸಿ ಮೇಲುದಂ ಬಿದಿರ್ದು (ಸೂಕ್ತಿಸು. ೧೧-೪೦). ೧೩. [ಗಣಿತ] (?): ಮತ್ತರು ಪಸಲಾಗಿರೆ ವಂಭತ್ತುಂ

ಶತಕಂಭವೆನಿಪುದಳತೆಯೊಳೆಲ್ಲಂ ಭಿತ್ತರದಿಂ ಸೋದಿಸಿಕೊಳು (ಭಾಸ್ಕರ. ೨೮-೧). 'ಸೋಸು$_1$' ಪರಾ. [ಸೋದನ + - ಇಸ್ಕು$_3$]

ಸೋದು 'ಸೋ$_1$' ಪರಾ.

ಸೋದೆ 'ಸುದ್ದಿ' ನೋ.

ಸೋಧನೆ 'ಸೋದನ' ನೋ.

ಸೋಧನೆವೋಗು (ಕ್ರಿ). ಪರಿಶುದ್ಧವಾಗು; ಶುದ್ಧಿಗೊಳ್ಳು: ಪತಿಬ್ರತದುನ್ನತಿಕ್ಕೆ ತಾಂ ಸೋಧನೆವೋಯ್ತು ಮುಂ ನೆಗಳ್ದಪುಂದತಿಯೊಳ್ (ಎಕ. ೪, ಬೇಲೂರು. ೧೧೨-೪೮ ಸು. 1220 ?). [ಸೋಧನ (< ಸೋದನ) + ಪೋಗು$_1$ (< ಪೋ$_1$)]

ಸೋನ$_1$ 'ಸಾನ$_1$' ನೋ.

ಸೋನ$_2$ 'ಸೊನ್ನೆ$_3$' ನೋ.

ಸೋನಗಾರ 'ಸೊನ್ನೆಗಾಱ' ನೋ.

ಸೋನಾಮುಖಿ (ನಾ). ಒಂದು ಬಗೆಯ ಗಿಡ ಮತ್ತು ವಿರೇಚನಕ್ಕಾಗಿ ಬಳಸುವ ಅದರ ಎಲೆ: ಸೋನಾಮುಖಿ, ನೆಲಾವರಿಕೆ (ಮೃಚ್ಛಿ. ೧೮-೩೨೯); ಕಪಾಟನಲ್ಲಿಯ ಸೋನಾಮುಖಿಸೊಪ್ಪಿನಿಂದ ಕಾಡೆ ಮಾಡಿಕೊಡಿರಿ (ಸ್ವಪ್ನಿಕ. ೨೭೫). [← ಮರಾ. ಸೋನಾಮುಖೀ]

ಸೋನಾಯ 'ಸೊನಯಿ' ನೋ.

ಸೋನೆ$_1$ (ನಾ). ೧. ಮಳೆ; ವೃಷ್ಟಿ: "ಸಲೆ ಸೋನೆಯನಲ್ಕೆ ವೃಷ್ಟಿಯೊಳ್" (ಕರ್ಣಾನಿ. ೮೩); ರಸಂಗಳಂ ತಳೆದ ಪಣ್ಣೊಲೆಯಂ ಗಿಳಿವಿಣ್ಡು ಚುಂಚುವಿಂದಿಱಿದಡೆ ಸೋರೆ ಸೋನೆಯೊಳೆ ದಾಂಗುಡಿ ಮಿನ್ದೆಸೆದಿರ್ಪ್ಪುವು (ಎಸಾ. XIII, ೩೩೧-೨೯; 929); ಅಮರ್ದಿನ ಸೋನೆಯ ಸುರಿದತ್ತು ರಸದ ತೊಱೆ ಪರಿದತ್ತಂಬೀ ನುಡಿಯನೆ ನುಡಿಯಿಸಿದತ್ತಾ ನಾಕಸ್ತ್ರೀಯ ಗೇಯಂ (ಆದಿಪು. ೭-೧೭); ಆನೆಗಳ ಮೇಲೆ ಕುವರಿಯರ್ದರ್ ಮುತ್ತುಗಳ ಸೋನೆಗಳನಡಿಗಡಿಗೆ ಸೂಸುತಿರೆ (ಜೈಮಿಭಾ. ೩೩-೪೫). ೨. ಎಡೆಬಿಡದೆ ಸುರಿಯುವ ಸಣ್ಣಹನಿಗಳ ಮಳೆ; ಜಿನುಗುಮಳೆ; ಜಡಿಮಳೆ: "ಸೋನೆಯೊಳ್ ತಂದಲಕ್ಕುಂ" (ಕರ್ಣಾನಿ. ೫೧); ತುಂತುಱ ತಿಂತಿಣಿಗಂ ಸೋನೆಗಳ ಜಿನುಂಗಿಗಂ ಬಿಱುಗಾಳಿಯ ಗಾಸಿಗಂ . . . ಬೆಚ್ಚದೆ ಬೆದಱದೆ . . . ಮಹಾವಟವೃಕ್ಷದ ಕೆಳಗೆ ವಿಪುಳತಪದಿಂದಪರ್ಣಯೊಪ್ಪುತ್ತುಮಿರೆಯಿರೆ (ಗಿರಿಕ. ೯-೫೮ ಪ). ೩. ಹೂವು, ಹಣ್ಣು ಮುಂತಾದುವುಗಳ ತೊಟ್ಟಿನಿಂದ ಸುರಿಯುವ ರಸ; ಸೊನೆ: ಕಾಯ್ಗಳಿಂದಮಿಂಬಾಗಿರೆ ಸೋರ್ವ ಸೋನೆ ಮದಮಾಗಿರೆ ಮಾವಿನ ಬಂದಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ (ಪಂಪಭಾ. ೨-೧೫); ಬಿರಿದೊಗುವ ಬಂಬಲಿನ ಸೋನೆಯ ಪರಿಯ ಪಕ್ವಫಲಾಳಿಗಳ ಬಂಧುರರಸಾಳ ಪ್ರಮುಖಭೂಜದಿನೆಸೆದುದುದ್ಯಾನ (ತೊರರಾ. ೧-೯-೧೨); ಉರುಪಿಕಚಂಚೂಹತಿಯಿಂದೊಗುವ ಮಾಮರದ ಸೋನೆಯ ಸೋನೆಯೊಳಗೆ ಇರಲಾಱದೆ ಪಣ್ತು ಬಕ್ಕೆವಲಸಿಗೇಳ್ವ ಪುರುಳಿಗಳೆಸೆದವು (ಕುರಾಸಾಂ. ೪-೪೯). 'ಸೊನೆ' ಪರಾ. [ದೇ. ॥ ತಮಿ. ಚೊನ್ಮೆ; ತೆಲು. ಸೋನ]

ಸೋನೆ$_2$ 'ಸಾವಣ' ನೋ.

ಸೋನೆಗರೆ 'ಸೋನೆಗಱೆ' ನೋ.

ಸೋನೆಗಱೆ, ಸೋನೆಗರೆ (ಕ್ರಿ). ೧. ಸೊನೆಯನ್ನು ಸುರಿಸು; ರಸವನ್ನು ಸೂಸು: ರಸದಾಳಿ ಪಣ್ತೊಡೆದು ಸೋನೆಗಱೆವಂತೆ ಪಾಡಿದರು . . . ಮಾನಿನಿಯರುಗಳು (ಸೊಂದಪು. ೮-೪). ಸೋನೆಗರೆ : ೨. ಮಳೆ ಸುರಿಸು; ವರ್ಷಿಸು: ಪೊಳಲ ಮೇಲೆ ಮಂಜುಳಕೃಪಾಮೃತದ ಸೋನೆಗರೆಯನೆ (ಚತುಪು. ೨-೪-೨೩). [ಸೋನೆ$_1$ + ಕಱೆ$_1$]

ಸೋನೆಗಾಲ (ನಾ). ಜಡಿಮಳೆ ಬರುವ ಕಾಲ; ವರ್ಷಾಕಾಲ: ತಾನೆ ಗುರುವೆಂದೆನಿಸಿ ತೋಱೆದನಾ ನಿಖಿಳನಾರಿಯರ ಮೋಹಕೆ ಸೋನೆಗಾಲದ ಮುಗಿಲ ನೇಱೆದ ವರುಷರುತುವಂತೆ (ಕೃಷ್ಣಾಕಾ. ೫-೩೧). [ಸೋನೆ$_1$ + ಕಾಲ]

ಸೋನೆಮರಿಯಾದೆ 'ಸೋಣೆಮರಿಯಾದೆ' ನೋ.

ಸೋನೆಮಳೆ 'ಸೋನೆವಳೆ' ನೋ.

ಸೋನೆವಳೆ, ಸೋನೆಮಳೆ (ನಾ). ೧. ಎಡೆಬಿಡದೆ ಸುರಿಯುವ ಮಳೆ; ಜಡಿಮಳೆ: ಸೋನೆವಳೆ ಸುರಿವಂದು ನೀರ್ವೊನಲು ಹರಿವಂದು ಬಿಸಿಲುಮಳೆಯಂದವನು ಕಾಣಬೇಕು (ಭಾವಜೀ. ೨೧-೪೦೩). ಸೋನೆಮಳೆ: ೧. ಈ ಸೋನೆಮಳೆಯಲ್ಲಿ ಹೊರಗಡೆ ಹೋಗಿ ಏನು ಕೆಲಸ ಮಾಡುವುದೂ ಸಾಧ್ಯವಿಲ್ಲ (ರೂಢಿ). ೨. (ಆಲಂ) ನಿರಂತರವಾದ ಚರ್ಚೆ; ಎಡೆಬಿಡದ ವಾಗ್ವಾದ: ಯಾರು ಸರಿ ಯಾರು ತಪ್ಪು ಎನ್ನುವ ಸೋನೆಮಳೆ ಸುರಿಯುತ್ತಲೇ ಇತ್ತು (ಹಸುಹೊ. ೩೧೫). [ಸೋನೆ$_1$ + ಮಳೆ (< ಮಳೆ)]

ಸೋನೇರಿ (ನಾ). ೧. ಚಿನ್ನದ ಬಣ್ಣದ ಕಾಗದ; ಗುನ್ನಾಂಪಟ್ಟೆ: ಕಾಗದ, ಹೊಸವು, ಎಲ್ಲಾ ಪ್ರಕಾರದವು ಅಂದರೆ ಪ್ರೆಂಚ . . . ಸೋನೇರಿ, ರುಪೇರಿ, ವಿಲಾಯತಿ ಕಾಗದ ಮುಂತಾದವು (ಮುಂಬಪ್ರಾ. ೧೩೯). (ಗು). ೨. ಚಿನ್ನದ ಬಣ್ಣದ: ಆ ತೋಟಗಳಲ್ಲಿ ಸೋನೇರಿ ರುಪೇರೀ ಕೆಲಸಗಳಿಂದ ವಿಚಿತ್ರವಾದ . . . ದಿವಾನಖಾನೆಯನ್ನೂ ಕಟ್ಟಿಸಿದರು (ಮಹಾವಂ. I, ೨೨೬). 'ಸುನೇರಿ' ಪರಾ. [← ಮರಾ. ಸೋನೇರೀ]

ಸೋಪದ್ರವ (ನಾ). ಸಂಕಟದಿಂದ ಕೂಡಿದುದು; ವಿಪತ್ತನ್ನು ಹೊಂದಿದುದು: ಸುರಪದವಿ ಸೋಪದ್ರವದ ನಿಷ್ಠುರವಿದೆಂದು ರಹಸ್ಯದಲಿ ನನಗೆಂದನಮರೇಂದ್ರ (ಕುವಾಅ. ೧೨-೨). [ಸಂ.]

ಸೋಪನ (ನಾ). ಮೆಟ್ಟಲು; ಪಾವಟಿಗೆ: ಸತ್ಯವೊಂದೇ ಸೋಪನವು ಸಗ್ಗಕ್ಕೆ ಜನ್ಮದ ಕೂಪರಕ್ಕಿದು ನಾವೆಯಾಗಿಹುದು (ಕುವಾಉ. ೩-೯). [< ಸಂ. ಸೋಪಾನ./ ಪ್ರ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ]

ಸೋಪಸ್ಕರ (ನಾ). ೧. ಅವಶ್ಯಕವಾದ ಸಾಮಗ್ರಿ; ಅಗತ್ಯವಸ್ತು: ವೀಧಿವೀಧಿಯೊಳು ಕಂಗೊಳಿಸುವ ಸೋಪಸ್ಕರ ವ್ಯವಹಾರದಂಗಡಿ ಮೆಱೆದುವಿಕ್ಕೆಲದಿ (ಮೋಹತ. ೩೬-೭೧); ಹಣ ಮುಟ್ಟದ ಸೋಪಸ್ಕರವನ್ನು ತರಿಸಿಕೊಟ್ಟು ರಥೋತ್ಸವವನ್ನು ಸಮ್ಮುಖವಾಗಿ ಆಗಮಾಡಿಸುವದು (ಮೃಅರಿ. ೧೯೨೮, ೪೬-೭; 1711); ಮಂದಿರಗಳನಿತ್ತು ಸೋಪಸ್ಕರವನಂದು[ತಂದು] ಕೊಟ್ಟು ದಣಿಸಿದರು (ತರ್ಕಕಾ. ೨-೪೮) ೨. ಗೃಹೋಪಕರಣ: ನಿಮಗೆ ವಾಸ್ತವ್ಯಕ್ಕೆ ಯೋಗ್ಯವಾದ ಒಂದು ದೊಡ್ಡ ಮನೆಯನ್ನು ಸೋಪಸ್ಕರಗಳ ಸಮೇತ ಲವಕಾಲದಲ್ಲಿ ಸಿದ್ಧಪಡಿಸುವೆನು (ವಾಗ್ದೇವಿ. ೧೭); ಆ ಕೊಟ್ಟಡಿಯ . . . ಸೋಪಸ್ಕರಗಳನ್ನೂ ರಚನೆಯ ರೀತಿಯನ್ನೂ ನೋಡಿ ಇಬ್ಬರೂ ಆನಂದ ಪರವಶರಾಗಿದ್ದಾಗ . . . ಬಾಗಿಲನ್ನು ಮುಚ್ಚಿದನು (ರಾಜಾಮ. ೨೪೪). ೩. ಅಡುಗೆಗೆ ಬೇಕಾಗುವ ಅಕ್ಕಿ, ಬೇಳೆ, ಉಪ್ಪು, ಮೆಣಸು ಮೊದಲಾದ ಪರಿಕರ; ಸಂಭಾರವಸ್ತು. ೪. ಧನ, ಧಾನ್ಯಾದಿ ಸಂಪತ್ತು: ಪರರ ಬೀಡನೆಗೆದು ಸೋಪಸ್ಕರವನಾರ್ಜಿಸುತಾವನಿಂದೀ ಧರಣಿಯೊಳು ಸತ್ಕರ್ಮಮೆಸಗಲು ವ್ಯರ್ಥವಾಗುವುದು (ಕಾವೇಮ. ೨೫). ೫. ಗೃಹೋಪಯೋಗಿಯಾದ ದ್ರವ್ಯ: ಸೋಪಸ್ಕರವನು ಒಂದು ಮಾಡದೆ ಎಲ್ಲ ಗೋಪಾಲಕೃಷ್ಣಗೆ ಅರ್ಪಿಸದೆ ಪಾಪಕರ್ಮಕ್ಕೆ ನಾ ಗುಱಿಯಾದೆ (ಪುರಂದ. ೧-೧೭೭-೯); ಗೋ ಮಹಿಷಿ ಮುಂತಾದವುಗಳನ್ನೂ ಮುಂದಿನ ಫಲ ಬರುವವರೆಗೆ ಪರಾಪೇಕ್ಷೆಯಿಲ್ಲದಂತೆ ಸೋಪಸ್ಕರವಾಗಿ ಕೊಟ್ಟರು (ಮಹಾವಂ. II, ೧೫೩). [ಸಂ.]

ಸೋಪಸ್ಕರವೆಱು (ಕ್ರಿ). ಅಗತ್ಯವಸ್ತುಗಳನ್ನು ಪಡೆದಿರು: ಆ ಪರ್ವತದ ದಕ್ಷಿಣ ಭಾಗದೊಳು ಜಂಬೂದ್ವೀಪದ ಮಧ್ಯದೊಳಿರ್ದು ಸೋಪಸ್ಕರವೆತ್ತ ನಿಖಿಲ ದೇಶಂಗಳ ಸ್ವರೂಪವನೇವಣ್ಣಿಸುವೆನು (ಮೋಹತ. ೨-೧೩). [ಸೋಪಸ್ಕರ + ಪೆಱು$_1$]

ಸೋಪಸ್ಕಾರ (ನಾ). ೧. = ಸೋಪಸ್ಕರ ೧: ಪರಿಚಾರಕರುಮಿಂತುಗೈವೃತಿಧರಿತ್ತಲಾ ವರಮಂತ್ರಿ ಸಕಲ ಸೋಪಸ್ಕಾರವನೊದಗಿಸುತ (ನವಮೋ. ೩೩-೧೨); ಇರು ಮೂರು ವಿಧದ ಸೋಪಸ್ಕಾರ ಒಂದಾದರೂ ಇಲ್ಲ (ಕಛಪ. ೪೩೪). ೨. = ಸೋಪಸ್ಕರ ೩: ಭೀಮರಾಜನು ದ್ರುಮವಂತೆ ಹೇಳಿದ ಹಾಗೆ ಬಂದರಸುಗಳಿಗೆ ಸೋಪಸ್ಕಾರವ ಕೊಡಿಸಿ ಕಟ್ಟಿಗೆಯ ಕೊಡದೆ ನಮ್ಮ ಕೇಳಿದಲ್ಲದೆ ಬೆಂಕಿಯ ಹೊತ್ತಿಸಬೇಡ ಎನಲು (ಭೃಗುಸೂ. I, ೭೫). ೩. ಪೂರಕವಾದುದು; ಸಾಧನವಾದುದು: ನಿಸರ್ಗಂ ಸ್ವಭಾವಮೆಂಬುದು ಅಧಿಗಮಂ ಅರ್ಥಾವಬೋಧಮೆಂಬುದು ತದ್ದ್ವಿತಯಕ್ಕಂ ಹೇತುತ್ವದಿಂ ಸೂತ್ರಂಗಳ್ ಸೋಪಸ್ಕಾರಂಗಳಪ್ಪುದಱಿಂ ಕ್ರಿಯಾಧ್ಯಾಹಾರನಿರ್ದೇಶಮಕ್ಕುಂ

(ತತ್ತ್ವಪ್ರ. ೭). ೪. ಅಣೆ; ಸಜ್ಜು; ಸಿದ್ಧತೆ: ಶಿವದಾಸಿ ಮುದದಿಯನೇಕ ಸೋಪಸ್ಕಾರಮಂ ಸುವಿವೇಕದಿಂ ಮಾಡಿದಳು (ಶಂಕರಾ. ೧೭-೩೭). [ಸಂ.]

ಸೋಪಹಾಸ (ಗು). ೧. ಪರಿಹಾಸ್ಯದ ; ಅಣಕದಿಂದ ಕೂಡಿದ. ೨. ತಿರಸ್ಕಾರದ; ಅವಹೇಳನದಿಂದ ಕೂಡಿದ. (ನಾ). ೩. ಅಣಕ; ಅಪಹಾಸ್ಯ: "ಸೋಲ್ಲುಂಠಃ, ಸೋತ್ಕ್ರಾಸಃ, ಸೋಪಹಾಸಃ - ಈ ಮೂಱು ಚುನ್ನಂ" (ಹಲಾಯು. ೨೪-೧೫೮). [ಸಂ.]

ಸೋಪಾಧಿರಹಿತ (ನಾ). ಯಾವ ನಿರ್ಬಂಧಕ್ಕೂ ಒಳಪಡದವನು; ಸರ್ವಸ್ವತಂತ್ರ: ಶ್ರೀಪಾರ್ವತೀನಾಥ. . . ಸೋಪಾಧಿರಹಿತ . . . ಪಾಲಿಸೈ (ವೀರಶೈವ. ೭-೧-೧). [ಸಂ.]

ಸೋಪಾನ (ನಾ). ೧. ಮೆಟ್ಟಲು; ಪಾವಟಿಗೆ: "ಆರೋಹಣಂ, ಸೋಪಾನಂ - ಈ ೨ ಸೋಪಾನಂ" (ಹಲಾಯು. ೫೦-೧೪೬); ಆನಂದವೆಂಬ ಜಲವ ತುಂಬಿ ಸ್ವಾನುಭಾವವೆಂಬ ಸೋಪಾನವ ಹೂಡಬೇಕಯ್ಯ (ವಚಸಂ. ೪೦೮-೬೮); ತಾಪದಲಿ ಸಂಸಾರಕೂಪದಲಿ ಬಿದ್ದವರು ಆಪತ್ತನಳಿದು ಪೊಱಮಡಲು ಗುರುಪಾದ ಸೋಪಾನವಯ್ಯ (ಸರ್ವಜ್ಞ. ೯೭). ೨. ಹಂತ; ಮಜಲು; ಘಟ್ಟ: ಪೀಠಿಕೆ, ವಿಷಯಪ್ರದರ್ಶನ, ಹೋಲಿಕೆ, ನಿಯಮನಿರೂಪಣೆ ಮತ್ತು ಪ್ರಯೋಗ ಇವುಗಳೇ ಆ ಐದು ಸೋಪಾನಗಳು (ಶಿಕ್ಷದ. ೨೨೧). [ಸಂ.]

ಸೋಪಾನಂಗಟ್ಟು (ಕ್ರಿ). ಮೆಟ್ಟಲನ್ನು ಕಟ್ಟು; ಪಾವಟಿಗೆಯನ್ನು ಹಾಕು: ದಿವಕ್ಕೆ ಪೋಪ ಬಟ್ಟೆಗೆ ಸೋಪಾನಂಗಟ್ಟದಂತೆ ತೆಱತೆಱದಿಂ ನೆಗೆದೊಗೆವ ಪೊಗೆಯ ಕಂಡು (ಪಂಚತಂ. ಅ. ೫೮-೧೦). [ಸೋಪಾನ + ಕಟ್ಟು$_1$]

ಸೋಪಾನಪಂಕ್ತಿ (ನಾ). ಮೆಟ್ಟಲುಗಳ ಸಾಲು ,— ಶ್ರೇಣಿ: ಸೋಪಾನಪಂಕ್ತಿಯನ್ನೇರಿ . . . ಪ್ರವೇಶಿಸಿದನು (ಪುನರು. ೩೫೮). [ಸಂ.]

ಸೋಪಾನಮಾನೆ (ನಾ). ಮೆಟ್ಟಲುಗಳ ನಿರ್ಮಾಣಕ್ಕಾಗಿ ಕೊಡುವ ಉಂಬಳಿ: ದೀಪಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ ಸೋಪಾನಕಟ್ಟಿ ಭೀಮಯೊಳು ಇಳಿಯುವುದಕೆ ಸೋಪಾನಮಾನೆ ವತನಿತ್ತ (ಶರಚ. ೩೩೨).

[ಸೋಪಾನ + ಮಾನ್ಯೆ (< ಮನ್ನೆಯ)]

ಸೋಪಿ 'ಸೊಪ್ಪೆ' ನೋ.

ಸೋಪಿತ (ನಾ). (?): ಊಟವಿನ್ಯಾತಕೆ ವಲಪಿನೊಳಿಲ್ಲದೆ ಪಾಟಪ ಮುಪ್ಪಿಗಾರುಂಟು ಕೋಟಲೆಕೊರಳನು ಕಿತ್ತು ಹಾಳುಗೂಡಿನ ಗೋಟೆಗೆ ಸೋಪಿತವಾದೆ (ಕಪೋತ. ೧೨-೪೧). [?]

ಸೋಪ್ಪು$_1$, ಸೋವ್ವು$_2$, ಸೋವೆ$_1$, ಸೋಹ್ಪು$_2$, ಸೋಹೆ (ನಾ). ೧. ಪ್ರಾಣಿಗಳನ್ನು ಪೊದೆಗಳಿಂದ ಎಬ್ಬಿಸಿ ಆಡುವ ಒಂದು ಬಗೆಯ ಬೇಟೆ: ಸೋಪಿನ ತೋಪಿನ ಪಳಹದ ಕೋಪಿನ ಪಾಳಿವದ ಗೋಟವೇಂಟೆಗೆ ಮತ್ತಂ ಚಾಪಪ್ರವೀಣದುದ್ಗತಕೋಪರ್ನಡತಂದರಲ್ಲಿ ಮುಂದೆ ಪುಳಿಂದರ್ (ಸೂತ್ರಸು. ೮-೧೦೪). **ಸೋವ್ವು$_2$**: ೨. (ಕರಾ) ಕಾಡಿನಲ್ಲಿ ಪ್ರಾಣಿಗಳು ನಡೆದಾಡುವುದರಿಂದ ಉಂಟಾದ ದಾರಿ; ಜಾಡು: ಈ ಸೋವಿನಲ್ಲೇ ಹುಲಿ ಹೋಗಿರಬೇಕು (ರೂಢಿ). ೩. ಸೂಚನೆ; ಸಂಕೇತ: ಪಗೆಯ ಸುಟಿವನಱಿವೊಡೆಂದು ಬಿಸುಗೈಯನಟ್ಟಿದ ಬೇಹುಕಾಱರ ಸೋವೆನಲಾಗಸದೊಳೆಡೆಯೆಡೆಯೊಳಱಿಲುಂ, ಭೂಮುಖದ ಮನೆಮನೆಯೊಳ್ ಸೊಡರುಮೆಸೆದುವು (ರಾಮಾಶ್ವ. ೨೨-೨೯). ೪. ಸುಳಿವು; ಸೂಕ್ಷ್ಮ: ತನ್ನ ಮನೆಯ ಮೇಲೆ ಅತ್ಯಾಚಾರ ನಡೆಯುವುದೆಂಬ ಸೋವು ಗೊತ್ತಾಗಿ, ವಿಶ್ವನಾಥಪಂತರು ತಮ್ಮ ಹೆಂಡತಿಯನ್ನೂ . . . ಕಳುಹಿಸಿದ್ದರು (ಎಧಿವ. ೨೪); ಸಾಂಬನಿಗೂ ಸೋವುಸಿಕ್ಕಿತು. ಬದಿಯಲ್ಲೇ ಮಡಗಿದ ಹಿಡಿಸೂಡಿಯನ್ನೆತ್ತಿಕೊಂಡ (ತ್ಯಾಗಮ. ೭೭). ೫. ಗಮನ; ಲಕ್ಷ್ಯ: ವರ್ಷದಲ್ಲಿ ಹತ್ತಾರು ಮಂದಿಯಾದರೂ ಕಾವಲುಗಾರರ ಸೋವನ್ನು ತಪ್ಪಿಸಿ ಪಲಾಯನ ಮಾಡುತ್ತಿದ್ದುದನ್ನು ಮರೆಯಲಾರದ ಸೆರೆಮನೆ ಅಧಿಕಾರಿ (ಓಂಕತ. ೮೪). ೬. (ಬೇಟೆಗಾರನಿಗೆ ಸಿಗುವ) ಶಿಕಾರಿ; ಬೇಟೆ: ಕೋಟಿ ಕೋಟಿ ಜನ, ಪರ್ಸದ ಪೂವು, ತುರುಗಿತು ಜವರಾಯನ ಬಾಯ್ ಸೋವು! (ಪಾರಸಿ. ೩೫-೮೦೦). **ಸೋವೆ$_1$**: ೪. ಆ ನಾಯಿ ಅದರಲ್ಲಿರುವ ಮೊಸಳೆಯ ಸೋವೆಯನ್ನರಿತು ನೀರಿನಲ್ಲಿಳಿಯಬೇಡವೆಂದು ಆತನನ್ನು ಸನ್ನೆ ಮಾಡಿತು (ಕಥಾಮಂ. IV, ೭೪). ೭. (?): ಅರ್ಥಜನರಲ್ಲಲ್ಲಿ ಸೋವೆಗಳ ತಿಳಿದಾಗ ಪರ್ದು ಮಾಡಿತ್ತೆಂಬರಗ್ನಿಸತಿಗೈದಿರವನಾರ್ಥರೆಯೊಳಱಿಯದಿರಿ (ಲಕ್ಷ್ಮೀಭಾ. ೩-೨೩-೩೩). **ಸೋಹ್ಪು$_2$**: ೧. ಸೋಹಿನಲಿ ಬೆನ್ನಟ್ಟಿ ಪಾರ್ಥಕುಮಾರ ಸದೆದನು ವೈರಿಮೃಗಕುಲವ (ಕುವ್ಯಾದ್ರೋ. ೫-೭೪); ಸರಳ ಸೊಂಪಿನ ಸೋಹಿನಲಿ ನಿಱಿಗರುಳ ದಾವಣಿವಲೆಗಳಲಿ . . . ಸಮರದೊಳರಿಮೃಗವ್ರಾತವನು ಭೀಮಕಿರಾತ ಕೈಕೊಂಡ (ಕುವ್ಯಾದ್ರೋ. ೧೨-೩೧). ೮. ಪ್ರಾಣಿಗಳನ್ನು ಅಡಗಿರುವ ಸ್ಥಳದಿಂದ ಎಬ್ಬಿಸಿ ಬೇಟೆಯಾಡುವ ಸ್ಥಳ: ನಿಂದು ಬೇಡರ ತೋಹುಸೋಹುಗಳ ಸಂದಿಯೊಳು ಪರಿದು ತಿರುಕಾಳತ್ತಿಮಲೆಯ ತಪ್ಪಲೊಳೆಲ್ಲ (ಕಣ್ಣರ. ದೇ. ೧೨೬-೨೦); ವನಾಂತರದೊಳ್ತೆರೆಯ ತೋಪಿನ ಸೋಹಿನ ನೀರಬೇಂಟೆಗಳುರ್ವರೆಗಳನೀಕ್ಷಿಸುತ್ತ ಬರೆ (ಅನಂಪು. ೧೧-೪೦). ೯. ಪ್ರಾಣಿಗಳನ್ನು ಅಡಗಿರುವ ಸ್ಥಳಗಳಿಂದ ಎಬ್ಬಿಸಿ ಬೇಟೆಗಾರರು ಹಾಕುವ ಕೂಗು,— ಬೊಬ್ಬೆ: ಬಲೆಗಾನಿರ ಸೋಹೆನಿಪ್ಪ ತತ್ಕಳಕಳಮುಣ್ಮೆ ಬೇಡವಡೆ ಬೊಬ್ಬಱಿದಾಡಿದುದಂದು ಬೇಂಟೆಯಂ (ದಶಕು. ೨-೧೧೪); ಸೋಹಿನ ಮಂತ್ರಮಯಸಂತತಿಯ ಸೊಂಪಿನ ವಿವಿಧ ಜಪಯಜ್ಞಾದಿಗಳ ಬಲೆಯ . . . ಯೋಗಸ್ಥಿತಿಯ ಸರಳಿನ ಶಬರರ್ಕೈದಿತು (ಕುವ್ಯಾಅ. ೫-೩೪). ೧೦. ಆಶ್ರಯ; ರಕ್ಷಣೆ: ಕಾಯಿ ಹೃದಯಾಕಾಶದ ಸೋಹಿನೊಳಿರುತಿಹ ಚಿತ್ಕಪೆ (ಗುರುಬ. ೪-೪). ೧೧. ಕಾವಲು; ಪಹರೆ: ಸಾಹಸದಿಂ ಪಡಲ್ಪಡಿಸಿ ಬೆಂಕೊಳಿಸಿದ ಸೋಹಿಲ್ಲದಂತೆಂಟು ಪೇಳ (ಗೂಢಚ. ೭-೧೧೨). **ಸೋಹೆ**: ೪. ಊಹೆಯಲ್ಲಿ ತಡವರಿಸಿ ಹೆಜ್ಜೆಯ ಗಾಹುಗತಕದೊಳಿಡುತ ಕಾಂತಿಯ ಸೋಹೆಯಱಿಯದೆ ಬೀದಿಯಲಿ ಕಂಡೆನು ಸರೋವರವ (ಕುವ್ಯಾಸ. ೧೨-೩೮). ೧೦. ದೊರಕಿದಾತಂ ಸವಿಯಬೇಹುದೇ ಮತ್ತಾರ್ಗೆ ದೊರೆಕೊಳುವುಪಾಯಕ್ಕೆ ಸೋಹೆಯಂ ಕೊಡಲಾಗದೇ ಜಗಜ್ಜನದ ಕೃಪೆಗೆ (ಸಿದ್ಧರಾ. ೯-೪೧).

ಸೋಹೆ ಸೋಹೆ (ದ್ವಿರುಕ್ತಿ): ಭೂಭುಜನಾತ್ಮಹಿತವ ಸೂಸಿದನು . . . ಸೋಹೆಸೋಹೆಯೊಳಾಡಿ ಹೋಗುತಿರ್ದನು (ಭರಚ. ೬೦-೫). **ಸೋವಿನ ಕಾಕು** = ಬೇಟೆಗಾರರು ಬೇಟೆಯಾಡುವುದಕ್ಕಾಗಿ ಪ್ರಾಣಿಗಳನ್ನು ಎಬ್ಬಿಸಲು ಹಾಕುವ ಕೂಗು ,— ಬೊಬ್ಬೆ : ಎಲ್ಲರೂ ಸೋವಿನ ಕಾಕು ಹಾಕುತ್ತಾರೆ (ಚಂದ್ರಸ. ೨೮-೧೫). **ಸೋವು ಬೇವು ಮಡಗು** = ಪಹರೆಯವರು ಮತ್ತು ಗೂಢಚಾರರನ್ನು ನೇಮಿಸು: ಚತುರೋಪಾಯದಿಂದಾ ಸೋವು ಬೇವು ಮಡಗಿ . . . ತುಂಟರನ್ನು ಹಿಡಿಮ ಕಳುಹುತ್ತೇನೆ (ರಾಜೇಂದ್ರ. ೨೬೭). **ಸೋವು ಹಿಡಿ** = ಸುಳಿವನ್ನು ಹಿಂಬಾಲಿಸು: ಅವನು ಚಮತ್ಕಾರದಿಂದ ಸೋವು ಹಿಡಿದು ಪ್ರಕರಣ ತಲಾಮ ಮಾಡಿದ್ದಕ್ಕಾಗಿ . . . ವಾಗ್ದೇವಿಯ ಮತ್ತು ಚಂಚಲನೇತ್ರರ ಕೃತಜ್ಞತೆಗೂ ಭಾಗಿಯಾದನು (ವಾಗ್ದೇವಿ. ೧೪೬). **ಸೋಹಿನ ಬೇಂಟೆ** = ಮೃಗಗಳನ್ನು ಬೆನ್ನಟ್ಟಿ ಆಡುವ ಬೇಟೆ: ನಾರೀಜನ ಮೆಯ್ದುತು ಮನಸಿಜಮಧುಮಾರುತರಾಡುವ ಸೋಹಿನ ಬೇಂಟೆಗೆ ಭೀರುತೆಯಿಂದೊಳಗಾಗಿ ನಡೆವ ಮೃಗಗಣವೆಂಬಂದದೊಳು (ಜಯಕಾ. ೫-೩೧).

[ಸೋ$_1$ + - ಪ್ಪು$_2$/ತುಳು. ಸೋವು, ತೋವು]

ಸೋಪ್ಪು$_2$ 'ಸೋಂಪು' ನೋ.

ಸೋಪ್ಪು$_3$ (ನಾ). ಸಾಬೂನು; ಸಬಕಾರ: ಸೋಪು, ವ್ಯಾಸೆಲೈನ್. . . ಮೋಟರು ಎಲ್ಲ ಬಹುವಾಗಿ ಪರದೇಶದವು (ಜಣಪ್ರ. ೧೦); ಪ್ರಾರ್ಥನೆ ತೊಡೆವುದು ಮನದ ಕಿಲ್ಬಿಷವನು ಆ ಸೋಪು ಸೀಗೆಗಳಂತೆ (ಚಂದ್ರವೀ. ೧೧೪-೫೬). [← ಇಂ. Soap]

ಸೋಬತಿ, ಸೋಬತು, ಸೋಬತೆ, ಸೋಬತ್ತು (ನಾ). (ಉಕ) ೧. ಅಧೀನ; ವಶವರ್ತಿಯಾದ ವ್ಯಕ್ತಿ: ಆತನ ಚಿಕ್ಕದಂದಿನೊಳಗಿನ ಕೆಲವರು ಪ್ರಾಣಕ್ಕೆ ಎರವಾಗಿ, ಕೆಲವರು ಸೆರೆಮನೆಯ ಸೋಬತಿಯಾದದ್ದನ್ನು ಅವರೇನು ಬಲ್ಲರು? (ಕುಮುದಿ. ೫೪); ಸೂಳೆಯ ಸೋಬತಿಯಾದ ಗಂಡನ ನೆನಸಿ ಫಲವೇನು (ಕನ್ನಡಾ. ೧೨೮). ೨. ಒಡನಾಟ; ಸಂಗ; ಸಹವಾಸ: ಈ ಸುಂದರಿಯ ಜನ್ಮದ ಸೋಬತಿಯು ತನಗಾದರೆ ಧನ್ಯನಾದೇನು (ಕನ್ನಡಿ. ೧೩೧); ಶ್ಯಾಮರಾಯನ ಸೋಬತೀ ಬಿಟ್ಟರ ಸಾಕಂತ (ದೀಪಕ. II, ೧೬೧); ಗಂಡಸು ಸೂಳೆಯ ಸೋಬತಿ(ಸಹವಾಸ) ಮಾಡಿರುವನು (ಕನ್ನಡಾ. ೧೧೨). ೩. ಒಡನಾಡಿ; ಸಂಗಾತಿ: ಆ ಸುಕುಮಾರ ಮಂಜುಘೋಷೆಯು ಇನ್ನು ಎಂಟು

ಹತ್ತು ದಿನ ಸೋಬತಿಯಾಗಿದ್ದಾಳೆ (ಮಂಜುಳ. ೧೦೭). ೪. ಈಡು; ಗುರಿ: ನಾನೀಗ ಯಾವ ಮುಖದಿಂದ ನಗರಕ್ಕೆ ಹೋಗಲಿ . . . ಇನ್ನೇನು ಒಂದು ಹಾಳುಬಾವಿಗೆ ಸೋಬತಿಯಾಗಲೆ? (ಸ್ಮೃತಿ. ೩೨೪). ೫. ತಂಗುವಿಕೆ; ವಾಸ್ತವ್ಯ; ವಾಸ: ಅವರ ಸರಮನೆಯ ಸೋಬತಿಯಿಂದ ನಮಗೇನಾದರೂ ಸಂತಾಪವಾಗಿದ್ದರೆ ಅದನ್ನು ಕಾರ್ಯತಃ ನಾವು ತೋರಿಸೋಣ (ಮಾಧವ. II. ೨೦೨). ೬. ಗುಂಪು; ಸಮೂಹ: ನಾಗಮಂಗಲದ ಭಟರು ಸೋಬತಿಯ ಕಟ್ಟಿ ಬೇಗದಿಜ್ಜಿದು ತುರುಕರನು ಬೇಗದೆ ಮೂಱುಸಾಸಿರ ಮೂಗರಿದಾಗ ರಾಗದೆ ಜಸವ ಬೀಜ್ಜಿದರು (ಕಂನವಿ. ೧೩-೫೯).

ಸೋಬತು: ೨. ಅದೇನು ಇವತ್ತಿನ ಸೋಬತೇ, ಬಿಡಾಕ? (ಹೊಸಂಪಾ. ೧೪).

ಸೋಬತೆ: ೨. ಇದು ಒಳ್ಳೆಯ ಸೋಬತೆಯಲ್ಲ ಶಾಮಾ! (ರಂಗರೂ. ೧೦೯); ಹಳ್ಳೀ ಊರ ಸೋಬತೇನ ಬಿಡತಿರಲಿಲ್ಲ (ದೀಪಹ. I. ೧೪).

ಸೋಬತ್ತು: ೨. ಈ ಚೇಲೇರ ಸೋಬತ್ತಿನಲ್ಲಿ ಇದ್ದ ಎರಡುಜನಕ್ಕೆ ತಾವು ಚೆನ್ನಾಗಿ ಶಿಕ್ಷೆಮಾಡಿದಂಥಾದ್ದು, ಲೋಕದ ಯಾವತ್ತು ಜನರು ತಿಳಿದು ಇದ್ದಾರೆ (ರಾಜೇಂದ್ರ. ೧೧೧).

[← ಅರ. ಹಿಂ. ಸೋಹಬತ್; ಮರಾ. ಸೋಬತ್, ಸೋಬತೀ, ಸೋಭತ್]

ಸೋಬತು 'ಸೋಬತಿ' ನೋ.

ಸೋಬತೆ 'ಸೋಬತಿ' ನೋ.

ಸೋಬತ್ತು 'ಸೋಬತಿ' ನೋ.

ಸೋಬಸ 'ಸೋಬಾನೆ' ನೋ.

ಸೋಬನವಾಡು, ಸೋಬಾನಹಾಡು (ನಾ). ಮದುವೆ ಮುಂತಾದ ಮಂಗಳ ಪ್ರಸಂಗಗಳಲ್ಲಿ (ಸಾಮಾನ್ಯವಾಗಿ ಒಟ್ಟಾಗಿ) ಹಾಡುವ ಹಾಡು; ಸೋಬಾನೆ: ಬಣ್ಣಗೂರಲ್ಕೆದಯರ್ ಸೋಬನವಾಡಂ ಪಾಡುಗೆ (ಚಕವಂ. ೧೪೮-೭). **ಸೋಬಾನಹಾಡು:** ಲಗ್ನ ಮುಹೂರ್ತಗಳಲ್ಲಿ ಸೋಬಾನಹಾಡು, ಶಿವರಾತ್ರಿ ಯುಗಾದಿಗಳಲ್ಲಿ ಕಂಬಿಯ ಹಾಡು . . . ಮೊದಲಾದುವುಗಳನ್ನು ಕಾಣಬಹುದು (ಕನ್ನಡಾ. X. ಪ್ರಸ್ತಾವನೆ). [ಸೋಬನ (< ಸೋಬಾನೆ) + ಹಾಡು (< ಪಾಡು)]

ಸೋಬಲಕ್ಕಿ 'ಸೋಗಿಲಕ್ಕಿ' ನೋ.

ಸೋಬಸ್ಕರ, ಶೋಭಸ್ಕರ, ಸೋಯಸ್ಕರ, ಸೋಯಿಸ್ಕರ (ಗು). ೧. ಅಗತ್ಯವಾದ; ಅವಶ್ಯಕವಾದ. (ನಾ). ೨. = ಸೋಪಸ್ಕರ ೧: ಆ ರುತ್ವಿಕ್ಕುಗಳನವಿಳಸೋಬಸ್ಕರಂಗಳಂ ಕೂಡಿ ಬಳಿಕ ಕ್ರತುವನೊಡರಿಬದನಾ ಪಾಪ (ವೀಶ್ಯಪ್ಪ. ೩-೨-೧೭); ಜೋಡಿಸುವೆ ಸೋಬಸ್ಕರಂಗಳ ಮಾಡಿಸಲು ಮದುವೆಯನು (ಅರ್ಜಾವಿ. ೧೮-೨೭); ಮನೆಯಲ್ಲಿ ತೃಣಕಾಷ್ಠಜಲಾದಿ ಸಕಲ ಸೋಬಸ್ಕರಗಳುಂ ತುಂಬಿಯೇಯಿಹವು (ಶುಕಪ. ೪). ೩. = ಸೋಪಸ್ಕರ ೩: ಅಕ್ಕಿ ಬೇಳೆ ಮೊದಲಾದ ಸೋಬಸ್ಕರಂಗಳ ಕೊಡುವೆವು (ಕಲುವಾ. ೧೦೪-೧೦); ದೊರೆಯು ಇವಳ ತೊಟ್ಟಿಗೆ ಕೊಡುತಾ ಇದ್ದ ಖಾಸಾ ಸೋಬಸ್ಕರವನ್ನು ದಿನಕ್ರಮೇಣ ಕಡಿಮೆ ಮಾಡುತಾ ಕಡಗೆ ಕಗ್ಗಲ ರಾಗಿ ಮುಗ್ಗಲ ಹುರುಳಿಗೆ ಇಳಿಸಿದನು (ಪೆಚಮಾ. ೧೭). ೪. ಅನುಕೂಲ; ಸೌಲಭ್ಯ. **ಶೋಭಸ್ಕರ:** ೩. ಪ್ರಾಕುದೂರಗಳು ಶಿಕಾರಿಗೆ ಬಂದು ಇದ್ದಾಗ್ಗೆ, ಅಡಿಗೆ ಶೋಭಸ್ಕರ ಕೊಟ್ಟು ಉಪಕಾರ ಮಾಡಿ ಇದ್ದೀರಿ (ರಾಜೇಂದ್ರ. ೬೧). **ಸೋಯಸ್ಕರ:** ೧. ಏರೀದಿ ಬಂದ ವೇಳೆಯಲ್ಲಿ ಬಹಳ ಠಿಕಾಣಿ ತಿರುಗಬೇಕಾಗುತ್ತದೆ, ಇದರ ಹೊರ್ತು ಮನಸ್ಸಿನಂತೆ ಸೋಯಸ್ಕರಮಾಲು ಸಿಗುವುದಿಲ್ಲ (ಮುಂಬವ್ಯಾ. ೧೯೬). **ಸೋಯಿಸ್ಕರ:** ೪. ವ್ಯಾಪಾರಿ ಜನರಿಗೆ ಸೋಯಿಸ್ಕರ ಆಗಬೇಕೆಂದು ನಮ್ಮ ಇಚ್ಛೆಯು ಬಹಳ ಇರುವುದರಿಂದ (ಮುಂಬವ್ಯಾ. ೨೫೨). [< ಸಂ. ಸೋಪಸ್ಕರ]

ಸೋಬಾನ 'ಸೋಬಾನೆ' ನೋ.

ಸೋಬಾನಹಾಡು 'ಸೋಬನವಾಡು' ನೋ.

ಸೋಬಾನೆ, ಶೋಬಾನ, ಶೋಭಾನ, ಶೋಭಾನೆ, ಸೋಬನ, ಸೋಬಾನ, ಸೋಭಾನ, ಸೋಭಾನೆ, ಸೋವನ (ನಾ). ೧. = ಸೋಬನವಾಡು: ಚಾರುಮುತ್ತೈದೆಯರೆಲ್ಲಾ ಸೇರಿ ಸೋಬಾನೆಯ ಪಾಡುತ ಬಂದಲ್ಲಿ ಆರತಿಗಳನು ಯತ್ತಿದರು (ಕಾಗಂಪ. ೧೧-೪೩); ಕಲರವದೊಳು ಯಮುನೆ ಹರಿಯೆ ಸೋಬಾನೆಯ ತರುಗಳುಲಿಯೆ (ಗೋಕುನಿ. ೨೯-೨). ೨. ಶುಭ, ಮಂಗಳ ಎಂಬಂತೆ ಹಾಡಿನ ಅಥವಾ ಹಾಡಿನ ಸಾಲಿನ ಕೊನೆಯಲ್ಲಿ ಸೇರಿಸುವ ಒಂದು ಶಬ್ದ: ಸೋಬಾನೆ ಎನ್ನುವುದಕ್ಕೆ ಕೂಡ ಕೈಲಾಗದೇನರೆ, ಸುಪನಾತೀರ? (ಮಾಮರಾ. ೬೮). **ಶೋಬಾನ:** ೧. ಹಾಡ್ಕ ಶೋಬಾನಕ್ಕೆ ಬಹಳದಿ ಕಾಡ್ಕ ತುಡುಸಾಧನಕೆಯಂತ್ಕ ಚೋಡುಗಟ್ಟುಲುಬಹುದೆ (ಚ್ಯಾಸಂ. ೨೩-೨೫). **ಶೋಭಾನ:** ೩. ಮಂಗಳಕರವಾದ ಗೀತೆ ,— ಪದ : 'ಶೋಭಾನಪಾಠಕ' ಪರಾ. **ಶೋಭಾನೆ:** ೧. ಶೋಭಾನೆಗಳ ಸೊಲ್ಲುಗಳಲ್ಲಿಯೂ . . . ಗುರುಲಘು ಅಕ್ಷರನಿಯಮಕ್ಕೆ ತುಂಬ ಅಪವಾದಗಳು ಕಾಣಿಸುತ್ತಿವೆ (ಸಂಶೋಧ. ೧೧೦). ೪. ಮದುವೆ, ಮುಂಜಿ ಮುಂತಾದ ಶುಭಸಮಾರಂಭ ,— ಮಂಗಳಕಾರ್ಯ: ರಾಗಿ ಬೀಸುವ ಹಾಡೋ ಶೋಭಾನೆಯ ಹಾಡೋ ವೃತ್ತಿಯಾಗದೆ ಹೋಗಿಲ್ಲವೇ ? (ಜಾನಪೀ. ೧೦). **ಸೋಬನ:** ೧. ಸೋಬನಮನೆಯದರಾದರದಿಂದೆ ಪಾಡುಗೆ (ಚಕವಿ. ೪-೩೪). ೪. ನೀಲವರಣ ಬಳಿಯವರ್ಯಾ ನಮ್ಮವಗಳಿರ್ಯಾ ಬೇಗ ಸೋಬನಕ ಬರಬೇಕು (ಹಳ್ಳಯ. ೧೩೨). ೫. ನಿಷೇಕ; ಪ್ರಸ್ತ: ನೆನ್ನೆ ಮದುವೆಯಾದ ದಂಪತಿಗಳಿಗೆ ಇಂದು ಅವರ ಮನೆಯಲ್ಲಿ ಸೋಬನ ಇಟ್ಟುಕೊಂಡಿದ್ದಾರೆ (ರೂಢಿ). **ಸೋಬಾನ:** ೧. ಅಲ್ಲಿದ್ದವರಲ್ಲಿ ಅನೇಕರು ಸೋಬಾನದಲ್ಲಿ ಪದವೀಧರೆಯರು. ಆದರೂ ಯಾರೂ ಬಾಯಿ ಬಿಡಲೊಲ್ಲರು! (ಸುವಸಂ. ೫೦); ಹಾಡುತಿಹವೆ ಸೋಬಾನಹಕ್ಕಿ? - ಇಲ್ಲ- ಇದು ಮರದುಲಿ (ಹೂಪಾದಿ. ೮-೨೫); ಗೂಬೆ ಕೈಯಲ್ಲಿ ಸೋಬಾನ ಹಾಡಿಸಿದ ಹಾಗೆ (ಗಾಡ). ೪. ಸೊಸೆ ಸತ್ತ ಮನೆಯಲ್ಲಿ ಸೋಬಾನ (ಅಲ್ಪವಿ. ೪೧). **ಸೋಭಾನ:** ೪. ನಟ್ಟನೆ ಭೇರಿ ಸೂಳ್ಕಿಸಿತಾಗಳೆ ಗುಡಿಯಿಟ್ಟುದೊಯ್ಯರದಿ ಸೋಭಾನ (ನಾಗಚ. ೩೬-೯೪). **ಸೋಭಾನೆ:** ೧. ಸೋಭಾನೆ ತಿಳಿಯದವಳು ಶೋಭನ ಮಾಡಳೋ (ಗಾಡ). **ಸೋವನ:** ೪. ಜಿನಪತಿ ದೇವದೇವ . . . ಖಿಳಕರ್ಮಕಂಚುಕಗಳಂ ವೆಜಪಿಂಗಿಸಿ ತೋಅಲಿರ್ದ ಸೋವನಮಿದಿರ್ವಂದು ನಿನ್ನ ಪದಪದ್ಮತಿಗಾಣಿಸಿತಂಜೆನಂಜೆನಿಂ (ಅನಂಪು. ೩-೪೪).

[< ಸಂ. ಶೋಭನ./ ತಮಿ. ಚೋವಾನ್ಕೆ; ತುಳು. ತೆಲು. ಸೋಬಾನ]

ಸೋಬೆ, ಸೋಭೆ (ನಾ). ಕಾಂತಿ; ಬೆಳಕು; ಪ್ರಕಾಶ: ಶೋಭೆ - ಸೋಬೆ (ಶಬ್ದಾನು. ೧೪೩. ಪ್ರಯೋ). **ಸೋಭೆ:** 'ಸೋಭಿಸು' ಪರಾ. [< ಸಂ. ಶೋಭಾ]

ಸೋಭಾನ 'ಸೋಬಾನೆ' ನೋ.

ಸೋಭಾನೆ 'ಸೋಬಾನೆ' ನೋ.

ಸೋಭಿಸು (ನಾ). ರಂಜಿಸು; ಶೋಭಿಸು: ಸೋಮೇಶಂ ಬಂದು ನಿಲ್ಲಲು [ರೂಢಿ] ಪುಲಿ[ಗೆ]ಯೂರೊಡೆಯ ಸೋಮಂ ಕಣ್ದು ಮಾಡಿದ ದವಾಲ್ಕಂ ಸೋಭಿಸುಗು (ಕಾಆ. ೭೮-೧೩-೨೧; 1088). [ಸೋಭೆ (< ಸೋಬೆ) + - ಇಸು]

ಸೋಭೆ 'ಸೋಬೆ' ನೋ.

ಸೋಮ (ನಾ). ೧. ಒಂದು ಬಗೆಯ ಸಸ್ಯ; ಕೋಡಂಬಳ್ಳಿ: ''ಸೋಮ ಮಮರ್ದುವಳ್ಳಿಯಕ್ಕುಂ'' (ಮಂಗರಾ. ೪೩-೪೩). ೨. ಸೋಮಸಸ್ಯದ ತಾಳು ಅಥವಾ ಕಾಂಡದಿಂದ ತೆಗೆದ ರಸ; IP ಮತ್ತು ಬರಿಸುವ ಈ ರಸವು ಯಜ್ಞ ಯಾಗಾದಿಗಳಲ್ಲಿ ದೇವತೆಗಳ ಪ್ರೀತ್ಯರ್ಥವಾಗಿ ಅರ್ಪಿಸುವ ಬಹು ಮುಖ್ಯವಾದ ವಸ್ತುಗಳಲ್ಲಿ ಒಂದು ಎಂಬ ನಂಬಿಕೆಯಿದೆ: ಭಾಂಡ ಭಾಂಡ ಸೋಮವು ಸಿದ್ಧವಾಗಿದೆ (ಮಹಾಭಾ. ೧೦೪). 'ಸೋಮಪಾನ', 'ಸೋಮಯಾಗ' ಪರಾ. ೩. ಅಮೃತ; ಸುಧೆ. ೪. ಚಂದ್ರ: ''ಇಂದುಃ, ಚಂದ್ರಃ, ಚಂದ್ರಮಾಃ, ಓಷಧೀಶಃ, ಸೋಮಃ . . . ದಾಕ್ಷಾಯಣೀರಮಣಃ - ಈ ೨೧ ಚಂದ್ರನ ಪೆಸರ್'' (ಹಲಾಯು. ೪-೪೨); ಸುಧಾಧವಳಧಾಮಂ ಸೋಮನೊಳ್ . . . ಸಮಾನಮೆನಿಕುಂ ಪ್ರೋತ್ತುಂಗಚೈತ್ಯಾಲಯಂ (ಪುಷ್ಪಪು. ೨-೭೫); ರಾಮನಡಿಯಿಟ್ಟ ನೆಲ . . . ಸೋಮನಂ ಪೆತ್ತ ಕಡಲೀ ಪುರಾತನಗಳಿರೆ ನಾಮೆಂತು ಹೊಸಬರೆಲೊ (ಮಂಕುಕ. ೧೩೦). ೫. ಕರ್ಪೂರ. ೬. ನೀರು; ಜಲ. ೭. ಗಾಳಿ; ವಾಯು. ೮. ಶಿವನ ಹೆಸರುಗಳಲ್ಲಿ ಒಂದು: ಸೋಮ ಸೋಮವಿಭೂಷ . . . ಪಂಪಾಧಿಪತಿ ವಿರೂಪಾಕ್ಷ ಕರುಣಿಸುವುದೆಮಗೆ (ಹಚಕಾ. ೧-೩); ನುತಿಪೆಂ ವಿಶ್ರುತ ವೀರಶೈವಶರಧಿ ಶ್ರೀಸೋಮನಂ ಸೋಮನಂ (ರಾಜಶೇ. ೧-೧೮). ೯. ಮುನಿಗಳ ಗುಂಪು. ೧೦. ಯಮ. ''ಸೋಮನೊಳು ಸುಧೆಯೊಳಂತಕನೊಳು ಸಮೀರನೊಳು

ಸೋಮಧರನೊಳು ವಾರಿಯೊಳು ವಲ್ಲಿಯೊಳು ಮುನಿಸ್ತೋಮದೊಳು ಕರ್ಪೂರದೊಳು ಸೋಮವನಿಸಿರ್ಕು'' (ಮಂಗರಾ. ೧೪೮-೪೨). ೧೧. ಕದಿರು; ಕಿರಣ. ೧೨. ಕುಬೇರನ ಹೆಸರುಗಳಲ್ಲಿ ಒಂದು. ೧೩. ಸುಗ್ರೀವ. ೧೪. ಕೋತಿ; ಮಂಗ. ೧೫. ಅಷ್ಟವಸುಗಳಲ್ಲಿ ಒಬ್ಬ. ೧೬. ವಾರದ ಎರಡನೆಯ ದಿನ; ಭಾನುವಾರದ ಮರುದಿನ. ೧೭. ಅಕ್ಕಿಗಂಜಿ; ಅಂಬಲಿ: ''ಅಭಿಷವಂ, ಅವಂತಿ, ಸೋಮಂ, ಶುಷೋದಕಂ, ಶುಕ್ಲಂ - ಈ ೫ ಅಕ್ಕಿಗರ್ಕು'' (ಪರಾಯು. ೫೩-೧೬೩). ೧೮. ಆಕಾಶ. ೧೯. ಸ್ವರ್ಗ. ೨೦. ಯುಗದ ಆದಿಯ ದೊರೆ. ೨೧. ಒಬ್ಬಾತನ ಹೆಸರು: ಪುಲಿ[ಗೆ]ಯೂರೊಡೆಯ ಸೋಮಂ ಕಣ್ಣು ಮಾಡಿದ ದೆವಾಲ್ಯಂ ಸೋಭಿಸುಗು (ಕ್ಞಾಶ. ೭೮-೧೩-೨೧; 1088). ೨೨. ದೇಹದಲ್ಲಿರುವ ಒಂದು ನಾಡಿ; ಇಡಾನಾಡಿ: ಅಲ್ಲಿಪ್ಪ ಮಹಾಲಿಂಗಮಂ ಶರಣಮಂತ್ರಮಾಲೆಯಂ ಮಾಡಿ ಮನದಲ್ಲಿ ಧರಿಸಿ ಸೋಮಸೂರ್ಯರ ಕಾಲಾಟಮಂ ನಿಲಿಸಿ (ಘನವ. ೫೦-೪೫). ೨೩. [ಶೈವ] ಶೈವಪಂಥಗಳಲ್ಲಿ ಒಂದು: ಶೈವ ಪಾಶುಪತ ಸೋಮ ಲಾಕುಳ ಮೆಂಬ ಶಾಸ್ತ್ರಾಂತರಂಗಳ್ಗೇ ಶುದ್ಧ ತಾಂತ್ರಿಕ ಪ್ರತಿಪಾದಕಂಗಳು (ವಿವೇಕ. ೧೨೯). ೨೪. [ಗಣಿತ] ಒಂದು ಎಂಬುದರ ಸಂಕೇತ : ಶಶಿ . . . ಸೋಮಂ ಸುಧಾಂಶು . . . ಇಳೆ ರೂಪತ್ಯೆಕಮೊಂದಱ ನಾಮಂ (ವ್ಯವಹಾ. ೯-೧). ೨೫. [ಧಂದ] ಒಂದು ಗಣದ ಹೆಸರು: ಸೋಮ ಹರಿಯುಂ ಕಾಮಹರನುಂ ತಾಮಿರೆ ಪೆಸರ್ ಪ್ರೇಮಂ (ಧಂಬೋಧಿ. ೨-೭೨).

ಸೋಮನ ಕುಣಿತ = ಗ್ರಾಮದೇವತೆಯ ಅಂಗರಕ್ಷಕ ದೇವತೆಯನ್ನು ಕುರಿತು ಮಾಡುವ ಒಂದು ಬಗೆಯ ನೃತ್ಯ: ಸೋಮನನ್ನು ಗ್ರಾಮದೇವತೆಯ ಅಂಗರಕ್ಷಕನೆಂದರೂ ಒಪ್ಪುತ್ತದೆ. ಈ ಜಾತ್ರೆ ಉತ್ಸವಸಂದರ್ಭಗಳಲ್ಲಿ ಸೋಮನ ಕುಣಿತ ಪ್ರಧಾನವಾದ ದೃಶ್ಯ (ಕಜಕ. ೧೭೯). [ಸಂ.]

ಸೋಮಕಾಯಿಕ (ನಾ). [ವೀಶೈ] ಅರವತ್ತುಮೂರು ಬಗೆಯ ಕಾಯಕಗಳಲ್ಲಿ ಒಂದು : ಸಂತೆಕಾಯಿಕ ಸೋಮಕಾಯಿಕ ಕಂತೆಕಾಯಿಕ ಇರುಳಕಾಯಿಕವೆಂತವಕೆ ಪೆಸರಿಟ್ಟು ಅರುವತ್ತೂರು ಕಾಯಿಕವನಂತು ವಿರಚಿಸಿ (ಬಿಜ್ಜಳ. ೪೮-೫೨). [ಸಂ.]

ಸೋಮಕುಲ (ನಾ). ಚಂದ್ರನು ಮೂಲಪುರುಷನಾಗಿರುವ ಕುಲ; ಚಂದ್ರವಂಶ: ಈ ಸೋಮಕುಲವೆರಡಾಯ್ತು ಯದು ಪೂರುಗಳ ದೆಸೆಯಿಂದ (ಕುವ್ಯಾಚ. ೨-೧೭). 'ಸೋಮಕುಲಜ' ಪರಾ. [ಸಂ.]

ಸೋಮಕುಲಜ (ನಾ). ಚಂದ್ರವಂಶದಲ್ಲಿ ಹುಟ್ಟಿದವನು: ಆ ಮಹಾಮೋಹರವನೊಡೆಯಲು ಸೋಮಕುಲಜರು ಭೀತರಾದರು (ಕುವ್ಯಾದ್ರೋ. ೪-೩೩). [ಸಂ.]

ಸೋಮಗಾವುಂಡ (ನಾ). ಒಬ್ಬಾತನ ಹೆಸರು: ಸೋಮಗಾವುಂಡನ ಮಗಂ ಬಮ್ಮಗಾವುಂಡನುಂ . . . ಮೆಚ್ಚಿ (ಎಕ. IV(R), ಚಾಮರಾ. ೧೨೩-೫; ಸು. 10ನೆಯ ಶತ).

[ಸೋಮ + ಗಾವುಂಡ (< ಗಾಮುಂಡ)]

ಸೋಮಗ್ರಹಣ (ನಾ). ಚಂದ್ರನ ಮೇಲೆ ಭೂಮಿಯ ನೆರಳು ಬೀಳುವಿಕೆ; ಚಂದ್ರಗ್ರಹಣ; ಉಪರಾಗ: ಸಾಮ್ಯವೆಲ್ಲವಂ . . . ಸೋಮಗ್ರಹಣದೊಳ್ ಕಾಲಂ ಕರ್ಚಿ ಧಾರೆಯೆಱುದು ಕೊಟ್ಟರ್ (ಎಕ. III(R), ನಂಜನ. ೨೯೪-೮; 977); ಬರೆ ಸೋಮಗ್ರಹಣಂ ಎಲಗ್ಗದೊಳಿನಾಪತ್ಯೇಂದುಗಳ್ ಛಿದ್ರದೊಳ್ ಧರಣೀಸಂದನ ಕೂಡೆ ತಾಯ್ಸೆರಸು ಕಂದಂ ಪೊಂದುಗುಂ (ಚಾತಪ್ರ. ೬-೫೦). [ಸಂ.]

ಸೋಮಘಂಟೆ (ನಾ). ಒಂದು ಬಗೆಯ ಸಸ್ಯ: ''ಇಲಿವಾಳಮದು ಸೋಮ [ಪಾಠಾಂ. ನು]ಘಂಟಾನಾಮಮಕ್ಕುಂ'' (ಮಂಗರಾ. ೪೪-೪೬). [ಸಂ. ಸೋಮಘಂಟಾ]

ಸೋಮಜ (ನಾ). ಚಂದ್ರನ ಮಗ; ಬುಧ. [ಸಂ.]

ಸೋಮಡಿಗ (ನಾ). ಒಬ್ಬಾತನ ಹೆಸರು: ಅಮಿತಭಟ್ಟಡಿಗಳ್ಗೆ ಕೆಸಿಲ್ಮನೆ ಒಡೆಒರ್ಗ್ಗಳೆಲ್ಲ ತಮ್ಮ ಕೆಲೆಯ ಕೆಲಗೆ ಕಲಿನಮಣ್ ಅವರ ಮಗನ್ನಿರ್ಸೋಮಡಿಗ ಕೊಟ್ಟರ್ (ಎಕ. III(R), ನಂಜನ. ೧೪೬-೪; ೩ನೆಯ ಶತ). [ಸೋಮ + ಅಡಿಗ]

ಸೋಮಣ (ನಾ). ಒಬ್ಬಾತನ ಹೆಸರು: ಭುವನಸಿಂಗಿಯರ ಮಗ ಸೋಮಣಂ . . . ಪಲರುಮನೋಡಿಸಿ (ಎಕ. X, ಕೋಲಾರ. ೨೩೨-೨; ಸು. 750). [ಸೋಮ + < ಅಣ್ಣ]

ಸೋಮತ್ವ (ನಾ). ಚಂದ್ರತ್ವವನ್ನು ಹೊಂದಿರುವಿಕೆ; ಚಂದ್ರನಾಗಿರುವಿಕೆ: ಸುರುಚಿರಮೆನಿಪ್ಪ ಮುತ್ತಿನ ಲಿಂಗಮಂ ಚಂದ್ರನಿರದೆ ಸದ್ಭಕ್ತಿಯಿಂದಂ ದೇಹದೊಳೆತಾಳ್ದು . . . ಸೋಮತ್ವಮಂ ಪಡೆದಿರ್ಪಂ (ಆರಾಚ. ೧-೪-೧೯). [ಸಂ.]

ಸೋಮಧರ (ನಾ). ಚಂದ್ರನನ್ನು ಧರಿಸಿದವನು; ಶಿವ: ವಿಪುಳಶ್ರೇಯ ಪದ್ಮಜ ಸೋಮಧರ ನಾರಾಯಣರು ಕೊಡಲಿ (ಕುವ್ಯಾಆ. ೧೦-೪೦).

ಸೋಮಧರನ ದಿನ = ಶಿವನನ್ನು ಪೂಜಿಸುವ ದಿನ; ಸೋಮವಾರ: ಸೋಮಧರನ ದಿನದಲ್ಲಿ . . . ಆತನನ್ನೆ ಧ್ಯಾನಿಸುತ್ತ ಬೆಟ್ಟವನ್ನು ಹತ್ತುತ್ತಿದ್ದಳು ಶಾಂತಲೆ (ಶಾಂತಲಾ. ೫೯೭). [ಸಂ.]

ಸೋಮಧರಮಾರ್ಗಣ (ನಾ). ಶೈವಾಸ್ತ್ರ; ಈಶಾನಾಸ್ತ್ರ: ಆ ಮಹಾಸ್ತ್ರದ ಹಾನಿರೋಷದ ತಾಮಸಾಗ್ನಿಯನೂಡಿ ಬಿಡಲುದ್ಯಾವನರ್ಜುನ ಕೊಂದನಗ್ಗದ ಜಾಜಿಶಾತಿತಮನ್ಮುವನು ಆ ಮಹಾಬಾಣಾಭಿಮುಖದಲಿ ಸೋಮಧರಮಾರ್ಗಣವನಿಂತೀ ಭೀಮವಿಕ್ರಮ ಕರ್ಣನೆಚ್ಚನು (ಕುವ್ಯಾಕ. ೨೩-೪೭). [ಸಂ.]

ಸೋಮಧಾರಿ (ನಾ). = ಸೋಮಧರ : ಅದಱಲಿ ಉದಕವಾದಡೆ ಸೋಮಧಾರಿಗ ಮಜ್ಜನಕ್ಕೆಱೆದಲ್ಲದೆಮ್ಮಯ್ಯ ತಾ ಮುಸುಡನೆತ್ತೀಗ ಭಾಷಿಸನೋ (ಬಸಪು. ೪೭-೧೧). [ಸಂ. ಸೋಮಧಾರಿನ್]

ಸೋಮನಾಥ (ನಾ). ಶಿವ: ಸೋಮನಾಥದೇವರ ಅಮೃತಪಡಿಗೆ ಮರುಜನಂಗಳು . . . ಕೆಱೆಯ ಕೊಟ್ಟೆವು (ಎಕ. VI(R), ಕೃಷ್ಣರಾ. ೮-೯; 1306). [ಸಂ.]

ಸೋಮಪ (ನಾ). ಸೋಮರಸವನ್ನು ಕುಡಿಯುವವನು; ಬ್ರಾಹ್ಮಣ: ''ಬ್ರಾಹ್ಮಣಂ . . . ಸೋಮಪಂ ವಿಪ್ರನೆಂದನಲು ಬ್ರಾಹ್ಮಣನ ಪೆಸರಕ್ಕುಂ'' (ಕುಂಗರಾ. ೬೩-೧). [ಸಂ.]

ಸೋಮಪಾನ (ನಾ). ಸೋಮರಸವನ್ನು ಕುಡಿಯುವುದು: ಅಗ್ನಿಪೂಜೆ ಮತ್ತು ಸೋಮಪಾನ ಆರ್ಯರು ಭರತಖಂಡಕ್ಕೆ ಬರುವುದಕ್ಕೆ ಮುಂಚೆಯೇ ಅವರ ಧರ್ಮದ ಅಂಗವಾಗಿತ್ತು (ಭಾರದ. ೨೦). [ಸಂ.]

ಸೋಮಮಣಿ (ನಾ). ಚಂದ್ರಕಾಂತಶಿಲೆ : ದಾಮೋದರನಂಗಸಂಗದೊಳಾ ಸತಿಯರ್ ಕಾಮಾಮೃತಮಂ ತಳೆದರ್ ಸೋಮಮಣಿಸ್ಥಳಗಳೊಸರ್ವವೋಲ್ ಶಶಿರುಚಿಯಿಂ (ಜಗವಿ. ೩-೭೪). [ಸಂ.]

ಸೋಮಯಜ್ಞ (ನಾ). ಸೋಮರಸವನ್ನು ಆಹುತಿಯನ್ನಾಗಿ ದೇವತೆಗಳಿಗೆ ಅರ್ಪಿಸಿ ಮಾಡುವ ಯಾಗ. [ಸಂ.]

ಸೋಮಯಾಗ (ನಾ). = ಸೋಮಯಜ್ಞ : ಸಾಮವೇದಸಂಹಿತೆಯಲ್ಲಿ ಬರುವ ಮಂತ್ರಗಳೆಲ್ಲವೂ ಮುಖ್ಯವಾಗಿ ಋಗ್ವೇದದಿಂದ ಆರಿಸಿ ಸೋಮಯಾಗದ ಉಪಯೋಗಕ್ಕಾಗಿ ಸಿದ್ಧಪಡಿಸಿದಂಥವು (ಭಾರದ. ೨೦); ಮೂರು ವರ್ಷಗಳಿಗೆ ಬೇಕಾದಷ್ಟು ಜೀವನದ್ರವ್ಯವಿದ್ದರೆ ಸೋಮಯಾಗ ಮಾಡಬೇಕೆಂದೂ ಅದಕ್ಕಿಂತ ಎಷ್ಟೆಷ್ಟು ಕಡಮೆಯಾದ ಐಶ್ವರ್ಯವಿದ್ದರೆ ಅಷ್ಟಷ್ಟು ಚಿಕ್ಕ ಚಿಕ್ಕ ಯಾಗಗಳನ್ನು ಮಾಡಬೇಕೆಂದೂ ಶಾಸ್ತ್ರವಿರುವುದು (ಓಂದಸಾ. ೨೫೮). [ಸಂ.]

ಸೋಮಯಾಜಿ (ನಾ). ಸೋಮಯಾಗವನ್ನು ಮಾಡಿದವನು: ಆ ಹೊನ್ನ ಧೇನುವನು ಕಡಿವುತಂ ಕೈವೊಯ್ದು ತಮ್ಮೊಳು ನುಡಿವುತಂ ಹಣೆ ಸೋಮಯಾಜಿಗೆ ಕೊಡುವ ಭಾಗಂ . . . ಎನುತ (ಬಸಪು. ೫೫-೧೬); ಅವರ ತೊತ್ತಿರ ಹೊಱಗೆಲಸದವದಿರ ಪಸಾಯಿತೆಯರಿಗೆ ವಡಿಗವ ನೀಡಲ್ಲರು ಸೋಮಯಾಜಿಗಳು (ಕುವ್ಯಾಆ. ೮-೯); ಆ ಸೋಮಯಾಜಿ ಹೋಮವ ಮಾಡುತಿಹನನುದಿನಂ (ಪತಿಲ. ೨-೩೬).

[ಸಂ. ಸೋಮಯಾಜಿನ್]

ಸೋಮಯ್ಯರಸ (ನಾ). ಒಬ್ಬಾತನ ಹೆಸರು : ಆತ್ರೇಯಗೋತ್ರರ್ ಶ್ರೀಮತ್ ಸೋಮಯ್ಯರಸರ ಮಗನೆಱೆಯಮಯ್ಯನ್ (ಎಕ. XI, ಚತ್ರದು. ೪೯-೬೪; 947).

[ಸೋಮ + ಅಯ್ಯ + ಅರಸ]

ಸೋಮರಸ (ನಾ). ಸೋಮಲತೆಯ ದೇಟುಗಳಿಂದ ತೆಗೆದ ರಸ : ಸೋಮರಸವು ಮಾಧುರ್ಯೋಪೇತವೂ ರಸವತ್ತಾದುದೂ . . . ಆಗಿದೆ (ಋಗ್ಭಾ. ೪೩); ಸೋಮರಸವು ಔಷಧಿವರ್ಗದಲ್ಲಿ ಕಾಣಿಸಿಕೊಂಡಾಗ ಸೋಮಲತೆಯಾಗುವುದು (ಮಹಾಭಾ. ೧೫೭). [ಸಂ.]

ಸೋಮರಾಗ (ನಾ). [ಸಂಗೀತ] ಒಂದು ರಾಗದ ಹೆಸರು : ಮಧುಮಾಧವ . . . ಗುಜ್ಜರಿ ಸೋಮರಾಗ . . . ಕರ್ನಾಟಕಬಂಗಾಳಮೆಂಬಿವೈತ್ತೇ ರಾಗಾಂಗ ದಿಂದಾದ ರಾಗಂಗಳು (ಎವೀಕ. ೧೮೮). [ಸಂ.]

ಸೋಮರಾಜಿ (ನಾ). ಒಂದು ಬಗೆಯ ಗಿಡ : "ಅವಲ್ಗುಜಃ, ಸೋಮರಾಜೀ . . . ಪೂತಿಫಲೀ - ೪ ಬಾಹುಜಿಗಯ ಪೆಸರುಗಳು" (ಸಿದ್ಧಾಂತಿ. ೧೫೬). [ಸಂ. ಸೋಮರಾಜೀ]

ಸೋಮರಾಸಿ (ನಾ). ಒಬ್ಬಾತನ ಹೆಸರು : ಶ್ರೀ ಸೋಮರಾಸಿಗಳ ಪ್ರತಿಷ್ಠೆ (ಎಕ. III(R), ಗುಂಡ್ಲುಪೇ. ೧೦೪-೧; 10ನೆಯ ಶತ). [ಸೋಮ + ರಾಸಿ,]

ಸೋಮರೋಗ (ನಾ). ೧. ಹೆಂಗಸರಿಗೆ ಬರುವ ಒಂದು ಬಗೆಯ ರೋಗ : ಪಾದರಿಬೇರಿನ ತೊಕ್ಕನ್ನು ಹಾಲಲ್ಲರೆದು ಕದಡಿ ೨ ದಿನ ಸೇವಿಸಲು ಪ್ರದರ, ಅಸ್ರಸ್ರಾವ, ಪಾಂಡುರೋಗ, ಸೋಮರೋಗ ಸಹ ಬಿಡುಗಡೆಯಹುದು (ಸಕವೈ. ೧೫೭). ೨. ಮಧುಮೇಹ; ಸಕ್ಕರೆಕಾಯಿಲೆ : ಆದಿತ್ಯಭಕ್ತನ ಬೇರು, ಹಿರಿಮದ್ದಿನ ಬೇರು . . . ಚೂರ್ಣಿಸಿ ಉತ್ತರಣಿ ಬೇರು, ಹಿಪ್ಪಲಿ ಹಾಕಿ ಹದದಲ್ಲಿಳುಹಿಕೊಂಡು ಸೇವಿಸಲು ಕಲ್ಲುಕಟ್ಟು, ಮೂತ್ರಕೃಚ್ಛ್ರ, ಸೋಮರೋಗ ಸಹ ಪರಿಹಾರ (ಸಕವೈ. ೩೮೩). [ಸಂ.]

ಸೋಮಲ (ನಾ). ಒಂದು ಬಗೆಯ ಧಾತು; ಅರಿದಾಳ; ಶಂಖಪಾಷಾಣ: ತವರಿನೊಳಗೆ ಗಂಧಕ, ಸೋಮಲ ಮುಂತಾದ ಪದಾರ್ಥಗಳು ಕೂಡಿರುತ್ತವೆ (ಮುಂಬಯಿ. ೬-೨೧); ಸೋಮಲದ ವಿಷಪರಿಣಾಮವನ್ನು ಅನುಭವಿಸಿದ ಹಿರಿಯನೊಬ್ಬ 'ಸೋಮಲವನ್ನು ತಿನ್ನಬೇಡಿರಿ' ಎಂದು ಹೇಳಿದರೆ (ಜನಜೀ. ೩೪). [← ಅರ. ಸುಂಬುಲ; ಹಿಂ. ಮರಾ. ಸೋಮಲ./ಸಂ. ಸೋಮಾಲಕ]

ಸೋಮಲಕಾರ, ಸುಂಬಳಕಾರ (ನಾ). = ಸೋಮಲ: ಕಬ್ಬಿಣವು ಬಹುತರವಾಗಿ ಅಮ್ಲಜ, ಗಂಧಕ, ಸೋಮಲಕಾರ ಇವುಗಳಲ್ಲಿ ಮಿಶ್ರವಾಗಿರುತ್ತದೆ (ಮುಂಬಯಿ. ೬-೧೮). **ಸುಂಬಳಕಾರ:** ಸುಂಬಳಕಾರ ಸುಡುವಲ್ಲಿ ಕೂತವನು ತತ್ಕಾಲವೇ ಮೂರ್ಛೆಗೈಯುತ್ತಾನೆ (ಮುಂಬಯಿ. ೫-೧೫೦). [← ಮರಾ. ಸೋಮಲಖಾರ್]

ಸೋಮಲತೆ (ನಾ). = ಸೋಮ ೧ : ಸೋಮರಸವು ದ್ವಿಜವರ್ಗದಲ್ಲಿ ಕಾಣಿಸಿಕೊಂಡಾಗ ಸೋಮಲತೆಯಾಗುವುದು (ಮಹಾಭಾ. ೧೫೭); ಸೋಮಲತೆಯಿಲ್ಲದಿದ್ದರೆ ಬೇರೆ ಸೊಪ್ಪನ್ನು ಉಪಯೋಗಿಸಿ ಯಾಗವನ್ನು ಮುಗಿಸುವರು (ವ್ಯಾಸಪಿ. ೧೪೩). [ಸಂ. ಸೋಮಲತಾ]

ಸೋಮಲಾಂಛನ (ನಾ). ಚಂದ್ರನನ್ನು ಲಾಂಛನವನ್ನಾಗಿ ತಲೆಯಲ್ಲಿ ಧರಿಸಿರುವವನು; ಶಿವ.

ಸೋಮಲಾಂಛನಲಾಂಛನರು = ಶಿವನನ್ನೆ ಚಿಹ್ನೆಯಾಗುಳ್ಳವರು: ಶಿವಭಕ್ತರು: ಸೋಮಲಾಂಛನಲಾಂಛನರು ಪರಿಣಾಮವಂಕುರಿಸಲ್ಕೆ . . ಮಾತುಗಳನಾಡುತ್ತ (ಬಸವ. ೨೫-೨). [ಸಂ.]

ಸೋಮವಂಶ (ನಾ). = ಸೋಮಕುಲ : ಆ ಸೋಮವಂಶಲಲಾಮನಪ್ರಿಯಮೂರ್ತಿ . . . ಮನಂಗೊಳಿಸಿದಂ (ಕಾಂತಿಪು. ೧೦-೮೮ ವ); ಈಯವಸ್ಥೆಗೆ ಸೋಮವಂಶದ ರಾಯತನವೆಂತಹುದು ಹೇಳೊ ತಾಯೆ (ಕುವ್ಯಾಲ. ೯-೬). [ಸಂ.]

ಸೋಮವರ್ತಿಶರ (ನಾ). ಒಂದು ಬಗೆಯ ಬಾಣ; ಈಶಾನಾಸ್ತ್ರ : ಆತನಲಿ ಸ್ಮೆರುತ್ಯವಿತ್ತಲು ಸೋಮವರ್ತಿಶರ ಆತನಲಿ ಸಾಮುದ್ರರೋಷಣವೀತನಲಿ ವಡಬಾಸ್ತ್ರ (ಕುವ್ಯಾಕ. ೨೩-೪೮). [ಸಂ.]

ಸೋಮವಲ್ಕ (ನಾ). ೧. ಒಂದು ಬಗೆಯ ಮರ; ಕಗ್ಗಲಿ : "ಕದರಃ. ಸೋಮವಲ್ಕಃ - ೨ ಬಿಳೀ ಕಗ್ಗಲೀಮರದ ಹೆಸರು" (ಸಿದ್ಧಾಂತಿ. ೧೨೩). ೨. ಒಂದು ಬಗೆಯ ಮರ; ಕಟ್ಟಿಲ. ೩. ಒಂದು ಬಗೆಯ ಸಸ್ಯ : "ಸೋಮವಲ್ಕಃ - ಕುಂಬಳದ ಗಿಡ. ಬಳಿತಾರೇಗಿಡ" (ಸಿದ್ಧಾಂತಿ. ೩೭೩). [ಸಂ.]

ಸೋಮವಲ್ಲರಿ (ನಾ). ೧. ಒಂದು ಬಗೆಯ ಸೊಪ್ಪಿನ ಗಿಡ : "ಬ್ರಾಹ್ಮೀ, ಮತ್ಸ್ಯಾಕ್ಷೀ, ವಯಸ್ಥಾ, ಸೋಮವಲ್ಲರೀ - ೪ ಹೊನಗೊನೇ ಸೊಪ್ಪು" (ಸಿದ್ಧಾಂತಿ. ೧೪೪). ೨. ಒಂದು ಬಗೆಯ ಗಿಡ ; "ಸೀಮೆಸದಾಪು" (ಸಸ್ಯಸಿ. ೧೧೫). [ಸಂ. ಸೋಮವಲ್ಲರೀ]

ಸೋಮವಲ್ಲಿ (ನಾ). ೧. = ಸೋಮ ೧ : "ಯಜ್ಞವಲ್ಲೀ, ಯಜ್ಞಶ್ರೇಷ್ಠಃ - ಈ ಯೆರಡುಂ ಸೋಮವಲ್ಲಿ" (ಓಷಧಿ. ೧೫೧); ಸೋಮವಲ್ಲಿಯ ಮುಸಲದ ವಿಹರಿಸುವ ದರ್ಭಾಸ್ತರಣದ ಚಮಸಾದಿಗಳ ಬಹುಸಾಧನಂಗಳಿಂ . . . ಮಖಶಾಲೆ ಕಣ್ಗೆಸೆದುದು (ಪೃಥ್ವಿಭಾ. ೩೩-೩೮). ೨. ಒಂದು ಬಗೆಯ ಸಸ್ಯ : "ಸೋಮವಲ್ಲಿ ವಾಕುಚಿಯಕ್ಕುಂ" (ವಸ್ತುಕೋ. ೩೭-೨೮). [ಸಂ. ಸೋಮವಲ್ಲೀ]

ಸೋಮವಾರ (ನಾ). ವಾರದ ಏಳು ದಿನಗಳಲ್ಲಿ ಎರಡನೆಯದು; ಚಂದ್ರನು ಅಧಿಪತಿಯಾಗಿರುವ ದಿನ : ಈಸ್ವರಸಂವತ್ಸರಸ್ರವಣಬಹುಳ ಅಷ್ಟಮಿ ಸೋಮವಾರ ಶ್ರೀಮನ್ಮಹಾಮಂಡಳೇಸ್ವರ ಕುಲೋತುಂಗ ಚೋಳ ಚಿಂಗಾಟ್ಟ ಒಡೆಯಾದಿತ್ಯದೇವರು ರಾಜ್ಯಂಗೆಯುತ್ತಿರಲು (ಎಕ. IV, ಹುಣಸೂ. ೫೭-೩; 1097 ?); ಸೋಮವಾರಮದಾದಿ ಯಾದೊಂಬತ್ತುದಿವಸಂ ವೇದಿತೋತ್ಸುಖವೃತ್ತಿಯಿಂ ಸಲೆ ನೋಂತು (ಬಸವ. ೨-೫೧). [ಸಂ.]

ಸೋಮವಾಹನ (ನಾ). ಶಿವನ ವಾಹನ; ನಂದಿ : ವಾಮಾಂಗ ಸೋಮವಾಹನ . . . ಬಸವೇಶ ನಮೋ (ಹಮ್ಮೀರ. ೫-೬). [ಸಂ.]

ಸೋಮವೀಥಿ (ನಾ). ಪಟ್ಟಣಗಳಲ್ಲಿ ದಕ್ಷಿಣೋತ್ತರವಾಗಿ ನಿರ್ಮಿಸಿದ ಮಾರ್ಗ,- ಬೀದಿ : ಅಲ್ಲಿಂದ ಮುಂದಕ್ಕೆ ಹೋಗಿ ಸೋಮವೀಥಿಯ ಕಂಡು ಪೊಕ್ಕು (ಅಮಂಡೇ. ೨೦೬-೪೬). 'ಸೂರ್ಯವೀಥಿ' ಪರಾ. [ಸಂ. ಸೋಮವೀಥೀ]

ಸೋಮವೀಧಿ (ನಾ). = ಸೋಮವೀಥಿ : ಒರಣದ ಹೊಂಗೆಲಸದವಿಳಾಗಾರ ಪಂಕ್ತಿಯ ಸೋಮವೀಧಿಯ ಸೂರವೀಧಿಯ ರಚನೆಯಲಿ ರಚಿಸಿದರು ಪಟ್ಟಣವ (ಕುವ್ಯಾಲ. ೧೨-೬). 'ಸೂರ್ಯವೀಧಿ' ಪರಾ. [< ಸಂ. ಸೋಮವೀಥೀ]

ಸೋಮಶಾಲಿ (ನಾ). ಒಂದು ಬಗೆಯ ಬತ್ತ: ಸೋಮಶಾಲಿಯ . . . ರಾಮಣೀಯಕವಾದ ಪುಷ್ಪಮಂಜರಿಯ ಸನಾಮದ ತೆನೆಗಳೊಪ್ಪಿಹುವು (ಹಂಸವಿ. ೫-೬೯). [ಸಂ.]

ಸೋಮಸಾಲೆ (ನಾ). ಮೊಗಸಾಲೆ; ಚಂದ್ರಸಾಲೆ : ಕೃಷ್ಣ . . . ಸೋಮಸಾಲೆಯೊಳು ಚಂದದಿಮ್ಮಣಿಮಯದ ಪೀಠದೊಳ್ಪತ್ನಿಯರ್ವೆರಸಿ ಸನ್ನರ್ತಿಗೊಂಡು (ಸಭಾಪ. ೧೧-೬). [< ಸಂ. ಸೋಮಶಾಲಾ]

ಸೋಮಾಂಕ (ನಾ). ಚಂದ್ರನನ್ನು ಗುರುತಾಗಿ ಉಳ್ಳವನು; ಶಿವ : ಸೋಮಾಂಕಂ . . . ಪೊರೆಗೆ ಸುಖಕರಂ ದಕ್ಷಿಣಾಮೂರ್ತಿಲಿಂಗಂ (ವೃಷವಿ. ೪೨-೪೮). [ಸಂ.]

ಸೋಮಾನ್ವಯ (ನಾ). = ಸೋಮಕುಲ : ಅಂದಂಬಡೆದ ಪೊಱವೀಡಂ ಸೋಮಾನ್ವಯಪ್ರದೀಪಂ ಪುಗುವಾಗಳ್ (ಶಾಂತಿಪು. ೧೦-೧೪೬ ವ). [ಸಂ.]

ಸೋಮಾರಿ (ನಾ). ಮೈಗಳ್ಳ; ಆಲಸಿ; ಸೋಂಬೇರಿ : ಸೋಮಾರಿಗಳಾಗಿದ್ದ ಪ್ರೇಕ್ಷಕರಿಗೆ . . . ವ್ಯಥೆಯಾಗುತ್ತಿತ್ತು (ರಾವಿಜ. ೧೨); ನೀನು ಶುದ್ಧ ಸೋಮಾರಿ (ಜಾಣಜ. ೫). 'ಸೋಂಬೇರಿ' ಪರಾ.

ಸೋಮಾರಿಕಟ್ಟೆ = ಮೈಗಳ್ಳರು ಸಮಯ ಕಳೆಯಲು ಹರಟುತ್ತಾ ಕೂರುವ ಸ್ಥಳ : ಈ ಊರಿಗೆ ಬಂದು ವರ್ಷವಾದರೂ ನೀನು ಹೇಳಿದ ಸೋಮಾರಿಕಟ್ಟೆ ಯಾವುದೆಂಬುದು ನನಗೆ ಗೊತ್ತೇ ಇಲ್ಲ (ಮರಲ. ೫೮).

[ದೇ. ॥ ತಮಿ. ಚೋಮಾಲಿ; ಮಲ. ತುಳು. ಸೋಮಾರಿ; ತೆಲು. ಸೋಮಾರಿ, ಸೋಮರಿ; ಕೋತ. ಚೋಮಾರಿ]

ಸೋಮಾರಿತನ (ನಾ). ಮೈಗಳ್ಳತನ; ಜಡತ್ವ : ಎಷ್ಟೋ ಜನರು . . . ಅಮೂಲ್ಯವಾದ ವೇಳೆಯನ್ನು ಸೋಮಾರಿತನದಲ್ಲಿ ವ್ಯರ್ಥವಾಗಿ ಕಳೆಯುತ್ತಾರೆ (ಮುಂಬಯಿ. ೪-೧೯೦); ಮನೆಯಲ್ಲಿ ಕುಳಿತು ಆಲಸ್ಯ ಮತ್ತು ಸೋಮಾರಿತನಗಳನ್ನು ಕಲಿಯುವುದಕ್ಕಿಂತ . . . ದುಡಿಯುವುದು ಮೇಲು (ವಾತ್ಸಲ್ಯ. ೯೬).

[ಸೋಮಾರಿ + - ತನ]

ಸೋಮಾಶ್ಮ (ನಾ). ಚಂದ್ರಕಾಂತಶಿಲೆ : ಸೋಮಾಶ್ಮದ ವೇದಿಕಾಗ್ರದೊಳ್ ನಿಂದವಳುದ್ದಾಮನಯನಾಂಶು ಪಸರಿಸೆ . . . ಈಕ್ಷಿಸಿದಳ್ (ರಾಜಶೇ. ೭-೧೪). [ಸಂ.]

ಸೋಮ್ಮ$_1$ 'ಸಾಮ್ಮ$_1$' ನೋ.

ಸೋಮ್ಮ$_2$ (ನಾ). ಸೋಮಯಾಗವನ್ನು ಮಾಡುವವನು. [ಸಂ. ಸೋಮಿನ್]

ಸೋಮ್ಮಿ (ನಾ). ಒಂದು ಬಗೆಯ ಮರ : 'ಸೋಮಿಚಕ್ಕೆ' ಪರಾ. [?]

ಸೋಮಿಚಕ್ಕೆ (ನಾ). ಔಷಧಿಗಾಗಿ ಬಳಸುವ ಒಂದು ಬಗೆಯ ಮರದ ತೊಗಟೆ,- ಚಕ್ಕೆ : ಸ್ಕಂಧವಲವಣ . . . ಓವು, ಸೋಮಿಚಕ್ಕೆ ಸಹ ಚೂರ್ಣವಂ ಮಾಡಿ (ಸಕವ. ೩೦೩). [ಸೋಮ್ಮಿ + ಚಕ್ಕೆ (< ಸೆಕ್ಕೆ$_1$)]

ಸೋಮೆ (ನಾ). ಒಂದು ಬಗೆಯ ಮರ : ತಾರೆ ಗೊರವೆ ಸೋಮೆ ಬಾಗೆ ಹಿಪ್ಪೆಯ ತರು ಗೇರ ಮರಗಳು ಅಲ್ಲಿಹವು (ಮಾದೇಸಾಂ. ೧-೫೬); ಸ್ವಾಮಿಮರ, ಕೆಮ್ಮರ, ಸೋಮೇಮರ (ಮೃಚಿಗಿ. ೭೧-೧೪೫೭). [?/ ಸಂ. ಸೋಮಾ]

ಸೋಮೇಶ (ನಾ). ಶಿವ : ಆದಯ್ಯಗಳ ಭಕ್ತಿಗೆ ಸುಲಭನಾಗಯಿತಂದು ಹುಲಿಗೆಜೆಯಲಿ ಬಿಡದೆ ನೆಲಸಿದನಲಾ ಸೋಮೇಶನು (ಬಸವ. ೫೩-೨೧). [ಸಂ.]

ಸೋಮೇಶ್ವರ (ನಾ). ೧. = ಸೋಮೇಶ : ಸೋವಣ್ಣಗೊಲಿದನು ಲೀಲೆಯಿಂ ಸೋಮೇಶ್ವರಂ (ಬಸವ. ೫೧-೮೨). ೨. [ಛಂದ] ಗುರುವಿನ ಚಿಹ್ನೆ : ವ್ಯೋಮೇಂದು ಭಾನುಗಣಯುಗ್ಮದಿನತ್ತಲಕ್ಕುಂ ಸೋಮೇಶ್ವರದ್ವಿತಯಮಂತರಜೊಳ್ಳಿರಾಮಂ (ಛಂದೋಂಬು. ೨-೧೪೭). [ಸಂ.]

ಸೋಮೋಪರಾಗ (ನಾ). ಚಂದ್ರಗ್ರಹಣ : ಸ್ವಸ್ತಿಶ್ರೀಜಯಾಭ್ಯುದಯ ಶಾಲಿವಾಹನ ಶಕವರುಷ ೧೫೨೧ನೆಯ ವಿಳಂಬಿ ಸಂ ಶ್ರಾವಣ ಶು ೧೫ [ಅ] ಸೋಮೋಪರಾಗ ಪುಣ್ಯಕಾಲದಲು (ಸೌಶಾ. XX. ೨೫೩-೬; 1588). [ಸಂ.]

ಸೋಯಗ (ನಾ). ಹಿರಿಮೆ; ಆಧಿಕ್ಯ (?): ಘಾಯವಡೆದನರಣ್ಯದೊಳು ದೈತೇಯಪತಿ ತನ್ನಯ ಪ್ರತಾಪದ ಸೋಯಗವ ಮೂದಲಿಸಲೆಲವೋ ತಾನವಸ್ಥೆಯಲಿ ನೋಯಲೀಕ್ಷಿಸಿ ಜರದೆ ಮುಂದೆ ಮದೀಯಕುಲಸಂಭವರು ನಿನ್ನನು ಸಾಯಕದಿ ಸಿರವರಿವರೆಂದ್ಯೆದಿದನು ಸದ್ಗತಿಗೆ (ಆನಂರಾ. ೧-೧೦-೫). [?]

ಸೋಯಸ್ಕರ 'ಸೋಬಸ್ಕರ' ನೋ.

ಸೋಯಿ 'ಸೋವಿ' ನೋ.

ಸೋಯಿದರ 'ಸೋವಿದರ' ನೋ.

ಸೋಯಿಸು (ಕ್ರಿ). ಶೋಧಿಸು; ಬಟ್ಟೆಇಳಿಸು (?) : ಪರಿವ ನೀರಂ ಪಱಿಯೆ ಪೊಯ್ಯಲುಮುರಿಯನಿಱಿದೇರ್ಪಡಿಸಲುಂ ರಸಮಂ ಸೋಯಿಸಲುಂ ನಮ್ಮಂ ನೋಯಿಸಲುಂ ಇನ್ನುಮೊರ್ವಂ ಪುಟ್ಟುವನುಂಟಿಕ್ಕುಂ (ಅರ್ಧನೇ. ೮-೪ ವ).

[< ಸೋವಿಸು ?]

ಸೋಯಿಸ್ಕರ 'ಸೋಬಸ್ಕರ' ನೋ.

ಸೋಯು 'ಸೋ$_1$' ನೋ.

ಸೋರ್$_1$, ಜೋರು$_1$, ಸೋರು$_1$ (ಕ್ರಿ). ೧. ಜಿನುಗು; ಸೋನೆಯಿಡು; ಹನಿ: "ಸೋರ್ - ಗಲನೇ, ಗರ್ವಹೀನೇ ಚ" (ಶಮಧಾ); ರಸಂಗಳಂ ತಳೆದ ಪಣ್ಣೊಲೆಯಂ ಗಿಳಿವಿಣ್ದು ಚುಂಚುವಿಂದಿಱಿದಡೆ ಸೋರೆ ಸೋನೆಯೊಳೆ ದಾಂಗುಡಿ ಮಿನ್ದೆಸೆದಿರ್ಪುವು (ಎಗ. XIII. ೩೩೧-೨೯; 929); ಜಿನುಗುವ ತುಂಬಿಯಿಂಚರಮೆ ಗಾಣರ ಕಾಕಳಿ ಕೂಡೆ ಸೋರ್ವ ಮಾವಿನ ಸೊನೆ ಗಂಧಸಿಂಧುರಮದಂ . . . ಆಗೆ (ಆದಿಪು. ೧೩-೬); ಗವಾಕ್ಷದ ಚಂದ್ರಕಾಂತದಿಂದುಡುಗದೆ ಸೋರ್ವ ನೀರ್ವನಿಗಳುಣ್ಮಿದ ನರ್ತನಘರ್ಮವಾರಿಯೊಳ್ ತದತಡಮಾಗೆ (ಮಲ್ಲಿಪು. ೨-೭೦). ೨. ಸುರಿ; ಧಾರೆಯಾಗಿ ಬೀಳು : ಸೋರ್ವ ವಸುಧಾರೆಯಂ ಕೆಯ್ಸಾರ್ವ ನಿಧಾನಮುಮನಿಟಿಸಿ ತನ್ನೀವಳವಿಂ ಪಾರ್ವಂಗಮಳಿಪಿ ಬೇಡಿದ ಪಾರ್ವಂಗಂ ಪಿರಿದನಿತ್ತನಂಗಮಹೀಶಂ (ಪಂಪಭಾ. ೯-೭೨); ಅನಿಮಿತ್ತಂ ಮರನೊಂದು ಕೊಂಬುಡಿವೊಡಂ ಮೇಣ್ ಲೋಹಿತಂ ಸೋರ್ವೊಡಂ ಜನಿಯಿಕ್ಕುಂ ಕದನಂ (ಲೋಕೋಪ. ೪-೫೨); ಉರ್ವಿ ಬೆಳೆದಿರ್ಪ ತರುಗಳ್ ಕಲ್ಪತರುಗಳಲ್ಲಲ್ಲಿ ಗಿರಿಸಾನುವಿಂದೆ ಸೋರ್ವ ನಿರ್ಝರರಸಂ ಸಿದ್ಧರಸಂ . . . ಎನಲು ಕೈಲಾಸಪರ್ವತಂ ಕಣ್ಗೆಸೆದುದು (ಚಿಬಪು. ೨-೧೧). ೩. (ಪಾತ್ರೆ, ಹೆಂಚು ಮೊದಲಾದುವು ತೂತಾಗಿ) ನೀರು ಮುಂತಾದ ದ್ರವಪದಾರ್ಥವು,- ಹರಿದು ಹೋಗು,- ಹರಿದು ಹೊರಬರು: ತತ್ಪ್ರಶಸ್ತಿಗಳೊಳಂತವನೊಯ್ಯನೊಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರಚಕ್ರವರ್ತಿಯಾ (ಆದಿಪು. ೧೫-೭೧). ೪. ಇಲ್ಲವಾಗು; ನೀಗು; ಕಳೆದುಹೋಗು : ಎಱಂಕೆಯ ಗಾಳಿ ಮುಟ್ಟಿ ಕಂದುವುವೆಸಟೊರ್ಮೆ ಪೀರಲೊಡಮಾಗಳೆ ಸೋರ್ವುವು ಕಂಪು (ಆದಿಪು. ೧೧-೧೨೦); ನೆಗಟ್ಟ ತಪದೊಂದು ಮಹೋದ್ಯೋಗದ ಸುಧ್ಯಾನಂ ನಿಂದಾಗಡೆ ಸೋರಲ್ ತಗುಳ್ಗುಮಳಿವಿಷಯಂಗಳ್ (ಜೀವಸಂ. ೧೭೩-೨೦); ಎಱಗುವ ತುಂಬಿವಿಂಡಗಿಯೆ . . . ಬಾಂದೊಱೆದಲೆಯಂ ಕನಲ್ಪು ನಡೆತಂದು ಬಸಂತನ ಸೊರ್ಕು ಸೋರ್ವಿನಂ ಮುಂದೆ ನಿಂದು (ಕಬ್ಬಿಕಾ. ೩೧೧). ೫. ಜೋಲು; ಜೋತುಬೀಳು; ನೇಲು : "ನನೆವಲ್ಲಿ ಜೋಲ್ದುದಱೊಳಂ . . . ಸೋರೆಂಬ ಶಬ್ದ" (ಶಬ್ದಮಂ. ೧೦೪); ಸೋರ್ಮುಡಿ ಸೋರ್ದು ಪಿಂದಲೆಯೆ (ಕಾವ್ಯಾವ. ೬೩೩). ೬. (ಸಡಿಲವಾಗಿ) ಜಾರು; ಕಳಚಿ ಕೊಳ್ಳು : ಕೊಂತಂಗಳಿಂದಮಿಟ್ಟಗಳಿಂದಂ ಕರುಳ್ಗಳಂ ಸೋರೆ [ಪಾಠಾಂ. ಸುರಿಯೆ] ಕುತ್ತುವುದುಂ (ವಡ್ಡಾರಾ. ೯೬-೨೮); ಅರೆಗಟ್ಟಿ ತುರಿಪದಿಂ ಪರಿತರೆ ಮೇಖಲೆ ಸೋರ್ದು ಕಾಲ್ಗೆವರೆ (ಶಾಂತಿಪು. ೬-೧೦); ಸೋಂಕಲೊಡಂ ನಿಶಾತರುಣಿಯಂ ಶಶಿ ಸೋರ್ದುದು ಸಂಜೆ ಸೀರೆವೋಲ್ (ಲೀಲಾವ. ೨-೩). ೭. ಸೊಕ್ಕು ಇಲ್ಲವಾಗು; ಮದವು ಅಡಗಿ ಹೋಗು : "ಸೋರ್ - ಗಲನೇ, ಗರ್ವಹೀನೇ ಚ" (ಶಮಧಾ). ಜೋರು$_1$: ೨. ಜೋರುತ್ತಿರುವ ನೆತ್ತರಿನಲ್ಲಿ ಜೋಡುಗಳು ನೆನೆದವು (ಮುಂಬಯಿ. ೬-೨೯೮). ಸೋರು$_1$: ೧. ಶೃಂಗಾರದ ಸುಧೆ ಸುರಿಸುವಂತಾ ಕುಚಾಗ್ರಂಗಳಿಂ ನುಣ್ಣನಿಪಂದಲ್ ಸೋರೆ (ಕುಸುಮಾ. ೫-೧೫೮); ಚಾರಿವರಿದು ಚಂದ್ರಸುರಧೇನು ಕೂರ್ತು ಚಕೋರವತ್ಸಗೆ ಮೊಲೆಗುಡಲು ಪೂರಿಸಿ ಕಡೆವಾಯೊಳಿಳಿವ ತಣ್ಣಾಲೆನೆ ಸೋರಿತು ಬೆಳ್ದಿಂಗಳಿಳಿಗೆ (ಮೋಹತ. ೧೬-೫೫); ಆನಂದಾಮೃತರಸ ಸೋರೆ ನರ್ತಿಸು, ತಾಯೆ (ಅನಿಕೇ. ೧-೬). ೨. ಚಂಡಪಿಳ್ಳೆಯ ಮೆಯ್ಯನಕ್ಕಱಿಂ ನೆಕ್ಕುತ್ತೆ . . . ಕಱೆದವಲ್ಲಿ ಲಿಂಗದ ಸಾರ ಮೃಡಭಕ್ತಿರಸಧಾರೆ ಎಂಬಂದದಿಂ ಸೋರೆ (ಚಂಡೇಶ. ೨೪೬-೧೨); ಕಂಬನಿಗಳಾಲಿ ಯೊಳೀಡಱಿದು ಸೋರಿದವು (ಕುವ್ಯಾಕ. ೧೪-೧೦); ಸೋರುವಾನಂದಾಶ್ರುಪುಳಕದ ಪೂರಣದಲೆತ್ತಿದನು ಪವನಕುಮಾರಕನ ಮಸ್ತಕವ ನಲಿದೊಲಿದಬುಜಭವಸೂನು (ತೊರರಾ. ೫-೯-೮). ೩. ಸೋರುತಿಹುದು ಮನೆಯ ಮಾಳಿಗಿ ದಾರು ಗಟ್ಟಿ ಮಾಳ್ವರಿಲ್ಲ (ತರೀಪ. ೧೯-೩); ಪೆಟ್ಟಿಗೆ ಒಡದು ಡಬ್ಬಿಗಳಿಗೆ ಧಕ್ಕೆ ಹತ್ತುತ್ತದೆ ಮತ್ತು ಎಣ್ಣೆಯು ಸೋರಹತ್ತಲು ರೇಲುವೆಕಂಪನಿಯವರು ತಕ್ಕೊಳ್ಳುವದಿಲ್ಲ (ಮುಂಬಾಸ್ಮಾ. ೩೯ ಪ್ರಸ್ತಾವನೆ). ೪. ಕಮಳದ ಸೊಕ್ಕು ಸೋರೆ . . . ಭಾನು ಪಶ್ಚಿಮಪಯೋಧಿಯೊಳೊಯ್ಯನೆ ಮೆಯ್ಯನಿಕ್ಕಿದಂ (ಪುಣ್ಯಾಸ್ರ. ೧-೧೧೫); ಭೂರಿಚಿಂತೆಯ ಬಿಟ್ಟು ತನ್ನ ತಾ ನೋಳ್ಪಾಗ ಸೋರುತಿರ್ದುದು ಕರ್ಮರಜಸು (ಭರಚ. ೧೫-೧೨೦); ಹಗಲೇರಿ ಹಗಲಿಳಿಯುತಿರುಳಾಗಿರುಳು ಹೋಗಿ ಕಾಲಜೀವನ ಸೋರಿದುದು (ಚತ್ರಾಂಗ. ೬೪-೧೭೫೩). ೮. ಕುಗ್ಗು; ಕುಸಿ: ಕಲಹ ಜಯಿಸದೆಂದು ಕಂಡೆದೆಯೊಳು ಸೋರಿ ತಲೆಗುಸಿದನು (ಭರಚ. ೨೪-೭೦). 'ಜೋಲ್$_1$' ಪರಾ.

ಸೋರಿ ಬರು = ಗುಟ್ಟು ಮುಂತಾದುವು ಹೊರಬೀಳು,- ಹೊರಬರು: ಬ್ರಿಟಿಷರು ತಮ್ಮ ಮಿಲಿಟರಿಬಲದಿಂದ ಆ ಯೋಜನೆಗೆ ಸಹಿ ಹಾಕುವಂತೆ ಸುಲ್ತಾನರನ್ನು ಒತ್ತಾಯಗೊಳಿಸಿರುವರೆಂದೂ ಸುದ್ದಿ ಸೋರಿ ಬಂದಿದೆ (ಎಅಗ್ನೇ. ೧೧೧).

ಸೋರುಹಾಕು = (ನೆನೆಹಾಕಿದ ಧಾನ್ಯ, ಬಟ್ಟೆ ಮುಂತಾದುವುಗಳ) ನೀರು ಸೋರಿಹೋಗುವಂತೆ ಮಾಡು : ನೆನೆ ಹಾಕಿರುವ ಕಡಲೇಬೇಳೆಯನ್ನು ಮೊದಲು ಸೋರುಹಾಕು, ಆಮೇಲೆ ತಿರುವಿ ಕೊಡುತ್ತೇನೆ (ರೂಢಿ).

[ದೇ.II ತಮಿ. ಪರ್ಜ. ಗಡಬ. ಚೋರ್; ಮಲ. ಚೋರ್, ಚೋರು; ತುಳು. ಸೋರು, ತೋರು; ಕೊಡ. ತೊರಿ; ತೆಲು. ತೊರಗು, ತೊರುಗು]

ಸೋರ್$_2$, ಜೋರು$_2$ (ನಾ). ೧. ಹನಿಯುವಿಕೆ; ತೊಟ್ಟಿಕ್ಕುವಿಕೆ: (ಕ). ೨. (ದ್ರವ ಮುಂತಾದವು ತೂತಿನ ಮೂಲಕ) ಹರಿದು ಹೋಗುವಿಕೆ: (ಕ). **ಜೋರು$_2$** : ೩. (ರಕ್ತ, ಕಣ್ಣೀರು ಮುಂತಾದುವುಗಳ) ಸುರಿತ; ಧಾರೆ: ಹಾಱಿದವು ಗಱಿಸಹಿತ ದೇಹವ ಡೋಱುಗಳೆದಂಬುಗಳು ನೆತ್ತರ ಜೋರು ಮಸಗಿತು ಕೂಡೆ ಜಾಜಿನ ಗಿರಿಯ ರೌಕುಳದ (ಕುವ್ಯಾಡ್ರೋ. ೧೬-೩೬) ಪಿರಿತ ಕಿವಿಗಳಲ್ಲಿ ಗುಗ್ಗೆವೊಱತೆ ಕಣ್ಣನಲ್ಲಿ ಜೋರು (ಸುಸಾರ. ೬೨-೩); ಆಡೆ ಏತಕೋ ಕಂದ ? ಜೋರು ನಿತ್ತಿತೆ ? (ಹಚ್ಚರ. ೪೩ ೧೭೮). ೪. ಹೊರಬರುವಿಕೆ; ಹೊರಸೂಸುವಿಕೆ : ಹಾಯ್ದ ಕರುಳಿನ ಮಿದುಳ ಜೋರಿನ ತೊಯ್ದ ರಕ್ತಾಂಬರದಿ ತಾನಿರಲು (ಕುವ್ಯಾಕ. ೮-೪೧);

ಗದೆಯ ಹೊಯ್ಲಲಿ ನರಳ್ವ ವೀರರ ಮಿದುಳ ಚೋರಿನ ಜೊಂಡೆ ಚೋಡಣೆಯ . . . ಝೋಂಪಿಸಿ ಕೆರಳ್ವ ಭಟರಟ್ಟೆಗಳಲೆಸೆದುದು ಕೂಡೆ ರಣಭೂಮಿ (ಕುಮಾಕ. ೧೫-೩೩).

[< ಸೋರ್$_1$]

ಸೋರಣ (ನಾ). ಸೋರುವಿಕೆ : "ಸೋರಣಂ . . . ಹುಣ್ಣ ಸೋರ್ತೆಯುಂ" (ಕಾಶಕೃ. ೨೨೩); ನಿತ್ಯ ಸೋರಣ ಸುರಿವುದಕಾರದೆಯೆರಡು ಹೊತ್ತು ಮೈದೊಳೆಯುತ್ತ ಲಿರಲು (ಬಿಜ್ಜಳ. ೭-೧೪). [ಸೋರು$_1$ (< ಸೋರ್$_1$) + - ಅಣ]

ಸೋರಾಟ 'ಸೊರಟ' ನೋ.

ಸೋರಿಕೆ (ನಾ). ೧. (ದ್ರವ, ಅನಿಲ ಮೊದಲಾದುವು) ಸೋರಿಹೋಗುವಿಕೆ : ಅಡಿಗೆ ಅನಿಲಗಳ ಸೋರಿಕೆಯಿಂದ ಅನೇಕ ಅಪಘಾತಗಳು ಸಂಭವಿಸುತ್ತವೆ (ರೂಢಿ). ೨. (ಆಲಂ) (ಹಣ ಮುಂತಾದುವು) ಅಪವ್ಯಯವಾಗುವಿಕೆ: ಉನ್ನತಮಟ್ಟದಲ್ಲಿ ನಡೆಯುವ ಹಣದ ಸೋರಿಕೆಯನ್ನು ತಡೆಗಟ್ಟುವವರೆಗೆ ನಮ್ಮ ದೇಶದ ಆರ್ಥಿಕಮಟ್ಟ ಸುಧಾರಿಸಲು ಸಾಧ್ಯವಿಲ್ಲ (ರೂಢಿ).

[ಸೋರು$_1$ (< ಸೋರ್$_1$) + - ಇಕೆ]

ಸೋರಿಸು, ಚೋರಿಸು (ಕ್ರಿ). ೧. ಸುರಿಸು; ಬೀಳುವಂತೆ ಮಾಡು: ಬಾನ್ಗಡರ್ದನಾ ಮುನಿ ಮತ್ತಂ ಧಾರಾಕಾರದೆ ನೀರಂ ಸೋರಿಸಿದಂ ಸುತ್ತಲಲ್ಲಿಯಾಶ್ರಮಪದದೊಳ್ (ಸೌನಂದ . ೧-೩೧). ೨. ಇಲ್ಲವಾಗಿಸು; ಹೊರಟು ಹೋಗುವಂತೆ ಮಾಡು: ನೀರು ಬೆಟ್ಟವ ಕೊಱೆವಂತೆ ರಾಯನ ಧ್ಯಾನವಾರಿ ಭೇದಿಸಿ ಕರ್ಮಗಿರಿಯಾ ಸೋರಿಸುತಿರ್ದುದು (ಭರಚ. ೧೮-೪೧). **ಚೋರಿಸು** : ೧. ಸೋರಿಸುತ ರುಧಿರಮಂ ಚೋರಿಸುತ ಕರುಳನಸುರಾರಿ ಶರಪಾತಘಾತ . . . ಮೈಗರದು ಖಡಿಖಂಡಗಳನುತ್ತರಿಸಿ ಬಿತ್ತರಿಸುತ (ಜಿನಮು. ೨೯-೩೦). [ಸೋರ್$_1$ + - ಇಸು$_3$]

ಸೋರು$_1$ 'ಸೋರ್$_1$' ನೋ.

ಸೋರು$_2$ 'ಸೊರೆ$_2$' ನೋ.

ಸೋರುಗಂಡಿ (ನಾ). (ಕೊಳಚೆಯ) ನೀರು ಹರಿದು ಹೋಗಲು ಮಾಡಿರುವ ರಂಧ್ರ ,- ತೂತು : ಮುಂದೈದಿ ತುಡುಕಿ ಸಜ್ಜೆಗಳಡರಿ ಸೋರುಗಂಡಿಯೊಳಿಳಿದು ಮಲಗಿ ನಿದ್ರೆಯೊಳರ್ಪರ ಸಡಗರಂಗಳ ನೋಡಿ . . . ವಾತಾಯನದ ಮಾರ್ಗವಿಡಿದು ಪೂರಮಟ್ಟನು (ವಂಕಾರಾ. ೫-೩-೨೩); ಮೂವರು ಪೈದಿಗಳು ಸೋರುಗಂಡಿಯ ಗಟ್ಟುನಾತ ಹೊಡೆಯುತ್ತಿದ್ದ ಮರದ ತೊಟ್ಟಿಯ ಮಗ್ಗುಲಲ್ಲಿದ್ದ ಮುಂಗೋಣೆಯಲ್ಲಿ ಬಿಟ್ಟಿದ್ದರು (ಪುನರು. ೫೪೯). [ಸೋರು$_1$ (< ಸೋರ್$_1$) + ಕಂಡಿ$_1$]

ಸೋರುಗಣ್ಣು (ನಾ). ೧. ನೀರು ಸುರಿಸುವ ಕಣ್ಣು: ಹಾರುವರಡತ್ತಾಗಿ ಹೋರುವ ಮಗನಾಗಿ ಸೋರುಗಣ್ಣಾಕೆ ಸೊಸೆಯಾದರಾ ಮನೆಗೆ ತೂರುವರು ಮಣ್ಣ (ಸರ್ವಜ್ಞ. ೧೭೫೩). ೨. ಕಣ್ಣಿನಲ್ಲಿ ನೀರು ಸುರಿಯುವ ಒಂದು ಬಗೆಯ ರೋಗ: ಈಗ ಬಂದಿರುವ ಡಾಕ್ಟರು ಸೋರುಗಣ್ಣಿಗೆ ಒಳ್ಳೆಯ ಚಿಕಿತ್ಸೆಯನ್ನು ಮಾಡುತ್ತಾರೆ (ರೂಢಿ). [ಸೋರು$_1$ (< ಸೋರ್$_1$) + ಕಣ್ಣು (< ಕಣ್)]

ಸೋರುಪ್ಪು (ನಾ). ಒಂದು ಬಗೆಯ ಖನಿಜ – ಕ್ಷಾರ; ಪೆಟ್ಲುಪ್ಪು : "ಅಕ್ಷ - ರುಚಕ = ಸೋರುಪ್ಪು" (ಗಂಗಾಮ. ೨೧); ನೆಲದೊಳಗೆ ಸುಂಬಳಕಾರ ತುತ್ಥ ಇಂಗಳೀಕ ನವಸಾಗರ ಸೋರುಪ್ಪು ಗಂಧಕ ಮುಂತಾದ ವಿಷರೂಪ ಕ್ಷಾರಾದಿಗಳಿರುತ್ತವೆ (ಮುಂಬಯಿ. ೫-೧೫೭). [ಸೋರ್ಯ (P ← ಪಾರ. ಶೋರಾ; ಹಿಂ. ಶೋರಾ, ಸೋರಾ; ಮರಾ. ಸೋರಾ./ತೆಲು. ಸೋರು, ಸೋರುಪ್ಪು) + ಉಪ್ಪು$_1$]

ಸೋರುಬಿಡು 'ಸೊರೆಬಿಡು' ನೋ.

ಸೋರುಮುಡಿ 'ಸೋರ್ಮುಡಿ' ನೋ.

ಸೋರೆ$_1$ 'ಸೊರೆ$_3$' ನೋ.

ಸೋರೆ$_2$, ಚೋರೆ$_1$, ಸೊರೆ$_4$ (ನಾ). ಒಂದು ಬಗೆಯ ಹಕ್ಕಿ : ಶಕುನಿ ಕಂಕಂ ತೊಂಡಿಗಂ ಸೋರೆ ಪಿತ್ತರಿ ಕೋಕಂ ಪಿಕಳಂ ಬಕಂ ಶಿಖಿ ಶುಕಂ (ರಾಜಶೇ. ೫-೫೯); ಗರುಡಂ ಗೀಜಗನಂಚೆ ಸೋರೆ ಪಿಕಳಂ (ಯಾದಚಂ. ೪-೪೬); ಹಂಗ ಟಿಟ್ಟಿಭ ಸೋರೆ ಘೂಕ ಗೊರವಂಕ (ರುಕ್ಮಾಂಗ. ೧೦-೫). **ಚೋರೆ$_1$** : ಗದ್ದೆಯಲ್ಲಿ ಕುಳಿತಿದ್ದ ಕೆಲವು ಚೋರೆ ಹಕ್ಕಿಗಳು ಹಾರಿದುವು (ಕಾನೂರು. ೮೯); ಹೋರೆ ಗುಬ್ಬಳಿಸಿತ್ತು ಅತ್ತ ಕೆಂಬೂತಂ ಪಾರಿತು ಪೊದೆಯಂದಿತ್ತ (ಅನೇಕ. ೪೯-೭). **ಸೊರೆ$_4$** : "ಭೀಷಣಃ - ಕುಂದುರುಷ್ಕ, ಸೊರೆಯ ಹಕ್ಕಿ" (ಓಷಧಿ. ೧೧೧).

ಸೋರೆಕಾಯಿ 'ಸೊರೆಗಾಯ್' ನೋ.

ಸೋರೆಗಾಯಿ 'ಸೊರೆಗಾಯ್' ನೋ.

ಸೋರೆಗುಂಡಿಗೆ (ನಾ). ಸೋರೆಬುರುಡೆಯ ಪಾತ್ರೆ: ಸುರುಚಿರಮಪ್ಪಾ ಸಿದ್ಧ ರಸಮನೀ ಸೋರೆಗುಂಡಿಗೆಯೊಳು ತುಂಬಿ ಕರತಳವ ಸೋಂಕಿಸದೀ ಹಗ್ಗಕೆ ಭರದಿಂದ ಕಟ್ಟಿಯಲುಗಲು (ನೇಮಿಸಂ. ೧೦-೨೧೧). [ಸೋರೆ$_1$ (< ಸೊರೆ$_3$) + ಗುಂಡಿಗೆ$_2$]

ಸೋರೆಬುರುಡೆ (ನಾ). ತಿರುಳನ್ನು ತೆಗೆದು ಒಣಗಿಸಿದ ಸೋರೆಕಾಯಿ; P ಗಿಡದಲ್ಲಿ ಬಿಟ್ಟ ಸೋರೆಯ ಕಾಯಿಗಳನ್ನು ಕೀಳದೆ ಹಾಗೆಯೇ ಬಿಟ್ಟರೆ ಬಲಿತು ಬುರುಡೆಗಳಾಗುತ್ತವೆ. ಈ ಬುರುಡೆಗಳನ್ನು ಭಾಗಮಾಡಿ (ಭಿಕ್ಷಾ) ಪಾತ್ರೆಯಂತೆ ಉಪಯೋಗಿಸುತ್ತಾರೆ. ಹಗುರವಾಗಿದ್ದು ತೇಲು ವುದರಿಂದ ದುಂಡುಕಾಯಿಗಳ ಬುರುಡೆಗಳ ಸಹಾಯದಿಂದ ಈಜು ಕಲಿಯುತ್ತಾರೆ. ದುಂಡು, ಚಪ್ಪಟೆ ಬುರುಡೆಗಳನ್ನು ಏಕನಾದ, ಕಿನ್ನರಿ, ವೀಣೆ ಮೊದಲಾದ ವಾದ್ಯಗಳಿಗೂ ಉಪಯೋಗಿಸುತ್ತಾರೆ : ಮರದ ಪಾತ್ರೆ . . . ಸೋರೆಬುರುಡೆ, ತಂಗಿನ ಕರಟ ಮುಂತಾದ ಪಾತ್ರೆಗಳಲ್ಲಿ ಭೋಜನವನ್ನು ಮಾಡಿದರೆ ದಾರಿದ್ರ್ಯ ಉಂಟಾಗುವುದು (ಸಕವೃ. ೪೯); ಆ ವನದ ಆಚೆ ಒಂದು ಸೋರೆಬುರುಡೆಯಲ್ಲಿ ಹಾಲು ಇಟ್ಟಿರುವುದು (ದೇಶಾಂಕ. ೧೪) ; ಕೆರೆಯ ನೀರಿನಲ್ಲಿ ದಾರಿಕಾಣುವುದಕ್ಕಾಗಿ ದೀಪಗಳನ್ನು ಸೋರೆಬುರುಡೆಗಳಲ್ಲಿ ಹತ್ತಿಸಿಕೊಂಡು ಬರುತಾ ಇದಾರೆ (ಪೇಟಮಾ. ೫೨).

[ಸೋರೆ$_1$ (< ಸೊರೆ$_3$) + ಬುರುಡೆ]

ಸೋರೆಬುರುಡೆಮರ (ನಾ). ಒಂದು ಬಗೆಯ ಮರ : ಸೋರೆಬುರುಡೆಮರ, ಸನ್ಯಾಸಿಬಕ್ಕರೆ (ಮೃಚ್ಛಿಗಿ. ೨೫-೪೬೭). [ಸೋರೆಬುರುಡೆ + ಮರ$_1$]

ಸೋರೆಮಟಿ 'ಸೋರೆಮಡಿ' ನೋ.

ಸೋರೆಮಡಿ, ಸೋರೆಮಟಿ (ನಾ). ಒಂದು ಸ್ಥಳದ ಹೆಸರು : ಸೋರೆಮಡಿಯ ಕಾಳಿಗದೊಳ್ . . . ಪಲವುಂ ಕುದುರೆಯಂ ಮಾನಸರುಮಾನಿಱಿದು ಬಿಟ್ಟೊಡೆ (ಸೌಇ. IX-i, ೧೧-೬; ಸು. ೨ನೆಯ ಶತ). **ಸೋರೆಮಟಿ** : ಮಹಾರಾಜರು[ಂ] ಬಾಣರಸರುಂ ಸೋರೆಮಟಿ ಕೋ[ಟ್ಟೆ]ಂ(ಕೋಟ್ಟೆ)ಯಿಟ್ಟಲ್ಲಿ . . . ಪಾಜ್ಯರ ಅಣ್ಣರ್ಕಱ್ ಪುನ್ನಣಮಾಣಿಱಿದು ಬೀಟ್ಟನ್ (ಎಇ. XXIV. ೧೯೧-೫; ಸು. 885). [?]

ಸೋರೆಮೊಗ (ನಾ). (ಆಲಂ) ಸೊಟ್ಟಮುಖದವನು; ವಿಕೃತಸ್ವರೂಪ ದವನು: ಯಮನೆಂಬ ಸೋರೆಮೊಗಂ ಬಂದು ಮುಳುಗಿಸಲ್ಬನೃಜಳಧಿಯೊಳ್ ದೇಹಬಹಿತ್ರಮದೊಡೆಯೆ (ಸಮಪ. ೧೩-೬೩) [ಸೋರೆ$_1$? + ಮೊಗ]

ಸೋರೊಡೆ (ಕ್ರಿ). (?) : ಸೋರೊಡೆದ ಕೈಯಿದನೆ ಕುಚಭಾರಂ ಬಿಟ್ಟೆಬೆ ಬಾಟೆ ಪೊಂಬಾಟೆಗೆ ತಳ್ಳೋರಂತಡರ್ದಡಕೆಯ ಸಸಿ ಸೀರೆಯನಭಿನಯಿಸುವಂತಿರೇ ನೊಪ್ಪಿದುದೋ (ಲೀಲಾವ. ೧೫-೭೫). [? + ಒಡೆ$_1$]

ಸೋರೋಡು (ನಾ). ತೂತುಗಳಿಂದ ಕೂಡಿದ ದೋಣಿ: ತೋರವಹ ಬಲುದೆಪ್ಪವಿರೆ ಮನ ಹಾರಿ ಸೋರೋಡಂ[ಪಾಠಾಂ. ಸೊರೆಯೋಡಂ] ಪಿಡಿದು ತಾಂ ಪಾರವೆಯ್ದುವೆನೆಂಬ ವನವೊಲು (ಬಸವು. ೬೦ ೪೬). [ಸೋರು (< ಸೋರ್$_1$) + ಓಡು$_3$ (< ಓಡ)]

ಸೋರ್ಗುರುಳು (ನಾ). ಸಡಿಲವಾಗಿ ಕಟ್ಟಿದ ತುರುಬು; ಅಳ್ಳಕವಾದ ಮುಡಿ: ಸುಳಿಗುರುಳು ಸೋರ್ಗುರುಳು . . . ಅಳಿಗುರುಳು ನಿರಿಗುರುಳು ಸುಕ್ಕು ಸೂಗಯಿಪಗುರುಳು (ನವಮೋ. ೨೪-೧೮). [ಸೋರ್$_2$ + ಕುರುಳು$_1$ (< ಕುರುಳ್$_1$)]

ಸೋರ್ಚು (ಕ್ರಿ). ೧. ಸೋರಿಹೋಗುವಂತೆ ಮಾಡು; ಸೋರಿಸು : "ಸೋರ್ಚು- ಗಲನೇ (ಸೋರಿಸು)" (ಶಮಧಾ); ಕೈಗೆ ತೊವಲುಟಿಯಲಗುರ್ವಿಸಿದುದು ತೀವಿದ ಗುಳ್ಳೆಯ ಪಸುಂಬೆಯಂ [ಸೋ][ಪಾಠಾಂ. ಸಾ]ರ್ಚಿದಂತೆ ತನು ಕೀಚಕನಾ (ಪಂಪಭಾ. ೮-೭೭). ೨. ಹೊರಬರುವಂತೆ ಮಾಡು : ಉರ್ಚಿ ಕೆಲಬರನುತ್ಸುರಾಗ್ರಹತಿಯಿಂ ಕರುಳ ಸೋರ್ಚಿ ಕೆಲಬರನು . . . ವಾಲಾಗ್ರದಿಂದಿರದೆ ಬಾರ್ಚಿ ಕೆಲಬರನಿಂತು ಪುಂಗವಂ ಭಂಗವಂ ಮಾಡುತ್ಯೆತರುತಿರ್ದನು (ಚಿಬಪು. ೪೪-೧೯).

[ಸೋರ್$_1$ + - ಚು$_1$]

ಸೋರ್ಮುಡಿ, ಸೋರುಮುಡಿ (ನಾ). ಸಡಿಲವಾದ ಮುಡಿ; ಅಳ್ಳಕವಾದ ತುರುಬು : ಬಾಡಿದ ಪೂಮಾಲೆಯೊಡನೆ ಬಟ್ಟಲ ಸೋರ್ಮುಡಿಯುಂ ಅಡಿಗಡಿಗೆ ತಡತಡವಪ್ಪ ನಡೆಗಳುಂಬೆರಸು . . . ಏನಜಾನನೆಯರ್ ಏಳಾಸವನಮಂ ಪೂಕ್ಕರ್ (ಆಪಪು. ೧೧-೭೦ ಪ); ಸುಟ್ಟಿಗುರುಳ್ಪೋರ್ಮುಡಿ ನೋಡಲ್ಲಾಡೆ ಸೊಗಯಿಕುಂ ದ್ರೌಪದಿಯಾ (ಗದಾಯು. ೮-೫೧); ಸುದತಿಯಾನನಕಂಪ್ರಿ ಮೋಲ್ಮುಡಿಗಧರ ಸೋರ್ಮುಡಿಗುನ್ನತಸ್ತನ . . . ರದನಗಳಿಗುತ್ತುಂಗಕಟಿ ನೆಟ್ಟೆ ಹೆದಱಿದಪುವು (ಜೀವಂಚಿ. ೨-೬೨). **ಸೋರುಮುಡಿ:** ಸೋರುಮುಡಿಯಾಕೆ ಗೊರವನ ನೆರೆದಳು (ಅವಚಂ. ೨೬-೧೧೧); ಒಪ್ಪಿದಿನಡುವಿನ ಸೋರುಮುಡಿಯ . . . ಜಡಿವ ಜಳನಡ ಮೆಲ್ಲಡಿಯರಾರತಿಗಳ ಪಿಡಿದು ನಿವಾಳಿಸಲು (ಧೃವಚ. ೨-೬೫); ಅಡ್ಡಮುಡಿಯ ಸೋರುಮುಡಿಯ ಸೊನ್ನಾರದ ದೊಡ್ಡಮುಡಿಯ ತೆಕ್ಕೆದುಱುಬ ಒಡ್ಡುದೋಱದೆ ಬಿಟ್ಟು ಬೇಸಱು ಮುಡಿಗಟ್ಟ ಖಡ್ಗಳಿದಯ್ತಂದರೊಸೆದು (ಭರತ. ೧೬-೨೪).

[ಸೋರ್ + ಮುಡಿ]

ಸೋರ್ಮೊನೆ (ನಾ). ೧. (ಕುಚದ) ಸೋರುವ ತುದಿ, – ತೊಟ್ಟು : ಎಲ್ಲು ಪೊಱಪೊಣ್ಮಿದ ಸೋರ್ಮೊನೆಯಪ್ಪ ಚೋಲ್ಮ ಮೇಗೊತ್ತಿದ ಕೊಟ್ಟಿಂತಂಗಿದ ಕುಚಂಬಡೆದಂದಶುಭಂ ನಿರಂತರಂ (ಲೋಕೋಪ. ೧೦-೫೫). ೨. (?): ಬನಪತಿಯರ್ದರಿಕ್ಕೆಗಳಿರ್ಕೆಲನುಂ ಕುರುಡತ್ತ ನಾಲ್ಕುಪೊಯ್ಯನೆ ನಡುವರ್ದ ಪನ್ನೆರಡು(ವೊ) ಬಳ್ಳಿದುವ(ವ)ಲ್ಲಪಣ್ಣ ಸೋರ್ಮೊನಗಳ ಸೂಲದಗ್ರದಱು(ರಿ)ಕ್ಷಮುಮಂದಱಿದರ್ದು ಬಿತ್ತು(ತ್ತಿ)ನೊ(ವೊ)ಳ್ಪಿನ ಕಣಿಯಪ್ಪ ಱಟ್ಟುಗನ ಮಾಡಿದ ಸೂತ್ರದ ಸೂರ್ಯಸೂಲದೊಳ್ (ಱಟ್ಟಮ. ೯-೧). [ಸೋರ್ + ಮೊನೆ]

ಸೋರ್ಮೊಲೆ (ನಾ). ಜೋತು ಬಿದ್ದ ಮೊಲೆ : ಅತಿ ಭೀತಿಯಾದಪುದು ಸೂಳೆಯ ಸೋರ್ಮೊ[ಪಾಣಾಂ. ಬೀಱ್ಪೊ]ಲೆಗಂಡು ಭೂಪತೀ (ಲೀಲಾವ. ೨-೧೦೮).

[ಸೋರ್ + ಮೊಲೆ]

ಸೋರ್ವಿ (ನಾ). ಸೋರುಪಿಕೆ : ಸುಖದ ಸೂರ್ಕಿನ ಸೋರ್ವಿಯನಲ್ಕೆ ಪಾಡಿ . . . ಬಾಜಿಸುವ ಮರುದ್ವರಾವಿವಿಧವಾದ್ಯವಿಶಾರದ ವಾದಕರ್ಕಳುಂ (ಮಹಾಸೇ. ೨-೪೮); ರಂಗರಕ್ತಿಯೊಳ್ ಕೂಡಿ ಸುಧಾರಸದ ಸೋನೆಯುಂ ಸುಖದ ಸೂರ್ಕಿ Eಸೂರ್ಕಿನE ಸೋರ್ವಿಯುಮೆಂಬಂತೆ ಸೊಗಯಿಸೆ ಪಾಡಿ (ಮಹಾಸೇ. ೪-೫೪ ಪ).

[ಸೋರ್ + - ವಿ]

ಸೋಲ್, ಸೋಲು$_1$ (ಕ್ರಿ). ಸೋತ, ಸೋಲ್ತ (ಭೂತಕೃ), ಸೋತು, ಸೋಲಿದು, ಸೋಲ್ತು, ಸೋಲ್ದು (ಭೂತನ್ಕೃ), ಸೋಲ್ವ (ಭವಿಕೃ). ೧. ಅಪಜಯ ಹೊಂದು; ಪರಾಜಯಗೊಳ್ಳು: "ಸೋಲ್ - ಪರಾಜಯೇ" (ಶಮಧಾ). ನಿಶ್ಚಲಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಗಳೊಳ್ ತವೆ ಬೀರ್ವವೊಲ್ನಿಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ (ಆದಿಪು. ೧೪-೧೦೫); ಹರಿ ಸೋಲ್ತಂ ಕರಿಗೆಂಬಿನಂ ಬವರದಿಂ ಗೆಲ್ವಂತೆ ಪೋರ್ದಾನೆಗಂ ಹರಿಗಂ ನೋಡೆ ಸಮಾನಮೆಂಬಿನೆಗಂ . . . ಮೆಱೆದಂ ಕೃಷ್ಣಂ ಬಲಾಟೋಪಮಂ (ಜಗಪಿ. ೬-೫೪); ತಾರಕಾಸುರನ ಬಾಧೆಗಾಱದೆ ಹರಿಬ್ರಹ್ಮೇಂದ್ರಾದಿ ದೇವರ್ಕಳ್ ಕಾದಿ ಸೋಲ್ತು (ಗಿರಿ. ೨ ಕಥಾಗರ್ಭಂ). ೨. ಪರವಶವಾಗು; ಮೋಹಗೊಳ್ಳು; ಮರುಳಾಗು : ಅಲ್ಲಿಯ ಕಣ್ ಪಳಂಚಿ ಮನಮಲ್ಲಿಯ ಕೀಲಿಸೆ ನೆಟ್ಟು ಮೆಟ್ಟು ತಳ್ತಲ್ಲಿಯೆ ಸೋಲ್ತು ಪತ್ತೆ (ಆದಿಪು. ೨-೪೨); ಚಂಡಶಾಸನನೆಂಬೊಂ ಮಿತ್ರತ್ವದಿಂ ಪೌದನಪುರಕ್ಕೆ ವಂದಾತಂ ಪ್ರಿಯನಂದೆಯಂ ಕಂಡು ಸೋಲ್ತು ಉಪಾಯಾಂತರದಿಂ ಆಕೆಯಂ ಕೊಂಡು ಪೋಗೆ (ಚಾಪುಂಪು. ೧೬೯); ನೀರೆಱೆಳವೆಣ್ಮಣಿಗೊರ್ವ ಪಥಿಕಂ ಸೋಲ್ತು (ಉದ್ಭಟ. ೩-೨೯ ಪ). ೩. (ಜೂಜಿನಲ್ಲಿ ಒಡ್ಡಿದ ಪಣವನ್ನು) ಕಳೆದುಕೊಳ್ಳು : ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀಪುದೆಂದು ಕಾಡುತ್ತಿರೆ ಲಂಬಣಂ ಪಱೆಯೆ (ಪಂಪಭಾ. ೯-೬೯). ಧಾತ್ರಿಯುಮನೀ ಹುತಾಶನಪುತ್ರಿಯುಮಂ ಬಱೆದೆ ಸೋಲ್ತನಲ್ಲಂ ಜೂದಿಂ ಕ್ಷತ್ರಿಯ ತೇಜಮುಮಂ ಯಮಪುತ್ರಂ ರಿಪುಗಂದೆ ಸೋಲ್ತಂ (ಗದಾಯು. ೧-೬೦); ತಾಂ ಜೂಜನಾಡಿ ಸಮಂತು ಸೋಲ್ತು ಸುವರ್ಣಮಾಯದೆ ಪೋಗಲ್ (ಉದ್ಭಟ. ೧೨-೯೩). ೪. ಸಾಮರ್ಥ್ಯವನ್ನು ಕಳೆದುಕೊಳ್ಳು; ದುರ್ಬಲವಾಗು: ಅಪರಾಜಿತಂ ತೇಜೋರೂಪಪಾವಕಂ ಕಣ್ಣೊಳುಳ್ಳೆ ಕಾಡದೆ ಸೋಲ್ತಂದುಪಸಂಹರಿಸುತೆ (ಶಾಂತಿಪು. ೪-೧೧); ಮದನಂಗಂಜುವ ಯೋಗಿಯೇ . . . ನಟನದೊಳ್ ಸೋತೋಡುವಳ್ ಸೂಳೆಯೇ (ಸೋಮೇಶ. ೭೮). ೫. ಕಡಮೆಯಾಗು; ಕುಂದು : ಏನಸುಂ ಮಿನೇಕ್ಷಣಂ ಸೋಲದ ರಸದೊದವಿಂ ಸೋರ್ಕಿ ಬೆಂಡೇಟ್ಟಿನಂ ನೆಟ್ಟಿನ ಮುಗ್ಧಾಲಾಪವಿಂಪಂ ಕಱೆದು (ಕಾದಂಬಾ. ೫೨೩). **ಸೋಲ್ಪು**$_1$: ೧. ಸೋತ ಬಲ ಸಂವರಿಸಿಕೊಂಡುದು ಪೂತುರೇ (ಕುವ್ಯಾದ್ರೋ. ೧೫-೨೫); ತುಂಗ ಚಂಗಳ್ಯಾಧಿಪನು ಕದನದೆ ಸೋತು ಕಂಗೆಟ್ಟು ಕಾಣೆಯಿತ್ತ ಮಂಗಳಗಜಶಾಲೆ . . . ಒಪ್ಪಿದುದು (ಕಂನಿ. ೬-೩೦); ಪಾಲಿಸುವ ಹರಿಯು ತಾ ಸೋಲನೆಂದೆನಬೇಡ ಶೂಲಿ ತಾ ಮಗನ ತಲೆ ಜಿಗುಟೆ ಹರಿಯೇಕೆ ಪಾಲಿಸದೆ ಹೋದ (ಸರ್ವಜ್ಞ. ೨೧೫). ೨. ಉನ್ನತಾಸನವಿತ್ತನಬಲಾಜನಂ ಸೋಲೆ (ನಂಬರ. ೩-೭೪); ನಟ್ಟ ದೃಷ್ಟಿಯ ತೆಗೆಯಲಾಱದೆ ಸೋತು ಕೀಚಕ ಪಾತಕವ ನೆನೆದ (ಕುವ್ಯಾವಿ. ೨-೯); ಮಾನವನ ಮನಸ್ಸು ಸೋಲುವುದು ಸೌಂದರ್ಯಕ್ಕೆ ಬಹುಬೇಗ (ಭಾರದ. ೦೦). ೩. ಭೂಪತಿತಿಲಕ ತನ್ನನು ಮುನ್ನ ಸೋಲಿದು ಬಳಿಕ ತನ್ನನು ಸೋತನೇ ಹೇಳೆಂದಳಿಂದುಮುಖಿ (ಕುವ್ಯಾಸ. ೧೪-೫೫); ಜೂಜಿನಲ್ಲಿ ಪುಷ್ಕರಗೆ ರಾಜ್ಯವ ಸೋತು ನಳಭೂವರನು ನಿಜಸತಿ ಸಹಿತ ಹೊಱವಂಟನು ವನಾಂತರಕೆ (ನಳಚ. ೪ ಸೂಚನೆ). ೪. ದುಡಿದು ಮೈ ಸೋತಿತೆಂದೆನುವಾಗ ಮನ ಪೆರ್ಚುವುದು ನೆನೆದಾತನ ನುಡಿಯ (ಗಂಚಾಪ. ೫೫-೬೫); ಸೋತ ದೇಹವನ್ನು ಸ್ವಲ್ಪ ಸಾವರಿಸಿಕೊಂಡರು (ಹೊಸ್ಕೆ. ೪೫). ೬. ದಣಿ; ಸಾಕಾಗು: ಒತ್ತರಿಪ ನಿಬ್ಬಣಿಗರೆಲ್ಲರುಂ ಕಣ್‌ಸೋಲೆ ಭಕ್ತರಂ ಸಾರೆ ನಿಂದಿರಿಸಿ (ಮಾನರ. ದೇ. ೧೬೮-೨೪); ಭೀತಿ ಬಿಗಿದುದು ದಿಟ್ಟತನದನು ಧಾತುಗೆಟ್ಟುದು ನೋಡಿ ಕಂಗಳು ಸೋತು ಮರಳಿದನು (ಕುವ್ಯಾಕ. ೩-೨೫).

ಸೋಂತರು, ಸೋತವರು = ಅಪಜಯ ಹೊಂದಿದವರು; ಪರಾಜಿತರಾದವರು : ಸತ್ಯವಿ ರಾಮಲಕ್ಷ್ಮನಿಗೆ ಸರಿಯೆಂಬ ಕನ್ನಡಕವಿಗಳು ವಾದಿಸಿ ಸೋಂತರಂತಾಗಿ ಮುನ್ನಿನರೊಲು (ಲಕ್ಷ್ಮಭಾ. ೧-೧೭); ಕೃಷ್ಣನ ಸೋಲವದು ಪಾಂಡವರು ಸೋತವರಲ್ಲ (ಕುವ್ಯಾದ್ರೋ. ೬-೬೭). **ಸೋತ ಪುರುಷ** = ಸೋತವಳು : ಸೋತ ಪುರುಷಗೆ ಸೋರೆಕಾಯಿ ಗೆದ್ದ ಪುರುಷಗೆ ಸಕ್ಕರೆಕಾಯಿ (ಗಾದೆ). **ಸೋತಾಳಿ** = ನಿತ್ರಾಣಗೊಂಡವಳು; ಬಳಲಿದವಳು (?) : ಶೀತಾಳು ಕಮಲೋಪವೀತವೆನಿಸಲಾ ಮೊಗಂ ವೇತಾಳಸೋಂಕನನುಕರಿಸಿ ಬರೆ ಶುಭರದಂ ಸೋತಾಳಿಯಂದದೊಳ್ಕೆಡದಳಪ್ರಿಯವಾಣಿ ಶ್ರುತಿಕಲಿತಮೆಂದೆನಿಸಲು (ವಂಕಾರಾ. ೨-೯-೨). **ಸೋತು ನುಡಿ** = ಮಣಿದು ಮಾತನಾಡು; ಸಗ್ಗಿ ನುಡಿ : ಸೋತು ನುಡಿವಾ ಹಿರಿಯರಲಿ ಸಂಪ್ರೀತಿಯನು ಸುಜನರಲಿ ನಿರ್ಮಲನೀತಿಯನು . . . ವೈರಿವ್ರಾತದಲಿ ಪೌರುಷವನಧಿಕಜ್ಞಾನಿಗಳಲೆಚ್ಚಱಿಕೆಯುಂಟೇ ರಾಯ ನಿನಗೆಂದ (ಕುವಾಸ. ಒರಿಗ. ೧-೪೯); **ಸೋತು ಸುಣ್ಣವಾಗು** = ವಿಪರೀತವಾಗಿ ಬಳಲು : ಕೆಲವೇ ಮಂದಿ ಶ್ರೀಮಂತರ ಕೈಕೆಳಗೆ ದುಡಿದೂ ದುಡಿದೂ ನೀವು ಸೋತು ಸುಣ್ಣವಾಗಿದ್ದೀರಿ (ಮುಂಗಾಮು. ೧೦೮); ನರ್ಸುಗಳೂ ಕಾಂಪೌಂಡರರೂ ದುಡಿದು ಸೋತು ಸುಣ್ಣವಾದರು (ದೀಪದ. ೯೯). **ಸೋತು ಹೋಗು** = ೧. ಅಪಜಯವನ್ನು ಹೊಂದು : ಚೈನರು . . . ಸಾಮಾಜಿಕ ರಂಗದಲ್ಲಿ ಸೋತು ಹೋಗಿದ್ದರು (ಸಾಹಿಸ. ೧೩೬). ೨. ಮಣಿ; ಸಗ್ಗು : ಮಾತು ಬಂದಾಗ ಸೋತು ಹೋದವನೇ ಜಾಣ (ಗಾದೆ).

[ದೇ. ॥ ತಮಿ. ತೋಲ್, ತೋರ್; ಮಲ. ತೋಲ್; ಕೊಡ. ಕೋತ. ಚೊಲ್; ತುಳು. ತೋಲ್ಪು, ಸೋದು, ಸೋಲು, ಸೋಲಾವು]

ಸೋಲ, ಸೊಲ್ಲ, ಸೋಲ್ಪು$_2$ (ನಾ). ೧. ಅಪಜಯ; ಪರಾಜಯ : ದೊರೆವತ್ತ ಕಾಳೆಗದ ಗೆಲ್ಲದ ಸೋಲದ ಮಾತು ನಿನ್ನೊಳಂ ನರನೊಳಮಿರ್ದುದು (ಪಂಪಭಾ. ೧೨-೧೧೮); ಗೆಲ್ಲ ಸೋಲವದೇಕೆ ಸೇವಿಸು ಮೆಲ್ಲಮೆಲ್ಲನೆ ನೀವೆನುತ್ತಂ (ಬಸಪು. ೫೯-೧೧); ಸೋಲವುಂಟೇ ವೀರನಾರಾಯಣನ ಭಕ್ತರಿಗೆ (ಕುವ್ಯಾದ್ರೋ. ೬ ೬೭). ೨. ಆಸಕ್ತಿ; ಮೋಹ; ಪ್ರೀತಿ: ಒಂದೊಂದೆ ರಸದ ಸೋಲಮದೊಂದೊಂದನೆ ಕೊಲ್ಗುಂ (ಆದಿಪು. ೪-೭೩); ಸುದತೀರತ್ನದ ರೂಪಮೆನ್ನ ಬಗೆಗಾದಂ ಸೋಲಮಂ ತಂದು ತಂದುದು ಕೂರ್ಪಂ (ಜಗವಿ. ೧೦-೭೨); ಕಾಲವಱಿದು ಕಲೆಯಱಿದಂತರಂಗದ ಸೋಲವಱಿದು . . . ರಸಿಕನನಗಲಿ ಮದಾಲಸಾಂಗಿಯರು ಜೀವಿಪರೆ

(ಕುರುಸಾಂ. ೨೩-೨೯). ೩. ತಣಿವು; ತೃಪ್ತಿ: ಕಣ್ಣಿತ್ತಂ ಸೋಲಮನೀವ ರನ್ನವಸರಂ ಬಿಲ್ಮಾದುದು (ಕಬ್ಬಕಾ. ೩೭). ೪. ಜೂಜು, ಪಂದ್ಯ ಮೊದಲಾದುವುಗಳಲ್ಲಿ ಒಡ್ಡಿದ ಪಣ: ವರಸೇನನೆಂಬೊಂ ಜೂದಾಡಿ ಯಕ್ಷಧೂರ್ತನೆಂಬೊಂಗೆ ಸಾಸಿರ ದೀನಾರಮಂ ಸೋಲ್ತು ಸೋಲಮಂ ಕುಡಲಾಱದೆ (ಪಡ್ಡಾರಾ. ೧೪-೫); ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾದುತ್ತಿರೆ (ಪಂಪಭಾ. ೯-೬೯): ಹೇಳಲೇನರ್ಜುನನ ಭೀಮನ ಸೋಲವದು ತಾ ಮೃತ್ಯುವು (ಕುವಾರ್ಜೂ. ೧೮-೩೦). ೫. ನಷ್ಟ; ಹಾನಿ: ನಿನಗೆ ಸಾಲಮುಂ ಸೋಲಮುಮುಂಟಪ್ಪುದು (ಜೀವಂಧ. ೧೩೦-೨೨ ವ). ೬. ದಣಿವು; ಆಯಾಸ: ಸುರತದ ಸೋಲಗಳೇಸು ಸೋಲದಿ ಮೈಮಱಹೇನು ಅಱಿಕೆಯನಱಿವವಳಾರೆ ಶಿವರತಿಕೇಳಿಯಲ್ಲಿ (ಶಿವಗೀ. ೧೭೭-೪೧೧). **ಸೊಲ್ಲ**: ೨. ಕುಸುಮಾವಳಿದೇವಿಯ ಕೋವಲಾಂಗದೊಳ್ ನೆಗೆದುವು ನಾಡೆ ಘರ್ಮಜಲಬಿಂಮಗಳೊಳ್ ಪೊದಲ್ದೂ[ದಮಾ ಮುದ]ಶ್ರುಗಳಿರದುನ್ಮದಾ ಮನದ ಸೊಲ್ಲವನಾಗಳೆ ಸೂಚಪಂದದಿಂ (ಕುಸುವಮಾ. ೧೨-೧೩). **ಸೋಲು**$_2$: ೧. ಇಂದುಧರಗಂಗಯಿಸತೀರದು ಬಂದು ಕೌತುಕದಾಳು ನೆರೆದುದು ಇಂದು ಗಲಿದರೆ ಮುಂದು ಜಗದಲಿ ಸೋಲೆ ನಿಮಗಿಲ್ಲ (ಕಾಶಾ. ೩೩-೧೧): ಆ ಚಿಣ್ಣ ನಿನ್ನ ಹಲವು ವಿದ್ಯೆಯ ಗರುಡಿಯ ಹೊಕ್ಕು ಕಲಿತನು ಗೆಲವುಂಟು ಸೋಲು[ಪಾಠಾಂ. ಲ] ಕೇಳ್ ಎನಗೆ (ಮೋಹತ. ೧೨-೮); ಗೆಲ್ಲು ಸೋಲಿಂಗೆ ಹೋರುವವನಲ್ಲ ಶರಣ (ಅಪಂಡೀ. ೧೩೨-೧೦೩). ೬. ಧೈಯಮಿನ್ನ ಅಭಾವದಿಂದ . . . ಯಾವ ಕೆಲಸ ಮಾಡಬೇಕಾದರೂ ಸೋಲು, ಬೇಗ ಸಿಡುಕು, ಕೋಪ, ಅತೃಪ್ತಿಯಿಂದ ಜೀವನ ಬೇಸರವಾಗುತ್ತದೆ (ಗೃಹವಿ. ೩೪).

ಸೋಲವನೆತ್ತು = ಪರಾಜಯಗೊಳಿಸು; **ಸೋಲಿಸು** : ನವಿಲ ಸೋಲವನೆತ್ತುವ ನೆಂದು ಬಂದೆನ್ನ ತಿವಿದ ಸಾಹಸಿಯ ನೋಡನುತೆ ವಿವಿಧ ವಿಚಾರದಿಂದೆಱೆಯೊಳಿಕ್ಕಲು ಕವಿದು ಬಿದ್ದುದು ಭೂಮಿಯಲಿ (ಮೋಹತ. ೩೮-೩೨).

[< ಸೋಲ್. / ತಮಿ. ತೋಲ್, ತೋರ್; ಮಲ. ತೋಲಿ; ತುಳು. ಸೋಲ, ಸೋಪು, ಸೋಲ್ಪು]

ಸೋಲಂಬಡೆ, ಸೋಲುವಡೆ (ಕ್ರಿ). ೧. ಮೋಹಗೊಳಿಸು; ಪರವಶಗೊಳಿಸು: ಚುಂಬನಮೊರ್ಮೆಗೊರ್ಮೆ ತನಿವರ್ಚುವುದು . . . ನುಣ್ಮುಡಿಯುಂ ಕವಿಗೊರ್ಮೆ ಗೊರ್ಮೆ ಸೋಲಂಬಡೆಯುತ್ತುಮಿರ್ಪುದವರ್ಗಳ್ಗವಕಾಶಮದುಂಟೆ ಬೇಟದೊಳ್ (ಚಂದ್ರಪು. ೬-೮೪). **ಸೋಲುವಡೆ**: ೨. ಅಪಜಯವನ್ನು ಹೊಂದು; ಪರಾಜಯಗೊಳ್ಳು: ಕೃಷ್ಣನ ಪರಾಕ್ರಮದಿಂದ ಸೋಲುವಡೆಯದ ರಾಜನಾರೂ ಇಲ್ಲಿ ಕಂಡುಬರುವುದಿಲ್ಲ (ಪಚಛಾ. ೮೨). [ಸೋಲ + ಪಡ್]

ಸೋಲಕಾರ್ತಿ (ನಾ). ಮೋಹವನ್ನುಂಟು ಮಾಡುವವಳು: ಸೋಲಕಾರ್ತಿಯರ್ ಕಣ್ಗೋಲಮಂ ಕಾಣ್ಕೆಗೊಟ್ಟು ಮನಮಂ ಮೆಚ್ಚುಗುಡೆಯುಂ (ಅರ್ಧನೇ. ೫-೨ ವ).

[ಸೋಲ + - ಕಾರ್$_1$ (<- ಕಾಱ) + - ತಿ$_1$ (< - ಇತ್ತಿ)]

ಸೋಲಗಿತಿ (ನಾ). = ಸೋಲಕಾರ್ತಿ: ಎಲಗೇ ನಿಲ್ ತಲವಾಲದಾಕೆ ಪಲವಣ್ಣಂಗೊಂಡ ನುಣ್ಗಲ್ಲಿದೇ ನೆಲದೊಳ್ಬುಟ್ಟುಗುಮಾವ ಬೇನೆಗೊಡಲೊಳ್ ತೊಟ್ಟರ್ವ ನೀನುಟ್ಟ ಪೇರಲೆಯೇವಾಳೆಯದೆಂದು ಸೋಲಗಿತಿಯರ್ಕೆಳ್ನನ್ನೆಗಂ (ಅಪ್ರತಿ. ೨೫-೧೭). [ಸೋಲ + - ಗಿತ್ತಿ (<- ಗಿತ್ತಿ)]

ಸೋಲಿಗ (ನಾ). ಗುಡ್ಡಗಾಡುಪ್ರದೇಶದಲ್ಲಿ ವಾಸಿಸುವ ಒಂದು ಜನಾಂಗ: ಆನೆಯನ್ನು ಗಾಯಗೊಳಿಸಿ ತಮ್ಮ ವಶಮಾತಿಕೊಳ್ಳುವ ಸೋಲಿಗರಂತೆ . . . ನನ್ನನ್ನು ವಶಪಾಡಿಕೊಳ್ಳಲೆತ್ನಿಸುತ್ತಿದ್ದಾನೆ! (ನಳಚ. ೨೦೪); ಆನೆಗಳ ಹಿಂಡನ್ನು ಅಟ್ಟಿಕೊಂಡು ಒಂದು ಒಂದು ಆವರಣದಲ್ಲಿ ಸೋಲಿಗರು ಸೇರಿಸುವರು (ಮಲ್ಲಿ. ೩೪); ಒಂದು ಕಾಲದಲ್ಲಿ ರಂಗನಿಗೆ ಒಬ್ಬ ಸೋಲಿಗ ಹುಡುಗಿಯ ಮೇಲೆ ಪ್ರೀತಿಯಾಯಿತು (ಸಣ್ಣಕ. IX, ೨). [?]

ಸೋಲಿದು 'ಸೋಲ್' ಪರಾ.

ಸೋಲಿಸು (ಕ್ರಿ). ೧. ಪರಾಜಯಗೊಳಿಸು; ಅಪಜಯ ಹೊಂದುವಂತೆ ಮಾಡು: 'ಸೋಲಿಸು – ಅಪಜಯೇ" (ಶಮಧಾ); ಕುತರ್ಕದಿಂ ಮತ್ಸರಿಪ ಪರವಾದಿ ಗಳನೊಮ್ಮೆಯು ಸೋಲಿಸುವ ಭಾಜೆ (ಬಾಸಪು. ೬-೪), ಆಳುವವರ ನಗಿಸುವುದು ನಗುವರನಳಿಸುವುದು ಗೆಲಿದವರ ಸೋಲಿಸಿ ಗೆಲಿಸುವುದು ಸೋತವರನೀ ವಿಪರೀತಗತಿ ವಿಧಿಗೆ (ಕುವ್ಮಾಕ. ೧೨-೩): ಹಂಸದ್ವಜನ ಗೆಲ್ದು ಸೋಲಿಸಿ ಪ್ರಮಾಲೆಯಂ (ಚಕ್ರಾಂಗ. ೭೨-೧೯೭೦). ೨. ಆಸಕ್ತಿಹೊಂದುವಂತೆ ಮಾಡು; ವ್ಯೋಹಗೊಳಿಸು; ಮರುಳಾಗಿಸು: ಪೊಸತಲರ್ದ ಪದಮೊಳುಣ್ಮುವ ಪೊಸಗಂಪಂ ಪಡೆದು ಪೊಟ್ಟಜೊಳ್ ಜನಮಂ ಸೋಲಿಸುಗುಂ (ಆದಿಪು. ೧೧-೧೦೯): ಆಡುವ ಕೇಕಿಯ ಭಂಗಿ ಲೋಕಮಂ ಸೋಲಿಸುಗುಂ (ಯಶೋಚ. ೩-೩೭); ಹೆಂಗಳ ರೂಪು ಗಂಡರಿಗೆ ಗಂಡರ ರೂಪು ಹೆಂಗಳ ಸೋಲಿಪುದೆಂಬ ಪಾಂಗಲ್ಲವವನ ಬಿಲ್ಮಿಕೆ ಗಂಡುಪೆಣ್ಗಳ ಕಂಗಳ ಸೆಜೆವಿಡಿದಿಹುದು (ಭರಚ. ೧-೫೦). ೧ , ೨: ಪಗೆಗಳುಮಂ ಪೆಂಡಿರುಮಂ ಮಿಗೆ ಸೋಲಿಪುವವನ ಬೀರಮುಂ ಗಾಡಿಯುಂ (ಕಬ್ಬಕಾ. ೪೮). ೩. ತಣಿಸು; ದಣಿಸು: ಸೋಲಿಸಿತೆ ಕಣಾ ಮೃತಪ ಪಳಗಾಲ ನಿನ್ನಯ ಕವಿಗಳನು (ಕುವ್ಮಾಡ್ಡೂ. ೧-೧).

[ಸೋಲ್ + - ಇಸು$_3$]

ಸೋಲು$_1$ 'ಸೋಲ್' ನೋ.

ಸೋಲು$_2$ 'ಸೋಲ' ನೋ.

ಸೋಲು$_3$ (ನಾ). ಒಂದು ಬಗೆಯ ಸುಗಂಧದ್ರವ್ಯ ಮತ್ತು ಅದರ ಗಿಡ: ಪುಷ್ಪವನದಲ್ಲಿ ರಾಮಂಚ ಸೋಲು ಕಮರಕ ಸುರವಾರ ಬೂಂದು ಚಹಾ ಕಾಫೀಬೀಜ ಪಚ್ಚದವನ ಮುಂತಾದವುಗಳನ್ನು ಹಾಕಬೇಕು (ಕೃಷಿಪ್ರ. ೧೭೦). [?]

ಸೋಲುಮುಡಿ 'ಸೋಲ್ಮುಡಿ' ನೋ.

ಸೋಲುವಡೆ 'ಸೋಲಂಬಡೆ' ನೋ.

ಸೋಲುವೆ (ನಾ). ೧. ಅಪಜಯ; ಪರಾಜಯ; ಪರಾಭವ: ಅಳುಮೇಳದಲ್ಲಿ ಎದಿತನಾಗಿ ಇಹಾಗ ಸೂಳೆಯ ಮನೆಯ ಆಳೇ ಬಾಲರಾಳಿಯ ಜೂಜಿನ ಸೋಲುವೆಯೇ (ಮೋಸಾಮಾ. ೧೨-೩೫). ೨. ಕ್ರಿಯಾಹೀನವಾಗುವಿಕೆ; ನಿಷ್ಕ್ರಿಯತೆ: ಮೈಯಲ್ಲಿನ ಬಹುಪಾಲು ನೀರು ಕಳೆದುಹೋಗಿ, ನೀರವಾಗೋ ಮೂತ್ರಪಿಂಡಗಳ ಸೋಲುವೆಯಿಂದಲೋ ರೋಗಿ ಸಾಯಬಹುದು (ಕವಿಕೋ. I. ೮೨೭).

[ಸೋಲು$_1$ (< ಸೋಲ್) + - ವೆ]

ಸೋಲೆ (ನಾ). ೧. (ಕಾಳು, ಬೇಳೆ, ಈರುಳ್ಳಿ ಮೊದಲಾದುವುಗಳ) ಹೊರಪದರ; ಸಿಪ್ಪೆ: 'ಸೋಲೆಗಳೆ' ಪರಾ. ೨. (ಹಾವಿನ) ಪೊರೆ: ಸರ್ಪನಂ ಪುದಿದಿರ್ದ ಸೋಲೆಯಂ ಹೆರೆಗಳೆದೊಡೇನು (ವೀಶಪ್ರ. ೪-೪-೪); ಪಾವಿನ ಸೋಲೆಯಂ ಪಸುವಿನ ತುಪ್ಪಮಂ ಸಾಮ್ಯಾಣಿಯೊಳ್ ಬೆರಸಿ ಪೊಗಗೊಳಿಪುದಂದುಂ (ಬಚಪಂ. ೧೪೮-೩); ಹಾವು ಸತ್ತ ಮೇಲೆ ಸೋಲೆ ಹಂಗೇನು? (ಗಾಡ). ೩. ಹಲಸಿನ ಹಣ್ಣಿನಲ್ಲಿ ತೊಳೆಯ ಸುತ್ತಲೂ ಇರುವ ನಾರು: ಹಲಸಿನ ಹಣ್ಣನ್ನು ಕುಡಲಿ ನಿಂದ ಕೊಯ್ದು ಸೋಲೆ ತೆಗೆದು, ಬತ್ತ ಬಿಡಿಸಿ, ತೊಳೆಗಳನ್ನು ಲಕ್ಷಣವಾಗಿ ತಟ್ಟೆಯಲ್ಲಿಟ್ಟು ಕೊಡುವುದು ಸಾಮಾನ್ಯ ರೀತಿ (ನನ್ನೂರು. ೧೩ ವೀರಕ).

[ದೇ. || ತಮಿ. ಚೊಲಿ = ಮರದ ತೊಗಟೆ; ತುಳು. ಚೂಲಿ, ಚೋಲಿ, ತೂಲಿ, ಸೂಲಿ, ಸೋಲಿ./ಮರಾ. ಸೋಲಣೇಂ = ಸಿಪ್ಪೆಸುಲಿ]

ಸೋಲೆಗಳೆ (ಕ್ರಿ). ೧. ಸಿಪ್ಪೆಯನ್ನು ಸುಲಿ .– ತೆಗೆ: ಸೋಲೆಗಳೆದ ಉಳ್ಳಿಯ ಬೇಳೆಯ ಅರೆಮಾನ ಹಸುವಿನ ಹಾಲಲ್ಲಿ . . . ಕಾಸಿ ಕೊಡಲು ವಾತಗುಲ್ಮ, ಉದಾವರ್ತ . . . ಕ್ಷಯ, ಇಷ್ಮನು ಪರಿಹರಿಸುವುದು (ವೈದ್ಯಸಾ. I. ೨೯೬). ೨. (ಹಾವು) ಪೊರೆಯನ್ನು ಕಳಚು,– ಬಿಡು: ಆಜುತಿಂಗಳಿಗೆ ಒಂದು ವೇಳೆ ಸೋಲೆಗಳೆಯುವುವು. ಸೋಲೆಗಳೆವಾಗ ಮರಣಾವಸ್ಥೆಯಲ್ಲಿ ಉಂಟಾದಷ್ಟು ಪ್ರಯಾಸ ಪಡುವುವು (ವೈದ್ಯಸಾ. II. ೧೪೪). [ಸೋಲೆ$_1$ + ಕಳೆ$_1$]

ಸೋಲ್ಕೆ (ನಾ). ಅಪಜಯ ಹೊಂದುವಿಕೆ; ಸೋಲುವಿಕೆ: ನೇಲ್ಕ, ಪೋಲ್ಕೆ, ಸೋಲ್ಕೆ, ಕಪಲ್ಕೆ (ಶಬ್ದಾನು. ೫೫೭ ಪ್ರಯೋ). [ಸೋಲ್ + - ಕೆ]

ಸೋಲ್ತ 'ಸೋಲ್' ಪರಾ.

ಸೋಲ್ತಯಿಸು (ಕ್ರಿ). ಸೋಲನ್ನು ಉಂಟುಮಾಡು; ಪರಾಜಯಗೊಳಿಸು: ಜನರಂಜನಂಗೆ ಚಳಲೋಚನಯುಗಳಂ ಕಾಣಲೊಡನೆ ಸೋಲ್ತಯಿಸಿದ ಶಾಸನಮಂ ಬರೆದಂತೆ ಕದಂಪಿನ ಮೃಗಮದಪತ್ರಭಂಗಮೊಪ್ಪಿದುದವಳಾ (ಲೀಲಾವ. ೧೨-೭೪).

[< ಸೋಲ್ + - ಇಸು$_3$]

ಸೋಲ್ತು 'ಸೋಲ್' ಪರಾ.

ಸೋಲ್ದು 'ಸೋಲ್' ಪರಾ.

ಸೋಲ್ನಡೆ (ನಾ). ನಿಧಾನವಾದ ನಡಗೆ; ಮೆಲ್ನಡೆ; ಮಂದಗಮನ: ಕಳಹಂಸಗಳ ನಡೆಯ ಕಳಭಂಗಳೊಳ್ನಡೆಯ ಸಲೆ ಸೊಂಪುನಡೆಯ ಸೋಲ್ನಡೆಯ ಸೊಬಗಿಯರಿರದೆ ತಳರ್ದರು (ಚಿಬಿಪು. ೩೭-೪೧). [ಸೋಲ್ + ನಡೆ]

ಸೋಲ್ಮುಡಿ, ಸೋಲುಮುಡಿ (ನಾ) ಸಡಿಲವಾದ ಮುಡಿ: ಅಳ್ಳಕವಾದ ತುರುಬು : ಬಳಲುಮುಡಿ ಬಲ್ಮುಡಿಯು ಸೋಲ್ಮುಡಿಯು ಜೋಲ್ಮುಡಿಯು (ನಸಪೂ. ೨೮-೧೮); ಪೊಗರುಕುಚ ನಗೆಮುಖವು ಸೋಲ್ಮುಡಿ ಸೊಗಪ ಸೊಬಗಿನ ಸೋನ ವರ್ಣಸಲ್ ಜಗದೊಳಾವನು (ಆದಿಪ. ೩೦-೩); ಆ ಪೆಂಪಿನ ಸಂಪಗೆಯನ್ನು ಮುಡಿದಿರುವ ಸೋಲ್ಮುಡಿಯ ಸೊಬಗಿ? (ತುಂಗಭ. ೬೫). **ಸೋಲುಮುಡಿ** : ಸೋಲುಮುಡಿಯ ಪೂವ ಸಿರಿದೇವಿಯ ನಿಜಮಾಲೆ ಕೌಸ್ತುಭಹಾರ ಉರ ವಿಶಾಲನ ಕಂಡೆ (ತೀರ್ಥಮ. ೧೧೮).

[< ಸೋರ್ಮುಡಿ]

ಸೋಲ್ವ 'ಸೋಲ್' ಪರಾ.

ಸೋಲ್ವಾಯಿನ (ನಾ). ಮೋಹಗೊಳಿಸುವಂತಹ ಬಾಗಿನ: ಸಬೀಜನಕೆ ಸಂತಸದ ಸೋಲ್ವಾಯಿನಮುಮಂ ತುಂಬಿಗಾಣತಿಯರ್ಗೆ ಬಾಯ್ಗಂಪಿನ ಬಾಯಿನಮಂ ಬೀಱುತ್ತುಮಲ್ಲಿಂ ತಳರ್ದರ್ (ಲೀಲಾವ. ೧೧-೫೭ ವ).

[ಸೋಲ್ + ಬಾಯಿನ (< ಬಾಯನ)]

ಸೋವಗಾವುಂಡ (ನಾ). ಒಬ್ಬಾತನ ಹೆಸರು: ಸೋವಗಾವುಣ್ಡ XXX ದೇವರಾ ಸೊಡರ್ಗ್ಗಂ ನಿವೇದ್ಯಕ್ಕಮ್ XXX ಮನ್ನಸಮುದ್ರ XXX ಗಂಡುಗನ್ ಕಳನಿ XXX ಗೆಯ್ದು (ಪ್ರಶಿ. ೧೯೨೬. ೧೨೫-೨; 955). [ಸೋವ್ವ + ಗಾವುಂಡ (< ಗಾಮುಂಡ)]

ಸೋವಡಿ (ನಾ). ಏನೂ ತಿಳಿಯದವನು; ಮುಗ್ಧ: ನೆರೆದಾಸ್ಥಾನದೊಳರ್ದು ರುಕ್ಮಿಣಿಯ ಮುಂದೆನ್ನೊಂದು ಸೌಭಾಗ್ಯಮಂ ಪರಿಹಾಸಂಗಯುತಿರ್ಪ ನಾರದನ ಮಾತಂ ಪ್ರೀತಿಯಿಂ ಕೇಳ್ದಿಳಾವರ ನೀಂ ಸೋವಡಿಯಂತಿರೀಗ ನುಡಿವಯ್ (ಜಗವಿ. ೧೨-೧೦೩).

[?]

ಸೋವಣ (ನಾ). ಒಂದು ಬಗೆಯ ತೆರಿಗೆ: ಸುಂಕ ಸೊದಿಗೆ ಸೋವಣ ಸಂದೂ ಸಕಲಸ್ವಾಮ್ಯವನು ಅನುಭವಿಸಿಕೊಂಬಿರಿ (ಎಕ. III (R), ಗುಂಡ್ಲುಪೇ. ೫೪ ಬ; 16ನೆಯ ಶತ) 'ಸೊಬ್ಬಣ' ಪರಾ. [?]

ಸೋವತ (ನಾ). ಬಲಿ; ಅರ್ಪಣೆ; ಆಹುತಿ: ಅಂತಕನ ಬಾರಿಗೆ ಸೋವತಮಾದೆ (ಪಂರಾಮಾ. ೧೪-೨೦೧); ಅವನ ಕಣ್ಗೆಸೆಯದೆ ನಿಷ್ಠಾವನಮಾ ವಿಭುವಿಯೋಗ ಪದದೊಳ್ ತೊದಳ್ಕಂ ಕಾವಲನಿರವಿಂಗಾದುದು ಸೋವತಮೇ ಪೇಳ್ವುದಣ್ಣ ವಿಧಿವಿಳಸನಮಂ (ವರ್ಧಪು. ೨-೪೦); ಸೋವತಮಂ ಮಾಡುವೆನಂತಕವದನಾವಾಸಕೆ ತಾಗಿದನಾದೊಡೆ ಮೇಣ ವಯಿಸದೇಂ ಪಿಡಿತಪ್ಪೆಂ ನಿಂದಡೆ ಕೋಡಗಗಟ್ಟಂ ತೊಟ್ಟನೆ ಕಟ್ಟಿ (ಕುಮಾರಾ. ೧೫-೨).

ಸೋವತಂ ಮಾಡು = ಬಲಿಯಾಗಿ ಕೊಡು ,– ಅರ್ಪಿಸು: ಶತಬಿಂದುವಿನ ಮಕ್ಕಳಪ್ಪಯ್ವರಂ ಗಾಳಿಗೊಡ್ಡಿದ ಪುಲ್ಲ ಬಿಂದುಗಳಂತೆ ನಕುಲಂ ನೆಲಕ್ಕ ಸೋವತಂ ಮಾಡಿದಂ (ಪಂಪಭಾ. ೧೩-೪೧ ವ). **ಸೋವತಮಾಗು** = ಆಹುತಿಯಾಗು; ತುತ್ತಾಗು; ಬಲಿಯಾಗು: ಅಂತು ಪಲಂಬರೆಲ್ಲಮೋಡಿ ಪೋಗೆಯುಮೆಮ್ಮ ವರೆಲ್ಲಂ ಜವನ ಬಾ(ವಾ)ರಿಗೆ ಸೋವತಮಾಗಯುಂ ಆಗಳಾನೊರ್ವಳೆ ಪಟುವಿನೊಳ ಗಾದಂ (ಜೀವಸಂ. ೧೫-೨೪ ವ); ಗುರುಗುಣಮಂ ಪೊರಳ್ಚಿ ಪುಲಿವಿಂಡುಗಳಂ ಪಿಡಿದಟ್ಟಿ ಕೊಂಡು . . . ದಿಟ್ಟಿಗೆ ಸೋವತಮಾದುದೆಲ್ಲವಂ ಹರಿಯಿಸೆ ಸೊಕ್ಕಿದಾನೆ ನೆಱೆ ಕೊಂದುದು ಬೀಡಿನ ಮಂಟಯೆಲ್ಲಮಂ (ಪುಣ್ಯಾಸ್ರ. ೪-೪೫).

[?/ ಪ್ರಾ. ಸೋವತ್ತ = ೧. ಉಪಕಾರ. ೨. ಉಪಭೋಗ್ಯ]

ಸೋವದಿಕೆ (ನಾ). ನಿವೇದನೆ; ಉಪಹಾರ; ಬಲಿ: ವಸುಪೂಣನ ಪತಿಯೆನಗೆಂದು ಸುನಂದ ಸಿಡಿಲ್ಕೆ ಮಾಟ್ಟ ಸೋವದಿ[ವಾಶಾಂ. ೩]ಕಯನೀ ಬಸಿವ ತಲೆಗೆನುತು ಮಿಡಾಡಿಸಿದಂ ಮಾಯಾವಿ ಪತಿಯ ಮಾಯದ ಶಿರವಂ (ಅನಂಪು ೧೨-೩).

[< ಸೋವತ + - ಇಕೆ]

ಸೋವನ 'ಸೋಬಾನೆ' ನೋ.

ಸೋವನಿಗ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲಿಗ: ತಂಬುಲಿಗರು ವಿಟ್ಟುವೊರ್ಕಲೊಳ್ ೨೫ ಪೆ XX ದ್ರೋಣಮುಮಂ ಕೊಟ್ಟರು ಸೋವನಿಗರು ಕೊಟ್ಟ ವಿ ೫ ಅಕ್ಕಸಾಲಿ XX ಸು ವಿ ೫ (ಎಕ. VII, ಶಿಕಾರಿ. ೧೧೧-೨೬, 1080). [< ಸಂ. ಸೌವರ್ಣಿಕ]

ಸೋವಳಿ (ನಾ). ಅಟ್ಟುವಿಕೆ; ಓಡಿಸುವಿಕೆ: ನೆಲಂ ನಿಲುಗೆಯಂ ನವೆವೊಂದು ಪದಮುಮಂ ಸೋವಳಿ ಮೇವಳಿ ಬಿಸುವಳಿಯಂ ಬಲಮಂ ಶಕುನಮನೊಳ್ಕಿತ್ತು ಪಾಯಮಂ ಪಿಡಿವಂದು . . . ಸಿಲೆಯ ಮೇಲಾದೊಡಂ ಶಕುನಮಂ ನಿಱೆಪಂತೆ ನಿಱೆಸುವೆಂ ಪಂಪಿಯಂ ನೀಂ ಮೆಚ್ಚಲುಂ (ಪಂಪಭಾ. ೫-೪೭). [ಸೋ + - ವಳ್ಳಿ]

ಸೋವಾಸಿಣಿ (ನಾ). ಮುತ್ತೈದೆ; ಸುಮಂಗಲಿ: "ಕೀಚಕಾಸ್ಪೋಟಾ, ಸುವಾಸಿನೀ-ಈ ೨ ಸೋವಾಸಿಣಿ" (ಪಲಾಯು. ೭೯-೩೨೯); ಸುವಾಸಿನಿ - ಸೋವಾಸಿಣಿ, ಸೋವಾಸಿನಿ (ಶಪಾದ. ೨೭೦ ಪ್ರಯೋ); ಸೋಮದೇಶಿಕನ ಪಟ್ಟರಿಸಿ ಬಿನದದಿಂ ಸೋವಾಸಿಣಿಯರೊಗ್ಗು ಗೂಡಿ ಜೋಗುಳವಾಡಿದರ್ಗಾಡಿಯಿಂ (ಪಾಸೋಪು. ೨-೩೯).

[< ಪ್ರಾ. ಸೋವಾಸಿಣೀ, ಸುವಾಸಣೀ, ಸುವಾಸಿಣೀ./ಸಂ. ಸುವಾಸಿನೀ]

ಸೋವಿ, ಸೋಯಿ (ನಾ). (ಉಕ) ೧. ಅನುಕೂಲ; ಸುಲಭ: ಬಸ್ಸು ಸೋವಿ ಆಗಿತ್ತು. ಟಾಂಗಾ ಮಾಡುವ ಗೋಜೂ ಇಲ್ಲ (ವೃನಿ. ೨೦೨); ಫ್ರಾನ್ಸಿಕ್ಕೆ ಹೋಗಲು ಮೂರು ಮಾರ್ಗಗಳು . . . ಮೂರನೆಯದು ಸ್ವಲ್ಪ ಸೋವಿಯಾಗುವುದಲ್ಲದೆ ಪ್ರವಾಸವೂ ಹೆಚ್ಚು ವೇಳೆಯವರೆಗೆ ಆಗುವುದು (ಶ್ರೀರಂಗ. ೮೪). ೨. ಕಡಮೆಯ ಬೆಲೆ; ಅಗ್ಗದ ದರ: ಅನಾವಶ್ಯಕವಾದ ಯಾವುದನ್ನೂ ಸೋವಿಯೆಂಬ ಕಾರಣದಿಂದ ಕೊಳ್ಳತಕ್ಕದ್ದಲ್ಲ (ಮಿತವ್ಯ. ೨೩); ಏನೋ ಪೇಟೆಗೆ ಹೋಗಿದ್ದೆ, ಕಾಯಿಪಲ್ಲೆ ಸೋವಿ ಕಂಡಿತು, ತಂದೆ (ಮುಂಗಾವು. ೧೧೪). **ಸೋಯಿ**: ೧. ಒಂದು ಗಾಡಿಯ ಭರತೀಯ ಮಾಲು ಇದ್ದರೆ . . . ಪರಭಾರ ಸ್ಟೇಶನ ಮೇಲೆ ಕಳುಹಿಸಲಿಕ್ಕೆ ಸೋಯಿ ಆಗುತ್ತದೆ (ಮುಂಬವಾ. ೧೮೬). ೨. "ಸೋಯಿ = ಅಗ್ಗ" (ಚಾನಕೋ. ೫೧); ಸಹಜ ಸೋಯಿ ಕಂಡಿತು ತಂದೆ (ಅಶೋಕ. ೭೧).

[← ಮರಾ. ಸೋಈ. ಸೋಯ್]

ಸೋವಿದರ, ಸೋಯಿದರ (ನಾ). = ಸೋವಿ ೨: ಇಂತಹ ಪ್ರಸಂಗಗಳಲ್ಲಿ ಅಲ್ಲಿಯ ಪತ್ರಿಕೆಗಳು ಈ ಜನರಿಗೆ ಸೋವಿದರದ ಕಾಮಧೇನು (ಗಾಶಿ. ೩೩). **ಸೋಯಿದರ** : ಇಲ್ಲಿ ಬನಾರಸಿ ಪೀತಾಂಬರ, ಪತ್ತಲ ಸೀರೆ ಒಂದೇ ಸೋಯಿದರದಲ್ಲಿ ದೊರೆಯುವುವು (ಸುತ್ತುಮು. ೩). [ಸೋವಿ + ದರ]

ಸೋವಿಲು 'ಸೋಂಕಿಲ್' ನೋ.

ಸೋವಿಲುದುಂಬು 'ಸೋಗಲುದುಂಬು' ನೋ.

ಸೋವಿಸು (ಕ್ರಿ). ೧. ಅಟ್ಟು; ಓಡಿಸು: ಮೃಗಂಪಿಗಂದೆರಗಿ ಬರುವಳಿಯ ನಿಕರಮಂ ಬೇಗದಿಂದಾಳಿಯರ ಕೈಗಳಂ ಸೋವಿಸುತಲಾಗ (ಸಿದ್ಧಕಾ. ೩-೧೩). ೨. ಪರಾಜಯ ಗೊಳಿಸು; ಸೋಲಿಸು: ಮುಖಶಶಿಯಿಂ ಶಶಾಂಕನನಟ್ಟಿ ಜಘನದಲಿ ಕುಲಗಿರಿಯ ಸೋವಿಸಿ ಘನಸ್ತನಗಳಲಿ ದಿಗ್ಗಜಕುಂಭಗಳ ಸೆಳೆದೊಲೆದು ನಲಿದುಯ್ಯಲೆಯನಾಡಿದರಾ ಮೃಗಾಕ್ಷಿಯರು (ಜೀವಂಜ. ೧೬-೭೧). [ಸೋವು (< ಸೋ) + - ಇಸು]

ಸೋವು 'ಸೋ' ನೋ.

ಸೋವು 'ಸೋಪು' ನೋ.

ಸೋವುಗ (ನಾ). ಬೇಟೆಗಾಗಿ ಕಾಡಿನ ಪ್ರಾಣಿಗಳನ್ನು ಎಬ್ಬಿಸಿ ಹೊರಡಿಸುವವನು: ತಡೆಯ ದೊಡ್ಡಾಪಂದಿ ಮಿಗಗಳ ನಿಡುವಲೆಯ ನೋಡೈದೆ ತೋಹುಗರೆಡಗವಂ ಸೋವುಗರು ಜಡಿತರೆ (ಸಾಳ್ವಭಾ. ೫-೨೫). [ಸೋವು (< ಸೋ) + - ಗ]

ಸೋವುಗಟ್ಟಿಗೆ (ನಾ). (ಬೇಟೆಯ ಪ್ರಾಣಿಗಳನ್ನು ತಿವಿದೆಬ್ಬಿಸಿ) ಓಡಿಸಲು ಉಪಯೋಗಿಸುವ ಕೋಲು: ಗಿಡುಗ ಸಾಳುವ . . . ಹಕ್ಕಿಗಳನವರು ಪಿಡಿದು ಮುಂಗೈಗದ್ದುಗೆಯೊಳಿಕ್ಕೆಲದೊಳೊಲೆವಾ ಸೋವುಗಟ್ಟಿಗೆ ಸಡಗರದಿ ಸೌರಂಭವೆಸೆದುದು ವಿಂಧ್ಯಕನ ಕೂಡೆ (ಸಾಳ್ವಭಾ. ೫-೨೦). [ಸೋವು (< ಸೋ) + ಕಟ್ಟಿಗೆ]

ಸೋವೆ 'ಸೋಪು' ನೋ.

ಸೋವೆ (ನಾ). ಒಂದು ಬಗೆಯ ಮರ : ಕಡವು ಶಾಲ್ಮಲಿ ಸೋವೆ . . . ಕರ್ಣಕಾರದ ಮೊತ್ತವಿದೆ (ತೊರಾ. ೩-೧-೨೭); ಬೇಳಲಿಬ್ಬೇಡೆ ಘನ ಸೋವೆವರ್ಗ (ರುಕ್ಮಾಂಗ. ೧೦-೩); ಸೋವೆ ನಗರೆ . . . ತುರುಗಳಲ್ಲಿಹವು (ಇಟಿಸಾ. ೬-೨೮). [?]

ಸೋಶೀರ (ನಾ). ಸುವಾಸನೆಯುಳ್ಳ ಬೇರನ್ನು ಹೊಂದಿರುವ ಒಂದು ಬಗೆಯ ಸಸ್ಯ; ಲಾಮಂಚ: ಆ ರಜಕರೊಳೊರ್ವಂ ಸೋಶೀರ ಶ್ರೀಚಂದನಂ ಪ್ರವಾಹದೆ ಬಂದಾ ತೀರಮನೆಯ್ದಲ್ ತೆಗೆದದನಾರಯ್ಕದೆ ಕಾಷ್ಠಮೆಂದು ಕಡಿವವಸರದೊಳ್ (ಪದ್ಮಸಾ. II, ೫೭೧). [ಸಂ.]

ಸೋಷ್ಣ (ಗು). ಉಷ್ಣತೆಯಿಂದ ಕೂಡಿದ; ಬಿಸಿಯಾದ: ಬೀಸಿದುದಸದೃಶ ಸೋಷ್ಣಪ್ರಭಂಜನಂ ಬೀಸಗೆಯೊಳ್ (ರಾಜಶೇ. ೫-೩೨). [ಸಂ.]

ಸೋಸ 'ಸಾಸ$_2$' ನೋ.

ಸೋಸಲು (ನಾ). ಒಂದು ಬಗೆಯ ಮೀನು: ಆ ಪೊಟ್ಟಣದಲ್ಲಿ ಕೆಲವು ಬೆಳ್ಳೇಡಿ, ಸೋಸಲು, ತೊಳ್ಳೆಮೀನುಗಳಿದ್ದು ಒಂದು ತೊಳ್ಳೆಮೀನಿಗೆ ಇನ್ನೂ ಜೀವವಿದ್ದುದರಿಂದ ಚಿಮ್ಮಿ ಹಾರಿ ಒಲೆಯ ಬೂದಿಗೇ ಬಿದ್ದಿತು (ಮಲೆಮ. ೫೮೮). [?]

ಸೋಸು$_1$ (ಕ್ರಿ). ಅಟ್ಟು; ಓಡಿಸು: ಸೋರ್ವ್ಯ ಕರುಳಾ ಕರುಳ್ಗಾಟಿಪ ಬಳ್ಳು ಬಳ್ಳುಮಂ ಸೋಸುವ ವೀರರಟ್ಟೆ ಭಟರಟ್ಟೆಯನಟ್ಟುವ ಭೂತಕೋಟಿಯಂದಾಸುರಮಾಯ್ದು . . . ಆಹವಾರಣಂ (ಎಕ. VIII, ಸಾಗರ. ೧೫೪-೪೮; 1218). [ಸೋ$_1$ + - ಸು$_1$]

ಸೋಸು$_2$ (ಕ್ರಿ). ೧. (ದ್ರವಪದಾರ್ಥಗಳ) ಕಲ್ಮಷಭಾಗವನ್ನು ಶೋಧಿಸಿ ತೆಗೆ,– ಬೇರ್ಪಡಿಸು; ಶೋಧಿಸು: ಬಳಿಕ ಅದರೊಳಗೆ ಸೇರಿಗೆ ಎರಡೂವರೆ ತೊಲೆಯಂತೆ ತಿಳಿಸುಣ್ಣ ಕೂಡಿಸಿ ಸೋಸಿ ತೆಗೆಯುವರು (ಮುಂಬಯಿ. ೪-೭೧); ಚಹಾ ಕಾಸೋದು ಸೋಸೋದು ನಡೆದೇ ಇತ್ತು (ಕೃನಿ. ೧೧). ೨. ಜರಡಿ ಹಿಡಿ; ವಂದರಿಯಾಡು: ಊರನ್ನೆಲ್ಲ ವಂದರಿಯಲ್ಲಿ ಸೋಸಿದಂತೆ ಹುಡುಕಿಬಿಟ್ಟರು (ಪಂಚಾಮೃ. ೭). ೩. ಆರಿಸಿ ತೆಗೆ; ಹೆಕ್ಕು: ಈ ಕೃತಿಯೊಳಿಹ ದೋಷಂಗಳ ಸೋಸುತ್ತೆ ಮಿಗೆ ತಿದ್ದಲಿಕ್ಕೆನಗೆ ಸನ್ಮತಿಯ ಕೈ ಸಾರಿಸು (ಪರಶು. ೧-೬); ಅಪ್ಪಿ ತಪ್ಪಿ ಬಿದ್ದಿರಬಹುದಾದ ಕಲ್ಲುಗಳನ್ನೂ ಚೆನ್ನಾಗಿ ಸೋಸಿ ಒಂದೂ ಬಿಡದಂತೆ ಹೊರತೆಗೆದು ಮಣ್ಣಿನಲ್ಲಿ ಹೂಳುವರು (ಬೋರದೇ. ೪೯) ೪. ಶುದ್ಧಾಶುದ್ಧಗಳನ್ನು ಬೇರ್ಪಡಿಸು; ಸ್ವಚ್ಛಗೊಳಿಸು: ಕೈಯಲ್ಲಿದ್ದ ತರಕಾರಿಯ ಬುಟ್ಟಿಯನ್ನು ಎದುರಾಗಿ ಇಟ್ಟುಕೊಂಡು, ಹರುವೆಯ ಸೊಪ್ಪನ್ನು 'ಸೋಸ' ತೊಡಗಿದಳು (ಕಾನೂರು. ೨೨೦) ೫. ಹುಡುಕು; ಅರಸು: ನಿನ್ನ ತನುವೆಂತು? ದನಿಯೆಂತು? ಮನೆಯೆಂತು? ದೆಸೆದೆಸೆಯ ಸೋಸಿ ನಾ ಸೋತೆ! (ಗಿಳಿವಿ. ೪೮-೬), ಒಂದು ದಿನ ಎಏನಕ್ಕೆ ಹೊರಟ ಕೇತಯ್ಯ ಚಂದದಿಂ ಬಿದಿರನುಂ ಸೋಸಿ ತರುವುದಕೆ (ಶರಲೀ. ೧೭೨). ೬. ತನಿಖೆ ಮಾಡು; ಪರೀಕ್ಷಿಸು: ಆ ಶಿರ ಆತನ ಬಿತನ ಕರದೊಳು ಸೂಸುವ ರಕ್ತವ ಬೀಳುತಿರೆ ಸೋಸಿ ನೋಡದೆ ರುಂಡ ಬಿಸುಡಲವನ ಶಿರ ಸಾಸಿರ ಮಾಡಿದಾಟವೆಲ್ಲಿ ಕಲಿತೆಯ್ಯ (ಪುರಂದ. ೧-೯೬ ೧೨); ನನ್ನ ಮೇಜಿನಲ್ಲಿ ಏನಿದೆ ಎಂದು ಸೋಸುವದೇ ಅವಳ ಕೆಲಸ (ಇಣಿನೋ. ೫೨). ೭. ವಿಚಾರ ಮಾಡು; ವಿಮರ್ಶಿಸು; ಪರಿಶೀಲಿಸು: ಮಿದುಳು ತಾನು ಕೇಳಿದ ವಿಚಾರಗಳನ್ನು ಸೋಸುತ್ತದೆ (ಮೂಕಜ್ಜಿ. ೨೬೦). ಕೂಲಂಕಷವಾಗಿ ಮೇಲಿನ ಮಾತುಗಳನ್ನು ಸೋಸಿ ನೋಡಿದರೆ, ಆ ಮಾತುಗಳ ಹಿಂದೆ ಆಗಿ ಹೋದ ಐತಿಹಾಸಿಕ ಭವ್ಯಸಂಗತಿಯು ತಲೆಯೆತ್ತಿ ಕುಣಿದಾಡುತ್ತಿರುವುದು ಕಂಡುಬರುವುದು (ಕನ್ನಡಾ. ೪೩). [IP ಇದು 'ಶೋದಿಸು' ಎಂಬ ರೂಪದ ದಕಾರವು ಲೋಪವಾಗಿ ಉಂಟಾದ ಶಬ್ದರೂಪವಿರಬಹುದು.]

ಸೋಸು$_3$ (ಕ್ರಿ). (ಉಕ) ಅನುಭವಿಸು; ಸಹಿಸು: ಅಂತೂ ತುಂಬಾ ಕಷ್ಟ ಸೋಸಿದ್ದೀರಿ (ಮರೇ. ೩೪); ಈ ಎಂಟು ವರ್ಷ ಗಂಗವ್ವ ಸೋಸಿದ ಬವಣೆ ಅವಳಿಗೇ ಗೊತ್ತು (ಗಂಮಾಯಿ. ೧). [< ಸಹಿಸು]

ಸೋಸು$_4$ (ನಾ). ೧. ಚಂದ; ಸೊಗಸು: ದಾಶಾಹ್ಮರುಣ ಬನ್ನಿರೈ ಸಂಭ್ರಮದಿಂದೆ ಸೋಸೀಲಿ ವ್ರಜನಾಥ ಮೀಸಲ ಜಾಯಸ (ಪ್ರಸಭಾ. ೨೨-೨); ವಯಸ್ಸಿಗೆ ಬಂದ ಮೇಲೆ ನೆರೆಯೂರಿನ ನಿಂಗನಿಗೆ ಸೋಸಿನಿಂದ ಮದುವೆ ಮಾಡಿಕೊಟ್ಟರು (ಅನ್ನ. ೧೮೧). ೨. ಉತ್ಸಾಹ; ಆಸಕ್ತಿ: ತಕ್ಕ ಕಾರಣದ ಹೊರ್ತು ಸುಮ್ಮಸುಮ್ಮನೆ ಹುಡುಗರಿಗೆ ಇನಾಮು ಕೊಡಹತ್ತಿದರೆ . . . ಅವರಿಗೆ ಸೋಸು ಹುಟ್ಟಬೇಕೆಂದು ಇನಾಮು ಕೊಡುವ ಉದ್ದೇಶವು ನಿಷ್ಫಲವಾಗಿ ಅವರಿಗೆ ಆ ಇನಾಮಿನ ಮಹತ್ವವು ತೋರದ ಹಾಗಾಗುತ್ತದೆ (ಮುಂಬಯಿ. ೫-೪೪). [< ಸೊಗಸ್ಸು]

ಸೋಹ (ನಾ). [ತತ್ತ್ವಶಾ] ನಾನೇ ಪರಮಾತ್ಮನೆಂಬ ಭಾವನೆ: ಸೋಹ ದಾಸೋಹವೆಂಬೆರಡಜತು ಸಹಜ ನಿರ್ದೇಹಿಯಾಗಿಪ್ಪ . . . ಶಿವಭಾವಭರಿತಾನಂದ ಸುಖಪ್ರಸೀಯೆನಗೆ ಕರುಣಾಬ್ಧಿ ಸೊದ್ದಳಲಿಂಗವೆ (ಶಿವಗೀ. ೧೭-೬೪); ಸೋಹದಿಂ ತನ್ನನುವಳಿದು ದಾಸೋಹಭಾವನ ಸತ್ಕ್ರಿಯಾತ್ಮಗ್ರಾಹಕವನೊಂದಿಸಿ ಅಜಸ್ರೋದಾತ್ತ ಚಿತ್ತದಲಿ (ಬಸವ. ೫-೫೭). [< ಸಂ. ಸೋಹಂ]

ಸೋಹಂ (ನಾ). = ಸೋಹ: ಜನ್ಮಜನ್ಮಕ್ಕೆ ಹೋಗಲೀಯದೆ ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ (ಬಸವ. ೪೭೩); ಬ್ರಹ್ಮ ತಾನೆಂದೆಂಬುದೇ ಸೋಹಮ್ಮೆನಿಪ ನಿಜಮುದ್ರೆಯದು ಶ್ರುತಿಸಮ್ಮತವು ಲೋಕಾನುಮತವು (ಅಮೃತ. ೩೬-೯). [ಸಂ]

ಸೋಹಗೊಳ್ಳು (ಕ್ರಿ). ತಾನೇ ಪರಮಾತ್ಮ ಎಂಬ ಭಾವವನ್ನು ಹೊಂದು; ಸೋಹಂಭಾವವನ್ನು ಪಡೆ: ದಾಸೋಹವೆಂಬ ಸೋಹ[ಶಾಶಾಂ. ಗೆ, ಹೆ]ಗೊಂಡು ಹೋಗಿ ಗುರುವ ಕಂಡೆ ಲಿಂಗವ ಕಂಡೆ (ಬಸವ. ೭೭೮).

[ಸೋಹ + ಕೊಳ್ಳು$_1$ (< ಕೊಳ್$_1$)]

ಸೋಹನಿ (ನಾ). [ಸಂಗೀತ] ಒಂದು ರಾಗದ ಹೆಸರು: ಸೋಹನಿ, ತೋಡಿ, ಭೈರವಿರಾಗಗಳು ತಲೆತಿರುಗುವುದನ್ನೂ . . . ಹೀಗೆಯೇ ಇತರ ರಾಗಗಳು ಇನ್ನೂ ಹಲವು ರೋಗಗಳನ್ನೂ ಗುಣಪಡಿಸುವುದೆಂಬ ಭಾವನೆ ಉತ್ತರಭಾರತದಲ್ಲಿದೆ (ಭಾರದ ೫೪೪).

[← ಮರಾ. ಸೋಹನೀ]

ಸೋಹಿ$_1$ (ನಾ). ನಾನೇ ಪರಮಾತ್ಮನೆಂಬ ಭಾವವುಳ್ಳವನು; ಸೋಹಂಭಾವವುಳ್ಳವನು: ಸೋಹಿ ದಾಸೋಹಿ ನೀನಾಗಿ ಭಕ್ತರಿಗೆ ಇಹಪರದ ಸುಖವನ್ನು ತೋಱಿದ ಗುರುವೆ (ತೂನ್ಕಸಂ. ೪೦೦-೨೦). [ಸೋಹ + - ಇ$_3$]

ಸೋಹಿ$_2$ (ನಾ). (?): ತೋಡಿಯೊಳು ನಾಟಯೊಳು ಸನ್ನಾಹ ಸಾಳಂಗರಾಗದೊಳು ಸೋಹಿಸೋಹಿಯ ತೋಱಿ ರಾಗಿಸಿ ಸಭೆಗೆ ಸಮ್ಮೋಹನರಸವ ಸೂಸಿದರು (ಭರತ. ೧೨-೪೩). [?]

ಸೋಹು$_1$ 'ಸೋ$_1$' ನೋ.

ಸೋಹು$_2$ 'ಸೋಪ್ಪು$_1$' ನೋ.

ಸೋಹುಮೃಗ (ನಾ). ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಬಳಸುವ ಪ್ರಾಣಿ; ದೀಹದ ಮೃಗ: "ಅಟ್ಟುಳಿಯೆನಲು ಸೋಹುಮೃಗ" (ಮಂಗಗಾ. ೧೧೨-೫).

[ಸೋಹು$_1$ (< ಸೋ$_1$) + ಮೃಗ]

ಸೋಹುಲಿ (ನಾ). ತೆನೆಗಳಿಗೆರಗುವ ಪಕ್ಷಿಗಳನ್ನು ಓಡಿಸುವಾಗ ಉಂಟು ಮಾಡುವ ಧ್ವನಿ: ಹೊಲಕಾಯುವ ಹೆಣ್ಣಿನ ಸೋಹುಲಿಯನ್ನು ಕೇಳಿ ಹಾರಿ ಹೋಗುವ ಹಕ್ಕಿಗಳಂತೆ (ಚಿತಂಬಾ. ೪೨). [ಸೋಹು$_1$ (< ಸೋ$_1$) + ಉಲಿ$_2$]

ಸೋಹುವೇಂಟೆ (ನಾ) ಮೃಗಗಳನ್ನು ಅಟ್ಟಿಕೊಂಡು ಹೋಗಿ ಮಾಡುವ ಬೇಟೆ: ಅಂಟು ಜಲವೇಂಟೆ ತೋಹಿನ ಬೇಂಟೆ ಘನಸೋಹುವೇಂಟೆಗಳೆನಿಪ್ಪ ಹೆಸರಂ ಹೊತ್ತು ಮೆಱೆವುತಿಪ್ಪೆಂಟುತೆಱದುಚಿತವೇಂಟೆಯನಾಡಿದಂ ಹರಿಶ್ಚಂದ್ರವಸುಧಾಧೀಶನು (ಹಚಕಾ. ೫-೪೯); ಪಳಹದ ಬೇಂಟೆ . . . ಸಂಗಳಿಸಿದ ನೀರವೇಂಟೆ ಘನ ಸೋಹು [ಪಾಶಾಂ. ಸೋಹಿನ] ವೇಂಟೆಯೆನಿಪ್ಪ ನಾಮಮಂ ತಳೆದೆಸೆವೆಂಟುಬೇಂಟೆಗಳನಾಡಿದನರ್ಥಿಯೊಳಂದು ಕಣ್ಣಪಂ (ತ್ರಿಪುವಿ. ೨೭-೯೨). [ಸೋಹು$_1$ (< ಸೋ$_1$) + ಬೇಂಟೆ]

ಸೋಹೆ 'ಸೋಪ್ಪು$_1$' ನೋ.

ಸೋಳ 'ಸೋಳಹ' ನೋ.

ಸೋಳಹ, ಸೋಳ (ನಾ). ಒಂದು ಸಂಖ್ಯೆ; ಹದಿನಾರು: ಘನಸೋಳಹಖಂಡದ ಹಕ್ಕರಿಕ್ಕೆ ಝಲ್ಲರಿ ತುಡಿಸಿರ್ದ ಪಟ್ಟ ಗುಣವಂ ಬೆರಸೊಪ್ಪುವ ಗಂಧಸಿಂಧುರೋತ್ಕರಮ ನಡರ್ದು ಜೋದರತಿವೇಗನಿನಾಜಿಗೆ ಬಂದುದು (ತ್ರಿಪುವಿ. ೨೪-೨೯೩); ಕಳೆದ ಪಲ್ಲಳ ಕವಡೆಯ ಗುಪ್ಪೆಯ ಮಾಡಿ ಬಳಿಕ ಸೋಳಹಡೊಂಪೆಯನು ಅಲಸದಾಡುವ ಜೂಜುಂಗಾಱ ಮರುಳ್ಗಳ ಬಳಗವಲ್ಲಲ್ಲಿಯೊಪ್ಪಿದುದು (ನೇಮಿಸಂ. ೮-೯೩). **ಸೋಳ** : ಮಂಗಳಂ ಜಯಮಂಗಳಂ . . . ಸೋಳಸಾಸಿರ ಸುದತಿಯರೆಲ್ಲರ ಆಳಿದ ವಸುದೇವಾತ್ಮಜಗೆ (ಪುರಂದ. ೧-೨೩೨-೨); ಸೋಳಸಾಸಿರಗೋಪಿಸಹಿತ ಜಲದಲಾಡಿ ಪೋದನೆ (ವಾದಿಕೇ. ೭೧-೩).

[← ಹಿಂ. ಸೋಲಹ್; ಮರಾ. ಸೋಳಾ./ಸಂ. ಷೋಡಶನ್]

ಸೋಳೆ 'ತೊಳ್ಳೆ$_2$' ನೋ.

ಸೌಂತೆ 'ಸವುಂತೆ' ನೋ.

ಸೌಂದರ (ಗು). ೧. ಸುಂದರವಾದ; ಚೆಲುವಾದ: 'ಸೌಂದರಗ್ರೀವ' ಪರಾ. (ನಾ). ೨. ಸೊಬಗು; ಚೆಲುವು: ಪುಣ್ಯಾಂಗನಾನೀಕಸೌಂದರವಂ ಕಂಡಿಡೆಯಲ್ಲಿ . . . ಶುಚಿ (ಇಆ. XII, ೯೭-೨೧; 1187); ನವ್ಯಸೌಂದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನರ್ತಿ ಬಂದಳೊಪ್ಪರೆ ಗಿರಿಜಾತೆ (ಗಿರಿಕ. ೪-೪೩); ಜಳಧಿ ಜಂಬೂದ್ವೀಪಮಂ ಸುತ್ತಿ ಸೌಂದರಮಾಗಿರ್ಪವೊಲ್ (ಪುಪ್ರಪು. ೨-೬೨). ೩. ಸುಂದರನಾದವನು; ಚೆಲುವ: ಗಗನಚರಸೌಂದರೀನುನೋನಯನಸೌಂದರನಾಗಿ ವಿದ್ಯಾಧರಶ್ರೀಯಂ ಅನುಭವಿಸಿ (ಆದಿಪು. ೧-೮೧ ಪ). ೪. ನವರತ್ನಗಳಲ್ಲಿ ಒಂದು; ವೈಡೂರ್ಯ: ''ಸೌಂದರವಾಳವಾಯಜಂ ವೈಡೂರ್ಯವಕ್ಕುಂ''(ಮಂಗರಾ. ೩೧-೬). ೫. [ಛಂದ] ಒಂದು ವೃತ್ತದ ಹೆಸರು: ಭಭರಸಲಗಂ ವಿಶ್ರಮಣಂ ಅಗೇಂದ್ರದೊಳ್ ಗುಣಸೌಂದರಂ (ಛಂದೋಂಬು. ೨-೧೫೦ ಅಡಿಟಿ): ನಾಲ್ಕನೆಯ ಪ್ರತಿಷ್ಠೆಯೆಂಬ ಛಂದಸ್ಸಿನ ಪ್ರತಿಪಾದದಲ್ಲಿಯೂ ಭಗಣ ಮತ್ತು ಒಂದು ಗುರುವುಳ್ಳ ಪದ್ಯವು ಸೌಂದರವೃತ್ತವೆನಿಸುವುದು (ಕೃಪಿ. ೭೯). [ಸಂ.]

ಸೌಂದರಗ್ರೀವ (ನಾ). ಚೆಲುವಾದ ಕೊರಳು: ಕಂಠಮಾಲೆಯಿಂ ಮೆಱೆವ ಸೌಂದರ ಗ್ರೀವದ . . . ಇಂತೊಪ್ಪುವ ರೂಪು ಸೌಂದರ್ಯದಿಂ ಶಿವಪೂಚೆಗೆ ನವಯೌವನವಾದಂತೆ ಮೆಱೆವ ಷೋಡಶಪ್ರಾಯಂ (ಬಸರ. ೨-೨೮). [ಸಂ.]

ಸೌಂದರತೆ (ನಾ). ಸುಂದರವಾಗಿರುವಿಕೆ; ಚೆಲುವಿಕೆ: ಮೂಱೇಖೆಯಲಿ ಸೌಂದರತೆಯನಾಂತ ಭುಜಯುಗಳವ ತೋಱು (ಮೋಹತ. ೮-೧೨). [< ಸಂ. ಸುಂದರತಾ]

ಸೌಂದರವೆಣ್ಣು (ನಾ). ಚೆಲುವಾದ ಹೆಣ್ಣು; ಸುಂದರಿ: ಈ ಪಾಟಿಯ ಸೌಂದರವೆಣ್ಣು ಕಮನೀಯ ರೂಪಸ್ಥ ನಿನಗಲ್ಲದುಳಿದ ಕಾಪುರುಷರ್ಗೆ ಕೈಸಾರಿದುದಿಲ್ಲ (ಮೋಹತ. ೪೧-೪೪). [ಸೌಂದರ + ಪೆಣ್ಣು (< ಪೆಣ್)]

ಸೌಂದರಿ (ನಾ). ೧. = ಸೌಂದರವೆಣ್ಣು: ಸ್ಮರಸುಖಮಂ ಸಲಿಸುವ ಸೌಂದರಿಯರೊಳೊಡಗೂಡಿ (ಧರ್ಮಾಮೃ. ೬-೧೫೮); ಸರಸತಾಂಬೂಲಮಂ ಸವಿದಿರುಸು ಬಾಯ್ಗುಪರಿ ಸುರತದಲಸಂ ಪರಿಹರಿಸು ಪಾದಕೆಂಬ ಸೌಂದರಿಯ ನುಡಿಯಿಂದಿವಳ್ ಸ್ವಾಧೀನಪತಿಕೆಯೆಂದಱಿದು (ಚಿಬಪ. ೧೦-೩೦). ೨. ಶ್ರೀಗಂಧ; ಚಂದನ: ''ಸೌಂದರಿಯೆನಲು ಚಂದನಂ'' (ಮಂಗರಾ. ೩೫-೧೫೫). [< ಸಂ. ಸುಂದರೀ]

ಸೌಂದರಿಯ (ನಾ). ಚೆಲುವು; ಅಂದ; ಸೌಂದರ್ಯ: ಮದನನ ರೂಪರೇಖೆಯ ಹಳಿವುದಾ ನಳನೃಪನ ಘನಸೌಂದರಿಯ ಲೋಕದಲಿ [ಪಾಶಾಂ. ನಿಜಸೌಂದರ್ಯದಾಟೋಪ] (ನಳಚ. ೨-೩೬); ಬಡನಡುವಿನ ಬಟ್ಟಕುಚದ ಸೌಂದರಿಯದ ಕೊಡಗಿತಿಯರು ರಾಜಿಸಿದರು (ಕಂನವಿ. ೨೧-೮೬). [< ಸಂ. ಸೌಂದರ್ಯ]

ಸೌಂದರ್ಯ (ನಾ). = ಸೌಂದರಿಯ: ತನ್ನ ದೇಹಸೌಂದರ್ಯಮಂ ಮಹಾತಪದೊಳ್(ದಿಂ) ಕ್ಷಪಿಯಿಸಿದೊಡೆ ದಿವ್ಯವಿಜಯಪರಮಸೌಂದರ್ಯಮಂ ಪಡೆಯಲಕ್ಕುಂ (ಚಾವುಪು. ೨೨೯); ಸೌಂದರ್ಯಕಂದದೊಳ್ ಸಮಸಂದುಣ್ಮಿದ ಕುಡಿಗಳಂತಿರೆಸೆದುವು ಪೊಲ್ಪಿಂದೊಂದಿ ಕುಸುಮಾವಳಿಯ . . . ಲಲಿತಾಂಗುಳಿಗಳ್ (ಕುಸುಮಾ. ೧೨-೪೬).

ಸೌಂದರ್ಯವಿಲಾಸದ ತೊಟ್ಟಿ = ಮೈಸೂರು ಅರಮನೆಯ ಒಂದು ಭಾಗ: ಕುಲದೇವತೆಯಾದ ಅಮಲದೇವತೆಯಂ . . . ಅರಮನೆಯ ಸೌಂದರ್ಯವಿಲಾಸದ ತೊಟ್ಟಿಯ ಹಜಾರದ ಪುಷ್ಪಮಂಟಪದಲ್ಲಿರಿಸಿ (ಮಹಾವಂ. 1, ೩೮). [ಸಂ.]

ಸೌಂದರ್ಯತನುತ್ರ (ನಾ). ಚೆಲುವಾದ ದೇಹವನ್ನು ಹೊಂದಿರುವಿಕೆ: ಯೌವನಾನ್ವಿತಸೌಂದರ್ಯತನುತ್ರಮುಂ ಗಡ ಬಳಿಕ್ಕಂತಾದೊಡಂ ತನ್ನ ಜೀವಿತಮಿವಂ ಗಡ (ರಾಜಶೇ. ೧೪-೪೪). [ಸಂ.]

ಸೌಂದರ್ಯನಿಳಯ (ನಾ). ಚೆಲುವಿನ ಆವಾಸಸ್ಥಾನ ,— ನಿಲಯ: ವಿಲಸಿತ ಪ್ರತಿಮೆಗಳಿಂದಾಗ ಸೌಂದರ್ಯನಿಳಯ ರಾಜಿಸಿದುದರ್ತಿಯಲಿ (ಕಂನವಿ. ೭-೪೦).

[ಸಂ. ಸೌಂದರ್ಯನಿಲಯ]

ಸೌಂದರ್ಯಪ್ರಜ್ಞೆ (ನಾ). ಚೆಲುವಿನ ಬಗೆಗಿನ ಸೂಕ್ಷ್ಮಬುದ್ಧಿ: ನಮ್ಮ ಕನ್ನಡ ಕವಿಗಳ ಸೌಂದರ್ಯಪ್ರಜ್ಞೆ . . . ಇಡೀ ಭಾರತೀಯ ಸೌಂದರ್ಯವಿಚಾರಗಳ ಕಡೆಗೆ ಎಳೆದುಕೊಂಡು ಹೋಯಿತು (ಸಾಂದಸ. i, ಮೊದಲ ಮಾತು). [ಸಂ. ಸೌಂದರ್ಯಪ್ರಜ್ಞಾ]

ಸೌಂದರ್ಯಪ್ರಸಾಧನ (ನಾ). ಚೆಲುವನ್ನು ಹೆಚ್ಚಿಸಲು ಬಳಸುವ ಅಲಂಕಾರ ಸಾಮಗ್ರಿ: ಮುಂದುಗಡೆ ಒಂದು ಟೇಬಲು, ದೊಡ್ಡ ಕನ್ನಡಿ, ಹತ್ತಿರವೇ ಸೌಂದರ್ಯಪ್ರಸಾಧನಕ್ಕಾಗಿ ಸುಗಂಧದ್ರವ್ಯಗಳು (ಜಯಂತ. ೩೫೨). [ಸಂ.]

ಸೌಂದರ್ಯಪ್ರಿಯತೆ (ನಾ). ಚೆಲುವಿನಲ್ಲಿ ಆಸಕ್ತಿ; ಸೌಂದರ್ಯಾಭಿರುಚಿ: ವೇದಋಷಿಗಳಿಗೆ ಸೌಂದರ್ಯಪ್ರಿಯತೆ ಇರಲಿಲ್ಲವೆನ್ನುವುದು . . . ಸತ್ಯದೂರವಾದ ಸಂಗತಿ (ಸೌಂದಸ. ೧೧೯). [ಸಂ. ಸೌಂದರ್ಯಪ್ರಿಯತಾ]

ಸೌಂದರ್ಯಮಿಮಾಂಸೆ (ನಾ). ಸೌಂದರ್ಯತತ್ತ್ವದ ವಿಷಯದಲ್ಲಿ ಮಾಡುವ ವಿಚಾರ,— ಜಿಜ್ಞಾಸೆ: ಸೌಂದರ್ಯದ ಸ್ವರೂಪವನ್ನು ವಿಚಾರ ಮಾಡುವ ಸೌಂದರ್ಯ ಮಿಮಾಂಸೆ (ಭಾರಮಿ. ೪). [ಸಂ. ಸೌಂದರ್ಯಮಿಮಾಂಸಾ]

ಸೌಂದರ್ಯಯೋನಿ (ನಾ). ಚೆಲುವಿನ ಜನ್ಮಸ್ಥಳ; ಸೌಂದರ್ಯದ ಉತ್ಪತ್ತಿಸ್ಥಾನ: ಸಕಳಸೌಂದರ್ಯಯೋನಿಯುಂ ರಾಜಧಾನಿಯುಮೆನಿಸಿ . . . ಪುರಮೆಸದಿರ್ಪುದು (ಪುಪ್ರಪು. ೨-೬೧ ಪ). [ಸಂ.]

ಸೌಂದರ್ಯವೃತ್ತಿ (ನಾ). ಚೆಲುವಿನ ಸ್ವಭಾವ ,— ಧರ್ಮ: ಇಂತನೇಕ ಜನಮನೋಹಾರಿ ಸೌಂದರ್ಯವೃತ್ತಿಗವಕಾಶಮಾದ ವಿವಿಧಪ್ರದೇಶದಿಂದೊಳಗೆ (ಪುಪ್ರಪು. ೨-೬೧ ಪ). [ಸಂ.]

ಸೌಂದರ್ಯಶಾಲಿ (ನಾ). ಸೊಬಗಿನಿಂದ ಕೂಡಿದವನು; ಚೆಲುವ: ನಾವು ನೋಡಿದ ಹುಡುಗ ತುಂಬಾ ಸೌಂದರ್ಯಶಾಲಿಯಾಗಿದ್ದಾನೆ (ರೂಢಿ)

[ಸಂ. ಸೌಂದರ್ಯಶಾಲಿನ್]

ಸೌಂದರ್ಯಶಾಲಿನಿ (ನಾ). ಚೆಲುವಿನಿಂದ ಶೋಭಿಸುವವಳು: ತರಿಸಿದಂ ಬೇಕಾದ ವಸ್ತುಗಳನು ಸರಸಗುಣ ಸೌಂದರ್ಯಶಾಲಿನಿಗೆ ಮಾಲಿನಿಗೆ (ಕೃಮಿಭಾ. ೨೭-೨೨); ಜಾರ್ಜಿಯಾ ದೇಶದ ಹೆಂಗಸರು ಬಹು ಸೌಂದರ್ಯಶಾಲಿನಿಯರು (ಭೂಗೋಳ. ೧೧೦).

[ಸಂ. ಸೌಂದರ್ಯಶಾಲಿನೀ]

ಸೌಂದರ್ಯಶಾಸ್ತ್ರ (ನಾ). ರಸಾಭಿಜ್ಞತೆಯನ್ನು ಕುರಿತು ತಿಳಿಸುವ ಶಾಸ್ತ್ರ; ಸೌಂದರ್ಯತತ್ತ್ವವನ್ನು ಕುರಿತು ವಿವರಿಸುವ ಜ್ಞಾನ: ಸೌಂದರ್ಯಶಾಸ್ತ್ರಕ್ಕೆ ಅರಿಸ್ಟಾಟಲನು ಇತ್ತಿರುವ ಕಾಣಿಕೆಗಳಲ್ಲೆಲ್ಲಾ ಅತ್ಯಮೂಲ್ಯವಾದುದು ಅವನು ಕಾವ್ಯಾನುಕರಣವನ್ನು ವಿವರಿಸಿರುವ ವಿಧಾನ (ಅಂಕಾ. ೧೫೩). [ಸಂ.]

ಸೌಂದರ್ಯಸಂವೇದನೆ (ನಾ). ಚೆಲುವಿನ ಅನುಭವ: ಈ ಕಾರಣದಿಂದ ಸೌಂದರ್ಯಸಂವೇದನೆ . . . ಸದಾ ಸುಖಾನುಭವರೂಪವಾದುದು (ಸೌಂದಸ. ೬).

[ಸಂ. ಸೌಂದರ್ಯಸಂವೇದನಾ]

ಸೌಂದರ್ಯಸಾರ (ನಾ). ಚೆಲುವಾದ ವಸ್ತುಗಳ ಉತ್ಕೃಷ್ಟಅಂಶ: ಪ್ರಾಣಂ ಬೊಯ್ದನೊ ಚಿತ್ರಿಸುತ್ತುಮವಳಂ ಸೌಂದರ್ಯಸಾರಂಗಳಿಂ (ಶಾಕುಂತ. ೨೫-೪೪). [ಸಂ.]

ಸೌಂದರ್ಯಾನುಭವ (ನಾ). = ಸೌಂದರ್ಯಸಂವೇದನೆ: ತಾದಾತ್ಮ್ಯವಿಲ್ಲದೆ ಸೌಂದರ್ಯಾನುಭವವು ಜನಿಸಲಾರದು (ಸಮ್ಮಕಾ. ೬೯). [ಸಂ.]

ಸೌಂದರ್ಯಾಭಿರುಚಿ (ನಾ). ಚೆಲುವಿನಲ್ಲಿ ಇರುವ ವಿಶೇಷಾಸಕ್ತಿ: ತನ್ನ ಸೌಂದರ್ಯಾಭಿರುಚಿ ವಿಕಾಸಗೊಂಡಂತೆಲ್ಲ ಆತ್ಮಪ್ರತ್ಯಯ ಕುಂದುತ್ತಿದೆಯೆಂದು ಅವನು ಭಾವಿಸಿದ್ದನು (ಪುಸಂ. ೨೦). [ಸಂ.]

ಸೌಂದರ್ಯೋಪಾಸಕ (ನಾ). ಚೆಲುವಿನ ಆರಾಧಕ; ಸೊಬಗನ್ನು ಕಂಡು ಮೆಚ್ಚಿ ಪೂಜಿಸುವವನು: ನಮ್ಮ ಹಿಂದಿನ ಕವಿಗಳು ಸೌಂದರ್ಯೋಪಾಸಕರಾಗಿದ್ದರು (ರೂಢಿ). [ಸಂ.]

ಸೌಂದರ್ಯೋಪಾಸನೆ (ನಾ). ಚೆಲುವನ್ನು ಆರಾಧಿಸುವುದು: ಅಜಂತ, ಎಲ್ಲೋರಗುಹಾಲಯಗಳು . . . ದಕ್ಷಿಣಭಾರತದ ಸೌಂದರ್ಯೋಪಾಸನೆ, ದೈವಭಕ್ತಿ, ಶಿಲ್ಪಕಲಾನೈಪುಣ್ಯಗಳ ಭವ್ಯಪ್ರತೀಕಗಳಾಗಿವೆ (ಭಾರದ. ೪೦೪).

[ಸಂ. ಸೌಂದರ್ಯೋಪಾಸನಾ]

ಸೌಕರ್ಯ (ನಾ). ೧. ಸೂಕರದ ಸ್ವಭಾವ. ೨. ವಿಷ್ಣುವಿನ ದಶಾವತಾರಗಳಲ್ಲಿ ಒಂದು; ವರಾಹಾವತಾರ: ಸುಚರಿತ ಕೂರ್ಮೋದಯಂ ಸಾರಸೌಕರ್ಯವಿಳಾಸಂ . . . ಪ್ರಾಭವ ಪ್ರೌಢತೇಜಂ (ಎಇ. VIII. ಸೊರಬ ೧೪೦-೫ ; 1198). ೩. ಅನುಕೂಲತೆ;

ಸೌಲಭ್ಯ: ಜಗತ್ತಿನ ಜನರಿಗೆಲ್ಲ ತಾವು ಕುಳಿತಿರುವ ಕಡೆ ಬೇಕಾದ ಸೌಕರ್ಯ ದೊರೆಯುವುದು (ಹಣಪ್ರ. ೯) ; ಬೇಸಾಯಗಾರರಾದ ನನ್ನೂರಿನವರಿಗೆ ಹೆಚ್ಚು ಸೌಕರ್ಯ ಒದಗಿಸಬೇಕು ನಿಜ (ನನ್ನೂರು. ೩೧೭). [ಸಂ.]

ಸೌಕುಮಾರ್ಯ (ನಾ). ೧. ಸುಕುಮಾರತೆ; ಮೃದುತ್ವ; ಕೋಮಲತೆ: 'ಸೌಕುಮಾರ್ಯಂಬೆಱು' ಪರಾ. ೨. [ಕಾವ್ಯಮೀ] ಕಾವ್ಯದ ಹತ್ತು ಗುಣಗಳಲ್ಲಿ ಒಂದು; ಮೃದುವರ್ಣಗಳಿಂದ ಕೂಡಿರುವಿಕೆ ಮತ್ತು ಅಹಿತವಾದ ವಿಷಯವನ್ನು ನಯವಾಗಿ ತಿಳಿಸುವುದು: ಮೃದುವಾದ ವರ್ಣ ರಚನೆಯೂ ಅಹಿತವಾದ ವಿಷಯವನ್ನು ನಯವಾಗಿ ಹೇಳುವುದೂ ಸೌಕುಮಾರ್ಯ ಗುಣವೆನಿಸಿಕೊಳ್ಳುತ್ತದೆ (ಭಾರಮೀ. ೪೨). [ಸಂ.]

ಸೌಕುಮಾರ್ಯಂಬೆಱು (ಕ್ರಿ). ಸುಕುಮಾರತೆಯನ್ನು ಪಡೆ; ಮೃದುತ್ವವನ್ನು ಹೊಂದು: ಅಲ್ಲಿ ಸೌಕುಮಾರ್ಯಂಬೆತ್ತೊಪ್ಪುವ ನಿರುಪಮ ನಿಜಶಿವಲಿಂಗಕ್ಕೆ ಕರತಳಾಸ್ತ ರಣಂ ಬೆಟ್ಟಿತಕ್ಕುಮೆಂದು ಬಿಟ್ಟು (ವೃಷವ. ೨೩-೧೪ ವ). [ಸೌಕುಮಾರ್ಯ + ಪೆಱು$_1$]

ಸೌಖ್ಯ (ನಾ). ೧. ನೆಮ್ಮದಿ; ಸುಖ; ನಿಶ್ಚಿಂತೆ. ೨. ಸಂತೋಷ; ಹರ್ಷ: ನಾನಾವಿಧ ಸೌಖ್ಯಭಾಜನನುಪಾರ್ಜಿತ ಬೇಚರರಾಜ ಹೃದ್ಯವಿದ್ಯಾವಿಭವಂ (ಆದಿಪು. ೧-೭೩). [ಸಂ.]

ಸೌಖ್ಯಕಾರಕ (ನಾ). ಸುಖವನ್ನುಂಟುಮಾಡುವವನು: ಮನಸಿಜನೆ ತಾಪಕಾರಣ ನೆನಿಸಿದನೆನಗವನೆ ಸೌಖ್ಯಕಾರಕನಾದಂ (ಶಾಕುಂತ. ೩೬-೬೩). [ಸಂ.]

ಸೌಖ್ಯಪ್ರಣವ (ನಾ). ಪಂಚಪ್ರಣವಮಂತ್ರಗಳಲ್ಲಿ ಒಂದು: ಸಾಕಲ್ಯಪ್ರಣವ ಶಾಂಭವಪ್ರಣವ ಸೌಖ್ಯಪ್ರಣವ ಸಾವಶ್ಯಪ್ರಣವ ಸಾಯುಜ್ಯಪ್ರಣವವೆಂಬ ಪಂಚಪ್ರಣವಮಂತ್ರಂಗಳಂ (ವಿವೇಕ. ೮೧). [ಸಂ.]

ಸೌಖ್ಯರತ (ನಾ). ಸುಖಾಸಕ್ತನಾದವನು: ನರಯುಗ್ಮೋದಯದೊಳ್ ಬುಧಂ ನೆಲಸೆ ವಾಣಿಗಾಳ್ ಕಲಾವೇದಿ ಸೌಖ್ಯರತಂ (ಜಾತಕ. ೧೭-೨೩). [ಸಂ.]

ಸೌಖ್ಯಾನುರಕ್ತ (ನಾ). = ಸೌಖ್ಯರತ: ದಿವಿಜೇಜ್ಯಂ ನಿಲೆ . . . ಮೂಱೞೊಳ್ . . . ಸೌಖ್ಯಾನುರಕ್ತಂ (ಜಾತಕ. ೧೮-೧೧). [ಸಂ.]

ಸೌಖ್ಯಾವಹ (ನಾ). ಸುಖವನ್ನುಂಟು ಮಾಡುವಂಥದ್ದು: ಸೌಖ್ಯಾವಹಮಿಾಕೆ ಗಕ್ಕೆಯನುಕೂಲಸಮೀರಣಮಾಗಿ ಮೇಣ್ ಪಥಂ (ಶಾಕುಂತ. ೫೩-೮೯). [ಸಂ.]

ಸೌಗಂಧ (ನಾ). ಪರಿಮಳ; ಸುವಾಸನೆ: ಸೌಗಂಧಮಂ ಕೂಡೆ ಪಸರಿಸುವ (ಎಕ. VII. ಶಿವಪಂ. ೪-೩೭; 1122); ಗಂಧವಾಹಂಗೆ ಸೌಗಂಧವ . . . ಅಡರಿಸುಗುಂ (ಜಗವಿ. ೪-೬೫); ಉಳ್ಳಿಯೆಲೆ ಸೌಗಂಧವಪ್ಪುದೆ ಮುಳ್ಳು ಕೈದುವೆ (ಕಾಶಿರಾ. ೨೨-೪೧). [ಸಂ.]

ಸೌಗಂಧಿ (ನಾ). ೧. ಮನೋಹರವಾದ ವಾಸನೆಯುಳ್ಳದು. ೨. ಶ್ರೀಗಂಧ; ಚಂದನ. [ಸಂ. ಸೌಗಂಧೀ]

ಸೌಗಂಧಿಕ (ನಾ). ೧. ಪರಿಮಳದಿಂದ ಕೂಡಿದುದು ; ಸುವಾಸನೆಯುಳ್ಳದು: ಬಂಧುರತರ ಜಿನಸವನಸುಗಂಧೋದಕದಿಂದೆ ನಾಂದು ತದ್ಗುಣದೊಳ್ ಸಂಬಂಧಿಸಿ ಪೆಸರ್ವಡೆದುವು ಸೌಗಂಧಿಕಮೆಂದು . . . ಕಿಸುಗಲ್ಲಳ್ (ಚಂದ್ರಪ್ರ. ೧೨-೯೯). ೨. ಸುಗಂಧದ್ರವ್ಯಗಳನ್ನು ಮಾರುವವನು. ೩. ಒಂದು ಬಗೆಯ ಹೂವು; ಚೆನ್ನೆಯ್ದಿಲೆ: "ಸೌಗಂಧಿಕಾ, ಕಲ್ಹಾರಂ ಈ ೨ ಚೆನ್ನೆಯ್ದಿಲ್" (ಹಲಾಯು. ೧೧೨-೫೯). ೪. ಒಂದು ಬಗೆಯ ಸುವಾಸನೆಯ ಹುಲ್ಲು. ೫. ಕಸ್ತೂರಿಮೃಗ: "ಸೌಗಂಧಿಕಂ ಕಸ್ತೂರಿಮಿಗಂ" (ಮಂಗರಾ. ೪೮-೮). ೬. ಒಂದು ಬಗೆಯ ಖನಿಜ; ಗಂಧಕ. ೭. ಒಂದು ರತ್ನದ ಹೆಸರು; ಪದ್ಮರಾಗ: ಸೌಗಂಧಿಕವೆಂಬ ರತ್ನವು ವೈಶ್ಯ ಜಾತಿಯು (ಸೌಗಂಧಿ. ೩೬೬-೩೩). [ಸಂ.]

ಸೌಗಂಧಿಕಾಕುಸುಮ (ನಾ). ಒಂದು ಬಗೆಯ ಹೂವು: ಆ ಭೀಮ ತಂದ ಸೌಗಂಧಿಕಾಕುಸುಮ ಇದಕೆ ಅಸಮ! (ಅಕೇ. ೨೩-೮). [ಸಂ.]

ಸೌಗಂಧಿಸು (ಕ್ರಿ). ಒಳ್ಳೆಯ ಸುವಾಸನೆಯನ್ನು ಸೂಸು: ರಸಯುತಮಾಗೆ ಸೌಗಂಧಿಸುವ ಮಾಂಸವನಟ್ಟು (ಬಸಪು. ೫೭-೩೬). [ಸೌಗಂಧ + - ಇಸು$_3$]

ಸೌಗಂಧ್ಯ (ನಾ). ಸುಗಂಧದಿಂದ ಕೂಡಿರುವಿಕೆ; ಪರಿಮಳಸಹಿತವಾದುದು: ಜಳದಿಂದಂ ಬಳಮಂ ಸುಗಂಧರಸದಿಂ ಸೌಗಂಧ್ಯಮಂ ಪುಷ್ಪಸಂಕುಳದಿಂ ಪೂದ್ಯತೆಯಂ . . . ಮಾಡುಗುಂ (ಶಾಂತಿಪು. ೧೦-೫೫). [ಸಂ.]

ಸೌಗತ (ಗು). ೧. ಬುದ್ಧನಿಗೆ ಸಂಬಂಧಿಸಿದ; ಬುದ್ಧನ ಅಭಿಪ್ರಾಯಕ್ಕೆ ಅನುಸಾರವಾದ: 'ಸೌಗತಸಿದ್ಧಾಂತ' ಪರಾ. (ನಾ). ೨. ಬುದ್ಧನ ಅನುಯಾಯಿ; ಬೌದ್ಧಧರ್ಮವನ್ನವಲಂಬಿಸಿದವನು: ವೈಶೇಷಿಕರೂ ಸೌಗತರೂ (ಬೌದ್ಧರೂ) ಶಬ್ದವು ಅನುಮಾನದಲ್ಲಿ ಅಂತರ್ಭೂತವಾಗುವುದು ಎಂದು ಹೇಳುವರು (ಭಾತತ್ತ್ವ. ೩೯೫). [ಸಂ.]

ಸೌಗತಸಿದ್ಧಾಂತ (ನಾ). ಬೌದ್ಧಮತದ ಸಿದ್ಧಾಂತ: ವೈದಿಕರು ಪ್ರತಿಕಕ್ಷಿಯರ ಅದ್ಭುತಗಳನ್ನು ಖಂಡಿಸಿ ಸಿದ್ಧಾಂತವನ್ನು ನಿರಾಕರಿಸುತ್ತಾರೆ. ಪ್ರಾಯಶಃ ಈ ವಿಚಾರವು ಸೌಗತಸಿದ್ಧಾಂತದಲ್ಲಿ ಅಧಿಕವಾಗಿ ಬರುವುದು (ಹಂದಸಾ. ೭). [ಸಂ.]

ಸೌಚ, ಸವುಚ (ನಾ). ಶುಚಿತ್ವ; ಸುಶೀಲಗುಣ: ಪರಬಳವಯ್ದು ಕಯ್ದುವೆಡೆ ಯಾಡುವ ತಾಣದೊಳಲ್ಲಿ ಬೀರಮಂ ಪರವಧು ವಟ್ಟೆಳಾತರೆಡೆಯಾಡುವ ತಾಣದೊಳಲ್ಲಿ ಸೌಚಮಂ ಪರಿಕಿಸಿ (ಎಕ. II. ೧೩೪-೪೨; ಸು. 982). **ಸವುಚ** : ತೋರು ಅವರೆಡೆಯೊಳಗೆ ಪರಿಗ್ರಹದಾರಿ ಏನಾನುಂಟೆ ಸವುಚಕ್ಕಾರಣದ ಗುಂಡಿಗೆಯು ಚೀಮೆಗಳಾವಿರಕ್ಷಣೆಗೆ (ಬಿಜ್ಜಪು. ೮೩-೩೪). [< ಸಂ. ಶೌಚ]

ಸೌಚಾಚಾರ (ನಾ). ೧. ಶುಚಿಯಾದ ನಡವಳಿಕೆ; ಸುಶೀಲನಡತೆ. ೨. ಶುಚಿಯಾದ ನಡವಳಿಕೆಯುಳ್ಳ ವ್ಯಕ್ತಿ: ಅನೇಕ ಗುಣಗಣಾಳಂಕೃತ ಸತ್ಯ ಸೌಚಾ [ಚಾರ] ಚಾರುಚಾರಿತ್ರ ನಯವಿನಯವಿಜ್ಞಾನವೀರಬಳಂಜಧರ್ಮ್ಮಪ್ರತಿಪಾಳಕರುಂ (ಕಗಆ. ೪೪-೬೩-೧೧; 1229). [< ಸಂ. ಶೌಚಾಚಾರ]

ಸೌಚಿಕ (ನಾ). ಸೂಜಿಯಿಂದ ಕೆಲಸ ಮಾಡುವವನು; ಚಿಪ್ಪಿಗ: "ತುನ್ನವಾಯಃ, ಸೌಚಿಕಃ - ಈ ೨ ಚಿಪ್ಪಿಗಂ" (ಹಲಾಯು. ೯೭-೪೩೬); ಸೀಲಮಂ ಬಿಡದಿರ್ಪ ಪಾರ್ವರ ಜಾಲಮಾರ್ಯರ ಗೊಂದಣಂ ಸೌದ್ದಾಲಿಕಚಯಂ ಸೌಚಿಕರ ಸಂದಣಿ ಕುಲಾಲತತಿ (ವಿವೇಧ. ೪-೬೫). [ಸಂ.]

ಸೌಜನ್ಯ (ನಾ). ೧. ಒಳ್ಳೆಯತನ; ವಿನಯ; ಸಜ್ಜನಿಕೆ: ಮಾತಿನಲ್ಲಿ ಮಾಧುರ್ಯ ವಿತ್ತು . . . ಸೌಜನ್ಯವಿತ್ತು (ಮಹಾಣ. ೧೬೫); ಯಾರೂ ಮಾನವಸಂಸ್ಕೃತಿಯ ಸೌಜನ್ಯ ವನ್ನು ಮೀರರು (ಕನ್ನಡಾ. ೫೧). ೨. ಉದಾರತ್ವ ; ಔದಾರ್ಯ: ಒಂದೇ ಒಂದು ಉಪಚಾರದ ಮಾತು ಕೂಡ ಆಡುವಷ್ಟು ಸೌಜನ್ಯ ಆ ತಾಯಿ ಮಗ ಇಬ್ಬರಿಗೂ ಇರಲಿಲ್ಲ (ಹೊಸಕ್ಷ. ೪೫); ಕರುಣೆಯಲಿ ನಯವಿನಯಗಳಲಿ ಮೇಣದಟಿನಲಿ ಸಂಸ್ಕೃತಿಯ ಸೌಜನ್ಯಭಕ್ತಿಯಲಿ . . . ಸಮನಿಲ್ಲ (ಚಿತ್ರಾಂಗ. ೭೨-೧೯೮೪).

ಸೌಜನ್ಯಕಂದಾಂಕುರ = ಅತ್ಯಂತ ವಿನಯಶಾಲಿ; ಒಂದು ಬಿರುದು: ಸೌಜನ್ಯಕಂದಾಂಕುರಂಗರ್ಚಿಸಿ ದೂತನಂ ವಿಸರ್ಜಿಸಿ (ಶಾಂತಿಪು. ೩-೯೩ ವ). **ಸೌಜನ್ಯತೀರ್ಥ** = ಒಂದು ಬಿರುದು: ಕೋದಣ್ಡಪಾರ್ತ್ಥಂ ಸೌಜನ್ಯತೀರ್ತ್ಥಂ ಮಣ್ಣಳಿಕಕಣ್ಮೇರವಂ (ಸೌಇಇ. XX. ೪೭-೯; 1074). **ಸೌಜನ್ಯರತ್ನಾಕರ** = ಒಂದು ಬಿರುದು: ಕಲಿಕಾಲಮೇರುವಿಬುಧಂ ಸೌಜನ್ಯರತ್ನಾಕರಂ ಬಲವನ್ತಂ ಪ್ರಭು [ಶಾನ್ತಿ ಸೆ]ಟ್ಟಿ (ಸೌಇಇ. XX. ೫೫-೩೫; 1082). [ಸಂ.]

ಸೌಜನ್ಯವಿದೂರ (ನಾ). ವಿನಯಗುಣದಿಂದ ಬಹುದೂರನಾದವನು; ಕ್ರೂರಿ; ಅಸಂಸ್ಕೃತ: ಮದನುಗ್ರಹಾರ್ಥಮೀ ಮಾನ್ಯಮಹೇಶ್ವರಂ ಮಱೊಳೆಳ್ಳಿದುದಂ ತಿಳಿದಾತನಲ್ತು ಸೌಜನ್ಯವಿದೂರನಾದೆನಕಟೆನ್ನವೊಲಾವನೊ ಗಾಂಪನುರ್ವಿಯೊಳ್ (ಶಬಶಂ. ೪-೧೨೭). [ಸಂ.]

ಸೌಜ್ಞೆ 'ಸನ್ನೆ' ನೋ.

ಸೌಜ್ಞೆಗೆಯ್ 'ಸನ್ನೆಗೆಯ್' ನೋ.

ಸೌಟಿಗೆ 'ಸೊಂಟಿಗೆ' ನೋ.

ಸೌಟು$_1$, ಸವಟು$_2$, ಸವುಟು (ನಾ). ಅಡಿಗೆ ಮಾಡುವಾಗ ಕೂಡಿಸಲು, ತೋಡಲು ಹಾಗೂ ಬಡಿಸಲು ಬಳಸುವ ಒಂದು ಸಾಧನ, ಸಟ್ಟುಗ: "ಕಂಚಿಕಮೆನಲ್ ಸೌ[ಪಾಠಾಂ. ಸವು]ಟೆನಿಕ್ಕುಂ" (ಮಂಗರಾ ೭೧-೮); ವನಿತೆ ಸೌಟನೊಳಕ್ಕಿಯ ತೊಳೆಸಿ (ಪುರಂದ. ೧-೧೧೧-೩); ಒಲೆಯೊಳೊಗ್ಗರಣಿಗೆ ಸೌಟಿಟ್ಟು ಎಣ್ಣೆಗೆ ಗಾಣಿಗನೆಡೆಗೋಡಿದಂತೆ (ಇಂಚಾಪ. ೮೯-೩೪). **ಸವಟ್ಟು** : ಅದನ್ನು ಸವಟುಗಳಿಂದ ತೆಗೆದು ಚೆಲ್ಲುತ್ತಾರೆ (ಮುಂಬಯಿ. ೩-೪೫). **ಸವುಟು**: ಅರಿಯನು ಸವುಟನೋಪಾದಿಯಲ್ಲಿ

ವೇದಶಾಸ್ತ್ರವವೋದಿದ ಶ್ರಮಮಾತ್ರವೆ (ಉತ್ತಚ. ೪೫-೧೩); ಸವುಟು ಕೈಯಲ್ಲಿ ಇದ್ದಾಗ ಅವುಟು ಮಾಡಿದ್ದೇ ಬಂತು (ಗಾದೆ). [ದೇ. ತುಳು. ಸೌಂಟು, ಸೌಟು]

ಸೌಡಂಗೀಗಿಡ (ನಾ). ಒಂದು ಬಗೆಯ ಸಸ್ಯ: ಸೌಡಂಗೀಗಿಡ, ಕಾಡುಸುಂಡೆ (ಮೈಪಿಗ. ೭೧-೧೪೮೦). 'ಚವುಡಂಗಿ' ಪರಾ. [ಸೌಡಂಗಿ + ಗಿಡ (< ಗಿಡು)]

ಸೌಡಿ, ಸವಡಿ (ನಾ). ಗದ್ದೆ, ತೋಟಗಳಿಗೆ ನೀರು ಬಿಡಲು ನೇಮಕನಾದ ಗ್ರಾಮನೌಕರ; ನೀರುಗಂಟಿ: ರಾತ್ರಿಯು ಹೊತ್ತು ಸೌಡಿಗಳನ್ನು ವಜಾಯಿಸಿಯೋ ಸರಿವಾಡಿಕೊಂಡೋ ನೀರನ್ನು ಬಿಟ್ಟುಕೊಂಡರು (ಕೆಲನ ೧೬೩). **ಸವಡಿ** : (ಕ). [?]

ಸೌದೀರ (ಗು). ವೀರರಸಪ್ರಧಾನವಾದ; ಪೌರುಷಯುಕ್ತವಾದ: ಧವಳ ಚಮರರುಹೋಪವೀಜ್ಯಮಾನನು ಸೌದೀರಸರಸವೀರಕಥಾಕರ್ಣನೋತ್ತೀರ್ಣ ಹರ್ಷಪುಳಕಸಂತಾನನುಂ (ಎಕ. V. ಬೇಲೂರು. ೭೧-೯೪; 11:7). [< ಸಂ. ಶೌಂಡೀರ]

ಸೌದು 'ಸವಡು' ನೋ.

ಸೌತಿ 'ಸವತಿ' ನೋ.

ಸೌತೆ 'ಸವುಂತೆ' ನೋ.

ಸೌತೆಕಾಯಿ 'ಸವುತೆಕಾಯಿ' ನೋ.

ಸೌದರಿ 'ಸೌದರೆ' ನೋ.

ಸೌದರೆ, ಸೌದರಿ (ನಾ). ಒಂದು ಗ್ರಾಮ ಅಥವಾ ಸಮಾಜದ ಮುಖ್ಯಸ್ಥ; ಚೌಧುರಿ(?) : ಈ ಭೀಮೇಸ್ವರದೇವರಿಗೆ ಸಟ್ಟಿಯ ಕೆಱಯ ಸೌದರ ಬಾದಯ ಮುದ್ದಿಡ ವಂಕಣ ಮುದುದಿಮಂ ಕೊಟ್ಟ ಎಱೆ ಹೊಲ (ಕ್ಯಾಇ. ೩೭-೫೦-೧೧; 1042). **ಸೌದರಿ**: ಚಿನಿವರದ ಸಟ್ಟಿ ಸೌದರಿಯರುಂ ಬಹುಧಾನ್ಯನವನು ಮಾರುವರು (ಸಪಮೋ. ೨೯-೫೭). 'ಚೌಧುರಿ' ಪರಾ. [?]

ಸೌದರ್ಯ (ನಾ). ಸೋದರಭಾವ; ಅಣ್ಣತಮ್ಮಂದಿರ ಪ್ರೀತಿ; ಭ್ರಾತೃ ವಾತ್ಸಲ್ಯ: ಎಮ್ಮಯ್ಯರುಂ ಬೆಸಕೆಯ್ಯುತ್ತಿರೆ ನೀನೆ ಮೇಣಾರಸುಗೆಯ್ ಸೋ|ಪಾಕಾಂ. ಸೌಂ|Eಸೌತೆದರ್ಯದಿಂದೊಳ್ಳಿತೇ ವಸುಧಾಮಂಡಳಮೀಬುಕೆಯ್ಯುದಿದನು (ಪಂಚಭಾ. ೧೩-೮೫); ಕರ್ಣಂಗೆಯುರ್ವರೆಯಂ ಕೊಟ್ಟವನಾಳ್ವನಾಗಿ ಬಬಿಕಾವಾಳಾಗಿ ಸೌದರ್ಯದಾಯಿರವಂ ಪೊಲ್ಲದುಗೆಯ್ದುರೆಂದು ಜಡಿದರ್ ಕುಂತೀಸುತರ್ಕೊಂತಿಯಂ (ಗದಾಯು. ೧೦-೨೦); ಅಮರಸೌದರ್ಯಮಿದು ಸಾಜಂ? (ಗಿಳಿವಿ. ೪೫-೨೦). [ಸಂ.]

ಸೌದಾಗಾರ (ನಾ). ವರ್ತಕ; ವ್ಯಾಪಾರಿ: ಬಳಿಕ ಬರಿಸಿ ಕುದುರೆಯ ಸೌದಾಗಾಱಿರತೆ |ಪಾಕಾಂ. ಸಾದಗಾಱಿ, ಸಾದಕರ, ಸೌದೆಗಾಱಿ, ಸೌಧಾಗಾಱಿ|ನ ಬೆಲೆಯೇನೀ ವಾಜಿಗೆನಲು (ಕುರಾಪಾಂ. ೯-೧೦೭); ಅವಳ ಇಪ್ಪತ್ತನೇ ವರುಷದಲ್ಲಿ ಲಂಡನದ ಜೋಸಫನೆಂಬ ಸೌದಾಗಾರನಿಗೆ ಮದುವೆ ಮಾಡಿಕೊಟ್ಟರು (ಗಡಿ. ೧೫೮).

[← ಪಾರ. ಹಿಂ. ಮರಾ. ಸೌದಾಗರ್]

ಸೌದಾಮನಿ (ನಾ). ೧. ಮಿಂಚು; ವಿದ್ಯುತ್ತು: "ತಂಪಾ . . . ವಿದ್ಯುತ್, ಸೌದಾಮನೀ . . . ಐರಾವತೀ - ಈ ೧೧ ಮಿಂಚು" (ಪಠಾಯು. ೧೧-೬೦). ೨. ಇಂದ್ರನ ಆಸ್ಥಾನದ ಒಬ್ಬ ಅಪ್ಸರೆಯ ಹೆಸರು. [ಸಂ. ಸೌದಾಮನೀ]

ಸೌದಾಮಿನಿ (ನಾ). ೧. ಮಿಂಚು; ವಿದ್ಯುತ್ತು: ಸೌದಾಮಿನಿಯವೊಲ್ ಭೋಂಕೆನೆ ಸುರಕಾಮಿನಿ ರಂಗದೊಳದ್ರಶ್ಯೆಯಪ್ಪುದುಮಾಗಳ್ (ಆದಿಪು. ೯-೪೧); ಭಗವದ್ಭಕ್ತಿ ಕಾದಂಬಿನಿ ಹೇಮದ್ಯೋತಿ ಸೌದಾಮಿನಿ . . . ಏನಿಸ (ಪುಷ್ಪಪು. ೯-೫೨); ಕಡೆಗಣ್ಣುಡಿವೆಳಗಿಂ ಸೌದಾಮಿನಿಯನ್ನೇಳಿಸುತೆಸೆದಿರ್ಪಾ ಕಾಮಿನಿ (ಉದ್ಭದೇ. ೨-೫೮). ೨. ಸಿಡಿಲು: ಅಂತಲ್ಲದಂದೀ ತರು ಕಡವುದೆ ಸೌದಾಮಿನೀಪಾತದಿಂದಂ (ಪಲ್ಲಿಪು. ೯-೫೭).

[ಸಂ. ಸೌದಾಮಿನೀ]

ಸೌದೆ, ಸವದೆ, ಸವಿದೆ, ಸವಿದೆ, ಸವುದೆ (ನಾ). ಕಟ್ಟಿಗೆ; ಉರುವಲು: ವರ್ಷಂಪ್ರತಿ ಹಾಲು ಸೌದೆಗವಾಗಿ ಸಹವಾಸಿಯ ಹಳ್ಳಿಯ ನಡುಬಯಲಲಿ . . . ಕೊಟ್ಟ ಗದ್ದ (ಮೈಆರ. ೧೯೪, ೨೯-೨೯: 1221); ಕಾಡಿನಲ್ಲಿ ಸೌದೆಗೆ ಕಡಿಮೆಯಾಗಿರಲಿಲ್ಲ (ದೇವೀಭಾ. ೩೭); ಮಹಮ್ಮದನು ಸೌದೆಯನ್ನೊದಗಿಸುವ ಕೆಲಸವನೊಪ್ಪಿಕೊಂಡನು (ಪ್ರಮಪ್ರ. ೭೧). **ಸವದೆ** : ಸಾಲಗಾರನ ಮನೆಗೆ ಸವದೆ ಹೊತ್ತರೆ ಮೇಲಣ ಬಡ್ಡಿಗೆ ಸಮವಾಯಿತು (ಗಾದೆ). **ಸವಿದೆ** : ಆ ಪೊನ್ನೆಲ್ಲಮಂ ಕೊಟ್ಟಾ ಸವಿದೆಯ ಭಂಡಿಯಂ ಕೊಂಡು (ಜೀಪಸಂ. ೧೯೬-೨೮ ವ); ದಿವಿಜಪತಿ ಮರಮಳಿಯಂ ಕಲ್ಪವೃಕ್ಷರೆ ತತ್ಪುರದೊಳ್ ನೆಲೆ ಸವಿದೆಗಳಿಲ್ಲದಂತುಟಾಯಿತ್ತಾಗಳ್ (ತ್ರಿಪುವಿ. ೧೦-೨೭). **ಸವಿಧೆ**: ಸತ್ರದಡುಗೆಯ ಸವಿಧೆಗೆ ಮೊದಲ್ಗೊಟ್ಟ ಗದ್ಯಾಣಮಂರಡು (ಸೌಗಾ. XI-1, ೯೨-೨೫; 1054). **ಸವುದೆ**: ಶಿಲೆಗಳು ಭೇದವಂ ಹೊಂದಿದ್ದರೆ ಮುತ್ತುಗದ ಸವುದೆಗಳಿಂದ . . . ಸುಟ್ಟು (ಸೌಗಾಭ. ೪೩೭-೧೭); ಮಟ್ಟಿಯ ಮುಟ್ಟುಗದರಳಿಯ ಸೆವುದೆಗಳನಳತೆಯೊಳ್ ಕೊಯ್ದಿರ್ಪನಾರಿಂ ತಲೆವೆಣಿಗೆಟ್ಟಿ ತರ್ಪ ವಟುಗಳಿಂದೆಯುಂ (ರಾಜವಾ. ೪೩-೧೫); ಗಂಡನು ಕೊಡಲಿಯನ್ನು ಹೆಗಲಿಗೆ ಹಾಕಿಕೊಂಡು ಸವುದೆಯನ್ನು ತರುವುದಕ್ಕೆ ಕಾಡಿಗೆ ಹೊರಟನು (ನೀತಿಬಾ. IX. ೧೯). 'ಸಮಿತ್ತು' ಪರಾ. [< ಸಂ. ಸಮಿಧ್]

ಸೌದ್ದೆ, ಸವದ್ದೆ (ನಾ). ವ್ಯಾಪಾರ; ವಹಿವಾಟು: ಕೆಲವು ಪ್ರಮಾಣಕ್ಕೆ ಒಮ್ಮೆ ಸೌದೆ (Transaction)ಯು ಪೂರ್ಣವಾಯಿತೆಂದರೆ ಅದನ್ನು ಪಾಲಿಸುವ ಸಾಮರ್ಥ್ಯವು ತನ್ನ ಸಂಸ್ಥಗಿದ ಎಂಬುದನ್ನು ಪ್ರಚಾರಕನು ಬಲ್ಲವನಾಗಿರಬೇಕು (ತಕ್ಕಡಿ. ೧೦೪). **ಸವದ್ದೆ** : ಮಾಲವು ವೇಳೆಯಲ್ಲಿ ಬರದೆ ಇದ್ದ ಕಾರಣ ಸವದಯನ್ನು ತಕ್ಕೊಳ್ಳುವವರ ಮತ್ತು ನಮ್ಮ ವಿಚಾರದಿಂದ . . . ಒಡಂಬಟ್ಟು (ಮುಂಬವ್ಯಾ. ೨೧೩).

ಸವದೆ ಮಾಡು = ವ್ಯಾಪಾರ ಮಾಡು; ವಹಿವಾಟು ನಡೆಸು: ಬರೆದ ಪ್ರಕಾರ ಸವದ ಮಾಡುವುದು ಅಥವಾ ಮಾಡದೆ ಇರುವುದು ನಮ್ಮ ಖುಶಿಯ ಮೇಲೆ ಇರುತ್ತದೆ (ಮುಂಬವ್ಯಾ. ೨೬೪). [← ಹಿಂ. ಮರಾ. ಸೌದಾ]

ಸೌಧ (ನಾ). ೧. ಸುಣ್ಣ ಬಳಿದ ಮನೆ; ಧವಳಾರ: "ಸುಧಾಧವಳಿತಂ, ಸೌಧಂ - ಈ ೨ ದವಳಾರಂ" (ಪಠಾಯು. ೪೯-೧೩೯). ೨. ಅರಮನೆ ಅಥವಾ ಉಪ್ಪರಿಗೆ; ಭವನ: ನಾಟಕಶಾಲೆಗಳ ವಿವಿಧ ಸೌಧಂಗಳ ಕೊಡಾಟವನೆ ಮೆಱೆದು (ಆದಿಪು. ೫-೩೭); ಸೌಧಮೂರ್ಧಂಗಳೊಳ್ ಚಕೋರಮಿಥುನದಂತೆ ಚಾರು ಚಂದ್ರಿಕಾಸೇವನೆಯಂ ಸಂಭಾವಿಸಿಯುಂ (ಚಂದ್ರಪ್ರ. ೩-೨೮ ವ); ಮಿಱುಗುವ ಸೌಧಂಗಳಾ ರಂಜಿಸಿ . . . ತೋರ್ಪ ಕಾಂಚೀಪುರಮುಂಟು (ರಾಮಾಶ್ವ. ೭೪-೧೬). ೩. ಬೆಳ್ಳಗಿರುವುದು; ಬಿಳಿಯದು. ೪. ಅಮೃತ. ೫. ಕೆಸರು; ಪಂಕ. ೬. ಹುಲ್ಲು; ತೃಣ. ೭. ಸತ್ಯ; ನಿಜ. "ನಿರುತಾಮೃತಂ ಪಂಕಮುಪ್ಪುರಿಗೆ ಸಿತಂ ಪುಲ್ಲಿವಾಱುಂ ಸೌಧವೆಸರ್" (ನಾನಾಕಂ. ೧೪೧); "ಹರ್ಮ್ಯ ಪೀಯೂಷಮುಂ ನಿರುತಂ ಪಂಕ ತೃಣಂ ಸಿತಂಗಳವು ಸೌಧಾಖ್ಯೆ" (ನಾನಾರ. ೯೫). [ಸಂ.]

ಸೌಧಗೃಹ (ನಾ). ಉಪ್ಪರಿಗೆಮನೆ: ಪದ್ಮರಾಗ ಜನಗೇಹದ ಸೌಧಗೃಹಂಗಳಂಶು ಮಂಡಳ ನೆಗೆದಲ್ಲಿ ಮಂಡಲಿಸೆ (ಪುಷ್ಪಪು. ೯-೨೬). [ಸಂ.]

ಸೌಧರ್ಮ (ನಾ). [ಜೈನ] ಹದಿನಾರು ಸ್ವರ್ಗಗಳಲ್ಲಿ ಮೊದಲನೆಯದು: ಸೌಧರ್ಮಂ ಕಲ್ಪಮಾ ಶ್ರೀನಿಲಯವಿದು ವಿಮಾನೋತ್ತಮಂ . . . ತಾತ್ಪರ್ಯದಿಂದಂ ಬಗೆವುದಱಿವುದುಂ (ಶಾಂತಿಪು. ೭-೨೧); ಸೌಧರ್ಮದೊಳಮರತ್ಯಶ್ರೀಧಾರಿಣಿಯಾಗಿ ಮತ್ತ ಬಂದೀಗಳ್ ದುರ್ಯೋಧನಸುತೆಯುಂ ಭವದವರೋಧಜನಾಗ್ರಣಿಯುಮಾದಳ್ (ಚಂದ್ರಪ್ರ. ೩-೭೮). [ಸಂ.]

ಸೌಧರ್ಮಕಲ್ಪ (ನಾ). = ಸೌಧರ್ಮ: ಉಗ್ರೋಗ್ರತಪಂಗೆಯ್ದನಿಬರುಂ ಸೌಧರ್ಮಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್ (ವರ್ಧಮಾ. ೩೦-೧೭); ಅಸುವಂ ವಿಸರ್ಜಿಸಿ ಸೌಧರ್ಮಕಲ್ಪದೊಳ್ ದೇವನಾಗಿ (ಆದಿಪು. ೨-೧೭ ವ). [ಸಂ.]

ಸೌಧರ್ಮಿಕೆ (ನಾ). ಒಳ್ಳೆಯತನ; ಸೌಜನ್ಯ: ಅತಿಭವ ಸೌಧರ್ಮಿಕೆಯ ಕೂರ್ಮೆಯ ಭರದಿಂದಜಗುವಂತೆಱಗಿ ಪೊಡವಡುವುದುಂ (ಶಾಂತಿಪು. ೫-೬ ವ); ನಿನ್ನಂ ಕೊಂದಂ ಗಡಮೊಳನಿನ್ನುಂ ಕೊಂದವನನೀಗ್ಗೆ ಕೊಲ್ಲದೆ ಮಾಣ್ಪಾನಿನ್ನುಮೊಳಂ ಗಡ ಸಾಲದೆ ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ (ಗದಾಯು. ೫-೬). [ಸೌಧರ್ಮ + -ಇಕೆ]

ಸೌಧರ್ಮೇಂದ್ರ (ನಾ). [ಜೈನ] ಸೌಧರ್ಮವೆಂಬ ಸ್ವರ್ಗಲೋಕದ ಅಧಿಪತಿ; ಹದಿನಾರು ಜನ ಇಂದ್ರರಲ್ಲಿ ಒಬ್ಬ: ವಿಲಾಸಂ ಮಿಗೆ ಸೌಧರ್ಮೇಂದ್ರನಂದಾ ತಚಿವರಸು ಮಹೋತ್ಸಾಹದಿಂ ಬಂದನಾಗಳ್ (ಆದಿಪು. ೭-೪೬); ಸೌಧರ್ಮೇಂದ್ರನಾದೇಶದಿಂ ಧನದಂ ನಿರ್ಮಿಸಿದಂ ಸಭಾಸದನಮಂ (ಮಲ್ಲಿಪು. ೧೪-೧೧೩). [ಸಂ.]

ಸೌನಂದಕ (ನಾ). [ಜೈನ] ಚಕ್ರವರ್ತಿಗೆ ಇರಬೇಕಾದ ಹದಿನಾಲ್ಕು ರತ್ನಗಳಲ್ಲಿ ಒಂದು; ಏಳು ಅಜೀವರತ್ನಗಳಲ್ಲಿ ಒಂದು; ಒಂದು ಖಡ್ಗದ ಹೆಸರು:

ಸೌ[ಜಾಂಾ. ಸಾ]ನಂದಕಮೆಂಬ ಖಡ್ಗರತ್ನಮುಂ (ಆದಿಪು. ೧೧-೩ ವ) ; ಅತಿ ನಿಶಿತಂ ಬಲಗೆಯ್ಯೊಳ್ ಶತಹ್ರದಾಕೃತಿಯನಾಂತ ಸೌನಂದಕದತ್ಯತಿಶಯರುಚಿ ತದ್ಧೂತದ್ವಿತಯದ ಕಣ್ಣೊಳ್ ನಿಮಿರ್ದುದು (ಮಹಾನೇ. ೧೧-೧೨೨). [ಸಂ.]

ಸೌನಿಕ (ನಾ). ಕಟುಕ ; ಕಸಾಯಿಗಾರ : "ವೈತಂಸಿಕಃ, ಸೌನಿಕಃ, ಕೌಟಿಕಃ, ಮಾಂಸವಿಕ್ರಯೀ ... ಈ ೪ ಸೊನೆಗಾಱರು" (ಹರಾಯು. ೯೭-೪೪೦); ಮಾನವರೊ ದಾನವರೊ ಭೂಮಾತೆಯನು ತಣಿಸ ಶೋಣಿತವನೆರೆಯುವರು ಬಾಷ್ಪ ಸಲುವುದಿರೆ . . . ಯಾ ಧರಣಿ ಸೌನಿಕನ ಕಟ್ಟೆಯೇಂ? (ಮಂಕಿಕ. ೧೨). [ಸಂ.]

ಸೌಪರ್ಣ (ನಾ). ಗರುಡ ; ಸುಪರ್ಣ : ವೈರಿಘಣೇಂದ್ರಸೌಪರ್ಣಂ (ಗದಾಯು. ೭-೭ ವ); ಸೌಪರ್ಣನಹಿಕುಲಕೆ ಮುನಿದಱಿಗಿ ಕೊಲುವಂತೆ (ಪಚಕಾ. ೬-೧೩); ಅಸುರೇಂದ್ರ ಕಟ್ಟಿದ ನಾಗಪಾಶವನು ನುಂಗಿದನು ಸೌಪರ್ಣ (ಕೌಶಿರಾ. ೧೯-೬೫). [ಸಂ.]

ಸೌಪ್ತಿಕ (ಗು). ೧. ನಿದ್ರೆಗೆ ಸಂಬಂಧಿಸಿದ. (ನಾ). ೨. ನಿದ್ರಿಸುತ್ತಿರುವವರ ಮೇಲೆ ಬಿದ್ದು ನಡೆಸುವ ಕಾಳಗ ; ಕಳ್ಳೇರುಕದನ : "ಸೌಪ್ತಿಕಮೆಂಬುದು ಕವಿಯೇಱು" (ಹಲಾಯು. ೭೪-೨೯೮). [ಸಂ.]

ಸೌಭದ್ರೇಯ (ನಾ). ಸುಭದ್ರೆಯ ಮಗ ; ಅಭಿಮನ್ಯು : ತನಿಸೊಕ್ಕಿ ದೆಸೆಪಟ ದುಳಿದು ಸೌಭದ್ರೇಯಭೃಂಗನ ಬಿಲುದನಿಯ ಭರವಂಜಿಸಿತು ಜಯಯುವತಿ ವಿರಹಿಗಳ (ಕುಮಾರವ್ಯಾ. ೬-೩೧). [ಸಂ.]

ಸೌಭಾಗ್ಯ (ನಾ). ೧. ಶುಭ ; ಮಂಗಳಕರವಾದುದು : ಸೌಭಾಗ್ಯವಿಂದಮಳಿಯಂ ಗುಣದಿಂದಳಿಯಂ ವಿತರಣಗುಣದಿಂದಳಿಯನೆನಿಪ್ಪಂಗೆ ಕುಡುಗೆ ಕೃತಿಕನ್ನಿಕೆಯಂ (ಪುಷ್ಪಪು. ೧-೭೦); ಸೌಭಾಗ್ಯಕೀರ್ತಿವಿಜ್ಞಾನಂಗಳ್ . . . ನಾಟ್ಯಮಾರ್ಗದೊಳೊಂದಿದವಂ ಗಲ್ಲದಜ್ಞನೊಳ್ ಸಮನಿಪವೇ (ಲಾಸ್ಯರಂ. ೧-೨೫). ೨. ಸುದೈವ ; ಅದೃಷ್ಟ : ವಿನಯಂ ರೂಪು ವಿವೇಕವುನ್ನಯದ ಪೆಂಪೊಳ್ಪಾರ್ಪು ಸೌಭಾಗ್ಯಮೆಂಬಿನಿತುಂ ರಾಣಿಯರ್ಗೆಲ್ಲಮುಳ್ಳೊಡಂ (ಪುಷ್ಪಪು. ೧೩-೯); ತಮ್ಮೀರ್ವರ ಸಮಾನುರಾಗ ಸೌಭಾಗ್ಯವಿಭ್ರಮಮಂ ಸಂಭ್ರಮಂ ಮಿಗೆ ಸಮದ ಸರಸೋಕ್ತಿಗಳಿಂ ಬಣ್ಣಿಸುತ್ತಿರ್ಪನಂ (ರಾಜಶೇ. ೧೧-೧೩೦ ವ); ನಿನ್ನಯ ಸರಂಗೇಳ್ವ ಸೌಭಾಗ್ಯವೊಂದದುವೆ ಸಾಲ್ಗೆನಗೆ (ಶ್ರೀರಾಮಾ. ೮೮-೨೮೧). ೩. ಮುತ್ತೈದೆತನ ; ಸೌಮಂಗಲ್ಯ : ರತಿಯಿಂ ಸೌಂದರ್ಯ ಸೌಭಾಗ್ಯಮಂ . . . ಈಟ್ಟೊಂಡು (ಪುಷ್ಪಪು. ೩-೨೫); ಅವಳಿಗೆ ಅಖಂಡಸೌಭಾಗ್ಯದ ವಾತ್ಸಲ್ಯಹಸ್ತ ನೇವರಿಸಿ ಆಶೀರ್ವದಿಸುತ್ತಿದ್ದರು (ದೀಪಪ. II, ೧೧). ೪. ಆಸ್ತಿ ; ಸಂಪತ್ತು : ನಮಗಿರುವ ಸೌಭಾಗ್ಯವೆಲ್ಲ ಇವಳೊಬ್ಬಳೇ (ಶಾಂತಲಾ. ೯). ೫. ಚೆಲುವು ; ಸೌಂದರ್ಯ : ಅತ್ಯಂತರೂಪಲಾವಣ್ಯಸೌಭಾಗ್ಯಕಾಂತಿಹಾವಭಾವವಿಲಾಸ ವಿಭ್ರಮಂಗಳನೊಡೆಯೊಳಂ . . . ತನ್ನಲ್ಲಿಗೆ ವಂದೊಳನೇಕಾಂತಂ ಸಮನಿಸಿದೊಡಾಕೆಗಳಿಪದೆ (ವಜ್ರಾರಾ. ೧೭-೧೧). ೬. ಸಿಂದೂರ ; ಚಂದ್ರ . ೭. [ಜ್ಯೋತಿ] ಇಪ್ಪತ್ತೇಳು ಯೋಗಗಳಲ್ಲಿ ಒಂದು ; ನಾಲ್ಕನೆಯ ಯೋಗ : ವಿಷ್ಕಂಭ ಪ್ರೀತಿ ಆಯುಷ್ಮಾನ್ ಸೌಭಾಗ್ಯ . . . ವೈಧೃತಿಗಳೆಂಬ ಇಪ್ಪತ್ತೇಳು ಯೋಗಂಗಳುಂ (ವಿವೇಕ. ೨೬೨). ೮. [ತತ್ತ್ವಶಾ] ಪದಾರ್ಥನಿರೂಪಣದಲ್ಲಿ ಬರುವ ನಲವತ್ತು ವಿಧ ಗುಣಗಳಲ್ಲಿ ಒಂದು : ರೂಪರಸಗಂಧ . . . ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೨೭೬). [ಸಂ.]

ಸೌಭಾಗ್ಯಂದಳೆ (ಕ್ರಿ). ಶುಭವನ್ನು ಹೊಂದು ; ಮಂಗಳವನ್ನು ಪಡೆ : ಮುನ್ನಂ ಮಾಡಿದ ಪುಣ್ಯದ ಫಲದಿಂದುನ್ನತಿಕೆಯ ಸೌಭಾಗ್ಯಂದಳೆದ್ದೆ (ಜಯಶಾ. ೩-೭೨).

[ಸೌಭಾಗ್ಯ + ತಳೆ]

ಸೌಭಾಗ್ಯವತಿ (ನಾ). ಮುತ್ತೈದೆ ; ಸುಮಂಗಲಿ : ಸೌಭಾಗ್ಯವತಿ . . . ಮೊದಲಾದ ಶಬ್ದಗಳನ್ನು . . . ಪತ್ರ ಸ್ವೀಕರಿಸತಕ್ಕವರ ಹೆಸರಿನ ಹಿಂದೆ ಜೋಡಿಸಿ ಬರೆಯುವ ಸಂಪ್ರದಾಯ ಉಂಟು (ಮುಂಬಯಿ. ೪-೮೪). [ಸಂ. ಸೌಭಾಗ್ಯವತೀ]

ಸೌಭಾಗ್ಯಶಾಲಿ, ಸೌಭಾಗ್ಯಶಾಳಿ (ನಾ). ಅದೃಷ್ಟವಿರುವ ವ್ಯಕ್ತಿ ; ಅದೃಷ್ಟಶಾಲಿ : ಅವಳು ತುಂಬ ಸೌಭಾಗ್ಯಶಾಲಿ, ಸುಖವಾಗಿದ್ದಾಳೆ (ರೂಢಿ). ಸೌಭಾಗ್ಯಶಾಳಿ : ಅದರ್ಕೆ ಪಾರಯ್ಸಿ ಸೌಭಾಗ್ಯಶಾಳಿ ವಿಟನಿಂತೆಂದಂ (ಶಾಂತಿಪು. ೮-೧೫ ವ). [ಸಂ. ಸೌಭಾಗ್ಯಶಾಲಿನ್]

ಸೌಭಾಗ್ಯಶಾಳಿ 'ಸೌಭಾಗ್ಯಶಾಲಿ' ನೋ.

ಸೌಭಾಗ್ಯಸಂಪನ್ನೆ (ನಾ). ಚೆಲುವನ್ನೆ ಸಂಪತ್ತಾಗಿ ಉಳ್ಳವಳು ; ಅತ್ಯಂತ ಸುಂದರಿ : ಲಕ್ಷ್ಮೀಮಹಾದೇವಿ ಧಾತ್ರೀಪತಿಯಂ ಸರ್ವಾಂಗಸೌಂದರ್ಯದಿನೆಱಗಿಸಿ ಸೌಭಾಗ್ಯಸಂಪನ್ನೆಯಾದಳ್ (ಮಲ್ಲಿಪು. ೩-೮೬). [ಸಂ. ಸೌಭಾಗ್ಯಸಂಪನ್ನಾ]

ಸೌಭಾಗ್ಯಸದನೆ (ನಾ). ಸೌಂದರ್ಯದ ನೆಲೆಯಾಗಿರುವವಳು ; ಅತ್ಯಂತ ಸುಂದರಿ : [ಚಂದ್ರ]ವದನೆ ಸೌಭಾಗ್ಯಸದನೆ ರಾಯಜಳಪ್ಪಕಳ್ಪಾವನೀಜ ಸಮಾಲಿಂದ (ಗಿತ) ಜಂಗಮಲತೆ (ಎಇ. XXVIII, ೩೫-೩೯; ಸು. 1082).

[ಸಂ. ಸೌಭಾಗ್ಯಸದನಾ (ಸೌಭಾಗ್ಯ + ಸದನ + -)]

ಸೌಭಾಗ್ಯಸಾರ (ನಾ). ಅತಿಶಯವಾದ ಸೌಂದರ್ಯದಿಂದ ಕೂಡಿದುದು : ನಾರೀನಯನೋತ್ಪಲಹೃನ್ನೀರೇಜಮನೊಡನೆಲರ್ಚಿ ಶಶಿಸೂರ್ಯಸಮಾಹಾರ ದಿನಾದವೊಲತುಳಾಕಾರಂ ಸೌಭಾಗ್ಯಸಾರಮಾಯ್ತಗ್ಗಳನಾ (ಚಂದ್ರಪು. ೧-೫೬). [ಸಂ.]

ಸೌಮಂಗಲ್ಯ (ನಾ). ೧. ಮಂಗಳಕರವಾದುದು ; ಶುಭಕರವಾದುದು. ೨. ಸುಮಂಗಲಿಯಾಗಿರುವಿಕೆ ; ಮುತ್ತೈದೆತನ : ಅರಸಾಳ್ವಗ ಧರಣಿಯುಂ ತರುಣಿಯುಂ ಶಾಲಿಸುಂದರಮಾಗಿರದೊಡೆ ಸೌಮಂಗಲ್ಯ[ಜಾಂಾ. ಳ್ಯ]ಮಾಗಿಯುಂ ಮೇಲೆಯುನ್ನತಿಯಪ್ಪುದೆ (ಚೈಮಿಭಾ. ೫-೫೩). [ಸಂ.]

ಸೌಮನಸ (ನಾ). ೧. ಒಳ್ಳೆಯ ಮನಸ್ಸನ್ನು ಹೊಂದಿರುವಿಕೆ. ೨. ಒಳ್ಳೆಯ ಮನಸ್ಸುಳ್ಳವನು : ವಿಗತಸೌಮನಸರುಂ ವಿಪರೀತಚರಿತರುಂ (ನಿವೇದ. ೪೧-೧೫). ೩. [ಜೈನ] ಸುಮೇರುಪರ್ವತದ ಮೇಲಿರುವ ನಾಲ್ಕು ವನಗಳಲ್ಲಿ ಮೂರನೆಯದು : ಆ ಜಂಬೂದ್ವೀಪದ ನಟ್ಟನಡುವೆ . . . ಭದ್ರಶಾಲನಂದನ ಸೌಮನಸ ಪಾಂಡುಕವನ ವಿರಾಜಿತಮುಂ . . . ಆಗಿ (ಆದಿಪು. ೧-೪೯ ವ) ; ಬೇಗದೊಳ್ ಸೌಮನಸಕ್ಕೆ ತಗುಳ್ದು ಮತ್ತೆ ಸೌಮನಸದಿನೆಯ್ದಿ ಪಾಂಡುಕವನಕಡರ್ದತ್ತು ಸುರೇಂದ್ರವಾರಣಂ (ಚಂದ್ರಪು. ೧೨-೧೦೬). ೪. ಅರುವತ್ತಮೂರು ಇಂದ್ರಕಗಳಲ್ಲಿ ಒಂದು : ನಿಜ ಜೀವಿತಾವಸಾನದೊಳ್ ಸೌಮನಸಮೆಂಬೂರ್ಧ್ವಮಧ್ಯಮದ ನವಗ್ರೈವೇಯಕ ದೊಳಹಮಿಂದ್ರನಾಗಿ (ಆದಿಪು. ೩-೭೮ ವ). [ಸಂ.]

ಸೌಮನಸವನ (ನಾ). = ಸೌಮನಸ ೩ : ಜಿನಮಜ್ಜನಾಂಬು ಪಾಂಡುಕವನದಿಂ ಸೌಮನಸವನಕೆ ತದ್ವನದಿಂ ನಂದನವನಕೆ ಪರಿದುದು (ಅಜಿಪು. ೪-೬೨). [ಸಂ.]

ಸೌಮನಸ್ಯ (ನಾ). ೧. ಒಳ್ಳೆಯ ಮನಸ್ಸಿನಿಂದ ಕೂಡಿರುವಿಕೆ : ಇವರು . . . ಸೌಮನಸ್ಯದಲಿಳೆಯ ಪಾಲಿಸುತಿರ್ದರು (ಕುಮಾಸ. ೧-೪೨); ಗೌರವ್ಯೆಯವರು . . . ಒಬ್ಬೊಬ್ಬರನ್ನೂ ಸೌಮನಸ್ಯದಿಂದ ಕುಶಲ ಕೇಳಿ ಕಷ್ಟಸುಖಗಳನ್ನು ವಿಚಾರಿಸಿ ಕಳಿಸಿಕೊಡುತ್ತಿದ್ದಾಗ (ಶಾಂತಲಾ. ೫೨). ೨. ಸಂತೋಷ. [ಸಂ.]

ಸೌಮನಸ್ಸು (ನಾ). ಒಳ್ಳೆಯ ಮನಸ್ಸು ; ಶುದ್ಧಚಿತ್ತ : ಸೌಮನಸ್ಸು ವೈಮನಸ್ಸುಗಳು ಕಣ್ಣಿಗೆ ಕಾಣಿಸುವದಿಲ್ಲ (ವಿಚಾಮಂ. ೨೬). [ಸಂ. ಸೌಮನಸ್]

ಸೌಮಿತ್ರಿ (ನಾ). ಸುಮಿತ್ರೆಯ ಮಗ ; ಲಕ್ಷ್ಮಣ : ಸೌಮಿತ್ರಿಯ ನಿರತಿಶಯ ಪ್ರೇಮಮನದನಂತುಟಿಂತುಟೆಂಬಂತುಟೆ ನಿದ್ರಾಮುದ್ರಿತಲೋಚನನಿರೆ ರಾಮಂ ರಕ್ಷಾನಿಮಿತ್ತಮೆಟ್ಟತ್ತಿರ್ದಂ (ವಂಶಾಮಾ. ೮-೪); ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಟಿಸನೆ ಕಾಕುತ್‌ಸ್ಥನಿಲ್ಲಿ ತಳುವಿದೊಡೆ (ಚೈಮಿಭಾ. ೧೯-೨೫). [ಸಂ.]

ಸೌಮುದಿ (ನಾ). (?) : ಕಳಕಳಿಪ ದರಹಾಸ ಕೌಮುದಿಯ ಸೌಮುದಿಯ ಪೊಳೆಪೊಳೆವ ಬಿಂಬೋಷ್ಠವಲ್ಲವದ ವಲ್ಲವದ ನಲವಿನಿಂ ನೋಳ್ಪ ಯತಿತತಿಯ ಸುರತತಿಯ ಸಂತತಿಗೆ ಹರಿಯ್ಯೆತರೆ (ವಂಶಾರಾ. ೧-೮-೨೬). [?]

ಸೌಮ್ಯ (ಗು). ೧. ಚಂದ್ರನಿಗೆ ಸಂಬಂಧಿಸಿದ. ೨. ಚೆಲುವಾದ ; ಸುಂದರವಾದ : ಸೌಮ್ಯದೇಹೋರ್ಧ್ವಕೇಶಂ ಸುಕೇಶಂ (ಆರಾಚ. ೪-೪-೩೩). ೩. ತಾಳ್ಮೆಯಿಂದ ಕೂಡಿದ ; ಶಾಂತವಾದ. ೪. ತೀಕ್ಷ್ಣವಲ್ಲದ. ೫. ತಂಪಾದ ; ಹಿತವಾದ. (ನಾ). ೬. ತೀಕ್ಷ್ಣವಲ್ಲದುದು : ತಡಿಗಳೊಳ್ ಬೆಳೆದ ಕುಜಪಂಕ್ತಿ ಸೌಮ್ಯಚ್ಛಾಯೆಯಿಂದ . . . ದಿನದೆಣೆಕೆಯಂತೆ ಚೆಲ್ವಳವಟ್ಟು ಕಾಣಿಸಿದುದಾ ಕೊಳಂ (ನಂದಿಮಾ. ೬-೨೫). ೭. ಚೆಲುವು ; ಅಂದ : "ಉತ್ತಮಂ ಪ್ರಿಯ ಸಾಧು ರಮಂ ರಮಣ್ಯಂ ರಮ್ಯರುಚಿರಂ ಪ್ರವೇಕಮೆನೆ ಸೌಮ್ಯಕ್ಕೆ ನಾಮಮಕ್ಕುಂ" (ಮಂಗರಾ. ೧೨೬ ೨). ೮. ಚೆಲುವ ; ಸುಂದರ : ವಜ್ರವೃಷಭನಾರಾಚ ಶರೀರಸಂಹನನಸೌಮ್ಯನುಂ (ಆದಿಪು. ೧೫-೩ ವ) ; ತನ್ನಾ ಸೌಮ್ಯನಂ ಕಂಡರಿತಳಾ ಮಂದಹಸಿತ ಮುಖಕಮಲದೊಳ್ ! (ಶ್ರೀರಾಮಾ. ೨೭೩-೨೭೧).

೯. ಸೈರಣೆಯುಳ್ಳವನು; ಶಾಂತಸ್ವಭಾವದ ವ್ಯಕ್ತಿ: ಸೌಮ್ಯನಾಗಿಯುಮಶೇಷ ಜಗದ್ಗುರು . . . ಆದನಾ ನೃಪಂ (ಪುಷ್ಪಸ್ರ. ೧೩-೭). ೧೦. ಒಳ್ಳೆಯದು; ಶುಭವಾದುದು: "ಪ್ರಾಗ್ಮಂ . . . ಸುಂದರಂ, ಸೌಮ್ಯಂ . . . ಈ ೨೬ ಒಳ್ಳಿತು" (ಹಲಾಯು. ೧೧೪-೪). ೧೧. ಅರುವತ್ತುಸಂವತ್ಸರಗಳಲ್ಲಿ ನಲವತ್ತುಮೂರನೆಯದು : ಆ ವರ್ಷವೇ ಪ್ರಭವ . . . ಸೌಮ್ಯ . . . ಕ್ಷಯವೆಂದಱವತ್ತು ತೆಱನಾಗಿಹುದು (ವೆಕಾ. ೨೬೩). ೧೨. ಒಂದು ಬಗೆಯ ಸಸ್ಯ: "ಕಾಂಡ - ಶಾಖಾ - ಸೌಮ್ಯ" (ಔಷಧಿ. ೩೧). ೧೩. [ಜ್ಯೋತಿ] ನವಗ್ರಹಗಳಲ್ಲಿ ಒಂದು; ಬುಧ: "ರೌಹಿಣೇಯಃ, ಬುಧಃ, ಸೌಮ್ಯಃ, ಚಾಂದ್ರಮಸಾಯನಃ - ಈ ೪ ಬುಧನ ಪೆಸರ್" (ಹಲಾಯು. ೯-೪೬); ಗುರುವಿನೊಳಂದಿ ಸೌಮ್ಯನೊಡನರ್ಕಿ ನವೇಂದುಗೆ ರುದ್ರ (೧೧) ಸಂಖ್ಯೆಯೊಳ್ . . . ಗ್ರಹಮೆಯ್ದುವಲ್ಲಿ (ಅಚ್ಯುಮ. ೮-೧೮೨). ೧೪. ಉಗ್ರವಲ್ಲದ ಗ್ರಹ; ಶುಭಗ್ರಹ: ಇರೆ ನೀಚಗೃಹದಿ ಸೌಮ್ಯರ್ ಮರಮೊದಲೊಳ್ ಸಾಲಮೂಲದೊಳ್ ಜನನಂ (ಜಾತಕ. ೪-೨೨). [ಸಂ.]

ಸೌಮ್ಯಕ (ನಾ). ದೇವತಾಪ್ರತಿಮೆಗಳನ್ನು ಪ್ರತಿಷ್ಠಾಪಿಸುವ ಐದು ಬಗೆಯ ಪೀಠಗಳಲ್ಲಿ ಒಂದು: 'ಮಯಮತ'ವೆಂಬ ಗ್ರಂಥದಲ್ಲಿ ಪ್ರತಿಮೆಗಳಿಗೆ ಬೇಕಾದ ಪೀಠಗಳು ಅನೇಕ ವಿಧವೆಂದೂ ಅವುಗಳಲ್ಲಿ ಮುಖ್ಯವಾದವು ಭದ್ರಪೀಠ, ಪದ್ಮಪೀಠ, ವಜ್ರಪೀಠ, ಸೌಮ್ಯಕ, ಶ್ರೀಕಾಮ್ಯವೆಂದೂ ಹೇಳಿದೆ (ಭಾರದ. ೫೧೭). [ಸಂ.]

ಸೌಮ್ಯದೃಷ್ಟಿ (ನಾ). ಶಾಂತವಾದ ನೋಟ; ಪ್ರಸನ್ನದೃಷ್ಟಿ: ನ್ಯೂನವಾಗಿ ಮೃಗಾಂಶೆಯೊಳು ಶನಿನ್ಯೂನವಿಲ್ಲದ ಸೌಮ್ಯದೃಷ್ಟಿಯು ತಾನೆತಾಳಲು ಬಾಳುತಿಹ ದಶವರುಷದೊಳು ಮನುಜಾ (ಕೇರಪ್ರ. ೨-೧೪). [ಸಂ.]

ಸೌಮ್ಯರೂಪ (ನಾ). ಮನೋಹರವಾದ ಆಕಾರ; ಸುಂದರವಾದ ರೂಪ. [ಸಂ.]

ಸೌಮ್ಯವಾರ (ನಾ). ಒಂದು ವಾರದ ಏಳುದಿನಗಳಲ್ಲಿ ನಾಲ್ಕನೆಯದು; ಬುಧನು ಅಧಿಪತಿಯಾಗಿರುವ ದಿನ; ಬುಧವಾರ. [ಸಂ.]

ಸೌಮ್ಯವೇಷ (ನಾ). ಕಣ್ಣಿಗೆ ಹಿತವಾದ ಉಡುಗೆ; ಆಡಂಬರರಹಿತವಾದ ವೇಷ: ತಪೋವನಗಳು ಸೌಮ್ಯವೇಷದಿಂದ ಪ್ರವೇಶಿಸುವುದಕ್ಕೆ ಯೋಗ್ಯಗಳು (ಶಾಕುಂತ. ೭-೧೦). [ಸಂ.]

ಸೌಮ್ಯೋಕ್ತಿ (ನಾ). ೧. ತೀಕ್ಷ್ಣವಲ್ಲದ ನುಡಿ; ಮೃದುವಾದ ಮಾತು. ೨. (ಆಲಂ) "ಕಠಿನ ಅಥವಾ ಒರಟಾದ ಶಬ್ದಗಳನ್ನು ಪ್ರಯೋಗಿಸ ಬೇಕಾಗುವಲ್ಲಿ ಅವಕ್ಕೆ ಬದಲಾಗಿ ನಯ ಅಥವಾ ಅಸ್ಪಷ್ಟ ಪದಪ್ರಯೋಗ ಮಾಡುವುದು; ನಯನುಡಿ; ಸೌಮ್ಯೋಕ್ತಿ" (Euphemism. ಇಂಕಾ): ಹುಡುಗಿ ಕಪ್ಪು. ಹಾಗೆನ್ನಲು ಇಷ್ಟವಿಲ್ಲ. ಎಣ್ಣೆಗಂಪು ಎನ್ನುವುದು ಸೌಮ್ಯೋಕ್ತಿ (ನಮ್ಮನು. ೨೫೬). [ಸಂ.]

ಸೌರ (ಗು). ೧. ಸೂರ್ಯನಿಗೆ ಸಂಬಂಧಿಸಿದ. ೨. ಸುರರಿಗೆ ಸಂಬಂಧಿಸಿದ; ದೇವತೆಗಳಿಗೆ ಸೇರಿದ. (ನಾ). ೩. ಸೂರ್ಯನಿಗೆ ಸಂಬಂಧಿಸಿದುದು: ನಡೆದುದು ಸೌರಂ ರಥಮುತ್ತರಾಯಣಕ್ರಮದಿಂದಂ (ಚಂದ್ರಪ್ರ. ೭-೬೬). ೪. ಸೂರ್ಯನ ಮಗ. ೫. ಶನಿ. ೬. ಯಮ. ೭. ಸೂರ್ಯನನ್ನು ಪೂಜಿಸುವವನು; ಸೂರ್ಯೋಪಾಸಕ: ಭಜಿಸುವರು ಸೌರರು ರವಿಯ (ಗಗತಾ. ೫-೬); ಸೌರರು ಸೂರ್ಯನ ಹಾಗೆ ಹಣೆಯ ಮೇಲೆ ಚಂದನದ ಬೊಟ್ಟನ್ನು ಇಟ್ಟುಕೊಳ್ಳುವರು (ಮುಂಬಯಿ. ೬-೧೧೨). ೮. ಸೂರ್ಯನ ಗತಿಯನ್ನು ಅನುಸರಿಸಿ ದಿನ ಮತ್ತು ಮಾಸಗಳನ್ನು ಲೆಕ್ಕ ಮಾಡುವ ಕ್ರಮ; ಸೌರಮಾನ: ಆ ಸಂವತ್ಸರವೇ ಸೌರ . . . ಸಾವನ ಭೇದದಿಂದೈದು ತೆಱನಾಗಿರ್ಪುದು (ವೆಕಾ. ೩೨೧); ಶ್ರೀಪರಮಾತ್ಮನು ಮೇಲೆ ಹೇಳಿದ ಪ್ರಕಾರ ಬಾರ್ಹಸ್ಪತ್ಯ, ಸೌರ, ಅನುಸಾರ, ನಾಕ್ಷತ್ರ, ಚಾಂದ್ರಮಾನಗಳೆಂಬ ಐದು ಬಗೆಯಾಗಿ ಗಣಿಸುವ ಪರಿವತ್ಸರಾದಿ ಐದು ಹೆಸರುಗಳನ್ನು ಧರಿಸಿರುವನು (ಹಸಾರ. ೫-೪೦ ಶಾಸ್ತ್ರೀಯ). ೯. [ಜ್ಯೋತಿ] ಶನಿಗ್ರಹ. [ಸಂ.]

ಸೌರಂಭ (ನಾ). ಸಂಭ್ರಮ; ಸಡಗರ: "ಸೌರಂಭಮೆಂದೆನಲು ಸಂಭ್ರಮಂ" (ಮಂಗರಾ. ೧೩೦-೧೬); ಲಹರಿಯ ಸಾಗರದ ಸೌರಂಭದಂತಿರೆ ಮಸಗಿತಾಸ್ಥಾನ (ಕುಮಾರವ್ಯಾ. ೧-೩೬); ಸಕಲಸೌರಂಭದಲ್ಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು (ಪ್ರಭುಲಿಂ. ೩-೨). [< ಸಂ. ಸಂರಂಭ]

ಸೌರಚಾಪ (ನಾ). ಸುರಧನಸ್ಸು; ಇಂದ್ರಚಾಪ: ಸೌರಚಾಪವು ಹೊಳೆವುತಿದೆ ನಭದಲ್ಲಿ (ಕೌಶಿಕಾ. ೩೮-೨೯). [ಸಂ.]

ಸೌರಣಿ 'ಸಂವರಣಿ' ನೋ.

ಸೌರಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದು; ಸೂರ್ಯನಿಗೆ ಸಂಬಂಧಿಸಿದ ಪುರಾಣ: ಸನತ್ಕುಮಾರಪುರಾಣ . . . ಸೌರಪುರಾಣ . . . ಭಾರ್ಗವಪುರಾಣವೆಂಬವೆ ಆಯಾಯ ನಾಮಧೇಯಮುಳ್ಳವೆಂಬಿಂ ನಿರೂಪಿತಂಗಳಾದ ಹದಿನೆಂಟು ಉಪಪುರಾಣಂಗಳು (ವೆಕಾ. ೯). [ಸಂ.]

ಸೌರಭ (ನಾ). ಸುವಾಸನೆ; ಪರಿಮಳ; ಸುಗಂಧ: ನಿಡುಸುಯ್ದ ನಲ್ಲಳ ಮುಖಾಂಬುಜ ಸೌರಭದೊಳೆ ಪೊದಟ್ಟು (ಪಂಪಭಾ. ೪-೧೦೭); ಸುರಕುಜಕುಸುಮಸೌರಭಂ ಬಂದಪುದು (ನಂಬರ. ೧೫-೧೬೮); ಗಗನದ ಪರಮಸೌರಭ ಕಲಸಿಕೊಂಡುದು ಸಕಲ ಸುರಕುಲವ (ಕುಮಾವಿ. ೧೦-೮೩). [ಸಂ.]

ಸೌರಭಂಗೆಡು (ಕ್ರಿ). ಸುವಾಸನೆಯು ಹಾಳಾಗು: ಎಸಱಂ ಮುಟ್ಟಲೊಡಂ ತನ್ನ ಸೌರಭಂಗೆಟ್ಟು ನೆಗಟ್ಟಿ ಕತ್ತುರಿವಣ್ಣಂ ಮಸಿಗಮೆಣೆಯಪ್ಪುದು (ಆದಿಪು. ೧೧-೧೧೭). [ಸೌರಭ + ಕೆಡು]

ಸೌರಭಕುಸುಮ (ನಾ). ಪರಿಮಳದಿಂದ ಕೂಡಿದ ಹೂವು: ಸೌರಭಕುಸುಮ ವಿಹಾರಂ . . . ಸುಳಿವುದಲ್ಲಿ ಚಾರುಸಮೀರಂ (ಜಗವಿ. ೨-೨೫). [ಸಂ.]

ಸೌರಭನಿಧಿ (ನಾ). ಸುವಾಸನೆಯ ಆವಾಸ; ಸುಗಂಧದ ನೆಲೆ: ಸೌರಭನಿಧಿ ತೀರ್ಥಕರ ಕುಮಾರಕನೆಂದೆಂದುಮಾ ಜಗತ್ಪತಿಗಿಂದ್ರಂ ಸಾರಸುಗಂಧವಿಳೇಪನಭೂರಿ ಜಳಸ್ನಪನವಿಧಿಗೊಡರ್ಚಿದನಾಗಳ್ (ಶಾಂತಿಪು. ೧೦-೫೨). [ಸಂ.]

ಸೌರಭವೆಱು (ಕ್ರಿ). ಸುವಾಸನೆಯನ್ನು ಹೊಂದು; ಪರಿಮಳದಿಂದ ಕೂಡಿರು: ಹೊನ್ನ ಹೊಳೆಗಳಿಂದ ಸೌರಭವೆತ್ತ ಕುಡಿನೀರ ಕುಡಲೀಂಟಿದರು (ಮೋಹತ. ೧೪-೧೫). [ಸೌರಭ + ಪೆಱು]

ಸೌರಭೇಯ (ನಾ). ಎತ್ತು; ಬಸವ: "ಉಕ್ಷಾ . . . ಸೌರಭೇಯಃ . . . ಶಾಕ್ವರಃ - ಈ ೧೧ ಎತ್ತು" (ಹಲಾಯು. ೪೪-೧೦೮). [ಸಂ.]

ಸೌರಭ್ಯ (ನಾ). ೧. ಸುವಾಸನೆ; ಕಂಪು: ತನುಲತೆ ಸೌರಭ್ಯಮಂ ಬೀಱೆ (ಜಗವಿ. ೨-೭೮); ಮುಡಿ ಪುಷ್ಪಂಗಳ ಸೂಸೆ ಕಡುಸೌರಭ್ಯವ ತನು ಬೀಱೆ (ಜೀವಂಸಾಂ. ೧೮-೬೫). ೨. ಕಾರ, ಕಹಿ, ಹುಳಿ, ಒಗರು ಮೊದಲಾದ ರುಚಿಗಳು: "ಕಟುತಿಕ್ತ ಕಷಾಯಮೆಂಬಿವು ಸೌರಭ್ಯದಲ್ಲಿಯುಂ . . . ವರ್ತಿಸುಗುಂ" (ಹಲಾಯು. ೧೩೫-೨೭). ೩. ಗೋವು; ಹಸು: "ಷಡುರಸ ಪರಿಮಳ ಗೋವು ಮೂಱು ಸೌರಭ್ಯಾಖ್ಯಂ" (ನಾನಾರ್ಥ. ೧೪೧). [ಸಂ.]

ಸೌರಭ್ಯವಡು (ಕ್ರಿ). ಪರಿಮಳವನ್ನು ಸೂಸು: ಸೌರಭ್ಯವಟ್ಟರ್ದ ಪೂಮಾಲೆಗಳನು ಬಟ್ಟವಡೆದ ರತ್ನಪವಳ ಮುತ್ತುಗಳ ಮೇಲ್ಕಟ್ಟು ಕಣ್ಮನಕೆ ರಂಜಿಸಿತು (ಮೋಹತ. ೨೬-೧೪). [ಸೌರಭ್ಯ + ಪಡು]

ಸೌರಭ್ಯವಡೆ (ಕ್ರಿ). = ಸೌರಭವೆಱು: ಮುಡಿವಾಳ ದವನ ಪಚ್ಚೆಯ ತೆನೆ ಸೌರಭ್ಯವಡೆದ ಪೊಂಬಾಳೆ ಪೂದಂಡೆ (ಮೋಹತ. ೧೪-೩೧). [ಸಂ.]

ಸೌರಮಾಸ (ನಾ). ಸೂರ್ಯನ ಗತಿಯ ಆಧಾರದ ಮೇಲೆ ಮಾಡುವ ಕಾಲಗಣನೆ. [ಸಂ.]

ಸೌರಮಾಸ (ನಾ). ಸೌರಮಾನದ ತಿಂಗಳು: ಸೂರ್ಯನ ಗತಿ ಸಂಬಂಧದಿಂದ ಕಲ್ಪಿಸಿದ ತಿಂಗಳುಗಳು ಸೌರಮಾಸಗಳೆಂದೆನಿಸಿಕೊಳ್ಳುತ್ತವೆ (ಮುಂಬಯಿ. ೬-೬೯). [ಸಂ.]

ಸೌರವರ್ಷ (ನಾ). ಸೂರ್ಯನ ಚಲನೆಯ ಆಧಾರದಿಂದ ಲೆಕ್ಕಹಾಕಿದ ವರ್ಷ: ಈ ಅವಧಿಯನ್ನು ನಾವು ಸೌರವರ್ಷವೆಂದು ಕರೆಯುತ್ತೇವೆ (ನಕ್ಷತ್ರ. ೪೦). [ಸಂ.]

ಸೌರವ್ಯೂಹ (ನಾ). ಸೂರ್ಯನನ್ನು ಸುತ್ತುಗಟ್ಟಿರುವ ಗ್ರಹಗಳ ಸಮೂಹ: ಸೂರ್ಯಸೌರವ್ಯೂಹದ ಕೇಂದ್ರ (ಭೂಹುಟ್ಟು. ೪); ಸೌರವ್ಯೂಹ (ಸೂರ್ಯನ ಸಂಸಾರ) ನಮ್ಮ ತೇಜೋರಾಶಿಗೆ ಸೇರಿದ್ದು (ಆಕಾಶ. ೬೩). [ಸಂ.]

ಸೌರಸ (ನಾ). ಅನುಮತಿ; ಅಪ್ಪಣೆ: ಶ್ರೀ ಮನ್ಮಹಾಮಂಡಳೇಶ್ವರಂ ಕುಮಾರಂ ಬಿಜ್ಜಲದೇವರಸರ ಸೌರಸದಿಂ ಪತ್ರಳಿಸಹಿತಂ ಪಡೆದು ಬರೆದ ಶಾಸನಂ (ಕೊಲ್ಹಾಶಾ. ೯-೩೯; 1147). [?]

ಸೌರಸಂಕ್ರಾಂತಿ (ನಾ). ಸೂರ್ಯನು ಒಂದು ರಾಶಿಯನ್ನು ಬಿಟ್ಟು ಇನ್ನೊಂದು ರಾಶಿಗೆ ಪ್ರವೇಶಿಸುವುದು; ಸೂರ್ಯಸಂಕ್ರಮಣ. [ಸಂ.]

ಸೌರಾಜ್ಯಗುಣ (ನಾ). ಒಳ್ಳೆಯ ರಾಜ್ಯಭಾರ ಮಾಡುವ ಗುಣ: ಶ್ರೀ ಜಾಯಾಪತಿ ಧರೆಯಂ ರಾಜನ್ವತಿ ಮಾಡಿ ತನ್ನ ಸೌರಾಜ್ಯಗುಣಂ ರಾಜಿಸೆ ನೆಗೞ್ದಂ (ಚಂದ್ರಪ್ರ. ೭-೧). [ಸಂ.]

ಸೌರಾಷ್ಟ್ರ (ನಾ). ೧. ಒಂದು ದೇಶದ ಹೆಸರು; ಇ ಈಗಿನ ಗುಜರಾತ್ ರಾಜ್ಯದ ಸೂರತ್‌ಪ್ರಾಂತ: ಬಸೆದು ಸೌರಾಷ್ಟ್ರಕ್ಕೆ ಪೋಗಿ (ಬಸವು. ೫೩-೧೧); ಬಳಿಕ ಸೌರಾಷ್ಟ್ರದಿಂದ ಸುತ್ರಾಮಸುತ . . . ನಡೆತರುತಿರ್ದನು (ಜೈಮಿಭಾ. ೨೮-೧). ೨. [ಸಂಗೀತ] ಒಂದು ರಾಗದ ಹೆಸರು: 'ಸೌರಾಷ್ಟ್ರ . . . ಶಯ ಸಹೋದರಿಯೆಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ವಿವೇಕ. ೨೩೩); ಸೌರಾಷ್ಟ್ರ- ಪ್ರಾಚೀನರಾಗ. ಅಸಂಪೂರ್ಣಮೇಳಪದ್ಧತಿಯಲ್ಲಿ ಈ ರಾಗ ೧೫ನೇ ಮೇಳಕರ್ತವಾದ ಮಾಯಾಮಾಳವಗೌಳದಲ್ಲಿ ಜನ್ಯವಾಗಿತ್ತು (ಸಂಗೀಚಂ. ೧೬೧). [ಸಂ.]

ಸೌರಾಷ್ಟ್ರಕ (ನಾ). ೧. ಒಂದು ಬಗೆಯ ಲೋಹ; ಕಂಚು: "ಕಾಂಸ್ಯಂ, ಸೌರಾ(ಷ್ಟ್ರಿ)ಷ್ಟ್ರಕಂ - ಈ ೨ ಕಂಚು" (ಹಲಾಯು. ೨೮-೧೬). ೨. ಒಂದು ಬಗೆಯ ವಿಷ: "ಬ್ರಹ್ಮಪುತ್ರಃ . . . ಸೌರಾ(ಷ್ಟ್ರಿ)ಷ್ಟ್ರಕಃ, ಕ್ಷೇಡಃ, ತೀಕ್ಷ್ಣಃ, ವಿಷಂ - ಈ ೯ ವಿಷಂ" (ಹಲಾಯು. ೧೦೬-೨೪). [ಸಂ.]

ಸೌರಾಷ್ಟ್ರಿ (ನಾ). ೧. ಸೌರಾಷ್ಟ್ರದಲ್ಲಿ ದೊರಕುವ ಒಂದು ಬಗೆಯ ಸುವಾಸನೆಯ ಮಣ್ಣು. ೨. ಒಂದು ಬಗೆಯ ಸಸ್ಯ: "ಸೌರಾಷ್ಟ್ರಿಯೆನೆ ಹಿಂದು" (ಮಂಗರಾ. ೪೪-೪೫). [ಸಂ.]

ಸೌರಿ$_1$ (ನಾ). ವಿಷ್ಣು ಅಥವಾ ಕೃಷ್ಣ: "ಅರಲ್ಪೊಡೆಯಂ . . . ಸೌರಿ . . . ಕಾವನಯ್ಯಂ - ಈ ೧೨ ವಿಷ್ಣುಗೆ ಹೆಸರು" (ಕಶಸಾ. ೧-೯); ಸೌರಿಯಿತ್ತ ಪೊಂಬಟ್ಟೆಯನಿಂದುಡು ಸಸಿಯಟ್ಟಿದ ಪೂವಂ ಮುಡಿ (ಕಬ್ಬಿಗಾ. ೩೭). [< ಸಂ. ಶೌರಿ]

ಸೌರಿ$_2$ (ನಾ). ೧. ಸೂರ್ಯನ ಮಗ. ೨. ಶನಿ: "ಪಂಗು ಸೌರಿ ಕ್ರೋಡನರ್ಕಜಂ ಮಂದನಸಿತನೆನಲ್ ಶನಿಯೆನಿಕ್ಕುಂ" (ಮಂಗರಾ. ೧೨-೬). ೩. [ಜ್ಯೋತಿ] ನವಗ್ರಹಗಳಲ್ಲಿ ಒಂದು; ಶನಿಗ್ರಹ: ಒಂದೆ ಗೃಹದೊಳ್ ನಿಂದಂದು ಸೌರೀಂ [ಪಾಶಾಂ. ಸೂರ್ಯೇಂ]ದುಗಳ್ . . . ಮನುಜಂಗಕ್ಕುಂ ಕ್ಷಯವ್ಯಾಧಿ (ಜಾತಕ. ೨೧-೨೩). [ಸಂ.]

ಸೌರಿಕ (ಗು). ೧. ಸ್ವರ್ಗೀಯವಾದ; ದೇವಲೋಕದ; ದಿವ್ಯ. (ನಾ). ೨. ದೇವಲೋಕ; ಸ್ವರ್ಗ. ೩. ಶನಿಗ್ರಹ. ೪. ಮಾದಕಪಾನೀಯ; ಸುರೆ. ೫. ಸುರೆಯನ್ನು ಮಾರುವವನು. [ಸಂ.]

ಸೌರಿಯ, ಶೌರಿಯ, ಸೌರ್ಯ$_1$ (ನಾ). ೧. ಸಾಹಸಿ; ಪರಾಕ್ರಮಿ: ಕನಕಧಾರಾವರುಷನಿಸ್ಸೀಮಸೌರಿಯನುಂ ಕಾದಮ್ಬರಾಯಸ್ಥಾಪನಾಚಾರಿಯನು . . . ಸುಚರಿತ ಚರಿತನುಮಪ್ಪ ಸಮಸ್ತ ಸೈನ್ಯಾಧಿಪತಿ ನಿಸ್ಸಂಕಪ್ರತಾಪ ಶ್ರೀ ಸಾಲೆಯ ಲೆಕ್ಕಮದೇವರಾಣೆಯರು (ಎಕ. XI. ದಾವಣ. ೫೯-೫೧; 1280). **ಶೌರಿಯ**: ೨. ಸಾಹಸ; ಪರಾಕ್ರಮ: ಶೌರಿಯದಲಿದಿರಿಲ್ಲ ಕುಲದಲಿ ಸೂರಿಯನ ಮಗ . . . ನಿನ್ನ ವಿಭವಕೆ ಆರು ಸರಿಯ್ಯೆ ಕರ್ಣ (ಕಿಷ್ಕಿಂಧಾ. ೧೦-೧೦); ಸೋರುವಶ್ರುಗಳಿಂದ ಸೀತಾಚೋರನಲಿ ತಾ ತಾಗಿ ತೊಲಗಿದ ಶೌರಿಯದ ಸಂಗತಿಯ ಹೇಳಿದು ಮುಗಿದನಕ್ಕಿಗಳ (ತೊರವಿ. ೩-೧೨-೮). **ಸೌರ್ಯ**$_1$: ೨. ಸುಭಟಾರಿಭೀಕರಂ ಪತಿಹಿತಾಂಜನೇಯಂ ಸೌರ್ಯಗಾಂಗೇಯಂ . . . ಶ್ರೀಮನ್ನಕುಲರಸರ್ (ಮೃಅರಿ. ೧೯೩೧, ೭೪-೩೬; 1053); ನೀತಿಪಾರಾಯಣಂ ಸೌರ್ಯನಾರಾಯಣಂ . . . ಶ್ರೀ ಮದ್ಭುವನೈಕಮಲ್ಲದೇವರ್ (ಸೌಇಇ. XX. ೪೬-೬೪; 1072). [< ಸಂ. ಶೌರ್ಯ]

ಸೌರಿವಾರ (ನಾ). ಶನಿವಾರ: ಸಾಸಿರದ ನೂರ ಹನ್ನೊನ್ದಾ ಸಕ ನ್ರಿಪವತ್ಸರಂ ಸಲಲು . . . ಸಿತತದಿಗೆ ಸೌರಿವಾರದೊಳೊಲವಿಂ ವಿಭವಂ ನೆರಪಿ (ಎಕ. VIII. ಸೊರಬ. ೧೭೯-೬೪; 1189). [ಸಂ.]

ಸೌರಿಸು 'ಸಂವರಿಸು$_1$' ನೋ.

ಸೌರ್ಯ$_1$ 'ಸೌರಿಯ' ನೋ.

ಸೌರ್ಯ$_2$ (ಗು). ೧. ಸೂರ್ಯನಿಗೆ ಸಂಬಂಧಿಸಿದ. (ನಾ). ೨. ಸೂರ್ಯನಿಗೆ ಸಂಬಂಧಿಸಿದುದು. ೩. ಸೂರ್ಯನ ಮಗ. [ಸಂ.]

ಸೌರ್ಯಶಾಳಿ (ನಾ). ಪರಾಕ್ರಮಿ; ಶೂರ: ಗಭಸ್ತಿಮಾಳಿಯತುಳಬಳ ಸೌರ್ಯಶಾಳಿ (ಮೃಅರಿ. ೧೯೩೧, ೭೪-೧೬; 1053); **ಅಣ್ಣನಂಘ್ರಿಯೊಳಿಱಗಿಸುಗುಂ ಸೌರ್ಯ್ಯಶಾಳಿ** ವೀರನೊಳಂಬಂ (ಸೌಇಇ. XX. ೫೫-೧೧; 1082) [< ಸಂ. ಶೌರ್ಯಶಾಲಿನ್]

ಸೌಲಕ್ಕಿ 'ಸೋಗಿಲಕ್ಕಿ' ನೋ.

ಸೌಲತ್ತು 'ಸವಲತ್ತು' ನೋ.

ಸೌಲಭ್ಯ (ನಾ). ಅನುಕೂಲ; ಸೌಕರ್ಯ: ಈ ಸೌಲಭ್ಯಗಳಿಂದಲೇ ಗಂಗಾತೀರದಲ್ಲಿ ದೊಡ್ಡದೊಡ್ಡ ಗಿರಣಿಗಳುಳ್ಳ ಜನಭರಿತಪಟ್ಟಣಗಳು ಬೆಳೆಯಲು ಕಾರಣ (ನನದಿ. ೨೨). [ಸಂ.]

ಸೌಲಭ್ಯಾಕಾಂಕ್ಷೆ (ನಾ). ಅನುಕೂಲವಾಗಿರಬೇಕೆಂಬ ಅಪೇಕ್ಷೆ; ಸೌಕರ್ಯಗಳ ಬಯಕೆ: ಮಾನವಸಾಮಾನ್ಯವಾದ ಸೌಲಭ್ಯಾಕಾಂಕ್ಷೆಯೂ ವೈಯಕ್ತಿಕವಾದ ಉಚ್ಚಾರಣಭೇದವೂ . . . ನೈಸರ್ಗಿಕಕಾರಣಗಳಾಗಿರುತ್ತವೆ (ಕೃಪಿಡಿ. ೨೯೫). [ಸಂ.]

ಸೌವತ್ಸರ 'ಸಂವಚ್ಛರ' ನೋ.

ಸೌವನೆ (ಅ). ಸೀಳುವ ಶಬ್ದದ ಒಂದು ಅನುಕರಣಾವ್ಯಯ: ಕಣಗಳ್ ಮೊನೆಯಿಂ ಪಿಳ್ಕುವರಂ ಸೌವನೆ ಸೀಳ್ವಂತುರ್ಚಿಪೋದುವಚ್ಯುತನಿಷುಗಳ್ (ಜಗವಿ. ೧೮-೯೧). [? + - ಅನೆ$_1$]

ಸೌವರಣೆ 'ಸಂವರಣೆ$_1$' ನೋ.

ಸೌವರಿಸು 'ಸಂವರಿಸು$_1$' ನೋ.

ಸೌವರ್ಚಲ, ಸೌವರ್ಚಳ (ನಾ). ೧. ಒಂದು ಬಗೆಯ ಲವಣ; ಸಜ್ಜುಕಾರ: "ಸರ್ಜಕಾಕ್ಷಾರಃ, ಕಾಪೋತಃ, ಸುಖವರ್ಚಕಃ, ಸೌವರ್ಚಲಂ, ರುಚಕಂ - ೫ ಸದ್ಯಕ್ಷಾರದ ಹೆಸರುಗಳು" (ಸಿದ್ಧಾಂಶಿ. ೩೦೭). ೨. ನೆಲ್ಲಿಕಾಯಿ ಮತ್ತು ಉಪ್ಪು ಸೇರಿಸಿ ತಯಾರಿಸಿದ ಒಂದು ಬಗೆಯ ಕ್ಷಾರ: (ಕೆ). **ಸೌವರ್ಚಳ**: ೧. "ಸೌವರ್ಚಳಃ, ರುಚಕಃ - ಈ ೨ ಸೌವರ್ಚಳಂ" (ಹಲಾಯು. ೧೦೧-೪೬೩). [ಸಂ.]

ಸೌವರ್ಚಲವಣ (ನಾ). = ಸೌವರ್ಚಲ ೧: "ಸೌವರ್ಚಲವಣಂ ರುಚಕಮಕ್ಕುಂ" (ಮಂಗರಾ. ೪೩-೪೪); ಇಂಗು, ಸೌವರ್ಚಲವಣ, ಶುಂಠಿ, ಮೆಣಸು . . . ಚೂರ್ಣಿಸಿ (ವೃದ್ಧಸಾ. II, ೫೧). [ಸಂ.]

ಸೌವರ್ಚಳ 'ಸೌವರ್ಚಲ' ನೋ.

ಸೌವರ್ಣ (ಗು). ೧. ಚಿನ್ನದಿಂದ ಮಾಡಿದ; ಸುವರ್ಣದಿಂದ ರಚಿತವಾದ: ದಿವಾಕರಂ ತ್ರೈಲೋಕ್ಯಸೌಂದರ್ಯ ಸೌವರ್ಣಕಲಶಮೆನೆ ಮೈದೋರಿ (ಶ್ರೀರಾಮಾ. ೨೮೫-೧೬). ೨. ಚಿನ್ನ; ಸುವರ್ಣ. [ಸಂ.]

ಸೌವರ್ಣೆ (ನಾ). ಒಂದು ಬಗೆಯ ಸಸ್ಯ: ಮೆಣಸಿಗೆಸೊಪ್ಪು ಸೌವರ್ಣಯ ಸೊಪ್ಪು (ವೃದ್ಧಸಾ. I, ೪೨೮). [ಸಂ.]

ಸೌವಸ್ತಿಕ (ಗು). ೧. ಸ್ವಸ್ತಿಕವಾದ; ಶುಭಕರ; ಮಂಗಳಕರ. (ನಾ). ೨. ಪುರೋಹಿತ: ಒಸೆದಾಶೀರ್ವಾದಮಂ ಸಾದರದೊಳೆ ಕುಡೆ ಸೌವಸ್ತಿಕಂ ಸೂಕ್ತಿಯಿಂ ಚೋಯಿಸಿಗಂ ತಾನಾತಿಥಿ[ಶ್ರಾ]ವಣೆಗೆಯೆ (ವರ್ಧಮಾ. ೮-೧೦೫). [ಸಂ.]

ಸೌವಾಗ್ಯ, ಸವುಭಾಗ್ಯ (ನಾ). = ಸೌಭಾಗ್ಯ ೧: ಶ್ರೀ ವೀರಶ್ರೀ ಕೀರ್ತಿಶ್ರೀ ವಾಕ್‌ಶ್ರೀಯೆಂಬ ಪೆಂಡಿರಗಲದೆ ತನ್ನೊಳ್ ಭಾಮಿಸಿದ ಪೆಂಡಿರೆನಿಸಿದ ಸೌವಾ[ಪಾಶಾಂ. ಭಾ]ಗ್ಯದ ಹರಿಗನೆಮ್ಮನೇನೊಲ್ದಪನೋ (ಪಂಪಭಾ. ೫-೧); ಸೋಽಸೌತವಾಗ್ಯಕೆಱೆಯಳಿಂದೀವರ ಲೋಚನೆ . . . ಪದ್ಮಾವತಿ ವರದೆಯೆಮಗಕ್ಕೆ (ಲೀಲಾವ. ೧೦-೩). **ಸವುಭಾಗ್ಯ**: ಭೂಸವುಭಾಗ್ಯನಿಧಾನ ನೂರ್ಜ್ಜಿತಭಳಂ ಶ್ರೀನಾರಸಿಂಹ್ವೋಜಯಾವಾಸವತೇಜಂ (ಎಕ. XI. ಚಿತ್ರದು. ೧-೧೨; 1310); ವಿಷ್ಣುಪ್ರದಕ್ಷಿಣಸವುಭಾಗ್ಯವನ್ನು ಮಹಾತ್ಮರಿಗೆ ಸಮಸ್ಕರಿಸಿದ ವಿಶೇಷವನ್ನು (ಶೇಷಧ. ೧-೧). [< ಸಂ. ಸೌಭಾಗ್ಯ]

ಸೌವಾದ (ನಾ). ಸಂಪೂರ್ಣ ಸಮ್ಮತಿ; ಪೂರ್ಣ ಒಪ್ಪಿಗೆ: ಯಿಡುಗುಂದಿಯ ಮಹಾಪ್ರ[ಭು] ನಾರಾಯಣಸರ್ವಾಕಿತ್ಯರು . . . ತಂನ ಕಿಱುತಂದೆಯರ ತಂನ

ವೊಡವುಟ್ಟಿದ ಪ್ರಜೆಯ ಯಿಂತಿದವರ ಸೌವಾದದಿಂದ ಧರ್ಮಪ್ರತಿಷ್ಠೆಯ ಮಾಡಿದ ಲದಕಿದ ಕ್ರಮವೆಂತೆಂದಡೆ (ಕಾ. III-i, ೬-೯;1348). [< ಸಂ. ಸಂವಾದ]

ಸೌವಿದ (ನಾ). ಅಂತಃಪುರದ ಕಾವಲುಗಾರ; ಕಂಚುಕಿ: ಭೀತಿಗದ್ಗದಕಂಠಂ ತುದಿಗೆಯ್ದೆ ಬಿನ್ನವಿಸಿದಂ ವಾಹ್ಯೋವಿದಂ ಸೌವಿದಂ (ಶಾಂತಿಪು. ೩-೬೫); ತಾಗಿದರ್ ವಿಹಿತರಕ್ಷಾಕೋವಿದರ್ ಸೌವಿದರ್ (ಪುಷ್ಪಪು. ೧೩-೧೦೧). [ಸಂ.]

ಸೌವಿದಲ್ಲ (ನಾ). = ಸೌವಿದ: ಕಪಿಂಜಳನಾಗಳಾ ಜರಾನಿರ್ಮಳನೆನಿಸಿದ ಸೌವಿದಲ್ಲನೊಡವರುತಿರ್ದಂ (ಕಾದಂಪೂ. ೮೧೩). [ಸಂ.]

ಸೌವೀರ (ನಾ). ೧. ಗಂಜಿ; ಅಂಬಲಿ: ಬತ್ತುಗಳನರೆದು ಸೌವೀರ ಸಮನ್ವಿತಮಾಗಿ ಕುಡಿಯೆ (ಲೀಕೋಪ. ೯-೪೪). ೨. ಬೋರೆ; ಎಲಚಿ: ''ಬೋರೆ ಸೌ[ಪಾಠಾಂ. ಸಂ] ವೀರಮಕ್ಕುಂ'' (ಮಂಗರಾ. ೩೬-೧೪). ೩. ಒಂದು ದೇಶದ ಹೆಸರು; ಭಾರತದ ಪಶ್ಚಿಮದಿಕ್ಕಿನಲ್ಲಿರುವ ಸಿಂಧೂ ಮತ್ತು ಜೀಲಂ ನದಿಗಳ ನಡುವಣ ಪ್ರದೇಶ: ಸೌವೀರಮಚ್ಛಬಂಗಾಳ . . . ಕಾಂಬೋಜದೇಶದ ಸಕಲಶರಣಾರ್ಥರುತಿರ್ದರು (ಚಿಪ್ರ. ೬-೪೯). ೪. ಸೌವೀರದೇಶದವನು: ಸೌವೀರವಲ್ಲಭ ಶರಭಭೀರುಂಡ ಪರಾಕು (ಯಾದಚಂ. ೩-೧ ವ). ೫. ಭಿದುರತೆಯುಳ್ಳ ಒಂದು ಬಗೆಯ ಲೋಹ. ೬. [ಸಂಗೀತ] ಒಂದು ರಾಗದ ಹೆಸರು: ಪಡಾರ . . . ಸೌವೀರ . . . ಹಿಂದೋಳಮೆಂಬಿಂತು ರಾಗಂಗಳುಂ (ವಿವೇಕ. ೨೩೩). [ಸಂ.]

ಸೌವೀರಾಂಜನ (ನಾ). (ಕಣ್ಣಿನ ಕಾಡಿಗೆಗಾಗಿ ಬಳಸುವ) ಒಂದು ಬಗೆಯ ಮೂಲಲೋಹ; ಸ್ರೋತಾಂಜನ: ''ನೇತ್ರಭೂಷಂ - ಸ್ರೋತಾಂಜನ, ಸೌವೀರಾಂಜನ'' (ಓಷಧಿ. ೮೯); ನೆಗ್ಗಿಲಬೇರು, ಮಾವಿನಬೇರು . . . ಸೌವೀರಾಂಜನ - ಇವು ಪ್ರತ್ಯೇಕ ೧ ಹಲವುಂ ಚೂರ್ಣಿಸಿ ಹಾಕಿ ಲೇಹ್ಯಪಾಕದಲ್ಲಿಳುಹಿ (ಸಪ್ತ. ೩೯೧). [ಸಂ.]

ಸೌವೀರಿ (ನಾ). [ಸಂಗೀತ] ಒಂದು ರಾಗದ ಹೆಸರು: ಭರತಖಂಡದ ಹಲವು ಒಳನಾಡುಗಳಲ್ಲಿಯೂ ಭಿನ್ನವಾದ ಗಾನಪದ್ಧತಿಯಿತ್ತೆಂಬುದಕ್ಕೆ ಆಂಧ್ರಿ, ದ್ರಾವಿಡಿ, ಸೌವೀರಿ ಮುಂತಾದ ಪ್ರಾಚೀನ ಜಾತಿರಾಗಗಳ ಹೆಸರುಗಳೇ ಸಾಕ್ಷಿಯಾಗಿವೆ (ಗಾನಶ. ೪೬). [ಸಂ. ಸೌವೀರೀ]

ಸೌಶೀಲ್ಯ (ನಾ). ಒಳ್ಳೆಯ ನಡತೆ; ಸದಾಚಾರ: ಬಲದೇವ ವಾಸುದೇವರ್ . . . ಸೌಶೀಲ್ಯಕ್ಕುತ್ಪತ್ತಿಸ್ಥಾನಮುಮಾಗಿ (ಶಾಂತಿಪು. ೧-೬೦ ವ); ಪತ್ನಿಯರ ಸೌಶೀಲ್ಯ ಶುಚಿ ರುಚಿ ಆಚಾರ ವಿಚಾರಗಳಿಂದ ಪ್ರಭುಗಳಿಗೆ ಒಳಿತಾಗುತ್ತ ಬಂದಿತು (ಶಾಂತಲಾ. ೧೫೧). [ಸಂ.]

ಸೌಷಿರ (ನಾ). ಜೊಲ್ಲು ವಿಶೇಷವಾಗಿ ಬರುವಂತಹ ಒಂದು ಬಗೆಯ ಬಾಯಿರೋಗ: ಬಾಯಲ್ಲಿ ವಿಶೇಷವಾಗಿ ಜೊಲ್ಲು ಸುರಿವದು - ಈ ರೀತಿಯಲ್ಲಿದ್ದುದು ಸೌಷಿರ ಎನಿಸಿಕೊಂಬುದು (ವೈದ್ಯಸಾ. II. ೧೨೪). [ಸಂ.]

ಸೌಷ್ಠವ (ನಾ). ೧. ಶ್ರೇಷ್ಠತೆ; ಉತ್ಕೃಷ್ಟತೆ. ೨. ಸೊಗಸು; ಅಂದ: ಆನೆಯ ನೇಱೆ ಸೌಷ್ಠವದೆ ಬರ್ಪರಿಕೇಸರಿಯೊಂದು ಗಾಡಿಯುದ್ದಾನಿ ತಗುಳ್ದು (ಪಂಪಭಾ. ೪-೫೮); ಪೇಟ್ದಂ ಪಂಪನತ್ಯಂತ ಸೌಷ್ಠವದಿಂದಾದಿಪುರಾಣಮಂ (ಸುಕುಮಾ. ೧-೩೭); ಮದ್ವಾನೆಯ ಸೊಂಡಿಲ ಸೌಷ್ಠವವನ್ನು ಗೆಲ್ಲುವ ಬಾಹುಯುಗ್ಮ (ಶಾಂತಲಾ. ೬೪). ೩: ಆಧಿಕ್ಯ; ಅತಿಶಯತೆ: ಸುಚರಿತ್ರತೆಯಿಂ ಸಮಸಂದ ಸೌಷ್ಠವಂ (ಚಂದ್ರಪ್ರ. ೫-೧೨೨). ೪. ಸಾಮರ್ಥ್ಯ; ದಕ್ಷತೆ: ಬೆಡಂಗಿಂಗೆ ಪಾಂಗಾದ ದೇಸಿಗಂ ಮಾಸರಿಕೆಗೆಕ್ಕಲಾವಣ ಮಾದ ಸೌಷ್ಠವಕ್ಕಂ . . . ಬೆಕ್ಕಸಂಬಟ್ಟು (ಶಾಂತಿಪು. ೩-೨೩ ಪ); ಎಲೆ ಕೃಷ್ಣ ನಿನ್ನ ರೂಪಮಂ ಸೌಷ್ಠವ ವ್ಯಕ್ತಿಯಂ . . ನೋಡಲ್ (ಜಗವಿ. ೪-೭೯ ವ). ೫. ಒಳ್ಳೆಯದು; ಲೇಸಾಗಿರುವುದು: ''ಸೌಷ್ಠವಂ, ಅ(ವ)ಪಿಷ್ಯಂಭಃ ಈ ೨ ಲೇಸಾಗಿರ್ಪುದು'' (ಹಲಾಯು. ೧೨೫-೭೪). ೬. ಚುರುಕಾಗಿರುವಿಕೆ; ಶೀಘ್ರಗುಣ. ೭. ಶುದ್ಧವಾಗಿರುವಿಕೆ; ಸಾಧುತ್ವ: ಶಬ್ದಸೌಷ್ಠವ ಅಲಂಕಾರಸೌಷ್ಠವಗಳ ವಿವೇಚನೆ (ಜೀವಸಾ. ೨೦೦). [ಸಂ.]

ಸೌಸವ (ನಾ). ಕಂಪು; ಸುವಾಸನೆ; ಸುಗಂಧ: ''ಸೌಸವಮೆಂದು ಕಂಪು'' (ಶಮದ. ಪದ್ಯ. ೨); ಸಾಂದಿನ ಸೌಸವದ ಕುಂಕುಮದ ಕತ್ತುರಿಯ ಕದಡಂ ಕದಡಿ (ಪಂಪಭಾ. ೫-೬೦ ವ); ಉಗುವ ಸೊನೆಯ ಸೌಸವದಿಂ ನೆರೆದದಿರ್ಗಂತಿಯಂ ತಾಟಿ (ರಾಮಾಶ್ವ. ೫೪-೧). [ಸಂ.]

ಸೌಸವಗೋಲ (ನಾ). ಸುವಾಸನೆಯ ಹೂವುಗಳನ್ನು ಬಾಣವಾಗಿ ಉಳ್ಳವನು; ಮನ್ಮಥ: ''ಸೌಸವಗೋಲ ಗಿಳಿದೇರ . . . ಮನ್ಮಥನ ನಾಮಮಕ್ಕುಂ'' (ಕಬ್ಬಕ್ಕ. ೮). [ಸೌಸವ + ಕೋಲ್ + -ಅ]

ಸೌಸ್ಥಿತ್ಯ (ನಾ). ಚಲಿಸದಿರುವಿಕೆ; ಸ್ಥಿರವಾಗಿರುವಿಕೆ: ದಿಕ್ಕರಿಂಗಳ್ . . . ನಿಷ್ಕಂಪಕರ್ಣಂಗಳಾಗಿರೆ ಗಂಡಸ್ಥಳದಾನಲೀನಮಧುಪಂ ತಾಳ್ದಿತ್ತು ಸೌಸ್ಥಿತ್ಯಮಂ (ಪುಷ್ಪಪು. ೪-೨೪). [ಸಂ.]

ಸೌಸ್ನಾತಿಕ (ನಾ). (ಶಾಸ್ತ್ರೋಕ್ತವಾದ) ಸ್ನಾನವಾಯಿತೆ ಎಂದು ಕುಶಲ ಪ್ರಶ್ನೆಮಾಡುವವನು: ಮುಖಮಂಡಳಜ್ಯೋತಿಃಪ್ರಭೆಯೊಂದು ಲೀಲಾಲಕ್ಷ್ಮಿ ಗಾವಾಸಮಾಗಿರೆ ಸೌಸ್ನಾತಿಕರುಂ ಬಂಧುಸಹಿತಂ ಶ್ರೀವಿಜಯನುಂ ಪುರಂಧ್ರೀವರ್ಗಮುಂ ಬಂದು (ಶಾಂತಿಪು. ೬-೧೮ ವ). [ಸಂ.]

ಸೌಹಾರ್ದ (ನಾ). ಸಹೃದಯತೆ; ಸೌಜನ್ಯ: ಇದು ಭವದಮಳಿನ ಸೌಹಾರ್ದ ದುದಯಮಲ್ಲದೆ ಮದೀಯಮಹಿಮೋನ್ನತಿಯಲ್ತು (ಶಾಂತಿಪು. ೪-೧೦೧); ಅರಸ ತೊಡು ಕವಚವನು . . . ಪತಿಕರಿಸೆನುತ ಪೆಟ್ಟಿಗೆಯ ಮುಚ್ಚಳ ತೆಱೆದು ಮುಂದಿರಿಸಿದನು ಸೌಹಾರ್ದದಲಿ ಯಮಸೂನು (ಕುವ್ಯಾಗ. ೫-೬೯). [ಸಂ.]

ಸೌಹಿತ್ಯ (ನಾ). ಪೂರ್ಣತೃಪ್ತಿ; ಸಮಾಧಾನ: ''ಪರ್ಯಾಪ್ತಂ, ಉಪಸಂಪನ್ನಂ, ತೃಪ್ತಿಃ, ಸೌಹಿತ್ಯಂ - ಈ ೪ ತ(ಣ್)ಣುವು'' (ಹಲಾಯು. ೫೪-೧೭೧). [ಸಂ.]

ಸೌಹೃದ (ನಾ). ಗೆಳೆತನ; ಮೈತ್ರಿ: ''ಸಖ್ಯಂ, ಸಾಪ್ತಪದೀನಂ, ಸೌಹಾರ್ದಂ, ಸೌಹೃದಂ . . . ಸಭಾಜನಂ - ಈ ೯ ಕೆಳೆ'' (ಹಲಾಯು. ೧೧೭-೫೧); ಜಲಧಿಯುಬ್ಬಿದವೊಲು ಸಭಾಮಂಡಲಿಯ ಸೌಹೃದ ವಾಗ್ವಿವಾದದ ಕಳಕಳಿಕೆ ದಿಗುತಟವ ಗಬ್ಬರಿಸಿದುದು (ಕುವ್ಯಾಭೀ. ೧-೪೨). [ಸಂ.]

ಸೌಳಕಾರ 'ಸವುಳು' ಪರಾ.

ಸೌಳಗೆ (ಅ). ಸೀಳುವಾಗಿನ ಶಬ್ದವನ್ನು ಸೂಚಿಸುವ ಒಂದು ಅನುಕರಣ ಅವ್ಯಯ: ತೆಗೆದಚ್ಚರ್ಜುನನಂಬು ತೀವೆ ತುದಿಯಿಂ ಬಾಲಂಬರಂ ಪಂದಿ ಸೌಳಗೆ ವೋಪಂತಿರೆ ನೋಡ ಸಂಬಳಿಗೆವೋಯ್ತು (ಪಂಪಭಾ. ೮-೧೬). [? + - ಅಗ್ಗೆ]

ಸೌಳನೆ (ಅ). = ಸೌಳಗೆ: ಮುಳಿದಚ್ಚೊಡೆ ಸೌಳನೆ ಸೀಳ್ದು ಪಚ್ಚವೋಲಾದುದು (ಪಂಪಭಾ. ೧೨-೮೭); ಮದೇಭ ಕುಮ್ಭಯುಗಮಂ ಬಿಡೆ ಸೌಳನೆ ಸೀಳದಿರ್ದ್ದಡಂ (ಎಸ. V. ಹಾಪಸ. ೫೩-೪೪; 1170); ನಿನ್ನ ಜೀವಾಹಿಯಂ ಸೌಳನೆ ಸೀಳ್ದುಂ (ಶಾಂತೀಶ್ವ. ೫-೨೦೨). [? + - ಅನ್ನೆ]

ಸೌಳು 'ಸವುಳು' ನೋ.

ಸೌಳುಗಿಡ (ನಾ). ಒಂದು ಬಗೆಯ ಸಸ್ಯ: ಅಡವೀಕತ್ತೆಗಳು ಸೌಳುಗಿಡಗಳನ್ನು ಕಹಿಗಿಡಗಳನ್ನು ಬಿರಸುಹುಲ್ಲನ್ನು ತಿನ್ನುತ್ತವೆ (ಮುಂಬಯಿ. ೩-೪೮). [ಸೌಳು (< ಸವುಳು) + ಗಿಡ (< ಗಿಡು)]

ಸೌಳುನೀರು 'ಸವುಳುನೀರು' ನೋ.

ಸೌಳುನೆಲ 'ಸವುಳುನೆಲ' ನೋ.

ಸೌಳುಪ್ಪು 'ಸವುಳುಪ್ಪು' ನೋ.

ಸೌಳುಮಣ್ಣು 'ಸವುಳುಮಣ್ಣು' ನೋ.

ಸೌಳುವಣ್ಣು 'ಸವುಳುಮಣ್ಣು' ನೋ.

ಸೌಳ್ನೆಲ 'ಸವುಳುನೆಲ' ನೋ.

ಸ್ಕಂದ (ನಾ). ೧. ಷಣ್ಮುಖ: ''ಗೌರೀಪುತ್ರಃ . . . ಸ್ಕಂದಃ, ಸ್ವಾಮೀ . . . ಶರಜನ್ಮಾ - ಈ ೨೦ ಕಾರ್ತಿಕೇಯನ ಪೆಸರ್'' (ಹಲಾಯು. ೫-೨೦). 'ಸ್ಕಂದಪಿತ' ಪರಾ. ೨. ಈಶ್ವರ; ಶಿವ. ೩. ರಾಜ; ದೊರೆ. ೪. ಶರೀರ; ದೇಹ. ೫. ನದಿಯ ದಡ, -ತೀರ. ೬. ಮಕ್ಕಳಿಗೆ ಬರುವ ಒಂದುಬಗೆಯ ರೋಗ; ಬಾಲಗ್ರಹ. ೭. ಬುದ್ಧಿವಂತ; ಜಾಣ. ೮. ಪಾದರಸ. ೯. ನೆಗೆಯುವುದು; ಏಗರುವುದು. [ಸಂ.]

ಸ್ಕಂದಪಿತ (ನಾ). ಷಣ್ಮುಖನ ತಂದೆ; ಶಿವ: ತ್ರಿವಿಕ್ರಮನ ಒಂದಗೆಲುಬಂ ಮುಱಿದು ಪಿಡಿದನು ಸ್ಕಂದಪಿತನು (ಬಾಪು. ೫೭-೨೩). [ಸಂ. ಸ್ಕಂದಪಿತೃ]

ಸ್ಕಂಧ (ನಾ). ೧. ಹೆಗಲು; ಭುಜಾಗ್ರ: ತಾಂಬೂಲ ಕರಂಕವಾಹಿನೀಸ್ಕಂಧ ವಿನ್ಯಸ್ತಹಸ್ತನುಮಾಗಿ (ಕಾದಂಪೂ. ೭೯); ಆಗಳಾ ಮಹಾಕಾಯದೈತ್ಯಸ್ಕಂಧದೊಳರ್ದ ಸಂಕರ್ಷಣಂ ಕಿಂಕರ್ತವ್ಯತಾಮೂಢನಾಗಿ ಪೋಗುತ್ತುಮಿರೆ (ಜಗವಿ. ೪-೫೪ ವ). ೨. ಮರದ ಕಾಂಡ; ಬುಡದಿಂದ ಗೆಲ್ಲು ಬಿಡುವವರೆಗಿನ ದಿಂಡು: ಅಮೇಯಸ್ಕಂಧಮುಂ ಸಂದಿಸ ಜರಠ ಮಹಾಶಾಲ್ಮಲೀವೃಕ್ಷಮಿರ್ಕುಂ (ಕಾದಂಪೂ. ೧೨೦). ೩. ಆನೆ, ಕುದುರೆ, ಕಾಲಾಳುಗಳ ಸಮೂಹ: "ಆನೆ ಕುದುರೆ ಮಾನಿಸರ ಸಂಘಾತಮಂ ಸ್ಕಂಧಮೆಂಬುದು" (ಮಂಗರಾ. ೧೪೧-೧೨). ೪. ಆನೆಯ ಹೆಗಲು: "ಸ್ಕಂಧಃ, ಆಸನಂ -ಈ ೨ ಆನೆಯ ಪೆಗಲ್" (ಹಲಾಯು. ೩೬-೬೪); ಬೇಗದಿಂದಿಟ್ಟೆದು ವಾರಣಸ್ಕಂಧದಿಂ (ಪಂರಾಮಾ. ೨-೨೦). ೫. ಗ್ರಂಥದ ಪರಿಚ್ಛೇದ ,— ಪ್ರಕರಣ: ನಾಲ್ಕನೇ ಸ್ಕಂಧ ಸಂಪೂರ್ಣಂ (ನಿಘಾಗ. ೪ ೧೯-೪೩ ವಚನ). ೬. ಸಮೂಹ; ಸಮುದಾಯ. ೭. ಸೈನ್ಯದ ವಿಭಾಗ; ತುಕಡಿ. ೮. ವರ್ಗ; ಗುಂಪು. ೯. ಅರಸು; ರಾಜ. ೧೦. ಜ್ಞಾನಿ; ಪಂಡಿತ. ೧೧. [ಛಂದ] ಅರುವತ್ತುನಾಲ್ಕು ಮಾತ್ರೆಯ ಒಂದು ಮಾತ್ರಾವೃತ್ತ. ೧೨. [ಬೌದ್ಧ] ಲೌಕಿಕಜ್ಞಾನದ ಐದು ಬಗೆ: ರೂಪ ವೇದನಾ ವಿಜ್ಞಾನ ಸಂಜ್ಞಾನ ಸಂಸ್ಕಾ(ಸ್ಕಾ)ರಂಗಳೆಂಬಯ್ದುಂ ಸ್ಕಂಧಂಗಳ್ . . . ಕ್ಷಣವಿಳಂಬಿಗಳ್ (ಶಾಂತಿಪು. ೮-೧೪೨ ವ). [ಸಂ.]

ಸ್ಕಂಧಕ (ನಾ). = ಸ್ಕಂಧ ೧೧: ಸಂಸ್ಕೃತದ ಆರ್ಯಾ ಅಥವಾ ಗಾಥಾವೃತ್ತವು ಪ್ರಾಕೃತದಲ್ಲಿ ಆರ್ಯಗೀತ ಅಥವಾ ಸ್ಕಂಧಕವೆಂಬ ೬೪ ಮಾತ್ರೆಯ ವೃತ್ತವಾಗಿ ಕನ್ನಡದಲ್ಲಿ ಮತ್ತು ತೆಲುಗಿನಲ್ಲಿ ವಿಶೇಷವಾಗಿ ಕಂದ ಎಂಬ ಹೆಸರಿನಲ್ಲಿ ಪ್ರಚಾರದಲ್ಲಿದೆ (ಕ್ಕಟಂ. ೧೧೨). [ಸಂ.]

ಸ್ಕಂಧವಾಹಕ (ನಾ). ಗಾಡಿ, ನೊಗ ಮುಂತಾದ ಭಾರದ ವಸ್ತುಗಳನ್ನು ಹೆಗಲಿನ ಮೇಲೆ ಹೊರುವುದಕ್ಕಾಗಿ ಪಳಗಿಸಿದ ಎತ್ತು: "ಸ್ಕಂಧಕಂ, ಸ್ಕಂದವಾಹಕಃ - ಈ ೨ ಹೂಡುವೆತ್ತು" (ಹಲಾಯು. ೪೪-೧೧೯). [ಸಂ.]

ಸ್ಕಂಧಶಾಖೆ (ನಾ). ಮರದ ದೊಡ್ಡ ರೆಂಬೆ,— ಹೆಗ್ಗೊಂಬು: "ಸ್ಕಂಧಶಾಖಾಃ, ಶಾಲಾಃ- ಈ ೨ ಮರದ ಹೆಗ್ಗೊಂಬು" (ಹಲಾಯು. ೩೦-೨೮). [ಸಂ. ಸ್ಕಂಧಶಾಖಾ]

ಸ್ಕಂಧಸಂಧಿ (ನಾ). ಹೆಗಲು; ಭುಜಾಗ್ರ: ಉಂಗುಟಮನಂಕವಣಿಗೆ ಕರಾಂಗುಳಿಯಂ ಸ್ಕಂಧಸಂಧಿಗುಯ್ಯೇಱಿದನುತ್ತುಂಗತುರಂಗಮಮಂ ನೃಪತುಂಗಂ (ಪಂರಾಮಾ. ೪-೧೨೦). [ಸಂ.]

ಸ್ಕಂಧಾವಾರ (ನಾ). ೧. ಸೈನ್ಯ ಅಥವಾ ಸೈನ್ಯದ ತುಕಡಿ: ವೇಲಾಂಧ ಪುರೋಪ ಕಂಠಮಂ ಸಾರ್ದುದು ಭೂಪಾಲಸ್ಕಂಧಾವಾರಂ (ಪಂರಾಮಾ. ೧೨-೩೬). ೨. ಸೈನ್ಯ ಬೀಡುಬಿಟ್ಟ ಸ್ಥಳ; ಸೇನಾಶಿಬಿರ; ಪಾಳಯ: ಅಚ್ಛೋದಸರೋವರದ ತೀರದೊಳಿಂದ್ರಾಯುಧದ ಪಚ್ಚೆವಿಡಿದು ಬಂದು ಬಟ್ಟರ್ದ ನಿಜಸ್ಕಂಧಾವಾರಮಂ ಕಂಡು (ಕಾದಂಉ. ೧೮೨). ೩. ರಾಜಧಾನಿ: "ಸ್ಕಂಧಾವಾರಃ, ರಾಜಧಾನೀ - ಈ ೨ ರಾಜಧಾನಿ" (ಹಲಾಯು. ೪೮-೧೩೧). [ಸಂ.]

ಸ್ಕಂಧೋಪನಯ (ನಾ). [ರಾಜನೀ] ಒಂದು ಬಗೆಯ ಸಂಧಿಕಾರ್ಯ; ಶರಣಾಗತಿಯ ಸಂಕೇತವಾಗಿ ಹಣ್ಣು ಅಥವಾ ಧಾನ್ಯಗಳನ್ನು ಕೊಟ್ಟು ಮಾಡಿಕೊಳ್ಳುವ ಸಂಧಿ: ನುಡಿದ ದ್ರವ್ಯಮಂ ಕಂದಾಯದೊಳ್ ಕುಡುವುದು ಸ್ಕಂಧೋಪನಯ ಸಂಧಿಯೆಂಬುದಕ್ಕುಂ (ಪಂಚತಂ. ೨೨೧-೬). [< ಸಂ. ಸ್ಕಂಧೋಪಾನೇಯ]

ಸ್ಕಂಭ (ನಾ). ೧. ಆಧಾರ; ಊರೆ. ೨. ಕಂಬ. ೩. ಪರಮಾತ್ಮ. [ಸಂ.]

ಸ್ಕನ್ನ (ಗು). ೧. ಜಾರಿಬಿದ್ದ; ಕಳಚಿಬಿದ್ದ. ೨. ಸ್ರವಿಸಿದ; ಸೋರಿದ. ೩. ಒಣಗಿದ; ಶುಷ್ಕವಾದ. ೪. ಹೊರಟುಹೋದ. ೫. ಚಿಮುಕಿಸಿದ. (ನಾ). ೬. ಜಾರಿಹೋದುದು; ಬಿದ್ದುದು: "ಸ್ಕನ್ನಂ ಗಳಿತಂ ಭ್ರಷ್ಟಂ" (ಪಸ್ರಕೋ. ೧೦೬-೪೮). [ಸಂ.]

ಸ್ಕಾಂದ (ಗು). ಷಣ್ಮುಖನಿಗೆ ಸಂಬಂಧಪಟ್ಟ: 'ಸ್ಕಾಂದಪುರಾಣ' ಪರಾ. [ಸಂ.]

ಸ್ಕಾಂದಪುರಾಣ (ನಾ). ಹದಿನೆಂಟು ಮಹಾಪುರಾಣಗಳಲ್ಲಿ ಒಂದು: ಪ್ರಾಹ್ಮಪುರಾಣ ಪದ್ಮಪುರಾಣ . . . ಸ್ಕಾಂದಪುರಾಣ . . . ಎಂಬವೇ ಶಿವಪ್ರಸಾದದಿಂದ ವ್ಯಾಸಮುನೀಶ್ವರೋಕ್ತಮಪ್ಪ ನಾಲ್ಕುಲಕ್ಷಗ್ರಂಥಸಂಖ್ಯೆಯುಳ್ಳ ಹದಿನೆಂಟು ಮೂಲ ಪುರಾಣಗಳು (ವಿವೇ. ೭). [ಸಂ.]

ಸ್ಕೂಲು (ನಾ). ಪಾಠಶಾಲೆ: ಭಾವಮೈದುನನ ಜತೆಯಲ್ಲಿ ಮ್ಯಾಚಿನ ಮಾತು, ಸ್ಕೂಲಿನ ಮಾತು ಆಡುತ್ತಿದ್ದಾಗ ಅಡಿಗೆಯವನು ಬಂದು 'ಎಲೆ ಹಾಕಿದೆ' ಎಂದು ತಿಳಿಸಿದನು (ಮಹಾಗ. ೧೬). [← ಇಂ. School]

ಸ್ಖಲನ, ಸ್ಖಳನ (ನಾ). ೧. ಎಡಹುವಿಕೆ; ಮುಗ್ಗರಿಸುವಿಕೆ. ೨. ಜಾರಿಬೀಳುವಿಕೆ; ಕಳಚಿಬೀಳುವಿಕೆ: ಅವನೀಕಂಪನಮಬ್ಜಶೋಷಣಮರಣ್ಯೋನ್ಮೂಲನಂ ಭೂಮಿಭೃನ್ನಿವಹಕ್ಷೇಪಣಮಿಂದ್ರಿನಸ್ಖಲನಮಭ್ರಾಲೋಡನಂ . . . ಆಯ್ತಸ್ಮದ್ಗಲಾತೋಪದಿಂ (ಜಗವಿ. ೭-೪೫). ೩. ಸೋಲು; ಅಪಜಯ. ೪. ನಿಂತು ಹೋಗುವಿಕೆ; ತಡೆಗೊಳ್ಳುವಿಕೆ: ಈಗ ನಮ್ಮ ರಾಜಧಾನಿಯ ಬಳಿಯ ಇದರ ಗತಿ ಸ್ಖಲನವಾಗಲು ಏನು ಕಾರಣವೊ? (ಶಕಾರ. ೧೯೮). ೫. ತಪ್ಪು; ಪ್ರಮಾದ. ೬. ಹಾದಿ ತಪ್ಪಿ ನಡೆಯುವಿಕೆ: ಮನುಷ್ಯನ ಸ್ಖಲನ ಹೆಚ್ಚೆಹೆಚ್ಚೆಗೂ ಉಂಟಾಗುತ್ತದೆ (ನಿಬೋಧ. ೧. ೨೧೬). ೭. ಅಂಬೆಗಾಲಿಕ್ಕುವಿಕೆ: "ಸ್ಖಲನ . . . ಹುಡುಗರು ಅಂಬೆಗಾಲು ಹಚ್ಚಿ ನಡೆಯೋಣ" (ಗಂಗಾಮ. ೩೩೮). **ಸ್ಖಳನ**: ೧. 'ಪದಸ್ಖಳನ' ಪರಾ. [ಸಂ.]

ಸ್ಖಲಿತ, ಸ್ಖಳಿತ (ಗು). ೧. ಕೆಳಗೆ ಬಿದ್ದಿರುವ. ೨. ಜಾರಿಬಿದ್ದ; ಕಳಚಿಬಿದ್ದಿರುವ. ೩. ನಡುಗುವ. ೪. ತಪ್ಪಾದ. ೫. ಅನುಮಾನಿಸುತ್ತಿರುವ; ಹಿಂದೆಮುಂದೆ ನೋಡುವ. ೬. ತೊಟ್ಟಿಕ್ಕಿದ ; ಸ್ರವಿಸಿದ. ೭. ತಡೆಗೆ ಒಳಗಾದ; ಪ್ರತಿಬದ್ಧ. ೮. ಹಾದಿತಪ್ಪಿದ. (ನಾ). ೯. ತಪ್ಪು; ಅಪರಾಧ: ತಾವೇ ಖಿಳರು ನೀವೇ ಸುಜನರಮ್ಮಾ ಸ್ಖಲಿತವನು ನೀವಿನ್ನು ಸೈರಿಸಿ ತಾಯೆ (ಕುವ್ಮಾಗ. ೧೧-೬೨). ೧೦. ಮೋಸ; ವಂಚನೆ. ೧೧. ಕಪಟೋಪಾಯ; ಕುತಂತ್ರ. ೧೨. (ಭಯದಿಂದ) ನಡುಗುವವನು; ತತ್ತರಿಸುವವನು: "ಪ್ರಸ್ಕಂದಃ , ಸ್ಖಲಿ[ಪಾಶಾ. ೪] ತಃ - ಈ ೨ ನಡುಗುವವಂ" (ಹಲಾಯು. ೬೯-೬೨೫). ೧೩. [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು : ಮಿಗೆ ಹಂಸಪಕ್ಷಕರಮವು ಸೊಗಯಿಸುತಿರೆ ಡೋಲಪಾದಸಂಚರದಿಮ್ಮೆಯ್ ನೆಗಲ್ದಿರಲ್ ಸ್ಖಲಿತಮೆಂದುಂ ಬಗೆವೆತ್ತುದು ಭರತದಲ್ಲಿ (ಲಾಸ್ಯರಂ. ೪-೧೪೯). ೧೪. ದುಃಖದಿಂದ ಉಸಿರು ಬಿಡುವುದು: ಸ್ಪಷ್ಟಚಲ . . . ಸ್ಖಲಿತ, ಪ್ರಸ್ಖಲಿತ - ಈ ಒಂಬತ್ತೂ ಕೋಹಳನ ಮತದಂತೆ ಗಾಳಿಯ ಭೇದಂಗಳ್ (ಲಾಸ್ಯರಂ. ೬-೭೮ ವ). **ಸ್ಖಲಿತಃ**: ೯. ಅಳಕೋತ್ಸಾರಿತಕೇಶಸಂಚಯಮನೀವೀಬಂಧನಾವಿಷ್ಕೃತಸ್ಖಲಿ[ಪಾಶಾ. ೮]ತಂ . . . ನೆರದತ್ತೆತ್ತಂ ಪುರಸ್ತ್ರೀಜನಂ (ಆದಿಪು. ೪-೬೦). [ಸಂ.]

ಸ್ಖಲಿತಗತಿ (ನಾ). ೧. ತಡವರಿಸುತ್ತಿರುವ ನಡಗೆ. ೨. ನಡಗೆಯನ್ನು ನಿಲ್ಲಿಸಿದ ವ್ಯಕ್ತಿ; ನಿಂತ ವ್ಯಕ್ತಿ: ಸ್ಖಲಿತಗತಿ ಲಲಿತಕುಂತಲೆ ವಲಿತನಿಜಗ್ರೀವ ಮಗುಟ್ಟು ನೋಡಿದಳೊರ್ವಳ್ . . . ಲಲಿತಾಂಗನನೊಲ್ದು ಸಗರಚಕ್ರೇಶ್ವರನಂ (ಅಜಪು. ೯-೩೮). [ಸಂ.]

ಸ್ಖಲಿತಚಲನ (ನಾ). ತಪ್ಪುಹೆಜ್ಜೆಯ ನಡಗೆ: ಬಾಲಕನ ವಿಶಂಗತಲಂ ಬಾಲಕನ ಸ್ಖಲಿತಚಲನವಿನ್ಯಾಸದ ಲೀಲಾಲಸಮಂ ಕಾಣದ ದುರ್ಬಿಲಮನಿಪ್ಪೊಂದು ಜೀವಸಂ ಜೀವನಮೇ (ಮಲ್ಲಿಸಾ. ೩-೧೧೬). [ಸಂ.]

ಸ್ಖಲಿತವಚನ (ನಾ). ೧. ಕೊಟ್ಟ ಭಾಷೆಗೆ ತಪ್ಪುವುದು; ವಚನಭಂಗ. ೨. ಕೊಟ್ಟ ಭಾಷೆಗೆ ತಪ್ಪಿದವನು; ವಚನಭಂಗ ಮಾಡಿದವನು: ಸ್ಖಲಿತವಚನನ ಯೋಗಿನಿಂದಾಕುಳನ ವಿಕಳವ್ರತನ ಲೋಕಾವಳಿಗಳಾಗಲಿ ಕೊಲ್ಲದಿದ್ದರ ನಾಳೆ ಸ್ಕಂಧವನ (ಕುವಾಡ್ರೋ. ೮-೬೮). [ಸಂ.]

ಸ್ಖಲಿತಾಂತರಂಗ (ನಾ). ಮನಸ್ಸಿಗೆ ಘಾಸಿಯಾದವನು: ಇನಜಂ . . . ಒಂದಿನಿಲೆ ಸೌಮ್ಯಕ್ಷೇತ್ರದೊಳ್ ದುಃಖಿತಂ ಧನಹೀನಂ ಸ್ಖಲಿತಾಂತರಂಗನಸುತಂ ನಿರ್ಲಜ್ಜಕಂ ರಕ್ಷಕಂ (ಜಾತಕ. ೧೭-೬೨). [ಸಂ.]

ಸ್ಖಳನ 'ಸ್ಖಲನ' ನೋ.

ಸ್ಖಳಿತ 'ಸ್ಖಲಿತ' ನೋ.

ಸ್ಖಾಲಿತ್ಯ (ನಾ). ೧. ಜಾರಿಬೀಳುವಿಕೆ. ೨. ಸರಿಯಾದ ಮಾರ್ಗವನ್ನು ಬಿಟ್ಟು ಹೋಗುವಿಕೆ. ೩. ತಪ್ಪು; ಪ್ರಮಾದ: ಇದುವರೆಗೆ ಕನ್ನಡದ ಹಸ್ತಪ್ರತಿಗಳಲ್ಲಿ ಕಂಡುಬರುವ ಲಿಪಿಕಾರಸ್ಖಾಲಿತ್ಯಗಳ ಸ್ವರೂಪವನ್ನು . . . ವಿವರಿಸಿದೆ (ಕನ್ನಸಂ. ೧೩೫). [ಸಂ.]

-ಸ್ತ (ಪ್ರ). ಒಂದು ತದ್ಧಿತಪ್ರತ್ಯಯ : 'ದೊಡ್ಡಸ್ತ' ಪರಾ. [<-ಸ್ಥ]

ಸ್ತಂಬ (ನಾ). ೧. ಹುಲ್ಲಿನ ಮೆದೆ. ೨. ಗೊಂಬೆಲು; ಗುಚ್ಛ. ೩. ಪೊದೆ; ಕಂಟಿ. ೪. ಆನೆಯನ್ನು ಕಟ್ಟುವ ಕಂಬ; ಆಲಾನ. ೫. ಕಂಬ. ೬. ಬೆಟ್ಟ; ಗಿರಿ. [ಸಂ.]

ಸ್ತಂಬಕರಿ (ನಾ). ೧. ಧಾನ್ಯ : "ಧಾನ್ಯಂ, ವ್ರೀಹಿಃ, ಸ್ತಂಬಕರಿಃ- ೩ ಸಾಧಾರಣವಾಗಿ ಧಾನ್ಯದ ಹೆಸರುಗಳು" (ಸಿದ್ಧಾಂತಿ.೨೮). ೨. ನೆಲ್ಲು; ಭತ್ತ : ಸ್ತಂಬಕರ್ಯಾದಿ ನಾನಾವಿಧಧಾನ್ಯಂಗಳಂ ಪದನಱಿದುಡುಗುವ ಕಳಂ ಮಾಡುವ . . . ಉಪಾಯಂಗಳುಮಂ . . . ಅಱಿಯೆ ಪೇಟ್ಪು (ಆದಿಪು.೬-೭೭ ವ). [ಸಂ.]

ಸ್ತಂಬೇರಮ (ನಾ). ಆನೆ : ನೆರೆದು ನೋಡಿದರಮರಸ್ತಂಬೇರಮಮಂ ಮುಕ್ತಿನ ಲಂಬಣಮಂದಮರರಮರನಾಯಕಯುತಮಂ (ಅಜಿಪು.೫-೭೫); ಸ್ತಂಬೇರಮದೊಳ್ ಪೊಣರ್ದಂ . . . ಸಮಾನಬಲನನೆ ಕೃಷ್ಣಂ (ಜಗವಿ.೬-೫೩). [ಸಂ.]

ಸ್ತಂಭ (ನಾ). ೧. ಸ್ಥಿರವಾಗಿರುವಿಕೆ; ನಿಶ್ಚಲತೆ. ೨. ತಡೆ; ನಿರೋಧ; ಪ್ರತಿಬಂಧ: ವಿಷಮಂ ಸ್ತಂಭಿಸುವುದೆ ತಾಂ ಸ್ತಂಭಂ (ಏಮಾದ.೩-೭). ೩. ನಿಗ್ರಹ; ಹತೋಟಿ. ೪. ಕಂಬ: ಭಿತ್ತಿಸ್ತಂಭೋಜ್ವಳ ಮುಕ್ತಿಕಾವಿತಾನಂ ಥಳಥಳಿಪುವು ಪುರದ ನಿಳಯನಿಳಯದೊಳೆಲ್ಲಂ (ಜಗವಿ. ೨-೨೪). ೫. ಕಾಂಡ; ತಾಳು. ೬. ಆಧಾರ; ಊರೆ: ಸುರಿಯೆ ಚತುಃಕುಂಭಂಗಳ್ ಭೂಭುವನಸ್ತಂಭಂ [ಪಾಠಾಂ. ಸ್ತಂಭನ] ಮಜ್ಜನಮನೆಯ್ದೆ ನಿರ್ವರ್ತಿಸಿದಂ (ಆದಿಪು.೮-೭೧). ೭. ಯಂತ್ರಮಂತ್ರಗಳಿಂದಾಗಲಿ, ಮಾಟದಿಂದಾಗಲಿ ಭಾವನೆಯನ್ನು ಅಥವಾ ಶಕ್ತಿಯನ್ನು ಹತ್ತಿಕ್ಕುವಿಕೆ: ಉಚ್ಚಾಟನ ಸ್ತಂಭಾದಿ ವಿದ್ಯಗಳು ಕ್ಷಿತಿಪ ಕೇಳ್ ಕರ್ಣನತ್ತಲು (ಕುವ್ಯಾಭ. ೨೨-೫). ೮. ಪತ್ರಿಕೆಯಲ್ಲಿಯ ಅಂಕಣ : ಸಮಾಚಾರಪತ್ರಿಕೆಯ ಸ್ತಂಭ (column) ಗಳನ್ನೇರಿ (ನಿಬಂಧ. I. ೪೭೭). ೯. [ಕಾವ್ಯಮಿ] ಎಂಟು ಬಗೆಯ ಸಾತ್ವಿಕಭಾವಗಳಲ್ಲಿ ಒಂದು; ಮೂರ್ಛೆ: ಸ್ತಂಭ, ಸ್ವೇದ . . . ಪ್ರಳಯಗಳೆಂಬಷ್ಟವಿಧ ಸಾತ್ವಿಕಭಾವಂಗಳಿಂ (ವಿವೇಕ. ೨೨೭); ಮರವಟ್ಟುದೇ ಸ್ತಂಭಂ (ಯಶ. ೪-೨೫೯ ವ). [ಸಂ.]

ಸ್ತಂಭಕ (ಗು). ೧. ತಡೆಹಿಡಿಯುವ; ನಿರೋಧಿಸುವ. (ನಾ). ೨. = ಸ್ತಂಭ ೯: ಮನೋವ್ಯಕಲ್ಯ ರೋಮಾಂಚಕ ಸ್ತಂಭಕ ಕಂಪ . . . ಮೂರ್ಛಾದಿ ನಾನಾವಿಕಾರಂಗಳೊಡನೆ ತೋಱುವುದುಂ (ಪಂಪಭಾ. ೪-೫೯ ವ). [ಸಂ.]

ಸ್ತಂಭಕ್ರೀಡಿತ (ನಾ). [ನಾಟ್ಯ] ಮೂವತ್ತೈದು ದೇಶೀಯ ಭೌಮಚಾರಿಗಳಲ್ಲಿ ಒಂದು; ಒಂದು ಕಾಲನ್ನು ಅಡ್ಡಲಾಗಿ ನೀಡಿ, ಇದರ ಪಾರ್ಶ್ವಕ್ಕೆ ಇನ್ನೊಂದು ಕಾಲಿನ ಅಂಗಾಲನ್ನು ಅನೇಕಾವರ್ತಿ ತಂದು ಮುಟ್ಟಿಸುವುದು: ರಥಚಕ್ರ . . . ಸ್ತಂಭಕ್ರೀಡಿತ . . . ಸಮಸ್ಖಲಿತ ಈ ಮೂವತ್ತೈದು ದೇಶೀಯಸಂಬಂಧದ ಭೌಮಚಾರಿಗಳು (ಲಾಸ್ಯರಂ. ೬-೧೭ ವ). [ಸಂ.]

ಸ್ತಂಭದೀಪಿಕೆ (ನಾ). ಕಂಬದ ಮೇಲೆ ನಿಲ್ಲಿಸುವ ದೀಪ; ಠಾಣದೀವಿಗೆ: ಪಡುವಣಶೈಲವಿಪುಲಸ್ತಂಭದೀಪಿಕೆಯಂತೆ ರವಿ ಮೆಱೆದ (ಕುವ್ಯಾಭ. ೧೦-೪೨). [ಸಂ. ಸ್ತಂಭದೀಪಿಕಾ]

ಸ್ತಂಭನ (ನಾ). ೧. ತಡೆ; ನಿರೋಧ; ಪ್ರತಿಬಂಧ. ೨. ನಿಶ್ಯಕ್ತಗೊಳಿಸುವಿಕೆ; ನಿಷ್ಕ್ರಿಯಗೊಳಿಸುವಿಕೆ. ೩. ಶಮನ; ಶಾಂತಗೊಳಿಸುವಿಕೆ. ೪. ಭದ್ರಗೊಳಿಸುವಿಕೆ; ಸ್ಥಿರಗೊಳಿಸುವಿಕೆ. ೫. ಊರೆಕೊಟ್ಟು ನಿಲ್ಲಿಸುವಿಕೆ. ೬. ರಕ್ತಪ್ರವಾಹವನ್ನು ಅಥವಾ ಸ್ರಾವವನ್ನು ನಿಲ್ಲಿಸುವಿಕೆ. ೭. ಮನ್ಮಥನ ಪಂಚಬಾಣಗಳಲ್ಲಿ ಒಂದು. ೮. ಮಾಟದ ವಿದ್ಯೆ: ಅಭಿಚಾರಿಕಕರ್ಮಗಳೂ ಉಂಟು - ಮಾರಣ, ವಶೀಕರಣ, ಮೋಹನ, ಸ್ತಂಭನ, ಉಚ್ಚಾಟನ ಇತ್ಯಾದಿ (ಭಾರದ.೨೮). ೯. = ಸ್ತಂಭ ೯. ೧೦. [ಸಂಗೀತ] ಧ್ವನಿಭೇದ: ಮಂದ, ಮಧ್ಯ, ವೇದ, ಕುಂಚನ, ಉಚ್ಚೂನನ, ಸ್ತಂಭನ, ದೀರ್ಘಭೇದಂಗಳಿಂ . . . ರವವಿಕಲ್ಪಗಳಂ ತೋಱಿ (ವಿವೇಕ. ೨೩೬). [ಸಂ.]

ಸ್ತಂಭನಗೈ (ಕ್ರಿ). ನಿಲ್ಲಿಸು: ಬಾಂದಳವನಳ್ಕಿರಿವ ಖಗದಧಿಪಗರುಡಾಂಕಿತಧ್ವಜವ ಸ್ತಂಭನಗೈದು ಪೇರ್ಗುಡಾರವ ನಿರ್ಮಿಸೆ (ನವಮೋ. ೫೯-೬೫). [ಸ್ತಂಭನ + ಗೈ (< ಕೆಯ್)]

ಸ್ತಂಭನಾಕ್ಷರ (ನಾ). (ಶತ್ರುವನ್ನು) ನಿಷ್ಕ್ರಿಯಗೊಳಿಸುವ ಮಂತ್ರಾಕ್ಷರ: ಏಪಕ್ಷ ಶರಾಸಾರ ಮೋಕ್ಷ ಹೂಂಕಾರ ಸ್ತಂಭನಾಕ್ಷರಸ್ತಂಭಿತಹೃದಯರಾಗಿ . . . ನಿಮ್ಮ ಬಗವ ಕಾರ್ಯಮಂ ಬಗೆಯಿಂ (ಆದಿಪು. ೧೪-೪೪ ವ). [ಸಂ.]

ಸ್ತಂಭನೆ (ನಾ). ನಿರೋಧ; ತಡೆ : ಗ್ರಹಣಗೆ:- ಜಾಯಿಕಾಯಿ, ಹಿಪ್ಪಲಿ . . .ಚೂರ್ಣಿಸಿ ಭಂಗಿಸೊಪ್ಪಿನ ರಸದಲ್ಲಿ ಅರೆದು ಗುಂಜಾಪ್ರಮಾಣದಲ್ಲಿ ಗುಳಿಗೆಯಂ ಮಾಡಿ ಸಕ್ಕರೆ, ಜೇನುತುಪ್ಪದಲ್ಲಿ ಕೊಳ್ಳೆ ಸ್ತಂಭನೆ (ವೈವಿ. ೬೭). [ಸಂ. ಸ್ತಂಭನ]

ಸ್ತಂಭಿತ (ಗು). ೧. ತಡೆಗೆ ಒಳಗಾದ; ನಿರೋಧಿಸಲ್ಪಟ್ಟ. ೨. ನಿಷ್ಕ್ರಿಯಗೊಳಿಸಲ್ಪಟ್ಟ; ನಿಶ್ಚೇತನವಾದ. (ನಾ). ೩. [ನಾಟ್ಯ] ಉಸಿರಾಡುವ ಒಂದು ಕ್ರಮ; "ಶಸ್ತ್ರಪ್ರಯೋಗ ಮಾಡುವವನಂತೆ ಉಸುರಾಡುವುದು" (ಲಾಸ್ಯರಂ. ೨೭೮ ಗದ್ಯಾನುವಾದ); ಸಮ, ಭ್ರಾಂತ, ವಿಲೀನ, ಆಂದೋಳಿತ, ಕಂಪಿತ, ಸ್ತಂಭಿತ . . . ಸೀತೃತ - ಈ ಹತ್ತು ಮೊದಲ ಒಂಬತ್ತುಗೂಡಿ ಒಟ್ಟು ಹತ್ತೊಂಬತ್ತು ಭೇದಂಗಳ್ (ಲಾಸ್ಯ ರಂ. ೩-೭೮ ವ). [ಸಂ.]

ಸ್ತಂಭಿಸು (ಕ್ರಿ). ೧. ಕಂಬವನ್ನು ನೆಡು. ೨. ಬಿಗಿಗೊಳಿಸು; ಭದ್ರಗೊಳಿಸು. ೩. ನಿಶ್ಚೇಷ್ಟಗೊಳಿಸು; ನಿಷ್ಕ್ರಿಯಗೊಳಿಸು: ಮಿಥ್ಯಾಜ್ಞಾನಿಯ ಮಾನಮಂ ಸ್ತಂಭಿಸುವ ಮಾನಸ್ತಂಭಂಗಳಿಂ (ಅಜಿಪು. ೭-೨೦ ವ); ಉಮಾಧಿಪನಂ ಸ್ತಂಭಿಸಿ ತಾಳ್ದಿದಂ ಜಯಮನೇಂ ಕೃಷ್ಣಂ ಜಗದೀಶ್ವರನೋ (ಜಗವಿ.೧೮-೬೨). ೪. ನಿಲ್ಲಿಸು; ತಡೆ: ದ್ರುಂಭಾಸ್ತ್ರದಿಂ ಮುಕುಂದಂ ಸ್ತಂಭಿಸಿ ರಥಮಂ ರಥಾಶ್ವಮಂ ಸಾರಥಿಯಂ ಸ್ತಂಭಿಸಿದಂ ಶಲ್ಯನ ದೋಸ್ತಂಭಮಂ (ಜಗವಿ. ೭-೮೭); ಈ ಮಹಾಸತಿ . . . ಎಮಗಭಯವಿತ್ತೆಮ್ಮನಟ್ಟಿ ಬರ್ಪಮರರಂ ಸ್ತಂಭಿಸಲ್ಕೆ (ಚಿಬಪು.೨೧-೩೪). ೫. ಭಯ, ಆಶ್ಚರ್ಯ ಮೊದಲಾದುವುಗಳ ಆಧಿಕ್ಯದಿಂದ ಸ್ಥಗಿತಗೊಳ್ಳು; ನಿಶ್ಚೇತನವಾಗು : ಎರಡು ನಿಮಿಷಕಾಲ ಱಿಳಿತಲ್ಲಿಯ ಸ್ತಂಭಿಸಿಹೋದರು ಪ್ರಭುಗಳು (ಕಾಂತಲಾ. ೩೦೭). [ಸ್ತಂಭನ + - ಇಸು]

ಸ್ತಂಭೀಭೂತ (ಗು). ೧. ಆಶ್ಚರ್ಯ, ಭಯ ಮುಂತಾದ ಮನೋಭಾವಗಳ ಆಧಿಕ್ಯದಿಂದ ಅಥವಾ ರೋಗಾತಿಶಯದಿಂದ ಸಂಪೂರ್ಣವಾಗಿ ನಿಶ್ಚೇತನವಾದ; ಮರವಟ್ಟ. (ನಾ). ೨. ನಿಶ್ಚೇತನಹೊಂದಿದ ವ್ಯಕ್ತಿ; ಮರವಟ್ಟವನು: ಡಾಕ್ಟರರು ಆಚ್ಚರಿಯಿಂದ ಸ್ತಂಭೀಭೂತರಾದರು (ಫಲಸಂ. ೩೩). [ಸಂ.]

ಸ್ತನ (ನಾ). ೧. ಮೊಲೆ; ಕುಚ: ತನುಜಂ . . . ತಣಯುಂಡು ಬಳವೂಡೀ ಪೀನಘನಸ್ತನಮೆ ಪಯೋಧರಂ (ಪುಷ್ಪಪು.೬-೯೨); ಕಾಂತಿಮತಿಗೆ ನಮಸ್ಕಾರಮಂ ಮಾಡಲೊಡಂ ಸ್ತನದಿಂ ಚುಮ್ಮಿಂದು ಪಾಲ್ಗಳ್ ಸುರಿಯೆ (ದಶಕು. ೯-೧೦೫). ೨. ಮೊಲೆಯ ತೊಟ್ಟು. ೩. ಕೆಚ್ಚಲು. [ಸಂ.]

ಸ್ತನಂಧಯ (ನಾ). ಸ್ತನ್ಯಪಾನ ಮಾಡುವ ಮಗು; ಹಸುಗೂಸು: ಎನ್ನ ಬಯಕೆಯಪ್ಪುದು ಸಂಧ್ಯಾಸ್ತನಂಧಯಸಮಾಗಮಸಮಾನಂ (ಆದಿಪು. ೩-೪೩ ಪ). [ಸಂ.]

ಸ್ತನಪಯೋಗಂಧಿ (ನಾ). ನೆಲಬೇವು: "ಸ್ತನಪಯೋಗಂಧಿಯನೆ ನಲಬೇವು" (ಮಂಗರಾ.೪೦-೩೩). [ಸಂ.]

ಸ್ತನಪಾನ (ನಾ). ಮೊಲೆಯುಣ್ಣುವಿಕೆ: ಸ್ತನಪಾನಂ ಮಾಡುತ್ತಂ ವನಿತೆಯ ನವಸೂತ್ರಮಣಿಗಳಂ ಪಿಡಿದೊಲವಿಂ . . . ಎಣಿಸುವ ಮುದ್ದುಮಗನದೆಂದಾದಪನೋ (ತ್ರಿಪುವಿ.೧೭-೮೬.). [ಸಂ.]

ಸ್ತನಪಾನಗುಡು (ಕ್ರಿ). ಮೊಲೆಹಾಲುಣಿಸು; ಮೊಲೆಯೂಡು: ಸ್ತನಪಾನ ಗುಡುವ ಹೆಂಗಳಿಗೆ ಪೇಳ್ದಳು ಹತ್ತುದಿನದೆಡೆಸಂದಿನ ರಾತ್ರಿ ಘನ ಜೋಪಾನದೊಳೀಡೇಱ ಬೇಕೆಂದು (ಪೋಷಡ. ೪-೭೭). [ಸ್ತನಪಾನ + ಕುಡು,(< ಕೊಡು,)]

ಸ್ತನಭರ (ನಾ). ಮೊಲೆಗಳ ಭಾರ: ಗುರುಜಘನ ಸ್ತನಭರಮಂಥರಲೀಲಾಲಸ ವಿಲಾಸಿನೀಚಲಿತಂಬೊಲ್ (ಕವಿರಾ. ೧-೭೭); ಗುರುಕಬರೀಭರ ಸ್ತನಭರೋರು ಭರಸ್ಥಿತಿಯಿಂ . . . ಅದ ಗಮನಾಲಸವೃತ್ತಿಯನೇನನೆಂದಪೆಂ (ಜಗವಿ. ೨-೯೭). [ಸಂ.]

ಸ್ತನಯಿತ್ನು (ನಾ). ೧. ಮೋಡ; ಮೇಘ: "ಸ್ತನಯಿತ್ನು ವಾರಿವಾಹಂ . . . ಜೀಮೂತಂ" (ಪಜ್ಯಕೋ. ೧೦-೫೩). ೨. ಗುಡುಗು; ಮೇಘಧ್ವನಿ. [ಸಂ.]

ಸ್ತನಾಂತರ (ನಾ). ೧. ಹೃದಯ. ೨. ಮೊಲೆಗಳ ನಡುವಿನ ಅಂತರ: ಸಮಸುವಿಭಕ್ತ ಸ್ತನಾಂತರನಂ . . . ಅನಿಮ್ಮನಾಭಿಯಂ (ಶಾಂತಿಪು. ೧೦-೧೪೨ ವ). [ಸಂ.]

ಸ್ತನಾಲಿಂಗನ (ನಾ). [ಕಾಮಶಾ] ಹನ್ನೆರಡು ಬಗೆಯ ಆಲಿಂಗನ ಪ್ರಕಾರಗಳಲ್ಲಿ ಒಂದು; ಗಾಢಾಲಿಂಗನ: ಸ್ತ್ರೀ ಉನ್ಮತ್ತಸ್ಥಾನದೊಳಿರ್ದು ಪ್ರಿಯನ ಎದೆಯಲ್ಲಿ ಪ್ರಿಯದಿಂ ಪೊಲೆಗಳೊಡಲಂ ಪೊಗುವಂತೆ ಗಾಢಾಲಿಂಗನಂಗೆಯ್ದುದು ಸ್ತನಾಲಿಂಗನ ವೆಂಬಾಲಿಂಗನ (ಕಾಮಶಾ. ೨೨೪). [ಸಂ.]

ಸ್ತನಾಶ್ಲೇಷ (ನಾ). = ಸ್ತನಾಲಿಂಗನ: ಅನುವಿಂ ಪಸೆಯೊಳ್ ಕುಳ್ಳಿರ್ದಿನಿಯನ ತೊಡೆಯೇಱಿ ಕಾಂತೆ ವಕ್ಷಸ್ಥಳಮಂ ಘನಕುಚದಿನೌಂಕಿಯಾಲಿಂಗನಮಂ ಮಾಡುತ್ತಿರಲ್ ಸ್ತನಾಶ್ಲೇಷಾಖ್ಯಂ (ಮನ್ಮಥ. ೧೧-೬). [ಸಂ.]

ಸ್ತನಿಕ 'ಸ್ತಾನೀಕ' ನೋ.

ಸ್ತನಿತ (ಗು). ೧. ಧ್ವನಿ ಮಾಡಿದ. ೨. ಗುಡುಗುವ; ಗರ್ಜಿಸುವ. (ನಾ). ೩. ಗುಡುಗು; ಮೇಘಗರ್ಜನೆ: ಸ್ತನಿತಧನುರ್ಗುಣಧ್ವನಿ ಶತಹ್ರದಶಸ್ಯಮರೀಚ . . . ಕೊಂಡುದಾಗಳಂಬಿನ ಮಬೆ (ಪಂರಾಮಾ. ೧೩-೪೯) ; ಸ್ತನಿತಘನಬ್ಯೂಹಿತಂ ದುರ್ದಿನಮದಪೂರಂ ಪಯೋದಗಜಘಟೆ ಸುಬಿದತ್ತು (ಚಂದ್ರಪು. ೪-೩೨). ೪. ದೊಡ್ಡಶಬ್ದ; ನಿನಾದ; ಕಲಕಲ. ೫. ಕೈಚಪ್ಪಾಳೆಯ ಸದ್ದು. ೬. ಬಿಲ್ಲಿನ ಹೆದೆಯ ಠೇಂಕಾರ. ೭. [ಜೈನ] ಹತ್ತು ಬಗೆಯ ಭವನಾಮರರಲ್ಲಿ ಒಂದು ವರ್ಗ : ಅಲ್ಲಿಯ ಸುರ ನಾಗ ವಿದ್ಯುತ್ಸುಪರ್ಣಾಗ್ನಿವಾತ ಸ್ತನಿತೋದಧಿ ದ್ವೀಪ ದಿಕ್ಕುಮಾರರೆಂದು ಭವನಾಮರರ್ ದಶವಿಕಲ್ಪಮಪ್ಪರ್ (ಪುರುಮಾ. ೧೧-೪೧ ವ).

[ಸಂ.]

ಸ್ತನಿತಾಮರ (ನಾ). = ಸ್ತನಿತ ೭ : ಆ ದಿವಿಜಾದಿನಾಥಮತದಿಂ ಸ್ತನಿತಾಮರ ಬೃಂದವುಮಂದು ಗಂಧೋದಕವೃಷ್ಟಿಯಂ ಸುರಿವರೊಯ್ಯನೆ ತಣ್ಣಗೆ ತಮ್ಮನಾಗೆ ಮೇಲಾದನಿಲಾಮರರ್ ಸುಬಿದು ಬೀಸುವರ್ (ಶಾಂತಿಪು. ೧೨-೨೨). [ಸಂ.]

ಸ್ತನ್ಯ (ನಾ). ಮೊಲೆಹಾಲು : ಜನನೀಸ್ತನ್ಯಮನುಂಡೆ ಸಾಂ ಬಬಿಕೆ ನೀಂ . . . ಬಾಲತ್ಯದಿಂದೆಲ್ಲಿಯುಂ ವಿನಯೋಲ್ಲಂಘನಮಾದುದಿಲ್ಲ (ಗದಾಯು. ೫-೭); ಪಂಚ ಭೂತಂಗಳ್ಗಂ ನಿಮಗಂ ಪ್ರತ್ಯುಪಕಾರಕ್ಷಮರಾರ್ ದೇಹಿಗಳೊಳಂಬಿಕಾಸ್ತನ್ಯಕ್ಕಂ (ಪಂರಾಮಾ. ೧೧-೬೯). [ಸಂ.]

ಸ್ತನ್ಯಪಾನ (ನಾ). ಮೊಲೆಹಾಲನ್ನು ಕುಡಿಯುವುದು; ಸ್ತನಪಾನ: ಸ್ತನ್ಯಪಾನದ ಸವಿಯ ಚಿನ್ನಾರಿಯಿಂಕುವಂತೆ ಮಣ್ಣುಬೊಂಬೆಯು ಬಲ್ಲುದೆ (ಪುರಂದ. ೪-೭೭-೧).

[ಸಂ.]

ಸ್ತಬಕ (ನಾ). ೧. ಹೂವು ಮೊದಲಾದುವುಗಳ ಗೊಂಚಲು,— ಗುಚ್ಛ: ಬಳಸುವೆಳದುಂಬಿಗಳ ನಾದಕ್ಕೆ ಬೆರ್ಚಿ ಬಿಸುಟ ಕರ್ಣಪೂರ ಪಾರಿಜಾತ ಸ್ತಬಕಂಗಳುಮಂ (ಪಂರಾಮಾ. ೨-೧೩ ವ) ; ತಳಿರ ತೊಂಗಲುಗಳನು ನವ್ಯಕುಸುಮಸ್ತಬಕ ತುಳವ ಫಳಮಂಜರಿಯ ಮಾಲೆಯಂ ನೀಡಿ (ಹಜಕಾ. ೩-೧೬). ೨. ಸಮುದಾಯ; ಸಮೂಹ: ಸೌಮಿತ್ರಿ . . . ಬಂದಂ ವಿಮಾನಗಭಸ್ತಿಸ್ತಬಕಂ ಫಳಂಚಲೆವಿನಂ ಜ್ವಾಲಾಸಹಸ್ರಂಗಳಂ (ಪಂರಾಮಾ. ೧೨-೯೪). ೩. ನವಿಲುಗರಿ. ೪. ಕುಚ್ಚು; ಗೊಂಡೆ. ೫. ಗ್ರಂಥದ ಅಧ್ಯಾಯ; ಆಶ್ವಾಸ. [ಸಂ.]

ಸ್ತಬ್ಧ (ಗು). ೧. ಸ್ಥಿರವಾದ; ನಿರುದ್ಧವಾದ. ೨. ನಿಷ್ಕ್ರಿಯವಾದ; ಅಲುಗಾಡದ: ಕಿಱಿದುಬೇಗಕ್ಕಾಕೆ ಕಣ್ಗಳಂ ತೆಱೆದು ಲಜ್ಜೆತೆಯಾದಂತೆಯುಂ ವಿಸ್ಮಯಸ್ತಬ್ಧ ದೃಷ್ಟಿಯಾಗಿ . . . ಅಲ್ಲಿಂದೆಬ್ದು (ಕಾದಂಉ. ೩೭೫). ೩. ತಿಳಿವಳಿಕೆಯಿಲ್ಲದ; ದಡ್ಡತನದ. (ನಾ). ೪. ಹಠವಾದಿ; ಕಲ್ಲೆದೆಯವನು: ಅರಸಂ ಸ್ತಬ್ಧಂ ಪೆರ್ಗಡೆ ಮರುಳಂ ತದ್ಭರ್ತಿ ಪಿಸುಣನಾಪ್ತಂ ಪುಸಿವಂ (ವಡಪ. ೧೦-೫೧). ೫. [ನಾಟ್ಯ] ನರ್ತನದಲ್ಲಿ ಕಂಪಿತ, ವಲಿತ, ಸ್ತಬ್ಧ, ಉದ್ವರ್ತಿತ, ನಿವರ್ತಿತ ಎಂಬ ಐದು ಬಗೆಯ ತೊಡೆಯ ನಿಲವುಗಳಲ್ಲೊಂದು; ಪ್ರ "ತೊಡೆಗಳನ್ನು ಅಲ್ಲಾಡಿಸದಂತೆ ನಿಲ್ಲಿಸುವುದು. ಹದರಿಕೆ, ವಿಷಾದ ಇವುಗಳನ್ನು ಅಭಿನಯಿಸುವಾಗ ಇದನ್ನು ವಿನಿಯೋಗಿಸಬೇಕು" (ಅಸ್ಯರಂ. ೨೬೩ ಗದ್ಯಾನುವಾದ): ಬೆಜಗಿಂ ನಿಲಲ್ಕೆ ತೊಡೆಗಳ್ ಮಱೆಸಿಂತು ಸ್ತಬ್ಧಂ (ಅಸ್ಯರಂ. ೨-೧೪೦). [ಸಂ.]

ಸ್ತಬ್ಧತ್ವ (ನಾ). ೧. ನಿಶ್ಚಲತೆ; ಅಚಲವಾಗಿರುವಿಕೆ. ೨. ನಿಶ್ಚೇಷ್ಟತೆ. ೩. ಹಟಮಾರಿತನ; ಮೊಂಡುತನ. ೪. ಬಿರುಸು; ಒರಟುತನ. [ಸಂ.]

ಸ್ತರ (ಗು). ೧. ಹರಡುವ; ವಿಸ್ತರಿಸುವ. (ನಾ). ೨. ಹರಡಿದುದು; ಹಾಸಿದುದು. ೩. ಹಾಸಿಗೆ; ತಲ್ಪ. ೪. (ಭೂಮಿಯ) ಪದರ; ಪಾತಳಿ: ಅದರ ಬೆಳಕು ಒಳಗೆಲ್ಲ ಸೂಸಿದಂತೆ ಮನಸ್ಸಿನ ಮೇಲಿನ ಉನ್ಮನದ ಸ್ತರಗಳು ಒಂದೊಂದೇ ನಿಚ್ಚಳವಾಗಿ ಗೋಚರವಾಗುತ್ತಿದ್ದವು (ಸಮಚೇ. ೯೩). ೫. ಮಟ್ಟ; ಹಂತ: ಯಾವ ಸ್ತರದ ಬೌದ್ಧಿಕ ಹಾಗೂ ಭಾವನಾಮಯ ಸಂಕೀರ್ಣತೆಗೆ ಒಂದು ಕಲಾಕೃತಿಯು ಒಯ್ಯಬಲ್ಲುದೋ ಆ ಸ್ತರದ ಮೇಲಿಂದ ಅದರ ಯೋಗ್ಯತೆಯು ನಿರ್ಣಯವಾಗುತ್ತದೆ (ನಪ್ರಕಾ. ೬೨). ೬. ವರ್ಗ; ವಿಭಾಗ: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ಸ್ತರಗಳಲ್ಲಿ ಅಂದಿನ ಸಮಾಜವನ್ನು ವಿಭಾಗಿಸಲಾಗಿತ್ತು (ಧರ್ಮಸಾ. ೧೦೪).

[ಸಂ.]

ಸ್ತವ (ನಾ). ೧. ಸ್ತುತಿಸುವುದು; ಹೊಗಳುವುದು. ೨. ಸ್ತುತಿ; ಸ್ತೋತ್ರ: ಸ್ತವಭೇಷಜದಿಂದಳ ಕರಗುವುದಲ್ರೆ (ಜಸಾಲ. ೨೨-೨೨); ಸ್ತವ ಸ್ತೋತ್ರ ಪಠಣಪ್ರಕರದ . . . ಸಂಭ್ರಮಕೆ ಬೆಲಗಾದನು ಹರಿಶ್ಚಂದ್ರನು (ಹಚಕಾ. ೬-೫೯); ವಂದಿಮಾಗಧಸ್ತವರವ ಮುಗ್ಗೆ ಬಂದನೆಸವೋಲಗಶಾಲೆಗಿಳಾಧಿನಾಯಕಂ (ರಾಜಶೇ. ೧೨-೪೧). [ಸಂ.]

ಸ್ತವಂಗೆಯ್ (ಕ್ರಿ). ಸ್ತುತಿಸು; ಸ್ತೋತ್ರಮಾಡು: ಮೊದಲೊಳ್ ಸಂಭಾಷಣಂಗೆಯ್ದುದ ವಲಮಿಳಿಕೆಯ್ಯಂದಮೆಂದಾದರಂಗೆಯ್ದುದಹಂಕಾರಂ ಸ್ತವಂಗೆಯ್ದುದವೆಮಗೆ ದಲ್ಲಾರವಂ (ಕಾದಂಉ. ೧೧೨) : ದೇವವರಂ ಸ್ತವಂಗೆಯ್ ವರಂಗೊಟ್ಟಾ ಮಹೇಂದ್ರಂಗೆ . . . ದುರ್ಗಿ ಬಲಿಕ್ಕೆ ತಾಂ ನೆಲಸಿ ನಿಂದಳ್ (ಜಗಮ. ೩-೧೬). [ಸ್ತವ + ಕೆಯ್]

ಸ್ತವಕ (ನಾ). ೧. ಹೂಗೊಂಚಲು: ಫಲಿನೀಫಲದ ಗುಚ್ಛಮಿವು ಚೂತಫಲಸ್ತವಕಂ ದಲೆಂದು ತೋಜಿದನವನೀಪಾಲಂಗೆ ಲೀಲೆಯಿಂ ವನಪಾಲಂ (ಚಂದ್ರಪು. ೨-೭೬). ೨. ಗ್ರಂಥದ ಭಾಗ ,— ಪ್ರಕರಣ; ಆಶ್ವಾಸ. ೩. ಸಮುದಾಯ; ಸಮೂಹ. ೪. ಹೊಗಳಿಕೆ; ಸ್ತುತಿ. ೫. ಹೊಗಳುವವನು; ಸ್ತುತಿಪಾಠಕ. [ಸಂ.]

ಸ್ತವನ (ನಾ). ೧. = ಸ್ತವ ೨ : ಸವನಾರ್ಚನ ಸ್ತವನ ಸಮಯಾನಂತರಂ (ಆದಿಪು. ೭-೧೦೬ ವ); ಜಿನಸ್ತವವಾದೊಡನೆ ವಿಷ್ಣುವಿನ ಸ್ತವನವು ಬರುವುದು (ಸಾಹಿಸ. ೧೨). ೨. [ಜೈನ] ಮೂಲಗುಣಗಳಲ್ಲಿ ಒಂದು: ವಸ್ತುರೂಪಗುಣಂಗಳಂ ಚತುರ್ವಿಂಶತಿ ಅರ್ಹತ್ತರಮೇಷ್ಠಿಗಳಂ ಸ್ತುತಿಯಿಸುವುದು ಸ್ತವನಮೆಂಬ ಹದಿನೇಳನೆಯ ಮೂಲಗುಣಂ (ಶ್ರಾವಕಾ. ೮೨-೨೦). [ಸಂ.]

ಸ್ತವನೀಯ (ಗು). ೧. ಹೊಗಳಲು ಯೋಗ್ಯವಾದ; ಸ್ತುತ್ಯ; ಸ್ತೋತ್ರಾರ್ಹವಾದ. (ನಾ). ೨. ಸ್ತುತ್ಯವಾದುದು; ಶ್ಲಾಘ್ಯವಾದುದು: ಮುನೀಂದ್ರಸೇವ್ಯಂ ಭವ್ಯಸ್ತವನೀಯಮೆನಿಸಿದಾಚಾಮ್ಲವರ್ಧನಂ ಪುಣ್ಯವರ್ಧನಂ ಕೇವಲಮೇ (ಪುರುಮಾ. ೯-೧೩); ಕವಿತಾಪ್ರೌಢಿಯೊಳಚ್ಚಸಂಭವನೆ ಕರ್ತಾರಂ ಕ್ರಿಯಾಕೌಶಲಂ ಸ್ತವನೀಯಂ (ಶಮದ. ೨೫೧ ಪ್ರಯೋ). [ಸಂ.]

ಸ್ಥಳನಿಬಂಧಿ (ನಾ). ಪ್ರಾದೇಶಿಕವಾದ ತೆರಿಗೆ; ಸ್ಥಳೀಯವಾದ ಸುಂಕ: ಬೆಳಗಲಿಯ ಪೊಳಸುಂಕ ಹೊಱಸುಂಕ ಸ್ಥಳನಿಬಂಧಿಯಾಗಿ (ಎಕ. VII. ಶಿವಪೊ. ೭೮-೨೭ : 1291). [< ಸಂ. ಸ್ಥಳನಿಬಂಧಿನ್]

ಸ್ಥಾನ, ಸಾನ (ನಾ). ೧. ಸ್ಥಾನ; ಪದವಿ: (೫). ೨. ಸ್ಥಳೀಯ; ಮೂಲಿಗ: ಅಱುವತ್ತು ಗೌಡು ನೂಱೆಪ್ಪತ್ತು ಸ್ಥಾನಮುಂ ಮುಂತಾಗಿ (ಎಕ. VII. ಶಿವಮೊ. ೬೯-೨೪ ; 1320). **ಸಾನ್ಮ** : ೩. ಭೂತದ ಗುಡಿ: ಆ ಗುಡಿಗಳಲ್ಲಿ ವರ್ಷಕ್ಕೊಮ್ಮೆ ಬಂದಿ ಇರುವ 'ಸಾನ' (= ಸ್ಥಾನ ಅಂದರೆ ಭೂತದ ಗುಡಿ)ಗಳಲ್ಲಿ ಬಂದಿ ಎಳೆಯುವ, ಇಲ್ಲದಲ್ಲಿ ಸಾಮಾನ್ಯವಾದ 'ಆಯನ' (= ಉತ್ಸವ)ಗಳು ಆಗುವುದುಂಟು (ತುಳುನಾ. ೨೫೨); ಅಲ್ಲೆ ಒಂದು ಸಣ್ಣ ಭೂತಾಲಯ, ಸಾನ (ಒಡ್ಡಿಗು. ೩). 'ತಾಣ' ಪರಾ.

[< ಸಂ. ಸ್ಥಾನ./ತುಳು. ಸಾನ]

ಸ್ಥಾನೀಕ, ಸಾಂತಿಗ, ಸಾನಿಗ, ಸ್ತನಿಕ (ಸಾ). ದೇವಸ್ಥಾನದ ಆಡಳಿತಾಧಿಕಾರಿ; ಸ್ಥಾನಿಕ: 'ಸ್ಥಾನೀಕತನ' ಪರಾ. **ಸಾಂತಿಗ**: ಕೋಳೂರು ನಖರೇಶ್ವರದೇವಳದ ಅರ್ಚಕ ಪರಮೇಶ್ವರ ಸಾಂದೇವ ಸಾಂತಿಗ (ಕ್ರಿ. ಶ. ೧೧೫೫ – ಸಾಂತಿಗವೆಂಬುದು ಸ್ಥಾನಿಕದ

ಅಪೂರ್ವ ಪ್ರಭೇದವೆಂದು ಪರಿಗಣಿಸಲ್ಪಟ್ಟಿದೆ) (ತುಳುನಾ. ೧೨೪). **ಸಾನಿಗ:** ದೇವರಿಗೆ ತಂತಮ್ಮ ಕರ್ಮ್ಮಾನ್ತರದ ಬೆಸಂಗಳಂ ಮಾಡಿ ಮೂ(ಂ)ನೂರ್ವ್ವರು ಸಾನಿಗರುಂ . . . ನಿಬದ್ಧಕಾಱರುಂ ಸುಖವಿರ್ಪ್ಪರು (ಸೌಇಇ. VI. ೧೧೩-೪; ಸು. 1200 ?). **ಸ್ತನಿಕ:** ಸೀರೆಯ ಬಯಿರೇದೇವರ ಸ್ತನಿಕ ಯೋಚಂಗನಿಗೆ ಬೈರೇದೇವರ ಶ್ರೀಪತಿಯ ಪಾದವೆ ಗತಿ (ಎಕ. X(S). ಕೋಲಾರ. ೩೧೬-೭; 17ನೆಯ ಶತ). [< ಸಂ. ಸ್ಥಾನಿಕ]

ಸ್ಥಾನೀಕತನ (ನಾ). ಸ್ಥಾನಿಕನ ವೃತ್ತಿ: ಅಮ್ಮಗೌಡ ಎರ್ಬಾಗಿಲ ಸ್ಥಾನೀಕತನ ಮುಕ್ಕವಾಗಿ ನಡ್ಸಿ (ಎಕ. XIV. ತಿರುಮ. ೧೪೫-೩ ; 1090). [ಸ್ಥಾನೀಕ + - ತನ]

ಸ್ಥಾವಕ (ನಾ). ಹೊಗಳುವವನು; ಸ್ತುತಿಸುವವನು: ದೈತ್ಯಸ್ಥಾ[ಪಾಠಾಂ. ಸ್ಥಾ]ವಕರು ನಾವೆಂದರಾ ವೈತಾಳಿಕರು (ನಿಘಾಗ. ೭-೮-೨೯). [ಸಂ.]

ಸ್ತಿಮಿತ (ಗು). ೧. ಒದ್ದೆಯಾದ; ತೊಯ್ದ. ೨. ನಿಶ್ಚಲವಾದ; ಶಾಂತವಾದ. ೩. ಬಿಗಿಯಾಗಿ ನೆಲಸಿದ; ಭದ್ರವಾಗಿ ಊರಿದ. ೪. ಮುಚ್ಚಿದ. ೫. ನಿಷ್ಕ್ರಿಯಗೊಂಡ; ಮರವಟ್ಟ. ೬. ಮೃದುವಾದ; ಕೋಮಲವಾದ. ೭. ಸಂತುಷ್ಟವಾದ; ಸಂತೃಪ್ತವಾದ. (ನಾ). ೮. ಭದ್ರವಾದ ನೆಲೆ; ಸ್ಥಿರತೆ: ಕಟ್ಟಿಯ ಜೀವನ ಒಂದು ಸ್ತಿಮಿತಕ್ಕೆ ಬಂದಿತು (ಗಂಮಾಯಿ. ೨೯೫); ಇತರ ಬಗೆಯಲ್ಲಿ ಪೇಟೆಯ ವ್ಯವಸ್ಥೆ ಮಾಡಿ ಎಲ್ಲವನ್ನೂ ಸ್ತಿಮಿತಕ್ಕೆ ತರಬೇಕಾಗುವುದು (ಹಣಪ್ರ. ೧೮೯). [ಸಂ.]

ಸ್ತಿಮಿತಕಾಯ (ನಾ). ನಿಶ್ಚಲವಾದ ದೇಹವುಳ್ಳವನು; ಅಲುಗಾಡದೆ ಕುಳಿತವನು: ಕೈಲಾಸಾದ್ರಿಯಲಿ . . . ಭೂಯಸ್ತಿಮಿತಕಾಯನ ಕಂಡನಬುಜಭವ (ಕುವ್ಯಾಕ. ೬-೧೫). [ಸಂ.]

ಸ್ತಿಮಿತಗಾತ್ರೆ (ನಾ). ನಿಶ್ಚೇಷ್ಟಳಾದವಳು; ಭಾವಾಧಿಕ್ಯದಿಂದ ಮರವಟ್ಟವಳು: ಆಕ್ರಾಂತಚಿಂತಾಭರಸ್ತಿಮಿತಗಾತ್ರೆಯುಂ . . . ಆಗಿರ್ಪಿನಂ (ಚಂದ್ರಪ್ರ. ೩-೫೦ ವ).

[ಸಂ. ಸ್ತಿಮಿತಗಾತ್ರಾ]

ಸ್ತಿಮಿತತಾರಕ (ನಾ). ಕಣ್ಣಾಲಿಗಳನ್ನು ಸ್ಥಿರವಾಗಿ ಒಂದೆಡೆಗೆ ನಿಲ್ಲಿಸಿದವನು; ಸ್ಥಿರದೃಷ್ಟಿಯಾದವನು: ನಿಶ್ಚಲಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕಣ್ಣೊಳೆ ತವ ಪೀರ್ವವೊಲ್ ನಿಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ (ಆದಿಪು. ೧೪-೧೦೫).

[ಸಂ.]

ಸ್ತಿಮಿತದೃಷ್ಟಿ (ನಾ). = ಸ್ತಿಮಿತತಾರಕ: ಧ್ಯಾನಾಧೀನೈಕ ಸಮಾಧಾನಮನಂ ಸ್ತಿಮಿತದೃಷ್ಟಿ ಪೋಲ್ತಂ ಮುನಿ . . . ಅಮಳ ಕಮಳಾಕರಮಂ (ಪುಪ್ಪಪು. ೧೪-೩೨). [ಸಂ.]

ಸ್ತಿಮಿತಾಕ್ಷ (ನಾ). ಸ್ಥಿರವಾದ ದೃಷ್ಟಿಯುಳ್ಳುದು: ವದನಂ ಸ್ತಿಮಿತಾಕ್ಷಂ ಶ್ಲಿಷ್ಟದಂತ ಮಷ್ಟಾಂಗಪಾತವಭ್ರೂಭಂಗಾಸ್ಪದಮೆಸೆದುದು ಯೋಗನಿಯೋಗದೊಳಜಿತ ಮಹಾಮುನೀಂದ್ರವಂದಾರಕನಾ (ಅಜಿಪು. ೭-೧೧). [ಸಂ.]

ಸ್ಥಿರವಾರ (ನಾ). ಶನಿವಾರ; ಮಂದವಾರ: ಸ್ಥಿರವಾರ ಮಹಾಪರ್ವಕಾಲದಲ್ಲು (ಎಕ. IX. ದೇವನ. ೧೫-೯; 1698). [< ಸಂ. ಸ್ಥಿರವಾರ]

ಸ್ಥಿರಾದಾಯ (ನಾ). ಸ್ಥಿರಾಸ್ತಿಯಿಂದ ಬರುವ ಆದಾಯ; ಗದ್ದೆ ಹೊಲ ತೋಟ ಮೊದಲಾದುವುಗಳಿಂದ ಬರುವ ಆದಾಯ: ಚಿರಾದಾಯ ಸ್ಥಿರಾದಾಯ ಅಕ್ಷೀಣ ಅಗಾಮಿ . . . ಸಿದ್ಧಸಾಧ್ಯಂಗಳ್ (ಮೃಅರಿ. ೧೯೩೦, ೯೩೦; 1605).

[< ಸಂ. ಸ್ಥಿರಾದಾಯ]

ಸ್ತುತ (ಗು). ೧. ಹೊಗಳಲ್ಪಟ್ಟ; ಸ್ತುತಿಸಲ್ಪಟ್ಟ. ೨. ಹೊಗಳಿಕೆಗೆ ಯೋಗ್ಯವಾದ; ಶ್ಲಾಘ್ಯ. (ನಾ). ೩. ಹೊಗಳಿಕೆ; ಸ್ತೋತ್ರ. ೪. ಶಿವನ ಒಂದು ಹೆಸರು.

[ಸಂ.]

ಸ್ತುತಿ (ನಾ). ೧. ಕೊಂಡಾಟ; ಹೊಗಳಿಕೆ: ಸ್ತುತಿನಿಂದೆಗಳಂ ಸವಿವಕ್ಷಿತಗುಣದೊಳ್ ಸದೃಶಮಾಗಿ ಪೇಟ್ಟುದು ಪೆಱತಂ ನುತ, ಸದೃಶಯೋಗಿತಾಲಂಕೃತಿಲಕ್ಷಣಮಕ್ಕುಂ (ಕವಿರಾ. ೩-೯೫); ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು (ಮಹಾದೇ. ಬ. ೪೫-೧೦೬). ೨. ಸ್ತೋತ್ರ; ಸ್ತುತಿಪದ್ಯ. ೩. ಮುಖಸ್ತುತಿ; ತೋರಿಕೆಯ ಹೊಗಳಿಕೆ. [ಸಂ.]

ಸ್ತುತಿಗೆಯ್, ಸ್ತುತಿಗ್ಗೆ (ಕ್ರಿ). ಸ್ತುತಿಸು; ಹೊಗಳಿಹಾಡು: ಯಥಾರ್ಥಂ ಸ್ತುತಿಗೆಯ್ದು . . . ದಂತಿಯ ಮೇಗಿರ್ದು ವಿನಮ್ರನಾಗೆ ದಿವಿಜೇಂದ್ರಂ (ಶಾಂತಿಪು. ೧೦-೧೦); ಮೃಡಗುಣಸ್ತುತಿಗೆಯ್ದು ಪೋಷಣವಡಗೆ ಸಾನಂದಾಶ್ರುಗಳೆನೆಡೆವಿಡದೆ ನೋಡುವ ನಯನಗಳು ಹೊಳೆದಾವರಿಸುತಿರಲು (ಬಸಪು. ೩೫-೫). **ಸ್ತುತಿಗ್ಗೆ:** ಹರಿಯ ಕಂಡಾಕ್ಷಣ ಗೌತಮ ಮುನಿಪತಿ ನೆಱೆ ಸ್ತುತಿಗ್ಗೆದನಂದಾಗ (ಕಂನಮಿ. ೫-೩೨). [ಸ್ತುತಿ + ಕೆಯ್]

ಸ್ತುತಿಗ್ಗೆ 'ಸ್ತುತಿಗೆಯ್' ನೋ.

ಸ್ತುತಿಪಾಠಕ (ನಾ). ಹೊಗಳುಭಟ್ಟ; ಭಟ್ಟಂಗಿ; ವಂದಿ: "ವೈತಾಳಿಕ ಪ್ರಬೋಧಕ ಸೂತ ಸ್ತುತಿಪಾಠಕಾಖ್ಯೆ ವಂದಿಯೊಳಕ್ಕುಂ" (ಮಕ್ಕುಕೂ. ೬೫-೭೮); ಸ್ತುತಿಪಾಠಕರ ಮುಜರೆ ಕೇಳಿಸಕೊಡಗಿದವು (ತುಳಸೀ. ೧೧೭). [ಸಂ.]

ಸ್ತುತಿಯಿಸು 'ಸ್ತುತಿಸು' ನೋ.

ಸ್ತುತಿವೆಱು (ಕ್ರಿ). ಹೊಗಳಿಕೆಗೆ ಪಾತ್ರವಾಗು; ಶ್ಲಾಘ್ಯವಾಗು: ಮಂಗಳಸ್ತುತಿವೆತ್ತು ಮೆಱೆದುದು ಜಂಗಮದ ಕೈಯೆರಡು (ಬಸಪು. ೩೮-೪೭). [ಸ್ತುತಿ + ಪೆಱು]

ಸ್ತುತಿಸು, ಸ್ತುತಿಯಿಸು (ಕ್ರಿ). ಹೊಗಳು; ಕೊಂಡಾಡು; ಸ್ತೋತ್ರಮಾಡು: ವಚನ ರಚನೆಗಳಂ ಸ್ತುತಿಸಿ . . . ಮುಕುಂದನಂ ದ್ವಾರಾವತಿಗೆ ಕಳಿಪಿ (ಗದಾಯು. ೧೦-೨೬ ವ); ದೇವದೇವನನನೇಕಪ್ರಕಾರದಿಂ ಸ್ತುತಿಸಿ ಸಾಷ್ಟಾಂಗವೆಱಗಿ ಪೊಡೆಮಟ್ಟು (ಪಂಚತಂ. ೧೬೩-೩). **ಸ್ತುತಿಯಿಸು:** ಮುಂದೆ ನಿಂದು ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿ ಬಂದಿಸಿ (ಷಡ್ಭಾರಾ. ೧೫೯-೨೪); ಶ್ರೀಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ (ಆದಿಪು. ೪-೨). [ಸ್ತುತಿ + - ಇಸು]

ಸ್ತುತ್ಯ (ಗು). ೧. ಹೊಗಳಲು ಯೋಗ್ಯವಾದ; ಸ್ತೋತ್ರಾರ್ಹವಾದ. (ನಾ). ೨. ಹೊಗಳಿಕೆಗೆ ಪಾತ್ರನಾದವನು; ಸ್ತೋತ್ರಾರ್ಹ: ಸ್ತುತ್ಯರೊಳಾರ್ ಸ್ತೋತ್ರಭಾವಮಂ ತಾಳ್ದವರ್ (ಚಂದ್ರಪ್ರ. ೭-೬); ಶೂಲಖಡ್ಗಕಪಾಲಹಸ್ತಂ . . . ಸರ್ವನಿಗಮಸ್ತುತ್ಯನನುಪಮನು (ಬಸಪು. ೧೭-೧೨). [ಸಂ.]

ಸ್ತೂಪ (ನಾ). ೧. (ಮಣ್ಣು) ಗುಡ್ಡೆ; ದಿಣ್ಣೆ. ೨. ಚಿತೆ. ೩. ಶಕ್ತಿ; ಬಲ. ೪. ರಾಶಿ; ಒಟ್ಟಿಲು. ೫. ಕುದುರೆಯ ಹಣೆ ,— ನೊಸಲು: ಸ್ತೂಪ [ಪಾಠಾಂ. ಸ್ತುಪ್ಪ]ದ ಪುರ್ಬೆಡೆ ನೋಡಲ್ಕೊಪ್ಪುವುದು ಲಲಾಟಮೆಂಬ ಪೆಸರಿಂದಕ್ಕುಂ ತಪ್ಪದೆ ಲಲಾಟಮೆಂಗುಂ ಬರ್ಪುದು ತಾಂ ಸ್ತೂಪಮೆಂಬ ಪೆಸರಂತಕ್ಕುಂ (ಅಶ್ವಶಾ. ೯-೨೦). ೬. ಬೌದ್ಧರ ಸಮಾಧಿಯ ಆಕಾರದಲ್ಲಿ ನಿರ್ಮಿಸಿದ ಸ್ಮಾರಕ: ಕಟ್ಟಿದರಜಸ್ರಂ ಸಹಸ್ರಶಿಲ್ಪಿಗಳಲ್ಲಿ ಸ್ಮಾರಕನಿಕೇತನಸ್ತೂಪಮಂ! (ಚಿತ್ರಾಂಗ. ೯೦-೨೪೯೩). ೭. [ಬೌದ್ಧ] ದಿಣ್ಣೆಯಾಕಾರದಲ್ಲಿ ರಚಿಸಿದ ಸಮಾಧಿ: ಸ್ತೂಪವೆಂದರೆ ಮರಣ ಹೊಂದಿದವರ ಜ್ಞಾಪಕಾರ್ಥವಾಗಿ ಕಟ್ಟಿರುವ ಕಟ್ಟಡ. ಇವು ಬೌದ್ಧಮತಕ್ಕೆ ಸಂಬಂಧಿಸಿದ್ದು (ಮೃವಾಸ್ತು. ೨೫). ೮. ಬೌದ್ಧಸಂನ್ಯಾಸಿಗಳಿಗೆ ಸೇರಿದ ಪೂಜ್ಯವಸ್ತುಗಳನ್ನು ಕಾದಿರಿಸಿದ ಸ್ಥಳ. [ಸಂ.]

ಸ್ತೂಪಿತ (ಗು). ರಾಶಿಯಾಗಿ ಒಟ್ಟಿದ; ಗುಡ್ಡೆಹಾಕಿದ: ಅನ್ಯೋರ್ವೀಶ್ವರ ವ್ರಾತದೂತಕುಳಸ್ತೂಪಿತರತ್ನರುಕ್ಬಳಿತಂ . . . ರಾಜಗೇಹಾಜಿರಂ (ಚಂದ್ರಪ್ರ. ೧-೧೫೧).

[ಸಂ.]

ಸ್ತೇನ (ನಾ). ಕಳ್ಳ; ತಸ್ಕರ: "ಜಯ . . . ವೇದಪುಸ್ತಕಸ್ತೇನದುರ್ದಮ ತಮೋದ್ದೈತ್ಯ ಮದಭಂಜನ (ಜಗವಿ. ೧೨-೫೭ ವ). [ಸಂ.]

ಸ್ತೇನಪ್ರಯೋಗ (ನಾ). ೧. ಕಳವಿನ ಪ್ರಯತ್ನ. ೨. [ಜೈನ] ಅಸ್ತೇಯವ್ರತದ ಅತಿಚಾರಗಳಲ್ಲಿ ಒಂದು; ಯಾರಿಗಾದರೂ ತಾನೇ ಕಳವಿನ ಪ್ರೇರಣೆ ಕೊಡುವುದು ಅಥವಾ ಬೇರೆಯವರಿಂದ ಪ್ರೇರಿಸುವುದು ಅಥವಾ ಕಳವಿಗೆ ಅನುಮೋದನೆ ನೀಡುವುದು: ಹೀನಾಧಿಕ ವಿನಿಮಾನ ಸ್ತೇನಾ[ಹೃತ] ದಾನಸದೃಶ ಮಿಶ್ರವಿಲೋಪ ಸ್ತೇನಪ್ರಯೋಗಮೆಂದಿವು ತಾನಸ್ತೇಯವ್ರತಕೃತಿಕ್ರಮಮಕ್ಕುಂ (ಸುಕುಮಾ. ೬-೧೫). [ಸಂ.]

ಸ್ತೇಯ (ನಾ). ೧. ಕಳವು; ಕಳ್ಳತನ: ವಿಕಲಮತಿಯಾದ ಮೃದುಮತಿ ಸ್ತೇಯಮೆ ತನಗೆ ಜೀವನೋಪಾಯಮಾಗೆ . . . ನೆಗೆಬುತ್ತುಂ (ಪಂರಾಮಾ. ೧೫-೪೭ ವ); ಸ್ತೇಯ ಯೋಗಾಚಾರ್ಯರಿವದಿರು (ನಿಘಾಗ. ೧೦-೮-೨೪); ಸ್ತೇಯಕ್ಕೆ ಸಮಾನಮಾಗಿ ಪೆಱತಾವ ಪಾಪಮುಂ ಮೂಲೋಕದೊಳಂ ತೋರ್ಕೆವಡೆಯಲಾಱವು (ಭಾರಶಾಂ. ೧೫೪-೨೪).

೨. ಕಳವು ಮಾಡಿದ ಅಥವಾ ಕಳವಾಗಬಹುದಾದ ವಸ್ತು: ಈಯೆ ತರವೇಟ್ಟು ದಬಲೆಯನೀಯದೆ ತಂದಂದು ತನಗದತ್ತಾದಾನಂ ಸ್ತೇಯಂ (ಪಂಂಪಾಮಾ. ೪-೧೦೦); ಸ್ತೇಯಮದತ್ತಾದಾನಂ ಹೇಯಂ (ಉಷಾಪ. ೯೭). [ಸಂ.]

ಸ್ತೇಯಾನಂದ (ನಾ). [ಜೈನ] ಹಿಂಸಾನಂದ, ಮೃಷಾನಂದ, ಸ್ತೇಯಾನಂದ ಮತ್ತು ಸಂರಕ್ಷಣಾನಂದವೆಂಬ ನಾಲ್ಕು ಬಗೆಯ ರೌದ್ರಧ್ಯಾನಗಳಲ್ಲಿ ಒಂದು; ಪರಸ್ವಾಪಹರಣದ ಚಿಂತನೆಯಲ್ಲಿ ನಿರತವಾಗುವಿಕೆ: ದ್ವೀತೀಯ ರೌದ್ರಧ್ಯಾನಂ ಬಲ್ಕಾಳ್ತನದೊಳಕ್ಕೆ ಮೇಣ್ ತಿಱಪಂ ಪಾರ್ದಕ್ಕೆ ಅಪಹರಣದೊಳಪ್ಪ ಸಂಕಲ್ಪಾಧ್ಯವಸಾನಂ ಸ್ತೇಯಾನಂದಮೆಂಬುದಕ್ಕುಂ (ಅಜಿಪು. ೪-೨೪ ವ). [ಸಂ.]

ಸ್ತೋಕ (ಗು). ೧. ಚಿಕ್ಕದಾದ; ಸಣ್ಣದಾದ. ೨. ಅಲ್ಪಕಾಲಿಕವಾದ; ಅಚಿರವಾದ: ಮಾನಿಸರೊಳ್ಸುಂ ಬಾಲುಮದೇಂ . . . ದಿನಮದೇಂ ಸ್ತೋಕಸುಖಮದೇನಧ್ರುವಮೋ (ಶಾಂತಿಪು. ೯-೧೦೨). ೩. ಕೀಳಾದ; ಕನಿಷ್ಠವಾದ. (ನಾ). ೪. ಕಿರಿದಾದುದು; ಅಲ್ಪವಾದುದು: "ಅಲ್ಪಂ ಲೇಶಮಣು . . . ತನು ಸ್ತೋಕಮನೆ ಕಿಱಿದೆನಿಕ್ಕುಂ" (ಮಂಗರಾ. ೧೩೭-೫). ೫. ಅಲ್ಪಕಾಲಿಕವಾದುದು: ಬೆಸಸುವುದವ್ಯಾಕುಳಮವ್ಯಾಯುಷ್ಯಸ್ತೋಕಬಹುತ್ವಮನಗಾಧಬೋಧಪಯೋಧೀ (ಶಾಂತಿಪು. ೭-೬೪); ಸ್ತೋಕದಿಂದಲೆ ನುಡಿದು ಸಭೆಯೊಳನೇಕಜನವನು ಮೆಚ್ಚಿಸುವ ಸುಭವಾಕ್ಯದಿಂದೊಡರಿಸುವ ತನ್ನಯ ವ್ಯದುವುಧುರವದಿಂ (ಕೊಲ್ಹಾಚ. ೧೪). ೬. (ನೀರಿನ) ಹನಿ; ಬಿಂದು. ೭. ಕಿಡಿ; ಸ್ಫುಲಿಂಗ. ೮. ಚಾತಕಪಕ್ಷಿ: "ಸ್ತೋಕಾಹ್ವಯಂ ಚಾದಗೆ" (ಮಲ್ಲಿಕೋ. ೪೨-೧೭). ೯. ಒಂದು ಬಗೆಯ ಶರೀರ; ಶರೀರದ ಭೇದ. ೧೦. ಬಾಲ. ೧೧. ಮಕ್ಕಳು. ೧೨. ತಪಸ್ಸು. "ಅಲ್ಪ ತನುಭೇದ ಪುಚ್ಚಮುಂ ಪುತ್ರರುಂ ತಪಮುಂ ಸ್ತೋಕಸಮಾಪ್ಮೆ" (ನಾಸಾರ. ೧೫೨). ೧೩. [ಜೈನ] ಕಾಲವನ್ನು ಅಳೆಯುವ ಒಂದು ಸಣ್ಣ ಪರಿಮಾಣ; ಸುಮಾರು ಐದೂಕಾಲು ಸೆಕೆಂಡಿನ ಅವಧಿ; IP ಒಂದು ಅಣು ಇನ್ನೊಂದು ಅಣುವನ್ನು ದಾಟುವ ಕಾಲಾವಧಿಗೆ ಸಮಯವೆಂದು ಹೆಸರು. ಅಸಂಖ್ಯಾತಸಮಯಗಳಿಗೆ ಒಂದು ಆವಳಿ ; ಅಸಂಖ್ಯಾತ ಆವಳಿಗಳಿಗೆ ಒಂದು ಉಚ್ಛ್ವಾಸ; ಏಳು ಉಚ್ಛ್ವಾಸಗಳಿಗೆ ಒಂದು ಸ್ತೋಕ: ಅದು ಸಮಯಾವಲಿ ಕೋಚ್ಛ್ವಾಸಸ್ತೋಕನಿಮೇಷನಾಡಿಕಾಮುಹೂರ್ತದಿವಸಪಕ್ಷಮಾಸರ್ತ್ವಯನ ಸಂವತ್ಸರಾದಿಗಣನಾನುಕ್ರಮದಿಂದಂ ಪೆರ್ಚಿದೆನಿಕೆಯೊಳ್ ಕೂಡಿದುದು (ಅದಿಪು. ೬-೬೮ ವ); ಸ್ತೋಕಮಕ್ಕುಮೇಳುಚ್ಛ್ವಾಸಂ (ಪಂಂಪಾಮಾ. ೧೦-೪೯). [ಸಂ.]

ಸ್ತೋಕಪುಣ್ಯ (ನಾ). ಅಲ್ಪಪುಣ್ಯನಾದವನು: ನಾಕಾಸ್ತೋಕಪುಣ್ಯರ ಮಾತದೇತಕೆ ಗುರುನದೀಸುತರ್ (ಕುವ್ಯಾಕ. ೧೦-೨೫). [ಸಂ.]

ಸ್ತೋತ್ರ (ನಾ). ೧. ಸ್ತುತಿ; ಕೊಂಡಾಟ: "ನುತಿ ಸಂಸ್ತವನಂ ಸ್ತೋತ್ರಂ ಸ್ತುತಿ ವಂದನಮಾಡೆ" (ಕಸ್ತೂಕೋ. ೮೦-೬೫); ನಾರದಂ . . . ತಾಯೇ ಚಂಡಾಂಶು ವ್ಯಾತತೋಜೋನಿಧಿ ಶರಣೆನುತಂ ಸ್ತೋತ್ರಮಂ ಮಾಡುತಿರ್ದಂ (ಗಿರಿಕ. ೪-೪೫). ೨. ಸ್ತುತಿಪದ್ಯ; ಶ್ಲೋಕ. [ಸಂ.]

ಸ್ತೋತ್ರಂಗೆಯ್ (ಕ್ರಿ). ಸ್ತುತಿಸು; ಕೊಂಡಾಡು: ಸ್ತೋತ್ರಂಗೆಯ್ವ ಕೇಳ್ವ ಕೌತುಕಂದಾಳ್ದು . . . ನುಡಿಯೆ (ಗಿರಿಕ. ೪-೪೮ ವ). [ಸ್ತೋತ್ರ + ಕೆಯ್]

ಸ್ತೋಭ (ನಾ). ೧. ತಡೆ; ನಿರೋಧ. ೨. ನಿಲುಗಡೆ; ವಿರಾಮ. ೩. ಅಗೌರವ; ತಿರಸ್ಕಾರ. ೪. ಹೊಗಳಿಕೆ; ಸ್ತುತಿ: ಪೂರ್ವಪಕ್ಷೋಪನ್ಯಾಸದೊಳ್ ಮಿಥ್ಯಾವಾದಮುಂ ಸ್ತೋಭದೊಳನರ್ಥಕವಚನಮುಂ . . . ಸಮನಿಸಿರ್ದುಂ (ಚಿಕವಂ. ೧೦೬-೧೪). ೫. ನಾಮವೇದದ ಒಂದು ವಿಭಾಗ. ೬. ಆವೇಶವನ್ನು ತುಂಬುವಿಕೆ: ದಷ್ಟಂಗಾವೇಶಮುಮಂ ಸ್ಪಷ್ಟಮನಲ್ ತಂದು ನುಡಿಸುವುದೆ ತಾಂ ಸ್ತೋಭಂ (ಖಮದ. ೩-೬). [ಸಂ.]

ಸ್ತೋಭಂಗೊಳ್ (ಕ್ರಿ). ವಿವಶವಾಗು: ಅಂತು ಮನಸಿಜನಾವೇಶಮಂತ್ರದಿಂ ಸ್ತೋಭಂಗೊಂಡಂತೆ ಪುರಪುರಂದ್ರೀಕ್ಷೋಭಮಾಗೆ (ಆದಿಪು. ೧೧-೨೩ ವ); ಆಳೋಕನ ಕುತೂಹಳದಿಂ ಮನೋಜ ರಾಜಾವೇಶಮಂತ್ರದಿಂ ಸ್ತೋಭಂಗೊಂಡಂತೆ ಪುರಕ್ಷೋಭಮಾಗೆ (ಸುಕುಮಾ. ೧೧-೭ ವ). [ಸ್ತೋಭ + ಕೊಳ್]

ಸ್ತೋಭನಕಾರಿ (ನಾ). ಮನಸ್ಸನ್ನು ಹಿಡಿದಿಡುವಂತಹುದು,— ಮರುಳು ಗೊಳಿಸುವಂತಹುದು: ವಸ್ತುಸ್ವಭಾವಕಥನಂ ವಾಸ್ತವಮುಪಮಾದ್ಯಶೇಷ ವಕ್ರೋಕ್ತಿ ವಿಪರ್ಯಸ್ತಂ ಸಮಸ್ತಲೋಕಮನಸ್ತೋಭನಕಾರಿ ಚಾರುತರಪುರುಷಾರ್ಥಂ (ಕಾವ್ಯಾವ. ೬೦೬). [ಸಂ. ಸ್ತೋಭನಕಾರಿನ್]

ಸ್ತೋಭನಾಕ್ಷರ (ನಾ). ಎದುರಿನ ವ್ಯಕ್ತಿ ಅಥವಾ ಶಕ್ತಿಯನ್ನು ತಡೆಗಟ್ಟುವ ಮಂತ್ರಾಕ್ಷರ: ವಿಪಕ್ಷವಿಶಿಖವೋಕ್ಷಟಂಕಾರಮನೆ ಜಗದುದಗ್ರ ನಿಜವೀರಗ್ರಹ ಸ್ತೋಭನಾಕ್ಷರಮೆಂದುಂ ಬಗೆದು (ಆದಿಪು. ೧೪-೯೮ ವ). [ಸಂ.]

ಸ್ತೋಮ (ನಾ). ೧. ಸ್ತುತಿ; ಸ್ತೋತ್ರ. ೨. ಯಜ್ಞ; ಯಾಗ: "ಯಾಗಃ, ಯಜ್ಞಃ, ಕ್ರತುಃ, ಸ್ತೋಮಃ . . . ಸತ್ರಂ – ಈ ೧೨ ಯಾಗಂ" (ಹಲಾಯು. ೭೮-೨೬೦). ೩. ಗುಂಪು; ಸಮೂಹ: ಮಹಾಗಾಧಬೋಧ ಬೋಧಿತ ಭವ್ಯಸ್ತೋಮಂ (ಸುಖಮಾ. ೪-೧); ಎಲ್ಲಾ ಕಲಾಪ್ರೌಢಿಸದ್ಗುಣಸ್ತೋಮವೆಲ್ಲಂ ನೆರೆದು ರೂಪಾದುದೆನಿಸುವ ಮಹಾಮಹಿಮ ಹಂಪೆಯ ಹರೀಶ್ವರನ ಮೂರ್ತಿ ನೆಲಸಿರ್ಕೆನ್ನ ಚಿತ್ರದೊಳಗೆ (ಪಚಕಾ. ೧-೧೨). ೪. ಅಧಿಕಪ್ರಮಾಣ; ಅಧಿಕ್ಯ. ೫. ತಲೆ; ಶಿರಸ್ಸು. ೬. ಐಶ್ವರ್ಯ; ಸಂಪತ್ತು. ೭. ಧಾನ್ಯ. ೮. ಕಬ್ಬಿಣದ ಮೊನೆಯುಳ್ಳ ದಂಡ,— ಕೋಲು. ೯. (?): ಬಹುವರ್ಣದ ಧಾತ್ರಿಯಲ್ಲಿ ಅವರವರ ವರ್ಣಧಾಯ ನಿಂದಿತ್ತು ಕೂಡೆ ವೇಧಿಸಿ ವಿಚಾರಿಸಲಾಗಿ ಒಂದೇಗುಣ ನಿಂದಿತ್ತು ಅದು ತಟಾಕದಲ್ಲಿ ಆಶ್ರಯಿಸಲಾಗಿ ಸ್ತೋಮ ವಾಯಿತ್ತು (ತೋಳಮಾ. ೬-೧೯); "ಗುಂಪು, ಜಲಾಶಯ" (ತೋಳಮಾ. ಕೋಶ). [ಸಂ.]

ಸ್ತೌತ್ಯ (ನಾ). ಸ್ತುತಿ; ಸ್ತೋತ್ರ: ಎಮಗೇನುವುಂ ತತ್ಸನಮ್ಮುಗೆಯ ಹೇಳದ ಸ್ತೌತ್ಯಮಂ ಮಾಡಿ ಕಳೆದೆ (ಸಿದ್ಧರಾ. ೯-೫೦); ಯಮನಂದನಂ . . . ನಾನಾಬಗೆಗಳಿಂದ ಸ್ತೌತ್ಯಂಗಳಂ ಬಲ್ಲಿದಂ ಮಾಡಲ್ ಮುರಾಂತಕಂ ಬಿಗಿಯಪ್ಪಿ ಮುಂಡಾಡಿದಂ ಕೃಪೆಯೊಳು (ತುರಂಗ. ೯೬-೬೧). [ಸಂ.]

ಸ್ತ್ಯಾನ (ಗು). ೧. ಒಟ್ಟಿಗೆ ಸೇರಿ ಸಮೂಹವಾದ. ೨. ದಪ್ಪವಾದ; ಗಾತ್ರವಾದ. ೩. ಮೆದುವಾದ; ನುಣುಪಾದ. ೪. ಹೆಪ್ಪುಗೊಂಡ; ಗಟ್ಟಿಗೊಂಡ. (ನಾ). ೫. ಹೆತ್ತ ತುಪ್ಪ: "ಶೀನಂ, ಸ್ತ್ಯಾನಂ – ಈ ೨ ಹೆತ್ತ ತುಪ್ಪ" (ಹಲಾಯು. ೪೬-೧೫೧). ೬. ದಪ್ಪ; ತೋರ. ೭. ಅಮೃತ. ೮. ಆಲಸ್ಯ; ಜಡತೆ. ೯. ಮರುಧ್ವನಿ; ಪ್ರತಿಧ್ವನಿ. ೧೦. ಅಸಮರ್ಥತೆ: ಕರ್ಮವನ್ನಾಚರಿಸಲು ಯೋಗ್ಯತೆ ಇಲ್ಲದಿರುವುದಕ್ಕೆ ಸ್ತ್ಯಾನ ಎಂದು ಹೆಸರು (ಭಾತತ್ತ್ವ. ೬೬೭). [ಸಂ.]

ಸ್ತ್ಯಾನಗೃದ್ಧಿ (ನಾ). [ಜೈನ] ದರ್ಶನಾವರಣೀಯ ಕರ್ಮದ ಒಂಬತ್ತು ಪ್ರಕಾರಗಳಲ್ಲಿ ಒಂದು; IP ಇದು ನಿದ್ದೆಯ ಐದು ಪ್ರಕಾರಗಳಲ್ಲಿ ಕೊನೆಯ ದಾಗಿದ್ದು ಇದರಿಂದ ಸ್ವಪ್ನದಲ್ಲಿ ವೀರ್ಯದೀಪ್ತವಾಗಿ ರೌದ್ರಕರ್ಮಗಳಿಗೆ ಪ್ರೇರಿಸುತ್ತದೆ: ಅಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಲಾಪ್ರಚಲಾ ಸ್ತ್ಯಾನಗೃದ್ಧಿ . . . ಎಂಬ ಪದಿನಾಱು ಕರ್ಮಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೦-೧೪ ವ). [ಸಂ.]

ಸ್ತ್ರೀ (ನಾ). ೧. ಹೆಂಗಸು; ಹೆಣ್ಣು: ಸ್ತ್ರೀಯೆಂಬನಾಥೆಯೆಂಬನ್ಯಾಯದ ಕೊಲೆಯೆಂಬ ದುರ್ಬಲಸ್ಯ ಬಲಂ ರಾಜಾಯೆಂಬ ವಾಕ್ಯಮಂ ಮಱೆದೀ ಯುವತಿಗೆ ಬಾಳನಿಂತು ಕೀಬ್ವುದೆ ಮರುಳೇ (ಕಾವ್ಯಾವ. ೪೦); ತದ್ದಾರಾಪರಸ್ತ್ರೀಯರಂ ತೊಬ್ತಿರ್ವಾಡಿದಂ (ಶಮದ. ೯೭ ಪ್ರಯೋ); ಪುರುಹೂತತನಯನವೋಲು ಭುವನಖ್ಯಾತನೆಂದಾ ಸ್ತ್ರೀಕಟಕ ಕೊಂಡಾಡಿತರ್ಜುನನ (ಕುವ್ಯಾಸ. ೩-೫೯). ೨. (ಯಾವುದಾದರೂ ಪ್ರಾಣಿಯಲ್ಲಿ) ಹೆಣ್ಣು; ಹೆಣ್ಣುಜೀವಿ. ೩. ಹೆಂಡತಿ; ಪತ್ನಿ. ೪. ಬಿಳಿ ಇರುವೆ; ಒರಲೆ: "ಸ್ತ್ರೀಯೆನಲ್ಕೊಱಲೆಯಕ್ಕು" (ಮಂಗರಾ. ೪೯-೧೩). ೫. ಪ್ರಿಯಂಗುಲತೆ. ೬. [ವ್ಯಾಕ] ಹೆಣ್ಣನ್ನು ಕುರಿತು ಹೇಳುವ ಲಿಂಗ; ಸ್ತ್ರೀಲಿಂಗ: ಸ್ತ್ರೀಪುಂಸವ್ಯತ್ಯಯಮಕ್ಕುಂ ಕರುಣೋಪತ್ಯಕೆಗಳೊಳಂ ವಧಾಭಲಾಷಾದಿಯೊಳಂ (ಕಾವ್ಯಾವ. ೧೬೦); ನಿನಗಜೆ ಕರ್ನಾಟಕದೊಳ್ ಪೀನಂ ಸ್ತ್ರೀಪುಂನಪುಂಸಕೋಭಯಪುಂ ಸ್ತ್ರೀ ಸ್ತ್ರೀನಸ್ತ್ರಮಸ್ತ ವಾಚ್ಯಾನ್ಯೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ (ಶಮದ. ೮೮). [ಸಂ.]

ಸ್ತ್ರೀತ್ವ (ನಾ). ೧. ಹೆಣ್ಣುತನ; ಹೆಂಗಸಾಗಿರುವಿಕೆ: ಸ್ತ್ರೀತ್ವವನ್ನು ದೇವತ್ವಕ್ಕೆ ಏರಿಸಿದ ದೇಶವು . . . ಭಾರತವೊಂದೇ (ಭಾರದ. ೩೯೦). ೨. ಹೆಂಗುಸಿನ ಸ್ವಭಾವ: ಈ ದುಷ್ಕೃತಮಂ ಸ್ತ್ರೀತ್ವದ ಜಡತ್ವದಿಂದೊಡರಿಸಿದೆಂ (ಪಂರಾಮಾ. ೭-೧೪). ೩. ಪತ್ನೀತ್ವ; ಸತೀತ್ವ. [ಸಂ.]

ಸ್ತ್ರೀದಾನ (ನಾ). ಹೆಣ್ಣನ್ನು ದಾನವಾಗಿ ಕೊಡುವಿಕೆ; ಕನ್ಯಾದಾನ: ಆದರದಿಂ ಗೋದಾನಂ ಸ್ತ್ರೀದಾನಂ ವಸ್ತ್ರದಾನಮಿಭಕುಲದಾನಂ ಭೂದಾನಂ ಶ್ರೀದಾನಂ ಗುಡುತುವೊಪ್ಪಿದಂ ಗಿರಿರಾಜಂ (ಗಿರಿಕ. ೩-೬೩). [ಸಂ.]

ಸ್ತ್ರೀದ್ರವ್ಯ (ನಾ). ೧. ಕನ್ಯೆಗಾಗಿ ಕೊಡುವ ತೆರ; ಕನ್ಯಾಶುಲ್ಕ: "ಶಂಖದೊಳು ಸ್ತ್ರೀದ್ರವ್ಯದೊಳು ಶುಲ್ಕಮಂಬಾಭಿಧಾನಮಕ್ಕುಂ" (ಮಂಗರಾ. ೧೪೩-೨೦). ೨. ಸ್ತ್ರೀಯರಿಗೆ ಸೇರಿದ ಧನ; ಸ್ತ್ರೀಧನ. [ಸಂ.]

ಸ್ತ್ರೀದ್ವೇಷಿ (ನಾ). ಹೆಂಗಸರನ್ನು ಕಂಡರೆ ಆಗದವನು; ಸ್ತ್ರೀಯರನ್ನು ದ್ವೇಷಿಸುವವನು: ಅವನೊಬ್ಬ ಸ್ತ್ರೀದ್ವೇಷಿಯಾಗಿದ್ದಾನೆ (ರೂಢಿ). [ಸಂ. ಸ್ತ್ರೀದ್ವೇಷಿನ್]

ಸ್ತ್ರೀಧನ (ನಾ). ಹೆಂಗಸಿನ ಸಂಪೂರ್ಣಾಧಿಕಾರಕ್ಕೆ ಸೇರಿದ ಧನ; ಔ ಸಾಮಾನ್ಯವಾಗಿ ತಂದೆ, ತಾಯಿ, ಸಹೋದರ, ಗಂಡ ಮೊದಲಾದ ಸಂಬಂಧಿಕರಿಂದ ಬಳಿವಳಿಯಾಗಿ ಬಂದ ಹಣ: ಕಾತ್ಯಾಯನಸ್ಮೃತಿ . . . ಸ್ತ್ರೀಧನದ ಆರು ವಿಭಾಗಗಳನ್ನು ಈತ ಹೇಳಿದ್ದಾನೆ (ಭಾರದ. ೬೪). [ಸಂ.]

ಸ್ತ್ರೀಧರ್ಮ (ನಾ). ೧. ಹೆಂಗಸು ಪಾಲಿಸಬೇಕಾದ ಕರ್ತವ್ಯ. ೨. ಹೆಂಡತಿಯ ಕರ್ತವ್ಯ; ಸತೀಧರ್ಮ. ೩. ಹೆಂಗಸರಿಗೆ ಅನ್ವಯವಾಗುವ ನಿಯಮ. ೪. ಮುಟ್ಟು; ಋತುಸ್ರಾವ. [ಸಂ.]

ಸ್ತ್ರೀನಾಡಿ (ನಾ). ದೇಹದಲ್ಲಿ ಎಡಭಾಗದ ನಾಡಿ: ಎಡಭಾಗದ ನಾಡಿಗಳು ಸ್ತ್ರೀನಾಡಿಗಳೆಂತಲೂ ಬಲಭಾಗದ ನಾಡಿಗಳಿಗೆ ಪುರುಷನಾಡಿಗಳೆಂತಲೂ ಹೆಸರು (ಪಸಾರ. ೪-೩ ತಾತ್ಪರ್ಯ). [ಸಂ.]

ಸ್ತ್ರೀಪಕ್ಷಿಗ್ರಹ (ನಾ). ಎಳೆಯ ಮಕ್ಕಳಿಗೆ ಬರುವ ಒಂದು ರೋಗ: ಸ್ತ್ರೀಪಕ್ಷಿಗ್ರಹ ಪಿಡಿದಿದ್ದರೆ ಶಿಶುವಿಗೆ ಸರ್ವಾಂಗವೂ ಕಂಪಿಸುವುದು. ತಾಪ, ಬಾಯರಿಕೆ, ಉಚ್ಚುವುದು ಇವಿಷ್ಟು ಉಂಟಾಗಿಹವು. ಮೊಲೆಯನೊಲ್ಲದು. ಇದು ಸ್ತ್ರೀಪಕ್ಷಿಗ್ರಹಶಂಕೆ ಎಂದೆಱಿವುದು (ಪೈದ್ಯಸಾ. II. ೧೩). [ಸಂ.]

ಸ್ತ್ರೀಪಾತ್ರ (ನಾ). ನಾಟಕ ಕಥೆ ಕಾದಂಬರಿಗಳಲ್ಲಿ ಬರುವ ಸ್ತ್ರೀವ್ಯಕ್ತಿ: ಈ ಸ್ತ್ರೀಪಾತ್ರಗಳ ರೀತಿಯೆ ಬೇರೆ, ಶಕುಂತಲೆಯ ರೀತಿಯೆ ಬೇರೆ (ಧರ್ಮಸಾ. ೬೭). [ಸಂ.]

ಸ್ತ್ರೀಪ್ರತಿಬದ್ಧ (ನಾ). ಹೆಣ್ಣಿಗೆ ಸಂಬಂಧಿಸಿದುದು; ಹೆಣ್ಣಿನ ದೆಸೆಯಿಂದ ಉಂಟಾದುದು: ತಿರ್ಯಗ್ಜಾತಿಗೆಲ್ಲಮಿನಿವಿರಿದು ಸ್ತ್ರೀಪ್ರತಿಬದ್ಧಂ ಮುಳಿಸೆಂದೊಡೆ ಮಾನಿಸರ್ ಸಾಮರ್ಥ್ಯಮುಳ್ಳೊಡೆ ಕಿಱಿದಱೊಳ್ ಮಾಣರ್ (ಶಾಂಪು. ೯-೧೩ ವ). [ಸಂ.]

ಸ್ತ್ರೀಯುಗಕರಣ (ನಾ). [ಕಾಮಶಾ] ಎರಡು ಹೆಣ್ಣುಗಳನ್ನು ಏಕಕಾಲದಲ್ಲಿ ರಮಿಸುವುದು: ಅತಿ ಕಾಮುಕನಾದ ಪುರುಷಂ ಈರ್ವರು ಸ್ತ್ರೀಯರನೊಮ್ಮೆ ಕೂಡಲುಪಾಯಂ ಒರ್ವಳ ಯೋನಿಯೊಳು ಲಿಂಗಮನಿಕ್ಕಿ ಒರ್ವಳ ಯೋನಿಯೊಳು ನಾಲಗೆಯಿಕ್ಕಿ ರಮಿಸಲ್ಕದು ಸ್ತ್ರೀಯುಗಕರಣಂ (ಕಾಮಶಾ. ೨೩೭). [ಸಂ.]

ಸ್ತ್ರೀಯುಗಲ, ಸ್ತ್ರೀಯುಗಳ (ನಾ). ೧. ಸ್ತ್ರೀಯ ಜೋಡಿ; ಇಬ್ಬರು ಹೆಂಗಸರು. ೨. = ಸ್ತ್ರೀಯುಗಕರಣ: ಮಣಿದಿರ್ವರೊಳೊರ್ವರನುರವಣೆಯಿಂ ನೆರೆಯುತ್ತುರ್ವೆರ್ವ ಕಾಂತೆಯ ಭಗಮಂ ಪ್ರಣಯದೆ ತುದಿನಾಲಗೆಯಿಂ ದಣಿದಣಿಯದೆ ಸೊಗಸುಗೆಯ್ವಿನಂ ಸ್ತ್ರೀಯುಗಲಂ (ಮನ್ಮಸಿ. ೧೪-೩೭). ಸ್ತ್ರೀಯುಗಳ: 'ಸ್ತ್ರೀಯುಗಳಕರಣ' ಪರಾ. [ಸಂ.]

ಸ್ತ್ರೀಯುಗಳ 'ಸ್ತ್ರೀಯುಗಲ' ನೋ.

ಸ್ತ್ರೀಯುಗಳಕರಣ (ನಾ). = ಸ್ತ್ರೀಯುಗಕರಣ: ಪುರುಷನತಿಕಾಮದಿಂ ತರುಣಿಯೊರ್ವಳ ಲಜ್ಜೆಯೆರೆದೆಡೆಯೊಳೀ ಧ್ವಜವನಿಟ್ಟುವವಳ ಸ್ಮರಗೃಹದೊಳಗೆ ಲಲ್ಲೆವರಿಸಿ ನಾಲಗೆಯಿಟ್ಟು ನೆರೆಯಲದು ಕೇಳ್ ಸ್ತ್ರೀಯುಗಳಕರಣವು (ಜನಪ. ೯-೫೫). [ಸಂ. ಸ್ತ್ರೀಯುಗಲಕರಣ]

ಸ್ತ್ರೀರತ್ನ (ನಾ). ೧. ಉತ್ತಮಳಾದ ಸ್ತ್ರೀ; ಸ್ತ್ರೀಯರಲ್ಲಿ ಮಿಗಿಲಾದವಳು: ಪುರುಷರತ್ನಕ್ಕೆ ಸ್ತ್ರೀರತ್ನಮಲ್ಲದೆ ಸಾಮಾನ್ಯಮಣಿಯುಂ ಪಸುರ್ವಣಿಯುಂ ದೊರೆಯಲ್ಕುಂ (ಶಾಂತಿಪು. ೪-೮೪ ವ); ಕ್ಷೋಣೀಭಾಗದೆ ಬೇರೆ ತೋರ್ಕುಮನಗಾ ಸ್ತ್ರೀರತ್ನಸೃಷ್ಟಿಕ್ರಮಂ (ಶಾಕುಂತ. ೨೫-೪೪). ೨. ಲಕ್ಷ್ಮಿ. ೩. [ಜೈನ] ಚಕ್ರವರ್ತಿಗೆ ದೊರೆಯುವ ಏಳು ಜೀವರತ್ನಗಳಲ್ಲಿ ಒಂದೆನಿಸಿದ ಪರಮಸುಂದರಿಯಾದ ಸ್ತ್ರೀ: ಸಾನಂದಕಮೆಂಬ ಖಡ್ಗರತ್ನಮುಂ . . . ಮನೋಹರಮುಮಪ್ಪ ಸ್ತ್ರೀರತ್ನಮುಮೆಂದಿಂತು ಜೀವಾಜೀವರತ್ನಂಗಳಂ . . . ಪೂಜಿಸಿ (ಆದಿಪು. ೧೧-೩ ವ); ಸೇನಾಪತಿಸ್ಥಪತಿಗೃಹಪತಿಪುರೋಹಿತಗಜವಾಜಿಸ್ತ್ರೀರತ್ನಂಗಳೆಂಬೇಳುಂ ಜೀವರತ್ನಂಗಳುಮಂ . . . ಅನುಕ್ರಮದೊಳರ್ಚಿಸಿ (ಚಂದ್ರಪು. ೬-೧೦೧ ವ). [ಸಂ.]

ಸ್ತ್ರೀರಾಗ (ನಾ). ೧. ಹೆಣ್ಣಿನ ಅನುರಾಗ: ಸ್ತ್ರೀರಾಗಕಥಾಶ್ರವಣತ್ಯಾಗಃ - ಸ್ತ್ರೀರಾಗವಿಷಯಕ್ಕೆ ಕಾರಣಮಪ್ಪ ಕಥೆಗಳ ಕೇಳ್ಕೆಯಂ ತೊಱೆವುದುಂ (ತತ್ತ್ವಪ್ರ. ೨೭೦). ೨. [ಸಂಗೀತ] ರಾಗಗಳಲ್ಲಿ ಒಂದು ವರ್ಗ; ರಾಗಿಣಿ; ಔ ಇಪ್ಪತ್ತುನಾಲ್ಕು ಸ್ತ್ರೀರಾಗಗಳಿವೆ: ರೇವಗುಪ್ತಿಯು ಭೈರವಿದ್ವಯಮಾ ವಸಂತಿಮಿವಾದಿಯಾದನು ಭಾವಿಸಲು ಸ್ತ್ರೀ[ಪ್ರಾಣಾಂ. ಶ್ರೀ]ರಾಗ ಪುರುಷರಾಗವಿವಿತಿಗಳು (ಬಸಪು. ೧೯-೧೪); ಸ್ತ್ರೀರಾಗ ಚತುರ್ವಿಂಶತಿ ಸೌರಾಷ್ಟ್ರ ಗಭೀರ ಪುರುಷರಾಗಂಗಳವಂ ವಾರಿಜಮುಖಿಯರ್ ಪಾಡಿದರ್ (ಹಮ್ಮೀರ. ೨-೯೫). 'ಪುರುಷರಾಗ' ಪರಾ. [ಸಂ.]

ಸ್ತ್ರೀರಾಜ್ಯ (ನಾ). ಹೆಂಗಸರದೇ ಪ್ರಾಬಲ್ಯ ಅಥವಾ ಅಧಿಕಾರವಿರುವ ರಾಜ್ಯ: ಮನದಿಂ ಸೆಱಿಗೆಯ್ದುಂ ಲೋಚನಂಗಳಿಂ ಬಂದಿವಿಡಿಗುಮೆಂದುಂ ವನಿತಾಜನಮದಱಿಂದಂ ಸ್ತ್ರೀರಾಜ್ಯ ನಗರಮಿಾ ನಗರಮೆನೆ ಕರಂ ರಮಣೀಯಂ (ಶಾಂಪು. ೩-೧೧); ಸ್ತ್ರೀರಾಜ್ಯದೊಳ್ ಪ್ರಮಿಳೆಯನೊಡಂಬಡಿಸಿ . . . ಫಲುಗುಣಂ ಮಣಿಪುರಕೆ ನಡತಂದನು (ಜೈಮಿಭಾ. ೧೬ ಸಂಚಿನ). [ಸಂ.]

ಸ್ತ್ರೀರೂಪ (ನಾ). ಹೆಣ್ಣಿನ ರೂಪ: ಸ್ತ್ರೀರೂಪಮೆ ರೂಪಂ ಶೃಂಗಾರಮೆ ರಸಂ (ಲೀಲಾವ. ೧೨-೮); ಜಗತ್ತಿನ ಸೃಷ್ಟಿಗಿಂತಲೂ ಪೂರ್ವದಲ್ಲಿ ಅಗ್ನಿಯೆ ಪುರುಷದಲ್ಲಿಯೂ ಸ್ತ್ರೀರೂಪದಲ್ಲಿಯೂ ಇದ್ದನು (ಋಷ್ಯಾಶ್ರ. ೪೨). [ಸಂ.]

ಸ್ತ್ರೀಲಿಂಗ (ನಾ). ೧. ಸ್ತ್ರೀಯ ಜನನಾಂಗ; ಯೋನಿ. ೨. ಸ್ತ್ರೀಯರಿಗೆ ವಿಶಿಷ್ಟವಾದ ಮೊಲೆ ಮೊದಲಾದ ಉಪಾಂಗ. ೩. [ವ್ಯಾಕ] ಹೆಂಗಸರನ್ನು ಸೂಚಿಸುವ ಲಿಂಗ; ಸ್ತ್ರೀವಾಚಕಲಿಂಗ : ಸ್ತ್ರೀಯರೆ ತಾಂ ಸ್ತ್ರೀಲಿಂಗಂ (ಶಮದ. ೯೧); ಗಂಡಸರನ್ನು ಹೇಳುವ ಪದಗಳಿಗೆ ಪುಲ್ಲಿಂಗವೆಂದೂ ಹೆಂಗಸರನ್ನು ಹೇಳುವ ಪದಗಳಿಗೆ ಸ್ತ್ರೀಲಿಂಗವೆಂದೂ ಹೆಸರು (ಮಧ್ವಮ. ೩೧). [ಸಂ.]

ಸ್ತ್ರೀವಶ್ಯ (ನಾ). ೧. ಹೆಂಗಸನ್ನು ವಶಪಡಿಸಿಕೊಳ್ಳುವಂತಹುದು: ನಾನಾ ಬಗೆಯ ಬಣ್ಣಗಳಿರುವ ವಸ್ತ್ರದ ಗುಣ- ನೋಡುವುದಕ್ಕೆ ಮಹಾಪ್ರೀತಿಕರವಾಗಿಯೂ ಸ್ತ್ರೀವಶ್ಯವಾಗಿಯೂ . . . ಇರುವುದು (ಸಕವ್ಯ. ೨೪). ೨. ಸ್ತ್ರೀಯ ಒಲವನ್ನು ಪಡೆದುಕೊಳ್ಳುವಿಕೆ; ಸ್ತ್ರೀವಶೀಕರಣ: ಮರುಳುಮ್ಮತ್ತದ ಬೀಜ, ನಾಗಕರ್ಣಕೆಬೇರು, ಬೀಜ ಮೂತ್ರದಲ್ಲಿ ಅರೆದು ಕಡಲೆಗಾತ್ರ ಗುಳಿಗೆಯಂ ಮಾಡಿ ದೇಹಕ್ಕೆ ಇಕ್ಕೆ ಸ್ತ್ರೀವಶ್ಯ (ವಿವೈವಿ. ೨೧೧). [ಸಂ.]

ಸ್ತ್ರೀವಾಚಕ (ನಾ). [ವ್ಯಾಕ] ಸ್ತ್ರೀಲಿಂಗಸೂಚಕವಾದ ಪದ: ಅಪತ್ಯ, ಕಳತ್ರ- ಎಂಬ ಶಬ್ದಂಗಳ್ ಸ್ತ್ರೀವಾಚಕಮಾಗಿಯುಂ ನಪುಂಸಕಂ (ಶಮದ. ೧೫೫ ಪ್ರಬೋ); ಸ್ತ್ರೀಲಿಂಗದ ರೂಪಗಳನ್ನು ಸಿದ್ಧಪಡಿಸುವ ಪ್ರತ್ಯಯಗಳಿಗೆ ಸ್ತ್ರೀವಾಚಕಪ್ರತ್ಯಯಗಳೆಂದು ಹೆಸರು (ಮಧ್ವಮ. ೩೩). [ಸಂ.]

ಸ್ತ್ರೀವೇದ (ನಾ). [ಜೈನ] ಒಂದು ಬಗೆಯ ನೋಕಷಾಯ; ಹೆಣ್ಣಿಗೆ ಗಂಡಿನ ಮೋಹವನ್ನುಂಟುಮಾಡುವ ಕರ್ಮ: ಮತ್ತಂ ಕಿಱಿದುಬೇಗದಿಂ ಕ್ರಮಕ್ರಮದೊಳ್ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ . . . ಘಾತಿಸಿ (ಆದಿಪು. ೧೦-೧೪ ವ); ಸ್ತ್ರೀವೇದಂ ಪುರುಷಾಭಿಲಾಷೆಯಂ ಮಾಡ್ಪುದು (ಪಸಾರ. ೧೨). [ಸಂ.]

ಸ್ತ್ರೀವೇಷಧರ (ನಾ). ಹೆಣ್ಣುವೇಷವನ್ನು ಧರಿಸಿದ ನಟ; ಸ್ತ್ರೀಪಾತ್ರವನ್ನು ವಹಿಸಿದ ನಟ: "ಸ್ತ್ರೀವೇಷಧರಂ ಭೃಕುಂಸನೆನೆಯುಂ ಭೃಕುಂಸನೆನೆಯುಂ ನೆಗಟ್ಟುಂ" (ವಸ್ತುರೂ. ೭೪-೭೫). [ಸಂ.]

ಸ್ತ್ರೀವ್ಯಸನ (ನಾ). ಹತ್ತು ಬಗೆಯ ವ್ಯಸನಗಳಲ್ಲಿ ಒಂದು; ಹೆಣ್ಣಿನ ಗೀಳು: ತನುವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಸ್ತ್ರೀವ್ಯಸನ ಧಾನ್ಯವ್ಯಸನ ದ್ರವ್ಯವ್ಯಸನ ವಿದ್ಯಾವ್ಯಸನ ಉತ್ಸಾಹಕವ್ಯಸನ ಸೇವಕವ್ಯಸನ ಕಾಷ್ಠವ್ಯಸನಗಳೆಂಬ ದಶವ್ಯಸನಗಳಿಂ ಹಸಗೆಟ್ಟು (ಏಕೇಕ. ೨೪೬). [ಸಂ.]

ಸ್ತ್ರೀಶಿಲೆ (ನಾ). [ಶಿಲ್ಪಶಾ] ಸ್ತ್ರೀವಿಗ್ರಹಗಳನ್ನು ಮಾಡಲು ಯೋಗ್ಯವಾದ ಕಲ್ಲು: ಶಿಲೆಯಲ್ಲಿ ಪುಂಶಿಲೆ, ಸ್ತ್ರೀಶಿಲೆ, ನಪುಂಸಕಶಿಲೆಯೆಂಬ ಮೂರು ವಿಧ . . . ಘಂಟಾನಾದ ದಂತೆ ಧ್ವನಿತವಾಗುವ ಶಿಲೆಯು 'ಸ್ತ್ರೀಶಿಲೆ' ಯೆಂದೂ . . . ಉಕ್ತಿ ಇದೆ. ಪುರುಷದೇವತಾ ವಿಗ್ರಹಗಳನ್ನು ಪುಂಶಿಲೆಯಿಂದಲೂ ಸ್ತ್ರೀದೇವತಾವಿಗ್ರಹಗಳನ್ನು ಸ್ತ್ರೀಶಿಲೆಯಿಂದಲೂ . . . ಮಾಡಬೇಕೆಂದು ವಿಧಿಸಿದೆ (ಭಾರದ. ೭೭). [ಸಂ. ಸ್ತ್ರೀಶಿಲಾ]

ಸ್ತ್ರೀಸಂಗ (ನಾ). ಹೆಂಗಸಿನ ಸಹವಾಸ ,— ಕೂಟ: ಯಾವ ಸ್ತ್ರೀಸಂಗದಿಂ ದೋಷ ಹುಟ್ಟುವುದೊ ಆ ಸ್ತ್ರೀಯ ತೊಡೆಯ ರಕ್ತದಲ್ಲಿ ಹಿಪ್ಪಲಿಯ ತೇದು ಕಣ್ಣಿಗೆಚ್ಚಲು ಆ ಕ್ಷಣವೇ ಸುಖಸನ್ನ ಗುಣಮಕ್ಕುಂ (ಸಕಪ್ರ. ೧೭೨). [ಸಂ.]

ಸ್ತ್ರೀಸಂಗಸನ್ನಿ (ನಾ). ಏಳು ದಿವಸಗಳವರೆಗೆ ಇರುವ, ತರುಣಜ್ವರವಿದ್ದಾಗ ಸ್ತ್ರೀಸಂಗ ಮಾಡುವುದರಿಂದ ಉಂಟಾಗುವ ಸನ್ನಿಪಾತ: ಸ್ತ್ರೀಸಂಗಸನ್ನಿಯ ದೋಷಲಕ್ಷಣಗಳು - ಸಂದು ಸಂದಿನ ಮುಡುಹುಗಳಲ್ಲಿ ಕತ್ತಿಯಲ್ಲಿ ಕಡಿದಂತೆ ಉಂಟಾದ ಬಹಳವೇದನೆಯು . . . ಮುಂತಾದ ಲಕ್ಷಣಗಳೊಡನೆ ಕೂಡಿರ್ಪುದೆ ತರುಣಜ್ವರ ದಲ್ಲಿಯುಂಟಾದ ಸ್ತ್ರೀಸಂಗದಿಂದಾದ ಸನ್ನಿದೋಷಂ. ಇದನ್ನೆ ಸುಖಸನ್ನಿ ಎಂದು ಹೇಳುವರು (ಸಕವೈ. ೧೭೦). [ಸ್ತ್ರೀಸಂಗ + ಸನ್ನಿ]

ಸ್ತ್ರೀಸವನ (ನಾ). ೧. ಹೆಂಗಸಿನ ಸ್ನಾನ. ೨. ಹೆಂಗಸರು (ಮುಟ್ಟಾದ) ನಾಲ್ಕನೆಯ ದಿನ ಶುದ್ಧಿಗಾಗಿ ಹಾಕಿಕೊಳ್ಳುವ ನೀರು; ನಾಲ್ಕೀರು. ೧ , ೨: ಸುವಿದಿತಮಿನಿತುದಿನಂ ಸ್ತ್ರೀಸವನಂ ನಿನಗಿಂದು ಕಾಂತೆ ಪುಂಸವನಂ ಮಾಡುವುದೊಂದ ರ್ಥಾಂತರದಿಂದವನೀಶಂ ಸರಸವಾಡಿ ಕಾಡುಗುಮೆಂದೋ (ಪುಷ್ಪಪು. ೩-೮೮). [ಸಂ.]

ಸ್ತ್ರೀಹತ್ಯ (ನಾ). ಹೆಂಗಸನ್ನು ಕೊಲೆಮಾಡುವಿಕೆ; ಸ್ತ್ರೀವಧೆ: ಸ್ತ್ರೀಹತ್ಯವು ಬಹಳ ದೊಡ್ಡ ಘಾತಕ (ನೀತಿಚಂ. IX. ೧೧); ನನ್ನ ಸ್ವಾಮಿಯ ಸೇವೆ ಮಾಡುವ ಭಾಗ್ಯ ತಪ್ಪಿಸಿ ಸ್ತ್ರೀಹತ್ಯ ಮಾಡಿದನಲ್ಲ (ದೇವಪಂ. ೪೪). [ಸಂ.]

ಸ್ತ್ರೈಣ (ಗು). ೧. ಹೆಂಗಸಿಗೆ ಸಂಬಂಧಿಸಿದ; ಸ್ತ್ರೀವಿಷಯಕವಾದ. ೨. ಹಣ್ಣನದ; ಸ್ತ್ರೀಸ್ವಭಾವದ: ಅಂತಲ್ಲದಿರೆ ಅನ್ಯರ್ಗೆ ದಲ್ ಆ ಸ್ತ್ರೈಣಚಾರುತೆ ಸುಲಭಮಾಯ್ತು (ಶ್ರೀರಾಮಾ. ೫೬-೪೪೮). ೩. ಸ್ತ್ರೀಯರಲ್ಲಿ ಆಸಕ್ತಿಯುಳ್ಳ; ಸ್ತ್ರೀಲಂಪಟವಾದ. ೪. ಸ್ತ್ರೀಯರಿಗೆ ಅಧೀನನಾದ; ಸ್ತ್ರೀವಶನಾದ. (ನಾ). ೫. ಸ್ತ್ರೀಲಂಪಟ; ಸ್ತ್ರೀವಶನಾದವನು: ಸ್ತ್ರೀEಸ್ತ್ರೈಣನಾದಗೆ ಕೇಡು ಬಪ್ಪುದು ಮಾಣದು (ಕಾಶಿಕಾ. ೧೯-೫). ೬. ಸ್ತ್ರೀಲೋಲುಪತೆ; ಸ್ತ್ರೀಲಂಪಟತೆ: ಸ್ತ್ರೈಣದಿಂ ಮುನ್ನುಜ್ಞೆ ಬನ್ನಂಬೆತ್ತನಂ ಪುಷ್ಕಲಪುರದ ಹಯಗ್ರೀವನಂ ಕರ್ಮದಿಂದಂ ಮಱೆದಾಂ ಮೆಯ್ಯಿಟ್ಟು ನಿದ್ರಾಸುಖದಿನಟಲೆ (ಪುಷ್ಪಪು. ೬-೩); ಸ್ತ್ರೈಣಚೇಷ್ಟಿತನೆಂದು ಕೆಲಬರು ಕಾಣೆವರಸನೆಂದು ಕೆಲರು (ಕುವಾಸ. ೧೨-೭). ೭. ಸ್ತ್ರೀಸ್ವಭಾವ. ೮. ಹೆಣ್ಣುಜಾತಿ; ಸ್ತ್ರೀಜಾತಿ. ೯. ಸ್ತ್ರೀಸಮೂಹ. ೧೦. [ವ್ಯಾಕ] ಸ್ತ್ರೀಲಿಂಗ: ಅವನಾತನೆಂಬ ಮಾತುಗಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೈಣದೊಳಿನ್ನವಳಾಕೆಯೆಂಬ ನುಡಿ ಸಂಭವಿಕುಂ (ಕಾವ್ಯಾವ. ೧೫೭). [ಸಂ.]

ಸ್ತ್ರೈಣಸುಖ (ನಾ). ಸ್ತ್ರೀಸಂಗಸುಖ; ಹೆಣ್ಣಿನ ಸುಖ: ಆ ನೃಪಂಗೆ ಮನದೊಳ್ ತೃಣವಲ್ಲಘುವಾದುದಾವಗಂ ಸ್ತ್ರೈಣಸುಖಂ (ಕಾದಂಪು. ೧೯). [ಸಂ.]

-ಸ್ಥ (ಪ್ರ). ಸಂಸ್ಕೃತದ 'ಸ್ಥ' ಶಬ್ದದಿಂದ ಬಂದಿರುವ, ದೇಶ್ಯಶಬ್ದಗಳಿಗೆ ಸೇರುವ ಒಂದು ತದ್ಧಿತ ಪ್ರತ್ಯಯ: 'ತಪ್ಪಿತಸ್ಥ', 'ದುಡ್ಡಸ್ಥ' ಪರಾ.

[IP ಸಂಸ್ಕೃತದಲ್ಲಿ "ಸ್ಥ' ಎಂಬುದು ಪ್ರತ್ಯಯವಲ್ಲ]

ಸ್ಥಂಡಿಲ (ನಾ). ೧. ಯಜ್ಞಕ್ಕಾಗಿ ಮಂತ್ರದಿಂದ ಸಂಸ್ಕರಿಸಿದ ಸಮತಟ್ಟಾದ ಭೂಮಿ; ಯಜ್ಞವೇದಿಕೆ: "ಲೇಸುಮಾಡಿದ ಭೂಮಿಯಂ ಸ್ಥಂಡಿಲಮೆಂಬುದು" (ಪಂಪಾ. ೧೨೫-೭೭); ಸ್ಥಂಡಿಲ ಪರಿಸ್ತರಣ ಪರಿವೇಷಣ ಅಲಂಕರಣ ಅಭಿಮುಖೀಕರಣ ಮುಖಾಹುತ್ಯಾದಿಗಳಿಂ ಸಮರ್ಚಿತನಾಗಿ (ಏವೇಕ. ೧೩೭). ೨. ಬರಡುಭೂಮಿ; ಬೀಳುನೆಲ. ೩. ಹೆಂಟೆಗಳ ರಾಶಿ. ೪. ಸೀಮೆ; ಸರಹದ್ದು. ೫. ನೆಲ; ಭೂಮಿ: ಸ್ಥಂಡಿಲದಲ್ಲಿ ಶಯನವು ಜಪವು ಪೂಜೆಯೂ ಭೋಜನವು ಮಾಡಬಾರದು (ಶೇಷಧ. ೨೦). [ಸಂ.]

ಸ್ಥಗಿತ (ಗು). ೧. ಮುಚ್ಚಿಡಲ್ಪಟ್ಟ; ಬಚ್ಚಿಟ್ಟ. ೨. ಆವರಿಸಿದ; ಆಕ್ರಮಿಸಿದ: ಇದಱೊಳ್ ಶ್ವೇತಾತಪತ್ರಸ್ಥಗಿತದಶದಿಶಾಮಂಡಲಂ ರಾಜಚಕ್ರಂ ಪುದಿದಱ್ಕೂಡಿತ್ತು (ಪಂಪಭಾ. ೧೨-೧೫೬); ಉದ್ಯತ್ ಸೀಕರೌಘಸ್ಥಗಿತಗಗನದಿಗ್ಮಂಡಳಂ (ಎಕ. XI, ದಾವಣ. ೪೩-೪; 1164). ೩. ತಡೆಗೊಂಡ; ನಿಲ್ಲಿಸಲ್ಪಟ್ಟ. (ನಾ). ೪. ಮುಚ್ಚಿದುದು: "ಅಪವಾರಿತಂ, ಪಿಹಿತಂ, ಸಂವೀತಂ, ಸಂವೃತಂ, ಸ್ಥಗಿತಂ - ಈ ೫ ಮುಚ್ಚಿದುದು" (ಹಲಾಯು. ೧೨೨-೫೮). ೫. ಅವರಿಸಿದುದು; ತುಂಬಿದುದು : ವಿಗತಮಳಮುಪಾತ್ತರಾತಿ [ಸಾ] ರ್ಥಾರ್ಥವೀರಂ ಸ್ಥಗಿತಮಮಿತ ನಾನಾಶಬ್ದವೀಚಿಪ್ರ [ಪಂ]ಚಂ . . . ಸಾಗರಂಬೋಲ್ ಸೊಗಯಿಸಿ ಧರಣಿ [ಚಕ್ರಾಂಬ]ರಾಕ್ರಾಂತಮಕ್ಕುಂ (ಕವಿಕಾ. ೩-೨೧೬). ೬. ನಿಂತು ಹೋದುದು; ತಡೆಯಲ್ಪಟ್ಟುದು: ಅವರ ಎಲ್ಲ ಕೆಲಸಗಳೂ ಸ್ಥಗಿತವಾಗಿದ್ದುವು (ಪಂಶವ್ಯ. ೨೬೯). [ಸಂ.]

ಸ್ಥಗಿತಗೊಳಿಸು (ಕ್ರಿ). ತಡೆಹಿಡಿದು ನಿಲ್ಲಿಸು: ಗಣಪೂರ್ತಿ ಸಂಖ್ಯೆಯ ಸದಸ್ಯರು ಸಭೆಯಲ್ಲಿಲ್ಲದಿದ್ದರೆ ಸಭೆಯನ್ನು ಸ್ಥಗಿತಗೊಳಿಸುವುದು (ಭಾಧಾನ. ೪೮); ಅವನ ಮಾತು ಗಳಿಂದ ನೀಲನು ತನ್ನ ಬಂದೂಕಿನ ಉಪಯೋಗವನ್ನು ಸ್ಥಗಿತಗೊಳಿಸಿ (ಬಂಗಾಹ. ೫೦). [ಸಂ.]

ಸ್ಥಪತಿ (ಗು). ೧. ಪ್ರಮುಖವಾದ; ಮುಖ್ಯವಾದ. (ನಾ). ೨. ದೊರೆ; ರಾಜ. ೩. ವಾಸ್ತುಶಿಲ್ಪಿ; ಶಿಲ್ಪಶಾಸ್ತ್ರಜ್ಞ: ಸಂಭಿನ್ನವಿದ್ಯೆಯಿಂ ಸ್ಥಪತಿ ಮಾಡಿಕೊಟ್ಟಂ ದೀಡಂ (ಪಂರಾಮಾ. ೧೨-೯೭); ದೇವಸ್ಥಪತಿ ನಿಜಾಜ್ಞೆಯಿಂದೆ ನಿರ್ಮಿಸುಗುಂ . . . ಪುರಮಂ (ಜಗವಿ. ೯-೨೫). ೪. ಶ್ರೇಷ್ಠನಾದ ಬಡಗಿ: "ಸ್ಥಪತಿ ಧ್ವನಿ ವರ್ಧಕಿಯೊಳ್" (ವಸ್ತುಕೋ. ೧೩೮-೧೨೧). ೫. ಅಂತಃಪುರದ ಕಾವಲುಗಾರ; ಕಂಚುಕಿ. ೬. ಯಾಗ ಮಾಡುವವನು: "ಯಾಗಗೆಯ್ಯಂ ಸ್ಥ[ಪಾಕಾಂ. ಸ್ಥ]ಪತಿ" (ಮಂಗರಾ. ೭೭-೧೪). ೭. ಬೃಹಸ್ಪತಿಯಾಗವನ್ನು ಮಾಡಿದವನು: "ಬೃಹಸ್ಪತಿಯಾಗವಂ ಮಾಡಿದವನಂ ಸ್ಥಾEಸ್ಥತಿಪತಿಯೆಂಬುದು" (ಹಲಾಯು. ೬೯-೨೬೪). ೮. ಕುಬೇರನ ಹೆಸರುಗಳಲ್ಲಿ ಒಂದು. ೯. [ಜೈನ] ಚಕ್ರವರ್ತಿಗೆ ತಾವಾಗಿ ದೊರೆಯುವ ಏಳು ಜೀವರತ್ನ ಗಳಲ್ಲಿ ಒಂದು; ಉತ್ತಮನಾದ ವಾಸ್ತುಶಿಲ್ಪಿ: ಹಸ್ತಿನಪುರಸಂಭೂತಂಗಳಪ್ಪ ಸೇನಾಪತಿ ಗೃಹಪತಿ ಸ್ಥಪತಿ ಪುರೋಹಿತರತ್ನಂಗಳಿಂದಂ (ಶಾಂತಿಪು. ೧೧-೮೪ ವ); ಸೇನಾಪತಿ ಸ್ಥಪತಿ ಗೃಹಪತಿ . . . ಸ್ತ್ರೀರತ್ನಂಗಳೆಂಬೇಱುಂ ಜೀವರತ್ನಂಗಳುಮಂ (ಚಂದ್ರಪ್ರ. ೬-೧೦೧ ವ). [ಸಂ.]

ಸ್ಥಪತಿರತ್ನ (ನಾ). = ಸ್ಥಪತಿ ೯: ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸಿಂದು ಬೆಸಸಿದಾಗಳ್ (ಆದಿಪು. ೪-೩೦ ವ); ಅನೇಕ ಚೈತ್ಯಾಲಯಂಗಳಂ ಸ್ಥಪತಿರತ್ನಂಗಳಿಂ ಮಾಡಿಸಿ (ಅಜಿಪು. ೯-೩೫ ವ). [ಸಂ.]

ಸ್ಥಪುಟಿತ (ಗು). ಏರುತಗ್ಗಾಗಿ ಮಾಡಲ್ಪಟ್ಟ; ತಗ್ಗುದಿಣ್ಣೆಗಳುಂಟಾದ: ವಾಜಿಖುರಾಹತಿಸ್ಥಪುಟಿತಗ್ರಾವಸ್ಥಲಂ (ಆದಿಪು. ೧೩-೬೫). [ಸಂ.]

ಸ್ಥಲ, ಸ್ಥಳ (ನಾ). ೧. ಭೂಮಿ; ಕ್ಷೇತ್ರ; ನೆಲ: "ನೆಲಂ ಸ್ಥಲಂ ಸ್ಥಲಿ" (ವಸ್ತುಕೋ. ೨೬-೫). ೨. ಸ್ಥಿರವಾದ ನೆಲ; ಗಟ್ಟಿಯಾದ ಒಣನೆಲ. ೩. ದಡ; ತೀರ. ೪. ಜಾಗ; ಪ್ರದೇಶ. ೫. ಎತ್ತರವಾದ ಜಾಗ; ದಿನ್ನೆ. ೬. ನೆಲೆ; ಇರುವ ಸ್ಥಾನ. ೭. ಚರ್ಚೆಯ ಅಥವಾ ನಿರೂಪಣೆಯ ವಿಷಯ,- ವಸ್ತು. ೮. ಗ್ರಂಥದ ಭಾಗ,— ಪ್ರಕರಣ. ೯. ಡೇರೆ; ಗುಡಾರ. ೧೦. ಸಾಂಪ್ರದಾಯಿಕವಾದ ಕಾವ್ಯಾಂಗ: ಪದಿನೆಂಟುಂ ಸ್ಥಲವರ್ಣನಮಿದರ್ಕೆ ಮೆಯ್ಯಟ್ಟಮೆನಿಸಿ ಪೇಟ್ಟಂ (ಶಮದ. ನ. ೨೦೩ ಪ್ರಯೋ). ೧೧. [ವೀಶೈ] ಭಕ್ತನ ಸಾಧನೆಯ ಮುಖ್ಯ ಹಂತ: ಇಂತೀ ನೂಱೆಂಟುಸ್ಥಲದಲ್ಲಿ ನಿಪುಣನಾಗಿ . . . ಏಕಸ್ಥಲವಾಗಿ ಸ್ಥಲನಿಃಸ್ಥಲವನ್ನೆದಿ ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕು (ಆದವ. ೮-೧೨). 'ಏಕೋತ್ತರಶತಸ್ಥಲ', 'ಷಟ್ಸ್ಥಲ' ಪರಾ. ೧೨. ಪರಬ್ರಹ್ಮ: ಸ್ಥಲವೆಂದರೆ ಅಂಗ ನೆಲೆಯಾದರೆ ಪ್ರಾಣ (ವಚಸಂ. ೧೪೩-೩೩) ; ಏಕವೆಂದೆನಿಸಿದ ಪರಬ್ರಹ್ಮವಿರಲು ತಾನೆ ಸ್ಥಲ (ಉಚಿಚಂ. ೪೮-೫).

ಸ್ಥಳ : ೪. "ಸ್ಥಳಂ ಸ್ಥಳಿಯೆನಲ್ಕೆ ಸರ್ವಸ್ಥಳಕ್ಕೆ ನಾಮಮಕ್ಕುಂ" (ಮಂಗರಾ. ೨೮-೨). ೬. ನಮ್ಮ ಸ್ಥಳ ಬೆಂಗಳೂರು (ರೂಢಿ). ೧೧. ತಿರುಪಿ ಜಂಗಮಲಿಂಗ ಭಕ್ತಿಸ್ಥಳಮನಾ ತ್ರಿವಿಧಪ್ರಸಾದಸ್ಥಳಮನಮಳಾಚಾರಪದಮಂ ತೋಱಿದಡೆ (ಬಸಪು. ೨೬-೬೫). ೧೩. ಒಂದು ನೂರು ಗ್ರಾಮಗಳನ್ನುಳ್ಳ ಒಂದು ವಿಭಾಗ,— ಪ್ರದೇಶ : (ಲೋಕಸ. ೨೨). ೧೪. ಭೂಮಿಯನ್ನು ಅಳೆಯುವ ಒಂದು ಪರಿಮಾಣ : ಕೆಲವು ಕಡೆಯಲ್ಲಿ ಒಂದು ಕೂರಿಗೆ ಭೂಮಿಗೆ ಸ್ಥಳವೆಂದೆನ್ನುವರು (ಕಭಾಗ. ೩೬೫). ೧೫. [ಗಣಿತ] ಹದಿನೆಂಟು ಎಂಬ ಸಂಖ್ಯೆಯ ಸಂಕೇತ : "ಜಾತ ಸ್ಥಳಂ ಪದಿನೆಂಟು" (ಮಂಗರಾ. ೧೦೪ ೯). [ಸಂ.]

ಸ್ಥಲಕಟ್ಟು (ನಾ). [ವೀಶೈ] ಷಟ್‌ಸ್ಥಲಗಳ ಕ್ರಮ,— ನಿಯಮ : ಕೆಲವರು ವಚನಗಳಿಗೆ ಟೀಕೆಗಳನ್ನು ಬರೆದರು. ಕೆಲವರು ಅವುಗಳನ್ನು ಸ್ಥಲಕಟ್ಟುಗಳಂತೆ ವ್ಯವಸ್ಥೆಗೊಳಿಸಿದರು (ಮೋಳಿಮಾ. ಮುಪ್ಪುಡಿ. ೧) ; ಒಳ್ಳೊಳ್ಳೆಯ ವಚನಗಳನ್ನು ಷಟ್ಸ್ಥಲದ ತತ್ತ್ವಾನುಭವಕ್ಕನುಗುಣವಾಗಿ ಸ್ಥಲಕಟ್ಟಿಗೆ ಸೇರಿಸಿ . . . ಕೀರ್ತಿ ಗಳಿಸಿದ್ದಾನೆ (ಶಂಕಕಂ. X,ಪೀಠಿಕೆ). [ಸ್ಥಲ + ಕಟ್ಟು]

ಸ್ಥಲಕಮಳ (ನಾ). ನೆಲದಾವರೆ; ಬೆಟ್ಟದಾವರೆ: ಜಳಕಮಳಂ ಮೇಣ್ ಸ್ಥಲಕಮಳಮಲ್ತು ಗಗನಸ್ಥಲಕಮಳಮಿದೆನಿಸಿ ಪಿಡಿದ ಧವಳಚ್ಛತ್ರಂ (ಮಲ್ಲಿಪು. ೯-೧೧೪). [ಸಂ. ಸ್ಥಲಕಮಲ]

ಸ್ಥಲಕುಳ, ಸ್ಥಳಕುಳ (ನಾ). [ವೀಶೈ] ಸ್ಥಳ ಮತ್ತು ವಂಶ(?) : ವಿಶ್ವಾಸದ ಹರವರಿಯಲ್ಲಿ ವಿಶ್ವಮಯ ಸ್ಥಲಕುಳಂಗಳಾದವು (ಮೋಳಿಮಾ. ೨೦೦-೬೪೫). **ಸ್ಥಳಕುಳ** : ಅಱಿವನ್ನಬರ ಸ್ಥಳಕುಳಂಗಳ ಹೊಲದ ಹೋಬ ತಿಳಿದಲ್ಲಿ . . . ಆತ ನಿಶ್ಚಿಂತ ನೋಡಾ (ಸರ್ವವ. ೧೩೭-೬೭೯). [ಸಂ. ಸ್ಥಲಕುಲ]

ಸ್ಥಲಚರ, ಸ್ಥಳಚರ (ನಾ). ನೆಲದ ಮೇಲೆ ಚಲಿಸುವ ಜೀವಿ: ನೀರಿಲ್ಲದಲ್ಲಿ ಜಲಚರಗಳು ಹ್ಯಾಗೆ ಬದುಕಿರಲಾರವೋ ಹಾಗೆ ಹವೆ ಇಲ್ಲದಲ್ಲಿ ಮನುಷ್ಯ ಮುಂತಾದ ಸ್ಥಲಚರಗಳು ಬದುಕಲಾರವು (ಮುಂಬಯಿ. ೫-೧೫೦); **ಸ್ಥಳಚರ** : ಅವಱೊಳ್ ಪಂಚೇಂದ್ರಿಯಂಗಳ್ ಜಳಚರ ಸ್ಥಳಚರ ಗಗನಚರ-ಪ್ರಕಾರದಿಂ ಮೂದೆಱನಕ್ಕುಂ (ಶಾಂತಿಪು. ೧೨-೧೧೨). [ಸಂ.]

ಸ್ಥಲಜ್ಞ, ಸ್ಥಳಜ್ಞ (ನಾ). ೧. ಪ್ರದೇಶವನ್ನು ಬಲ್ಲವನು; ಸ್ಥಳವನ್ನು ತಿಳಿದವನು. ೨. [ವೀಶೈ] ಷಟ್‌ಸ್ಥಲ, ಏಕೋತ್ತರಶತಸ್ಥಲ ಮುಂತಾದ ಆಧ್ಯಾತ್ಮಿಕಹಂತಗಳನ್ನು ತಿಳಿದವನು: ಅನಾಚಾರದಲ್ಲಿ ಆಚಾರವಡಗಿ ಭಕ್ತನಲ್ಲದೆ ಭವಿಯಾಗಿ . . . ಆಱುಕುಳದಲ್ಲಿ ಬಲ್ಲವನಲ್ಲದೆ ಇಂತವಱೊಳಗಾದ ನೂಱೊಂದು ಕುಳಕ್ಕೆ ಸ್ಥಲಜ್ಞನಲ್ಲ (ಮೋಳಿಮಾ. ೧೭೫-೬೬೧). **ಸ್ಥಳಜ್ಞ** : ೧. ಆ ದೇವಾಲಯವು ಸಮುದ್ರಗರ್ಭದಲ್ಲಿ ಲೀನವಾದಂತೆ ಸ್ಥಳಜ್ಞರು ಹೇಳುವರು (ಲ್ಕೃಷ್ಣಪ್ರ. ೧). [ಸಂ.]

ಸ್ಥಲಪಲ್ಲಟ, ಸ್ಥಳಪಲ್ಲಟ (ನಾ). ಸ್ಥಾನಾಂತರ; ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಬದಲಾಯಿಸುವಿಕೆ; ವರ್ಗಾವಣೆ: (ಕ). **ಸ್ಥಳಪಲ್ಲಟ** : ಮನೆಯಲ್ಲಿ ದಿನನಿತ್ಯ ಬೇಕಾಗುವ ಪದಾರ್ಥಗಳನ್ನು ಸ್ಥಳಪಲ್ಲಟಮಾಡದೆ ನಿರ್ದಿಷ್ಟ ಸ್ಥಳದಲ್ಲಿಡುವುದರಿಂದ ಕೆಲಸ ಸುಲಭವಾಗುತ್ತದೆ (ರೂಢಿ). [ಸ್ಥಲ + ಪಲ್ಲಟ]

ಸ್ಥಲವಂದಿಗ, ಸ್ಥಳವಂದಿಗ (ನಾ). ಆ ಸ್ಥಳಕ್ಕೆ ಸೇರಿದ ವ್ಯಕ್ತಿ; ಅದೇ ಜಾಗಕ್ಕೆ ಸೇರಿದವನು : (ಕ). **ಸ್ಥಳವಂದಿಗ**: ಅಲ್ಲಿಯ ಸ್ಥಳವಂದಿಗರು ಆ ಊರಿನ ಹೆಸರಿನ ಬಗೆಗೆ ಒಂದು ದಂತಕಥೆಯನ್ನು ಹೇಳುತ್ತಾರೆ (ರೂಢಿ). [ಸ್ಥಲ + ಒಂದಿಗ]

ಸ್ಥಲಶೃಂಗಾಟ, ಸ್ಥಳಶೃಂಗಾಟ (ನಾ). ಒಂದು ಬಗೆಯ ಸಸ್ಯ; ನೆಗ್ಗಿಲು. **ಸ್ಥಳಶೃಂಗಾಟ**: "ಗೋಕ್ಷುರಃ, ಸ್ಥಳಶೃಂಗಾಟಃ, ಶ್ವದಂಷ್ಟ್ರಾ, ತ್ರಿಕಂಟಕಃ- ಈ ೪ ನೆಗ್ಗಿಲು" (ಹಲಾಯು. ೩೩-೪೮). [ಸಂ.]

ಸ್ಥಲಿ, ಸ್ಥಳಿ (ನಾ). ೧. ಗಟ್ಟಿನೆಲ ; ಬಿಣನೆಲ. ೨. ನೈಸರ್ಗಿಕವಾದ (ಕಾಡು, ವನ ಮೊದಲಾದ) ಸ್ಥಳ. ೩. ಪ್ರದೇಶ; ಜಾಗ: "ನೆಲಂ ಸ್ಥಲಂ ಸ್ಥಲಿ" (ವಸ್ತುಕೋ. ೨೬-೫). ೪. ಸ್ಥಳದೇವತೆ ; ಸ್ಥಳದ ದೇವರು. **ಸ್ಥಳಿ**: ೩. "ಸ್ಥಳಂ, ಸ್ಥಳೀ- ಈ ೨ ಸ್ಥಳಂ" (ಹಲಾಯು. ೨೬-೩). [ಸಂ. ಸ್ಥಲೀ]

ಸ್ಥಲೀಕ$_1$, **ಸ್ಥಳೀಕ** (ನಾ). ೧. ಸ್ಥಳದ ನಿವಾಸಿ : (ಕ). **ಸ್ಥಳೀಕ**: ೨. ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದುದು,— ಸೀಮಿತವಾದುದು: ಈಗೀಗ ಈ ತೆರನಾದ ಸ್ಥಳೀಕವಾದ ರಕ್ತದ ಒತ್ತಡದ ವಿಷಯದಲ್ಲಿ ಹಲವಾರು ನೂತನ ವಿಧಾನದ ಪ್ರಯೋಗಗಳು ಬಳಕೆಗೆ ಬಂದಿವೆ (ಮನೋಸಂ. ೧೧೧). [< ಸಂ. ಸ್ಥಲಿಕ]

ಸ್ಥಲೀಕ$_2$ (ನಾ). ನೆಲಗಟ್ಟು : ನೀಲಬದ್ಧಸ್ಥಲೀಕಂ ಮರಕತಜಗತೀಮಂಡಲಂ ಸ್ಫಾಟಿಕಸ್ತಂಭಾಲಂಬಂ . . . ದ್ವಾರಾಲಂಕಾರಂಗಳಿಂ ರಚ್ಚಿಸೆದುದನುಪಮಂ ತತ್‌ಕೃತಿತೋದ್ಭಾಪಗೇಹಂ (ಚಂದ್ರಪ್ರ. ೬-೪೪). [ಸಂ.]

ಸ್ಥವಿರ (ಗು). ೧. ಸ್ಥಿರವಾದ; ದೃಢವಾದ. ೨. ವಯಸ್ಸಾದ; ಮುಪ್ಪಾದ (ನಾ). ೩. ಮುದುಕ; ವೃದ್ಧ: ಪುರುಷ ಸ್ತ್ರೀ ಬಾಲ ವೃದ್ಧ ಸ್ಥವಿರ ಯುವ ಜನಾತಂಕಶಂಕಾತಿರೇಕಂ ಪುರದೊಳ್ಪೊಣ್ಮೆತ್ತು . . . ಘೋರಪ್ರಳಾಪಂ (ವಂಶಾವಳಿ. ೪-೧೧೧). ೪. ಬ್ರಹ್ಮ. ೫. ಭಿಕ್ಷುಕ. ೬. [ಜೈನ] ಒಂದೇ ಕಡೆಗೆ ನಿಲ್ಲುವ ಶ್ರಮಣ: ಗುರುಸ್ಥವಿರಾದಿ ನಿರೂಪಿತ ಮಾರ್ಗಾಚರಣಮುಂ . . . ಎಂದಿವು ಮೊದಲಾಗೊಡೆಯಱಿಂ ತನಗೆ ತಕ್ಕಂತು ನಗಟ್ಟುದು (ತತ್ತ್ವಪ್ರ. ೩೪೩); ಅಂಗಬಾಹ್ಯಗ್ರಂಥಗಳನ್ನು ಆ ಕಾಲದ ಸ್ಥವಿರರು (ಒಂದೇ ಕಡೆಗೆ ನಿಲ್ಲುವ ಶ್ರಮಣರು) ರಚಿಸಿದ್ದಾರೆ (ಜೈನಪ. ೧೬೪). ೭. [ಬೌದ್ಧ] ಹಿರಿಯನಾದ ಬೌದ್ಧಮತಾನುಯಾಯಿ: ಅವರು ಏನಾದರೂ ಮರೆತುಬಿಟ್ಟು ಹೋಗಿರುವುದುಂಟೋ ಎಂದು ನೋಡುವುದು ಸ್ಥವಿರ ಆನಂದನ ಪದ್ಧತಿ (ಹತ್ತುಮ. ೪೭); ಸಂಘಪಿತರೂ ಸಂಘಪರಿನಾಯಕರೂ ಆಗಿ ಅನುಭವಿಕರಾದ ಸ್ಥವಿರರಿಗೆ ವಿಶೇಷವಾದ ಪೂಜೆಯನ್ನು ಕೊಡದ ಭಿಕ್ಷುವು ಧರ್ಮವಿನಯಗಳಲ್ಲಿ ವೃದ್ಧಿ . . . ಪಡೆಯಲು ಶಕ್ತನಲ್ಲ (ತೀರ್ಥಕ. ೧೫); ಆಗ ಸ್ಥವಿರನು ಎಲ್ಲಾ ದುಃಖಸ್ಕಂಧಗಳಿಗೂ ಸ್ಕಂಧಗಳು ಬೀಜಗಳೆಂದು ವೃಕ್ಷದ ಉಪಮಾನವನ್ನು ಹೇಳಿದನು (ಬುದ್ಧಪ. ಮಿಲಿಂದ. ೭೨). [ಸಂ.]

ಸ್ಥವಿರವಾದ (ನಾ). [ಬೌದ್ಧ] ಸುತ್ತ, ವಿನಯ ಮತ್ತು ಅಭಿಧಮ್ಮ ಎಂಬ ಮೂರು ಬೌದ್ಧಗ್ರಂಥಗಳಲ್ಲಿ ನಿರೂಪಿತವಾಗಿರುವ ಧರ್ಮ; ಹೀನಯಾನ ಬೌದ್ಧಧರ್ಮ: ಹೀನಯಾನವೆಂಬ ಸ್ಥವಿರವಾದವನ್ನು "ಬುದ್ಧನ ಧರ್ಮ" ಎಂದೂ . . . ಅರ್ಥಮಾಡಿಕೊಳ್ಳಬಹುದು (ಭಾರತ. ೨೦೫). [ಸಂ.]

ಸ್ಥವಿರೆ (ನಾ). ಮುದುಕಿ; ವೃದ್ಧೆ: ಅಸ್ಥಿಪಂಜರದಂತವೋಲಸ್ಥಿರಸ್ಥವಿರೆಯಂ ಕಂಡು (ಶ್ರೀರಾಮಾ. ೨೧-೫೫೬). [ಸಂ. ಸ್ಥವಿರಾ]

ಸ್ಥಳ 'ಸ್ಥಲ' ನೋ.

ಸ್ಥಳಕುಳ 'ಸ್ಥಲಕುಳ' ನೋ.

ಸ್ಥಳಚರ 'ಸ್ಥಲಚರ' ನೋ.

ಸ್ಥಳಜ್ಞ 'ಸ್ಥಲಜ್ಞ' ನೋ.

ಸ್ಥಳಪಲ್ಲಟ 'ಸ್ಥಲಪಲ್ಲಟ' ನೋ.

ಸ್ಥಳಮನೆ (ನಾ). ಸ್ಥಳೀಯ ಅಧಿಕಾರಿಗಳ ಮನೆ: (ಕ).

ಸ್ಥಳಮನೇ ಸಾಗು = ಸ್ಥಳೀಯ ಅಧಿಕಾರಿಗಳ ಮನೆಯ ಕೆಲಸಗಳನ್ನು ಸಾಗಿಸುವುದು,— ವ್ಯವಹಾರಗಳನ್ನು ನೋಡಿಕೊಳ್ಳುವುದು (?): ಅರಮನೆ ಕೆಲಸ, ಸ್ಥಳಮನೇಸಾಗು, ಸಂತು, ಎತ್ತುವಳಿ ಮೊದಲಾದ ಕೆಲಸಗಳನ್ನು ಮಾಡುತಾ ಸೇನುಭೋಗರ ಸಮ್ಮತಿಯಿಂದ ನಡೆದುಕೊಳ್ಳುವುದೆಂದು ನೇಮಕ ಮಾಡಿದ್ದೂ ಅಲ್ಲದೆ (ಚತ್ರಪಾ. ೧). [ಸ್ಥಳ (= ಸ್ಥಲ) + ಮನೆ]

ಸ್ಥಳಮರ್ಯಾದೆ (ನಾ). ಸ್ಥಳದ ನಿಯಮ,— ಕಟ್ಟುಪಾಡು : ತಮ್ಮ ಸ್ಥಳಮರ್ಯಾದೆ ಮಹಿಮೆಯಪ್ಪುದು (ಎಕ. VII, ಹೊನ್ನಾಳಿ. ೯೧-೩೭: 1185). [ಸಂ. ಸ್ಥಲಮರ್ಯಾದಾ]

ಸ್ಥಳಯಾತ್ರೆ (ನಾ). (ವ್ಯಾಪಾರದ ಕಾರಣಕ್ಕಾಗಿ) ಭೂಮಾರ್ಗವಾದ ಪಯಣ: ದತ್ತನುಂ ನಂದಿಷೇಣನುಂ ಎಂಬರ್ . . . ಸೋದರಮಾವಂ ಭದ್ರಮಿತ್ರನಲ್ಲಿ ಮೊದಲ್ಗೊಂಡು ಸ್ಥಳಯಾತ್ರೆಗೆ ಪೋಗಿ ಸಂಖ್ಯಾತೀತಸಾರಧನಮಂ ಪಡೆದು ಬರ್ಪೆಡೆಯೊಳ್ (ಶಾಂತಿಪು. ೯-೯೦ ಎ). [ಸಂ. ಸ್ಥಲಯಾತ್ರಾ]

ಸ್ಥಳವಂದಿಗ 'ಸ್ಥಲವಂದಿಗ' ನೋ.

ಸ್ಥಳವಿಪರ್ಯಯ (ನಾ). ಸ್ಥಳದ ಬದಲಾವಣೆ ; ಸ್ಥಾನಾಂತರ ; ವರ್ಗಾವಣೆ: ನಿತ್ಯಪರೀಕ್ಷಣ ಸ್ಥಳವಿಪರ್ಯಯ ಪ್ರತಿಪತ್ತಿದಾನಂಗಳಿಂ ನಿಯೋಗಿಗಳಂ ಕಾಮದುಘರ್ ಮಾಡಿಯುಂ (ಚಂದ್ರಪ್ರ. ೨-೬೧). [ಸಂ. ಸ್ಥಲವಿಪರ್ಯಯ]

ಸ್ಥಳಶೃಂಗಾಟ 'ಸ್ಥಲಶೃಂಗಾಟ' ನೋ.

ಸ್ಥಳಸಂಕೋಚ (ನಾ). ಜಾಗ ಕಡಿಮೆಯಾಗಿರುವಿಕೆ ; ಸ್ಥಳ ಸಾಲದಾಗುವಿಕೆ : ಸ್ಥಳಸಂಕೋಚದಿಂದ . . . ಮಹತ್ವದ ವಿಷಯಗಳನ್ನು ಬಿಡಬೇಕಾಯಿತು (ಭಾರದ. ೬.ಮುನ್ನುಡಿ). [ಸಂ. ಸ್ಥಲಸಂಕೋಚ]

ಸ್ಥಳಸುಂಕ (ನಾ). ಸ್ಥಳೀಯ ತೆರಿಗೆ; ಸ್ಥಳದಲ್ಲಿ ಕೊಡಬೇಕಾದ ತೆರಿಗೆ: ಗ್ರಾಮಗಳ ಸ್ಥಳಸುಂಕ ಮಗ್ಗಮನೆ ಬೆಲ್ಲಸುಂಕ ಅಡೆದಱೆ ಮಾದಾಱಿಕೆ ವೋಜನ ವರಿ (ಎಪಿ. XIV. ಗುಂಡ್ಲುಪೇ ೧೨೯-೯೮; 1521); ಇದರಲ್ಲಿ . . . ಗದ್ದೆ, ಬೆದ್ದಲು, ಕಾಡಾರಂಬ, ಮಾರ್ಗಸುಂಕ, ಸ್ಥಳಸುಂಕ, ಹುಲ್ಲುಬನ್ನಿ . . . ಇವೇ ಮೊದಲಾದುವುಗಳು ಸೇರಿದ್ದವು (ಚಿತ್ರಶಾ. ೪ ಉಪೋದ್ಘಾತ). [ಸ್ಥಳ (= ಸ್ಥಲ) + ಸುಂಕ]

ಸ್ಥಳಹೇಱು (ನಾ). ಪ್ರಾದೇಶಿಕವಾಗಿ ಚಾಲ್ತಿಯಲ್ಲಿರುವ ಹೇರು,— ಹೊರೆ (?): ಸ್ಥ[ಳ]ಹೇಱಿಂಗೆ ಕಾಣೋದೇಸಿಯ ಹೆಱಿಂಗೆ ಅರವನೆ ಕೊಳಗ ದಾಯ ಕೊಟ್ಟಲ್ಲಿ (ಕಾಇ. ೩೧-೪೨-೧೮; 1116). [ಸ್ಥಳ (= ಸ್ಥಲ) + ಹೇಱು (< ಪೇಱು)]

ಸ್ಥಳಾಂತರ (ನಾ). ೧. ಇನ್ನೊಂದು ಸ್ಥಳ ; ಬೇರೆಯ ಜಾಗ: ನನ್ನ ಮಗನಾದ ಭರತನನ್ನು ಸೋದರಮಾವನ ಮನೆಗೆ ಕಳುಹಿಸುವ ನೆವದಿಂದ ಸ್ಥಳಾಂತರಕ್ಕೆ ಹೊರಡಿಸಿದನು (ಕಗವ. ೬೪). ೨. ಬೇರೆಯ ಸ್ಥಳಕ್ಕೆ ವರ್ಗಾವಣೆ ಮಾಡುವಿಕೆ; ಸ್ಥಾನಾಂತರ ಮಾಡುವಿಕೆ: ಅನರೀಕ್ಷಿತವಾಗಿ ಸ್ಥಳಾಂತರಶಿಕ್ಷೆಯನ್ನು ಕೊಟ್ಟು ಅಧಿಕಾರಿಗಳನ್ನು ಮನಸ್ಸಿನಲ್ಲಿಯೇ ನಿಂದಿಸುತ್ತ . . . ರೈಲನ್ನು ಹತ್ತಿದೆ (ರಾಯಾಕ. ೨). [ಸಂ. ಸ್ಥಲಾಂತರ]

ಸ್ಥಳಾಂತರಗೊಳ್ಳು (ಕ್ರಿ). ಬೇರೆಯ ಸ್ಥಳಕ್ಕೆ ಸಾಗಿಸಲ್ಪಡು; ವರ್ಗಾವಣೆ ಹೊಂದು: ಅಸಂಖ್ಯಾತಜನರು ಬಂದು, ಇದ್ದು, ವಲಸೆಹೋಗಿ ಸ್ಥಳಾಂತರಗೊಂಡು . . . ತಮ್ಮ ಜೀವನನಾಟಕವನ್ನು ನಡೆಯಿಸಿದರು (ಯಾಕ್ಷಪ. ೨).

[ಸ್ಥಳಾಂತರ + ಕೊಳ್ಳು (< ಕೊಳ್)]

ಸ್ಥಳಾವಕಾಶ (ನಾ). ಜಾಗ ಇರುವ ಸೌಲಭ್ಯ; ಸ್ಥಾನಾವಕಾಶ: ಚಿತ್ರಗಳಲ್ಲಿ ಸ್ಥಳಾವಕಾಶಪರಿಜ್ಞಾನ, ಆಕೃತಿಗಳ ಒಪ್ಪ ಕೂಡ ಕಾಣದು (ಭಾರದ. ೫೨೭).

[ಸಂ. ಸ್ಥಲಾವಕಾಶ]

ಸ್ಥಳಿ 'ಸ್ಥಲಿ' ನೋ.

ಸ್ಥಳಿಕ (ಗು). ಸ್ಥಳದಲ್ಲಿರುವ; ಸ್ಥಾನೀಯ; ಅದೇ ಊರಿನ: ಸ್ಥಳಿಕ ಕೆಲವು ಹಸರುಗಳು ಅವಸಲ್ಲಿ ಕುತೂಹಲವನ್ನೇ ಕೆರಳಿಸಿದ್ದವು (ರಂಗರೋ. ೬೪); ಗಜಪುರದ ಸಾಲಿಗ್ರಾಮ ನರಸಿಂಹಸ್ವಾಮಿಗೂ ಇನ್ನೂ ಒಂದೆರಡು ಸ್ಥಳಿಕ ದೇವರುಗಳಿಗೂ ಪ್ರತ್ಯೇಕವಾದ ಸ್ತುತಿಗಳು ಇಲ್ಲಿ ಸಂದುದನ್ನು ಕಾಣಬಹುದು (ಯಾಕ್ಷಪ. ೫೦). [ಸಂ. ಸ್ಥಲಿಕ]

ಸ್ಥಳೀಕ 'ಸ್ಥಲೀಕ' ನೋ.

ಸ್ಥಳೀಯ (ಗು). ಸ್ಥಳಕ್ಕೆ ಸೇರಿದ; ಸ್ಥಳಕ್ಕೆ ವಿಶಿಷ್ಟವಾದ: ಉಬ್ಬರವಿಳಿತಗಳು, ನೀರು ಆವಿಯಾಗುವ ವೇಗದಲ್ಲಿ ವ್ಯತ್ಯಾಸ, ಲವಣತೆಯಲ್ಲಿ ಭೇದ ಇವುಗಳಿಂದ ಅಲ್ಲಲ್ಲಿ ಸ್ಥಳೀಯ ಉದಕಪ್ರವಾಹಗಳಾಗುತ್ತವೆ (ಭೂವಿ. ೯೧).

ಸ್ಥಳೀಯಕಾಲಮಾನ = ಒಂದು ಸ್ಥಳಕ್ಕೆ ಸೀಮಿತವಾದ ಕಾಲಮಾನ; ಒಂದು ರೇಖಾಂಶದಲ್ಲಿರುವ ಸ್ಥಳಗಳ ಕಾಲಮಾನ: ರಂಗೂನ್, ಬೊಂಬಾಯಿ, ಕಲ್ಕತ್ತ ನಗರಗಳ ಸ್ಥಳೀಯಕಾಲಮಾನ ಬಹುಮಟ್ಟಿಗೆ ವ್ಯತ್ಯಾಸವಾಗಿರುತ್ತದೆ (ಭೂವಿ. ೨೦). [ಸಂ. ಸ್ಥಲೀಯ]

ಸ್ಥಳೈಕ್ಯ (ನಾ). [ಕಾವ್ಯಮೀ] ನಾಟಕದ ಕ್ರಿಯೆ ಒಂದೇ ಸ್ಥಳದಲ್ಲಿ ನಡೆಯುವಿಕೆ: ಕಾಲೈಕ್ಯ, ಸ್ಥಳೈಕ್ಯ ಎಂಬುವು ನಾಟಕರಚನೆಯ ಸಮ್ಮತತತ್ತ್ವಗಳಾದುವು (ಸಾಹಿಪ್ರ. ೧೭೪). [ಸಂ. ಸ್ಥಲೈಕ್ಯ]

ಸ್ಥಾಣುವಲೀಲೆ (ನಾ). ಶಿವನ ಲೀಲೆ; ಶಿವಲೀಲೆ: ಪರಶಿವನ ಚಂದ್ರಧರಲೀಲೆಯಾದಿಯಾದ ಸ್ಥಾಣುವಲೀಲೆಯಂತ್ಯಮಾದ ಇಪ್ಪತ್ತೆದು ಲೀಲೆಗಳ ಆ ಪರಶಿವನ ಸಗುಣಾನಂದಲೀಲೆ (ಭೈರೂ. I. ೨). [ಸಂ. ಸ್ಥಾಣುಲೀಲಾ]

ಸ್ಥಾಣು (ಗು). ೧. ಸ್ಥಿರವಾದ; ಭದ್ರವಾದ; ಅಚಲವಾದ. (ನಾ). ೨. ಶಿವ; ಈಶ್ವರ : ಅನಾಥೆಯಂ ಶರಣಿನುತ್ಪಾಶ್ರಯಿಸಿದೆಂ ಸ್ಥಾಣುವಂ (ಕಾದಂಪು. ೯೫೩); ವನಜಾಕ್ಷಂ ವೈಷ್ಣವಾಸ್ತ್ರಂದುಡೆ ಸುರರಗಿದರ್ ಸ್ಥಾಣುವಲ್ಲಾದಿದಂ (ಜಗವಿ. ೮-೬೩). ೩. ಮರದ ಬೊಡ್ಡೆ,— ಕಾಂಡ; ಮುಂಡಿಗೆ: "ಆರಯ್ಯೆ ಮುಂಡಿಗೆ ಸ್ಥಾಣುವೆಂದನಿಸಿಕ್ಕು" (ಮಂಗರಾ. ೫೯-೧೩) : ಸ್ಪರ್ಶಕೆ ಸ್ಥಾಣುವೆಂದನಿ . . . ಎಡೆಯಾಡುತಿರ್ಪುದೆ ನಿರ್ವಿಷಯ ಮತವು (ಗಗಶಾ. ೧೬-೧೧). ೪. ಕಂಬ; ಸ್ತಂಭ. ೫. ಗೂಟ ; ಮೊಳೆ. ೬. ಕತ್ತರಿಸಿದ ಮರದ ಕೊರಡು. ೭. ಈಟಿ; ಸಬಳ. ೮. ಬ್ರಹ್ಮ. ೯. ವಿಷ್ಣು. [ಸಂ.]

ಸ್ಥಾಣುಚೋರನ್ಯಾಯ (ನಾ). [ತರ್ಕ] ಲೌಕಿಕನ್ಯಾಯಗಳಲ್ಲಿ ಒಂದು; ಮಬ್ಬುಗತ್ತಲೆಯಲ್ಲಿ ನಿಲ್ಲಿಸಿರುವ ಮೋಟುಮರವನ್ನು ಕಳ್ಳನೆಂದು ಭ್ರಮಿಸುವುದು. ಅಜ್ಞಾನದಿಂದ ಉಂಟಾಗುವ ತಪ್ಪುತಿಳಿವಳಿಕೆ: ಸ್ಥಾಣುಚೋರನ್ಯಾಯದಂತೆ ಶುಕ್ತಿರಜತನ್ಯಾಯದಂತೆ ರಜ್ಜುಸರ್ಪನ್ಯಾಯದಂತೆ ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸುಂಟೆ (ಸಿದ್ಧವ. ೪. ೨೫-೭೨). [ಸಂ.]

ಸ್ಥಾಣುನಿವಸನ (ನಾ). ೧. ಶಿವನ ನಿವಾಸ. ೨. ಮರದ ಕಾಂಡಗಳಿಗೆ ಆಶ್ರಯವಾದುದು. ೧, ೨: ಆ ಮಹಾವನಂ . . . ಸ್ಥಾಣುನಿವಸನವಾಗಿಯುಂ ಅಪರ್ಣಾನ್ವಿತಮಲ್ತು (ಚಂದ್ರಪ್ರ. ೫-೫೮ ವ). [ಸಂ.]

ಸ್ಥಾಣೂತ್ಕರ (ನಾ). ಕೊರಡುಗಳ ಸಮೂಹ : ನವಚೂತಂ ತಳರ್ವಂದದಿಂ ತಳರ್ಗುಮೆ ಸ್ಥಾಣೂತ್ಕರಂ ಚಿತ್ರದೊಳ್ (ಜಗವಿ. ೧-೧೩). [ಸಂ.]

ಸ್ಥಾನ (ನಾ). ೧. ನಿಲ್ಲುವಿಕೆ; ನೆಲೆಯಾಗಿ ನಿಂತಿರುವಿಕೆ. ೨. ಭದ್ರವಾಗಿರುವಿಕೆ ; ನಿಶ್ಚಲತೆ; ದೃಢತೆ. ೩. ಅವಸ್ಥೆ; ಇರವು. ೪. ಜಾಗ; ಸ್ಥಳ: "ತಾಣಮ ತಾಂ ಸ್ಥಾನಮಕ್ಕುಂ" (ಕವಿಕಂ. ೧೨೮). ೫. ಮನೆ; ನಿವಾಸ: "ಆವಾಸಃ, [ಆ]ವಸಥಂ, ಗೃಹಂ, ಭವನಂ, ಸ್ಥಾನಂ . . . ಆಲಯಃ - ಈ ೩೧ ಮನೆ" (ಹಲಾಯು. ೪೪-೧೩೬). ೬. ನಾಡು; ಪ್ರದೇಶ. ೭. ನಗರ ; ಪಟ್ಟಣ. ೮. ಪದವಿ; ದರ್ಜೆ; ಅಂತಸ್ತು: ಸಮಾಜದಲ್ಲಿ ಅವರ ಸ್ಥಾನ ಯಾವುದೆಂಬುದನ್ನು ಯೋಚಿಸದೆ ಅವರೊಂದಿಗೆ ಮಾತನಾಡಿ ವಿನೋದ ಮಾಡಬಹುದಾಯಿತು (ಮಲಸಾ. ೧೭) ; ಸ್ಥಾನವನಾರ್ಜಿಸು ಸಿರಿಯ ಸಂಪಾದಿಸು ಸಾಧ್ಯವಾದರೆ ಮಾನದಿಂದೆ (ಇಂಚಾಪ. ೧೩೧-೪೩). ೯. ಪವಿತ್ರಕ್ಷೇತ್ರ; ದೇವಸ್ಥಾನ: [ಪರಿರ]ಕ್ಷಿಸಿದೀ ಸ್ಥಾನಕ್ಕೆರಡಂ ಬಗೆದಳಿ(ಬಿ)ದವಂಗೆ . . . ಪಾಪಂ ಸಾರ್ದುಂ (ಎಸಾ. XXVIII, ೩೬-೭೩; 1082); ಜ್ಞಾನವಿಲ್ಲದನ ಬಱಿಯೊಡಲು ಹಾಳೂರ ಸ್ಥಾನದಂತಿಕ್ಕು (ಸರ್ವಜ್ಞ. ೪೨೭). ೧೦. ಸರಿಯಾದ ಸ್ಥಳ; ಯೋಗ್ಯವಾದ ಜಾಗ. ೧೧. (ಬಾಣ ಬಿಡುವುದು ಮುಂತಾದ ಸಂದರ್ಭಗಳಲ್ಲಿ ನಿಲ್ಲುವ) ದೇಹದ ಭಂಗಿ; ಸ್ಥಾನಕ: ಗದೆಗಳುಮನಿರ್ವರುಮಾಯ್ದುಕೊಂಡು ಅಲೀಢ ಪ್ರತ್ಯಾಲೀಢ ಸಮಪಾದ ವೈಷ್ಣವ ಮಂಡಲಾಗ್ರಮುಮೆಂಬ ಪಂಚವಿಧ ಸ್ಥಾನಕ್ಕತಂಗಳೊಳಂ . . . ಎಂಟುಂತೆಱದ ಪ್ರಹರಣಂಗಳೊಳಂ ಅತಿಪರಿಚಿತರಾಗಿ ವೈಶಾಖಸ್ಥಾನದೊಳ್ ನಿಂದು (ಗದಾಯು. ೮-೧ ವ). ೧೨. ವರ್ಣಗಳ ಉಚ್ಚಾರಣೆಯ (ಕಂಠ, ತಾಲವ್ಯ ಮುಂತಾದ) ಬೇರೆ ಬೇರೆ ಅಂಗ. ೧೩. ಸಂದರ್ಭ ; ಅವಕಾಶ. ೧೪. ವಿಷಯ; ವಸ್ತು. ೧೫. ಹೋಲಿಕೆ; ಸಾದೃಶ್ಯ. ೧೬. [ವೀಶೈ] "ಗುರುವಿನ ಗೃಹಕ್ಷೇತ್ರಾದಿ ರಕ್ಷಣವೆ ಸ್ಥಾನವೆನಿಪುದು" (ಮನೋಎ. ೨-೨೧ ಟೀಕು) : ಸದ್ಗುರುಸೇವೆ ಯಾವುದೆಂದೊಡೆ ಆಪ್ತ, ಅಂಗ, ಸ್ಥಾನ, ಸದ್ಭಾವವೆಂದು ನಾಲ್ಕುತೆಱನಾಗಿಹುದು . . . ಗುರುವಿನ ಗೃಹಕ್ಷೇತ್ರಾದಿರಕ್ಷಣಾಧಿಕವೇ ಸ್ಥಾನವೆನಿಸುವುದು (ವೀಚಿಂ. ೧೬). ೧೭. [ಜೈನ] ದ್ವಾದಶಾಂಗಗಳಲ್ಲಿ ಒಂದು: ಆಚಾರ, ಸೂತ್ರಕೃತ, ಸ್ಥಾನ . . . ದೃಷ್ಟಿವಾದ ಎಂಬುವು ಹನ್ನೆರಡು ಅಂಗಗಳು (ಭಾತತ್ತ್ವ. ೨೨೮). ೧೮. [ವೈದಿಕ] ಆಗಮ ಗ್ರಂಥಗಳಲ್ಲಿಯ ಪ್ರಕರಣಗಳ ಸಮೂಹ : ಪ್ರಕರಣಗಳ ಸಮೂಹಕ್ಕೆ ಸ್ಥಾನವೆಂದು ಹೆಸರು (ಭಾತತ್ತ್ವ. ೨೬). ೧೯. [ರಾಜನೀ] ರಾಜ್ಯದ ಶಕ್ತಿಗೆ ಮುಖ್ಯವಾದ ಆಧಾರ; ಸೈನ್ಯ, ಕೋಶ, ನಗರ, ರಾಜ್ಯ ಇತ್ಯಾದಿ. ೨೦. ಯುದ್ಧ ಬಂದರೆ ಎದುರಿಸುವುದಕ್ಕೆ ಸಿದ್ಧವಾಗಿ ಸೈನ್ಯವನ್ನು ನಿಲ್ಲಿಸಿಕೊಂಡಿರುವ ಸ್ಥಿತಿ. ೨೧. ಶತ್ರುವಿನೊಂದಿಗೆ ಸಮಾನತೆಯನ್ನು ಕಾಪಾಡಿಕೊಂಡಿರುವಿಕೆ: ಕ್ಷಯವೃದ್ಧಿಸ್ಥಾನವಧಿತ್ರಯಂಗಳೊಳ್ ಕ್ಷಯವನಹಿತರೊಳ್ ಶೇಷವಧಿದ್ವಯಮಂ

ತನ್ನೊಳ್ ನಿಱಿಸುವುದು (ಶಾಂತಿಪು. ೨-೪೯). ೨೨. [ಸಂಗೀತ] ಸಪ್ತಸ್ವರಗಳಲ್ಲಿ ಪ್ರತಿಯೊಂದರ ನಿರ್ದಿಷ್ಟ ಶ್ರುತಿಸ್ಥಾಯಿ. [ಸಂ.]

ಸ್ಥಾನಕ (ನಾ). ೧. ಸ್ಥಳ; ಜಾಗ; ಪ್ರದೇಶ: ಜನನಂ . . . ನಿರ್ಜನಸ್ಥಾನಕದೊಳ್ (ಜಾತಕ. ೪-೨೨). ೨. ನಗರ; ಪಟ್ಟಣ. ೩. ಬಾಣ ಬಿಡುವಾಗ ಬಿಲ್ಲುಗಾರನು ನಿಲ್ಲುವ ಭಂಗಿ. ೪. ಗಿಡಗಳಿಗೆ ನೀರುಣಿಸಲು ಸುತ್ತಲೂ ರಚಿಸಿದ ಮಡಿ,– ಪಾತಿ; ಆಲವಾಲ. ೫. [ನಾಟ್ಯ] ನಿಲ್ಲುವ ಭಂಗಿ,– ನಿಲವು: ಋಜು ಋಜುಪರಾವೃತ್ತಿ ಅರ್ಧಋಜು ಅರ್ಧಋಜುಪರಾವೃತ್ತಿ ಸಾಚಿ ಸಾಚಿಪರಾವೃತ್ತಿ ದ್ವ್ಯರ್ಧಾಕ್ಷಂ ತತ್ಪರಾವೃತ್ತಿ ಪಾರ್ಶ್ವಗತಮೆಂಬ ನವಸ್ಥಾನಕಂಗಳೊಳಂ (ಚಂದ್ರಪು. ೧೫-೭೦ ವ); ಅಂತು ಪುರುಷ, ಸ್ತ್ರೀ, ದೇಶೀ, ಉಪವಿಷ್ಟ, ಸುಪ್ತ ಇವುಗಳಿಂದ ಒಟ್ಟು ಐವತ್ತೊಂದು ಸ್ಥಾನಕಂಗಳಕ್ಕುಂ (ಲಾಸ್ಯರಂ. ೭-೧೨ ವ); ಸ್ಥಾನಕ, ನಿಲ್ಲುವ ಭಂಗಿ ; ಚಾರಿ, ಕಾಲುಗಳ ಚಲನ (ಭಾರದ. ೫೫೩). ೬. [ವಾಸ್ತು] ದೇವಾಲಯಗಳಲ್ಲಿ ಪ್ರತಿಷ್ಠಿಸುವ ಮೂರ್ತಿಪ್ರಕಾರಗಳಲ್ಲಿ ಒಂದು; ನಿಂತುಕೊಂಡಂತೆ ನಿರ್ಮಿಸಿದ ಮೂರ್ತಿ: "ಸ್ಥಾನಕ"ವೆಂದರೆ ನಿಂತಿರುವ ವಿಗ್ರಹ (ಮೃವಾಸ್ತು. ೨೭); ಗರ್ಭಗುಡಿಯಲ್ಲಿ ಮೂರು ಸ್ಥಾನಕವಿಗ್ರಹಗಳಿವೆ (ಹೊಯ್ಸಳಾ. ೮೮). [ಸಂ.]

ಸ್ಥಾನದೀಪಿಕೆ (ನಾ). ಒಂದೇ ಸ್ಥಳದಲ್ಲಿಟ್ಟಿರುವ ದೀಪ; ತಾಣದೀವಿಗೆ: "ಸ್ಥಾನದೀಪಿಕೆ- ತಾಣದೀವಿಗೆ" (ಶಮದ. ೨೮೯ ಪ್ರಯೋ) ; ಚಂಚತ್ಕಾಂಚನಸ್ಥಾನದೀಪಿಕಾಗ್ರ ನಿರ್ವ್ಯಗ್ರದೇದೀಪ್ಯಮಾನದೀಪಪ್ರಭಾಭಿಭೂತತಮಸ್ತೋಮಮುಮಪ್ಪ ಗರ್ಭಗೃಹಮಂ . . . ಪೊಕ್ಕು (ಚಂದ್ರಪು. ೩-೯೭ ವ). [ಸಂ. ಸ್ಥಾನದೀಪಿಕಾ]

ಸ್ಥಾನಪತಿ (ನಾ). ೧. ಮಠದ ಅಥವಾ ದೇವಾಲಯದ ಪ್ರಧಾನಾಧಿಕಾರಿ: ಆ ಗಣಗಚ್ಛದ ಸ್ಥಾನಪತಿಗಳ್ (ಎಕ. VII. ಶಿವಮೊ. ೧೦-೫೪; 1085) ; ಸ್ಥಾನಿಕ, ಸ್ಥಾನಾಧ್ಯಕ್ಷ ಮತ್ತು ಸ್ಥಾನಪತಿ ಎಂಬೀ ಮೂರು ವಾಚಕಗಳು ಒಂದೇ ಅರ್ಥವನ್ನೀಯುವುವು (ತುಳುನಾ. ೧೧೦). ೨. ಅಧಿಕಾರಿ: ಮಹಾರಾಜಾಧಿರಾಜರು ಪರಮಹರ್ಷಿತರಾಗಿ ಮಹಲುದಾರನು ತಂದ ಪತ್ರಗಳನ್ನು ಓದುವ ಸ್ಥಾನಪತಿಗಳ ಕೈಗೆ ಕೊಟ್ಟು ಓದಿಸಿದರು (ಬಪ್ಪರು. ೨). [ಸಂ.]

ಸ್ಥಾನಪಲ್ಲಟ (ನಾ). ೧. ಒಂದು ಜಾಗವನ್ನು ಬಿಟ್ಟು ಇನ್ನೊಂದು ಜಾಗಕ್ಕೆ ಹೋಗುವಿಕೆ; ಸ್ಥಾನಾಂತರ: ಈ ಸೂತ್ರಗಳಲ್ಲಿ ಪರಸ್ಪರ ಸ್ಥಾನಪಲ್ಲಟವಾದರೆ . . . ವ್ಯಾಕರಣಪಾಠಕ್ಕೆ ಭಂಗವುಂಟಾಗುತ್ತದೆ (ಶಮಪಾಂ. ೬); ಧ್ರುವಗಳ ಸ್ಥಾನ ಪಲ್ಲಟವು ಇದಕ್ಕೆ ಕಾರಣ (ನಕ್ಷತ್ರ. ೭೨). ೨. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವಿಕೆ; ಸ್ಥಳಾಂತರ ಮಾಡುವಿಕೆ: ಪದಾರ್ಥಗಳ ಸ್ಥಾನಪಲ್ಲಟ ದಿಂದ ಆತುರದಲ್ಲಿ ಕೈಗೆ ಸಿಕ್ಕದೆ ಶ್ರಮವಾಗುತ್ತದೆ (ರೂಢಿ). [ಸ್ಥಾನ + ಪಲ್ಲಟ]

ಸ್ಥಾನಭ್ರಷ್ಟ (ನಾ). ೧. ತನ್ನ ಸ್ಥಾನದಿಂದ ಹೊರದೂಡಲ್ಪಟ್ಟವನು; ಪದಚ್ಯುತನಾದವನು: ಎಂತುಂ ಸ್ಥಾನಭ್ರಷ್ಟಂಗೆ ತೇಜಮೆಂಬುದುಮುಂಟೇ (ಆದಿಪು. ೯-೭೮). ೨. [ಸಂಗೀತ] "ತ್ರಿಸ್ಥಾಯಿಗಳನ್ನೂ ಸ್ವರಸ್ಥಾನಗಳನ್ನೂ ಬಿಟ್ಟು ಹಾಡುವವನು" (ಸಂಗೀಚಂ. ೧೦೩). [ಸಂ.]

ಸ್ಥಾನಭ್ರಷ್ಟತೆ (ನಾ). ಸ್ಥಾನವನ್ನು ಕಳೆದುಕೊಳ್ಳುವಿಕೆ; ಸ್ಥಾನಚ್ಯುತಿ; ಪದವಿ ಭ್ರಷ್ಟನಾಗುವಿಕೆ: ನೀನಾತಂಗೆಱಗದೆಯಭಿಮಾನತೆಯಿಂದಿರ್ದೆಯಾದಡಂ ನಿನಗಕ್ಕುಂ ಸ್ಥಾನಭ್ರಷ್ಟತೆ ರಾಜ್ಯವಿಹೀನತೆ (ಪುಣ್ಯಾಸ್ರ. ೫-೫೫). [ಸಂ. ಸ್ಥಾನಭ್ರಷ್ಟತಾ]

ಸ್ಥಾನಮಾನ (ನಾ). ಸ್ಥಾನ ಮತ್ತು ಗೌರವ: ಭಾರತದ ಸಮಸ್ತನಾಗರಿಕರಿಗೆ . . . ಸ್ಥಾನಮಾನ ಮತ್ತು ಅವಕಾಶಸಮತೆಯೂ ದೊರೆಯುವಂತೆ ಮಾಡುವುದ ಕ್ಕಾಗಿಯೂ (ಭಾಧಾನ. ೧); ಭೂಸ್ವಾಮ್ಯದ ವಿಷಯದಲ್ಲಿ ತನ್ನ ಸ್ಥಾನಮಾನವೇನೆಂಬ ಪ್ರಶ್ನೆಯನ್ನು ಕೆರಳಿಸಿತು (ಪುನರು. ೨೬೨). [ಸಂ.]

ಸ್ಥಾನಲಾಭ (ನಾ). ೧. ಸ್ಥಾನ ಅಥವಾ ಪದವಿಯ ಪ್ರಾಪ್ತಿ. ೨. [ಜೈನ] ನಲವತ್ತೆಂಟು ದೀಕ್ಷಾನ್ವಯಕ್ರಿಯೆಗಳಲ್ಲಿ ಮೂರನೆಯದು: ಅವತಾರ ವೃತ್ತಿಲಾಭ ಸ್ಥಾನಲಾಭ . . . ಉಪಯೋಗತ್ವಮೆಂಬೆಂಟುಂ ಬೆರಸು ಪೂರ್ವೋಕ್ತೋಪನಯನಾದಿ ಚತ್ವಾರಿಂಶತ್ ಕ್ರಿಯೆಗಳೊಡನೆ ನಾಲ್ವತ್ತೆಂಟು ದೀಕ್ಷಾನ್ವಯಕ್ರಿಯೆಗಳುಮಂ (ಆದಿಪು. ೧೫-೧೬ ವ). [ಸಂ.]

ಸ್ಥಾನಶುದ್ಧಿ (ನಾ). ಐದು ವಿಧದ ಶುದ್ಧಿಗಳಲ್ಲೊಂದು: ಆತ್ಮಶುದ್ಧಿ ಸ್ಥಾನಶುದ್ಧಿ ದ್ರವ್ಯಶುದ್ಧಿ ಲಿಂಗಶುದ್ಧಿ ಮಂತ್ರಶುದ್ಧಿಗಳೆಂಬ ಪಂಚಶುದ್ಧಿಗಳಂ ವಿಸ್ತರಿಸುವುದಱಲ್ಲಿ ಶೋಧನ ಸಮ್ಮಾರ್ಜನ ಅನುಲೇಪನ ವರ್ಣಕ ಗಂಧ ಪುಷ್ಪ ಧೂಪ ದೀಪ ಪೂಜೋಪಕರಣ ವಾಸ್ತುಶುದ್ಧಾದಿಗಳಿಂ ಚೌಕವನಲಂಕರಿಸುವುದೇ ಸ್ಥಾನಶುದ್ಧಿ (ವಿವೇಕ. ೧೦೩). [ಸಂ.]

ಸ್ಥಾನಾಚಾರ್ಯ (ನಾ). = ಸ್ಥಾನಪತಿ ೧: ಸಮಸ್ತಧರ್ಮಂಗಳಿವೆಲ್ಲಮಂ ನೋಡಿ ಮಾಡುವರೆಂದಡದೇಂ ಪ್ರಸಿದ್ಧರೋ ಸ್ಥಾನಾಚಾರ್ಯ್ಯರ್ (ಸೌಇಇ. XX. ೭೬-೪೪ ; 1118); ಸ್ಥಾನಾಚಾರ್ಯರಾದ ಕಾಳಾಮುಖರು . . . ಗುರುಗಳಾಗಿ ಜಂಗಮರೆಂದು ಕರೆಸಿಕೊಂಡರು (ನೊಳಂಬ. ೧೩೪). [ಸಂ.]

ಸ್ಥಾನಾಧಿಪ (ನಾ). = ಸ್ಥಾನಪತಿ ೧ : ಸ್ವಯಂಭುದೇವರ ಸ್ಥಾನಾಧಿಪರಪ್ಪ ದೇವರಾಸಿ ಜೀಯ್ಯರ ಸಿಷ್ಯ ವಾಮದೇವ (ಸೌಇಇ. XX. ೨೪-೨೨; 1034). [ಸಂ.]

ಸ್ಥಾನಿಕ (ಗು). ೧. ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ,– ಸೀಮಿತ ವಾದ: ಇಂದಿನ ಈ ಸ್ಥಾನಿಕ ರಾಜಕಾರಣಕ್ಕಾಗಿ ಬಲಿಯಾಗುವವರು ಮಧ್ಯಮವರ್ಗದ ಬಡಜನರು (ಅಜನಾ. ೧). (ನಾ). ೨. ದೇವಸ್ಥಾನ ಮುಂತಾದ ಸಾಮಾಜಿಕ ಸಂಸ್ಥೆಗಳ ಮೇಲಧಿಕಾರಿ; ಆಡಳಿತಾಧಿಕಾರಿ: ಎಱೆಯಂಗೇಶ್ವರದ ಸ್ಥಾನಿಕ ಇ ಲೇಖ ಬರೆದೊಂ (ಮೈಅರಿ. ೧೯೩೮, ೬೭-೧೩; 908); ಸಿದ್ಧನಾಥದೇವರ ಸ್ಥಾನಿಕ ಹಿರಿಯ ಸಿದ್ಧಣಂಗಳ ಮಗ ಸೋವಣ್ಣಂಗೆ ಧಾರೆಯನೆಱದು ಕೊಟ್ಟೆವು (ಎಕ. XI. ಚಿತ್ರದು. ೫೫-೧೩; 1355); ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿರುವ ಆಡಳಿತೆಯ ಕ್ರಮದಂತೆ ಸಣ್ಣ ನೆಲೆವೀಡುಗಳ ಅಧಿಕಾರಿಗಳು ಸ್ಥಾನಿಕರೆಂದೂ ಅವರು ಧಾರ್ಮಿಕ ರಾಜಕೀಯಾಧಿಕಾರಿಗಳಾಗಿದ್ದರೆಂದೂ ಸ್ಪಷ್ಟವಿದೆ (ತುಳುನಾ. ೯೮). ೩. ದೇವಸ್ಥಾನದಲ್ಲಿ ಪೂಜಾರಿಗೆ ಸಹಾಯಕನಾದ ಸೇವಕ: ಕಾಯವೆಂಬ ದೇಗುಲದಲ್ಲಿ ಜೀವವೆಂಬ ದೇವರು ಕರಣೇಂದ್ರಿಯಂಗಳೆಂಬ ಸ್ಥಾನಿಕಂ ಕೈಯಲ್ಲಿ ಪೂಜಿಸಿಕೊಂಬುದು ಗೊಹೇಶ್ವರಲಿಂಗಕ್ಕೆ ದೂರ (ಅವಚಂ. ೨೬೨-೧೧೯೧); ದೇವಸ್ಥಾನದ ಸೇವಕರು . . . ಸಾತಾನಿ, ಸ್ಥಾನಿಕ, ವಾರಿಯನ್ (ತುಳುನಾ. ೧೭೨). ೪. ಬ್ರಾಹ್ಮಣರಲ್ಲಿ ಒಂದು ವರ್ಗ: ಸ್ಥಾನಿಕರು ತುಳುನಾಡಿನ ಬ್ರಾಹ್ಮಣರಲ್ಲಿ ಮೊದಲಿಗರು (ತುಳುನಾ. ೭). [ಸಂ.]

ಸ್ಥಾನಿಗ (ನಾ). = ಸ್ಥಾನಿಕ ೨: ವಿಶ್ವಕರ್ಮ್ಮಗೋತ್ರದ ಕರುವೂರೆಮ್ಮ ಪೂಟಲ ಸ್ಥಾನಿಗ ಮಧುರೊವಝುನಗಟ್ಟ ಶಾಸನಂ ಅಗಟ್ಟಿದು ನಿಮಿತ್ತಮಾಗಿ ಕೊಟ್ಟ ಮಣ್ಣೂರ್ಬಣ್ಣುಗಂ ಬೆದೆ ಉತ್ತಮ ಕ್ಷೇತ್ರಂ (ಎಕ IX(S), ಬೆಂಗಳೂ. ೧೫೧-೬೦; 828). 'ಸ್ಥಾನೀಕ' ಪರಾ. [ಸ್ಥಾನ + - ಇಗ]

ಸ್ಥಾಪಕ (ನಾ). ೧. (ದೇವರ ಮೂರ್ತಿಯನ್ನು) ಸ್ಥಾಪನೆ ಮಾಡುವವನು; (ವಿಗ್ರಹವನ್ನು) ಪ್ರತಿಷ್ಠೆಗೊಳಿಸುವವನು,– ನೆಲೆಗೊಳಿಸುವವನು: ಪ್ರಾಪಕ ಸ್ಥಾಪಕ ನಿಯಾಮಕ ವ್ಯಾಪಕನು ಎಂದಱಿದು ನೀ ನಿರ್ಲೇಪನಾಗಿರು (ಪಸಾರ. ೪-೨೯) : ಶಿಲ್ಪಿಗೆ "ಸ್ಥಪತಿ"ಯೆಂದೂ, ಆಗಮಿಕರಿಗೆ "ಸ್ಥಾಪಕ"ರೆಂದೂ ಆಗಮಶಾಸ್ತ್ರದಲ್ಲಿ ಉಲ್ಲೇಖವಿದೆ (ಭಾರದ. ೭೭). ೨. ಮತ, ಧರ್ಮ, ರಾಜ್ಯ, ಸಂಸ್ಥೆ ಮೊದಲಾದುವು ಗಳ ಪ್ರವರ್ತಕ,– ಆರಂಭಕಾರ : ಈ ವಿದ್ಯಾಸಂಸ್ಥೆಯ ಸ್ಥಾಪಕರು ಒಬ್ಬ ದೊಡ್ಡ ಶ್ರೀಮಂತರು (ರೂಢಿ). ೩. [ನಾಟ್ಯ] ರಂಗಭೂಮಿಯ ಮೇಲ್ವಿಚಾರಕ; ಸೂತ್ರ ಧಾರನ ಸಹಾಯಕ: ಸೂತ್ರಧಾರನು ತನ್ನ ಸಹಾಯಕರೊಡನೆ ಪ್ರಸ್ತಾವನೆಯನ್ನು ನಡಸಿ ಹೋದ ಮೇಲೆ "ಸ್ಥಾಪಕ"ನೆಂಬ ಮತ್ತೊಬ್ಬನು ಬಂದು ಕವಿಚರಿತ್ರಾದಿಗಳನ್ನು ಹೇಳಿ ನಾಟಕವನ್ನು ಸ್ಥಾಪಿಸಬೇಕೆಂದು ಹೇಳಿದೆ; ಆದರೆ ಸ್ಥಾಪಕನು ಬರುವುದು ಅಪರೂಪ; ಸೂತ್ರಧಾರನೇ ಪ್ರಾಯಿಕವಾಗಿ ಅವನ ಕೆಲಸವನ್ನೂ ಮಾಡುತ್ತಾನೆ (ಸಂನಾಟ. ೨೭). [ಸಂ.]

ಸ್ಥಾಪತ್ಯ (ನಾ). ೧. ವಾಸ್ತುಶಿಲ್ಪವಿದ್ಯೆ: ಸ್ಥಾಪತ್ಯವಿಶಾರದಪದವಿಯನ್ನು ಪಡೆದ ನಾನು ಆಗಂತುಕವಾಗಿ ಹೆಸರು ದೆಸೆ ಕೇಳುವುದು ಅನಾಗರಿಕವೆಂದು ಬಿಟ್ಟೆ (ಗೀಚುಗ. ೪೦). ೨. ಅಂತಃಪುರದ ಕಾವಲುಗಾರ; ಕಂಚುಕಿ: "ಸೌವಿದಃ, ಸೌವಿದಲ್ಲಃ, ಸ್ಥಾಪತ್ಯಃ, ಕಂಚುಕೀ – ಈ ೪ ಸಾವಾಸಿ" (ಪಲಾಯು. ೭೦-೨೭೩). [ಸಂ.]

ಸ್ಥಾಪನ (ನಾ). ೧. (ದೇವರ ವಿಗ್ರಹ ಮುಂತಾದುವನ್ನು) ಸ್ಥಾಪಿಸುವಿಕೆ; ಪ್ರತಿಷ್ಠಾಪನೆ ಮಾಡುವಿಕೆ: ಶಿವನಂ ಭಜಿಸುತ ಆವಾಹನ ಸ್ಥಾಪನ ಸನ್ನಿಧಾನ

ಸನ್ನಿರೋಧನ ಸಮುಪೀಕರಣಾದಿ ಮುಖ್ಯಕ್ರಿಯೆಗಳಿಂದೊಡಗೂಡಿ (ವೀಕ್ಷ. ೧೦೪). ೨. ಮನಸ್ಸನ್ನು ಧ್ಯಾನದಲ್ಲಿ ನೆಲೆಗೊಳಿಸುವಿಕೆ; ಏಕಾಗ್ರತೆ. ೩. ಮನೆ; ನಿವಾಸ. ೪. ಗರ್ಭಿಣಿಗೆ ಮಾಡುವ ಒಂದು ಸಂಸ್ಕಾರೋತ್ಸವ: 'ಪುಂಸವನ' ಪರಾ. ೫. ಅಲುಗಾಡದಂತೆ ಕಟ್ಟಿ ನಿಲ್ಲಿಸುವುದು,— ಸ್ಥಿರಗೊಳಿಸುವುದು. ೬. ಮತ, ಧರ್ಮ, ಸಂಸ್ಥೆ ಮುಂತಾದುವುಗಳನ್ನು ಸ್ಥಾಪಿಸುವುದು;— ನಿರ್ಮಿಸುವುದು. [ಸಂ.]

ಸ್ಥಾಪನಂಗೆಯ್ (ಕ್ರಿ). ರಚಿಸು; ನಿರ್ಮಿಸು: ಅಪರದಿಗ್ಭಾಗದೊಳನ್ನಗಾರಕೇವಲಿ ಹುತಾಶನಕುಂಡಮಂ ಸ್ಥಾಪನಂಗೆಯ್ದು (ಆದಿಪು. ೧೬-೪೨ ವ). [ಸ್ಥಾಪನ + ಕೆಯ್]

ಸ್ಥಾಪನವಡೆ (ಕ್ರಿ). ಸ್ಥಾಪಿಸಲ್ಪಡು: ಓಪಳ ಗುರುಕುಚಯುಗಳವ ಪ್ರಬ್ಧಶ್ರೇಣಿಚಾಪ ಕಣ್ಣಿಟ್ಟು ನಿಟ್ಟಿಸಲು ಸ್ಥಾಪನವಡೆದಿರ್ದ ಬಾಲೇಂದುಗೆಱೆ ಸುಸ್ಪರೂಪವಾಗಿರ್ದುದೇನೆಂಬೆ (ಮೋಹತ. ೧೬-೪೨ ವ). [ಸ್ಥಾಪನ + ಪಡ್]

ಸ್ಥಾಪನಾಚಾರ್ಯ (ನಾ). ನೆಲೆಗೊಳಿಸಿದ ಹಿರಿಯ ವ್ಯಕ್ತಿ; ಪ್ರತಿಷ್ಠಾಪನೆ ಮಾಡಿದ ಮಹಾತ್ಮ: ಪಾಂಡವಸ್ಥಾಪನಾಚಾರ್ಯನೆಂದು ಧರೆಯೊಳ್ಪನ್ನೆಗಂ ಜನಮಾದರಿರ್ದವುದೆ (ಚಿಮಿಭಾ. ೨ ೫೬). [ಸಂ.]

ಸ್ಥಾಪನೆ (ನಾ). = ಸ್ಥಾಪನ ೧: ಹೊಸದೇವಾಲಯದಲ್ಲಿ ಅವರು ಲಕ್ಷ್ಮಿಯ ವಿಗ್ರಹವನ್ನು ಸ್ಥಾಪನೆ ಮಾಡಿದರು (ರೂಢಿ). [ಸಂ. ಸ್ಥಾಪನಾ]

ಸ್ಥಾಪಿತ (ಗು). ೧. ವಿಗ್ರಹ, ಕಟ್ಟಡ ಮೊದಲಾದುವುಗಳಂತೆ ನಿರ್ಮಿಸಿ ನಿಲ್ಲಿಸಿದ; ಪ್ರತಿಷ್ಠಾಪಿಸಿದ. ೨. ನೆಲೆಗೊಳಿಸಿದ; ಭದ್ರಪಡಿಸಿದ. ೩. ನಿಯಮಿಸಿದ; ನೇಮಕ ಮಾಡಿದ. ೪. ನಿರ್ಧರಿಸಿದ; ತೀರ್ಮಾನ ಮಾಡಿದ. ೫. ಮದುವೆಯಾದ; ವಿವಾಹವಾದ. ೬. ಅಚಲವಾದ; ಸ್ಥಿರವಾದ. (ನಾ). ೭. ಪ್ರತಿಷ್ಠಿತವಾದುದು; ನೆಲೆಗೊಳಿಸಲ್ಪಟ್ಟುದು: ಧರ್ಮಾರ್ಥಕಾಮವಿಮೋಕ್ಷ ದೀಪಿತಮಾರ್ಗ ಸಂತತಲಕ್ಷಣಸ್ಥಾಪಿತಸಮುನ್ನತಮಹಿಮ ಪಿತಕೀರ್ತಿ (ಬಾಹು. ೪೭-೩). [ಸಂ.]

ಸ್ಥಾಪಿಸು (ಕ್ರಿ). ೧. ಪ್ರವರ್ತಿಸು; ನಿರ್ಮಿಸು: ಈ ಸಾಹಿತ್ಯದ ಹೊಸ ಮನುಗಳು ಈ ಯುಗದಲ್ಲಿ ಹೊಸ ಮನ್ವಂತರವನ್ನು ಸ್ಥಾಪಿಸಿದರು (ಶಾಹೀ. ೧). ೨. ಮಥಿಸಿಸು; ನಿರೂಪಿಸು: ಈ ಕೃತಿ ಅನುಭವಾವ್ಯತದ ಮಾದರಿಯಲ್ಲಿ ಅದನ್ನನುಸರಿಸಿ ಅನುಕರಿಸಿ ರಚಿತವಾದುದಲ್ಲವೆಂದು ಸ್ಥಾಪಿಸುವುದು (ಜಾಡಾ. ೬). ೩. ಇಡು; ಇರಿಸು: ''ಸ್ಥಾಪಿಸು ನ್ಯಾಸಕರಣೇ'' (ಶಮಥಾ); ನೆಗಬ್ಬ ಡಾಳಪ್ರಿಯನೊಳ್ ಸಂಗತಗುಣ ನಪಿಲತೆಯನಸುಂಗೊಳಿ ಭುಜವಿಜಯಗರ್ವದಿಂ ಸ್ಥಾಪಿಸಿದಂ (ಪಂಪಭಾ. ೧-೩೮). ೪. ನೆಲೆಗೊಳಿಸು; ಪ್ರತಿಷ್ಠಾಪಿಸು; ಸ್ಥಾಪನೆಮಾಡು: ಬಾಬಪನು ಹಿಂದೂಸ್ಥಾನದಲ್ಲಿ ಮೊಗಲ್ ಸಾಮ್ರಾಜ್ಯವನ್ನು ಸ್ಥಾಪಿಸಿದನು (ರೂಢಿ). [ಸ್ಥಾಪನ + - ಇಸ್ಕು]

ಸ್ಥಾಪ್ಯ (ಗು). ೧. ಇಡಬೇಕಾದ; ನಿಕ್ಷೇಪ ಮಾಡಬೇಕಾದ. ೨. ಸ್ಥಾಪಿಸಬೇಕಾದ; ನೆಲೆಗೊಳಿಸಬೇಕಾದ. ೩. ನಿಯಮಿಸಬೇಕಾದ. ೪. ಮುಚ್ಚಿಡಬೇಕಾದ. (ನಾ). ೫. ಇರವು; ನಿಕ್ಷೇಪ: ಪರುಷದ ಗಿರಿಯಲ್ಲಿ ಕಬ್ಬುನದ ಮೊರಡೆ ಉಂಟೇ ಕ್ಷೀರದ ಶರಧಿಯಲ್ಲಿ ಕ್ಷಾರಜಲ ಸ್ಥಾಪ್ಯ ಉಂಟೇ (ಮೋಲಿಮಾ. ೧೪೧ ೫೬೭). ೬. ಬೋಡಣೆ; ಕೂಡಿಸುವಿಕೆ: ಹೊತ್ತು ಹೊತ್ತಿಗೆ ಕಿಚ್ಚನೆ ಬರಿಸಿದರೆ ತಲೆ ಉರಿದುದೆಂದು ಹೊತ್ತುಹೊತ್ತಿಗೆ ಪ್ರಾಣಕ್ಕೆ ಪ್ರಸಾದವ ಸ್ಥಾಪ್ಯವ ಮಾಡಿ . . . ಮಹಾಬೆಳಗಿನಲಿ ಬಯಲಾದರು ಕಾಣಾ (ಲಿಂಗಪ. ೪. ೬೭-೬೨); ಕುರುಡನ ಮುಂಡಕ್ಕೆ ಹೇವನ ತಿರವ ಸ್ಥಾಪ್ಯವ ಮಾಡಿದರಯ್ಯಾ (ಸರ್ವಜ್ಞ. ೧೯೯-೯೧೧). ೭. ಪ್ರತಿಷ್ಠಾಪನೆ; ಸ್ಥಾಪನೆ: ರಾಮನಾಥನನರ್ಚಿಸನೆ ಲಕ್ಷ್ಮೀಮನೋಹರನೊಲಿದು ದುರ್ಗಾರಾಮದೊಳು ದ್ವಾರಾವತಿಯೊಳುಂ ಸ್ಥಾಪ್ಯವಂ ಮಾಡಿ (ಬಾಪು. ೫೪-೬೩). ೮. ಸ್ಥಾಪಿತವಾದುದು; ಭದ್ರವಾಗಿ ನೆಲೆಸಿದುದು: ಊರ ಮುಂದಕೆ ಹೋಗಲೊಡನಾ . . . ಊರ ಶಿವಭವಪಂಗಳಾ ಸ್ಥಾಪ್ಯೋರುಲಿಂಗಂಗಳು ಸ್ವಯಂಭೂಚಾರುಲಿಂಗವು ಕಮ್ಮ ನಿಜಪೀಠಂಗಳಿಂದಗಲ್ದು (ಬಾಪು. ೫೭-೪೨). ೯. ದೇವತಾವಿಗ್ರಹ. ೧೦. ಲಿಂಗರು; ಬೀಳ್ಗುಂಡು: ''ನಂಗಲ್ಲು ಸ್ಥಾಪ್ಯಮಕ್ಕುಂ'' (ಮಂಗರಾ. ೧೨೦-೪). [ಸಂ.]

ಸ್ಥಾಯಿ (ಗು). ೧. ನಿಲ್ಲುವ; ನಿಂತಿರುವ. ೨. ಉಳಿಯುವ; ಶಾಶ್ವತವಾಗಿರುವ. ೩. ವಾಸವಾಗಿರುವ; ನೆಲಸಿರುವ. ೪. ಸ್ಥಿರವಾದ; ನಲಿಗೊಂಡ. (ನಾ). ೫. ಶಾಶ್ವತವಾದುದು; ಅಮರವಾದುದು: 'ಕಲ್ಪಾಂತರಸ್ಥಾಯಿ' ಪರಾ. ೬. ಸ್ಥಿರವಾಗಿರುವುದು; ಕಾಯಂ: ಅಲ್ಲಿ ಜನ ಸ್ಥಾಯಿಯಾಗಿ ವಾಸಿಸುವುದಕ್ಕೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಬೇಕು (ಪಸಂಪಟ್ಟಿ. ೧೯೮) ೭. ಸ್ವರದ ತೀವ್ರತೆಯ ಮಟ್ಟ: ಲೋಹಬಿಲ್ಲೆಯು ನಾದದ ಗುಣ ಮತ್ತು ಸ್ಥಾಯಿಗನುಸಾರವ ಕಂಪಿಸುವಂತೆ ಅದನ್ನು ಜಾಗರೂಕತೆಯಿಂದ ರಚಿಸಿರುತ್ತಾರೆ (ವಿಚಿತ್ರಾ. ೧೦೧). ೮. = ಸ್ಥಾಯಿಭಾವ : ಜಿಜ್ಞಿತ್ಯದಿಂದ ಪ್ರವೃತ್ತವಾದ ಚಿತ್ತವೃತ್ತಿಗಳಲ್ಲಿ ಸ್ಥಾಯಿಗಳು ಆಸ್ವಾದ್ಯವಾದರೆ 'ರಸ' (ಧ್ವನ್ಯಲೋ. ೧೦ ಆಡಿಟಿ). ಒಂದು ಭಾವ ಸ್ಥಾಯಿಯೇ ಸಂಚಾರಿಯೇ ಎಂಬುದನ್ನು ಸರಿಯಾಗಿ ನಿರ್ಧರಿಸಲು ಸನ್ನಿವೇಶದ ಪರಿಜ್ಞಾನ ಅವಶ್ಯಕ (ಭಾಲೋಚಾ. ೬೪೪). ೯. [ಸಂಗೀತ] ''ಆರೋಹಣ ಮತ್ತು ಅವರೋಹಣಕ್ಕೆ ಸುಲಭವಾಗಿ ಹೊಂದಿ ಬರುವ ಸಪ್ತಸ್ವರಸಮೂಹಕ್ಕೆ ಸ್ಥಾಯಿ ಎಂದು ಹೆಸರು'' (ಸಂಗೀಚಂ. ೧೭): ಸ್ಥಾಯಿ ಸಂಚಾರಿಗಳ ಸರಿಗಮವಧನಿಯ ಸರದಾಯುತದ ಶುದ್ಧ ಸಂಕೀರ್ಣಸಾಳಿಗದ ಪೂರಾಯತ ಸುತಾನಂಗಳಂ . . . ಗೇಯರಸವೊಸರೆ ಪಾಡಿದರವರ್ (ಜೈಮಿಭಾ. ೨೦-೫೮). 'ತ್ರಿಸ್ಥಾಯಿ' ಪರಾ. [ಸಂ. ಸ್ಥಾಯಿನ್]

ಸ್ಥಾಯಿಭಾವ (ನಾ). [ಕಾವ್ಯಮೀ] ಮನುಷ್ಯನಲ್ಲಿ ಜಾಗೃತವಾಗಿ ಅಥವಾ ಸುಪ್ತವಾಗಿ ಯಾವಾಗಲೂ ಇರತಕ್ಕ ಎಂಟು (ಅಥವಾ ಕೆಲವರ ಮೇರೆಗೆ ಒಂಬತ್ತು) ಬಗೆಯ ಚಿತ್ತವೃತ್ತಿ ಅಥವಾ ಭಾವ: ರತಿ ಪರಿಹಾಸಂ ಶೋಕೋದ್ಭ ತಮುತ್ಸಾಹಂ ಭಯಂ ಪ್ರಕೋಪಂ ವಿಜುಗುಪ್ಸತೆ ವಿಸ್ಮಯಾಶಯುತ್ಪಂ ಪ್ರತಿನಿಯತ ಸ್ಥಾಯಿಭಾವಮಿವು ತಾಮಕ್ಕುಂ(ಕಾವ್ಯಾ. ೬೯); ರತಿ ಪರಿಹಾಸಂ ಶೋಕೋದ್ಭತಮುತ್ಸಾಹಂ ಪ್ರಕೋಪ ವಿಸ್ಮಯ ಭಯ ಸಂತತಿ ವಿಜುಗುಪ್ಸತೆಯೆಂಬಮನ್ನತಿ ವಡೆಗುಂ ಸ್ಥಾಯಿಭಾವ ಮೊಪ್ಪುವ ಶಮಮುಂ (ರಸಂ. ೧-೭). [ಸಂ.]

ಸ್ಥಾಯಿಭಾವಕ (ನಾ). = ಸ್ಥಾಯಿಭಾವ: ತ್ರಿಂಗಾಸಾದಿಗಳಪ್ಪೊಂಬತ್ತುಂ ರಸಂಗಳುಮನೆಂಟುಂ ಸ್ಥಾಯಿಭಿಯಿತಿಭಾವಕಂಗಳುಮಂ (ಅಚಿಪ್ರ. ೯-೬೦ ವ). [ಸಂ.]

ಸ್ಥಾಯಿಸಮಿತಿ (ನಾ). ಒಂದು ಸಂಘದಿಂದ ನಿಯಾಮಕವಾಗಿ ಆ ಸಂಘದ ಜೀವಮಾನದಲ್ಲಿ ಕಾರ್ಯಾಲೋಚನೆಗೆ ಸಿದ್ಧವಾಗಿರುವ ಸಮಿತಿ; ಸಿದ್ಧಸಮಿತಿ: ಆರ್ಥಿಕ-ಸಾಮಾಜಿಕ ಸಭೆಯ ಒಂದು ಸ್ಥಾಯಿಸಮಿತಿ (Standing Committee) ಆದ ತಾಂತ್ರಿಕಸಹಾಯಸಮಿತಿಗೆ ವರದಿಗಳನ್ನು ಸಲ್ಲಿಸುವುದು (ಆತಸಂ. ೨೦). [< ಸಂ. ಸ್ಥಾಯಿಸಮಿತಿ]

ಸ್ಥಾಲಿ, ಸ್ಥಾಳಿ (ನಾ). ೧. ಮಣ್ಣಿನ ಪಾತ್ರೆ; ಮಡಕೆ. ೨. ಅಡುಗೆಗೆ ಬಳಸುವ ಪಾತ್ರೆ: ''ಪಾತ್ರಂ ಭಾಂಡಂ ಸ್ಥಾಲಿಯಮತ್ರಂ ಭಾಜನಮಿನಿಕ್ಕುಂ'' (ಪಸ್ಕೋಪಿ. ೪೯-೨೬) ೩. ಸೋಮರಸವನ್ನು ತಯಾರಿಸುವಾಗ ಬಳಸುವ ಒಂದು ವಿಶಿಷ್ಟವಾದ ಪಾತ್ರೆ. ೪. ಲೋಹದ ಗುಂಡನೆಯ ಸಣ್ಣ ಪಾತ್ರೆ: ಅವರು ಪ್ರತಿದಿನವೂ ತಾಮ್ರದ ಸ್ಥಾಲಿಯಲ್ಲಿ ನೀರು ಕುಡಿಯುತ್ತಾರೆ (ರೂಢಿ). **ಸ್ಥಾಳಿ**: ೧. ''ಉಪಾ, ಸ್ಥಾಳಿ: . . . ಕುಂಡಂ- ೬ ಮಡಕೆ'' (ಹಲಾಯು. ೩೮ ೧೪೯). [ಸಂ. ಸ್ಥಾಲೀ]

ಸ್ಥಾಲೀಪಾಕ (ನಾ). ಪ್ರತಿಪರ್ವಕಾಲದಲ್ಲಿ ಗೃಹಸ್ಥನು ಔಪಾಸನಾಗ್ನಿಯಲ್ಲಿ ಚರುವನ್ನು ಬೇಯಿಸುವ ಕರ್ಮ: ಇನ್ನು ಬರುವ ಪ್ರತಿಪದೆಯ ಸ್ಥಾಲೀಪಾಕವಾದ ಮೇಲೆ ಇಲ್ಲಿಂದ ಹೊರಡುವೆನು (ಸಡದಾ. II. ೧೮೫೦); ದಂಪತಿಗಳ ಪ್ರೇಮವು ದೃಢವಾಗಿರಲೆಂದು ಸ್ಥಾಲೀಪಾಕವನ್ನು ನೂಡಿದರು (ಮಹಾಗಾ. ೧೭೬). [ಸಂ.]

ಸ್ಥಾಲೀಪುಲಾಕನ್ಯಾಯ (ನಾ). [ತರ್ಕ] ಲೌಕಿಕನ್ಯಾಯಗಳಲ್ಲಿ ಒಂದು. ಒಂದು ಬೇಯಲಿಟ್ಟಿರುವ ಪಾತ್ರೆಯಲ್ಲಿ ಒಂದು ಕಾಳು ಬೆಂದಿದ್ದರೆ ಎಲ್ಲ ಕಾಳೂ ಬೆಂದಿರುತ್ತವೆಯೆಂದು ನಿರ್ಧರಿಸುವಂತೆ ವಿಕಾಶವನ್ನು ಪರೀಕ್ಷಿಸಿ ಸಮೂಹದ ಯೋಗ್ಯತೆಯನ್ನು ನಿರ್ಣಯಿಸುವ ನ್ಯಾಯ : ಸ್ಥಾಲೀಪುಲಾಕನ್ಯಾಯದಿಂದ ಕೆಲವೇ ಶ್ರುತಿಯುಕ್ತಿಗಳನ್ನು ಈ ಚಿಕ್ಕಲೇಖನದಲ್ಲಿ ಉದಾಹರಿಸಿದೆ (ಭಾರದ. ೧೪೫). [ಸಂ.]

ಸ್ಥಾವರ (ಗು). ೧. ಸ್ಥಿರವಾಗಿ ಒಂದೇ ಕಡೆ ಇರುವ; ಚಲನೆಯಿಲ್ಲದ; ನಿಶ್ಚಲವಾದ. ೨. ಅಚೇತನವಾದ; ಜಡವಾದ. ೩. ಸ್ಥಿರವಾದ; ಶಾಶ್ವತವಾದ. (ನಾ). ೪. ಚಲನಶಕ್ತಿಯಿಲ್ಲದೆ ಇದ್ದಲ್ಲಿಯೆ ಇರುವ ಬೆಟ್ಟ,

ಭೂಮಿ, ಮರ ಮುಂತಾದುವು: ಸಚರ ಸ್ಥಾವರಕೆಲ್ಲ ಸರ್ವಸುಖದುಃಖಿಂಗಳ್ ಸಮಾಸಂಗಳ್ (ಸೋಮೇಶ. ೯೯): ಜಂಗಮಕೆ ಸ್ಥಾವರಕೆ ಚೈತನ್ಯಾಂಗರಕ್ಷನು . . . ಪರಕರಮಸ್ತ ತಾನೀತ (ಹರ್ಷಾಭಿ. ೯-೭೦): ಕೆಲಬಲನ ಸ್ಥಾವರಜಂಗಮಂಗಳ್ ಕಂಡುಂ ಕಾಣದಂತಿರ ಕಣ್ಮಾಯ್ಪುದುವು (ರಾಮಾಶ್ವ. ೩೮-೮). ೫. ಮನೆ, ಹೊಲ ಮುಂತಾದ ಸ್ಥಿರಾಸ್ತಿ. ೬. ಒಂದು ಬಗೆಯ ವಿಷ. ೭. [ಪೀಶೈ] ಲಿಂಗದ ಎರಡು ವಿಧಗಳಲ್ಲಿ ಒಂದು; ದೇವಾಲಯಗಳಲ್ಲಿ ಪ್ರತಿಷ್ಠಿತವಾದ ಲಿಂಗ: ಸ್ಥಾವಂಕ್ಕಳಿವುಂಟು ಜಂಗಮಕ್ಕಳಿವಿಲ್ಲ (ಸಿದ್ಧೇಶ್ವರ. ೬೨೦). ೮. [ಜೈನ] ಏಕೇಂದ್ರಿಯಜೀವ; ಇದ್ದ ಸ್ಥಳವನ್ನು ಬಿಟ್ಟು ಚಲಿಸಲಾರದ ಜೀವ: ತ್ರಸಂಗಳುಂ ಸ್ಥಾವರಂಗಳಪ್ಪುವು (ತತ್ವಪ್ರ. ೨೨): ಜೀವಾತ್ಮರುಗಳಿಗೆ ಅವರವರ ಕರ್ಮಾಧೀನವಾಗಿ ಬರುವ ದೇಹವನ್ನು ದೇವ, ಮನುಷ್ಯ, ತಿರ್ಯಕ್, ಸ್ಥಾವರವೆಂದು ಸಾಮಾನ್ಯವಾಗಿ ನಾಲ್ಕು ಪ್ರಕಾರ ಪುರಾಣಗಳಲ್ಲಿ ವಿಭಾಗಮಾಡಿರುತ್ತಾರೆ . . . ಸ್ಥಾವರವೆಂದರೆ ವೃಕ್ಷ ಗುಲ್ಮಲತೆ ಮೊದಲಾದುವು (ಓಂದಸಾ. ೧೪). ೯. ಏಕೇಂದ್ರಿಯಜನ್ಮಕ್ಕೆ ಕಾರಣವಾದ ನಾಮಪ್ರಕೃತಿ: ನಿದ್ರಾನಿದ್ರಾ . . . ಸ್ಥಾವರ ಸಾಧಾರಣ ಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮಪ್ರಕೃತಿಗಳಂ ನಿಶ್ಶೇಷಂ ಕಿಡಿಸಿ (ಆದಿಪು. ೧೮-೧೪೫): ಸ್ಥಾವರ ಸೂಕ್ಷ್ಮ ಅಪರಿಯಾಪ್ತ ಸಾಧಾರಣ ಶರೀರ ಅಸ್ಥಿರ . . . ಅಯಶಸ್ಕೀರ್ತಿ ನಾಮಕರ್ಮಮೆಂದಿಂತು ನಾಮಕರ್ಮದುತ್ತರಪ್ರಕೃತಿಗಳು ತೊಂಭತ್ತಮೂಱುಂ ನೂಱುಮೂಱುಂ ಮೇಣಪ್ಪುವು (ಗೊಮ್ಮಸಾ. ೪-೨). [ಸಂ.]

ಸ್ಥಾವರತೆ (ನಾ). ನಿಶ್ಚಲವಾಗಿ ನಿಂತಿರುವಿಕೆ ; ಸ್ಥಿರತೆ : ಅದನ್ನು 'ಮನೆ'ಯೆಂದು ಕರೆಯುತ್ತಿದ್ದರು ಅಷ್ಟೇ. ಆ ಹೆಸರಿಗೆ ಅದಕ್ಕಿದ್ದ ಹಕ್ಕು ಎಂದರೆ-ತಡಿಕೆಗೋಡೆಗಳ ಬದಲಾಗಿ ಅದಕ್ಕಿದ್ದ ಮಣ್ಣಿನ ಗೋಡೆಗಳು ಮತ್ತು ಅದರ ಸ್ಥಾವರತೆ (ಮರಮ. ೬೭೦).

[ಸಂ. ಸ್ಥಾವರತಾ]

ಸ್ಥಾವರನಾಮಕರ್ಮ (ನಾ).= ಸ್ಥಾವರ ೯: ಸ್ಥಾವರನಾಮಕರ್ಮಪಾಕಾಧೀನಂಗಳ್ ಸ್ಥಾವರಂಗಳ್ (ಆದಿಪು. ೧೮-೬೧೪): ಸ್ಥಾವರನಾಮಕರ್ಮ - ಈ ಪ್ರಕೃತಿಯ ಉದಯವಿಂದ ಪೃಥ್ವೀ, ಜಲ, ತೇಜ, ವಾಯು, ವನಸ್ಪತಿಕಾಯಗಳಲ್ಲಿ ಏಕೇಂದ್ರಿಯಜೀವವಾಗಿ ಜನಿಸುವುದು (ತ್ವಸಪ್ರ. ೩೭೬). [ಸಂ. ಸ್ಥಾವರನಾಮಕರ್ಮನ್]

ಸ್ಥಾವರಲಿಂಗ (ನಾ). ದೇವಸ್ಥಾನ ಮೊದಲಾದ ಕಡೆಗಳಲ್ಲಿ ಪೂಜೆಗಾಗಿ ಪ್ರತಿಷ್ಠಿತವಾದ ಶಿವಲಿಂಗ: ಅಂಗದ ಮೇಲೆ ಲಿಂಗದೇವಸಿರ್ದಂತೆ ಇತರ ಸ್ಥಾವರಲಿಂಗಕ್ಕೆ ಹೋಗಿ ಹೋಗಿ ದೇವರ ಕಂಡೆನೆಂದು ಅಱಿವುತಿಪ್ಪ ಸಲೆ ಮನುಜರುಗಳಿಗ ಉಪದೇಶ ಮಾಡುವ ಗುರುವಿಂಗೆ ಪುಣ್ಯದ ಬಚ್ಚೆಯ ಕೊಡ ಉರಿಲಿಂಗತಂದೆ (ವಚಸಂ. ೩೭೨-೧೫೯) ; ಶುದ್ಧಶೈವವು ಸ್ಥಾವರಲಿಂಗವನ್ನು ಪೂಜಿಸಿದರೆ ವೀರಶೈವವು ಇಷ್ಟಲಿಂಗವನ್ನು ಪೂಜಿಸುತ್ತದೆ (ಶೂನ್ಯಸಂ. ೩). [ಸಂ.]

ಸ್ಥಾವರವಿಷ (ನಾ). ಸಸ್ಯಮೂಲವಾದ ವಿಷ : ವಿಷ ಮೂಱು ತೆಱ-ಸ್ಥಾವರವಿಷ, ಜಂಗಮವಿಷ, ಕೃತ್ರಿಮವಿಷಮೆಂದು. ಆವುದೊಂದು ವಿಷ ಗೆಣಸು, ಗೆಂಡಬೇರುಗಳಿಂದ ಉಂಟಾಗುತಲಿರೆ ಅದು ಸ್ಥಾವರವಿಷವೆನಿಸಿಕೊಂಬುದು (ಪದ್ಮಸಾ. II, ೧೭೫). [ಸಂ.]

ಸ್ಥಾವಿರ (ನಾ). ಮುಪ್ಪು ; ವಾರ್ಧಕ್ಯ : ''ಸ್ಥಾವಿರಂ, ವೃದ್ಧತ್ವಂ - ೨ . . . ಮುದಿತನ, ಮುಪ್ಪು'' (ಶಬ್ದಾಖ. ೧೭೯). [ಸಂ.]

ಸ್ಥಾಸಕ (ನಾ). ೧. ಗಂಧ ಮೊದಲಾದ ಸುವಾಸನೆಯ ದ್ರವ್ಯಗಳನ್ನು ದೇಹಕ್ಕೆ ಅನುಲೇಪಿಸುವುದು : ಅಲೆವ ತೆರೆಗಳ್ ಮೆಲ್ಲಂ ಬವರಿಸಿ ಸೋಂಕುತ್ತುಂ ಕಳೆದುವು ಘನಕುಚಕಳಶಕುಂಕುಮಸ್ಥಾಸಕಮಂ (ಆದಿಪು. ೧೧-೧೪೧) : ಬೆಳ್ವಾವರೆವೂಗಳವನ್ನ ದರಾರರಸನ ಭುಜಶಿಖರಚಂದನಸ್ಥಾಸಕಮಂ (ಮಲ್ಲಿಪು. ೮-೧೫೫). ೨. ಅನುಲೇಪನ ದ್ರವ್ಯ: ಗಂಧಂದಳವಕ್ಕಣವಾಗಳಾ ನೃಪಾವಾಸದೊಳಾಡಿದತ್ಸಸೆಯೆ ಪಾಣಿತಲಂ ಪಡವಂತ ಕುಂಕುನುಸ್ಥಾಸಕಮಂ ಕುರುಳ್ ಕೆದಱುವಂತೆ ತಮಾಲನವಪ್ರವಾಳಮಂ (ಪಂಡಿತಾ. ೬-೧೧೬). ೩. ಬಾಗಿಲು, ಗೋಡೆ ಮುಂತಾದುವುಗಳ ಮೇಲೆ ಅಂಗೈಯಿಂದ ಚಟ್ಟು ಬಡಿಯುವುದು,— ಅಂಗೈ ಗುರುತು ಮೂಡಿಸುವಿಕೆ : ''ಸ್ಥಾಸಕಂ, ಹಸ್ತಬಂಬಂ - ಈ ೨ ಚಟ್ಟಜಿಪುದು'' (ಹಲಾಯು. ೪೯-೩೮೬). ೪. ಸುಗಂಧದ್ರವ್ಯಗಳಿಂದ ಮಾಡಿದ ಬೊಂಬೆ, — ವಿಗ್ರಹ : ಆಗಳ್ ನಿರಂತರಂ ಸಮುತ್ಥಾಪಿತಂಗಳುಂ ಕನಕರಜತಮಯಾನೇಕಸ್ಥಾಸಕಾಲಂಕೃತಂಗಳುಂ ವಿಚಿತ್ರ ಚೀನಾಂಶುಕರುಚಿರಂಗಳುಂ ಉನ್ನದ್ಧ ವಿವಿಧಮಣಿದರ್ಪಣಧ್ವಜಂಗಳುಂ . . . ಅಪ್ಪ ತೋರಣಂಗಳನೆ ನುಗುಳುತ್ತುಂ (ಆದಿಪು. ೪-೨೮೮). ೫. ನೀರು ಮೊದಲಾದ ದ್ರವ್ಯಗಳ ಮೇಲೆ ಏಳುವ ಗುಳ್ಳೆ ; ಬುದ್ಬುದ. ೬. (ಕುದುರೆಯ ಗೌಸು ಇತ್ಯಾದಿ ಅಲಂಕಾರಸಾಮಗ್ರಿಯ ಮೇಲಿರುವ) ಬುದ್ಬುದಾಕಾರದ ಆಭರಣ. [ಸಂ.]

ಸ್ಥಾಣು (ಗು). ೧. ಅಚಲವಾದ ; ಸ್ಥಿರವಾದ. ೨. ಶಾಶ್ವತವಾದ; ನಿತ್ಯವಾದ. (ನಾ). ೩. ಅಚಲವಾಗಿರುವವನು : ''ಸ್ಥಾಸ್ನುಃ, ಸ್ಥಿರತರಃ, ಸ್ಥೇಯಾನ್-೩ ಬಹುಕಾಲದವರೆಗೂ ಚಲನೆಯಿಲ್ಲದೆ ಸ್ಥಿರವಾಗಿ ಇರುವಂಥವನು'' (ಸಿದ್ಧಾಂ. ೬೪೨). ೪. ಚಲಿಸಲಾರದುದು; ಸ್ಥಾವರ: ನರತಂ ರಾಕ್ಷಸರಂ . . . ಅಪ್ಸರೋಬ್ಯಾದಮಂ ತರದಿಂ ನಿರ್ಮಿಸಿಯವ್ಯಯವ್ಯಯಮನಿಪ್ಪಾ ಸ್ಥಾಸ್ನುವಂ ಜಂಗಮೋತ್ಕರಮಂ ಕಲ್ಪಿಸಿದಂ ಸರೋರುಹಭವಂ ವಿಜ್ಞಾನಸಂಪತ್ತಿಯಿಂ (ಎಮ್ಮಪು. ೧-೧-೨೪೦). ೫. ಮರ; ವೃಕ್ಷ. [ಸಂ.]

ಸ್ಥಾಳಿ 'ಸ್ಥಾಲಿ' ನೋ.

ಸ್ಥಿತ (ಗು). ೧. ನಿಂತುಕೊಂಡ; ನಿಂತಿರುವ. ೨. ಎದ್ದುನಿಂತ; ಮೇಲೆದ್ದ. ೩. ಇರುವ; ನೆಲಸಿದ: ದಂತೋತ್ಸಂಗಸ್ಥಿತ ಜಯಕಾಂತಗೆ ಚಲ್ಯಾಗೆ ಪಿಡಿದ ಸೀಗುರಿಗಳವೆಂಬಂತೆಯೊಲೆಸದುವು . . . ಎಱಗಿ ಸುಳಿವ ಮದಮಧುಪಂಗಳ್ (ಆದಿಪು. ೧೨-೭೦). ೪. ಸ್ಥಿರವಾದ; ಚಂಚಲವಲ್ಲದ: 'ಸ್ಥಿತಪ್ರಜ್ಞ' ಪರಾ. ೫. ಶಾಶ್ವತವಾದ; ನಿತ್ಯವಾದ. ೬. ನಿರ್ಣೀತವಾದ; ಸ್ಥಾಪಿತವಾದ. ೭. ಸಮೀಪದಲ್ಲಿ ಇರುವ; ಕೈಗೆಟುಕುವ. ೮. ಪ್ರತಿಜ್ಞೆಗೆ ಬದ್ಧನಾದ. ೯. ಉಂಟಾದ; ಸಂಭವಿಸಿದ. (ನಾ). ೧೦. ಇಡಲ್ಪಟ್ಟುದು; ಸ್ಥಾಪಿತವಾದುದು; ಇರಿಸಿದುದು: ಮಧ್ಯಾಂತಸ್ಥಿತಮಾಗಿ ಬೆಳಪ್ಪುದಱಿಗೆ ದೀಪಕಮಕ್ಕುಂ (ಕಾವ್ಯಾವ. ೬೪೨). ೧೧. ಉಳಿಕೆ; ಬಾಕಿ; ಕೊರತೆಯಾಗಿರುವ ಹಣದ ಮೊತ್ತ: ಸಂದಾಯಮಂ ಬೀಯದೊಳಗೆ ಕಳೆವನಿತಕ್ಕೆ ಐದುಕೋಟ ಸ್ಥಿತವನೊಳಗ ಗಣಕರ್ ಕಂಡು (ಬೂಸ. ೫-೮೯). ೧೨. [ಕಾಮಶಾ] ಒಂದು ಬಗೆಯ ರತಿಬಂಧ; ಸ್ಥಿತರತಿ: ನಿಂದು ನೆರೆಯಲಲಾತೆ ಸ್ಥಿತಂ (ಜನಪ. ೯-೬). [ಸಂ.]

ಸ್ಥಿತಪ್ರಜ್ಞ (ಗು). ೧. ಸ್ಥಿರವಾದ ಬುದ್ಧಿಯುಳ್ಳ; ದೃಢನಿರ್ಣಯವುಳ್ಳ. (ನಾ). ೨. ಪ್ರಪಂಚದ ಎಲ್ಲ ಆಗುಹೋಗುಗಳನ್ನು ಸಮಭಾವದಿಂದ, ನಿರ್ವಿಕಾರವಾಗಿ ಗಣಿಸುವವನು; ಸೋಲು-ಗೆಲವು, ಸುಖ-ದುಃಖ ಮೊದಲಾದುವನ್ನು ಸಮಚಿತ್ತನಾಗಿ ಸ್ವೀಕರಿಸುವ ದೃಢಚಿತ್ತವುಳ್ಳವನು: ಮನಸ್ಸಿನಲ್ಲಿ ಹುಟ್ಟುವ ಎಲ್ಲ ಕಾಮವಾಸನೆಗಳನ್ನು ತ್ಯಾಗಮಾಡಿ, ಯಾವಾಗ ತನ್ನ ಮೂಲಕ ತನ್ನಲ್ಲಿಯೇ ತೃಪ್ತಿ ಹೊಂದಿರುತ್ತಾನೋ ಆಗ ಅವನು ಸ್ಥಿತಪ್ರಜ್ಞನೆನಿಸಿಕೊಳ್ಳುತ್ತಾನೆ (ಅನಾಸ. ೧೧); ಸುಖವನ್ನೂ ದುಃಖವನ್ನೂ ಮನಸ್ಸಿನ ಸಮಭಾವದಿಂದಲೇ ಕಾಣುವ ಸ್ಥಿತಪ್ರಜ್ಞನ ಸ್ಥಿತಿ ನನಗೆ ಸಾಧ್ಯವಿಲ್ಲ (ಶಾಂತಲಾ. ೨೮). [ಸಂ.]

ಸ್ಥಿತಪ್ರಜ್ಞೆ (ನಾ). ಸುಖದುಃಖ, ಲಾಭಾಲಾಭ ಮೊದಲಾದುವನ್ನು ಸಮಭಾವದಿಂದ ಕಾಣುವ ಚಿತ್ತಸ್ಥೈರ್ಯ : ಸುಖದುಃಖಗಳಾಚಿಗಿನ ರಾಜ್ಯದಲ್ಲಿ ನಿಂತ ಯೋಗಸ್ಥನ ಹಾಗೆ ಸ್ಥಿತಪ್ರಜ್ಞೆಯಿಂದ . . . ಅಕ್ಕನು ತನ್ನನ್ನು ನೋಡುತ್ತಿರುವಂತೆ ನರಹರಿಗೆನಿಸಿತು (ಸಮಜೀ. ೨೨೩). [ಸಂ. ಸ್ಥಿತಪ್ರಜ್ಞಾ]

ಸ್ಥಿತರತಿ (ನಾ). [ಕಾಮಶಾ] ಒಂದು ಬಗೆಯ ರತಿಬಂಧ : ಈರ್ವರೂ ಕೋಲಿನಂತೆ ನಿಂದಿರ್ದು ರಮಿಸಿದೊಡೆ ಸ್ಥಿತರತಿ (ಕಾಮಶಾ. ೬-೧೭೫). [ಸಂ.]

ಸ್ಥಿತಾವರ್ತ (ನಾ). [ನಾಟ್ಯ] ಹದಿನಾರು ಬಗೆಯ ಮಾರ್ಗಭೌಮಚಾರಿಗಳಲ್ಲಿ ಒಂದು : ಚರಣಮೊದಗ್ರತಲಸಂಚರಮಂ ಬತ್ತರಿಸಿ ಮತ್ತಮೊಂದೀ ಪಾರ್ಶ್ವಕ್ಕಿರ ದಯ್ದು ತತ್ಪದಂ ಪೂರ್ವದೆ ಮೊಳಕಾಲೊಳಗುಮಾಗಿ ಸ್ವಸ್ತಿಕದಿಂದಂ ಸಲೆ ಸ್ವಸ್ತಿಕ ಪದಮಂ ಬರ್ಚೂಲವಿಂದಂ ತನ್ನ ತಾಣದಿಂದಿರಲದು ತಾಂ ಸೆಲಗೊಳಲ್ ಸ್ಥಿತಾವರ್ತದ . . . ಚಾರಿಯೆನಿಸಿ ರಂಜಿಸು ತೋರ್ಪುಂ (ರಾಸ್ಕರಂ. ೬-೨೦). [ಸಂ.]

ಸ್ಥಿತಿ (ನಾ). ೧. ಚಲಿಸದೆ ನಿಲ್ಲುವಿಕೆ; ಕೆಳಕ್ಕೆ ಬೀಳದಿರುವಿಕೆ : ಸ್ಥಿತಿಯೆಂದರೆ ನಿಲ್ಲುವಿಕೆ, ಕೆಳಕ್ಕೆ ಬೀಳದಿರುವಿಕೆ (ಓಂದಸಾ. ೮೨). ೨. ಇರುವಿಕೆ; ಅಸ್ತಿತ್ವ: ಪಂಚಮಸ್ತುಗಳಿಗೆ ಒಟ್ಟಿನಲ್ಲಿ ಸಂಭವಿಸುವ ಅವಸ್ಥೆಗಳು ಎಂಟು - ಉತ್ಪತ್ತಿ, ಸ್ಥಿತಿ, ಸಂಚಾರ,

ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷ ಎಂದು (ಭಾತತ್ತ್ವ-೪೫೭). ೩. ಪೋಷಣೆ; ರಕ್ಷಣೆ: ಸೃಷ್ಟಿಸಲ್ಪಟ್ಟ ಪ್ರಪಂಚವನ್ನು ಜಾಗ್ರದಾದ್ಯವಸ್ಥೆಗಳಲ್ಲಿ ನಾನಾರೂಪಗಳಿಂದ ಪೋಷಿಸುವುದು ಸ್ಥಿತಿ (ಒಂದಸಾ. ೨೮೪). ೪. ಒಂದು ಅವಸ್ಥೆಯಲ್ಲಿ ಮುಂದುವರಿಯುವಿಕೆ. ೫. ಇದ್ದಂತೆ ಇರುವಿಕೆ; ಸ್ಥಿರತೆ. ೬. ಅವಸ್ಥೆ; ದೆಸೆ: ಇಲ್ಲಿ ಕಾಣುವ ಅಸ್ತವ್ಯಸ್ತಸ್ಥಿತಿಯ ಗೊಂದಲ . . . ಗಾಬರಿಯನ್ನು ಮೂಡಿಸಿದರ ಆಶ್ಚರ್ಯವಲ್ಲ (ದ್ರಾಎಪ. ೯೮). ೭. ವ್ಯವಸ್ಥೆ; ವಿಲೇವಾರಿ: "ತನ್ನಿರವಿನಲಿ ವ್ಯವಸ್ಥೆಯಲಿ ಸ್ಥಿತಿಯನಿಕ್ಕು" (ಮಂಗರಾ. ೧೪೬-೨೨). ೮. ನಿಯಮ; ಕಟ್ಟುಪಾಡು: ಪೂರ್ವಮರ್ಯಾದೆಯೊಳ್ ಹಂಚಿಸುವೊ ಸ್ಥಿತಿಯನಿಟ್ಟಿದು ಉಣ್ಣವರ್ ಕಪಿಲೆಯುಂ ಪಾರ್ವರುಮಂ ಕೊನ್ಮೊಂ (ಎಕ. XVI. ತುಪಾಕೂ. ೮೧-೧೨: ೪೦೭). ೯. ಐಶ್ವರ್ಯ; ಸಂಪತ್ತು: ಸ್ಥಿತಿ ಇಲ್ಲದಿದ್ದರೂ ಗತಿಗೆಡಬಾರದು (ಗಾಜ). 'ಸ್ಥಿತಿವಂತ' ಪರಾ. ೧೦. ದಾನಭೂಮಿ; ದತ್ತಿ: ಪುಳಿಯಣ್ಣ ನ್ನಿಯ ಎಕಣದ ಬಾಗಿಯುಲಗನಾಗೆ X ಕ್ಕಟ್ಟು ಪಡದ ಸ್ಥಿತಿ ಏಣ್ಣುಗಂ ಕಟನಿಯು ಪಾಟ್ಕಣ್ಣುಗವು ತಣ್ಣುಪಟ್ಟು (ಎಕ. X (S). ಚಕ್ಕಬ. ೨೬-೧೦: ೨೫೫ ಶತ). ೧೧. ಅಂತಸ್ತು; ಮಟ್ಟಿ. ೧೨. ಒಳ್ಳೆಯ ನಡತೆ; ಸಚ್ಚಾರಿತ್ರ. ೧೩. ತೀರ್ಮಾನವಾದ ನಿಯಮ; ಅಂತಿಮನಿರ್ಣಯ. [ಸಂ.]

ಸ್ಥಿತಿಕರ್ತ (ನಾ). ಲೋಕವನ್ನು ಪಾಲಿಸುವವನು; ವಿಷ್ಣು: (೬).

[< ಸಂ. ಸ್ಥಿತಿಕರ್ತೃ]

ಸ್ಥಿತಿಗತಿ (ನಾ). ಇರುವ ಸ್ಥಿತಿ; ಅವಸ್ಥೆ: ಸಭ್ಯತೆಯು ಸ್ನೇಹಸಂಬಂಧ ಯೋಗ್ಯತ ಸ್ಥಿತಿಗತಿ ಸಮಯ ಸಂದರ್ಭ ಮುಂತಾದವುಗಳಿಗೆ ಅನುಗುಣವಾದುದು (ಅರ್ಜುಧ. ೬೩); ಮುಂದ ಹೋದರು ಸಾವು ಹಿಂದ ಬಂದರು ಸಾವು ಸ್ಥಿತಿಗತಿಯಿಂತಿರುವಂದು ಮುಂದ ಹೋಗಿಯೆ ಸತ್ತು ಯಶವನು ಪಡೆವೆವು (ಇಂಚಾಪ. ೨೩೫-೬೪). [ಸಂ.]

ಸ್ಥಿತಿವಂತ (ನಾ). ಸಿರಿವಂತ; ಧನಿಕ: ಅವರು ಈ ಊರಿಗೆಲ್ಲ ಸ್ಥಿತಿವಂತರು (ರೂಢಿ).

[ಸಂ. ಸ್ಥಿತಿವತ್]

ಸ್ಥಿತಿಸಾರ (ನಾ). ೧. ಭಾಷೆಗೆ ತಪ್ಪದವನು; ಪ್ರತಿಜ್ಞಾಪಾಲಕ : ಆರಯೆ ನೃಪರಾರುಂ ವಾಕ್ಸಾರರ್ ಕರ್ತವ್ಯಸಾರರಲ್ಲರ್ . . . ಸ್ಥಿತಿಸಾರಂ ನಿನ್ನನ್ನನಾವನಿಜೀವ ಬೆಡಂಗಾ (ಗದಾಯು. ೨-೭). ೨. ದೃಢಮನಸ್ಸುಳ್ಳವನು; ಸ್ಥಿರಚಿತ್ತನಾದವನು: ಸ್ಥಿತಿಸಾರರಲ್ಲದವನೀಪತಿಗಳನೋಲ್ಮೆಸಿ ಪಡವ ಧನಲಾಭದಿನುನ್ನತಗಿರಿಗುಹಾಂತರಾಳ ಸ್ಥಿತಿಲಾಭಂ ಪೂಜ್ಯಮೆಂಬರಱಿವವರಲ್ಲರ್ (ಪಂಚತಂ. ೧೩೪-೧). [ಸಂ.]

ಸ್ಥಿತಿಸ್ಥಾಪಕ (ಗು). ೧. ವ್ಯತ್ಯಾಸ ಹೊಂದಿದರೂ ಮರಳಿ ಮೊದಲಿನ ನೈಜಸ್ಥಿತಿಗೆ ಬರಬಲ್ಲ; ತನ್ನ ಸಹಜಸ್ಥಿತಿಯನ್ನು ಪುನಃ ಹೊಂದಬಲ್ಲ: ಕಬ್ಬಿಣದ ಹೂರ್ತು ಎರಡನೇ ಯಾವ ಧಾತುವಿನಲ್ಲಿಯೂ ತಾವ್ರದಷ್ಟು ಸ್ಥಿತಿಸ್ಥಾಪಕಗುಣವಿಲ್ಲ (ಮುಂಬಯಿ. ೪-೧೩೬). (ನಾ). ೨. ಸಂಕೋಚ, ವಿಸ್ತರಣ ಮೊದಲಾದ ವಿಕಾರಗಳಾದರೂ ಅವುಗಳಿಂದ ಬಿಡುಗಡೆಯಾದೊಡನೆ ಮರಳಿ ತನ್ನ ಸಹಜಸ್ಥಿತಿಯನ್ನು ತಾಳುವ ಗುಣ: ಸ್ಥಿತಿಸ್ಥಾಪಕವೆಂದರೆ ಮೊದಲಿನ ಸ್ಥಿತಿಯನ್ನು ಕಾಯ್ದುಕೊಳ್ಳುವ ಗುಣವು (ಮುಂಬಯಿ. ೫-೫೭). ೩. ಸ್ಥಿತಿಸ್ಥಾಪಕಗುಣವುಳ್ಳದು: ಅಸಂಖ್ಯಾತಕಣಗಳು ಸಂದಣಿಯಲ್ಲಿ ಸ್ಥಿತಿಸ್ಥಾಪಕವಲ್ಲದ ಆಘಾತಗಳುಂಟಾಗುವುದೆಂದೂ ಮತ್ತು ಒಂದಕ್ಕೊಂದು ಕೂಡಿಕೊಂಡು ಸಂಬದ್ಧವಾಗುವುದೆಂದೂ ಲಿಗೊಂಡಸ್ ತಿಳಿಸಿದನು (ಪೂಪುಬ್ಬು. ೨೬); ಅಣುಗಳು ಸಂಪೂರ್ಣವಾಗಿ ಸ್ಥಿತಿಸ್ಥಾಪಕಗಳಾಗಿವೆ (ಭೌಪ. ೨೮೬). [ಸಂ.]

ಸ್ಥಿತಿಸ್ಥಾಪಕತ್ವ (ನಾ). = ಸ್ಥಿತಿಸ್ಥಾಪಕ ೨: ವ್ಯತ್ಯಾಸವನ್ನುಂಟುಮಾಡಿದ ಬಲವನ್ನು ತೆಗದು ಹಾಕಿದರೆ ವಸ್ತುವು ಸಾಧಾರಣವಾಗಿ ತನ್ನ ಮೊದಲಿನ ಸ್ಥಿತಿಗೇ ಬರುವುದರಿಂದ ಈ ಗುಣಕ್ಕೆ ಸ್ಥಿತಿಸ್ಥಾಪಕತ್ವವೆಂದೂ (Elasticity) ಇಂತಹ ವಸ್ತುಗಳಿಗೆ ಸ್ಥಿತಿಸ್ಥಾಪಕ ವಸ್ತುಗಳೆಂದೂ . . . ಹೆಸರು (ಭಾತವಿ. ೧೦೫). [ಸಂ.]

ಸ್ಥಿತ್ಯಂತರ (ನಾ). ಇದ್ದ ಸ್ಥಿತಿಯು ಹೋಗಿ ಇನ್ನೊಂದು ಸ್ಥಿತಿಯು ಪ್ರಾಪ್ತವಾಗುವಿಕೆ; ಬದಲಾವಣೆ: ನರಹರಿ - ರಮಾಬಾಯರ ಆಕ್ರೋಶಮಯ ಸನ್ನಿವೇಶದಲ್ಲಿ ಅವರ ಭಾವನೆಗಳಲ್ಲಾದ ಸ್ಥಿತ್ಯಂತರ ಕ್ರಮವಾಗಿ ಚಿತ್ರಿತವಾಗಿದೆ (ಸಮಜ್ಞ. ೨೭ ಪೀಠಿಕೆ); ಇಂತಹ ಧಾರ್ಮಿಕ ಸಾಮಾಜಿಕ ಸ್ಥಿತ್ಯಂತರಗಳ ಮಧ್ಯದಲ್ಲಿ ಅವಳ ಸಾಹಿತ್ಯದ ಅಭಿವ್ಯಕ್ತಿಗೆ ಅವಕಾಶವೆಲ್ಲಿ? (ಕರ್ನಾಕ. ೧೮೮). [ಸಂ.]

ಸ್ಥಿರ (ಗು). ೧. ದೃಢವಾದ; ಭದ್ರವಾದ. ೨. ಅಚಲವಾದ; ಸ್ಥಾವರ. ೩. ಶಾಶ್ವತವಾದ; ನಿತ್ಯವಾದ. ೪. ಶಾಂತಸ್ಥಿತಿಯುಳ್ಳ; ಪ್ರಶಾಂತವಾದ. ೫. ರಾಗದ್ವೇಷರಹಿತವಾದ. ೬. ದೃಢವಾದ ಚಾರಿತ್ರವುಳ್ಳ; ಸನ್ಮಾರ್ಗದಿಂದ ಕದಲದ. ೭. ನಿಶ್ಚಯವಾದ; ನಿಶ್ಚಿತವಾದ. ೮. ಸಾಂದ್ರವಾದ; ಘನೀಭೂತವಾದ: ಈ ಬಂಗಾರದ ತುಂಡುಗಳು ಈ ಸ್ಥಿರತಿಮಿರದಲ್ಲಿ ಚಿರಕಾಲ . . . ನಿಶ್ಚಲವಾಗಿ ಬದ್ದುಕೊಂಡಿವೆ (ಇಪ್ರಕ. ೩೫೧). ೯. ಬಲಶಾಲಿಯಾದ; ಸಮರ್ಥವಾದ. (ನಾ). ೧೦. ನಿತ್ಯವಾದುದು; ಶಾಶ್ವತವಾದುದು: "ನಿತ್ಯಂ ಧ್ರುವಂ ಶಾಶ್ವತಮದು ಸನಾತನಮನಶ್ವರಂ ಸ್ಥಿರಮನಿಕ್ಕುಂ" (ಮಂಗರಾ. ೮-೨೫). ೧೧. ಮರ. ೧೨. ಬೆಟ್ಟ; ಪರ್ವತ: "ಗಿರಿ ಗೋತ್ರಂ ಶಿಖರಿ ಧರಂ ಸ್ಥಿರಂ ನಗಂ ಪರ್ವತಂ" (ಪಪ್ರಚೋ. ೨೮-೧). ೧೩. ಶಿವನ ಒಂದು ಹೆಸರು. ೧೪. ಶನಿಗ್ರಹ: 'ಸ್ಥಿರವಾರ' ಪರಾ. ೧೫. ಸಮಾಧಾನಚಿತ್ತದಿಂದ ಇರುವವನು: "ವಿಸ್ರಬ್ಧಃ, ಸ್ಥಿರಃ- ಈ ೨ ಹದುಳಿ (ಗ) ದಂ" (ಹಲಾಯು. ೬೧-೨೧೫). ೧೬. ಸ್ಥೈರ್ಯ; ದೃಢತೆ : ಸ್ಥಿರವ ಹಡೆದು ವಿಮ್ಮರ್ಲತೆ ಸುರಧನು ತರುಣಿ ರೂಪವನಾಂತು ಧರಗಿಳಿತಪ್ಪ ಪಾಂಗಿನೊಳಂದಳದಿಂ ತರುಣಿಯಳಿವುತಿರ್ದಳಾಗ (ಶ್ರೀಪಾಲ.೧೦-೬೭). ೧೭. ದೇವತೆ. ೧೮. ಎತ್ತು; ವೃಷಭ. ೧೯. ಷಣ್ಮುಖ. ೨೦. ಮುಕ್ತಿ; ಮೋಕ್ಷ. ೨೧. [ಜ್ಯೋತಿ] ವೃಷಭ, ಸಿಂಹ, ವೃಶ್ಚಿಕ ಮತ್ತು ಕುಂಭರಾಶಿಗಳು. ೨೨. [ಜೈನ] ನಾಮಕರ್ಮಪ್ರಕಾರಗಳಲ್ಲಿ ಒಂದು; IP ಈ ಕರ್ಮದ ಉದಯದಿಂದ ಶರೀರದಲ್ಲಿ ರಸಾದಿಧಾತುಗಳು ಉತ್ಪನ್ನವಾಗಿ ಸ್ಥಿರವಾಗಿ ಉಳಿಯುತ್ತವೆ: ಸ್ಥಿರಾಸ್ಥಿರ ಶುಭಾಶುಭ ಸುಸ್ವರದುಸ್ವರ . . . ನೀಚೈರ್ಗೋತ್ರಂ ಗಳೆಂಬ ದ್ವಿಸಪ್ತಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೭-೪೯ ವ). [ಸಂ.]

ಸ್ಥಿರಂ (ಅ). ದೃಢವಾಗಿ; ಸ್ಥಿರವಾಗಿ: ಸ್ಥಿರಮಿರ್ದು ಪ್ರಭು ನುಡಿಯ ಪ್ರರೂಢಮುದ ನಾದನಾತಂ (ಕವಿಕಾ. ೨-೭). [< ಸಂ. ಸ್ಥಿರ]

ಸ್ಥಿರಕರಿಸು (ಕ್ರಿ). ದೃಢಪಡಿಸು; ಸ್ಥಿರೀಕರಿಸು: ಮುಂ ಪತ್ತವರಿರವಂ ಪೋಲ್ವುದು ಪುಟ್ಟಿದ ಶಿಶುವೆಂಬರ ಮಾತಂ ಸ್ಥಿರಕರಿಸುವ ತೆಱದಿಂ ತದ್ರಾಜಾತ್ಮಜೆಯ . . . ಮಧ್ಯದೊಳೊದವಿದ ಸೊನ್ನೆಯ ದೊರೆಯಾದುದು ನಾಭೀವಲಯಂ (ಜಯಾಕಾ. ೩-೩೪).

[ಸಂ. ಸ್ಥಿರಕರಣ + - ಇಸ್ಕು]

ಸ್ಥಿರಕುಕ್ಷಿ (ನಾ). ಕಲ್ಲು; ಶಿಲೆ : "ಸ್ಥಿರಕುಕ್ಷಿ ಪಾಷಾಣಮಶ್ಮಮುಪಲಮನೆ ಪ್ರಸ್ತರಂ . . . ಕಲ್ಲಕ್ಕುಂ" (ಮಂಗರಾ. ೨೯-೧). [ಸಂ.]

ಸ್ಥಿರಗೊಳಿಸು (ಕ್ರಿ). ೧. ಅಚಲವಾಗಿ ಇರಿಸು; ಸ್ಥಿರವಾಗಿ ನಿಲ್ಲಿಸು: ಮೂಲದೇಹ ಸ್ವಭಾವವು ಅಥವಾ ಪ್ರಕೃತಿಯು ತಾಮಸವಿದ್ದರೆ ಪರಮೇಶ್ವರನ ಶುದ್ಧಸ್ವರೂಪದಲ್ಲಿ ಚಿತ್ತವನ್ನು ಸ್ಥಿರಗೊಳಿಸುವ ಉದ್ಯೋಗವು ಒಮ್ಮೆಲೇ ಅಥವಾ ಒಂದೇ ಜನ್ಮದಲ್ಲಿ ಸಫಲವಾಗಲಾರದು (ಶಾಂತಜೀ. ೬೭). ೨. ದೃಢಪಡಿಸು; ಸ್ಥಿರೀಕರಿಸು: (೬).

[ಸ್ಥಿರ + ಕೊಳ್ + - ಇಸ್ಕು]

ಸ್ಥಿರಚಿತ್ತ (ನಾ). ದೃಢವಾದ ಮನಸ್ಸುಳ್ಳವನು: ಉನ್ಮತ್ತನು ನಾನು, ಸ್ಥಿರಚಿತ್ತನು ನಾನು! (ಪಾಂಚಜ. ೧೬-೧೯). [ಸಂ.]

ಸ್ಥಿರಜೇವಿ (ನಾ). ಎಲವದ ಮರ; ಬೂರುಗ : "ಸ್ಥಿರಜೇವಿ ಮೋಚ ಶಾಲ್ಮಲಿ ಯೆಲವವಕ್ಕುಂ" (ಮಂಗರಾ. ೩೬-೧೭). [ಸಂ. ಸ್ಥಿರಜೀವಿನ್]

ಸ್ಥಿರತೆ (ನಾ). ೧. ದೃಢತೆ; ಗಟ್ಟಿತನ: ಸ್ಥಿರತೆಯಲಿ ಕನಕಾದ್ರಿ ಧೈರ್ಯದಿ ಧರಗೆ ಸರಿ ಗಂಭೀರತನದಲಿ ಶರಧಿಗಣೆ . . . ಭೂಪ ದಶರಥನು (ಕಾಶಿರಾ. ೧-೨೪). ೨. ಶಾಶ್ವತತೆ; ನಿತ್ಯತೆ: ಪೆರ್ಮೆಗಂ ಸ್ಥಿರತೆಗಮಾಶ್ರಯಮಾದ ಗಗನಲಕ್ಷ್ಮಿಯ ಮಧ್ಯಾಧಿಗತವಳಿತ್ರಯಮನೆ ಸಲೆ ಸೊಗಯಿಪುದು ಜಗತ್ತ್ರಯಂ (ಚಂದ್ರಪ್ರ. ೧-೬೯).

[ಸಂ. ಸ್ಥಿರತಾ]

ಸ್ಥಿರತ್ವ (ನಾ). ೧. ಸ್ಥೈರ್ಯ; ದೃಢತೆ: ನಿಶ್ಯಂಕನುಂ ನಿಸ್ಸಹಾಯನುಮಾಗಿ ನುಡಿದ ಮೋಘಜಿಹ್ವನ ಸ್ಥಿರತ್ವಕ್ಕೆ ಮೆಚ್ಚಿ (ಶಾಂತಿಪು. ೬-೨೫ ವ). ೨. ಬಲ; ಸಾಮರ್ಥ್ಯ: ಸುರಪತಿ ಕೆಯ್ಮಱಿದು . . . ಆಯರ್ವರ್ ಮುನ್ನೆರಪಿರ್ದಗಣ್ಯಪುಣ್ಯಸ್ಥಿರತ್ವಮಂ ನೆಗಟೆ ಪೊಗಟಲಱಿಯಂ ಸಭೆಯೊಳ್ (ಶಾಂತಿಪು. ೧೦-೭೬). [ಸಂ.]

ಸ್ಥಿರನುಡಿ (ಕ್ರಿ). ಸ್ಥಿರವಾದ ಮಾತನ್ನು ಆಡು; ಸತ್ಯವನ್ನು ನುಡಿ: [ಗು]ಣಸಂಪನ್ನಂ ಸ್ಥಿರನುಡಿವಾತಂ ಧರ್ಮದ ಮೇರು (ಸೌಗಾ. XX. ೨೪-೨೪: 1034). [ಸ್ಥಿರ + ನುಡಿ]

ಸ್ಥಿರಪಡಿಸು (ಕ್ರಿ). ದೃಢಪಡಿಸು; ಸ್ಥಿರೀಕರಿಸು: ಅನೇಕ ನಿದರ್ಶನಗಳನ್ನು ನೀಡಿ ಅವರು ತಮ್ಮ ವಾದವನ್ನು ಸ್ಥಿರಪಡಿಸಿದರು (ರೂಢಿ). [ಸ್ಥಿರಪಡು + - ಇಸ್ಕು]

ಸ್ಥಿರಪಡು (ಕ್ರಿ). ರುಜುವಾತಾಗು; ದೃಢಪಡು: ಟೀಕೆಟಪ್ಪಣಿ ನೀಡಿದ ಸಂಗತಿ ಸಾಕ್ಷ್ಯಸಾಮಗ್ರಿಯಿಂದ ಸ್ಥಿರಪಟ್ಟುದಾದರೆ ಅವನನ್ನು . . . ಕಠಿಣಶಿಕ್ಷೆಗೆ ಗುರಿಪಡಿಸಬಹುದು (ಪುನರು. ೩೧೫). [ಸ್ಥಿರ + ಪಡು]

ಸ್ಥಿರಪದ (ನಾ). ಶಾಶ್ವತವಾದ ಪದವಿ; ಮೋಕ್ಷ: ಇಂದುಶೇಖರನ ಪೊಲವಾಂತು ಬಾಣಾಮ್ಬಿ . . . ಸ್ಥಿರಪದಕ್ಕೆದಿದಂ (ನವಮೋ. ೩೩-೩೨). [ಸಂ.]

ಸ್ಥಿರಬಾಳ್ (ಕ್ರಿ). ಸ್ಥಿರವಾಗಿ ಬದುಕು; ಚಿರಕಾಲ ಜೀವಿಸು: ಪರಿವ ಪೆರ್ದೂಱೆಯಮ್ಮಳಿಗಾದ ಗೇಕೆಲ್ಲ ಸ್ಥಿರಬಾಳ್ವುವದಕಿದಿರಾದ ಮರಗಳು ಬೇಗಿತ್ತು ಬಿದ್ದುಹೋಹುವು (ಭರಚ. ೩೯-೧೧೨). [ಸ್ಥಿರ + ಬಾಳ್ (< ಬಾಳ್ವು)]

ಸ್ಥಿರಬುದ್ಧಿ (ನಾ). ೧. ದೃಢಮನಸ್ಸು ; ಅಚಲವಾದ ಬುದ್ಧಿ. ೨. ಸ್ಥಿರವಾದ ಮನಸ್ಸುಳ್ಳವನು; ದೃಢಚಿತ್ತ. [ಸಂ.]

ಸ್ಥಿರಬೋಧ (ನಾ). ಮೋಕ್ಷಜ್ಞಾನವುಳ್ಳವನು ; ಕೇವಲಜ್ಞಾನಿ: ಸ್ಥಿರಬೋಧಂ ಚಂಪಯೊಳ್ ಪೆಂಪಸೆದಿರೆ ವಸುಪೂಜ್ಯಾತ್ಮಜಂ . . . ನರ್ಮಿದರ್ (ಶಾಂಪು. ೧೨-೩೦). [ಸಂ.]

ಸ್ಥಿರಮನಸ್ಕ (ನಾ). = ಸ್ಥಿರಬುದ್ಧಿ ೨: ಅವನು ಹೀಗೆ ಇಷ್ಟೇ ಶಾಂತಚಿತ್ತನಾಗಿ, ಸ್ಥಿರಮನಸ್ಕನಾಗಿ ಇರುತ್ತಾನೆ (ವೀರಯೋ. ೫). [ಸಂ.]

ಸ್ಥಿರವಚನ (ನಾ). ೧. ಶಾಶ್ವತವಾಗಿ ಉಳಿಯುವ ಮಾತು; ಸತ್ಯ. ೨. ಸತ್ಯವನ್ನು ನುಡಿಯುವನು: ಕಾಳಗನತಿಧವಳಯಶಂ ರಾಜಪೂಜಿತಂ ಸ್ಥಿರವಚನಂ (ಸೌಗಾ. XX. ೩೧-೧೨; 1044). [ಸಂ.]

ಸ್ಥಿರವಾರ (ನಾ). ಶನಿವಾರ: ಈ ಶನಿವಾರದಲ್ಲಿ ಸ್ಥಿರವಾರ ಮಾರುಕಲ್ಲುಬೆಟ್ಟದ ಕಾಡಿನಲ್ಲಿ ಬೇಟೆ ಆಡಿದಲ್ಲಿ ಬಿದ್ದ ಮೃಗಜಾತಿಗಳ ವಿವರಾ (ರಾಚೇಂದ್ರ. ೧೪೯): ತ್ರಯೋದಶಿ ಸ್ಥಿರವಾರ ಹಸ್ತನಕ್ಷತ್ರ ವೃದ್ಧಿಯೋಗ ಅಭಿಜಿನ್ಮುಹೂರ್ತದಲ್ಲಿ ಕೇಶವ ಪ್ರತಿಷ್ಠೆ ಮಾಡಿಸಿದರು (ಪೂಯ್ವಾ. ೨೦). [ಸಂ.]

ಸ್ಥಿರಸೇಪೆ (ನಾ). ಸ್ಥಿರವಾಗಿರುವಂತೆ ಹರಸಿ ತಳಿಯುವ ಅಕ್ಷತೆ: ಕಂಕಣ ಕೈಹಾರ ಕಟ್ಟಿ ಸ್ಥಿರಸೇಸೆಯನಿಕ್ಕಿ ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು (ಮಹಾದೇ. ಬ. ೩೫-೭೬). [ಸಂ. ಸ್ಥಿರಸೇಸಾ]

ಸ್ಥಿರಸ್ಥತ್ತು (ನಾ). ಮನೆ, ಭೂಮಿ ಮುಂತಾದ ಸ್ಥಾವರ ಆಸ್ತಿ: ಸ್ಥಿರಸ್ಥತ್ತಿನ ಆಧಾರದ ಮೇಲೆ ಸಾಲ ಕೊಡುವುದು ಎಷ್ಟು ಅಪಾಯಕರ (ಯೋಧಪ್ರ. ೩೧).

[ಸ್ಥಿರ + ಸ್ವತ್ತು]

ಸ್ಥಿರಹಸ್ತ (ನಾ). [ನಾಟ್ಯ] ಮೂವತ್ತೆರಡು ಅಂಗಹಾರಗಳಲ್ಲಿ ಮೊದಲನೆಯದು: ಸ್ಥಿರಹಸ್ತ, ಪರ್ಯಸ್ತ ಸೂಚೀವಿದ್ಧ, ಅಪರಾಜಿತ . . . ಸಂಭ್ರಾಂತ, ಸ್ವಸ್ತಿಕರೇಚಿತ - ಈ ಮೂವತ್ತೆರಡು ಅಂಗಹಾರಂಗಳ ಪೆಸರು (ಲಾಸ್ಯರಂ. ೫-೭ ವ). [ಸಂ.]

ಸ್ಥಿರಾಯು (ಗು). ೧. ಬಹುಕಾಲ ಬದುಕುವ ; ದೀರ್ಘಾಯುಷಿಯಾದ. (ನಾ). ೨. ಬಹುಕಾಲ ಬದುಕುವಂತಹುದು; ದೀರ್ಘಾಯುಷಿಯಾದುದು. ೩. ಒಂದು ಬಗೆಯ ಮರ; ಬೂರುಗದ ಮರ: ''ಎಲವಂ ಸ್ಥಿರಾಯು ತಾಂ ಶಾಲ್ಮಲಿಯೆನಿಕ್ಕುಂ'' (ಪಪ್ರಕೋ. ೩೩-೨). [ಸಂ. ಸ್ಥಿರಾಯುಸ್]

ಸ್ಥಿರಾಸ್ತಿ (ನಾ). = ಸ್ಥಿರಸ್ವತ್ತು: ಅವನು ತನ್ನ ಸ್ಥಿರಾಸ್ತಿಯನ್ನು ಆಧಾರಮಾಡಿ ಅವರಿಂದ ಸಾಲಪಡೆದನು (ರೂಢಿ). [ಸ್ಥಿರ + ಆಸ್ತಿ]

ಸ್ಥಿರೀಕರಣ (ನಾ). ಸ್ಥಿರಗೊಳಿಸುವಿಕೆ; ದೃಢಗೊಳಿಸುವಿಕೆ: 'ದೇಗುಲ'ವೆಂಬ ಭವ್ಯಕಲ್ಪನೆ, ಈ ಏರುವಿಕೆಯ ಒಂದು ನಲೆಯ ಸ್ಥಿರೀಕರಣಕ್ಕೆ ದೇವಮಾನವರು ಕಲ್ಪಿಸಿರುವ ಉಪಾಯಗಳಲ್ಲೊಂದು (ಕಾವ್ಯಕಾ. ೬). [ಸಂ.]

ಸ್ಥಿರೀಕರಿಸು (ಕ್ರಿ). ದೃಢಪಡಿಸು; ಸ್ಥಿರಗೊಳಿಸು: ಶಿವಸ್ಕಂದವರ್ಮನು ತಂದೆಯಾದ ಮಹಾರಾಜ ಬಪ್ಪಸ್ವಾಮಿಯು ಹಿಂದೆ ಕೊಟ್ಟಿದ್ದ ಬ್ರಾಹ್ಮಣದತ್ತಿಯನ್ನು ಸ್ಥಿರೀಕರಿಸಿದನೆಂದು ಹೇಳಿದೆ (ಕರ್ನಾಅ. ೫). [ಸ್ಥಿರೀಕರಣ + - ಇಸ್ಕು]

ಸ್ಥಿರೆ (ನಾ). ೧. ಸ್ಥಿರಬುದ್ಧಿಯಿರುವ ಹೆಣ್ಣು; ದೃಢಚಿತ್ತವುಳ್ಳ ಸ್ತ್ರೀ: ಸ್ಥಿರೆಯಲ್ಲದವಳನತಿನಿಷ್ಠುರೆಯಂ . . . ಸರಿಯಂ ಭಾವಿಪುದು ಮುನ್ನಮೇ ಶುಭಕಾಮಂ (ಕಾದಂಪು. ೫೪೯): ಧರೆಯಂ ಸ್ಥಿರೆಯೆನಿಸಿದನಿಂದಿರೆಯಂ ಪದ್ಮಾಲಯಾಖ್ಯೆಯೆಂದೆನಿಸಿದಂ . . . ಅದೇಂ ಸಮರ್ಥನೊ ಪದ್ಮಂ (ಪಜ್ಜಪು. ೩-೨). ೨. ಭೂಮಿ; ಪೃಥ್ವಿ: ''ಸ್ಥಿರೆ ಧರಣಿ ಧಾತ್ರಿ . . . ನೆಲಂ'' (ವಸ್ತುಕೋ. ೨೬-೧). ೩. ಒಂದು ಬಗೆಯ ಮರ; ಬೂರುಗದ ಮರ. ೪. ಮೂರೆಲೆಹೊನ್ನೆ; ಶಾಲಪರ್ಣಿ: ''ಎದಾರಿಗಂಧಾ, ಅಂಶುಮತೀ, ಶಾಲಪರ್ಣೀ, ಸ್ಥಿರಾ, ಧ್ರುವಾ-ಈ ಮೂರೆಲೆಹೊನ್ನೆ ಹೆಸರು'' (ಸಿದ್ಧಾಂತಿ. ೧೩೮). [ಸಂ. ಸ್ಥಿರಾ]

ಸ್ಥೂಣಾನಿಖನನನ್ಯಾಯ (ನಾ). [ತರ್ಕ] ಕಂಬವನ್ನು ಹೂಳುವಾಗ ಪುನಃಪುನಃ ಅಲ್ಲಾಡಿಸಿ ಸ್ಥಿರಗೊಳಿಸುವಂತೆ, ಒಂದು ಸಿದ್ಧಾಂತವನ್ನು ಸ್ಥಿರಪಡಿಸಲು ವಿಷಯವನ್ನು ಮತ್ತೆ ಮತ್ತೆ ಚರ್ಚಿಸುವುದು: ಆ ಹೊಸಬೆಳಕೂ ಸ್ಥೂಣಾನಿಖನನ ನ್ಯಾಯದಂತೆ ಎಂದರೆ ಕಂಭವನ್ನು ಅಲ್ಲಾಡಿಸಿ ಅಲ್ಲಾಡಿಸಿ ದೃಢಪಡಿಸಿದಂತೆ, ಈ ಸಂಸ್ಕೃತಿಯ ಪೋಷಣೆಗೇ ಸಹಾಯಕಾರಿಯಾಗಿದೆ (ಕರ್ನಾಸಂ. ೧೫). [ಸಂ.]

ಸ್ಥೂರಿ (ನಾ). ೧. ಭಾರವನ್ನು ಹೊತ್ತು ಸಾಗಿಸುವ ಕುದುರೆ; ಹೇರಿನ ಕುದುರೆ: ಮನೋಜವ ಕಾಮಚಾರಿ ಸ್ಥೂರಿ ಪೃಷ್ಠಯೋಜಿತಮುಮನುಕೂಲಶೂರರಥ ಕಲ್ಪಪರಿಣತರಥಚೋದಕಭ್ರಾಜಿತಮುಂ ಆಗಿ (ಆದಿಪು. ೧೧-೧೨ ವ). ೨. ಭಾರ ಹೊರುವ ಎತ್ತು; ಹೇರೆತ್ತು. [ಸಂ. ಸ್ಥೂರಿನ್]

ಸ್ಥೂಲ, ಸ್ಥೂಳ (ಗು). ೧. ದೊಡ್ಡ ಆಕಾರದ; ದಪ್ಪವಾದ: ಸ್ಥೂಲಗಾತ್ರದ ದಾದಿ ಫೋಟೋವಿನ ಮೇಲೆ ಬಾಗಿಕೊಂಡು ಪ್ರಶ್ನಿಸಿದಳು (ಪುನರು. ೬೨೩). ೨. ಶಕ್ತಿಶಾಲಿಯಾದ; ಸಾಮರ್ಥ್ಯವುಳ್ಳ. ೩. ಬೊಜ್ಜುಳ್ಳ; ಕೊಬ್ಬಿದ. ೪. ನಿಖರವಲ್ಲದ; ಸರಿಸುಮಾರಾದ: $\pi = 3$ ಎಂಬ ಬಹಳ ಸ್ಥೂಲವಾದ (Rough) ಬೆಲೆಯನ್ನು ಪ್ರಾಚೀನದೇಶಗಳೆಲ್ಲಾ . . . ಉಪಯೋಗಿಸಿರುತ್ತಾರೆ (ಗಣಚ. ೧೩೧). ೫. ಮಂದಬುದ್ಧಿಯ; ಅವಿವೇಕಿಯಾದ. ೬. ಹೊರಗಿನ; ಬಾಹ್ಯ: ಕಾವ್ಯಶಾಪೆಯಲ್ಲಿ ಬೆಳವಣಿಗೆ ತೋರಿರುವಷ್ಟು ಮಟ್ಟಿಗೆ ದೇಶಚರಿತ್ರೆ ಮೊದಲಾದ ಸ್ಥೂಲಲೋಕವಿಚಾರದ ಶಾಖೆಗಳಲ್ಲಿ ಬೆಳವಣಿಗೆ ಕಾಣಬರುವುದಿಲ್ಲ (ಸಾಒಶ. ೩೯). (ನಾ). ೭. ದಪ್ಪವಾಗಿರುವುದು; ತೋರವಾದುದು : ''ಪೀನ ಪೀವರಾಮ್ಬಿಂ ಸ್ಥೂಲಂ'' (ವಸ್ತುಕೋ. ೧೦೭-೫೬); ಶ್ಲೇಷ್ಮಾಧಿಕ್ಯದಿಂದ ದೇಹವು ಸ್ಥೂಲವಾಗಿರುವುದು (ಸಕಪ್ರ. ೧೯). ೮. ಜಡಸ್ವಭಾವದವನು; ಆಲಸಿ: ''ಸ್ಥೂಲಂ ಜಡನುಂ'' (ವಸ್ತುಕೋ. ೧೨೩-೩೩). ೯. ಸೂಕ್ಷ್ಮ, ಸ್ಥೂಲ ಮತ್ತು ಪರ ಎಂಬ ಮೂರು ಬಗೆಯ ದೇಹಪ್ರಕಾರಗಳಲ್ಲಿ ಒಂದು; ಭೌತಿಕವಾದ ಶರೀರ: ಸ್ಥೂಲಸೂಕ್ಷ್ಮಪರಂಗಳೆಂದೇ ಹೇಳುವರು ಮೂಱೆಂದು ತನುಗಳ ಸ್ಥೂಲವವಯವಗೂಡಿ ತೋರ್ಪುದು ಮಾಂಸಮಯಪಿಂಡ (ಅಮೃತ. ೩-೭೮). ೧೦. [ತತ್ತ್ವಶಾ] ಹೊರಗೆ ತೋರುವಂತಹುದು; ಬಾಹ್ಯವಾದುದು: ಸ್ಥೂಲವು ಬಾಹ್ಯವೆಂದೂ ಸೂಕ್ಷ್ಮವು ಅಭ್ಯಂತರವೆಂದೂ . . . ಹೇಳಲ್ಪಡುತ್ತದೆ (ತಿವಾಸೂ. ೩೭-೧೪ ಆಡಟ). ಸ್ಥೂಳ: ೭. ''ಬಹುಳಃ, ಸ್ಥೂಳಃ, ಪೀನಃ, ಪೀವಾ, ಪೀವರಃ- ಈ ೫ ದೊಡ್ಡಿ (ತು)'' (ಹಲಾಯು. ೫೭-೧೪೭). ೧೧. ಡೇರೆ; ಗುಡಾರ: ''ದೂಷ್ಯಂ, ಸ್ಥೂಳಂ, ಪಟಕುಟೀ, ಗುಣಲಯನೀ, ಕೇಳಿಕಾ - ಈ ೫ ಗುಡಿ'' (ಹಲಾಯು. ೭೪-೨೯೭).

ಸ್ಥೂಲವಾಗಿ = ಸರಿಸುಮಾರಾಗಿ; ಅಂದಾಜಿನಲ್ಲಿ: ನಕ್ಷತ್ರಗಳು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತವೆ ಎಂದು ಸ್ಥೂಲವಾಗಿ ಆಗಲೇ ಹೇಳಿದ್ದೇವೆ (ನಕ್ಷತ್ರ. ೩೨); ನೂತನ ಪರಿಕ್ಷಾಕ್ರಮ ಏರ್ಪಟ್ಟಿದೆ. ಅದನ್ನಿಲ್ಲಿ ಸ್ಥೂಲವಾಗಿ ವಿವರಿಸಿದ (ತಿಕ್ಷರ. ೩೫೯). [ಸಂ.]

ಸ್ಥೂಲತನು (ನಾ). ಭೌತಿಕವಾದ ದೇಹ; ಪಂಚಭೂತಗಳಿಂದಾದ ಶರೀರ; ಜಡದೇಹ: ಎನ್ನ ಸ್ಥೂಲತನುವೆಂಬ ಕೈಲಾಸದ ಮೇಲೆ . . . ಲೀಲೆಯನಾಡುವಾತ ನೀನೇ ಅಯ್ಯಾ (ಅಖಂಡೇ. ೨೪೦-೮೬). [ಸಂ.]

ಸ್ಥೂಲತ್ವ (ನಾ). ದಪ್ಪನಾಗಿರುವಿಕೆ ; ತೋರವಾಗಿರುವಿಕೆ : ಈ ಸ್ಥೂಲತ್ವದ ಕಾರಣದಿಂದಲೇ ದೈಹಿಕಚಟುವಟಿಕೆಗಳು ಕೂಡ ಮಂದಗತಿಯನ್ನು ಹಿಡಿಯುತ್ತವೆ (ಮನೋಸಂ. ೨೩೬). [ಸಂ.]

ಸ್ಥೂಲದಾರು (ನಾ). ೧. ದಪ್ಪನಾಗಿರುವ ಕೊರಡು : "ಸೀಚನ ವಂಶ ಸ್ಥೂಲದಾರುಗಳೊಳು ತಳೆ" (ಶಬ್ದಮಂ. ೧೧೪). ೨. ದೊಣ್ಣೆ ; ಬಡಿಗೆ. [ಸಂ.]

ಸ್ಥೂಲದೇಹ (ನಾ). ೧. = ಸ್ಥೂಲತನು. ೨. ದಪ್ಪನಾದ ಶರೀರ; ತೋರವಾದ ದೇಹ : ಅವರದು ಸ್ಥೂಲದೇಹ (ರೂಢಿ). [ಸಂ.]

ಸ್ಥೂಲಪಾದ (ನಾ). ೧. ಆನೆ. ೨. ಆನೆಕಾಲು ರೋಗವುಳ್ಳವನು ೩. (?): ಆರುಯವೆಗಳ ಸ್ಥೂಲಪಾದವೆರೆದರಲದಕ್ಕಾರು ಪಾಲನೊಳೊಪಮಂ ಕೂಡಿ ತಂಡಿಲವ ಸಾರಿ ರವತೂಕ ಮಿರಲದಕೆ ಕ್ರಯವನು ಪೇಳು ಪಿಂಶತಿಯ ಮೇಲೆಂಟನೂ (ರತ್ನಶಾ. ೫-೧೮). [ಸಂ.]

ಸ್ಥೂಲಬುದ್ಧಿ (ನಾ). ೧. ಮಂದಬುದ್ಧಿ ; ಸೂಕ್ಷ್ಮವಲ್ಲದ ಬುದ್ಧಿ : ನಮ್ಮ ಸ್ಥೂಲ ಬುದ್ಧಿಗೆ ನ್ಯಾಯ ಎಂದು ಕಂಡುಬರುವ ವಿಷಯ (ಶಾಂತಲಾ. ೯೪). ೨. ದಡ್ಡ; ಅವಿವೇಕಿ. [ಸಂ.]

ಸ್ಥೂಲಲಕ್ಷ (ನಾ). ಧಾರಾಳವಾಗಿ ದಾನಮಾಡುವವನು; ದಾನಶೂರ : ಸ್ಥೂಲಲಕ್ಷ:, ಬಹುವ್ಯಯಾ - ಈ ೨ ಹಿರಿದನೀವಂ" (ಹಲಾಯು. ೬೦-೨೧೦). [ಸಂ.]

ಸ್ಥೂಲಶರೀರ (ನಾ). ೧. = ಸ್ಥೂಲತನು. ೨. = ಸ್ಥೂಲದೇಹ ೨ : ಸ್ಥೂಲಶರೀರದವರಿಗೆ ಹೆಚ್ಚು ಓಡಾಡುವುದು ಕಷ್ಟವಾಗುತ್ತದೆ (ರೂಢಿ). [ಸಂ.]

ಸ್ಥೂಲಾಂಗ (ನಾ). ೧ = ಸ್ಥೂಲತನು : ತ್ಯಾಗಾಂಗವು ಬಹಿರಂಗವಾದುದರಿಂದ ಸ್ಥೂಲಾಂಗವೆಂದೂ ಹೇಳಲ್ಪಡುವುದು (ಶಿವಾಸೂ. ೭೫). ೨. ದಪ್ಪನಾದ ದೇಹ ವುಳ್ಳವನು : "ಬೃಹಚ್ಚರಣಾಂ ಸ್ಥೂಲಾಂಗಂ ಸೂಕರವದನಂ ಕರ್ಕಟಾದಿಮದ್ರೋಕ್ಕಾಣಂ" (ಜಾತಕ. ೧೯-೧೦). [ಸಂ.]

ಸ್ಥೂಲೋಚ್ಚಯ (ನಾ). ೧. ಬೆಟ್ಟದಿಂದ ಉರುಳಿ ಬಿದ್ದು ದಿಣ್ಣೆಯಾಗಿರುವ ಬಂಡೆಗಲ್ಲು. ೨. ಅಪೂರ್ಣತೆ; ಅಸಮಗ್ರತೆ. ೩. ಆನೆಯ ನಡಗೆಯಂತಹ ನಡಗೆ; ವೇಗವೂ ಅಲ್ಲದ, ನಿಧಾನವೂ ಅಲ್ಲದ ನಡಗೆ: "ನಿಟ್ಟೋಟವಹ ನಡೆ ಸ್ಥೂಲೋಚ್ಚಯಮನಿಕ್ಕು" (ಮುಗಾರಾ. ೪೭-೬). ೪. ಮುಖದಲ್ಲಿ ಮೊಡವೆಗಳು ಮೂಡುವಿಕೆ. [ಸಂ.]

ಸ್ಥೇಮ (ನಾ). ಸ್ಥಿರತೆ ; ದೃಢತೆ : "ಸ್ಥಿರಭಾವಂ ಸ್ಥೇಮಂ" (ವಸ್ತುಕೋ. ೧೧೫-೨೮); ಗ್ರಾಮಪಾಲಕದಂತೆ ಧಾತುಗ್ರಾಮಗಳಿಗುಂಡನ್ನರಸಮಂ ಸ್ಥೇಮದಿಂ ಹಂಚಿಡುತ (ವಿವೇಚ. ೧೩-೨೩). [ಸಂ. ಸ್ಥೇಮನ್]

ಸ್ಥೈರ್ಯ (ನಾ). ೧. ಸ್ಥಿರತೆ; ದೃಢತೆ. ೨. ಮನಸ್ಸಿನ ಗಟ್ಟಿತನ; ಮನೋದಾರ್ಢ್ಯ : ಸ್ಥೈರ್ಯಶೌರ್ಯಂ ವರಕೃಪಾನಿಧಿ ಪೂರ್ಯಧೈರ್ಯಂ (ಬಸವು. ೨೨-೨೪); ನಾರಾಯಣನ ಸ್ವಭಾವ ಚಂಚಲವಾದುದು; ಅವನದು ಸ್ಥೈರ್ಯವಿಲ್ಲದ ಜೀವ (ಚಿಟ್ಟಜೀ. ೧೪೬). ೩. ತಾಳ್ಮೆ. ೪. ಎಡೆಬಿಡದೆ ಇರುವಿಕೆ; ನಿರಂತರತೆ. ೫. ಜಿತೇಂದ್ರಿಯತ್ವ. ೬. [ದ್ವೈತ] ನಲವತ್ತು ಬಗೆಯ ಗುಣಗಳಲ್ಲಿ ಒಂದು : ರೂಪ, ರಸ, ಗಂಧ . . . ಸ್ಥೈರ್ಯ, ಶೌರ್ಯ, ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೨೭೫). [ಸಂ.]

ಸ್ಥೌರಿ (ನಾ). ೧. ಭಾರ ಹೊರುವುದಕ್ಕಾಗಿ ಬಳಸುವ ಕುದುರೆ; ಹೇರುಗುದುರೆ. ೨. ಹೇರೆತ್ತು : "ಸ್ಥೌರೇ, ಪೃಷ್ಠವಾಹ:- ಈ ೨ ಹೇಱುವತ್ತು" (ಹಲಾಯು. ೪೪-೧೧೧). [ಸಂ. ಸ್ಥೌರಿನ್]

ಸ್ನಪನ (ನಾ). ೧. (ದೇವರಿಗೆ) ಸ್ನಾನಮಾಡಿಸುವಿಕೆ; ಅಭಿಷೇಕ : ಜಿನಪತಿ ಸ್ನಪನದ ಕಡೆಯೊಳ್ (ಶಾಂತಿಪು. ೧೦-೬೪ ವ); ಪರಮಶ್ರೀತೀರ್ಥನಾಥಸ್ನಪನಸಲಿಲದಿಂದೆನ್ನ ಗಾತ್ರಂ ಪವಿತ್ರಕರಮಕ್ಕೆ (ಪುಷ್ಪಪು. ೭-೮). ೨. ಜಳಕ ; ಸ್ನಾನ : ಅಂತು ಪುಷ್ಪವತಿಯಾಗಿ ಚತುರ್ಥಸ್ನಪನಮಾಂಗಲ್ಯಪುರಸ್ಸರಮರ್ಹತ್ಪೂಜಾಮಂಗಳಮನಾಚರಿಸಿ (ಪಲ್ಲಿವು. ೪-೫೩). ೩. ಪ್ರೋಕ್ಷಣೆ ಮಾಡುವುದು. [ಸಂ.]

ಸ್ನಾತ (ಗು). ೧. ಸ್ನಾನ ಮಾಡಿದ; ಮಿಂದ. ೨. ನಿಷ್ಣಾತನಾದ; ಪಾರಂಗತನಾದ. (ನಾ). ೩. ಸ್ನಾನ ಮಾಡಿದವನು : ನೀಡಿದನು ಕುಶಿಕತನಯಂ ರಾಮಚಂದ್ರಂಗೆ ಮಂಗಳಸ್ನಾತಂಗೆ ಮಂತ್ರಸದ್ವಿದ್ಯೆಯಂ (ಶ್ರೀರಾಮಾ. ೩೧-೯೧); ಗೋವಿಂದಭಟ್ಟ . . . ಮತ್ತೊಮ್ಮೆ ಸ್ನಾತನಾಗಿ ಮಡಿಯಾಗಿ ಮಂಗಳಾರತಿಗೆ ಬರುತ್ತಾನೆ (ದೀಪಹ. II, ೯೦). ೪. ವಿದ್ಯಾಪಾರಂಗತನಾದವನು. [ಸಂ.]

ಸ್ನಾತಕ (ನಾ). ೧. ಬ್ರಹ್ಮಚರ್ಯಾಶ್ರಮದ ಕರ್ತವ್ಯದಂತೆ ಗುರುಕುಲದಲ್ಲಿ ವಿದ್ಯಾರ್ಜನೆಯನ್ನು ಮುಗಿಸಿಕೊಂಡು, ಗುರುವಿನ ಅಪ್ಪಣೆಯಿಂದ ಮನೆಗೆ ಮರಳಿ ಗೃಹಸ್ಥಾಶ್ರಮಕ್ಕೆ ಸೇರುವವನು : ಗುರುಕುಲದಿಂದ ಹಿಂತಿರುಗುವವನಿಗೆ ಸ್ನಾತಕನೆಂದು ಹೆಸರು (ಆರ್ಯಧ. ೧೨೭). ೨. ಕಾಲೇಜಿನಲ್ಲಿ ಓದಿ ಪದವಿ ಪಡೆದವನು : ಬರೇ ಕಾಲೇಜುಗಳಲ್ಲಿ ಓದಿ ಬಂದ ಸ್ನಾತಕ (Graduate)ನಿಗೆ ನಾನು ಮೂರು ಕಾಸನ್ನೂ ಕೊಡುವುದಿಲ್ಲ (ವಿಜ್ಞಾಕ. ೧೦೮). ೩. [ಜೈನ] "ಸರ್ವ ಘಾತಿಕರ್ಮಗಳನ್ನು ನಾಶಮಾಡಿದ ಕೇವಲಿಗಳು ಸ್ನಾತಕರೆನಿಸುವರು" (ಜೈನಧ. ೮೯) : ನೈಷ್ಠಿಕಬ್ರಹ್ಮಚಾರಿಗಳ್ . . . ಭಿಕ್ಷಾವೃತ್ತಿಯಿಂ ಸ್ನಾತಕರೆನಿಸಿ ದೇವಾರ್ಚನಾನಿರತರಪ್ಪರ್ (ತತ್ತ್ವಪ್ರ. ೨೮೭). [ಸಂ.]

ಸ್ನಾತಕಪೂರ್ವ (ಗು). (ಕಾಲೇಜಿನಲ್ಲಿ) ಪದವಿಪೂರ್ವಹಂತದ; ಪದವಿಗೆ ಹಿಂದಿನ : ಸ್ನಾತಕಪೂರ್ವಶಿಕ್ಷಣ ಬಹುಮಟ್ಟಿಗೆ ಅವುಗಳ ವಿವೇಚನಾತ್ಮಕ ಅಧ್ಯಯನಕ್ಕಾಗಿ (ಶಿಕ್ಷದ. ೪೯). [ಸಂ.]

ಸ್ನಾತಕವ್ರತ (ನಾ). ಗುರುಕುಲ ವಿದ್ಯಾಭ್ಯಾಸದ ನಂತರದ ತೀರ್ಥಸ್ನಾನ ಮುಂತಾದ ವಿಧಿನಿಯಮಗಳನ್ನು ಹಿಡಿಯುವಿಕೆ : ಕೃಷ್ಣಭೀಮಾರ್ಜುನರು ಏಮಳಸ್ನಾತಕವ್ರತಮುನಿಗಳಾದರು (ಕುವ್ಯಾಸ. ೨-೫೫). [ಸಂ.]

ಸ್ನಾತಕವ್ರತಿ (ನಾ). ಗುರುಕುಲವಿದ್ಯಾಭ್ಯಾಸವನ್ನು ಮುಗಿಸಿ, ಗೃಹಸ್ಥಾಶ್ರಮಕ್ಕೆ ಮೊದಲಿನ ನಿಯಮಗಳನ್ನು ಪಾಲಿಸುವವನು : ಸ್ನಾತಕವ್ರತಿಯಲ್ಲ ಋತ್ವಿಜ ನೀತನಲ್ಲಾಚಾರ್ಯನಲ್ಲ (ಕುವ್ಯಾಸ. ೮-೨೯); ಸಾರ ಹೃದಯಾರವಿಂದ ಸ್ನಾತಕವ್ರತಿಗಳೋರಂತಪಾರಸಂಸಾರಪಾರಾವಾರಪಾರಮಂ ಸೇರುವಡೆ . . . ದೂರ್ಮಸವಾಲಿಸು (ನಂದಿಮಾ. ೧೮-೨). [ಸಂ.]

ಸ್ನಾತಕೋತ್ತರ (ಗು). ಕಾಲೇಜಿನಲ್ಲಿ ಓದಿ ಮೊದಲನೆಯ ಪದವಿಯನ್ನು ಗಳಿಸಿದ ಮೇಲೆ ಮುಂದಿನ ಪದವಿಗೆ ಸಂಬಂಧಿಸಿದ : ಸ್ನಾತಕೋತ್ತರಶಿಕ್ಷಣವನ್ನು ಟರಾಂಟೋ ವಿಶ್ವವಿದ್ಯಾಲಯದಲ್ಲೇ . . . ಮುಂದುವರೆಸಿ (ಸಸ್ಮೃ. ೫೫). [ಸಂ.]

ಸ್ನಾನ (ನಾ). ೧. ಜಳಕ; ಮೀಹ; ಮಜ್ಜನ : ಆ ಪ್ಲವನಂ, ಸ್ನಾನಂ, ಸವನಂ - ಈ ೩ ಮೀವುದು" (ಹಲಾಯು. ೬೮-೨೫೪); ತಿಳಿದೂ ತಿಳಿದೂ ಕ್ಷಾರ ಮಾಡಿಕೊಂಡು ನೆತ್ತಿಗೆ ಸ್ನಾನ ಮಾಡಿದಿರಿ (ನಂಟರು. ೩೪); ಹೋಗು ಬೇಗನೆ ಸ್ನಾನಮಾಡಿ ಬಾ (ಬಾಬಾ. ೭೪). ೨. ಸೂತಕ ಮುಂತಾದ ಮೈಲಿಗೆಗಳನ್ನು ಕಳೆಯಲು ಮಾಡುವ ಮಜ್ಜನ. ೩. ಶುದ್ಧಿಗಾಗಿ ಮಂತ್ರಪೂರ್ವಕವಾಗಿ ಪ್ರೋಕ್ಷಣೆ ಮಾಡುವುದು. ೪. ದೇವರಿಗೆ ಮಾಡುವ ಅಭಿಷೇಕ. [ಸಂ.]

ಸ್ನಾನಂಗೈ (ಕ್ರಿ). ಮೀಯು ; ಜಳಕಮಾಡು : ದೇವಗಂಗೆಯಲ್ಲಿ ಇಳಿದು ಸ್ನಾನಂಗೈದು (ಗಗಾ. ೧೬-೧೯). [ಸ್ನಾನ + ಗೈ (< ಕೆಯ್)]

ಸ್ನಾನಘಟ್ಟ (ನಾ). ನದಿ ಅಥವಾ ಕೆರೆಯ ದಂಡೆಯಲ್ಲಿ ಸ್ನಾನಮಾಡುವುದಕ್ಕಾಗಿ ನಿರ್ಮಿಸಿದ ಮೆಟ್ಟಲುಗಳ ಸಾಲು,— ಸೋಪಾನಪಂಕ್ತಿ : ಬ್ರಾಹ್ಮಣರಿಗೂ ಒಕ್ಕಲಿಗರಿಗೂ ಬೇರೆ ಬೇರೆ ಸ್ನಾನಘಟ್ಟಗಳಿವೆ (ಚಿಸ್ತ. ೧೦). [ಸಂ.]

ಸ್ನಾನೀಯ (ಗು). ೧. ಸ್ನಾನಕ್ಕೆ ಯೋಗ್ಯವಾದ. ೨. ಅಭಿಷೇಕಕ್ಕೆ ಯೋಗ್ಯವಾದ. (ನಾ). ೩. ಸ್ನಾನಕ್ಕೆ ಅಗತ್ಯವಾದ ಚೂರ್ಣ ಮುಂತಾದುವು : "ಕ್ಷೋದಂ ಸ್ನಾನೀಯಂ ಕ್ಷಣದಾದಿ ತನುತ್ರಕ್ ಪ್ರಸಾಧಕದ್ರವ್ಯ ಸಮುತ್ಸಾದಿತಂ" (ವಸ್ತುಕೋ. ೭೭ ೧೫); ಪುರೋಡಾಶಕಷಾಯಸ್ನಾನೀಯೋದ್ವರ್ತನಸಂಚಾವಳಿ ಸ್ನಾನೋಪಕರಣಂಭರಸು ಜಗದೇಕಬಂಧುವಂ ಮಜ್ಜನಂಬುಗಿಸಿ (ಶಾಂತಿಪು. ೧೦-೩೭ ವ). [ಸಂ.]

ಸ್ನಾಪಕ (ನಾ). ಸ್ನಾನಮಾಡಿಸುವವನು : ಸಕಳಾಮರರ್ ಪಯೋವಾಹಕ ರಮರಿಯರಲ್ಲಿ ಪರಿವೆಸಂಗೆಯ್ವರ್ ಸ್ನಾಪಕನಿಂದ್ರಂ . . . ಜಿನಮಜ್ಜನದೊಳ್ (ಚಂದ್ರಪ್ರ. ೧೨-೧೩೪). [ಸಂ.]

ಸ್ನಾಪನ (ನಾ). ಮೀಯಿಸುವಿಕೆ; ಸ್ನಾನಮಾಡಿಸುವಿಕೆ: ಸಾಂಗೋಪಾಂಗದಿಂ ಪಂಚಾಮೃತ ಸ್ನಾ [ಪಾಠಾಂ. ಸ್ನ]ಪನಂಗಳಂ ಮಾಡಿ (ಬಸವಪು. ೧೮-೭೫); ಉತ್ಸವ, ಸ್ನಾಪನ, ಬಲಿಗಾಗಿ ಬೇಕಾದ ಮೂರ್ತಿಗಳು ಮಾತ್ರ ಲೋಹದಿಂದ ನಿರ್ಮಿತವಾಗುವುವು (ಭಾರದ. ೫೧೮). [ಸಂ.]

ಸ್ನಾಯು (ನಾ). ೧. ಪ್ರಾಣಿದೇಹದಲ್ಲಿ ಚಲನಕ್ಕೆ ಕಾರಣವಾಗಿ ಸಂಕೋಚನ ಶಕ್ತಿಯುಳ್ಳ ತಂತುತಂಡ ; ರಜ್ಜು ; ಮಾಂಸಖಂಡ : "ಸ್ನಾಯು ಸಿರಾಪ್ರಚಯಂ" (ವಸ್ತುಕೋ. ೭೨-೨೮); ಪ್ರಾಣಿಗಳ ಮಾಂಸ ಎಂಬುದು ಸ್ನಾಯುಗಳ ಅಸಂಖ್ಯಾತ ಚಿಕ್ಕ ದೊಡ್ಡ ಸೂಡಿಗಳೇ (ಪ್ರಾಣಿಶಾ. ೪). ೨. ಬಿಲ್ಲಿನ ಹೆದೆ. [ಸಂ.]

ಸ್ನಿಗ್ಧ (ಗು). ೧. ಎಣ್ಣೆಯಂತೆ ಜಿಡ್ಡಾದ. ೨. ಜಿಗುಟಾದ: ಅಂಟಂಟಾದ. ೩. ನುಣುಪಾದ; ನಯವಾದ: ನಸುದೋಱುತ್ತಿರ್ದ ನುಣ್ಗೇಸೆಗಳುಮಾ ಮೃದುಸ್ನಿಗ್ಧಕೇಶಂಗಳುಂ ಕಣ್ಗೆಸೆಯಲ್ (ಕಾದಂಬ. ೫೪೭); ಸ್ನಿಗ್ಧಕೇಸರಮಂ ನೇರ್ಪಡೆ ನೀವಿ ಕಂಧರಕೆ ಕೈಯಂ ನೀಡಿ (ಮಲ್ಲಿಪು. ೮-೧೭೦). ೪. ಹೊಳೆಯುವ; ಪ್ರಕಾಶಿಸುವ. ೫. ಒದ್ದೆಯಾದ; ತೇವವಾದ. ೬. ನಿಬಿಡವಾದ; ಸಾಂದ್ರವಾದ. ೭. (ದ್ರವಗಳಿಗೆ ಸಂಬಂಧಿಸಿದಂತೆ) ಮಂದವಾದ; ಗಟ್ಟಿಯಾದ. ೮. ಸೌಜನ್ಯಪರವಾದ; ಸ್ನೇಹಶೀಲ. ೯. ಹಿತಕರವಾದ; ಸೌಮ್ಯವಾದ: ದಂತ ಸುಸ್ನಿಗ್ಧಕಾಂತಿಯ ತನುರುಚಿರಕಾಂತ (ಶ್ರೀರಾಮಾ. ೫೫-೩೩). (ನಾ). ೧೦. ಮೃದುವಾದುದು; ಕೋಮಲವಾದುದು: "ಮಸೃಣಂ ಸ್ನಿಗ್ಧಂ ಚಿಕ್ಕಣಂ" (ವಸ್ತುಕೋ. ೧೧೨-೧೦). ೧೧. ಸ್ನೇಹಿತ; ಗೆಳೆಯ: "ಮಿತ್ರಂ, ಸಖಾ, ವಯಸ್ಯಃ, ಸುಹೃತ್, ಸ್ನಿಗ್ಧಃ- ಈ ೫ ಕೆಳೆಯಂ" (ಪಲಾಯು. ೭೦-೨೭೪). ೧೨. [ಜೈನ] ಎಂಟು ಬಗೆಯ ಸ್ಪರ್ಶನಾಮಕರ್ಮಗಳಲ್ಲಿ ಒಂದು: ಸ್ಪರ್ಶನಾಮಕರ್ಮಮಷ್ಟವಿಧಮಕ್ಕುಂ ಕರ್ಕಶಮೃದು ಗುರುಲಘು ರೂಕ್ಷಸ್ನಿಗ್ಧ ಶೀತೋಷ್ಣ ಸ್ಪರ್ಶನಾಮಕರ್ಮಮೆಂದಿಂತು (ಗೊಮ್ಮಸಾ. ೪-೧೦). ೧೩. [ನಾಟ್ಯ] ಸ್ಥಾಯಿಭಾವದ ನೋಟಗಳಲ್ಲಿ ಒಂದು; ಅನುರಾಗವನ್ನು ವ್ಯಕ್ತಪಡಿಸುವ ನೋಟ: ಸ್ನಿಗ್ಧ, ಹೃಷ್ಟ, ದೀನ, ಕ್ರುದ್ಧ, ದೃಪ್ತ, ಭಯ, ಜುಗುಪ್ಸಿತ, ವಿಸ್ಮಿತ-ಈ ಎಂಟು ಸ್ಥಾಯಿಭಾವದ ನೋಟಂಗಳು (ಲಾಸ್ಯರಂ. ೩-೫ ವ); ಅತ್ಯಭಿಲಾಷೆಯನೆಯ್ದಿಸಿಯುತ್ತಮದ ಕಟಾಕ್ಷವೀಕ್ಷಣಂ ಕಡುನಯದಿಂ ಪತ್ತುಗೆವಡೆ ನಿಡುವುರ್ಬುಂ ಮತ್ತಂ ಮಧುರಂ ಪ್ರಸನ್ನಮಾ ಸ್ನಿಗ್ಧಗುಣಂ (ಲಾಸ್ಯರಂ. ೩-೧೮). [ಸಂ.]

ಸ್ನಿಗ್ಧತೆ (ನಾ). ಮಾರ್ದವ ; ಮಧುರತೆ : ಅವರು ಕುಡಿದ ಮದಿರೆಯು (Madeira) ಆ ಸ್ನೇಹಕ್ಕೆ ಹೆಚ್ಚಿನ ಸ್ನಿಗ್ಧತೆಯನ್ನು ತಂದಿತ್ತು (ಸಮಜೀ. ೮೦೭). [ಸಂ. ಸ್ನಿಗ್ಧತಾ]

ಸ್ನಿಗ್ಧಾಲೋಕ (ನಾ). ಮೋಹಕವಾದ ನೋಟ; ಮನೋಹರವಾದ ದೃಷ್ಟಿ: ಸ್ಖಲಿತಗಮನಂ ಮುಗ್ಧಾಲಾಪಂ . . . ಸ್ನಿಗ್ಧಾಲೋಕಂ ಪ್ರಸಾರಿತಕಜ್ಜಲಂ ತಿಳಕವಿಳಸದ್ಭಾಳಂ ಭೂಷಾಪರಂಪರಲೀಲೆಯಂ ತಳೆಯೆ ತಳೆದಂ ಚೆಲ್ಕಂ ಲಂಬಾಳಕಂ ನೃಪಬಾಲಕಂ (ಮಲ್ಲಿಪು. ೪-೧೩೧). [ಸಂ.]

ಸ್ನುತ (ಗು). ೧. ಸ್ರವಿಸಿದ ; ತೊಟ್ಟಿಕ್ಕಿದ : ಎತ್ತಿಕೊಂಡಾ ಕಾಂತೆ ತೊಡೆಯಲಿ ಚಿತ್ತಜಾಕ್ಷಿಯ ಕುಳ್ಳಿರಿಸಿಕೊಂಡತ್ಯಧಿಕಪುತ್ರಾನುರಾಗಸ್ನುತಪಯೋಧರವ ಇತ್ತು ಮಗ್ಗುಲಲಪ್ಪಿ ಕುಳ್ಳಿರಲು (ನಿಭಾಗ. ೧೦-೯-೨೯). (ನಾ). ೨. ಸ್ರವಿಸಿದುದು; ಸೋರಿದುದು: "ಸ್ನನ್ಯಂ, ರೀಣಂ, ಸ್ರುತಂ, ಸ್ನುತಂ - ೪ ಸೋರಿ ಹೋದುದು" (ಸಿದ್ಧಾಂತ. ೩೪೮). [ಸಂ.]

ಸ್ನುಷೆ (ನಾ). ಸೊಸೆ ; ಮಗನ ಹೆಂಡತಿ : "ಸ್ನುಷೆ ತಾಂ ಮಗನ ವಧು" (ವಸ್ತುಕೋ. ೫೫-೨೨); ಅಮಾತ್ಯನ ಸತೀಮಣಿಯನಾ ಚತುರ್ಮುಖನೆಂಬ ಶಿಲ್ಪಿಗನೊಡರ್ಚಿಸುವೊಡಾ ಚಕ್ರಸ್ನುಷೆಯೊಳಿಹ ಲಾವಣ್ಯರಸವನೊಬ್ಬುಳಿ ಮಾಡಿ ತಂದು . . . ಜೀವಂಗೊಟ್ಟನು (ಕರೀಚೇ. ೨-೨೪). [ಸಂ. ಸ್ನುಷಾ]

ಸ್ನುಹಿ (ನಾ). ಒಂದು ಬಗೆಯ ಕಳ್ಳಿ ; ಮುಂಡುಗಳ್ಳಿ : "ಮಹಾವೃಕ್ಷಃ, ಸ್ನುಹಿಃ- ಈ ೨ ಮುಂಡಗಳ್ಳಿ" (ಪಲಾಯು. ೩೩-೪೪). [ಸಂ.]

ಸ್ನುಹಿವೃಕ್ಷ (ನಾ). = ಸ್ನುಹಿ: ಸ್ನುಹಿವೃಕ್ಷಮಂ ಮಹಾವೃಕ್ಷಮೆಂದು ನುಡಿವಂತ ಭೀಮನಂ ಮಹಾರಥನೆಂದು ನುಡಿಯಲ್ತಕ್ಕುದೆ ವಲಂ (ಗದಾಯು. ೩-೫೭ ವ) [ಸಂ.]

ಸ್ನೇಹ (ನಾ). ೧. ಜಿಡ್ಡು : ಅಂಟಂಟಾಗಿರುವಿಕೆ. ೨. ಎಣ್ಣೆ ಮೊದಲಾದ ಜಿಡ್ಡಿರುವ ವಸ್ತು. ೩. ಕೊಬ್ಬು : ನಿರ್ಗಂಧವಾಯುವಿಲ್ಲದ ಆಹಾರದೊಳಗೆ ಸ್ನೇಹ ಷಷ್ಠ ಸರ್ಕರೆ ಎಂಬ ಮೂರು ಒಳಭೇದಗಳಿವೆ (ಮುಂಬಯಿ. ೫-೧೬೧). ೪. ತೇವ; ಆರ್ದ್ರತೆ. ೫. ವೀರ್ಯ ಮೊದಲಾದ ದೇಹದೊಳಗಿನ ರಸ. ೬. ಗೆಳೆತನ; ಸಖ್ಯ: "ಸಖ್ಯಂ, ಸಾಪ್ತಪದೀನಂ, ಸೌಹಾರ್ದಂ, ಸೌಹೃದಂ, ಸ್ನೇಹಃ, ಪ್ರೀತಿಃ, ಅಜರ್ಯಂ, ಸಂಗತ(ತ)ಿಃ, ಸಭಾಜನಂ-ಈ ೯ ಕೆಳೆ" (ಪಲಾಯು. ೧೧೭-೨೧); ಅವನಿಗೂ ಇವನಿಗೂ ಸ್ನೇಹ ಬಿತ್ತು (ಮುಂಬಯಿ. ೫-೨೩೦). ೨, ೬ : ಉದಕಾಂತಃಪಾತಿವೊಲ್ ಸ್ನೇಹದ ಲಾಭಮನಸುಂ ಪರ್ವಿ ಮದ್ರೌವನೋದ್ಯನ್ಮದದೊಳ್ ತೋಱುತ್ತಮಿರ್ದಪ್ಪುದು (ಕಾದಂಬ. ೯೧). [ಸಂ.]

ಸ್ನೇಹಗೈ (ಕ್ರಿ). ಗೆಳೆತನ ಮಾಡು: ಸ್ನೇಹ ಮಾಡು: ಬಿಡದಾಕ್ಷಣಂ ಸ್ನೇಹಗೈವವಂ ಶ್ರೇಯಸಂ (ಮಂಗರಾ. ೧೨-೨೦). [ಸ್ನೇಹ + ಗೈ (< ಕೆಯ್)]

ಸ್ನೇಹಪಾತ್ರ (ನಾ). ೧. ಎಣ್ಣೆಯ ಪಾತ್ರೆ,— ಬುದ್ದಲಿ : ಆ ಸ್ನೇಹಪಾತ್ರ ಕಿಱಿದಾದೊಡೆ ಕುತುಪ ಎನಿಸುಗು, ಅದು ಕೆಯ್ಸಿದ್ದಿಗೆ (ನಾಚಿಕಾ. ೬). ೨. ಸ್ನೇಹಕ್ಕೆ ಯೋಗ್ಯನಾದ ವ್ಯಕ್ತಿ ಅಥವಾ ವಸ್ತು. [ಸಂ.]

ಸ್ನೇಹಿತ (ಗು). ೧. ಎಣ್ಣೆ ಸವರಿದ. ೨. ವಿಶ್ವಾಸದಿಂದ ಕೂಡಿದ; ಪ್ರಿಯವಾದ. (ನಾ). ೩. ಗೆಳೆಯ; ಮಿತ್ರ: ನನ್ನ ಸ್ನೇಹಿತ ಶಿವು ಒಂದು ಬಗೆಯ ಮನುಷ್ಯ (ರಾಮಾನ. ೧೦೫); ರಾಯರಿಗೆ ಊರಿನವರೆಲ್ಲಾ ಸ್ನೇಹಿತರು (ರಾಯಕ. ೯೯). [ಸಂ.]

ಸ್ನೇಹಿಸು (ಕ್ರಿ). ಗೆಳೆತನಮಾಡು; ಸ್ನೇಹ ಮಾಡು: ಹತ್ತುಮಂದಿಗಂಜದವನ ಸ್ನೇಹಿಸ ಬಾರದು (ಪುರಂದ. ೨-೭೦-೬). [ಸ್ನೇಹ + - ಇಸ್ತು]

ಸ್ಪಂದ (ನಾ). ೧. (ಕಣ್ಣು, ಭುಜ ಮೊದಲಾದುವು) ಮಿಡಿಯುವಿಕೆ; ಅದಿರುವಿಕೆ: ದಕ್ಷಿಣಭುಜಮಚಿರಪ್ರತಿಪಕ್ಷಮಹೀಪಾಲವಿಜಯಲಕ್ಷ್ಮೀಲಲನಾ ವಕ್ಷೋಜಸ್ಪರ್ಶನಮನನಕ್ಷರಮಱಿಪಿದುದು ಪತಿಗಮಂದಸ್ಪಂದಂ (ಆದಿಪು. ೧೧-೧೧); ಮುದದಿಂ ತ್ವತ್ಕೀರ್ತಿಯಂ ಕೇಳ್ಪೆಡೆಯೊಳತುಳರೋಮಾಂಚದಿಂ ಸ್ಪಂದದಿಂ ಗದ್ಗದದಿಂ ಸ್ವೇದಂಗಳಿಂ . . . ಶೈವಸಾಮ್ರಾಜ್ಯಸಮ್ಯಕ್‌ಪದವಾಂತಿರ್ಪಂತೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ ೬೭). ೨. ಅಲ್ಪಚಲನೆ: ತ್ರಿಜಗದುದಯ ನಾಶಂಗಳಾತ್ಮೀಯಶಕ್ತಿಸ್ಪಂದಾಸ್ಪಂದಗಳೆಂಬಚ್ಚುತನ ಭುಜಬಲಕ್ಕಂತದೊಂದಾವ ಲೆಕ್ಕಂ (ಜಗದಿ. ೬-೬೬). [ಸಂ.]

ಸ್ಪಂದನ (ನಾ). ೧. = ಸ್ಪಂದ ೧ : ದಕ್ಷಿಣಾಕ್ಷಿಸ್ಪಂದನದೊಳಂ ಸೂಚಿಸುವ ಶುಭ ಸೂಚನೆಯೊಳಂ ನಾರಾಯಣನುದಾತ್ತನಾರಾಯಣನ ಬರವನಱಿದು (ಪಂಪಭಾ. ೪-೩೩ ವ); ಬಸವಣ್ಣನವರ ವ್ಯಕ್ತಿತ್ವ ಎಷ್ಟು ಹಿರಿದೋ ಅಷ್ಟು ಮಾನವೀಯ. ಅದರ ಸ್ಪಂದನವನ್ನೂ ಹೋಗಾಟವನ್ನೂ ನಾವು ಅರ್ಥಮಾಡಿಕೊಂಡು ಅನುಭವಿಸಬಲ್ಲೆವು (ಕಸಾಚಿ. ೧೫೮) ೨. ಗತಿ; ಚಲನೆ. ೩. ಇತರರ ಭಾವನೆಗಳಿಗೆ ಸಮಾನವಾಗಿ ಪ್ರತಿಕ್ರಿಯೆಯನ್ನು ತೋರಿಸುವಿಕೆ. [ಸಂ.]

ಸ್ಪಂದಿಸು (ಕ್ರಿ). ೧. ಮಿಡಿ; ಅದುರು; ಕಂಪಿಸು: ಸ್ಪಂದಿಸಿದುದವನ ಮೆಯ್ ಚಿನ್ಮಯಾವೇಶದಿಂ (ಶ್ರೀರಾಮಾ. ೩೭-೨೫) ೨. ಇತರರ ಭಾವನೆಗಳಿಗೆ ಸಮಾನವಾಗಿ ಪ್ರತಿಕ್ರಿಯೆಯನ್ನು ತೋರಿಸು,— ತುಡಿತವನ್ನು ಹೊಂದು: ಬಡವರ ನೋವನ್ನು ಕಂಡು ಅವರ ಹೃದಯ ಸ್ಪಂದಿಸುತ್ತದೆ (ರೂಢಿ). [ಸ್ಪಂದನ + - ಇಸ್ತು]

ಸ್ಪರುಶ 'ಪರುಸ' ನೋ.

ಸ್ಪರುಶಣ 'ಪರುಸನ' ನೋ.

ಸ್ಪರುಶನ 'ಪರುಸನ' ನೋ.

ಸ್ಪರುಷ 'ಪರುಸ' ನೋ.

ಸ್ಪರ್ಧಾಳು (ನಾ). ಹುರುಡಿಸುವವನು; ಸ್ಪರ್ಧಿ: ಈ ಜಾತಿವೈರ ಸಹಜ . . . ನಾವು ಮೇಲಿರುವವನನ್ನು ನೋಡಿ ಸ್ಪರ್ಧಾಳುಗಳಾಗುತ್ತೇವೆ (ಬಂಕಿಮ. ೪೯೭). [ಸಂ. ಸ್ಪರ್ಧಾಲು]

ಸ್ಪರ್ಧಿ (ಗು). ೧. ಹುರುಡಿಸುವ, ಸ್ಪರ್ಧೆಗೆ ನಿಲ್ಲುವ. ೨. ಈರ್ಷ್ಯೆಯುಳ್ಳ; ಕರುಬುವ. (ನಾ). ೩. ಹುರುಡಿಸುವವನು; ಸ್ಪರ್ಧಿಸುವವನು. ೪. ಸ್ಪರ್ಧೆಗೆ

ನಿಲ್ಲುವಂತಹುದು; ಸರಿಸಮವೆನಿಸುವಂತಹುದು: ಮೊಗಮುತ್ತುಲ್ಲಸರೋಜಹಾಸಿನಯನಂ ನೀಲಾಂಬುಜಸ್ಪರ್ಧಿ (ಆದಿಪು. ೧-೭೪). [ಸಂ. ಸ್ಪರ್ಧಿನ್]

ಸ್ಪರ್ಧಿಸು (ಕ್ರಿ). ೧. ಹುರುಡಿಸು; ಪೈಪೋಟಿ ಮಾಡು: ಈ ವಯಸ್ಸಿನಲ್ಲಿ ಮತ್ತೆರಡು ಭಾಷೆಗಳು ಸ್ಪರ್ಧಿಸುವಂತೆ ಮಾಡುವುದು ತುಂಬಾ ಅಪಾಯಕರ (ಶಿಕ್ಷಣ. ೧೬೨); ಗಂಡಸರೂ ಹೆಂಗಸರೂ ತಮ್ಮ ಪಾಕಶಾಸ್ತ್ರಪಾಂಡಿತ್ಯದ ಪ್ರಯೋಗಪರೀಕ್ಷೆಯಲ್ಲಿ ಸ್ಪರ್ಧಿಸುತ್ತಿರುವುದು ಗಮನಾರ್ಹವಾದ ವಿಷಯ (ಜೀವಾತ್ಮ. ೧೬೨). ೨. ವಿರೋಧಿಸು; ಪ್ರತಿಭಟಿಸು : ದುರ್ಧರದರಣ್ಯಪ್ರವೇಶಮಂ ಮಾಡಿದಂ ಸ್ಪರ್ಧಿಸುವ ದನುಜರಂ ಮುಱಿದು ಮುನಿಗಳನೋವಿ ಸತಿಸಹಿತ ಕಾಕುತ್ಸ್ಥನು (ಜೈಮಿಭಾ. ೧೮-೩). [ಸ್ಪರ್ಧ + - ಇಸ್ಕು]

ಸ್ಪರ್ಧೆ (ನಾ). ೧. ಹುರುಡು; ಮೇಲಾಟ; ಪೈಪೋಟಿ: ನಾಗರಿಕತೆಯಂದರೆ ಶಿಕ್ಷಣಕ್ಕೂ ಪ್ರಳಯಕ್ಕೂ ಆಗುತ್ತಿರುವ ಸ್ಪರ್ಧೆ (ಶಿಕ್ಷಣ. ೪). ೨. ಈರ್ಷ್ಯೆ; ಮತ್ಸರ. ೩. ವಿರೋಧ; ಪ್ರತಿರೋಧ: ''ಸ್ಪರ್ಧಾ, ಸಂಘರ್ಷಃ- ಈ ೨ ಪಜಪಱಿಸುಹ'' (ಪಲಾಯು. ೧೩೦-೧೦೧). [ಸಂ. ಸ್ಪರ್ಧಾ]

ಸ್ಪರ್ಶ (ನಾ). ೧. ಮುಟ್ಟುವಿಕೆ; ಸೋಕುವಿಕೆ. ೨. ಶರೀರಕ್ಕೆ ಸೋಕುವುದರಿಂದ ಆಗುವ ಜ್ಞಾನ; ಸ್ಪರ್ಶಜ್ಞಾನ. ೩. ಸಂಪರ್ಕ; ಸಂಸರ್ಗ. ೪. ಸೋಕುವ ಅಥವಾ ಸಂಪರ್ಕವಾಗುವ ವಸ್ತು. ೫. ಸಂಪರ್ಕ ಅಥವಾ ಪ್ರಭಾವದಿಂದ ರೋಗವನ್ನುಂಟುಮಾಡುವಂತಹುದು; ಸೋಂಕು. ೬. ಅಸ್ಪಷ್ಟತೆ; ವ್ಯಾಧಿ: ''ಸ್ಪರ್ಶಃ, ಸ್ಪಷ್ಟಾ, ಉಪತಪ್ತಾ- ೩ ಕಂದಿ ಬಳಲುವ ಹಾಗೆ ಮಾಡುವ ರೋಗ'' (ಸಿದ್ಧಾಂತಿ. ೩೬೦). ೭. ಕೊಡುಗೆ; ದಾನ. ೮. ಸ್ಪರ್ಶಮಣಿ; ಪರುಸಗಲ್ಲು. ೯. ಗಾಳಿ. ೧೦. ಆಕಾಶ. ೧೧. ಸುರತ ; ಕೂಟ. ೧೨. ಗುಪ್ತಚಾರ. ೧೩. [ದ್ರವ್ಯತ] ನಲವತ್ತುಗುಣಗಳಲ್ಲಿ ಒಂದು: ರೂಪ, ರಸ, ಗಂಧ, ಸ್ಪರ್ಶ, ಸಂಖ್ಯಾ . . . ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಪಿಂಡಸಾ. ೨೭೫). ೧೪. [ಬೌದ್ಧ] ಇಂದ್ರಿಯಜ್ಞಾನ: ಇಂದ್ರಿಯವು ತನ್ನ ವಿಷಯವನ್ನು ಮುಟ್ಟಿದಾಗ ಆಗುವುದು 'ಸ್ಪರ್ಶ'. 'ಸ್ಪರ್ಶ'ದಿಂದ ಆಗುವ ಅನುಭವವೇ ವೇದನೆ (ಭಾರದ. ೧೯೫). ೧೫. [ವ್ಯಾಕ] ಕಕಾರದಿಂದ ಮಕಾರದವರೆಗಿನ ವ್ಯಂಜನ; ವರ್ಗೀಯವ್ಯಂಜನ. ೧೬. ಸಂಪೂರ್ಣಶ್ವಾಸನಿರೋಧದಿಂದ ಉಚ್ಚರಿಸುವ ವ್ಯಂಜನ; ಮೂಕವ್ಯಂಜನ: ಭಾಷಾಶಾಸ್ತ್ರಜ್ಞರ ಅಭಿಪ್ರಾಯದಂತೆ ಮೂಲದ್ರಾವಿಡರಲ್ಲಿ ಸ್ಪರ್ಶವರ್ಣಗಳು ಇದ್ದುದು ಐದಲ್ಲ, ಆರು. ಆ ಆರನೆಯ ಸ್ಪರ್ಶವೇ (Stop) ವರ್ತ್ಸ್ಯ (ದ್ರಾವಿ. ೩೫೩). [ಸಂ.]

ಸ್ಪರ್ಶಕಾಲ (ನಾ). [ಜ್ಯೋತಿ] ಗ್ರಹಣವು ಆರಂಭವಾಗುವ ಸಮಯ. [ಸಂ.]

ಸ್ಪರ್ಶನ (ನಾ). ೧. ಮುಟ್ಟುವಿಕೆ; ಸೋಕುವಿಕೆ: ಪಯಃಪಾನದಿಂ ಯುವತೀ ಸ್ಪರ್ಶನಮಾಮ್ಲತಿಕ್ತಮಧುರದ್ರವ್ಯಂಗಳಿಂ . . . ಆ ತಿಕ್ತಮುಂ ಪಿಂಗುಗುಂ (ಶೋಕೋಪ. ೯-೫): ಕೂಡಲಸಂಗನ ದರ್ಶನ ಸ್ಪರ್ಶನದಿಂದ ಮನವೊಲಿದು ನೆರೆವ ಭರವನೇನ ಹೇಳುವೆನಯ್ಯ (ಬಸವ. ೪೯೩). ೨. ಹಿಡಿತ; ಹಿಡಿಯುವಿಕೆ: ''ನಿಗ್ರಹಂ ಪೀಡನಂ ಸ್ಪರ್ಶನಂ ಗ್ರಹಣಮೆನಲು ಹಿಡಿಹಂ'' (ಮಂಗರಾ. ೧೩೦-೧೭೧). ೩. ಸ್ಪರ್ಶೇಂದ್ರಿಯ. ೪. ಕಾಳಗ; ಯುದ್ಧ. ೫. ಗಾಳಿ; ವಾಯು: ''ಸ್ಪರ್ಶನಃ - ವಾಯು '' (ಕಾಶಕ್ಯ. ೨೨೨). ೬. ದಾನ; ಕೊಡುಗೆ: ''ವಿಶ್ರಾಣನಂ, ವಿಹಾಯನಂ . . . ಸ್ಪರ್ಶನಂ, ಉತ್ಸರ್ಗಃ, ಪ್ರದೇಶನಂ, ದಾನಂ - ಈ ೧೦ ಕುಡುವುದು'' (ಪಲಾಯು. ೬೯-೨೬೫). [ಸಂ.]

ಸ್ಪರ್ಶನತಪ್ಪುಕ (ನಾ). [ವೀಶೈ] ಸ್ಪರ್ಶದಿಂದ ಪಾಪಮಾಡಿದವನು: ದರುಶನ ತಪ್ಪುಕ ಪ್ರಥಮಪಾತಕ ಸ್ಪರ್ಶನತಪ್ಪುಕ ದ್ವಿತೀಯಪಾತಕ ಗುರುತಪ್ಪುಕ ತೃತೀಯ ಪಾತಕ ಪರದಾರ ಚತುರ್ಥಪಾತಕ ಮಾಂಸಾಹಾರಿ ಪಂಚಮಪಾತಕ ಈ ಐವರೊಡನೆ ನೀನುಡಿಯಲಿಲ್ಲ ರಾಮನಾಥಾ (ದೇದಾಪ. ೧೯-೨೮). [ಸ್ಪರ್ಶನ + ತಪ್ಪುಕ]

ಸ್ಪರ್ಶನಾನುಮಿತ (ನಾ). ಮುಟ್ಟಿ ನೋಡಿ ತಿಳಿಯಬಹುದಾದುದು ; ಸ್ಪರ್ಶದ ಮೂಲಕ ಊಹಿಸಬಹುದಾದುದು : ಇದು ಬನಮಿದು ನೃಪಗ್ಯಹಮೆಂಬುದಮೋಘಂ ಸ್ಪರ್ಶನಾನುಮಿತಮಪ್ಪುದು ಷಟ್ಪದ ಶುಕಪಿಕಾಳಿಗೆನೆ ನೃಪಸದನಂ ಸೊಗಯಿಪುದು ಚಿತ್ರಮಣಿಶಬಲತೆಯಿಂ (ಜಗವಿ. ೨-೩೬). [ಸಂ.]

ಸ್ಪರ್ಶನಾಮಕರ್ಮ (ನಾ). [ಜೈನ] ತೊಂಬತ್ತುಮೂರು ಬಗೆಯ ನಾಮಕರ್ಮ ಪ್ರಕೃತಿಗಳಲ್ಲಿ ಒಂದು: ಸ್ಪರ್ಶನಾಮಕರ್ಮವುಷ್ಟವಿಧಮಕ್ಕುಂ ಕರ್ಕಶ ಮೃದು ಗುರು ಲಘು ರೂಕ್ಷ ಸ್ನಿಗ್ಧ ಶೀತೋಷ್ಣ ಸ್ಪರ್ಶನಾಮಕರ್ಮಮೆಂದಿಂತು (ಗೊಮ್ಮಸಾ. ೪-೧೦). [ಸಂ.]

ಸ್ಪರ್ಶನೀಯ (ಗು). ೧. ಮುಟ್ಟುವುದಕ್ಕೆ ಯೋಗ್ಯವಾದ. ೨. ಮುಟ್ಟತಕ್ಕ; ಮುಟ್ಟಬೇಕಾದ. (ನಾ). ೩. ಮುಟ್ಟುವುದಕ್ಕೆ ಹಿತವಾದುದು; ಸ್ಪರ್ಶಸುಖವನ್ನು ಕೊಡತಕ್ಕುದು: ಧೃತನಾನಾವರ್ಣಪರ್ಣಚ್ಛವಿಸಮುದಯ ಸಂದರ್ಶನೀಯಂ . . . ದ್ವಿರೇಫೋದಿತನಾದಕರ್ಣನೀಯಂ ಸಿಕತಿಲತಲಶಯ್ಯಾಚಯ ಸ್ಪರ್ಶನೀಯಂ ಸತತಂ ಪೌರ್ಗ ಪಂಚೇಂದ್ರಿಯಸುಖದೊದವಂ ನಂದನಂ ಮಾಟ್ಪುದೆಂದುಂ (ಚಂದ್ರಪ್ರ. ೧-೧೧೨). [ಸಂ.]

ಸ್ಪರ್ಶನೋದಕ (ನಾ). [ವೀಶೈ] ದಶವಿಧ ಪಾದೋದಕಗಳಲ್ಲಿ ಒಂದು; ಜಿಹ್ವೆಯಲ್ಲಿ ಸ್ವೀಕರಿಸಿದ ತೀರ್ಥ: ಪ್ರಥಮದಲ್ಲಿ ಪಾದೋದಕ . . . ಚತುರ್ಥದಲ್ಲಿ ಸ್ಪರ್ಶನೋದಕ . . . ದಶಮದಲ್ಲಿ ಸತ್ಕೋದಕ (ಚಿಸ್ಥವ. ಕ. ೫೩೦-೧೧೫೯); ಪಾದದಲ್ಲಿ ಪಾದೋದಕ ಆ ಪಾದತೀರ್ಥವನ್ನು ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬ ಇಚ್ಛೆ ಹುಟ್ಟಿದಲ್ಲಿ ಲಿಂಗೋದಕ . . . ಜಿಹ್ವೆಯಲ್ಲಿ ಪಂಚಾಂಗುಲದಿ ಸ್ವೀಕರಿಸಿದ್ದೇ ಸ್ಪರ್ಶನೋದಕ (ಕರ್ನಾಕ. ೧೩೭). [ಸಂ.]

ಸ್ಪರ್ಶಪ್ರವೀಚಾರ (ನಾ). [ಜೈನ] ಸ್ಪರ್ಶದ ಮೂಲಕವೇ ರತಿಸುಖವನ್ನು ಪಡೆಯುವವನು: ಅಲ್ಲಿಯ ನಿಳಿಂಪರೆಲ್ಲಂ . . . ಸ್ಪರ್ಶಪ್ರವೀಚಾರರುಮಪ್ಪರ್ (ಸುಖುಮಾ. ೧೧-೬೨ ಪ). [< ಸಂ. ಸ್ಪರ್ಶಪ್ರವಿಚಾರ]

ಸ್ಪರ್ಶಮಣಿ (ನಾ). ಸೋಕಿದ ಲೋಹವನ್ನು ಚಿನ್ನವಾಗಿ ಪರಿವರ್ತಿಸುವುದೆಂದು ನಂಬಲಾದ ಒಂದು ಬಗೆಯ ಕಲ್ಲು: ತನ್ನಂ ಸೋಂಕಿದ ಲೋಹಾದಿಗಳನ್ನೆಲ್ಲ ಸುವರ್ಣಮಯಮಾಗಿ ಮಾಳ್ಪ ಸ್ಪರ್ಶಮಣಿ (ವಿವೇಕ. ೩೧೦) ; ಕಾಂಚನ ಖನಿಯ ಖನನಂ ವೃಥಾ ಪರಿಶ್ರಮವಲ್ತೆ ಸ್ಪರ್ಶಮಣಿ ಕರದೊಳಿರೆ ? (ಚಿತ್ರಾಂಗ. ೪೦-೧೦೯). [ಸಂ.]

ಸ್ಪರ್ಶಯೋಗ (ನಾ). [ವೀಶೈ] ಒಂದು ಬಗೆಯ ಯೋಗ: ಮಂತ್ರಯೋಗ ಸಹಿತ ಪವನಮನಂಗಳೊಂದುಗೂಡಿ ಮೂಲಾಧಾರದಿಂ ಸುಷುಮ್ನಾನಾಡಿಮಾರ್ಗದೊಳ್ಕೆದಿ ಶಿರೋಮಧ್ಯಗತ ಪರಮಾತ್ಮತೇಜಸ್ಸಿನೊಳು ಮನೋಲಯವಹುದೇ ಸ್ಪರ್ಶಯೋಗ ವೆನಿಸುವದು (ವಿವೇಕ. ೫೫೫). [ಸಂ.]

ಸ್ಪರ್ಶವೇದಿ (ನಾ). = ಸ್ಪರ್ಶಮಣಿ: ಆತತಾಭ್ರಂಕಿಶಿಲೆಗಳೊಳು ರತ್ನಗಿರಿಗಳೊಳು ಸ್ಫೀತವಿಲಸತ್ ಸ್ಪರ್ಶ[ಪಾಶಾಂ. ಪುರುಷ]ವೇದೀವ್ರಾತದೊಳು ದರುಶನವಿಮುಕ್ತಿಖ್ಯಾತ ದಾಸ್ಥಾನಂಗಳೊಳು ನಂದನವನಂಗಳೊಳು . . . ಪೊಂಗಿ ನಡೆವುತ (ಬಸವ. ೧೯-೩೪).

[ಸಂ.]

ಸ್ಪರ್ಶಾನುಮೇಯ (ನಾ). = ಸ್ಪರ್ಶನಾನುಮಿತ: ವನಿತೆಯ ಕಣ್ಪೆಳಗುಂ ಚಂದನಜಲಮುಂ ಬೇಱೆವೇಱೆ ನಿಟ್ಟಿಸಲರಿದೆಂಬನಮಡಿ ಪರ್ವಿ ಭೂಪಂಗೆನಸುಂ ಸ್ಪರ್ಶಾನುಮೇಯಮಾದುವು ಕೊಳದೊಳ್ (ಮಲ್ಲಿಪು. ೬-೧೧೫). [ಸಂ.]

ಸ್ಪರ್ಶಾಷ್ಟಕ (ನಾ). [ಜೈನ] ಎಂಟು ಬಗೆಯ ಸ್ಪರ್ಶನಾಮಕರ್ಮಪ್ರಕೃತಿ: ಸ್ಪರ್ಶಾಷ್ಟಕಂ . . . ನೀಚ್ಕೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೪ ವ). [ಸಂ.]

ಸ್ಪರ್ಶಿಸು (ಕ್ರಿ). ಮುಟ್ಟು; ಸೋಕು: ವಿದ್ಯುಚ್ಛಕ್ತಿಯ ಜೀವಂತತಂತಿಯನ್ನು ಸ್ಪರ್ಶಿಸುವುದರಿಂದ ಆಘಾತವುಂಟಾಗುತ್ತದೆ (ರೂಢಿ). [ಸ್ಪರ್ಶ + - ಇಸ್ಕು]

ಸ್ಪರ್ಶೇಂದ್ರಿಯ (ನಾ). ಸ್ಪರ್ಶಜ್ಞಾನವುಳ್ಳ ಇಂದ್ರಿಯ; ಮೈದೊಗಲು; ಚರ್ಮ : ಗಾಳಿಯು ನಮಗೆ ಕಾಣಿಸುವುದಿಲ್ಲ, ಆದಾಗ್ಯೂ ಸ್ಪರ್ಶೇಂದ್ರಿಯದಿಂದ ಗಾಳಿ ಇರುತ್ತದೆಂದು ತಿಳಿದುಕೊಳ್ಳುತ್ತೇವೆ (ಮುಂಬಯಿ. ೪-೫೮). [ಸಂ.]

ಸ್ಪಷ್ಟ (ಗು). ೧. ನಿಚ್ಚಳವಾಗಿ ಕಾಣುವ; ವಿಶದವಾದ; ಚೆನ್ನಾಗಿ ಗೋಚರವಾದ. ೨. ನಿಜವಾದ; ಸತ್ಯವಾದ. ೩. ಚೆನ್ನಾಗಿ ಅರಳಿದ; ಪೂರ್ಣವಿಕಸಿತವಾದ. (ನಾ). ೪. ನಿಚ್ಚಳವಾಗಿ ಕಾಣುವಂತಹುದು; ಸ್ಫುಟವಾಗಿರುವುದು: ''ವಿಶದಂ, ಪ್ರಕಟಂ, ಸ್ಪಷ್ಟಂ, ಪ್ರಕಾಶಂ, ಸ್ಫುಟಂ - ಈ ೫ ಅಱಿಯಲ್ಪಪ್ಪುದು'' (ಪಲಾಯು. ೧೩೪-೬೭); ಬೆಳ್ಳಿಯ ನಾಣ್ಯಗಳ ಮೇಲೆ ಅಚ್ಚು

ಸ್ಪಷ್ಟವಾಗಿ ಮೂಡುವುದು (ಮುಂಬಯಿ. ೪-೧೨೧) ; ಇವುಗಳೊಂದೂ ಸ್ಪಷ್ಟವಾಗಿ ಸರಿಯಾಗಿ ತಿಳಿದಿರಲಿಲ್ಲ (ಮಲನಾ. ೭). [ಸಂ.]

ಸ್ಪಷ್ಟೀಕರಣ (ನಾ). ೧. ವಿವರಗಳೊಂದಿಗೆ ಸಂಪೂರ್ಣವಾಗಿ ತಿಳಿಸಿಹೇಳುವುದು; ಕ್ಲಿಷ್ಟ ಅಥವಾ ಗೂಢವಾಗಿರುವುದನ್ನು ವಿವರವಾಗಿ ವಿವರಿಸುವುದು: ಹೊಸಪ್ರತಿಯಲ್ಲಿ ಇದರ ಸ್ಪಷ್ಟೀಕರಣ ಮಾಡಿದೆ (ಶಮಜಾಂ. ೬೭). ೨. ವಿವರಣೆ ಕೊಡುವ ಹೇಳಿಕೆ ; ಸಮಜಾಯಿಷಿ. [ಸಂ.]

ಸ್ಪೃಶ್ಯ (ಗು). ೧. ಮುಟ್ಟುವುದಕ್ಕೆ ಯೋಗ್ಯವಾದ; ಮುಟ್ಟಲರ್ಹವಾದ: ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳುಮಂದಿರ್ತೆಱದ ಶೂದ್ರಸಂತತಿಗೆ ಶುಶ್ರೂಷಾ ನಿಯೋಗಂಗಳುಮಂ . . . ಉಪದೇಶಂಗೆಯ್ದು (ಆದಿಪು. ೮-೭೪ ವ). (ನಾ). ೨. ಮುಟ್ಟುವುದಕ್ಕೆ ಯೋಗ್ಯನಾದ ವ್ಯಕ್ತಿ; ಮುಟ್ಟಿದರೆ ಮೈಲಿಗೆಯೆನಿಸ ದವನು : ಸ್ಪೃಶ್ಯಾಸ್ಪೃಶ್ಯರ ವಿಚಾರಮಂಥನ ಹಾಗೆಯೇ ಸಾಗಿದೆ (ಧರ್ಮಸಾ. ೨). [ಸಂ.]

ಸ್ಪೃಷ್ಟ (ಗು). ೧. ಕೈಯಿಂದ ಮುಟ್ಟಿದ; ಸ್ಪರ್ಶ ಮಾಡಿದ. ೨. ಸಂಪರ್ಕ ಹೊಂದಿದ; ಸಂಸರ್ಗವಾದ. ೩. ಪ್ರಭಾವಕ್ಕೆ ಒಳಗಾದ; ಪರಿಣಾಮಕ್ಕೆ ಒಳಗಾದ. ೪. ಮೈಲಿಗೆಯಾದ; ಸ್ಪರ್ಶದಿಂದ ಕೆಟ್ಟುಹೋದ. (ನಾ). ೫. ನಿಶ್ಚಯಿಸಲ್ಪಟ್ಟುದು. ೬. ಅಧಿಕವಾದುದು: "ಸ್ಪೃಷ್ಟಂ - ೧ ನಿಶ್ಚಯಿಸ ಲ್ಪಟ್ಟದ್ದು, ೨ ಬಹುವಾದ್ದು" (ಸಿದ್ಧಾಂತಿ. ೩೮೩). ೭. ಪ್ರಭಾವಕ್ಕೆ ಅಥವಾ ಪರಿಣಾಮಕ್ಕೆ ಒಳಗಾದವನು: ಸೃಷ್ಟಿಚೋದನೆಗಳಿಂ ನರನೂಳಿಷ್ಟಗಳುದಯವಿಷ್ಟಸಿದ್ಧಿಗೆ ಯಂತ್ರತಂತ್ರಗಳ ಯುಕ್ತಿ ತ್ವಷ್ಟೃಕುಶಲದೆ ಸೃಷ್ಟವಿಕೃತಿ ; ಇಂತನ್ಯೋನ್ಯ ಸ್ಪೃಷ್ಟರ್ ಪ್ರಕೃತಿನರರು (ಮಂಕುತ. ೮೬೦). ೮. [ವ್ಯಾಕ] ಅಕ್ಷರೋತ್ಪತ್ತಿಸ್ಥಾನಗಳಿಂದ ಪೂರ್ಣಸ್ಪರ್ಶವಾಗಿ ಉದ್ಭವಿಸುವ ವರ್ಣ; ವರ್ಗೀಯ ವರ್ಣ. [ಸಂ.]

ಸ್ಪೃಷ್ಟಕ (ನಾ). [ಕಾಮಶಾ] ಆಲಿಂಗನಪ್ರಕಾರಗಳಲ್ಲಿ ಒಂದು : ರಭಸದೆ ಪೋಪಳ್ಗೆ ಯದಿರ್ವರುತಾಟಂದೊರ್ವನವನೆ ಮನದಂದವಂಗರುಹರಿನೀಕ್ಷಿಸಲವಳುಂ ನಿರೀಕ್ಷಿಸಲ್ ಸ್ಪೃಷ್ಟಕಾಖ್ಯಮುಪಗೂಹನಕ(ಮು)ಂ (ಮನ್ಮಥ. ೧೧-೪) ; ಇದಿರೆ ಬರ್ಪ ಸುದತಿಗಿದಿರೆ ನಡೆದು ಕಿಱಿದೆನಿಪ್ಪ ಪಥದೊಳು ಪದೆದು ಪುರುಷನವಳ ಸೋಂಕಲದನೆ ಮನದೆಗೊಂಡು ಪುಳಕಮುದಿಸೆ ಮುರಿದು ನೋಳ್ಪುದೀಗ ಸ್ಪಇಸ್ಪೃಇಷ್ಟಕಂ (ಜನಪ. ೭-೨). [ಸಂ.]

ಸ್ಪೃಹಣೀಯ (ಗು). ೧. ಬಯಸತಕ್ಕ; ಅಪೇಕ್ಷಣೀಯವಾದ. (ನಾ). ೨. ಇಷ್ಟವೆನಿಸುವಂತಹುದು; ಅಪೇಕ್ಷಣೀಯವಾದುದು: ಗೃಹದಿರ್ಘಕೆಯಂ ಧಾರಾಗೃಹಮಂ . . . ಆರ್ಗಂ ಸ್ಪೃಹಣೀಯಮಾಗೆ ಪಲವುಂ ಬಹುವಿದ್ಯಾಗೃಹಮಹತ್ತರರ್ ಸಮೆದಿತ್ತರ್ (ಪಂರಾಮಾ. ೧೨-೯೮); ಶರೀರದೆ ಘಟಿಸಿದ ಯೌವನವೆ ಸುಮದವೋಲ್ ಸ್ಪೃಹಣೀಯಂ (ಶಾಕುಂತ. ೧೦-೯) ; ಯಾರಾದರೂ ಮದುವೆಯಾಗಲು ಇಚ್ಛಿಸಿದರೆ ಅದು ಸ್ಪೃಹಣೀಯವೇ, ಗರ್ಹಣೀಯವಲ್ಲ (ಶರಚ. ೨೨೮). ೪. ಇಷ್ಟನೆನಿಸುವವನು; ಅಪೇಕ್ಷಣೀಯ ವ್ಯಕ್ತಿ: ವಸಂತ ಎಷ್ಟೇ ಸ್ಪೃಹಣೀಯನಾದರೂ ತಾನು ಆನಂದನ ಹೆಂಡತಿ (ಕಮಸಿ. ೧೩೦). [ಸಂ.]

ಸ್ಪೃಹೆ (ನಾ). ಬಯಕೆ ; ಅಪೇಕ್ಷೆ : "ಇಚ್ಛಾ, ಕಾಂಕ್ಷಾ, ಸ್ಪೃಹಾ . . . ಆಶಂಸಾ - ಈ ೮ ಇಚ್ಛೆ" (ಹಲಾಯು. ೧೧೮-೨೫). [ಸಂ. ಸ್ಪೃಹಾ]

ಸ್ಪೃಹೆವೆಱು (ಕ್ರಿ). ಬಯಸು ; ಇಚ್ಛಿಸು : ಭಯಭಕ್ತಿ ಸ್ಪೃಹೆವೆತ್ತು ನೋಳ್ಪ ನಯನಂ ರೋಷಾರುಣಾವೇಶದುರ್ಣಯಕಿಂಬಾಯ್ತು (ಶಬ್ದಶಾ. ೪-೧೩೩). [ಸ್ಪೃಹೆ + ಪೆಱು]

ಸ್ಫಟಾಧರ (ನಾ). ಹೆಡೆಯುಳ್ಳ ಹಾವು ; ಸರ್ಪ : ಈ ಘುಳುಘುಳುಧ್ವಾನೋದ್ಗತ ಬುದ್ಬುದಪ್ರಕರವಾ ಸ್ಫಟಾಧರನತಿಸ್ಫಾರ ಸ್ಫಟಾಪೂತ್ಕಾರವಾತೋದ್ಗತ ಬುದ್ಬುದಪ್ರಕರಂ (ಜಗವಿ. ೩-೮೦ ವ). [ಸಂ.]

ಸ್ಫಟಾರತ್ನ (ನಾ). ಹಾವಿನ ಹೆಡೆಯಲ್ಲಿರುವುದೆಂದು ನಂಬಲಾದ ರತ್ನ; ಫಣಾರತ್ನ: ದಶಾದಿಶಾದ್ಯೋತತ್ ಸ್ಫಟಾರತ್ನಮಂಜುಳನಿರ್ಝಂ (ವಿಷ್ಣುಪು. ೨-೧-೧೭೨). [ಸಂ.]

ಸ್ಫಟಿಕ (ನಾ). ೧. ಬೆಣಚುಕಲ್ಲಿನ ಜಾತಿಗೆ ಸೇರಿದ ನಿರ್ಮಲವೂ ಪಾರದರ್ಶಕವೂ ಆಗಿರುವ ಒಂದು ಬಗೆಯ ಬಿಳಿಯ ಹೊಳಪಿನ ಕಲ್ಲು : "ನಿರ್ಮಲೋಪಲಃ - ಸ್ಫಟಿಕ" (ಓಷಧಿ. ೮೮); ಚಿದಂಬರದೇವಾಲಯದಲ್ಲಿರುವ ಲಿಂಗವು ಸ್ಫಟಿಕದಿಂದ ನಿರ್ಮಿತವಾದುದು (ಭಾರದ. ೫೧೯) ; ಅವನ ಕೀರ್ತಿಪ್ರಶಸ್ತಿಯ ಸ್ಫಟಿಕಭೂಮಿಕೆಯಂತೆ . . . ಅಚಲದಲಶಾಂತಿ ದೆಸೆದೀವೆ (ವೃಶಾಪ. ೯೦-೭೫೬). ೨. ಸೂರ್ಯಕಾಂತ ಶಿಲೆ: "ಸ್ಫಟಿಕಃ, ಸೂರ್ಯಕಾಂತಃ, ಅರ್ಕಾಶ್ಮಾ, ದಹನೋಪಲಃ - ಈ ೪ ಸ್ಫಟಿಕಂ" (ಹಲಾಯು. ೨೯-೨೨). ೩. "(ಒಂದು ಗೊತ್ತಾದ ಒಳರಚನೆಯಿದ್ದು, ಒಂದು ಕ್ರಮದಲ್ಲಿ ಅಳವಡಿಸಿದ ಸಮತಳದ ಮುಖಗಳಿಂದ ಎಲ್ಲೆಗಟ್ಟಿ) ನಿರ್ದಿಷ್ಟಘನರೂಪವನ್ನು ಪಡೆದ ಅಣುರಾಶಿ" (Crystal. ಇಂಕನ): ಕೆಲವು ಸ್ಫಟಿಕಗಳನ್ನು (Crystals) ಕಾಯಿಸುವುದರಿಂದ, ಸೀಳುವುದರಿಂದ ಇಲ್ಲವೆ ಅದುಮುವುದರಿಂದ ವಿದ್ಯುತ್ತು ಉತ್ಪತ್ತಿಯಾಗುತ್ತದೆ (ಶಿಲ್ಪನಾ. ೨೨೭). ೪. ಒಂದು ಬಗೆಯ ಸಸ್ಯ ಮತ್ತು ಅದರ ಹೂವು: ಕುರುವಕ, ಪಟಿಕದ ಹೂ, ಸ್ಫಟಿಕದ ಹೂ (ಮೃಚ್ಛಿ. ೧೧-೧೯೫); ಕೋಕಿಲಾದಿ ಕೂಜನ: ಸ್ಫಟಿಕಪುಷ್ಪಲಾಜನ (ಅಕೇ. ೨೦-೧೪). ೫. ಗುರಾಣಿ ; ಢಾಲು (?) : ಎಷ್ಟು ಪಟುಭಟರಾದರೂ ಸ್ಫಟಿಕದ ಮರೆಯಲ್ಲಿ ಅಡಗಬೇಕು (ಮೋಳಿಮಾ. ೨೧-೯೨). [ಸಂ.]

ಸ್ಫಟಿಕಮಣಿ (ನಾ). = ಸ್ಫಟಿಕ ೧: ಅತಿಶೈತ್ಯವಾಗಿ ಜನಗಳ ಪಿತ್ತವನ್ನು ಪರಿಹರಿಸುವುದರಲ್ಲಿ ಮುಖ್ಯವಾಗಿರುವುದು ಸ್ಫಟಿಕಮಣಿಯ ಗುಣ (ಸಕಪ್ರ. ೩೯). [ಸಂ.]

ಸ್ಫಟಿಕಾದ್ರಿ (ನಾ). ಕೈಲಾಸಪರ್ವತ: ಸರದದ ಮುಗಿಲ್ಗಳೆಜಗಿದ ತರಳ ಸ್ಫಟಿಕಾದ್ರಿನಿಕರಮೆನೆ ಕೊನೆಯೊಳ್ ಬೆಳ್ಳೂರೆವಿಂಡಂ ತಾಳ್ದಿದ ಪೆರ್ದೆರೆವಿಂಡುಗಳೆಸೆವುವಾ ಮಹಾವಾಹಿನಿಯೊಳ್ (ಚಂದ್ರಪ್ರ. ೧೦-೫೦). [ಸಂ.]

ಸ್ಫಟಿಕಾಬ್ಜ (ನಾ). ಬಿಳಿಯ ಕಮಲ; ಬಿಳಿಯ ತಾವರೆ: ಅನುರೂಪಂ ಸ್ಫಟಿಕಾಬ್ಜದೊಳ್ ದಧಿ ಸುವರ್ಣಕ್ರೌಂಚದೊಳ್ ರೋಚನಂ . . . ಮಾಣಿಕ್ಯಭಾಜನ ದೊಳ್ ಕುಂಕುಮಪಂಕಮೇಂ ಮೆಱೆದುವೋ ಮಾಂಗಲ್ಯಸಾಕಲ್ಯಮಂ (ಪಂರಾಮಾ. ೫-೧೨೫). [ಸಂ.]

ಸ್ಫಟಿಕಾಶ್ಮ (ನಾ). ಸ್ಫಟಿಕದ ಶಿಲೆ: ಪದಂ ಚಾರುಕಾಂಚನವರ್ಣಂ ಸ್ಫಟಿಕಾಶ್ಮ ವರ್ಣಮುದರಂ ಮಾಣಿಕ್ಯವರ್ಣಂ ಕೊರಲ್ (ಜಗವಿ. ೧-೫೧). [ಸಂ. ಸ್ಫಟಿಕಾಶ್ಮನ್]

ಸ್ಫಟೆ (ನಾ). ಹಾವಿನ ಹೆಡೆ: "ಫಣಮೆನಲ್ ಸ್ಫಟೆಯೆನಲ್ ಪೆಡೆಯಕ್ಕುಂ" (ಪಂಗರಾ. ೧೧೮-೩). [ಸಂ. ಸ್ಫಟ]

ಸ್ಫಾಟಿಕ (ನಾ). = ಸ್ಫಟಿಕ ೧: ಕನಕಸ್ಫಾಟಿಕರತ್ನಹರ್ಮ್ಯಚಯಮಂ ಬಂದೇಱಿ ನಿಂದು (ರಾಜಶೇ. ೧೩-೯೨). [ಸಂ.]

ಸ್ಫಾಟಿಕಗ್ರಾವ (ನಾ). = ಸ್ಫಟಿಕಾಶ್ಮ: ನಿರ್ಮಳಜಳರುಚಿಯಂ ಸ್ಫಾಟಿಕಗ್ರಾವ ಬದ್ಧಾವನಿಯೊಳ್ . . . ತಾಳುತ್ತುಮೆತ್ತಂ ಸುಱಿವುದು ಮಹಿಭೃದ್ಗೇಹದೇಣೀ ಸಮೂಹಂ (ಚಂದ್ರಪ್ರ. ೧-೧೪೭). [ಸಂ.]

ಸ್ಫಾಟಿಕಾದ್ರಿ (ನಾ). = ಸ್ಫಟಿಕಾದ್ರಿ: ಅಚ್ಛ ಸ್ಫಾಟಿಕಾದ್ರಿಪ್ರತಿಮ ಲಹರಿಕಾಜಾಲ ಸಂಕೀರ್ಣಮಂತಾ ನದಿ ಚೆಲ್ವಾದತ್ತು (ಚಂದ್ರಪ್ರ. ೧-೮೩). [ಸಂ.]

ಸ್ಫಾರ (ಗು). ೧. ದೊಡ್ಡ ; ಅಗಲವಾದ ; ವಿಶಾಲವಾದ: ಪೊಕ್ಕಂ ನೃಪಾವಾಸಮಂ . . . ವಿಶಾಲೋರಃಸ್ಥಲೀನಿಸ್ತುಲ ಚಕಚಕಿತಸ್ಫಾರಹಾರಂ ಕುಮಾರಂ (ಪಂರಾಮಾ. ೨-೩); ಸ್ಫಟಾಧರನತಿಸ್ಫಾರಸ್ಫಟಾಪೂತ್ಕಾರವಾತೋದ್ಗತಬುದ್ಬುದಪ್ರಕರಂ (ಜಗವಿ. ೩-೮೦. ವ). ೨. ಹೇರಳವಾದ; ಅತಿಶಯವಾದ: ಗಂಗಾಪಗಾಸ್ಫಾರರುಗ್ವಿಸ್ತರಮಂ ತಟ್ಟೈಸಿ (ಎಕ. V. ಬೇಲೂರು. ೭; 1136); ಸ್ಫಾರಶರೀರಕಾಂತಿ ಜನನೀನಯನಾಬ್ಜಮನುಳ್ಳಲರ್ಚಿ ವಿಸ್ತಾರಮನೋರಥಾಂಗಮನೊಣರ್ಚೆ ಬೆಳರ್ಬೆಳನೇಸಱಂತೆ ತೇಜೋರುಚಿರಾತ್ಮನಲ್ಲಿರೆ ಜಿನಾರ್ಚಕಂ (ಪುಷ್ಪಪು. ೧೦-೧೬). (ನಾ). ೪. ಉಬ್ಬು ; ಬಾವು. ೫. ನಡುಕ; ಕಂಪನ. ೬. ಒಂದು ಬಗೆಯ ಆಭರಣ. ೭. ಅತಿಶಯ; ಆಧಿಕ್ಯ : "ಸ್ಫೀತಂ ಸ್ಫಾರಂ ಘನಮೆನಿಕ್ಕುಂ" (ಪಸ್ತುಕೋ. ೧೦೬-೪೯). [ಸಂ.]

ಸ್ಫಾಲನ (ನಾ). ೧. ನಡುಕ; ಕಂಪನ. ೨. ಘರ್ಷಣೆ. ೩. ತಟ್ಟುವಿಕೆ; ಚಪ್ಪರಿಸುವಿಕೆ: ತಮಾಲವನಂಗಳಿಂದೆ ಭೃಂಗಾಳಿಯ ಗಾವರಂ ಪುದಿದ ಪುಷ್ಪಲತಾ ಗೃಹದಿಂದೆ ಚಂದ್ರಿಕಾಚಾಲದವೊಲ್ ಕೆಲಂಬಿಡುಂ ಭೋರ್ಗರೆಯಲ್ ಸುರಿತರ್ಪ ನಿರ್ಝರ [ಪಾಶಾಂ. ರಾ] ಸ್ಫಾಲನ ಶೀಕರಪ್ರಕರದಿಂದೆಸೆದತ್ತು ಬೃಹದ್ಗುಹಾಂಗಣಂ (ಕಾದಂಪು. ೬೯೧). 'ಆಸ್ಫಾಲನ' ಪರಾ. [ಸಂ.]

ಸ್ಫಿಕ್ಕೆ (ನಾ). ಪ್ರಾಣಿಗಳ ಮಲ ; ಸಗಣಿ, ಲದ್ದಿ, ಹಿಕ್ಕೆ ಇತ್ಯಾದಿ : ''ಸ್ಫಿಕ್ಕಾ - ಹೆಕ್ಕೆ, ಹಿಕ್ಕೆ'' (ಶಮದ. ೨೭೨ ಪ್ರಮೇ). [ಸಂ. ಸ್ಫಿಕ್ಕಾ?./ IP ಶಬ್ದಮಣಿದರ್ಪಣದಲ್ಲಿ ಈ ಶಬ್ದವನ್ನು ಸಂಸ್ಕೃತವೆಂದು ಪರಿಗಣಿಸಿ, 'ಹಿಕ್ಕೆ' ಶಬ್ದವನ್ನು ಇದರ ತದ್ಭವವೆಂದು ಹೇಳಿದರೂ ಸಂಸ್ಕೃತಕೋಶಗಳಲ್ಲಿ 'ಸ್ಫಿಕ್ಕಾ' ಶಬ್ದ ಸಿಕ್ಕಿಲ್ಲ. ಪಿಳ್ಕೆ, ಪಿಕ್ಕೆ, ಹಿಕ್ಕೆ ಶಬ್ದಗಳನ್ನು ಜ್ಞಾತಿಶಬ್ದಗಳ ಆಧಾರದಿಂದ ಈ ನಿಘಂಟಿನಲ್ಲಿ ದೇಶ್ಯಶಬ್ದಗಳೆಂದು ಪರಿಗಣಿಸಲಾಗಿದೆ.]

ಸ್ಫೀತ (ಗು). ೧. ವಿಶಾಲವಾದ; ವಿಸ್ತೃತವಾದ. ೨. ದೊಡ್ಡ ; ಗಾತ್ರವಾದ: ಅತಿಸ್ಫಾರವಿಸ್ಫುಲಿಂಗ ಸ್ಫೀತಾವರೋಹಣದೊಳಂ ದಂಡನ ಖಂಡನ ತಾಡನ ಪೀಡನ ಗರ್ಜನ ತರ್ಜನಾದಿಗಳನೆಯ್ದಿ (ಅಜಪು. ೧೧-೧೦ ವ). ೩. ಅಧಿಕವಾದ; ಅತಿಶಯವಾದ: ಸ್ಫೀತಭಕ್ತಿಸಮಗ್ರದೊಳು . . . ಪ್ರೀತಿಯಿಂದಿಂತಾಡುತ (ಬಸವ. ೪೭-೯). ೪. ಸಂತುಷ್ಟ; ಆನಂದಿತ. ೫. ಶುದ್ಧವಾದ. ೬. ಯಶಸ್ವಿಯಾದ; ಅಭಿವೃದ್ಧಿ ಹೊಂದಿದ. ೭. ಆನುವಂಶಿಕ ರೋಗದಿಂದ ಬಳಲುತ್ತಿರುವ. (ನಾ). ೮. ದೊಡ್ಡದು; ಘನವಾದುದು: ''ಸ್ಫೀತಂ ಸ್ಫಾರಂ ಘನಮೆನಿಕುಂ'' (ಪಪ್ರಾಕೋ. ೧೦೬-೪೯). [ಸಂ.]

ಸ್ಫುಟ (ಗು). ೧. ಒಡೆದು ಹೋಳಾದ; ಸ್ಫೋಟವಾದ; ಸೀಳಿಹೋದ. ೨. ಅರಳಿದ; ವಿಕಾಸವಾದ. ೩. ಸ್ಪಷ್ಟವಾದ; ಪ್ರಕಟವಾದ : ಮದವಾದಿ ಭಯಂಕರನೆನ್ನು ದಣ್ಣುಳಂ ಸ್ಫುಟಪಟುಘೋಷದಿಕ್ಕಟಮನೆಯ್ದುತು ವಾಕುಪಟು ಗೋಪನನ್ನಿಯ (ಎಕ. ೧೧.೬೯-೩೨; ೧೧೦೦). ೪. ಚೆನ್ನಾಗಿ ಕಾಣುವ, – ಗೋಚರಿಸುವ. ೫. ಶುಭ್ರವಾದ; ಹೊಳೆಯುವ. ೬. ಹೆಸರುವಾಸಿಯಾದ ; ಪ್ರಸಿದ್ಧವಾದ. ೭. ಹರಡಿದ ; ವಿಸ್ತರಿಸಿದ. ೮. ನಿಜವಾದ ; ಸತ್ಯವಾದ. ೯. ಅಸಾಮಾನ್ಯವಾದ; ವಿಚಿತ್ರವಾದ. (ನಾ). ೧೦. ಅರಳಿದುದು; ವಿಕಸಿತವಾದುದು: ''ಪ್ರಫುಲ್ಲಃ, ಉತ್ಫುಲ್ಲಃ . . . ಸ್ಫುಟಿಃ, ಫುಲ್ಲಃ , ವಿಕಸಿತಃ, ೪ ಅರಳಿರುವುದರ ಹೆಸರುಗಳು, ಅರಳಿದ್ದು'' (ಸಿದ್ಧಾಂತ. ೧೧೧). ೧೧. ಸ್ಪಷ್ಟವಾಗಿ ತಿಳಿಯುವಂತಹುದು; ವಿಶದವಾದುದು: ''ವಿಶದಂ, ಪ್ರಕಟಂ, ಸ್ಪಷ್ಟಂ, ಪ್ರಕಾಶಂ, ಸ್ಫುಟಂ – ಈ ೫ ಅರ್ಥಯಲ್ಲರ್ಪು[ಹು]ದು'' (ಹಲಾಯು. ೧೩೪-೬೭); ಸ್ಫುಟವಾದ ಬರವಣಿಗೆ, ಚೊಕ್ಕಟವಾಗಿರುವ ಅಭ್ಯಾಸ . . . ಎಲ್ಲ ಪಾಠಗಳಲ್ಲೂ ಬೋಧನೆಯಾಗಬೇಕು (ತಿಕ್ಷಪ್ರ. ೨೫೦). [ಸಂ.]

ಸ್ಫುಟಬಂಧ (ನಾ). [ಕಾವ್ಯಮಿ] ಒತ್ತಕ್ಷರ ಮತ್ತು ಮಹಾಪ್ರಾಣಾಕ್ಷರಗಳು ವಿಶೇಷವಾಗಿರುವ ಪಾದಬಂಧ : ಮೃದುತರ ವರ್ಣಾನುಗಮಾಸ್ಪದ ವಿರಚನೆಯೊಳಗೆ ತೋರ್ಪುದದು ಸ್ಫುದುಬಂಧಂ ವಿದಿತಸ್ಫುಟಾಕ್ಷರಾಧಿಕಪದವಿರಚಿತಮಪ್ಪುದಕ್ಕುಮಾ ಸ್ಫುಟಬಂಧಂ (ಕವಿರಾ. ೨-೫೭). [ಸಂ.]

ಸ್ಫುಟಹರ್ಷ (ನಾ). ಹೆಚ್ಚಾಗಿ ಹರ್ಷಿತನಾದವನು; ಅತಿಶಯವಾದ ಆನಂದವುಳ್ಳವನು: ಮಣಿಭೂಷಣಭಾಜಟಿಲಿತಮೂರ್ಜ್ಯತ್ಕರ್ಷಂ ಸ್ಫುಟಹರ್ಷಂ ತನ್ನ ವರ್ಷವರ್ಧನದಿನದೊಳ್ (ಆದಿಪು. ೨-೨). [ಸಂ.]

ಸ್ಫುಟಾಕ್ಷರ (ನಾ). [ಕಾವ್ಯಮಿ] ಒತ್ತಕ್ಷರ ಮತ್ತು ಮಹಾಪ್ರಾಣಾಕ್ಷರ: ವಿದಿತಸ್ಫುಟಾಕ್ಷರಾಧಿಕಪದವಿರಚಿತಮಪ್ಪುದಕ್ಕುಮಾ ಸ್ಫುಟಬಂಧಂ (ಕವಿರಾ. ೨-೫೭). [ಸಂ.]

ಸ್ಫುಟಿಕೆ (ನಾ). ೧. ಪುಡಿಕೆ; ಪೊಟ್ಟಣ: ಚಿಂದಳಿರ ಕರಂಡಕಮರವಿಂದದಳಸ್ಫುಟಿಕೆ ಕದಳಿಯೆಲೆವಡಲಿಗೆ ಚೆಲ್ವೊಂದಿರೆ ಕರದೊಳ್ (ರಾಜಶೇ. ೧೦-೩೪). ೨. ಮುರಿದು ಬಿದ್ದ ತುಂಡು, – ಹೋಳು. [ಸಂ. ಸ್ಫುಟಿಕಾ]

ಸ್ಫುಟಿತ (ಗು). ೧. ಬಿರಿದ; ಭಗ್ನವಾದ: ಮದ್ಭಿಪತ್ಕಿಶ್ರವಣಮಾತ್ರದಿಂ ಸ್ಫುಟಿತ ಹೃದಯನಾದ ಚಂದ್ರಾಪೀಡನೆಲ್ಲಿ ಪುಟ್ಟಿದಂ (ಕಾದಂಬ. ೬೯). ೨. ಅರಳಿದ; ವಿಕಸಿತವಾದ. ೩. ಸ್ಪಷ್ಟಗೊಳಿಸಿದ ; ಪ್ರಕಟಪಡಿಸಿದ. ೪. ನಾಶವಾದ. [ಸಂ.]

ಸ್ಫುಟಿಸು (ಕ್ರಿ). ಪ್ರಕಟವಾಗು; ವ್ಯಕ್ತವಾಗು; ಗೋಚರಿಸು: ನಿಜದೊಳ್ ಸ್ಫುಟಿಸಿದಮಲಬ್ರಹ್ಮಗುರು ಬಸವಂಗೆ ಶರಣೆಂಬೆ (ಪದ್ಮರು. ೧-೨): ಸಾಧನಾಭ್ಯಾಸ ಗಳನ್ನು ಮಾಡಿದರೆ ಪ್ರಾತಿಭವು ಸ್ಫುಟಿಸಿ ಪರಶಿವನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ (ಭಾರದ. ೨೧೫). [ಸ್ಫುಟ + - ಇಸ್ಕು]

ಸ್ಫುಟೀಕರಣ (ನಾ). ೧. ಸ್ಪಷ್ಟಗೊಳಿಸುವಿಕೆ ; ಸ್ಪಷ್ಟೀಕರಣ : ಇಂತಹ ಕಡೆಗಳಲ್ಲಿ ಮಾತ್ರ ಸ್ಫುಟೀಕರಣಕ್ಕಾಗಿ 'ಉ' ಪ್ರತ್ಯಯವನ್ನು ಸೇರಿಸುವುದು ಉಚಿತ (ಸಂಶೋಧ. ೫೭). ೨. ತಿದ್ದುಪಾಟು; ಸರಿಪಡಿಸುವಿಕೆ. [ಸಂ.]

ಸ್ಫುಟೀಕರಿಸು (ಕ್ರಿ). ಸ್ಪಷ್ಟಗೊಳಿಸು; ವಿಶದಪಡಿಸು: ವಿವೇಕಗಳೊಲ್ದಿತರಗುಣಮ ನಿತರದೊಳಂ ಸ್ಫುಟೀಕರಿಸಿ ತೋರಲದು ನಿರ್ವ್ಯಾಕುಳದಿಂದಂ (ಮಾಧವಾ. ೧-೧೦೦). [ಸ್ಫುಟೀಕರಣ + - ಇಸ್ಕು]

ಸ್ಫುಟೋಕ್ತಿ (ನಾ). [ಕಾವ್ಯಮಿ] ಸ್ಫುಟವಾದ ವರ್ಣಗಳಿಂದ ಕೂಡಿದ ಮಾತು; ಒತ್ತಕ್ಷರ ಮತ್ತು ಮಹಾಪ್ರಾಣಾಕ್ಷರಯುಕ್ತವಾದ ನುಡಿ : ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂಚ್ಚಾರಣೆಯಿಂದಮದ್ಭುತರಸಂ . . . ಪ್ರಕಟಮಕ್ಕೆ (ಕವಿರಾ. ೨-೯೯). [ಸಂ.]

ಸ್ಫುರಣ (ನಾ). ೧. ನಡುಗುವುದು; ಕಂಪನ: ''ಸ್ಫುರಣಂ, ಸ್ಫುರಣಂ - ೨ ಅದುರುವುದು; ಅಲ್ಲಾಡುವುದು'' (ಸಿದ್ಧಾಂತಿ. ೩೫೮). ೨. ಪ್ರಕಟವಾಗುವಿಕೆ; ಗೋಚರಿಸುವಿಕೆ. ೩. ಹೊಳೆಯುವುದು; ಮಿನುಗುವುದು. ೪. ಮನಸ್ಸಿಗ ಹೊಳೆಯುವಿಕೆ ; ತಟ್ಟನೆ ನೆನಪಾಗುವಿಕೆ. ೫. ವಿಸ್ತಾರ. [ಸಂ.]

ಸ್ಫುರಣೆ (ನಾ). = ಸ್ಫುರಣ ೪ : ಪರಮೇಶ್ವರಿ ನಿಜಾಂತಃಕರಣಜನಿತಸ್ಫುರಣೆಯನು ಬಿನ್ನಪಿಸಲುದ್ಯೋಗಿಸಿದಳಭವಂಗೆ (ಪ್ರಭುಲೀ. ೨-೩೦); 'ಇದು ಅಪೂರ್ವವಾದ ಸ್ಫುರಣೆ' ಎಂಬ ಮನಸ್ಸಿನ ಚಮತ್ಕೃತಿಯು ಸಹೃದಯರಲ್ಲಿ ಹುಟ್ಟುತ್ತಿದ್ದರೆ (ಧ್ವನ್ಯಾಲೋ. ೨೬೧). [ಸಂ. ಸ್ಫುರಣ]

ಸ್ಫುರಣೆಗೆಡು (ಕ್ರಿ). ಏನೂ ಹೊಳೆಯದಾಗು ; ಅಪ್ರತಿಭನಾಗು : ತರಣಿಸುತನದ ಕಂಡು ತಿರುವಿಗೆ ಸರಳ ಸಂಧಿಸಿ ತೆಗೆಯಲೆಂಬೀ ಸ್ಮರನ ವಿದ್ಯಾಶಕ್ತಿಯೊಳ್ ತಕ್ಷಣದಿ ಕೀಲಿಸಲು ಸ್ಫುರಣೆಗೆಟ್ಟವನಲ್ಲಿ ನಿಂದನು (ಸಾಳ್ವಭಾ. ೩೦-೨೪). [ಸ್ಫುರಣೆ + ಕೆಡು]

ಸ್ಫುರದನಲ (ನಾ). ಪ್ರಜ್ವಲವಾದ ಬೆಂಕಿ: ಉರುಪಿತ್ತಶೋಕಪಲ್ಲವವಿರಚಿತ ಶಯನೀಯಮೆನ್ನ ಮೈಯ್ಯಂ ಪೀನಂ ಸ್ಫುರದನಲಪ್ರತಿನಿಧಿ ತತ್‌ಸ್ವರೂಪಗುಣ ಮಕ್ಕುಮೆಂಬುದೆಂದುಂ ಯುಕ್ತಂ (ಕವಿರಾ. ೩-೩೭). [ಸಂ.]

ಸ್ಫುರದ್ರೂಪಿ (ನಾ). ಎದ್ದು ಕಾಣುವ ರೂಪವುಳ್ಳವನು; ಚೆಲುವ: ರಾಯನು ಸ್ಫುರದ್ರೂಪಿಯೂ ದೃಢಕಾಯನೂ ಆಗಿದ್ದನು (ಕೃದೇವ. ೧೦); ಸ್ಫುರದ್ರೂಪಿಯೂ ಪೌರುಷವಂತನೂ ಆದ ರಾಜಕುಮಾರನನ್ನು ನೋಡಿ ಅರಸನ ಸಿಟ್ಟು ಇಳಿಯಿತು (ಪುಣಸ. ೪೭). [ಸಂ. ಸ್ಫುರದ್ರೂಪಿನ್]

ಸ್ಫುರಿತ (ಗು). ೧. ನಡುಗುವ; ಕಂಪಿಸುವ: ಸ್ಫುರಿತಾಧರಪಲ್ಲವೆ ಬಂಧುರಲೋಚನ ಕುಸುಮೆ . . . ಕಾಂತೆಯೆಂಬುದವಯವನಿರೂಪಣಕ್ರಮದಿನವಯವಂ ರೂಪಕದೊಳ್ (ಕವಿರಾ. ೩-೧೫). ೨. ಅದುರಿದ; ಕಂಪಿಸಿದ. ೩. ಹೊಳೆಯುವ; ಪ್ರಕಾಶಿಸುವ: ಸ್ಫುರಿತ [ಪಾಠಾಂ. ವಿತತ] ತಪೋವಯಾನಳನಿನೀಯೊಡಲಂ ನೆಗಟ್ಟೀ ಗಿರೀಂದ್ರಕಂದರದೊಳಗಿಂತೆ ದಲ್ ಕರಗಿಪೆಂ (ಪಂಪಭಾ. ೪-೬). ೪. ಅಸ್ಥಿರವಾದ; ಹೊಯ್ದಾಡುವ. ೫. ಉಬ್ಬಿದ ; ಊದಿಕೊಂಡ. ೬. ವ್ಯಕ್ತವಾದ; ಪ್ರಕಟವಾದ. ೭. ಮನಸ್ಸಿನಲ್ಲಿ ಹೊಳೆದ; ಬುದ್ಧಿಗೆ ತೋರಿದ. (ನಾ). ೮. ಅದಿರುವುದು; ಕಂಪಿಸುವುದು. ೯. ಪ್ರಕಾಶಿಸುವುದು; ಹೊಳೆಯುವುದು. ೧೦. ಮನಸ್ಸಿಗೆ ತೋರುವುದು; ಬುದ್ಧಿಗೆ ಹೊಳೆಯುವುದು. ೧೧. ಹೊಳಪು; ಮಿಂಚು. ೧೨. ಭಾವೋದ್ರೇಕ. ೧೩. [ಅಶ್ವಶಾ] ಕುದುರೆಯ ನಡಗೆಗಳಲ್ಲೊಂದು ಪ್ರಕಾರ; ನೆಗೆಯುತ್ತ ಹೋಗುವ ಗತಿ: ಚಿಮ್ಮುಗಳ ಕಾಣಿಸುವುದು ಸ್ಫುರಿತವೆನಿಸಿಕೊಂಬುದು. ಹಾವು ನಡೆದಂತೆ ಡೊಂಕುಡೊಂಕಾಗಿ ಓಡಿಸುವುದು ನಾಗೋಷ್ಮವೆನಿಸಿಕೊಂಬುದು (ಅಶ್ವಚೇ. ೨೫-೭). ೧೪. [ಸಂಗೀತ] ಒಂದು ಸ್ವರಕಂಪ(ಗಮಕ)ವಿಶೇಷ; ಸ್ವರವು ಜಂಟಿಯಾಗಿ ಸುಡಿಯುವ ಒಂದು ಗಮಕ: ಸ್ಫುರಿತ ಪ್ರಮಿತ ದೀರ್ಘ . . . ಕೋಮಲವೆಂಬವಿಪ್ಪತ್ತೆರಡೇ ಶ್ರುತಿಗಮಕಂಗಳು (ವಿವೇಕ. ೧೮೬): ಸ್ಫುರಿತ – ಜಂಟಿಯ ಸ್ವರಗಳು ಸುಡಿಯುವುದು (ಸಂಗೀಚಂ. ೨೮). ೧೫. [ನಾಟ್ಯ] ವ್ಯಾದೀರ್ಣ, ಶ್ವಸಿತ, ವಕ್ರ, ಸಂಹತ, ಚಲಸಂಹತ, ಸ್ಫುರಿತ, ಚಲಿತ, ಲೋಲ ಎಂಬ ಎಂಟು ಬಗೆಯ ಚಿಬುಕಭೇದಗಳಲ್ಲಿ ಒಂದು;

ಬೆಚ್ಚಿದಂತೆ ಗದ್ದವನ್ನು ನಡುಗಿಸುವುದು: ಉರುತರದೆ ಬೆಚ್ಚ ನಡುಗಲ್ ಸ್ಫುರಿತಂ (ಕಾಸ್ಕರಂ. ೬-೧೧೧). ೧೬. ಮೂವತ್ತೈದು ಬಗೆಯ ದೇಶೀಯಭೌಮಚಾರಿಗಳಲ್ಲಿ ಒಂದು; ತುದಿಗಾಲುಗಳನ್ನು ನಡುಗಿಸಿ ಪಾದಪಾರ್ಶ್ವಗಳು ನೆಲವನ್ನು ಮುಟ್ಟಿಕೊಂಡಿರುವಂತೆ ಕಾಲುಗಳನ್ನು ಚಲಿಸುವುದು: ಪಿಂದು ಸ್ತಂಭಕ್ರೀಡಿತಮುರುಲಂಘಿತಮೆಯ್ದೆ ರಾಜಿತ ಸ್ಫುರಿತಂ (ಕಾಸ್ಕರಂ. ೬-೧೧). ೧೭. ಒಂಬತ್ತು ಬಗೆಯ ಎವೆಯ ಭೇದಗಳಲ್ಲಿ ಒಂದು: ಎವೆ ತಿರುಗಲ್ಕೆ ವಿವರ್ತಂ ತವೆ ಪಾಱುತ್ತಿರ್ದೊಡಿಂತು ಸ್ಫುರಿತಮೆನಿಕ್ಕುಂ (ಕಾಸ್ಕರಂ. ೩-೫೧). ೧೮. [ಕಾಮಶಾ] ಚುಂಬನದ ಹನ್ನೆರಡು ಪ್ರಕಾರಗಳಲ್ಲಿ ಒಂದು: ತರಳೆಯಮರ್ದುಟಿಯನೊರ್ಮೆಯೆ ವರನೀಂಟಲ್ ಕೂಡೆ ಬರಸೆಳೆಯಲೊಡನವನಾದರದಿಂ ತನ್ನಧರಮನೀಂಟರಲೆಸೆಗುಂ ಸ್ಫುರಿತಚುಂಬನಂ ರತಿಯೆಡೆಯೊಳ್ (ಮನ್ಮಥ. ೧೨-೩). [ಸಂ.]

ಸ್ಫುರಿತಕ (ನಾ). = ಸ್ಫುರಿತ ೧೮: ಅಸಿಯಲ್ಲೆಲ್ಲೆಡೆಯೊಸೆಯದಲುಂಗದ ಮುಸುಡೀಯಲದೇ ಸ್ಫುರಿತಕವು (ಜಸವ. ೬-೧೭); ನಿಮಿತ್ತಕ ಸಂಘಟಕ ಸ್ಫುರಿತಕ ಭ್ರಾಂತಕ ತಿರ್ಯಕ್ಕು ಅತಿತೃಷ್ಣಕ ಉತ್ತರ ಸಂಘಟ್ಟಕ ಜಿಹ್ಮಾಮೇಳನ ಜಿಹ್ಮಿಕೆ ಅಧಿಕ ಜಿಹ್ಮಾಯೋಗ ಮೆಂಬ ದ್ವಾದಶಚುಂಬನಸಂಭ್ರಮಿಗಳಿಂ (ವಿವೇಕ. ೧೮೩). [ಸಂ.]

ಸ್ಫುರಿಯಿಸು 'ಸ್ಫುರಿಸು' ನೋ.

ಸ್ಫುರಿಸು, ಸ್ಫುರಿಯಿಸು (ಕ್ರಿ). ೧. ಮಿನುಗು; ಮಿಂಚು; ಹೊಳೆ: ಸ್ಫುರಿಸುವೊಳ್ಮೊಡೆಯ ಬೆಡಗಿನ ನಡೆಯ . . . ಸೌಂದರಿಯದರಸಿ ನಿಜಪತಿಯ ಮುಂದಱ್ಚರಿಯ ಬಗೆಗೊಂಡಳಂದು ಬೇಱೊಂದು ಪರಿಯ (ಜೈಮಿಭಾ. ೧೧-೯). ೨. ಮೂಡು; ಹುಟ್ಟು; ಉದ್ಭವಿಸು : ನವಮಾಸದೊಳ್ ಶಿವಜ್ಞಾನಂ ಸ್ಫುರಿಸೆ (ಪದ್ಮರಾ. ೧೦-೧೧೫); ಸ್ಫುರಿಸಿತಾ ಗಂಡೆದೆಯ ಹೃದಯದಲಿ ತಾನು ಹೆಣ್ಣೆಂಬ ಲಜ್ಜೆಯ ಲಹರಿ ಮೊತ್ತ ಮೊದಲ್ (ಚಿತ್ರಾಂಗ. ೬-೧೬೨). ೩. ಕಂಡುಬರು; ಗೋಚರವಾಗು; ತೋರು: ಸ್ಫುರಿಸಿದುವು ಸೀತಾಕೃತಿಯಲಾಭರಣವವ ಕಂಡರಸ ತಂದನು ತರಹರದಲುದಕವನು ಹೊಳಹೊಳಿವಂಬಕಂಗಳಲಿ (ತೊರರಾ. ೪-೨-೬). ೪. ಮನಸ್ಸಿಗೆ ತಟ್ಟನೆ ಹೊಳೆ,— ಗೋಚರವಾಗು. ಸ್ಫುರಿಯಿಸು : ೧. ಭುಜದೊಳ್ ನಿಂದ ಬೀರಸಿರಿಯೆಸೆವ ನೆಟಲ್ ಸ್ಫುರಿ[ಕಾಕಾಂ. ರ]ಯಿಸೆ ಮಯ್ಯೊಳ್ ಪೋಲ್ತಂ ಹರಿ ನೀಳೋದ್ಯತ್‌ಪ್ರಸನ್ನಮಣಿದರ್ಪಣಮಂ (ಶಾಂತಿಪು. ೨-೧೩); ಬೆಳಗಿಂ ಸ್ಫುರಿಯಿಪ ಸದ್ರತ್ನನಿಕರದಿಂದೊಪ್ಪುವುದಂ . . . ಪದಕಮಂ ಕಂಡು (ಧರ್ಮಾಮೃ. ೨-೧೧೬). ೨. ಸ್ಫುರಿಯಿಸೆ ಸಿಪ್ಪಿನಲ್ಲಿ ಸಲೆ ಮುತ್ತಿನ ಮಾಲ್ಕೆಯಿನ್ (ಎಸಾ. XVIII, ೧೪೪-೧೫; 1097). [ಸ್ಫುರಣ + - ಇಸು]

ಸ್ಫುಲಿಂಗ (ನಾ). ಬೆಂಕಿಯ ಕಿಡಿ; ಅಗ್ನಿಕಣ: "ಸ್ಫುಲಿಂಗಃ, ಕಣಃ - ಈ ೨ ಕಿಡಿ" (ಪರಾಖ್ಯು. ೧೨-೬೭); ಖಿಡ್ಡಘಟ್ಟನಸಮುದ್ಭವ ವಿಸ್ಫುರಿತ ಸ್ಫುಲಿಂಗಮಂಬುಗತಳ ಮುಚ್ಚಳದ್ಯುಧಿರಶಂಬರಸಂಭೃತಮುರ್ವಿ . . . ಲೋಕಭೀಕರಮೆನಿಸಿತ್ತು (ರಾಜಶೇ. ೬-೭೮); ಸ್ಫುಲಿಂಗದಶೆಯೊಳ್ ಸಮಿತ್ತುಗಳನೆಳಸುತಿರ್ಪ ವಹ್ನಿಯ ತೆರದಿಂ . . . ಕುಮಾರನಿವನೆನಗೆ ನೋಡೆ ಕಾಣುತ್ತಿರ್ಪಂ (ಶಾಕುಂತ. ೧೧೪-೧೭.೮). [ಸಂ.]

ಸ್ಫೂರ್ತಿ (ನಾ). ೧. ಸ್ಪಂದನ; ಸ್ಫುರಣ. ೨. ನೆಗೆತ; ಜಿಗಿತ. ೩. ಅರಳುವಿಕೆ; ವಿಕಸನ. ೪. ಪ್ರಕಾಶನ; ಪ್ರಕಟವಾಗುವಿಕೆ. ೫. ಮನಸ್ಸಿಗೆ ಹೊಳೆಯುವಿಕೆ. ೬. ಹೊಳಪು; ಪ್ರಕಾಶ. ೭. ಥಟ್ಟನೆ ಹೊಳೆಯುವ ಭಾವ, — ವಿಚಾರ; ಕಾವ್ಯದ ಅಥವಾ ಕಲೆಯ ನಿರ್ಮಿತಿಗೆ ಪ್ರಚೋದಿಸುವ ಪ್ರೇರಣೆ: ಅಸಗನ ಸಂಸ್ಕೃತ ಶಾಂತಿಪುರಾಣದಿಂದಲೇ ಸ್ಫೂರ್ತಿಯನ್ನು ಪಡೆದು ಪೊನ್ನನು ಕನ್ನಡದಲ್ಲಿ ಶಾಂತಿಪುರಾಣವನ್ನು ರಚಿಸಿದ್ದಿರಬೇಕು (ಸಾಹಿಸ. ೫೩) ; ಮಹಾರಾಣಿಯ ಸ್ವರ್ಗೀಯನೃತ್ಯವನ್ನು ನೋಡಿನ ಕುಶಲ ರೂವಾರಿಗಳಿಗೆ ಆಗ ಮನಸ್ಸಿಗೆ ಒಂದು ಸ್ಫೂರ್ತಿ ಹೊಳೆಯಿತು (ಶಾಂತಲಾ. ೧೫.೭). [ಸಂ.]

ಸ್ಫೂರ್ತಿಗೆಡು (ಕ್ರಿ). (ಆಲಂ) ಅರಿವುಗೆಡು; ಬುದ್ಧಿಗೆಡು: ಸ್ಫೂರ್ತಿಗೆಡೆ ಮನುಜರಿಗೆ ರಾವಣನಾರ್ತಿಯಪ್ಪುದು (ಕುವ್ಯಾವಿ. ೨-೪೩). [ಸ್ಫೂರ್ತಿ + ಕೆಡು]

ಸ್ಫೋಟ (ನಾ). ೧. ಒಮ್ಮೆಲೆ ಒಡೆದು ಸಿಡಿಯುವಿಕೆ: ಇಲ್ಲಿ ಮೂರು ಅಥವಾ ನಾಲ್ಕು ರಾಕೆಟ್ಟುಗಳಿರಬಹುದು ಅಷ್ಟೆ. ಅವು ಕೂಡ ಸ್ಫೋಟವಾಗಿ ಹಾರುತ್ತಿರುವ ಕ್ಷಿಪಣಿಯ ವೇಗವನ್ನು ತೀವ್ರಗೊಳಿಸುತ್ತವೆ (ಆಕಾಶ. ೪೮). ೨. ಪ್ರಕಟವಾಗುವಿಕೆ; ಬಹಿರಂಗ ಗೊಳ್ಳುವಿಕೆ: 'ಸ್ಫೋಟಗೊಳ್ಳು' ಪರಾ. ೩. ಕೊಲೆ; ವಧೆ; ನಾಶ. ೪. ಬಾವು; ಕುರು; ಬೊಕ್ಕೆ. ೫. ಒಂದು ಶಬ್ದವನ್ನು ಕೇಳಿದೊಡನೆ ಮನಸ್ಸಿಗೆ ತಟ್ಟನೆ ಹೊಳೆಯುವ ಭಾವ. ೬. [ಕಾವ್ಯಮೀ] ವರ್ಣಾದಿಗಳಲ್ಲಿರುವ ಅರ್ಥಾಭಿವ್ಯಂಜಕವಾದ ವ್ಯಾಪಾರ ,— ಧ್ವನಿವಿಶೇಷ: ಅರ್ಥವು ನಮಗೆ ಗೊತ್ತಾಗುವುದು . . . ಸ್ಫೋಟತತ್ತ್ವದಿಂದ. ಅರ್ಥವನ್ನು ಸ್ಫುಟಪಡಿಸತಕ್ಕದ್ದಾದ ಕಾರಣದಿಂದಲೇ ಇದಕ್ಕೆ ಸ್ಫೋಟವೆಂದು ಹೆಸರು. ಪದವಾಕ್ಯಾದಿಗಳಲ್ಲಿರುವ ವರ್ಣಗಳು ಈ ಸ್ಫೋಟವನ್ನು ಅಭಿವ್ಯಂಜಿಸುತ್ತವೆ (ಭಾರಮೀ. ೫೭). [ಸಂ.]

ಸ್ಫೋಟಕ (ನಾ). ೧. ಬೊಕ್ಕೆ; ಗುಳ್ಳೆ; ಹುಗುಳು : "ಗಂಡಂ ಸ್ಫೋಟಕಸಮಾಹ್ವಯಂ ತಾಂ ಪಿಟಕಂ " (ಮ್ಯಾಕೋ. ೭೩-೩೭); ತಂಡುಳಜಲದಿಂದರಿಸಿನಮಂ ಪುಣಿಸೆಯ ಬೇರ ರಸಮುಮಂ ಕುಡಿಯೆ ಕಿಡಿಸುಗುಂ ಸ್ಫೋಟಕಮಂ (ಲೋಕೋಪ. ೯-೨೫). ೨. ಸಿಡುಬಿನ ಬೊಕ್ಕೆ. ೩. ಸಿಡಿಯುವಂತಹುದು; ಸ್ಫೋಟವಾಗುವಂತಹುದು. [ಸಂ.]

ಸ್ಫೋಟಗೊಳ್ಳು (ಕ್ರ). ೧. ಒಮ್ಮೆಲೆ ಬಹಿರಂಗವಾಗು; ರಹಸ್ಯವು ಬಯಲಾಗು: ಪ್ರಥಮ ಮೂರುನಾಲ್ಕುವರ್ಷ ಈ ವ್ಯವಹಾರ ಗೌಪ್ಯವಾಗಿತ್ತು. ಆದರೆ ಕೊನೆಗೊಮ್ಮೆ ಸ್ಫೋಟಗೊಂಡಿತು (ಗಂಮಾಯಿ. ೫೫). ೨. ಸಿಡಿಮದ್ದು ಮುಂತಾದ ಆಸ್ಫೋಟಕಗಳು ಸಿಡಿ, — ಆಸ್ಫೋಟಗೊಳ್ಳು: ಜನನಿಬಿಡಪ್ರದೇಶದಲ್ಲಿ ದುಷ್ಕರ್ಮಿಗಳು ಅಡಗಿಸಿಟ್ಟಿದ್ದ ಸಿಡಿಮದ್ದು ಸ್ಫೋಟಗೊಂಡು ಅನೇಕರಿಗೆ ಹಾನಿಯಾಯಿತು (ಡಂಢಿ). [ಸ್ಫೋಟ + ಕೊಳ್ಳು (< ಕೊಳ್)]

ಸ್ಫೋಟನ (ನಾ). ೧. = ಸ್ಫೋಟ ೧ : ಅಲ್ಲಿ ಸಿಡಿಮದ್ದಿನ ಸ್ಫೋಟನದಿಂದ ಅನೇಕರಿಗೆ ಗಾಯಗಳಾದುವು (ಡಂಢಿ). ೨. ಅರಳುವುದು; ವಿಕಸನ. ೩. ಪ್ರಕಟಪಡಿಸುವುದು; ಬಹಿರಂಗಗೊಳಿಸುವುದು. ೪. ವಿಶದಗೊಳಿಸುವುದು; ಸ್ಪಷ್ಟಪಡಿಸುವುದು. ೫. ಕಾಳುಗಳನ್ನು ತೂರಿ ಹಸನುಗೊಳಿಸುವುದು; ಕೇರುವುದು. ೬. ಬೆರಳನ್ನು ಎಳೆದು ಇಲ್ಲವೆ ಒತ್ತಿ ಲಟಿಕ್ ಎನಿಸುವುದು; ನೆಟಿಕೆಮುರಿಯುವುದು. ೭. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು: ಧೂನನ, ಶ್ಲೇಷ . . . ಸ್ಫೋಟನ, ಮೋಟನ . . . ತರ್ಜನ - ಈ ಇಪ್ಪತ್ತು ಕರಕರ್ಮಭೇದಂಗಳ್ (ಕಾಸ್ಮರಂ. ೪-೧೩ ವ). [ಸಂ.]

ಸ್ಫೋಟಿಸು (ಕ್ರಿ). ೧. ಸ್ಫೋಟಗೊಳಿಸು; ಸಿಡಿಮದ್ದಿನಂತೆ ಸಿಡಿಸು: ದುಷ್ಕರ್ಮಿಗಳು ಸ್ಫೋಟಿಸಿದ ಸಿಡಿಮದ್ದಿನಿಂದ ದೊಡ್ಡ ಅನಾಹುತವೇ ಆಯಿತು (ಡಂಢಿ). ೨. ಬೆರಳುಗಳನ್ನು ಒತ್ತಿ ಇಲ್ಲವೆ ಎಳೆದು ನೆಟಿಕೆತೆಗೆ: (ಕ). [ಸ್ಫೋಟನ + - ಇಸು]

ಸ್ಮಯ (ನಾ). ೧. ನಗೆ; ಹಾಸ; ಸ್ಮಿತ: "ಸ್ಮಿತಂ, ಸ್ಮಿತಿ, ಸ್ಮಯಃ . . . ಸ್ಮೇರಂ- ಈ ೨ ನಸುನಗೆ" (ಕಾಶಕ್ಯ. ೧೨೫). ೨. ಆಶ್ಚರ್ಯ; ಬೆರಗು: ಇಮಾದಿಗಳ್ಗೆ . . . ಭಯದಿಂದಂ ಮುಳಿಸಿಂದಂ ಸ್ಮಯದಿಂದಂ (ಶಮದ. ೧೦೭ ಪ್ರಯೋ). ೩. ಸೊಕ್ಕು; ಉದ್ಧಟತನ; ಗರ್ವ: ಸ್ಮಯಮರ್ದವುಗೆ ಕವಿವುಗೆ ದುರ್ನಯೋಕ್ತಿ ಕೊಲೆಗೆಯ್ದೆ ತನ್ನ ಬಗೆಯಿಂ ತತ್ಕಾಂತೆಯೊಳಳುಪಿ ನೆರೆದೊಡೀಂ ಕಯ್ಪೆಯುಣ್ಬರಂ ರಸಮೆ ಬಾರಿಕುಂ ಕೆಮ್ಮನಿರಿಂ (ಶಾಂತಿಪು. ೬-೨೭). [ಸಂ.]

ಸ್ಮಯರಹಿತ (ನಾ). ಗರ್ವವಿಲ್ಲದವನು; ನಿರಹಂಕಾರಿ: ಕ್ಷಯವ್ಯಜನಂ ಜಿನಸಮಯಂ ಸ್ಮಯರಹಿತಂ ಹಿತವಚಃಪ್ರಿಯಂ ಪ್ರಿಯಧರ್ಮಂ . . . ಸರಸ್ವತೀಮುಖ ಮುಕುರಂ (ಸುಬಮಾ. ೧-೫೧). [ಸಂ.]

ಸ್ಮರ (ನಾ). ೧. ನೆನಪು; ಜ್ಞಾಪಕ; ಸ್ಮರಣೆ. ೨. ಪ್ರೇಮದೇವತೆಯಾದ ಕಾಮ; ಮನ್ಮಥ: ಸ್ಮರನಸ್ತ್ರಸಮಿತಿಯದು ನಿರ್ಭರಮಂಗಮನುರ್ಬ ಪೋಗೆಯುಂ (ಕವಿರಾ. ೩-೧೮೫); ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಪೋ ಮೆಚ್ಚೆ ನಾನ್ (ಪಂಪಭಾ. ೪-೩೮): ಬಂದನಲ್ಲಿಗೆ ಕುಮಾರಂ . . . ಯೌವನದರ್ಪಂ ಸ್ಮರನಂ ಮಗುಟ್ಟಿ (ಪುಷ್ಪಸ್ತ. ೪-೮೦).

ಸ್ಮರನಾಹವ = ರತಿಕ್ರೀಡೆ: ಸ್ಮರನಾಹವಕ್ಕೆ ಬಾರೆಂದು ರಂಬಿಸಿ ಕರೆದನೋರ್ವ ವಿಟ ತನ್ನಿನಿಯಳ (ಪ್ರೌಢರಾ. ೬-೨೨). [ಸಂ.]

ಸ್ಮರಕಳೆ (ನಾ). ಕಾಮಕಲೆ; ಕಾಮಶಾಸ್ತ್ರ: ಸ್ಮರಕಳಾರಾರಾಜಿತಂ ಪೂಜಿತಂ (ಮದಶಿ. ೧೦-೩೯). [ಸಂ. ಸ್ಮರಕಲಾ]

ಸ್ಮರಕೇತನ (ನಾ). ಪುರುಷನ ಜನನಾಂಗ; ಶಿಶ್ನ: ಸ್ಮರಕೇತನಮೆಳ್ಪರಮಿಲ್ಲದಿರಲ್ ಪುರುಷಂಗದನಲಿತತಿನಿಪುಣೆ ತರುಣಿ ತರದ ಸೀತ್ಕರಿಸುತೆ ಕಲೆದಂದಿರದೆ ನೆಲೆವಳು (ಜನವ. ೧೦-೩೩). [ಸಂ.]

ಸ್ಮರಗಲಹ (ನಾ). ಪ್ರಣಯಕಲಹ; ರತಿಕ್ರೀಡೆ: ಮದಹಂಸಗಮನೆಯರುಗಳು ಜೀರ್ಕೊಳವೆಯೊಳುದಕವ ತೀವಿ ತಂದಾಗ ಮುದದೊಳಿಸೆಯ ಸ್ಮರಗಲಹದ ಶರವೆಂದು ಬೆದಱಿದರು (ಹಂಸವಿ. ೨೫-೧೨೯). [< ಸಂ. ಸ್ಮರಕಲಹ]

ಸ್ಮರಗೃಹ (ನಾ). ಸ್ತ್ರೀಯ ಜನನೇಂದ್ರಿಯ; ಯೋನಿ: ಪುರುಷನತಿಕಾಮದಿಂ ತರುಣಿಯೊರ್ವಳ ಲಜ್ಜೆಯೆರೆದೆಡೆಯೋೀ ಧ್ವಜಮನಿಟ್ಟುಮವಳ ಸ್ಮರಗೃಹದೊಳಗೆ ಲಲ್ಲೆವೆರಸಿ ನಾಲಗೆಯಿಟ್ಟು ನೆರೆಯಲದು ಸ್ತ್ರೀಯುಗಳಕರಣವು (ಜನವ. ೯-೫೫). [ಸಂ.]

ಸ್ಮರಘ್ನಸ್ಮರ (ನಾ). ಕಾಮನನ್ನು ನಾಶಮಾಡಿದವನು; ಶಿವ: ನೆಗಟ್ಟೇಕಾದಶರುದ್ರನಾದಿಪುರುಷಂ ದೇವಂ ಲಲಾಟೇಕ್ಷಣಂ . . . ದ್ರೋಣಂಗೆ ಕಾರ್ಯಾರ್ಥದಿಂ ಮಗನಾದಂ ಸ್ಮರಘ್ನಸ್ಮರಂ ದಯೆಯಿನಶ್ವತ್ಥಾಮನೆಂದು (ಗದಾಯು. ೨-೨೫). [ಸಂ.]

ಸ್ಮರಚಾಪ (ನಾ). ೧. ಮನ್ಮಥನ ಬಿಲ್ಲು. ೨. ಕಬ್ಬು: ಕರಿದಾದೊಡೆ ಕತ್ತುರಿಯಂ ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ ಸ್ಮರಚಾಪಮನಿಬ್ಬೆಯ್ಯರೆ (ಯಶೋಚ. ೨-೪೨); ಸ್ಮರಚಾಪವಿಭ್ರಮಭ್ರೂಲತಾರ್ಧಶಶಿನಿಟಲೆ [ಪಾಠಾಂ. ಸ್ಮರಚಾಪಮಂ ಮಿಗುವ ಪುರ್ಬಿನರೆಸಸಿನೊಸಲೆ] (ಪ್ರಾಥರಾ. ೬-೨೨). [ಸಂ.]

ಸ್ಮರಣ (ನಾ). ೧. ಮರೆತುಹೋದುದನ್ನು ಮರಳಿ ಜ್ಞಾಪಿಸಿಕೊಳ್ಳುವಿಕೆ, — ನೆನೆಯುವಿಕೆ: ವೃತ್ತಿಯು ಸಂಶಯ, ನಿಶ್ಚಯ, ಗರ್ವ ಮತ್ತು ಸ್ಮರಣ ಎಂದು ನಾಲ್ಕು ವಿಧ (ಭಾತತ್ತ್ವ ೫೬೮). ೨. ನೆನಪು; ಜ್ಞಾಪಕ. ೩. ದೇವರ ಧ್ಯಾನ; ಚಿಂತನೆ: ಬಾಷ್ಪದ ಭಕ್ತಿ ನವವಿಧ . . . ಶ್ರವಣ ಕೀರ್ತನೆ ಸ್ಮರಣ ಸೇವೆಯು (ಗಗತಾ. ೩-೫೫). ೪. ಸಂಪ್ರದಾಯ; ನಡವಳಿಕೆ. ೫. ಸಾಂಪ್ರದಾಯಿಕ ನೀತಿಬೋಧೆ: (೩). ೬. ನೆನಪನ್ನು ಉಳಿಸಿಕೊಡುವ ವಸ್ತು ಅಥವಾ ಕ್ರಿಯೆ: (೩). ೭. ಒಂದು ಬಗೆಯ ಸಸ್ಯ; ಬ್ರಾಹ್ಮಿ: ''ಸ್ಮರಣ ಕುಷ್ಮಿಯನಲ್ಕೆ ಬ್ರಾಹ್ಮಿಯಕ್ಕುಂ'' (ಮಂಗರಾ. ೩೯-೨೮). ೮. [ಕಾವ್ಯಮಿ] ಅರ್ಥಾಲಂಕಾರಗಳಲ್ಲಿ ಒಂದು; ''ಯಾವುದಾದರೂ ಒಂದಾನೊಂದು ಪದಾರ್ಥದ ಅನುಭವವುಂಟಾದಾಗ ಅದರ ಹೋಲಿಕೆಯಿಂದ ಬೇರೆ ಪದಾರ್ಥದ ಜ್ಞಾಪಕವುಂಟಾದರೆ ಅದು ಸ್ಮರಣಾಲಂಕಾರವೆನ್ನಿಸಿಕೊಳ್ಳುವುದು'' (ಕೃಪಿ. ೨೬೫): ಮುಂ ಪೋದುದನ ಪೂರ್ವಮಂ ಕಂಡು ನೆನೆವುದದು ತಾಂ ಸ್ಮರಣಂ (ಕಾವ್ಯಾ. ೭೧೩). [ಸಂ.]

ಸ್ಮರಣೆ (ನಾ). ಅಕ್ಷರಮಾಲೆ ; ಜಪಸರ : ಗಿರಿಚೆಯಿಂ ಪರಿ ಕೇಳಿದಾಗಲೆ ಸ್ಮರಣೆಯನು ಕರದಿಂದಲೊಂದೆಡೆ ಸರಿಸಿ . . . ಮೆಲ್ಲನೆ ಸರಸವಚನಗಳಿಂದ ಬಟುವಿಗೆ ಕೊಟ್ಟಳುತ್ತರವ (ಪಾರ್ವಪ. ೨-೬೪). [ಸಂ. ಸ್ಮರಣೇ]

ಸ್ಮರಣೆ (ನಾ). ೧. ನೆನಪು; ಜ್ಞಾಪಕ: ನನಗೆ ಚಿಕ್ಕಂದಿನಲ್ಲಿ ಈ ಸ್ಥಳವನ್ನು ನೋಡಿದ್ದ ಸ್ಮರಣೆಯೇ ಇಲ್ಲ (ರೂಪಾ). ೨. ಧ್ಯಾನ; ಚಿಂತನೆ: ಕೃಷ್ಣನಾಮಸ್ಮರಣೆ ಧನಕರಿಗುಂಟೆ (ಕುವ್ಯಾಸ. ೧೪-೧೩೦) ; ನಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ಬಾಯಿಗೆ ಬರಲಿ (ಪುರಂದ. ೨-೧೪೮ ಪಲ್ಲವಿ). [ಸಂ. ಸ್ಮರಣ]

ಸ್ಮರಣೆಗೈ (ಕ್ರಿ). ಧ್ಯಾನಮಾಡು; ಚಿಂತನೆ ಮಾಡು: ಗುರುವರತರರಹಸ್ಯವನು ಸ್ಮರಣೆಗೈವುದು (ಗಗತಾ. ೩-೫೭). [ಸ್ಮರಣೆ + ಗೈ (< ಕೈಯ್)]

ಸ್ಮರತತ್ತ್ವ (ನಾ). ೧. ಕಾಮತತ್ತ್ವ: ಜಿನತತ್ತ್ವಂ ಸ್ಮರತತ್ತ್ವಮೆಂಬಿವೆರಡುಂ ದೂರಸ್ಥಂ (ಶಾಂತಿಪು. ೧-೧೬). ೨. ಕಾಮಶಾಸ್ತ್ರ: ರೇಚಮಹೀಶ ನೀ ಜಗಕೆಲ್ಲಂ ಸ್ಮರತತ್ತ್ವಮಂ ಬಿಸಸ (ಮದಪ. ೧-೩೫). [ಸಂ.]

ಸ್ಮರಬಂಧು (ನಾ). ಕಾಮನ ಸಹೋದರ; ಬ್ರಹ್ಮ.

ಸ್ಮರಬಂಧುರಥಗಮನೆ = ಬ್ರಹ್ಮನ ವಾಹನವಾದ ಹಂಸಪಕ್ಷಿಯಂತೆ (ಮೋಹಕವಾಗಿ) ಚಲಿಸುವವಳು; ಹಂಸಗಮನೆ: ಸ್ಮರಬಂಧುರಥಗಮನೆ ಸ್ಮರಮೌರ್ವಿಜಿತಚಿಕುರೆ (ಪ್ರಾಥರಾ. ೬-೨೨). [ಸಂ.]

ಸ್ಮರಬಾಣ (ನಾ). ಕಾಮನ ಬಾಣ: ಸ್ಮರಬಾಣಾರ್ತ ವಿಟೀವಿಟಾಳಿಗೆ ವಿಯೋಗಂ ಪೂರ್ವಸಂಭೋಗಸಂಸ್ಮರಣಂ . . . ಕುಡುವ ಕೋಡೆಂದೀ ಸ್ವಸಂವಿತ್ತರಂಪರೆ ಪೋಕುಂ ಪ್ರಳಯಕ್ಕೆ ತತ್‌ಕ್ಷಣಿಕ ಮಿಥ್ಯಾವಾದಿ ವಾದೀಂದ್ರರಿಂ (ಶಾಂತಿಪು. ೮-೧೪೫); ಸ್ಮರಬಾಣ ಲೋಲಾಯತಾಕ್ಷಿ . . . ಸ್ಮರನಾಹವಕ್ಕೆ ಬಾರೆಂದು ರಂಬಿಸಿ ಕರೆದನೋರ್ವ ವಿಟ ತನ್ನಿನಿಯಳ (ಪ್ರಾಥರಾ. ೬-೨೨). [ಸಂ.]

ಸ್ಮರಮಂತ್ರ (ನಾ). ರತಿಶಾಸ್ತ್ರರಹಸ್ಯ; ಕಾಮರಹಸ್ಯ: ಸ್ಮರಮಂತ್ರಂ ಬಹುಭಾಷಾ ಪರಿಚಿತಿಯಂತ್ರಪ್ರಯೋಗಮಖಿಲವ್ಯೂಹೋತ್ಕರಮೆಂಬಿನಿತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಪ್ರಪು. ೪-೬೦). [ಸಂ.]

ಸ್ಮರಮಂದಿರ (ನಾ). = ಸ್ಮರಗೃಹ: ''ಭಗಃ, ಯೋನಿಃ, ಉಪಸ್ಥಃ, ವರಾಂಗಃ, ಸ್ಮರಮಂದಿರಂ - ಈ ೫ ಉಪಸ್ಥಂ'' (ಪಲಾಯು. ೮೫-೩೩೦). [ಸಂ.]

ಸ್ಮರಯಂತ್ರ (ನಾ). = ಸ್ಮರಗೃಹ: ''ಸ್ಮರಯಂತ್ರವೆಂದು ಯೋನಿಯ ಹೆಸರು'' (ಕಾಮಶಾ. ೨೩೩). [ಸಂ.]

ಸ್ಮರರಥ (ನಾ). ಕಾಮನ ವಾಹನ; ಗಿಳಿ.

ಸ್ಮರರಥವಾಣಿ = ಗಿಳಿಯಂತೆ ಮಧುರವಾಗಿ ಮಾತಾಡುವವಳು; ಕೀರವಾಣಿ: ಸ್ಮರರಥವಾಣಿ ಸ್ಮರನಾಹವಕ್ಕೆ ಬಾರೆಂದು ರಂಬಿಸಿ ಕರೆದನೋರ್ವ ವಿಟ ತನ್ನಿನಿಯಳ (ಪ್ರಾಥರಾ. ೬-೨೨). [ಸಂ.]

ಸ್ಮರರಾಗ (ನಾ). ಕಾಮಾಸಕ್ತಿ; ಕಾಮಪರವಶತೆ: ಸ್ಮರರಾಗಾಂಧತ್ವದಿಂದಂ ಪಗಲೊಳಮಸತೀಕೇಳಿ ಪೊೞ್ಮಲ್ . . . ಬಂದುದು ಶಿಶಿರನ್ಯಪೋದ್ಮತ್‌ಕೃತಾಂತಂ ವಸಂತಂ (ಕಾದಂಪು. ೭೨೦); ಸ್ಮರರಾಗೋದ್ರೇಕಂ ವೀತರಾಗನಿರ್ದೆಡೆಯೊಳೇಕೆ ಪುಟ್ಟುಗುಂ (ಪುಪ್ರಪು. ೯-೧೧೮). [ಸಂ.]

ಸ್ಮರರಿಪು (ನಾ). ೧. ಕಾಮನ ವೈರಿ; ಶಿವ: ಸ್ಮರರಿಪುಲಲಾಟನೇತ್ರ ಸ್ಫುರದುರುಹುತವಹನಿನೆಯ್ದೆ ಬೇವುತ್ರಿರ್ದಾ ಸ್ಮರನ ಪೊಗೆಯಿಂದೆ ಪುದಿದಿರ್ದ ರತಿಯವೋಲ್ ಕಾಂತೆ ಕರಮೆ ಕಣ್ಮೆಸೆದಿರ್ದಳ್ (ಕಾದಂಪು. ೪೩). ೨. ಜಿನ; ಅರ್ಹಂತ: ಸ್ಮರರಿಪು ಪುಟ್ಟೆ ಧಾರಿಣಿಗೆ ಕಾಶ್ಯಪಗೋತ್ರಮಿದೇಂ ಪವಿತ್ರವೋ (ಪುಪ್ರಪು. ೧೨-೧೫೫). [ಸಂ.]

ಸ್ಮರಲೋಪ (ನಾ). ಕಾಮನನ್ನು ನಾಶಗೊಳಿಸಿದವನು,— ಜಯಿಸಿದವನು: ಗುರುರೂಪ ಸ್ಮರಲೋಪ ಸದ್ಭಕ್ತಿಹೃದ್ದೀಪ ಸಿದ್ಧನಂಜೇಶನೊರೆದಂ (ಗುರುಚಾ. ೬-೪೭). [ಸಂ.]

ಸ್ಮರವೈರಿ (ನಾ). ಮನ್ಮಥನ ಶತ್ರು; ಶಿವ: ಸ್ಮರವೈರಿ ಧರ್ಮವಕ್ಕೋಜೆ . . . ಸ್ಮರರಥವಾಣಿ ಸ್ಮರನಾಹವಕ್ಕೆ ಬಾರೆಂದು ರಂಬಿಸಿ ಕರೆದನೋರ್ವ ವಿಟಂ ತನ್ನಿನಿಯಳ (ಪ್ರಾಥರಾ. ೬-೨೨). [ಸಂ.]

ಸ್ಮರಸಂಗ್ರಾಮ (ನಾ). ರತಿಕೇಳಿ; ಸುರತ: ಸ್ಮರಸಂಗ್ರಾಮದ ಭೋಗರಾಜರದಟಂ . . . ನಖಾನಪಿ ಪ್ರಬಳದಂತಾದಂತಿಯಿಂ ಕಾದಿದರ್ (ಹಮ್ಮೀರ. ೨-೮೭). [ಸಂ.]

ಸ್ಮರಸಖ (ನಾ). ೧. ಕಾಮನ ಗೆಳೆಯ. ೨. ಚಂದ್ರ. ೩. ವಸಂತ. [ಸಂ.]

ಸ್ಮರಹರ (ನಾ). ೧. ಕಾಮನನ್ನು ಕೊಂದವನು; ಶಿವ: ಪೇಳುವನುಮಾವರನ ಸ್ಮರಹರನ . . . ಭಿಕ್ಷಾಚರಿತೆಯಂ (ಭಿಕ್ಷಾಚ. ೧-೩); ಸ್ಮರಹರನ ಕರುಣವಿಲ್ಲದಲೆ ಜಗದೊಳಗೆ ಇರುವುದೆ ಕಷ್ಟ (ಸರ್ವಜ್ಞ. ೨೫೧). ೨. [ಜೈನ] ಕಾಮನನ್ನು ಗೆದ್ದವನು; ಜಿನ; ಅರ್ಹಂತ: ಸ್ಮರಹರನ ತಾಯ್ಗೆ ಸುರವಧು ಸಿರಿಗನ್ನಡಿವಿಡಿದ ತೆಱನದಂತನ (ಶಾಂತಿಪು. ೯-೧೯೦); ಸ್ಮರಹರನುದಯಮನಱಿಪುವ ಸುರವಿಷ್ಕರದೊಡನೆ ನಡುಗಿ ತಲರ್ವಿಲ್ಲುಂ (ಪುಪ್ರಪು. ೧೦-೧೪). [ಸಂ.]

ಸ್ಮರಾಂತಕ (ನಾ). = ಸ್ಮರಹರ ೧ : ಸ್ಮರಾಂತಕನಂತೆ ಗಿರಿಜೆಗರೆಮ್ಮೆಗೊಡುವನೇಯಿಚರ್ಮಮಂ ಧರಿಸಿದವನೇಂ ಶುದ್ಧನೇಯುಗ್ರಸರ್ಪವಂ ತೊಟ್ಟಾತನೇಂ ಶಾಂತನೇ (ವೀಶ್ವಪು. ೨-೨-೨೧). [ಸಂ.]

ಸ್ಮರಿಯಿಸು 'ಸ್ಮರಿಸು' ನೋ.

ಸ್ಮರಿಸು, ಸ್ಮರಿಯಿಸು (ಕ್ರಿ). ೧. ನೆನಪು ಮಾಡಿಕೊಳ್ಳು; ಜ್ಞಾಪಿಸಿಕೊಳ್ಳು; ಮನಸ್ಸಿಗೆ ಮರಳಿ ತಂದುಕೊಳ್ಳು : ಮಾನವನಿಗೆ ಸದಾ ಸಲ್ಲಿಸುತ್ತಿರುವ ಸೇವೆಯನ್ನು ಮನಸಾ ಸ್ಮರಿಸಿ ತನ್ನ ಕೃತಜ್ಞತೆ ಅರ್ಪಿಸುತ್ತಾನೆ (ನಸದಿ. ೧೭); ನಿನ್ನ ಉಪಕಾರ ಎಷ್ಟು ಸ್ಮರಿಸಿಕೊಂಡರೂ ಸಾಲದು (ಪದ್ಮಸ. ೮೧). ೨. ಚಿಂತನೆ ಮಾಡು; ಧ್ಯಾನಿಸು; ನೆನೆ:

ತೀರ್ಥಂಕರರನಾ ಪೊಱ್ತುಂ ಸ್ಮರಿಸಲೆಂದು . . . ಇಪ್ಪತ್ತುನಾಲ್ಕು ಘಂಟಾಜಾಲಂ ಗಳನಿಱಿಸಿದೊಡೆ (ಚಾವುಂಪು. ೫೪); ಸ್ಮರಿಸುತ ಕಣ್ಮುಚ್ಚಿ ನೋಡಿದರವರಂತೆ ಪರಮಾತ್ಮ ತೋಱುವನೊಳಗೆ (ಭರಟ. ೨-೭೨). ಸ್ಮರಿಯಿಸು: ೧. ಸ್ಮರಿಯಿಪನಿರ್ಪತಿರ್ಚ್ಚಾಸಿರ ಬರಿಸಕ್ಕೊರ್ಮೆ ಮನದೊಳುಣಿಸಂ (ಆದಿಪು. ೬-೧೬); ಸ್ಮರಿಯಿಸಿದಂ ಮುಚುಕುಂದಂ ಚಿರೋಕ್ತಮ[illegible]ನುದೊಳ್ (ಜಗಸಿ. ೯-೪೬). ೨. ಮರಣದ ಜನ್ಮದ ನಿಗಳಂ ನಿರಾಕುಳಂ ಪತ್ತುವಿಡುವಿನಂ ಜಿನ ನಿನ್ನ ಸ್ಮರಿಯಿಪುದನಣೋರಣ್ಯಂತರವ್ಯತಿಕ್ರಮಣಮಾತ್ರಮಂ ಮೆಱೆದಪೆನೇ (ಆದಿಪು. ೧೦-೫೯); ಮೆಱೆದನಿಲ್ಲ ಮುಕುಂದನನೇಕಚಿತ್ತದಿಂ ಸ್ಮರಿಯಿಸುತಿರ್ದಂ (ಗದಾಯು. ೫-೩೮). [< ಸ್ಮರಣ + - ಇಸ್ಸು]

ಸ್ಮರೋದಕ (ನಾ). ಮದನದ್ರವ; ರತಾಂಬು: ಮುಡಿಯರನಪ್ಪಿಯೆ ಪೆರ್ಮೊಲೆ ವಿಡಿದು . . . ಚುಂಬಿಸುತೊಡಗೂಡಲ್ ಚೌತಿಯೊಳ್ ಸ್ಮರೋದಕಮೊಸರ್ಗುಂ (ಮನ್ಮಥವಿ. ೩-೧೫). [ಸಂ.]

ಸ್ಮರೋನ್ಮಾದ (ನಾ). ಕಾಮೋದ್ರೇಕ; ಕಾಮಾವೇಶ: ಪೋದುದು ಜೌವನಂ ಕ್ರಮದಿನಾದುದು ಮುಪ್ಪಿನಿಸಾದೊಡಂ ಸ್ಮರೋನ್ಮಾದದೊಳೀ ವಿಮೋಹದೊಳದೇಕೆ ಗಡಂ ಬಗೆಯಂ ತಗುಳ್ಚಿ ಬೇಳಾದಪಂ (ಆದಿಪು. ೨-೩೫). [ಸಂ.]

ಸ್ಮಶಾನ 'ಮಸಣ' ನೋ.

ಸ್ಮಾರಕ (ಗು). ೧. ನೆನಪು ಮಾಡಿಕೊಡುವ; ಜ್ಞಾಪಕಾರ್ಥವಾದ: 'ಸ್ಮಾರಕ ಸ್ತಂಭ' ಪರಾ. (ನಾ). ೨. ಒಂದು ಮಹತ್ವದ ಘಟನೆಯ ಅಥವಾ ವ್ಯಕ್ತಿಯ ಜ್ಞಾಪಕಾರ್ಥವಾಗಿ ಸ್ಥಾಪಿಸಿದ ಕಂಬ, ಕಟ್ಟಡ ಮೊದಲಾದುದು: ಸನ್ಯಸನವಿಧಿಯಿಂದ ಮಡಿದವರ ಸ್ಮಾರಕವಾಗಿ ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು (ಕಶಾಅ. ೧೬); ಶತ್ರುಗಳು ದೇಶವನ್ನು ಆಕ್ರಮಿಸಿದಾಗ ಈ ಸ್ಮಾರಕಗಳನ್ನು ಸುಟ್ಟುಹಾಕಿ ತಾವೇ ಬೇರೆ ಸ್ಮಾರಕಗಳನ್ನು ಕಟ್ಟಿದರು (ಶಿಲ್ಪನಾ. ೬೭); ಕಟ್ಟಿದರಜಸ್ರಂ ಸಹಸ್ರಶಿಲ್ಪಿಗಳಲ್ಲಿ ಸ್ಮಾರಕನಿಕೇತನಸ್ತೂಪಮಂ (ಚಿತ್ರಾಂಗ. ೯೦-೨೪೯೩). [ಸಂ.]

ಸ್ಮಾರಕಸ್ತಂಭ (ನಾ). = ಸ್ಮಾರಕ ೨: ಅನಂತರ ಅವನು . . . ಸ್ಮಾರಕಸ್ತಂಭದ ಕತೆ ಪ್ರಾರಂಭಿಸಿದನು (ಪುನರು. ೩೬೫). [ಸಂ.]

ಸ್ಮಾರ್ತ (ಗು). ೧. ನೆನಪಿಗೆ ಸಂಬಂಧಪಟ್ಟ; ಸ್ಮರಣವಿಷಯವಾದ. ೨. ನೆನಪಾದ; ಸ್ಮರಣೆಗೆ ಬಂದ. ೩. ಸ್ಮೃತಿಗ್ರಂಥಗಳಲ್ಲಿ ವಿಧಿಸಿದ; ಸ್ಮೃತಿ ನಿಯಮಗಳಿಗೆ ಅನುಸಾರವಾದ. ೪. ಕಾನೂನುಬದ್ಧವಾದ; ವಿಧ್ಯುಕ್ತವಾದ. (ನಾ). ೫. ಸ್ಮೃತಿಗ್ರಂಥಗಳಲ್ಲಿ ವಿಧಿಸಿದ ಆಚರಣೆ: ದಂಡನೀತಿಸ್ಮಾರ್ತ ಶೌಚೋದ್ದಂಡವೇದಾಧ್ಯಯನನಿಪುಣನ . . . ಪೌರೋಹಿತನ ಮಾಡುವುದು (ಕುವ್ಯಾಉ. ೩-೧೬). ೬. ಸ್ಮೃತಿಗ್ರಂಥ. ೭. ಸ್ಮೃತಿವಿಧಿಗಳನ್ನು ಪಾಲಿಸುವವನು: ಅನುನಯದಿ ಸ್ಮಾರ್ತರಿಗೆ ತನ್ಮಾತೃವಿನ ಪದಪ್ರಾಪ್ತಿಯದಾಗುವುದು (ಗಗಶಾ. ೮-೬೨). ೮. ಶಂಕರಾಚಾರ್ಯರ ಮತಾನುಸಾರಿಯಾದ ಅದ್ವೈತಪಂಥದ ಬ್ರಾಹ್ಮಣ: ಹುಟ್ಟಿನಲ್ಲಿ ಹರಿಜನನಾಗಿದ್ದ ನಂದನನ್ನು ಸ್ಮಾರ್ತರು ಭಕ್ತಶ್ರೇಷ್ಠನೆಂದು ಗೌರವಿಸಿದರು (ಭಾರದ. ೩೯೦); ನಾನು ಶ್ರೀವೈಷ್ಣವ, ಅವನು ಸ್ಮಾರ್ತ, ಆದರೇನು? (ರಾಮಾನ. ೬೮). [ಸಂ.]

ಸ್ಮಾರ್ತಕರ್ಮ (ನಾ). ಸ್ಮೃತಿಯಲ್ಲಿ ವಿಧಿಸಿದ ಅಗ್ನಿಹೋತ್ರವೆ ಮೊದಲಾದ ಕರ್ಮ; IP ಗೃಹ್ಯಸೂತ್ರಗಳಲ್ಲಿ ವಿವಾಹೋಪನಯನಾದಿ ಷೋಡಶ ಕರ್ಮಗಳ ವಿಧಿವಿಧಾನಗಳು ಉಕ್ತವಾಗಿರುತ್ತವೆ. ಈ ರೀತಿಯ ಕರ್ಮ ಗಳಿಗೆ ಸ್ಮಾರ್ತಕರ್ಮಗಳೆಂದು ಹೆಸರು: ಯಜ್ಞಗಳು ಶ್ರೌತಕರ್ಮಗಳು; ಅಗ್ನಿಹೋತ್ರಾದಿಗಳು ಸ್ಮಾರ್ತಕರ್ಮಗಳು (ಆರ್ಯಧ. ೮). [ಸಂ. ಸ್ಮಾರ್ತಕರ್ಮನ್]

ಸ್ಮಾರ್ತವಿಧಿ (ನಾ). ಸ್ಮೃತಿಗಳಲ್ಲಿ ಹೇಳಿದ ಆಚಾರನಿಯಮ: ಅಹುದಹುದಲೇ ಶ್ರೌತಪಥದಲಿ ಬಹಿರಿ ನೀವೇ ಸ್ಮಾರ್ತವಿಧಿಸನ್ನಿಹಿತರೆಂಬುದನಱಿಯದೇ ಮೂಜಗದ ಜನವೆಲ್ಲ (ಕುವ್ಯಾಅ. ೮-೩೦). [ಸಂ.]

ಸ್ಮಿತ (ಗು). ೧. ನಗುವ; ನಕ್ಕ. ೨. ಅರಳಿದ; ವಿಕಾಸವಾದ: ಸ್ಮಿತಧವಳಕಮಳ ವನದೊಳ್ ರತಿರಾಗದೆ ಹಂಸಿ ಹಂಸನಂ ಸೋಂಕುವವೋಲ್ ಅತಿಶಯಶಯನ ಸ್ಥಳದೊಳ್ ಪತಿಯೊಡನಾ ಕಾಂತೆ ಸುರತಸುಖದಿಂದಿರ್ದಳ್ (ಜಗವಿ. ೨-೭೫); ಸ್ಮಿತಮಧುರ ಮುಖಕಾಂತಿ ಕಲ್ಲೋಲಿತ ಕಟಾಕ್ಷಚ್ಛವಿಯಲೀಶನ ಧೃತಿಯಲೀಡಱೆದೆಡದಲೆಸೆವರು ಗೌರಿದೇವಿಯರು (ಕುವ್ಯಾಅ. ೬-೭೫). (ನಾ). ೩. ನಸುನಗು; ಮಂದಹಾಸ: ಕುಸುಮಂ ಸ್ಮಿತಮಳಿನಯನಂ ಕಿಸಲಯಮಧರಂ (ಕವಿರಾ. ೩-೧೪); ಸ್ಮಿತವಿರಲಿ ವದನದಲಿ . . . ಹಿತವಿರಲಿ ವಚನದಲಿ (ಮಂಕುಶ. ೭೨೪). ೪. ಅರಳುವಿಕೆ; ವಿಕಸನ: "ಉನ್ಮೀಳಿತಂ, ಉನ್ಮಿಷಿತಂ, ಸ್ಮಿತಂ . . . ವಿಕಾಸಃ - ಈ ೯ ಅಲರ್ವುದರ್ಕೆ ಪೆಸರ್" (ಹಲಾಯು. ೩೧-೩೩). [ಸಂ.]

ಸ್ಮೃತ (ಗು). ೧. ನೆನಪುಮಾಡಿಕೊಂಡ; ಸ್ಮರಣೆಗೆ ಬಂದ; ಜ್ಞಾಪಕವಾದ. ೨. ವಿಧಿಸಿದ; ಉಕ್ತವಾದ; ತಿಳಿಸಿದ. ೩. (ಹೀಗೆಂದು) ಹೆಸರಿಸಲಾದ; ಉಲ್ಲೇಖಿತವಾದ. ೪. ಸ್ಮೃತಿಗ್ರಂಥಗಳಲ್ಲಿ ವಿಧಿಸಿದ; ಸಾಂಪ್ರದಾಯಿಕ ಆಚಾರನಿಯಮಗಳು ತಿಳಿಸಿದ. (ನಾ). ೫. ನೆನಪು; ಸ್ಮರಣೆ. [ಸಂ.]

ಸ್ಮೃತಿ (ನಾ). ೧. ನೆನಪು; ಸ್ಮರಣೆ; ಜ್ಞಾಪಕ: ಮತಿಗರ್ಥವಾದೊಡೇಂ? ಸ್ಮೃತಿಯೊಳದು ನೆಲಸಿರಲಿ (ಮಂಕುಶ. ೭೫೫). ೨. ಚಿತ್ತವೃತ್ತಿಯ ಐದು ಪ್ರಕಾರಗಳಲ್ಲಿ ಒಂದು; ಜ್ಞಾಪಕಶಕ್ತಿ; ಸ್ಮರಣಶಕ್ತಿ: ಸ್ಮೃತಿಯೆಂಬುದು ಪೂರ್ವದಲ್ಲಿ ಅನುಭವಿಸಿದ ವಿಷಯಗಳನ್ನು ಸಂಸ್ಕಾರದಿಂದ ಜ್ಞಾಪಿಸಿಕೊಳ್ಳುವುದು (ಹಿಂದಸಾ. ೧೦೪). ೩. ಅನುಭವಸಂಸ್ಕಾರದಿಂದ ಉಂಟಾಗುವ ಜ್ಞಾನ: ಕೇವಲ ಸಂಸ್ಕಾರದಿಂದ ಹುಟ್ಟಿದ ಜ್ಞಾನಕ್ಕೆ 'ಸ್ಮೃತಿ' ಎಂದು ಹೆಸರು (ಭಾತತ್ತ್ವ. ೬೫೧). ೪. ಎಚ್ಚರ; ಅರಿವು: ಅವನಿಗೆ ಸ್ಮೃತಿ ತಪ್ಪಿಹೋಯಿತು (ರಾವಿಜ. ೧೩೦). ೫. ಮನು, ಯಾಜ್ಞವಲ್ಕ್ಯ ಮೊದಲಾದವರಿಂದ ರಚಿತವಾದ ಆಚಾರ, ವಿಧಿಗಳ ಗ್ರಂಥ; ಧರ್ಮಸಂಹಿತೆ: ವೇದಾಂಗ ಸ್ಮೃತಿ ವೇದಮಂದಿನಿತುಮಂ ಪೂಣ್ದೋದಿದೆಂ (ಸುಕುಮಾ. ೩-೪೩); ಶ್ರುತಿ ತದರ್ಥ ಸ್ಮೃತಿಗಳಲಿ ಪಂಡಿತರು ನಡೆವುದ ಮಾದು ಮೂರ್ಖರ ಗತಿಯನನುಕರಿಸಿದರೆ ಬಳಿಕ ವಿಶೇಷವೇನೆಂದ (ಕುವ್ಯಾದ್ರೋ. ೧೯-೫೭); ಸ್ಮೃತಿಗಳು ಶ್ರುತ್ಯರ್ಥವನ್ನು ಅನುಸರಿಸುತ್ತವೆ (ಭಾರದ. ೫೦). ೬. ಸ್ಮೃತಿಗ್ರಂಥಗಳ ನಿಯಮ, — ಉಲ್ಲೇಖ. ೭. [ಕಾವ್ಯಮೀ] ಮೂವತ್ತು ಮೂರು ಸಂಚಾರಿಭಾವಗಳಲ್ಲಿ ಒಂದು: ಮತಿನಿರ್ವೇದಾವಹಿತ್ಥ . . . ಸ್ಮೃತಿಗರ್ವಾಮರ್ಷ ದೈನ್ಯೋತ್ಸುಕರತಿ ಮುದಪಸ್ಮಾರ ಲಜ್ಜಾವಿಷಾದಸ್ಮೃತಿ ಚಿತ್ತಭ್ರಂಶಮೋಹಾಮಯಮೃತಿಗಳಿವಿಂತೆಯ್ದೆ ಸಂಚಾರಿಭಾವಂ (ಕಾವ್ಯಾವ. ೭೯೫). ೮. = ಸ್ಮರಣ ೮: ಸ್ಮೃತಿ ಸಾಮ್ಯಯೋಗಿತೆ . . . ಭಾವಿಕ ಉದಾತ್ತವೆಂಬ ಅಲವತ್ತೈದಲಂಕಾರಂಗಳಿಂದೊಡಗೂಡಿ (ವಿವೇಕ. ೧೭೯). [ಸಂ.]

ಸ್ಮೃತಿಕಾರ (ನಾ). ಸ್ಮೃತಿಗ್ರಂಥವನ್ನು ರಚಿಸಿದವನು; ಸ್ಮೃತಿಕರ್ತ: ಬೋಧಾಯನನು ತನ್ನನ್ನೂ ಸೇರಿಸಿ ಎಂಟುಜನ ಸ್ಮೃತಿಕಾರರೆಂದು ಹೇಳುತ್ತಾನೆ (ಭಾರದ. ೫೧). [ಸಂ.]

ಸ್ಮೃತಿಪಥ (ನಾ). ನೆನಪು; ಸ್ಮರಣೆ: ಹಿಂದಿನದು ನಮ್ಮ ಸ್ಮೃತಿಪಥದಲ್ಲಿಲ್ಲ; ಮುಂದಿನದು ನಮ್ಮ ದೃಷ್ಟಿಗೆ ಅಗೋಚರವಾಗಿದೆ (ಪಂಜಪಂ. ೨೦೮); ಬೆಳಗ್ಗೆ ರಂಗಮ್ಮ, ಗೋವಿಂದನನ್ನು ನಿಷ್ಕಾರಣವಾಗಿ ಬಯ್ದುದು ಅವಳ ಸ್ಮೃತಿಪಥಕ್ಕೆ ಬಂದಿತು (ನಿಶಉ. ೮). [ಸಂ.]

ಸ್ಮೃತಿಭ್ರಂಶ (ನಾ). ೧. ನೆನಪಿನ ಶಕ್ತಿ ಇಲ್ಲವಾಗುವುದು. ೨. ಜ್ಞಾನ ತಪ್ಪುವುದು; ಎಚ್ಚರ ತಪ್ಪುವುದು: ಮೂಗಿಗೆ ಆ ತುಪ್ಪವನ್ನು ಇಪ್ಪತ್ತುನಾಲ್ಕು ದಿನ ನಸ್ಯವಂ ಮಾಡಿದರೆ ಸಕಲ ಮದ ಸಕಲ ಅಪಸ್ಮಾರ ಸ್ಮೃತಿಭ್ರಂಶ ಜಿಹ್ವಾಸ್ತಂಭಗಳು - ಈ ಮೊದಲಾದವುಗಳೆಲ್ಲಾ ಮಾಣುವುವು (ವಿದ್ಯವಿ. ೭೨). [ಸಂ.]

ಸ್ಮೃತಿವಿಭ್ರಮ (ನಾ). = ಸ್ಮೃತಿಭ್ರಂಶ ೧: ಕ್ರೋಧದಿಂದ ಸಮ್ಮೋಹವುತ್ಪನ್ನವಾಗುತ್ತದೆ; ಸಮ್ಮೋಹದಿಂದ ಸ್ಮೃತಿವಿಭ್ರಮವಾಗುತ್ತದೆ; ಸ್ಮೃತಿವಿಭ್ರಮದಿಂದ ಬುದ್ಧಿನಾಶವಾಗುತ್ತದೆ (ಧರ್ಮಸಾ. ೧೩೨). [ಸಂ.]

ಸ್ಮೇರ (ಗು). ೧. ನಸುನಗುತ್ತಿರುವ: ಸ್ಮೇರವದನಂ ಚಳಚಕೋರನಯನಂ (ಗದಾಯು. ೮-೫೭); ವೀರತಪಸ್ವಿ ಯಶೌಘಮಹಾರಾಜಂ ನೋಂತು ಕಱೆದನಾಸುರವನಿತಾ ಸ್ಮೇರಕಟಾಕ್ಷನಿರೀಕ್ಷಣಕ್ಕೆರವಶೀತಾಂಶುದೇವನಾದಂ ದಿವದೊಳ್ (ಯಶೋಚ. ೪-೫೫). ೨. ಅರಳಿದ; ಪ್ರಫುಲ್ಲವಾದ; ಪ್ರಸನ್ನವಾದ: ಸ್ಮೇರವಕ್ತ್ರಸರೋರುಹಂ . . .

ಮುರಾರಿ ಕೈಪಱಗಾಡಿದಂ (ಜಗವಿ. ೩-೫೩). (ನಾ). ೩. ನಗು; ಮಂದಹಾಸ: ಸ್ಮೇರಮರೀಚಿ ಲೋಚನಮರೀಚಿ . . . ದಂತವಿಸ್ತಾರಮರೀಚಿಗಳ್ (ಗಿರಿ. ೩-೧೧೭); ಉನ್ನತ ಪ್ರಾಸಾದದಬಲೆಯರ ವೃತ್ತವದನದ ಸುಮಂದಸ್ಮೇರಚಂದ್ರಿಕೆಯೊಳುತ್ತುಂಗ ದೇವಾಲಯದ ಗೋಪುರದ ಮಾಣಿಕದ ಕಲಶದೆಳವಿಸಿಲೊಳು ಕತ್ತಲೆ ಪರೆವುದು (ಚೈಮಿಭಾ. ೩-೧೮). ೪. ಸ್ಪಷ್ಟವಾದುದು; ವಿಶದವಾದುದು. ೫. ತೋರಿಕೆ; ಪ್ರಕಟಣೆ. ೬. ಹೆಮ್ಮೆ; ಗರ್ವ. [ಸಂ.]

ಸ್ಮೇರಮುಖ (ನಾ). ೧. ನಗುಮುಖ. ೨. ನಗುಮುಖವುಳ್ಳವನು: ಅತ್ಯಂತ ವಿಸ್ಮಯಸ್ಮೇರಮುಖನುಮತಿಚಿರನ್ಯಸ್ತಹಸ್ತಪಲ್ಲವನುಂ (ಆದಿಪು. ೧೦-೫೨ ವ); ಹೃದ್ಯಂ ಸ್ಮೇರಮುಖಂ ಲೋಕೈಕಹಿತಕರಂ ಸುಕುಮಾರಂ ಸಮನಿಸುಗೆ (ಮಲ್ಲಿಪು. ೪-೩೯). [ಸಂ.]

ಸ್ಯಂದ (ನಾ). ೧. ಹನಿಯುವಿಕೆ; ತೊಟ್ಟಿಕ್ಕುವಿಕೆ: ವಾರಸುಂದರಿಯರ ಸೂಸುವ ಪರಮಾನಂದ ಸ್ಮಿತಸುಧಾಸ್ಯಂದ ಸಂತತಾರ್ದ್ರಂಗಳಪ್ಪಾರ್ದ್ರಾಕ್ಷತಸಿತಕುಸುಮಾಂಜಲಿಗಳ ನಿದಿರ್ಗೊಂಡು (ಆದಿಪು. ೪-೬೧ ವ). ೨. ತ್ವರಿತವಾದ ಗತಿ; ವೇಗದ ಚಲನೆ. ೩. ರಥ. ೪. ಚಂದ್ರ. ೫. ಒಂದು ಬಗೆಯ ನೇತ್ರರೋಗ. ೬. ಹನಿ; ಬಿಂದು. [ಸಂ.]

ಸ್ಯಂದನ (ಗು). ೧. ಹನಿಯುವ; ಒಸರುವ. ೨. ವೇಗವಾಗಿ ಹರಿಯುವ; ಶೀಘ್ರಗತಿಯಲ್ಲಿ ಪ್ರವಹಿಸುವ. ೩. ತ್ವರಿತಗತಿಯುಳ್ಳ; ವೇಗಶಾಲಿಯಾದ. (ನಾ). ೪. ರಥ: ಕರ್ಣನುಮೆನ್ನೆಂದೊಂದೋಜೆಯೊಳೆಸಗದೊಡಾಂ ಸ್ಯಂದನ ದಿಂದಿಳಿದು ಪೋಪೆನೆಸಗೆಂ ತೇರಂ (ಪಂಪಭಾ. ೧೨-೧೦೧). ೫. ನೀರು. ೬. ಗಾಳಿ; ವಾಯು. ೭. ಹೊಳೆ; ನದಿ. ೮. ಒಂದು ಬಗೆಯ ಮರ ; ತಾರೆಯ ಮರ: "ಅಂಬು ರಥಂ ತರಂಗಿಣಿ ಕುಚಾದಿಗಳಿಂತಿವು ಸ್ಯಂದನಾಖ್ಯ" (ನಾನಾರ. ೧೨); "ಉದಕ ರಥ ವೃಕ್ಷ ನದಿ ನಾಲ್ಕಿದು ಸ್ಯಂದನಮೆನಿಕ್ಕು" (ನಾನಾಕಂ. ೩೫). [ಸಂ.]

ಸ್ಯಂದನಾರೋಹ (ನಾ). ರಥದಲ್ಲಿ ಕುಳಿತು ಯುದ್ಧ ಮಾಡುವವನು; ರಥಿ; ರಥಿಕ: "ರಥೀ, ಸ್ಯಂದನಾರೋಹಃ - ಈ ೨ ರಥವನೇಱುವಾತಂ" (ಹಲಾಯು. ೬೫-೨೩೬). [ಸಂ.]

ಸ್ಯಂದಿ (ಗು). ೧. ಹನಿಯುವ; ತೊಟ್ಟಿಡುವ. ೨. ಒಸರುವ; ಸ್ರವಿಸುವ. ೩. ವೇಗವಾಗಿ ಚಲಿಸುವ. (ನಾ). ೪. ಸ್ರವಿಸುವಂತಹುದು; ಸುರಿಸುತ್ತಿರುವುದು: ಮಂಗಳಗೀತ ಮಂಗಳರವಂ ಕರ್ಣಾಮೃತಸ್ಯಂದಿಯುಣ್ಮುವಿನಂ . . . ಅತ್ಯುತ್ಸಾಹದಿಂ ಪೊಕ್ಕಂ (ಗದಾಯು. ೮-೬೭); ಎಯ್ತಂದಂ . . . ವಿದ್ಯಾಧರೀಲೋಚನಾ ನಂದಸ್ಯಂದಿ ತಟೀವಿಲಾಸವನಮಂ ಕೈಳಾಸಮಂ ನಾರದಂ (ಪಂರಾಮಾ. ೪-೮೭); ಕರ್ಣಾಮೃತಸ್ಯಂದಿಗಳಪ್ಪ ನುಡಿಗಳಂ ನರೇಂದ್ರಂ ನುಡಿಯಲೊಡಂ (ಚಂದ್ರಪ್ರ. ೭-೭೯ ವ). [ಸಂ. ಸ್ಯಂದಿನ್]

ಸ್ಯಮಂತಕ (ನಾ). ಪ್ರತಿದಿನ ಎಂಟು ಹೇರು ಚಿನ್ನವನ್ನು ಕೊಡುವುದೆಂದೂ, ಎಲ್ಲ ಬಗೆಯ ಅಪಾಯಗಳಿಂದ ರಕ್ಷಿಸುವುದೆಂದೂ ನಂಬಲಾದ ಒಂದು ಬಗೆಯ ಬೆಲೆಯುಳ್ಳ ರತ್ನ: ಹರುಷ ಮಿಗಲಂದಾ ಸ್ಯ[ಪಾಠಾಂ. ಶ್ಯ]ಮಂತಕ ವರಮಹಾರತ್ನವನು ಕೊಟ್ಟನು ಪರಮಧಾರ್ಮಿಕನೆನುತ ಕರುಣಾವನಧಿ ಕೈಮುಗಿದು (ಸಿಭಾಗ. ೧೦-೬೭-೨೬). [ಸಂ.]

ಸ್ಯಮಂತಪಂಚಕ (ನಾ). ಪರಶುರಾಮನಿರ್ಮಿತವೆಂದು ಪ್ರಸಿದ್ಧವಾದ ಕುರುಕ್ಷೇತ್ರದಲ್ಲಿಯ ಐದು ಮಡುಗಳು: ಮುನ್ನಂ ಪರಶುರಾಮನೀ ನೆಲದೊಳುಳ್ಳರಸುಮಕ್ಕಳೆಲ್ಲರುಮನಿರ್ಪತ್ತೊಂದು ಸೂಟ್ಟರೆಗಂ ಪಿಳ್ಳೆಪೆಸರಿಲ್ಲದಂತು ಕೊಂದವಂದಿರ ನೊರೆನೆತ್ತರೊಳ್ ತೀವಿ ತನ್ನ ತಾಯ್ಗೆ ನೀರಿಱಿಯಲುಂ ತಂದೆಗೆ ನೀರ್ಗುಡಲುಮೆಂದು ಮಾಡಿದ ಸ್ಯಮಂತಪಂಚಕಂಗಳೆಂಬ ಪೆಸರ ಪೆರ್ಮಡುಗಳೊಳಗೆ ಮೂಡಿ ಮುಟ್ಟೂಡಿ ನೋಡಿಯುಂ (ಗದಾಯು. ೬-೨೮ ವ); ಅರ್ಜುನನು ಕೃಷ್ಣನ ಸೂಚನೆಯಂತೆ ಅದನ್ನು ಬೇರೆ ಬಾಣಗಳಿಂದ ಹಾರಿಸಿ ಸ್ಯಮಂತಪಂಚಕದ ಹೊರಗೆ . . . ವೃದ್ಧಕ್ಷತ್ರನ ತೊಡೆಯ ಮೇಲೆ ಬೀಳಿಸಿದನು (ವಚಭಾ. ೨೮೭). [ಸಂ.]

ಸ್ಯಾದ್ವಾದ (ನಾ). [ಜೈನ] ಪದಾರ್ಥದ ಪೂರ್ಣಜ್ಞಾನವನ್ನು ಪಡೆಯುವುದಕ್ಕೋಸ್ಕರ ಅದರ ಒಂದೊಂದು ಗುಣವನ್ನು ಪ್ರಧಾನವಾಗಿಟ್ಟುಕೊಂಡು ಇತರ ಗುಣಗಳನ್ನು ಗೌಣವಾಗಿಸಿ ಪರೀಕ್ಷಿಸುವುದು, ಅನಂತರ ಇನ್ನೊಂದು ಗುಣವನ್ನು – ಹೀಗೆ ಭಾಗಶಃ, ಆದರೆ ಸಮಗ್ರವಾಗಿ ತಿಳಿದುಕೊಳ್ಳುವ ಕ್ರಮ: ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ (ಸೌಇಇ. XX. ೧೩-೫೫ ; 875); ಪರವಾದಿ ಕ್ಷೋಣಿಭೃತ್ಪಕ್ಷಮಂ ದೇವೇಂದ್ರಂ ಕಡಿದಂದದಿಂದೆ ಕಡಿದಂ ಸ್ಯಾದ್ವಾದವಿದ್ಯಾಸ್ತ್ರದಿಂ (ಪಂರಾಮಾ. ೧-೨೪). [ಸಂ.]

ಸ್ಯಾನಭೋಗ 'ಸೇನಬೋವ' ನೋ.

ಸ್ಯಾಲ (ನಾ). ಹೆಂಡತಿಯ ಅಣ್ಣ ಅಥವಾ ತಮ್ಮ; ಭಾವಮೈದುನ: "ಸತಿಯ ಸಹಜಾತನಕ್ಕುಂ ಪ್ರ[ತೀ]ತಿಯಿಂ ಸ್ಯಾಲನಾಮನುಂ ದೇವರನುಂ" (ವಸ್ತುಕೋ. ೫೫-೨೦). [ಸಂ.]

ಸ್ಯೂತ (ಗು). ೧. ಸೂಜಿಯಿಂದ ಹೊಲಿದ; ಹೊಲಿಗೆ ಹಾಕಿದ. ೨. ಹೆಣೆಗೆ ಹಾಕಿ ಕೂಡಿಸಿದ; ಹೆಣೆದ. ೩. ಚುಚ್ಚಿದ. (ನಾ). ೪. ಚೀಲ. [ಸಂ.]

ಸ್ಯೂತಿ (ನಾ). ೧. ಹೊಲಿಯುವಿಕೆ; ಹೊಲಿಗೆ ಹಾಕುವಿಕೆ. ೨. ಸೂಜಿಗೆಲಸ; ಕಸೂತಿ. ೩. ಚೀಲ. ೪. ವಂಶ; ಪೀಳಿಗೆ. ೫. ಸಂತತಿ; ಸಂತಾನ. [ಸಂ.]

ಸ್ರಂಸನ (ನಾ). ೧. ಬೀಳುವಿಕೆ; ಪತನ. ೨. ಕೆಡಹುವಿಕೆ; ಬೀಳಿಸುವಿಕೆ. ೩. ಗರ್ಭಸ್ರಾವ. ೪. ಭೇದಿಯ ಔಷಧ; ವಿರೇಚಕ. [ಸಂ.]

ಸ್ರಂಸಿ (ಗು). ೧. ಕೆಳಗೆ ಜಾರಿ ಬೀಳುತ್ತಿರುವ. ೨. ಕೆಳಗೆ ಜೋತಿರುವ; ನೇತಾಡುವ. ೩. ಶಿಥಿಲವಾದ; ಹರಿದುಹೋಗುವಂತಿರುವ. ೪. ತೂಗಾಡುತ್ತಿರುವ. (ನಾ). ೫. ಗೋಣಿಮರ: "ಪೀಲುಃ, ಗುಡಫಲಃ, ಸ್ರಂಸೀ - ೩ ಗೋನುಮರ" (ಸಿದ್ಧಾಂತಿ. ೧೧೮). [ಸಂ. ಸ್ರಂಸಿನ್]

ಸ್ರಕ್ಕು (ನಾ). ಹೂಮಾಲೆ; ಹೂವಿನ ಸರ: ದಿವ್ಯಾಂಬರಾಲಂಕರಣ ಸ್ರಗ್ರಾಜಿಯಿಂ ಪೂಜಿಸಿ (ಅಜಿಪು. ೫-೨೮); ಕುಸುಮ ಸ್ರಗ್ವಸನಾನ್ನಪಾನ . . . ಅನೀಕಮಂ ಕೊಟ್ಟು (ಪಂರಾಮಾ. ೧-೬೬). [< ಸಂ. ಸ್ರಜ್]

ಸ್ರಗ್ಧರೆ (ನಾ). [ಛಂದ] ಪ್ರತಿಪಾದದಲ್ಲಿ ಇಪ್ಪತ್ತೊಂದು ಅಕ್ಷರಗಳಿರುವ ಪ್ರಕೃತಿಛಂದಸ್ಸಿನ ಒಂದು ಸಮಪಾದವೃತ್ತ: ಭೂಮಿ ಜ್ಯಾಲೇಂದು ದೇವಾಧಿಪ ಪು[ಪಾಠಾಂ. ಸು]ರಗಣದಿಂ ಮುಂತೆ ತೋಯತ್ರಯಂಗಳ್ ತಾಮತ್ತಂ ಬಂದು ಚೆಲ್ವಾಗಿರೆ . . ಪೆಸರಿಂ ಸ್ರಗ್ಧರಾನಾಮವೃತ್ತಂ (ಛಂದೋಬು. ೨-೧೮೧). [ಸಂ. ಸ್ರಗ್ಧರಾ]

ಸ್ರಗ್ವಿಣಿ (ನಾ). [ಛಂದ] ಪ್ರತಿಪಾದದಲ್ಲಿ ನಾಲ್ಕು ರಗಣಗಳಿಂದ ಕೂಡಿದ ಹನ್ನೆರಡು ಅಕ್ಷರಗಳನ್ನುಳ್ಳ ಜಗತೀಛಂದಸ್ಸಿನ ಒಂದು ವೃತ್ತ: ಜಾತವೇದೋ ಗಣಂಗಳ್ ಚತುಸ್ಥಾನಸಂಜಾತಮಾಗುತ್ತಿರ್ದೆಂದಿನಂತಾದೊಡಾ ಜಾತಮಂ ಸ್ರಗ್ವಿಣೀ ವೃತ್ತಮೆಂಬರ್ (ಛಂದೋಬು. ೨-೧೩೦). [ಸಂ. ಸ್ರಗ್ವಿಣೀ]

ಸ್ರಜ (ನಾ). ಹೂಮಾಲೆ: "ಸ್ರಜಂ ಮಾಲ್ಯಂ ಪುಷ್ಪವಿಶೇಷರಚನಂ" (ವಸ್ತುಕೋ. ೭೭-೧೪) ; ಪ್ರಜೆಯೆಲ್ಲಂ ಜಲಗಂಧ ಸ್ರಜತಂಡುಲ ಧೂಪದೀಪ ಚರು ತಾಂಬೂಲ ವ್ರಜದಿಂ ಪೂಜಿಸುವುದು (ಯಶೋಚ. ೪-೭೩); ಮುನಿಪತಿ ದಿವ್ಯಸ್ರಜಮಂ ಕೊಡಲೊಡ ಮದನಾ ಗಜಮಸ್ತಕದಲ್ಲಿ ಸಾರ್ಚಿದಂ ಶಚಿಯಾಣ್ಮಂ (ಏಷ್ಣುಪು. ೧-೨-೧೧೫). [ಸಂ. ಸ್ರಜ್]

ಸ್ರಮ 'ಸವ' ನೋ.

ಸ್ರವ (ನಾ). ೧. ತೊಟ್ಟಿಕ್ಕುವಿಕೆ; ಹನಿಯುವಿಕೆ. ೨. ಪ್ರವಹಿಸುವಿಕೆ. ೩. ಮೂತ್ರ. ೪. ಹನಿ; ಬಿಂದು. ೫. ಪ್ರವಾಹ. ೬. ಚಿಲುಮೆ; ಬುಗ್ಗೆ. [ಸಂ.]

ಸ್ರವಂತಿ (ನಾ). ಹೊಳೆ; ತೊರೆ; ನದಿ: ಕಾವೇರಿ ಸ್ರವಂತೀ ಸಮುತ್ತರಣಾನಂತರಂ ಬರೆವರೆ (ಶಾಂತಿಪು. ೧೧-೩ ವ). [ಸಂ. ಸ್ರವಂತೀ]

ಸ್ರವಿಸು (ಕ್ರಿ). ಒಸರು; ಜಿನುಗು; ಸೋರು: ಆನೆಗಳಿಗೆ ಮದೋದಕವು ಸ್ರವಿಸುವ ಸ್ಥಾನಗಳಂ ಪೇಳುವೆನು (ಸೌಗಂಧಿ. ೨೭೭-೧೭); ಸ್ರವಿಸುವುದು ಜೀವರಸ ಹೃದಯಗರ್ತದ ತಳದಿ (ಮಂಜಿಕ. ೪೬೪); ಕಣ್ಮುಚ್ಚಿದೆವೆಗಳಿಂ ಸ್ರವಿಸಿದತ್ರಶ್ರು (ಶ್ರೀರಾಮಾ. ೧೬೬-೪೦೧). [(ಸಂ. ಸ್ರವಣ) + - ಇಸ್ಕು]

ಸ್ರಷ್ಟಾರ (ನಾ). ರಚಿಸುವವನು; ನಿರ್ಮಿಸುವವನು: ಮಿಥ್ಯಸೃಷ್ಟಿಯು ಕೃತಿಯೆಂದೆನಿಸುವುದು ಅಲ್ಲಿ ಕವಿಗಳು ಸ್ರಷ್ಟಾರರು (ಸಾಹಿವಿ. ೮). [< ಸಂ. ಸ್ರಷ್ಟೃ]

ಸ್ರಸ್ತ (ಗು). ೧. ಬಿದ್ದ. ೨. ಜಗುಳಿದ; ಜಾರಿದ. ೩. ಸಡಿಲಿದ; ಶಿಥಿಲವಾದ. ೪. ನೇತಾಡುವ; ಜೋಲುವ: ಸ್ರಸ್ತಕುಂತಳಕೇಶಂ ಗತಪುಷ್ಪದೀನವದನಂ (ಗದಾಯು. ೧೦-೧೩). (ನಾ). ೫. ಕಳಚಿಕೊಂಡುದು: "ಸ್ರಸ್ತಂ, ಧ್ವಸ್ತಂ . . . ಗಳಿತಂ - ೭. ಜಾರಿ ಬಿದ್ದದ್ದು, ಕಳಚಿಕೊಂಬುದು" (ಸಿದ್ಧಾಂತಿ. ೬೫೧). [ಸಂ.]

ಸ್ರಾವ (ನಾ). = ಸ್ರವ ೨: 'ಗರ್ಭಸ್ರಾವ', 'ರಕ್ತಸ್ರಾವ' ಪರಾ. [ಸಂ.]

ಸ್ರಾವೆ 'ಶ್ರಾವೆ' ನೋ.

ಸ್ರಾಹೆ 'ಶ್ರಾಹೆ' ನೋ.

ಸ್ರುಕ್ಕು (ನಾ). ಹೋಮಾಗ್ನಿಯಲ್ಲಿ ತುಪ್ಪವನ್ನು ಸುರಿಯಲು ಬಳಸುವ (ಪಲಾಶ ಅಥವಾ ಖದಿರವೃಕ್ಷಗಳ) ಮರದಿಂದ ಮಾಡಿದ ಸವುಟು: ಸ್ರುಕ್‌ಸ್ರುವಾಕ್ಷತ ಸುಗಂಧ ಯವಾಮಳತಿಲ . . . ವಿವಿಧ ಮುವಿಪರಿಕರಂಗಳುಮಂ ಬೇಱೆವೇಱೆ ತೋಱೆ (ಜಗದ. ೧೭-೭ ವ); ಶತಜುಹುಗಳಿಂ ವೈಕಂಕತದ ಷಷ್ಟಿಸ್ರುಕ್ಸ್ರುಪನಿವಹದಿಂದ . . . ಬೇಕಾದ ವಸ್ತುಸಂಜಾತದಿಂ ಮಖಶಾಲೆ ಕಣ್ಗೆಸೆದುದು (ಹರಿಭಾ. ೩೩-೩೮).

[< ಸಂ. ಸ್ರುಚ್]

ಸ್ರುತ (ಗು). ೧. ಪ್ರವಹಿಸಿದ. ೨. ಜಿನುಗಿದ; ತೊಟ್ಟಿಕ್ಕಿದ. ೩. ಹೊರಟು ಹೋದ. (ನಾ). ೪. ದ್ರವ. [ಸಂ.]

ಸ್ರುವ (ನಾ). ೧. ಯಜ್ಞದಲ್ಲಿ ಬಳಸುವ ಸವುಟುಗಳಲ್ಲಿ ಒಂದು ಬಗೆ : "ಧ್ರುವಾ, ಉಪಭೃತ್, ಜುಹೂಃ, ಸ್ರುವಃ . . . ಸ್ರುಕ್ಕು ಎಂಬ ಆಜ್ಯಗ್ರಹಣಪಾತ್ರದ ಆಯಾ ನಾಮಗಳು, ೪ ಬಗೆಯ ಸ್ರುಕ್ಕುಗಳು" (ಸಿದ್ಧಾಂತಿ. ೨೨೦). ೨. ಸೋಮರಸಕ್ಕೆ ಬಳಸುವ ದರ್ವಿ. ೩. ಜಲಪಾತ; ನೀರ್ಬೀಳು. [ಸಂ.]

ಸ್ರುವೆ (ನಾ). ೧. ಒಂದು ಬಗೆಯ ಸಸ್ಯ; ಹೆಗ್ಗುರಂಟಿಕೆ: "ಮಧುರಸೆ, ಮಧುಶ್ರೇಣಿ . . . ಹೆಗ್ಗುರಂಟಿಕೆ, ಸ್ರಾವೆ, ಸ್ರುವಾ" (ಸಸ್ಯನಿ. ೧೧೭). ೨. ಒಂದು ಬಗೆಯ ಮರ; ಆನೆಬೇಲ. [ಸಂ. ಸ್ರುವ]

ಸ್ರೋತ (ನಾ). ೧. ನೀರಿನ ಪ್ರವಾಹ; ಹರಿಯುವಿಕೆ: "ಓಘಃ, ಪ್ರವಾಹಃ, ವೇಗಃ, ಧಾರಾ, ಸ್ರೋತಃ, ರಯಃ - ಈ ೬ ತೊಱೆಯ ಹರಿಹಂ" (ಹಲಾಯು. ೧೧೦-೪೭). ೨. ರಭಸವುಳ್ಳ ಪ್ರವಾಹ; ನುಗ್ಗಿ ಹರಿಯುವ ಹೊನಲು: ಕಣ್ಣೊಳಿರ್ದುದು ನೋಡ ಹಿಮಾಚಳಶಿಖರದ ಮೇಲ ಪಾಯ್ದ ಗಂಗಾಸ್ರೋತಂ (ಪಂಚಭಾ. ೭-೭೩); ಮೊರೆಯುತ್ತುಂ ಪರಿಯುತ್ತುಮಿರ್ಪ ರುಧಿರಸ್ರೋತಂಗಳಿಂ (ತಂಡಾಮಾ. ೯-೧೨೪). ೩. ಹೊಳೆ; ನದಿ: 'ಸ್ರೋತಃಪತಿ' ಪರಾ. ೪. ತೆರೆ ; ಅಲೆ. ೫. ನೀರು. ೬. ಜ್ಞಾನೇಂದ್ರಿಯ: "ಖಂ, ಅಕ್ಷಂ, ಇಂದ್ರಿಯಂ, ಸ್ರೋತಃ, ಹೃಷೀಕಂ, ಕರಣಂ - ಈ ೬ ಇಂದ್ರಿಯಂಗಳ್" (ಹಲಾಯು. ೪೮-೩೮೧). ೭. ಆನೆಯ ಸೊಂಡಿಲು. ೮. ಪ್ರಾಣಿದೇಹದಲ್ಲಿರುವ ರಂಧ್ರ. ೯. ವಂಶ; ಪೀಳಿಗೆ. [ಸಂ. ಸ್ರೋತಸ್]

ಸ್ರೋತಃಪತಿ (ನಾ). ಸಮುದ್ರ: ಖ್ಯಾತಂ ಮಹೇಂದ್ರಗಿರಿಸಾರಾತಿಶಯಂ ಪತಿ ಮಹೇಂದ್ರಗಿರಿಗಂ ಪ್ರಾಚೀಸ್ರೋತಃಪತಿ ಪ್ರಯಾಣದೊಳಿತಂ ಜಂಗಮಮಹೇಂದ್ರಮೆನಿಕುಂ ಘಟಿಯಿಂ (ಶಾಂತಿಪು. ೫-೧೩೬). [ಸಂ.]

ಸ್ರೋತಸ್ವಿನಿ (ನಾ). ನದಿ; ಹೊಳೆ: ತರುಣೀಲೋಚನಲೋಲಮಾಯುವಚಲ ಸ್ರೋತಸ್ವಿನೀಸಂಚಲಂ ಸಿರಿ (ಚಂದ್ರಪ್ರ. ೪-೫೩); ಆ ಸಮಾಪೋರ್ವಿಯೊಳ್ ಸ್ಥಿರಮಿರ್ಪರ್ ಪದದೀಂಟುಗುಂ ರಸಮನಾ ಸ್ರೋತಸ್ವಿನೀತೀರದೊಳ್ (ವಿಷ್ಣುಪು. ೨-೧೦-೪೬).

[ಸಂ. ಸ್ರೋತಸ್ವಿನೀ]

ಸ್ರೋತ್ರಗುತ್ತಿಗೆ, ಸುತ್ರಗುತ್ತಿಗೆ, ಸುತ್ರೆಗುತ್ತಗೆ (ನಾ). ಶ್ರೋತ್ರಿಯರಿಗೆ ಕೊಡುತ್ತಿದ್ದ ಉಂಬಳಿ: ದೇವಂಣ ಆರಾಧ್ಯಂಗೆ ಕೊಟ ಸ್ರೋತ್ರಗುತ್ತಿಗೆಯ ಭೂದಾನ ಶಿಲಾಶಾಸನದ ಕ್ರಮವೆಂತೆಂದರೆ (ಮೈಆಂ. ೧೫೩೪, ೫೮-೧೩ : 1434). **ಸುತ್ರಗುತ್ತಿಗೆ**: ಆ ಸೀಮೆಗೆ ಗದ್ದೆ ತೋಟ ಮರ ಮಗ್ಗವಣ ಕಿಱುಕುಳ ಸೊನ್ನಾದಾಯ ಸುತ್ರಗುತ್ತಿಗೆ ಯಿ ಯೊಳಗಾಗಿ (ಎಕ. VII(R). ಮಳವ. ೧೦-೧೦ ; 1517). **ಸುತ್ರೆಗುತ್ತಗೆ** : ಸೀಮೆಯ ಒಳಗಣ ಹಳನವು ನಿವಗೆ ಸುತ್ರೆಗುತ್ತಗೆಯಗಿ ಕೊಟವಾಗಿ (ಎಕ. VII(R). ಮಳವ. ೧೧೪-೧೦; ಸು. 13ನಯ ಶತ). [< ಶ್ರೋತ್ರಿಯ + ಗುತ್ತಿಗೆ (< ಗುತ್ತಗೆ)]

ಸ್ವ (ಗು). ೧. ತನ್ನ; ತನಗೆ ಸಂಬಂಧಿಸಿದ; ಸ್ವಂತ. ೨. ಹುಟ್ಟಿನಿಂದ ಬಂದ; ಸ್ವಭಾವಸಿದ್ಧವಾದ; ನೈಸರ್ಗಿಕ. (ನಾ). ೩. ತನ್ನ ಕುಲ ಅಥವಾ ವಂಶಕ್ಕೆ ಸಂಬಂಧಪಟ್ಟ ವ್ಯಕ್ತಿ; ಜ್ಞಾತಿ; ಬಂಧು. ೪. ಆತ್ಮ : ಸ್ವ ಎಂಬುದನ್ನು ಜ್ಞಾನಿಗಳು ಆತ್ಮವೆನ್ನುತ್ತಾರೆ (ಸಂಕೋಧ. V. ಮುನ್ನುಡಿ). [ಸಂ.]

ಸ್ವಂ (ನಾ). ಧನಸಂಪತ್ತು: "ದ್ರುಮ್ಮಂ . . . ಅರ್ಥಃ, ಸ್ವಂ . . . ವಸು, ವಿಭವಃ - ಈ ೧೫ ಒಡಮೆಯ ಪೆಸರ್" (ಹಲಾಯು. ೧೪-೮೦). [ಸಂ.]

ಸ್ವಂತ, ಸೊಂತ (ಗು). ೧. ಒಬ್ಬ ವ್ಯಕ್ತಿ, ವಸ್ತು ಅಥವಾ ಒಂದು ಸಂಸ್ಥೆಗೆ ಸೇರಿದ; ಖಾಸಗಿಯಾದ; ವೈಯಕ್ತಿಕ: ಸರ್ಕಾರವು ವಿಧಿಸಿದ್ದ ಅನೇಕ ಆರ್ಥಿಕನಿಬಂಧನೆಗಳು ಸಡಿಲವಾದುದರಿಂದ, ಆರ್ಥಿಕಶಕ್ತಿಗಳು ಸ್ವಂತಸ್ಥಾಯಿಯನ್ನು ಪಡೆದವು (ಅಂತಸಂ. ೭); ಪ್ರಪಂಚದ ಬಹುಸಂಖ್ಯಾತಭಾಷೆಗಳಿಗೆ ತವ್ಮದೇ ಆದ ಒಂದು ಸ್ವಂತ ಲಿಪಿ ಇಲ್ಲ (ದ್ರಾವಿ. ೪೫). ೨. ವ್ಯಕ್ತಿಗತವಾದ; ವಿಶಿಷ್ಟವಾದ. (ನಾ). ೩. ತನ್ನದೇ ಆದುದು; ಖಾಸಾ: ಮಾತುಗಳು ನನ್ನ ಸ್ವಂತವಾದದ್ದು (ರಾಯಕ. ೪೭). ೪. ಮುದ್ದಾಂ; ಖಿದ್ದು: ಕಾಸಕ್‌ಗಳು ತಮ್ಮ ದ್ರಾಕ್ಷಾರಸವನ್ನು ತಾವೇ ಸ್ವಂತವಾಗಿ ಮಾಡಿಕೊಳ್ಳುತ್ತಾರೆ (ಮಲಿಪಾ. ೨೧). **ಸೊಂತ**: ೧. ಅಂತಕನ ಪೋಲ್ಪಿಂಥ ಪುರುಷನ ಸೊಂತವಾರ್ಧಕ್ಯವನ್ನು . . . ಕಂಡು (ರಘುವಂ. ೧೨೧-೬೭). ೩. ನಿಂದೂ ಸೊಂತದ್ದಲ್ಲ (ಕಮ್ಮಟ. ೩೩). 'ಸ್ವತಃ' ಪರಾ.

[< ಸಂ. ಸ್ವಂ./ ತಮಿ. ಚೊನ್ತ; ತೆಲು. ಸೊಂತ]

ಸ್ವಂತ್ಯ (ನಾ). ೧. 'ಸು' ಎಂಬ ಅಕ್ಷರದಿಂದ ಕೊನೆಯಾಗುವುದು; ಸುಕಾರಾಂತವಾದುದು: ವ್ಯಂಜನರೂಪದಿನೇತಱದಿಂ ಸ್ವಂತಧಾತುಗಕ್ಕುಂ ಚತ್ವಂ (ಶಮದ. ೨೫೯). ೨. ಒಳ್ಳೆಯ ಮುಕ್ತಾಯವನ್ನು ಹೊಂದುವುದು; ಸುಖಾಂತವಾದುದು. [ಸಂ.]

ಸ್ವಂತಿಕೆ (ನಾ). ತನ್ನದೇ ಆದ ವಿಶಿಷ್ಟತೆ, – ವೈಶಿಷ್ಟ್ಯ; ತನ್ನತನ: ಆದರ್ಶಮಾನವನ ಸಮನ್ವಯ ಸಮ್ಮಕ್ತ್ವವನ್ನು ಬಣ್ಣಿಸುವುದರಲ್ಲಿ ರತ್ನಾಕರನ ಸ್ವಂತಿಕೆಯಿದೆ (ಕಪಾಚ. ೬೭೬).

[ಸ್ವಂತ್ + - ಇಕೆ]

ಸ್ವಕಪೋಲಕಲ್ಪನೆ (ನಾ). ೧. (ಆಲಂ) ಸ್ವಂತವಾದ ಕಲ್ಪನೆ. ೨. ತನ್ನದೇ ಆದ ಊಹೆ: ಆ ಲಿಪಿಗಳ ವಿಚಾರದಲ್ಲಿ ಎಲ್ಲದಕ್ಕಿಂತಲೂ ಹೆಚ್ಚಿನ ಊಹಾಪೋಹಗಳೂ ಸ್ವಕಪೋಲಕಲ್ಪನೆಗಳೂ ಹುಟ್ಟಿಕೊಂಡಿವೆ (ದ್ರಾವಿ. ೫೩). [ಸಂ. ಸ್ವಕಪೋಲಕಲ್ಪನಾ]

ಸ್ವಕಪೋಲಕಲ್ಪಿತ (ನಾ). ಸ್ವಂತವಾದ ಕಲ್ಪನೆಯಿಂದ ಕೂಡಿದುದು; ತನ್ನದೇ ಆದ ಊಹೆಯಿಂದ ಕೂಡಿದುದು: ಎಲ್ಲವೂ . . . ಸ್ವಕಪೋಲಕಲ್ಪಿತಗಳೆಂಬ ಬಗ್ಗೆ ಮಾತ್ರ ಯಾರೂ ಅನುಮಾನ ಪಡಲಾರರು (ಬಾಗಿನ. IV. ಮುನ್ನುಡಿ). [ಸಂ.]

ಸ್ವಕರ್ತೃ (ನಾ). [ವ್ಯಾಕ] ಕ್ರಿಯೆಯನ್ನು ತಾವೇ ನಿರ್ವಹಿಸುವಂತಹುದು; ಕ್ರಿಯೆಯ ನಿರ್ವಹಣೆಯಲ್ಲಿ ಸ್ವತಂತ್ರವಾದುದು: ಸ್ವಪರಕರ್ತೃವ್ಯೋಳ್ - ಸ್ವಕರ್ತೃ ಪರಕರ್ತೃವಿನಲ್ಲಿ (ಶಮದ. ೨೩೧ ಟೀಕೆ). [ಸಂ.]

ಸ್ವಕಾರ್ಯ (ನಾ). ತನ್ನದೇ ಆದ ಕಾರ್ಯ; ಸ್ವಂತಕೆಲಸ: ಆಹ, ಸ್ವಕಾರ್ಯ ಪರತ್ವವಂಬುದು ಹೀಗೆ ತಾನೆ. ಈತನ ಸಂತಾಪದಿಂದ ನಾನು ಸಂತಸಪಡುವನು (ಶಾಕುಂತ. ೮೫-೧೧); ಅವರು ಬಂದುದರಿಂದ ಸ್ವಾಮಿಕಾರ್ಯ, ಸ್ವಕಾರ್ಯ ಎರಡೂ ಆಯಿತು (ರೂಢಿ). [ಸಂ.]

ಸ್ವಕೀಯ (ಗು). ೧. ತನ್ನದಾದ; ತನಗೆ ಸಂಬಂಧಿಸಿದ; ಸ್ವಂತದ: ಸ್ವಕೀಯ ಚರಮಸಮಯದೊಳ್ . . . ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ (ಆದಿಪು. ೧೬-೪೯ ವ); ಆ ಸಮಯದೊಳುದ್ಯಾನದಿನೀ ಸುಗ್ರೀವಂ ಸ್ವಕೀಯಭವನಕ್ಕೇಲ್ತಂದು (ಪಂಪಾಮಾ. ೧೦-೧೦). ೨. ತನ್ನ ಕುಟುಂಬಕ್ಕೆ ಸೇರಿದ; ಸ್ವಂತಸಂಸಾರಕ್ಕೆ ಸೇರಿದ. (ನಾ). ೩. ತನ್ನದೇ ಆದುದು; ಸ್ವಂತವಾದುದು: "ಕಾಸಾ - ಸ್ವಕೀಯವೂ" (ಕಾಶಕ್ಯ. ೨೦೧). ೪. ತನಗೆ ಸಂಬಂಧಿಸಿದ ವ್ಯಕ್ತಿ; ಬಂಧು: ಅಸಮಏಭೂತಿ ಗಳನುವಾರ್ಜಿಸುವೊಡೆ ಜನಮಂ ಸ್ವಕೀಯಮಂ ಮಾಲ್ಪುದು (ಚಂದ್ರಪ್ರ. ೪-೨೧); ರಣಮಹೀಸಂತಮಸ ಶಾಂತೇಕ್ಷಣರು ದಿಗುಭ್ರಮಯಲಿ ಸ್ವಕೀಯ ಕ್ಷಣನವನು ರಚಿಸಿದರು ರೌರವವಾಯ್ತು ರಾತ್ರಿಯಲಿ (ಕುವ್ಯಾದ್ಯೋ. ೧೫೫-೭೦). ೫. ತನ್ನ ಕುಟುಂಬಕ್ಕೆ ಸೇರಿದ ವ್ಯಕ್ತಿ: ಮನೆಯ ಆಡಳಿತವನ್ನು ಆಚಾರ್ಯರು ಸಂಪೂರ್ಣವಾಗಿ ವೆಂಕಮ್ಮನವರಿಗೇ ವಹಿಸಿಕೊಟ್ಟಿದ್ದರು. ಅಲ್ಲಿ ಅವರೇ ಸ್ವಕೀಯರು (ಸಮಜೀ. ೨೭೦). [ಸಂ.]

ಸ್ವಕೀಯಾನ್ವಯ (ನಾ). ತನ್ನ ಮನೆತನ ,– ವಂಶ: ಅಗಳ್ ಸೂತರ್ ಸ್ವಕೀಯಾನ್ವಯದರಸುಗಳಂ ಬಣ್ಣಿಸುತ್ತಿರ್ಪಿನಂ (ಶಾಂತಿಪು. ೫-೯೭). [ಸಂ.]

ಸ್ವಕೀಯೆ (ನಾ). [ಕಾವ್ಯಮೀ] ಮೂರು ಬಗೆಯ ನಾಯಿಕೆಯರಲ್ಲಿ ಒಬ್ಬಳು; ತನ್ನ ಪತ್ನಿ; ಸ್ವಂತ ಹೆಂಡತಿ: ಬಳಿಕ ಸ್ವಕೀಯೆ ಪರಕೀಯೆ ಪಣ್ಯಂರೆಂಬ ತ್ರಿವಿಧ ನಾಯಿಕೆಯರಿಂ (ವಿವೇಕ. ೧೮೨); ಪ್ರಕಟತರನಾಯಿಕೆಯರಾ ಸ್ವಕೀಯೆ ಪರಕೀಯೆ ಪಣ್ಯೆಯನೆ ಮೂಱುತೆಱಂ (ರಸರ. ೩-೮೬ ಸೂತ್ರ). [ಸಂ. ಸ್ವಕೀಯಾ]

ಸ್ವಕುಲ, ಸ್ವಕುಳ (ನಾ). ತನ್ನ ಕುಲ; ತನ್ನ ವಂಶ: ಸ್ವಕುಲಪ್ರಧಾನ ಗಜವಾಜಿ ಕುಂಜರಂ ವಿಭು ವೃಷಾಖ್ಯಪುಂಗವಮಕ್ಕುಂ (ವಸ್ತುಕೋ. ೧೨೧-೧೮). **ಸ್ವಕುಳ:** ಸ್ವಕುಳಪಯೋಧಿಚಂದ್ರಿಕೆ . . . ನಯನಾಳಿಜಾಳನವಮಾಳಿಕೆಯೆಂಬುದು ಲೋಕ ಮಾಕೆಯಂ (ಚಂದ್ರಪ್ರ. ೧೩-೬೫). [ಸಂ.]

ಸ್ವಕುಳ 'ಸ್ವಕುಲ' ನೋ.

ಸ್ವಗತ (ಗು). ೧. ಸ್ವಂತವಾದ; ತನ್ನ; ತನಗೆ ಸಂಬಂಧಿಸಿದ: ಸ್ವಗತಾನಲಸನ್ನಿಣ ರಶ್ಮಿ ಗಾಢನುಗಣಿತ ಜಲದ್ವಿಪಾವಳಿ ಕಡಲಂ ಮಿಗೆವಂದಮರಗಜೇಂದ್ರಂ ಸೊಗಯಿಸುವುದು ದಾನವಾರಿ ಲೇಖಾನುಗತಂ (ಕಾವ್ಯಾವ. ೭೬೯); ಸ್ವಗತನಿಬಿಡಪಲ್ಯಂಕಾಸನೋಲ್ಲಾಸಂ . . . ಆತ್ಮಕೇಶಾಳಿಗಳನಳಿದ ಬೇರಂ ತೀರೆ ಕೀಲ್ಯಂತೆ ಕಿಲ್ತಂ (ಪುಷ್ಪಪು. ೧೩-೧೧೦). ೨. ಅಂತರ್ಗತವಾದ; ಒಳಗೊಂಡ: ಮಗುಳ್ದುಂ ಮ[ಗುಳ್ದು]ಮಾತಂ ನೆಗಲ್ದಿರೆ ಪೇಳ್ದೂಗಳಕ್ಕುಮಾ ವ್ಯಾವೃತ್ತಿ ಸ್ವಗತಾಳಂಕಾರಂ ಬಗೆಗಗಾಧಮನರದಱ ತೆಱನನೀ ಕುಱಿಪುಗಳಿಂ (ಕವಿರಾ. ೩-೨೦೦). 'ಸ್ವಗತಭೇದ' ಪರಾ. (ನಾ). ೩. ತನ್ನಲ್ಲಿರುವುದು; ಅಂತರಂಗದಲ್ಲಿರುವುದು: ಸ್ವಗತವಿಲ್ಲದ ಮೋದ ಹೊಳಲುಗೊಡದು (ಆರಳು. ೪೦೧-೧೦). ೪. ಆತ್ಮಚಿಂತನೆಯಲ್ಲಿ ಲೀನನಾದವನು; ಅಂತರ್ಮುಖಿ: ನೋಡಿದ ಕೂಡಲೆ ಆತನು ಇತರರಿಗಿಂತ ಸ್ವಂತಂತ್ರನೂ ಸ್ವಗತನೂ ಆಗಿರುವಂತೆ ತೋರುತ್ತಿತ್ತು (ನಬೂಧ. II. ೩೮೪). ೫. [ನಾಟ್ಯ] ನಾಟಕದ ಸಂಭಾಷಣೆಯಲ್ಲಿ ಒಂದು ಬಗೆ; ಒಂದು ಪಾತ್ರವು ಉಳಿದ ಪಾತ್ರಗಳನ್ನು ಉದ್ದೇಶಿಸದೆ ಪ್ರೇಕ್ಷಕರಿಗೆ ಮಾತ್ರ ಕೇಳಿಸುವಂತೆ ತನಗೆ ತಾನೇ ಮಾತನಾಡಿಕೊಳ್ಳುವುದು; ಆತ್ಮಗತ: ಸ್ವಗತಂ – ಮಾತನಾಡುವ ಪಾತ್ರವಲ್ಲದೆ ಮತ್ತಾರೂ ಕೇಳದ್ದು (ಕೃಪಿ. ೨೦೭). 'ಸ್ವಗತಭಾಷಣ' ಪರಾ. [ಸಂ.]

ಸ್ವಗತತೃಪ್ತ (ನಾ). ಆತ್ಮತೃಪ್ತಿಯನ್ನು ಹೊಂದಿದವನು; ಆತ್ಮಸಂತೋಷವನ್ನು ಪಡೆದವನು: ಸ್ವಗತತೃಪ್ತರಾಗಿ ಸನ್ಯಾಸಿಯಂತೆ ಅವರು ತಮ್ಮ ಜೀವನವನ್ನು ಸಾಗಿಸಿದ್ದರು (ಸಮಜೀ. ೭೭೫); ಪ್ರಥಮಪ್ರಾಯದಲ್ಲಿ ನಾಚಿಗಮುಸುಗಿ ಕುಲವಧುವು ದನಿಗೊಡದೆ ಇದ್ದಾಗ ಪುರುಷನನುರಾಗವು ಬಣ್ಣಗುಂದಿ ಆತನು ಸ್ವಗತತೃಪ್ತನಾಗುತ್ತಾನೆ (ಗೊತ್ತಾಗು. ೧೪೨). [ಸಂ.]

ಸ್ವಗತಭಾಷಣ (ನಾ). = ಸ್ವಗತ ೫ : ಸ್ವಗತಭಾಷಣ ಮುಕ್ತಾಯಗೊಂಡಾಗ ಕೈ ಚಪ್ಪಾಳೆ ನಾಟಕಮಂದಿರದಲ್ಲಿ ಮಾರ್ಮೊಳಗಿತು (ಪುನರು. ೬೯೯). [ಸಂ.]

ಸ್ವಗತಭೇದ (ನಾ). ಒಂದು ವಸ್ತುವಿನಲ್ಲಿ ಅಂತರ್ಗತವಾದ ವಿಭಾಗ: ಪ್ರತಿವಸ್ತುವಿಗೂ ಸಚಾತೀಯಭೇದ, ವಿಜಾತೀಯಭೇದ, ಸ್ವಗತಭೇದವೆಂದು ಮೂರು ವಿಧ ವಸ್ತುಗಳಿರುವುವು (ಹಿಂದಸಾ. ೨೨೨); ಇಲ್ಲಿ ಬರುವ ಪದ, ವಾಕ್ಯ, ವರ್ಣ, ಪದಭಾಗ, ಸಂಘಟನೆ, ಮಹಾವಾಕ್ಯ – ಈ ಭೇದಗಳೆಲ್ಲ ವ್ಯಂಜಕಶಬ್ದದ ಸ್ವಗತಭೇದಗಳು (ಧ್ವನ್ಯಾಲೋ. ೧೧೭ ಅಡಿಟ). [ಸಂ.]

ಸ್ವಗುರುಸ್ಥಾನಸಂಕ್ರಾಂತಿ (ನಾ). [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ಮುನಿಗಣಕ್ಕೆ ಪೋಷಕನಾಗಿದ್ದು ತನ್ನ ಗುರು ಅಲಂಕರಿಸಿದ್ದ ಸ್ಥಾನವನ್ನು ಅಲಂಕರಿಸುವುದು; ಸ್ವಗುರುಸ್ಥಾನಾವಾಪ್ತಿ: ಸ್ವಗುರುಸ್ಥಾನಸಂಕ್ರಾಂತಿ ನಿಸ್ಸಂಗತ್ವಾತ್ಮಭಾವನಾಯೋಗ . . . ಎಂಬಯ್ತತ್ತುಮೂಱು ಗರ್ಭಾದಿ ನಿರ್ವಾಣಪರ್ಯಂತಂಗಳವ್ವ ಗರ್ಭಾನ್ವಯಕ್ರಿಯೆಗಳುಂ (ಆದಿಪು. ೧೫-೧೫ ಪ); ಆದಾನಮುಂ . . . ಸ್ವಗುರುಸ್ಥಾನಸಂಕ್ರಾಂತಿಯುಂ . . . ನಿರ್ವಾಣಪರ್ಯಂತ ಮಪ್ಪಯ್ತತ್ತುಮೂಱುಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). 'ದೀಕ್ಷೆ' ಪರಾ. [ಸಂ.]

ಸ್ವಗೃಹ (ನಾ). ೧. ಸ್ವಂತಮನೆ; ತನ್ನಮನೆ: ವಧುವಿನ ಸ್ವಗೃಹದಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಬೇಕೆಂದು ಗುರುಹಿರಿಯರು ನಿಶ್ಚಯಿಸಿರುತ್ತಾರೆ (ರೂಢಿ). ೨. [ಜ್ಯೋತಿ] (ಆಯರಾಶಿಯ) ಸ್ವಂತಕ್ಷೇತ್ರ; ಸ್ವಕ್ಷೇತ್ರ: ಕ್ರಮದಿಂ ದ್ವಾದಶಭಾಗವೊಂದು ಗೃಹಕಕ್ಕುಂ ತದ್ಸ್ವಗೃಹದ್ವಾದಶಾಂಶಮನಾಳ್ವರ್ ಸ್ವಗೃಹಾದಿ ರಾಶಿಪತಿಗಳ್ (ಜಾತಕ. ೧-೩೭). [ಸಂ.]

ಸ್ವಗೃಹತ್ಯಾಗ (ನಾ). [ಜೈನ] ಐವತ್ತುಮೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ತನ್ನ ಸಂಪತ್ತನ್ನೆಲ್ಲ ದಾನಮಾಡಿ ಲೋಕೋತ್ತರಕಲ್ಯಾಣಸಾಧನೆಗಾಗಿ ಮನೆಬಿಟ್ಟು ಹೊರಡುವುದು: ಆದಾನಮುಂ . . . ಸ್ವಗೃಹತ್ಯಾಗಮುಂ . . . ನಿರ್ವಾಣಪರ್ಯಂತಮಪ್ಪಯ್ತತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). 'ದೀಕ್ಷೆ' ಪರಾ. [ಸಂ.]

ಸ್ವಗೃಹಸ್ಥ (ನಾ). [ಜ್ಯೋತಿ] ಸ್ವಂತಕ್ಷೇತ್ರದಲ್ಲಿರುವುದು: ಗೃಹಮೇಱುಂ ಜನನೋದಯಗೃಹಮುಂ ಬಲಯುಕ್ತಮೆನೆ ಪರಸ್ಪರ ಪೀಡಾರಹಿತಂ ಸ್ವಗೃಹಸ್ಥಂ ತದ್ಪ್ರಮೆನೆ ಪರಮಾಯುವಂ ಯಥೋಕ್ತಂ ಕುಡುಗುಂ (ಜಾತಕ. ೮-೯). [ಸಂ.]

ಸ್ವಗ್ರಾಮ (ನಾ). ಸ್ವಂತಗ್ರಾಮ; ತನ್ನ ಹಳ್ಳಿ: ಚಾತ್ರಗೆ ಬಂದವರೆಲ್ಲರೂ ಸ್ವಗ್ರಾಮಗಳಿಗೆ ತೆರಳಿದರು (ರೂಢಿ). [ಸಂ.]

ಸ್ವಚ್ಛ (ಗು). ೧. ಪಾರದರ್ಶಕವಾದ. ೨. ಬಿಳಿಯ; ಬಿಳುಪಾದ. ೩. ಪರಿಶುದ್ಧವಾದ; ನಿರ್ಮಲವಾದ: ಹಾರಾಂಶು ಸ್ವಚ್ಛನೀರಂ ಸುರಯುವತಿ ಮುಖಾಂಭೋಜನೇತ್ರೋತ್ಪಲಶ್ರೀಸಾರಂ (ಆದಿಪು. ೧೦-೧೯). ೪. ನಿಷ್ಕಳಂಕವಾದ; ದೋಷರಹಿತವಾದ: ಅಲಿಸು ಮದೀಯ ಸ್ವಚ್ಛವಾಕ್ಯಗಳಂ (ಶ್ರೀಮಹಾ. ೯-೧೬). (ನಾ). ೫. ನಿರ್ಮಲವಾದುದು; ಪರಿಶುದ್ಧವಾದುದು : ''ಅನಾವಿಳಂ ಪ್ರಸನ್ನಂ ಸ್ವಚ್ಛಂ'' (ವಸ್ತುಕೋ. ೧೦೮-೬೦); ಸ್ವಚ್ಛಂಗಳ್ ನಿಜದಿಂ ವಿರಕ್ತವಿನುತಂಗಳ್ . . . ರತ್ನತ್ರಯಂಗಳ್ ಹೃದಯಚ್ಛನ್ನಾಭರಣಂಗಳಕ್ಕೆಮಗೆ ಮುಕ್ತಿಶ್ರೀ ಮನಂಗೊಳ್ವಿನಂ (ಪುಷ್ಪಪು. ೧-೮). ೬. ಸ್ಫಟಿಕಶಿಲೆ. [ಸಂ.]

ಸ್ವಚ್ಛ (ಅ). (ಉಕ) ಸ್ಪಷ್ಟವಾಗಿ; ಸ್ಫುಟವಾಗಿ: ನಾ ಸ್ವಚ್ಛ ಹೇಳತೀನಿ, ನಿನ್ನ ಮ್ಯಾಲ ನಾ ಸಿಟ್ಟಿಗೆದ್ದೀನಿ (ಹೂಸಂಸಾ. ೧೭೨). [< ಸ್ವಚ್ಛ.]

ಸ್ವಚ್ಛಂದ (ಗು). ೧. ಮನಸ್ಸು ಬಂದಂತೆ ನಡೆದುಕೊಳ್ಳುವ; ಅಂಕೆಯಿಲ್ಲದ; ಸ್ವೇಚ್ಛೆಯಿಂದ ಕೂಡಿರುವ: ಇಂದಲೇ ರಿಪುರುಧಿರಪಾನಾನಂದಕೃತಮದಶಾಕಿನೀ ಸ್ವಚ್ಛಂದಲೀಲಾನೃತ್ಯದರ್ಶನವೆಂದನಾ ಚ್ಚೆದ್ಯ (ಕುವ್ಯಾಸ. ೧೦-೫೭). ೨. ಸ್ವಪ್ರೇರಣೆಯ; ಸ್ವತಃ ಪ್ರೇರಿತವಾದ. ೩. ಸಂಸ್ಕರಣವಿಲ್ಲದ; ನಯವಿಲ್ಲದ. (ನಾ). ೪. ಮನಸ್ಸು ಬಂದಂತೆ ನಡೆದುಕೊಳ್ಳುವಿಕೆ; ಕಟ್ಟುಪಾಡಿಲ್ಲದಿರುವಿಕೆ; ಸ್ವೇಚ್ಛೆ: ''ಸ್ವವಶಂ ಸ್ವಚ್ಛಂದಂ ಸ್ವೈರವೃತ್ತಿ'' (ವಸ್ತುಕೋ. ೧೦೧-೧೯); ಈ ವಿಚಿತ್ರಸನ್ನಿವೇಶ, ನೇಹ ನಲುಮೆಗಳ ತಾಕಲಾಟ . . . ಇವೆಲ್ಲ ಅವನ ಚದಾಕಾಶದಲ್ಲಿ ಸ್ವಚ್ಛಂದವಾಗಿ ಅಲೆಯತೊಡಗಿದವು (ಸಮಜೀ. ೪೩೧); ಹಾಗಾದರೆ ಸ್ವೇಚ್ಛೆಯಿಂದ ಸ್ವಚ್ಛಂದವಾಗಿ ಹಾರು (ಕಲ್ಲೋಲ. ೨೨-೫). ೫. ಮುಕ್ತವಾದುದು; ಐಚ್ಛಿಕವಾದುದು: ಆದಿಸ್ವರ ಪದವಂತ್ಯದೊಳಾದೆಡೆಯೊಳ್ವರ್ಣಮಕ್ಕುಮೆರಡನೆಯ ವಿಳಕ್ಕಾ ದಾನಪದಂ ದೀರ್ಘಂ ಪಾದಾಂತದೊಳುಲಿದ ತಾಣದೊಳ್ ಸ್ವಚ್ಛಂದಂ (ಕವಿರಾ. ೨-೧೬). ೬. ಸ್ವತಂತ್ರವಾಗಿರುವವನು; ಬೇರೆ ಯಾರಿಗೂ ಅಧೀನನಲ್ಲದವನು: ''ಯಥಾಕಾಮೀ, ಸ್ವರುಚಿಃ, ಸ್ವಚ್ಛಂದಃ, ನಿರವಗ್ರಹಃ - ಈ ೪ ತನ್ನಿಚ್ಛೆಕಾಱಂ'' (ಹಲಾಯು. ೬.೨- ೭೨೪). [ಸಂ.]

ಸ್ವಚ್ಛಂದಗಾಮಿ (ನಾ). ತನ್ನ ಮನಸ್ಸು ಬಂದಂತೆ ಸಂಚರಿಸುವವನು; ನಿರ್ಬಂಧವಿಲ್ಲದೆ ಓಡಾಡುವವನು: ಕಮಳಾಕ್ಷಂ ಸ್ವಚ್ಛಂದಗಾಮಿ ಯಮುನಾಕಚ್ಛಂ ಬಡಿದೇಱ್ತರುತ್ತುಮೊದವಸರದೊಳ್ (ಜಗಪ. ೩-೭೯). [ಸಂ. ಸ್ವಚ್ಛಂದಗಾಮಿನ್]

ಸ್ವಚ್ಛಂದಚಾರಿ (ನಾ). ಸ್ವೇಚ್ಛೆಯಿಂದ ವರ್ತಿಸುವ ವ್ಯಕ್ತಿ; ಸ್ವೈರವೃತ್ತಿಯುಳ್ಳ ವ್ಯಕ್ತಿ: ಅದುವೆ ಮೊದಲಾಗೀಗಳಲ್ಲಿಯ ಸುವತಿಯರು ಸ್ವಚ್ಛಂದಚಾರಿಯರು (ಕುವ್ಯಾಸ. ೫-೧೬). [ಸಂ. ಸ್ವಚ್ಛಂದಚಾರಿನ್]

ಸ್ವಚ್ಛಂದಚಾರಿಣಿ (ನಾ). ಮನಸ್ಸು ಬಂದಂತೆ ನಡೆಯುವವಳು; ಸ್ವೈರಿಣಿ:

ಮುಖದಲ್ಲಿ ಮಧುವನ್ನೂ ಹೃದಯದಲ್ಲಿ ವಿಷವನ್ನೂ ಧರಿಸಿರುವ ಈತನ ಕೈ ಸೇರಿದುದುಕ್ಕೆ ನಾನು ಚೆನ್ನಾಗಿ ಸ್ವಚ್ಛಂದಚಾರಿಣಿಯಾದೆನು (ಶಾಕುಂತ. ೭೦-೨೦); ಶಕುಂತಲೆ . . . ರಾಣಿಯಾಗುವುದಿರಲಿ ತಾನು ಸ್ವಚ್ಛಂದಚಾರಿಣಿಯಲ್ಲವೆಂದು ನಾಲ್ಕುಜನರೆದುರು ಸಿದ್ಧಪಡಿಸಬೇಕಾಯ್ತು (ಧರ್ಮಸಾ. ೭೧). [ಸಂ. ಸ್ವಚ್ಛಂದಚಾರಿಣೀ]

ಸ್ವಚ್ಛಂದಛಂದ (ನಾ). [ಛಂದ] (ಪ್ರಾಸ, ಗಣ, ಯತಿ ಇತ್ಯಾದಿ) ಪರಿಚಿತವಾದ ಸಾಂಪ್ರದಾಯಿಕನಿಯಮಗಳ ಕಟ್ಟುಪಾಡಿಗೆ ಒಳಪಡದ ಕಾವ್ಯರಚನೆಯ ಛಂದಸ್ಸು; ಮುಕ್ತಛಂದಸ್ಸು: ವಚನಗಳಲ್ಲಿ ನಿರ್ದಿಷ್ಟವಾದ ಯಾವ ಛಂದೋಬಂಧಗಳು ಅಡಕವಾಗಿದ್ದರೂ ಅವುಗಳಲ್ಲಿ ಒಂದು ಸ್ವಚ್ಛಂದಛಂದದ ನಾಡಿಯು ಸ್ಪಂದಿಸುವುದೆಂಬುದನ್ನೂ . . . ಈ ಸಂದರ್ಭದಲ್ಲಿ ಗಮನಿಸಬೇಕು (ಛಂದೋವಿ. ೨೩೦); ಭಾವಗೀತಗಳ ವಿವಿಧ ತಾನ ಲಹರಿ, ಸರಳರಗಳೆ, ಸ್ವಚ್ಛಂದಛಂದ . . . ಹೀಗೆ ಛಂದಸ್ಸು - ಶೈಲಿಗಳ ವಿಕಾಸವಾಯಿತು (ಸಪ್ತಕಾ. ೨೫). [< ಸಂ. ಸ್ವಚ್ಛಂದಛಂದಸ್]

ಸ್ವಚ್ಛಂದತೆ (ನಾ). ಮನಬಂದಂತೆ ಇರುವ ಸ್ವಾತಂತ್ರ್ಯ; ಯಾವುದೇ ಕಟ್ಟುಪಾಡುಗಳಿಲ್ಲದೆ ಇರುವ ಸ್ವತಂತ್ರತೆ: ಛಂದಸ್ಸಿನ ಸುಖಿಭಾವದ ಒತ್ತಡದಲ್ಲಿ ಪದಗಳು ತಮಗೆ ತಾವೆ ಉಚಿತವಾಗಿ ಜೋಡಣೆಗೊಳ್ಳುವ ಸ್ವಚ್ಛಂದತೆಯಲ್ಲಿವೆ (ಕಾವ್ಯಕು. ೯೩). [ಸಂ. ಸ್ವಚ್ಛಂದತಾ]

ಸ್ವಚ್ಛಂದಪ್ರವೃತ್ತಿ (ನಾ). ಮನ ಬಂದಂತೆ ವರ್ತಿಸುವುದು; ಸ್ವೇಚ್ಛಾವೃತ್ತಿ: ಈ ಹಬ್ಬದಲ್ಲಿ ವಿದ್ಯಾರ್ಥಿಗಳ ಸ್ವಚ್ಛಂದಪ್ರವೃತ್ತಿಗೆ ಸಾಕಷ್ಟು ಅವಕಾಶ ಸಿಗುತ್ತಿದ್ದುದರಿಂದ ಅವರ ಹಾವಳಿ ಹೆದ್ದೊರೆಯಂತೆ ಹರಿಯತೊಡಗಿತು (ರಂಗರೋ. ೪೩); ಅದಕ್ಕೆ ಅವಳ ರಾಷ್ಟ್ರೀಯಜೀವನದ ವಿಷಯವಾಗಿರುವ ಶ್ರದ್ಧೆಯೇ ಕಾರಣವಲ್ಲದೆ ಸ್ವಚ್ಛಂದ ಪ್ರವೃತ್ತಿಯಾಗಲಿ, ಸ್ವೇಚ್ಛಾಚಾರವಾಗಲಿ ಅಲ್ಲಿಲ್ಲವೆಂಬುದನ್ನು ವಿಚಾರವಂತರು ಒಪ್ಪಿಕೊಂಡಿದ್ದಾರೆ (ಪ್ರಬುಂಧ. ೯೦). [ಸಂ.]

ಸ್ವಚ್ಛಂದಮರಣ (ನಾ). ೧. ತನಗೆ ಮನಸ್ಸು ಬಂದಾಗ ಪಡೆಯುವ ಸಾವು; ಇಚ್ಛಾಮರಣ. ೨. ತನಗೆ ಇಚ್ಛೆ ಬಂದಾಗ ಸಾವನ್ನು ಪಡೆಯಬಲ್ಲವನು; ಇಚ್ಛಾಮರಣಿ: ನೀನು ಸ್ವಚ್ಛಂದಮರಣನಾಗು! ನೀನಾಗಿ ಸಾವನ್ನು ಅಪೇಕ್ಷಿಸುವವರೆಗೂ ನಿನಗೆ ಸಾವು ಬರದೆ ಇರಲಿ! (ಮಚಿಭಾ. ೫). [ಸಂ.]

ಸ್ವಚ್ಛಂದಮಿಟ್ಟು (ನಾ). = ಸ್ವಚ್ಛಂದಮರಣ ೨: ಅಂತು ಶರಪಂಜರದೊಳೊಜಗಿಯುವೊಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ ಸ್ವಚ್ಛಂದಮಿಟ್ಟು ವಪ್ಪುದಱಿಂದುತ್ತರಾಯಣಂ ಬರ್ಪನ್ನಮಿರಿಸಿದಂ (ಪಂಪಭಾ. ೧೧-೪೭ ವ). [ಸ್ವಚ್ಛಂದ + ಮಿಟ್ಟು]

ಸ್ವಚ್ಛತೆ (ನಾ). ಪರಿಶುದ್ಧವಾಗಿರುವಿಕೆ; ತಿಳಿಯಾಗಿರುವಿಕೆ; ನೈರ್ಮಲ್ಯ: ಸ್ಯಾದು ಸ್ವಚ್ಛತೆ ಶೃತ್ಯವಾವೋದವೊಂದಿ ಸೊಗಸಾದ ಲಲಿತಾಂಗಿಯರ ಕರತಳದ ವಿಮಲಕಲಶೋದಕವನೊಲಿದೀಂಟುತಿರ್ದೊಡಂ (ಚಿಮಿಭಾ. ೩-೧೦). [ಸಂ. ಸ್ವಚ್ಛತಾ]

ಸ್ವಜನ (ನಾ). ೧. ಒಂದೇ ಕುಲ ಅಥವಾ ಜಾತಿಗೆ ಸೇರಿದ ಜನ; ಸ್ವಂತಜನ. ೨. ನಂಟು; ಬಂಧು: ''ಜನನಮನ್ಯವಾಯಂ ಕುಲಮಿನ್ನಂತವೞೊಳ್ ಜನಿಯಿಸಿದಾತಂ ತಾಂ ಸ್ವಜನಂ ಸ್ವಬಂಧು'' (ವಸ್ತುರೋ. ೫೬-೨೯).

ಸ್ವಜನಪಕ್ಷಪಾತ = ತನ್ನ ಜಾತಿಗೆ ಅಥವಾ ತನಗೆ ಸಂಬಂಧಿಸಿದ ಜನರ ಬಗ್ಗೆ ಒಲವರವನ್ನು ತೋರಿಸುವಿಕೆ,— ಪಕ್ಷಪಾತ ಮಾಡುವಿಕೆ: ಅವರು ಅಧಿಕಾರದಲ್ಲಿರುವಾಗ ಸ್ವಜನಪಕ್ಷಪಾತದಿಂದ ತಮ್ಮವರನೇಕರಿಗೆ ಉದ್ಯೋಗಗಳನ್ನು ಒದಗಿಸಿಕೊಟ್ಟಿರು (ರೂಢಿ). [ಸಂ.]

ಸ್ವಜಾತಿ (ನಾ). ೧. ಸ್ವಂತಜಾತಿ; ತನ್ನ ಕುಲ: ಸ್ವಜಾತಿ ಧರ್ಮನೀತಿಯ ಬಿಟ್ಟು ವಿಜಾತಿಗಳ ಎಂಜಲು ತಿಂಬ ಪಾಪಕರ್ಮಿಗಳಾದಡಾಗಲಿ . . . ರುದ್ರಾಕ್ಷಿಮಾಲೆಯ ಕೊರಳಲ್ಲಿ ಧರಿಸಿದರೆ ಪರಮಪವಿತ್ರನೆನಿಸಿ ಹರನ ಕೈಲಾಸದಲ್ಲಿಪ್ಪನು ನೋಡಾ (ಅಪೆಂಡೇ. ೪೫-೪); ಹೆಂಡಕುಡಿಯುವವರಿಗೆ ಸ್ವಜಾತಿಯವರೂ ಹಿಂದೆ ಚೆಂಬಿನಲ್ಲಿ ನೀರು ಕೊಡುತ್ತಿರಲಿಲ್ಲ (ಸನ್ನೂಹು. ೩೧೫). ೨. ತನ್ನ ಜೀವವರ್ಗ; ಸ್ವಂತ ಜೀವಜಾತಿ. [ಸಂ.]

ಸ್ವಜೀವ (ನಾ). ತನ್ನ ಜೀವ,— ಪ್ರಾಣ: ಧನಮುಚಿತದಾನದೊಳ್ ಜವ್ವನಂ ತಪೋನಿಯಮದೊಳ್ ಸ್ವಜೀವಂ ಸನ್ಯಾಸನದೊಳ್ ಪೋದಂಗೇವೋಯ್ತೆನೆ ಸುದನರ್ ನೃಪತಿ ಪಾತ್ರದಾನಮನಿತ್ತಂ (ಶಾಂತಿಪು. ೬-೭೩). [ಸಂ.]

ಸ್ವತಂತ್ರ (ಗು). ೧. ಪರಾಧೀನವಲ್ಲದ; ಸ್ವಾವಲಂಬಿಯಾದ: ವ್ಯಕ್ತಿ ಯಾವಾಗಲೂ ಸ್ವತಂತ್ರಜೀವಿಯಾಗಿರಲು ಪ್ರಯತ್ನಿಸಬೇಕು (ರೂಢಿ). ೨. ಸ್ವೇಚ್ಛೆಯಿಂದ ಕೂಡಿದ; ಸ್ವಚ್ಛಂದವೃತ್ತಿಯ; ಯಾರ ಅಧೀನಕ್ಕೂ ಒಳಪಡದ. ೩. (ಮಕ್ಕಳ ವಿಚಾರದಲ್ಲಿ) ತಂದೆ, ತಾಯಿಗಳ ಅಧೀನಕ್ಕೆ ಒಳಪಡದ; ವಯಸ್ಸಿಗೆ ಬಂದ; ಬೆಳೆದ. (ನಾ). ೪. ಯಾರ ಅಧಿಕಾರಕ್ಕೂ ಒಳಪಡದಿರುವಿಕೆ; ಸ್ವಾತಂತ್ರ್ಯ; ಅನಿರ್ಬಂಧತೆ: ''ಸ್ವತಂತ್ರ ವ್ಯುತ್ಥಾನಂ ವಿವೃತ್ತಿಯೆನಲೊಲಿದಂತೆ ನಡಹಮಕ್ಕುಂ'' (ಮಂಗರಾ. ೧೩೩-೭೦); ವ್ಯಕ್ತಿ ಸ್ವತಂತ್ರವಾಗಿ ಅವುಗಳನ್ನು ಬೆದಕಿ ಹೊಸದನ್ನು ಸೇರಿಸುವಂತೆ ಇರಲಿಲ್ಲ (ತಿಕ್ಕ. ೩೭); ದೇಶಾಂತರ ಹೋದರೂ ಸ್ವತಂತ್ರವಿರಬೇಕು (ಗಾದೆ). ೫. ಸ್ವಾತಂತ್ರ್ಯದಿಂದ ಕೂಡಿದವನು; ನಿರ್ಬಂಧವಿಲ್ಲದವನು: ಕೂಡಲಸಂಗಮದೇವಾ ನಿಮ್ಮ ಶರಣರು ಸ್ವತಂತ್ರರು (ಬಸವ. ೮೧೪); ನೀನು ಇನ್ನೂ ಸಣ್ಣವನು; ಸ್ವತಂತ್ರವಾಗಿ ನಡೆಯತಕ್ಕಷ್ಟು ಪ್ರೌಢನಾಗಿಲ್ಲ (ಮುಂಬಯಿ. ೪-೩೮). ೬. [ವ್ಯಾಕ] ಸಾಪೇಕ್ಷವಲ್ಲದುದು: ಅವಂ ಅವಳ್ ಅದು ಎಂಬಿವು ಸ್ವತಂತ್ರಂಗಳ್ (ಶಮದ. ೧೪೩ ವೃತ್ತಿ). [ಸಂ.]

ಸ್ವತಂತ್ರಿ (ನಾ). ಸ್ವಾತಂತ್ರ್ಯವನ್ನು ಹೊಂದಿದವನು; ನಿರ್ಬಂಧವಿಲ್ಲದವನು: ನಾನಱಿದು ತಂದಿಹೆನೆಂದಡೆ ಸ್ವತಂತ್ರಿಯಲ್ಲ ನಿನ್ನ ಭೇದಿಸಿ ಕಂಡಿಹೆನೆಂದಡೆ ಸ್ವಾಮಿವಿಶ್ವಾಸಿಯಲ್ಲ (ಮೋಮಾ. ೯೯-೩೯೫). [ಸಂ. ಸ್ವತಂತ್ರಿನ್]

ಸ್ವತಂತ್ರಿಕೆ (ನಾ). ಸ್ವಾತಂತ್ರ್ಯ; ಸ್ವತಂತ್ರತ್ವ: ತನ್ನಿಂದಱಿದೆನೆಂದಡೆ ಸ್ವತಂತ್ರಿಕೆ ಇಲ್ಲ ಇದಿರಿಂದಱಿದೆನೆಂದಡೆ ಪರತಂತ್ರಿಯಲ್ಲ (ಮೋಮಾ. ೯-೬೧). [ಸ್ವತಂತ್ರ + - ಇಕೆ]

ಸ್ವತಂತ್ರಿಸು (ಕ್ರ). ಸ್ವಾತಂತ್ರ್ಯವನ್ನು ಹೊಂದು; ಸ್ವಾತಂತ್ರ್ಯವನ್ನು ವಹಿಸಿಕೊಳ್ಳು: ಮಂತ್ರದಿಂ ತಹೆನೆಂಬುದೇಕಾಣೆಯಿಮ್ಮು ಸ್ವತಂತ್ರಿಸುತಿದೆಯೆಂದಳಾಕೆ (ಧರಚ. ೪೬-೧೩೬); ನಾನೇ ಸ್ವತಂತ್ರಿಸಿ ಸರಸ್ವತಿಯನ್ನು ಕರೆದು ಕೇಳುವೆನು (ನಡದಾ. II, ೧೪೩೯). [ಸ್ವತಂತ್ರ + - ಇಸು]

ಸ್ವತಃ (ಅ). ತಾನೇ; ಖುದ್ದಾಗಿ; ಸ್ವಯಂ: ನೀವೀಗ ಸ್ವತಃ ಹೋಗಬೇಕೇನು? (ಪ್ರಣಸ. ೫). [ಸಂ. ಸ್ವತಸ್]

ಸ್ವತಃಪ್ರಮಾಣ (ನಾ). ಸ್ವಯಂ ವ್ಯಕ್ತವಾದುದು; ತಾನೇ ಪ್ರಮಾಣವಾದುದು; ಸ್ವತಃ ಸಿದ್ಧವಾದುದು: ಮಾನವನ ಪುಸ್ತಕಭಂಡಾರದಲ್ಲಿ ವೇದವು ಅತ್ಯಂತ ಪುರಾತನ . . . ಸನಾತನಕಾಲದಿಂದ ಭಾರತೀಯರಿಗೆ ಅದು ಸ್ವತಃಪ್ರಮಾಣ; ಶಾಶ್ವತಸತ್ಯ (ಭಾರದ. ೩೪). [ಸಂ.]

ಸ್ವತಃಸಿದ್ಧ (ನಾ). ೧. = ಸ್ವತಃಪ್ರಮಾಣ. ೨. ಸ್ವಯಂವ್ಯಕ್ತನಾದವನು; ಸ್ವತಃ ಪ್ರಮಾಣನಾದವನು; ಸ್ವಯಂಭೂ: ಶತಪತ್ರಕಮಳಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವ (ಬಸವ. ೮೧೩). [ಸಂ.]

ಸ್ವತಸ್ಸಿದ್ಧ (ನಾ). = ಸ್ವತಃಪ್ರಮಾಣ: ಅವೆಲ್ಲಾ ಧ್ವನಿತಾರ್ಥವೇ, ಅದು ಸ್ವತಸ್ಸಿದ್ಧವಾಗಿರಬಹುದು (ಧ್ವನ್ಯಾಲೋ. X. ಮುನ್ನುಡಿ). [ಸಂ.]

ಸ್ವತ್ತು 'ಸೊತ್ತು' ನೋ.

ಸ್ವತ್ವ (ನಾ). ೧. ಸ್ವತಂತ್ರಸ್ಥಿತಿ,— ಅಸ್ತಿತ್ವ. ೨. ಸ್ವಂತ ಹಕ್ಕು; ಒಡೆತನ; ಸ್ವಾಮ್ಯ: ದಾನವೆಂದರೆ ದಾತನು ದಾನಮಾಡುವ ಸ್ವತ್ತಿನ ಮೇಲೆ ತನಗಿರುವ ಸ್ವತ್ವವನ್ನು ನಿವೃತ್ತಿ ಮಾಡಿ ಅದರ ಮೇಲೆ ಪ್ರತಿಗ್ರಹೀತನ ಸ್ವತ್ವವನ್ನು ಉತ್ಪಾದನ ಮಾಡುವ ಕ್ರಿಯೆಯು (ಅರ್ಥಧ. ೮೮); ಪ್ರತ್ಯಕ್ಷವಿಲ್ಲದಾ ಸ್ವಾಮಿಯಂ ನೆನೆನೆನೆದು ಸತ್ಯ ಭಕ್ತಿಯ ಸೇವೆಗೆಯ್ವಂ ಭರತಂ ನಿತ್ಯಜೀವನದಿ ನೀನಾ ನಯವನನುಸರಿಸೊ ಸ್ವತ್ವದಾಶೆಯ ನೀಗಿ (ಮಂಖಿಕ. ೭೧೦). ೩. ತನ್ನತನ; ಸ್ವಂತಿಕೆ: ಪರಿಸ್ಥಿತಿಯು ಹಲವು ಬಗೆಗಳಿಂದ ವಂಶಮಿಶ್ರಣಕ್ಕೆ ಜನಾಂಗಗಳನ್ನು ಒತ್ತಾಯಪಡಿಸುತ್ತಿದ್ದರೂ ಮನುಷ್ಯನಲ್ಲಿರುವ ಸ್ವತ್ವದ ಅಭಿಮಾನವು ಈ ವಿಷಯಕ್ಕೆ ಎಷ್ಟೋ ತಡೆಯನ್ನು ಹಾಕಿದೆ (ಕರ್ನಾಪೂ. ೧೧). [ಸಂ.]

ಸ್ವದಸ್ತೂರ (ನಾ). ೧. ಸ್ವಂತ ಕೈಬರೆಹ; ಸ್ವಹಸ್ತಾಕ್ಷರ: ನರಸಪ್ಪನ ಸ್ವದಸ್ತೂರ ಬರಹ ಬಸವಲಿಂಗಯದೇವರ ಸ್ವಹಸ್ತದಿನ್ಹಾ ಬರಕೊಟ್ಟ ಭೂದಾನ ವೊಪಿತ (ಮೈಆರ. ೧೯೨೮ ; ೮೨-೪೮ ; 1768); ಶಂಕರಕಾಕಾ ಅವರಿಗೆ ಸ್ವದಸ್ತೂರ ಖುದ್ದ ಕಾಗದ ಬರೆದಿದ್ದ (ದೀಪಹ. II. ೩೭೮). ೨. ಸ್ವಂತ ಸಹಿ; ತನ್ನ ರುಜು : ಇವನ -- ಸ್ವದಸ್ತೂರ (ಪೂರ್ವದ ಯಜಮಾನ) (ನಿರಾಭ. ೧೪೭). [← ಮರಾ. ಸ್ವದಸ್ತೂರ್]

ಸ್ವದಾರಸಂತೋಷ (ನಾ). ತನ್ನ ಹೆಂಡತಿಗೆ ಸಂತೋಷವನ್ನುಂಟುಮಾಡುವಿಕೆ: ವಸುವಂ ದ್ವಿಜನ್ಮದಾನದೆ ಪೊಸಜೊವನಮಂ ಸಂತೋಷದೆ ನಿನ್ನಿಸುವಂ ಪತಿಕಾರ್ಯದೆ ವರ್ಜಿಸಿದ್ಕೆ ನಿನ್ನನ್ನನಾವನಂಗಾಧಿಪತೀ (ಗದಾಯು. ೫-೨೨). [ಸಂ.]

ಸ್ವದೇಶ (ನಾ). ಸ್ವಂತ ದೇಶ; ತಾಯ್ನಾಡು: ಇಂತಹ ಎಷ್ಟೋಜನ ನರಪಿಶಾಚರು ಸ್ವದೇಶಹಿತೈಷಿಗಳೆಂಬ ಮೊಗವಾಡಗಳನ್ನು ಹಾಕಿಕೊಂಡು . . . ತಮ್ಮ ಹಾಳ ಹೊಟ್ಟೆಗಳನ್ನು ಹೊರೆದುಕೊಳ್ಳುತ್ತಿರುವರು (ಚಿನ್ನಬೇ. ೧೮೬). [ಸಂ.]

ಸ್ವದೇಶಾಭಿಮಾನ (ನಾ). ತಾಯ್ನಾಡಿನ ಬಗೆಗಿರುವ ಅಭಿಮಾನ, – ಗೌರವ: ಇಂಗ್ಲೀಷ್‌ಸಾಹಿತ್ಯವನ್ನೋದಿದ ಭಾರತೀಯರು ಅದರಲ್ಲಡಕವಾದ ಸ್ವದೇಶಾಭಿಮಾನವನ್ನೂ ಸ್ವಾತ್ರಂತ್ಯಪ್ರೇಮವನ್ನೂ ಬೆಳಿಸಿಕೊಂಡರು (ಭಾರದ. ೪೨೭). [ಸಂ.]

ಸ್ವದೇಶಿ (ಗು). ಸ್ವಂತದೇಶಕ್ಕೆ ಸಂಬಂಧಪಟ್ಟ ; ತಾಯ್ನಾಡಿಗೆ ಸೇರಿದ: ಜರ್ಮನ್ ಬ್ಯಾಂಕುಗಳು ಸ್ಟಾಕು, ಸ್ವದೇಶಿಹುಂಡಿ ಮತ್ತು ಎನಿಮಯದ ಹುಂಡಿಗಳ ದಲ್ಲಾಳಿಕೆಲಸ ಮಾಡುವರು (ಹಣಕ್ರ. ೧೨೩).

ಸ್ವದೇಶಿಚಳುವಳಿ = ಸ್ವದೇಶಕ್ಕೆ ಸಂಬಂಧಿಸಿದ ಆಂದೋಳನ; ದೇಶೀಯಪರವಾದ ಚಳುವಳಿ; IP ಸ್ವದೇಶೀವಸ್ತುಗಳನ್ನೇ ಎಲ್ಲರೂ ಬಳಸಬೇಕೆಂದು ಸ್ವಾತಂತ್ರ್ಯಪೂರ್ವಭಾರತದಲ್ಲಿ ಗಾಂಧೀಜಿಯವರು ನಡೆಸಿದ ಚಳುವಳಿ: ಸ್ವದೇಶಿಚಳುವಳಿಯ ಸಂದರ್ಭದಲ್ಲಿ ಅಸಂಖ್ಯಾತದೇಶಭಕ್ತರು ತಮ್ಮ ಪರದೇಶವಸ್ತುಗಳನ್ನು ಬೆಂಕಿಗೆ ಆಹುತಿ ನೀಡಿದರು (ರೂಢಿ). [< ಸಂ. ಸ್ವದೇಶೀಯ]

ಸ್ವಧರ್ಮ (ನಾ). ೧. ಸ್ವಂತಧರ್ಮ; ತನ್ನ ಧರ್ಮ: ಜೈನಧರ್ಮಂ ಸ್ವಧರ್ಮಂ (ಸುಕುಮಾ. ೧-೪೯); ತನ್ನ ಸ್ವಭಾವಕ್ಕೆ ಹೊಂದಿಕೊಳ್ಳುವ ಧರ್ಮ ಸ್ವಧರ್ಮ (ಭಾರದ. ೩೨೮); ಸ್ವಧರ್ಮ ತಪ್ಪಿದರೂ ಅಧರ್ಮ ಮಾಡಬಾರದು (ಗಾಧ). ೨. ತನ್ನ ಜನಾಂಗ ಅಥವಾ ಜಾತಿಗೆ ಸಂಬಂಧಿಸಿದ ಕರ್ತವ್ಯ. ೩. ತನ್ನ ಕರ್ತವ್ಯ ; ಸ್ವಂತ ವೃತ್ತಿ,– ಕಾರ್ಯ: ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ (ಬಸವ. ೫೧೩);ರೈತರ ಅವನತಿಯ ಮೂಲಕ ಸ್ವಹಿತವನ್ನು ಸಾಧಿಸಿಕೊಳ್ಳುವುದೇ ಮಾಲೀಕರ ಸ್ವಧರ್ಮವಾಗಿತ್ತೆಂಬುದನ್ನು ಅವರು . . . ಅನುಭವದಿಂದ ಮನಗಂಡಿದ್ದರು (ಪುನರು. ೨೯೩). ೪. ತನ್ನತನ; ಸ್ವಂತಿಕೆ. [ಸಂ.]

ಸ್ವಧಾಂತ್ಯ (ನಾ). ಪಿತೃಗಳಿಗೆ ಹವಿಸ್ಸನ್ನು ಸಮರ್ಪಿಸುವಾಗ ಮಾಡುವ ಘೋಷಣೆಯೊಂದಿಗೆ ಮುಗಿಯುವಿಕೆ: ನಿತ್ಯಹೋಮ ಸ್ವಧಾಂತ್ಯದಿ ಘನ ಸ್ವಾಹಾಂತ್ಯ ದಖಿಲಸಂಭ್ರಮಕೆ ಬೆಜಗಾದನು ಹರಿಶ್ಚಂದ್ರನು (ಪಚಾ. ೬-೩೯). [ಸಂ.]

ಸ್ವಧಾಕಾರ (ನಾ). ಪಿತೃದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಮಾಡುವ ಘೋಷಣೆ: ಸ್ವಧಾಕಾರ ವಷಟ್ಕಾರ ಸ್ವಾಹಾಕಾರೋಂಕಾರಧ್ವನಿ ನೆಗಟೆ ನೆಗಟ್ಟು ದಾಹತಿಧೂಮಂ (ಪಂಪಭಾ. ೬-೩೪); ಪಿತೃಕಾರ್ಯಗಳಲ್ಲಿ ಮಾಡುವ ಸ್ವಧಾಕಾರಗಳೂಯಿಲ್ಲ (ಆರ್ಯಮಾ. ೯೪). [ಸಂ.]

ಸ್ವಧಿತಿ (ನಾ). ಕೊಡಲಿ; ಕುಠಾರ: ''ಪರಶ್ವಧಃ, ಕುಠಾರಃ, ಪರಶುಃ, ಸ್ವಧಿತಿಃ – ಈ ೪ ಕೊಡಲಿ'' (ಹಲಾಯು. ೭೮-೩೨೦). [ಸಂ.]

ಸ್ವನ (ನಾ). ಶಬ್ದ; ಸದ್ದು; ಧ್ವನಿ: ಉಣ್ಮೆ ನಭದೊಳ್ ಮಾಂಗಲ್ಯತೂರ್ಯಸ್ವನಂ (ಜಗವಿ. ೨-೭೭); ಗೀತವಾದ್ಯಮಧುರಸ್ವನಂ ಕೇಳದಿಹುದಿನಿತು ಬಳಿಸಾರ್ದೊಡಂ (ಶ್ರೀರಾಮಾ. ೧೦೫-೧೫೪). [ಸಂ.]

ಸ್ವನಾಮಖ್ಯಾತ (ನಾ). ತನ್ನ ಹೆಸರಿನಿಂದ ಪ್ರಸಿದ್ಧವಾದ ವ್ಯಕ್ತಿ; ಹೆಸರಾಂತ ವ್ಯಕ್ತಿ: ಎಷ್ಟೋ ಜನ ದೊಡ್ಡ ದೊಡ್ಡ ಸ್ವನಾಮಖ್ಯಾತರಾದ ನ್ಯಾಯವಾದಿಗಳೂ . . . ಜಯಿಸಲಾರದವರಾಗಿ ತಲೆಯನ್ನು ತಗ್ಗಿಸಿ ಬಿಟ್ಟಿರುವರು (ಬಚ್ಚಬೇ. ೪). [ಸಂ.]

ಸ್ವನಾಯ 'ಸೊನಯಿ' ನೋ.

ಸ್ವನಿತ (ಗು). ೧. ಶಬ್ದಮಾಡಿದ; ಧ್ವನಿಮಾಡಿದ. (ನಾ). ೨. ಶಬ್ದ ಮಾಡುವುದು; ಧ್ವನಿಯನ್ನು ಹೊರಡಿಸುವುದು: ''ಸ್ವನಿತಂ, ಧ್ವನಿತಂ -- ೨ ಕೂಗುತ್ತಿರುವಂಥಾದ್ದು, ಮೊರೆಯುತ್ತಿರುವಂಥಾದ್ದು'' (ಸಿದ್ಧಾಂ. ೩೪೬). ೩. ಶಬ್ದ; ಧ್ವನಿ. ೪. ಸಿಡಿಲಿನ ಶಬ್ದ. ೫. ಸಿಡಿಲಿನ ಹೊಡೆತ; ವಜ್ರಾಘಾತ. [ಸಂ.]

ಸ್ವನಿಮಾ (ನಾ). [ಭಾಷಾಶಾ] ಧ್ವನಿಗಳ ಒಂದು ವರ್ಗ: Phoneme ಎಂಬ ಇಂಗ್ಲಿಷ್‌ಪದಕ್ಕೆ ಸಮಾನಾರ್ಥದಲ್ಲಿ ಧ್ವನಿಮಾ ಎಂಬ ಪದವನ್ನು ಇದೂವರೆಗೂ ಬಳಸುತ್ತಿದ್ದರು, ಆದರೆ ಈಗ ಸ್ವನಿಮಾ ಎಂಬ ಪದ ರೂಢಿಗೆ ಬರುತ್ತಿದೆ (ದ್ರಾವಿ. X. ಮೂದಲುಮಾತು). 'ಧ್ವನಿಮಾ' ಪರಾ. [ಸಂ.]

ಸ್ವಪಕ್ಷ (ನಾ). ೧. ಸ್ವಂತ ಗುಂಪು; ತನ್ನ ಪಕ್ಷ. ೨. ತನ್ನ ಸಿದ್ಧಾಂತ; ಸ್ವಂತ ಅಭಿಪ್ರಾಯ: ಪರಪಕ್ಷದೂಷಣಪುರಸ್ಸರಮನೇಕೋಪಪತ್ತಿಗಳಿಂ ಸ್ವಪಕ್ಷ ಸ್ಥಾಪನಂಗಯ್ದು (ಆದಿಪು. ೨-೨೨ ವ). ೩. ತನ್ನ ಪಕ್ಷಕ್ಕೆ ಸೇರಿದವನು; ಸ್ನೇಹಿತ: ವಸುಧಾತಲದೊಳ್ ಸ್ವಪಕ್ಷದರ್ಶನವಿಲಾಸಮೊದವಿಸದೆ ಮುದಮನಾರ್ಗಂ ಮನದೊಳ್ (ಚಂದ್ರಪ್ರ. ೨-೯೩). [ಸಂ.]

ಸ್ವಪನ (ನಾ). ೧. ಮಲಗುವುದು; ನಿದ್ರೆ: ''ಸ್ವಪನಂ ಸ್ವಾಪಂ'' (ವಸ್ತುಕೋ. ೧೧೪-೨೦). ೨. ನಿದ್ರೆಯಲ್ಲಿ ಕಾಣುವ ನೋಟ; ಕನಸು; ಸ್ವಪ್ನ: ಸ್ವಪನದಿ ಬಂದು ಕ್ರೀಡಿಸಿದಾತ ಪ್ರಿಯನಾದಪ ಕೆಲದಿವಸಂಗಳಿಗೆ (ಮೋಹತ. ೨೫-೨೭); ಸ್ವಪನದಿ ಜ್ಞಾನ ಬಂದಂತೆ (ಹರೋತ. ೨೩).

[ಸಂ. / IP ಈ ಶಬ್ದವು 'ಸ್ವಪ್ನ'ದ ತದ್ಭವವಾಗಿರುವ ಸಾಧ್ಯತೆಯೂ ಇದೆ]

ಸ್ವಪ್ನ (ನಾ). ೧. ಮಲಗುವಿಕೆ; ನಿದ್ರೆ. ೨. = ಸ್ವಪನ ೨: ಸುಖದುಃಖಗಳಿಂಬುದು ಸ್ವಪ್ನೇಂದ್ರಜಾಲಸನ್ನಿಭಂಗಳುಂ . . . ಅಕ್ಕುಂ (ಶಾಂತಿಪು. ೮-೧೩೨ ವ); ಜಾಗ್ರತ್ಸ್ವಪ್ನ ಸುಷುಪ್ತಿಯವಸ್ಥಾತ್ರಯಂಗಳೊಳು ಶರಣರಂ ಸಂಗನೆಂದಲ್ಲದೆ ಕಾಣೆ (ಬಸರ. ೮-೪೧). [ಸಂ.]

ಸ್ವಪ್ನಜೀವಿ (ನಾ). ಕಲ್ಪನಾಲೋಕದಲ್ಲಿ ವಿಹರಿಸುವವನು; ಕನಸುಗಾರ; ಕನಸು ಕಟ್ಟುವವನು: ಅದನ್ನು ನೆಚ್ಚಿ ಸ್ವಪ್ನಜೀವಿಗಳು ದಿಕ್ಕೂಚಿಯನ್ನು ಸಹ ಬಯಸದೆ ತೇಜಸ್ಸಾಗರದಲ್ಲಿ ಯಾತ್ರೆ ಹೊರಡುತ್ತಾರೆ (ಯೋಧಪು. ೪೨). [ಸಂ. ಸ್ವಪ್ನಜೀವಿನ್]

ಸ್ವಪ್ನತಂತ್ರ (ನಾ). ಸಾಹಿತ್ಯದ ರಚನೆಯಲ್ಲಿ ಕನಸನ್ನು ಬಳಸಿಕೊಳ್ಳುವ ತಂತ್ರ, – ಯೋಜನೆ : ನವ್ಯಕಾವ್ಯದ ಗಂಭೀರಗೀತಗಳಲ್ಲಿ ಇನ್ನೊಂದು ವಿಶೇಷನಿರೂಪಣೆಯು ಕಂಡು ಬರುತ್ತದೆ. ಅದಾವುದೆಂದರೆ, - ಸ್ವಪ್ನತಂತ್ರ (ನವ್ಯಕಾ. ೩೧). [ಸಂ.]

ಸ್ವಪ್ನದರ್ಶನ (ನಾ). ಕನಸಿನಲ್ಲಿ ಕಾಣುವಿಕೆ; ಸ್ವಪ್ನದಲ್ಲಿ ನೋಡುವಿಕೆ: ಮಹಾಶ್ಚರ್ಯಸ್ವಪ್ನದರ್ಶನೋತ್ಸವಾನಂತರಂ ಸಹಸ್ರಕರನೋದಯಸಮಯದೊಳ್ . . . ಒಪ್ಪುತ್ತಿರೆ (ಜಗವಿ. ೨-೭೭ ವ); ಧ್ಯಾನನಿದ್ರಾಸ್ವಪ್ನದರ್ಶನದಿ ಕಾಣಿಸಿತ್ತೊಂದು ದಿವ್ಯಾಕೃತಿ ರುಚಿರಮೂರ್ತಿ! (ಚಿತ್ರಾಂಗ. ೮೩-೨೨೦೧). [ಸಂ.]

ಸ್ವಪ್ನಲೋಕ (ನಾ). ಕನಸಿನ ಪ್ರಪಂಚ; ಕಲ್ಪನಾಲೋಕ: ಸ್ವಪ್ನಲೋಕವ ಜಾಗ್ರತಂ ಸುಳಿಸುವನಲ್ತೆ? (ಮಂಜಿಕ. ೯೫). [ಸಂ.]

ಸ್ವಪ್ನಾವಸ್ಥೆ (ನಾ). ಕನಸಿನ ಸ್ಥಿತಿ; ಕನಸು ಕಾಣುವ ಭಾವ,– ನೆಲೆ: ಎನ್ನ ಸೂಕ್ಷ್ಮತನುವಿನ ಸ್ವಪ್ನಾವಸ್ಥೆಯಲ್ಲಿ ದೃಶ್ಯಾದೃಶ್ಯದ ಲೀಲೆಯನಾಡುವಾತನು ನೀನೇ ಅಯ್ಯಾ (ಅಖಂಡೇ. ೩೦೬-೯೩). [ಸಂ. ಸ್ವಪ್ನಾವಸ್ಥಾ]

ಸ್ವಪ್ರಕಾಶ (ನಾ). ೧. ಸ್ವತಃ ಇರುವ ತೇಜಸ್ಸು; ಸ್ವಯಂಪ್ರಕಾಶ. ೨. ಸ್ವತಃ ತೇಜಸ್ಸನ್ನು ಹೊಂದಿರುವುದು; ಸ್ವಯಂಪ್ರಕಾಶವಾದುದು: ಆದ್ಯಯ ವತೀಂದ್ರಿಯವಮೂರ್ತಸ್ವಪ್ರಕಾಶವದು (ಅಮೃತ. ೩-೧೩೧); ಜ್ಞಾನವು . . . ಸ್ವಪ್ರಕಾಶವಲ್ಲ ಎಂಬ ವಾದದ ರಹಸ್ಯವನ್ನು 'ನ್ಯಾಯಮಂಜರೀ'ಕಾರರು ಸೂಚಿಸಿರುವರು (ಹಿಂದುಸಾ. ೫೪). [ಸಂ.]

ಸ್ವಪ್ರತಿಷ್ಠೆ (ನಾ). ೧. ಆತ್ಮಾಭಿಮಾನ; ಸ್ವಾಭಿಮಾನ; ಸ್ವಂತದ ಬಗ್ಗೆ ಹೆಮ್ಮೆಪಡುವುದು: ಪಹರೆನಾಯಕ ಸ್ವಪ್ರತಿಷ್ಠೆ ಮತ್ತು ವಿನೋದ ಬೆರೆತ ಧ್ವನಿಯಲ್ಲಿ ಗದರಿಸಿದನು (ಪುನರು. ೫); ಕುರ್ಚಿಯಲ್ಲಿ ಕೂರಿಸಿದಾಗ ಮಗುವಿನ ಸ್ವಪ್ರತಿಷ್ಠೆಯ

ಹುಟ್ಟುಗುಣದ ಪ್ರದರ್ಶನಕ್ಕೆ ಅಡ್ಡಿಯಾಯಿತು (ಶಕ್ತಿದ. ೬೫೩). ೨. ತನ್ನ ಅಭಿಪ್ರಾಯವನ್ನು ಪಟ್ಟು ಹಿಡಿಯುವಿಕೆ ; ದುರಾಗ್ರಹ : ಇದು ದಾಸನ ಸ್ವಪ್ರತಿಷ್ಠೆ! (ಹೇಮಕೂ. ೧೦೨). [ಸಂ. ಸ್ವಪ್ರತಿಷ್ಠಾ]

ಸ್ವಪ್ರಯತ್ನ (ನಾ). ತನ್ನ ಯತ್ನ; ಸ್ವತಃ ಮಾಡುವ ಪ್ರಯತ್ನ, — ಎತ್ತುಗಡೆ : ತಮ್ಮ ರಾಜ್ಯವನ್ನು ನೊಳಂಬರು ಒಡೆಯರ ಸಹಾಯದಿಂದಲೂ ಸ್ವಪ್ರಯತ್ನದಿಂದಲೂ . . . ಅಭಿವೃದ್ಧಿಗೊಳಿಸಿಕೊಂಡರು (ನೊಳಂಬ. ೭೧). [ಸಂ.]

ಸ್ವಪ್ರಯೋಜನ (ನಾ). ಸ್ವಂತ ಅನುಕೂಲ; ತನ್ನ ಉಪಯೋಗ, — ಪ್ರಯೋಜನ: ಸಾಮಾನ್ಯವಾಗಿ ಯಾರೂ ಸ್ವಪ್ರಯೋಜನವಿಲ್ಲದೆ ಕೆಲಸವನ್ನು ಮಾಡುವುದಿಲ್ಲ (ರೂಢಿ). [ಸಂ.]

ಸ್ವಪ್ರಶಂಸೆ (ನಾ). ತನ್ನನ್ನು ತಾನೇ ಹೊಗಳಿಕೊಳ್ಳುವಿಕೆ; ಆತ್ಮಪ್ರಶಂಸೆ: ಸ್ವಲ್ಪ ಸ್ವಪ್ರಶಂಸೆಯೂ ಅವನಲ್ಲಿ ಸೇರಿಕೊಂಡಿತ್ತು (ಪುನರು. ೩೪೦). [ಸಂ. ಸ್ವಪ್ರಶಂಸಾ]

ಸ್ವಪ್ರೇರಣೆ (ನಾ). ತನಗೆ ತಾನೇ ಉಂಟಾಗುವ ಪ್ರಚೋದನೆ; ಆಂತರಿಕ ಪ್ರೇರಣೆ; ಸ್ವಯಂಪ್ರೇರಣೆ: ಸ್ವಪ್ರೇರಣೆಯಿಂದ ಮಾಡುವ ಉದ್ಯಮಗಳಂತೆ ತೋರಬೇಕು (ಶಕ್ತಿದ. ೩೧೬) [ಸಂ. ಸ್ವಪ್ರೇರಣಾ]

ಸ್ವಬುದ್ಧಿ (ನಾ). ಸ್ವಂತ ಬುದ್ಧಿ; ತನ್ನ ಬುದ್ಧಿಶಕ್ತಿ: ಹೇಳಿಕೆಯ ಮಾತು ಕೇಳದೆ ಯಾವಾಗಲೂ ಸ್ವಬುದ್ಧಿಯಿಂದ ಕೆಲಸ ಮಾಡುವುದು ಒಳ್ಳೆಯದು (ರೂಢಿ). [ಸಂ.]

ಸ್ವಭಾನು (ನಾ). ೧. ತನ್ನಷ್ಟಕ್ಕೆ ತಾನೇ ಹೊಳೆಯುವಂತಹದು; ಸ್ವಯಂ ಪ್ರಕಾಶವಾದುದು. ೨. [ಜ್ಯೋತಿ] ಅರವತ್ತು ಸಂವತ್ಸರಗಳಲ್ಲಿ ಹದಿನೇಳನೆಯದು: ಮತ್ತಮಾ ವರುಷವೇ ಪ್ರಭವ . . . ಸ್ವಭಾನು . . . ಅಕ್ಷಯವೆಂಬವತ್ತು ತೆಱನಾಗಿಹುದು (ವಿವೇಕ. ೩೨೧). [ಸಂ.]

ಸ್ವಭಾವ (ನಾ). ೧. ಸಹಜಸ್ಥಿತಿ ; ಸ್ವಾಭಾವಿಕವಾದ ಇರವು. ೨. ಸಹಜವಾದ ಗುಣಧರ್ಮ; ಸ್ವಾಭಾವಿಕವಾದ ಗುಣ: "ಧರ್ಮಃ, ಸ್ವಭಾವಃ, ಆತ್ಮಾ - ಈ ೩ ಸ್ವಭಾವಂ" (ಹಲಾಯು. ೧೨೯-೯೭); ಅಲ್ಲದೆ, ಧರ್ಮವು ನನ್ನ ಸ್ವಭಾವಕ್ಕೆ ಬಂದದ್ದು (ವಚಭಾ. ೧೨೦). ೩. (ಸಾಮಾನ್ಯವಾಗಿ ಪ್ರಾಣಿಗಳಲ್ಲಿ) ಕಲಿಯದೆ ಬಂದ ಚಾತುರ್ಯ; ಹುಟ್ಟರಿವು: ಹಲವು ವಸ್ತುಗಳಿಗೆ ಹಲವು ತೆರನಾಗಿ ತೋರುವ ಈ ಪ್ರತಿಕ್ರಿಯೆಗಳಿಗೆ ಮೂಲವಾದುದು ಸ್ವಭಾವ (Instinct) (ಸೌಂದಸ. ೫). ೪. [ಕಾವ್ಯಮೀಮಾ] ರಸವಾಗಬಲ್ಲ ಸ್ಥಾಯಿಭಾವ : "ಆ ರತಿಸ್ಥಿತಿಯಿಂದ ಪೂಱಗೆ ಪುಟ್ಟಿದ ಮನವಿಕಾರಂ ಸ್ವಭಾವವಕ್ಕುಂ" (ಮಂಗರಾ. ೨೩-೨). ೫. ಅರ್ಥಾಲಂಕಾರಗಳಲ್ಲಿ ಒಂದು ಬಗೆ; ಸಹಜಗುಣಧರ್ಮಗಳ ವರ್ಣನೆ; ಸ್ವಭಾವೋಕ್ತಿ: ಸತತಂ ದಕ್ಷಿಣಮಾರ್ಗೋದಿ ತೋಕ್ತಿಭೇದಕಗುಣಂ ಸ್ವಭಾವಾಖ್ಯಾನಂ (ಕವಿರಾ. ೨-೫೩). [ಸಂ.]

ಸ್ವಭಾವತಃ (ಅ). ಸಹಜವಾಗಿ; ಸ್ವಾಭಾವಿಕವಾಗಿ: ಸ್ವಭಾವತಃ ಅವನು ಮುಂಗೋಪಿ (ರೂಢಿ). [ಸಂ. ಸ್ವಭಾವತಸ್]

ಸ್ವಭಾವಧರ್ಮ (ನಾ). ಸ್ವಾಭಾವಿಕವಾದ ಗುಣ; ಹುಟ್ಟುಗುಣ: ಅನುಭವ ಅವರ ಸ್ವಭಾವಧರ್ಮವನ್ನು ಸಾಂದ್ರಗೊಳಿಸಿತು (ಧರ್ಮಸಾ. ೭೭). [ಸಂ.]

ಸ್ವಭಾವವಾದ (ನಾ). [ವೇದಾಂತ] ವಸ್ತುಗಳ ನೈಸರ್ಗಿಕಪ್ರವೃತ್ತಿಗನುಗುಣವಾದ ಸಹಜ ಹಾಗೂ ಅತ್ಯಾವಶ್ಯಕಕ್ರಿಯೆಗಳಿಂದ ಜಗತ್ತು ಸೃಷ್ಟಿ ಮತ್ತು ಸ್ಥಿತಿಯನ್ನು ಹೊಂದಿದೆ ಎಂಬ ವಾದ: ಒಂದು ಬೀಜವು ಭೂಮಿಯಲ್ಲಿ ಬಿದ್ದರೆ ಬೀಜಶಕ್ತಿ ಯಿಂದಲೇ ಮೊಳಕೆಯಾಗಿ ಎಲೆಗಳಾಗಿ ದಂಟಾಗಿ ಪುಷ್ಪವಾಗಿ ಫಲವಾಗುತ್ತದೆ. ಇದಕ್ಕೆ ಸ್ವಭಾವವಾದವೆಂದು ಹೆಸರು (ಹಿಂದುಸಾ. ೧೫). [ಸಂ.]

ಸ್ವಭಾವವೈರಾಗ್ಯ (ನಾ). ಸ್ವಾಭಾವಿಕವಾದ ವಿರಕ್ತಿ; ಸಹಜವೈರಾಗ್ಯ: ಸ್ವಭಾವ ವೈರಾಗ್ಯಭಾವಮುಂ ಸರ್ವಭವಾನುಭವವಿರಕ್ತತೆಯುಂ ದುರ್ಲಭಂ (ಸುಕುಮಾ. ೧೨-೩೭). [ಸಂ.]

ಸ್ವಭಾವಸಿದ್ಧ (ಗು). ೧. ಸಹಜವಾದ; ಸ್ವಾಭಾವಿಕವಾದ. (ನಾ). ೨. ಸಹಜವಾದುದು; ಸ್ವಾಭಾವಿಕವಾದುದು: ಸ್ವಭಾವಸಿದ್ಧವಾಗಿಯೇ ತಲೆದೋರುತ್ತಿದ್ದ ಅವಳ ಬುದ್ಧಿಶಕ್ತಿಯನ್ನೂ ನಡೆವಳಿಕೆಗಳನ್ನೂ ನೋಡಿದವರೆಲ್ಲ ಅವಳು . . . ರಾಜಮಂದಿರದಲ್ಲಿ ಬೆಳೆದವಳಲ್ಲವೆಂದು ಹೇಳಲಾರದವರಾಗಿದ್ದರು (ಕವಿಕ. ೯). [ಸಂ.]

ಸ್ವಭಾವೋಕ್ತಿ (ನಾ). ೧. ಇದ್ದುದನ್ನು ಇದ್ದಂತೆ ಹೇಳುವ ಮಾತಿನ ಕ್ರಮ. ೨. [ಕಾವ್ಯಮೀಮಾ] ಅರ್ಥಾಲಂಕಾರಗಳಲ್ಲಿ ಒಂದು ಬಗೆ; ಸಹಜಗುಣ ಧರ್ಮಗಳ ವರ್ಣನೆ: ವಕ್ರೋಕ್ತಿ ಸ್ವಭಾವೋಕ್ತಿ ಪಾಕ ಲಾಲಿತ್ಯ ಗುಂಪು ಇಂಪು ರೀತಿ ನೂತನಮಾಗೆ . . . ಮೆಚ್ಚಿದರ್ದ ಸರಸಕವಿಗಳ ಸಂದಣಿಯೊಳಂ (ಗಿರಿಕ. ೨-೧೦೫ ಬ); ವಸ್ತುಗಳ ಜಾತಿಗುಣ ಕ್ರಿಯಾದಿಗಳನ್ನು ಇದ್ದದಿದ್ದ ಹಾಗೇ ವರ್ಣಿಸುವುದು 'ಸ್ವಭಾವೋಕ್ತಿ' (ಕೃಷಿಡಿ. ೨೮೬). [ಸಂ.]

ಸ್ವಭಾಷಾಪ್ರೇಮ (ನಾ). ತನ್ನ ಮಾತೃಭಾಷೆಯ ಬಗೆಗಿರುವ ಪ್ರೀತಿ, — ಅಭಿಮಾನ: ಅವರು ಪರದೇಶಕ್ಕೆ ಹೋದರೂ ಸ್ವಭಾಷಾಪ್ರೇಮದಿಂದ ಕನ್ನಡದ ಸಂಪರ್ಕವನ್ನು ಉಳಿಸಿಕೊಂಡಿದ್ದಾರೆ (ರೂಢಿ). [ಸಂ.]

ಸ್ವಭಾಷಾಮೋಹ (ನಾ). = ಸ್ವಭಾಷಾಪ್ರೇಮ: ಇದು ಕೇವಲ ಸ್ವಭಾಷಾಮೋಹದಿಂದ ಆಡುವ ಮಾತಲ್ಲ (ಗೃಹವಿ. IV. ಮುನ್ನುಡಿ). [ಸಂ.]

ಸ್ವಭು (ನಾ). ತನ್ನಿಂದ ತಾನೇ ಉಂಟಾದವನು; ಸ್ವಯಂಭು; ಬ್ರಹ್ಮ: "ಪಿತಾಮಹಂ ಸ್ವಭು ಸ್ವಯಂಭು ವಿಧಿ ಚತುರಾನನಂ . . . ವಿರಂಚಿಯೆನೆ ಬ್ರಹ್ಮನಕ್ಕುಂ" (ಮಂಗರಾ. ೩-೯). [ಸಂ. ಸ್ವಭೂ]

ಸ್ವಯ (ನಾ). ೧. [ವೀಶೈ] ತಾದಾತ್ಮ್ಯಭಾವ: ಬಯಲ ಬಣ್ಣವ ಮಾಡಿ ಸ್ವಯವ ನಿಲವ ಮಾಡಿ ಸುಳಿವಾತನ ಬೆಡಗ ಬಲ್ಲವರಾರ್ಯ (ದೇವಾವ. ೯೪-೧೩೧); ಅಗ್ನಿಯಂಜಲನುಂಡು ಲಿಂಗದಲ್ಲಿ ಸ್ವಯವನಱಸುವ ಭಂಗಿತರನೇನೆಂಬೆನಯ್ಯಾ (ಚನ್ನವ. ಕ. ೫೪೫-೧೧೮೨). ೨. ಪ್ರತ್ಯಕ್ಷಭಾವ; ನಿಜಸ್ವರೂಪ: ನಯನೇಂದ್ರಿಯದೊಳು ಚಿನ್ಮಯರೂಪ ನೋಟ ತನ್ಮಯವೆ ಶಿವಲಿಂಗ ಸ್ವಯವೆಂದು ನಂಬು ನಿಶ್ಚಯವೆಂದ ಗುರುವೆ ಕೃಪೆಯಾಗು (ಮೃಲಾರ. ೬೦-೧೬೧). ೩. ನಿತ್ಯವಾದುದು ; ಶಾಶ್ವತವಾದುದು: ಸ್ವಯವಿದ್ದಂತೆ ಲಯವ ಕೂಡುವರೆ ಅಯ್ಯಾ (ಮದೇವ. ೨೫೬- ೬೪). ೪. ನಿತ್ಯವಾದುದು; ಸತ್ಯ: ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು ಸಾಯದ ಮುನ್ನ ಸ್ವಯವನಱಿದಡೆ ದೇವನೊಲಿದ (ಅವಚಂ. ೧೩೩-೭೦೬). ೫. ತನ್ನನ್ನು ತಾನು ಅರಿತುಕೊಳ್ಳುವುದು: "ಸ್ವಯ - ತನ್ನ ತಾನರಿವುದು" (ವೀಶೈಪಾ. ೨೪-೮). ೬. ಸ್ವಯಂಪೂರ್ಣವಾದುದು; ತಾನೇ ವ್ಯಕ್ತವಾದುದು: ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೇ (ಮಹಾದೇ.ಬ. ೨೮-೫೭); ಹಿಂದೆ ನೀವು ಕೊಟ್ಟ ನಿರೂಪು ಹುಸಿಯಾದಡೆ ಇನ್ನು ಮುಂದೆ ಸ್ವಯವಪ್ಪಂತೆ ನಡಿಸಾ (ಸಿದ್ಧವ. ಕ. ೬೩-೧೯೯). ೭. ತನ್ನತನ; ಸ್ವಂತಿಕೆ: ಸ್ವಯವಿರಬೇಕು ಸಕಲಗುಣಂಗಳಲ್ಲಿ ನಯವಿರಬೇಕು ನುಡಿಗಡಣದಲ್ಲಿ (ಅಖಂಡೇ. ೧೩೧-೧೦೦). ೮. ಸ್ವಾಧೀನ; ಅಂಕ; ಹತೋಟಿ: ನಿಮ್ಮಜ್ಜಿಗೆ ಈಗೀಗ ಏನೇನೂ ಬುದ್ಧಿ ಸ್ವಯವಿಲ್ಲವಂತಲ್ಲ (ಮೂಕಜ್ಜಿ. ೩೦). 'ಸಯ್' ಪರಾ.

ಸ್ವಯವಾಗು = ೧. ತಾದಾತ್ಮ್ಯಭಾವವನ್ನು ಹೊಂದು; ಲೀನವಾಗು; ಐಕ್ಯವಾಗು: ಅಱಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನಱಿವೆ (ಮಹಾದೇ. ಬ. ೧೪೪-೩೩೦); ಅಂಗೈಯ ಲಿಂಗದಲ್ಲಿ ನೋಟ ಸ್ವಯವಾದ ಇರವ ನೋಡಾ (ಅವಚಂ. ೨೪೩-೧೧೦೬). ೨. ಸ್ವಾವಲಂಬಿಯಾಗು: ಇವರು ಪಂಚಮವರ್ಷದಲ್ಲಿ ವೇದ ವೇದಾಂಗಗಳನ್ನು ಶೈವಾಗಮಂಗಳನ್ನು ಪೂರ್ವಜನ್ಮಜ್ಞಾನವಿಶೇಷದಿಂದ ಸ್ವಯವಾಗಿಯೇ ಅಭ್ಯಾಸ ಮಾಡಿದರು (ಪುರಾವಿ. ೧೦೭). ೩. "ಪ್ರತ್ಯಕ್ಷನಾಗು (?)" (ಬಸರ.ಕೋಶ): ಎಲೆ ತಂದೆ ಎಲೆ ಹಂದೆ ಕೂಡಲಸಂಗ ಸ್ವಯವಾಗು ಸ್ವಯವಾಗು (ಬಸರ. ೧೨-೩೦). [< ಸಂ. ಸ್ವಯಂ]

ಸ್ವಯಂ (ಅ). ತನಗೆ ತಾನೇ; ಸ್ವತಃ; ಖುದ್ದಾಗಿ; ಮುದ್ದಾಂ: ಸ್ವಯಮನ್ನ ಬ್ರಹ್ಮಾದ್ಯಖಿಳಚೇತನ ಕನ್ನಕಲ್ಪಕನಾಹನನಿರುದ್ಧಾದಿ ನಾಮದಲಿ (ಹಸಾರ. ೧೨-೨೪); ಸ್ವಯಮಂ ಕುರಿತ ಸಕಲ ವಿಶ್ವಸತ್ತ್ವವೂ ಬೇವ ಪ್ರಿಯತಮವೂ ಸೃಷ್ಟಿಯಲಿ (ಮಂಕುಕ. ೨೭೪). [ಸಂ.]

ಸ್ವಯಂಕರ್ತೃ (ನಾ). [ವ್ಯಾಕ] ತಾನೇ ಕರ್ತೃವಾಗಿರುವುದು; ಕ್ರಿಯೆಯನ್ನು ತಾನೇ ವಹಿಸಿಕೊಂಡಿರುವ ಕರ್ತೃ: ಸಂಸ್ಕೃತದನೇಕಾಕ್ಷರಧಾತುಗೆ ಸ್ವಯಂಕರ್ತೃವಿನೊಳಿಸುವಕ್ಕುಂ (ಶಮದ. ೨೩೧ ವೃತ್ತಿ). [ಸಂ.]

ಸ್ವಯಂಕರ್ತೃಕ (ನಾ). = ಸ್ವಯಂಕರ್ತೃ: ಕನ್ನಡದ ಧಾತುವಿಂಗೆ ಹೇತುವಿನೊಳಂ ಸ್ವಯಂಕರ್ತೃಕ ಪರಕರ್ತೃಕದೊಳಂ ಇಸುವಕ್ಕುಂ (ಶಮದ. ೨೩೧ ವೃತ್ತಿ). [ಸಂ.]

ಸ್ವಯಂಕೃತ (ಗು). ೧. ತಾನೇ ಮಾಡಿದ; ತನ್ನಿಂದಾದ: ಸ್ವಯಂಕೃತಾನರ್ಥ ಮಾಡಿಕೊಳ್ಳುದಿದಾವ ಕಾರಣಂ (ಪಂಚತಂ. ೫೩-೧೪). (ನಾ). ೨. ತಾನೇ ಮಾಡಿದುದು; ತನ್ನಿಂದಾದುದು: ಮಾಲಿನ್ಯಕ್ಕೆ ಮೂರು ವಿಧದ ಕಾರಣಗಳು:- ಒಂದು ಜನ್ಮಾಂತ್ರಿಯ, ಒಂದು ಸ್ವಯಂಕೃತ, ಒಂದು ಆಗಂತುಕ . . . ನಾವಾಗಿ ಮಾಡಿಕೊಳ್ಳುವುದು ಸ್ವಯಂಕೃತ (ಅರ್ಥಧ. ೯೭). [ಸಂ.]

ಸ್ವಯಂಕೃತಾಪರಾಧ (ನಾ). ತಾನೇ ಮಾಡಿಕೊಂಡ ಅಪರಾಧ; ಸ್ವತಃ ಮಾಡಿದ ತಪ್ಪು: ಸ್ವಯಂಕೃತಾಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಲುವಾಗಿ . . . ಹಿಂದಿನದೆಲ್ಲ ನೆನೆಸಿಕೊಳ್ಳುತ್ತಿದ್ದೇನೆ (ಪುನರು. ೧೯೬); ಸ್ವಯಂಕೃತಾಪರಾಧದಿಂದುಂಟಾದ ಅನರ್ಥವನ್ನು . . . ಸೈರಿಸಿಕೊಂಡು (ಕವಿಕ. ೨೯). [ಸಂ.]

ಸ್ವಯಂಚಾಲಿತ (ಗು). ಸ್ವತಃ ಚಲಿಸಲು ಸಾಮರ್ಥ್ಯವುಳ್ಳ: ಉರುಳೆಯೊಳಕ್ಕೆ ಗಾಳಿ ಬರಲು ಮತ್ತು ಹೊರಹೋಗಲು ಸ್ವಯಂಚಾಲಿತ ಕವಾಟಗಳಿರುತ್ತವೆ (ಕವಿಕೋ. I. ೨೬೭); ಸ್ವಯಂಚಾಲಿತ (Automatic) ಯಂತ್ರಗಳು ಬಂದ ಮೇಲಂತೂ ಈ ಕೆಲಸವು ಇನ್ನೂ ಹಗುರವಾಯಿತು (ಶಿಲ್ಪನಾ. ೧೬೮). [ಸಂ.]

ಸ್ವಯಂಪಾಕ (ನಾ). ೧. ತಾನೇ ಮಾಡಿಕೊಳ್ಳುವ ಅಡುಗೆ; ಸ್ವತಃ ತಯಾರಿಸಿಕೊಳ್ಳುವ ಆಹಾರ. ೨. ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವ ನಿಯಮ,— ವ್ರತ. : ಸ್ವಯಂಪಾಕ ಪುರುಷೋತ್ತಮಭಟ್ಟೋಪಾಧ್ಯಾಯ (ಸೌಇ. XI. ii ೧೫೪-೫೯ ; 1104). ೩. (ವ್ರತ ಅಥವಾ ವಿಶೇಷಸಂದರ್ಭಗಳಲ್ಲಿ) ತನ್ನ ಅಡುಗೆಯನ್ನು ತಾನೇ ಸಿದ್ಧಪಡಿಸಿಕೊಳ್ಳಲು ಬೇಕಾದ ಪಡಿಪದಾರ್ಥ: ಸ್ವಾಮಿಗಳಿಗೆ ಇಂದು ನಮ್ಮ ಮನೆಯಿಂದ ಸ್ವಯಂಪಾಕ ಕೊಡಬೇಕು (ರೂಢಿ). [ಸಂ.]

ಸ್ವಯಂಪಾಕಿ (ನಾ). (ವ್ರತ ಅಥವಾ ವಿಶೇಷ ಸಂದರ್ಭಗಳಲ್ಲಿ) ತನ್ನ ಅಡುಗೆಯನ್ನು ತಾನೇ ಮಾಡಿಕೊಳ್ಳುವವನು; ಸ್ವತಃ ಆಹಾರವನ್ನು ತಯಾರಿಸಿಕೊಳ್ಳುವವನು: ಅವರು ಹತ್ತು ವರ್ಷಗಳಿಂದಲೂ ಸ್ವಯಂಪಾಕಿಗಳಾಗಿದ್ದಾರೆ (ರೂಢಿ). [ಸ್ವಯಂಪಾಕ + - ಇ$_3$]

ಸ್ವಯಂಪ್ರಕಾಶ (ಗು). ೧. ಸ್ವತಃ ಕಾಂತಿ ಬೀರುವ; ಸ್ವತಂತ್ರವಾಗಿ ಹೊಳೆಯುವ: ಈ ಬೆಳಕೆಂಬ ಶಕ್ತಿವಿಶೇಷವು ಸ್ವಯಂಪ್ರಕಾಶವಸ್ತುಗಳಿಂದ ಹೊರಡುತ್ತದೆ (ಭ೗ತವಿ. ೧೫೪). (ನಾ). ೨. ತಾನಾಗಿ ಪ್ರಕಾಶಿಸುವಂಥದು; ಸ್ವತಂತ್ರವಾಗಿ ಹೊಳೆಯುವಂಥದು: ಜ್ಞಾನವು ಸ್ವಯಂಪ್ರಕಾಶವಲ್ಲದಿದ್ದರೆ ತನ್ನ ಜ್ಞಾನಕ್ಕೂ ಇತರರ ಜ್ಞಾನಕ್ಕೂ ವ್ಯತ್ಯಾಸವಿಲ್ಲ (ಹಿಂದಸಾ. ೫೪); ಗ್ರಹಗಳು ಸ್ವಯಂಪ್ರಕಾಶವಾಗಿಲ್ಲ (ಆಕಾಶ. ೧೩). [ಸಂ.]

ಸ್ವಯಂಪ್ರಭು (ನಾ). ತನಗೇ ತಾನೇ ಒಡೆಯನಾದವನು; ಯಾರ ಅಧೀನಕ್ಕೂ ಒಳಪಡದವನು : ಲೀಲಾಯಿತಂ ಸ್ವಯಂಪ್ರಭುಗುಚಿತಂ (ಜಗವಿ. ೩-೭೦). [ಸಂ.]

ಸ್ವಯಂಬರ 'ಸೊಯಂಬರ' ನೋ.

ಸ್ವಯಂಬರಸಾಲೆ 'ಸೊಯಂಬರಸಾಲೆ' ನೋ.

ಸ್ವಯಂಬುದ್ಧ (ನಾ). ತಾನಾಗಿಯೇ ಜ್ಞಾನಿಯಾದವನು; ಸ್ವತಃ ತಿಳಿದವನು: ನೀಂ ಸ್ವಯಂಬುದ್ಧನ ಆರ್ ಪ್ರತಿಬೋಧಿಸುವರ್ ನಿನ್ನಂ (ಶಾಂತಿಪು. ೯-೬೧). [ಸಂ.]

ಸ್ವಯಂಭು (ಗು). ೧. ತನ್ನಿಂದ ತಾನೇ ಮೂಡಿದ; ತಾನಾಗಿಯೇ ಹುಟ್ಟಿದ: ಅದರ ಸ್ವಯಂಭುಶೋಭೆಗೆ ಶರಣೆಂದು ಶುದ್ಧರಾದೆವು (ಶರಚ. ೮೩೪). ೨. ಸ್ವಯಂ ಪ್ರಕಾಶವುಳ್ಳ: 'ಸ್ವಯಂಭುಲಿಂಗ' ಪರಾ. (ನಾ). ೩. ತಾನಾಗಿಯೇ ಉಂಟಾದುದು; ತನ್ನಿಂದ ತಾನೇ ಮೂಡಿದುದು: ವೇದ ಸ್ವಯಂಭುವೆಂಬ ವಾದಿ ನೀ ಕೇಳೆಲವೊ (ಬಸವ. ೫೩೧); ವೇದವು ಯಾರ ನಿರುಕ್ತಿಯೂ ಅಲ್ಲ. ಅದು ಸ್ವಯಂಭು (ಭಾರದ. ೧೨೯). ೪. ಸ್ವಯಂಪ್ರಕಾಶವುಳ್ಳುದು: ಆಕಾಶದ ಸೂರ್ಯ ಹಲವು ಕುಂಭದಲ್ಲಿ ತೋಱುವ ತೆಱ ಮೆಱೆದರೆ ಪ್ರತಿಷ್ಠೆ ಅಱೆದಡೆ ಸ್ವಯಂಭು (ಮೋಳಿಮಾ. ೧೧-೪೧). ೫. ಯಾರ ಅಂಕೆಗೂ ಒಳಪಡದಿರುವುದು; ಸ್ವತಂತ್ರವಾದುದು: ಆ ಉಭಯದ ಬಿಡುಗಡೆಯನಱಿದು ಅಡಗಿಯಲ್ಲದೆ ಸ್ವಯಂಭುವಲ್ಲ (ಮೋಳಿಮಾ. ೨-೩). ೬. ತನ್ನಿಂದ ತಾನೇ ಉಂಟಾದವನು,— ಉದ್ಭವವಾದವನು: ಕಾಲ ಕಲ್ಪಿತಂಗಳಿಲ್ಲದೆ ನಿಮ್ಮಿಂದ ನೀವೆ ಸ್ವಯಂಭುವಾಗಿರ್ದಿರಯ್ಯಾ (ಚನ್ನವ. ೫. ೫-೭); ಸ್ವಯಂಭು ನೀನೆಯಾಗಿರ್ದೆಯಯ್ಯ (ಸಿದ್ಧವ. ೫. ೬೭-೨೧೭). ೭. ಬ್ರಹ್ಮ: ಗಗನವ ಮನ ನುಂಗಿತ್ತು ಆದಿ ವೇದವ ನುಂಗಿ ವೇದ ಸ್ವಯಂಭುವ ನುಂಗಿ ಕಾಲಕರ್ಮ ಹಿಂಗಿತ್ತು (ಅಮಚು. ೧೦೦-೪೫೨). ೮. ಶಿವ. ೯. ವಿಷ್ಣು. ೧೦. ಬುದ್ಧ. ೧೧. ಯಾರ ಅಂಕೆಗೂ ಒಳಪಡದ ವ್ಯಕ್ತಿ; ತನ್ನ ಇಚ್ಛೆಯಂತೆ ನಡೆಯುವ ಸ್ವತಂತ್ರವ್ಯಕ್ತಿ: ತಾನೇ ಸ್ವಯಂಭು ಎಂದುಕೊಂಡು ಶಾಲಬ್ಬೆ ತನ್ನ ಇಷ್ಟಕ್ಕೆ ವಿರುದ್ಧವಾದದ್ದೇನನ್ನೂ ಎಂದೂ ಸಹಿಸಿದವಳಲ್ಲ (ಹೊಸಕ್ಷಿ. ೨೧). ೧೨. ಸ್ವಂತಸಾಮರ್ಥ್ಯವುಳ್ಳ ವ್ಯಕ್ತಿ; ಚತುರ: ಸಹಸ್ರಜನರಲ್ಲಿ ಯಾವನೋ ಒಬ್ಬ ವ್ಯಕ್ತಿ ಮಾತ್ರ ಸ್ವಶಕ್ತಿ ಸ್ವಸಾಮರ್ಥ್ಯಗಳಿಂದ ಸ್ವಯಂಭುವಾಗಿ ವಿಜೃಂಭಿಸುತ್ತಾನೆ (ನಂಜುಂಡ. ೧೩೭). [ಸಂ. ಸ್ವಯಂಭು, ಸ್ವಯಂಭೂ]

ಸ್ವಯಂಭುಲಿಂಗ (ನಾ). [ವೀಶೈ] ಸ್ವಯಂಪ್ರಕಾಶವುಳ್ಳ ಲಿಂಗ; ಪಂಚಲಿಂಗಗಳಲ್ಲಿ ಒಂದಾದ ಜ್ಯೋತಿರ್ಲಿಂಗ: ಶೈವಸಿದ್ಧಾಂತಸಮ್ಮತವಾದ ಪಂಚ ಲಿಂಗಾರ್ಚನದೊಳು ಸ್ವಯಂಭುಲಿಂಗ ಬಾಣಲಿಂಗ ಚರಲಿಂಗ ಸಂಕೀರ್ಣಲಿಂಗ ಪ್ರಾಣಲಿಂಗವೆಂಬೈದರೊಳಗೆ ತಮ್ಮ ತಮ್ಮ ಶಕ್ತ್ಯನುಸಾರಮಾಗಿ ಅರ್ಚನತತ್ಪರರಾಗ ಬೇಕೆಂದು ನಿಶ್ಚಯಿಸಲಕ್ಕುಂ (ವಿವೇಕ. ೧೦೨). [ಸಂ.]

ಸ್ವಯಂಭುಸ್ವರ (ನಾ). [ಸಂಗೀತ] ಒಂದು ಸ್ವರವು ತಂತಿಯಲ್ಲಿ ನುಡಿಯುತ್ತಿರುವಾಗ ಅದರ ಜೊತೆಯಲ್ಲಿಯೇ, ಪ್ರತ್ಯೇಕ ಪ್ರಯತ್ನವಿಲ್ಲದೆ, ಸಹಜವಾಗಿ ಉತ್ಪನ್ನವಾಗುವ ಸ್ವರ: ನಾಲ್ಕು ತಂತಿಗಳಿಗೂ ಹೀಗೆ ಮಾಡುವುದರಿಂದ ತಂತಿಗಳ ಧ್ವನಿ ಸುಶ್ರಾವ್ಯವಾಗಿ ತುಂಬುನಾದದೊಡನೆ ಸ್ವಯಂಭುಸ್ವರಗಳೂ ಕೇಳಿ ಬರುತ್ತವೆ (ಸಂಗೀಚಂ. ೧೧೨) ; ಈ ತಂಬೂರಿಗಳಿಂದ ಹೊರಹೊಮ್ಮುತ್ತಿದ್ದ ಸ್ವಯಂಭುಸ್ವರಗಳು . . . ಒಳ್ಳೆಯ ಮಧುರನಾದದ ವಾತಾವರಣ, ಹಿನ್ನೆಲೆಯನ್ನು ಕಲ್ಪಿಸುತ್ತಿದ್ದುವು (ಸಂಗೀತ. ೧೧೦). [ಸಂ.]

ಸ್ವಯಂಭೂರಮಣ (ನಾ). [ಜೈನ] ಮಧ್ಯಲೋಕದ ಒಂದು ಸಾಗರ: ಏಸದತ್ತೇಕರಜ್ಜುಪ್ರಮಾಣಂ ತಿರ್ಯಗ್‌ಲೋಕಂ ಸ್ವಯಂಭೂರಮಣಜಲಧಿ ಪರ್ಯಂತಮಂ ತಾಗುವನ್ನಂ (ಆದಿಪು. ೧-೪೮); ಸ್ವಯಂಭೂರಮಣಸಾಗರೋದಕಾದಾನ ಕೃಸಂಖ್ಯಾತದ್ವೀಪಸಮುದ್ರಂಗಳಂ ನಿಮಿಷಮಾತ್ರದಿನತಿಕ್ರಮಿಸಿಯುಂ (ಚಂದ್ರಪ್ರ. ೯-೫೫ ವ). [ಸಂ.]

ಸ್ವಯಂವರ (ನಾ). ೧. ತಾನೇ ಆರಿಸಿಕೊಂಡುದು; ಸ್ವಂತದ ಆಯ್ಕೆ. ೨. (ಸಾಮಾನ್ಯವಾಗಿ ರಾಜಕುಮಾರಿ ಅಥವಾ ಕ್ಷತ್ರಿಯಕನ್ಯೆಯಾದ) ವಧುವು ವಿವಾಹಾಕಾಂಕ್ಷಿಗಳಾದ ಅಭ್ಯರ್ಥಿಗಳು ನೆರೆದ ಸಭೆಯಲ್ಲಿ ಒಂದು ವ್ಯವಸ್ಥಿತಸಂದರ್ಭದಲ್ಲಿ ತನ್ನ ಪತಿಯನ್ನು ತಾನೇ ಆರಿಸಿಕೊಳ್ಳುವಿಕೆ ಮತ್ತು ಹಾಗೆ ಆರಿಸಿಕೊಂಡು ಏರ್ಪಾಡಾಗುವ ವಿವಾಹ: ಸ್ವಯಂವರಾ, ಪತಿಂವರಾ, ವರ್ಯಾ - ಈ ೩ ಸ್ವಯಂವರದಲ್ಲಿ ಪತಿಯನ್ನು ವರಿಸಿದ ಸ್ತ್ರೀಯ ಹೆಸರು (ನಾಚಿರಾ. ೧೧೬); ಕ್ಷತ್ರಿಯರ ಪದ್ಧತಿಪ್ರಕಾರ ಸ್ವಯಂವರವಾಗಬೇಕು (ನೀತಿಚಂ. VI. ೬); ಕೇಳ್ದಳಿತ್ತನಸೂಯೆ . . . ಸ್ವಯಂವರದ ವೃತ್ತಮಂ (ಶ್ರೀರಾಮಾ. ೧೭೮-೭೩). [ಸಂ.]

ಸ್ವಯಂವರೆ (ನಾ). ಆಹ್ವಾನಿತರು ನೆರೆದ (ಸ್ವಯಂವರ)ಸಭೆಯಲ್ಲಿ ತನ್ನ ಗಂಡನನ್ನು ತಾನೇ ಆರಿಸಿಕೊಳ್ಳುವ ಹೆಣ್ಣು: "ಸ್ವಯಂವರಾ, ಪತಿಂವರಾ, ವರ್ಯಾ - ಈ ೩ ಸ್ವಯಂವರದಲ್ಲಿ ಪತಿಯನ್ನು ವರಿಸಿದ ಸ್ತ್ರೀಯ ಹೆಸರು" (ನಾಚಿರಾ. ೧೧೬). [ಸಂ. ಸ್ವಯಂವರಾ]

ಸ್ವಯಂವೇದ್ಯ (ನಾ). ಸ್ವತಃ ತಿಳಿಯತಕ್ಕುದು; ತನಗೆ ತಾನೇ ಮನದಟ್ಟಾಗುವುದು: ಯಾವುದರ ಅನುಭವ ಸ್ವಯಂವೇದ್ಯವಾದ ಮಾಧುರ್ಯದಲ್ಲಿ ಸೃಷ್ಟಿಯ ಏಕತಾನದೊಡನೆ ಮಿಡಿಯುವುದೋ ಆಗ ಅದು ಸೌಂದರ್ಯವಲ್ಲದೆ ಮತ್ತೇನನ್ನು ತಾನೇ ಅಭಿವ್ಯಕ್ತಿಗೊಳಿಸೀತು (ಸೌಂದಸ. ೮೯). [ಸಂ.]

ಸ್ವಯಂಶಾಸಿತ (ನಾ). ಯಾರ ಅಧೀನಕ್ಕೂ ಒಳಪಡದೆ ತನ್ನದೇ ಆದ ಆಡಳಿತಕ್ಕೆ ಒಳಪಟ್ಟುದು: ಒಂದೊಂದು ಗ್ರಾಮವೂ ನಗರವೂ ಸ್ವಯಂಶಾಸಿತವಾಯ್ತು (ಅಪಲ್ಕೋ. ೧೧೨). [ಸಂ.]

ಸ್ವಯಂಸಿದ್ಧ (ಗು). ತನ್ನಷ್ಟಕ್ಕೆ ತಾನೇ ಸ್ಪಷ್ಟವಾದ: ಮಿತ – ಪರಿಚ್ಛಿನ್ನ ವೆಂಬುದು ಸ್ವಯಂಸಿದ್ಧವಿಷಯ (ಜೀವಾತ್ಮ. ೫೨). [ಸಂ.]

ಸ್ವಯಂಸೇವಕ (ನಾ). (ಪ್ರತಿಫಲಾಪೇಕ್ಷೆಯಿಲ್ಲದ) ಸ್ವಸಂತೋಷದಿಂದ ತಾನಾಗಿ ಸೇವೆಯಲ್ಲಿ ತೊಡಗುವ ವ್ಯಕ್ತಿ: ಸ್ವಯಂಸೇವಕರು ಅಲ್ಲಲ್ಲಿ ನಿಂತು ವಸ್ತುಗಳನ್ನು ತೋರಿಸುತ್ತಿದ್ದರು (ಕಪಪ್ರ. ೪-೩೨). [ಸಂ.]

ಸ್ವಯಂಸೇವಿಕೆ (ನಾ). (ಪ್ರತಿಫಲಾಪೇಕ್ಷೆಯಿಲ್ಲದ) ಸ್ವಸಂತೋಷದಿಂದ ತಾನಾಗಿ ಸೇವೆಯಲ್ಲಿ ತೊಡಗುವವಳು: ಸ್ವಯಂಸೇವಿಕೆಯರ ಗುಂಪೊಂದು ಮರವಣಗೆಯಲ್ಲಿ ಹೊರಟಿತ್ತು (ಫಲಸಂ. ೮೭). [ಸಂ. ಸ್ವಯಂಸೇವಿಕಾ]

ಸ್ವಯಂಸೇವೆ (ನಾ). "ಸ್ವಂತ ಇಷ್ಟದಿಂದ ಮಾಡುವ ಸೇವೆ, ಸ್ವಯಂಸೇವೆ": (Voluntary Service. ಇಂಕಾ). [ಸಂ. ಸ್ವಯಂಸೇವಾ]

ಸ್ವಯಲಿಂಗ (ನಾ). [ವೀಶೈ] ಆತ್ಮಲಿಂಗ; ತಾದಾತ್ಮ್ಯಭಾವ: ಸ್ವಯಲಿಂಗ ದನುಭಾವ ತನಗೆ ದೊರಕೊಂಡ ಬಳಿಕ ದೇವಲೋಕವೆಂಬುದೇನೊ ಮರ್ತ್ಯಲೋಕವೆಂಬುದೇನೊ (ಬಸವ. ೯೪೭) ; ಘನಲಿಂಗದೇವರು ತಮ್ಮ ಸ್ವಯಲಿಂಗಾನು ಭಾವದಿಂದ ಹಾಡಿದ ವಚನ (ಘನವ. ೧-೧). [ಸ್ವಯ + ಲಿಂಗ]

ಸ್ವಯಸಂಪರ್ಕ (ನಾ). [ವೀಶೈ] ಲಿಂಗಾನುಭೂತಿ: ಉಪೇಕ್ಷೆಯಿಂದ ಉರಿವ ಬೆಳಗು ಪವನನ ಪ್ರಳಯಕ್ಕೆ ಒಳಗು ಸ್ವಯಸಂಪರ್ಕದಿಂದ ಒರಗಿದ ಬೆಳಗು ಅನಿಲನ ಆಹುತಿಗೆ ಪೊಱಗಾಗಿಪ್ಪುದು (ಮೋಳಮಾ. ೯-೩೨). "ಸ್ವಾನುಭಾವ" (ಮೋಳಮಾ. ಕೋಶ).

[ಸ್ವಯ + ಸಂಪರ್ಕ]

ಸ್ವಯಸುಖ (ನಾ). [ವೀಶೈ] ಸ್ವಸಂತೋಷ; ಆತ್ಮಾನಂದ: ಇರ್ನಯನದೊಳಾ ನಂದಾಶ್ರುಗಳುಣ್ಮೆ ವರ್ಣಿಸಲರಿದಿಲ್ಲ ಸ್ವಯಸುಖವ (ಶಪಗೀ. ೧೭೧-೧೩೭).

[ಸ್ವಯ + ಸುಖ]

ಸ್ವಯಾನಂದ (ನಾ). = ಸ್ವಯಸುಖ: ಸ್ವಯಾನಂದಭರಿತ ನೀಕಳಂಕಮಲ್ಲಿಕಾರ್ಜುನಾ (ಮೋಳಮಾ. ೧೭೦-೨೭). [ಸ್ವಯ + ಆನಂದ]

ಸ್ವಯಾನುಭಾವ (ನಾ). [ವೀಶೈ] ೧. ಸ್ವಂತ ಅನುಭಾವ; ಸ್ವಾನುಭಾವ; ಆತ್ಮಸಾಕ್ಷಾತ್ಕಾರ. ೨. ಸ್ವಾನುಭಾವವನ್ನು ಹೊಂದಿದ ವ್ಯಕ್ತಿ; ಆತ್ಮ ಸಾಕ್ಷಾತ್ಕಾರವನ್ನು ಹೊಂದಿದ ವ್ಯಕ್ತಿ: ಜ್ಞಾನಹೀನರು ಬೇಗ ಹೋಗಿ . . . ನಿರುತ ಸ್ವಯಾನುಭಾವರು ಬನ್ನಿ (ಸರ್ವಜ್ಞ. ೮೧-೪೫೦). [ಸ್ವಯ + ಅನುಭಾವ]

ಸ್ವಯಾರ್ಜಿತ (ಗು). ೧. ಸ್ವಂತವಾಗಿ ಗಳಿಸಿದ; ತಾನೇ ಸಂಪಾದಿಸಿದ: ಸ್ವಯಾರ್ಜಿತ ಆಸ್ತಿಯನ್ನು ವ್ಯಕ್ತಿಯು ತನ್ನ ಇಷ್ಟದಂತೆ ವಿನಿಯೋಗಿಸಲು ಸ್ವತಂತ್ರನು (ಡೂಢಿ). (ನಾ). ೨. ಸ್ವಂತವಾಗಿ ಗಳಿಸಿದುದು; ಸ್ವತಃ ಸಂಪಾದಿಸಿದುದು: ಅವರ ಮನೆ ಸ್ವಯಾರ್ಜಿತವಾದುದರಿಂದ ಯಾರೂ ಹಕ್ಕನ್ನು ಚಲಾಯಿಸಿ ಪಡೆದುಕೊಳ್ಳುವ ಅಧಿಕಾರವಿಲ್ಲ (ಡೂಢಿ). [ಸಂ.]

ಸ್ವಯೂಥಕಲಹ (ನಾ). ತಮ್ಮತಮ್ಮವರಲ್ಲೇ ಉಂಟಾಗುವ ಒಳಜಗಳ; ಸ್ವಂತಜನಗಳಲ್ಲಿ ಪರಸ್ಪರ ಹುಟ್ಟುವ ಕಲಹ: ಸ್ವಯೂಥಕಲಹಕ್ಕಿಂತಲೂ ಅಧಿಕವಾದ ವಿಷ ಬೇರೆ ಇಲ್ಲ (ಚಕ್ರಪಾ. ೧೧೧); ಅಲ್ಲಿ ಸಿಂಹಾಸನಕ್ಕಾಗಿ ಸಹೋದರರಲ್ಲಿ ನಡೆದ ಸ್ವಯೂಥಕಲಹದ ಬೆಂಕಿಗೆ ಆಜ್ಯನಾಗಿ ಮಲ್ಲಿಕಾಪೂರನು ಬಂದಿದ್ದನು (ರಾಜೋದ. ೨); ಅನಂತರ ಬ್ರಾಹ್ಮಣರಲ್ಲಿ ಸ್ವಯೂಥಕಲಹ ಪ್ರಾರಂಭವಾಯಿತು (ಗರುದಾ. ೨೩). [< ಸಂ. ಸ್ವಯೂಥಕಲಹ]

ಸ್ವರ (ನಾ). ೧. ಕಂಠದಿಂದ ಹೊರಡುವ ನಾದ; ಧ್ವನಿ: "ಹ್ರಾದಃ . . .ಸ್ವರಃ, ರವಃ, ಘೋಷಃ - ಈ ೪ ಧ್ವನಿ" (ಹಲಾಯು. ೨೩-೧೩೭). ೨. ಶಬ್ದ; ಸದ್ದು. ೩. (ವೇದಗಳನ್ನು ಪಠಿಸುವಾಗ ಬಳಸುವ) ಉದಾತ್ತ, ಅನುದಾತ್ತ ಮತ್ತು ಸ್ವರಿತ ಎಂಬ ಮೂರು ಬಗೆಯ ಉಚ್ಚಾರಣೆ,– ಶಬ್ದದ ಮೇಲೆ ಬೀಳುವ ಒತ್ತು: ವೇದಮಂತ್ರಗಳನ್ನು ಸ್ವರಸಹಿತವಾಗಿ ಅಭ್ಯಾಸ ಮಾಡಬೇಕು (ಡೂಢಿ). ೪. [ವ್ಯಾಕ] ಭಾಷೆಯಲ್ಲಿ ಅನ್ಯಾವಲಂಬನೆಯಿಲ್ಲದೆ ಉತ್ಪನ್ನವಾಗುವ ಅ, ಇ, ಉ ಮುಂತಾದ ಶಬ್ದದ್ರವ್ಯ; ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸುವ ವರ್ಣ; ವ್ಯಂಜನವಲ್ಲದ ಅಕ್ಷರ: ಅಂತಕಾರಾದಿ ಹಕಾರಾಂತ ಸ್ವರವ್ಯಂಜನ ಭೇದ ಭಿನ್ನ ಶುದ್ಧಾಕ್ಷರಂಗಳುಮಂ . . . ಉಪದೇಶಂಗಯ್ದು (ಆದಿಪು. ೮-೫೯ ವ); ತರದಿನಕಾರಂ ಮೊದಲಾಗಿರೆ ಪದಿನಾಲ್ಕುಂ ಸ್ವರಂಗಳ್ (ಶಮದ. ೬); ಬಿಡಿಯಾಗಿ ಉಚ್ಚರಿಸಲು ಆಗುವ ವರ್ಣಕ್ಕೆ ಸ್ವರ ಎಂದು ಹೆಸರು (ಮಧ್ಯಮ. ೧೯). ೫. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: "ಸ್ವರ . . . ಏಟಱ ನಾಮಂ" (ಪ್ರಪಾಸಾ. ೯-೬): "ಋಷಿ ನಗ ಹಯ ಸ್ವರಮದೇಟು" (ಮಂಗರಾ. ೧೦೧-೮) ೬. [ಸಂಗೀತ] ಇನ್ನೊಂದರ ನೆರವನ್ನು ಅಪೇಕ್ಷಿಸದೆ, ಶ್ರೋತೃಗಳಿಗೆ ಸ್ವತಃ ರಂಜನೆ ಯನ್ನುಂಟುಮಾಡುವ ನಾದವಿಶೇಷ; (ಮುಖ್ಯವಾಗಿ) ಷಡ್ಜ, ಋಷಭ ಇತ್ಯಾದಿ ಸಪ್ತಸ್ವರ: ಸ್ವರಗಳು ಏಳು. ಇವು ಸಂಗೀತಶಾಸ್ತ್ರದಲ್ಲಿ ಉಕ್ತ (ಧ್ವನ್ಯಾಲೋ. ೨೧ ಅಡಿಟಿ): ಭಾರತೀಯಸಂಗೀತದ ಸ್ವರ ಮತ್ತು ಲಯಗಳ ಮೂಲಬೀಜಗಳನ್ನು ಕಾಣಬೇಕಾದಲ್ಲಿ ವೇದಗಳನ್ನು ನೋಡಬೇಕು (ಭಾರದ. ೫೩೬). ೭. ಗೀತೆಯ ಆರು ಲಕ್ಷಣಗಳಲ್ಲಿ ಒಂದು: ಸ್ವರ ಶ್ರುತಿ ಗಮಕಂಗಳಿಂ ಪುಟ್ಟಿದ ಗೀತಮಾದೊಡೆ ಸ್ವರ ಸುಸ್ವರ ಸುರಾಗ ಮಧುರ ಅಕ್ಷರ ಅಲಂಕಾರವೆಂಬಾಱು ಲಕ್ಷಣಮುಳ್ಳುದಾಗಿಹುದು (ವಿವೇಕ. ೨೩೨). [ಸಂ.]

ಸ್ವರಕರಣ (ನಾ). ೧. ಶಬ್ದವನ್ನುಂಟುಮಾಡುವುದು; ಸದ್ದುಮಾಡುವುದು: ಸ್ವರಕರಣ – ಸರಕರಣ (ಶಮದ. ೨೮೯ ಪ್ರಯೋ). ೨. ಒಂದು ಬಗೆಯ ತಾಳ: ಧ್ರುವ ಮಟಯ . . . ಸ್ವರಕರಣ ಪಾಠಕರಣ . . . ಜಯಾಳವೆಂಬವೇ ಮೊದಲಾದ ನೂಱೊಂದು ತಾಳಂಗಳಾದೊಡೆ (ವಿವೇಕ. ೧೪೨). [ಸಂ.]

ಸ್ವರಗೆಯ್, ಸ್ವರಗ್ಗೆ (ಕ್ರಿ). ನಾದವನ್ನು ಹೊರಡಿಸು; ಹಾಡು: ತರುಣಪಲ್ಲವದ ವಿಸ್ತಾರದಿಂ ನೇರದಿಂ ಸ್ವರಗೆಯ್ದು [ಪಾಠಾಂ. ಸರಗ್ಗೆವ] ಕಲಪಿಕೋಚ್ಚಾರದಿಂ ಸಾರದಿಂ (ಚಿಮಿಭಾ. ೩-೨೮). **ಸ್ವರಗ್ಗೆ**: ಸ್ವರಗ್ಗೆವ ಕೋಗಿಲೆಯ ಧ್ವನಿ ಸೊಂಪಿನಿಂದೆ (ಸಪಪೂ. ೮-೨೮). [ಸ್ವರ + ಕೆಯ್]

ಸ್ವರಗ್ಗೆ 'ಸ್ವರಗೆಯ್' ನೋ.

ಸ್ವರಜತಿ (ನಾ). [ಸಂಗೀತ] ಕರ್ಣಾಟಕ ಸಂಗೀತದ ಒಂದು ರಚನೆ; IP ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿಂದ ಕೂಡಿದ್ದೂ, ಆಯಾ ರಾಗದ ಸ್ವರೂಪವನ್ನು ತಿಳಿಸುವ ಜತಿಗಳಿಂದ ಏರ್ಪಡುತ್ತದೆ: ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ಹೊಂದಿ, ರಾಗದ ಪೂರ್ಣಸಂಚಾರಕ್ರಮಗಳನ್ನು ಭಾವಯುಕ್ತವಾಗಿ, ಗಮಕಯುಕ್ತವಾಗಿ ಹೊರಗೆಡಹುವ ತಾಳಬದ್ಧವಾದ ಸಾಹಿತ್ಯಯುಕ್ತರಚನೆ. ಸ್ವರಜತಿ ಎನಿಸಿಕೊಳ್ಳುತ್ತದೆ (ಸಂಗೀಚಂ. ೭೦). [ಸ್ವರ + ಜತಿ]

ಸ್ವರಜಾಲ (ನಾ). [ಸಂಗೀತ] ಹ್ರಸ್ವಸ್ವರಗಳು ಅತಿಯಾದ ವೇಗದಲ್ಲಿ ನಡೆಯುವ ಸ್ವರಸಂಚಾರವಿಶೇಷ: ಅತಿ ತೀವ್ರಗತಿಯಿಂದ ನುಡಿಯುತ್ತಿದ್ದ ಆ ಶಾರೀರದ ಸ್ವರಜಾಲ (ಬಿರ್ಕಾ), ಮಿಂಚಿನೋಪಾದಿಯಲ್ಲಿ ಪ್ರವಹಿಸಿ ಶ್ರಾವಕರಿಗೆ ಪರಮಾನಂದವನ್ನೂ ಪರಮಾಶ್ಚರ್ಯವನ್ನೂ ಏಕಕಾಲದಲ್ಲಿ ಉಂಟುಮಾಡುತ್ತಿದ್ದುವು (ಸಂಗೀಚಂ. ೨೫೮). [ಸಂ.]

ಸ್ವರತಿ (ನಾ). ತನ್ನಲ್ಲಿ ಮಾತ್ರ ತನಗೆ ಇರುವ ಪ್ರೀತಿ; ತನ್ನಲ್ಲಿ ಮಾತ್ರ ತಾನು ಸಂತೋಷಗೊಳ್ಳುವುದು; ಆತ್ಮರತಿ: ತನ್ನವರನ್ನು ಹರಿದು ಹರಿದು ತಿನ್ನುವ, ಕೊಡುವ ಪ್ರೇಮವನ್ನು ಕಳೆದುಕೊಂಡ ಸ್ವರತಿಯ ನರಕದಲ್ಲಿ ಬಾಳುತ್ತಾನೆ. ಸಭ್ಯ ಸಂತ ಇಬ್ಬರೂ ಆತ್ಮರತರು, ಆತ್ಮತೃಪ್ತರು. ನನಗೆ ಸ್ವರತಿ ಮಾತ್ರ ಸಾಧ್ಯ (ಪೊಸಕ್ಷ. ೨೩೭).

[ಸಂ.]

ಸ್ವರತಿರುವು (ನಾ). [ಸಂಗೀತ] ಸ್ವರಸಮೂಹವು ತನ್ನ ಸಂಚಾರದ ದಿಕ್ಕನ್ನು ಬದಲಾಯಿಸುವುದು: ಅವರ ಕೆಲವು ನಿರವಲ್‌ಗಳು, ಗಮಕಗಳು, ಮಿಂಚಿನಂತೆ ಹೊಳೆಯುವ ಸ್ವರತಿರುವುಗಳೂ ಪಲುಕುಗಳೂ . . . ಮೆಚ್ಚುಗೆಯನ್ನು ತಂದುಕೊಟ್ಟವು (ಸಂಗೀತ. ೧೨೦). [ಸ್ವರ + ತಿರುವು]

ಸ್ವರದೋಷ (ನಾ). [ವ್ಯಾಕ] ಸ್ವರಗಳನ್ನು ತಪ್ಪಾಗಿ ಉಚ್ಚರಿಸುವುದು: ಪಾತಂಜಲಿ ಮಹಾಭಾಷ್ಯದಲ್ಲಿ ಹೇಳುವ ಪ್ರಕಾರ ಇಂತಹ ಹ್ರಸ್ವದೀರ್ಘಪಲ್ಲಟವು ಸ್ವರದೋಷ ವೆನಿಸುವುದು (ಸಂಶೋಧ. ೧೨೦). [ಸಂ.]

ಸ್ವರಧಾತು (ನಾ). [ವ್ಯಾಕ] ಸ್ವರವು ಮೂಲಕ್ರಿಯಾಪದವಾಗಿರುವುದು: ಸ್ವರಧಾತುಗಳ ಈ – ಪ್ರದಾನೇ, ಓ – ಸ್ನೇಹೇ (ಕಮಧಾ). [ಸಂ.]

ಸ್ವರಪಂಪ (ನಾ). [ಸಂಗೀತ] ಕೇವಲ ಎರಡು ಅಥವಾ ಮೂರುಸ್ವರಗಳನ್ನು ಪ್ರಯೋಗಿಸಿ ಅವುಗಳನ್ನು ದಟ್ಟವಾಗಿ ಹಣೆಯುವುದು: ಈ ನಾಲ್ಕು ರೀತಿಯ ಸ್ವರಪಂಪಗಳನ್ನು ಹೊಂದಿರುವುದೇ ಸರಿಯಾದ ತಾನ (ಸಂಗೀಚಂ. ೮೯). [ಸ್ವರ + ಪಂಪ?]

ಸ್ವರಪುಂಜ (ನಾ). ಸ್ವರಗಳ ಸಮೂಹ : ಕೆಲವು ಬಾರಿ ದುಡಿಯ ತುದಿಗೂ ಬೆಣೆಗಳಿಗೂ ನಡುವೆ ಇರುವ ಜಾಗದಲ್ಲಿ ತಂತಿಗಳನ್ನು ಬಡಿದು ಹಲವಾರು ಸುಂದರ ಸ್ವರಪುಂಜಗಳನ್ನು ಸೃಜಿಸುತ್ತಿದ್ದರು (ಸಂಗೀಶ. ೬೯). [ಸಂ.]

ಸ್ವರಪ್ರಸ್ತಾರ (ನಾ). [ಸಂಗೀತ] ಮಾತಿಗೆ ಸ್ವರಲಯಗಳನ್ನು ರಚಿಸುವುದು; ಸಾಹಿತ್ಯವನ್ನು ಸ್ವರಲಿಪಿಯಲ್ಲಿ ಬರೆದಿಡುವಿಕೆ: ಪಲ್ಲವಿಶೇಷಯ್ಯರ್ ಅವರು ತಮ್ಮ ರಚನೆಗಳಿಗೆಲ್ಲ ಸ್ವರಪ್ರಸ್ತಾರ ಹಾಕಿಕೊಟ್ಟು ಪ್ರಕಟಿಸಿ ಬಹಳ ದೊಡ್ಡ ಉಪಕಾರ ಮಾಡಿದ್ದಾರೆ (ಸಂಗೀತ. ೪೯). [ಸಂ.]

ಸ್ವರಬತ್ 'ಸ್ವರಬತ್ತು' ನೋ.

ಸ್ವರಬತ್ತು, ಸ್ವರಬತ್, ಸ್ವರಬಾತ್ (ನಾ). ಒಂದು ಬಗೆಯ ತಂತೀವಾದ್ಯ; IP ಹಿಂದೂಸ್ಥಾನೀ ಸಂಗೀತದಲ್ಲಿ ಬಳಕೆಯಾಗುವ ಈ ವಾದ್ಯವಿಶೇಷ ಈಗ ಅಪರೂಪವಾಗುತ್ತಿದೆ: ಹತ್ತು ದಿನವೂ ತಾವೇ ಕಚೇರಿಮಾಡುವರು. ಈ ದಿನ ವೀಣೆ, ನಾಳೆ ಜಲತರಂಗ . . . ಬೇರೊಂದು ದಿನ ಸ್ವರಬತ್ತು ! (ಗಾನಕ. ೫); ಪಿಟೀಲು, ಪಿಯಾನೋ, ಸ್ವರಬತ್ತು - ಈ ಹಲವಾರು ವಾದ್ಯಗಳಲ್ಲೂ ಪರಿಶ್ರಮ ಪಡೆದಿದ್ದರು (ನಾಕಲಾ. ೨೮). **ಸ್ವರಬತ್**: ವೀಣೆಯೊಂದನ್ನೇ ಅಲ್ಲದೆ ಸ್ವರಬತ್, ಪಿಟೀಲು, ಪಿಯಾನೋ, ಜಲತರಂಗ ಮತ್ತು ನಾಗಸ್ವರಗಳನ್ನೂ ಅದ್ಭುತವಾಗಿ ಶೇಷಣ್ಣನವರು ನುಡಿಸಬಲ್ಲವರಾಗಿದ್ದರು (ಸಂಗೀಚಂ. ೨೭೦). **ಸ್ವರಬಾತ್**: ಪರಮೇಶ್ವರಭಾಗವತರು ವೀಣಾವಾದನ, ಪಿಟೀಲುವಾದನ ಮತ್ತು ಸ್ವರಬಾತ್‌ನ ವಾದನಗಳಲ್ಲಿ ಬಹಳ ಪರಿಶ್ರಮ ಪಡೆದಿದ್ದರು (ಸಂಗೀತ. ೪೩). [?]

ಸ್ವರಬಾತ್ 'ಸ್ವರಬತ್ತು' ನೋ.

ಸ್ವರಭಂಗ (ನಾ). ೧. ಧ್ವನಿ ಒಡೆಯುವುದು, ಭಾವೋದ್ವೇಗ ಮುಂತಾದ ಕಾರಣಗಳಿಂದ ಉಚ್ಚಾರಣೆಯಲ್ಲಿ ಉಂಟಾಗುವ ದೋಷ, — ಅಸ್ಪುಟತೆ. ೨. ಧ್ವನಿಯು ಒಡೆಯುವುದು,— ಬದಲಾಗುವುದು. ೩. ಕಂಠನಾದವನ್ನು ಮೂಟಕುಗೊಳಿಸುವ ಒಂದು ಬಗೆಯ ಗಂಟಲುರೋಗ: ಸ್ವರಭಂಗವನ್ನೂ ಹಲ್ಲುಕುರುವನ್ನೂ ಹಲ್ಲುನೋವನ್ನು . . . ಪರಿಹರಿಸಿ ದೃಷ್ಟಿಪ್ರಸನ್ನತೆಯನ್ನುಂಟು ಮಾಡುವುದು (ಸಙ್ಞ. ೨೬): ಈ ತ್ರಿದೋಷಗಳಿಂದೊಗೆದ ಸ್ವರಭಂಗವನು, ಮೇದೋ ಧಾತುವೃದ್ಧಿಯಿಂ ಪುಟ್ಟಿದ ಸ್ವರಭಂಗವನು ಅಸಾಧ್ಯವೆಂದು ಬಿಡುವುದು (ಸಙ್ಞ. ೨೫೯). [ಸಂ.]

ಸ್ವರಭಕ್ತಿ (ನಾ). [ಭಾಷಾಶಾ] ದ್ವಿತ್ವಾಕ್ಷರಗಳ ಮಧ್ಯೆ ಸ್ವರವನ್ನು ತಂದು ವ್ಯಂಜನಗಳನ್ನು ಬಿಡಿಸಿ ಹೇಳುವುದು; IP ಉದಾ: ಭಕ್ತಿ — ಭಕುತಿ, ಯುಕ್ತಿ — ಯುಕುತಿ, ಹರ್ಷ — ಹರುಷ: ದ್ವಿತ್ವಾಕ್ಷರಗಳುಳ್ಳ ತತ್ಸಮಶಬ್ದಗಳು ಸ್ವರಭಕ್ತಿಯಿಂದ ತದ್ಭವಗಳಾಗುತ್ತವೆ (ರೂಢಿ). [ಸಂ.]

ಸ್ವರಭಾರ (ನಾ). ವರ್ಣಗಳ ಉಚ್ಚಾರದಲ್ಲಿ ಗೊತ್ತಾದ ಸ್ವರಗಳ ಮೇಲೆ ಒತ್ತು ಬೀಳುವುದು; ಸ್ವರಾಘಾತ: ಗದ್ಯದ ಸ್ವರಭಾರವನ್ನು ಕುಕ್ಕಿಸುವಂಥ ಮಿಕ್ಕಿಸುವಂಥ ಗಾನಮಾಧುರ್ಯವು ಆಕೃತಿಯಲ್ಲಿರಬೇಕು (ಗೊತ್ತುಗು. ೬೩). [ಸಂ.]

ಸ್ವರಭೇದ (ನಾ). [ಕಾವ್ಯಮೀ] ಎಂಟು ವಿಧವಾದ ಸಾತ್ವಿಕಭಾವಗಳಲ್ಲಿ ಒಂದು; ಧ್ವನಿ ಬದಲಾಗುವುದು: ಸ್ಯೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಮಶ್ರೂದ್ಭೇದಂ ಸ್ತಂಭಂ ಲಯಮೆಂದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ (ಕಾವ್ಯಾವ. ೬೯೬). [ಸಂ.]

ಸ್ವರಮಂಡಲ (ನಾ). ಒಂದು ಬಗೆಯ ತಂತ್ರೀವಾದ್ಯ: ಸ್ವರಮಂಡಲದಲ್ಲಿ ದಂಡಿಗೆಯಲ್ಲಿ ಕಿನ್ನರಿಯಲ್ಲಿ ತ್ರಿವಿಧವೀಣೆಯೊಳು ಕೊರಳು ಬೆರಳು ಕೊಂಕುದನಿಗೂಡಿ ಮುತ್ತಿನ ಸರವೆತ್ತಿದಂತ ಪಾಡಿದರು (ಭರತ. ೬೪-೧೪); ನುಡಿಸುವ ವೀಣೆ ಕಿನ್ನರಿ ಸ್ವರಮಂಡಲ ತಂಬೂರಿ . . . ಇಂತಿವು ಮೊದಲಾದ ನಾನಾ ತೆರದ ನಾದಂಗಳನು ಕಿವಿದುಂಬಿ ಕೇಳಿ (ಅಮಂಡೇ. ೨೦೬-೪೬). [ಸಂ.]

ಸ್ವರಮೇಳ (ನಾ). ಪರಸ್ಪರ ಕೂಡಿರುವ ಸ್ವರಗಳ ಸಮೂಹ: ಈ ಕ್ರಮವನ್ನು ತೊಡಕಾದ ತರಂಗಗಳ ಆಕಾರಗಳಲ್ಲಿ ಸ್ವರಮೇಳಗಳನ್ನು ಪ್ರತ್ಯೇಕಿಸಲು ಉಪಯೋಗಿಸುತ್ತಿದ್ದಾರೆ (ಕಪಕೋ. I. ೬೫೪). [ಸಂ. ಸ್ವರಮೇಲ]

ಸ್ವರಮೈತ್ರಿ (ನಾ). [ಸಂಗೀತ] ಪರಸ್ಪರವಾಗಿ ಹೊಂದಿಕೊಂಡು ಕಿವಿಗೆ ಹಿತವಾಗುವಂತಹ ರೀತಿಯಲ್ಲಿ ಸ್ವರಗಳನ್ನು ಏರ್ಪಡಿಸುವುದು: ಸ್ವರಮೇಳ; ಸ್ವರಮೈತ್ರಿ ; ಇಂಪುದನಿ ; ಮಧುರನಾದ (Harmony. ಇಂಕಾ). [ಸಂ. ಸ್ವರಮೈತ್ರೀ]

ಸ್ವರಯೋಗ (ನಾ). = ಸ್ವರಮೇಳ: ಅವ್ಯಕ್ತ ಮಧುರವಾಗಿಯೂ ವಿಶುದ್ಧವಾಗಿಯೂ ಇರುವ ಗೀತಿಯಲ್ಲಿ ಸ್ವರಯೋಗ ಕೇಳಿಬರುವುದು (ಶಾಕುಂತ. ೬೦-೩). [ಸಂ.]

ಸ್ವರವಾದಿ (ನಾ). ಹಾಡು ಹೇಳುವವನು; ಹಾಡುಗಾರ; ಸಂಗೀತಗಾರ: ಸ್ವರವಾದಿ - ಸರವಾದಿ (ಶಮದ. ೨೦೪ ಪ್ರಯೋ). [ಸಂ. ಸ್ವರವಾದಿನ್]

ಸ್ವರವಿನ್ಯಾಸ (ನಾ). [ಸಂಗೀತ] ವಿವಿಧರೀತಿಗಳಲ್ಲಿ ಸ್ವರಗುಂಪುಗಳನ್ನು ರಚಿಸುವುದು: ಅವರ ಸ್ವರವಿನ್ಯಾಸ ಕ್ರಮ ವಿಶಿಷ್ಟರೀತಿಯದು (ರೂಢಿ). [ಸಂ.]

ಸ್ವರವೀಣೆ (ನಾ). ಒಂದು ಬಗೆಯ ವೀಣೆ: ವಿವಂಚಿಕೆ . . . ಸ್ವರವೀಣೆ . . . ಕಾಲಕೀಯೆಂಬ ಮೂವತ್ತುಮೂಱು ತಂತ್ರೀವಾದ್ಯಂಗಳಲ್ಲಿ (ವಿವೇ. ೨೩೬). [ಸಂ. ಸ್ವರವೀಣಾ]

ಸ್ವರಶುದ್ಧಿ (ನಾ). ಸ್ವರಗಳನ್ನು ಸರಿಯಾಗಿ ಉಚ್ಚರಿಸುವುದು; ಸ್ವರಗಳ ಉಚಿತವಾದ ಬಳಕೆ: ಸ್ವರಶುದ್ಧಿಯಲ್ಲಿಯೂ, ಸಮುಚಿತ ಉಚ್ಚಾರದಲ್ಲಿಯೂ . . . ದೂರಯಬಹುದಾದ ಸುಸಂಧಿಯು ಬೇರೆ ಯಾವ ಸಂದರ್ಭದಲ್ಲಿಯೂ ದೂರೆಯುವುದಿಲ್ಲ (ಕಥಕ. ೮೭). [ಸಂ.]

ಸ್ವರಸ (ನಾ). ೧. ಸ್ವಂತ ಅಪೇಕ್ಷೆ, — ರುಚಿ ; ಸ್ವಸಂತೋಷ. ೨. [ವೈದ್ಯಶಾ] ಸಹಜವಾದ ರಸ; ತನ್ನ ರಸ: ಮತ್ತಲೀಹ್ಯ . . . ಅದರಲ್ಲಿ ಹಾಕುವ ಸ್ವರಸಗಳು - ಗರುಗ, ಆಡುಸೋಗೆ, ಒಂದೆಲಗ, ಎಸಗ (ಸಙ್ಞ. ೨೨೨). [ಸಂ.]

ಸ್ವರಸಂಧಿ (ನಾ). [ವ್ಯಾಕ] ಎರಡು ಸ್ವರಗಳ ನಡುವೆ ಆಗುವ ಸಂಧಿ: ಸ್ವರಸಂಧಿಯಲ್ಲಿ ಆಗಮವಾಗುವ ಯ, ವ ಎಂಬ ಅಕ್ಷರಗಳು ಉಚ್ಚಾರಣೆಯ ಸೌಕರ್ಯವನ್ನನುಸರಿಸಿ ಬರುವವು (ಕ್ಷಪಾ. ೮). [ಸಂ.]

ಸ್ವರಸಂವಾದ (ನಾ). (ಸಂಗೀತದಲ್ಲಿ) ಸ್ವರಗಳ ಹೊಂದಾಣಿಕೆ; ಸ್ವರಗಳ ಸಾಮರಸ್ಯ: ಹೀಗೆ ಏಕತಾನದಲ್ಲಿರುವ ಸ್ವರಗಳು ಬಹು ಇಂಪಾಗಿ ಕೇಳುತ್ತವೆ. ಸ್ವರಸಂವಾದ (Harmony) ವಿಷಯದಲ್ಲಿ ಇದೇ ಮುಖ್ಯತತ್ವ (ಭಾಷವಿ. ೧೨೬). [ಸಂ.]

ಸ್ವರಸಪ್ತಕ (ನಾ). [ಸಂಗೀತ] ಆಧಾರಷಡ್ಜದಿಂದ ನಿಷಾದದವರೆಗಿನ ಏಳು ಮೂಲಸ್ವರಗಳು,— ಸಪ್ತಸ್ವರಗಳು: ರೂಢಿಯಲ್ಲಿರುವ ಸಮಗ್ರಸ್ವರಸ್ಥಾನಗಳನ್ನು ಪ್ರತಿನಿಧಿಸುವ ಏಳುಸ್ವರಗಳಲ್ಲಿ ಹಿಂದಿನದಕ್ಕಿಂತ ಮುಂದಿನದು ಧ್ವನಿಮಟ್ಟದಲ್ಲಿ ಕ್ರಮವಾಗಿ ಏರುವಂತೆ ವ್ಯವಸ್ಥೆಗೊಳಿಸಿರುವುದನ್ನು ಸ್ವರಸಪ್ತಕವೆಂದೂ . . . ಕರೆಯಲಾಗುತ್ತದೆ (ಕವೀಲೋ. I. ೮೭೦). [ಸಂ.]

ಸ್ವರಸಮುದಯ (ನಾ). (ಸಂಗೀತದಲ್ಲಿ) ಸ್ವರಗಳ ಸಮೂಹ : ಆ ಮಹಾವನಂ . . . ಸ್ವರಸಮುದಯದಂತೆ ನಿಷಾದನಿಷೇವ್ಯಮುಂ . . . ಆರಾಧಕನಂತಕ್ಷಮಾಲಾಗಣಿತ ಜಪೋಪೇತಮುಂ (ಚಂದ್ರಪು. ೫-೫೨ ವ). [ಸಂ.]

ಸ್ವರಸಾದ (ನಾ). = ಸ್ವರಭಂಗ ೩: ವಾತ ಪಿತ್ತ ಶ್ಲೇಷ್ಮವೆಂಬ ದೋಷತ್ರಯಂಗಳೇಕವಾಗಿ ಕೂಡಿರ್ಪುದರಿಂದಲೂ ಕ್ಷಯದಿಂದಲೂ ಮೇದಸ್ಸಿನಿಂದಲೂ ಸ್ವರಸಾದವೆಂಬ ರೋಗವು ಅರು ಪ್ರಕಾರವಾಗಿ ಪುಟ್ಟುವುದು (ಸಙ್ಞ. ೨೫೯). [ಸಂ.]

ಸ್ವರಸಾಮ್ಯ (ನಾ). ೧. [ಭಾಷಾಶಾ] ಒಂದು ಶಬ್ದದಲ್ಲಿ ಒಂದು ಗೊತ್ತಾದ ಪ್ರಚುರಸ್ವರವು ಪದದ ಇತರ ಸ್ವರಗಳನ್ನು ತನ್ನಂತೆ ಪರಿವರ್ತಿಸುವುದು. ೨. (ಬೇರೆ ಭಾಷೆಯ) ಪರ್ಯಾಯಶಬ್ದಗಳಲ್ಲಿ ಒಂದೇ ರೀತಿಯ ಸ್ವರಗಳಿರುವಿಕೆ; ಪರ್ಯಾಯಪದಗಳ ಸ್ವರಗಳಲ್ಲಿರುವ ಪರಸ್ಪರ ಹೋಲಿಕೆ: ಅವರ ಅಭಿಪ್ರಾಯದಂತೆ ಸ್ವರಸಾಮ್ಯವು ನಾಲ್ಕಾರುಭಾಷೆಗಳಲ್ಲಿ ಕಾಣಬಹುದು, ಆದರೆ ಅದರ ಅರ್ಥ ಸ್ವರಸಾಮ್ಯ ನಾಲ್ಕೈದು ಭಾಷೆಗಳ ರಚನೆಯಲ್ಲಿದೆ ಎಂದು (ದ್ರಾವಿವಿ. ೩೮). [ಸಂ.]

ಸ್ವರಾಂಗ (ನಾ). [ವ್ಯಾಕ] (ಅನುಸ್ವಾರ, ವಿಸರ್ಗಗಳು) ಸ್ವರಗಳು ಒಂದು ಅಂಗವಾಗಿ ಸ್ವರದ ಮುಂದೆ ಬರುವುದು : ಪರಿಕಿಸೆ ಬಿಂದು ವಿಸರ್ಗಂ ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್ (ಶಮುದ. ೧೨). [ಸಂ.]

ಸ್ವರಾಂತ (ನಾ). [ವ್ಯಾಕ] ಸ್ವರವನ್ನು ಕೊನೆಯಲ್ಲಿ ಹೊಂದಿರುವ ಪದ: ಈಗ (ಉ ಸೇರಿ) ಸ್ವರಾಂತವಾಗಿರುವ ಅನೇಕ ಶಬ್ದಗಳು ಹಳಗನ್ನಡದಲ್ಲಿ ವ್ಯಂಜನಾಂತವಾಗಿದ್ದು ವೆಂಬುದನ್ನು ಗಮನಿಸಬೇಕು (ಕೃಪಿಡಿ. ೬); ವ್ಯಂಜನಾಂತಗಳಾದ ಅರಲ್, ಪುರುಳ್ - ಎಂಬಥವು . . . ಸ್ವರಾಂತಗಳಾಗಿ, ಪ್ರಥಮಾವಿಭಕ್ತಿರೂಪಗಳೇ ಆಗುತ್ತವೆ (ಸಂತೋಧ. ೫೪). [ಸಂ.]

ಸ್ವರಾಂತರ (ನಾ). [ಸಂಗೀತ] ನಾಲ್ಕೇ ಸ್ವರಗಳನ್ನೊಳಗೊಂಡ (ರಾಗ) ಪ್ರಯೋಗ: ರಾಗ ಕ್ರಮವಾಗಿ ಸ್ವರೂಪಗೊಂಡ ರೀತಿಯಲ್ಲಿ ಆರ್ಚಕ (ಏಕಸ್ವರಪ್ರಯೋಗ) . . . ಸ್ವರಾಂತರ (ನಾಲ್ಕು ಸ್ವರಗಳ ಪ್ರಯೋಗ) . . . ಎಂಬ ಹಂತಗಳು ಕಂಡುಬಂದಿವೆ (ಸಂಗೀಚಂ. ೨೨). [ಸಂ.]

ಸ್ವರಾಕ್ಷರ (ನಾ). [ವ್ಯಾಕ] ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸಲಾಗುವ ವರ್ಣ; IP ಕನ್ನಡ ವರ್ಣಮಾಲೆಯಲ್ಲಿ ಅಕಾರದಿಂದ ಔಕಾರದವರೆಗೆ ಹದಿನಾಲ್ಕು ಸ್ವರಾಕ್ಷರಗಳಿವೆ : ವರ್ಣಮಾಲೆಯಲ್ಲಿ ಸ್ವರಾಕ್ಷರಗಳನ್ನು ಜೀವಾಕ್ಷರಗಳೆಂದೂ ಅಚ್ಚುಗಳೆಂದೂ ಕರೆಯುತ್ತಾರೆ (ಸಂಶೋಧ. ೧೪). [ಸಂ.]

ಸ್ವರಾಜ್ಯ (ನಾ). ೧. ಸ್ವತಂತ್ರವಾದ ರಾಜ್ಯ; ಯಾರ ಅಧೀನಕ್ಕೂ ಒಳಪಡದ ರಾಜ್ಯ: ನಾನು ಸ್ವರಾಜ್ಯ ಮತ್ತು ಬಾದಷಹತೆಯು ಸಮಂಜಸವಾಗಿ ಏರ್ಪಡುವುದು ಎಂದು ಉತ್ತರವಿತ್ತೆ (ಝಾರಾಗ. ೧೭೧). ೨. ಸ್ವಾಧಿಪತ್ಯ; ಸ್ವಾಯತ್ತತೆ; ಸ್ವಾತಂತ್ರ್ಯ: ಸ್ವರಾಜ್ಯವು ನಮ್ಮ ಜನ್ಮಸಿದ್ಧಹಕ್ಕು ಎಂದು ಲೋಕಮಾನ್ಯತಿಲಕರು ಘೋಷಿಸಿದರು (ರೂಢಿ). ೩. [ಜೈನ] ಐವತ್ತೂರು ಗರ್ಭಾನ್ವಯಕ್ರಿಯೆಗಳಲ್ಲಿ ಒಂದು; ಜಿನನಾಗುವವನಿಗೆ ಪಟ್ಟಾಭಿಷೇಕ ಮಾಡುವುದು: ಆದಾನಮುಂ . . . ಸ್ವರಾಜ್ಯಮುಂ ಚಕ್ರಲಾಭಮುಂ . . . ನಿರ್ವಾಣಪರ್ಯಂತಮಪ್ಪಯ್ವತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾವುಂಪು. ೨೧೨). [ಸಂ.]

ಸ್ವರಾಜ್ಯಕ್ರಿಯೆ (ನಾ). = ಸ್ವರಾಜ್ಯ ೩: ಮೂರ್ಧಾಭಿಷಿಕ್ತರಪ್ಪ ಪಾರ್ಥಿವರಿಂದ ಭಿಷಿಕ್ತನಾಗಿ ನೆಲನೆಲ್ಲಮನಾಳ್ವುದು ಸ್ವರಾಜ್ಯಕ್ರಿಯೆ (ಚಾವುಂಪು. ೨೧೯).

[ಸಂ. ಸ್ವರಾಜ್ಯಕ್ರಿಯಾ]

ಸ್ವರಾವಳಿ (ನಾ). [ಸಂಗೀತ] ಶಾಸ್ತ್ರೀಯಸಂಗೀತದ ಪ್ರಾರಂಭದ ಭಾಗ; ಸರಳವರಸೆ: ಸ್ವರಾವಳಿ, ಜಂಟಿವರಸೆ, ಅಲಂಕಾರಗಳು ಮತ್ತು ಗೀತೆಗಳು - ಅವು ಸಂಗೀತಶಿಕ್ಷಣತ್ರಯದ ಪ್ರಥಮಪಾಠಗಳಷ್ಟೆ (ಹೇಮಕೂ. ೧೦೪). [ಸಂ. ಸ್ವರಾವಲೀ]

ಸ್ವರಾಷ್ಟಕ (ನಾ). [ಸಂಗೀತ] ಸರಿಗಮಪದನಿಸ ಎಂಬ ಎಂಟು ಸ್ವರಗಳು: ಸ್ವರಸಪ್ತಕದ ಕೊನೆಯಲ್ಲಿ ಮೊದಲನೆಯ ಸ್ವರದ ಪ್ರಥಮ ಊರ್ಧ್ವಾವರ್ತನವನ್ನು ಸೇರಿಸಿಕೊಂಡರೆ ಬರುವುದನ್ನು ಸ್ವರಾಷ್ಟಕವೆಂದೂ ಕರೆಯಲಾಗುತ್ತದೆ (ಕವಿಕೋ. I. ೮೭೦).

[ಸಂ.]

ಸ್ವರಿತ (ನಾ). ವೇದಮಂತ್ರಗಳ ಪಠನದಲ್ಲಿ ಬಳಸುವ ನಾಲ್ಕು ಬಗೆಯ ಸ್ವರಗಳಲ್ಲಿ ಒಂದು; ಉದಾತ್ತಸ್ವರದ ಮುಂದೆ ಅನುದಾತ್ತಸ್ವರವನ್ನು ಕೂಡಿಸಿ ಉಚ್ಚರಿಸುವಾಗ ಬರುವ, ಅವೆರಡರ ಸಂಮಿಶ್ರಸ್ವರ: ಆ ಬ್ರಾಹ್ಮಣಂ ಬ್ರಹ್ಮಸಭೆಯ ಮುಂದೆ ಉದಾತ್ತ ಅನುದಾತ್ತ ಸ್ವರಿತ ಪ್ರಚಯವೆಂಬ ಚತುಸ್ಸ್ವರಂಗಳಿಂ . . . ಮಂತ್ರವನು ಉಚ್ಚರಿಸೆ (ನನ್ನಚಾ. ೨-೧೩೦ ಪ); ವೇದಮಂತ್ರಗಳನ್ನು ಗಾನರೂಪದಲ್ಲಿ ಹಾಡಲು ಅವರು ಪ್ರಯೋಗಿಸಿದ ಉದಾತ್ತ, ಅನುದಾತ್ತ ಮತ್ತು ಸ್ವರಿತಕ್ರಮಗಳು . . . ರಾಗ. ಸ್ವರೂಪ ಕಾಣಲು ಮಾರ್ಗದರ್ಶಿಯಾದವೆಂದು ನಿಸ್ಸಂದೇಹವಾಗಿ ಹೇಳಬಹುದು (ಸಂಗೀಚಂ. ೨೧). [ಸಂ.]

ಸ್ವರು (ನಾ). ೧. ಇಂದ್ರನ ವಜ್ರಾಯುಧ: ಹರಿಯೆಚ್ಚಂ ಬ್ರಹ್ಮಾಸ್ತ್ರದಿನುರುಳಿ ಶಿರಂ ಶರಶಿಲೀಮುಖಾಕೀರ್ಣವಿಯತ್ತರುವಂ ಗರ್ಜಿತ ವಿಜಿತ ಸ್ವರುವಂ ಸಂಗ್ರಾಮ ಕೇಳಿಗುರುವಂ ಮುರುವಂ (ಜಗವಿ. ೧೨-೨೪). ೨. ಸಿಡಿಲು: ಅಶನಿ. ೩. ಬಾಣ. ೪. ಯಜ್ಞ; ಯಾಗ. [ಸಂ.]

ಸ್ವರುಚಿ (ನಾ). ತನ್ನ ಒಲವು; ಸ್ವಂತ ಇಚ್ಛೆ: ನಂಮ ಸ್ವರುಚಿಯಿಂದ . . . ಒಡಂಬಟ್ಟು ಕೊಟ್ಟ ಶ್ರೋತ್ರಿಯದಾನ ಶಿಲಾಶಾಸನ (ಸೌಇ. IX-ii, ೪೪೦-೩೦; ಸು. 419). [ಸಂ.]

ಸ್ವರೂಚಿ (ನಾ). = ಸ್ವರುಚಿ: ಆಚಂದ್ರಾರ್ಕವಾಗಿ ನಡಸಿ ಪಾಲಿಸುವವೆಂದು ತಂದು ಸ್ವರೂಚಿಯಿಂದ ಒಡಂಬಟ್ಟು ಬರೆಸಿದ ಶಿಲಾಶಾಸನ (ಸೌಇ. IX-ii, ೪೫೬-೧೫; 1451); ತಮ್ಮ ಧರ್ಮಪರಿಣಾಮನಿಮಿತ್ತವಾಗಿ ತಮ್ಮ ಸ್ವರೂ(ರು)ಚಿಯಿಂದ ಗುರುಭಕ್ತಿಯಿಂದ ವೊಡಂಬಟ್ಟು ಬರಸಿ ಕೊಟ್ಟ ತಾಂಬ್ರಶಾಸನ (ಎಇ. XX. ೯೪-೫೬; 1556).

[IP ಇದು 'ಸ್ವರುಚಿ' ಎಂಬುದರ ಅಪಲಿಖಿತ]

ಸ್ವರೂಪ (ಗು). ೧. ಸುಂದರವಾದ; ಚೆಲುವಾದ. ೨. ಹೋಲಿಕೆಯುಳ್ಳ; ಸಾದೃಶ್ಯವನ್ನು ಹೊಂದಿದ. (ನಾ). ೩. ನಿಜವಾದ ರೂಪ; ಸ್ವಂತ ಆಕೃತಿ: ಸ್ಮರಹರಂ ತನ್ನಯ ಸ್ವರೂಪಂ ಧರಿಸಿ . . . ಇದಿರ್ವಂದು (ಬಸಪು. ೫೭-೬೦). ೪. ಸಹಜವಾದ ಗುಣ; ಸ್ವಭಾವ: ಸದಸದಾದಿ ವಸ್ತು ಸ್ವರೂಪನಿರೂಪಣಪ್ರವೀಣ (ಸೌಇ. XX. ೪೬-೨೫ ; 1072). ೫. ಸಹಜವಾದ ಸ್ಥಿತಿ,— ಇರವು: ೨ನೆಯ ಶತಮಾನದ ಆಡುನುಡಿಯ ಸ್ವರೂಪ ನಮಗೆ ತಿಳಿದುಬಂದಿಲ್ಲವಾಗಿ (ದ್ರಾವಿವಿ. ೮೧). ೬. ಕ್ರಮ; ರೀತಿ; ಬಗೆ: ಅಗಲುವ ಸಮಯ ಈ ಸ್ವರೂಪದಲ್ಲಿ ಬಂದೊದಗಿತು (ಇಪ್ರಕ. ೨೭೪). ೭. ಪ್ರಕೃತಿ; ಸಹಜಧರ್ಮ. ೮. ವಿಚಿತ್ರವಾದ ಗುರಿ,— ಉದ್ದೇಶ. ೯. ವಿದ್ವಾಂಸ; ಮೇಧಾವಿ. [ಸಂ.]

ಸ್ವರೂಪಕಥನ (ನಾ). [ವ್ಯಾಕ] ವಸ್ತುಸ್ವರೂಪವನ್ನು ಸಹಜವಾಗಿ ಹೇಳುವುದು: ಅನುಕರಣದೊಳೊಂದಿದ ಮಾತಿನಲ್ಲಿ ನಿರ್ದೋಷವಾಗೆ ಸಲ್ಲುಂ ಪೇಳ್ದೊಂತಿನಿತುಂ ಸ್ವರೂಪಕಥನದೊಳನುವಾದಂ ಭಿನ್ನಶಬ್ದಮಪ್ಪುದಱಿಂದಂ (ಕಾವ್ಯಾವ. ೪೫೨). [ಸಂ.]

ಸ್ವರೂಪಜ್ಞಾನ (ನಾ). [ವೀಶೈ] ತನ್ನ ಸ್ಥಿತಿಯ ಅರಿವು; ಸ್ವಾತ್ಮಜ್ಞಾನ: ಪ್ರಪಂಚದ ಮಿಥ್ಯಾತ್ವವು ಸ್ವಾನುಭವಕ್ಕೆ ವಿರುದ್ಧವಾಗಿ ತೋರುವುದರಿಂದ ಸ್ವರೂಪಜ್ಞಾನ ಸ್ಥಿರವಾಗಿ ನಿಲ್ಲುವಂತಿಲ್ಲ (ಶಕ್ತಿವಿ. ೧೯). [ಸಂ.]

ಸ್ವರೂಪದೇಹ (ನಾ). [ದ್ವೈತ] ಹುಟ್ಟಿನಿಂದ ಬಂದ ಶರೀರ; ಸ್ಥೂಲದೇಹ: ಒಬ್ಬೊಬ್ಬ ಜೀವನಿಗೂ ದೇಹಾವರಣಗಳುಂಟು . . . ಮೊದಲು ಜೀವನ ಸ್ವರೂಪದೇಹ, ಎರಡನೆಯದು ಲಿಂಗದೇಹ (ಹಸಾರ. ೩-೭ ವಿಶೇಷಾರ್ಥ). [ಸಂ.]

ಸ್ವರ್ಗ (ನಾ). ೧. ದೇವಲೋಕ; ನಾಕ; IP ಪುಣ್ಯ ಮಾಡಿದವರು ಸತ್ತ ಮೇಲೆ ಹೋಗುವರೆಂದು ನಂಬಲಾದ ಸುಖಮಯವಾದ ಮತ್ತು ಪ್ರಕಾಶಮಯವಾದ ಲೋಕ: ವೇಡಿರೂನ್ ಸ್ವರ್ಗ್ಗತ್ತಿಱೆಯ ಮರಿಯಾದಿ ಕೊಟ್ಟಾನ್ (ಎಕ. III(R). ಹಗ್ಗಡ. ೧೫೬-೩ ; 780); ಆಚಾರವೇ ಸ್ವರ್ಗ ಅನಾಚಾರವೇ ನರಕ (ಬಸವ. ೨೩೯) ; ಬೆಚ್ಚನ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನು ಅಱಿವ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚಿಂದ (ಸರ್ವಜ್ಞ. ೧೭೧). ೨. ಸುಖ: ಸಂತೋಷ: ಕುಲಯುತನು ಕೋವಿದನು ಕರುಣಾಜಲಧಿ ಕೌತುಕಯುಕ್ತವಿದನೆಂದಿಳೆ ಹೊಗಳುತಿರಲದುವೆ ಕೇಳ್ಳೆ ಸ್ವರ್ಗ ತಾನೆಂದ (ಕುವ್ಯಾಉ. ೪-೪೦). ೩. ಸೃಷ್ಟಿ. ೪. ಸ್ಥಿತಿ; ಇರವು. ೫. ಪೂರ್ವಕಾಲದಿಂದ ಇರುವುದು; ಅನಾದಿ: "ಸ್ಥಿತಿಯುಂ ಸೃಷ್ಟಿಯನಾದಿ ನಾಕ ಸುಖಮುಂ ಸ್ವರ್ಗಾಹ್ವಯಂ" (ನಾನಾರ. ೧೫೫); "ಸುರಲೋಕ ಪೂರ್ವ ಸುಖಮುಂ ಇರವುಗಳುಂ ಸೃಷ್ಟಿಯೈದು ಸ್ವರ್ಗಾಖ್ಯಂ" (ನಾನಾಕಂ. ೧೫೯). [ಸಂ.]

ಸ್ವರ್ಗಕಾಮ (ನಾ). ಸ್ವರ್ಗವನ್ನು ಬಯಸುವವನು; ಮೋಕ್ಷಾಪೇಕ್ಷಿ: ಯಾವ ಆಧಾರವೂ ಇಲ್ಲದೆ ಸ್ವರ್ಗಕಾಮನು ಅಗ್ನಿಹೋತ್ರ ಮಾಡಬೇಕು (ಧ್ವನ್ಯಾಲೋ. ೫೦). [ಸಂ.]

ಸ್ವರ್ಗಲೋಕ (ನಾ). = ಸ್ವರ್ಗ ೧: ಪರಮಜಂಗಮದಲ್ಲಿ ಹದಿನಾಲ್ಕುಲೋಕಂಗಳಡಗಿರ್ಪುವು . . . ಹೃದಯದಲ್ಲಿ ಸ್ವರ್ಗಲೋಕ (ಅಖಂಡೇ. ೧೪೨-೧೨೪). [ಸಂ.]

ಸ್ವರ್ಗವಾಸಿ (ನಾ). ದೇವಲೋಕದಲ್ಲಿ ವಾಸಿಸುವವನು; ಸ್ವರ್ಗದಲ್ಲಿ ನೆಲಸಿದವನು.

ಸ್ವರ್ಗವಾಸಿಯಾಗು = ಸಾಯು; ಮರಣಹೊಂದು: ಟಳಕರ ಹಿರಿಯ ಮಗ ಸ್ವರ್ಗವಾಸಿಯಾಗಿದ್ದಾನೆ (ಧರ್ಮಾ. ೧೪೧). [ಸಂ. ಸ್ವರ್ಗವಾಸಿನ್]

ಸ್ವರ್ಗಸ್ಥ (ನಾ). = ಸ್ವರ್ಗವಾಸಿ.

ಸ್ವರ್ಗಸ್ಥನಾಗು = ಸಾಯು: ಅವನು ಸ್ವರ್ಗಸ್ಥನಾಗಿ ಇಂದಿಗೆ ಒಂದು ವರ್ಷವಾಯಿತು (ರೂಢಿ). [ಸಂ.]

ಸ್ವರ್ಗಾಗ್ರ (ನಾ). [ಜೈನ] ದೇವಲೋಕದ ತುದಿ; ಸ್ವರ್ಗದ ಮೇಲ್ಭಾಗ: ಮಾಸೇನರ್ಪ್ಪರಮಪ್ರಭಾವರಿಪಿಯರ್ . . . ಸಾಸಿರ್ವ್ವರ್ವ್ವರಪೂಜೆದನ್ದುಯೆ ಅವರ್ಸ್ವರ್ಗ್ಗಾಗ್ರಮಾನೇಱಿದಾರ್ (ಎಕ. II. ೨೬-೨ ; ಸು. 700). [ಸಂ.]

ಸ್ವರ್ಗಾಲಯ (ನಾ). = ಸ್ವರ್ಗ ೧: ಸಮ್ಯಗಾರಾಧನಂ ಕೃತ್ವಾ ಸ್ವರ್ಗ್ಗಾಲಯ XXX (ಎಕ. II. ೨೩-೪ ; ಸು. 700) ; ಪಾಣ್ಡ್ಯವಿಲ್ಲರಸರಾ ಮಗನ್ ದೇವು . . . ಶ್ವೇತವಾಹನರ್ ಉದಯಪುರಮಾನ್ ಪೂಗುವಲ್ಲಿ ಎಱಿದು ಸ್ವರ್ಗ್ಗಾಲಯಕ್ಕೇಱಿದೊನ್ (ಎಇ. IX, ೧೯-೭; ಸು. 800). [ಸಂ.]

ಸ್ವರ್ಗಿ (ನಾ). = ಸ್ವರ್ಗವಾಸಿ: ಶ್ರೀ ದಾಸಿಅಮ್ಮನ್ ಕಣ್ಣಯೊಳ್ಸನ್ನೊರ್ಬ್ಬರನೆಱಿದು ಸ್ವರ್ಗ್ಗಿ ಆದನ್ (ಮೃಅರಿ. ೧೯೫೯. ೨೩-೧೦ ; 740). [< ಸ್ವರ್ಗ]

ಸ್ವರ್ಗೀಯ (ಗು). ೧. ಸ್ವರ್ಗಕ್ಕೆ ಸಂಬಂಧಿಸಿದ ; ದೇವಲೋಕದ. ೨. ಆನಂದದಾಯಕವಾದ: ಮಹಾರಾಣಿಯ ಸ್ವರ್ಗೀಯನೃತ್ಯವನ್ನು ನೋಡಿದ ಕುಶಲರೂವಾರಿಗಳಿಗೆ ಆಗ ಮನಸ್ಸಿಗೆ ಒಂದು ಸ್ಫೂರ್ತಿ ಹೊಳೆಯಿತು (ಶಾಂತಲಾ. ೧೩೩). ೩. ಸ್ವರ್ಗವಾಸಿಯಾದ; ದಿವಂಗತ: ಸ್ವರ್ಗೀಯ ರಾಮಕೃಷ್ಣಶಾಸ್ತ್ರಿಗಳು ದೊಡ್ಡ ಸಂಸ್ಕೃತ ವಿದ್ವಾಂಸರು (ರೂಢಿ). [ಸಂ.]

ಸ್ವರ್ಜಿತ (ನಾ). ಸ್ವರ್ಗಲೋಕವನ್ನು ಗೆದ್ದವನು: ಗೋಜಿತನು ಸ್ವ[ಪಾಠಾಂ. ಅ]ರ್ಜಿತನು . . . ಅಗ್ರಪಟಲದ ಬೆಳಗು ಕೂಡಲಸಂಗಯ್ಯನು (ಬಸವ. ೯೫೪).

[ಸಂ. ಸ್ವರ್ಜಿತ್]

ಸ್ವರ್ಣ (ನಾ). ೧. ಚಿನ್ನ; ಬಂಗಾರ: "ಹೇಮಂ, ಸ್ವರ್ಣಂ . . . ತಪನೀಯಂ - ಈ ೨೫ ಹೊನ್ (ಪೊನ್)" (ಹಲಾಯು. ೨೯-೧೯) ; ಗರುಡಪತಾಕೇಶ್ವರನ ಸತ್ಕೃತಿಯ ನೀ ಕೇಳಲುಸಿರುವೆ ಸ್ವರ್ಣಕಂಬಿಯೊಳು ಸಲಾಕೆಯ ತೆಗೆದಂತೆ (ಮೋಹತ. ೨೭-೨); ಲಕ್ಷ್ಮಿಯ ನಿವಾಸಮೆನೆ ಸ್ವರ್ಣ ಸಂಪತ್ತಿನಿಂ ಮೇರುವಿಂಗೆಣೆಯಾಗಿ ಕಣ್ಣು ಕೋರೈಸೆ (ಚಿತ್ರಾಂಗ. ೭೨-೧೯೭೧). ೨. ಐಶ್ವರ್ಯ; ಸಂಪತ್ತು: "ದ್ಯುಮ್ನಂ . . . ಸ್ವರ್ಣಂ . . . ವಿಭವಃ - ಈ ೧೫ ಒಡಮೆಯ ಪೆಸರ್" (ಹಲಾಯು. ೧೪-೮೦). [ಸಂ.]

ಸ್ವರ್ಣಕಾರ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲಿಗ: ಸ್ವರ್ಣಕಾರನೆ ಬಲ್ಲನುಳಿದವರರಿಯರು ಚಿನ್ನದ ಚಿತ್ರಕರ್ಮವನು (ಇಂಚಾಪ. ೬೭-೨೫). [ಸಂ.]

ಸ್ವರ್ಣಕ್ಷೀರಿ (ನಾ). ಒಂದು ಬಗೆಯ ಸಸ್ಯ; ಹಳದಿವರ್ಣದ ರಸ ಒಸರುವ ಒಂದು ಬಗೆಯ ಗಿಡ; ದತ್ತೂರಿ: ದತ್ತೂರಿ(ಸ್ವರ್ಣಕ್ಷೀರಿ) ಹೂವನ್ನು ಎಮ್ಮೆ ಸಗಣಿರಸದಲ್ಲರೆದು ನಸ್ಯಮಾಡಿಸುವುದು (ಸಕವೈ. ೪೨೮. ಪರಿ). [ಸಂ. ಸ್ವರ್ಣಕ್ಷೀರೀ]

ಸ್ವರ್ಣಗೌರಿ (ನಾ). ಪಾರ್ವತಿಯ ಇನ್ನೊಂದು ಹೆಸರು.

ಸ್ವರ್ಣಗೌರಿವ್ರತ = ಭಾದ್ರಪದ ಶುದ್ಧತದಿಗೆಯಂದು ಸುಮಂಗಲಿಯರು ಆಚರಿಸುವ ಒಂದು ವ್ರತ; ಅಂದು ಸ್ವರ್ಣಗೌರಿಯನ್ನು ಪೂಜಿಸಿ, ಮುತ್ತೈದೆಯರಿಗೆ ಬಾಗಿನಗಳನ್ನು ಕೊಡುವರು: ಈ ಸ್ವರ್ಣಗೌರೀವ್ರತದಿಂ ಸಕಲಸಂಪತ್ತಾಗುವುದು ನೀನುಂ ಮಾಳ್ಪುದು (ಹಮ್ಮೀರ. ೭-೬೬ ವ). [ಸಂ. ಸ್ವರ್ಣಗೌರೀ]

ಸ್ವರ್ಣದಿ (ನಾ). ದೇವಗಂಗೆ; ಗಂಗಾನದಿ: ಬಂದೇಱಿದಂ ಧೀರಂ ಶೌರಿವರೂಥಮಂ . . . ಶಸ್ತ್ರ ತೂಣೀರವ್ರಾತಸನಾಥಮಂ ಧ್ವಜಝಾಪ್ತಸ್ವರ್ಣದೀಪಾಥಮಂ (ಜಗವಿ. ೧೫-೭೦); ಇಂದುಖಂಡಮಹಿಕುಂಡಳಮುದ್ಯತ್ಸ್ವರ್ಣದಿ ಭಾಳವಿಲೋಚನಂ . . . ನಿಜರೂಪಂ ತೋಱಿದನದ್ರಿಸುತಾಧವಂ (ರಾಜಶೇ. ೧೪-೮೬). [ಸಂ. ಸ್ವರ್ಣದೀ]

ಸ್ವರ್ಣದೀಧರ (ನಾ). ಗಂಗಾಧರ; ಶಿವ: ಕಾಶಿಯೊಳರ್ಧಮಾಸವದಱಿಂ ಸ್ವರ್ಣದೀಧರನಂ ಯಜಿಸೆ (ಪದ್ಮರಾ. ೧೧-೧೪೪). [ಸಂ.]

ಸ್ವರ್ಣಪಾಲೆ (ನಾ). ಒಂದು ಬಗೆಯ ಸಸ್ಯ: "ತೃಣಗಂಧಿಃ - ಸ್ವರ್ಣಪಾಲೆ" (ಓಷಧಿ. ೭೨). [ಸ್ವರ್ಣ + ಪಾಲೆ$_2$]

ಸ್ವರ್ಣಪಾಷಾಣ (ನಾ). ಚಿನ್ನದ ಅಂಶ ಇರುವ ಕಲ್ಲು: ಸ್ವರ್ಣಪಾಷಾಣದೊಳ್ ಸುವರ್ಣಮುಂಟಾಗಿಯುಂ ದಹನ ತಾಪನ ಪಿಂಡಿಬದ್ಧನಾದಿ ಕ್ರಿಯೆ[ವೆ]ಱದನ್ನೆಗಂ ಪೊನ್ನಾಗದಂತೆ ತಪದಿಂದಲ್ಲದೆ ಮೋಕ್ಷಮಾಗದು (ವಡ್ಡಾರಾ. ೧೦೦-೨೭). [ಸಂ.]

ಸ್ವರ್ಣಪುಷ್ಪಿ (ನಾ). ಹಳದಿಯ ಹೂವು ಬಿಡುವ ಒಂದು ಬಗೆಯ ಸಸ್ಯ; ಕಕ್ಕೆ: "ಆರಗ್ವಧಃ, ಕೃತಮಾಲಃ, ಸ್ವರ್ಣಪುಷ್ಪೀ - ಈ [೩ ಕಕ್ಕೆ]" (ಹಲಾಯು. ೩೩-೪೫).

[ಸಂ. ಸ್ವರ್ಣಪುಷ್ಪೀ]

ಸ್ವರ್ಣಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ: ಸ್ವರ್ಣಮಲ್ಲಿಗೆ, ಹಸುರು ಜಾಜಿಮಲ್ಲಿಗೆ (ಮೃಔಗಿ. ೪೭-೯೩೪). [< ಸಂ. ಸ್ವರ್ಣಮಲ್ಲಿಕಾ]

ಸ್ವರ್ಣಮಾನ (ನಾ). ಚಿನ್ನರೂಪವಾದ ಬೆಲೆ; ಸ್ವರ್ಣಕ್ರಯ: ಸ್ವರ್ಣಮಾನ (Gold Standard) - ಪದ್ಧತಿಯಲ್ಲಿ ಪ್ರತಿರಾಷ್ಟ್ರವೂ ಅದರ ಮುಖ್ಯನಾಣ್ಯಕ್ಕೆ ಬಂಗಾರದಲ್ಲಿ ಇಷ್ಟು ಬೆಲೆಯೆಂದು ನಿಗದಿಮಾಡಿತು (ಅಂತಸಂ. ೭). [ಸಂ.]

ಸ್ವರ್ಣಯುಗ (ನಾ). (ಆಲಂ) ಸಮೃದ್ಧಿಯಿಂದ ಕೂಡಿದ ಕಾಲಾವಧಿ; ಸುವರ್ಣಯುಗ: ಷಹಜಹಾನನ ಕಾಲವನ್ನು ಮೊಗಲ್ ವಾಸ್ತುಶಿಲ್ಪದ 'ಸ್ವರ್ಣಯುಗ' ವೆಂದು . . . ಅಭಿಪ್ರಾಯಪಟ್ಟಿದ್ದಾರೆ (ಭಾರದ. ೫೦೮). [ಸಂ.]

ಸ್ವರ್ಧಾಮ (ನಾ). = ಸ್ವರ್ಗ ೧: ನರಪತಿ ಪುತ್ರಶೋಕದಿಂದೆ ಸ್ವರ್ಧಾಮಕಡರೆ (ಕೃಮಿಭಾ. ೧೮-೩). [ಸಂ.]

ಸ್ವರ್ಧುನಿ (ನಾ). ದೇವಗಂಗೆ; ಗಂಗಾನದಿ: ಭೀಷ್ಮಂ . . . ಸ್ವರ್ಧುನಿಯೊಳ್ ಪುಟ್ಟಿದುದಱಿನತಿಜಡನಲ್ತೇ (ಜಗವಿ. ೧೭-೧೯); ಸ್ವರ್ಧುನಿಯುತ್ತುಂಗತರಂಗಾನ್ವಿತ ಮೂರ್ಧಂ (ಉದ್ಧವೆ. ೭-೩೦). [ಸಂ. ಸ್ವರ್ಧುನೀ]

ಸ್ವರ್ಧೋರೇಯ (ನಾ). ಸ್ವರ್ಗಲೋಕದ ಮುಖಂಡ; ಇಂದ್ರನೇ ಮೊದಲಾದ ನಾಯಕರು: ಸ್ವರ್ಧೋರೇಯರ್ಕಳಿಂದ್ರಾದಿಗಳೆ ದೊರೆಯೆ ತಾಮೆಂದು ಬಾಣಂ ಕರಂ . . . ಮದದೊದವಿಂ ನಿಚ್ಚಲುಂ ಪೆರ್ಚಿ ನಿಲ್ವಂ (ಜಗವಿ. ೧೭-೮೪). [ಸಂ.]

ಸ್ವರ್ಭಾನು (ನಾ). ನವಗ್ರಹಗಳಲ್ಲಿ ಒಂದು; ರಾಹು: ಪೂರ್ವಭವಬದ್ಧ ಕ್ರೋಧದಿಂ ಬಾಲನಂ ಸುರನುರ್ವಿ ಪಿಡಿದುಯ್ದನುಯ್ಯ ತೆಱದಿಂ ಸ್ವರ್ಭಾನು ಬಾಲಾರ್ಕನಂ (ಪಂರಾಮಾ. ೪-೧೬); ಚಕ್ರಹತಿಯಿಂ ಸ್ವರ್ಭಾನು ತುಂಡಾಗನೇ (ಸೋಮೇಶ. ೪೫). [ಸಂ.]

ಸ್ವರ್ಮಣಿ (ನಾ). ನೇಸರು ; ಸೂರ್ಯ : ಸ್ವರ್ಮಣಿ ಧರಾತಳಕೆ ನಭದಿಂದುರುಳ್ವಂತೆ ಪೆರ್ಮಱವೆಗೊಂಡು ಭೀಳ್ವನಿತಱೊಳ್ (ಕೃಮಿಭಾ. ೨೦-೬೦). [ಸಂ.]

ಸ್ವರ್ಲೋಕ (ನಾ). ಸ್ವರ್ಗಲೋಕ; ಅಮರಲೋಕ: ಭೂಲೋಕ ಭುವರ್ಲೋಕ ಸ್ವರ್ಲೋಕ . . . ಸತ್ಯಲೋಕದಿಂದತ್ತತ್ತ ನಿಮ್ಮುತ್ತಮಾಂಗ (ಬಸಹ. ೯೬-೨೮೭). [ಸಂ.]

ಸ್ವಲ್ಪ (ಗು). ೧. ತುಸು; ಕೊಂಚ; ಅಲ್ಪ: ಇದನ್ನು ಸ್ವಲ್ಪದರಲ್ಲಿಯೇ ತಿಳಿಸು (ಮುಂಬಪ್ರಾ. ೩ ಪ್ರಸ್ತಾವನೆ). ೨. ಸಣ್ಣದಾದ; ಚಿಕ್ಕ. (ನಾ). ೩. ಅಲ್ಪವಾದುದು; ಬೆಲೆಯಿಲ್ಲದುದು; ಕ್ಷುದ್ರವಾದುದು: ಸ್ವಲ್ಪದ ಅರಸನಿಗೆ ಅಲ್ಪದ ಪ್ರಧಾನಿ (ಗಾದೆ). ೪. ಅಲ್ಪನಾದವನು; ಕ್ಷುದ್ರ: ನಿನ್ನನ್ನು ಸ್ವಲ್ಪನಾದ ನಾನು ಹೇಗೆ ಸ್ತೋತ್ರವನ್ನು ಮಾಡಲಿ (ಅರ್ಕಮಾ. ೭). [ಸಂ.]

ಸ್ವಲ್ಪವಿತ್ತ (ನಾ). ಅಲ್ಪವಾದ ಐಶ್ವರ್ಯವಿರುವವನು: ರವಿ . . . ಮಕರದೊಳಿರೆ ಮೂರ್ಖಂ ಖಳಂ ಲೋಭಿ ನೀಚವ್ಯವಹಾರಂ ಸ್ವಲ್ಪವಿತ್ತಂ ಪರವಿಭವಯುತಂ (ಜಾತಕ. ೧೭-೧೭). [ಸಂ.]

ಸ್ವಲ್ಪಾತ್ಮಜ (ನಾ). ಕಡಿಮೆ ಮಕ್ಕಳಿರುವವನು; ಮಿತಸಂತಾನಿ: ಧಾತ್ರೀತನಯಂ . . . ಚಾಪನಿಮೇಷಸ್ಥನಾಗಿರೆ . . . ಸ್ವಲ್ಪಾತ್ಮಜಂ (ಜಾತಕ. ೧೭-೨೦). [ಸಂ.]

ಸ್ವಲ್ಪು (ಗು). ೧. (ಉಕ) = ಸ್ವಲ್ಪ ೧: ನಮಗೂ ಸ್ವಲ್ಪು ಗಡ್ಡವಿದೆ (ಅಮಗಾಂ. ೭). (ನಾ). ೨. ಬಹಳ ಕಡಿಮೆ: ಆ ಕಾಲಕ್ಕೆ ತಿಳಿದವರೂ ಸ್ವಲ್ಪು (ವಚಶಾ. I. ಪ್ರಸ್ತಾವನೆ ೫). [< ಸಂ. ಸ್ವಲ್ಪ]

ಸ್ವಶಬ್ದವಾಚ್ಯತ್ವ (ನಾ). [ಕಾವ್ಯಮೀ] ಒಂದು ಬಗೆಯ ರಸದೋಷ: ಅನಪೇಕ್ಷಿತವಾದ ಸಹಾಯವು ಅನರ್ಥಕಾರಿಯಾಗುವಂತೆ "ಸ್ವಶಬ್ದವಾಚ್ಯತ್ವ" ಎಂಬ ರಸದೋಷ ಇಲ್ಲಿ ಒದಗುತ್ತದೆ (ಭಾರಮೀ. ೩೩೨). [ಸಂ.]

ಸ್ವಸೃ (ನಾ). ಒಡಹುಟ್ಟಿದವಳು ; ಸಹೋದರಿ. [ಸಂ.]

ಸ್ವಸ್ತಿ (ನಾ). ೧. ಒಳ್ಳೆಯದು, ಕ್ಷೇಮ, ಕುಶಲ ಎಂಬರ್ಥದ ಒಂದು ಪದ: "ಒಳ್ಳಿತರಲಾದಿಯಲಿ ಪುಣ್ಯದಲಿ ಸ್ವಸ್ತಿಯೆಂದೆಂಬುದಕ್ಕುಂ" (ಮಂಗರಾ. ೧೫೫-೬೮); ಸ್ವಸ್ಥತೆಯ ಕದಲಿಸದ ಜಗದಾಸ್ಥೆಯೊಂದು ಗುಣ ಆಸ್ಥೆಯನು ಕುಂದಿಸದ ತಾಟಸ್ಥ್ಯವೊಂದು

ನಷ್ಟಲಾಭಂಗಳಲಿ ಲಘುಹಾಸ್ಯನಯವೊಂದು ಸ್ವಸ್ತಿಗಾವಶ್ಯಕವೂ (ಮಂಜುಳ. ೭೨೩).
೨. ದೇವಸ್ಥಾನ ಮುಂತಾದ ಕಡೆಗಳಲ್ಲಿ ಹೇಳುವ ಶುಭಾಶಂಸನೆಯ ಮಂತ್ರ; ಶಾಂತಿಮಂತ್ರ; ಆಶೀರ್ವಚನ. ೩. ಶಾಸನ, ಪತ್ರ ಮುಂತಾದುವುಗಳ ಪ್ರಾರಂಭದಲ್ಲಿ ಮಂಗಳ, ಶುಭ ಎಂಬರ್ಥದಲ್ಲಿ ಬಳಸುವ ಶಬ್ದ: ಸ್ವಸ್ತಿಶ್ರೀ ಮಹಾವೀರ XX ಅಬ್ಬುಜ ತಮ್ಮಡಿಗಳ್ (ಎಕ. II, ೧೫-೧ ; ಸು. 800); ಸ್ವಸ್ತಿ ಸಮಸ್ತಮಂಡಳಿಕಮಸ್ತಕಪುಷ್ಪರಜಃಪಿಶಂಗಿತಾಂಘ್ರಿಸ್ವಬಕದ್ವಯಂ (ಶಾಂತಿಪು. ೧೧-೭೪). ೫. ಪುಣ್ಯ. [ಸಂ.]

ಸ್ವಸ್ತಿಕ (ನಾ). ೧. ಮಂಗಳಕರವಾದ ಒಂದು ಬಗೆಯ ಗುರುತು,— ಲಾಂಛನ. ೨. ವಕ್ಷಃಸ್ಥಳವು ಮುಚ್ಚುವಂತೆ ಎರಡು ತೋಳುಗಳನ್ನು ಒಂದರ ಮೇಲೊಂದು ಬರುವಂತೆ ಇಟ್ಟುಕೊಳ್ಳುವುದು: ಮನಸಿಜನೃಪಲೀಲಾಲಾಂಛನಂ ಸ್ವಸ್ತಿಕಂ ಸ್ತ್ರೀಜನದೊಳೆಸದು ನಿಂದತ್ತು (ಆದಿಪು. ೧೧-೧೪೮); ಈ ಸ್ವಸ್ತಿಕದಿಂ ಕರ್ಪೂರ ಶಲಾಕೆಯಿಂ ನಯನಪುತ್ರಿಕಾಸ್ವಸ್ತಿಕಮೆನಿಸುದು (ಮಲ್ಲಿಪು. ೫-೪೨). ೩. ಹಿಟ್ಲರನ ಕಾಲದ ನಾಜಿಪಕ್ಷದ ಜರ್ಮನಿಯ ರಾಷ್ಟ್ರಲಾಂಛನ. ೪. ಒಂದು ವಿಶಿಷ್ಟಾಕೃತಿಯ ಕಟ್ಟಡ. ೫. [ವಾಸ್ತು] ಒಂದು ಬಗೆಯ ಕಟ್ಟಡನಿರ್ಮಾಣದ ರೀತಿ: ''ಸ್ವಸ್ತಿಕಃ, ವರ್ಧಮಾನಃ, ನಂದ್ಯಾವರ್ತಃ - ಈ ೩ ಮೊದಲಾಗುಳ್ಳುವು ಅರಮನೆಯ ಭಂದಂಗಳ್'' (ಪಲಾಯು. ೫೧-೧೫೦). ೬. [ನಾಟ್ಯ] ಮೂವತ್ತು ಬಗೆಯ ನೃತ್ತಹಸ್ತಗಳಲ್ಲಿ ಒಂದು: ತವ ಹಂಸಪಕ್ಷ ಕರಮೆರಡವೆ ಮುಂಗೈ ಮೇಲನೊಂದೆ ಸ್ವಸ್ತಿಕಮನಿಕುಂ (ಲಾಸ್ಯರಂ. ೨-೪೮). [ಸಂ.]

ಸ್ವಸ್ತಿಕಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು: ಸ್ಥಿರಸುಖದಿಂ ನಿಶ್ಚಲಾತ್ಮಕಮಾದಾಸನದಲ್ಲಿ ಸಿದ್ಧಾಸನ ಸಿಂಹಾಸನ ಸ್ವಸ್ತಿಕಾಸನ . . . ಅರ್ಧಾಸನಾದಿ ಎಂಭತ್ತುನಾಲ್ಕು ಆಸನಭೇದಂಗಳು (ವಿವೇಕ. ೧೩೦); ಮುಖ್ಯವಾದ ಕೆಲವು ಆಸನಗಳು ೧. ಉತ್ತಾನಾಸನ . . . ೬೦ ಸ್ವಸ್ತಿಕಾಸನ (ಭಾರತ. ೧೬೭). [ಸಂ.]

ಸ್ವಸ್ತಿಕೆ (ನಾ). ಒಂದು ಬಗೆಯ ಸಸ್ಯ: ''ಚಿಲಿಕೆ ಸ್ವಸ್ತಿಕೆಯಕ್ಕು'' (ಮಂಗರಾ. ೪೪-೪೭). [?/ ಸಂ. ಸ್ವಸ್ತಿಕ = ಬೆಳ್ಳುಳ್ಳಿ]

ಸ್ವಸ್ತಿವಾಚನ (ನಾ). ಒಳ್ಳೆಯದಾಗಲಿ, ಶುಭವಾಗಲಿ ಎಂದು ಸಾಂಪ್ರದಾಯಿಕವಾಗಿ ಹೇಳುವ ವೇದಮಂತ್ರ : ಸುರರು ವಸುಗಳು . . . ಕಿಂಪುರುಷರೀಯಲಿ ನಿನಗೆ ವಿಮಳಸ್ವಸ್ತಿವಾಚನವ (ಕುವ್ಯಾಳಿ. ೪-೨೮) ; ಸ್ವಸ್ತಿವಾಚನಗಳನ್ನು ಹೇಳುತ್ತ ಓಲಗ ಶಾಲೆಯನ್ನು ಪ್ರವೇಶಿಸಿದರು (ಶಾಂತಲಾ. ೬೩). [ಸಂ.]

ಸ್ವಸ್ತ್ಯಯನ (ನಾ). ಪ್ರಯಾಣದಲ್ಲಿ ಮಂಗಳವಾಗಲಿ, ಶುಭವಾಗಲಿ ಎಂದು ಸಾಂಪ್ರದಾಯಿಕವಾಗಿ ಹೇಳುವುದು: ಚಂದದಿಂದನಗೆ ಸ್ವಸ್ತ್ಯಯನಗಳನುಂ ಮಾಡಿ ಬೇಗಲಪ್ಪಣೆಯನೀಯೆ (ವಂಕಾರಾ. ೨-೯-೩೮); ತಾರೆ ಸ್ವಸ್ತ್ಯಯನವನ್ನು ಹೇಳಿದ ಬಗ್ಗೆ ರಾಮಾಯಣದಲ್ಲಿ ಉಲ್ಲೇಖವಿದೆ (ಕರ್ನಾಕ. ೭). [ಸಂ.]

ಸ್ವಸ್ಥ (ನಾ). ೧. ಚೆನ್ನಾಗಿರುವುದು; ಕ್ಷೇಮ; ಆರೋಗ್ಯ: ಯಾಕೋ ನನ್ನ ಮೈಯಲ್ಲಿ ಸ್ವಸ್ಥವಿಲ್ಲ (ಪುಟ್ಟಬು. ೪-೭೬). ೨. (ಆಲಂ) ಯೋಗ್ಯವಾದುದು; ಸರಿಯಾದುದು; ಚೆನ್ನಾದುದು: ಮಣ್ಣೂ ನೀರು ಸ್ವಸ್ಥವಾಗಿ ಮೃತ್ತಿಕೆ . . . ತೋಜಿಬರುವಂತೆ (ಮೋಳಮಾ. ೧೫೮-೭೪೦); ಉಳಿದ ವಿಪ್ರಸಂದೋಹಕುಂ ಗೋದಾನ ಭೂದಾನವ ಸ್ವಸ್ಥದಿಂ ಕೈಗ್ಕೆದು (ವಂಕಾರಾ. ೧-೨೪-೩೨). ೩. ಕ್ಷೇಮವಾಗಿರುವವನು; ಆರೋಗ್ಯದಿಂದಿರುವವನು. ೪. [ನಾಟ್ಯ] ಒಂದು ಬಗೆಯ ಆಸನಭಂಗಿ: ಸ್ವಸ್ಥ ಮಂದಾಲಸ . . . ವಿಮುಕ್ತ ಈ ಒಂಬತ್ತು ಕುಳ್ಳಿರ್ದ ಸ್ಥಾನಕಂಗಳ್ (ಲಾಸ್ಯರಂ. ೭-೧೨ ವ).

ಸ್ವಸ್ಥವಾಗಿರು = ೧. ಆರೋಗ್ಯವಾಗಿರು; ಕ್ಷೇಮದಿಂದಿರು: ಅವರು ಈಗ ಸ್ವಸ್ಥವಾಗಿದ್ದಾರೆ (ರೂಢಿ). ೨. (ಆಲಂ) ಸುಮ್ಮನಿರು; ತೆಪ್ಪಗಿರು: ನೀನು ಸ್ವಸ್ಥವಾಗಿದ್ದರೆ ಯಾವ ತೊಂದರೆಯೂ ಬರುವುದಿಲ್ಲ (ರೂಢಿ). [ಸಂ.]

ಸ್ವಸ್ಥತೆ (ನಾ). ಸ್ವರ್ಗವಾಸಿತ್ವ; ಸ್ವರ್ಗವಾಸ: ಸ್ವಸ್ಥತಾಗತಿ ಮುಕ್ತರಾದವರೊಳಲ್ಲದಾನಾಡೊಳಿಲ್ಲ (ಪಚಕಾ. ೨-೧೧). [ಸಂ. ಸ್ವಸ್ಥತಾ]

ಸ್ವಸ್ಥಾನ (ನಾ). ೧. ತನ್ನ ಜಾಗ; ಸ್ವಂತ ಸ್ಥಳ: ಅವರು ಸ್ವಸ್ಥಾನದಲ್ಲಿದ್ದಾರೆ (ರೂಢಿ). ೨. [ಜೈನ] ಜೀವಿಯ ಮೂರು ಅವಸ್ಥೆಗಳಲ್ಲಿ ಒಂದು: ನಿರವಶೇಷ ಮೋಹೋಪಶಮವೋದ್ಭೂತ ಯಥಾಖ್ಯಾತಚಾರಿತ್ರಸಂಪನ್ನನಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ (ಆದಿಪು. ೬-೩೩ ವ). [ಸಂ.]

ಸ್ವಸ್ರೀಯ (ನಾ). ೧. ಒಡಹುಟ್ಟಿದವಳ ಮಗ; ಸೋದರಳಿಯ: ''ಸ್ವಸ್ರೀಯಃ, ಜಾಮೇಯಃ, ಭಾಗಿನೇಯಃ - ಈ ೩ ಒಡಹುಟ್ಟಿದವಳ ಮಗಂ'' (ಪಲಾಯು. ೮೪-೩೫೩). ೨. ಹೆಂಡತಿಯ ಅಣ್ಣ ಅಥವಾ ತಮ್ಮ; ಭಾವಮೈದುನ. ೩. ಮಗಳ ಗಂಡ; ಅಳಿಯ. ೪. ತಿಳಿಯದಿರುವಿಕೆ ; ಅಜ್ಞತೆ. ೫. ಮೋಕ್ಷ : ''ಅಜ್ಞತೆ ಎಮೋಹಂ ಮುಕ್ತಿ ಜಾಮಾತೃ ಭಕ್ತಿರಸಂ ಸ್ಯಾಲಕ ಮೂರ್ಛೆಯೆಂಬಿನಿತುಂ ಸ್ವಸ್ರೀಯಾಭಿಧಾನಂ'' (ನಾನಾರ್ಥ. ೧೫೫). [ಸಂ.]

ಸ್ವಹಸ್ತ (ನಾ). ೧. ತನ್ನ ಕೈ; ಸ್ವಂತಹಸ್ತ. ೨. ಸ್ವಹಸ್ತಾಕ್ಷರ; ಸಹಿ; ರುಜು: ಯಾ ಧರ್ಮಕ್ಕೆ ಆರೊಬ್ಬರು ತಪಿದರೂ ಕಾಶಿಯಲಿ ಕಪಿಲೆಯ ಕೊಂದ ಪಾಪದಲಿ ಹೋಹರು ಸ್ವಹಸ್ತಗಳ ಒಪ್ಪ (ಎಕ. X(S), ಕೋಲಾರ. ೨೯೮-೧೩; 1419). [ಸಂ.]

ಸ್ವಹಸ್ತಾಕ್ಷರ (ನಾ). ರುಜು; ಒಪ್ಪ: ನೆಪಮಾತ್ರಕ್ಕೆ ಒಂದು ಪತ್ರಿಕೆಯನ್ನು ಬರೆದು ಸ್ವಹಸ್ತಾಕ್ಷರವನ್ನು ಹಾಕಿಕೊಡಬೇಕೆಂದು ಕೇಳಿದನು (ಕವಿ. ೫). [ಸಂ.]

ಸ್ವಹಿತ (ನಾ). ತನ್ನ ಶ್ರೇಯಸ್ಸು; ಸ್ವಂತಲಾಭ: ರೈತರ ಅವನತಿಯ ಮೂಲಕ ಸ್ವಹಿತವನ್ನು ಸಾಧಿಸಿಕೊಳ್ಳುವುದೇ ಮಾಲೀಕರ ಸ್ವಧರ್ಮವಾಗಿತ್ತೆಂಬುದನ್ನು ಅವರು . . . ಅನುಭವದಿಂದ ಮನಗಂಡಿದ್ದರು (ಪುನರು. ೨೯೩). [ಸಂ.]

ಸ್ವಾಂಗ (ನಾ). ತನ್ನ ಸ್ವಂತ ಅವಯವ; ತನ್ನದೇ ಆದ ಅಂಗಾಂಗ: ಕಂಪಿನಿಂ ವರ್ಣದಿಂ ಸ್ವಾಂಗಮಿಂತಿಹುದೆಂದು ಪೆಂಪಿನಿಂ ತೋರ್ವಂತೆ ಜನರ್ಗೆ (ಜ್ಞಾನಚ. ೩೮-೧೨೯).

ಸ್ವಾಂಗಸ್ಪೃಷ್ಟಕಸಹಿತಂ = ತನ್ನ ಕೈಮುಟ್ಟು; ತನ್ನ ಕೈಯಾರೆ; ಸ್ವಹಸ್ತದಿಂದ: ಶ್ರೀಸಾಹಸಾಂಕನಜಿತಂಗಿತ್ತಂ ಮಹಿಪಂ ಸ್ವಾಂಗಸ್ಪೃಷ್ಟಕಸಹಿತಂ ಮಣಿಕನಕವಸ್ತ್ರ ವಾಹನಚಯಮಂ (ಪಂಚತಂ. ೧೪೭-೧೭). [ಸಂ.]

ಸ್ವಾಂತ (ಗು). ೧. ಶಬ್ದಮಾಡಿದ. (ನಾ). ೨. ತನ್ನ ಅಂತ್ಯ, — ಸಾವು. ೩. ಗವಿ; ಗುಹೆ. ೪. ಮನಸ್ಸು; ಅಂತರಂಗ: ಆ ಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ . . . ಉಪಶಾಂತಸ್ವಾಂತನಿರ್ದುದೆಂಬುದಂ ತನ್ನುನೀಂದ್ರರವಧಿಜ್ಞಾನದಿಂದಱಿದು (ಆದಿಪು. ೫-೧೧ ವ); ಕಂತು ಕಳಂಬ ಕದಂಬಂ ಸ್ವಾಂತವನೊಳ ಪೊಕ್ಕುದಂದು ಯತಿಪುಂಗವರಾ (ಹಮ್ಮೀರ. ೬-೨೫). [ಸಂ.]

ಸ್ವಾಗತ (ನಾ). ೧. ಸುಖವಾಗಿ ಬರುವುದು; ಸುಖಾಗಮನ; ಔ ಬಂಧುಮಿತ್ರರನ್ನು ಆದರದಿಂದ ಬರಮಾಡಿಕೊಳ್ಳುವಾಗ ಸಾಮಾನ್ಯವಾಗಿ ಹೇಳುವ ಮಾತು: ನಂದಂ ನುಡಿದಂ ಸ್ವಾಗತಮ ಸುಖಮೆ ಭವದೀಯಾಗಮದಿಂ ಸುದಿನಮಾದುದಿಂದಿನ ದಿವಸಂ (ಜಗವಿ. ೫-೮೨); ಪಾಳೆಯದ ಹೆಬ್ಬಾಗಿಲಲಿ ತನ್ನನಿದಿರ್ಗೊಂಡು ಸಂತೋಷದಿಂ ಸ್ವಾಗತವನಿತ್ತು ವಂದಿಸಿದ ಸಾಮಂತ ಸೇನಾನಿ ಮನ್ನೆಯರ ಮನ್ನಿಸುತೆ (ಚಿತ್ರಾಂಗ. ೧೮-೪೭೦). ೨. [ಛಂದ] ಅಕ್ಷರ ಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದವೊಂದಕ್ಕೆ ಹನ್ನೊಂದು ಅಕ್ಷರಗಳಿರುವ 'ತ್ರಿಷ್ಟುಪ್' ಛಂದಸ್ಸಿನ ಒಂದು ವೃತ್ತ: ಏಗಳುಂ ಯತಿ ದಿಶಾಗಜದೊಳ್ನಿಂದಾಗಳ್ಗಿ ದಿವಿಜೇಂದು ಹರರ್ಸಂಯೋಗಮಾಗಿರೆ . . . ಸ್ವಾಗತಂ (ಛಂದೋಂಬು. ೨-೧೧೯); ಸ್ವಾಗತಂ ರನಭಮುಂ ಗುರುಯುಗ್ಮಂ (ಕೃಷ್ಣಕ. ೮೦).

ಸ್ವಾಗತ ಹೇಳು = ಸುಖಾಗಮನವನ್ನು ಬಯಸು: ಅವನು ಅವರಿಗೆ ಸ್ವಾಗತ ಹೇಳಿ ಅವರನ್ನು ಅರ್ಘ್ಯಪಾದ್ಯಮಧುಪರ್ಕಾದಿಗಳಿಂದ ಸತ್ಕರಿಸಿದನು (ವಚಭಾ. ೭೮). [ಸಂ.]

ಸ್ವಾಗತವಚನ (ನಾ). ಸುಖಾಗಮನವನ್ನು ಕೋರಿ ಹೇಳುವ ಮಾತು; ಕುಶಲ ಪ್ರಶ್ನೆ: ಭದ್ರಾಸನದೊಳ್ ಕುಳ್ಳಿರ್ದು ಸ್ವಾಗತವಚನಪುರಸ್ಸರಂ ಸಂಭಾಷಣಪ್ರಸ್ತಾವದೊಳ್ ವಸ್ತುವಿಚಾರಂ ಪುಟ್ಟೆ (ಶಾಂತಿಪು. ೮-೧೨೬ ವ). [ಸಂ.]

ಸ್ವಾಗತಿಸು (ಕ್ರಿ). ಆದರದಿಂದ ಬರಮಾಡಿಕೊಳ್ಳು; ಸುಖಾಗಮನವನ್ನು ಬಯಸು: ಅವರನ್ನು ಸ್ವಾಗತಿಸಲು ಮಕ್ಕಳ ತಂಡವೊಂದು ಸಿದ್ಧವಾಗಿತ್ತು (ಕಂಬಹ. ೧೨೫); ಇಲ್ಲಿಂದ ಇವರುಗಳನ್ನೆಲ್ಲ ಸ್ವಾಗತಿಸಿ ಕರೆದುಕೊಂಡು ಹೋಗುವುದು (ಮೂಲಾಸ. ೧೨೨). [ಸ್ವಾಗತ + - ಇಸು]

ಸ್ವಾಚ್ಛಂದ್ಯ (ನಾ). ತನ್ನ ಮನ ಬಂದಂತೆ ನಡೆಯುವ ಸ್ವಾತಂತ್ರ್ಯ; ಸ್ವೈರವರ್ತನೆ: ಆ ವಿಶ್ವರೂಪಸಂದರ್ಶನದಿ ಹೊಂದಿಹುವು ಜೀವ ನಿರ್ಜೀವಗಳು, ಕ್ರಮಯದೃಚ್ಛೆಗಳು ಆವಶ್ಯ ವಶ್ಯ; ಸ್ವಾಚ್ಛಂದ್ಯ ನಿರ್ಬಂಧಗಳು ಕೈವಲ್ಯದೃಷ್ಟಿಯದು (ಮಂಕುಶ. ೩೨೨); ಬೇಜವಾಬ್ದಾರಿಯ ದೊರೆಗಳಲ್ಲಿ ಸಹಜವಾಗಿ ಕಂಡುಬರುವ ಸ್ವಾಚ್ಛಂದ್ಯದ ಸ್ವೇಚ್ಛಾಚಾರದ ಕುತ್ತ ಅವನಿಗೂ ಅಂಟಿಕೊಂಡಿತು (ಬದ್ಧಪ್ರ. XII, ಪೀಠಿಕೆ). [ಸಂ.]

ಸ್ವಾತಂತ್ರ್ಯ (ನಾ). (ವ್ಯಕ್ತಿ, ಸಮುದಾಯ, ದೇಶ ಮುಂತಾದ ಸಂದರ್ಭಗಳಲ್ಲಿ) ಪರಾಧೀನತೆ ಇಲ್ಲದಿರುವಿಕೆ; ತನ್ನ ಇಚ್ಛಾನುಸಾರವಾಗಿ ನಡೆದುಕೊಳ್ಳುವ ಅಧಿಕಾರ; ಸ್ವತಂತ್ರತೆ: ಸ್ವಾತಂತ್ರ್ಯದ ಅರ್ಥ ಹಾಗೂ ಪ್ರಯೋಜನವನ್ನು ತಿಳಿದು ಆಚರಿಸದೆ ಹೋದರೆ ಪುರುಷನಿಗಾದರೂ ಸ್ವಾತಂತ್ರ್ಯವಿದ್ದೇನು ಪ್ರಯೋಜನ? (ಕರ್ನಾಕ. ೨೦೧). [ಸಂ.]

ಸ್ವಾತಂತ್ರ್ಯಸಂಗ್ರಾಮ (ನಾ). (ದೇಶದ) ಬಿಡುಗಡೆಗಾಗಿ ನಡೆಸುವ ಹೋರಾಟ: ಸ್ವಾತಂತ್ರ್ಯಸಂಗ್ರಾಮವಾರಂಭವಾಯಿತು (ಇಂಚಾಪ್ರ. ೩೮-೭೯). [ಸಂ.]

ಸ್ವಾತಿ (ನಾ). ೧. [ಜ್ಯೋತಿ] ಇಪ್ಪತ್ತೇಳುನಕ್ಷತ್ರಗಳಲ್ಲಿ ಒಂದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ: ಅದು ಸ್ವಾತಿಗಲ್ಲದೆ ಬಾಯ್ದೆಱೆಯದು ಕೇಳು ಕೇಳಾತಂದ ಎಲ್ಲವಕ್ಕೆ ಬಾಯ ಬಿಟ್ಟರೆ ತಾನೆಲ್ಲಿಯ ಮುತ್ತಪ್ಪುದೋ (ಬಸವ. ೮೦೯); ಸ್ವಾತಿಯೆ ಬರ್ಪವೊಲ್ ಮದನಮಂಜರಿ ಬಂದು . . . ಕಥಾಂಗಗಾಂಗಜಲವರ್ಷಮನಾಗಿಸೆ (ಅನಂಪು. ೪-೫೮); ತಾರೆಗಳ ಮೊತ್ತವಿಪ್ಪತ್ತೇಳೆಱೊಳಗೆಯು ಹಸ್ತ ಮೃಗಶಿರೆ ಸ್ವಾತಿ ರೋಹಿಣಿ ಶುಭವು (ಗಗತಾ. ೪-೬೮). ೨. [ಜೈನ] ಶರೀರಾಕೃತಿಗೆ ಕಾರಣವಾದ ಸಂಸ್ಥಾನ ನಾಮಕರ್ಮದ ಸಮಚತುರಸ್ರ, ನ್ಯಗ್ರೋಧಪರಿಮಂಡಲ, ಸ್ವಾತಿ, ಕುಬ್ಜ, ವಾಮನ ಮತ್ತು ಹುಂಡ ಎಂಬ ಆರು ಬಗೆಗಳಲ್ಲಿ ಒಂದು; ಕೆಳಗೆ ದಪ್ಪವಾಗಿಯೂ ಮೇಲೆ ತೆಳುವಾಗಿಯೂ ಇರುವ ದೇಹರಚನೆಯನ್ನುಂಟು ಮಾಡುವ ನಾಮಕರ್ಮ: ಹುತ್ತಿನಂತೆ ಕೆಳಗಗಲಿತ್ತಾಗಿ ಮೇಗಸಿದಪ್ಪುದು ಸ್ವಾತಿ (ತಸೂವೃ. ೨೫೬); ಸಮಚತುರಸ್ರಸಂಸ್ಥಾನನಾಮಕರ್ಮಮೆಂಬುದುಂ ನ್ಯಗ್ರೋಧಪರಿಪಂಡಲ ಸ್ವಾತಿ ಕುಬ್ಜ ವಾಮನ ಹುಂಡಶರೀರಸಂಸ್ಥಾನನಾಮ ಕರ್ಮಮೆಂದಿಂತುಂ ಶರೀರಾಂಗೋಪಾಂಗಕರ್ಮಂ (ಗೂಮ್ಮಸಾ. ೪-೧).

ಸ್ವಾತಿಯುದಕ = ಸ್ವಾತಿಮಳೆಯ ನೀರು; **P** ಸ್ವಾತಿಮಳೆಯ ಹನಿಯನ್ನು ಸಿಪ್ಪು ಹಿಡಿದುಕೊಂಡರೆ ಅದು ಮುತ್ತಾಗುವುದೆಂಬ ನಂಬಿಕೆಯಿದೆ: ಸ್ವಾತಿಯುದಕದೊಳಾದ ಮೌಕ್ತಿಕವ್ರಾತಕಯ್ಯನೆ ಚಿಪ್ಪು (ಕುವ್ಯಾಕ. ೮-೩). [ಸಂ.]

ಸ್ವಾತಿಬಿಂದು (ನಾ). ಸ್ವಾತಿಮಳೆಯ ಹನಿ: ಸ್ವಾತಿಬಿಂದುವಿಂದೊಗೆದ ಮುತ್ತಿಂಗೆ ತಿಗಮೊಗವಾವುದೆಂದೆಣಪರೇ (ನವಮೋ. ೧-೧೬). [ಸಂ.]

ಸ್ವಾತಿಮಳೆ (ನಾ). ಸ್ವಾತಿನಕ್ಷತ್ರದಲ್ಲಿ ಬರುವ ಮಳೆ: ಸ್ವಾತಿಮಳೆಯ ನೀರು ಬೀಳುವುರಿಂದ ಚಿಪ್ಪು ಮುತ್ತಾಗುವುದೆಂಬ ನಂಬಿಕೆಯಿದೆ (ಗೂಢಿ).

[ಸ್ವಾತಿ + ಮಳೆ (< ಮಱೆ)]

ಸ್ವಾತಿವರುಷ (ನಾ). = ಸ್ವಾತಿಮಳೆ: ಧರೆಯೊಳೆಲ್ಲಂ ಸ್ವಾತಿವರುಷಂ ಸುರಿಯಲೆಂತಹ ಹನಿಗಳಿಗೆ ಏ ಸರಿಯೊಳಂ ಕಱೆಗೊಳ್ಳದಂತಾಗಿದಱ ಪರಿ ಬೇಱೆ ನಿರುತವದಱಿಂ ಪ್ರಾಣಪದವಾದಿರವಿಗಲ್ಲದೆ ಬಾಯಿದೆಱೆಯದು ಕರಮೆಸವ ಸಿಂಪೊಂದು ನೆನೆವುತ ಮಿಹುದು ಮಳೆಗಳಿಗೆ (ಬಸಪು. ೫೧-೨೪). [< ಸಂ. ಸ್ವಾತಿವರ್ಷ]

ಸ್ವಾತಿವರ್ಷ (ನಾ). = ಸ್ವಾತಿಮಳೆ: ಬಹುಗುಣತ ಜನಗಣದ ಸಂಸ್ತುತಿಯ ಧವಳಧಾರಾಸ್ವಾತಿವರ್ಷಕ್ಕೆ ಬಾಯ್ದೆರೆಯುತೆನ್ನ ಹೃದಯದ ಭಕ್ತಿಶುಕ್ತಿಯಲಿ ಮುತ್ತುಗಳ ರಚಿಸಿ (ಚಿತ್ರಾಂಗ. ೩೭-೧೦೧೨). [ಸಂ.]

ಸ್ವಾತ್ಮವಿಚಾರ (ನಾ). ತನ್ನ ಅಂತರಂಗದ ಬಗೆಗಿನ ಯೋಚನೆ; ಆತ್ಮಜ್ಞಾನದ ಯೋಚನೆ: ಸ್ವಾತ್ಮವಿಚಾರಕಲ್ಪಮತಿಯಾವರ್ ಧರ್ಮಮಂ ಪಾಲಿಸರ್ ಯುಗಧರ್ಮಂ ನರರ್ಗಪ್ಪುದೈ (ಸೋಮೇಶ. ೪೬). [ಸಂ.]

ಸ್ವಾತ್ಮವಿಮರ್ಶೆ (ನಾ). ತನ್ನನ್ನು ತಾನೆ ಪರೀಕ್ಷಿಸಿಕೊಳ್ಳುವುದು; ಆತ್ಮವಿಮರ್ಶೆ: ಶಾಸ್ತ್ರಾಭ್ಯಾಸವು ಸ್ವಾಧ್ಯಾಯ. ಇದು ಹಿರಿಯ ಜ್ಞಾನಿಗಳ ಅನುಭವವನ್ನೂ, ಸ್ವಾತ್ಮವಿಮರ್ಶೆಯನ್ನೂ ತಿಳಿಯಪಡಿಸುತ್ತದೆ (ಭಾರದ. ೨೬೩). [ಸಂ. ಸ್ವಾತ್ಮವಿಮರ್ಶ]

ಸ್ವಾದ (ನಾ). ೧. ತಿನ್ನುವ ಅಥವಾ ಕುಡಿಯುವ ಮೂಲಕ ಆಹಾರವನ್ನು ರುಚಿನೋಡುವುದು; ಆಸ್ವಾದಿಸುವುದು. ೨. ರುಚಿ; ಸವಿ: ಕಪ್ಪುರವು ಬೆಳ್ಳಗಿರುತ್ತದೆ . . . ಆದರೆ ಸ್ವಾದ ಮಾತ್ರ ಕಹಿ ಇರುವುದು (ಮುಂಬಯಿ. ೪-೭೨). ೩. ಸ್ವಾರಸ್ಯ: ಈ ಚೇಷ್ಟೆಗಳ ಸ್ವಾದವನ್ನೂ ಪೂರ್ತಿ ಸವಿದಂತಾಗಲಿಕ್ಕಿಲ್ಲ (ತಿಂಮತ. ೮). ೪. ಮೆಚ್ಚಿಕೆ; ಇಷ್ಟಪಡುವಿಕೆ. ೫. ರುಚಿಗೊಳಿಸುವಿಕೆ; ಸವಿಗೊಳಿಸುವಿಕೆ. ೬. [ಕಾವ್ಯಮೀ] ಕಾವ್ಯದ ರಸ: ಸ್ವಾದವು ಬೌದ್ಧಿಕವಾಗಿಯೂ ಭಾವನಾತ್ಮಕವಾಗಿಯೂ ಎಂದು ಎರಡು ವಿಧ . . . ಕವಿಕಾವ್ಯಪ್ರಶಂಸೆಯು ಈ ಎರಡೂ ಪ್ರಕಾರದ ಸ್ವಾದಗಳನ್ನೊಳಗೊಂಡಿರುವುದು (ಸಾಹಿಸ. ೧೬೮). [ಸಂ.]

ಸ್ವಾದನೀಯ (ಗು). ೧. ಸವಿಯನ್ನು ಒದಗಿಸುವ; ರುಚಿಕರವಾದ. (ನಾ). ೨. ರುಚಿಕರವಾದುದು: ದಳತ್ಸುಪ್ತತತಿ ಘ್ರಾಣೀಯಮುದ್ಯತ್ಫಲರಸವಿಸರಸ್ವಾದನೀಯಂ . . . ಸತತಂ ಪೌರರ್ಗೆ ಪಂಚೇಂದ್ರಿಯಸುಖದೊದವಂ ನಂದನಂ ಮಾಱ್ಪುದೆಂದುಂ (ಚಂದ್ರಪ್ರ. ೧-೧೧೨). [ಸಂ.]

ಸ್ವಾದಿಷ್ಠ (ಗು). ತುಂಬ ಸವಿಯಾದ; ಅತ್ಯಂತ ಮಧುರವಾದ: ಮನಂ ಸಂದ ಬೇವಸವ ಬಗೆತಂದೊರೆವುವೆಮ್ಮ ಸ್ವಾದಿಷ್ಠಗೀತಂ (ಗಿಳಿಪಂ. ೮-೧೫). [ಸಂ.]

ಸ್ವಾದಿಸು (ಕ್ರಿ). ೧. ಸೇವಿಸು; ಅನುಭೋಗಿಸು: ಇಷ್ಟೊಂದು ದಿನ ಪರಿತಪಿಸಿ ಸಿಕ್ಕ ಶ್ರೇಷ್ಠಫಲವೆಂದು ಅದನ್ನು ಸ್ವಾದಿಸಿದರು (ಅಪನಾ. ೮೬). ೨. (ಸೌಂದರ್ಯವನ್ನು) ಅನುಭವಿಸು; ಆನಂದಿಸು: ಕಮಲೋದರನ ಸಂಪನ್ನ ಸರಸಸಿತಾನನಾಬ್ಜವನು ಸ್ವಾದಿಸುತ ಕಂಗಳಲಿ ಸಲೆ ತತ್ಪಾದ ಪರಿಚರಿಯೆಯಲಿ (ನಿಭಾಗ. ೧೦-೧೦೩-೨೩).

[ಸ್ವಾದನ್ + - ಇಸು]

ಸ್ವಾದು (ಗು). ೧. ಸವಿಯಾದ; ರುಚಿಕಟ್ಟಾದ. ೨. ಪ್ರಿಯವಾದ; ಇಷ್ಟವಾದ. ೩. ಚೆಲುವಾದ; ಮನೋಹರವಾದ. (ನಾ). ೪. ರುಚಿ; ಸವಿ. ೫. ಚೆಲುವು; ಸೌಂದರ್ಯ. ೬. ದ್ರಾಕ್ಷೆ. ೭. ರುಚಿಯಾದ ಆಹಾರ: ಅಮೃತಕಲ್ಪಮೆಂಬ ಸ್ವಾದುವುಂ ಅಮೃತಮೆಂಬ ಪಾನಮುಂ (ಅಜಿಪು. ೧೦-೧ ವ). ೮. ಸವಿಯಾದುದು; ಸಿಹಿಯಾದುದು: ಚಿಗುರೆಂದುಂ ಮೆಲೆ ಬೇವು ಸ್ವಾದುವಹುದೇ (ಸೋಮೇಶ. ೪೧). ೯. ಸಕ್ಕರೆ ಜೋನಿ; ಕಾಂಕಬಿ. ೧೦. ಒಂದು ಬಗೆಯ ಸುಗಂಧದ್ರವ್ಯ.

[ಸಂ.]

ಸ್ವಾದುಕಂಟಕ (ನಾ). ೧. ನಾಯಿಬೇಲ; ಹಲುಮಾಣಿಕಮರ: "ಸ್ವಾದುಕಂಟಕಃ, ವಿಕಂಕತಃ, ಸ್ರುವಾವೃಕ್ಷಃ, ಗ್ರಂಥಿಲಃ, ವ್ಯಾಘ್ರಪಾತ್ - ೫ ಹಲುಮಾಣಿಕ ಮರದ ಹೆಸರು, ನಾಯಿಬೇಲ, ಹುಳಿಬೇಲ" (ಸಿದ್ಧಾಂಶಿ. ೧೨೦). ೨. ಒಂದು ಬಗೆಯ ಮುಳ್ಳುಗಿಡ; ನೆಗ್ಗಿಲು: "ಪಲಂಕಷಾ, ಇಕ್ಷುಗಂಧಾ, ಶ್ವದಂಷ್ಟ್ರಾ, ಸ್ವಾದುಕಂಟಕಃ, ಗೋಕ್ಷುರಕಃ, ವನಶೃಂಗಾಟಃ - ೭ ಪಲ್ಲೇರುಗಿಡದ ಹೆಸರುಗಳು, ನೆಗ್ಗಿಲು ಹೆಸರುಗಳು" (ಸಿದ್ಧಾಂಶಿ. ೧೩೪). [ಸಂ.]

ಸ್ವಾದುಪನಸ (ನಾ). ಒಂದು ಬಗೆಯ ರುಚಿಕರವಾದ ಹಲಸು; ಬಕ್ಕೆಹಲಸು: "ಸ್ವಾದುಪನಸಕ್ಕೆ ಪೆಸರೊಂದುವುದು ಬಕ್ಕೆವಲಸೆಂದು" (ಶಬ್ದಮಂ. ೨೬).

[ಸ್ವಾದು + ಪನಸ (< ಪಲಸು)]

ಸ್ವಾದುರಸೆ (ನಾ). ೧. ಒಂದು ಬಗೆಯ ಔಷಧೀಸಸ್ಯ; ಕಾಕೋಳಿಸೊಪ್ಪು: "ವಾಯಸೋಲೀ, ಸ್ವಾದುರಸಾ, ವಯಸ್ಥಾ - ೩ ಕಾಕೋಳೀಸೊಪ್ಪು, ಗೊರಿಮಿಡಿ" (ಸಿದ್ಧಾಂಶಿ. ೧೪೫). ೨. ಕಳ್ಳು; ಮದ್ಯ: "ಮಧು, ಆಸವಃ . . . ಕಾದಂಬರೀ, ಸ್ವಾದುರಸಾ . . . ಈ ೨೪ ಕಳ್ಳು" (ಹಲಾಯು. ೫೫-೧೭೪). ೩. ಶತಾವರೀಬಳ್ಳಿ. ೪. ದ್ರಾಕ್ಷೆ. [ಸಂ. ಸ್ವಾದುರಸಾ]

ಸ್ವಾದ್ವಿ (ನಾ). ದ್ರಾಕ್ಷೆ: "ಮೃದ್ವೀಕಾ, ಗೋಸ್ತನೀ, ದ್ರಾಕ್ಷಾ, ಸ್ವಾದ್ವೀ, ಮಧುರಸಾ - ೫ ದ್ರಾಕ್ಷೆ ಪೆಸರುಗಳು" (ಸಿದ್ಧಾಂಶಿ. ೧೩೬). [ಸಂ. ಸ್ವಾದ್ವೀ]

ಸ್ವಾಧಿಕಾರ (ನಾ). ೧. ತನ್ನ ಸ್ವಂತ ಕರ್ತವ್ಯ; ಸ್ವಂತದ ಕೆಲಸ. ೨. ಸ್ವತಂತ್ರವಾಗಿ ವ್ಯವಹರಿಸುವ ಅಧಿಕಾರ; ಸ್ವಾಧಿಪತ್ಯ: ರಾಜಕೀಯದಲ್ಲಿ ವಿಕ್ಟೋರಿಯ ಪ್ರಾಂತ್ಯ ನ್ಯೂಸೌತ್‌ವೇಲ್ಸ್‌ನಿಂದ ಬೇರ್ಪಟ್ಟು ಎರಡೂ ರಾಜ್ಯಗಳಿಗೆ ಸ್ವಾಧಿಕಾರ ಸಿಕ್ಕಿತು (ಕವಿಕೋ. II, ೧೧೭). [ಸಂ.]

ಸ್ವಾಧಿಪತ್ಯ (ನಾ). ತನ್ನದೇ ಆದ ಅಧಿಕಾರ; ತನ್ನ ಪರಮಾಧಿಕಾರ: ಸಂಪೂರ್ಣ ಸ್ವಾಧಿಪತ್ಯವನ್ನು ಬೇಡುವ ಗಂಡನೆಂಬ ಅಭಿಮಾನ . . . ಹೃದಯವನ್ನು ಹಿಮ್ಮೆಟ್ಟುತ್ತಿತ್ತು (ಕಮನ. ೪೮). [ಸಂ.]

ಸ್ವಾಧಿಷ್ಠಾನ (ನಾ). [ಯೋಗ] ಶರೀರದಲ್ಲಿರುವ ಷಟ್ಚಕ್ರಗಳಲ್ಲಿ ಎರಡನೆಯದು: ಎನ್ನ ಸ್ವಾಧಿಷ್ಠಾನದಲ್ಲಿ ಎಪ್ಪತ್ತುಕೋಟಿ ಸೂರ್ಯಚಂದ್ರಾಗ್ನಿಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯ ನೀವು (ವಚಸಂ. ೪೦೧-೩೯); ಯೋಗೀಶ್ವರರ ಧ್ಯಾನಯೋಗಕ್ಕೆ ಸ್ಥಾನಂಗಳಾವವೆನೆ ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯ (ಆಪಂಡೇ. ೨೧೯-೭೦). [ಸಂ.]

ಸ್ವಾಧೀನ (ಗು). ೧. ಸ್ವತಂತ್ರವಾದ; ನಿರ್ಬಂಧರಹಿತವಾದ. ೨. ತನ್ನ ವಶದಲ್ಲಿರುವ; ತನ್ನ ಕೈವಶವಾದ. (ನಾ). ೩. ಹತೋಟಿ; ಅಂಕೆ; ವಶ: ನಜರ್ಕನ ಕೈಕಾಲು ಸ್ವಾಧೀನಕ್ಕೆ ಬರಲಿಲ್ಲ (ಮಲಸಾ. ೨೦೭); ಸಿದ್ಧಪುರುಷರಿಗೆ ಕ್ಷೇಮವೆಂಬುದು ಸ್ವಾಧೀನವಾಗಿರುವುದು (ಶಾಕುಂತ. ೬೫-೨೨). ೪. ಸ್ವತಂತ್ರವ್ಯಕ್ತಿ: ನಾವು ಸ್ವಾಧೀನರಾಗಿ ಯಾವುದನ್ನು ವಶಮಾಡಿಕೊಳ್ಳಬೇಕು, ಯಾವುದಕ್ಕೆ ನಾವು ವಶರಾಗಬೇಕು ಎಂಬುದನ್ನು ಆ ಮಹಜ್ಜೀವಿತಗಳು ತಿಳಿಸುತ್ತವೆ (ಭಾರದ. ೪೪೭). [ಸಂ.]

ಸ್ವಾಧೀನಪತಿಕೆ (ನಾ). [ಕಾವ್ಯಮಿಮಾ] ನಾಯಿಕೆಯರಲ್ಲಿ ಒಂದು ವಿಧ; ಗಂಡನನ್ನು ತನ್ನ ವಶದಲ್ಲಿ ಇಟ್ಟುಕೊಂಡವಳು: ಅನುಕೂಲಮತಿಯಿನಾತ್ಮೇಶನನುದಿನಂ ಕೆಲದೊಳಿರ್ದು ಮಂಡನವಂ ಕಾಮಿನಿಗೆ ಪೊಸೆಯಿಸುವೊಡಾ ವಧೂ ಜನದಿಂ ಸ್ವಾಧೀನಪತಿಕೆಯೆನೆ ಪೆಸರ್ವಡೆಗುಂ (ಶೃಂಗಾರ. ೩-೫೦); ಸತತಂ ಸ್ವಾಧೀನಪತಿಕೆ ಪತಿಯಂ ಸ್ವಾಧೀನಮಾಗಿ ತಡೆದಂಗನೆ (ರಸರ. ೩-೯೭). [ಸಂ. ಸ್ವಾಧೀನಪತಿಕಾ]

ಸ್ವಾಧೀನಭರ್ತೃಕೆ (ನಾ). = ಸ್ವಾಧೀನಪತಿಕೆ: ಸ್ವಾಧೀನಭರ್ತೃಕೆ ಖಂಡಿತೆ . . . ಕಲಹಾಂತರಿತೆಯರೆಂಬ ಎಂಟು ತೆಱದವಸ್ಥಾನಿಬದ್ಧರಾದ ಕಾಮಿನಿಯರಿಂ (ಎವೇಕ. ೨೨೮). [ಸಂ. ಸ್ವಾಧೀನಭರ್ತೃಕಾ]

ಸ್ವಾಧ್ಯಾಯ (ನಾ). ೧. ತನ್ನಷ್ಟಕ್ಕೆ ತಾನೆ ಹೇಳಿಕೊಳ್ಳುವಿಕೆ; ಇತರರ ಸಹಾಯವಿಲ್ಲದ ತಾನೆ ಅಭ್ಯಾಸಮಾಡಿಕೊಳ್ಳುವಿಕೆ. ೨. ಸ್ವಂತವಾಗಿ ವೇದಾಭ್ಯಾಸ ಮಾಡುವಿಕೆ,– ವೇದಾಧ್ಯಯನ ನಡೆಸುವಿಕೆ. ೩. ವೇದ: "ವೇದಃ, ಶ್ರುತಿಃ, ಆಮ್ನಾಯಃ, ಸ್ವಾಧ್ಯಾಯಃ, ಛಂದಃ, ಆಗಮಃ – ಈ ೬ ವೇದದ ಪೆಸರ್" (ಹಲಾಯು. ೩-೯). ೪. [ಜೈನ] ಶ್ರಾವಕನು ಪ್ರತಿದಿನ ಆಚರಿಸಬೇಕಾದ ಇಜ್ಯೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ ಮತ್ತು ತಪ ಎಂಬ ಷಟ್ಕರ್ಮಗಳಲ್ಲಿ ಒಂದು; IP ಅಭ್ಯಂತರತಪಸ್ಸಿನ ಒಂದು ಭೇದವೆಂದೂ ಇದು ಪರಿಗಣಿತವಾಗಿದೆ. ಧರ್ಮಶಾಸ್ತ್ರವನ್ನು ಓದುವುದು, ಕೇಳುವುದು, ಚಿಂತಿಸುವುದು, ಮನನ ಮಾಡುವುದು: ಅಭ್ಯಂತರ ತಪಷ್ಷಟ್ಕದೊಳಂ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯಮೆಂಬ ತಪಮಂ ತಳೆದಂ (ಸುಖಸಾ. ೪-೧೪೮). [ಸಂ.]

ಸ್ವಾನ (ನಾ). ಧ್ವನಿ; ನಾದ; ಶಬ್ದ: "ಹ್ರಾದಃ, ನಾದಃ, ಶಬ್ದಃ, ಸ್ವಾನಃ, ಧ್ವಾನಃ, ಸ್ವರಃ, ರವಃ, ಘೋಷಃ:- ಈ ೮ ಧ್ವನಿ" (ಹಲಾಯು. ೨೩-೧೩೭). [ಸಂ.]

ಸ್ವಾನುಭವ (ನಾ). ೧. ತನ್ನ ಸ್ವಂತ ಅನುಭವ; ಸ್ವಪ್ರಯತ್ನದಿಂದ ಗಳಿಸಿಕೊಂಡ ಅರಿವು: ಬ್ರಹ್ಮವೆನಲದಱಿಂದಧಿಕವೇನಿಲ್ಲವದು . . . ತಿಳಿವ ಪರಿಯಂತೆಂದೆನಲು ಶ್ರುತಿಗುರುಗಳಿಂದದು ಸ್ವಾನುಭವವೇದ್ಯ (ಅಪ್ಪಣ. ೧-೧೪); ಕಾಡುವಾಸಿಗಳು ಸ್ವಾನುಭವದಿಂದ ಯಾವುದರದು ಕುಡಿಯಬಹುದು, ಯಾವುದರದು ಕುಡಿಯಕೂಡದು ಎಂಬುದನ್ನು ಕಂಡುಕೊಂಡಿರುತ್ತಾರೆ (ಹಸುಹೂ. ೭೧). ೨. ಆಧ್ಯಾತ್ಮಿಕ ಅನುಭವ; ದರ್ಶನ; ಸಾಕ್ಷಾತ್ಕಾರ: ಪೂರ್ವಜನ್ಮಸಂಸ್ಕಾರಬಲದಿಂ ಭಕ್ತಿ ಜ್ಞಾನಾಧಿಕಂ ತಾನೇ ತೋರ್ಪುದೇ ಸ್ವಾನುಭವಮಕ್ಕುಂ (ಎವೇಕ. ೧೧೧). [ಸಂ.]

ಸ್ವಾನುಭಾವ (ನಾ). = ಸ್ವಾನುಭವ ೨ : ತೆಱಹಿಲ್ಲದ ನಂಬಿದ ಸ್ವಾನುಭಾವಸುಖವು ತೆಱಹಿಲ್ಲದ ಮಹಿಮೆ ತೆಱಹಿಲ್ಲದ ವಿಚಾರ ಕೂಡಲಸಂಗಮದೇವಾ ನಿಮ್ಮ ಶರಣಂಗೆ (ಬಸವ. ೯೧೮). [ಸಂ.]

ಸ್ವಾನುಭೂತಿ (ನಾ). = ಸ್ವಾನುಭವ ೨: ಆ ಸಿದ್ಧರು ಸ್ವಾನುಭೂತಿಯಿಂದ ಉಪದೇಶ ನೀಡುತ್ತಿದ್ದಾರೆ (ರೂಢಿ). [ಸಂ.]

ಸ್ವಾಪ (ನಾ). ೧. ನಿದ್ದೆ; ನಿದ್ರೆ: "ಸ್ವಪನಂ ಸ್ವಾಪಂ" (ವಸ್ತುಕೋ. ೧೧೪-೨೦). ೨. ಕನಸು ; ಸ್ವಪ್ನ. ೩. ನಿದ್ರಾಲಸ್ಯ ; ನಿದ್ದೆಯ ಮಬ್ಬು. ೪. ಭಾವಾತಿರೇಕದಿಂದ ಉಂಟಾಗುವ ಅಲ್ಪಕಾಲಿಕ ನಿಶ್ಚೇತನತೆ; ಮೈಮರವು. [ಸಂ.]

ಸ್ವಾಪತೇಯ (ನಾ). ಧನದ್ರವ್ಯಾದಿ ಸಂಪತ್ತು; ಆಸ್ತಿ: "ದ್ಯುಮ್ನಂ, ದ್ರವ್ಯಂ, ದ್ರವಿಣಂ, ರಾಃ, ಸ್ವರ್ಣಂ, ಸ್ವಾಪತೇಯಂ . . . ವಿಭವಃ:- ಈ ೧೫ ಒಡಮೆಯ ಪೆಸರ್" (ಹಲಾಯು. ೧೪-೮೦). [ಸಂ.]

ಸ್ವಾಪವಡೆ (ಕ್ರಿ). ನಿದ್ರೆಹೊಂದು; ನಿದ್ದೆಯಲ್ಲಿರು: ಈ ರೂಪು ನಾಮಾಶ್ರಯವೆನಿಪ ಪರಮಾತ್ಮತತ್ವವನು ತಾ ಪರಮನಾಗಲೆಂದು ವಿಷಯನಿರೂಪವನು ಬಿಟ್ಟತುಳಸುಖದಲಿ ಸ್ವಾಪವಡೆದವನಂದೆತೆತೆ ನಿಷ್ಕೃತಿತನದಲಿರುತಿಹುದು (ನಿಭಾಗ. ೧೧-೨೦-೪೨).

[ಸ್ವಾಪ + ಪಡೆ]

ಸ್ವಾಭಾವಿಕ (ಗು). ೧. ಸ್ವಭಾವದಿಂದ ಉಂಟಾದ; ಹುಟ್ಟುಗುಣವಾದ; ಸಹಜವಾದ: ಸ್ವಾಭಾವಿಕ ಶುಭಗುಣನಿಧಿಗಂಬುಜನಾಭನಿಗಾನೆಱಗುವೆನು (ಪದಿಬ. ೩-೧೧). (ನಾ). ೨. ಹುಟ್ಟುಗುಣವಾಗಿ ಬಂದುದು; ನೈಸರ್ಗಿಕವಾದುದು; ಸಹಜವಾದುದು: ಈ ಪರ್ಯಾಯಗಳಲ್ಲಿ ದುಃಖರಾಗದ್ವೇಷಾದಿ ಪರ್ಯಾಯಗಳು ಆಗಂತುಕಗಳು. ಜ್ಞಾನ ದರ್ಶನ ಸುಖ ಮೊದಲಾದ ಪರ್ಯಾಯಗಳು ಸ್ವಾಭಾವಿಕಗಳು (ಒಂದಸಾ. ೮೩). ೩. [ಜೈನ] ತೀರ್ಥಂಕರನಿಗೆ ಒದಗುವ ಮೂವತ್ತುನಾಲ್ಕು ಅತಿಶಯಗಳಲ್ಲಿ ಒಂದು ವರ್ಗ: ಸ್ವಾಭಾವಿಕ ಕರ್ಮ ಕ್ಷಯಜ ದೇವಕೃತಂಗಳೆಂಬ ಮೂವತ್ತುನಾಲ್ಕುಮತಿಶಯಂಗಳೊಳೊಂದುಗುಂದದಿರೆಯುಂ (ಶಾಂತಿಪು. ೧೨-೧೪ ವ). [ಸಂ.]

ಸ್ವಾಭಿಮಾನ (ನಾ). ೧. ತನ್ನ ಬಗೆಗಿರುವ ಅಭಿಮಾನ; ಆತ್ಮಾಭಿಮಾನ: ಉಪಾಧ್ಯಾಯರಿಗೂ ತಮ್ಮ ಕಾರ್ಯದಲ್ಲಿ ಸ್ವಾವಲಂಬನೆಯೂ ಸ್ವಾಭಿಮಾನವೂ ಉಂಟಾಗುತ್ತವೆ (ಶಿವಪ. ೨೬೧). [ಸಂ.]

ಸ್ವಾಭಿಮಾನಿ (ನಾ). ಸ್ವಾಭಿಮಾನವುಳ್ಳವನು; ತನ್ನ ಗೌರವವನ್ನು ಕಾಪಾಡಿಕೊಳ್ಳುವವನು: ಅಪ್ಪ ಎಂಥ ಸ್ವಾಭಿಮಾನಿಯೆಂಬುದನ್ನು ಅಣ್ಣ ಅರಿತೇ ಇಲ್ಲ (ವಾಪ್ಪಲ್ಲ. ೩೪). [ಸಂ. ಸ್ವಾಭಿಮಾನಿನ್]

ಸ್ವಾಮಿ (ನಾ). ೧. ಯಜಮಾನ; ಮಾಲೀಕ. ೨. ಒಡೆಯ; ಅಧಿಪತಿ: "ಆರ್ಯಃ, ಪರಿವೃಢಃ, ಸ್ವಾಮಿ . . . ಅಧಿಪತಿಃ – ಈ ೧೦ ಒಡೆಯಂ" (ಹಲಾಯು. ೫೭-೧೪೮); ಸ್ವಾಮಿ ನೀನು, ಶಾಶ್ವತ ನೀನು (ಬಸವ. ೫೨೪). ೩. ದೇವರು; ಪರಮಾತ್ಮ: ತಿರುಪತಿಯ ವೆಂಕಟರಮಣಸ್ವಾಮಿಯ ದೇವಾಲಯ ಪ್ರಸಿದ್ಧವಾದುದು (ರೂಢಿ). ೪. ಅರಸು; ಪ್ರಭು. ೫. ಗಂಡ; ಪತಿ: "ಸ್ವಾಮಿ ಭರ್ತೃ ಪತಿ . . . ವಲ್ಲಭಂ ಪ್ರಿಯಂ ಪ್ರಣಯಿ ಕಾಂತನಿಷ್ಠಂ ದಯಿತಂ" (ವಸ್ತುಕೋ. ೯೯-೯). ೬. ಧರ್ಮಗುರು; ಆಧ್ಯಾತ್ಮಗುರು. ೭. ವಿದ್ವಾಂಸನಾದ ಬ್ರಾಹ್ಮಣ. ೮. ಸಂನ್ಯಾಸಿ ಮತ್ತು ಅವರ ಹೆಸರಿನ ಮುಂದೆ ಸೇರುವ ಪದ. ೯. ಸ್ಕಂದ; ಷಣ್ಮುಖ: "ಶರಜನ್ಮಂ ಗುಹಂ . . . ತಾರಕರಿಪು ಸ್ವಾಮಿ ಕಾರ್ತಿಕೇಯಂ" (ಮಂಗರಾ. ೫-೧೬); ಗಣಪನುಂ ಸ್ವಾಮಿಯುಂ ಕೆಲಬಲದೊಳೊಪ್ಪಿರಲು (ಬಸರ. ೧-೧೫೫). ೧೦. ಶಿವ. ೧೧. ವಿಷ್ಣು. ೧೨. ಗರುಡ. ೧೩. ವಾತ್ಸ್ಯಾಯನಋಷಿ. ೧೪. ಒಂದು ಬಗೆಯ ಮರ; ಕೆಮ್ಮರ: "ಸ್ವಾಮೀಮರ, ಕೆಮ್ಮರ, ಸೋಮೇಮರ" (ಪ್ರಥಿಗಿ. ೭೧-೧೪೫೭); ಅಡವಿಗೋರಂಟಿ, ಚಿಲ್ಲ, ಮರುವ, ಸ್ವಾಮಿ, ದೂಪ, ತೇಗ, ಅರಸಿನ (ನಮ್ಮನು. ೨೩೭). ೧೫. ಪುರುಷರನ್ನು ಸಂಬೋಧಿಸುವಾಗ ಸಾಮಾನ್ಯವಾಗಿ ಬಳಸುವ ಗೌರವಸೂಚಕ ಪದ: ತೊಱೆಯ ಮಿವನ್ಗಳಿರಾ ತೊಱೆಯ ಮಿವ ಸ್ವಾಮಿಗಳಿರಾ ತೊಱೆಯಿಂ ಭೋ ತೊಱೆಯಿಂ ಭೋ ಪರನಾರಿಯ ಸಂಗವ ತೊಱೆಯಿಂ ಭೋ (ಬಸವ. ೬೪೪); ಸ್ವಾಮಿ, ವಿದ್ವಾಂಸರಾದವರು ಹೀಗೆ ಆತ್ಮಸ್ತುತಿಯಂ ಮಾಡಿಕೊಳ್ಳುವುದುಂಟೇ (ಮುದ್ರಾಮಂ. ೩೩೧); ಇಲ್ಲ ಸ್ವಾಮಿ! ನಾನು ಬಡವ. ಆದರೆ ಸುಳ್ಳು ಹೇಳೋ ಮನುಷ್ಯನಲ್ಲ (ರಂಗಶ. ೪೯). ೧೬. ಸಾಮಾನ್ಯವಾಗಿ ಪುರುಷರ ಹೆಸರಿನೊಂದಿಗೆ ಸೇರುವ ಪದ: ಉದಾ: ಕೃಷ್ಣಸ್ವಾಮಿ, ಶಿವಸ್ವಾಮಿ ಇತ್ಯಾದಿ. ೧೭. (ಪೂರ್ವಕಾಲದಲ್ಲಿದ್ದ) ವರ್ತಕಸಂಘದ ಸದಸ್ಯ: ತೆಲಸಂಗ(ವ)ದ

ಮಹಾಜನಂಗಳೆರಡಯ್ಯೂ [ವ್ರ್ಯ]ರ್ ಸ್ವಾ ಮಿಗಳುಂ ಮೂವತ್ತಾಱುಂ ಬೀಡಿನ ಸೆಟ್ಟಿಯರುಂ . . . ಸತ್ರಕ್ಕೆ ಬಿಟ್ಟ ಧಮ್ಮವೆನ್ತೊಂದೆಡೆ (ಕಾ. II. ೨೧-೨೦ ; 1147). [ಸಂ. ಸ್ವಾಮಿನ್]

ಸ್ವಾಮಿಕಂಟಕ (ನಾ). ಒಡೆಯನಿಗೆ ಕೆಡುಕು ಮಾಡುವವನು; ಸ್ವಾಮಿದ್ರೋಹಿ: ಹರಿಬಿಕ್ಕಲ್ದ ನಾಯಕರ ಸುಡು ಹೊಟ್ಟೆಹೊರಕರ ವಾಯಕಿವದಿರ ಸಂತವಿಟ್ಟನು ಸ್ವಾಮಿಕಂಟಕರ (ಕುವ್ಯಾದ್ರೋ. ೧೦-೫೮). [ಸಂ.]

ಸ್ವಾಮಿಕಾರ್ಯ (ನಾ). ಒಡೆಯನ ಕೆಲಸ: ಸ್ವಾಮಿಕಾರ್ಯವಲ್ಲದೆ ಇನ್ನೇನೂ ಬೇಕಾಗಿಲ್ಲದ ನಮಗೆ ಯಾವ ವಿಜಯವು ಅಭಿಮತವೋ ತಾವೇ ಯೋಚಿಸಿ (ಮಹಾಭಾ. ೧೫೪): ಈ ವ್ಯವಹಾರದಲ್ಲಿ ನನ್ನದೇನೂ ಇಲ್ಲ ಅಮ್ಮ . . . ಸ್ವಾಮಿಕಾರ್ಯ ಎಂದು ಬಂದಿದ್ದೇನೆ (ದೇವಪಂ. ೧೫೦). [ಸಂ.]

ಸ್ವಾಮಿತ್ವ (ನಾ). ೧. ಒಡೆತನ; ಮಾಲೀಕತ್ವ. ೨. ಪ್ರಭುತ್ವ; ಆಧಿಪತ್ಯ: ಕೆಲರುತ್ಪಾದಿಸುವರ್ ಸ್ವಾಮಿತ್ವದೊಳಾದ ಭೇದದೆ ಚತುರ್ಥಿಯುಂ ಷಷ್ಠಿಯುಮಂ (ಕಾವ್ಯಾವ. ೧೨೦). [ಸಂ.]

ಸ್ವಾಮಿದುರುಹಿಕೆ (ನಾ). ಒಡೆಯನಿಗೆ ಕೇಡು ಬಗೆಯುವಿಕೆ,—ದ್ರೋಹ ಮಾಡುವಿಕೆ: ನುಡಿವವರು ನಾವ್ ಹಗೆಗಳೇ ನಿನ್ನೊಡೆಯರಲ್ಲಾ ಸ್ವಾಮಿದುರುಹಿಕೆ ಲೇಸು ಲೇಸು (ಕುವ್ಯಾವಿ. ೬-೧೧). [ಸ್ವಾಮಿ + ದುರುಹಿಕೆ]

ಸ್ವಾಮಿದ್ರೋಹ (ನಾ). ೧. ಒಡೆಯನಿಗೆ ಕೇಡು ಮಾಡುವಿಕೆ,— ದ್ರೋಹ ಬಗೆಯುವಿಕೆ: ಸ್ವಾಮಿದ್ರೋಹಮುಂ ಪುತ್ರವಧಮುಂ ಗೆಯ್ದನೆಂದಾತಂಗೆ ಮುಳಿದು (ಚಾಪುಂಪು. ೪೩೯); ಅರಸಿನವರಿಂದಾ ನಮಗೆ ಪ್ರಾಣೋಪಕಾರವಾದ್ದಕ್ಕೆ ಅವರಿಗೆ ನಾಊ ಸ್ವಾಮಿದ್ರೋಹ ಮಿತ್ರದ್ರೋಹ ಮಾಡಬಾರದು (ಪೃದರ. ೨೯). ೨. ಒಡೆಯನಿಗೆ ದ್ರೋಹ ಬಗೆಯುವವನು; ಒಡೆಯನನ್ನು ವಂಚಿಸುವವನು: ಪ್ರಾಣವನೆ ಕಾವ ಬಗೆ ಮಿಗೆ ಸ್ವಾಮಿದ್ರೋಹನಾದ ವೈದ್ಯನಂತೆ . . . ದೆಸಗೆಟ್ಟೋಡುವಶನಿಘೋಷನಂ (ಶಾಂಪು. ೬-೩೯ ವ); ಸ್ವಾಮಿದ್ರೋಹರು ದಳದಲಿದ್ದವರೆತ್ತ ಹೋದರು (ಕುವ್ಯಾದ್ರೋ. ೧-೬೩).

ಸ್ವಾಮಿದ್ರೋಹರ ಗಂಡ = ಸ್ವಾಮಿದ್ರೋಹಿಗಳನ್ನು ಶಿಕ್ಷಿಸುವ ವೀರ; ಒಂದು ಬಿರುದು: ಸ್ವಾಮಿದ್ರೋಹರ ಗಂಡ ಗಡಿಯಂಕಭೀಮ ರಾ[ಮ]ರಾಚೇಂದ್ರ ಮಹಾ ಅರಸುಗಳು (ಕಾ. IV. ೩೦-೭ ; 1505). **ಸ್ವಾಮಿದ್ರೋಹರ ಶಿರಃಖಂಡನ** = ಸ್ವಾಮಿ ದ್ರೋಹಿಗಳ ತಲೆಗಳನ್ನು ಕತ್ತರಿಸುವವನು; ಒಂದು ಬಿರುದು: ಕಸ್ಮೀರ ವಿಷಯಮುಖಮಂಡನಂ ಸ್ವಾಮಿದ್ರೋಹರ ಶಿರಷ್ಖಂಡನಂ ನಾಮಾದಿ ಸಮಸ್ತಪ್ರಸಸ್ತಿ ಸಹಿತಂ (ಕಾಆ. ೩೬-೫೦-೫; 1042). [ಸಂ.]

ಸ್ವಾಮಿದ್ರೋಹಿ (ನಾ). = ಸ್ವಾಮಿದ್ರೋಹ ೨: ಸಿಲುಕಿದನು ಘಡ ಸ್ವಾಮಿದ್ರೋಹಿಗೆ ಬಲೆಯ ಹಾಯಿಕೊ (ಕುವ್ಯಾಕ. ೧೯-೧೪); ಎಲವೊ ಸ್ವಾಮಿದ್ರೋಹಿ ತಾನಲ್ಲೆಂದನಂಗದನು (ಕೌಶಿರಾ. ೧೮-೪೩). [ಸಂ. ಸ್ವಾಮಿದ್ರೋಹಿನ್]

ಸ್ವಾಮಿದ್ರೋಹಿಕೆ (ನಾ). = ಸ್ವಾಮಿದ್ರೋಹ ೧ : ನಲನೊಡೆಯನಾಪ್ತಿಗರು ಬಗೆದರು ಸ್ವಾಮಿದ್ರೋಹಿಕೆಯ (ಕುವ್ಯಾದ್ರೋ. ೧೦-೭). [ಸ್ವಾಮಿದ್ರೋಹ + - ಇಕೆ]

ಸ್ವಾಮಿನಿ (ನಾ). ೧. ಒಡತಿ; ಯಜಮಾನಿತಿ: ನಿಮ್ಮ ಈ ನಡತೆಯನ್ನು ಕಂಡು ನಮ್ಮ ಸ್ವಾಮಿನಿಯು ಭಯೋದ್ರೇಕದಿಂದ ಮೂರ್ಛೆಹೋಗಿರುವಳು (ರಾಜವಿ. ೬೫). ೨. ಹಂಡತಿ. [ಸಂ. ಸ್ವಾಮಿನೀ]

ಸ್ವಾಮಿಭಕ್ತಿ (ನಾ). ಒಡೆಯನಿಗೆ ನಿಷ್ಠನಾಗಿರುವಿಕೆ; ಒಡೆಯನ ಮೇಲಿರುವ ಭಕ್ತಿ, — ಗೌರವ: ಅವರು ಪ್ರವಾಸದಲ್ಲಿದ್ದಾಗ ಅವನೇ ಸಹಾಯಕ. ಎಂಥ ಸ್ವಾಮಿಭಕ್ತಿ ಅವನದು! (ತೆರೂತ. ೭೧). [ಸಂ.]

ಸ್ವಾಮಿಭೃತ್ಯನ್ಯಾಯ (ನಾ). [ತರ್ಕ] ಒಡೆಯ ಮತ್ತು ಸೇವಕರ ನಡುವಿನ ಸಂಬಂಧವನ್ನು ತಿಳಿಸುವ ಒಂದು ನ್ಯಾಯ: ಆಳು ನಾಂ ದೊರೆ ನೀನು ಸ್ವಾಮಿಭೃತ್ಯನ್ಯಾಯ ಕೇಳು ಪೋಷಕ ನೀನು ಪೋಷ್ಯ ನಾಂ (ಪಂಚಾರಾ. ೨-೧೯-೩೧). [ಸಂ.]

ಸ್ವಾಮಿವಂಚಕ (ನಾ). = ಸ್ವಾಮಿದ್ರೋಹ ೨.

ಸ್ವಾಮಿವಂಚಕರ ಗಂಡ = ಸ್ವಾಮಿದ್ರೋಹಿಗಳನ್ನು ಶಿಕ್ಷಿಸುವವನು; ಒಂದು ಬಿರುದು: ಸ್ವಾಮಿವಞ್ಚಕರ ಗಂಣ್ಡರುಂ ರಾಉತ್ತರಾಯರುಂ ಜವನಿಕೆನಾರಾಯಣರುಂ . . ಚರಮಾಳ ದೇವ ವರ್ಣ್ಣಾಯಕರು (ಎಕ. XI, ಚತ್ರದು. ೧೨-೧೩; 1286). [ಸಂ.]

ಸ್ವಾಮಿವಿರೋಧ (ನಾ). ೧. = ಸ್ವಾಮಿದ್ರೋಹ ೧. ೨. ಷಣ್ಮುಖನಿಗೆ ವೈರಿಯಾಗಿರುವಿಕೆ; ಷಣ್ಮುಖನನ್ನು ಎದುರಿಸುವಿಕೆ. ೧ , ೨ : ವಿಶ್ವಾಸಘಾತಂ ವಸದ್ರುಮನೀಡದೊಳ್ ಸ್ವಾಮಿವಿರೋಧಂ ತಾರಕಚಿತ್ರಕಥೆಯೊಳ್ . . . ಅಕ್ಕುಮಲ್ಲದ ಜನಪದಜನಂಗಳೊಳಿಲ್ಲ (ಜಗವಿ. ೨-೧ ವ). [ಸಂ.]

ಸ್ವಾಮಿಸಂಬಂಧ (ನಾ). ಒಡೆತನದ ಸಂಬಂಧ; ಸ್ವಾಮಿತ್ವದ ಬಂಧುತ್ವ: ಸಂಬಂಧದೊಳ್ ಷಷ್ಠಿಯಕ್ಕುಂ. ಅದು ಸ್ವಾಮಿಸಂಬಂಧ, ಕುಲಸಂಬಂಧ, ಜಾತಿಸಂಬಂಧ, ಅವಯವಸಂಬಂಧ, ಲಕ್ಷಣಸಂಬಂಧ, ಸನ್ನಿಧಾನಸಂಬಂಧ, ಸಂಸ್ಪರ್ಶಸಂಬಂಧ, ಸಂಬಂಧದ ಸಂಬಂಧವೆಂಬಿನಿತೆಲ್ಲೊಳಮಕ್ಕುಂ (ಶಮದ. ೧೩೨ ವೃತ್ತಿ). [ಸಂ.]

ಸ್ವಾಮಿಹಿತವ (ನಾ). ಒಡೆಯನಿಗೆ ಹಿತವನ್ನುಂಟುಮಾಡುವವನು; ಸ್ವಾಮಿಭಕ್ತ: ಪ್ರತಿಹಿತವೆಯಹ ಸುದತಿಯನ್ಯತವಱಿಯದವನೀಶನುಭಯಕುಲಶುದ್ಧನಹ ಕುವರನೀ ಸ್ವಾಮಿಹಿತವನಹ ಮಂತ್ರಿಯ ಸೋಂಕು ತನಗೆ ಕೈಸಾರ್ದುದೆಂದು (ಪಚಕಾ. ೧೦-೩೨).

[ಸಂ. ಸ್ವಾಮಿಹಿತವತ್]

ಸ್ವಾಮ್ಯ (ನಾ). ೧. ಒಡೆತನ; ಯಾಜಮಾನ್ಯ: ತನ್ನ ಸ್ವಾಮ್ಯದ ವಸ್ತುವನ್ನು ತನ್ನಿಂದ ಇತರರು ಕಿತ್ತುಕೊಂಡಂತೆ ಆತ ಗುರುಗುಟ್ಟುತ್ತಿದ್ದ (ಕೀಲುಗೊ. ೪೬); ನನಗೆ ಅದರ ಸ್ವಾಮ್ಯದ ಹಕ್ಕು ಹೊರಟುಹೋದೀತು (ಸಂಬರು. ೧೯). ೨. (ಭೂಮಿ, ಆಸ್ತಿ, ರಾಜ್ಯ ಮೊದಲಾದುವು) ಒಡೆತನಕ್ಕೆ ಒಳಪಟ್ಟುದು ಅಥವಾ ಒಳಪಡ ಬೇಕಾದುದು: ನೀವಿಂತೊಡಬಡಿಸಿ ಪಾಂಡವರ ಸ್ವಾಮ್ಯವನೀಸಿ ಕೊಡಿ (ಕುವ್ಯಾಉ. ೯-೨೪). ೩. ಸಂಪೂರ್ಣಅಧಿಕಾರದ ಅಥವಾ ಏಕಸ್ವಾಮ್ಯದ ಸನ್ನದು, — ಹಕ್ಕುಪತ್ರ : ಸ್ವಾಮ್ಯದ ಹಕ್ಕು (Patent) ಕೊಡುವುದಕ್ಕಾಗಿಯೇ . . . ಕಾನೂನುಗಳೂ ಪ್ರಚಾರದಲ್ಲಿವೆ (ಪಸುಹೊ. ೨೭೪). [ಸಂ.]

ಸ್ವಾಯಂಭುವ (ನಾ). ೧. ಸ್ವಯಂಭುವಿನ ಮಗ; ಹದಿನಾಲ್ಕು ಮನುಗಳಲ್ಲಿ ಮೊದಲನೆಯವನು: ಸ್ವಾಯಂಭುವ . . . ಇಂದ್ರಸಾವರ್ಣಕರೆಂಬ ಹದಿನಾಲ್ಕುಂ ಮನುಗಳೊಳಗೆ (ವಿವೇಕ. ೨೦೪). ೨. ಇಪ್ಪತ್ತೆಂಟು ಬಗೆಯ ಶಿವಾಗಮ ಗಳಲ್ಲೊಂದು: ಕಾಮಿಕ . . . ಸ್ವಾಯಂಭುವ, ಅನಲ, ವೀರ, ರೌರವ, ಮಕುಟ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). ೩. ಒಂದು ಬಗೆಯ ವೀಣೆ: ಅಂತು ಬಗೆದಂದು ರಾವಣ ರುದ್ರಕೂರ್ಮ ಕೈಲಾಸಾಕಾಶ ಗೌರಿ ಸ್ವಾಯಂಭುವ ಕಿನ್ನರವೀಣೆಗಳುಮಂ ವೇಣುಸ್ವರಮಂಡಲಂಗಳುಮಂ ಶ್ರುತಿಗೊಳಿಸಿ (ವೃಪವಿ. ೧೧-೭ ವ). [ಸಂ.]

ಸ್ವಾಯತ (ನಾ). [ವಿಶೈ] ೧. "ಅಳವಡುವಿಕೆ, ಸಾಕ್ಷಾತ್ಕಾರ" (ಅವಚಂ. ಕೋಶ): ಆಯತವಾಯಿತ್ತು ಅನುಭವ ಸ್ವಾಯತವಾಯಿತ್ತು ಶಿವಜ್ಞಾನ (ಅವಚಂ. ೬೪-೨೮೧); ಗುರುಕರುಣವ ಪಡೆದುದಕ್ಕೆ ಚಿಹ್ನವಾವುದೆಂದಡೆ ಅಂಗದ ಮೇಲೆ ಲಿಂಗ ಸ್ವಾಯತ ವಾಗಿರಬೇಕು (ಪಚಸಂ. ೧೩೫-೧). ೨. "ವೀರಶೈವರಲ್ಲಿ ಗುರುವು ಭಕ್ತನಿಗೆ ಪ್ರಾಣಲಿಂಗವನ್ನು ಅರುಹಿಕೊಡುವ ದೀಕ್ಷೆ" (ಬಸವ. ಕೋಶ): ಆಯತ ಕೆಟ್ಟರೆ ಕೆಡಬಹುದಲ್ಲದೆ ಸ್ವಾಯತ ಕೆಡಬಾರದಯ್ಯಾ (ಬಸವ. ೮೯೭). [ಸಂ.]

ಸ್ವಾಯತಲಿಂಗ (ನಾ). [ವಿಶೈ] ಪ್ರಾಣಲಿಂಗ: ಆಯತಲಿಂಗದಲ್ಲಿ ನೀವೆನಗೆ ಆಚಾರವ ತೋಱಿದಿರಾಗಿ ಸ್ವಾಯತಲಿಂಗದಲ್ಲಿ ನೀವೆನಗೆ ಅಱಹ ತೋಱಿದಿರಾಗಿ (ವಚಸಂ. ೫೨೧-೧೧೦); ಆಯತಲಿಂಗವ ಹಿಡಿದು ಸ್ವಾಯತಲಿಂಗವ ಕಾಣಬೇಕು (ಆಪ್ರಭು. ೬೬).

[ಸಂ.]

ಸ್ವಾಯತ್ತ (ಗು). ೧. ಸ್ವಾಧಿಕಾರವುಳ್ಳ; ಸ್ವತಂತ್ರವಾದ: ಆಗಷ್ಟ ೧೫ಕ್ಕೆ ಭಾರತಕ್ಕೆ ಸ್ವಾಯತ್ತ ಸರಕಾರ ಸಿಗುವುದು (ವಿಜಯ. ೧೪). (ನಾ). ೨. ಸ್ವಾಧೀನ ವಾದುದು; ತನ್ನ ವಶಕ್ಕೆ ಬಂದುದು: ವೀರಸಂಕಮದೇವಪ್ರಭು ಚಕ್ರವರ್ತ್ತಿಪದಮಂ ಸ್ವಾಯತ್ತಮಂ ಮಾಡಿದಂ (ಶಾಸಪ. ೧೩); ಸ್ತೇಯಮದತ್ತಾದಾನಂ ಹೇಯಮದಂ ತೊಱೆದವಂಗೆ ನವನಿಧಿರತ್ನಂ ಸ್ವಾಯತ್ತಂ (ಉಸಾರ. ೯೭). ೩. [ರಾಜನೀ] ಅರಸನು ತಾನೇ ಎಲ್ಲ ಅಧಿಕಾರವನ್ನು ವಹಿಸಿಕೊಂಡು ಆಳುವುದು; ರಾಜಾಯತ್ತ ನೀತಿ: ದಂಡನೀತಿಶಾಸ್ತ್ರದಲ್ಲಿ ಸ್ವಾಯತ್ತವೆಂದೂ, ಸಚಿವಾಯತ್ತವೆಂದೂ, ಉಭಯಾಯತ್ತವೆಂದೂ ಸಿದ್ಧಿಗಳು ಮೂರು ತೆರನಾಗಿ ಹೇಳಿ ಇಹವು (ಮುದ್ರಾಮಂ. ೩೨೪). [ಸಂ.]

ಸ್ವಾಯತ್ತತೆ (ನಾ). ತಾನೆ ಆಡಳಿತ ಅಥವಾ ವ್ಯವಹಾರವನ್ನು ನಡೆಸುವ ಅಧಿಕಾರ: ಶಾಸನಸಭೆಯಲ್ಲಿ ಬಹುಮತ ಪಡೆದ ಕಾಂಗ್ರೆಸ್ಸು ಪ್ರಾಂತಿಕಸ್ವಾಯತ್ತತೆಯ ವಿಷಯವಾಗಿ ಸರಕಾರದ ನಿರ್ಣಯವನ್ನು ವಿರೋಧಿಸಿ ಜಯಶಾಲಿಯಾಯಿತು (ಕರುಕಾ. ೧೩೪). [ಸಂ. ಸ್ವಾಯತ್ತತಾ]

ಸ್ವಾಯತ್ತಸಂಸ್ಥೆ (ನಾ). ಸ್ವತಂತ್ರವಾಗಿ ಆಡಳಿತವನ್ನು ನಡೆಸುವ ಸಂಸ್ಥೆ: ಕನ್ನಡ ಸಾಹಿತ್ಯಪರಿಷತ್ತು ಒಂದು ಸ್ವಾಯತ್ತಸಂಸ್ಥೆಯಾಗಿದೆ (ರೂಢಿ). [ಸಂ. ಸ್ವಾಯತ್ತಸಂಸ್ಥಾ]

ಸ್ವಾರ 'ಸವಾರ' ನೋ.

ಸ್ವಾರಕಚೇರಿ 'ಸವಾರಕಚೇರಿ' ನೋ.

ಸ್ವಾರಸ್ಯ (ನಾ). ೧. ಸ್ವಾಭಾವಿಕವಾದ ಮಾಧುರ್ಯ; ನೈಸರ್ಗಿಕವಾದ ರುಚಿ. ೨. ಆಹ್ಲಾದಕರವಾದುದು; ಸಂತೋಷಪ್ರದವಾದುದು. ೩. ಆಸಕ್ತಿಯನ್ನುಂಟು ಮಾಡುವಂತಹುದು; ಕುತೂಹಲಕರವಾದುದು: ಇದರ ಚರಿತ್ರ ಸ್ವಾರಸ್ಯವಾದದ್ದು (ಶಾಸಗಿ. ೮೨). ೪. ಶ್ರೇಷ್ಠತೆ; ಉತ್ತಮತೆ. ೫. ಮರ್ಮ; ಸಾರ; ಸತ್ತ್ವ. [ಸಂ.]

ಸ್ವಾರಾಜ್ಯ (ನಾ). ಇಂದ್ರನ ರಾಜ್ಯ; ಸ್ವರ್ಗ: ಎಮ್ಮೊಳಗೆ ನಿಸದಂ ನೆಲೆಸಿರುವ ಸ್ವಾರಾಜ್ಯವೆಮಗೆ ತೋರಿಸೆ ಯೇಸು . . . ನಲವತ್ತುದಿನ ಹಸಿದಂ (ಗಿಳಿವಿ. ೪೫-೧೧); ಸ್ವಾರಾಜ್ಯ ಭೂರಾಜ್ಯ ಮತ್ತೆ ಭುವೋರಾಜ್ಯದೈಶ್ವರ್ಯವೆಷ್ಟಿದ್ದರಿರಲಿ (ಇಂಚಾಪ. ೧೩೦-೩೯). [ಸಂ.]

ಸ್ವಾರಿ 'ಸವಾರಿ' ನೋ.

ಸ್ವಾರಿಫಿರಂಗಿ (ನಾ). ದಂಡಯಾತ್ರೆಯಲ್ಲಿ ಬಳಸುವ ತೋಪು,— ಫಿರಂಗಿ: ಅನೆಯನ್ನೇರಿ ಸೊನ್ನೇಬಾಣಗಳನ್ನು ಹೂಡೆಯಿಸಿ ಸ್ವಾರಿಫಿರಂಗಿ ಹೂಡೆದು . . . ಕಡಿಯಲಾಗಿ ಹಗೆಗಳು ತಡೆಯಲಾರದೆ ನಾಲ್ಕು ಕಡೆಗೂ ಓಡಿಹೋದರು (ಚಿತ್ರಪಾ. ೫೫). IP ''ದೊರೆಯ ಸಂಗಡ ತೆಗೆದುಕೊಂಡು ಹೋಗುವ ಕತ್ತಿ, ಇದನ್ನು ಸ್ವಾರಿಫಿರಂಗಿ ಎಂತಲೂ ಬರೆಯುತಾರೆ'' (ಚಿತ್ರಪಾ. ಅನುಬಂಧ).

[ಸ್ವಾರಿ (< ಸವಾರಿ) + ಫಿರಂಗಿ]

ಸ್ವಾರ್ಜಿತ (ನಾ). ತಾನು ಗಳಿಸಿದುದು; ಸ್ವತಃ ಸಂಪಾದಿಸಿದುದು: ಶೀನಪ್ಪನ ಅಡ್ಡಹೆಸರು 'ಕಲಿಯುಗ' . . . ಸ್ವಾರ್ಜಿತವಾದ ಈ ಬಿರುದು ಒಂದು ಬಗೆಯ ನಗುನಾಮ ಅಷ್ಟೆ (ಕಂಬಾಮ. ೩೭). [ಸಂ.]

ಸ್ವಾರ್ಥ (ನಾ). ೧. ತನ್ನ ಪ್ರಯೋಜನ; ಸ್ವಹಿತ. ೨. ತನ್ನ ಹಿತವನ್ನು ನೋಡಿಕೊಳ್ಳುವ ಪ್ರವೃತ್ತಿ; ಸ್ವಹಿತಾಸಕ್ತಿ: ಸ್ವಾರ್ಥವನ್ನು ಕಳೆದುಕೊಂಡು ಮಮತ್ವವನ್ನು ಅಹಂಕಾರವನ್ನು ದೂರಮಾಡು (ಧರ್ಮಸಾ. ೧೩೨); ಆ ದಾಸಿ ನಚ್ಚಿನೊಡತಿಗೆ ಮತ್ತೆ ಮೆಚ್ಚನಾಕೆಯ ಶಿಶುಗೆ ತೊಳ್ತುಗೆಯ್ಮೆಯ ಪೆರ್ಮೆಗೊಳ್ನನೆಸಗುವೆನೆಂದು ಕಜ್ಜಮಂ ಕೈಕೊಂಡೊಡೇಂ ಸ್ವಾರ್ಥದೋಷಮಂ ಕಾಣ್ಬರಾರಾಕೆಯ ಪರಾರ್ಥತೆಯ ಶುದ್ಧಿಯಲಿ? (ಶ್ರೀರಾಮಾ. ೧೧೫-೯೮). ೩. ತನ್ನ ಅರ್ಥವನ್ನು ಉಳ್ಳುದು: ಸ್ವಾರ್ಥಂ ಪ್ರಥಮಾರ್ಥ ತೃತೀಯಾರ್ಥ ಚತುರ್ಥ್ಯರ್ಥದೊಳ್ ದ್ವಿತೀಯೆ (ಕವಿದ. ೧೩೫). ೪. ಪ್ರಯೋಜನ; ಫಲ: ಜಡಪಾಷಾಣವ ಅನಂತಕೋಟವರ್ಷ ಪೂಜೆ ಮಾಡಿದರು ವ್ಯರ್ಥವಲ್ಲದ ಸ್ವಾರ್ಥವಿಲ್ಲ (ಅಖಂಡೇ. ೨೬೯-೧೧); ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ (ನಾದಲೀ. ೮೫-೧೧). ೫. ಸ್ವಂತ ಹಣ. [ಸಂ.]

ಸ್ವಾರ್ಥಪರ (ನಾ). ತನ್ನ ಹಿತವನ್ನೇ ನೋಡಿಕೊಳ್ಳುವವನು; ಸ್ವಾರ್ಥಿ: ಸ್ವಾರ್ಥಪರರೂ ಸಂಕುಚಿತಮನೋಭಾವನೆಯವರೂ ಹೆಚ್ಚಿಕೊಂಡು (ಶಕ್ತಿದ. ೨೧). [ಸಂ.]

ಸ್ವಾರ್ಥಲೋಲುಪ್ತಿ (ನಾ). ಸ್ವಂತಸತ್ತ್ವದ ಮೇಲಿನ ಆಸಕ್ತಿ; ಸ್ವಸಾಮರ್ಥ್ಯದ ವ್ಯೋಹ: ಕೌರವನರ್ಥವನು ಸಲೆ ತಿಂಬುದಲ್ಲದೆ ಸಮರ ನಿಮಗೇಕೆ ಸ್ವಾರ್ಥಲೋಲುಪ್ತಿಯಲಿ ನಿಲುವ ಸಮರ್ಥರಾದರೆ ಬಾಣಧಾರಾತೀರ್ಥದೊಳಗೋಲಾಡಿಸುವೆನೆಂದಭ್ಭನಭಮನ್ಯು (ಕುವಾದ್ರೋ. ೬-೧೦). [< ಸಂ. ಸ್ವಾರ್ಥಲೋಲುಪತಾ]

ಸ್ವಾರ್ಥಸಿದ್ಧಿ (ನಾ). ತನ್ನ ಬಯಕೆಯನ್ನು ನೆರವೇರಿಸಿಕೊಳ್ಳುವಿಕೆ; ಇಷ್ಟಸಿದ್ಧಿ: ಆ ಧೂರ್ತಶಿಖಾಮಣಿ ಸ್ವಾರ್ಥಸಿದ್ಧಿಯಂ ಮಾಡಿಕೊಂಡು ಸ್ವೇಚ್ಛೆಯೊಳೋಡಿಪೋದಂ (ಪಂಚತಂ. ೨೩೦-೧೪). [ಸಂ.]

ಸ್ವಾರ್ಥೋಚ್ಚರಿತ (ನಾ). ತನ್ನ (ಸಹಜವಾದ) ಅರ್ಥದಲ್ಲಿ ಹೇಳಲ್ಪಟ್ಟುದು: ಪುರುಷತ್ರಯಮುಂ ಸ್ವಾರ್ಥೋಚ್ಚರಿತಂಗಳ್ (ಶಮದ. ೨೨೩). [ಸಂ.]

ಸ್ವಾವಲಂಬನ (ನಾ). ತನ್ನ ಜೀವನೋಪಾಯಕ್ಕಾಗಿ ಇನ್ನೊಬ್ಬರನ್ನು ಆಶ್ರಯಿಸದಿರುವಿಕೆ; ಪರಾವಲಂಬನವಿಲ್ಲದಿರುವಿಕೆ: ಕೇಶವನಿಗೂ ಸಹ ಭೀಮು ಸ್ವಾವಲಂಬನದ ಪಾಠವನ್ನು ಕಲಿಸುತ್ತಾನೆ (ಸಮಜೀ. ೧೨ ಪೀಠಿಕೆ); ಗ್ರಾಮೋದ್ಯೋಗ ಮಾಡಿರಿ, ಕೈಗಾರಿಕೆ ನಡೆಸಿರಿ, ಸ್ವಾವಲಂಬನ ಕಲಿಯಿರಿ (ದೇಣಿ. ೩೦). [ಸಂ.]

ಸ್ವಾವಲಂಬಿ (ನಾ). ೧. ತನಗಾಗಿ ಬೇರೆಯವರನ್ನು ಆಶ್ರಯಿಸದಿರುವ ವ್ಯಕ್ತಿ; ಪರಾವಲಂಬಿಯಲ್ಲದವನು : ತನಗೆ ಇಲ್ಲಿಯ ತನಕ ಕಲಿಸಿ ತನ್ನನ್ನು ಸ್ವಾವಲಂಬಿಯಾಗಿ ಮಾಡಿದಳಲ್ಲ ಎಂದು ಅವಳ ಬಗ್ಗೆ ಅಭಿಮಾನವಿದೆ (ಆಚೋದೇ. ೭೪). ೨. ತನ್ನ ಅಗತ್ಯಗಳನ್ನೆಲ್ಲ ತಾನೆ ಪೂರೈಸಿಕೊಳ್ಳುವಂತಹದು: ಪ್ರತಿರಾಷ್ಟ್ರವೂ ಸ್ವಾವಲಂಬಿಯಾಗಿರುವುದು ಸಾಧ್ಯವಿಲ್ಲದ ಮಾತು (ಕಮೋ. I. ೮೨೪). [ಸಂ. ಸ್ವಾವಲಂಬಿನ್]

ಸ್ವಾಸ 'ಸಾಸ' ನೋ.

ಸ್ವಾಸ್ತಿ 'ಸ್ವಾಸ್ತೆ' ನೋ.

ಸ್ವಾಸ್ತೆ, ಸ್ವಾಸ್ತಿ, ಸ್ವಾಸ್ಥಿ (ನಾ). ಸುಸ್ಥಿತಿ, ಅಭಿವೃದ್ಧಿಗಳಿಗಾಗಿ ಕೊಟ್ಟ ದಾನ,— ದತ್ತಿ: ಸ್ವಾಸ್ತೆಯು ನಡದು ಬರುತ್ತಿದ್ದಲ್ಲಿ (ಮೈಅರಿ. ೧೯೨೯, ೧೮-೮; 1402); ನೀವು ಕಟಿಸಿದ ಮಠದ ಧರ್ಮಕ್ಕೆ ಸ್ವಾಸ್ತೆಯ ಮಾಡಿಕೊಡಬೇಕೆಂದು ನಮ್ಮ ಕೂಡೆ ಹೇಳಿದಲ್ಲಿ (ಮೈಅರಿ. ೧೯೨೯, ೯೨-೮; 1667); ನಾವು ಶಿವಾರ್ಪಣವಾಗಿ ಕೊಟ್ಟ ಸ್ವಾಸ್ತೆ ಶಾಸನದ ಕ್ರಮವೆಂತೆಂದರೆ (ಎಕ. VII. ಶಿವಮೊ. ೮೨-೧೭; 1683). **ಸ್ವಾಸ್ತಿ**: ಮಲ್ಲಿನಾಥಸ್ವಾಮಿಗೆ ಸ್ವಾಸ್ತಿಗೆ ಕೊಟ್ಟದು (ಎಕ. XVI. ಮದ್ದೂ. ೧೪-೮; 1531); ಯಾ ಧರ್ಮಕ್ಕೆ ಬಿಟ್ಟ ಸ್ವಾಸ್ತಿಗೆ ತಪ್ಪುದರ ಯಾ ಸ್ವಾಮಿಗಳ ಹರಿವಾಣಕ್ಕೆ ವಿಷವನಿಕ್ಕಿದವರು (ಎಕ. XIV. ಶ್ರೀರಂ. ೧೯೮-೨೯; 1598). **ಸ್ವಾಸ್ಥಿ** : ಯಾವರಿಗೆ ಉತ್ತಾರ ಕೊಟ್ಟ ಸ್ವಾಸ್ಥಿಗೆ ಶಾಸನವ ಬರಸಿ ಕೊಡಬೇಕೆಂದು (ಎಕ. VII. ಶಿವಮೊ. ೨೯-೧೨; 1712). [< ಸ್ವಾಸ್ತೆ]

ಸ್ವಾಸ್ಥಿ 'ಸ್ವಾಸ್ತೆ' ನೋ.

ಸ್ವಾಸ್ಥ್ಯ (ನಾ). = ಸ್ವಾಸ್ತೆ: ಯಾ ಸ್ವಾಸ್ಥ್ಯ ಗ ೨ ॥ ಭೂಮಿಯನ್ನು . . . ಬಿಟ್ಟು ಕೊಟ್ಟದ್ದರಿಂದ (ಮೈಅರಿ. ೧೯೨೯, ೧೮-೧೧; 1402); ಗಾಜನೂರ ಸೀಮೆ ವಳಗೆ ಕೊಟ್ಟ ಸ್ವಾಸ್ಥ್ಯೆಯ ವಿವರ (ಎಕ. VII. ಶಿವಮೊ. ೨-೮೦ ; 1641). [ಸಂ. ಸ್ವಾಸ್ಥಾ (ಸು + ಆಸ್ಥಾ)./ IP ಇದು ಸಂಸ್ಕೃತದ 'ಸ್ವಾಸ್ಥ್ಯ' ದಿಂದ ಬಂದಿರುವ ಸಾಧ್ಯತೆಯೂ ಇದೆ]

ಸ್ವಾಸ್ಥ್ಯ (ನಾ). ೧. ಸ್ವಾವಲಂಬನೆ. ೨. ಧೈರ್ಯ; ದೃಢತೆ; ಸ್ಥೈರ್ಯ. ೩. ಕ್ಷೇಮ; ಆರೋಗ್ಯ; ದೇಹಪ್ರಕೃತಿಯ ಸ್ವಸ್ಥತೆ: ಅವನ ಸ್ವಾಸ್ಥ್ಯಕ್ಕೆ ನಾವೆಲ್ಲರೂ ಪಾನಮಾಡಿ ಸಂತೋಷವಾಗಿರೋಣ (ರಾಜಾಮ. ೩೨); ಚಾರುನ ಸ್ವಾಸ್ಥ್ಯಕ್ಕೆ ಭಂಗ ಬಂದೀತೆಂದು ಶಂಕಿಸಿ ಯಾವಾಗಲೂ ಅವಳ ಮೇಲೆ ತನ್ನ ಸಂರಕ್ಷಣೆಯ ಕಣ್ಣಿಟ್ಟನು (ಇಪ್ರಕ. ೨೮೭). ೪. ಸುಸ್ಥಿತಿ; ಕಲ್ಯಾಣ: ಸಮಾಜದ ಸ್ವಾಸ್ಥ್ಯಕ್ಕಾಗಿ ಅದರ ಮುಖಂಡರೂ . . . ರಾಜ್ಯದ ಅಧಿಕಾರಿವರ್ಗದವರೂ ಸೇರಿ, ಸಮಾಲೋಚಿಸಿ ಮಹಾರಾಜರೆಡೆಗೆ ಹೋದರು (ಕುಂಕುವು. ೩೮). ೫. ಸೌಖ್ಯ; ಸಂತೋಷ. ೬. ತೃಪ್ತಿ; ಸಮಾಧಾನ. ೭. ಪಾಳೆಯ; ವಸಾಹತು: ಪುಲಿಕಾಟ್ . . . ಸಾಡ್ರಾಸ್ - ಇವು ಮುಂಚೆ ಡಚ್ಚರ ಸ್ವಾಸ್ಥ್ಯಗಳಾಗಿದ್ದುವು (ಭೂಗೋಳ. ೮೨). ೮. [ಕಾವ್ಯಮೀ] ಕವಿತ್ವದ ಎಂಟು ಪರಿಕರಗಳಲ್ಲಿ ಒಂದು : ಕಾವ್ಯಮೀಮಾಂಸೆಯಲ್ಲಿ ರಾಜಶೇಖರನು, ಸ್ವಾಸ್ಥ್ಯಂ ಪ್ರತಿಭಾಭ್ಯಾಸೋ ಭಕ್ತಿರ್ವಿದ್ವತ್ಕಥಾ ಬಹುಶ್ರುತತಾ ಸ್ಮೃತಿದಾರ್ಢ್ಯಮನಿರ್ವೇದಶ್ಚ ಮಾತರೋಷ್ವೀ ಕವಿತ್ವಸ್ಯ . . . ಎಂದು ಪಟ್ಟಿಹಾಕುತ್ತಾನೆ (ಭಾರಮೀ. ೧೮೩). [ಸಂ.]

ಸ್ವಾಹಾಕಾರ (ನಾ). ಹೋಮಕಾಲದಲ್ಲಿ ಮಾಡುವ 'ಸ್ವಾಹಾ' ಎಂಬ ಶಬ್ದದ ಉಚ್ಚಾರಣೆ: ಸ್ವಧಾಕಾರ ವಷಟ್ಕಾರ ಸ್ವಾಹಾಕಾರೋಂಕಾರಧ್ವನಿ ನೆಗಲ್ ನೆಗಲ್ದುದಾ ಹುತಿಧೂಮಂ (ಪಂಪಭಾ. ೬-೩೪). [ಸಂ.]

ಸ್ವಾಹಾಪತಿ (ನಾ). ಸ್ವಾಹಾದೇವಿಯ ಪತಿ; ಅಗ್ನಿ: ಶ್ರೀಪತಿಗೆ ಸೊಬಗನು . . . ಸರಿತ್ಪತಿಗೆ ಗಂಭೀರತೆಯನು ಸ್ವಾಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ (ಹಚಿಕಾ. ೧-೧); ಸ್ವಾಹಾಪತಿಯ ಪ್ರಿಯೆಯಂ ಮಾಡಿಕೊಂಡು ಸ್ವೇಚ್ಛೆಯೊಳೋಡಿಪೋದಂ (ಪಂಚತಂ. ೨೩೦-೧೪). [ಸಂ.]

ಸುರಪತಿಯುಂ ಸ್ವಾಹಾಪತಿಯುಂ . . . ಧನಪತಿಯುಂ ಪಶುಪತಿಯುಮೆನಿಸಿದಾಶಾಪತಿಗಳ್ (ಪುಷ್ಪಪು. ೧೦-೮೦). [ಸಂ.]

ಸ್ವಾಹಾಪ್ರಿಯ (ನಾ). = ಸ್ವಾಹಾಪತಿ : "ವಸು ಸಿತೇತರಗತಿ ಸ್ವಾಹಾಪ್ರಿಯಂ . . . ಪಾವಕಂ ಜ್ವಾಲಿ ವೈಶ್ವಾನರಂ" (ಮಂಗರಾ. ೧೪-೬). [ಸಂ.]

ಸ್ವಾಹೆ (ನಾ). ಅಗ್ನಿಯ ಹೆಂಡತಿ : "ಅರ್ಚಿಯೆನಲಗ್ನಿ . . . ಸ್ವಾಹಾಖ್ಯೆಯೆನಲವನ ನಾರಿಯಕ್ಕುಂ" (ಮಂಗರಾ. ೧೪-೭). [ಸಂ. ಸ್ವಾಹಾ]

ಸ್ವಿನ್ನತೆ (ನಾ). ಬೆವರುವಿಕೆ: ರತಖಿನ್ನ ಕಿನ್ನರೀಸ್ವಿ [ಪಾಠಾಂ. ಸ]ನ್ನತೆಯಂ ತಣ್ಮಲೆದು ಕಳೆದು ಸುಯ್ಯಿಂ ಸುರಭೀಕೃತಮಾಗುತ್ತುಂ ಪ್ರತ್ಯುಪಕೃತಿವಡೆವುದು ತದುಪವನದ ಪಾವನಪವನಂ (ಚಂದ್ರಪು. ೧೦-೪೨). [ಸಂ. ಸ್ವಿನ್ನತಾ]

ಸ್ವಿನ್ನಾಂಗ (ನಾ). ಬೆವರುವ ದೇಹ; ಬೆವರಿಡುವ ಶರೀರ: ಸುಕುಮಾರ ಕುಮಾರನ ಕಂಟಕಿತಾಂಗಪ್ರಕೃತಿಗಂ ವಧೂಸ್ವಿನ್ನಾಂಗಪ್ರಕೃತಿಗಮನಂಗನೇಂ ಪಚ್ಚಿ ಕೊಟ್ಟನೋ ಬೇಱೆವೇಱೆ ರಸಮಂ ಪಸೆಯೊಳ್ (ಶಾಂತಿಪು. ೬-೧೪). [ಸಂ.]

ಸ್ವೀಕರಣ (ನಾ). ೧. ಇನ್ನೊಬ್ಬರಿಂದ ತೆಗೆದುಕೊಳ್ಳುವಿಕೆ; ಅಂಗೀಕರಿಸುವಿಕೆ: ಹೊಗೆಸೊಪ್ಪು . . . ಪೋರ್ಚುಗೀಸರಿಂದ ಸ್ವೀಕರಣ (ಶಾಸಗಿ. ೨೭). ೨. (ಅತಿಥಿಗಳನ್ನು) ಬರಮಾಡಿಕೊಳ್ಳುವುದು; ಸ್ವಾಗತಿಸುವುದು: ಲೋಕಪಾಲನು ಕಾಲ್ನಡೆಯೊಳಿದಿರ್ವಂದೊಡನೆ ಸಾರ್ದು ಪ್ರಾಕಟಪ್ರಿಯ ವಿನಯಪೂರ್ವ ಸ್ವೀಕರಣ ಸತ್ಕಾರ ಸಂತುಷ್ಟಾಕಲನನಂ ಮಾಡಿ (ಬಸಪು. ೫-೧೭). ೩. ಮದುವೆ; ವಿವಾಹ. ೪. [ಭಾಷಾಶಾ] ಒಂದು ಭಾಷೆಯು ಬೇರೆ ಭಾಷೆಗಳಿಂದ ಪದಗಳನ್ನು ತೆಗೆದುಕೊಂಡು ತನ್ನದಾಗಿ ಮಾಡಿಕೊಳ್ಳುವಿಕೆ: ಅಕ್ಷರಮಾಲೆಯ ವೈಲಕ್ಷಣ್ಯದಿಂದಲೂ, ಸ್ವೀಕರಣಕ್ರಮದ ವೈಲಕ್ಷಣ್ಯದಿಂದಲೂ ಸಂಸ್ಕೃತದಿಂದ ಅದರೊಳಕ್ಕೆ ಬಂದ ಪದಗಳು ಬಹುವೇಳೆ ಮಾರ್ಪಟ್ಟು ಹೋದುವು (ನಮ್ಮನು. ೧೮); ಈ ಸ್ವೀಕರಣ ಕಾರ್ಯ ಮತ್ತು ಪದಗಳ ಸಂಖ್ಯೆ ಹೆಚ್ಚಾಯಿತು (ಪ್ರಾಎಎ. ೪೩೬). ೫. [ಗ್ರಂಥಸಂ] ಪಾಠಾಂತರಗಳಿರುವಲ್ಲಿ ಪರಿಶೀಲಿಸಿ ಒಂದು ಪಾಠವನ್ನು ಯೋಗ್ಯಪಾಠವೆಂದು ಒಪ್ಪಿ ಇಟ್ಟುಕೊಳ್ಳುವಿಕೆ: ಸಂಪಾದಕ, ಕವಿ ಬರೆದದ್ದು ಇದೇ ಅಥವಾ ಅದು ಬೇರೆ ಇದ್ದಿರಲಾದರು ಎಂದು ತೀರ್ಮಾನಿಸಿ ಪಾಠವೊಂದನ್ನು ಒಪ್ಪಿಕೊಳ್ಳುವುದು ಸ್ವೀಕರಣ (ಕನ್ನಸಂ. ೧೭೭). [ಸಂ.].

ಸ್ವೀಕರಣೀಯ (ನಾ). ಸ್ವೀಕರಿಸುವುದಕ್ಕೆ ಯೋಗ್ಯವಾದುದು; ಪಡೆಯಲು ಅರ್ಹವಾದುದು: ಅದು ನನಗನುಭವನೀಯವಲ್ಲವೆಂದು ಹೇಳುತ್ತಿರುತ್ತೇನೆಯೇ ಹೊರತು ಸ್ವೀಕರಣೀಯವಲ್ಲವೆಂದು ನಾನು ಹೇಳಲಿಲ್ಲ (ಲಕ್ಷ್ಮೀಪ್ರ. ೧೬೮). [ಸಂ.]

ಸ್ವೀಕರಿಸು (ಕ್ರಿ). ೧. ತನ್ನದಾಗಿ ಮಾಡಿಕೊಳ್ಳು; ಅಂಗೀಕರಿಸು: ಅರಸುಗಳ್ ತಮ್ಮ ಮೊರೆಯೊಳಿರ್ದೋಲೈಸುವ ಮನುಜಂ ವಿದ್ಯೆಯಿಲ್ಲದವನಾದೊಡಂ ಅಕುಲೀನನಾದೊಡಂ ಅಯೋಗ್ಯನಾದೊಡಂ ಸ್ವೀಕರಿಸುವರ್ (ಪಂಚತಂ. ೩೨-೧೯); ಮಾಱುಗೊಂಬವರು ಹರವಿಯಂ ಬಾಱಿಸಿಯಲಾ ಸ್ವೀಕರಿಸುವರು (ಬಸಪು. ೨೨-೬೪). ೨. ಸೇವಿಸು; ಭುಂಜಿಸು: ನಾನು ಸಕಲಪದಾರ್ಥವ ಸ್ವೀಕರಿಸುವ ಮುನ್ನವೇ ಜಂಗಮಕ್ಕೆ ಮೃಷ್ಟಾನ್ನವ ನೀದುವೆ (ಪುಹಾದೇ.ಬ. ೮೯-೨೧೫). ೩. ವಧುವನ್ನಾಗಿ ಒಪ್ಪಿಕೊಳ್ಳು; ಮದುವೆಯಾಗು: ಎನ್ನ ಮಗಳಂ ಸ್ವೀಕರಿಸಿ ನೀವೆನ್ನನುದ್ಧರಿಸುವುದು (ಬಸಪು. ೪-೨). ೪. ಒಂದು ನಿರ್ದಿಷ್ಟ ಮತ, ಸಂಪ್ರದಾಯ ಮೊದಲಾದುವನ್ನು ಒಪ್ಪಿ, ಅದಕ್ಕೆ (ಹೊಸದಾಗಿ) ಸೇರು: ಶೈವಸಂಪ್ರದಾಯವನ್ನು ಸ್ವೀಕರಿಸಿದರು (ಇಸ್ಲಾಂಸಂ. ೧೮). ೫. ವ್ರತ, ಆಚರಣೆ ಮೊದಲಾದುವನ್ನು ಕೈಕೊಳ್ಳು : ಕೆಲಂಬರ್ ಪ್ರಥಮೋಪಶಮ ಸಮ್ಯಕ್ತ್ವಮಂ ಸ್ವೀಕರಿಸಿ ಅಸಂಯುತರಪ್ಪರ್ (ಗೊಮ್ಮಸಾ. ೧೫೧-೨). ೬. ಒಪ್ಪಿಕೊಳ್ಳು; ಸರಿಯೆಂದು ಗ್ರಹಿಸು: ಒಂದೆರಡು ಮೂಱೆಂದು ಪದಾರ್ಥಮನೆಣಿಸುವೆಡೆಯೊಳ್ ಏಕವಚನ ದ್ವಿವಚನ ಬಹುವಚನಂಗಳಂ ಸ್ವೀಕರಿಸುವರ್ (ಶಮದ. ೯೪ ವೃತ್ತಿ). ೭. ತಾಳು; ಹೊಂದು: ಶ್ರೀಕೇಳೀನಿಲಯಂ ರಮ್ಯಾಕೃತಿ ದಿವಸಾನುಸಾರದಿಂ ಪುದಿದೊಡವಂ ಸ್ವೀಕರಿಸಿದನವಾಳಿನ ಕಮಳಾಕರಮೆನೆ ಜೈನಮನೋಹರಚರಿತಂ (ಚಂದ್ರಪು. ೪-೧). [ಸ್ವೀಕರಣ + - ಇಸ್ತು]

ಸ್ವೀಕಾರ (ನಾ). = ಸ್ವೀಕರಣ ೧: "ಪ್ರಮಾಣಸ್ವೀಕಾರ' ಪರಾ. [ಸಂ.]

ಸ್ವೀಕಾರಬಡು (ಕ್ರಿ). ಒಪ್ಪಿಗೆಯಾಗು; ಅನುಮತವಾಗು: ಸ್ವೀಕಾರಬಟ್ಟು ಕರೆಸಿಕೊಂಡು ಹೋಗದೆ ನೂಕಿ ಬಂಧುಗಳೆಯ್ದಲವರು ಏಕವರ್ಬಂದರೂ ಕರೆದೆವೆಯೆಂಬರು ತೂಕ ತಗ್ಗುವುದು (ಭರಚ. ೪೦-೩೮). [ಸ್ವೀಕಾರ + ಪಡು]

ಸ್ವೀಕೃತ (ಗು). ೧. ತನ್ನದಾಗಿ ಮಾಡಿಕೊಂಡ; ಅಂಗೀಕರಿಸಿದ. ೨. ಕೈಕೊಂಡ: ಸ್ವೀಕೃತಸತ್ತಪಃಪ್ರಚಯನಂ ಶ್ರೀಕುಂಡಕುಂದೋಜ್ಜ್ವಳಾನ್ವಯನಂ ವಂದಿಪೆನಟ್ಟಿಯಿಂದೆ (ಚಂದ್ರಪು. ೧-೨೧). ೩. ಮದುವೆಯಾದ. ೪. ತಾಳಿದ; ಹೊಂದಿದ. ೩,೪: ಆ ಕಮಳಜಾತವಂಶಸುಧಾಕರದೊಳ್ ಪೆಂಪುವೆತ್ತನುದ್ಧತಧಾತ್ರೀಲೋಕಂ ಸ್ವೀಕೃತವಿಮಳಶ್ರೀಕಂ ಗೋವಿಂದನಂದದಿಂ ಗೋವಿಂದಂ (ಕಇಅ. ೩-೨-೫೯: 1058). ೫. ಒಪ್ಪಿಗೆಯಾದ; ಸಮ್ಮತವಾದ. [ಸಂ.]

ಸ್ವೀಕೃತಪುತ್ರ (ನಾ). ದತ್ತುಪುತ್ರ. [ಸಂ.]

ಸ್ವೀಕೃತಿ (ನಾ). ಒಪ್ಪಿಗೆಯಾದುದು; ಅಂಗೀಕೃತವಾದುದು; ಸ್ವೀಕರಿಸಿದುದು. [ಸಂ.]

ಸ್ವೀಯ (ಗು). ತನ್ನದೇ ಆದ; ಸ್ವಂತ; ಸ್ವಕೀಯ: ರಾಯ ಮುದಿದಶರಥನನಾಡಿಸುತ ಕೈಕೇಯಿ ಸ್ವೀಯವಶದಲಿ ಕೋಸಲವನಾಳಿದಂತೆ ಮಾಯೆ ಬೊಮ್ಮನ ಬಿನದವಡಿಸಿ ನಮ್ಮೀ ಜಗವ ಕಾಯುವಳು ತನ್ನಿಚ್ಛೆ (ಮಂಕುಕ. ೧೪೬); ಸ್ವಸ್ಥಾನದಲಿ ನಿಂತು ಸ್ವೀಯಧರ್ಮದಿ ನಡೆದು ಸರ್ವರಿಗೆ ಹಿತಕಾರಿಯಾಗಿ ಬಾಳುವೆನು! (ಕರುಶ್ರಾ. ೩೨-೧೩). [ಸಂ.]

ಸ್ವೀಯೆ (ನಾ). [ಕಾವ್ಯಮೀ] ಮೂರು ಬಗೆಯ ನಾಯಿಕಾಭೇದಗಳಲ್ಲಿ ಮೊದಲನೆಯ ವರ್ಗಕ್ಕೆ ಸೇರಿದವಳು: ಎನಸುಂ ಸ್ವೀಯೆ ಜ್ಯೇಷ್ಠಾಕನಿಷ್ಠೆಯಿಷ್ಟಂಗಳಿಂದಮಿರ್ತೆಱಂ (ಶೃಂಗಾರ. ೩-೨೨) ; ನಾಯಿಕೆಯರಲ್ಲಿ 'ಸ್ವೀಯೆ' (ತನ್ನವಳು), 'ಅನ್ಯೆ' (ಇತರಳು), 'ಸಾಧಾರಣೆ' (ವೇಶ್ಯೆ) ಎಂದು ಮೂರು ವಿಧ (ಸಂನಾಟ. ೧೮). 'ಸ್ವಕೀಯೆ' ಪರಾ. [ಸಂ. ಸ್ವೀಯಾ]

ಸ್ವೇಚ್ಛಾಚಾರ (ನಾ). ಮನಬಂದಂತೆ ನಡೆಯುವಿಕೆ; ಉಚ್ಛೃಂಖಲತೆ; ಸ್ವೈರವೃತ್ತಿ: ಸ್ವಚ್ಛಂದಪ್ರವೃತ್ತಿಯಾಗಲಿ ಸ್ವೇಚ್ಛಾಚಾರವಾಗಲಿ ಅಲ್ಲಿಲ್ಲ (ಪ್ರಬಂಧ. ೯೦). [ಸಂ.]

ಸ್ವೇಚ್ಛಾಚಾರಿಣಿ (ನಾ). ತನ್ನ ಮನಬಂದಂತೆ ವರ್ತಿಸುವವಳು; ಸ್ವೈರಿಣಿ: ಮೂರು ಮಕ್ಕಳಿಗಿಂತ ಹೆಚ್ಚಾಗಿ ಯಾವ ಆಪದ್ಧರ್ಮವೂ ಒಪ್ಪುವುದಿಲ್ಲ. ಆದ್ದರಿಂದ ನಾಲ್ಕನೆಯ ಮಗನನ್ನು ಪಡೆದರೆ ನಾನು ಸ್ವೇಚ್ಛಾಚಾರಿಣಿಯಾದೇನು!' (ವಚಭಾ. ೧೩). [ಸಂ. ಸ್ವೇಚ್ಛಾಚಾರಿಣೀ]

ಸ್ವೇಚ್ಛಾತೂರ್ಯ (ನಾ). (?): ಋಣಾತೂರ್ಯ ಸ್ವೇಚ್ಛಾತೂರ್ಯ ಇಂತೀ ಮಾಟದಲ್ಲಿ ಮಾಡೆ ಉಂಡ ಓಗರ ವಾಂತಿಯಾದಂತೆ . . . ಸ್ವೇಚ್ಛಾತೂರ್ಯವೆಂಬ ತೂರ್ಯದಲ್ಲಿ ನಿಂದು ಆ ತೂರ್ಯವಂ ಬಿಟ್ಟು ತುದಿಯಲ್ಲಿ ನಿಂದು ಒಡೆಯನ ಕೈಯಲ್ಲೆಡೆ ಮಡಗಿರಲಾಗಿ ಒಡೆಯ ಕೇಳಿದಡೆ ಒಡೆಯಂಗೆ ಒಡವೆಯಂ ಕೊಟ್ಟು ದೃಢಚಿತ್ತದಲ್ಲಿಪ್ಪವಂಗೆ ಪೊಡವಿಯ ಮಾಟಕೂಟದವರು ಸರಿಯೇ (ಮೋಳಿಮಾ. ೨೮-೧೧೮); ಕ್ರಿಯನಱಿದು ಆಚಾರದಲ್ಲಿ ನಿಂದು ಋಣಾತೂರ್ಯ ಮುಖ್ಯತೂರ್ಯ ಸ್ವೇಚ್ಛಾತೂರ್ಯವೆಂಬ ಮೂಱು ಮಾಟವ ಕಂಡು . . . ಮಾನ್ಯರ ಇರವನಱಿತು ಕೂಡುವಲ್ಲಿ ಇಂತೀ ಭಾವ ಸದ್ಭಕ್ತನ ಸ್ಥಲ (ಮೋಳಿಮಾ. ೧೧೬-೪೫೬). [ಸಂ. ?]

ಸ್ವೇಚ್ಛಾಮರಣ (ನಾ). ೧. ತನ್ನ ಇಚ್ಛಾನುಸಾರವಾಗಿ ಸಾವನ್ನು ಹೊಂದುವಿಕೆ,— ಮರಣವನ್ನು ಪಡೆಯುವಿಕೆ. ೨. ತನ್ನ ಇಚ್ಛಾನುಸಾರವಾಗಿ ಹೊಂದುವ ಸಾವು. [ಸಂ.]

ಸ್ವೇಚ್ಛಾಮರಣಿ (ನಾ). ೧. ತನ್ನ ಇಚ್ಛೆಯ ಮೇರೆಗೆ ತನ್ನ ಸಾವಿನ ಸಮಯವನ್ನು ನಿರ್ಧರಿಸಲು ಸಮರ್ಥನಾದ ವ್ಯಕ್ತಿ: ಮಾರ್ಕಂಡೇಯಮಹಾಮುನಿ ಸ್ವೇಚ್ಛಾಮರಣಿಯೆನಿಸಿಕೊಂಡನಲ್ಲದೆ ಲಿಂಗದ ನಿಜವನಱಿಯನು (ಬಸವ. ೮೫೭) ; ಆ ಮಹಾರಥ ಭೀಷ್ಮನೇ ಸ್ವೇಚ್ಛಾಮರಣಿಯಾಚಾರ್ಯ ಚಾಪವ್ಯೋಮಕೇಶನು ಹೊಕ್ಕು ಕಾಣರು ಹಗೆಗೆ ಹರಿವುಗಳ (ಕುವ್ಯಾಕ. ೧-೨೭); ಸ್ವೇಚ್ಛಾಮರಣಿಯಾಗಿದ್ದದ್ದರಿಂದ ಅವನು ಯಾವಾಗ ಬೇಕಾದರೆ ಆವಾಗ ಸಾಯಬಹುದಾಗಿತ್ತು (ವಚಭಾ. ೨೭೫). ೨. ಭೀಷ್ಮನ ಒಂದು ಹೆಸರು. [ಸಂ. ಸ್ವೇಚ್ಛಾಮರಣಿನ್]

ಸ್ವೇಚ್ಛಾಮೃತ್ಯು (ನಾ). = ಸ್ವೇಚ್ಛಾಮರಣೆ ೨: ದೇವವ್ರತಿಯುಂ ಸ್ವೇಚ್ಛಾಮೃತ್ಯುವುಂ ಕುರುಕುಲಪಿತಾಮಹನುಂ ಆಹವಭೀಷ್ಮನುಮೆನಿಸಿದ ಭೀಷ್ಮನ ಶರಶಯನದೊಳಂ . . . ಸುಯೋಧನಂ ಚಿಂತಾಕ್ರಾಂತನಾಗಿ (ಗದಾಯು. ೨-೧೦ ವ). [ಸಂ.]

ಸ್ವೇಚ್ಛಾಲಾಪ (ನಾ). ೧. ಇಷ್ಟಬಂದಂತೆ ಮಾತನಾಡುವುದು: ಒಳ್ಳೆಯದು, ಇವರ ಸ್ವೇಚ್ಛಾಲಾಪಗಳನ್ನು ಕೇಳುವೆನು (ಶಾಕುಂತ. ೬೩-೨೧). ೨. ಕಾಡುಹರಟೆ. [ಸಂ.]

ಸ್ವೇಚ್ಛಾವೃತ್ತಿ (ನಾ). = ಸ್ವೇಚ್ಛಾಚಾರ: ನಿನ್ನ ಸ್ವೇಚ್ಛಾವೃತ್ತಿಯನ್ ತೊಱೆಯಲ್ಕೆವೇಡ್ಕುಂ (ಬಸ್ವಪ್ರ. ೫೫-೧೨೦). [ಸಂ.]

ಸ್ವೇಚ್ಛೆ (ನಾ). ೧. ತನ್ನ ಇಚ್ಛೆ ,— ಇಷ್ಟ. ೨. ಯಾವುದೇ ಕಟ್ಟುಪಾಡುಗಳಿಲ್ಲದೆ ಇಷ್ಟಬಂದಂತೆ ಇರುವಿಕೆ: ನೆರೆದಿರ್ದತ್ತೊಂದು ನಾನಲ್ಕಿಡಿದು ಮಹಿಷವ್ಯಂದಂ ಯಥಾ ಸ್ವೇಚ್ಛೆಯಿಂದಂ (ಚಂದ್ರಪ್ರ. ೫-೬೧); ಸ್ವೇಚ್ಛೆಯಿಂದಾ ಹಯಂ ತೆಂಕಮೊಗವಾಗಿ ನಡೆದುದು (ಪೃಮಿಭಾ. ೮-೧೩); ಯಾವ ನಿಯಮ ನಿರ್ಬಂಧಗಳೂ ಇಲ್ಲದೆ ಸ್ವೇಚ್ಛೆಯಾಗಿ ಬೆಳೆದಳು ಮುಕ್ತಾ (ಆಶ್ರಮ. ೪೭). [ಸಂ. ಸ್ವೇಚ್ಛಾ]

ಸ್ವೇದ (ನಾ). ೧. ಬೆವರು: ಸಂತಸದೊಳೋಲಾಡಿ ಪುಳಕ ಸ್ವೇದ ತೊದಳು ಕಂಪನ . . . . ಸುಖದಲಿ ಹಾಡಿ (ಪಚಕಾ. ೫-೮೦). ೨. ಉಷ್ಣತೆ. ೩. ಆವಿ; ಉಗಿ. ೪. [ಕಾವ್ಯಮಿಮಾ] ಎಂಟು ಬಗೆಯ ಸಾತ್ವಿಕಭಾವಗಳಲ್ಲಿ ಒಂದು; ಬೆವರುವಿಕೆ: ಸ್ವೇದಂ ವೈವರ್ಣ್ಯಂ ಸ್ವರಭೇದಂ ರೋಮಾಂಚನಂ ಪ್ರಕಂಪನಂ . . . ಲಯಮೆಂದಾದುವಿವೆಂಟುಂ ರಸಕ್ಕೆ ಸಾತ್ವಿಕಭಾವಂ (ಕಾವ್ಯಾವ. ೭೯೬); ಪುಲಕಾಶ್ರುಸ್ವೇದ ಸ್ತಂಭಲಯ ಸ್ವರಭೇದಕಂಪವೈವರ್ಣ್ಯಂಗಳ್ ಸಲೆ ಸಾತ್ವಿಕಭಾವಂಗಳ್ (ರಸರ. ೧-೮). [ಸಂ.]

ಸ್ವೇದಜ (ಗು). ೧. ಬೆವರಿನಿಂದ ಹುಟ್ಟಿದ. (ನಾ). ೨. ನಾಲ್ಕು ಬಗೆಯ ಜೀವಜಂತುಗಳಲ್ಲಿ ಒಂದು ಬಗೆ; ಬೆವರಿನಿಂದ ಹುಟ್ಟುವ ಕ್ರಿಮಿ: ಅಂಡಜ, ಸ್ವೇದಜ, ಉದ್ಭಿಜ, ಜರಾಯುಜರೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೋ (ಬಸವ. ೨೨೫); ಬೆರೆಯೆ ಭೂತಾಂಶಗಳು ಪಂಚೀಕರಣದಿಂದಲಿ ಸ್ವೇದಜೋದ್ಭಿಜ ನೆರ ಜರಾಯುಜವಂಡಜವೆನಿಪ ನಾಲ್ಕು ಪ್ರಾಣಿಗಳು (ಅಮೃತ. ೪-೧೪). [ಸಂ.]

ಸ್ವೇದಜಲ (ನಾ). ಬೆವರಿನ ನೀರು; ಬೆವರು: ಲಾವಣ್ಯರಸದ ಬಂಡುಗಳಾವರಿಸಿದುವೆನಿಸಿ ಪೊಳೆದುವವನೀಶ್ವರಕಾಂತಾವದನಂಗಳ್ ಸ್ವೇದಜಲಾ[ಪಾಶಾಂ. ಲವಾ] ವಳಿಯಿಂ (ಆದಿಪು. ೧೧-೫೧); ವಿತತಸ್ಫಕ್ಕದ ಲೋಳಿಗಳ ಸಂಸ್ಪತ ಜಠರಜ ಸ್ವೇದಜಲಲಾಲಿತ ಹಯಾವಳಿ ಕಳನ ಗೆಲಿದವು ಹರಿಯ ನೇಮದಲಿ (ಕುವಾಭೀ. ೬-೪). [ಸಂ.]

ಸ್ವೇದನ (ನಾ). ೧. ಬೆವರು. ೨. ಬೆವರುವಂತೆ ಮಾಡುವುದು. ೩. ಬೆವರು ಬರಿಸುವ ಔಷಧ. [ಸಂ.]

ಸ್ವೇದನವಿಧಿ (ನಾ). [ವೈದ್ಯಶಾ] ಆಯುರ್ವೇದಪದ್ಧತಿಯ ಐದು ಬಗೆಯ ಚಿಕಿತ್ಸಾಕ್ರಮಗಳಲ್ಲಿ ಒಂದು; ಬೆವರುವಂತೆ ಮಾಡುವುದರಿಂದ ನೀಡುವ ಚಿಕಿತ್ಸೆ: ಸ್ನೇಹವಿಧಿಯು ಸ್ನೇಹವೆನಿಸಿಕೊಂಬುದು; ಸ್ವೇದನವಿಧಿಯೇ ಸ್ವೇದನವೆನಿಸಿಕೊಂಬುದು, ವಮನವಿಧಿ, ವಿರೇಚನವಿಧಿ, ನಸ್ಯವಿಧಿ ಸಹಾ ಪಂಚಕರ್ಮವೆನಿಸಿಕೊಂಬುವುವು (ಸಚಿ. ೨೪). [ಸಂ.]

ಸ್ವೇದನಿಕೆ (ನಾ). ಹುರಿಯುವ ಕಾವಲಿ, ಬಾಣಲಿ ಮುಂತಾದುದು: ''ಸ್ವೇದನಿಕೆಯದೆಂದರೆ ಕಾವಲಿಯೆನಿಕ್ಕು'' (ಮಂಗರಾ. ೬೩-೨೪). [ಸಂ. ಸ್ವೇದನಿಕಾ]

ಸ್ವೇದಬಿಂದು (ನಾ). ಬೆವರಿನ ಹನಿ: ಸಾತ್ವಿಕ ಸ್ವೇದಬಿಂದುಗೆ ರೋಮೋದ್ಭತಿಗಿರ್ಕೆಯಾದ ಸುತಗಂ ಜಾಮಾತೃಗಂ . . . ಕೈನೀರೆಱೆದಂ (ಚಂದ್ರಪ್ರ. ೬-೭೧) ; ಸೈಗೆಡವ ರೋಮದ ಧೂಮ್ರವಕ್ತ್ರದ ಸ್ವೇದಬಿಂದುಗಳ ಜಡಿವ ರೋಷದ ಭರದಲಿ . . . ಕಡಿಕಡಿದು ಬಿಸುಟನು ಗುರುಸುತನ ಸಾರಥಿಯ ರಥಹಯವ (ಕುವಾಕ. ೧೪-೨೦). [ಸಂ.]

ಸ್ವೈರ (ಗು). ೧. ಮನಬಂದಂತೆ ನಡೆಯುವ; ಸ್ವಚ್ಛಂದ ವರ್ತನವುಳ್ಳ. ೨. ಅನಿಯಂತ್ರಿತವಾದ; ಯಾವ ಕಟ್ಟುಪಾಡಿಗೂ ಒಳಗಾಗದ. ೩. ಸ್ವತಂತ್ರವಾದ. ೪. ಸೋಮಾರಿಯಾದ; ಆಲಸಿಯಾದ. ೫. ಐಚ್ಛಿಕವಾದ. (ನಾ). ೬. ಸ್ವಂತ ಇಚ್ಛೆ; ಸ್ವೇಚ್ಛೆ. ೭. ಅನಿರ್ಬಂಧತೆ; ಸ್ವಚ್ಛಂದತೆ: ''ಮಂದದೊಳು ಸ್ವೇಚ್ಛೆಯೊಳು ಸ್ವೈರಮೆಂದೆಂಬುದು'' (ಮಂಗರಾ. ೧೪೩-೨೩); ಸ್ವೈರದಿವಾಂ ಪೋಗುತ್ತಿರೆ ತಾರಾಪಥದೊಳ್ ಪಳಂಚಿದುದು ಕವಿಯಂ ಹಾಹಾರವಂ (ಪಂಠಾಮು. ೧೦-೫೭); ಪೌರ ಪೌರಂದ್ರಿಯರ್ ಪದುಳದಿಂದೈತಂದು ಸ್ವೈರದಿಂದವಗಾಹಮಸಗೆ (ವಂಕಾರಾ. ೧-೫-೪). ೮. ಸೋಮಾರಿ; ಆಲಸಿ: ''ಸ್ವೈರಃ - ಆಲಸ್ಯಗಾರ, ಸ್ವತಂತ್ರನು'' (ಪದ್ಮಾಅ. ೪೧೭). ೯. ನಿಧಾನ; ಮಂದವೇಗ: 'ಸ್ವೈರಚರ' ಪರಾ. [ಸಂ.]

ಸ್ವೈರಚರ (ನಾ). ಮೆಲ್ಲಗೆ ಸುಳಿಯುವಂತಹುದು; ಮಂದಗಾಮಿ: ಸಾರತಶೈತ್ಯಭಾರಂ ಸ್ವೈರಚರಂ ಸುಟ್ಟೆವುದಲ್ಲಿ ಚಾರುಸಮೀರಂ (ಜಗವಿ. ೨-೨೫). [ಸಂ.]

ಸ್ವೈರಚಾರ (ನಾ). = ಸ್ವೈರಚರ: ಚೇತಃಪ್ರೀತಿಯಂ ಪೆರ್ಚಸುವುದುಪವನಸ್ವೈರಚಾರಂ ಸಮೀರಂ (ಮಲ್ಲಿಪು. ೨-೪೦); ಲೀಲೆಯಿಂ ಬಾಲಕನೆನೆ ಸುಳಿದಂ ಸ್ವೈರಚಾರಂ ಸಮೀರಂ (ರಾಜಶೇ. ೧೧-೭೭). [ಸಂ.]

ಸ್ವೈರತೆ (ನಾ). ಸ್ವಚ್ಛಂದವರ್ತನೆ ; ಸ್ವೇಚ್ಛಾವೃತ್ತಿ. [ಸಂ. ಸ್ವೈರತಾ]

ಸ್ವೈರಪಥ (ನಾ). ಅನಿರ್ಬಂಧವಾದ ಮಾರ್ಗ; ಅಡೆತಡೆಗಳಿಲ್ಲದ ದಾರಿ: ಪಾರಂಗತಂಗಂತರಾಳ ದೂರಗಳೇನು? ಸ್ವೈರಪಥವಾತನದು (ಮಂಜುಕ. ೭೯೮). [ಸಂ.]

ಸ್ವೈರಮಾರ್ಗ (ನಾ). ಸ್ವಂತಅಪೇಕ್ಷೆಯಿಂದ ಆಯ್ದುಕೊಂಡ ಮಾರ್ಗ: ಜಿನಮಾರ್ಗಂ ಸ್ವೈರಮಾರ್ಗಂ ಜಿನಮತಮೆ ಮತಂ ಜೈನಧರ್ಮಂ ಸ್ವಧರ್ಮಂ (ಪುಷಮಾ. ೧-೪೯). [ಸಂ.]

ಸ್ವೈರವೃತ್ತಿ (ನಾ). ಮನಬಂದಂತೆ ನಡೆಯುವಿಕೆ; ಸ್ವಚ್ಛಂದವರ್ತನೆ; ಸ್ವೇಚ್ಛಾವೃತ್ತಿ: ಹರಿತಹ ನೀರು ಕೊಱೆವುದು ದಡವನೆರಡನು ಸ್ವೈರವೃತ್ತಿಯಲಿ (ಕಾಶಿರಾ. ೪೩-೨೫); ತಾಯಿ ಮೇನಕೆಯಾದರೂ ಬಂದುದು ವೇಶ್ಯೆಗೆ ಸಹಜವಾದ ಸ್ವೈರವೃತ್ತಿಯಿಂದಲ್ಲ, ಮಹೇಂದ್ರನಾಣತಿಯಂತೆ (ಧರ್ಮಸಾ. ೬೫). [ಸಂ.]

ಸ್ವೈರಾಲಾಪ (ನಾ). = ಸ್ವೇಚ್ಛಾಲಾಪ ೧: ಒಂದು ರಮಣೀಯಸ್ಥಾನದೊಳ್ ಪರಸ್ಪರ ಸ್ವೈರಾಲಾಪದಿಂದಿರ್ದ ವಿಟಜನದೊಳೊರ್ವಂ . . . ಎನೆ (ಜಗವಿ. ೧೬-೧೫ ವ). [ಸಂ.]

ಸ್ವೈರಿಣಿ (ನಾ). ಮನಬಂದಂತೆ ವರ್ತಿಸುವವಳು; ವ್ಯಭಿಚಾರಿಣಿ; ವೇಶ್ಯೆ: ಸ್ವೈರಿಣಿ ಬಗೆ ಬಂದಾಗಳೆ ಮಾರಕ್ರೀಡೆಯನೊರ್ಚಲೆಂದುಪಪತಿಯಂ ದಾರಕನಂ ಕೊಲವೇಟ್ಟಳ್ (ಪಂಠಾಮೂ. ೪-೫೨); ಮೇನಕೆಯಲ್ಲಿ ಕಾಮದಿಂದ ಹುಟ್ಟಿದ ನೀನು ಸ್ವೈರಿಣಿಯಾಗಿ ತೋರುತ್ತೀಯೆ (ವಚಭಾ. ೬೯೭). [ಸಂ. ಸ್ವೈರಿಣೀ]

ಸ್ವೋದರಪೂರಣ (ನಾ). ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವಿಕೆ; ಉದರಂಭರಣ: ಕ್ರೂರಕರ್ಮಮಂ ಪತ್ತುವಿಟ್ಟು ಶುದ್ಧಚಿತ್ತನಾಗಿ ಸ್ವೋದರಪೂರಣ ಮಾತ್ರಕ್ಕೆ ತಕ್ಕನಿತನೇ ಸ್ವೀಕರಿಸಿ (ಪಂಚತಂ. ೬೭-೭). [ಸಂ.]

ಸ್ವೋಪಜ್ಞ (ಗು). ೧. ಸ್ವತಂತ್ರವಾಗಿ ಕಲ್ಪಿಸಿದ; ಸ್ವಂತಪ್ರತಿಭೆಯಿಂದ ಉಂಟಾದ. (ನಾ). ೨. ಸ್ವತಂತ್ರವಾಗಿ ತಾನೆ ಸೃಷ್ಟಿಸಿದುದು,— ನಿರ್ಮಿಸಿದುದು: ಎಲ್ಲವೂ ಸ್ವಂತ, ಸ್ವೋಪಜ್ಞ, ಸ್ವಕಪೋಲಕಲ್ಪಿತಗಳೆಂಬ ಬಗ್ಗೆ ಮಾತ್ರ ಯಾರೂ ಅನುಮಾನ ಪಡಲಾರರು (ಬಾಗಿವ. IV ಮುನ್ನುಡಿ). [ಸಂ.]

ಸ್ವೋಪಜ್ಞತೆ (ನಾ). (ಸಾಹಿತ್ಯ, ಕಲೆ ಮುಂತಾದುವುಗಳಿಗೆ ಸಂಬಂಧಿಸಿದಂತೆ) ಸ್ವತಂತ್ರವಾಗಿ ನಿರ್ಮಾಣಮಾಡುವ ಶಕ್ತಿ; ಸೃಜನಸಾಮರ್ಥ್ಯ: ನವಚ್ಛಿತನ್ಯವು ಆ ಕವಿಯ ಸ್ವೋಪಜ್ಞತೆಯನ್ನೇ ಪವಿತ್ರವಾಗಿಸಿದ ನಿಸರ್ಗದಿಂದೊದಗಿದುದು (ಅಮಕ. ೧೩೬). [ಸಂ. ಸ್ವೋಪಜ್ಞತಾ]

ಹ

ಹ$_1$ (ನಾ). ೧. ಕನ್ನಡ ವರ್ಣಮಾಲೆಯ ಐವತ್ತು ಮೂರನೆಯ ಅಕ್ಷರ; ಹಕಾರ: ಭತ್ಸಕ್ಕೆ ಹ ಪ ವಮಕ್ಕುಂ ರತ್ಸಕ್ಕಂ ಲ ಳಮುಮಕ್ಕುಂ (ಶಮದ. ೨೮೨); ಅವರ್ಗೀಯ: ಯ ರ ಲ ವ ಸ ಹ ಳ ಱ ಟ (ಕ್ಷಪಾ. ೬). ೨. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: "ಜದಹಮೆಂಟು" (ಮಂಗರಾ. ೧೦೪-೧೨).

- ಹ$_2$ '- ಪ$_2$' ನೋ.

ಹಂಕಣದಲೆ (ನಾ). ಕೆದರಿದ ಕೂದಲು ತುಂಬಿದ ತಲೆ; (ಎಣ್ಣೆ ನೀರಿಲ್ಲದೆ, ಬಾಚದೆ) ಸಿಕ್ಕಾದ ತಲೆ: ಬಟ್ಟು ಹಂಕಣದಲೆಯನಡಿಗಡಿಗೆ ತುಱಿಸುತ್ತ ನಟ್ಟ ದಿಟ್ಟಿಯೊಳು ತನಯನ ಬರವ ನೋಡುತ್ತ . . . ನಿಂದು ಸುಜ್ಞನೆ ಸುಯ್ದಳು (ಪಚಕಾ. ೧೨-೧೬); ಹತ್ತಿದೊಡಲು ಹಂಕಣದಲೆ ಕೈಯಲಿ ಎತ್ತಿದ ಅಡನಿಕೊಡ್ಡುಗಳು (ಹರಿಸಾಂ.೩.೪೭). [ಹಂಕಣ್ಕೆ + ತಲೆ$_1$]

ಹಂಕರ (ನಾ). ಜಂಬ; ಗರ್ವ; ಅಹಂಕಾರ: ಹಂಕರವು ಡಂಭಾದಿಕಾರವಂತಕ ವುಳ್ಳವರಾಗಿ ವಿಷಯದ ಮಂಕು ಬಯಕೆಯ ಬಯಸಿ . . . ಮಾಡಲಿಕೆ ರಾಕ್ಷಸತಪವದು (ಜ್ಞಾನಸಂ.೩೦-೬೨). [< ಸಂ. ಅಹಂಕಾರ]

ಹಂಕಲು 'ಹಕ್ಕಲ್' ನೋ.

ಹಂಕಲುತೆರಿಗೆ (ನಾ). ಹಕ್ಕಲುಭೂಮಿಯ ಮೇಲೆ ಹಾಕುವ ಕಂದಾಯ: (ಕಸಂಗ್ಲಾ. ೧೫೯). [ಹಂಕಲು (< ಹಕ್ಕಲ್) + ತೆರಿಗೆ (< ತೆಱಿಗೆ)]

ಹಂಕಳು 'ಹಕ್ಕಲ್' ನೋ.

ಹಂಕಾರ 'ಆಂಕರ' ನೋ.

ಹಂಕಾರಿಸು (ಕ್ರಿ). ಲಂಗರು ಹಾಕಿ ನಿಲ್ಲಿಸು: (ಕಸಂಗ್ಲಾ.೧೬೯).

[ಹಂಕಾರ? + - ಇಸು$_5$]

ಹಂಕೃತಿ (ನಾ). = ಹಂಕರ: ಶೋಕಕಾರಣ ಲೋಭಮೋಹಸ್ಪೃಹೆ ಜನನ ಮರಣ ಈ ಕಳಂಕೀ ಹಂಕೃತಿಗೆಯೇಕಾಕಿ ವರಮತಿಗಿಲ್ಲ (ನಭಾಗ. ೧೧-೩೪-೧೨). [< ಸಂ. ಅಹಂಕೃತಿ]

ಹಂಗ$_1$ 'ಪಂಗ$_1$' ನೋ.

ಹಂಗ$_2$, ಪಂಗ$_4$ (ನಾ). ಒಂದು ಬಗೆಯ ಶಕುನದ ಹಕ್ಕಿ; ಹಂಗಾಗೆ: "ಅಸಮಾಕ್ಷವನೆ ಹಂಗಮಕ್ಕುಂ" (ಮಂಗರಾ. ೫೨-೮); ಆರ್ಚಿಸಿ ಕಾಬುದಕ್ಕೆ ಹಕ್ಕಿ ಹಂಗನ ನಿಮಿತ್ಯವೆ (ವೋಳಮಾ.೬-೨೧); ಹಂಗಂ, ಹಸುಬಂ (ಶಮದ. ೧೨೧ ಪ್ರಯೋ); ಬರುತ ಬಚ್ಚೆಯೊಳೆಡಕೆ ಹಂಗನು, ಹರಿಣ ಬಲದಲಿ ತೋಱಿ ಹಾಯಿತು ಹರಿಣ (ಕುವ್ಯಾಅ.೬೦೧. ೩೭-೧೬). Δ **ಹಂಗ$_4$**: ಶರಭ ಭೇರುಂಡ ರಣಪದ್ಮ ಬಾವಲಿ ಪಂಗ ಗರುಡ ಮೊದಲಾದ . . . ಖಗಮೃಗದ ನೆರವಿ (ಸವಮೋ. ೮-೧೦). [?]

ಹಂಗಡ, ಹಗಡು (ನಾ). ಹಗ್ಗ; ಹುರಿ: ಆರಂಭಕೃಷಿಯನು ಮಾಳ್ಪರು ಗದ್ದೆಗೆ ನೀರ ಹರಿಯೆ ತಿದ್ದನಲು ನಾರ ಹಂಗಡವ ಮಾಡೆನಲಾಗಿ (ಮೋಹತ.೪೧-೨೦); ಹಟ್ಟಿಯ ದೇವರ ಗಟ್ಟಿ ಹಂಗಡದಲಿ ಕಟ್ಟಿಳಿದೊಯ್ದನು ಬಟ್ಟಬಯಲಿನಲಿ (ಪ್ರಸಭಾ.೧೭-೮). **ಹಗಡು** : ಮಗ್ಗವ ಬಟ್ಟು ಮನೆಯ ಬಟ್ಟು ನೇಯ್ಗೆಯ ಹಗ್ಗ ಹಗಡನೆಲ್ಲವನುಳಿದು ಭರ್ಗನ ಪುರದೊಳೋಲಾಡುವ ಶಕುನದ ಸುಗ್ಗಿಯಾದುದು ನಮಗೆನುತ (ಆಮುಸಾಂ. ೪-೪೦). [?]

ಹಂಗಣೆ (ನಾ). ಹೀಯಾಳಿಸುವಿಕೆ; ಹಂಗಿಸುವಿಕೆ: ಧರ್ಮದಾಸನಿಗೆ . . . ದೊರೆಸಾನಿಗಳ ಹಂಗಣೆಯೂ ಕುಚೋದ್ಯವೂ ದಿನೇ ದಿನೇ ಹೆಚ್ಚುತ್ತಾ ಬಂದುವು (ಅದೂಚ.೭೬); ಸ್ವಲ್ಪ ಆಸ್ತಿ ಮಾಡಿದ್ರೂ ಒಬ್ಬನ ಹಂಗಣೆಯಿರಬಾದು (ಬಾಗಿಸ.೪೭); ಕರ್ಣನು ದ್ರೌಪದಿಗೆ . . . ಹಂಗಣೆಯ ಮಾತನಾಡಿದನು (ರಾಜಸೂ.೧೨೦).

[ಹಂಗಿಸು + - ಅಣೆ$_4$]

ಹಂಗನೂಲು 'ಪೊಂಗುನೂಲ್' ನೋ.

ಹಂಗಪಕ್ಷಿ (ನಾ). = ಹಂಗ$_2$: ರಾಮನೂ ಕಾಟಣ್ಣನೂ ಬೇಟೆಗೆಂದು ಹೊರಡುವ ಹೊತ್ತಿಗೆ ಹಂಗಪಕ್ಷಿ ಅಡ್ಡಾಗಲು ಅಪಶಕುನವೆಂದು ಬಗೆದು ಊರಲ್ಲಿಯೇ ಉಳಿಯುವರು (ಕುಮಾಸಾಂ.೨೩೫). [ಹಂಗ$_2$ + ಪಕ್ಷಿ]

ಹಂಗರ (ನಾ). ಒಂದು ಬಗೆಯ ಸಸ್ಯ : ಈ ಕಲ್ಲಿಗೆ ತೆಂಕಲು ಹಂಗರ ಮೆಳೆ ಕೆಳಗೆ ನೆಟ್ಟ ಕಲ್ಲು (ಎಕ. XIV, ಮ್ಯಸೂರು. ೧೧೫-೩೪೪; 1674). [?]

ಹಂಗರಕ 'ಹೊಂಗರಕ' ನೋ.

ಹಂಗರಲು (ನಾ). ಸದಾ ಹಸಿರಾಗಿರುವ ಒಂದು ಬಗೆಯ ಸಸ್ಯ : (ಕ). P ಇದು ಹಸಿಯಿದ್ದಾಗಲೂ ಚೆನ್ನಾಗಿ ಉರಿಯುತ್ತದೆ. [< ಹಂಗರು$_1$?]

ಹಂಗರಿಕೆ (ನಾ). ಒಂದು ಬಗೆಯ ಸಸ್ಯ: ಬಂದರೆ, ಬಂದಾರೆ, ಹಂಗರಿಕೆ, ಬಂದರಿಕೆ (ಮೈಪಿಗಿ.೩೨-೩೦೮). [< ಹಂಗರು$_1$?]

ಹಂಗರು$_1$, ಹಂಗಾರು (ನಾ).= ಹಂಗರಲು : ಕಂಬುಳಲ್ಲಿ ಹಂಗರು ಬರಲುಗಳನ್ನು ಇರಕಿಕೊಂಡು ಬರುವ ವಾಡಿಕೆಯಿತ್ತು (ಪುಟ್ಟುಹ.೫೯). **ಹಂಗಾರು** : ಬಂದಾರಿಕೆ . . . ಹಂಗಾರು, ಹಂಗರಿಕೆ, ಹೆಂಗರಳು, ಒಣದುರ್ಗಿ (ಸಸ್ಯನಿ. ೫೧). [?]

ಹಂಗರು$_3$ (ನಾ). (?): ಕುಂದಾಪುರದ ಗ್ರಾಮದವೊಳಗಣ ಹಂಗರು ಅಧಿವಾಸದ ಉರುಧನಿಯರ ಜನ ೨ (ಪೌಶಾ. IX-ii, ೪೨-೧೫; 1406). [?]

ಹಂಗರೆ (ನಾ).= ಹಂಗರಲು: ದೇವಪುರದ ಬಸವನ ಗುಡಿ ಹಂಗರೇಮಾಳದಲ್ಲಿ ಲಿಂಗಮುದ್ರೆ ಬಳಿಯ ಮೂಡಮುಖ (ಎಕ. III, ತಿರುಮ.೬೩-೪೪೬; 1748). [< ಹಂಗರು$_1$?]

ಹಂಗರ್ಕಟ್ಟೆ (ನಾ). ಲಂಗರು ಹಾಕಿ ಹಡಗು ನಿಲ್ಲಿಸುವ ಸ್ಥಳ; ಬಂದರು: ಹಡಗು ಲಂಗರು ಹಾಕಿ ನಿಲ್ಲುವ ಸ್ಥಳ. ಹಂಗರ್ಕಟ್ಟೆ (ತುಳುನಾ.೨೧೧).

[ಹಂಗರ? + ಕಟ್ಟೆ$_1$]

ಹಂಗಳಿ (ಕ್ರಿ). ಹಳೆಯದಾಗು; ಜೀರ್ಣವಾಗು : ಭೃಂಗ ಹಂಸವು ಅಕ್ಕು ಶೃಂಗಿ ಮಾಣಿಕವಕ್ಕು ಹಂಗಳಿದ ಸೀರೆ ಮಡಿಯಕ್ಕು ಕರ್ಮ ತಾ ಹಿಂಗುವ ದಿನಕೆ (ಸರ್ವಜ್ಞ. ೮೯೧). [ಹಂಗು? + ಅಳ$_1$ (< ಅಟ್ಟಿ$_1$)]

ಹಂಗಾಂ 'ಹಂಗಾಮು$_2$' ನೋ.

ಹಂಗಾಗೆ, ಪಂಗಾಗೆ (ನಾ).= ಹಂಗ ೨: ಹಂಗಾಗೆ [ಪಾಠಾಂ. ಪಂಕಾಗೆ] ಪೊಣರ್ವಕ್ಕಿ ಪಿಂಗುರಿ ಗೂಗೆ (ಸೂಕ್ತಿಸು.೬-೧೪೪); (ಕಾವ್ಯಸಾ. ೧೦೪೪ ಶೂದ್ರಕ ನೋ). Δ **ಪಂಗಾಗೆ**: ನೆರಸುಳ್ಳಂ ಪ್ರಿಯಂಗೆಯ್ಯಂತೆ ಪಂಗಾಗೆ ಮುಳಿದು ನೋಟ್ಪನಂತೆ ಕೆಂಗಣ್ಣ . . . ಎಂದಿಂತುಮನೇಕ ಪಕ್ಷಿಜಾತಿಗಳಂ ತೆಕ್ಕನೆ ತೀವಿದ ಪಟುವಂ (ಬಂಹಂ.೨-೩೮ ವ).

[ಹಂಗ$_2$ + ಕಾಗೆ]

ಹಂಗಾಮ, ಹಂಗಾಮು$_1$ (ನಾ). ೧. ಹದಕ್ಕೆ ಬರುವ ಕಾಲ; ಋತುಸಮಯ; ಸುಗ್ಗಿಕಾಲ: ಮಾವಿನಪಣ್ಣಿನ ಪಂಗಾಮವು ಬರುವುದರೊಳಗಾಗಿ ತಯಾರುಮಾಡಿ ಕೊಂಡು ಆ ಮಡಿಯಲ್ಲಿ ಬೀಜವನ್ನು ಹಾಕಬೇಕು (ಕೃಪ್ರ.೧೩೫); ಹತ್ತಿಯು ಎರಡನೇ ಹಂಗಾಮದವರಿಗೆ . . . ತುಂಬಿ ಇಡುವರು (ಮುಂಬವ್ಯಾ. ೪೧). ೨. ಗಡು; ಅವಧಿ: ಆಗ ಒಪ್ಪಂದದ ಹಂಗಾಮವು ಮೀರಿ ಹೋದ್ದರಿಂದ . . . ಕಳಿಸಿಕೊಟ್ಟನು (ಚರಿಸಂ. ೧೫೦). **ಹಂಗಾಮು$_1$** : ೧. ಭತ್ತ ಕೊಯ್ಯುವ ಹಂಗಾಮು ಬಂದಿತು (ಕರವೀ. ೨೦೦); ತೆಂಗಿನಕಾಯಿ ಪೊಬ್ಬರಿ . . . ಹಂಗಾಮಿನಲ್ಲಿ ಮಾತ್ರ ದೊರೆಯುತ್ತದೆ (ಮುಂಬವ್ಯಾ.೨೪೫).

[<— ಪಾರ. ಹಿಂ. ಮರಾ. ಹಂಗಾಮ್]

ಹಂಗಾಮಿ (ಗು).೧. ತಾತ್ಕಾಲಿಕ; ಖಾಯಂ ಅಲ್ಲದ: ಹಂಗಾಮಿ ಬಕ್ಷಿ ಗಿರಿಯಾಯಿತು (ಮಹಾವಂ.II, ೪೬). (ನಾ). ೨. ತಾತ್ಕಾಲಿಕವಾದುದು; ಕಾಯಂ ಅಲ್ಲದುದು: ಕಮಲಜ ನಾಟಕವಿದೆಂದಱಿಯದಾ ಮಹಕೋಟಲೆಗೆ ಹಂಗಾಮಿಯೆನ್ನಿಸಿದ ಹದನ ಕೇಳು (ಕೃಷ್ಣಾಕಾ.೪-೪೦). [<— ಪಾರ. ಹಿಂ. ಹಂಗಾಮಿ]

ಹಂಗಾಮು₁ 'ಹಂಗಾಮ' ನೋ.

ಹಂಗಾಮು₂, ಹಂಗಾಂ (ನಾ). ಗಲಾಟೆ; ಗದ್ದಲ; ದಂಗೆ: ಲೂಟಿ ಮಾಡಬೇಕು ಯಂತಾ ಹಂಗಾಮು ಮಾಡುತ್ತಾರೆ (ರಾಜೇಂದ್ರ.೪೮); ಕೊಡಗರ ಹಂಗಾಮು ಹದ್ದು ಮೀರಿಯದೆ (ರಾಜೇಂದ್ರ.೪೯). "ಹಂಗಾಂ: ಅರಮನೇ ಬಾಗಿಲಿಗೆ ಬಂದು ಹಂಗಾಂ ಮಾಡುತ್ತಿದ್ದನು (ಮಹಾವೀ.೧.೧೭೦). [<— ಪಾರ. ಹಂಗಾಮ್; ಹಿಂ. ಮರಾ. ಹಂಗಾಮಾ]

ಹಂಗಾರು 'ಹಂಗರು₁' ನೋ.

ಹಂಗಾಳು (ನಾ). ಋಣದಲ್ಲಿರುವ ಸೇವಕ; ಹಂಗಿನಲ್ಲಿರುವ ಆಳು: ಹಂಗನ ಬಲ ಲೇಸು ಹಂಗಾಳು ಇರ ಲೇಸು (ಸರ್ವಜ್ಞ.೭೯); ಹಂಗಾಳಾದ ಮೇಲೆ ಮಂಗನ ಹಾಗೆ ಮಾಡಬೇಕು (ಗಾದೆ). [ಹಂಗು (< ಪಂಗು₂) + ಆಳು₃ (< ಆಳ್₃)]

ಹಂಗಿಗ 'ಪಂಗಿಗ' ನೋ.

ಹಂಗಿಗೆ (ನಾ). ಋಣದಲ್ಲಿರುವವಳು; ಹಂಗಿಗೆ ಒಳಗಾದವಳು: ಸೂಸುವಾಲಿ ನೀರ್ವನಿಗಳ್ಗಂ ಮಿಳಿರ್ವೆಳವಿಜ್ಜಣಿಗೆಗಳಂ ತಳಿರ್ವೆಲರ್ಗಂ ಕಾಂತೆ ಕರಮೆ ಹಂಗಿಗೆಯಾದಳ್ (ಚಂದ್ರಪು.೪-೧೩೨). [ಹಂಗಿಗ (< ಪಂಗಿಗ) + - ಎ₂]

ಹಂಗಿತಿ (ನಾ). = ಹಂಗಿಗೆ : ಒಮ್ಮೆ ಕಾಮನ ಕಾಲ ಹಿಡಿವೆ ಒಮ್ಮೆ ಚಂದ್ರಮಂಗ ಸೆಱಗೊಡ್ಡಿ ಬೇಡುವೆ ಸುದು ವಿರಹವನು . . . ಎಲ್ಲರಿಗೆ ಹಂಗಿತಿ [ಪಾಶಾಂ. ಹಂಗುಗಿತ್ತಿ] ಯಾದೆನವ್ವ (ಮಹಾದೇ. ಬ.೩೩-೭೨). [ಹಂಗು (< ಪಂಗು₂) + - ಇತಿ₁ (< - ಇತ್ತಿ)]

ಹಂಗಿಸು (ಕ್ರಿ). ಮೂದಲಿಸು; ಹೀಯಾಳಿಸು: ನಿಸದಂ ಹಂಗಿಸುತಿರ್ವನಾ ಖಳನನಾಳ್ವಾತಂಗೆ ಪೆಂಪಕ್ಕುಮೇ (ಸೂಕ್ತಿಸು.೧೬-೪೬); ಪಿಂಗಿಯುಂ ನೆಱೆ ಪಿಂಗದೀ ವ್ಯಾಸಂಗವಯ್ಯೋ ಎನುತ ಶಿವನಂ ಹಂಗಿಸುವನೀ ಪರಿಯ ದೇವರು ನಿನ್ನುವಂ ನಗರೆ (ಬಸಪು.೧೮-೫೬); ಗಂಡನನ್ನು ಹಂಗಿಸಿ ನಾವು ರಾಜಿಯಾಗುವುದನ್ನು ತಪ್ಪಿಸಿದಳು (ಆರ್ಯಕ. ೧೧); ಹಂಗಿಸಿದರೂ ಮಂಗತನ ಹೋಗಲಿಲ್ಲ (ಗಾದೆ).

[ಹಂಗು (< ಪಂಗು₂) + - ಇಸು₅]

ಹಂಗು 'ಪಂಗು₂' ನೋ.

ಹಂಗುದೊರೆ (ಕ್ರಿ). ಆಸೆಯನ್ನು ಬಿಡು; ಅಪೇಕ್ಷೆಯನ್ನು ತ್ಯಜಿಸು: ಸಿಪಾಯಿಯರು ತಮ್ಮ ಜೀವನದ ಹಂಗುದೊರದು ಸೇನಾಪತಿಯ ಬೆದರಿಕೆಗೆ ಬಗ್ಗದೆ ನಿಂತಿದ್ದಾರೆ (ಪ್ರಣಾ.೭೪). [ಹಂಗು (< ಪಂಗು₂) + ತೊರೆ₁ (< ತೊಱೆ₁)]

ಹಂಗುವಡು (ಕ್ರಿ). ಹಂಗಿಗೆ ಒಳಗಾಗು; ಋಣಿಯಾಗು: ಮಾರಯ್ಯ ಶೂಲವ ಹಾಯಬಂದಲ್ಲಿ ಮತ್ತಿನ್ನು ಸಾವಿಂಗೆ ಹಂಗುವಡಲೇಕೆ (ಕರ್ನಾಕ.೧೪೩).

[ಹಂಗು (< ಪಂಗು₂) + ಪಡು₁]

ಹಂಗುಹರಿ (ಕ್ರಿ). ಸಂಬಂಧ ಇಲ್ಲವಾಗು ,— ಕಿತ್ತುಹೋಗು: ಆ ದುಷ್ಟನ ಹಂಗು ಹರಿದಾಗಲೇ ನಿನಗೆ ನೆಮ್ಮದಿ ಸಿಕ್ಕುತ್ತದೆ (ಡೂಢ).

[ಹಂಗು (< ಪಂಗು₂) + ಹರಿ₁ (< ಪಱಿ₁)]

ಹಂಗುಹಱಿ (ನಾ). ಹಂಗಿನಿಂದ ಕೂಡಿದ ಭಿಡೆ,—ಮುರವತ್ತು: ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ನಾನು ಹಂಗುಹಱಿಯಿಲ್ಲದೆ ಮಾಡುವೆ (ಅನಚಂ.೧೯೬-೪೩೬); ಹಂಗುಹಱಿಯಿಂದ ನಿರ್ವಂಚಕನೆ ಮಾಹೇಶ್ವರ (ವೀಶಪು. ೮-೧೪೪-೧೩).

[ಹಂಗು(< ಪಂಗು₂) + ಹಱಿ₂]

ಹಂಗುಳಿ (ನಾ). ಒಂದು ಬಗೆಯ ಪಾದಪೀಠ: "ಹಂಗುಳಿ [ಪಾಶಾಂ. ಹಂಗುಳಿಗೆ] ಯನೆ ಕಾಲ್ಮಣೆ" (ಚತುಸಾ. ೯೪); ಮಹಿಶೂರಿನ ಸಿಂಹಾಸನವು ಹೇಡಿಯ ಹಂಗುಳಿಯಲ್ಲ (ಸುಗುಗಂ. ೫೦-೧೫). [?]

ಹಂಗುಳಿಕೆ (ನಾ).= ಹಂಗುಳಿ: ಕುರವಕ ಸರಸೀರುಹ ಲತಾವಳಿಗಳ ತಂಡಣೆಯಿಂ ಕೊಳನಂತೆ ವಿರಾಜಿಪ ಹಂಗುಳಿ[ಪಾಶಾಂ. ವೇದಿ]ಕೆಯ ಮೇಲೆ ಪದ್ಮಾವತಿಯಂ ಭೋಂಕನೆ ಕಂಡು (ಆದರ. ಪ.೩೬-೯). [ಹಂಗುಳಿ + - ಇಕೆ]

ಹಂಚಳಿಗೆ (ನಾ). ಒಂದು ಬಗೆಯ ಸಸ್ಯ : ಹೂವಿನ ಬನ ಹಂಚಳಿಗೆಯ ಕೈದೋಟ ಮಾವಿನಾರವೆ ಪಣ್ಣಾಯಿ ತೀವಿದ ತಂಗಿನಾರವೆಗಳ ನೋಡುತ ಭೂವರ ನಡತಂದನಾಗ (ಶ್ರೀಪಾಲ.೭-೧೪೮); ನಳನಳಿಸುವ ಹೂವಿನ ಬನಗಳ ಹಂಚಳಿಗೆಯ ಕೈದೋಟಗಳ (ಗುರುಚ. ೫೧೪). [?]

ಹಂಚಿ₁ (ನಾ). ಒಂದು ಬಗೆಯ ಹುಲ್ಲು: ಕಱುಕೆ ಮರಗಱುಕೆ ಕವಲುಂಗಱುಕೆ ಕವಲ್ದೊಟ್ಟಿ ಹಂಚಿ . . . ಮಾನಿನಿ ಕಸಕೆ ಕಲ್ಸುಲ್ (ಸೂಕ್ತಿಸು.೩-೨೯); ಹಂಚಿಯ ಕಡ್ಡಿಯಂ ಪೊಡೆದು ನೋಡುತೆ ದಂಷ್ಟದ ಕೂರ್ಪನುರ್ಬಿ ರೋಮಾಂಚವನಾಂತು (ಉದ್ಭಟ. ೨-೬೭); ಕೈಪೆಯೆನಿಪಾರಣ್ಯದ ಹಂಚಿಯ ಪುಲ್ವೇರಂ ಕುಡಿಸಲ್ಕೆ ವಾಂತಿಯಿಂ ವಿಷಮಿಟ್ಟಿಗುಂ (ಏಮದ.೧೬-೬೮). [ದೇ. ॥ ತಮಿ. ಪಞ್ಚಾಯ್]

ಹಂಚಿ₂ 'ಪಂಚಿ₁' ನೋ.

ಹಂಚಿಕಡ್ಡಿ (ನಾ). ಹಂಚಿಯ ಹುಲ್ಲಿನ ಕಡ್ಡಿ; IP ಇದನ್ನು ಪೊರಕೆಗಳನ್ನು ಮಾಡಲು ಮತ್ತು ಎಲೆ ಹಚ್ಚಲು ಉಪಯೋಗಿಸುತ್ತಾರೆ: ಹಂಚಿಕಡ್ಡಿಯನ್ನು ಕಂದು ಮಾಧವನಿಗೆ ದೃಷ್ಟಿ ತೆಗೆದಳು (ನಿರಾತ.೫೩); ತೆಳ್ಳಗೆ ಹಂಚಿಕಡ್ಡಿಯಂತಿದ್ದಾಳೆ (ಆಲಹೂ. ೧೧೩); ಹೆಣ್ಣುಮಕ್ಕಳಿಗೆ ಕಸೂತಿ ಕೆಲಸ ಮತ್ತು ಹಂಚಿಕಡ್ಡಿಯಿಂದ ತರಹೆವಾರಿ ಬುಟ್ಟಿಗಳನ್ನು ಮಾಡುವುದನ್ನು ಕಲಿಸುತ್ತಿದ್ದಾರೆ (ದಿಲ್ಲಿಪ.೧೧೩). [ಹಂಚಿ₁ + ಕಡ್ಡಿ]

ಹಂಚಿಕೆ₁ (ನಾ). ಪಾಲುಮಾಡುವಿಕೆ; ಭಾಗಮಾಡುವಿಕೆ; ವಿತರಣೆ: ಪ್ರಾಥಮಿಕಶಾಲೆಯ ಪಾಠದ ಹಂಚಿಕೆಯಲ್ಲೂ ವ್ಯತ್ಯಾಸವಾಗಬೇಕು (ಶಿಕ್ಷಪ.೯೭); ಹಣದ ಸಂಗ್ರಹದಲ್ಲಿಯೂ ಹಂಚಿಕೆಯಲ್ಲಿಯೂ ಯಾವ ನಿಯಮವನ್ನು ಅನುಸರಿಸುವುದು (ಪಣಪ್ರ.೧). 'ಪಸುಗೆ' ಪರಾ. [ಹಂಚು₁ (< ಪಸು₁)+ - ಇಕೆ]

ಹಂಚಿಕೆ₂ (ನಾ). ೧. ಯುಕ್ತಿ; ಉಪಾಯ: ನರಿಯ ಹಳೆ ಹಂಚಿಕೆಗಳೆಲ್ಲ ಎತ್ತ ಹೋದವೋ ಏನೋ ಹೊಸವಂತೂ ತೋರಲಿಲ್ಲ (ಮುಂಬಯಿ.೨-೪೯); ನನಗೆ ಒಂದು ಹಂಚಿಕೆ ತೋಚುವುದು (ಸ್ಕೂಲಮಿ.೨೧೨). ೨. ಯೋಜನೆ; ಕಾರ್ಯಕ್ರಮ: ಪ್ರತಿಯೊಂದು ಹವಣಕ್ಕೆ, ಹುಡುಕಿಗೆ ಮತ್ತು ಹಂಚಿಕೆಗೆ ದುಡ್ಡು ಅವಶ್ಯ (ತಕ್ಕಡಿ. ೫೩); ನಾಗಯ್ಯನವರು ಹಂಚಿಕೆಯನ್ನು ಹೇಗೆ ಕಾರ್ಯಗತ ಮಾಡಬೇಕು ಎಂಬುದನ್ನು ನಿರ್ಣಯಿಸುತ್ತಾರೆ (ಸಪತ್ನಿ.೨೨). [ಹಂಚು₃ + - ಇಕೆ]

ಹಂಚಿಬುಲ್ಲು, ಹಂಚಿಹುಲ್ಲು (ನಾ). ಹಂಚಿಯ ಹುಲ್ಲು: "ದೀರ್ಘಪತ್ರಾ— ಗಣಜಿಲು . . . ಹಂಚಿಬುಲ್ಲು" (ಓಷಧಿ.೭೭). **ಹಂಚಿಹುಲ್ಲು**: "ರೋಮಶತೃಣಂ— ಹಂಚಿಹುಲ್ಲು" (ಓಷಧಿ. ೧೪೦). [ಹಂಚಿ₁ + ಪುಲ್ಲು (< ಪುಲ್)]

ಹಂಚಿಸು (ಕ್ರಿ). ಪಾಲುಮಾಡಿಸು; ಭಾಗಮಾಡಿಸು: ಪೂರ್ವಮರ್ಯಾದೆಯೊಳ ಹಂಚಿಸುವೊಂXಸ್ಥಿತಿಯನಲ್ಲಿದು ಉಣ್ಣವರ್ ಕಪಿಲೆಯಂ ಪಾರ್ವರುಮಂ ಕೊನ್ಮೊಂ (ಎಕ. XVI, ತುಮಕೂ. ೮೧-೧೧; 903). [ಹಂಚು₁ (< ಪಸು₁) + - ಇಸು₅]

ಹಂಚಿಹುಲ್ಲು 'ಹಂಚಿಬುಲ್ಲು' ನೋ.

ಹಂಚು₁ 'ಪಸು₁' ನೋ.

ಹಂಚು₂ 'ಹೆಂಚು' ನೋ.

ಹಂಚು₃ (ನಾ). ಉಪಾಯ; ಹಂಚಿಕೆ; ಯುಕ್ತಿ: ಆತನನ್ನು ಹಿಡಕೊಡಲಿಕ್ಕೆ ಹಂಚುಮಾಡಿ ಹೊತ್ತು ಕಾಯುತ್ತಿದ್ದರು (ಗೊಲ್ಲೂಥಾ. VI ಮುನ್ನುಡಿ). [< ಪೊಂಚು₂]

ಹಂಚುಬಡಿ (ಕ್ರಿ). ಹಂಚಿನಂತೆ ಕಪ್ಪಾಗು; ಕಳೆಗುಂದು: ಪ್ರತಾಪಸಿಂಹನ ತೇಜಸ್ಸಿಯಾದ ಮೋರೆಯು ಹಂಚುಬಡಿದಂತಾಯಿತು (ಶ್ರಾಭಮೂ.೯).

[ಹಂಚು₃ (< ಹೆಂಚು) + ಬಡಿ₁]

ಹಂಚುರಿ (ನಾ). (ಮಾಂಸ ಮುಂತಾದುವನ್ನು)ಹೆಂಚಿನ ಮೇಲೆ ಬೇಯಿಸುವಿಕೆ: ಕಟುಕರು ಕಿರಾತರು ಕೈವಿಕರು ಹಂಚುರಿಯ ಮೂಲದಿ ಜೀವಿಸುವ ಭರ್ಜಕರು ಕಟುಕರು (ವಿವೇಧ. ೪-೬೪). [ಹಂಚು₃ (< ಹೆಂಚು) + ಉರ್ಕಿ₂]

ಹಂಚೆಯ (ನಾ). ಒಂದು ಊರಿನ ಹೆಸರು: ಒಲೆಕೋಡಿನ ಹಂಚೆಯದ ಹತ್ತೂರ ತ್ರಿಸನ್ಮಿ (ಇಆ.VIII, ೨೧೩-೩೩; 10ನೆಯ ಶತ). [?]

ಹಂಜಕ (ನಾ). ಒಂದು ಬಗೆಯ ಸೊಪ್ಪು: ಹಂಜಕ:- ಈ ಸೊಪ್ಪಂ ಮೊಲೆಹಾಲಲ್ಲಿ ಅರೆದು ಕೊಳ್ಳೆ ಬಿಕ್ಕಲು ಕೆಮ್ಮು ಬರುವುದು ಮಾಣ್ಗುಂ (ವೈವಿ ೭). [< ಸಂ. ಹಂಜಿಕಾ]

ಹಂಜಕ್ಕಿ (ನಾ). ೧. ಹಾಲು ತುಂಬಿಕೊಂಡಿರುವ ಅಕ್ಕಿ; ಹಸಿಯಕ್ಕಿ: ಪತಿತ ಪಾವನ ಪರ್ವತಾಶ್ರಮದಲ್ಲಿಪ್ಪೆನುನ್ನತ ಮಲ್ಲಿನಾಥನೆಂದೆನ್ನ ನಾಮಂ ನಿನ್ನನತಿನೇಹದಿಂ ನೋಡಿ ಹಂಜಕ್ಕಿಯಂ ಬೇಡಿ ಮೆಲಬಂದೆನು (ಸಿದ್ಧರಾ.೨-೨೮). ೨. ಅರ್ಧ ಬೆಂದ ಅಕ್ಕಿ; ಗಂಜಿ ಸುತ್ತಿದ ಅನ್ನ: ಬುಡವಿಲ್ಲದ ಗಡಿಗೆಗೆ ಹಾಕಿದರು ಅಕ್ಕಿಗಳ ಎರಡು ಹಂಜಕ್ಕಿ

ಒಂದು ಬೇಯಲಿಲ್ಲ (ಪುರಂದ.೩-೨೭-೯); ಸಾರು ಉಪ್ಪಿಲ್ಲದ್ದು! ಪಲ್ಯ ಕಾರವಿಲ್ಲದ್ದು! ಅನ್ನವು ಹಂಜಕ್ಕಿ! (ಯಾಜ್ಞಿಕ. ೧೦). [< ಹಸ್ಕಿ$_2$? + ಅಕ್ಕಿ$_1$]

ಹಂಜಮಾನ (ನಾ). ಅರಬ್ಬಿದೇಶದ ವ್ಯಾಪಾರಿಗಳ ಸಂಘ,—ಸಂಸ್ಥೆ: ನಾಂಡುಗ್ರಾಮ ನಖರ ಹಂಜಮಾನ ಆಚರ ಮುಂತಾಗಿ (ಸೌಇ. ೧೯೨೯, ಮಂಗಳೂರು. ೪೬೦-೨೫; 1297); ಹೊಂನಾಉರದ ಹಂಜಮಾನಕೆ ಮುಕ್ಷವಾದ [ಉಂ] ಮದಮದ [ಕಾ] ಲರು ಹಂಜಮಾನವೊಂದು ಕೋಲ ಬಳಿ (ಕಇ.I, ೪೮-೬; 1427); ಬಸರೂಱ ಒಳಗಣ ಹಂಜಮಾನದವರು ನಂಮ ಅರಮನೆಗೆ ತೆಱುವ ಹಡಿಕೆಯ ಹೊಂನನೂ ತೆಱುವದಕೆ ತೀರದೆ (ಸೌಇ.IX-ii, ೪೫೯-೧೪; 1465); ಚಾರಣರ ವಂದಿಗಳ ವೈಶ್ಯರ ಕೇರಿಗಳನಾ ಹ[ಪಾಠಾಂ. ಹು]ಂಜಮಾನರ ಕೇರಿಗಳನೀಕ್ಷಿಸುತ ನಡೆತರುತಿರ್ದರೊಲವಿನಲಿ (ನಿಭಾಗ. ೧೦-೩೭-೪೪). [<— ಪಾರ. ಅರ. ಅಂಜುಮಾನ್]

ಹಂಜರ, ಹಂದರ$_2$ (ನಾ). ೧. ಹಕ್ಕಿಗಳನ್ನು ಅಥವಾ ಮೃಗಗಳನ್ನು ಕೂಡಿಡುವ ಸಾಧನ; ಪಂಜರ: ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ (ಬಸವ.೧೬೩); ಹಂಜರದೊಳು ತೇಜಃಪುಂಜ ರಂಜಿಸುತಿರಲು ಅಂಜನಸಿದ್ಧ ಶಿವಯೋಗಿ ತಾ ಕುಟಿಲ ಮಂಜರಿಯ ಕಾದ (ಸರ್ವಜ್ಞ.೪೮೫); ಅರಗಿಳಿಯ ಹರಣಮಂ ಹೊರೆವ ಹಂಜರಮೆನಲ್ (ಶ್ರೀರಾಮಾ. ೫೭೭-೫೮). ೨. ಹೆಣಿಗೆ; ತಡಿಕೆ: ಕರುಳ ತೊಂಡಲು ಖಂಡದ ಬಣ್ಣಬಾಸಿಗ ನರದ ಹಂಜರ ಚಪ್ಪರದಲಿ ನೆರೆದು ಶಾಕಿನಿಯರು ಮದುವೆಯ ಮಾಡುತ ಮೆಚ್ಚೆದರು (ಕಂನಪಿ.೧೫-೭೩). ೩. ಮುಸುಕು; ಹೊದಿಕೆ: ತನುವೆಂಬ ಮನೆಗೆ ಅಸ್ತಿಯೇ ಕಂಭಗಳು ಚರ್ಮದ ಹಂಜರ [ಪಾಠಾಂ. ರು] ನರದ ಚಿಮ್ಮುಗಟ್ಟು (ಅದವ. ಧಾ.೩೨-೫೩); ಅಱು ಹಣವೇಳು ಸತ್ತಿಗೆಯ ಹಂಜರ ಮುಕ್ಕೊಡೆಗೂಡಿ ಗದ್ಯಾಣಂವೊಂದು (ಎಕ.III,ತಿರುಮ. ೯೭ ೭೧; 1297). ೪. ಮನೆಯ ಮೇಲಿನ ಹುಲ್ಲುಹೊದಿಕೆ,— ಛಾವಣಿ,— ಸೂರು: ಒಬ್ಬನು ಹೊಸದಾಗಿ ಮನೆ ಕಟ್ಟಿ ಹಂಜರ ಹರಡುವಾಗ ಮನೆಗೊಬ್ಬರು ಹೋಗಿ ಒಂದು ಗಳಿಗೆಯೊಳಗಾಗಿ ಆ ಕೆಲಸವನ್ನು ಪೂರೈಸಿ ಬರುವ ವಾಡಿಕೆಯಿತ್ತು (ಹುಟ್ಟಿಹ.೧೮). **ಹಂದರ$_2$**: ೨. ನೆಲೆ ಇಲ್ಲದ ಕಾಯ ಎಲುವಿನ ಹಂದರ (ಪುರಂದ.೨-೧೦-೨); ಹೊಲಸು ಮಾಂಸದ ಹುತ್ತ ಎಲುವಿನ ಹಂದರವು ಹೊಲೆ ಬಲಿದ ತನುವಿನೊಳಗಿರ್ದುಮದಜೊಳಗೆ ಕುಲವನಱಸುವರೆ (ಸರ್ವಜ್ಞ.೨೦). [< ಸಂ. ಪಂಜರ]

ಹಂಜರಕೂಳಿ 'ಹಂಜರಗೂಳಿ' ನೋ.

ಹಂಜರಗಟ್ಟು (ನಾ). ಚಪ್ಪರದ ಹೆಣಿಗೆ: ಅನಲನ ತೊಲೆಯ ಹಾಕಿ ಮೊಳೆಯ ಗಳುವ ಬೀಸಿ ಕೆಂಡದ ಹಂಜರಗಟ್ಟಂ ಕಟ್ಟಿ (ಚಿಕ್ಕವ. ೪-೨೧೧); ಸುರ್ಕಿದಿರ್ಬರಿಗಳೊಳಮೆಲ್ಗಳಿಂ ಸಮೆದು ಸಡಿಲಾದ ಹಂಜರಗಟ್ಟನಿರ್ಕೆಯಂ ಮತ್ತೊರ್ಮೆ ಕಂಡು (ಸಂಸಪ.೩೬-೧೦).

[ಹಂಜರ + ಕಟ್ಟು$_2$]

ಹಂಜರಗೂಳಿ, ಹಂಜರಕೂಳಿ (ನಾ). (ಮೀನು ಹಿಡಿಯಲು ಉಪಯೋಗಿಸುವ) ಸೀಳಿದ ಬಿದಿರಿನಿಂದ ಮಾಡಿದ ಬುಟ್ಟಿ; ಬಿದಿರಿನ ಕೂಳಿ: ಕಾಡೊಡೆಯಂ ತೋಡಿಲ್ಲದ ತೊಱೆವೇಂಟೆಯಾಡಲೆಳಸುತಿಱೆಗೂಳಿ ಹಂಜರ ಗೂಳಿಡುಗಾಣಂ . . . ಕೊಂಡು (ರಾಜಶೇ.೫-೧೧೪ ವ). **ಹಂಜರಕೂಳಿ**: ಆವ ಹಂಜರಕೂಳಿ ಮೊಗವಲೆ ಯಾವ ಗಾಣವು ಬೀಸುವಲೆಯುಱೆ ತೀವಿದುದಕದ ಮಡುವೆಯುದು ಸಂಗ್ರಾಮಭೂಮಿ ಕಣಾ (ಕುವ್ಯಾಕ.೨೨-೨೮). [ಹಂಜರ + ಕೂಳಿ (< ಕೂಳೆ$_1$)]

ಹಂಜರವಕ್ಕಿ (ನಾ). ಗೂಡಿನಲ್ಲಿರುವ ಹಕ್ಕಿ; ಪಂಜರದ ಪಕ್ಷಿ: "ಪಂಜರಪಕ್ಷಿ ಹಂಜರವಕ್ಕಿ" (ತಮದ. ೨೯೨ ಪ್ರಯೋ). [ಹಂಜರ + ಪಕ್ಕಿ]

ಹಂಜರಿಕೆಕುಚ್ಚು (ನಾ). ಒಂದು ಬಗೆಯ ಸಸ್ಯ: ಮರಸದ, ಬಗುಲಿ, ಹಂಜರಿಕೆಕುಚ್ಚು, ಮರಸುತ್ತುಬಳ್ಳಿ (ಮೃಚ್ಛಿಗಾ.೧೬-೨೯೨). [?]

ಹಂಜರಿಸು$_1$ 'ಪಂದರಿಸು' ನೋ.

ಹಂಜರಿಸು$_2$ (ಕ್ರಿ). ಹರಡು; ವ್ಯಾಪಿಸು: "ಹಂಜರಿಸಿತೆನಲು ಪಸರಿಸಿದರ್ಥಂ" (ಕವಿಕಂ. ೨೧೦); ನರೆ ನೆಗೆದು ಬೆಳುಕರಿಸಿ ತಲೆಗೆ ತಲೆದೋಱುತಿರೆ ಪರಕರಿಸಿ ಹಂಜಿಯಂ ಹಂಜರಿಸಿ ಮಿಱುಗುತಿರೆ ತೆರನೆಗೆಯೆ ಯಮಪುರದ ಸೋಪಾನವೆಂಬಂತೆ (ಪಿಂಡೋರ. ೨-೧೧). 'ಪಂಜರಿಸು' ಪರಾ. [ಹಂಜರ + - ಇಸ್ಕು$_3$]

ಹಂಜಿ (ನಾ). ೧. ನೂಲನ್ನು ತಯಾರಿಸಲು ಹತ್ತಿಯ ಬೀಜ ಬಿಡಿಸಿ ಹೆಕ್ಕಿ ಹಸನುಮಾಡಿದ ಹತ್ತಿಯ ಸಣ್ಣ ಸುರುಳಿ: ಹತ್ತಿ ಹಂಜಿ ನೂಲಮಳವೆಗೆ ಎೀಸ ೨ (ಎಕ. XII, ಚಿಕ್ಕನಾ. ೨೧-೬೯; 1160); ಕಟಕಸೂತ್ರದ ಗೂಡ ಮಾಡಿಕೊಂಡಿಪ್ಪಲ್ಲಿ ಸೂತ್ರಕ್ಕೆ ನೂಲನು ಅದೆಲ್ಲಿಂದ ತಂದಿತ್ತು ರಾಟಿ ಇಲ್ಲ ಹಂಜಿ ಇಲ್ಲ (ಚನ್ನವ. ೯.೬-೯); ಎಡಗಾಲಿಂದ ಹಂಜಿಯ ಹೊಸವಂದದಿ ಕೆಡಹಿ ಹೊಸೆದು ಕೊಂದನಾಗ (ಚಂಮಿಸಂ.೨೩-೧೩೮). ೨. ಹತ್ತಿ; ಅರಳೆ: ನರೆನೆಗೆದು ಬೆಳುಕರಿಸಿ ತಲೆಗೆ ತಲೆದೋಱುತಿರೆ ಪರಕರಿಸಿ ಹಂಜಿಯಂ ಹಂಜರಿಸಿ ಮಿಱುಗುತಿರೆ ತೆರನೆಗೆಯೆ ಯಮಪುರದ ಸೋಪಾನವೆಂಬಂತೆ (ಪಿಂಡೋರ.೨-೧೧). ೩. ಹತ್ತಿಯಿಂದ ಮಾಡಿದ ಬತ್ತಿ; ಅರಳೆ ಬತ್ತಿ: "ಹಂಚಿ Eಜೆತ ವರ್ತಿಕೆಯಕ್ಕು" (ಮಂಗರಾ.೭೧-೨೦). 'ಪಿಂಜ್ಜಿ$_2$', 'ಹಿಂಜಿ' ಪರಾ. [< ಸಂ. ಪಂಜಿ]

ಹಂಜಿಕೆ (ನಾ). ಒಂದು ಬಗೆಯ ಔಷಧೀಸಸ್ಯ ಮತ್ತು ಅದರ ಬೇರು; ಗಂಟುಭಾರಂಗಿ: "ಹಂಜಿಕಾ . . . ಬರ್ಬರಃ, ವಂದಕಃ - ೯ ಭಾರಂಗೀ ಹೆಸರುಗಳು, ಗಂಟುಭಾರಂಗಿ ಎಂಬುವ ಗ್ರಂಥಿಕದ್ರವ್ಯವು ಪ್ರಸಿದ್ಧವಾದದ್ದು" (ಸಿದ್ಧಾಂತಿ. ೧೩೨).

[ಸಂ. ಹಂಜಿಕಾ]

ಹಂಜಿಗುಕ್ಕೆ (ನಾ). ಅರಳೆಯನ್ನು ತುಂಬುವ ಕುಕ್ಕೆ,—ಗೂಡೆ: ಹಂಜಿಗುಕ್ಕೆ ಯೊಳೆEಲೆತಸೆವ ಮೊಗದೊಳಾ ಬೊಗಡು ಬಾಯಿಂ ಜೊಲ್ಲು ಸುರಿಯೆ . . . ಮುರುಡು ಗೋಲ್ವಿಡಿದು ತಡವರಿಸಿ ನಡೆವ ಮುದುಪಂ (ಚಿಬಪು.೧೦-೭೭). [ಹಂಜಿ + ಕುಕ್ಕೆ$_1$]

ಹಂಜೆ (ನಾ). (ನಾಟಕದಲ್ಲಿ) ದಾಸಿ ಅಥವಾ ತೊತ್ತನ್ನು ಕರೆಯುವಾಗ ಸಂಬೋಧಿಸುವ ಪದ: ಸುಡು ಪಂಚಗಳೆಂಜಲ ಹಂಜೆಯೆಂದು ಬಯ್ದೊಡನೊಡನೆತ್ತಿದ ರ್ಮಸಗಿ ಬೇಟದ ಬನ್ನಮನಕ್ಕತಂಗಿಯರ್ (ಅನಂಪು.೮-೩೧); ಹೇಕುಳಿಗೊಂಡ ನಾಯಿ ನೀನೇಕೆಲೆ ಹಂಚೆ Eಜೆತ ಬಾಯ್ಬಡಿಯದಿರ್ (ಬಾಧಪು. ೧೫-೭೮). [ಸಂ. ಹಂಜಾ]

ಹಂಟಗೆ (ನಾ). ಒಂದು ಬಗೆಯ ಔಷಧೀಸಸ್ಯ : ನಾರುಬೇರು, ಹಾವುಲಿಗೆ, ಹಂಟಗೆ, ಔಳಗೆ, ಬೆಳಂಗಿ (ಮೃಚ್ಛಿಗಾ.೨-೩೨). [?]

ಹಂಡ$_1$ (ನಾ). ಷಂಡ; ನಪುಂಸಕ : ಷಂಡ- ಹಂಡ (ತಮದ.೨೫೮ ಪ್ರಯೋ).

[< ಸಂ. ಪಂಡ]

ಹಂಡ$_2$ (ನಾ). ೧. ಬಿಳಿಯ ಬಣ್ಣ; ಬಿಳುಪು: 'ಹಂಡಬಂಡ' ಪರಾ. ೨. ಬಿಳಿಯ ಬಣ್ಣದ ಎತ್ತು; ಬಿಳಿಯೆತ್ತು: ಹಂಡ ಹಾಱುವ ಚಿಂಚ ಮಲೆವ ಪುಲ್ಗೋರಿ . . . ಪಲವುಪರಿಯೆತ್ತು ತೊಂಭತ್ತಾಱುಲಕ್ಷ ಮೇಳ್ಗೆಸಿ (ಸಿಂಗಿರಾ.೩೫-೭); ಹಂಡ ಕೆಂದಗಳಿಲ್ಲ ಹುಂಡಿ ಕಾರಿಗಳಿಲ್ಲ ಗಂಡರಿದ್ದೊಬ್ಬ ಮಗನಿಲ್ಲ (ಸರ್ವಜ್ಞ. ೧೯೨೬); ಯಾವುದು ಹಂಡಎತ್ತೇ, ಕಳೆದ ಹನ್ನೆರಡು ವರಹಕೊಟ್ಟು ಕೊಂಡದ್ದೇ? (ಬೆಟ್ಟಜೇ.೫೩).

[< ಪಾಂಡು$_1$?]

ಹಂಡಕ್ಕಿ (ನಾ). ಬಿಳಿಯ ಬಣ್ಣದ ಅಕ್ಕಿ; ಬೆಳತಿಗೆ ಅಕ್ಕಿ: ಹಂಡಕ್ಕಿ ದುಂಡಕ್ಕಿ ದುಂಡುರಾಜಣದಕ್ಕಿ ಬಂದೂರ ಗದ್ದೆ ಗೊನೆ ಬತ್ತದ ನೆಲ್ಲಕ್ಕಿ ಬಂದವೆ ನಮ್ಮ ಅರಮನೆಗೆ (ನಾಪದ. ೧೧೫). [ಹಂಡ$_2$ + ಅಕ್ಕಿ$_1$]

ಹಂಡನಾಯ್, ಹಂಡನಾಯಿ (ನಾ). ಕ್ಷುದ್ರವಾದ ನಾಯಿ; ಹೊಲಸುನಾಯಿ: ವಿಷ್ಣುವಂ ಹಂಡನಾಯಾಗೆಂದವಂ ಶಪಿಸಿದ (ವೀಶೃಪು. ೪-೧೨-೧೫). **ಹಂಡನಾಯಿ** : ತನ್ನ ಬಡತಿಂಡಿಗಳಲಿನಿತನ್ನು ಹಂಡನಾಯಿಗೆ ಹಾಕಿ ತಿನ್ನುವನು (ಕಥನ. ೪-೧).

[ಹಂಡ? + ನಾಯ್]

ಹಂಡನಾಯಿ 'ಹಂಡನಾಯ್' ನೋ.

ಹಂಡಬಂಡ, ಹಂಡಹುಂಡ (ಗು). ೧. ಬಿಳುಪು ಮತ್ತು ಕಂದುಬಣ್ಣಮಿಶ್ರವಾದ; ಬೆರಕೆಬಣ್ಣದ: ಹಂಡಬಂಡದ ಕುದರಿ ಗೊಂಡೇದ ಲಗಾಮ ಕಂಡೇನ ಊರ ತೆವರಾಗ (ಗರತಿ.೬೩); ಹಂಡಬಂಡ ಕುರಿಯ ಮರಿಯು ಬಹಳ ಮುದ್ದು ಬರುವೋಲಿತ್ತು (ಕನನ.೪-೩); ಬಿಳಿಯವು ಕರಿಯವು ಹಂಡಬಂಡ ಕೆಂಪು ಬೂದಿಬಣ್ಣದವು ಈ ಮೇರೆಗೆ ಹಲವು ಬಣ್ಣದ ಪಾರಿವಾಳಗಳುಂಟು (ಮುಂಬಯಿ.೩-೧೧೦). ೨. ಮಿಶ್ರವಾದ; ಬೆರಕೆಯಾದ: ಕನ್ನಡವನ್ನು ಕೈಬಿಟ್ಟು ತನ್ನ ಮಾತೃಭಾಷೆಯಾಗಿದ್ದ ಆ ರೂಪುಗೆಟ್ಟ ಹಂಡಬಂಡ ಮರಾಠಿಯನ್ನು ಕೇಶವರಾಯ ಶುರು ಮಾಡಿದರಾಯಿತು (ಬೆಂಗಬ.೮೩). (ನಾ). ೩. ಮಿಶ್ರಬಣ್ಣದ ಪಾರಿವಾಳ; ಹೊರಸು: (ಕ). ೪. ಬಿಳಿ ಮತ್ತು ಕಂದು ಬಣ್ಣದ ಎತ್ತು: ಕೆಂದಬಣ್ಣದ ಬಲು ಚಂದ ಚಂದ ಹೋರಿಗಳು ನಂದಿಯ

ಹಂಗ ಮೈಮಾಟ ಹಂಡಬಂಡ ಹೊಂದಿ ನಡೆದವು ಸಾಲುಗೊಂಡು (ಸಿದ್ಧಪು.೧೭-೨೦). **ಹಂಡಹುಂಡ** : ೧. ಕರಿಯ ಬಿಳಿಯ ಹಂಡಹುಂಡ ಮರಿಗಳು (ಮಲಿಮ.೧೦೭). ೪. ಕಾರಿಕಪ್ಪಂ ಹಂಡಹುಂಡ ಕೆಂದಂ ಬೆಳ್ಪಿಹೋರಿಗಳುಮೊಳಗಾದ ಹಿಂಡು (ಸಿದ್ಧರಾ. ೮-೪೯). 'ಹುಂಡವಣ್ಣ' ಪರಾ. [ಹಂಡ್ + ಬಂಡ್]

ಹಂಡಬಂಡಕಥೆ (ನಾ). (ಆಲಂ) ಪೊಳ್ಳುಕತೆ; ಜೊಳ್ಳುಕತೆ : ಅತಿರಂಜಿತವಾದ ಈ ಹಂಡಬಂಡಕಥೆಗಳು ಅವರಿಗೆ ಹಾಸ್ಯಾಸ್ಪದವೆನಿಸುವುವು (ಕಥಕ. ೩೪).

[ಹಂಡಬಂಡ + ಕಥೆ]

ಹಂಡಬಂಡತನ (ನಾ). ಬೆರಕೆಯಾಗಿರುವಿಕೆ; ಮಿಶ್ರತನ: ಬೆಳಗಾಂವಿಯ ಹಂಡಬಂಡತನವು ಕಾಣಿಸಿಕ್ಕಿತು (ಚಿಟ್ಟಸೂ. ೧೦೦). [ಹಂಡಬಂಡ + - ತನ]

ಹಂಡಬಂಡು (ನಾ). ಬೆರಕೆಬಣ್ಣ; ಮಿಶ್ರವರ್ಣ: ಕನ್ನಡಕದ ಹಂಡಬಂಡು ಸಂಸಾರಕ್ಕೆ ಬಣ್ಣವೇರುವ ಸಂಭವವಿಲ್ಲ (ಎಚಾಮಂ. ೨೦). [ಹಂಡಬಂಡ + - ಉ್]

ಹಂಡಹಕ್ಕಿ (ನಾ). ಬಿಳಿಯ ಬಣ್ಣದ ಹಕ್ಕಿ; ಬೆಳ್ಳಕ್ಕಿ: ತುಸುಹೊತ್ತಿನಲ್ಲಿ ಮನೆಯ ಮುಂದೆ ಬೇಲಿಯ ಸಾಲಿನಲ್ಲಿ ಹಂಡಹಕ್ಕಿ ಸಿಳ್ಳುಹಾಕತೊಡಗಿತ್ತು (ಮಲಿಮ. ೨೫).

[ಹಂಡ್+ ಹಕ್ಕಿ (< ಪಕ್ಕಿ)]

ಹಂಡಹುಂಡ 'ಹಂಡಬಂಡ' ನೋ.

ಹಂಡಹೋರಿ (ನಾ). ಬಿಳಿಯ ಬಣ್ಣದ ಹೋರಿ: ಗೊಂಡ್ಯಾದ ಹಣೆಪಟ್ಟಿಸ ಹಂಡಹೋರಿ ನನಗಾಗಿ ಕೊಂಡಾರ ನಮ್ಮವರು (ಕನ್ನಜಾ. ೧೪೬).

[ಹಂಡ್ + ಹೋರಿ (< ಪೋರಿ್)]

ಹಂಡಾಕಳು (ನಾ). ಬಿಳಿಯ ಬಣ್ಣದ ಹಸು: ಆ ಹಂಡಾಕಳು ಏತಲ್ಲ ಅದನ್ನೇ ಚಂದನ ಜೊತೆಗೆ ತಲಾರಕ್ಕೆ ಕಟ್ಟಿದರಾತು (ಸುವಸಂ. ೬೩). [ಹಂಡ್ + ಆಕಳು (< ಆಕಳ್)]

ಹಂಡಾಹಂಡ (ನಾ). ದೊಡ್ಡ ದೊಡ್ಡ ಪಾತ್ರೆ (?): ಮಂಡಲಂಗಳ ಮಾಡಿ ರಂಗವಲಿಗಳ ಹಾಕಿ ಹಂಡಾಹಂಡದಲಿಯಿಳಿವಿ ಭೂಮಂಡಲಾಧಿಪತಿ ನಿನಗೆ ಅರ್ಪಿತವೆಂದು ತಂದು ನೈವೇದ್ಯಿಟ್ಟು ಶ್ರೀಹರಿಗೆ ಅರ್ಪಿಸುತ್ತಿದ್ದೆ (ಪುರಂದ. ೫-೬೯-೧೩). [?]

ಹಂಡೆ$_1$ (ನಾ). ತಾಮ್ರ ಮೊದಲಾದ ಲೋಹಗಳಿಂದ ಮಾಡಿದ ನೀರು ತುಂಬುವ ದೊಡ್ಡ ಪಾತ್ರೆ; ಕಡಾಯಿ; ದೊಡ್ಡತಪ್ಪಲೆ: ನೀರು ತುಂಬುವುದೊಂದು ದೊಡ್ಡ ಹಂಡೇ ಅದೆಯಂತೆ (ಪಬುಂಬಹು.೪-೫೨); ಪ್ರತಿ ಮನೆಯ ಮುಂದೆ ಒಂದೊಂದು ಹಂಡೆಯ ತುಂಬಾ ಓಕುಳಿ ಮಾಡಿಡುವ ಪದ್ಧತಿ (ಪುಟ್ಟಹ. ೫೦); ಹತ್ತು ಕೊಡದ ಹಂಡೇ ಒಬ್ಬನ ಎತ್ತಿ ಇಳಿಸುತಿದ್ದಿನಿ (ಮಣ್ಣುಹ. ೧೧೩).

[? ./ ತುಳು. ಹಂಡೆ; ತೆಲು. ಹಂಡ./ ಹಿಂ. ಮರಾ. ಹಂಡಾ]

ಹಂಡೆ$_2$ (ನಾ). ಬಿಳಿಯ ಎತ್ತು: ಹಂಡೆ ಹವಳೆ ಹುಲುಗಚ್ಚಕೊಂಡು ನಿಂತವು (ಪ್ರಸಭಾ. ೪೯-೬). 'ಹವಳೆ' ಪರಾ. [< ಹಂಡ್]

ಹಂತ$_1$ 'ಪಂತ$_1$' ನೋ.

ಹಂತ$_2$ (ನಾ). ೧. ಮೆಟ್ಟಿಲು; ಸೋಪಾನ; ಪಾವಟಿಗೆ: "ಆರೋಹಣಂ, ಸೋಪಾನಂ . . . ಸೋಪಾನದ ಹೆಸರುಗಳು, ಮೆಟ್ಟುಗಳು, ಪಾವಟಿಗೆ, ಹಂತಗಳು" (ಶಬ್ದಾತಿ.೧೦೪); ಮನೆಯ ಹೊಱಗಣ ಹಂತ ಬಿಡದಿಹ ಜನದನಿತು ತಾನೈಸೆ ನಿಮ್ಮಯ ಸೇನೆ (ಕುವ್ಯಾಸ. ೬೦೨.೫-೩೮); ಹಜಾರದ ಪಾರ್ಶ್ವಗಳಲ್ಲಿ ಉಪ್ಪರಿಗೆಗಳ ಮೇಲೆ ಹತ್ತಿಹೋಗುವ ಹಂತಗಳು (ಶ್ರೀರಾಯ.೧೩೭). ೨. ಘಟ್ಟ; ಮಜಲು: ಈ ಕಸಬೇಕೆರೆ ಹಿನ್ಸೆ ಕೀಳುಪಾಯ ಹನ್ರದಲ್ಲಿರುವ ದೈವದ ಗದ್ದೆ ಅಯಾಚಿತರ ಗದ್ದೆ (ಎಕ. XV. ಆರಸೀ. ೨೧೪-೨; 1817); ಯೋಗಸಿದ್ಧರು ಲಯಯೋಗದ ಅನುಭವದಲ್ಲಿ ಅನೇಕ ಹಂತಗಳನ್ನು ನಿರೂಪಿಸಿರುತ್ತಾರೆ (ಭಾರದ. ೧೫೫); ಆಳುಕಾಳುಗಳಿಂದ ಉಪದೇಶ ಪಡೆಯುವ ಹಂತಕ್ಕೆ ನಾನು ಇನ್ನೂ ಇಳಿದಿಲ್ಲ (ಹಾಹುತ್ರ. ೩೫).

ಹಂತವಾರು = ಒಂದು ಮಜಲು ಅಥವಾ ಮಟ್ಟಕ್ಕೆ ಸಂಬಂಧಿಸಿದ,— ಸೇರಿದ: ಗ್ರಾಮಗಳ ಹಂತವಾರು ಮೇರೆಗೆ . . . ಕಾಲೂಳಿಗದ ಜನ ಮುಂತಾದವರನ್ನೂ ನೇಮಕಮಾಡಿದರು (ಮಹಾವಂ. I. ೧೧೯).

ಹಂತ$_3$ 'ಪಂತ$_2$' ನೋ.

ಹಂತ$_4$ (ಅ). ಶೋಕ, ಕರುಣ, ಸಂಘರ್ಷ, ಜುಗುಪ್ಸೆ ಮುಂತಾದ ಭಾವಗಳನ್ನು ಸೂಚಿಸುವ ಅವ್ಯಯ: "ಅತಿಶೋಕದಲ್ಲಿ ಸಂಘರ್ಷದಲಿ ಹಂತಮೆಂದೆಂಬ ನುಡಿ ವರ್ತಿಸಿರ್ಕುಂ" (ಮುಂಗರಾ. ೧೫೫-೬೯); ಹಂತ ಹಿರಿಯರು ಹುಸಿಯ ನುಡಿವರೆ ಸಂತವೇಕಾತ್ಮಕವು ಕಂಡೇಕಾಂತವೆಂದಿನ್ನಾವದಾವುದು ಹೇಳನೇಕಾಂತ (ನಭಾಗ. ೧೦-೭೨-೨೦); ಅಂತವಿಲ್ಲದ ಸೌಖ್ಯಮೋರ್ವನ ಹಂತ (ರಘುವಂ. ೮-೭೯). [ಸಂ.]

ಹಂತಕ (ನಾ). ಕೊಲ್ಲುವವನು; ಕೊಲೆಗಾರ: ವಿಜಯನಾರಸಿಂಹ ಎಂಬ ಕತ್ತಿಯು ಆ ಹಂತಕರನ್ನು ತುತ್ತುಗೊಂಡ ಕಥೆ (ಸಂಪಕ. ೧೧೫). [ಸಂ.]

ಹಂತಿ 'ಪಂತಿ' ನೋ.

ಹಂತಿಕಟ್ಟು 'ಪಂತಿಗಟ್ಟು' ನೋ.

ಹಂತಿಕಾಱ 'ಪಂತಿಕಾಱ' ನೋ.

ಹಂತಿಕುಂಟೆ (ನಾ). (ಉಕ) ಹೊಲವನ್ನು ಹಸನುಮಾಡಲು ಹೊಡೆಯುವ ಸಾಲುಕುಂಟೆ: (೬). [ಹಂತಿ (< ಪಂತಿ) + ಕುಂಟೆ$_1$]

ಹಂತಿಗಟ್ಟು 'ಪಂತಿಗಟ್ಟು' ನೋ.

ಹಂತಿಗಣ್ಣಿ (ನಾ). ಸಾಲಾಗಿ ಕಟ್ಟಲು ಉಪಯೋಗಿಸುವ ಹಗ್ಗ; ದಾವಣಿ: ಹಂತಿಗಣ್ಣಿಯು ಚಿನ್ನ, ಚಿಂತೆಯಿಲ್ಲದ ರಾಣಿ ಬಂತು ಮಹಮನೆಗೆ ಬಸವಣ್ಣ ಉಣಿಸಿದನು ನಿಂತು ಶಿವಮತವ ಅಂಬಲಿಯ (ಕನ್ನಜಾ.೧೩೩); ಕಣ, ಕೂರಿಗೆ, ಮೇಳಿ, ಹಂತಿಗಣ್ಣಿ (ಕಸ್ಕಾ. ೨೧೧). [ಹಂತಿ(< ಪಂತಿ) + ಕಣ್ಣಿ]

ಹಂತಿಗಾಱ 'ಪಂತಿಕಾಱ' ನೋ.

ಹಂತಿಗೂಡಿಸು (ಕ್ರಿ). ಸಾಲಾಗಿಸು; ಪಾಳಿಮಾಡು: ಕ್ರತುಪದಕ್ಕಿರುವ 'ಸರ್ವ' ಎಂಬ ವಿಶೇಷಣಪದವು ಹಿಂಸಾತ್ಮಕಕ್ರತುಗಳನ್ನೂ ಹಂತಿಗೂಡಿಸುತ್ತಿದೆ (ನಾಡೋಜ. ೬೭).

[ಹಂತಿ(< ಪಂತಿ) + ಕೂಡಿಸು]

ಹಂತಿಗೊರಲು (ನಾ). ತಲೆಗಳ ಸಾಲು; ಸಾಲುದಲೆ.

ಹಂತಿಗೊರಲವನು = ಸಾಲಾಗಿ (ಹತ್ತು)ತಲೆಗಳುಳ್ಳವನು; ರಾವಣ : ಹಂತಿಗೊರಲವನನೇಳಿಸೆ[ಪಾಕಾಂ. ಹಂತಿಗೊರಲವನೇಳಿದದೆ, ಹಂತಿಗೊರಲವವೇಳಿದ] ಪೆರ್ಚಿರಲೊಳೊತ್ತಿ ಹಂತಮಂ ಮುಱಿದು ಮೂಱುವತೆಯುಳ್ಳರಮನೆಯನಂತವುರಮಂ ಮಾಡಿ (ಪದ್ಮರಾ.೧೩-೬೫). [ಹಂತಿ (< ಪಂತಿ) + ಕೊರಲು (< ಕೊರಲ್)]

ಹಂತಿಗೊಳ್ 'ಪಂತಿಗೊಳ್' ನೋ.

ಹಂತಿಗೊಳ್ಳು 'ಪಂತಿಗೊಳ್' ನೋ.

ಹಂತಿದಪ್ಪು (ಕ್ರಿ). ಸಾಲುತಪ್ಪು; ಅಸ್ತವ್ಯಸ್ತವಾಗು: ಪೊರ್ಕುಬಿಯಂದಮೆ ಹಂತಿದಪ್ಪಿ ತಾಱುಂಬಲಿಯುಂ ತೆರಳ್ದ ಕುರುಳುಗ್ಮೆ ಬೆಮರ್ . . . ಕೂಟದೊಂದು ಸವಿಯಂ ಪಿಸುಣಾಡುವುವೀ ಲತಾಂಗಿಯಾ (ಚಂದ್ರಪ್ರ.೮-೭೨).

[ಹಂತಿ (< ಪಂತಿ) + ತಪ್ಪು$_1$]

ಹಂತಿದಾವಣಿ (ನಾ). (ಕಣದಲ್ಲಿ ಸಾಲಾಗಿ) ಕಟ್ಟುವ ಹಗ್ಗ; ಎಣೆಹಗ್ಗ: (೬).

[ಹಂತಿ (< ಪಂತಿ) + ದಾವಣಿ$_1$]

ಹಂತಿಯೂಟ 'ಪಂತಿಯೂಟ' ನೋ.

ಹಂತಿವಿಡಿ 'ಪಂತಿವಿಡಿ' ನೋ.

ಹಂತಿವೆಣ್ (ನಾ). ಹೆಂಗಸರ ಸಾಲು: ಪಂತವಾಡುವ ಭಟರಳಿಗಿಳಿ ಪಡಿಯಱ ತಿಂಥಿಣಿ ಕೋಗಿಲೆವಿಂಡು ಹಂತಿವೆಣ್ಗಳ ತನುಲತೆ ವನಮೆನಲು ವಸಂತನವೊಲು ನೃಪನೆಸೆದ (ಶ್ರೀಪಾಲ. ೩-೬). [ಹಂತಿ (< ಪಂತಿ) + ಪೆಣ್]

ಹಂತಿಹೊಡೆ (ಕ್ರಿ). ಕಣದಲ್ಲಿ ಒಕ್ಕಣೆಗಾಗಿ ಸಾಲಾಗಿ ಕಟ್ಟಿದ ದನಗಳನ್ನು ಸುತ್ತಿಸು: ಏತದಿಂದ ಬಾವಿಯ ನೀರೆತ್ತುವಾಗ ಅಥವಾ ಹಂತಿ ಹೊಡೆಯುವಾಗ ಗಂಡಸರು ಹಾಡುವ ತ್ರಿಪದಿ (ಧಂಡೋಪ. ೨೪೪); ಹಂತಿ ಹೊಡೆಯುತ ನೆನೆದೆ ಸಂತಸದಿ ಶರಣರನು (ಜನಗೀ. ೧೩); ಹಂತಿಹೊಡೆಯುವಾಗ ಆಳುಗಳು ಪದಗಳನ್ನು ಹೇಳುತ್ತಿದ್ದರು (ಕಪಪು. ೩-೬೪). [ಹಂತಿ (< ಪಂತಿ) + ಹೊಡೆ$_1$ (< ಪೊಡೆ$_1$)]

ಹಂತುಗೊಳ್ (ಕ್ರಿ). ಕೊನೆಗೊಳ್ಳು; ಮುಗಿ; ಅಂತ್ಯವಾಗು: ಲಲನೆಯರ ಭ್ರಾಂತಿನಿಂ ಹಂತುಗೊಳುವರೆ ಖಚರನೆಂದೆಸೆದ (ಜನಮು. ೨೪-೧೮). [ಹಂತ್ಯು + ಕೊಳ್$_1$]

ಹಂತೆ (ನಾ). ಗರ್ವ; ಅಹಂಕಾರ; ಮದ: ಇಂತಿದಧ್ಯಾಸವಿದರಂತಾತ್ಮನಲ್ಲಿ ಜಡ

ಹಂತೆಯೊಳಗುಳ್ಳ, ಗುಣವೆಯ್ದು ಸತ್ಕವೆಂಬಂತೆ ಕಾಣಿಸುವುದೆಲೆ ಪುತ್ರ (ಅನುಸಾ. ೬-೨-೯); ಚಿಂತಿಪನಾತ್ಮಮದವೆತ್ತೆಮಿಗೆ ಹಂತೆ ಮುಂದನಗೆ ಸರಿ ಯಾರೆ (ವೀಶ್ವಪು. ೭-೩-೧೯); ಅಣಿಪಾದಿಸಿದ್ದಿ ಸಂಭ್ರಮದ ಹಂತೆಯೊಳಾರ ಯೆಣಿಕೆಗೊಳ್ಳದ ಪುಹಿಮುರಿಪಱಿಯದಾಂ ನೊರೆದೆ . . . ನುತಿಸುತ್ತ ಸೈಗೆಡದು ಪೊರಳಿದಂ ಧಾರಿಣಿಯೊಳು (ಚತುಪು. ೨-೪-೪೮). [< ಅಹಂತೆ]

ಹಂದರ್ 'ಪಂದರ್' ನೋ.

ಹಂದರ$_1$ 'ಪಂದರ್' ನೋ.

ಹಂದರ$_2$ 'ಹಂಜರ' ನೋ.

ಹಂದರಜಡ್ಡು (ನಾ). ಮದುವೆಯ ಕಾರ್ಯದ ಓಡಾಟದಲ್ಲಿ ಉಂಟಾಗುವ ದೇಹಾಲಸ್ಯ: ಮದುವೆಯೆಲ್ಲ ಮುಗಿದ ಮೇಲೆ 'ಹಂದರ - ಜಡ್ಡಿನಿಂದ' ಮೂರುದಿನದಲ್ಲಿ ನಿರ್ವಿಣ್ಣರಾಗಿ ಹೋದ ದೇಸಾಯರು ರಾತ್ರಿ ಅವಳ ಮನೆಗೆ ಬಂದಾಗ . . . ನಕ್ಕಳು (ಸುಮುಪೇ. ೩೫೦). [ಹಂದರ$_1$ (< ಪಂದರ್) + ಜಡ್ಡು]

ಹಂದರಹೂ (ನಾ). ಒಂದು ಬಗೆಯ ಹೂವು ಮತ್ತು ಅದರ ಗಿಡ: ಹಲ್ಲೆಬಳ್ಳಿ, ಹಂದರಹೂ (ಮೃಚಿಗಿ. ೬೫-೧೩೧೧). [ಹಂದರ? + ಹೂ$_2$ (< ಪೂ$_2$)]

ಹಂದರಿಕ್ಕು 'ಪಂದರಿಕ್ಕು' ನೋ.

ಹಂದರು 'ಪಂದರ್' ನೋ.

ಹಂದರುವಣ (ನಾ). ಮದುವೆ ಮುಂತಾದ ಸಮಾರಂಭಗಳಲ್ಲಿ (ಮನೆಯ ಮುಂದೆ) ಚಪ್ಪರ ಹಾಕುವಾಗ ಕೊಡಬೇಕಾಗಿದ್ದ ತೆರಿಗೆ; ಚಪ್ಪರದ ಹಣ: ಪುರಿಗಳಿಯ ರಾಮೇಸ್ವರದೇವರ್ಗ್ಗಾ ಪುರದ [ಸಾ]ದದ[ಆ] ಹಂದರುವಣವೆಂಬಿವಂ ಸರ್ವಸಮಶ್ಯವಾಗಿ ಬಿಡಂದು ಬೇಱವುದುಂ (ಶಾಸಾ. XX,೭೮-೧೪; 1118).

[ಹಂದರು (< ಪಂದರ್) + ಪಣ್$_3$]

ಹಂದಲ್ 'ಪಂದಲ್' ನೋ.

ಹಂದಲು 'ಪಂದಲ್' ನೋ.

ಹಂದಲೆ 'ಪಂದಲೆ' ನೋ.

ಹಂದಿ 'ಪಂದಿ' ನೋ.

ಹಂದಿಕೊಬ್ಬು (ನಾ). ಹಂದಿಯ ಕೊಬ್ಬು,— ನೆಣ: ಮುರಿದ ಮೂಳೆಗಳನ್ನು ಒಂದು ಗೂಡಿಸಲು ಹಂದಿಕೊಬ್ಬನ್ನು ಉಪಯೋಗಿಸುತ್ತಾರೆ (ರೂಢಿ).

[ಹಂದಿ (< ಪಂದಿ)+ ಕೊಬ್ಬು$_2$ (< ಕೊರ್ವು$_2$)]

ಹಂದಿಗ (ನಾ). ಅಂಜುಬುರುಕ; ಹೇಡಿ: ಹಂದಿಗರು ನನಗೆಯಿದಿರಾಂಪರೇ ಪರಿಯೆರ್ದಯ ಕುಂದಿಲ್ಲದೊದ್ದೆ ಧಾತನ ಜಿಹ್ವೆಪೀಠದೊಳು ನಿಂದೆಯಾಖಂಡಲಗೆ ಡಾಗ ನೊತ್ತಿದ ಹರನ ಸಿರತೊಡೆಯನಡರ್ದ ಮತ್ರಂ (ಪ್ರಬುಪು. ೫-೧೫೧). 'ಹಂದಿಗ$_1$' ಪರಾ.

[ಹಂದಿ (< ಪಂದಿ) + -ಗ]

ಹಂದಿಗಡ್ಡೆ 'ಪಂದಿಗಡ್ಡೆ' ನೋ.

ಹಂದಿಗೀರ (ನಾ). (ಹಂದಿಯಂತೆ ಕಿರುಚುವ) ಒಂದು ಬಗೆಯ ಹಕ್ಕಿ; ಸಣ್ಣಗೂಗೆಹಕ್ಕಿ : (ಪ). [ಹಂದಿ (< ಪಂದಿ) + ಕೀರ್$_3$?]

ಹಂದಿಗುಂಟೆ (ನಾ). (?): ಮಂದಗಮನೆಯಂದು ನಡೆಗಂಡನಲ್ಲದೆ ಹಂದಿಗುಂಟೆಯನದ ಹೇಳಲಿಲ್ಲ (ಚಿದಾವ. ೩೮-೭). [?]

ಹಂದಿಗೆಡ್ಡೆ 'ಪಂದಿಗಡ್ಡೆ' ನೋ.

ಹಂದಿಗೆರಕನಗೆಡ್ಡೆ (ನಾ). ಒಂದು ಬಗೆಯ ಗೆಡ್ಡೆ; ಕೊನ್ನಾರಿಗೆಡ್ಡೆ: "ಕಸೇರುಕಾ-ಸೀಬಿ ಗೆಡ್ಡೆ, ಹಂದಿಗೆರಕನ ಗೆಡ್ಡೆ" (ಓಷಧಿ. ೨೪).

[< ಹಂದಿ(< ಪಂದಿ) + ಗೆಡ್ಡೆ(< ಗಡ್ಡೆ)]

ಹಂದಿಡು (ಕ್ರಿ). ಹಂದಿಯನ್ನು ಹೊಡೆ,--ಬಡಿ: ಕರ್ನಾಟಕ ಪ್ರಕೃತಿಸ್ವರ ಲೋಪಕ್ಕೆ . . . ಇಕಾರಕ್ಕೆ — ದಾಳಿಟ್ಟಂ, ಹಂದಿಟ್ಟಂ, ಸವಡಿಟ್ಟಂ (ಶಮದ. ೫೩ ಪ್ರಯೋ).

[ಹಂದಿ (< ಪಂದಿ) + ಇಡು$_1$]

ಹಂದಿತುಪ್ಪ (ನಾ). ಹಂದಿಯ ಕೊಬ್ಬಿನಿಂದ ತಯಾರಿಸಿದ ತುಪ್ಪ: ಮೂಳೆ ಮುರಿದಾಗ ಹಂದಿತುಪ್ಪ ಹಾಕಿ ಕಟ್ಟುತ್ತಾರೆ (ರೂಢಿ). [ಹಂದಿ (< ಪಂದಿ) + ತುಪ್ಪ]

ಹಂದಿದಾಟು (ನಾ). ಕತ್ತಿವರಸೆಯಲ್ಲಿ ಒಂದು ಪಟ್ಟು; ಹಂದಿ ನೆಗೆಯುವಂತೆ ನೆಗೆಯುವುದು: ಆಸ್ಥಾನದಲ್ಲಿ ಶೀಘ್ರಗಮನದ ಕಡೆಯಲ್ಲಿ ತಾನು ತಿರುಗಿ ಮುಂದುಕಡೆಯಲ್ಲಿ ಬಲದ ಪಾದವನ್ನಿಯಿಟ್ಟು ಬಂಡಿಕೋಲಿನಿಂದ ಕಡಿವುದು ಆವದಾನೊಂದುಂಟು ಅದು ಖಡ್ಗಶಾಸ್ತ್ರವ ಬಲ್ಲವರಿಂದ ಹಂದಿದಾಟುಯೆಂದು ನುಡಿಯಲ್ಪಡುವುದು (ಖಡ್ಗಟೀ. ೫-೩೭). [ಹಂದಿ (< ಪಂದಿ) + ದಾಟು$_2$ (< ದಾಂಟು$_3$)]

ಹಂದಿಪುಟ್ಟನ ಗೆಡ್ಡೆ (ನಾ). ಒಂದು ಬಗೆಯ ಗೆಡ್ಡೆ; ಕೊನ್ನಾರಿಗಡ್ಡೆ: "ಈ ಹಂದಿಪುಟ್ಟನ ಗೆಡ್ಡೆ ಇದೆಯಲ್ಲಾ, ಅದರ ರುಚಿಗೆ" ಎಂದು ಪಂಡಿತನಿಗಿಂತಲೂ ತನ್ನ ಕನ್ನಡ ಮೇಲುಮಟ್ಟದ್ದು ಎಂಬ ಹೆಮ್ಮೆಯಿಂದ ಹೇಳಿದನು (ಮಳಮ. ೩೩೦).

[ಹಂದಿ (< ಪಂದಿ) + < ಪುಟ್ಟ$_1$ + ಗೆಡ್ಡೆ (< ಗಡ್ಡೆ)]

ಹಂದಿಪೊದೆಕೊಡೆ (ನಾ). ಒಂದು ಬಗೆಯ ಸಸ್ಯ: ಹಂದಿಪೊದಕೊಡೆ, ಮೊಲ್ಲೆ (ಮೃಚಿಗಿ. ೫೧-೧೦೧೩). [ಹಂದಿ (< ಪಂದಿ) + ಪೊದ್$_3$ + ಕೊಡೆ$_2$]

ಹಂದಿಬಳ್ಳಿ (ನಾ). ಒಂದು ಬಗೆಯ ಸಸ್ಯ: ಚೀನಾಬಳೀಮರ, ಪುನಾಲೀ ಹಂದಿಬಳ್ಳಿ (ಮೃಚಿಗಿ. ೨೯-೫೬೯). [ಹಂದಿ (< ಪಂದಿ) + ಬಳ್ಳಿ]

ಹಂದಿಮಾನು 'ಪಂದಿಮಾನ್' ನೋ.

ಹಂದಿವಲೆ (ನಾ). (ಕಾಡು) ಹಂದಿಯನ್ನು ಹಿಡಿಯುವ ಬಲೆ: ಎರಳೆವಲೆ ಪಂದಿವಲೆ ಹೊಯ್ಯಲೆ . . . ಬೇಡರ ಸಿರದೊಳೊಪ್ಪಿದುದು (ಸಾಸ್ಕಭಾ. ೫-೧೯).

[ಹಂದಿ (< ಪಂದಿ) + ಬಲೆ$_1$]

ಹಂದಿವಳಯ (ನಾ). ಒಂದು ಬಗೆಯ ಸಸ್ಯ: "ಕೂರ್ಚಂ - ಹಂದಿವಳಯ" (ಓಷಧಿ. ೩೭). [ಹಂದಿ (< ಪಂದಿ) + ವಳಯ?]

ಹಂದಿವಾಡಿ (ನಾ). ಒಂದು ಊರಿನ ಹೆಸರು: ಪಳ್ಳಮ ಮುತ್ತೆರಿಎ(ಯೆ) ಹನ್ನಿವ(ವಾ)ಡಿ ಎ(ಯೆ)ನ(ನೇ)ರುಂಗಲ್ಲೆ (ಇಆ. VIII, ೨೧೩-೨೫; 10ನಯ ಶತ).

[ಹಂದಿ (< ಪಂದಿ) + ವಾಡಿ$_1$ (< ಪಾಡಿ$_3$)]

ಹಂದಿವೇಂಟೆ 'ಪಂದಿವೇಂಟೆ' ನೋ.

ಹಂದೀಟ (ನಾ). (ಹಂದಿಯನ್ನು ತಿವಿಯಲು ಬಳಸುವ) ಒಂದು ಬಗೆಯ ಈಟಿ (?): "ಭಲ್ಲಾ= ಹಂದೀಟ" (ಕಾಶಕ್ಕ. ೧೧೪). 'ಪಂದಿಪೊಟ್ಟು' ಪರಾ.

[ಹಂದಿ (< ಪಂದಿ) + ಈಟ (< ಇಟ್ಟು$_2$)]

ಹಂದು 'ಹೆಂದು' ನೋ.

ಹಂದೆ 'ಪಂದೆ' ನೋ.

ಹಂದೆಗ$_1$ (ನಾ). ಹೇಡಿ; ಅಂಜುಬುರುಕ: ಹೇಳಬಲ್ಲಿರೆ ತಥ್ಯವನು ತೆಗೆ ಕಾಳಗದ ಹಂದೆಗರ [ಪಾಠಾಂ. ಹಂದೆಗಳ]ನೆಮತ ಕರಾಳದೈತ್ಯವ್ರಾತ ಕವಿದುದು ಕೃಷ್ಣನಭಮುಖಕೆ (ನಭಾಗ. ೧೦-೪೯-೩೬); ಎನ್ನನು ಹಂದೆಗರೆಂಬರು (ಕರಿ. ೧೨-೧).

[ಹಂದೆ (< ಪಂದೆ) + -ಗ$_2$]

ಹಂದೆಗ$_2$ (ನಾ). ಒಂದು ಬಗೆಯ ಮೀನು: ಹಾರುವಂ ಹಿರಿಯ ಪಡುಸಕ್ಕರಿಗ ನಿಱಿಲು ಹಂದೆಗನಾನೆವೊಗನೆಂಬ ಪರಿಪರಿಯ ವಿಾನ್ಗಳಂ ಗುದಿಗೆಯ್ದುರು (ಪಚಕಾ. ೫-೪೫). [IP ಇದು 'ಹಂದಿಗ' ಎಂದಿರಬಹುದೆ?]

ಹಂದೆತನ 'ಪಂದೆತನ' ನೋ.

ಹಂದೊಗಲ್ 'ಪಂದೋಲ್' ನೋ.

ಹಂಪ$_1$ 'ಪಂಪ$_2$' ನೋ.

ಹಂಪ$_2$ (ನಾ). (?): ಪರಮವಿಕ್ರಮವುಳ್ಳ, ರಘುವಿನ ಬರುವ ವಾರ್ತೆಯನರಿತು ಪಶ್ಚಿಮಧರಣಿಪತಿಗಳ ಹಂಪದಿಂ ಕರವನ್ನು ಕೊಟ್ಟಿಹನು (ರಘುವಂ. ೪-೫೮). [?]

ಹಂಪಲು 'ಪಣ್$_3$' ಪರಾ.

ಹಂಪುಗಾಲ (ನಾ). ಅದ್ದೂರಿಯ ಕಾಲ; ವೈಭವದ ಸಮಯ: ಲೋಕದ ಅನ್ನವು ಲೋಕದಂತೆಯೆ ತಾನು ಹಂಪುಗಾಲದ ಬೆಳೆಯು ಹಾಲುಂಡಿತ್ತು (ಸಭೀಗೀ. ೧೭-೩೭೪); ಮಿಡಿ ಕಾಯಿ ಹಣ್ಣುಗಳ ಹಂಪುಗಾಲದ ಸೊಂಪು ಋತು ಋತುಗಳಾಡಿಸಿದ ನೂರು ಚದುರು (ನಲಮು. ೪೨-೫೫). [ಹಂಪ್ಪು (< ಪಂಪು$_1$) + ಕಾಲ]

ಹಂಪುಗೊಳಿಸು (ಕ್ರಿ). ಅದ್ದೂರಿಮಾಡು; ವೈಭವಗೊಳಿಸು: ಹಂಪುಗೊಳಿಸುವ

ದೇವಿಯೊಲಿದ ಮಾಧವನ ವಿದ್ಯಾತೀರ್ಥವನ್ನು ತಂದು ಹಂಪು ಪಡೆಯೆಂದು ನಾ ಎರೆಯುವೆನು ನೀ ಸರ್ವಸಂನ್ಯಾಸಿಯಾಗು ಎಂದು (ಸೂರ್ಯಪಾ. ೪೯-೧೭).

[ಹಂಪು(< ಪಂಪು) + ಕೊಳಿಸು]

ಹಂಪುಪಡೆ (ಕ್ರಿ). ಅದ್ಭುರಿಯಾಗು; ವೈಭವವನ್ನು ಸೊಂದು : ಹಂಪುಗೊಳಿಸುವ ದೇವಿಯೊಲಿದ ಮಾಧವನ ವಿದ್ಯಾತೀರ್ಥವನ್ನು ತಂದು ಹಂಪುಪಡೆಯೆಂದು ನಾ ಎರೆಯುವೆನು ನೀ ಸರ್ವಸಂನ್ಯಾಸಿಯಾಗು ಎಂದು (ಸೂರ್ಯಪಾ. ೪೯-೧೭).

[ಹಂಪು (< ಪಂಪು) + ಪಡೆ]

ಹಂಪೆ (ನಾ). ಕನ್ನಡನಾಡಿನ ಒಂದು ಪ್ರಸಿದ್ಧ ತೀರ್ಥಕ್ಷೇತ್ರ; ವಿರೂಪಾಕ್ಷನು ನೆಲಸಿರುವ, ತುಂಗಭದ್ರಾನದಿಯ ದಂಡೆಯ ಮೇಲಿರುವ (ಪೌರಾಣಿಕವಾಗಿ ವಾಲಿ, ಸುಗ್ರೀವರು ನೆಲಸಿದ್ದರೆಂದು ನಂಬಲಾದ, ಐತಿಹಾಸಿಕವಾಗಿ ವಿಜಯನಗರವೆಂದು ಪ್ರಸಿದ್ಧವಾಗಿದ್ದ) ಸ್ಥಳ: ಗಿರಿಜಾಕಲ್ಯಾಣ ಕಥಾಕಾವ್ಯಮಂ ಹಂಪೆಯ ಮಾದರಸರ ಕಾರುಣ್ಯದ ಶಿಶುವಪ್ಪ ಹಂಪೆಯ ಹರಿಹರಂ ಬಿನ್ನಪಂಗೈದಂ (ಗಿಜಕ. ಕಥಾಗರ್ಭಂ ೩); ಹಂಪೆಯ ಕೊಂಪೆಯ ನೋಂಪಿಯು ಫಲಿಸಲಿ ಗುಡಿಗಟ್ಟಲಿ ಕನ್ನಡ ಹರಣ (ಅರಳು ೩೦೫-೨); ಹಂಪೆಗೆ ಹೋಗುವುದಕ್ಕಿಂತ ತನ್ನ ಕೊಂಪೆಯಲ್ಲಿರುವುದು ಲೇಸು (ಗಾದ).

[< ಸಂ. ಪಂಪಾ]

ಹಂಬಕ್ಕಿ 'ಪಂಬಕ್ಕಿ' ನೋ.

ಹಂಬಲ 'ಪಂಬಲ್' ನೋ.

ಹಂಬಲಿಕೆ (ನಾ). ೧. ಉತ್ಕಟವಾದ ಬಯಕೆ; ಅತಿಯಾದ ಹಂಬಲ, — ಅಪೇಕ್ಷೆ: ಶ್ರೀದೇವಿಯನ್ನು ಕಣ್ಣಾರೆ ಕಾಣಬಹುದೆಂಬ ಹಂಬಲಿಕೆ ಅವನಿಗಿದ್ದಿತು (ಶ್ರೀರಾಯ.೨೯೪); ಅವರೀರ್ವರ ಹಂಬಲಿಕೆಯು ಫಲಿಸಿತು (ಧರ್ಮಪಾ.೬೮); ಒಂದು ಮನಸಿನ ಬಯಕೆ ತಾ ಬರಿಯ ಹಂಬಲಿಕೆ (ಸಾಗೀತ.೫೫-೫). ೨. ಚಿಂತೆ; ವ್ಯಥೆ; ದುಃಖ: ಮಾತೃಕದಂಬ ಶೋಕಿಸುತೊರಲುತಿಹ ನಾನಾ ಬಗೆಯ ಹಂಬಲಿಕೆಗಳ ಕೇಳಿ ಪೊರಳಿ ರಾಜಕಳೇಬರವ ಕಂಡರಿಕೆದಪ್ಪಲು (ಆನಂರಾ. ೨-೩-೨೬). [ಹಂಬಲ (< ಪಂಬಲ್) + - ಇಕೆ]

ಹಂಬಲಿಸು 'ಪಂಬಲಿಸು' ನೋ.

ಹಂಬಲು 'ಪಂಬಲ್' ನೋ.

ಹಂಬು$_1$ 'ಪರಪು$_1$' ನೋ.

ಹಂಬು$_2$ 'ಪರಪು$_2$' ನೋ.

ಹಂಬುಕಳ್ಳಿ (ನಾ). ಬಳ್ಳಿಯಂತೆ ಬೆಳೆಯುವ ಒಂದು ಬಗೆಯ ಕಳ್ಳಿಗಿಡ: ಹಂಬುಕಳ್ಳಿ, ಸೋಮಲತೆ, ಬ್ರಾಹ್ಮಿ (ಮೃಪಿಗಿ. ೬೮-೧೩೮೮); ಜತ್ತುವೆ, ಹಂಬುಕಳ್ಳಿ, ನಂಜಿನ ಗೊರಡು, ಸಮುದ್ರಪಾಲ (ಸಮ್ಮನು. ೨೩೮). [ಹಂಬು$_2$ (< ಪರಪು$_2$) + ಕಳ್ಳಿ$_2$]

ಹಂಬುಗಱುಕೆ (ನಾ). ಬಳ್ಳಿಯಂತೆ ಉದ್ದವಾಗಿ ಬೆಳೆಯುವ ಒಂದು ಬಗೆಯ ಗರುಕೆ: ''ಅಳಿದೂರ್ವಾ- ಪಂಬುಗಱುಕೆ'' (ಓಷಧಿ. ೧೨).

[ಹಂಬು$_2$ (< ಪರಪು$_2$) + ಕಱುಕೆ$_1$ (< ಕಱುಂಕೆ)]

ಹಂಬುಗಾರಕ (ನಾ). ವೀಳೆಯದೆಲೆಯ ಬಳ್ಳಿಯಿಂದ ಎಲೆ ಕೊಯ್ಯುವುದು (?): ಅನುಪಿನ ಕಟ್ಟಿ ಗ್ರಾಮದಿಂದ ಹಟಿಕಾರ ಮಗ ೨೯ ಗ೧೫ ಹುಡಿಕೆಕಾರಕದಿಂದ ಜನ ೨೯ ಗ೧೫ ಹಂಬುಗಾರಕದಿಂದ ಜನ ೨೯ ಗ ೧೮೩ (ಎಕ.VIII, ಶೀರ್ಥಹ. ೯೫-೬೧; 1709). 'ಹುಡಿಕೆ ಕಾರಕ' ಪರಾ. [ಹಂಬು$_2$ (< ಪರಪು$_2$) + - ಗಾರ (< - ಕಾಱ) + - ಕ$_2$]

ಹಂಬುದುರುಚ (ನಾ). ಬಳ್ಳಿಯಾಗಿ ಬೆಳೆಯುವ ತುರುಚೆ ಗಿಡ: ಅಗುಳುಶುಂಠಿ, ಮುಡಿವಾಳ . . . ಹಂಬುದುರುಚನಬೇರು . . . ಕಷಾಯಂ ಕಾಸಿ ಕುಡಿಯೆ ಪಿತ್ತ ಛರ್ದಿ ಹರ (ಸಕವೈ.೨೬೭). [ಹಂಬು$_2$ (< ಪರಪು$_2$) + ತುರುಚ (< ತುಱುಚೆ)]

ಹಂಬುಮಲ್ಲಿಗೆ (ನಾ). ಬಳ್ಳಿಯಾಗಿ ಬೆಳೆಯುವ ಮಲ್ಲಿಗೆಗಿಡ : ನವಮಲ್ಲಿಗೆ, ಹಂಬುಮಲ್ಲಿಗೆ (ಮೃಪಿಗಿ. ೪೭-೯೩೨). [ಹಂಬು$_2$ (< ಪರಪು$_2$) + ಮಲ್ಲಿಗೆ]

ಹಂಬುಹಾರಕಹುಲ್ಲು (ನಾ). ಒಂದು ಬಗೆಯ ಹುಲ್ಲು: ಹಂಬುಹಾರಕ ಹುಲ್ಲು, ಪೊರೆಹುಲ್ಲು (ಮೃಪಿಗಿ. ೧೪-೨೪೧).

[ಹಂಬು$_2$ (< ಪರಪು$_2$) + ಹಾರಕ (< ಪಾರಕು) + ಹುಲ್ಲು (< ಪುಲ್)]

ಹಂಬೆ (ನಾ). ಬಳ್ಳಿ; ಹಂಬು: ನಾನೊಬ್ಬನುಂಟು ಹಲವಾಗಲೆಲ್ಲೂ ಎಂಬ ಹಂಬಲಿನ ಹಂಬೆ ಹರಿಬಳ್ಳಿವಳ್ಳಿಗಳಾಗಿ ತನ್ನ ದಾಂಗುಡಿಯ ಗೂನೆ ಬಾನು ಪಣ್ಣೊಂದಾಗಿ (ಅರಳು ೧೨೦-೨). [< ಪರಪ್ಪು]

ಹಂಸ (ನಾ). ೧. ಒಂದು ಬಗೆಯ ಬಿಳಿಯ ಬಣ್ಣದ ಪಕ್ಷಿ; ಅಂಚೆ; ಮರಾಲ: ಭರದಿಂ ರಾಮಂ ಕಾಕಾಸುರನಂ ಮುನಿದಿಸುವ ತೆಱದಿನೆಚ್ಚಂ ವಿಷಗೇಶ್ವರನೆನಿಪ ಹಂಸನಂ ವರ[ಪಾಶಾಂ. ರಾಜಹಂಸನ] ಶರಾಸನಾಗಮವಿಶಾರದಂ ತತ್‌ಕ್ಷಣದಿಂ ಅಂತೆಚ್ಚ ಕೋಲಿಂ ಮುನ್ನಮೆ ಸುರುಳ್ದರುಳ್ದು ಹಂಸಂ ವಿಧ್ವಂಸಮನೆಯ್ದಿತ್ತು (ಪಂಚತಂ. ೧೨೯-೬); ಸರಯೂತರಂಗಿಣಿಗೆ ಹಿಮಗಿರಿಯ ದೂರದಿಂದೈತಂದುವೆಡೆಬಡದ . . . ಹಂಸಕಾರಂಡತತಿ (ಶ್ರೀರಾಮಾ.೧೫-೩೯೮); ಹಂಸನಂಥಾ ಪಕ್ಷಿಯಿಲ್ಲ ಕಂಸನಂಥಾ ರಾಕ್ಷಸನಿಲ್ಲ (ಗಾದ). ೨. ಶ್ರೇಷ್ಠವಾದ ಆತ್ಮ; ಪರಮಾತ್ಮ: ಕಾಯದೊಳಗೆ ಕಾಯವಾಗಿರ್ದಯಲ್ಲ ಹಂಸಾ ಸಂಸಾರಮಾಯಾಪಾಶವ ಬಿಡಲೊಲ್ಲದೆ ಡಿಂಬವ ನೆಚ್ಚಿ ಕೆಟ್ಟೆಯಲ್ಲಾ ಹಂಸ ಜೀವ ಶೂನ್ಯವಾಗಿ ಹೋದುದನಱಿಯಾ ಹಂಸಾ (ಬಸಪು.೨೫); ಸಂಸಾರಬಂಧಪ್ರವಿಧ್ವಂಸಂಗೆ ಹಂಸಂಗೆ . . . ಸಿಂಹವಿಷ್ಟರಂ ಕಣ್ಣ ಪುಣ್ಯದ ಬೆಳಸಿನಂತಿರ್ಪುದು (ಚಿಬಪು.೨೯-೧೩); ಒಂದು ಕಂಭದೊಳಯ್ದು ಗಂಧ ಹಂಸನ ಕಟ್ಟಿ ಒಂದಱೊಳು ಮನವು ಬೆರೆದಿಹರೆ ಪರಬೊಮ್ಮ ಪಂಥತಾನಿರುವ (ಸರ್ವಜ್ಞ. ೫೩೭). ೩. ಶಿವ. ೪. ಬ್ರಹ್ಮ. ೫. ವಿಷ್ಣು. ೬. ಸೂರ್ಯ: ಪುರುಷಾರ್ಥನಿಧಿಪುರಂದರ ಪರಮಪ್ರಿಯಮಿತ್ರನೋರ್ವನುದಯಿಸಿದಂ ಸುಂದರ ರೂಪನರಿಷ್ಟಗೆ ಚಿತ್ರರಥಾನನ ಪುಂಡರೀಕಹಂಸಂ ಹಂಸಂ (ಕಾದಂಪು. ೭೧೧); ಮರು ದಾಕೀರ್ಣಲಸದ್ಮನಪ್ರಸವತಾರಾರಾಜಿತಂ ಹಂಸಬಂಧುರಸಾವಾಳಿ ರುಚಿಪ್ರದಾನ ಕವಿರಾಜಾಲಂಕೃತಂ . . . ರಂಜಿಸಿದುದಾ ರಾಜೇಂದ್ರನೊಡ್ಡೋಲಗಂ (ರಾಜಶೇ.೫-೨೦). ೧, ೬: ವಿನುತ ಹಂಸಾವಳಿಯ ನದಿಗಳಿಂದಭ್ಯಮಯವೆನಿಸುವ ತಟಾಕಂಗಳಿಂ ಕುಜದ ಪಜ್ಜೆಯಿಂ . . . ದೇಶಂ ನವಗ್ರಹಾತ್ಮಕವೆನಿಸಿತು (ಭಾಮಚಂ. ೨-೬). ೭. ಶಶಿ; ಚಂದ್ರ. ೧, ೭: ಕರಿಯಂತೆ ಕೊಳದಂತೆ . . . ಗಿರಿಜಾತೆಯಂತೆ ಮಿಗೆ ಹಂಸ ಸದ್ವಿಜ ಕೇಕಿಶರ ಸಿಂಹಯುತಮಾಗಿ ಕಾನನಂ ಬಹಳ ರೌದ್ರಾನನಂ ಕಣ್ಗೆಸೆದುದು (ಚಿಬಪು. ೫೩-೧೯). ೮. ಕಾಮ; ಮನ್ಮಥ. ೯. ಮುನಿ; ಯತಿ: ಯತಿಯೇ ವ್ಯಕ್ತಿಭೇದದಿಂ ಕುಟೀಚಕ ಬಹೂದಕ ಹಂಸ ಪರಮಹಂಸರೆಂದು ನಾಲ್ಕುತೆಱನಾಗಿರ್ಪರ್ (ವಿವೇ. ೧೨೬). ೧೦. ಶ್ರೇಷ್ಠನಾದವನು. ೧೧. ಶಕ್ತಿಯುತನಾದವನು; ಬಲಶಾಲಿ. ೧೨. ಅತ್ಯುತ್ತಮವಾದುದು; ಶ್ರೇಷ್ಠವಾದುದು. ೧೩. ತಾವರೆ; ಕಮಲ. ೧೪. ನಿರ್ಮಲವಾದುದು. ೧೫. ಬೆಳಕಿನ ಕಿರಣ; ಕಾಂತಿ. ೧೬. ಕಣ್ಣು; ನೇತ್ರ. ೧೭. ಕುದುರೆ: ''ಫುಲ್ಲನೇತ್ರನೊಳರ್ಕನೊಳು ಶಶಿಯೊಳಾತ್ಮನೊಳು ಬಲ್ಲಿದನೊಳಶ್ವನೊಳು ಕಿರಣದೊಳು ಹಂಸೆಯೊಳು ಸಲ್ಲಲಿತ ಶಿವನೊಳು ಸರೋಜದೊಳ್ ಪರಿವರ್ತಿಸಿರ್ಕುಂ ಹಂಸಾಭಧಾನಂ'' (ಮಂಗರಾ. ೧೪೯-೪೧); ''ವಿಮಲಂ ಹಯಮುಖ್ಯ ಮರೀಚಿಯಾತ್ಮ ಕಾಮಾರಿ ಮರಾಳ ನೇತ್ರ ಮುನಿ ವಾರಿಜಬಾಂಧವ ವಾರಿಜೋದ್ಭವಂ ವಾರಿಜವೈರಿ ವಾರಿಜಲೋಚನ ವಾರಿಜ ಹಂಸವಾಚಕಂ'' (ನಾನಾರ್ಥ. ೯). ೧೮. ಕೋಣ; ಮಹಿಷ. ೧, ೯, ೧೫, ೧೮: ಹರಿಸಂದೋಹವಿರಾಜಿತಂ ವಿವಿಧವದ್ಮಾಲಂಕೃತಂ ಹಂಸಸಂಚರಣಪ್ರೌಢ ಉದಾತ್ತ ವಿಕ್ರಮಗುಣೋದ್ಯತ್ಪುಂಡರೀಕಾಂಕ(ಂ)ಸೌಂದರ ವಾಗಿರ್ಪುದಱಿಂದೆ ಪದ್ಮವನದಂದಂ ಭಾವಿಸಲ್ ವಿಷ್ಣುಭೂವರರಿರ್ವ್ವಾ ಪುರಮುಂ ಸುರೇಂದ್ರಪುರಮುಂ ವಿದ್ಯಿಟ್ಪುರಾನೀಕಮುಂ (ಎಕ.V, ಅರಸೀ. ೬೯-೫; 1185). ೧೯. ಉಪನಿಷತ್ತುಗಳಲ್ಲಿ ಒಂದು: ಶ್ರೀರುದ್ರ ಬೃಹದಾರಣ್ಯಕ . . . ಹಂಸ ಪರಮಹಂಸ . . . ಮುದ್ಗಲ ಮುಂಡಕವೆಂಬಿವು ಮೊದಲಾದವೇ ಉಪನಿಷತ್ತುಗಳು (ವಿವೇ. ೫). ೨೦. ಪ್ರಮಾಣಕ್ಕೆ ಅನುಸಾರವಾಗಿ ವಿಂಗಡಿಸುವ ಐದು ಪ್ರಕಾರದ ಮನುಷ್ಯಜಾತಿಗಳಲ್ಲಿ ಒಂದು: ವರಾಹಮಿಹಿರನು ಮನುಷ್ಯರನ್ನು ಶರೀರದ ಅಳತ ಆಕಾರದ ಮೇಲೆ, ಐದು ಜಾತಿಗಳನ್ನಾಗಿ ವಿಂಗಡಿಸುತ್ತಾನೆ . . . 'ಹಂಸ' ಜಾತಿಗೆ ಸೇರಿದ ಪುರುಷನ ಎತ್ತರವು ೯೬ ಅಂಗುಲ ಪ್ರಮಾಣವಿರುತ್ತದೆ (ಭಾರದ. ೫೧೭). ೨೧. ಒಂದು ಪರ್ವತದ ಹೆಸರು: ಶಂಖಕೂಟ ವೃಷಭ ಹಂಸ . . . ಶಿವಿರಿಯಂಬೈದು ಕುಧರಂಗಳೇ . . . ಸುರಸಂತತಿಗಾಶ್ರಯಂಗಳಾಗಿರ್ಕುಂ (ವಿವೇ. ೧೭೩). [ಸಂ.]

ಹಂಸಕ (ನಾ).೧. ಹಂಸಪಕ್ಷಿ; ಮರಾಳ. ೨. ಕಾಲಿನಲ್ಲಿ ತೊಡುವ ಒಂದು ಬಗೆಯ ಆಭರಣ; ಅಂದುಗೆ; ನೂಪುರ: ''ಮಂಜೀರಂ, ಹಂಸಕಂ - ಈ ೨

ಅಂದುಗೆ'' (ಹಲಾಯು. ೯೨-೪೦೬); ಚಾರುಹಂಸಕಮಂ ಸಮಂತಿಕ್ಕಿ ಝಣತ್ಕಾರಮಂ ಮಾಳ್ಪ ಕಿಂಕಿಣಿಗಳಂ . . . ಕಟ್ಟಿ (ಪದ್ಮರಾ. ೩-೪೫); ಹಂಸಕದುಲುಹು ಕಂಕಣನಾದಗೇಳ್ದಮೃತಾಂಶು ವದನೆಯೆದ್ದಳೆಂದು ಹಂಸನಾಥನಿಗೆ ಪಂದಿಸಿ ಕಣ್ಣುದೆಱೆದನದೇಂ ಸುಪಿಶೀಲನೊ ಚಕ್ರಿ (ಭರಚ.೪೧-೧೬೭). [ಸಂ.]

ಹಂಸಕುಳ (ನಾ). ಮರಾಳಗಳ ಗುಂಪು; ಹಂಸಗಳ ಸಮೂಹ: ಅಮರನದೀ ಹಂಸಕುಳಂ ಕಮಳಜ ಹಂಸೇಂದ್ರ ಸೇವೆಗೆಟ್ಟರ್ಪ ವಿಳಾಸಮದೆನಿಸಿ ದೇಸವೆತ್ತುವ . . . ಚಮರರುಹಂಗಳ್ (ಜಗವಿ. ೧-೩೮). [ಸಂ. ಹಂಸಕುಲ]

ಹಂಸಕ್ಷೀರನ್ಯಾಯ (ನಾ). [ತರ್ಕಶಾ] ಒಂದು ಬಗೆಯ ನ್ಯಾಯ; IP ಹಾಲಿಗೆ ನೀರು ಬೆರಸಿಟ್ಟರೆ, ಹಂಸ ಹಾಲನ್ನು ಮಾತ್ರ ಕುಡಿದು ನೀರನ್ನು ಬಿಡುವ ಹಾಗೆ ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಮಾತ್ರ ಗ್ರಹಿಸಬೇಕೆಂಬ ನ್ಯಾಯ: ಭಾವಶುದ್ಧಿಯನಳಿಯಲಾವ ಮಂತ್ರಸವಾಲು ಮಾನಸಸರೋವರದಿ ಹಂಸಕ್ಷೀರನ್ಯಾಯ (ನಲಮು. ೬೭-೧೨). [ಸಂ.]

ಹಂಸಗತಿ (ನಾ).೧. ಹಂಸ ನಡೆಯುವ ರೀತಿ,— ಭಂಗಿ; ಮರಾಳಗಮನ: 'ಹರಿ' ಎನ್ನೆ ಗರಿಕೆದರಿ ರಕ್ಕೆ ಹರಡುವ ಸಂತಚಿತ್ತದನುಕರಣೆಯೊಳು ಹಂಸಗತಿಗೆರೆದು (ಮಲಿದೇ. ೫೫-೬). ೨. [ಛಂದ] ವರ್ಣಛಂದಸ್ಸಿನ ಇಪ್ಪತ್ತಾರು ಛಂದಸ್ಸುಗಳಲ್ಲಿ ಇಪ್ಪತ್ತೊಂಭತ್ತು ಅಕ್ಷರಗಳುಳ್ಳ ವಿಕೃತಿಛಂದಸ್ಸಿನ ಒಂದು ವೃತ್ತ: ದಿವಿಜಷಡಂಬುಜ ಮಿತ್ರಗಣಪ್ರಕರಂ ಲಗಮುಂ ಕ್ರಮದಿಂ ಪದದೊಳ್ ವಿವರಿಸೆ ಬಂದು ವಿರಾಜಿಸೆ ವಿಶ್ರಮಣಂ ವಸುಸಂಖ್ಯೆಯೊಳ್ನಯದಿಂದವಿಚಳಿತಂ ರಸವೃತ್ತಿಯನಾಳ್ವೆಸೆಯುತ್ತಿರೆ ಕೇಳ್ಮಳಹಂಸಗತೀ ಭುವನದೊಳೀ ತೆಱದಿಂದಮೆ ಸಂದುದು ನಾಕಿಗನಿಂದುದು ಹಂಸಗತೀ (ಛಂದೋಂಬು. ೨-೧೮೭). [ಸಂ.]

ಹಂಸಗಮನೆ (ನಾ). ೧. ಹಂಸದಂತೆ ಮಂದಗತಿಯ ನಡಗೆಯುಳ್ಳವಳು; ಮರಾಳಗಮನೆ. ೨. ಬ್ರಹ್ಮನ ಹೆಂಡತಿ: (೬). [ಸಂ. ಹಂಸಗಮನಾ]

ಹಂಸಗ್ರೀವ (ನಾ). ಹಂಸದ ಕೊರಳು: ಹಂಸಗ್ರೀವನಿಹಿತ್ಕಕಪಾದನಿಳಾವಂದ್ಯನ ನಿಂದ್ಯನಬ್ಜಗರ್ಭಂ ಬಂದಂ (ಪಂಪಭಾ. ೧೨-೧೩೮). [ಸಂ. ಹಂಸಗ್ರೀವಾ]

ಹಂಸಚ್ಛದ (ನಾ). ಹಂಸದ ನವಿರಾದ ಗರಿ: ಕರಿದಂತಂ ಚಮರೀರುಹಂ ಪುಲಿದೊವಲ್ ಹಂಸಚ್ಛದಂ . . . ಚೂಡಾರತ್ನಮಂಬೀ ವನಾಂತರಸಂಜಾತಮನಾತನೋಲಗಿಸಿಗಂ ಸದ್ಯಸ್ಸುಸಂಘಾತಮಂ (ಪುಷ್ಪಸ. ೫-೧೦೨). [ಸಂ.]

ಹಂಸತೂಲ, ಹಂಸತೂಳ (ನಾ).೧. = ಹಂಸಚ್ಛದ: ಲಲಿತಮುದುತರಹಂಸತೂಲದ ತಳಿತ ಮಂಚದ ತಂಬೆಲರ ನಸುಸುಳಿವಿನಲಿ ಥಳಥಳಿಪ ಚಾಳಕಪಂಕ್ತಿ ರಂಜಿಸಲು (ಬಸವ. ೧೨-೧೪). ೨. = ಹಂಸತೂಲತಲ್ಪ: ಹರಿಸಹಿತನಿಳಯದೊಳ್ ಷಡ್ರಸಾದಿಗಳ ನಾರೋಗಿಸಿ ವಿಮಲ ಹಂಸತೂಲದೊಳ್ಪವಡಿಸಿದಂ (ಚೈಮಿಭಾ.೨-೬೪). **ಹಂಸತೂಳ**: ೧. ಮೃದುವಂ ಪಚ್ಚಡಿಸಿದ ಹಂಸತೂಳದ ಹಾಸುಮಂಚವನಾಸೆಗೆಯ್ವುತಂ (ನಂಜಿಕ. ೧೦-೭೮); ಒಡನೊಪ್ಪುವ ಹಂಸತೂಳದ ತಲ್ಪವ ಕಡುಚೆಲ್ವ ಮಿಸುನಿಮಂಚದಲಿ ಮಡಿಸಿ ಹಚ್ಚಡಿಸಿ ರತ್ನದ ಬಟ್ಟುವೊಱಗ ಸಂಗಡಿಸಿದರತಿಮುದದಿಂದ (ಕಂನಪ. ೪-೧೩). [ಸಂ.]

ಹಂಸತೂಲತಲ್ಪ, ಹಂಸತೂಲತಳ್ಪ, ಹಂಸತೂಳತಲ್ಪ (ನಾ). ಹಂಸದ ನವಿರಾದ ಗರಿಯನ್ನು ಹಾಕಿ ತಯಾರಿಸಿದ ಹಾಸಿಗೆ; IP ಬಹಳ ಮೃದುವಾದ ಹಾಸಿಗೆ : ವರಹಂಸತೂಲತಲ್ಪದೊಳು ಮಣಿವೆಳಗಿನೊಳು . . . ಪವಡಿಸುವ ಸುಕುಮಾರನು (ಪಚಕಾ. ೧೨-೩೦). **ಹಂಸತೂಲತಳ್ಪ**: ಸಜ್ಜವನೆಯೊಳುಪಾಧಾನ ವಿರಾಜಮಾನಹಂಸತೂಲತಳ್ಪದೊಳ್ ವಿಶ್ರಮಿಸಿ (ಶಂಠಾವಪ. ೫-೩೦ ವ). **ಹಂಸತೂಳತಲ್ಪ**: ಮಿಱುಪ ರತ್ನದ ಶಾರದಾಮಂಟಪದೊಳು ವರಹಂಸತೂಳತಲ್ಪದಲಿ ತರುಣಿ . . . ಧರಣೀಶನ ಕಂಡಳು (ಕಂನಪ. ೧೧-೧೧೭). [ಸಂ.]

ಹಂಸತೂಲತಳ್ಪ 'ಹಂಸತೂಲತಲ್ಪ' ನೋ.

ಹಂಸತೂಲಿಕಾತಲ್ಪ (ನಾ).= ಹಂಸತೂಲತಲ್ಪ: ಹಂಸತೂಲಿಕಾತಲ್ಪ ಎಂದರೆ ಹಂಸಗಳ . . . ತುಪ್ಪುಳವನ್ನು . . . ಹತ್ತಿಗೆ ಬದಲಾಗಿ ಉಪಯೋಗಿಸಿ ತುಂಬಿ ಹೊಲಿದ ಲೇಪು (ಸಾಹಿಪೀ. ೫೬). [ಸಂ.]

ಹಂಸತೂಳ 'ಹಂಸತೂಲ' ನೋ.

ಹಂಸತೂಳತಲ್ಪ 'ಹಂಸತೂಲತಲ್ಪ' ನೋ.

ಹಂಸತ್ವ (ನಾ). ಬ್ರಹ್ಮಪದವಿ; ಮೋಕ್ಷ: ಬಳಿಕ ಹಂಸತ್ವದಲಿ ಗಗನವೆ ನಿಲುಗು ಹಮ್ಮು ಮಹತ್ವದಲಿ ಮಹದಳಿವು ಮಾಯೆಯೊಳಾಕೆಯಡಗುವಳೀತನಂಘ್ರಿಯಲಿ (ಕುವ್ಯಾಸ. ೯-೨೪). [ಸಂ.]

ಹಂಸಧ್ವನಿ (ನಾ).೧. ಹಂಸಪಕ್ಷಿಯ ಧ್ವನಿ. ೨. [ಸಂಗೀತ]ಒಂದು ರಾಗದ ಹೆಸರು: ಹಂಸಧ್ವನಿರಾಗದ ಪಾತಾಪಿ ಗಣಪತಿಂ . . . ಈ ಕೆಲವು ಕೃತಿಗಳನ್ನು ಮಾತ್ರ ಅವರು ತಮ್ಮ ಸಂಗೀರಿಗಳಲ್ಲಿ ಹಾಡುತ್ತಿದ್ದರು (ಸಂಗೀತ. ೫). [ಸಂ.]

ಹಂಸಪದ (ನಾ). ಹಂಸದ ಹೆಜ್ಜೆ; ಮರಾಳದ ಪಾದ: ಇಲ್ಲಿಯದ ಚೈತ್ರರಥ ದೊಳ್ಸಲ್ಲಮುಮೆಂದಜನೆ ಹಂಸಪದನಂ ತಪ್ಪೆಂದಲ್ಲಿಟ್ಟನೆನಿಪುವಾ ವನದಲೊಕ್ಕ ಪರಾಗದಲ್ಲಿ ಹಂಸಪದಂಗಳ್ (ಚಂದ್ರಪ್ರ. ೧೦-೧೯). [ಸಂ.]

ಹಂಸಪದಿ (ನಾ). ಒಂದು ಬಗೆಯ ಸಸ್ಯ: ''ಗೋದಾಪದೀ - ಹಂಸಪದಿ, ನೆಲದಾಳೆ'' (ಓಷಧಿ. ೫೧). [ಸಂ.]

ಹಂಸಪಾದ (ನಾ).೧. ಹಂಸದ ಹೆಜ್ಜೆ; ಮರಾಳದ ಪಾದ. ೨. ಒಂದು ಬಗೆಯ ಸಸ್ಯ; ಇಂಗುಳಿಕ: ''ಹಿಂಗುಳಂ ಹಂಸಪಾದಮೆನೆ ಕುರುವಿಂದ'' (ಮಂಗರಾ.೩೧-೭). ೩. ಬರವಣಿಗೆಯಲ್ಲಿ ಅಕ್ಷರ ಮೊದಲಾದುವುಗಳನ್ನು ಬಿಟ್ಟಿರುವ ಸ್ಥಳವನ್ನು ತೋರಿಸಲು ಪಂಕ್ತಿಯ ಕೆಳಗಡೆ ಹಾಕುವ ಚಿಹ್ನೆ : ಪ್ರಯೋಗದಲ್ಲಿ ಬಿಟ್ಟುಹೋಗಿದ್ದ ಒಂದು ಸಾಲನ್ನು ಪುಟಕಟ್ಟಿದ ಕರಡಿನಲ್ಲಿ ಹಂಸಪಾದ ಹಾಕಿ ಸೇರಿಸಿದ್ದಾಯಿತು (ರೂಢಿ). [ಸಂ.]

ಹಂಸಪಾದಿ (ನಾ). ಒಂದು ಬಗೆಯ ಸಸ್ಯ: ''ತ್ರಿಪದಿ ಧೃತಮಂಡಳಿ ಮರಾಳಪದಿಯೆನ ಹಂಸಪಾದಿ'' (ಮಂಗರಾ.೪೨-೩೮); ಆದಿತ್ಯವಾರ ಉದಯಕಾಲದಲ್ಲಿ ಮೌನವಾಗಿ ಹಂಸಪಾದಿಯ ಮೂಲವ ತಂದು ಇರಿಸಿಕೊಂಡಿದ್ದು ಬೇಳು ಕಚ್ಚಿದರೆ ಆ ಬೇರ ಬಾಯಲ್ಲಿ ಹಾಕಿಕೊಂಡು ಅಗಿದು ಕಿವಿಯಲ್ಲಿ ಉರುಹಲು ವಿಷಹರ (ವೈದ್ಯಸಾ. II, ೧೯೩); ಕಹಿಪಡವಲ, ಎಸಗದ ಬೇರು . . . ಹಂಸಪಾದಿ ಬೇರು, ಬಜೆ, ಶುಂಠಿ ಇವಂ ಕಷಾಯಂಗೈದು ಸೇವಿಸೆ ದೋಷಜ್ವರಂ ಗುಣಮಕ್ಕು (ಸಕವೈ. ೧೦೬). [ಸಂ. ಹಂಸಪಾದಿನ್]

ಹಂಸಬೆಂಡಿ (ನಾ). ಒಂದು ಬಗೆಯ ಮರ: ಹಂಸಬೆಂಡಿ: ಮಧ್ಯಮ ಆಕಾರದ ವೃಕ್ಷ. ಮೇಲಾದ ಜಂತೆಗಳಾಗುತ್ತವೆ (ಕಭಾಗ. ೪೯). [ಹಂಸ + < ಬೆಂಡಿಗ]

ಹಂಸಭೇದ (ನಾ). ಒಂದು ಬಗೆಯ ವನಸ್ಪತಿ: ''ಅಭವ್ಯಃ - ಹಂಸಭೇದ'' (ಓಷಧಿ. ೪). [ಸಂ.]

ಹಂಸಮಂಡಳಿ (ನಾ). [ನಾಟ್ಯ] ಹದಿನಾರು ಜನರು ಸೇರಿ ಮಾಡುವ ಒಂದು ಬಗೆಯ ನೃತ್ಯ: ಹಂಸಕಲಾಂಭೋಜಹಂಸನೆನಿಪ ನೃಪಹಂಸನ ಸಮ್ಮುಖದಲ್ಲಿ ಹಂಸಮಂಡಳಿಯೆಂಬ ನಾಟ್ಯವ ತೊಡಗಿದರೇಂ ಸೊಬಗು (ಭರಚ. ೧೩-೧೧೭). [ಸಂ. ಹಂಸಮಂಡಲೀ]

ಹಂಸಮಂತ್ರ (ನಾ). ಪರಮಾತ್ಮನನ್ನು ಕುರಿತು ಹೇಳುವ ಮಂತ್ರ : ಇವಕೆಲ್ಲ ಪ್ರಾಣಾಯಾಮ ಹಂಸಮಂತ್ರವೇ ಮುಖ್ಯವು (ನವಮೋ. ೧೮-೨೪). [ಸಂ.]

ಹಂಸಮತ್ತ (ನಾ). [ಛಂದ] ವರ್ಣಛಂದಸ್ಸಿನಲ್ಲಿ ಪ್ರಸಿದ್ಧವಾದ ಇಪ್ಪತ್ತಾರು ಛಂದಸ್ಸುಗಳಲ್ಲಿ, ಪಾದದಲ್ಲಿ ಹನ್ನೆರಡುಅಕ್ಷರಗಳನ್ನುಳ್ಳ ಜಗತಿ ಛಂದಸ್ಸಿನ ಒಂದು ವೃತ್ತ: ಇಂದುಯುಗಾಗ್ನಿ ವಯೋಗಣಂಗಳಿತ್ತಂ ಬಂದಿರೆ ಪಾದದೊಳೊಂದಿ ರಾಜಿಸುತ್ತುಂ ಸುಂದರಿ ನಾಕಿಗನಿಷ್ಟದಿಂದೆ ವೃತ್ತಂ ಸಂದುದು ನಾಮದೊಳೊಪ್ಪಿ ಹಂಸಮತ್ತಂ (ಛಂದೋಂಬು.೨-೧೩೪). [ಸಂ.]

ಹಂಸಮಿಥುನ (ನಾ). ಹೆಣ್ಣು ಮತ್ತು ಗಂಡು ಹಂಸಗಳ ಜೊತೆ; ಮರಾಳ ದಂಪತಿ : ಅಗಲದ ಹಂಸಮಿಥುನಮೆನೆ . . . ಅಗಲದೆ ನಲಿಯುತಿರ್ದರಾ ದಂಪತಿಗಳ್ (ಜಗವಿ. ೨-೩೨). [ಸಂ.]

ಹಂಸಯಾನೆ (ನಾ). ಹಂಸದಂತೆ ನಡಗೆಯುಳ್ಳವಳು; ಹಂಸಗಮನೆ: (೬). [ಸಂ. ಹಂಸಯಾನಾ]

ಹಂಸರಾಜ (ನಾ).೧. ಹಂಸಗಳ ಒಡೆಯ; ರಾಜಹಂಸ. ೨. ಒಂದು ಬಗೆಯ ಸಸ್ಯ: (ಮೃಡಿಗಿ.೩-೪೩).೩. ಒಬ್ಬ ಕನ್ನಡ ಕವಿಯ ಹೆಸರು: ಎರಡು ಪದಮುಂ

ತದ್ಭವಮನೆಯ್ದುವಲ್ಲಿಯೊಂದು ಪದಮನುಬಿಸಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ ತರವೇಟ್ಮೂಣಿಕ್ಕಭಂಡಾರದ ಪುಟಿಕೆಗಳಂ (ಶಮುದ.೨೯೯ ಪ್ರಯೋ). [ಸಂ. ಹಂಸರಾಜನ್]

ಹಂಸರುತಿ (ನಾ). ಹಂಸಗಳ ಶಬ್ದ ,— ಧ್ವನಿ: ಗೃಹದೀರ್ಘಕೆಯಿಂದೆಟ್ಟರ್ತ ಹಂಸರುತಿ ಮಧುರಮಧುಕರೀಝಂಕಾರಂ (ಮಲ್ಲಿಪು.೪-೫೮). [ಸಂ.]

ಹಂಸಲೋಚನಶೋಭಿ (ನಾ).೧. ಸೂರ್ಯನನ್ನು ಕಣ್ಣಲ್ಲಿ ಉಳ್ಳುದರಿಂದ ಶೋಭಿಸುವವನು; ವಿಷ್ಣು. ೨. ಹಂಸಗಳ ನೋಟವುಳ್ಳದ್ದರಿಂದ ಶೋಭಿಸುತ್ತಿರುವುದು; ಸರೋವರ: ವನಮಾಲಿಯಂದದಿಂ ಪದ್ಮಿ ಪದ್ಮಿನಿಯ ವೋಲ್ಕುವನಕುಕ್ಷಿಯ ತೆಱದಿ ಹಂಸಲೋಚನಶೋಭಿ ಹಂಸಲೋಚನಶೋಭಿಯಂತೆ ವರಚಕ್ರಿ ವರಚಕ್ರಿಯವೊಲು ಅನಿಮಿಷಾಶ್ರಯಮೂರ್ತಿ (ಚೈಮಿಭಾ.೧೫೫-೧೨). [ಸಂ. ಹಂಸಲೋಚನಶೋಭಿನ್]

ಹಂಸವಾಹನ (ನಾ). ಹಂಸವನ್ನು ವಾಹನವಾಗಿ ಉಳ್ಳವನು; ಬ್ರಹ್ಮ. [ಸಂ.]

ಹಂಸವ್ಯೂಹ (ನಾ). ಹಂಸದ ಆಕಾರದಲ್ಲಿರುವ ಸೈನ್ಯದ ರಚನೆ: ತುರಗವಱು ವತ್ತಾಱುಕೋಟಿಯನುರುಮದೇಭವನೆಂಟುಲಕ್ಷವ ವರರಥವನಱುವತ್ತುಸಾವಿರವನು ಸಗಾಢದಲಿ . . . ಹಂಸವ್ಯೂಹವನು ಸಡಗರಿಸಿದನು (ಕುವ್ಯಾದ್ಯೂ.೯-೨೦). 'ಚಕ್ರವ್ಯೂಹ', 'ಪದ್ಮವ್ಯೂಹ' ಪರಾ. [ಸಂ.]

ಹಂಸಶಾಬಕ (ನಾ). ಹಂಸದ ಮರಿ; ಮರಾಳಶಿಶು: ಮುಕುರದೊಳು ಮಾರ್ಪೊಳಿವ ಚಂದ್ರಮಂಡಲದಂತೆ ಸುಕರಾಂಬುವೊಳ್ ಪೊಳೆವ ಹಂಸಶಾ[ಪಾಕಾಂ. ಸಾ]ಬಕದಂತೆ (ಬಸರ.೧-೧೨೨). [ಸಂ.]

ಹಂಸಸಲ್ಲಾಪ (ನಾ). ಪರಮಾತ್ಮನ ವಿಷಯದಲ್ಲಿ ಮಾತನಾಡುವುದು,— ಸಂಭಾಷಣೆ: ಪುಂಸರಿಗೆ ಪೂರ್ವಕೃತಪುಣ್ಯಪರಿಪಾಕದಿಂ ಹಂಸಸಲ್ಲಾಪ ಸಂದರುಶನಾದಿಗಳೊಳ್ ರಿರಂಸೆ ಪುಟ್ಟುವುದಲ್ತೆ (ವಂಕಾರಾ.೨-೩-೧೨೪). [ಸಂ.]

ಹಂಸಾಯ (ನಾ). ಹೊಸದಾಗಿ ಬಿತ್ತುವರಿ ಮಾಡಿದ ಭೂಮಿಯ ಮೇಲೆ ಹಾಕುವ ಕಂದಾಯ: (ಕೃಸ್ಮಗ.II, ೫೪೯). [ಸಂ.]

ಹಂಸಾರ್ಭಕ (ನಾ).= ಹಂಸಶಾಬಕ: ನೆಲವರ್ಚುವ ಪೆಣ್ಗಳ ಕರತಳದಿಂ ಕರತಳಕೆ ಬರ್ಪ ಬಾಲಕನಾಗಳ್ ಗೆಲವಂದಂ ಕಂದಾವರೆಯಲರಿಂದಲರ್ಗಯ್ದೆ ತಳರ್ವ ಹಂಸಾರ್ಭಕನಂ (ರಾಜಶೇ. ೪-೬೯). [ಸಂ.]

ಹಂಸಾವಳಿ (ನಾ). ಒಂದು ಬಗೆಯ ಸೀರೆ : ಪಳಯು ಪುಟ್ಟಾವಳಿಯು ನೇತ್ರಾವಳಿಯು ಹಂಸಾವಳಿಯು (ಬಸಪು.೧೧-೨೫). [ಹಂಸ + < ಪಳ್ಳಿ (< ಪಲ್ಲಿ)]

ಹಂಸಿ (ನಾ).೧. ಹೆಣ್ಣುಹಂಸ: ಶ್ರೀಕಾಂತ ತನ್ನುರಃಪದ್ಮಾಕರದೊಳ್ ಹಂಸಿಯಂತೆ ನೆಲಸಿರೆ (ಪುಪ್ರಪು.೩-೧). ೨. ಒಂದು ಬಗೆಯ ಸಸ್ಯ: "ಪರಿಪಾಲೀ-ಹಂಸೀ" (ಓಷಧಿ.೯೨). [ಸಂ. ಹಂಸೀ]

ಹಂಸೀಭಾವ (ನಾ). ಹಂಸದ ರೀತಿ : ಶ್ರೀವಿಶದವರ್ಣ ಮಧುರಾರಾವೋಚಿತೆ . . . ಸರಸ್ವತಿ ಹಂಸೀಭಾವದೆ ನೆಲೆಗೊಳ್ಸಿ ಕೂರ್ತು ಮನ್ಮಾನಸದೊಳ್ (ಕವಿರಾ. ೧-೩). [ಸಂ.]

ಹಂಸೆ (ನಾ). ೧. = ಹಂಸಿ ೧ : ಚಕೋರಂ ಹಂಸೆ ಕುರ್ಕುಗಿಳಿ . . . ಮೊದಲಾಗೂಡೆಯ ಗಗನಚರಂ (ವಡ್ಡಾರಾ. ೯೭-೯); ಅರಳಿಯ ಮರದ ಮೇಲೊಂದು ಹಂಸೆ ಗೂದನಿಕ್ಕಿತ್ತ ಕಂಡೆ (ಅವಚಂ. ೪೯-೨೦೬); ಹಂಸೆಗಳ ನಡೆಗಳ ಹೆಟ್ಟುಗೆಯರುಣಬಡಿಸಿದರು ಬಹುವಿಧದ ಭಕ್ಷ್ಯಗಳ (ತೂರರಾ. ೬-೫೫-೪೦). ೨. = ಹಂಸಿ ೨ : "ಮರಾಳಿಕಾ-ಹೆಮ್ಮಿಟಲ, ಹಂಸೆ" (ಓಷಧಿ.೧೧೦). [ಸಂ. ಹಂಸ]

ಹಂಹ (ನಾ). ಪಾಪ; ಕರ್ಮ: "ಹಂಹಮನಲ್ಕೆ ಪಾಪ"(ಕರ್ನಾನಿ. ೪೩); ಶ್ರೀರಾಮರಂ ವೊಕ್ಕಳಂ ತನ್ನೊಂದು ಹಂಹದಟಿವಗ್ಗಿನ ಬೆಸಗೆಯ್ಮೆಯಿಂ ತೆಗಟ್ಟ ಕೀಲನ ದುರ್ಗತಿಗಿಟ್ಟಿವೆಂ (ರಾಮಾಶ್ವ. ೧೧೧-೧೩). 'ಹಂಹಗೆಯ್ತ' ಪರಾ. [< ಸಂ. ಅಂಹ]

ಹಂಹಗೆಯ್ತ (ನಾ). ಪಾಪದ ಕೆಲಸ; ಕೆಟ್ಟ ಕೆಲಸ: ಮದಿಸಿದ ಪಾಹಗೆಯ್ತದಳವಾನಿಸ ದಣ್ಣಾಳಿಯನ್ನದುಂಟೆನುತ್ತದಿರಿಪ (ಸಂಪಪ. ೬೯-೯). [ಹಂಹ + ಕೆಯ್ತ]

ಹಕನಾಕ (ನಾ). (ಉಕ) ಯೋಗ್ಯತೆಯಿಲ್ಲದವನು; ಕ್ಷುದ್ರಮನುಷ್ಯ: ಅಂತಿಂತಹ 'ಹಕನಾಕ' ಗಳ ಪಾಲುಮಾಡಲು ಬಾಳವ್ಯ ಸುತರಾಂ ಒಪ್ಪಲಿಲ್ಲ (ಗಂಗಾಗಾ. ೮೨); ಇಷ್ಟಾಗಿ ಅವಾ ಆರಿಸಿ ಬಂದರ . . . ನಮಗೇನು ಒಂದು ಐದುರೂಪಾಯಿ ಪಗಾರ ಹೆಚ್ಚು ಕೊಡತಾನೇನು? ಭಲೆ ಹಕನಾಕ ಅವ (ಅಪನಾ.೨೧೪).

[<— ಮರಾ. ಹಕನಾಕ, ಹಕನಾಹಕ = ಏನಾಕಾರಣ]

ಹಕಲ (ಗು). ಅಖಂಡವಾದ; ಸ್ಥಿರವಾದ: 'ಹಕಲಮನಸು' ಪರಾ.

[< ಸಂ. ಅಕಲ]

ಹಕಲಮನಸು (ನಾ). ಸ್ಥಿರವಾದ ಮನಸ್ಸು; ಚಂಚಲವಲ್ಲದ ಮನಸ್ಸು: ಕಕುಲಾತಿ ತೊರಿಯದೆ ಸಕಲ ಸೊಗಸಿನಿಂದ ಹಕಲಮನಸಿನಲ್ಲಿ ಬಕನು ಕುಳಿತು ತನ್ನ ಭಕುತಿಗೆ ಒಂದು ಕುಯುಕುತಿಯ ನಡಿಸಿ ಉದಕತೀರವಿದ್ದಂತೆ ಬಕುತಿಯ ತೋರುವನೊ (ಎಸಾಸು. ೬೬-೪).

[ಹಕಲ + ಮನಸು]

ಹಕಲು 'ಹಕ್ಕಲ್' ನೋ.

ಹಕಳಾಡು (ಕ್ರಿ).೧. ಅಲುಗಾಡು. ೨. ಅಶಾಶ್ವತವಾಗಿರು (?): ಯಿವಿರ್ಗೆ ಚಪರ ಕಾಣಿಕೆಯಿಲ್ಲ ಮಕ್ರಿಕಾಣಿಕೆಯಿಲ್ಲ ಡೊಂಬಕಾಣಿಕೆಯಿಲ ಲಿಂಗಕಾಣಿಕೆಯಿಲ ಹಕಳಾಡದ ಬಿರುದು ಹಳದಿಗಡಿಗೆ ಹಗಲುದೀವಿಗೆ (ಎಕ. XVI. ಗುಬ್ಬಿ, ೬೯-೩೩; ?). [< ಅಗುಳಾಡು?]

ಹಕಾರ (ನಾ). 'ಹ' ಎಂಬ ಅಕ್ಷರ: ಸಂದ ಪಕಾರಕ್ಕೆ ಹಕಾರಂ ದೊರೆಕೊಳ್ಗುಂ ವಿಕಲ್ಪದಿಂ (ಶಮುದ. ೧೫೯). [ಸಂ.]

ಹಕಾರಿಹೊಡೆ (ಕ್ರಿ). ಕೂಗಿಡು; ಬೊಬ್ಬೆಹೊಡೆ: ಕೇವಲ ಹಾದೀ ತಪ್ಪಿಕೊಂಡ ಮನುಷ್ಯನೊಬ್ಬನು 'ಹಕಾರಿ' ಹೊಡೆಯುವಂತೆ ಕೂಗುಗಳು ಕೇಳಿಸುತ್ತಿದ್ದವು (ಕಾಕಾ.೧೦೯).

[ಹಕಾರಿ (P <— ಮರಾ. ಹಾಕಾರಣೇ = ಜೋರಾಗಿ ಕೂಗು)+ ಹೊಡೆ, (< ಪೊಡೆ,)]

ಹಕೀಕತ್, ಹಕೀಕತು, ಹಕೀಕತ್ತು (ನಾ). ನಿಜವಾದ ವರ್ತಮಾನ; ಸತ್ಯವಾರ್ತೆ; ವಾಸ್ತವಸುದ್ದಿ: ಹಕೀಕತ್ ಏನೇನೂಂತ ಅವರನ್ನು ತಡೆದು ನಿಲ್ಲಿಸಿ ಕೇಳಿದ (ಕುಮಾಕಾ. ೧೪೫). **ಹಕೀಕತು**: ನಿಮಗೆಲ್ಲಾ ಹಕೀಕತು ಮೊದಲಿನಿಂದಲೂ ಗೊತ್ತಾಐತಿ (ಗ್ರಾಮಾಯಿ. ೪೭೩); ಪದ್ಮನಾಭನು ಅವಳ ಹಕೀಕತನ್ನು ವಿವರವಾಗಿ ತಿಳಿದುಕೊಂಡು ಮೃದುಳಾಬೆಹನಳಿಗೆ ಅರುಹಿದ (ದರ್ಶನ. ೧೦೦). **ಹಕೀಕತ್ತು**: ಅವರ ಮಧ್ಯಯುದ್ಧದ ಹಕೀಕತ್ತು ಆಗಿ ಇರುವ ಸಮಯ ಜಲ್ದು ಆಗುವದರಿಂದಾ (ರಾಜೇಂದ್ರ. ೮೨); ನಿನಗೆ ಇನ್ನೊಂದು ಹಕೀಕತ್ತು ಹೇಳೋದು ಮರೆತಿದ್ದೆ ಅನಂತಾ (ಬೀಳತ. ೧೫೫); ಎಲ್ಲಾ ಹಕೀಕತ್ತು ಕೇಳಿ ಕಾಕಾನು ಬಹಳ ಚಡಪಡಿಸಿದ (ವ್ಯನ. ೪೪೫).

[<— ಅರ. ಹಿಂ. ಹಕೀಕತ್; ಮರಾ. ಹಕೀಕತ್, ಹಕೀಗತ್]

ಹಕೀಕತು 'ಹಕೀಕತ್' ನೋ.

ಹಕೀಕತ್ತು 'ಹಕೀಕತ್' ನೋ.

ಹಕೀಮ (ನಾ). ಯುನಾನಿವೈದ್ಯ: ಹಕೀಮರ ಲೇಹ್ಯ ಮುರಬ್ಬ ಎಲ್ಲವನ್ನು ತರಿಸಿದಂತೆ ತಿಪ್ಪೆಗೆ ಎಸದಾಯಿತು (ಸಿಡಿಲು. ೧೦೬); ಹಕೀಮರಿಗೆ ಹೇಳಿ ಕಳುಹಿಸಲೆ (ಕೃಷ್ಣಭಾ. ೩); ದೇಶೀಯ ಹಕೀಮರು ಯಾವ ಫಲವೆಂದು ಹೇಳಬಹುದು (ಕಮಕ. ೧೮).

[<— ಅರ. ಹಿಂ. ಮರಾ. ಹಕೀಮ್]

ಹಕೋರಿ (ನಾ). ಒಡೆತನ; ಅಧಿಕಾರ; ಸ್ವಾಮ್ಯ (?): ಭೈರವದೇವಒಡೆಯರು ತಮ್ಮ ಹಕೋರಿಯ ಒಳಗಣ ಬಳನುನಾಡ ಕೈಯಲ್ಲಿ ಕಾಣಿಕೆಯ ಮಾಡಿಕೊಂಡು (ಕ್ರಾ.I, ೫೧-೬; 1432). [< ಹಕ್ಕುದಾರಿ?]

ಹಕ್ಕರಕಿ , ಹಕ್ಕರಿಕೆ, (ನಾ). ಒಂದು ಬಗೆಯ ಸೊಪ್ಪು; ಶಂಖಿನಿ: ಉರುಳಿಗಡ್ಡಿ, ಬಳ್ಳೊಳ್ಳಿ, ಚಟ್ಟಿ, ಹಕ್ಕರಕಿ, ಹೆಸರುಕಾಳು ಎಲ್ಲಾ ನನ್ನ ಬಯಕೆಯ ಜೀನಸುಗಳೇ ಆಗಿದ್ದವು (ವ್ಯನ. ೧೧೫). **ಹಕ್ಕರಿಕೆ**: "ಶಂಖಿನೀ, ಚೋರಪುಷ್ಪೀ, ಕೇಶಿನೀ, ಕಡಿಯಾಲದ ಗಿಡದ ಪೆಸರುಗಳು, ಹಕ್ಕರಿಕೇಸೊಪ್ಪಿನ ಹೆಸರು" (ಸಿದ್ಧಾಂತಿ.೧೪೧). 'ನಾಯಿಹಕ್ಕರಿಕೆ ಗಿಡ' ಪರಾ. [?]

ಹಕ್ಕರಕ್ಕೆ 'ಪಕ್ಕರಿಕೆ' ನೋ.

ಹಕ್ಕರಿ 'ಪಕ್ಕರ,' ನೋ.

ಹಕ್ಕರಿಕೆ, 'ಹಕ್ಕರಕಿ' ನೋ.

ಹಕ್ಕರಿಕೆ, 'ಪಕ್ಕರಿಕೆ' ನೋ.

ಹಕ್ಕರಿಕ್ಕೆ 'ಪಕ್ಕರಿಕೆ' ನೋ.

ಹಕ್ಕರಿಗೆ 'ಪಕ್ಕರಿಕೆ' ನೋ.

ಹಕ್ಕರೆ 'ಪಕ್ಕರೆ$_1$' ನೋ.

ಹಕ್ಕಲ್, ಹಂಕಲು, ಹಂಕಳು, ಹಕಲು, ಹಕ್ಕಲ, ಹಕ್ಕಲು, ಹಕ್ಕಲ್ಲು, ಹಕ್ಕು (ನಾ).೧. (ಬೆಳೆ ಕೊಯ್ದ) ಬಯಲುಪ್ರದೇಶ; ಬೀಳು; ಪಾಳು: ಆ ಗರ್ದ್ದೆಯ ತೆಂಕಣ ಹಳ್ಳದಿಂ (೦) ತೆಂಕಲ್ ಹಕ್ಕಲ್ ಮತ್ತರೊಂದು (ಇಆ. V, ೧೭-೨೯; 1019). **ಹಂಕಲು:** ೧. ಇವು ಬೇರೆ ಬೇರೆ ಸ್ಥಿತಿಯ ನೆಲ; ಹಂಕಲು ಬೆಳೆ ಕುಯ್ದ ನೆಲ (ನಮ್ಮನು.೨೪೩). ೨. ಹೊಲದಲ್ಲಿ ಚಲ್ಲಾಡಿದ ತೆನೆ: ಹಂಕಲು ಆಯುತ್ತಿದ್ದವನಿಗೆ ಅರಿಹುಲ್ಲು ಸಿಕ್ಕಿದ ಹಾಗಾಯ್ತು (ಹುಟ್ಟಿಹ. ೧೫೦). **ಹಂಕಳು:** ೧. ದನವಂ ಕೊಂಡು ಹಂಕಳು XXX ಮುಚ್ಚುವಲ್ಲಿ (ಎಕ.VIII, ಸೊರಬ. ೩೦೯-೬; 1212). **ಹಕಲು:** ೧. [ಬಿಟ್ಟಿ]ಗೊಂಡದ ಬಳಿಯ ಹಕಲು ಮತ್ತ೧ (ಸೌಇ. XX ,೭೬-೫೮; 1118). **ಹಕ್ಕಲ:** ೧.ಎರಡು ಹಕ್ಕಲದ XXX ಹತ್ತಿಯ ಮಳವೆ (ಸೌಇ.XX , ೭೧-೬೪; 1109); ಹಕ್ಕಲದ ದಾರಿಯಲ್ಲೂ ಕೆಲವು ಭೂತದ ಕಲ್ಲುಗಳಿವೆ (ಪದ್ಮಸ. ೨೦); ಕಟ್ಟಂಗೆರೆಯ ಉಬ್ಬಿನ ಇಕ್ಕಡೆಯ ಹಕ್ಕಲದ ನಡುವೆ ಮಲೆನೂರಿನಿಂದ ಹಾದು ಬರುವ ಕೆಮ್ಮಣ್ಣಿನ ಮಾರ್ಗವಿದೆ (ದೇವಹಂ. ೫೨). ೩. "ಬೀಕಲು; ಹಾಳಾಗಲು ಬಂದ ಬೆಳೆ" (ಜಾನಕೋ. ೫೧). **ಹಕ್ಕಲು:** ೧. ದೇವರ ಸೊಡರೆಣ್ಣೆಗೆ ಬಿಟ್ಟ ಹಕ್ಕಲು ಮತ್ತರೊಂದು (ಎಕ.VIII, ಸೊರಬ. ೨೯೯-೨೭; 1074); ಬಲ್ಲವತ್ತದ ಕಟ್ಟೆಯ ಒತ್ತಾರಿಣ ಹಕ್ಕಲ ಬರದು (ಎಕ.VII, ಶಿವಮೊ. ೨೬-೨೫೪; 1524); ಹಕ್ಕಲು ಇಲ್ಲದ ಒಕ್ಕಲು ಅಲ್ಲ ಮಕ್ಕಳಿಲ್ಲದ ಭಾಗ್ಯವಿಲ್ಲ (ಗಾದೆ). ೩. ಹಕ್ಕಲಂತೆ ಬಡಿಹಕ್ಕೆ ವಂದು ಮುಯ್ಯಿಲ್ಲದೊಕ್ಕಲಂತೆ ಬಡುಗುಲಿಗೆ ವಂದು (ಧರ್ಮಾಮೃ. ೩-೭೭). ೪. ಚೆಲ್ಲಾಡಿರುವಿಕೆ; ಚೆದರಿರುವಿಕೆ: ಕಾಣಿಕೆಯನಿತ್ತಖಿಳಸುಭಟಶ್ರೇಣಿ ಕಂಡುದು ನುಡಿಯ ಹಾಣಾಹಾಣಿಗಳ ಭಾಷೆಗಳ ಹಕ್ಕಲು ವೀರರುಕ್ಕುಗಳ (ಕುಮಾಶ. ೧-೨೬). **ಹಕ್ಕಲ್ಲು:** ೧. ತೋಟ ತುಡಿಕ್ಕೆ ಹಕ್ಕಲ್ಲು ಕುಂಮರಿ (ಎಕ.VI, ಕೊಪ್ಪ.೪೯-೨೨; 1392). **ಹಕ್ಕು:** ೧. 'ಹಕ್ಕುಗದ್ದೆ' ಪರಾ.

ಹಕ್ಕಲ ಕಾಯಕ = ಹೊಲಗಳಲ್ಲಿ ಕಾಳು, ತೆನೆ ಬೇರ್ಪಡಿಸುವ ಕೆಲಸ: ಮಡದಿ ಹಕ್ಕಲ ಕಾಯಕದೊಳು ಗೌರಮ್ಮನು ಕಸವಿಕೋಟೆಯ ಬಸವಣ್ಣ (ಲಶಿಂ. ೩೮-೨೬). **ಹಕ್ಕಲನು ಹೊಗಿಸು** = (ಆಲಂ) ಬಯಲಿಗೆ ಬರುವಂತೆ ಮಾಡು; ನಿರಾಶ್ರಯಗೊಳಿಸು: ಸುರಪಾಲಕನ ಪರಿಭವಿಸಿ ಹಕ್ಕಲನು ಹೊಗಿಸಿದನು (ನಿಭಾಗ. ೭-೩-೩). **ಹಕ್ಕಲಾಗು** = ೧. ಬಯಲಾಗು; ಗಿಡಮರಗಳಿಲ್ಲವಾಗು: ಬರಬರುತ್ತಾ ಕಾಡಿನಂಚು ಹಕ್ಕಲಾಯಿತು (ಮಲೆಮ. ೨೨). ೨. ಚದುರು; ಶೂನ್ಯವಾಗು: ಹೊಕ್ಕವರು ಹೆಣಗಿದರೆ ನಿಜೀಗರುಳೊಕ್ಕವಡಗುದಿರಿದವು ಮೋಹರ ಹಕ್ಕಲಾಗಲು ಹರಿದು ಸಬಳಿಗರಿಜೀದು ತೋಜೀದರು (ಕುಮ್ಮಾಭೀ. ೪-೪೨).

[ದೇ. ॥ ತಮಿ. ಪೊಱುಕ್ಕು= ಆಯು; ತುಳು. ಹಕ್ಕಲ್]

ಹಕ್ಕಲ 'ಹಕ್ಕಲ್' ನೋ.

ಹಕ್ಕಲಗೈಸು (ಕ್ರಿ). ಬೀದಿಪಾಲು ಮಾಡು; ನಿರ್ಗತಿಕನನ್ನಾಗಿ ಮಾಡು: ಪರಿಪರಿ ಭಯಂಗಳು ಹರಿಬಿಟ್ಟು ಎನ್ನನು ಹಕ್ಕಲಗೈಸದೆ ಪರಿಪಾಲನೆ ಮಾಡು (ಮೋಕ್ಷದೀ.೩೭-೫).

[ಹಕ್ಕಲ (< ಹಕ್ಕಲ್) + ಕೈಸು (< ಕೆಯ್ಸು)]

ಹಕ್ಕಲಾಯು (ಕ್ರಿ). (ಹೊಲದ ಬಯಲಿನಲ್ಲಿ ಬಿದ್ದಿರುವ) ತೆನೆಗಳನ್ನು ಆಯು,— ಶೇಖರಿಸು: "ಧ್ರಶ್ಮಾತಿ — ಹಕ್ಕಲಾಯ್ದಪಂ" (ಕಾಶಕ್ಕ. ೨೪೯).

[ಹಕ್ಕಲು (< ಹಕ್ಕಲ್) + ಆಯ್ದು$_1$(< ಆಯ್$_1$)]

ಹಕ್ಕಲಿಕೆ 'ಪಕ್ಕರಿಕೆ' ನೋ.

ಹಕ್ಕಲು 'ಹಕ್ಕಲ್' ನೋ.

ಹಕ್ಕಲುಗಡಿ (ನಾ). ಬಯಲಾದ ಮೇರೆ; ಇಲ್ಲದ ಸೀಮೆ: ಬಿಡದಲಾ ಕುರುಸ್ಯೆನ್ನ ಹಕ್ಕಲುಗಡಿಯ ಭಟರೊಗ್ಗಾಯ್ತಲಾ (ಕುಮ್ಮಾಗ. ೧-೬೭).

[ಹಕ್ಕಲು (< ಹಕ್ಕಲ್) + ಗಡಿ$_1$]

ಹಕ್ಕಲ್ಮೀಸೆ (ನಾ). (ಕೂಳೆಯಂತೆ) ಒರಟಾಗಿರುವ ಮೀಸೆ: ನೆಗಳ್ದ ಹಜೀಗಡ್ಡ ಹಕ್ಕಲ್ಮೀಸೆಗಳ್ ಮನಂಬುಗುವ ನೊಸಲೊಳ್ತೋರ್ಪ ಸಿತಭೂತಿ ಕಂಧರದೊಳಗ ಮಿಱುಪ ರುದ್ರಾಕ್ಷಮಾಲೆಯಚ್ಛಸ್ಫಟಿಕಮಣಿಗೂಡಿ ತೊಳಗುತಿರ್ಪ (ಅರಾಚ. ೧-೭-೮).

[ಹಕ್ಕಲ್ + ಮೀಸೆ]

ಹಕ್ಕಲ್ಲು 'ಹಕ್ಕಲ್' ನೋ.

ಹಕ್ಕಶಾಯಿ 'ಹಕ್ಕುಶಾಯಿ' ನೋ.

ಹಕ್ಕಳೆ (ನಾ).೧. ಬಿರುಕು ಬಿಟ್ಟು ಮೇಲೆ ಎದ್ದಿರುವ ಪದರ,— ಪೊರೆ,— ಸಿಪ್ಪೆ: ಆ ನಾಡೊಳಗೆ ಸ್ಥಳವೃತ್ತಿಯಾಗಿ ಹಕ್ಕಳೆಯ ಹೊಲನು ಮಂತ್ರಿ ಭೋಗಾಭ್ಯನ್ತವಾಗಿ ಕೊಟ್ಟು (ಎಕ. VII, ಶಿಕಾಂ. ೧೦೦-೭೦; 1129); ಗೋಡೆಗಳಿಗೆ ಅಂಗೈದಪ್ಪದ ಹಕ್ಕಳೆಗಳಾಗಿ ಅಂಟಿಕೊಂಡಿದ (ಗಂಗಾಸಾ. ೭). ೨. ಅರಗು; ಅಲಕ್ತಕ: "ಹಕ್ಕಳೆಯೆಲತ್ತಿಕೆಯೆನಿಕ್ಕು" (ಮಂಗರಾ. ೩೩-೮).

ಹಕ್ಕಳೆಯಾಗು = ಪದರವಾಗು; ಪೊರೆಯಾಗು: ಈ ಗುಳ್ಳೆಗಳು ಅತಿ ಸುಲಭವಾಗಿ ಒಡೆದುಕೊಂಡು ಹಕ್ಕಳೆಯಾಗುತ್ತವೆ (ಕಲರೂ.೬೬). [?]

ಹಕ್ಕಳೆಯೇಳು (ಕ್ರಿ). ಪದರವೇಳು; ಪೊರೆಯಾಗು: ಕಾಲಿನ ಹಿಮ್ಮಡಿಯು ಒಡೆದು ಹಕ್ಕಳೆಯೆದ್ದಿದೆ (ರೂಢಿ). [ಹಕ್ಕಳೆ + ಏಳು$_1$ (< ಏಱ್$_1$)]

ಹಕ್ಕಿ 'ಪಕ್ಕಿ' ನೋ.

ಹಕ್ಕಿಕಾರ (ನಾ). ಒಂದು ಬಗೆಯ ಔಷಧೀಸಸ್ಯ: ಹಕ್ಕಿಕಾರ, ಸೊಗದೆ, ಸಿಲದೆ, ನಾಯಿನಾರೆ ಇವಂ ಆಡಿನ ಹಾಲಲ್ಲಿ ಕೊಡಿಸುವುದು (ಎಚ್ಚಮ. ೧೪೭). [?]

ಹಕ್ಕಿನೋಟ (ನಾ).೧. ಪಕ್ಷಿಯು ಹಾರುವಷ್ಟು ಎತ್ತರದಿಂದ ಕಾಣುವ ಭೂದೃಶ್ಯ; ದೂರದಿಂದ ಕಾಣುವ ಸಮಗ್ರನೋಟ; ಪಕ್ಷಿನೋಟ: "ಎತ್ತರದಿಂದ ಊರು, ಮೊ.ಗಳ ವಿಶಾಲವಾದ ನೋಟ; ಹಕ್ಕಿನೋಟ (ರೂಪ) ಸೂಕ್ಷ್ಮನಿರೂಪಣ; ಒಟ್ಟಡಕ" (Birds Eye- View. ಇಂಕನಿ). ೨. (ಆಲಂ) ಯಾವುದಾದರೊಂದು ವಿಷಯದ ಸ್ಥೂಲವಾದ ವಿವರಣೆ: ಸಮಾಜರಚನೆ ಸಂಸ್ಕೃತಿ ಸಂಘಟನೆಗಳ ವಿಕಾಸವನ್ನು ಮೇಲೆ ಹಕ್ಕಿನೋಟದಿಂದ ಅವಲೋಕಿಸಲಾಗಿದೆ (ಮಾವಾದ. ೭೮). [ಹಕ್ಕಿ (< ಪಕ್ಕಿ) + ನೋಟ]

ಹಕ್ಕಿಪಿಕ್ಕಿ 'ಹಕ್ಕಿಬಿಕ್ಕಿ' ನೋ.

ಹಕ್ಕಿಬಿಕ್ಕಿ, ಹಕ್ಕಿಪಿಕ್ಕಿ (ನಾ). ೧. ಒಂದು ಬಗೆಯ ಅಲೆಮಾರಿಜನಾಂಗ; P ಹಕ್ಕಿಗಳನ್ನು ಹಿಡಿದು, ಮಾರಿ ಜೀವಿಸುವವರು: ಮೂರುರಾತ್ರಿ ಹಕ್ಕಿಬಿಕ್ಕಿಯವರನ್ನು ಕರಸಿ ಗೂಬೆನ ಹೊಡೀರಿ ಎಂದೆ (ಮನೋಸಂ. ೮೪). ೨. ಕೈಚಳಕ; ಕಣ್ಕಟ್ಟು; ಇಂದ್ರಜಾಲ: (ಕ). **ಹಕ್ಕಿಪಿಕ್ಕಿ:** ೧. ಚಿಂದಿ ಸೀರೆಗಳನ್ನು ಸುತ್ತಿದ್ದ ಇಬ್ಬರು ಹಕ್ಕಿಪಿಕ್ಕಿಯುವತಿಯರು . . . ನರ್ತಿಸುತ್ತಿದ್ದರು (ಸರ್ವಮಂ. ೫೯).

[P ಇದು ಪ್ರತಿಧ್ವನಿಶಬ್ದವಿರಬಹುದು]

ಹಕ್ಕಿರೋಗ (ನಾ). ಮೂಳೆ ಮೆತುವಾಗುವ ಒಂದು ಬಗೆಯ ಮಕ್ಕಳ ರೋಗ: ನಮ್ಮನೆ ಮಕ್ಕಳಿಗೆ ಮನುಷ್ಯರಿಗೆ ಬರುವ ಖಾಯಿಲೆಗಳು ಬರಬಾರದೆ? ನಾಯಿಕೆಮ್ಮು, ಹಕ್ಕಿರೋಗ . . . ಹುಲಿಹುಣ್ಣು — ಖಾಸ್‌ಬಂಗಲೆ ಖಾಯಿಲೆಗಳೆಲ್ಲಾ ನಮ್ಮ ಮನೆಲೇನೆ! (ತುಟಿಮಾ. ೨೯). [ಹಕ್ಕಿ(< ಪಕ್ಕಿ) + ರೋಗ]

ಹಕ್ಕಿವಾರ್ಜಿಹುಲ್ಲು (ನಾ). ಒಂದು ಬಗೆಯ ಹುಲ್ಲು: ಹಕ್ಕಿವಾರ್ಜಿಹುಲ್ಲು, ಮರಗತಟ್ಟು ಹುಲ್ಲು (ಮೃಚಿಗಿ. ೧೦-೧೬೩).

[ಹಕ್ಕಿ (< ಪಕ್ಕಿ) + ವಾರ್ಜಿ$_2$ + ಹುಲ್ಲು(< ಪುಲ್)]

ಹಕ್ಕಿವಾಹನ (ನಾ). ಗರುಡಪಕ್ಷಿಯನ್ನು ವಾಹನವಾಗಿ ಉಳ್ಳವನು; ವಿಷ್ಣು: ಹಕ್ಕಿವಾಹನನ ಗುಣ ಲೆಕ್ಕಿಸಿ ಪೊಗಳದೆ ಬೆಕ್ಕಸಬೆಱಗಾಗಿ ಅಕ್ಕಿಗೆ ತಿರುಗುವವ (ಕನಕ. ೧೦೭-೨೦). [< ಸಂ. ಪಕ್ಷಿವಾಹನ]

ಹಕ್ಕಿಶಕುನ (ನಾ). ಹಾಲುಹಕ್ಕಿಯಿಂದ ಸೂಚಿತವಾಗುವ ಶುಭಾಶುಭ: ಹಕ್ಕಿಶಕುನ ಕೇಳಿ ಬಂದರು (ರೂಢಿ). [ಹಕ್ಕಿ (< ಪಕ್ಕಿ) + ಶಕುನ]

ಹಕ್ಕಿಸಿಳ್ಳೆಗಿಡ (ನಾ). ಒಂದು ಬಗೆಯ ಸಸ್ಯ: "ಕೂರ್ಚಶೀರ್ಷ: . . . ಜೀವಕವೆಂಬುವ ಔಷಧ, ಹಕ್ಕಿಸಿಳ್ಳೆಗಿಡ" (ಸಿದ್ಧಾಂಶಿ. ೧೪೦).

[ಹಕ್ಕಿ (< ಪಕ್ಕಿ) + ಸಿಳ್ಳೆ$_1$ (< ಸಿಳ್ಳು$_1$) + ಗಿಡ (< ಗಿಡು)]

ಹಕ್ಕು$_1$ 'ಪಕ್ಕು$_1$' ನೋ.

ಹಕ್ಕು$_2$, ಪಕ್ಕು$_6$ (ನಾ). ೧. ಒಡೆತನ; ಅಧಿಕಾರ; ಸ್ವಾಮ್ಯ: ಎಲ್ಲರಿಗೂ ಸಾಮಾಜಿಕ, ರಾಜಕೀಯ, ಆರ್ಥಿಕ ನ್ಯಾಯನೀತಿಗಳಲ್ಲಿ ಸಮಾನ

ಹಕ್ಕುವುಂಟೆಂಬುದನ್ನು ಸಾರಲಾಗಿದೆ (ಯಃಪ್ರ. ೬೫); ಮದುವೆ ಎಂದರೆ ನಮ್ಮ ಜೀವನದ ಹಕ್ಕನ್ನು ಗಂಡಿಗೆ ಮಾರಿಕೊಂಡಂತೆ (ಕಾವೀ. ೧೯೪). ೨. ಗ್ರಾಮದ ಅಧಿಕಾರಿಗಳಿಗೆ ಆನುವಂಶಿಕವಾಗಿ ಕೊಡುವ ಪಾಲು; ವರ್ಷಾಶನ: ವೃತ್ತಿವಂತರು ಕಂದಾಯದ ಹಕ್ಕನ್ನು ಇಟ್ಟುಕೊಂಡು ಭೂಮಿಯ ಸ್ವಾಮ್ಯವನ್ನು ಸರ್ಕಾರದ ಕಡೆಗೊಪ್ಪಿಸಿದರು (ಹುಬ್ಬಸ. ೩). ೩. ಉದ್ಯೋಗ; ಕೆಲಸ: (೫). Δ ಪಕ್ಕು : ೧. ಆದೊಡಿನ್ನೀ ಕೇಡ ತೊಡರಿಂದೆ ನಾನ್ ಪಜಿದು ಬಡುಗಡೆಯನಾನಲ್ಕೆ ಪಕ್ಕುಂಟು ನನಗೆ (ಅಂತಿಗೂ. ೧೯-೩೮೮). [<— ಅರ. ಹಿಂ. ಮರಾ. ಹಕ್]

ಹಕ್ಕು3 (ನಾ). (?): ಮೂವರ ಕಟ್ಟಿಯ(೦)ವೊತ್ತಿನ[ಲಿ] ಹಾಳಿ[ಗೂಡಾಗಿ ಬೀಜ ಬಿಡುವ] ಕೆಯಿ ಕಂಬ ಳಂಂ ಅದಬಳಿಯ ಹಕ್ಕ ಸಹಿತ ಅಂಗಡಿಬೀದಿಯಲಿ ರಾಜಬೀದಿಯಿಂ ಪಡುವಲು . . . ಸರ್ವನಮಶ್ಯವಾಗಿ ಬಿಟ್ಟರು (ಶಾಸಾ. XV, ೨೬೨-೮; 1206). [?]

ಹಕ್ಕುಗಟ್ಟು (ಕ್ರಿ). (ಕಣ್ಣು, ಮೂಗು ಮೊದಲಾದುವುಗಳಲ್ಲಿ) ಮಲ ಸೇರು; ಕೊಳೆಗಟ್ಟು: ಮೂಗಿನಲ್ಲಿ ಹಕ್ಕುಗಟ್ಟಿದೆ (ರೂಢಿ). [ಹಕ್ಕು1 (< ಪಕ್ಕು1)+ ಕಟ್ಟು1]

ಹಕ್ಕುದಾರ (ನಾ). ಒಡೆತನವಿರುವವನು; ಬಾಧ್ಯಸ್ಥ: ತಲಾಂತರದಿಂದ ನಡದು ಬರುತ್ತಿರುವ ಗ್ರಾಮನೌಕರರ ಕೆಲಸಗಳಿಗೆ ಹಕ್ಕುದಾರನು (ಗ್ರಾಮೂಕ. ೫); ನೀನು ನಿನ್ನ ಹಟವನ್ನೇ ಹಿಡಿದರೆ ನೀನು ಗಂಗವಳಿಯ ಸಿಂಹಾಸನಕ್ಕೆ ಹಕ್ಕುದಾರನಲ್ಲವೆಂದು ಸಾರುವೆನು (ಹಾಪುತ್ರ. ೯೫). [ಹಕ್ಕು2 + - ದಾರ]

ಹಕ್ಕುದಾರಿ (ನಾ). ಒಡೆತನ; ಬಾಧ್ಯತೆ: ತಂದೆಯ ಹಕ್ಕುದಾರಿಯು ಮೇಲೆ ತಿಮ್ಮಣ್ಣನವರು ಆದವಾನೀಸುಭಯ ದಿವಾನರಾಗಿದ್ದರೆಂಬ ನೆನಪು ವಾಚಕರಿಗಿರಬಹುದು (ಕಭಮ. ೫೯೪); ರಜನಿಯ ಹಕ್ಕುದಾರಿಯು ಸ್ಪಷ್ಟವಾಗುತ್ತಿತ್ತು (ಬಂಚಮ. ೯೨).

[< ಹಕ್ಕುದಾರ]

ಹಕ್ಕುದಾರಿಕೆ (ನಾ).= ಹಕ್ಕುದಾರಿ: (೫). [ಹಕ್ಕುದಾರ + - ಇಕೆ]

ಹಕ್ಕುಪತ್ರ (ನಾ). ಒಡೆತನದ ಪತ್ರ; ಅಧಿಕಾರಪತ್ರ: ಕೋರ್ಟಿನಲ್ಲಿ ನನ್ನ ಮೂಲ ಹಕ್ಕುಪತ್ರವನ್ನು ಪಡದು ನ್ಯಾಯತೀರ್ಮಾನ ಮಾಡಿದರು (ರೂಢಿ). [ಹಕ್ಕು2 + ಪತ್ರ]

ಹಕ್ಕುಬಾಧ್ಯತೆ (ನಾ). ಅಧಿಕಾರ ಮತ್ತು ಜವಾಬ್ದಾರಿ: ಅವರಿಗೆ ನ್ಯಾಯವಾಗಿ ಕೊಡಬೇಕಾದ ಜನ್ಮಸಿದ್ಧವಾದ ಹಕ್ಕುಬಾಧ್ಯತೆಗಳಿಗೂ ಧಕ್ಕೆ ತಂದಿದ್ದೇವೆ (ರಾಯಚ. ೩೦); ವೀರನರಸಿಂಹರಾಯನು ಇಮ್ಮಡಿನರಸಿಂಹರಾಯನ ಮಕ್ಕಳಿಗೆ ವಿಜಯನಗರಸಿಂಹಾಸನದ ಮೇಲಿದ್ದ ಹಕ್ಕುಬಾಧ್ಯತೆಗಳನ್ನು ಗಣನೆಗೆ ತಾರದೆ ತಾನೇ ಚಕ್ರವರ್ತಿಯಾದನು (ಕ್ರದೇವ. ೬). [ಹಕ್ಕು2 + ಬಾಧ್ಯತೆ]

ಹಕ್ಕುಶಾಯಿ, ಹಕ್ಕಶಾಯಿ (ನಾ). ಅಧಿಕಾರಯುತವಾಗಿ ವಿಧಿಸಲಾಗುವ ಖರ್ಚು: ಒಳಗಿನ ಖರೀದಿಗೆ ಅಡತಿ, ಹಕ್ಕುಶಾಯಿ, ದಲಾಲಿ ಮತ್ತು ಧರ್ಮಾದಾಯ (ಮುಂಬವ್ಯಾ. ೩೫ ಪ್ರಸ್ತಾವನೆ). **ಹಕ್ಕೆಶಾಯಿ:** ಭಂಗಾರ ಬೆಳ್ಳಿಯ ಖರೀದಿಗೆ ಅಡತಿ ಧರ್ಮಾದಾಯ ದಲಾಲಿ ಹಾಂಗು ಹಕ್ಕಶಾಯಿಯ ದರಗಳು (ಮುಂಬವ್ಯಾ. ೧೮ ಪ್ರಸ್ತಾವನೆ); ಹಕ್ಕಶಾಯಿ. ಭಂಗಾರದ ದರ ಒಂದು ತೂಲಿಗೆ ಪಾವ ಆಣೆಯಂತೆ . . . ಖರ್ಚು ಬೀಳುವುದು (ಮುಂಬವ್ಯಾ. ೩೦). [ಹಕ್ಕು2+ ಶಾಯಿ (< ಶಾಹಿ)]

ಹಕ್ಕೆ 'ಪಟ್ಕೆ' ನೋ.

ಹಕ್ಕೆಗೊಳ್ (ಕ್ರಿ). ನೆಲೆಗೊಳ್ಳು; ಆಶ್ರಯವನ್ನು ಪಡೆ: ಮಿಕ್ಕು ಮಿಗೆ ಮತಿಮಱೆದು ಹರುಪವು ಹಕ್ಕೆಗೊಂಡುದು (ಪ್ರಭುಲಿ. ೨೨-೪೦). [ಹಕ್ಕೆ (< ಪಟ್ಕೆ) + ಕೊಳ್1]

ಹಕ್ಕೆದಲೆ 'ಪಕ್ಕೆದಲೆ' ನೋ.

ಹಕ್ಕೆದಾಣ (ನಾ). ನೆಲೆ; ಆಶ್ರಯಸ್ಥಾನ: ಹಕ್ಕೆದಾಣಂ ವೇಹುದಾಣ ನಾನಾಮೃಗಗಳಿಕ್ಕೆದಾಣಂಗಳಱಿದು . . . ಬಂಧನವ ರಚಿಸಿದರು ಬೇಂಟೆಯೊಳಗೆ (ಸೌಂದಪು ೧೮-೪೩). [ಹಕ್ಕೆ(< ಪಟ್ಕೆ) + ತಾಣ]

ಹಕ್ಕೆರಲು (ನಾ). ಒಂದು ಬಗೆಯ ಸಸ್ಯ: ಮೂಕರಿವೆ, ಮೂಕಾರ್ತಿ, ಹಕ್ಕೆರಲು (ಮೃಡಿಗಿ. ೩೩-೬೪೦). [?]

ಹಕ್ಕೊತ್ತಾಯ (ನಾ). ತಮ್ಮ ಹಕ್ಕಿನ ಬೇಡಿಕೆಗಳನ್ನು ಪೂರೈಸುವಂತೆ ಒತ್ತಾಯಿಸುವಿಕೆ: ಸಿಬ್ಬಂದಿಯು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಹಕ್ಕೊತ್ತಾಯಮಾಡಿದರು (ರೂಢಿ). [ಹಕ್ಕು2 + ಒತ್ತಾಯ]

ಹಕ್ಲು 'ಹಕ್ಕಲ್' ನೋ.

ಹಕ್ಲುಗದ್ದೆ (ನಾ). "ಹುಲ್ಲು ಬೆಳೆಸಲಿಕ್ಕೆ ಬಿಟ್ಟು ಗದ್ದೆ" (ನಸ್ನೂಡು. ಟಪ್ಪಗೆ): ಸಸಿ ಒಳಗ ನಮ್ಮ ಹುಳ್ಳಿಚಿಕ್ಕನಿಗೆ ಅವನ ಹಕ್ಲುಗದ್ದೆಗೆ ಅಂತ ವಸೀ ಕೊಟ್ಟೆ (ನಸ್ನೂಡು. ೧೭೨). [ಹಕ್ಲು (< ಹಕ್ಕಲ್) + ಗದ್ದೆ (< ಗಟ್ಟೆ)]

ಹಕ್ಲುಸಾಗುವಳಿ (ನಾ). "ಜಲಾಶಯಗಳ ಸಹಾಯವಿಲ್ಲದೆ ದಿಬ್ಬದಲ್ಲಿ ವ್ಯವಸಾಯಮಾಡುವುದು" (ಕಸಂಗ್ರಾ. ೧೮); "ಕೃಷಿಬೇಸಾಯ; ಬೆದ್ದಲುಭೂಮಿ; ಕಾಡಾರಂಭ" (ಕಸಂಗ್ರಾ. ೧೫೯). [ಹಕ್ಲು (< ಹಕ್ಕಲ್) + ಸಾಗುವಳಿ]

ಹಗ 'ಪಗವು' ನೋ.

ಹಗಡಿ (ನಾ). (?): ಗಂಧವಣಿಗ ಹಗಡಿಯಿಂ ಮಾಱುಗೊಂಡು ಬಂದುದುಂ ನಿರುದ್ಧ ಮಪ್ಪುದುಂ ಹಾಲು ತುಪ್ಪ ಮೊಸರು ಭಕ್ಷ್ಯಾದಿಗಳು ಪ್ರಚುರದಿಂ ಹೊಸತಲ್ಲದುದು ಮೆಂಬೀ ದೋಷಂಗಳಿಲ್ಲದ ನಿರವದ್ಯಮಪ್ಪ ವಸ್ತುಗಳಂ (ಶ್ರಾವಕಾ. ೧೩೪-೫೧). [?]

ಹಗಡು 'ಹಂಗಡ' ನೋ.

ಹಗಣ 'ಪಗರಣ' ನೋ.

ಹಗಣಾಟ (ನಾ). ನಟನೆ; ಸೋಗು: ಕೇಳಬೇಕೆಂದು ಇಚ್ಛಾ! ಮತ್ತ ಮೇಲೆ ಹಗಣಾಟ (ಚಂದುಚ. ೬೬). [ಹಗಣ (< ಪಗರಣ) + ಆಟ]

ಹಗಣಿಗ 'ಪಗರಣಿಗ' ನೋ.

ಹಗರ (ನಾ).೧. ಕಟ್ಟು; ಹೊರೆ (?) : ಕರ್ವಿನ ಹಗರಕ್ಕೆ ಒಂದು ಕರ್ವು (ಎಇ.XIII. ೨-೨೮; 1204). ೨. (?): ಹಗರದಾ ದಾನವಂ ಕರೆದೊಯ್ದು ಲಂಕೆಯೊಳ್ ಸೊಗಸಾಂತ ಬನದೊಳಡಲ್ (ವಂಕಾರಾ. ೬-೬೭-೨೨). [?]

ಹಗರಣ 'ಪಗರಣ' ನೋ.

ಹಗರಣಗಿತ್ತಿ (ನಾ). ಬಿನ್ನಾಣಗಾತಿ; ಒಯ್ಯಾರಿ : ಹಗರಣಗಿತ್ತಿ ಹಬ್ಬ ಮಾಡಿದರೆ ಮನೆಗಂಡನಿಗೆ ಉಪವಾಸ (ಗಾಡ). [ಹಗರಣ (< ಪಗರಣ) + - ಗಿತ್ತಿ]

ಹಗರಣವಾಡಿಸು (ಕ್ರಿ). ಆಟವಾಡಿಸು; ನಾಟಕವಾಡಿಸು: ಹಗರಣವಾಡಿಸಿತ್ತು ಹರಿಯಂ ಹರನಂ ತಿರಿಸಿತ್ತು ಬೊಮ್ಮನಂ ಮಗಳೊಡಗೂಡಿಸಿತ್ತು . . . ವಿಧಿ (ನಳಚಂ.೬೪೧).

[ಹಗರಣ (< ಪಗರಣ) + ಆಡಿಸು]

ಹಗರಣವಾಡು (ಕ್ರಿ). ಆಟವಾಡು; ನಟನೆಮಾಡು: ದೊರೆಯೆದ್ದು ಹಗರಣವಾಡಿದಂದದಿ ನೀನಿರದೀ ಹುಲುಕಜ್ಜುಕಾಗಿ ತರಲು ಮನವನು (ನೇಮಿಸಂ.೨೬-೬೨); ನಗೆಗಡೆಯಾಗಿಂತು ನೆಗಳ್ತರೆ ದೊರೆಯೆದ್ದು ಹಗರಣವಾಡಿದಂದದೊಳು (ಭರಚ. ೫೧-೭೧).

[ಹಗರಣ (< ಪಗರಣ) + ಆಡು1]

ಹಗರಣೆ 'ಪಗರಣ' ನೋ.

ಹಗರಣಿಗ 'ಪಗರಣಿಗ' ನೋ.

ಹಗರಣೆಯಾಟ (ನಾ). ಸೋಗಿನ ಆಟ; ನಟನೆಯ ಆಟ: ಮತ್ತ ಹಗರಣೆಯಾಟದ ವರನೀ ಬಸವಣ್ಣನುತ್ತಮದ ಜಂಗಮಂ ಮಾಡಿ ಜಂಗಮಕ್ಕಿತ್ತು (ಚಬಪು. ೩೭-೭೭).

[ಹಗರಣೆ (< ಪಗರಣ) + ಆಟ]

ಹಗರಣೆಸು (ಕ್ರಿ).೧. ತೊಂದರೆಕೊಡು; ಕಾಟಕ್ಕೊಳಗುಮಾಡು: ಹಗರಣೆಪ ಗೃಹಕಲಹ ಪೊಟ್ಟೈಸಿ ಕಂಗಳಿಂದುಗಿವಶ್ರು ಸೃಷ್ಟಿಯಂ ತೋಯಲಾಱದಲೆ (ಕೃಕವ. ೧-೧೯-೨). ೨. ತೊಂದರೆಪಡು; ಕಾಟಕ್ಕೊಳಗಾಗು: ಮಗನೆ ಕುರುರಾಯ ಕೇಳು ಚಿತ್ತದಲಿ ಹಗರಣಿಸಬೇಡ ತಾಳು (ಅಭಕಾ.೩೧). [ಹಗರಣ (< ಪಗರಣ) + - ಇಸು]

ಹಗರಣೆ 'ಪಗರಣ' ನೋ.

ಹಗರು1 (ಕ್ರಿ). ನೆಗೆ; ಜಿಗಿ: ಇಬ್ಬರ ಕೈಯಿಂದ ಹಗರಿ ಮೂರನೆಯವನಾದ ಇವನ ಜೊತೆಗಿದ್ದಳು (ಒಡ್ಡಿಯ. ೧೧೯). [?]

ಹಗರು2 'ಹಗಱು' ನೋ.

ಹಗರು3 'ಹಗುರು2' ನೋ.

ಹಗಲ್ 'ಪಗಲ್' ನೋ.

ಹಗಲು 'ಪಗಲ್' ನೋ.

ಹಗಲುಕ್ಕೆದೀವಿಗೆ (ನಾ). (ಬಿರುದುಸೂಚಕವಾಗಿ ಹಿಡಿಯುವ) ದೀವಟಿಗೆ;

ಹಗಲಿನ ಪಂಜು: ಹಗಲುಕ್ಕಿದೀವಿಗೆಯ ಬಿರುದಿನ ವಿಗಡನಿವನಾರನಲು ಭೂಪಾಳಿಗಳ ರತ್ನಪ್ರಭೆಯ ಲಹರಿಯ ಲಾವಣಿಗೆ ಮಿಗಿಲು (ಕುವಾಅ. ೭-೨೬).

[ಹಗಲು(< ಪಗಲ್)+ ಕೈದೀವಿಗೆ (< ಕೈಯ್ದೀವಿಗೆ)]

ಹಗಲುಗತ್ತಲೆ (ನಾ). ಹಗಲುಹೊತ್ತಿನಲ್ಲಿ ಉಂಟಾಗುವ ಕತ್ತಲೆ: ಕರಿಯ ಕಬ್ಬಿಳಿ ಬಳಗಗಳೆ ಸಲೆ ತರತರದ ಹೊರಳಿಗಳ ಚೋಳಿಯ ನೆರವಿ ಕೂಡಿತು ಹಗಲುಗತ್ತಲೆ ಮುಸುಕಿದಂದದಲಿ (ಬಸಪು. ೫೮-೫೦); ಹಗಲುಗತ್ತಲೆ ಕಟ್ಟಿತೇನಿದು ಯುಗದ ಕಡೆಯೋ ಶಿವಶಿವಾ (ಕುವಾಕ. ೨೩-೩೪). [ಹಗಲು (< ಪಗಲ್) + ಕತ್ತಲೆ (< ಕಟ್ಟಲೆ)]

ಹಗಲುಗನಸು 'ಪಗಲ್ಗನಸು' ನೋ.

ಹಗಲುಗನ್ನ (ನಾ). ಹಗಲು ಹೊತ್ತಿನಲ್ಲಿ ಹಾಕುವ ಕನ್ನ; ದಿನದಲ್ಲಿ ಮಾಡುವ ಕಳ್ಳತನ: ಅಗಣಿತಮಹಿಮನೆಂದು ಕಟಕಂ ಪೊಗಳೆ ಕನ್ನದ ಬೊಮ್ಮಿದೇವನು ಹಗಲುಗನ್ನವನಿಕ್ಕಿ ಮೆಱೆದನು ಬಿಜ್ಜಳನ ಮನೆಯ (ಬಸಪು. ೩೧ ಸೂಚನೆ); ಪದಾರ್ಥವಂ ತಮ್ಮ ಮನೆಯಲ್ಲಿ ಅಲ್ಪವಿರಲು, ಹಗಲುಗನ್ನವನಿಕ್ಕಿ ಬಿಜ್ಜಳನರಮನೆಯೊಳು ತರಬೇಕೆಂದು (ಭೈರಸೂ. I, ೩೫೦). [ಹಗಲು (< ಪಗಲ್) + ಕನ್ನ]

ಹಗಲುಗಳ್ಳ 'ಪಗಲ್ಗಳ್ಳ' ನೋ.

ಹಗಲುಗೊಲೆ (ನಾ). ಹಗಲಿನಲ್ಲಿಯೇ ಕೊಲ್ಲುವುದು.

ಹಗಲುಗೊಲೆಮಾನ್ಯ = ಹಗಲಿನಲ್ಲಿಯೇ ಕೊಲ್ಲುವ ವೀರ; ಒಂದು ಬಿರುದು: ದುರ್ಗದ ಪಾಳಯಗಾರರನ್ನು ಇರಿಸಿಕೊಂಡಿದ್ದು . . . ಹಗಲುಗೊಲೆಮಾನ್ಯ ಎಂದು ಹೊಗಳಲು ಭಟರನ್ನು ಕೊಟ್ಟು ದುರ್ಗಕ್ಕೆ ಕಳುಹಿಸಿದನು (ಚಿತ್ರವಾ. ೧೪).

[ಹಗಲು(< ಪಗಲ್) + ಕೊಲ್]

ಹಗಲುದರೋಡೆ (ನಾ). ದಿನದಲ್ಲಿ ಮಾಡುವ ಲೂಟಿ; ಹಗಲಿನಲ್ಲಿ ಮಾಡುವ ಸೂರೆ, — ದರೋಡೆ: ಈ ದಾರಿಯಲ್ಲಿ ಹಗಲುದರೋಡೆ ಇದೆಯೇ? (ದೀನಪಂ. ೧೨೨).

[ಹಗಲು(< ಪಗಲ್) + ದರೋಡೆ]

ಹಗಲುದೀವಟಿ (ನಾ). (ಬಿರುದುಸೂಚಕವಾಗಿ ಹಿಡಿಯುವ) ಹಗಲಿನ ದೀವಿಗೆ: ಹಗಲುದೀವಟಿಯ ಪಂಜೆಯು ಬಗೆಗತಿಶಯಮಾದ ಸಿಂಹಲಕ್ಷ್ಮ ಪತಾಕಂ (ಬೀಳವಂ. ೧-೧೦೬). [ಹಗಲು (< ಪಗಲ್) + ದೀವಟಿ (< ದೀವಟಿಗೆ)]

ಹಗಲುದೀವಟಿಗೆ (ನಾ). = ಹಗಲುದೀವಟಿ: ಬಿರುದು ಹಳದಿ ಗಡಿಗೆ ಹಗಲುದೀವಟಿಗೆ ಸಹ ಕೊಟರೂ (ಎಕ. XVI, ಗುಬ್ಬಿ. ೬೯-೩೪ ?); ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಹಂಬಲವು ತನ್ನ ಹಗಲುದೀವಟಿಗೆಯನ್ನು ಹೊತ್ತಿಸಿಕೊಂಡು ಮಹಾಸಾಧನೆಯನ್ನು ನಾಡಜೀವಿಗಳಿಗೆಲ್ಲ ನೀಡಿತು (ಸುವರ್ಣ. ೨೨೫).

[ಹಗಲು (< ಪಗಲ್) + ದೀವಟಿಗೆ]

ಹಗಲುಪಂಜು (ನಾ). = ಹಗಲುದೀವಟಿ: ಹಗಲುಪಂಜಿನ ಬಿರುದಿನ ಸುಭಟರು ನೆಲೆ ಜಗಜಂಪಿನ ಸತ್ತಿಗೆಯ ವಿಗಡವಿಗ್ರಹವೀರರುಗಳು (ಕಂನಪ. ೧೧-೧೪೩).

[ಹಗಲು (< ಪಗಲ್) + ಪಂಜು]

ಹಗಲುಲಗ್ಗೆ (ನಾ). ಹಗಲುಹೊತ್ತಿನಲ್ಲಿ ಮಾಡುವ ದಾಳಿ: ಹಗಲುಲಗ್ಗೆಯೊಳರಿನೃಪರ ದುರ್ಗವ ಕೊಂಡ ಜಗಕತಿಕೀರ್ತಿಪ್ರಚಂಡ (ಕಂನಪ. ೪-೭೮).

[ಹಗಲು (< ಪಗಲ್)+ ಲಗ್ಗೆ]

ಹಗಲುಹಾವಸೆ (ನಾ). ಬೆಳಗಿನಲ್ಲಿ ಸುರಿಯುವ ಮಂಜು; ಕಾವಳ : ತೆಗೆದುದಗ್ಗದ ತಂಪು ನದಿ ಸರಸಿಗಳ ತಡಿಯಲಿ ಹಚ್ಚೆಯಾದುದು ಹಗಲುಹಾವಸೆ ಹರಿದು ಹೊಕ್ಕರಿಸಿದುದು ಹಿಮಜಲವ (ಕುವಾಅ. ೫-೫); "ಹಗಲುಹಾವಸೆ" ಎಂಬ ಶಬ್ದಗಳಿಗೆ ಅರ್ಥವಾಗದೆ ಲಿಪಿಕಾರನು 'ಹಾವಸೆ' ಯನ್ನು 'ಹಂಸೆ' ಯನ್ನಾಗಿ ಮಾಡಿದನು . . . ಹಗಲುಹಾವಸೆ ಎಂದರೆ ಮಂಜು, ಕಾವಳ (ಕನ್ನಸಂ. ೧೩೦).

[ಹಗಲು (< ಪಗಲ್) + ಹಾವಸೆ (< ಪಾವಸೆ)]

ಹಗಲುಳುಕು 'ಪಗಲುಳ್ಕು' ನೋ.

ಹಗಲೆಱೆಯ 'ಪಗಲೆಱೆಯ' ನೋ.

ಹಗಲೇರು (ಕ್ರಿ). ಹೊತ್ತೇರು; ಮಧ್ಯಾಹ್ನವಾಗು: ಹಗಲೇರಿ ಹಗಲಿಳಿಯುತಿರುಳಾಗಿರುಳು ಹೋಗಿ ಕಾಲಜೀವನ ಸೋರಿದುದು (ಚಿತ್ರಾಂಗ. ೬೪-೧೭೫).

ಹಗಲೊಡೆಯ 'ಪಗಲೊಡೆಯ' ನೋ.

ಹಗಲೋಲಗ (ನಾ). ಹಗಲಿನಲ್ಲಿ ನಡೆಸುವ ದರ್ಬಾರು; ಹಗಲುಹೊತ್ತಿನ ಸಭೆ: ಶೂದ್ರಕನೆಂಬ ಅರಸು . . . ಒಂದು ದಿನ ಹಗಲೋಲಗವಾಗಿ ಹಜಾರದಲ್ಲಿ ಇರುವ ಸಮಯ (ವಚಕಾ. ೧). [ಹಗಲು (< ಪಗಲ್) + ಓಲಗ]

ಹಗವ 'ಪಗವು' ನೋ.

ಹಗವು 'ಪಗವು' ನೋ.

ಹಗಹ 'ಪಗವು' ನೋ.

ಹಗಱ್, ಹಗರು$_2$, ಹಗಱು$_1$ (ನಾ). ಬಿದಿರಿನ ಸೀಳು; ದೆಬ್ಬೆ: ಱಕಾರಾದೇಶ ರೇಫಗಂ ಶಿಥಿಲತ್ವಂ . . .ಕೆಸರ್ಗಳ್, ಬಸಿರ್ಗಳ್, ಪೆಸರ್ಗಳ್, ಹಗರ್ಗಳ್ (ತಮಪ್ರ. ೪೨ ಪ್ರಯೋ). **ಹಗರು$_2$**: ಬೆನ್ನನ್ನು ಹಗರಹಾಂಗ ನೆಟ್ಟಗೆ ನಿಗರಿಸಿ (ಮಂತ್ರಶ. ೪೧-೩). **ಹಗಱು$_1$**: ಹಗಱುಗಳನಿಕ್ಕಿ ಬಿಗಿದೊಡೆ ನಾಯಬಾಲವದು ಬಳಿಕ ನೀಳಕೆ ಸಸಿನವಹುದೇ (ಬಸಪು. ೬೦-೪೮); ಉತ್ತರನ ಹೆಡತಲೆಯ ಹಗಱ್[ಪಾಠಾಂ. ಹದರಿ]ನೊಳೌಂಕಿ ತಂದನು (ಕುವ್ಯಾವಿ. ೬-೩೦); ಅಸಿಯವೆರಡುಂ ಕಲ್ಲುನೆರಡು ಕಡೆಯೊಳಗಿರಿಸಿ ಮಿಸುಪ ತಱಿಗೆಂಡಮಂ ನಡುವಿಕ್ಕಿಯೆಳೆವಿದಿರ ಹಸಿಯ ಹಗಱಂ ಹರಹಿಕೊಂಡದಱ ಮೇಲೆ ಕೆನೆಬೆಣ್ಣೆಯಂ ಕೂಡಿ ಸಮದ ಹಸನಾದ ರೊಟ್ಟಿಯಂ ಮಡಗಿ ಹದನಾಗಿ ಬೇಯಿಸಿ ತೆಗೆದು ಮತ್ತದಕ್ಕಂಗಾರಸಿತಕಮೆಂದೊಸೆದು ಹೆಸರಂ ಕೊಟ್ಟು (ಸೂಪಶಾ. ೧-೧೬); ಬಿಲ್ಲಿಂದ ಬೀಹಿನ ಹಗಱು ಮುಱಿವವೋಲು (ನೇಮಿಸಂ. ೨-೫೨).

ಹಗಱಿ (ನಾ). ಒಂದು ವಂಶದ ಹೆಸರು (?): ಆಶ್ವೀಜ ಸು ೫ ಶು ಹಗಱಿರ ಬೊಂಮಣ . . . ಸುರಲೋಕಪ್ರಾಪ್ತನಾದ (ಎಕ. VII, ಶಿವಮೂ. ೧೦೪-೩; ?). [?]

ಹಗಱಿಕ್ಕು (ಕ್ರಿ). ೧. ಬಿದಿರಿನ ಸೀಳುಗಳನ್ನು ಸೇರಿಸಿ ಕಟ್ಟು; ದೆಬ್ಬೆಗಳನ್ನು ಒಟ್ಟು : ಗಳಕೆ ಹಗಱಿಕ್ಕಿ ಬಂಧಿಸುತ (ವೀಕ್ಷಪು. ೪-೨೫-೩೧). ೨. ಕವೆಗೋಲಿನಂತೆ ಸೀಳಿದ ಬಿದಿರನ್ನು ಕುತ್ತಿಗೆಗೆ ಇಟ್ಟು ನೂಕು: ದಿವಾಕರನು ಹೆಡತಲೆಗೆ ಹಗಱಿಕ್ಕಿದನು ಚಂದ್ರಮನ (ಕುವ್ಯಾರ್ಜೂ. ೧-೪೨). [ಹಗಱು$_1$(< ಹಗಱ್) + ಇಕ್ಕು$_1$]

ಹಗಱಿಡು (ಕ್ರಿ).೧. = ಹಗಱಿಕ್ಕು ೨: ಕಲ್ಲಿಂದಿಟ್ಟು ಕರಂ ಬಡಿಯಿಂದವ ನಿಲ್ಲದೆ ಬಡಿದು ಬಜಿಲ ಬಲ್ಮೊಯ್ಲಿಂದೆಲ್ಲೆಡೆ ಬಾಸುಳನೇಳಿಸಿ ಕೈಕಾಲೋವದೆ ಹಗಱಿಟ್ಟು ಚೆಲ್ಲಯದಿಂ ಕಡು ಕೇಱನಿಱಿದು . . . ಬಾಧಿಸಿದಂ ಜತಿರಾಯನನಾ ಖಳನು (ಜಯಕಾ. ೧೩-೪೧). ೨. "ಬಣ್ಣವಿಡು" (ಪ್ರಭಣ್ಣ): ಅಂಗಜನವನೀಶ್ವರನುತ್ತಮಿಕೆಯ ಚೆಲ್ವಂ ಕುಡು ಕೊಲ್ವೆನೆನುತ್ತವೆ ಬೆಳ್ಳಿಯ ಹಗಱಿಟ್ಟಿಂದದಿ ಕಣ್ಗೆ ವಿರಾಜಿಸಿತು (ಜಯಕಾ. ೧೦-೫೭). [ಹಗಱ್ + ಇಡು$_1$]

ಹಗಱು$_1$ 'ಹಗಱ್' ನೋ.

ಹಗಱು$_2$ (ನಾ). ಕೊರಳು; ಕುತ್ತಿಗೆ (?) : ಮಂದನೊಳೆ ಶಂಖಪಾಳಂ ಸಂದೆಯಮೇಂ ಜಾನ(ವ)ದಲ್ಲಿ ಹಗಱಂ [ಪಾಠಾಂ. ಪದಱ] ಪಿಡಿಗುಂ ಬಂದಿರ್ಕುಂ ಕಣ್ಣೊಳ್ ವಿಷಮೆಂದಱಿ ನೀಂ ಮಂಗರಾಜನನುಮತದಿಂದಂ (ಖಮದ. ೩-೩೭). [?]

ಹಗಿನ 'ಪಗಿನ್' ನೋ.

ಹಗಿನಗಂಪು (ನಾ).ಅಂಟಿನ ವಾಸನೆ; ತಿಗುದಿನ ನಾತ: ಸಾಹಸಿಯ ಆವೇಶ ಕೆತ್ತಿದಾರತಿಯಾಯ್ತಡವಿವೆಂಕೆ: ಧೂಪಮಿಕ್ಕಿತು ಹಗಿನಗಂಪು (ಶ್ರೀರಾಮಾ. ೪೦೭-೮೧).

[ಹಗಿನ (< ಪಗಿನ್) + ಕಂಪು]

ಹಗಿನು 'ಪಗಿನ್' ನೋ.

ಹಗುರ, ಹಗುರು$_1$ (ನಾ). ೧. ಭಾರವಿಲ್ಲದುದು; ತೂಕವಿಲ್ಲದುದು: ಹೊಳೆಯ ಹಗುರದಿಂದ ಹಳ್ಳವ ಹಾಯಬೇಕು (ಮೋಷಮಾ.೬೦-೨೪೭); ಮಣ್ಣು ಇಷ್ಟು ಸೂಕ್ಷ್ಮ ಹಂಗೂ ಹಗುರ ಇರುತ್ತದಲ್ಲಾ (ಮುಂಜಾವಾ. ೪೭); ಮೇಲೆ ಕೊಟ್ಟರುವ ಪಟ್ಟಿಯಲ್ಲಿನ ಬಹುಸಂಖ್ಯಾತ ಮರಗಳು ಹಗುರದ ಗುಣ ಪಡೆದವು (ಶಾಸಗಿ.೬೮). ೨. (ಆಲಂ) ನೆಮ್ಮದಿ; ಸಂತೋಷ: ನಮ್ಮ ಹೃದಯದಲ್ಲಿ ಅದೊಂದು ತರಹೆಯ ಹಗುರ ವೇರ್ಪಟ್ಟಿತ್ತು (ಸುಂದರಿ. ೧೩). ೩. ಅಲ್ಪವಾದುದು; ಕ್ಷುಲ್ಲಕವಾದುದು: ಮರಿಯಾದೆಗಳು ಇಲ್ಲ ಹಗುರ ರಾಜ್ಯಕೆಲ್ಲ (ಪುರಂದ.೧-೧೪೮-೨). **ಹಗುರು$_1$** : ೧. ಇಮಾರತಿಯ ಕಟ್ಟಿಗೆಯಲ್ಲಿ ಅನೇಕ ಜಾತಿ ಇದ್ದು . . . ದೊಡ್ಡದು ವಜನದಾರ ಮತ್ತು

ಹಗುರು ವಗೈರೆ ಅನೇಕ ಭೇದಗಳು (ಮುಂಬಯ್ಯಾ.೨೦೦).

ಹಗುರಮಾಡಿಕೊಳ್ಳು = (ಆಲಂ) ನೆಮ್ಮದಿಯನ್ನು ತಂದುಕೊಳ್ಳು; ಸಂತೋಷವನ್ನು ಹೊಂದು: ಅವನು ಒಂದಲ್ಲ ಒಂದು ರೀತಿಯಿಂದ ತನ್ನ ಮನಸ್ಸನ್ನು ಹಗುರಮಾಡಿಕೊಳ್ಳುತ್ತಿದ್ದನು (ಪುನರು. ೨೬೨). [ದೇ. ॥ ತುಳು. ಹಗುರ]

ಹಗುರು$_1$ 'ಹಗುರ' ನೋ.

ಹಗುರು$_2$, ಹಗರು$_3$ (ನಾ).ತಲೆಯಲ್ಲಿ (ಕೊಳೆಗಟ್ಟಿ) ಪುಡಿಪುಡಿಯಾಗಿ ಉದುರುವ ಹೊಟ್ಟು; ಹುರುಪು; ಸಿಬ್ಬು: ಕಿವಿಯೊಳಗಣ ಗುಗ್ಗೆ ಕಣ್ಣೊಳಗಣ ಕಿಸುರು . . . ತಲೆಯೊಳಗಣ ಹಗುರು (ಬಾಪಟೇ. ೨-೩-೫೩ ವ). **ಹಗರು$_3$**: ತಲೆ ತುಂಬಾ ಹಗರಾಗಿ ಕಡಿಯುತ್ತಿದೆ (ರೂಢಿ).

ಹಗುರುನೀರು (ನಾ). ಗಡುಸಲ್ಲದ ನೀರು; ಸಿಹಿನೀರು: ಹಗುರುನೀರೆಂದರೆ ನಮ್ಮ ಶರೀರಕ್ಕೆ ಪಾಚಕಪದಾರ್ಥಗಳು ಕೂಡಿದ ನೀರು (ಮುಂಬಯಿ.೫-೧೫೭).

[ಹಗುರು$_1$ + ನೀರು$_1$ (< ನೀರ್)]

ಹಗೆ$_1$ 'ಪಗೆ$_1$' ನೋ.

ಹಗೆ$_2$ 'ಪಗೆ$_2$' ನೋ.

ಹಗೆ$_3$ 'ಪಗವು' ನೋ.

ಹಗೆಗಲಹ (ನಾ). ದ್ವೇಷದಿಂದ ಕೂಡಿದ ಜಗಳ; ವೈರದ ಕದನ: ನಿಲಲು ಬೇಕೆಲೆ ಜೀಯ ನೀ ಹಗೆಗಲಹದಲಿ ಹರನೊಡನೆ ಮಿಕ್ಕಿನ ಗಲಭೆಕಾಱರು ಪಾಡೆ ನಿನಗಂ ದಮರರೊಗ್ಗಿನಲಿ (ತೂರರಾ. ೫-೬-೫). [ಹಗೆ$_2$ (< ಪಗೆ$_2$) + ಕಲಹ]

ಹಗೆಗಾರ 'ಪಗೆಗಾಱ'ನೋ.

ಹಗೆಗೆಡು (ಕ್ರಿ).ದ್ವೇಷ ಹೋಗು; ವೈರವಿಲ್ಲದಂತಾಗು: ಮುಂತೆ ಬಗೆಗೆಟ್ಟು ಹಗೆಗೆಟ್ಟು ಮೃಗನಿಚಯವಿರೆ (ಆನಾರ. ದೇ. ೧೮೩-೨). [ಹಗೆ$_2$ (< ಪಗೆ$_2$) + ಕೆಡು$_1$]

ಹಗೆಗೊಳ್ 'ಪಗೆಗೊಳ್' ನೋ.

ಹಗೆಗೊಳ್ಳು 'ಪಗೆಗೊಳ್' ನೋ.

ಹಗೆತನ 'ಪಗೆತನ' ನೋ.

ಹಗೆತೀರಿಸು (ಕ್ರಿ).ದ್ವೇಷವನ್ನು ಸಾಧಿಸು: ನೀನು ಹಗೆತೀರಿಸಿಕೊಳ್ಳಬೇಕೆಂದಿದ್ದರೆ ನನ್ನ ಮಾತು ಕೇಳು (ಅರ್ಯಕ.೨೫). [ಹಗೆ$_2$ (< ಪಗೆ$_2$) + ತೀರಿಸು]

ಹಗೆಯ$_1$ 'ಪಗೆಯ' ನೋ.

ಹಗೆಯ$_2$ 'ಪಗವು'ನೋ.

ಹಗೆವ 'ಪಗೆವ' ನೋ.

ಹಗೆವಡೆ (ಕ್ರಿ). ದ್ವೇಷವನ್ನು ಹೊಂದು; ವೈರವನ್ನು ಪಡೆ : ಬಲುಗ್ಗೆಯನೊಡನೆ ಹಗೆವಡೆದು ಕೊಲೆಗಂಜಲೇಕೆ (ಮೋಳಮಾ.೪೦-೧೬೭). [ಹಗೆ$_2$ (< ಪಗೆ$_2$ + ಪಡೆ$_1$]

ಹಗೆವು 'ಪಗವು' ನೋ.

ಹಗೆಸಾಧಿಸು (ಕ್ರಿ). ದ್ವೇಷವನ್ನು ಸಾಧಿಸು; ವೈರವನ್ನು ತೀರಿಸಿಕೊಳ್ಳು: ತಾನು ಹಗೆಸಾಧಿಸಿಕೊಳ್ಳಬೇಕೆಂದು ಮಾಡಿದ ಪ್ರಯತ್ನವು ವ್ಯರ್ಥವಾದುದನ್ನು ಕಂಡು . . . ನುಡಿದನು (ಕವಿಕ. ೨೦). [ಹಗೆ$_2$(< ಪಗೆ$_2$) + ಸಾಧಿಸು]

ಹಗೆಹರಿ (ಕ್ರಿ). ದ್ವೇಷವಿಲ್ಲದಂತಾಗು; ವೈರತ್ವವಿಲ್ಲವಾಗು: ಬವರಕ್ಕೆತಂದ ರಿಪು ಕೃಷ್ಣನಂ ಕಾಣದಿಹ ಪವಣಾವುದಕಟ ಪೊಸತಿದು ತನ್ನ ಹಗೆಹರಿಯದೆಂದು ಚಿಂತಿಸುತಿರ್ದನು (ಕೃಮಿಭಾ. ೭-೫೩). [ಹಗೆ$_2$(< ಪಗೆ$_2$) + ಹರಿ$_1$ (< ಪರಿ$_2$)]

ಹಗೆಹು 'ಪಗವು' ನೋ.

ಹಗೇವ 'ಪಗವು' ನೋ.

ಹಗೇವು 'ಪಗವು' ನೋ.

ಹಗ್ಗ 'ಪಗ್ಗ' ನೋ.

ಹಗ್ಗಿ 'ಅಗ್ಗಿ$_1$'ನೋ.

ಹಗ್ಗು (ಕ್ರಿ).ಜೀರ್ಣವಾಗು; ಲಯವಾಗು: ಹರನ ಕೊರಲೊಳು ಹಗ್ಗಿತು ದೇವನಿವಹನಿರದಟ್ಟಿ ಕೊಲಲಾಯ್ತೆಂದು ಪಿರಿದು ನಗುವವಂದಿನ ಕಾಲಕೂಟದ ಭರದಿಂದಾ ಫಣಿವಿತತಿ (ಶ್ರೀಪಾಲ.೧೧-೬೦). [< ಅಗ್ಗು]

ಹಚ, ಹಚಾ (ಅ).೧. ದನ, ನಾಯಿ ಮೊದಲಾದುವುಗಳನ್ನು ಓಡಿಸುವಾಗ ಉಚ್ಚಾರಮಾಡುವ ಒಂದು ಅವ್ಯಯ : ಹಚ ಎಂದು ನಾಯಿಯನ್ನು ಓಡಿಸಿದರು (ರೂಢಿ). ೨. ತಿರಸ್ಕಾರ ಅಥವಾ ಭೀಮಾರಿ ಹಾಕುವಾಗ ಉಚ್ಚರಿಸುವ ಒಂದು ಅವ್ಯಯ: (ಕ). **ಹಚಾ**: ೨. ನನಗಂತೂ ಗಂಡು ಹೆತ್ತವರ ಮನೆ ಬಾಗಿಲು ಕಾದು 'ಹಚಾ' ಅನ್ನಿಸಿಕೊಂಡು ಸಾಕಾಗಿ ಹೋಗಿದೆ (ಸಾವಿಸ. ೭೫).

ಹಚಹಚ (ದ್ವಿರುಕ್ತಿ) : ಇವನನ್ನು ಶಪಿಸಿ ಜನ ಮತ್ತೆ ನುಗ್ಗಿದರು. ಬರುವವರನ್ನು ಹಚಹಚ ಅನ್ನಲು ನಾನೂ ಶಾಸ್ತ್ರೀ ಜೊತೆ ಸೇರಿಕೊಂಡೆ (ವೃದ್ಧವಿ.೩೦).

ಹಚಡ 'ಪಚ್ಚಡ' ನೋ.

ಹಚಾ 'ಹಚ' ನೋ.

ಹಚ್ಚ$_1$ 'ಪಚ್ಚ$_1$' ನೋ.

ಹಚ್ಚ$_2$ 'ಪಚ್ಚ$_2$' ನೋ.

ಹಚ್ಚಕಬ್ಬುನ (ನಾ). ಶುದ್ಧವಾದ ಲೋಹ; ಅಚ್ಚಕಬ್ಬಿಣ: ದಿನದೆಡೆಯುಂಟೆ ಸೂರ್ಯನುದಯಕ್ಕೆ ತಮೋವಿಲಯಕ್ಕೆ ಹಚ್ಚಕಬ್ಬುನದಳಿವಿಂಗೆ ಸಿದ್ಧರಸದಾಕ್ರಮಣಕ್ಕೆ (ಶತಕ. ೧೫೮-೨೨). [ಹಚ್ಚ$_1$(< ಪಚ್ಚ$_1$) + ಕಬ್ಬುನ]

ಹಚ್ಚಗೆ (ಅ). ೧. ಹಸಿರಾಗಿ: ವಸಂತ ಹಚ್ಚಗಾಗಿ ಹಬ್ಬಿದ ಹುಲ್ಲುಹಾಸಿಗೆಯ ಮೇಲೆ ಹಾಯಾಗಿ ಒರಗಿದ (ಕಮನ. ೨೫); ಈ ದಿವಸದೊಳಗೆ ಅಡವೆಲ್ಲ ಹಚ್ಚಗೆ ಒಪ್ಪುತ್ತದೆ (ಮುಂಬಯಿ. ೭-೭೪); ಹಚ್ಚಗಿರುವಲ್ಲಿ ಮೇಯೋದು ಬೆಚ್ಚಗಿರುವಲ್ಲಿ ಮಲಗೋದು (ಗಾದೆ). ೨. (ಆಲಂ) ಆರಾಮವಾಗಿ; ಹಾಯಾಗಿ: ನಾನು ಮನೆಬಿಟ್ಟು ಎಲ್ಲಿಗೂ ಹೊರಡುವುದಿಲ್ಲ. ನಿಮ್ಮ ಸ್ನೇಹಿತರು ಬದುಕಿದ್ದಾಗ ಎಂದರೆ, ನಾನೂ ಹಚ್ಚಗೆ ಹತ್ತುಕಡೆ ಹೋಗುತ್ತಿರಬೇಕು, ಬರುತ್ತಿರಬೇಕು (ಮಹಾಗ. ೧೪೬). [ಹಚ್ಚ$_1$(< ಪಚ್ಚ$_1$) + - ಅಗ್ಗೆ$_3$]

ಹಚ್ಚಡ$_1$ 'ಪಚ್ಚಡ' ನೋ.

ಹಚ್ಚಡ$_2$ (ನಾ). ಒಂದು ಬಗೆಯ ಅಳತೆ , — ಮಾನ (?): ವಜ್ರಕ್ಕೆ ಮಂಜಾಡಿ ಕರ್ಪೂರ ಕುರುಜು ಕಸುರಿವೇಣು ಚಿನ್ನಬೆಳ್ಳಿ ತೂಕ ಕಂಚು ತಾಮ್ರ ಹಲ ಇವು ತೂಗಿ ಮಾರುವಂತ ವಿವರಗಳು: ಆನೆಗೆ ಗಜಕಡ್ಡಿ, ಕುದುರೆಗೆ ಕುಡುಮೆಟ್ಟು, ಕೋಡಿಗೆಯಿಪ್ಪತ್ತು ಹಚ್ಚಡಾ (ಭಾಸ್ಕರ. ೭೮-೩). [?]

ಹಚ್ಚಡಿ 'ಪಚ್ಚಡ' ನೋ.

ಹಚ್ಚಡಿಕೆ 'ಪಚ್ಚಡಿಕೆ' ನೋ.

ಹಚ್ಚಡಿಸು 'ಪಚ್ಚಡಿಸು' ನೋ.

ಹಚ್ಚನೆ 'ಪಚ್ಚನೆಯ' ನೋ.

ಹಚ್ಚನೆಯ 'ಪಚ್ಚನೆಯ' ನೋ.

ಹಚ್ಚವಡ 'ಪಚ್ಚವಡ$_1$' ನೋ.

ಹಚ್ಚವಡಿ 'ಪಚ್ಚವಡ$_1$' ನೋ.

ಹಚ್ಚವಡಿಗೆ 'ಪಚ್ಚವಡಿಗೆ' ನೋ.

ಹಚ್ಚವಡಿಸು 'ಪಚ್ಚವಡಿಸು' ನೋ.

ಹಚ್ಚಹಸಿ 'ಪಚ್ಚಪಸಿ' ನೋ.

ಹಚ್ಚಹಸಿರು 'ಹಚ್ಚಹಸುರು' ನೋ.

ಹಚ್ಚಹಸುರು, ಹಚ್ಚಹಸಿರು (ನಾ). ಅಚ್ಚ ಹಸಿರಾದ ಬಣ್ಣ: ಹಚ್ಚಹಸುರಂ ತೋರ್ಪುದೀ ನೆಲದ ಮಾಟಂ (ಕಾಲೂರ. ೧೯೧-೪೩೬). **ಹಚ್ಚಹಸಿರು**: ಕಾರೆಗಿಡಗಳೆರಡನ್ನು ಆವರಿಸಿ ಅದಕ್ಕೆ ಹಚ್ಚಹಸಿರು ಹಚ್ಚಡವನು ಹೊದೆಸಿದ ಜಾಗಟೆಯ ಹೊದರೊಳಗೆ ಸರಿದು ಕುಳಿತುಕೊಂಡರು (ಹುಲಿಹಾ. ೨೫೩). [ಹಚ್ಚ$_1$(< ಪಚ್ಚ$_1$) + ಹಸುರು (< ಪಸುರ್$_2$)]

ಹಚ್ಚಹಸುಳೆ (ನಾ). ಬಹಳ ಎಳೆಯ ಮಗು; ಹಸುಗೂಸು : ಮೆಚ್ಚಿ ಬಂದವಳಲ್ಲ ಕಂಪಿಲರಾಯಗೆ ಹೆಚ್ಚಿ ಬಂದವಳಾನಲ್ಲ ಹಚ್ಚಹಸುಳೆಯನೆನ್ನನು ನೂಕಿ ಕೊಂಡನು ಹುಚ್ಚುಹಿಡಿದು ಮೊಚ್ಚೆದಟ್ಟಿ (ಕುರಾಸಾಂ.೨೬-೧೨೧).

[ಹಚ್ಚ$_1$(< ಪಚ್ಚ$_1$) + ಹಸುಳೆ (< ಪಸುಳೆ)]

ಹಚ್ಚಳ 'ಪಚ್ಚಳ$_2$' ನೋ.

ಹಚ್ಚಿಡು (ಕ್ರಿ).ಉರಿಯುವಂತೆ ಮಾಡು; ಹೊತ್ತಿಸಿಡು: ಮನೆಯು ಕತ್ತಲೆಯಲ್ಲಿರಲು

ಒಂದು ದೀಪ ಹಚ್ಚಟ್ಟಂತಾಯಿತು (ಕಾಲೂರ. ೧೪ ಕಥಾಸಾರ).

[ಹಚ್ಚು₁ (< ಪಚ್ಚು₃) + ಇಡು₁]

ಹಚ್ಚಸು₁ 'ಪಚ್ಚಸು₁' ನೋ.

ಹಚ್ಚಸು₂ 'ಪಚ್ಚಸು₂' ನೋ.

ಹಚ್ಚು₁ 'ಪಚ್ಚು₃' ನೋ.

ಹಚ್ಚು₂ 'ಪಸು₁' ನೋ.

ಹಚ್ಚುಕೊಳ್ 'ಪಚ್ಚುಗೊಳ್' ನೋ.

ಹಚ್ಚೆ 'ಪಸು₃' ನೋ.

ಹಚ್ಚೆಚುಚ್ಚಸು (ಕ್ರಿ). ಮೈಮೇಲೆ ಅಲಂಕಾರಕ್ಕಾಗಿ ಚಿತ್ರ ಬರೆದು ಹಸಿರು ತುಂಬಿ ಮುಳ್ಳಿನಿಂದ ಅಥವಾ ಸೂಜಿಯಿಂದ ಚುಚ್ಚಸು; ಹಚ್ಚೆಹೊಯಿಸು: (ಕ). [ಹಚ್ಚೆ (< ಪಸು₃) + ಚುಚ್ಚಸು]

ಹಚ್ಚೆಚುಚ್ಚು (ಕ್ರಿ). ಮೈಮೇಲೆ ಅಲಂಕಾರಕ್ಕಾಗಿ ಚಿತ್ರ ಬರೆದು ಹಸಿರುಬಣ್ಣವನ್ನು ತುಂಬಿ ಮುಳ್ಳಿನಿಂದ ಅಥವಾ ಸೂಜಿಯಿಂದ ಚುಚ್ಚು, — ಹೊಯ್ಯು: ಆಕೆಯ ಕೈಮೇಲೆ ಹಚ್ಚೆಚುಚ್ಚಿದ ಗುರುತಿದೆ (ರೂಢಿ).

[ಹಚ್ಚೆ (< ಪಸು₃) + ಚುಚ್ಚು₁ (< ಚುರ್ಚು₁)]

ಹಚ್ಚೆತಿಲಕ (ನಾ).(ಹಣೆಯ ಮೇಲೆ ಅಲಂಕಾರಕ್ಕಾಗಿ ಚುಕ್ಕೆಯಿಟ್ಟು, ಅದರ ಮೇಲೆ ಸೂಜಿಯಿಂದ ಚುಚ್ಚಿ ಹಸಿರುಬಣ್ಣವನ್ನು ತುಂಬಿದ ಬೊಟ್ಟು, — ತಿಲಕ: (ಕ). [ಹಚ್ಚೆ (< ಪಸು₃) + ತಿಲಕ]

ಹಚ್ಚೆಬಟ್ಟು 'ಹಚ್ಚೆಬೊಟ್ಟು' ನೋ.

ಹಚ್ಚೆಬೊಟ್ಟು, ಹಚ್ಚೆಬಟ್ಟು (ನಾ). = ಹಚ್ಚೆತಿಲಕ: ಶೃಂಗಾರ ಹಣೆಗೆ ಹಚ್ಚೆಬೊಟ್ಟು (ಎದಾಕ್ಕ. ೧೦೩-೬). **ಹಚ್ಚೆಬಟ್ಟು**: ಹೆಚ್ಚಿನ ಸಖಿಯರು ಸ್ವಚ್ಛದಿ ಫಣೆಯೊಳು ಹಚ್ಚೆಬಟ್ಟಿನ ರೇಪಾ ಚುಚ್ಚಿದರು (ಜಾಕೀ. ೪೩). [ಹಚ್ಚೆ (< ಪಸು₃) + ಬೊಟ್ಟು₂ (< ಬಟ್ಟು₂)]

ಹಚ್ಚೆಲ (ನಾ).(ಹಂಚಿದ) ಪಾಲು; ಭಾಗ: ಎಚ್ಚಂಬುವೆರಸು ಮೃಗಮಂ ಬಿಚ್ಚದೆ ಮುಂದಿಟ್ಟು ತಳುವದೆನಗಂ ನಿನಗಂ ಹಚ್ಚೆಲಮದೀಗೆನುತ್ತಂ ನಿಚ್ಚಳಗಲಿ ಕಣ್ಣಂವಯ್ಯ ನೊಲವಿಂ ನುಡಿದಂ (ತ್ರಿಪುವಿ. ೨೭-೧೨೨). [< ಪಸು₁]

ಹಚ್ಚೆಹೊಯ್ (ಕ್ರಿ). = ಹಚ್ಚೆಚುಚ್ಚು: ಮನದ ಮೈಯೊಳು ಹಚ್ಚೆಹೊಯ್ದಂತೆ ಹಸುರಾಗಿ ನಿತಂಥ ಸಂಗತಿಗಳು ಕೆಲವನು ಗುರುತಿಸಿ ಹೇಳಿದೆ ಹಾಡಾಗಿ (ಇಂಜಾಪ. ೬೨-೯೬). [ಹಚ್ಚೆ (< ಪಸು₃) + ಹೊಯ್₁ (< ಪೊಯ್₁)]

ಹಚ್ಚೊತ್ತಿ 'ಪಚ್ಚೋಂತಿ' ನೋ.

ಹಜರತ್ 'ಹಜರತು' ನೋ.

ಹಜರತು, ಹಜರತ್, ಹಜರತ್ತ (ನಾ). ಮಹನೀಯ; ಮಹಾತ್ಮ; ಶ್ರೇಷ್ಠ: ಹಜರತು ನವಾಬುಸಾಹೇಬರ ಅಪ್ಪಣೆ ಪ್ರಕಾರ (ಎಕ.VIII, ಸಾಗರ. ೩೫೪-೬; 1743). **ಹಜರತ್**: ಹಜರತ್ ಮಹಮದರು ತಮ್ಮ ಕುರಾನನ್ನು ಗ್ರಂಥಸ್ಥವಾಗಿ ಮಾಡುತ್ತಿದ್ದಾಗ ಪರ್ಷಿಯನ್ನರ ಕತೆಗಳು ಜನಕ್ಕೆ ಇದಕ್ಕಿಂತ ಚನ್ನಾಗಿ ಹಿಡಿಸುತ್ತವೆ ಎಂದು ಹೇಳಿದವರುಂಟಂತೆ (ಭಾರದ. ೪೦೫). **ಹಜರತ್ತ**: ಒಂದು ಕಡೆ ಹೈದರಾಬಾದಿನ ಹಜರತ್ತರು ಒಂದು ಕಡೆ ಆದವಾನಿಯ ಖಾನರು . . . ಹೀಗೆ ಕರ್ನಾಟಕದ ಚತುರ್ದಿಕ್ಕುಗಳೂ ಮುಸಲ್ಮಾನರ ಅಂಕೆಯಲ್ಲಿದ್ದವು (ಕಭವಿ. ೫೨೩). [<- ಅರ. ಹಿಂ. ಹಜರತ್]

ಹಜರತ್ತ 'ಹಜರತು' ನೋ.

ಹಜಾಮ (ನಾ).ಕ್ಷೌರಿಕ; ನಾಯಿಂದ: ಭುತನಹಳ್ಳಿಯಿಂದ್ದಾ ಹಜಾಮರ್ರು ವಾಲಗಕ್ಕೆ ಮಲ್ಲಿಗೆ ಹುವು ಮುಡ್ಸಿ . . . ವಾಲಗಾ ಮಾಡುತ್ತಿರಲ್ಲು (ಎಕ. IX,ಕಾನಕಾ. ೯೦-೩; 1700); ನಿಜಾಮನಿಂದ ಹಜಾಮನ ತನಕ ಎಲ್ಲರ ಗುಟ್ಟಿನ ಗವಸಣಿಕೆ ನಾನು (ಪರಿಲ. ೧೩); ಆಗತಾನೆ ಹಜಾಮನಲ್ಲಿ ಗಡ್ಡಬೋಳಿಸಿಕೊಂಡು ಬಂದು . . . ನಿಂತಿದ್ದರು (ಚಿಗುಬು. ೧). [<- ಅರ. ಹಜ್ಜಾಮ್; ಹಿಂ. ಮರಾ. ಹಜಾಮ್]

ಹಜಾಮಗಿರಿ (ನಾ). ೧. ಹಜಾಮನ ಕೆಲಸ; ಕ್ಷೌರಿಕವೃತ್ತಿ. ೨. (ಆಲಂ) ಕೀಳಾದ ಕೆಲಸ; ಕ್ಷುಲ್ಲಕವೃತ್ತಿ: ಇಂತಹ ಹಜಾಮಗಿರಿ ಮಾಡಲಿಕ್ಕೇನೆ ಏನು ನಾನು ಡಾಕ್ಟರನಾದದ್ದು (ಹೂಬಿಸಿ. ೯೧). [ಹಜಾಮ + - ಗಿರಿ₂]

ಹಜಾಮತ್ 'ಹಜಾಮತ್ತು' ನೋ.

ಹಜಾಮತ್‌ಶಾಲೆ (ನಾ).ಕ್ಷೌರದ ಅಂಗಡಿ; ಆಯುಷ್ಕರ್ಮಶಾಲೆ: ಮೇಸ್ಟ್ರೇ ಇದೇನು ಹೊರಗೆ ನೋಡಿದರೆ ಪ್ರಾಥಮಿಕಶಾಲೆ, ಒಳಗೆ ನೋಡಿದರೆ ಹಜಾಮತ್‌ಶಾಲೆ (ರಂಗಕ. ೭೦). [ಹಜಾಮತ್ (< ಹಜಾಮತ್ತು) + ಶಾಲೆ₂]

ಹಜಾಮತಿ 'ಹಜಾಮತ್ತು' ನೋ.

ಹಜಾಮತ್ತು, ಹಜಾಮತ್, ಹಜಾಮತಿ (ನಾ). ೧. ತಲೆಬೋಳಿಸುವುದು; ಕ್ಷೌರ: ತಿರುಪತಿಕ್ಷೌರದಂತಿದೆ ನಿನ್ನ ಹಜಾಮತ್ತು (ರೂಢಿ). **ಹಜಾಮತ್**: ೧. ನಿನ್ನ ಹಜಾಮತ್ ಮಾಡಬೇಕೋ (ಕಲಕ. ೧೦೭). ೨. (ಆಲಂ) ನಿರ್ವಾಹವಿಲ್ಲದ ವೆಚ್ಚ; ಅನಗತ್ಯವಾದರೂ ಮಾಡಬೇಕಾದ ಖರ್ಚು: ಲೋಕಾಭರಾಮು, ಜಯರಾಮು - ಹಜಾಮತ್ ಮಾಡಿದರು (ಜೂಗಬ. ೯೩). **ಹಜಾಮತಿ**: ೧. ಹಣವಂತನು ಹಜಾಮತಿಯನ್ನು ಮಾಡಿಸಿಕೊಂಡರೆ ಸುಮ್ಮನೆ ಯಾವುದಾದರೊಂದು ಹೊಂಡದಲ್ಲಾಗಲಿ ಕೆರೆಯಲ್ಲಾಗಲೀ ಮೈಮುಳುಗಿಸಿಕೊಂಡು ಶುದ್ಧವಾಗಿ ಬರುತ್ತಿರಲಿಲ್ಲ (ಫಲಸಂ. ೧೭); ಇದು ಹಜಾಮತೀ ಮಾಡೋ ಅಂಗಡಿ (ಹೂಬಿಸಿ. ೪). ೨. ವರ್ಷದಲ್ಲೆರಡು ಸಲ ಎಲ್ಲ ಪೋಲೀಸ್ ಕಚೇರಿಗಳಿಗೂ ಆಗುವ 'ಹಜಾಮತಿ'ಇದು (ಬಂಗಾರ.೯).

[<- ಹಿಂ. ಮರಾ. ಹಜಾಮತ್]

ಹಜಾರ₁ (ನಾ). ೧. ಸಭೆ ಮೊದಲಾದುವುಗಳು ನಡೆಯುವ ಸ್ಥಳ; ಓಲಗಶಾಲೆ: ದೀವಾಣವು ದೀವದ ಮೃಗವಾಸವು ಪಾವನತರದ ಹಜಾರ ಜಾವಗಳನು ಸೂಚಪ ಫಳಿಯಾರದ ಭಾವವನದನೇನೆಂಬೆ (ಅಂಜಚ. ೩-೩೮); ಹಜಾರ ಸಿಂಹಾಸನವ ಮಾಡಿದಲ್ಲಿ (ಸೌಸಾ. IX-ii,೪೩೯-೧೧; 1418); ಅಗಲದೊಳ್ ಚಾವಡಿ ಹಜಾರ ಹಯ ಗಜಶಾಲೆ ಮುಖ್ಯ ಬಿಡಾರಂಗಳು (ಚಲಪು. ೪೭-೩೩). ೨. ಮನೆಯಲ್ಲಿ ಪ್ರಧಾನವಾಗಿರುವ, ದೊಡ್ಡದಾದ ಮುಂಭಾಗ; ಪಡಸಾಲೆ: ವಸಂತನು ವನವನ್ನುವ ಹಜಾರದಲ್ಲಿ ವಸ್ತುಗಳನ್ನು ಕಟ್ಟಿರುವನು (ಸೌಗಂಧಿ. ೪೭-೧); ನಂಜಮ್ಮ ಅವರನ್ನೆಲ್ಲ ತನ್ನ ಮನೆಗೆ ಕರೆದೊಯ್ದು ಹಜಾರದಲ್ಲಿ ಉಚಿತಪೀಠಗಳ ಮೇಲೆ ಕುಳ್ಳಿಸಿದಳು (ಪಾಪುತ್ರ. ೧೦೬). ವೇದಗಳ ಕಾಲದ ಮನೆಯಲ್ಲಿ ಒಂದು ಹಜಾರವೂ ಅದರ ಸುತ್ತಲೂ ಕೋಣೆಗಳೂ ಇರುತ್ತಿದ್ದುವು (ಮೃವಾಸ್ತ್ರ. ೩೩). [?./ ತೆಲು. ಹಜಾರ, ಹಜಾರು]

ಹಜಾರ₂ (ನಾ). ಒಂದು ಸಂಖ್ಯೆ; ಸಾವಿರ; ಸಹಸ್ರ: ಬಿಜಾಪುರದಲ್ಲಿ ಇಜಾರದವರು ಹಜಾರಮಂದಿ (ಗಾಪ). [<- ಪಾರ. ಹಿಂ. ಮರಾ. ಹಜಾರ್]

ಹಜಾರಪಟ್ಟಿ (ನಾ). ಸಭಾಮಂದಿರಗಳ ಸಾಲು; ಓಲಗಶಾಲೆಗಳ ಸಮೂಹ: ವಿಲಸಿತಪ್ರಾಕಾರಮೇಳದ ನಿಲವು ತಾಂ ಪದಿನಾರುಯೋಜನದಳತೆಯಪ್ಪದ್ಭಾರ ಕೊತ್ತಳ ಮೂರು ಕೋಂಟೆಯಲೀ ಪೊಳೆವ ಚಾತುರ್ಲಕ್ಷವೀಧಿಗಳಳವಿಯಲಿ ನವಕೋಟಿ ಶಂಕರನಿಳಯಗಳು ಮೂವತ್ತುಕೋಟಿ ಹಜಾರಪಟ್ಟಿಗಳು (ಆನಂದಾ. ೧-೬-೩೧).

[ಹಜಾರ₁ + ಪಟ್ಟಿ₂]

ಹಜಾರಾ, ಹಜಾರಿ (ನಾ). ೧. ಅನೇಕ ಧಾರೆಗಳನ್ನು ಸೂಸುವ ಕಾರಂಜಿ: ಅಸಂಖ್ಯಸೂಕ್ಷ್ಮಛಿದ್ರಗಳೊಳಗಿಂದ ಹಾರುವ ಹಜಾರಾಯೆಂಬ ಕಾರಂಜಿಯ ಎದುರಿಗೆ ಬೆಳಿಗ್ಗಾಗಲಿ ಸಂಜೆಯಾಗಲಿ ಸೂರ್ಯನ ಕಡೆಗೆ ಬೆನ್ನುಮಾಡಿ ನಿಂತರೆ (ಮುಂಬಯಿ. ೬-೯೫). **ಹಜಾರಿ**: ೨. ಸಾವಿರ ಸಿಪಾಯಿಗಳ ಸರದಾರ, — ನಾಯಕ: ಪದಾತಿಯಲ್ಲಿ . . . ಎರಡು ಹವಾಲುಗಳಿಗೊಬ್ಬ ಜುಮ್ಲೆದಾರನೂ, ಹತ್ತು ಜುಮ್ಲೆಗಳಿಗೊಬ್ಬ ಹಜಾರಿಯೂ, ಏಳು ಹಜಾರಿಗಳಿಗೊಬ್ಬ ಸರ್‌ನೌಬತ್ತು . . . ಇರುತ್ತಿದ್ದರು (ಭಾಪ್ರ. ೧೫೫). [<- ಮರಾ. ಹಜಾರಾ, ಹಜಾರೀ; ಪಾರ. ಹಜಾರ್]

ಹಜಾರಿ 'ಹಜಾರಾ' ನೋ.

ಹಜೂರು₁ 'ಹುಜೂರು₁' ನೋ.

ಹಜೂರು₂ 'ಹುಜೂರು₂' ನೋ.

ಹಜೂರುಕಚೇರಿ (ನಾ). (ಕಂದಾಯವ ಸೂಲಿಯ) ಅಧಿಕಾರಿಯ ಕಾರ್ಯಾಲಯ, — ಕಚೇರಿ: (ಕ). [ಹಜೂರು (< ಹುಜೂರು₂) + ಕಚೇರಿ]

ಹಜ್ಜ 'ಪಜ್ಜ' ನೋ.

ಹಜ್ಜಿ 'ಪಜ್ಜಿ' ನೋ.

ಹಜ್ಜೆಗೊಳಿಸು (ಕ್ರಿ). ಹೆಜ್ಜೆಯಿಡುವಂತೆ ಮಾಡು; ಚಲಿಸುವಂತೆ ಮಾಡು: ದಸಯಜ್ಞಿದು ಬೋಳ್ಕೆಸಿ ಹಜ್ಜೆಗೊಳಿಸಿ ತೊಡೆ ಮಡ ದನಿ ಚಮ್ಮಟಿಗೆಗಳಿನೊಯ್ಯ ನೊಯ್ಯನೆ ಮೈವಳಿಗೆ ತಂದು (ರಾಜಶೇ. ೬-೧೧ ವ). [ಹಜ್ಜೆ (< ಪಜ್ಜೆ) + ಕೊಳಿಸು]

ಹಜ್ಜೆದೆಗೆ (ಕ್ರಿ). ಕಾಲುಕೀಳು; ಹಿಂದಕ್ಕೆ ನಡೆ; ಓಡು : ಹಜ್ಜೆದೆಗೆದರೆ ಜುಣಗಲೀಯದೆ ಮೇಲೆ ಕವಿಸುವ ಮೀಜಿ ಕೈಮಾಡಿ ಕೆಣಕಿದರೆ ಝುಂಕಿಸುವ . . . ಸುರಗಿಯತಿಬಲರು (ಕುಮಾಭೀ. ೪-೨೩). [ಹಜ್ಜೆ (< ಪಜ್ಜೆ) + ತೆಗೆ$_1$]

ಹಜ್ಜೆಯಿಡು 'ಪಜ್ಜೆಯಿಡು' ನೋ.

ಹಜ್ಜೆವಿಡಿ 'ಪಜ್ಜೆವಿಡಿ' ನೋ.

ಹಜ್ಜೆಹಾಕು 'ಪಜ್ಜೆಹಾಕು' ನೋ.

ಹಟ (ನಾ). ಛಲ; ಆಗ್ರಹ: ಅವನಿಗೆ ಡಚ್ಚರು ತಯಾರಿಸುತ್ತಿದ್ದ ಹರಳುಗಳಿಗಿಂತ . . . ಉತ್ತಮೋತ್ತಮವಾದ ಉಜ್ಜಿದ ಹರಳನ್ನು ತಯಾರಿಸಬೇಕೆಂಬ ಹಟ (ವಿಕಾಸ. ೩); ಹಲವರಿಗೆ ಈ ಪ್ರಶ್ನೆ ವೈಯಕ್ತಿಕಸ್ವಾನಮಾನಗಳ ಪ್ರಶ್ನೆಯಾಗಿ ಹಟ ಹೆಚ್ಚಿತು (ಡ್ರಾವಿವಿ. ೮೨).

ಹಟತೊಡು = ಛಲಹಿಡಿ; ಛಲಮಾಡು: ಅವರು ಏನೆಂದರೂ ನೊಂದು ಹಟತೊಡಬೇಡ (ರಂಗನಾ. ೩೭). **ಹಟಮಾಡು** = ಮೊಂಡುಹಿಡಿ; ಚಂಡಿಮಾಡು: ಮಗು ತುಂಬಾ ಹಟಮಾಡುತ್ತಿತ್ತು (ರೂಢಿ). **ಹಟಸಾಧಿಸು** = ಛಲಹಿಡಿದು ಸಾಧನೆಮಾಡು: ಅಂತೂ ಹಟಸಾಧಿಸಿ ಹಿಡಿದ ಕೆಲಸವನ್ನು ಮಾಡಿಬಿಟ್ಟೆಯಲ್ಲ! (ರೂಢಿ).

[< ಸಂ. ಹಠ]

ಹಟಗಾತಿ (ನಾ). ಛಲದ ಸ್ವಭಾವದವಳು; ಛಲಗಾತಿ: ಅವಳು ಬಹಳ ಹಟಗಾತಿ (ರೂಢಿ). [ಹಟ + - ಕಾತ್ತಿ$_5$]

ಹಟಗಾರ (ನಾ). ಛಲದ ಸ್ವಭಾವದವನು; ಛಲಗಾರ: ಅವನು ತುಂಬಾ ಹಟಗಾರ (ರೂಢಿ). [ಹಟ + - ಗಾರ (< - ಕಾಱ)]

ಹಟದ್ರತ್ನ (ನಾ). ಹೊಳೆಯುವ ಮಣಿ, — ರತ್ನ: ವೈದೇಹಿಗೆ ಮಕುಟಹಟದ್ರತ್ನ ದಿಂದರ್ಘ್ಯಮಿತ್ತಂ (ಪಂರಾಮಾ. ೯-೮೪); ದೇದೀಪ್ಯಮಾನಪ್ರಭವೇಂ ಕಣ್ಗೊಂಬುವೆತ್ತಿ ರ್ದುದೂ ವಿಕಟಹಟದ್ರತ್ನಕೂಟಂ ಕಿರೀಟಂ (ಚಂದ್ರಪ್ರ. ೨-೫೬). [ಸಂ.]

ಹಟದ್ರುಚಿ (ನಾ). ಹೊಳೆಯುವ ಕಾಂತಿ, — ಪ್ರಭೆ: ಉಜ್ಜ್ವಲನವರತ್ನಭೂಷಣ ಕೀರಿಟಹಟದ್ರುಚಿಯಿಂದದೇಂ ಪಳಂಚಲೆದುದೂ ರಾಜರಾಜಸಭೆ (ಪಂರಾಮಾ. ೬-೭೪).

[ಸಂ.]

ಹಟನ್ನೀರೇಜ (ನಾ). ನಳನಳಿಸುವ ತಾವರೆ: ಇರ್ದತ್ತು ಹಟನ್ನೀರೇಜನಾಳಂ ನಿಮಿರ್ದುದನಿದಿರೊಳ್ ಪೊತ್ತು ತೋರ್ಪಂದದಿಂದಂ (ಸುಕುಮಾ. ೩-೧೫). [ಸಂ.]

ಹಟಮಾರಿ (ನಾ). ಛಲದ ಸ್ವಭಾವದ ವ್ಯಕ್ತಿ: ನಮ್ಮ ರಾಘವ ತುಂಬಾ ಹಟಮಾರಿ (ತುಂಗಭ. ೧೧೩); ವೆಂಕಟರಾಯ ಅಸಾಧ್ಯ ಸಂಶಯಿ; ಅಸಾಧ್ಯ ಹಟಮಾರಿ (ಗಂಮಾಯಿ. ೨೬೯). [ಹಟ + - ಮಾರಿ$_1$]

ಹಟಮಾರಿತನ (ನಾ). ಛಲದ ಸ್ವಭಾವ; ಆಗ್ರಹಬುದ್ಧಿ: ನನ್ನ ಅಂಗಿಯ ಬೇಕೆಂಬ ಹಟಮಾರಿತನ ಅವನಿಗಿಲ್ಲ (ದೇಕಸೈ. ೩೪); ಇದರಿಂದ ಅವಳಲ್ಲಿ ಹಟಮಾರಿತನವು ಮನೆಮಾಡಿತು (ರಂಗರೂ. ೧೮೬). [ಹಟಮಾರಿ + - ತನ]

ಹಟಯೋಗಿ (ನಾ). ಹಠಯೋಗವನ್ನು ಮಾಡುವವನು: ಅಂಬಿಕಾಯೋಗಿಗಳ ಡೊಂಬರಿಗೆ ಸರಿಯೆಂಬೆ ಹಟಯೋಗಿಗಳ ಅಟಮಟಗಾಱರೆಂದೆಂಬೆ (ಸಿದ್ಧೇವ.೨೧೪-೩೫೮).

[< ಸಂ. ಹಠಯೋಗಿನ್]

ಹಟವಾದಿ (ನಾ). ಛಲವನ್ನು ಸಾಧಿಸುವವನು: ಹೀಗೆಮಾಡಬೇಡ. ಅವರು ಹಟವಾದಿ . . . ಎಂದು ಅಂಗಲಾಚಿದರು (ರಂಗನಾ. ೩೪); ಛಲವಾದಿಯ ಸಂಗಡ ಹಟವಾದಿ ಸೇರಿದ ಹಾಗೆ (ಗಾದೆ). [< ಸಂ. ಹಠವಾದಿನ್]

ಹಟವಿಡಿ, ಹಟಹಿಡಿ (ಕ್ರಿ). ಛಲತೊಡು; ಆಗ್ರಹಪಡಿಸು: ದುರ್ಜನರುಯೆಲೆಮರುಳೆ ಪಾಲ್ಪಸುಗಯ ಈ ಕಾಲ ಬಿಡದಿರೆಲೆ ಹಟವಿಡಿದು ಕೊಳ್ಳೆಂದು . . . ಎಂಬರು (ತುರಂಗ. ೪-೫); ಯಾರೆಷ್ಟು ಹೇಳಿದರೂ ಕೇಳದೆ ತೌರುಮನೆಗೆ ಹೋಗದೆ ಬಿಡೆನೆಂದು ಹಟವಿಡಿದರೆ ಆಗ ನಾವೇನು ಮಾಡಬಲ್ಲೆವು (ಲಕ್ಷ್ಮೀಪ್ರ. ೧೦೭). **ಹಟಹಿಡಿ**: ನಿನ್ನನ್ನೇ ಮದುವೆಯಾಗುವೆ ನೆಂದು ಈ ಒಂದು ವರುಷದಿಂದ ಹಟಹಿಡಿದಿದ್ದ (ತೇಮೋಡ. ೯೯). [ಹಟ + ಪಿಡಿ$_1$]

ಹಟಹಿಡಿ 'ಹಟವಿಡಿ' ನೋ.

ಹಟಾತ್ಕಾರ (ನಾ). ಗರ್ವ; ಅಹಂಕಾರ: ಕಲಿಯುಂ ಬಲ್ಗಾಳುಮೆನ್ನಿಂದೊಳರ ಪೆಱರುಮೆಂಬೀ ಹಟEಟಾತ್ಕಾರದಿಂದಂ ಮಲೆದೆಯ್ತಂದೆಮ್ಮ ಮಾವಂಗಿದಿರಿದಿರುಱೆ ಬಂದಾಂತೆ[ಯಾಂತೆ] ಶಿಣ್ಣಂ ನಿಲವೇಟ್ಟೆಂದಟ್ಟಿ (ಬಂಪಾ. ೧೨-೪); ಸಹಸ್ರಧಾರವಾದ ಚಕ್ರವು ಗರ್ವಿತನಾಗಿ ಕ್ಷಮೆಯ ಬಿಟ್ಟು ಆ ದೇವನಂ ಕುರಿತು ಹಟಾತ್ಕಾರದಿಂದ ನುಡಿದುದು (ಗರಮ. ೯-೫೫). [?./ ಸಿಂ. ಹಠಾತ್ಕಾರ = ಬಲಾತ್ಕಾರ; ಒತ್ತಾಯ]

ಹಟಾತ್ತು (ಅ). ಇದ್ದಕ್ಕಿದ್ದಂತೆ: ಮೇಲೆ ಹೇಳಿದ ಯಾವ ಚಿಹ್ನೆಯೂ ಕಾಣಿಸ ಕೊಳ್ಳದೆ ಹಟಾತ್ತಾಗಿ ಮೂರ್ಛೆಹೋಗಿ ಸಾಯುವುದು (ಗ್ರಾಮಾಕ. ೧೨೮); ನನ್ನ ಸುಶಿ ಹಟಾತ್ತಾಗಿಯೂ ಕೇಳಬಿಟ್ಟಳು (ನಡದಾ. II, ೮೭೫). 'ಹಠಾತ್ತು' ಪರಾ. [?]

ಹಟೆಕಾರ (ನಾ). ಬಟ್ಟೆ ನೇಯುವವನು; ನೇಕಾರ: ಅನುಪಿನ ಕಟ್ಟೆ ಗ್ರಾಮದಿಂದ ಹಟೆಕಾರ ಮಗ ೨ಕ್ಕೆ ಗ ೧ . . . ಅಸಗಗಾರಕದಿಂದ ಜನ ೧ಕ್ಕೆ ಗ ॥ ೨ (ಎಕೆ.VIII, ತೀರ್ಥಹ. ೯೫-೬೦; 1709). [< ಪಟ್ಟೆಗಾಱ]

ಹಟ್ಟಿ (ನಾ). ೧. ವಸ್ತುಗಳನ್ನು ಮಾರುವ ಸ್ಥಳ; ಅಂಗಡಿ: "ಶ್ರಿತಹಟ್ಟಮಾ ಪಣಂ ಪಣ್ಯ ವಿಕ್ರಯಶಾಲೆ" (ವಸ್ತುಕೋ. ೪೮-೨೦). ೨. ಸಂತೆ; ಬಜಾರು: ಬಿಟ್ಟ ಕರವು ಕಠಾರಿಯಿಂದರೆಯಟ್ಟಿ ತೀವಿದುದು ತೀವಿದಡವಿಯ ಬಟ್ಟಗರನಾ ದಂಡೆಗೊಡ್ಡಿದ ಕೈಯ ಕಡುಹಿನಲಿ ಹೊಟ್ಟೆಯಲಿ ಕರುಳೊಕ್ಕು ಕಪಿಗಳ ಹ[ಪಾಠಾಂ. ಬೆ]ಟ್ಟವಗಣಿತವಾದವಾ ನೊರೆಗಟ್ಟಿ ಸುರಿವರುಣಾಂಬುನದಿ ಹಲವಾದುದಗಲದಲಿ (ತೊರಾ. ೬-೨೮-೫೦). [ಸಂ.]

ಹಟ್ಟಗಾಱ (ನಾ). ೧. ವ್ಯಾಪಾರಮಾಡುವವನು; ವರ್ತಕ. ೨. ಒಂದು ಮನೆತನದ ಹೆಸರು ಮತ್ತು ಆ ಮನೆತನಕ್ಕೆ ಸೇರಿದವನು: ಅಲಿಂ ಪಡುವಲು ಹಟ್ಟಗಾಱರ ಕೆಯಿ ಪಡುವಣ ಸೀಮೆ ಅಂಗಡಿಯ ದಾವಣ್ಣನ ಸತ್ರಕ್ಕೆ ಬಿಟ್ಟ ಕೆಯ್ಯಿಂ ಮೂಡಲು . . . ಸರ್ವ್ವಬಾಧಾಪರಿಹಾರವಾಗಿ ಪ್ರತಿಪಾಳಿಸುವರು (ಶೌಇಇ. XI -ii, ೧೩೬-೫೭; 1091); ಶ್ರೀಮತು ಹಟ್ಟಗಾಱ ಕಡಂಬರ ಕಾಡೆಯ ನಾಯಕನುಮವರ ಮಾವಂ ಸೋವೆಯ ನಾಯಕನುಂ ತಳಾಱೆಕೆ ಡೊಂಕಿವಣ ಮಾನೆಣ್ಣೆಸಹಿತಂ ಬಿಟ್ಟ ಗಾಣವೊಂದು (ಕಇ. II, ೧೦-೩೬; 1181); ಪಟ್ಟಣಸ್ವಾಮಿಗಳು ಹಟ್ಟಗಾಱ ಹರಿಗ ಕಾಳಬೋವ ಮಂಡಳಿಕ ಜಗದ್ದಳ ಬಂಮಿದೇವನ ಸುಪುತ್ರ ಸೋಯಿದೇವ ಘಟ್ಟದೇವಯೀ ಧರ್ಮ್ಮವಂ ಸ್ವಧರ್ಮದಿಂ ಪ್ರತಿಪಾಳಿಸಿದರು (ಶೌಇಇ. IX - i, ೩೩೮-೧೫; 1221). [ಹಟ್ಟ + - ಕಾಱ]

ಹಟ್ಟವಿಲಾಸಿನಿ (ನಾ). ೧. ಸಂತೆಸೂಳೆ; ಬಜಾರಿ: "ಹಟ್ಟವಿಲಾಸಿನಿ . . . ಸಂತೆಯಲ್ಲಿ ಸುಳಿದಾಡುವವಳು ; ಹಾದರಗಿತ್ತಿ" (ಅಂಗಾ). ೨. ಒಂದು ಬಗೆಯ ಸುಗಂಧದ್ರವ್ಯ.

[ಸಂ. ಹಟ್ಟವಿಲಾಸಿನೀ]

ಹಟ್ಟಳೆ (ನಾ). ಬಂಧನ; ಸಂಕೋಲೆ: ಒತ್ತೆಗೊಂಡವನವಳ ಕಾಲ್ಗೆ ಹಟ್ಟಳೆವೊಲಿದು ಕೊಂಡಿರೆ (ಪದ್ಮರಾ. ೨-೧೮); ದುರ್ಜನೆ ಕಾಲ್ಗೆ ಹಟ್ಟಳೆಯ ಹೊಲಿಸಿ ಬಾಗಿಲ್ಗಾಯ್ಕುತಂ ಇರಲು (ಗುಬಾಂ. ೮-೬೬). [?]

ಹಟ್ಟಿ$_1$ 'ಪಟ್ಟಿ$_1$' ನೋ.

ಹಟ್ಟಿ$_2$ (ನಾ). ವ್ಯಾಪಾರದ ಸ್ಥಳ; ಸಂತೆ. [ಸಂ. ಹಟ್ಟೀ]

ಹಟ್ಟಿಕಾರ 'ಹಟ್ಟಿಕಾಱ' ನೋ.

ಹಟ್ಟಿಕಾಱ, ಹಟ್ಟಿಕಾರ (ನಾ). ದನಕಾಯುವವನು; ಗೋಪಾಲಕ; ಗೊಲ್ಲ: ಹಟ್ಟಿಕಾಱರಿಹ ಹಳ್ಳಿ ಘೋಷಂ (ಮಂಗರಾ. ೫೫-೧೦); ಹಟ್ಟಿಕಾಱರು ಭಾಪು ತನ್ನನು ಕಟ್ಟಿ ಬಿಸುಟರು (ನಿಭಾಗ. ೧-೧೦-೫೬). **ಹಟ್ಟಿಕಾರ**: ಹಟ್ಟಿಕಾರರು, ಹಳ್ಳಿಕಾರರು, ಹನುಮರು . . . ರಾಮನ ಎಡಬಲದಲ್ಲಿ ಬಂದು ನಿಂತರು (ಕುಮಾಸಾಂ. ೧೪೩); ಹಟ್ಟಿಕಾರನೆಂದರೆ 'ಜೀವಧನಂಗಳ' ಸಾಕಿ ಬದುಕುವವನು (ಕರ್ಣಾಭೂ. ೧೨). 'ಪಟ್ಟಿಕಾಱ' ಪರಾ.

[ಹಟ್ಟಿ$_1$ (< ಪಟ್ಟಿ$_1$) + - ಕಾಱ]

ಹಟ್ಟಿಕೆ 'ಪಟ್ಟಿಗೆ' ನೋ.

ಹಟ್ಟಿಕೊಟ್ಟ (ನಾ). ದನಗಳನ್ನು ಕಟ್ಟುವ ಸ್ಥಳ; ಗೋಶಾಲೆ: ಹಟ್ಟಿಕೊಟ್ಟದ ಅರಸುಗಳಿಗೆ ಸಮಾನಸ್ಕಂಧತೆಯ ಸಂಗಡಿಗನಾಗಿ ತೊಳಲ್ಗಾಡುತ್ತಿದ್ದ ಆ ತಿರಿಕತನದ ತಾರತಕ್ಕಡಿಗನಿಗೆ ರಾಜಾಗಾಧಿರ್ಯವೆಲ್ಲಿಂದ ಬರಬೇಕು? (ಮಂತ್ರಶ. ೧೫೦-೧).

[ಹಟ್ಟಿ$_1$ (< ಪಟ್ಟಿ$_1$) + ಕೊಟ್ಟ$_2$]

ಹಟ್ಟಿಕೊಟ್ಟಿಗೆ (ನಾ). = ಹಟ್ಟಿಕೊಟ್ಟಿ: ತೋಟ ತುದಿಕೆ ಹಟ್ಟಿಕೊಟ್ಟಿಗೆ ದನಹುಲ್ಲು (ಚಿಟ್ಟಿಲ. ೧೫೯-೧೭). [ಹಟ್ಟಿ$_1$ (< ಪಟ್ಟಿ$_1$) + ಕೊಟ್ಟಿಗೆ]

ಹಟ್ಟಿಗಾಳಗ 'ಹಟ್ಟಿಗಾಳಿಗ' ನೋ.

ಹಟ್ಟಿಗಾಳಿ (ನಾ). (ಆಲಂ) ಬಜಾರಿ ಎಂಬರ್ಥದ ಒಂದು ಬಯ್ಗುಳ: ಜಗುಳ್ಳಿಯಿದಿರ್ಚಿ ಸಬ್ಬಮೆನಗಿಲ್ಲದ ದೋಷಮನಿಟ್ಟು ಹಟ್ಟಿಗಾಳಿ ಗಳಹಿಯೆಂಬುದಂ ಕರೆಯದಿರ್ದೊಡೆ (ಲೀಲಾವ. ೨-೧೧೦). [ಹಟ್ಟಿ$_1$ (< ಪಟ್ಟಿ$_1$) + ಕಾಳಿ (< ಕಹಳಿ)]

ಹಟ್ಟಿಗಾಳಿಗ, ಹಟ್ಟಿಗಾಳಗ (ನಾ). ಹಟ್ಟಿ, ಹಟ್ಟಿಗಳ ನಡುವೆ ನಡೆಯುವ ಕಾದಾಟ: ಚಾಳುಕ್ಯನರೇಂದ್ರನ ಮುಂದೆ ಹಟ್ಟಿಗಾಳಿಗದೊಳ್ ಪಂಪನಪಪಂ ಪರಪಿನೆಂದನೆ ಸುಭಟರ್ದ್ದುರೆಯೆ ಬಗೆವಡಾಚುಗಿನೃಪನೊಳ್ (ಪೌಕಾ. XI-ii, ೧೧೯-೧೫೫: 948). **ಹಟ್ಟಿಗಾಳಿಗ:** ಹಟ್ಟಿಗಾಳಗಕ್ಕೆ ಮಲೆವ ಸಾಮನ್ತರ ಗಂಡಂ (ಎಕ.XIV. ನಾಗಮಂ. ೧೪೦-೫೧: 1225). [< ಪಟ್ಟಿಗಾಳಿಗ]

ಹಟ್ಟಿಗೆ$_1$ (ನಾ). ವಾಸಮಾಡುವ ಸ್ಥಳ; ಆವಾಸ: (ಕ). [< ಹಟ್ಟಿ$_1$]

ಹಟ್ಟಿಗೆ$_2$ 'ಪಟ್ಟಿಗೆ' ನೋ.

ಹಟ್ಟಿದೆರೆ (ನಾ). ದನಗಳನ್ನು ಕಟ್ಟುವ ಮನೆಗಳ ಮೇಲೆ ಹಾಕುವ ಕಂದಾಯ, — ತೆರಿಗೆ: ಆ ಪುರದ ಚತುಸೀಮೆಯೊಳಗಣ . . . ಬಟ್ಟಿ ಕೊಟ್ಟಣ ಅಳಿವಂನ್ಯಾಯ ಸುಂಕ ಹಟ್ಟಿದೆರೆ ತವ್ವು ತೌವುಡಿ (ಎಕ.XI, ಚತ್ರದು. ೨-೨೨; 1355).

[ಹಟ್ಟಿ$_1$ (< ಪಟ್ಟಿ$_1$) + ತೆರೆ$_3$ (< ತೆಱೆ^{3})]

ಹಟ್ಟಿಮನೆ (ನಾ). ದನಗಳನ್ನು ಕಟ್ಟುವ ಕೊಟ್ಟಿಗೆ: ನಿನ್ನ ಕಾಲ್ತುಳಿತದಿಂ ಹಟ್ಟಿಮನೆ ತುಂಬಿತ್ತು (ಕಾಲೂರ.೮೩-೧೫೮). [ಹಟ್ಟಿ$_1$ (< ಪಟ್ಟಿ$_1$) + ಮನೆ]

ಹಟ್ಟಿಹಕ್ಕಲು (ನಾ). ಹಟ್ಟಿ ಮತ್ತು ಅದಕ್ಕೆ ಸಂಬಂಧಿಸಿದ ಬಯಲು ಪ್ರದೇಶ: ಯಿಂತೀ ಚತುಸ್ಸೀಮೆಯೊಳಗುಳ್ಳ . . . ಹಟ್ಟಿಹಕ್ಕಲು ತೋಟತುಡಿಕೆ (ಮೈಪಿ. ೧೯೩೪, ೫೩-೧೮; 1405). 'ತೋಟತುಡಿಕೆ' ಪರಾ.

[ಹಟ್ಟಿ$_1$ (< ಪಟ್ಟಿ$_1$) + ಹಕ್ಕಲು (< ಹಕ್ಕಲ್)]

ಹಟ್ಟು 'ಪಡು$_1$' ಪರಾ.

ಹಟ್ಟೆ 'ಪಟ್ಟಿ$_2$' ನೋ.

ಹಟ್ಟೆಗಾಱಿ$_1$ (ನಾ).= ಹಟ್ಟಗಾಱಿ ೨ : ಸಾಂತಳಿಗ ಸಾಯಿರಕ್ಕೆ ಧಾಳಿಯಾಗಿ ಹರಿದಲ್ಲಿ ಹಟ್ಟೆಗಾಱ ಬೀಚ ಹಲರನಿಱಿದು ಮೆಱೆದು ಸುರಲೋಕಪ್ರಾಪ್ತನಾದಂ (ಎಕ.VIII. ಸೊರಬ.೧೪೭-೪; 1132). [< ಹಟ್ಟಗಾಱಿ]

ಹಟ್ಟೆಗಾಱಿ$_2$ 'ಪಟ್ಟುಕಾಱಿ' ನೋ.

ಹಠ (ನಾ). ಛಲ; ಆಗ್ರಹ: ಎಳೆಯ ಮಕ್ಕಳ ಹಾಗೆ ಹಠ ಮಾಡಿದಿರಿ (ನಂಬಿಯ.೩೪); ನಾರಾಯಣ ತನ್ನ ಹಠ ಬಿಡಲಿಲ್ಲ (ತ್ಯಾಗವಿ. ೧೫೬). ೨. ಒತ್ತಾಯ; ಬಲಾತ್ಕಾರ: ''ಹರEಠತಂ ಪ್ರಸರEಭತಿವನಲು ಬಲುಹಿಂಗಕ್ಕು'' (ಮಂಗರಾ. ೧೩೬-೩೯).

ಹಠತೊಡು = ಛಲತೊಡು; ಛಲಹಿಡಿ: ನೀವೆಲ್ಲ ಪುಣ್ಯಶಾಲಿಗಳಮ್ಮ ಹಠತೊಟ್ಟು ಬೈಗಳಿಂ ಕೋಪದಿಂ ಕೋರಿಕೆಯ ಸಾಧಿಪರಿ (ಕವಸೋ. ೪೫-೨); ಈ ಹುಟ್ಟುಹಬ್ಬಾಸ ಗಂಡಿನಲ್ಲಿ ಏಕೆ ಹಠತೊಟ್ಟು ಹೋರಾಡುತ್ತಲಿದೆ (ದೇಶನ. ೭೪). [ಸಂ.]

ಹಠಗಾರ (ನಾ). ಹಟಹಿಡಿಯುವನು; ಛಲಗಾರ : ನನಗೆ ನೀನು ಹಠಗಾರನೆಂದು ಗೊತ್ತು. ಬೇಡವೆಂದರೆ ಅವಶುನ ನುಡಿದಂತಾಗುತ್ತದೆ (ಬೆಂಗಾಳ್ಕ. ೪೯೧).

[ಹಠ + - ಗಾರ (< - ಕಾಱ)]

ಹಠತ್ಕುಟಾರ (ನಾ).೧. ಹೊಳೆಯುವ ಕತ್ತಿ. ೨. ಹೊಳೆಯುವ ಕತ್ತಿಯ ಸ್ವರೂಪನಾದವನು: ಅಖರ್ವಗರ್ವ್ವಪರ್ವ್ವತಾರೂಢದುರ್ವ್ವಿನೀತಸರ್ವಚಾರ್ವ್ವಾಕೋರ್ವ್ವಿರುಹನಿಪಾಟನಪಟುಹಠತ್ಕುಟಾರರ್ ವಿಷಮವಿಷಯಾತಿದೂರರ್ (ಶಾಸವ. ೫೨-೪೩; 12ನಯ ಶತ). [IP ಇದು 'ಹಟತ್ಕುಟಾರ' ಎಂಬುದರ ಅವಲಿಖಿತ]

ಹಠಮಾರಿ (ನಾ). = ಹಟಮಾರಿ: ಸುಮಿತ್ರೆ ಎಷ್ಟು ಹಠಮಾರಿಯೋ . . . ಅಷ್ಟೇ ಮೃದು ಸರೋಜೆ (ಎದ್ಕಾರ. ೩೦). [ಹಠ + - ಮಾರಿ$_1$]

ಹಠಯೋಗ (ನಾ). [ಯೋಗ] ಯೋಗದಲ್ಲಿ ಒಂದು ಬಗೆ: ಮಂತ್ರ ಯೋಗ ಲಯಯೋಗ ಹಠಯೋಗ ರಾಜಯೋಗವೆಂದು ಯೋಗ ಚತುರ್ವಿಧ (ಅಖಂಡೇ. ೨೧೨-೪೨); ಇಡಾ ಪಿಂಗಳ ಈ ಎರಡು ನಾಡಿಗಳಲ್ಲಿ ಸಂಚರಿಸುತ್ತಿರುವ ಪ್ರಾಣವಾಯುವು ಇವುಗಳ ಮಧ್ಯೆ ಇರುವ ಸುಷುಮ್ನಾನಾಡಿಯೊಳಕ್ಕೆ ಪ್ರವೇಶಿಸುವಿಕೆಯೇ ಹಠಯೋಗ (ಭಾರದ. ೧೫೩). [ಸಂ.]

ಹಠವೃತ್ತಿ (ನಾ).೧. ಛಲದ ಸ್ವಭಾವ. ೨. ಒತ್ತಾಯ; ಬಲವಂತ: ''ಪ್ರಸಭಮೆನಿಕ್ಕುಂ ಹಠವೃತ್ತಿ.'' (ವಸ್ತುಕೋ. ೧೧೨-೧೦). [ಸಂ.]

ಹಠಾತ್ಕಾರ (ನಾ). ಬಲಾತ್ಕಾರ; ಒತ್ತಾಯ. [ಸಂ.]

ಹಠಾತ್ತನೆ (ಅ). ಇದ್ದಕ್ಕಿದ್ದಂತೆ; ಕೂಡಲೆ: ಲೂಟಿಯಾಯಿತೆಂಬ ವರ್ತಮಾನ ಹಠಾತ್ತನೆ ಬಂತು (ನಿರಾತ. ೪೬); ಹಠಾತ್ತನೆ ಬರುವ ಆಪಶ್ಯಕತೆಯೇನು (ಕಾವೇರಿ. ೧೧೫).

[ಹಠಾತ್ತು + - ಅನೆ$_1$]

ಹಠಾತ್ತು (ಅ). ಕೂಡಲೆ; ತಕ್ಷಣ: ತಲೆಯ ಮೇಲೆ ಲಾಠಿ ಏಟು ಬಿದ್ದರೆ ಕೈ ಹಠಾತ್ತಾಗಿ ತಲೆಯ ಮೇಲಕ್ಕೆ ಹೋಗುತ್ತದೆ (ಜೀವಾತ್ಮ. ೨೦೦); ಅಧಿಕ ಒತ್ತಡದ ಪರಿಣಾಮವಾಗಿ ಅವು ಹಠಾತ್ತಾಗಿ ಪರಿವರ್ತನೆಪೂಗಬಲ್ಲವು (ಭೂಹುಟ್ಟು. ೨). 'ಹಟಾತ್ತು' ಪರಾ. [?]

ಹಡಕಿ 'ಪಡುಕೆ' ನೋ.

ಹಡಕಿಗ (ನಾ). ಹೊಲಸು ತಿನ್ನುವವನು; ಹೊಲೆಯ: ಸತ್ತ ನಾಯ ಭಕ್ಷಿಸುವ ಹಡಕಿಗರನೇನೆಂಬೆನಯ್ಯಾ (ದೇದಾವ. ೩೩-೫೮). [ಹಡಕು (< ಪಡುಕೆ) + - ಇಗ]

ಹಡಕು 'ಪಡುಕೆ' ನೋ.

ಹಡಕುಳಿನಾಯ್ (ನಾ). ದುರ್ಬಲವಾಗಿ, ಮೇಲೇಳಲಾರದ ನಾಯಿ: ಶುನಿಕಾಪಿ-ಹಡಕುಳಿನಾಯ್ (ನೀತಿವಾ. ೨೬-೩೭). 'ಪಡುಕುಳಿಯೆತ್ತು' ಪರಾ.

[ಹಡಕುಳಿ (< ಪಡುಕುಳಿ) + ನಾಯ್]

ಹಡಕೆ 'ಪಡುಕೆ' ನೋ.

ಹಡಗ 'ಪಡಂಗು' ನೋ.

ಹಡಗಿಲೆ (ನಾ). ಒಂದು ಊರಿನ ಹೆಸರು: ಹಡಗಿಲೆನಾಮಗ್ರಾಮಂ (ಪೌಕಾ. XX, ೪-೧೨; 683). 'ಪಡುಗಲ್' ಪರಾ. [?]

ಹಡಗು 'ಪಡಂಗು' ನೋ.

ಹಡಗುಕಟ್ಟೆ (ನಾ). ಹಡಗು ಮೊದಲಾದುವುಗಳು ನಿಲ್ಲುವ ಸ್ಥಳ; ಬಂದರು: ರಾತ್ರಿಯ ಆ ಅತಲಸ್ಪರ್ಶಅಂಧಕಾರವೂ ಅವೊತ್ತು ಖಿದಿರವುರದ ಹಡಗುಕಟ್ಟೆಯ (Jetty) ಮೇಲೆ ಮಲಿನವಾಗಿದ್ದದ್ದನ್ನು ನೋಡಿದ (ನಬಂಧ.II, ೧೪೧).

[ಹಡಗು (< ಪಡಂಗು) + ಕಟ್ಟೆ]

ಹಡಗುದಂಡು (ನಾ). ಹಡಗಿನಲ್ಲಿ ಯುದ್ಧಮಾಡುವ ಸೈನ್ಯ; ನೌಕಾಬಲ: ಅಮೂರ್‌ನದಿಗೆ ದಕ್ಷಿಣದೇಶದಲ್ಲಿ — ವ್ಲೇಡಿವೋಸ್ಟಾಕ್ಸ್ ಹಡಗುದಂಡಿನ ಸ್ಥಳ (ಭೂಗೋಳ.೧೦೯). [ಹಡಗು (< ಪಡಂಗು) + ದಂಡು]

ಹಡಣ 'ಪಡಣ' ನೋ.

ಹಡಣಗಿತ್ತಿ (ನಾ). ದುಸ್ಥಿತಿಗಿಳಿದ ವೇಶ್ಯೆ, — ಜಾರೆ: ಮತ್ತೊರ್ವಳ್ ನೆರೆಮನೆಯ ಮಱಿಸೂಳೆಯ ಸೊಬಗಿಂಗಲ್ಬುು ತನ್ನಂತೆ ಪಡಪುಡುಗಿ ಗಡಣಕ್ಕೆ ಬಂದ ಹಡಣಗಿತ್ತಿ ಸೂಳೆಗಿಂತೆಂದಳ್ (ಅನಂಪು. ೮-೧೮ ಪ). [< ಹಡಣ + - ಗಿತ್ತಿ]

ಹಡಣಿಗೆ 'ಪಡಣಿಗೆ' ನೋ.

ಹಡದ (ನಾ). ಒಂದು ಬಗೆಯ ಬಳ್ಳಿ: ಹಡದದ ಬಳ್ಳಿಯಮ್ಮತವಳ್ಳಿ . . . ಪೊಸ ಶುಂಠಿದಾರುಗಳ ತ್ರಿಫಳೆವೆರಸು ಕಾಯ್ದ ಕಷಾಯಂ (ಕಲ್ಯಾಕಾ. ೩-೩೯). [?]

ಹಡದಿ$_1$ (ನಾ). (ಗುರು ಹಿರಿಯರೇ ಮೊದಲಾದ ದೊಡ್ಡವರನ್ನು ಬರಮಾಡಿಕೊಳ್ಳುವಾಗ) ನೆಲದ ಮೇಲೆ ನಡೆಯಲು ಹಾಸುವ ಮಡಿ ಮಾಡಿದ ಬಟ್ಟೆ; ನಡೆಮಡಿ: ದುಡಿದವರ ಪಾದಕ್ಕಂತ ಹಡದಿ ಹಾಸ್ಕಾವ (ಸುವೀಗೀ. ೮೬-೧೦); ಹಡದಿಯನ್ನು ಹಾಸಲು ಮಡಿವಾಳನೂ ಬೇಕು (ಕನ್ನಚಾ. ೬೮); ಬಿಡುದಿಯೊಳಗೆ ಹಡದಿ ತಪ್ಪೀತೆ? (ಗಾದ).

[ದೇ. ॥ ತೆಲು. ಪಡಿದ]

ಹಡದಿ$_2$ 'ಪಡಿಯದೆ' ನೋ.

ಹಡದೆ 'ಪಡಿಯದೆ' ನೋ.

ಹಡದೆನಂದಾಕ (ನಾ). ಒಂದು ವಂಶ ಮತ್ತು ಆ ವಂಶಕ್ಕೆ ಸೇರಿದವನು: ಕಮುಂಗಲೆ ಕನ್ತಿಯರ್ಗೆ ಪೊಲ್ಮೆದ ಹಡದೆನನ್ದಾಕರ ಮಗನಯ್ಯಮ್ಮೆದೆನನ್ದಾಕರ ಮಗಂ . . . ಕಣ್ಣಮಂಗಲದೊಳ್ಸಸದಿ ಮಾಡಿಸಿ ಆ ಬಸದಿಗೆ ಕೊಟ್ಟ ಮಣ್ಣು (ಎಕ.X, ಕೋಲಾಂ. ೯೦-೮೫; 903). [ಹಡ? + ತೆನಂದಾಕ (< ತೆನ್ನಂದಾರ್ಕ)]

ಹಡದೇವ (ನಾ). ಒಬ್ಬಾತನ ಹೆಸರು: ಆದಿಕ್ಕ ಶ್ರೀ ಹಡದೇವಪುತ್ರನ್ (ಇಆ.X, ೧೭೭-೪; ೭ನಯ ಶತ). [ಹಡ? + ದೇವ]

ಹಡಪ$_1$ 'ಅಡಪ' ನೋ.

ಹಡಪ$_2$ (ನಾ). ಒಂದು ಬಗೆಯ ಕಜ್ಜಿ; ನಾಯಿಕಜ್ಜಿ: ಪಕ್ವಾನ್ನವನ್ನು ಬಡಿಸಿಟ್ಟಾಗ ಹಡಪ ಹತ್ತಿದ ನಾಯಿಯು ಬಾಯಿ ಹಾಕಿ ಹಸಿವಿಗೆ ಹೇಸಿಕೆಯನ್ನು ತರಿಸುವಂತೆ ಆ ದಿನ ಅವರ ಮನಸ್ಥಿತಿಯಾಗಿತ್ತು (ಬಾಬಲ. ೫೧). [< ಅಡವ್ಪು]

ಹಡಪಂಬಿಡಿ 'ಅಡಪಂಬಿಡಿ' ನೋ.

ಹಡಪಗಾಣಿಕೆ (ನಾ). ಹಡಪದ ಕೆಲಸಕ್ಕಾಗಿ ಕೊಡುವ ಕಾಣಿಕೆ, — ಬಳುವಳಿ: ನೀವು ಕೊಡುವ ಕಾಣಿಕೆ ಹಡಪಗಾಣಿಕೆ ಬಿಟ್ಟಿ ಬಿಡಾರ . . . ಉಡುಗೊಱೆ ವೊಲುಪೆ ಮುಂತಾಗಿ ಎಲ್ಲವನು ಸರ್ವಮಾನ್ಯವಾಗಿ ನಿಮಗೆ ಮಾಡಿದೆವಾಗಿ (ಎಕ.VIII, ತೀರ್ಥಹ. ೧೯೯-೮೧; 1404). [ಹಡಪ$_1$ (< ಅಡಪ) + ಕಾಣಿಕೆ (< ಕಾಣ್ಕೆ)]

ಹಡಪನಡಸು (ಕ್ರಿ). (ಸಂಚಿಯ) ಊಳಿಗಮಾಡು (?): ಶಂಭು ನಂಬಿಗಿ ಹಡಪ ನಡಸುತಿರೆ ನಿನ್ನೊಡನೆ ನಾಂ ಬರ್ಪೆ ಕೈಲಾಸಕಮ್ಮರಿಯದಿರುಯೆನುತ ನಂಬಿಗೆಯೊಳಿರಲು (ನವಮೋ.೧೪-೩). [ಹಡಪ$_1$ (< ಅಡವ) + ನಡಸು$_1$ (< ನಡಯಿಸು)]

ಹಡಪವಳ 'ಅಡಪವಳ' ನೋ.

ಹಡಪಾಳಿ 'ಪಡಪಾಳಿ$_2$' ನೋ.

ಹಡಪಿ (ನಾ). ಸಂಚಿಯವ್ನು ಹಿಡಿಯುವವನು; ಹಡಪದವನು: ತರ್ಕ ಮಿಮಾಂಸಕಾಚಾರಿಯಗೆ ಚಾಮರವನಿಕ್ಕುವನ ಪೆಸರ್ಕೆವ ಹಡಪಿ ವೈಷ್ಣವ ಗದ್ದುಗಿಕ್ಕುವನ ಪಸರಾರುಹತ (ಸಂಗಿರಾ. ೨೭-೭). [ಹಡಪ$_1$ (< ಅಡವ) + -ಇ$_3$]

ಹಡಪಿಗ 'ಅಡಪಿಗ' ನೋ.

ಹಡಬೆ 'ಅಡಬೆ' ನೋ.

ಹಡಬೆಬೀಳು (ಕ್ರಿ). ಕೆಟ್ಟಚಾಳಿ ಹಿಡಿ; ದಾರಿತಪ್ಪು: ಚಿರ ಮದುವೆಯಾಗುವ ಮೊದಲೇ ಹಡಬೆಬಿದ್ದಿದ್ದನೆಂಬ ಪ್ರತೀತಿ ಇತ್ತು (ಮಲಮ. ೧೧೩).

[ಹಡಬೆ (< ಅಡಬೆ)+ ಬೀಳು$_1$ (< ಬೀಲ್$_1$)]

ಹಡರ (ನಾ). ಒಂದು ಬಗೆಯ ಸುಂಕ (?): ತಪ್ಪು ತವುಡಿ ದಂಡ ಉಂಡಿಗೆ ಹಡರ ಹನುಕೊಂಬಣ (ಎಕ. IX, ಕಾನಕಾ.೪೧-೧೨; 1300); ದಂಡವುಂಡಿಗೆ ಹಡರ ಕಿಱುಕು XX ಬೆದ್ವಾಯ ಮುಂತಗಿ (ಎಕ. XIV, ಕೃಷ್ಣರಾ. ೨೮-೩೧; ?). [?]

ಹಡಲ 'ಪಡಲ$_1$' ನೋ.

ಹಡಲಗೆ 'ಪಡಲಗೆ' ನೋ.

ಹಡಲಿಕೆ 'ಪಡಲಗೆ' ನೋ.

ಹಡಲಿಗೆ 'ಪಡಲಗೆ' ನೋ.

ಹಡಲು (ನಾ). ಕೆಸರುಭೂಮಿ: ಈ ಚತುಸ್ಸೀಮೆಯ ಒಳಗೆ ಉಳ್ಳಂಥಾ ಬೆಟ್ಟು ತಿಟ್ಟ ಹಕ್ಕಲು ಹಡಲು ಹೊಲನು ನೆಲ ಜಲ (ಶಾಸಾ. IX-ii, ೪೧೭-೯; 1377); ಹಡಲೊ Eಲೊತಳಗೆ ಹುಡಿಯೊಳಗೆ ಪೊರಡಿಗಳೊಡೆದ ತಱಿಗಲ್ಲೊಳಗೆ . . . ಎಳೆದು ಕೊಂಯ್ಯರು ಮಹಾಪಾತಕನನು (ಪ್ರಹ್ಲಾಚ. ೯-೩೯). 'ಅಡಲು' ಪರಾ. [< ಅಳಿಡು]

ಹಡವಳ 'ಪಡೆವಳ' ನೋ.

ಹಡವಳತಿ 'ಪಡವಳತಿ' ನೋ.

ಹಡವಳ್ತಿ 'ಪಡವಳತಿ' ನೋ.

ಹಡವು (ನಾ). ಒಂದು ಬಗೆಯ ಜವಳಿ (?): ಗುಡಿಯ ಬೀಡಿಗಂ ಅಡಕೆ ಮೆಣಸು ದಸರೆಯ ಮಳವ ಶಿಲೆಯ ಮಳವೆ ಹಡವಿನ ಮಳವೆ ಅರಿಷಣ ಮಳವೆ ಅಲ್ಲದ ಮಳವೆ ನೀಲದ ಕೊಡಯತ್ತಿನಲು . . . ರುದ್ರಶಕ್ತಿಪಂಡಿತರ ಕಾಲಂ ಕರ್ಚ ಧಾರಾಪೂರ್ವಕಂ ಬಿಟ್ಟು (ಶಾಸಪ. ೪೪-೪; 1098). [?]

ಹಡಸಾಲೆ (ನಾ). ಒಂದು ಬಗೆಯ ಔಷಧೀಸಸ್ಯ: ಪಂಚೋಟಮರ, ಹಡಸಾಲೆ, ಹಲುಸಲ್ಲೆ, ಪಲುಚೊಟ್ಟೆ, ನಾಟಿಗಟ್ಟುಪರ್ಚೆ (ಮೃಡಿಗಿ. ೫೯- ೧೧೪೪). [?]

ಹಡಹಾಳಿ 'ಪಡಪಾಳಿ$_1$' ನೋ.

ಹಡಹು$_1$ 'ಪಡಪು$_1$' ನೋ.

ಹಡಹು$_2$ 'ಪಡಂಗು' ನೋ.

ಹಡ್ಡಳಿಗೆ 'ಪಡಲಗೆ' ನೋ.

ಹಡಿ$_1$ 'ಪಡಿ$_2$' ನೋ.

ಹಡಿ$_2$ 'ಪಡಿ$_3$' ನೋ.

ಹಡಿ$_3$ 'ಹಡು$_3$' ನೋ.

ಹಡಿಂಕೆ 'ಪಡುಕೆ' ನೋ.

ಹಡಿಕ (ನಾ). ತುಂಬಿದ ಹೇರು (?): ಸೋಜಿಗೆ ಭತ್ತ ಹಡಿಕದ ಭಂಡಿಯಲುಯೊಕುಳ ಭತ್ತ (ಎಕ. XI, ಚಳ್ಳಕೆ. ೫೧-೩೯; 1087); ಒಕ್ಕಲಲಿರ್ಬ್ಬಳ ಭತ್ತ ಹಡಿಕದ ಭಂಡಿಗಿರ್ಬ್ಬಳ ಬೆಲ್ಲದ ಭಂಡಿಗೆ ವೀ ೨ ಮರನ ಬಂಡಿಗೆ ವೀ ೧ ಬಿದಿರ ಬಂಡಿಗೆ ವೀ ೧ (ಶಾಸಾ.XI-ii, ೧೫೮-೧೬; 1123). [< ಅಡುಕು ?]

ಹಡಿಕಟ್ಟು 'ಪಡಿಗಟ್ಟು$_2$' ನೋ.

ಹಡಿಕೆ$_1$ 'ಪಡುಕೆ' ನೋ.

ಹಡಿಕೆ$_2$ 'ಹಡಿಕೆ$_2$' ನೋ.

ಹಡಿಕು 'ಪಡುಕೆ' ನೋ.

ಹಡಿಕುನಾರು 'ಪಡುಕೆನಾಡು' ನೋ.

ಹಡಿಕೆ$_1$ 'ಪಡುಕೆ' ನೋ.

ಹಡಿಕೆ$_2$, **ಹಡಿಕಿ**$_2$ (ನಾ). ಒಂದು ಬಗೆಯ ತೆರಿಗೆ: ಖಾಣವಾ ಚದ್ದಿಯ ಭಂಡಿ ಜಡದಲೆ ಕೋಟೆಯ ಹಡಿಕೆ ಕೊಟ್ಟಿಗೆಗಳೆ (ಎಕ.V, ಪಾಸನ. ೧೫೯-೧೦; 1200); ಗ್ರಾಮದವರು ಅರಮನೆಗೆ ಹಡಿಕೆ ಬಟ್ಟಾಗ ಪುರುಶೋತ್ತಮಭಟ್ಟರಿಗೂ ಅವರ ಸಂತಾನ ಪಾರಂಪರಿಯಕ್ಕೆ ನಡಸಿ ಬಾಹರು (ಕಾ. I, ೫೮-೨೦; 1446); ಹಂಜಮಾನದವರು ನಂಮ ಅರಮನೆಗೆ ತೆಱುವ ಹಡಿಕೆಯ ಹೊಂನನೂ ತೆಱುವದು (ಶಾಸಾ.IX-ii, ೪೫೯-೧೫; 1465). **ಹಡಿಕೆ**$_3$: ಭತ್ತವಲ್ಲದ ಹಡಿಕಿ ಹೊದಕೆ ಆಕರ (ಸೌಎ.೧೯೩೦, ಉಡುಪಿ. ೬೦೧-೧೮; 1339). [?]

ಹಡಿಕೆಕಾಯ (ನಾ). ಹೊಲಸಿನಿಂದ ತುಂಬಿದ ದೇಹ; ಕೊಳೆಯಿಂದ ತುಂಬಿದ ಶರೀರ: ಒದಕ ಮಡಿಕೆಯಂತೆ ಒಡೆದು ಹೋಗುವ ಹಡಿಕೆ[ಕಾಕಾಂ.೬]ಕಾಯವ ನೆಚ್ಚಿ ತಟತಟನೆ ತಾಗಿ ಮಠದ ಬೆಕ್ಕಾಗಿ ತಿಟ್ಟನೆ ತಿರುಗಿ (ಲಿಂಗಪ. ೪. ೬೧-೪೬).

[ಹಡಿಕೆ$_1$ (< ಪಡುಕೆ)+ ಕಾಯ]

ಹಡಿಕೆಗೈನೆ (ನಾ). ಕ್ಷುದ್ರ ಹೆಂಗಸು; ದುಷ್ಟೆ: ಇಡಿದ ಹೊಲಸಿನ ನಾತದುಬ್ಬರದೆಡೆ ಬಲದ ತಿನಿಸುಗಳ ಮಧ್ಯದ ಹಡಿಕೆಗೈನೆಯ ಕಂಡು ಹೇಸುತ ಹನುಮ ಹೊಱವಂಟ (ತೊರರಾ. ೫-೨-೩೬). [ಹಡಿಕೆ$_1$ (< ಪಡುಕೆ) + ಗೈನೆ (< ಕೈನೆ)]

ಹಡಿಕೆದೇಹ (ನಾ). = ಹಡಿಕೆಕಾಯ: ಜಡನು ನಾನಾಗಿನಿತುಕಾಲಂ ಹಡಿಕೆದೇಹ ದೊಳಿರ್ದು ಮೋಹಿಸಿ ಕೆಡುವ ಸುಖವನು ನಚ್ಚಿ ಕೆಟ್ಟೆನನಂತಭವದಲ್ಲಿ (ಭಗಚ. ೫-೮೫).

[ಹಡಿಕೆ$_1$ (< ಪಡುಕೆ) + ದೇಹ]

ಹಡಿಕೆದೊಳ್ತು (ನಾ). ಕೆಟ್ಟ ಸೇವಕಿ; ಕ್ಷುದ್ರದಾಸಿ: ಬಾವನ್ನಮಂ ಪೊರೆದು ರಂಜಿಸುವ ರಸಿಕನಿರದೋವೊ ಕಿಸುಕುಳವನೇಂ ಪೊರೆವನೇ ದಿವ್ಯಕಾಂತಾವಿನುತಸುರಾತನುಭವಿ ಹಡಿಕೆದೊಳ್ತಿಂಗ ರಮಿಸುವನೆ (ಪದ್ಮರಾ. ೬-೧೬).

[ಹಡಿಕೆ$_1$ (< ಪಡುಕೆ) + ತೊಳ್ತು (< ತೊಡ್ತು)]

ಹಡಿಕೆನಾತ, ಹಡುಕುನಾತ (ನಾ). ಹೊಲಸುವಾಸನೆ; ಗಬ್ಬುನಾತ: ಮಡಿಯೊಳಗಿಟ್ಟರೂ ಹಡಿಕೆನಾತ ಹೋಗಲಿಲ್ಲ (ಗಾದೆ). **ಹಡುಕುನಾತ:** ಅಲ್ಲಿಯ ಹಡುಕುನಾತವನ್ನು ಸಹಿಸಲಾರದೆ ಧರ್ಮರಾಜನು . . . ಈ ಸ್ಥಳವಾವುದು ? ನನ್ನ ತಮ್ಮಂದಿರೆಲ್ಲಿದ್ದಾರೆ ? ಎಂದು ದೇವದೂತನನ್ನು ಕೇಳಿದನು (ವಚಭಾ. ೬೮೯).

[ಹಡಿಕೆ$_1$ (< ಪಡುಕೆ)+ ನಾತ]

ಹಡಿಕೆನಾಡು 'ಪಡುಕೆನಾಡು' ನೋ.

ಹಡಿಕೆವಾಯ್ದೆಜೆ (ನಾ). ಹೊಲಸು ನಾರುವ ಬಾಯಿ: ಧೂರ್ಜ್ಯವಪೂಜಕರ್ ಮಿಂಚುದಲೆ ಹಡಿಕೆವಾಯ್ದೆಜೆಯ ದುಃಕುಹಕಿಗಳ್ (ವಿಕೋಪು. ೯-೩೭).

[ಹಡಿಕೆ1 (< ಪಡುಕೆ) + ಬಾಯ್ದೆಜೆ2]

ಹಡಿಗಣ್ಣು (ನಾ). ಕಣ್ಣಿನ ಒಂದು ಬಗೆಯ ರೋಗ; ಪಿಸುರುಗಣ್ಣು: ನೀರುಗಣ್ಣು ಚಾರುಗಣ್ಣು ಹುಳುಗಣ್ಣು ಹಡಿಗಣ್ಣು (ಶಾಸ.೩೨೮). [< ಹಡಿಕೆ1 + ಕಣ್ಣು (< ಕಣ್)]

ಹಡಿಗಿಜು 'ಪಡಿಗಿಜು' ನೋ.

ಹಡಿತಾರ (ನಾ). ಒಂದು ಬಗೆಯ ಚಿಕ್ಕ ನಾಣ್ಯ: ತುಳುವ ಶಾಸನಗಳಲ್ಲಿ ಬರುವ ನಾಣ್ಯಗಳೂ ಅಳತೆಗಳೂ ಗದ್ಯಾಣ . . . ತಾರ, ಹಡಿತಾರ, ಹಾನೆ (ತುಳುವಾ.೨೭೧). [?]

ಹಡಿದಳ (ನಾ). ಒಂದು ಅಳತೆಯ ಸಾಧನ (?): ಕ್ರಮದಿಂದಂ ಸುಟ್ಟುಗಜಳಮುಮಂ ಹಡಿದಳದಿ ಸಂಜೆ ಸೂಡರ್ಗೆನ್ನೆಯುಮಂ . . . ದೇವರ್ಗ್ಗೆ ನಗರವೆಲ್ಲಂ ಬಿಟ್ಟರು (ಕಾಪು. ೧೪-೪-೧೪೫; 1093). [? + ತಳ (= ತಲ)]

ಹಡಿದೆಜೆ 'ಪಡಿದೆಜೆ' ನೋ.

ಹಡಿಮುಖ 'ಪಡಿಮುಖ' ನೋ.

ಹಡಿಮ್ಮೆಲಿಗೆ (ನಾ). ಹೊಲಸುಮ್ಮೆಲಿಗೆ: ನಾನು ಮಡೀಲಿದೀನಿ. ನಿನ್ನ ಸ್ಕೂಲಿನ ಹಡಿಮ್ಮೆಲಿಗೆ ಸೀರೆ ನನಗೆ ಹುಟ್ಟಿದಹಬೇಡ (ತೀಲುಗೂ.೧೪). [ಹಡ್ಡಿ3 (< ಹಡ್ಡು3) + ಮ್ಮೆಲಿಗೆ]

ಹಡಿಮೊಖ 'ಪಡಿಮೊಗ' ನೋ.

ಹಡಿಯದೆ 'ಪಡಿಯದೆ' ನೋ.

ಹಡಿಯರ 'ಪಡಿಯಲಿ' ನೋ.

ಹಡಿಯಲಿ 'ಪಡಿಯಲಿ' ನೋ.

ಹಡಿಯಾಲಿ 'ಪಡಿಯಲಿ' ನೋ.

ಹಡಿರೋಗ (ನಾ). ಕೆಟ್ಟ ರೋಗ: ಆ ಪಾಳಯಗಾರನ ಮಗಳಿಗೆ ಏಕೆ ಅಂತಹ ಹಡಿರೋಗ? (ದೇಶಾಂಶ. ೭೭). [< ಹಡಿಕೆ1 + ರೋಗ]

ಹಡಿಲು (ನಾ).೧. ಸಸ್ಯ ಬೆಳೆಯದ ಭೂಮಿ; ಬಂಜರು; ಬೀಳುನೆಲ: ಗರಗುಳಿ ಈಂತಾಯ ಪಡಿಲಿಂ ಮೂಡ ಆವಯ ಕುಂಟೆ (ಎಇ.XII, ಗುಬ್ಬಿ. ೩೦-೬೮: 1331): ಕಡಿಯುಂಡುಗಿ ಹಡಿಲಾಗಿ ಬಗೆ ಅಳಲ ಮಡಿಲಾಗಿ ತಳರುತಿದೆ ಮೃತ್ಯುವಿನ ತಡಿಗೆ (ಭಾರಂಗ. ೬-೭). ೨. (ಕರಾ) ಪಶುಗಳಿಂದ ಮೆಟ್ಟಿಸಲು ಹಾಕಿದ ಹುಲ್ಲುರಾಶಿ.

ಹಡಿಲುಬೀಳು = ಸಸ್ಯ ಬೆಳೆಯದ ಭೂಮಿಯಾಗು; ಬಂಜರಾಗು; ಬೀಳಾಗು: ಮಂಜಣ್ಣ ಸತ್ತ. ಅದರಿಂದ ಗದ್ದೆ ಹಡಿಲು ಬೀಳುತ್ತದೆ (ಮುಗಿಯು. ೭೫); ಗದ್ದೆ ಈ ವರ್ಷವೂ ಹಡಿಲುಬಿದ್ದರೆ ನಾಳೆ ಕೆಟ್ಟೇ ಹೋಗುತ್ತದೆ (ಜಿದಾಶಾ. ೩೭೪).

[<– ತುಳು. ಪಡಿಲ್, ಪಡೀಲ್, ಹಡೀಲ್]

ಹಡಿಲುಭೂಮಿ (ನಾ). ಸಸ್ಯ ಬೆಳೆಯದ ಭೂಮಿ; ಬಂಜರು; ಬೀಳುನೆಲ: ಸೂಪ್ಪಿನ ಹಳ್ಳಿಯಲ್ಲಿ ಮನೆಮಠಗಳು ಕಡಿಮೆ, ಹಡಿಲುಭೂಮಿಯೇ ಅಧಿಕ (ಕೃಷ್ಣಪೂ.೪).

[ಹಡಿಲು + ಭೂಮಿ]

ಹಡಿಸಲಿಸು 'ಪಡಿಸಲಿಸು2' ನೋ.

ಹಡಿಹಾಲಿ 'ಪಡಿಯಲಿ' ನೋ.

ಹಡು1 'ಪಡು1' ನೋ.

ಹಡು2 'ಪಡು5' ನೋ.

ಹಡು3, ಹಡಿ3, ಹಡ್ಡಿ3 (ನಾ).೧. ಹೊಲಸು; ಕೊಳೆ. ೨. ಮಲ; ಹೇಸಿಗೆ: 'ಹಡುವು', 'ಹಡುಹು' ಪರಾ. **ಹಡಿ3**: ೧. 'ಹಡಿಮ್ಮೆಲಿಗೆ' ಪರಾ. **ಹಡ್ಡಿ3**: ೨. 'ಹಡಹರ್ದು' ಪರಾ.೩. ಬೆದೆ: ಹಸುವಿಗೆ ಹಡ ಬಂದಿದೆ (ಕೃಷಿ). ೪. ಕೆಟ್ಟ ಚಾಳಿಗೆ ಬಿದ್ದವನು: ಶಾಮಭಟ್ಟನೆ, ಪಾಪ ಒಳ್ಳೆಯವ, ಆದರೆ ಹಡ ನೋಡಿ ವಿಚ್ಚು ಕಳೆದು ಉಳಿದ ಹಣವನ್ನು ಸೂಳೆಯ ಮೇಲೆ ಸುರಿಯುತ್ತಾನೆ (ಪ್ರಶ್ನ. ೧೪೭). [< ಪಡುಕೆ]

ಹಡುಕು 'ಪಡುಕೆ' ನೋ.

ಹಡುಕುನಾತ 'ಹಡಿಕೆನಾತ' ನೋ.

ಹಡುಕುಳಿ 'ಪಡುಕುಳಿ' ನೋ.

ಹಡುಕೆ 'ಪಡುಕೆ' ನೋ.

ಹಡುಗಾರುಕ್ಕೆ (ನಾ). ಬೀಳುನೆಲವನ್ನು ಉಳುವುದು; ಬಂಜರುಉಕ್ಕೆ; ಬೀಳುಕ್ಕೆ: ಯಾವ ಯಾವ ಹೊಲಗಳ ಹಡುಗಾರುಕ್ಕೆಯಾಯ್ತೆಂದು ಕೇಳಿದೆ (ಚಾಂಗಾಳ್ಳ. ೪೨೦).

[< ಹಡು2 + ಆರ್ಕು (< ಆರ್3) + ಉಕ್ಕೆ (< ಉಳ್ಕೆ)]

ಹಡುಬೀಳಿಸು (ಕ್ರಿ). ಸಸ್ಯ ಬೆಳೆಯದಂತೆ ಮಾಡು; ಬಂಜರಾಗಿಸು; ಬೀಳುಮಾಡು: ನಮ್ಮ ಕೆಳಗಿನ ಗದ್ದೆಯನ್ನು ಹಾಗೆಯೇ ಹಡುಬೀಳಿಸುವ ಬದಲು ಎಳ್ಳನ್ನಾದರೂ ಬಿತ್ತಿದ್ದರೆ, ಒಂದರಡು ಬೇಳೆ ಎಣ್ಣೆಯಾದರೂ ಸಿಗುತ್ತಿತ್ತು (ಮರಮ. ೩೨).

[ಹಡುಬೀಳು (< ಪಡುಬೀಳು) + - ಇಸು3]

ಹಡುಬೀಳು 'ಪಡುಬೀಳು' ನೋ.

ಹಡುಭೂಮಿ 'ಪಡುಭೂಮಿ' ನೋ.

ಹಡುವಣ 'ಪಡು2' ಪರಾ.

ಹಡುವಲ್ 'ಪಡು2' ಪರಾ.

ಹಡುವಲು 'ಪಡು2' ಪರಾ.

ಹಡುವು (ನಾ). ಹೇಸಿಗೆ; ಮಲ: ಕೋಳಿಯ ತಂದು ಹಂಜರವ ಕೂಡಿ ಅಮೃತಾನ್ನವನಿಕ್ಕಿ ಸಲಹಿದಡೆ ಅದು ತಾನೆ ಮತ್ತೆ ತಿಂಬ ಹಡುವಿಂ [ಶಾಕಾಂ. ೬] ಗೆ ಚಿತ್ರವನಿಕ್ಕುವದ ಮಾಣ್ಬುದ (ಬಸವ. ೮೬); (ಗಣಭಾ.೨೬೪ ನೋ); ಕುಕ್ಕು(ರ್ಕು)ರಂಗ ಪಟ್ಟೆಮಂಚ ಸುಪ್ರತ್ತಿಗ ಅಮೃತಾನ್ನವನಿಕ್ಕಿ ಸಲಹಿದಡೂ ಹಡುವಿಂಗೆ ಚಿತ್ರವನಿಕ್ಕುವುದೇ ದಿಟ (ಸರ್ವಜ್ಞ. ೩೫-೧೭೫); ಹಡುವ ಕಚ್ಚಿದ ಶ್ವಾನ ಒಡೆಯನ ಕುಡುಹ ಬಲ್ಲುದೆ (ಸಿದ್ಧೇಶ. ೧೧೮). [ಹಡ್ಡು3 + - ವು]

ಹಡುಹು1 (ನಾ). = ಹಡುವು: ಭಕ್ತರು ಬಯಕೆಯನಿರಿಸಿದರೆ ಅದು ಸತ್ತ ನಾಯ ಮಾಂಸ ವಿರಕ್ತರು ದ್ರವ್ಯವ ಮುಟ್ಟಿದಡೆ ಅದು ಕತ್ತೆಯ ಹಡುಹಿಂಗೆ ತಪ್ಪಿದರಂಬೆ (ಸರ್ವಜ್ಞ. ೧೭೮). [ಹಡ್ಡು3 + - ಹು2 (< - ವು)]

ಹಡುಹು2 (ನಾ). ಬಂಜರುಭೂಮಿ (?): ಪಡುವ ಪಳಿಯ ಹಡುಹು ಗಡಿ ಬಡಗಣ ಮಕ್ಕಿ (ಪೌಇ. ೧೫೩, ಉಡುಪಿ. ೨೫೨-೬:?). [< ಪಡವು1?]

ಹಡೆ1 'ಪಡೆ1' ನೋ.

ಹಡೆ2 'ಪಡೆ2' ನೋ.

ಹಡೆ3 'ಹಡು3' ನೋ.

ಹಡೆ4 (ನಾ). ೧. (ಕರಾ) ಮಾತುಗಾರ; ವಾಚಾಳಿ: ಹೆಬ್ಬಾರರನ್ನು 'ಹಡೆ, ಪಳ್ಳ' ಅನ್ನುತ್ತೀರಿ ನೀವು (ಕೃಷ್ಣಪೂ. ೨೮). ೨. ಪೊಳ್ಳು; ವ್ಯರ್ಥ.

ಹಡೆಪಟ್ಟಾಂಗ (ಕರಾ) = ಪೊಳ್ಳುಹರಟೆ: ಅಣ್ಣನನ್ನು ಬಾಯಿಬಿಟ್ಟು ಕೇಳೋಣವೆಂದರೆ 'ಈ ಹೆಂಗಸರಿಗೆ ಹಡೆಪಟ್ಟಾಂಗವೆಂದರೆ ಅಷ್ಟು ಪ್ರೀತಿ' ಎಂದು ಅಣ್ಣನು ಹೇಳುವುದಕ್ಕೆ ಹಿಂದಮುಂದಾಗಸೆಂಬುದು ಖಂಡಿತ (ಮರಮ. ೬೯). [?]

ಹಡೆಮಾತು 'ಪಡವಾತು' ನೋ.

ಹಡೆಯಿಸು 'ಪಡೆಯಿಸು' ನೋ.

ಹಡೆವಳ 'ಪಡೆವಳ' ನೋ.

ಹಡೆವಳಿತಿ 'ಪಡವಳತಿ' ನೋ.

ಹಡೆಹರ್ದು (ನಾ). ಹೊಲಸು ತಿನ್ನುವ ಹದ್ದು: ಪರ್ದು ಚಿಂಬರ್ದುರುತರದ ಹಡೆಹರ್ದು ಪೆರುವರ್ದಪರೊಳೊಪ್ಪಿದವು (ಸಾಳ್ವಭಾ. ೫-೨೩).

[ಹಡ್ಡಿ3 (< ಹಡು3) + ಹರ್ದು (< ಪರ್ದು)]

ಹಡೆಹುಡುಗ (ನಾ). ಪ್ರಾಯದ ಹುಡುಗ; ಪಡ್ಡೆ: ಈ ಹಡೆಹುಡುಗ ಕೈಯಲ್ಲಿರುವ ದುಡ್ಡನ್ನೆಲ್ಲ ಕಳೆದುಕೊಂಡರೆ ಏನು ಗತಿ? (ಸಂಸ್ಕಾರ. ೧೨೪).

[ಹಡ್ಡೆ (< ಪಡ್ಡೆ) + ಹುಡುಗ]

ಹಡ್ಡಲಗೆ 'ಪಡಲಗೆ' ನೋ.

ಹಡ್ಡಲಿಗೆ 'ಪಡಲಗೆ' ನೋ.

ಹಡ್ಡು1 (ಕ್ರಿ). (ಉಕ) ತೋಡು; ಬಗೆ; ಅಗೆ: ಹಡ್ಡುತ್ತಲುಗುರಿನಿಂದಡಿಯಿಟ್ಟು ಮುಂದಕ್ಕೆ ಗುಡ್ಡದೊಳಗರಭಾವಿಯೆಲ್ಲಿರ್ಪುದೆಂದನುತ ಕುಂಟುತ್ತೆ ಬರುತಿರ್ದನು (ಪುರಪು. ೨೪ ೧೨); ಒಪ್ಪನು ಅಲ್ಲಿಯೇ ಹತ್ತಿರ ನೆಲ ಹಡ್ಡುತ್ತಿದ್ದನು (ಅನ್ನ. ೨೦೮).

[< ಪರಡು1]

ಹಡ್ಡು$_2$ (ನಾ). (ಆಲಂ) ಹಾಳು; ನಾಶ.

ಹಡ್ಡುಮಾಡು = ನಾಶಮಾಡು; ಹಾಳುಮಾಡು: ಬಿಟ್ಟ ಸಂಪಾದನೆ ಇರುವಾಗ ಕೊಡದ ಏನು ಮಾಡಿಯಾನು? ನೀನು ಅದಕ್ಕೆ ನಮ್ಮ ಮನೆ ಬದುಕು ಹಡ್ಡುಮಾಡಿ ಬಿಟ್ಟೆಯಲ್ಲ! (ಸುವಸಂ. ೮೦). [< ಹಡ್ಡು$_1$]

ಹಡ್ಡೆ 'ಪಡ್ಡೆ' ನೋ.

ಹಣ್$_1$ 'ಪಣ್$_2$' ನೋ.

ಹಣ್$_2$ 'ಪಣ್$_3$' ನೋ.

ಹಣ 'ಪಣವು$_1$' ನೋ.

ಹಣಕಾಸು (ನಾ). (ರಾಜ್ಯದ ಅಥವಾ ಒಬ್ಬ ವ್ಯಕ್ತಿಯ) ದ್ರವ್ಯರೂಪದ ವರಮಾನ,— ಆದಾಯ: ಹಣಗೆ ಹಾರ್ಯಸಿಕೊಂಡು ತಿರುಪತಿಗೋಹದ ಕಂಡು ಪಣಕಾಸು ಕೊಂಡು ಬಂದು (ಪುರಂದ. ೨-೬೬-೭).

ಹಣಕಾಸು ಅಧಿಕಾರಿ = ರಾಜ್ಯದ ದ್ರವ್ಯರೂಪವರಮಾನಕ್ಕೆ ಸಂಬಂಧಿಸಿದ ಇಲಾಖೆಯ ಅಧಿಕಾರಿ: ನೀವು ಹಣಕಾಸು ಅಧಿಕಾರಿಗಳೊಂದಿಗೆ ಈ ವಿಷಯವನ್ನು ಚರ್ಚಿಸಿ (ರೂಢಿ). [ಹಣ(< ಪಣವು$_1$) + ಕಾಸು$_2$]

ಹಣಕು 'ಹಣಿಕು$_1$' ನೋ.

ಹಣಗಟ್ಟು (ಕ್ರಿ). (ಕರಾ) ಮರಗಟ್ಟು; ಜಡವಾಗು: ಮಲಗಿಕೊಳ್ಳುವಾಗ ಶರೀರವೆಲ್ಲ ಹಣಗಟ್ಟುತ್ತದೆ (ಮರಮ. ೫೦೬).

[ಹಣ್$_0$ (IP <— ತುಳು. ಪಣ = ನಿಷ್ಕ್ರಿಯತೆ; ಜಡತ್ವ) + ಕಟ್ಟು$_1$]

ಹಣಗಾತಿ (ನಾ). ದುಡ್ಡಿರುವವಳು; ಐಶ್ವರ್ಯವಂತೆ: (ಕ).

[ಹಣ(< ಪಣವು$_1$) + - ಕಾತಿ]

ಹಣಗಾರ (ನಾ). ದುಡ್ಡಿರುವವನು; ಐಶ್ವರ್ಯವಂತ; ಧನಿಕ: ಪುಷ್ಪಸೇನನೆಂಬ ಹಣಗಾರನಾದ ಮತ್ತೊಬ್ಬ ಬ್ರಾಹ್ಮಣನಿಗೆ ವಿವಿಲಶನೆಂಬ ಮಗನಿದ್ದನು (ನೀತಿಚಂ. ೫ ೨೪); ಮನೆಯಗಾರನ ಹಂಗು ಹಣಗಾರನಿಗೂ ಬೇಕು (ಗಾದೆ).

[ಹಣ(< ಪಣವು$_1$) + - ಗಾರ(< - ಕಾಱ)]

ಹಣಚಿ$_1$ (ನಾ). ಮುತ್ತೈದೆ; ಸುಮಂಗಲಿ: 'ಹಣಚಿಬಟ್ಟು' ಪರಾ.

[< ಅಣಚಿ]

ಹಣಚಿ$_2$ (ನಾ). ಒಂದು ಬಗೆಯ ಮರ: ಆ ಹುಣಚಿಯ ಮರ ಹಣಚಿಯ ಮರವಾಗಿ ತಾ ಕಣಚಿ ಹೋದುದ ಕಂಡೆ (ಸಿದ್ಧವ. ೪. ೨೩೩-೭೬೨). 'ಹನಿಚಿ' ಪರಾ. [?]

ಹಣಚಿಬಟ್ಟು (ನಾ). ಮುತ್ತೈದೆತನದ ಸೂಚಕವಾಗಿ ಚುಚ್ಚಿಸಿಕೊಳ್ಳುವ ಹಚ್ಚೆಯ ಬೊಟ್ಟು,— ಗುರುತು: ಹಣಚಿಬಟ್ಟಿನ ಮ್ಯಾಲ ಹರಿದಾಡು ಕುಂಕುಮ (ಗತಿ. ೭೭); ಹಣಚಿಬಟ್ಟಿನ ಕೈಯ ಒತ್ತಿ ಹಿಡಿಯಲುಬ್ಯಾಡ (ಕೃಷ್ಣಾ. ೧೨೦).

[ಹಣಚಿ$_1$ + ಬಟ್ಟು]

ಹಣಚು 'ಪಳಂಚು$_1$' ನೋ.

ಹಣಜೆ (ನಾ). ಒಂದು ಬಗೆಯ ಹುಲ್ಲು; ಇಕ್ಕುಳಿಕೆ: "ಇಕ್ಕುಳಿಕೆ ಹಣಜೆಯಕ್ಕು" (ಮಂಗರಾ. ೭೩-೮). [ದೇ. ॥ ತಮಿ. ಅಣಚ್ಚೈ; ತುಳು. ಪಣಜ]

ಹಣತಿ 'ಪಣತೆ' ನೋ.

ಹಣತಿಸೊಡರು 'ಪಣತಸೊಡರ್' ನೋ.

ಹಣತೂಕ (ನಾ). ಚಿನ್ನದ ಒಂದು ತೂಕ; ೨೧೩ ದ್ರಮ್ಮದ ತೂಕ: (ಕಸಂಗ್ರಾ.೧೮೨).

[ಹಣ(< ಪಣವು$_1$) + ತೂಕ]

ಹಣತೆ$_1$ 'ಪಣತೆ' ನೋ.

ಹಣತೆ$_2$ (ನಾ). (ಬಾಳೆಯ)ಚಿಪ್ಪು: ಒಂದು ತಾಮ್ರದ ಹರಿವಾಣದಲ್ಲಿ ಎರಡು ಹಣತೆ ಗಾಳಿಬಾಳೆಹಣ್ಣುಗಳನ್ನಿರಿಸಿದ (ಚಿಗುತ. ೯೬); ಒಂದು ಹಣತೆ ಬಾಳೆಹಣ್ಣು ಬಂದಿತು (ಮುಗಿಯು. ೧೮೫). 'ಹಣಿಗೆ' ಪರಾ. [?]

ಹಣಬರಿ (ನಾ). ಎತ್ತುಗಳಲ್ಲಿ ಒಂದು ಬಗೆ: ಎತ್ತುಗಳಲ್ಲಿ ಸೋರಟಿ, ಮೂಡಲು, ಕುಂಡಲವಾಡಿ, ಜವಾರಿ, ಧಣಗರೀ, ಖಿಲಾರೀ, ಹಣಬರಿ, ಬಿಲ್ಲರಿಯೆಂಬ ಎಂಬ ಆ ಜಾತಿಗಳುಂಟು (ಕಭಾಗ.೫೭). [?]

ಹಣಬೆ 'ಆಳಂಬೆ' ನೋ.

ಹಣಮ 'ಹಣುವ' ನೋ.

ಹಣಮಂತ 'ಹಣುಮಂತ' ನೋ.

ಹಣಮಟೆಂಕಿ (ನಾ). ಹನುಮಂತನ ಚಿತ್ರವಿರುವ ಒಂದು ಬಗೆಯ ಚಿನ್ನದ ನಾಣ್ಯ: ಚಿನ್ನದ ನಾಣ್ಯಗಳು:— ರಾಮಟೆಂಕೀ ಮೊಹರು . . . ಹಣಮಟೆಂಕಿ ರೂ. ೧೮, ಪದ್ಮಟೆಂಕಿ ರೂ. ೧೮ (ಕಭಾಗ.೨೬೦). 'ರಾಮಟೆಂಕಿ' ಪರಾ.

[ಹಣಮ (< ಹಣುವ) + ಟೆಂಕಿ (< ಟಂಕಿ$_2$)]

ಹಣಮಣಿಹ (ನಾ). ದುಡ್ಡಿನ ಕೆಲಸ; ಹಣದ ಕಾರ್ಯ: ತುಳುವಮನ್ನೆಯರ ಮದಮಂ ಮುರಿದು ಸ್ವಾಧೀನಂಗೆಯ್ದು ಕರಮಂ ಕೊಂಡು ಹಣಮಣಿಹಮಂ ತೆತ್ತು ನಡೆವಂತು ಕಟ್ಟಳೆಯಂ ರಚಿಸಿ (ಕೆಳ್ಳ. ೨-೬೨). [ಹಣ (< ಪಣವು$_1$) + ಮಣಿಹ$_1$]

ಹಣಮುಟ್ಟು (ಕ್ರಿ). ದುಡ್ಡು ತೆಗೆದುಕೊಳ್ಳು; ಹಣ ಅಗತ್ಯವಾಗು: ಯಲೆ ಕಾಯಿ ಮೇಲೋಗರ ಹುಲುಗಂಧ ಮೊದಲಾದ ಹಣಮುಟ್ಟದ ಸೋಪಸ್ಕರ ಏನು ತರಿಸಿಕೊಟ್ಟು ರಥೋತ್ಸವವನ್ನು ಸಂಭ್ರಮವಾಗಿ ಆಗುಮಾಡಿಸುವುದು (ಕ್ಷುಆಂ. ೧೫೨೮, ೪೬-೬; 1711). [ಹಣ (< ಪಣವು$_1$) + ಮುಟ್ಟು$_1$]

ಹಣರುಣ (ನಾ). (ಸಂಬಳ ಮುಂತಾದ ರೂಪದಲ್ಲಿ ಪಡೆಯುವ) ಹಣದ ಹಂಗು: ಕಯ್ಯುಗಾಱರು ನೀಗಿದರು ನಿಜಪತಿಯ ಹಣರು[ಪಾಠಾಂ. ರಿ]ಣವ(ಕ್ಷುಆಂ. ೧೫-೧೦). [ಹಣ(< ಪಣವು$_1$) + ರುಣ]

ಹಣವಂತ (ನಾ). ದುಡ್ಡಿರುವವನು; ಧನಿಕ: ವಿದ್ಯಾವಂತ, ಜೊತೆಗೆ ಹಣವಂತ (ಸುವಸಂ. ೧೪). [ಹಣ (< ಪಣವು$_1$) + - ವಂತ]

ಹಣವಡ 'ಹಣವಡ್ಡ' ನೋ.

ಹಣವಡ್ಡ, ಹಣವಡ (ನಾ). ಒಂದು ಹಣ ಮತ್ತು ಒಂದು ಅಡ್ಡ; ಏಳು ಆಣೆಗಳು: ಹಸುವಿಗೆ ಹಾಗ ಎತ್ತಿಗೆ ಹಣವಡ್ಡ ಕಱುವಿಗೆ ಮೂಱು ಹಣ (ತುಱಾ.೩); ಹಾದಿಯ ಜಗಳವನ್ನು ಹಣವಡ್ಡಕ್ಕೆ ಕೊಂಡು ತನಗೂ ತನ್ನ ಯಜಮಾನರಿಗೂ ಹಂಚಿಬಿಡುತ್ತಿದ್ದಳು (ಕುಸಾಪ.೩). **ಹಣವಡ:** ಅಡಬಲಿಯಲು ಹಣವಡ ಬಿನುಗಿನ ಅಡ ಮುಱಿದೆಯ ಹಾಗ (ಎಪ್ರ. XI. ದಾವಣ.೪೪; 1143). [ಹಣ (< ಪಣವು$_1$)+ ಅಡ್ಡ$_2$]

ಹಣವಡ್ಡತೂಕ (ನಾ). ಏಳು ಆಣೆಗಳ ತೂಕ : ಇಂಗು ಹಣವಡ್ಡತೂಕ, ಸೈಂಧವ ನಾಲ್ಕು ಹಣವಡ್ಡ ತೂಕ . . . ಉಳ್ಳಿ ನಲ್ವತ್ತು ಹಣವಡ್ಡತೂಕ, ಈ ಪ್ರಕಾರದಲ್ಲಿ ಇಂಗು ಮೊದಲಾದ ನಾಲ್ಕು ದಿವಧವು ಕೂಡಿ ಆರುವರಾಹ ತೂಕವ ಕೊಡಿಸಲು ಗುಲ್ಮ, ಉದಾವರ್ತ ಉದರಶೂಲೆಗಳು ಪರಿಹರವಹವು (ವೈದ್ಯಸಾ. ೨,೩೧೬).

[ಹಣವಡ್ಡ + ತೂಕ]

ಹಣವು 'ಪಣವು$_1$' ನೋ.

ಹಣಾಹಣಿ, ಹಾಣಾಹಣಿ, ಹಾಣಾಹಾಣಿ (ನಾ).ಗ. ಒಬ್ಬನು ತನ್ನ ಹಣೆಯಿಂದ ಇನ್ನೊಬ್ಬನ ಹಣೆಗೆ ಹೊಡೆದು ಮಾಡುವ ಯುದ್ಧ: ದಕ್ಕಾದಕ್ಕಿ (ಹಾಣಾಹಾಣಿ) ಹಣಾಹಣಿ . . . ಇವು ತತ್ಸಮಂಗಳ್ (ಶಮದ. ೧೮೫ ಪ್ರಯೋ); ರಾಯ ಶ್ರೀ ತಾಳಪತ್ರಮಂ ಕೈಕೊಂಡು ಹಣಾಹಣಿ ಕೇಶಾಕೇಶಿ ಮೋಡಾಮೋಡಿಯುದ್ಧಮಂ ಮಾಡುತ್ತ ಗಂಧರ್ವನ ಶಿಖೆಯಂ ಪಿಡಿದು ನೆಲಕ್ಕೆ ಮೆಟ್ಟಿ ನಿಲ್ಲಲಾಗಿ (ಬ್ರತ್ನೇಶ್ವ. ೬೭). ಶಿ. ದೊಡ್ಡ ಜಗಳ: ಬೆಳಗದ್ದರೆ ಅತ್ತಗೂ ಸೊಸೆಗೂ ಹಣಾಹಣಿ ಜಗಳ (ಮಾಮರಾ. ೧೩೨). **ಹಾಣಾಹಾಣಿ:** ೧. ಕುದುರೆಗಳಾ ಮೋಹರದೊಳಗುಜ್ಜೆಯುರುಳ್ವುದನೀಕ್ಷಿಸುತಿನಿವಿರಿದುಂ ಕೋಪ ದಿನದಟು ಮಿಗಲ್ಕೇಱುವ ಹಾಣಾಹಾಣಿಯಿಂದ ನಿಮಿರ್ಚಿದರು (ಜಯಾಕಾ. ೬-೩೭); ಕಣ್ಗಾಣದ ತಮ್ಮೊಳು ತಾವು ಹಾಣಾಹಾಣಿಯೊಳು ಶಿವಿದಾಡುವುದ ಜಗತ್ಕಾಣ ನಿರೀಕ್ಷಣೆಗೆಯ್ದ (ಮೋಹತ. ೪೦-೪೨). **ಹಾಣಾಹಾಣಿ:** ೧. ಹೂಣಿಗರು ಹುರಿಬಲಿದು ಹಾಣಾಹಾಣಿಯಲಿ ಹೊಯ್ದಾಡಿದರು (ಕುವಾಭೀ. ೮-೧೫); ತರದಿ ದಂಡಾದಂಡಿ ಕೂಡೆ . . . ಕೇಶಾಕೇಶಿ ಪಿರಿದು ಹಾಣಾಹಾಣಿಯ ಹೆಲ್ಲಾಹೆಲ್ಲಿಯುದ್ಧಮಾದುದು (ಸಾಳ್ವಭಾ. ೧೫-೧೪). [< ಪ್ರಣ$_1$]

ಹಣ್$_1$ 'ಪಣ್$_1$' ನೋ.

ಹಣ್$_2$ (ಕ್ರಿ).ಗ. ಹೊಡೆ; ಬಡಿ: ಚಿನ್ನದ ಗಿಂಡೀಲಿ ನೀರ ತಂದಿಟ್ಟರೆ ಕಣ್ಣುಕಾಣದ ನಾ ಹಣೆದ[ಪಾಠಾಂ. ಕೊಣದ] ಪಂಧರಿರಾಯ (ಪುರಂದ. ೧-೬೫-೪); ಹೋರಾಟದಲ್ಲಿ ಹಗೆಯನ್ನು

ಹಣಿದು ಹಣ್ಣಿಗಿಳಿಸಿದರೆ ಮಾತ್ರ ಬಂಕೆಯನೀತನು ಹಿಂದಿರುಗಿ ಬಂದು ಸಿಂಹಾಸನ ಕೈರುವನು (ವೀರಬು.೬೬). ೨. (ಹಪ್ಪಳ ಮೊದಲಾದುವುಗಳನ್ನು) ಲಟ್ಟಿಸು; ಒತ್ತಿ ಅಗಲಮಾಡು: ಮೂರನೆಯ ಮನೆಯಲ್ಲಿ ಹಪ್ಪಳ ಹಣಿಯುವುದಕ್ಕೆ . . . ಹೋದುದೂ ಉಂಟು (ಸಂನ್ಯಾಸಿ. ೨೮). ೩. ಕುಡುಗೋಲು, ಕತ್ತಿ, ಕಬ್ಬಿಣ ಮೊದಲಾದುವುಗಳನ್ನು (ಹರಿತಗೊಳಿಸಲು) ತಟ್ಟು,— ಬಡಿ: ಇಮ್ಮಡಿ ಶಕ್ತಿಯಿಂದ ಕತ್ತಿಯನ್ನು ಹಣಿದರೆ ಅದು ನಾಲ್ಕುಮಡಿ ಪದಾರ್ಥವನ್ನು ಕಡಿಯುತ್ತದೆ (ಮುಂಬಯಿ. ೫-೧೮೯); ಕಬ್ಬಿಣ ಕಾಸುವೆ ಅಡಿಗಲ್ಲ ಮೇಲಿರಿಸುವೆ ಥಣಥಣ ಹಣಿಯುವೆ (ಕವಪ್ರ. ೨-೫೭); ಒದುಕಿನಡಿಗಲ್ಲಿನಲಿ ನೂರುನೋವಿನ ಭ್ರೂಣ ತಾಳ- ಕುಡ-ಕುಳಗಳನು ಹಣಿದು ಕುಡಿಸಿದ ನೀರು (ಸಲಮು.೬೦-೮). ೪. ಕತ್ತರಿಸು; ತುಂಡರಿಸು: ಹಣಿದ ಮೂಗಿನ ಹಲ್ಲಿದ ತುಟಿಗಳ ಜುಣುಗುಗಿವಿಗಳ ಜುರಿತ ಹುಣ್ಣಿನ ಕೊಜೆದ ಕದಪುಗಳ . . . ರಕ್ಕಸಿ ಬಂದಳು (ತೂರರಾ.೩-೭-೧೧೨). ೫. ಮುರಿ; ತುಂಡುಮಾಡು: ಹಣಿಗೆ ಮಟ್ಟಿಯ ಬಡಿದು ದರ್ಭೆಯ ಹಣಿದು ಬೆರಳಲಿ ಸಿಕ್ಕಿ ಧೋತ್ರದ ದಣಿಬವನು ನಿಜವಿಡಿದು ಮಹಳದ ಮನೆಯ ಬೌಳದಲಿ ಮಣಿಗೆ ಮಂಡಿಸಿ ಕುಳ್ಳಿತುಂಬೌತಣದ ವಿಧ್ಯವ ಬಲ್ಲಿರಿ (ಕುವಾಪ. ೭-೧೨). ೬. ಜಜ್ಜು; ಹಿಂಡು: ಬಳ್ಳಿ ತುಱುಟಿಯ ಬೇರ ಬಳ್ಳಿತಾಗಿಯೆ ಹಣಿದು ಬೆಳ್ಳಿಯ ರಸದಿ ಬೆರೆಯಲ್ಕೆ ಹೇಮ ತಾ ಬಳ್ಳದಲಿ ಬಕ್ಕು (ಸರ್ವಜ್ಞ. ೧೯೭೪). ೭. ಹೋರಾಡು; ಪ್ರತಿಭಟಿಸು: ಹಣಿದ ದಿಕ್ಪಾಲಕರ ಪ್ರಮಥರ ಕುಣಿಹವನು ಕುಂದಿಸುವೆ ತಾಗುವೆ (ಅಂಬಿಕಾ. ೩೯-೮). ೮. ನಾಶಗೊಳಿಸು; ಇಲ್ಲವಾಗಿಸು: ರಣದೊಳಿನಿಬರ ನೊಬ್ಬನೇ ನೆಲೆ ಹಣಿದನೆಂದಮರಾಳಿ . . . ಹೊಗಳಿತು (ಕುವಾಪ. ೬೧೩. ೯-೯೪); ಸುರರಾಯನಸುರರ ಹಣಿದನು (ನಿಭಾಗ. ೬-೮-೧); ಬಲುಮೆ ಮೋಸಗಳನು ಹಣಿಯ ಕಲಹಗೈದ ರಾಜ (ಅಮತಂ. ೨೦-೧೫). ೯. ಇಲ್ಲವಾಗು; ನಾಶವಾಗು: ಬೆಳೆದ ಕತ್ತಲೆ ಮುತ್ತು ಹಣತುದೋ ಕುಮುದಿನಿಯ ಕೆಳೆಯ ಬಹಡಮಳಸಂಧ್ಯಾವನಿತೆ ಭುವನಮಂ ಮಳಯಜದಿ ಧವಳಿಸಿದಳೋ . . . ಎಂದೆಂಬ ಸಂದೇಹಕೊಳಗಾಗಿ ಬೌಪಟಂಬರಿದು ಪಸರಿಸಿತು ಬೆಳುದಿಂಗಳು (ಪಚಕಾ. ೩-೮೪): [< ಪಣ್ಣ್]

ಹಣ್ಣ್ 'ಪಣ್ಣ್' ನೋ.

ಹಣಿಕಿಕ್ಕು (ಕ್ರಿ). ಇಣುಕಿ ನೋಡು; ಮರೆಯಲ್ಲಿ ನಿಂತು ನೋಡು: ಮನಸ್ಸಿನಲ್ಲಿ ಎಂತಹದೋ ಸಂಶಯ ಮೆಲ್ಲನೆ ಹಣಿಕಿಕ್ಕಹತ್ತಿತ್ತು (ಮೂಯದಾ.೮೦); ಮನೆಯ ಗೋಡೆಯ ಮಧ್ಯದಿಂದ ಮೆಲ್ಲನೆ ಒಂದು ಮುಖ ಹಣಿಕಿಕ್ಕುವುದು (ನಡದಾ. I,೩೧೩).

[ಹಣಿಕು$_1$ + ಇಕ್ಕು]

ಹಣಿಕಿಸು (ಕ್ರಿ). ತಗ್ಗಿಸು; ಬಗ್ಗಿಸು: ಮರ್ಮಾಹತನಾದ ಆ ಮಾಣಿ ಮತ್ತೆ ಅಲ್ಲಿ ನಿಲ್ಲದಾದ ಹಾಗೆ ತಲೆ ಹಣಿಕಿಸಿ ಕಣ್ಣೀರು ಸುರಿಸುತ್ತಲೇ . . . ದುಃಖವನ್ನು ಕೋಡಿಯಾಗಿ ಹರಿಬಿಟ್ಟ (ಹೊಸಕ್ಕ. ೩೨). [ಹಣಿಕು$_2$ (< ಪಣುಂಕು) + - ಇಸ್ಸು]

ಹಣಿಕು$_1$, ಹಣಕು (ಕ್ರಿ). ಇಣಿಕಿ ನೋಡು; ಮರೆಯಲ್ಲಿ ನಿಂತು ನೋಡು: ಕಣಕುಟ್ಟೋ ಅಲ್ಲಿಗೆ ಹೋಗಿ ಹಣಕಿ ಇಣಕಿ ನೋಡುವಿರಿ (ಪುರಂದ. ೨-೯೦-೧); ಹಣಕುವುದು ಇಲ್ಲಿ ಬಿರುಬಿರುಕಿನಲ್ಲಿ ಕಣ್ಣಿಳೆಯುವಂಥ ಸುಗ್ಗಿ (ಸೂರ್ಯವಾ. ೫೭-೨); ಕುಮಾರವ್ಯಾಸನ ಶೈಲಿಯ ಅನುಕರಣವು ಕನಕದಾಸರ ಕೃತಿಗಳಲ್ಲಿ ಹಣಕುತ್ತದೆ (ತವನ. ೧೫೫); ಸ್ವಲ್ಪಹೊತ್ತಿನ ನಂತರ ನಾಗ ಹಣಕಿದ (ನಡದಾ. II, ೧೦೨೭). **ಹಣಕು:** ಬೆಚ್ಚನಾ ಮನೆಯಾ ಹೊಚ್ಚಲದೊಳಗೆ ನಿಂತರು ಭಟ್ಟರು ಹಣಕುತ ಹೊರಗೆ (ಗರಿ. ೪೫-೬); ಕತ್ತನ್ನು ಮೇಲಕ್ಕೆ ಹಣಕಿ ಹಣಕಿ ದನೆದರು (ಅಳಾ. ೮೫).

ಹಣಕಿ ನೋಡು = ಇಣಿಕಿ ನೋಡು; ಮರೆಯಲ್ಲಿ ನಿಂತು ನೋಡು: ಕೆಲವರು ಕಿಟಕಿಯ ಹೊರಗೆ ಹಣಕಿ ನೋಡುತ್ತಿದ್ದರು (ಸಾಹೇಬ್. ೫). **ಹಣಕಿ ಹಾಕು, ಹಣಕಿ ಹಾಕು** = ಹಣಿಕಿ ನೋಡು: ಕಿಡಿಕಿಯಲ್ಲಿ ಹಣಕಿ ಹಾಕಿದ (ಮೀದಿಮ. ೧೬); ರಾತ್ರಿಯಲ್ಲಿ ಆಗಸದ ತುಂಬೆಲ್ಲಾ ತಾರೆಗಳು ಹಣಕಿ ಹಾಕಿದಾಗ ಹಡಗಿನ ಜನಕ್ಕೆ ಯಾವುದೋ ಶಾಂತಿ ಸಿಗುತ್ತಿತ್ತು (ದಕ್ಷಿನ. ೧). 'ಇಣಿಕು' ಪರಾ.

ಹಣಕು$_2$ 'ಪಣುಂಕು' ನೋ.

ಹಣಗು 'ಪಣುಂಕು' ನೋ.

ಹಣಗೆ 'ಪಣಿಗ' ನೋ.

ಹಣಿತ (ನಾ). ಹೊಡೆತ; ಪೆಟ್ಟು: ಗುಣವ ರೂಢಿಸಿದರೆ ಸಮಷ್ಟಿಯ ಹಣಿತದಲಿ ಮುರಿದಿದಿರನಗಲಕೆ ಕುಣಿವ ಬೌಪಟಬೊಮ್ಮಗಜವಿದನಱಿವರಾರೆಂದ (ಕುವ್ಯಾಸ. ೯-೧೫೫).

[ಹಣ್$_2$ + - ತ್$_2$]

ಹಣಿತೆ 'ಪಣಿತೆ' ನೋ.

ಹಣಿದ$_1$ 'ಪಣಿದ$_1$' ನೋ.

ಹಣಿದ$_2$ 'ಪಂತ$_1$' ನೋ.

ಹಣಿದ$_3$ (ನಾ). ೧. ಕೆಬ್ಬಿನ ಹಾಲಿನಿಂದ ಮಾಡಿದ ಪದಾರ್ಥ; ಕಾಕಂಬಿ: "ಘಾಣಿತಮೆಂಬುದು ಹಣಿದಂ" (ಪರಾಯು. ೫೪-೧೬೯). ೨. (ಕಾವಲಿಯಲ್ಲಿ ಬೇಯಿಸಿ ತಯಾರಿಸುವ) ಒಂದು ಬಗೆಯ ತಿಂಡಿ: "ತುಪ್ಪದೊಳ್ ತಾಳಿಸಿದುದ್ಯೆದ ಭಕ್ಷ್ಯಮೆನಿಕ್ಕು ಹಪ್ಪಳಾದಿಗಳ್ ದಗ್ಧಮಕ್ಕು ಕಾವಲಿಯಲಹವ್ಯದ ಹಣಿದಮಕ್ಕುಂ" (ಮಂಗರಾ. ೩೪-೩). [< ಸಂ.ಘಾಣಿತ]

ಹಣಿದಂಬೊಯ್ 'ಪಣಿದಂಬೊಯ್$_1$' ನೋ.

ಹಣಿವರಡು (ಕ್ರಿ). (ಕಾಲಿನ ಗೊರಸಿನಿಂದ) ಬೆದಕು: ಹಣಿವ[ಪಾತಾಂ.ದ] ರಡುತ್ತಮುದ್ದರಿಸಿ ಬದ್ದಣಸುಂಗಳ ಬಂಗಿ ಕೋಲ್ಗಳಿಂದಣದಣಯಿಂ ನೆಲಂ ಬಿರಿವಿನಂ ಕೆಲದೀಡಿಱಿಯುತ್ತಲತ್ತಲಿತ್ತಣ ಬಸವಂಗೋಡೆ ಪೂಣರಲ್ ತೊಣೆಯಲ್ಲದೆ ಮತ್ತಮಲ್ಲಿಯುಂ ಮಣಿಯದೆ ಮುಂದೆ ನಿಂದ ವೃಷಭೇಂದ್ರನನಿಂದುನಿಭಾಸ್ಯೆ ನೋಡಿದಳ್? (ಸೂಕ್ತಿಸು. ೭-೩೭). [ಹಣ್$_2$ + ಪರಡು$_1$]

ಹಣಿಸು 'ಪಣಿಸು' ನೋ.

ಹಣು$_1$ 'ಪಣ್$_2$' ನೋ.

ಹಣು$_2$ 'ಪಣ್$_3$' ನೋ.

ಹಣುಂಗು 'ಪಣುಂಕು' ನೋ.

ಹಣುಗು 'ಪಣುಂಕು' ನೋ.

ಹಣುಗುದಲೆ (ನಾ). ಕುಸಿದ ತಲೆ: ಅಲ್ಲಿಗಲ್ಲಿಗೆ ತಱುಬಿ ಕಾದುವ ಕಲ್ಲು ಮರದಣ್ಣಗಳನಗಲಕೆ ಕೊಲ್ಲುಗೊಲೆಯಲಿ ಕೊಂದು ಕೊಡಹಿದರುಸುರ ಹಸರಗಳ ಹಲ್ಲುಗಿರುಕಿನ ಹಣುಗು[ಪಾಳಾಂ. ಹುಣುಬು]ದಲೆಗಳ ತಲ್ಲಣದ ತಳಮೇಲುಗಳ ಕೈಗಲ್ಲುಗಳ ಹರಿಸೇನೆ ಸೈಗೆಡೆದಿರ್ದುದು (ತೂರರಾ. ೬-೩೭-೧೫೫).

[ಹಣುಗು(< ಪಣುಂಕು) + ತಲೆ$_1$]

ಹಣುಮಂತ, ಹಣಮಂತ (ನಾ). ಆಂಜನೇಯ: ಹಣುಮಂತರಾಯ ಹಗ್ಗ ತಿನ್ನುವಾಗ ಪೂಜಾರಿ ಶಾವಿಗೆ ಬೇಡಿದ (ಗಾಡ). **ಹಣಮಂತ** : ಹಣಮಗೊಲ್ಲರು ಹಣಮಂತನ ಪೂಜಾರಿಗಳು (ಕಭಾಗ. ೧೭೩). [< ಹನುಮಂತ]

ಹಣುವ, ಹಣಮ (ನಾ). ೧. ಆಂಜನೇಯ;ಹನುಮಂತ. ೨. (ಆಲಂ) ಬಂಟ; ಸೇವಕ: ಅರಿಮಚ್ಚಳಿಕ ಗಜಕಂಠೀರವ ಆಹವಮಲ್ಲದೇವನ ಹಣುವಂ (ಎಸ.VII,೫ಕಾಂ. ೧೫೧-೧೬: 1048). 'ಅಣುವ' ಪರಾ. **ಹಣಮ:** ೧. 'ಹಣಮಟೆಂಕಿ' ಪರಾ.

[< ಸಂ. ಹನುಮನ್]

ಹಣುಹಗಿನು 'ಪಣ್$_3$' ಪರಾ.

ಹಣೆ$_1$ 'ಪಣೆ$_1$' ನೋ.

ಹಣೆ$_2$ 'ಪಣೆ$_2$' ನೋ.

ಹಣೆ$_3$ 'ಪಣೆ$_4$' ನೋ.

ಹಣೆಕಟ್ಟು 'ಪಣೆಗಟ್ಟು' ನೋ.

ಹಣೆಗಣ್ಣ 'ಪಣೆಗಣ್ಣ' ನೋ.

ಹಣೆಗಣ್ಣು 'ಪಣೆಗಣ್' ನೋ.

ಹಣೆಗಿಚ್ಚು 'ಪಣೆಗಿಚ್ಚು' ನೋ.

ಹಣೆಗುತ್ತಿ (ನಾ). ಏತ ಹಾಕಲು ಭೂಮಿಯಲ್ಲಿ ನೆಡುವ ಮರ; ಏತದ ಮರ: ಆ ಬಯಲಲ್ಲಿಯ ಒಂದು ಬಾವಿಗೆ ಒಂದು ಹಣೆಗುತ್ತಿಯನ್ನು ತಂದು ನೆಡಬೇಕಾದ ಪ್ರಸಂಗ ಬಂತು (ಮಾಮಗು. ೯). [ಹಣ್$_3$(< ಪಣ್$_4$) + ಕುತ್ತಿ$_1$]

ಹಣೆಚಾಚು (ಕ್ರಿ). ನಮಸ್ಕರಿಸು: ಭೃತ್ಯನ ಕಾವುದೆಂದರ್ಜುನನು ಹಣೆಚಾಚಿದನು

ಹರಿಪದಕೆ (ಕುವ್ಯಾಲು.೧-೪೪); ಅಲಘುಮತಿ ಹಣೆಚಾಚಿದಳು ಹರಿಯಂಘ್ರಿಕಮಲದಲಿ (ನಿಭಾಗ. ೩-೧೬-೫). [ಹಣೆ$_1$ (< ಪಣೆ$_1$) + ಚಾಚು$_1$]

ಹಣೆಪಟ್ಟಿ (ನಾ). ನೊಸಲಿಗೆ ಕಟ್ಟುವ ಅಲಂಕಾರದ ಪಟ್ಟಿ; ಹಣೆಯ ಪಟ್ಟಿ: ನೊಳಂಬರ ಮೂರ್ತಿಶಿಲ್ಪದಷ್ಟೇ ಸುಂದರವಾದವು ಈ ನಂದಿವಿಗ್ರಹಗಳು ಇವುಗಳಿಗೆ ಘಂಟಾಹಾರ, ಗೆಜ್ಜೆಯ ಹಾರ, ಸರಪಳಿ, ಹಣೆಪಟ್ಟಿ . . . ಇರುತ್ತವೆ (ನೊಳಂಬ. ೧೧೨). [ಹಣೆ$_1$ (< ಪಣೆ$_1$) + ಪಟ್ಟಿ$_2$]

ಹಣೆಬಟ್ಟು (ನಾ). ೧. ಬೈತಲೆಗೆ ಇಟ್ಟುಕೊಳ್ಳುವ ಆಭರಣ; ಬೈತಲೆಬೊಟ್ಟು: ಅರಳೆಲೆಯು ಹಣೆಬಟ್ಟು ಸರದ ಗುಂಡಿನ ಕೊಪ್ಪು, ಪರಿಪರಿಯ ವಜ್ರದ್ದೂನ್ನೋಲೆಗಳು (ಜಗೀತ. ೭೧). ೨. ಹಣೆಯಲ್ಲಿ ಇಟ್ಟುಕೊಳ್ಳುವ ಕುಂಕುಮದ ಬೊಟ್ಟು, — ತಿಲಕ: ಹಣೆಬಟ್ಟು ದೊಡ್ಡದಾಗಿ ಇಟ್ಟುಕೊಂಡರೆ ನಿನಗೆ ಒಪ್ಪುತ್ತದೆ (ರೂಢಿ). [ಹಣೆ$_1$(< ಪಣೆ$_1$)+ ಬಟ್ಟು]

ಹಣೆಬರಹ, ಹಣೆಬರೆಹ (ನಾ).೧. ವಿಧಿಲಿಖಿತ; ನಿಯತಿ; ವಿಧಿ: ''ಅದು ನಿಮ್ಮ ಹಣೆಬರಹ. ಮತ್ತೇನೂ ಹೇಳಲಾರೆ''. ಎಂದವಳು ಮಾರ್ನುಡಿದಳು (ಪುನರು.೨೫೫); ''ನಾನೇನು ಕರ್ಮ ಮಾಡಿದ್ದೆ?'' ಎಂದು ತನ್ನ ಹಣೆಬರಹವನ್ನು ನಿಂದಿಸಿದಳು (ಮಗಮಾಂ. ೧೦೦); ಯಾರ ಹಣೆಬರಹ ಹೇಗಿದಯೆಂಬುದು ಯಾರಿಗ ಗೊತ್ತು (ಚಂದ್ರಶಾ. ೨೫). ೨. (ಆಲಂ) ದುಸ್ಥಿತಿ; ಶೋಚನೀಯಸ್ಥಿತಿ: ಇಂಥ ಹೊಲಸು ವಾತಾವರಣದಲ್ಲಿ ಇದೇ ಹಣೆಬರಹವೆಂದು ಕಾಣುತ್ತದೆ (ಬದುಜ.೫೧೭). ೩. ತಲೆಬರಹ; ಶಿರೋನಾಮೆ: ಹಲಗೆಯ ಹಣೆಬರಹವೇ ಬದಲಾಗಿ ''ಗಾಂಧೀರಜಕಸೇವಾ'' ಆಗಿ ನೇತಾಡುತ್ತಿದ್ದಿತು (ಹುಚ್ಚುಪು. ೨೩). **ಹಣೆಬರೆಹ**: ೨. ಈ ಜನರ ಹಣೆಬರೆಹನೆ ಇದು. ಖೂನಿ ಮಾಡೋದು (ನಡದಾ. ೧,೩೨೨). [ಹಣೆ$_1$ (< ಪಣೆ$_1$) + ಬರಹ (< ಬರೆಪ)]

ಹಣೆಬರೆಹ 'ಹಣೆಬರಹ' ನೋ.

ಹಣೆಯಕ್ಕಿ 'ಪಣೆಯಕ್ಕಿ' ನೋ.

ಹಣೆಯಿಕ್ಕು 'ಪಣೆಯಿಕ್ಕು' ನೋ.

ಹಣೆಯೊಂದು (ಕ್ರಿ). (ನಮಸ್ಕರಿಸುವಾಗ) ಹಣೆಯು ಕಾಲುಗಳಿಗೆ ತಾಕು, — ಮುಟ್ಟು: ಕಂದನಂ ತಾನೆತ್ತಿಕೊಂಡೆತಂದವರ ಚರಣಾಂಬುಜಕೆ ಹಣೆಯೊಂ[ಪಾಶಾ. ವೊಂ]ದ ಹೊಡವಡಿಸಲ್ಕೆ ಕರುಣಾರಸವೊಸರುತಿರಲು (ಬಸಪು. ೪೮-೩೦); ಆ ಬಸವನಾ ಗುರುವಿನ ಚರಣಸರಸಿಜಯುಗಕೆ ಹಣೆಯೊಂದೆ ವಂದಿಸುತ (ಬಸಪು. ೬೧-೬೦). [ಹಣೆ$_1$ (< ಪಣೆ$_1$) + ಒಂದು$_1$]

ಹಣೆಹಗ್ಗ (ನಾ). ಎತ್ತುಗಳನ್ನು ಅಂಕೆಯಲ್ಲಿಡಲು ಉಪಯೋಗಿಸುವ ಹಗ್ಗ: (೬). [ಹಣೆ$_1$ (< ಪಣೆ$_1$) + ಹಗ್ಗ (< ಪಗ್ಗ)]

ಹಣೆಹಚ್ಚು (ಕ್ರಿ). = ಹಣೆಯೊಂದು: ಬಾದಷಹರು ರಮೇಶನ ಪಾದಗಳಿಗೆ ಹಣೆ ಹಚ್ಚಿದರು (ಹಾಡುಪು. ೬೫). [ಹಣೆ$_1$(< ಪಣೆ$_1$) + ಹಚ್ಚು$_1$ (< ಪಚ್ಚು$_1$)]

ಹಣ್ಣೆಂಡ 'ಪಣ್ಣೆಂಡ' ನೋ.

ಹಣ್ಣೊನೆ 'ಪಣ್ಣೊಲೆ' ನೋ.

ಹಣ್ಣೊಳ್ 'ಪಣ್ಣೊಳ್' ನೋ.

ಹಣ್ಣೊಳಿಸು 'ಪಣ್ಣೊಳಿಸು' ನೋ.

ಹಣ್ಣಡಕೆ 'ಪಣ್ಣಡಕೆ' ನೋ.

ಹಣ್ಣಡಿಕೆ 'ಪಣ್ಣಡಕೆ' ನೋ.

ಹಣ್ಣಲು (ನಾ). ಒಂದು ಬಗೆಯ ಮೀನು: ಕೊಜೆವ ಸೀಗುಡಿ ಗೆಂಡೆ ಕುಚ್ಚು ಹಣ್ಣಲು ಬಸಿಗ ಗಿಱಿಲು ಬಂಗಡೆ ಹಾವು . . . ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಪಚಕಾ. ೯-೪೫). [?]

ಹಣ್ಣಜ್ಜುವೆ (ನಾ). ಹಳೆಯದಾಗಿರುವ ಬಟ್ಟೆ; ಜೀರ್ಣವಾದ ವಸ್ತ್ರ: ತನ್ನವನೊಬ್ಬ ನುಟ್ಟ ಹಣ್ಣಜ್ಜುವೆ ಸೀರೆಯನೀಸಿಕೊಂಡು ನಾಲ್ಕಾಗಿ ಸೀಳಿ . . . ಅವಿಚಾರದಿಂ ನೀಡ (ಪಚಕಾ. ೮-೫೦). [ಹಣ್ಣು$_3$ (< ಪಣ್^{3}) + ಅಜ್ಜುವೆ]

ಹಣ್ಣೆಸು$_1$ 'ಪಣ್ಣೆಸು$_1$' ನೋ.

ಹಣ್ಣೆಸು$_2$ 'ಪಣ್ಣೆಸು$_2$' ನೋ.

ಹಣ್ಣು$_1$ 'ಪಣ್ಣು$_1$' ನೋ.

ಹಣ್ಣು$_2$ 'ಪಣ್$_2$' ನೋ.

ಹಣ್ಣು$_3$ 'ಪಣ್^{3}' ನೋ.

ಹಣ್ಣುಗಣ್ಣು (ನಾ). ಕಣ್ಣಿನ ಒಂದು ಬಗೆಯ ರೋಗ: ಪಿತ್ತರೋಹಿಣಿ ೧ ಭಾಗ ಇವಂ ಹುಲಿಗಿಲಿರಸದಲ್ಲಿ ಮರ್ದಿಸಿ ಓಪ್ಪಲಿಯ ಹಾಗೆ ಗುಳಿಗೆಯಂ ಮಾಡಿ ನಂಬೇರಸದಲ್ಲಿಯಾಗಲೀ ನೀರಲ್ಲಾಗಲೀ ತೇದು ಕಣ್ಣಿಗಿಕ್ಕಲು ಕಾಚು, ಪಟಲ, ಹಣ್ಣುಗಣ್ಣು, ನೀರುಸುರಿಯುತ್ತಿರುವುದು ಮಾಣುವುವು (ಎಪ್ಯ.೫೭). [ಹಣ್ಣು$_3$ (< ಪಣ್^{3})? + ಕಣ್ಣು (< ಕಣ್)]

ಹಣ್ಣುಗರಡಿ (ನಾ). ವಯಸ್ಸಾದ ಕರಡಿ; ಮುದಿಕರಡಿ: ರಣವದೇತಕೆ ಹಣ್ಣುಗರಡಿಗೆ (ಕಾಶಾ. ೩೭-೨೫). [ಹಣ್ಣು$_3$ (< ಪಣ್^{3}) + ಕರಡಿ$_1$]

ಹಣ್ಣುಗಾಯ (ನಾ). ಕೀವು ತುಂಬಿಕೊಂಡು ಮೆತ್ತಗಾಗಿರುವ ಗಾಯ: ಹಣ್ಣುಗಾಯ ಒಡೆದು ನೋವು ಕಡಮೆಯಾಯಿತು (ರೂಢಿ). [ಹಣ್ಣು$_3$ (< ಪಣ್^{3})+ ಗಾಯ]

ಹಣ್ಣುಗಾಯಿ 'ಪಣ್ಗಾಯ್' ನೋ.

ಹಣ್ಣುಗೆಣಸು (ನಾ). ಚನ್ನಾಗಿ ಬಲಿತ ಗೆಣಸು; ಪಕ್ವವಾದ ಗೆಣಸು: ಹಾಲುಜೇನಂ ಕೂಡೆ ಕುಡಿದೆಮ್ಮ ಜಗಳವಂ ಮುಳುಗಿಸುವ ಹಣ್ಣುಗೆಣಸಂ ತಿಂದು ತೇಗಿಸುವ (ಹಪ್ಪಸ.೪೬-೨೨೦). [ಹಣ್ಣು$_3$ (< ಪಣ್^{3}) + ಗೆಣಸು (< ಗೆಟಸು)]

ಹಣ್ಣುಗೊಳಿಸು 'ಪಣ್ಗೊಳಿಸು' ನೋ.

ಹಣ್ಣುನನ್ನೆ (ನಾ). ಒಂದು ಬಗೆಯ ಸಸ್ಯ: (ಮೃಡಿಗಿ.೬೪-೧೩೦೫). [?]

ಹಣ್ಣುಮುದುಕ (ನಾ). ತುಂಬ ವಯಸ್ಸಾದ ವ್ಯಕ್ತಿ; ಅತಿವೃದ್ಧ: ಆ ಹಣ್ಣು ಮುದುಕರಿಗೆ ಕಣ್ಣುಕಾಣುವುದಿಲ್ಲ (ರೂಢಿ). [ಹಣ್ಣು$_3$ (< ಪಣ್^{3}) + ಮುದುಕ]

ಹಣ್ಣುಮುದುಕಿ (ನಾ). ಬಹಳ ವಯಸ್ಸಾದ ಹೆಂಗಸು; ಅತಿವೃದ್ಧೆ: ನಾಯ್ ಸರಕೆಂದೊಡಿತ್ತ ಬಾ ಜಾಣಯೆಂಬಾ ಹಣ್ಣುಮುದುಕಿ ಸೂಳೆಯರಸದರು (ಚಬಪ್ರ. ೧೦-೬೬). [ಹಣ್ಣು$_3$ (< ಪಣ್^{3}) + ಮುದುಕಿ]

ಹಣ್ಣುವ (ನಾ). ಸಿದ್ಧಗೊಳಿಸುವಿಕೆ; ಸಜ್ಜು; ಅಣಿ: ''ಕಲ್ಪನೆ ಸಜ್ಜನೆ ಎಂದೊಡೆ ಅನೆಯ ಹಲ್ಲಣಿಸುವುದು, ಹಣ್ಣುವಮೆಂದೂ ಎಂಬರು'' (ನಾಚರಾ. ೬). [< ಪಣ್^{1}]

ಹಣ್ಣುವರಿ (ಕ್ರಿ). ಹಣ್ಣಾಗು; ಪಕ್ವವಾಗು; ಕಳಿ: ಆ ಕಾಯಿಗಳು ಪಾಡಿಗೆ ಬಂದು ಕೆಲಕೆಲವು ಹಣ್ಣುವರಿದು ಸೊಂಪಾಗಿ ತೋರುತ್ತಿದ್ದವು (ಮುಂಬಯಿ. ೩-೩೭). [ಹಣ್ಣು$_3$ (< ಪಣ್^{3}) + ಪರ್ಕಿ]

ಹಣ್ಣುವಾಳೆ (ನಾ). ಪಕ್ವಕ್ಕೆ ಬಂದ ಬಾಳೆ; ಹಣ್ಣಿಗೆ ಬಂದ ಬಾಳೆ: ಹಣ್ಣುವಾಳೆಯ ಕಾಯ ಸುಟ್ಟು ನಾರಂ ತೆಗೆದು ಸಣ್ಣ ಗದುಗದ ತೋರವಂ ಮಾಡಿ ಮತ್ತವಂ ಬಣ್ಣಿಸರದಂತೆ ಸರಗಯ್ದು . . . ಸಿತಮೋಚಫಲವೆಸರಿಡುವುದು (ಸೂಪಶಾ. ೪-೮೩). [ಹಣ್ಣು$_3$(< ಪಣ್^{3})+ ಬಾಳೆ$_1$ (< ಬಾಟೆ)]

ಹಣ್ಣುಸಂಪಗೆ (ನಾ). ಒಂದು ಬಗೆಯ ಸಂಪಗೆಮರ: ಆಟುರಕ, ಹಣ್ಣುಸಂಪಗೆ (ಮೃಡಿಗಿ. ೩೭-೭೩೮). [ಹಣ್ಣು$_3$ (< ಪಣ್^{3}) + ಸಂಪಗೆ]

ಹಣ್ಣುಹಂಪಲು 'ಪಣ್^{3}' ಪರಾ.

ಹಣ್ಣೆ (ನಾ). ಒಂದು ಬಗೆಯ ಔಷಧೀಸಸ್ಯ: ''ಸಿರಿಕನ್ನೆ ಮಧುಮೂಲಿಯೆನೆ ಹಣ್ಣೆ'' (ಮಂಗರಾ.೪೫-೪೮). 'ಅಣ್ಣೆ$_2$' ಪರಾ. [ದೇ. ॥ತಮಿ. ಪಣ್ಣೈ]

ಹಣ್ಣೆಲೆ 'ಪಣ್ಣೆಲೆ' ನೋ.

ಹಣ್ಣೆನೆ 'ಪಣ್ಣೆನೆ' ನೋ.

ಹತ (ಗು).೧. ಕೊಂದ; ಸಂಹರಿಸಿದ. ೨. ಹೊಡೆದ; ಗಾಯಗೊಳಿಸಿದ. ೩. ನೋಯಿಸಿದ; ಬಾಧೆಗೊಳಗುಮಾಡಿದ. ೪. ನಾಶವಾದ; ಭಂಗವಾದ: ಹತಭುಜಗರ್ವಮಾಗೆ ದೆಸೆಗೆಟ್ಟನಿರುದ್ಧತಳಪ್ರಹಾರದಿಂ . . . ಗತವಿಷವಾಗಿ ನಾಗಕುಲ ಮುತ್ಕಟಭೀತಿಯಿನೋಡುವಂತೆವೋಲ್ (ಜಗವಿ. ೧೭-೧೫೯). (ನಾ). ೫. ಕೊಲ್ಲುವಿಕೆ; ಸಂಹಾರ; ನಾಶ.೬. ಕೊಲ್ಲಲ್ಪಟ್ಟವನು; ಸಂಹರಿಸಲ್ಪಟ್ಟವನು: ಹರನಿಂದ ಹತನಾದ ಕಂತು (ಮೋಹತ.೫೫-೨). [ಸಂ.]

ಹತಕ (ನಾ). ಕೆಟ್ಟವನು; ನೀಚ: ''ಹತಕಂ ಕೆಟ್ಟವಂ'' (ಮಂಗರಾ.೭೧-೧೪); ಇತ್ತ ವಸಂತನಿತ್ತ ಮಲಯಾನಿಲನಿತ್ತ ಮಧುವ್ರತಾಳಿ ಮತ್ತಿತ್ತ ಮದೋತ್ಕ ಕೋಕಿಲ ಕದಂಬಕವೆಯ್ದೆ ವಿಜೃಂಭಿಸಿತ್ತು ತಾನಿತ್ತಲಡರ್ದು ಚಂದ್ರಹತಕಂ ತಲೆದೋಱಿದನೋವೋ ಕೆಟ್ಟೆಂ (ಕಾದಂಬ. ೮೮೨): ತಾಯತ್ತ ಮರೆಯಾಗಲಿಂದುಹತಕನು ಇತ್ತ ಉದಿಸಿದನು ಮದಿಸಿ (ಸಪದಾ. I, ೪೭೧). [ಸಂ.]

ಹತಕಂತುಕ (ನಾ). ಹೊಡೆದ ಚಂಡು; ಎಸೆದ ಸೆಂಡು: ಮಾಱಿ ಹತಕಂತುಕದವೊಲು ಪುಟವೇಱುತಿದೆ ವಿಕ್ರಮ ಚಡಾಳಿಸಿ ಬೀಱುತಿದೆ ಭುಜ ಭಾರಿಯಂಕವ (ಕುವಾ. ೬-೨೫).

[ಹತ + ಕಂತುಕ]

ಹತಕಲ್ಮಷ (ನಾ). ಕಳಂಕರಹಿತನಾದವನು; ಕಲ್ಮಷರಹಿತ: ಈ ಪರಮೇಶ್ವರಂ ತ್ರಿಜಗದೀಶ್ವರನೀ ಹತಕಲ್ಮಷಂಗೆ ಮಾತಾಪಿತೃಭಾವಮೆಂದು ನಿಮಗಾದುದು (ಶಾಂತಿಪು. ೧೦-೭೫). [ಸಂ.]

ಹತದೇಹ (ನಾ). ಏಟು ಬಿದ್ದ ದೇಹ,— ಶರೀರ: ಹತದೇಹ ಹತಭುಜದ್ವಯ ಹತೋರು ಹತಜೀವ ಹತಕರೀಟಂ ಹತಹೃತ್ಪತಿಕಾರ್ಯಮೆಂಬುದುಂಟೇ ಗತಿಯಂ ಸಾಧಿಸುವುದಲ್ತೆ ತಾಂ ಪ್ರತಿಕಾರಂ (ಗದಾಯು. ೯-೨೬). [ಸಂ.]

ಹತಪ್ರತಿಜ್ಞ (ನಾ). ಶಪಥ ಕೈಗೂಡದವನು; ಪ್ರತಿಜ್ಞೆ ಭಂಗವಾದವನು: ಆತ್ಮೀಯವಿದ್ಯಾಗರ್ವಪರ್ವತಮವರ ವಚೋವಜ್ರನಿರ್ಘಾತದಿಂ ನುಚ್ಚುನುಜ್ಜಿಯಾಗಿ ಪೋದೊಡೆ ಹತಪ್ರತಿಜ್ಞರುಂ ಗಳಿತಗರ್ವರುಮಾಗಿ (ಅದಿಪು. ೩-೭೫ ವ). [ಸಂ.]

ಹತಪ್ರಭ (ನಾ). ಕಾಂತಿಯನ್ನು ಕಳೆದುಕೊಂಡವನು; ಕಳಾಹೀನ: ಕೋದಂಡಂ ಕಡಿಕಂಡಮಾಗೆ ಪಱಿಪಡೆ ಪೊಡರ್ಪು ಹೇಮಪ್ರಭಂ ಹತಪ್ರಭನಾದಂ (ಪಂಡಾಮಾ.೩-೬೦).

[ಸಂ.]

ಹತಬಲ (ನಾ).೧. ಶಕ್ತಿಗುಂದಿದುದು: ಅವನ ಶಕ್ತಿವಿಶೇಷಗಳೆಲ್ಲ ಇದರಲ್ಲಿ ತನಿಗೊಂಡು ಮೇಳಗೊಂಡಿವೆ, ಮತೀಯ ಅಭಿನಿವೇಶಗಳೆಲ್ಲ ಸೌಂದರ್ಯಪ್ರಜ್ಞೆಯ ಮುಂದ ಹತಬಲವಾಗಿವೆ (ಕಸಾಚ. ೧೮೩). ೨. ಶಕ್ತಿಗುಂದಿರುವವನು; ಬಲವನ್ನು ಕಳೆದುಕೊಂಡವನು: ಜೈನರು . . . ಧಾರ್ಮಿಕರಂಗದಲ್ಲಿ ಹತಬಲರಾಗಿದ್ದರು (ಸಾಮಸ. ೧೩೬). ೩. ಇಂದ್ರ: ಹತಬಲವಾಸಮಾದುದಮರಾವತಿಯ್ಗಲಬಿಲಪ್ರಭಾವ ಸಂಗತಿಗಡಯಾಯ್ತು (ಪ್ರಭವ. ೪-೩೨). [ಸಂ.]

ಹತಬುದ್ಧ (ನಾ). ಬುದ್ಧಿಯನ್ನು ಕಳೆದುಕೊಂಡ ವ್ಯಕ್ತಿ: ಭವಾನೀಚರಣನು ಕಾಲೀಪದನ ಅವಸ್ಥೆ ನೋಡಿ ಹತಬುದ್ಧನಾಗಿ ಹೋದನು (ಇಪ್ರಕ. ೩೮೯): ತೀರ ಹತಬುದ್ಧಳಾದ ಕುವರಿಯಂ ನೀವು ಕೈನೀಡಿ ಕಾಯಬೇಕು (ಕೃಷ್ಣಾಕು. ೬-೨೨).

[< ಸಂ. ಹತಬುದ್ಧಿ]

ಹತಭಾಗಿನಿ (ನಾ). ಅದೃಷ್ಟವನ್ನು ಕಳೆದುಕೊಂಡವಳು; ಭಾಗ್ಯಹೀನೆ: ಈ ಪರಿಣಾಮಫಲವನ್ನು ಹತಭಾಗಿನಿಯರಾದ ಅಂದಿನ ಸತಿಯರು ಭುಂಜಿಸಬೇಕಾಯಿತು (ಭಾರದ. ೪೮೪). [ಸಂ. ಹತಭಾಗಿನೀ]

ಹತಭಾಗ್ಯ (ನಾ). ಅದೃಷ್ಟವನ್ನು ಕಳೆದುಕೊಂಡವನು; ಭಾಗ್ಯಹೀನ: ಅಜ್ಞಾನದ ಕಗ್ಗತ್ತಲು ಹಪ್ಪುಗಟ್ಟಿ ಈ ಹತಭಾಗ್ಯನ ಆತ್ಮವನ್ನು ಮುಸುಕಿದ (ವೀರಯೋ. ೧೯).

[ಸಂ.]

ಹತಭುಜದ್ವಯ (ನಾ). ಏಟು ಬಿದ್ದು ಜರ್ಜರಿತವಾದ ಕೈಗಳು: ಹತದೇಹ ಹತಭುಜದ್ವಯ ಹತೋರು ಹತಜೀವ ಹತಕರೀಟಂ ಹತಹೃತ್ಪತಿಕಾರ್ಯಮೆಂಬುದುಂಟೇ ಗತಿಯಂ ಸಾಧಿಸುವುದಲ್ತೆ ತಾಂ ಪ್ರತಿಕಾರಂ (ಗದಾಯು. ೯-೨೬). [ಸಂ.]

ಹತಮತಿ (ನಾ). ಬುದ್ಧಿಯನ್ನು ಕಳೆದುಕೊಂಡವನು; ಬುದ್ಧಿಗೇಡಿ: ಹತಮತಿ [ಪಾಠಾಂ. ಹತನುಂ] ಮನುಷ್ಯಗತಿವಡೆದು ತಾಪಸತ್ಯಕ್ಕೆ ಸಾರ್ದು ರಾಕ್ಷಸವಂಶೋದ್ಭವನಾಗಿ ಭರದಿನುಪಸರ್ಗತತಿಯನಾ ತೀರ್ಥವಿಭುಗೆ ಬಿಡದೊಡರಿಸಿದಂ (ಪಾರ್ಶ್ವಪು. ೧೭-೧೪೦).

[ಸಂ.]

ಹತಮದ (ನಾ). ಅಹಂಕಾರವನ್ನು ಕಳೆದುಕೊಂಡವನು: ನಾಗಸೇನಂ . . . ರಾಜಪೂಜ್ಯಮಮಲಶ್ರೀಯಾವ್ಪುದಂ ಕಾಮುದಂ ಹತಮದಂ ನಮಾವ್ಯಹಂ (ಎಕ.II, ೩೪ ೪; 700). [ಸಂ.]

ಹತಮದನ (ನಾ). ಕಾಮನನ್ನು ನಾಶಮಾಡಿದವನು; ಶಿವ: ಈ ಹೋದನೆ ಮುಳುಗಿ ಬಹಳ ಸಂಸಾರದೊಳಂ ನೀ ಹರಿದು ಬಂದು ತೆಗೆಯಯ್ಯಾ ಹತಮದನಾ ಪ್ರಸನ್ನಶಂಕರ ಲಿಂಗಾ (ಶಂಕಂ. ೬೦). [ಸಂ.]

ಹತಮನ (ನಾ). ಕುಂದಿದ ಚಿತ್ತ; ಮುರಿದ ಮನಸ್ಸು: ಒರೆದಪನೇನಂ ಹತಮನಮುರ ತಾಂ ಪಂಬಲಿಸಿ ಮರುಗಲಿಳ್ದತ್ತೀಗಳ್ (ಶಾಕುಂತ. ೮೩-೧೩೮). [ಸಂ.]

ಹತವಿತತಕೋಳಾಹಳಂ (ಅ). ಪೆಟ್ಟುಗಳಿಂದ ಜರ್ಝರಿತಗೊಳಿಸಿ; ಕೋಲಾಹಲವನ್ನುಂಟುಮಾಡಿ: ಗಜಪತಿಯುಂ ಮುಗಿಲ ಧ್ವನಿಯ ಮೆಲ್ಲಂಭೀರಮಪ್ಪ ಗರ್ಜನೆಯನೊಡೆಯದುಂ ಬಂದು ಪಡೆಯೆಲ್ಲಮಂ ಹತವಿತತಕೋಳಾಹಳಮೆಟೆದು ಕೊಲ್ಲುದುಂ (ಪಪ್ರಾರಾ. ೩೫-೯); ಸಾರ್ವಭೌಮನೆಂಬ ಪೆಟ್ಟವರ್ಧನಗಜಂ ಸೊರ್ಕಿ ಮಸಗಿ ಕಟ್ಟುಗಳೆಲ್ಲಮಂ ಪಱಿದು ಹತವಿತತಕೋಳಾಹಳಮೆಟೆದು ಪೊಱಲೆಲ್ಲಮಂ ಕೊಲ್ಲುದಂ (ಪಪ್ರಾರಾ. ೬೩-೧೦). [ಸಂ. ಹತವಿತತಕೋಲಾಹಲಂ]

ಹತಾರ 'ಹತ್ಯಾರು' ನೋ.

ಹತಾಶ (ನಾ). ಆಸೆಯು ನಾಶವಾದವನು; ನಿರಾಶೆಗೊಂಡವನು: ಸುಬ್ಬು ಹತಾಶನಾಗಿ ಹೋಗಿ ಮಲಗಿದನು (ನಿರಾತ. ೩೬): ರಾಜರೆಲ್ಲರೂ ಹತಾಶರಾಗಿ . . . ಹಿಂದಿರುಗಿದರು (ಆರ್ಯಕೀ. ೫). [ಸಂ.]

ಹತಾಶತೆ (ನಾ). ಆಸೆ ನಾಶವಾದುದು; ಆಶಾಭಂಗ: ಪದಿನಾಲ್ಕು ಬರಿಸಮಾಶಂಕೆಯ ನಿರೀಕ್ಷಣೆಯ ಭೀತಿ ವಿಸ್ಮತೆ ಹತಾಶತೆಗಳ್ಕೆವುರಿ ನಡುವೆ ತವಮಿರ್ದುಂ (ಶ್ರೀರಾಪು. ೯೯-೨೭). [ಹತಾಶ + - ತ್ವ]

ಹತಾಶೆ (ನಾ). ಆಸೆಯ ನಾಶ; ಆಶಾಭಂಗ: ಕುಳಿತನ್ ಹತಾಶೆಯ ಮಂಕುಬಡಿದಂತೆ (ಶ್ರೀರಾಮಾ. ೨೬೩-೧೩); ಶಾಲಭ್ಯೆಗೆ ಒಮ್ಮೆ ಹತಾಶೆಯನ್ನಿಸಿದರೂ . . . ಸಮಾಧಾನ ಬಾರದಿಲ್ಲ (ಪೂಸಕ್ತ. ೪೫). [ಸಂ. ಹತಾಶಾ]

ಹತಾಹತಿ (ನಾ). ೧. ಏಟಿನ ಮೇಲೆ ಏಟು; ಹೊಡೆತದ ಮೇಲೆ ಹೊಡೆತ: ಎರಡು ಚೂಣಿಗಳ ಕಾಹುರದ ಕಲಿಗಳೆಡವರಿಸಿ ಹೊಯ್ದಾಡಿದರ್ ಬಾಹುನಖಮುಷ್ಟಿ ಕೇಶಾಕೇಶಿ ಮಲ್ಲಯುದ್ಧದ ಹತಾಹತಿಗಳಿಂದೆ (ಜೈಮಿಭಾ. ೩೭-೬). ೨. ನಾಶ; ಅಳಿವು: ಆಂಗ್ಲೇಯ ಸಿಪಾಯಿಗಳು ಹತಾಹತಿಯಾದರು (ಝಾರಾಗ. ೩೯೭). [ಸಂ.]

ಹತಿ (ನಾ).೧. ಹೊಡೆಯುವಿಕೆ. ೨. ಸಂಹಾರ. ೩. ನಾಶಪಡಿಸುವಿಕೆ. ೪. ಪೆಟ್ಟು; ಹೊಡೆತ: ಗಾಳಿಗೊದ್ದಿದ ಮುಗಿಲ್ಗಳೆಯಾದುದು ಕೂಡೆಯೊಕ್ಕಿದಂತಾದುದು . . . ರಾಮಬಾಣಹತಿಯಿಂದಿದಿರಾದ ವಿರೋಧಿಸಾಧನಂ (ಪಂರಾಮಾ. ೪-೬೬); ಪಡಿಬಲವನು ಕೊಂದು ಕಾದಿದರೊಮ್ಮೆ ಶರಶರದ ಹತಿಗಳಿಂ (ಜೈಮಿಭಾ.೧೨-೪೪). [ಸಂ.]

ಹತಿಗೆಯ್ (ಕ್ರಿ). ಏಟು ಕೊಡು; ಪೆಟ್ಟು ಹಾಕು; ಹೊಡೆ: ಪಶುವಂ ತಾಂ ಹತಿಗೆಯ್ದುದರೊಳ್ ಶ್ರೋತ್ರಿಯನತಿ ಕರ್ಕಶನಾದೊಡಂ ಕೃಪಾನ್ವಿತನಲ್ತೇ (ಶಾಕುಂತ. ೭೭-೧೩೨). [ಹತಿ + ಕೆಯ್]

ಹತಿಯಾರು 'ಹತ್ಯಾರು' ನೋ.

ಹತಿಯಿಸು 'ಹತಿಸು' ನೋ.

ಹತಿಸು, ಹತಿಯಿಸು (ಕ್ರಿ).೧. ಕೊಲ್ಲು; ಸಂಹರಿಸು; ನಾಶಮಾಡು: ಆ ಯತಿನಾಥನಂ ಹತಿಸಿ ತಂದು (ದಶಕು. ೧೩-೨೮); ಗೋವಂ ಹತಿಸಿ ಸಕಲದೋಷವಂ ಮಾಡಿ (ಪದ್ಮರಾ. ೧೧-೧೩೮); ರಾವಣ ಕುಂಭಕರ್ಣಾದಿ ದುರುಳರಕ್ಕಸರನೆಲ್ಲರ ಹತಿಸಿ (ಚಟುಪು. ೨೪-೨೨). ೨. ಗುಣಾಕಾರ ಮಾಡು: ಹತಿಸು, ಗುಣಿಸು . . . ಇಂತಿನಿತುಂ ಗುಣಿಸೋದಕ್ಕೆ ಹೆಸರು (ವ್ಯವಹಾ. ೧೧). **ಹತಿಯಿಸು**: ೧. ಕೊಟ್ಟಾರದ ಕರಣಂ(ಣಿ)ಗಳಂ ಬಂಚಿಸಿ ಕಳ್ಪು ದ್ರವ್ಯಮಂ ಸೂಳೆಗೆ ಕೊಟ್ಟೊಡರಸಂ ಪಿಡಿತರಿಸಿ ಹತಿಯಿಸೆ ಸತ್ತು ಪುಲಿಯಾದೊಂ (ಚಾವುಂಪು. ೨೬). [ಹತಿ + - ಇಸು]

ಹತೋಟಿ (ನಾ). ಅಂಕೆ; ಹಿಡಿತ: ಸಾಹಸದಿಂದ ಆ ದನಗಳನ್ನು ಹತೋಟಿಗೆ ತರಹತ್ತಿದನು (ಬಿಗಾಸೊ. ೬೮); ತನ್ನ ಮೇಲೆ ತನಗೇ ಹತೋಟಿ ಇಲ್ಲದ ಹಾಗೆ ಎದ್ದು ನಿಂತು ಅತ್ತಿಂದಿತ್ತ ಓಡಾತತೊಡಗಿದ (ಅನಾಥ. ೨೪೭).

[<— ಮರಾ. ಹಾತೌಟೀ= ಹಸ್ತಚಾತುರ್ಯ; ಹಿಂ. ಹಥೌಟಿ = ಹಸ್ತಕೌಶಲ./ ಸಂ. ಹಸ್ತವರ್ತಿನ್ = ಕೈಯಲ್ಲಿ ಹಿಡಿದುದು]

ಹತೋದ್ಧೂತ (ಗು). (ಪಾದದ)ಆಘಾತದಿಂದ ಉಂಟಾದ, — ಮೇಲೆದ್ದ: ಬಭ್ರುವಾಹನಂ ಸಮರಕನುವಾಗಿ ನಿಲಲು . . . ತರಣಿಮಂಡಲಮಂ ಚಮೂಪದ ಹತೋದ್ಧೂತರೇಣುಪ್ರಜಂ ಮುಸುಕಿತು (ಜೈಮಭಾ. ೨೨-೧). [ಸಂ.]

ಹತ್ತ (ನಾ). ಕೈ; ಹಸ್ತ: ಕಪ್ಪುವಟ್ಟಿಗನನಾಂತು ಬರಮಿವ ಹತ್ತದ ತುತ್ತತುದಿಯಾಗಿ ಮಂತುರಪರಿಜುದಾಳ್ಕ ನೆಲೆ ಮೆಲೆವ ಕಾಶಿಯೊಡೆಯಂ (ಪದ್ಮರಾ.೧೨ ೬೫).

[< ಪ್ರಾ. ಹತ್ತ./ ಸಂ. ಹಸ್ತ]

ಹತ್ತಂಡಿ (ನಾ). (ಉಕ) ಇಕ್ಕಟ್ಟು; ಸ್ಥಳಸಂಕೋಚ: ಬಸ್ಸಿನಲ್ಲಿ ಹತ್ತಂಡಿಯಾಗಿ ಜಾಗವೇ ಸಿಗಲಿಲ್ಲ (ರೂಢಿ). [< ಪತ್ತು + ಅಂಡಿ]

ಹತ್ತಂಬಳ್ಳಿ, ಹತ್ತಂಬಾಳ (ನಾ). (ಉಕ) ೧. (ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದಿರುವ) ಒಂದು ಬಗೆಯ ಮಕ್ಕಳ ಆಟ: ಮಕ್ಕಳು ಹತ್ತಂಬಳ್ಳಿ ಆಡುತ್ತಿದ್ದಾರೆ (ರೂಢಿ). **ಹತ್ತಂಬಾಳ** : ೨. (?): ಆ ಎಲ್ಲ ನಾಯಿಗಳ ಬಳಗವು ಇದರ ಸುತ್ತ ಹತ್ತಂಬಾಳವನ್ನು ಕಟ್ಟುತ್ತಿದ್ದವು (ಮೂಪಾಸಾ. ೨೩).

ಹತ್ತಂಬಾಳ ಕಟ್ಟು = ಸುತ್ತುಗಟ್ಟು (?): ಇನ್ನುಳಿದ ರೈತರಾಳೇರು ಸುತ್ತಲೂ ಹತ್ತಂಬಾಳ ಕಟ್ಟಿ ನಿಂತಿರುವರು (ಮುಳ್ಳುಜೇ. ೧೧೩). [ಹತ್ತ + ಬಳ್ಳಿ]

ಹತ್ತಂಬಾಳ 'ಹತ್ತಂಬಳ್ಳಿ' ನೋ.

ಹತ್ತಕಟ್ಟು$_1$ 'ಹತ್ತೆಗಟ್ಟು$_1$' ನೋ.

ಹತ್ತಕಟ್ಟು$_2$ 'ಹತ್ತೆಗಟ್ಟು$_2$' ನೋ.

ಹತ್ತಕಟ್ಟು$_3$ (ನಾ). ಕೈಗೆ ಕಟ್ಟಿಕೊಳ್ಳುವ ಒಂದು ಬಗೆಯ ಆಭರಣ: ''ಹತ್ತಕಟ್ಟು:- ಇದು ಮಣಿಗಂಟು ಮೊದಲಾದ ಹಸ್ತಭಾಗಗಳಿಗೆ ಕಟ್ಟುವ ಆಭರಣಭೇದ''(ಪಾರ್ಶ್ವಸು.೪೭); ಮಾಲಿಂಗ . . . ಆ ಹತ್ತಕಟ್ಟು ಇತ್ತ ತಾ (ಬಣ್ಣಮಾ. ೧೦).

[ಹತ್ತ + ಕಟ್ಟು]

ಹತ್ತಕಡಕು 'ಹತ್ತುಕಡುಕು' ನೋ.

ಹತ್ತಕಡುಕು 'ಹತ್ತುಕಡುಕು' ನೋ.

ಹತ್ತಗಟ್ಟು$_1$ 'ಹತ್ತೆಗಟ್ಟು$_1$' ನೋ.

ಹತ್ತಗಟ್ಟು$_2$ 'ಹತ್ತೆಗಟ್ಟು$_2$' ನೋ.

ಹತ್ತಗಡೆ 'ಹತ್ತುಗಡೆ' ನೋ.

ಹತ್ತಡ (ನಾ). ಉತ್ತರೀಯ; ಮೇಲುವಸ್ತ್ರ (?): ತುಡುಕಿದನು ಚಕ್ರವನು ರಥದಿಂ ಪೊಡವಿಯೊಳು ದುಮ್ಮಿಕ್ಕಿದನು ಹತ್ತಡವ ಹಾಯಿಕೆ ಹರಿದನು (ಕುವ್ಯಾಭೀ. ೬-೩೫).

[P ಇದು 'ಹಚ್ಚಡ' ಎಂದಿರಬಹುದೇ?]

ಹತ್ತಡಿ, ಹತ್ತರಿ (ನಾ). ಮರ ಮೊದಲಾದುವುಗಳನ್ನು ನಯಮಾಡಲು ಬಳಸುವ ಒಂದು ಸಾಧನ; ಉಜ್ಜುಗೊರಡು: ''ಹತ್ತಡಿ = ಬಡಿಗನ ಒಂದು ಉಪಕರಣ'' (ಚಾನಕೋ. ೫೨). **ಹತ್ತರಿ**: ಮಧ್ಯದಲ್ಲಿ ಹಿಡಿದಿದ್ದ ಹಗ್ಗವನ್ನು ಎಮ್ಮೆ ಜಗ್ಗಿಸಿದುದರಿಂದ ಕೈ ಹತ್ತರಿ ಕೊಟ್ಟಂತೆ ಆಯಿತು (ಪಸ್ತಕ. ೪೭).

ಹತ್ತರಿಹಿಡಿ = ಉಜ್ಜು; ನಯಮಾಡು: ಕೀಸಿ ಹರಿತಮಾಡಿದ ಅಡಕೆಯ ದಬ್ಬೆಗಳಿಂದ ಹಂದಿಯ ಚರ್ಮವನ್ನು ಹತ್ತರಿ ಹಿಡಿವಂತೆ ಹರಸುತ್ತಿದ್ದರು (ಮಲಮ. ೪೯೫).

ಹತ್ತರಿಹೊಡೆ = ಹತ್ತರಿಹಿಡಿ: ಅವನಿಗೆ . . . ಮರದ ತುಂಡುಗಳನ್ನು ಕುಯ್ದು ಕತ್ತರಿಸಿ ಕೆತ್ತಿ ಹತ್ತರಿಹೊಡೆದು ಅಭ್ಯಾಸವಾಗಿದ್ದಿತು (ಶಿವರಾ. ೫೯).

[<— ಹಿಂ. ಹಥೌಡಾ, ಹಥೌಡ; ಮರಾ. ಹತೋಡಾ, ಹಾತೋಡಾ]

ಹತ್ತರ$_1$ 'ಪತ್ತಿರ' ನೋ.

ಹತ್ತರ$_2$ 'ಪತ್ತಿರ' ನೋ.

ಹತ್ತರಸ (ನಾ). ಮಂದವಾದ ರಸ; ಗಟ್ಟಿರಸ: ಅತ್ತರದ ಮೇಲುಂಡೆಬದನೆ ಗಾಯ್ಲಳನಿಟ್ಟು . . . ಪುತ್ತಮಾ ಕಾಯ್ಲಳಂ ಸೀಳಿಕೊಂಡಪಱಲ್ಲಿ ಉತ್ತಮದ ಸಂಭಾರಮಿಕ್ಕಿ ತಾಳಿಸಿ ಕೆಲವ ಹತ್ತರಸಮಾದ [ಪಾಠಾಂ. ರಸದ] ಕೊಣಬನೊಳಿಕ್ಕಿ ಒಗ್ಗರಿಸೆ ಮಧುರವ್ಯಂತಾಕಪಾಕ (ಸೂಪಶಾ. ೪-೧೪). [< ಪತ್ತು$_1$ + ರಸ]

ಹತ್ತರಿ 'ಹತ್ತಡಿ' ನೋ.

ಹತ್ತರಿಕೆ (ನಾ). ಒಂದು ಬಗೆಯ ಸೊಪ್ಪು: ಗುರುಗುಂಜಿಯ ಕಳ್ಳಿಯ ಹತ್ತರಿಕೆಯ ಚೀಳ್ಕತಮೆಂಬವನಿತಱ ಬೇರೊಳ್ ದೊರೆಕೊಂಡುದೊಂದನಣಲೊಳ್ ಧರಿಯಿಸಿದೊಡೆ ಪಲ್ಲ ಪುಲುಗಳೆಲ್ಲಂ ಕಿಡುಗುಂ (ಲೋಕೋಪ. ೯-೮೫); ಹತ್ತರಿಕೆಯ ರಸಮೊಂದಂ ಮತ್ತಂ ಮಧುಯುಕ್ತಮಾಗಿ(ಗೆ) ಪೂಸಲೊಡಂ ಪಲ್ಲೊತ್ತಿದ ಪುಣ್ಣುಳ್ . . . ಮಾಣ್ಗುಂ (ಏಮದ. ೧೩-೧೦); ಹತ್ತರಿಕೆ ಪಲ್ಲೆ ಜೋಳದ ಹೊಲದಲ್ಲಿ ಬೆಳೆಯುತ್ತದೆ (ರೂಢಿ). 'ಹಕ್ಕರಿಕೆ' ಪರಾ. [?]

ಹತ್ತವಸ (ನಾ). ಒಂದು ಬಗೆಯ ಅಲಂಕಾರವಸ್ತು: ತೋಳ ಕಡೆಯದ ಪೊಂಗಿಜುಗಜ್ಜೆಗಳಿಂ ಪಳಚ್ಚನಪ್ಪ ಹ[ಪಾಠಾಂ. ಹು]ತ್ತವಸದ ತೊಡೆಗಳೊಳಮರ್ಚಿದ ಸೌವರ್ಣದ ಸವಗಂಗಳ ಸುಚ್ಚಯಿಯ ಮೊಚ್ಚೆಯಂಗಳಪ್ಪ ಪ್ರಭೆಗಳ್ ಪಲವುಂ ಬಣ್ಣದ ಪರಿವೇಷಮಂ ಪಡೆಯೆ (ಮಹಾನೇ. ೧೨-೩೨ ವ). [?]

ಹತ್ತಸರ (ನಾ). ಕೊರಳಿಗೆ ಒತ್ತಿಕೊಂಡಿರುವಂತೆ ಧರಿಸುವ ಒಂದು ಬಗೆಯ ಆಭರಣ, — ಕಂಠಾಭರಣ: ಹತ್ತಸರದ ಬೆಳ್ಮಣಿಯನಭಿನ್ನತೆವೆತ್ತು ಸರಾಗದಿ ಕಟ್ಟಿದ ವಿಲಸದ್ಭೃತ್ತಪಯೋಧರಯುಗಳೆಯ ನುಣ್ಪೂದಲತಿ ವಿಭ್ರಾಜಿಸಿತು (ಜಯಕಾ. ೫-೧೩); ಮುತ್ತಿನ ಹತ್ತಸರ ಕಂಠಮಾಲೆ ಮೂಗುತಿಯ ಸರಸಿಜಾಕ್ಷಿಯರು . . . ಚರಿಸುವರಾ ಬೀದಿಯೊಳಗೆ (ಕಂಸವಿ. ೬-೧೦೨). [< ಪತ್ತು$_1$ + ಸರ]

ಹತ್ತಸು (ನಾ). ಶೇಕಡ ಹತ್ತರಷ್ಟು ತೆರಿಗವಿನಾಯಿತಿ ಉಳ್ಳ ಭೂಮಿ (?): ಭೂಮಿಯಂ ಮಾಱುಗೊಣ್ಣ . . . ನೂಱಿರ್ಪತ್ತು ಮತ್ತಮೆದಱ ಹತ್ತಸಿನ ತನ್ನ ಬಳದೊಳಗೆ ಬವ್ರ್ಯಯ್ಯಂ ಎದ್ಯಾದಾನಕ್ಕೆ ಕೊಟ್ಟ ಮತ್ರ್ಪನ್ನೆರಡು (ಶಾಸಾ. IX-i, ೧೦೪-೧೯; 1046). 'ಪನ್ನಸು' ಪರಾ. [< ಪತ್ತು$_1$]

ಹತ್ತಳ, ಹಥಳ (ನಾ). ೧. ಒಂದು ಬಗೆಯ ಆಯುಧ: ಪರಶು ಪಿಂಡಿವಾಳಂ ವಜ್ರಮುಷ್ಟಿ ಹತ್ತ[ಪಾಠಾಂ. ತ್ತೊ]ಳ ಮುದ್ಗರ . . . ಎಂಬ ಕೈದುವಂ ಹಿಡಿದು ಕಾಲಾಳ್ಗಳೋವದೆ ನೆರೆದುದು (ಸೋಮಚ. ೫-೩೭); ಝಡಿವ ದೂಹತ್ತಿಗಳ ಹಾಯಿಕೆ ಹಿಡಿವ ಲೌಡಿಯ ಹತ್ತಳದ ತನಿಗಡಣಿಗರು ಮೂದಲಿಸಿ ಕವಿದುದು ರಾಯರಾವುತರು (ಕುವ್ಯಾಭೀ. ೪-೨೫); ಕನ್ನಗತ್ತಿ ಕೈವಲೆಯಲಗು ಮಾಸಿದುಡುಪಿನ ಹತ್ತಳವ ಹವನಸುತ ಪರಮ ಪದದಂತೆ (ಸಂಗಿರಾ. ೧೭-೬). ೨. (ಹುರಿ ಅಥವಾ ಚರ್ಮದ ಪಟ್ಟಿಯನ್ನು ಕಟ್ಟಿ ಮಾಡಿದ) ಹೊಡೆಯುವ ಸಾಧನ; ಬಾರುಗೋಲು; ಚಾವಟಿ: ಬಿಳಿಯ ಬೌರಿಯ ಹೊಳೆಗಳುರು ಹತ್ತಳದ ಕಟ್ಟಿಗೆ ಬೇಂಟೆಗಳ ಹದವಿಲು ತದೀಯ ಶರಾಳಿಗಳ ತಂದಿಳುಹಿದರು ಚರರು (ಕುವ್ಯಾಸ. ೫-೪೬); ಮತ್ತೆ ವೋಹಿದವೆರಡು ರಥ' ಕೆಂಪೊತ್ತಿದಿನನುದಯದಲಿ ಸೂತನ ಹತ್ತಳದ ಹೊಯ್ಲಿನಲಿ ಹೊಳಕಿದವಶ್ವವೆಡಬಲಕೆ (ತೂವರಾ. ೬-೫೦-೧). **ಹಥಳ**: ೨. ಸಬಳದ ಸೆಲ್ಲಹದ ಕುಂತದ ಹಥಳದ ಕುದುರೆ ಗಾಳಿಗದ ಬೀಂನಣದೊಳು(೦)ನ್ನತಿಕೆವಡೆದ ಸುಭಟಸವಾರಿ ಚೂಡಾರತ್ನ (ಶಾಸಾ. IX-i, ೩೪೩-೨೦; 1226). [? ./ ಪ್ರಾ. ಹತ್ಥಲ = ಆಟಕ್ಕಾಗಿ ಕೈಯಲ್ಲಿ ಹಿಡಿದಿರುವ ವಸ್ತು]

ಹತ್ತಾಹತ್ತಿ (ನಾ). ಕೈ ಕೈ ಸೇರಿಸಿ ಮಾಡುವ ಜಗಳ, — ಕಾದಾಟ: ಹಿಡಿದರಿಬ್ಬರು ಕೈಗಳನ್ನು ಹೊಕ್ಕೊಡನೆ ಹತ್ತಾಹತ್ತಿಯಲಿ (ಕುವ್ಯಾಅ. ೭-೩೭); ಒಬ್ಬರೊಬ್ಬರ ಕರತಳವ ಕರತಳಕಿಡುವ ಬಂಧುರದ ಹತ್ತಾಹತ್ತಿಯಲಿ ಕೆಣಕಿದರು ಕಾಳಗವ (ಅಕ್ಕೂಪ. ೭-೬೦).

[< ಪ್ರಾ. ಹತ್ಥಾಹತ್ಥಿ./ ಸಂ. ಹಸ್ತಾಹಸ್ತಿ]

ಹತ್ತಿ$_1$ 'ಪಟ್ಟಿ' ನೋ.

ಹತ್ತಿ$_2$ (ನಾ). ಗುಂಪು; ವರ್ಗ: ಕೊವಗೆಯ್ಯ ಇಪ್ಪತ್ತನಾಲ್ಕನೆಯ ಹತ್ತಿಯಲ್ಲಿ ಇಜಿಸಲ್ ಗಟ್ಟಿಸಹಿತಂ ಪುತ್ತರಯ್ದು (ಎಇ. XIII, ೫೧-೪೨; 1204). [<— ತಮಿ. ಪತ್ತಿ]

ಹತ್ತಿಎಲೆಹರಳು (ನಾ). ಒಂದು ಬಗೆಯ ಸಸ್ಯ: ಚಿಕ್ಕಕಾಡುಹರಳು, ಹತ್ತಿ ಎಲೆಹರಳು (ಪ್ಯಮೆಡಿ. ೪೮-೯೫).

[ಹತ್ತಿ$_1$ (< ಪಟ್ಟಿ) + ಎಲೆ + ಹರಳು (< ಪರಲ್)]

ಹತ್ತಿಕಾಯಿ (ನಾ). ೧. ಹತ್ತಿಯ ಕಾಯಿ: (೬). ೨. ಹತ್ತಿಕಾಯಿಯ ಆಕಾರದಲ್ಲಿ ಕರಿದು ತಯಾರಿಸಿದ ಒಂದು ಭಕ್ಷ್ಯ: ಪಕೋಡ ಇವ, ಹತ್ತಿಕಾಯಿ ಇವ (ರೂಢಿ).

[ಹತ್ತಿ$_1$ (< ಪಟ್ಟಿ) + ಕಾಯಿ (< ಕಾಯ್)]

ಹತ್ತಿಕಾಳು (ಕ್ರಿ). ಹತ್ತಿಯಿಂದ ತೆಗೆದ ಬೀಜ: ಹತ್ತಿಕಾಳು ದನಗಳಿಗೆ ಒಳ್ಳೆಯ ಆಹಾರ (ರೂಢಿ). [ಹತ್ತಿ$_1$ (< ಪಟ್ಟಿ) + ಕಾಳು$_2$ (< ಕಾಟ್)]

ಹತ್ತಿಕ್ಕು (ಕ್ರಿ). ೧. ಹತ್ತಿರಕ್ಕೆ ಸೇರಿಸು; ಒರಗಿಸು: ಖರ್ಚಿಯ ಬೆನ್ನಿಗೆ ತನ್ನ ಬೆನ್ನನ್ನು ಹತ್ತಿಕ್ಕಿ ಖರ್ಚಿಯ ಹಿಂಗಾಲುಗಳ ಮೇಲೆ ತನ್ನನ್ನು ತೂಗಿಕೊಳ್ಳಹತ್ತಿದ (ಪ್ರೇಮತ. ೨). ೨. ಅಧೀನದಲ್ಲಿಡು; ಅಂಕೆಯಲ್ಲಿಟ್ಟುಕೊಳ್ಳು: ತುಟಿಯವರೆಗೆ ಬಂದಿದ್ದ ಬೈಗಳನ್ನು ಹಾಗೆಯೇ ಹತ್ತಿಕ್ಕಿ ಮುಖ ತೊಳೆದುಕೊಳ್ಳಲು ಕೆಳಗೆ ಹೋದೆ (ಚಂದುಟಿ. ೮೬); ಹತ್ತಿಕ್ಕಿದರೂ ಉಕ್ಕಿಬರುವ ಕಣ್ಣೀರುತುಂಬಿದ ಕಣ್ಣುಗಳಿಂದ ಮಗಳತ್ತ ನೋಡಿದ (ಬೆನ್ನುಹಿಂ. ೨೧). [ಹತ್ತ್ಕ್ಕೆ (< ಪತ್ತ್ಕೆ$_1$) + ಇಕ್ಕು]

ಹತ್ತಿಗ 'ಪತ್ತಿಗ$_1$' ನೋ.

ಹತ್ತಿಗಿಡ (ನಾ). ಹತ್ತಿಯನ್ನು ಬಿಡುವ ಗಿಡ; ಅರಳೆಗಿಡ: ಹತ್ತಿಗಿಡದ ಕೊನೆ ಹಗೆಯಾಗಿ ಬಿಡದ ಮೇಲಿನ್ನೇನಿನ್ನೇನು (ಪುರಂದ ೨-೩೭-೧).

[ಹತ್ತಿ$_1$ (< ಪಟ್ಟ್ಕೆ) + ಗಿಡ (< ಗಿಡು)]

ಹತ್ತಿಗೆ$_1$ 'ಪತ್ತುಗೆ' ನೋ.

ಹತ್ತಿಗೆ$_2$ 'ಪತ್ತಿಗೆ$_3$' ನೋ.

ಹತ್ತಿಗೆ$_3$ (ನಾ). ಒಂದು ಬಗೆಯ ಸಸ್ಯ: "ಅಕ್ಷಿಕಾ - ಹತ್ತಿಗೆ; ಅಬಿಳವಾಳಲು; ನುಲಿಗನಕಾಯಿ" (ಓಷಧಿ. ೪). [?]

ಹತ್ತಿಡು (ಕ್ರಿ). ೧. = ಹತ್ತಿಕ್ಕು ೧: ಮನಮುಟ್ಟಿ ಮಸ್ತಕದಿ ಹತ್ತಿಟ್ಟು ನುತಿತತಿಗಳಿಂ ಪೊಗಳ್ದನಾ ಚಂದ್ರಧರನಂ (ಮಲ್ಲಾರಿ. ೯-೧೦). ೨. = ಹತ್ತಿಕ್ಕು ೨: ಆತನನ್ನು ಮುತ್ತಿ ಹತ್ತಿಡಲು ಹವಣಿಸಬಹುದು (ಮೋಮಾ.೧೮ ಪ್ರಸ್ತಾವನೆ); ಲೆಕ್ಕದ ಮೊತ್ತ ಅದೆಷ್ಟು ಹತ್ತಿಟ್ಟು ಬಿಗಿಹಿಡಿದರೂ ಚಾರುಲತೆಯ ಕೈವೆಚ್ಚದ ಸೊತ್ತಿನಲ್ಲಿ ಹಿಡಿಸಲೊಲ್ಲದು (ಇಪ್ರಕ. ೨೨೦).

ಹತ್ತಿಟ್ಟುಕೊಳ್ಳು = ಹತ್ತಿಕ್ಕು ೨: ತುಳಸಿಯ ಸುದ್ದಿಯನ್ನು ಹೇಳಬೇಕೆಂಬ ಇಚ್ಛೆಯನ್ನು ಝಿನಿಯಾನ ತಾಯಿ ಬಹಳ ದಿವಸದವರೆಗೆ ಹತ್ತಿಟ್ಟುಕೊಂಡಿದ್ದಳು (ಜಮೀನ್ದಾ. ೭೪). [ಹತ್ತ್ಕೆ (< ಪತ್ತ್ಕೆ$_1$) + ಇಡು$_1$]

ಹತ್ತಿಬೀಜ (ನಾ). = ಹತ್ತಿಕಾಳು: ಹತ್ತಿಬೀಜ ದನಗಳಿಗೆ ಒಳ್ಳೆಯ ಆಹಾರ (ರೂಢಿ).

[ಹತ್ತಿ$_1$ (< ಪಟ್ಟ್ಕೆ) + ಬೀಜ]

ಹತ್ತಿರ$_1$ 'ಪತ್ತಿರ' ನೋ.

ಹತ್ತಿರ$_2$ 'ಪತ್ತಿರೆ' ನೋ.

ಹತ್ತಿರು 'ಪತ್ತಿರ' ನೋ.

ಹತ್ತಿರೆ$_1$ 'ಪತ್ತಿರ' ನೋ.

ಹತ್ತಿರೆ$_2$ 'ಪತ್ತಿರೆ' ನೋ.

ಹತ್ತಿಲ 'ಪತ್ತಿರ' ನೋ.

ಹತ್ತಿಸು 'ಪತ್ತಿಸು' ನೋ.

ಹತ್ತಿಹರಳು (ನಾ). = ಹತ್ತಿಕಾಳು: ಮಹಾಕಾರ್ಪಾಸಚೂಣ: - ಹುರಿದ ಹತ್ತಿಹರಳ ಬೀಜ ಗ ೩ ತೂಕ . . . ಚೂರ್ಣಂ ಮಾಡಿ ಸಮಸಕ್ಕರೆವೆರಸಿ ಉದಯದಲ್ಲಿ . . . ಸೇವಿಸಲು ಪೈತ್ಯರೋಗ . . . ಮುಂತಾದ ಸಕಲ ರೋಗವೂ ಗುಣಮಕ್ಕುಂ (ಸಕವೈ. ೧೪೫).

[ಹತ್ತಿ$_1$ (< ಪಟ್ಟ್ಕೆ) + ಹರಳು (< ಪರಲ್)]

ಹತ್ತಿಹುಲ್ಲು (ನಾ). ಒಂದು ಬಗೆಯ ಹುಲ್ಲು: (ಮೃಜಿಗಿ. ೪೫-೮೯೫).

[ಹತ್ತಿ$_1$ (< ಪಟ್ಟ್ಕೆ) + ಹುಲ್ಲು (< ಪುಲ್)]

ಹತ್ತು$_1$ 'ಪತ್ತು$_1$' ನೋ.

ಹತ್ತು$_2$ 'ಪತ್ತು$_3$' ನೋ.

ಹತ್ತುಕಡಕು 'ಹತ್ತುಕಡುಕು' ನೋ.

ಹತ್ತುಕಡುಕು, ಹತ್ತಕಡಕು, ಹತ್ತಕಡುಕು, ಹತ್ತುಕಡಕು (ನಾ). (ಕಿವಿಯಲ್ಲಿ ಧರಿಸುವ) ಮಧ್ಯದಲ್ಲಿ ಹರಳು ಅಥವಾ ಮುತ್ತು ಇರುವ ಒಂದು ಆಭರಣ: ಒಬ್ಬಳು ಒಳ್ಳೆ ಶೀರೆಯನ್ನು ಉಟ್ಟಿದ್ದಾಳೆ. ಒಳ್ಳೆ ಮೌಲ್ಯದ ಹತ್ತುಕಡುಕು ಸರಗಳನ್ನು ಧರಿಸಿದ್ದಾಳೆ (ನಿಷ್ಕಾಮ. ೧೪). **ಹತ್ತಕಡಕು**: ಮುತ್ತಿನ ನೀಲದ ರತ್ನದ ಚೆಲ್ಲಿನ ಹತ್ತಕಡಕು ರಾಜಿಸಲು (ನಾಗಕು. ೬-೫೦); ಈಗಲೂ ಸಹ ಕಿವಿಯಲ್ಲಿ ಹತ್ತಕಡಕು, ಒಂಟಿ, ಬಟ್ಟುಗಳನ್ನುಳ್ಳ ಜನ ಅಪರೂಪವಾಗಿ ಸಿಗಬಹುದು (ನಂಜುಂಡ. ೧೨೮). **ಹತ್ತಕಡುಕು**: ವಂಟಿ ಚವುಕುಳಿ ಹತ್ತಕಡುಕು ವುಂಗುರವು (ಕೃಷ್ಣವಿ. ೨-೪೫); ಒಬ್ಬನ ಕಿವಿಯಲ್ಲಿ ಒಂಟಿ ಇತ್ತು, ಮತ್ತೊಬ್ಬನ ಕಿವಿಯಲ್ಲಿ ಸಣ್ಣ ಹತ್ತಕಡುಕು ಇತ್ತು (ಕಥಾಮಂ. IV, ೯೧). **ಹತ್ತುಕಡಕು**: ಕಿವಿಯಲ್ಲಿದ್ದ ಹತ್ತುಕಡಕುಗಳಿಂದ ಅದು ಬಕ್ಕಪ್ಪನದೇ ಎಂದು . . . ಬಾಯಿಕಟ್ಟಿದರು (ನನ್ನೂರು. ೨೧೦).

[< ಪತ್ತು$_2$ + ಕಡುಕು$_3$]

ಹತ್ತುಗಡೆ, ಹತ್ತಗಡೆ (ನಾ). ಅಂಟಿರುವುದು; ಹತ್ತಿರದ ಸಂಬಂಧ; ಬಾಂಧವ್ಯ: ಜೀವನಕ್ಕೂ ನಮಗೂ ಅದಾವ ಹತ್ತುಗಡೆ ಎಂದು ನಾವು ಮರಣಕ್ಕೆ ಹೆದರಿಕೊಳ್ಳಬೇಕು (ಇಪ್ರಕ. ೪೩೨); ಆ ಹೆಣ್ಣುಮಕ್ಕಳ ಹತ್ತುಗಡೆಯವರೆಲ್ಲ ಒಳಗೊಳಗೇ ತುಂಬ ಸಂತಾಪಗೊಂಡರು (ಜನಜೀ. ೧೨೦). **ಹತ್ತಗಡೆ**: ನಾನು ರಣದುಲ್ಲಾಖಾನರನ್ನು ನೋಡ ಬೇಕಾಗಿದೆ. ನಾನು ಅವರ ಹತ್ತಗಡೆಯವಳು (ಧರ್ಮಿತೇ. ೩೬). [< ಪತ್ತು$_2$ + ಕಡೆ$_3$]

ಹತ್ತುಗೆ 'ಪತ್ತುಗೆ' ನೋ.

ಹತ್ತುಗೋಂಟೆ (ನಾ). ಹೊಂದಿಕೊಂಡಿರುವ ಕೋಟೆ (?): ಕೋಂಟೆಗೆ - ತಟ್ಟಿಗೋಂಟೆ, ಧೂಳಿಕೋಂಟೆ, ಹತ್ತುಗೋಂಟೆ, ಹೆಡಗೆಗೋಂಟೆ (ಶಮದ. ೨೯೮ ಪ್ರಯೋ).

[< ಪತ್ತು$_2$ + ಕೋಂಟೆ]

ಹತ್ತುಮಿನು (ನಾ). ಒಂದು ಬಗೆಯ ಮಿನು: ಹಿಂದೆ ಕಾಣಿಸಿದ್ದ ಹತ್ತುಮಿನು ಕಡಿಯಲು ಹೊರಟವರ ಕೈಬೆಳಕುಗಳೊಂದೂ ತೋರಲಿಲ್ಲ (ಮಲಿಮ. ೮).

[ಹತ್ತು? + ಮಿನು$_2$ (< ಮಿನ್$_2$)]

ಹತ್ತೆ$_1$ (ನಾ). ೧. ಹತ್ತಿರ; ಸಮೀಪ: ಜನರ ಗುಂಪು ಮತ್ತಿಷ್ಟು ಅದನ್ನು ಹತ್ತೆಯಾಗಿ ಮುತ್ತಿ ತಮ್ಮ ವರ್ತುಳವನ್ನು ಸಣ್ಣದು ಮಾಡಿತು (ಮೇದಿಮ. ೧೪೬). ೨. (ಅಳತೆಗೆ) ಚಿಕ್ಕದು; ಬಿಗಿಯಾದುದು: ನೋಡು; ಬೂಟು ಹತ್ತೆಯಾದಾವು (ಪವನ. ೧೩). ೩. ಮಲ್ಲಯುದ್ಧದಲ್ಲಿಯ ಒಂದು ಪಟ್ಟು,— ವರಸೆ: ಮಲ್ಲತನಮೊಲ್ಲದೆ ದಾನಕದೊಳ್ಪೊದಟ್ಟೊಡಾಂ ಪಿಡಿದುದೆ ಕತ್ತರಂ ಕರವಳಂ ಸೆರವಟ್ಟಣೆ ಹತ್ತೆ ಡೊಕ್ಕರಂ ಚಡಿಕೆ ತುಳಾಡಿ ಪೊಟ್ಟಮುಡುಹಂ ಮುಹಡಂ ದಣುವಟ್ಟೆ ಪಟ್ಟಸಂ (ಅನಂಪು. ೨-೨೭).

[< ಪತ್ತು$_2$]

ಹತ್ತೆ$_2$ 'ಪತ್ತೆ$_1$' ನೋ.

ಹತ್ತೆಗಟ್ಟು$_1$, ಹತ್ತಕಟ್ಟು$_1$, ಹತ್ತಗಟ್ಟು$_1$ (ಕ್ರಿ). (ಕೊರಳಿಗೆ ಹತ್ತಿದಂತೆ) ಬಿಗಿಯಾಗಿ ಕಟ್ಟು: ಹತ್ತೆಗಟ್ಟಿದ ಕಂಠಮಾಲೆ ಕಡುಕುಂಗುರಂ (ಲಿಂಗಪು. ೨೯-೧೪). **ಹತ್ತಕಟ್ಟು**: ನಿನ್ನ ಕಾಲಿಗೆ ಎನ್ನ ಕೊರಳ ಹತ್ತಕಟ್ಟುವೆ (ಪುರಂದ. ೪-೬-೨). **ಹತ್ತಗಟ್ಟು$_1$**: ಅತ್ತ ಇತ್ತಲಿ ನೋಡಿನ್ನೆತ್ತ ಪೋಗಲಿ ನಿನ್ನ ಚಿತ್ತದಲಿ ಹತ್ತಗಟ್ಟಿಕೊಂಬೆ (ಪುರಂದ. ೫-೯೦-೪).

[ಹತ್ತ್ಕೆ (< ಪತ್ತ್ಕೆ$_1$) + ಕಟ್ಟು$_1$]

ಹತ್ತೆಗಟ್ಟು$_2$, ಹತ್ತಕಟ್ಟು$_2$, ಹತ್ತಗಟ್ಟು$_2$ (ನಾ). (ಕೊರಳಿಗೆ) ಹತ್ತಿಕೊಂಡಂತೆ ಕಟ್ಟಿಕೊಳ್ಳುವ ಸರ: ಮದಕುಂಭಿಕುಂಭದೊಳೊಗೆದ ತೋರಮುತ್ತಿನ ಹತ್ತೆಗಟ್ಟನೆಸೆವ ತೊಳಪ ದಂತದ ಕನ್ನವುರ (ಸೌಂದಪು. ೧೮-೩೬); ಮುಕ್ತಾನಿಚಯದಿಂದ ಸಂಘಡಿತ ಸುರುಚಿರದ ಹತ್ತೆಗಟ್ಟು ಮುಂತಾದುವಂ ತೊಡಿಸಿದಳ್ ಚೆಚ್ಚರದಲಿ (ವೆಂಕಾರಾ. ೧-೨೧-೫೬). **ಹತ್ತಕಟ್ಟು$_2$**: ಕೊರಳೊಳೊಪ್ಪುವ ಹತ್ತಕಟ್ಟಿನ ಮೌಕ್ತಿಕಸರ ಹರಿದೊಕ್ಕುವತ್ತಿತ್ತ (ಭರಚ. ೧೮-೭೩). **ಹತ್ತಗಟ್ಟು$_2$**: ಕೊರಲ ಮುತ್ತಿನ ಹತ್ತಗಟ್ಟು ಮಾಣಿಕ್ಯದ ಸರವೆನಿಸಿಹುದು (ನಾಗಕು. ೨೬-೪೩). [ಹತ್ತ್ಕೆ (< ಪತ್ತ್ಕೆ$_1$) + ಕಟ್ಟು$_2$]

ಹತ್ತೆಗಡಿ (ಕ್ರಿ). ಸಮೀಪದಿಂದ ಕತ್ತರಿಸು: ಮಾಸೆಗಡಿದೊಡೊತ್ತಿ ಸೆಳೆದನು ಶರವನೆಚ್ಚನು ಪವನನಂದನನ ಹತ್ತೆಗಡಿದನು (ಕುಮಾರ್ಯೋ. ೧೮-೪೨). [ಹತ್ತ್ಕೆ (< ಪತ್ತ್ಕೆ$_1$) + ಕಡಿ$_2$]

ಹತ್ತೆಬರು (ಕ್ರಿ). ಹತ್ತಿರಕ್ಕೆ ಬರು; ಸಮೀಪಕ್ಕೆ ಆಗಮಿಸು: ಇತ್ತಲಿರ್ದಾ ಭಕ್ತರುಗಳು . . . ಮುದವೆತ್ತಿ ತಾನುಂ ಚನ್ನಬಸವಂ ಹತ್ತೆಬರೆ ನಡೆತಂದರಾ ಉಳುವೆಯ ಮಹಾಮನೆಗೆ (ಬಸಪು. ೬೧-೭೪). [ಹತ್ತ್ಕೆ (< ಪತ್ತ್ಕೆ$_1$) + ಬರು (< ವರ್)]

ಹತ್ತೆವಿಡಿ 'ಪತ್ತೆವಿಡಿ' ನೋ.

ಹತ್ತೆಸಾರ್ 'ಪತ್ತೆಸಾರ್' ನೋ.

ಹತ್ತೆಸಾರು 'ಪತ್ತೆಸಾರ್' ನೋ.

ಹತ್ತೆಸೇರು (ಕ್ರಿ). ಹತ್ತಿರಕ್ಕೆ ಹೋಗು; ಬಳಿಸೇರು: ಹರಿದುಬಂದು ಹತ್ತೆಸೇರಿದ ಬಸವನ ಮಹಾಮನೆಯ ತಲೆ ಎತ್ತಿ ನೋಡಿದ ಮುಗಿಲ ಮೂಲೆದಪ್ಪದೆ (ಶೂನ್ಯಸಂ. ೩೧೫-೧೯); ಋಷಿಶಾಪಮಂ ಮಟ್ಟೆದೆಯಾ ಜಗದಿ ಸತ್ತ ಕನಸಂ ಕಾಣಲೆದ್ದು

ಕುಳ್ಳಿರ್ಪರೆಂಬಾ ಗಾದೆಯನಱಿಯೆಯಾ ಹತ್ತೆಸೇರದಿರೆಂದು ಚರಣಕೆಱಗಲ್ (ಲಕ್ಷ್ಮಭಾ. ೧-೨೭-೧೨). [ಹತ್ತೆ (< ಪತ್ತೆ) + ಸೇರು (< ಸೇರ್)]

ಹತ್ತೆಹಿಡಿ 'ಪತ್ತೆವಿಡಿ' ನೋ.

ಹತ್ತೆಹೊದ್ದು (ಕ್ರಿ). = ಹತ್ತೆಸೇರು: ಇತ್ತ ಬಾ ಎನ್ನದವನ ಹತ್ತೆಹೊದ್ದಲುಬೇಡ (ದೇದಾವ. ೨೮-೪೮). [ಹತ್ತೆ (< ಪತ್ತೆ) + ಹೊದ್ದು (< ಪೊರ್ದು)]

• **ಹತ್ಯ** (ನಾ). ಕೊಲ್ಲುವಿಕೆ; ಸಂಹಾರ; ಹತ್ಯೆ. [ಸಂ.]

ಹತ್ಯಾಕಾಂಡ (ನಾ). ೧. ಕೊಲ್ಲುವಿಕೆಯ ಪ್ರಸಂಗ; ಹತ್ಯೆಯ ಪ್ರಸಂಗ. ೨. (ಆಲಂ) ಸರ್ವನಾಶ: ಹತ್ಯಾಕಾಂಡವಾರಂಭಿಸಲು . . . ಕ್ಷಣಕ್ಷಣವನ್ನೂ ಎಣಿಸುತ್ತಿದ್ದ ರಾಜಂ ತಂದೆಯ ಚಿತ್ರ ಸ್ವಾಮಿಯ ಮನಸ್ಸಿನ ಮುಂದೆ ನಿಂತಿತು (ಸ್ವಾಮಿಪ್ರೇ. ೧೨೨); ಈ ಸಾಮೂಹಿಕಹತ್ಯಾಕಾಂಡದಲ್ಲಿ ತನ್ನ ಇಪ್ಪಿಕಲ್ಲಿಗೂ ಅಷ್ಟೇ ಶ್ರೇಯಸ್ಸುಂಟು ಎಂದು ಅದರ ಅರ್ಥವಿದ್ದೀತು (ದೇಕನ್ನ. ೬೨). [ಸಂ.]

ಹತ್ಯಾರ್ 'ಹತ್ಯಾರು' ನೋ.

ಹತ್ಯಾರ 'ಹತ್ಯಾರು' ನೋ.

ಹತ್ಯಾರು, ಹತಾರ, ಹತಾರು, ಹತಿಯಾರು, ಹತ್ಯಾರ್, ಹತ್ಯಾರ (ನಾ). ಕತ್ತಿ, ಖಡ್ಗ, ಬಂದೂಕು, ತುಬಾಕಿ ಮೊದಲಾದ ಆಯುಧ; ಶಸ್ತ್ರ: ಆ ಯರಡಜನ ಚೇಲೇರ ಕೈಯ ಇದ್ದ ಹತ್ಯಾರು: ಚಕಮುಕಿ ಬಂದೂಕು ಯರಡು (ರಾಚೇಂದ್ರ. ೫೭); ಅವೊತ್ತೆಲ್ಲ ನಾಯಕನು ಹತ್ಯಾರುಗಳ ಜೊತೆಯಲ್ಲಿದ್ದನು (ಮಲ್ಲಿ. ೫೫). **ಹತಾರ:** ಹೆಚ್ಚಿನ ಹತಾರ ಮುಚ್ಚಟ್ಟರು (ಕನ್ನಜಾ. ೮೭); ನಾವು ತುರುಗಾಹಿಗಳು ಹತಾರ ಸಹಿತವಾಗಿ ಕವಳ ಕುಡುಗೋಲು ಗೊಂಗಡಿ ತೆಗದುಕೊಂಡು ಹಿಂಬಾಲಿಸಿಕೊಂಡು ಹೋಗುವೆವು (ಸುಪಸಂ. ೬೭). **ಹತಾರು:** ಆಳುಗಳು ಹತಾರುಗಳನ್ನು ಹಿಡಿದು ನೆಟ್ಟಗೆ ನಿಂತು ನೋಡಿದರು (ಕಾನೂರು. ೧೮೧); ಹಾರೆ ಕತ್ತಿ ಸಮೆಗೋಲು ಮಟ್ಟುಗತ್ತಿ ಮುಂತಾದ ಕದ್ದ ಹತಾರುಗಳನ್ನು ಕೊಟ್ಟು . . . ತಿಂಡಿಪದಾರ್ಥಗಳನ್ನು ತೆಗೆದುಕೊಂಡು ಹೋಗತೊಡಗಿದರು (ಮಲಮ. ೪೪೩). **ಹತಿಯಾರು:** ಒರೆಯಲ್ಲಿದ್ದ ಹತಿಯಾರಿಂದಲೇ ಒಬ್ಬಿಬ್ಬರಿಗೆ ಹೊಡೆದಿರುವುದಾಗಿಯೂ . . . ಹೇಳಿದರು (ಸಚ. ೮೩). **ಹತ್ಯಾರ್:** "ಹತ್ಯಾರ್, ಮಂತ್ರಶಕ್ತಿಯುಳ್ಳ ಆಯುಧಗಳಾದ ಅಸ್ತ್ರಗಳಿಗೂ, ಬಾಣ ಕತ್ತಿ ಪಿರಂಗಿ ಮುಂತಾದ ಎಲ್ಲಕ್ಕೂ ಹೆಸರುಗಳು" (ಸಿದ್ಧಾಂತಿ. ೨೬೨). **ಹತ್ಯಾರ:** ಕುಡುಗೋಲು ಕೊಡತಿ ದೊಣ್ಣೆ ಹಾರೆ ಮುಂತಾದ ಕೈಗೆ ಸಿಕ್ಕಿದ ಹತ್ಯಾರಗಳನ್ನು ಕೈಯಲ್ಲಿ ಹಿಡಿದಿರುವರು (ತುಂಗಭ. ೩೧); ಬಂದೂಕು, ಹತ್ಯಾರ ಎರಡೂ ತಾ (ಮೇದಿಮ. ೧೮).

[< ಪ್ರಾ. ಹತ್ಥಿಯಾರ್./ಮರಾ. ಹತ್ಯಾರ್, ಹತಿಯಾರ್, ಹತೇರ್; ಹಿಂ. ಹಥಿಯಾರ್]

ಹತ್ಯೆ (ನಾ). = ಹತ್ಯ: ಹತ್ಯೆಯೇ ಹನ್ಯತೆಯೊ ವಿಜಯವೋ ಪರಿಭವವೊ ಕ್ಷತ್ರಿಯಂ ಸ್ವಾರ್ಥಮಂ ಗಣಿಸುವನೆ ರಣದೊಳ್ ? (ಮಂಜಿಕ. ೬೨೪). [ಸಂ. ಹತ್ಯಾ]

ಹತ್ರ$_1$ 'ಪತ್ರಿರ' ನೋ.

ಹತ್ರ$_2$ 'ಪತ್ರಿರ' ನೋ.

ಹತ್ಸ (ನಾ). = ಹಕಾರ: ಥಕಾರಕ್ಕೆ ಹತ್ಸಂ-ಗಾಥೆ-ಗಾಹೆ (ಕಮದ. ೨೫೭ ಪ್ರಯೋ).

[ಸಂ.]

ಹಥಳ 'ಹತ್ತಳ' ನೋ.

ಹದ 'ಪದ$_1$' ನೋ.

ಹದಗ (ನಾ). ದೀಪದ ಹುಳು; ಪತಂಗ: ಹಣ್ಣೆಂದೆಱಗಿ ಹದಗಂಗಳು ಮಹಾಗ್ನಿಯಲೆಱಕೆ ಸೀದುರುಳ್ವಂತೆ (ಸಿಭಾಗ. ೯-೭-೪೭). [< ಸಂ. ಪತಂಗ]

ಹದಗಡಲೆ (ನಾ). ಕಂಕುಳು, ತೊಡೆಸಂದು ಮೊದಲಾದ ಕಡೆಗಳಲ್ಲಿ ಎದ್ದು ನೋವು ಕೊಡುವ ಒಂದು ರೀತಿಯ ಗಂಟು; ಉಡುಚು: ಕುರುವು ಹದಗಡಲೆಗಳಿಂದ ಯಾರೂ ಸಾಯುವದಿಲ್ಲ (ಪೊಸಂಸಾ. ೯೮). [ಹದ (< ಪದ$_1$) + ಕಡಲೆ (< ಗಳಲೆ)]

ಹದಗಾತಿ (ನಾ). (ಪ್ರೇಮದ) ಪಕ್ವತೆಯನ್ನು ತಿಳಿದವಳು, – ಹದವನ್ನು ಅರಿತವಳು; ಪ್ರೌಢೆ: ಹರೆಯ ಮಿಂದಿ ಹದಗಾತಿ ತಲೆಯೊಳೊಂದು ನೆರೆಯಿಲ್ಲ (ಸೌಂದಕಾ. ೩-೫೨). [ಹದ (< ಪದ$_1$) + – ಕಾತಿ]

ಹದಗಾಯಿ 'ಪದಗಾಯಿ' ನೋ.

ಹದಗಾರ 'ಹದಗಾಱಿ' ನೋ.

ಹದಗಾಸು 'ಪದಂಗಾಸು$_1$' ನೋ.

ಹದಗಾಱಿ, ಹದಗಾರ (ನಾ). (ಪ್ರೇಮದ) ಪಕ್ವತೆಯನ್ನು ತಿಳಿದಿರುವವನು, – ಅರಿತವನು; ಪ್ರೌಢ: ವಿರಹಮಂ ತಮಿಸಿ ನೆರೆಯೊ ಹದಗಾಱಿ ನೀನೆಮ್ಮನೆಂದಮರೆಯರ್ ಭ್ರಮೆಗೊಂಡರು (ಚಿಬಪ್ರೊಗ-೩೭). **ಹದಗಾರ:** ಮುದದಿ ಸ್ತಿರಬಾಳು ಸತ್ಕದ ಹದಗಾರನು ವೀರ ತಿಂಮರಾಯ (ಎಕ. XII. ಪಾವಗ. ೪೭-೩೨; 1670). [ಹದ (< ಪದ$_1$) + – ಕಾಱಿ]

ಹದಗಿಡು 'ಪದಗೆಡು' ನೋ.

ಹದಗುದಿ (ನಾ). ೧. ಪಕ್ವವಾಗುವಂತೆ ಬೇಯುವಿಕೆ; ಹದಕ್ಕೆ ಬರುವ ಕುದಿ: ಊರಿನಲ್ಲಿ ಪಾಲುಹಾಕಿದರೆ ಎಂಟಾಣೆಗಿಂತ ಹೆಚ್ಚಾಗಿ ತರುತ್ತಿರಲಿಲ್ಲ. ತಂದುದರಲ್ಲಿ ಅರ್ಧವನ್ನು ಹದಗುದಿಯಲ್ಲೇ ರುಚಿ ನೋಡ್ತೀನಿ ಅಂತಲೋ . . . ನೆಪ ಹೇಳಿ ಮುಗಿಸಿಬಿಡುತ್ತಿದ್ದ (ನಸ್ಕೂರು. ೨೨೫). ೨. (ಆಲಂ) ಪ್ರಯತ್ನ; ತರದೂದು: ನಿನ್ನೇ ದಿನ ಹದವಾದ ಮಳೆಯಾಗಿದೆ. ಏನಾದರೂ ಹದಗುದಿಮಾಡಿ ಹೊಲ್ಕೆ ಕಾಳು ಬಿತ್ತೋದು ಬಿಟ್ಟು ಆಟಾ ಆಡಿ ಮಲಕೊಂಡವ್ರಲ್ಲಾ (ಹುಟ್ಟಹ. ೧೬೮). [ಹದ (<ಪದ$_1$) + ಕುದಿ$_3$]

ಹದಗೆಂಪು 'ಪದಗೆಂಪು' ನೋ.

ಹದಗೆಡಿಸು 'ಪದಗೆಡಿಸು' ನೋ.

ಹದಗೆಡು 'ಪದಗೆಡು' ನೋ.

ಹದಗೆಯ್ 'ಪದಗೆಯ್' ನೋ.

ಹದಗ್ಗೆ 'ಪದಗೆಯ್' ನೋ.

ಹದಗೊಡು 'ಪದಂಗೊಡು' ನೋ.

ಹದಗೊಳಿಸು 'ಪದಂಗೊಳಿಸು' ನೋ.

ಹದಗೊಳ್ಳು 'ಪದಂಗೊಳ್' ನೋ.

ಹದಡ 'ಪರಡು$_3$' ನೋ.

ಹದಡಿ 'ಪದಡೆ' ನೋ.

ಹದಡು 'ಪರಡು$_3$' ನೋ.

ಹದಡೆ 'ಪದಡೆ' ನೋ.

ಹದತಪ್ಪು 'ಪದಂದಪ್ಪು' ನೋ.

ಹದದಂಬುಲ (ನಾ). ರುಚಿಕಟ್ಟಾದ ತಾಂಬೂಲ; ಸವಿಯಾದ ವೀಳೆಯ: ಇದಿರ್ವಂದಮರ್ದಪ್ಪಿ ಬಾಯೊಳು ಬಾಯಿಟ್ಟು ಹದದಂಬುಲವನೀಸಿಕೊಂಡು (ನೇಮಿಸಂ. ೨೮-೯೬). [ಹದ (< ಪದ$_1$) + ತಂಬುಲ]

ಹದದೋರೆ (ನಾ). ಹದವಾದ ದೋರೆಕಾಯಿ: ಕಾಯ್ವಳಗಮನೊಂದು ಕೊಂಬು ಹದದೋರೆಗಳೋಳಿಯನೊಂದು ಕೊಂಬು ಪಣ್ಗಳನೆಸೆವೊಂದು ಕೊಂಬು ತಳಿದಿಂತು ಮನೋಹರಮಾಯ್ತು ಮಾಮರಂ (ಕುಸುಮಾ. ೧೦-೧೫೫). [ಹದ (< ಪದ$_1$) + ದೋರೆ$_1$]

ಹದನ್ 'ಪದ$_1$' ನೋ.

ಹದನ 'ಪದ$_1$' ನೋ.

ಹದನಗೊಳಿಸು 'ಪದಂಗೊಳಿಸು' ನೋ.

ಹದನಱಿ 'ಪದನಱಿ' ನೋ.

ಹದನು 'ಪದ$_1$' ನೋ.

ಹದನುಗೊಳಿಸು 'ಪದಂಗೊಳಿಸು' ನೋ.

ಹದಬೆದೆ (ನಾ). ಬಿತ್ತಲು ಯೋಗ್ಯವಾದ ಕಾಲ; ವ್ಯವಸಾಯಕ್ಕೆ ತಕ್ಕ ಕಾಲ: ಆ ಹೊಲನಂ ಹಸಮಾಡಿ ಬಿತ್ತುವ ಪರಿ ಇನ್ನಾವುದಯ್ಯಾ ಎಂದೊಡೆ ನಾದಬಿಂದು ಕಳೆ ಮಳೆಗಾಲದ ಹದಬೆದೆಯನಱಿದು ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳ ನೆಟ್ಟು (ಸರ್ವಜ್ಞ. ೧೦೬-೫೬೮); ಹದಬೆದೆಯಲಾರಂಬ ಕದನದಲಿ ಕೂರಂಬ ನದಿಯ ಹಾಯುವಲಿ ಹದುಗೋಲ ಮಱೆದಾತ ವಿಧಿಯ ಬೈದೇನು (ಸರ್ವಜ್ಞ. ೧೩೬೩); ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು ಹದಬೆದೆಯನರಿತಂಥ ಹೃದಯವಾಸೀ (ನಾಡಲೀ. ೧೩-೨).

[ಹದ (<ಪದ$_1$) + ಬೆದೆ]

ಹದಬೆದೆಗಾಲ (ನಾ). (ಬೀಜವನ್ನು ಬಿತ್ತಲು) ಪಕ್ವವಾದ ಮತ್ತು ಯೋಗ್ಯವಾದ

ಕಾಲ: ಕಾಡಗಿಡಗಳ ಕಡಿದು . . . ಭೂಮಿಯ ಹಸನಗೊಳಿಸಿ ಹದಬೆದೆಗಾಲ ನೋಡಖಿಳಧಾನ್ಯಗಳ ಬಿತ್ತಿ (ಸಪಮೋ. ೨-೪೨). [ಹದಬೆದೆ + ಕಾಲ]

ಹದಮಳೆ 'ಪದವಟಿ' ನೋ.

ಹದಮಾರು (ಕ್ರಿ). ರೀತಿಯನ್ನು ಕಳೆದುಕೊಳ್ಳು; ಕ್ರಮತಪ್ಪು: ಕರ್ಣಾಭರಣದ ಹುಡುಗಿಯ ಸಹಾಯದಿಂದ ತನ್ನ ಹೆಂಡತಿ ತಯಾರಿಸಿದ್ದ ಭೋಜನ ಎಲ್ಲಿ ಹದಮಾರುತ್ತೊ ಎಂದು ಅವನು ಶಂಕೆ ವ್ಯಕ್ತಪಡಿಸಿದನು (ಪುನಯ. ೯೦); ಎಲ್ಲರೂ ನಮಗೇಕೆ ಆ ವಿಚಾರ ಎಂದು ಕುಳಿತರೆ ನಿತ್ಯ ಊರಲ್ಲಿ ಆಗುವ ಅನರ್ಥಗಳು ಮಾತ್ರ ಹದಮಾರುತ್ತದೆ (ಕಾವೀ. ೬೯). [ಹದ(< ಪದ₁) + ಮಾರು(< ಮಾಱು)]

ಹದರಿ (ನಾ). ಬೆದೆ; ನಸೆ: ಹಸುವಿಗೆ ಹದರಿ ಬಂದಿದೆ (ಡಾಢ). 'ಹದರಿದನ' ಪರಾ. [< ಹದ]

ಹದರಿಕ್ಕು₁ 'ಪದಿರಿಕ್ಕು' ನೋ.

ಹದಳಿಕ್ಕು₂ (ಕ್ರಿ). ಹೆದರಿಸು; ಭಯವನ್ನುಂಟುಮಾಡು: ಗದಗದಿಸಿ ಕಾಂತಾ ಸಮೂಹವು ಬೆದರಿದುದು ಜಗದೀಶ್ವರೀಕ್ಷಿಸಿ ಬೆದರಬೇಡೆಂದಭಯಪದ್ಮವ ತೋರಿ ಹೂಂಕೃತಿಯ ಮದಮುಖನ ಹದರಿಕ್ಕಿ ತೋರಿಸೆ ಬುದುಬುದಾಕಾರದಲಿ ಕೇಸರಿ ವದನದಲಿ ಜನಿಸಿದವುಯಡೆಬಿಡದಬುಧಿಘೋಷದಲಿ (ಅಂಬಿಕಾ. ೩೨-೩೭).

[ಹದರು₀(< ಪದಱು₂) + ಇಕ್ಕು]

ಹದರಿದನ (ನಾ). ಬೆದೆಗೆ ಬಂದ ಹಸು; ನಸೆ ಬಂದ ಆಕಳು: ಹದರಿದನಕ್ಕೆ ಹದಿನಾರು ಹೋರಿ (ಡಾಢ). [ಹದರಿ + ದನ]

ಹದರು₁ 'ಪದಿರ್₁' ನೋ.

ಹದರು₂ 'ಪರಡು₃' ನೋ.

ಹದವರಿ 'ಪದನಱಿ' ನೋ.

ಹದವಳಿ (ಕ್ರಿ). ಹದತಪ್ಪು; ಹವಣುಗೆಡು: ಹಮ್ಮುಗೊಳದೆ ಹದವಳಿಯದೆ . . . ಚಿತ್ರ ಸಮ್ಮತಿಯಱಿತೆಸಗುವುದು (ಪದಬ. ೪-೧೫೫).

[ಹದ (< ಪದ₁) + ಅಳಿ₁(< ಅಲ್₁)]

ಹದವಳೆ 'ಪದವಟಿ' ನೋ.

ಹದವಱಿ 'ಪದನಱಿ' ನೋ.

ಹದವಿಲು 'ಪದವಿಲ್' ನೋ.

ಹದವಿಲ್ಲು 'ಪದವಿಲ್' ನೋ.

ಹದಹದಿಕಿಸು (ಕ್ರಿ). ೧. ಅದಿರು; ಗಿಟಕರಿಸು; ಅಲ್ಲಾಡು: ಬೆಳರ್ದುಟಿ ಬಿಂಬಿಸೆ ಹದಹದಿಕಿಸೆ ಪಲ್ಲು ನಳನಮುಖವು ಕೊರಗುತಲಿ ತಳರುವ ಕೋಮಲಾಂಗಿಯ ಕಂಡು (ಅನಂಚ. ೯-೧೨೯). ೨. ಅಲ್ಲಾಡಿಸು; ಅಲುಗಿಸು: ಮದಗಜದೊಬ್ಬುಳಿಗೆದಱಿಸಿ ನಿಡಿದಾಗಿ ಪದುಳದಿ ಮಲಗಿ ವಾಲವನು ಹದಹದಿ [ಪಾಠಾಂ. ರಿ] ಕಿಸುತಿರ್ದ ಮೃಗರಾಜನಿರೆ ಸ್ಪಷ್ಟವೊದವಿ ಕಂಡಳು ಮೃಗನೇತ್ರೆ (ಅನಂಚ. ೫-೯೬). [ಹದಹದಿಕು + - ಇಸು₅]

ಹದಹದಿಕು (ಕ್ರಿ). ಅಲ್ಲಾಡು; ಅಲುಗು: 'ಹದಹದಿಕಿಸು' ಪರಾ. [?]

ಹದಹದಿಸು (ಕ್ರಿ). ಹದವಾಗಿರಿಸು: ಹದಹದಿಸಿ [ಪಾಠಾಂ. ಹದಸರಿಸಿ, ಹುದಿಸಿದನು, ಹೊದಿಸಿದನು] ಹವಣಿಸಿದನೆಡೆಗೆಡೆಗಿದಿರುಕೆಲುಗಳ ಬೆಣಗಳಲಿ ನಡೆದುದು ನಿಜೋನ್ನತಸೇತುಬಂಧನ ಹತ್ತುಯೋಜನವ (ತೊರಾ. ೬-೫೮-೪೭). [?+ - ಇಸು₅]

ಹದಹು 'ಪದಪು' ನೋ.

ಹದಿ₁ 'ಪದಿ₁' ನೋ.

ಹದಿ₂ 'ಪದಿ₂' ನೋ.

ಹದಿ₃ 'ಪದಿನ್' ನೋ.

ಹದಿ₄ (ನಾ). ಒಂದು ಬಗೆಯ ತೆರಿಗೆ (?): ಕುಳಕೆ ಬಂದ ಹದಿ ಹೊದಕೆ ಮೊದಲಾದ XXX ದ ಸಿದ್ಧಾಯವನು . . . ಕೊಂಡು (ಎಕ. VIII, ತೀರ್ಥಹ. ೧೭೦-೧೭; 1424); ಪಡುವ ಸಾಲಿಂದ ಯತ್ತುವ ಮೆದಯನ ಹದಿಯ ಉಪ್ಪಿನ XXX (ಸೌಶಾ. IX-1; ೪೫೫-೧೫; 1451). 'ಹದಿಕೆ' ಪರಾ. [?]

ಹದಿಕೆ 'ಪೊದಕ್ಕೆ₂' ನೋ.

ಹದಿಗು 'ಪದುಗು' ನೋ.

ಹದಿಗ್ಗೆ₁ 'ಪೊದಕ್ಕೆ₂' ನೋ.

ಹದಿಗ್ಗೆ₂ (ನಾ). ಒಂದು ಬಗೆಯ ಆಯುಧ: ಬಿಲ್ಲು ಬಾಣವು ಈಟಿ ಹದಿಗ ಪಿಡಿದ ಕತ್ತೀ ಗುದ್ದೆಗಳಲಿ ಫಲ್ಲುಫಲ್ಲನೆ ವೂರಿಕೊಳುತಾ ಕಾಲಕಿಂಕರರಂದದಲ್ಲಿ . . . ಬಂದರಾಗ (ಸಾರಂಗ.೨೧). [?]

ಹದಿಟಿ 'ಪದಿಟಿ' ನೋ.

ಹದಿಟಿಗೆಯ್ 'ಪದಿಟಿಗೆಯ್' ನೋ.

ಹದಿನ್ 'ಪದಿನ್' ನೋ.

ಹದಿನಯ್ದು 'ಪದಿನಯ್ದು' ನೋ.

ಹದಿನಾಕು 'ಪದಿನಾಲ್ಕು' ನೋ.

ಹದಿನಾರು 'ಪದಿನಾಱು' ನೋ.

ಹದಿನಾರುಭಾವನೆ 'ಪದಿನಾಱುಭಾವನೆ' ನೋ.

ಹದಿನಾಲ್ಕು 'ಪದಿನಾಲ್ಕು' ನೋ.

ಹದಿನಾಱು 'ಪದಿನಾಱು' ನೋ.

ಹದಿನಾಱುಕಳೆ (ನಾ). (ಚಂದ್ರನ) ಷೋಡಶಕಲೆಗಳು.

ಹದಿನಾಱುಕಳೆಯಣ್ಣ = ಷೋಡಶಕಲೆಗಳನ್ನು ಹೊಂದಿರುವವನು; ಚಂದ್ರ: ಅಂಗಜಭಟನ ಖಂಡಿಯದೇಱಿನವರಿಗೆ ಸುಖತರವ ಹದಿನಾಱುಕಳೆಯಣ್ಣನ ವಿಲೋಕನವು (ತೊರಾ. ೩-೧೧-೪೯). [ಹದಿನಾಱು (< ಪದಿನಾಱು) + ಕಳೆ₈ (< ಕಲೆ₃)]

ಹದಿನಾಱುಭಾವನೆ 'ಪದಿನಾಱುಭಾವನೆ' ನೋ.

ಹದಿನೆಂಟು 'ಪದಿನೆಂಟು' ನೋ.

ಹದಿನೆಂಟುದೋಷ 'ಪದಿನೆಂಟುದೋಷ' ನೋ.

ಹದಿನೆಂಟುಸಮಯ (ನಾ). ಹದಿನೆಂಟು ಬಣ,– ಪಂಗಡ: ಅಱುವತ್ತು ಗವುದು ನೂಱಿಪ್ಪತ್ತುಸ್ಥಾನವೂ ಹದಿನೆಂಟುಸಮಯವೂ ನೆರೆದು (ಎಕ.VII. ಶಿವಮೂ. ೧೪-೧೫; 1309). [ಹದಿನೆಂಟು (< ಪದಿನೆಂಟು) + ಸಮಯ₁]

ಹದಿನೆರಡು 'ಪನ್ನೆರಡು' ನೋ.

ಹದಿನೇಳು 'ಪದಿನೇೞ್' ನೋ.

ಹದಿನೇಱು 'ಪದಿನೇೞ್' ನೋ.

ಹದಿನ್ಯೆದು 'ಪದಿನಯ್ದು' ನೋ.

ಹದಿಬಱೆ 'ಹದಿಬದೆ' ನೋ.

ಹದಿಬದೆ, ಅದೆಬದೆ, ಪತಿಬ್ರತೆ, ಹದಿಬತೆ (ನಾ). ಗಂಡನ ಸೇವೆಯನ್ನೇ ವ್ರತವಾಗಿ ಉಳ್ಳವಳು; ಗರತಿ; ಸಾಧ್ವಿ: "ಹದಿಬದೆಯೆಂದು ಪತಿವ್ರತೆ" (ಕಪಸಾ. ೬೨-೩೭೮); ಲಂಪಟಕೊಳಗಾಗದ ಹದಿಬದೆಯಂತೆ . . . ಪೆರ್ಸಂಪಗೆಮರ ಗಳೊಪ್ಪಿದುವು (ಮೋಪತ. ೨೪-೪೯); ಹದಿಬದೆಯರೆಂದು ಹೆಸರಾಂತ ಹೆಣ್ಮಾಣಿಗಳಂ ಪರಿಕಿಸಿದೆನವರುಂ ಸುಲಭಮಾದರಯ್ (ಶ್ರೀರಾಮಾ. ೨೨೪-೩೫೨). **ಅದೆಬದೆ:** ನುಡಿದಳದೆಬದೆ ಪತಿಯನುಪಚರಿಸೆ ತಳುವಾಯ್ತುದಾಸೀನ ನಿಮ್ಮೊಳಿಲ್ಲ (ಲಕ್ಷ್ಮೀಭಾ. ೫೧-೧೦). **ಪತಿಬ್ರತೆ: 'ಪತಿಬ್ರತಿಕೆ'** ಪರಾ. **ಹದಿಬತೆ:** ಮತಿಯಂ ಮಱೆದು ಮರುಳ್ಗೊಂಬಾ ಹದಿಬತೆಯರ್ ಬೆನ್ನಂ ಬಿಡದ ನವಪ್ರಾಯಿತೆಯರೆಸೆದರವನೀಶಂ ಬೀದಿವಿಡಿದು ನಡೆತರ್ಪಾಗ (ಜಯಕಾ. ೧೦-೬೧).

ಪತಿಬ್ರತಾಚರಣಗುಣಸಾವಿತ್ರಿ = ಪಾತಿವ್ರತ್ಯದ ಆಚರಣೆಯ ಗುಣದಲ್ಲಿ ಸಾವಿತ್ರಿ ಯಂತಿರುವವಳು; ಒಂದು ಬಿರುದು: ಪತಿಬ್ರತಾಚರಣಗುಣಸಾವಿತ್ರಿ ಪರಿವಾರ ಸಮುದ್ಧರಣಧಾತ್ರಿ . . . ಶ್ರೀಮತ್ಪಿರಿಯರಸಿ ಕಂಚಲಮಹಾದೇವಿಯರ್ (ಸೌಶಾ. XX. ೪೬-೧೧; 1072). [< ಸಂ. ಪತಿವ್ರತಾ]

ಹದಿಮೂರು 'ಪದಿಮೂಱು' ನೋ.

ಹದಿಮೂಱು 'ಪದಿಮೂಱು' ನೋ.

ಹದಿರ್₁ 'ಪದಿರ್₁' ನೋ.

ಹದಿರ್₂, ಹದಿರು₃ (ನಾ). ೧. ಎಳೆಯ ಕಾಯಿ; ಮಿಡಿ; ಹೀಚು: "ಹದಿರೆಸಲಳಕಂ"

(ಕರ್ಣಾ.೪೭). **ಹದಿರು$_3$**: ೧. "ಎಳೆಗಾಯಿ ಮಿಡಿ ಹದಿರು ಹೀಚುಂ" (ಶಬ್ದಮಂ. ೨೩). ೨. (ಆಲಂ) ಎಳೆತನ; ಬಾಲ್ಯ: ೨೩ ವರ್ಷವೆಂದರೆ ಹೀಗೆ ಹಣ್ಣೂ ಅಲ್ಲ ಹಾಗೆ ಹದಿರೂ ಅಲ್ಲ (ಮೂರುಉ. ೩೨). [ದೇ. ॥ ಮಲ. ಪಯಿಕ್ಕು]

ಹದಿರಾಟ (ನಾ). ಚಮತ್ಕಾರದ ಆಟ: ತೊದಲನುಡಿ ಹದಿರಾಟ ಬೆದರುನೋಟಗಳಿಂದ ಮದವೇರಿದಾನೆ ಇಮ್ಮಡಿಯಾದವಳು (ಸಾರಂಗ. ೫). [ಹದಿರ್$_1$(< ಪದಿರ್$_1$) + ಆಟ]

ಹದಿರಿಕ್ಕು 'ಪದಿರಿಕ್ಕು' ನೋ.

ಹದಿರಿಸು (ಕ್ರಿ). ವಿಡಂಬನೆ ಮಾಡು; ಚುಚ್ಚಿ ಮಾತನಾಡು: ಉದರನಿಮಿತ್ತವಿಡಿದು ಉದರವ ಹೊರೆವವನಲ್ಲ ಹದಿರಿಸಬಲ್ಲ ಚದುರ ಕಾಣೆ ಭೋ (ಚನ್ನವ.ಕ. ೫೬-೧೨೫).

[ಹದಿರು$_1$ (< ಪದಿರ್$_1$) + -ಇಸು$_3$]

ಹದಿರು$_1$ 'ಪದಿರ್$_1$' ನೋ.

ಹದಿರು$_2$ 'ಪರಡು$_3$' ನೋ.

ಹದಿರು$_3$ 'ಹದಿರ್$_2$' ನೋ.

ಹದಿರುಗಾಱ (ನಾ). ಚತುರ; ಜಾಣ: ಈ ಹದಿರುಗಾಱನಾತನ ಮಗಂ ಗಡ ಮರಳ್ದಾ ಹಿರಿಯನೆಡೆಗೆಮ್ಮನೊಯ್ಯ ಗಡ ಕೇಳಿಮೆಂದು ಹತ್ತಿರ್ದರ್ವರ ಕೈವೊಯ್ದು ನಕ್ಕು (ಚಟಪು. ೩೩ - ೧೪). [ಹದಿರು$_1$ (< ಪದಿರ್$_1$) + - ಕಾಱ]

ಹದಿರುಗಾಱಿಕೆ (ನಾ). ಜಾಣ್ಮೆ; ಚಮತ್ಕಾರ: ಕದನವೆಂದೊಡೆಯೆನ್ನ ಹೃದಯ ಜರ್ಜರಿಸುತಿದೆ ಮೃದುಮಾತನಾಡೆಂದು ಬಡವನಂದದಿ ನುಡಿಯೆ ಹದಿರುಗಾಱಿಕೆಯ ನಿನ್ನಯ ಬಲ್ಮೆಯೊಳಗೆನ್ನ ಮಾಯೆಯಂ ಗೆಲ್ದನೆನಲು (ಪ್ರಭುಪು. ೬-೧೧).

[ಹದಿರುಗಾಱ + - ಇಕೆ]

ಹದಿರುನೋಟ (ನಾ). ಬೆಡಗಿನ ನೋಟ: ಹ [ಪಾಠಾಂ.ಕ]ದಿರುನೋಟದ ಮಿಂಡಿ ಬೇಡಿತಿ ಪುದಿಯೆ ತನ್ನೊತ್ತಿನಲಿ ನಿಂದನು ಮದನನಾ ಬಟ್ಟೆಯಲಿ ಸಂದ ಪುಳಿಂದ ವೇಷದಲಿ (ಸಾಳ್ವಭಾ. ೩೦-೧೭). [ಹದಿರು$_1$ (< ಪದಿರ್$_1$) + ನೋಟ]

ಹದಿರುವಯ್ಗಳು (ನಾ). ಚಮತ್ಕಾರಯುಕ್ತವಾದ ಬಯ್ಗಳು: ಸುಯ್ಗಳುಣ್ಮದ ಭರಂ ತನುಬಂಧನಂ ಹದಿರುವಯ್ಗಳುಣ್ಮದ ಲಲ್ಲೆ ನಡದುಗುರ್ ಕರಗದರ್ದೆ ಪೊಯ್ಗಳುಣ್ಮದ ಸರಸಮಱಿಕೆಗೂಡಿದ ಪರವಶಂ ಜಾರರೊಳ್ ಮಱೆದುದು (ಚಟಪು. ೯-೧೫). [ಹದಿರು$_1$(< ಪದಿರ್$_1$) + ಬಯ್ಗಳು(< ಬಯ್ಗುಳ್)]

ಹದಿರುವಾತು 'ಪದಿರುವಾತು' ನೋ.

ಹದಿರ್ಗೊಳ್ಳು (ಕ್ರಿ). ಚಂಚಲವಾಗು; ಉದ್ವಿಗ್ನಗೊಳ್ಳು: ಮುಟ್ಟಿದೊಡಾಕ್ಷಣ ತನುರೋಮಗಳು ಗುಡಿಗುಟ್ಟ ಮೆಯ್ಯೊಳಗೆ ಕಾತುರವ ಮುಟ್ಟದರೆದೆ ಹದಿರ್ಗೊಳ್ದ ಕರಣದ ಗಟ್ಟವಾಳದೆ ತೆರಳಿದಳು (ಮೋಹತ. ೩೧-೨೮).

[ಹದಿಱು$_0$(< ಪದಱು$_2$) + ಕೊಳ್ಳು$_1$(< ಕೊಳ್$_1$)]

ಹದಿವಡು (ಕ್ರಿ). (ಆಯಕಟ್ಟಾದ) ನೆಲೆಯಲ್ಲಿ ನಿಲ್ಲು: ನಿನ್ನತಹಿಯೋ ಪ್ರಾಣನಾಥ ಕೇಳೆನಗೆ ತನಗಿನ್ನೇನು ವೈರವೋ ನೀನಗಲಲೊಡನೆ ಕವಿದೆನ್ನನಿಸಲೆಂದು ತಿರುವಿನೊಳು ನನೆಗಣೆದೊಟ್ಟು ಹದಿವಟ್ಟು ಕಂದರ್ಪನು ಸನ್ನದ್ಧನಾಗಿ ನಿಂದು (ಸೌಂದಪು. ೧೭ - ೪೩). [ಹದ್ವಿ$_2$(< ಪದ್ವಿ$_2$) + ಪಡು$_1$]

ಹದಿಹ (ನಾ). ಒಳ್ಳೆಯ ಅವಕಾಶ; ಸುಸಂದರ್ಭ: ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ ನಾನಿದನೆಲ್ಲವ ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆನ್ನೊಡೆಯ ಮುಳಿಯದಿಹ ನಿದು ಹದಿಹನೆಂಬಾಸೆಯಿಂ ಹೊಱೆಯನಿಳುಹಿ [ಪಾಠಾಂ. ನೆಂಬಾಸೆಯಿಂ ಹೊಱೆಯನಿಳುಹಿ ಮತ್ತೆಳಸಿ, ನದು ದಿಟಂಯೆಂಬಾಸೆಯಿಂ ಹೊಱೆಯನಿಳುಹಿ] ಕುಡುಗೋಲ್ವಿಡಿದು ಸಾರ್ದನಸ್ವಾದ್ರಿಯಂ ಸಾರುತಿಹ ಸೂರ್ಯನಂತೆ (ಹಚಕಾ. ೧೨-೮).

[ಹದ್ವಿ$_2$(< ಪದ್ವಿ$_2$) + - ಹ$_2$(< - ಪ$_2$)]

ಹದಿಹರೆಯ (ನಾ). ಹತ್ತು, ಹನ್ನೊಂದು ವರ್ಷದ ಪ್ರಾಯ: ಅಲ್ಲಿ ಸೇರಿದ್ದವರೆಲ್ಲ ಹದಿಹರೆಯದ ಹುಡುಗರೇ (ರೂಢಿ). [ಹದ್ವಿ$_2$(< ಪದಿನ್) + ಹರೆಯ(< ಪರಯ)]

ಹದುಗಿಸು (ಕ್ರಿ). ಕುಗ್ಗಿಸು; ಸಂಕೋಚಗೋಳಿಸು: ಭಂಗವಡಿಸದೆ ಹಸಗೆಡಿಸದೆ ಹದುಗಿಸದೆ ಬಸಿಱೊಳು ಬಂದ ಪೆಣ್ಮಕ್ಕಳ ಮಱುಕವ ಸೊಸೆಯರೆಡೆಯೊಳೆಸಗುವುದು (ಹದಿಬ. ೪-೨೫). [ಹದುಗು$_1$(< ಪದುಗು) + - ಇಸು$_3$]

ಹದುಗು$_1$ 'ಪದುಗು' ನೋ.

ಹದುಗು$_2$ (ನಾ). ಪಕ್ಕ; ಬದಿ; ದಡ: ಮೊದಲೇರಿಯ ಹದುಗಿಂ ತೆಂಕಲು ಕೊಳೆಗೆ ಎಂಟು (ಮೈಆರಿ. ೧೯೩೭, ೧೮-೪೧; 1289); ಬಯಲ ಹದುಗಿನ ಗದ್ದೆ (ಇಎ. ೧೯೫೨, ಓರೇಕರೂರು. ೪೬-೨೩; ?). [← ತಮಿ. ಪತುಕ್ಕೈ]

ಹದುರು 'ಪದಿರ್$_1$' ನೋ.

ಹದುಳ 'ಪದುಳ' ನೋ.

ಹದುಳವಿಡು (ಕ್ರಿ). ಕ್ಷೇಮವಾಗಿಡು; ಸುಖವಾಗಿಡು: ಹದುಳವಿಡುವವರಿಲ್ಲ ಸೇನೆಯ ಮೊದಲಿಗರು ಮುನ್ನೋಟವಿಕ್ಕಿತು ಕದನದಲಿ ಕೈಸೂಱೆಗೊಟ್ಟರು ಜಯವ ತಮತಮಗೆ (ಕುಮಾಧಿ. ೯-೨೬). [ಹದುಳ(< ಪದುಳ) + ಇಡು$_1$]

ಹದುಳವಿರು 'ಪದುಳಮಿರ್' ನೋ.

ಹದುಳಹೋಗು 'ಪದುಳಂಬೋಗು' ನೋ.

ಹದುಳಿಗ 'ಪದುಳಿಗ' ನೋ.

ಹದುಳಿಗಚಿತ್ತ (ನಾ). ನೆಮ್ಮದಿಯಿಂದ ಕೂಡಿದ ಮನಸ್ಸುಳ್ಳವನು: ಹದುಳಿಗ ಚಿತ್ತನಾಗಿ ಹರ್ಷಾನಂದದಿಂ ಸೇವನೆಯ ಮಾಡಿ . . . ಶಿವಮಯನಾಗಿರ್ದೆನಯ್ಯ (ಅಖಂಡೇ. ೨೪೮-೧೦೧). [ಹದುಳಿಗ(< ಪದುಳಿಗ) + ಚಿತ್ತ]

ಹದುಳಿದ 'ಪದುಳಿದ' ನೋ.

ಹದುಳಿರ್ 'ಪದುಳಮಿರ್' ನೋ.

ಹದುಳಿರಿಸು 'ಪದುಳಮಿರಿಸು' ನೋ.

ಹದುಳಿಸು 'ಪದುಳಿಸು' ನೋ.

ಹದುಳು 'ಪದುಳ' ನೋ.

ಹದುಳೆ (ನಾ). ಸುಖವಾಗಿರುವವಳು: ಹದುಳೆ ಹೊಂತಕಾರಿ ದೆಸೆದಿಕ್ಕ ನೋಡುತ ಕುಶಲರೆಲ್ಲರನು ಸೋಲಿಸುವಂತೆ ಬಂದು ನಿಂದಿಹಳು (ಸೌಂದಕಾ. ೩-೪೦).

[ಹದುಳ (< ಪದುಳ) + - ಎ$_2$]

ಹದೆ$_1$ 'ಪದೆ$_1$' ನೋ.

ಹದೆ$_2$ (ನಾ). ಪಕ್ಕ; ಬದಿ: ಊರಿಂ ಪಡುವಣ ಕೆಱೆಯ ಹಿಂದೆ ಮತ್ತರು ನಾಲ್ಕು ಹದೆಯ ಹಡುವಣ ಹಳ್ಳದಿ ಹಡುವಲು ಮತ್ತರು ನಾಲ್ಕು (ಎಕ.XI, ಚಿತ್ರದು. ೩೬-೪೯; 1199). 'ಹದುಗು$_2$' ಪರಾ. [< ಪದ್ವಿ$_2$?]

ಹದ್ದಿಕೆ 'ಪೊದಕೆ$_2$' ನೋ.

ಹದ್ದು$_1$ 'ಪರ್ದು' ನೋ.

ಹದ್ದು$_2$, ಪದ್ದು$_2$ (ನಾ). ೧. ಗಡಿ; ಸೀಮೆ; ಮೇರೆ: ನಮ್ಮ ಅಪ್ಪಣೆ ಇಲ್ಲದೆ ನಿಮ್ಮ ಹದ್ದು ದಾಟಿ ನಮ್ಮ ಅರ್ದಿಗೆ (ಹದ್ದಿಗೆ) ಬರುವುದಕ್ಕೆ ಕಾರಣವೇನು (ರಾಜೇಂದ್ರ. ೧೯). ೨. ಅಂಕೆ; ಅಧೀನ; ನಿರ್ಬಂಧ: ನಮ್ಮ ಗುರುವೆ ಸಾಕು ಅವರನ್ನು ಹದ್ದಿನಲ್ಲಿಟ್ಟಿರುವುದಕ್ಕೆ (ತುಂಗಭ. ೧೯); ತಾಯಿಯ ಹದ್ದಿನಲ್ಲಿ ಬೆಳೆದ ಮಗ ಸಾಂಬನಿಗೆ ತಾಯಿಯ ಮಾತೇ ವೇದವಾಕ್ಯ (ಹೊಸಕ್ತಿ. ೧೯). Δ ಪದ್ದು$_2$: ೧. ಮುಳಿದು ಪದ್ದಿನಿಂದಾ ಪರಶು ಪಾಣಿಯುಂ ಮುಂದೆಸಗಿ ನಡದಾ ಪ್ರಯಾಣದೆಡೆಗೆ (ಪರಶು. ೩೯-೨೬). ೨. ಪಾರ್ಥಿವರ ವಂಶದೊಳುದ್ಭವಿಸಿ ಪದ್ದನುಳಿದಿಳೆಯೊಳುಂ ಜೀವಿಪಡೆ ಭವದಂಘ್ರಿಶಿಷ್ಯ ತಾಂ ನಿರ್ದೈವನೆ (ಪರಶು. ೨೯-೧೫).

ಹದ್ದುದಾಟಿಸು = ಗಡಿಹಾಯಿಸು; ಗಡಿಪಾರುಮಾಡು: ಕಳವಿನ ಪ್ರಕರಣದಲ್ಲಿ ಮನೋಹರನನ್ನು ಹಿಡಿಸಿ ಬ್ರಿಟಿಶ ಹದ್ದುದಾಟಿಸಿ ಆ ಸಂಸ್ಥಾನಕ್ಕ ಕಳಿಸುತ್ತೇನೆ (ಕೊತಕಾ. ೫೫). [← ಆರ. ಹದ್ದ್; ಹಿಂ. ಹದ್; ಮರಾ. ಹದ್, ಹದ್ದ್]

ಹದ್ದುಗಟ್ಟು (ನಾ). (ಆಲಂ) ಬಹಳ ಬಿಗಿಯಾದ ಬಂಧನ: ದಾನವನ ಕದ್ದ ಕಳ್ಳನ ಕಟ್ಟುವಂದದಿ ಹದ್ದುಗಟ್ಟನು ಕಟ್ಟಿ ಹೊಡೆದರೆ ಬಿದ್ದನಸುವಡಗಿತ್ತು (ಕೌಶಿರಾ. ೨೧-೩೯). [ಹದ್ದು$_1$(< ಪರ್ದು) + ಕಟ್ಟು$_2$]

ಹದ್ದುಗಣ್ಣು (ನಾ). (ಆಲಂ) ಕ್ರೂರವಾದ ದೃಷ್ಟಿ; ಕೆಟ್ಟ ನೋಟ: ಆಕಾಶದಲ್ಲಿ ಹಾರಾಡುತ್ತಿದ್ದ ಹದ್ದುಗಳಲ್ಲಿ ಒಂದು ಇಳಿದು . . . ಅಗ್ರಹಾರವನ್ನೆಲ್ಲಾ ಹದ್ದುಗಣ್ಣಿನಲ್ಲಿ ಈಕ್ಷಿಸಿತು (ಸಂಸ್ಕಾರ. ೬೪); ಇನ್ನು ಕೆಲವರು ಆದಿಲ್‌ಶಾಹಿಯ ಹದ್ದುಗಣ್ಣಿಗೆ ಸಿಕ್ಕು ತಮ್ಮ

ಪ್ರಾಣಗಳನ್ನು ನಾಡಿಗಾಗಿ ಬಲಿದಾನವಿತ್ತರು (ಕುಂಬುಮ.೪೬).

[ಹದ್ದು$_1$ (< ಪರ್ದು) + ಕಣ್ಣು(< ಕಣ್)]

ಹದ್ದುಗೈ (ನಾ). = ಹದ್ದುಗಟ್ಟು: ಅರ್ಧರಾತ್ರಿಯೊಳಗೆ ಹೆಣನನು ತಂದು ಕದ್ದು ಸುದುವ ಲಂಡಹೆಣ್ಣ ಹದ್ದುಗೈಯನು ಕಟ್ಟಿ ತಲೆಯನರಿವೆನೆಂದು ಹೊದ್ದಿದ ಹೆಣನ ಹಿಂಗಾಲ (ಹರಿಸಾ. ೪-೫೨). [ಹದ್ದು$_1$ (< ಪರ್ದು) + ಕೈ$_2$(< ಕೆಯ್$_2$)]

ಹದ್ದುಗೈಯಿಡು (ಕ್ರಿ). (ಆಲಂ) (ದೂರದಲ್ಲಿರುವುದನ್ನು ನೋಡುವ) ನಿರೀಕ್ಷೆಯಲ್ಲಿರು: ಹದ್ದುಗೈಯಿಟ್ಟು [ಪಾಶಾಂ. ಕೈಯಿಟ್ಟು] ಹಾದಿಯ ನೋಡುತೀ ಪರಿಯ ಸುದ್ದಿಯಲಿ ನಿಮಿಷಯುಗಮಾಡಿ ದೊಬ್ಬುತ್ತ್ರಯೆದ್ದು ಕುಳಿತಿರೆ (ಶ್ರೀಕೃಪಾ. ೨೪); ಸದ್ದುಸಪ್ಪಳವನಾಲಿಸುತಿದ್ದೆನಮ್ಮಾ ನಾ ಹದ್ದುಗೈಯಿಟ್ಟು ಕದ ಹೊಂದಿದ್ದೆನಮ್ಮಾ (ಶ್ರೀಕೃಪಾ.೨೬). [ಹದ್ದುಗೈ + ಇಡು]

ಹದ್ದುಪಾರು (ನಾ). ಎಲ್ಲೆ ದಾಟುವಿಕೆ; ಗಡಿಪಾರು; ಸೀಮೋಲ್ಲಂಘನೆ.

ಹದ್ದುಪಾರುಮಾಡು = (ಅಪರಾಧದ ಶಿಕ್ಷೆಯಾಗಿ) ನಾಡಿನ ಗಡಿಯಿಂದ ಹೊರಗಟ್ಟು; ಗಡಿಪಾರುಮಾಡು: ನನ್ನನ್ನು ರಾಜದ್ರೋಹಿಯೆಂದು ದರ್ಬಾರದಲ್ಲಿ ಅವಮಾನಗೊಳಿಸಿ ಹದ್ದುಪಾರುಮಾಡಿದರು (ಕುಮುದಿ. ೮೦); ಪರಕೀಯಶತ್ರುಗಳನ್ನು ಈ ದೇಶದಿಂದ ಹದ್ದುಪಾರುಮಾಡುವುದಕ್ಕಾಗಿ . . . ಸಿದ್ಧನಿರುವೆನು (ಪ್ರಬಂಧ. ೫೭).

[ಹದ್ದು$_2$ + ಪಾರು$_3$]

ಹದ್ದುಬಸ್ತು (ನಾ). ೧. ಗುರುತು ಮಾಡಿದ ಮೇರೆ,– ಗಡಿ: ಕೆಲವು ಮಂದಿ ತಂಟೆಕೋರರಾದ ರೈತಜನರು ನಂಬರಿನ ಹದ್ದುಬಸ್ತಾದ ಬಾಂದುಕಲ್ಲುಗಳನ್ನು ಮನಃಪೂರ್ವಕವಾಗಿ ಕಿತ್ತಿಸೆಯುವುದೂ ವುಂಟು (ಭೂಮಿಳ. ೩೮). ೨. ಎಲ್ಲೆ; ಗಡಿ: ನನ್ನ ಹದ್ದುಬಸ್ತಿನ ಜಮಿನಿಗೆ ನೀನು ಬರುವುದು ಬೇಕಿಲ್ಲ (ರೂಢಿ) ೩. (ಆಲಂ) ಅಂಕೆ; ಅಧೀನ; ಹಿಡಿತ: ಜನರ ಸ್ವೇಚ್ಛಾಪ್ರವೃತ್ತಿಯನ್ನು ತಡೆದು ಅವರನ್ನು ಒಂದು ನ್ಯಾಯದ ಹುದ್ದುಬಸ್ತಿನಲ್ಲಿ ನಿಲ್ಲಿಸುವುದಕ್ಕೋಸ್ಕರ ಏರ್ಪಟ್ಟುದ್ದು (ರಾಜ್ಯಶಾ. ೪೯); ಖೈದಿಗಳ ಈ ದೊಡ್ಡ ಗುಂಪನ್ನು ಹದ್ದುಬಸ್ತಿನಲ್ಲಿಡುವುದೇ ಕಷ್ಟ (ಪುನರು. ೨೨೫). [< ಹದ್ದು$_2$]

ಹದ್ದುಮಿರು 'ಹದ್ದುಮಾಜು' ನೋ.

ಹದ್ದುಮಾಜು, ಹದ್ದುಮಿರು (ಕ್ರಿ). ೧. ಎಲ್ಲೆ ಮಿರು: ಕುಸುಮವೃಷ್ಟಿಯ ಸುರಿದನಮರೇಂದ್ರ ಹದ್ದುಮಾಜಿದ ಹಬ್ಬವಾಯಿತು ಹೊದ್ದಿದರ ಹೊರವಾತ ಸುಖದಿಂದಿದ್ದನು (ಕಾಶಿಕಾ. ೨೨-೭೦). **ಹದ್ದುಮಿರು**: ೨. ಅಂಕೆ ಮಿರು; ನಿರ್ಬಂಧವನ್ನು ಉಲ್ಲಂಘಿಸು: ಅತ್ತ ದಕ್ಷಿಣದಲ್ಲಿ ಚೋಳ ಪಾಂಡ್ಯರು ಹದ್ದುಮಿರುತ್ತಿದ್ದಾರೆ (ಶ್ರೀರಾಯ. ೩೦೨); ಈ ತೋಟದೊಳಕ್ಕೆ ಯಾರೂ ಬರಕೂಡದು. ಹದ್ದುಮಿರಿ ಬಂದವರಿಗೆ ಶಿಕ್ಷೆ (ಪುಟ್ಟರ. ೧೭). [ಹದ್ದು$_2$ + ಮಾಜು]

ಹನ್ 'ಪದಿನ್' ನೋ.

ಹನಕೆ (ನಾ). ಒಂದು ಬಗೆಯ ಔಷಧೀಸಸ್ಯ: ಬಾನಾವರ, ನೀರುನಲ್ಲೆ, ಹನಕೆ (ಮೈಪಿಗಿ. ೬೯-೭೭೫). [?]

ಹನನ (ನಾ). ೧. ಕೊಲ್ಲುವಿಕೆ; ಸಂಹಾರ; ವಧೆ : ಬ್ರಾಹ್ಮಣಹನನ ಮಹಾಪಾಪಮಂ ಗೆಯ್ದ ನಿಸ್ಸಂಶಯನೆನ್ನಂ ಪಾಪೆಯಂ ನೀಂ ಬೆಸಗೊಳೆ ಫಲಮೇಂ (ಇದಂಪು. ೯೫೭); ಆಗಸಕ್ಕೆ ಬೆಕ್ಕಸವನೆ ತಳ್ದು ಪಾಯ್ದು ಕಣಿಗಳ್ ಕೊಂಡಿದಿಕ್ಕಿದುವರ್ವರಂ ನಿರೀಕ್ಷಿಸೆ ಪರನಿರ್ನಿಮಿತ್ತಹನನೋದ್ಯಮಮಾತ್ಮವಿನಾಶಕಾರಣಂ (ರಾಜಶೇ. ೫-೧೦೩). ೨. ನಾಶ ಪಡಿಸುವಿಕೆ; ಅಳಿವು; ವಿನಾಶ. ೩. ಹೊಡೆಯುವಿಕೆ; ನೋಯಿಸುವಿಕೆ. ೪. ಗುಣಿಸುವುದು. ೫. ಒಂದು ಬಗೆಯ ಶಿಕ್ಷೆ: ಹನನ . . . ದುರ್ಬೋಧ್ಯ ನಾನಾವಿಧಾಸಂಖ್ಯಾತ ಶೀವ್ರವೇದನಾರೂಪಂಗಳಾಗಿ ಶಿವದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷೆ (ವೀರೇ. ೧೮೧). [ಸಂ.]

ಹನವಡ್ಡದಗಿಡು (ನಾ). ಒಂದು ಬಗೆಯ ಸಸ್ಯ: "ಆಮ್ರಪತ್ರಕಃ– ಹನವಡ್ಡದಗಿಡು" (ಓಷಧಿ. ೧೨). [? + ಗಿಡು]

ಹನಸವಾಡಿ 'ಪನಸವಾಡಿ' ನೋ.

ಹನಸವಾತು (ನಾ). (ಆಲಂ) ಗೊಡ್ಡುಮಾತು: ಹನಸವಾತಿಗೆ ನಾನು ಹರವಸಗೊಂಬಳಲ್ಲ (ಗೀತಗೋ. ೨೫). [< ಹನಸು$_2$ + ಮಾತು$_1$]

ಹನಸು$_1$ 'ಪನ್ನಸು' ನೋ.

ಹನಸು$_2$ (ನಾ). ವೇದದ 'ಪ್ರಶ್ನೆ' ಎಂಬ ಭಾಗದಲ್ಲಿ ಬರುವ ಮಾತು: ಆ ಪನ್ನದಲ್ಲಿರುವ ಹನಸುಗಳಂ ಬೇರೆ ಬೇರೆ ಎಂಗಡಿಸಿ (ಶಾಗಂಧಿ. ೩೬-೧೭); ಸರ್ವಂ ಖಲ್ವಿದಂ ಬ್ರಹ್ಮ ಎಂಬ ಹನಸೆಮ್ಮುವನೆ ಕುರಿತೊ? ಜಗವಂ ಕುರಿತೊ? (ಪಟ್ಟರ. ೨೩-೧೮).

[< ಪನ್ನ$_2$]

ಹನಸೋಗೆ 'ಪನಸೋಗೆ' ನೋ.

ಹನಿ$_1$ 'ಪನಿ$_1$' ನೋ.

ಹನಿ$_2$ 'ಪನಿ$_2$' ನೋ.

ಹನಿಕಪ್ಪೆ (ನಾ). (ಕರಾ) ಕಪ್ಪೆಯಲ್ಲಿ ಒಂದು ಬಗೆ; ಮಳೆಗಪ್ಪೆ.

[ಹನಿ$_2$ (< ಪನಿ$_2$) +ಕಪ್ಪೆ$_1$]

ಹನಿಕಿಸು, ಹನುಕಿಸು (ಕ್ರಿ). ನೀರು, ರಸ ಮುಂತಾದುವುಗಳನ್ನು ತೊಟ್ಟಿಕ್ಕಿಸು: (ಕ). ಹನುಕಿಸು: ನೀರನ್ನು ಹನುಕಿಸಬೇಡ (ರೂಢಿ). [ಹನಿಕು + - ಇಸು$_5$]

ಹನಿಕು, ಹನುಕು (ಕ್ರಿ). ಹನಿಯಾಗಿ ಬೀಳು; ತೊಟ್ಟಿಕ್ಕು: (ಕ). **ಹನುಕು**: ರಾತ್ರಿಯೆಲ್ಲಾ ಮಳೆ ಹನುಕುತ್ತಲೇ ಇತ್ತು (ರೂಢಿ). [< ಹನಿ$_1$(< ಪನಿ$_1$)]

ಹನಿಕ್ಕೆ (ನಾ). ಒಂದು ಬಗೆಯ ಅಳತೆ (?): ಕೇರಿಯ ನೈರಿತ್ಯದ ಗೋಂಟನಲು ಏಳು ಕೈಯಗಲ ಹನಿಕ್ಕೆಯ ನೀಳದ ಮನೆಯು ಮಗ್ಗ ಸಹಿತ ಕೊಟ್ಟರು (ಪ್ರಾಶಾ. ೧೬೯-೧೭; 1233). [?]

ಹನಿಗಣ್ಣು (ನಾ). (ಸಂತೋಷ, ದುಃಖ ಮೊದಲಾದುವುಗಳಿಂದ) ನೀರು ತುಂಬಿರುವ ಕಣ್ಣು: ಅವ್ವ ನನ್ನನ್ನು ಮಾಮಾನ ತೊಡಯ ಮೇಲೆ ಕೂಡಿಸಿ ಹನಿಗಣ್ಣಿನಿಂದ ದತ್ತಕ ಕೊಟ್ಟಳು (ಸ್ವಚರಿ.೨೪); ಒಗ್ಗಾಲಿ ತನಗೆ ನೀಡಲಾದ ಅಷ್ಟೆಲ್ಲ ದ್ರವ್ಯವನ್ನು ಮರಳಿ ಮುದುಕನಿಗೇ ಅರ್ಪಿಸಿ ಹನಿಗಣ್ಣಿನಿಂದ . . . ನಮಸ್ಕಾರ ಹಾಕಿದನು (ಕಂಬಾಪು. ೨೧). [ಹನಿ$_2$ (< ಪನಿ$_2$) + ಕಣ್ಣು(< ಕಣ್)]

ಹನಿಗವನ (ನಾ). (ಆಲಂ) ಸಣ್ಣಕವನ; ಚಿಕ್ಕಪದ್ಯ: ಶ್ರೀ ಅರವಿಂದರ ಸಾವಿತ್ರಿಯನ್ನು ಕುರಿತು ಬಂದ ಒಂದು ಹನಿಗವನ (ಜೀವಲ. ೧೨೪). [ಹನಿ$_2$ (< ಪನಿ$_2$) + ಕವನ]

ಹನಿಗೂಡು (ಕ್ರಿ). ನೀರಿನಿಂದ ತುಂಬು; ಹನಿತುಂಬು: ಆಕಯ ಕಣ್ಣುಗಳು ತಟ್ಟನೆ ಹನಿಗೂಡುವುವು (ಚತಂಬಾ. ೧೫); ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಬತ್ತ (ಗಾಡ).

[ಹನಿ$_2$(< ಪನಿ$_2$) + ಕೂಡು$_1$]

ಹನಿಚೆ (ನಾ). ಒಂದು ಬಗೆಯ ಸಸ್ಯ: (ಮೈಪಿಗಿ. ೧೫-೨೭೬). 'ಹಣಚ್ಚಿ$_2$' ಪರಾ. [?]

ಹನಿಬ್ಬರು 'ಪನ್ನೆರಡು' ಪರಾ.

ಹನಿಮಳೆ (ನಾ). ತುಂತುರುಮಳೆ; ಸೋನೆ; ಜಿನುಗುಮಳೆ: ರಾತ್ರಿಯೆಲ್ಲಾ ಹನಿಮಳೆಯಾಯಿತು (ರೂಢಿ). 'ಜಡಿಮಳೆ' ಪರಾ.

ಹನಿಹನಿಮಳೆ = ಹನಿಮಳೆ: ಗಾಳಿಮಳೆ, ಹನಿಹನಿಮಳೆ, ಜಡಿಮಳೆ, ಜಿರಾವರ್ತಿ ಮಳೆಯೂ ಸುರಿಯತೊಡಗಿತು (ಬಾಳಿಗಿ. ೫೩). [ಹನಿ$_2$(< ಪನಿ$_2$) + ಮಳೆ(< ಮಟೆ)]

ಹನಿಸು 'ಪನಿಸು' ನೋ.

ಹನಿಹೊತ್ತು 'ಪನಿಪೊಳ್ತು' ನೋ.

ಹನು$_1$ (ನಾ). ೧. ದವಡೆ; ಕಪೋಲ: "ಕಪೋಲಮನೆ ಹನು" (ಮಂಗರಾ. ೯೪-೪); ಕ್ರೂರಂ ಸ್ಥೂಲಹನುದ್ವಯಂ ಕಲಿಮನಂ . . . ಸಿಂಹೋದ್ಭವಂ (ಜಾತಕ. ೧೭-೫); ಹನು ನಸುನೀಳಮಾಗೆ ಮೃದುವತ್ಕರುಣಾಧರಮಾಗೆ ಪಲ್ಲಳಿಂದಿನೆ ಋಜುವಾಗೆ . . . ವಿಭೂತಿಯನುಂಟುಮಾಡುಗುಂ (ಕೋಕೋಪ. ೧೧-೨೧); ಚಿಬುಕದ ಮೇಗಣ ಅಣುಗಳೆ ಹನು (ಅಶ್ವಶಾ. ೯-೨೩). ೨. ಒಂದು ಬಗೆಯ ಸುಗಂಧದ್ರವ್ಯ. ೩. ಒಂದು ಬಗೆಯ ಮೂಲಿಕೆ. [ಸಂ.]

ಹನು$_2$ (ನಾ). ಒಂದು ಬಗೆಯ ತೆರಿಗೆ (?): ಸಮಸ್ತ ಗಉಂಡಗಳಿಗೆ ಕೊಟ್ಟ ಸಾಸನದ ಕ್ರಮವೆಂತೆಂದಡೆ ತಪ್ಪು ತಉಡಿ ದಂಡ ಉಂಡಿಗೆ ಹಡರ ಹನು ಕೊಂಬಂಣ (ಎಕ. IX. ಕಾನಕಾ. ೪೧-೧೨; 1300). [?]

ಹನುಕಲು (ನಾ). ಹನಿಯುತ್ತಿರುವಿಕೆ; ತುಂತುರುಮಳೆ: "ಹನುಕಲು–ಹನಿಗಾಲ, ಸಮೃದ್ಧಮಳೆಗಾಲ" (ಜಾನಪೋ.೫೩). [ಹನುಕು (< ಹನಿಕು) +- ಅಲು(< ಅಲ್$_2$)]

ಹನುಕಿಸು 'ಹನಿಕಿಸು' ನೋ.

ಹನುಕು 'ಹನಿಕ್ಕು$_2$' ನೋ.

ಹನುಚಕ್ರ (ನಾ). [ಅಶ್ವಶಾ] (ಕುದುರೆಯ) ಕಪೋಲದ ಮೇಲ್ಭಾಗ ಹಾಗೂ ಕೆಳಭಾಗದ ಸಮೂಹ: ಗಂಡದ ಪೊಱಗಣ ಕೆಳಗಣ ತಂಡಕೆ ಹನುಚಕ್ರಮೆಂಬ ಪೆಸರ ದಕಕ್ಕುಂ (ಅಶ್ವಶಾ. ೯-೨೪). [ಸಂ.]

ಹನುಮ (ನಾ). ೧. (ದೊಡ್ಡ) ದವಡೆಯನ್ನು ಹೊಂದಿರುವುದು. ೨. ವಾಯುವಿನ ಮಗ; ಅಂಜನಾಪುತ್ರ; ಮಾರುತಿ: ವಿತತರಾಕ್ಷಸರಾಜಬಲ ಸಂಗತವನುಱ್ ಸಂಹರಿಸಿ ರಾವಣಸುತನಿನಬುಜಭವಾಸ್ತ್ರದಲಿ ಬಿಗಿವಡೆದನಾ ಹನುಮ (ತೊರರಾ. ೫-೬ ಸಂಚಿಕೆ); ನಿಮಿರ್ದುದು ನವಿರ್, ಮೆಯ್ಗೆ ಹನುಮನಾ! (ಶ್ರೀರಾಮಾ. ೪೮೧-೧೯೩).

ಹನುಮನ ಕಲ್ಲು = ಹನುಮಂತನ ಮುದ್ರೆಯಿರುವ ಗಡಿಕಲ್ಲು; ಹನುಮನ ಮುದ್ರೆಕಲ್ಲು: ಕೊನೆಯಗೆ ನೆಟು ಕೊಟ ಹನುಮನ ಕಲು (ಮೃಅಂ. ೧೯೩೭. ೪೫-೨; 16ನೆಯ ಶತ) ಹನುಮನ ತಾಳಿ = ಹನುಮಂತನ ಚಿತ್ರವಿರುವ, ಕೊರಳಲ್ಲಿ ಧರಿಸುವ ಒಂದು ಆಭರಣ: ಕತ್ತಿನಲ್ಲಿ ಅಡ್ಡಿಕೆ . . . ಹನುಮಂತನ ತಾಳಿ, ಹುಲಿಯುಗುರು (ಮಲ್ಲಿ. ೪೦). ಹನುಮನ ಬಾಲ = ಒಂದು ಬಗೆಯ ಯುದ್ಧದ ಸಾಮಗ್ರಿ: ಬಲೆ ಪಟ ಹನುಮನ ಬಾಲ ಚಬುಕು ಕೊಳ್ಳಿ ತೊಲಗದ ಕಂಭ ಮುಂದುಲಿವ ತಲೆ ಕಳಸದ ಬಿರಿದಿನ ಹರಿಗೆಯ ಮಂದಿ ಕಲಹಕ್ಕೆ ಪೊಱಮಟ್ಟರೊಸೆದು (ಕುರಾಸಾಂ. ೧೧-೩೩); ಇದೆ ಮುತ್ತಿನ ಕುಚ್ಚಿನ ಹನುಮನ ಬಾಲವಿದೆ ನವರತ್ನದ ಠೌಳಿ ಇದೆ ಪಚ್ಚೆಗಾವಿನ ಸತ್ತಿಗೆಯಿವ ರಾಮನಿದಕೆ ಸಂದೆಗಬೇಡವಿನ್ನು (ಕುರಾಸಾಂ. ೪೦-೧೬); ಹಮ್ಮುಗೆ ವರಹನುಮನ ಬಾಲ ಹೊಂಗಂಟೆ ಹೊಮ್ಮೇಳದ ಕಠಾರಿಗಳು . . . ಒದವಿತೊಗ್ಗಿನಲಿ (ಮೋಹತ. ೧೯-೧೧). ಹನುಮನ ಹಕ್ಕಿ = ಒಂದು ಬಗೆಯ ಹಕ್ಕಿ: (ಕ).

[< ಸಂ. ಹನುಮತ್]

ಹನುಮಂತ (ನಾ).= ಹನುಮ ೨: ರಾವಣನ ಮೇಲಣ ರಾಜಕಾರಿಯದ ಕಥನಕಾಳೋಚಿಸಿ ಕರಡಿ ಕಪಿಗಳಂ ನೆರಪಿ ಪೃಥಿವಿಜೆಯನಱಸಲ್ಕೆ ವೀರಹನುಮಂತನಂ ಕಳುಹಿದಂ ಕಾಕುತ್ಸ್ಥನು (ಕೃಮಿಭಾ. ೧೧-೫); ಹನುಮಂತ ಹಗ್ಗ ಕಡಿಯುವಾಗ ಪೂಜಾರಿ ಶಾವಿಗೆ ಬೇಡಿದ (ಗಾದೆ). [ಸಂ. ಹನುಮತ್]

ಹನುಮಂತಢಾಳ (ನಾ). ಕತ್ತಿಯ ವರಸೆಯಲ್ಲಿ ಒಂದು ಬಗೆ; IP ಹನುಮಂತನು ಕುಳಿತುಕೊಳ್ಳುವಂತೆ ಕುಳಿತು ತೀವ್ರವಾಗಿ ಹೊಡೆಯುವ ಒಂದು ವರಸೆ: ಕುಳಿತುಕೊಂಡವನಾಗಿ ಯೇಳುವಾಗ ಪಾರ್ಶ್ವಗಳಲ್ಲಿ ದೃಷ್ಟಿಯನ್ನು ಮಾಡಿ ಮೇಲೆಯೂ ಕೆಳಗೂ ಕೈಗಳ ಕ್ಷೇಪಣಿ ಆವದುಂಟು ಅದು ಹನುಮಂತಢಾಳ (ಹನುಮಂತಗತಿ)ಯಂದು ತಿಳಿವದು (ಖಡ್ಗಲಿ. ೪-೬೧). [ಹನುಮಂತ + ಢಾಳ$_1$ (< ಡಾಳ$_1$)]

ಹನುಮಂತತೊಪ್ಪಲು (ನಾ). ಒಂದು ಬಗೆಯ ಸಸ್ಯ: ಸಿತ್ತುಂಡೆಗಿಡ, ಸಿಡಿಗೋಲಿ, ಹನುಮಂತತೊಪ್ಪಲು, ಚೇಡುಬೀರ (ಮೃಡಿಗಿ. ೨೧-೩೯೩). [ಹನುಮಂತ + ತೊಪ್ಪಲು]

ಹನುಮಗತಿ (ನಾ). ಹನುಮಂತನಂತೆ ನೆಗೆಯುವುದು: ತುರಗರತ್ನಮಂ . . . ಇಮ್ಮಡಿಪಂಟೇಂದ್ರನರೇಂದ್ರಂ ಹನುಮಗತಿಯಿಂದೇರಿದಂ (ಬೀಳವಂ. ೧-೫೫).

[ಹನುಮ + ಗತಿ]

ಹನುಮತ್ತು (ನಾ). ಒಂದು ಬಗೆಯ ಹಲ್ಲಿನ ಬೇನೆ,– ದಂತರೋಗ: ಹನುಮತ್ತೆಂಬ ದಂತರೋಗದಲ್ಲಿ ಹಲ್ಲುಗಳು ಕಟವಾಯಿಸಂದುಗಳಲ್ಲಿ ವಾತದಿಂದ ಅತ್ಯಂತ ವಕ್ರವಾಗಿ ಮುಖವನು ವಕ್ರವಾಗಿ ಮಾಡುವವು (ವೃದ್ಧಸಾ. II. ೧೨೨). [ಸಂ. ಹನುಮತ್]

ಹನುಮದ್ಧ್ವಜ (ನಾ). ಹನುಮಂತನ ಚಿತ್ರವಿರುವ ಬಾವುಟ,– ಧ್ವಜ: ತಮ್ಮ ಭುಜಪರಾಕ್ರಮದಿಂದ ಸಂಪಾದಿಸಿದ ಹನುಮದ್ಧ್ವಜ ಗರುಡಧ್ವಜ . . . ಏಟುಪಾವುಡೆ ಮುಂತಾದ ಬಿರುದುಗಳಿಂದಲೂ . . . ಆಸ್ಥಾನವು ಕಂಗೊಳಿಸುತ್ತಿರಲು (ಮಹಾವಂ. I, ೨೪). [ಸಂ.]

ಹನುಮನ ಫಲ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಫಲ: (ಮೃಡಿಗಿ. ೭-೧೨೦). 'ರಾಮಫಲ', 'ಸೀತಾಫಲ' ಪರಾ. [< ಹನುಮ + ಫಲ]

ಹನುಮನಾಯಕ (ನಾ). ಯಕ್ಷಗಾನಗಳಲ್ಲಿ ಬರುವ ಹಾಸ್ಯಪಾತ್ರ, –ವಿದೂಷಕ: ಹನುಮನಾಯಕನ ಪಾತ್ರಕ್ಕೆ ಕಾಣೆಯೇ ಸೈ (ಬೆಳುಮ. ೫). [ಹನುಮ + ನಾಯಕ]

ಹನುಮಾನಾಸನ (ನಾ). [ಯೋಗ] ಒಂದು ಬಗೆಯ ಆಸನ: ಮುಖ್ಯವಾದ ಕೆಲವು ಆಸನಗಳು . . . ೪೮. ಸೇತುಬಂಧಾಸನ ೪೯. ಹನುಮಾನಾಸನ ೫೦. ಗರುಡಾಸನ (ಭಾರದ. ೧೬೭). [ಸಂ.]

ಹನುಮಾಯಣ (ನಾ). ಹನುಮಂತನ ವಿಸ್ತಾರವಾದ ಕಥೆ: ಕೆಟ್ಟೆ ಹನುಮಾಯಣ ವಿದಾಯಿತು ಮುಟ್ಟಿ ರಾಮಾಯಣದ ಕಥೆಗಳ ಬಟ್ಟೆದಪ್ಪಿತು . . . ಎನುತಣುವನುದಕವನು ಥಟ್ಟನಸುರನ ಬಾಯಿಗೆಱೆದನು (ಕಾಶಿರಾ. ೨೨-೨೩).

[IP ಇದು 'ರಾಮಾಯಣ' ಎಂಬ ಶಬ್ದದ ಹೋಲಿಕೆಯ ಮೇಲೆ ಆದ ರೂಪ]

ಹನುಮಿಸು (ಕ್ರಿ). ಕೆನೆ; ಹೇಷಾರವಮಾಡು: ನರಿವಿಂಡುಗಳ ಕೂಡಿ ಬಹುವಿಧದ ವರ್ಣಗಳಲಿ ತುರಗಮಯವಾಗಿ ಹನುಮಿಸುತ ಖುರಪುಟವೆತ್ತಿ ಧರಣಿಯಂ ಬಗಿದೊಗುವ ವಹಿಲಗತಿ ಚಿತ್ರದಿಂದಿರಲು (ಲಶಿಚಾ. ೩೭-೧೨); ಲಳಿ ಮಸಗಿ ಹನುಮಿಸುತ ಖುರದಲಿ ನೆಲನ ಕೆರೆದವು ಕುದುರೆ (ಕುವ್ಯಾಭೀ.೮-೨); ಹನುಮಿಸಿದೊಡೆ ಸಿಂಹನಾದವೆಂದಾನೆಗಳ್ಮನ ಗುಂದುವವು ಕುದುರೆಗಳು ಕನಲಿ ಕಣ್ಮೆಡುವವೆಂದೆನಲಾ ವಾರುವನನುವನದೇನ ಬಣ್ಣಿಪೆನು (ಕುರಾಸಾಂ. ೧೩-೮೮). [ಹನುಮು + - ಇಸು$_3$]

ಹನುಮು (ನಾ). ಕುದುರೆಯ ಕೆನೆತ; ಹೇಷಾರವ: ಮೋಡಮಂ ಹನುಮಿಂ ಪಳದೆಂ ನಾಡೆ ನರ್ತನದಿಂ ನಟನಂ ಕೂಡೆ ನಕ್ಕು ಸುವಕ್ತ್ರದೊಳಂ ಗಾಡಿಯಿಂದ ಪತಿವ್ರತೆಯಾ ಮೋಱೆಯಂದದ ವಾಜಿಚಯಂ (ಹಾಲಾಸ್ಯ. ೪-೧೧-೧೧೮). 'ಹನುಮಿಸು' ಪರಾ.

[< ಹನುಮ?]

ಹನುರೋಮ (ನಾ). ಮುಖದ ಕೂದಲು; ಗಡ್ಡ: "ಮುಖರೋಮಂ ಶ್ಮಶ್ರು ಕೂರ್ಚಕಂ ಹನುರೋಮಂ" (ವಸ್ತುಕೋ.೭೧-೭೨). [ಸಂ.]

ಹನೆ$_1$ 'ಪನೆ$_1$' ನೋ.

ಹನೆ$_2$ 'ಪನೆ$_2$' ನೋ.

ಹನೆ$_3$ 'ಪಾನೆ' ನೋ.

ಹನೆಗರಿ (ನಾ). ತಾಳೆಗರಿ; ಪನೆಗರಿ: ವರ್ಷವೆಲ್ಲ ಮನೆಯ ಗೋಡೆಗಳನ್ನು ಮುಚ್ಚುತ್ತಿದ್ದ 'ಹನೆ' ಗರಿಗಳಿಗೆ ಆ ದಿನ ವಿಶ್ರಾಂತಿ (ಮರಮ. ೧).

[ಹನೆ$_1$ (< ಪನೆ$_1$) + ಗರಿ (< ಗಱಿ)]

ಹನೆಗೊನೆ (ನಾ). ಹಲ್ಲಿನ ಆಕಾರದಲ್ಲಿರುವ ಹೊಂಬಾಳೆ: ಅಡಕೆಯ ಹನೆಗೊನೆ ಬಿಂಗಾರ ಹಳ್ಳಿಯ ಹೆಣ್ಣಿನ ಸಿಂಗಾರ ಬಡವರ ಬೆಡಗಿನ ಬಂಗಾರ ಕರಿದೇವ ಹರಸಲಿ ಮುಂಗಾರ ಹಿಂಗಾರ (ಕ್ರೌಂಚಧ್ವ. ೩-೧೯). [ಹನೆ$_2$ (< ಪನೆ$_2$) + ಕೊನೆ$_2$]

ಹನೆಬೊಂಡ (ನಾ). (ಕರಾ) ಹನೆಮರದ ಎಳೆಯ ಕಾಯಿ: ತಾನು ಮನೆಯಿಂದ ತಂದ ಹನೆಬೊಂಡದ ತೊಳೆಗಳನ್ನು ಎಬ್ಬಿಸಿ ಅವರ ಮುಂದಿಟ್ಟಳು (ಮರಮ. ೪೨೧).

[ಹನೆ$_1$ (< ಪನೆ$_1$) + ಬೊಂಡ$_1$]

ಹನೆಮರ 'ಪನೆಮರ' ನೋ.

ಹನೆಹೆಡೆ (ನಾ). = ಹನೆಗರಿ: ಮನೆಯ ಬಾಗಿಲಿಗೆ, ಒಂದು ತೂಗಾಡುವ 'ಹನೆಹೆಡೆ', ಮಳೆಗಾಲ ಬಂದರೆ ಯಾರನ್ನಾದರೂ ಬೇಡಿ ಕಾಡಿ, ಇನ್ನೊಂದು ಹತ್ತು ಹನೆಮರದ ಗರಿಗಳನ್ನು ತಂದು ನಾಲ್ಕು ಸುತ್ತಲೂ ತೂಗಿಸುತ್ತಾನೆ (ಹಹಸ. ೭೬).

[ಹನೆ$_1$ (< ಪನೆ$_1$) + ಹೆಡೆ$_1$ (< ಪೆಡೆ)]

ಹನ್ನ$_1$ 'ಪನ್ನ$_1$' ನೋ.

ಹನ್ನ$_2$ 'ಪನ್ನ$_3$' ನೋ.

ಹನ್ನವಣ 'ಪನ್ನವಣ' ನೋ.

ಹನ್ನವಣಿಗ (ನಾ). (ವೀಳೆಯದ) ಎಲೆಯನ್ನು ಮಾರುವವನು: ಈನ್ತೀ ಧರ್ಮಮಂ ಸ್ತಳದ ಹನ್ನವಣಿಗರುಂ ಡ್ಡಾಯದ ಕೋಲ್ಕಾಱರುಂ ಪುರಸ್ಸಹರಾಗಿ ನಡಸುವುದು (ಸೌಇಇ.IX-i; ೧೬೪-೪೫:1098); ಹನ್ನವಣಿಗ ಸಿಂಗಣನುವೈನೊಱ ನಾಲ್ವರುಮಿಟ್ಟು ಬಿಟ್ಟ ಧರ್ಮ ಗಾತ್ರಕ್ಕೆಯೊಂದು ಪೇಱೆ (ಕಾ. I, ೧೯-೧೫:1108).

[ಹನ್ನ$_2$ (< ಪನ್ನ$_3$) + - ವಣಿಗ$_2$]

ಹನ್ನಸ (ನಾ). ನಿಂದೆ; ಅಪವಾದ: ಮಱೆ ಮೋಸ ಕಲಹ ಕಾತರ ಕಟ್ಯಾಯಸ ಬಿಱುಬು ಹರುಬು ಹನ್ನಸಗಳ ತೆಱನಱಿಯದಳ ರಕ್ಷಿಸು ರಂಗಾ (ಶತಸಾಂ. ೩೩-೭೭); ಗನ್ನಗದುಕುಗಳ

ಕಳೆದು ಗರ್ವವ ಬಿಟ್ಟು ಹನ್ನಸಗಳನು ಹಬ್ಬಿಸದೆ ತನ್ನ ಬಾಳಿಕೆ ಬಡತನದ ಬಗೆಯನೆಲ್ಲ ಬಿನ್ನವಿಪುದು ವಿನಯದೊಳು (ಹದಿಬ. ೩-೨೨). [?]

ಹನ್ನಸವಾತು (ನಾ). ನಿಂದೆಯ ಮಾತು : ಈ ಮೇಲ್ಗೆಯ್ಮೆವಾಡಂ ಕೇಳ್ದುಮ್ಮಹದೊಳೆ ಗಮ್ಮನೆ ಪೋಪುದುಚಿತಮಿನ್ನಿವರ್ ಪಾಡುವ ಬಜುಬಿನ್ನಣಿಯ ಹನ್ನಸವಾತುಗಳನನ್ನೆವರ ಮನ್ನರೆನಿಸಿ ಕೇಳ್ವೆಂ (ಚಕವಿ. ೬-೧೫೭ ವ). [ಹನ್ನಸ + ಮಾತು$_1$]

ಹನ್ನಸು 'ಪನ್ನಸು' ನೋ.

ಹನ್ನಾಸಿ 'ಪನ್ನಸು' ನೋ.

ಹನ್ನಿಬ್ಬರ್ 'ಪನ್ನೆರಡು' ಪರಾ.

ಹನ್ನಿಬ್ಬರ ಗಂಡ 'ಪನ್ನೆರಡು' ಪರಾ.

ಹನ್ನಿಬ್ಬರು 'ಪನ್ನೆರಡು' ಪರಾ.

ಹನ್ನಿರ್ಕಯಿ 'ಪನ್ನೆರಡು' ಪರಾ.

ಹನ್ನಿರ್ಚ್ಛಾಸಿರ 'ಪನ್ನೆರಡು' ಪರಾ.

ಹನ್ನಿರ್ಧಾನ್ಯ 'ಪನ್ನೆರಡು' ಪರಾ.

ಹನ್ನಿರ್ಬರ್ 'ಪನ್ನೆರಡು' ಪರಾ.

ಹನ್ನಿರ್ವರು 'ಪನ್ನೆರಡು' ಪರಾ.

ಹನ್ನುಸಿಗ 'ಪನ್ನಸಿಗ' ನೋ.

ಹನ್ನೆರಡು 'ಪನ್ನೆರಡು' ನೋ.

ಹನ್ನೆರಡುಮಹಲು (ನಾ). ಕೋಟಿಮಹಲು, ಗಾಡೀಮಹಲು, ದೀವಟೀ ಮಹಲು, ಜಕಾಯತ್ ಮಹಲು, ತಟ್ಟಿಮಹಲು, ದರೋಗಿಮಹಲು, ಸೇಂದೀಮಹಲು, ಪಾಲಖಿಮಹಲು, ಇಮಾರ್ತಿ ಮಹಲು, ದರ್ಜಿಮಹಲು, ಫಾಯಿನ್‌ಮಹಲು ಮತ್ತು ಜಾಸೂದ್‌ಮಹಲು ಎಂಬ ಹನ್ನೆರಡು ವಿಧವಾದ ಭವನಗಳು: 'ಹಸವಾಯಿ ಜಗಜೆಂಪ ಸುಗುಣ ಕನ್ನಡಜಾಣ' ಪಾದಷಹನು ರತ್ನಖಚಿತ ವಾದ ವಸಂತಮಹಲಿನಲ್ಲಿ ಸಭೆಮಾಡಿಕೊಂಡು ಎಪ್ಪತ್ತೆರಡು ನಿಯೋಗ ಅಠಾರಖಾನೆ ಹನ್ನೆರಡುಮಹಲು ವಿದ್ವಜ್ಜನಸಮೇತವಾಗಿ ಸದರು ಮಾಡಿಕೊಂಡು ಕುಳಿತಿದ್ದನು (ಬಖೈರು. ೪). [ಹನ್ನೆರಡು (< ಪನ್ನೆರಡು) + ಮಹಲು (< ಮಹಾಲು)]

ಹನ್ನೊಂದು 'ಪನ್ನೊಂದು' ನೋ.

ಹಪ (ನಾ). ಬೈಗುಳು; ಶಾಪ.

ಹಪಹಾಕು = ಬೈಯು; ಶಾಪಹಾಕು : ಉಪಕಾರ ಅರಿಯದವ ಊಟಕ್ಕೆ ಬಂದರೇನೊ ಹಪಹಾಕಿ ಉಣಿಸುವ ಆಪ್ತನಾದರೆ ಏನೊ (ವಿದಾಕೃ. ೧೦೭-೩).

[?. / ಮರಾ. ಹಪಾಪ್ = ದುರಾಸೆ, ವೃಥೆ]

ಹಪತಾಪ (ನಾ). ಸಂಕಟದಿಂದ ಕೂಡಿದ ತಾಪ; ಬಹಳವಾದ ಸಂಕಟ: ಪಾಪವೆಂಬ ಗರಳದಲ್ಲಿ ಹಪತಾಪ ಪಡುತ್ತೇನೆ ಶ್ರೀಪತಿಯೆ ನಿನ್ನ ನಾಮ ಲೇಪಿಸೆನ್ನ ನಾಲಿಗೆಗೆ (ವಿದಾಕೃ. ೧೦೬-೬). [ಹಪ್ಪ (ಗ ← ಮರಾ. ಹಪಾಪ್) + ತಾಪ್ಪ]

ಹಪಹಪ (ನಾ). ತೊಂದರೆ; ತ್ರಾಸ: ಎಲೆಗೆರಡಾದರೂ ಚೆಲ್ಲದಿದ್ದರೆ ಯಾರಿಗೂ ತೃಪ್ತಿ ಇಲ್ಲ. ಅದೇನೋ ಹಪಹಪ ಎಲ್ಲರ ಮನಸ್ಸಿಗೂ (ದಾಕೂಟ. ೧೦೪).

[← ಮರಾ. ಹಪಾಪ್]

ಹಪಹಪಿಸು (ಕ್ರಿ). ಬವಣೆಪಡು; ಬೇಗುದಿಗೊಳ್ಳು: ಮನೆಯಲ್ಲಿಯ ಕಾಳು-ಕಡಿಗಳೆಲ್ಲ 'ತಳ ಝಾಡಿಸಿ' ಪ್ರತಿಯೊಂದು ಒಕ್ಕಲುಕುಟುಂಬವೂ ಹಪಹಪಿಸಿತು (ಬರಹಾ. ೫೮); ಒಮ್ಮೆಲೆ ಕೇಳಬಂದಿತು ಬನುವನಿಗೆ ಅರ್ಧ ಕುಡಿದು ಹಪಹಪಿಸುತ್ತಿರುವ ತನ್ನಣ್ಣನ ದನಿ! (ಬನಸಿ. ೨೫). [ಹಪಹಪ + - ಇಸ್ತು$_3$]

ಹಪಾಪಿ (ನಾ). (ಉಕ) ೧. ದುರಾಸೆ; ಲೋಭ: ಹಪಾಪಿಯಿಂದ ಎಲ್ಲ ದಿನಗಳನ್ನು ಮೊದಲಿಗೇ ವೆಚ್ಚಮಾಡಿ ಆಮೇಲೆ ಚಡಪಡಿಸುವ ಸ್ಥಿತಿ ಇವನಿಗಿಲ್ಲ (ಗಾಳಿಪ. ೫೮). ೨. ದುರಾಸೆಯುಳ್ಳ ವ್ಯಕ್ತಿ; ಲೋಭಿ: ಅವುಗಳಿಗೆ ಭೋಗಗಳನ್ನು ಸೇವಿಸಲಿಕ್ಕೆ ಅನುವನ್ನೇ ಮಾಡಿಕೊಡದಿದ್ದರೆ ಅವು ಹಪಾಪಿಯಾಗಿ ಅನುಕೂಲಸಂಧಿ ದೊರೆತೊಡನೆ ಅನಿಯಂತ್ರಿತವಾಗುವುವು (ಭಾರಸಂ. ೧೬೦): ಮೊದಲಿನಿಂದಲೂ ಹೊಂಚುಹಾಕಿ ಕುಳಿತ ಹಪಾಪಿಯಂತೆ! (ಮೂರುದಾ. ೨೧೯). [← ಮರಾ. ಹಪಾಪ್]

ಹಪಾಪಿತನ (ನಾ). ದುರಾಸೆ; ಲೋಭ: ಎರಡಕ್ಕೆ ಬದಲು ಹತ್ತು ಕಣ್ಣುಗಳಿದ್ದರೆ ಹೇಗೊ ಹಾಗೆ ಹಪಾಪಿತನದಿಂದ ಕೂರಾಗಿ ನೋಡಿದರು (ಕಾಗೆಕ. ೨೩); ಎಷ್ಟು ತಿಂದರೂ ಸಾಕಿಲ್ಲ. ದರಿದ್ರತನ ತಪ್ಪುವದಿಲ್ಲ. ಹಪಾಪಿತನ ಹೋಗುವದಿಲ್ಲ (ಸ್ಮೃತಿಚಿ. ೩೮೯).

[ಹಪಾಪಿ + - ತನ]

ಹಪಾಪಿಸು (ಕ್ರಿ). ಅತಿಯಾಗಿ ಬಯಸು; ತವಕಪಡು: ಮತ್ಸರಬುದ್ಧಿಯಿಂದ ದೂಷಿತವಾದ ಗಂಡನ ಪ್ರೇಮಕ್ಕಾಗಿ ಅವಳು ಹಪಾಪಿಸಿರಲಿಲ್ಲ (ಸ್ಮಶಾವೈ. ೬೭); ಜನರೆಲ್ಲ ಅಧಿಕಾರ ಗೌರವಕ್ಕೆ ಹಪಾಪಿಸಿದ್ದಾರೆ (ರಂಗರೋ. ೧೫೧); ಮನುಷ್ಯರೆಂಬುವ ಮಾನವಪ್ರಾಣಿಗಳು . . . ಅನ್ನಕ್ಕಾಗಿ ಹಪಾಪಿಸಿ ಅನ್ನದ ದಾರಿ ನೋಡುತ್ತ ಸಾಲುಸಾಲಾಗಿ ಕುಳಿತಿದ್ದರು (ಮಣ್ಣಿಮ. ೧೨೬). [ಹಪಾಪಿ + - ಇಸ್ತು$_3$]

ಹಪಾಪಿಹದ್ದು (ನಾ). ದುರಾಸೆಯ ಹದ್ದು : ಮೊದಲ ಸಲ ಅನ್ನ ದೃಷ್ಟಿಗೆ ಬಿದ್ದೊಡನೆ ಹಪಾಪಿಹದ್ದಿನಂತೆ ಹಾರಿ ಅದನ್ನು ಹೊಡೆಯುತ್ತಿರಲಿಲ್ಲ (ಅನಾದಿ. ೩೫).

[ಹಪಾಪಿ + ಹದ್ದು$_1$ (< ಪರ್ದು)]

ಹಪ್ತೆ, ಹಫ್ತೆ (ನಾ). ೧. ಏಳುದಿನಗಳ ಅವಧಿ; ಒಂದು ವಾರ: ಬಡಾಫಕೀರರು . . . ಇಲ್ಲಿಂದ ಹೋಗಿ ಎರಡು ಹಪ್ತೆಗಳಾದವು (ದೌಲತ್. ೧೪); ಈ ಒಂದು ಹಪ್ತೆ ಒಂದು ವರ್ಷದಲ್ಲಿ ತರಲಾಗದಷ್ಟು ಮಾರ್ಪಾಡನ್ನು ಅವಳಲ್ಲಿ ತಂದಿತ್ತು (ಹುಲಿಹಾ. ೮೮). ೨. ಕಂತು ಕಟ್ಟುವ ಕಾಲಾವಧಿ ಮತ್ತು ಕಂತಿನ ಹಣ: (ಕಿ). ೩. ಕಂದಾಯ; ತೆರಿಗೆ: ಸಭೆ, ಮೆರವಣಿಗೆ ಮಾಡಿರಿ, ಬೇಡವಾದರೆ ಸರಕಾರದ ಕಾಯದೆಗಳನ್ನು ಪಾಲಿಸಬೇಡಿರಿ, ಹಪ್ತೆ ಕೊಡಬೇಡಿರಿ (ಬಂಗಾರ. ೧೭೭); ನಿನ್ನ ಹೊಲದ ಹಪ್ತೆ ಏನರ ಈ ಸರೆ ಹೆಚ್ಚು ಆಗೇತೇನು? (ಗಂಮಾಯಿ. ೧೮೮). **ಹಫ್ತೆ**: (ಅನಂನಾ); (ಕಿಸಂಗ್ಲಾ. ೫೯).

[← ಪಾರ ಹಿಂ. ಹಫ್ತಾ; ಮರಾ. ಹಪ್ತಾ, ಹಫ್ತಾ ./ ಸಂ. ಸಪ್ತಾಹ]

ಹಪ್ತೆಕೊಡು (ಕ್ರಿ). ಕಂದಾಯ ಸಲ್ಲಿಸು; ತೆರಿಗೆ ಕೊಡು: ನಾವು ಹಪ್ತೆಕೊಟ್ಟು-ಕೊಟ್ಟು ಸತ್ತೆವು. ಆದರಿನ್ನೂ ಇವರ ಹೊಟ್ಟೆ ತುಂಬಿಲ್ಲ (ಜಮೀನ್ಯಾ. ೬೪).

[ಹಪ್ತೆ + ಕೊಡು$_1$]

ಹಪ್ಪರಿಕೆ (ನಾ). (?): ಸರಕಿನ ಕೋಣೆ ಕಟ್ಟಳೆಮರಂ ಕುಡುಗೋಲ್ತೆರೆಸೀರೆ ದಬ್ಬಳಂ ಹುರಿ ಗಡಹಾರೆ ನೇಣ್ಕೊಡಲಿ ಕತ್ತಿಗೆ ಸಗ್ಗಳೆ ಗೂಂಟವೆತ್ತು ಹಪ್ಪರಿಕೆಯ ಭಂಡಿ ತೊತ್ತು ಬೆಸವಾಳ್ ಸವಗಂ ತೊದೆ ಮೊಚ್ಚೆಯಂಗಳೆಂಬುರುತರಸಾಧನಂಬೆರಸು ದಂಡಿನವರ್ ಪೊಱಮಟ್ಟರರ್ಥಿಯಿಂ (ಶ್ರೀಪುವಿ. ೨೪-೨೮೫). [?]

ಹಪ್ಪಳ 'ಪಪ್ಪಡ' ನೋ.

ಹಪ್ಪಳಕಾರ 'ಪಪ್ಪಡಕಾರ' ನೋ.

ಹಪ್ಪಳಖಾರ 'ಪಪ್ಪಡಕಾರ' ನೋ.

ಹಪ್ಪಳಿಕೆ, ಹಪ್ಪಳಿಗೆ (ನಾ). ೧. (ಹಪ್ಪಳದಂತೆ) ಚಪ್ಪಟ್ಟೆಯಾಗಿರುವುದು: ನಿಯತದ್ವಿತ್ವಕ್ಕೆ - ಪಪ್ಪುಕಂ . . . ಹಪ್ಪಳಿಕೆ, ಹಿಪ್ಪಲಿ, ಸಿಪ್ಪು (ಶಮದ. ೩೬ ಪ್ರಯೋ). 'ಹಪ್ಪಳಿಕೆಮೂಗು' ಪರಾ. **ಹಪ್ಪಳಿಗೆ**: ೧. ಸ್ಫಟಿಕೋಪಲಂಗಳಿಂ ಧಾರಿಣಿ ಕೂಡೆ ಹಪ್ಪಳಿಗೆಯೊತ್ತಿದುದೋ ಸಲಿಲಾಶಯಂ ಪಯಃಪೂರಮನಾಂತುದೋ ದಿಟಕೆ ತಾನೆನಿಸಿತ್ತಮೃತಾಂಶುರಶ್ಮಿಯಿಂ (ಚಂದ್ರಪು. ೮-೩೯). ೨. ಚಪ್ಪಟೆಯಾದ ಕಲ್ಲು; ಹಾಸುಗಲ್ಲು : ಆ ತೀರ್ತ್ಥದ್ವಾರಪಕ್ಷಶೋಭಾರ್ತ್ತಂ ಮಾಡಿಸಿದ ನೀರಂಗದ ಹಪ್ಪಳಿಗೆ ಯುಮನೀ ಮಹಾಸೋಪಾನಪಜ್ತಿಯುಮಂ ರಚಿಸಿದಂ ಶ್ರೀಗೊಮ್ಮಟದೇವರ ಸುತ್ತಲು ರಂಗಮ ಹಪ್ಪಳಿಗೆಯಂ ಬಿಗಿಯಿಸಿದಂ (ಎಕ. II, ೨೬೭-೭; 1160).

[ಹಪ್ಪಳ (< ಪಪ್ಪಡ) + - ಇಕೆ]

ಹಪ್ಪಳಿಕೆಮೂಗು (ನಾ). ಹಪ್ಪಳದಂತೆ ಚಪ್ಪಟೆಯಾದ ಮೂಗು; ತಟ್ಟೆಮೂಗು: ಪಱಿದಲೆ ಕುಟಿನೊಸಲಟಿಗಣ್ ನೊರೆವಾಯ್ ಹಪ್ಪಳಿಕೆಮೂಗು (ಯಶೋಚ. ೨-೩೮).

[ಹಪ್ಪಳಿಕೆ + ಮೂಗು]

ಹಪ್ಪಳಿಗೆ 'ಹಪ್ಪಳಿಕೆ' ನೋ.

ಹಪ್ಪಳೆ (ನಾ). ಚಪ್ಪಟೆಯಾಗಿರುವ ಕಲ್ಲು; ಚಪ್ಪಡಿ: ಇಂದುಕಾಂತದ ಶಿಲೆಯ ಹಪ್ಪಳೆ ಬಂಧಿಸಿದ ಸೋಪಾನ ಸುತ್ತಲು ಹೊಂದಿ ಹೊಱಗಾಣಿಸದ ಸಪ್ತಾವರಣಮಯಭಿತ್ತಿ (ಪ್ರಭುಲೀ. ೨೧-೧೦). [< ಹಪ್ಪಳ]

Δ ಹಪ್ಪಟ 'ಪಪ್ಪಡ' ನೋ.

ಹಪ್ಪು (ನಾ). ಮಾಂಸದ ತುಂಡು; ಬಾಡಿನ ಚೂರು: ಇರುಳಾಗಲಿಬ್ಬರುಂ ಹುಲಿಯನೇಳಿಸಿ ಪೋಪೆವೆರೆ ಬೇಕೆ? ಹಸಿದಿಹೆಯೆ ಕಾಡ ಮದುಮಗನೆ ಇರುವುದಿಲ್ಲಿಯೆ ಹಪ್ಪು ಮೆರವಣಿಗೆ ನಾಳೆ ನೀನರಸನಾಗುವೆಯೆಂದು ಪೋದರವರೊಡನೆ (ಕಾಲೂರ. ೮೮-೧೭೦); ಮಾತು ಕೇಳದ ಮಕ್ಕಳು ನಾಯಿ ಬಾಯಿಗೆ ಹಪ್ಪು (ಗಾದೆ). [?]

ಹಪ್ಪುಕಳ (ನಾ). "ಹಪ್ಪು ತಿನ್ನುವ ಹದ್ದು; ಕಬ್ಬಾರೆಹದ್ದು; ರಣಹದ್ದು" (ಸಂಕೋ. ೫೪೨): ಈಗ ಈ ಹುಡುಗ ಸಿಕ್ಕಿದ್ದಾನೆ; ಅವನನ್ನು ಲಗಾಡಿ ತೆಗೆಯುತ್ತಾರೆ; ಚೂರು ಚೂರು ಇರಿಸುವುದಿಲ್ಲ . . . ಶುದ್ಧ ಹಪ್ಪುಕಳಗಳು (ಪಪ್ಪ. ೫೮). [ಹಪ್ಪು + ಕಳ್ಳ]

ಹಪ್ಪುಸವಗ (ನಾ). ಒಂದು ಬಗೆಯ ಮರ: ಹಪ್ಪುಸವಗ - ಶೋಭೆಯುಳ್ಳ ದೊಡ್ಡ ಮರ. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ. ತೋಟೆಯ ನಾರಿನಿಂದ ಹಗ್ಗಗಳಾಗುತ್ತವೆ. ಸಮುದ್ರ ತೀರದಲ್ಲಿ ಈ ನಾರಿನ ವಸ್ತ್ರಗಳನ್ನು ಮಾಡುವರು (ಕಭಾಗ. ೪೯).

[ಹಪ್ಪು ₂ + ಸವಗ]

ಹಪ್ಪೆ 'ಹಪ್ತೆ' ನೋ.

ಹಬಶಿ, ಹಬಸಿ, ಹಬ್ಬಸಿ, ಹಬ್ಬಿಸಿ, ಹಬ್ಬುಸೆ (ನಾ). ೧. ಒಂದು ದೇಶದ ಹೆಸರು; ಅಬಿಸೀನಿಯಾ: ನಮಗ ಕಾಣಿಸಿದವನಿಗೆ ಪ್ರಾಣಾಚ್ಛೆಯಾಗಲೆಂದು ಹಬಶಿಯವರಿಗೆ ಹುಕ್ಕುಂ ಕಳುಹಿಸಿದನು (ಕಥಾಮಂ. IV, ೧೦೦). **ಹಬಸಿ**: ೧. ಆಫ್ರಿಕಾಖಂಡದೊಳಗೆ ಹಬಸೀದೇಶದಲ್ಲಿಯೂ (ಮುಂಬಯಿ. ೪-೪೬). ೨. **ಅಬಿಸೀನಿಯಾ ದೇಶದವನು**: ಮೋರೆಯಂತೂ ಹಬಸಿಯ ಮೋರೆಯಂತೆ ಎಷ್ಟು ಚಂದ ಕಾಣುತ್ತದೆ! (ಮೋಹನೀ. ೨೮). **ಹಬ್ಬಸಿ**: ೧. 'ಹಬ್ಬಸಿಗ' ಪರಾ. **ಹಬ್ಬಿಸಿ**: ೨. ಹಬ್ಬತು ಕೆಂಧೂಳು ಮುಸುಕೆ ಬಹ ಹಬ್ಬಿಸಿಗಳು ಫರಂಗಿಗಳು (ಸೌಂದಸಾ. ೫-೧೧). **ಹಬ್ಬುಸೆ**: ೧. ಬರ್ಬರದ ಸ್ಕೀನಿಕರ ರೂಪಿಲಿ ಎಭ್ರಮೆಯ ನೋಡುವರೆ ಸಹಸದಿ ನಿರ್ಬರವು ಠಕ್ಕುಗಳನರಿಯರು ನಿರ್ಮಳಾಂಗಿಯರು ಹಬ್ಬುಸೆಯ ಸಿಂಗಣವು ಬೋಟಕೆ (ಶಕ್ಕೂಣ. ೯-೭೨).

[← ಪಾರ. ಹಿಂ. ಹಬಶೀ; ಮರಾ. ಹಬಶೀ, ಹಪಶೀ]

ಹಬಸಿ 'ಹಬಶಿ' ನೋ.

ಹಬಸೇಗಿಡ (ನಾ). ಒಂದು ಬಗೆಯ ಗಿಡ: "ವಂಜುಲಃ, ನಿಚುಲಃ - ಈ ೨ ಹಬಸೇಗಿಡದ ಪೆಸರ್" (ಹಲಾಯು. ೩-೪೨). [ಹಬಸ್ಯೆ + ಗಿಡ (<ಗಿಡು)]

ಹಬು 'ಪಬು' ನೋ.

ಹಬೆ, ಹಬ್ಬೆ (ನಾ). ೧. ಕಾಂತಿ; ಪ್ರಭೆ: ಪರಿವೃತರೇಫಲೋಪಕ್ಕೆ . . . ಪ್ರಭಾ - ಹಬೆ; ಪ್ರಭು-ಹಬು (ತಮಿದ. ೨೭೧ ಪ್ರಯೋ); ಮಿಸುನಿರತುನದ ಹಬೆ[ಜಾಕಾಂ. ಚಿವಿ]ಗಳಲಿ ರಂಜಿಸುವ ಮಂಟಪದೊಳಗೆ ರಾಜಪ್ರಸರದೊಡನವನೀಶನಿದ್ದನು ಸಿಂಹಪೀಠದಲಿ (ಸಳಚ. ೪-೨೫); ಪುರದ ಪುರಂಧ್ರಿಯರ ಪೊಂಬಚ್ಚದೊಚ್ಚತಂ ತಲತಲಿಪ ಹಬೆಯು ಪರ್ಬುಗೆಯಿಂ . . . ರಾಜಿಪ ನಗರಮಂ ಕಣ್ಣಾಣೆಯೆ ಕಂಡು (ರಾಮಾಶ್ವ. ೧೦೪-೨). ೨. (ಬಿಸಿಯಿಂದ ಬರುವ) **ಆವಿ; ಉಗಿ**: ಅಮ್ಲ, ಸಾರ, ಅನಿಲಗಳನ್ನು ಬಿಟ್ಟರೆ ಉಗಿ ಇಲ್ಲವೆ ಹಬೆಯು ಅಧಿಕವಾಗಿ ವಾಯುಗೋಲದಲ್ಲಿದೆ (ಬಾಲಪ್ರ. II, ೧೦೨); ಆಹಾರ ಬೇಯುವ ಪಾತ್ರೆಯನ್ನು ಮುಚ್ಚರಬೇಕು. ಹೀಗೆ ಮುಚ್ಚದಿದ್ದರೆ ಕೆಲವು ವಿಟಮಿನ್ನುಗಳು ಹಬೆಯೊಡನೆ ಹೊರಹೊರಟು ನಷ್ಟವಾಗುವುವು (ಗೃಹವಿ. ೫೧); ಸೂರ್ಯನ ಮೇಲ್ಮೈ ಮಿಂಚುವ ಅನಿಲ ಹಬೆಗಳಿಂದ ರಚಿತವಾಗಿದೆ (ಆಕಾಶ. ೯); ಹಬೆಗೆ ತಾಳದೆ ಉರಿಯೊಳಗೆ ಬಿದ್ದ (ಗಾದೆ). **ಹಬ್ಬೆ**₂: ೧. ಫಣಿಗಣ್ಣಿನ ನಿಡುಹಬ್ಬೆಯೋ ಕುಂಡಲ ಫಣಿಫಣಮಣಿಗಣಗ್ಯಣೆಯೊ ಹಸ್ತದಿ ಮಣಿಯದ ಕಾಲಾನಲಕೀಲೆಯ ರೋಚಿಶ್ಚಯವೋ (ಭಕ್ತಿಸ. II, ೪-೩). [< ಸಂ. ಪ್ರಭಾ./ ತುಳು. ಹಬೆ]

ಹಬೆಗಣ್ಣು (ನಾ). ಉಷ್ಣದಿಂದ ಕೆಂಪಾದ ಕಣ್ಣು; ಆವಿಗಣ್ಣು; ಕಾವುಕಣ್ಣು: ನೀರುಗಣ್ಣು, ಜಾರುಗಣ್ಣು, ಕಿಸುಜುಗಣ್ಣು, ಹಬೆಗಣ್ಣು (ಶುಸ. ೩೨೮).

[ಹಬೆ + ಕಣ್ಣು (< ಕಣ್)]

ಹಬ್ಬ 'ಪರ್ಬ' ನೋ.

ಹಬ್ಬಗಾಣಿಕೆ (ನಾ). ಪುಣ್ಯಕಾಲದಲ್ಲಿ ಕೊಡುವ ಕಾಣಿಕೆ: ತೋಟಕೆ ತೆಜುವ ಸಿದ್ಧಾಯದ ಯಿಪ್ಪತ್ತುಹಣ ಹಬ್ಬಗಾಣಿಕೆ ಹೊಂನಂಗಿಯಲಿ (ಎಕ. VIII, ತೀರ್ಥಹ. ೨-೨೯; 1423); ದೀವಳಿಗೆ ಯುಗಾದಿ ಹಬ್ಬಗಾಣಿಕೆ ಗ ೨ (ಎಕ. VIII, ತೀರ್ಥಹ. ೯೫-೭೪; 1709).

[ಹಬ್ಬ (< ಪರ್ಬ) + ಕಾಣಿಕೆ (< ಕಾಣ್ಕೆ)]

ಹಬ್ಬಣ್ಣ (ನಾ). ಒಬ್ಬಾತನ ಹೆಸರು: ಸೇನಬೇವ ಹಬ್ಬಣ್ಣಂಗೆ ದಯೆಗೆಯ್ದುಂಬಲಿ ಯಾಗಿ ಕೊಟ್ಟ ಮತ್ತರ್ಪ್ಪದಿನಾಲ್ಕು (ಇಆ. XVIII, ೪೦-೩೮; 999). [? + ಅಣ್ಣ₂]

ಹಬ್ಬಸಿ 'ಹಬಶಿ' ನೋ.

ಹಬ್ಬಸಿಗ, ಹಬ್ಬಿಸಿಗ (ನಾ). **ಅಬಿಸೀನಿಯಾದೇಶದವನು**: ತಮ್ಮ ನಚ್ಚಿನ ಹಬ್ಬಸಿಗರ ಸಾಸಿರದಿನ್ನೂರ ಕಟ್ಟಾಳ್ಗಳ ರಾವುತದಳವನ್ನು . . . ಸಜ್ಜಾಗಿರಬೇಕೆಂದೆಚ್ಚರಿಸಿ (ಮಂತ್ರಶ. ೯೮); ಈ ಹಬ್ಬಸಿಗರ ಪಡೆಯನ್ನೊಡಗೊಂಡು, ಶ್ರೀಮಂತರು . . . ಹೊರಡಲನುವಾಗಿರುವರು (ಮಂತ್ರಶ. ೯೯). **ಹಬ್ಬಿಸಿಗ**: ಮದವಬ್ಬಿದತ್ತು ಮೈಮೆಯಬ್ಬಿದತ್ತಿಳೆಯೊಳ್ ಬಳೆದತ್ತು ದುರ್ಯಶಂ ಪದೆದು ಪಠಾಣ ಹಬ್ಬಿಸಿಗ ರೋಹಿಲ ಸೈದಬಲಂ ಮಲಂಗಿದತ್ತೊದವಿ ಪಲಾಯನಂಬಡೆವುದು (ಚಿಪ. ೨-೧೧೬).

[ಹಬ್ಬಸಿ (< ಹಬಶಿ) + - ಗ₃]

ಹಬ್ಬಹರಿದಿನ 'ಪರ್ಬ' ಪರಾ.

ಹಬ್ಬಹಾಡಿ 'ಪರ್ಬ' ಪರಾ.

ಹಬ್ಬಹುಣ್ಣಿಮೆ 'ಪರ್ಬ' ಪರಾ.

ಹಬ್ಬ (ನಾ). (?): ಹಬ್ಬಕ್ಕೆ ಆಕ್ರೂರ ಕರದೊಯ್ದನದಕೋ ಶಬ್ದದ ಬಿಗಿವಿಲಿ ಹೆಣ್ಣಸ ಗೋಸುಗ ತಬ್ಬಿಬ್ಬಿ ಭೀಷ್ಮನುಗೊಳಿಸಿದನದಕೊ ಹಬ್ಬೇಗಿಕ್ಕಿ ತಮ್ಮ ಮನಸಿಗೆ ಬಂದಂತೆಯಬ್ಬಟ್ಟಿಗೊಲ್ಲರು ಆಡಿದರದಕೊ (ಮೋಹದೀ. ೨೩-೩); ಒಬ್ಬರಿಬ್ಬರೇನೊ ಭುಂಜಿಸುವರು ನಿತ್ಯಾ ಹಬ್ಬಗಿಕ್ಕದೆ ನೋಡು ಸಾಲುಸಾಲಾಗಿ ಇದ್ದು ಉಬ್ಬಿ ಮತ್ಸರದಿಂದ ಎಲ್ಲಾದರು ನಾನೊಬ್ಬನೆ ಕರ್ಮದಲ್ಲಿ ಬಿಡದೆ ಹಾಕಲಿಬೇಕು (ವಿಸಾಪು. ೪೭-೫); ಹಬ್ಬಿದ ಸುಖಮಾನವಬ್ಬಗೆ ಸತಿಪತಿ ಇಬ್ಬರಾನಂದದಲ್ಲಿ ಹೆಬ್ಬಟ್ಟಿನಲ್ಲಿ, ಸವಿದು ಸಭ್ಯವಾಗಿಪ್ಪದು ಹಬ್ಬವೆ ಬಲುಹಬ್ಬ ನಿರ್ಭಯವಾದ ರತ್ನಗರ್ಭದಲ್ಲಿ ಕುಟಿರ ಗುಬ್ಬಿಗೂಡಿನಮ್ಮು ಗರ್ಭವಾಸವೆ ರಚಿಸಿ ಹಬ್ಬಿಗಿಕ್ಕದೆ ಏನು ನಿರ್ಬಂಧನವಿಲ್ಲದೆ ಲಭ್ಯವಾಗಿಪ್ಪ ಗರ್ಭದ ಸುಖಿಗಳವರು (ವಿಸಾಪು. ೫೩-೧). [?]

ಹಬ್ಬಿಗೆ 'ಪರ್ವುಗೆ' ನೋ.

ಹಬ್ಬಿಸಿ 'ಹಬಶಿ' ನೋ.

ಹಬ್ಬಿಸಿಗ 'ಹಬ್ಬಸಿಗ' ನೋ.

ಹಬ್ಬುಸು 'ಪರ್ವಿಸು' ನೋ.

ಹಬ್ಬು₁ 'ಪರಪ್ಪು₁' ನೋ.

ಹಬ್ಬು₂ 'ಪರಪ್ಪು₂' ನೋ.

ಹಬ್ಬುಕಱುಕೆ, ಹಬ್ಬುಗರಿಕೆ (ನಾ). ಹಬ್ಬಿ ಬೆಳೆಯುವ ಒಂದು ಬಗೆಯ ಕರುಕೆ: "ಅವಾರ್ಣ್ಣ-ಮಲ್ಲಿ, ಹಬ್ಬುಗಱುಕೆ" (ಓಷಧಿ. ೯). **ಹಬ್ಬುಗರಿಕೆ**: ಹೊಲದ ತುಂಬ ಹಬ್ಬುಗರಿಕೆ ಹರಡಿದೆ (ರೂಢಿ). [ಹಬ್ಬು₁ (< ಪರಪ್ಪು₁) + ಕಱುಕೆ₁ (< ಕಱುಂಕೆ)]

ಹಬ್ಬುಗಣೆ (ನಾ). ಹರಡುವ ಬಾಣ: ಗಬ್ಬರಿಸಿ ಗಬಲಿಕ್ಕಿ ಮುಸುಕಿದಂ ಕೂರ್ಗಣೆಯ ಹಬ್ಬುಗಣೆಯಿದಿರುಗಣೆ ಬಳಿಸಲಿಸಿ ರಿಪುಬಲವನೆಬ್ಬಿಸಿದ ಯಮನಗರಿಗಂ (ತುರಂಗ. ೫೧-೨೭). [ಹಬ್ಬು₁ (< ಪರಪ್ಪು₁) + ಕಣೆ₁]

ಹಬ್ಬುಗರಿಕೆ 'ಹಬ್ಬುಕಱುಕೆ' ನೋ.

ಹಬ್ಬುಗಿಡಿ (ನಾ). ಹರಡುವ ಕಿಡಿ; ಹಬ್ಬುವ ಕಿಡಿ: ಅಬ್ಬರಿಸಿ ಬಲುಮುಷ್ಟಿಗಳ ನಭಕೆಬ್ಬಿಸುತ ಕಯ್ದುಡುಕಿದರು ಸುರರುಬ್ಬಿಱಿಯೆ ಸುಳಿಸಿದರು ಮುಷ್ಟಿಯ ಸೂಳುಪಾಳ್ಗಳಲಿ ಹಬ್ಬುಗಿಡಿಗಳ ಹೊದಱುದಿವಿಗಳ ಗುಬ್ಬರದ ಸಬುದದಲಿ ತಾಯ್‌ಮಳಲುಬ್ಬುತಿರ್ದುದು ಶರಧಿಯಲಿ ತಾ ಸೊರಹಲೇನೆಂದ (ತೊರಕಾ. ೪-೩-೯). [ಹಬ್ಬು₁ (< ಪರಪ್ಪು₁) + ಕಿಡಿ]

ಹಬ್ಬುಗುಳ್ಳ (ನಾ). ಹಬ್ಬಿ ಬೆಳೆಯುವ ಒಂದು ಬಗೆಯ ಗುಳ್ಳ,— ಬದನೆ: ಕೆಂಪುಗುಳ್ಳ, ಹಬ್ಬುಗುಳ್ಳ (ಮೃಡಿಗಿ. ೭೦-೧೪೪೧). [ಹಬ್ಬು₁ (< ಪರಪ್ಪು₁) + ಗುಳ್ಳ]

ಹಬ್ಬುಗೆ 'ಪರ್ವುಗೆ' ನೋ.

ಹಬ್ಬುಗೆವಲೆ (ನಾ). ಒಂದು ಬಗೆಯ ಬಲೆ; ಹರಡಿರುವ ಬಲೆ: ಹೆಬ್ಬಲೆ ತೆರಸೀರೆ ಕಾಲ್ಕಣ್ಣ ಬೆಳ್ಳಾರ ಹಬ್ಬುಗೆವಲೆಗಳ ಹೊಱೆಯ ಒಬ್ಬರೊಬ್ಬರ ಬೈವುತ

ಹೊತ್ತು ನಡೆದರಂದಬ್ಬರ ಮಸಗೆ ಶಬರರು (ಕರಾಸಾಂ. ೨೭-೪೩).

[ಹಬ್ಬುಗೆ (< ಪರ್ವುಗ) + ಬಲೆ1]

ಹಬ್ಬುಗೆವಿಡಿ (ಕ್ರಿ). ಮೆಟ್ಟಿಲನ್ನು ಆಶ್ರಯಿಸು; ಸೋಪಾನಮಾರ್ಗವನ್ನು ಅನುಸರಿಸು: ಸಿದ್ಧಲೋಕಕೆ ಪೋಪರಿದು ತಾನೆ ಸೂಚನೆ ಸಿದ್ಧಶಿಲೆಯೊಲಿದ ಶೈಲ ಸಿದ್ಧಂ ನಮೋಯೆಂದು ಹಬ್ಬುಗೆವಿಡಿದದಱುದ್ದವನೇಱಿದರವರು (ಭರಚ. ೬೬-೭).

[ಹಬ್ಬುಗೆ (< ಪರ್ವುಗೆ) + ಪಿಡಿ1]

ಹಬ್ಬುಗೆವೆಳಗು (ನಾ). ಹರಡುತ್ತಿರುವ ಕಾಂತಿ; ಹಬ್ಬುತ್ತಿರುವ ಪ್ರಭೆ: ಹೊಳಹೊಳೆವ ಕೈದುಗಳ ಹಬ್ಬುಗೆವೆಳಗು ಗಬ್ಬರಿಸಿದುದು ದಿಗುತಟವ (ಕುವಾಭೀ. ೧-೪೭). [ಹಬ್ಬುಗೆ (< ಪರ್ವುಗೆ) + ಬೆಳಗು2]

ಹಬ್ಬುಗೊಳ್ಳು, 'ಪರ್ವುಗೊಳ್' ನೋ.

ಹಬ್ಬುಬದನೆ (ನಾ). = ಹಬ್ಬುಗುಳ್ಳ: "ಲತಾಬೃಹತೀ - ಬಳ್ಳಿಸುಂಡೆ, ಹಬ್ಬುಬದ (ಗೆ)ನೆ" (ಓಷಧಿ. ೧೪೨). [ಹಬ್ಬು1 (< ಪರಪು1) + ಬದನೆ]

ಹಬ್ಬುವಣಿಕೆ (ನಾ). ಒಂದು ಬಗೆಯ ಆದಾಯ (?): ನಾಗಬೋವನ ಮಕ್ಕಿಬೀಜ ಖ ೬೯ ಹೊಂಗು ಗ ೧ ಆ ಭೂಮಿಯ ಹಬ್ಬುವಣಿಕೆಯಿಂದ ಗ ೮೧ (ಎಕ. VI. ಕೊಪ್ಪ. ೪೭ ೨೪: 1530). [?]

ಹಬ್ಬುಸುಂಡೆ, ಹಬ್ಬುಸೊಂಡೆ (ನಾ). ಒಂದು ಬಗೆಯ ಬಳ್ಳಿ ಮತ್ತು (ತರಕಾರಿಯಾಗಿ ಬಳಸುವ)ಅದರ ಕಾಯಿ: (ಮೃಡಿಗಿ. ೭೧-೧೪೪೬). **ಹಬ್ಬುಸೊಂಡೆ:** ಗಜಬೇರು, ಹಬ್ಬುಸೊಂಡೆ, ಚಿತ್ರಮೂಲ, ಗರುಗನಸೊಪ್ಪು, ಈಶ್ವರೀಬೇರು, ಶುಂಠಿ, ಹಿಪ್ಪಲಿ ಇವುಗಳ ಕಷಾಯ ಕಾಯಿಸಿ, ಹಿಪ್ಪಲಿ ಪ್ರತಿಪಾಕವಿಕ್ಕಿ ಕೊಡಲು ವಾತಪಿತ್ತಜ್ವರ ಶ್ಲೇಷಮಜ್ವರ, ಕ್ಷಯ, ಕಾಸಹೋಗ, ಸರ್ವವಾಯುರೋಗ ಸಹ ಗುಣವಾಗುವುವು (ಸಳ್ವ. ೯೪). [ಹಬ್ಬು1 (< ಪರಪು1)+ ಸುಂಡೆ1]

ಹಬ್ಬುಸೆ 'ಹಬಶಿ' ನೋ.

ಹಬ್ಬುಸೊಂಡೆ 'ಹಬ್ಬುಸುಂಡೆ' ನೋ.

ಹಬ್ಬೆ1 (ನಾ). ೧. ಒಂದು ಬಗೆಯ ಜೊಂಡು; ಬೆತ್ತ: ನಡುಗ ದಿಶಾಧಿಪರ್ ಕಡಲ ಹಬ್ಬೆಯ ವೋಲ್ ತಲೆದೋಱಲಾಱದಿರ್ದೆಡೆಯೊಳೆ ತರ್ಗಿ ನೋಡೆ ಕುಱುಸೈನಿಕಮೊರ್ಮೊದಲೆತ್ತಲುಂ ಸಿಡಿಲ್ ಪೊಡದುದೆನಲ್ಕೆ ಜೇವೊಡೆದು (ಸೇಮಪು. ೧೨-೬೬); ಭೂದೇವಿಯ ಮೇಲ್ಪೆಱಗಿನಂತೆ ಪರಿವ ನದಿಯ ತಡಿಯೊಳು ಪರ್ವಿರ್ದ ಹಬ್ಬೆಯ ಕಿಚ್ಚಿನ ಬಟ್ಟೆವಿಡಿದು ಬರುತಿರ್ಪ ಪದದೊಳ್ (ಪುಣ್ಯಾಸ್ರ. ೪-೨೬ ವ); ಎನಿತು ಮಳೆಗರೆದೊಡಂ ಹಬ್ಬೆ ಹೂವುದೆ ದೇವ? (ಹಬ್ಬರ. ೧೮-೬೨). ೨. ಒಂದು ಬಗೆಯ ಮರ: ಅಂಬಿಲದಿಂದರೆದರಿಸಿನಮಂ ಬೆರಸಿಯೆ ತೊಳೆದು ಪುಣ್ಕೆ ಹ(ಹೆ)ಬ್ಬೆಯ ದಳಮಂ "ಕಿಂ ಬಹುನಾ" ಚೂರ್ಣಿಸಿ ತಳಿಯಂಬುರುಹಂ ಹಿಮದೊಳಗಿದವೋಲ್ ವಿಷಮಬೀಗುಂ (ಖಮರ. ೧೭-೧೧೪): ಹಬ್ಬೆಯದೊಂದು ದಂಡಮಂ ಪಿಡಿದಿದಿರ್ವರ್ಪನಂ ಪದದು ನಿಟ್ಟಿಸಿ (ರಸರ. ಪಂ. ೧, ೧೦೯); ಮುತ್ತಿಗೆ, ಹಬ್ಬೆ, ನೀರುಹಬ್ಬೆ, ನುಗ್ಗೆ, ಶೀನುಗ್ಗೆ ಮೊದಲಾದ ಪುಷ್ಪಫಲಭರಿತವಾದ ವೃಕ್ಷಂಗಳನ್ನು (ಕೃವಾಲ. ೨೨೮). 'ಅಬ್ಬೆ4', 'ಪರಂಬೆ' ಪರಾ.

ಹಬ್ಬೆ2 'ಹಬೆ' ನೋ.

ಹಮ್‌ಚೌಕು 'ಹಮಚೌಕು' ನೋ.

ಹಮಚೌಕು, ಹಮ್‌ಚೌಕು, ಹಮ್ಮಚೌಕು (ನಾ). ಸರಿಸಮಾನವಾದ ಉದ್ದ ಮತ್ತು ಅಗಲಗಳುಳ್ಳ ಚತುರಸ್ರ,—ಚೌಕ; ಚದರ: ತೋಟದ ಸುತ್ತಲೂ ಬೇಲಿಯ ಸಮೀಪಕ್ಕೆ ಇಪ್ಪತ್ತುನಾಲ್ಕು ಮೊಳಕ್ಕೆ ಒಂದರಂತೆ ಹಮಚೌಕುಗಜದ ಪ್ರಮಾಣ ಅಗಲ ಹಾಗೂ ಒಂದುಗಜ ತಗ್ಗಾಗಿರುವ ತಗ್ಗುಗಳನ್ನು ಅಗಳಿಸಿ . . . ಭರೀ ಮಾಡಬೇಕು (ಕೃಪತ್ರ. ೧೩೫). **ಹಮ್‌ಚೌಕು:** ಊರ ಮಧ್ಯದಲ್ಲಿ ಹಮ್‌ಚೌಕು ಒಂದೂ ಒಂದೂವರೇ ಎಕರೆಯ ಭೂಮಿಯನ್ನು . . . ಹಿಡಿದಿದೆ (ದೀಪಹ. II. ೮೭). **ಹಮ್ಮಚೌಕು:** ಹಮ್ಮ ಚೌಕು ಮೂವತ್ತೆರಡುಮಾರು ಭೂಮಿಗೆ ನಾಲ್ಕುತ್ತೆಂಟು ಸೇರು ಬೀಜವನ್ನು ಬಿತ್ತಬೇಕು (ಕೃಪತ್ರ. ೯೨).

[ಹಮ್ಮ (IP ← ಪಾರ. ಹಿಂ. ಹಮ್ = ಸಮಾನ, ಸದೃಶ) + ಚೌಕು1 (< ಚೌಕ2)]

ಹಮರಹ (ಅ). ಜೊತೆಯಲ್ಲಿ; ಸಂಗಡ: ನಾಜರಜಂಗರ ಹಮರಹಾ ಹೋಗಿಯಿದ್ದ ವ್ಯಾಳೇಲಿ (ಪ್ರದರ. ೬೮). [← ಪಾರ. ಹಿಂ. ಹಮ್‌ರಾಹ್]

ಹಮಹಮಿಕೆ (ನಾ). ೧. ನಾನು ಮುಂದು ತಾನು ಮುಂದು ಎಂದು ಯಾವುದಾದರೂ ಕೆಲಸಕ್ಕೆ ಸ್ಪರ್ಧೆಯಿಂದ ನುಗ್ಗುವುದು: ತಾನು ಮಾತ್ರ . . . ಚಿಲ್ ಎಂದು ಚಿಮ್ಮುವ ಹಮಹಮಿಕೆಯಲ್ಲಿದ್ದ ಉತ್ಸಾಹವನ್ನು ಒತ್ತಿ ಅದುಮಿದ್ದ (ದೀಪಹ. I. ೧೦೬). ೨. ಅಹಂಕಾರ; ಸೊಕ್ಕು; ಗರ್ವ: ಹತ್ತು ಹೆಣ್ಣು ತರುವ ಹಮಹಮಿಕೆಯ ಮಾವನವರಿಗೆ ತಮ್ಮ ಕೈಗೊಂಬೆಯಾದ ರಾಜನನ್ನು ಹೇಗೆ ಬೇಕು - ಹಾಗೆ ಕುಣಿಸುವ ಸಾಮರ್ಥ್ಯವಿತ್ತು (ದೀಪಸಾ. ೯೪); ಈ ಒಂದೇ ಕಾಗದದಿಂದ ಶ್ಯಾಮರಾಯನನ್ನು ನುಶಿಯಂತೆ ಒರೆಸಿ ಒಗೆಯಬಲ್ಲೆನೆಂಬ ಹಮಹಮಿಕೆ ಬಂದಿತು (ದೀಪಹ. II. ೬೦೦).

[< ಅಹಮಹಮಿಕೆ]

ಹಮಾ, ಹಮಾಂ (ಗು). ಎಲ್ಲ; ಸಮಸ್ತ; ಸರ್ವ: ಒಂದು ಚೂರು ಗಸಿ ಸಾಕ್ಕೋ, ಹಮಾ ಬೇಡ (ಮಲಮ. ೨೧). **ಹಮಾಂ:** 'ಹಮಾಂಕೋಮು' ಪರಾ.

[← ಪಾರ. ಹಮಹ್; ಆರ. ಆಮ್; ಹಿಂ. ಹಮಾ; ಮರಾ. ಹಮ್]

ಹಮಾಂ 'ಹಮಾ' ನೋ.

ಹಮಾಂಕೋಮು 'ಹಮಾಕೋಮು' ನೋ.

ಹಮಾಂಜಿನಸು (ನಾ). ಎಲ್ಲ ವಿಧವಾದ ವಸ್ತು; ಸಮಸ್ತಪದಾರ್ಥ: (ಕ).

[ಹಮಾಂ (< ಹಮಾ) + ಜಿನಸು]

ಹಮಾಕೋಮು, ಹಮಾಂಕೋಮು (ನಾ). ಎಲ್ಲ ಜಾತಿ; ಸಮಸ್ತವರ್ಗ: ಗಡಿಗಳು ಮುಂತಾದ ಸ್ಥಳದ ಪೇಟೆಗಳಲ್ಲಿ ಬಣಜಿಗರು, ಕೋಮಟಿಗರು, ಪಂಚಾಳದವರು ಮುಂತಾದ ಹಮಾಕೋಮಿನ ಜನರು ತಮ್ಮ ತಮ್ಮ ಜಾತಿನಿಬಂಧನೆಯನ್ನು ಮೀರದಂತೆಯೂ ಕಳ್ಳತನ ನಡೆಯದಂತೆಯೂ . . . ಕಟ್ಟುಮಾಡಿದರು (ಮಹಾವಂ. I. ೧೨೫). **ಹಮಾಂಕೋಮು:** ಆ ಊರಿನ ಉತ್ಸವದಲ್ಲಿ ಹಮಾಂಕೋಮಿನ ಜನರೂ ನೆರೆದಿದ್ದರು (ಜಂಥಿ). [ಹಮಾ + ಕೋಮು]

ಹಮಾಮ್‌ಸ್ನಾನ (ನಾ). ೧. ಬಿಸಿನೀರಿನ ಸ್ನಾನ. ೨. ಆವಿಯಿಂದ ಮಾಡುವ ಸ್ನಾನ; ಹಬೆಯ ಸ್ನಾನ: ಆವಿಸ್ನಾನ (ಹಮಾಮ್)ಮಾಡಲು ನೀರನ್ನು ಕಾಯಿಸುವದಕ್ಕಾಗಿ ನೆಲದ ಕೆಳಗೆ ಒಲೆಗಳಿದ್ದು ಆವಿ ಮೇಲಕ್ಕೆ ಬರುವಂತೆ ನೆಲದಲ್ಲಿ ಮತ್ತು ಕೋಣೆಯ ಗೋಡೆಯಲ್ಲಿ ರಂಧ್ರಗಳವೆ . . . ಇಂತಹ ಹಮಾಮ್‌ಸ್ನಾನಪದ್ಧತಿ ಮತ್ತಾವ ಸಂಸ್ಕೃತಿಯಲ್ಲು ಕಂಡುಬರುವುದಿಲ್ಲ (ಬಾರದ. ೧೨).

[ಹಮಾಮ್ (IP ← ಅರ. ಹಮಾಮ್; ಹಿಂ. ಹಮಾಮ್, ಹಮ್ಮಾಮ್; ಮರಾ. ಹಮಾಮ್ = (ಬಿಸಿನೀರಿನ) ಸ್ನಾನ. ಸ್ನಾನಗೃಹ) + ಸ್ನಾನ]

ಹಮಾಲ (ನಾ). ಸಾಮಾನುಹೊರುವ ಕೆಲಸ ಮಾಡುವವನು: ಹಮಾಲರಿಬ್ಬರು ಮಾತಿಲ್ಲದೆ ಸಾಮಾನು ಹೊತ್ತುನಿಂತಿದ್ದರು (ಪಹಾಸ. ೧೧೯); ಹಮಾಲನ ಕೈಯಲ್ಲಿ ಆಕೆ ತನ್ನ ಸಾಮಾನು ಕೊಡುತ್ತಿರುವಾಗಲೇ ಪ್ರಮಿಳೆಯು ನರಹರಿಯನ್ನು ನೋಡಿದ್ದಳು (ಸಮಜೀ. ೬೫೧). [← ಅರ. ಹಿಂ. ಹಮ್ಮಾಲ್: ಮರಾ. ಹಮಾಲ್]

ಹಮಾಲಿ (ನಾ). ೧. ಕೂಲಿಯ ಕೆಲಸ: ಅವರ ಮರ್ಜಿ ಅನುಸರಿಸಿಕೊಂಡು, ಅವರ ಹಮಾಲಿಮಾಡುವುದಕ್ಕೆ ಯಾರಿಗೆ ಸಾಧ್ಯ ಸ್ವಾಮಿ (ಗೃಹಲ. ೧೪೬). ೨. ಕೂಲಿಯ ಕೆಲಸ ಮಾಡುವವನಿಗೆ ಕೊಡುವ ಹಣ; ಕೂಲಿ: ಒಂದೆರಡು ಜನರು ಮಾತ್ರ ಯಾವದೇ ಒಂದು ಬೀದಿಯ ಹೆಸರು ಹೇಳಿ 'ಅಲ್ಲಿಗೆ ಒಯ್ದು ಮುಟ್ಟಿಸಿದರೆ ಮಾತ್ರ ಹಮಾಲಿ!' ಅಂದರು (ಭೂಮಿತಾ. ೮೫): ಕಟ್ಟಿಗೆ ಮುಂತಾದ ಕಿರಕೋಳ ಸಾಮಾನುಗಳ ಅಡತಿ, ಹಮಾಲಿ, ಪ್ಯಾಕಮಾಡುವ ಕೂಲಿ ಮತ್ತು ಮಜೂರಿ (ಮುಂಬ್ಯಾ. ೬೬ ಪ್ರಸ್ತಾವನೆ). ೩. ಕೂಲಿಯ ಕೆಲಸಮಾಡುವವನು: ಒಬ್ಬಬ್ಬರಿಗೆ ಹಮಾಲಿ ಬರುತ್ತೀಯೇನು? ಎಂದು ಕೇಳಿದರೇನೇ ಅನಂಗಿಗೆ ವಾಗತ್ಯವೆನಿಸಿತು (ಮುಂಗಾಮು. ೧೦೨): ತನಗೆ ಮ್ಯಾನೇಜರ ಎಂದು ಮೊದ್ದ ಹೆಸರನ್ನು ವಯಪಾಲಿಸಿ 'ಹಮಾಲಿ' ಕೆಲಸ ಮಾಡಹಚ್ಚಿದರೆಂದು ಗುಂಡನು ಸಿಟ್ಟುಗೆದ್ದು ಕುದಿಯತೊಡಗಿದನು (ರಾಜಗೂ. ೧೪೬). [← ಮರಾ. ಹಮಾಲೀ]

ಹಮಿಾರ, ಹಮಿಾರು (ನಾ). ೧. ಪರಾಕ್ರಮಿ; ವೀರ; ಶೂರ: "ಶೂರಃ, ವೀರಃ, ವಿಕ್ರಾಂತಃ - ೩. ಶೂರನ ಹೆಸರು ಹಮಿಾರನಾದ ವೀರನು" (ಸಿದ್ಧಾಂತಿ. ೨೫೯).

೨. [ಸಂಗೀತ] ಒಂದು ರಾಗದ ಹೆಸರು: 'ಹಮೀರನಾಟಿ' ಪರಾ. ಹಮೀರು: ೨. ಯಮುನಾಕಲ್ಯಾಣಿ, ಹುಸೇನಿ, ಬೇಹಾಗು, ಹಮೀರು, ನವರೋಜು ಮುಂತಾದ ರಾಗಗಳು ಹಲವು ನಮ್ಮಲ್ಲಿ ನೆಲೆಗೊಂಡು ಕರ್ಣಾಟಕ ಗೌರವವನ್ನು ಪಡೆದಿರುವುದು ಈ ಮಾರ್ಗದಿಂದಲೇ (ಗಾನಕ. ೫೫).

[< ಸಂ. ಹಮ್ಮೀರ ./ ಹಿಂ. ಹಮೀರ್, ಹಮ್ಮೀರ್; ಮರಾ. ಹಮೀರ್]

ಹಮೀರತನ (ನಾ). ಘಾಟಿತನ: ನೋಡಿದಿರೊ ಅವಳ ಹಮೀರತನವನ್ನ? (ಮಾಮರಾ. ೮೦).

[ಹಮೀರ + - ತನ]

ಹಮೀರನಾಟಿ (ನಾ). [ಸಂಗೀತ] ಒಂದು ರಾಗದ ಹೆಸರು: ನಾಟ ಆಹರೀನಾಟಿ ಸಾಳಗನಾಟಿ ಹಮೀ [ಪಾಠಾಂ. ಮ್ಮೀ]ರನಾಟಿ ಗುಜ್ಜರನಾಟಿ ಎಂಬವೇ ಪಂಚವಿಧ ನಾಟಿಗಳು (ವಿವೇಕ. ೧೮೯). [ಹಮೀರ + ನಾಟಿ$_2$]

ಹಮೀರು 'ಹಮೀರ' ನೋ.

ಹಮೇಷ (ನಾ). (ಅ). ಸದಾ; ಯಾವಾಗಲೂ; ಸರ್ವದಾ: ಟೀಪುಸುಲ್ತಾನರು ವಿಕಲ್ಪಮಾಡಬೇಕುಯಂಬದಾಗಿ ಕುಂಪನಿಗೆ ತಿಳಿಯದ ಹಾಗೆ ಹಮೇಷ ಹಿಕಮತ್ತುಗಳ ನಡಸುತ್ತಾ ಇದ್ದರು (ರಾಜೇಂದ್ರ. ೫೬); ಮನೆಗೆ ಹಮೇಷ ಬೀಗ ಹಾಕಿರುವುದನ್ನು ನೋಡಿ ಜನ ಹಲವುರೀತಿಗಳಲ್ಲಿ ಮಾತಾಡಿಕೊಳ್ಳುತ್ತಿದ್ದರು (ಯುಪಸ. ೧೮೯).

[<— ಪಾರ. ಹಿಂ. ಮರಾ. ಹಮೇಶಾ]

ಹಮ್ಮಚೌಕು 'ಹಮಚೌಕು' ನೋ.

ಹಮ್ಮದ, ಹಮ್ಮಳ (ನಾ). ೧. ಮೈಮರೆಯುವಿಕೆ; ಪ್ರಜ್ಞೆ ತಪ್ಪುವಿಕೆ; ಮೂರ್ಛೆ: "ಹಮ್ಮದಮುಂ ಮುಚ್ಚೆ ಹರವಸಂ ಮೂರ್ಛಾಖ್ಯಂ" (ಕವಿಕಂ. ೧೧೩); ನೀರ ತೋರವನಿಯ ತಂದಲೊಂದುಗಯೊಳಮೆಂತಾನುಂ ಹಮ್ಮದದಿನಗಲ್ದು ತನ್ನವಸ್ಥಾಂತರಕ್ಕೆ ತಾನೆ ಬೆಕ್ಕಸಂಬಡುತ್ತಿರ್ಪನ್ನೆಗಂ (ಚಂದ್ರಪ್ರ. ೫-೧೯ ವ); ಸವನಿಸೆ ಹಮ್ಮದಂ ನಡುಪ ಕಾಲ್ ಬೆಮರಂ ಬಿಡುತಿರ್ಪ ಗಲ್ಲಂ (ಕಬ್ಬಕಾ. ೩೩೨). ೨. ಬೆರಗು; ದಿಗ್ಭ್ರಮೆ: ಹಮ್ಮದವೆಂದೆನೆ ಕೌತುಕಾರ್ಥದೊಳ್" (ಕರ್ಣಾನಿ. ೧೬). **ಹಮ್ಮಳ:** ೧. ಶಬರಿಯರರಿದು ಹಮ್ಮಳದಿವುಮ್ಮಳದಿ ಹೊರಳಿದರು ಪುರುಷರಗಲಿಂ (ಜಿನಮು. ೧೩-೧೯).

[< ಸಂ. ಪ್ರಮಾದ]

ಹಮ್ಮದಂಬೊಂದು (ಕ್ರಿ). ಎಚ್ಚರತಪ್ಪು; ಮೂರ್ಛೆಹೋಗು: ಸುರಿವಾ ಸ್ವೇದ ಮೊದಲ್ಗಡುಂಗು ನವಿರ್ಗಳ್ಬಾಷ್ಪೋದ್ಗಮಂ ಗದ್ಗದಸ್ವರಮುಂ ತಾಮಿನಿತೆಲ್ಲಮೊರ್ಮೆ ದೊರೆಯಲ್ಲೋ ಹಮ್ಮದಂಬೊಂದಿದರ್ (ನರಚ. ೪೮-೧೧೧).

[ಹಮ್ಮದ + ಪೊಂದು$_1$ (< ಪೊರ್ದು)]

ಹಮ್ಮದಂಬೋಗು, ಹಮ್ಮದವೋಗು (ಕ್ರಿ). = ಹಮ್ಮದಂಬೊಂದು: ನೃಪ ನಿನ್ನಂ . . . ನಭದಿಂ ಗಾಂಡೀವಿ ತರ್ಪಾಗಳೇ ಕೃಪನೀ ಸೈಂಧವಂ . . . ಈ ಕುಂಭಜನೀ ಕುರುಪ್ರಭವರಂದೇಂ ಹಮ್ಮದಂಬೋದರೇ (ಗದಾಯು. ೨-೩೪); ಅನೇಕೌಷಧಿಗಳಂ ಕೊಟ್ಟೊಡೇಳೆಂಟುಮಡಿಯಾಗಿ ವೇದನಿಸಿತದು ಹಮ್ಮದಂಬೋಗೆ ವಾಗೀಶನು (ಸೌಂದಪ್ರ. ೧೩-೮). **ಹಮ್ಮದವೋಗು:** ಬಿಗುರ್ತುಜೆ ಹಮ್ಮದವೋದನೋಹಿಲಂ (ಉದ್ಯಟ. ೧೧-೭೧); ಒದಱಿದವು ರಣವಾದ್ಯಚಯವಳ್ಳೆದೆಗೊಳಲ್ ಬ್ರಹ್ಮಾಂಡವೀಶನ ಹೃದಯ ಹಾತಕವಾಜೆ ಹಮ್ಮದವೋಗೆ ಕಮಲಭವ (ತುರಗಾ. ೬-೧೭-೧೩).

[ಹಮ್ಮದ + ಪೋಗು$_1$ (< ಪೋ$_1$)]

ಹಮ್ಮದವೋಗು 'ಹಮ್ಮದಂಬೋಗು' ನೋ.

ಹಮ್ಮನೆ (ಅ). ಇದ್ದಕ್ಕಿದಂತೆ, ಕೂಡಲೆ, ತಕ್ಷಣ ಎಂಬರ್ಥದ ಒಂದು ಅನುಕರಣಾವ್ಯಯ: ಜಜ್ಜನೆ ಜರಿದು ಬಿಬ್ಬನೆ ಬಿರಿದು ಪ್ರಾಣ ಹಮ್ಮ [ಪಾಠಾಂ. ವ್ವ]ನೆ ಹಾಱೆ ಭಯವಟ್ಟು ನಡನಡುಗಿ (ಶೂನ್ಯಸಂ. ೧೯೦-೩೫); ತನುವ ದಂಡಿಸುತುಗ್ರತಪಸು ಮಾಡುವರು ಹಮ್ಮನೆ ಶಾಸ್ತ್ರಪಠನದೋಱುವರು ಅನಿಮಿಷರಾಗಿ ಯೋನಿಗೆ ಬೀಳ್ವರಲ್ಲದೆ ವಿನುತಾತ್ಮಸಿದ್ಧಿವಡೆಯರು (ಭರಚ. ೬೮-೧೬). [? + - ಅನೆ$_1$]

ಹಮ್ಮಯಿಸು, ಹಮ್ಮಯ್ಸು, ಹಮ್ಮವಿಸು, ಹಮ್ಮಿಸು, ಹಮ್ಮೈಸು$_1$ (ಕ್ರಿ). ೧. ಎಚ್ಚರತಪ್ಪು; ಮೂರ್ಛೆಹೋಗು; ಮೈಮರೆ: ತನು ಕಡುಗೋಡುಗೋಡಿದಪು ದೆಳ್ಳಸಿತುಂ ಮಿಡುಕಂತದಿಲ್ಲ . . . ನಿಜವಲ್ಲಭನಂದ[ಮದಂ]ದಿನಂದಮಿಂದೆನಿತೆಱನಲ್ತು ಹಮ್ಮಯಿಸಿದಂದಮೊ ಮೇಣ್ ಮಱಲುಂದಿದಂದಮೋ (ವರ್ಧಮಾ. ೫-೫); ವೀರ ಧೀರೋದ್ಧತನಿಶಾಚರವೀರನತಿಮಥನದಲಿ ವಜ್ರಿಕುಮಾರ ಹಳಚಿದು ಹಮ್ಮಯಿಸಿದನು ಕದನಕೇಳಿಯಲಿ (ತೊರಾ. ೬-೨೨ ಸೂಚನೆ). ೨. ಎಚ್ಚರ ತಪ್ಪಿ ಕುಸಿ; ಮೂರ್ಛೆಹೋಗಿ ಬೀಳು: ಆ ಪೊಲ್ತೊಂಗ ಭೂಮಿಚೆ . . . ನಡೆನಡೆದು ಕಾಲೊಡೆದು ನೆತ್ತರ್ ಬಸಿಯೆ ಮೆಯ್ಯುಂದಿ ಧರೆಗೆ ಹಮ್ಮಯಿಸೆ (ರಾಮಾಶ್ವ. ೩೩-೨೮). **ಹಮ್ಮಯ್ಸು:** ೧. ಹಮ್ಮಯ್ಸಿ ಕಿಱಿದು ಬೇಟಕ್ಕೊಮ್ಮೆಯೆ ಪೋಪಂದು ಪುಗುವುದಸು ಬೇಗಂ (ಧರ್ಮಾಮೃ. ೯-೧೧೧). **ಹಮ್ಮವಿಸು:** ೧. ಈ ಪರಿ ನಮ್ಮನೆಲ್ಲರ ಮುಂದೆ ಭಂಗಿಸಿ ಹೆಮ್ಮೆಗೆಡಿಸುವ ಪರಿಯ ನೋಡಾ ಎನುತ ಮನಮಱುಗಿ ಇಮ್ಮೆ ಬೆಂದವಳಿದ್ದಲಂತಿರೆ ಹಮ್ಮವಿಸಿಯೊಱಗುತಲಿ ವಿಮಳೆಯ ನೆಮ್ಮಿದಳು ನಿಲಲಾಱದಾಳಾಪಿಸುತಲಾ ಮಾಯೆ (ಪ್ರಭುಲಿಂ. ೭-೭೦). **ಹಮ್ಮಿಸು:** ೧. ನಮ್ಮವರು ಬರುವುದನು ಉಮ್ಮಳಿಸಿ ನೋಡುವೆನು ಹಮ್ಮಿಸುವೆ ಮನದೊಳಗೆ ಬಾರದಿರಲು (ಸುಸಾರ. ೨). **ಹಮ್ಮೈಸು$_1$:** ೧. ಬೊಮ್ಮದ ಮನೆಯ ಕೋಣೆಯೊಳೊಬ್ಬ ಗೊರವತಿ ಇಮ್ಮೆಯ ಸಿರಿಯ ಮಾಳಿಗೆಯೊಳಗೆ ಹಮ್ಮೈಸಿದಳು (ಅವಚಂ. ೩೦೦-೧೩೧೫); ಹಂಬಲಿಸಿದರು ಹಮ್ಮೈಸಿದರು ಕೋಮಳೆಯ ಕಾಣದೆ ಮೋಹನಿಯು ಮಮಕಾರ ಭೂಮಿಪನು (ಪ್ರಭುಲಿಂ. ೮-೮). ೩. ದುಃಖಪಡು; ಗೋಳಾಡು: ಕೌರವೇಶ್ವರಗೆ ನೆಲ್ಲನಾಸಗಾಣನು ಶಿವಶಿವಾಯೆನುತ ಹಮ್ಮೈಸಿದಂ ಒಡೆಯಗಂ ಕರ್ಣನು (ತುರಂಗ. ೭೦-೪೬). [< ಹಮ್ಮದ + - ಇಸ್ಸು$_3$]

ಹಮ್ಮುಯ್ಸು 'ಹಮ್ಮಯಿಸು' ನೋ.

ಹಮ್ಮವಿಸು 'ಹಮ್ಮಯಿಸು' ನೋ.

ಹಮ್ಮಸ (ನಾ). ಒಂದು ಬಗೆಯ ಆಯುಧ (?): ನಿಮ್ಮಂ ನೆನೆಯದ ಮನಮಂ ಹಮ್ಮಸದಿಂದೂತ್ತಿ ಕೆತ್ತಿ ಕೀಸುವೆ ಮತ್ತಾ[ಂ] ಘಮ್ಮನೆ ಶೂಲದೊಳಿಡುವಂ ಸುಮ್ಮನೆ ಬಿಡೆನಾಂ (ಶಂಕಕಂ. ೧೫). [?]

ಹಮ್ಮಳ 'ಹಮ್ಮದ' ನೋ.

ಹಮ್ಮಳಿಸು (ಕ್ರಿ). = ಹಮ್ಮಯಿಸು ೧: ಸೋವಿಲೊಳಿರ್ದ ಮಗುವ ಕಾಣದಾ ಸತಿಯೆವ್ವನು ಕೆಟ್ಟೆನಾನೆನುತ ಆ ವಸುಧೆಗೆ ಹಮ್ಮಳಿಸಿಯುರುಳಿ ಶೋಕಾವೇಶದೊಳಗಿರುತಿರಲು (ನೇಮಿಸಂ. ೧೮-೨೩); ಹಮ್ಮಳಿಸಿ ದೇಹವುರಿಯ ಬೇಗಿಗೆ ಬ್ರಹ್ಮರೆಲ್ಲರಿಗೆ ದಾನ ದಕ್ಷಿಣ ಗಮ್ಮನೆ ಹೋಮಹವನ ತೀರ್ಥ ದಿಶ್ಯಾಂತವಾಗದಿರೆ (ಸಂದಿಲೀ. ೬-೫೪).

[ಹಮ್ಮಳ (< ಹಮ್ಮದ) + - ಇಸ್ಸು$_3$]

ಹಮ್ಮಿಕೆ (ನಾ). ಅಹಂಕಾರ; ಸೊಕ್ಕು: ಎಲವೊ ಕಿರಾತಸಂಕುಳವ ಕಾಷ್ಠಾಂಗಾರದಳವನು ಮುಱಿದ ಹಮ್ಮಿಕೆಯ ಬಲುಪಂಥ ನಮ್ಮೊಳು ಸಲ್ಲದು (ಚೇವಕಕಾಂ. ೮-೬೮); ಪ್ರಹಲಾದನನ್ನಯದ ಬಲಿ ಬಹುಭಕ್ತಿಯೊಳೀಶ್ವರಾರ್ಚನೆಯನುಱೆ ಮಾಡಲ್ಕಹಿ ಭೂಷಣನಾತಗೊಲಿದತಿ ಬಹಳೈಶ್ವರ್ಯಗಳನಿತ್ತಡಾ ಹಮ್ಮಿಕೆಯಿಂ (ದಶಾವ. ೬-೧೫).

[ಹಮ್ಮು$_2$ (< ಅಹಮ್ಮು) + - ಇಕೆ]

ಹಮ್ಮಿಗ (ನಾ). ಅಹಂಕಾರಿ; ಗರ್ವಿಷ್ಠ: ಇಮ್ಮನದ ಸೊಡಗೆಯ ಮದ್ದು ಕರ್ಮಕ್ಕೀಡಾದವರ ನುಡಿಯೆಂದಡೆ ಎನ್ನ ಹಮ್ಮಿಗನೆಂಬರು (ಮೋಳಿಮಾ. ೨೬೫-೧೧೭); ಬಲು ಚೆನ್ನಿಗತನವ ತಾನು ಮಾಡಲು ಬಲುಹಮ್ಮಿಗನೆಂದು ಬೈಯುವರೊ (ಪುರಂದ. ೩-೧೩೨-೨). [ಹಮ್ಮು$_2$ (< ಅಹಮ್ಮು) + - ಇಗ]

ಹಮ್ಮಿಣಿ, ಹಮ್ಮೀಣಿ, ಹಿಮ್ಮಣಿ, ಹಿಮ್ಮಣ್ಣಿ, ಹಿಮ್ಮೇಣಿ (ನಾ). (ಉದ್ದವಾಗಿಯೂ ಚಿಕ್ಕದಾಗಿಯೂ ಇರುವ) ಹಣದ ಚೀಲ; ಥೈಲಿ: ಸಾಹುಕಾರರು ಮರುಮಾತಾಡದೆ ಮೊದಲು ಹಮ್ಮಿಣಿಯನ್ನು ತಿಜೋರಿಯಲ್ಲಿಟ್ಟು ಬರಬೇಕೆಂದು ಕೋಣೆಗೆ ಹೋದರು (ಹೊಂಬಲಿ. ೩೮); ಈ ಉತ್ಸವದ ಮೂಲಕವಾಗಿ ಕರ್ನಾಟಕವು ಕವಿಗೆ ತನ್ನ ಗೌರವವನ್ನು ಸಲ್ಲಿಸಿತಲ್ಲದೆ, ಕವಿಗೆ ಒಂದು ಹಮ್ಮಿಣಿಯನ್ನಿತ್ತು ತನ್ನ ಮೆಚ್ಚುಗೆಯನ್ನೂ ತೋರಿಸಿತು (ಸಾಸಮಾ. ೮೧). **ಹಮ್ಮಿಣಿ:** ಅವರು ತಮ್ಮ ಹಮ್ಮಿಣಿಯೊಳಗಿಂದ ರೂಪಾಯಿ ಎಣಿಸಲಿ (ಮೋಹನೀ. ೬೫); ಒಂದು ಮರದ ಕೆಳಗೆ ಕುಳಿತು ಬಸವ್ವನು ತನ್ನ ಹಮ್ಮಿಣಿ ತೆಗೆದು ಹಣ ಎಣಿಸಿದನು (ಪವನ. ೩೭). **ಹಿಮ್ಮಣಿ:** ಎನ್ನ ಹಿಮ್ಮಣಿಯ ಗೊಂಡೆಯಂ ಹರಿದು ಹೊನ್ನೆರಚಿ ತೀವೆನುಪವನವ ನಾ ಮರೆಯಿಂ (ಗಿಲಿಂ. ೧೧೮-೧೦); ಪೆಟ್ಟಿಗೆಯಲ್ಲಿಯೂ ಹಿಮ್ಮಣಿಯಲ್ಲಿಯೂ ಬ್ಯಾಂಕಿನಲ್ಲಿಯೂ ತುಂಬಿರುವ ಹಣವನ್ನು ಹೇಗೆ ವೆಚ್ಚಮಾಡಬೇಕು?

(ನಾಗಗೀ. ೧೫೨). **ಹಿಮ್ಮಣ್ಣಿ**: 'ಹಿಮ್ಮಣ್ಣಿಬೀಲ' ಪರಾ. **ಹಿಮ್ಮೇಣಿ**: ಮಡಿವಾಳಯ್ಯ . . . ಇನ್ನೂರುರೂಪಾಯಿಯ ಹಿಮ್ಮೇಣಿಯನ್ನು ಮಾದಣ್ಣನ ಕೈಗಿಟ್ಟರು (ಬೆಳುಮ. ೬೬).

[← ಮರಾ. ಹಮಿಣೇ, ಹಮಾಣೇ. ಹಮಿಣ, ಹಮೇಣೇ]

ಹಮ್ಮಿಸು 'ಹಮ್ಮಯಿಸು' ನೋ.

ಹಮ್ಮೀಣೆ 'ಹಮ್ಮಿಣೆ' ನೋ.

ಹಮ್ಮೀರ (ನಾ). ೧. ಒಂದು ದೇಶದ ಹೆಸರು: ಪಲ್ಲವಕ ಹಮ್ಮೀರ ಜಾಳಾಂಧ್ರ . . . ದೇಶಂಗಳೊಳೆಸೆವ ಜಂಗಮವು ಭಕ್ತಾಳಿ (ಬಸವಪು. ೬-೧೯); ಕೊಂಕಣ ಸಿಂಧು ಹಮ್ಮೀರ . . . ಕಾಂಬೋಜದೇಶದ ಸಕಲಶರಣರ್ಕೆತರುತಿರ್ದರು (ಚಿಬಪು. ೬-೪೪). ೨. (ಹಮ್ಮೀರದೇಶದ ರಾಜ ಮತ್ತು ಅಲ್ಲಿಯ ಪ್ರಜೆ: ಪಾರಸೀಕ ಪಾರಿಯಾತ್ರ ಹಮ್ಮೀರ ಡೊಕ್ಕಾರ ತುರುಷ್ಕ ಮರುಪ್ರಭೃತಿಭೂಪಾಲಕರಿಂ ಭಯಾನಕರಸಮುಂ (ಜಗವಿ. ೨-೩೯ ಪ); ತೆಲುಂಗ ಗುರ್ಜರ ಹಮ್ಮೀರ ತುರುಷ್ಕ ನೇಪಾಳರ್ ಮೊದಲಾದ ರಾಜಪುತ್ರರ ಪಂಕ್ತಿಗಳೊಳಂ (ಗಿರಿಕ. ೨-೧೦೫ ವ). ೩. (ಆಲಂ) ಶೂರ; ಪರಾಕ್ರಮಿ: ವೀರಹಮ್ಮೀರ ದಾಮೋದರ ಪಾತ್ರೆಗಳಾ ರಣರಂಗಮಧ್ಯದೊಳು ವೀರರಾಮನ ಖಡ್ಗದಿಂದ ಮಡಿದು ಸುರನಾರಿಯ ರೆಡೆಗೆಯ್ದಿದರು (ಕುರಾಪಾಂ. ೧೭-೭೦); ಪ್ರಳಯಾಗ್ನಿಯಂತೆಸವ ರಘುವೀರನಂ ಕಂಡ ಧುರವಿಜಯಹಮ್ಮೀರನಂ (ವಂಕಾರಾ. ೩-೧೧-೧೦). [ಸಂ.]

ಹಮ್ಮೀರತಾತಿ (ನಾ). ವೀರತ್ವದ ಗುರುತಿಗಾಗಿ ಕೈ ಅಥವಾ ಕುತ್ತಿಗೆಯಲ್ಲಿ ಧರಿಸುವ ಕಾಪು,– ರಕ್ಷೆ: ಪ್ರೀತಿಯಿಂದೊಲಿದು ಭೂಪನ ಕೈಗೆ ಹಮ್ಮೀರತಾತಿಯ ಕಟ್ಟಿದಳೊರ್ವೆ (ಕಂಸಪ. ೨೪-೭೬); ಫಣಿಸುಪ್ಪಾಣಿಮುತ್ತುಗಳ ಕಟ್ಟಿರುವ ಹಮ್ಮೀರತಾತಿಯು ಪಟ್ಟೆಪೀತಾಂಬರಗಳಿಂದಡಿಯಿಟ್ಟು ಚರಿಸುವ ರಾಜಕುವರರು (ನಾಗವ. ೨-೭೮).

[ಹಮ್ಮೀರ + ತಾತಿ (< ತಾಯಿತ)]

ಹಮ್ಮು$_1$ (ಕ್ರಿ). ೧. (ಹಗ್ಗ ಮೊದಲಾದುವುಗಳನ್ನು) ಹೊಸೆ; ಹೆಣೆ: ''ಹಮ್ಮು-ರಜ್ಜುಕ್ರಿಯಾಯಾಂ (ಹೆಣೆ)'' (ಶಮಧಾ). ೨. ಕಟ್ಟು; ಬಂಧಿಸು: ತುರಂಗ ಬಲದಪರಭಾಗದೊಳ್ ಹಮ್ಮಿದ ಗುಳದ ಹೂಡಿದ ಆಂಚಿಯದ . . . ಕೋಳಾಹಳ ದಬ್ಬರಮಾಗೆ (ಗಿರಿಕ. ೬-೫೫ವ); ಬಲುಮಿಳಿಯಲಿವನನು ಸುತ್ತಿ ಸಿಂಧುರಘಟೆಗಳಿಂದೆಳೆಸುತ್ತ ಕೊಂಡೊಯ್ಕೆನಲು ಹಮ್ಮಿದರಾನೆಯಲಿ ಕಪಿಯ (ತೊರಾ. ೫-೭-೩). ೩. ವಿರ್ಪಡಿಸು; ಯೋಜಿಸು; ಸಜ್ಜುಗೊಳಿಸು: ಆ ಪಾತಕವನ್ನು ಕಳೆಯಲಿಕ್ಕೆಂದು ಧರ್ಮರಾಯ ಅಚ್ಯುತನ ಅಪ್ಪಣೆಯಂತೆ ಅಶ್ವಮೇಧಯಾಗವನ್ನು ಹಮ್ಮಿದ (ಬದುರ. ೧೦೩); ಮೂರು ಅರ್ಥವತ್ತಾದ ಗೋಷ್ಠಿಗಳನ್ನು ಹಮ್ಮಿ ಅಯಾ ರಂಗದಲ್ಲಿ ಪರಿಣತರಾದವರ ಶ್ರದ್ಧೆಯುಳ್ಳವರ ವ್ಯಾಸಂಗದ ಫಲವನ್ನು ವಿನಿಯೋಗಿಸುವ ವ್ಯವಸ್ಥೆ ಇಲ್ಲಿದೆ (ಇವರ್ಣ. ೨೬೧). ೪. ಒದಗು; ಉಂಟಾಗು: ಹಿಂದ ಹಮ್ಮಿದ [ಪಾಕಾಂ. ನ] ಸಮರದೊಳು ನಡೆತಂದು ಖೇಚರನಡಸಿ ಕಟ್ಟಿದಡಂದು ನಿನ್ನನು ಬಡಿಸಿದವನರ್ಜುನನೊ ರವಿಸುತನೊ (ಕುವ್ಯಾಭಾ. ೧-೧೦). ೫. ಕೊಳ್ಳೆ ಹೊಡೆ; ಲೂಟಿಮಾಡು: ಇನ್ನು ಗರವಲೆಗೆ ಕಳ್ಳರು ಬಂದು ಮನೆ ಹಮ್ಮಿದರು (ರಾಜೇಂದ್ರ. ೧೪೨). ೬. ಹರಡು; ಸೂಸು: ಪೊಸಮುಗಿಲ್ಗಳು ಹಮ್ಮಿ ಪಸರಿಸಿ ತೋರ್ದವಾ ವರ್ಷಪ್ರವೇಶದಲಿ (ಕಾವೇಮ. ೧೬-೪೨); ಹೊಸಮಳಿಗಳಾಗಿ ನೆಲ ಹೊಸಹೊಸಲು ಹರಿದು, ಹೊಸ ಹಮ್ಮು ಹಮ್ಮುತ್ತ, ಎಲ್ಲರೂ ನನ್ನಕ್ಕ ತಂಗಿಯರು ಬಿಗುರಿ ಎಲ್ಲರೂ ಬೆಲುವಾದರು (ಹೊಂಗಳು .೧೮-೧).

ಹಮ್ಮಿಕೊಳ್ಳು = ವಿರ್ಪಡಿಸಿಕೊಳ್ಳು; ಯೋಜಿಸು: ಈ ವರ್ಷ ಅವರು ಒಳ್ಳೆಯ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ (ರೂಢಿ).

ಹಮ್ಮು$_2$ 'ಅಹಮ್ಮು' ನೋ.

ಹಮ್ಮುಖವೋಗು (ಕ್ರಿ). ನಿಸ್ತೇಜವಾಗು; ಕಾಂತಿಗುಂದು (?): ಹಮ್ಮುಖ ವೋದುದು ಸಭೆಯೆಲ್ಲ ಭರತೇಶ ಸಮ್ಮುಖಗೊಟ್ಟು ನೋಡಿದನು ದಿಮ್ಮನೆದ್ದರು ಕೂಡೆ ಸೇವಕರೆಲ್ಲರಾಗುಮ್ಮುವ ಕಂಬನಿಗೂಡಿ (ಭರಚ. ೭೧-೧೩).

[? + ಮುಖ + ಪೋಗು$_1$ (< ಪೋ$_1$)]

ಹಮ್ಮುಗ (ನಾ). ಜಂಬದವನು; ಅಹಂಕಾರಿ: ನಿಮ್ಮ ಚಿತ್ತಕೆಯಱಿಕೆಮಾಡಿದೆಂ ಮತ್ತಿನ್ನು ಹಮ್ಮುಗರ ಕಳುಹಿದೊಡೆ ಎಂತಪ್ಪುದೋ ಕಾರ್ಯ ಶಮ್ಮದಿಂ ನೋಡಿ ಚಿತ್ತೈಸಿಂ (ಪ್ರಭುಪ್ರ. ೮-೫೬). 'ಹಮ್ಮಿಗ' ಪರಾ. [ಹಮ್ಮು$_2$ (< ಅಹಮ್ಮು) + - ಗ$_2$]

ಹಮ್ಮುಗೆ$_1$ (ನಾ). ೧.(ಜೋಡಿಸಿ ಕಟ್ಟುವ) ಹಗ್ಗ; ಪಾಶ: ಸಂಗಟಕಮನೆ ಹಮ್ಮುಗೆಯ ಕುಣಿಕೆಗಳು (ಮಂಗರಾ. ೮೬-೩೧); ಮರಳಿ ವಾಪಿಯ ಕೊಂಡು ರಾವ್ತರು ತಿರುಗಿದರು ಹಮ್ಮುಗೆಯ ನೇಣ್ಗಳ ಹಲಿದು ಹಕ್ಕರಿಕೆಗಳ ಬಿಸುಟರು (ಕುವ್ಯಾಗ. ೧-೧೭). ೨. ಕಟ್ಟು; ಬಂಧನ: ಮುಗ್ಗಿ ಕೆಡೆಯಲು ಕುದುರೆ ಸೂತನ ಬಗ್ಗಿಸಿದ ನಸುರೇಂದ್ರನವಸಾ ಹಗ್ಗಗಳ ಹಮ್ಮುಗೆಯ ಸಡಿಲಿಸಿ ಹಯವನಬ್ಬರಿಸೆ (ತೊರಾ. ೬-೨೨-೨೧). ೩. ಯೋಜನೆ: ಎಮ್ಮ ಮನ ಮುಂಚುವುದು ಕಾರ್ಯದ ಹಮ್ಮುಗೆಯ ನೀವಱಿಯಿರೇ ತಮತಮ್ಮ ದುಷ್ಟತ ತಮಗೆ ಫಲಿಸಿದರೇನು ನಿಮಗೆಂದ (ಕುವ್ಯಾಆ. ೨೦-೧೨). [ಹಮ್ಮು$_1$ + - ಗೆ]

ಹಮ್ಮುಗ್ಗೆ (ನಾ). ಗರ್ವ; ಸೊಕ್ಕು: ನಿಮ್ಮಿರ್ವರ ಸೌಭಾಗ್ಯದ ಹಮ್ಮುಗೆಯಂ ಸುಭಗೆ ಕಾಮುಮಂಜರಿ ಪದೆಪಿಂದೊರ್ಮೆ ಪರೀಕ್ಷಿಸಿ ಪೇಟ್ಟೊಡೆ ನಿಮ್ಮಯ ಹೀನಾಧಿಕತ್ವಮತಿ ಸುತಿವಡೆಗುಂ (ದಶಕು. ೯-೪೪); ಸುರವಂಶಕುಲಹೃತ್ಕೂಲನೆದೆಯಲಿ ಹುಣುಬುದೋಱಿತು ಹಗೆಯ ಹಮ್ಮುಗೆಯ (ತೊರಾ. ೬-೨-೧).

[ಹಮ್ಮು$_2$ (< ಅಹಮ್ಮು) + - ಗೆ]

ಹಮ್ಮುಗೆಡು (ಕ್ರಿ). ಜಂಬವಿಳಿ; ಗರ್ವಭಂಗವಾಗು: ಸೌರಾಷ್ಟ್ರಸೋಮೇಶ್ವರಾ ನಿಮ್ಮ ಮುಟ್ಟಿ ಹಮ್ಮುಗೆಟ್ಟುದ ನಾನೇನೆಂಬೆನಯ್ಯ (ಆವವ. ೩೧-೬೯); ಸಿಂಹಳನು ಹಮ್ಮುಗೆಡದ ಆ ರಥವನ್ನೇರಿ ಬೊಬ್ಬಿರಿದನು (ಶಿವಸಾ. ೨೧).

[ಹಮ್ಮು$_2$ (< ಅಹಮ್ಮು) + ಕೆಡು$_1$]

ಹಮ್ಮುಗೊಳು (ಕ್ರಿ). ಜಂಬಪಡು; ಗರ್ವಿಸು: ಹಮ್ಮುಗೊಳದೆ ಹದವಳಯದೆ . . . ಚಿತ್ತಸಮ್ಮತಿಯಱಿದೆಸಗುವುದು (ಪದಿಬ. ೪-೧೫).

[ಹಮ್ಮು$_2$ (< ಅಹಮ್ಮು) + ಕೊಳು (< ಕೊಳ್$_1$)]

ಹಮ್ಮುಬಿಮ್ಮು (ನಾ). ಗರ್ವ ಮತ್ತು ಬಿಂಕ: ಪೂಜೆಯ ಮಾಡುವಲ್ಲಿ ಪುಣ್ಯವನಱಿಯದೆ ಮಾಡಬೇಕು ಹೆಣ್ಣು ಮಣ್ಣು ಹೊನ್ನು ಕೊಡುವಲ್ಲಿ ಹಮ್ಮುಬಿಮ್ಮಿಲ್ಲ ದಿರಬೇಕು (ಮೋಳಮಾ. ೬೯-೧೬೧); ಭವದೇಕಶರಣಮನಿಸಿ ಶಿವಶಾಂತಿಯಂ ವಹಿಸಿ ಹಮ್ಮುಬಿಮ್ಮುಗಳುಳಿದು ನವಲೋಷ್ಟಕಾಂಚನ ಸಮಾನಬುದ್ಧಿಯೊಳು ಮತ್ತವಿರಳಾಚರಣ ಸಂಕಲಿತ ಮಾನಸಮದುವೆ ಮಂದಿರಂ ಮನುಕುಲೇಶ (ವಂಕಾರಾ. ೨-೧೮-೧೫); ನಿನ್ನಲ್ಲಿ ಹಮ್ಮ ಬಿಮ್ಮುಗಳು ಇನ್ನೂ ಅವಿತುಕೊಂಡಿರುವಂತೆ ಕಾಣುತ್ತಿದೆ (ತುಂಗಭ. ೭೬).

[ಹಮ್ಮು$_2$ (< ಅಹಮ್ಮು) + ಬಿಮ್ಮು$_1$]

ಹಮ್ಮುಹೆಮ್ಮೆ (ನಾ). = ಹಮ್ಮುಬಿಮ್ಮು: ಏನೆ ಇರಲಿ, ಏನೆ ಇರಲಿ, ಹಮ್ಮು ಹೆಮ್ಮೆಗಳೇನೆ ಇರಲಿ, ತಿರುಳಿನರಿವು, ಹಿರಿಯ ನಡತೆ, ಮೇಲುಸಾಲು, ಏನೆ ಇರಲಿ (ಇಂಗೀತ. ೬೮-೬). [ಹಮ್ಮು$_2$ (< ಅಹಮ್ಮು) + ಹೆಮ್ಮೆ (< ಪೆರ್ಮೆ)]

ಹಮ್ಮೆಸು$_1$ 'ಹಮ್ಮಯಿಸು' ನೋ.

ಹಮ್ಮೆಸು$_2$ (ಕ್ರಿ). ಬಯಸು; ಅಪೇಕ್ಷಿಸು: ನನ್ನ ಮಲತಮ್ಮನು ನನ್ನೊಡನೆ ಕಾಳಗಕ್ಕೆ ಹಮ್ಮೆಸುವನಲ್ಲವೆ ? (ಕಕಾದ. ೨೦೬); ಪಕ್ಷಿಯು ಅವನನ್ನೂ ಅವನ ಕಡೆಯವರನ್ನೂ ಆರಾಧಿಸಿ ಸೇವಿಸಿ ಅಪಚಾರಗಳನ್ನೆಲ್ಲ ಸಹಿಸಿಕೊಂಡು ಅವರ ಹಸಾದಕ್ಕೆ ಹಮ್ಮೆಸಿ ತನ್ನ ಯೋಗಕ್ಷೇಮವನ್ನೇ ಮರೆತು ಜನ್ಮವನ್ನು ಸಾರ್ಥಕಗೊಳಿಸಬೇಕು (ಆರ್ಯಾಧ. ೧೬೪). [? + - ಇಸು$_2$]

ಹಯ (ನಾ). ೧. ಕುದುರೆ; ಅಶ್ವ: ಹಯದ ಮನಕ್ಕಮೇಱಿದನ ಬಿನ್ನಣಕಂ ದೊರೆಯಾಗಿಯುಂ ವಾಹಳಿಗಳ್ ಮನೋಹರಂ (ಕಾಂಶಿವ. ೬-೧೪೪); ವಾನರನ ಹಯ ಕುಂಜರನ ಪಂಚಾನನನ ಮೃಗಪೋತಕನ ಗುಣವಾ ನರೇಂದ್ರನೊಳಿರಲು ಬೇಹುದು (ಕುವ್ಯಾಉ. ೩-೧೦೯); ಹಂದಿ ಹದಿನೈದು ಈದರೂ ಒಂದೂ ಹಯವಾಗಲಿಲ್ಲ (ಗಾಪ). 'ಹಯವಲ್ಗನ' ಪರಾ. ೨. [ಕಾಮಶಾ] ಮೂರು ಬಗೆಯ ಪುರುಷರಲ್ಲಿ ಒಂದು ವಿಧ: ಮುನಿವರ ವಾತ್ಸ್ಯಾಯನ ಮತದೊಳು ನೆಟ್ಟನೆ ಶಶ ವೃಷ ಹಯರೆಂದಿನಪ ಪುನುಜರ್ ಮೂದಱಂ (ಜನವ. ೪-೧); ಶಶ ವೃಷ ಹಯರೆಂಬ ಪ್ರಮಾಣಪುರುಷರಿಂ (ಏವಣ. ೧೪೨). ೩. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: ''ಋಷಿ ನಗ ಹಯ ಸ್ವರಮದೇಲು'' (ಮಂಗರಾ. ೧೦೩-೮). ೪. [ಛಂದ] ಒಂದು ಬಗೆಯ ಪ್ರಾಸ: ನಿಜದಿಂ ಬಂದೊಡೆ ಸಿಂಗಂ ಗಜದೀರ್ಘಂ . . . ಹಯಮಂಬುಜಮುಖಿ ದಡ್ಡಕ್ಕರಂಗಳವು

ಷಟ್‌ಪ್ರಾಸಂ (ಛಂದೋಂಬು. ೧-೪೬ ಅಡಿಟಿ). 'ಹಯಪ್ರಾಸ' ಪರಾ.

ಹಯಒರಟ = (ತುಂಟ) ಕುದುರೆಯಂತೆ ಒರಟಾದವನು; ಬಹಳ ಒರಟ: ಶುದ್ಧ ಒರಟ ಅಲ್ಲ, ಹಯಒರಟ! ನಾನು ಬೇಕಾಗಿ ಕೆರಳಿಸಿ ಮಾತಾಡಿದೆ (ಮರ್ಯ. ೭೮).

ಹಯವತ್ಸರಾಜ = ಅಶ್ವಾರೋಹಣದಲ್ಲಿ ವತ್ಸರಾಜನಂತೆ ಪ್ರಸಿದ್ಧನಾದವನು; ಒಂದು ಬಿರುದು: ನುಡಿದಂತೆ ಗಣ್ಮಂ ಹಯವತ್ಸರಾಜಂ ರೂಪಮನೋಜಂ ಪರಬಳ ಸೂಳ್‌ಕಾಱಂ (ಸೌಂದ.II, ೧೮-೬; 980); ದಾನಕಾನೀನಂ ಹಯವತ್ಸರಾಜ ರೂಪ ಮನೋಜಂ ನಿವುನ್ನಪತಿಹೃದಯಸೆಲ್ಲಂ ಭುವನೈಕಮಲ್ಲಂ (ಸೌಂದ. XI - i, ೮೪-೭; 1049). [ಸಂ.]

ಹಯಖುರ (ನಾ). ಕುದುರೆಯ ಗೊರಸು: ಹಯಖುರವುಂ ಚಕ್ರದ ನೇಮಿಯುಮೂರ್ಜಿತವಜ್ರವುಕ್ಕುವೆನೆ ವಾಹಿನಿಯೊಳ್ ನಿಯತಮದಾಟದೆ ಸಮಭೂಮಿಯೊಳದಿರದೆ ಪರಿವ ತೆಱದೆ ಪರಿದತ್ತು ರಥಂ (ಪಾರ್ಶ್ವಪು. ೧೦-೧೦೩). [ಸಂ.]

ಹಯಗಂಧಿ (ನಾ). ಒಂದು ಬಗೆಯ ಔಷಧೀಸಸ್ಯ; ಹಿರೇಮದ್ದಿನ ಗಿಡ; ಅಶ್ವಗಂಧಿ: ಹಯಗಂಧಿಯ ಬೇರಂ ಕ್ಷಾರಯುತಂ ಮೇಣಂದೆ ಪುಟ್ಟದೆಳಗಱುವಿನ ವಿಷ್ಣುಯುಮಂಗುರುವುಮನುಂ ತಿಂದು ಯಥೇಷ್ಟಂ ತಿನ್ಗೆ ಮೆಯ್ಗೆ ಮಚ್ಚದ ವಿಷಮಂ (ಲೋಕೋಪ. ೧೦-೪೫). [< ಸಂ. ಹಯಗಂಧಾ]

ಹಯಗ್ರೀವ (ನಾ). ೧. ವಿಷ್ಣುವಿನ ಒಂದು ಅವತಾರ; ℙ ಕುದುರೆಯ ಮುಖದ ಆಕೃತಿಯನ್ನು ಹೊಂದಿದ, ಮಧುಕೈಟಭರೆಂಬ ರಾಕ್ಷಸರನ್ನು ಕೊಂದು ವೇದಗಳನ್ನು ರಕ್ಷಿಸಿದ ವಿಷ್ಣುವಿನ ಒಂದು ಹೆಸರು. ೨. ಹಯಗ್ರೀವ ಆಕಾರದ ವಿಷ್ಣುವಿನಿಂದ ಹತನಾದ ಒಬ್ಬ ರಾಕ್ಷಸನ ಹೆಸರು: ಮುರ ಹಯಗ್ರೀವ ಪಂಚಜನ ನಿಶುಂಭರೆಂಬ ನಾಲ್ವರ್ ದನುಜನಾಯಕರಿರ್ವರ್ (ಜಗವಿ. ೧೧-೮೫ ವ). ೩. ಕಡಲೆಬೇಳೆ ಬೆಲ್ಲಗಳಿಂದ ತಯಾರಿಸುವ ಒಂದು ಬಗೆಯ ಭಕ್ಷ: ಮೊನ್ನೆ ದ್ವಾದಶಿ ಪಾರಣೆಗೆ ನಾನು ಹಯಗ್ರೀವ ಮಾಡಿದ್ದೆ (ಗೃಹಲ. ೬೯). [ಸಂ.]

ಹಯತತಿ (ನಾ). ೧. ಕುದುರೆಗಳ ಗುಂಪು, — ಸಮೂಹ. ೨. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: ನನಭನಲಗಮೆಂಬಿವು ಗಣನಿವಹಂ ಜನಿಯಿಸಿ ಯತಿ ನಿಲ್ರಿರೆ ಹಯತತಿಯೊಳ್ ನಿನಗಿದನಱಿವಂತಿರೆ ವಿರಚಿಸಿದೆಂ ವನರುಹವದನೇ ಪ್ರಹರಣಕಲಿಕಂ (ಛಂದೋಂಬು. ೨-೧೪೭). [ಸಂ.]

ಹಯದಳ (ನಾ). ಚತುರಂಗಬಲದಲ್ಲಿ ಒಂದು; ಕುದುರೆಯ ಪಡೆ; ಅಶ್ವಸೈನ್ಯ: ಕೆದಡಜಿಗಿಜಿಯಾಯ್ತು ಹಯದಳ ಹತ್ತುಸಾವಿರವು (ಕಾಶಿರಾ. ೨೦-೪೩). [ಸಂ. ಹಯದಲ]

ಹಯದಟ (ನಾ). = ಹಯದಳ: ಹಯದಟಮಂ ಬೆಸಸಲ್ ವಾರ್ಧಿಯ ವೀಚಿಯ ತೆಱದಿನುಱದೆ ಕವಿಯಲ್ ಶತ್ರುಂಜಯನ ಹರಿಯುಗ್ರಹರಿಬಳಚಯಮದನಿದಿರಾಂತು ಬೆದಱಿ ಬೆಂಕೊಳಿ ಭೋಂಕಲ್ (ನೇಮಿಪು. ೭-೯೦). [ಹಯ + ದಟ]

ಹಯನ 'ಪಯನ್' ನೋ.

ಹಯನು 'ಪಯನ್' ನೋ.

ಹಯನುಗದ್ದೆ (ನಾ). ಬೇಸಗೆ ಕಾಲದಲ್ಲಿ ಕೆರೆಯ ನೀರಿನಿಂದ ಬೆಳೆಯುವ ಗದ್ದೆ: (ಕ). [ಹಯನು (< ಪಯನ್) + ಗದ್ದ (< ಗದ್ದೆ)]

ಹಯನುಬತ್ತ (ನಾ). ಬೇಸಗೆಕಾಲದಲ್ಲಿ ಕೆರೆಯ ನೀರಿನಿಂದ ಬೆಳೆಯುವ ಬತ್ತ; ಜನವರಿ ತಿಂಗಳಲ್ಲಿ ನಾಟಿ ಮಾಡುವ ನೆಲ್ಲು: (ಕ).

[ಹಯನು (< ಪಯನ್) + ಬತ್ತ]

ಹಯನುಬೆಳೆ (ನಾ). ಬೇಸಗೆ ಕಾಲದ ಬೆಳೆ; ಜನವರಿ ತಿಂಗಳಲಿನಲ್ಲಿ ನಾಟಿ ಹಾಕಿ ಕೆರೆಯ ನೀರಿನಿಂದ ಬೆಳೆಯುವ ಬೆಳೆ: (ಕ).

[ಹಯನು (< ಪಯನ್) + ಬೆಳ್ಕೆ]

ಹಯಪತಿ (ನಾ). ೧. ಕುದುರೆಗಳ ಒಡೆಯ; ತುರಗದಳದ ಅಧಿಪತಿ. ೨. ಒಂದು ಬಿರುದು: ಭೋಜ ಲಾಳ ಗಜಪತಿ ಹಯಪತಿ ನರಪತಿಯೆನಿಪ ಮಹೀಪಾಳರಾಸ್ಥಾನದಲ್ (ಎಸಾ. VI, ೨೧೬-೮; 1057). [ಸಂ.]

ಹಯಪರಿಕರ (ನಾ). ಕುದುರೆಯ ನಡುಕಟ್ಟು; ಲಗಾಮು: "ಬಿಗಿ-ಬಂಧನೇ, ಹಯಪರಿಕರೇ ಚ" (ಶಮಧಾ). [ಸಂ.]

ಹಯಪರ್ಯಾಣ (ನಾ). ಕುದುರೆಯ ಜೀನು, — ತಡಿ: ಹಯಪರ್ಯಾಣ[ಪಾಠಾಂ. ಪಲ್ಯಾಣ] ಪ್ರಭಾಮಂಜರಿ ಗಜ ಭದು ಸಿಂಧೂರರಾಗಂ . . . ತದ್ದಿಗ್ವಿಜಯಯಾತ್ರೋದ್ಯೋಗದೊಳ್ ಕೊಲ್ಲಾಣಿಗೆ ಮೆಱೆಯೆ ಬರ್ಪಲ್ಲಿ ಭೂಪಾಲಸಿಂಹರ್ (ಅನಂಪು. ೧೩-೭೫). [ಸಂ.]

ಹಯಪ್ರಾಸ (ನಾ). [ಛಂದ] ಒಂದು ಬಗೆಯ ಪ್ರಾಸ; "ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಜಾತೀಯ ಸಂಯುಕ್ತವ್ಯಂಜನಗಳು ಬರಲು ಹಯಪ್ರಾಸವೆನಿಸುವುದು" (ಕೃಛಂ. ೭೩).

[ಸಂ.]

ಹಯಮಂದಿರ (ನಾ). ಕುದುರೆಗಳಿರುವ ಸ್ಥಳ; ಲಾಯ: ಹಯಮಂದಿರಂಗಳೆಲ್ಲರ ನಯನಂಗಳ್ಗೀವುತಿರ್ಪುಪತಿಶಯಮಂ ತಮ್ಮಯ ರತ್ನಕಳಶಕರಣೋಚ್ಚಯದೊಳ್ ತೇಂಕಾಡುತಿರ್ದವೆಂಬಂತಿವೊಲಂ (ಪಾಧಪು. ೧-೧೫೧). [ಸಂ.]

ಹಯಮಾರ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು; ಕಣಗಿಲು: "ಕರವೀರಃ, ಹಯಮಾರಃ - ಈ ೨ ಕಣಗಿಲೆ" (ಪಲಾಯು. ೩.೨-೪೫). [ಸಂ.]

ಹಯಮಾರಕ (ನಾ). = ಹಯಮಾರ: "ಪ್ರತಿಹಾಸ, ಶತಪ್ರಾಸ, ಚಂಡಾತ, ಹಯಮಾರಕ, ಕರವೀರ - ಕಣಗಿಲೆ" (ನಾಚರಾ. ೬). [ಸಂ.]

ಹಯಮೇಧ (ನಾ). ಹಿಂದೆ ರಾಜರು ದಿಗ್ವಿಜಯವನ್ನು ಸಾಧಿಸಿ ನಂತರ ಕುದುರೆಯನ್ನು ಬಲಿಕೊಟ್ಟು ಮಾಡುತ್ತಿದ್ದ ಯಾಗ; ಅಶ್ವಮೇಧ: ಮಿತ್ರೋದಯಾತ್ರರದೊಳ್ಕೆತಂದು ಹಯಮೇಧ ಸತ್ರಸಾಧನಕೆ ವೇದವ್ಯಾಸಮುನಿ ಧರ್ಮಪುತ್ರನಂ ಬೋಧಿಸಿ ಮರಳ್ದನು (ಜೈಮಿಭಾ. ೨-೪೭); ಪೂರ್ವಪಶ್ಚಿತಿವಿಡಿದು ಮಾಳ್ಪ, ದಿಗ್ವಿಜಯ ಹಯಮೇಧ ಮೊದಲಾದುವಂ ತೊರೆದು . . . ದೇವರ್ಕಳಂ ಪೂಜಿಸಲ್ ಮೆಚ್ಚುವುದು ಜಗವನಾಳುವ ಋತಂ (ಶ್ರೀರಾಮಾ. ೯-೨೪೩). [ಸಂ.]

ಹಯಮೋಹರ (ನಾ). = ಹಯದಳ: ಕರಿಘಟೆಯ ಕಲಕಿದನು ಹಯಮೋಹರವ ಜರುಹಿದನೌಕಿ ಹರಿತಹ ವರರಥವ ಹುಡಿಮಾಡಿದನು ಕೆಡಹಿದನು ಕಾಲಾಳ (ಕುವಾದ್ರೋ. ೫-೧೨). [ಹಯ + ಮೋಹರ]

ಹಯರಕ್ಷೆ (ನಾ). ಕುದುರೆಯ ಕಾವಲು, — ರಕ್ಷೆ: ಅಂದು ಕುಲಗೋತ್ರಮಂ ಕೊಂದ ಪಾಪಂ ಪೋಗಲೆಂದಶ್ವಮೇಧಮಂ ತೊಡಗಿಯೆನ್ನಂ ಧರ್ಮನಂದನಂ ಕಳುಹಿದಂ ಹಯರಕ್ಷೆಗದಱೊಡನೆ ಬರೆ ಸಿಲ್ಕಿತದು ಶಿಲೆಯೊಳು (ಜೈಮಿಭಾ. ೧೮-೧೭).

[ಸಂ. ಹಯರಕ್ಷಾ]

ಹಯವಲ್ಗನ (ನಾ). [ಅಶ್ವಶಾ] ಕುದುರೆಯ ಐದು ಬಗೆಯ ನಡೆಗಳಲ್ಲಿ ಒಂದು ಬಗೆ: ಅದಂ ಗುಣಾರ್ಣವನಿಡಲೊಲ್ಪನಿಲ್ಲ ಹಯವಲ್ಗನಸಂಚಳರತ್ನಕುಂಡಳಂ (ಪಂಪಭಾ. ೫-೫೧). [ಸಂ.]

ಹಯವೈಹಾಳಿ (ನಾ). ಕುದುರೆಯನ್ನು ಹತ್ತಿ ಸವಾರಿಮಾಡುವುದು; ಕುದುರೆ ಸವಾರಿ: ದ್ವಿರದಾರೋಹಣಯೋಗ್ಯವೀಧಿ ಹಯವೈಹಾಳಿಪ್ರದೇಶಂ ನಿರಂತರ ಶಸ್ಯಶ್ಯಾಮಭೂಮಿ . . . ಸುತ್ತಿರ್ಪನೆಗಂ (ಪುಷ್ಪಪು. ೪-೫೪). [ಹಯ + ವೈಹಾಳಿ]

ಹಯವ್ಯಾತ (ನಾ).= ಹಯತತಿ ೧: ಶಾತಶರಪ್ರಹಾರದ ರಥಾಂಗವಿದಾರಣಮಕ್ಷ ಖಂಡನಂ ಸೂತನಿಷೂದನಂ ಯುಗಸಮುದ್ಧರನಂ ಧ್ವಜಭಂಜನಂ ಹಯವ್ಯಾತ ನಿಶುಂಭನಂ ಸಮನಿಸುತ್ತಿರೆ (ಚಂದ್ರಪು. ೧೦-೭೫). [ಸಂ.]

ಹಯಶಾಸ್ತ್ರ (ನಾ). ಕುದುರೆಯ ಜಾತಿ, ಲಕ್ಷಣ, ಬಲ, ರೋಗ, ಚಿಕಿತ್ಸೆ ಮುಂತಾದ ಕುದುರೆಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನೂ ತಿಳಿಸುವ ಶಾಸ್ತ್ರ; ಅಶ್ವಶಾಸ್ತ್ರ: ನೃತ್ತಗೀತ ಹಯಶಾಸ್ತ್ರಾದ್ಯೆತ . . . ವಿದ್ಯಾಕದಂಬಕಸುಂ ಚಂದ್ರ ಕವೀಂದ್ರನೋರ್ವನೆ ವಲಂ ಬಲ್ಲಂ ಪೆಱರ್ಬಲ್ಲರೇ (ಮಪಚ. ೧-೫೧); ಇಭೇಂದ್ರಶಿಕ್ಷೆ ಹಯಶಾಸ್ತ್ರಂ . . . ಅಖಿಲವ್ಯೂಹೋತ್ಕರಮೆಂಬನಿತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಷ್ಪಪು. ೪-೫೯). [ಸಂ.]

ಹಯಶಿಕ್ಷಕ (ನಾ). ಕುದುರೆಗಳನ್ನು ಪಳಗಿಸುವವನು; ಅಶ್ವಗಳಿಗೆ ಶಿಕ್ಷಣಕೊಡುವವನು: ಹಯಶಿಕ್ಷಕರಿಂ ಗಜಶಿಕ್ಷೆಯ ಭೀಕರದಿಂ ಸ್ರವಂಗುಡುವ ಜೋದರ ಸಂಚಯದಿಂ ನಯದಿಂ ವೈಹಾಳಿಯ ಬಯಲೊಪ್ಪಿತ್ತು ಪಟ್ಟಣದ ವನದೆಡೆಯೊಳ್ (ಗಿರಿ. ೨-೭೪). [ಸಂ.]

ಹಯಶಿಕ್ಷೆ (ನಾ). ಕುದುರೆಗಳನ್ನು ಪಳಗಿಸುವುದು; ಅಶ್ವಗಳನ್ನು ತರಬೇತುಮಾಡುವುದು: ಹಯಶಿಕ್ಷಾಕ್ರೀಡೆಯಂ ತೋಱುವ ಹರಿಸುತನೋ ತಾನೆನಿಪ್ಪಂದದಿಂ . . . ನಾಡೆಯುಮಾ ಕಂದರ್ಪದೇವಂ ಸುರುಚಿರತುರಗಾರೂಢಿಯೊಳ್ ಪ್ರೌಢನಾದಂ (ಕುಸುಮಾ. ೭-೭೫). [ಸಂ. ಹಯಾಶಿಕ್ಷಾ]

ಹಯಶೃಂಗಚಾಪ (ನಾ). (ಆಲಂ) ಕುದುರೆಯ ಕೊಂಬಿನ ಬಿಲ್ಲಿನ ಹಾಗೆ ಅಸಂಭವವಾದುದು: ಮದನರಸಪ್ಪವಂ ಕವಿಯೆ ತಣ್ಣಸನಾಗದೆ ತೃಷ್ಣೆಗಿಂಬುಕೆಯ್ದದೆ ಪಗೆಗೊಂಡು ಪೋಪುದು ಸಮುದ್ರದ ಮಧ್ಯದ ಬಾಳೆ ಕೆಯ್ಗೆವರ್ಪುದುಮನಗಾಧ ಮನ್ಮಥ ಸಮುದ್ರದ ಮಧ್ಯದ ಬಾಳೆ ಕೆಯ್ಗೆವರ್ಪುದುಮನಮೋಘಮಿಚ್ಛೆಯಿಪ ನಿಚ್ಛೆಯಪೊಂ ಹಯಶೃಂಗಚಾಪಮಂ (ಶಾಂತಿಪು. ೮-೯೭). [ಸಂ.]

ಹಯಹೇಷಿತ (ನಾ). ಕುದುರೆಯ ಕೆನೆತ; ಹೇಷಾರವ: ಯುಗಪದಾಸ್ಫಾಲಿ ತಾನೇಕದುಂದುಭಿಧ್ವನಿಮಧುರಗೀತಂಗಳಪ್ಪ ಹಯಹೇಷಿತಂಗಳಿಂದಂ ಸಂದಣಿಸಿ (ಆದಿಪು. ೧೪-೮೬ ವ). [ಸಂ.]

ಹಯಾತ್, ಹಯಾತಿ (ನಾ). ಬಾಳು; ಜೀವಮಾನ; ಆಯುಷ್ಯ: ಭಗವಂತನ ಮುಖ್ಯಗುಣಗಳೆಂದರೆ - ಜಮಾಲ್ (ಸೌಂದರ್ಯ), ಜಲಾಲ್ (ಶಕ್ತಿ, ಮಹತ್ವ), ಕಮಾಲ್ (ಪರಿಪೂರ್ಣತೆ), ಹಯಾತ್ (ಜೀವನ) . . . ಬಸೀರ್ (ಮಹದ್‌ವೀಕ್ಷಣ) (ಇಸ್ಲಾಂಪಂ. ೨೯೫). **ಹಯಾತಿ:** ತಂದೆಯು ಕೊಂಡ ಗಡಿಗೆಯು ಮಗನ ಹಯಾತಿಯವರೆಗೆ ಬರಬೇಕು ಎಂಬ ವೃತ್ತಿಯಿಂದ ಗೋರಾಕುಂಬಾರನು ಗಡಿಗೆಗಳನ್ನು ತಯಾರಿಸುತ್ತಿದ್ದನು (ಭಾರಸಂ. ೮೩); ಕಾಕಾ ಅವರ ಹಯಾತೀ ಒಳಗ ಆ ಕುಟುಂಬ ಒಡೀಬಾರದು (ದೀಪಹ. II, ೧೦೬). [← ಅರ. ಹಿಂ. ಮರಾ. ಹಯಾತ್]

ಹಯಾತಿ 'ಹಯಾತ್' ನೋ.

ಹಯಾಮಿ (ನಾ). ಆಳ್ವಿಕೆ; ದರಬಾರು: ಉಡುಪಿಪದ್ಮನಾಭಾಚಾರ್ಯರ ಹಯಾಮಿಯಲ್ಲಿ ಅವಳು ತಿನ್ನುತ್ತಿದ್ದ ಒಂದೇ ಒಂದು ಬೀಡಾದ ಬೆಲೆ ಏಳೂವರೆ ರೂಪಾಯಿ (ಬೆಂಗಒ. ೧೪೩). [← ಹಿಂ. ಹಯಾಮ್?. / ತೆಲು. ಹಯಾಮು]

ಹಯಾರ್ಜುನರುಕ್ಕು (ನಾ). ಕುದುರೆಯ ಬಿಳಿಯ ಹೊಳಪು, – ತೇಜಸ್ಸು: ವಾಗ್ಮಲೀಲಾಭೃದ್ಧರಾಮರ ಭುಗ್ಭರಿನಮುಚಭಿದ್ಧ ಯಾರ್ಜುನರುಗ್ಭಿಮಾನಿ ಮರುದ್ಧುನೀವನ ಪುಂಡರೀಕಾಭ್ಜ . . . ಬಸವ (ಬಸಪು. ೩೮-೧). [ಸಂ. ಹಯಾರ್ಜುನರುಚ್]

ಹಯಾಳಿ (ನಾ). = ಹಯತತಿ ೧: ಏಱಿದಾತನ ಮನಂ ಮನವಾಗೆ ಮನೋಜವಂಗಳಂ ಪರಿವ ಹಯಾಳಿ . . . ಒಪ್ಪುಗುಮಾ ಪುರಗೋಪುರಂಗಳೊಳ್ (ಜಗವಿ. ೨-೧೭). [ಸಂ. ಹಯಾಲಿ]

ಹಯಿನು 'ಪಯನ್' ನೋ.

ಹಯ್ದ 'ಹೈದ' ನೋ.

ಹಯ್ನ 'ಪಯನ್' ನೋ.

ಹಯ್ಮು 'ಪಯನ್' ನೋ.

ಹಯ್ಯಂಗವೀನ (ನಾ). ೧. ಆಗತಾನೆ ಕಡೆದು ತೆಗೆದ ಬೆಣ್ಣೆ; ತಾಜಾಬೆಣ್ಣೆ; ನವನೀತ: ಅತಿದೂರೋಚ್ಚ್ವಾಸವಿಕಾಸ ನಾಸಾಂಜಲಿಪುಟ ಪೀಯಮಾನದುಗ್ಧಹಯ್ಯಂಗವೀನಮುಂ (ಆದಿಪು. ೧೧-೨೬ ವ); ಸುಗಂಧಿ ಪರಿಮಲಾನೂನನಪ್ಪ ಹಯ್ಯಂಗವೀನ ಮುಮನರಸಂಗಂ ಪಂಕ್ತಿಯೊಳುಣ್ಣ ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಕುಮಾ. ೧೧-೫೫ ವ). ೨. ಆಗತಾನೆ ಕಾಸಿದ ತುಪ್ಪ: "ಹಯ್ಯಂಗವೀನಂ, ಆಜ್ಯಂ - ಈ ೨ ಹೊಸತುಪ್ಪಂ" (ಪಲಾಯು. ೫೭-೧೧೯). [< ಸಂ. ಹೈಯಂಗವೀನ]

ಹಯ್ಯೆ (ನಾ). ಒಂದು ನಾಡಿನ ಹೆಸರು: ಕುಂದಮರಸರು ಸಾಸ್ತಳಿಸಾಸಿರಮುಮಂ ಹಯ್ಯೆಯಯ್ನೂಱುಮನ್ . . . ರಾಜ್ಯಂಗೆಯ್ಯುತ್ತಮಿರ್ದು (ಎಕ.VII, ೨೬೧. ೧೨೫-೨೪; 1019); ಬನವಾಸಿ ಕಡಂಬಳಿ ಹಯ್ಯೆಯೆಂಬ ದೇಶಂಗಳ್ (ಮುಂಬರಾ. XI, ೨೬೧-೨೭; 1162). 'ಪಯ್ವೆನಾಡು' ಪರಾ. [?]

ಹಯ್ವೆಗುಂದ (ನಾ). ಒಂದುಊರಿನ ಹೆಸರು; P ಈಗಿನ ಸೊರಬ ತಾಲ್ಲೂಕಿನ ಹಯ್ಯುಂದ: ಲೋಕಟಗನರಸಂಗೆ ಪುತ್ರನಿಮಿತ್ತಕಾರಣಮಾಗಿ ಹಯ್ಯೆಗುನ್ನದಭ್ಪೆಗೆ ತಲೆಯಂ ಪರಸಿ (ಎಕ. VIII, ಸೊರಬ. ೪೭೯-೬; 991). [ಹಯ್ವೆ + ಕುಂದ್ರ]

ಹರ (ನಾ).೧. ಶಿವ; ರುದ್ರ; ಈಶ್ವರ: ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು (ಬಸವ. ೧೬೯); ಹರ ಕೊಲ್ಲಲ್ ಪರಕಾಯ್ವನೇ (ಸೋಮೇಶ. ೨೯). ೨. ಅಗ್ನಿ; ಬೆಂಕಿ. ೩. ಶಿವನ ದಿಕ್ಕು; ಈಶಾನ್ಯ: ತೆಂಕಣೊಗೆದು ಬಡಗಣ್ಗೆ ಬರ್ಪೂಡಂ . . . ಹರನೊಳೊಗೆದು ನೈಋತಿಗೆ ಬರ್ಪೂಡಂ . . . ಇವ ನೋಡಿ ಪೇಱ್ ಮಱೆಯದಿರ್ಕ ತಾನೆಂಬುದಂ (ಅಬ್ಬಮ. ೨-೧). ೪. ಭಾಗಿಸುವ ಸಂಖ್ಯೆ, ಛೇದ; ಭಾಜಕ. ೫. ಭಾಗಿಸುವಿಕೆ; ಭಾಗಾಕಾರ. ೬. ನಿವಾರಣೆ; ಪರಿಹಾರ: ವಾತಜ್ವರ, ಪಿತ್ತಜ್ವರ, ಶ್ಲೇಷ್ಮಜ್ವರ ಇವು ಹರವಹುದು (ವಿಷವಿ. ೧೮). 'ಹರಂಗೆಯ್' ಪರಾ. ೭. ಕತ್ತೆ. ೮. ಹಿಡಿತ; ಒತ್ತಾಯದಿಂದ ಹಿಡಿದುಕೊಳ್ಳುವಿಕೆ. "ಹರ - ಅಗ್ನಿ; ೨. ಶಿವ; ೩. ಕತ್ತೆ; ೪.ಹಿಡಿತ; ೫. ಭಾಜಕ" (ನಾನಾಶ. ೨೭೩). ೯. [ಛಂದ] ಗುರು ಅಕ್ಷರದ ಸಂಕೇತ: "ಲಘುವೆ ಹರಿ ಗುರುವೆ ಹರರ್" (ಮಂಗಛಾ. ೧೦೭-೧೯); ವ್ಯೋಮಂ ಹರಂ ತಾಮಾಗಿರಲ್ ಶ್ಯಾಮಾಂಗಿ ಕೇಳ್ ಕಾಮಾಂಗಮಂ (ಛಂದೋಜಂ. ೨-೭೭). ೧೦. [ಗಣಿತ] ಹನ್ನೊಂದು ಎಂಬ ಸಂಖ್ಯೆಯ ಸಂಕೇತ: ಹರರೆಡೆ [ಪಾಕಾಂ. ಹರಿಹರರೊಳೆ] ಯತಿನಿಯಮಂ (ಛಂದೋಜಂ. ೨-೧೫೭).

ಹರಹರ (ದ್ವಿರುಕ್ತಿ) = ಆಶ್ಚರ್ಯವನ್ನು ಸೂಚಿಸುವ ಒಂದು ಉದ್ಗಾರ: ಗಿರಿಯ ಮಕ್ಕಳು ನೆರೆದು ವಜ್ರವ ಸರಸವಾಡುವ ಕಾಲವಾಯಿತೆ ಹರಹರತಿವಿಸ್ಮಯವು (ಕುವಾದ್ರೋ. ೨-೫೫). **ಹರನತನು** = ೧. ಶಿವನ ದೇಹ. ೨. ಎಂಟು ಎಂಬ ಸಂಖ್ಯೆಯ ಸಂಕೇತ: ಕರಿದಿದ್ದಾಗಂ . . . ಹರನ ತನು ಸಿದ್ಧಿ ವಾರಣಮಾರಯೆ ಯೆಂಟಕ್ಕೆ ನಾಮಂ (ವ್ಯವಹಾ. ೯-೮). **ಹರಹರ ಎನ್ನು** = (ಆಲಂ) ಪ್ರಾಣ ಬಿಡು; ಸಾಯು: ಓಡುವ ಬಸ್ಸಿನಡಿಯಲ್ಲಿ ಸಿಕ್ಕಿಹಾಕಿಕೊಂಡ ನಾಯಿ ಅಲ್ಲೇ ಹರಹರ ಎಂದಿತು (ಡೂಢಿ). [ಸಂ.]

ಹರಂಗೆಯ್ (ಕ್ರಿ). ನಿವಾರಿಸು; ಪರಿಹರಿಸು: ಜೀವರಿಗುಂಟಾದ ರೋಗಗಳ ಹರಂಗೆಯ್ವ ಔಷಧಿಗಳಲ್ಲಿಯೂ ತಾನೇ ವ್ಯಾಪಿಸಿರ್ಪುದರಿಂ . . . ಲಕ್ಷ್ಮೀಪತಿಗೆ ಮೊದಲು ನಮಸ್ಕರಿಸಿ ರೋಗಹರವಾದ ಔಷಧಗಳನ್ನು ಬಳಿಕ ಪೇೞ್ವೆನು (ಪಕ್ಷ. ೫). [ಹರ + ಕೆಯ್]

ಹರಕ (ನಾ).(?): ಕುಂದಣನ ಹರಕದಿಂ ಪಿರಿಯ xx ಗಡಿ ನಿಡಿ ಹುಟ್ಟು ಕಟ್ಟಳೆಯ ವಿವರ (ಸೌಶಾ. IX-ii, ೪೫೭-೧೦; 1455) [?]

ಹರಕತು 'ಹರಕತ್ತು' ನೋ.

ಹರಕತ್ತು, ಹರಕತು (ನಾ). ೧. ಅಡ್ಡಿ; ಅಡಚಣೆ: ತಾಲೂಕಿನ ಅಮಲುದಾರ್ರು ಹರಕತ್ತು ಮಾಡಿದ್ದಕ್ಕೆ ದಿವಾನ ಪೂರ್ಣಯ್ಯನವರ ತಾಕೀತ್ತು ತ್ರೆಗದುಕೊಂಡು ಹೋಗಿ ಕೊಟ್ಟಲ್ಲಿಯರಡು ಹೊಲಾ ನಡಶಿಕೊಟ್ಟು (ಎಕ.VII (S), ಚನ್ನಗಿ. ೮೫-೫; 1821); ಇಲ್ಲಿಯವರೆಗೆ ಎಂದಾದರೂ ನಿಮ್ಮ ಕೆಲಸವು ಹರಕತ್ತಾಗಿ ನಿಂತಿರುವದೇ? (ಜಮಿಪ್ರಾ. ೧೯): ದೇವರ ದರ್ಶನಕ್ಕೆ ಯಾರಾದರೂ ಬರಬಹುದಲ್ಲ - ಯತಿಗಳು ಬರುವುದಕ್ಕೆ ಏನು ಹರಕತ್ತು? (ಕಲನ. ೬೯೦). ೨. ಕಷ್ಟ; ತಾಪತ್ರಯ: ಏ ಸಾವಕಾರ, ಒಂದು ಹತ್ತು ರೂಪಾಯಿಕೊಡು, ಬಹಳ ಹರಕತ್ತಾಗೇದ (ಕ್ಷತ್ರಿಜ. ೪೯). **ಹರಕತು:** ೧. ಒಂದ್ಹನೀ ನೀರು ಉಳೀದಿದ್ರೂ ಹರಕತಿಲ್ಲ (ಕಮ್ಮಟ. ೩). [← ಅರ. ಹಿಂ. ಮರಾ. ಹರಕತ್]

ಹರಕರಿಸು 'ಪರಕಲಿಸು' ನೋ.

ಹರಕಲಿಸು 'ಪರಕಲಿಸು' ನೋ.

ಹರಕಿಣೆ (ನಾ). ಕಿಂಡಿ; ಕಿಟಕಿ (?): ಕರೆಯಲಮ್ಮದೆ ಪಾಕ್ಕೆಯನು ಹರಕಿಣೆಯೊಳಗಿಳಿಕಿ ತಾ ನೋಡುತ ಕರಸನ್ನೆ ಮಾಡುವನೊರ್ವ (ಜ್ಞಾನಚ. ೩೮-೨೩). [?]

ಹರಕೆ 'ಪರಕ್ಕೆ' ನೋ.

ಹರಕೆಕಟ್ಟು 'ಪರಕೆಗಟ್ಟು' ನೋ.

ಹರಕೆಕೊಡು 'ಪರಕೆಗೊಡು' ನೋ.

ಹರಕೆಗೊಳ್ 'ಪರಕೆಗೊಳ್' ನೋ.

ಹರಕೆಗೊಳ್ಳು 'ಪರಕೆಗೊಳ್' ನೋ.

ಹರಕೆತೀರಿಸು (ಕ್ರಿ). ದೇವರಿಗೆ ಹೊತ್ತ ಹರಕೆಯನ್ನು ಈಡೇರಿಸು; ದೇವರಿಗೆ ಕೊಡುತ್ತೇನೆಂದ ಕಾಣಿಕೆಯನ್ನು ಸಲ್ಲಿಸು: ಅವರು ಹರಕೆ ತೀರಿಸಿ ಬಂದ ಮೇಲೆಯೆ ಮಗನ ರೋಗ ವಾಸಿಯಾಯಿತು (ಡೂಢಿ). [ಹರಕೆ (< ಪರಕ್ಕೆ) + ತೀರಿಸು]

ಹರಕೆದೆಗೆ (ಕ್ರ). ದೇವರಿಗೆ ಬಲಿಯೆಂದು ಒಪ್ಪಿಸು; ಬಲಿಕೊಡು: ಈಗಳೊಂದಿಸಸು ಹೂತ್ತಿಗೆ ಹರಕದೆಗೆದ ಕುಜಿಯಾಗಿ ಕೊರಲಂ ಕೊಯ್ಸುಕೊಂಡು ಭೂತಕ್ಕೆ ಬಲಿಯಾಗುತಿದಯನ್ನ ಮೆಯ್ (ಸಮ್ಮಳ. ೨-೬೬) [ಹರಕೆ (< ಪರಕ್ಕೆ) + ತೆಗೆ]

ಹರಕೆಹೊರು (ಕ್ರ). ತನ್ನ ಕೆಲಸ ನೆರವೇರಿದರೆ ದೇವರಿಗೆ ಪ್ರತಿಯಾಗಿ ಹೀಗೆ ಸೇವೆ ಸಲ್ಲಿಸುತ್ತೇನೆಂದು ಪ್ರತಿಜ್ಞೆಮಾಡು, – ಹರಸಿಕೊಳ್ಳು: ಜ್ಞಾಪಕ ಬಂದ ದೇವರಿಗಲ್ಲಾ ಹರಕೆಹೊತ್ತೆ (ಸಿರಾತ. ೫೪); ಹರಕೆ ಹೂತ್ತು ಕೊಂಡ ಭಕ್ತರು ಸ್ನಾನಮಾಡಿ ನೆಲದ ಮೇಲೆ ಮಲಗಿಕೊಂಡು ಬಸವನಿಂದ ದಾಟಿಸಿಕೊಳ್ಳುತ್ತಾರೆ (ಬೋರದೇ. ೨೩).

[ಹರಕೆ (< ಪರಕ್ಕೆ) + ಹೊರು (< ಪೊಱು)]

ಹರಕೋಟೀರ (ನಾ). ಶಿವನ ಜಡೆಮುಡಿ; ಜಟಾಜೂಟ: ಹರಕೋಟೀರದ ಚಂದ್ರಮಂಗಮರ್ದ ಗಂಗಾದೇವಿಗಾದತ್ತು ಭಾಸುರಸಂಧ್ಯಾರುಣರೋಚಿ ಬೈತಲೆಯ ಸಿಂಧೂರಂ ಭವತ್ ಪಾದುಕಾಭರಣ ಶ್ರೀಪದಪದ್ಮಪಾಂಶುನಖಜಾಲಂ ತಾರಕಾಪಾಳಿ ಭಾಸುರಸೀಮಂತದ ಮೌಕ್ತಿಕಾವಳಿಯಲ್ಲಂಕಾರಂ ಕಿರಾತೇಶ್ವರಾ (ವೃಷವಿ. ೧೦-೧೩೬).

[ಸಂ.]

ಹರಕೋಲು (ನಾ). ಹರಗುವ ಸಾಧನ; ಕುಂಟೆಯ ಈಸು: ಮುತ್ತಿನ ಹರಕೋಲು ಮುಗಿಲುಬಣ್ಣದ ಕುಂಟೆ ಸಣ್ಣ ಕೊಬೀನ ನವರತ್ನ ಕಟ್ಟೊಂಡು ಜಾಣ ಹರಗಿದನು ಜವನಾವ (ಹಳ್ಳಿಯ. ೪೧). [ಹರಗು$_1$ (< ಪರಗು) + ಕೋಲು$_1$ (< ಕೋಲ್)]

ಹರಗ (ನಾ). (?): ಪ್ರೀತಿಯಿಂ ತನ್ನ ಯಮ್ಮಗೆ ಹರಗಮಂ ತಿನಿಸಿ ಸಾತಿಶಯಮೆನಲದರ ಮೃದೊಳೆದು ಕರೆವುತ್ತ (ಮಹಾಂತೇ. ೧೨-೨೯). [?]

ಹರಗಣ (ನಾ). ೧. ಶಿವನ ಓಲಗದಲ್ಲಿರುವ ಶ್ರೇಷ್ಠಭಕ್ತರ ಸಮುದಾಯ. ೨. ಶಿವಭಕ್ತರ ಸಮೂಹ: ಹರಗಣಪಂಕ್ತಿಯ ನಡುವೆ ಕುಳ್ಳರ್ದು . . . ಸಕಲ ದೇವಾನ್ವಯ ಒಡಯರಿಂದಲೂ ಮಿಗಿಲಾಗಿಕ್ಕಲು ತೆಗೆದಿರಿಸಿದೆನು (ಬಸವ. ೪೬೯). ೩. ಶಿವನ ಲಿಂಕರಾದ ವೀರಭದ್ರನೇ ಮೊದಲಾದ ವೀರರ ಪಡೆ: ಜಗದಳವಿನಗ್ರದ ಹರನ ವೊಲು ಬಲವವನೊಳದೆ (ತೊರಕಾ. ೬-೮-೧೩). [ಸಂ.]

ಹರಗಣೆ (ನಾ). ಸಾಗುವಳಿಗಾಗಿ ಭೂಮಿಯನ್ನು ಹರಗುವಿಕೆ: ಒಂದು ದಿವಸ ಪ್ರಾಣವಂ ಬಿಡುವಾಗ ಸತಿಸುತರು ನಮಗೇನು ಗತಿ ಎಂದು ಕೇಳಲು ಹೊಲನ ಹರಗಣೆಯಂ ಮಾಡಿ ಬದುಕಿ ಎನಲು (ಭೃಶೂ. ೨. ೩೧೩); ಹರಗಣೆಯ ಕಳವಳ ದೊಳಿಯತಲಳಿದೊರ್ವಂಗೆ ಪರಲೋಕವಾದುದು (ಅಜುಪು. ೮).

[ಹರಗು$_1$ (< ಪರಗು) + - ಅಣೆ$_1$]

ಹರಗಲು 'ಪಜಿಗೋಲ್' ನೋ.

ಹರಗಿ 'ಪರಗಿ' ನೋ.

ಹರಗಿರಿ (ನಾ). ಶಿವನು ವಾಸಮಾಡುವ ಬೆಟ್ಟ; ಕೈಲಾಸಪರ್ವತ: ಹರಗಿರಿಯಂ ಪರಿದೇಱುವ ಹರಿಪಾದಕ್ಕಮಮ ಸರಸಿ ಪರಪಿದ ನೀಲಂಬೆರಸಿದ ಪೀತಾಂಬರಮೆನೆ ಬಿರಿದಲರ್ದುವು ತುಂಬೆರಸಿ ಪೊಂದಾವರಗಳ್ (ಸೂಕ್ತಿಸು. ೯-೪೨); ಹರಗಿರಿಗೆ ಹುಲು ರಕ್ಕಸರು ಮತ್ಸರಿಸುವಂತಾಯ್ತು (ಕುವ್ಯಾಚ. ೧೪-೫೩). [ಸಂ.]

ಹರಗು$_1$ 'ಪರಗು' ನೋ.

ಹರಗು$_2$ 'ಪರಪು$_1$' ನೋ.

ಹರಗುವಾಳ್ (ನಾ). ಕುಂಟೆಯ ತಾಳು; ಗುಳ: ಬಾಲು - ಜೀವನಾರ್ಥಂ; (ನಾವಿದವಾಳ್, ಕೂರ್ವಾಳ್, ಹರಗುವಾಳ್ - ಎಂಬಲ್ಲಿ ಕುಳಂ) (ಜಮದ. ಪಠಿ.೧).

[ಹರಗು$_1$ (< ಪರಗು) + ಬಾಳ್$_3$]

ಹರಗೃಹ (ನಾ). ಶಿವದೇವಾಲಯ; ಶಿವಾಲಯ: ಹರಿಗ್ರಿಪದಿಂ ಹರಗೃಹದಿಂ ಸುರಗೃಹದಿಂದರುಹಗೃಹದೆ ಬೌದ್ಧಾಲಯದಿಂ ಗೊರವರ ಸವಣರ ಬೌದ್ಧರ ನರವಿಗಳಿಂದಿಂಡ ನಾಡೆ ಸೂಗಯಿಸಿ ತೋರ್ಕುಂ (ಕೋಲ್ಹಾಶಾ. ೧೭-೧೪; 1118); ಹರಗೃಹದಿಂ ನೆಗೆದು ನಭೋಂತರಕ್ಕೆದುವ ಧೂಪಧೂಮದಾಮೋದಕ್ಕಂಬರಲಕ್ಷ್ಮಿ ನಿಜಶಿರೋಜೋತ್ಕರಮಂ ಬರ್ಚಿದವೊಲಬ್ಬಮಗ್ರದೊಳೆಸಗುಂ (ರಾಜಶೇ. ೨-೧೩೦). [ಸಂ.]

ಹರಗೋಲು 'ಪಜಿಗೋಲ್' ನೋ.

ಹರಚರಣ (ನಾ). ಶಿವನ ಪಾದ: ಹರಚರಣಕಮಲಭೃಂಗಂ . . . ಇಂವಬೆಡಂಗಂ (ಗದಾಯು. ೧-೩೧); ಹರಚರಣವಿಕ್ಷಿಪ್ತಚೇತಃಸ್ಫುರಣ' ತತ್ಪರಿಯಂತ ಉಕ್ಕಿತು (ಜವ್ಯಾಳ. ೫-೯). [ಸಂ.]

ಹರಚಿತ (ನಾ). ಪರಿಹಾರೋಪಾಯ; ಪ್ರಾಯಶ್ಚಿತ್ತ: ಇಂದು ಕೃತಪಾತಕಕೆ ತ್ರಿಕರಣದಿಂದ ಹರಚಿತ ಮಾಡದಿರ್ದಡೆ ಮುಂದೆ ನವೆವರು ನರತದಲಿ (ನಿಘಾಗ. ೬-೧೦-೩); ಧರಣಿಸುರರಿಗೆ ಬಂದ ಕಂಟಕವ ಪರಿಹರಿಸದಿರಲವಗೆ ಪಾತಕಂ ಪರಿವಹುದು ಬಳಿಬಳಿಕೆ ಹರಚಿತವ [ಪಾಕಾಂ. ಪರಿಹರವ] ನಾ ಕಾಣೆ (ಶುರಂಗ. ೧೫-೨).

[?. / ಸಂ. ಹರ = ನಿವಾರಣೆ]

ಹರಜಟಾನಿಲಯೆ (ನಾ). ಶಿವನ ಜಡೆಯಲ್ಲಿ ಇರುವವಳು; ಗಂಗೆ: ಗಂಗಾಜೇವಿ ಹರಜಟಾ [ಪಾಕಾಂ. ಶರೋ]ನಿಲಯೆ ನಿನ್ನಯ ಮಹಿಮೆಯು ಪೂಗಳಲಂದರಿದು ಪೊರೆವುದೆನ್ನ (ಪ್ರಾಥರಾ. ೧-೪). [ಸಂ. ಹರಜಟಾನಿಲಯಾ]

ಹರಜನ್ಮ (ನಾ). ಶಿವಪದ; ಹರತ್ವ: ನರಜನ್ಮವ ತೊರೆದು ಹರಜನ್ಮವ ಮುಡಿದ ಗುರುವೇ . . . ನಮೋ ನಮೋ (ಮಹಾದೇ. ಬ. ೨೩-೪೩). [ಸಂ.]

ಹರಟಿ 'ಹರಿಟೆ' ನೋ.

ಹರಟು (ಕ್ರ). ಗಳಹು; ವ್ಯರ್ಥವಾಗಿ ಮಾತಾಡು: ಮನಬಂದಂತೆ ಹರಟಿದರೆ ನಿನ್ನ ಶಿರವು ಉಳಿಯಲಾರದು. (ಪೌಗಂಧಿ. ೨೯೪-೧೫೫); ದುರುಳತನದಲಿ ಬಾಯ್ಗೆ ಬಂದುದ ಹರಟದೇ ಪೋಗತ್ರ ಸುಮ್ಮನೆ ಸಾಯಬೇಡ (ಅರ್ಜಾವಿ. ೧೨-೧೪). ೨. ವಿನೋದಾರ್ಥವಾಗಿ ಸಂಭಾಷಿಸು; ಸಲ್ಲಾಪಮಾಡು: ಗಂಡಸರು . . . ನಾಡಿನ ವಾರ್ತೆಗಳನ್ನು ಹರಟುತ್ತಿದ್ದರು (ಹಾಹುತ್ರ. ೪೮); ಮಮವೆಯ ಸಡಗರದಲ್ಲಿ ತನ್ನ ಗಂಡನೊಡನೆ ಹರಟುವುದರಲ್ಲಿ ಬೇರೆಲ್ಲರನ್ನೂ ಆಕೆ ಮರೆತಂತಿತ್ತು (ವಾಕ್ಷೇ. ೨೭೨).

[? ./ ತುಳು. ಅರಟು, ಹರಟು]

ಹರಟೆ (ನಾ). ೧. ವ್ಯರ್ಥವಾದ ಮಾತು; ಗಳಹುವಿಕೆ: ಹೇಗ ಉದ್ಗಾರ ಮಾಡ್ಯಾನು ಶ್ರೀಹರಿ . . . ಹರಿಯ ನೆನೆಯದೆ ಗೊಡ್ಡುಹರಟೆಗೆ ಹೊತ್ತು ಏಱಿಸಿದವನ (ಪುರಂವ. ೧.೧೫೬-೧೧); ಮರ್ಯಾದೆಯಿಲ್ಲದೆ ಹರಟುತ್ತೀಯೆ . . . ನಿನ್ನ ಹರಟೆ ನನಗೆ ಬೇಡ (ಅರ್ಜುಳ. ೪೭); ಬಾಲಸಂನ್ಯಾಸಿಗೆ ಹಾಳುಹರಟೆ ಯಾಕೆ? (ಗಂವ). ೨. ನೀರಸವಾದ ಕಥನ; ಗೊಡ್ಡುಕತೆ: ಹಿಂದುಮುಂದಣ ನಿಂದ ಹರಟೆಯ ಹೇಳಿಹನೆಂದರೆ ಪುರಾಣಕನಾದ (ಶಿವಮಂ. ೪೪). ೩. ಸರಸಸಲ್ಲಾಪ; ವಿನೋದದ ಮಾತುಕತೆ: ದಿನವೆಲ್ಲ ಗಳಿಯುಗಲ್ಲಿ ಹರಟೆಯಲ್ಲಿಯೇ ಹೋಗಿತ್ತು (ಅಜನಾ. ೨೪೨); ಹರಟೆಯ ಸುಖ ಉಳಿಯಬೇಕಾದರೆ ಕೂಡಿದವರ ಸಂಪ್ಯ ಮಿತವಾಗಿರುವುದು ಅವಶ್ಯ (ದೀಚನ್ಯ. ೧೭೭). ೪. ಪ್ರಬಂಧಸಾಹಿತ್ಯದಲ್ಲಿ ಒಂದು ಪ್ರಕಾರ; ಲಘುಪ್ರಬಂಧ: ಹರಟೆಯೆಂದರೆ ಗದ್ಯಭಾವಗೀತ ಎನ್ನುವಷ್ಟು ಉತ್ತಮ ಹರಟೆಗಳು ಇಂಗ್ಲೀಷಿನಲ್ಲಿವೆ (ನಿಶಾಭ. ೧೫); ನಮ್ಮ ಸಾಹಿತ್ಯದಲ್ಲಿ ಹರಟೆಯು ತೀರ ಕೂಸು (ನಿಶಾಭ. ೧೨೨).

[< ಹರಟು ./ ತಮಿ. ಅರಟ್ಟೈ; ತುಳು. ಅರಟೆ, ಹರಟೆ]

ಹರಟೆಕೊಚ್ಚು (ಕ್ರ). = ಹರಟು ೧: ಹರಟೆಯ ಗತಿಯು ದೇವರಿಗೂ ತಿಳಿಯದು . . . ಹರಟೆಕೊಚ್ಚುವವರಿಗೂ ತಿಳಿಯದು (ನಿಶಾಭ. ೧೨೦); ಒಂದು ದಿನ ಮಧ್ಯಾಹ್ನ ನಂಜಮ್ಮ ತನ್ನ ಪರಿಚಿತರ ಮನೆಗೆ ಹರಟೆಕೊಚ್ಚಲು ಹೋಗಿದ್ದಳು (ಕುಸಂ. ೨೮).

[ಹರಟೆ + ಕೊಚ್ಚು$_1$]

ಹರಟೆಗಾರ (ನಾ) ಲಘುಪ್ರಬಂಧಗಳನ್ನು ಬರೆಯುವವನು: ಹರಟೆಗಾರ ಕೇವಲ ನರ್ಮಸಚಿವನಲ್ಲ; ಉಚ್ಚಸಾಹಿತಿ, ಕವಿತೆಗಳನ್ನು ಬರೆಯದ ಕವಿ (ನಿಶಾಭ. ೧೬).

[ಹರಟೆ + - ಗಾರ (< - ಕಾಱ)]

ಹರಟೆಗುಟ್ಟು (ಕ್ರ). = ಹರಟು ೧: ಯಾರೂ ಇಲ್ಲದೆ ಕರವ ದಾಲಯೆದ್ದಪ ಕಟ್ಟಿ ಕೂಡಿಕೊ ಎನುತಲೆ ಹೋರಾಟವ ಮಾಡಿ ಹರಟೆಗುಟ್ಟುವನೀತ [ಪಾಕಾಂ. ಜೋಗಾಡಿ ಸಿದನಮ್ಮ] (ಪುರಂದ. ೧-೬೦-೧); ಕಂಡಕಂಡಲ್ಲಿ ನಿಂದನಿಂದಲ್ಲಿ ಮುಂದುವರಿದು ಹರಟೆಗುಟ್ಟುವ ಒಣಹರಟೆಗಾಱರ ಶಿವಾನುಭಾವಿಗಳೆಂತಂಬನಯ್ಯಾ (ಅಖಂಡೇ. ೧೯೨-೧೦). [ಹರಟೆ + ಕುಟ್ಟು$_1$]

ಹರಟೆಬಡಿ (ಕ್ರ). = ಹರಟು ೧: ಎಲಾ ಹಾರವ, ಲಕ್ಷವಿಲ್ಲದೆ ಹರಟೆ ಬಡಿಯುತೀಯೆ? ನಿನ್ನ ತಲೆಯನ್ನು ಈಗಲೇ ಹಾರಿಸುತ್ತೇನೆ (ನೀತಚಿಂ. XI, ೧೪). [ಹರಟೆ + ಬಡಿ$_1$]

ಹರಟೆಬಾಯಿ (ನಾ). ಹರಟುವ ಬಾಯಿ; ಸಿಕ್ಕಾಪಟ್ಟೆ ಆಡುವ ಬಾಯಿ: ಅಲ್ಲಿದ್ದ ಹರಟೆಬಾಯಿಗಳನ್ನು ಮುಚ್ಚಿಸಬೇಕಾದರೆ ತಾಯಿಗೆ ಸಾಕುಸಾಕೆನಿಸಿತು (ಮುಂಗಾಪ್ರ. ೮೧).

[ಹರಟೆ + ಬಾಯಿ$_1$ (< ಬಾಯ್)]

ಹರಟೆಮಲ್ಲ (ನಾ). ಹೆಚ್ಚು ಮಾತಾಡುವವನು; ವಾಚಾಳಿ: ಒಂದು ಮಾತು ಹೇಳಿ ಮುಗಿಸೋ ಕಡೆ ನಾಲ್ಕುಮಾತು. ಅವನಿಗೇನು ಬಂತು? ಶುದ್ಧ ಹರಟೆಮಲ್ಲನಾಗಿದ್ದಾನೆ (ನೂರ್ಗಡ. ೭೩); ಇಂತಹ ಸುಕೃತಶಾಲಿಯಾದ ತಂದೆಯ ಮಗನಾಗಿ ಹುಟ್ಟಿದೆ-ಜನ್ಮತಃ ಅಷ್ಟಿರಚಿತ್ತನೂ ಹರಟೆಮಲ್ಲನೂ ಅಲೆದಾಟದ ಸ್ವಭಾವದವನೂ ಆದ ನಾನು (ಪ್ರಾಣಿ. ೧೦); ತರುಣಬರಹಗಾರರಲ್ಲಿ ಅಧಿಕಮಂದಿ ಹರಟೆಮಲ್ಲರು (ರೂಪಸಂ. ೪೦).

[ಹರಟೆ + ಮಲ್ಲ]

ಹರಟೆಮಲ್ಲಿ (ನಾ). ಹರಟುವವಳು; ಗಳಹುವವಳು: ಆ ಹರಟೆಮಲ್ಲಿಯ ಮಾತು ಕೇಳುತ್ತಿದ್ದರೆ ಹೊತ್ತುಗಳೆದದ್ದೇ ತಿಳಿಯುವುದಿಲ್ಲ (ರೂಢಿ). [ಹರಟೆಮಲ್ಲ + - ಇ$_3$]

ಹರಟೆಹೊಡೆ (ಕ್ರಿ). ೧. = ಹರಟು ೧: ಅದು ಇದೂ ಹರಟೆಹೊಡೆಯುತ್ತ . . . ನಡೆದ (ರೂಪಸಂ. ೭). ೨.= ಹರಟು ೨: ರಜೆ ಇದ್ದಾಗ ಆನಂದ . . . ಹತ್ತಾರು ವಿಷಯಗಳನ್ನು ಕುರಿತು ಹರಟೆಹೊಡೆಯುತ್ತಿದ್ದ (ಕಮನ. ೨.) [ಹರಟೆ + ಹೊಡೆ$_1$ (< ಪೊಡೆ$_1$)]

ಹರಡಿ 'ಪರಡು$_3$' ನೋ.

ಹರಡಿಕೆ (ನಾ). ಹಬ್ಬುವಿಕೆ; ಪ್ರಸಾರ; ವಿಸ್ತರಣೆ: ಚರ್ಚುಗಳ ಪರಸ್ಪರದ್ವೇಷವೂ . . . ಸರ್ಕಾರದ ಪ್ರಭಾವವೂ ಇಸ್ಲಾಂ ಹರಡಿಕೆಗೆ ಸಹಾಯವಾದುವು (ಇಸ್ಲಾಂಸಂ. ೨೧).

[ಹರಡು$_1$ (< ಪರಡು$_1$) + - ಇಕೆ]

ಹರಡಿಸು (ಕ್ರಿ).೧. ಅಗಲವಾಗಿ ಹಾಕಿಸು; ಹರವುವಂತೆ ಮಾಡು: ಪಂಡಿತರು ಸ್ವಲ್ಪ ಮರಳು ತರಿಸಿ ತಮ್ಮ ಮುಂದೆ ನೆಲದ ಮೇಲೆ ಹರಡಿಸಿ . . . ಎಂದರು (ಚಂಗಾಳ್ಳ. ೭೧). ೨. ಪ್ರಸಾರಮಾಡು; ವಿಸ್ತರಿಸು; ಹಬ್ಬಿಸು: ವೇದಶಾಸ್ತ್ರಾದಿಗಳಿಗಿಂತಲೂ ಹೆಚ್ಚಾಗಿ ಕಾವ್ಯವೇ ಆತ್ಮಸಮತಾಸಂಸ್ಕೃತಿಯನ್ನು ಹರಡಿಸಿ ನೆಲೆವಡಿಸಿತು ಎಂದು ನಮ್ಮ ಭಾವನೆ (ನಾಡೋಜ. ೨). [ಹರಡು$_1$ (< ಪರಡು$_1$) + - ಇಸು$_3$]

ಹರಡು$_1$ 'ಪರಡು$_1$' ನೋ.

ಹರಡು$_2$ 'ಪರಡು$_2$' ನೋ.

ಹರಡು$_3$ 'ಪರಡು$_3$' ನೋ.

ಹರಡೆ$_1$ 'ಪರಡು$_3$' ನೋ.

ಹರಡೆ$_2$ 'ಪರಡೆ$_3$' ನೋ.

ಹರಡೆ$_3$, ಹರ್ಡೆ (ನಾ). ಅಳಲೆಕಾಯಿಮರ: (ಕ).**ಹರ್ಡೆ**: (ಕ). 'ಅಣಲೆ$_1$' ಪರಾ.

[← ತುಳು. ಹರಡೆ, ಅರಡೆ]

ಹರಣ$_1$ 'ಪರಣ$_2$' ನೋ.

ಹರಣ$_2$ (ನಾ). ೧. ತೆಗೆದುಕೊಳ್ಳುವಿಕೆ; ಸ್ವೀಕಾರ. ೨. ಕಿತ್ತುಕೊಳ್ಳುವುದು; ಸೆಳೆದುಕೊಳ್ಳುವುದು. ೩. ಕಳ್ಳತನ; ಅಪಹಾರ: ಅನ್ಯರದನ್ನು ತನ್ನದೆಂದು ಮರೆಮಾಚಿ ಹೇಳುವುದೇ ನಿಜವಾದ ಹರಣ (ಭಾರವಿ. ೨೦೦). ೪. ನಾಶಗೊಳಿಸುವಿಕೆ; ಕೊಲೆ: 'ಹರಣಂಗೆಯ್' ಪರಾ. ೫. ಇಚ್ಛೆಗೆ ವಿರುದ್ಧವಾದುದು; ಅನಪೇಕ್ಷಿತವಾದ ಕಾರ್ಯ. ೬. ಮದುವೆಯ ಕಾಲದಲ್ಲಿ ಮದುಮಕ್ಕಳಿಗೆ ಕೊಡುವ ಉಡುಗೊರೆ; ಬಳುವಳಿ. ೭. ಉಪನಯನಕಾಲದಲ್ಲಿ ವಟುವಿಗೆ ಕೊಡುವ ಕಾಣಿಕೆ. ೮. ಸಂಧಾನ ಮಾಡುವುದು; ಸಂಧಿಕಾರ್ಯ. "ಪ್ರಾಣಮುಂ ಸಂಧಿಕೃತ್ಯಂ ಕೊಲೆಯುಂ ತನ್ನಿಚ್ಛೆಗಂ ಬಾರದುದು ಹರಣಮಕ್ಕುಂ" (ನಾನಾರ್ಥ. ೧೬೬). [ಸಂ.]

ಹರಣಂಗಳೆ, ಹರಣಗಳೆ (ಕ್ರಿ). ಪ್ರಾಣವನ್ನು ಬಿಡು; ಸಾಯು: ಕಾದಲನನಗಲ್ದಗಲ್ಕೆಯುರಿಪಂ ಸೈರಿಸಲಾಜದೆ ಹರಣಂಗಳೆಯಲುಜ್ಜುಗಿಸಿ (ಶಬಶಂ. ೩-೩೫ ವ). **ಹರಣಗಳೆ**: ಸ್ಮರನ ಚರಣಹತಿಯಿಂದಸುರ ಕಾರಿ ರಕ್ತವ ಧರೆಗೆ ಕೆಡೆದುರುಳಿ ಹರಣಗಳೆಯೆ (ನವಮೂ. ೧೨-೯೨). [ಹರಣ$_1$ (< ಪರಣ$_2$) + ಕಳ್$_2$ (< ಕಟ್ಪಿ)]

ಹರಣಂಗೆಯ್ (ಕ್ರಿ).ಕೊಲೆಮಾಡು; ಕೊಲ್ಲು: ಪಾಱುವ ಪಾಱುಂಬಳೆ ಕೊಳೆ ಜೇಱ್ದುಂಬರಕೆ ತಲೆ ಸಿಡಿಲ್ದೊಡಮಾ ಕಾಯ್ಪಾಜದೆ ಹರಣಂಗೆಯ್ದುವು ಜಾಜಿಲ್ಲದ ಜೋದರಟ್ಟೆಗಳ್ ಕೆಲವಾಗಳ್(ವಂಪಭಾ. ೧೦-೯೫). [ಹರಣ$_2$ + ಕೆಯ್$_1$]

ಹರಣಂಗೊಳಿಸು (ಕ್ರಿ). ಅಪಹಾರಮಾಡಿಸು; ಕಳವುಮಾಡಿಸು:ಹರಣಂಗೊಳಿಪುದಿವಂಗಚ್ಚರಿಯಲ್ತು . . . ತಸ್ಕರರಿಂ ಮದ್ಧನಮನಿಂತು ಕಳಿಸಿದ ಕತದಿಂ (ವೃಷಪ. ೨೦-೧೪).

[ಹರಣ$_2$ + ಕೊಳ್$_1$ + - ಇಸು$_3$]

ಹರಣಂಬಡೆ (ಕ್ರಿ). ಪ್ರಾಣವನ್ನು ಹೊಂದು; ಜೀವಂತವಾಗು: ಪಲವುಂ ಪರಿಯ ಪಕ್ಕಿಗಳ ಪೆರ್ಬಿದ ಸರಂಗಳಿಂ ಹರಣಬಡೆದಂತ ಪರಿವಡೆದು ತಿರಿತಿಣಪಡೆದ ಪೇರಡವಿಯೊಳ್ ಪೊಗಟ್ಟೆವೆತ್ತು (ಕಬ್ಬಿಕಾ. ೫೧); ಅವರ್ ಮಂತಣಂಗೋಂದು ಮಂತ್ರತಂತ್ರೌಷಧ ವಿಲೇಪನಾದಿಯಂ ನಿಮಿರ್ಚಿಯುಂ ಹರಣಂಬಡೆಯಲ್ಕಮಜಿದೆ ಕೆಲಸಾರ್ದರ್ (ವೃಪವಿ. ೩೧-೨೪ ವ). [ಹರಣ$_1$ (< ಪರಣ$_2$) + ಪಡೆ$_1$]

ಹರಣಂಬಾರು (ಕ್ರಿ). ಪ್ರಾಣರಕ್ಷಣೆಯನ್ನು ನಿರೀಕ್ಷಿಸು: ನಿನ್ನೊಳ್ಕಾಂ ಪೋರ್ವೆನೆಂದಚ್ಯುತನುರುತರ ಸಂರಂಭದಿಂದಾಜಿಗೇಳ್ತರ್ಪನ್ನಂ ತನ್ನೊಡ್ಡದೆಲ್ಲಂ ಕ್ಷಣದೊಳ್ ಹರಣಂಬಾರಿ ಪೋದತ್ತದಾಗಳ್ (ವೀರಶ. ೮೪).

[ಹರಣ$_1$(< ಪರಣ$_2$) + ಪಾರು$_1$ (< ಪಾರ್$_1$)]

ಹರಣಂಬಿಡಿ, ಹರಣವಿಡಿ (ಕ್ರಿ). ಪ್ರಾಣವನ್ನು ಕಾಯ್ದುಕೊಂಡಿರು; ಜೀವಹಿಡಿ; ಬದುಕಿರು: ವಿರಹದಿಂದುರಿಗದಿರಿಂದ ಕಿಮುಳ್ಳಿದ ತಳರೆನೆ ಕೊರಗಿ ಕರಂ ಹೂವಿನ ಹೊತ್ತಪ್ಪನ್ನೆವರಂ ಬೀಡಿನೊಳು ಹರಣಂಬಿಡಿ[ಪಾಕಾಂ. ಬಡೆ]ದಿರ್ದಲ್ಲಿಂ ತಳರ್ದಂ . . . ಜಯಭೂಪಂ (ಜಯಕಾ. ೪-೪೫). **ಹರಣವಿಡಿ**: ಆತನನೆಚ್ಚ ವೀರಂ ಗರಸಿಯಹೆಯೆನಲದನೆ ಹಾರುತ ಹರಣವಿಡಿದಿಹಳಮರಧೇನುವಿನುಕುತಿಯನು ನಂಬಿ (ನಭಾಗ. ೯-೧೭-೩೨). [ಹರಣ$_1$ (< ಪರಣ$_2$) + ಪಿಡಿ$_1$]

ಹರಣಗಳೆ 'ಹರಣಂಗಳೆ' ನೋ.

ಹರಣಗೊಳ್, ಹರಣಗೊಳು (ಕ್ರಿ). ಪ್ರಾಣವನ್ನು ತೆಗೆ; ಕೊಲ್ಲು; ವಧಿಸು: ನರರು ರಾಕ್ಷಸಭಟರ ರಣದಲಿ ಹರಣಗೊಂಬುದು ಬೆಱಗಲಾ (ತೊರಕಾ. ೬-೧೨-೫). **ಹರಣಗೊಳು**: ಸುಭಟರ ಹರಣಗೊಳುವ ಪಟಲುಗಳ ಕಱುವ ಗುಂಡಿನ ಮಳೆಯೂರೊಳಗೆಸೆದುದು ಹೊಱಪಾಳೆಯದವರಿಂದ (ಕಂಪಾ. ೧೬-೩೬).

[ಹರಣ$_1$ (< ಪರಣ$_2$) + ಕೊಳ್$_1$]

ಹರಣಗೊಳು 'ಹರಣಗೊಳ್' ನೋ.

ಹರಣಭರಣ (ನಾ). ೧. ತೆಗೆದುಕೊಳ್ಳುವುದು ಮತ್ತು ತುಂಬಿಕೊಡುವುದು: ಬಿಸಿಲಂ ನಾನಾತಪತ್ರಂ ಮಸುಳಿಸೆ ಸಿತಖಡ್ಗಪ್ರಭಾಮಂಡಲಂ ಕೊರ್ವಿಸೆ . . . ಮಾರ್ಗಾನೇಕತೋಯಾಶಯಮನುರುರಜಂ ಪೀಱೆ ದಾನಪ್ಲವಂ ಪೂರಿಸೆ ತೋಱಿತ್ತತ್ತಮಾದಂ ಹರಣಭರಣಚಾತುರ್ಯಮಂ ಚಾತುರಂಗಂ (ಚಂದ್ರಪು. ೧೦-೩೦); ಈ ಧರ್ಮಜನ ಬಹುಮಾನಾವಮಾನದ ಹೊಱಿಗೆ ನಿನ್ನದು ಹರಣಭರಣವನು ನೀವು ಬಲ್ಲಿರಿ (ಜಾಮ್ಲಾ. ೧-೪); ಸರಿಗಮಪದನಿಗಳ ನೇಮ ತಪ್ಪದೆ ಹರಣಭರಣದ ಹೆಂಪು ತಿರುಪುಗಳ . . . ರಾಮಣೀಯಕರಚನೆಯಲಿ ಸನಾಮನೆನಿಸುವನವನೆ ಗಾಯಕನು (ಜಾಮ್ಲಾ. ೩-೯೫). ೨. ತಪ್ಪು ಮತ್ತು ಒಪ್ಪು: ಆ ಲಿಂಗದ ಶೃಂಗಾರದ ಹರಣ ಭರಣವಲಾ ಎಂದಱಿದು ಅಳವಡಿಸೂದು ರುದ್ರಾಕ್ಷಿಯನು (ಸರ್ವಜ್ಞ. ೧೮೨-೬೩೪). ೩. (ಶತ್ರುಗಳ) ಶಿಕ್ಷೆ ಮತ್ತು (ಸ್ವಕೀಯರ) ರಕ್ಷೆ: ಮರನನೇಱಿದಱೊಳಗೆ ಪಾಂಡವರಿರಿಸಿ ಹೋದರು ಕೈದುಗಳ ಮಿಗೆ ಹರಣಭರಣಕ್ಷಮೆಗಳಲಿ (ಕುವ್ಯಾವಿ ೬-೩೨). [ಸಂ.]

ಹರಣವಲ್ಲಭ (ನಾ). ಪ್ರಾಣನಾಥ; ಜೀವದೊಡೆಯ: ಕರುಣಿ ರಾಘವ ಶ್ರುತಿಶಿರೋಮಣಿ ಹರಣವಲ್ಲಭ ಹಂಸವರ್ಧನ ತರಣಿಕುಲ ಕೃಪೆಮಾಡು (ಕಾಶಿಕಾ. ೧೨-೫೧); ಕರಣವಿಕಾರ ಬೇಡೆಂದು ಪೇಳ್ ನಿನ್ನಯ ಹರಣವಲ್ಲಭಗೆ (ಮೋಹತ. ೧೦-೨೯).

[< ಸಂ. ಪ್ರಾಣವಲ್ಲಭ]

ಹರಣವಳಿ (ಕ್ರಿ). ಪ್ರಾಣವನ್ನು ಬಿಡು; ಸಾಯು: ದಾನವಾರಿಯ ವಿರಹಕ್ಕಾಜದೆ ಚಾನಕೀಸತಿ ಹರಣವಳಿದಳೊ (ಕಾಶಿಕಾ. ೧೦-೪೭): ಹರಣವಳಿದು ಧರೆಗುರುಳಿದ ಪಕ್ಕಿಯ ಪರಿಯ ನಿಟ್ಟಿಸಿ ಪರಿತಪಿಸಿ ಇರದೆ ತಾನೆಸಗಿದ ತಪಗಳ ಮ್ಮೆಮೆಗೆ ಸರಿಯಿಲ್ಲೆಂದೆಣಿಸಿದನು (ಪದಿಮ. ೨-೩೫). [ಹರಣ$_1$ (< ಪರಣ$_2$) + ಅಳಿ$_1$ (< ಅಟ್ಪಿ$_1$)]

ಹರಣವಿಡಿ 'ಹರಣಂಬಿಡಿ' ನೋ.

ಹರಣೆ, ಹರಳೆ$_2$ (ನಾ). ಹಾವರಣೆ: ಹಾದಿಯಲ್ಲಿ ಹಲ್ಲಿ, ಹರಣೆ ಮುಂತಾದುವುಗಳು ಇದ್ದ ಸ್ಥಳವನ್ನು ಬಟ್ಟು ಪೊದರುಗಳನ್ನಾಶ್ರಯಿಸುತ್ತಲಿದ್ದುವು (ರಾಜಾಮ. ೧೬೪). **ಹರಳೆ**$_2$: ಗಾರೆಗೋಡೆಯ ತೂತಿನಿಂದ ಅನೇಕ ಕ್ರಿಮಿಕೀಟಗಳೂ ಹರಳೆಗಳೂ . . . ಹೊರಗೆ ಹೊರಟವು (ರಾಜಾಮ. ೧೬೫). [< ಅರಣೆ]

ಹರತರದೂದು, ಹರ್ತರದೂದು (ನಾ). ೧. ಎಲ್ಲ ಬಗೆಯ ಸಿದ್ಧತೆ; ಸಂಪೂರ್ಣ ಸಜ್ಜು, – ತಯಾರಿ: ಹರತರದೂದಿನಿಂ ನಮ್ಮಯ ದುರ್ಗದ ಭರವಸದೊಳು ನಿಲ್ವೆವು (ಕಂಸವಿ. ೧೯-೫೦); ನಾನು ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಹರತರದೂದುಮಾಡಿ ಅವನನ್ನು ಹಿಡಿಯಬೇಕೆಂದು ಓಡಿಸಿದೆ (ಕಲಸ. ೧೫೧); ಲಕ್ಷ್ಮೀನಾರಣಪ್ಪನವರು ಸಾವಿತ್ರಿಗೆ ವರ ಹುಡುಕಲು "ಹರತರದೂದು" ಮಾಡಿದರು (ತಾಯಿ. ೧೦). **ಹರ್ತರದೂದು**: ೧. ಆ ಹೆಳವಿ ಹುಡುಗೀಗೆ ಷಾಕ್ ಆಗೋ ಅಂಥ ಒಂದು ಕಾಗದಾನ ಶಶಿ ಅಕ್ಕರದಲ್ಲಿ ತಯಾರು ಮಾಡಿ, ಅದು ಅವಳ ಕೈಗೆ ನೇರವಾಗಿ ಹೋಗೋಹಾಗೆ ಹರ್ತರದೂದು ಮಾಡಿಬಿಡೋದು (ಉಮಾಶ. ೧೦೧) ೨. ಎಲ್ಲ ರೀತಿಯ ಪ್ರಯತ್ನ; ಸರ್ವಪ್ರಯತ್ನ: (ಕಸಂಗ್ರಾ. ೧೨೦)

[← ಆರ. ಹಿಂ. ಹರ್‌ತರದ್ದುದ್; ಮರಾ.ಹರ್‌ತರದೂದ್]

ಹರತಾಳ$_1$ (ನಾ). ಶಂಖಪಾಷಾಣ ಮತ್ತು ಗಂಧಕಗಳ ಸಂಯೋಗದಿಂದಾಗುವ ಒಂದು ಬಗೆಯ ಹಳದಿವರ್ಣದ ವಿಷಾರಿವಸ್ತು; ಅರಿದಾಳ: ಪ್ರತಿ, ಹರತಾಳ, ಇಂಗು . . . ಗುಲಾಬಿನೀರು ಮುಂತಾದವುಗಳು (ಮುಂಬಪ್ರಾ. ೯೯).

[< ಸಂ. ಹರಿತಾಲ. / ಹಿಂ. ಹರತಾಲ್; ಮರಾ. ಹರತಾಳ್]

ಹರತಾಳ$_2$ (ನಾ). ರಾಜಕೀಯ ಅಥವಾ ಸಾಮಾಜಿಕ ಬಿಕ್ಕಟ್ಟಿನಿಂದಾದ ಅಸಮಾಧಾನಪ್ರದರ್ಶನಕ್ಕಾಗಿ ಅಂಗಡಿ, ಶಾಲೆ, ಕಾರಖಾನೆ ಮೊದಲಾದ ಸಾರ್ವಜನಿಕಸಂಸ್ಥೆಗಳ ವ್ಯವಹಾರವನ್ನು ನಿಲ್ಲಿಸುವುದು, – ಬಾಗಿಲು ಮುಚ್ಚುವುದು: ಪ್ರಪಂಚದಲ್ಲಿ ಬಾಹುಬಲವಿಲ್ಲದ ಯಾವ ಹರತಾಳವೂ ಯಶಸ್ವಿಯಾಗುವದಿಲ್ಲ (ಭಾರತಿ. ೧೧೭); ವಿದ್ಯಾರ್ಥಿಗಳೇ, ಈದಿನ ಶಾಲೆಗೆ ಹರತಾಳ. ನಾನು ಹೊರಗೆ ಹೊರಟೆ (ರಕ್ತಧ್ವ. ೧೫೬). [← ಹಿಂ .ಹಡತಾಲ್; ಮರಾ. ಹರತಾಳ್]

ಹರತಾಳಕ (ನಾ). (ಉಕ) ಭಾದ್ರಪದಶುಕ್ಲ ತೃತೀಯೆಯಂದು ಮುತ್ತೈದೆಯರು ಆಚರಿಸುವ ಗೌರೀವ್ರತ: ನಾಳೆ ಹರತಾಳಕವಿದೆ. ಸಂಜೆಗೆ ಇಬ್ಬರು ಮುತ್ತೈದೆಯರನ್ನು ಪೂಜೆಗೆ ಕರೆ (ಸ್ವಪಟ. ೫೮). [← ಹಿಂ. ಹರತಾಲಿಕಾ, ಹರಿತಾಲಿಕಾ; ಮರಾ. ಹರತಾಳಿಕಾ, ಹರತಾಳಿಕಾ. / ಸಂ. ಹರಿತಾಲಿಕಾ]

ಹರತಿ 'ಪರಂತಿ' ನೋ.

ಹರತೆ (ನಾ). ಹರಗುವಿಕೆ; ಕುಂಟೆ ಹೊಡೆಯುವಿಕೆ: ಪೈರು ಸಾಲಾಗಿ ಬೆಳೆಯುವುದರಿಂದ ಸಾಲುಗಳ ಮಧ್ಯದಲ್ಲಿ ಕಳಿಕೀಳುವುದನ್ನೂ ಹರತೆ ಹೊಡೆಯುವುದನ್ನೂ ಎತ್ತುಗಳ ಸಹಾಯದಿಂದಲೇ ಮಾಡಬಹುದು (ವ್ಯವಸ. ೨೧); ಮಣ್ಣು ತಳಮೇಲಾದ ತರುವಾಯ . . . ಹರತೇ ಹೊಡೆಯುವರು (ಸುಮಚಿ. ೭೭). [< ಹರಗು$_1$ (< ಪರಗು) + - ತೆ$_3$]

ಹರತ್ತಿ 'ಪರಂತಿ' ನೋ.

ಹರದ$_1$ 'ಪರದ$_1$' ನೋ.

ಹರದ$_2$ (ನಾ). ೧. ಅವ್ಯವಸ್ಥೆ: ಏನೂ ತುಂಬ ಹರದವಾಗಿತ್ತು. ಆದುದರಿಂದ ಸರಿಯಾಗಿಟ್ಟೆ (ಕೀಲುಗೂ. ೧೩೦). ೨. ನಿರುಪಯುಕ್ತವಾದ ವಸ್ತು, ಸಂಗತಿ ಮುಂತಾದುದು: ಈ ನಿಯಮಗಳ ಉದ್ದೇಶವೇನೆಂದರೆ . . . ಬರಿಯ ಒಣಪಾಂಡಿತ್ಯವನ್ನು ಮಾತ್ರ ತೋರಿಸತಕ್ಕ ಸಂಸ್ಕೃತದ ಹರದವನ್ನೆಲ್ಲಾ ಗುಡಿಸಿ ಎತ್ತಿಹಾಕುವುದೇ (ಕಬಿಸಾ. ೨, ೨೬); ಅಡಿಗೆಯ ಮನೆಯ ಹರದವನ್ನು ಗುಡ್ಡೆಹಾಕಿ, ಮನೆಯ ಕಸಗುಡಿಸಿ . . . ಹೋಗುತ್ತಿದ್ದಳು (ರಂಗನಾ. ೪೫). [?]

ಹರದಮಾತು 'ಹರದವಾತು' ನೋ.

ಹರದವಾತು, ಹರದಮಾತು (ನಾ). ಪೇಟೆಯ ಮಾತು; ಬೀದಿಮಾತು: ಇದನಾರೆಂದರಲವೋ ನಿನಗೆ ತನಗಳಿಯಂದಿರವರೆಂದೆಂಬ ಲೋಕದ ಹರದಮಾತುಗಳ (ನಿಭಾಗ. ೧೦-೩೧-೨೬). **ಹರದಮಾತು**: ಜೀಯ ಬಲ್ಲಿರಿ ನಿಮ್ಮವರ ಪರಿಯ ಹರದಮಾತಿನ ಹದನು ಬಳಿಕಾ ಚರರಿಗಿದು ಗೋಚರಿಸುವುದೆ (ಕುವಾವಿ. ೪-೮).

[ಹರದ$_1$ (< ಪರದ$_1$) + ಮಾತು$_1$]

ಹರದಾಡು 'ಪರದಾಡು$_2$' ನೋ.

ಹರದಾರಿ 'ಹರಿದಾರಿ' ನೋ.

ಹರದಾಳಿ 'ಹರಿದಾಳಿ' ನೋ.

ಹರದಿ, ಹರದೆ (ನಾ). ೧. ಗರತಿ; ಮುತ್ತೈದೆ: ಹರಿಯೊಂದು ಹರಿನೀರ ತಿರೆಯೊಂದು ಕರಿನೀರ ಹರದಿ ನಿನ್ನೆದೆಯು ಮುನ್ನೀರ ಜನುಮಾವು ಹರಿಗಿಡಿಯದಂಥ ಹೊಳೆನೀರ (ಮೂರ್ತಿಕಾ. ೪೩-೮); ರಕ್ಷಿಪ ಹರಿ ಬಂದ ಹರದಿ ಚಾನಕಿಯರಸ ಬಂದಾನೆಂದು ಬರುದಿನ ಕಾಳಿ ಕೂಗಿದವು (ಕರ್ಣಾ. ೨೭೪). ೨. ಹೆಂಡತಿ; ಮದದಿ: ಕರಪಾತ್ರ ಗಜಚರ್ಮ ಹರದಿಯರಿರ್ವರೂ ಉರಗಕಂಕಣ ಶೂಲ ಡಮರು ಹರಿಟೆಯ ಭಾರವಿಲ್ಲೆನುತ ತ್ರಿಶೂಲವ ಹರನದ್ದಹಾಕಿ ದಾಂಟಿದನು (ಅಮುಸಾಂ. ೫-೧೦೬). **ಹರದೆ**: ೧. ಹರದೇರ ಸೋಬನಕೆ ಕರಸವ್ಯ (ನಾಪದ. ೧೧೪); ಅರಸ ಸ್ಯತ್ರನ್ನು ದೋಚಿದ್ದು, ಹರದೆಯರನ್ನು ಕೆಡಿಸಿದ್ದು ಉಂಟು (ಚಕಾ. ೪೧೬) ೨. ಹರಕೊಟ್ಟ ಕಾಲಕ್ಕೆ ಹರನ ರೂಪಿಗೆ ನೀಡು ಹರದೆಯರು ಸುತರು ನೆಱೆ ಸವಿದು ಸುಖಿಸುತಲಿ ಹರನ ಹರಸುವರು (ಸರ್ವಜ್ಞ. ೬೦೫).

[< ಗರತಿ./ ಸಂ. ಗೃಹಸ್ಥೀ. / ಪ್ರಾ. ಹರ = ಗೃಹ]

ಹರದಿಕೆ 'ಪರದಿಕೆ' ನೋ.

ಹರದಿಗ (ನಾ). ವ್ಯಾಪಾರಸ್ಥ; ವ್ಯಾಪಾರಿ; ಬಣಜಿಗ: ಸರ್ವವ್ಯಾಪಾರವ ಕಟ್ಟಿ ಕೊಂಡಿಪ್ಪ ಹರದಿಗನ ತೆಱನಂತೆ ಕೊಂಡುದಕ್ಕೆ ಕೊಡುವಲ್ಲಿ ವಾಸಿಯ ಕಂಡು ಬಿಟ್ಟ ಲಾಭ ಗಾಱನಂತೆ ಮೊದಲಿಗೆ ಮೋಸ ಲಾಭಕ್ಕುಂಟೇ ಅಯ್ಯಾ (ಮೋಮಾ. ೭೬-೨೯೭); ಅಧಿಕಧನಯುತನಾಗಿ ವುನ್ನತದಿ ಮೆರೆವ ಹರದಿಗ ಸೆಟ್ಟಿ ವರ್ತಕರುಮಿರ್ವರು (ಸವಮೋ. ೨-೪೬). [ಹರದು (< ಪರದು) + - ಇಗ]

ಹರದೀಕ್ಷೆ (ನಾ). ಶೈವರಿಗೆ ಮಾಡುವ ದೀಕ್ಷಾಸಂಸ್ಕಾರ; ಶಿವದೀಕ್ಷೆ: ಹರದೀಕ್ಷೆ ಯಾಂತ ಮಹಿಮಂ ಪರದೀಕ್ಷೆಯನಾಶೆಗೈವನೇ (ವೃಷವಿ. ೩-೩೪). [ಸಂ. ಹರದೀಕ್ಷಾ]

ಹರದು 'ಪರದು' ನೋ.

ಹರದುಗೆಯ್ 'ಪರದುಗೆಯ್' ನೋ.

ಹರದುಗೆಯ್ಯು 'ಪರದುಗೆಯ್' ನೋ.

ಹರದೆ 'ಹರದಿ' ನೋ.

ಹರದೇಶಿ, ಹರದೇಸಿ, ಹರಿದಾಸಿ (ನಾ). (ಉಕ) ಗಂಡು ಹೆಣ್ಣಿಗಿಂತ ಹೆಚ್ಚೆಂದು ಬಣ್ಣಿಸಿ ಹಾಡುವ ಲಾವಣಿಕಾರರ ಪಂಗಡ: ಹರದೇಶಿ ಪಂಗಡದ ಹಾಡುಗಾರರು ಎದ್ದು ನಿಂತು ದಪ್ಪು ಬಾಜಿಸತೊಡಗಿದರು (ಕಪವ. ೬-೧೪); ಹಳ್ಳಿಗರಲ್ಲಿ 'ಹರದೇಶಿ' 'ನಾಗೇಶಿ' ಪದಗಳನ್ನು ಈರ್ಷೆಯಿಂದ ಹಾಡುವುದು ಎಲ್ಲರಿಗೂ ಗೊತ್ತಷ್ಟೆ (ಕರ್ನಾಸಂ. ೧೨೫). **ಹರದೇಸಿ**: ಹರದೆಲಸಿಗಳು ಪುರುಷನನ್ನು ಮೇಲುಗಟ್ಟಿ, ನಾಗೇಸಿಯು ಪ್ರಕೃತಿಯನ್ನು ಮೇಲುಗಟ್ಟಿ ಹಾಡುವರೆನ್ನಬೇಕು (ಸುವರ್ಣ. ೪೧). **ಹರಿದಾಸಿ**: ಹರಿದಾಸಿ ನಾಗೇಶಿಯವರ ಹಾಡು ಕೇಳುವದೂ . . . ಇವೇ ಮೊದಲಾದ ಕಾರ್ಯಗಳಲ್ಲಿ ಅವರು ತೊಡಗಿದ್ದರು (ಸಾಹಸಂ. ೧೭೫). [? . / ಮರಾ. ಹರದಾಸ್‌ವಳ]

ಹರದೇಸಿ 'ಹರದೇಶಿ' ನೋ.

ಹರನಯನ (ನಾ). ೧. ಶಿವನ ಮೂರನೆಯ ಕಣ್ಣು. ೨. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ: ಹರನಯನ ವಹ್ನಿ ಪುರ ಶಶಿ . . . ಅದು ಮೂಱಱ ನಾಮಂ (ವ್ಯವಪಾ. ೯-೩); ಹರನಯನ ವೇದ ಶಶಿ(?) ಗಿರಿಯಿಂದಂ ಗುಣಿಸಲ್ (ಭಾಸ್ಕರ. ೪೨-೬).

[ಸಂ.]

ಹರನಾಳಿಗೆ 'ಪರಿನಾಳಿಗೆ' ನೋ.

ಹರನಿಲಯ, ಹರನಿಳಯ (ನಾ). ಶಿವದೇವಾಲಯ; ಶಿವಾಲಯ: ಹರನಿಲಯಕೆ ನಡೆವಾತನ ಚರಣಸರೋಜಾತ ಶುದ್ಧ (ಶಂಕಕಂ. ೯೨). **ಹರನಿಳಯ**: ಹರನಿಳಯದ ಬಾಗಿಲೊಳೆದ್ದುರಿಗಂಡೊಳಗಿರ್ದ ಭಕ್ತರೊದಜುತ್ತಿರಲು (ತ್ರಿಪುವಿ. ೩೩-೨೨); ಹರನಿಳಯಂಬೊಕ್ಕಲ್ಲದೆ ಧರಣಿಯೊಳೀ ಕಂಬಿಯಂ ಸಮಂತಿಳುಪದ ಬಲ್ಲಿರಿದಿನ ಭಕ್ತಿಯ ಬಿಂಕಂ ದೊರೆವೆತ್ತುದು ನಿನ್ನೊಳ್ (ವೃಷವಿ. ೫೯-೧೩೩). [ಸಂ.]

ಹರನಿಷ್ಠ (ನಾ). ಶಿವನಲ್ಲಿ ಶ್ರದ್ಧೆಯುಳ್ಳವನು; ಶಿವಭಕ್ತ: ಹರನಿಷ್ಠಗಲ್ಲದಲೆ ಹರಿದು ಹೋಗದು ಪಾಪ (ಸರ್ವಜ್ಞ. ೪೦). [ಸಂ.]

ಹರನಿಳಯ 'ಹರಸಿಲಯ' ನೋ.

ಹರನೇತ್ರ (ನಾ). ೧. ಶಿವನ ಮೂರನೆಯ ಕಣ್ಣು: ಹರನೇತ್ರಜ್ವಾಲೆಯಿಂ ಬೇವ ತನುವನುಮ ಕಾಣುತ್ತ . . . ಮತ್ತೆತ್ತಿದಂತಿರ್ದ ಶೋಭಾಕರರೂಪಾಕಾರನಂ ತತ್ತರುಣಿ ಕನಸಿನೊಳ್ ಕಂಡು ಸೋಲ್ತಳ್ (ಲೀಲಾವ. ೭-೭೯); ಹರನೇತ್ರವಹ್ನಿಯೊಳಡಬಳವ ಸುಡಬಗೆದೆಲಾ ಮರುಳೆ ಮಹೀಪತಿಯೆ (ಕಿಷ್ಕಿಂ. ೧೪-೩೭). ೨. ಶಿವನ ಬಲಗಣ್ಣಾದ ಸೂರ್ಯ; ರವಿ: ಹರನೇತ್ರಸಖಂ ಗಡ ಮುರಹರನೇತ್ರಂ ಗಡ ವಿಧಾತೃಜನಕಂ ಗಡ ತಾವರೆಯದ ಕರಯಾಮದು ಗಡ ಸಿರಿಯನೆ ತಿಳಿ ಕಾಲವಶಮನಾರ್ಕಳಿದಪರೋ (ರಾಜಶೇ. ೧೧-೧೨). ೩. [ಗಣಿತ] ಮೂರು ಎಂಬ ಸಂಖ್ಯೆಯ ಸಂಕೇತ. [ಸಂ.]

ಹರಪುರ (ನಾ). ಶಿವನ ಪುರ; ಕೈಲಾಸ: ಸುರಪುರಕೆ ಹರಪುರಕೆ . . . ಬೊಮ್ಮನ ಪುರಕೆ ನೂರ್ಮಡಿ ಮಿಗಿಲೆನಿಸಿ ತಾ ಕರಚಿಲುವಿನಿಂದೆಸೆವುದದು ಪಾತಾಳದೊಳು ಲಂಕೆ (ಕೌತಿರಾ. ೩೯-೨). [ಸಂ.]

ಹರಪೂಜೆ (ನಾ). ಶಿವನನ್ನು ಅರ್ಚಿಸುವುದು; ಶಿವಪೂಜೆ: ಹರಪೂಜೆಯಿಂದ ಮಿಗಿಲೀಶ್ವರ ಭಕ್ತರ ಪೂಜೆಯೆಂಬುದಾಗಮಂ (ರಾಜಶೇ. ೧೪-೧೨). [ಸಂ. ಹರಪೂಜಾ]

ಹರಪೂಜೆಗೆಯ್ (ಕ್ರಿ). ಶಿವನನ್ನು ಪೂಜೆಮಾಡು: ಹರಪೂಜೆಗೆಯ್ದು ಪೊಳ್ತೋಸರಿಪುದು (ಪೃಪಬಿ. ೧೨-೫೨). [ಹರಪೂಜೆ + ಕೆಯ್$_1$]

ಹರಪೆ (ನಾ). ೧. ಬಯಲು; ತೆರೆದ ಪ್ರದೇಶ: ಮನೆಯಂ ಕಟ್ಟದರೆಂಬಲ್ಲಿ ಹರಪೆಯಲ್ಲಿರಬಾರದೆಂಬುದಾಯಿತು (ಅರಸಾ. ೧೯೩-೧). ೨. (ರಹಸ್ಯ ಮುಂತಾದುವು) ಹರಡುವಿಕೆ; ಬಯಲಾಗುವಿಕೆ: ಅವರ ಮನೇ ಜನದ ಎದುರಿಗೆಲ್ಲಾ ನನ್ನ ಸಂಗತಿಯನ್ನು ಹರಪೆಮಾಡಿಕೊಳ್ಳಲೇ ? (ಸುಮಚಿ. ೨೬೮). [< ಪರಪ್ಪು$_1$]

ಹರಪ್ರಿಯ (ನಾ). ಶಿವನ ಗೆಳೆಯ; ಕುಬೇರ: ನಯನೌಘಚ್ಛಲದಿಂದೆ ನೈದಿಲೆಸಳಂ ಶಕ್ರಂ ಮುಸುಂಕಿಟ್ಟಂ . . . ತುಹಿನಭೂಮೀಧ್ರಕ್ಕೆ ಸಾರ್ದಂ ಹರಪ್ರಿಯನಾವರ್ತಿಸೆ ತಳ್ತು ನಾಲ್ವಸಯುಮಂ ಗ್ರೀಷ್ಮಪ್ರತಾಪೋದಯಂ (ಚಂದ್ರಪ್ರ. ೯-೬೭). [ಸಂ.]

ಹರಬಕುತಿ (ನಾ). ಶಿವನ ಮೇಲಿನ ಭಕ್ತಿ; ನಿಷ್ಠೆ: ಹರಬಕುತಿಯಿಲ್ಲದ ಜಡಪತಿಗಳಂ ಬಿಟ್ಟು ಸದ್ಗತಿಗಳಂ ಪಡೆದ ಮಡದಿಯರನೇಕರುಂಟು (ಪಾಸೋಪು. ೪-೧೧೫). [< ಸಂ. ಹರಭಕ್ತಿ]

ಹರಬಿ 'ಪರವಿ' ನೋ.

ಹರಭಕ್ತ (ನಾ). ಶಿವಶರಣ; ಶಿವಭಕ್ತ: ಹರಭಕ್ತಂ ಪೆಟ್ಟಗೆಯಂ ಭರದಿಂ ತೆಱೆದೀಕ್ಷಿಸಲ್ಕೆ ವಿಸ್ಮಯದೊಳ್ . . . ಪಂದೆಯನೆ ಪಾವಡರ್ದಂತಾದಂ (ಕ್ರಿಪುವಿ. ೭-೯೦); ಹರಭಕ್ತ ದ್ರೋಹಮನಾರ್ ವಿರಚಿಪರವರ್ಗೀ ನೃಪಾಲಗತಿಯಪ್ಪುದು (ವೃಷವಿ. ೪೨-೨೭). [ಸಂ.]

ಹರಭಕ್ತಿ (ನಾ). = ಹರಬಕುತಿ: ಹರಭಕ್ತಿಪ್ರಮದಾಮುಖೈಕಮುಕುರಂ . . . ವೃಷಭೇಶ್ವರಂ ಸಲಹುಗೆಮ್ಮಂ (ಶಬಶಂ. ೧-೪). [ಸಂ.]

ಹರಮ (ನಾ). ಏರ್ಪಾಟು; ವ್ಯವಸ್ಥೆ: ಹೈದರಲ್ಲಿಖಾನ ಬಹದರರೂ ಬಂದು . . . ದಳವಾಯ ಹೇಳಿ ಸ್ವಸ್ಥಾಮಾಡಿಕೊಂಡು ಹಣ ಬರುವಂತೆ ಹರಮ ಮಾಡಿ ಪುನಹಾ ದಿಂತುಗಲ್ಲಿಗೆ ಹೊರಟು ಹೋದರು (ಹೈದರ. ೭೪). [?]

ಹರಯ 'ಪರಯ' ನೋ.

ಹರಯಗಳೆ (ಕ್ರಿ). ಪ್ರಾಯವು ಹೊರಟು ಹೋಗು; ತಾರುಣ್ಯವು ಮೀರು; ಪ್ರೌಢವಯಸ್ಸಾಗು: ಹರಯಗಳೆದ ಪೆಣ್ಣಿನ ಸಂಗಸುಖವೆಳಹರಯದ ಹೆಣ್ಣೆನೊಳುಂಟೆ (ಕಂನವಿ. ೬-೧೯೪). [ಹರಯ (< ಪರಯ) + ಕಳೆ$_1$ (< ಕಟ್ಟೆ$_1$)]

ಹರಯೋಗ (ನಾ). ಶಿವಭಕ್ತಿ: ಹರಯೋಗವಾಂತ ವೃಷಭನ ಕರಿಯಾಲಿಯ ಕಾಂತಿಯೊಳಗಣಂ ಕುಚಮುಖದೊಳ್ ಪರಕಲಿಸಿ ಪೊಣ್ಮಿದತ್ತನೆ ಗುರುಕುಚ ಚೂಚುಕದ ಮೇಚಕದ್ಯುತಿ ಮೆಱೆಗುಂ (ವೃಷವಿ. ೩-೫). [ಸಂ.]

ಹರಲು 'ಪರಲ್' ನೋ.

ಹರಲುಗ 'ಪರಲುಗ' ನೋ.

ಹರಲೆ 'ಪಱಲೆ' ನೋ.

ಹರಲ್ಕಟ್ಟು (ನಾ). ಹರಳಿನ ರಚನೆ; ಸಣ್ಣಕಲ್ಲುಗಳ ವಿನ್ಯಾಸ (?): ಬಿಲಸಗ್ಗಂ ಸವಿಸಂದಿ ಡೋಣಿ ಪರಿಚಾರೇರುಂ ಪುಗಿಲ್ವಟ್ಟೆ ಮೇಖಳೆ ತಾಳ್ಪಾಸಱ ಗಂಡಶೈಲಮಡ ಕಿಲ್ಕೂಟಂ ಹರಲ್ಕಟ್ಟು ತಾಱಲೊಸರ್ದಾಣ ಮಹಾಗ್ರಹಂ ತೊಱ ಕೊಳಂ ಪುಲ್ವಟ್ಟೆಗಳ್ ಕಾರ್ಮುಕಂಬೋಲ್ಪಲೆ ಗಂಟಿಕ್ಕಿದ ಕಾಡ ದಿಕ್ಕಿಗಮಜಸ್ರಂ ರಯ್ಯಾಮಾ ಬೆಟ್ಟದೊಳ್ (ಸೂತ್ರಿಸಾ. ೩-೨). [ಹರಲ್$_0$ (< ಪರಲ್) + ಕಟ್ಟು$_2$]

ಹರವಂಚು (ನಾ). ನಂಬಿಕೆಗೆ ದ್ರೋಹಮಾಡಿ ಮೋಸದಿಂದ ಹಣವನ್ನು ತಿಂದುಹಾಕುವುದು; ಕೊಟ್ಟ ಹಣವನ್ನು ದುರುಪಯೋಗಮಾಡಿಕೊಳ್ಳುವುದು: (ಕಸಂಗ್ಲಾ. ೭೯). [?]

ಹರವಡಿ 'ಪರವರಿ' ನೋ.

ಹರವಣಿಗೆ 'ಪರವಣಿಗೆ' ನೋ.

ಹರವರಿ$_1$ (ಕ್ರಿ). ಮಿತಿಯನ್ನು ತಿಳಿ; ವ್ಯಾಪ್ತಿಯನ್ನು ಅರಿ: ತರುಣನಂ ನೋಡಿ ಸ್ಮರರತಿದೇವಿಯರು ಹೆಚ್ಚಿ ಹರವರಿಯದಾನಂದದುಗ್ಗಾಬ್ಧಿಯೊಳು ಮುಳುಗಿ ಸುತನ ಪರಿಪಾಲಿಸುತ್ತೆ (ನವಮೋ. ೧೫-೫೦). [ಹರವ್ವು$_2$ (< ಪರಪ್ಪು$_2$) + ಅರಿ$_2$ (< ಅಱಿ)]

ಹರವರಿ$_2$ 'ಪರವರಿ' ನೋ.

ಹರವರಿಗಾಱ (ನಾ). ಏಳಿಗೆಯನ್ನುಂಟುಮಾಡುವವನು; ವೃದ್ಧಿಗೊಳಿಸುವವನು: ಚೊನ್ನ ಹರವರಿಗಾಱ ಕಾಮನ ಗೆಲ್ಲಗಾಱ ಚಂದಿರನುದಿಸಿದ ಮೂಡದೆಸೆಯ (ವರ್ಧಚಿ. ೮-೭). [ಹರವರಿ$_2$ (< ಪರವರಿ) + - ಕಾಱ]

ಹರವರಿಗೊಳ್ (ಕ್ರಿ). ನೆಲೆಗೊಳ್ಳು; ನೆಲಸು: ತರುಣಿಯರಿಟ್ಟ ಭೂಷಣದಿ ಕೀಲಿತವಾದ ಬೆರಕೆವರಲಾ ಕಾಂತಿ ಮುಸುಕೆ ಸುರಚಾಪ ಸ್ಥಿರವೆತ್ತು ಹರವರಿಗೊಂಡೊಂದಿರವಾದುದು ನೋಟಕರಿಗೆ (ಗೊಮ್ಮಟ. ೧-೭೧); ಹರುಷಂ ಹರವರಿಗೊಂಡು ಎನಗೆ ಶಿವತತ್ವ ಸಾಧ್ಯವಾಯಿತು (ಘನವ. ೨೭-೨೨). [ಹರವರಿ$_2$ (< ಪರವರಿ) + ಕೊಳ್$_1$]

ಹರವರಿಸು 'ಪರವರಿಸು' ನೋ.

ಹರವಸ 'ಪರವಸ' ನೋ.

ಹರವಸಂಬಡು (ಕ್ರಿ). ಮೈಮರೆ; ಮೂರ್ಛೆಹೋಗು: ಪರಿಮಳಕೆ ಬಂದು ಮುಸುಱಿದ ನೊಣಂಗಳು ಕೂಡೆ ಹರವಸಂಬಟ್ಟು ಚರಿಯಿಸಲು ನೆರೆಯದೆ ಸೊಕ್ಕಿ ಮರುಳಾದುವು (ಪಚಕಾ. ಪಂ. ೪-೫೫). [ಹರವಸ (< ಪರವಸ) + ಪಡು$_1$]

ಹರವಸಂಬೊಗು (ಕ್ರಿ). = ಹರವಸಂಬಡು: ಮೈಹೋಗೇಱಿದಂತೆ ಸುಖದಾವೇಶ ಬಂದಂತೆ ಹರವಸಂಬೊಕ್ಕಿರ್ದನು (ಸೋಮಚಿ. ೪-೧೦). [ಹರವಸ (< ಪರವಸ) + ಪೊಗು]

ಹರವಸಂಬೋಗು, ಹರವಸವೋಗು (ಕ್ರಿ). = ಹರವಸಂಬಡು: ವ್ಯಸನಾರ್ಥಮಾಗಿ ವಿಟನ ಬೆಂಬಿಡದೆ ಬಂದೆನೆಲೆಯೆಂದು ಹರುಷಂಗೆಟ್ಟು ಹರವಸಂಬೋಗಿ ಮತ್ತೆ ಮೆಲ್ಲನೆಳ್ಚತ್ತು ಸಂತಾಪಿಸುತ್ತೆ (ಹಮ್ಮೀರ. ೬-೩೦ ವ); ಬಿರಹದ ಬೆಂಕೆಯಿಂ ಬೆಂದು ಕಡುಹರವಸಂ ಬೋದರಮರಿಯರ್ ನಡೆವಲ್ಲಿ ನಿಂತಲ್ಲಿ ತತ್‌ಕ್ಷಣದೊಳು (ಚಬಪು. ೧೯-೪೩). ಹರವಸವೋಗು: ಕುವರನ ಚೆಲ್ವಿಕೆಯ ಒಸೆದೀಕ್ಷಿಸುತ ಹೊಸಜೌವನೆಯರು ಹ [ಪಾಠಾಂ. ಪ]ರವಸವೋದರು (ಕುರಾಸಾಂ. ೩೧-೧೨). [ಹರವಸ (< ಪರವಸ) + ಪೋಗು$_1$ (< ಪೋ$_1$)]

ಹರವಸಗೊಳಿಸು (ಕ್ರಿ). ಪರವಶಗೊಳಿಸು; ಮೋಹಗೊಳಿಸು: ಕಾಣರೆ ನೀವೆನ್ನಿನಿಯನನು . . . ಮೆಯ್ಸುರಿಯೊಳಾನಂದದ ಸೆರೆಯನಲುಗಿ ಮಿಗೆ ಹರವಸಗೊಳಿಸುವ ಹರಿಯನೀಯೆಡೆಯ (ಗೀತಗೋ. ೧೮-೨). [ಹರವಸ (< ಪರವಸ) + ಕೊಳ್$_1$ + - ಇಸು$_3$]

ಹರವಸತೆ 'ಪರವಸತೆ' ನೋ.

ಹರವಸದಿಳಿ (ಕ್ರಿ). ಮೂರ್ಛೆತಿಳಿ; ಎಚ್ಚರಗೊಳ್ಳು: ಮತ್ತಗಜಾನನ ಹರವಸ ದಿಳಿದೆಚ್ಚತ್ತು ಪೆರ್ಗದೆಯ ತೆಕ್ಕೊಂಡು . . . ಅಪ್ಪಳಿಸುತಿಕ್ಕಿದನು (ಮೋಹತ. ೩೮-೭೧). [ಹರವಸ (< ಪರವಸ) + ತಿಳಿ$_1$]

ಹರವಸವೋಗು 'ಹರವಸಂಬೋಗು' ನೋ.

ಹರವಿ 'ಪರವಿ' ನೋ.

ಹರವಿಗೂಳು (ನಾ). ಒಂದು ಬಗೆಯ ತೆರಿಗೆ: ಅನುಪು ಕೊಡವೀಸ ಹಂದರಹಣ ಹರವಿಗೂಳು ಮೇಟುಕೊಳಗ . . . ಸರ್ವಬಾಧೆ ಪರಿಹಾರಕ್ಕೆ ಗದ್ಯಾಣ ಗ ೧೧ ವರಹ ಅಂತು ಗದ್ಯಾಣ ಗ ೪೭ ॥ ೧ ಅಕ್ಷರದಲು ನಾಲ್ವತ್ತೇಳು ಆರುಹಣ (ಮೈಆಂ. ೧೯೩೪, ೩೭-೨೧; 1430). [ಹರವಿ (< ಪರವಿ) + ಕೂಳು$_2$ (< ಕೂಡು$^*_1$)]

ಹರವು$_1$ 'ಪರಪು$_1$' ನೋ.

ಹರವು$_2$ 'ಪರಪು$_2$' ನೋ.

ಹರಸಖ (ನಾ). = ಹರಪ್ರಿಯ: ಹರಸಖನಲ್ಲಿ ಪುಷ್ಪಕಮನಿಟ್ಟುಳಿಗೊಂಡು . . . ಅಜೇಯನಾಗಿರೆ ಬಹುಯತ್ನಗೌರವದಿನಾಂ ಪೊಣರ್ದಿಕ್ಕಿದ ರಾವಣಂ ವಚೋಧರ ಶಿಶುಪಾಲನೆಂಬಸುರನಾದುದನಾಂ ತಿಳಿದೆಂ ನಿರಾಕುಳಂ (ಜಗವ. ೧-೭೧). [ಸಂ.]

ಹರಸಮಯಿ (ನಾ). ಶೈವಮತಕ್ಕೆ ಸೇರಿದವನು: ಗುರುವಹಂ ಗಡ ಚೋಳರಾಯನ ಹರಸಮಯಿ ಗಡ ಈತನಂ ಧಿಕ್ಕರಿಸಿ ಸುಮ್ಮನೆ ಹೋಗಿವಡಿಸುವುದು ಧರ್ಮವಲ್ಲವಿದು (ಬಸಪು. ೫೦-೨೨). [ಸಂ. ಹರಸಮಯಿನ್]

ಹರಸಾಲು (ನಾ). ಪ್ರತಿಯೊಂದು ವರ್ಷ; ವರ್ಷಂಪ್ರತಿ: ಹರಸಾಲು ತಾಜಾಸನ್ನದು ಉಜುರುಯಿಡದೆ ಸದರಿಪ್ರಕಾರಾ . . . ನಡಸಿಕೊಂಡು ಬರುವದು (ಎಕ. VI. ಕೊಪ್ಪ. ೪೮-೪೩; 1811); ಹರಸಾಲು ತಾಜಾ ಸನ್ನದು ಉಜೂರ್ಯಿಡದೆ . . . ನಡಶಿಕೊಂಡು ಬರ್ಪುವದು (ಮೈಆಂ. ೧೯೨೨, ೩೯-೨೦; 1813). [← ಹಿಂ.ಹರ್‌ಸಾಲ್]

ಹರಸು 'ಪರಸು$_1$' ನೋ.

ಹರಹ (ನಾ). (?): ಸಯಿಗಲನಿಕ್ಕಿ ಹರಹದಲಿ X ನಾಗ XXX ಸೇನಬೋವ (ಎಕ. XII (S), ಚಿಕ್ಕನಾ. ೭೫-೧೨; 1331). [?]

ಹರಹಸನ (ನಾ). ಶಿವನ ನಗೆ : ಸ್ಫುರಿತೋದ್ಯತ್ತಾರತಾರಾಚಲಹರಹಸನಾದಭ್ರಶುಭ್ರಾಭ್ರ . . . ಗೌರದ್ಯುತಿವಿಶದಯಶಃಕಾಂತನೀ ಶಾಂತಿವರ್ಮಂ (ಪುಷ್ಪಪು. ೧-೮೧). [ಸಂ.]

ಹರಹಾಸ (ನಾ) = ಹರಹಸನ: ಹರಹಾಸಕ್ಕೊಂದೆರಟುಂ ದಿಕ್ಕರಿದನಕೆರಟ್ಟುಂ ಉ . . . ಶೈಲಾಸಧಾತ್ರೀಧರಕೆಂಟೊಂಬತ್ತು ಮೇಲಾಗಿರೆ ಪಸರಿಸಿದಂ ಕೀರ್ತಿಯಂ ನಾಗವರ್ಮಂ (ಛಂದೋಂಬು. ೧-೨೩); ಹರಹಾಸಾವಯವಂಗಳಂತಿರಲನಂತಾನಂತ ಭೋಗಂಗಳಂತಿರ ಪೂರ್ಣೇಂದುಕಲಾಳಿಯಂತಿರ ಸಿತಾಬ್ಜಾನೀಕವೊಪ್ಪಲ್ ಶಖಾಂತರದೊಳ್ ನಿರ್ಮಲದಿವ್ಯಮೌಕ್ತಿಕಶಲಾಲಿಂಗಂ ಚತುರ್ವಕ್ತ್ರಸುಂದರಮಲ್ಲಿರ್ದುದು (ಕಾದಂಪು. ೬೫೭). [ಸಂ.]

ಹರಹಾಸದ್ಯುತಿ (ನಾ). ಶಿವನ ನಗೆಯ ಕಾಂತಿ: ಹರಹಾಸದ್ಯುತಿ ಮೂರ್ತಿಗೊಂಡುದೊ ಎರಿಂಚಖ್ಯಾತಿ ಲೋಕಂಗಳೊಳ್ ಪರಿದಾಯಾಸದೆ ನಿಂದುದೋ . . . ಎಂಬಂತಿರೆ ದಿವ್ಯಸುಂದರಿ ಮನಕ್ಕಾನಂದಮಂ ಮಾಡಿದಳ್ (ಕಾದಂಪು. ೬೬೩); ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀಕರಮಂ ನಿಂದಿಸಿ . . . ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತಂಡನಾ (ಕಾವ್ಯಾವ. ೮೬೩). [ಸಂ.]

ಹರಹು$_1$ 'ಪರಪು$_1$' ನೋ.

ಹರಹು$_2$ 'ಪರಪು$_2$' ನೋ.

ಹರಹುಗೆಡು 'ಪರ್ವುಗೆಡು' ನೋ.

ಹರಹುವಲೆ (ನಾ). ಹರಡಿಕೊಳ್ಳುವ ಒಂದು ಬಗೆಯ ಬಲೆ: ಎರಳೆವಲೆ ಹಂದಿವಲೆ ಹೊಯ್ಲೆ ಹರಹುವಲೆಗಳೆಳವಲೆ ಹುಡಿಕೆವಲೆ . . . ಚಿತ್ರರದ ನೇಣ್ಗಲೆ ಮೊಕರವಲೆ ಬೇಡರ ಸಿರದೊಳೊಪ್ಪಿದುದು (ಸಾಳ್ವಭಾ. ೫-೧೯). [ಹರಹು$_1$ (< ಪರಪು$_1$) + ಬಲೆ$_1$]

ಹರಳ್$_1$ 'ಪರಲ್' ನೋ.

ಹರಳ್$_2$, **ಹರಳು**$_2$ (ನಾ). ಜಾರತ್ವ; ವ್ಯಭಿಚಾರ: 'ಹರಳಿಗೆ' ಪರಾ. ಹರಳು$_2$: 'ಹರಳಿಸು' ಪರಾ. [ದೇ. ॥. ☞ ಇದಕ್ಕೆ 'ಪರಳ್' ಎಂಬುದೇ ಮೂಲರೂಪವಿರಬಹುದು]

ಹರಳ (ನಾ). ವಿಟ; ಜಾರ: ಶೀಪ್ಪದೊಳಾಗ ನಸುತೀರದಿಹ ಕೂಟ ಬೇಟ ನೋಟದಿ ರತಿಸಿ ಹರಳರ್ಕೈದಿದರಿತ್ತಲು (ಪ್ರಭುಪು. ೪-೧೧೯). 'ಹರಳೆ$_1$' ಪರಾ. [ಹರಳ್$_2$ + - ಅ$_7$]

ಹರಳಿಗ, ಅರಳಿಗ$_1$, ಪರಳಿಗ (ನಾ). = ಹರಳ: "ಹರಳಿಗಂ - ಜಾರಂ " (ಶಮದ. ಪಂ. ೨); ಅರವಿನ್ನನೀಶಪುತ್ರೀವರಂ ಬ್ರಹ್ಮನಾಸುರದ ಜಾರಂ ಶಕ್ರ ಸತಿಯರೀರೆಂಟು ಸಾಸಿರದ ಹರಳಿಗಸು ಹರಿ (ಸಿದ್ಧರಾ. ೪-೬೨); ಮನೆಯೊಳ್ ಕಾಲ್ ನಲೆಗೊಂಡು ನಿಂದಜ್ಜಿಯನೀ ಜೋಕಾಜ್ಜಿಯಂತಿರ್ಕೆ ಸೂಂಬನೊಳೊಲ್ಲಾಡುವಳ್ಳೊಳ್ಳಾ ಹರಳಿಗಂ ಕದ್ದೊಯ್ವನೇನಿರ್ದೊಡಂ . . . ಆವಾವ ಮುಹೂರ್ತದೊಳ್ ಪಡೆದನೀ ಪಾಃಬೂದ ಮೂಳಂಗಳಂ ? (ಸೂಕ್ತಿಸು. ೮-೪೫೭): ಬಗೆಬಗೆಯಿಂ ತನುತನುವನೊಂದುಗೂಡಿ ನೆರೆವ ಚಾಣ್ಕ್ಯನ ಹೆಇತರಳಿಗರ ಭೋಗಮೆ ಭೋಗಮಲ್ತೆ! (ರಾಮಾಶ್ವ. ೬೦-೫೯). **ಅರಳಿಗ:** ಅತ್ತ ಮಲಂಗಿದಳೀ ಮನೆಯತ್ತಲ್ ಸುಳಿವವನುವೊರ್ವನಿಲ್ಲಮೆನುತ್ತುಂ ಮತ್ತೇಂ ಕನಲ್ವವೊಲೊರ್ವಳ್ ಚಿತ್ತಂಬುಗಿಪರಳಿಗಂಗೆ ಮಿಗೆ ಸೂಚಿಸಿದಳ್ (ಉದ್ಭಟ. ೧೦-೧೦೦). Δ **ಪರಳಿಗ:** "ಸಿತಗಂ, ಜೋಡಂ, ಪರಳಿಗಂ, ಪಾಣ್ಯಂ - ಈ ೪ ಜಾರಂಗೆ ಪೆಸರ್" (ಕಶಸಾ. ೬೨-೪೮೭); "ಜೋಡಂ ಪರಳಿಗನು ಪಾಣ್ಯ ಸಿತಗಂ ಜಾರಂ" (ಕವಿಗ. ೧೬೧).

[ಹರಳ್$_2$ + - ಇಗ. ☞ 'ಪರಳಿಗ' ಎಂಬುದೇ ಮೂಲರೂಪವಿರಬಹುದು]

ಹರಳಿಗಿತ್ತಿ (ನಾ). = ಹಾದರಗಿತ್ತಿ; ಜಾರೆ: ಕುಜಿತ ತಾಣದೊಳು ತವಕದೆ ಬೊಗಸೆ ರೊಳ್ಕೆರೆವ ಹರಳಿ Eಳತಿಗಿತ್ತಿಯರು ಮದನನ ಹೇರಿಗಿತ್ತಿಯರು ಕಾಣಿಸಿದರಿಕ್ಕಟಿಯೊಳು (ಸೌಂದಪು. ೧೭-೪೬). [ಹರಳಿಗ +- ಇತ್ತಿ]

ಹರಳಿವಟ್ಟ (ನಾ). ಒಂದು ಬಗೆಯ ತೆರಿಗೆ: ಬೇಡಿಗೆ ಭತ್ತವರೀ ಹರಳಿವಟ್ಟ ಸರಧಿ ಮುಂತಾದ ಸಮಸ್ತ ಕಾಣಿಕೆಗಳು ಸಹಾ ನೀವೇ ಆಗುಮಾಡಿ ಅನುಭವಿಸಿಕೊಂಡು (ಎಕ. XV, ಅರಕ. ೧೦೬-೧೩೦; 1665). [ಹರಳಿ$_2$ + ವಟ್ಟ]

ಹರಳಿಸು (ಕ್ರಿ). ಹಾದರಮಾಡು; ವ್ಯಭಿಚಾರವನ್ನು ನಡೆಸು: ಬಿತ್ತರದಿ ಹರಳಿ ಹರಳಿಸಿ ಹರಿದುಬರಲು (ಪ್ರಭುಪು. ೪-೧೩೮); ಹೊತ್ತಗೆಯ ಕೆದಱೆ ರತಿಸುವರ ಚಾತುರ್ಯದಿಂ ಮುತ್ತು ತಾಯೆಂದು ಹರಳಿಸುವರತಿ ಬೂದಿಯೊಳು ವಿತ್ತ ಜಗುಳ್ವುವು ಎಂದು ವರಿಸಿ ಗಂಡನ ಮಱಸುವರು ಮಗನನೆರ್ದೆಯೊಳಿಟ್ಟು ತತ್ತತ್ಕೆಯೆಂದು ಕುಣಿಸುತ್ತನ್ಯ ಪುರುಷರೊಳು ಚಿತ್ತಜನಸುಖವಿವೆಸಗಿ ಪತಿಯ ನಾಂಚಿಸುವರು (ಪ್ರಭುಪು. ೭-೧೫೯).

[ಹರಳು$_2$ (< ಹರಳ್$_2$) + - ಇಸು$_3$]

ಹರಳು$_1$ 'ಪರಲ್' ನೋ.

ಹರಳು$_2$ 'ಹರಳ್$_2$' ನೋ.

ಹರಳುಂಗುರ 'ಪರಲುಂಗುರ' ನೋ.

ಹರಳುಕಲ್ಲು 'ಪರಲ್ಗಲ್ಲು' ನೋ.

ಹರಳುಗಟ್ಟಿಸು (ಕ್ರಿ). ದ್ರವವಸ್ತುವನ್ನು ಒಣಗಿಸಿ ಹಳುಕು ಹಳುಕಾಗುವಂತೆ ಮಾಡು,— ಹರಳುಹರಳಾಗಿ ಮಾಡು: ಈ ಜೋನಿಯನ್ನು ಹರಳುಗಟ್ಟಿಸುವುದು (Crystallize) ಮುಂವಿನ ಕೆಲಸ (ಬಾಲಪ್ರ. II. ೬೫೨).

[ಹರಳು$_1$ (< ಪರಲ್) + ಕಟ್ಟು$_1$ + - ಇಸು$_3$]

ಹರಳುಗಲ್ಲು 'ಪರಲ್ಗಲ್ಲು' ನೋ.

ಹರಳುಗಿಡ (ನಾ). ಪಿಡಲಗಿಡ: "ವ್ಯಾಘ್ರಪುಚ್ಛಃ, ಗಂಧರ್ವಹಸ್ತಕಃ, ವಿರಂಡಃ . . .ವ್ಯಡಂಬಕಃ:- ೧೧ ಹರಳುಗಿಡದ ಹೆಸರುಗಳು" (ಸಿದ್ಧಾಂಶಿ. ೧೦೬).

[ಹರಳು$_1$ (< ಪರಲ್) + ಗಿಡ (< ಗಿಡು)]

ಹರಳುಗುಣಿಮಣೆ (ನಾ). ಬೀಜ ಅಥವಾ ಕವಡೆಗಳನ್ನು ಹಾಕಿ ಆಡುವುದಕ್ಕಾಗಿ ಮಾಡಿರುವ ಹದಿನಾಲ್ಕು ಗುಣಿಗಳಿರುವ ಮಣೆ; ಗೊಟ್ಟುಗುಣಿಮಣೆ: (ಕ).

[ಹರಳು$_1$ (< ಪರಲ್) + ಗುಣಿ$_1$ (< ಕುಬ್ಜಿ$_2$) + ಮಣೆ$_1$]

ಹರಳುಟೆಕ್ಕೆ (ನಾ). ರತ್ನದಂತೆ ಕಾಣುವ ಪೋಟಾಹರಳು; ಕೃತಕಮಣಿ: ಚಿಂತಾಮಣಿಗೆ ಕೈದುಡುಕಿ ಹರಳುಟೆ[ಪಾಠಾಂ. ತೆ]ಕ್ಕೆಯಿದೆಂಬ ಪಾಪಿಗೆ ಪರಮಗುರು ನಾನಾದೆನ್ಕೆ (ಕುವ್ಯಾಭೀ. ೬೧೩. ೩-೬೯). [ಹರಳು$_1$ (< ಪರಲ್) + ಟೆಕ್ಕೆ$_2$ (< ಟೆಕ್ಕೆ$_1$)]

ಹರಳುದುಂಬು (ಕ್ರಿ). ರತ್ನವನ್ನು ಕುಂದಣಿಸು; ಹರಳನ್ನು ಕೆಚ್ಚು,— ಮೆಟ್ಟು: ಬೆಲುವೆಗ ತಕ್ಕ ಸಿಂಗರವ ನಿರ್ಮಿಸಿ . . . ದಾದಿಯರು ಉಲುಹಿಂಗ ಹರಳುದುಂಬಿದ ರತ್ನಮಯ ಹೊನ್ನ ನಿಲವುಗನ್ನಡಿಯ ತೋಱಿದರು (ಮೋಹತ ೨೬-೫೭)

[ಹರಳು$_1$ (< ಪರಲ್) + ತುಂಬು$_1$]

ಹರಳುಪ್ಪು (ನಾ). ಹಳುಕುಹಳುಕಾಗಿರುವ ಉಪ್ಪು: ಅಂಗಡಿಗೆ ಹೋಗಿ ೭೦೦ ಕೆ. ಜಿ. ಹರಳುಪ್ಪು ತೆಗದುಕೊಂಡು ಬಾ (ಮೂಢ). [ಹರಳು$_1$ (< ಪರಲ್) + ಉಪ್ಪು$_1$]

ಹರಳುವೀರೆ (ನಾ). ಒಂದು ಬಗೆಯ ಸಸ್ಯ: "ಪುಟಬೀಜಂ -ಹರಳುವೀರೆ" (ಓಷಧಿ. ೧೦೦). [?]

ಹರಳುಹೊನ್ನೆ (ನಾ). ಒಂದು ಬಗೆಯ ಮರ: ಕಲ್‌ಹೊನ್ನೆ, ಕಿರಿಹೊನ್ನೆ, ಕಲ್‌ಪೊನ್ನೆ, ಹರಳುಹೊನ್ನೆ, ಬೊಬ್ಬಿ, ಇರ್ಕೆ (ಮೃಡಿಗಿ. ೧೬-೨೮೬).

[ಹರಳು$_1$ (< ಪರಲ್) + ಹೊನ್ನೆ (< ಪೊನ್ನೆ)]

ಹರಳೆ$_1$ (ನಾ). ಹಾದರಗಿತ್ತಿ; ಜಾರೆ: ಒರ್ವ ಸತಿ ನಿಂದು ನೋಡುತಿರೆ ಬಿತ್ತರದಿ ಹರಳೆ ಹರಳಿಸಿ ಹರಿದು ಬರಲು (ಶ್ರುಭಾಷ. ೪-೧೩೮). [ಹರಳ + -ಎ$_2$]

ಹರಳೆ$_2$ 'ಹರಣೆ' ನೋ.

ಹರಳೆಣ್ಣೆ (ನಾ). ಹರಳುಬೀಜದಿಂದ ತೆಗೆದ ಎಣ್ಣೆ; ಔಡಲೆಣ್ಣೆ: ಹರಳೆಂಣೆ ಪ ೧೨ ಭಂಡಿಕಾಪರ ಜೀವಿತಕ್ಕೆ ವರಹ ಗ ೧ (ಎಕ. XV, ಬೇಲೂರು. ೭೦-೪೫: 1484); ಹನ್ನೊಂದನೆಯ ದಿನ ಬೆಚ್ಚಗಿರುವ ಹರಳೆಣ್ಣೆಯನ್ನು ಬಾಣಂತಿಯ ಮೈಗೆ ಒತ್ತಿ . . . ಸ್ನಾನಮಾಡಿಸುವುದು ಒಳ್ಳೆಯದು (ಗೃಹವಿ. ೧೦೩); ನಾಲ್ಕು ಹನಿ ಜೇನಿಗೆ ಎರಡುಹನಿ ಹರಳೆಣ್ಣೆಯನ್ನು ಸೇರಿಸಿ ಎರಡು ಮೂರು ಸಲ ನೆಕ್ಕಿಸುವುದು (ಮನಮ. ೪). [ಹರಳು$_1$ (< ಪರಲ್) + ಎಣ್ಣೆ]

ಹರಳೊತ್ತು 'ಪರಲೊತ್ತು' ನೋ.

ಹರಳೋಲೆ 'ಪರಳೋಲೆ' ನೋ.

ಹರಳ್ಚು (ಕ್ರಿ). ದೃಷ್ಟಿಗೆ ತಡೆಯುಂಟುಮಾಡು: "ಹರಳ್ಚು - ನೇತ್ರನಿರೋಧಕರಣೇ (ದೃಷ್ಟಿಗೆ ಅಡ್ಡಿಮಾಡು)" (ಶಮಧಾ). [ಹರಳ್$_3$ + - ಚು$_1$]

ಹರಳ್ವಕ್ಕಿ (ನಾ). ಒಂದು ಬಗೆಯ ಪಕ್ಷಿ: ಹರಳ್ವಕ್ಕಿ ಗೀಜಗ ನೀರೊಳು ಬಿದ್ದೇಳ್ವ ತೆರಳ್ವ ಹಾಲ್ವಕ್ಕಿ ಮಯೂರ . . . ತರುಗಿಡುವಳ್ಳಿಯೊಳಿಸೆಯ (ಅಭ್ಯಲೂ. ೩-೨೫).

[ಹರಳ್$_3$ + ಪಕ್ಕಿ]

ಹರಾಂ 'ಹರಾಮು' ನೋ.

ಹರಾಜ್ 'ಹರಾಜು' ನೋ.

ಹರಾಜು, ಹರಾಜ್ (ನಾ). ಸರಕನ್ನು ಸಾರ್ವಜನಿಕವಾಗಿ ಮಾರಾಟಕ್ಕಿಟ್ಟು ಎಲ್ಲರಿಗಿಂತ ಹೆಚ್ಚಿನ ಬೆಲೆ ನೀಡಿದವರಿಗೆ ಮಾರುವ ಕ್ರಮ; ಲಿಲಾವು: ಹರಾಜಿಗಾಗಿ ಗೊತ್ತುಮಾಡಲ್ಪಟ್ಟ ದಿವಸ ಸ್ಯತ್ನನ್ನು . . . ಬಹಿರಂಗವಾದ ಹರಾಜು ಮೂಲಕ ಧಡಸವಾಲುದಾರನಿಗೆ ವಿಕ್ರಯಿಸತಕ್ಕದ್ದು (ಗ್ರಾಮಾಸ. ೩೮); ಅವನ ದೊಡ್ಡ ಮನೆಯು ಹರಾಜಿಗೆ ಬಂತು (ಪಂಚಾಮೃ. ೨೯). **ಹರಾಜ್:** ಪಾವತಿ ಮಾಡತಕ್ಕ ವಿಷಯದಲ್ಲಿಯೂ ಮತ್ತು ಹರಾಜ್ ಮಾಡತಕ್ಕ ವಿಷಯದಲ್ಲಿಯೂ ಗ್ರಾಮಮುನಸಿಫನ ಹುಕುಂ ಮೇರೆಗೆ ನಡೆಯುವುದು (ಗ್ರಾಮಾಸ. ೧೯).

ಹರಾಜು ಮಾಡು = ಲಿಲಾವಿನಿಂದ ಮಾರು: ನಾಲ್ಕೆದರಷ್ಟು ಮೊತ್ತಕ್ಕೆ ಅವನ್ನು ಹರಾಜು ಮಾಡಿ ಮಹಮ್ಮದನು ಆ ಹಣವನ್ನು ಭಕ್ಷುಕನ ಕೈಯಲ್ಲಿಟ್ಟು (ಪ್ರಮಹ. ೧೨೨).

ಹರಾಜುಹಾಕು = ಹರಾಜುಮಾಡು: ಅವನಿಗೆ ಇಷ್ಟಬಂದಂತೆ ಜಮಿನುದಾರಿಯನ್ನು ಹರಾಜುಹಾಕಿ ತೆಗದುಕೊಳ್ಳುವುದು ಹೆಚ್ಚಾಗಿದ್ದಿತು (ದೇವಿಜಾ. ೭೧).

[← ಅರ. ಮರಾ. ಹರಾಸ್]

ಹರಾತ್ಮಜ (ನಾ). ೧. ಶಿವನ ಮಗ. ೨. ಷಣ್ಮುಖ; ಸ್ಕಂದ: ಆ ಹರಾತ್ಮಜ ಹಸುಳೆತನದ ವ್ಯೂಹದಲಿ ತಾರಕನನಿಕ್ಕನೆ (ಶ್ರುಭಾಷ. ೧೫-೧೯). ೩. ಗಣಪತಿ. [ಸಂ.]

ಹರಾದ್ರಿ (ನಾ). ಶಿವನ ವಾಸಸ್ಥಾನವಾದ ಬೆಟ್ಟ; ಕೈಲಾಸಪರ್ವತ: ಕರುಣಿಸು ದೈವಮ ಪಾಲಿಸು ಹರಾದ್ರಿ ರಕ್ಷಿಸೆಲೆ ಧಾತ್ರಿ (ಕಾದಂಪೂ. ೯೨೫); ಹರಾದ್ರಿಯಂ ಹರಂಬೆರಸು ಭುಜಂಗಳಿಂ ನೆಗಪಿ ಶಕ್ರನುಮಂ ಸೆಜೆಗೆಯ್ದಜೇಯನಾಗಿರೆ . . . ರಾವಣಂ (ಜಗವಿ. ೧-೭೧).

[ಸಂ.]

ಹರಾಮ 'ಹರಾಮು' ನೋ.

ಹರಾಮಖೋರ (ನಾ). ದ್ರೋಹಿ; ವಿಶ್ವಾಸಘಾತಕ: ಹರಾಮಖೋರ 'ಕುಂಪನಿ' ಜನರು ಸುಲ್ತಾನರನ್ನು ಮೋಸದಿಂದ ಕೊಂದ ಕಥೆ ಮೊದಲಾದುವನ್ನೆಲ್ಲ ರಸವತ್ತಾಗಿ ಬಣ್ಣಿಸಿದ (ಒ೩ಯು. ೨೪). [← ಪಾರ.ಹರಾಮ್‌ಖೋರ್; ಹಿಂ. ಮರಾ. ಹರಾಮ್‌ಖೋರ್]

ಹರಾಮಿ (ನಾ). ೧. ಉಪಕಾರಗೇಡಿ; ದ್ರೋಹಿ. ೨. ಕೀಳುನಡತೆಯ ಹೆಣ್ಣು; ನೀತಿಗೆಟ್ಟ ಹೆಂಗಸು: ಈ ಘಾತಿಮಾಬೇಗಂ ಹರಾಮಿಯಾಗಿದ್ದಾಳೆ. ಅವಳ ಅಸಹ್ಯವಾದ ಚರಿತ್ರೆಯನ್ನು ಹೇಳಲು ಸಾಧ್ಯವಿಲ್ಲ (ದಾಲತ್. ೧೨೧): ಮಂಗಳೆ . . . ಮೈಸೂರಿಗೆ ಓಡಿಹೋಗಿ ಕಾಯಿಲೆ ಬಿದ್ದಿದ್ದ ನಟರಾಜನನ್ನು 'ಮಡಗಿ'ಕೊಂಡ 'ಹರಾಮಿ' (ಸರ್ವಮಂ. ೩೩೧). [← ಹಿಂ. ಮರಾ. ಹರಾಮಿ]

ಹರಾಮು, ಹರಾಂ, ಹರಾಮ (ನಾ). ೧. ಅಧರ್ಮ; ಅನ್ಯಾಯ; ಅನೀತಿ: (೫). ೨. ದುಷ್ಕೃತನ: (೫). ೩. ನಿಷಿದ್ಧವಾದುದು: (೫). **ಹರಾಂ:** ೧. ಖಾವಂದ್, ಎಲ್ಲಾ ಹರಾಂ ಆಗಿ ಹೋಯಿತು. ಈ ಹುಡುಗರ ಬುದ್ಧಿ ಕೆಟ್ಟುಹೋಯಿತು (ಮಲ್ಲಿ. ೨೮೬). ೪. ದುಷ್ಪವ್ಯಕ್ತಿ; ದುರಾಚಾರಿ: ನಿನ್ನಂಥ ಕಾಮಾಂಧನಾದ ಹರಾಂ ನಂಬಿದರೆ ತಾನೇ ಆ ದೇವರಿಗಾಗುವ ಲಾಭವೇನು? (ದಾಲತ್. ೯೬). **ಹರಾಮ:** ೧. "ಹರಾಮದ ರೊಕ್ಕ" (ಲಂಚದ ಹಣ) ಹರಾಮಕ್ಕೆ ಹೋಯಿತು (ನಾಪೋಲೀ. ೧೧೬). ೫. ದ್ರೋಹಿ: ಉತ್ತಯೆಂಬ ಕೊಡಗ ಕಾರೆಕಾರ ಉಪ್ಪಿಗೆ ಹರಾಮನಾಗಿ ಕೋಟಂಗಡಿ ಅರಸಿನ ಬಳಿಗೆ ವೋಡಿಹೋಗಿ (ರಾಚೇಂದ್ರ. ೪). [← ಅರ. ಹಿಂ. ಮರಾ. ಹರಾಮ್]

ಹರಾರಿ (ನಾ). ಶಿವನ ವೈರಿ; ಮನ್ಮಥ; ಕಾಮ: ರಣಮಹಾಮಾರಿಯ ಮುಂದ ಬೊಬ್ಬಿಲಿಂದು ತೋರಿದುಕೋಣನ ತಲೆಗಡಿವಂತೆ ಹರಾರಿ ಖಂಡಿಸಿದ ಖಂಡೆಯದೆ (ಮೋಹತ. ೧೨-೭೭). [ಸಂ.]

ಹರಾವರಿ 'ಪರವರಿ' ನೋ.

ಹರಾಸೆ (ನಾ). ಶಿವನ ದಿಕ್ಕು; ಈಶಾನ್ಯ: ಹರಾಸೆಯೊಳಿರ್ಪ ಕಂಭಮಿರ್ವೆರಲನಿತರ್ಕೆ ಮತ್ತೆ ಕಿಲಿದಪ್ಪುದು (ಲೋಕೋಪ. ೩-೨೮). [< ಸಂ. ಹರಾಶಾ]

ಹರಿ$_1$ 'ಪಲಿ$_1$' ನೋ.

ಹರಿ$_2$ 'ಪರಿ$_2$' ನೋ.

ಹರಿ$_3$ 'ಪರಿ$_3$' ನೋ.

ಹರಿ$_4$ (ನಾ). ೧. ಹಸಿರುಬಣ್ಣ. ೨. ಹಳದಿ ಬಣ್ಣ. ೩. ಕಂದುಬಣ್ಣ; ಕಪಿಲವರ್ಣ: "ಪಿಂಗಂ ಕಪಿಳಂ ಬಭ್ರು ಪಿಶಂಗಂ ಹರಿ ಪಿಂಗಳಂ ಕಡಾರಂ ಕಪಿಶಂ" (ಪಪ್ರಕೋ. ೧೦೯-೬೫). ೪. ಬಿಳಿದು; ಶುಭ್ರವಾದುದು. ೫. ವಿಷ್ಣು: ಇವನಜ ಇವ ಹರಿ ಇವ ಸುರಪತಿ ಇವ ಧರಣೀಂದ್ರ (ಬಾಪು. ೫೩೭). ೬. ಕೃಷ್ಣ: ಅರಿಗನೊಡೆಯಂ ಹರಿ . . . ನರಂಗೆ ಸೆಜಪುಗೆಯ್ದನನಂತಂ (ಪಂಪಭಾ. ೪-೪೪); ಸುಪ್ರೀತನಾದೆ ನಾಂ ಶ್ರೀಪ್ರಭು ನಿಮಗೆಂದಗಾಗ್ರ್ಯದೊಳ್ ಹರಿ ನುಡಿದಂ (ಜಗವಿ. ೪-೮೩); ರಾಯನ ನಾರಿ ಬಂದಳು ಕವಿದು ಬಿದ್ದಳು ಹರಿಯ ಚರಣದಲಿ (ಶುವ್ಯಾಖ. ೨-೮). ೭. ಶಿವ; ಈಶ್ವರ. ೮. ಬ್ರಹ್ಮ. ೯. ಯಮ: ಹರಿತನುಜೆಗರ್ಧಾಂಗವಿತ್ತೆ ಹರಿಯಂ ಪೊತ್ತೆ ಹರಿಯ ಶೂಲದೊಳಿಟ್ಟೆ . . . ಕರುಣೆ ಗುರು ಸಂಗಮೇಶ (ಪ್ರಾಥರಾ. ೫-೧). ೧೦. ವಾಯು: "ಪವನಃ . . . ಹರಿಃ , ಮಹಾಬಲಃ- ಈ ೨೦ ಗಾಳಿಯ ಪೆಸರ್" (ಹಲಾಯು. ೧೪-೭೭); ಹರಿಯ ಬಾಯ ಹಾಲು ಉರಿಯ ಕೈಯ ಬೆಣ್ಣೆ ಗಿರಿಯ ಮೇಲಣ ಶಿಶು ಹರಿದಾಡುತ್ತಿದೆ (ಅವಚಿ. ೫೫-೨೬೮); ಹರಿಯ ಗತಿಯನು ಹಳಿವ ಮದದಿಕ್ಕರಿಯ ದಿಕ್ಕರಿಗಳಿವ ಸೂರ್ಯನ ತುರಗವನು ಮರುಳಾಡಿ ಬಲು ಮತ್ಸರಿಪ . . . ಮನಕಧಿಕ ವೇಗದಿ ತುರಗ ನೂಕಿದುವು (ಕಾತಿರಾ. ೭೭-೯). ೧೧. ಅಗ್ನಿ; ಬೆಂಕಿ: 'ಹರಿಸುತ' ಪರಾ. ೧೨. ಇಂದ್ರ; ದೇವೇಂದ್ರ: ಎರಡ ಕರದಿಂದವಂ ಕೊಳಲರಿದೆಂದನಿತರ್ಕಮನಿತೆ ಭುಜಮಂ ಹರಿ ವಿಸ್ತರಿಸಿದನೆನಿಮಾದಿ ಗುಣೋತ್ಕರಮುಳ್ಳಮರಂಗೆ ಭುಜವಿಗುರ್ವಣೆ ಪರಿದೇ (ಶಾಂತಿಪು. ೧೦-೪೧); ಅಂದಿನ ಹರಿಗೆ ಕವಚವನಿತ್ತವೊಲು ಮರುಳಾಗಬೇಡ (ಶುವ್ಯಾಉ. ೧೦-೨೯). ೧೩. ಸೂರ್ಯ; ರವಿ: ಹರಿಯಿಲ್ಲದ ಪವನಾದ್ಯಂ ಹರಿಯಿಲ್ಲದ ಲೋಕಪಾಲ ಪರಿಷದ್ಬಲಯಂ ಹರಿಯಿಲ್ಲದ ಕಾಂತಾರಂ ಹರಿ ನೀನಿಲ್ಲದ ಮದೀಯ ಗೋಕುಲಮಫಲಂ (ಜಗವಿ. ೩-೯೪); ಪುಟ್ಟೆ ಸುರೇಂದ್ರಾಶೆಗೆ ರಾಗಮಂದು ಹರಿ ಪದ್ಮಾನಂದಿ . . . ಆಕ್ರಮಿಸಿದಂ ಭೂಚಕ್ರಮಂ ಪಾದದಿಂ (ಪುಪ್ರಸ. ೮-೨೩) ೧೪. ಚಂದ್ರ: ಹರಿತನುಜೆಗರ್ಧಾಂಗವಿತ್ತೆ ಹರಿಯಂ ಪೊತ್ತೆ . . . ಕರುಣೆ ಗುರು ಸಂಗಮೇಶ (ಪ್ರಾಥರಾ. ೫-೧). ೧೫. ಬೆಳಕಿನ ಕಿರಣ. ೧೬. ನೀರು. ೧೭. ಬಿನ್ನ; ಹೊನ್ನು. ೧೮. ಕುದುರೆ: ತೆರೆಗಳ ಮಾಲೆಯನವಯವದೆ ದಾಂಟಿ ಪರಿದುವು ಹರಿಗಳ್ (ಆದಿಪು. ೧೨-೪೧); ಪರಿದು ಜವಮುಳ್ಳುದಲ್ಲಿನೀ ಹರಿ ನಿಮಿಷಕೆ ಪರಿದುವರಿಗುಂ (ಕಾದಂಪೂ. ೬೫೫). ೧೯. ಸಿಂಹ: ಪೊಕ್ಕಡಿಗಿಡೆ ಸಾರ್ಚದ ಮದರದನಿಗೆ ಹರಿ ನಿಲ್ಲದೆ ನಿಚ್ಚಟಗಲಿಗೆ ಪೆಸರ ಕಲಿ ನಿಂದಪನೇ (ಶಾಂತಿಪು. ೨-೧೦೮);

ಹರಿ ಬಾಳಕನಾದೊಡಂ ಪಡಲ್ವಡಿಸನೆ ಗಂಧಸಿಂಧುರಘಟಾಳಿಯಂ (ಪಂರಾಮಾ. ೪-೪೮). ೨೦. ಗಿಳಿ. ೨೧. ನವಿಲು. ೨೨. ಪಾರಿವಾಳ; ಪಾರಾವತ. ೨೩. ಕೋತಿ; ವಾನರ: ''ಬಲೀಮುಖಃ . . . ಹರಿಃ, ಕಪಿಃ, ಕೀಶಃ, ಶಾಖಾಮೃಗಃ, ವಾನರಃ- ಈ ೧೧ ಕೋಡಗಂ'' (ಪಲಾಯು. ೬೯-೭೮); ಹರಿಯ ಕಟ್ಟೋ ಹರಿಯ ಬಿಡಿಸೋ ಹರಿಯ ಘಸಣಿಯು ಬೇಡ ಮೊರೆಯೋಯೆನಿಸಬೇಕೆಂದ (ಕಾಶಿರಾ. ೧೨-೧೪); ಹರಿಯುಮಂ ಪಳವಿಗೆಯ ಹರಿಯುಮಂ ಪಾರ್ಥನ ಲಹರಿಯುಮಂ ಧಾತುಗಿಡಿಸಿ (ಚಿಮಭಾ. ೨೫-೪೬). ೨೪. ಕಪ್ಪೆ; ಮಂಡೂಕ: ಉರಗಾಸ್ಯಾಲಗ್ನಭಗ್ನಪ್ರಚಲಿತಹರಿವ್ಯೋಲ್ . . . ಇರ್ದನೀ ಮಾಯೆಯ ಮುಖದಿಡೆಯೊಳ್ (ರಕ್ಷಾಶ. ೨೬). ೨೫. ಹಾವು; ಸರ್ಪ: ''ಉರಗಂ ಭೋಗಿ . . . ಹರಿಯುಂ ಕುಂಡಲಿ . . . ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ'' (ಪಸ್ರಕೋ. ೧೪-೭). ೨೬. ಕಡಲು; ಸಮುದ್ರ. ೨೭. ದಿಕ್ಕು; ದಿಶೆ. ೨೮. ಅಂಬು; ಬಾಣ. ೨೯. ಕೋಶ; ಭಂಡಾರ: ಪುರದೊಳಿಹನೇ ರಾಜ ಪುಸಿಯದು ಪುರದೊಳಿಹ ಹರಿ (ಶಂಕರಾ. ೧೧-೨೫). ೩೦. ಬಂಡಿ; ಚಕ್ಕಡಿ. ೩೧. ಕೋಗಿಲೆ. ೩೨. ನಾಭಿ, ಕಿಂಪುರುಷ, ಹರಿ, ಇಳಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮಾಲ ಎಂಬ ಒಂಬತ್ತು ಪ್ರಾಚೀನ ಭೌಗೋಲಿಕವಿಭಾಗಗಳಲ್ಲಿ ಒಂದು: 'ಹರಿವರ್ಷ' ಪರಾ. ೩೩. [ಛಂದ] ಲಘು ಅಕ್ಷರದ ಸಂಕೇತ: ''ಲಘುವೆ ಹರಿ ಗುರುವೆ ಹರರ್'' (ಮಂಗರಾ. ೧೦೭-೧೯); ವ್ಯೋಮಂ ಹರಿ ಮುಂದಾ ಮಾರಹರಂ ತಾಮಾಗೆ ಸತೀ ನಾಮಂ ತಿಲಕಂ (ಛಂದೋಂಬು. ೨-೭೦). ೩೪. ಆರು ಬಗೆಯ ಪ್ರಾಸಗಳಲ್ಲಿ ಒಂದು; ಸಿಂಹಪ್ರಾಸ: ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧವಾದ ಒಂದು ವ್ಯಂಜನವು ಬರುವುದು: ಹರಿ ಕರಿ ವೃಷಭ ತುರಂಗಂ ಶರಭಮಜಂಗಳುಮೆನಿಪ್ಪ ಷಟ್‌ಪ್ರಾಸಕ್ಕುಂ ತರುಣಿ ನಿಜದೀರ್ಘಬಿಂದು ಎನಿರದೊತ್ತುಂ ವ್ಯಂಜನಂ ವಿಸರ್ಗದೆ ಬರ್ಕುಂ (ಛಂದೋಂಬು. ೧-೪೬ ಅಡಿ ೩). ೩೫. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: ಏಕತ್ರಿಂಶತ್ ಹರಿಶ್ಚೈವ ದ್ಯಾತ್ರಿಂಶತ್ ಮಹಾಹರಿಃ (ವ್ಯವಹಾ. ೮). ೩೬. [ಜ್ಯೋತಿ] ಸಿಂಹರಾಶಿ: ಬಸಜಾರಿ ಹರಿಯೊಳಿರ ವೀಕ್ಷಿಸೆ ಕನಕಾದಿಗ್ರಹಂ ಮಹೀನಾಥಂ ಜೋಯಿಸಿಗಂ ವಿತ್ತಾಧೀಶಂ ವಸುಧೇಶಂ ನಾವಿದಂ ನರೇಶ್ವರನಕ್ಕುಂ (ಜಾತಕ ೨೦-೫); ಹರಿಗೊಂಬತ್ತುಂ(೯) ಕರ್ಕಿಗೆ ನಿರುತಂ ನೂಲ್ಪಿರ್ವತೊಂದು (೧೨೧)ಮಿದು ಗುಣಕಾರಂ ಪರಿವಿಡಿದಪ್ಪದ ಕೊಳು ಪನ್ನೆರಡುಂ ರಾಶಿಗಳ ಗುಣಮನೊಳ್ಪಿದ ಅಟ್ಟಾ (ಅಭಿಮ. ೧೨-೨೪);''ಇಂದ್ರನೊಳು ವಾಜಿಯೊಳು ಕಾಲನೊಳು ಕಪಿಯೊಳು ಮೃಗೇಂದ್ರನೊಳು ಕೃಷ್ಣನೊಳು ಮರುತನೊಳು ಗಿಣಿಯೊಳು ಫಣೀಂದ್ರನೊಳು ತರಣಿಯೊಳು ಕಿರಣದೊಳು ಮಂಡೂಕನೊಳು ಕಾಂಚನಚ್ಛವಿಯೊಳು ಚಂದ್ರನೊಳು ಶುಭ್ರದೊಳು ಹರಿಶಬ್ದಮಕ್ಕುಂ'' (ಮಂಗರಾ. ೧೪೫-೩೧); ''ಕಮಲಾಕ್ಷಂ ಶಕಟಾಹಿ ಸಿಂಹ ಶುಕ ಭೇಕಂ ವಾರಿ ಪಾರಾವತಂ ಯಮ ಕೋಶಾಂಬುಧಿ ದಿಕ್ಕು ವಾನರ ಬಿಡೌಜಾರ್ಕಂ ಸುವರ್ಣಂ ತುರಂಗಮ ಸೋಮಂ ಧವಳಾನಿಲಾಂಶು ಹರಿಶಬ್ದಂ'' (ನಾಸಾರ. ೧೧).

ಹರಿಪೌತ್ರಸತಿಪಿತ = ಕೃಷ್ಣನ ಮೊಮ್ಮಗನಾದ ಅನಿರುದ್ಧನ ಮಾವ; ಬಾಣಾಸುರ: ಹರಿಪೌತ್ರಸತಿಪಿತಗೆ ಕರಸಹಸ್ರವನಿತ್ತೆ ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). ಹರಿಯ ಜಾಮಾತೃ = ವಿಷ್ಣುವಿನ ಅಳಿಯ; ಗಂಗಾಧರ; ಶಿವ: ಹರಿಯ ಜಾಮಾತೃ ಹರ . . . ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). ಹರಿಯ ಲಗ್ನ = ಧನುರ್ಲಗ್ನ: ನವಮನವಾಂಶಕಂ ಹರಿಯ ಲಗ್ನದೊಳಾಗೆ . . . ಯುವತಿಯ ಗರ್ಭದೊಳ್ ಪಲರುಮೊರ್ಮೆಯ ಪುಟ್ಟುವರೇಕಕಾಲದೊಳ್ (ಜಾತಕ. ೩-೧೬). ಹರಿಯಾತ್ಮಭವ = ಇಂದ್ರನ ಮಗ; ಅರ್ಜುನ: ಹರಿಯಾತ್ಮಭವಗೊಲಿದು ಶರವಿತ್ತೆ ವರವಿತ್ತೆ . . . ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). [ಸಂ.]

ಹರಿಒಲೆ 'ಹರಿಯೊಲೆ' ನೋ.

ಹರಿಕಂಠ (ನಾ). ನವಿಲು: '' ಚಕ್ಷುಶ್ಶ್ರವಾಶಂ ಕಳಾಪಿ ಶಿಖಿ ಕೇಕಿ ಪುರುಪಕ್ಷಂ ಮಯೂರಂ ಶಿಖಂಡಿ ಹರಿಕಂಠಂ ಶಿಖಾವಳಂ ನವಿಲೆನಿಕ್ಕುಂ'' (ಮಂಗರಾ. ೫೦-೨). [ಸಂ.]

ಹರಿಕಣ 'ಪರಿಕಣಿ' ನೋ.

ಹರಿಕಥಾಶ್ರವಣ (ನಾ). ಹರಿಕಥೆಯನ್ನು ಕೇಳುವಿಕೆ: ಹರಿಕಥಾಶ್ರವಣ ಮಾಡೋ ಪಾಡೋ ಹರಿಕಥಾಶ್ರವಣ ಮಾಡೋ (ಪುರಂದ. ೪-೧೦ ಪಲ್ಲವಿ). [ಸಂ.]

ಹರಿಕಥೆ (ನಾ). ೧. ಶ್ರೋತೃಗಳ ಮುಂದೆ ಸಂಗೀತಸಹಿತವಾಗಿ ಹೇಳುವ, ಸಾಮಾನ್ಯವಾಗಿ ವಿಷ್ಣುಪರವಾದ ಕಥೆ, – ಸಂಕೀರ್ತನೆ; ಕಥಾಕಾಲಕ್ಷೇಪ: ಹರಿಕಥೆ ಕೇಳುವ ಪರಿಜನರು ಈ ಪರಿಯ ಪುರಾಣಕ್ಕೆ ಸರಿದು ಕುಳ್ಳಿರುವರು (ಪುರಂದ. ೪-೧೧೧ ಪಲ್ಲವಿ); ಅವರು ಕೃತಿಕಾರರಾಗಿದ್ದುದಲ್ಲದೆ ಹರಿಕಥೆಗಳನ್ನೂ ಮಾಡುತ್ತಿದ್ದರು (ಸಂಗೀತ. ೬). ೨. (ಆಲಂ) ಅಸಂಬದ್ಧವಾದ ಪ್ರಲಾಪ: ಸಾಕು, ನಿಲ್ಲಿಸು ನಿನ್ನ ಹರಿಕಥೆಯನ್ನು (ರೂಢಿ). [ಸಂ. ಹರಿಕಥಾ]

ಹರಿಕಥೆದಾಸ (ನಾ). ಸಾಮಾನ್ಯವಾಗಿ ವಿಷ್ಣುಪರವಾದ ಕಥೆಗಳನ್ನು ಸಂಗೀತಸಹಿತವಾಗಿ ಶ್ರೋತೃಗಳ ಮುಂದೆ ಹೇಳುವವನು; ಸಂಕೀರ್ತನಕಾರ; ಭಾಗವತ: ಭದ್ರಗಿರಿ ಕೇಶವದಾಸರು ಈ ಕಾಲದ ಪ್ರಸಿದ್ಧ ಹರಿಕಥೆದಾಸರು (ರೂಢಿ).

[ಹರಿಕಥೆ + ದಾಸ]

ಹರಿಕರಿಸು 'ಪರಕಲಿಸು' ನೋ.

ಹರಿಕಾಂತ (ನಾ). ವಜ್ರ: ''ವಜ್ರಂ ಹರಿಕಾಂತಂ'' (ಮಂಗರಾ. ೩೧-೭). [ಸಂ.]

ಹರಿಕಾಂಭೋಜಿ (ನಾ). [ಸಂಗೀತ] ಒಂದು ರಾಗದ ಹೆಸರು: ಹರಿಕಾಂಭೋಜಿ ಪ್ರಸಿದ್ಧ ರಾಗ. ೨೮ನೇ ಮೇಳಕರ್ತ ರಾಗ . . . ಭಕ್ತಿ ಕರುಣಾರಸಪ್ರಧಾನ ರಾಗ (ಸಂಗೀಚಂ. ೧೪೪). [ಸಂ.ಹರಿಕಾಂಭೋಜೀ]

ಹರಿಕಾರ 'ಪರಿಕಾರಿ' ನೋ.

ಹರಿಕಾಳಿ (ನಾ). (?): ಹರಿಕಾಳಿ ಮೊದಲಾದ ಜನಕುಡುಗೊರೆಯಿತ್ತು ವರಬಂಧು ಬಲಸ್ಮರಾದಿಗಳ ಪರಿತೋಷದಿಂದ ಬೀಳ್ಕೊಟ್ಟನು ಗೋಕುಲದೆಳೆಯ ನಾರದ ಗರುತ್ಮರನು (ಮೋಹತ. ೪೨-೭೧). ''ರಣವಾದ್ಯ'' (ಮೋಹತ. ಗದ್ಯಾನುವಾದ). [?]

ಹರಿಕಾಱಿ 'ಪರಿಕಾರಿ' ನೋ.

ಹರಿಕಿರಣ (ನಾ). ಸೂರ್ಯನ ಕಿರಣ; ಕಾಂತಿ: ತಾಮ್ರಧ್ವಜಂ ಹರಿನಾದಮಂ ಮಾಡಿ ಹರಿದಾಡುತಿರೆ ಕೂಡೆ ಹರಿಣಾಂಕಕುಲಜಂ ವಿಹರಿಸಿದಂ ಬಾಣದಿಂ ಹರಿಕಿರಣಮಡಗುವಂತೆ (ಚಿಮಭಾ. ೨೫-೪೬). [ಸಂ.]

ಹರಿಕೀರ್ತನೆ (ನಾ). ವಿಷ್ಣು ಅಥವಾ ಕೃಷ್ಣನನ್ನು ಸ್ತುತಿಸುವ ಹಾಡು, – ಸಂಕೀರ್ತನೆ: ಹರಿಸ್ತುತಿಯ ನೀ ಕೇಳು ಹರಿಕೀರ್ತನೆಯ ಪಾಡು (ಪುರಂದ. ಧಾ. ೨-೫೦-೩). [ಸಂ. ಹರಿಕೀರ್ತನ]

ಹರಿಕೇಲಾದ್ರಿ (ನಾ). ಇಂದ್ರಕೀಲವೆಂಬ ಬೆಟ್ಟ: ಹರಿಕೇಲಾದ್ರಿಯೊಳಿರ್ದುರು ಕಿಱಿರೂಪಿನ ಮೂಕದಾನವನ ಪಾಂಗಿನ ಸೂಕರಂ . . . ಒಳಪೊಕ್ಕು ಪಾಯ್ದು ಪೊಯ್ದುದು (ಪಮ್ಮರ. ೪-೪೬). [ಸಂ.]

ಹರಿಕುಣಿ 'ಪರಿಕಣಿ' ನೋ.

ಹರಿಕುಶ (ನಾ). ಒಂದು ಬಗೆಯ ಸಸ್ಯ: '' ಹೊಳಚುಳ್ಳಿ, ಮುಳ್ಳಿಚುಳ್ಳಿ, ಹರಿಕುಶ, ತುಡಿಚುಳ್ಳಿ'' (ಮೃಡಿಗಿ. ೨-೨೪). [ಸಂ.]

ಹರಿಕುಳಿ 'ಪರಿಕಣಿ' ನೋ.

ಹರಿಕೆ 'ಪರಕೆ' ನೋ.

ಹರಿಕೆಕುಳಿ (ನಾ). ಒಂದು ಬಗೆಯ ತೆರಿಗೆ: ಯೆಲೆದೋಂಟಕುಳಿಯಂಬಿನೂಱಕ್ಕಂ ಸಿದ್ಧಾಯ ಹರಿಕೆಕುಳಿಯ ಸುಂಕಲಾಭಾಯ ಕಟ್ಟಿಲೆ ಬಟ್ಟಿಸುಂಕ ಸರ್ಬ್ಬಾಬಾಧೆ ಪರಿಹಾರ (ಕ್ರಾ. I, ೩೦-೪೬: 1222). [ಹರಿಕೆ, + ಕುಳಿ,]

ಹರಿಕೇಣಿ (ನಾ). ಕಾಲುವೆ: ''ಯಾನಂ, ಸಾರಿಣೇ- ಈ ೨ ಹರಿಕೇಣಿ'' (ಪಲಾಯು. ೧೧೩-೬೩). 'ಪರಿಕಣಿ' ಪರಾ. [ಹರಿ$_2$ (< ಪರಿ$_2$) + ಕೇಣಿ$_1$]

ಹರಿಕೇಸರಿ (ನಾ). ಒಬ್ಬ ರಾಜನ ಹೆಸರು: ಹರಿಕೇಸರಿದೇವರ್ ಬನವಾಸಿ ಪನ್ನಿರ್ಚ್ಚಾಸಿರಕ್ಕಮರಸುಗೆಯ್ದ (ಎಇ XIII, ೧೭೦-೧೬; 1055); IP ಈ ಶಾಸನದಲ್ಲಿ ಹರಿಕೇಸರಿ,ಹರಿಗ ಹಾಗೂ ಅರಿಕೇಸರಿ, ಅರಿಗ ಎಂಬ ನಾಲ್ಕು ರೂಪಗಳನ್ನೂ ಒಬ್ಬನೇ ರಾಜನಿಗೆ ಪರ್ಯಾಯವಾಗಿ ಬಳಸಲಾಗಿದೆ. 'ಅರಿಕೇಸರಿ' ಪರಾ.

[ಸಂ. ಹರಿಕೇಸರಿನ್]

ಹರಿಗ (ನಾ). ೧. ಒಬ್ಬ ರಾಜನ ಹೆಸರು: ಭೂವನಿತಾವರಂ ಹರಿಗಂ (ಎಇ XIII, ೧೭೧-೨೩; 1055); ಶ್ರೀಮಾನ್ ಹರಿಗಮನಸ್ಸರೋವರರಾಜಹಂಸಿ ಸುಭಗವಿಳಾಸಿ

ಹರಿಗನರ್ದ್ಧಾಂಗಿ ಪರಿವಾರಸುರಭಿಯರಪ್ಪ ಶ್ರೀಮಲ್ಲಚ್ಚಲದೇವಿಯರು (ಕಾ. I, ೧೭-೨೧; 1055). ೨. ಅರ್ಜುನ; IP ಪಂಪಭಾರತದಲ್ಲಿ ಮಾತ್ರ ಈ ಹೆಸರನ್ನು ಅರ್ಜುನನಿಗೆ ಅನ್ವಯಿಸಲಾಗಿದೆ: ಛಾಯಾಲಕ್ಷ್ಯಮನೊಡ್ಡಿಯುಮಾಯದ ನೀರೊಳಗೆ ತನ್ನನಡಸಿದ ನೆಗಟಂ ಬಾಯಟಿವಿನಮಿಸಿಸಿಯುಮರೆ ಹೋಯಜಬಾಪ್ಪೆಂದು ಹರಿಗನಂ ಗುರು ಪೊಗಟ್ಟಂ (ಪಂಪಭಾ. ೨-೬೦); ಸಂಮೋಹನಾಸ್ತ್ರದಿಂದೆಚ್ಚ ಬೀರರಂ ಬೀರದ ಶಾಸನಮನೆ ನಿಟ್ಟಿಸುವ ಬಗೆಯಿಂದನಿಬರ ಪಟಬಗೆಯನೆಟೆದುಕೊಂಡಂ ಹರಿಗಂ (ಪಂಪಭಾ. ೮-೧೦೯). 'ಅರಿಗ' ಪರಾ. [< ಹರಿಕೇಸರಿ]

ಹರಿಗಡಿ₁ 'ಹಟ್ಟಿಗಡಿ' ನೋ.

ಹರಿಗಡಿ₂ (ಕ್ರಿ). ೧. (ಪ್ರವಾಹವು) ನಿಂತುಹೋಗು; ನಿಲ್ಲು: ಇತ್ತಲು ಹರಿಗಡಿದುದು ಮಳೆ (ಕೃಷ್ಣಗೋ. ೩-೫೨); ಅವರ ನಗೆ ಫಕ್ಕನೆ ಹರಿಗಡಿಯಿತು (ಎರಸೆ. ೬೪); ಅವಳ ಕಂಬನಿ ಒಂದು ಕ್ಷಣವೂ ಹರಿಗಡಿದಿರಲಿಲ್ಲ (ಪ್ರೇಮಾಶ್ರ. ೮೨). ೨. (ಆಲಂ) ತೆರೆದಿಡು; ಪ್ರಕಟಪಡಿಸು: ಆಕೆ ನಾಳೆ . . . ತನ್ನೊಳಗಿನ ತುಡಿತವನ್ನು ಆತನೆದುರಿಗೆ ಹರಿಗಡಿಯಲು ನಿರ್ಧರಿಸಿದ್ದಾಳೆ (ಬನಸಿ. ೧೭೭). [ಹರಿ₃ (< ಪರಿ₂) + ಕಡಿ₂]

ಹರಿಗಲು 'ಪಟ್ಟಿಗೋಲ್' ನೋ.

ಹರಿಗಟ್ಟಲೆ (ನಾ). ಹಬ್ಬಿರುವ ಕತ್ತಲೆ; ವ್ಯಾಪಿಸಿರುವ ಅಂಧಕಾರ: ಹಳಹಳನಿರ್ದ ತಾರೆಗಳನಾಯ್ದು ಕುಱುಂಕುತುಮಂತೆ ಪೂಣ್ದು ಬೆಂಬಟ್ಟಿವಿಡಿದೊತ್ತಿಕೊಂಡು ಹರಿಗಟ್ಟಲೆಯಂ ತವೆ ಪೀರುತಂ . . . ಬಂದುದಯಾದ್ರಿಯನರ್ಕನೇಱಿದಂ (ಕುಸುಮಾ. ೧೪-೨೧); ಬಟ್ಟಿವಿಡಿದೊತ್ತುಗೊಂಡ ಹರಿಗಟ್ಟಲೆಯ ತವೆ ನುಂಗುತುಂ . . . ಬಂದುದಯಾದ್ರಿಯನರ್ಕನೇಱಿದಂ (ಶಾಂತೀಶ್ವ. ೧೧-೧೦೯). [ಹರಿ₂ (< ಪರಿ₂) + ಕಟ್ಟಲೆ]

ಹರಿಗಾಡು (ನಾ). ವ್ಯಾಪಿಸಿರುವ ಕಾಡು; ದಟ್ಟವಾದ ಅಡವಿ: ನರಕದಿಕ್ಕಿಗೆ ದ್ವಿಜರ್ನೆರೆದ ಕಳ್ಳರು ಕದ್ದು ಹರಿಸೆ ಹರಿಗಾಡಿನೊಳು ಪಶುನಿಚಯವಂ ಮರಳ್ಚಿ ಪಶುಪತಿಪುರದೊಳಿರಿಸಿ ಸುವಿಧಾನದೊಳು ನೆರಪಲಿಂದಾಂ ಬಯಸಿ ಬರದೆನಿನಿತಂ (ಪಾನಂಚ. ೩-೧೫೫). [ಹರಿ₂ (< ಪರಿ₂) + ಕಾಡು₂]

ಹರಿಗಾಲುವೆ 'ಪರಿಗಾಲುವೆ' ನೋ.

ಹರಿಗುಟ್ಟು (ಕ್ರಿ). ತುಂಡು ತುಂಡಾಗುವಂತೆ ಹೊಡೆ: ಬೊಬ್ಬಿರಿದು ಚತುರಂಗಬಲವ ಹರಿ[ವಾಕಾಂ. ಹುಡಿ]ಗುಟ್ಟಿದಂ ಕುರುಸೇನೆಯೊಳಗೆ ಮೂರಕ್ಕೋಣಿಬಲವನವ ನೊರಗಿಸಿದನು (ತುರಂಗ. ೫೭-೩೯). [ಹರಿ₁ (< ಪಱಿ₁) + ಕುಟ್ಟು₁]

ಹರಿಗೆ₁ (ನಾ). ಬುಗ್ಗೆ; ಚಿಲುಮೆ: ಅರ್ಜುನನೊಂದು ಬಾಣದಿಂದಾಕಾಶಕ್ಕೊಗ್ಗಿರುವ ಪರಿಗೆ [ಪಾಕಾಂ. ಗಂಗೆ] ಯಂ ತರಿಸಿದನು ಸುರಿಸಿದನು ನುಗ್ಗಿಸಿದ ಬಾಯೊಳಗೆ ಸೇದಿದನು ಹೂಳಿದನು ಕಲಿಭೀಷ್ಮನಾ ಡಗೆಯನು (ತುರಂಗ. ೪೭-೩೪) 'ತಲಪರಿಗೆ' ಪರಾ.

[ಹರಿ₂ (< ಪರಿ₂) + - ಗೆ]

ಹರಿಗೆ₂ 'ಪರಿಗ' ನೋ.

ಹರಿಗೆಕಾರ 'ಪರಿಗೆಕಾಱ' ನೋ.

ಹರಿಗೆಕಾಱ 'ಪರಿಗೆಕಾಱ' ನೋ.

ಹರಿಗೆಡು 'ಪರಿಗೆಡು' ನೋ.

ಹರಿಗೇಶ (ನಾ). ಗರುಡ: ಬಿತ್ತರದಿ ಪಕ್ಕಿಯೆರೆಯನನು ಶೃಂಗರಿಸಿ ನಲವೆತ್ತು ಧನುರ್ವಾಣ ಪೇರ್ಶಂಖಚಕ್ರಂಗಳಳವಡಿಸಿಯಾಯತದಿಂ ಜಡಿದು ಹತ್ತಿ ಹರಿಗೇಶನಪರದಿ ಮಂಡಿಸಲು ಕೃಷ್ಣ ಮತ್ತ ಬಲರಾಮ ಪ್ರದ್ಯುಮ್ನ . . . ಮಂಡಲೇಶ್ವರರು ಕುಳ್ಳಿರಲು (ನನವಚ. ೨೯-೫೩). [? + ಈಶ]

ಹರಿಗೋಪ (ನಾ). ಮಿಂಚುಹುಳು; ಇಂದ್ರಗೋಪ: ಭರದೆ ಪೊಯ್ದಾಡಲಸಿಯಸಿಯಂ ದೊಗೆದ ಕಿಡಿಯೆ ಹರಿಗೋಪಮಾ ವೀರರಸವೆ ಪರಿವೊನಲಾಗೆ ವರುಷದಂತಿರ್ಪ ರಣಮಂ ಕಂಡು ವೀರರ ಮನಶ್ಚಾತಕಂ ನಲಿದುದು (ಚಿಬಪ್ರ. ೩೮-೩೭). [ಸಂ.]

ಹರಿಗೋಲು 'ಪಟ್ಟಿಗೋಲ್' ನೋ.

ಹರಿಗ್ರಿಹ (ನಾ). ವಿಷ್ಣುದೇವಾಲಯ: ಹರಿಗ್ರಿಹದಿಂ ಸುರಗೃಹದಿಂದರುಹಗೃಹದೆ ಬೌದ್ಧಾಲಯದಿಂ . . . ಇಂದಿನಾಡೆ ಸೊಗಯಿಸಿ ತೋರ್ಕುಂ (ಕೊಲ್ಹಾಶಾ. ೧೭-೧೪; 1196).

[IP 'ಇದು ಹರಿಗೃಹ' ಎಂಬುದರ ಅಪಲಿಖಿತ]

ಹರಿಚಂದನ (ನಾ). ೧. ಹಳದಿವರ್ಣದ ಶ್ರೀಗಂಧದ ಮರ: "ಹರಿಚಂದನಂ ಮತ್ತ ಬರ್ಬರಮಕ್ಕು" (ಮಂಗರಾ. ೯೯-೨೧); ಮೃಗಮದಕಾಂತಿಯಂ . . . ಉದ್ಧರ್ಕಾರಗತಮೆನಿಪ್ಪ ಸೌರಭಮುಮಂ ಹರಿಚಂದನದೊಂದು ನೇರಿತಂ ಮಿಗೆ ಬಿದಿ ಕೊಂಡು ನಿರ್ಮಿಸಿದನೀಕೆಯಂ (ಬಾಧಪು. ೩-೩೦). ೨. ದೇವಲೋಕದ ಐದು ಬಗೆಯ ಮರಗಳಲ್ಲಿ ಒಂದು: "ಮಂದಾರಃ, ಪಾರಿಜಾತಕಃ, ಹರಿಚಂದನಃ, ಕಲ್ಪವೃಕ್ಷಃ, ಸಂತಾನಃ- ಈ ೫ ದೇವರ ಮರಂಗಳ್" (ಜಲಾಯು. ೨೨-೧೩೫); ನಂದನವನಸಂಭವ ಹರಿಚಂದನ ಸಂತಾನ ಪಾರಿಜಾತಕ ವಿಲಸನ್ಮಂದಾರನಮೇರುದ್ರುಮಸಂದೋಹದ ಕುಸುಮಕೋಟಿಯಂ (ಪುಷ್ಪಪು. ೧೧-೪೪); ಹರಿಚಂದನ ಕುಸುಮಂಗಳನಿರದಮರರ್ ಸೂಸೆ (ಹಮ್ಮೀರ. ೨-೧೨). ೩. ಚಂದನವನ್ನು ತೇದು ಮಾಡಿದ ಕಲ್ಕ,– ಗಂಧ: ಚಂದ್ರಾತಪಪಾಂಡುರ ಹರಿಚಂದನಾನುಲಿಪ್ತಗಾತ್ರನುಂ (ಆದಿಪು. ೧೧-೧೦ ವ); ತೊಟ್ಟ ಮೌಕ್ತಿಕಪ್ರಸರ ವಿಭೂಷಾವಳಿ ಹರಿಚಂದನದಣ್ಪು ಪೊದಳ್ಚ ಕಾಂತಿಯಂ ಪಸರಿಸೆ (ಸುಕುಮಾ. ೯-೧೧೪). ೪. ಬೆಳ್ದಿಂಗಳು. ೫. ಕುಂಕುಮಕೇಸರಿ. [ಸಂ.]

ಹರಿಜ (ನಾ). ೧. ವಿಷ್ಣುವಿನ ಮಗ; ಬ್ರಹ್ಮ: ಹರಿಮಿತ್ರ ಹರಿನೇತ್ರ ಹರಿಜಮಸ್ತಕ ಪಾತ್ರ . . . ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). ೨. ಮನ್ಮಥ; ಕಾಮ: ಹರಿಜನ ರೂಪು ಕೌಶಿಕನ ಸತ್ವಗುಣಂ (ತ್ರಿಪುವಿ. ೨೪-೧೭೮). ೩. ಸೂರ್ಯನ ಮಗ; ಸುಗ್ರೀವ: ಜಾಂಬವ ಹರಿಜ ಹರಿಸುತ ಹರಿಸಖನ ಸುತವೆರಸಿ ಲಂಕೆಯ ಹೊಕ್ಕ ರಾಘವ ನನುಜನೊಡಗೂಡಿ (ಕೌಶಿರಾ. ೪೨-೩೬). [ಸಂ.]

ಹರಿಜನ (ನಾ). ಅಸ್ಪೃಶ್ಯ; ಅಂತ್ಯಜ; IP ಇದು ಗಾಂಧೀಜಿಯವರು ಅಸ್ಪೃಶ್ಯರಿಗೆ ಕೊಟ್ಟ ಹೆಸರು: ಹುಟ್ಟಿನಲ್ಲಿ ಹರಿಜನನಾಗಿದ್ದ ನಂದನನ್ನು ಸ್ಮಾರ್ತರು ಭಕ್ತಶ್ರೇಷ್ಠನೆಂದು ಗೌರವಿಸಿದರು (ಭಾರದ. ೩೯೦); ಆತನ ಸಹಪಾಠಿಗಳು . . . ಹರಿಜನರ ಕಮ್ಮಾರರ ಮಡಿವಾಳರ ಮಕ್ಕಳು (ಸಸ್ಕೃ. ೯೩). [ಸಂ.]

ಹರಿಜಾತೆ (ನಾ). ಬ್ರಹ್ಮನ ಮಗಳು; ಸರಸ್ವತಿ: ವಾಣೀ ಪರಮಕಲ್ಯಾಣ . . . ನಿರ್ವಾಹವಂತೆ ಪತಿವ್ರತೆ ನಿರ್ಮಲಚರಿತೆ ಪೂರ್ವದೇವತೆ ಹರಿಜಾತೆ (ವಿದಾಕೃ. ೭೨-೨).

[ಸಂ.ಹರಿಜಾತಾ]

ಹರಿಟೆ, ಹರಟಿ (ನಾ). (ನೂಲನ್ನು ಸುತ್ತುವ) ರಾಟೆ: ಅಡ್ಡಗಟ್ಟು ಹರಿಟೆ ಹೊಕ್ಕುಳಗೂಟ ನಾಲಿಗೆಗೂಟವನಿರದೊಂದುಳಿಯದೆ ಕಟ್ಟಿದನು (ಅಮುಸಾಂ. ೫-೬); ಕರಪಾತ್ರೆ ಗಜಚರ್ಮ ಹರದಿಯರಿರ್ವರೂ ಉರಗಕಂಕಣ ಶೂಲ ಢಮರು ಹರಿಟೆಯ ಭಾರವಿಲ್ಲೆನುತ ತ್ರಿಶೂಲವ ಹರನಡ್ಡಹಾಕಿ ದಾಂಟಿದನು (ಅಮುಸಾಂ. ೫-೧೦೩). "ಹರಟೆ: ಒಟ್ಟ ಕಳ್ಳನು ಚೀಡರಲ್ಲಿ ನೂಲ ಕಳವಂ ಮಾಡಿ ನೂಲ ಹರಟೆಯಂ ಕೊಂಡು ಪೋಗುವಾಗ (ಚೃರಸಾ. I, ೩೭೭). [< ಆಟ್ಟ./ ಪ್ರಾ. ರಹಟ್ಟ, ಅರಹಟ್ಟ. /ಸಂ. ಅರಘಟ್ಟ]

ಹರಿಣ (ಗು). ೧. ಬಿಳಿಯ; ಬಿಳಿಯ ಬಣ್ಣದ. ೨. ಹಳದಿ ಅಥವಾ ಹಸುರು ಛಾಯೆಯ ಬಿಳಿಬಣ್ಣವುಳ್ಳ. (ನಾ). ೩. ಹುಲ್ಲೆ; ಜಿಂಕೆ: ಹರಿಣಧರ ಹರಿಣನಂ ಪೂಮರದಡಿಯೊಳ್ ಪೊಯ್ದುಪಟ್ಟ ಪುಲಿಗಳಿವೆನಿಕುಂ ಪರೆದರುಣಸಿತಾಸಿತಮಪ್ಪ ರಾಗದಿಂ ಬೀಡೆವಟ್ಟ ಬೆಟ್ಟದ ಸಱಿಗಳ್ (ಅಜಿಪು. ೯-೨೪); ಹರಿಣನಂ ಹಳಿವ ಮಾರುತನನೇಳಿಸುವ ಹರಿಸರಳನಣಕಿಸುವ ಮನದಿಂ ಮುಂದೆ ಲಂಘಿಸುವ ಭರವೆಂತುಟು (ಹಚಕಾ. ೩-೨೧). ೪. ಬಿಳಿಯ ಬಣ್ಣ: "ಗೌರಃ . . . ಹರಿಣಃ, ಪಾಂಡುರಃ, ಪಾಂಡುಃ, ಅವದಾತಃ, ಪಾಂಡರಃ – ಈ ೧೨ ಬಿಳಿದು" (ಹಲಾಯು. ೧೨೧-೪೭). ೫. ಸೂರ್ಯ. ೬. ವಿಷ್ಣು. ೭. ಶಿವ. [ಸಂ.]

ಹರಿಣಕ್ರೀಡನ (ನಾ). ಜಿಂಕೆಯಂತೆ ನೆಗೆದು ಆಡುವ ಒಂದು ಬಗೆಯ ಮಕ್ಕಳ ಆಟ: ಹರಿಣಕ್ರೀಡನಮೆಂಬುದನೆರೆವಚ್ಚಾಡಲ್ ವಸುದೇವನಂದನರ್ ಬಗದಂದರ್ (ಜಗವಿ. ೪-೫೧). 'ಎರಲೆಧೀಂಕು' ಪರಾ. [ಸಂ.]

ಹರಿಣಚರ್ಮ (ನಾ). ಜಿಂಕೆಯ ತೊಗಲು; ಅಜಿನ: ರತುನಪೀಠದಿ ಹರಿಣಚರ್ಮದ ಮೇಲೆ ಕುಳಿತಿರ್ದಾತ ರಾಘವನು (ಕೌಶಿರಾ. ೧೭-೧೮). [ಸಂ.]

ಹರಿಣತ್ರಾಸ (ನಾ). [ನಾಟ್ಯ] ಮೂವತ್ತೆರಡು ಬಗೆಯ ದೇಶೀಯಭೌಮ ಚಾರಿಗಳಲ್ಲಿ ಒಂದು; ಕಾಲುಗಳನ್ನು ಕುಂಚಿತಮಾಡಿ ಸ್ವಸ್ತಿಕದಂತಿರಿಸಿ ಅಂಗಾಲನ್ನು ಬಗ್ಗಿಸಿ ಮುಂದಕ್ಕೆ ನೆಗೆದು ನಿಂತುಕೊಳ್ಳುವುದು: ಪದಮೆರಡುಂ

ಕುಂಚಿತಮಂ ಪುದಿದುಂ ಸ್ವಸ್ತಿಕದೆ ನಿಂದು ತಲಮಂ ಸುರ್ಕಿಸಿ ಸುದತಿ ಕೇಳ್ ನೆಗೆದು ಮುಂದಕ್ಕೊದವಿಂದಿಳೆಯಲ್ಲಿ ನಿಲ್ಲೆ ಹರಿಣತ್ರಾಸಂ (ಲಾಸ್ಯರಂ. ೬-೭೩). [ಸಂ.]

ಹರಿಣತ್ರಾಸಿತ (ನಾ). = ಹರಿಣತ್ರಾಸ: ರಥಚಕ್ರ, ಪರಾವೃತ್ತತಲ, ನೂಪುರ . . . ಹರಿಣತ್ರಾಸಿತ, ಅರ್ಧಮಂಡಲ . . . ಸಮಸ್ಪಲಿತ - ಈ ಮೂವತ್ತೈದು ದೇಶಿಯ ಸಂಬಂಧದ ಭೌಮಚಾರಿಗಳು (ಲಾಸ್ಯರಂ. ೬-೧೭ ವ). [ಸಂ.]

ಹರಿಣಧರ (ನಾ). ೧. ಜಿಂಕೆಯ ಗುರುತನ್ನು ಧರಿಸಿದವನು; ಚಂದ್ರ: ಹರಿಣಧರಂ ಸೊಗಯಿಸಿದಂತಿರೆ ಕುಸುಮಿತ ಚೂತವಿತತಿ ಸೊಗಯಿಸಿತೆನಸುಂ (ಕವಿರಾ. ೩-೩೩); ಹರಿಣಧರನವೊಲೊಳುಮೊಗಂಗಳ . . . ಯುವತಿಯರು . . . ಭೂರಿಭೂಷಣ ಪೂರಿತಾಭಿಳನಾರಿಯರು ಬಂದರು (ಬಸಪು. ೫-೨೪). ೨. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: ಹರಿಣಧರ ದುರಿತಕರ ರುತುಶರಧಿ ಚತುಷಷ್ಠಿ ಯುಗ್ಮ ದಿಕ್ಕರಿಗಳನುಂ ನಿರಿಯ್ಯೆ ಶಶಿಕರ ಹಿಮದೊಳ್ ಧರೆಯೊಳು ನಕ್ಷತ್ರಮಾಲೆ ಪಸರಿಸಿ ತೋರ್ಗುಂ (ಭಾಸ್ಕರ. ೪೫ ೩). [ಸಂ.]

ಹರಿಣಧರಧರ (ನಾ). ಚಂದ್ರನನ್ನು ಧರಿಸಿದವನು; ಶಿವ: ಪರಮೇಶ್ವರ ಉಮಾವರ ಹರಿಣಧರಧರ ಪರದನಾಗು (ಬಸಪು. ೫೩-೪೬). [ಸಂ.]

ಹರಿಣಧರಹರಿಣ (ನಾ). ಚಂದ್ರನಲ್ಲಿರುವ ಜಿಂಕೆ: ಹರಿಣಧರಹರಿಣಂ ಪೂಮರದಡಿಯೊಳ್ ಪೊಯ್ದು ಪಟ್ಟ ಪುಲಿಗಳವೆನಿಕುಂ ಪರೆದರುಣಸಿತಾಸಿತಮಪ್ಪ ರಾಗದಿಂ ಬೀಡೆವಟ್ಟ ಬೆಟ್ಟದ ಸಜ್ಜಿಗಳ್ (ಅಜಿಪು. ೯-೨೪). [ಸಂ.]

ಹರಿಣಪಕ್ಷ (ನಾ). ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗಿನ ಅವಧಿ; ಶುಕ್ಲಪಕ್ಷ: ಬೆಳೆವುತಿರ್ದರು ಹರಿಣಪಕ್ಷದ ನಳಿನರಿಪುವಿನವೊಲ್ ಕುಮಾರರು (ಕುವ್ಯಾಅ. ೩-೧೧). [ಸಂ.]

ಹರಿಣಪ್ಲುತ (ನಾ). ೧. [ನಾಟ್ಯ] ಹತ್ತೊಂಬತ್ತು ಬಗೆಯ ದೇಶೀಯ ಆಕಾಶಚಾರಿಗಳಲ್ಲಿ ಒಂದು; ಮುಂದಕ್ಕೆ ನೆಗೆದು ನಿಂತುಕೊಳ್ಳುವುದು: ಮುಂದಕ್ಕೆ ನೆಗೆದು ಪದದಿಂ ನಿಂದಡೆ ಭೂಮಿ[ಯೊ]ಳೆ ಕೇಳ್ ಹರಿಣಪ್ಲುತಂ (ಲಾಸ್ಯರಂ. ೬-೯೨): ಅರುಣಚರಣಾಂಶು ಬಂದುಗೆಯರಲಂ ಬಲಿಗೆದಱ್ ಕಾಲ್ಗಳೊಳ್ ತೊಡರ್ದ ನರೇಶ್ವರರ ಬಗೆವಲೆದೊಡಂಕಂ ಪರಿಹರಿಪವೊಲಾಂತಳಬಲೆ ಹರಿಣಪ್ಲುತಮಂ (ರಾಜಶೇ. ೧೨ ೯೩). ೨. ನೂರೆಂಟು ಬಗೆಯ ಕರಣಗಳಲ್ಲಿ ಒಂದು ; ಹರಿಣಪ್ಲುತ ಚಾರಿಯನ್ನು ಮಾಡುವ ಕಾಲದಲ್ಲಿಯೆ ಒಂದು ಕೈಯಿಂದ ದೋಲಹಸ್ತವನ್ನು ಇನ್ನೊಂದು ಕೈಯಿಂದ ಕಟಕಾಮುಖಹಸ್ತವನ್ನು ಮಾಡುವುದು: ಹರಿಣ ಪ್ಲುತಚಾರಿಯದಂ ಚರಣದೆ ಬಿತ್ತರಿಸುತೊಂದು ಕಯ್ಯುಂ ಡೋಲದಿನಿರೆ ಕಟಕಾಮುಖಮಂ ವಿಸ್ತರಿಸಲ್ ಕರಮೊಂದು ನೋಡೆ ಹರಿಣಪ್ಲುತಮುಂ (ಲಾಸ್ಯರಂ. ೪-೧೩೭). ೩. [ಛಂದ] ಪಾದದಲ್ಲಿ ಹದಿನೇಳು ಅಕ್ಷರಗಳಿರುವ ಅತ್ಯಷ್ಟಿಛಂದಸ್ಸಿನ ಒಂದು ಸಮಪಾದ ವೃತ್ತ: ಹರಿಣಪ್ಲುತಶರಣಜನಸಮುದ್ಧರಂ ವರಪಾವನಭಾಸುರಂ (ಹಾಲಾಸ್ಯ. ೧-೧೪-೨೦). [ಸಂ.]

ಹರಿಣರಿಪು (ನಾ). ಜಿಂಕೆಯ ವೈರಿ; ಸಿಂಹ: ಹರಿಣರಿಪುಗೆ ಬಿಕ್ಕಪೋತ ಕಳಪಕುಳಮಾರಣಕೋಳಾಹಳಮಾನದಿಂಬಂಗಾವೇಡೇವಳಿಗೆಯಂಬಂತಕ್ಕುಂ (ಶಾಂತಿಪು. ೩-೬೬ ವ). [ಸಂ.]

ಹರಿಣರೋಗ (ನಾ). [ಅಶ್ವಶಾ] ಕುದುರೆಗಳಿಗೆ ಬರುವ ಒಂದು ಮಾರಕರೋಗ: ಬಸಿಱ್ತಿ ಕಟ್ಟೆ ಮೆಯ್ ಕೀಲಿಸಿದಂತಿರೆ ಲೋಳೆ ಸುರಿಯೆ . . . ಬಾಲವಾಲ ಬೀಟಲ ತೆಱದಿಂ ಮಿಡುಕದಿರೆ ಹರಿಣರೋಗಂ ತಡೆಯದೆ ಮಡಿಗುಂ (ಅಶ್ವಶಾ. ೧೩-೪೨). [ಸಂ.]

ಹರಿಣಾಂಕ (ನಾ). ಜಿಂಕೆಯ ಗುರುತನ್ನು ಧರಿಸಿದವನು; ಚಂದ್ರ: ಹರಿಣಾಂಕಂ ಪರಮೋಚ್ಚದೊಳಿರೆ . . . ಧರಣೀಶ್ವರನಕ್ಕುಮಾ ವಿಲಗ್ನಪ್ರಭವಂ (ಜಾತಕ. ೧೨-೧೦); ಹರಿಣಾಂಕಂ ತೆಗೆದೋಡುತ್ತಿರೆ ಪಶ್ಚಿಮಗಿರಿಯ ಮಜ್ಜೆಗೆ . . . ಪರೆದುವು ಬಿಯದರ್ಕಳಂತಿರರ್ಕಕರಂಗಳ್ (ವೃಷಸಿ. ೯ ೨೮). [ಸಂ.]

ಹರಿಣಾಂಕಕುಲಜ (ನಾ). ಚಂದ್ರವಂಶದಲ್ಲಿ ಹುಟ್ಟಿದವನು; ಅರ್ಜುನ: ಹರಿಣಾಂಕಕುಲಜಂ ವಿಹರಿಸಿದಂ ಬಾಣದಿಂ ಹರಿಕಿರಣಮಡಗುವಂತೆ (ಚೈಮಿಭಾ. ೨೫-೪೬). [ಸಂ.]

ಹರಿಣಾಂಕಜ (ನಾ). ೧. ಚಂದ್ರನ ಮಗ. ೨. ಬುಧಗ್ರಹ: ಹರಿಣಾಂಕಂ ಕುಂಭದೊಳಿರೆ ಹರಿಣಾಂಕಜ ಗುರು ಸಿತರ್ ನಿರೀಕ್ಷಿಸೆ ಜನಪಂ ನರಪಸಮಂ ಪಾಣ್ಬಂ ಕ್ರೂರರಭೀಕ್ಷಿಸೆ ತರದೆ ತತ್ಸಮಂ ಫಲಮಕ್ಕುಂ (ಜಾತಕ. ೨೦-೧೧). [ಸಂ.]

ಹರಿಣಾಂಕಧರ (ನಾ). ಚಂದ್ರನನ್ನು ಧರಿಸಿದವನು; ಶಿವ : ಹರಿಯುದಿಸೆ ದಿನದಂತೆ ಹರನಾಲಯಕೆ ಬಂದು ಹರಿಣಾಂಕಧರನ ಪೂಜೆಯನೆಸಗಿ (ಪ್ರೌಢರಾ. ೧೨-೨೬). [ಸಂ.]

ಹರಿಣಾಂಕಮಂಡಲ (ನಾ). ಚಂದ್ರನ ಬಿಂಬ; ಚಂದ್ರಮಂಡಲ: ಹರಿಣಾಂಕ ಮಂಡಲವಿಟ್ಟೆಸಿದುದಳಿ ಪಾಯ್ದ ಬಿಳಿಯ ತಾವರೆಯರಲಂ (ಅಜಿಪು. ೬-೪೪). [ಸಂ.]

ಹರಿಣಾಕ್ಷಿ (ನಾ). ಜಿಂಕೆಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳುಳ್ಳವಳು: ಕಾತರನೀಲ್ದುಕೊಳ್ವೆನೆಂದಾ ಹರಿಣಾಕ್ಷಿಯನಿರದೆ ಕಾಳಿಗಕ್ಕೊಡರಿಸಿದಂ (ಪಂರಾಮಾ. ೧೦-೧೨೫) ; ಮೋಹನಲಕ್ಷಣರೇಖೆಗಳೇ ಹರಿಣಾಕ್ಷಿಯ ಮುಖಾಮೃತಾಂಶುಗಿವೆಂದೇನಾ ಹಾರವದಿಂ ಮನ್ಮಥನೂಹಿಸಿ ನಲಿವನೊ ಸವಿಭ್ರಮಭ್ರೂಯುಗಮಂ (ಪುಷ್ಪಪು. ೩-೫೨).

[ಸಂ. ಹರಿಣಾಕ್ಷೀ (ಹರಿಣ + ಅಕ್ಷಿ + -)]

ಹರಿಣಾಜಿನ (ನಾ). = ಹರಿಣಚರ್ಮ: ಹರಿಣಾಜಿನವಾಸಃಪರಿಕರನಾಗಿ ವಿಚಿತ್ರ ಮೌಂಜಿಮೇಖಳೆಯನವಂ ಧರಿಯಿಸಿ ತೊಡರ್ದಂ ಭವವಾಗುರೆಯೊಳ್ ವಾಗುರೆಯ ಮೃಗದ ವೋಲ್ ಮೃಗಶೃಂಗಂ (ಶಾಂತಿಪು. ೭-೪೪). [ಸಂ.]

ಹರಿಣಿ (ನಾ). ೧. ಹಸಿರುಬಣ್ಣ : "ಹರಿಣಿಯೆಂಬುದು ಗಿಳಿಯ ಎಱಂಕೆಯ ವರ್ಣಂ" (ಹಲಾಯು. ೧೨೨-೫೩). ೨. ಹೆಣ್ಣುಜಿಂಕೆ,– ಎರಳೆ : ಮೊಲೆಯೂಡುವ ಹರಿಣಿಯಂ ನೀಡುಂ ಭಾವಿಸಿ ನೋಡಿ . . . ಎನ್ನೊಳಿಂತೆಂದಳ್ (ಪುಷ್ಪಪು. ೩-೭೬ ವ). ೩. ಚಿನ್ನದಿಂದ ರಚಿತವಾದ ಮೂರ್ತಿ; ಸುವರ್ಣಪುತ್ಥಳಿ: "ಹರಿಣೀ, ಹಿರಣ್ಮಯಾ- ಈ ೨ ಹೊನ್ನ ಪ್ರತಿಮೆ" (ಹಲಾಯು. ೨೨-೧೩೧). ೪. ರಾಶಿ; ಸಮೂಹ. ೫. [ಕಾಮಶಾ] ಸ್ತ್ರೀ ವರ್ಗಗಳಲ್ಲಿ ಒಂದು ಮತ್ತು ಆ ವರ್ಗಕ್ಕೆ ಸೇರಿದ ಹೆಣ್ಣು; IP 'ಹರಿಣಿ'ಗೆ 'ಚಿತ್ರಿಣಿ'ಯೆಂಬ ಪರ್ಯಾಯನಾಮವೂ ಉಂಟು: ಕರಿಗಮನದಸಿಯೊಡಲ ಸುರತದಿಚ್ಛೆಯ ಸೊಬಗು ಪೊರೆದ ಸವಿನುಡಿಯ ಪೂವಿನ ಕಂಪಿನ ಸ್ಮರಜಲದ ಪವಣುಣಿಸಿನಿರದ ಮತ್ಸರದಾಱುಬೆರಳ ನಾಣಡೆಯವಳೆ ಹರಿಣಿ ತರುಣಿ (ಜನವ. ೪-೧೫); ರೂಪು ಸಮವಾದ ತಲೆ ಗುಡ್ಡನಾಗಿ ಸಾಂದ್ರವಾದ ಮಂಡೆಯ ಕೂದಲು ಸಣ್ಣ ನಡುವು . . . ಸಸಿನದೇಹ ಅನುರಾಗಮುಂಟು ಈ ಲಕ್ಷಣಂಗಳುಳ್ಳವಳು ಹರಿಣಜಾತಿಸ್ತ್ರೀ ಯೆನಿಸಿಕೊಂಬುವಳು (ಕಾಮಶಾ. ೩-೪೬). ೬. [ಛಂದ] ಪ್ರತಿಪಾದದಲ್ಲಿ ಹದಿನೇಳು ಅಕ್ಷರಗಳನ್ನುಳ್ಳ ಅತ್ಯಷ್ಟಿಛಂದಸ್ಸಿನ ಒಂದು ಸಮವೃತ್ತ: ಹರಿಣಿಯೆನಿಪಾ ವೃತ್ತಂ ತೋಱಲ್ ನಸಂಮರಸಂಲಗಂ (ಕೈಪಿ. ೧೫): "ಚಯಂ ಮೃಗ ಪಾಂಚಾಲಿಕೆ ವೃತ್ತಮಿಂತು ಹರಿಣೀಶಬ್ದಂ" (ನಾನಾರ. ೯೬). [ಸಂ. ಹರಿಣೀ]

ಹರಿಣೀನೇತ್ರೆ (ನಾ). ೧. ಹೆಣ್ಣುಜಿಂಕೆಯ ಕಣ್ಣಿನ ಆಕಾರದ ಕಣ್ಣುಗಳುಳ್ಳವಳು. ೨. ಜಿಂಕೆಯನ್ನೇ ಕಣ್ಣಾಗಿ ಉಳ್ಳವಳು; ವನದೇವಿ. ೧, ೨: ಹರಿಣೀನೇತ್ರೆ ಯನಬ್ಜಷಂಡಮುಖಿಯಂ ಬಿಂಬೋಷ್ಠಿಯಂ . . . ಚಕ್ರೇಶ್ವರನೀ ವನಪ್ರಮದೆಯಂ ಕೈಕೊಳ್ಳದೇಂ ಮಾಣ್ಬನೇ (ಪಂಚತಂ. ೯೮-೫). [ಸಂ. ಹರಿಣೀನೇತ್ರಾ]

ಹರಿಣೀಪ್ಲುತ (ನಾ). = ಹರಿಣಿ ೬ : ಕುಲಿಶಧರ ವಾತೋರ್ವೀ ವೈಶ್ವಾನರಾನಿಲರಂತ್ಯ ದೊಳ್ ನೆಲಸೆ ಹರಿಯುಂ ಕಾಮಪ್ರಧ್ವಂಸಿಯುಂ ನಿಲೆ ಯತಿ ಷಟ್ಕದೊಳ್ . . . ಕರ್ಣಾಮೃತಂ ಹರಿಣೀಪ್ಲುತಂ (ಛಂದೋಂಬು. ೨-೧೬೭). [ಸಂ.]

ಹರಿಣೀಯೂಥ (ನಾ). ಜಿಂಕೆಗಳ ಹಿಂಡು: ಸುರಿವ ಮಟೆಗಳ್ಳಿ ಗಿರಿಕಂದರದೊಳ್ ಮಡಗಿಟ್ಟು ತಮ್ಮ ಶಾಬಕವಂಬಕ್ಕರೆಗರ್ಬಿ ಹರಿತದೂರ್ವಾಂಕುರಮಂ ಕೊಂಡುಯ್ದುದಂದು ಹರಿಣೀಯೂಥಂ (ಪಂರಾಮಾ. ೭-೧೫೮). [ಸಂ.]

ಹರಿಣೇಕ್ಷಣೆ (ನಾ). = ಹರಿಣೀನೇತ್ರೆ ೧: ಒರ್ವನಂ ಬೊಬ್ಬಿಱಿದಾರ್ದು ಕೊಲ್ಲ ಕೊಲೆಯಂ ಹರಿಣೇಕ್ಷಣೆ ಕಂಡು ಭೀತಿಯಿಂ ತಂದೆಯನೆಂದಳ್ (ಸುಕುಮಾ. ೭-೬).

[ಸಂ. ಹರಿಣೇಕ್ಷಣಾ (ಹರಿಣ + ಈಕ್ಷಣ + -)]

ಹರಿತ$_1$ (ನಾ). (ಆಯುಧ ಮೊದಲಾದುವುಗಳ ತುದಿ ಅಥವಾ ಅಲಗು) ತೀಕ್ಷ್ಣವಾಗಿರುವಿಕೆ; ಹದನಾಗಿರುವಿಕೆ: ಅವನು ಹರಿತವಾದ ಕುಡುಗೋಲಿನಿಂದ ಕಬ್ಬನ್ನು ಕತ್ತರಿಸುತ್ತಿದ್ದಾನೆ (ರೂಢಿ). [ಹರಿ$_1$ (< ಪಱ್ಱಿ$_1$) + - ತ$_2$]

ಹರಿತ್ತ (ನಾ). ೧. ಚಲನೆ; ಸಂಚಾರ : "ಪಂಥನಂ, ಪಂಥನೀಯಂ - ಈ ೨ ಹರಿತಂ" (ಕಾಶಕ್ರ. ೨೫೮): ಹರಿಯ ಹರಿತಕ್ಕಿಂಬುಗುಡದ ತರುಗುಲ್ಮಗಳ ವರಜನ್ಮವಾಸ . . . ಅರಣ್ಯದೊಳು ಬರುತಿರ್ದ ಹರಿಯಜಸುರಪರುಗಳೊಡೆಯನು (ಭಿಕ್ಷಾಟ. ೧-೧೮). ೨. ಹರಿಯುವಿಕೆ; ಹರಿವು; ಪ್ರವಾಹ : ಹೊಳೆಯ ಹರಿತಕ್ಕೂ ಮಳೆಯ ಸುರಿತಕ್ಕೂ ಇರುವಂತೆ (ಚಿತ್ರಸೂ. ೧ ಮುನ್ನುಡಿ). ೩. ರಭಸ; ತೀವ್ರತೆ: ಸಂಗೀತದ ಸಂಚು, ತಾಳಧಾರಿಯ ಕಳವು ವಾದ್ಯಭೇದಕನ ಮುಟ್ಟು ಗಾಣನ ಹರಿತ ಭಾವಜ್ಞನ ಚಿತ್ತ ಇಂತೀ ನಾನಾಗುಣಂಗಳ ಲಕ್ಷ್ಯಲಕ್ಷಿತವಂ ತಿಳಿದು (ಸರ್ವಜ. ೧೩೮-೬೩). [ಹರಿ$_2$ (< ಪರಿ$_2$) + - ತ್ತ]

ಹರಿತ್ತ (ಗು). ೧. ಹಸಿರಾದ; ಹಸಿರುಬಣ್ಣದ: ಸಮೀಪದೊಳಿರ್ದ ಹರಿತ ಪಲ್ಲವಭರಾನಮ್ರವಾದೊಂದು ಜಂಬೂವೃಕ್ಷಮನಡರ್ದು (ಕಾದಂಬ. ೭೩೩); ಘನಹಾರೀತಕಹಂಸಿಯೊಳ್ ಹರಿತದೂರ್ವಂ ರಾಜತದ್ರೋಣಿಯೊಳ್ ಘನಸಾರಂ . . . ಏಂ ಮೆಚ್ಚದುವೋ ಮಾಂಗಲ್ಯಸಾಕಲ್ಯಮಂ (ಪಂಚಾಮೃ. ೫-೧೨೫). (ನಾ). ೨. ಹಸಿರು ಬಣ್ಣ; ಪಚ್ಚೆವರ್ಣ : "ಶ್ಯಾಮಂ, ಶ್ಯಾಮಳಂ, ರಾಮಂ, ಪಾಲಾಶಂ, ಹರಿತಂ, ಹರಿತ್- ಈ ೬ ಪ(ಹ)ಸುರ್" (ಪಲಾಯು. ೧೨೧-೪೯); ಶ್ವೇತ ಪೀತ ಕಪೋತ ಹರಿತ ಕೃಷ್ಣ ಮಾಂಜಿಷ್ಠವೆಂಬ ಷಡುವರ್ಣವೆಂದೆನ್ನ . . . ಲಿಂಗೈಕ್ಯವ ನುಡಿಯ (ಅವಚಂ. ೧೨೨-೫೫೪); ಶ್ವೇತಪೀತಹರಿತ ಮಾಂಜಿಷ್ಠ ಕಪೋತ ಮಾಣಿಕ್ಯ ಈ ಆಱುವರ್ಣಂಗಳಲ್ಲಿ ಬೆರೆದುದು ಅಭ್ರಕವೊಂದೇ (ಮಷಸಂ. ೧೧೭-೭೩). ೩. ಹಸಿರುನೆಲ: "ಶಾಡ್ವಳಂ, ಹರಿತಂ - ಈ ೨ ಹಸುರ್ ನೆಲಂ" (ಪಲಾಯು. ೨೬-೪). ೪. ಹಳದಿಬಣ್ಣ. ೫. ಒಂದು ಬಗೆಯ ಹುಲ್ಲು; ಕರುಕೆ : 'ಹರಿತಾಂಕುರ' ಪರಾ. ೬. ಸಿಂಹ. [ಸಂ.]

ಹರಿತಕ (ನಾ). ೧. ಹಸಿರು ತರಕಾರಿಯಾದ ಸೊಪ್ಪು, ಕಾಯಿಪಲ್ಯ ಮುಂತಾದುವು: "ಶಾಕಂ, ಹರಿತಕಂ, ಶಿಗ್ರುಃ - ೩ ಪಲ್ಯ, ತರಕಾರಿ, ಸೀಪಲ್ಯ, ಹುಳಿಪಲ್ಯ, ಸೊಪ್ಪು - ಕಾಯಿ" (ಸಿದ್ಧಾಂತಿ. ೨೮೪). ೨. ಹಸಿರುಹುಲ್ಲು. [ಸಂ.]

ಹರಿತಗೆಡು (ಕ್ರಿ). ಓಟ ಕುಗ್ಗು; ನಡೆಗೆಡು: ಹರಿವ ಹರಿತಗೆಟ್ಟು ಜವಗೆಟ್ಟು ನಿಂದವು ತುರಗದಳವುಂ (ಅನಂಚ. ೨೩-೪೭). [ಹರಿತ$_2$ + ಕೆಡು$_1$]

ಹರಿತಗೋತ್ರ (ನಾ). ಒಂದು ಗೋತ್ರದ ಹೆಸರು; ಹಾರೀತಗೋತ್ರ: ಹರಿತ ಗೋತ್ರೋದ್ಭವನೊಪ್ಪಿರಲೀ ಶಾಸನನ XXX. ವಿರಚಿಸಿದಂ ಗೋಪಾಳರಾಜನಿಳಿಗಿಂತೆಸೆದಂ (ಕೊಲ್ಹಾಪು. ೨೦-೪೫; 1265). [IP ಇದು 'ಹಾರೀತಗೋತ್ರ' ಎಂಬುದರ ಅಪಲಿಖಿತ]

ಹರಿತಚ್ಛ (ನಾ). ಒಂದು ಬಗೆಯ ಹೂವು (?): ಹರಿತಚ್ಛವನ್ನು ಧರಿಸುವುದರಿಂದ ಉಷ್ಣಕರವಾಗಿ ಕಹಿಯಾಗಿ . . . ಕ್ರಿಮಿರೋಗಗಳನ್ನೂ ವಾತರೋಗವನ್ನೂ ಪರಿಹರಿಸುವುದು (ಸಕವೃ. ೪೫). [?./ ಸಂ. ಹರಿತಚ್ಛದ = ಹಸುರುಎಲೆಗಳನ್ನುಳ್ಳುದು]

ಹರಿತನಯ (ನಾ). ೧. ವಿಷ್ಣುವಿನ ಮಗ; ಮನ್ಮಥ: ವರವನಿತೆಯರ್ಗ್ಗೆ ರಿಪುಗಳ್ಗೆ ಕದರ್ತ್ತಿಜನಕ್ಕೆ ತ್ರೈಲದಂಡಾಧೀಶಂ ಹರಿತನಯಂ ಹರಿತನಯಂ ಹರಿತನಯಂ ಧರೆಯೊಳೆಂದು ಪೊಗಳದರೊಳರೇ (ಎಕ. V. ಅರಸೀ. ೧೪೧-೩೦; 1158). ೨. ಇಂದ್ರನ ಮಗ; ಅರ್ಜುನ: (ಮೇಲಿನ 'ಎಕ. V' ಪ್ರಯೋಗವನ್ನು ನೋಡಿ) ೩. ಸೂರ್ಯನ ಮಗ; ಕರ್ಣ: (ಮೇಲಿನ 'ಎಕ. V' ಪ್ರಯೋಗವನ್ನು ನೋಡಿ). [ಸಂ.]

ಹರಿತನಯಾರಿ (ನಾ). ವಿಷ್ಣುವಿನ ಮಗನಾದ ಮನ್ಮಥನ ಅಥವಾ ಸೂರ್ಯನ ಮಗನಾದ ಯಮನ ಶತ್ರು; ಶಿವ. ೨. ಗಂಗೆಗೆ ಶತ್ರುವಾದವಳು; ಯಮುನೆ. ೧, ೨ : ಹರಿತನಯಾರಿಯೆಂದೆನಿಸಿಯುಂ ಧವಳಾಂಶುಕಧಾರಿ . . . ಅಪ್ರಮೋಹ ಭಾಸುರ ನೆನಿಸಿರ್ದುಮನ್ವಿತನಯಸ್ಥಿತಿಯೊಪ್ಪಿದನದ್ರಿಜಾಧವಂ (ಶಬಶಂ. ೧-೭೯).

[ಸಂ. (ಹರಿತನಯ + ಅರಿ; ಹರಿತನಯಾ + ಅರಿ)]

ಹರಿತನುಜ (ನಾ). ವಾಯುಪುತ್ರ; ಹನುಮಂತ : ಉತ್ತಮದ ಲಿಂಗವನು ಧರಿಸಿಯೆ ಹಸ್ತದಲಿ ಹರಿತನುಜ ತರುತಿರಲಿತ್ತ ಹರಿಯಿದಿರಿನಲಿ ಕಂಡನು ಲಿಂಗಕೋಟಿಗಳ (ಕಾಶಿರಾ. ೪೪-೨೨). [ಸಂ.]

ಹರಿತನುಜೆ (ನಾ). (ದಕ್ಷ) ಬ್ರಹ್ಮನ ಮಗಳು; ದಾಕ್ಷಾಯಣಿ: ಹರಿತನುಜೆ ಗರ್ಧಾಂಗವಿತ್ತೆ ಹರಿಯಂ ಪೊತ್ತ (ಪ್ರೌಢರಾ. ೫-೧). [ಸಂ. ಹರಿತನುಜಾ]

ಹರಿತಪರಿವೇಷ (ನಾ). ಹೊಂಬಣ್ಣದ ಪ್ರಭಾವಳಿ,— ಪ್ರಭಾಮಂಡಲ: ತಿಳಿಗೊಳದ ಸುತ್ತಲುಂ ಕಣ್ಗೊಳಿಸಿತು ತಳತಳಿಸುವೆಳಗಱುಂಕೆಯ ಗಱಿತಲ್ಪೆಳವಸಲೆ ಪೂರ್ಣಶಶಿಮಂಡಳಮಂಡನಮಾದ ಹರಿತಪರಿವೇಷದವೊಲ್ (ಮಲ್ಲಿಪು. ೮-೭೯). [ಸಂ.]

ಹರಿತಮಣಿ (ನಾ). ಹಸಿರುರತ್ನ; ಪಚ್ಚೆ; ಮರಕತ: ಈಕೆಯರ ಪಾದಪಾತ ದಿನೇಕೇಂದ್ರಿಯಮಸುಕೆ ತಳರ್ವುದರಿದೆ ತಳರ್ದತ್ತಲ್ಲಿ ಕಲ್ದೆರ್ದೆಯನೆ ಸೊಗಯಿಸಿತಾ ಕಳಿತ ಪದಾಂಶು ಹರಿತಮಣಿಸೋಪಾನಂ (ಚಂದ್ರಪ್ರ. ೭-೧೨೪). [ಸಂ.]

ಹರಿತರ್ 'ಪರಿತರ್' ನೋ.

ಹರಿತರು 'ಪರಿತರ್' ನೋ.

ಹರಿತಾಂಕುರ (ನಾ). ಹುಲ್ಲುಗರಿಕೆ: ಒಸಗೆಯಂ ನೆವಂ ಮಾಡಿ ಹರಿತಾಂಕುರ ಫಳಪುಷ್ಪಾದಿಗಳನರಮನೆಯೊಳಗಂ ಪೊಱಗಂ ಕೆದಱಿಸಿ ಮಕುಟಬದ್ಧ ಪ್ರಭೃತಿಗಳನೊಸಗಗೆ ಬರಿಸಿದೊಡೆ (ಚಾವುಂಪು. ೫೧). [ಸಂ.]

ಹರಿತಾನ್ನ (ನಾ). ಹಳದಿಬಣ್ಣದ ಅನ್ನ; ಚಿತ್ರಾನ್ನ : ಅರುಣಾನ್ನ ಹರಿತಾನ್ನ ದಧ್ಯಾನ್ನ ಗೂಡಾನ್ನ ಪರಮಾನ್ನ ಪಾಯಸಂ . . . ಮುಖ್ಯಭೋಜನದ್ರವ್ಯವಾ ತರುಣಿಯರು . . . ತಂದೀಯಲು (ಸವಮೋ. ೧೯-೨೯). [ಸಂ.]

ಹರಿತಾಲ, ಹರಿತಾಳ (ನಾ). ೧. ಶಂಖಪಾಷಾಣ ಮತ್ತು ಗಂಧಕಗಳ ಸಂಯೋಗದಿಂದಾದ ಒಂದು ಬಗೆಯ ಹಳದಿಯ ಧಾತುವಿಶೇಷ; ಅರಿದಾಳ. ೨. ಹಳದಿಛಾಯೆಯುಳ್ಳ ಹಸುರುಬಣ್ಣದ ಅಥವಾ ಹಳದಿಬಣ್ಣದ ಪಾರಿವಾಳ,— ಕಪೋತ. **ಹರಿತಾಳ** : ೧. ಹರಿತಾಳದೊಳ್ ನಖಾಗ್ರದ ಬರೆದ ನಿಜಾಮಸ್ಥಯಂ ನಿವೇದಿಸೆ ಬನದಿಂದರಗಿಳಿ ತಳರ್ವುವು ದೇಶಾಂತರಕೆ ಸಂದೇಶಹರರವೋಲ್ ಬಿರಯಿಗಳಾ (ಅಜಿಪು. ೨-೯); ಹರಿತಾಳವನ್ನು ಶುದ್ಧಿಮಾಡಿ ಲೋಳಿಸರ ಬೇರಿನಲ್ಲಿಟ್ಟು ಪುಟಹಾಕಿ ೧ ರೂ ತೂಕದಷ್ಟು ಹಸುವಿನ ತುಪ್ಪದೊಡನೆ ತಿನ್ನಲು ಕುಸುಮ ನಿಲ್ಲುವುದು (ಸಕವೃ. ೪೩೧ ಪರಿಶಿಷ್ಟ). [ಸಂ.]

ಹರಿತಾಲಕ (ನಾ). ೧. = ಹರಿತಾಲ ೧: "ಪಿಂಜರಂ . . . ಹರಿತಾಲಕಂ - ೫ ಕರಿದಳದ ಹೆಸರುಗಳು" (ಸಿದ್ಧಾಂತಿ. ೩೦೫). ೨. = ಹರಿತಾಲ ೨. [ಸಂ.]

ಹರಿತಾಲಿ (ನಾ). ಕರುಕೆ; ದೂರ್ವೆ: "ದೂರ್ವೆ ಹರಿತಾಲಿ[ಜಾಣಾಂ. ೪]ಯೆನೆ ಕಱುಕೆಯೆನಿಸಿಕ್ಕು" (ಮಂಗರಾ. ೩೩-೭). [ಸಂ. ಹರಿತಾಲೀ]

ಹರಿತಾಳ 'ಹರಿತಾಲ' ನೋ.

ಹರಿತ್ತು (ನಾ). ೧. ಹಸಿರು; ಹಸಿರುಬಣ್ಣ: "ಶ್ಯಾಮಂ . . . ಹರಿತಂ, ಹರಿತ್ - ಈ ೬ ಪ(ಹ)ಸುರ್" (ಪಲಾಯು. ೧೨೧-೪೯). ೨. ಹುಲ್ಲು. ೩. ದೆಸೆ; ದಿಕ್ಕು. ೪. ಗಿಡಮರಗಳ ಎಲೆಗಳಲ್ಲಿರುವ ವರ್ಣಧಾತು; ಪತ್ರಹರಿತ್ತು: ಕೆಲವು ಜೀವಿಗಳು . . . ತಮ್ಮಲ್ಲಿರುವ ಹರಿತ್ತು (Chlorophyll) ಎಂಬುದರ ಸಹಾಯದಿಂದ ತಮ್ಮ ಆಹಾರವನ್ನು ತಾವೇ ಸ್ವತಃ ತಯಾರಿಸಿಕೊಳ್ಳುತ್ತವೆ (ಪರಜೀ. ೧). [ಸಂ. ಹರಿತ್]

ಹರಿತ್ಪ್ರದೇಶ (ನಾ). ಹಸಿರುಹುಲ್ಲಿರುವ ಸ್ಥಳ: ಹರಿತಾಯಮಾನಮಪ್ಪ ಹರಿತ್ಪ್ರದೇಶಮನೀಶಂ ಮಹಾಪ್ರಾಸಾದದುಪರಿಮತಳದೊಳರ್ದು ನೋಡುತಿರ್ಪನ್ನೆಗಂ (ಚಂದ್ರಪ್ರ. ೪-೪೯ ವ). [ಸಂ.]

ಹರಿತ್ವ (ನಾ). ಕುದುರೆಯಾಗಿರುವಿಕೆ; ಕುದುರೆಯ ಸ್ವರೂಪ: ಧುರಧರೆಯಲ್ಲಿ ಸೋಲ್ತ ತಮವೇಳ್ಪುರಗಾಕೃತಿಯಿಂ ವರೂಥಮಂ ಧರಿಯಿಸಿ ಸೇವೆಗೆಯ್ಯಲೊಲವಿಂ ದಿನನಸ್ತನಗೇಂದ್ರಕೆಯ್ದೆ . . . ಆ ಹರಿತ್ವಮಂ ತ್ವರಿತದಿ ಬಿಟ್ಟು ಮುತ್ತಿದುದು ಕತ್ತಲೆ ತಳ್ತು ಸಮಸ್ತಧಾತ್ರಿಯಂ (ತ್ರಿಪುವಿ. ೭-೮೨). [ಸಂ.]

ಹರಿದಂತ (ನಾ). ದಿಕ್ಕಿನ ತುದಿ; ದಿಗಂತ: ವನಲಕ್ಷ್ಮಿ ಹರಿದಂತದೊಳ್ ಪಸರಿಸಿದ ಕಹಳಾರವದಿನಿವರ ಬರವಱಿದು ಗಂಧವಹನಂ ನೀಂ ತಳ್ವದಿಲ್ಲಿಗಾರ್ಯನ ಕರೆದು ತಾರೆಂದು ಸಂತಸದೆ ಕಳಿಪಿದಳೊಯೆನೆ ಬಂದುದುದ್ಯಾನದಿಂ ತಂಬೆಲರ್ ಪದ್ಮರಾಜನೆಡಗೆ (ಪದ್ಮರಾ. ೮-೨೧); ಹರಿದಂತಂಗಳನೆಯ್ದೆ ಮಂಗಳಮಹಾವಾದ್ಯಸ್ವನಂ (ತ್ರಿಪುವಿ. ೬೧-೪೭). [ಸಂ.]

ಹರಿದಂತದಂತಿ (ನಾ). ದಿಗಂತದ ಆನೆ ; ದಿಗ್ಗಜ: ಹರಿದಂತದಂತಿಗಳ ಗೋಣೆಂದು ಕುಸಿಯದೇನಿರಲಾರ್ಪವೇಯೆಂದು ನೋಟಕರ್ ಮೂಗಿಂಗೆ ಬೆರಳಿಟ್ಟು ಸೋಜಿಗಂಬಡುತಿರೆ ಸಮಸ್ತಬಲಮಂ ನೆರಪಿ (ಪದ್ಮರಾ. ೩-೫೦). [ಸಂ. ಹರಿದಂತದಂತಿನ್]

ಹರಿದಂಬರ (ನಾ). ಹಸಿರುಬಟ್ಟೆ; ಹಸಿರುವಸ್ತ್ರ: ಭೂಮಿದೇವಿ ಪೊದೆದತಿ ಹರಿದಂಬರಮಂಬಂತಿರೆ ಪಸುರಾದುರು ಶಾಳಿಕ್ಷೇತ್ರವೆಸಗುಂ (ಪಮ್ಮಿರ. ೧-೫೦). [ಸಂ.]

ಹರಿದರುಶನ (ನಾ). ವಿಷ್ಣುವಿನ ದರ್ಶನ: ಹರಿದರುಶನಕಾಗಿ ನಾರದರು ಬರಲು ಸಿರಿದೇವಿ ಹೊಱಗಿನ ಬಾಗಿಲಲಿದ್ದಳು (ಪುರಂದ. ೬-೫೦ ಪಲ್ಲವಿ). [< ಸಂ. ಹರಿದರ್ಶನ]

ಹರಿದಶ್ವ (ನಾ). ೧. ಸೂರ್ಯ: ಹರಿದಶ್ವಂ ಬಂದಪಂ ವಾಹಳಿಗೆನುತರುಣಂ . . . ಕುಂಕುಮಘನರಸಮಂ ಸಿಂಪಿಸುತ್ತಿರ್ದನೆಂಬಂತಿರಲೆತ್ತಂ ಪೊಣ್ಮೆದತ್ತುದಯಸಮಯದೊಳ್ ಶೋಣಸೂರ್ಯಾಂಶುಜಾಲಂ (ಕಾದಂಪೂ. ೧೪೧): ಹರಿದಶ್ವನ ತುರಗಂಗಳ ತಿರನೆಳಲೊ ಭೂಮಿದೇವಿ ಪೊದೆದತಿಹರಿದಂಬರಮೆಂಬಂತಿರೆ ಪಸುರಾದುರು ಶಾಳಿಕ್ಷೇತ್ರವೆಸಗುಂ (ಪಮ್ಮಿರ. ೧-೫೦). ೨. (ಸೂರ್ಯನ) ಹಸುರುಬಣ್ಣದ ಕುದುರೆ: ಕಿರಣಂಗಳ ಕಾವುಗಳಿನೆ ಹರಿದಶ್ವಂಗಳ ಪಸುರ್ತ ಪಸುರೆಲೆಯಿನೆ ತೋರ್ಪರುಣದಿನಮಣಿ ಬಯಲ್ದಾವರೆಯಿನೆ ಪೋಲ್ದಿರ್ದನಪರಗಿರಿವರಶಿರದೊಳ್ (ಕಾವ್ಯಸಾ. ಆಱಂ. ಶೂದ್ರಕ). ೩. ಎಕ್ಕದ ಗಿಡ; ಅರ್ಕವೃಕ್ಷ. [ಸಂ.]

ಹರಿದಳ (ನಾ). = ಹರಿತಾಲ ೧: ಬರಿಗಜಕ್ಕೆ ಹೊರದೇಶಗಳಿಂದ ಆಮದಾಗುವ ವಸ್ತುಗಳಾವುವೆಂದರೆ . . . ಪರಿಶುದ್ಧವಾದ ಹೊಳಪುಗಾಜು, ಕೆಂಪು ಹರಿದಳ (ಪ್ರವಾಗ. ೧, ೯೫). [< ಸಂ. ಹರಿತಾಲ]

ಹರಿದಾಟ 'ಪರಿ$_2$' ಪರಾ.

ಹರಿದಾಡು 'ಪರಿ$_2$' ಪರಾ.

ಹರಿದಾರಿ, ಪರಿದಾರಿ, ಹರದಾರಿ (ನಾ). ದೂರವನ್ನು ಅಳೆಯುವ ಒಂದು ಪ್ರಮಾಣ; ಸುಮಾರು ಮೂರುಮೈಲಿ ಅಳತೆಯ ಪ್ರಮಾಣ: ಹರಿದಾರಿ ಪರಿಯಂತರ ಹೋಗಿ ಜಿನದತ್ತಗುರುವಿನ ಚರಣಾಬ್ಜಕೆರಗಿ (ಜಿನರಾ. ೬-೧೩೩); ಹಳಿಮನೆಗೆ ಮೇಗರವಳ್ಳಿಯಿಂದ ಸುಮಾರು ಒಂದು ಹರಿದಾರಿ (ಮಲೆಮ ೬೨). Δ **ಪರಿದಾರಿ:** ಪರಿದಾರಿಯಳತೆಯಗಲದ ಸರಿಯೆನೆ ನಾಲ್ವಸೆಯೊಳಿಸವ ಪಳಿಕಿನ ಮಣಿಗಳ ನೆರೆದುದು ಸೋಪಾನಂಗಳ್ ಬೆರೆದಿರಲಾ ತೀರ್ಥಮಿರ್ದುದುಜ್ ತಿಳಿನೀರಿಂ (ಹಾಲಾಸ್ಯ. ೩-೧೬-೫). **ಹರದಾರಿ:** ಹರ[ಪಾಠಾಂ. ರಿ] ದಾರಿಯಳತೆಯಲಿ ಇದಿರೊಳೊಂದುದ್ಯಾನವನವಿರಲದಱ ಸೊಬಗಂ ನೋಡುತಂ . . . ವಾಲ್ಮೀಕೇಶ್ವರನು ನಿಂದು (ಬಸಪು. ೨೬-೬೨); ಹಳ್ಳಿಗಳ ಜನರು ನೀರಿಗಾಗಿ ಎರಡೆರಡು ಹರದಾರಿ ಹೋಗುವದು ಅಪರೂಪವಲ್ಲ (ಕಾಭಾಗ. ೭). [?]

ಹರಿದಾಸ (ನಾ). ದೀಕ್ಷೆಯನ್ನು ಪಡೆದ ವಿಷ್ಣುಭಕ್ತ; ಮಾಧ್ವಸಂಪ್ರದಾಯದ, ವಿಷ್ಣುಸ್ತುತಿಯ ಕೀರ್ತನೆಗಳನ್ನು ರಚಿಸಿ, ಹಾಡಿ, ಭಕ್ತಿಪ್ರಚಾರ ಮಾಡುವ, ದೀಕ್ಷೆಯನ್ನು ಪಡೆದ ಭಕ್ತ: ಹರಿದಾಸರ ಸಂಗ ದೊರಕಿತು ಎನಗೀಗ ಇನ್ನೇನಿನ್ನೇನು (ಪುರಂದ. ೨-೬೯ ಪಲ್ಲವಿ); ಹರಿದಾಸರಲ್ಲಿ ನರಹರಿತೀರ್ಥ, ಶ್ರೀಪಾದರಾಯ . . . ಹಳವನಕಟ್ಟೆ ಗಿರಿಯಮ್ಮ ಇವರೇ ಮೊದಲಾದವರು ಮುಖ್ಯರಾಗಿದ್ದಾರೆ (ಭಾಂದ. ೬೧೧). [ಸಂ.]

ಹರಿದಾಸಿ 'ಹರದೇಶಿ' ನೋ.

ಹರಿದಾಳಿ, ಹರದಾಳಿ (ನಾ). ಬಿರುಸಿನ ಮುತ್ತಿಗೆ; ರಭಸದ ಆಕ್ರಮಣ,—ದಾಳಿ: ಸಾಲ ಸಾವಿರ ದೀವಿಗೆಯ ಹರಿದಾಳಿಗಳುಕದೆ ನೃಪರ ಮೋಱೆಗಳೋಳಿಗಳ ನೆಱೆ ಹೊದ್ದಿ ಕತ್ತಲೆ ನಿಂದುದಲ್ಲಲ್ಲಿ (ಕುವ್ಯಾಕ. ೧-೧೯); ಅರಿಕರ್ಮಗಳ ಸುಡುವೆವು ಮೋಕ್ಷದುರ್ಗಕೆ ಹರಿದಾಳಿವಿಡುವೆವು (ಭಾರಚ. ೬೫-೨೭). **ಹರದಾಳಿ** : ಹರನ ಗಿರಿಗುಡಿಗಳಲಿ ಸುರೆ ಮಾಂಸ ಮಾಜೀತು ಶರಣರಿಗೆ ಹರಣ ಪಿರಿದಾಗಿ ಜಗದಲ್ಲಿ ಹರದಾಳಿ ನೋಡ (ಸರ್ವಜ್ಞ. ೧೦೫೩). [ಹರಿ$_3$ (< ಪರಿ$_2$) + ದಾಳಿ (< ದಾಟು)]

ಹರಿದಿಗ್ವದನ (ನಾ). ಪೂರ್ವದಿಕ್ಕಿನ ಮುಖ; ಪೂರ್ವದಿಕ್ಕು: ಹರಿದಿಗ್ವದನಂ ಸಂಧ್ಯಾಸ್ಫುರಿತಾಧರಮಧುರತಾರಕಾವಸನಂ ಭಾಸುರಚಂದ್ರಿಕಾತಿಲಕಮುದುವರಕಾಂತಿಯುತಂ ಬೆಡಂಗುಮೆತ್ತತ್ತಾಗಳ್ (ಆಪು. ೬-೬೯). [ಸಂ.]

ಹರಿದಿನ (ನಾ). ೧. ವಿಷ್ಣುವಿನ ಪ್ರೀತ್ಯರ್ಥವಾಗಿ ಉಪವಾಸವಿದ್ದು ಪೂಜೆ, ಕೀರ್ತನೆ ಹಾಗೂ ಜಾಗರಣೆ ಮಾಡುವ ದಿವಸ,—ಏಕಾದಶಿ ಮತ್ತು ದ್ವಾದಶಿ: ಹರಿದಿನವಿಂದು ಯಜ್ಞಾರಂಭದಿನ ವಡ್ಡಂತಿ ಲೇಸೆಂದು ಬಂದು ನಾನಾಮುಖದ ದಾನಕೆ ತಂದ ಮಸ್ತುವ ಬಾಚಿ ಹೊಳ್ಸಿಸಿ ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆ (ಕುವ್ಯಾವಿ. ೬-೧೩); ಹರಿದಿನದಲಿ ಉಂಡ ನರರಿಗೆ ಘೋರನರಕವು ತಪ್ಪದು (ಪುರಂದ. ೧-೧೬೪ ಪಲ್ಲವಿ). ೨. ಹಾಲಕ್ಕಿ ಒಕ್ಕಲಿಗರು ಆಚರಿಸುವ ಒಂದು ಹಬ್ಬ: ಹಾಲ್ಕಕ್ಕೀ ಒಕ್ಕಲಿಗರಲ್ಲಿ ಹರಿದಿನ, ದೀವಳಿಗೆ, ಹೋಳೀಹುಣ್ಣಿವೆ, ಇವು ಮೂರು ದೊಡ್ಡಹಬ್ಬಗಳು. ಉಗಾದಿಯಾದ ಬಳಿಕ ಯೆಂಟು ದಿವಸದವರೆಗೆ ಹರಿದಿನದ ಸಮಾರಂಭ ನಡೆಯುತ್ತದೆ (ಕಾಭಾಗ. ೧೩೭). [ಸಂ.]

ಹರಿದೊಗಲು 'ಪಜ್ಜಿದೊವಲ್' ನೋ.

ಹರಿದ್ರ (ನಾ). ಹಳದಿಬಣ್ಣ; ಅರಿಸಿನ ಬಣ್ಣ: "ಪೀತಂ ಹರಿದ್ರಮೆನೆ ರಜನಿವರ್ಣಂ" (ಮಂಗರಾ. ೧೩೧-೨೨). [ಸಂ. ಹರಿದ್ರಾ]

ಹರಿದ್ರತ್ನ (ನಾ). ಹಸಿರುಬಣ್ಣದ ಹರಳು; ಮರಕತಮಣಿ; ಪಚ್ಚೆಮಣಿ: ಭಾಸ್ವದ್ಭಿತ್ತಿಯಂ ಸುತ್ತಿರೆ ಸುರುಚಿರಚಿತ್ರಂ ಹರಿದ್ರತ್ನ ಮಧ್ಯಾಜಿರಮಂ ಮುಕ್ತಾವಲೀ ರಂಗವಲಿ ಬಳಸೆ (ಪಂಪಾಮಾ. ೫-೧೧೨); ಮಿಸುಪ ಹರಿದ್ರತ್ನಮೊಂದಿರ್ದ ಮುಂಗೈಸರಂ (ರಾಜಶೇ. ೪-೭೧). [ಸಂ.]

ಹರಿದ್ರವನ (ನಾ). ಅರಿಸಿನದ ಗಿಡಗಳ ತೋಪು: ವನಲಕ್ಷ್ಮಿಯ ನೇತ್ರಾಂಶುಕವೆನೆ ನೇತ್ರಕ್ಕೆಸೆದು ಮಿಸುಗಿ ಪಸುರ್ವಡೆದುವು ನಂದನದ ಕೆಲಂದಿಡಿದಾರ್ದ್ರಕವನ ಜೀರಕವನ ಹರಿದ್ರವನ ಸಂತತಿಗಳ್ (ಪುಷ್ಪಸ. ೨-೪೭). [< ಸಂ. ಹರಿದ್ರಾವನ]

ಹರಿದ್ರಾಂಗ (ನಾ). ಅರಿಸಿನವನ್ನು ಲೇಪಿಸಿದ ಮೈ: ಚಂದ್ರಹಾಸಂ ಕಂಡನಿದಿರೆ ಕುಂಕುಮಸುರಂಜಿತಹರಿದ್ರಾಂಗದಿಂ ಕಂಗೊಳಿಪ ನೂತನವಧೂವರರನು (ಪ್ರಮಿಧಾ. ೨೯-೪೨); ಕುಂಕುಮಸುರಂಜಿತಹರಿದ್ರಾಂಗದಿಂ ಮೆರೆವ ನೂತನ ವಧೂವರರು ಬಂದರಿದಿರಾಗಿ (ಚಂದ್ರಸ. ೬೯-೧೬). [ಸಂ.]

ಹರಿದ್ರಾಕ್ಷಿ (ನಾ). ಒಂದು ಬಗೆಯ ಸಸ್ಯ: "ಕೃಷ್ಣಫಲಾ - ಬಾವುಜಿಗೆ, ಹರಿದ್ರಾಕ್ಷಿ, ಕರಿಯ ನಾಯಿತೊಳಸಿ, ತೊಳಸಿ" (ಓಷಧಿ. ೬೯). [ಸಂ. ಹರಿದ್ರಾಕ್ಷಾ]

ಹರಿದ್ರುಮ (ನಾ). ದೇವದಾರುವೃಕ್ಷ: "ಪೀತದಾರುಃ- ಹರಿದ್ರುಮ (ದೇವದಾರು)" (ಓಷಧಿ. ೯೯). [ಸಂ.]

ಹರಿದ್ರೆ (ನಾ). ೧. ಅರಿಸಿನ: "ಅರಿಸಿನಂ ಸಿತಂ ಹರಿದ್ರ ರಜನಿಯೆನಿಕ್ಕು" (ಮಂಗರಾ. ೬೯-೨೮); ವಾಜಿಗೆ ಪೂಸುಗೆ ಕುಂಕುಮ ಹರಿದ್ರೆ ಗಂಧಾಧಿಗಳಂ (ಅಶ್ವಶಾ. ೮-೧೪). ೨. ಅಳಲೆ; ಆಣಿಲೆ: "ಜೀವಕಿ ಹರೀತಕಿ ಹರಿದ್ರೆ ಶಿವೆಯನಲಣಿಲೆ" (ಮಂಗರಾ. ೬೭-೨೦). [ಸಂ. ಹರಿದ್ರಾ]

ಹರಿದ್ವರ್ಣ (ನಾ). ಹಸಿರುಬಣ್ಣ: ಸುಂದರವಾದ ಹರಿದ್ವರ್ಣದ ನೇತ್ರಗಳು ಪುಸು ದೂರ ಸರಿದಂತಿದ್ದುವು (ಪುಸಪು. ೫೭೪). [ಸಂ.]

ಹರಿದ್ವಸು (ನಾ). ಹಸಿರುರತ್ನ; ಮರಕತಮಣಿ; ಪಚ್ಚೆ: ಆ ವೇದೀಸ್ಥಳದೊಳ್ ಹರಿದ್ವಸುವ ಪಾತ್ರಂಗಳ್ ಲಸದ್ಭೂರ್ವೆಯಿಂ ತೀವಿರ್ದುಂ ನವಚಂದ್ರಕಾಂತಚಷಕಂಗಳ್ ಚಂದನೋದ್ದೀದಿಂ ತೀವಿರ್ದುಂ . . . ಬೞಿರ್ದರ್ವೋಲೆಸೆದುವಾದಂ ವರ್ಣಸಾಮಾನ್ಯದಿಂ (ಚಂದ್ರಪ್ರ. ೬-೫೪). [ಸಂ.]

ಹರಿದ್ವಾರ (ನಾ). ಗಂಗಾನದಿ ಬೆಟ್ಟುಗಳಿಂದಿಳಿದು ಬಯಲುಪ್ರದೇಶಕ್ಕೆ ಬರುವ ಸ್ಥಳ ಮತ್ತು ಆ ಸ್ಥಳದಲ್ಲಿರುವ ಪುಣ್ಯತೀರ್ಥ: ತನುವೆಂಬುದೊಂದು ಹುತ್ತಕ್ಕೆ ಒಂಬತ್ತು ಬಾಗಿಲು ತಾಮಸವೆಂಬ ಸರ್ಪಂಗೆ ತಲೆ ಹದಿನಾಲ್ಕು ಒಡಲಾಯು ಬಾಲವ ಬ್ರಹ್ಮಲೋಕಕ್ಕೆ ಇಟ್ಟು ಶಿರವ ಹರಿದ್ವಾರದಲ್ಲಿರಿಸಿ ಕರಣೇಂದ್ರಿಯಂಗಳೆಂಬ ಕಾಳಕೂಟ ವಿಷವನೆ ಉಗುಳುತ್ತಿದೆ ನೋಡಾ (ಷಡ್ಸ್ಥ. ೧೨೨). [ಸಂ.]

ಹರಿದ್ವ್ಯೂಹ (ನಾ). ದಿಕ್ಕುಗಳ ಸಮೂಹ; ಎಲ್ಲಾ ದಿಕ್ಕುಗಳು: ಪೂರ್ಣ ದುರ್ಗಾರ್ಣವ ದೊರೆಗಣೆವಂದತ್ತು . . . ಉದ್ದಾಮಸೌಧದ್ಯುತಿಭರಿತ ಹರಿದ್ವ್ಯೂಹ ಮಾಸ್ಥಾನಗೇಹಂ (ಚಂದ್ರಪ್ರ. ೫-೩). [ಸಂ.]

ಹರಿಧಾಮ (ನಾ). ವೈಕುಂಠ: ಹರಿಧಾಮಕ್ಕಾಳ್ವಂದಾರರದೆಯ್ದಿದರ್ (ದಿವ್ಯಚ. ೧೧-೨೬). [ಸಂ.]

ಹರಿನಂದನ (ನಾ). ೧. ವಾಯುವಿನ ಮಗ; ಭೀಮ: ಅಂಜಿದರಂ ನಿಜಬಾಹು ವಜ್ರಪಂಜರದೊಳಗಿಟ್ಟು ಕಾವ ಹರಿನನ್ನನನಾಶ್ರಿತರಾದ ಶಿಷ್ಯರಂ ಪೊರೆವ ಪೊಗರ್ತೆವೆತ್ತ

ಬಲಿ ಭಾವಿಪೊಡೀತನೆ (ಸೌಇಾ. XX. ೭೪-೧೫; 1112). ೨. ಹನುಮಂತ; ಆಂಜನೇಯ: ನೊಂದ ಹುಲಿಯಂತಸುರನಾ ಹರಿನಂದನನ ಹೊಗಳಿದನು . . . ಕೋಪದಿ ತಿವಿದನನಿಲಜನ (ಕೌಶಿಶಾ. ೨೨-೨೪). ೩. ಇಂದ್ರನ ಮಗ; ಅರ್ಜುನ: ಹರಿನಂದನನ ಬಿಡದೆಸುತ ಬಂದನು ಭೀಷ್ಮ ಮುಳಿಸಿನಲಿ (ಕುಮಾಭೀ. ೬-೨೧); ಹರಿನಂದನನ ದಿವ್ಯಹರಿಮಯವರೂಥಮಂ ಹರಿವೇಗದಿಂದೆಸಪ ಹರಿಚತುಷ್ಟಯಮುಮಂ . . . ಧಾತುಗಿಡಿಸಿ (ಚೈಮಿಭಾ. ೨೫-೪೬). ೪. ಕಾಮ; ಮನ್ಮಥ. ೩, ೪ : ಹರಿನಂದನಭಂಜನ ನಹಿಮರುಚಿಸುತಾರಾತಿ ವಿಜಯನಾತ್ತಸುಭದ್ರಂ ವರಭೀಮಧರ್ಮಯುತನಾಗಿರುತಂ ನರನಲ್ತು ಬಸವನೆನಿಸಿದನಲ್ತೇ (ವೃಷಾ. ೫-೩೯). [ಸಂ.]

ಹರಿನಾದ (ನಾ). ೧. ಸಿಂಹದ ಗರ್ಜನೆ. ೨. ಉತ್ಸಾಹ ಹಾಗೂ ಶೌರ್ಯ ಸೂಚಕವಾದ ಧ್ವನಿ; ಸಿಂಹನಾದ: ತಾಮ್ರಧ್ವಜಂ ಹರಿನಾದಮಂ ಮಾಡಿ ಹರಿದಾಡುತಿರೆ (ಚೈಮಿಭಾ. ೨೫-೪೬); ಪರಬಲದೊಳರಿಗಳ ಹರಿನಾದಂ ಪಿರಿದಾದುದು (ಅದ್ಭುತ. ೫೧-೧೦). [ಸಂ.]

ಹರಿನಾಮ (ನಾ). ವಿಷ್ಣು ಅಥವಾ ಕೃಷ್ಣನ (ಬೇರೆ ಬೇರೆ) ಹೆಸರು,– ನಾಮ: ಸವಣರ ಕಂಡರೆ ಬತ್ತಲೆಯಟ್ಟಿರಯ್ಯಾ ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ (ಬಸವ. ೧೦೩); ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವುವು (ಪುರಂದ. ೪-೭೧. ಪಲ್ಲವಿ). [ಸಂ. ಹರಿನಾಮನ್]

ಹರಿನಾಳಿ (ನಾ). ನೀರು ಮೊದಲಾದುವು ಹರಿದು ಹೋಗಲು ಮಾಡಿದ ದಾರಿ; ಮೋರಿ; ಚರಂಡಿ: "ಪ್ರಣಾಳೀ, ಜಳಪದ್ಧತಿಃ - ಈ ೨ ಹರಿನಾಳಿ" (ಹಲಾಯು. ೧೧೩-೬೩). [ಹರಿ$_2$ (< ಪರಿ$_2$) + ನಾಳಿ$_1$ (= ನಾಲಿ)]

ಹರಿನಾಳಿಗೆ 'ಪರಿನಾಳಿಗೆ' ನೋ.

ಹರಿನೀರು 'ಪರಿನೀರ್' ನೋ.

ಹರಿನೀಲ, ಹರಿನೀಳ (ನಾ). ಕಪ್ಪುನೀಲವರ್ಣದ ರತ್ನ; ಇಂದ್ರನೀಲ: ಆ ನಿಖಿಲರಾಜಕಿರೀಟಕೀಲಿತಹರಿನೀಲಮಣಿ ಮದಾಳಿಮಾಲಾಪರಿಚುಂಬಿತ ಚರಣಾರವಿಂದಂ (ಪಂರಾಮಾ. ೩-೧೭ ವ); ದಳಿತಾಬ್ಜದಿಂದಮೊಂದೊಂದಳಿಗಳ್ ನೆಗೆನೆಗೆದು ಮತ್ತಮಿಱಗುತ್ತಿರೆ ತನ್ನಳಿನಿ ಹರಿನೀಲದಿಂ ಕಂದಳದೊಳ್ಪಿಱಿಕಲ್ಲನಾಡುವಂತೆ ವೊಲೆಸೆಗುಂ (ರಾಜಶೇ. ೨-೭೧). ಹರಿನೀಳ : ಬಿದಿ ಹರಿನೀಳದೊಳ್ಕಡೆದಜಾಂಡಮನಂಜನ ದೊಳ್ಪೊರಳ್ಚಿದಂತೊದವಿರೆ ಮರ್ಬು (ಮಲ್ಲಿಪು. ೭-೨೨) ; ಯಾಮಿನಿಯಂತೆ ಚಂದ್ರ ರುಚಿರಾಜಿತಂ . . . ವಾಯುಪಥದಂತದು ಹರಿನೀಳಭಾಸುರಂ (ಪುಷ್ಪಪು. ೧೩-೮೩). [ಸಂ.]

ಹರಿನೀಲಚ್ಛವಿ, ಹರಿನೀಳಚ್ಛವಿ (ನಾ). ಇಂದ್ರನೀಲದ ಕಾಂತಿ: ಹರಿನೀಲಚ್ಛವಿ ಪುಂಡರೀಕನಯನಂ ವಿಸ್ತೀರ್ಣವಕ್ಷಸ್ಥಲಂ . . . ಗಂಡರೊಳ್ ನೀಱಂ (ಪಂರಾಮಾ. ೮-೧೨); ಹರಿನೀಲಚ್ಛವಿ ರೋಚನಾರುಚಿರನೇತ್ರಂ ವೃತ್ತಗಾತ್ರಂ . . . ಕ್ರೋಧೋದ್ಧುರಂ ಸಿಂಧುರಂ (ಚಂದ್ರಪು. ೯-೧೦೦). ಹರಿನೀಳಚ್ಛವಿ: ಹರಿನೀಳಚ್ಛವಿಯೆಂಬ ಚೆಲ್ವ ತೊವಲಂ ಕಲ್ಲೋಲಹಸ್ತಾಗ್ರದೊಳ್ ಧರಿಸಿರ್ದುಂ . . . ದುರ್ಧರನಿರ್ಘೋಷಣದಿಂದ ಪುಯ್ಯಲಿಡು ವಂತಿರ್ದತ್ತು ದುಗ್ಧಾರ್ಣವಂ (ಬಾಧವು. ೮-೬೭). [ಸಂ.]

ಹರಿನೀಲದ್ಯುತಿ (ನಾ). = ಹರಿನೀಲಚ್ಛವಿ: ಹರಿನೀಲದ್ಯುತಿಜಾಲದಿಂ ರವಿಗೆ ಶೀತದ್ಯೋತಿಗುದ್ಯೋತಭೀಕರರಾಹುವ್ರಜಶಂಕೆಯಂ ಮರಕತಪ್ರದ್ಯೋತಜಾತ ಪ್ರಭಾಸುರದಿಂದಾ ಹಯಸಂಕುಲಕ್ಕೆ ಹರಿಣಂಗುತ್ಕೀರ್ಣದೂರ್ವಾಂಕುರೋತ್ಕರವಿಭ್ರಾಂತಿ ಯನುಂಟುಮಾಡಿ ಕರುಮಾಡಂ ನಾಡ ಕಣ್ಗೊಪ್ಪುಗುಂ (ಕುಸುಮಾ. ೨-೧೨೭). [ಸಂ.]

ಹರಿನೀಲಮಣಿ (ನಾ). = ಹರಿನೀಲ : ತೋರಮುತ್ತಿನ ಹಾರಮಂ ತೊಟ್ಟು ಚಂದ್ರಮುಖಿ ಕಾರ ಕತ್ತಲೆಯೊಳಡಿಯಿಡಲಂಜಿ ಪಣಿಗೆ ಕಸ್ತೂರಿಯಂ ಕಣ್ಗೆ ಕಾಡಿಗೆಯಂ ಕೊರಲ್ಗೆ ಹರಿನೀಲಮಣಿಭೂಷಣವನು ಸೇರಿಸಲ್ಕದು ನೈಜಮಾಗೆ . . . ಏದಿದಳ್ ಸಂಕೇತಭವನ ದೊಳ್ಕಾದಿರ್ದ ಕಾಂತೆನೆಡೆಗೆ (ಚೈಮಿಭಾ. ೨೬-೯). [ಸಂ.]

ಹರಿನೀಲರತ್ನ (ನಾ). = ಹರಿನೀಲ : ಹರಿನೀಲ [ಪಾಶಾಂ. ೪] ರತ್ನಮಂ ಕಂಡರಿಸಿದ ಕಣ್ಣಿಱವಿಗೆಯ್ದೆ ಜೀವಂಬೊಯ್ದಂತಿರೆ ತೋರ್ಪ ಗಂಡಗಾಡಿಗೆ ಪುರುಷೋತ್ತಮನೆಂದು ಕೊಂಡುಕೊನೆದುದು ಲೋಕಂ (ಪಂರಾಮಾ. ೩-೧೫೭). [ಸಂ.]

ಹರಿನೀಲವರ್ಣ (ನಾ). ೧. ಇಂದ್ರನೀಲದ ಬಣ್ಣ; ಕಪ್ಪುನೀಲಿ. ೨. ಇಂದ್ರ ನೀಲದಂತೆ ಮೈಬಣ್ಣವುಳ್ಳವನು: ಹರಿನೀಲವರ್ಣನೀ ಸುಂದರತನು ನೀಂ ರೋಚನಾಭೆಯೊಳ್ ನೆರೆಯಲೊಡಂ ಪರಭಾಗಮಾಗಿ ನಿಮ್ಮಿರ್ವರಿರವು ಕಾರ್ಮುಗಿಲ ಮಿಂಚಿನಿರವಿನ ತೆಱದಿಂ (ಶಾಂತಿಪು. ೫-೧೪೩). [ಸಂ.]

ಹರಿನೀಲೋಪಲ, ಹರಿನೀಳೋಪಳ (ನಾ). = ಹರಿನೀಲ: ಹರಿನೀಲೋಪಲ [ಪಾಶಾಂ. ನೀಳೋಪಳ] ವಿರಚಿತಮರಳೆಲೆ ಬಾಲಕನ ನಿಟಿಲದೊಳ್ ನಯನಮನೋಹರ ಮಾದುದು (ಪಂರಾಮಾ. ೩-೧೨೨); ಹರಿನೀಲೋಪಲಪಟ್ಟಕಾಘಟಿತಸೋಪಾನಂಗಳೊಳ್ ತೀರಮಂದರಕಲ್ಲೋಲವಿಲೋಲಮಾಲಿಕೆಗಳೊಳ್ ಕಾಂತಾಪ್ರತಿಚ್ಛಾಯೆ ತಳ್ತಿರೆ . . . ಕಣ್ಗಂಬಾಯ್ತು ಪದ್ಮಾಕರಂ (ಅನಂಪು. ೭-೩೨). ಹರಿನೀಳೋಪಳ : ಹರಿನೀಳೋಪಳಮುಂ ಪಯಗರಡಿಯುಮಿರೆ ನೀಳಯುಗಳಮೆಂದೆಳೆ ನಭಶ್ಚರಯುಗಳಮದಕೆ ನಗೆಯೊಳ್ ಬಿರಿವಂತಿರೆ ಬಿರಿವುವಲ್ಲಿ ಪೊಸಮಲ್ಲಿಗೆಗಳ್ (ಶಾಂತಿಪು. ೨-೯೭). [ಸಂ.]

ಹರಿನೀಳ 'ಹರಿನೀಲ' ನೋ.

ಹರಿನೀಳಕುಟ್ಟಿಮ (ನಾ). ಇಂದ್ರನೀಲದಿಂದ ರಚಿಸಿದ ನೆಲಗಟ್ಟು: ಚಂದನರಸಬಿಂದುಗಳಿಂ ಸೌಂದರಹರಿನೀಳಕುಟ್ಟಿಮಾಂಗಣದೊಳ್ ಜಾಣಂದಂ ಚಳೆಯಂಗೊಟ್ಟುದದಂದಾಗಸದಲ್ಲಿ ಪೊಳೆವ ತಾರಗೆಗಳವೋಲ್ (ಬಾಧವು. ೧೧-೪೧).

[ಸಂ. ಹರಿನೀಲಕುಟ್ಟಿಮ]

ಹರಿನೀಳಚ್ಛವಿ 'ಹರಿನೀಲಚ್ಛವಿ' ನೋ.

ಹರಿನೀಳತಳ (ನಾ). ಆಕಾಶ : ಅಮರ್ದುಣಸಗ್ಗದಚ್ಚರಸಿಯರ್ ವಧುವರ್ ನಿಳಯಂ ಪರಾರ್ಥ್ಯರತ್ನಮಯವಿಮಾನಮಾಳ್ಗಳಮರರ್ ಹರಿನೀಳತಳಂ ಧರಾತಳಂ . . . ಎನೆ ಬಣ್ಣಿಪಂಗೆ ಸುಖಸಂಪದಮೇಂ ಗಳ ಮೊಗ್ಗೆ ಸಗ್ಗದಾ (ಚಂದ್ರಪು. ೪-೭೨).

[ಸಂ. ಹರಿನೀಲತಲ]

ಹರಿನೀಳೋಪಳ 'ಹರಿನೀಲೋಪಲ' ನೋ.

ಹರಿನುಡಿ (ನಾ). ಒಂದೇ ಸಮನೆ ನಡೆಯುವ ಮಾತು ; ವಾಕ್ಪ್ರವಾಹ : ಮಾತ ಬಣ್ಣಿಸಲು ಹೊತ್ತು ಹೋಯಿತ್ತಯ್ಯ ನಿನಗದೆ ಹರಿನುಡಿಗೆ ಕಡೆಯಿಲ್ಲ (ಅವಚಂ. ೨೪೭-೧೧೨೬). [ಹರಿ$_2$ (< ಪರಿ$_2$) + ನುಡಿ$_2$]

ಹರಿನೆಲೆ (ನಾ). ೧. ವಿಷ್ಣುವಿನ ವಾಸಸ್ಥಾನ. ೨. ಸಿಂಹಗಳ ನಿವಾಸ. ೧, ೨ : ಹರಿನೆಲೆಯುಯಿರುಳ ನಭದಂತಮಳಸೋಮಾನ್ವಿತಂ (ನವಮೋ. ೮ ೧೧).

[ಹರಿ$_4$ + ನೆಲೆ$_1$]

ಹರಿನೇತ್ರ (ನಾ). ೧. ಅಗ್ನಿನೇತ್ರ. ೨. ಕಣ್ಣಲ್ಲಿ ಅಗ್ನಿಯನ್ನು ಉಳ್ಳವನು; ಅಗ್ನಿನೇತ್ರ; ಶಿವ : ಹರಿಮಿತ್ರ ಹರಿನೇತ್ರ ಹರಿಜಮಸ್ತಕಪಾತ್ರ . . . ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). [ಸಂ.]

ಹರಿನ್ನೀಲ (ನಾ). = ಹರಿನೀಲ: ಹರಿನ್ನೀಲದ ಬಜ್ಜರದಿಂ ಮರಕತ ಸೊನ್ನಲಿಗೆಯ ಸಾಲಿಂ ಚೆನ್ನೆಸೆದವು . . . ಕರುಮಾಡಂ (ಉದ್ಧವೇ. ೨-೩೩).

[IP ಇದು 'ಹರಿನೀಲ' ಶಬ್ದವನ್ನು ಪ್ರಾಸ ಮತ್ತು ಛಂದಸ್ಸಿಗಾಗಿ ಮಾಡಿಕೊಂಡ ರೂಪ]

ಹರಿನ್ಮಣಿ (ನಾ). ಹಸಿರುರತ್ನ; ಪಚ್ಚೆ; ಮರಕತ: ತೊಳಪ ಹರಿನ್ಮಣಿಕುಟ್ಟಿಮ ತಳದೊಳ್ ತಳಮಾರೆ ತಳಮನೂಱಿ ಬೆಡಂಗಂ ತಳೆದು ತಳರ್ನಡೆ ನಡೆವೆಡೆಯೊಳೆದೇಂ ಜನನಿಗೆ ವಿರೋಧಮಂ ಮಾಡಿದನೋ (ಸುಕುಮಾ. ೧೦-೩೯); ತೊಳಗುವ ಪೊನ್ನ ಕೋಟೆಯ ಹರಿನ್ಮಣಿಗೋಪುರದಿಂದ್ರನೀಲದಟ್ಟಳಿಗಳ . . . ಅಂಶುಮಂಡಳ ನೆಗೆದಲ್ಲಿ ಮಂಡಳಿಸೆ (ಪುಷ್ಪಪು. ೯-೨೭). [ಸಂ.]

ಹರಿಪದ (ನಾ). ೧. ವಿಷ್ಣುವಿನ ಪಾದ: ಸಭ್ಯತಾಲತೆ ಹೂತು ಹಸರಿಸಿ ಹಬ್ಬಿ ಫಲವಾದಂತೆ ಕಾಯವ ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ (ಕುವಾಅ. ೧೬-೩೪); ಹರಿಪದದಿಂದೊಗೆದ ರಜಂ [ಹರಿ]ಪದಮಂ ತೊಡರೆ ನಡೆದುದಾ ನೃಪಸ್ಯೆನ್ಯಂ (ಕುಸುಮಾ. ೧೫-೮೫). ಹರಿಪದಾಶ್ರಯನಮೃತರಂಜಿತ ಕೃಷ್ಣಾಂಕನುರುಕುಮುದವರ್ಧನಂ . . . ಎನ್ನ ಸುತನೆನ್ನಂತೆ ಪೆರ್ಮೆಯಿಂ ಪರಿವರ್ಧಿಪಂ ಗಡಂ (ಚಿಬಪು. ೯-೨೪). ೨. ಸೂರ್ಯನು ವಿಷುವದ್ರೇಖೆಯನ್ನು ದಾಟುವ ಎರಡು ಕಾಲಗಳಲ್ಲಿ ಒಂದು; ಮೇಷಸಂಕ್ರಾಂತಿ. ೩. ಕುದುರೆಯ ಖುರಪುಟ: ಹರಿಪದದಿಂದೊಗೆದ ರಜಂ [ಹರಿ]ಪದಮಂ ತೊಡರೆ ನಡೆದುದಾ ನೃಪಸ್ಯೆನ್ಯಂ (ಕುಸುಮಾ. ೧೫-೮೫). [ಸಂ.]

ಹರಿಪದನಿಷ್ಠ (ನಾ). ವಿಷ್ಣುವಿನ ಪಾದಗಳನ್ನು ನಂಬಿದವನು; ವಿಷ್ಣುಭಕ್ತ: ಹರಿಪದನಿಷ್ಠರನು ನಿಲುಕುವನೆ ದುರ್ಜನನು (ಕುಮಾಅ. ೧೬-೪೯). [ಸಂ.]

ಹರಿಪದವಳಯ (ನಾ). ಆಕಾಶಸ್ಥಲ; ಗಗನಮಂಡಲ: ಕಲಿತಬಲ ಶತಕೋಟಿ ಗಿದಿರಾಗಳಿದವದ್ರಿಗಳಂತೆ ಹರಿಪದವಳಯವಿವಳಿತವಾಯ್ತು ಮೇಘವ್ರಾತದಂದದಲಿ (ಕುಮಾಭಿ. ೬-೯). [ಸಂ. ಹರಿಪದವಲಯ]

ಹರಿಪೀಠ (ನಾ). ಸಿಂಹಾಸನ : ಇರೆ ಹರಿಪೀಠದೊಳ್ ಭರತನಾದರದಿಂ ಬೆಸಗೊಂಡುದಂ . . . ಈ ನೆಗಳ್ದಾದಿಪುರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ (ಆಪು. ೧-೪೦); ಹರಿಪೀಠಮುದಯಗಿರಿಯಂತಿರೆ ಬಾಳಂ ಬಾಳಭಾನುಮಂಡಳಮೆಂಬಂತಿರೆ ಬಾಳಾತಪಮೆಂಬಂತಿರೆ ತನುರುಚಿ ಪುದಿದುದೊಗೆದು ಗಗನಾಂತರಮಂ (ಮಲ್ಲಿಪು. ೧೨-೧೧೩). [ಸಂ.]

ಹರಿಪೌರುಷ (ನಾ). ಸಿಂಹದ ಪರಾಕ್ರಮ: ಮಳಯಜಗಂಧಮೆಂತು ಹರಿಪೌರುಷಮೆಂತು . . . ನಿಜಂ ತನಗಂತು ಸದ್ಗುಣಾವಳಿ ಸಹಜಾತಂ (ಶಾಂತಿಪು. ೭-೧೧೯). [ಸಂ.]

ಹರಿಪ್ರಿಯೆ (ನಾ). ೧. ವಿಷ್ಣುವಿನ ಹೆಂಡತಿ; ಲಕ್ಷ್ಮಿ: "ಶರಧಿಸುತೆ ರಾಮೆ ಗೋಮಿನಿ ಲಕ್ಷ್ಮಿ ಪದ್ಮಮಂದಿರೆ ಹರಿಪ್ರಿಯೆ . . . ಮನ್ಮಥಮಾತೆಯೆನಲು ಸಿರಿಗಕ್ಕು ನಾಮಂ" (ಮಂಗರಾ. ೬-೧೮). ೨. ತುಳಸಿ. ೩. ಭೂಮಿ. ೪. ದ್ವಾದಶೀತಿಥಿ. [ಸಂ. ಹರಿಪ್ರಿಯಾ]

ಹರಿಬ, ಅರುಬ್ಬು, ಹರುಬು (ನಾ). ೧. ಕೆಲಸ; ಕಾರ್ಯ; ವ್ಯವಹಾರ: ಬಲ್ಲಗವುಡಂಗೆ ಹಣವಿನ ಮಣ್ಣಲಕಯ್ಯ ಕಾಡಾಗಿ ಸಲಿಸಿದ ಆ ಹರಿಬಕೆ ನಾಡು ಮಗುಳ್ದು ಲಕ್ಕಯ್ಯಂಗೆ (ಮೃಆರಿ. ೧೯೩೯. ೩೫-೧೩: 1205); ಅರರೆ ರಾವುತು ಜಾಗು ಸ್ವಾಮಿಯ ಹರಿಬಕೋಸುಗ ಹಗೆಯ ಹೊಯ್ದಿರಿ (ಕುಮಾಕ. ೩-೪); ಹೋಹೊ ಹಾಹಾ ಎಂದು ನಮ್ಮ ಬಾಯ್ಬಿಡಿಸುವುದೆ ಈ ಹರಿಬದೊಳಗುಟ್ಟೊ? (ಮಂಕುಕ. ೪೨). ೨. ಕರ್ತವ್ಯ; ಕಾರ್ಯಭಾರ: ಪೊರೆದಾಳ್ದಂಗರಿಭಂಜನೋದ್ಯಮದೊಳೆಂದುಂ ನಾಮೆ ಮುಂದಿರ್ದು ಪಿಂಗಿರೆ ಕರ್ಮಾರಿವಿಭೇದದೊಳ್ ಹರಿಬಂ (ವರ್ಧಪು. ೯-೧೫), ಹರಿಬವೆಮ್ಮದು ಸಾರಿ ನೀವೆಂದರಸು ಮಕ್ಕಳ ನಿಲಿಸಿ ಬಲುಗೊಂಡುರವಣಿಸಿ ತಡೆದನು ವಿರಾಟನು ಕಳಶಸಂಭವನ (ಕುಮಾದ್ರೋ. ೧೭-೩೯); ಅತಿಬಲನು ನೀ ಹರಿಬವಿದು ತಾ ನಿನ್ನದೆಂದನುಕೊಳಿಸಿದನು ರಣವ (ತೊರರಾ. ೬-೧೯-೮). ೩. ಹೊಣೆಗಾರಿಕೆ; ಜವಾಬುದಾರಿ: ಹರಿಬವೆನ್ನದು ಹೊಳ್ಳುಗಳವೆನು ದುರುಳಧನುವನು (ಕುಮಾಅ. ೧೪-೧೩); ಬರಲಿ ಮಾಣಲಿ ಹಾನಿವೃದ್ಧಿಯ ಹರಿಬವೆನ್ನದು (ಕುಮಾಅ. ೧೯-೩೪). ೪. ಕಾಳಗ; ಯುದ್ಧ: ಕಲಿತನಕ್ಕಟ್ಟಿ ಮೇಣೇಗಳಾಯ್ತೋ ಮನದೊಳ್ ಪೋ ಬರ್ಕದಂತುಂ ಹರಿಬವನಿನಿತುಂ ಟಕ್ಕನಾಂತಲ್ಲಿ ನೋಟ್ಟುಂ (ಚಂದ್ರಪು. ೬-೨೫); ಹಸುಳೆಗಳಲಾ ಹರಿಬವನು ನೀವೆಂದ ಹಗೆಗಳಲಿ ಎಸಗ ಬಲ್ಲರೆ (ತೊರರಾ. ೧-೯-೩೩); ಆ ಹರಿಬಕಸುರಾಂತಕಂ ಬಂದೊಡಾತನ ಮುಂದೆ ತೋಱಿಸುವೆನೆನ್ನ ಭುಜವಿಕ್ರಮವನು (ಕೃಮಿಭಾ. ೧೧-೧೨). ೫. ಮುಯ್ಯಿ; ಸೇಡು: ಬರುತ್ತೆದಳೆಮ್ಮಮ್ಮ ಗುಡ್ಡಮ್ಮ ನಿಜಪತಿಯ ಹರಿಬವಂ ತೆಗೆಯಬೇಕೆನುತ (ಲಕಿಂಂ. ೩೭-೨೪); ತನ್ನ ತಮ್ಮನ ಹರಿಬವನು ಮರಳಿಚುವೆನೆನುತಿದಿರಾದನಮರಾರಿ (ಕುಮಾಅ. ೧-೨೩); ನನ್ನಯ ಪಿತನಂ ಮುಳಿಸಿಂ ತನ್ನಂಗನೆ ಕೊಂದ ಹರಿಬವಂ ನಾಂ ತೆಗೆಯದ ಮುನ್ನಂ ಕಂಡೊಡೆ ಸರಿಯುವರೇಂ ನಗರೇ ನನ್ನನೆಂದನಾ ಗಜದೈತ್ಯಂ (ವೀರವಿ. ೫-೧೪). ೬. ಕಷ್ಟ; ತೊಂದರೆ : ಜನಿಸಿದನು . . . ಹರಿ ತಾನನಿಮಿಷರ ಹರಿಬವನು ತೆಗೆಯಲ್ಕೆ (ಸಂಭಪ. ೧೦-೧೨) ; ಹರಿಬಕಿಲ್ಲದ ನಾಯಕರ ಸುಡು (ಕುಮಾದ್ರೋ. ೧೦-೫೮); ವಾರಿಜೋದ್ಭವಜನಕ . . . ಕಂಬುಕಂಧರನೆ ಹೆಂಗಸಿನ ಹರಿಬವಂ ಬಿಡಿಸು (ತುರಂಗ. ೨೪-೨೯). ೭. ರಕ್ಷಣೆ; ಪಾಲನೆ: ಸುರರ್ಗಭಯವಿತ್ತವರ ಹರಿಬಕ್ಕೆ ಶರಭನಿಂ ಹರಿಯ ರಂಜಿಪ ತೊವಲನೆತ್ತಿ ಸುಲಿಸಿ (ಸಾನಂಚ. ೨-೧೭); ಹೆಂಡತಿಯ ಹರಿಬದಲಿಯೊಬ್ಬನು ಗಂಡುಗೂಸೇ ವೈರಿಯನು ಕಡಿಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು (ಕುಮಾವಿ. ೩-೪೬); ತನ್ನಯ ಮೊಮ್ಮನ ಹರಿಬಕೆ ವಾಸುದೇವ ದಂಡೆತ್ತಿ ಬಂದಿಹನು (ಮೋಹತ. ೩೭-೧೭). ೮. ಕಾರಣ; ಉದ್ದೇಶ: ಕರಿಗಳ್ ಬಾಳ್ಗಂಬದೊಳೊಪ್ಪಿರುತಿರ್ದುವು ಸುಳಿವ ನೀಲಮೇಘಾವಳಿಯಂ ತರದಿಂ ಸೆಱೆಯಿಟ್ಟಂತಾ ಗಿರಿಪತಿ ಸುರಪತಿಯ ಹಗೆಯ ಹರಿಬದ ಚಲದೊಳ್ (ಗಿರಿಕ. ೨-೭೫); ಅವರಿವರೆಲ್ಲರುವೊಬ್ಬನ ಹರಿಬಕೆ ಕೆಮ್ಮನೆ ಶಿರವೊಡ್ಡಲೇಕೆ (ಇಂಚಾಪ. ೧೮೭-೨೩). ೯. ಅವಕಾಶ; ಸಮಯ; ಸಂಧಿ: ಕೊರಳ ಹಾರವ ತಿದ್ದಬೇಕೆಂದು ಸಾರ್ದೆಮ್ಮ ಕೊರಳ ತಡವಿ ಕೂಡ ನಗುವೆ ತರಹರಿಸಿದೆವಿಂದುತನಕ ನಾವೀಗೆಮ್ಮ ಹರಿಬವ ಬಿಡೆವು (ಭರಚಿ. ೪೨-೧೧೧). ಅರುಬ್ಬು : ೧. ಎಲೆ ಮಕ್ಕಳಿರ ನೀವು ಇಷ್ಟೊತ್ತು ಏನರುಬುಗಳ ಮಾಡಿ ಬಂದಿರೈ (ಶರಲೀ. ೪೮೨-೧); ಎನಗಿನ್ನು ಮುಂದಣ ಅರುಬುವುಂಟದಕೈದಬೇಕೆಂದವರು ಬೀಳ್ಕೊಂಡು (ಜಿನಭಾ. ೧೮-೫೬). ಹರುಬು : ೨. ಮಜೆ ಮೋಸ ಕಲಹ ಕಾತರ ಕಟ್ಟಾಯಸ ಬಿಜುಬು ಹರುಬು ಹನ್ನಸಗಳ ತೆಜನಜಿಯದಳ ರಕ್ಷಿಸು (ಶತಸಾ. ೩೩-೭೭)

ಹರಿಬಂಧನ (ನಾ). ಕುದುರೆಯನ್ನು ಅಂಕೆಗೆ ತರುವುದು,— ಹತೋಟಿಯಲ್ಲಿಟ್ಟು ಕೊಳ್ಳುವುದು: ವಿಮಾರ್ಗಂ ಹರಿಬಂಧನಮಂ ಭೌಮಂ ವೈಹಾಯಸಂ ವಯಸ ಯಂತ್ರಕ್ಷೇತ್ರವಹಳಿ ಸತ್ಯಂ ದಾರಿಮೆಂಬ ಭೇದಂಗಳಿಂದಶ್ವಮನೇಱಲು ರೇಚಿಗನೃಪತಿ ತಾನೆ ಬಲ್ಲಂ (ಮದಕಿ. ೧-೨೧). [ಸಂ.]

ಹರಿಬಂಧು (ನಾ). ಕೃಷ್ಣನ ನಂಟ; ಅರ್ಜುನ : "ಇಂದ್ರಜಂ ಸಿತಹಯಂ ಗಾಂಡೀವಿ ಜಿಷ್ಣು ಹರಿಬಂಧು ಫಲ್ಗುಣನೆನಲ್ಕರ್ಜುನನೆನಿಸ್ಕು" (ಮಂಗರಾ. ೭೮-೩). [ಸಂ.]

ಹರಿಬಕಾಱ (ನಾ). ಕಾಳಿಗ ಮಾಡುವವನು; ಯೋಧ; ಸೈನಿಕ: ಕವಿದು ಹುಯ್ಯಲು ಹರಿಬಕಾಱರ ತಿವಿದು ಮತ್ಸ್ಯನ ಬಲವ ಸೀಳುತ . . . ಸುಶರ್ಮಕನವಚಿ ಹೊಯ್ದು ವಿರಾಟನೊಡನವಗಡಿಸಿ ಕಾದಿದನು (ಕುಮಾವಿ. ೬೧೧. ೫-೬೨). [ಹರಿಬ + - ಕಾಱ]

ಹರಿಬಲ (ನಾ). ೧. ಸಿಂಹಗಳ ಸಮೂಹ: ಇದ್ದುದಾ ಸಮಸಪ್ತಕರು ಜಗವದ್ದ ಜಲಧಿಯ ತೆರೆಯವೊಲು ಮುಳಿದೆದ್ದ ಹರಿಬಲದಂತೆ ದುಶ್ಶಾಸನನ ಪಾಯದಳ (ಕುಮಾಕ. ೧೫-೬). ೨. [ಜೈನ] ವಾಸುದೇವನ ಸೈನ್ಯ: ಹರಿಬಲವಳಿದುದು ಹರಿಬಲವಳಿದುದು ಹರಿಬಲದಿಂದ ಬೇಗದೊಳು ಹರಿಬಲಗಿಂತು ಪೇಳುತಲೊದಗಿದನಾ ಹರಿಯ ಹರಿಬಕೆ ರೋಷದಲಿ (ವರ್ಧಚ. ೪-೪೩). ೩. ಸಿಂಹದ ಪರಾಕ್ರಮ: ಮೇಲಿನ 'ವರ್ಧಚ' ಪ್ರಯೋಗವನ್ನು ನೋಡಿ. ೪. ಕಪಿಗಳ ಸೈನ್ಯ: ಹರಿಬಲವ ಬಱಿಕೈವುತಿರ್ದುದು ಹರಿಬದತಿಬಲ ಖಳಕದಂಬಕವಸಮಸಮರದಲಿ (ತೊರರಾ. ೬-೩೦-೨). ೫. ಕುದುರೆಗಳ ಸೈನ್ಯ : ಕೆಲಬಲದಲಿ ಹರಿಬಲ [ಪಾಶಾಂ. ದರಿಬಲ ಹರಿ] ಸಾಲಿನಲಿ ರಾಜಕುಲಮಿರೆ ಪೌದನಾಧಿಪನು ಒಲಿದೋಲಗವಿರೆ ಬಂದ ಬಾಂಬಟ್ಟೆಯ ನೆಲದೆಱೆಯನ ದೂತನಾಗ (ವರ್ಧಚ. ೬-೫೬). [ಸಂ.]

ಹರಿಬವೆತ್ತು (ಕ್ರಿ). ಕರ್ತವ್ಯವನ್ನು ನಿರ್ವಹಿಸು; ಜವಾಬ್ದಾರಿಯನ್ನು ಹೊರು: ಜಡಿವ ಪಡಿಯಱ ಕಳಕಳಮೊಡನೊಗೆತರೆ ಬೆಸನನೆಟ್ಟು ಬೇಡುವ ಚರನಂ ಕಿಡೆ ನುಡಿವ ಹರಿಬವೆತ್ತುವ ಕಡಂಗಿ ಮೂದಲಿಪ ರಭಸಮೇನುಣ್ಮೆದುದೋ (ವರ್ಧಪು. ೬-೪೨). [ಹರಿಬ + ಎತ್ತು]

ಹರಿಬಿ$_1$ 'ಪರವಿ' ನೋ.

ಹರಿಬಿ$_2$ (ನಾ). ಒಂದು ಬಗೆಯ ಆಯುಧ: ಹರಿಬಿ [ಪಾಶಾಂ. ದಿ]ಯರ್ಗಱಿಪಿ ಕಳಕನ ಹೂವಿನ ಕುಚ್ಚಿನುರುವ ಸಬಳದಾಳುಗಳ ನರವಿಯೊಳತಿಸಂಭ್ರಮದೆ ಕಂಠೀರವ ನರಸರಾಜೇಂದ್ರನೈತಂದ (ಕಂನಮಿ. ೧೨-೩೩); ತೂಗುವ ಹರಿಬಿಯ ಗರಿಯಿಟ್ಟಿಯಧಟರ ಸಾಗರದೊಳು ಬಹನಾರೆ (ಕಂನಮಿ. ೨೫-೫೪). [?]

ಹರಿಬಿಡು 'ಪರಿವಿಡು' ನೋ.

ಹರಿಬೀಳು (ಕ್ರಿ). ೧. ಚೆದರಿ ಬೀಳು: ಹೊಲದ ತುಂಬ ಕಪ್ಪುಮೋಡದ ತುಂಡುಗಳಂತೆ ಹರಿಬಿದ್ದ ಮಣ್ಣಿನ ಹೆಂಟೆಗಳು ಅವಳ ಕಣ್ಣುಗಳನ್ನು ಕೋರೈಸಿದುವು (ಮಣ್ಣಿಮ. ೩). ೨. ಹರಿಹಾಯು; ಸಿಡುಕು; ರೇಗು: ಸುಮ್ಮಸುಮ್ಮನೆ ನಾನು ಮಾತಾಡಿದ ಕೂಡಲೇ ಇಬ್ಬರೂ ನನ್ನ ಮೇಲೆ ಹರಿಬೀಳುವಿರಿ (ಉದಮೈ. ೪೬). [ಹರಿ$_2$ (< ಪರಿ$_2$) + ಬೀಳು$_1$ (< ಬೀಟ್ಟು$_1$)]

ಹರಿಭಕುತಿ (ನಾ). ವಿಷ್ಣುಭಕ್ತಿ: ಹರಿಭಕುತಿ ಉಳ್ಳವರ ಶರೀರವೆ ಕುರುಕ್ಷೇತ್ರ ಅವರು ನರರೆಂದು ಬಗೆವವರೆ ನರಕವಾಸಿಗಳು (ಪುರಂದ. ೧-೧೦೮ ಪಲ್ಲವಿ). [< ಸಂ. ಹರಿಭಕ್ತಿ]

ಹರಿಭಕ್ತ (ನಾ). ವಿಷ್ಣುಭಕ್ತ. [ಸಂ.]

ಹರಿಭೂಧರ (ನಾ). ಕೈಲಾಸಪರ್ವತ: ಹರಿಕರ್ಣಕರಧರನೆ ಹರಿಭೂಧರಸುಮಂದಿರ . . . ಕರುಣಿ ಗುರು ಸಂಗಮೇಶ (ಪ್ರೌಢರಾ. ೫-೧). [ಸಂ.]

ಹರಿಭೂಮ (ನಾ). ಮದುವೆಯ ಮರುದಿನ ಹೆಣ್ಣಿನವರು ಅಳಿಯನ ಸ್ನೇಹಿತರಿಗೆ ಮಾಡುವ ಔತಣದ ಊಟ: ಹರವಲ್ಲಭನು ಹರಿಭೂಮದ ದಿನ ಸಂಬಂಧಿಯ ಸೆರೆಹೊರೆಯವರನ್ನೂ ಊಟಕ್ಕೆ ಕರೆದನು (ದೇವೀಚಾ. ೫). [ಸಂ.]

ಹರಿಮಂಥ (ನಾ). ೧. ಒಂದು ಬಗೆಯ ನೆಲ್ಲಿಮರ. ೨. ಕಡಲೆ; ಚಣಕ: ಹರಿಮಂಥ ತೊಗರಿ ಕಲ್ಲುಪ್ಪು ಲವಂಗವು ವರಜಾಯಿಫಲ ಹಪ್ಪಳವು (ಜ್ಞಾನಚಿ. ೩೬-೧೦೨). [ಸಂ.]

ಹರಿಮಣಿ (ನಾ).= ಹರಿನೀಲ: ಹರಿಮಣಿಯಱೆಯೊಳ್ಮಿಱುಗುತ್ತಿರೆ ವೃತ್ತತೆವೆತ್ತ ದಿನಕರೋಪಲಮಿದು ಭಾಸ್ಕರಬಿಂಬಮೆಂದು ಬಂದಾ ಗರಣದ ಸಮಯದೆ ವಿಧುಂತುದಂ ಪಿಡಿವುದದಂ (ರಾಜಶೇ. ೬-೨೨). [IP ಇದು 'ಹರಿನೀಲಮಣಿ' ಎಂಬುದರ ಸಂಕ್ಷಿಪ್ತರೂಪ]

ಹರಿಮಣಿಹ (ನಾ). ಪಾರುಪತ್ಯಗಾರ(?): ತನುವೆಂಬ ರಾಜ್ಯಕ್ಕೆ ಮನವೆಂಬ ಅರಸು ಆ ಅರಸಿಂಗೆ ನೋಟಬೇಟದವರಿಬ್ಬರು ಅಷ್ಟಮಣಿಹ ಹರಿಮಣಿಹದವರು (ಲಿಂಗಾವ. ಕ. ೭೪-೭೫). [ಹರಿ$_2$ (< ಪರಿ$_2$) + ಮಣಿಹ$_2$ (< ಮಣಿಯ)]

ಹರಿಮಧ್ಯ (ನಾ). ಸಿಂಹದ ಸೊಂಟದಂತೆ ತೆಳುವಾದ ಸೊಂಟ : ಹರಿಮಧ್ಯಂ ಮೃಗಶಾಬನೇತ್ರಮಳಿಮಾಲಾವೇಣಿ . . . ಒಪ್ಪಿರೆ ಭಿಲ್ಲಾಂಗನೆಯರ್ಕಳಾದಮರಿಯರ್ (ಶಬರಂ. ೩-೮). [ಸಂ.]

ಹರಿಮಧ್ಯೆ (ನಾ). ಸಿಂಹದ ಸೊಂಟದಂತೆ ತೆಳುವಾದ ಟೊಂಕವುಳ್ಳವಳು: ಧರೆಯ ಮೇಲೆರಡು ಕರವನೂರಿ . . . ವರದಂಡಾಕೃತಿಯೊಳು ತನುವಿರಲದು ಹರಿಮಧ್ಯೆ ನೀಲಕಂಠಾಸನ (ವೇದಾಂಡ. ೩-೧೦-೧೦). [ಸಂ. ಹರಿಮಧ್ಯಾ]

ಹರಿಮಿತ್ರ (ನಾ). ಶಿವ : ಹರಿಮಿತ್ರ ಹರಿನೇತ್ರ ಹರಿಜಮಸ್ತಕಪಾತ್ರ . . . ಕರುಣ ಗುರುಸಂಗಮೇಶ (ಪ್ರೌಢರಾ. ೫-೧). [ಸಂ.]

ಹರಿಮಿಥುನ (ನಾ). ೧. ಗಂಡು ಹೆಣ್ಣು ಸರ್ಪಗಳ ಜೋಡಿ. ೨. ಗಂಡು ಹೆಣ್ಣು ಕಪ್ಪೆಗಳ ಜೋಡಿ. ೩. [ಜ್ಯೋತಿ] ಸಿಂಹ ಮತ್ತು ಮಿಥುನರಾಶಿ. ೧, ೨, ೩: ಮಕರ ಕರ್ಕಾಟಕ ಹರಿಮಿಥುನದಿಂದನಿಮೇಷನಿಕರದಿಂ . . . ಸುಕರಮೆನೆ ರಂಜಿಸಿತು ವಾರಾಶಿ ರಾಶಿರಾಶಿಯನಾಂತ ಗಗನದಂತೆ (ಶ್ರೀರಾಮಾ. ೩-೨೯). [ಸಂ.]

ಹರಿಮುಖ (ನಾ). ೧. ಕುದುರೆಯ ಬಾಯಿ: ಹರಿಮುಖ ಹೇಷಾಘೋಷಂ ಹರಿನ್ಮುಖಾಂತರಮನೆಯ್ದು ತೀವುತ್ತಿರೆಯುಂ . . . ನಡೆದುದಾ ನೃಪಸೈನ್ಯಂ (ಕುಸುಮಾ. ೧೫-೮೫). ೨. ಸಿಂಹದ ಮುಖವುಳ್ಳವನು; ಶಿವನ ಗಣಗಳಲ್ಲಿ ಒಬ್ಬ: ಹರಿಮುಖರು ಶರಭವಕ್ತ್ರರು ಮಹಾವ್ಯಾಘ್ರಬಂಧುರಲಪನರು . . . ಅಧಿಕಗಣನಿಕರ ವೆಯ್ದುತ್ತು ಶಿವನ ಕೂಡೆ (ವೀರಶೈವ. ೩-೧೯-೬). [ಸಂ.]

ಹರಿಮುರಿ 'ಹಱಿಮುಱಿ' ನೋ.

ಹರಿಮೇಖಲೆ, ಹರಿಮೇಖಳೆ (ನಾ). ಇಂದ್ರಜಾಲ; ಯಕ್ಷಿಣಿ; ಮಾಯೆ: "ಹರಿಮೇಖಲೆಯೆಂದು ಇಂದ್ರಜಾಲಂ" (ಶಮದ. ಪರಿ. ೨); ಮಾತುಳಸುತೆಯಾಳಿಯರನು ವಂಚಿಸಿ ಕುವರಿಯ ಕದ್ದು ನೆನಹಿಗಗೋಚರವೆನೆ ಹರಿಮೇಖಲೆಯನು ಮಾಱಿ ತಂದನೀ ಪದಕವ (ಸೂಪಸೂ. ೨೦-೧೦); ವಿಷಾದ ವಿಡಂಬ ಹರುಷಂಗಳಲಿ ನೀನಿಹುದೇಕಚಿತ್ತದಲಿ ತುಂಬುವುದು ಬತ್ತುವುದು ರಾಜ್ಯದ ಡೊಂಬು ಹರಿಮೇಖಲೆಯ ವಿದ್ಯಾಡಂಬರವಿದು (ಕುವ್ಯಾಸ. ೧೧-೧೭). **ಹರಿಮೇಖಳೆ** : ಬಲ್ಲೆನಾತನ ಬಲುಹನೀಶ್ವರನಲ್ಲಿ ಹರಿಮೇಖಳೆಯ (ಕುವ್ಯಾದ್ರೋ. ೧೮-೧೧); ಎಲೆಲೆ ಹಾರುವನೇಕೆ ಹರಿಮೇಖಳೆಯ ಕೇಳಿಕೆಯೇಕೆ (ಕುವ್ಯಾಕ. ೨-೨೨). [ಸಂ. ಹರಿಮೇಖಲಾ]

ಹರಿಮೇಖಳೆ 'ಹರಿಮೇಖಲೆ' ನೋ.

ಹರಿಯಂತರ (ನಾ). ಒಂದು ದೊಡ್ಡಪ್ರಮಾಣದ ಉದ್ದದ ಅಳತೆ: ಒಂದು ಹರಿಯಂತರ ವಿಶಾಲ ಮಹಾಸಭಾವಿಸ್ತರಣವದಱಲಿ ತಱಹ ಕಾಣೆನು ತೀವಿತವನಿಪರು (ಕುವ್ಯಾಸ. ೧೩-೩೨). [ಹರಿ$_2$ + ಅಂತರ]

ಹರಿಯಕ್ಷ (ನಾ). ಸಿಂಹ: "ಹರಿಯಕ್ಷನಾ ಮೃಗಾರಾತಿ ಕಂಠೀರವಂ ಕರಿವೈರಿ ಕೇಸರಿಯೆನಲ್ ಸಿಂಹಮೆನಿಸಿಕ್ಕು" (ಮಂಗರಾ. ೪೭-೭); ಹಾಯ್ವುಬ್ಬರದ ಹುಲಿ ಹರಿಯಕ್ಷ ಕುಲ ಮಲೆತಿಱಿವ ಕಾಡ್ಕೋಣ . . . ಉಬ್ಬಿಱಿತದೊಡ್ಡನು ಮುಂದೆ ನಿಲಿಸಿದನಾ ಚಮೂರಮಣ (ತೊರರಾ. ೬-೧೯-೧೭). [< ಸಂ. ಹರ್ಯಕ್ಷ]

ಹರಿಯಣ 'ಪರಿಯಾಣ$_1$' ನೋ.

ಹರಿಯರಿಗ (ನಾ). (?) : ಸೇನಭಾವ ಭೂಮಿ ೪೫೦ ಗ್ರಹಂ ಹಸ್ತ ೭ ೧೧ ಹರಿಯರಿಗ ಉಬ್ಬಾನಿಕಗಯ ಗ್ರಹಂ ಹಸ್ತ ೧೨ (ಕೊಲ್ಲಾಶಾ. ೨೩-೫೧; ?). [?]

ಹರಿಯಾಗೆ (ನಾ). ಒಂದು ಬಗೆಯ ಸಸ್ಯ : ತಗಡತಿ, ಹರಿಯಾಗ, ಮ್ಯಸಾಲೆ (ಮ್ಯಪಿಗಿ. ೫೦-೧೦೧೦). [?]

ಹರಿಯಾಣ 'ಪರಿಯಾಣ$_1$' ನೋ.

ಹರಿಯಿಡು 'ಪರಿಯಿಡು' ನೋ.

ಹರಿಯಿಸು 'ಪರಿಯಿಸು' ನೋ.

ಹರಿಯೊಲೆ, ಹರಿಒಲೆ, ಹರಿವೊಲೆ (ನಾ). ದೊಡ್ಡ ಪ್ರಮಾಣದಲ್ಲಿ ಅಡುಗೆ ಮಾಡಲು ನೆಲದಲ್ಲಿ ಕಾಲುವೆಯಾಕಾರದಲ್ಲಿ ತೋಡಿ ಮಾಡಿದ ಒಲೆ: ಶುನಕಗಳು . . . ಹರಿಯೊಲೆಗಳನ್ನು ಸಂತತ ನಿವಾಸಸ್ಥಾನಗಳನ್ನಾಗಿ ಮಾಡಿಕೊಂಡಿದ್ದುವು (ಲಕ್ಷ್ಮೀಪ್ರ. ೮). **ಹರಿಒಲೆ** : ಅಡಿಗೆಯವರು ಒಂದು ಹರಿಒಲೆಯನ್ನು ಆಗದು . . . ಅಡಿಗೆ ಮಾಡುತ್ತಿದ್ದರು (ಮಲಸಾ. ೫೩); ಒಂದು ದೊಡ್ಡ ಹರಿಒಲೆಯನ್ನು ಮಾಡಿಸಿ ಅದರ ಮೇಲೆ ತಗಡನ್ನಿಟ್ಟು, ಅದರ ಮೇಲೆ ಕುಳ್ಳನ್ನು ಸುಡಿಸಿ ಒಟ್ಟಿ ಇಟ್ಟರಾಯಿತು, ಕೆಲಸ! (ಸ್ಮೃತಿಚಿ. ೩೫೦). **ಹರಿವೊಲೆ** : ಛತ್ರಗಳಲ್ಲಿ ಸಾಮಾನ್ಯವಾಗಿ ಹರಿವೊಲೆಗಳಿರುತ್ತವೆ (ರೂಢಿ). [ಹರಿ$_3$ (< ಪರಿ$_3$) + ಒಲೆ$_4$]

ಹರಿವಂಶ (ನಾ). ೧. ಸೂರ್ಯವಂಶ: ಹರಿವಂಶನಿಯಮದಿಂ ಹಿತಪುರೋಹಿತಂ ಶುಭಮುಹೂರ್ತದೊಳ್ ಕನ್ಯಕೆಯಂ ತರವೇಱೆ (ಪಂಚಾಮಾ. ೫-೪೬). ೨. ಕೃಷ್ಣನ ಕುಲಪರಂಪರೆ ,– ವಂಶ: ಹರವಂಶನರಾಧಿಪರಂ ಪರಿರಕ್ಷಿಪೆನಾನುಪಾಯದಿಂದ (ಬಂಪಾರಿ. ೭-೯); ಹರಿವಂಶತಿಳಕನಾನತಪರನೃಪಜಾಳಕಂ . . . ತತ್ಸಮುದ್ರವಿಜಯ ಮಹೀಶಂ (ನೇಮಿಪು. ೮-೭೭). ೩. ಗುಣವರ್ಮನೆಂಬ ಕವಿ ಕನ್ನಡದಲ್ಲಿ ಬರೆದ, ಕೃಷ್ಣನ ಕಥೆಯನ್ನೊಳಗೊಂಡ ಒಂದು ಚಂಪೂಕಾವ್ಯ: ಈಂದ ಪುಲಿಯಾ ವೂಲಿರ್ದರ್ಳೆಂದು . . . ಗುಣವರ್ಮನ ಹರಿವಂಶಪ್ರಯೋಗಂ (ಶಮದ. ೧೧೮ ಪ್ರಯೋ). ೪. ವ್ಯಾಸಮುನಿಯಿಂದ ರಚಿತವಾದ, ಮಹಾಭಾರತಕ್ಕೆ ಪೂರಕವಾದ ಸಂಸ್ಕೃತದ ಒಂದು ಪ್ರಸಿದ್ಧಗ್ರಂಥ. ೫. ಸರ್ಪಗಳ ಕುಲ: ಹರಿವಂಶಂ ಹರಿವಂಶದಂತತುಳಭೋಗಖ್ಯಾತಮಾಯ್ತು (ಅರ್ಧನೇ. ೬-೭೮). [ಸಂ.]

ಹರಿವಕ್ತ್ರ (ನಾ). ಸಿಂಹದ ಮುಖವುಳ್ಳವನು; ಶಿವನ ಗಣವರ್ಗದಲ್ಲಿ ಒಬ್ಬ: ಹರಿವಕ್ತ್ರಂ ಕರಿವಕ್ತ್ರನಶ್ವವರವಕ್ತ್ರಂ . . . ರುರುವಕ್ತ್ರನೆಂಬರೆಸೆದರ್ ವಿಶ್ವೇಶ್ವರಾಸ್ಥಾನ ದೊಳ್ (ರಾಜಶೇ. ೧೪-೧೫೪). [ಸಂ.]

ಹರಿವತ್ರ (ನಾ). [ಕಾಮಶಾ] ರತಿಭೇದಗಳಲ್ಲಿ ಒಂದು: ಸ್ತ್ರೀ ಮರಗಳ ಗೋಡೆಗಳನೊತ್ತುಗೊಂಡು ನಿಂದಿರ್ದು ಮಾಡುವ ಭಾವದಿ ಪುರುಷನವಳ ಕೊರಳಂ ಪಿಡಿದುಕೊಂಡಿರೆ ಅವಳು ಒಂದು ಕಾಲ ಮೇಲಕ್ಕಿತ್ತಿ ರಮಿಸಲ್ಕೆ ಹರಿವತ್ರಮೆಂಬ ಕರಣಂ (ಕಾಮಶಾ. ೨೩೭). [ಸಂ.]

ಹರಿವಡಿ 'ಪರಿವಿಡಿ$_2$' ನೋ.

ಹರಿವಣ 'ಪರಿಯಾಣ$_1$' ನೋ.

ಹರಿವಧು (ನಾ). ಇಂದ್ರನ ಹೆಂಡತಿ ; ಇಂದ್ರಾಣಿ ; ಶಚಿ : ಹರಿವಧು ನೂಪುರಮಂ ಜಿನಚರಣದೊಳಳವಡಿಸಿ ತಳೆಯೆ ಶಿರದೊಳ್ ಮಣಿಶೇಖರಮೆನಿಸಿತು (ಪಾರ್ಶ್ವಪು. ೧೪-೧೦೬). [ಸಂ. ಹರಿವಧೂ]

ಹರಿವರಿ 'ಪರಿ$_3$' ಪರಾ.

ಹರಿವರುಷ (ನಾ). ಜಂಬೂದ್ವೀಪದಲ್ಲಿರುವ ನಾಭಿ, ಕಿಂಪುರುಷ, ಹರಿ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮೂಲ ವೆಂಬ ಒಂಬತ್ತು ವಿಭಾಗಗಳಲ್ಲಿ ಒಂದು: ಆ ಮಹಾ ಹರಿವರುಷದಲ್ಲಿಯ ಸೀಮೆ ಯೋಜನನವಸಹಸ್ರವಿರಾಮವದಱೊಳಗೆಲ್ಲ ವಿವರಿಸಲಱಿಯೆ ನಾನು (ಕುವ್ಯಾಸ. ೩-೩೫). [< ಸಂ. ಹರಿವರ್ಷ]

ಹರಿವರೂಥ (ನಾ). ಸಿಂಹದ ವಾಹನ : ವೈಷ್ಣವಿಯಾಗಿ ಹರಿವರೂಥಮನಡರ್ದು . . . ಅಮರರನುಳುಹಿದಗಚೆ ಸಲಹಾ (ಸವಮೋ. ೯-೨). [ಸಂ.]

ಹರಿವರೂಢೆ (ನಾ). ಸಿಂಹವನ್ನು ವಾಹನವಾಗಿವುಳ್ಳವಳು; ದುರ್ಗೆ: ಅತಿಬಳಾನ್ವಿತ ಹರಿವರೂಢೆ . . . ಅತಿದಯದೊಳೆನ್ನ ಬಡಮತಿಗೆ ಬೆಂಬಲಮಾಗು (ಸಮೂ. ೮-೨). [ಸಂ. ಹರಿವರೂಢಾ]

ಹರಿವರ್ಷ (ನಾ). ೧. = ಹರಿವರುಷ. ೨. [ಜೈನ] ಜಂಬೂದ್ವೀಪದಲ್ಲಿರುವ ಭರತವರ್ಷ, ಹೈಮವತವರ್ಷ, ಹರಿವರ್ಷ, ವಿದೇಹವರ್ಷ, ರಮ್ಯಕವರ್ಷ, ಹೈರಣ್ಯವತವರ್ಷ ಮತ್ತು ಐರಾವತವರ್ಷವೆಂಬ ಏಳು ವಿಭಾಗಗಳಲ್ಲಿ ಮೂರನೆಯದು; ಮಧ್ಯಮ ಭೋಗಭೂಮಿ: ಆ ತಿರ್ಯಗ್‌ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತ್ಕರಾವ್ಹತಂಗಳೆಂಬೀಯುಂ ಜನಪದಂಗಳಿಂ . . . ಎಸೆದು (ಆದಿಪು. ೧-೪೮ ೪); ಹರಿವರ್ಷಮೆಂಬ ವಿಷಯದೊಳುರುಶೋಭಾಧಾನಮಾಗಿ ಸೊಗಯಿಪುದು . . . ಭೋಗಪುರಮೆಂಬುದು (ನೇಮಿಪು. ೨-೪೧). [ಸಂ.]

ಹರಿವಲೆ (ನಾ). ಅಗಲವಾಗಿ ಹರಡುವ ಒಂದು ಬಗೆಯ ಒಲೆ: ಕರದಲಿ ಪಿಡಿದ ಬಿಲ್ಲಂಬು ಹರಿವಲೆ ಬೆಳ್ಳಾರವಲೆ ಸಹ ವನದಿ ಸಂಚರಿಸುತ ಶಬರರೊಪ್ಪಿದರು (ಜೀವಂಶಾ. ೨೦-೭); ಹಾಸುವಲೆಗಳಿಂದ ಹರಿವಲೆಯಿಂದತಿ ಬೀಸುವಲೆಯು ಕಣ್ಗಿವಲೆಯಿಂ ಸೂಸುವಲೆಗಳಿಂದ ಬೇಂಟೆಯ ಜನರಲ್ಲಿ ಘಾಸಿಮಾಡುವರು ಮೃಗಗಳ (ರಾಮವಿ. ೧೫-೬೫). 'ಹರಹುವಲೆ' ಪರಾ. [ಹರಿ$_2$ (< ಪರಿ$_2$) + ಬಲೆ$_1$]

ಹರಿವಾಣ$_1$ 'ಪರಿಯಾಣ$_1$' ನೋ.

ಹರಿವಾಣ$_2$ 'ಪಾರಿವಾಳ$_2$' ನೋ.

ಹರಿವಾಸ$_1$ (ನಾ). ಒಂದು ಬಗೆಯ ಕೊಳಲು: ಹದಿನೆಂಟಂಗುಲ ಹದಿನೇಳಂಗುಲ . . . ಒಂದಂಗುಲ ಪ್ರಮಾಣನ ಕ್ರಮವಿಡಿದು ಜಾತಿವಾಸ . . . ಹರಿವಾಸ ನಿಧಿವಾಸ . . . ಭುವನಾಧಿಪತಿವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವನಱಿದು (ವಿವೇ. ೧೯೧). [ಹರಿ? + ವಾಸ$_1$]

ಹರಿವಾಸ$_2$ (ನಾ). ೧. ಹಾವುಗಳ ವಸತಿ. ೨. ಕಪ್ಪೆಗಳ ನಿವಾಸ. ೩. ವಿಷ್ಣುವಿನ ವಾಸಸ್ಥಾನ. ೧, ೨, ೩: ವರಕ್ಷೀರವಾರಾಶಿಯಂತೆ ಹರಿವಾಸದಿಂ . . . ನೆರೆ ಪತಿವ್ರತೆಯಂತೆ ಕಾಂತಾನುಕೂಲದಿಂ ಧರೆಯ ಮಂಡಲದಂತೆ ಕುವಲಯಾನ್ವಿತದಿಂದೆ ಸರಸಿ ಶೋಭಿಸುತಿರ್ದುದು (ಸಮೂ. ೮-೩೫). [ಸಂ.]

ಹರಿವಾಸರ (ನಾ). ವಿಷ್ಣುವಿನ ದಿನ; ಏಕಾದಶಿ ಹಾಗೂ ದ್ವಾದಶಿಯ ತಿಥಿ: ಪರಿವಾಸರದುಪವಾಸದ ಭಾಗ್ಯವು ಕಂಡಕಂಡವರಿಗೆ ದೊರಕುವುದೆ (ಪುಂದ. ೫-೧೪೭ ಪದ್ಯವಿ); ಕಷ್ಟಮೀತಕೆ ಜೀಯ ಹರಿವಾಸರ ವ್ರತಭ್ರಷ್ಟರಾದಪೆವೆಂಬ ಭಯಕೆ ನಿನ್ನಾಲಯದ ಮೃಷ್ಟಾನ್ನಮಾವೊಲ್ಲೆದಿರ್ದೆವಸಲೆ ಗರ್ವದಿಂ ಬೇಱೆಯಲ್ಲ (ಚೆಮಿಭಾ. ೨೯-೨೬). [ಸಂ.]

ಹರಿವಾಹ (ನಾ). ಇಂದ್ರ: "ಪುರುಹೂತಂ ಮಘವಂ . . . ಹರಿವಾಹಂ ಶತಮನ್ಯು ನೀರದರಥಂ ಶಕ್ರಂ ವೃಷಂ ವಾಸವಂ" (ಪಸ್ತುತೋ. ೬-೩೩). [ಸಂ.]

ಹರಿವಾಳ 'ಪಾರಿವಾಳ$_2$' ನೋ.

ಹರಿವಿಡು 'ಪರಿವಿಡು' ನೋ.

ಹರಿವಿಷ್ಟರ (ನಾ). ಸಿಂಹಾಸನ; ರಾಜನ ಗದ್ದುಗೆ: ಸುರಿತಮಣಿಖಚಿತಹರಿವಿಷ್ಟರದೊಳಲಂಕರಿಸಿ ನೆಱೆದ ರಾಜನ್ಯಕಮಂ . . . ಆದರಿಸುತ್ತುಂ (ಆದಿಪು. ೯-೨): ಹರಿಯ ಹರಿವಿಷ್ಟರದ ಬಲದಲಿ ಧರಣಿಪತಿ ಕುಳ್ಳಿರ್ದನು (ಕುವಾಉ. ೮-೬೫). [ಸಂ.]

ಹರಿವು$_1$ 'ಪಱಿವು' ನೋ.

ಹರಿವು$_2$ 'ಪರಿವು' ನೋ.

ಹರಿವುಳಿಗ (ನಾ). ಒಂದು ಬಗೆಯ ಉಳಿಗ,— ಸೇವೆ (?): ಆ ಅರಮನೆಯ ಹರಿವುಳಿಗದ ಆಚಾರಿ ಕೆಸವೋಜನ ಅಳಿಯ ಶ್ರೀ ಪದುಮಲೇಸ್ವರದ ಆಚಾರಿ ಹರಿಯಣ್ಣನ ಅಪ್ಪಣೆಯಿಂ ಹಲಯೂರ ಹಾರುವದೇವ ಹೊಯ್ಸಿದ (ಎಕ. IX(S). ಕಾಸಕಾ. ೯೨-೩೮; ಸು. 1300). [ಹರಿ$_2$ + ಉಳಿಗ$_2$ (< ಊಟಿಗ)]

ಹರಿವೆ$_1$ 'ಪರವಿ' ನೋ.

ಹರಿವೆ$_2$ 'ಹಱುಹೆ' ನೋ.

ಹರಿವೆಸ 'ಪರಿವೆಸ' ನೋ.

ಹರಿವೆಸಗೆಯ್ 'ಪರಿವೆಸಂಗೆಯ್' ನೋ.

ಹರಿವೇಗ (ನಾ). ವಾಯುವೇಗ; ತೀವ್ರವಾದ ಗತಿ: ಹರಿನಂದನನ ದಿವ್ಯಹರಿಮಯವರೂಥಮಂ ಹರಿವೇಗದಿಂದೆಸವ ಹರಿಚತುಷ್ಟಯಮುಮಂ ಹರಿಯುಮಂ . . . ಧಾತುಗಿಡಿಸಿ (ಚಿಮಿಭಾ. ೨೫-೪೬). [ಸಂ.]

ಹರಿವೊಚ್ಚೆ (ನಾ). ಹಸಿರು ಬೇಲಿ (?): ಕಲ್ಲಿಯ ಹರಿವೊಚ್ಚೆ ಮುಂತಾಗಿ ತೇಗಮರದ ಉಭಯಮಾರ್ಗದ ನಡವಣಮೇರಿಯರ ಮೇಲೆಯ ಪಡುವಣ ಕಟ್ಟೆ (ಎಕ. V. ಹಾಸನ. ೧೩೩-೭೪ ; 1406). [ಹರಿ$_2$ + ಒಚ್ಚೆ$_1$ (< ಒಚ್ಚೆ)]

ಹರಿವೊಲೆ 'ಹರಿಯೊಲೆ' ನೋ.

ಹರಿವ್ರಜ (ನಾ). ಕುದುರೆಗಳ ಸಮೂಹ; ಅಶ್ವಗಳ ಗುಂಪು: ನೆರೆದಾಡುವಚ್ಚಿ ಬೆರ್ಚಿಸೆ ಹರಿವ್ರಜಂ ತೊಲಗಿ ತೊಲಗಿ ಬರೆ ಗೋಮೂತ್ರಂಬರಿಯೆ ರಥಂ (ಶಾಂತಿಪು. ೪-೩೮). [ಸಂ.]

ಹರಿಶಕ್ತಿ (ನಾ). ೧. ಸಿಂಹದ ಸಾಮರ್ಥ್ಯ. ೨. ಸಿಂಹದಂತೆ ಬಲವುಳ್ಳವನು; ಸಿಂಹಬಲ: ಹರಿಶಕ್ತೀ ಭವದಸ್ಯಭಿನ್ನ ಕರಿಕುಂಭೋನ್ಮುಕ್ತ ಮುಕ್ತಾಫಲೋತ್ಕರಮಂ ಮಾಱಲೆಪೋಗಿ ರಾಜಗೃಹದೊಳ್ ಕಾಣ್ಕೆಂ (ಅರ್ಧನೇ. ೩-೭೧). [ಸಂ.]

ಹರಿಶರ (ನಾ). ೧. ವಿಷ್ಣುವಿನ ಬಾಣ. ೨. ನಾರಾಯಣಾಸ್ತ್ರ: ಬೆರಳ ತುದಿಯಲಿ ಬೊಬ್ಬಿಲಿದು ಹರಿಶರಕೆ ಕೈನೀಡಿದನು ಕಲ್ಪದ ಹರನವೊಲು ಹರರೂಪ ಹೊಂಗಿದ ನಧಿಕರೋಷದಲಿ (ಕುವಾದ್ರೋ. ೧೯-೧೩). ೩. ವಿಷ್ಣುವನ್ನೇ ಬಾಣವನ್ನಾಗಿ ಪ್ರಯೋಗಿಸಿದವನು; ಶಿವ: ಆಂ ಸೆಣಸಲ್ ಸಮರ್ಥನೇ ಹರಿಶರನೊಳ್ ಪರಿಗತಕೃಶಶರಂ (ಶಬಶಂ. ೪-೧೨೨). [ಸಂ.]

ಹರಿಶಿಶು (ನಾ). ಸಿಂಹದ ಮರಿ: ಹರಿಶಿಶುಗೆ ಮಿಸುಪ ದಂಷ್ಟ್ರಾಂಕುರಮುದಯಿಸುವಂತೆ . . . ಅಮಳ ರದನೋತ್ಕರಮುದಯಿಸಿದುದು ಕುವಾರವದನಾಂತರದೊಳ್ (ಕುಸುಮಾ. ೬-೧೪೬). [ಸಂ.]

ಹರಿಶೌರ್ಯ (ನಾ). ಸಿಂಹದಂತೆ ಪರಾಕ್ರಮವುಳ್ಳವನು: ಹರಿಶೌರ್ಯಂ ಹರಿತೋಱಿದಂ ಹರಿಯ ಸಾಮರ್ಥ್ಯಕ್ಕೆ ಸಾಮರ್ಥ್ಯಮಂ (ಜಗವಿ. ೧೩-೧೫). [ಸಂ.]

ಹರಿಶ್ಚಂದ್ರ (ಗು). ೧. ಹೊಂಬಣ್ಣದ ಕಾಂತಿಯುಳ್ಳ. (ನಾ). ೨. ಸೂರ್ಯವಂಶದಲ್ಲಿ ಹುಟ್ಟಿ, ಸತ್ಯಕ್ಕೆ ಹೆಸರಾದ ಒಬ್ಬ ಪ್ರಸಿದ್ಧ ರಾಜ; ತ್ರಿಶಂಕುವಿನ ಮಗ: ಹಿಂದಣರಸುಗಳನುದ್ಧರಿಸಲೆಂದವತರಿಸಿದ ವಸುಧಾಧಿವತಿ ಹರಿಶ್ಚಂದ್ರನಾತನ ಸತ್ಯದಸಕಮಂ ಪೊಗಳಲೆನ್ನಳವೆ (ಪಚಕಾ. ೨-೭); ದಿಲೀಪ ಮಾಂಧಾತರು ಹರಿಶ್ಚಂದ್ರಾದಿ ಪೃಥ್ವೀಶ್ವರರನಂತರ ಮೃತ್ಯುವಶವರ್ತಿಗಳು (ಕುವಾದ್ರೋ. ೭-೩೮). [ಸಂ.]

ಹರಿಸ 'ಹರುಸ' ನೋ.

ಹರಿಸಂಗ 'ಪರಿಸಂಗ' ನೋ.

ಹರಿಸಂಯೋಗಿ (ನಾ). ೧. ವಿಷ್ಣುವಿನೊಡನೆ ಕೂಡಿದುದು; ವಿಷ್ಣುವಿನ ಸಹವಾಸವುಳ್ಳುದು. ೨. ಗಿಳಿಗಳ ಒಡನಾಟವುಳ್ಳುದು; ಗಿಳಿಗಳ ಸಂಬಂಧವುಳ್ಳುದು. ೧, ೨: ಹರಿಸಂಯೋಗಿಯಾಗಿ ಲಕ್ಷ್ಮೀದೇವಿಯಂತೆ ಗೋಪಿಯರೊಳೊಂದಿ ಬಿಸಜಾಕ್ಷನಂತೆ ಸುವರ್ಣಯುತಮಾಗಿ ಪರದನಂತೊಪ್ಪುಗುಂ ಶಾಲಿಯ ವನಂ (ಪದ್ಮರಾ. ೮-೧೩). [ಸಂ. ಹರಿಸಂಯೋಗಿನ್]

ಹರಿಸಖ (ನಾ). ಅಗ್ನಿಯ ಮಿತ್ರ; ವಾಯು: ಎಮ್ಮಾ ಪುರದ ಸಿರಿಯನು ನೋಡಬೇಕೆಂದಾ ವಿಭೀಷಣನು ಕರಯುಗವ ಮುಗಿದೆಱಗಿ ಜಾಂಬವ ಹರಿಜ ಹರಿಸುತ ಹರಿಸಖನ ಸುತವರಸಿ ಲಂಕೆಯ ಹೊಕ್ಕ ರಾಘವನನುಜನೊಡಗೂಡಿ (ಕಾಶಿರಾ. ೪೨-೩೬). [ಸಂ.]

ಹರಿಸಗೊಳಿಸು (ಕ್ರಿ). ಸಂತೋಷಪಡಿಸು; ಹರ್ಷಗೊಳಿಸು: ನನ್ನ 'ಇಂದ್ರಚಾಪ'ವನ್ನು ಗುರುಗಳೂ ಹಿರಿಯರೂ ಮಿತ್ರರೂ ಓದಿ ಮೆಚ್ಚಿ . . . ನನ್ನನ್ನು ಹರಸಿದ್ದಾರೆ, ಹರಿಸಗೊಳಿಸಿದ್ದಾರೆ (ಗಾಹಾಸ. VI. ಮುನ್ನುಡಿ).

[ಹರಿಸ (< ಹರುಸ) + ಕೊಳ್$_1$ + - ಇಸು$_1$]

ಹರಿಸತಿ (ನಾ). ಇಂದ್ರನ ಹೆಂಡತಿ; ಇಂದ್ರಾಣಿ; ಶಚಿ: ಹರಿಸತಿ ಜನತನುವಂ ಜಾತರೂಪವಿಳಿಸಿತನಿಧಾನಮಂ ಕಂಡೊಸೆದಳ್ (ಚಂದ್ರಪು. ೧೨-೫೨). [ಸಂ.]

ಹರಿಸಲುಗೆ (ನಾ). ಹೆಚ್ಚಿನ ಸಲುಗೆ ,– ಸದರ : ಎಮ್ಮಯ್ಯನೆಮ್ಮವ್ವೆಯೊಳಗೆ ಹೊಕ್ಕು ಕೆಡುವಿರೊಯ್ಯದಿರೆಂದು ನಾನೊಬಲುತಿರಲಿರಲು ಕಡೆಗಣಿಸಿ ಬೋನಮಂ ಕೊಂಡದಕ್ಕಕ್ಕಿಯಂ ಕೊಡುವವೆಂದನುತ ಹರಿ[ಪಾಕಾಂ. ರು]ಸಲುಗೆಯಿಂದೊಯಿದರು (ಸೋಮಚ. ೨-೧೦೧). [ಹರಿ$_2$ (< ಪರಿ$_2$) + ಸಲುಗೆ (< ಸಲ್ಗೆ)]

ಹರಿಸವಳ (ನಾ). ವಾರ್ಷಿಕ; ವರ್ಷಂಪ್ರತಿ (?): ಪೊಂಗೆ ತಿಂಗ[ಬ್ಲ್] ಕಿಜಿಯ ಪಾಗ ಬಡ್ಡಿ ಲೆಕ್ಕದೆ ಹರಿಸವಳದ ಬಡ್ಡಿಯ ಹೊಂಗೆ ದಿವಸ [ವ]ಳಂ ಪನ್ನೆರ್ವರ್ಬ್ಯಾಹ್ಮಣರ್ಗ್ಗೆ ಶತ್ರಮಂ ನಡಯಿಸುವುದಂದು . . . ಕೊಟ್ಟ, ಲೊಕ್ಕ ಪೊಂಗದ್ಯಾಣವರ್ಪ್ಪತ್ತು (ಸಾಶಾ. XV. ೧-೧೯; 1059). 'ದೀವಸಬಳೆ' ಪರಾ.

[P ಇದು 'ವರಿಸವಳ' ಎಂಬುದರ ಅಪಲಿಖಿತವಿರಬಹುದೆ ?]

ಹರಿಸಾಲೆ (ನಾ). ಗಿಣಿಗಳ ನೆಲೆ,– ವಾಸಸ್ಥಾನ (?): ಹರಿಗಳ್ಕೈಶ್ವರ್ಯದರಮನೆ ಹರಿಯ ಹರಿಸಾಲೆ ಹರಿಯ ವಾಹನಗಳಿಹ ಗೊತ್ತು ಹರಿಯಿಹ ತಾಣ . . . ಹರಿಮಯದರಣ್ಯದೊಳು ಬರುತಿರ್ದ ಹರಿಯಜಸುರಪರುಗಳೊಡೆಯನು (ಭಕ್ತಾಚ. ೧-೧೪). [< ಸಂ. ಹರಿಶಾಲಾ]

ಹರಿಸು$_1$ 'ಪಜೆಯಿಸು' ನೋ.

ಹರಿಸು$_2$ 'ಪರಿಯಿಸು' ನೋ.

ಹರಿಸುಟಿ, ಹರಿಸುಟಿಗ (ನಾ). ಒಂದು ಬಗೆಯ ಆಟ (?): ಓಡಿ ಹೋಗುತ ಮರಳಿ ಹಿಂದಕ ಕೋಡ ಕೆಯ್ಯವರುಗಳನೇಡಿಸಿ ಬೀಳುತೇಳುತಲಿ ಹಾಡುತಲಿ ನಲಿನಲಿದು ಹರಿಸುಟಿಯಾಡುತಲಿ ನಾನಾವಿನೋದವ ಮಾಡುತಿರ್ದನು ಜಗದೊಳಾ ಪ್ರಭುಲಿಂಗ ಲೀಲೆಯಲಿ (ಪ್ರಭುಲೀ. ೨೨-೬೫). **ಹರಿಸುಟಿಗೆ**: ಹರಿಯಯೆದೆಯನು ಮಟ್ಟಿದೆನು ಶಂಕರನನರ್ಧಾಂಗದೊಳು ನಟ್ಟನೆ ಹರಿಸುಟಿಗೆಯಾಡಿದನು ಬ್ರಹ್ಮನ ಬಾಯ ಮುದ್ರಿಸಿದ (ಪ್ರಭುಲೀ. ೭-೫೭).

[?/ ಸಂ. ಚುಟಿಕಾ = (ಹೆಬ್ಬೆರಳು ನಡುಬೆರಳನ್ನು ಸೇರಿಸಿ) ಚುಟಿಕೆ ಹಾರಿಸುವುದು]

ಹರಿಸುಟಿಗೆ 'ಹರಿಸುಟಿ' ನೋ.

ಹರಿಸುತ (ನಾ). ೧. ವಿಷ್ಣುವಿನ ಮಗ; ಮನ್ಮಥ : ಮತ್ತಮಲ್ಲಿ . . . ಪಂಚ ಬಾಣಕ್ಕೆ ತಕ್ಕ ಕುಸುಮಶರಮಂ ಬೆಸಲೆಯಾಗದ ಮಲ್ಲಿವಲ್ಲರಿಗಳಿಲ್ಲ ಹರಿಸುತಂಗೆ ಗಿರಿದುರ್ಗಮಾಗಿ ಪಾಳಿಸದ ಕೃತಕಶ್ಮಲಮಿಲ್ಲ (ಪುಷ್ಪಸ. ೯-೨೧ ವ). ೨. ಇಂದ್ರನ ಮಗ; ಅರ್ಜುನ : ಹರಿಸುತನೆಯ್ದಿವಂದಿರದೆ ನೋಡಿ . . . ವರ್ವಾಯಮಟ್ಟಿಸುವಿಂದಿಸುವುದುಂ (ನೇಮಿಪು. ೧೦-೫೧). ೩. ಅಗ್ನಿಯ ಮಗ; ಸುಗ್ರೀವನ ಕಪಿನಾಯಕರಲ್ಲಿ ಒಬ್ಬನಾದ ನೀಲ: ಜಾಂಬವ ಹರಿಜ ಹರಿಸುತ ಹರಿಸಖನ ಸುತವೆರಸಿ ಲಂಕೆಯ ಹೊಕ್ಕ ರಾಘವನನುಜನೊಡಗೂಡಿ (ಕಾಶಾರಾ. ೪೨-೩೬). ೪. ಸೂರ್ಯನ ಮಗ; ಸುಗ್ರೀವ: ಪೋಯೆಂದು ಹತ್ತಿತು ಹುರಿಕಟಿಸಿ ಹರಿಸುತನ ನೇಮದಲಿ . . . ಬಾಲೇಂದುಧರನ ಗಿರಿಧರನ ದುರ್ಗವನೀ ಕಪಿವ್ಯಾತ (ತೊರರಾ. ೬-೧೬-೪೨). [ಸಂ.]

ಹರಿಸೇನೆ (ನಾ). ಕಪಿಗಳ ಪಡೆ,– ಸೈನ್ಯ : ಹಲ್ಲುಗಿರುಕಿನ . . . ಹರಿಸೇನೆ ಸೈಗಡದಿರ್ದುದು (ತೊರರಾ. ೬-೩೭-೧೫). [ಸಂ. ಹರಿಸೇನಾ]

ಹರಿಸೇವೆ (ನಾ). ೧. ವಿಷ್ಣುವಿಗೆ ಸಲ್ಲಿಸುವ ಕೈಂಕರ್ಯ ; ಪರಮಾತ್ಮನ ಸೇವೆ: ಸಕಲವೆಲ್ಲವು ಹರಿಸೇವೆಯನ್ನಿ (ಪುರಂದ. ೧-೭೧ ಪಲ್ಲವಿ). ೨. ದಾಸಯ್ಯಗಳು ವರ್ಷಕ್ಕೊಮ್ಮೆ ನಡೆಸುವ ವೆಂಕಟರಮಣನ ಸೇವೆ ಮತ್ತು ಆ ಸಂದರ್ಭದಲ್ಲಿ ಹಂಚುವ ಪಂಚಕಜ್ಜಾಯದ ಪ್ರಸಾದ : ಇದಾದ ಮೇಲೆ ಮಾರನೆ ದಿನ ಹರಿಸೇವ ನಡೆಯುವುದು (ಪುಟ್ಟಹ. ೧೨); ದಾಸಯ್ಯನಿಗೂ ಅವನ ಅನುಚರರಿಗೂ ಹರಿಸೇವೆ ಸಲ್ಲುತ್ತದೆ (ಹಳ್ಳಿಬಾ. ೫೬). [ಸಂ. ಹರಿಸೇವಾ]

ಹರಿಸೈನ್ಯ (ನಾ). ಕುದುರೆಗಳ ಪಡೆ; ಅಶ್ವದಳ: ಹರಿಸೈನ್ಯಂ ಹಸ್ತಿಸೈನ್ಯಂ ಪಲ್ಪಟಯಿಗೆ . . . ಮಂತ್ರಪಾಳರ್ಬೆರಸಿಂದ್ರಂ ಬರ್ಪವೋಲ್ಮಾಗಧನಧಿಕಬಲಂ ಬಂದನಾನಂದದಿಂದಂ (ಅರ್ಧನೇ. ೫-೬೯). [ಸಂ.]

ಹರಿಹ (ನಾ). ಹರಿಯುವಿಕೆ; ಪ್ರವಾಹ: ಓಘಃ, ಪ್ರವಾಹಃ, ವೇಣೀ, ಧಾರಾ, ಸ್ರೋತಃ, ರಯಃ – ಈ ಆಱು ತೊಱೆಯ ಹರಿಹಂ" (ಹಲಾಯು. ೧೧೦-೪೭); ದೂಳಿಯ ಪಚ್ಚೆಯಂತೆ ಬಯಲ ಕಾಳಿಗದಂತೆ ಮೆಯ್ನೀರ ಹರಿಹದಂತೆ (ಧರ್ಮಾಮೃ. ೯-೨೬ ಅಡಿಟ); ನಗೆಯು ನಗರಾಜನಲಿ ಹರಿವ ಗಂಗಾನದಿಯ ಮಿಗಿಲಾದ ಹರಿಹದೊಲು ಹರಿಯೆ ಸೂಸಲು ತಡೆಯು (ಸಮೀಗೀ. ೭-೧೪). [ಹರಿ$_2$ (< ಪರಿ$_2$) + - ಹ$_2$ (< - ಪ$_2$)]

ಹರಿಹಂಚಿಕೆ (ನಾ). ಚೂರುಚೂರುಮಾಡಿ ಹಂಚುವಿಕೆ ; ತುಂಡು ತುಂಡು ಮಾಡಿ ಹಂಚುವಿಕೆ: ಭೂಮಿಯನ್ನು ಹರಿದು ಸರ್ವರಿಗೂ ಸಮವಾಗಿ ಹಂಚುವುದೇ ಸಮಾಜವಾದದ ತಿರುಳೆಂಬ ಅಂಧ ಹರಿಹಂಚಿಕೆ ಮೂರ್ಖತನವೆಂಬ . . . ಸಂಗತಿ ಆ ಹೊತ್ತಿಗಾಗಲೆ ಅವನಿಗೆ ಮನವರಿಕೆಯಾಗಿತ್ತು (ಪುನರು. ೪೫೫).

[ಹರಿಹಂಚು (< ಹಜಿಹಂಚು) + - ಇಕೆ]

ಹರಿಹಂಚು 'ಹಜಿಹಂಚು' ನೋ.

ಹರಿಹಯ (ನಾ). ಇಂದ್ರ : "ಪುರುಹೂತನಿಂದ್ರನಂಬುದರಥಂ ಶತಮಖ್ಯಹರಿಹಯಂ ಪರ್ಜನ್ಯನಾಖಂಡಲಂ ಮರುತ್ವಾನೆನಲ್ಕೆ ಸುತ್ರಾಮನಕ್ಕುಂ" (ಮುಗರಾ. ೧೨-೧); ಹರಿಹಯನು ಸಸ್ಯಾಧಿಕಂಗಳ ಹೊರೆಯಲೋಸುಗ ಮೈಗೆ ಮೈಯಾಗಿರುತಿಹನು ಭುವನದ್ವಯದೊಳು (ಕುವಾಉ. ೪-೭೦). [ಸಂ.]

ಹರಿಹರ (ನಾ). ೧. ವಿಷ್ಣು ಹಾಗೂ ಶಿವ ಎರಡೂ ದೇವತೆಗಳ ಸಂಯುಕ್ತ ರೂಪದ ಮೂರ್ತಿ : ನರರಾ ಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಕೋಭಾಕರಮಪ್ಪಂತೊಂದೆ ರೂಪಂ ತಳೆದ ಹರಿಹರಂ ಕೂರ್ತು ರಕ್ಷಿಕ್ಕೆ ನಮ್ಮಂ (ಎಕ. XI. ದಾವಣ ೨೫-?; 1224); ಶ್ರೀ ಹರಿಹರದೇವರಿಗೆ ಸಲ್ಲುವ ಬಂನಿಕೋಡಸೀಮೆಯೊಳಗೆ ಹರಿದ್ರೆಯೆಂಬ ನದಿಯಂ ಕಟ್ಟಿ (ಎಕ. XI. ದಾವಣ. ೨೩-೬೪; 1410). ೨. ವಿಜಯನಗರಸಾಮ್ರಾಜ್ಯದ ಆರಂಭದ ಅರಸುಗಳಲ್ಲಿ ಒಬ್ಬ. ೩. ಗಿರಿಜಾಕಲ್ಯಾಣವೆಂಬ ಕಾವ್ಯವನ್ನೂ ಶಿವಶರಣರ ರಗಳೆಗಳನ್ನೂ ಬರೆದು ಪ್ರಸಿದ್ಧನಾದ ಹನ್ನೆರಡನೆಯ ಶತಮಾನದ ಒಬ್ಬ ಕನ್ನಡದ ಪ್ರಸಿದ್ಧಕವಿ: ವರಗಿರಿಜಾಕಲ್ಯಾಣಮನೊರೆದಂ ವಿವೇಕಿ ಹರಿಹರದೇವಂ (ಗಿರಿಕ. ೧-೪೧). ೪. ಹರಿಹರೇಶ್ವರ ದೇವಾಲಯವುಳ್ಳ ದಾವಣಗೆರೆ ತಾಲ್ಲೂಕಿನ ಒಂದು ಊರು: ಗುರುಧರ್ಮೈಕ್ಯಿತಯಕ್ಕೆ ನೀನೆ ದಿಟದಿಂ ಪೋಲಾಳ್ವ ಕೇಳ್ . . . ನಿನ್ನ ವೊಲ್ ಧರೆ ಚೋದ್ಯಂಬಡುವಂತಿರಾರ್ ಹರಿಹರಶ್ರೀಗೇಹಮಂ ಮಾಡಿದರ್ (ಎಕ. XI. ದಾವಣ. ೨೫; 1224). ೫. [ವೀಶ್ಯೆ] ವಿಷ್ಣುವನ್ನು ನಿಗ್ರಹಿಸಿದವನು; ಶಿವ: ಹರಿಹರನೆಂದು ನಿನ್ನ ನಿಜಕೀರ್ತನೆಯಂ ಶರಣಾಳಿ ಕೂಡೆ ಡಂಗುರಿಸುತೆ ಸತ್ಯಮಂ ನುಡಿಯೆ ಸೇರದು ಶಾಪಹತರ್ಗೆ (ಹಂಪಾಶ. ೯೫); ಹರನು ಹರಿಯಂ ಹರಿಸಿದಿದು ಕಾರಣದಿ ಹರಿಹರನು (ಬಸಪು. ೫೭-೨೮). ೬. ದಕ್ಷಬ್ರಹ್ಮನನ್ನು ಕೊಂದವನು; ವೀರಭದ್ರ: ಹರಿಹರನ ಪಿತನೆ ಜಯಜಯವೆಂದು ವಂದಿಗಳ್ ಕೊಂಡಾಡುತಿರಲು (ಚಿಬಸ. ೬೦-೧೪). [ಸಂ.]

ಹರಿಹಲಗೆ (ನಾ). ಮರದ ಹಲಗೆಯ ಒಂದು ತುದಿಗೆ ಹುಡುಗನನ್ನು ಕೂರಿಸಿ, ಇನ್ನೊಂದು ತುದಿಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಹೋಗುವ ಒಂದು ಬಗೆಯ ಆಟ (?) : ಗುಡುಗು ಗುತ್ತಿನ ಚಿಂಡು . . . ಹರಿಹಲಗೆ ನಿಡುಗವಣೆ ಕೆಡಹು ಕುಟ್ಟಿಗನಾದಿಯಾದವರ್ಗದ ವಿನೋದದಲಾಡಿದರು ಪಂಗಡದಲ್ಕೆವರು ನೂರ್ವರಿವರಿತ್ತಂಡ ವೊಂದಾಗಿ (ಕುವಾಉ. ೬-೨). [ಹರಿ$_2$ (< ಪರಿ$_2$) + ಹಲಗೆ (< ಪಲಗೆ)]

ಹರಿಹಾದಿ (ನಾ). (?) : ನೆಲದೊಳಂದಧಿಕದಿ ಮೂಱು ನಾಲ್ಕೇಳನು ತಲೆ ಗುನಿಸುತ ಲಾಟಿಂದ ಒಲಿದು ಭಾಗಿಸಿ ಬಂದೊಡವು ಹರಿಹಾದಿಯೆ ನೆಲೆ ಮೂಱು ಜಾತಿ ಬಾಹುಲ್ಯ (ವರ್ಧಚ. ೮-೭೧). [?]

ಹರಿಹಾಯ್, ಹರಿಹಾಯು (ಕ್ರಿ). ೧. (ಆಲಂ) ಬಹಳ ಸಿಟ್ಟಿಗೇಳು; ಆಕ್ರೋಶದಿಂದ ರೇಗು: ಇವರ ಮೇಲೆ ಹರಿಹಾಯ್ವುದು ವಿಚಾರಿಗಳ ಮತಮಲ್ಲ (ಮಲ್ಲಚ. ೮-೩); ಪ್ರಭುರಾಯರು ಸಿಪಾಯಿಯ ಮೇಲೆ ಹರಿಹಾಯ್ದರು (ಕೊಂದಯಾ. ೫೨). ೨. ಆತುರದಿಂದ ಮುಂದೆ ಬರು; ತವಕದಿಂದ ಮುಂದಾಗು: ಹೊಸ ಶಿಕ್ಷಕಿ ಬಂದಾಗ ಎಲ್ಲಾ ಮಾಸ್ತರರು ಹರಿಹಾಯ್ದು ಮಾತನಾಡಿಸಿದ್ದರಿಂದ (ಕಾವೇರಿ. ೭). **ಹರಿಹಾಯು**: ೧. ಶಾಲೆಯಲ್ಲಿ ದುಡಿದು ಬಂದ ಲಕ್ಷ್ಮೀಪತಯ್ಯ ಮನೆಯಲ್ಲಿ ಕಾವೇರಿಯ ಮೇಲೆ ಹರಿಹಾಯುತ್ತಿದ್ದರು (ಹ್ಯಾಗ. ೭೨); ಸ್ವಲ್ಪ ಶಾಂತವಾಗಿರಿ ಸುಮ್ಮನೆ ಹರಿಹಾಯಬೇಡಿರಿ (ಕಮನ. ೧೮೫). [ಹರಿ$_2$ (< ಪರಿ$_2$) + ಹಾಯ್$_1$ (< ಪಾಯ್$_1$)]

ಹರಿಹಾಯು 'ಹರಿಹಾಯ್' ನೋ.

ಹರಿಹು$_1$ 'ಪರಪು$_2$' ನೋ.

ಹರಿಹು$_2$ 'ಪರಿವು' ನೋ.

ಹರಿಹುಗಿಲ್, ಹರಿಹುಗಿಲು (ನಾ). ೧. ಸೂರೆಗೆ ಈಡಾದುದು; ದಾಳಿಗೆ ಒಳಗಾದುದು: ಇಳಿಯೊಳ್ ಕಾಡ್ಕಿದ ಬೇಡರ್ಗಿದು ಹರಿಹುಗಿಲಾಯ್ತು (ಕುಮಾವ್ಯ. ೧೪-೪೭). **ಹರಿಹುಗಿಲು** : ೧. ಅದ್ದ ಹರುಷದ ಪರಹು ಹರಿಹುಗಿಲಾಯ್ತು ಭಯರಸಕೆ (ನಿಭಾಗ. ೧೦-೮೭-೨೦). ೨. ದಾಳಿ; ಆಕ್ರಮಣ : ಯಾದವರಗಡುತನ ನಮ್ಮಲ್ಲಿ ಸಲ್ಲದು . . . ನೀಂ ಹರಿಪುಗಿಲು ಮಾಡುವ ಮಂತ್ರ ನಾಕೆನ್ನು (ಕುವ್ಯಾಉ. ೬೦೯. ೯-೪೦); ಉಸುರುಗತಗಸದಲ್ಲಿ ತನುವಿನ ಬೆಸುಗೆಯನು ಬಿಡುವಾಡಿ ಬಿಸುಡದೆ ಹಸುತೃಷೆಯ ಹರಿಹುಗಿಲಿನುಪಟಳಕಂಜಿ ಮುಖಗೊಡದೆ ದಶವಿಧೇಂದ್ರಿಯದಾಳಿಯಲಿ ಶಂಕಿಸದೆ ನಿಲುವೊಡೆ ಸಿದ್ಧರಾಮನ ದಸೆಯ ನೆನೆಯಲು ಭಕ್ತರಹರ್ಕೆ (ಪ್ರಭುಲೀ. ೧೮-೮).

[ಹರಿ$_3$ (< ಪರಿ$_3$) + ಹುಗಿಲ್$_3$ (< ಪುಗಿಲ್$_1$)]

ಹರಿಹುಗಿಲು 'ಹರಿಹುಗಿಲ್' ನೋ.

ಹರಿಹೇಷಾಧ್ವನಿ (ನಾ). ಕುದುರೆಗಳ ಕೆನೆತ ,– ಕಿಳಿರು: ಹಂಹೇಷಾಧ್ವನಿ ಗಂಧಸಿಂಧುರಘಟಾಘಂಟಾಸ್ವನಂ . . . ದಿಕ್ಕರಿಕರ್ಣಾಂತರವಾಗೆ ನೀಳ್ದುದು ನೃಪಶ್ರೀಜೃತ್ರಯಾತ್ರೋತ್ಸವಂ (ಪುಷ್ಪಸಿ. ೮-೩೨). [ಸಂ.]

ಹರಿಹೊನಲು 'ಪರಿವೊನಲ್' ನೋ.

ಹರೀಂದ್ರ (ನಾ). ಶ್ರೇಷ್ಠವಾದ ಸಿಂಹ : ಕಲಿತಪದ್ಮಪತ್ರಾಂಬಕೆ ಹರೀಂದ್ರವರವಾಹನೆ . . . ಗತಿ ಭವತ್ಪದಂ ಶಾಂಭವೀ (ರಾಜಶೇ. ೭-೧೦೬). [ಸಂ.]

ಹರೀತಕಿ (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ; ಅಳಲೆ; ಅಣಲೆ : ಎಲುದಿನಂ ಸುರಭಯ ಜಳದೊಳ್ ಭಾವಿಸಿ ಹರೀತಕಿಯನೆಚ್ಚೊಡಂಪಣಂಗಳ್ ಕಿಡುಗುಂ (ಮೋಕೋಪ. ೯-೭೫). [ಸಂ. ಹರೀತಕೀ]

ಹರು 'ಪಱುವು' ನೋ.

ಹರುಕ 'ಪಱುಕ' ನೋ.

ಹರುಕಣ 'ಪರಿಕಣೆ' ನೋ.

ಹರುಕಲು (ನಾ). ಹರಿದುದು ; ಚಿಂದಿಯಾದುದು : ಈ ಪುಸ್ತಕ ತುಂಬ ಹರುಕಲಾಗಿದೆ (ರೂಢಿ). [ಹರುಕು (< ಪಱುಕು) + - ಅಲು (< - ಅಲ್$_2$)]

ಹರುಕು 'ಪಱುಕು' ನೋ.

ಹರುಕುಮುರುಕು 'ಪಱುಕು' ಪರಾ.

ಹರುಗುಣಗೂಟ (ನಾ). ನೇಯ್ಗೆಯಲ್ಲಿ ಬಳಸುವ ಒಂದು ಸಾಧನ (?): ಹರುಗುಣಗೂಟ ಠವಣಗೋಲು ಲಾಳಿಯು ಮುರಿಗಟ್ಟಿಗೆಯು ಅಡ್ಡಗಟ್ಟು ಹರಿಚೆ ಹೊಕ್ಕುಳಗೂಟ ನಾಲಿಗಗೂಟವನಿರದೊಂದುಳಿಯದೆ ಕಟ್ಟಿದನು (ಅಮುಸಾ. ೫-೬).

[? + ಗೂಟ (< ಗೂಂಟು)]

ಹರುಗೋಲು 'ಪಱಿಗೋಲ್' ನೋ.

ಹರುಣೆ (ನಾ). ಶಕುನದ ಹಲ್ಲಿ (?) : ಇದು ದಲ್ ದಿಗ್ವಿಜಯಂ ರಣಾಜಿರದೊಳಾರಾನುಂ ಭರಂಗೆಯ್ದು ತಾಗಿದಪರ್ಬೆಳ್ಪುದೆಯಾ ಬಲಂ ವಿಧುಬಲಂ ತಾರಾಬಲಂ ನೋಡಬೇಡಿದ ಬೇಳಂಬಮನಂತಕಂಗಮನಗಂ ತೀರ್ದಂಬುದೇಂ ವಕ್ರಮೆಂಬುದುಮೇಂ ಮಿಕ್ಕಿನ ಹಕ್ಕಿಯೊಳ್ ಹರುಣೆಯೊಳ್ ಸೇನಾಸಹಸ್ರಂಗಳುಂ ಎಂದು ತೋಱಿದುತ್ಪಾತಕ್ಕೆ ಸಡೆಯದೆಯುಂ (ಅನಂಪು. ೧೩-೮೮). [< ಅರಣೆ ?]

ಹರುಬರಿ 'ಪರಿವರಿ' ನೋ.

ಹರುಬು 'ಹರಿಬ' ನೋ.

ಹರುವಿ 'ಪರವಿ' ನೋ.

ಹರುವು 'ಪಱುವು' ನೋ.

ಹರುವೆ$_1$ 'ಪರವಿ' ನೋ.

ಹರುವೆ$_2$ 'ಹಱುಹೆ' ನೋ.

ಹರುಷ 'ಹರುಸ' ನೋ.

ಹರುಷಂದೋಱು (ಕ್ರಿ). ಆನಂದಗೊಳಿಸು; ಸಂತೋಷಪಡಿಸು: ಪೊಂದೊಟ್ಟಿಲೊಳಗೆ ಶಿಶುಲೀಲೆಯಿಂ ಕೆಲದಿನಂ ತಾಯ್ಗೆ ಹರುಷಂದೋಱಿದಂ ಕುವರನು (ಚಿಬಪು. ೫-೩೫). [ಹರುಷ (< ಹರುಸ) + ತೋಱು]

ಹರುಷಂಬಡು (ಕ್ರಿ). ಸಂತೋಷವನ್ನು ಹೊಂದು; ಆನಂದಿಸು: ದಿಟ್ಟಿಪರ ದಿಟ್ಟಿಗಳಿಗಚ್ಚರಿ ಹುಟ್ಟಿ ಪೊನ್ನುಕ್ಕಿದೊಡೆ ಹರುಷಂಬಟ್ಟು ಭೂಪಂ ಬಸವರಸನಂ ಕೀರ್ತಿಸುತಮಿರಲು (ಬಸಪು. ೧೦-೧೫೫). [ಹರುಷ (< ಹರುಸ) + ಪಡು$_1$]

ಹರುಷಂಬೊಱು (ಕ್ರಿ). = ಹರುಷಂಬಡು: ಹರುಷಂಬೊತ್ತು. ಲಿಂಗಸ್ಪರುಶನದ ನಿಯಮಂಗಳಂ ತೀರ್ಚಿ (ಬಸಪು. ೭೦-೩೩). [ಹರುಷ (< ಹರುಸ) + ಪೊಱು]

ಹರುಷಗೆಡು 'ಹರುಸಂಗೆಡು' ನೋ.

ಹರುಷತಿಕೆ (ನಾ). ಪರಮಾನಂದ: ಮುನ್ನೂಱುವತ್ತು ನಕ್ಷತ್ರಕ್ಕೆ ಬಾಯಿ ಬಿಟ್ಟುಕೊಂಡಿಪ್ಪುದೆ ಮುತ್ತು ಅದು ಸ್ವಾತಿಗಲ್ಲದೆ ಬಾಯ್ದೆಱೆಯದು ಕೇಳು ಕೇಳಾ ತಂದೇ ಎಲ್ಲವಕ್ಕೆ ಬಾಯು ಬಿಟ್ಟರೆ ತಾನೆಲ್ಲಿಯ ಮುತ್ತಪ್ಪುದೂ ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು ಕರಣಾದಿಗುಣಂಗಳ ಮಱೆದರು (ಬಸವ. ೬೦೯). [< ಹರುಷ]

ಹರುಷನ (ನಾ). ಹರ್ಷ; ಆನಂದ: ದರುಶನವಾಯಿತು ಹರುಷನವಾಯಿತು ಗುರುವರ್ಯನ್ನಯ ಕಲ್ಪತರುವೆ (ಕೋಡಚ. ೧-೧೩೬). [< ಸಂ. ಹರ್ಷಣ]

ಹರುಷಪುಳಕ (ನಾ). ಸಂತೋಷದಿಂದ ಉಂಟಾಗುವ ರೋಮಾಂಚನ: ಹರುಷಪುಳಕದ ಹರಹಿನಲಿ . . . ಅರಿದಿಶಾಪಟಮಲ್ಲ ಬಂದನು ಪಯಣಗತಿಗಳಲಿ (ತೊರಾ. ೧-೬-೭). [< ಸಂ. ಹರ್ಷಪುಲಕ]

ಹರುಷಭೋಗ (ನಾ). ಸಂತೋಷದ ಸೌಭಾಗ್ಯ; ಆನಂದದ ಸಮೃದ್ಧಿ: ಉರುಳುರುಳು, ಸಾಗರವೆ, ಮುನ್ನೀರಿನಾಗರವೆ, ತೆರತೋಳ್ಗಳಿಂದಯಾಲಿಂಗಿಸಿ ಧರಿತ್ರಿಯಂ ವರುಷಶತ ಗತವಾದರಳಿಯದನುರಾಗದಲಿ ಹರುಷಭೋಗದಲಿ! (ಚಾತ್ಪಾ. ೬೫-೧೭೬೧). [< ಸಂ. ಹರ್ಷಭೋಗ]

ಹರುಷವೇಱು (ಕ್ರಿ). ಸಂತೋಷವನ್ನು ತಾಳು: ಬಿಜ್ಜಳನ ಮೊಗಂ ಲಜ್ಜೆಯೇಱೆ ಶರಣರ ಮೊಗಂಗಳ್ ಹರುಷವೇಱೆ (ಬಸರ. ೯-೧೨೯).

[ಹರುಷ (< ಹರುಸ) + ಏಱು$_1$ (< ಏಱ್$_1$)]

ಹರುಷಾಶ್ರು (ನಾ). ಆನಂದದಿಂದ ಕಣ್ಣಿನಲ್ಲಿ ಬರುವ ನೀರು; ಆನಂದಾಶ್ರು: ಇಳೆಯ ಹರುಷಾಶ್ರುಗಳು ಸಲೆ ಕಂಗಳಲಿ ಪರಮಾನಂದವಾಗಲು ನಳಿನನಾಭನು . . . ಸೆಳೆದು ದಿಗಿಯಪ್ಪಿದನು ಭರತನ (ಕೌಶಾ. ೪೪-೪೫). [< ಸಂ. ಹರ್ಷಾಶ್ರು]

ಹರುಷಿತ (ಗು). ೧. ಸಂತೋಷವನ್ನು ಹೊಂದಿದ; ಪ್ರಸನ್ನಗೊಂಡ : ಮತ್ತೆಯುಂ ಮಣಿಭೂಷಣಂಗಳನಿತ್ತು ಸತತಾನಂದಹರುಷಿತಚಿತ್ತದಿಂದಂ ಕಳುಹಿದನು (ಬಸಪು. ೫-೭೦). (ನಾ). ೨. ಸಂತೋಷ ಹೊಂದಿದವನು; ಆನಂದಿತನಾದವನು: ನಸುನಗುತ ಗುರು ಕೌರವಮಹೀಶನ ಮೊಗದ ಸುಮ್ಮಾನಕ್ಕೆ ಹರುಷಿತನಾಗುತಿಂತೆಂದ (ಕುವ್ಯಾಪ್ರೋ. ೧೦-೪೫). ೩. ಸಂತೋಷ; ಆನಂದ: ಬಸವಮಂತ್ರಿಯನು ಸ್ಮಿತಮುಖಾಂಬುಜನಾಗುತಂ ಹರುಷಿತದೊಳೊಡನೊಡನಪ್ಪಿ ಕರುಣಾಮೃತರಸದೊಳೋಲಾಡಿಸಲು ಮಾಹೇಶ್ವರರು ನಲಿದು (ಬಸಪು. ೨೨-೬೩). [< ಸಂ. ಹರ್ಷಿತ]

ಹರುಷಿತೆ (ನಾ). ಸಂತೋಷ ಹೊಂದಿದವಳು; ಆನಂದಿತೆ: ಪರಮಹರುಷಿತೆಯಾಗಿ ಮನವಚ್ಚರಿವಡುತ್ತಾ, ಓಹಿಲಯ್ಯಗೆ ಧರಣಿಯೊಳು ಸಾಷ್ಟಾಂಗದಂಡಪ್ರಣವಮಂ ಮಾಡಿ (ಬಸಪು. ೪೪-೪೨); ಕೇಳಿ ಹರುಷಿತೆಯಾದಳುತ್ತರೆಯೋಲಗಕೆ ಬಂದು . . . ಕೈಮುಗಿದೆಂದಳೀ ಪದನ (ಕುವ್ಯಾವಿ. ೫-೨೮). [< ಸಂ. ಹರ್ಷಿತಾ]

ಹರುಷಿಸು (ಕ್ರಿ). ಸಂತೋಷಪಡು; ಆನಂದವನ್ನು ಹೊಂದು: ಅಂಗ್ಕತಳದಲಿಹ ಪರುಷವನು ಕಲ್ಲೆಂದು ಟಿಕ್ಕೆಯ ಹರಳಿನಲಿ ಹರುಷಿಸುವ ಮೂಢಮನುಷ್ಯರಂದದಲಿ ಅರಸಕೌರವನೆಂದನು (ಕುವ್ಯಾಉ. ೧೬-೭); ಸಕಲದನ ಹರುಷಿಸಿತು ಹಯಮೇಧದಲಿ (ತೊರಾ. ೧-೭-೫೧). [ಹರುಷ (< ಹರುಸ) + - ಇಸು]

ಹರುಷೋನ್ನತಿ (ನಾ). ಮಿಗಿಲಾದ ಸಂತೋಷ; ಆನಂದಾತಿಶಯ: ಮುನ್ನ ಸಾರಥಿಯಹನು ನೋಡುವೆನೆನುತ ವಹಿಲದಲಿ ಬೆಸ್ಸಲಬಲೆಯನ್ಯದಲಾ ಸಂಪನ್ನಬಲ ನೋಲಗಕೆ ಬರೆ ಹರುಷೋನ್ನತಿಯಲುತ್ತರಕುಮಾರನು ಕರದು ಮನ್ನಿಸಿದ (ಕುವ್ಯಾವಿ. ೫-೬೯). [< ಸಂ. ಹರ್ಷೋನ್ನತಿ]

ಹರುಸ, ಹರಿಸ, ಹರುಷ (ನಾ). ಹಿಗ್ಗು; ಸಂತೋಷ: ಸೂಕ್ಷ್ಮ- ಸುಕುಮ, ಹರ್ಷ-ಹರುಸ (ಶಮದ. ೨೫೪ ಪ್ರಯೋ); ಸಚಿವನು ಹರುಸ ಮಿಗಲಾ ಪೊಳಲ ಹೊಕ್ಕು . . . ರತ್ನಕನ್ನಿಕೆಯೆನಿಪ್ಪಳಂ ನಿಶ್ಚೈಸಿ ಉಂಗುರುಡಿಕೆಯ ಮಾಡಿದ (ಸೌಂದಪು. ೪-೧೭); ಹರುಸದೆ ದೂತಿಯರ್ ಸತಿಗೆ ಸಿಂಗರ ಮಾಡುತಿರಲ್ಕೆ . . . ಸಖಿಯರ್ತೊಡಿಸಿರ್ದ ಕಾರಣಂ ಪಂದುಂದು (ನವಚ. ೩೬-೭೫). **ಹರಿಸ** : ''ಸಂತಸ ಹರಿಸಮಲಂಪುಂ ಸಂತೋಷಾಖ್ಯಾನ'' (ತಪಕಂ. ೧೩೪): ಹರಿಸಂ ಮಿಗೆ ಕೈಲಾಸದ ಪುರದೊಳಗೊಪ್ಪಿರ್ಪ ನಭವನದ್ರುಯರೂಪಂ (ಗಿರಿಕ. ೧೦-೧೧೨). **ಹರುಷ** : ಕಂಪಲ್ಲಸಂಗನ ಶರಣರು ಬಂದರ ಉಬ್ಬಿ ಕೊಬ್ಬಿ ಹರುಷದಲೋಲಾಡುವೆ (ಬಸವ. ೩೭೭); ಹರುಷದ ಶರಧಿಯೊಳ ಗೋಲಾಡುತಿದ್ದುದು ನಿಖಿಲಜನ ನಲಿದು (ಕಾಶಿಖಂ. ೪೪-೨೫). [< ಸಂ. ಹರ್ಷ]

ಹರುಸಂಗೆಡು, ಹರುಷಗೆಡು (ಕ್ರಿ). ಸಂತೋಷವಿಲ್ಲದಾಗು; ವ್ಯಥೆಪಡು: ಎರಡುಂ ಸಂಜೆಯೊಳಂ ಹರಿ ಹರುಸಂಗೆಟ್ಟಶ್ರುಜಿಂದು ವಿಣ್ಮೂತ್ರಂಗಳ್ ಸುರಿಯೆ ಕಿಳಿಪ್ಪೊಡೆ ಮಾಡುಗುಮರಸಂಗಂ ಪಿರಿದು ಭಯಮಂ (ಅಶ್ವಶಾ. ೪-೫೭). **ಹರುಷಗೆಡು**: ಮುಂದುಗಾಣದೆ ಹಲವನೆಣಿಸುತ ಹರುಷಗೆಟ್ಟಂತೆಂದನಾ ಮುನಿಪ (ತೊರಕಾ. ೧-೯-೨೮).

[ಹರುಸ + ಕೆಡು]

ಹರುಹು$_1$ 'ಪರಪು' ನೋ.

ಹರುಹು$_2$ 'ಪರಪು' ನೋ.

ಹರುಹು$_3$ 'ಪರಿವು' ನೋ.

ಹರುಹುಗೆಡು (ಕ್ರಿ). ನಡೆಗೆಡು; ಮುಂದೆ ಸಾಗದಂತಾಗು: ಹರುಹುಗೆಟ್ಟುದು ತೇರು ಸಾರಥಿ ಹುರುಳುಗೆಡಿಸಿಯೆ ನುಡಿದನಂದಿನ ಕೊಱತೆ ತಾ ಮುನ್ನಾಯ್ತು (ಕುವ್ಯಾಕ. ೧-೧೫). [ಹರುಹು$_3$ (< ಪರಿವು) + ಕೆಡು]

ಹರುಹೆ 'ಹಱುಹೆ' ನೋ.

ಹರೆ$_1$ 'ಪರೆ' ನೋ.

ಹರೆ$_2$ 'ಪರೆ' ನೋ.

ಹರೆ$_3$ 'ಪಱೆ' ನೋ.

ಹರೆ$_4$ 'ಪೊರೆ' ನೋ.

ಹರೆ$_5$ 'ಪರೆ' ನೋ.

ಹರೆ$_6$ 'ಪರಯ' ನೋ.

ಹರೆಕಾರ 'ಪಱೆಕಾಱು' ನೋ.

ಹರೆಕಾಱು 'ಪಱೆಕಾಱು' ನೋ.

ಹರೆಗಡಿ 'ಪರೆಗಡಿ' ನೋ.

ಹರೆಗಡಿಸು (ಕ್ರಿ). ಸೀಳು; ತುಂಡುಗೊಳಿಸು; ಕತ್ತರಿಸು: ಪರ್ಬತವನೊಡೆದುಳಿಸಿ ಭೂಮಿಯನಿಬ್ಭಗೆಯ ಮಾಡಿಸುತ ರಥಗಜದೊಬ್ಬುಳಿಯ ಹರೆಗಡಿಸಿ . . . ಅಹಿತರಿಗುಬ್ಬಸವನೆಸಗುವನೆ ಜೋಧನು (ಕುವ್ಯಾಉ. ೩-೧೦೨). [ಹರೆಗಡಿ (< ಪರೆಗಡಿ) + - ಇಸು]

ಹರೆಗಳೆ 'ಪೆರೆಗಳೆ' ನೋ.

ಹರೆಯ 'ಪರಯ' ನೋ.

ಹರೆಯಂಬಡೆ, ಹರೆಯವಡೆ (ಕ್ರಿ). ತಾರುಣ್ಯವನ್ನು ಪಡೆ ; ಯೌವನವನ್ನು ಹೊಂದು: ಹರನ ಮೆಚ್ಚು ಹರೆಯಂಬಡೆದಂತೆ ಶಂಕರನ ಬಿಂಕಂ ಬಿನ್ನಣಮಾದಂತೆ . . . ನೆಲೆ ಮೆಱೆದು ನಡೆತಂದು ನಗತನೂಜೆ ಚಂದ್ರಧರನ ಮುಂದೆ ನಿಂದು (ಗಿರಿಕ. ೫-೭೬ ವ). **ಹರೆಯವಡೆ**: ಜಯಧರಣೀಪತಿ ಸಕಲಕಲಾಕೋವಿದನಾಗಿ ಹರೆಯವಡದಂ (ಜಯಕಾ. ೨ ಸೂಚನೆ). [ಹರೆಯ (< ಪರಯ) + ಪಡೆ]

ಹರೆಯಂಬೋಗು (ಕ್ರಿ), ಯೌವನಾವಸ್ಥೆಯನ್ನು ಮಿರು; ವೃದ್ಧಾಪ್ಯವನ್ನು ಹೊಂದು : ಪ್ರವಯಾಃ, ಸ್ಥವಿರಃ, ವೃದ್ಧಃ, ಯಾತಯಾಮಃ - ಈ ೪ ಹರೆಯಂಬೋದಾತಂ (ಹಲಾಯು. ೮೩-೩೪೯). [ಹರೆಯ (< ಪರಯ) + ಪೋಗು$_1$ (< ಪೋ$_1$)]

ಹರೆಯಬೋಗುಹ (ನಾ). ತಾರುಣ್ಯವು ಕಳೆದು ಹೋಗುವಿಕೆ; ಮುಪ್ಪು ಉಂಟಾಗುವಿಕೆ: ''ಜ್ಯಾನಿ, ಜೀರ್ಣ - ಹರೆಯಬೋಗುಹ'' (ನಾಚರಾ. ೩).

[< ಹರೆಯಂಬೋಗು + - ಹ$_2$ (< - ಪ$_2$)]

ಹರೆಯವಡೆ 'ಹರೆಯಂಬಡೆ' ನೋ.

ಹರೆಯಿಸು 'ಪರೆಯಿಸು' ನೋ.

ಹರೆಹಂದಲ್ (ನಾ). ವಿಸ್ತಾರವಾದ ಹಂದರ,— ಚಪ್ಪರ : ಮಱೆಯದಲ್ಲರನಂದು ಮುನ್ನಿಸಿ ಬೀಳ್ಕೊಟ್ಟ ಮಱುದಿನ ವೊದಲಾಗಿ ಚಕ್ರಿ ಹರೆಹಂದಲಿಕ್ಕಿ ಹಲವು ದಿನ ಮದುವೆಯ ತೆಱನಱಿದೊಲ್ದು ಮಾಡಿದರು (ಭರಚ. ೪೩-೧೧೫); ಚೊಕ್ಕವೆಣ್ಣಲ್ಲಲ್ಲಿ ಪುಟ್ಟುವುವಾ ಪೆಣ್ಣ ಪಕ್ಕದವರೆ ನೋಡಿ ನೃಪಗೆ ತಕ್ಕುವೆಂದರ್ತಿಯೊಳೀಯೆ ಹರೆಹಂದಲಿಕ್ಕಿ ಮದುವೆಯಾಗುತಿಹನು (ಭರಚ. ೭೫-೭೭).

[ಹರೆ$_1$ (< ಪರೆ$_1$) + ಹಂದಲ್ (< ಪಂದರ್)]

ಹರೇಣು (ನಾ). ೧. ಬಟ್ಟಗಡಲೆ; ಬಟಾಣೆಕಾಳು. ೨. ಒಂದು ಬಗೆಯ ಸುಗಂಧಯುಕ್ತವಾದ ಔಷಧೀದ್ರವ್ಯ ; ರೇಣುಕ : ''ದ್ವಿಜಾ, ಹರೇಣುಃ, ರೇಣುಕಾ, ಕೌಂತೀ, ಕಪಿಲಾ, ಭಸ್ಮಗಂಧಿನೀ - ೬ ರೇಣುಕ ಎಂಬುವ ಗ್ರಂಥ್ಯದ್ರವ್ಯದ ಹೆಸರು'' (ಸಿದ್ಧಾಂತ. ೧೪೦). [ಸಂ.]

ಹರೇಣುಕ (ನಾ). = ಹರೇಣು ೨: ಲೋಧ್ರದ ಚಿಕ್ಕೆ, ತುಲಸೀಬೇರು, (ನೆಲ್ಲಿಚಿಟ್ಟು), ಆಲದ ಮುಗುಳು, ಹರೇಣುಕ ಇವಿಷ್ಟನ್ನೂ ಸಮಾಂಶವಾಗಿ ಹಾಲಲ್ಲರೆದು ಋತುಸ್ನಾನ ಮಾಡಿದ ದಿನದಲ್ಲಿ ಕುಡಿಯ ಕೊಡೆ ಗರ್ಭಸಿದ್ಧಿಯಹುದು (ವೈದ್ಯಸಾ. II. ೪೫). [ಸಂ.]

ಹರ್ಡೆ 'ಹರಡೆ' ನೋ.

ಹರ್ತ (ನಾ). ಸಂಹರಿಸುವವನು; ಲಯಕರ್ತ: ಕರ್ತನುಂ ಸರ್ಪಕ್ಕೆ ಭರ್ತನುಂ ಹರ್ತನುಂ ಪರಮೇಶನಲ್ಲದೆ ಭರ್ತ ಬೇಱುಂಟೇ (ಬಸವ. ೫೪-೪); ಲಿಂಗರೂಪನಂ ಹರ್ತ ಪಾವಕರೂಪ ಲಿಂಗದೊಳಗಿರ್ದನಂ ಕೂರ್ತು ವಂದಿಸುವೆನು (ವೀಶಪು. ೬-೧-೭೬).

[< ಸಂ. ಹರ್ತೃ]

ಹರ್ತರದೂದು 'ಪರತರದೂದು' ನೋ.

ಹರ್ತಾರ (ನಾ). ಸಂಹರಿಸುವವನು; ಲಯಗೊಳಿಸುವವನು: ಕರ್ತಾರಂ ನೀನೆ . . . ಹರ್ತಾರಂ ನೀನೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೯೯).

[< ಸಂ. ಹರ್ತೃ]

ಹರ್ತೃ (ನಾ). ೧. ತರುವವನು; ಮುಟ್ಟಿಸುವವನು. ೨. ಸ್ವೀಕರಿಸುವವನು; ತೆಗೆದುಕೊಳ್ಳುವವನು. ೩. ಕಿತ್ತುಕೊಳ್ಳುವವನು. ೪. ಕಳ್ಳ; ತುಡುಗ. ೫. ಸಂಹರಿಸುವವನು; ನಾಶಮಾಡುವವನು. ೬. ಸೂರ್ಯ. [ಸಂ.]

ಹರ್ದು 'ಪರ್ದು' ನೋ.

ಹರ್ಬು 'ಪರಪು' ನೋ.

ಹರ್ಬುಗೆ 'ಪರ್ವುಗೆ' ನೋ.

ಹರ್ಮಾಗಾಲ (ನಾ). ಕಷ್ಟಸಾಧ್ಯ; ದುಸ್ತರ (?): ಅವಳನ್ನು ಸಮಾಧಾನ ಮಾಡಬೇಕಾದರೆ ಅಷ್ಟಿಗೆ ಹರ್ಮಾಗಾಲವಾಗಿತ್ತು (ಮಲಪ. ೮೬); ಅಪಸಿಗೆ ಅನುಭವದಿಂದ ಗೊತ್ತಿತ್ತು, ತನ್ನ ಹೆಂಡತಿ ಮಾತು ಪ್ರಾರಂಭಿಸುವುದು ಹರ್ಮಾಗಾಲ ಎಂದು (ಮಲಪ. ೨೪೪). [?]

ಹರ್ಮ್ಯ (ನಾ). (ಶ್ರೀಮಂತರ) ಉಪ್ಪರಿಗೆ ಮನೆ; ಸೌಧ; ಮಹಲು: ಪರ್ವತದ ಮೇಲೆ ಕಱಿಂಗಿ ಕಲ್ಬಲಿಸಿದ ಮರದುಱುಗಲ ನಡುವೆ ಸುಧಾಧವಳಿತೋತ್ತುಂಗ ರಮ್ಯಹರ್ಮ್ಯಂಗಳಂ ಕಾಣ್ಬರಪ್ಪೊಡದು ಹಿಡಿಂಬಪುರಮೆಂಬುದು (ಪಂಚಪಾ. ೩-೧೫ ವ); ರತ್ನಹರ್ಮ್ಯಚಯಮಂ ಬಂದೇಱಿ ನಿಂದಲ್ಲಿ ಕಾಮಿನಿಯರ್ ಸಾಲ್ವಿಡಿವೀಕ್ಷಿಸುತ್ತಿರೆ (ರಾಜಶೇ. ೧೩-೯೨). [ಸಂ.]

ಹರ್ಮ್ಯಾಗ್ರ (ನಾ). ಉಪ್ಪರಿಗೆಯ ಮೇಲುಭಾಗ: ಅಶನಿವೇಗಂ . . . ಒರ್ಮೆ ಹರ್ಮ್ಯಾಗ್ರಭೂಮಿಯೊಳಿರ್ದು ನೆಗೆದ ಮುಗಿಲಂ ನೋಡುತ್ತುಮಿರ್ಪುದುಂ (ಪಂಡಾಮಾ. ೧೦-೧೩೬ ವ); ತಳರಲ್ಕೆಂದಡಿಯಿಟ್ಟು ಜಾಱಿ ಜವದಿಂ ಕೈಯೂಱಿ ಬಿಲ್ಬೇಳ್ದು . . . ಕೋಲ್ಗಳನಾಂತ್ಯೆದುವ ಪಾಂಥರಂ ನಗುವರಾ ಹರ್ಮ್ಯಾಗ್ರದಬ್ಜಾಕ್ಷಿಯರ್ (ರಾಜಶೇ. ೮-೧೩೪). [ಸಂ.]

ಹರ್ಮ್ಯೋರ್ಧ್ವ (ನಾ). = ಹರ್ಮ್ಯಾಗ್ರ : ಹರ್ಮೋರ್ಧ್ವದೊಳ್ . . . ವಿಮಾನನಿಚಯಂ ನಿಂದತ್ತದತ್ತತ್ತಲುಂ (ಚಂದ್ರಪ್ರ. ೬-೧೮). [ಸಂ.]

ಹರ್ಯಕ್ಷ (ನಾ). ೧. ಸಿಂಹ: ಹರಿ ಹರ್ಯಕ್ಷನ ಬಾಯಂತಿರೆ ಕಟ್ಟೆಯ ತೆಱೆದ ಬಾಯಂ . . . ಎರಡುಂ ಕೆಯ್ಯಿಂ ಪಿಡಿದಾಸುರಮಾಗಿರೆ ಸೀಳ್ದು ಬಿಸುಟನೆರಡುಂ ದೆಸೆಗಂ (ಅರ್ಧನೇ. ೭-೯೨); ಜಯಜಯ ಜಲಂಧರಮದಾಂಧಗಜ ಹರ್ಯಕ್ಷ (ರಾಜಶೇ. ೧೪-೧೬೯ ರಗಳೆ). ೨. ಕುಬೇರ. ೩. ಶಿವ. ೪. ಹಿರಣ್ಯಾಕ್ಷನೆಂಬ ರಾಕ್ಷಸ. [ಸಂ.]

ಹರ್ವು 'ಪರಪು1' ನೋ.

ಹರ್ಷ (ನಾ). ೧. ಹಿಗ್ಗು; ಸಂತೋಷ; ಆನಂದ : ಮದಮಾನಮಾಯಭಯಲೋಭ ವಿಷಾದಹರ್ಷಾಭ್ಯುದಿತಾಂತರಂಗರಿಪುವರ್ಗಜಯಾವತಾರಂ (ಕವಿರಾ ೩-೨೨೭); ನವಿಮ್ಮಾ ಭರಾಕ್ರಾಂತಿನಿರೋಧಂ ಮಾಣ್ದುದಿನ್ನೆಂದು . . . ಕಮಠನುಂ ತೂಗಿದಂ ಹರ್ಷದಿಂದಂ (ಜಗವಿ ೩-೪). ೨. ರೋಮಾಂಚನ ; ಪುಳಕ : 'ರೋಮಹರ್ಷ' ಪರಾ. ೩. ನೈಷಧವೆಂಬ ಸಂಸ್ಕೃತಮಹಾಕಾವ್ಯವನ್ನು ರಚಿಸಿದ ಒಬ್ಬ ಕವಿ. ೪. ರತ್ನಾವಳಿ, ನಾಗಾನಂದ ಮತ್ತು ಪ್ರಿಯದರ್ಶಿಕಾ ಎಂಬ ಸಂಸ್ಕೃತ ನಾಟಕಗಳನ್ನು ಬರೆದವನೂ, ಉತ್ತರಭಾರತದ ಪ್ರಸಿದ್ಧಚಕ್ರವರ್ತಿಯೂ ಆಗಿದ್ದ ಹರ್ಷವರ್ಧನನೆಂಬ ದೊರೆ: ಸ್ತುತಿಗೆಯ್ಯಂ . . . ಚತುರೋಕ್ತಿ ಪ್ರಚುರಾರ್ಥಕಾವ್ಯಜನಿತೋರ್ವಿಹರ್ಷನಂ ಹರ್ಷನಂ (ಜಗವಿ. ೧-೮). ೫. [ಕಾವ್ಯಮೀ] ಮೂವತ್ತುಮೂರು ವ್ಯಭಿಚಾರಿ ಅಥವಾ ಸಂಚಾರಿ ಭಾವಗಳಲ್ಲಿ ಒಂದು: ಮತಿ ಲಜ್ಜೆ . . . ಹರ್ಷ . . . ಅಪಸ್ಮಾರವೆಂಬ ಮೂವತ್ತುಮೂಱು ಸಂಚಾರೀಭಾವಂಗಳಂ ಪರಿವರ್ಧಿಸಿ (ವಿವೇಕ. ೧೮೧): ಮತಿಲಜ್ಜಾವೇಗಶಂಕಾಮರಣಚಪಲತಾಹರ್ಷನಿರ್ವೇದ . . . ಅಪಸ್ಮಾರಕಾಖ್ಯಾನದಿಂದಂ - ಈ ಮೂವತ್ತುಮೂಱುಂ ವ್ಯಭಿಚಾರಿಭಾವಂಗಳ್ (ರಸರ. ೧, ಸೂತ್ರ. ೧೦). [ಸಂ.]

ಹರ್ಷಂದಾಳು (ಕ್ರಿ). ಸಂತೋಷವನ್ನು ಹೊಂದು ; ಆನಂದವನ್ನು ಪಡೆ: ಸುತಂ ಜನಿಯಿಸುವಂ ನಿನಗೆಂದು ಲೀಲೆಯೊಳುಸಿರಲು ಕೇಳ್ದತಿಹರ್ಷಂದಾಳಿ ಸುಖದೊಳಿರು ತಿರಲಾ ವಾರ್ತೆಯಿಂ ಲಲಿತಾಂಗಿಯ ನಡುವಿನ ಕಡುದಾರಿದ್ರ್ಯಂ ಪಿಂಗಿದುದು (ಜಯಕಾ. ೨-೫೬). [ಹರ್ಷ + ತಾಳು1 (< ತಾಳ್1)]

ಹರ್ಷಗರ್ಭ (ನಾ). ೧. ಸಂತೋಷದಿಂದ ತುಂಬಿದುದು; ಆನಂದಮಯವಾದುದು: ಮಹೋತ್ಸವಂಗಳೊಡನೆ ಗರ್ಭಮುಂ ಬಂಧುಜನ ಹರ್ಷಗರ್ಭಮುಂ ಪರಿಪೂರ್ಣಮಾಗೆ (ಪಂರಾಮಾ. ೩-೧೦೩ ವ): ಉದರದೊಳಂ ರಮಣಿಗೆ ನೆಲಸಿತ್ತು ಹರ್ಷಗರ್ಭಂ ಗರ್ಭಂ (ಚಂದ್ರಪು. ೩-೮೪). ೨. ಆನಂದಿತನಾದವನು; ಹರ್ಷಿತನಾದವನು: ಧರೆ ರತ್ನಗರ್ಭಮಾದುದು ಸುರರೆಲ್ಲಂ ಹರ್ಷಗರ್ಭರಾದರ್ (ಆದಿಪು. ೭-೨೬). [ಸಂ.]

ಹರ್ಷಣ (ಗು). ೧. ಸಂತೋಷವನ್ನುಂಟು ಮಾಡುವ ; ಆನಂದದಾಯಕವಾದ. (ನಾ). ೨. ಸಂತೋಷ; ಆನಂದ. ೩. ರೋಮಾಂಚನಗೊಳಿಸುವಿಕೆ: 'ರೋಮಹರ್ಷಣ' ಪರಾ. ೪. ಒಂದು ಬಗೆಯ ನೇತ್ರರೋಗ. ೫. ಮನ್ಮಥನ ಪಂಚಬಾಣಗಳಲ್ಲಿ ಒಂದು. ೬. [ಜ್ಯೋತಿ] ವಿಷ್ಕಂಭವೇ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಹದಿನಾಲ್ಕನೆಯದು: ವಿಷ್ಕಂಭ . . . ಹರ್ಷಣ . . . ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೩೨೦). [ಸಂ.]

ಹರ್ಷಧೃತಿ (ನಾ). ಸಂತೋಷದಿಂದ ಕೂಡಿದ ಧೈರ್ಯ: ಪಚ್ಚೆಸಪ್ಪುಳಂ ಕೇಳ್ದವೊಲಾಗಿ ತಿರುಗಿದಳಯ್ಯೊ ತನ್ನವರೆ ಬಂದರೆಂಬೊಂದತಿಯ ಹರ್ಷಧೃತಿಯಿಂದ (ಶ್ರೀರಾಮಾ. ೨೪೩-೪೦೯). [ಸಂ.]

ಹರ್ಷನಿರ್ಭರ (ಗು). ೧. ಸಂತೋಷದಿಂದ ತುಂಬಿದ; ಅತ್ಯಾನಂದವುಳ್ಳ. (ನಾ). ೨. ತುಂಬ ಸಂತೋಷಗೊಂಡವನು: ಮಲಪ್ರಭೆ ಎದುರಿಗೆ ಕಂಡಿತಂತೆ ಅದನ್ನು ಕಂಡಾಕ್ಷಣಕ್ಕೆ ಹರ್ಷನಿರ್ಭರರಾದ ಭಾರ್ಗವರು 'ಐಹೊಳೆ' - ಎಂದು ಉದ್ಗಾರ ತೆಗೆದ ಮಾತೇ ಆ ಊರ ಹೆಸರಾಗಿ 'ಐಹೊಳೆ' ಎಂದು ಪ್ರಸಿದ್ಧವಾಗಿದೆಯೆಂದು ಸ್ಥಲಪುರಾಣ (ಭಾಪಾಶಾ. ೭೪). [ಸಂ.]

ಹರ್ಷಪ್ರಕರ್ಷ (ನಾ). ಸಂತೋಷದ ಹೆಚ್ಚಳ; ಆನಂದದ ಆಧಿಕ್ಯ: ಜನಪತಿ ನಿಮ್ಮಿಂದಲ್ಲದೆ ಜನಕ್ಕೆ ಹರ್ಷಪ್ರಕರ್ಷಮಕ್ಕುಮೆ ಪೆಱರಿಂ (ಮಲ್ಲಿಪು. ೯-೯೪). [ಸಂ.]

ಹರ್ಷಾಂಬು (ನಾ). ಆನಂದದಿಂದ ತುಡಿಯುವ ಕಣ್ಣೀರು; ಆನಂದ ಬಾಷ್ಪ: ಭಗವಂತನಿಗೆ, ತಮ್ಮ ಆತ್ಮಾರ್ಪಣೆಯಿಂದ ಆದ ಸುಖರೂಪದ ಹರ್ಷಾಂಬು ಅದು ಇದ್ದರೂ ಇರಬಹುದು (ಶಾಂತಲಾ. ೨೫೮). [ಸಂ.]

ಹರ್ಷಾಶ್ರು (ನಾ). = ಹರ್ಷಾಂಬು: ನೆರೆದ ಮುನಿಪದಾಂಭೋಜಮಂ ಕಂಡು ಹರ್ಷಾಶ್ರುಪಯಃಪೂರಂಗಳಿಂ ಪಾದ್ಯಮನೊಡರಿಸಿದಂ ಸೂಕ್ತಿಮುಕ್ತಾವತಂಸಂ (ಮಲ್ಲಿಪು. ೧೩-೧೯೯); ನಡುಗುವ ತನುವಲ್ಲಿಯ ತುದಿಯಿಂ ಪೊಡೆಗೊಡನುದಿರ್ವಲರಂದದಲಿ . . . ಹರ್ಷಾಶ್ರು ಬಿಡದೊಕ್ಕುವು (ಕಂನಪಿ. ೧೦ ೩೭). [ಸಂ.]

ಹರ್ಷಿಸು (ಕ್ರಿ). ಸುಖಿಸು; ಸಂತೋಷಪಡು: ನೈರ್ಮಲ್ಯಕ್ಕೆ ನೋಂತವರಲಿ ಗುಡುಗಿ ಮಿಂಚಿ ವರ್ಷಿಸು, ಮಲಮಲನೇ ಮಲರುತಿರುವ ಜೀವ ಕಂಡು ಹರ್ಷಿಸು (ಜೀವಲ. ೫೨-೧೨). [ಹರ್ಷ + - ಇಸ್ತು3]

ಹರ್ಷೋತ್ಕರ್ಷ (ನಾ). ಆನಂದಾತಿಶಯ; ಅತ್ಯಧಿಕವಾದ ಸಂತೋಷ: ಶ್ರೀಕುಮುದಿನಿಗೊದವುಗುಮೆ ಕಲಾಕಾಂತನೊಳಲ್ಲದಾತ್ಮಹರ್ಷೋತ್ಕರ್ಷಂ (ರಾಜಶೇ. ೭-೯೭). [ಸಂ.]

ಹರ್ಷೋತ್ಕರ್ಷಚಿತ್ತ (ನಾ). ಅಧಿಕವಾದ ಮನಃಸಂತೋಷವನ್ನು ಹೊಂದಿದವನು; ಅತಿಶಯವಾದ ಆನಂದದಿಂದ ಕೂಡಿದ ಮನಸ್ಸುಳ್ಳವನು: ಮನಂ ಸಂತಸಂಬಡೆ ಪರಿಪುಷ್ಟ ಹರ್ಷೋತ್ಕರ್ಷಚಿತ್ತನಾಗಿ (ಶಾಂತಿಪು. ೧೦-೬೦ ವ); ತಜ್ಜರದ್ಯಾನರಂ ಹರ್ಷೋತ್ಕರ್ಷಚಿತ್ತನಾಗಿ ಆತ್ಮಗತದೊಳಿಂತೆಂದಂ (ಪಂಚತಂ. ೨೭೯-೯). [ಸಂ.]

ಹರ್ಷೋತ್ಕರ್ಷಿತ (ಗು). ಆನಂದಾತಿಶಯದಿಂದ ಕೂಡಿದ ; ತುಂಬ ಸಂತೋಷವನ್ನು ಹೊಂದಿದ: ಹರ್ಷೋತ್ಕರ್ಷಿತಾಂತರಂಗನಾಗಿ ನಮಸ್ಕಾರಂಗೆಯ್ದು (ಸುಕುಮಾ. ೩-೧೪ ವ). [ಸಂ.]

ಹರ್ಷೋದ್ಗಾರ (ನಾ). ಅತ್ಯಂತ ಹೆಚ್ಚಾದ ಸಂತೋಷವುಂಟಾದಾಗ ಮಾಡುವ ಧ್ವನಿ,— ಉದ್ಗಾರ : ಇದೆಲ್ಲವನ್ನೂ ಕಿಟಕಿಯ ಮೂಲಕ ನೋಡುತ್ತಿದ್ದ ಹುಡುಗರು ಓ ಎಂದು ಹರ್ಷೋದ್ಗಾರ ಮಾಡಿದರು (ಹಸುಪೂ. ೧೩). [ಸಂ.]

ಹಲ1 'ಪಲ1' ನೋ.

ಹಲ2 (ನಾ). ತೂಕದ ಒಂದು ಸಣ್ಣಪ್ರಮಾಣ; ನಾಲ್ಕುಕರ್ಷಗಳ ತೂಕ: ಹಲಕ್ಕೆ ನಾಲ್ಕು ಕರುಷಗಳಕ್ಕುಂ (ವ್ಯವಹಾ. ಅನುಬಂ. I. ೩-೧೨); ಎರಡುಮೊಗಯುದಕದೊಳಗೊಂದೊಂದು ಹಲ ಶುಂಠಿ ಮತ್ತರೆವಲ ಮೆಣಸನಿಕ್ಕಿ (ಸೂಪಶಾ. ೩-೨೮). [< ಸಂ. ಪಲ]

ಹಲ3, ಹಳ2 (ನಾ). ೧. ನೇಗಿಲು; ರೆಂಟೆ: ಪದಿನಾಱುಸಾಸಿರ ಸಂವಾಹನಂಗಳುಂ . . . ಶತಸಹಸ್ರಕೋಟಿ ಹಲಂ [ಪಾಠಾಂ. ಹ್ರದಂ]ಗಳುಂ ಮೂಱುಕೋಟಿ ಗೋಮಂಡಳಮುಂ . . . ಆತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ (ಆದಿಪು. ೧೫-೩ ವ): ಏಕಲಕ್ಷಕೋಟಿ ಹಲಗಳುಂ . . . ಸ್ಥಾಲಿಗಳೇಕಕೋಟಿಗಳು ಮತ್ತಲ್ಲಿ (ಶಾಂತೀಶ. ೮-೫೩). ೨. (ಬಲರಾಮನ ಕೈಯಲ್ಲಿರುವ) ನೇಗಿಲಿನ ಆಕಾರದ ಒಂದು ಆಯುಧ: ಬಲನಾರಾಯಣ ಬಾಹುದಂಡದಳವಂ ನೋಡಲ್ ಗದಾದಂಡದಿಂ ಹಲದಿಂ ಕೂಡಿದ ಚಾಪದಂಡಯುಗಮಂ ಬೈತಲ್ಲಿ ಕಾದಿರ್ಪುದುಂ (ಪಂರಾಮಾ. ೫-೨೯): ಬಂದು ಹಲಂ [ಪಾಠಾಂ. ಳಂ] ದಿವದಿಂ ಬಲಭದ್ರಹಸ್ತದೊಳ್ ನಿಂದುದತಿಭಯಂಕರರೂಪಿಂ (ಜಗವಿ. ೭-೬೪). ೩. ವಿರೂಪತೆ ; ಕುರೂಪತೆ. ೪. [ಜ್ಯೋತಿ] ಲಗ್ನವನ್ನು ಬಿಟ್ಟು ಉಳಿದ ಸ್ಥಾನಗಳಲ್ಲಿ ಏಳು ಗ್ರಹಗಳಿದ್ದರೆ ಆಗುವ ಯೋಗ: ಗ್ರಹಮೇಱುಂ ಲಗ್ನೇತರಗೃಹದೊಳ್ ನೆಲಸಿದೊಡೆ ಹಲಮೆನಿಕ್ಕುಂ ಯೋಗಂ (ಜಾತಕ. ೧೩-೩). **ಹಳ2**: ೧. ಅರಿನರಪಾಲಮೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರ ಚಾಮರ ಹಳಚಿಹ್ನಚಿಹ್ನಿತ ಪದಾಕೃತಿ (ಪಂಪಭಾ. ೬-೨೯); ಪದಿನಾಲ್ಪಾಸಿರ ಸಂವಾಹನಂಗಳಿಂದಮಯ್ವತ್ತಾಱಂತರದ್ವೀಪಂಗಳಿಂದಂ ನೂರ್ಪಾಸಿರಕೋಟಿ ಹಳಂಗಳಿಂದಂ (ಶಾಂತಿಪು. ೧೧-೮೪ ವ). ೨. ರಾಮಂಗಪರಾಜಿತಮೆಂಬ ಹಳ[ಪಾಠಾಂ. ಲ]ಮುಂ ಕೌಮುದಿಯೆಂಬ ಗದೆಯುಂ ಯಕ್ಷಸಹಸ್ರರಕ್ಷಿತಂಗಳಾಗೆ (ಚಾವುಂಪು. ೩೧೫). [ಸಂ.]

ಹಲ4 'ಹಲ್ಲಿ3' ನೋ.

ಹಲ್ಕ (ನಾ). ಹಿಂದೆ ಅಗಸರ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ: ಮಾದಾರಿಕೆವೋಜನ ವರಿ ಅಸಗರ ಹಲ ಗಾಣಿಗರ ಸುಂಕ . . . ಅಂತು ಯಾ ತೆಱಿಗೆ ಸಹವಾಗಿ (ಎಕ. XIV, ಗುಂಡ್ಲುಪೇ. ೧೨೯-೯೯; 1521). [?]

ಹಲಕಾಲ 'ಪಲಕಾಲ' ನೋ.

ಹಲಕು$_1$ (ಕ್ರಿ). ಮರವನ್ನು ಹತ್ತು,— ಏರು: "ಹಲಕು - ವೃಕ್ಷಾರೋಹಣೇ, ಶರೀರಾಂಗಭೇದೇ ಚ" (ಶಮಧಾ). [?]

ಹಲಕು$_2$ (ನಾ). ದವಡೆಯ ಭಾಗ; ಕೆನ್ನೆಯ ಕೆಳಭಾಗ: "ಹಲಕು - ವೃಕ್ಷಾರೋಹಣೇ, ಶರೀರಾಂಗಭೇದೇ ಚ" (ಶಮಧಾ); ಕರದ ಬಲ್ಲೆಯದಿಂದ ವಾಲಿಯ ವರಕುಮಾರನ ತಿವಿಯೆ ಹಲಕಿನ ಸರಿಸದಲಿ ಮೊನೆದೋಱುತುಗುಳುವ ರಕುತಧಾರೆಯಲಿ (ತೊರಾ. ೬-೩೦-೩೦). [?. / ತಮಿ. ಅಲಕು]

ಹಲಗಣೆ (ನಾ). ಹಲಗೆಗಳನ್ನು ಜೋಡಿಸಿದ ಅಟ್ಟಣೆ (?): ಹಲಗಣೆ ಹಾಕಿದ್ದ ಕೆಳಗರುಡಿಯಲ್ಲಿ ಒಂದು ಹಣತೆಯ ಬೆಳಕಿನಲ್ಲಿ ಐಗಳು ಅನಂತಯ್ಯ ಏನನ್ನೊ ರಾಗವಾಗಿ ಓದುತ್ತಿದ್ದುದು ಕೇಳಿಸಿ, ಐತ . . . ಎಂದನು (ಮಲೆಮ. ೨೬೬). 'ಅಟ್ಟಣೆ$_1$' ಪರಾ.

[ಹಲಗೆ (< ಪಲಗೆ) + ಮಣೆ$_1$]

ಹಲಗಾರತಿ, ಹಲಿಗಾರತಿ (ನಾ). ಚಪ್ಪಟೆಯಾಗಿರುವ ಹಾಗು ಹಿಡಿಯುಳ್ಳ ಆರತಿ ತಟ್ಟೆ; ಅವರು ದೇವರಿಗೆ ಹಲಗಾರತಿಯಿಂದ ಮಂಗಳಾರತಿ ಮಾಡಿದರು (ರೂಢಿ). **ಹಲಿಗಾರತಿ:** ಕಟ್ಟುದೀವಿಗೆಗಳು ಹಚ್ಚಿಟ್ಟು ತುಪ್ಪದ ದೀವಿಗೆಯ ಬಗೆಬಗೆ ತುಂಬಿಟ್ಟ ಹಲಿಗಾರತಿ . . . ವಿಷ್ಣುಮೂರುತಿಗೆ ನಾ ಕೈಯ ಮುಗಿಯುತಲಿದ್ದೆ (ಪುರಂದ. ೫-೬೯-೧೧).

[ಹಲಗೆ (< ಪಲಗೆ) + ಆರತಿ$_1$]

ಹಲಗಾಲ 'ಪಲಕಾಲ' ನೋ.

ಹಲಗೆ 'ಪಲಗೆ' ನೋ.

ಹಲಗೆಕಾಱ (ನಾ). ಹರೆಯನ್ನು ನುಡಿಸುವವನು; ತಮಟೆ ಬಾರಿಸುವವನು: ಹಲಗೆಕಾಱರನಾಪ್ತರಂ ದೇವಲಕರಂ ಪೂವಾಡಿಗರಂ ಬಾಗಿಲವರಂ ಸುಯಿಧಾನರಂ ಹಲವಾಳುಗಳನಾಯ್ದು (ಬಸಪು. ೧೬-೧೩). [ಹಲಗೆ (< ಪಲಗೆ) + - ಕಾಱ]

ಹಲಗೆಗಲ್ಲು (ನಾ). ಚಪ್ಪಟೆಯಾದ ಕಲ್ಲು; ಚಪ್ಪಡಿ: ಅಲ್ಲಿಂದಂ ಪಡುವ ನಡದು ನಟ್ಟ ಹಲಗೆಗಲ್ಲು (ಎಕ. XII, ತಿಪಟೂ. ೧೫೯-೭೫; ?).

[ಹಲಗೆ (< ಪಲಗೆ) + ಕಲ್ಲು (< ಕಲ್$_3$)]

ಹಲಗೆಮಂಚ (ನಾ). ಮರದ ಫಲಕಗಳನ್ನು ಹೊಂದಿಸಿ ಮಾಡಿದ ಮಂಚ: ಹಲಗೆಮಂಚದ ಮೇಲೆ ಹಾಸಿಗೆಯಿಲ್ಲದೆ ಮಲಗಿಕೊಳ್ಳುವುದರಿಂದ ಸದಾ ಆರೋಗ್ಯಕರವಾಗಿ . . . ಶರೀರಕ್ಕೆ ಕಾಂತಿಯನ್ನೂ ಅಗ್ನಿಬಲವನ್ನೂ ಕೊಡುವುದು (ಸಕವೃ. ೫೮).

[ಹಲಗೆ (< ಪಲಗೆ) + ಮಂಚ]

ಹಲಗೆಸೇರುವೆ (ನಾ). ೧. ಹಲಗೆಗಳನ್ನು ಜೋಡಿಸಿ ರಚಿಸಿದ ಒಳಮಾಳಿಗೆ,— ಛತ್ತು: ಅವರ ಮನೆಗೆ ಹಲಗೆಸೇರುವೆ ಮಾಡಿಸಿದ್ದಾರೆ (ರೂಢಿ). ೨. ಹಲಗೆಗಳನ್ನು ಜೋಡಿಸುವಿಕೆ: ಹಲಗೆಸೇರುವೆ ಮಾಡು; ಹಲಗೆ ಹಾಸು (Board, ಇಂಕನಾ).

[ಹಲಗೆ (< ಪಲಗೆ) + ಸೇರುವೆ]

ಹಲಗೆಸೇವೆ (ನಾ). ದೇವರ ಉತ್ಸವದಲ್ಲಿ ಹರೆ ಬಾರಿಸುವ ಕೈಂಕರ್ಯ: ಮಾರಮ್ಮನ ಉತ್ಸವಗಳಲ್ಲಿ ಹಲಗೆಸೇವೆ ಮಾಡುವ ಹೊಲೆಯರ ಕೆಂಚ ಮುನಿಯರು ಕುಡಿದು ಬಂದು ತಮ್ಮ ರಣವಾದ್ಯಗಳನ್ನು ಆವೇಶದಿಂದ ನುಡಿಸಲಾರಂಭಿಸಿದ್ದರು (ಊರುಕ. ೬).

[ಹಲಗೆ (< ಪಲಗೆ) + ಸೇವೆ$_1$]

ಹಲಚ 'ಹಲಚೆ' ನೋ.

ಹಲಚಿಗಲ್ಲು (ನಾ). ಚಪ್ಪಟೆಯಾದ ಕಲ್ಲು; ಹಲಗೆಕಲ್ಲು: ಒಂದು ಹಲಚಿಗಲ್ಲಿನ ಮೇಲೆ ಹೆಣ್ಣುಗೊಂಬೆಯ ಆಕಾರವನ್ನು ಹುಟ್ಟಿಸಿದ್ದಾರೆ (ಕಭಾಗೆ. ೫೧೬).

[ಹಲಚಿ (< ಹಲಚೆ) + ಕಲ್ಲು (< ಕಲ್$_3$)]

ಹಲಚೆ, ಹಲಚಿ (ನಾ). ೧. ಚಪ್ಪಟೆಯಾದುದು; ಸಪಾಟಾದುದು: ಹಲಚೆಯಾದ ಕಲ್ಲು ತಗೊಂಡು ಅಡ್ಡ ಹಿಡಿದು ನೀರ ಮೇಲೆ ಪುಟಸುತ್ತ ರೊಟ್ಟೀ ಆಟವನ್ನು ಆಡಿದರು (ಕಸಾಪ. I, ೧೩೨). **ಹಲಚೆ:** ೧. ಇವುಗಳ ತಲೆ ದೊಡ್ಡದು, ಕಣ್ಣು ಸಣ್ಣವು, ಮೋರೆ ಹಲಚಿ, ಮೃಬಣ್ಣ ಕಪ್ಪು (ಮುಂಬಯಿ. ೩-೨೪); ಕರಡಿಯ ತಲೆ ಹಲಚಿ (ಮುಂಬಯಿ. ೩-೧೦೪). (ಗು). ೨. ಹಲಗೆಯಂತೆ ಚಪ್ಪಟೆಯಾದ; ಸಮತಲವಾದ: 'ಹಲಚಿಗಲ್ಲು' ಪರಾ. [?]

ಹಲದಂಡ (ನಾ). ನೇಗಿಲಿನ ಈಸು: "ಹಲದಂಡ ಪಚ್ಚೆ ಪಲ್ಲವ ನವಿರಾರುಣಂ ಪವಳವಾಳ ವಿಪಂಚಿಗಳುಂ ಪ್ರವಾಳ" (ನಾನಾರ. ೮). [ಸಂ.]

ಹಲದಿ 'ಹಳದಿ' ನೋ.

ಹಲಧರ, ಹಳಧರ (ನಾ). ೧. ನೇಗಿಲನ್ನು ಹಿಡಿದವನು; ರೈತ. ೨. ನೇಗಿಲಿನಂತಹ ಆಯುಧವನ್ನು ಹಿಡಿದವನು; ಬಲರಾಮ: ಸಿರಿಲೋಲಸಹಿತ ಯುಧಿಷ್ಠಿರಾದಿ ನೃಪಾಲಕರು ಕಾಣಿಕೆಯನಿತ್ತರು ನಮಿಸಿ ಹಲಧರಗೆ (ಕುವ್ಯಾಗ. ೬-೧); ವಸುದೇವ ಹಲಧರರ್ಪೊಳಲಿನಲಿರ್ದು ಪಾಲಿಸಲಿ (ಚಿಮಿಭಾ. ೭-೨). ೩. [ಚೈನ] ವಾಸುದೇವನ ಸಹೋದರನಾದ ಬಲದೇವ ; IP ಇವರು ಬೇರೆ ಬೇರೆ ತೀರ್ಥಂಕರರ ಕಾಲದಲ್ಲಿರುವ ಒಟ್ಟು ಒಂಬತ್ತು ಬಲದೇವರು : ಪದೆದೆಱಗಿ ಹಲಧರಂ ತ್ರಿಃ ಪ್ರದಕ್ಷಿಣಂಗೆಯ್ದು ಸೇಸೆಗೊಂಡು (ಶಾಂತಿಪು. ೧-೯೨). **ಹಳಧರ:** ೨. ಕೃಷ್ಣನಬ್ಬ ಮಣ್ಣಂ ತಿಂದಂ ನೋಡೆಂದು ಹಳಧರಂ ಪಿಸುಣಾಡಲ್ (ಜಗವಿ. ೩-೬೨). ೩. ಹಳಧರನಂಬ ಕಾಂಬುರುಹಮುಂ ವಸುದೇವನ ನೇತ್ರನೀರಜಾವಳಿ ಪುದಿದಾ ಜನಾರ್ದನನ ದೇಹದೊಳೊಂದಿರೆ (ನೇಮಿಪು. ೬-೧೦೮); ಹಳಧರನಂ ನುಂಗಿ . . . ಅಲಂಘ್ಯಬಲ ನಲ್ಲಿಯುಗುಬ್ಬು ಬ[ಂ]ದಂ ಮದನಂ (ಬಂಹಾರ. ೯-೩೮). [ಸಂ.]

ಹಲಪಿ 'ಹಲಪೆ' ನೋ.

ಹಲಪೆ, ಹಲಪಿ (ನಾ). ವರ್ತುಳಾಕಾರದ ಚಪ್ಪಟೆಯಾದ ಬಿಲ್ಲೆ : ಆಬಿಸಿನಿಯಾ, ತಿಬೇಟ ಹಾಗೂ ಆಫ್ರಿಕೆಯ ಹಲವಾರು ಭಾಗಗಳಲ್ಲಿ ಉಪ್ಪಿನ ಚಕ್ಕಚಿಕ್ಕ ಹಲಪೆಗಳನ್ನು ನಾಣ್ಯಗಳೆಂದು ಬಳಸಿದುದು ನಮಗೆ ತಿಳಿದು ಬರುವದು (ಸುತ್ತುಮು. ೨೦). 'ಹಲಚೆ' ಪರಾ. **ಹಲಪಿ** : ತನ್ನ ಗಂಟಿನೊಳಗಿನ ಹಲಪಿಯ ಹಣವನ್ನು ಎಣಿಸುತ್ತಲಾಗಲಿ . . . ಹಾಡುತ್ತಲಾಗಲಿ ಕುಳಿತುಕೊಳ್ಳುವಳು (ಹೂಬಿಸಿ. ೬೩). 'ಕುಂಟಿಹಲಪಿ' ಪರಾ. [?]

ಹಲಬು 'ಪಲುಂಬು' ನೋ.

ಹಲಮಾಣಿಕ 'ಪಲ್ಮಾಣಿಕ' ನೋ.

ಹಲಯೋಗ (ನಾ). [ಜ್ಯೋತಿ] "ಲಗ್ನವನ್ನು ಬಿಟ್ಟು ಉಳಿದ (ಎರಡು ಮೂರು ನಾಲ್ಕು ಮತ್ತು ಅವುಗಳ ತ್ರಿಕೋಣ)ಸ್ಥಾನಗಳಲ್ಲಿ ಏಳುಗ್ರಹಗಳಿದ್ದರೆ ಹಲಯೋಗ" (ಜಾತಕಿ. ೧೩-೩ ಅಡಿಟಿ). [ಸಂ.]

ಹಲರೇಖೆ (ನಾ). [ಸಾಮುದ್ರಿ] ಅಂಗೈಯಲ್ಲಿರುವ ಚಿಹ್ನೆ: ಹಲರೇಖೆಯು ಚಾಮರರೇಖೆಯು ಇರಲು ರಾಜ್ಯಾಧಿಪತಿಯಾಗಿ ನಿತ್ಯದಲ್ಲಿಯೂ ಸಂಪತ್ತೂ ಅಭಿವೃದ್ಧಿಯಾಗುವುದು (ಸಾಮುಲ. ೧೦೩-೫). [ಸಂ. ಹಲರೇಖಾ]

ಹಲವಂಗ 'ಪಲವಂಗ' ನೋ.

ಹಲವಂದ 'ಪಲವಂದ' ನೋ.

ಹಲವಣ (ನಾ). ನೇಗಿಲಿನ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ (?): ಯಾನೆಗೊಸನೆ ಸಲ್ವನ್ನೆಗಂ ಪುರದ್ರಮ್ಮಮುಂ ಕೊಳ್ಳಸಲ್ಲು[ದು] (ಕಇ. ೪೭-೬-೧೪; 1152). [ಹಲ$_3$ + ಪಣ$_3$]

ಹಲವಣ್ಣಿಗೆ (ನಾ). ಹಲವು ಬಗೆಯ ವರ್ಣನೆ: ತನ್ನ ಕೊಲಬಂದುದನು ಮಾತಿಗೆ ಮುನ್ನ ಹರಿಯನು ಬೈದುದನು ಹಲವಣ್ಣಿಗೆಯಲೆಂಟೊಂದಗೂಡಿಸಿ . . . ಕಲಹವ ಹಣ್ಣೆದನು ದಾರುಕನು (ಕೃಷ್ಣಾಕಾ. ೧೫-೫೨). [ಹಲ$_1$ (< ಪಲ$_1$) + ಬಣ್ಣಿಗೆ$_1$]

ಹಲವರಿ (ಕ್ರಿ). ಹಲುಬು; ಅಲವತ್ತುಕೊಳ್ಳು: ಮೂರು ಹೊತ್ತು . . . ನರಳುತ್ತಲೋ ಇನ್ನೇನನ್ನಾದಾರೂ ಹಲವರಿಯುತ್ತಲೋ ಇರುತ್ತಿದ್ದ (ಮಲೆಮ. ೬೯೫); ಅವನು ಜಾಗೃತಗೊಂಡವನಂತೆ . . . "ನಾನೀಗ ಮಲಗಬೇಕು" ಎಂದು ಪರಿಪರಿಯಾಗಿ ಹಲವರಿದನು (ಪುನರು. ೨೬೭). [< ಅಲವಱು]

ಹಲವರ್ಧ 'ಪಲವರ್ಧ' ನೋ.

ಹಲವಳಿ 'ಹಲಿವುಳಿ' ನೋ.

ಹಲವಾ, ಹಲುವ, ಹಲ್ವ, ಹಲ್ವಾ (ನಾ). ಒಂದು ಬಗೆಯ ಮೆದುವಾದ

ಸಿಹಿತಿಂಡಿ: ಉಡುಪೀ ಫರಾಳದ ಅಂಗಡಿಯಲ್ಲಿ ಪೇಡೆ, ಹಲವಾ, ಅಂಟಿನ ಉಂಡಿ ಮುಂತಾದ ಮಡಿಯ ಪದಾರ್ಥಗಳು ಬಿದ್ದ ಮೂಲಕ . . . ಕೆಲಸಮಾಡಿಕೊಡಲು ಅಂತರಾತ್ಮನ ಪ್ರೇರಣೆಯಾಗಿತ್ತು (ಗಂಪಾಯಿ. ೨೩೨). ಹಲುವ : ಹಲುವವು ಕಿತ್ತಳೆಬಣ್ಣವನ್ನು ತಳೆದಾಗ . . . ಹರಿವಾಣದ ಮೇಲೆ ಹರಡಬೇಕು (ಅಡುಸೌ. ೯೭). ಹಲ್ವ : ತುಪ್ಪ ಸಕ್ಕರೆಗಳನ್ನು ಸೇರಿಸಿ ಅದನ್ನು ಹಲ್ವವನ್ನು ತಯಾರಿಸಿದರೆ ತುಪ್ಪ ಸಕ್ಕರೆಗಳ ಸ್ವಂತಸ್ವಭಾವಗಳಿಗೆ ಯಾವ ಹಾನಿಯೂ ಆಗದು (ಜೀವಾತ್ಮ. ೨೧೩). ಹಲ್ವಾ : ಹಲ್ವಾಗಳಲ್ಲಿ ಅನೇಕ ಪ್ರಕಾರಗಳಿವೆ, ಬಾದಾಮಿ ಹಲ್ವಾ ಅವುಗಳಲ್ಲೊಂದು (ರೂಢಿ).

[← ಅರ. ಹಲ್ವಾ; ಹಿಂ. ಮರಾ. ಹಲವಾ]

ಹಲವು 'ಪಲ$_1$' ನೋ.

ಹಲವುಮಕ್ಕಳಬಳ್ಳಿ (ನಾ). ಒಂದು ಬಗೆಯ ಸಸ್ಯ ; ಶತಾವರಿಬಳ್ಳಿ : "ಶತಾವರಿ, ಹಲವುಮಕ್ಕಳಬಳ್ಳಿ" (ಪ್ರಜ್ಞಿಗಿ. ೧೦-೧೬೯). 'ಹಲುಮಕ್ಕಳತಾಯಿಬಳ್ಳಿ' ಪರಾ.

[ಹಲವು (< ಪಲ$_1$) + < ಮಗು + ಬಳ್ಳಿ]

ಹಲವುಮಾತು 'ಪಲವಾತು' ನೋ.

ಹಲವುಸೂಳ್ 'ಪಲಸೂಳ್' ನೋ.

ಹಲಸಮುದ್ಭವ (ನಾ). [ಜ್ಯೋತಿ] ಹಲಯೋಗದಲ್ಲಿ ಹುಟ್ಟಿದವನು: ಹಲಸಮುದ್ಭವಂ ಕೃಷಿಗೆಯ್ಯಂ (ಜಾತಕ. ೧೩-೧೩). [ಸಂ.]

ಹಲಸಿಗ (ನಾ). ವನಸ್ಪತಿಗಳಲ್ಲಿ ವ್ಯವಹರಿಸುವವನು; ವೈದ್ಯ: ಹಾಲಿಗೆ, ಹಲಸಿಗಂ, ಹಲಗೆ (ಶಮದ. ೧೬ ಪ್ರಯೋ); ಹ [ಪಾಠಾಂ. ಹಾ]ಲಸಿಗನೊರ್ವಂ . . . ಭಗಂಧರಾದಿಯಾದ ರೋಗವೆಲ್ಲಮಂ ಕಳೆವೆನೆನುತ್ತೆ ಕೇರಿಕೇರಿಯಂ ಸುತ್ತಿ ಬರುತಿರೆ (ಧರ್ಮಪ. ೯-೨೮ ವ).

[? + - ಇಗ]

ಹಲಸು 'ಪಲಸು' ನೋ.

ಹಲಹಸ್ತ (ನಾ). = ಹಲಧರ ೩: ಅಂಗಜನ್ಮನಾಗಿಯುಮಮಾನುಷಂ ಹಲಹಸ್ತಂ (ಶಾಂತಿಪು. ೨-೯). [ಸಂ.]

ಹಲಾಕು, ಹಲಾಖು (ಗು). (ಉಕ) ೧. ಸೋತುಹೋದ; ಬಳಲಿದ: (ಕ). ೨. ಹಾಳಾದ; ನಾಶವಾದ : (ಕ). (ನಾ). ೩. ಕೊರಗು; ವ್ಯಥೆ. ೪. ಬಳಲಿಕೆ; ಆಯಾಸ: ಒಂದು ಇಡೀ ದಿವಸದ ಗಾಡಿಯ ಪ್ರಯಾಣ; ಹಾದಿಯಲ್ಲಿ ಹಲಾಕು ಹೈರಾಣಾಗುವ ಸಂಭವ ಜಾಸ್ತಿ (ದೀಪಹ. I. ೨೦). ೫. ನಾಶ ; ಹಾಳು. ಹಲಾಖು.

ಹಲಾಕಾಗು = ೧. ಕೊರಗು; ವ್ಯಥೆಪಡು: ಸೋನಕ್ಕ . . . ತಾವು ನಿಶ್ಚಿಂತರಾಗಿದ್ದೇವೆ, ನೀವು ಹಲಾಕಾಗಬೇಡಿರೆಂದು ಧೈರ್ಯ ಕೊಡುತ್ತಿದ್ದರು (ದೀಪಹ. II. ೪೬). ೨. ಹಾಳಾಗು; ನಾಶವಾಗು: ಔಜು ಯಾವತ್ತೂ ಮುರಿದು ಬಿಯಾ ಜಖಮಿ ಆಗಿ ಹಲಾಕಾದ್ದರಿಂದ (ರಾಚೇಂದ್ರ. ೨೬); ಜಪ್ತಿಯಾದ ಸ್ವತ್ತುಗಳು ಹರಾಜಾಗುವವರಿಗೂ ಆ ಸ್ವತ್ತುಗಳು ಹಲಾಕಾಗದಂತೆ ಗ್ರಾಮಾಧಿಕಾರಿಯು ಇಟ್ಟು ಕಾಪಾಡಿಕ್ಕೊಂಡಿರಬೇಕು (ಗ್ರಾಮಾಕ. ೭೩). ಹಲಾಕು ಮಾಡು, ಹಲಾಖು ಮಾಡು = ೧. ಪೀಡಿಸು; ಗೋಳಾಡಿಸು: ಕೆಲವರ ಕಾಲು ಕುಯಿದು ಕೆಲವರಿಗೆ ಗಲ್ಲುಹಾಕಿ ಈ ಮೇರೆ ನಾನಾ ಪ್ರಕಾರ ಹಲಾಕುಮಾಡಿ ಶರಾರತ್ತು ನಡಸಿದ್ದರಿಂದ (ರಾಚೇಂದ್ರ. ೪೯). ೨. ನಾಶಮಾಡು: ಪಾಕಶಾಕ ಸಮಸ್ತವೆಲ್ಲ ಹಲಾಕುಮಾಡಿ ಜಂಗಮರ್ ನೂಕಿ ಪೋಗಲು (ಶರಲೀ. ೩೪೫-೪); ಮರಾಟೆ ಫವುಜನೆಲ್ಲಾ ಹಲಾಖು ಮಾಡಿ . . . ಪಟ್ಟಕ್ಕೆ ಬಂದರು (ಹೈದರ. ೪೩).

[← ಅರ. ಹಿಂ. ಹಲಾಕ್; ಮರಾ. ಹಲಕ್, ಹಲಾಕ್, ಹಲಾಖ್]

ಹಲಾಖು 'ಹಲಾಕು' ನೋ.

ಹಲಾಗ್ರ (ನಾ). ನೇಗಿಲಿನ ತುದಿ: ಚೆನ್ನ ಭೂಮಿಯನುಳಿಸೆ ಕಂಡುದು ಹೊನ್ನ ಮಂದಸವಾ ಹಲಾಗ್ರದಿ ಕನ್ನೆಯದಱೊಳಗಿರಲು ಭೂಷಿತೆಯಾಗಿ ಸಿರಿಯಂತೆ (ಕಾಶಿಖಂ. ೨-೨). [ಸಂ.]

ಹಲಾಯುಧ (ನಾ). ೧. ನೇಗಿಲು: ಅಂತು ಬಲದೇವಂ . . . ಹಲಾಯುಧ ಮನೆತ್ತಿಕೊಂಡು . . . ವೀರ್ಯಮಂ ಪೊಸಯಿಸಿದಂ (ಶಾಂತಿಪು. ೫-೫೬ ವ). ೨. ಬಲರಾಮ: ದೇವ ಮಹಿಮಾಸ್ಪದ ಹಲಾಯುಧಸಮೇತ ಜಯ (ಜಗವಿ. ೨-೧೧೩). ೩. = ಹಲಧರ ೩: ಭಟಮುಡಳಕ್ಕೆ ಕೆಂಡದ ಮಟೆಯೆಂಬಿನಂ ಕಱೆದನುಬಿನ ಮಟೆಯಂ ಹಲ[ಪಾಠಾಂ. ಳಾ]ಯುಧಂ (ಪಂರಾಮಾ. ೪-೬೬). ೪. 'ಅಭಿಧಾನರತ್ನಮಾಲಾ' ಎಂಬ ನಿಘಂಟನ್ನು ಬರೆದ ಒಬ್ಬ ಸಂಸ್ಕೃತಗ್ರಂಥಕರ್ತ: ವರವೈಜಯಂತಿಯ ನಯಂ ಹಲಾಯುಧನ ವಿಸ್ತರದ ವಚನೋಕ್ತಿಯೆಂಬಿಂತಿವೆಲ್ಲವನು ಸಂವರಿಸಿಯಭಿನವ ಮಂಗನುಸುರಿದಂ (ಮಂಗರಾ. ೨-೪). ೫. ಪ್ರಸಿದ್ಧ ಶಿವಭಕ್ತನಾದ ಒಬ್ಬ ಅರಸನ ಹೆಸರು : ಇರ್ಪನೊರ್ವಂ ಶಿವನ ಭಕ್ತನೊಲವಿಂದಲ್ಲಿ ತನ್ನ ನಾಮಂ ಹಲಾಯುಧನೆಂಬುದಾಗಿರಲ್ (ಹಲಾರ. ಹ. ೧೯೩-೯); ಹಲಾಯುಧದೇವನರ್ಥಿಯಲಿ ಆ ಮಹಾತ್ಮರ ಮೆಲ್ಲಡಿಗಳಿಗೆ . . . ನಮಿಸುತಂ (ಬಸಪು. ೨೫-೧). ೬. [ಛಂದ] ಪ್ರತಿಪಾದದಲ್ಲಿ ಒಂಬತ್ತು ಅಕ್ಷರಗಳನ್ನುಳ್ಳ ಒಂದು ಸಮವೃತ್ತ: ಪಾವಕಂ ತ್ರಿದಶಪಾವಕಂ ಭಾವಿಸಿರ್ದೊಡಱ್ ನಾಮದಿಂ . . . ಕೇವಲಂ ಬಗೆ ಹಲಾಯುಧಂ (ಛಂದೋಂಬು. ೨-೯೯).

[ಸಂ.]

ಹಲಾಸನ (ನಾ). [ಯೋಗ] ಆಸನಗಳಲ್ಲಿ ಒಂದು : ೧. ಉತ್ತಾನಾಸನ . . . ೨. ಹಲಾಸನ (ಭಾರದ. ೧೬೭). [ಸಂ.]

ಹಲಾಹಲ (ನಾ). ಒಂದು ಬಗೆಯ ಘೋರವಾದ ವಿಷ: ಹಾಲಾಹಲ: "ಕಾಕೋಲಃ, ಕಾಲಕೂಟಃ, ಹಲಾಹಲಃ . . . ವತ್ಸನಾಭಃ . . . ಈ ೯ ವಿಷದ ಭೇದಗಳು" (ಸಿದ್ಧಾಂತಿ. ೭೫). [ಸಂ.]

ಹಲಿ$_1$, ಹಳ್ಳಿ$_6$ (ನಾ). ೧. ಬೇಸಾಯಗಾರ; ಒಕ್ಕಲಿಗ. ೨. ಬಲರಾಮ: ಹಲಿಯಂ ರಣಕೇಳಿಕುತೂಹಲಿಯಂ ನಟ್ಟರ್ದೆಂ (ಗದಾಯು. ೩-೬೨); ಜಲಜಲೋಚನನಗ್ರಜನಾಗಿ ಮೆಱೆಯುವ ಹಲಿಯ ಚಿತ್ರವ ತೋಱಿಸಿದಳು (ವೃಕಚ. ೩೦-೨೬). ೩. = ಹಲಧರ ೩: ಕೊಳ್ಳದೆ ಮಾಣಂ ಹಲಿ[ಪಾಠಾಂ. ಳಿ]ಯಾಣೆ ಪರಮದೀಕ್ಷೆಯನಾಗಳ್ (ಶಾಂತಿಪು. ೨-೬೨). ೪. ರಾಮ: ಭರತಂಗೇಂ ಹಲಿ ಸಾಮ್ರಾಜ್ಯಪಟ್ಟಮಂ ಕಟ್ಟಿದನೋ (ಪಂರಾಮಾ. ೭-೨೨). ಹಳ್ಳಿ$_6$: ೨. ಇಂದೆ ಹಳಿಯುಂ ಗಡ ಕೂಡುವನಾತನಂ ಗೆಲಲ್ ಬಂದಪುದೇ (ಪಂಪಭಾ. ೧೩-೭೫). ೩. ಕಳಿಂದನಂದನೆಯನಾ ಬಳೀವರ್ದಪುಂಗವನ ಬಟೆಯನಾ ಹಳಿಯುಂ ವಸುದೇವನುಂ ಪೊಱಮಟ್ಟು (ನೇಮಿಪು. ೬-೭೪ ವ). [ಸಂ. ಹಲಿನ್]

ಹಲಿ$_2$ (ನಾ). ೧. ದೊಡ್ಡ ನೇಗಿಲು. ೨. ನೇಗಿಲು ಹೊಡೆದ ಸಾಲು; ಉಕ್ಕೆ ಸಾಲು. ೩. ಬೇಸಾಯ; ಒಕ್ಕಲುತನ. [ಸಂ.]

ಹಲ್ಲಿ$_3$, ಹಲ್ಲ$_4$, ಹಲೆ (ನಾ). (ಉಕ) ಭ್ರೂಣ; ಗರ್ಭಪಿಂಡ: 'ಹಲಿವುಳಿ' ಪರಾ. ಹಲ್ಲ$_4$: 'ಹಲವಳಿ' ಪರಾ. ಹಲೆ: 'ಹಲೆವುಳಿ' ಪರಾ. [< ಸಂ. ಫಲಿನ್?]

ಹಲಿಕ (ನಾ). ರೈತ; ಬೇಸಾಯಗಾರ: ಹಲಿಕಕನ್ನಿಕೆಯಿಪ್ಪ ಸುಸ್ತನಿಯನ್ನುವುದನು ತರುಣರಿಗೊರೆವಂತೆ ಈ ಮನೆಯಂಗಳದೇರಂಡಕಾಂಡವು ಚಿಗುರೊಡೆದೆಸೆದಪುದಲ್ಲ (ಗಾಥಾಸ. ೩-೫೭). [ಸಂ.]

ಹಲಿಕೆ, ಹಲಿಗೆ (ನಾ). ಹೊಲಗದ್ದೆಗಳಲ್ಲಿ ಹೆಂಟೆಗಳನ್ನು ಒಡೆಯುವ ಸಾಧನ; ಹಲಬೆ: "ಕೋಟಿ(ೇ)ಶಂ, ಲೋಷ್ಟಭೇದನಂ - ಈ ೨ ಹಲಿಕೆ" (ಹಲಾಯು. ೯೪-೪೨೨). ಹಲಿಗೆ: ಊರ ತರುಣನೊಬ್ಬ . . . ಆ ಮೆತ್ತನೆ ಭೂಮಿಯನ್ನು ಉತ್ತನು; ಹಲಿಗೆ ಹೊಡೆದನು (ಜಾನಗೀ. ೯೦). 'ಪಲಗೆ', 'ಹಲಿವೆ' ಪರಾ. [< ಸಂ. ಫಲಕ./ತಮಿ. ಪಲಕೆ]

ಹಲಿಗ (ನಾ). ಒಂದು ಬಗೆಯ ತೆರಿಗೆ (?): ಕೆರೆಮಣ್ಣು ಮದ್ಯಕ ಕಿರುಕುಳ ಹಲಿಗಗಳ ಸ್ವಾಮ್ಯ ಅಲ್ಲಿಯ ಮರವಳಿಯ ಸುಂಕ ಆಲೆಸುಂಕ ಸ್ಥಳಸುಂಕ ಸಮಸ್ತ ಬಳಿ ಸಹವಾದ ನುಗ್ಗಿಲೂರ ಚತುಃಸೀಮೆ (ಎಕ. III. ಮಳವ. ೧೨೧-೧೭೦; 1424). [?]

ಹಲಿಗಾರತಿ 'ಹಲಗಾರತಿ' ನೋ.

ಹಲಿಗೆ 'ಹಲಿಕೆ' ನೋ.

ಹಲಿದಳ (ನಾ). ನವಿಲುಗರಿಯ ಕೊಡೆ (?): ಹರುಷ ಕೈಮಿಗಿಲು ಕುಳ್ಳಿರಿಸಿ ಢಾಳಿಸುವ ಚಾಮರ ಹಲಿದಳಗಳ್ ಮುಂದೆಸೆಯೆ ಮೊರೆವ ಮಂಗಳವಾದ್ಯದಿ ರುರೆ ಮಝುರೆಯೆಂಬ ಧರಣೀಶರೊತ್ತೊತ್ತಿಯಿಂದ (ಭೃರವಂ. ೧-೨೦೩). [< ಹೀಲಿದಳೆ ?]

ಹಲಿನೀಲ (ನಾ). = ಹರಿನೀಲ: ಮಲಯಜಕಱಗುವಳಿಯ ಕರಯುಗದಿಂದ ಲಲನೆ ಸೋವಲು ಪತಿದೇವಿ ಹಲಿನೀಲವರಲೀಂದಾಡುವಮ್ಮಾಲೆಯ ಗೆಲುನಂತಿಹವು ನೋಳ್ಪರಿಗ (ರಾಮವಿ. ೩-೨೨). [< ಹರಿನೀಲ]

ಹಲಿಪ್ರಿಯ (ನಾ). ಕಡಹದ ಮರ; ಕದಂಬವೃಕ್ಷ: "ನೀಪಃ, ಪ್ರಿಯಕಃ, ಕದಂಬಃ,

ಹಲಿಪ್ರಿಯಃ - ೪ ಕಡಹದ ಗಿಡದ ಹೆಸರುಗಳು, ಈಚಲಗಿಡದಲ್ಲಿ ಉತ್ತಮಜಾತಿ - ದೇವಯೋಗ್ಯವಾದ ಈಚಲುಮರ'' (ಸಿದ್ಧಾಂತಿ. ೧೨೧). [ಸಂ.]

ಹಲಿಪ್ರಿಯೆ (ನಾ). ಹೆಂಡ; ಮದ್ಯ: ''ಸುರಾ, ಹಲಿಪ್ರಿಯಾ, ಹಾಲಾ . . . ಮದ್ಯಂ - ೧೩ ಹೆಂಡದ ಪೆಸರು'' (ಸಿದ್ಧಾಂತಿ. ೩೧೪). [ಸಂ. ಹಲಿಪ್ರಿಯಾ]

ಹಲಿಯುಳಿ 'ಹಲಿವುಳಿ' ನೋ.

ಹಲಿವಳಿ 'ಹಲಿವುಳಿ' ನೋ.

ಹಲಿವುಳಿ, ಹಲವಳಿ, ಹಲಿಯುಳಿ, ಹಲಿವಳಿ, ಹಲೆವುಳಿ (ಕ್ರಿ). (ಉಕ) ೧. ಗರ್ಭಸ್ರಾವ ಹೊಂದು; ಮೈಯಿಳಿ: ''ಸ್ರವದ್ಗರ್ಭ = ಹಲಿವುಳಿದವಳು'' (ಗಂಗಾಮ). ೨. (ಆಲಂ) ಪೂರ್ಣಗೊಳ್ಳುವ ಮೊದಲೇ ಮುರಿದುಹೋಗು; ನಿಷ್ಫಲವಾಗು: ಆತನ ಆಗಿನ ಎಣಿಕೆಗಳೆಲ್ಲಾ ಹಲಿವುಳಿದ ನಂತರ ಮೊಮ್ಮಗಳಾಗಿ ಬರಬೇಕಾಗಿದ್ದ ಗೌರಿ ಸೊಸೆಯಾಗಿ ಬಂದಿದ್ದಳು (ನಡದಾ. II, ೦೮೯). **ಹಲವಳಿ**: ೧. ಕುಮಾರಿಯು ಗರ್ಭಿಣಿಯಾದ ಲಕ್ಷಣ ಕಂಡು ಬಂದು, ಮರುಕ್ಷಣವೇ ವಿಷಧೋಪಚಾರ ನಡೆದು, ಈಗ ಹಲವಳಿದಿದ್ದಳು (ಸಮಜೀ. ೯೭೭). **ಹಲಿಯುಳಿ**: ೧. ಹಲಿಯುಳಿಯುವ ಬಾಣಂತಿಯಂತೆ ಹಲವಳಿದು ಭೂಮಿತಾಯಿ ಹಾಸಿಗೆ ಹಿಡಿದಿದ್ದಾಳೆ (ನವ್ಯಕಾ. ೩೩). **ಹಲಿವಳಿ**: ೧. ಆವನ ಹೆಂಡತಿ ಬರುವ ಹಾಗಿರಲಿಲ್ಲ; ಹಲಿವಳಿದು ಮತ್ತೆ ಹಾಸಿಗೆ ಹಿಡಿದು ಮಲಗಿದ್ದರು (ಸಮಜೀ. ೪೫೦). **ಹಲೆವುಳಿ**: ೧. ''ಅವತೋಕಾ - ಅಕಸ್ಮಾತ್ ಹಲೆವುಳಿದವಳು'' (ಗಂಗಾಮ. ೧೩). [ಹಲಿ$_3$ + ಉಳಿ$_1$ (< ಉಲ್$_1$)]

ಹಲಿವೆ, ಹಲುಬೆ, ಹಲುವೆ (ನಾ). = ಹಲಿಕೆ : ಹಲುಬೆಗಳು ಅಥವಾ ಹಲಿವೆಗಳು - ಇವು ನೆಲವನ್ನು ಉತ್ತ ಮೇಲೆ ಅದನ್ನು ಹಸನು ಮಾಡುವುದಕ್ಕೆ ಮುಖ್ಯವಾಗಿ ಉಪಯೋಗಿಸಲ್ಪಡುತ್ತವೆ (ವ್ಯವಮ. ೯). **ಹಲುಬೆ**: ಐದು ರೂಬಲ್ಲಿಗೆ ರೈತರು . . . ಮೂರು ಬಾರಿ ಉತ್ತು, ಹಲುಬೆ ಹೊಡೆದು, ಬಿತ್ತಿ, ಬಲಿತ ಮೇಲೆ ಕೊಯ್ದು ಕಂತೆ ಕಟ್ಟಿ ಕಣಕ್ಕೆ ಸಾಗಿಸಬೇಕಾಗಿತ್ತು (ಪುನರು. ೨೬೪). **ಹಲುವೆ**: ಹಲುವೆ, ಹಲುಬೆ (ಕಂಗ್ಲಾ. ೧೮). 'ಹಲಿಕೆ' ಪರಾ. [?]

ಹಲೀಮಕ (ನಾ). ಕಾಮಾಲೆರೋಗದಲ್ಲಿ ಒಂದು ಪ್ರಕಾರ; ಪಾಂಡುರೋಗ: ಪಾಂಡುರೋಗದಲ್ಲಿ ವಾತ, ಪಿತ್ತಗಳ ಹೆಚ್ಚಳಗೆಯಿಂದ ರೋಗಚಿಹ್ನಂಗಳು ತೋರುವ ರೀತಿಯಲ್ಲಿ ಭ್ರಮೆ, ತೃಷ್ಣೆ, ಶ್ವೀಸಂಗದಲ್ಲಿ ದ್ವೇಷ, ಅಲ್ಪವಾದ ಜ್ವರ, ಇವಿಷ್ಟು ಉಂಟಾಗಿದ್ದುದು ಹಲೀಮಕವೆನಿಸಿಕೊಂಬುದು (ವೃದ್ಧಸಾ. I, ೬೪೭); ಸಿದ್ಧಘೃತ . . . ಆ ಘೃತವನ್ನು ಸೇವಿಸಲು ಕಾಸರೋಗ, ಸಂತಾಪ, ಹಲೀಮಕ, ತಲೆಬೇನೆ ಸಹ ಮಾಣ್ಗುಂ (ಸಹ್ಯ. ೧೧೪). [ಸಂ.]

ಹಲು 'ಪಲ್' ನೋ.

ಹಲುಂಬು 'ಪಲುಂಬು' ನೋ.

ಹಲುಕಡಿ 'ಪಲ್ಗಡಿ' ನೋ.

ಹಲುಕಡ್ಡಿ, ಹಲ್ಲುಕಡ್ಡಿ (ನಾ). ಹಲ್ಲುಗಳ ಸಂದಿನಲ್ಲಿ ಸಿಕ್ಕಿಕೊಂಡಿರುವ ಆಹಾರದ ಕಣ ಮೊದಲಾದುವನ್ನು ತೆಗೆಯಲು ಬಳಸುವ ಲೋಹ ಅಥವಾ ಮರದ ಕಡ್ಡಿ: ಅಶನ ಶಯನ ಹಲುಕಡ್ಡಿ ದರ್ಪಣ ನಡೆ ನುಡಿ ಚೈತನ್ಯ . . . ರೂಪ ನಿರೂಪ ಎಲ್ಲವು ಲಿಂಗಕ್ಕರ್ಪಿತವಲ್ಲದೆ ಎನ್ನಂಗಕ್ಕೆ ಸೂಗಸದೂ ಅಯ್ಯ (ಶಮೀ. ೮೯-೪೩). **ಹಲ್ಲುಕಡ್ಡಿ**: ಲಿಂಗೋದಕ ಹಲ್ಲುಕಡ್ಡಿ ಮೊದಲಾದ ಸಕಲಪದಾರ್ಥಂಗಳ ಇಷ್ಟಲಿಂಗಕ್ಕೆ ಕೊಟ್ಟು ಕೊಂಬ ಎಚ್ಚಱಿಕೆ (ಘನವ. ೨೫-೨೮); ಹತ್ತುಜನರ ಹಲ್ಲುಕಡ್ಡಿ ಒಬ್ಬನ ತಲೆಹೊರೆ (ಗಾದ). [ಹಲು (< ಪಲ್) + ಕಡ್ಡಿ]

ಹಲುಗಳೆ 'ಪಲ್ಗಳೆ$_1$' ನೋ.

ಹಲುಗಿರಿ 'ಪಲ್ಗಿರಿ' ನೋ.

ಹಲುಗಿರಿಗಚ್ಚು (ಕ್ರಿ). ಹಲ್ಲುದವಡೆ ಕಚ್ಚು: ಬಿಡದೆ ಜಂಬುಕ ಘೂಕ ನಗರಿಯ ನಡುವೆ ಹಲುಗಿರಿಗಚ್ಚಿಯುಲಿದವು (ಕ್ರಿಪ್ರಾಪ. ೨-೨೩).

[ಹಲುಗಿರಿ$_2$ + ಕಚ್ಚು$_1$ (< ಕರ್ಚು$_1$)]

ಹಲುಗಿರಿಸು 'ಪಲ್ಗಿರಿಸು' ನೋ.

ಹಲುಗಿರುಕು, ಹಲ್ಲುಗಿರುಕು (ನಾ). ಹಲ್ಲು ಕಿರಿಯುವಂತಹುದು: ಅಹಹ ಹಲುಗಿರುಕುಮ್ಮಗ ನೀನೇನು ತೊಲತೊಲಗು (ಆನಂರಾ. ೧-೫೯-೬೮). **ಹಲ್ಲುಗಿರುಕು**: ಹಲ್ಲುಗಿರುಕಿನ ಹುಣುಬುದಲೆಗಳ ತಲ್ಲಣದ ತಳಮೇಲುಗಳ ಕೈಗಲ್ಲುಗಳ ಹರಿಸೇನೆ ಸೈಗೆಡೆದಿರ್ದುದಗಲದಲಿ (ತೊರರಾ. ೬-೩೭-೧೫). [< ಹಲುಗಿರಿ (< ಪಲ್ಗಿರಿ)]

ಹಲುದಿನ್ 'ಪಲ್ದಿನ್' ನೋ.

ಹಲುದಿನು 'ಪಲ್ದಿನ್' ನೋ.

ಹಲುದೆಗೆ (ಕ್ರಿ). ಹಲ್ಲನ್ನು ಕೀಳು: ಒಗುವ ಕಿವಿಮೂಗುಗಳ ರಕುತದ ಹಗರಣದ ಹೊಸನಾಟಕದ ಹಲುದೆಗೆದ ರಕ್ಕಸಿ ಬಂದಳೊದಜುತ ಏಳನ ಪಟ್ಟಣಕೆ (ತೊರರಾ. ೩-೪-೩೦). [ಹಲು (< ಪಲ್) + ತೆಗೆ$_1$]

ಹಲುದೆಱಹಿ (ನಾ). ಹಲ್ಲು ಕಿರಿಯುವವನು: ಹಚ್ಚ ಹಲುಬುವ ಹಲುದೆಱಹಿಗಳ ಮೆಚ್ಚದಿದಿರನು ನಿಂದಿಸುತ ಕಣುಮುಚ್ಚಿ ನಿಗುರುವ ಭಿನ್ನಮತಿಗಳನೊಲ್ಲೆನು (ನಭಾಗ. ೮-೨೦-೯). [ಹಲು (< ಪಲ್) + ತೆಱಹು (< ತೆಱಪು) + - ೪$_3$]

ಹಲುದೆಜೆ 'ಪಲ್ದೆಜೆ' ನೋ.

ಹಲುದೋಱು (ಕ್ರಿ). ಹಲ್ಲು ಕಾಣಿಸು; ಹಲ್ಲುಗಳೆಲ್ಲ ಸ್ಪಷ್ಟವಾಗಿ ಕಾಣು: ಅಳಿಮನದಾಸೆಯವರ ಮೂಗ ಹಲುದೋಱಿ ಕೊಯ್ಯ, ಕೂಡಲಸಂಗಮದೇವ (ಬಸವ. ೬೬೫); ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರ ಹಲುದೋಱೆ ಮೂಗ ಕೊಯಿ (ಬಸವ. ೭೧೦). [ಹಲು (< ಪಲ್) + ತೋಱು]

ಹಲುಬಾಟ (ನಾ). ಹಂಬಲ; ಬಯಕೆ: ಅದೇತಕೆ ಅಯ್ಯಾ ಶಿವನೊಳಗೆ ಕೂಟಸ್ಥನಾದಹೆನೆಂಬ ಹಲುಬಾಟ ಇದು ಭಕ್ತಿಸತ್ಕದ ಆಟವಲ್ಲ (ಮಡೇವ. ೨೬೯-೧).

[ಹಲುಬು (< ಪಲುಂಬು) + ಆಟ]

ಹಲುಬಿ 'ಪಲುಬಿ' ನೋ.

ಹಲುಬು 'ಪಲುಂಬು' ನೋ.

ಹಲುಬೆ 'ಹಲಿವೆ' ನೋ.

ಹಲುಬೇನೆ, ಹಲ್ಲುಬೇನೆ (ನಾ). ಹಲ್ಲು ಸಡಿಲವಾಗುವುದು, ಹುಳುಕಾಗುವುದು ಮುಂತಾದ ಕಾರಣಗಳಿಂದ ವಸಡಿನಲ್ಲಿ ಉಂಟಾಗುವ ನೋವು; ಹಲ್ಲುನೋವು; ದಂತಶೂಲೆ: ಜ್ವರವೆಯ್ದೆ ದಕ್ಷಂಗೆ ಕರರೋಗವಿಂದ್ರಂಗೆ ನೆರೆದ ಹಲುಬೇನೆ ಪೂಷಂಗೆ (ಪಾನಂಚ. ೩-೮೩). **ಹಲ್ಲುಬೇನೆ**: ''ಅರ್ಬುದ - ಹಲ್ಲುಬೇನೆ'' (ಗಂಗಾಮ. ೪). [ಹಲು (< ಪಲ್) + ಬೇನೆ]

ಹಲುಮಕ್ಕಳತಾಯಿಬಳ್ಳಿ (ನಾ). ಒಂದು ಬಗೆಯ ಸಸ್ಯ: 'ಹಲವುಮಕ್ಕಳಬಳ್ಳಿ' ಪರಾ. [? + ಬಳ್ಳಿ]

ಹಲುಮಾಣಿಕ 'ಪಲ್ಮಾಣಿಕ' ನೋ.

ಹಲುಮಾಣಿಕ್ಯ 'ಪಲ್ಮಾಣಿಕ' ನೋ.

ಹಲುಮಿಡಿ 'ಪಲ್ಮಡಿ' ನೋ.

ಹಲುಮೊರೆ 'ಪಲ್ಮೊರೆ' ನೋ.

ಹಲುವ 'ಹಲವಾ' ನೋ.

ಹಲುವೆ 'ಹಲಿವೆ' ನೋ.

ಹಲುಸಲ್ಲೆ (ನಾ). ಒಂದು ಬಗೆಯ ವಿಷಧೀಸಸ್ಯ: ಪಂಚೋಟಮರ, ಹಡಸಾಲೆ, ಹಲುಸಲ್ಲೆ, ಪಲುಚೊಟ್ಟೆ, ನಾಟಿಗಟ್ಟುವರ್ಚ (ಮೃಡಿಗಿ. ೫೯-೧೧೮೮). [?]

ಹಲೆ 'ಹಲ್$_3$' ನೋ.

ಹಲೆಚಾರ (ನಾ). ಸೇವೆ; ಪರಿಚರ್ಯೆ(?): ಹಲುಗುರ ವೈಜ್ಯನಾಥ' ದೇವರಿಂಗೆ ನೈವೇದ್ಯಕಂ ನಂದಾದೀವಿಗೆಗಂ ದೇಗುಳ ಹಲೆಚಾರಕ್ಕಂ . . . ಧಾರಾಪೂರ್ವಕಂ ಮಾಡಿಕೊಟ್ಟರು (ಎಕ. III, ಮಂಡ್ಯ. ೨೯-೨೩; 1131).

[P ಇದು 'ಪರಿಚಾರ' ಎಂಬುದರ ಅಪಲಿಖಿತವಿರಬಹುದು]

ಹಲೆದೆಜೆ (ನಾ). ನೇಗಿಲಿನ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ(?): ಕಾಣಿಕೆ ಕಿಱುಕುಳಾಯ ದಾಯಸಹಿತಂ XXX ಪಂಚಕ ಆರುವಣ ಹಿಟ್ಟುದೆಜೆ ಹಲೆದೆಜೆ . . . ಯಿಂತಿನಿತುವಂ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಪಾಶಾ. XX. ೧೩೭-೩೭; 1189). [P ಇದು 'ಹಲದೆಜೆ' ಎಂಬುದರ ಅಪಲಿಖಿತವಿರಬಹುದು]

ಹಲೆವುಳಿ 'ಹಲಿವುಳಿ' ನೋ.

ಹಲ್ಕ 'ಹಲ್ಕಾ' ನೋ.

ಹಲ್ಕಡಿ 'ಪಲ್ಗಡಿ' ನೋ.

ಹಲ್ಕಡಿವಿನಯ (ನಾ). (ಆಲಂ) ತೋರಿಕೆಯ ವಿನಯ; ಧೂರ್ತವಿನಯ (?): ನುಡಿ ತೊದಳಾರ್ಪ್ಪು ನಿಪ್ರಸರ ವಾಯಮದುಳ್ಳಸಿ ವಿಕ್ರಮಕ್ರಮಂ ಬಡವರ [ಮಾ]ರಿ ಪಂಪು ಮುಗಿಲೊಡ್ಡಱುತ ಕುಱುಗಂಟು ನಂಟು ಹಲ್ಕಡಿವಿನಯಂ ಪ್ರಪಂಚಪುರುಷಾರ್ತ್ಥಮನರ್ತ್ಥಕಮೆಂಬ ನಾಡ ನಿಗ್ಗಡಿಗಳನೆನ್ತು ಪೋಲಿಪೆನೊ ಕೇಶವದೇವನೊಳನ್ಯಮರ್ತ್ಯರ (ಸೊಸಾ. XV. ೪೮-೫; 1152 ?).

[ಹಲ್ಕಡಿ (< ಪಲ್ಗಡಿ) + ವಿನಯ]

ಹಲ್ಕಾ, ಹಲ್ಕ (ಗು). ೧. ಲಘುವಾದ; ಹಗುರವಾದ: (ಕ). ೨. ಅಮುಖ್ಯವಾದ; ಮಹತ್ವವಲ್ಲದ: ಈ ಹಲ್ಕಾ ವಿಚಾರಗಳಿಗೆ ತಲೆಕೆಡಿಸಿಕೊಳ್ಳಲು ನನಗೆ ಬಿಡುವಿಲ್ಲ (ರೂಢಿ). ೩. ನಿಕೃಷ್ಟವಾದ; ಕ್ಷುಲ್ಲಕವಾದ: ಈ ರೀತಿ ಹಲ್ಕಾ ಕೆಲಸ ಮಾಡಲು ನಿನಗೆ ನಾಚಿಕೆಯಾಗಬೇಕು (ರೂಢಿ). ೪. ಕೀಳ್ತರಗತಿಯ; ಅಸಭ್ಯವಾದ: ಅವರು ಈ ಊರಿಗೇ ದೊಡ್ಡ ಮನುಷ್ಯರು. ಆದರೆ ಶುದ್ಧ ಹಲ್ಕಾಜನ (ಮರಳ. ೬೩). ೫. ಸಣ್ಣಪ್ರಮಾಣದ; ಗಂಭೀರವಲ್ಲದ; ಅಲ್ಪಪ್ರಮಾಣದ: ೩೨೩ ಕಲಮಿನ ಪ್ರಕಾರ ಹಲ್ಕಾ ಮಾರಾಮಾರಿ ಅರ್ಜಿ (ಗ್ರಾಪಾಯ. ೨೭೩). (ನಾ). ೬. ಕೀಳ್ತರಗತಿಯ ವ್ಯಕ್ತಿ; ಅಸಭ್ಯವ್ಯಕ್ತಿ: ಅವ್ವನೂ ಹಲ್ಕಾ, ಮಗಳೂ ಹಲ್ಕಾ, ಅಂಥಲ್ಲಿ ಹೋದರ ನಾನು ಹಲ್ಕಾ ಆಗುತೀನಿ (ಮಣ್ಣುಹ. ೮೮). **ಹಲ್ಕ**: ೪. ಸಾಲ್ಮರದ ಬೀದಿಯಲ್ಲಿ ಹಲ್ಕ ಹೆಂಗಸೊಬ್ಬಳು ತನ್ನ ಸ್ವೇಚ್ಛೆಯ ಗಡಿಯಾರವನ್ನು ಕದ್ದುಕೊಂಡು ಹೋದ ಕತೆಯನ್ನು ವಿವರಿಸಿದನು (ಪುನರು. ೧೦೨). [← ಹಿಂ. ಮರಾ. ಹಲಕಾ./ ಸಂ. ಕ್ಷುಲ್ಲಕ]

ಹಲ್ಕಿರಿ 'ಪಲ್ಗಿರಿ' ನೋ.

ಹಲ್ಕಿಸಿ (ಕ್ರಿ). ಹಲ್ಲುಕಿರಿ; ನಗು: ಹಲ್ಕಿಸಿವುದೆ ಸರಿ ಪ್ರಚಾರವು ಚೀರಾಟವೆ ಜಯಜಯಕಾರ (ಅರಳು. ೧೫೪-೧೨). [< ಪಲ್ + ಕಿಸಿ$_1$]

ಹಲ್ಕುರು (ನಾ). ಹಲ್ಲಿನ ದೋಷದಿಂದ ದವಡೆಯ ಮೇಲೆ ಏಳುವ ಬೊಕ್ಕೆ,– ಬಾವು: (ಕ). [< ಪಲ್ + ಕುರು$_1$]

ಹಲ್ಗಡಿ 'ಪಲ್ಗಡಿ' ನೋ.

ಹಲ್ಗಿರಿ 'ಪಲ್ಗಿರಿ' ನೋ.

ಹಲ್ತೆರೆ 'ಪಲ್ತೆಱೆ' ನೋ.

ಹಲ್ನಗೆ (ನಾ). ಹಲ್ಲು ಕಾಣವಂತೆ ನಗುವುದು (?): ತೊಟ್ಟಿಲಯ್ಯ:– (ಆರಕ್ತಪ್ರಪುಲ್ಲನಾಗಿ, ಬೆಳ್ತನದ ಹಲ್ನಗೆಯಿಂದ) ವೋ! ಅದೇ? (ಮಂತ್ರಶ. ೩೮-೨೧).

[< ಪಲ್ + ನಗೆ]

ಹಲ್ಮೆಡಿ 'ಪಲ್ಮಡಿ' ನೋ.

ಹಲ್ಮೊರೆ 'ಪಲ್ಮೊರೆ' ನೋ.

ಹಲ್ಯ (ಗು). ೧. ಉಳಬೇಕಾದ; ಸಾಗುಮಾಡಬೇಕಾದ. ೨. ಕುರೂಪಿಯಾದ. (ನಾ). ೩. ಉತ್ತ ಭೂಮಿ; ಸಾಗುಮಾಡಿದ ಭೂಮಿ: "ಸೀತ್ಯಂ, ಕೃಷ್ಟಂ, ಹಲ್ಯಂ - ೩. ಉತ್ತ ಭೂಮಿ, ಗೆಯ್ದ ನೆಲ" (ಸಿದ್ಧಾಂತಿ. ೨೭೬). ೪. ಕುರೂಪ; ವಿರೂಪತೆ: ಜಗತಿಯೊಳಗುಳ್ಳಖಿಳಪ್ರಾಣಿಗಳ ಸೌಂದರ್ಯ ಬಗೆಯಲೊಂದೊಂದು ತಿಲದನಿತನುಂ ಸ್ವೀಕರಿಸಿ ಮಿಗೆ ಹಲ್ಕರಹಿತಮಂದನಿಪಹಲ್ಯಾನಾಮ ಸುಂದರಿಯಳಂ ನಿರ್ಮಿಸಿ (ಪಂಕಾರಾ. ೧-೧೫-೪೩). [ಸಂ.]

ಹಲ್ಲಕ (ನಾ). ೧. ಕೆಂಪುಬಣ್ಣದ ತಾವರೆ ಅಥವಾ ನೈದಿಲೆ: "ಹಲ್ಲಕಂ, ರಕ್ತಸಂಧ್ಯಕಂ - ೨ ಕೆಂಪುನೈದಿಲೇ ಹೆಸರು" (ಸಿದ್ಧಾಂತಿ. ೯೯); ಮುಖಚಂದ್ರನ ನೋಳ್ಕೆಸಲ್ಕೆಟ್ಟಂದೆಡ ಬಲಂಗಳೊಳಳವಟ್ಟು ಹಲ್ಲಕಂಗಳೆನೆ ಬಗೆಗೊಳ್ಳ ಮಾಣಕರ್ಣಾವತಂಸದ ಕಮನೀಯನುಂ (ಉದ್ಭಟ. ೮-೫೧ ವ). ೨. ಕೆಂಪುಬಣ್ಣದ ಬಂಧೂಕಪುಷ್ಪ: "ಹಲ್ಲಕಂ - ಕೆಚ್ಚನೆ ಅಪ್ಪ ಬಂದುಗೆ. ಅದು ಜಲದೊಳಾದಡೂ ಸ್ಥಲದೊಳಾದಡೂ ಹುಟ್ಟುವುದು" (ನಾಚರಾ. ೫); ಅರವಿಂದೋತ್ಪಲ ಕುಂದ ಹಲ್ಲಕ ಪಲಾಶಂ ಕಾಂಚಿವಾಲಂಗಳುಂ . . . ಇರ್ಕುಂ (ಹಮ್ಮೀರ. ೬-೪೬). [ಸಂ.]

ಹಲ್ಲಕಾರ್ತಿ (ನಾ). (?): ಭಲ್ಲೂಕರರಸ ಲೋಕೋಪಕಾರಂಗೈವ ಸೊಲ್ಲುಗಳ ನುಸುರ್ದುರಿವಾದುದ್ಧೆ ಮಾನಸಕೆ ಹಲ್ಲಕಾರ್ತಿಯು ಜನಿಸುವನ್ನೆಗಂ ಪಾಲ್ಗಡಲಿಗ್ಗದಿ ಸಂಜೀವನವನು ಉಲ್ಲಾಸದಿಂ ತಂದು (ವಂಕಾರಾ. ೬-೩೬-೧೦). [?]

ಹಲ್ಲಟೆ (ನಾ). ಹಿಂಸೆ; ತೊಂದರೆ (?): ಎಲ್ಲಿಯ ಮಾರಿಯ ಬರಿಯ ಚವುಟಿ ಮತ್ತೆಲ್ಲಿಯ ಬಲುಮಿಳ್ತುವಿನ ಹಲ್ಲಟೆಗಾಡಿದೆವೆನುತೊಲ್ಮೆಸಿತು ಬಲ್ಲಿದ ನೃಪನಿಕುರುಂಬ (ನೇಮಿಸಂ. ೧೨-೮೨). [?]

ಹಲ್ಲಣ 'ಪಲ್ಲಣ' ನೋ.

ಹಲ್ಲಣಿಗೆ (ನಾ). (ಕುದುರೆಯ) ತಡಿ,– ಜೀನು: ಇಂದ್ರಾಯುಧವು ಹಲ್ಲಣಿಗೆಯೊಡನೆ ಸಿದ್ಧವಾಗಿ ನಿಂತಿತು (ನಾಗಶಾ. ೫೨). [< ಹಲ್ಲಣ (< ಪಲ್ಲಣ)]

ಹಲ್ಲಣಿಸು 'ಪಲ್ಲಣಿಸು' ನೋ.

ಹಲ್ಲಣೆ$_1$ (ನಾ). ಮುಸುಕು; "ಗವಸಣಿಕೆ" (ತ್ರಿಪುವಿ. ಕೋಶ): ಹಲಗೆಯ ಹಲ್ಲಣೆಯಂ ತೆಱದು ನಾಲ್ಕು ತೆಱದ ಧಾರೆಯಂ ಮೂಱು ತೆಱದ ನಿವಾರಣೆಯಂ ನಾಲ್ಕು ತೆಱದದವೊಯ್ಯಂ ಬಿತ್ತರಿಸಿ (ತ್ರಿಪುವಿ. ೨೩-೧೪ ವ). [?]

ಹಲ್ಲಣೆ$_2$ (ನಾ). ಗಟ್ಟಿಯಾದ ಅಬ್ಬರ (?): ಘಲ್ಲಣೆಯ ಖುರಪುಟದ ತುರಗದ ಹಲ್ಲಣೆಯ ಹೇಷಿತಕೆ ಹಗೆಯೆದೆ ಝಲ್ಲೆನಲು ಕಣ ಜಾಡಿ ಕವಿದುದು ಕಟಕದಗಲದಲಿ (ಕುವಾಮ್ರೋ. ೧೮-೩); ಹಲ್ಲಣೆಯ ಹೇಷಿತರವಕೆ ಹೆದಱೆತು ರಾಕ್ಷಸವ್ರಾತ (ಕುವಾಕ. ೭-೨೩); ನಿಲುಕಿತೊಂದೆಸೆಯಲಿ ಮಹಾರಥರುಲುಹು ಮತ್ತೊಂದೆಸೆಯಲಶ್ವಾವಳಿಯ ಹಲ್ಲಣೆ ಹೊಳಕಿದುದು (ತೊರರಾ. ೬-೧೫-೧೨). [?]

ಹಲ್ಲಳ 'ಪಲ್ಲಣ' ನೋ.

ಹಲ್ಲಾ, ಹಲ್ಲೆ$_4$ (ನಾ). ಲಗ್ಗೆ; ಮುತ್ತಿಗೆ; ದಾಳಿ: ಕೋಟೆಯ ಮೇಲೆ ಹಲ್ಲಾ ನಡೆಯುವುದಾದರೆ ಅದು ಕತ್ತಲೆಯ ಹೊತ್ತಿನಲ್ಲೇ ಸರಿ (ಕೃಷ್ಣಭೂ. ೧೦೭); ನಾವು ಬರುವುದರೊಳಗೆ ಕಲ್ಯಾಣ ಕಲ್ಲುಬುರುಗೆ ಕೋಟೆಗಳ ಹಲ್ಲಾ ಮಾಡುಯಂಬುದಾಗಿ ಸೇಮಕ ಮಾಡಿದ್ದರು (ಕೆಳವಂ. ೧೩). **ಹಲ್ಲೆ$_4$**: ಕಿತ್ತೂರ ಮೇಲೆ ಹಲ್ಲೆಮಾಡಲು ದೊಡ್ಡ ಸೈನ್ಯವನ್ನು ಕಳಿಸಿಕೊಟ್ಟರು (ಕಪಪು. ೪-೯೩).

[← ಅರ. ಮರಾ. ಹಿಂ. ಹಲ್ಲಾ]

ಹಲ್ಲಿ 'ಪಲ್ಲಿ$_1$' ನೋ.

ಹಲ್ಲಿಕೆ (ನಾ). ಒಂದು ಬಗೆಯ ಔಷಧೀಸಸ್ಯ ಮತ್ತು ಅದರ ಹೂವು: (ಮೃಔಗಿ. ೨೦-೩೫೯). [?]

ಹಲ್ಲಿಟ್ಟು (ನಾ). ಹಲ್ಲುಗಳಿಗೆ ಕಪ್ಪುಬಣ್ಣವನ್ನು ಉಂಟುಮಾಡಲು ಉಜ್ಜಿಕೊಳ್ಳುವ ಒಂದು ಬಗೆಯ ನಸುಹಳದಿ ಪುಡಿ; ಚಾಚೇಲು: ಹಲ್ಲು ತುಂಬಿ ಇಡಗಿದ ಹಲ್ಲಿಟ್ಟು (ಹುಚ್ಚಾಟ. ೩); ಕೆಂಪಿ ತನ್ನ ದಂತಾಲಂಕಾರಕ್ಕಾಗಿ ಹಲ್ಲುಕಪ್ಪು ಹಾಕಿದ್ದಳು. ಇನ್ನೂ ಕರ್ರಗೆ ಕಾಣಲಿ ಅಂತ ದಿನವೂ ತಪ್ಪದೆ ಹಲ್ಲಿಟ್ಟು ತಿಕ್ಕುತಿದ್ದಳು (ನನ್ನೂರು. ೨೫೫). [ಹಲ್ಲು (< ಪಲ್) + ಹಿಟ್ಟು (< ಪಿಟ್ಟು)]

ಹಲ್ಲಿಲಿ 'ಪಲ್ಲಿಲಿ' ನೋ.

ಹಲ್ಲಿಲಿಬಾಯಿ 'ಪಲ್ಲಿಲಿವಾಯ್' ನೋ.

ಹಲ್ಲಿಸಕುನ (ನಾ). ಹಲ್ಲಿ ನುಡಿಯುವುದನ್ನು ಗುರುತಿಸಿ ಹೇಳುವ ಶಕುನ: (ಕ). 'ಪಲ್ಲಿಶಕುನ' ಪರಾ. [ಹಲ್ಲಿ (< ಪಲ್ಲಿ$_1$) + ಸಕುನ]

ಹಲ್ಲೀಶ (ನಾ). [ಕಾವ್ಯಮೀ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು; ಒಂದು ಗಂಡು ಪಾತ್ರ ಹಾಗೂ ಏಳರಿಂದ ಹತ್ತರಷ್ಟು ಹೆಣ್ಣುಪಾತ್ರಗಳಿರುವ, ನೃತ್ಯ ಹಾಗೂ ಗಾಯನಗಳೇ ಪ್ರಧಾನವಾಗಿರುವ ಏಕಾಂಕನಾಟಕಪ್ರಭೇದ: ೧. ನಾಟಿಕಾ . . . ೧೭. ಹಲ್ಲೀಶ ೧೮. ಭಾಣಿಕಾ ಎಂದು ಉಪರೂಪಕಗಳು ಹದಿನೆಂಟು ವಿಧ (ಸಂನಾಟ. ೩೨). [ಸಂ.]

ಹಲ್ಲೀಶಕ (ನಾ). ವೃತ್ತಾಕಾರವಾಗಿ ನರ್ತಿಸುವುದು; ರಿಂಗಣಗುಣಿತ: ಪ್ರತಿಚ್ಛಾಯೌಗಂಧರಾಯಣ ಪಂಚರಾತ್ರ ಬಾಲಚರಿತಗಳಲ್ಲಿ 'ಹಲ್ಲೀಶಕಾದಿ' ನೃತ್ಯವಿದೆ (ಸಂನಾಟ. ೧೦೦). [ಸಂ.]

ಹಲ್ಲೀಶಿಕ್ಯಾ (ನಾ). ಬ್ರಿಟಿಶರ ಆಳ್ವಿಕೆಯ ಆರಂಭಕಾಲದಲ್ಲಿ ಬಳಕೆಯಾಗುತ್ತಿದ್ದ

ಹದಿನಾರು ಬಗೆಯ ಬೆಳ್ಳಿರೂಪಾಯಿನಾಣ್ಯಗಳಲ್ಲಿ ಒಂದು: ಔರಂಗಾಬಾದಿ . . . ೪ ಹಲ್ಲೀಶಿಕ್ಕಾ , ೫ ಶಹಾಪುರೀ (ಕಭಾಗ. ೨೮೦). [? + ಶಿಕ್ಕಾ (< ಸಿಕ್ಕಾ)]

ಹಲ್ಲು 'ಪಲ್' ನೋ.

ಹಲ್ಲುಕಚ್ಚು 'ಪಲ್ಗರ್ಚು[1]' ನೋ.

ಹಲ್ಲುಕಡಿ 'ಪಲ್ಗಡಿ' ನೋ.

ಹಲ್ಲುಕಡ್ಡಿ 'ಹಲುಕಡ್ಡಿ' ನೋ.

ಹಲ್ಲುಕಪ್ಪು (ನಾ). ಹಲ್ಲುಗಳನ್ನು ಕರಿದಾಗಿ ಮಾಡಲು ಲೇಪಿಸುವ ಒಂದು ಬಗೆಯ ದ್ರವ: ಕೆಂಪು ತನ್ನ ದಂತಾಲಂಕಾರಕ್ಕಾಗಿ ಹಲ್ಲುಕಪ್ಪು ಹಾಕಿದ್ದಳು (ನಸ್ಸೂರು. ೨೫೫). [ಹಲ್ಲು (< ಪಲ್) + ಕಪ್ಪು[4] (< ಕರ್ಪು[1])]

ಹಲ್ಲುಕಿರಿ 'ಪಲ್ಗಿರಿ' ನೋ.

ಹಲ್ಲುಕಿಸಿ (ಕ್ರಿ). ಹಲ್ಲುಕಿರಿ; ಹಲ್ಲು ಕಾಣುವಂತೆ ನಗು: ಮಂಗ ಹಲ್ಲುಕಿಸಿಯುತ್ತಿದೆ (ರೂಢಿ). [ಹಲ್ಲು (< ಪಲ್) + ಕಿಸಿ[1]]

ಹಲ್ಲುಗಿಂಜು (ಕ್ರಿ). (ಆಲಂ) ದೈನ್ಯದಿಂದ ಬೇಡಿಕೊಳ್ಳು; ಯಾಚಿಸು: ಮಕ್ಕಳ ಮೇಲುಖರ್ಚಿಗೆ ಗಂಡನನ್ನು ಹಲ್ಲುಗಿಂಜುವ ಪರಿಸ್ಥಿತಿ ಹೋಯಿತು (ಕಾಯಿಕ. ೧೦೫); ಅವರ ಹಿಂದೆ ಮುಂದೆ ಓಡಾಡಿ ಹಲ್ಲುಗಿಂಜುತ್ತ ಶುಶ್ರೂಷೆ ಮಾಡುವುದು ಅವನ ಸ್ವಭಾವಕ್ಕೆ ಅಂಟಿ ಬಂದಿತ್ತು (ರಾಗಿಗ. ೧೨೨). [ಹಲ್ಲು (< ಪಲ್) + ಗಿಂಜು[1]]

ಹಲ್ಲುಗಿರಿ 'ಪಲ್ಗಿರಿ' ನೋ.

ಹಲ್ಲುಗಿರಿಕು 'ಹಲುಗಿರಿಕು' ನೋ.

ಹಲ್ಲುಚುಚ್ಚೊಹಂಚಿ (ನಾ). ಒಂದು ಬಗೆಯ ಔಷಧೀಸಸ್ಯ: ದೊಡ್ಡಹಂಚೀಹುಲ್ಲು, ಹಲ್ಲುಚುಚ್ಚೋಹಂಚಿ, ನಾಯಿಹಂಚೀಕಡ್ಡಿ (ಮೃಡಿಗಿ. ೯-೧೫೧). [?]

ಹಲ್ಲುದ್ದಿಕೆ (ನಾ). ಹಲ್ಲು ಮಸೆಯುವಿಕೆ: ಬದ್ದುದಗಣತಸೇನೆ ಜಾಂಬವನಿದ್ದನಂಬಿನ ಗೂಡಿನಲಿ ಹಲ್ಲುದ್ದಿಕೆ[ಪಾಠಾಂ. ಗೆ]ಯ ಹನುಮಂತನಳಿಮರುಷಣಪ್ರತಾಪದಲಿ ಇದ್ದನಹಿತನ ಕಾಣದೆ (ತೊರಾ. ೬-೧೫೫-೨೯).

[ಹಲ್ಲು (< ಪಲ್) + ಉದ್ದು[3] (< ಉರ್ದು[1]) + - ಇಕೆ]

ಹಲ್ಲುನೋವು (ನಾ). ಹಲ್ಲಿಗೆ ಉಂಟಾಗುವ ಬಾಧೆ; ಹಲ್ಲಿನ ಬೇನೆ: ಹಲ್ಲುನೋವಿಗೆ: - ಶುಂಠಿ, ಹಿಪ್ಪಲಿ, ಸಾಸುವೆ, ಮೆಣಸು, ಇವಂ ಅರದು ನೀರೊಳಗೆ ಹಾಕಿ ಕಾಸಿ ಮುಕ್ಕಳಿಸಲು ನೋವು ಮಾಣ್ಗುಂ (ವೈಎ. ೧೩೭); ನೆಲ್ಲು ಒಣಗಲಿಲ್ಲ ಹಲ್ಲುನೋವು ಫನ್ನ ಕಲ್ಲುಹೋಗದು (ಪುರಂದ. ೪-೧೯೧-೧).

[ಹಲ್ಲು (< ಪಲ್) + ನೋವು]

ಹಲ್ಲುಪುಡಿ (ನಾ). ಹಲ್ಲುಗಳನ್ನು ಶುಭ್ರಗೊಳಿಸಲು ಉಜ್ಜುವ ಪುಡಿ; ದಂತಮಂಜನದ ಪುಡಿ: ಪಕ್ಕದ ನಾಗೊಂದಿಗೆಯ ಮೇಲಿದ್ದ ಹಲ್ಲುಪುಡಿಯ ಡಬ್ಬವನ್ನು ತೆಗೆದು ಆಕೆಯ ಕೈಗಿತ್ತ (ವಾಶ್ವಬ್ರ. ೧೭); ಅವನ ಹಲ್ಲುಗಳು . . . ನಂಜನಗೂಡಿನ ಹಲ್ಲುಪುಡಿಗೂ ಜುಮ್ಮೆನ್ನದಂತೆ ಮೆರೆಯುತ್ತಿದ್ದುವು (ನಸ್ಸೂರು. ೨೮೨).

[ಹಲ್ಲು (< ಪಲ್) + ಪುಡಿ]

ಹಲ್ಲುಬಾರಿಸು (ಕ್ರಿ). ೧. ಹಲ್ಲುಗಳನ್ನು ಕಟಗುಟ್ಟಿಸು: ಈ ಜ್ವರವು ಬೇಗನೆ ನನ್ನನ್ನು ಬಿಡುವಂತೆ ತೋರುವುದಿಲ್ಲ. ಅಹಹಾ . . . ಎಂದು ಹಲ್ಲುಬಾರಿಸತೊಡಗಿದಳು (ಜಯಂತ. ೩೩೧). ೨. (ಆಲಂ) ಕೋಪದಿಂದ ಅವಡುಗಚ್ಚು: ಅತ್ತ ಇಂಗ್ಲಿಷ್ ನಿಜಾಮರು ನಿಷ್ಕಾರಣವಾಗಿ ಹೈದರನ ದ್ವೇಷ ಕಟ್ಟಿಕೊಂಡು ಹಲ್ಲುಬಾರಿಸುತ್ತ ಕುಳಿತರು (ಚರಿಸಂ. ೧೩೫). [ಹಲ್ಲು (< ಪಲ್) + ಬಾರಿಸು[1]]

ಹಲ್ಲುಬೇನೆ 'ಹಲುಬೇನೆ' ನೋ.

ಹಲ್ಲುಬ್ಬ (ನಾ). ಮುಂದೆ ಹಾಯ್ದ ಹಲ್ಲುಳ್ಳವನು; ಉಬ್ಬುಹಲ್ಲಿನವನು: (೬).

[ಹಲ್ಲುಬ್ಬು + - ಅ[7]]

ಹಲ್ಲುಬ್ಬ (ನಾ). ಉಬ್ಬಿದ ಹಲ್ಲುಳ್ಳವಳು; ಹಲ್ಲು ಮುಂದೆ ಹಾಯ್ದಿರುವವಳು: ಅತ್ತರು ತಿಳಿಯದು, ನಕ್ಕರು ತಿಳಿಯದು, ಹಲ್ಲುಬ್ಬ ಹೇಗಿದ್ದರೇನು (ಇಂಚಾಪ. ೧೬೧-೯೪).

[ಹಲ್ಲುಬ್ಬ + - ಇ[2]]

ಹಲ್ಲುಬ್ಬು (ನಾ). ಹಲ್ಲು ಮುಂದೆ ಹಾಯ್ದಿರುವಿಕೆ; ಉಬ್ಬುಹಲ್ಲಾಗಿರುವಿಕೆ: ಆ ಹುಡುಗೀಗೆ ಹಲ್ಲುಬ್ಬು, ಹೌದೋ ಅಲ್ಲವೋ ? (ನನ್ನಪ. ೫೧).

[ಹಲ್ಲು (< ಪಲ್) + ಉಬ್ಬು[2] (< ಉರ್ವು[2])]

ಹಲ್ಲುಮಟ್ಟೆ 'ಹಲ್ಲುಮೊಟ್ಟೆ' ನೋ.

ಹಲ್ಲುಮದ್ದುಗಿಡ (ನಾ). ಒಂದು ಬಗೆಯ ಸಸ್ಯ; ಬಕುಲ: "ಕೇಸರಃ. ವಕುಳಃ- ೨ ಪವಳದ ಹುಷ್ಕಿನ ಗಿಡ, ವಕುಳವೃಕ್ಷ, ಹಲ್ಲುಮದ್ದುಗಿಡ, ವಜ್ರದಂತಗಿಡ" (ಸಿದ್ಧಾಂತಿ. ೧೨೬). [ಹಲ್ಲು (< ಪಲ್) + ಮದ್ದು (< ಮರ್ದು) + ಗಿಡ (< ಗಿಡು)]

ಹಲ್ಲುಮಸೆ (ಕ್ರಿ). ಹಲ್ಲುಕಡಿ; ಹಲ್ಲುಕಚ್ಚು: ಆ ಗ್ರಾಮದ ಎರಡು ಪಕ್ಷಗಳೂ ಒಂದರ ಮೇಲೆ ಮತ್ತೊಂದು ಹಲ್ಲುಮಸೆಯುತ್ತಾ ಇರುತ್ತವೆ (ರೂಢಿ).

[ಹಲ್ಲು (< ಪಲ್) + ಮಸೆ[1]]

ಹಲ್ಲುಮಿಡಿ 'ಹಲ್ಲುಮುಡಿ' ನೋ.

ಹಲ್ಲುಮುಡಿ, ಹಲ್ಲುಮಿಡಿ (ನಾ). ಹಲ್ಲುಗಳ ತುದಿಯ ಭಾಗ: ಕೋಪಾತಿಶಯದಿಂದ ಹಲ್ಲುಮುಡಿಯನ್ನು ಕಚ್ಚುತ ಶೀಳ್ವುದಲ್ಲೆದ್ದನು (ಕ್ಷವಾಸ. ೯೮); ಹಲ್ಲುಮುಡಿಯನು ಕಚ್ಚಿ ಕಲ್ಲುಮನಸಾದಾಗ ನೆಟ್ಟುದೀ ನೋಟ! (ಇಂಗೀತ. ೬೫-೧೦). ಹಲ್ಲುಮಿಡಿ: ಇನ್ನೂ ಕೆಲವರು ಕೋಪದಿಂದ ಹಲ್ಲುಮಿಡಿ ಕಚ್ಚಿದರು (ವಚಭಾ. ೮೬); ಹಲ್ಲುಮಿಡಿ ಕಚ್ಚಿಕೊಂಡು . . . ಅದನ್ನೇ ತಬಲಾ ಮಾಡಿಕೊಳ್ಳುತ್ತಿದ್ದರು (ನಬೃಧ. II. ೩೬).

[ಹಲ್ಲು (< ಪಲ್) + ಮುಡಿ[2]]

ಹಲ್ಲುಮುರಿ 'ಪಲ್ಮುರಿ' ನೋ.

ಹಲ್ಲುಮೊಟ್ಟೆ, ಹಲ್ಲುಮಟ್ಟೆ (ನಾ). = ಹಲ್ಲುಮುಡಿ: ಹಲ್ಲುಮೊಟ್ಟೆಗಿರಿಯುತ್ತಾ . . . ಹೆಗಡೆ ಆರ್ಭಟಿಸಿದ (ದೇವಹಂ. ೨೨೪). ಹಲ್ಲುಮಟ್ಟೆ: ಪೋಲೀಸು ಜವಾನ . . . ಹಲ್ಲುಮಟ್ಟೆ, ಕಚ್ಚಿ, ಅಷ್ಟಿನ ಶರೀರವನ್ನು ತುಸು ಮೇಲೆತ್ತಿದನು (ಪುಸರು. ೪೪೫).

[ಹಲ್ಲು (< ಪಲ್) + ಮೊಟ್ಟೆ[1]]

ಹಲ್ಲುಶೂಲೆ (ನಾ). = ಹಲ್ಲುನೋವು: ವಜ್ರದಂತಿ, ಕಾಚ, ಗೇರ ಹರಳು ಇವು ೩ ನ್ನೂ ಎಳ್ಳಕ್ಕದಲ್ಲಿ ಹಾಕಿಕೊಳ್ಳಲು ಹಲ್ಲುಶೂಲೆ ಗುಣ (ವೈಎ. ೧೩೭).

[ಹಲ್ಲು (< ಪಲ್) + ಶೂಲೆ[1]]

ಹಲ್ಲುಹಚ್ಚು (ಕ್ರಿ). ಹಲ್ಲುಹಾಕು; ಬಾಯಿಹಾಕು; ಕಚ್ಚು: ಇಲಿಯೂ ಹಲ್ಲುಹಚ್ಚಲು ಬರುವ ಪದಾರ್ಥ ಕಂಡರೆ ಹೇಗೆ ಕಡಿಕಡಿದು ಹಾಕುವುದೋ . . . ಹಾಗೇ ನಾನಾದರೂ ಸಣ್ಣವನಿದ್ದಾಗ ಮುದ್ರಿತಪುಸ್ತಕ ನೋಡಿದರೆ ಓದಿ ಮುಗಿಸಿ ಒಗೆಯುವುದು ನನ್ನ ಸ್ವಭಾವವಾಗಿತ್ತು (ಆಪ್ರಕ. ೪೭೪). [ಹಲ್ಲು (< ಪಲ್) + ಹಚ್ಚು[1] (< ಪಚ್ಚು[1])]

ಹಲ್ಲುಹುಳು (ನಾ). ಹಲ್ಲಿನ ಬುಡ ಅಥವಾ ಸಂದುಗಳಲ್ಲಿ ಉತ್ಪತ್ತಿಯಾಗಿ ಹಲ್ಲನ್ನು ಕೊರೆಯುವ ಕ್ರಿಮಿ: ಹಲ್ಲುಹುಳುವಿಗೆ ಆದಿತ್ಯವಾರದ ದಿನ ಎಕ್ಕದ ಹಾಲಿಂ ಎಸಗನ ಬೇರನೂದಿ ಹಲ್ಲುಸಂಧಿಯ ಗಿರಿಯೆ ಹಲ್ಲುಹುಳು ತೀರ್ಗುಂ (ವೈಎ. ೯೨). [ಹಲ್ಲು (< ಪಲ್) + ಹುಳು (< ಪುಟು)]

ಹಲ್ಲೆ[1] 'ಪಾಲ್ಕೆ[3]' ನೋ.

ಹಲ್ಲೆ[2] (ನಾ). ದೊಡ್ಡ ದೊಡ್ಡ ಕಾಯಿಗಳನ್ನು ಬಿಡುವ ಒಂದು ಬಗೆಯ ಬಳ್ಳಿ: (೬). [← ತುಳು. ಪಲ್ಲೆ]

ಹಲ್ಲೆ[3] 'ಪಲ್ಲೆ' ನೋ.

ಹಲ್ಲೆ[4] 'ಹಲ್ಲಾ' ನೋ.

ಹಲ್ಲೆಕಾಯಿಬಳ್ಳಿ (ನಾ). = ಹಲ್ಲೆ[2]: "ಹಲ್ಲೇಕಾಯಿಬಳ್ಳಿ, ಗರ್ದಾಳ" (ಮೃಡಿಗಿ. ೩೪-೬೫೨). [ಹಲ್ಲೆ[2] + ಕಾಯಿ[4] (< ಕಾಯ್[4]) + ಬಳ್ಳಿ]

ಹಲ್ಲೆಗಡುಬು (ನಾ). ಬಿಲ್ಲೆಯಾಕಾರದ ಕಡುಬು: ತಣ್ಣೀರಿನಿಂದ ತೊಳೆದಕ್ಕಿಯನು ಹಾಲೊಳಗೆ ಸಣ್ಣನಪ್ಪಂತರೆದು ಕದಡಿಯೊಲೆಯೊಳು ತೊಳಸಿ ಬೆಣ್ಣೆಯಂ ಹಾಕಿಯುಂಡಲಿಗೆವದದೊಳು ಇಳುಹಿ ಹಲ್ಲೆ[ಪಾಠಾಂ. ಯುಂಡಿ]ಗಡುಬುಗಳ ಮಾಡಿ (ಸೂಪಶಾ. ೧-೬೨). [ಹಲ್ಲೆ[2] (< ಪಲ್ಲೆ[2]) + ಕಡುಬು (< ಕಡುಂಬು)]

ಹಲ್ಲೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: "ಹಲ್ಲೆಬಳ್ಳಿ, ಹಂದರಹೂ" (ಮೃಡಿಗಿ. ೬೫-೧೩೧೧). [ಹಲ್ಲೆ[2] + ಬಳ್ಳಿ]

ಹಲ್ಲೆವಜ್ಜೆ (ನಾ). ಚಪ್ಪಟೆಯಾದ ಹೆಜ್ಜೆ: ಸಣ್ಣ ಮಳಲ್ದಾಣಂಗಳೊಳ್

ಪೆಂಟನೆಳೆದಂತಾಗುತ್ತಿರೆ ಪೋದ ಪೇರುಡುಗಳ ಹಲ್ಲೆ[ಪಾಠಾಂ. ಹಿಲ್ಲ]ವಚ್ಚೆಗಳುಮಂ . . . ಕಂಡು (ಕುಸುಮಾ. ೧೪-೫೯ ವ). [ಹಲ್ಲ್ಕೆ (< ಪಲ್ಲ್ಕೆ) + ಪಚ್ಚೆ]

ಹಲ್ಲೊತ್ತು 'ಪಲ್ಲೊತ್ತು$_2$' ನೋ.

ಹಲ್ವ 'ಹಲವಾ' ನೋ.

ಹಲ್ವಾ 'ಹಲವಾ' ನೋ.

ಹವ 'ಹವಾ' ನೋ.

ಹವಣ 'ಪವಣ್' ನೋ.

ಹವಣರಿ 'ಪವಣಱಿ' ನೋ.

ಹವಣಱಿ 'ಪವಣಱಿ' ನೋ.

ಹವಣೆ (ನಾ). ಹಾಳತವಾದುದು; ಅತಿ ಹೆಚ್ಚೂ ಅಲ್ಲದೆ, ಅತಿ ಕಡಿಮೆಯೂ ಅಲ್ಲದೆ ಮಧ್ಯಮಪ್ರಮಾಣವಾದುದು: ಅವರು ಅಷ್ಟು ಎತ್ತರವಿದ್ದಿಲ್ಲ; ಅಷ್ಟು ಗಿಡ್ಡೂ ಇದ್ದಿಲ್ಲ; ಹವಣೆಯ ಆಳು ಆಗಿದ್ದರು (ಕಲಿಕು. ೮೨); ಆತನು ವಿಶಾಲವಾದ ಎದೆಯವನೂ ಹವಣೆಯಾದ ನಡುಕಟ್ಟಿನವನೂ . . . ಇರುವನು (ಅಂದಿಕೆ. ೨೬).

[< ಪವಣ್]

ಹವಣಿಕೆ 'ಪವಣಿಕೆ' ನೋ.

ಹವಣಿಗೊಳಿಸು (ಕ್ರಿ). ಹೊಂದಿಸು; ಅಳವಡಿಸು: ಕನ್ನಡಗೀತಗಳನ್ನು ಇಂಗ್ಲಿಷಿನ ಹದಕ್ಕೆ ಹವಣಗೊಳಿಸುವದು ಹಿತವಾಗಿರುತ್ತದೆಂದು ನನ್ನ ಆಂಗ್ಲಕವಿಮಿತ್ರರೊಬ್ಬರು ಹೇಳಿದರು (ವಿಚಾಮಂ. ೧೨೦). [ಹವಣಿ + ಕೊಳ್$_1$ + - ಇಸು$_3$]

ಹವಣಿತು, ಹವಣಿತ್ತು (ನಾ). ೧. ಸಮಪ್ರಮಾಣದಲ್ಲಿರುವುದು; ಹಾಳತವಾಗಿರುವುದು: "ಮಧ್ಯ - ಹವಣಿತಾಗಿ ಬಾಜಿಸುಹ" (ನಾಟರಾ. ೬). ಹವಣಿತ್ತು: "ನಗೆ ಹವಣಿತ್ತಾದೊಡೆ ವಿಹಸಿತಂ" (ನಾಟರಾ. ೬). [< ಪವಣ್]

ಹವಣಿತ್ತು 'ಹವಣಿತು' ನೋ.

ಹವಣಿಸು 'ಪವಣಿಸು' ನೋ.

ಹವಣು 'ಪವಣ್' ನೋ.

ಹವಣುಗ (ನಾ). ಅಳೆಯುವವನು; ಅಳತೆ ಮಾಡುವವನು: "ಮಾಯಕಃ, ಮಾಪಕಃ, ಮಾಯಮಾನಃ, ಮಿತವಾನ್, ಈ ೪ ಹವಣುಗಂ" (ಶಾಶಕ್ಯ. ೧೦೦). 'ಪವಣಿಗ' ಪರಾ. [ಹವಣು (< ಪವಣ್) + - ಗ$_2$]

ಹವಣುಗಳಿ 'ಪವಣ್ಗಱಿ' ನೋ.

ಹವಣುಗಾಣ್ (ಕ್ರಿ). ರೀತಿಯನ್ನು ತಿಳಿ: ಇವರ ನೀನಿಂದು ನಲಿಸೆ ನಿನ್ನ ಮನಗೊಯ್ಯ ಹವಣುಗಾಣನು ನಾನು (ಗೊಮ್ಮಟ. ೭-೧೩೬). [ಹವಣು (< ಪವಣ್) + ಕಾಣ್]

ಹವನ (ನಾ). ೧. ಯಾಗ; ಯಜ್ಞ: ಮಾದಕ್ಷಿಣಾಪಥಬಹುಶತಹವನಾಹವದು[ಳ್] ಪಶುಪ್ರದಾನ ಶೌರ್ಯೋದ್ಯಮಭರಿತೋ[ನ್ನಾನ]ಪಶುಪತಿಯೆನ್ದು (ಮೃಆರ. ೧೯೩೬, ೧೬-೬; ಸು. 450); ಆತನ ಶಿರವ ಕಡಿದಾಹುತಿಯನೀವೆನು ನಿಮಗೆ ಹವನದಲಿ (ಸಂಭಪ. ಪರಿ. ೧-೫). ೨. ಯಾಗದಲ್ಲಿ ಬಳಸುವ ಸೌಟು. ೩. ಆಮಂತ್ರಣ; ಆಹ್ವಾನ. ೪. ಯುದ್ಧಕ್ಕೆ ನೀಡುವ ಆಹ್ವಾನ. ೫. ಬೆಂಕಿ; ಅಗ್ನಿ. [ಸಂ.]

ಹವನಕರ್ಮ (ನಾ). ಯಜ್ಞಕಾರ್ಯ: ಅಣ್ಣನಾದ ಯಾಜನು ಒಪ್ಪಿಕೊಂಡು ತಮ್ಮನ ಸಹಾಯದೊಡನೆ ಹವನಕರ್ಮವನ್ನು ಮಾಡಿಸಿದನು (ವಚಿಪಾ. ೪೯). [ಸಂ. ಹವನಕರ್ಮನ್]

ಹವಳ 'ಪವಳ' ನೋ.

ಹವಳತೊಂಡೆ 'ಪವಳದೊಂಡೆ' ನೋ.

ಹವಳದುಟಿ 'ಪವಳದುಟಿ' ನೋ.

ಹವಳದೊಂಡೆ 'ಪವಳದೊಂಡೆ' ನೋ.

ಹವಳಬಂಡೆ (ನಾ). ಹವಳಗಳಿಂದಾದ ಬಂಡೆಗಲ್ಲಿನಂತಹ ಗಡ್ಡೆ; ಹವಳದ ಸ್ತರಗಳು ಗಟ್ಟಿಯಾಗಿ ಉಂಟಾದ ಹವಳಗಲ್ಲು: (ಕ).

[ಹವಳ (< ಪವಳ) + ಬಂಡೆ$_1$]

ಹವಳಿಸಿಂಗ (ನಾ). ಒಬ್ಬಾತನ ಹೆಸರು: X ಹವಳಿಸಿಂಗಂ ತಮ ಅಯ್ಯಂಗೆ ಕಲ್ಲನಿಕ್ಕಿಸಿ XXX (ಎಕ. X. ಚಿಂತಾಮ. ೧೨೦-೨; ಸು. 1000). [? + ಸಿಂಗ$_1$]

ಹವಳೆ (ನಾ). ಕಂದುಬಣ್ಣದ ಹಸು; ಕಪಿಲವರ್ಣದ ಹಸು: ಹಿಂಡುಗೋವು ಹರಿಯ ಕೃತಿಯ ಕಂಡು ಧ್ಯಾನದಲ್ಲಿ ತಂದು . . . ತಂಡತಂಡ ಒಪ್ಪಿದವು ಹಂಡೆ ಹವಳೆ ಹುಲುಗಚ್ಚಿಕೊಂಡು ನಿಂತವಲ್ಲಿಗಲ್ಲಿ ಮೆಂಡಲಿದ್ದವು (ಪ್ರಸಭಾ. ೪೯-೬). [< ಹವಳ]

ಹವಾ, ಹವ, ಹವೆ (ನಾ). ೧. ಗಾಳಿ; ವಾಯು: 'ಹವಾಸೀರ' ಪರಾ. ೨. ಋತುಮಾನ; ವಾಯುಗುಣ: ಆಗಲೆ ಹವಾ ಬದಲಾಯಿಸುತ್ತಿದ್ದಿತು. ಆದರೂ ಆ ದಿನ ಸಂಧ್ಯಾಕಾಲದಲ್ಲಿ ಆಕಾಶವು ನಿರ್ಮಲವಾಗಿದ್ದಿತು (ಝೂರಾಗ. ೧೩). ಹವ: ೨. "(ಯಾವುದಾದರೂ ಪ್ರಾಂತದಲ್ಲಿ) ಕಾವು, ತೇವ, ಗಾಳಿ, ಬೆಳಕು ಇವೆ ಮೊ. ಗಳ ಒಂದು ಗೊತ್ತಾದ ಸ್ಥಿತಿ; ವಾಯುಗುಣ; ಹವ" (Climate. ಇಂಕಾನ). ಹವೆ: ೧. ಹವೆಯು ನೆಲದ ಹತ್ತಿರ ದಟ್ಟಾಗಿರುವುದು (ಮುಂಬಯಿ. ೪-೬೧): ಬಸ್ಸೊಂದು ವೇಗವಾಗಿ ಬರುತ್ತಿತ್ತು . . . ಮುಂದಿನ ಗಾಲಿಯ ಹವೆ ಹೋಗಿ ನಿಂತುಬಿಟ್ಟಿತು (ಚಿನ್ನುಹಿಂ. ೩೩). ೨. ಹತ್ತೀಬೆಳೆಗೆ ಉಷ್ಣ ಹವೆ ಬೇಕು (ಮುಂಬಯಿ. ೪-೨೬); ಈ ಶೀಮೆಯ ಹವೆಯು ಬಹು ಆರೋಗ್ಯವಾದದ್ದು (ಕಭಾಗ. ೭). [← ಅರ. ಪಾರ. ಹಿಂ. ಮರಾ. ಹವಾ]

ಹವಾಗುಣ (ನಾ). ಋತುಮಾನ; ವಾಯುಗುಣ: ಊರಿನ ಹವಾಗುಣವು ಆರೋಗ್ಯವಾಗಿದ್ದಿತು (ಹುಚ್ಚಹ. ೫). [ಹವಾ + ಗುಣ]

ಹವಾನಿಯಂತ್ರಣ (ನಾ). (ಕಟ್ಟಡ ಅಥವಾ ಕಾರು ಮುಂತಾದ ವಾಹನ ಇತ್ಯಾದಿಗಳಲ್ಲಿ) ನಿರ್ದಿಷ್ಟವಾದ ವಿದ್ಯುಚ್ಚಾಲಿತಯಂತ್ರದಿಂದ ಗಾಳಿಯನ್ನು ಶೋಧಿಸಿ, ವಾತಾವರಣದ ತೇವಾಂಶ ಮತ್ತು ಉಷ್ಣಾಂಶವನ್ನು ಅಗತ್ಯಕ್ಕೆ ತಕ್ಕಂತೆ ಹೊಂದಿಸುವ ಒಂದು ವಿಧಾನ: ಈ ಕೊಠಡಿಯಲ್ಲಿರುವ ಹವಾನಿಯಂತ್ರಣ ಮಾಡುವ ಯಂತ್ರ ಕೆಟ್ಟುಹೋಗಿದೆ (ರೂಢಿ). [ಹವಾ + ನಿಯಂತ್ರಣ]

ಹವಾನಿಯಂತ್ರಿತ (ಗು). ಹವಾನಿಯಂತ್ರಣ ಮಾಡಿದ: ಸುಸಜ್ಜಿತವಾದ ಹವಾನಿಯಂತ್ರಿತಕೊಠಡಿಯಲ್ಲಿ ಸಭೆ ನಡೆಯುತ್ತಿತ್ತು (ರೂಢಿ). [ಹವಾ + ನಿಯಂತ್ರಿತ]

ಹವಾಮಾನ (ನಾ). = ಹವಾಗುಣ: ಆರು ದಿನಗಳಿಂದ ಒಂದು ರೀತಿಯ ತಂಗಾಳಿ ಬೀಸುತ್ತಿದೆ. ಹವಾಮಾನ ಚೆನ್ನಾಗಿಲ್ಲ (ಕಾವೇರಿ. ೧೦೯); ವಸಂತಋತುವಿನ ಹವಾಮಾನಕ್ಕನುಗುಣವಾಗಿ ಮಳೆ ಬಿದ್ದು, ಗಾಳಿ ಬೀಸಿ ಹವ ತಣ್ಣಗಾಗಿತ್ತು (ಪುನರು. ೩೦೯).

[ಹವಾ + ಮಾನ]

ಹವಾಲ್‌ಸೀಮೆ (ನಾ). ಅಧೀನದಲ್ಲಿರುವ ಸೀಮೆ: ತಲಕಾಡು ಹವಾಲ್‌ಸೀಮೆಯನ್ನು ಬೆಣ್ಣೆಹೊನ್ನಿ ಕೈಯಿಂದ ಎಟ್ಟಣ್ಣನು ಕಟ್ಟಿಕೊಂಡಿದ್ದು, ಅವನಿಂದ ಸಾಧಿಸಿದ್ದು ಕೆರಗೋಡು (ಬೆಟ್ಟಅ. ೨೨೦ ಪರಿ).

[ಹವಾಲ್ಯ (P ← ಹಿಂ. ಹವಾಲೀ: ಮರಾ. ಹವಾಲಾ, ಹವಾಲೀ) + ಸೀಮೆ]

ಹವಾಲತೆ, ಹವಾಲ್ತೆ (ನಾ). ಹೊಣೆ; ಜಾಮೀನು: ಈ ಬಗೆಯ ಹಣಕ್ಕೆ ಅನ್ನದಾನಸಟ್ಟಿ, ನರಸಟ್ಟಿಗಳ ಹವಾಲತೆ ಕೊಟ್ಟ ನಂತರ . . . ಕೆಲಸವನ್ನು ಖಾಯಂ ಮಾಡಿಸಿದರು (ಮಹಾವಂ. I. ೨೨೪). ಹವಾಲ್ತೆ: 'ಹವಾಲ್ತೆದಾರ' ಪರಾ.

[← ಪಾರ. ಮರಾ. ಹವಾಲತ್./ ತುಳು. ಹವಾಲ್ತೆ]

ಹವಾಲದಾರ, ಹವಾಲುದಾರ, ಹವಾಲ್ದಾರ (ನಾ). ೧. ಸೈನ್ಯದಲ್ಲಿಯ ಒಬ್ಬ ಅಧಿಕಾರಿ; ಕಿಲ್ಲೆಯ ಕಾವಲು ಮಾಡುವ ಅಧಿಕಾರಿ: ವೆಂಕಟರಾಯ ಹವಾಲದಾರ ಮಿಯಾಖಾನ ಬಾವಾ ಗರೀಬ ನಾಡಿಗ ವೆಂಕಟಗಿರಿಯಪ್ಪ ಸಹ (ಎಕ. XI, ಹೊಳೆಕೆ. ೧೨೬-೮; 1692 ?); ಬಸವಾಪಟಣದ ಹವಾಲದಾರ ಬಾಬಾಸಾಹೇಬರ ಬಗೆ ಜಮಾನದಾರ ತ್ರಿಯಮ್ಬಕಸಖಜಿಪಣ್ಡಿತರ ಕಾರ ಕಿರದಿಯಲು (ಎಕ. XI, ಹೊಳೆಕೆ. ೬೩-೫; 1716). ಹವಾಲುದಾರ: ೨. ಸುಬೇದಾರನ ಕೈಕೆಳಗಿರುವ ಜಿಲ್ಲಾಧಿಕಾರಿ: (ಕ). ಹವಾಲ್ದಾರ: ೩. ಪೋಲೀಸು ಜಮಾದಾರ: ಹವಾಲ್ದಾರರು ಕರೆಯುತ್ತಾ ಇದಾರೆ ಬರ್ರಿ (ಬಂಗಾರ. ೧೧೬).

[← ಪಾರ. ಹವಾಲ್‌ದಾರ್; ಹಿಂ. ಹವಲ್ದಾರ್, ಹವಾಲ್ದಾರ್; ಮರಾ. ಹವಲದಾರ್, ಹವಾಲದಾರ್]

ಹವಾಲಿಸು (ಕ್ರಿ). ಒಪ್ಪಿಸಿಕೊಡು; ವಶಕ್ಕೆ ಕೊಡು: ಬೀರುಬಳ್ಳಿ ಗ್ರಾಮವನೂ ಪ್ರಾಕುಸ್ವಾಮಿಯವರ ಶ್ರೀಭಣ್ಡಾರಕ್ಕೆ ನಾವು ಹವಾಲಿಸಿ ಕೊಟ್ಟು ಯಾಗ . . . ಧಾರೆಯನೆಱದು ಕೊಟ್ಟೆವು (ಎಕ. III, ಶ್ರೀರಂಗ. ೯೪-೨೦; 1678). [ಹವಾಲು + - ಇಸು$_3$]

ಹವಾಲು, ಹವಾಲೆ (ನಾ). ೧. ವಶ; ಸುಪರ್ದು: ರಾಮಾನುಜಜಿಯ್ಯರ ಹವಾಲಿನಲ್ಲಿ ನಡಸಿಕೊಂಡು ಬರುತ್ತಾಯಿದ್ದರಾದ ಕಾರಣ (ಎಕ. III. ಶ್ರೀರಂಗ. ೧೦೦-೧೫೨; 1724). **ಹವಾಲೆ**: ೧. ಅರಮನೆ ಹವಾಲೆಯಾಗಿ ಸಿಸ್ತಿಗೆ ಕೂಡಿ ಬರುತ್ತಿದ್ದ ಬಗೆ ಗ ೧೫೫ ವಿವರ (ಮೈಆಂ. ೧೯೨೮, ೬೧-೧೪; 1684); ಯಿಲ್ಲಿಂಗಾಭಟ್ಟಗೆ ಬಾಳುತ್ತಾರವಾಗಿ ಅನುಭವಿಸಿ ಬಾಹಂಗೆ ಭೂಮಿ ಹವಾಲೆ ಮಾಡಿಕೊಟ್ಟು (ಎಕ. IX(S). ಬೆಂಗಳೂ. ೧೫೦-೫; ಸು. 1700). ೨. ಹೊಣೆಗಾರಿಕೆ; ಜವಾಬ್ದಾರಿ: ಹೀಗ ಒಬ್ಬರ ಮೇಲೊಬ್ಬರು ಹವಾಲೆಯನ್ನು ಹಾಕುತ್ತ ಬಂದದ್ದರಿಂದ ನಾವು ಇಷ್ಟೊಂದು ಹಾಳಾಗಿ ಹೋಗಿರುವೆವು (ಕಾಳರಾ. ೮೨). ೩. ಫಿರ್ಯಾದು; ಆಪಾದನೆ (?): ಅಕ್ಕಿ ಕೊಟ್ಟುದು ನಿಜವೆಂದು ಅವರು ಹೇಳಿದರೆ ನಿನ್ನನ್ನು ಬಿಟ್ಟು ಬಡುತ್ತೇನೆ. ಇಲ್ಲದಿದ್ದರೆ ನಿನ್ನ ಮೇಲೆ ಹವಾಲೆ ಮಾಡಲಾದೀತು (ಭಾರತಿ. ೧೨). 'ಅಹವಾಲು' ಪರಾ. [← ಅರ. ಹಿಂ. ಮರಾ. ಹವಾಲಾ]

ಹವಾಲುದಾರ 'ಹವಾಲದಾರ' ನೋ.

ಹವಾಲೆ 'ಹವಾಲು' ನೋ.

ಹವಾಲ್ತೆ 'ಹವಾಲತೆ' ನೋ.

ಹವಾಲ್ತೆದಾರ (ನಾ). ಜಾಮೀನಾದವನು; ಹೊಣೆಗಾರ: ಅಪೀಲ್‌ವಾದಿಯ ಹವಾಲ್ತೆದಾರನಿಂದ ಅಥವಾ ರಿಸೀವರಿನಿಂದ ಒಂದು ವ್ಯಾಜ್ಯ ಅಥವಾ ಅಪೀಲು ವಜಾ ಆದ್ದನ್ನು ರದ್ದುಪಡಿಸಲು ಹುಕುಂ ಬಗ್ಗೆ - ಅರವತ್ತು ದಿವಸಗಳು (ಗ್ರಾಮಾಕ. ೧೬೬). [ಹವಾಲ್ತೆ (< ಹವಾಲತೆ) + - ದಾರ್]

ಹವಾಲ್ದಾರ 'ಹವಾಲದಾರ' ನೋ.

ಹವಾಸೀರ (ನಾ). ಸಾಕಷ್ಟು ಗಾಳಿಯಾಡುವಂತಹುದು; ಶುದ್ಧವಾದ ಹವೆಯುಳ್ಳದು: ಪಡಸಾಲೆ ಇಂಬಾಗಿ ಹವಾಸೀರ ಆಗಿತ್ತಲ್ಲ (ರಕ್ಷಧ್ವ. ೧೯೧); ಇಲ್ಲಿನ ಎಲ್ಲ ಚಾಳುಗಳೂ 'ಹವಾಸೀರ' ಇವೆ (ರಾಯಚೂ. ೪). [← ಮರಾ. ಹವಾಶೀರ್]

ಹವಿ$_1$ (ನಾ). ೧. ಹೋಮದಲ್ಲಿ ದೇವತೆಗಳಿಗೆ ಆಹುತಿಯಾಗಿ ಕೊಡುವ ತುಪ್ಪ, ಅನ್ನ, ಕಾಳು, ಹಿಟ್ಟು ಮೊದಲಾದ ಪದಾರ್ಥ; ಚರು: ಕಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ ಕಚ್ಚಿದ್ದು ಸುಡುವಾಗ . . . ಬೊಬ್ಬಿಟ್ಟೆಲ್ಲರ ಕರವರಯ್ಯಾ (ಬಸವ. ೫೮೭); ತುಪ್ಪದೊಳಗಾ ವಸ್ತ್ರಂಗಳಂ ನಾದು ಉರಿಗೆ ಹವಿಯಂ ಕೊಡಲೊಡನೆ . . . ಹೊಗೆಯಂಬರಕೆ ನೆಗೆಯಲು (ಬಸವ. ೫೭-೧೮). ೨. ತುಪ್ಪ. ೩. ನೀರು. ೪. ಶಿವ. ೫. ಹೋಮ; ಹವನ. ೬. ಅನ್ನ; ಆಹಾರ: ನಂಬಿಯೂ ನಂಬದ ಡಂಬಕ ನಾನಯ್ಯಾ ಹಾವ ತೋಱಿ ಹವಿಯ ಬೇಡುವಂತೆ (ಬಸವ. ೨೮೨). [ಸಂ. ಹವಿಸ್]

ಹವಿ$_2$ (ನಾ). ಬೆಂಕಿ; ಅಗ್ನಿ: ಹವಿಯ ಮೇಲೊಣತ್ಯಣವ ಹಾಕಿದೊಲು ಉರಿದದ್ದು (ಪ್ರಸರಾ. ೧೩-೧೧). [ಸಂ. ಹವಿನ್]

ಹವಿಕ, ಹವೀಕ, ಹವ್ಯಕ, ಹೈಗ$_1$ (ನಾ). (ಕರಾವಳಿಯಲ್ಲಿ ವಾಸಿಸುವ) ಸ್ಮಾರ್ತಬ್ರಾಹ್ಮಣರ ಒಂದು ವರ್ಗ: ಹವಿಕರು (ಹೈಗರು)- ಇವರು ಕಾನಡಾ ಜಿಲ್ಲೆಯಲ್ಲಿ ಯೆಲ್ಲಕಡೆಯಲ್ಲಿ ವಾಸಿಸುತ್ತಾರೆ (ಕಭಾಗ. ೮೫); ಈ ಹವಿಕರು . . . ತುಳುನಾಡಿಗೆ ಎರಡನೆಯ ಕಂತಿನಲ್ಲಿ ಮೂರನೆಯ ಶತಮಾನದಲ್ಲಿ ಬಂದು ನೆಲೆ ನಿಂತವರು (ತುಳುನಾ. ೧೪೩). **ಹವೀಕ**: ಕಾಸರಗೋಡಿನ ಕರಾವಳಿಯ ಪ್ರಾಂತದಲ್ಲಿ ಹವೀಕಬ್ರಾಹ್ಮಣರ ಕುಲದಲ್ಲಿ ಅವನ ಜನನವಾಗಿದ್ದಿತು (ಅಂಬಿಚಾ. ೯). **ಹವ್ಯಕ**: ಬೇರೆ ಎನಿಸುವ ಕನ್ನಡ ಒಂದಿದೆ. ಅದನ್ನು ಹವ್ಯಕರು ಆಡುತ್ತಾರೆ, ಅದು ಹಳಗನ್ನಡದ ರೂಪಗಳನ್ನು ಉಳಿಸಿಕೊಂಡು ಈಗಿನ ಕಾಲಕ್ಕೆ ಪ್ರತ್ಯೇಕವೆಂಬಂತೆಯೇ ಇದೆ (ನಮ್ಮನು. ೨೮); ನೀವು ಈ ಮೊದಲು ಹವ್ಯಕರಲ್ಲಿ ಎಂದಾದರೂ ಉಂಡುದುಂಟೇ ? (ಚಿಚ್ಚಜೀ. ೧೫೭); ನೀಲಗಿರಿಯ ಬಡಗ . . . ದಕ್ಷಿಣಕನ್ನಡಜಿಲ್ಲೆಗಳ ಹವ್ಯಕರ ಕನ್ನಡ - ಇವು ಈ ಗುಂಪಿಗೆ ಸೇರಿದ ಉಪಭಾಷೆಗಳು (ದ್ರಾವಿ. ೧೩೫). **ಹೈಗ**$_1$: ಹೈಗ ಬ್ರಾಹ್ಮಣರಿಗೆ ಮೊಸರು ಮಜ್ಜಿಗೆ ಬಹಳ ಬೇಕಾಗುವ ಕಾರಣ ಅವರು ಫಟ್ಟದ ಕೆಳಗೆ ಸಹ ಯಮ್ಮೆಗಳನ್ನು ಕಟ್ಟುವರು (ಕಭಾಗ. ೫೬). [ದೇ. ॥ ತುಳು. ಹೈಗ]

ಹವಿಗ (ನಾ). ಒಬ್ಬಾತನ ಹೆಸರು: ಉಪ್ಪವಳ್ಳಿಯ ಹವಿಗಂಗ ಕೊಟ್ಟ ಸ್ಥಿತಿಕ್ರಮಮಾವುದೆಂದೊಡೆ (ಎಕ. VI. ಚಿಕ್ಕಮ. ೪೨-೧೫; 959). [?]

ಹವಿಗೊಳ್ (ಕ್ರಿ). ಹೋಮದಲ್ಲಿ ಅರ್ಪಿಸಿದ ಆಹುತಿಯನ್ನು ಸ್ವೀಕರಿಸು ,— ತೆಗೆದುಕೊಳ್ಳು: ತುಡುಗುಣಿಗಳವದಿರು ನಭೋಗ್ರಕ್ಕೆ ಸಿಡಿದು ಹವಿಗೊಂಬಮರ ನಿಕರದ ಹೆಡಕ ಬಾರಿಸಿ ಬಾಚುತಿರ್ದರು ಬಾಯ ತುತ್ತುಗಳ (ತೊರರಾ. ೧-೧೧-೮). [ಹವಿ$_1$ + ಕೊಳ್$_1$]

ಹವಿನೇತ್ರ (ನಾ). ಅಗ್ನಿನೇತ್ರ; ಶಿವ: ಹವಿನೇತ್ರಶರಣಮಣಿ ಕಕ್ಕಯ್ಯಗಳ ಪ್ರಸಾದವು ಬಚ್ಚದಿರು ಲಿಂಗಪೂಜೆಗೈದೆತಪ್ಪೆನನ್ನವರ ಸೈರಿಸೆನಲು (ವ್ರಾಪ್ರರಾ. ೧೯-೭). [ಸಂ.]

ಹವಿರ್ಭಾಗ (ನಾ). ಹೋಮದಲ್ಲಿ ಆಯಾ ದೇವತೆಗಳಿಗೆ ನಿಗದಿಯಾದ ಹವಿಸ್ಸಿನ ಭಾಗ: ಎವಗೆ ತವಗೆಂದೀ ಹವಿರ್ಭಾಗವನು ಮುತ್ತಿತು ದೇವತತಿ (ಕುವ್ಯಾಸ. ೭-೩೯); ಸುತ್ರಾಮಂ ಸಕಲದಿವಿಜರೊಡಗೂಡಿ ಯಜ್ಞದ ಹವಿರ್ಭಾಗಮಂ ಕೊಳಲ್ಕೆ ಪ್ರೇಮದಿಂ ಪ್ರತ್ಯಕ್ಷಮಾಗಿ ಬಂದಿರುತಿರ್ದನು (ಚೈಮಿಭಾ. ೫-೪೫). [ಸಂ.]

ಹವಿರ್ಭುಜ (ನಾ). ಹವಿಸ್ಸನ್ನು ಭುಜಿಸುವವನು; ಅಗ್ನಿ: ದ್ವಿಷನ್ಮೇದಿನೀಶ್ವರ ಸಂಹಾರಹವಿರ್ಭುಜಂ ಭುಜಬಳಂ ಶ್ರೀರಾಜಮಾರ್ತ್ತಂಡನ (ಎಕ. II. ೧೪೩-೧೩; 982); ರುಧಿರಂ ಸುಖದೊಳ್ ಶನಿ ದಶಮದೊಳಂತಾ ಸೂರ್ಯನಸ್ತದೊಳ್ ನೆಲಸಿದೊಡಾಯುಧದಿಂದೆ ಹವಿರ್ಭುಜನಿಂದೆ ಧರಾಪತಿಕೋಪದಿಂದೆ ಮಡಿಗುಂ ಮನುಜಂ (ಜಾತಕ. ೨೩-೧೩). [ಸಂ. ಹವಿರ್ಭುಜ್]

ಹವಿಷ್ಯ (ನಾ). ೧. ಹೋಮದಲ್ಲಿ ಆಹುತಿ ಕೊಡಲು ಯೋಗ್ಯವಾದ ಆಹಾರಪದಾರ್ಥ. ೨. ತುಪ್ಪ. ೩. ಕಾಡಕ್ಕಿ; ನೀವಾರ. ೪. ತುಪ್ಪದಲ್ಲಿ ಕಲಸಿದ ಅನ್ನ. [ಸಂ.]

ಹವಿಸ್ಸು (ನಾ). ಹವಿ; ಚರು: ಜ್ಞಾನಾಗ್ನಿಯಲ್ಲಿ ಕರ್ಮಫಲವೆಂಬ ಹವಿಸ್ಸನ್ನು ಹಾಕಿ ಯಜ್ಞನಾರಾಯಣನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು (ಭಾರದ. ೧೧೭); ಹವಿಸ್ಸು ದೇವತೆಗಳಿಗೆ ಚಾರು ಮತ್ತು ಪ್ರಿಯತಮ (ಸೌಂದಸ. ೪೩ ಅಡಿಟಿ). [< ಸಂ. ಹವಿಸ್]

ಹವೀಕ 'ಹವಿಕ' ನೋ.

ಹವೀಜ (ನಾ). ಕೊತ್ತುಂಬರಿ ಕಾಳು; ಧನಿಯ: ಮೆಣಸಿನಕಾಯಿ, ಹವೀಜ, ದಾಲಚಿನ್ನಿ . . . ಮುಂತಾದ ಪದಾರ್ಥಗಳು ಅನ್ನದ ರುಚಿಯನ್ನು ಬೆಳಸಿ ಅದನ್ನು ಬೇಗ ಜೀರ್ಣಮಾಡುತ್ತವೆ (ಮುಂಬಯಿ. ೫-೧೬೭); ಇದರಲ್ಲಿ ನಾಲ್ಕು ಹವೀಜಕಾಳು ಮತ್ತು ಅರಳೆಎಲೆ ಕೂಡ ಹಾಕಿ ಮರಳಿಸಿ ತುಸು ಬಿಸಿಬಿಸಿ ಇರುವಾಗಲೇ ತಾಯಿಗೆ ಕುಡಿಸು (ಕ್ಯಾಮಹಾ. ೪೦). [?]

ಹವುಂಬ್ಬೆ (ನಾ). ಒಬ್ಬಾಕೆಯ ಹೆಸರು: ಶ್ರೀವಿಮಳಚಂದ್ರಪಂಡಿತದೇವರ ಗುಡ್ಡಿ ಹವುಂಬ್ಬೆಯಾ ತಂಗೆ ಶಾಂತಿಯಬ್ಬೆ ತಮ್ಮ ಗುರುಗಳ್ಗೆ ಪರೋಕ್ಷವಿನಯಂಗಯ್ದರ್ (ಎಕ. VI. ಮೂಡಗೆ. ೧೧-೬೫; ಸು. 990). [?]

ಹವುದ 'ಹೌದು$_2$' ನೋ.

ಹವುದು 'ಅಹುದು$_2$' ನೋ.

ಹವೆ 'ಹವಾ' ನೋ.

ಹವೇಲಿ (ನಾ). ೧. ದೊಡ್ಡಮಹಲು; ಉಪ್ಪರಿಗೆ ಮನೆ: ಗುಣವಾಗುವವರೆಗೆ ಅವರುಗಳನ್ನು ತನ್ನ ಹವೇಲಿಛತ್ರದಲ್ಲಿಯೇ ಇರಿಸಿಕೊಂಡು . . . ಗುಣ ಮಾಡಿ ಕಳುಹಿಸಿಕೊಡುತ್ತಿದ್ದನು (ಮುಸುಗ. ೧೪೮). ೨. ಜಿಲ್ಲೆ ಅಥವಾ ಪರಗಣೆಯ ಮುಖ್ಯಸ್ಥಳ ,— ಪ್ರಮುಖವಾದ ಪಟ್ಟಣ: ಪರಗಣ ಹೊಸಕೋಟೇ ಹವೇಲಿಗೆ ಸಲುವ ತರಫು ಮಾಲೂರು ಹೋಬಳಿಗೆ ಸಲ್ಲುವ (ಎಕ. X. ಮಾಲೂರು. ೮೦-೮; 1762). [← ಪಾರ. ಹವೀಲೀ; ಅರ. ಹಿಂ. ಮರಾ. ಹವೇಲೀ]

ಹವ್ಯ (ನಾ). ಹೋಮದ ಮೂಲಕ ದೇವತೆಗಳಿಗೆ ಕೊಡುವ ಆಹುತಿ; ಹವಿಸ್ಸು: ನಾಡಿಗರ್ ದಿನದಿನಂ ಬೇಳ್ಪೊಂದು ಹವ್ಯಮನುಂಡುಂಡು ಸವಿಗೊಂಡ ಬೋಲ್‌ಯರ್ . . . ಈವುಜ್ಜುಗಕ್ಕೆ ತಡೆವರ್ಪರ್ (ರಾಮಾಶ್ವ. ೫೫-೨೯); ಯಾಜೋಪಯಾಜರು ಮಂತ್ರಿಸಿದ ಹವ್ಯವು ಹೇಗೆ ವ್ಯರ್ಥವಾಗುತ್ತದೆ ನೋಡೋಣ! (ವಚಭಾ. ೪೯).

ಹವ್ಯಕವ್ಯ = ದೇವತೆಗಳಿಗೆ ಹೋಮದಲ್ಲಿ ಅರ್ಪಿಸುವ ಹವಿಸ್ಸು ಮತ್ತು ಪಿತೃಗಳಿಗೆ ಶ್ರಾದ್ಧಾದಿಗಳಲ್ಲಿ ಕೊಡುವ ಆಹುತಿ: ಚಾರುವೈದಿಕಹವ್ಯಕವ್ಯವಿಪಾರ ವೃತ್ತಿಗಳಳಿದವು (ಕುವ್ಯಾಕ. ೬-೨೨); ಹವ್ಯಕವ್ಯಂಗಳಿಗೆ ಅನ್ನವ [illegible] ವಾದುದಱಿಂದಲ

ನವರತ ಸಲೆ ಹೊಗಳುತಿಹರನ್ನವನು ಮುನಿಗಳು ಸುರರು (ತಿಮ್ಮಅ. ೬-೧೬); ಆಸ್ತಿಕರಾದ ಹಿಂದಿನ ಕಾಲದ ಆಘೀಸರುಗಳು . . . ಹವ್ಯಕವ್ಯಗಳಿಗೆ ಉಪಯುಕ್ತವಾದ ಬ್ರಾಹ್ಮಣರನ್ನು ಹತ್ತಿರ ಇಟ್ಟುಕೊಳ್ಳುತ್ತಿದ್ದರು (ಶ್ರೀಕಥ. ೧೬೩). [ಸಂ.]

ಹವ್ಯಕ 'ಹವಿಕ' ನೋ.

ಹವ್ಯವಾಹ (ನಾ). ದೇವತೆಗಳಿಗೆ ಹವಿಸ್ಸನ್ನು ಒಯ್ದು ಮುಟ್ಟಿಸುವವನು; ಅಗ್ನಿ: ನೀನೆ ಅನಂತಂ, ನೀನೆ ಹವ್ಯವಾಹಂ . . . ನಿನ್ನಂ ಮಱೆವುಗುವೆಂ (ಅದ್ಭುತ. ೬-೨೩). [ಸಂ.]

ಹವ್ಯವಾಹನ (ನಾ). = ಹವ್ಯವಾಹ: ಅರ್ಜುನನು . . . ತಾನು ಗಡ ಸ್ಕಂಧವನ ತಲೆಯನು ಭಾನುವಡಗದ ಮುನ್ನ ಕೊಂಬೆನು ಹೀನನಾದರೆ ಹೊಗುವೆನೆಂದನು ಹವ್ಯವಾಹನನ (ಕುಮಾರ್ಜ್ರೋ. ೮-೫೮); ಭಾನುಕೋಟಿತೇಜದವನ ಭವಕಾನನರಾಶಿಗೆ ಹವ್ಯವಾಹನನ (ಪುರಂದ. ೧-೮೩-೪). [ಸಂ.]

ಹವ್ಯವಾಹನಸಖ (ನಾ). ಅಗ್ನಿಯ ಮಿತ್ರ; ವಾಯು: ಹವ್ಯವಾಹನಸಖಂ ತೊಲಗಿಸುವ ಬಹಳ ಮೇಘವ್ಯೂಹಸಂಘಾತದೊಡ್ಡವಣೆ ಮುಱಿವುದೆ ಕೃತವ್ಯಜನ ವಾತವಿಂದೆಲೆ ಮರುಳೆ ಹೋಗು (ಚೈಮಿಭಾ. ೧೩-೯). [ಸಂ.]

ಹವ್ಯಾಮೋದ (ನಾ). ಹೋಮದಲ್ಲಿ ಅರ್ಪಿಸಿದ ಹವಿಸ್ಸಿನ ಸುವಾಸನೆ: ಸಮಿಧೆಗಳನಾಂತು ಪೊಣ್ಮುವ ಹವ್ಯಾಮೋದದಿನಘಪರಿಹಾರಕಮಾದೀ ವೈತಾನವಹ್ನಿ ಸಲಹುಗೆ ನಿನ್ನಂ (ಶಾಕುಂತ. ೫೨-೮೬). [ಸಂ.]

ಹವ್ಯಾಶನ (ನಾ). = ಹವಿರ್ಭುಜ: "ಕೃಶಾನುವಗ್ನಿ ದಹನಂ ಹವ್ಯಾಶನಂ ವಹ್ನಿ" (ಪಾಪ್ರಕೋ. ೭-೩೯). [ಸಂ.]

ಹವ್ಯಾಸ (ನಾ). ೧. ಹೆಬ್ಬಯಕೆ; ಉತ್ಕಟವಾದ ಅಪೇಕ್ಷೆ: ಏನೇತಕೆ ಎಂಬುದೆ ಹವ್ಯಾಸ; ಇದನುಳಿದಾಗದು ಪದವಿನ್ಯಾಸ (ಅಹಲ್ಯ. iv); ತಮ್ಮದೇ ಆದ ದನ-ಧನಗಳನ್ನು ಮುಂದೆ ತಮ್ಮವರೇ ಆದ ಜನಕ್ಕೆ ಬಿಟ್ಟುಹೋಗಬೇಕೆಂಬ ಹವ್ಯಾಸ ಹುಟ್ಟಿತು (ಮಾವಾದ. ೭೨). ೨. ಚಟ; ಗೀಳು: ಈ ನಾಟಕದ ಹವ್ಯಾಸ ಬಿಟ್ಟು ಹಾರೋಫ್ಲೇನ್ ಕಂಪನಿಗೆ ಸೇರ್ಕೊಳ್ಳೂ ನರಸಿಂಹ (ಮಾಮನ. ೩೩); ಸ್ತ್ರೀವ್ಯಾಮೋಹವು ಅಂತಹುದು. ನೀನು ಈ ಹವ್ಯಾಸದಲ್ಲಿ ನಿನ್ನ ರಾಜ್ಯವನ್ನು ಕಳೆದುಕೊಳ್ಳುವಿ (ಶ್ರೀಕಾಯ. ೨೯೯). ೩. ಉತ್ಸಾಹ; ಆಸಕ್ತಿ: ತೋಟಗಾರಿಕೆಯಲ್ಲಿ ಮೊದಲಿನಿಂದಲೂ ಅವರಿಗೆ ಹವ್ಯಾಸ (ಪ್ರೇಮಾಶ್ರ. ೨೪೨); ನನಗೆ ತುಂಬಾ ಜನಸೇವೆ ಮಾಡುವ ಹವ್ಯಾಸ (ಗಾಳಿಗು. ೧೩). ೪. ರೂಢಿ; ಅಭ್ಯಾಸ: ಪತ್ರಗಳಿಗಂತೂ ಉತ್ತರ ಕೊಡುವ ಹವ್ಯಾಸ ಇಲ್ಲವೇ ಇಲ್ಲ (ರೂಪಸಂ. ೫೧). [← ಮರಾ. ಹವ್ಯಾಸ; ಅರ. ಹಿಂ. ಹವಸ್]

ಹವ್ಯಾಸಿ (ಗು). ೧. ಯಾವುದಾದರೊಂದು ಕಲೆಯನ್ನು ವೃತ್ತಿಯಾಗಿ ಹೊಂದದೆ, ಕೇವಲ ಅಭಿರುಚಿಯ ಮೂಲಕ ತೊಡಗಿ, ಸಾಕಷ್ಟು ಅನುಭವವಿಲ್ಲದಿದ್ದರೂ ಪ್ರಯೋಗ ನಡೆಸುವ: ನಾಟಕ ಈಗೊಂದು ವೃತ್ತಿಯಾಗಿ ಉಳಿದಿಲ್ಲವಾದರೂ, ಹವ್ಯಾಸಿ ನಟರು ಹಾಗು ನಾಟಕಸಂಸ್ಥೆಗಳ ಮೂಲಕ ಜೀವಂತವಾಗಿದೆ (ರೂಢಿ). (ನಾ). ೨. "ಕಲಾಪ್ರೇಮಿ, ವಿನೋದಿ, ಹವ್ಯಾಸಿ, ಪ್ರವೇಶಿ, ಯಾವುದನ್ನೂ ಚೆನ್ನಾಗಿ ಅಭ್ಯಾಸ ಮಾಡದೆ, ಎಲ್ಲದಕ್ಕೂ ಕೈಹಾಕುವ(ವನು); ಅನನುಭವಿ" (Dilettante. ಇಂಕಿನ).

ಹವ್ಯಾಸಿ ಕಲಾವಿದ = ವೃತ್ತಿಯಾಗಿ ಅಲ್ಲದೆ ಕೇವಲ ಮನೋಲ್ಲಾಸಕ್ಕಾಗಿ ನಾಟಕ, ಸಂಗೀತ ಮುಂತಾದ ಯಾವುದಾದರೂ ಲಲಿತಕಲೆಯಲ್ಲಿ ತೊಡಗಿರುವ ವ್ಯಕ್ತಿ: ಹವ್ಯಾಸಿ ಕಲಾವಿದರ ಸಂಘದ ಉದ್ಘಾಟನೆ ಇಂದು ನೆರವೇರಿತು (ರೂಢಿ). ಹವ್ಯಾಸಿ ರಂಗಭೂಮಿ = ಹವ್ಯಾಸಿ ಕಲಾವಿದರು ಪ್ರಯೋಗ ನಡೆಸುವ ರಂಗಭೂಮಿ: ಹವ್ಯಾಸಿ ರಂಗಭೂಮಿಯಲ್ಲಿ ತರಬೇತಿ ಹೊಂದಿದ ಅನೇಕ ಕಲಾವಿದರು ಇಂದು ಪ್ರಖ್ಯಾತರಾಗಿದ್ದಾರೆ (ರೂಢಿ).

[ಹವ್ಯಾಸ + - ಇ ₃ ./ ಮರಾ. ಹವ್ಯಾಶೀ, ಹವ್ಯಾಸೀ]

ಹವ್ವನೆ 'ಪವ್ವನೆ' ನೋ.

ಹವ್ವಳಿಸು 'ಪವ್ವಳಿಸು₂' ನೋ.

ಹಷಾಮುಬಾರು (ನಾ). ಆಯುಧಪಾಣಿಗಳಾದ ಸೈನಿಕರ ಪಡೆ; ಸಶಸ್ತ್ರ ಸಿಪಾಯಿಗಳ ದಳ: ನಾಗಂಗಳೋಳ್ ಧ್ವಜವ ಪಿಡಿದು ಕುಳಿತಿರುವ ರನ್ನ ಹಷಾಮುಬಾರಿನವರಾ . . . ಕಂಡಮಾತ್ರದೊಳರಿಗಳೆದೆ ಬಿರಿಯದಿರ್ಪುದೇನೇ (ಅರ್ಜುನವಿ. ೨೪-೪೮). 'ಅಹಷಾಮ್' ಹೋ.

[ಹಷಾಮ್ಬು₁ (P ← ಮರಾ. ಹಶಾಮ್ = ಸಿಪಾಯಿ) + ಬಾರ್ದು₂ (< ಬಾರ್ತ್₂)]

ಹಷೀಷ್ (ನಾ). (ಹೊಗೆಸೇದಲು ಅಥವಾ ಅಗಿಯಲು ಒಣಗಿಸಿದ) ಭಂಗಿಯ ಗಿಡದ ತುದಿಯೆಲೆ; ಒಂದು ಬಗೆಯ ಮಾದಕದ್ರವ್ಯ: ಈ ಧೂರ್ತ ಮೂರುದಿನಗಳವರೆಗೆ ಅಂತಃಪುರವನ್ನು ಬಿಟ್ಟು ಹೋಗಿ ಹಷೀಷ್ ಸೇದುವ ದುರ್ವ್ಯಸನದಲ್ಲಿ ಮೈಮರೆತಿದ್ದಾನೆ! (ನಗಹೊ. ೨೩೩). [← ಅರ. ಪಾರ. ಹಷೀಷ್]

ಹಸ₁ 'ಪಸ₁' ನೋ.

ಹಸ₂ 'ಪಸ₂' ನೋ.

ಹಸ₃ (ನಾ). ಹಗ್ಗ; ಪಾಶ: ಕೊಯ್ದು ಖಂಡವ ಚುಚ್ಚಿ ಬಾಯೊಳಗಿಡಿವುತಲಿ ಹಸ ಬಿಟ್ಟು ನಾಯಿಗಳ ಕಚ್ಚಿ ಹರಿಸುತ ಕದುಕಿರಿದು . . . ಅಚ್ಚಪಾಪಿಯನಿಂತು ಕೊಂಡೊಯ್ಯರು ಕಣಾ (ಪ್ರಜ್ಞಾಚ. ೯-೪೦). 'ಪಾಸ₁' ಪರಾ. [< ಸಂ. ಪಾಶ]

ಹಸಂಗೆಡು 'ಪಸಗೆಡು' ನೋ.

ಹಸಂಗೆಯ್, ಹಸಗೆಯ್, ಹಸನಗ್ಗೆ (ಕ್ರಿ). ೧. ಸರಿಪಡಿಸು: ಕಲ್ಲಬಲೆಗಳಂ ಸರಗೊಳಿಸುತುಂ ಹಾಸಮಂ ಹಸಂ[ಪಾಠಾಂ. ಹಾಸು]ಗೆಯ್ಯುತುಂ . . . ತಂತಮ್ಮ ಪರಿವಿಡಿಯ ಜಾತಿವಿದ್ಯಂಗಳಿಂದೆಸೆವ ಲುಬ್ಧಾಶ್ರಯದ ವನಮೆಸೆದುದು (ಚಿಬಸು. ೫೩-೨೧). **ಹಸಗೆಯ್**: ೨. ಹಸನುಗೊಳಿಸು; ಶುದ್ಧಮಾಡು: ಲೋಹದಿಂದ ಕೀಳಂ ಹಡೆದ ಚಿನ್ನಮಂ ಪುಟಮುಖದಿ ಹಸಗೆಯ್ದು ತೆಱದಿ ನಾನಿನ್ನೊಮ್ಮೆ ಕರೆದವನ ದುರ್ಮಾರ್ಗಮಂ ಬಿಡಿಸಿ ನಿನಗೆ ತಕ್ಕಂತೆ ಮಾಳ್ಪೆಂ (ಸಮ್ಯಕೌ. ೬-೩೪); ಭೂವಳಯದಲ್ಲರ್ಪ ನರರ ಪುಣ್ಯದ ಬೆಳಸನೋವಿ ಹಸಗೆಯ್ಯಲೆಂದಬುಜಜಂ ರತ್ನದಿಂ ಕೇವಣಿಸಿ ನಟ್ಟ ಚಿನ್ನದ ಮೇಟಿಯಂತೆಸೆದು ತೋರ್ಪುದಾ ಮೇರುಶೃಂಗಲಂ (ಸಿದ್ಧೇಶ. ೧-೨೯). ೩. ಅಂದಗೊಳಿಸು; ಸೊಗಸುಗೊಳಿಸು: ತೊಳಗುವ ಕಪ್ಪುರದ ಹಳುಕಿಂ ಹಸೆEಸ3ಗೆಯ್ದುಕ್ಕಿದ ಹಾಹೆಯೊ (ಜಯಕಾ. ೧೩-೫೧); ಅಲ್ಲಿರ್ದಾ ದುರಗಲಿಗಳು ಮಾರ್ಮಸಗಿ ಅಸಿಗೊಳಲವರನೆಲ್ಲರವಿದ್ಯೆಯಿಂದ ತಂಬಸಿಲೆಪ್ಪದಿಂ ಹಸಗೆಯ್ದು ರಸಚಿತ್ರದಂತೆ ಕೀಲಿಸಿ ಬಹುಗಟ್ಟನುಬ್ಬಸಮಾಗುವಂದದಿ ಕಟ್ಟಿ (ನೇಮಿಸಂ. ೨೪-೧೧೪). **ಹಸನಗ್ಗೆ**: ೨. ಬಿತ್ತುವ, ಅಗಿಯುವ, ಹಸನಗ್ಗೆಯುವ, ಕೊರೆಯುವ, ರಾಶಿ ಮಾಡುವ ಸಲಕರಣೆಗಳೇ ಬೇರೆ (ಕನ್ನಡಾ. ೧೩೦).

[ಹಸ₂ (< ಪಸ₂) + ಕೆಯ್₁]

ಹಸಂತಿ (ನಾ). ಅಗ್ನಿಷ್ಟಿಕೆ; ಕುಮಟಿ: "ಬೆಸಳಿಗೆ ಹಸಂತಿಗೆ ಹಸಂತಿಯೆಂದೆನಿಸಿಕ್ಕು" (ಮಂಗರಾ. ೬೨-೨೩). [ಸಂ. ಹಸಂತೀ]

ಹಸಂತಿಕೆ₁ (ನಾ). = ಹಸಂತಿ: "ಹಸಂತಿಕೆ ಮತ್ತಂಗಾರ ಶಕಟಿ(ಕೆ)ಯದು ಹಸಂತಿಯುಮೆನಿಕುಂ" (ಪಾಪ್ರಕೋ. ೫೦-೨೮). [ಸಂ. ಹಸಂತಿಕಾ]

ಹಸಂತಿಕೆ₂ (ನಾ). ಮೇಲುಹೊದಿಕೆ; ಶಲ್ಯ; ವಲ್ಲಿ (?): ತಲೆಗಳಿಗೆ ಶಾಲುಗಳ ಸುತ್ತಿಕೊಂಡತಿಧವಳಲಲಿತಚೇಲದ್ವಯವನುಟ್ಟೊದ್ದು ಮತ್ತೆ ಕೋಮಲ ಹಸಂತಿಕೆಗಳನು ಪೊದಿಯುತ್ತ . . . ಎಪ್ಪತ್ತುನಾಲ್ಕು ಪೀಠಸ್ತ್ರೈದಿದರು ಬಲುಸಂಭ್ರಮದಲಿ (ಅರ್ಜುನವಿ. ೨೭-೧೪). [?]

ಹಸಂತಿಗೆ (ನಾ). = ಹಸಂತಿ: "ಬೆಸಳಿಗೆ ಹಸಂತಿಗೆ ಹಸಂತಿಯೆಂದೆನಿಸಿಕ್ಕು" (ಮಂಗರಾ. ೬೨-೨೩). [< ಸಂ. ಹಸಂತಿಕಾ]

ಹಸಕು 'ಹಸುಕು' ನೋ.

ಹಸಗಾರ (ನಾ). ಸೊಗಸುಗಾರ; ರಸಿಕ: ಹಸಗಾರಾ ತಿಮ್ಮಯ್ಯ ಯಾತ್ರಲ್ಲಿ ಉಂಡಾರು ಕಾಡಲ್ಲಿ ಬೆಳೆಯೋ ಬವನಾಸೀ (ಹುಟ್ಟಿಹ. ೧೧೩).

[ಹಸ₃ (< ಪಸ₂) + - ಕಾರ₁ (< - ಕಾಱ)]

ಹಸಗಾಲ (ನಾ). ಬರಗಾಲ; ಕ್ಷಾಮದ ಕಾಲ: ಹಸುಗೂಸುಗಳಿಗೆ ಹಾಲಂ ಹಸಿದರ್ಗನ್ನವನವಾ XXX ರೆ ನಿಚ್ಚಂ ಹಸಗಾಲದೊಳಂ ಸಲಿಸುವ ಬೆಸನದಿನಾರಾದಿಗೊಂಡನಂ ಪೋಲ್ವನ್ನರ್ (ಎಕ. V, ಬೇಲೂರು. ೧೩೭-೪೯; 1183).

[ಹಸ₁ (< ಪಸ₁) + ಕಾಲ]

ಹಸಗೆಡಿಸು 'ಪಸಗೆಡಿಸು' ನೋ.

ಹಸಗೆಡು 'ಪಸಗೆಡು' ನೋ.

ಹಸಗೆಯ್ 'ಹಸಂಗೆಯ್' ನೋ.

ಹಸಗೊಳಿಸು 'ಪಸಗೊಳಿಸು' ನೋ.

ಹಸಗೊಳ್ಳು 'ಪಸಂಗೊಳ್' ನೋ.

ಹಸತಿಗೆ (ನಾ). (?): ನಡುಗಂತಿಯಾದ ಹಸತಿಗೆಯ ಹ[ಪ್ರಾಕಾಂ. ಹಸರಿಗೆಯ ಹ, ಹೊಸತಿಕೆಯ ಪ]ಸುವಿನ ಮೊಸರು ಕಡೆದ ಹೊಸಬೆಣ್ಣೆಯಂ ಸೋದಿಸಿಯೊಲೆಯೊಳಿತ್ತ . . . ಸಲೆ ಕಾಸಿ ಬಳಿಕಿಳುಹಿಕೊಂಡೊಡನೆ ಗುಳವಿಟ್ಟು ಮತ್ತೊಂದು ಹಾಡಕ್ಕೆಜ್ಜೆದು ತುಪ್ಪಮಂ ಹಸಮಾಳ್ಪುದು (ಸೂಪಶಾ. ೨-೧೭). [?]

ಹಸದ 'ಪಸಾದ' ನೋ.

ಹಸದನ 'ಪಸದನ' ನೋ.

ಹಸನ$_1$ 'ಪಸ$_2$' ನೋ.

ಹಸನ$_2$ (ನಾ). ನಗುವಿಕೆ; ನಗೆ: ಮಾಚಯ್ಯಂ ಹರುಷಮಂ ತಾಳ್ದು . . . ಆಸನದೊಳು ಹಸನವಸೆಯೆ (ಬಸಪು. ೩೭-೨೪); ಅಲರ ಬಿಜ್ಜಣಿಗೆಯಿಂ ಬೀಸೆ ಬೀಸರಂಬೋದಂತೆ ಹಸನಂ ಹಸಂಗೆಡೆ (ರಾಜಶೇ. ೭-೯೨ ವ). [ಸಂ.]

ಹಸನಂಗೆಯ್ (ಕ್ರಿ). ನಗು; ನಗೆಬೀರು: ಅರಿಭೂಮಿಪರೆರ್ದಗಳನಾ ಚರಣದಿ ನೊದೆವಂತೆ ಕಾಲನಲ್ಲಾಡಿಸುವಂ ಪರಭೂಪಾಲರ ಬಾಳಂ ಪರಿಹಾಸ್ಯಂ ಮಾಡುವಂತೆ ಹಸನಂಗೆಯ್ವುಂ (ಹಮ್ಮೀ. ೨-೨೭). [ಹಸನ$_2$ + ಕೆಯ್$_1$]

ಹಸನಗ್ಗೆ 'ಹಸಂಗೆಯ್' ನೋ.

ಹಸನಿಗ (ನಾ). ಅಂದಗಾರ; ಸೊಗಸುಗಾರ: ತೊದಳ್ನುಡಿಯ ತವಕಿಗಂ ನಲಿವ ಮಾಗಾಯ ನವನರ್ತನದ ಹಸನಿ[ಪ್ರಾಕಾಂ. ಲಿ]ಗಂ ಬಳೆದೋಳ ಭಾಗ್ಯನಿಧಿ (ಬಸರ. ೧-೧೫೦); ಕುಪ್ಪಸದ ಬೀರಣೆಯ ದಿನ್ನಣದ ಹಸನಿ[ಪ್ರಾಕಾಂ. ರಿ, ಲಿ]ಗಂ ಬೊಪ್ಪಗೆಯ ಹೊಲವೇಷದಿಹಪರದ ಲೆಕ್ಕಿಗಂ (ಬಸರ. ೫-೫೯). [ಹಸನು (< ಪಸ$_2$) + - ಇಗ]

ಹಸನಿಸು (ಕ್ರಿ). (ಕಾಳುಗಳಲ್ಲಿಯ ಕಸಕಡ್ಡಿಗಳನ್ನು ತೆಗೆದು) ಶುದ್ಧಗೊಳಿಸು; ಹಸನುಗೊಳಿಸು: ಅಕ್ಕಿ ಬೇಳೆ ಹಸನಿಸುವಾಗ . . . ಕಾರಣ ಕೇಳಿದವರಿಗೆ ಹರಳು ಬಿತ್ತೆಂದು ನೆವ ಹೇಳುವಳು (ಕಪಪು. ೭-೨೩). [ಹಸನು (< ಪಸ$_2$) + - ಇಸು$_3$]

ಹಸನೀಲಿ (ನಾ). ಅಪ್ಪಟ ನೀಲಿಬಣ್ಣ; ಅಚ್ಚ ನೀಲವರ್ಣ: ಹಸನೀಲಿಯ ಕಣ್ಣು ನಸುಗಂಪನಲಿ ನಿಂತು ಅಸು ಬೆಳಗಿನಲ್ಲಿ ಕೂಡಿತ್ತು (ಸಿದ್ಧಪ್ರ. ೩-೫).

[ಹಸ$_2$ (< ಪಸ$_2$) + ನೀಲಿ]

ಹಸನು 'ಪಸ$_2$' ನೋ.

ಹಸನುಗೊಳಿಸು 'ಪಸಗೊಳಿಸು' ನೋ.

ಹಸನುಪ್ರತಿ (ನಾ). ಬರವಣಿಗೆಗಳ ಓರೆಕೋರೆಗಳನ್ನು ತಿದ್ದಿದ ಪ್ರತಿ; ಪಕ್ಕಾಪ್ರತಿ: ಅಂದಿನ ಟಪಾಲಿಗೆ ಹೋಗಬೇಕಾದ ಕಾಗದಪತ್ರಗಳ ಹಸನುಪ್ರತಿಗಳನ್ನು ಸರಿನೋಡಿರುದು ಹಾಕಿ . . . ಸಂಚಾರ ಹೊರಡುವುದು ಅವರ ಬೆಂಗಳೂರಿನ ದಿನಚರಿಯಂತೆ (ಸಂಬಾರು. ೮೭). [ಹಸನು (< ಪಸ$_2$) + ಪ್ರತಿ]

ಹಸನುಹನಿ (ನಾ). ಸ್ವಚ್ಛವಾದ ನೀರಿನ ಬಿಂದು: ಬಸಿಲುಕಾಲದ ಬೇಗೆ ತಾಳದ ಕುಸುಮಗಳು ಬಾಯಾರಲು ಹಸನುಹನಿಗಳ ಕಡಲು ಹೊಳಿಗಳ ದೆಸೆಯೊಳೀಂಟುತ ಸುರಿವನು (ಕವಪ. ೨೯-೨). [ಹಸನು (< ಪಸ$_2$) + ಹನಿ$_3$ (< ಪನ್ನಿ$_2$)]

ಹಸನ್ಮುಖ (ನಾ). ೧. ನಗುಮುಖ; ನಗೆಮೊಗ: ಒಂದೆರಡು ಬಾರಿ ಆ ವಿಷಯವಾಗಿ ನಾವು ಪ್ರಶ್ನಿಸಿದಾಗ ಅಲ್ಲಿದ್ದ ಅಧಿಕಾರಿಣಿಯೊಬ್ಬಳು . . . ಹಸನ್ಮುಖದಿಂದ ಉತ್ತರ ಕೊಟ್ಟಿದ್ದಳು (ಸಂಬಾರು. ೯೭). ೨. ನಗುಮೊಗದವನು; ಪ್ರಸನ್ನವಾದ ಮುಖವುಳ್ಳವನು: ಬಾವಾಜಿ ಹಸನ್ಮುಖನಾಗಿ, ಕುಳಿತುಕೊಳ್ಳಿರೆಂದು ಸನ್ನೆಮಾಡಿದ (ಕುಂಬಾಮ. ೨೫). [ಸಂ.]

ಹಸನ್ಮುಖಿ$_1$ (ನಾ). ನಗುಮೊಗದವಳು; ಪ್ರಸನ್ನಮುಖಿಮುದ್ರೆಯವಳು: ವಜ್ರಾಯುಧಂಗಂ ಹಸನ್ಮುಖಿ ಲಕ್ಷ್ಮೀಮತಿಗಂ ಪುರಾತನೆಭವಸ್ನೇಹಕ್ಕೆ ಪುಣ್ಯಂ ಮಹಾಸುಖಮಾಗುತ್ತಿರ ಬಂದು ಪುಟ್ಟಿ ಗುರುವುಂ ತಾನುಂ ಮನಂಗೊಂಡರ್ . . . ಕ್ಷೇಮಂಕರಾಧೀಶನಂ (ಶಾಂತಿಪು. ೭-೧೨೧): ಎಲ್ಲವನ್ನೂ ನುಂಗಿಕೊಂಡು . . . ಹೊರಗೆ ಹಸನ್ಮುಖಿಯಾಗಿಯೇ ತೋರುತ್ತಿದ್ದಳು (ಹೊಸಕ್ಕ. ೨೨). [ಸಂ. ಹಸನ್ಮುಖೀ]

ಹಸನ್ಮುಖಿ$_2$ (ನಾ). ನಗುಮೊಗದವನು; ಪ್ರಸನ್ನತೆಯನ್ನು ಸೂಸುವ ಮುಖವುಳ್ಳವನು: ತನ್ನಷ್ಟು ಸುಖಿ ಯಾರೂ ಇಲ್ಲ ಎನ್ನುವಂಥ ಹುಮ್ಮಸ್ಸಿನಿಂದ ರಾಯರು ಹಸನ್ಮುಖಿಗಳಾಗುತ್ತಿದ್ದರು (ವಾತ್ಸಲ್ಯ. ೨೯); ಐತಾಳರು ಮಗುವಿನ ಮುಖವನ್ನು ಕಂಡು ಹಸನ್ಮುಖಿಗಳಾದರು (ಮರಮ. ೧೨೦). [ಸಂ. ಹಸನ್ಮುಖಿನ್]

ಹಸರ 'ಪಸರ' ನೋ.

ಹಸರಗಣ್ಣಿ (ನಾ). ಒಂದು ಬಗೆಯ ಮರ: ಮರಗಳು . . . ಕಮರಕ, ಮುರಕಲಿ, ಹಸರಗಣ್ಣಿ, ತುಪರ (ನಮ್ಮನು. ೨೩೬). 'ಹಸುರ್ಗಣ್ಣಿ' ಪರಾ. [?]

ಹಸರಣೆ 'ಪಸರಣ' ನೋ.

ಹಸರದುಱುಗಲು (ನಾ). ದೊಡ್ಡರಾಶಿ: ಬಸನೆಣನ ಹರಹಿದ ಹಸಿಯ ತೊಗಲಿನ ತಳತ ಖಂಡದ ಹಸರದುಱುಗಲ ಕಾಳಿದನ ಜಂಗಡೆಯ ಗಳಗೆಗಳ . . . ಕೋದ ಮಿನಂಗಡಿಯಲ್ಕೆತಂದ (ಕುವ್ಮಾಳ. ೧೫-೮).

[ಹಸರ (< ಪಸರ) + ತುಱುಗಲ್ (< ತುಱುಂಗಲ್)]

ಹಸರವಿಕ್ಕು (ಕ್ರಿ). ವರ್ಣಿಸು; ವಿವರಿಸು: ರಸಿಕದಂಪತಿಗಳು ಕೂಡಿದರೆನೆ ಸಾಕು . . . ಅಂತುಟಿಂತುಟಾಡಿದರೆಂದು ಹಸರವಿಕ್ಕುವುದಾವ ಜಾಣ್ಮೆ (ಭರಚ. ೧೦-೧೦೨).

[ಹಸರ (< ಪಸರ) + ಇಕ್ಕು]

ಹಸರವಿಡಿ (ಕ್ರಿ). (ಬೆಳೆದು) ಹೆಚ್ಚಾಗು; ಅಧಿಕವಾಗು: ಹರಭಕ್ತಿ ಹಸರವಿಡಿದಿರದೆ ಹರಿದಾಡಿ ಮೆಲ್ಪೊರೆದ ನುಡಿವದಿರಿನಿಂ ಕೈಮುಗಿವುತಂ ಕರಗಿ ಕಾಸಿದ ತುಪ್ಪದೊರೆವುಗ್ಗಡಂ ತೂಕ ಸರಿಯೆಂದು ಹುಸಿವ ಪರಿಯಂ ನೆನೆವುದು (ಶಾನಂಚ. ೫-೨೬).

[ಹಸರ (< ಪಸರ) + ಪಿಡಿ$_1$]

ಹಸರಾಣಿಬಳ್ಳಿ, ಹಸುರಾಣಿಬಳ್ಳಿ (ನಾ). ಒಂದು ಬಗೆಯ ಬಳ್ಳಿ: (ಪ). **ಹಸುರಾಣಿಬಳ್ಳಿ**: ನರಂಬಬಳ್ಳಿ, ಹಸುರಾಣಿಬಳ್ಳಿ, ಭೂಚಕ್ರಬಳ್ಳಿ (ಮೃಡಿಗ. ೨೪-೪೪೪).

[? + ಬಳ್ಳಿ]

ಹಸರಿಕೆ 'ಪಸರಿಕೆ' ನೋ.

ಹಸರಿಗ 'ಪಸರಿಗ' ನೋ.

ಹಸರಿಸು 'ಪಸರಿಸು' ನೋ.

ಹಸರು$_1$ 'ಪಸರ್' ನೋ.

ಹಸರು$_2$ 'ಪಸುರ್$_2$' ನೋ.

ಹಸರುಕಟ್ಟಿಗೆ (ನಾ). ಒಂದು ಬಗೆಯ ದಂಡ: ಗಗ್ಗರಿಕಟ್ಟಿಗೆ ೩೦, ಬೆಳ್ಳಿಕಟ್ಟಿಗೆ ೫೦, ಹಸರುಕಟ್ಟಿಗೆ ೫೦ (ಗಾಯಾದ. ೧೦). [? + ಕಟ್ಟಿಗೆ,]

ಹಸರುಕಾಯಿ 'ಪಸುರ್ಗಾಯ್' ನೋ.

ಹಸರುಗುಬ್ಬ 'ಹಸುರುಗುಬ್ಬಿ' ನೋ.

ಹಸರುನೀರುಪಾತ್ರೆ (ನಾ). ಒಂದು ಬಗೆಯ ಬಳ್ಳಿ: ''ಕೊಟ್ಟಿಗೆಣಸುಬಳ್ಳಿ, ಹಸರುನೀರುಪಾತ್ರೆ'' (ಮೃಡಿಗ. ೫೮-೧೦೭೪). [?]

ಹಸರುನೂಲಿಗ 'ಹಸುರುನೂಲಿಗೆ' ನೋ.

ಹಸರುವಾಣಿ 'ಹಸುರುವಾಣಿ' ನೋ.

ಹಸರುವಾಣಿಚಪ್ಪರ 'ಹಸುರುವಾಣಿಚಪ್ಪರ' ನೋ.

ಹಸರ್ವಾಣಿ 'ಹಸುರುವಾಣಿ' ನೋ.

ಹಸಲು (ನಾ). ೧. ಒಂದು ಬಗೆಯ ಭೂಮಿ,— ಜಮೀನು: ಮಾನ್ಯಮಾಗೆ ಪಿಣ್ಣಿಕ್ಕೆ ಬಿಟ್ಟ ಕರ್ಮಣ್ಯಗೇರಿಯ ಎರೆಯ ಹಸಲು ಹನ್ನೆರಡೆಂಬುದು ಮತ್ತರು ೩ ಕಮ್ಮಂ ೩೦೦ (ಪಾಇಇ. IX-i. ೨೦೩-೨೫; 1122); ಆಗ್ನೇಯದಲು ಬೆದಲು ಹಸಲು (ಎಕ. VI. ಕಡೂರು. ೧೦೪-೬೭; 1141). ೨. (?): ಯಿ ಧರ್ಮ್ಮಸ್ಥಳಂಗಳನು ಬದ್ದು ೧ ಪುರಾಣವನು ನಡಸಿ ತಂನ್ತ ತನ್ನ ಸಂತತಿ ಸಂತತಿ ಉಳ್ಳಂನ್ನಬರ ಹಿರಿಯರಾಗಿ ಹುಟ್ಟದವರೆ ಆಚಂದ್ರಾರ್ಕ್ಕಸ್ಥಾಎ ಎಗ್ಗು ಸುಖದಿಂ ಬಾಳುವರು ಹುಟ್ಟದವನ ಹಸಲು ಸಲ್ಲ ಕೊಟ್ಟವನ ಅರ್ತ್ತ ಸಲ್ಲ (ಕಾ. I. ೫೩-೬೨; 1433). [?]

ಹಸಲುಗೂಳು (ನಾ). ಪಕ್ವಾನ್ನ; ಮೃಷ್ಟಾನ್ನ (?): ಪರಿಪಂತಿವಿಡಿದು ಕವಿಗಳ ಗಮಕಿಗಳ ವಾದಿಗಳ . . . ಮನ್ನಣೆಯ ಮಾನಿಸರು ಮುಮ್ಮರೆನಲೆಡೆಗೊಂಡ ಸಕಲಪರಿಜನವೆರಸಿ ಸವಿದು ಸಂಗಡ ಹಸಲು[ಪಾಶಾಂ. ಕಲಸು]ಗೂಳುಂಡನಿನಕುಲಲಲಾಮ (ಪಚಕಾ. ೩-೫೯). [ಹಸಲು$_1$ + ಕೂಳು$_2$ (< ಕೂಱ್$_3$)]

ಹಸಲೆ 'ಪಸಲೆ' ನೋ.

ಹಸವಳಿ (ಕ್ರಿ). ಅಂದಗೆಡು; ರೂಪುಗೆಡು: ಹುಳು ಮೈಯನು ಕೊರೆಯೆ ಚೆಂದವಿದು ಹೊರೆಯೆ ಹಸವಳಿದಿರೆ ಎಸಳು. ನಿನ್ನ ಜನ ಮುಸು(ಜಾಸಗ. ೮-೧೩)

[ಹಸ$_2$ (< ಪಸ$_2$) + ಅಳಿ$_1$ (< ಅಱ್$_1$)]

ಹಸಾಕಳಕಾಯಿ (ನಾ). ಒಂದು ಬಗೆಯ ಕಾಯಿ: "ಕರ್ಕಟಕಾ - ಮಧೂ?, ಖರ್ಜೂರ, ಹಸಾಕಳಕಾಯಿ, ಬೆಳ್ಳಿ, ಬೈಗಿಯ ತಿರುಳು?" (ಒಷಧಿ. ೨೫). [?]

ಹಸಾದ 'ಪಸಾದ' ನೋ.

ಹಸಾಳೆ 'ಹಸಿಯಳೆ' ನೋ.

ಹಸಿ$_1$ 'ಪಸಿ$_1$' ನೋ.

ಹಸಿ$_2$ 'ಪಸಿ$_3$' ನೋ.

ಹಸಿಕಟ್ಟಿಗೆ (ನಾ). ಒಣಗದ ಸೌದೆ; ಹಸಿಸೌದೆ: ಆದರೆ ಅದೇ ಹಸಿಕಟ್ಟಿಗೆಯನ್ನು ನಂಬಿ ಅವರು ಬದುಕಬೇಕು (ಮರಮ. ೯). [ಹಸಿ$_2$ (< ಪಸಿ$_2$) + ಕಟ್ಟಿಗೆ$_1$]

ಹಸಿಕಲು (ನಾ). ಜೋಡಣೆ; ಸೇರಿಕೆ: ಮಸಿಯ ಮಣ್ಣನೆ ಪೂಸಿ ಕೊರಳಲಿ ಹಸಿಯ ಸೂಪ್ಪನೆ ಕಟ್ಟಿ ಪೀಲಿಯ ಹಸಿಕಲನು ಬಿಗಿದುಟ್ಟು ಭುಜದೊಳು ಹೊಯ್ದು ಬಲುಗೇರ . . . ಪಂಜ ಹಿಡಿದೀ ವಸುಧೆಯೊಳು ತಿಱಿದುಂಬುದೊಳ್ಳಿತ ಮಗನೆ ನಿನಗೆಂದ (ಪ್ರಭ್ಲಾಚ. ೧೧-೫೫). [?]

ಹಸಿಗೆ 'ಪಸುಗೆ' ನೋ.

ಹಸಿಗೆಕೊಳಗ (ನಾ). ಒಂದು ಅಳತೆಯ ಕೊಳಗ ,— ಅಳೆಯುವ ಕೊಳಗ: ತಾಳೂರ ಹಸಿಗೆಕೊಳಗದಲು ಬೀಜವರಿ ಗದ ಪಂಡುಗ ೧ ವೂಂದು ಖಂಡುಗ ಬೀಜವರಿಯ ಗದೆಯ ಸ್ಥಳವನು ಕೊ [ಟೆಇ] (ಸೌಇಇ. IV, ೨೫೦-೪; 1521). [ಹಸಿಗೆ$_1$ + ಕೊಳಗ$_1$]

ಹಸಿಗೆಪಟ್ಟಿ (ನಾ). ಉತ್ಪನ್ನವನ್ನು ವಿಭಾಗಿಸಿದ ವಿವರಗಳನ್ನೊಳಗೊಂಡ ಲೆಕ್ಕದ ವಿವರ ,— ಹಂಚಿಕೆ ಪಟ್ಟಿ: (ಕ). [ಹಸಿಗೆ (< ಪಸುಗೆ) + ಪಟ್ಟಿ$_2$]

ಹಸಿಗೆಮುತ್ಸದ್ದಿ (ನಾ). ಉತ್ಪನ್ನ ವಿಭಾಗದ ಲೆಕ್ಕವಿಡುವ ಕರಣಿಕ: (ಕ).

[ಹಸಿಗೆ (< ಪಸುಗೆ) + ಮುತ್ಸದ್ದಿ]

ಹಸಿಗೋಡೆ (ನಾ). ಇನ್ನೂ ಒಣಗದಿರುವ ಮಣ್ಣಿನ ಗೋಡೆ: ಹಸಿಗೋಡೆಯಲ್ಲಿ ಹರಳು ನಟ್ಟು ಹಾಗೆ (ಗಾದೆ). [ಹಸಿ$_2$ (< ಪಸಿ$_3$) + ಗೋಡೆ]

ಹಸಿತ (ಗು). ೧. ನಕ್ಕ; ನಗೆಯಿಂದ ಕೂಡಿದ: ಹಸಿತಮುಖದಿಂದಾ ಕದಹುಗಳ ದಸೆಯನು ದಿಟ್ಟಿಸಲು (ಬಸಪು. ೨೮-೫೦). ೨. ಅರಳಿದ; ವಿಕಸಿತವಾದ. (ನಾ). ೩. ಅರಳುವಿಕೆ; ವಿಕಾಸ: "ವಿಕಾಸಮುಜ್ಜೃಂಭಿತಂ . . . ಹಸಿತಂ ವಿಕಸಿತಮುನ್ಮೀಲಿತಂ ವಿನಿದ್ರಮೆನಿಕ್ಕುಂ" (ವಸ್ತುಕೋ. ೩೧-೧೦). ೪. ನಗೆ; ಹಾಸ: ಹಸಿತಯಶಃ ಪ್ರಭೃತಿಯೊಳುಲ್ಲಸಿತಂ ಸಿತಭಾವಂ . . . ಕೋಪರಾಗಪ್ರಸರದೊಳಾರಕ್ತವರ್ಣಮಭಿವರ್ಣಿಸುಗುಂ (ಕಾವ್ಯಾವ. ೮೬೧). [ಸಂ.]

ಹಸಿಬಿಸಿ 'ಪಸಿ$_3$' ಪರಾ.

ಹಸಿಬೆ 'ಪಸುಂಬೆ' ನೋ.

ಹಸಿಬೆಚೀಲ (ನಾ). ಮಧ್ಯದಲ್ಲಿ ಬಾಯಿಯಿದ್ದು ಭುಜದ ಮೇಲೆ ಹಾಕಿಕೊಂಡಾಗ ಎರಡೂ ಕಡೆ ಬರುವಂಥ ಉದ್ದದ ಚೀಲ: ಆ ವೃದ್ಧರು ಹೆಗಲ ಮೇಲೆ ಹಸಿಬೆಚೀಲ ಹಾಕಿಕೊಂಡು ಬರುತ್ತಿದ್ದಾರೆ (ರೂಢಿ).

[ಹಸಿಬೆ (< ಪಸುಂಬೆ) + ಚೀಲ]

ಹಸಿಮಜ್ಜಿಗೆ (ನಾ). ಮಜ್ಜಿಗೆಯಿಂದ ತಯಾರುಮಾಡುವ (ಕುದಿಸದಿರುವ) ಒಂದು ಬಗೆಯ ವ್ಯಂಜನಪದಾರ್ಥ: "ತೇಮನಂ, ನಿಷ್ಕಾನಂ - ೨ ತೇವನವೆಂಬ ಮಜ್ಜಿಗೆಪಳಿದ್ಯ, ಹಸೀಮಜ್ಜಿಗೆ, ಹಸೀಯಾಳೆ, ಮಸರುಚಟ್ಟಿ" (ಸಿದ್ಧಾಂತಿ. ೨೮೬). 'ಹಸಿಯಳೆ' ಪರಾ. [ಹಸಿ$_2$ (< ಪಸಿ$_3$) + ಮಜ್ಜಿಗೆ]

ಹಸಿಮಡಕೆ (ನಾ). ಇನ್ನೂ ಆವಗೆಗೆ ಹಾಕದಿರುವ ಮಡಕೆ; ಸುಡದಿರುವ ಮಡಕೆ: ಭಯಂಕರವ್ಯೂಹಗಳು ಹಸಿಮಡಕೆಯಂತೆ ಚೆಲ್ಲಾಪಿಲ್ಲಿಯಾಗುವುವು (ಬಾಣಅ. ೧೪೨). [ಹಸಿ$_2$ (< ಪಸಿ$_3$) + ಮಡಕೆ$_1$]

ಹಸಿಮೆಣಸಿನಕಾಯಿ (ನಾ). (ಅಡುಗೆಯಲ್ಲಿ ಕಾರಕ್ಕಾಗಿ ಬಳಸುವ) ಹಸಿಯದಾದ ಮೆಣಸಿನಕಾಯಿ: ಊಟಕ್ಕೆ ಕೂತುಕೊಳ್ಳುವ ಮೊದಲು, ಮನೆಯ ಹಿತ್ತಲಿಗೆ ಹೋಗಿ ನಾಲ್ಕು ಹಸಿಮೆಣಸಿನಕಾಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಬಂದಿದ್ದನು (ಮರಮ. ೧೦೮). [ಹಸಿ$_2$ (< ಪಸಿ$_3$) + ಮೆಣಸಿನಕಾಯಿ]

ಹಸಿಮೈ (ನಾ). ಮದುವೆಯ ಸಂದರ್ಭದಲ್ಲಿ ವಧೂವರರ ಮೈಯ ಅರಿಸಿನ ಇನ್ನೂ ಮಾಸದಿರುವಾಗ ಅಥವಾ ಹೆಣ್ಣುಮಕ್ಕಳಿಗೆ ಹೆರಿಗೆ, ಋತು ಮುಂತಾದುವುಗಳಾದ ಹೊಸದರಲ್ಲಿ ದೃಷ್ಟಿ ತಾಗುವ ಸಂಭವವಿರುವ ದೇಹ: ಹಸಿಮೈಯೊಳಗ ಈಗ ಯಾತಕ್ಕ ಬರತಾನ ಬಾಟು ? (ಅಶೋಕ. ೨೧).

[ಹಸಿ$_2$ (< ಪಸಿ$_3$) + ಮೈ (< ಮೆಯ್$_2$)]

ಹಸಿಯಕ್ಕಿ (ನಾ). ೧. ಬೇಯಿಸದೆ ಇರುವ ಅಕ್ಕಿ: ರುಚಿಯಿಲ್ಲದಿದ್ದರೆ ಹಸಿಯಕ್ಕಿ ತಿಂದಾನು (ರೂಢಿ). ೨. ನೆನೆದ ಅಕ್ಕಿ; ನೆನೆಯಕ್ಕಿ: ಗೌರಿಯ ನೈವೇದ್ಯಕ್ಕೆ ಹಸಿಯಕ್ಕಿ ತಂಬಿಟ್ಟು ಸಿದ್ಧವಾಗಿವೆ (ರೂಢಿ). [ಹಸಿ$_2$ (< ಪಸಿ$_3$) + ಅಕ್ಕಿ$_1$]

ಹಸಿಯಡಕೆ 'ಪಸಿ$_3$' ನೋ.

ಹಸಿಯಲ್ಲ (ನಾ). ಹಸಿಯ ಶುಂಠಿ: "ಆರ್ದ್ರಕಮೆನಲ್ ಶೃಂಗವೇರಮೆನ ಹಸಿಯಲ್ಲವಕ್ಕು" (ಮಂಗರಾ. ೪೧-೩೫). [ಹಸಿ$_2$ (< ಪಸಿ$_3$) + ಅಲ್ಲ$_1$]

ಹಸಿಯಳೆ, ಹಸಾಳೆ, ಹಸಿವಾಳೆ (ನಾ). ಒಂದೆಲಗನ ಸೊಪ್ಪು ನೆಲ್ಲಿಕಾಯಿ ಮುಂತಾದುವುಗಳಲ್ಲಿ ಒಂದನ್ನು; ಹಸಿಯಾಗಿಯೇ ತೆಂಗಿನ ತುರಿ, ಉಪ್ಪು, ಮಸಾಲೆಗಳ ಜೊತೆ ರುಬ್ಬಿ ಮೊಸರು ಅಥವಾ ಮಜ್ಜಿಗೆ ಬೆರಸಿ ತಯಾರಿಸುವ ಒಂದು ಬಗೆಯ ವ್ಯಂಜನಪದಾರ್ಥ; ಹಸಿಮಜ್ಜಿಗೆ: ಅಳಿಯೊಳೇಲಕ್ಕಿ ಸ್ಥಂಭವ ಬೆಲ್ಲವತ್ತ ಮಾಗುಳಿಯಲ್ಲ ಕರಿಬೇವು ಸವೆದ ಸಾಸುವೆ ಮಾವಿನೆಳಗಾಯಿ ಕೊತ್ತುಂಬರಿಯನಿಕ್ಕಿ . . . ಮಾಡಿದೊಡೆ ಹಸಿಯಳೆಯಸನವೆಂದು ಹೆಸರಾಗಿ (ಸೂಪಶಾ. ೩-೨೯). **ಹಸಾಳೆ:** ಕಣ್ಣಾಪಂಡಿತರು ಹೇಳ್ದ್ರು, ಇಲಿಕಿವಿಸೊಪ್ಪಿನ ಹಸಾಳೆ ಮಾಡಿಕೊಂಡು ಕುಡಿಯಾಕೆ ii (ಮಲೆಮ. ೧೮೫). **ಹಸಿವಾಳೆ:** ಸಾಮಾನ್ಯವಾಗಿ ಮೊದಲನೆಯ ಅನ್ನಕ್ಕೆ ಹಸಿವಾಳೆಯನ್ನು ಬಡಿಸುತ್ತಾರೆ (ರೂಢಿ). [ಹಸಿ$_2$ (< ಪಸಿ$_3$) + ಅಳೆ$_2$]

ಹಸಿಯಿಸು (ಕ್ರಿ). ಹಸಿದಿರುವಂತೆ ಮಾಡು; ಉಪವಾಸವಿರಿಸು: ಮಾನಿನಿಯರ ಹಸಿಯಿಸಿ ತಾನು ಇನಿತು ಪ್ರಯಾಸವ ಮಾಡುವುದುಚಿತವೆ (ಧರಚ. ೧೯-೬೫).

[ಹಸಿ$_1$ (< ಪಸಿ$_1$) + - ಇಸು$_3$]

ಹಸಿರು 'ಪಸುರ್$_2$' ನೋ.

ಹಸಿರುಗಟ್ಟು 'ಪಸುರ್ಗಟ್ಟು' ನೋ.

ಹಸಿರುಗನ್ನಿ 'ಹಸುರ್ಗನ್ನೆ' ನೋ.

ಹಸಿರುಮುರಿ$_1$ 'ಹಸುರುಮುರಿ' ನೋ.

ಹಸಿರುಮುರಿ$_2$ (ನಾ). ಹಳದಿಬಣ್ಣದಿಂದ ಆವೃತವಾಗಿರುವುದು: ನನ್ನ ಕಣ್ಣುಗಳನ್ನು ಅದೇತಕ್ಕೋ ಹೋಲಿಸುತ್ತಿದ್ದಿರಿ. ಅವೀಗ ಹಸಿರುಮುರಿಯಾಗಿವೆ (ಸುವಸಂ. ೨೬). [ಹಸಿರು (< ಪಸುರ್$_2$) + ಮುರಿ$_3$ (< ಮುರಿವು)]

ಹಸಿರುವಾಣಿ 'ಹಸುರುವಾಣಿ' ನೋ.

ಹಸಿರುವಾಣಿಚಪ್ಪರ 'ಹಸುರುವಾಣಿಚಪ್ಪರ' ನೋ.

ಹಸಿರುಹಣೆ (ನಾ). (ಕುಂಕುಮವಿಲ್ಲದ) ಹಚ್ಚೆಯ ಹಸುರು ಕಲೆ ಇರುವ ಹಣೆ; ವಿಧವೆಯ ಹಣೆ: ಎತ್ತರದ ಹಸಿರುಹಣೆ ಹಾಳ ಬಿತ್ತರಿಸುತಿದೆ (ಗಂಗಾತ. ೬೧-೧೭). [ಹಸಿರು (< ಪಸುರ್$_2$) + ಹಣೆ$_1$ (< ಪಣೆ$_1$)]

ಹಸಿವಾಳೆ 'ಹಸಿಯಳೆ' ನೋ.

ಹಸಿವು 'ಪಸಿ$_2$' ನೋ.

ಹಸಿವೆ (ನಾ). ೧. ಹಸಿವು; ಕ್ಷುಧೆ: ಹುಲಿಯು . . . ನೆಟ್ಟಗೆ ಹಸಿವೆಯಾಗುವ ತನಕ ಸುಮ್ಮನೆ ತನ್ನ ಗವಿಯೊಳಗೆ ಬಿದ್ದುಕೊಂಡಿರುತ್ತದೆ (ಮುಂಬಯಿ. ೪-೩೬); ಉದಂಕನು ದಾರಿ

ನಡೆದು ಹೋಗುತ್ತಿರಲು ಅವನಿಗೆ ಹಸಿವೆಯಾಯಿತು (ಮಣಿಸ. ೬೭); ಹಸಿವೆಗೆ ಬಾಯ್ಸುವಿ ಬೇಡ, ನಿದ್ದೆಗೆ ಹಾಸಿಗೆ ಬೇಡ (ಗಾಡಿ). ೨. ಆಸೆ; ಬಯಕೆ; ಅಪೇಕ್ಷೆ: ಮಾತಿನಿಂದ, ಉಣಿಸಿನಿಂದ, ತಿನಿಸಿನಿಂದ, ಚೇಷ್ಟೆಯಿಂದ ಇನ್ನಾವದರಿಂದಾಗಲಿ ನಿಮ್ಮ ಸಾವಿರ ಹಸಿವೆಗಳನ್ನೂ ತೃಪ್ತಿಪಡಿಸಿಕೊಳ್ಳಿರಿ (ಸಂಜೀವ. ೧೮೪); ಜ್ಞಾನದ ಹಸಿವೆಯಿಂದ ಬಂದವರಿಗೆ ಆನಂದವಾಗುವಂತಿರಬೇಕು (ಗ್ರಂಥಾಲ. ೫). [ಹಸಿ$_1$ (< ಪಸಿ$_1$) + - ವೆ]

ಹಸಿಶುಂಠಿ (ನಾ). = ಹಸಿಯಲ್ಲ: ೪ ಒಣಮೆಣಸು, ೩ ತುಂಡು ಹಸಿಶುಂಠಿ (ಅಡುಸಾ. ೧೦೯). [ಹಸ್ಸಿ$_2$ (< ಪಸ್ಸಿ$_3$) + ಶುಂಠಿ]

ಹಸಿಸುಣ್ಣ (ನಾ). ಒದ್ದೆಯಾದ ಸುಣ್ಣ; ನೀರಿನಲ್ಲಿ ಹಾಕಿ ಅರಳಿಸಿದ ಸುಣ್ಣ: ಮನೆಗೆ ಬಳಿಯಲು ಹಸಿಸುಣ್ಣ ಬೇಕು (ರೂಢಿ). [ಹಸ್ಸಿ$_2$ (< ಪಸ್ಸಿ$_3$) + ಸುಣ್ಣ]

ಹಸಿಹಿಟ್ಟು (ನಾ). (ಅಡುಗೆಗೆ ಬಳಸುವ) ಹುರಿಯದೆ, ನೆನೆಸದೆ ಅಥವಾ ಬೇಯಿಸದೆ ಇರುವ ಅಕ್ಕಿ, ರಾಗಿ ಮುಂತಾದ ಧಾನ್ಯಗಳ ಹಿಟ್ಟು: ರಾಗಿ ಮಾಡಬೇಡವ, ಹಸಿಹಿಟ್ಟು ಬೀಸಬೇಡವ . . . ಹೊಟ್ಟೆಗಿಲ್ಲದೆ ಇದೆಲ್ಲಾ ಮಾಡಕಾದೀತಾ? (ಮುಸುಗ. ೧೫೦). [ಹಸ್ಸಿ$_2$ (< ಪಸ್ಸಿ$_3$) + ಹಿಟ್ಟು (< ಪಿಟ್ಟು)]

ಹಸು$_1$ 'ಪಸು$_3$' ನೋ.

ಹಸು$_2$ 'ಪಸು$_4$' ನೋ.

ಹಸುಂಬ 'ಪಸುಂಬ' ನೋ.

ಹಸುಂಬೆ 'ಪಸುಂಬೆ' ನೋ.

ಹಸುಕು, ಹಸಕು (ನಾ). ೧. ಹಸಿಯಾಗಿರುವುದು: ಹಸುಕು ಕಸುಕಿನ ಹಸುರು ಹಣ್ಣಿನಾ ಹೊಸಹಳದಿ ನುಸುಕಿನಾ ನೀಲಿ ಮುಂಜಾವಿನಲ್ಲಿ (ನನಲ್ಲ. ೧೪-೨೩). ೨. ಪಕ್ವವಾಗಿ ಬೇಯದಿರುವುದು; ಅರಬರೆ ಬೆಂದಿರುವುದು: ಅನ್ನ ಹಸುಕಾಗಿದೆ (ರೂಢಿ). ೩. (ಹಸಿಯಾಗಿರುವುದರಿಂದ ಉಂಟಾಗುವ) ಕೆಟ್ಟವಾಸನೆ; ದುರ್ವಾಸನೆ: ಹಸುಕು [ಪಾಠಾಂ. ಹಸಲು] ನಾತಂ '' (ಶಬ್ದಮಂ. ೨೪). 'ಹಸುಕುನಾಱು' ಪರಾ. ಹಸಕು: ೩. ''ಹಸಕೆನಲ್ ದುರ್ಗಂಧಕೆಡೆಯಕ್ಕು'' (ಕಶರ. ೧೧೪).

ಹಸಕುಬಿಸಕು = ಚೆನ್ನಾಗಿ ಬೇಯದ; ಅಪಕ್ವವಾದ: ಹಸಕುಬಿಸಕು ಮುಸುಕಿನ ಜೋಳ, ಎಣ್ಣೆಯಲ್ಲಿ ಕರಿದಿದ್ದ ವಡೆ (ಸಾವಿಸ. ೨೬). [< ಹಸ್ಸಿ]

ಹಸುಕುನಾಱು (ಕ್ರಿ). ಹಸಿಯಾಗಿರುವುದರಿಂದ ಅಪಕ್ವವಾದ ವಾಸನೆಯನ್ನು ಬೀರು; ಹಸಿವಾಸನೆ ಬರು: ಆ ಹಾಲ ತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ ಚಟ್ಟ ಹತ್ತದೆ ಹಸುಕುನಾಱದೆ ಕವುರು(ಕವರು)ಏಳದೆ . . . ಕಾಸಿ ಉಣಬಲ್ಲಡೆ ಆತನೆ ಭೋಗಿ (ಸರ್ವಜ. ೧೦೭-೫೭೫). [ಹಸುಕು + ನಾಱು]

ಹಸುಕೂಸು 'ಪಸುಗೂಸು' ನೋ.

ಹಸುಗಣ್ಣು (ನಾ). ಎಳೆಯ ಕಣ್ಣು: ಹಸಗಣ್ಣ ಚಿಗರಿಗಳನು, ಕೊಳೆಯರನು, ಚೆಲುವರನು . . . ದೇವರನು ಬಿಡಿಸುವೆನು ನಿನ್ನ ಕಡಿದು (ದ್ರೌಪದಿಾ. ೬೪-೧೯).

[ಹಸು$_1$ (< ಪಸು$_3$) + ಕಣ್ಣು (< ಕಣ್)]

ಹಸುಗಿ 'ಪಸುಗೆ' ನೋ.

ಹಸುಗೂಸು 'ಪಸುಗೂಸು' ನೋ.

ಹಸುಗೂಸುಂಗೊಲೆ (ನಾ). ಎಳೆಯ ಮಗುವಿನ ವಧೆ; ಶಿಶುಹತ್ಯೆ: ಹೇಸರು ಯಮದೂತರು ಹಸುಗೂಸುಂಗೊಲೆಗೆ (ಮುಕ್ತಕಂ. ೫೮-೯).

[ಹಸುಗೂಸು (< ಪಸುಗೂಸು) + ಕೊಲೆ$_2$]

ಹಸುಗೆ 'ಪಸುಗೆ' ನೋ.

ಹಸುಗೆಗೆಯ್ (ಕ್ರಿ). ಹಂಚು; ವಿತರಣೆ ಮಾಡು: ಆತ್ಮವಿಚಾರಪ್ರಕಾರವನಾವಗ ಹಸುಗೆಗೆಯ್ಯುವ ಶಿವಾರ್ಚಕರ ಚಿತ್ತೈಸು (ಮೋಹತ. ೨೦-೫೩).

[ಹಸುಗೆ (< ಪಸುಗೆ) + ಕೆಯ್$_1$]

ಹಸುಗೆಗೊಳ್ 'ಪಸುಗೆಗೊಳ್' ನೋ.

ಹಸುಗೆನ್ನೆ (ನಾ). ಎಳೆಯ ಕಪೋಲ; ಮೃದುವಾದ ಕೆನ್ನೆ: ರಂಗಮ್ಮ ಪ್ರೀತಿಯಿಂದ ಮೃದುವಾಗಿ ಮಗುವಿನ ಹಸುಗೆನ್ನೆಗೆ ಎರಡು ಪೆಟ್ಟುಕೊಟ್ಟು (ನಿಶೆಉ. ೨೪೮).

[ಹಸು$_1$ (< ಪಸು$_3$) + ಕೆನ್ನೆ]

ಹಸುಗೆಪದ್ಧತಿ (ನಾ). (ಕರಾ) ಆಹಾರ ಮೊದಲಾದ ಜೀವನಾವಶ್ಯಕ ವಸ್ತುಗಳನ್ನು ಪ್ರತಿಯೊಬ್ಬರಿಗೂ ದಿನಕ್ಕೆ ಇಷ್ಟೆಂದು ನಿಗದಿ ಮಾಡಿ ಕೊಡುವ ಕ್ರಮ; ಪಡಿತರ ವ್ಯವಸ್ಥೆ: ಹಸುಗೆಪದ್ಧತಿ ನಾಡಲ್ಲಿ ಬಂತು (ಕುಟ್ಟಿದೂ. ೨೬).

[ಹಸುಗೆ (< ಪಸುಗೆ) + ಪದ್ಧತಿ]

ಹಸುಗೆಮಣಿಗಾರ (ನಾ). ಭೂಮಿಯನ್ನು ಅಳೆದು (ಆಯಾ ವ್ಯಕ್ತಿಗಳ ಅಂಕೆಗೆ ಒಳಪಡುವ ಜಮೀನಿನ ವ್ಯಾಪ್ತಿಯನ್ನು) ನಿಗದಿ ಪಡಿಸುವವನು; ಮೋಜಣಿದಾರ: ಅರಮನೆಯ ವಾರ ಪೈರುಗಳನ್ನು ರೇಖೆಮಾಡುವುದಕ್ಕೆ ಹಸುಗಮಣಿಗಾರ ೧ ಹಸುಗೆ ಶ್ಯಾನಭಾಗ ೧, ಕಾಲೂಳಿಗದ ಜನ ಮುಂತಾದವರನ್ನೂ ನೇಮಕ ಮಾಡಿದರು (ಮಹಾವಂ. I, ೧೧೯).

[ಹಸುಗೆ (< ಪಸುಗೆ) + ಮಣಿಗಾರ (< ಮಣಿಯಗಾಱ)]

ಹಸುಗೆಶ್ಯಾನಭಾಗ (ನಾ). ಭೂಮಿ, ಫಸಲು ಮೊದಲಾದುವುಗಳ ಲೆಕ್ಕವಿಡುವ ಕರಣಿಕ: ಹಸುಗೆ ಮಣಿಗಾರ ೧, ಹಸುಗೆ ಶ್ಯಾನಭಾಗ ೧ (ಮಹಾವಂ. I, ೧೧೯).

[ಹಸುಗೆ + ಶ್ಯಾನಭಾಗ (< ಸೇನಬೋವ)]

ಹಸುತನ (ನಾ). ಹಸುಳೆತನ; ಎಳಮೆ; ಶೈಶವ: ಮೃದುಮಧುರಗಭೀರಧ್ವಾನದ ನುಡಿಗಳ್ ಹಸು[ಪಾಠಾಂ. ಕೂಸು]ತನದೊಳಂ ಕೇಳ್ವ ಜನಕ್ಕೊದವಿಸಿದುವು ಪರಮಾನಂದದ ಭಾರಮನೇನುದಾರನೋ ವೀರಜಿನಂ (ವರ್ಧಪು. ೧೪-೭೬); ಹಸುತನದ ಹಾಸಬಿಚ್ಚುವನು ತನ್ನ ತಾ ನಿನ್ನ ಮೆಚ್ಚುಗೊಂಡು ಹಿರಿಹಿಗ್ಗನೂಡು ಕಾಣುವದ ಕಂಡು ಚಿರಂಜೀವಿಯಾಗಿಕೊಂಡು (ಮುಕ್ತಕಂ. ೧೯-೫).

[ಹಸು$_1$ (< ಪಸು$_3$) + - ತನ]

ಹಸುಬ 'ಪಸುಂಬ' ನೋ.

ಹಸುಬೆ 'ಪಸುಂಬೆ' ನೋ.

ಹಸುಮಗ 'ಪಸುಮಗ' ನೋ.

ಹಸುಮಗಳು (ನಾ). ಸುಕುಮಾರಿ; ಬಾಲೆ: ಹೆಸರ ಬ್ಯಾಳೀ ಒಯ್ದು ಕೆಸರ ಕಲಸೀದಂಗ ಹಸುಮಗಳನೊಯ್ದು ಮುದುಕಾಗ ಕೊಟ್ಟರು ದುಸ್ಮಾನದವರು ತವರವರು (ಕನ್ನಜಾ. ೧೨೪); ವಿಷವ ಕುಡಿದಳ್ಳೆ ಏಕಭಾವದಿ ನಿನ್ನ ಹಸುಮಗಳು (ಕೃಷ್ಣಾಕು. ೭-೧೧).

[ಹಸು$_1$ (< ಪಸು$_3$) + ಮಗಳು (< ಮಗಳ್)]

ಹಸುಮಗು 'ಪಸುಮಗು' ನೋ.

ಹಸುಮೀನು (ನಾ). ಒಂದು ಬಗೆಯ ಮೀನು: ಅವು ಮರದ ತುಂಡುಗಳಲ್ಲ, ಮೀನುಗಳು. ಇವಕ್ಕೆ ''ಹಸುಮೀನು'' ಎನ್ನುತ್ತಾರೆ (ದಾಲಪ್ರ. I, ೮೧).

[ಹಸು$_7$ + ಮೀನು$_2$ (< ಮೀನ$_2$)]

ಹಸುಮೊಗ 'ಪಸುಮೊಗ' ನೋ.

ಹಸುರಂಗಿ 'ಪಸುರಂಗಿ' ನೋ.

ಹಸುರಂಬಲಿ (ನಾ). ಸೊಪ್ಪಿನಿಂದ ತಯಾರಿಸುವ ಅಂಬಲಿ: ಗಾಡಿಗ ಡಿಂಬುಗಂಗೆ ಚಿಕ್ಕು ಮುಟ್ಟಿಗೆ ಹಸುರಂಬಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ . . . ಕುಱುಕುವ ಹೇಸಿದೈವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ (ಬಸವ. ೫೫೬).

[ಹಸುರು (< ಪಸುರ್$_2$) + ಅಂಬಲಿ$_1$]

ಹಸುರಾಣಿಬಳ್ಳಿ 'ಹಸರಾಣಿಬಳ್ಳಿ' ನೋ.

ಹಸುರಿಸು (ಕ್ರಿ). ಹಚ್ಚಗಾಗು; ಹಸಿರಾಗು: ಆಗ್ಗೆ ಭೂಮಿಯು ಎಷ್ಟು ಹಸುರಿಸಿತ್ತು (ಫಲಸಂ. ೭). [ಹಸುರು (< ಪಸುರ್$_2$) + - ಇಸ್$_3$]

ಹಸುರು 'ಪಸುರ್$_2$' ನೋ.

ಹಸುರುಕಲ್ಲು 'ಪಸುರ್ಗಲ್' ನೋ.

ಹಸುರುಗಟ್ಟು 'ಪಸುರ್ಗಟ್ಟು' ನೋ.

ಹಸುರುಗನ್ನಿ 'ಹಸುರ್ಗನ್ನೆ' ನೋ.

ಹಸುರುಗುಂದು (ಕ್ರಿ). ಹಸಿರುಬಣ್ಣ ಕಡಮೆಯಾಗು,— ಕಂದು: ಎಸೆವ ದೇವಾಳಿ ಕಬ್ಬಾಳೆ ಹಸುರುಗುಂದದ ಪಚ್ಚೆನಾದವು ಮಧುರಂಗ ಪಸರಿಸಿ ಮೆಱೆದುವರ್ತಿಯಲಿ (ಕಂನಮಿ. ೫-೮೭). [ಹಸುರು (< ಪಸುರ್$_2$) + ಕುಂದು$_1$]

ಹಸುರುಗುಬ್ಬಿ, ಹಸರುಗುಬ್ಬಿ (ನಾ). ಒಂದು ಬಗೆಯ ಔಷಧೀಸಸ್ಯ: "ಪಯೋಷೀ (ಷ್ಣೀ) - ಹಸುರುಗುಬ್ಬಿ" (ಓಷಧಿ. ೯೧). **ಹಸುರುಗುಬ್ಬಿ:** "ಅಂಜನಕೇಸಿಕಾ, ನೀಲಪುಷ್ಪಿಕಾ?, ಅಂಜನಪುಷ್ಪಿಕಾ - ಹಸರುಗುಬ್ಬಿ" (ಓಷಧಿ. ೯೨). [?]

ಹಸುರುಗೆಂಪು (ನಾ). ಹಸಿರು ಮತ್ತು ಕೆಂಪುಬಣ್ಣಗಳ ಮಿಶ್ರವರ್ಣ; ಕಪಿಲವರ್ಣ: "ಕವಿಲು ಶ್ಯಾಮಮನೆ ಹಸುರುಗೆಂಪು" (ಮಂಗರಾ. ೧೩೧-೨೧).

[ಹಸುರು (< ಪಸುರ್) + ಕೆಂಪು]

ಹಸುರುಜಾಜಿಮಲ್ಲಿಗೆ (ನಾ). ಒಂದು ಬಗೆಯ ಜಾಜಿಮಲ್ಲಿಗೆ: "ಸ್ವರ್ಣಮಲ್ಲಿಗೆ, ಹಸುರುಜಾಜಿಮಲ್ಲಿಗೆ" (ಮೃಡಿಗಿ. ೪೭-೧೩೪).

[ಹಸುರು (< ಪಸುರ್) + ಜಾಜಿ (< ಜಾದಿ) + ಮಲ್ಲಿಗೆ]

ಹಸುರುಡಿಗೆ 'ಪಸುರುಡಿಗೆ' ನೋ.

ಹಸುರುಡುಗೆ 'ಪಸುರುಡಿಗೆ' ನೋ.

ಹಸುರುಡೆ 'ಪಸುರುಡೆ' ನೋ.

ಹಸುರುತುಂಬೆ (ನಾ). ಒಂದು ಬಗೆಯ ತುಂಬೆಗಿಡ: ಹಸುರುತುಂಬೆ, ದೊಡ್ಡತುಂಬೆ (ಮೃಡಿಗಿ. ೫೦-೧೦೨). [ಹಸುರು (< ಪಸುರ್) + ತುಂಬೆ]

ಹಸುರುದೀಪ (ನಾ). ಹಸಿರು ಬಣ್ಣದ ಗಾಜನ್ನು ಹೊದಿಸಿದ ದೀಪ; ವಾಹನಸಂಚಾರ ಕ್ರಮದಲ್ಲಿ ಮಾರ್ಗವು ಸುರಕ್ಷಿತವಾಗಿರುವುದರಿಂದ, ಮುಂದೆ ಹೋಗಬಹುದೆಂದು ಸೂಚಿಸುವ ದೀಪ: ಹಸುರುದೀಪವನದೂ ಗಾರ್ಡು ತೋರಿಸಿದರು ಗಾಡಿ ಮೆಲ್ಲನೆ ಚಲಿಸಿಹುದು (ಚಂದ್ರಮೌ. ೧೨೯-೧೪).

[ಹಸುರು (< ಪಸುರ್) + ದೀಪ]

ಹಸುರುನೂಲಿಗೆ, ಹಸರುನೂಲಿಗ (ನಾ). ಹಸಿರುಬಣ್ಣದ ಒಂದು ಬಗೆಯ ಉದ್ದವಾಗಿರುವ ಹಾವು: ಹಸರುಹಾವು, ಹಸುರುನೂಲಿಗೆ, ಗೋಧಿನಾಗರ (ಪಮ್ಮಸು. ೨೪೦). **ಹಸುರುನೂಲಿಗ:** (ಪ). [ಹಸರು (< ಪಸುರ್) + (< ನೂಲಿಗ)]

ಹಸುರುಬದನಿಕೆ (ನಾ). ಒಂದು ಬಗೆಯ ಸಸ್ಯ: (ಮೃಡಿಗಿ. ೭೮-೧೫೯೩).

[ಹಸುರು (< ಪಸುರ್) + ಬದನಿಕೆ (< ಬಂದನಿಕೆ)]

ಹಸುರುಮದ್ದು (ನಾ). ಸ್ವದೇಶದ ಗಿಡಮೂಲಿಕೆಗಳಿಂದ ತಯಾರು ಮಾಡಿದ ಮದ್ದು; ನಾಟಿಔಷಧ; ಹಸುರೌಷಧ: "ಬೆರಕೆಯಿಲ್ಲದ ಮೂಲಿಔಷಧ ವಸ್ತು (ಜೈವ ಅಥವಾ ಅಜೈವ; ಮಿಶ್ರಣ ಮಾಡಿಯೋ ಮಾಡದೆಯೋ ಪ್ರಯೋಗ) ಗಂದಿಗ ವಸ್ತು; ಮೂಲಿಕೆ; ಬೇರು; ಹಸುರುಮದ್ದು" (Drugs. ೧೦೬೨)

[ಹಸುರು (< ಪಸುರ್) + ಮದ್ದು (< ಮರ್ದು)]

ಹಸುರುಮುರಿ, ಹಸಿರುಮುರಿ[1] (ಕ್ರಿ). ಹಸಿರಿನ ಸಮೃದ್ಧಿಯನ್ನು ಹೊಂದಿರು; ಸೊಂಪಾಗಿರು; ಹಸಿರೇರು; "ಹುಸುರು ಕಾಣು" (ಜಾನಪೋ. ೫೫೫). **ಹಸಿರುಮುರಿ**[1]: ಹಸಿರುಮುರಿಯುವ ತೋಪಿನಲ್ಲಿ ಅವರ ಬಂಗಲೆ (ಪ್ರೇಮಾಶ್ರ. ೭೩). ಹಚ್ಚಗೆ ಹಸಿರುಮುರಿವ ಮನೋಹರ ನಿಕುಂಜವನದಿಂದ ಹೊರಬಿದ್ದು ತಾನು ಇದಾವ ಮರುಭೂಮಿಯಲ್ಲಿ ಒಮ್ಮಿಂದೊಮ್ಮೆ ಬಂದು ಬಿದ್ದಳೂ (ಇಪ್ಪಕ. ೨೮೨).

[ಹಸುರು (< ಪಸುರ್) + ಮುರಿ[1]]

ಹಸುರುಮೇವು (ನಾ). ಹಸಿರಾದ ಸೊಪ್ಪು, ದಂಟು ಮೊದಲಾದ ದನಗಳ ಆಹಾರ; ಹಸಿಮೇವು: ಹಸುರುಮೇವು ಇರುವ ಕಡೆ ದನ ಹೊಡೆದುಕೊಂಡು ಹೋಗು (ಡೂಢ). [ಹಸುರು (< ಪಸುರ್) + ಮೇವು]

ಹಸುರುವಾಣಿ, ಹಸರುವಾಣಿ, ಹಸರ್ವಾಣಿ, ಹಸಿರುವಾಣಿ (ನಾ). ೧. ಸಸ್ಯಗಳಿಂದ ಉತ್ಪನ್ನವಾಗುವ ಸೊಪ್ಪು, ಕಾಯಿ, ತರಕಾರಿ, ಹಣ್ಣು ಮೊದಲಾದ (ವ್ಯಾಪಾರದ) ಸರಕು: ಕರಣಕರ ಮಾನ್ಯ ಹಸುರುವಾಣಿ ಸುಂಕ ಯೆಂಮ್ಮಸುಂಕ (ಶಾಸಾ. IV. ೨೪೫-೧೭; 1513): ತೆಂಗು ಹಲಸು ಎಲೆ ಬಳ್ಳಿ [ಹು]ಣಸೆ ನಿಂಬೆ ಮಾದಳ ಮೊದಲಾದ ಹ[ಸು]ರುವಾಣಿ (ಶಾಸಾ. IX - ii, ೫೯೫-೧೫; 1539): ಹಸುರುವಾಣಿ ಬೆಳೆದು ನೀರರಯಲಿಕ್ಕಿರುತ್ತದೆ (ಸ್ವಪ್ನಪೂ. ೭). ೨. ಹಸುರಾದ ಎಲೆ, ಗರಿ ಮೊದಲಾದುವು: ರಂಗರಾಯರ ಮನೆಯ ಮುಂದೆ ಹಸುರುವಾಣಿಯ ಚಪ್ಪರ . . . ನಗುತ್ತಿತ್ತು (ಮಗಮಾಂ. ೧೪೪). **ಹಸರುವಾಣಿ:** ೧. ಬ್ರಾಹ್ಮಣಜನ್ಮ ಬಂದ ಮೇಲೆ ಹಸರುವಾಣಿ ತಿಂದೇ ಸಾಯಬೇಕು (ಮರಮು. ೧೦). **ಹಸರ್ವಾಣಿ:** ೧. 'ಹಸರ್ವಾಣಿ ಕ್ಷುದಾಯ' ಪರಾ. **ಹಸಿರುವಾಣಿ:** ೨. ಮನೆಮನೆಗೂ ಹಸಿರುವಾಣಿಯ ಹಂದರ (ಶುಂಗಭ. ೩೮).

[ಹಸುರು (< ಪಸುರ್) + ವಾಣಿ[2] (< ಬಾಣಿಗ)]

ಹಸುರುವಾಣಿಚಪ್ಪರ, ಹಸರುವಾಣಿಚಪ್ಪರ, ಹಸಿರುವಾಣಿಚಪ್ಪರ (ನಾ). ಹಸುರಾಗಿರುವ ಮಾವಿನಸೊಪ್ಪು, ತೆಂಗಿನ ಗರಿ, ಬಾಳೆ ಮುಂತಾದುವುಗಳಿಂದ ಅಲಂಕರಿಸಿದ ಚಪ್ಪರ,—ಹಂದರ: ಪಾಠಶಾಲೆಯ ಮುಂದುಗಡೆ ವಿಶಾಲವಾದ ಸೊಗಸಾದ ಹಸುರುವಾಣಿಚಪ್ಪರ (ರಂಗಚ. ೧೦) **ಹಸರುವಾಣಿಚಪ್ಪರ:** ಸೂರ್ಯಭಗವಂತನು ತೊಟ್ಟಿಯಲ್ಲಿ ಹಾಕಿದ್ದ ಹಸರುವಾಣಿಚಪ್ಪರದ ಕಂಡಿಗಳಿಂದ ಬಂದು ವಧೂವರರಿಗೆ ಆಶೀರ್ವಾದಮಾಡುತ್ತಿದ್ದನು (ಹುಟ್ಟಸ. ೧೦). **ಹಸಿರುವಾಣಿಚಪ್ಪರ:** ಜಮಾಬಂದಿ ನಡೆಯಬೇಕಾದ ದೇವಸ್ಥಾನದ ಮುಂದೆ ಹಸಿರುವಾಣಿಚಪ್ಪರ ಮತ್ತು ತಳಿರುತೋರಣ ಹೇಳತೀರದು (ನನ್ನೂರು. ೧೫೯). [ಹಸುರುವಾಣ + ಚಪ್ಪರ]

ಹಸುರುಹಾವು (ನಾ). ೧. ಹಸಿರು ಬಣ್ಣದ ಹಾವು: (ಪ). ೨. ಒಂದು ಬಗೆಯ ಔಷಧೀಸಸ್ಯ: ಬಚೆ . . . ಸುಜ್ಜಲಬೀಜ, ಹಸುರುಹಾವು ಇವು ಪ್ರತ್ಯೇಕ ಗ ೧ ತೂಕವಂ ಕಲ್ಕವಂ ಮಾಡಿ ಹಾಕಿ ಕರಪಾಕದಿಂದಿಳುಹಿ ಸರ್ವಾಂಗಲೇಪಂಗೈಯಲು ಸಂಧಿಗಸನ್ನಿ ಮುಂತಾದ ಸಕಲಸನ್ನಿಪಾತವೂ ಗುಣವಕ್ಕುಂ (ಸಕ್ವ. ೧೫೬).

[ಹಸುರು (< ಪಸುರ್) + ಹಾವು[2] (< ಪಾವು)]

ಹಸುರುಹುಲ್ಲು 'ಪಸುರ್ವುಲ್' ನೋ.

ಹಸುರೆಲೆ 'ಪಸುರೆಲೆ' ನೋ.

ಹಸುರೌಷಧ (ನಾ). = ಹಸುರುಮದ್ದು: ಎಷ್ಟೋ ಖಾಯಿಲೆಗಳನ್ನು ಹಸುರೌಷಧಗಳಿಂದಲೇ ವಾಸಿಮಾಡಿಕೊಳ್ಳುತ್ತಾರೆ (ಡೂಢ). [ಹಸುರು (< ಪಸುರ್) + ಔಷಧ]

ಹಸುರ್ಗಟ್ಟು 'ಪಸುರ್ಗಟ್ಟು' ನೋ.

ಹಸುರ್ಗನ್ನೆ, ಹಸಿರುಗನ್ನಿ, ಹಸುರುಗನ್ನಿ (ನಾ). ಒಂದು ಬಗೆಯ ಮರ: (ಪ). **ಹಸಿರುಗನ್ನಿ:** ಹಸಿರುಗನ್ನಿ . . . ಗೋಣಿ. ಬೆಟ್ಟದಸಿರುಗೋಣಿ (ಸಸ್ಯಸಾ. ೪೬). **ಹಸುರುಗನ್ನಿ:** "ಹಸುರುಗನ್ನಿ, ಬೆಲಗ, ಬಿಳೀಬೀಟೆ, ಬೆಟ್ಟದ ಹಸುರುಗೋಣಿ" (ಮೃಡಿಗಿ. ೨೮-೫೪೭). 'ಹಸರಗಣ್ಣೆ', 'ಹಸ್ತಿಗನ್ನೆ' ಪರಾ. [?]

ಹಸುರ್ಗರಡಿಗೆ (ನಾ). ಹಸಿರುಬಣ್ಣದ ಕರಂಡಕ,—ಡಬ್ಬಿ: ನಸಿದ ಕಾಮವ ಪರ್ಚಿಸುವ ದಿವ್ಯ ಮಡಿಕೆಯ ಹಸುರ್ಗರಡಿಗೆಯೊಳು ತುಂಬ ರಸೆಯೊಳು ಮೆಜೆಸಲು ಕಟ್ಟಿದಂದದಲಿ ಕಣ್ಗೆಸದುವು ಪೂಗವ್ಯಕ್ತಿಗಳು (ಮೋಹತ. ೨೪-೪೩).

[ಹಸುರ್ + (< ಪಸುರ್) + ಕರಡಿಗೆ (< ಕರಂಡಿಗೆ)]

ಹಸುರ್ಗೂಳು 'ಪಸುರ್ಗೂಳ್' ನೋ.

ಹಸುರ್ಗೊನೆ (ನಾ). ಹಸಿರುಹುಲ್ಲಿನ ತುದಿ: ಚಿಲ್ಪ ಹಸುರ್ಗೊನೆಯಲ್ಲಿ ನೆಲ್ಲ ಹೊಂದೆನೆಯಲ್ಲಿ ಚಿಲ್ಲಿದವು ಇಬ್ಬನಿಯ ಮುತ್ತುಗಳಿವಿಲ್ಲಿ (ಎಚೀಗೀ. ೨೮-೧೬).

[ಹಸುರ್ + (< ಪಸುರ್) + ಗೊನ್ನೆ (< ಕೊನ್ನೆ)]

ಹಸುರ್ನೆಲ 'ಪಸುರ್ನೆಲ' ನೋ.

ಹಸುರ್ಬಯಲು (ನಾ). ಹಸುರಿನಿಂದ ತುಂಬಿರುವ ಬಯಲು; ಹಚ್ಚಗಿರುವ ಮೈದಾನ: ನನ್ನಿಳಿಯಾ ಹಸುರ್ಬಯಲೀ ಎಳಗರುಕೆಯ ಹಾಸಿನಲಿ ಚಲಿಸದವೊಲೆ ಚಲಿಸುತ್ತಿವೆ ಮೇಯುತ್ತಿಹ ಗೋವು (ಪಕ್ಷಿಕಾ. ೫೨-೮).

[ಹಸುರ್ + (< ಪಸುರ್) + ಬಯಲು (< ವಯಲ್)]

ಹಸುವು 'ಪಸು[4]' ನೋ.

ಹಸುವೆ 'ಪಸುಂಬೆ' ನೋ.

ಹಸುಹರಣ (ನಾ). ಎಳೆಯ ಪ್ರಾಣ; ಕೋಮಲವಾದ ಜೀವ: ನೀವೇ ಬಲ, ನೀವೇ ಹೊಲ, ನೀವೇ ಚಲ ಕಲಿಸಿರವ್ವ, ಕಲಿಸಿರಿ ಹಸುಹರಣವ ಬಲಿಸಿರಿ (ಅರಳಿ. ೨೭-೧೪). [ಹಸು[1] (< ಪಸು[3]) + ಹರಣ[1] (< ವರಣ[3])]

ಹಸುಹುಡುಗ (ನಾ). ಚಿಕ್ಕಪ್ರಾಯದ ಬಾಲಕ: ಅಸುರನ ತೋಳ್ಗಳ ತಪ್ಪಿದಿಕ್ಕಿ ಸಿಕ್ಕಿದ ಹಸುಹುಡುಗನ ತಂದು ಕುಡುವೆ (ಮೋಹತ. ೩೭-೨೪).

[ಹಸು[1] (< ಪಸು[3]) + ಹುಡುಗ]

ಹಸುಳ 'ಪಸುಳ' ನೋ.

ಹಸುಳೆ 'ಪಸುಳೆ' ನೋ.

ಹಸುಳೆಗಾಯ್ (ನಾ). ಎಳೆಯ ಕಾಯಿ; ಮಿಡಿ: ಜಿಗಿವ ಹಾಸದಿ ಜನಿಸಿದಾ ಹಸುಳೆಗಾಯ್ ಏರುಜವ್ವನದ ಸೊಂಪನೊಳು ಮಾಗಿ, ಫಲಮಾಗಿ, ಹರುಷದಿಂ ಬಿರಿದುಬ್ಬಿ ತೋರುವ್ಯದು ಮೈಗೊಂಡ ಬಸಿರ ಸಂತಸವ (ವಿಕ್ರಾಗ್ರ. ೨-೮).

[ಹಸುಳೆ (< ಪಸುಳೆ) + ಕಾಯ್]

ಹಸುಳೆತನ 'ಪಸುಳೆತನ' ನೋ.

ಹಸುಳೆದುಂಬಿ (ನಾ). ಮರಿದುಂಬಿ: ಕೋಮಲೆಯ ಮಿಸುನಿದಾವರೆ ಮೊಗ್ಗೆ ಮೊಲೆಯೊಳವನ ಬಿಟ್ಟ ಹಸುಳೆದುಂಬಿಯೋಲೆಲಗಿದವು (ಶ್ರೀಪಾಲ. ೪-೯೧).

[ಹಸುಳೆ (< ಪಸುಳೆ) + ತುಂಬಿ]

ಹಸುಳೆಬಿಸಿಲು 'ಪಸುಳೆವಿಸಿಲ್' ನೋ.

ಹಸುಳೆವೆಜೆ (ನಾ). ಶುಕ್ಲಪಕ್ಷದ ಆರಂಭದ ಚಂದ್ರ; ಬಾಲಚಂದ್ರ: ನಿಡುಮುಡಿಯೊಳು ರಂಜಿಸುವ ಹಸುಳೆವೆಜೆಯಂತೆ ವಿರಾಜಿಪ ಬೆಳಗ್ಗೆದಗೆಯಸಳಂ . . , ವಸುಧಾಧಿಪತಿಯಂದಿನ ದುರ್ಗಾಂಬಿಕೆಯಂತೊಪ್ಪಿದಳು (ಜಯಕಾ. ೨-೧೧).

[ಹಸುಳೆ (< ಪಸುಳೆ) + ಪೆಜೆ]

ಹಸೆ 'ಪಸ್ಸೆ' ನೋ.

ಹಸೆಗಲ್ಲು (ನಾ). ವಧೂವರರು ಕುಳಿತುಕೊಳ್ಳುವ ಪೀಠ; ಹಸೆಮಣೆ: ಆಕಾಶವನುಂಟು ಚಪ್ಪರವೆ ಹಾಕಿ ಭೂಮಿ ಅಡ್ಡಗಲಕೆ ಹಸೆಗಲ್ಲ ಬರದು ಗೌರಿಗು ಈಶ್ವರಗು ಲಗ್ನವ ಮಾಡಿ (ನಾಪದ. ೧೧೩).

[ಹಸೆ (< ಪಸ್ಸೆ) + ಕಲ್ಲು (< ಕಲ್ಲ್)]

ಹಸೆಗೆ 'ಪಸುಗೆ' ನೋ.

ಹಸೆಜಗಲಿ (ನಾ). ಹಸೆಮಣೆಯನ್ನು ಇಡುವುದಕ್ಕಾಗಿ ನಿರ್ಮಿಸಿದ ವೇದಿಕೆ: (ಪ). 'ಪಸೆಜಗತಿ' ಪರಾ. [ಹಸೆ (< ಪಸ್ಸ) + ಜಗಲಿ]

ಹಸೆದಾನ (ನಾ). ಭೂರಿಯಾದ ದಾನ; ಅತಿಶಯವಾದ ದಾನ (?): ಹಸುವಿಂಗ ಮೇವು ಶಿಶುವಿಂಗ ನವನೀತಮಂ ಪಸಿದವಂಗನ್ನೋದಕಂ ದಾನ ಬೇಳ್ಪಂಗೆ ಹಸೆದಾನ ವಧುವಿಲ್ಲದವರ್ಗೆ ವಿವಾಹ ವಿಟರಾದವಗಟಂಗಸುಖವ ಬಿಸಗೂಂಬುದಕ್ಕಿದೇ ಕುಡುಹು (ಪಚಕಾ. ೪-೪೧), ''ಕನ್ಯಾದಾನ'' (ಪ್ರಭಾಗ್ಯ). [ಹಸೆ + ದಾನ]

ಹಸೆನಿಲ್ 'ಪಸೆನಿಲ್' ನೋ.

ಹಸೆಮಣೆ 'ಪಸೆವಣೆ' ನೋ.

ಹಸೆಯಿಸು (ಕ್ರಿ). (ಆಲಂ) ಮಂಗಳವನ್ನು ಕೋರು; ಶುಭವನ್ನು ಹಾರೈಸು: ತಾಳಮದ್ದಳೆ ಗೀತನರ್ತನಗಾತಿಯ ಮೇಳ ವಿದ್ವತ್ಸಭೆ ಸುರರ ಜಾಲಕ್ಕೆ ಹಸೆಯಿತ್ತು ಬೀಳ್ಕೊಟ್ಟು ಚವಲ ಬೊಂಬಾಳವನಿಳದ ಮಾಧವನು (ಮೋಪತ. ೪೨-೩೭).

[ಹಸೆ (< ಪಸ್ಸೆ) + ಇಸು]

ಹಸೆವಣೆ 'ಪಸೆವಣೆ' ನೋ.

ಹಸೆಹಾಡು (ನಾ). ಹಸೆಗೆ ಕರೆಯುವ ಹಾಡು; ''ಸೋಬಾನ ಹಾಡು'': (ಜಾನಪೋ. ೫೫). [ಹಸೆ (< ಪಸ್ಸೆ) + ಹಾಡು (< ಪಾಡು)]

ಹಸೆಹಿಡಿ 'ಪಸೆವಿಡಿ' ನೋ.

ಹಸ್ತ (ನಾ). ೧. ಕೈ; ಕರ; ಪಾಣಿ: ಬ್ರಹ್ಮಂಗೆ ವಾಕ್ ಪರುಷ . . . ರುದ್ರಂಗೆ ಹಸ್ತ ಪರುಷ ನಮ್ಮ ಕೂಡಲಸಂಗನ ಶರಣಂಗೆ ಪಾದವೇ ಪರುಷ (ಬಸವ. ೮೬೫); ಹಸ್ತವ ಮುಗಿದು ಕಾಂತನ ಕರ್ಣಯುಗಳಕೆ ವಿಸ್ತರಿಸಿದಳು ಬಿನ್ನಹವ (ಮೋಹತ. ೬-೬). ೨. ಮುಂಗೈ: ''ಸಪ್ರಕೋಷ್ಠಂ ಕರಾಗ್ರಮಂತದು ಹಸ್ತಂ'' (ವಸ್ತುಕೋ. ೬೯-೧೨). ೩. ಮೊಳಕೈಯಿಂದ ನಡುಬೆರಳ ತುದಿವರೆಗಿನ ಅಳತೆ; ಮೊಳ: ಗೇಣುಮದು ನಾಲ್ಕಾಗಳ್ ಭುವನದೊಳ್ ಹಸ್ತಮಕ್ಕುಂ (ವ್ಯವಹಾ. ಅನುಬಂಧ. ೩, ೫೨-೨೨). ೪. ಆನೆಯ ಸೊಂಡಿಲು: ಆ ಮಹಾಮದೇಭಂ . . . ಆನೆವಾಂಗಿನ ವೀರರೆಲ್ಲರುಮಂ ಪನ್ನೆರಡುಂ ಹಸ್ತಪ್ರಹಾರದೊಳಂ ಪದಿನೆಂಟುಂ ಕೋಡೇಱಿನೊಳಂ ಏಟುಂ ತೆಱದ ತಾಳವಟ್ಟದ ಪೊಯ್ಲೊಳಂ ನಾಲ್ವತ್ತು ನಾಲ್ಕು ಗಾತ್ರಾಪರಪಾತದೊಳಂ ದೆಸೆವಲಿಗೆಯ್ದು (ಚಂದ್ರಪ್ರ. ೯-೧೦೧ ವ). ೫. (ಕೂದಲಿನ)ಮೊತ್ತ; ರಾಶಿ: ''ಹಸ್ತಃ, ಪಕ್ಷಃ, ಪಾಶಃ— ಈ ೩ ಹಿಮ್ಮುಡಿ'' (ಹಲಾಯು. ೮೭-೩೭). ೧, ೫: ಕುರುಕುಲಜೀವಾಕರ್ಷಣಪರಿಣತಮಿದು ಕಾಳಹಸ್ತಮಲ್ಲದೆ ಪರಮೇಶ್ವರಿ ಕೇಶಹಸ್ತಮಕ್ಕುಮೆ (ಗದಾಯು. ೧-೭೭). **'ಕೇಶಹಸ್ತ'** ಪರಾ. ೬. ಒಬ್ಬ ರಾಕ್ಷಸನ ಹೆಸರು: ಆರಿಂ ಮುನ್ನಂ ಸರಗಂ ಪಾರದೆ ಹಸ್ತ ಪ್ರಹಸ್ತರುಬದೊಡ್ಡಿರ್ದರ್ (ಪಂರಾವಿ. ೧೩-೧೨). ೭. [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಹದಿಮೂರನೆಯ ನಕ್ಷತ್ರ ಮತ್ತು ಆ ನಕ್ಷತ್ರದಲ್ಲಿ ಆಗುವ ಮಳೆ; ☞ ಇದು ಹಸ್ತದ ಆಕೃತಿಯಲ್ಲಿ ಐದು ನಕ್ಷತ್ರಗಳಿಂದ ಕೂಡಿದೆ: ಅಶ್ವಿನಿ ಭರಣಿ . . . ಹಸ್ತ . . . ರೇವತಿಯೆಂಬವಿಪ್ಪತ್ತೇಳು ನಕ್ಷತ್ರಂಗಳುಂ ತಾರೆಗಳ ಮೊತ್ತವಿಪ್ಪತ್ತೇಳರೊಳಗೆಯುಂ ಹಸ್ತ ಮೃಗಶಿರ ಸ್ವಾತಿ . . . ಶುಭವು (ಗಣಿತಾ. ೪-೭೮). ೧, ೭: ಉರ್ವರೆ ತನಿಯಲ್ ಮುದದಿಂ ಪೊಂಗಲಿವುದು ಚಿಟ್ಟಯಾನ ಹಸ್ತವಪ್ರತಿಹಸ್ತಂ (ಎಕ. V, ಬೇಲೂರು. ೧೯೩; 1160). ೮. [ನಾಟ್ಯ] ಆಂಗಿಕಾಭಿನಯದಲ್ಲಿ ಕೈಗಳ ವಿನ್ಯಾಸ: ಹಸ್ತ ಕೈಗಳ ಸಂಕೇತ; ಇದು ಎರಡು ವಿಧವಾದುದು, ಒಂದು ಸಂಯುಕ್ತಹಸ್ತ (ಎರಡು ಕೈಗಳು) ಇನ್ನೊಂದು ಅಸಂಯುಕ್ತ (ಒಂಟಿ) ಜೊತೆಗೆ ನೃತ್ತಹಸ್ತಗಳವೆ (ಭಾರದ. ೫೫೩). ೯. (ಆಲಂ) ಐದುನೂರು ರೂಪಾಯಿ: ನಿನಗೆ ಎಂಟು ಹಸ್ತ ಲಾಭವಾಗುವಾಗ ನಂಗೆ ಒಂದು ಹಸ್ತವೋ (ಸಚಿತಾ. ೨). [ಸಂ.]

ಹಸ್ತಕ (ನಾ). ೧. ಕೈಯ ವಿನ್ಯಾಸ. ೨. ಒಂದು ಅಳತೆಯ ಪ್ರಮಾಣ. ೩. ತುರುಬು; ಕೇಶಪಾಶ: ''ಹಸ್ತಕಂ ತುರುಬು'' (ಮಂಗರಾ. ೯೪-೬). ೪. (ಆಲಂ) ವಶವರ್ತಿ; ಆಜ್ಞಾನುಸಾರವಾಗಿ ಕೆಲಸ ಮಾಡುವವನು: ಈ ಕಾಲದಿಂದ ಮುಂದೆ ಬಾಜಿರಾಯನು ಇಂಗ್ಲಿಷರ ಹಸ್ತಕನಾದನು (ಕಭಾಗ. ೩೭೧); ದಿಲ್ಲಿಯ ಬಾದಶಹನ ಹಸ್ತಕನಾದ ಒಬ್ಬ ಸರದಾರನು ಬೆಂಗಳೂರಿಗೆ ಹೋಗಿ ಅದನ್ನು ದೇವರಾಜನಿಗೆ . . . ಮಾರಿದನು (ಮುಂಬಯಿ. ೪-೮೨). [ಸಂ.]

ಹಸ್ತಕಂಕಣ (ನಾ). ಕೈಗೆ ಧರಿಸುವ ಬಳೆ,— ಕಡಗ: ಹಸ್ತಕಂಕಣ, ಹಿಂಡುಗರಿಂಕಣ (ಶಮದ. ೨೯೮ ಪ್ರಯೋ). [ಸಂ.]

ಹಸ್ತಕಟಕ (ನಾ). = ಹಸ್ತಕಂಕಣ: ವೀರಾಂಗದಂಗಳೆಂಬ ಹಸ್ತಕಟಕಂಗಳುಂ (ಆದಿಪು. ೧೦-೧ ವ). [ಸಂ.]

ಹಸ್ತಕಟ್ಟು 'ಹಸ್ತಗಟ್ಟು' ನೋ.

ಹಸ್ತಕಡಗ (ನಾ). = ಹಸ್ತಕಂಕಣ: ಕಾಲ ಕಡಹದ ಪೆಂಡೆಯಂಗಳ ತೋಳ ಮಣಿಗಳ ಹಸ್ತಕಡಗದ ನೀಲ ಮುತ್ತಿನ ತೊಂಬೆಗಡುಕಿನ ಕೊರಳ ದಾರಗಳ . . . ಆಭರಣಂಗಳಂ ಧರಿಸಿ (ಚಿಪಪು. ೬೧-೩೭); ಒಪ್ಪವಿತ್ತ ಹಸ್ತಕಡಗ ಆಶಾಪಾಶವೆರಡಿತ್ತು (ಕನಕ. ೧೭೦-೨); ಕೀಲ ಕಡಗ ಹಸ್ತಕಡಗ . . . ಪಣೆಗಡಗದ ಸೊಬಗಿನ ನೀಲಕುಂತಳೆಯರೊಪ್ಪಿದರು (ಕಂಪನ. ೨೪-೩೯). [ಹಸ್ತ + ಕಡಗ]

ಹಸ್ತಕ (ನಾ). ಅಂಕೆ; ವಶ; ಅಧೀನ: ಕೌಲುನಂಬಗ ಕೊಟ್ಟು ನಮ್ಮ ಹಸ್ತಕನಲ್ಲಿ ಬಂದುಬಸ್ತು ಮಾಡಿ ಮಡಗುವದು (ರಾಜೇಂದ್ರ. ೯೬). [< ಹಸ್ತಕ]

ಹಸ್ತಕೌಶಲ (ನಾ). ಕೈಚಳಕ; ಕೈಕೆಲಸದ ನೈಪುಣ್ಯ: ಹಸ್ತಕೌಶಲಕಲಿತಚಿತ್ರಕಳಾಪ ಪತ್ರಚ್ಛೇದ್ಯಾದಿ ಸಮನ್ವಿತಮಪ್ಪ ಶಿಲ್ಪಮುಮಂ ಪಡದು (ಆದಿಪು. ೮-೬೪ ವ). [ಸಂ.]

ಹಸ್ತಕ್ಷೇಪ (ನಾ). (ಆಲಂ) ಇನ್ನೊಬ್ಬರ ಕಾರ್ಯದಲ್ಲಿ ನಡುವೆ ಕೈ ಹಾಕುವಿಕೆ,—ಮಧ್ಯೆ ಪ್ರವೇಶಿಸುವಿಕೆ: ರಾಜ್ಯಕಾರಭಾರದಲ್ಲಿ ನೂರಳ ಈ ಅತಿ ಹಸ್ತಕ್ಷೇಪವನ್ನು ಅವನು ಮನ್ನಿಸುತ್ತಿರಲಿಲ್ಲ (ನೂರಬ. ೪೨); ಕರಣಲೇಖೆ ಖಂಡಿತ ಬಲ್ಲಳು ನೀಲಕಂಠನ ಕೆಲಸದಲ್ಲಿ ಹಸ್ತಕ್ಷೇಪ ಮಾಡಲು ತನ್ನ ನಲ್ಲನಿಗೆ ಯಾವ ಅಧಿಕಾರವೂ ಇಲ್ಲವೆಂದು (ಇಷ್ಟಕ. ೪೦೬). [ಸಂ.]

ಹಸ್ತಗಟ್ಟು, ಹಸ್ತಕಟ್ಟು (ನಾ). = ಹಸ್ತಕಂಕಣ: ಹಸ್ತಗಟ್ಟುಗಳ್ ಹೊಳೆಯುವ ಹೆಣ್ಣಿನ ಮಿತ್ರಯ ಕಂಡು ಹರ ಮರುಳಾದ (ವಾದೀಂ. ೪೬-೧೩). **ಹಸ್ತಕಟ್ಟು**: ಎಪ್ಪತ್ತೆರಡು ಸಾವಿರ ಸೂತ್ರದ ಹಸ್ತಕಟ್ಟು ಎರಡಿತ್ತು (ಕನಕ. ೧೩೦-೨). [ಹಸ್ತ + ಕಟ್ಟು]

ಹಸ್ತಗಡಿ (ನಾ). ಕತ್ತರಿಸಿ ಹೋದ ಕೈ: ಕಂಧರಗಡಿ ಬಾಹುಗಡಿ ಹಸ್ತಗಡಿ ನೇರಂದದ ನಡುತೊಡೆಗಡಿಯ ವ್ಯಂದಾರಕವಿರೋಧಿಗಳು ಬಿದ್ದರು ಕಾಮನಂದನ ಬಾಣಗಳಿಂದೆ (ಮೋಪತ. ೩೫-೩೩). [ಹಸ್ತ + ಕಡಿ]

ಹಸ್ತಗತ (ಗು). ೧. ಕೈಗೆಬಂದ; ಕೈವಶವಾದ ೨. ದೊರಕಿಸಿದ; ಗಳಿಸಿಕೊಂಡೆ. (ನಾ). ೩. ಕೈವಶ; ಸ್ವಾಧೀನ: ಆ ಪೈಕಿ ೧೫ ವಂಟೆ ಮೇಲಣ ಅಕಬರೀಮೊಹರಾ ಹೇರುಗಳನ್ನು ಹಸ್ತಗತಾ ಮಾಡಿಕೊಂಡು (ಹೈದರ. ೨೬); ಮಯೂರಶರ್ಮನು ಪಶ್ಚಿಮಸಮುದ್ರದಿಂದ ಶ್ರೀಶೈಲದವರೆಗಿದ್ದ ದೇಶವನ್ನು ಪಲ್ಲವರಿಂದ ತೆಗೆದುಕೊಂಡಾಗ ಈ ಭಾಗವು ಅವನ ಹಸ್ತಗತವಾಗಿರಬೇಕು (ಕರ್ಣಾಅ ೯). [ಸಂ.]

ಹಸ್ತಗುಣ (ನಾ). (ಆಲಂ) ಹಿಡಿದ ಕೆಲಸವನ್ನು ಸಫಲಗೊಳಿಸುವ ಕೈಯ ಮಹತ್ತ್ವ,— ಪ್ರಭಾವ; ಕೈಗುಣ: ನನ್ನ ಹಸ್ತಗುಣವನ್ನು ಪರೀಕ್ಷೆ ಮಾಡಿ ನೋಡಿ. ನಿಮ್ಮ ತಲೆಶೂಲೆ ಗುಣವಾಗುವವರೆಗೂ ನಾನು ಇಲ್ಲಿಂದ ಕದಲುವುದಿಲ್ಲ (ಹಶ್ರುಮ. ೧೦೫); ಎಲ್ಲಾರಿಗೂ ಗೊತ್ತಾಗಿರಬೇಕು ನಮ್ಮ ಹಸ್ತಗುಣ (ನಡುಮ. ೩೫). [ಸಂ.]

ಹಸ್ತಚ್ಛಟೆ (ನಾ). ೧. ಹಸ್ತಗಳ ಸಮೂಹ. ೨. (ಆಲಂ) ಕೈಗಳ ಸಮೂಹದಿಂದ ಹೊಡೆಯುವ ಏಟು; ಹಸ್ತತಾಡನೆ: ಹಸ್ತಚ್ಛಟಾಜರ್ಝರಮಧ್ಯಂ ಪೆಂಡವಾಸಂ ಗಗನವಿವರಮಂ ರೋದನೋನ್ನಾದದಿಂದಂ ಭರಿತಂ ಮಾಟ್ಟಂತು ವೈಕುರ್ವಣಪರಿಣತಿಯಂ ಬೀಱಿದಂ ರತ್ನಚೂಲಂ (ಪಂರಾಮಾ. ೧೬-೪೮). [ಸಂ. ಹಸ್ತಚ್ಛಟಾ]

ಹಸ್ತತಲ, ಹಸ್ತತಳ (ನಾ). ಅಂಗೈ; ಕರತಳ: 'ಹಸ್ತತಲಾಮಲಕ' ಪರಾ. ಹಸ್ತತಳ: ಆಯತವಾಮಹಸ್ತತಳಲಕ್ಷಣವಜ್ರ[ವಿ]ಚೂರ್ಣಿತಾದ್ರಿವಜ್ರಾಯುಧನೆಂಬ ದೊಡ್ಡಿವೆಸರಂ ಕೊಳದೊಳ್ ತನಗರ್ಧಪೋಷಮಾಮ್ನಾಯಮನೀಯೆ (ಶಾಂತಿಪು. ೮-೫೬). [ಸಂ.]

ಹಸ್ತತಲಾಮಲಕ (ನಾ). ಅಂಗೈಯೊಳಗಿನ ನೆಲ್ಲಿಕಾಯಿ; ಕರತಲಾಮಲಕ: ವಿಷ್ಟಪಮೊರ್ಮೆಯುಂ ತಮಗೆ ಹಸ್ತತಲಾಮಲಕಂಬೊಲೆಯ್ದೆ (ಚಂದ್ರಪು. ೩-೬೮). [ಸಂ.]

ಹಸ್ತತಳ 'ಹಸ್ತತಲ' ನೋ.

ಹಸ್ತನ್ಯಸ್ತ (ನಾ). ಕೈಗೆ ಒಪ್ಪಿಸಿದುದು; ಕೈವಶಮಾಡಿದುದು: ಅನೇಕ ಕ್ಷತ್ರಿಯ ಪುತ್ರರ ಕುಲಧನಂಗಳಂ ಕೈಕೊಂಡು ಕೋಶಾಧ್ಯಕ್ಷ ಹಸ್ತನ್ಯಸ್ತಂಗಳ್ಮಾಡಿ (ಆದಿಪು. ೧೩-೮೦ ವ). [ಸಂ.]

ಹಸ್ತಪತ್ರ (ನಾ). ಪ್ರಚಾರಕ್ಕಾಗಿ ಕೈಯಿಂದ ಹಂಚುವ, ಅಚ್ಚುಮಾಡಿದ ಚಿಕ್ಕ ಪ್ರಕಟಣೆ; ಕರಪತ್ರ: ಆ ಹಸ್ತಪತ್ರದಲ್ಲಿ ಕೆಲವು ಪ್ರಾಣಿಗಳ ಚಿತ್ರಗಳು ಇದ್ದವು (ಕಪಪು. ೨-೨೬); ಇವೊತ್ತು ನಾವು ಕೈ ನೀಡಿದರೆ ಸಾಕು; ಹಸ್ತಪತ್ರವನ್ನು ತಂದು ಕೊಟ್ಟು ಹೋಗುತ್ತಾರೆ (ಗಾಳಿಪ. ೬೩). [ಸಂ.]

ಹಸ್ತಪತ್ರಿಕೆ (ನಾ). ೧. = ಹಸ್ತಪತ್ರ: ನನ್ನ ಬಾಲ್ಯದ ಬಂಧುರತೆಯನ್ನೆಲ್ಲ ಮರಳಿ ಕರೆತರುವ ಶಕ್ತಿ ಹಸ್ತಪತ್ರಿಕೆಗೆ ಉಂಟು (ಗಾಳಿಪ. ೭೪). ೨. ಕೈಬರೆಹದ ಪ್ರತಿ; ಹಸ್ತಪ್ರತಿ: ಈ ಹಸ್ತಪತ್ರಿಕೆಯಲ್ಲಿರುವ ಮುದ್ರಿತವಾಗಿಯೂ ಇರುವ ಅನೇಕ ಕೃತಿಗಳನ್ನು ಆ ಸಂಸ್ಥೆಯ ಪುಸ್ತಕಭಾಂಡಾರದಲ್ಲಿ ಶೇಖರಿಸಲಾಗಿದೆ (ಯಕ್ಷಗಾ. ೧೪). [ಸಂ. ಹಸ್ತಪತ್ರಿಕಾ]

ಹಸ್ತಪರೀಕ್ಷೆ (ನಾ). ಅಂಗೈಯಲ್ಲಿರುವ ರೇಖೆಗಳನ್ನು ಸಾಮುದ್ರಿಕದೃಷ್ಟಿಯಿಂದ ಪರಿಶೀಲಿಸುವುದು; ಕೈ ನೋಡುವುದು: (ಕಿ). [ಸಂ. ಹಸ್ತಪರೀಕ್ಷಾ]

ಹಸ್ತಪರುಷ (ನಾ). ಕೈಯಿಂದ ಮುಟ್ಟಿ ಶುದ್ಧಗೊಳಿಸುವ ಸಿದ್ಧಿ: ಪರಿಪಾಕವಾದ ಸಕಲಪದಾರ್ಥಗಳ ಹಸ್ತಪರುಷದಿಂದೆ ಶುದ್ಧಸಂಸ್ಕಾರವ ಮಾಡಿದಲ್ಲದೆ ಲಿಂಗಕ್ಕೆ ಅರ್ಪಿಸಲಾಗದು (ಅಖಂಡೇ. ೧೬೨-೨೪); ಮನಪರುಷ, ವಾಕ್‌ಪರುಷ, ಹಸ್ತಪರುಷ, ದೃಷ್ಟಿಪರುಷ, ಭಾವಪರುಷಂಗಳು ಎಂಬ ಪಂಚಪರುಷಂಗಳನ್ನು ಜಗದೀಶ್ವರನು ಕೊಟ್ಟಿರುವನಾಗಿ (ಕೃಷಿಪ್ರ. ೨೬೫). 'ಪಂಚಪರುಷ' ಪರಾ.

[ಹಸ್ತ + ಪರುಷ, (< ಪರುಸ)]

ಹಸ್ತಪಾವಡ 'ಹಸ್ತಪಾವುಡ' ನೋ.

ಹಸ್ತಪಾವುಡ, ಹಸ್ತಪಾವಡ (ನಾ). [ವೀಶೈ] ಅಭಿಷೇಕ ಮಾಡಿದ ಬಳಿಕ ಇಷ್ಟಲಿಂಗವನ್ನು ಒರಸುವುದಕ್ಕಾಗಿ ಪ್ರತ್ಯೇಕವಾಗಿಟ್ಟಿರುವ ಮಡಿಬಟ್ಟೆ: ವೀರಶೈವಳ ಹಸ್ತಪಾವುಡವಿಲ್ಲದೆ ಊರಿಂದೂರಿಗೆ ಬಂದಿ ಹ್ಯಾಂಗ (ಲೋಕಗೀ. ೬೭-೮). ಹಸ್ತಪಾವಡ: ಕರದ ಪುಸ್ತಕ ನಾರಿವಾಳ ತೋಳೊಳು ಕಟ್ಟಿದುರು ಭಸಿತದಾಧಾರ ಹಸ್ತಪಾವಡ ನುಡಿದ ಹರಮಂತ್ರಯೆಡಬಲಂಗಳ ನೋಡ ಶಂಕಿಸಂ ಹಿರಿದು ಕಿಱಿದಿವರೆನ್ನನು (ಗುರುಚಾ. ೩-೫೮). [ಹಸ್ತ + ಪಾವುಡ,]

ಹಸ್ತಪ್ರತಿ (ನಾ). ೧. ಗ್ರಂಥವನ್ನು ಓಲೆ ಅಥವಾ ಕಾಗದ ಮುಂತಾದುವುಗಳಲ್ಲಿ ಬರೆದ ಕೈಬರೆಹದ ಪ್ರತಿ: ಕೆಲವು ಕಾವ್ಯಗಳಿಗೆ ಅನೇಕ ಹಸ್ತಪ್ರತಿಗಳು ದೊರತಿಲ್ಲ (ಕನ್ನಸಂ. ೬೨). ೨. ಮುದ್ರಣವಾಗದ ಯಾವುದೇ ಕೈಬರಹದ ಪ್ರತಿ; ಅಚ್ಚಾಗದ ಮೊದಲಿನ ಪ್ರತಿ: (ಕಿ). [ಸಂ.]

ಹಸ್ತಪ್ರತಿಶಾಸ್ತ್ರ (ನಾ). ಹಸ್ತಪ್ರತಿಯ ಸಿದ್ಧತೆಗೆ ಸಂಬಂಧಿಸಿದ ಶಾಸ್ತ್ರ. [ಸಂ.]

ಹಸ್ತಬಿಂಬ (ನಾ). ಮೈಗೆ ಸುಗಂಧದ್ರವ್ಯಗಳನ್ನು ಲೇಪಿಸುವುದು; ಸುಗಂಧಾನುಲೇಪನ: "ಸ್ಥಾಸಕಂ, ಹಸ್ತಬಿಂಬಂ-ಈ ೨ ಚಟ್ಟಱಿವುದು" (ಹಲಾಯು. ೮೯-೩೮೬). [ಸಂ.]

ಹಸ್ತಭೂಷಣ (ನಾ). ಕೈಗೆ ತೊಡುವ ಆಭರಣ,—ಕಡಗ: "ಕೌಸ್ತುಭಂ ಕಣ್ಣುನೀರ್ ಭ್ರಮಣಂ ಮೇಖಲೆ ಹಸ್ತಭೂಷಣಮಿವಿಂತುಂ ಕಂಕಣಾಖ್ಯಾನಂ" (ನಾನಾರ. ೪೭). [ಸಂ.]

ಹಸ್ತಮರ್ದನ (ನಾ). ಕೈಯನ್ನು ಹಿಸುಕುವುದು: ಹಸ್ತಿನಿಗೆ ಜಂಘಗಳು ಚಿತ್ತಿನಿಗೆ ಹರಡುಗಳು ಹಸ್ತಮರ್ದನವು ಶಂಖಿನಿಗೆ ಪದ್ಮಿನಿಗೆ ಮಸ್ತಕವು ನೋಡ (ಸರ್ವಜ್ಞ. ೧೬೩೩) [ಸಂ.]

ಹಸ್ತಮಸ್ತಕಸಂಯೋಗ (ನಾ). [ವೀಶೈ] ಇಷ್ಟಲಿಂಗವನ್ನು ಗುರುವು ಶಿಷ್ಯನಿಗೆ ದಯಪಾಲಿಸುವ ಒಂದು ವಿಧಾನ: ಇಷ್ಟಲಿಂಗವ ದೃಷ್ಟದ ತನುವಿಂಗೆ ಪ್ರಮಾಣಿಸುವಲ್ಲಿ ಉತ್ಪತ್ತಿ ಸ್ಥಿತಿಲಯಂಗಳ ಹುಟ್ಟುಗೆಡಿಸಿ ನಿತ್ಯಾನಿತ್ಯವನೀಕ್ಷಿಸಿ ತೋಱಿ ಹಸ್ತಮಸ್ತಕಸಂಯೋಗವ ಮಾಡಬೇಕು (ಮೋಳಿಮಾ. ೧೪೪-೫೫೦). [ಸಂ.]

ಹಸ್ತಮುದ್ರಿಕೆ (ನಾ). (ಅರಸ ಮುಂತಾದವರ) ಹೆಸರು ಅಥವಾ ಲಾಂಛನವನ್ನು ಕೆತ್ತಿರುವ ಉಂಗುರ; ಮುದ್ರೆಯುಂಗುರ: ಅವಳ ಕೈಯಲ್ಲಿ ತನ್ನ ಗುರುತಿನ ಹಸ್ತಮುದ್ರಿಕೆ ಅಥವಾ ಪಂಚಾಮೊಹರನ್ನು ಕೊಟ್ಟು . . . ಹೇಳಿ ಕಳುಹಿಸಿದಳು (ಬಂಕಿಮ. ೨೧೮). [ಸಂ. ಹಸ್ತಮುದ್ರಿಕಾ]

ಹಸ್ತಮುದ್ರೆ (ನಾ). [ನಾಟ್ಯ] (ಆಂಗಿಕಾಭಿನಯದಲ್ಲಿ) ಕೈಯ ವಿನ್ಯಾಸ; ಹಸ್ತದ ಭಂಗಿ: ಭಾವ ಭಂಗಿಗಳಲ್ಲಿ, ಹಸ್ತಮುದ್ರಗಳಲ್ಲಿ, ಬೆರಲಿರಿತದಲ್ಲಿ, ತಲೆದೂಕದಲ್ಲಿ, ಮುಖದ್ಯುತಿಯಲ್ಲಿ . . . ಪರಮತಾಣ್ಣವದಿಂದ ನಿಜವಾಗಿ ಧನ್ಯವಾದುವು! (ಬೆಟ್ಟಅ. ೧೩-೧೨). [ಸಂ. ಹಸ್ತಮುದ್ರಾ]

ಹಸ್ತಮೈಥುನ (ನಾ). [ಕಾಮಶಾ] ಹಸ್ತದಿಂದ ಕೃತಕವಾಗಿ ಮಾಡುವ ರತಿಕೇಳಿ. 'ಮುಷ್ಟಿಮೈಥುನ' ಪರಾ. [ಸಂ.]

ಹಸ್ತರೇಖೆ (ನಾ). ಅಂಗೈಯಲ್ಲಿರುವ ಗೆರೆ: ಹಸ್ತರೇಖೆಗಳ ಬಗೆಯಂ ಕರುಣದಿಂ ನಿನಗೆ ವಿಸ್ತರಿಸುವೆನು ಕೇಳು (ವೀಶೈಪು. ೪-೨೩-೩೯). [ಸಂ. ಹಸ್ತರೇಖಾ]

ಹಸ್ತಲಾಗ, ಹಸ್ತಲಾಘ (ನಾ). ೧. (ಗೌರವಸೂಚಕವಾಗಿ) ಕೈಯನ್ನು ಹಿಡಿದು ಕರೆತರುವುದು: ಸಸಿದಲೆಯಂ ವಿರಿಂಚಿ ಮುರವೈರಿಗಳಾಗಳೆ ಹಸ್ತಲಾಗಮಂ ಸಸಿನೆ ಕುಡಲ್ಕೆ ರಾಜಗೃಹದಂತರಮಂ ಪುಗುತಂದು (ಹಾಲಾಸ್ಯ. ೧-೬-೫೫). ೨. "ಹಸ್ತಸ್ಪರ್ಶ" (ಪಂಚನೆ. ೧೬೬ ಅಡಿಟಿ): ಈ ಹಸ್ತಲಾಗಕ್ಕೆ ದಾಹಗೊಳ್ಳುತ, ತಮ್ಮ ದೇಹವಂ ದಂಡಿಪರ್ ಜನರು ತರತರದೆ (ಪಂಚನೆ. ೧೬೬). ಹಸ್ತಲಾಘ: ೧. ಹಸ್ತಲಾಘದಿ ಚೇಳಿನಿಯ ಜನ ವೃತ್ತದಲಿ ವಿಪುಲಾದ್ರಿಯಗ್ರಕೆ ಹತ್ತಿಸಿದೆ ಭೋಯೆನುತಲೇರಿದನಾಗ (ಮುಲ್ಲಾಶ. ೨-೧೦). 'ಕೈಲಾಗು' ಪರಾ. [< ಹಸ್ತಲಾಘವ]

ಹಸ್ತಲಾಘ 'ಹಸ್ತಲಾಗ' ನೋ.

ಹಸ್ತಲಾಘವ (ನಾ). ೧. ಕೈಯ ಚಳಕ,—ಕೌಶಲ: ಆ ಬಿಲ್ಲುಗಾರರನ್ನೂ ಕರ್ಣನ ಹಸ್ತಲಾಘವವನ್ನೂ ಮನಸ್ಸಿಗೆ ತಂದುಕೊಂಡು ನನಗೆ ನಿದ್ರೆ ಬರುತ್ತಿಲ್ಲ (ವಚಭಾ. ೧೨೩); ಕಾಳೆಗವನ್ನು ನೋಡಲು ಬಂದಿದ್ದ ಜನರೆಲ್ಲರೂ ಇವರ ಸಾಧನೆಯನ್ನೂ ಹಸ್ತಲಾಘವ ಚಮತ್ಕಾರಗಳನ್ನೂ . . . ಕೊಂಡಾಡುತ್ತಿದ್ದರು (ಒಡಕ. ೩೬). ೨. ಗೌರವಕ್ಕಾಗಿ ಅಥವಾ ಆಸರೆಗಾಗಿ ಕೈಯನ್ನು ಹಿಡಿದು ಕರೆತರುವುದು: ತಲೆವಾಗಿ, ವೃದ್ಧಮನ್ತ್ರಿಯ ಹಸ್ತಲಾಘವಂಗೊಂಡು ಭದ್ರಾಸೀನನಾಗುವನು (ಸುಗುಗಂ. ೪೫-೧೨). ೩. ಕೈಕುಲುಕುವುದು; ಹಸ್ತಾಂದೋಲನ; ಸ್ನೇಹಸೂಚಕವಾಗಿ ಕೈಯನ್ನು ಹಿಡಿದು ಮೆಲ್ಲಗೆ ಅಲುಗಿಸುವುದು: ಅಧ್ಯಕ್ಷರ ಬಳಿ ಹೋಗಿ, ಹಸ್ತಲಾಘವ ಕೊಟ್ಟು

ನಮಸ್ಕಾರ ಮಾಡಿ ಸ್ವಸ್ವಳಕ್ಕೆ ಹಿಂದಿರುಗಬೇಕು (ವಿಷ್ಣು. ೧೨): ಅವರು ಶ್ರೀಧರನನ್ನು ನಗುಮುಖದಿಂದಲೇ ಸ್ವಾಗತಿಸಿ ಹಸ್ತಲಾಘವ ಸಲ್ಲಿಸಿದರು (ವಾಕ್ಸಲ್ಯ. ೬೮೫). ೪. ಕೈಚಳಕದಿಂದ ಮಾಡುವ ಕಣ್ಕಟ್ಟು: — ಗಾರುಡಿ: (೬). [ಸಂ.]

ಹಸ್ತವಿಸ್ತಾರ (ನಾ). = ಹಸ್ತಮುದ್ರೆ: ಆಕೆಯರ ಚತುಷ್ಪಷ್ಟಿವಿಧಹಸ್ತವಿಸ್ತಾರದಿಂ ಬಂದುಲ್ಲಾಪರೆಯು ಬಿನವಮಾಗಲ್ಯಂತಕಯಂ . . . ಅತಿಮನೋಹರವಾಗ (ಚಂದ್ರಪ್ರ. ೧೨-೧೯೪ ವ). [ಸಂ.]

ಹಸ್ತವ್ಯಾಪಾರ (ನಾ). ಕೈಗಳ ಕಾರ್ಯ.—ಚಟುವಟಿಕೆ: ಅವರು ತಮ್ಮ ಮನೋವ್ಯಾಪಾರವನ್ನು ಪರಮಶಿವನ ಪದಂಗಳಲ್ಲಿಯು . . . ಹಸ್ತವ್ಯಾಪಾರವನ್ನು ಭಕ್ತರಿಗೆ ವಸ್ತ್ರಂಗಳು ಕೌಪೀನಂಗಳು ನೇಯಿಸಿಕೊಡುವುದರಲ್ಲಿಯು ನಿರಿಸಿದವರಾಗಿ (ಪುರಾವಿ. ೨೬.). [ಸಂ.]

ಹಸ್ತಶುದ್ಧಿ (ನಾ). ವ್ಯಾಪಾರ, ವ್ಯವಸಾಯ, ವೈದ್ಯಕೀಯವೃತ್ತಿ ಮೊದಲಾದುವುಗಳಲ್ಲಿ ಕೈಗುಣದಿಂದ ಉಂಟಾಗುವ ಏಳಿಗೆ, — ಊರ್ಜಿತಾವಸ್ಥೆ: (೬). [ಸಂ.]

ಹಸ್ತಸಂಜ್ಞೆ (ನಾ). ಹೇಳಬೇಕಾದ ಮಾತನ್ನು ಹಸ್ತವಿನ್ಯಾಸದಿಂದ ಸೂಚಿಸುವುದು; ಕೈಸನ್ನೆ: ರತ್ನಗಳೊಳುತ್ತಮಮೆನಿಪ್ಪುದನು ಹಸ್ತಸಂಜ್ಞೆಯ ತೋರುತಾ ರತ್ನಗಳ ಬೆಲೆಯ ವಾಕ್ಯದಿ ಪೇಳಬಾರದು (ರತ್ನಶಾ. ೬-೨೬). [ಸಂ. ಹಸ್ತಸಂಜ್ಞಾ]

ಹಸ್ತಸರ (ನಾ). ಮುಂಗೈಗೆ ಧರಿಸುವ ಒಂದು ಆಭರಣ: ಹಸ್ತಸರ ಹೊನ್ನ ಬಳೆ ತೋಳಬಂದಿ ಕರಮಸೆಯಲು ಮಾಸತಿಯರಾದರು ರಾಮನರಸಿಯರಂದು ರಾಗದೊಳು (ಜಾಠಾಸಾಂ. ೩೬-೧೫೯); ಲುಳಿ ಹಸ್ತಸರ[ಜಾತಾಂ. ರವಿ]ವೆರಲುಂಗುರ ಕಡಗ ತೋಳ್ಬಳೆ ಕಂಕಣಸೂಡಗವ . . . ತರಿಸಿ ಕೊಟ್ಟನವನು (ರಾಮವಿ. ೮-೪೬). [ಸಂ.]

ಹಸ್ತಸಾಮುದ್ರಿಕ (ನಾ). [ಸಾಮುದ್ರಿ] ಅಂಗ್ಯರೇಖೆಗಳ ಆಧಾರದ ಮೇಲೆ ವ್ಯಕ್ತಿಯ ಭವಿಷ್ಯವನ್ನು ಹೇಳುವ ಶಾಸ್ತ್ರ. ೨. ಹಸ್ತಸಾಮುದ್ರಿಕ ಶಾಸ್ತ್ರವನ್ನು ಬಲ್ಲ ವ್ಯಕ್ತಿ: ಸ್ತ್ರೀಪುರುಷರ ಯೋಗಾಯೋಗಗಳನ್ನು ಅಭ್ಯಸಿಸಿ ಅವರ ಆಗುಹೋಗುಗಳನ್ನು ಕಂಡುಹಿಡಿಯುವ ಹಸ್ತಸಾಮುದ್ರಿಕನಂತೆ . . . ಅರಸುತ್ತ ಬರುವಳು (ಪಂಪಂತ. ೮). [ಸಂ.]

ಹಸ್ತಸೂತ್ರ (ನಾ). ೧. ವಿವಾಹ ಮೊದಲಾದ ಮಂಗಳಸಮಯಗಳಲ್ಲಿ ಮುಂಗೈಗೆ ಕಟ್ಟುವ ಕಂಕಣ, — ಅಭಿಮಂತ್ರಿಸಿರುವ ದಾರ: "ಕಂಕಣಂ, ಹಸ್ತಸೂತ್ರಂ, ಪ್ರತಿಸರಂ - ಈ ೩ ನೂಲ ಕಂಕಣಂ" (ಪಲಾಮು. ೯೨-೪೦೪). ೨. = ಹಸ್ತಸರ: "ತೀವಿ ಮುಂಗೈಯಲಿಹ ಸರ್ವಭೂಷಣಮೆಯ್ದೆ ಭಾವಿಸಲು ಹಸ್ತಸೂತ್ರಮೆನಿಕ್ಕು" (ಮಂಗರಾ. ೧೦೦-೨೬). [ಸಂ.]

ಹಸ್ತಸ್ವಸ್ತಿಕ (ನಾ). ಕತ್ತರಿಯ ಆಕಾರದಲ್ಲಿ ಕೈಗಳನ್ನು ಅಡ್ಡಲಾಗಿ ಇಡುವುದು; ಕೈಗಳಿಂದ ಸ್ವಸ್ತಿಕಮುದ್ರೆಯನ್ನು ರಚಿಸುವುದು: ಉತ್ತರೀಯಾಂತರೀಯಂ ತೊನೆಯೆ ತೊಲಗಿ ನಿಂದಿರ್ದಲ್ಲಿ ತಂದಿತ್ತುದುಚ್ಚಸ್ತನದೊಳಮರ್ದ ಹಸ್ತಸ್ವಸ್ತಿಕಂಗಳ್ ಬೆಡಂಗಂ (ಆದಿಪು. ೧೫-೧೪೮). [ಸಂ.]

ಹಸ್ತಾಂಗುಲಿ (ನಾ). ಕೈಬೆರಳು: ಪಂಚಾಕ್ಷರಿಯಿಮ್ಮಡಿಸಿದಂತಿರ್ಪ ಹಸ್ತಾಂಗುಲಿಗಳ ಪ್ರಸಾದಸ್ಥಲಮೆನಿಸಿದ ಪೂಜ್ಯೋದರದ . . . ಬಸವರಾಜಂ ಕಾರಣಿಕಪುರುಷಂ ಶಿವಭಕ್ತಿಸರ್ವಾಂಗಚರಿತಂ ನೆನೆದು ನೋಡಿ (ಬಸರ. ೨-೩೧). [ಸಂ.]

ಹಸ್ತಾಂತರ (ನಾ). ೧. (ಆಸ್ತಿ ಮುಂತಾದುವು) ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹೋಗುವುದು, —ಒಬ್ಬರಿಂದ ಇನ್ನೊಬ್ಬರಿಗೆ ಸಾಗುವುದು: ಜಮಾನು ಹಸ್ತಾಂತರವಾಗುವುದನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು (ಭಾಧಾನ. ೨೫೮). ೨. ಕೈಯಲ್ಲಿ ಉಳಿದಿರುವ ಹಣ; ಶಿಲ್ಕು: ವಟ್ಟ ಲಂಚ ಹೊರನಿಲ ಹಸ್ತಾಂತರ ಸಂಜಾಯಿತನಿಲಗಳ ಪರಿವಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ (ಕಳಸ್ಯ. ೭-೨೯). ೩. ಬೇರೆಯವರಿಂದ ಬರಬೇಕಾಗಿದ್ದು, ಇನ್ನೂ ಬಾಕಿಯಾಗಿರುವ ಹಣ. ೪. ಖಜಾನೆ; ಬೊಕ್ಕಸ: ನಿಗದಿಯಾದ ತೆರಿಗೆಹಣ ಅಡ್ಡಿಯಿಲ್ಲದೆ ಹಸ್ತಾಂತರಕ್ಕೆ ವಸೂಲಾಗಿ ಬರುತ್ತದೆ (ಆಡಾಮಾ. IV. ೬೦): ಆಳಿಕೆ ಆಳಿಕೆಗೆ ಹಸ್ತಾಂತರದ ಸುವರ್ಣಾದಾಯ ಹೆಚ್ಚುತ್ತಲೇ ಬಂತು (ಚಿತ್ರಪಾ. ೫ ಉಪೋದ್ಘಾತ). [ಸಂ.]

ಹಸ್ತಾಂತರಣ (ನಾ). = ಹಸ್ತಾಂತರ ೧: ಯಾರೊಬ್ಬರ ಪರವಾಗಿ ಅಂಥ ಯಾವುದಾದರೂ ಸಂವಿದೆಯನ್ನು ಅಥವಾ ಹಸ್ತಾಂತರಣಪತ್ರವನ್ನು ಮಾಡುವ ಅಥವಾ ಬರೆಯುವ ಯಾವ ಮನುಷ್ಯನಾಗಲಿ ಅದರ ಸಂಬಂಧದಲ್ಲಿ ವೈಯಕ್ತಿಕವಾಗಿ ಬದ್ಧನಾಗಿರತಕ್ಕುದಲ್ಲ (ಭಾಧಾನ. ೧೬೨). [ಸಂ.]

ಹಸ್ತಾಂತ್ರಿ (ನಾ). ಕೈಕೆಲಸದವನು (?): ಯಿ ಶಸನವನು ಕೆತ್ತಿದಾತ ಹಸ್ತಾಂತ್ರಿ ಗೂಳಪ್ಪ (ಎಕ. XVI. ಚಕ್ಕನಾ. ೯೦-೯೪:1802). [P ಇದು 'ಹಸ್ತತಂತ್ರಿ' ಎಂದಿರಬಹುದ ?]

ಹಸ್ತಾಂದೋಲನ (ನಾ). ಕೈಕುಲಕುವುದು; ಹಸ್ತಲಾಘವ: ಇನ್ನಪಕ್ಷರು ಚಾಧವನೊಂದಿಗೆ ಹಸ್ತಾಂದೋಲನ ಮಾಡಿ ಹೇಳಿದರು (ರತ್ನಗೋ. ೫೩): ಹಸ್ತಾಂದೋಲನ ಕೊಟ್ಟು ನಮ್ಮಿಬ್ಬರನ್ನು ಕಳುಹಿದರು (ಮೀರಮ. ೧೮೯). [ಸಂ.]

ಹಸ್ತಾಕ್ಷರ (ನಾ). ೧. ಕೈಬರೆಹ: ಓದಂದು ಕೊಡೆ ಬರಹವ ಕಂಡು ಗಣಕ ಮೇಲೋದುತೆ ಕಣ್ಣನಿಗಳ ತಂದು ಆದರಿಸಮ್ಮಯ್ಯನ ಹಸ್ತಾಕ್ಷರ ಮೇದಿನೀಪತಿಯೆಂದು ನುಡಿದನು (ತ್ರಿಭುತಿ. ೧೦-೧೪); ಹಸ್ತಾಕ್ಷರದಲ್ಲಿರುವ ವ್ಯತ್ಯಾಸಗಳಿಂದ ಈ ವಿಷಯವನ್ನು ತಿಳಿಯಬಹುದು (ಕನ್ನಸಂ. ೬೮). ೨. ಸಹಿ; ರುಜು: ನಿನ್ನ ಇಷ್ಟಾನುಸಾರವಾಗಿಯೇ ಪತ್ರವನ್ನು ಬರೆದು ಹಸ್ತಾಕ್ಷರವನ್ನು ಹಾಕಿ ಕೊಡುವೆನು (ಕವಿಕ. ೫). [ಸಂ.]

ಹಸ್ತಾಗ್ರ (ನಾ). ೧. ಕೈಬೆರಳು; ಅಂಗುಲಿ: ರಾಜತನಯರ್ ಪೂಣ್ಕತ್ತಲೀ ಪ್ರಸ್ತರಕ್ಕೆ ತಗುಳ್ಳಂಬುದುಮಿತ್ತಿಕೊಂಡು ಗಗನಕ್ಕೀಡಾಡಿ ವಾಮೇತರಾಯತಹಸ್ತಾಗ್ರದೂಳಾಂತು ತಾಳ್ದಿದುಬಲಿಂ ಬಾಳತ್ಯದೊಳ್ ಕೋಟಿಕಾಂತಿತಮಾ ಕಲ್ ಶಿಲಿಶಿಲ್ ತ್ರಿಪ್ಪಷ್ಟಮಂಪಂ ಗಕ್ಕುಂ ಪಜಂಗಕ್ಕುಮೇ (ಶಾಂಪು. ೫-೨೬); ಶಕುಂತಳೆಯು . . . ತನ್ನ ಹಸ್ತಾಗ್ರದಿಂದ ಮುಖವನ್ನು ಮುಚ್ಚಿಕೊಂಡು ಅತಿಭೀತಳಾದಂತಿರುವಳು (ಶಾಕುಂತ. ೯೦-೧೫). ೨. ಸೊಂಡಿಲು: ಕೊಳದೊಳ್ ಬಾಳಮೃಣಾಳನೀಕಬಳಮಂ ಕಿಬ್ಬೆತ್ತಿ ಹಸ್ತಾಗ್ರದಿಂ ತಿಳಿನೀರಂ ತಗದೂಯ್ಯನೂಡಿಸಿ . . . ಬಾಳಕರೇಣುವಂ ಬಯಕೆಯೊಳ್ ಕೊಂಡಾಡುತಿರ್ದತ್ತಿಭಂ (ವೀರಾವ. ೮-೪). [ಸಂ.]

ಹಸ್ತಾಪಜೇಯ (ನಾ). ಕೈಗೆ ಸುಲಭವಾಗಿ ಎಟುಕುವಂತಹುದು: ನತರ್ಗೊಲ್ದು ಸರ್ವಸಮಂ ನಲ್ಲೆಬಲಿತ್ತು ಕಾವೆ ದೊರೆಯಲ್ ಹಸ್ತಾಪಜೇಯಂ ಫಲಂ (ವಸ್ತವಂ. ೮೫). [ಸಂ.]

ಹಸ್ತಾಭರಣ (ನಾ). ೧. ಕೈಗೆ ಧರಿಸುವ ಒಡವೆ; ಬಳೆ, ಕಡಗ ಮೊದಲಾದ ಆಭರಣ: "ಮುದ್ರಿ - ಮುರಿಕುಂ, ಹಸ್ತಾಭರಣಮುಂ, ಬಳೆಯವುಂ" (ಕಾತಕ್ಕ. ೨೨೪). ೨. [ಜ್ಯೋತಿ] ಹಸ್ತೆ ಎಂಬ ನಕ್ಷತ್ರ. ೧, ೨: ಶ್ರವಣಭೂಷಣದಿಂದ ಹಸ್ತಾಭರಣದಿಂದೆ ದಿವಿಜಪದಮಸವಂತೆ . . . ಚೆಲ್ವಿಂದ ವಿಷಯ ಕಂಗೊಳಿಸಿರ್ದಳು (ಜೈಮಿಭಾ. ೩೧-೧೦). [ಸಂ.]

ಹಸ್ತಾಭಿನಯ (ನಾ). = ಹಸ್ತಮುದ್ರೆ: ಭಾವದ ಬೆಸುಗೆಗಳ ಹಸ್ತಾಭಿನಯ ದೃಕ್ಪ್ರಸರಣದ ವರಸಾತ್ವಿಕಾಂಗಿಕಸುಗತಿವಿಭ್ರಮದ . . . ವರಲಾಸ್ಯತಾಂಡವವಸೆದುದ್ದೆ ರಂಭಾದಿ ನರ್ತಕಿಯರಲಿ ಹೊಸತೆನಿಸಿ (ಕುವಾಳ. ೬-೧೩). [ಸಂ.]

ಹಸ್ತಾಮಳಕ (ನಾ). ೧. ಅಂಗೈ ಮೇಲಿರುವ ನೆಲ್ಲಿಯ ಕಾಯಿ; ಕರತಲಾಮಲಕ: ಭವಸಂಬಂಧದೊಳ್ ತೊಟ್ಟ ಸಂಭಾವನೆ ಚಿತ್ರಂಬೊಕ್ಕು ಹಸ್ತಾಮಳಕದ ತೆಱದಿಂ ತೋಱೆ (ಶಾಂಪು. ೯-೧೦೩). ೨. (ಆಲಂ) ಸುಲಭ; ಸರಾಗ: ಇದನಾವನರಿವ ಗೋಪ್ಯ ದೊಳಗಿರ್ತು ಭಾಮಿಸುವ ಮುದದೊಳಭ್ಯಾಸಿಸುವನವನಿಗಾನಂದಸಂಪದವು ಹಸ್ತಾಮಳಕ ಮಾಗಿ ಸಾಯುಜ್ಯಮಂ ಪಡೆವ (ವೆಂಕಾರಾ. ೪-೯-೩೦). [ಸಂ. ಹಸ್ತಾಮಲಕ]

ಹಸ್ತಾರ್ಕ (ನಾ). [ಜ್ಯೋತಿ] ಹಸ್ತಾನಕ್ಷತ್ರದಲ್ಲಿರುವ ಸೂರ್ಯ: ಕೀರ್ತಿಶೇಖರ ಧರಾರಮಣಂಗೆ ಹಸ್ತಾರ್ಕನಂತೆ ಕನ್ಯಾಸಮನ್ವಿತಂ ಬರ್ಪಂತು ಬಲಿಯಟ್ಟಿ (ಅನಂಪು. ೬-೩೧ ವ); ಗಡಿಗೆ ಹಸ್ತಾರ್ಕದಿಂದೊಡೆಯಲದಱೋದಿನೊಳಗಡಕೆಹೋಳಂ ಮೈಯ ನೀರಿಂದವೆ ಬಿಡದೇಳುದಿನಮರೆದು ಕಡುಗಂಪಿನಿಂ ಪೊರೆದು ಕುಡೆ ಮಹಾವಶ್ಯ ಮಿದು ತಪ್ಪದು (ಜನಮ. ೧೩-೫೨). [ಸಂ.]

ಹಸ್ತಾವಚಯ (ನಾ). ಕಯ್ಯಿಂದ ಹೂವನ್ನು ಸಂಗ್ರಹಿಸುವುದು: ಹಸ್ತಾವಚಯದಿನುರುಪುಷ್ಪಸ್ತಬಕಮನುನ್ನದಭ್ರಮದ್ಭ್ರಮರಪರಿತ್ರಸ್ತಮತಿ ಮೆಲ್ಲನೆಲಗಿ ಘನಸ್ತನವತಿ ಕೊಯ್ವಳಾಮ್ರಶಾಖೆಯೊಳೊರ್ವಳ್ (ಕಾವ್ಯಾಪ. ೪೦೪). [ಸಂ.]

ಹಸ್ತಾವಲಂಬ (ನಾ). ಕಯ್ಯ ಆಸರೆ: ಮಂಗಳಾಳಂಕರಣಾಲಂಕೃತಂ ಸೌಧರ್ಮೇಂದ್ರದತ್ತ ಹಸ್ತಾವಲಂಬನಾರೂಢಶುಭಪರಿಣಾಮಂ . . . ಶಿಬಿಕೆಯನೇಱಿದಾಗಳ್ (ಆದಿಪು. ೯-೭೨). [ಸಂ.]

ಹಸ್ತಾಹಸ್ತಿ (ನಾ). ಕೈ ಕೈ ಕಾಳಗ; ತುಮುಲಯುದ್ಧ: (ಕಿ). [ಸಂ.]

ಹಸ್ತಾಹಸ್ತಿಕೆ (ನಾ). ೧. = ಹಸ್ತಾಹಸ್ತಿ. ೨. ಏನಿಮಯ: ಆಕೆಯ ವದನದಿಂದೀ ನಿನ್ನ ವದನಕೆ ಮತ್ತಲ್ಲಿಂದೆನ್ನ ಚರಣಕೆ ಹಸ್ತಾಹಸ್ತಿಕೆಯಿಂದಲಿಂದು ಈ ತಿಲಕವು ನೆಗಳ್ದುದಿದತುಳದುಷ್ಕರವು (ಗಾಥಾಸ. ೪೫-೭೯). [ಸಂ. ಹಸ್ತಾಹಸ್ತಿಕಾ]

ಹಸ್ತಾಳಂಕೃತಿ (ನಾ). ಕೈಗೆ ತೊಡುವ ಕಡಗ, ಬಳೆ ಮೊದಲಾದ ಆಭರಣ: "ಕಂಕಣಮಾವಾಪಂ ವಳಯಂ ಕಟಕಂ ಪಾರಿಹಾರ್ಯನಾಮಂ ಹಸ್ತಾಳಂಕೃತಿ" (ಮಸ್ತುಕೋ. ೭೬-೬). [ಸಂ. ಹಸ್ತಾಲಂಕೃತಿ]

ಹಸ್ತಿ$_1$ (ಗು). ೧. ಕೈಗಳುಳ್ಳ. (ನಾ). ೨. ಸೊಂಡಿಲುಳ್ಳುದು; ಆನೆ: ಹಸ್ತಿಯ ತನ್ನ ಮುನ್ನಿನ ಭವಾವಳಿಯೆಲ್ಲಮನೆಯ್ದೆ ಪೇಟಿ ಲೋಕಸ್ತುತದೇಶಭೂಷಣ ಮಹಾಮುನಿಪುಂಗವರ್ (ಪಂರಾಮಾ. ೧೫-೫೩); ದೇವಕಿ ಪೊತ್ತಳಂತತಿವ್ಯಾಕುಳವೃತ್ತಿಯಂ ನಿಜಫಲಸ್ತಬಕಂ ವನಮತ್ತಹಸ್ತಿಹೇಳಾಕರಭಗ್ನವಾಗೆ ಕಡುಪಾಡಟಿದೊಂದು ನವಾಮ್ರ ವಲ್ಲರಿವೋಲ್ (ಜಗವಿ. ೨-೫೬). ೩. ಹಸ್ತಿನಾಪುರವನ್ನು ನಿರ್ಮಿಸಿದ ಚಂದ್ರವಂಶದ ಒಬ್ಬ ಅರಸ: ಭರತಸೂನು ಸುಹೋತ್ರನಾತನ ನರಕುಮಾರಕ ಹಸ್ತಿ ಹಸ್ತಿನಪುರಿಗೆ ಹೆಸರಾಯ್ತಾತನಿಂದವೆ (ಕುವ್ಯಾಆ. ೨-೧೯). ೪. (ಆಲಂ) ದೊಡ್ಡದು; ಹಿರಿದು: 'ಹಸ್ತಿವಾವುಜ' ಪರಾ. [ಸಂ. ಹಸ್ತಿನ್]

ಹಸ್ತಿಕಂದ (ನಾ). ಗೆಡ್ಡೆಗಳನ್ನುಳ್ಳ ಒಂದು ಬಗೆಯ ಔಷಧೀಸಸ್ಯ: "ತ್ವಗ್ದೋಷಾರಿ = ಹಸ್ತಿಕಂದ" (ಓಷಧಿ. ೬೬). [ಸಂ.]

ಹಸ್ತಿಕಕ್ಷ (ನಾ). ೧. ಸಿಂಹ. ೨. ಹುಲಿ. ೩. (?): ಏನೆಂಬೆನ್ನೆ ಕಪಿವರನ ಕೋಳಾಹಳದ ಕದನವ ಕರೆದು ನಖದಲಿ ಹೊಯ್ದು ಕರದಲಿ ಕಾದುವಂದದಲಿ ಮುರಿದು ಬಾಲದಲಡಿಗಡಿಗೆ ಬೊಬ್ಬಿಱಿದು ಹೆಣಗಿದನಿನಸುತನ ಭಾಸುರದ ಹೇಮಧ್ವಜದ ಹಲಗೆಯ ಹಸ್ತಿಕಕ್ಷದಲಿ (ಕುವ್ಯಾಕ. ೨೨-೧೮). [ಸಂ.]

ಹಸ್ತಿಕರ್ಣ (ನಾ). ಒಂದು ಬಗೆಯ ಔಷಧೀಸಸ್ಯ: "ಶ್ರೀಶ(ಟಾಲುಃ)ಲಾಟುಃ-ಬೆಲ್ಲವತ್ತದ ಹೀಚು, ಹಸ್ತಿಕರ್ಣ" (ಓಷಧಿ. ೧೬೮). [< ಸಂ. ಹಸ್ತಿಕರ್ಣ]

ಹಸ್ತಿಗಂಧಿ (ನಾ). ಒಂದು ಬಗೆಯ ಔಷಧೀಸಸ್ಯ: "ಶ್ರೀಹಸ್ತಿನೀ, ಭೂರುಂಡೀ — ಈ ೨ ಹಸ್ತಿಗಂಧಿ" (ನಾಚರಾ. ೧೦೮). 'ಹಸ್ತಿಗನ್ನೆ' ಪರಾ. [?]

ಹಸ್ತಿಗನ್ನೆ (ನಾ). ಒಂದು ಬಗೆಯ ಔಷಧೀಸಸ್ಯ: "ಭೂರುಂಡೀ = ಹಣ್ಣೆ, ಹಸ್ತಿಗನ್ನೆ" (ಓಷಧಿ. ೧೧೨). 'ಹಸುರ್ಗನ್ನೆ' ಪರಾ. [?]

ಹಸ್ತಿಘಟೆ (ನಾ). ಆನೆಗಳ ಹಿಂಡು; ಗಜಸ್ಕೆನ್ಯ: ಪಲ್ಲವಕುಲತಿಲಕಂ ಶ್ರೀಮನ್ ಬೀರನೊಬವ್ಬ ಪ್ರಿಥಿವೀರಾಜ್ಯಂಗೆಯ್ಯೆ ಸಾನ್ತರನ ಮೇಗೆಬ್ಬು ಹಸ್ತಿಘಟೆಗೆಯ್ದು ಕಾಳೆ[ಗ]ದೊಳಣ್ಣಿಯ ಕಾದು (ಎಕ. X, ಶ್ರೀನಿವಾ. ೬೪-೩; ಸು. 930). [ಸಂ. ಹಸ್ತಿಘಟಾ]

ಹಸ್ತಿತಂತ್ರ (ನಾ). ಆನೆಗಳನ್ನು ಪಳಗಿಸುವ ವಿದ್ಯೆ; ಗಜಶಾಸ್ತ್ರ: ರತ್ನಪರೀಕ್ಷೆಯೊಳ್ ತುರಗಶಾಸ್ತ್ರದೊಳುತ್ತಮಹಸ್ತಿತನ್ತ್ರದೊಳ್ . . . ಅರ್ತ್ಥಶಾಸ್ತ್ರದೊಳ್ ಯತ್ನಪರಂ ಪಲಪ್ಪೊಗಳೆ ಧಾXXಣಿಯೊಳ್ ವಿಭು ವೀರಶಾನ್ತರಂ (ಎಕ. VIII, ನಗರ. ೪೮-೯. ಸು. 1060). [ಸಂ.]

ಹಸ್ತಿದಂತ (ನಾ). ಆನೆಯ ಕೋರೆ; ಗಜದಂತ: (ಕಿ). [ಸಂ.]

ಹಸ್ತಿನಖ (ನಾ). ೧. ಕೋಟೆಯ ಹೆಬ್ಬಾಗಿಲು ಅಥವಾ ಮಹಾದ್ವಾರದ ಮುಂದೆ (ವೈರಿಗಳು ನುಗ್ಗಿ ಬರದಂತೆ ತಡೆಯಲು) ನಿರ್ಮಿಸುತ್ತಿದ್ದ ಮಣ್ಣಿನ ದಿನ್ನೆ: "ಹಸ್ತಿನಖಃ, ಪರಿಕೂಟಃ— ಈ ೨ ಹೆಬ್ಬಾಗಿಲ ಕಟ್ಟು" (ಹಲಾಯು. ೪೮-೧೩೩). ೨. ಹೆಬ್ಬಾಗಿಲು; ದೊಡ್ಡಬಾಗಿಲು; ಮಹಾದ್ವಾರ: "ಪರಿಕೂಟಮಾ ಹಸ್ತಿನಖಮನಲು ಪೆರ್ಬಾಗಿಲಕ್ಕು" (ಮಂಗರಾ. ೫೭-೪). [ಸಂ.]

ಹಸ್ತಿನಿ (ನಾ). ೧. ಹೆಣ್ಣಾನೆ; ಕರಿಣಿ: ವನಗಜಯೂಥಮಳ್ಳಿ ಪೆಱಗಿರ್ದಿರದೊಡ್ಡಟಿ ದೋಡುವಲ್ಲಿ ದಂತಿನಿ ಮೊಲೆಯೂಡೆ ನಿಂದು ನಿಜಪೋತಮನಾಗಳೆ ಸಿಂಹಮೆಯ್ದಿ ಹಸ್ತಿನಿಯನವಚ್ಛೆಗೆಯ್ದು ಕರಿಯೂಥಮನಟ್ಟುವುದಿಲ್ಲಿ (ಶಾಂತಿಪು. ೨-೧೦೫). ೨. [ಕಾಮಶಾ] ಪದ್ಮಿನಿ, ಚಿತ್ತಿನಿ, ಹಸ್ತಿನಿ ಮತ್ತು ಶಂಖಿನಿ ಎಂಬ ನಾಲ್ಕು ಬಗೆಯ ಸ್ತ್ರೀಜಾತಿ ಗಳಲ್ಲಿ ಒಂದು ಮತ್ತು ಆ ಜಾತಿಗೆ ಸೇರಿದ ಸ್ತ್ರೀ: ತೊಡೆ ತೋಳಂಗುಲಿ ಕಂಧರಂ ದ್ವಿಜಮಿವೆತ್ತಂ ಕೋಮಲಂ . . . ಪದ್ಮಾಸ್ಯಮೊಳ್ನುಡಿಗಳ್ಪೆಟ್ಟಿತುವಾಗೆ ಹಸ್ತಿನಿಗೆ ದಾನಾಮೋದಮಕ್ಕುಂ (ಮದಶಿ. ೨-೩); ಮೊಡಲದು ಹಸ್ತಿನಿಗೆ ಬಡಗಲದು ಚಿತ್ತಿನಿಗೆ ಪಡುವಲದು ಶುದ್ಧಶಂಖಿನಿಗೆ ತೆಂಕಲಿನ ಬೀಡು ಪದ್ಮಿನಿಗೆ (ಸರ್ವಜ್ಞ. ೧೬೩೦); ಒಳ್ಳಿತಲ್ಲದ ನಡೆ ದೊಡ್ಡ ನಡುವು . . . ಗದ್ದದ ಧ್ವನಿಯುಳ್ಳವಳು ಇವಳು ಹಸ್ತಿನೀಜಾತಿಸ್ತ್ರೀ ಯೆಂದರಿವುದು (ಕಾಮಶಾ. ೨೦೬). ೩. [ಯೋಗ] ದೇಹದ ಹದಿನಾಲ್ಕುನಾಡಿಗಳಲ್ಲಿ ಒಂದು: ನಾಡಿಗಳ ಚೌದಶಗಳಿಗೆ ನಾಮಗಳಾಯುರು ಸುಷುಮ್ನೆಯು ಪಿಂಗಳೆಯು ಯಿಡಾ ಸರಸ್ವತಿ ಪೂಷವಾರುಣಿ ಮೆರವ ಹಸ್ತಿನಿ ಜಿಹ್ಮೆಯಾ ಅಶ್ವಿನಿ ಅಲಂಬುಸೆಯು . . . ಗಂಧವಾರಿಯು ವರಸೆದಪ್ಪದೆಯಿರುವವಾ ಶಂಖಿನಿಸಹಿತವಾಗಿ (ಗಗತಾ. ೯-೧೧). [ಸಂ. ಹಸ್ತಿನೀ]

ಹಸ್ತಿಪಕ (ನಾ). ಆನೆಯನ್ನು ನಡೆಸುವವನು; ಮಾವುತ: "ಹಸ್ತಿಪಕ, ಹಸ್ತಾರೋಹಃ, ನಿಷಾದೀ — ಈ ೩ ಮಾವಂತಂ" (ಹಲಾಯು. ೩೮-೭೨); ಹಸ್ತಿ[ಪ][ಪಾಠಾಂ. ಸ]ಕಂ ಬಿಗಿದೊಂದಿದಂದು ಬಿಲ್ಲಿಗೆ ಮೊದಲಾಗಿ ಕಿಟ್ಸೆಱಿ ತಗುಳ್ದಿರೆ ಕಾಲ್ಗಳೊಳಂತದೊಂದುಮಂ ಬಗೆಯದೆ ಮಿಱಿ ಹಾರಿಯೊಳರಂ ಮುಗುದಂದುವು ಮತ್ತಹಸ್ತಿಗಳ್ (ವರ್ಧಮಾ. ೮೪೯). [ಸಂ.]

ಹಸ್ತಿಪಾದ (ನಾ). ಒಂದು ಬಗೆಯ ಔಷಧೀಸಸ್ಯ; ಆನೆಕಾಲುಗಿಡ: ನೆಲಮುಚ್ಚಲು, ಹಸ್ತಿಪಾದ, ಹಕ್ಕರಿಕೆ, ಆನೆಕಾಲುಗಿಡ, ನಾಯಿನಾಲಗೆಗಿಡ (ಮೃಜಿಗಿ. ೩೩-೬೪೧). [ಸಂ.]

ಹಸ್ತಿಮಶಕಾಂತರ (ನಾ). ಆನೆಗೂ ಸೊಳ್ಳೆಗೂ ಇರುವ ವ್ಯತ್ಯಾಸ; ಒಂದಕ್ಕೊಂದು ಹೋಲಿಕೆಯೆ ಆಗಲಾರದಂತಹ ಸ್ಥಿತಿ; ಬಹಳ ವ್ಯತ್ಯಾಸ ವಾಗಿರುವುದು: ರಾಜ್ಯಕ್ಕಂ ತ್ರಿಭುವನಸಾಮ್ರಾಜ್ಯಕ್ಕಂ ಬಗೆಯೆ ಹಸ್ತಿಮಶಕಾಂತರಂ (ಶಾಂತಿಪು. ೫-೭೨); ಪರಿಕಿಪೊಡೆ ಹಸ್ತಿಮಶಕಾಂತರಮೆನಿಪ್ಪುದು ತನ್ನ [ಗು]ಣದ ನೆಗಟ್ಟರ ಗುಣದಂತರಂ (ಎಇ. XVI, ೬೦-೧೫; 1081). 'ಅಜಗಜಾಂತರ' ಪರಾ. [ಸಂ.]

ಹಸ್ತಿಮೂರ್ಖ (ನಾ). ಅತಿಮೂರ್ಖ; ದೊಡ್ಡಮೂರ್ಖ: ನಾಸ್ತಿಯೆಂಬ ವಸ್ತುವ ನಾಸ್ತಿಯೆಂದರಿಯದೆ ಅಸ್ತಿಯೆಂದು ಕಂಡರೆ ಹಸ್ತಿಮೂರ್ಖನು (ವಾದಿಕೀ. ೧೫೩-೨೮). [ಸಂ.]

ಹಸ್ತಿಯೂಧ (ನಾ). ಆನೆಗಳ ಹಿಂಡು: ಮಲಯಸುಂದರನೆಂಬಾನೆಯುಂಟು ಹಸ್ತಿಯೂಧಕ್ಕೆಱೆಯನಪ್ಪುದು (ವಡ್ಡಾರಾ. ೩೪-೨೦). [ಸಂ.]

ಹಸ್ತಿರದ (ನಾ). = ಹಸ್ತಿದಂತ: ಕಸ್ತೂರಿಕಾಂಡಕಂ ವನ [ಪಾಠಾಂ. ನವ] ಹಸ್ತಿರದಂ ಹಸ್ತಿಮಸ್ತಕೋದ್ಭವ ಮುಕ್ತಾವಿಸ್ತಾರಮೆಂದು ತಂದು ಸಮಸ್ತವನಾಧೀಶರವನಿಪತಿಯಂ ಕಂಡರ್ (ಆದಿಪು. ೧೨-೬೭). [ಸಂ.]

ಹಸ್ತಿವಾವುಜ (ನಾ). ದೊಡ್ಡದಾಗಿರುವ ಒಂದು ಬಗೆಯ ಚರ್ಮವಾದ್ಯ: ಹಸ್ತಿವಾವುಜ ವೀಣೆ ಮದ್ದಳೆ ರಾವಣಹಸ್ತ . . . ಸ್ವರಮಂಡಲ ಮುಖ್ಯಸಕಲ ವಿದ್ಯಾಸ್ತ್ರೀಯರಿರ್ದರಿಕ್ಕೆಲದಿ (ಮೋಹತ. ೧೮-೪೬). [ಹಸ್ತಿ + ಆವುಜ]

ಹಸ್ತಿಶಾಲೆ (ನಾ). ಆನೆಯ ಲಾಯ; ಗಜಶಾಲೆ: ನಿರುತಂ ಶುದ್ಧಾಂತಕಾಂತಾ ಗೃಹಪರಿವೃತಿಯಿಂ ಹಸ್ತಿಶಾಲಾದಿ ನಾನಾಪರಿವಾರಾವಾಸವಿನ್ಯಾಸದಿಂ . . . ರಂಜಿಸಿರ್ಕುಂ ಕರುಮಾಡಂ (ಪುಷ್ಪಪು. ೯-೨೯). [ಸಂ. ಹಸ್ತಿಶಾಲಾ]

ಹಸ್ತೆ (ನಾ). = ಹಸ್ತ$_2$: ಹಸ್ತೆ ಮಳೆ ಹುಯ್ಯದಿದ್ದರೆ ಹೆತ್ತ ತಾಯಿಯೂ ಅನ್ನ ಇಡಳು (ಗಾದೆ). [ಸಂ. ಹಸ್ತಾ]

ಹಸ್ತೋದಕ (ನಾ). ೧. ಊಟ ಆರಂಭವಾಗುವ ಮುನ್ನ ಆಚಮನಕ್ಕಾಗಿ ಬಲಗೈಗೆ ಹನಿಸುವ ನೀರು; ಆಪೋಶನದ ನೀರು: (ಕಿ). ೨. ದಾನ ಕೊಡುವಾಗ ಎರೆಯುವ ಮಂತ್ರಪೂರ್ವಕವಾದ ನೀರು; ಕೈಧಾರೆ: ಯಿ ಸ್ಥಾನದಲು ಮಾನ್ಯ ವಾಗಿ ಊರುಗಳಂ ಭೂಮಿಗಳಂ ಧನಂಗಳಂ ಈ ಲಿಂಗಕ್ಕೆ ಹಸ್ತೋದಕವಂ ಮಾಡಿಕೊಟ್ಟು ದುವಂ (ಸೌಇಇ. XX, ೧೭೭-೧೦; 1190). ೩. [ವೀಶೈ] ಗುರು ಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ, ಸ್ಪರ್ಶನೋದಕ,

ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ವಾಮೋದಕ ಮತ್ತು ಸತ್ಕೋದಕ ಎಂಬ ಹತ್ತುವಿಧ ಪಾದೋದಕಗಳಲ್ಲಿ ಒಂದು; ''ಲಿಂಗವನ್ನು ಹಸ್ತದಲ್ಲಿರಿಸಲು ಅದು ಹಸ್ತೋದಕವು'' (ಶಿವಾಕೋ. ೧೦೪): ಎನ್ನ ಆತ್ಮವೆ ಪರಮಾಮೃತದ ನೈವೇದ್ಯವಯ್ಯ ನಿಮಗೆ ಎನ್ನ ಪರಿಣಾಮವೆ ಹಸ್ತೋದಕವಯ್ಯ ನಿಮಗೆ (ಅಯ್ದಂಡೆ. ೨೪೧-೮೭). ಹಸ್ತದೊಳಗಿದ್ದ ತೀರ್ಥವನು ಸಲಿಸಿದ್ದೇ ಹಸ್ತೋದಕ. ಆ ತೀರ್ಥವನು ಮೂರು ಸಲ ಸ್ವೀಕರಿಸಿದ್ದೇ ಪರಿಣಾಮೋದಕ (ಕರ್ನಾಕ. ೧೫೨). 'ಪಾದೋದಕ' ಪರಾ. [ಸಂ.]

ಹಸ್ತೋದಕಂಗೆಯ್ (ಕ್ರಿ) ದಾನವಸ್ತುವನ್ನು ಧಾರೆಯೆರೆದು ಕೊಡು: ಶ್ರೀನನ್ದಿಪನ್ಗೆತದೇವರ್ಗ್ಗೆ ಹಸ್ತೋದಕಂಗೆಯ್ದು ಕೊಟ್ಟೀವಾ ಗ್ರಾಮಮಂ (ಸೌಂದ. XX, ೪೬-೪೧: 1072). [ಹಸ್ತೋದಕ + ಕೆಯ್]

ಹಸ್ತ್ಯಾರೋಹ (ನಾ). ಆನೆಯನ್ನು ನಡೆಸುವವನು; ಮಾವುತ: ''ಹಸ್ತಿಪಕಃ, ಹಸ್ತ್ಯಾರೋಹಃ, ನಿಷಾದೀ -- ಈ ೩ ಮಾವಂತಂ'' (ಹರಾಯು. ೩೮-೭೨). [ಸಂ.]

ಹಳ$_1$ 'ಪಟ$_1$' ನೋ.

ಹಳ$_2$ 'ಹಲ$_3$' ನೋ.

ಹಳಕು 'ಪಟಿಕ' ನೋ.

ಹಳಕೆ (ನಾ). ಹಳೆಯದಾಗಿರುವಿಕೆ: ಆ ಕಾಣುವ ಮೂಡಲ ಗೋಡೆಯು ಹೊರಗಣಂದ ನೋಡುವವರಿಗ ಕಲ್ಕುಟ್ಟಡದ ಹಳಕೆಯ ಬಣ್ಣಗಳಿಂದ ಹಾವಸೆಗರುಕೆಗಳಿಂದ ಅಚ್ಚುಕಟ್ಟಾಗಿ ಬಲವಾಗಿ ಭದ್ರವಾಗಿ ಮುದ್ದಾಗಿದೆ (ಬಿಟ್ಟಿಅ. ೬೭-೨೭). [ಹಳ$_1$ (< ಪಟದು$_1$) + - ಕೆ]

ಹಳಗ, ಹಳಗು (ನಾ). ಕಳೇಬರ; ಅಸ್ತಿಪಂಜರ: ಜಿಹ್ವೇಂದ್ರಿಯ ವಿಷಯಾಸಕ್ತಂಗಳಪ್ಪ ಕಾಗಗಳಾನಯ ಹಳಗದ ಪಡುಕಗೊಳಪೊಕ್ಕು ಪೂಜಮಡಲಾಜದ ಮಹಾನದಿಯ ಪೊನಲಿಂ ಓರಿದು ದುಃಖವನೆಯ್ದುವಂತಯುಂ (ದ್ರಾದಶಾ. ೪-೬೧ ವ); ಸುಗ್ರೀವ . . . ರಘುನಾಥಗಾ ಸತ್ಯವನ್ನೋಡಲಂದು ತನ್ನಣ್ಣ ಕೊಂದ ಹಳಗವಂ ತೋರಿಸಲ್ಕೆ (ತುರಂಗ. ೩೪-೭೮). **ಹಳಗು:** ಗಳಿಸಿ ಪಾಪವನ್ನು ಯಮನ ಬಳಿಗೆ ಒಯ್ಯ, ತನುವ ನಾಯ ಹಳಗಿಗಿಂದ ಕಡಯ ಕಾಂಬುದೆಂದಿಗಪ್ಪುದೊ (ಸಪಾಂ. ೬೩-೪). [< ಪಟಗ$_1$?]

ಹಳಗನ್ನಡ 'ಪಟಗನ್ನಡ' ನೋ.

ಹಳಗಾಗು (ಕ್ರಿ). (ಆಲಂ) ಅಪಮಾನಿತನಾಗು; ಕೀಳಾಗು: ಕೈ ಹೊಯ್ದು ನಕ್ಕಳು ದ್ರುಪದರಾಜಸುತೆ ನರದ ಪೃಥ್ವೀಶ್ವರರ ಮಧ್ಯದೊಳ್ಗುರುಹಿರಿಯರೊಳ್ಮುಂದ ಹಳಗಾದನು (ತುರಂಗ. ೨೩-೨೭). [ಹಳಗ + ಆಗು]

ಹಳಗಿಸು 'ಪಳಗಿಸು' ನೋ.

ಹಳಗು 'ಹಳಗ' ನೋ.

ಹಳಗ 'ಪಲಗ' ನೋ.

ಹಳಚಿಗೆ, ಹಳಚ್ಚಗ (ಅ). ೧. ನಿರ್ಮಲವಾಗಿ; ಸ್ವಚ್ಛವಾಗಿ: ಕಳಮೆಯನ್ನವ ತೊವರಿಯ ಹಳಚಗಿರುವ ತೂಯ ರಸ ಪುಣಿಸಪಳಿದ್ಯವ ಎಳವೆಣ್ಣುಗಳಿಕ್ಕಿದರು (ಜ್ಞಾನಚ. ೬೯-೧೩೬). **ಹಳಚ್ಚಗೆ:** ೨. ನಿಚ್ಚಳವಾಗಿ: ಇನ್ನೂ ಬೆಳಕು ಹರಿದು ಹಳಚ್ಚಗಾಗಿರಲಿಲ್ಲ (ಬೆಳುಮ. ೨೭೪). 'ಪಳಚ್ಚನೆ' ಪರಾ. [ಹಳಚು$_1$ (< ಪಳಂಚು$_1$) + - ಅಗ್$_1$]

ಹಳಚನೆ 'ಪಳಚ್ಚನೆ' ನೋ.

ಹಳಚಿಕೆ, ಹಳಚಿಗೆ (ನಾ). ೧. ನಿರ್ಮಲತೆ; ಸ್ವಚ್ಛತೆ: ಉದಕಕ್ಕೆ ಹಳಚಿಕೆಯಲ್ಲದೆ ಪಾಕಮಳಕ್ಕುಂಟ (ಸಕವ. ಕ. II, ೨೧೫-೭೨). ೨. ಪವಿತ್ರತೆ; ಪಾವಿತ್ರ್ಯ: ಹಂಯ ಹಳಚಿಕೆಯುಳ್ಳವನಲ್ಲವ ಸುರೂಪಿ ಸಮಗುಣನು ನೀನಲ್ಲವೆ (ವೃಂದ. ೫-೩೫-೧). ೩. ಅಪ್ಪಳಿಸುಫಿಕೆ; ಘಟ್ಟಣೆ: ಬಲಿದ ಬವರಕೆ ನೂಱುಮಡಿಯನೆ ಕಲುಮರನ ಕಣಗಳ ಕಱೋರದ ಹಳಚಿಕೆಗಳುಗ್ಘಡಿಸುತಿರ್ದವು ವೀರರಾಹವದ (ತೊರಾ. ೬-೨೨-೯). **ಹಳಚಿಗೆ:** ೪. ಕಾಂತಿ; ಹೊಳಪು: ತೂಳತೊಳತೊಳಗುವ ಕರಗತ ಹರಿಣನ ಕಂಗಳ ಹಳಚಿಗೆಯೊ (ಭಕ್ತಿಸ. II, ೪-೫). ೫. ಸ್ವಚ್ಛವಾದುದು; ಹಸನಾದುದು: ಬಳಿದಾಗಿ ತೊಳೆದಳ್ಕ, ಕಪ್ಪನಲ್ಲವ ತೆಗೆದು ಹಳಚಿಗೆ[ಪಾಕಾಂ. ಕೆ]ಯ ಮಾಡಿ (ಸೂಪಶಾ. ೨-೬೬).

[ಹಳಚು$_1$ (< ಪಳಂಚು$_1$) + - ಇಕೆ]

ಹಳಚಿಕೆವೆಱು (ಕ್ರಿ). ನಿರ್ಮಲವಾಗು; ಸ್ವಚ್ಛವಾಗು: ಪಲ್ಲಟವಿಲ್ಲದೂರ್ಮೆಯುಂ ಹಳಚಿಕೆವೆತ್ತ ವಸ್ತ್ರದ ವಿಲಾಸದ ಚೆನ್ನಿಗರಲ್ಲಿ ಮೇಳವಂ ಬಳಸದಿರು (ಶಾಂಃಶ್ರ. ೧೧ - ೭೫). [ಹಳಚಿಕೆ + ಪೆಱ್ದು]

ಹಳಚಿಗೆ 'ಹಳಚಿಕೆ' ನೋ.

ಹಳಚು$_1$ 'ಪಳಂಚು$_1$' ನೋ.

ಹಳಚ್ಚು$_2$ 'ಪಳಂಚು$_2$' ನೋ.

ಹಳಚ್ಚಗೆ 'ಹಳಚಿಗೆ' ನೋ.

ಹಳಚ್ಚು 'ಪಳಂಚು$_1$' ನೋ.

ಹಳತು 'ಪಟದು' ನೋ.

ಹಳದಿ, ಪಳದಿ, ಹಲದಿ (ನಾ). ೧. ಅರಿಸಿನದ ಬಣ್ಣ; ಪೀತವರ್ಣ: ಕಿವಿಯಲಿಕ್ಕಿದ ಬಳಹದೋಲ ಹಳದಿಯ ಉಡುಗೆ (ಬಸರ. ೯-೧೦೧); ಹಳದಿ ಪಾರಿಯ ಪಚ್ಚೆ ಜೋನೆಗವಳಿ ಸುವರ್ಣಾವಳಿಯ ಸಂಧ್ಯಾವಳಿಯುದಯರಾಗದಲಿ ರಚಿಸಿದ ಹಕ್ಕರಿಕೆಗಳ . . . ರಚಿಸಿದರು (ಕುವಾಭ. ೪-೪೯); ಇಲ್ಲಿ ಕೆಂಪು; ಅಲ್ಲಿ ಹಳದಿ (ಅನಿಕೇ. ೨೦-೧೧). ೨. ಅರಿಸಿನ: 'ಹಳದಿಗಡಿಗೆ' ಪರಾ. Δ ಪಳದಿ: ೧. ''ಪಳದಿ — ಹರಿದ್ರಾ'' (ತದ್ಭವೋ. ೨೫); ಕೆಂಪಸಿತಂ ಪಳದಿ ಪಳುಕು ಪಚ್ಚೆಗಳ ಬಣ್ಣದಿಂದೆ (ಜ್ಞಮಿಭಾ. ೪-೪). ೩. ಹಳದಿಬಣ್ಣದ ಬಟ್ಟೆ: ಸುವರ್ಣಪಳಿಯ ಪಳದಿಯ ಜೋನೆಗವಳಿಯ ಪಲಬಗೆಯ ಪಲ್ಲಣದ . . . ಪರುತವಣೆ ಪಸರಿಸೆ (ರಾಜಶೇ. ೬-೧೧ ವ). **ಹಲದಿ** : (೬).

[< ಪ್ರಾ. ಹಲದ್ದೀ, ಹಲದ್ದಾ, ಹಲಿದ್ದಾ./ ಸಂ. ಹರಿದ್ರಾ]

ಹಳದಿಕಣಗಲು (ಕ್ರಿ). ಹಳದಿ ಬಣ್ಣದ ಕಣಗಿಲು: (ಮೃಜಿ. ೫೩-೧೦೬೬).

[ಹಳದಿ + ಕಣಗಲು (< ಕಣಗಿಲೆ$_1$)]

ಹಳದಿಗಡಿಗೆ (ನಾ). ಅರಸಿನದಿಂದ ಅಲಂಕೃತವಾದ ಗಡಿಗೆ (?): ಹಕಳಾಡದ ಬಿರುದು ಹಳದಿಗಡಿಗೆ ಹಗಲುದೀವಿಟಿಗೆ ಸಹ ಕೊಟರೂ (ಎಕ. XVI, ಗುಬ್ಬಿ. ೬೯-೩೪; ?).

[ಹಳದಿ + ಗಡಿಗೆ]

ಹಳದಿಗುಳ್ಳ (ನಾ). ಒಂದು ಬಗೆಯ ಸಸ್ಯ: ''ಹಳದಿಗುಳ್ಳ, ಆನೆಸುಂಡಗಿಡ'' (ಮೃಜಿ. ೭೦-೧೪೪೦). [ಹಳದಿ + ಗುಳ್ಳ]

ಹಳದಿಗೋರಟೆ (ನಾ). ಹಳದಿಬಣ್ಣದ ಹೂವುಗಳನ್ನು ಬಿಡುವ ಒಂದು ಬಗೆಯ ಸಸ್ಯ: ''ಬಾಲಪುಷ್ಪಃ,— ಹಳದಿಗೋರಟೆ, ಸೇವಂತಿಗೆ'' (ಓಷಧಿ. ೧೦೮); ಹಳದಿಗೋರಟೆ ಸೊಪ್ಪು, ಅಮರದವಳ್ಳಿ . . . ತುಪ್ಪದಲ್ಲಿ ಹಾಕಿ ಕಾಸಿ ಆ ತುಪ್ಪವ ತೊಡೆಯಲು ಬೆಂದ ಹುಣ್ಣು ಮಾಣುವುದು (ಕ್ಷದ್ಮಸಾ. II, ೧೬೦).

[ಹಳದಿ + ಗೋರಟೆ (< ಗೋರಂಟೆ)]

ಹಳದಿಜ್ವರ (ನಾ). ಕಾಮಾಲೆ ಮತ್ತು ಕಪ್ಪುಬಣ್ಣದ ವಾಂತಿ ಉಂಟಾಗುವ ಉಷ್ಣದೇಶದ ಒಂದು ಬಗೆಯ ಜ್ವರ: ದಕ್ಷಿಣ ಆಫ್ರಿಕ, ಕಾಂಗೋ ಪ್ರಾಂತಗಳಲ್ಲಿ ''ಹಳದಿಜ್ವರ'' ಎಂಬೊಂದು ಭಯಂಕರ ಬೇನೆಯಿದೆ (ಪಾಲತ್ಯ. III, ೧೬೮೬); ಅನಾಫಲಿಸ್ ಮಲೇರಿಯಾ (Malaria) ಜ್ವರವನ್ನೂ ಸ್ಟಿಗೋಮಿಯ ಹಳದಿಜ್ವರ (Yellow fever) ವನ್ನೂ ಹರಡುತ್ತವೆ (ಗೃಹಪ. ೧೫೫). [ಹಳದಿ + ಜ್ವರ]

ಹಳದಿಪಾವಟೆ (ನಾ). ಒಂದು ಬಗೆಯ ಔಷಧೀಸಸ್ಯ: ಹಳದಿಪಾವಟೆ, ಏನೆಷ, ಮಡ್ಡಿ (ಮೃಜಿ. ೫೫-೧೦೬೬). [ಹಳದಿ + ಪಾವಟೆ (< ಪಾಪಟ್ಟೆ)]

ಹಳದಿಬಣ್ಣ 'ಹಳದಿವರ್ಣ' ನೋ.

ಹಳದಿಯಂಬರ (ನಾ). ಹಳದಿಬಣ್ಣದ ವಸ್ತ್ರ: ಒಪ್ಪುವ ನಾಗಚಂಪಕಪ್ರಸರದ ಚೊಲ್ಲೆಹಂ ಹಳದಿಯಂಬರಂ (ಸೂತ್ರಸು. ೮-೪೧೦). [ಹಳದಿ + ಅಂಬರ]

ಹಳದಿವರ್ಣ, ಹಳದಿಬಣ್ಣ (ನಾ). ಅರಿಸಿನದ ಬಣ್ಣ; ಪೀತವರ್ಣ: ಒಸೆದು ಹೂಸುವ ಹಳದಿವರ್ಣದ ಭಸಿತಮಂ ಹೂಸಿದೆನೊಡಲೊಳಿದ ರಸಿಕ ನೋಡೆಂದನುತ ತೋಱಿದಳರಿಸಿನವನಬಲೆ (ಬಸಪು. ೧೨-೧೭). **ಹಳದಿಬಣ್ಣ:** ಸಿಂಹಗಳು ಸಾಧಾರಣವಾಗಿ ಹಳದಿಬಣ್ಣದವು (ಮುಂಬಯಿ. ೪-೨೦೮.). [ಹಳದಿ + ಬಣ್ಣ]

ಹಳದು 'ಪಟದು' ನೋ.

ಹಳದುಪ್ಪ 'ಪಳದುಪ್ಪ' ನೋ.

ಹಳಧರ 'ಹಲಧರ' ನೋ.

ಹಳಬ 'ಪಳಬ' ನೋ.

ಹಳಬಾಳಗೆ (ನಾ). ಒಂದು ಬಗೆಯ ಮರ: ಹಳಬಾಳಗೆ (ಕುಡಕ).— ಮಧ್ಯಮ ಆಕಾರದ್ದು. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ (ಕಭಾಗ. ೫೦). [?]

ಹಳಮೂಕ (ನಾ). ಒಂದು ಬಗೆಯ ಜೋಳ: ಹಳಮೂಕನ ಜೋಳ, ಉಳಕನ ಜೋಳ, ಈ ಯೆರಡು ಜಾತಿಗಳನ್ನು ಬೇರೆ ಜಾತಿಗಳ ಪೈರಿನಲ್ಲಿ ನಡುನಡುವ ಸಾಲುಗಳಾಗಿ ಮಾತ್ರ ಬಿತ್ತುವರು (ಕಭಾಗ. ೨೭೧). [?]

ಹಳಮೆ 'ಪಟಮೆ' ನೋ.

ಹಳಮೊರೆ 'ಪಳಮೊರೆ' ನೋ.

ಹಳಯಿಗೆ 'ಪಟಯಿಗೆ' ನೋ.

ಹಳಲೆ (ನಾ). ಒಂದು ಬಗೆಯ ಮಿಾನು: ಹಳಲೆ ಕಪ್ಪೆಗಳೊಜಲೆ ಬೋಟೆ ಗಿಜಿಲುಗಳೆಂಬ ಹೊಳವಳಿಯ ಮಿಾನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಲನು (ಹಚಕಾ. ೫-೪೭). 'ಹಜಿಲ್' ಪರಾ. [?]

ಹಳವಂಡ (ನಾ). (ಉಕ) ೧. ಉಮ್ಮಳ; ತಲ್ಲಣ: ಎದೆಯು ನಿಗಿನಿಗಿಕೆಂಡ ಮನವೆಲ್ಲ ಹಳವಂಡ (ಪಯೂ. ೮೭-೧೧); ಇದ್ದೊಬ್ಬ ಕುವರನನು ಕಳಕೊಂಡ ಹಳವಂಡ ಬಯಲಾಯ್ತು ನಿನ್ನ ಬರವಿಗೆ ಸೋದರಾ! (ಚಂತನ. ೧೦-೩). ೨. ತಳಮಳ ವನ್ನುಂಟುಮಾಡುವ ಭ್ರಾಂತಿ; ಭ್ರಾಮಕಸ್ವಪ್ನ: ಹಾರ್ಕಿಸಿದೆಲ್ಲವು ಹಳವಂಡವಾದ ಮೇಲಿನ್ನೇನಿನ್ನೇನು (ಪುರಂದ. ೨-೩೭-೫); ಈ ಹಳವಂಡವೆಲ್ಲ ಹೋಗಿ ಎಲ್ಲವೂ ಸರಿಯಾಗುತ್ತದೆ (ಜನನಾ. ೧೧೬). ೩. ತೀವ್ರವಾದ ಹಂಬಲ; ತವಕ: ಓದಿಹೋಗ ಬೇಕು, ಶಾಂತಿನಿಕೇತನ ಸೇರಬೇಕು ಎಂಬುದೊಂದೆ ಹಳವಂಡ (ಗಾಳಪ. ೬೮); ನೂರಜಹಾನಳ ಹಳವಂಡವೇ ಮಗನನ್ನು ಈ ಮನೆಗೆ ತಂದು ಬಿಟ್ಟತೆಂದು ಮಾಸಾಹೇಬರು ನಿಶ್ಚಯಿಸಿದರು (ಕನ್ನಡಿ. ೧೪೧).

ಹಳವಂಡಕನಸು 'ಹಳವಂಡಗನಸು' ನೋ.

ಹಳವಂಡಗನಸು, ಹಳವಂಡಕನಸು (ನಾ). = ಹಳವಂಡ ೨: ಹಗಲು ಮನಸ್ಸಿನಲ್ಲಿ ಬಂದು ಹೋದದ್ದೇ ರಾತ್ರಿ ಕನಸಿನಲ್ಲಿ ವಿಕಾರವಾಗಿಯೂ ವಿಪರೀತವಾಗಿಯೂ ಬಂದರೆ ಅದು ಹಳವಂಡಗನಸು (ವಿಚಾಮಂ. ೬೨); ನೆನಪಾದಂತೆ ಅವಳಿಗೆ ಅದೆಲ್ಲ ಹಳವಂಡಗನಸಿನಂತೆ ತೋರಿತು (ನಿರಾಧ. ೫೩). **ಹಳವಂಡಕನಸು:** ಏನಿಲ್ಲ ಕಂಚುಕಿಯ, ಹಳವಂಡಕನಸಿನಲಿ ಎಚ್ಚತ್ತು ನಾನಿಹೆನು (ಸ್ವದರ್ಶ. ೬); ಹಳವಂಡಕನಸನ್ನು ಕಂಡವನು ನೆನೆನೆನೆಸಿ ಯಾಕೇನೂ ತಬ್ಬಿಬ್ಬಾಗುವೊಲೆ (ಸಖೀಗೀ. ೧೫೫-೨೦೫). [ಹಳವಂಡ + ಕನಸು]

ಹಳವಂಡಗ್ಯೆ (ಕ್ರಿ). ಭ್ರಾಂತಿಯ ಕನಸನ್ನು ಕಾಣು; ಭ್ರಮೆಗೊಳಗಾಗು: ನನ್ನ ಮನಸ್ಸು . . . ಹಳವಂಡಗ್ಯೆಯುತ್ತ ಬಾಹ್ಯಜಗತ್ತನ್ನೇ ಮರೆತಿದ್ದಿತೆಂದು ಹೇಳಬೇಕು (ಹಸುಂತ. ೨೭೬). [ಹಳವಂಡ + ಕ್ಯೆ₁ (<ಕೈ₁)]

ಹಳವಳ (ನಾ). ಉಮ್ಮಳ; ಕಳವಳ: ಗುಂಡಿಗವೊಡೆದವೊಲು ಹಾ ವಿಧಿಯೆ ಹಾಯೆನುತ ಹಳವಳದಿ ಮಿಡಿದು ಕಂಬನಿಗಳನು . . . ಶೋಕಿಸಲು (ಉತ್ತಕ. ೪೦-೨೭). 'ಹಳಹಳಿ₂' ಪರಾ. [?]

ಹಳವಳಿಸು (ಕ್ರಿ). ಉಮ್ಮಳಿಸು; ಕಳವಳಪಡು; ಹಳಹಳಿಸು: ಕಣ್ಮಂಪೇಱಿ ಕಯ್ ನಡುಗಿ ಘುಡುಘುಡಿಸಿ ಕೊನೆಮಾಸ ಕೆತ್ತಿ ಭುಗಿಭುಗಿಲೆನುತ ಹಳವ [ಪಾಠಾಂ. ಹ]ಳಿಸಿ (ಮಜಿರ. ದೇ. ೭೪-೮); ಕಬ್ಬುವಿಲ್ಲ ಹಾಹಾ ನಮ್ಮ ತೊಡೆದ್ಯೆ ಕೊಲ್ಲದೆ ಕೊಂದೆ ನೀನೆಮ್ಮನೆಂದಬಲೆಯರೆಲ್ಲರು ಹಳವಳಿಸಿದರು (ಭರಚ. ೫೨-೬೯); ಅಳದವರಳು ತಿರ್ದರು ರತಿಕಾಂತನ ಹಳವಳಿಸುವ ಪ್ರಳಾಪದಲಿ (ಮೋಹಚ. ೮-೨೫); ನಂದನ ನೀನೆನ್ನ ಹಾಕಿ ಹೋಹರೆ ಹಾಯೆಂದುಜೆ ಹಳವಳಿಸಿದಳು (ನಾಗಕು. ೧೧-೪೦). 'ಹಳಹಳಿಸು₂' ಪರಾ. [ಹಳವಳ + - ಇಸು]

ಹಳವಾತು 'ಪಟವಾತು' ನೋ.

ಹಳವಾರ 'ಹಳುವಾರ' ನೋ.

ಹಳವಾರಿ (ನಾ). ನಿಕೃಷ್ಟವ್ಯಕ್ತಿ; ಕ್ಷುದ್ರನಾದವನು: ಇಳೆಯೊಳು ಬಲವನ್ನು ಪೇಳಿಕೊಂಡು ಸುಳಿದಾಡಿ ಕಂಡಲ್ಲಿ ಹಳವಾರಿಯಾಗಿ ಹಕ್ಕಲವಾಗಿ ತಿರುಗಿದ ಮೂಢ ನಾನು (ಮೋಕ್ಷದೀ. ೯೧). [ಹಳವಾರ (< ಹಳುವಾರ) + - ಇ]

ಹಳವಿ (ನಾ). ದುರ್ಗಾದೇವತೆ (?): ಅಟ್ಟಹಾಸವ ಮಾಡಿ ಕೊಂದಳು ದುಷ್ಟರನು ನಿಮಿಷದಲಿ ಕಾಲನ ಪಟ್ಟಣದವೋಲಾಯ್ತು ಹಳವಿಯ ಮನೆಯದಾಕ್ಷಣಕೆ (ನಿಭಾಗ. ೫-೬-೩೬). [?]

ಹಳವಿಗೆ 'ಪಟಯಿಗೆ' ನೋ.

ಹಳವಿಗೆಗೋಲು (ನಾ). ಬಾವುಟದ ಕೋಲು, — ದಂಡ: ಕಪಿಯ ಹಳವಿಗೆಗೋಲ ನೆತ್ತಿಸಿ ಕೆಲಬಲದ ಮನ್ನೆಯರ ಕೈವೀಸಿ . . . ಪಾರ್ಥನಿದಿರಾದ (ಕುವ್ಯಾಧೀ. ೬-೧೩). [ಹಳವಿಗೆ (< ಪಟಯಿಗೆ) + ಕೋಲು₁ (< ಕೋಲ್₁)]

ಹಳವಿಸು 'ಪಳಯಿಸು' ನೋ.

ಹಳವು₁ 'ಪಟುವ' ನೋ.

ಹಳವು₂ (ನಾ). ಸಂಶಯ; ಸಂದೇಹ (?): ಅಳವ ಕೊಳಗದ ಮಾಟ ಆತ ನಿನ್ನೆಡೆಯೂಟ ಸರಕಳಿದ ಬಳಿಕ ನೋಡೋ ದೇಹ ತಾಸುಳಿಯದಿದು ಹಮ್ಮೂ ಬಡೋ ಇದಕೆ ಹಳವಿಲ್ಲ (ವಾದೀ. ೬೨-೩). [?]

ಹಳವೆ 'ಪಟವೆ' ನೋ.

ಹಳವೆಣ (ನಾ). ಬಲುದಿನದಿಂದ ಸಂಸ್ಕಾರವಾಗದೆ ಉಳಿದ ಹೆಣ; ಕೊಳೆತ ಶವ: ಮಿಗೆ ಹಳವೆಣನ ಹೊಲಸಿಗೆ ಹೇಸಿ ಹರಿದಡಿಗಡಿಗೆ ಸುಯ್ವವನ (ಕುವ್ಯಾಗ. ೩-೧೨). [ಹಳ₁ (< ಪಟದು) + ಪೆಣ]

ಹಳಸಲು (ನಾ). ೧. ಹಳಸಿಹೋದುದು; ಕೆಟ್ಟುಹೋದುದು: ನೆಸ್ಸೆ ಮಾಡಿದ ಅನ್ನ ಹಳಸಲಾಗಿದೆ (ರೂಢಿ) (ಗು). ೨. ಮಾಸಿದ; ಮಲಿನವಾದ: ಮಾರನೆಯ ದಿವಸ ಹಳಸಲು ಮುಖದಿಂದ ಮನೆಗೆ ತಿರುಗಿ ಹೋಗುವುದಕ್ಕಿಂತ . . . ನಿದ್ರೆ ಮಾಡುವುದೇ ಲೇಸೆಂದು ತೋರಿತು (ನವಾಸ. ೬೬); ಮತ್ತೆ ಅದೇ ಹಳಸಲು ಸಮಕಲು ರಗಳೆ! (ತುಂಗಭ. ೬೦). ೩. ಹಳಸಿಹೋದ; ಕೆಟ್ಟುಹೋದ: ಹಳಸಲು ತಿಂಡಿಗಳನ್ನು ತಿಪ್ಪೆಗೆ ಬಿಸಾಡು (ರೂಢಿ). [ಹಳಸು₁ (< ಪಟಸು) + - ಅಲು (< - ಅಲ್₂)]

ಹಳಸು₁ 'ಪಟಸು' ನೋ.

ಹಳಸು₂ (ನಾ). ೧. ಹಳಸಿ ಕೊಳೆಯಾದುದು; ಹೊಲಸು: ಹಲ್ಲು ದಾಳಂಬದ ಬಿತ್ತಂದನಲ್ಲದೆ ಹಲ್ಲೊಳಗಣ ಹಳಸ ಹೇಳಲಿಲ್ಲಾ (ಚದಾವ. ೬೮-೪). (ಗು). ೨. ಹಳಸಿದ; ಕೊಳೆತ: ಹಳಸುತಿಂಡಿಯ ಹುಳವಾಸನೆ ಮೂಗಿಗಡರುತ್ತಿತ್ತು (ವುನರು. ೨೭೮).

ಹಳಸುಮಾಡು = ಮಾಸುವಂತೆ ಮಾಡು: ಈ ದಿನಗಳಲ್ಲಿ . . . ಬದಲಾವಣೆಗಳಾಗಿ ಹಳೆಯದನ್ನು ಹಳಸುಮಾಡಿಬಿಟ್ಟಿವೆ (ಶಿಕ್ಷದ. ೫೦).

[< ಪಟಸು./ ತುಳು. ಹಲಸ್, ಅಲಸ್]

ಹಳಸು₃ 'ಪಲಸು' ನೋ.

ಹಳಸುವೆಣ (ನಾ). = ಹಳವೆಣ: ಹಳಸುವೆಣವನ್ನು ಮನೆಯಲ್ಲಿಟ್ಟುಕೊಳ್ಳುವುದು ಧರ್ಮವಲ್ಲಾ (ವಿಜಯ. ೧೭೨). [ಹಳಸು₁ (< ಪಟಸು) + ಪೆಣ]

ಹಳಹಳ (ನಾ). ಅಧಿಕವಾದ ಕಾಂತಿ, ಪ್ರಕಾಶವನ್ನು ಅನುಕರಿಸುವ ಶಬ್ದ: 'ಹಳಹಳನೆ', 'ಹಳಹಳಿಕೆ₁' ಪರಾ.

ಹಳಹಳನೆ (ಅ). ಕಾಂತಿಯುಕ್ತವಾಗಿ; ಥಳಥಳನೆ: ಬೆಳವ ತುಪ್ಪುಳುಮಾಸೆ ಹಳಹಳನೆ ನಳನಳಿಸೆ ವಿಟವೇಷದಿಂ ವಿಳಾಸಂ ಸೂಸಲಡಿಯಿಡುತೆ ಬರೆ (ಇಪರ. ದೇ. ೩೨-೧೨); ಹಳಹಳನೆ ಹೊಳೆಹೊಳೆದು ದೇವಕಳೆ ಮನಕೆ ಮಂಗಳವೆತ್ತುದು (ಸಿದ್ಧರಾ. ೨-೨೪); ಹಳಹಳನಿರ್ದ ತಾರೆಗಳನಾಯ್ದು ಕುಱುಂಕುತುಂ . . . ಬಂದುದಯಾದ್ರಿಯನರ್ಕನೇಱಿದಂ (ಕುಸುಮ. ೧೪-೨೧). [ಹಳಹಳ + - ಅನೆ₁]

ಹಳಹಳಿ₁ (ನಾ). ರಭಸ; ತೀವ್ರತೆ: ಹಳಹಳಿಯೊಳೇಳ್ವ ಘನತತಿ ಚುಮ್ಮು ಚುಮ್ಮನುತ್ತಳುರ್ವ ಬಿಸಿಲತಿನಿರ್ಮಳತ್ವಮಂ ತಳೆದು ತೊಳತೊಳಗುವ ಸುಧಾಂಶುಬಿಂಬಂ ವಿರಾಜಿಸಿದುದಾ ಬಂದ ಶರದಾಗಮದೊಳು (ಸಮ್ಮಕಾ. ೧-೧೯).

[ದೇ. ‖ ತೆಲು. ಹಳಹಳಿ, ಹಳಾಹಳಿ]

ಹಳಹಳಿ₂, ಹಳಾಹಳಿ (ನಾ). ೧. ಕಳವಳ; ತಳಮಳ: ಇದುವರೆಗಿನ ಮನಸ್ಸಿನ ಹಳಹಳಿ ಕಡಿಮೆಯಾಗಿ ಸ್ವಲ್ಪ ಹಾಯೆನಿಸಿತ್ತು (ಪ್ರಾ. ೩೩೪); ಒಂದು ಬಗೆಯ ಹಳಹಳಿ

ಅವರ ಮನಸ್ಸನ್ನು ಮುತ್ತಹತ್ತಿತು (ಮೂಯದಾ. ೭೬). ೨. ವಿಷಾದ; ಪಶ್ಚಾತ್ತಾಪ: ಸೌಂದರ್ಯದ ಋಣವೊಂದನ್ನು ಕಳೆದುಕೊಂಡುದಕ್ಕೆ ಹಳಹಳಿಯೆನಿಸಿತು (ಶಿಲಾಮು. ೪೪): ಸಿಟ್ಟಿನ ಕೈಯಲ್ಲಿ ಬುದ್ಧೀ ಕೊಟ್ಟರೆ ಎಲ್ಲವ್ನನಂತೆ ಹಳಹಳಿಗೆ ಗುರಿಯಾಗಬೇಕಾಗುವುದು (ಸ್ಕೂಲಮು. ೮೮). ಹಳಾಹಳಿ: ೧. ರಾಯರು ಗಿರಿಜಮ್ಮನ ಹಳಾಹಳಿಯನ್ನು ನಿವಾರಿಸಿದರು (ಜೀವನ. ೧೧). [<— ಮರಾ. ಹಳಹಳ, ಹಳಹಾಳ]

ಹಳಹಳಿಕೆ₁ (ನಾ). ಕಾಂತಿ; ತೇಜಸ್ಸು: ಥಳಥಳಿಸಿ ತೋಳ ಮೊದಲುಜ್ಜಳಿಕೆ ಕುಡಿಯಿಟ್ಟು ಪೊಳಿವಂಗಭಂಗಿಯೊಳೆ ಹಳಹಳಿಕೆ ಪೊಱಮಟ್ಟು ಪೇರುರದ ಪೊಳಿಪು ಮಣಿಹಾರರುಚಿಯಿಂ ಪೆರ್ಚಿ (ಕುಸುಮಾ. ೭-೧೩೬ ಠಗಳ); ಒಳಗೆ ಥಗೆ ನಗೆ ಹೊಱಗೆ . . . ಪರಾಭವದ ಕಂದೊಳಗೆ ಕಡುಹಿನ ಕಲಿತನದ ಹಳಹಳಿಕೆ ಹೊಱಗೆ ಮಹೀಶ ಹದನಿದು ನಿನ್ನ ನಂದನನ (ಕುವ್ಯಾಶ. ೨-೧). [ಹಳಹಳ + - ಇಕೆ]

ಹಳಹಳಿಕೆ₂ (ನಾ). ರಭಸ; ತೀವ್ರತೆ: ಸಲಗ ಸಲಗನೊಳುಬ್ಬಿ ಹಳಚುವ ಹಳಹಳಿಕೆಯಲಿ ತಾಗಿದರು ತಳವೆಳಗುಗೊಳೆ ತಳದಿಳಿಯ ಭಾರಕರುಸುರು ನಿಮಿಷದಲಿ (ತೊರಾ. ೬-೩೩-೧೨). [ಹಳಹಳಿ + - ಕೆ]

ಹಳಹಳಿಕೆ₃ (ನಾ). ಕಳವಳ; ತಳಮಳ: ಅವನನ್ನು ಅಗಲಿರುವ ನಮ್ಮ ಮನದ ಹಳಹಳಿಕೆಗಿಂತ ನಮ್ಮನ್ನು ಅಗಲಿರುವ ಅವನ ಮನದ ಹಳಹಳಿಕೆ ನೂರುಪಾಲು ಹೆಚ್ಚು (ರಾಮಾನ. ೨೭); ನನ್ನಿಂದಿನ ಹಳಹಳಿಕೆಗೆ ಕಾರಣ ತಾನೇನೋ (ಅಹಲ್ಯ. ೧೯-೬). [ಹಳಹಳಿ + - ಕೆ]

ಹಳಹಳಿಪಡು (ಕ್ರಿ). ವಿಷಾದಿಸು; ಮರುಗು: ಯಾರು ನೋಡಿದರೂ, ಸುಭಗೆಯಂಥ ಹಸುಗೂಸಿಗೆ ಈ ಬಗೆ ಆಗಬಾರದಿತ್ತೆಂದು ಹಳಹಳಿಪಟ್ಟರು (ಗಂಗಾಸಾ. ೧೯). [ಹಳಹಳಿ₂ + ಪಡು₁]

ಹಳಹಳಿಸು₁ (ಕ್ರಿ). ಮಿರುಗು; ಹೊಳೆ; ಪ್ರಕಾಶಿಸು: ನಳನಳಿಪ ಕರ್ಪುರದ ಸೂಡರ್ಗಳಂ ಬೆಳಬೆಳಗಿ ಹಳಹಳಿಪ ಧೂಪವಿತ್ತಾರತಿಗಳಂ ಬೆಳಗಿ (ಗಾಪ. ದೇ. ೨೯-೨೨); ಹಳ[ಪಾಠಾಂ. ಳಿ]ಹಳಿಪ ಕಣ್ಗಳಿಂ ಉಚ್ಚೈಶ್ರವಮನಿಳಿಕ್ಕಿವ ತುರಂಗದೊಳ್ ಕುಳಿತು (ಮಳಿ. ಪ. ೨೨೬-೨೬); ಹಳಹಳಿಪ ಕುರುಳುಗಳ ಮಜ್ಜೆಯಲಿ ತೊಳಪ ಕಂಗಳಲೀಕ್ಷಿಸುತ ಕೆಲಬಲದ ನೆರವಿಯನು (ನಿಭಾಗ. ೧೦-೧೦-೩೬). [ಹಳಹಳ + - ಇಸ್ಸು]

ಹಳಹಳಿಸು₂ (ಕ್ರಿ). ೧. ಕಳವಳಿಸು; ತಳಮಳಿಸು: ಪುಂಡರೀಕದಳಾಕ್ಷ ರಾಮರು . . . ಹಳಹಳಿಸಿ ಭಯಗೊಂಡವೋಲನುಕರಿಸಿದರು ದಿಗುಮಂಡಲವನೀಕ್ಷಿಸುತ ಮಾಯಾಮರ್ತ್ಯಭಾವನೆಯ (ನಿಭಾಗ. ೧೦-೫೩-೩); ಕುರೂಪಿಯಾಗಿರುವುದು ಪಾಪವಲ್ಲ, ಕುರೂಪಿಯಾಗಿದ್ದೇನಲ್ಲಾ ಎಂದು ಹಳಹಳಿಸುವುದು ಪಾಪ (ಪ್ರಹಾಗ. ೭). ೨. ಹಂಬಲಿಸು; ಕಾತರಿಸು: ಲಲನೆ ರುಕ್ಮಿಣದೇವಿ ಮಗನಾಗಮನವನು ಕಂಡು ಹಳಹಳಿಸಿ ನೋಡುತ್ತ . . . ಬೆಱಗಾದಳು (ನಿಭಾಗ. ೧೦-೭೭-೩೭). ೩. ತಲ್ಲಣಿಸು: ಅಳಿಕುಲಾಳಕಿ ಬಂದಳೊಬ್ಬಳೆ ಮಳಿಗೆ ಕೈಯೊಡ್ಡಿ ಬಲಿದು ಮೈ ನಡನಡುಗಿ ಹಲುಹಲು ಹಳಚಿ ನೆನೆದಳು ವಾರಿಯಲಿ ತನು ಹಳಹಳಿಸೆ ಬಳಲಿದಳು ಚರಣದ ಹೊನಲ ಹೋರಟೆಗೆ (ಕುವ್ಯಾಅ. ೯-೨೫). [ಹಳಹಳಿ₂ + - ಇಸ್ಸು]

ಹಳಾಹಳಿ 'ಹಳಹಳಿ₂' ನೋ.

ಹಳಿ₁ 'ಪಟ್ಟಿ₁' ನೋ.

ಹಳಿ₂ (ಕ್ರಿ). ಹೊಡೆ; ಥಳಿಸು; ಬಡಿ: ಕರಗಿಸಿಯುಮೆಱೆದುಂ ಕಂಡರಿಸಿಯುಂ ಹಳಿದುಂ ಕೆತ್ತಿಯುಂ ಬೆಚ್ಚುಂ ನಯಸಾಣೆವಿಡಿದುಂ ಸಮೆದುದೆಂಬಂತಿರೆ ತಟತಟನೆ ಪೊಳೆದು ಬತ್ತರಂ ಬಡೆದ ಬದುಗಲ್ಲ ಸುತ್ತಣ ಮೆಟ್ಟಿದಿಯಿಂ (ರಾಮಾಶ್ವ. ೫೨-೧೭). 'ಪಣ್ಣೆ₂' ಪರಾ. [<ಹಣ್ಣೆ?]

ಹಳಿ₃ 'ಪಟ್ಟಿ₂' ನೋ.

ಹಳಿ₄ 'ಪಟ್ಟಿ₃' ನೋ.

ಹಳಿ₅ 'ಪಳ್ಳಿ₁' ನೋ.

ಹಳಿ₆ 'ಹಲ್ಲಿ₁' ನೋ.

ಹಳಿ₇ (ನಾ). ಜೇನುಗೂಡು; ಜೇನುಹುಟ್ಟಿ: ಉರಿದೋಱೆ ಜೇನ ಹಳಿಯ ಬಿಟ್ಟಾ, ನೂಣಿನಿರದ ತೆರಳುವ ತೆಱದೊಳು ಸರಿದುದು ಸುರುತಾಳ ಲಗ್ಗೆ ದುರ್ಗವ ಬಿಟ್ಟು (ಕುರಾಸಾಂ. ೬೯-೨೮). 'ಪಲ್ಲೆ₂' ಪರಾ. [?]

ಹಳಿಗ (ನಾ). ಶಿವನ ಗಣಗಳಲ್ಲಿ ಒಬ್ಬನಾದ ಭೃಂಗಿ (?): ಬಿಗುರ್ವರಿಜಂ, ಹಳಿಗಂ, ಕೊಂಡಂ, ಗುಳಿಕಂ, ಮುಂತಪ್ಪ ಭೂತವೇತಾಳಂಗಳ ಮರುಳ್ಪಡೆವೆರಸು . . . ಕೊಳುಗುಳಕೆ ನಡತಂದು (ರಾಮಾಶ್ವ. ೧೩೧-೧೭). [?]

ಹಳಿಗು 'ಹಳುಗು₁' ನೋ.

ಹಳಿಗೆ 'ಪಳಿಗೆ₁' ನೋ.

ಹಳಿತ (ನಾ). ಬೈಗಳು; ದೂಷಣೆ; ನಿಂದೆ: "ಗರ್ಹಣಂ, ಗರ್ಹಣೀಯಂ - ಈ ೨ ಹಳಿತಂ" (ಕಾಶಿ. ೫೯೭). [ಹಳಿ₁(< ಪಲಿ₁) + - ತ₂]

ಹಳಿಬಂಡಿ (ನಾ). ನಾಲ್ಕುಗಾಲಿಗಳುಳ್ಳ, ತೇರಿನಾಕಾರದ ಎತ್ತಿನ ಬಂಡಿ: ಹೊಸದೊಂದು ಹಳಿಬಂಡಿ ಸಿದ್ಧವಾಗಿದೆ. ತೇರಿನ ಮಾಟದ ನಾಲ್ಕು ಗಾಲಿಗಳು . . . ಸಾಮಾನ್ಯವಾಗಿ ಹಳಿಬಂಡಿಯ ಗಾಲಿಗಳಿಗೆ ಗದ್ದಿ ಇರುವದಿಲ್ಲ . . . ಶುಭಕಾರ್ಯಗಳಲ್ಲಿ ಮಾತ್ರ ಈ ಬಂಡಿಗಳ ಅಗತ್ಯ (ಚಳಿಪಾ. ೧೩೫). [ಹಳಿ₂ + ಬಂಡಿ₁]

ಹಳಿಮೆ (ನಾ). = ಹಳಿತ: ನನ್ನ ಹಳಿವುದು ದಂಡ . . . ನಿನ್ನೀ ಹಳಿಮೆ ಮನಸಿನೊಳಗೊಳಗಿನೊಲಿಮೆ! (ಪಠಾನ. ೭೭-೧೦). [ಹಳಿ₁(< ಪಲಿ₁) + - ಮೆ₂]

ಹಳಿಲ್ (ನಾ). ಒಂದು ಅನುಕರಣಪದ: ನುಡಿಯಂ ಕೇಳಿಯೆದೆ ಹಳಿಲಂ [ಪಾಠಾಂ. ರಂ]ದು ಮಿಗೆ ಹಮ್ಮದಂಬೋಗಿ (ಪಮ್ಮಕಾ. ೯-೧೭).

ಹಳಿಲನೆ (ಅ). ತಟ್ಟನೆ; ಕೂಡಲೆ: ಎಲೆಲೆ ವೃದ್ಧನಾ ಬಿದ್ದನೆಂಬಲ್ಲಿಂ ಮುನ್ನಂ ನಿಲಲಾಜಿದ ಹಳಿಲನೆ ಳಿಳಿಗವಟ್ಟಲ ಮೇಲೆ ಬೀಳೆ (ಸಂದಿ. ೬-೪೬೭); ಸಿದ್ಧಪತಿ ಬರುತ್ತಿರೆ ಕಾಣುತೊಜಿಲಿ ಹಳಿಲನೆ ಬಿದ್ದು (ಸಿದ್ಧರಾ. ೯-೩೧). [ಹಳಿಲ್ + - ಅನ₁]

ಹಳಿವು₁ 'ಪಟ್ಟಿ₂' ನೋ.

ಹಳಿವು₂ 'ಪಟುವ' ನೋ.

ಹಳಿಸು₁ 'ಹಟ್ಟಿಸು' ನೋ.

ಹಳಿಸು₂ 'ಪಳಯಿಸು' ನೋ.

ಹಳು₁ 'ಪಟುವ' ನೋ.

ಹಳು₂ (ನಾ). ೧. ನಿಕೃಷ್ಟ; ಕೀಳು: ಲಜ್ಜೆಯ ಭಯದ ಹೋರಟೆಗಳುಂ ಹಳುವಾಗಿ ಕುಲದ ಸಿರಿ ತಪ್ಪುವುದಲಾ ಸಾಕಿಳುಹಬೇಕೆಂದನುತ ಗಂಗಾಜಲದೊಳಗೆ ಹಾಯ್ದುದಳು ಜನದಪವಾದ ಭೀತಿಯಲಿ (ಕುವ್ಯಾಅ. ೩-೨೧). ೨. ಊನ; ಚ್ಯುತಿ: ಗುರುವಾದಡೂ ಆಚಾರಭ್ರಷ್ಟನಾದಡೆ ಅನುಸರಿಸಲಾಗದು ಲಿಂಗವಾದಡೂ ಆಚಾರ ಹಳುವಾದಲ್ಲಿ ಪೂಜಿಸಲಾಗದು (ವಚಶಾ. I, ೨೪೦-೨). 'ಹಳುಹು' ಪರಾ. ೩. ಹಗುರ; ಲಘು; ಸುಲಭ: 'ಹಳುವಾಯ್ತು' ಪರಾ. [<— ಮರಾ. ಹಳು, ಹಳೂ]

ಹಳುಂಗು 'ಪಣುಂಕು' ನೋ.

ಹಳುಕು 'ಪಟಿಕೆ' ನೋ.

ಹಳುಗು₁, ಹಳಿಗು (ನಾ). ೧. ಕುಗ್ಗಿದುದು; ಕುಸಿದುದು; ತಗ್ಗಿದುದು. **ಹಳಿಗು**: ೨. ಹಿಂಜರಿಕೆ; ಹಿಮ್ಮೆಟ್ಟುವಿಕೆ: ಸಿಂಗದ ಹಳಿಗುಂ ಮೇಷದ ಪಿಂಗುಂ ಕೋವಿದರ ಭೀತಿಯೆಂಬೀ ಮೂರುಂ ಭಂಗವೆನಿಸಲ್ಕೆ ಪಡೆಯವು ಕಂಗೆಡಿಸಿಯೆ ಕೊಲ್ಲದಿರವು (ನೀತಿಸಾ. ೨೮೭).

ಹಳುಗಾಗು = ೧. ಕುಂದು; ಕುಗ್ಗು: ಹಳಹಳಿಕೆ ಹಳುಗಾ[ಪಾಠಾಂ. ವಾ]ದ ಮುಖಮಂಡಲದ ಜಯಮುಖದಾದಿಯಲಿ ದಳಗಳನು ದಂತಾಧರದ ಬಿಗುಹಿನಲಿಳಿದನಾಸನವ (ತೊರಾ. ೬-೨೦-೩). ೨. ಹೆದರು; ಅಂಜು: ಕರಿಮನದ ರಾವಣನು . . . ಮುನಿಪತಿಗೆಱಗಿದನು ಶರಣೆನುತ ಹಳುಗಾದಂತೆ ಕುಳ್ಳಿರ್ದ (ಕಾಶಿರಾ. ೨-೩೭); ಅಜನುದಧಿಶಯನನ ಮೂರ್ತಿಯನು ಜಲದೊಳಗೆ ಕಾಣದೆ ಹತ್ತಿರಿದು ಹಳುಗಾದನಂಭೋರುಹದ ಕರ್ನಿಕೆಯ (ನಿಭಾಗ. ೩-೪-೨). [< ಪಣುಂಕು]

ಹಳುಗು₂ (ನಾ). ಅಚ್ಚುಕಟ್ಟಿನ ಭೂಮಿ; ನೀರಾವರಿಭೂಮಿ: ತಂಬುಲಗೆಱೆಯ ಗದ್ದೆ ೪ ೧೦೦ ಮಾಟಿಸೆಟ್ಟಿಯ ಕೆಱೆಯ ಹಳುಗಿನೊಳಗೆ ೪ ೨೦೦ (ಸೌಶಾ. IX - i, ೧೭೪-೨; 1100); ತುಂಬಿದಿಳಿದ ಹಳುಗು ಕಮ್ಮಯನ್ನೂಱು (ಸೌಶಾ. IX - i, ೨೦೬-೩; 1122); ಆಲಗಟ್ಟಿದ ಹಳುಗಿನಲು ಬಿಟ್ಟ ಗದ್ದೆ ೪(೦)ಮ್ಮ ನೂಱಿ ಮೂವತ್ತು (ಸೌಶಾ. IX - i ೨೯೧-೨೮; 11ನೆಯ ಶತ).

ಹಳುದಾರಿ (ನಾ). ಕಾಡಿನ ಹಾದಿ; ಅರಣ್ಯದ ದಾರಿ: ಒಲೆಯ ಮೇಲಣ ಹಾಲು ಚಲದಂಕದತಿಪಂಥ ಲಲನೆಯರೊಲುಮೆ ಹಳುದಾರಿ ಇವು ನಾಲಕ್ಕು ತೊಲಗಿದರೆ ಇಲ್ಲ (ಸರ್ವಜ್ಞ. ೧೪೯೬). [ಹಳ್ಳು$_1$(< ಪಟುವ) + ದಾರಿ]

ಹಳುಮಯ (ನಾ). ಕಾಡಿನಿಂದ ಕೂಡಿ ದಟ್ಟವಾದುದು: ಬೆಳೆದು ಕತ್ತಲೆ ಹಬ್ಬಿ ಹಳುಮಯವದಾಗಿರಲ್ ಬೆಳಗು ಹೊಳಕಿದ ಬಳಿಕವಡಗಿತೆಲ್ಲ (ಮನೋವಿ. ೪-೨೪).

[ಹಳ್ಳು$_1$(< ಪಟುವ) + - ಮಯ್ಯ$_3$]

ಹಳುರೆ, ಹಳುರೇ (ಅ). ಮೆಚ್ಚುಗೆಯನ್ನು ಸೂಚಿಸುವ ಒಂದು ಭಾವ ಸೂಚಕಾವ್ಯಯ: ಹಳುರೆ ಧಿರುಧಿರು ಭಾಪು ಮಝು ಮಂಗಳೆ ಮಹಾಸತಿಯಾದಿ ಮಾಯಾಲಲನೆಯವಧಾರೆಂಬ ದನಿ ಕೇಳಿಸಿತು ರಘುಪತಿಯ (ತೊರಕಾ. ೬-೫೩-೪೯). **ಹಳುರೇ:** ಝೂರೇ ಜಝೂರೇ ಹಳುರೇ ಹೋಹೋ ಮಝೂ ಎಂಬುಲಿ ನೆಗವಿನೆಗಂ ಬಿಟ್ಟು ಮಾಱೂಂತ ಮೇಲಾಳ್ಗಳನಾಗಳ್ ತಳ್ತು ಪೊಯ್ದು (ಕಬ್ಬಿಣ. ೨೬೯); ಎಲುವ ಗದೆಯಲಿ ಹೆಟ್ಟುಗುಟ್ಟೋ ಹಳುರೆ ಹಳುರೇ ರಾವುರಾವುರೆಯೆಂದು ಖಳರುಲಿಯೆ (ಕಾಶಿಕಾ. ೩೨-೫೧).

ಹಳುರೇ 'ಹಳುರೆ' ನೋ.

ಹಳುವ 'ಪಟುವ' ನೋ.

ಹಳುವಟೆ (ನಾ). ಕ್ಷುಲ್ಲಕ; ಕ್ಷುದ್ರ: ಬಳಿಕಲಾ ಖಳರಿಬ್ಬರುಬ್ಬಿದ ಹಳುವಟೆ [ಪಾಠಾಂ. ವೆಡೆ]ಯ ಕಪಿಭಟರ ಮೋಹರದೊಳಗೆ ಮೋಹರಿಸಿದರು ಮಾರ್ಗಣಗಣ ಮಹಾಂಬುಧಿಯ (ತೊರಕಾ. ೬-೩೧-೮). [<— ಮರಾ. ಹಳವಟ, ಹಳುವಟ]

ಹಳುವಡು (ಕ್ರಿ). ಅಡವಿಯ ಪಾಲಾಗು; ಕಾಡಿಗೆ ಹೋಗು: ಪಾಂಡವರು ಬಲ್ಲಿದರೆಂಡಡೆ ತಮಗೆ ಹಳುವಟ್ಟು ಹೋಗಲದೇನು (ಚಿನ್ನವ. ೫. ೨೧೫-೪೮೧); ಕೋಗಿಲೆಗಳು ಹಳುವಟ್ಟು(ಗಳಹು) ಹೋದ ಬನದಂತಾದೆ ನೋಡವ್ವಾ (ಸರ್ವವ. ೭೨-೩೫).

[ಹಳ್ಳು$_1$(< ಪಟುವ) + ಪಡು$_1$]

ಹಳುವರ 'ಹಳುವಾರ' ನೋ.

ಹಳುವಾಯಿ$_1$ (ನಾ). ಹಗುರುತನ; ಸುಲಭತೆ: ಚಿಗಿದ ತಲೆ ಬೊಬ್ಬಿಱಿಯೆ ಬಳಿಕಾಳುಗಳ ದೇವನು ಮುಷ್ಟಿಬಳಿಗೋಲುಗಳನ್ನೆದಾರೇಳ ಹಳು ಹಳುವಾಯಿಯೆಸುಗಯಲಿ (ಕುಮಾಕ. ೨೦-೩೬); ಬಾಣಗಳು ಸವೆವನ್ನಬರಲೆಚ್ಚುದು ಮುಂಡ ರಾವಣೆಯ ಮಗುಳೆ ಕಿಗ್ಗಟ್ಟನ ಕಠಾರಿಯನುಗಿದು ದಂಡೆಯನೊಡ್ಡಿ ತಿವಿದುದು ಗಗನವನು ಹಳುವಾಯಿಯಲಿ ಹವಣಿಸುತ ರಥದೊಳಗೆ (ತೊರಕಾ. ೬-೪೪-೫೬). 'ಗರುವಾಯಿ' ಹೋ. [< ಹಳ್ಳು$_3$]

ಹಳುವಾಯಿ$_2$ (ನಾ). [ಸಂಗೀತ] (?): ಆಯತದ ಹಳುವಾಯಿ ದರಹಳುವಾಯು ಗುಂಡಾಗುಂಡಿ ಮಾನಸಜೇಯವನಿಪ ಭ್ರಮರಲೀಲೆಯ ಕುರುಟೆ ರಂಜಿಸಲು (ಬಸಪು. ೧೯-೧೫); ಸುರಂಗಿತಮಾಯತಂ ಮಣಿಕಂಪಿತಂ ಹಳುವಾಯಿ ಚೊಕ್ಕಳಮನೂದ್ಗತವೃತ್ತಿ ಪಾಳಿ ವಿಮೋಕ್ಷಮಿಂಪು ಲಯಾಸ್ಪದಂ . . . ಬೆಡಂಗಮರೆ ಬಾಜಿಸುತೆ ಚಾರುವೀಣೆಯಂ (ವೃಪವಿ. ೧೧-೯). [?]

ಹಳುವಾರ, ಹಳವಾರ, ಹಳುವರ (ನಾ). ೧. ಕಷ್ಟವಿಲ್ಲದಿರುವಿಕೆ; ಹಗುರಾಗಿರುವಿಕೆ; ಅನಾಯಾಸ: ಅವರ ಕೃಪೆಯಾಂತರೀ ಬಂಡಿಗಳ್ಬಹಳ ಹಳುವಾರದಿಂದೀ ಕ್ಷಣಂ ಘಳಿಲದಿಂ ಮುಂದಕ್ಕೆ ಸಾಗುತ್ತಲೆಡೆಯೂರ ಪೊಳೆಯಲ್ಲಿ ನೆಲೆಗೊಂಡು ಮೆರೆದಪವು (ದುರಪು. ೧೮-೩೪); ಈಗ ಹಳುವಾರ ಅನಸಾಕ ಹತ್ತೈತಿ (ಪತಿತೋ. ೧೧). **ಹಳವಾರ:** ೨. ನಿಕೃಷ್ಟವಾದುದು; ಲಘು: 'ಹಳವಾರಿ' ಪರಾ. **ಹಳುವರ:** ೧. ಹಳುವರದ ಮಂಡಿಯಲಿ ವಾಸುಗಿಯಳುಕದವೊಲಾಶಾಗಜಂಗಳು ಬಳುಕದವೊಲ್ . . . ಅಸ್ತ್ರವನು ಕೆನ್ನೆಗೆ ಸೆಳೆದು ಮತ್ತೀ ಮಾತನೆಂದನು (ತೊರಕಾ. ೬-೫೧-೬೪). [<— ಮರಾ. ಹಳವಾರ, ಹಳುವಾರ]

ಹಳುವು 'ಪಟುವ' ನೋ.

ಹಳುಹಳು (ನಾ). ಮೆಚ್ಚುಗೆಯನ್ನು ಸೂಚಿಸುವ ಒಂದು ನುಡಿ: ಹಳುಹಳು ಪೂತು ಸಾರಥಿ ಭಲರೆ ಸಾರಥಿ ಜಾಗುರೆನುತಿರ್ದುದು ಮಹಾರಥರು (ಕುಮಾದ್ರೋ. ೧೭-೧೧); ಹಳುಹಳು ಮಹಾಧನು ಬೇಡ ಬಿದ್ದರೆ ಕೊಲಿಸಿದವರಾವಲ್ಲವೆನುತಿರ್ದುದು ಭಟವ್ರಾತ (ನಿಭಾಗ. ೧೦-೩೭-೫೦).

ಹಳುಹಾಯ್ (ಕ್ರಿ). ಅಡವಿಯ ಪಾಲಾಗು; ಅರಣ್ಯವನ್ನು ಸೇರು: ಅಂಜಿ ಹದಿನಾಱು ಮಂದಿ ಹಳುಹಾಯ್ದರು ಎಂಟು ಬಂಟರು ಕಂಟಕನಾಶವಾದರು (ಮೊಪಾ. ೨೩೦-೭೮೩). [ಹಳ್ಳು$_1$(< ಪಟುವ) + ಹಾಯ್$_1$ (< ಪಾಯ್$_1$)]

ಹಳುಹು (ನಾ). ಚ್ಯುತಿ; ಕೊರತೆ: ಸತ್ಯಕೆ ಹಳುಹು ಬರದೆಂದಂತರಂಗದಿ ನಿಲಿಸು ಧರ್ಮದೊಳಹಿತವಿಡಬೇಡೆಂದಳಿಂದುಮುಖಿ (ಜಿನಭಾ. ೪೯-೨೮).

[ಹಳ್ಳು$_2$ + - ಹು$_2$ (<- ಪ್ಪು$_2$)]

ಹಳೆ 'ಪಟ$_1$' ನೋ.

ಹಳೆಕೆರ 'ಪಳೆಗೆರ್ಪು' ನೋ.

ಹಳೆಗನ್ನಡ 'ಪಟಗನ್ನಡ' ನೋ.

ಹಳೆಗಲೆ (ನಾ). ಹಳೆಯ ಗಾಯದ ಗುರುತು: ಅಮರರಾಯುಧದ ಪಡಿಮುಖದ ಹಳೆಗಲೆಯ ಕರುಳ್ಗಳನಡಸಿ ಬಸುಱಲಿ ಹೊಲಿದ ಹೊಲಿಗೆಯ ದಡಿಗರಕ್ಕಸರಾಯರಿದ್ದುದು ಕೋಟಿಸಂಖ್ಯೆಯಲಿ (ತೊರಕಾ. ೩-೭-೫). [ಹಳೆ$_1$(< ಪಟದು) + ಕಲೆ$_2$]

ಹಳೆಗೆರಹು 'ಪಳೆಗೆರ್ಪು' ನೋ.

ಹಳೆತಲೆ (ನಾ). ಹಳೆಯ ತಲೆಮಾರಿನವನು; ಹಿಂದಿನ ತಲೆಮಾರಿನವನು: ಹೀಗೆ ಹಾಡುತ್ತಾ ಇದ್ದರು ಅಂತ ಹೊಗಳೋದನ್ನು ಹಳೇತಲೆಗಳ ಬಾಯಲ್ಲಿ ಕೇಳ್ತಾ ಇದ್ದೆ (ಹೂಗೀತ. ೧೪). [ಹಳೆ (< ಪಟದು) + ತಲೆ$_1$]

ಹಳೆದಿನ (ನಾ). ಮುಪ್ಪಿನ ದಿನಮಾನ; ವಾರ್ಧಕ್ಯದ ಕಾಲ: ಹಳೆದಿನದ [ಪಾಠಾಂ. ಹಲವುದಿನ] ತಾಯ್ತಂದೆಗಳ ಬಿಡದಲಸದವರನು ಹೊತ್ತು ತೊಳಲಿದೆನಿಳೆಯೊಳುಳ್ಳ ಸಮಸ್ತತೀರ್ಥಕ್ಷೇತ್ರಗಿರಿವನವ (ತೊರಕಾ. ೨-೫-೧೫.) [ಹಳೆ (< ಪಟದು) + ದಿನ]

ಹಳೆನಂಟು (ನಾ). ಹಿಂದಿನಿಂದ ನಡೆದು ಬಂದ ಸಂಬಂಧ: ಹಳೆನಂಟಿಂದ ಬುದ್ಧಿಯ ಹೇಳಲಾಂ ಬಂದೆ (ಕಾಶಿಕಾ. ೧೮-೩೩). [ಹಳೆ (< ಪಟದು) + ನಂಟು$_2$]

ಹಳೆನೀರು 'ಪಟನೀರ್' ನೋ.

ಹಳೆನೇಹ (ನಾ). ಹಿಂದಿನ ದಿನಗಳಲ್ಲಿದ್ದ ಪ್ರೀತಿ,—ಒಲುಮೆ: ಹಳೆನೇಹವಿಹುದೆಂದು ಎಳಸಿ ಹೋಗುವನೆಗ್ಗ ಕಳವಳವಕ್ಕು ಹಳಿಯಕ್ಕು (ಸರ್ವಜ್ಞ. ೧೮೦೭).

[ಹಳೆ (< ಪಟದು) + ನೇಹ]

ಹಳೆಪೈಕ 'ಪಟದು' ಪರಾ.

ಹಳೆಮರ 'ಪಟವರ' ನೋ.

ಹಳೆಮಾತು 'ಪಟವಾತು' ನೋ.

ಹಳೆಯ 'ಪಟದು' ಪರಾ.

ಹಳೆಯಪಯಿಕ 'ಪಟದು' ಪರಾ.

ಹಳೆಯಪೈಕ 'ಪಟದು' ಪರಾ.

ಹಳೆಯುಳಿಕೆ 'ಪಳೆಯುಳಿಕೆ' ನೋ.

ಹಳೆವರ 'ಪಟವರ' ನೋ.

ಹಳೆಹಗೆ 'ಪಟವಗೆ' ನೋ.

ಹಳೆಹುಣ್ಣು 'ಪಟೆವುಣ್' ನೋ.

ಹಳೇಪೈಕ 'ಪಟದು' ಪರಾ.

ಹಳ್ಳ 'ಪಳ್ಳ' ನೋ.

ಹಳ್ಳಂಬರಿ (ಕ್ರಿ). ಪ್ರವಾಹವಾಗಿ ಹರಿ: ದನಿಯ ಹನಿ ಕೂಡುತೊಯ್ಯನೆ ಹತಾಶೆ ಹಳ್ಳಂಬರಿದು, ದುಮುಕಿ, ಕೊಚ್ಚಿತ್ತಲ್ಲಿ ನೆಚ್ಚಿನುತ್ತರಮುಖಿಯ ಕೆಚ್ಚಿ ನೋಡದ ಪುಟ್ಟು ನುಚ್ಚುನುರಿವೋಗೆ! (ಶ್ರೀರಾಮಾ. ೩೭೪-೩೨೨). [ಹಳ್ಳ (< ಪಳ್ಳ) + ಪರಿ$_2$]

ಹಳ್ಳಗದ್ದೆ 'ಪಳ್ಳಗಟ್ಟೆ' ನೋ.

ಹಳ್ಳಿ 'ಪಳ್ಳಿ$_1$' ನೋ.

ಹಳ್ಳಿಕಾತಿ (ನಾ). ಹಳ್ಳಿಯ ಹೆಣ್ಣು; ಗ್ರಾಮೀಣ ಹೆಂಗಸು: ಕೊಳಲ ರಾಗದ ರಹಿಯೊ ಕಲ್ಲಿಯ ಕಲಸುಗೂಳೋ ಹಳ್ಳಿಕಾತಿಯರೊಳಗುಡಿಯ ಹಾದರವೊ (ಕುಮಾಸ. ೨-೭೮). [ಹಳ್ಳಿ (< ಪಳ್ಳಿ$_1$) + - ಕಾತ್ತಿ$_5$]

ಹಳ್ಳಿಕಾರ 'ಪಳ್ಳಿಕಾಱ' ನೋ.

ಹಳ್ಳಿಕಾಱ 'ಪಳ್ಳಿಕಾಱ' ನೋ.

ಹಳ್ಳಿಗ 'ಪಳ್ಳಿಗ' ನೋ.

ಹಳ್ಳಿಗತನ (ನಾ). ಹಳ್ಳಿಯವನ ನಡೆ ನುಡಿ; ಗ್ರಾಮೀಣವಾದ ನಡವಳಿಕೆ: ಒಂದು ವಿನವೂ ಅವನ ಹಳ್ಳಿಗತನವು ಹೊರಬೀಳಲಿಲ್ಲ (ಪಂಚಕ. ೧೦).

[ಹಳ್ಳಿಗ (< ಪಳ್ಳಿಗ) + - ತನ]

ಹಳ್ಳಿಗಮಾರ (ನಾ). ಹಳ್ಳಿಗ; ಅನಾಗರಿಕ: ನನ್ನೊಡನೆ ಕೆಲಸಕ್ಕೆ ಒಬ್ಬ ಹಳ್ಳಿಗಮಾರ ಪಠಾಣನನ್ನು ನಿಯಮಿಸಿದ್ದಾರೆ (ಝಾನ್ಸಿ. ೬೫೮). [ಹಳ್ಳಿ (< ಪಳ್ಳಿ) + ಗಮಾರ]

ಹಳ್ಳಿಗಾಡ (ನಾ). ಹಳ್ಳಿಗಾಡಿನಲ್ಲಿರುವವನು; ಗ್ರಾಮವಾಸಿ: ಹಿರೇರ ಕಾಲದಿಂದ ಕಟ್ಟೇ ಮೇಲೆ ಕೂತು ಹೇಳುವ ಗೊಡ್ಡುಕಥೆಗಳು. ನಮ್ಮ ನಿಮ್ಮಂಥ ಹಳ್ಳಿಗಾಡಿಗರಿಗೆ ಸರಿ ಬೀಳಬಹುದು (ರಾಸಹು. ೬೦). [ಹಳ್ಳಿಗಾಡು + - ಅ]

ಹಳ್ಳಿಗಾಡು (ನಾ). ಹಳ್ಳಿಯ ಪರಿಸರ; ಗ್ರಾಮೀಣಪ್ರದೇಶ: ನಿಮಗೆ ಅವರ ಹೆಸರು ಗೊತ್ತಿಲ್ಲವೆಂದರೆ ನೀವು ಯಾವುದೊ ಹಳ್ಳಿಗಾಡಿನವರಿರಬೇಕು (ನಿಷ್ಕಾಮ. ೧೪೭); ಹಳ್ಳಿಗಾಡಿನಲ್ಲಿ ಹುಡುಕಿ ನೋಡಿದರೂ ಅಂಥವನೊಬ್ಬ ರೈತ ಸಿಗುತ್ತಿರಲಿಲ್ಲ (ಪುಸರು. ೬೦೯). [ಹಳ್ಳಿ(< ಪಳ್ಳಿ) + ಕಾಡು]

ಹಳ್ಳಿಮುಕ್ಕ (ನಾ). = ಹಳ್ಳಿಗಮಾರ: ನಮ್ಮ ಹಾಗ ಒಂದೂ ತಿಳೀದ ಹಳ್ಳಿಮುಕ್ಕರಲ್ಲ ನೀವು (ಮೂರ್ತಿ. ೧೫೦). [ಹಳ್ಳಿ (< ಪಳ್ಳಿ) + ಮುಕ್ಕ]

ಹಳ್ಳಿವಾಡ (ನಾ). = ಹಳ್ಳಿಗಾಡು: ಈ ಪಕ್ಕದಲ್ಲಿ ವರ್ತಕರೂ ಅವರ ಗುಮಾಸ್ತರೂ ಒಕ್ಕಲಿಗರೂ ಹಳ್ಳಿವಾಡದ ಜನರೂ ಸೇರಿದರು (ಇಂಗ್ಲಂಡ. ೧೪೮); ಹೆಚ್ಚಿನ ದುಶ್ಚಿಂತೆ, ತನ್ನ ಹಳ್ಳಿವಾಡ ತಂದೆ ಪಟ್ಟಣದ ಹುಡುಗರ ಅಪಹಾಸ್ಯಕ್ಕೆಲ್ಲಿ ಗುರಿಯಾಗುವನೋ ಎಂದು (ಇಪ್ರಕ. ೬೯೦). [ಹಳ್ಳಿ (< ಪಳ್ಳಿ) + ವಾಡ]

ಹಱಿ (ನಾ). ಒಂದು ಅನುಕರಣಶಬ್ದ: ಹಱ್ಱಿಂದೇಡಿಸಿ ರಕ್ತಮಂ ಕುಡಿದು ಪೆರ್ಗಂಡಂಗಳಂ ಸೂಸುತುಂ (ಧರ್ಮಾಮೃ. ೬-೧೪೯); ಪಲ್ಲಿಱಿದು ಹರ್ಷೆನುತುರ್ಬುತೆ . . . ತಾಂ ನೆಲೆ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು ಮರ್ಕಟಂ (ಗಿರಿಕ. ೫-೨೦). 'ಪರ್' ಪರಾ.

ಹಱಿಗೋಲು 'ಪಱಿಗೋಲ್' ನೋ.

ಹಱಿಲ್ (ನಾ). ಒಂದು ಬಗೆಯ ಮಿನು: ಸಾನೆ ಮೂಗುಂ ಹಱಿಲ್ ಮುಡಿಲುಂ ಪಂದಿಗನೆಂಬ ಮಿನ್ದೆಗದನಾ ಭಕ್ತಂ ಮಹಾಲೀಲೆಯಿಂ (ತ್ರಿಪು. ೫೭-೮). 'ಹಳಲೆ' ಪರಾ. [<— ತಮಿ. ಪಱಳಾ]

ಹಱಿಲೆ$_1$ 'ಪಱಲೆ' ನೋ.

ಹಱಿಲೆ$_2$ (ನಾ). ಹಲ್ಲೆ; ಬಿಲ್ಲೆ: ಹ[ಪಾಕಾಂ. ಪ]ಱಲೆಯಂ ಮಾಡಿ ಕೆನೆಮೊಸರು ಸಿಪಿಬೆಣ್ಣೆಯಂ ನೆಱೆ ತಡಪಿ . . . ಹಂಚನೊಳು ಬೇಯಿಸೆ ಸಿತಕರೊಟ್ಟವೆಸರಂ ಪಡೆದುದು (ಸೂಪಶಾ. ೧-೧೭). [?]

ಹಱಿ$_1$ 'ಪಱಿ$_1$' ನೋ.

Δ ಹಱಿ$_2$ 'ಪರಿ$_2$' ನೋ.

ಹಱಿ$_3$ 'ಪಱಿ$_3$' ನೋ.

ಹಱಿ$_4$ (ನಾ). ದಾಕ್ಷಿಣ್ಯ; ಭಿಡೆ: ಕೂಡಲಸಂಗಮದೇವಾ ನಿಮ್ಮ ಹಂಗೇನು ಹಱಿಯೇನು ಅನುಭಯಲಿಂಗಜಂಗಮದ ಮೊಱೆಹೊಕ್ಕು ಬದುಕಿದೆನು (ಬಸವ. ೬೯೦). 'ಹಂಗುಹಱಿ' ಪರಾ. [?]

Δ ಹಱಿಕಾಱ 'ಪರಿಕಾಱ' ನೋ.

ಹಱಿಕು 'ಪಱುಕು' ನೋ.

ಹಱಿಕುಗಡ್ಡ 'ಹಱುಕುಗಡ್ಡ' ನೋ.

ಹಱಿಗಂಡು (ನಾ). (ಆಲಂ)ಅಲ್ಪವಾದ ಪೌರುಷ: ಹೀನಪೌರುಷ: ಎಱಗಿ ಶರಣೆಂದು ಬಾಳದೆ ಹಱಿಗಂಡಿಂದಾತನೇವನೆಂದುಲಿವನ ಬಾಯೊಱೆಯಾಗಲ್ಮೂರಲಗಂ ಕಿಱಿಹದೆ ಮಾಣ್ಪನೆ ಹಬ್ಬಣಂ ವಿಜಿತರಣಂ (ಕ್ರಾ. ೬, ೨೫-೪೫; 1186).

[ಹಱ್ಱಿ (< ಪಱ್ಱಿ) + ಗಂಡು]

ಹಱಿಗಡಿ, ಹರಿಗಡಿ$_1$ (ಕ್ರಿ). ಸೀಳಿ ಹಾಕು; ಪೂರ್ಣವಾಗಿ ಕತ್ತರಿಸು,—ತುಂಡರಿಸು: ಇವನ ತಲೆಯ ಹಱಿಗಡಿವೆನು (ಪ್ರಭಂಜ. ೨-೧೫೮); ನಿನ್ನ ತೋಳುಗಳ ಹಱಿಗಡಿದು ಬಿಸುಡುವೆನು (ಸಾಳ್ವಭಾ. ೧೬-೬೫). **ಹರಿಗಡಿ**$_1$: ಕಾಲಾಳ ಮೇಲಾಳ ಜೋಧರಂ ಹರಿಗಡಿದು ಬಿಡೆ (ಕುರಂಗ. ೭೩-೪೩); ಶಿರ ಬಾಗಿದರೆ ಹರಿಗಡಿಯುವೆಯೂ ಗುರುರಾಜಾ ? (ತುಂಗಭ. ೪೧). [ಹಱಿ$_1$ (< ಪಱಿ$_1$) + ಕಡಿ$_2$]

ಹಱಿಗರುಳು(ನಾ). ಕತ್ತರಿಸಿ ಹೋದ ಕರುಳು; ತುಂಡಾದ ಕರುಳು: ಹಱಿಗರುಳ ನೆಣವಸೆಯ ಮೂಳೆಯ ಮುಱಿಕುಗಳ ಕಡಿಖಂಡಮಯವಾಯ್ತುಬಿಳ ಚತುರಂಗ (ಕುಮ್ಮಾರ್ಜು. ೧೮-೭೩). [ಹಱಿ$_1$ (< ಪಱಿ$_1$) + ಕರುಳು (< ಕರುಳ್)]

ಹಱಿಗವಿ (ನಾ). (ಆಲಂ) ಕೀಳುಮಟ್ಟದ ಕವಿ; ಕ್ಷುದ್ರಕವಿ; ಅಳಿಗವಿ: ಹಱಿ [ಪಾಕಾಂ. ಅರಿ]ಗವಿಗಳ ಕಬ್ಬಂಗಳ ಹೊಱಗಳೆಯಕ್ಕರದ ಹೊಲಿಗೆ ಬರ್ಚಿದೊಡೆಲ್ಲಂ ಬಱಿ ತಾಜೆಗೆ ಬೀಱಿಗವೆತ್ತಜತತ್ತಱವಕ್ಕೆಸಕ್ಕಮಸ್ತಂಬ್ಯಸ್ತಂ (ಗಿರಿಕ. ೧-೨೩).

[ಹಱ್ಱಿ (< ಪಱ್ಱಿ) + ಕವಿ]

ಹಱಿಗೊಯಿ (ಕ್ರಿ). ಹರಿದು ಹೋಗುವಂತೆ ಕತ್ತರಿಸು,—ಸೀಳು: ಹಱಿಗೊಯಿದ ಮಿಂಚಿನ ಗೊಂಚಲು ನೆಱೆವೋತು ಇಂದುಕೋಟಿಪ್ರಭೆಯ ಶಾಂತಿಯನೊಳಕೊಂಡು . . . ಬದುಕಿದೆನು (ಬಸವ. ೪. ೨೫೩ - ೧೩೨).

[ಹಱ್ಱಿ (< ಪಱ್ಱಿ) + ಕೊಯಿ (< ಕೊಯ್)]

ಹಱಿಗೋಲು 'ಪಱಿಗೋಲ್' ನೋ.

ಹಱಿತಿನ್ 'ಪಱಿತಿನ್' ನೋ.

ಹಱಿತಿನಿಸು (ಕ್ರಿ). ಕತ್ತರಿಸಿ ತಿನ್ನಿಸು; ಕಿತ್ತು ತಿನ್ನಿಸು (?): ನವಖಂಡವ ಕೂಡಿ ಕಡಿಕಡಿದು ನೋಡು ಆ ಶೂಲವೈದ್ಯದು ಮುಖವಾಗಿ ಹಾಯುವಾಗ (ಆ ಹಾವಿನಿಂದ?) ಹಱಿತಿನಿಸಿ ನೋಡು (ಬಸಹ. ೬೫-೯೧). [ಹಱಿತಿನ್ (< ಪಱಿತಿನ್) + - ಇಸು]

ಹಱಿತೆ (ನಾ). ಅವಕಾಶ (?): ಹೆಱೆಯ ಕಾಣುತ ಉಡುಗೊಱೆಯನೀವುದಕಿನ್ನು ಹಱಿತೆಯಲ್ಲವು ತನಗೆನುತ ಮಱೆಗಾದಿತ್ಯನು ಪೋಗಲರಿ ತಾವರೆಯು ಮುಖ ದೆಱೆಯಲಮ್ಮದೆ ಮುಸುಕಿದುದು (ಅಮುಷಾಂ. ೩-೪೫). [?]

ಹಱಿದಲೆ 'ಪಱಿದಲೆ' ನೋ.

ಹಱಿದಲೆಯ (ನಾ). ತಲೆಯ ಮೇಲೆ ಚೆನ್ನಾಗಿ ಕೂದಲಿಲ್ಲದವನು; ಹರಕುಕೂದಲುಳ್ಳ ತಲೆಯವನು: ಗುಳಿಗಣ್ಣಂ, ಹಱಿದಲೆಯಂ (ಶಪುದ. ೭೭ ಪ್ರಯೋ). [ಹಱಿದಲೆ (< ಪಱಿದಲೆ) + - ಅ]

ಹಱಿದಳ (ನಾ). ಛಿನ್ನಭಿನ್ನವಾದ ಸೈನ್ಯ: ಪಾರ್ಥನ ತಱುಬಿದನು ನಿನ್ನಾತ ಸ್ಥೆರಿಸಿ ಹಱಿದಳವ ಕೂಡಿದನು ಕಲಿ ಮಾಡಿದನು ಕಾಲಾಳ (ಕುವ್ಯಾಗ. ೧-೪೨).

[ಹಱಿ$_1$ (< ಪಱಿ$_1$) + ದಳ$_3$(= ದಲ)]

ಹಱಿದೊಗಲು 'ಪಱಿದೊವಲ್' ನೋ.

ಹಱಿಪಡು 'ಪಱಿವಡು' ನೋ.

ಹಱಿಮಣ್ (ನಾ). ಹೆಂಟೆ ಹಾಗೂ ಕಲ್ಲಿನ ತುಂಡುಗಳಿರುವ ಮಣ್ಣು; ಗಂಟುಗಂಟಾದ ಮಣ್ಣು: ಅಱಿಯದ ಬಾಲಂ ಬೀದಿಯ ಹಱಿಮಣ್ಣಿಂ ಮಾಡಿದೊಂದು ಹಾಹೆಯ ತೆಱದಿಂ ತಱಬಱಿಕಂ ವಿಕಟಾಕೃತಿ ನೆಱೆ ನಿಷ್ಕರನಿವೃತಹುಂಡ ಸಂಸ್ಥಾನಂಗಳ್ (ಶಾಂತೀಶ್ವ. ೯-೧೦೭). [ಹಱ್ಱಿ (< ಪಱ್ಱಿ) + ಮಣ್]

ಹಱಿಮಾತು (ನಾ). (ಆಲಂ) ಖಂಡಿಸುವ ನುಡಿ; ಪ್ರತಿವಾದದ ಮಾತು: ಆರನಾರಾಡಿಸುವರೆಂಬುದನಾರು ಬಲ್ಲರು ಸಾಕು ಬಱಿಯ ವಿಚಾರವಂತಿರಲಿನ್ನದೇ ಹಱಿ ಮಾತನಾಡಿದರೆ ಸಾರಲಱಿವವೆ ನಮಗೆ ನಮ್ಮ ಮನೋರಥಂಗಳು (ಪ್ರಭುಲಿ. ೭-೭೨).

[ಹಱಿ$_1$ (< ಪಱಿ$_1$) + ಮಾತು]

ಹಱಿಮುಱಿ, ಹರಿಮುರಿ (ನಾ). ಅಲ್ಲಲ್ಲಿ ಅಲ್ಪಸ್ವಲ್ಪ ಛಿನ್ನವಾಗುವಿಕೆ; ಖಂಡಸ್ಫುಟಿತ: ಕೈದುವಿದೆಕೋ ತನ್ನ ತನುವನು ಹೊಯ್ದು ನೋಡಾ ನೀನು ನಿನ್ನಾಪನಿತು ಸತ್ಯದಲಿ ಕೂಡಲೊಳಗೊಂದಿನಿತು ಹಱಿಮುಱಿಯಾದರಕಟಾ ನಾನು ಸಿದ್ಧನೆ (ಪ್ರಭುಲಿ. ೧೯-೨೫); ಹಱಿಮುಱಿಯಿಲ್ಲೊಂದು ಕುಱುಹಿಲ್ಲ (ಪರಬೋ. ೪-೮-೯). **ಹರಿಮುರಿ**: ಸಮಾಜ ಹರಿಮುರಿಯಾಗದಿರೆ ಸಲ್ಲ (ಹಕ್ಕಿರ. ೬೪೨-೧೪); ಮುಂಡನ ವೇಗದಲ್ಲಿ ಒಂದಿಷ್ಟು ಹರಿಮುರಿ ಆಗತಕ್ಕುವೆ (ದೀಪ್ತಿ. ೭೭). [ಹಱ್ಱಿ (< ಪಱ್ಱಿ) + ಮುಱ್]

ಹಱಿಮೂಲೆ (ನಾ). ಸಂದುಗೊಂದು: ನಡತಂದು ಹಱಿಮೂಲೆಗೊಂಬ ಹುಲಿ ಕರಡಿಯಂ ಜಡಿವ ಹೂಂಕೃತಿಗರಣ್ಮದ ಭೂತ ಭೇತಾಳವಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝುಂಕಿಸಿದುವಾ ಕೌಶಿಕನ ಪ್ರೇರಣೆಯೊಳು (ಹಚಕಾ. ೯-೧೩).

[ಹಱಿ$_1$ (< ಪಱಿ$_1$) + ಮೂಲೆ$_1$]

ಹಱಿಯೆಸು 'ಪಱಿಯೆಸು' ನೋ.

ಹರಿಯೊದೆ (ಕ್ರಿ). ತೊರೆ; ಕಳಚಿಕೊಳ್ಳು; ಬಿಡಿಸಿಕೊಳ್ಳು: ಮಹಾಪಾತಕವ ಕೆಡೆ ನೂಂಕಿ ತನುವ ಪಾವನ ಮಾಡಿ ಸಂಸಾರಬಂಧನವ ಹಱಿಯೊದೆದು . . . ಅನವರತ ಸೌಖ್ಯಗೊಡುಗೆ (ಲಶಿಚಂ. ೪೦-೧೦). [ಹಱಿ$_1$ (< ಪಱಿ$_1$) + ಒದೆ$_1$]

ಹಱಿವಾಯ್ 'ಪಱಿವಾಯ್' ನೋ.

ಹಱಿವು 'ಪಱಿವು' ನೋ.

ಹಱಿಸು 'ಪಱಿಯಿಸು' ನೋ.

ಹಱಿಸೂಱೆ (ನಾ). ಸಂಪೂರ್ಣವಾಗಿ ಕಿತ್ತುಕೊಳ್ಳುವುದು; ಅಧಿಕವಾದ ಸೂರೆ: ನಿಪ್ಪೊಸತಪ್ಪ ವಿಲಾಸಂ ಸುರಸತಿಗೊಪ್ಪಂಬಡೆದಮರನ ಮನಮಂ ಹಱಿಸೂಱೆ ವಿಡಿದುವಾಗ (ಜಯಕಾ. ೧೩-೪೯). [ಹಱಿ$_1$ (< ಪಱಿ$_1$) + ಸೂಱೆ]

ಹಱಿಹಂಚು, ಹರಿಹಂಚು (ನಾ). ೧. ಚೂರುಚೂರು; ಛಿನ್ನಭಿನ್ನತೆ: ಗುಹೇಶ್ವರನೆಂಬ ಲಿಂಗದ ಘನಘಟ್ಟಿಯನಱಿವಡೆ ನಿನ್ನಱಿವೆಲ್ಲವ ಹಱಿಹಂಚ ಮಾಡಿ ನೀನಱಿ ಮರುಳೇ (ಅವಚಂ. ೧೩೧-೬೦೦). ೨. ಚೆಲ್ಲಾಪಿಲ್ಲಿ; ಚದುರುವಿಕೆ: ಧರೆಗೆ ದುರ್ಜನರಾದ ತುರುಕರ ಬಲವನು ಹಱಿಹಂಚ ಮಾಡಿಯೋಡಿಸಿದ (ಕಂನವಿ. ೧೭-೫). ೩. ಹಾಳು; ಕೇಡು; ನಾಶ: ಹರಭಕ್ತಿಯೆಂದಱುಪಿ ಹಱಿಹಂಚ ಮಾಡಿದಂ (ಕಾರಿ. ದೇ. ೨೮೭-೨೪). **ಹರಿಹಂಚು**: ೨. ಇನ್ನುಳಿದ ಭಾಗವು ಹಲವಾರು ತುಂಡುಗಳಾಗಿ ಸಣ್ಣಪುಟ್ಟಸಂಸ್ಥಾನಗಳಲ್ಲಿ ಹಾಗು ನಿಜಾಮರಾಜ್ಯದಲ್ಲಿ ಹರಿಹಂಚಾಗಿತ್ತು (ಕಸಾಚ. ೨೪೨); ಸರದಾರರ ಪಡೆಯು . . . ಅವರ ಸೈನ್ಯವನ್ನು ಚದುರಿಸಿ ಹರಿಹಂಚು ಮಾಡಿತು (ಸಕಸೃ. IX, ಪ್ರಸ್ತಾವನೆ).

ಹಱಿಹಂಚಾಗು = ೧. ಚೂರುಚೂರಾಗು; ಛಿದ್ರವಾಗು: ಕೂಡೆ ಹಱಿಹಂಚಾದ ತಂದೆಯ ಗೂಡ ನೋಡದ ಮುನ್ನ ಕಂಬನಿ ಮೂಡಿ ಮುಳುಗಿದವಾಲಿ ಕಾಣವು ಪಿತೃಕಳೇವರವ (ಕುಮಾರವ್ಯಾ. ೧೯-೮); ಸೊಬಗೆಯರು ಪಂಚಗುರುಗಳ ಪಾಡಿದರು ಪಾತಕ ಹಱಿಹಂಚಾಗಿ ಹರಿದು ಹೋಹಂತೆ (ಭಾರಚ. ೧೩-೩೫). ೨. ಚೆಲ್ಲಾಪಿಲ್ಲಿಯಾಗು; ಚದುರು: ಹಱಿಹಂಚಾಯ್ತು ಮಹಾರಥರೊಡ್ಡಣ (ಜಯಕಾ. ೬-೭). ೩. ಹಾಳಾಗು; ನಾಶವಾಗು: ನಾಡಿಗೋಸುಗ ಸೋದರರು ಹೊಯ್ದಾಡಿ ಹಱಿಹಂಚಾದರೆಂಬುದ ನಾಡದಿಹುದೇ ಲೋಕ (ಕುಸಾಗಾ. ೨-೨೯). [ಹಱಿ$_1$(< ಪಱಿ$_1$) + ಹಂಚು$_2$]

ಹಱಿಹಂಚುವಡು (ಕ್ರಿ). ಚೆಲ್ಲಾಪಿಲ್ಲಿಯಾಗು; ಚದುರಿಹೋಗು: ನಿಮಿಷ ಮಾತ್ರದೊಳ್ ಸುರಸೇನೆ ಹಱಿಹಂಚುವಟ್ಟು, . . . ಬೆನ್ನಿತ್ತುದು (ಚಿಬಪು. ೨೪-೨೧).

[ಹಱಿಹಂಚು + ಪಡು$_1$]

ಹಱುಕ 'ಪಱುಕ' ನೋ.

ಹಱುಕು 'ಪಱುಕು' ನೋ.

ಹಱುಕುಗಡ್ಡ, ಹಱಿಕುಗಡ್ಡ (ನಾ). ಹರುಕುಮುರುಕಾಗಿರುವ ಗಡ್ಡ: ಗಿಡ್ಡ ರೂಪಿನ ಹಱು [ಪಾಠಾಂ. ಱ]ಕುಗಡ್ಡದ ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ (ಸಗಚ. ೬-೧೪). **ಹಱಿಕುಗಡ್ಡ**: ಹಱಿಕುಗಡ್ಡದ ಕೆದಱುಮಿಸೆಯ ಕೀನಿವಲ್ಲುಗಳ . . . ಕಿಱುಕುಲರು ಬಂದರು (ಬಸಪು. ೫೮-೪೯). [ಹಱುಕು (< ಪಱುಕು) + ಗಡ್ಡ$_1$]

ಹಱುಗಲ್ 'ಪಱಿಗೋಲ್' ನೋ.

ಹಱುಗಾಣು (ಕ್ರಿ). ಅಳಿವನ್ನು ಯೋಚಿಸು; ನಾಶವನ್ನು ಚಿಂತಿಸು: ಹರಗ . . . ಶ್ರೀಗಂಧವರ್ಷಿಪ ನೇಮ ನಿರುತವೆಂತರಲೊಮ್ಮೆ ಶ್ರೀಗಂಧ ದೊರೆಯದಿರೆ ನೇಮ ತಪ್ಪಿತ್ತೆನುತಲಿ ಹರಣಕ್ಕೆ ಹಱುಗಾಣಲು (ಗುರುಚಾ. ೬-೭); ಮಂತ್ರಜಪದಿಂ ಹರಣಂ ತದಶ್ವಕ್ಕೆ ಬಾರದಿರೆ ತನ್ನಸುಗೆ ಹಱುಗಾಣೆ ಹರನೊಲಿಯೆಯೆಂದಿನೊಲು ಜಯಿಸಿ (ರಾಶಿಚ. ೧೦-೨೩). [ಹಱು$_0$ (< ಪಱುವು) + ಕಾಣು (< ಕಾಣ್)]

ಹಱುಗೊಳ್ (ಕ್ರಿ). ಕಿತ್ತುಕೊಳ್ಳು: ಮೂರ್ಖನೈನಾರ್ ಶಿವಂ ಜೂಜಾಡಿ ಭರದೆ ಸೋಲಲ್ ಕಟ್ಟಿ ಹಾಯ್ಕೆ ಪಣಿಗಣ್ಣೊಡೆ ನಿರುತ ಜಂಗಮದೊಡವೆಯೆನುತೆ ಹ [ಪಾಠಾಂ. ಹು]ಱುಗೊಂಡಂ (ಚಿಬಪು. ೫೭-೩೭). 'ಪಱುಕೊಳ್' ಪರಾ.

[ಹಱು$_0$ (< ಪಱಿ$_1$) + ಕೊಳ್$_1$]

ಹಱುಗೋಲ್ 'ಪಱಿಗೋಲ್' ನೋ.

ಹಱುಗೋಲು 'ಪಱಿಗೋಲ್' ನೋ.

ಹಱುಣೆ 'ಪಱುಣೆ' ನೋ.

ಹಱುಣೆ 'ಪಱುಣೆ' ನೋ.

ಹಱುವು 'ಪಱಿವು' ನೋ.

ಹಱುವೆ 'ಹಱುಹೆ' ನೋ.

ಹಱುಹೆ, ಹರಿವ್ಯೆ, ಹರುವ್ಯೆ, ಹರುಹೆ, ಹಱುವೆ (ನಾ). (ತರಕಾರಿಯಾಗಿ ಬಳಸುವ) ಒಂದು ಬಗೆಯ ಸೊಪ್ಪು: "ಪಾಲಕ್ಕಮೆಂಬುದು ಹಱುಹೆ" (ಹಲಾಯು. ೨೯-೧೦); ನೆಲಗೋಣಿ ಪು(ಹು)ಣಿಸೆ . . . ಹಱುಹೆಯೆಂಬಿವಱೆಲೆಯಂ ಕಱಿಯೊಳಱೆ ಕಾಸಿ ಕಟ್ಟಲ್ ತೊಲಗುಗುಮೊದಱಿಸುವ ಮುಳ್ಳ ವಿಷಮೆನಿತನಿತುಂ (ಖಮದ. ೨-೩೧೧). **ಹರಿವ್ಯೆ$_2$**: "ದಂಟಿನ ಸೊಪ್ಪು, ಹರಿವೆ ಸೊಪ್ಪು" (ಸ್ಮನಿ. ೧೦); ಮಾರ್ಷ. (ಹರಿವೆ) . . . ಜ್ಯೇಷ್ಠಮಧು ಇವೆಲ್ಲ ಮಧುರ (ಅಷ್ಟಾಂಗ. ೧೩೮). **ಹರುವ್ಯೆ$_2$**: ಅಲ್ಲಿಯೂ ಹಂದಿ ಹರುವೆಮಡಿ . . . ತಿಂಗಳವರೆಮಡಿಗಳನ್ನೆಲ್ಲ ತುಳಿದು ರಂಪಮಾಡಿ ಮನೆಯ ಮೇಲಣ ಹಕ್ಕಲುಕಾಡಿನ ಕಡೆಗೆ ನುಗ್ಗಿಬಿಟ್ಟತ್ತು (ಮಲೆಮ. ೧೨೧). **ಹರುಹೆ**: "ರಾಜಕೀರೀ, ರಾಜಗಿರಿ ಈ — ಯೆರಡುಂ ಹರುಹೆ" (ಒಪಧಿ. ೧೩೮). **ಹಱುವೆ**: ತುಪ್ಪೋಗರಕ್ಕೆ ನಱುವಲು . . . ಕೆಂಪಿನ ಹಱುವೆಯಾದಿಯಾಗುತ್ತಮದ ಸೊಪ್ಪಿನೆಸಱಂ ಬಸಿದುಕೊಂಡು (ಸೂಪಶಾ. ೩-೧೮); ಮಿಱುಗುವ ಕನ್ನಡಿಯೊಳು ಹರಹಿಡ ಸಣ್ಣ ಹಱುವೆಯ ಬಿತ್ತುಗಳಂತೆ ತುಱುಗಿದ ಬವರಿಯಿಂದೆಸೆವ ಗಲ್ಲಗಳೊಂದು ಮೆಱಹು ಸಾಲದೆ ಚಕ್ರಧರನ (ಧರಚ. ೬-೪೮).

ಹಱೆ 'ಪಱೆ$_1$' ನೋ.

ಹಱೆಕಾಱು 'ಪಱೆಕಾಱು' ನೋ.

ಹಱೆಗಾಱು 'ಪಱೆಕಾಱು' ನೋ.

ಹಱೆಗುಟ್ಟು 'ಪಱೆಗುಟ್ಟು' ನೋ.

ಹಱ 'ಪಱ$_1$' ನೋ.

ಹಱಗೂಂಟಣಿ 'ಪಱಗುಂಟಣಿ' ನೋ.

ಹಱದು 'ಪಱದು' ನೋ.

ಹಱಮೈಲಗೆ (ನಾ). ಮಲಿನವಾದ ಬಟ್ಟೆ; ಉಟ್ಟು ಕಳೆದ ವಸ್ತ್ರ: ನಗಲಕ್ಕಿಯುಟ್ಟ ಹಱಮೈಲಗೆಗಳನೊಜ್ಜರಮನಿಪ್ಪ ಮಡಿವಾಳಂಗಂ[ವಗೆ]ವಱೆಯೊಳ್ ತೆಗೆದಿಸುಟ ವೊಲಗತಟದೊಳ್ [ಪೊರಳು]ತಿರ್ಪುವಜಗರನಿಕರಂ (ಸೂತ್ರಿಸು. ೩-೮೨).

[ಹಱ(< ಪಱದು) + ಮೈಲಗೆ (< ಮೈಲಿಗೆ)]

ಹಱಯಿಗೆ 'ಪಱಯಿಗೆ' ನೋ.

ಹಱಯೂರ್ (ನಾ). ಒಂದು ಊರಿನ ಹೆಸರು: ಪುಲಿನಾಡು ರಾಸಮಯ್ಯ ಹಱಯೂರರಸರಂ ದಣ್ಣುವೇಟ್ಟೊಡೆ (ಎಕ. X ಶ್ರೀನಿವಾ. ೮೫-೫; ಸು. 900?). [? + ಊರ್]

ಹಱವಿಗೆ 'ಪಱಯಿಗೆ' ನೋ.

ಹಱಿ$_1$ 'ಪಱಿ$_1$' ನೋ.

ಹಱಿ$_2$ 'ಪಱಿ$_3$' ನೋ.

ಹಱಿವು 'ಪಱಿ$_2$' ನೋ.

ಹಱಿಸು, ಹಳಿಸು$_1$ (ಕ್ರಿ). ಬಯ್ಯಿಸು; ದೂಷಣೆಗೆ ಒಳಗಾಗುವಂತೆ ಮಾಡು. **ಹಳಿಸು$_1$**.

ಹಱಿಸಿಕೊಳ್ಳು, ಹಳಿಸಿಕೊಳ್ಳು, ಹಳಿಸಿಕೊಳ್ಳು = ನಿಂದೆಗೆ ಪಾತ್ರವಾಗು; ಬಯ್ಯಿಸಿಕೊಳ್ಳು: "ಗರ್ಹ್ಯಾಧೀನ, ವಕ್ತವ್ಯ = ಹಱಿಸಿಕೊಂಬವನು" (ನಾಚಿಕಾ. ೫); ಕೃತಕಂಗಳಂಗನೆಯರಿಗೆ ನೆಲೆಯಾಗಿ ಹಳಿಸಿ[ಪಾಠಾಂ. ಹಳಿಯಿಸಿ]ಕೊಳುತಿರ್ದು ಮತ್ತಾ ಹೆಸರೆ ಲೇಸೆನಿಸಿಕೊಂಡವಾ ಹುಲಿಗೆಱೆಯೊಳು (ಸೋಮಚ. ೫-೬೯); ಮಕರದೊಳು

ಮನೆಹಟ್ಟಿದೊಡೆ . . . ಹಲಬರಿಂ ಹಳಿಸಿಕೊಂಬಳು (ವೀಶಪು. ೪-೨೧-೨೨).

[ಹಟ್ಟಿ$_1$ (< ಪಟ್ಟಿ$_1$) + - ಇಸು$_3$]

ಹಟ್ಟಿ 'ಪಟ್ಟಿ$_1$' ನೋ.

ಪಟ್ಟಿಗೂಟು 'ಪಟಗೂಟು' ನೋ.

ಹಟ್ಟಿ 'ಪಟ್ಟಿ' ನೋ.

ಹಾ (ಅ). (ದುಃಖ, ಕೋಪ, ಆಶ್ಚರ್ಯ, ಉದ್ವೇಗ, ತೃಪ್ತಿ ಮುಂತಾದುವುಗಳನ್ನು ಸೂಚಿಸುವ) ಒಂದು ಉದ್ಗಾರವಾಚಕಶಬ್ದ: ಕೇಡನಱಿದ್ಕೆ ಹಾ ಶ್ವೇತಕೇತುವ್ರತೀ (ಕಾದಂಪು. ೯೦೦); ಹಾ ಗುರುನಾಥನೆ ಹಾ ಗುರುವೆ ಹಾ ಗುರುದೇವನೆ (ಬಸವ. ೪೫-೭); ಹಾ ಯುಧಿಷ್ಠಿರರಾಯ ಶಿವಶಿವ ವಾಯುಸುತ ಹಾ ಪಾರ್ಥ ಹಾ ಮಾದ್ರೇಯರಿರ ಹಾಯೆನುತ ಹರೆದುದು ಸೇನೆ ಧೆಸದೆಸಗೆ (ಕುಮಾಡ್ರೋ. ೩-೫೯).

ಹಾಹಾ (ದ್ವಿರುಕ್ತಿ): ಹಾಹಾ ಜನಕಸುತೇ ವೈದೇಹಿಯೆಂದು . . . ಮೂರ್ಛೆಗ ಸಂದಂ (ಪಂರಾಮಾ. ೯-೧೧೬); ಹಾ ಮಹಾವಿಭ್ರಮ ಹಾಹಾ ಮನ್ಮಥ ಹಾ ಸಮ್ಮದ (ಗಿರಿಕ. ೮-೬೭); ಹಾಹಾ ಮಗನೆ ನಮ್ಮುವನು ಪರಕೆ ಸಲಿಸದೆ ಮುಂದೆ ನೀನೀ ಪರಿಯ ಹೋಹರೆ (ತೊರರಾ. ೨-೫-೨೪). 'ಆಹ$_1$' ಪರಾ.

ಹಾಂ (ನಾ). ಒಂದು ಉದ್ಗಾರವಾಚಕಶಬ್ದ: ಮೊನ್ನೆ ಆಟಕ್ಕಾಗಿ ಆರೇರ ರಂಗನ ಕೂಡ ಕುಸ್ತಿ ಹಚ್ಚಿದರ ಹಾಂ ಅನ್ನುವುದರಲ್ಲಿ ಮುರಿದು ಒಗೆದ (ಬಿಚ್ಚಹೂ. ೪೧).

ಹಾಂಕಾರ 'ಆಂಕರ' ನೋ.

ಹಾಂಗೆ 'ಅಹಗೆ' ನೋ.

ಹಾಂಸೆ 'ಪಾವಸೆ' ನೋ.

ಹಾಕತೆವೆಱು (ಕ್ರಿ). (?): ಏಕಾಂತದೊಳು ನಿನ್ನ ಪದಪದ್ಮಂಗಳನೇಕಾಗ್ರಚಿತ್ತ ದಿಂದೊಲಿದು ಹಾಕತವೆತ್ತು ಜಾನಿಸೆ ಕೆಡದಿಹುದೆಯನೇಕ ಕಲ್ಪಿಶ ಜಿನರಾಜ (ರಾಮವಿ. ೨೦-೧೬೩). [? + ಪೆಱು$_1$]

ಹಾಕರಿಸು (ಕ್ರಿ). ಹಾಹಾಕಾರವನ್ನುಂಟುಮಾಡು; ಗೊಂದಲವೆಬ್ಬಿಸು (?): ಸರಳು ಸರಳಿಂಗಣೆದು ಪೊಗೆಮಯಂ ಕಿಡಿಮಯವದಾಗಿ ಹಾಕರಿಸಿ ದಶದಿಕ್ಕಿನೊಳ್ ಜಾರುತ್ತೊರೆಯುತ್ತಿರ್ದುದು (ತುರಂಗ. ೬೮-೬೦). 'ಆಕರಿಸು$_2$' ಹೋ.

[? + - ಇಸು$_3$]

ಹಾಕಾರ (ನಾ). ೧. ಹಾ ಎಂಬ ಉದ್ಗಾರ: ಎಲ್ಲಿಡೆಯು ಕೇಳುತಿದೆ ಹಾಕಾರವು, ಕ್ರಾಂತಿ ಎಂಬುವ ಭೂತ ತಲೆಗೆದರಿ ಹುಚ್ಚಿದ್ದು ಸುತ್ತುತಿದೆ (ಪಾಂಚಜ. ೫೨-೭). ೨. [ಜೈನ] ಹಾ ಎಂಬ ಶಬ್ದದ ಉಚ್ಚಾರದಿಂದ ಕೊಡುತ್ತಿದ್ದ ಶಿಕ್ಷೆ; ಒಂದು ಬಗೆಯ ವಾಗ್ದಂಡ; P ಮೊದಲನೆಯ ಐದು ಮನುಗಳು ಪ್ರಜೆಗಳನ್ನು ಅಪರಾಧಗಳಿಂದ ಪರಾವೃತ್ತಗೊಳಿಸುತ್ತಿದ್ದ ಒಂದು ಶಬ್ದೋಚ್ಚಾರ: ಆ ಕಾಲದೊಳಾ ಮನುಷ್ಯರಪರಾಧಂಗೆಯ್ಯೆ ಮುನ್ನಮಯ್ವರ್ ಮನುಗಳು ಹಾಕಾರ ಲಕ್ಷಣಮಪ್ಪ [ಹಾಹಾಂ. ಹಾಮಾಧಿಕ್ಕಾರ] ದಂಡಮಂ ಮಾಡಿದರು (ಜಾವುಂಪು. ೧೧).

[ಹಾ + - ಕಾರ$_4$]

ಹಾಕಿಮ್ (ನಾ). ಆಡಳಿತಾಧಿಕಾರಿ: 'ಪರಗಣಹಾಕಿಮ್' ಪರಾ.

[<— ಹಿಂ. ಹಾಕಿಮ್; ಮರಾ. ಹಾಕಿಮ್, ಹಾಕೀಮ್]

ಹಾಕಿಸು 'ಹಾಯ್ಕಿಸು' ನೋ.

ಹಾಕು 'ಪಾಯ್ಕು$_1$' ನೋ.

ಹಾಕುಪಾವಡಿಗ (ನಾ). ಬಟ್ಟೆಯಿಂದ ಗಾಳಿ ಹಾಕುವವನು: ಛತ್ರಿ ಚಾಮರ ಢಾಳು ಎತ್ತಿ ಪಿಡಿದಿರುವವರು ಹತ್ರ ಟಿಮ್ಮುವ ಹಾಕುಪಾವಡಿಗರು (ಶರಲೀ. ೨೩೦-೩).

[ಹಾಕು (< ಪಾಯ್ಕು$_1$) + ಪಾವಡ$_1$ (< ಪಾವುಡ$_1$) + - ಇಗ]

ಹಾಕ್ಕೆಯ್ಯ (ನಾ). ಒಬ್ಬಾತನ ಹೆಸರು; ಹಾಕ್ಕೆಯ್ಯ ಬರೆದ (ಎಕ. VII, ಶಿಕಾ. ೫೦-೧೪; 993). ' ಆಕಯ್ಯ' ಹೋ. [? + ಅಯ್ಯ$_1$]

ಹಾಕ್ಕಾಟ 'ಪಾಯ್ಕು$_1$' ಪರಾ.

ಹಾಕ್ಕಾಡು 'ಪಾಯ್ಕು$_1$' ಪರಾ.

ಹಾಗ 'ಪಾಗ$_1$' ನೋ.

ಹಾಗಕಂಭ (ನಾ). [ಗಣಿತ] ಒಂದು ಅಳತೆಯ ಪ್ರಮಾಣ: ಅರಗಳಿಯಿಂದ ಅರ ಗಳೆಯ ಗುಣಿಸಲು ಹಾಗಕಂಭವಕ್ಕು (ಕ್ಷೇತ್ರಗ. ೬-೩). [ಹಾಗ (< ಪಾಗ$_1$) + ಕಂಭ]

ಹಾಗಪಾಲು (ನಾ). ನಾಲ್ಕನೆಯ ಒಂದು ಭಾಗ; ಕಾಲುಭಾಗ: ಸಂತುಷ್ಟ ವಾಯಿತು ಸೀಮೆಪುರದೊಳು ಹಾಗಪಾಲುಜನ (ಬಿಜ್ಜಪು. ೬೭-೨೦); ಭೂಮಿಯ ಮೇಲ್ಭಾಗದಲ್ಲಿ ಸುಮಾರು ಹಾಗಪಾಲುನೆಲವೂ ಮುಕ್ಕಾಲುಪಾಲು ನೀರೂ ಇವೆ (ಭೂಗೋಳ. ೧೦). [ಹಾಗ (< ಪಾಗ$_1$) + ಪಾಲು$_2$ (< ಪಾಲ್$_2$)]

ಹಾಗಮಟ್ಟ (ನಾ). ಒಂದು ಅಳತೆಯ ಪ್ರಮಾಣ: ಪುಟ್ಟಗೇಣುಯೆಂಬುದು ಹಾಗಮಟ್ಟ (ಕ್ಷೇತ್ರಗ. ೩೭-೪). [ಹಾಗ (< ಪಾಗ$_1$) + ಮಟ್ಟ$_1$]

ಹಾಗಲ್ 'ಪಾಗಲ್$_1$' ನೋ.

ಹಾಗಲ 'ಪಾಗಲ್$_1$' ನೋ.

ಹಾಗಲು 'ಪಾಗಲ್$_1$' ನೋ.

ಹಾಗವಡೆ (ಕ್ರ). ಕನಿಷ್ಠನಾಣ್ಯವನ್ನು ಪಡೆ; ಚಿಕ್ಕಾಸನ್ನು ಹೊಂದು: ಮೇಲಿಕ್ಕಿದ ಹೆಣ್ಣು ಹಾಗವಡೆಯಳೆಂಬಾಳಾಪದ ಗಾದೆಯಱಿತು ತೂಳಿಸಿ ಮೋಹವ ಕಾಣಿಸುವುದು ಪ್ರೌಢಲೋಲಾಕ್ಷಿಯರ ಮತವಲ್ಲ (ಕಂನವ. ೯-೧೫೬). [ಹಾಗ (< ಪಾಗ$_1$) + ಪಡೆ$_1$]

ಹಾಗವಡ್ಡಿ (ನಾ). ಒಂದು ಬಗೆಯ ಬಡ್ಡಿ: ಹಾಗವಡ್ಡಿಯಿಂ ದೇವರ ಭಂಡಾರವಾಗಿ ಕೊಟ್ಟ ಗದ್ಯಾಣ ಮೂಱು (ಎಕ. XIV, ತಿರುಮ. ೨೭೦-೫; 1259).

[ಹಾಗ (< ಪಾಗ$_1$) + ಬಡ್ಡಿ$_2$]

ಹಾಗವೃದ್ಧಿ (ನಾ). = ಹಾಗವಡ್ಡಿ: ಇನ್ತಿನಿಬರ ಜೀವಿತಂ ಬಡ್ಡಿಯಲು ನಡವಂತಾಗಿ ಗುರುದೇವರು ಈರ ಮೇಲೆ ಹಾಗವೃದ್ಧಿಯಿಂ ಕೊಟ್ಟ ಗದ್ಯಾಣ ೧೦೦ (ಶಾಸಪ. ೫೩-೧೧; 1107). [ಹಾಗ (< ಪಾಗ$_1$) + ವೃದ್ಧಿ]

ಹಾಗೂವೀಸ (ನಾ). ಒಂದು ಹಾಗ ಮತ್ತು ಒಂದ ವೀಸ (?): ನಾಲುವತ್ತುವಂಭತ್ತು ವರಹವೂ ಹಾಗೂವೀಸದ ಗ್ರಾಮವಂದು (ಮೈಅಂ. ೧೯೩೮, ೨೨-೬೯; 1817); ಮಗ್ಗಿ ಬಾರದಿದ್ದರೆ ಹಾಗೂವೀಸ ಗುಣಿಸು ಅಂದ (ಗಾದ). [ಹಾಗ್ಕೂ (< ಪಾಗ$_1$) + ವೀಸ]

ಹಾಗೆ 'ಅಹಗೆ' ನೋ.

ಹಾಚಿ 'ಪಾವಸೆ' ನೋ.

ಹಾಜರ್ 'ಹಾಜರು' ನೋ.

ಹಾಜರ್‌ಭಾಷಿ 'ಹಾಜರುಭಾಷಿ' ನೋ.

ಹಾಜರಾತಿ (ನಾ). ಹಾಜರಾಗಿರುವಿಕೆ; ಉಪಸ್ಥಿತವಾಗಿರುವಿಕೆ: ತಹಶೀಲ್ದಾರ ರುಗಳ ಹಾಜರಾತಿ ಹುಕುಂನಲ್ಲಿರತಕ್ಕದ್ದು (ಗ್ರಾಮಾಕ. ೪); ಶಾಲೆಯ ಹಾಜರಾತಿ, ಅವನಿಗೆ ಕಲಿವಿನಲ್ಲಿರುವ ಆಸಕ್ತಿ . . . ಶಿಕ್ಷಣಾಭಿವೃದ್ಧಿಯ ಮಟ್ಟವನ್ನು ನಿರ್ಧರಿಸುತ್ತವೆ (ಶಿಕ್ಷದ. ೫೬೪). [< ಹಾಜರು]

ಹಾಜರಿ (ನಾ). = ಹಾಜರಾತಿ: ಹಾಸ್ಯಚಟಾಕಿಯ ಹಾರಿಸುತಾ ದಿನ ಗುರುತಿಸುತಿದ್ದೆ ಹಾಜರಿಯ (ಇಂಚಾಪ. ೬೯-೮೩); ಇಂದು ಮುಂಜಾನೆಯಿಂದಲೇ ಹಾಜರಿ ಕೊಡುತ್ತಿದ್ದೇನೆ (ಜಪಿಸಾ. ೧೫೭). [<— ಪಾರ. ಮರಾ. ಹಾಜಿರೀ]

ಹಾಜರು, ಹಾಜರ್ (ನಾ). ಇರುವಿಕೆ; ಉಪಸ್ಥಿತವಾಗಿರುವಿಕೆ: ನಾವು ಹಾಜರು ಇದ್ದೇವೆ (ರಾಜೇಂದ್ರ. ೩); ನಾಲ್ಕಾರು ದಿನಗಳಲ್ಲಿ ಹಾಜರು ಇದ್ದು ಬಂದೆ (ಅನ್ನಪೂ. ೭೪). ಹಾಜರ್: ಶ್ಯಾಮ ಎಲ್ಲಿದ್ದರೆ ನಾನು ಅಲ್ಲಿ ತಪ್ಪದೆ ಹಾಜರ್ (ಅಲಹೂ. ೭೭); ಫೀನಸರಕಾರದೆದುರು ಇಂಥಾ ಸ್ಕೀಮನ್ನು ಹಾಜರ್ ಮಾಡಿರುವಾಗ (ಪ್ರಕಾಶ. ೧೩೮). ಹಾಜರಾಗು = ಉಪಸ್ಥಿತನಿರು; ಪ್ರತ್ಯಕ್ಷ ನಿರು: ತಮ್ಮ ಊಟ ಆಗುವುದರೊಳಗಾಗಿ ಬಂದು ಹಾಜರಾಗುತ್ತೇನೆ (ರಂಗಶ. ೯೦); ನೀವು ತಕ್ಷಣ ಸನ್ನಿಧಾನಕ್ಕೆ ಹಾಜರಾಗತಕ್ಕದ್ದು (ಶ್ರೀರಾಯ. ೧೦೬). ಹಾಜರಿರು = ಉಪಸ್ಥಿತವಾಗು; ಹಾಜರಾಗು: ಎಲ್ಲರೂ ಹಾಜರಿರಬೇಕೆಂದು ತಾಕೀತು ಮಾಡಿದ್ದನು (ಮುಂಗಾಮು. ೧೧೨); ಆ ದರ್ಬಾರಿನಲ್ಲಿ ಶಿವರಾವ್‌ಭಾವುವಿನ ಮಕ್ಕಳು . . . ಇಬ್ಬರೂ ಹಾಜರಿದ್ದರು (ಝಾರಾಚ. ೨). ಹಾಜರುಪಡಿಸು = ಉಪಸ್ಥಿತನಾಗುವಂತೆ ಮಾಡು: ಕೋರ್ಟಿನಲ್ಲಿ ಹಾಜರು ಪಡಿಸುವ ವಿಷಯದಲ್ಲಿ ನಿಮಗೆ ಬೇಜಾರು ಬೇಡ! (ಧೂಮಮ. ೪೪).

[<— ಅರ. ಹಾಯಿರ್; ಹಿಂ. ಹಾಜಿರ್; ಮರಾ. ಹಾಜೀರ್]

ಹಾಜರುಪಟ್ಟಿ (ನಾ). ಉಪಸ್ಥಿತರಿದ್ದವರನ್ನು ಗುರುತಿಸುವ ಯಾದಿ; ಹಾಜರಾತಿಯ ಪಟ್ಟಿ: ಅವರ ಹೆಸರುಗಳನ್ನು ಹಾಜರುಪಟ್ಟಿಯಲ್ಲಿ ದಾಖಲು ಮಾಡಿಕೊಂಡರು (ರಕ್ತರೂ. ೬೨). [ಹಾಜರು + ಪಟ್ಟಿ]

ಹಾಜರುಭಾಷಿ, ಹಾಜರ್‌ಭಾಷಿ (ನಾ). ರಾಜ ಅಥವಾ ಅಧಿಕಾರಿಯ ಸಮ್ಮುಖದಲ್ಲಿದ್ದು ವ್ಯವಹರಿಸುವ ನೌಕರ: ಅವನಿಗೊಂದು ಹಾಜರುಭಾಷಿ ಹುದ್ದೆಯನ್ನೂ ದೊರಕಿಸಿಕೊಟ್ಟರು (ಪುಸು. ೩೭೦). **ಹಾಜರ್‌ಭಾಷಿ:** ರಾಜನು ಅವರೊಡನೆ ನೇರವಾಗಿ ಮಾತನಾಡದೆ ಮತ್ತೊಬ್ಬನ (ಹಾಜರ್‌ಭಾಷಿಯ) ಮೂಲಕ ಮಾತಾಡುತ್ತಾನೆ. ಯಾರು ರಾಜನೊಡನೆ ಮಾತಾಡಬೇಕೋ ಆತ ಮುಂದೆ ಹೋಗಿ ಹಾಜರ್‌ಭಾಷಿಗೆ ಜವಾಬು ಕೊಟ್ಟು ತಾನು ನಿಂತಿದ್ದ ಸ್ಥಳಕ್ಕೆ ಹಿಂದಿರುಗುತ್ತಾನೆ (ಪ್ರವಾ. II, ೬೬೫).

[← ಹಿಂ. ಹಾಜಿರ್‌ಬಾಶೀ; ಮರಾ. ಹಾಜೀರ್‌ಬಾಶೀ, ಹಾಜರ್‌ಬಾಶೀ]

ಹಾಟ (ನಾ). ೧. ಒಂದು ವೃತ್ತಿ,— ಕಸುಬು: ಜೋಗಯ ಹಾಟ ೧ ಮತ್ತ ೨ ಧಾರೆಯ ಹಾಟ ೧ ಹಳಿಜಕೋಜ ಮತ್ತ ೧ ಇಂತೀ ವೃತ್ತಿಗಳಂ ಸಲಿಸುವರು (ಸೌಇ. IX-i, ೬೬೫-೫೬; 1215). ೨. ಕುದುರೆಯ ಕೆನ್ನೆಯ ಭಾಗ: ಕಟದ ಸಂಕ (ಶಂಖ)ದ ಪೂಜಗಣ ಕೆನ್ನೆಗ ಹಾಟಮಂಬ ಪೆಸರಕ್ಕುಂ (ಅಶ್ವಶಾ. ೮೭-೬೨). [?]

ಹಾಟಕ (ನಾ). ೧. ಚಿನ್ನ; ಬಂಗಾರ: ಸುಗಂಧಿಜಲಸಂಭೃತಹಾಟಕಘಟಿತಘಟಕೋಟಿ ಗಳನೆತ್ತಿಕೊಂಡು ಸುರಿದಾಗಳ್ (ಆದಿಪು. ೭-೧೦೦ ವ); ವಿಸ್ಫುರಿತಸ್ಫಟಿಕಮಣಿವಿಲಸದುಭಯ ತಟಘಟಿತಹಾಟಕ ಸೋಪಾನಶ್ರೇಣಿಯಿಂದಂ (ಅಜಪು. ೭-೨೦ ವ) ೨. ಒಂದು ಬಗೆಯ ಸೇಬು; ಮುಳ್ಳುಸೇಬು. [ಸಂ.]

ಹಾಟಕನೇತ್ರ (ನಾ). ಹಿರಣ್ಯಾಕ್ಷನೆಂಬ ರಾಕ್ಷಸ: ಧಾತ್ರಿಯನು ಕದ್ದೊಯ್ದ ಹಾಟಕನೇತ್ರನ ತೆಗೆದು ಬಿಸುಟು (ಕಭವಿ. ೧೨). [ಸಂ.]

ಹಾಟಕಪೀಠ (ನಾ). ಚಿನ್ನದ ಆಸನ: ವಧೂವರರಿರ್ವರುಮಂ . . . ಮಣಿಮಯವೇದಿಕೆಯ ಹಾಟಕಪೀಠದ ಮೇಲ ಪಾಸಿದ ದುಗುಲದ ದಳಿಂಬದೊಳಿರಿಸಿದಾಗಳ್ (ಆದಿಪು. ೪-೪೭ ವ). [ಸಂ.]

ಹಾಟಕವೆಟ್ಟು (ನಾ). ಮೇರುಪರ್ವತ; ಸುವರ್ಣಪರ್ವತ: ಬದ್ಧರವೇ ಹಾ[ಟ] [ಪಾಶಾಂ. ತ]ಕವೆಟ್ಟಿಗ ನಗುವುಜ್ಜುಗವೇನದನುಸುರುಸುರು (ಉದ್ಭರೇ. ೩-೧೬).

[ಹಾಟಕ + ಬೆಟ್ಟು (< ಬೆಟ್ಟು)]

ಹಾಟಕಾಂಬರ (ನಾ). ಜರತಾರಿ ವಸ್ತ್ರವನ್ನು ಧರಿಸಿದವನು; ವಿಷ್ಣು: ಕೋಟ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ ಸಾಟಿಯಿಲ್ಲದ ಪೂರ್ಣಗುಣಳು ಸರ್ವಕಾಲ ಮಾಡುತಿಹಳು (ಪುರಂದ. ಧಾ. ೧-೫೧-೧). [ಸಂ.]

ಹಾಟಕೇಶ್ವರ (ನಾ). ಶಿವನ ಒಂದು ಹೆಸರು; ℙ ಗೋದಾವರೀನದೀತೀರದ ಕ್ಷೇತ್ರದಲ್ಲಿರುವ ಈಶ್ವರ: ಉನ್ನತಶ್ರೀಗಿರಿಗೆ ಬಂದು ಸಮುನ್ನತಿಯೊಳಾ ಹಾಟಕೇಶ್ವರ ಸನ್ನಿಧಿಯೊಳಾರು ವಿಸ್ಫುಲಿಂಗಂಗಳು ಸಮುದ್ಭಳಿಸೆ (ಬಸಪು. ೫೩-೫೨); ಮತ್ತಲ್ಲಿ ಹಾಟಕೇಶ್ವರಮಿರ್ಪುದು (ಪಾಸೋಪು. ೫-೨೬). [ಸಂ.]

ಹಾಡ (ನಾ). ೧. (ಎಣ್ಣೆ ಮುಂತಾದ ದ್ರವಪದಾರ್ಥಗಳ) ಒಂದು ನಿರ್ದಿಷ್ಟ ಅಳತೆ ಮತ್ತು ಆ ಅಳತೆಯ ಸಾಧನವಾದ ಬುದ್ದಲಿ, ಪಾತ್ರೆ ಮುಂತಾದುವು: ಬೇಱೂರಿಂದಂ ಬಂದು ಮಾಱುವ ಎಣ್ಣೆಯ ಹಾಡಕ್ಕೆಯದ್ದೆಣ್ಣೆಯ ಕೊಟ್ಟರ್ (ಮುಂಬರಾ. X, ೨೬೯-೭೪: 1229); ಬುದ್ದಣಿ ಹಾಡ ಪಕ್ಕಲ ಕಂಬಗಳ ಕೊಡನುದಾರೆಗಳ ಘೃತ ತೈಲ ಬಸೆಗಳ ಸಾರ ಕಟ್ಟಿತು (ತೂರರಾ. ೫-೮-೪); ಇನ್ನೊಂದು ಸಾರಿ ಹೋದರೆ, ಹೊಗೆ ಹಾಕಿ, ನೊಣಗಳನ್ನು ಓಡಿಸಿ, ಒಂದು ಹಾಡ ಜೇನನ್ನು ಹಿಂಡಿ ತಂದೇನು (ಮೂಕಜ್ಜಿ. ೬೩). ೨. ಒಂದು ನಿರ್ದಿಷ್ಟವಾದ ಅಳತೆಯ ಬೀಜವರಿಯ ಭೂಮಿ: ಯೆರಡುಂ ಹಾಡದ ಕೆಯ್ಕ ಬಳಿಯಲ್ಲಿ (ಸೌಇ. XV, ೧೫೧-೩; 1191); ಮೈಜನಾಥಭಟ್ಟೋಪಾಧ್ಯಾಯರಿಗೆ ಕೊಟ್ಟ ಭೂಮಿ ಹಾಡವೆರಡು ಅವರ ಮಕಳು ವಿಷ್ಣುಭಟರಿಗೆ ಹಾಡವೆರಡು (ಎಕ. VIII, ಸೂರಬ. ೧೩೫-೪೧; 1217). [ದೇ. ॥ ತುಳು. ಪಾಡ./ ಸಂ. ಹಾಡಿಕಾ = ಮಣ್ಣಿನ ಪಾತ್ರೆ]

ಹಾಡಂಗಿ 'ಪಾಡಗ,' ನೋ.

ಹಾಡಕ (ನಾ). ಭೂಮಿ; ಜಮೀನು: ಕೊವರಗಾವ್ಯುನ ಹಾಡಕ [ವೊ]ಳಗೆ ಮತ್ತರು ಮೂವತ್ತುಂ (ಸೌಇ. XI-i, ೧೧೩-೩೦;1074). [?]

ಹಾಡಗ 'ಪಾಡಗ,' ನೋ.

ಹಾಡಗೆ, ಹಾಡಿಗೆ (ನಾ). ರಥದ ಒಂದು ಭಾಗ: ಮಂದರಾದ್ರಿಯೆ ರಥದ ಹರುಹಾಯ್ತು ಹಾಡಗೆಯದೆಂದೆನಿಪ ರಥದ ವಳಗುದಯಾಸ್ತಗಿರಿಗಳೆರಡುಂ ದೃಢದ ರಥವನಾಂತಿಪ್ಪ ಕುರುಗಣೆಗಳ್ಕೆ (ವೀಕ್ಕಪು. ೨-೧೦-೮). **ಹಾಡಿಗೆ:** ಈ ನಾಲ್ಕೂ ಗಾಲಿಗಳ ಮೇಲೆ ಸಮತೂಕವಾಗಿ ಭಾರ ಹಾಕಿ ಕೂಡಿಸಿದ ಹಾಡಿಗ ತೋಳು (ಬಳಭಾ. ೧೩೫). [?]

ಹಾಡಹಗಲು, ಹಾಡುಹಗಲು (ನಾ). ನಿಚ್ಚಳವಾದ ಹಗಲುಹೊತ್ತು: ಹಾಡಹಗಲಿನಲ್ಲಿಯೇ ಅಂಗಡಿ ಲೂಟಿಯಾಗಿ ಹೋಯಿತು (ಕೂಳಿ). **ಹಾಡುಹಗಲು:** ಹಾಡುಹಗಲಿನಲ್ಲಿಯೂ ಸಹ ಆ ದಟ್ಟವಾದ ಕಾಡಿನಲ್ಲಿ ಸೂರ್ಯರಶ್ಮಿ ಬೀಳುವುದಿಲ್ಲ (ಕೂಳಿ). [< ಪಟ್ಟಪಗಲ್]

ಹಾಡಿ 'ಪಾಡಿ,' ನೋ.

ಹಾಡಿಕೆ (ನಾ). ಹಾಡುವಿಕೆ; ಹಾಡುಗಾರಿಕೆ: ಹರಿಸ್ಮರಣವಿಲ್ಲದ ಹಾಡಿಕೆಯು ಅರಣ್ಯರೋದನ (ಪುರಂದ. ೫-೧೬೧-೨೪); ಹಾಡು, ಹಾಡಿಕೆ ಮತ್ತು ಹಾಡುಗಾರ ಇದೊಂದು ತ್ರಿವೇಣಿಸಂಗಮವು (ಸಾಹಿಸಂ. ೬೭). [ಹಾಡು, (< ಪಾಡು,) + - ಇಕೆ]

ಹಾಡಿಗೆ 'ಹಾಡಗೆ' ನೋ.

ಹಾಡಿತಿ (ನಾ). ಹಾಡುವವಳು; ಹಾಡುಗಾರ್ತಿ: ಅವರಲ್ಲಿ ಹಾಡಿತಿ ಕಣ್ಣಮ್ಮನಾಚ್ಚಿಯಾರ್ ಮುಖ್ಯಳು (ಕೊಲೀಜಾ. ೧೬).

[ಹಾಡು, (< ಪಾಡು,) + - ಇತಿ, (< - ಇತ್ತಿ)]

ಹಾಡಿಮದ್ದು (ನಾ). ನಾಟಿ ಔಷಧಿ; ಹಳ್ಳಿ ಔಷಧಿ: ಇಂತಿವನೆಲ್ಲಿದು ಮಜ್ಜಿದಲ್ಲಿ ತಾ ಮಾಡಿಕೊಂಡ ಕುತ್ಸಕ್ಕೆ ಹಾಡಿಮದ್ದನರದಂತೆ (ವೀಕ್ಷ. ೯).

[ಹಾಡಿ (< ಪಾಡಿ,) + ಮದ್ದು (< ಮರ್ದು)]

ಹಾಡಿಸು 'ಪಾಡಿಸು' ನೋ.

ಹಾಡು, 'ಪಾಡು,' ನೋ.

ಹಾಡು, 'ಪಾಡು,' ನೋ.

ಹಾಡು, 'ಪಾಡು,' ನೋ.

ಹಾಡು, 'ಪಾಡಿ,' ನೋ.

ಹಾಡುಕಾರ 'ಪಾಡುಂಗಾಱ' ನೋ.

ಹಾಡುಕಾಱ 'ಪಾಡುಂಗಾಱ' ನೋ,

ಹಾಡುಗ 'ಪಾಡುಗ' ನೋ.

ಹಾಡುಗಬ್ಬ 'ಪಾಡುಗಬ್ಬ' ನೋ.

ಹಾಡುಗಾಯಿ 'ಪಾಡುಗಾಯಿ' ನೋ.

ಹಾಡುಗಾರ 'ಪಾಡುಂಗಾಱ' ನೋ.

ಹಾಡುಗಾರಿಕೆ 'ಪಾಡುಂಗಾಱಿಕೆ' ನೋ.

ಹಾಡುಹಗಲು 'ಹಾಡಹಗಲು' ನೋ.

ಹಾಡೆ (ನಾ). ಒಂದು ಬಗೆಯ ಮೂಲಿಕೆ; ಅಗಳುಶುಂಠಿ: ಹಾಡೆಯ ಗೆಂಡ ತ್ರಿಕಟುಕ ಚೀರಿಗೆ ಹಿಂಗು ರೂಢಿವಡೆದ ಪಂಚಲವಣ (ಸಾಳ್ವಸಾಂ. ೧೦); ಅಗಳ ಶುಂಠಿ (ಹಾಡೆ) . . . ಇವು ತ್ರಿದೋಷನಾಶಕ (ಅಷ್ಟಾಂಗ. ೧೩೬-೭೦ ಟೀ). [< ಸಂ. ಪಾಠಾ]

ಹಾಡೆಲ (ನಾ). ಒಂದು ಬಗೆಯ ಸಸ್ಯ: "ಜ್ಯೋತ್ಸ್ನಿ, ಪಹೇಲಿಕಾ, ಜಾಲಿ – ಈ ೩ ಹಾಡೆಲ" (ನಾಟರಾ. ೧೧೦). [?]

ಹಾಡ್ಯ 'ಪಾಡಿ,' ನೋ.

ಹಾಣರ (ನಾ). ಒಂದು ಊರಿನ ಹೆಸರು; ಒಜಕೋಡಿನ ಉಗುರವಾಡಿಯ ಹಾಣರದ ತ್ರಿಸನ್ನಿ (ಇಆ. VIII, ೨೦೩-೨೯; 10ನೆಯ ಶತ).

ಹಾಣಾಹಣಿ 'ಹಣಾಹಣಿ' ನೋ.

ಹಾಣಾಹಾಣಿ 'ಹಣಾಹಣಿ' ನೋ.

ಹಾಣಾಹಾಣಿಕಾಱ (ನಾ). ಹಣಾಹಣಿ ಕಾಳಗವನ್ನು ಮಾಡುವವನು; ವೀರ: ಸಾಣಗಂಡಲಗಿವನು ಸಮರಕೆ ಹೂಣಿಗನು ರಿಪ್ಪೆಬಲದ ಹಾಣಾಹಾಣಿಕಾಱನು

ಕರ್ಣನಳುಕುವನಲ್ಲ ನಿನಗೆ (ಕುಮ್ಮಾ. ೧೬-೨೦).

[ಹಾಣಾಹಾಣಿ (< ಹಣಾಹಣಿ) + - ಕಾಱ]

ಹಾಣಿ (ನಾ). (?): ಹಾಣಿಯ ಮಿಣಿಯ ಕಡಿಯನು ನಾ'ದು' (ದ?)ವೋದ ಕೆಱಹನು ಬೂದಿವೋದ ಮೆಱಹನು ಒಣಗಿದೆಲುವನು ಆಯದುಕೊಂಡು ಒಡಲ ತುಂಬ ಬೂದಿಯೊಳಗೆ ಕೆಡೆದಿಪ್ಪ ಶ್ವಾನ ಬಲ್ಲುದೇ ಅಮೃತಾನ್ನಗಳಪ್ಪೆಡೆಯ (ಸರ್ವಜ್ಞ. ೧೭೬-೭೫೫). [?]

ಹಾತಕ (ನಾ). ಪಾಪ; ಪಾತಕ: ಹೊಸಹೊಸ ಸಿಂಗರಮಂ ಬಲ್ಲಿನ್ನಣದಿಂದೊಡರಿಸಿ ತೂಣನ ಗೆಲ್ಲೀ ಹಾತಕಮಂ ನಿಕ್ಕುವಮೆನೆ ಕೊಲ್ಲಮರ್ದುರುಳಿಯ ಪೋಲ್ವೆಳಗುಗ್ಗುಳಮಂ ಹಗ್ಗಿಯೊಳಿರಿಸಿ (ಉದ್ಧವ. ೬-೪೭). [< ಸಂ. ಪಾತಕ]

ಹಾತಕವಾಱು (ಕ್ರಿ). ಹೌಹಾರು (?): ಒದಱಿದವು ರಣವಾದ್ಯಚಯವಳ್ಳಿದೆಗೊಳಲ್ ಬ್ರಹ್ಮಾಂಡವೀಶನ ಹೃದಯ ಹಾತಕ [ಪಾಕಾಂ. ದ್ರವ] ವಾಱೆ ಹಮ್ಮದವೋಗೆ ಕಮಲಭವ (ಪೊರರಾ. ೬-೧೬-೧೩). 'ಹಾತವಾಱು' ಪರಾ. [?]

ಹಾತರುಮಾಲು (ನಾ). (ಉಕ) ಕೈಚೌಕ; ಕರವಸ್ತ್ರ: ಅವನ ಕೋಟಿನೊಳಗೇ ಇದ್ದ ಒಂದು ಮಾಟ ಹಾತರುಮಾಲದಿಂದ ಮಗುವಿನ ಮೂಗು ಒರೆಸಿದಳು (ಸಾಮಾ. ೪೭).

[<— ಮರಾ. ಹಾತ್‌ರುಮಾಲ್]

ಹಾತವಾಱು (ಕ್ರಿ). ಹಾತೊರೆ; ಉತ್ಕಂಠಿತವಾಗು: ಪಸಿದಿರ್ದ ಹಾಂಗ ಹಾತವಾಱುತಿರ್ದ ನೆಲನಪ್ಪಿದ ಕಡುಗಿಡ್ಡನಾಗಿ ಕುರ್ಗಿದ ಕುಂಡೋದರನನಂತಃ ಪುರಸ್ಕರೆಲ್ಲರ್ ಕಂಡು ಚೋದ್ಯಂಬಡುತ್ತಮಿರೆಯಿರೆ (ಹಾಲಾಸ್ಯ. ೧-೮-೨೨ ವ). 'ಹಾತಕವಾಱು' ಪರಾ. [?]

ಹಾತಾಳಿಸು (ಕ್ರಿ). ಹಸ್ತಕೌಶಲವನ್ನು ತೋರು, —ನಿರ್ವಹಿಸು: ಹೀಗೆ ಎತ್ತಿಕೊಂಡ ಸನ್ನಿವೇಶಗಳನ್ನು ಪ್ರಭಾವಿಯಾಗಿ ಹಾತಾಳಿಸುವ ಹಿಡಿತ. ಅವಶ್ಯವಾದ ಗತಿಪ್ರಜ್ಞೆ, ಪಾತ್ರದರ್ಶನ ಇವು ರುದ್ರಭಟ್ಟನಲ್ಲಿವೆ (ಕಶಾಟ. ೧೯೨).

[ಹಾತಾಳ್ಯ (P <— ಮರಾ. ಹಾತವಳಾ, ಹಾತೋಳ್) + - ಇಸ್ಸು]

ಹಾತುಕುಂಟಿ (ನಾ). ಕುಸ್ತಿಯ ಒಂದು ಪಟ್ಟು: ಎಂದು ಘಂಟೆಯು ಹಾತು ಕುಂಟಿಯು ನಿಂದೆ ಘಂಟೆಯು ಹಾತುಭಾಣುಗಳೊಂದಿದಿಕ್ಕತ ಭಾವು . . . ಚೇಣ ಪಟ್ಟುಸುವೆಂದನಿಪ ವಿಂದಾಣದಲಿ ಕಾದಿದರು ಜಟ್ಟಿಗಳು (ಸಾಳ್ವಭಾ ೨೨-೭೨). [?]

ಹಾತುಭಾಣು (ನಾ). ಕುಸ್ತಿಯ ಒಂದು ಪಟ್ಟು: ಎಂದು ಘಂಟೆಯು ಹಾತು ಕುಂಟಿಯು ನಿಂದೆ ಘಂಟೆಯು ಹಾತುಭಾಣುಗಳೊಂದಿದಿಕ್ಕತ ಭಾವು ಚೇಣ ಪಟ್ಟುಸುವೆಂದನಿಪ ವಿಂದಾಣದಲಿ ಕಾದಿದರು ಜಟ್ಟಿಗಳು (ಸಾಳ್ವಭಾ. ೨೨-೭೨). [?]

ಹಾತೆ 'ಪಾತ್ರೆ$_2$' ನೋ.

ಹಾತೆಹುಳು (ನಾ). ಪತಂಗ; ದೀಪದ ಹುಳು: ದೀಪದ ಬೆಳಕಿಗೆ ಹಾತೆಹುಳುವು ಬಂದು ಮೈ ಸುಟ್ಟುಕೊಂಡರೂ ಮತ್ತೂ ದೀಪವನ್ನು ಕೆಡಿಸಲು ನೋಡುವುದಿಲ್ಲವೆ? (ಶಾಂಭವಿ. ೫೬). [ಹಾತೆ (< ಪಾತ್ರೆ) + ಹುಳು (< ಪುಳು)]

ಹಾತೊರೆ (ಕ್ರಿ). ಆತುರ ಪಡು; ಕಾತರಿಸು; ಹಂಬಲಿಸು: ಉಗ್ರಕಾರ್ಯಕ್ರಮ ಕೈಗೊಳ್ಳಲು ಜನತೆ ಹಾತೊರೆಯುತ್ತಿತ್ತು (ಋಉಕಾ. ೧೧೧); ಹಳ್ಳಿಯ ಜೀವನಕ್ಕಾಗಿ ಹಾತೊರೆಯುವವರಲ್ಲಿ ನಾನೊಬ್ಬ (ಜೀ ವರಂ. ೪೭); ಪುನಃ ನಮ್ಮ ಪೂರ್ವಿಕರ ಪಂಥವನ್ನೇ ಹಿಡಿಯಲು ಹಾತೊರೆಯುತ್ತಿದ್ದೇವೆ (ರಾಮರಾ. ೪೨). [?]

ಹಾದಂಡ (ನಾ). = ಹಕಾರ ೨: ಹಾದಂಡಮಯ್ಯರೀ ಹಾಮಾದಂಡಮತ್ತಯ್ಯರಿಂ ಹಾಮಾದಿಗ್ಳೇದಂ ಕುಲಧರರಯ್ಯರಿನಾದುದು (ಜಾವುಂಪು. ೧೧); ಕ್ರಮದಯ್ಯರಿಂದೆ ಹಾದಂಡಮಯ್ಯರುಂ ಮನುಗಳಿಂದೆ ಹಾಮಾದಂಡಂ ಸಮನಿಸೆ (ಪಂಡಾಮಾ. ೧-೮೯).

[ಹಾ + ದಂಡ]

ಹಾದರ 'ಪಾರದಾರ' ನೋ.

ಹಾದರಗಿತ್ತಿ 'ಪಾದರಗಿತ್ತಿ' ನೋ.

ಹಾದರವಿದ್ದೆ (ನಾ). ಜಾರವಿದ್ಯೆ: ಮಧ್ಯರಾತ್ರಿಗೆ ಬರ್ಪನಕ ನಿದ್ದೆಗೆಯ್ವಂತೆ ಮಂದಿರದೊಳು ಹಾದರವಿದ್ದೆಯಂಗನೆಗಳೊಪ್ಪಿದರು (ಮೋಹತ. ೨೮-೨೯).

[ಹಾದರ (< ಪಾರದಾರ) + ವಿದ್ದೆ (< ವಿದ್ಯೆ$_2$)]

ಹಾದರಿ 'ಪಾದರಿ$_2$' ನೋ.

ಹಾದರಿಗ 'ಪಾದರಿಗ' ನೋ.

ಹಾದರಿಗಿತಿ (ನಾ). ಜಾರೆ; ವ್ಯಭಿಚಾರಿಣಿ: ಕಮ್ಮಱಿತಿ, ನಾವಿದಿತಿ, ಹಾದರಿಗಿತಿ (ಶಮದ. ನ. ೨೨೦ ಪ್ರಯೋ). [ಹಾದರಿಗ (< ಪಾದರಿಗ) + - ಇತಿ$_1$ (< - ಇತ್ತಿ)]

ಹಾದರಿವಾಗಲ್, ಹಾದರಿವಾಗಿಲು (ನಾ). ಒಂದು ಊರಿನ ಹೆಸರು (?): ಒಡ್ಡಕೋಡಿನ ಹಾದರಿವಾಗಿಲ ಕುಪ್ಪೆಯ ತ್ರಿಸ್ಸನ್ನಿ (ಇಆ. VIII, ೨೧೪-೩೮; 10ನೆಯ ಶತ). ಹಾದರಿವಾಗಿಲು: ಎಡತೊಟ್ಟನಾಡೊಳಗೆ . . . ಕೊಟ್ಟ ಹಾದರಿವಾಗಿಲು (ಮೈಆರ. ೧೯೪೫, ೧೮-೩೦; 13ನೆಯ ಶತ). [?]

ಹಾದರಿವಾಗಿಲು 'ಹಾದರಿವಾಗಿಲ್' ನೋ.

ಹಾದಾಟ 'ಪಾಯ್$_1$' ಪರಾ.

ಹಾದಾಡು 'ಪಾಯ್$_1$' ಪರಾ.

ಹಾದಿ 'ಪಾದಿ$_1$' ನೋ.

ಹಾದಿಕಾಯು (ಕ್ರಿ). (ಆಲಂ) ಎದುರು ನೋಡು; ದಾರಿಕಾಯು; ನಿರೀಕ್ಷಿಸು: ಬಂದರೆ ಬರಲಿ. ತುಸು ಹಾದಿಕಾದಾನು (ಹೂಸಕ್ಷ. ೧೭.೨).

[ಹಾದಿ (< ಪಾದಿ$_1$) + ಕಾಯು$_1$ (< ಕಾ$_1$)]

ಹಾದಿಕಾರ (ನಾ): ದಾರಿಹೋಕ; ಪ್ರಯಾಣಿಕ: ಹಳ್ಳಿಕಾರನಲ್ಲ ಹಾದಿಕಾರನಲ್ಲ (ನಾಪರ. ೩೮); ಬಡಹಾದಿಕಾರನ ವೇಷದಿಂದ ಮಧ್ಯಾಹ್ನ ಆ ವನಕ್ಕೆ ಬಂದನು (ಕಪಪು. ೭-೮). [ಹಾದಿ (< ಪಾದಿ$_1$) + - ಕಾರ$_1$ (< - ಕಾಱ)]

ಹಾದಿಗ (ನಾ). = ಹಾದಿಕಾರ: ಮೇದಿನಿಯ ಭಾರಾಪಹರಣವಿನೋದವಿದು ಮಾಯಾ ಪ್ರಪಂಚನ ಹಾದಿಗರಿಗಿದು ಸಿದ್ಧವೆಂದೇ ತೋಱಿಹುದೆಂದ (ತೂರರಾ. ೧-೪-೭೮); ಆದೇ ಹಾದಿಯ ಹಾದಿಗರಿಗೇ ಅವನು ಸರ್ವೋಚ್ಚ ಸನ್ಮಾನವನ್ನು ಕೊಡದೆ ಹೇಗೆಯೂ ಇರಲಾರನು (ನಬಂದ. I, ೨೧೬). [ಹಾದಿ (< ಪಾದಿ$_1$) + - ಗ$_2$]

ಹಾದಿಗೆಡು (ಕ್ರಿ). ೧. ದಾರಿ ತಪ್ಪು; ಮಾರ್ಗ ತಿಳಿಯದಾಗು: ಹಾದಿಗಟ್ಟು ತೊಟ್ಟಗೆ ನೆಗೆತರ್ಪ ನುಣ್ಣಾದಿರೂ ಪೇಟೆನೆ ನೋಟ್ಪರ ಕಣ್ಗೆ ಸುತ್ತಲುಂ ಸೊಗಯಿಸಿ ಮೇಲೆ ಮೇಲೆ ಕವಿತಂದುವು ಭೋಂಕನೆ ಪೂವಿನಂಬುಗಳ್ (ಕಬ್ಬಿಕಾ. ೩೦೬). ೨. ಕೆಟ್ಟಕ್ರಮವನ್ನು ಅನುಸರಿಸು; ನೀತಿಗೆಡು: ಮನೆಯನ್ನು ನಂಬಿಕೊಂಡು ಇರುವುದೇ ಆಕೆಗೆ ಬೇಕಿಲ್ಲ. ಹಾದಿಗೆಟ್ಟವಳು (ಕಮನ. ೩೯). [ಹಾದಿ (< ಪಾದಿ$_1$) + ಕೆಡು$_1$]

ಹಾದಿಗೊಳ್ (ಕ್ರಿ). ೧. ನಡೆಯಲು ಪ್ರಾರಂಭಿಸು; ಪ್ರಯಾಣಕ್ಕೆ ತೊಡಗು: ಮಣಮಂದಪುತ್ತೂರ್ಗ್ ಹಾದಿಗೊಂಡೊಮ್ಮೆಯುಂ ಪ್ರಣಯದಿಂದೆಡೆಯಾಡುವಾ ಜನದ ವೆರ್ಮೆಯುಂ (ಸಂಬರ ೫-೩೭); ಹಾದಿಗೊಂಡೆಡೆಯಾಡುವರ ಕರದಾ ದಸೆಗಳನು ನೋಡಿ (ನಭಾಗ. ೧೧-೧೫೫-೩). ೨. ಕ್ರಮವಾಗು; ಒರಣವಾಗು: 'ಹಾದಿಗೊಳಿಸು' ಪರಾ.

[ಹಾದಿ (< ಪಾದಿ$_1$) + ಕೊಳ್$_1$]

ಹಾದಿಗೊಳಿಸು (ಕ್ರಿ). ಕ್ರಮವಾಗಿಡು; ಒರಣಗೊಳಿಸು: ಹೊನ್ನ ಹರಿಯಾಣಂಗಳಂ ಹಾದಿಗೊಳಿಸುತಂ ರನ್ನದಡ್ಡಣಿಗೆಗಳ ಮೇಲೆ ತಂದಿರಿಸುತಂ (ಇಹರ. ದೇ. ೨೯-೧೯).

[ಹಾದಿಗೊಳ್ + - ಇಸ್ಸು]

ಹಾದಿಜಗಳ (ನಾ). ಎಲ್ಲರೆದುರಿಗೆ ಬೀದಿಯಲ್ಲಿ ನಡೆಯುವ ಜಗಳ; ಮುಚ್ಚುಮರೆಯಿಲ್ಲದ ಕಲಹ: ಹಾದಿಜಗಳ ಹಣವಡ್ಡ. ಬೀದಿಜಗಳ ಮುಪ್ಪಾಗ (ಗಾದ). [ಹಾದಿ (< ಪಾದಿ$_1$) + ಜಗಳ (< ಜಗಲ)]

ಹಾದಿತಪ್ಪು (ಕ್ರಿ). ೧. = ಹಾದಿಗೆಡು ೧: ಯಾಕೀ ಬಸಂತೀಬಾಯಿ ಈ ಹೊತ್ತು ಹಾದಿ ತಪ್ಪಿದಿರೇನು (ಮಜಪು. ೩೬); ತಾನು ಯಾವನೊ ಒಬ್ಬ ರಾಜಪುತ್ರ, ಹಾದಿತಪ್ಪಿ ಬಂದು ಹೊತ್ತು ಹೋಗಲಾರದೆ ಈ ಕೆಲಸ ಮಾಡುತ್ತಿದ್ದೇನೆ (ದೇಚ. ೬೨). ೨. = ಹಾದಿಗೆಡು ೨: ಹುಡುಗ ಹಾದಿ ತಪ್ಪಿದ್ದಾನೆ (ಗೂಢಿ). [ಹಾದಿ (< ಪಾದಿ$_1$) + ತಪ್ಪು$_1$]

ಹಾದಿದೆಗೆ (ಕ್ರಿ) ಪ್ರಯಾಣಕ್ಕೆ ತೊಡಗು; ಸಾಗು: ಮೇದಿನಿಯೊಳು ಖಾನ ಮೌನದೀಕ್ಷೆಯ ಕೊಂಡು ಹಾದಿವೆಗೆಡತನ್ನ ಪುರಕೆ (ಗಂಜವಿ. ೧೫-೧೨೫).

[ಹಾದಿ (< ಪಾದಿ$_1$) + ತೆಗ$_1$]

ಹಾದಿದೋರು (ಕ್ರಿ). ದಾರಿಯನ್ನು ಕಾಣಿಸು, ಮಾರ್ಗ ತೋರು: ಬದರಿಗ ಎದರ

ತಿಕ್ಕಿ ಉದುರಿತ್ತು ಕಿಡಿಬೆಂಕಿ ಹಾದಿದೋರಿದವು ದೀಪಾಗಿ (ಸಿದ್ಧಪ್ಪ. ೫-೫೯).

[ಹಾದಿ (< ಪಾದಿ) + ತೋರು (< ತೋಱು)]

ಹಾದಿನಡೆ (ಕ್ರಿ). = ಹಾದಿಗೊಳ್ ೧: ವಾದಿಯ ಸಂಗಡ ವಾದಿಸಲು ಸಲ್ಲ, ಕುಂಟನ ಸಂಗಡ ಹಾದಿನಡೆಯಲು ಸಲ್ಲ (ಗಾದ). [ಹಾದಿ (< ವಾದಿ) + ನಡೆ]

ಹಾದಿಸೋಡು (ಕ್ರಿ). (ಆಲಂ) ಎದುರು ನೋಡು; ಹಾದಿ ಕಾಯು: ಈಗ ಕತ್ತಲೆಯಾಯಿತು, ಅಮ್ಮ ಹಾದಿ ನೋಡುತ್ತಾಳೆ (ಮೂರುದಾ. ೪೮).

[ಹಾದಿ (< ವಾದಿ) + ನೋಡು]

ಹಾದಿಬಿಡಿಸು (ಕ್ರಿ). ೧. ಮುಂದೆ ಹೋಗಲು ಸಾಧ್ಯವಾಗುವಂತೆ ಜನರನ್ನು ಆ ಕಡೆ ಈ ಕಡೆ ಸರಿಸಿ ದಾರಿಮಾಡು: ಪೋಲೀಸರು ಬಂದು ಜನಸಂದಣಿ ಚದುರಿಸಿ ಹಾದಿ ಬಿಡಿಸಿದರು (ರೂಢಿ). ೨. ದಾರಿ ತಪ್ಪಿಸು; ಗುರಿ ತಪ್ಪಿಸು: ಅಹಂಗೀತವೇ ಎನ್ನನು ಕೆಡಿಸಿತು,ಎನ್ನ ಹಾದೀ ಬಿಡಿಸಿತು ದಿಟಸುಖದ ಮರೆಯಿಸಿ ಸಟೆಯಲ್ಲಿರಿಸಿತು (ಅಂತರಾ. ೧೭). [ಹಾದಿ (< ಪಾದಿ) + ಬಿಡಿಸು]

ಹಾದಿಸುದ್ದಿ (ನಾ). ಬೀದಿಯಲ್ಲೆಲ್ಲಾ ಹರಡಿರುವ ಸಮಾಚಾರ; ಗುಲ್ಲು: ಪೀಟರ್ಸ್‌ಬರ್ಗ್ ನಗರದಲ್ಲೆಲ್ಲಾ ಹಾದಿಸುದ್ದಿಯಾಗಿದ್ದ ಸೈಬೀರಿಯಾದ ಹೊಸ ಗೌರ್ನರ್ ಪ್ರಸಂಗದ ಬಗ್ಗೆ ಅವರು ಮಾತಾಡಿಕೊಳ್ಳುತ್ತಿದ್ದಿರಬೇಕೆಂದು ನೆಕ್ಲುದೋವ್ ಊಹಿಸಿದನು (ಪುನರು. ೬೭೭). [ಹಾದಿ (< ಪಾದಿ) + ಸುದ್ದಿ]

ಹಾದಿಹಿಡಿ (ಕ್ರಿ). ೧. ನಡೆ; ಹೋಗು: ನಾವಿಬ್ಬರೂ ಕುದುರೆ ಹತ್ತಿ ಹಾದಿ ಹಿಡಿದವು (ಸ್ವಪ್ನಿ. ೨೯); ಅಪ್ಪಣ್ಣಭಟ್ಟರ ಮನೆಯ ಹಾದಿ ಹಿಡಿದಳು (ಮೂರುದಾ. ೧೮೫). ೨. ದಾರಿಯನ್ನು ಅನುಸರಿಸು; ಹಿಂಬಾಲಿಸು: ವೇದ ಆಗಮವೇಕೆ ವಾದ ಓದುಗಳೇಕೆ ನಾದಬಿಂದುಗಳ ಭೃಮೆಯೇಕೆ ಶರಣರ ಹಾದಿ ಹಿಡಿದವಗೆ (ಸರ್ವಜ್ಞ. ೧೮೩). ೩. (ಒಳ್ಳೆಯ) ರೀತಿಯನ್ನು ಅನುಸರಿಸು: ಶ್ರೀಪಾದರಾಜರು ದ್ವೈತಮತಪ್ರಚಾರ ಮಾಡಲು ಅನುಕೂಲವಾದ ಹಾದಿಹಿಡಿದು ಭಾಗವತರ ತಂಡವೊಂದನ್ನು ತಯಾರುಮಾಡಿದರು (ಜಗಬಾ. ೮೧); ನನ್ನ ಮುಂದಿನ ಪೀಳಿಗೆಯಾದರೂ ಹಾದಿಹಿಡಿಯಲಿ (ಹಳ್ಳಿಸಾ. ೭೩). [ಹಾದಿ (< ಪಾದಿ) + ಹಿಡಿ (< ಪಿಡಿ)]

ಹಾದಿಹೋಕ (ನಾ). =, ಹಾದಿಕಾರ: ನಮ್ಮ ನಿಮ್ಮಂಥ ಹಾದಿಹೋಕಮಂದಿ ಬೆರಗಾಗುವುದು ಅಪರಾಧವಾಗಲಿಕ್ಕಿಲ್ಲ, (ಮೂಸಾದ. ೪೧); ಹಾದಿಯಲ್ಲಿ ಎರಡು ಮೂರು ಸಲ ಎಡವಿದನು; ಹಾದಿಹೋಕರಿಗೆ ಕೈ ತಾಕಿಸಿದನು (ಕನಕ. ೮೯).

[ಹಾದಿ (< ಪಾದಿ) + ಹೋಕ (< ಪೋಕ)]

ಹಾನ$_1$ (ನಾ). ಬಿಡುವಿಕೆ; ತ್ಯಾಗ: ಧನಸೇವೆಯಿಂದೆ ನೆರವಪ್ಪರ್ ನಂಟರೆಂದಂದು ತಾಂ ಮರುಳಕ್ಕುಂ ಪುರುಳಕ್ಕುಮೇ ಮಱೆದು ಹಾನಾದಾನವಿಜ್ಞಾನಮಂ (ಪಂಡಿತಾಮೂ. ೬-೬೭). [ಸಂ.]

ಹಾನ$_2$ (ನಾ). (?): ಕಂಪಿನ ಗಂಧ ಅಕ್ಷತ . . . ಕಂಪಿನ ಹಾನ ಕರಿಯ ಹಾನ ಇವಂ ಮಂತ್ರಸಹಿತವಾಗಿ ಮೂಱುದಿನ ಹೆಚ್ಚಟ್ಟೆಯಲ್ಲಿ ಬಲಿಯಂ ಕೊಡುವುದು (ಬಾಲಬೃ. ೧೩೨-೧೦); ಅರಕೆಲೆಯ ಬಡಗಣ ಹಾನ ಹಾದರಿಯ ಹಕ್ಕಲು (ಎಕ. VII, ಶಿವಮೊ. ೧೨೪-೬; ?). [?]

ಹಾನಂಜಿಮರ (ನಾ). ಒಂದು ಬಗೆಯ ಮರ: ಕುರುಡನ ವೋಣಿಯ ಕಳಿದು ಹಾನಂಜಿಮರದ ಬಳಿಯ ನೆಟ್ಟು ಕಲ್ಲು (ಎಕ. XIV, ಮೈಸೂರು. ೧೧೬-೫೫; 1664).

[ಹಾನಂಜಿ + ಮರ]

ಹಾನಂಬಿ, ಹಾನಬಿ (ನಾ). (?): ಗದ್ದೆಯ ಹಾನಂಬಿಯ ತೆವರ ಮೇಲಣ ನೇಲೋಲ ಮರನ ವೊತ್ತಿನಲು (ಎಕ. VIII, ತೀರ್ಥಹ. ೧೨೯-೪೯; 1404). **ಹಾನಬಿ**: ಅಡಕೆತೋಟದ ವೊತ್ತಿನಲು ಹಾನಬಿಯ ತೆವರ ಮೇಲೆ (ಎಕ. VIII, ತೀರ್ಥಹ. ೨೧೮-೨೫; 1415). [?]

ಹಾನಬಿ 'ಹಾನಂಬಿ' ನೋ.

ಹಾನಿ$_1$ (ನಾ). ಒಂದು ಅಳತೆಯ ಪ್ರಮಾಣ: ಕೋಟೇಶ್ವರದೇವರ ನಂವೇದ್ಯಕೆ ದಿನ ಒಂದಕ್ಕಂ ಅಕ್ಕಿ ನಾಡ ಹಾನಿ ಮೂಜಿ ಲೆಕ್ಕದಲು ತುಪ್ಪ ಸೂಳಸಿ (ಸೌಕಾ. IX-ii, ೪೧೭-೨೫; 1377); ಅದಕ್ಕಂಗಡಿ ಭತ್ತ ೩೭ ಹಾನಿ ವಾಸಿ ೩ ೧ (ಎಕ. VI, ಕೊಪ್ಪ. ೪೭-೧೯; 1530). 'ಹಾನೆ' ಪರಾ. [< ಪಾನಿ]

ಹಾನಿ$_2$ (ನಾ). ೧. ಕೇಡು; ನಾಶ: ಅತಿ ಕಾಮರ್ಗತಿ ಹಾನಿಯ್ಕೆ (ಸೋಮೇಶ. ೬೯); ಬಂದು ಕರ್ಣನ ಹಾನಿ ಕೌರವ್ಯಂದವನು ವೇಧ್ಯಸಿತೇ (ಕುವ್ಯಾಶ. ೧-೯). ೨. ಕುಂದು; ಕೊರತೆ: ಪ್ರಾಣ ಕೊಡುವ ತೆಗೆಯುವ ಅವಶ್ಯಕತೆಯಲ್ಲದಿದ್ದರೂ, ಕೊಡಬೇಕಾದರೆ ತೆಗೆದುಕೊಳ್ಳಬೇಕಾದರೆ ಹಾನಿಯೇನು (ಬಾಣಾ. ೬೭). ೩. ನಷ್ಟ: ಮೋನವತ್ತಲು ರಭಸವತ್ತಲು ಹಾನಿಯಿತ್ತಲು ವೃದ್ಧಿಯತ್ತಲು ಭೂಪ ಕೇಳೆಂದ (ಕುವ್ಯಾದ್ಯೂ. ೪-೧). ೪. ಕ್ಷಯ; ಕ್ಷೀಣಿಸುವಿಕೆ: ಹಾನಿಯುಂ ವೃದ್ಧಿಯುಮದು ನಿಜಮಂಭೋಧಿಗಂಬರ್ (ಎಸಾ. XIII, ೧೯-೧೭; 1204).

ಹಾನಿಮಾಡು = ನಷ್ಟವಾಗಿಸು; ಹಾಳುಮಾಡಿಕೊಳ್ಳು: ಮಾನವಜನ್ಮ ದೊಡ್ಡದು ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ (ಪುರಂದ. ೧-೧೪ ಪಲ್ಲವಿ). **ಹಾನಿವೃದ್ಧಿ** = ನಷ್ಟ ಮತ್ತು ಏಳಿಗೆ; ಲಾಭಾಲಾಭ: ಎನ್ನ ಹಾನಿವೃದ್ಧಿ ನಿಮ್ಮದಯ್ಯಾ (ಬಸವ. ೬೦); ಎನ್ನ ಹಾನಿವೃದ್ಧಿಗಳೆಲ್ಲ ಪ್ರಸಾದವಯ್ಯ (ಅಖಂಡೇ. ೧೪೬-೬೯). [ಸಂ.]

ಹಾನಿಕರ (ನಾ). ಕೇಡನ್ನುಂಟುಮಾಡುವಂತಹುದು; ಅಪಾಯಕರವಾದದು: ಸಿಗರೇಟುಸೇವನ ಆರೋಗ್ಯಕ್ಕೆ ಹಾನಿಕರ (ರೂಢಿ). [ಸಂ.]

ಹಾನುಂಗಲ್ 'ಪಾನುಂಗಲ್' ನೋ.

ಹಾನುಂಗಲು 'ಪಾನುಂಗಲ್' ನೋ.

ಹಾನುಗಲ್ 'ಪಾನುಂಗಲ್' ನೋ.

ಹಾನುಗಲ್ಲು 'ಪಾನುಂಗಲ್' ನೋ.

ಹಾನೆ 'ಪಾನೆ' ನೋ.

ಹಾಮಚ (ನಾ). ಒಂದು ಬಗೆಯ ಬಳ್ಳಿ: "ವಿಷ್ಣುಕ್ರೀನಟ್ರಿಯಾ, ಫೈಷ್ಣಿ, ವಾರಾಹೀ, ಬದರಾ -- ೪ ಹಾಮಚೀಬಳ್ಳಿ" (ಸಿದ್ಧಾಂತಿ. ೧೪೬). [?]

ಹಾಮಾದಂಡ (ನಾ). [ಜೈನ] ಹಾ ಮತ್ತು ಮಾ ಎಂಬ ಶಬ್ದಗಳ ಉಚ್ಚಾರದಿಂದ ಕೊಡುತ್ತಿದ್ದ ಶಿಕ್ಷೆ; ಒಂದು ಬಗೆಯ ವಾಗ್ದಂಡ; IP ಎರಡನೆಯ ಐದು ಮನುಗಳು ಪ್ರಜೆಗಳನ್ನು ಅಪರಾಧಗಳಿಂದ ಪರಾವೃತ್ತಗೊಳಿಸುತ್ತಿದ್ದ ಶಬ್ದೋಚ್ಚಾರ: ಹಾದಂಡಮಯ್ಯರಿಂ ಹಾಮಾದಂಡ ಮತ್ತಯ್ಯರಿಂ ಹಾಮಾದಿಗ್ಗೇದಂ ಕುಲಧರರಯ್ವರಿನಾದುದು (ಚಾವುಂಪು. ೧೧). [ಹಾ + ಮ್ಮಾ + ದಂಡ]

ಹಾಮಾಧಿಕ್ಕಾರದಂಡ (ನಾ). = ಹಾಮಾದಂಡ: ಈ ಮಾಟ್ಕೆಯೊಳಿಸಗದರಂ ಹಾಮಾಧಿಕ್ಕಾರದಂಡದಿಂ ದಂಡಿಪುದು (ಆದಿಪು ೩-೭೪); ಮತ್ತಮಯ್ಯರ್ ಮನುಗಳು ಹಾಮಾಧಿಕ್ಕಾರದಂಡಮಂ ಮಾಡಿದರು (ಚಾವುಂಪು. ೧೧).

[ಹಾ + ಮ್ಮಾ + ಧಿಕ್ಕಾರ + ದಂಡ]

ಹಾಮೆಕ್ಕೆ 'ಪಾವುಮಕ್ಕೆ' ನೋ.

ಹಾಯ್$_1$ 'ಪಾಯ್' ನೋ.

ಹಾಯ್$_2$ 'ಪಾಯ್' ನೋ.

ಹಾಯ್$_3$, **ಹಾಯ್**$_2$ (ಗು). ೧. (ಊಟ, ನಿದ್ದೆ, ಸ್ಥಳ ಮುಂತಾದುವುಗಳಲ್ಲಿ) ಆಹ್ಲಾದಕರವಾದ; ಸಂತೋಷಕರವಾದ: (೬). **ಹಾಯ್**$_2$: (ನಾ). ೨. ಸಮಾಧಾನ; ನೆಮ್ಮದಿ; ಸೌಖ್ಯ: ನನಗಿನ್ನೆಲ್ಲಿ ವಿಶ್ರಾಂತಿ, ಮನಸ್ಸಿಗಿನ್ನೆಲ್ಲಿಯ ಹಾಯ ? (ಚಿತಂಬಾ. ೨೪); ಎಂದು ಜೀವಕ್ಕೆ ಹಾಯು ಬರುವುದೋ ಎಂದು ತಲೆಯ ಮೇಲೆ ಕೈಯಿಟ್ಟು ಕುಳಿತುಬಿಡುವನು (ಮುರುಕು. ೭೪).

ಹಾಯಗೊಳ್ಳು = ಸಮಾಧಾನವನ್ನು ಪಡೆ; ನೆಮ್ಮದಿಯನ್ನು ಹೊಂದು: ತಾಯಿಯ ನನಪಿಲ್ಲ, ಮಾಯದ ತೊಡಕಿಲ್ಲ ಹಾಯಗೊಂಡಿತು ಮೈ ಮನ (ಸಿದ್ಧಪ್ಪ. ೪-೧). **ಹಾಯಾಗಿರು** = ನೆಮ್ಮದಿಯಿಂದಿರು; ಸೌಖ್ಯವಾಗಿರು: ಗುತ್ತಿಗೆ ತೆಗೆದುಕೊಂಡು ಹಾಯಾಗಿರಬಹುದು (ಪುನರು. ೨೬೯). **ಹಾಯಾಗು** = ನೆಮ್ಮದಿಯಾಗು; ಹಿತವೆನಿಸು: ನಾನು ಈಗ ಹಾಯಾಗಿ ಬೆಂಡಿನಂತೆ ತೇಲಿಕೊಂಡಿದ್ದೇನೆ (ಬಂಚಮ. ೩೩೦); ಆ ಚಿಂತೆಯನ್ನು ಬಿಟ್ಟು ಹಾಯಾಗಿ ಒಂದು ಳಿಗೆ ವಿಶ್ರಾಂತಿ ತೆಗೆದುಕೊಳ್ಳಿ (ಚಿತಂಬಾ. ೨೪).

[ದೇ. ‖ ತೆಲು. ಹಾಯಿ]

ಹಾಯಗಡು 'ಹಾಯ್ಗಡ' ನೋ.

ಹಾಯನ (ನಾ). ೧. ವರ್ಷ; ಸಂವತ್ಸರ: " ಹಾಯನಃ, ಅಬ್ದಃ . . . ಸಮಃ — ಈ

೬ ವರ್ಷ೦'' (ಹಲಾಯು. ೨೦-೧೧೬); ಬಳಿಸೂನು ಸಹಸ್ರಭುಜಾಬಳಿಗರ್ವದ ಷಷ್ಟಿ ಹಾಯನಂ ತುಂಗಗಜಂ ಕಳಭಕ್ಕಿದಿರ್ಚದಂತಿರೆ ಮುಳಿದು ಕುಮಾರಂಗಿದಿರ್ಚಿ ನಿಂದು (ಜಗಪ. ೧೭-೧೩೦); ಋಷಿಗಳಿತ್ತ ಶಾಪದೊಳು ದಶಹಾಯನಂ ಪೂರ್ಯಿಸಲಿಲ್ಲ (ರಾಘಚ. ೧-೩೦). ೨. ಕಿರಣ; ರಶ್ಮಿ ೩. ಒಂದು ಬಗೆಯ ಕೆಂಪು ಅಕ್ಕಿ. [ಸಂ.]

ಹಾಯ್₁ 'ಪಾಯ್₂' ನೋ.

ಹಾಯ್₂ 'ಹಾಯ್₃' ನೋ.

ಹಾಯಿಕಿಸು 'ಹಾಯ್ಕಿಸು' ನೋ.

ಹಾಯಿಕು 'ಪಾಯ್ಕು₁' ನೋ.

ಹಾಯಿಕ್ಕು 'ಪಾಯ್ಕು₁' ನೋ.

ಹಾಯಿಗಡ 'ಹಾಯ್ಗಡ' ನೋ.

ಹಾಯಿಗೊಳ್ (ಕ್ರಿ). ಸಂತೃಪ್ತಿಯನ್ನು ಹೊಂದು; ಹಾಯಾಗಿರು: ಅಂಬಾಡಿಯ ವೀಳ್ಯದೆಲೆಗಳಿಂದ ಕಟ್ಟಿರುವ ಅರವಟಿಗೆಗಳೊಳ್ ಹಾಯಿಗೊಂಡು (ಸಾಗಂಧಿ. ೧೮೦ - ೧೧).

[ಹಾಯ್₂ (< ಹಾಯ್₃) + ಕೊಳ್₁]

ಹಾಯಿಚಲ (ನಾ). ಗಾಳಿಯ ಒತ್ತಡಕ್ಕಾಗಿ ದೋಣಿಯ ನಡುಗಂಬಕ್ಕೆ ಕಟ್ಟುವ ಪಟ; ನೌಕಾಪಟ: ಮುಕ್ಕಿಮೊರೆವ ತೆರೆರಕ್ಕರೌದ್ರದಲಿ ಅಗೋ ಚುಕ್ಕೆ ಚುಕ್ಕಾಣಿ ದಯೆ; ಬಿಟ್ಟು ಹಾಯಿಚಲ ಅನುಕೂಲಾನಿಲ ಆಚೆ ಸುಧೆಯುಗುವ ಕಿನಾರೆಗೆ (ನಡಬಂ. ೬-೧).

[ಹಾಯ್₁ (< ಪಾಯ್₂) + ಚಲ್₂]

ಹಾಯಿದೋಣಿ (ನಾ). ಹಾಯಿಪಟವನ್ನೊಳಗೊಂಡ ದೋಣಿ; ನೌಕಾಪಟವನ್ನು ಕಟ್ಟಿದ ನಾವೆ: ದಾಟಿಕೊಂಡು ಹೋಗಲು ಹಾಯಿದೋಣಿ ಇರಲಿಲ್ಲ (ಸಬಾಧ. II, ೧೨೯); ಬೆಳಕು ಕಡಲಲಿ ಹಾಯಿದೋಣಿಯಲ್ಲಿ ಮಾರಿಬಲೆ ಬಿದ್ದಿತ್ತು (ಹೂಸಕ್ತಿ. ೫೭).

[ಹಾಯ್₁ (< ಪಾಯ್₂) + ದೋಣಿ]

ಹಾಯಿಪಟ (ನಾ). = ಹಾಯಿಚಲ: ಅವರು ನಾವೆಯ ಹಾಯಿಪಟಗಳನ್ನು ಬಿಡಿಸಿದರು (ಹಾಹುತ್ತ. ೨೫). [ಹಾಯಿ₁ (< ಪಾಯ್₂) + ಪಟ]

ಹಾಯಿಸು 'ಪಾಯಿಸು' ನೋ.

ಹಾಯಿಹಡಗು (ನಾ). ಪಟವನ್ನು ಕಟ್ಟಿ ನಡೆಸುವ ಹಡಗು; ನೌಕಾಪಟವನ್ನುಳ್ಳ ಹಡಗು: ''ಹಾಯಿಹಡಗು!'' (Sailing Ship. ಪತ್ರಿ. ೭೫).

[ಹಾಯಿ₁ (< ಪಾಯ್₂) + ಹಡಗು (< ಪಡಂಗು)]

ಹಾಯು 'ಪಾಯ್₁' ನೋ.

ಹಾಯೆನಿಸು (ಕ್ರಿ). ಸಮಾಧಾನವಾಗು; ನೆಮ್ಮದಿಯಾಗು: ತನ್ನ ಕಂದಮ್ಮನನ್ನು ಎತ್ತಿಕೊಂಡು ಎದೆಹಾಲುಣಿಸಿದಳು . . . ಸ್ವಲ್ಪ ಹಾಯೆನಿಸಿತು (ನೂರಜ. ೭); ಬೆನ್ನ ಮೇಲೆ ನಾಲ್ಕು ತಂಬಿಗೆ ಬಿಸಿನೀರು ಹಾಕಿಸಿಕೋ. ಹಾಯೆನಿಸಬಹುದು (ಮೂಯದಾ. ೧೭).

[ಹಾಯ್₂ + ಎನಿಸು₁]

ಹಾಯ್ಕಿಸು, ಹಾಕಿಸು, ಹಾಯಿಕಿಸು (ಕ್ರಿ). ೧. ಹಾಕುವಂತೆ ಮಾಡು: ಅಟ್ಟಿಯಂ ಹೊಱಗೆಳೆದು ಹಾಯ್ಕಿಸಲು (ಚಪಪು. ೨೮-೨೮); ತುಱುಗೆವಗಣ್ಣ ನೀರಿಂಗೆ ಹರಿಂಗೋಲ ಹಾಯ್ಕಿಸಬೇಡೆಂದು ಪೊಂಬಟ್ಟೆ ಸೆಱಗಿನಿಂ ತೊಡೆದ ಲೋಚನವ (ಮೋಹಪ. ೪-೮೭). **ಹಾಕಿಸು**: ೧. ಅದಕ್ಕೆ ಕಜ್ಜಾಯಮಂ ತರಿಸಿ ಹಾಕಿಸಿ (ಪೂರ್ವಪು. ೬೨). ೨. ಮಾಡಿಸು; ನಿರ್ಮಾಣಗೊಳಿಸು: ಹವಳದ ನೆಗಾರ ಸೆಟಗಳಿಗೆ ಹಾಕಿಸ್ತ ಶಿಲಾಶಾಸನ (ಎಕ. X (S), ಕೋಲಾರ. ೨೭೪-೪; 1573); ಕೆಜೆಯ ಕಟ್ಟಿಸು ಮತ್ತೆ ಪೂದೋಟ ಹಾಕಿಸು (ಪುರಂದ. ೨-೯೧-೪); ತಿಮ್ಮಿ ತಾನು ದೇವರಿಗೆ ಮಾತಿನ ಮಂಟಪವನ್ನು ಹಾಕಿಸುವೆನೆಂದು ಯಾರ ಬಳಿಯಲ್ಲಿಯೂ ಹೇಳದಿದ್ದರೂ. . . ಕೇಳಿದಳು (ಜೀವರಂ. ೫೫). **ಹಾಯಿಕಿಸು**: ೨. ಲೋಕನಾಯಿಕ ಹಾಯಿಕಿಸಿದ ವೀರಗಲ್ಲು (ಕಾ. I, ೪೦-೧೧; 1415).

[ಹಾಯ್ಕು (< ಪಾಯ್ಕು₁) + - ಇಸ್₂]

ಹಾಯ್ಕು 'ಪಾಯ್ಕು₁' ನೋ.

ಹಾಯ್ಗಡ, ಹಾಯಗಡು, ಹಾಯಿಗಡ (ನಾ). ಹೊಳೆಯನ್ನು ಸುರಕ್ಷಿತವಾಗಿ ದಾಟುವ ಸ್ಥಳ; ಕಡವು: ಕಟ್ಟು ತನ್ನ ಗುಂಪಿನವರೊಡನೆ ಹಾಯ್ಗಡದ ಸಮೀಪ ಹೋದನು (ಕಪಪು. ೬-೭೯); ಅಲ್ಲಿನ ಹಾಯ್ಗಡದಲ್ಲಿ ಪಾರೋಡನ್ನು ಏರಿ ಶ್ರೀರಂಗನ ನಡುಗಡ್ಡೆಯನ್ನು ಮುಟ್ಟಬೇಕಾಗಿತ್ತು (ಸಮತ. ೧೨೬). **ಹಾಯಗಡು**: ಅದನ್ನು ದಾಟುವುದಕ್ಕೆ ದಾರಿಯಾದ ಹಾಯಗಡು ಸಿಕ್ಕಲಿಲ್ಲ (ಕಾಂಪೂಚ. ೪೬); ಎಲ್ಲಾ ಅಪ್ಸರೆಯರೂ ನದಿಗೆ ನಡೆಯಿರಿ, ಹಾಯಗಡುವಿಗೆ ಹಾರಿ ನಡೆಯಿರಿ (ಭಾರದ. ೨೮). **ಹಾಯಿಗಡ**: ''ಹೊಳೆ ಹಾಯುವ ಸ್ಥಳ ಹಾಯಿಗಡ ಕಡವು'' (Drift. ಇಂಕನ)

[ಹಾಯ್₁ (< ಪಾಯ್₁) + ಕಡ್₂ (< ಕಡಹು₂)]

ಹಾಯ್ದಾಡು 'ಪಾಯ್₁' ಪರಾ.

ಹಾಯ್ಲುಳಿ, ಹಾಯ್ಲೂಳಿ (ನಾ). (ಕರಾ) ಒಂದು ಭೂತದ ಹೆಸರು: ಅದು ಇಸಗಾಳಿ ಉಪದ್ರ ಎಂತ ಗೊತ್ತಾಯಿತು . . . ಇಸಗಾಳಿ ಅಂದರೆ ಹಾಯ್ಲುಳಿ, ಗೀಯ್ಲುಳಿ ಭೂತ ಅನ್ನುತ್ತಾರಲ್ಲ! (ಮೂಕಜ್ಜಿ. ೩೭೩). **ಹಾಯ್ಲೂಳಿ**: ಪಂಜುರ್ಲಿ, ಹಾಯ್ಲೂಳಿ, ಬೊಬ್ಬರ್ಯ, ಜಟ್ಟಿಗ . . . ಎತ್ತಿ ಹೊರಟವೆ ಕರಿಪತಾಕೆ ಹಾಕುತ ಕೇಕೆ (ಚಂಡಮ. ೩೦-೫೫). [?]

ಹಾಯ್ಲೂಳಿ 'ಹಾಯ್ಲುಳಿ' ನೋ.

ಹಾಯ್ಸು 'ಪಾಯಿಸು' ನೋ.

ಹಾರ₁ (ನಾ). ಬಲಿ; ಆಹಾರ: ತಗೆದಪ್ಪಿ ತೂಪಿಲ್ಲಿದು ಹಾರವ ನಿವಾಳಿಸಿ ಹಾಯ್ಕು ಬಾಯ ತಂಬುಲವಿಟ್ಟು ಮುದ್ದಿಸಿದಳು (ಸಂದಿಮಾ. ೧೩-೪೬); ''ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು'', ಹಾರ ಕೊಡಬೇಕಂತ ಮಾತಾತು ಮನೆಯಾಗ (ಕನ್ನಬಾ. ೭೯); ದೆವ್ವದ ತೃಪ್ತಿಗಾಗಿ 'ಹಾರ' ದ ಮೇಲೆ 'ಹಾರ' ಸಂಹಾರವಾಯಿತು. ಗುಡಿಯ ಮುಂದಿನ ಅಂಗಳದಲ್ಲಿ ಕೋಳಿಯ ರುಂಡಗಳು ಚಂಡಾಡಿದುವು (ಕುಡಿಕೂ. ೭೭).

[< ಸಂ. ಆಹಾರ./ ತುಳು. ಹಾರ]

ಹಾರ₂ (ನಾ). ೧. ಕೊರಳಲ್ಲಿ ಧರಿಸುವ ಹೂವಿನ ಅಥವಾ ಮುತ್ತು, ರತ್ನಗಳ ಮಾಲೆ, — ಸರ: ಹಾರಂಗಳುಮಂ ಪೆಜವುಂ ಪ್ರತ್ಯಂಗೋಚಿತಾತ್ಯಂಗಮಣಿವಿಭೂಷಣಂಗಳುಮಂ . . . ಪಡೆದು (ಆಚಪು. ೮-೫೪ ವ); ನುಡಿದರೆ ಮುತ್ತಿನ ಹಾರದಂತಿರಬೇಕು (ಬಸವ. ೮೦೨); ಕೈಯಲ್ಲಿ ಒಂದು ದೊಡ್ಡ ಹೂವಿನ ಹಾರ ಹಿಡಿದುಕೊಂಡು, ರಂಗದ ಮೇಲೆ ನೆಗೆದು ಬಂದ (ದೀಪಹ. II, ೬೯೯). ೨. ಮನೋಹರವಾದುದು; ರಮಣೀಯವಾದುದು: ಮೂಱುಲೋಕದ ಚೆಲ್ವೆಲ್ಲಮುಂ ವಿಧಾತ್ರನೊಂದಡೆಗೆ ತರಳ್ಚಿ ದಂತೆ ಸಮಸ್ತವಸ್ತುವಿಸ್ತಾರಹಾರಮಾಗಿರ್ದ ಹಸ್ತಿನಪುರವೆ ನಿಜವಂಶಾವಳಂಬಮಾಗೆ (ಪಂಪಭಾ. ೧-೫೮ ವ). ೩. ಅಪಹಾರ; ಕಳವು. ೪. ಯುದ್ಧ; ಕದನ. ೫. ನಷ್ಟ; ಹಾನಿ. ೬. [ಗಣಿತ] ಭಿನ್ನರಾಶಿಯಲ್ಲಿ ಅಡ್ಡಗೆರೆಯ ಕೆಳಗಿನ ಅಂಕಿ; ಛೇದ: (Denominator. ಪಾಣಿ. ೨೮). [ಸಂ.]

ಹಾರ₃ (ನಾ). ೧. ಗಾಡಿ; ಬಂಡಿ: ಅಚ್ಚು ಮುರಿದ ಹಾರಕ್ಕೆ ಎತ್ತಿನ ಹಂಗಿಲ್ಲವೆಂದ (ಮೋಹಮಾ. ೪೫-೧೪೭). ೨. ಹಗುರ; ಆರಾಮ: ಕಲಿತರು ನಿಮ್ಮ ಪೂರ್ವನ್ಯಪಾಲಕರು ಸರಹಸ್ಯಸಾಂಗೋಪಾಂಗವಿದ್ಯೆಗಳ . . . ಲಘುಪಾಳಿಯಲಿ ಹಾರದಲಿ ವಿವಿಧಾನುಪ್ರಯೋಗದಲಿ (ಕುವಾಆ. ೭-೧); ನಾಲ್ಕುಕೊಡ ನೀರನ್ನಾದರೂ ಹೊತ್ತು ಹಾಕಿದರೆ ಸೊಪ್ಪ ತಂದು ಕೊರೆದರೆ ಮೈಗೆ ಎಷ್ಟೋ ಹಾರ (ಪಳುಮ. ೧೬೯). [?]

ಹಾರಂಗಿ₁ (ನಾ). ಯುದ್ಧದಲ್ಲಿ ಬಳಸುವ ಒಂದು ಸಾಧನ: ಕೊಡಲಿ ಗೂಟಂ ಹಾರೆ ಹಾರಂಗಿ ಕೈಪಿಡಿದಾ ತಾಮ್ರಸಭಾಂಡಮೆಂಬವಿನಿತುಂ ದಂಡಿಂಗ ಸಾಮಗ್ರಿಗಳ್ (ಸೂಕ್ತಿಸು. ೮-೨೬). [?]

ಹಾರಂಗಿ₂ (ನಾ). ಒಂದು ನದಿಯ ಹೆಸರು: ಕರಿಹೊಳೆ ಕಪಿಲೆಯು . . . ಹಾರಂಗಿ ಶರಾವತಿ ಶರಯು ಬಂದಿಹರು (ಸಿದ್ಧಪು. ೯-೪೨). [?]

ಹಾರಂಗೊಡು (ಕ್ರಿ). ನಿವೇದನೆ ಮಾಡು; ಸಮರ್ಪಿಸು: ಎರಡು ಪರ್ವ್ವದೊಳಂ ಪಟ್ಟಂಗಟ್ಟಿದೇವೆಯನ್ನು ಪಣಮಂ ಕೆಲೆಗೆ ಹಾರಂಗೊಟ್ಟರ್ (ಎಕ. X, ಚಂತಾಮ. ೬೪(೨) -೩; 955). [ಹಾರ₁ + ಕೊಡು₁]

ಹಾರಕ 'ಪಾರಕು' ನೋ.

ಹಾರಕಟ್ಟಿಗೆ 'ಪಾರುಗಟ್ಟಿಗೆ' ನೋ.

ಹಾರಕು 'ಪಾರಕು' ನೋ.

ಹಾರಕ್ಕಿ 'ಪಾರಕು' ನೋ.

ಹಾರಕ್ಕು 'ಪಾರಕು' ನೋ.

ಹಾರಗಟ್ಟಿಗೆ 'ಪಾರುಗಟ್ಟಿಗೆ' ನೋ.

ಹಾರಗಾಲು 'ಹಾರುಗಾಲು' ನೋ.

ಹಾರಣ (ನಾ). ವ್ರತೋಪವಾಸದ ಮಾರನೆಯ ದಿನ ಮಾಡುವ ಊಟ; ಪಾರಣೆ: ಧಾರಣ ಹಾರಣ ವ್ರತದೊಳಿಂತೊಡಲಂ [ಜದ] ಮಾಡಿ ನೈಷ್ಠಿಕಾಯಾತದೊಳೊಪ್ಪಿ ಕೂಡಿ (ಸೌಂದಾ. XI-i, ೯೭-೩.೨; 1062). 'ಬಾರಣೆ' ಪರಾ. [< ಸಂ. ಪಾರಣ]

ಹಾರಣಿ 'ಪಾರಣ್ಣ$_3$' ನೋ.

ಹಾರಣೆ 'ಪಾರಣ್ಣ$_3$' ನೋ.

ಹಾರಬಂಧ(ನಾ). [ಕಾವ್ಯಮೀ] ಚಿತ್ರಕವಿತ್ವದಲ್ಲಿ ಒಂದು ಬಗೆ; ಹಾರದ ಆಕೃತಿಗೆ ಹೊಂದುವಂತೆ ರಚಿಸಿದ ಪದ್ಯಬಂಧ — ಕವಿತೆ: ಶಬ್ದವ್ಯಚಿತ್ರ್ಯಕ್ಕೆ ಚಿತ್ರಕವಿತ್ವವೆಂದೂ 'ಬಂಧ' ವೆಂದೂ ಹೆಸರು . . . ಇವುಗಳಲ್ಲಿ ನಿರೋಷ್ಠ, ಅತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ಹಾರಬಂಧ, ಮುರಜಬಂಧ ಮುಂತಾದ ನಾನಾವಿಧಗಳುಂಟು (ಕೈಪಡಿ. ೨೫೪). [ಸಂ.]

ಹಾರಬೆಕ್ಕು (ನಾ). ಒಂದು ಬಗೆಯ ಬೆಕ್ಕು: ಕಬ್ಬೆಕ್ಕು, ಹಾರಬೆಕ್ಕು, ಪುಣಗಿನ ಬೆಕ್ಕು . . . ಕುರ್ಕ ಮುಂತಾದ ಇತರ ಪ್ರಾಣಿವರ್ಗಕ್ಕೆ ಕಾಡಿನಲ್ಲಿ ಮಿತಿಯೇ ಇರಲಿಲ್ಲ (ಪಂಜಪಂ. ೨). [? + ಬೆಕ್ಕು (< ಬೆರ್ಕು)]

ಹಾರಯಿಸು 'ಪಾರಯಿಸು' ನೋ.

ಹಾರಯ್ಸು 'ಪಾರಯಿಸು' ನೋ.

ಹಾರವ$_1$ 'ಪಾರ್ವ' ನೋ.

ಹಾರವ್$_2$ (ನಾ). (ನೋವನ್ನು ಸೂಚಿಸುವ) 'ಹಾ' ಎಂಬ ಶಬ್ದ: ದ್ವಿಗುಣಿಸಿದುದು ಹಾರವಂ ಪ್ರತಿಧ್ವಾನದಿಂ ಜಿನೇಂದ್ರಾಲಯದೊಳ್ (ಪಂಪಾಮಾ. ೧೪-೧೦೧); ನೀಂ ಪಡೆವಾ ಸುತಂ ರಿಪುಚಮೂಸಂಹಾರವಂ ಹಾರವಂ ಪೊದರಲ್ ಮಾಡ್ಕುಂ (ಜಗಪ. ೨-೮೫).

[ಹಾ + ರವ]

ಹಾರವಲಯ (ನಾ). ೧. (ಶೋಕಸೂಚಕವಾದ) 'ಹಾ' ಎಂಬ ಉದ್ಗಾರಧ್ವನಿ. ೨. ಕೊರಳಲ್ಲಿ ಧರಿಸುವ ಮಾಲೆ,—ಹಾರ. ೧, ೨: ಸರಸಿಯೊಳ್ಕಲಹಂಸಮಯ ಮುತ್ಪಲಾಕ್ಷಿಯರ ಕಂಧರದೊಳು ಹಾರವಲಯಂ . . . ಇಲ್ಲಮಿವು ಮತ್ತಲ್ಲಿಯುಂ ಧರ್ಮಜನ ನೆಲದೊಳು (ಜೈಮಿಭಾ. ೨-೮); ಹಾರವಲಯಂಯೆಂದರೆ, ಹಾಹಾಕಾರ ಧ್ವನಿಲಯವಿದೆಲ್ಲಿಹುದೆಂಬ ಪ್ರಶ್ನಕ್ಕೆ ಉತ್ಪಲಾಕ್ಷಿಯ ಕಂಧರದೊಳು ಹಾರವಲಯ ಎಂಬ ಭಿನ್ನೋತ್ತರ (ಕವಲ. ೧೫೨). [ಹಾರವ್$_2$ + ಲಯ; ಹಾರ್$_2$ + ವಲಯ]

ಹಾರವಾಣ$_1$ 'ಪಾರಿವಾಳ$_1$' ನೋ.

ಹಾರವಾಣ$_2$ 'ಪಾರಿವಾಳ$_2$' ನೋ.

ಹಾರವಿತ್ತ 'ಪಾರ್ವಂತಿ' ನೋ.

ಹಾರವಿಸು 'ಪಾರಯಿಸು' ನೋ.

ಹಾರಹನಿ (ನಾ), ಸಣ್ಣಹನಿ; ತೂರುಹನಿ: ದೇಶದ ಇತರ ಭಾಗಗಳಲ್ಲಿ ವಿಪರೀತಮಳೆಯಾಗಿ ಕೊಚ್ಚಿಕೊಂಡು ಹೋದರೂ ಇಲ್ಲಿ ಹಾರಹನಿಯೂ ಉದುರುತ್ತಿರಲಿಲ್ಲ (ಮಳ್ಗಮ. ೫). [< ಹಾರು (< ಪಾಱು$_1$) + ಹನಿ$_3$ (< ಪನಿ$_2$)]

ಹಾರಹೂರ (ನಾ). ದ್ರಾಕ್ಷಿಯ ಬಳ್ಳಿ ಮತ್ತು ಅದರ ಹಣ್ಣು: "ಹಾರಹೂರಂ ಪಶುಸ್ತನಿ ಮೃದ್ವೀಕೆ ದ್ರಾಕ್ಷೆ" (ಮಂಗರಾ. ೩೪-೧೦). [ಸಂ. ಹಾರಹೂರಾ]

ಹಾರಾಂಶು (ನಾ). ಹಾರದ ಕಾಂತಿ: ಉರದೊಳ್ ಹಾರಾಂಶು ಗಂಡಸ್ಥಳಿಯೊಳಮಳ ಕರ್ಣಾವತಂಸಾಂಶು (ಚಂದ್ರಪ್ರ. ೬-೭೦). [ಸಂ.]

ಹಾರಾಟ 'ಪಾಱುಟ' ನೋ.

ಹಾರಾಡಿಸು (ಕ್ರಿ). ೧. ಹಾರುವಂತೆ ಮಾಡು; ಜಿಗಿಸು: ಹುಡುಗರು ಗಾಳಿಪಟವನ್ನು ಹಾರಾಡಿಸುತ್ತ ಹೊತ್ತು ಕಳೆದರು (ರೂಢಿ). ೨. ಚಲಿಸುವಂತೆ ಮಾಡು; ಅಲುಗಾಡಿಸು: ಆಂಗಿಕಂ ಅಂದರ ಕಣ್ಣುಹುಬ್ಬುಗಳನ್ನು ಹಾರಾಡಿಸುವಿಕೆ (ಒಡ್ಡಾಂತಿ. ೬೨).

[ಹಾರಾಡು (< ಪಾಱುಡು) + - ಇಸ್ಕು]

ಹಾರಾಡು 'ಪಾಱುಡು' ನೋ.

ಹಾರಾವರಿ (ನಾ). ಒಂದು ಬಗೆಯ ಭೂಮಿ (?): ಅಕ್ಕಿಯ ಬಮ್ಮಯಂಗೆ ಧರ್ಮ್ಮಭೂಮಿಯ ಬಟ್ಟು ಗದ್ದೆ ಕೊಳಗ ಹತ್ತು ಹಾರಾವರಿಯ ಮಳಲು (ಎಕ. VI, ಕಡೂಯ. ೪೧-೪; ?). [?]

ಹಾರಿ$_1$ 'ಪಾರಿ$_3$' ನೋ.

ಹಾರಿ$_2$ 'ಪಾರಿ$_4$' ನೋ.

ಹಾರಿ$_3$ (ನಾ). (ಮನಸ್ಸನ್ನು) ಅಪಹರಿಸುವಂಥದು; ಮನೋಹರವಾದುದು: 'ಹಾರಿಗೊಳ್', 'ಹಾರಿವಡೆ' ಪರಾ. [ಸಂ. ಹಾರಿನ್]

ಹಾರಿಂಚರ (ನಾ). ಹಕ್ಕಿಗಳು ಹಾರುವಾಗ ಆಗುವ ಗರಿಗಳ ಅಥವಾ ರೆಕ್ಕೆಗಳ ಶಬ್ದ: ಗೂಡಿಗೆ ಗೊತ್ತಿಗೆ ಹಾರಿಹೋಗುವ ಹಕ್ಕಿಗಳ ಹಾರಿಂಚರ ಅಡಗತೊಡಗಿತ್ತು (ಮಳಮ. ೮೯). [ಹಾರು$_1$ (< ಪಾರ್$_1$) + ಇಂಚರ$_1$]

ಹಾರಿಕಾಯ 'ಪಾರಿಪಾಯ' ನೋ.

ಹಾರಿಕಾಯವಳ (ನಾ). ಒಂದು ಬಗೆಯ ಸುಂಕ: ಊರೊಳಗೆ ಹುಟ್ಟುವ ಹಾರಿಕಾಯವಳವ ತೂಗುವ ಭಂಡಕೆ ಹೊಂಗೆ ಹಾಗ ೧ (ಸೌಂದಾ. IX-i, ೧೪೫-೩೫; 1079).

[ಹಾರಿಕಾಯ (< ಪಾರಿಪಾಯ) + ವಳ ?]

ಹಾರಿಕಾಯಸುಂಕ (ನಾ). ಒಂದು ಬಗೆಯ ಸುಂಕ: ಹಾರಿಕಾಯಸುಂಕಮಂ ಶ್ರೀಕಲಿದೇವರಿಗಯಂಗಭೋಗ ಪೂಜೆಪುನಸ್ಕಾರಕ್ಕೆ ಮಾನ್ಯವಾಗಿ ಧರ್ಮ್ಮಕ್ಕೆ ಕೊಟ್ಟರ್ (ಸೌಂದಾ. IX-i, ೨೯೭-೮೦; 1178). [ಹಾರಿಕಾಯ (< ಪಾರಿಪಾಯ) + ಸುಂಕ$_1$]

ಹಾರಿಕಾಯಿ 'ಪಾರಿಪಾಯ' ನೋ.

ಹಾರಿಕೆ 'ಹಾಜಿಕೆ' ನೋ.

ಹಾರಿಕೆಮಾತು (ನಾ). ಆಧಾರರಹಿತವಾದ ಮಾತು: ಹಾರಿಕೆಮಾತು ಕೇಳಿಕೊಂಡು ವಿಶ್ವಾಸ ಹಾಳುಮಾಡಿಕೊಳ್ಳಬಾರದು (ರೂಢಿ). [ಹಾರಿಕೆ (< ಹಾಜಿಕೆ) + ಮಾತು$_1$]

ಹಾರಿಕೆಸುದ್ದಿ (ನಾ). ಆಧಾರರಹಿತವಾದ ವರ್ತಮಾನ: ಹಾರಿಕೆಸುದ್ದಿಗಂತೂ ರೆಕ್ಕೆಗಳೇ ಇವೆ (ವಿಚಾಮಂ. ೯೫); ಸಾವಿತ್ರಿ ಹೇಳಿದ ಹಾರಿಕೆಸುದ್ದಿಗೂ ಇವನ ಮಾತಿಗೂ ಇರುವ ಸಂಬಂಧವನ್ನು ನೆನೆದು ಅವಳು ನಡುಗಿದಳು (ಮಾಕ್ಷಮ. ೬೩).

[ಹಾರಿಕೆ (< ಹಾಜಿಕೆ) + ಸುದ್ದಿ]

ಹಾರಿಗೆ (ನಾ). ಒಂದು ಬಗೆಯ ಸುಂಕ: ಉಂಡಿಗೆ ತೆರಿಗೆ ಹಾರಿಗೆ ಬಲ XX ಸಂಮಂಧ ಇಲ್ಲಾ ಯೆಂದು ಕೊಟ್ಟ ಶಿಲಾಶಾಸನ (ಎಕ. XIV, ಶ್ರೀರಂಗ. ೬೧೩-೨೫; 1550). [?]

ಹಾರಿಗೊಳ್ (ಕ್ರಿ). ಮನೋಹರವಾಗು; ರಮಣೀಯವೆನ್ನಿಸು: ತರುಣಿಯ ರಂಗಕಾಂತಿಗಳ ಕೂಡೆ ಕಡಲ್ ಪರಿದಳ್ಕಿ ಸೂಸುವಾಭರಣಮರೀಚಿ ಕಾಲಹರಿಗಂ . . . ಪೊಳೆದರ್ದಿದಂತೆವೋಲ್ ಪರಿವುದು ಹಾರಿಗೊಂಡ ಧವಳಾರದ ಕೇರಿಯ ಬೀದಿಬೀದಿಗಳ್ (ಅನಂಪು. ೩-೧೮); ಅಮೃತಾರ್ಣವಮನೆ ಮೇರುವಿವ ಮೇಖಳಾವನಕೆ ತಿರ್ದಿ ಪರಿಯಿಸಲಿಂದ್ರಂ ಸಮೆದೇಱಿವೊಲೆರಡೋಳಿಯೆ ನಿಮಿರ್ದಸೆದುದು ಹಾರಿ[ಪಾಶಾಂ. ದಿ]ಗೊಂಡು ಕೇರ್ಗಟ್ಟಿದವೋಲ್ (ಪುಷ್ಪಸ್ತ. ೧೧-೯). [ಹಾರಿ$_3$ + ಕೊಳ್$_1$]

ಹಾರಿದ್ರಕ (ನಾ). ೧. ಅರಿಸಿನ; ಹರಿದ್ರೆ: ಭೂರಮಣಿಯ ಶೃಂಗಾರಾಗಾರಮಿದೆನೆ ವಿರಹಿಜನಕೆ ಮದನನ ಕಾರಾಗಾರಮಿದೆನೆ ಬಗೆಗೊಳ್ಳುವು ಹಾರಿದ್ರಕ ಜೀರಕಾರ್ದ್ರಕೇಕ್ಷು ವನಂಗಳ್ (ಪುಷ್ಪಸ್ತ. ೯-೨೨). ೨. ಹಳದಿಬಣ್ಣ. [ಸಂ.]

ಹಾರಿಯಾಳ 'ಪಾರಿವಾಳ$_2$' ನೋ.

ಹಾರಿವಡೆ (ಕ್ರಿ). ಮನೋಹರವಾಗು; ಆಕರ್ಷಕವಾಗು: ಹಾರಿವಡೆದೆಸೆದುದಪಾರ ನೇರಾಣಿಯ ಪೊಂಗೊಡಂಗಳಿರಡುಂ ತಱದಿಂ ವಾರಿಧಿಯನೆಯ್ದೆ ಮೊಗೆಯಲ್ ಮೇರುಮಹೀಧರಮೆ ತೋಳ್ಗಳಂ ನೀಡಿದವೊಲ್ (ಅನಂಪು. ೫-೫೬). [ಹಾರಿ$_3$ + ಪಡೆ$_1$]

ಹಾರಿವಾಣ 'ಪಾರಿವಾಳ$_2$' ನೋ.

ಹಾರಿವಾಳ 'ಪಾರಿವಾಳ$_2$' ನೋ.

ಹಾರಿಸು 'ಪಾಱಿಸು' ನೋ.

ಹಾರೀತ (ನಾ). ೧. ಒಂದು ಬಗೆಯ ಪಾರಿವಾಳ: "ಜೀವಂಜೀವಃ . . . ಹಾರೀತಃ, ವಂಜುಳಃ, ಕಪೋತಃ — ಈ ೬ ಹೊಱಸು" (ಹಲಾಯು. ೪೨-೧೦೦) ಮಯೂರಹಾರೀತಕಾರಂಡಕುರವಕ ಸಂಕುಳಚರಣಸಂಚರಣದಿಂ (ಪುಷ್ಪಸ್ತ. ೨-೬೯ ವ)

೨. ಒಬ್ಬ ಋಷಿ: ನಾಳೆಯ ಬರ್ಪನತಿಥಿ ನಾರಾಯಣಂ, ಹಾರೀತ! ಧನ್ಯಮಾಯ್ತೆ ಮ್ಮಾಶ್ರಮಂ (ಶ್ರೀರಾಮಾ. ೧೩೦-೧೫೦). [ಸಂ.]

ಹಾರೀತಕ (ನಾ). = ಹಾರೀತ ೧: ಯಮುನಾವಾರಿವಿಸ್ತಾರಮಂ ಮಾಂಕರಿಸಲ್ ಸಾಲ್ದಿರ್ದ ಹಾರೀತಕ ಹರಿತಶಿಲಾಪಟ್ಟದೊಳ್ ಭೂಪನಿರ್ದಂ (ಕಾಪಂಕಾ. ೧೦೨); ಘನಹಾರೀತಕಹಂಸಿಯೊಳ್ ಹರಿತ ದೌರ್ವಂ . . . ಮೂನೆಕ್ಕ ಭಾಜನ ದೊಳ್ಕುಂಕುಮಪಂಕಮೇಂ ಮಜ್ಜಿದುದೋ ಮುಂಗಲ್ಕ ಸಾಕಲ್ಯಮಂ (ಪಂಗಾಮಾ. ೫-೧೨೫). [ಸಂ.]

ಹಾರು$_1$ 'ಪಾರ್$_1$' ನೋ.

ಹಾರು$_2$ 'ಪಾಱು$_1$' ನೋ.

ಹಾರು$_3$ 'ಪಾರ್ದು$_3$' ನೋ.

ಹಾರುಕೇರಿ (ನಾ). ಬ್ರಾಹ್ಮಣರ ಬೀದಿ: ಆ ಮಳಲೂರ ಪಟ್ಟಣದ ಹಾರುಕೇರಿಗೆ ಸಲುವ ಬೆಜ್ಜನು ವೀರಾಪುರವೆಂಬ ಗ್ರಾಮವು (ಎಕ. IX, ಚನ್ನಪ. ೧೫೨-೧೦; 1534).

[< ಹಾರುವ + ಕೇರಿ]

ಹಾರುಗಟ್ಟಿಗೆ 'ಪಾರುಗಟ್ಟಿಗೆ' ನೋ.

ಹಾರುಗಾಲು, ಹಾರಗಾಲು (ನಾ). ೧. ನಿಂತಲ್ಲಿ, ನಿಲ್ಲದೆ ಓಡಾಡುವ ಕಾಲು: ಮನೆಯ ಹೊರಗಡೆಯೇ ಅಡ್ಡಾಡುತ್ತಿದ್ದರ 'ಹಾರುಗಾಲ ಹರದೆ' ಯೆಂದು ಹೆಸರಿಟ್ಟಾರು (ಸುಪಸಂ. ೧೦). ೨. ದೂರದೂರಕ್ಕೆ ಇಡುವ ಕಾಲು; ದಾಟುಕಾಲು: ಹಾರುಗಾಲಿನ ಭರದಿ ಗಿಡದಡಿಗ ತಲುಪಿದನು (ಸಖೀಗೀ. ೭೦-೨). **ಹಾರಗಾಲು:** ೨. ಹೋರಿಗಳು ಹಾರಗಾಲಿನಿಂದ ಓಡುತ್ತಿದ್ದವು (ಮನಚಿ. ೪೦).

[ಹಾರು$_2$ (< ಪಾಱು$_1$) + ಕಾಲು$_1$ (< ಕಾಲ್$_1$)]

ಹಾರುಗೂಳು (ನಾ). (?): ಅರಯಿಗೆ ಕಾವ ಹಾಲಂ ಮಾದಲ್ದ ಹಣ್ಣನೆರಡಾಗಿ ಕೊಯಿದು ಕುಸುರೆಯ ತೆಗೆದವಕೆ ತುಂಬಿ ಸರಿಯಿರುಳಿನಲ್ಲಿ ಹಾರುಗೂಳಾ ಬೋಳ್ವದೊಳು ಹಾಕಿದಾ ಕಟ್ಟಶನಕೆ ತುಱುವಲಂ ಮಾಡಿದೆಳೆಯಲ್ಲ ನೀರುಳ್ಳಿಯಂ ಬೆರಸಿ (ಸೂಪಶಾ. ೬-೨೨); "ಬಿರಿಸಾದ ಅನ್ನ" (ಸೂಪಶಾ. ಕೋಶ). [ಹಾರು ? + ಕೂಳು (< ಕೂಟ್$_1$)]

ಹಾರುಗೆ (ನಾ). ಒಂದು ಬಗೆಯ ಸಸ್ಯ: ಹಾರುಗ, ಸುರತಿಚಿಕ್ಕ (ಮೃಪಿಗಿ. ೭೭-೧೫೭೭).

[?]

ಹಾರುಗೋಲು 'ಹಾರಕೋಲು' ನೋ.

ಹಾರುದಿ 'ಪಾರದಿ' ನೋ.

ಹಾರುಮಾನು (ನಾ). ಒಂದು ಬಗೆಯ ಮಾನು; ಜಿಗಿದಾಡುವ ಮಾನು: "ಪ್ಲೋಷೀ, ಶಫರೀ — ೨ ಹಾರಿ ಬೀಳುವ ಮಾನಿನ ಹೆಸರುಗಳು ಅಂದರೆ ಹಾರುಮಾನು, ಮಾಟುಮಾನು" (ಸಿದ್ಧಾಂಶಿ. ೭೩). [ಹಾರು$_2$ (< ಪಾಱು$_1$) + ಮಾನು$_2$ (< ಮಾನ್$_2$)]

ಹಾರುಮೆಕ್ಕೆ (ನಾ). ಒಂದು ಬಗೆಯ ಸಸ್ಯ: ಇಂದ್ರವಲ್ಲಿ — ಹಾರುಮೆಕ್ಕೆಯುಂ (ಪ್ರಚಾ. ೭-೨೫). 'ಹಾವುಮೆಕ್ಕೆ' ಪರಾ. [ಹಾರು ? + ಮೆಕ್ಕೆ$_2$]

ಹಾರುವ$_1$ 'ಪಾರ್ವ' ನೋ.

ಹಾರುವ$_2$ (ನಾ). ಒಂದು ಬಗೆಯ ಮಾನು: ಹರಳು ಹಾರುವಂ . . . ಹಂದೆಗನಾನೆಮೊಗನೆಂಬ ಪರಿಪರಿಯ ಮಿನ್ಗಳಂ ಗುದಿಗೆಯ್ದರು (ಪಚಕಾ. ೫-೪೫). 'ಹಾರುಮಾನು' ಪರಾ. [?]

ಹಾರುವತನ (ನಾ). ಬ್ರಾಹ್ಮಣಿಕೆ; ಬ್ರಾಹ್ಮಣ್ಯ: ಹಾರುವನು ನಾನಹುದು ಕಟಿಗಳ ಬೇರುಗೊಲೆಯನು ಗೆಯ್ದು ವಿಜಯವ ಹಾರುವೆನು ನೋಡೆಂದು ಹಾರುವತನದ ಕೈಮೆಗಳ ಸೇರದಣಕವೆನುತ್ತ ರಕ್ಕಸ ಮೇರೆಯಲ್ಲದೆ ಸರಳ ಸುರಿದನು (ಕಾಶಿರಾ. ೨೧-೫೪).

[ಹಾರುವ$_1$ (< ಪಾರ್ವ) + - ತನ]

ಹಾರುವಯ್ಯ (ನಾ). ಬ್ರಾಹ್ಮಣ: ಏನು ಹಾರುವಯ್ಯನವರು ಬಂದಿರಿ (ಹಬ್ಬಿಬ. ೧೫೨).

[ಹಾರುವ$_1$ (< ಪಾರ್ವ) + ಅಯ್ಯ$_1$]

ಹಾರುವಾಣ 'ಪಾರಿವಾಳ್$_2$' ನೋ.

ಹಾರುವಿತಿ 'ಪಾರ್ವಂತಿ' ನೋ.

ಹಾರುವಿತ್ತಿ 'ಪಾರ್ವಂತಿ' ನೋ.

ಹಾರುಸುದ್ದಿ (ನಾ). = ಹಾರಿಕೆಸುದ್ದಿ: ಸಾಧಾರಣಜನರಂತ ಹಾರುಸುದ್ದಿಯ ಮೇಲೆ ಅವಲಂಬಿಸಿ ಕೆಲಸ ಮಾಡುವ ಪ್ರಸಂಗ ಬರುತ್ತದೆ (ಕುಬೊಂ. ೮೯); ಹಾರುಸುದ್ದಿಗಳಿಂದ ನೀವು ಇಷ್ಟು ವ್ಯಗ್ರರಾಗುವುದು ನನ್ನ ದೃಷ್ಟಿಯಲ್ಲಿ ನಿಮ್ಮ ಗೌರವವನ್ನು ಹೆಚ್ಚಿಸುವುದಿಲ್ಲ (ಪ್ರಮಾಶ್ರ. ೬೯). [ಹಾರು$_2$ (< ಪಾಱು$_1$) + ಸುದ್ದಿ]

ಹಾರುಹೊಡೆ (ಕ್ರಿ). (ಕಪಾಟು, ಬೀರು, ಮನೆ ಇತ್ಯಾದಿಗಳ) ಬಾಗಿಲನ್ನು ವಿಶಾಲವಾಗಿ ತೆಗೆ,—ಸಂಪೂರ್ಣವಾಗಿ ತೆರೆ: ಕಪಾಟಿನ ಬಾಗಿಲು ಹಾರು ಹೊಡೆದಿತ್ತು (ಜಿಪ್ರ). [ಹಾರು$_2$ (< ಪಾಱು$_1$) + ಹೊಡೆ$_1$ (< ಪೊಡೆ$_1$)]

ಹಾರೆ 'ಪಾರೆ$_1$' ನೋ.

ಹಾರೆಕೋಲು, ಹಾರುಗೋಲು (ನಾ). ಹಾರೆ; ಗಡಾರಿ: ನನ್ನ ಕೈಯಲ್ಲೂ ಒಂದು ಹಾರೇಕೋಲೋ ಒನಕೆಯೋ ಇರುವುದು ಒಳ್ಳೆಯದಲ್ಲವೇ? (ರಾಯಕ. ೧೭). **ಹಾರುಗೋಲು:** ಈ ಭೃಂಗಗಳು ನೀಳವಾದ ಹಾರುಗೋಲು(ಪಾರಂಗಿ)ಗಳನ್ನಿಬಹುದು (ಬಾಲಶ್ರ. ೧, ೬೮). [ಹಾರೆ (< ಪಾರೆ$_1$) + ಕೋಲು$_1$ (< ಕೋಲ್$_1$)]

ಹಾರೆಗಟ್ಟಿಗೆ 'ಪಾರುಗಟ್ಟಿಗೆ' ನೋ.

ಹಾರ್ಕೆ (ನಾ). ಕೋರಿಕೆ; ಬಯಕೆ: ಆರು ಋತುಗಳು ಬಂದು ಆರ್ಕೆ ಮಾಡುವವು ಯ್ದೂವುದೋ ಹಾರ್ಕೆ ಎದೆಯೊಳಿಟ್ಟು (ನಲಮು. ೬೧-೧೮); ಜೀವನನ್ಮೆರ್ಮಲ್ಕವುಳ್ಳವರ ಪವಿತ್ರಹಸ್ತದಿಂದ ಅದಾಗಬೇಕೆಂದು ನನ್ನ ಹಾರ್ಕೆ ಇತ್ತು (ಜೀವಾತ್ಮ. XI, ಮುನ್ನುಡಿ).

[ಹಾರ್ಕೆಸು (< ಪಾರಯಿಸು) + - ಇಕೆ]

ಹಾರ್ಕೆಸು 'ಪಾರಯಿಸು' ನೋ.

ಹಾರೋಗಿಡ (ನಾ). ಒಂದು ಬಗೆಯ ಸಸ್ಯ: ತಿಲ್ಲ, ಹಾರೋಗಿಡ (ಮೃಪಿಗಿ. ೭೭-೭೦೨).

[? + ಗಿಡ (< ಗಿಡು)]

ಹಾರ್ದಿಕ (ಗು). ೧. ಆತ್ಮೀಯವಾದ; ಪ್ರಿಯವಾದ: ನನ್ನ ಹಾರ್ದಿಕ ಆಕಾಂಕ್ಷೆಯನ್ನು ಪೂರ್ಣಗೊಳಿಸಿ ಪ್ರೋತ್ಸಾಹಿಸಿರುತ್ತಾರೆ (ಜೀವಾತ್ಮ. XI, ಮುನ್ನುಡಿ). (ನಾ). ೨. ಆತ್ಮೀಯವಾದುದು; ಪ್ರಿಯವಾದುದು: 'ಶಾಮಾ ಒಳಗೆ ಬಾ' ರಂಗನು ಹಾರ್ದಿಕವಾಗಿ ಕರೆದನು (ರಂಗರೋ. ೧೧೫); ಸತೀಶನ ಮಾತುಗಳು ಹಾರ್ದಿಕವಾಗಿದ್ದವು (ಕಪ್ರಶ್ನ. ೩೧೨). [ಸಂ.]

ಹಾರ್ಮೋನಿಯಂ (ನಾ). "ತಿದಿಯ ಮೂಲಕ ಗಾಳಿಯನ್ನು ನುಗ್ಗಿಸಿ, ಲೋಹದ ತೆಳುತುಂಡುಗಳು ಕಂಪಿಸುವಂತೆ ಮಾಡಿ, ಅದರಿಂದ ಸ್ವರಗಳು ಹೊರಡುವಂತೆಯೂ, ಬೇಕಾದ ಸ್ವರಗಳನ್ನು ಬೆರಳೊತ್ತುವಿಕೆಯಿಂದ ಪಡೆಯುವಂತೆಯೂ ಅಳವಡಿಸಿರುವ ಒಂದು ವಾದ್ಯ: "ಹಾರ್ಮೋನಿಯಂ" (Harmonium. ಇಂಇಸ): ಹಾರ್ಮೋನಿಯಂ ಅದೇ ಆಗಷ್ಟೇ ಕೀರ್ತನೆಗಳಿಗೆ ಬಳಸತೊಡಗಿದ್ದರು (ಸ್ಮೃಚಿ. ೭೮); ಹಾರ್ಮೋನಿಯಂ ವಾದ್ಯದಲ್ಲಿ ಈ ಸಂಖ್ಯೆಗಳನ್ನು ಸ್ವಲ್ಪ ಬದಲಾಯಿಸಿ ಯಾವ ಮನೆಯನ್ನಾದರೂ ಷಡ್ಜವಾಗಿಟ್ಟುಕೊಳ್ಳಲಾಗುವಂತೆ ವಿರ್ಪಡಿಸಿದೆ (ಭೌತವಿ. ೧೫೧). [<— ಇಂ. Harmonium]

ಹಾರ್ವ 'ಪಾರ್ವ' ನೋ.

ಹಾಲ್‌ಅಹವಾಲ್, ಹಾಲಹವಾಲಿ, ಹಾಲಾಲೆ, ಹಾಲಾವಲೆ, ಹಾಲಾಹವಾಲು, ಹಾಲಾಹವಾಲೆ (ನಾ). ೧. ಪರಿಸ್ಥಿತಿಯ ವಿವರಣೆ; ಅಹವಾಲು; ಮನವಿ: ಜನರ ಸ್ಥಿತಿ ತರಗತಿಗಳನ್ನು ನೋಡಿ ಅವರ ಹಾಲ್‌ಅಹವಾಲ್ ವಿಚಾರಿಸಿ ಸಾಧ್ಯವಾದ ಮಟ್ಟಿಗೂ ಪ್ರಜಾಪ್ರಯೋಜನಾರ್ಥವಾದ ಕಾರ್ಯಗಳನ್ನು ನೆರವೇರಿಸಿದರು (ಮಹಾಮಂ. II, ೪೪). **ಹಾಲಹವಾಲಿ:** ೧. ಓಗೆ ನನ್ನ ಹಾಲಹವಾಲಿಗಳು ಹಲವು ಸಾವಿರ (ತೂಪಸಂ. ೩೪). **ಹಾಲಾಲೆ:** ೧. ವಿಳುಸಾಗರಕಧಿಕ ಭವಸಾಗರಂಬೋದು . . . ಹಾಲಾಲೆಯಿಂದ ಪೋಗುವುದಲ್ಲ ಇದು ಹರಿಗೋಲು ಹಾಕಿದರಿಂದ ದಾಟುವುದೆ (ವಿದಾತ್ಮ. ೪೦ - ೩). **ಹಾಲಾವಲೆ:** ೧. ಇವರು ಭಕ್ತರಿಂದ ಹಣ್ಣು ಕಾಯಿ ತೆಗೆದುಕೊಂಡು, ಅವರ ಹಾಲಾವಲೆಯನ್ನು ಮುಖ್ಯ ಜೈನ ಹೆಗ್ಗಡೆಯವರಿಗೆ ಹೇಳಿ . . . ಭಕ್ತರಿಗೆ ಒಳ್ಳೆತನವನ್ನು ಬಯಸುವುದು (ತುಜನಾ. ೧೨೦). **ಹಾಲಾಹವಾಲು:** ೧. ಸರಕಾರ ಅಂದರೆ ಹಾಗೆ ಜನಗಳ ಹಾಲಾಹವಾಲು, ಅದರ ಮುಂದೆ ಎಷ್ಟೋ ಸಮಯ ಕೊಳೆಯುತ್ತಾ ಬಿದ್ದಿರಬಹುದು (ಅಳಾ. ೨೪೯). **ಹಾಲಾಹವಾಲೆ:** ೧. ಒಬ್ಬೊಬ್ಬರನ್ನೇ ಕರೆದು

ವಿಚಾರಿಸತೊಡಗಿದರು. ಒಬ್ಬೊಬ್ಬರ ಹಾಲಾಹವಾಲೆಯಾಯಿತು (ಜಾರುವಾ. ೧೦೭). ೨. ವರ್ತಮಾನ; ಸುದ್ದಿ: ಮಗದೊಮ್ಮೆ ಇನ್ನೇನೋ ಹಾಲಾಹವಾಲೆ ಹೇಳಿದಳು (ಮೂಕಜ್ಜ. ೧೧೫).

[<— ಹಿಂ. ಮರಾ. ಹಾಲ್‌ಅಹವಾಲ್, ಹಾಲ್‌ಹವಾಲ್./ ತುಳು. ಹಾಲ್‌ಹವಾಲ್]

ಹಾಲ₁ 'ಪಾಲ₂' ನೋ.

ಹಾಲ₂ (ನಾ). ೧. ನೇಗಿಲು; ಹಲ. ೨. ನೇಗಿಲನ್ನು ಆಯುಧವನ್ನಾಗಿ ಉಳ್ಳವನು; ಬಲರಾಮ. [ಸಂ.]

ಹಾಲಂಗರವಳಿಗೆ (ನಾ). ಹಾಲನ್ನು ಬೆರಸಿ ಮಾಡುವ ಒಂದು ಬಗೆಯ ರೊಟ್ಟಿ,— ಭಕ್ಷ: ಕುಟ್ಟಿ ಕಣಕವನು ಹಪ್ಪಳದಂತೆ ಲತೆಯಲ್ಲಿದು ಬಟ್ಟವಾಲ್ ಕಾದ ಸಮಯದೊಳದಂ ತುದಿಳಿಯ ಬಿಟ್ಟು ಬೇಯಿಸಿ ತೆಗದು ಮಡಿಸಿ[ದುದು] ಹಾಲಂಗರ ವಳಿಗೆಯೆನಿಸಿಕೊಂಬುದು (ಸೂಪಶಾ. ೧-೧೯).

[ಹಾಲು₁ (< ಪಾಲ್₁) + ಅಂಗರವಳಿಗ (< ಅಂಗರವೋಳಿಗ)]

ಹಾಲಂಗೊಳಲೆ (ನಾ). ಒಂದು ಬಗೆಯ ಸೊಪ್ಪು: ಕರಿನೆಲ್ಲಿಯ ಸೊಪ್ಪು, ಕೊಳಕೊಳಕೆ ಸೊಪ್ಪು, ಹಾಲಂಗೊಳಲೇಸೊಪ್ಪು,— ಇಷ್ಟು ಸೊಪ್ಪನ್ನು ಸಮಾನಂಗೊಂಡು ಅಕ್ಕಿಗಚ್ಚಿನಲ್ಲಿ ರಾಯಪುರಿಸಕ್ಕರೆ, ತುಪ್ಪದಲ್ಲಿ ಮೆಲ್ಲಲು ಗರ್ಭಕಟ್ಟುವುದು (ಎಪ್ಪಎ. ೧೨೫). [?]

ಹಾಲಕ್ಕಿ 'ಪಾಲ್ಪಕ್ಕಿ' ನೋ.

ಹಾಲಗುಂಬಳ 'ಪಾಲ್ಗುಂಬಳ' ನೋ.

ಹಾಲಡಕೆ 'ಪಾಲಡಕೆ' ನೋ.

ಹಾಲತ್ತಿ (ನಾ). ಒಂದು ಬಗೆಯ ಅತ್ತಿಮರ: " ಯಮಳಪಲಂ — ಉಗುನಿ, ಹಾಲತ್ತಿ, ಕಡಸಿಗೆ" (ಓಷಧಿ. ೧೩೧). [ಹಾಲು₁ (< ಪಾಲ್₁) + ಅತ್ತಿ₂]

ಹಾಲಪ (ನಾ). ಒಂದು ಬಗೆಯ ಸಸ್ಯ: ತೊರತ್ತಿ, ಸುರಟಿ, ಕಿಲ್ಲಂಗಿ . . . ಹಾಲಪ (ಮೃಜಿಗಿ. ೪೫-೮೮೨). [?]

ಹಾಲಬಲಗೆ (ನಾ). ಒಂದು ಬಗೆಯ ಸಸ್ಯ: ಗೊದ್ದಸ ಮರ, ಹಾಲಬಲಗೆ, ಬೋಳವಂಟೆ (ಮೃಜಿಗಿ. ೬೯-೭೬೫). [?]

ಹಾಲಮಡ್ಡಿ 'ಹಾಲುಮಡ್ಡಿ' ನೋ.

ಹಾಲರೊಡ್ಡಿ 'ಹ್ಹಾಲುರೊಡ್ಡಿ' ನೋ.

ಹಾಲವಕ್ಕಿ 'ಪಾಲ್ಪಕ್ಕಿ' ನೋ.

ಹಾಲವುಗ 'ಪಾಲೌಗು' ನೋ.

ಹಾಲಹಕ್ಕಿ 'ಪಾಲ್ಪಕ್ಕಿ' ನೋ.

ಹಾಲಹಲ (ನಾ). ತೀಕ್ಷ್ಣವಾದ ವಿಷ; ಹಾಲಾಹಲ: ಕಾಲಕೂಟಂ ವತ್ಸನಾಭಿಯು ಹಾಲಹಲಮುಂ ಸಿಂಗಿ ಮೊದಲಾಭೀಳಗರಳಂಗಳನವೆಲ್ಲಂ ಕಲಸಿ ಆಱೆಯಿಸಲು (ಬಸಪು. ೫೮-೫೫). [ಸಂ.]

ಹಾಲಹವಾಲೆ 'ಹಾಲ್‌ಅಹವಾಲ್' ನೋ.

ಹಾಲಾಮೆ (ನಾ). ಒಂದು ಬಗೆಯ ಆಮೆ: ಆಮೆ, ಹಾಲಾಮ, ಮುರಿಆಮೆ, ತಾಬಲೆ (ನಮ್ಮಸು. ೨೪೦). [? + ಆಮೆ]

ಹಾಲಾಲೆ 'ಹಾಲ್‌ಅಹವಾಲ್' ನೋ.

ಹಾಲಾವಲೆ 'ಹಾಲ್‌ಅಹವಾಲ್' ನೋ.

ಹಾಲಾವು (ನಾ). ಒಂದು ಬಗೆಯ ತೆರಿಗೆ (?): ದೇವಿದಜೆ ಅಡಿಗಚ್ಚುಕಾಣಿಕೆ ಕಯ್ಯಾಣಿಕೆ ಹಾಲಾವು (ಎಕ. VIII, ತೀರ್ಥಹ. ೧೯೨-೪೬; 1103). [?]

ಹಾಲಾಹಲ, ಹಾಳಾಹಳ (ನಾ). ೧. ಸಮುದ್ರಮಥನಕಾಲದಲ್ಲಿ ಉದ್ಭವವಾದ ಮಹಾವಿಷ: ಹಾಲಾಹಲವನು ಪಾನವ ಮಾಡಿದ ಫಾಲಲೋಚನನೆ ಬಲ್ಲವನು (ಎದಾಕೃ. ೧೫-೧). ೨. ಘೋರವಾದ ಒಂದು ಬಗೆಯ ವಿಷ: ಭೋಗಿಸುವದೊಳ್ಳಿಹ ರಸಾಯನದೋಗರಂಗಳು ನಿಮ್ಮ ಭಾಗವಿದಾಗಿ ಹಾಲಾಹಲ ಮಹಾಪ್ರಳಯಗರಳವೆಮ್ಮ ಭಾಗವೇ (ಬಸಪು. ೫೮-೪೬); ಕೊಲೆಗೆಯ್ಮದಿರ್, ತಾಯೆ, ಹಾಲೂಡಿದೆದಯೊಳೆಯೆ ಹಾಲಾಹಲವನುಗುಳಿ! (ಶ್ರೀರಾಮಾ. ೧೦೯-೨೬೨); ನಾನೆ ದಾರುಣನೆಂದಿದೇತಕೆ ಬೀಗುವ ಸುಮ್ಮನೆ ಓ ಹಾಲಾಹಲವೆ (ಇಂಚಾಪ. ೨೨೧-೬೫). **ಹಾಳಾಹಳ:** ೧. ಮಸಕದ ಹಾಳಾಹಳದೊಡನೆಸವಿಂದುವಲೇಖೆ ಪುಟ್ಟುವಂದದಿನಾ ರಾಕ್ಷಸನೊಡನೆ ಪುಟ್ಟಿ ದೇವಕಿ ವಸುದೇವಂಗರಸಿಯಾಗಿ ಸುಖದಿಂದಿರ್ದಳ್ (ಜಗವ. ೨-೬೯). ೨. ಕಾಳಕೂಟದ ಹ್ಹಾಳಾಹಳವೆಂಬ ವಿಷಂಗಳು ಕುದಿದವರನಲ್ಲದೆ ಮಿಕ್ಕಿನಂತೆ ಯಾರುವನು ಏನೂ ಮಾಡವು (ಸರ್ವವ. ೧೭೧-೮೧೧). [ಸಂ.]

ಹಾಲಾಹವಾಲು 'ಹಾಲ್‌ಅಹವಾಲ್' ನೋ.

ಹಾಲಾಹವಾಲೆ 'ಹಾಲ್‌ಅಹವಾಲ್' ನೋ.

ಹಾಲಿ (ಅ). ಈಗ; ಸದ್ಯದಲ್ಲಿ; ಪ್ರಕೃತ: ಹಾಲಿ ಯಿನಾಮುತ್ತಿರುಲ್ಲು ಚಾವಡಿ ಯಿರುವುದು (ಮ್ಯಅರಿ. ೧೯೩೪, ಸಂ-೯, 1812); ಹಾಲಿ ಜಾರಿಯಲ್ಲಿದ್ದ ಆಡಳಿತಪದ್ಧತಿಯಿಂದ ಅನಿವಾರ್ಯವಾಗಿ ಉಂಟಾಗುವ ಕೆಡುಕುಗಳನ್ನು ವಿವರಿಸಿದನು (ದಾದಾನ. ೧೭೦).

[<— ಆರ. ಮರಾ. ಹಾಲ್. / ತುಳು. ಹಾಲಿ]

ಹಾಲಿಕ (ಗು). ೧. ನೇಗಿಲಿಗೆ ಸಂಬಂಧಿಸಿದ. (ನಾ). ೨. ಬೇಸಾಯಗಾರ; ರೈತ: ಕುಲಾಲತತಿ ಹಾಲಿಕರ ವರ್ಗಂ (ಎವೀಭ. ೪-೬೫); ಹಾಲಿಕರು ಎಂಬ ನೇಗಿಲು ಒಡಿದು ಉಳುವವರೂ . . . ಉಪಜಾತಿಗಳಾಗಿ ಹುಟ್ಟಿಕೊಂಡವೆಂದು ತಿಳಿದು ಬಂದಿದ (ತುಳುವಾ. ೮೭). [ಸಂ.]

ಹಾಲಿಗೆ (ನಾ). ಕರಡಿಗ; ಭರಣಿ: ನಿರನುನಾಸಿಕ ಲಕಾರಕ್ಕೆ — ಹಾಲಿಗೆ, ಹಲಸಿಗಂ, ಹಲಗೆ (ಶಮದ. ೧೬ ಪ್ರಯೋ); ವಜ್ರದ ಭಸಿತದ ಹಾಲಿಗೆಯಂತೆಯೊಡರಿಚರ್ದಾ ಸ್ಫಟಿಕಪೀಠದಂದದೊಳು ರಾಜಿಪುದು ಚಿನ್ಮೇರು (ವೀಶ್ಮಪು. ೮-೨೦-೨೧). [?]

ಹಾಲಿಪ್ಪೆ (ನಾ). ಒಂದು ಬಗೆಯ ಇಪ್ಪೆಮರ: ಇಪ್ಪೆ, ದೊಡ್ಡಿಪ್ಪೆ, ಹಿಪ್ಪೆ, ಹಾಲಿಪ್ಪೆ (ಮೃಜಿಗಿ. ೧೨-೨೦೪). [ಹಾಲು₁ (< ಪಾಲ್₁) + ಇಪ್ಪೆ₂ (< ಇರ್ಪ)]

ಹಾಲಿವಾಣ 'ಪಾರಿವಾಳ₂' ನೋ.

ಹಾಲು₁ 'ಪಾಲ್₁' ನೋ.

ಹಾಲು₂ (ನಾ). (ಮನೆ, ಬಂಗಲೆ, ಅರಮನೆ ಮುಂತಾದುವುಗಳಲ್ಲಿ) ಕೊಠಡಿಗಿಂತ ವಿಶಾಲವಾಗಿರುವ ಹಜಾರ; ತೊಟ್ಟಿ: ಮಟ್ಟಲು ಹತ್ತಿ ಬಲಗಡೆಯ ಹಾಲಿನ ನಡುವ . . . ನಿಂತುಬಿಟ್ಟ (ಸಾಪಬ್ರ. ೧೯೩). [<— ಇಂ. Hall]

ಹಾಲುಂಡೆ 'ಪಾಲುಂಡೆ' ನೋ.

ಹಾಲುಕಂಬ 'ಹಾಲುಗಂಬ' ನೋ.

ಹಾಲುಕರೆ 'ಪಾಲ್ಗಱೆ' ನೋ.

ಹಾಲುಕೀರು, ಹಾಲುಖೀರು (ನಾ). ಹಾಲಿನಿಂದ ತಯಾರಿಸಿದ ಪಾಯಸ: ಯಾವ ಊಟಕ್ಕೂ ಹಾಲುಕೀರು, ಬೋಂಡ ತಪ್ಪು ತ್ತಿರಲಿಲ್ಲ (ನನ್ನೂರು. ೧೫೫). **ಹಾಲುಖೀರು:** ಅವತ್ತೂ . . . ಹಾಲುಖೀರು, ಬೋಂಡ ಇವುಗಳನ್ನು ಮ್ಹಾಡಿದ್ದರು (ಶ್ರೀಕಥ. ೩೦). [ಹಾಲು₁ (< ಪಾಲ್₁) + ಕೀರು₂]

ಹಾಲುಕುಂಬಳ 'ಪಾಲ್ಗುಂಬಳ' ನೋ.

ಹಾಲುಕುಡಿಸು 'ಪಾಲ್ಗುಡಿಸು' ನೋ.

ಹಾಲುಕೊರಟಗೆ (ನಾ). ಒಂದು ಬಗೆಯ ಸಸ್ಯ: ಚಿತ್ರಮೂಲದ ಬೇರಿನ ಪಟ್ಟಿ . . . ಹಾಲುಕೊರಟಗೆ ಬೇರಿನ ಪಟ್ಟಿ ಇದರ ಕೊನೆ, ಮೇಣಸು, ಬೆಳ್ಳುಳ್ಳಿ ಇವುಗಳನ್ನರೆದು ಪೊಟ್ಟಣ ಕಟ್ಟಿ ಕಟ್ಟಿಕೊಳ್ಳಲು ಭಳಿಜ್ವರ ನಿಲ್ಲುವುದು (ಸಇವ. ೭೯.). [ಹಾಲು₁ (< ಪಾಲ್₁) + ಕೊರಟಗೆ (< ಕುರಂಟಿಗ)]

ಹಾಲುಖೀರು 'ಹಾಲುಕೀರು' ನೋ.

ಹಾಲುಖೋವಾ (ನಾ). ಕಾಯಿಸಿ ಗಟ್ಟಿಗೊಳಿಸಿದ ಹಾಲಿನಿಂದ ತಯಾರಿಸುವ ಒಂದು ಬಗೆಯ ಸಿಹಿತಿಂಡಿ: ಸಿಹಿತಿಂಡಿ ಅಂಗಡಿಯಲ್ಲಿ ಹಾಲುಖೋವಾ, ಜಿಲೇಬಿ ಗಳನ್ನು ತಟ್ಟೆಯಲ್ಲಿ ಪೇರಿಸಿಟ್ಟಿದ್ದಾರೆ (ರೂಢಿ). [ಹಾಲು₁ (< ಪಾಲ್₁) + ಖೋವಾ]

ಹಾಲುಗಂಬ, ಹಾಲುಕಂಬ (ನಾ). ಮದುವೆಯಲ್ಲಿ, ಧಾರೆಯ ಮಂಟಪಕ್ಕೆ ಸಮೀಪವಾಗಿ ನೆಟ್ಟಿರುವ (ಮುರಿದರೆ ಹಾಲು ಸುರಿಸುವ) ಮರದ ಕೊಂಬೆ: ಚಪ್ಪರ ಹಾಕಿದ್ದಾನೆ. ಹಾಲುಗಂಬಗಳನ್ನು ತಂದುಹಾಕಿದ್ದಾನೆ (ಬಳುಮ. ೬). **ಹಾಲುಕಂಬ:** (ಎಮ್ಮೆ. II, ೧೧). [ಹಾಲು₁ (< ಪಾಲ್₁) + ಕಂಬ₁ (< ಕಂಭ)]

ಹಾಲುಗಡಲು 'ಪಾಲ್ಗಡಲ್' ನೋ.

ಹಾಲುಗಬ್ಬು (ನಾ). ಒಂದು ಬಗೆಯ ಕಬ್ಬು: ಬಿಳಿಕಬ್ಬು, ಕರಕಬ್ಬು, ಹಾಲುಗಬ್ಬು ಅಥವಾ ಹುಲ್ಲುಕಬ್ಬು — ಈ ಮೂರು ಜಾತಿಗಳ ಕಬ್ಬು ಈ ಜಿಲ್ಲೆಯಲ್ಲಿ ಬೆಳೆಯುತ್ತದೆ (ಕಭಾಗ. ೨೬೨). [ಹಾಲು$_1$ (< ಪಾಲ್$_1$) + ಕಬ್ಬು$_2$ (< ಕರ್ವ$_1$)]

ಹಾಲುಗಲ್ಲ, ಹಾಲ್ಗಲ್ಲ (ನಾ). ಮೃದುವಾದ ಕೆನ್ನೆ; ಕೋಮಲವಾದ ಕಪೋಲ: ಎಸುಗೆ ಚೆಲುವನು ಹಾಲುಗಲ್ಲದ ಹಸುಳೆಯುಗವಿದಲ್ಲ (ಕುವ್ಯಾಕ. ೨೦-೨೬); ಬಿಸಿ ಕಂಬನಿಗಳು ಜಾರಿ ಅವಳ ಹಾಲುಗಲ್ಲುಗಳ ಮೇಲೆ ಮುತ್ತುಗಳನಿಟ್ಟಂತೆ ಸ್ಥಿರವಾಗಿ ನಿಂತು ಕೊಂಡಿದ್ದವು (ಹಾಡುಹು. ೧). **ಹಾಲ್ಗಲ್ಲ**: ಅವಳ ಮುಖದಲ್ಲಿ ನಗೆತುಂಬಿತ್ತು! ಹಾಲ್ಗಲ್ಲದಲ್ಲಿ ಚೆಲುವು ಚೆಲ್ಲುತ್ತಿತ್ತು! (ಪಮುಕೂ. ೫೪). [ಹಾಲು$_1$ (< ಪಾಲ್$_1$) + ಗಲ್ಲ$_1$]

ಹಾಲುಗಲ್ಲು (ನಾ). ಬಿಳುಪಾದ ನುಣ್ಣಗಿರುವ ಕಲ್ಲು; ಅಮೃತಶಿಲೆ: ಹಗಲಿರುಳು ಏಳುದಿನಮಲ್ಲಿ ಚೈತ್ಯಾಲಯಂ ಚಿತ್ರಾಂಗದೆಯ ಯಶಶ್ಶೈತ್ರಸುರತರುವಂತೆ ಬೆಳೆದುದೊಯ್ಯನೆ ಹಾಲುಗಲ್ಲಿನಲಿ (ಚಿತ್ರಾಂಗ. ೯೦-೨೪೮೮); ಹಾಲುಗಲ್ಲಿನ ಪೀಠದ ಮೇಲೆ ಪ್ರತಿಮೆಯನ್ನು ಅಳವಡಿಸಲಾಗಿತ್ತು (ಹಾಪುತ್ರ. ೧೦೮). [ಹಾಲು$_1$ (< ಪಾಲ್$_1$) + ಕಲ್ಲು (< ಕಲ್$_3$)]

ಹಾಲುಗಾರೆ (ನಾ). ಬಿಳಿಯ ಗಾರೆ; ಬಿಳಿಯ ಬಣ್ಣದ ಗಚ್ಚು: ಕ್ಷೀರಸುಧಾ ಮಂದಿರದಲ್ಲಿ ವಾಸಮಾಡಿದಲ್ಲಿ . . . ಚಿತ್ರಗಳಿಂದ ಕೂಡಿಕೊಂಡು ಹಾಲುಗಾರೆಯಿಂದಲೂ, ಬಿಳುಪಾದ ಸುಣ್ಣದಿಂದಲೂ, ಮಹತ್ತಾದ ಕಾಂತಿಯುಂಟಾಗಿ ಶ್ಲೇಷ್ಮದೋಷಗಳನ್ನುಂಟುಮಾಡುವುದು (ಸಕವ್ಯ. ೫೭); ಹಾಲುಗಾರೇ ಹಾಕಿರುವ ಸ್ಥಳಗಳು ಸುವರ್ಣಮಯವಾದ ಬಾಗಲುಗಳು (ಕ್ಷವಾಸ. ೮೭). [ಹಾಲು$_1$ (< ಪಾಲ್$_1$) + ಗಾರೆ$_1$]

ಹಾಲುಗಾಳು (ನಾ). ಹಾಲು ತುಂಬಿರುವ ಕಾಳು; ಇನ್ನೂ ಬಲಿಯದೆ ಇರುವ ಕಾಳು: ಹಣ್ಣುಹಂಪಲುಗಳನ್ನೂ, ಹಾಲುಗಾಳುಗಳನ್ನೂ ತಂದು ನನಗೆ ಗುಟುಕು ಕೊಟ್ಟು, ಉಳಿದರೆ ತಾನು ತಿನ್ನುತ್ತಿದ್ದನು (ಕಪಪು. ೭-೧೧೧). [ಹಾಲು$_1$ (< ಪಾಲ್$_1$) + ಕಾಳು$_3$ (< ಕಾಳ್$_2$)]

ಹಾಲುಗಿಡ (ನಾ). ಒಂದು ಬಗೆಯ ಸಸ್ಯ: ಹಾಲುಗಿಡದ ತಿಗಣೆಯ . . . ಭ್ರೂಣೋತ್ಪತ್ತಿ . . . ಆಗುವಂತೆ ತಿಳಿಸಬಹುದು (ಕಚಚ. ೧೦೪). [ಹಾಲು$_1$ (< ಪಾಲ್$_1$) + ಗಿಡ (< ಗಿಡು)]

ಹಾಲುಗಿಣ್ಣು (ನಾ). ಕಾಯಿಸಿ ಗಟ್ಟಿಗೊಳಿಸಿದ ಎಳಗಂದಿ ಹಾಲು; ಗಿಣ್ಣು ಹಾಲು: ''ಕೂರ್ಚಿಕಾ-ಹಾಲುಗಿಣ್ಣಿಗ ಹೆಸರು'' (ಸಿದ್ಧಾಂತ. ೨೪೭). [ಹಾಲು$_1$ (< ಪಾಲ್$_1$) + ಗಿಣ್ಣು$_1$]

ಹಾಲುಗುಂಬಳ 'ಪಾಲ್ಗುಂಬಳ' ನೋ.

ಹಾಲುಗುನ್ನಿ (ನಾ). ಒಂದು ಬಗೆಯ ಸಸ್ಯ: ಹುಣ್ಣು ವೆಗ್ಗಳವಾದರೆ ಗೇರ ತೈಲ, ಹಾಲುಗುನ್ನಿಯ ಹಾಲು, ಎಕ್ಕೆಯ ಹಾಲು ಇವಂ ಪೂಸುವುದು (ವಪ್ರವಿ. ೧೪೬). [ಹಾಲು$_1$ (< ಪಾಲ್$_1$) + ಕುನ್ನಿ$_2$]

ಹಾಲುಗೆಚ್ಚಲು (ನಾ). ಹಾಲು ತುಂಬಿದ ಕೆಚ್ಚಲು: ಹಾಲುಗೆಚ್ಚಲು ಬಳಿಯ ತೊಣಸಿ ಹತ್ತಿಕೊಂಡು ಕಾಲವನು ಕಳೆದ ಬಗೆ ಬಲ್ಲಿರೆಲ್ಲ (ವಿದಾಕೃ. ೧೪-೨). [ಹಾಲು$_1$ (< ಪಾಲ್$_1$) + ಕೆಚ್ಚಲು (< ಕೆಚ್ಚಲ್)]

ಹಾಲುಗೆಣಸು (ನಾ). ಒಂದು ಬಗೆಯ ಗೆಣಸು: ಕರೇಹಂಬು, ಗೌರಿಬಳ್ಳಿ, ಹಾಲುಗೆಣಸು (ಮೃಜಿ. ೪೫-೪೮೯). [ಹಾಲು$_1$ (< ಪಾಲ್$_1$) + ಗೆಣಸು]

ಹಾಲುಗೆನ್ನೆ, ಹಾಲ್ಗೆನ್ನೆ (ನಾ). = ಹಾಲುಗಲ್ಲ: ಹೆತ್ತ ತಾಯಿಯು ಹಾಲುಗೆನ್ನೆಗೆ ಮುತ್ತನೀಯದೆ ಮಾಣಳು (ಅಗ್ನಿಹಂ. ೧೮); ಎಂಟುದಿನಗಳ ಹಿಂದೆ ನಕ್ಕಾಗ ಗುಳಿ ಬೀಳುತ್ತಿದ್ದ ಹಾಲುಗೆನ್ನೆ ಬತ್ತಿಕೊಂಡ ರೀತಿಯೋ ? (ವಾತ್ಸಲ್ಯ. ೨೧೨). **ಹಾಲ್ಗೆನ್ನೆ**: ಹಾಲ್ಗೆನ್ನೆ ಹೊಸ ಹುಡುಗನವನಿನ್ನು (ನಡದಾ. I. ೪೫೨). [ಹಾಲು$_1$ (< ಪಾಲ್$_1$) + ಕೆನ್ನೆ]

ಹಾಲುಣಿಸು (ಕ್ರಿ). ಹಾಲನ್ನು ಕುಡಿಸು: ನಿನ್ನ ಕರುವಂ ದಣಿಸಿ ನಮಗಲ್ಲ ಹಾಲುಣಿಸಿ ಚೆನ್ನ ನೀಂ ಪೋದೆಯೇಂ (ಕಾಲೂರ. ೮೩-೧೫೮). [ಹಾಲು$_1$ (< ಪಾಲ್$_1$) + ಉಣಿಸು$_1$]

ಹಾಲುಣ್ಣ (ನಾ). ಚರ್ಮದ ಮೇಲೆ ಏಳುವ ಸಣ್ಣ ಗಂತಿ; ನರವುಲಿ: (ಪ). [?]

ಹಾಲುತುಂಬು 'ಪಾಲ್ತುಂಬು' ನೋ.

ಹಾಲುದುಂಬುದೆನೆ (ನಾ). ಹಾಲು ತುಂಬಿದ ಧಾನ್ಯದ ಹೊಡೆ,—ತೆನೆ: ಹಾಲುದುಂಬುದೆನೆಯ ಶಾಲಿ ಸೊಗಸನಿತ್ತುವು ನೋಳ್ಪರಿಗೆ (ಕಂನವ. ೫-೬೨). [ಹಾಲು$_1$ (< ಪಾಲ್$_1$) + ತುಂಬು$_1$ + ತೆನೆ$_1$]

ಹಾಲುಪರೆ 'ಹಾಲ್ಪರೆ' ನೋ.

ಹಾಲುಪಾಯಸ (ನಾ). ಅಕ್ಕಿ ಮತ್ತು ಹಾಲು ಸೇರಿಸಿ ಮಾಡುವ ಪಾಯಸ: ಪರರ ಮನೆಯ ಬತ್ತವನ್ನು ತಂದು, ಸುಲಿದು, ಹಾಲುಪಾಯಸ ಮಾಡುವ ಗತಿ ಬರಲಿಲ್ಲ (ಮತಮ. ೩೦೫). [ಹಾಲು$_1$ (< ಪಾಲ್$_1$) + ಪಾಯಸ]

ಹಾಲುಪೊಂಗಲು 'ಪಾಲುಪೊಂಗಲು' ನೋ.

ಹಾಲುಬತ್ತ (ನಾ). ಹಾಲು ತುಂಬಿದ ಬತ್ತದ ತೆನೆ: ಹಾಲುಬತ್ತಕ್ಕೆ ಕವಿವರಗಿಳಿಗಳ ಹಿಂಡ ಮೇಲಕ್ಕೆಬ್ಬಿಸುವ ನಾರಿಯರ ಪೇಳಲಳವೆ (ಕಂನವ. ೫-೬೪). [ಹಾಲು$_1$ (< ಪಾಲ್$_1$) + ಬತ್ತ]

ಹಾಲುಬಳಪ (ನಾ). (ಬಹಳ ಮೃದುವಾಗಿ ಮತ್ತು) ಬಿಳುಪಾಗಿ ಬರೆಯುವ ಬಳಪ; ಬೆಣ್ಣೆಬಳಪ: (ಪ). [ಹಾಲು$_1$ (< ಪಾಲ್$_1$) + ಬಳಪ]

ಹಾಲುಬಳ್ಳಿ (ನಾ). ೧. ಒಂದು ಬಗೆಯ ಬಳ್ಳಿ: (ಪ). ೨. ಒಂದು ಬಗೆಯ ಮರ: (ಪ). [ಹಾಲು$_1$ (< ಪಾಲ್$_1$) + ಬಳ್ಳಿ]

ಹಾಲುಬಾಯಿ (ನಾ). ಅಕ್ಕಿ,ರಾಗಿ, ಗೋದಿ ಮುಂತಾದುವುಗಳನ್ನು ರುಬ್ಬಿ ತೆಗೆದ ಹಾಲಿನಿಂದ ತಯಾರಿಸುವ ಒಂದು ಬಗೆಯ ಸಿಹಿತಿಂಡಿ; ಕ್ಷೀರಿಣಿ: ಸೀತೆಯ ಬಾಯಿ ಹರಕಾದರೂ ಅವಳು ಮಾಡುವ ಹಾಲುಬಾಯಿಯ ರುಚಿ ಅಷ್ಟೇನೂ ಕಡಿಮೆಯಿಲ್ಲ (ಮೂಕಜ್ಜಿ. ೨೦೪); ಹಾಲುಬಾಯಿ ಮಾಡಿದ್ದಾರೆ ಅಮ್ಮ (ಪದ್ಮಸ. ೨೫೩). [?]

ಹಾಲುಬುಡ್ಡಿ (ನಾ). ಎಳೆಯ ಮಕ್ಕಳಿಗೆ ಹಾಲನ್ನು ಕುಡಿಸಲು ಉಪಯೋಗಿಸುವ ಸೀಸೆ: ಹಾಲುಬುಡ್ಡಿಯನ್ನು ಶುಚಿಯಾಗಿ ತೊಳೆದಿಡು (ರೂಢಿ). [ಹಾಲು$_1$ (< ಪಾಲ್$_1$) + ಬುಡ್ಡಿ (< ಬುರುಡೆ)]

ಹಾಲುಬೆತ್ತ (ನಾ). ಒಂದು ಬಗೆಯ ಬೆತ್ತ: ಬೆತ್ತದ ಬಳ್ಳಿ, ಹಾಲುಬೆತ್ತ, ನಾಗಬೆತ್ತ (ಮೃಜಿ. ೧೫೫-೨೬೯). [ಹಾಲು$_1$ (< ಪಾಲ್$_1$) + ಬೆತ್ತ]

ಹಾಲುಬೆಳ್ಳಿ (ನಾ). ಬೊಕ್ಕ ಬೆಳ್ಳಿ; ಉತ್ತಮ ವರ್ಗದ ಬೆಳ್ಳಿ: (ಪ). 'ಕಂದುಬೆಳ್ಳಿ' ಪರಾ. [ಹಾಲು$_1$ (< ಪಾಲ್$_1$) + ಬೆಳ್ಳಿ]

ಹಾಲುಮಂಡಗೆ (ನಾ). ಹಾಲಿನಿಂದ ತಯಾರಿಸುವ ಒಂದು ಬಗೆಯ ಮಂಡಗೆ: ರಾಮೇಶ್ವರದೇವರ ಹಾಲುಮಂಡಗೆಗೆ ಹಿರಿಯ ಕೋಲ ಎಂಟುಮತ್ತರ್ಕೆಯ್ (ಕ್ರಾ. II. ೨೪-೩೩; 1166); ಪ್ರಥಮಸ್ಥಳ ಮ ೧೨ ಹಾಲುಮಂಡಗೆ - ಮ ೧೪ (ಬೋಳಶಾ. ೧೯೬ ಜಮುಖಂಡಿ. ೫೦-೧೬; 1306). [ಹಾಲು$_1$ (< ಪಾಲ್$_1$) + ಮಂಡಗೆ]

ಹಾಲುಮಡ್ಡಿ, ಹಾಲಮಡ್ಡಿ, ಹಾಲ್ಮಡ್ಡಿ (ನಾ). ಒಂದು ಬಗೆಯ ಸುಗಂಧ ದ್ರವ್ಯ: ಹಾಲುಮಡ್ಡಿ ಸಾಂಬ್ರಾಣಿ ಮೊದಲಾದ ಪರಿಮಳದ್ರವ್ಯಗಳಿಂದಾ ವಾಸನೆಯಂ ಗೊಳಿಸಿ ಮುತ್ತಿನಾರತಿಯನ್ನೆತ್ತಿ (ಸಾಗಂಧಿ. ೬೦-೧೬); ಇಲ್ಲಿಗೆ ನಾನಾ ತರಹೆ ಅಗರು, ಮರ, ಕರ್ಪೂರ ಹಾಲುಮಡ್ಡಿ ಬರುತ್ತವೆ (ಪ್ರವಾಗ. I. ೩೨೬). **ಹಾಲಮಡ್ಡಿ**: ಗುಗ್ಗುಳ ಹಾಲಮಡ್ಡಿಯ ಮಹಿಷಾಕ್ಷಿಯ ವೆಗ್ಗಳ ಲೋಭಾನ ಕಪ್ರರಾಳ (ದೇವಾಂಪು. ೬-೭೦); ಹಾಲಮಡ್ಡಿ ಕರ್ಪೂರ ಶಿಲಾರಸ ದೇವದಾರ (ಸಿದ್ಧಪ್ಪ. ೧೪-೩). **ಹಾಲ್ಮಡ್ಡಿ**: ಕೆಂಪುಸೊನೆ ಸೋರುತ್ತಿರೆ, ಹಸಿಗಂಪು ಹಸರುವುದು ಕಡಿವಾ ಬಡಗಿಗಳ್ಗೆ ಹಾಲ್ಮಡ್ಡಿ ಹೊಗೆ ಧೂಪವಾಗಿ (ಶ್ರೀರಾಮಾ. ೨೫೮-೧೧೬). [ಹಾಲು$_1$ (< ಪಾಲ್$_1$) + ಮಡ್ಡಿ$_1$]

ಹಾಲುಮುಲ್ಲಂಗಿ (ನಾ). ಒಂದು ಬಗೆಯ ಮೂಲಂಗಿ ಗಿಡ: ಹಾಲಹಕ್ಕರಿಕೆ, ಹಾಲುಮುಲ್ಲಂಗಿ (ಮೃಜಿ. ೧೯-೬೭೦). [ಹಾಲು$_1$ (< ಪಾಲ್$_1$) + ಮುಲ್ಲಂಗಿ (< ಮೂಲಂಗಿ$_1$)]

ಹಾಲುರೊಡ್ಡಿ, ಹಾಲರೊಡ್ಡಿ (ನಾ). ಒಂದು ಬಗೆಯ ಔಷಧದ್ರವ್ಯ: ಕಷಾಯದಲ್ಲಿ ಹಸಿಸಿ ಕಾಸುವಾಗ ಹಾಕುವ ಕಲ್ಕದ್ರವ್ಯಗಳು — ರೊಡ್ಡಿ, ಹಾಲುರೊಡ್ಡಿ, ಮಂಜಿಷ್ಠೆ (ವೈದ್ಯಸಾ. I. ೪೧೫). **ಹಾಲರೊಡ್ಡಿ**: ಸಿಹಿಹಾಲೆ, ರೊಡ್ಡಿ, ಹಾಲರೊಡ್ಡಿ . . . ಕಾಯಿಸಿ ಪಾಕದಲ್ಲಿಳಿಹಿ (ಸಚಿತ್ರ. ೮೫). [ಹಾಲು$_1$ (< ಪಾಲ್$_1$) + ರೊಡ್ಡಿ]

ಹಾಲುವಕ್ಕಿ 'ಪಾಲ್ವಕ್ಕಿ' ನೋ.

ಹಾಲುವಾಣ$_1$ 'ಪಾರಿವಾಳ$_1$' ನೋ.

ಹಾಲುವಾಣ$_2$ 'ಪಾರಿವಾಳ$_2$' ನೋ.

ಹಾಲುಸಂಪಿಗೆ (ನಾ) ಒಂದು ಬಗೆಯ ಸಸ್ಯ (ಪ್ಯಡಿಗಿ ೬೩-೧೨೭)

[ಹಾಲು$_1$ (< ಪಾಲ್$_1$) + ಸಂಪಿಗೆ (< ಸಂಪಗೆ)]

ಹಾಲುಸೋರೆ (ನಾ). ಒಂದು ಬಗೆಯ ಸಿಹಿಸೋರೆಯ ಕಾಯಿ: ಹುರಳಿಕಟ್ಟು, . . . ಹಾಲುಸೋರೆ, ಕುಸಿಹಾಲೆಸೂಪು, ಎರಡೆಲೆ ಹೊನ್ನೆ, ಚಕ್ರವರ್ತದ ಸೊಪ್ಪು, ಬಲಿಕೀರೆಸೊಪ್ಪು ಇವುಗಳೆಲ್ಲವೂ ಜ್ವರದವರಿಗೆ ಪಥ್ಯದ್ರವ್ಯಗಳು (ಸಹ್ಯ. ೧೦೨).

[ಹಾಲು$_1$ (< ಪಾಲ್$_1$) + ಸೋರೆ$_1$]

ಹಾಲುಹಕೀಕತ್ತು (ನಾ). ಸ್ಥಿತಿಗತಿ; ವಸ್ತುಸ್ಥಿತಿ: ಮೂರು ತಿಂಗಳು ಇಲ್ಲಿ ಇದ್ದು ಇಲ್ಲಿ ಹಾಲುಹಕೀಕತ್ತು ನೋಡಿಯೂ ಕೇಳಿಯೂ ಇದ್ದಾರೆ (ರಾಜೇಂದ್ರ. ೧೦೭).

[<— ಮರಾ. ಹಾಲ್‌ಹಕೀಕತ್]

ಹಾಲುಹಕ್ಕಿ 'ಪಾಲ್ವಕ್ಕಿ' ನೋ.

ಹಾಲುಹಸುಳೆ 'ಪಾಲ್ಗಸುಳೆ' ನೋ.

ಹಾಲುಹಳ್ಳ 'ಪಾಲ್ವಳ್ಳ' ನೋ.

ಹಾಲೂಡಿಸು (ಕ್ರಿ). ಎದೆಹಾಲನ್ನು ಕೊಡು,—ಉಣ್ಣಿಸು: ಸುಮಾರುಜನ ತಾಯಂದಿರು ಮಕ್ಕಳಿಗೆ ಹಾಲೂಡಿಸುವ ಅಭ್ಯಾಸವನ್ನು ಬಿಟ್ಟುಬಿಟ್ಟಿರು (ಮಸೋಸಂ. ೨೦೯). [ಹಾಲು$_1$ (< ಪಾಲ್$_1$) + ಊಡಿಸು]

ಹಾಲೂಡು (ಕ್ರಿ). = ಹಾಲೂಡಿಸು: ಮಗುವಿನ ಹೊಟ್ಟೆಗೆ ಹಾಲೂಡುವವರು ಯಾರು ? (ಪುನರು. ೨೮೭). [ಹಾಲು$_1$ (< ಪಾಲ್$_1$) + ಊಡು$_1$]

ಹಾಲೆ$_1$ 'ಪಾಲೆ$_1$' ನೋ.

ಹಾಲೆ$_2$ 'ಪಾಲೆ$_2$' ನೋ.

ಹಾಲೆ$_3$ 'ಪಾಲೆ$_3$' ನೋ.

ಹಾಲೆ$_4$, **ಹಾಳೆ**$_2$ (ನಾ). (ತಾಳೆ ಮುಂತಾದ ಮರದಿಂದ ಇಳಿಸಿದ) ಮದ್ಯ; ಹೆಂಡ: (೬). **ಹಾಳೆ**$_2$: "ಮಧು, ಆಸವಃ . . . ಹಾಳಾ, ಕಲ್ಯಂ . . . ಮಧು — ಈ ೨೪ ಕಳ್ಳು" (ಪಲಾಯು. ೫೫-೧೭೪). [ಸಂ. ಹಾಲಾ]

ಹಾಲೆ$_5$ (ನಾ). ಕಣ್ಣಿನ ಪಾಪೆ; ಕಣ್ಣುಗುಡ್ಡೆ: ಆಲಿಯ ಕೊನೆಯಲ್ಲಿ ಬೆಳೆದ ಹಾಲೆ ಬಾಲೆಯರನೇ ಬಯಸುತಿಪ್ಪುದು ನೋಡಾ (ಸಿಪ್ರೇವ. ೧೩೦-೩೮೭); ಕರಿಹಾಲಿಗಳಿಂದ ಕೂಡಿರುವ ಕಣ್ಣುಗಳಿಂದ ಹೊರಟು ಬರುವ ಕಂಬನಿಗಳಂ ಕೂಡಿರುವುದಕ್ಕೆ ಕಾರಣವೇನು? (ಕೃಪಾಪ. ೩೩). [< ಆಲಿ$_2$]

ಹಾಲೆಮರ (ನಾ). ಒಂದು ಬಗೆಯ ಮರ: ಹಾಲೆಮರದ ಸೊಸಿಯು ಹಸುವಿನ ಸಗಣಿಯಿಂದಲೆ ತುಂಬಿದ ಹಳ್ಳದಲ್ಲಿ ನಡಬೇಕು (ಪೌಗಂಧಿ. ೪೨೬-೯).

[ಹಾಲೆ$_2$ (< ಪಾಲೆ$_2$) + ಮರ$_1$]

ಹಾಲೆರೆ 'ಪಾಲೆಱೆ' ನೋ.

ಹಾಲೆಹಕ್ಕಿ (ನಾ). ಒಂದು ಬಗೆಯ ಶಕುನದ ಹಕ್ಕಿ; ಹಂಗನ ಹಕ್ಕಿ: (೬).

[ಹಾಲೆ$_1$ (< ಪಾಲೆ$_1$) + ಹಕ್ಕಿ (< ಪಕ್ಕಿ)]

ಹಾಲೆಱೆ 'ಪಾಲೆಱೆ' ನೋ.

ಹಾಲೊಡಕಲು (ನಾ). ಒಡೆದ ಹಾಲಿನ ಗಟ್ಟಿಭಾಗ ಮತ್ತು ಅದರಿಂದ ತಯಾರಿಸುವ ಒಂದು ಬಗೆಯ ತಿನಿಸು: ಮನೆಯಲ್ಲಿ ಕಡೆದು ತೆಗೆದ ಬೆಣ್ಣೆ, ಮೊಸರು, ಹಾಲೊಡಕಲು, ಖೀರು (ನಿಬಂಧ. II, ೧೬೫).

[ಹಾಲು$_1$ (< ಪಾಲ್$_1$) + ಒಡಕಲು]

ಹಾಲೊಡಪು (ನಾ). ಒಡೆದ ಹಾಲಿನ ಗಟ್ಟಿಭಾಗ: ವಡೆಯಂ ಬೇಯಿಸಿಕೊಂಡು ಚೆನ್ನಾಗಿ ನಲುಕಿಸಿದ ಪುಡಿಯುಮಂ ತುಪ್ಪದೊಳು ಹುರಿದ ಹಾಲೊಡಪಿನಿಂದೊಡವೆರಸಿ . . . ತುಪ್ಪದೊಳು ಪಾಕಂ ಮಾಡಲದು ಮುಸುಕಿನೊಡೆಯಾದುದು (ಸೂವಶಾ. ೧-೬೭).

[ಹಾಲು$_1$ (< ಪಾಲ್$_1$) + ಒಡಪು$_1$]

ಹಾಲೊಱತೆ (ನಾ). ಹಾಲಿನ ಬುಗ್ಗೆ,— ಝರಿ: ಶ್ವೇತಪರ್ವತದ . . . ಹಾಲೊಱತೆ ಸುರಿತಪ್ಪಂತೆ ಹಾಲ ಹಳ್ಳವೋಲಗದ ನಡುವ ಮಾಡುಗಟ್ಟಿ ಪರಿದು ಪೊಱಸೂಸೆ (ಬಾಹ. ೧೦-೭೨). [ಹಾಲು$_1$ (< ಪಾಲ್$_1$) + ಒಱತೆ (< ಒಱಂತೆ)]

ಹಾಲೋಗರ 'ಪಾಲೋಗರ' ನೋ.

ಹಾಲ್ಕಾಗದ (ನಾ). (ಹಾಲಿನಂತೆ) ಬಿಳಿಹಳಳ ಬಿಳುಪಾಗಿರುವ ಕಾಗದ: ಹಾಲ್ಕಾಗದದಲ್ಲಿ ಬರೆದ ಬರಹ ಬಹಳ ಚನ್ನಾಗಿದೆ (ಡಂಫಿ).

[ಹಾಲ್$_2$ (< ಪಾಲ್$_1$) + ಕಾಗದ]

ಹಾಲ್ಕುಡಿ 'ಪಾಲ್ಗುಡಿ' ನೋ.

ಹಾಲ್ಗಡಗ 'ಪಾಲ್ಗಡಗ' ನೋ.

ಹಾಲ್ಗಡಲು 'ಪಾಲ್ಗಡಲ್' ನೋ.

ಹಾಲ್ಗಲ್ಲ 'ಹಾಲುಗಲ್ಲ' ನೋ.

ಹಾಲ್ಗುಂಬಳ 'ಪಾಲ್ಗುಂಬಳ' ನೋ.

ಹಾಲ್ಗುಡಿ 'ಪಾಲ್ಗುಡಿ' ನೋ.

ಹಾಲ್ಗೆನ್ನೆ 'ಹಾಲುಗೆನ್ನೆ' ನೋ.

ಹಾಲ್ತುತ್ತ 'ಪಾಲ್ತುತ್ತ' ನೋ.

ಹಾಲ್ತೊರೆ 'ಪಾಲ್ತೊಱೆ' ನೋ.

ಹಾಲ್ದುಂಬು 'ಪಾಲ್ದುಂಬು' ನೋ.

ಹಾಲ್ದೆನೆ 'ಪಾಲ್ದೆನೆ' ನೋ.

ಹಾಲ್ಪರೆ, ಹಾಲುಪರೆ (ನಾ). ಗಜ್ಜುಗದಾಟದಲ್ಲಿ ಬಳಸುವ ಒಂದು ಉದ್ಗಾರಶಬ್ದ: ಒಂದಡೆಯೊಳು ಗರ್ದುಗವನಾಡುತಿರಲಾಗ ಬಂದೋರ್ವ ಹಾಲ್ಪರೆಯೆಂದು ಅಂದೆತ್ತಿಕೊಂಡೋಡಿ ಹಿಡಿವ ಕುಮಾರರ ವೃಂದವ ಕಂಡಳಾ ಚದುರೆ (ಚ್ಯಾಸಚ. ೨-೫೦). **ಹಾಲುಪರೆ**: ಮಱೆಯೊಳು ಬಂದು ಮಕ್ಕಳ ಗರ್ದುಗವ ಹಾಲುಪರೆಯೆಂದು ಬಾಚಿ ಹಿಡಿಯಲು ಹೆಜ್ಜನೂಂಕಿ ಬಳಿಕ ಕೈಯಿಂದ ಸುಲಿವನಾವ ದುಜ್ಜುದುಂಬಿಯಾ ಬಾಲವಿಮ್ಮು (ನೇಮಿಸಂ. ೧೫-೧೦೮). [?]

ಹಾಲ್ಮಡಿ (ನಾ). (ಹಾಲಿನಂತೆ) ಪರಿಶುಭ್ರವಾದ ಮಡಿಬಟ್ಟೆ: ಶ್ರೀನದಿಯ ಸಲಿಲದಲಿ ಮಿಂದು ಹೊಸ ಹಾಲ್ಮಡಿಯ ನಾರುಡೆಯನುಟ್ಟು (ಶ್ರೀರಾಮಾ. ೧೧೨-೧).

[ಹಾಲ್$_2$ (< ಪಾಲ್$_1$) + ಮಡಿ$_2$]

ಹಾಲ್ಮಡ್ಡಿ 'ಹಾಲುಮಡ್ಡಿ' ನೋ.

ಹಾಲ್ಮರ 'ಪಾಲ್ಮರ' ನೋ.

ಹಾಲ್ಮೆಕ್ಕೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: "ಅಡಿಕೆಬಾಳೆ . . . ದೊಡ್ಡಮಕ್ಕೆ, ಹಾಲ್ಮಕ್ಕೆಬಳ್ಳಿ" (ಸಪ್ಪ. ೪೨). [ಹಾಲ್$_2$ (< ಪಾಲ್$_1$) + ಮೆಕ್ಕೆ$_3$ + ಬಳ್ಳಿ]

ಹಾಲ್ವಕ್ಕಿ 'ಪಾಲ್ವಕ್ಕಿ' ನೋ.

ಹಾಲ್ವಕ್ಕರಿಕೆ (ನಾ). ಒಂದು ಬಗೆಯ ಹಕ್ಕರಿಕೆಸೊಪ್ಪಿನ ಗಿಡ: ಹಾಲ್ವಕ್ಕರಿಕೆ, ಹಾಲುಮುಲ್ಲಂಗಿ (ಪ್ಯಡಿಗಿ. ೪೯-೯೭೦).

[ಹಾಲ್$_2$ (< ಪಾಲ್$_1$) + ಹಕ್ಕರಿಕೆ$_1$ (< ಹಕ್ಕಱಿಕೆ)]

ಹಾವ (ನಾ). ೧. ಆಹ್ವಾನ; ಕರೆ. ೨. ಸ್ತ್ರೀಯು (ಆಂಗಿಕಾಭಿನಯದ ಮೂಲಕ) ಸೂಚಿಸುವ ಶೃಂಗಾರಭಾವನೆ; ಸ್ತ್ರೀಯು (ಅಂಗವಿನ್ಯಾಸದಿಂದ) ಸೂಚಿಸುವ ಶೃಂಗಾರಭಾವ: ಅಂತಾಕೆಯ . . . ಗಾಡಿವೆರಸಿದ ಹಾವಕ್ಕಂ ನಾಣ್ಕೆರಸಿದ ಭಾವಕ್ಕಮೊಲ್ಲು (ಪಂಪಭಾ. ೪-೧೭ ವ); ಸ್ತ್ರೀಸದ್ಮದೊಳ್ . . . ಈಗಳುಳ್ಳವರೊಳಿಲ್ಲೀ ಹಾವವೀ ಭಾವಮಾ ಪರಿಜೇ ವಿಭ್ರಮಮಿಾ ವಿಲಾಸಂ (ಸುಕುಮಾ. ೫-೫೮); ಪಾಡೆಂತಂತು ಹಾವಂ, ಹಾವಮೆಂತಂತು ಭಾವಂ, ಪುದುಂಗೊಳೆ ನವರಸೋದಯಕೆ ಪಡಿವೆತ್ತಾಡುವ ನಟ್ಟವಿಗರ ಕೂಟದಿಂ (ರಾಮಾಶ್ವ. ೨೩-೧೮). ೨. ಹಸ್ತಮುದ್ರೆ; ಹಸ್ತವಿನ್ಯಾಸ: ಮುಖಮುದ್ರೆಗಳು ಹೇಗೆ ಭಾವವನ್ನು ಪ್ರಕಟಿಸುವುವೋ ಹಾಗೆಯೇ ಹಾವಗಳಿಂದ ಅಂತರ್ಯವನ್ನು (ಹಸ್ತಮುದ್ರೆಗಳಿಂದ) ಸೂಚಿಸಲು ಬರುವುದು (ಭಾಚಿತ್ರ. ೧೩); ಹಸ್ತಗಳು . . . ಹೇಗೆ ಇರಬೇಕೆಂದೂ ಸೂಚಿಸಿದರು, ಈ "ಹಾವ"(gestures)ಗಳಿಗೆ ಮುದ್ರೆಗಳೆಂದು ಹೆಸರು (ಬಾಲಪ್ರ. II, ೮೫೫).

ಹಾವಭಾವ = ಶೃಂಗಾರಭಾವನೆ; ವಿಲಾಸ; ಬೆಡಗು: ಹಾವಭಾವ

ವಿಲಾಸವಿಭ್ರಮಂಗಳನೊಡೆಯೊಳು . . . ಪೋಗವೇಳ್ದ ಧನಧತ್ತ ನೊಳ್ಕಿದನೆಂದಂ (ವಡ್ಡಾರಾ. ೧೭-೧೧); ಹುಬ್ಬುಗಳ ಗೆರೆಯಲ್ಲಿ ಹಾವಭಾವವ ರಸವು (ಕಉಶ್ರಾ. ೧೦-೨). [ಸಂ.]

ಹಾವಂಚೆ 'ಪಾವಸೆ' ನೋ.

ಹಾವಚ 'ಪಾವಸೆ' ನೋ.

ಹಾವಚೆ 'ಪಾವಸೆ' ನೋ.

ಹಾವಡಿಗ 'ಪಾವಡಿಗ' ನೋ.

ಹಾವಡಿಗವಿದ್ಯೆ (ನಾ). ಹಾವನ್ನು ಆಡಿಸುವ ವಿದ್ಯೆ; ಗಾರುಡಿಗ ವಿದ್ಯೆ: ಉರಗನ ಮೇಲೆ ಕುಣಿದಾಡಿದನು ಗಡ ಹಾವಡಿಗವಿದ್ಯೆಯಲಿ (ಕುವ್ಯಾಸ. ೧೦-೧೫). [ಹಾವಡಿಗ (< ಪಾವಡಿಗ) + ವಿದ್ಯೆ]

ಹಾವರ (ನಾ). ಪರಿಸ್ಥಿತಿ (?): ಬಾಳಾಂಬಕಬಲಿಗೆ ಸಿಕ್ಕಿದ ಲೀಲಾಂಗಕಾಲಕ್ಕೆ ಒಳಗಾದ. ಪುಷ್ಪೋದ್ಭವ ಹೆಡಗಟ್ಟಗೀಡಾದ ಇವರು ಮೂವಱು ದೇವರಿಂದು ಆರಾಧಿಸಿ ಜೀನ ಮಡಕೆಯಲ್ಲಿ ಸಿಕ್ಕಿದ ನೋಣದಂತಾದಿರಯ್ಯ . . . ಆ ಹಾವರ ಕಂಡೆನ ಗಂಜಿಕೆಯಾಯಿತ್ತಯ್ಯ (ಮೋಳಮಾ. ೧೯೬-೭೯). [?]

ಹಾವರಣ (ನಾ). ಮೇಲುಹೊದಿಕೆ: ನೊಸಲಗನ್ನಡಿ ಢಣರಂಬ ಹೊಕ್ಕುಳ ಘಂಟೆ ಮಿಸುನಿಬರಹದ ಹಾವರಣ ಬಸವ ಗಲ್ಲದ ಮದಧಾರೆಯಿಂದಾನೆಗಳ್ ಮಸಗಿ ಬಂದುವು ರಾಯನಡೆಗೆ (ಭರಚ. ೨೦-೬೩). [< ಸಂ. ಪ್ರಾವರಣ]

ಹಾವರಣೆ 'ಪಾವರಣೆ' ನೋ.

ಹಾವರಣೆ 'ಪಾವರಣೆ' ನೋ.

ಹಾವಸೆ 'ಪಾವಸೆ' ನೋ.

ಹಾವಸೆಗಲ್ಲು 'ಪಾವಸೆಗಲ್' ನೋ.

ಹಾವಸೆಮನ (ನಾ). (ಆಲಂ) ಅಶುದ್ಧವಾದ ಮನಸ್ಸು; ಮಲಿನವಾದ ಚಿತ್ತ: ಹಳಿವ ಹಾವಸೆಮನದೊಳಿದ್ದರು ಕೆಲರು ಕೆಲರಡೆಯಾಡುತಿರ್ದರು (ಕುವ್ಯಾಳ. ೫-೧೪). [ಹಾವಸೆ (< ಪಾವಸೆ) + ಮನ]

ಹಾವಸೆಹಲ್ಲು 'ಪಾವಸೆವಲ್' ನೋ.

ಹಾವಸೆಹಿಡಿ (ಕ್ರಿ). ಪಾಚಿ ಕಟ್ಟು; ಪಾಚಿ ಬೆಳೆ: ಮಡುಗಳಕ್ಕುಡಿಸಿಪವು ಹಾವಸೆ ಹಿಡಿದ ಪಥ ಪಾಂಥಕರ ಪದಹತಿಗೊಡಲನಿತ್ರವು ಹೊಂಗಿದವು ಹೊಲದಲಿ ವಿಹಂಗಚಿಯ (ತೊರಹಾ. ೪-೬-೧೧). [ಹಾವಸೆ (< ಪಾವಸೆ) + ಹಿಡಿ$_1$ (< ಪಿಡಿ$_1$)]

ಹಾವಳಿ (ನಾ). ತೊಂದರೆ; ಕಾಟ; ಉಪದ್ರವ: ಭಾವಯಿರಿಗೆ ತತ್ಪುರದೊಳು ಕ್ಕಾವನ ಹಾವಳಿ ವೆಗ್ಗಳಮಾಯ್ತು (ನೇಮಿಸಂ. ೮-೨೬); ಎಲ್ಲಿ ಬೆಣ್ಣೆಯ ಬಚ್ಚಿಡಲಿ ನಾ ಕಳ್ಳಕೃಷ್ಣನ ಹಾವಳಿ ಘನವಾಯಿತು (ಪುರಂದ. ೩-೭೧ ಪಲ್ಲವಿ); ಜಾನಕಿಯ ಸುತನ ಬಾಣಾವಳಿಯ ಹಾವಳಿಯನೇನೆಂಬೆನು (ಜೈಮಿಭಾ. ೨೦-೪೭).

ಹಾವಳಿಮಾಡು = ತೊಂದರೆಮಾಡು; ಉಪದ್ರವ ಕೊಡು: ಹುಲಿ ಚಿರತೆಗಳು ಹಗಲೇ ಊರಿಗೆ ಬಂದು ಹಾವಳಿ ಮಾಡುತ್ತವೆ (ಕೊಸಭೇ. ೨೨). [ದೇ. ∥ ತುಳು. ಹಾವಳಿ; ತೆಲು. ಹಾವಳಿ, ಹಾವಡಿ, ಆವಡಿ]

ಹಾವಳಿಸು (ಕ್ರಿ). ತೊಂದರೆ ಕೊಡು; ಹಾವಳಿಮಾಡು: ಹಸಿದ ಬಂದಿದೆ ಗೂಗೆ ಮುಗಿಲಿಂದಿಳಿಗೆ ಹಾವಳಿಸುತ್ತಲಿವೆ (ಭಾರಕಾಂ. ೪-೮೧); ಹಾವಳಿಸಿ ಕಾವಳಿಸಿದಹಿತರೊಳಗಾವರಿಸಿ (ಜಿನಮು. ೨೦-೩೦). [ಹಾವಳಿ + - ಇಸು$_3$]

ಹಾವಾಡಿಗ 'ಪಾವಡಿಗ' ನೋ.

ಹಾವಿಗೆ 'ಪಾವುಗೆ' ನೋ.

ಹಾವು 'ಪಾವು$_1$' ನೋ.

ಹಾವುಕಣ್ಣನಗಿಡ (ನಾ). ಒಂದು ಬಗೆಯ ಸಸ್ಯ: ''ನಾಕುಲೀ . . . ಸುವಹಾ — ೮ ಸರ್ಪಾಕ್ಷಿಗಿಡದ ಹೆಸರುಗಳು . . . ಹಾವುಕಣ್ಣನಗಿಡ, ನಂಜಾರೇಗಿಡ, ಮುಂಗೀಮೇವುಗಿಡ'' (ಸಿದ್ಧಾಂಜ. ೧೩೮). [ಹಾವು (< ಪಾವು$_1$) + < ಕಣ್ಣು + ಗಿಡ (< ಗಿಡು)]

ಹಾವುಗಣ್ಣು (ನಾ). ಹಾವಿನ ಕಣ್ಣಿನಂತೆ ಹೊಳೆಯುವ ಕಣ್ಣು: ಚಿಲುವಿನಲಿ ಬಳುಬಳುಕಿ ಬೆಡಗಿನಲಿ ನಲಿದು ಹಾವುಗಣ್ಣಿನ ಸೆರೆಯನೆಮ್ಮ ಸಳೆಯುವಿರಿ (ನಿಮ್ಮಧ್ಯ. ೨). [ಹಾವು (< ಪಾವು$_1$) + ಕಣ್ಣು (< ಕಣ್)]

ಹಾವುಗಾರ (ನಾ). ಹಾವನ್ನು ಹಿಡಿದು ಆಡಿಸುವ ವೃತ್ತಿಯವನು; ಹಾವಾಡಿಗ: ''ವ್ಯಾಲಗ್ರಾಹಿ — ಗಾರುಡಿಗ, ಹಾವುಗಾರ'' (ಗಂಗಾವ. ೬೦೦); ಹಾವುಗಾರನು ಕಣ್ಣು ಮೋಸಮಾಡಲಿಕ್ಕೆ ಕಲಿಯುತ್ತಾನೆ (ಮುಂಬಯಿ. ೪-೨೫೮). [ಹಾವು (< ಪಾವು$_1$) + - ಗಾರ (< - ಕಾಱ)]

ಹಾವುಗೆ$_1$ 'ಪಾವುಗೆ' ನೋ.

ಹಾವುಗೆ$_2$ (ನಾ). ತಪ್ಪು; ಕೆಟ್ಟದು; ಕೆಡುಕು (?): (ಪ).

ಹಾವುಗೆಗಾಱ (ನಾ). ೧. ಕೆಟ್ಟದ್ದನ್ನು ಮಾಡುವವನು (?): (ಪ). ೨. ಜೂಜಾಟದ ಮನೆಯನ್ನು ನಡೆಸುವವನು; ಜೂಜನ್ನು ಆಡಿಸುವವನು: (ಪ). [ಹಾವುಗೆ$_2$ + - ಕಾಱ]

ಹಾವುದಲೆಗ (ನಾ). (ಹಾವಿನ ಹೆಡೆಯನ್ನು ಹೋಲುವ ತಲೆಯನ್ನುಳ್ಳ) ಒಂದು ಬಗೆಯ ಹಕ್ಕಿ: ಹಂಗ ಹಾವುದಲೆಗ ಹದ್ದು ಮರವಕ್ಕಿ . . . ಸೋಗ ಸೊಡ ಪಿಕಗಳ ಪಣದರುವಕ್ಕಿಯಿಂದೊಪ್ಪಿತಡವಿ (ರಾಮವಿ. ೧೫-೭೩); ಹಾವುದಲೆಗ ಹರಡೆ ಹಂಗ . . . ಕನ್ನವಿಲ್ಲಳ ಹೊಜೆ ಮುಂದೆ ತಳರೆ ತಡೆಯದೆಯ್ದಿದವು (ಕುರಾಸಾಂ. ೬೪-೩). [ಹಾವು (< ಪಾವು$_1$) + ತಲೆ$_1$ + - ಗ್$_3$]

ಹಾವುನಂಜಿನಗಿಡ (ನಾ). ಒಂದು ಬಗೆಯ ಸಸ್ಯ: ಕೊಮರಕ, ಹಾವು ನಂಜಿನಗಿಡ, ಕಾಡುಮಣಸು (ನಮ್ಮನು. ೨೩೮). [ಹಾವು (< ಪಾವು$_1$) + < ನಂಜು$_2$ + ಗಿಡ (< ಗಿಡು)]

ಹಾವುಮಕ್ಕಿ 'ಪಾವುಮೆಕ್ಕೆ' ನೋ.

ಹಾವುಮಾನು 'ಪಾವುಮಾನ್' ನೋ.

ಹಾವುಮೆಕ್ಕೆ 'ಪಾವುಮೆಕ್ಕೆ' ನೋ.

ಹಾವುರಾಣಿ 'ಪಾವರಣೆ' ನೋ.

ಹಾವುಲಿಗೆ (ನಾ). ಒಂದು ಬಗೆಯ ಸಸ್ಯ: ನಾರುಬೇರು, ಹಾವುಲಿಗ, ಹಂಟಗೆ, ಹೌಳಿಗ, ಬೆಳಂಗಿ (ಮೃಚಿ. ೨-೬೨). [?]

ಹಾವುಸೆ 'ಪಾವಸೆ' ನೋ.

ಹಾವೇರಿನ್ಯಾಯ (ನಾ). (ಉಕ) ಉಭಯಪಕ್ಷಗಳಿಗೂ ಸಮಾಧಾನ ತರುವ ನ್ಯಾಯ; ℙ ಧಾರವಾಡಜಿಲ್ಲೆಯ ಹಾವೇರಿತಾಲ್ಲೂಕಿನಿಂದ ಪ್ರಾರಂಭವಾಯಿತೆಂದು ಭಾವಿಸಲಾದ ನ್ಯಾಯ: ಪುರಾಣಗಳಲ್ಲಿ ಹರಿ-ಹರರ ಹಾವೇರಿನ್ಯಾಯವಾಗಿ ಹರಿ ಹೆಚ್ಚಲ್ಲ, ಹರ ಕಡಿಮೆಯಲ್ಲ ಇಬ್ಬರೂ ಸಮಾನರು ಎಂದು ಗೊತ್ತಾಗಿಲ್ಲವೆ! (ನಿರಾಭ. ೧೩೦); ಶಂಕರಾಚಾರ್ಯರೂ ಈ ವಿಷಯದಲ್ಲಿ ಹೇಳಿದುದರಿಂದ, 'ಹಾವೇರಿನ್ಯಾಯ' ಮಾಡಿ ಡಾಕ್ಟರರು ಜನಿವಾರವೊಂದನ್ನು ಹಾಕಿಕೊಂಡಿರುವರು (ಸಂನಾಪ. ೧೦೫). [ಹಾವೇರಿ + ನ್ಯಾಯ]

ಹಾವ್ಮೆಕ್ಕೆ 'ಪಾವುಮೆಕ್ಕೆ' ನೋ.

ಹಾಸ$_1$ 'ಪಾಸ$_1$' ನೋ.

ಹಾಸ$_2$ (ನಾ). ೧. ನಗು; ನಗೆ: ಹರಹಾಸಾವಯವಂಗಳಂತಿರಲ್ . . . ನಿರ್ಮಲ ದಿವ್ಯಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರಸುಂದರಮಲ್ಲಿರ್ದುದು ರತ್ನಪೀಠಘಟಿತಂ ದೇದೀಪ್ಯಮಾನಪ್ರಭಂ (ಕಾದಂಪೂ. ೬೫೭); ಮುಕುಳನನಿಮಿಳನಂಗಳ್ ವಿಕಾಸಹಾಸ ಪ್ರಬೋಧನೋನ್ಮೇಷಂಗಳ್ ಪ್ರಕಟಿಸುಗುಮ್ಮೆಕ್ಕಮಂ ನಿರ್ವಿಕಲ್ಪದಿಂ ಗೌಣ ಮುಖ್ಯವೃತ್ತಿಕೃತಂಗಳ್ (ಕಾವ್ಯಾವ. ೯೧೪). ೨. ಉಲ್ಲಾಸ; ನಲಿವು; ಸಂತೋಷ. ೩. [ಕಾವ್ಯಮೀ] ಅಂಗವಿಕಾರಾದಿ ದರ್ಶನದಿಂದ ಉಂಟಾಗುವ ಚಿತ್ತವಿಕಾಸ: ಹಾಸ್ಯರಸದ ಸ್ಥಾಯಿಭಾವ: ರತಿ ಹಾಸ . . . ಶಮೆಯೆಂಬ ಕ್ರಮದಿಂ ಶೃಂಗಾರಾದಿ ನವರಸಕ್ಕೆ ಬೀಜಭೂತಂಗಳಾದ ಸ್ಥಾಯಿಭಾವಂಗಳೇ ದಕ್ಷಿಣಾದಿನಾಯಕ ಹೃದಯದಲ್ಲಿ ಸ್ಥಾಯಿಯಾಗಿರ್ದು (ಏವೀಶ. ೧೯೦); ಕೆಳಗಿನ ಭಾವಲೋಕದಿಂದ ರೇಖಾಂಶಗಳಂತೆ ರತಿ ಹಾಸ ಶೋಕಾದಿ ಸ್ಥಾಯಿಭಾವಗಳು ಹೊರಡುತ್ತವೆ (ಸೌಂದ. ೧೯). [ಸಂ.]

ಹಾಸಂಗಿ 'ಪಾಸಂಗೆ' ನೋ.

ಹಾಸಕ್ಕಿ (ನಾ). ರಂಗೋಲಿಯ ಹಸೆ ಬರೆಯುವಾಗ ಇಡುವ ಚುಕ್ಕಿ: ಕೇಸರಿ ಬಣ್ಣದ ಕ್ಯಾವಿ, ಬಿಳಿಯ ಬಣ್ಣದ ಸುಣ್ಣ, ಹಾಸಕ್ಕಿ ಕುಸುರು ಬರೆಯಾರೆ (ಕನ್ನಬಾ. ೬೭).

[ಹಾಸು$_3$ (< ಪಾಸು$_2$) + ಅಕ್ಕಿ$_1$]

ಹಾಸಗಿ 'ಪಾಸಂಗ' ನೋ.

ಹಾಸಗೆಹಿಡಿ 'ಹಾಸಿಗೆಹಿಡಿ' ನೋ.

ಹಾಸರ 'ಹೇಸರ' ನೋ.

ಹಾಸರಗತ್ತೆ 'ಹೇಸರಗಳ್ತೆ' ನೋ.

ಹಾಸರೆ 'ಪಾಸಱೆ' ನೋ.

ಹಾಸರೆಗಲ್ಲು 'ಪಾಸಱೆಗಲ್ಲು' ನೋ.

ಹಾಸಲು (ನಾ). ೧. ಪ್ರಯಾಣ, ಅಂಚೆ ಮುಂತಾದುವುಗಳ ವೆಚ್ಚ: ಮೊದಲು . . . ಪತ್ರ ಮುಟ್ಟುತಕ್ಕ ಸ್ಥಳದ ಅಂತರದ ಮಾನದಿಂದ ಹಾಸಲು ಕೊಡಬೇಕಾಗುತ್ತಿತ್ತು (ಮುಜಾಯಿ. ೪-೭೩); ಹಾಸಲು, ಹಾಯಿಸಲು, ಹಾಯಿಸುವುದಕ್ಕೆ ಕೊಡಬೇಕಾದ ಸುಂಕ ಎಂದಿರಬಹುದು (ನಮ್ಮನು. ೧೦೯); ಹೋಗಿ ಬರುವ ಹಡಗಿನ ಹಾಸಲನ್ನು ಕೊಟ್ಟಾಗಿತ್ತು (ಅಪೂಪ. ೭). ೨. ಬೆಲೆ; ಕಿಮ್ಮತ್ತು: ಕಾಗದ್ದಾಗ ಏನ ಹಾಸಲ ಉಳದದ. ಗಂಟನಕಿಂತ ಬಡ್ಡೀನ ಜಾಸ್ತ ಆಗೇದ (ದೀಪಹ. I. ೧೪೧).

[← ಅರ. ಹಾಸೀಲ್; ಮರಾ. ಹಾಶೀಲ್, ಹಶೀಲ್]

ಹಾಸಱೆ 'ಪಾಸಱೆ' ನೋ.

ಹಾಸಱೆಗಲು 'ಪಾಸಱೆಗಲ್ಲು' ನೋ.

ಹಾಸಱೆಗಲ್ಲು 'ಪಾಸಱೆಗಲ್ಲು' ನೋ.

ಹಾಸಾದ 'ಪಸಾದ' ನೋ.

ಹಾಸಿಕೆ$_1$ 'ಪಾಸಿಕೆ' ನೋ.

ಹಾಸಿಕೆ$_2$ (ನಾ). ನಗು; ಹಾಸ: (ಕ). [ಹಾಸ$_2$ + - ಇಕೆ]

ಹಾಸಿಕ್ಕು (ಕ್ರಿ). ಮಗ್ಗದ ನೂಲುಹಾಸನ್ನು ಸಿದ್ಧಪಡಿಸು: (ಕ).

[ಹಾಸು$_3$ (< ಪಾಸು$_2$) + ಇಕ್ಕು]

ಹಾಸಿಗ (ನಾ). ನಗಿಸುವವನು; ಹಾಸ್ಯಗಾರ; ವಿದೂಷಕ: ಒಸೆದು ಪೌರಾಣಿ ಹಾಸಿಗರು ಮುಂತಾದಸಮಸದ್ಭುಧಜನರು ಮುಖ್ಯವಿನಿಯೋಗದೊಡ್ಡೋಲಗದಲ್ಲಿ ಶಶಿಮೌಳಿಯಂದದಿ ಸಮಸ್ತಪ್ರಭುವರನೆನಿಸಿ . . . ಇರ್ದನಾ ಖಳೇಶ (ನವಮೋ. ೩-೨೬). [ಹಾಸ$_2$ + - ಇಗ]

ಹಾಸಿಗೆ 'ಪಾಸುಗೆ$_1$' ನೋ.

ಹಾಸಿಗೆಗಲ್ಲು 'ಹಾಸುಗೆಗಲ್ಲು' ನೋ.

ಹಾಸಿಗೆಮರ (ಕ್ರಿ). ಒಂದು ಬಗೆಯ ಮರ: ಹಾಸಿಗೆಮರ, ಕಾಡುಅಶೋಕ (ಮೃಡಿಗಿ. ೪೪-೩೭೮). [ಹಾಸಿಗೆ, + ಮರ$_1$]

ಹಾಸಿಗೆಹತ್ತು (ಕ್ರಿ). ರೋಗದ ಕಾರಣದಿಂದ ಹಾಸಿಗೆಯಿಂದ ಮೇಲಕ್ಕೇಳದಂತಿರು,–ಮಲಗು: ಈ ಸ್ಥಿತಿಯಲ್ಲಿ ಅವಳಿಗೆ ಕಾಯಿಲೆಯಾಗಿ ಹಾಸಿಗೆ ಹತ್ತಿ ಮಲಗಲು (ಬೂಕಾ. ೧೩೨). [ಹಾಸಿಗೆ (< ಪಾಸುಗೆ$_1$) + ಹತ್ತು$_1$ (< ಪತ್ತು$_1$)]

ಹಾಸಿಗೆಹಾವು (ನಾ). ಹಾಸಿಗೆಯಲ್ಲಿ ಸೇರಿಕೊಂಡಿರುವ ಹಾವು ,– ಸರ್ಪ.

ಹಾಸಿಗೆ ಹಾವಾಗು = (ಆಲಂ) ಶತ್ರುವಾಗು; ದ್ರೋಹಿಯಾಗು: ದುರ್ಗದ ತುರುಕ ಪ್ರಜೆಗಳೂ, ತುರುಕ ಅಧಿಕಾರಿಗಳೂ, ಹಾಸಿಗೆ ಹಾವಾಗಿ ತಮ್ಮ ದ್ರೋಹಿತನವನ್ನು ಮತಮ್ಮೆರಕ್ಕಿಂತಲೂ ಹೆಚ್ಚಾಗಿ ತೋರಿಸಿದರು (ಚಿತ್ರಪಾ. ೧೦೨).

[ಹಾಸಿಗೆ (< ಪಾಸುಗೆ) + ಹಾವು (< ಪಾವು$_1$)]

ಹಾಸಿಗೆಹಿಡಿ, ಹಾಸಗೆಹಿಡಿ (ಕ್ರಿ). = ಹಾಸಿಗೆಹತ್ತು: ಸೀತಾರಾಮುವು ಹಾಸಿಗೆ ಹಿಡಿದಂದಿನಿಂದ ರಾಮಚಂದ್ರನು ಅವನ ಪಕ್ಕದಿಂದ ಅಲುಗಲಿಲ್ಲ, (ಸಉಪ. ೮೯.); ಈ ಬಾರಿ ವೆಂಕಪ್ಪಯ್ಯನವರ ಮನೆಯಲ್ಲಿ ಎಲ್ಲರೂ ಒಂದಲ್ಲ ಒಂದು ಕಾರಣದಿಂದ ಹಾಸಿಗೆಹಿಡಿದುಬಿಟ್ಟಿದ್ದರು (ಎದ್ಕಾರ. ೨). **ಹಾಸಗೆಹಿಡಿ**: ಹಾಸಗೆಹಿಡಿದಳಾ ದಿನವೆ ಶಬರಿಯುಂ (ಶ್ರೀರಾಮಾ. ೨೭೬-೩೪೯). [ಹಾಸಿಗೆ (< ವಾಸುಗೆ$_1$) + ಹಿಡಿ$_1$ (< ಪಿಡಿ$_1$)]

ಹಾಸಿಗೆಹುಣ್ಣು (ನಾ). "ಯಾವಾಗಲೂ ಮಲಗಿಯೇ ಇರುವುದರಿಂದ ಆದ ಹುಣ್ಣು: ಹಾಸಿಗೆಹುಣ್ಣು" (Bed Sore. ಇಂಕಾ).

[ಹಾಸಿಗೆ (< ಪಾಸುಗೆ$_1$) + ಹುಣ್ಣು (< ಪುಣ್)]

ಹಾಸಿಸು (ಕ್ರಿ). ಗೇಲಿಮಾಡು; ಚೇಷ್ಟೆ ಮಾಡು: ಮೃತ್ಯುರಹಿತನ ಧ್ಯಾನದೊಳಗೆ ಬರುತಿರಲೋರ್ವ ಕುತ್ಸದಿಂ ಮೃತವಾಗಿ ಹೂಣುತಿರಲಲ್ಲೊಬ್ಬನುತ್ತಮ ಸುಶಿವಭಕ್ತ ಸಾವರೇಯೆಂದು ಹಾಸಿಸಲವಂಗಸುವಿತ್ತನು (ಪ್ರಬುಪ್ರ. ೭-೧೫೩); ಇಂತೆಂದು ನುಡಿಯಲು ಗಜರಿದನು ಹಾಸಿಸುವರೆಂದೆನುತ (ಸುದಾಮ. ೫-೧೬). [ಹಾಸ್$_2$ + - ಇಸು$_3$]

ಹಾಸು$_1$ 'ಪಾಸು$_1$' ನೋ.

ಹಾಸು$_2$ 'ಪಾಯಿಸು' ನೋ.

ಹಾಸು$_3$ 'ಪಾಸು$_2$' ನೋ.

ಹಾಸು$_4$ 'ಪಾಸ$_1$' ನೋ.

ಹಾಸುಎಳೆ 'ಹಾಸೆಳೆ' ನೋ.

ಹಾಸುಂಬೆ (ನಾ). ಪಾಚಿ; ಪಾವಸೆ: ಹಾಸುಂಬೆ ಹಬ್ಬಿದ ಕಲ್ಲುಗೋಡೆಯು ಆ ಕಟ್ಟಡಗಳಲ್ಲಾಗಲಿ . . . ಒಂದು ನರಪಿಳ್ಳೆಯಾದರೂ ಕಾಣುತ್ತಿರಲಿಲ್ಲ (ಮಲಮ. ೭೧೧).

[< ಪಾವಸೆ]

ಹಾಸುಕಲ್ಲು 'ಪಾಸುಗಲ್' ನೋ.

ಹಾಸುಗಲ್ಲು 'ಪಾಸುಗಲ್' ನೋ.

ಹಾಸುಗಳೆ (ಕ್ರಿ). (ನಾಯಿಯ ಕೊರಳಿಗೆ ಕಟ್ಟಿರುವ) ಪಟ್ಟಿಯನ್ನು ಬಿಚ್ಚು, – ಸಡಿಲಿಸು: "ನಿಜ ಭಾವಿಸಲು ಹಾಸುಗಳೆಯಲ್ಲಿ ತಿವಿ ಶಬ್ದ" (ಶಬ್ಧಮಂ. ೧೧೦).

[ಹಾಸು$_4$ (< ಪಾಸ$_1$) + ಕಳೆ$_1$]

ಹಾಸುಗಾಯ್, ಹಾಸುಗಾಯಿ (ನಾ). ಉದ್ದವಾಗಿ ಸೀಳಿರುವ ಕಾಯಿ (?): ಅದಱೊಳಗೆ ತಾಳಿಸಿಕೊಂಡು ನೀರುಳ್ಳಿಗಳನು ಕಗ್ಗುಂಬಳದ ಹಾಸುಗಾಯ್ಗಳಿನು ತಂದಿಳಿಹಿ ಸಮನಾದ ಕಂದಲ ಮುಚ್ಚಿ . . . ಪಾಕಂ ಮಾಡೆ (ಸೂಪಶಾ. ೫-೧೬). **ಹಾಸುಗಾಯಿ**: ಬದನೆ ಹೀರೆಯ ಹಾಸುಗಾಯ . . . ಮೃದುವಾದ ತಾಳಲನಿಕ್ಕಿ (ಜ್ಞಾನಚಿ. ೩೯-೧೧೫). [ಹಾಸು$_3$ (< ಪಾಸು$_2$) + ಕಾಯ್$_4$]

ಹಾಸುಗಾಯಿ 'ಹಾಸುಗಾಯ್' ನೋ.

ಹಾಸುಗೆ 'ಪಾಸುಗೆ$_1$' ನೋ.

ಹಾಸುಗೆಗಲ್ಲು, ಹಾಸಿಗೆಗಲ್ಲು (ನಾ). ಉದ್ದಕ್ಕೆ ಚಾಚಿರುವ ಕಲ್ಲು; ಹಾಸುಗಲ್ಲು: ಬಸವೇಶ್ವರದೇವಸ್ಥಾನದ ಯಾವುದಾದರೂ ಒಂದು ಕಂಬ ಒರಗು ದಿಂಬಾಗಿರುತ್ತದೆ. ಹಗಲಾದರೆ; ಇರುಳಾದರೆ, ಇವನಿಗೇ ಮಿಸಲಾಗಿರುವ ಹಾಸುಗೆಗಲ್ಲು (ಬಳುಮ. ೬). **ಹಾಸಿಗೆಗಲ್ಲು**: ಇಲ್ಲಿಂದ ಹಾಸಿಗೆಗಲ್ಲುಗಳು ಪರವೂರಿಗೆ ಹೋಗುತ್ತವೆ (ಗ್ರಟಬ್ರಿ. ೫೦). [ಹಾಸುಗೆ (< ಪಾಸುಗೆ$_1$) + ಕಲ್ಲು (< ಕಲ್$_1$)]

ಹಾಸುಗೆಹಿಡಿ 'ಪಾಸುಗೆ$_1$' ಪರಾ.

ಹಾಸುಗೊಳ್ (ಕ್ರಿ). ಹಗ್ಗದಿಂದ ಕಟ್ಟಿಸಿಕೊಳ್ಳು: ಹಾಸುಗೊಂಡ ನಾಯಂತ ಸಿಡಿಮಿಡಿಗೊಂಡು (ಧರ್ಮಾಮೃ. ೧೦-೧೬೮). [ಹಾಸು$_4$ (< ಪಾಸ$_1$) + ಕೊಳ್$_1$]

ಹಾಸುಗೋಲ್, ಹಾಸುಗೋಲು (ನಾ). ಓಟಕ್ಕೆ ತಡೆಯಾಗುವಂತೆ (ನಾಯಿ ಮುಂತಾದ) ಪ್ರಾಣಿಯ ಕೊರಳಿಗೆ ಕಟ್ಟುವ ಕೋಲು; "ಕೊಡತ, ನಾಯ ಕೊರಳಿಗೆ ಕಟ್ಟಿದ ಕೋಲು" (ಪ್ರಭಗ್ಲೊ). **ಹಾಸುಗೋಲು**: "ಚಳಿ ಹಾಸುಗೋಲು ಪುಣ್ಣೋವುಗಳೊಳಂ ಕೊಡತ" (ಶಬ್ಧಮಂ. ೯೮). [ಹಾಸು$_4$ (< ಪಾಸ$_1$) + ಕೋಲ್$_1$]

ಹಾಸುಗೋಲು 'ಹಾಸುಗೋಲ್' ನೋ.

ಹಾಸುನರಿ (ನಾ). ಮಗ್ಗದ ಹಾಸನ್ನು ಸಿದ್ಧಪಡಿಸಲು ಉಪಯೋಗಿಸುವ ಒಂದು ಬಗೆಯ ಸಲಕರಣೆ: (ಕ). [ಹಾಸು$_3$ (< ಪಾಸು$_2$) + ನರಿ$_1$]

ಹಾಸುನೂಲು (ನಾ). ಮಗ್ಗದಲ್ಲಿ ಉದ್ದಕ್ಕೆ ಹಾಕಿರುವ ಎಳೆಗಳ ಸಾಲು: ನೀಟವಾಗಿ ಸಮವಾಗಿರುವ ಹಾಸುನೂಲುಗಳು ಹೊಕ್ಕುನೂಲುಗಳಿಗೆ ಆಧಾರವಾಗಿರುವ ಹಾಗೆ ಸತ್ಪುರುಷರಿಗೆ ಸತ್ಪುರುಷರೇ ಆಧಾರವಾಗಿರುವರು (ಕೃವಾಭಾ. ೫೯); ಆ ಮನೆಯ ಮುದುಕಿ ಮತ್ತು ಅವಳ ಹಿರಿಯ ಮೊಮ್ಮಗಳು ಮಗ್ಗದ ಹಾಸುನೂಲನ್ನು ಜೋಡಿಸುತ್ತಿದ್ದರು (ಪುನರು. ೨೮೭). [ಹಾಸು$_3$ (< ಪಾಸು$_2$) + ನೂಲು$_2$ (< ನೂಲ್$_2$)]

ಹಾಸುಬಂಡೆ (ನಾ). ಅಗಲವಾದ ಚಪ್ಪಟೆಕಲ್ಲು; ಹಾಸುಗಲ್ಲು: ಪೀಂಚಲು ಒಂದು ಹಾಸುಬಂಡೆಗೆ ಹಾರಿ . . . ತಳಾಲೆಯನ್ನು ತಂದಳು (ಪಲಮು. ೧೭೦).

[ಹಾಸು$_3$ (< ಪಾಸು$_2$) + ಬಂಡೆ$_1$]

ಹಾಸುಮಂಚ 'ಪಾಸುವಂಚ' ನೋ.

ಹಾಸುಮಡಿ (ನಾ). (ನಡೆಮಡಿಯಂತೆ ನೆಲಕ್ಕೆ) ಹಾಸಲು ಬಳಸುವ ವಸ್ತ್ರ: ಈ ಹೊನ್ನಿನ ಹಾಸುಮಡಿ, ಬೆಳ್ಳಿಯ ಹೂಮಾಲೆ, ಬಂಗಾರದ ಹೊಮ್ಮುಗುಳಿನ ಮಾಲೆ ಇವನ್ನು ಅಕ್ಕನ ಸುಮ್ಮಾನಕ್ಕೆ ಇರಲೆಂದು ತಮ್ಮಂದಿರು ಕಳುಹಿದರೊ? (ಮಾಮಲ್ಲಿ. ೫೧).

[ಹಾಸು$_3$ (< ಪಾಸು$_2$) + ಮಡಿ$_2$]

ಹಾಸುಮಣೆ 'ಪಾಸುಮಣೆ' ನೋ.

ಹಾಸುವಲಗೆ, ಹಾಸುಹಲಗೆ (ನಾ). ಅಗಲವಾದ ಹಲಗೆ: ಆ ವಿಶ್ವಕರ್ಮನಿಂದಂ ಭೂಮಿ ತಾನೇ ವರೂಥಮಾಯ್ತಾಸುಗಳ್ ತಾರೆಗಳ್ ನಾನಾ ಸಮುದ್ರಂಗಳಚ್ಚಾದುವಾ ವಿಂಧ್ಯಗಿರಿ ಹಾಸುವಲಗೆಯಾಯ್ತು (ಚಿಪ್ರಪು. ೪೧-೪೨). **ಹಾಸುಹಲಗೆ:** ವಿಂಧ್ಯ ಹಿಮಗಿರಿ ಹಾಸುಹಲಗೆಗಳಾದವಚ್ಚು ಮಹಾಸಮುದ್ರವೆ ಆಯ್ತು (ಕವ್ಯಾಳ. ೭-೩).

[ಹಾಸು$_3$ (< ಪಾಸು$_2$) + ಪಲಗೆ]

ಹಾಸುವಲೆ 'ಪಾಸುಂಬಲೆ' ನೋ.

ಹಾಸುಹಲಗೆ 'ಹಾಸುವಲಗೆ' ನೋ.

ಹಾಸುಹೊಕ್ಕು$_1$ 'ಪಾಸು$_2$' ಪರಾ.

ಹಾಸುಹೊಕ್ಕು$_2$ 'ಪಾಸುಂಪೊಕ್ಕುಂ' ನೋ.

ಹಾಸುಹೊಯ್ಯು (ಕ್ರಿ). ೧. ಮಗ್ಗದ ಹಾಸನ್ನು ಸಿದ್ಧಗೊಳಿಸು: (ಕ), ೨. ಅತ್ತಿತ್ತ ಚಲಿಸು; ಶತಪಥಹಾಕು: ಗೌಡರು ಗುಡಿಯ ತುಂಬ ಹಾಸುಹೊಯ್ಯತೊಡಗಿದರು (ಗ್ರಾಮಾಯ. ೩೬). ೩. ಮಗುಚಿ ಹಾಕು; ತಿರುವು: ಜಯಂತನು ತನ್ನ ಸ್ಮರಣೆಯ ಹಾಸುಹೊಯ್ಯಹತ್ತಿದನು (ಜಯಂತ. ೯೯).

[ಹಾಸು$_3$ (< ಪಾಸು$_2$) + ಹೊಯ್ದು$_2$ (< ಪೊಯ್$_2$)]

ಹಾಸೆಳೆ, ಹಾಸುಎಳೆ (ನಾ). = ಹಾಸುನೂಲು: ಹಾಸೆಳೆಯನ್ನು ಸರಿಪಡಿಸಲಾಗದುದರಿಂದ ಅವಳು ಉರಿದು ಬೀಳುತ್ತಿದ್ದಳು (ಪುನರು. ೨೮೨). **ಹಾಸುಎಳೆ:** ಆ ನೇಯ್ಗೆಯ ಬಟ್ಟೆಗಳಲ್ಲಿ ಕರ್ಣರೇಖೆಗಳು ಕಂಡುಬರುವುದಿಲ್ಲ. ಹೋಗುಎಳೆಗಳು ೩ ಅಥವಾ ೪ ಹಾಸುಎಳೆಗಳ ಕೆಳಗಾಗಲೀ ಮೇಲಾಗಲೀ ತೂರಿಹೋಗುತ್ತವೆ (ಗೃಪಾ. ೭೪).

[ಹಾಸು$_3$ (< ಪಾಸು$_2$) + ಎಳೆ$_2$ (< ಎಟ್$_2$)]

ಹಾಸ್ಟಲು 'ಹಾಸ್ಟೆಲ್ಲು' ನೋ.

ಹಾಸ್ಟೆಲು 'ಹಾಸ್ಟೆಲ್ಲು' ನೋ.

ಹಾಸ್ಟೆಲ್ಲು, ಹಾಸ್ಟಲು, ಹಾಸ್ಟೆಲು (ನಾ). ವಿದ್ಯಾರ್ಥಿಗಳಿಗೆ ಅಥವಾ ಇತರ ವಿಶೇಷಪಂಗಡದವರಿಗೆ ಊಟ, ವಸತಿಗಳನ್ನು ಕೊಡುವ ಮನೆ; ವಿದ್ಯಾರ್ಥಿನಿಲಯ: ಸರೋಜಳನ್ನು . . . ಚಿಕ್ಕಪ್ಪನ ಮನೆಯಲ್ಲಿ ಬಿಡಬಹುದೆಂದೋ ಹಾಸ್ಟೆಲ್ಲಿನಲ್ಲಿ ಇಡಬಹುದೆಂದೋ ನಾಗರಾಜ ಹೇಳಿದ್ದನಷ್ಟೇ (ಮಹಾಗ. ೩೫೫). **ಹಾಸ್ಟಲು:** ಮೈಸೂರಿನ ಕಾಲೇಜುವಿದ್ಯಾರ್ಥಿನಿಯರ ಹಾಸ್ಟಲಿಗೆ ಸೇರಿಸಿದರು (ದೊರಸ. ೪೨). **ಹಾಸ್ಟೆಲು:** ನಮ್ಮ ಹುಡುಗರಿಗೂ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಅಂತ ಹಾಸ್ಟೆಲು ಇಟ್ಟಾರ (ನೀನಮು. ೧೫೪); ನಿತ್ಯ ವಿದ್ಯಾರ್ಥಿಗಳು . . . ಹಾಸ್ಟೆಲನ್ನು ತೊಳೆದು ಶುಭ್ರವಾಗಿಡಬೇಕು (ಪೂಸಕ್ಷಿ. ೨೪೩). [← ಇಂ. Hostel]

ಹಾಸ್ತಿಕ (ನಾ). ೧. ಆನೆಯನ್ನು ನಡೆಸುವವನು; ಮಾವಟಿಗ: ಆಗಳದಱ ಸಿರಿಯನರಸಂ ಭೀಮರಥನೊಳ್ ನುಡಿಯುತ್ತುಂ ಹಾಸ್ತಿಕಪ್ರಾಯಬಲಂ ಬರುತುಮಿರೆ (ಚಂದ್ರಪ್ರ. ೧೦-೪೬ ವ). ೨. ಆನೆಗಳ ಹಿಂಡು,—ಗುಂಪು: "ಕರಿಬ್ಯಂದಂ ಗಜತೆ ಹಾಸ್ತಿಕಂ ತಾನಕ್ಕುಂ" (ವಸ್ತುಕೋ. ೮೭-೩೨); ಚಿಲಾತಾವರ್ತರೆಂಬರ್ವರ್ ಮ್ಲೇಚ್ಛರಾಜರ್ ಧನುರ್ಧರಪ್ರಾಯಮುಮಶ್ವೀಯಬಹಳಮುಂ ಹಾಸ್ತಿಕಸಾಧನಮುಮಪ್ಪ ತಮ್ಮ ಬಲಮನೊಂದು ಮಾಡಿ (ಆದಿಪು. ೧೩-೫೬ ವ). [ಸಂ.]

ಹಾಸ್ಯ (ನಾ). ೧. ನಲಿವು; ಉಲ್ಲಾಸ; ಸಂತೋಷ: ಪೂರ್ವರತಿ ಹಾಸ್ಯ ಜುಗುಪ್ಸೆ . . . ಕ್ರೋಧಮೆನೆ ತೋರ್ವ ಭಾವಮದಕ್ಕು (ಮಂಗರಾ. ೨೨-೧); ಸರಸಹಾಸ್ಯದ ಹಾಸಕದ ವಹಣಿಗಳ ವೈಸಿಕದ . . . ನವಶಾಬರಿಯರ್ಕೆದಿದರರಸ ಕೇಳ್ ಮುನಿಮ್ಯಗವನಾಂತರವ (ತೊರರಾ. ೧-೫ ೪೦). ೨. ನಗೆಯನ್ನುಂಟುಮಾಡುವಿಕೆ; ತಮಾಷೆ; ವಿನೋದ: ಸಮರವಿಶ್ರಾಂತಸೈನಿಕರ ಪ್ರದರ್ಶನದ ಘೋಷದಿಂ, ಜಯಗಾನದಿಂ ಹಾಸ್ಯ ಪರಿಹಾಸ್ಯಶಬ್ದದಿಂ . . . ರಣಶಿಬಿರಮೆಸೆದತ್ತು (ಚಿತ್ರಾಂಗ. ೧೪-೪೭೧); ಹಾಸ್ಯದಲ್ಲಿ ನಗೆಯು ಪುಷ್ಪದಲ್ಲಿ ಪರಿಮಳ ಬೆರೆದಂತೆ (ಕನ್ನಚಾ. ೪೯). ೩. ಕುಚೋದ್ಯ; ಗೇಲಿ; ಅಣಕ: ಒಮ್ಮೊಮ್ಮೆ ಹೆಣ್ಣು ಹೊಯ್ಮಾಲಿಯಾಗಿ ಒಣಸೋಗು ಮಾಡಿ, ಹಾಸ್ಯಕ್ಕೆ ಗುರಿಯಾಗುವುದೂ ಉಂಟು (ಕನ್ನಚಾ. ೫೯). ೪. [ಕಾವ್ಯಮೀ] ನಾಟಕ ಅಥವಾ ಕಾವ್ಯದಲ್ಲಿ ಬರುವ ನವರಸಗಳಲ್ಲಿ ಒಂದು: "ಶೃಂಗಾರಃ, ಹಾಸ್ಯಃ, ಕರುಣಃ, ರೌದ್ರಃ, ವೀರಃ, ಭಯಾನಕಃ, ಭೀಭತ್ಸಃ, ಅದ್ಭುತಃ, ಶಾಂತಃ - ಈ ೯ ರಸಂಗಳ್" (ಪಲಾಯು. ೧೭-೯೨); ಕಾರುಣ್ಯಂ ಹಾಸ್ಯಂ ಶೃಂಗಾರಮಿನಿತಱೊಳಮಕ್ಕೆ ವೈದರ್ಭ . . . ವೀರರಸಂಗಳ್ಗಿ ಪೇಟ್ಪೆ ಪಾಂಚಾಳಿಕೆಯಂ (ಕಾವ್ಯಾವ. ೭೮೮); ವರ ಶೃಂಗಾರಂ ಹಾಸ್ಯಂ ಕರುಣಂ ವೀರಂ . . . ಭೀಭತ್ಸ ರಸಂಗಳಿವೆಂಟು ಮತ್ತ ನುತ ಶಾಂತರಸಂ (ರಪಠ. ೧-೧೧). ೫. [ಜೈನ] ಒಂಭತ್ತು ವಿಧವಾದ ನೋಕಷಾಯ ಅಥವಾ ಮೋಹನೀಯ ಕರ್ಮಭೇದಗಳಲ್ಲಿ ಒಂದು; "ನಗೆ, ತಮಾಷೆಗಳನ್ನುಂಟು ಮಾಡುವ ಕರ್ಮ" (ಜೈನಕೋ. ೨೮೭): ಕ್ರಮಕ್ರಮದೊಳ್ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ ಪುರಾತನಸತ್ಕರ್ಮದೊಡನೆ ಹಾಸ್ಯರತ್ಯರತಿಶೋಕ ಭಯ ಜುಗುಪ್ಸಾಭಿಧಾನ ನವನೋಕಷಾಯ ಷಟ್ಕರ್ಮಮುಮಂ ಘಾತಿಸಿ (ಆದಿಪು. ೧೦ ೨೪ ವ). [ಸಂ.]

ಹಾಸ್ಯಂಗೆಯ್ (ಕ್ರಿ). ಅಣಕಿಸು; ಗೇಲಿಮಾಡು: ಲಂಬಕರ್ಣಂ ಆ ನರಿ ದೂರುಭೀರುವಾದುದರ್ಕೆ ಹಾಸ್ಯಂಗೆಯ್ದುದು (ಪಂಚತಂ. ೪೧ ೨೦). [ಹಾಸ್ಯ + ಕೆಯ್$_1$]

ಹಾಸ್ಯಕ (ನಾ). ತಮಾಷೆಗಾರ; ವಿದೂಷಕ: ಗಾಯಕ ವೈಣಿಕ ಮಾರ್ದಂಗಿಕ ಜಟ್ಟಿ ಹಾಸ್ಯಕರೂ . . . ಊರೊಳಿರ್ಪ ಪರಿಜನ ಪಾರ್ವರೂ ನಡೆತಂದು . . . ಕುಳಿತರು (ಕಗವಿ. ೭೫ ಎಷ್ಟುಪು). [ಸಂ.]

ಹಾಸ್ಯಗಾತಿ (ನಾ). ನಗಿಸುವವಳು: ಅವಳು ಒಳ್ಳೆಯ ಹಾಸ್ಯಗಾತಿ (ರೂಢಿ).

[ಹಾಸ್ಯ + - ಕಾತಿ$_3$]

ಹಾಸ್ಯಗಾರ (ನಾ). ೧. ನಗಿಸುವವನು: ಹಾಸ್ಯಗಾರನಾದ ಅವನು ಇದ್ದರೆ ವೇಳೆ ಸರಿಯುವುದೇ ತಿಳಿಯುವುದಿಲ್ಲ (ರೂಢಿ). ೨. ಯಕ್ಷಗಾನ, ಬಯಲಾಟಗಳಲ್ಲಿ ನಗಿಸುವ ಪಾತ್ರವನ್ನು ವಹಿಸುವವನು: ರಂಗಸ್ಥಳದ ಸಾಹಿತ್ಯದಲ್ಲಿ ಹಾಸ್ಯಗಾರ ಇಲ್ಲವ ಹನುಮಂತನಾಯಕನ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬೇಕಾಗುತ್ತದೆ (ಯಕ್ಷಬ. ೧೪೮). ೩. ಗೇಲಿಮಾಡುವವನು; ಕುಚೋದ್ಯ ಮಾಡುವವನು: "ಪರಿಹಾಸಕ - ಹಾಸ್ಯಗಾರ" (ಗಂಗಾಮ. ೨೦೦). [ಹಾಸ್ಯ + - ಗಾರ (< - ಕಾಜ)]

ಹಾಸ್ಯಚಟಾಕಿ (ನಾ). (ಆಲಂ) ನಗಿಸುವ ಚುಟುಕುಮಾತು: ನನ್ನದೆಮಟ್ಟದ ಎತ್ತರದದುರಿನ ಮೇಜಿನ ಮೇಲೂರಿ ಕೈಯ ಹಾಸ್ಯಚಟಾಕಿಯ ಹಾರಿಸುತಾ ವಿನ ಗುರುತಿಸುತಿದ್ದೆ ಹಾಜರಿಯ (ಇಜಾಪ. ೩೯-೪೩). [ಹಾಸ್ಯ + ಚಟಾಕಿ]

ಹಾಸ್ಯದೃಷ್ಟಿ (ನಾ). ೧. ಹಾಸ್ಯ ಮಾಡುವ ಮನೋಧರ್ಮ. ೨. [ನಾಟ್ಯ] ನೋಟದ ಅಭಿನಯಗಳಲ್ಲಿ ಒಂದು; IP "ಕರಿಗುಡ್ಡೆಯನ್ನು ಸ್ವಲ್ಪ ಒಳಕ್ಕೆ ಮಾಡಿ ವಿಚಿತ್ರವಾಗಿ ಸುತ್ತಿಸಿ ಮೆಲ್ಲನೆ ಸುಮಾರಾಗಿ ಮತ್ತು ಜಾಗ್ರತೆಯಾಗಿ ಕಣ್ಣನ್ನು ಮಿಟುಕಿಸುವುದು" (ಅಸ್ಯರಂ. ೨೬೩ ಗದ್ಯಾನುವಾದ): ಇನಿತೊಳಗೆಱಗಿ ವಿಚಿತ್ರ ಮನುನಕರಿಸಿಯೆ ತಿರುಗುವಾಲಿಯಾಗುತೆ ಮಿಗೆ ಮೆಲ್ಲನೆ ಮಧ್ಯ ತೀವ್ರ ಕ್ರಮದಂದು ನಿಮೇಷಮನೆಸಗೆ ಹಾಸ್ಯದೃಷ್ಟಿ (ಅಸ್ಯರಂ. ೩-೧೧). [ಸಂ.]

ಹಾಸ್ಯನಾಟಕ (ನಾ). ಹಾಸ್ಯಪ್ರಧಾನವಾದ ನಾಟಕ; ನಗೆನಾಟಕ: ಪ್ರಹಸನ: ಉಳಿದ ಹಾಸ್ಯನಾಟಕಗಳಲ್ಲಿಯಂತೆಯೆ, ಇವರ ನಾಟಕದಲ್ಲಿಯೂ ನಗೆಗೀಡಾದ ಗುಣವೆಂದರೆ ಸಾಮಾಜಿಕಪ್ರತಿಷ್ಠೆ (ಸಚದಾ. I. ೨೧೮). [ಸಂ.]

ಹಾಸ್ಯಪಾತ್ರ (ನಾ). ನಾಟಕಗಳಲ್ಲಿ ನಗಿಸುವುದಕ್ಕಾಗಿಯೇ ಇರುವ ಪಾತ್ರ: ಇವೆಲ್ಲ ತನ್ನ ನಾಟಕಗಳಲ್ಲಿಯ ಹಾಸ್ಯಪಾತ್ರಗಳ ನೆನಪು ತಂದುಕೊಡುತ್ತಿದ್ದವು (ಗಂಮಾಯಿ. ೩೯). [ಸಂ.]

ಹಾಸ್ಯಭಾರ (ನಾ). ಅತಿಶಯವಾದ ಗೇಲಿ,– ಅಣಕ; ನಗೆಗೇಡು: ಕಣ್ಬರಿ ಪುತ್ರಮಿತ್ರ ವನಿತಾಜನದೊಳ್ ಸಮಸಂದು ರಾಜ್ಯಮಂ ಜಾಣ್ಬೆಡೆ ದುಃಖಹೇತುವನಿದಂ ನೆಱೆ ತಾಳ್ವೆ . . . ಅಟ್ಟುಣ್ಬ ವರಂಗ ಸಂಗಡಿಗನಪ್ಪೆನೆ ತಪ್ಪೆನೆ ಹಾಸ್ಯಭಾರಮಂ (ಚಂದ್ರಪ್ರ. ೨-೪೧). [ಸಂ.]

ಹಾಸ್ಯರಸ (ನಾ). [ಕಾವ್ಯಮೀ] ನಾಟಕ ಅಥವಾ ಕಾವ್ಯದಲ್ಲಿ ಬರುವ ನವರಸಗಳಲ್ಲಿ ಒಂದು: ಉತ್ಸವದಿಂದ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆ . . . ಊರ್ಜಿತೋಕ್ತಿಗಳಿನಕ್ಕತಿರೌದ್ರರಸಂ ರಸಾವಹಂ (ಕವಿರಾ. ೨-೧೦೦); ಹಾಸ್ಯರಸವನ್ನು ಬೇರೆ ಬೇರೆ ಸ್ವಭಾವದ ಜನರು ಅನುಭವಿಸುವಾಗ ಅವರ ಶರೀರದಲ್ಲಿ ಉಂಟಾಗುವ ವೈಪರೀತ್ಯಗಳನ್ನು ಮಾತ್ರ ಇವು ತಿಳಿಸುವುದೇ ಹೊರತು ಹಾಸ್ಯರಸದ ಒಳರಹಸ್ಯವೇನೆಂಬುದರ ವಿಚಾರ ಇವುಗಳಿಂದ ಮುಂದುವರಿಯುವುದಿಲ್ಲ (ಭಾರಮಾ. ೪೦೩). [ಸಂ.]

ಹಾಸ್ಯವಾಕ್ಯ (ನಾ). [ಕಾವ್ಯಮೀ] ಕಾವ್ಯದ ಹದಿನೆಂಟು ಬಗೆಯ ದೋಷಗಳಲ್ಲಿ ಒಂದು: ಅಸದರ್ಥಂ ವಿಪರೀತಕಲ್ಪನೆಯಭವ್ಯಂ . . . ದುರ್ಲಕ್ಷಣಂ ಹಾಸ್ಯ ವಾಗ್ವಿಷಮಾಸೌಮ್ಯಮನೋಜ್ಞೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೪೬ ಅಡಿವಡ್ಡ). [ಸಂ. ಹಾಸ್ಯವಾಚ್]

ಹಾಸ್ಯಶೀಲ (ನಾ). ೧. ನಗಿಸುವ ಗುಣ,– ಸ್ವಭಾವ: ಅಸಾಧಾರಣ ಹಾಸ್ಯಶೀಲ ದೈವದತ್ತವಾಗಿ ಅವನಲ್ಲಿ ಮೈಗೂಡಿಕೊಂಡಿತ್ತು (ಪುನರು. ೪೧೪). ೨. ನಗಿಸುವ ಗುಣವನ್ನುಳ್ಳವನು; ಹಾಸ್ಯಗಾರ: ಆ ಹಾಸ್ಯಶೀಲರಾದ ಉಪಾಧ್ಯಾಯರನ್ನೇ ಎಲ್ಲಾ ವಿದ್ಯಾರ್ಥಿಗಳು ಹೆಚ್ಚು ಬಯಸುತ್ತಿದ್ದರು (ರೂಢಿ). [ಸಂ.]

ಹಾಸ್ಯಾಸ್ಪದ (ನಾ). ನಗೆಗೀಡಾದುದು; ಅಣಕಕ್ಕೆ ಗುರಿಯಾದುದು: ನಮ್ಮ ಚಿತ್ರಗಳಲ್ಲಿ ಹಾಸ್ಯ! ಇಲ್ಲದೆ ಇರುವಾಗ ಇದೆಯೆಂದು ಸಾಧಿಸುವುದು ಸಹ ತೀರಾ ಹಾಸ್ಯಾಸ್ಪದವಾದದ್ದೇ (ನಾಡಿಗೇ. ೧೮೧). [ಸಂ.]

ಹಾಹಾ 'ಹಾ' ಪರಾ.

ಹಾಹಾಕಾರ (ನಾ). ೧. ಗೋಳಾಟ ಅಥವಾ ರೋದನದ ಕೂಗು: ಅಂಬೋಧಿ ಘೋಷದಿಂದೆದ್ದು ಹಾಹಾಕಾರದಿಂ ಭಯಂಗೊಂಡೊರಲುತಿರ್ದುದಾಸ್ಥಾನಂ (ಜೈಮಿಭಾ. ೨೬-೬೩); ತೃಷೆಯಿಂದ ಬಾಯ್ಬಿಡುವ ಹಕ್ಕಿಗಳ ಹಾಹಾಕಾರ (ಚಂದ್ರಮಾ. ೪೮-೫); ಜನಸಾಮಾನ್ಯರಲ್ಲಿ ಹಾಹಾಕಾರವುಂಟಾಯಿತು (ಕರ್ನಾಕ. ೩೭). ೨. ಹೋಮಮಂತ್ರಾಕ್ಷರದ ಕಡೆಯ 'ಸ್ವಾಹಾ ಸ್ವಾಹಾ' ಎಂಬುದರಿಂದ ಕೇಳಿ ಬರುವ 'ಹಾಹಾ' ಎಂಬ ಶಬ್ದ. ೧, ೨: ಹಾಹಾಕಾರಂ ಹೋಮಮಂತ್ರಾಕ್ಷರಾಂತ್ಯದೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ವ). [ಸಂ.]

ಹಾಹಾಕ್ರಂದ (ನಾ). = ಹಾಹಾಕಾರ ೧: ಭೋಂಕೆನೆ ಹಾಹಾಕ್ರಂದವೊಗದುದಂತಃಪುರದೊಳ್ (ಅಜಿಪು. ೧೦-೩೩). [ಸಂ.]

ಹಾಹಾಕ್ರಂದನ (ನಾ). = ಹಾಹಾಕಾರ ೧: ರಘುರಾಮನಂಗನೆಯನೆನ್ನಂ ಸೀತೆಯಂ ಪಾತಕಂ ದೊರೆಗೆಟ್ಟುಯ್ಯಪನೇವೆನೆಂದು ಸತಿ ಹಾಹಾಕ್ರಂದನಂ ಮಾಡಿದಳ್ (ಪಂರಾಮಾ. ೯-೧೪೩). [ಸಂ.]

ಹಾಹಾಕ್ರಂದನಗೆಯ್ (ಕ್ರಿ). ಅಳು; ಪ್ರಲಾಪಿಸು; ಹಾಹಾಕಾರಮಾಡು: ಪೋದಂ ಬಟೆಕಾತನಿರ್ದೆಡೆಗೆ ಹಾಹಾಕ್ರಂದನಂಗೆಯ್ಯುತಂ (ಕಾದಂಪೂ. ೯೧೪). [ಹಾಹಾಕ್ರಂದನ + ಕೆಯ್₁]

ಹಾಹಾಭೂತಚೇತಸ (ನಾ). ಪ್ರಲಾಪಿಸುವವನು (?); ಹಾಹಾಕಾರ ಮಾಡುವವನು(?): ತಂದ ಕುಱಿಯನಂದಿರುಳೊಳ್ಕೊಂದು ತಿಂದಾತಂ ಪಸಿದು ದೆಸೆದೆಸೆಗವ್ವಳಿಸಿ ಹಾಹಾಭೂತಚೇತಸನಾಗಿರ್ದು ಮೃದುಪಿಶಿತಾಹಾರಮಂ ಪಡೆದುಂ ಮೆಚ್ಚಿ ಕರುಣಿಸಿ ತಿನಲೊಲ್ಲದೆ ಕಾದು ಕಟಿಪಿದ ರಕ್ಕಸಂಗೆ ಮಿಕ್ಕವರುಳ್ಕೊಡೆ ಪೇಱೆಮೆಂದಂ (ಸುಕುಮಾ. ೭-೨೭ ವ). [ಹಾಹಾಭೂತ್ಯ + ಚೇತಸ್ಯ]

ಹಾಹಾಭೂತಚೇತಸ್ಕೆ (ನಾ). ಪ್ರಲಾಪಿಸುವವಳು (?); ಹಾಹಾಕಾರ ಮಾಡುವವಳು (?): ನೀಳನೆಂಬ ಮಾದೆಗಂಗಂ ಕೌಶಂಬಿಯೆಂಬ ಮಾದೆಂಗಿಗಂ ಮಗಳಾಗಿ ಪೂರ್ವೋಪಾರ್ಜಿತ ಶುಭಾನುಪೂರ್ವಿನಾಮಕರ್ಮೋರ್ವೀರುಹ ಪರಿಪಾಕ ಫಳಮನನುಭವಿಸುತ್ತುಮೊಂದು ಪೊತ್ತಪ್ಪಡಂ ಸುಖಂಗಾಣದೆ ಹಾಹಾಭೂತಚೇತಸ್ಕೆಯಾಗಿರ್ದಳಂ ನೀಮೊಗಳ್ ಕಂಡಿರ್ (ಸುಕುಮಾ. ೫-೨೧ ವ). [ಹಾಹಾಭೂತ್ಯ + ಚೇತಸ್ಕ್ಯಂ]

ಹಾಹಾರವ (ನಾ). = ಹಾಹಾಕಾರ ೧: ಅವನೀವ್ಯೋಮಮನೆಯ್ದ ಪರ್ವಿ ಬಳೆದುಂ ಶೋಕಾನುಬಂಧಾಂಧಬಾಂಧವ ಹಾಹಾರವಮೆಂತುಮೆಯ್ದುದು ವಲಂ ಲೋಕಾಂತರ ಪ್ರಾಪ್ತನಪ್ಪವನಂ (ಆದಿಪು. ೩-೫೪); ಐಸರಲಿ ಕಲ್ಯಾಣಕಟಕನಿವಾಸಿಗಳು ಹಾಹಾರವಂಗಳು ಸೂಸುವಾನನರಾಗಿ ಬಸವಾ ಎನುತೊಲಲುತಿರಲು (ಬಸಪು. ೩೭-೨೧). [ಸಂ.]

ಹಾಹೂಕ (ನಾ). ಹಾ, ಹೂ ಎಂದು ಉದ್ಗರಿಸುವವನು (?): ಪಿಮ್ಮೆಟ್ಟದಡಿಯನೊಮ್ಮೊಮ್ಮೆ ಪದಲಾಘದಿಂ ಹಿಮ್ಮೆಟ್ಟಿ ಹೊಳೆದು ನೆಗೆದೆತ್ತಿ ಕ್ರಮಮಸ್ತಕಮಗುಮ್ಮುತಿಹ ಗದೆಗದೆಯ ತಟ್ಟಿ ತದ್ಭಂಗಮಂ ಮುಟ್ಟಿಸದ ಚತುರಿನಿಂದ ನಿಮ್ಮನೆಮ್ಮೆಲುವೆಂದು ಮೂದಲಿಸಿ ತೂಕರಿಸಿ ದಿಮ್ಮಿದಿರಗೊಡುತಲೊಲೆದತ್ತಿತ್ತ ಹಾಹೂಕರೊಮ್ಮಿಂದ ಕಾದಿದರ್ (ಜಿನಮು. ೧೩-೬೪). [?]

ಹಾಹೆ₁ 'ಪಾಪೆ' ನೋ.

ಹಾಹೆ₂ 'ಪಾಯ್₂' ನೋ.

ಹಾಹೆದೊಡರು (ನಾ). ಸಣ್ಣ ಸಣ್ಣ ಬೊಂಬೆಗಳಿಂದ ಕೂಡಿದ ಆಭರಣ; ಬಿರುದಿನ ಪೆಂಡೆಯ: ಪೆಂಡೆಯದ ವಾಮಾಂಘ್ರಿ ಮೆಱೆದಿರೆ ಹಿಂಡುದೇವರ ಹಾಹೆದೊಡರಲಿ ಗಂಡುಗಲಿ ಪರಿವಳಿಯುಟ್ಟು . . . ಖಡ್ಗವ ಕೊಂಡು ಝಳಪಿಸಿದ (ಕೌಶಿರಾ. ೪೧-೩). [ಹಾಹೆ₁ (< ಪಾಪೆ) + ತೊಡರು₂ (< ತೊಡರ್₂)]

ಹಾಳ್ 'ಪಾಟ್' ನೋ.

ಹಾಳ₁ 'ಪಾಟ್' ನೋ.

-ಹಾಳ₂ (ಪ್ರ). ಹಾಳುಮಾಡುವವನು ಎಂಬರ್ಥದಲ್ಲಿ ಸೇರುವ ಪ್ರತ್ಯಯ: 'ಕಾಗದಹಾಳ' ಪರಾ. [ಹಾಳು (< ಪಾಟ್) + - ಅ₇]

ಹಾಳಂಬಡು 'ಪಾಟಂಬಡು' ನೋ.

ಹಾಳತ, ಪಾಳತ, ಹಾಳಿತ (ನಾ). ಹೆಚ್ಚು ಕಡಿಮೆಯಿಲ್ಲದಿರುವಿಕೆ; ಅಗತ್ಯಕ್ಕೆ ತಕ್ಕ ಪ್ರಮಾಣ; ಹದ: ಪ್ರಚಲಿತವಿಮರ್ಶೆಯ ಅತ್ಯಂತ ವಿಚಿತ್ರವೂ ನಿರುತ್ಸಾಹದಾಯಕವೂ ಆದ ಲಕ್ಷಣಗಳಲ್ಲಿ ಒಂದು: ಹಾಳತ ಗಾಂಭೀರ್ಯ ದೃಷ್ಟಿವೈಶಾಲ್ಯಗಳ ಅಭಾವ (ಸಾಹಿತ್ಯ. ೨೮೬); ಮಲ್ಲಿಗೆಯ ಕಂಪಿಗೂ ಹಿರಿದಿದರ ಸೌಗಂಧ ಯಾವ ಕಂಪವು ಇದಕ್ಕೆ ಹಾಳತಹುದು? (ಪ್ರವಾಹೋ. ೧೦೮). Δ **ಪಾಳತ**: ಸಲೆ ಚರಾಚರ ಜೀವರಾಸಿ ದೇಹಂಗಳವು ನೆಲೆಯಾಗಲಾನವರ ಪಾಳತಮದಾಗಲಿವು ಪಿರಿದು ಕಿಱಿದಾಗಿ ತೋಱಿದೊಡದೇಂ ಕಡೆಗೆ ಕೇಳಱಿಯಲಾರ್ಗಂ ಪೊಱತೆ (ಹಾಲಾಸ್ಯ. ೩-೧೪-೧ ರಗಳೆ). **ಹಾಳಿತ**: ಕೊಡಸಿಗತಿಗುಡು ಓವು ಅತಿಭಜೆ . . . ಇವಂ ಮೊಸರಿಂದರೆದು ಗಟ್ಟಿಮಜ್ಜಿಗೆಯಲ್ಲಿ ಕದಡಿ ಹಾಳಿತವಾಗಿ . . . ಊಟ ಮಾಡಲು ಜ್ವರಾತಿಸಾರ ಗುಣಮಕ್ಕುಂ (ಸಕವೃ. ೩೦೭); ತಮ್ಮ ತಮ್ಮ ಪದವಿಯ ಗರ್ವಕ್ಕೆ ತಕ್ಕ ಹಾಗೆ ಹಾಳಿತವಾಗಿ ದಿಟ್ಟದಿಂದ ನೀಟಾಗಿ ಕುಳಿತು . . . ದೃಷ್ಟಿಸಿ ನೋಡಿದನು (ಕೋಟಿಸಾ. ೭೮). [ದೇ. ॥ ತುಳು. ಹಾಳಿತ]

ಹಾಳಲು (ನಾ). ಜಮೀನು; ಭೂಮಿ: ಹಳ್ಳಿಯ ಹಾಳಲೊಳು ಬೇವನಿತು ಜೀವವ ತೋಱೆ ಕಂಡು (ಸಾಳ್ವಭಾ. ೧೯-೩೬). [ಹಾಳು (< ಹಾಟ್) + - ಅಲು (< - ಅಲ್₂)]

ಹಾಳವಿಸು (ಕ್ರಿ). ಮೆರೆ; ಪ್ರದರ್ಶಿಸು (?): ತಾಳ ಮದ್ದಳೆಯಾವುಜಂ ಶ್ರುತಿಗಾಳೆ ದಂಡಿಗೆಯರುಮೆ ವೀಣೆಯ ತಾಳಿ ನಿಂದರು ಶ್ರುತಿಯನಾರೈವುತ ಲತಾಂಗಿಯರು ಮೇಳ ಕಂಗೆಸೆದಿತ್ತು ಗಾಡಿಯ ಹಾಳವಿಸುತಲಿ ಪಾತ್ರದವರು ಚಢಾಳಿಸುತೆ ನಿಂದರು ವಿಲಾಸದಿ ರಂಗಮಂಟಪದಿ (ಶಂಕರಾ. ೨-೬೪). [? + - ಇಸು₃]

ಹಾಳಹಳ (ನಾ). ಘೋರವಾದ ವಿಷ; ಹಾಲಾಹಲ: ಒಡಲನಸಿತಂ ಮಾಡಿದಂದಿನ ಕಡುಪಿನಗ್ಗದ ಹಾಳಹಳವಿಂತಡಸಿ ಬಂದುದೆನುತ್ತ ಲಕ್ಷ್ಮೀರಮಣನಳುಕಿದನು (ಬಸಪು. ೫೮-೬೨); ಈ ಹಾಳಹಳ ವಿಷದಡಿಗೆಯನು ಬಡಿಸಿದಡೆ ಮೇಣುಂಡು ಬಾಳುವವರಾರೆನುತ ಬಹಳ ಜ್ವಾಲೆಯೊಳು ನಿಂದಂತೆ ರೋಷಕರಾಳಮುಖ ನೋಡಿದಳು ತನ್ನೆಡಬಲದ ಪಟುಭಟರ (ನಿಭಾಗ. ೫೯-೬-೩೦). [< ಸಂ. ಹಾಲಾಹಲ]

ಹಾಳಾಹಳ 'ಹಾಲಾಹಲ' ನೋ.

ಹಾಳಿ₁ 'ಪಾಳೆ₁' ನೋ.

ಹಾಳಿ₂ 'ಪಾಟಿ₂' ನೋ.

ಹಾಳಿಗೆಡು 'ಪಾಟಿಗೆಡು' ನೋ.

ಹಾಳಿಡು 'ಪಾಟಿಡು' ನೋ.

ಹಾಳಿತ 'ಹಾಳತ' ನೋ.

ಹಾಳಿಹದ್ದು, ಹಾಳೆಹದ್ದು (ನಾ). ಒಂದು ಬಗೆಯ ಹದ್ದು: ನಾಳೆ ನಾಡದು ಎಂದು ಹೀಗೆ ಬಾಳುವ ಕಾಲದಿ ಯಮನು ಕೋಳಿಪಿಳ್ಳೆಯಾಡುವಾಗ ಹಾಳಿಹದ್ದಿನಂತೆ ಒಯ್ಯುವ (ಪುರಂದ. ೩-೮೧-೪); ಮಲೆಯ ಭನಬನದ ತರಿವ ಮೂಡಲಗಾಳಿ, ಹಸಿರು ಬಯಲಿಗೆ ತರುತಲಿರುವ ಪಡುವಲ ಗಾಳಿ, ಹಾಳಿಹದ್ದುಗಳಂತೆ ತೇಡುತಿರುವದ ನೋಡುವೆನು (ಉಯ್ಯಾಲೆ. ೧೫-೬). **ಹಾಳೆಹದ್ದು:** ಅಲ್ಲಲ್ಲಿ ಹಾಳೆಹದ್ದಿನ ಗೂಡುಗಳು ಕಣ್ಣಿಗೆ ಬೀಭತ್ಸವಾಗಿ ಕಾಣುತ್ತಲಿವೆ (ಜನಜೀ. ೬೬). [ಹಾಳಿ₂ + ಹದ್ದು (< ಪರ್ದು)]

ಹಾಳಿಹಸುಗೆ (ನಾ). ಯೋಗ್ಯವಾದ ರೀತಿ; ಉಚಿತವಾದ ನಡವಳಿಕೆ: ಹಾಳಿಹಸುಗೆಯನಱಿಯದಾ ಹೀಹಾಳಿಗೆಡಿಸಿದೆನಂದು ಸಭೆಯಲಿ ಖೂಳನವಗುಣಶತವ ನೋಡದೆ ನಿಮ್ಮ ಮೆಱೆಯಿಂದ (ಕುವ್ಯಾಡ್ಯೂ. ೧-೨೬).

[ಹಾಳಿ₂ (< ಪಾಟಿ₂) + ಹಸುಗೆ (< ಪಸುಗೆ)]

ಹಾಳು 'ಪಾಟು' ನೋ.

ಹಾಳುಕೊಂಪೆ (ನಾ). ೧. ನಿರ್ಜನವಾದ ಸ್ಥಳ. ೨. (ಆಲಂ) ಬೇಡವಾದ ಸ್ಥಳ; ಇಷ್ಟವಾಗದ ಊರು: ಆ ಹಾಳುಕೊಂಪೆಯಲ್ಲಿ ಅವರ ಬೈಗಳು ಕೇಳಲೆಂದು ಹೋಗಬೇಕಿತ್ತೆ? (ವಾಕ್ಸಲ್ಯ. ೪೬). [ಹಾಳು (< ಪಾಟು) + ಕೊಂಪೆ]

ಹಾಳುಗ (ನಾ). ಹಾಳುಮಾಡುವವನು: ಹಾಳುಗ ನಾಂ ಕಾಳುಗ ನಾಂ ಕೀಳುಗ ನಾಂ ಏಳು ಬೇಲಿಯಂ ಕಳಿದವ ನಾಂ ಭಾಳಾಕ್ಷ ನಿಮ್ಮ ಆಳಿನ ಆಳಿಗೆ ಸರಿಯೇ (ಶಂಕಕಂ. ೧೦೨).

[ಹಾಳು (< ಪಾಟು) + - ಗ₂]

ಹಾಳುಗರೆ 'ಹಾಳ್ಗರೆ' ನೋ.

ಹಾಳುಗಸ (ನಾ). (ಹೊತ್ತು ಮೂಡಿದ ಕೂಡಲೆ ತೆಗೆಯಬೇಕಾದ) ಹಿಂದಿನ ದಿನದ ಕಸ: ಮರುದಿನ ಮುಂಜಾನೆ ಎಂಟು ಗಂಟೆಯಾದರೂ . . . ಹಾಳುಗಸವನ್ನೂ ತೆಗೆಯುವ ಮನಸ್ಸಾಗಲಿಲ್ಲ (ಗಂಗಾಸಾ. ೬೮). [ಹಾಳು (< ಪಾಟು) + ಕಸ]

ಹಾಳುಗುಡಿ (ನಾ). ಹಾಳು ಬಿದ್ದ ದೇವಾಲಯ; ನಾಶವಾದ ದೇವರ ಗುಡಿ: ಮೆಸೆಯುತಿಹ ಮತ್ಸರದ ನೆರೆಯೊಳಿರುವುದಕಿಂದ ಹಸನಿಲ್ಲದ ಹಾಳುಗುಡಿಯೆ ಲೇಸು (ಕನಕ. ೪೧-೩); ಆ ಮಾವಿನ ತೋಪಿನ ಕತೆ, ಹಳ್ಳದ ಇತಿಹಾಸ, ಹಾಳುಗುಡಿಯ ಐತಿಹ್ಯ . . . ಇಂಥ ವಿಷಯಗಳನೆಲ್ಲ ಅವರು ಬಹು ರಮ್ಯವಾಗಿ ಹೇಳುತ್ತಾರೆ (ಮುಂಗಾಮು. ೯೬).

[ಹಾಳು (< ಪಾಟು) + ಗುಡಿ₃]

ಹಾಳುಗೆಡವು 'ಪಾಟ್ಗೆಡವು' ನೋ.

ಹಾಳುಗೆಡಹು 'ಪಾಟ್ಗೆಡವು' ನೋ.

ಹಾಳುಗೆಡು (ಕ್ರಿ). ಹಾಳಾಗು; ನೀತಿಗೆಡು: ಜೋಳವಾಳಿಯಾನಲ್ಲ ವೇಳೆವಾಳಿಯವ ನಾನಯ್ಯಾ ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ ಕೇಳು . . . ಮರಣವೇ ಮಹಾನವಮಿ (ಬಸವ. ೬೯೮); ಎಲ್ಲ ಬಿಟ್ಟು ಆ ಹಾಳುಗೆಟ್ಟವಳ ಖಾನಾವಳಿಗೇ ಏಕೆ ಹೋಗಬೇಕಿತ್ತೋ (ಮೂರುದಾ. ೧೮೪). [ಹಾಳು (< ಪಾಟು) + ಕೆಡು₁]

ಹಾಳುಗೇಡಿ (ಕ್ರಿ). ವ್ಯರ್ಥಗೊಳಿಸುವವನು; ನಾಶಮಾಡುವವನು: ಹಾಳುಗೇಡಿಯೇ ನಾನು, ಯಾಕೆ? ಈ ಹೂ ಬಿಸಾಡಿದುದಕ್ಕೇನು? ಅದು ಮರದಲ್ಲಿದ್ದರೇನು ಸಂಭ್ರಮ ವಾಗುತ್ತಿತ್ತು . . . ಎಂದನು (ಮುಗಿಯು. ೧೭). [ಹಾಳು (< ಪಾಟು) + ಕೇಡಿ₁]

ಹಾಳುಗೋಡೆ 'ಪಾಟ್ಗೋಡೆ' ನೋ.

ಹಾಳುದೇಗುಲ 'ಪಾಟ್ದೇಗುಲ' ನೋ.

ಹಾಳುಬಗೆ (ಕ್ರಿ). ಕೆಡುಕನ್ನು ಹಾರೈಸು; ಕೆಟ್ಟುದನ್ನು ಬಗೆ: ಹೀಗೆ ಹಗೆ ಮಾಡಿ ಇವನಿಗೆ ಹಾಳುಬಗೆದವರಲ್ಲಿ ಕೇಮರಬಲ್ಲಾಳನೇ ಮೊದಲನೆಯವನು (ಕಗದ್ಯ. ೬೭).

[ಹಾಳು (< ಪಾಟು) + ಬಗೆ₁]

ಹಾಳುಬಡಿ (ಕ್ರಿ). ೧. ಕೆಡಿಸು; ಹಾಳಾಗಿಸು: ಮುತ್ತಿನಂಥಾ ಹುಡುಗಿ ಸಂಸಾರ ಹಾಳುಬಡದು ಈ ಚಿಕ್ಕ ಪುಟ್ಟವರನ್ನ ಒಯ್ಯೋ ಬದಲು ನನ್ನ ಒಯ್ಯಬಾರದಿತ್ತೇನಪಾ (ಹನ್ನೊಂದ. ೨೪). ೨. ಬರಿದಾಗಿರು; ಹಾಳುಗರೆ: ಊರು ಬಿಕೋ ಎಂದು ಹಾಳುಬಡಿಯುತ್ತಿತ್ತು (ರಂಗಕ. ೧೨೯). [ಹಾಳು (< ಪಾಟು) + ಬಡಿ₁]

ಹಾಳುಬಾವಿ 'ಪಾಟ್ಬಾವಿ' ನೋ.

ಹಾಳುಬೀಡು (ನಾ). ನಾಶವಾದ ಸ್ಥಳ; ಹಾಳು ಬಿದ್ದ ಜಾಗ: ಸೂಸಪುರಿ ಬೆಳಗದೋ, ಪಾಡದೋ ಮತ್ತೆ? ಹಾಳುಬೀಡೆನಿಪುದೇ ಇನ್ನದಕೆ ಹೊತ್ತೆ? (ಪಾರಸಿ. ೭-೧೫೦). [ಹಾಳು (< ಪಾಟು) + ಬೀಡು₂]

ಹಾಳುಬೀಳು₁ 'ಪಾಳುಬೀಳು' ನೋ.

ಹಾಳುಬೀಳು₂ (ನಾ). ನಾಶ ಹೊಂದುವಿಕೆ: ಮಾನವನ ರೂಪ ಗುಣಗಳನ್ನೆಲ್ಲಾ ತನ್ನ ಬಣ್ಣದಿಂದ ಪವಿತ್ರಗೊಳಿಸುವ ಈ ಸೌಂದರ್ಯ ಇದ್ದಕ್ಕಿದ್ದ ಹಾಗೆ . . . ಈ ಲೋಕವನ್ನು ಹಾಳುಬೀಳಾಗಿಸುವುದೇತಕ್ಕೆ? (ಸೌಂದಸ. ೩೧). [< ಹಾಳುಬೀಳು₁]

ಹಾಳುಭಾವಿ 'ಪಾಟ್ಬಾವಿ' ನೋ.

ಹಾಳುಮನೆ 'ಪಾಟ್ಮನೆ' ನೋ.

ಹಾಳುಮೂಳ (ನಾ). ಕೆಟ್ಟವನು; ದುಷ್ಟ: ಅವನೊಬ್ಬ ಹಾಳುಮೂಳ (ರೂಢಿ).

[ಹಾಳು (< ಪಾಟು) + ಮೂಳ₁ (< ಮೂಟ)]

ಹಾಳುಮೂಳಿ (ನಾ). ಕೆಟ್ಟವಳು; ಕೆಟ್ಟ ಹೆಂಗಸು: ಆ ಹಾಳುಮೂಳಿ ಸುಳ್ಳು ಹೇಳುತ್ತಿದ್ದಾಳೆ (ಕಲ್ಲಿಕಾ. ೪೦). [ಹಾಳುಮೂಳ + - ಇ₂]

ಹಾಳುಮೂಳು (ನಾ). ಕೆಲಸಕ್ಕೆ ಬಾರದುದು; ವ್ಯರ್ಥವಾದುದು: ಹಾಳುಮೂಳು ಇದರ ಜೊತೆಗೆ ಸೇರಿಸಬೇಡಿರಿ (ಮರಳಿ. ೧೫೪). [ಹಾಳುಮೂಳ + - ಉ₄]

ಹಾಳುಮೆಣಸು (ನಾ). ಒಂದು ಬಗೆಯ ಮೆಣಸು: ಪೂರ್ವ ಪಶ್ಚಿಮ ಉತ್ತರ ದಕ್ಷಿಣಾದಲ್ಲೂ ತಿರಿಗಾಡುವ ಹಾಳುಮೆಣಸು ಬೂಸ ನಾನಾ ಸರಕ್ಕುನಡೆ ೧ಕ್ಕೆ ಗೆ ಟ್ ೮೦ (ಎಕ. XVI, ಗುಬ್ಬಿ. ೭೩-೬೮; ಸು. 1672). [ಇದು 'ಕಾಳುಮೆಣಸು' ಎಂದಿರಬಹುದೆ?]

ಹಾಳುಮೊರಡಿ (ನಾ). ನಿರ್ಜನವಾದ ಬೆಟ್ಟ: ಹಾಳುಮೊರಡಿಗಳಲ್ಲಿ ಊರ ದಾರಿಗಳಲ್ಲಿ ಕೆಱೆ ಬಾವಿ ಹೂಗಿಡುಮರಂಗಳಲಿ . . . ಹಿರಿಯಾಲದ ಮರದಲ್ಲಿ ಮನೆಯ ಮಾಡಿ (ಬಸವ. ೫೫೭). [ಹಾಳು (< ಪಾಟು) + ಮೊರಡಿ₁ (< ಮೊರಡು₂)]

ಹಾಳುಮೋರೆ (ನಾ). ಕುಂಕುಮವನ್ನು ಇಟ್ಟುಕೊಳ್ಳದಿರುವ ಮುಖ: ಹಾಳುಮೋರೆಯಲ್ಲಿರಬಾರದು ಕುಂಕುಮ ಇಟ್ಟುಕೋ (ರೂಢಿ).

[ಹಾಳು (< ಪಾಟು) + ಮೋರೆ (< ಮೋಱೆ)]

ಹಾಳುವರಿ (ಕ್ರಿ). ಕೆಟ್ಟು ಹಾಳಾಗು; ನಾಶವಾಗು: ಆ ಕುಂಟೆ ಒಡೆದು ಹೋಗಿ ಖಿಲವಾಗಿ ಇರಲಾಗಿ ಕಟಿಸುವರಾರೂ ಇಲ್ಲದೆ ಹಾಳುವರಿದುಯಿರಲಾಗಿ ನಾಉ ವಿಚಾರಿಸಿ . . . ಆ ಕುಂಟೆಯನೂ ಕಟ್ಟಿಸ್ತೇಉ (ಸೌಇಇ. IX-ii, ೫೯೧-೯; 1539).

[ಹಾಳು (< ಪಾಟು) + ಪರಿ₁ (< ಪಱಿ₁)]

ಹಾಳುಸುರಿ 'ಪಾಳ್ಸುರಿ' ನೋ.

ಹಾಳುಹಂಪೆ (ನಾ). ಪಾಳುಬಿದ್ದ ಪಂಪಾಕ್ಷೇತ್ರ; ಹಾಳಾದ ಹಂಪೆ: ಈ ದೇವಾಲಯವು ಈಗಲೂ ಕರ್ನಾಟಕರಾಜ್ಯದ ಹಿರಿಮೆಯನ್ನು ಹಾಳುಹಂಪೆಯಲ್ಲಿ ಎತ್ತಿ ತೋರಿಸುವಂತೆ ಕಾಣುತ್ತದೆ (ಭಾರದ. ೫೦೭). [ಹಾಳು (< ಪಾಟು) + ಹಂಪೆ]

ಹಾಳುಹಣೆ (ನಾ). ಕುಂಕುಮ, ಬೊಟ್ಟು ಇತ್ಯಾದಿಗಳನ್ನು ಇಟ್ಟಿರದ ಬೋಳುಹಣೆ: ಸುಭಗೆ ಹಾಲು ಮೊಸರು ಬಡಿಸಲು ಬಂದಾಗ ಅವನ ದೃಷ್ಟಿ ಆಕೆಯ ಹಾಳುಹಣೆಯ ಕಡೆಗೆ ಬಿದ್ದಿತು (ಗಂಗಾಸಾ. ೮೨).

[ಹಾಳು (< ಪಾಟು) + ಹಣೆ₁ (< ಪಣೆ₁)]

ಹಾಳುಹರಟೆ (ನಾ). ಪ್ರಯೋಜನವಿಲ್ಲದ ಮಾತು; ಕಾಡುಹರಟೆ: ಹಾಳು ಹರಟೆಯಾಡಿ ಮನವ ಬೀಳು ಮಾಡಿಕೊಳ್ಳಬೇಡಿ (ಪುರಂದ. ೧-೧೬೭-೩); ಹಂಬಲಸಿ ಹಾಳುಹರಟೆಗಳ ವರಟೆಗಳ ಹರಟೆಗಿಂತ ನಂಬಿ ಹರಿದಾಸರೊಳು ಪೊಂದುವುದೆ ಲೇಸು (ಪುರಂದ. ೪-೨೧-೧); ಬಾಲಸನ್ಯಾಸಿಗೆ ಹಾಳುಹರಟೆ ಯಾಕೆ? (ಗಾದೆ).

[ಹಾಳು (< ಪಾಟು) + ಹರಟೆ]

ಹಾಳುಹರಿ (ನಾ). ಕೆಟ್ಟಪದಾರ್ಥ; ಹೊಲಸುಪದಾರ್ಥ: ಬಾಳುವಲ್ಲಿ ಬದುಕುವಲ್ಲಿ ಗುರುಲಿಂಗಜಂಗಮವನಱಿಯದೆ ಹಾಳುಹರಿಯ ತಿಂದ ಶುನಕನಂತೆ ಕಾಲ್ಕೆಡೆದು

ಓಡಾಡಿ ಏಳಲಾಱದೆ ಬಿದ್ದಾಗ ಶಿವಾ ಎಂದರೆ ಅಲ್ಲಿ ದೇವನಿಪ್ಪನೇ (ವಚಸಂ. ೪೭-೭೦).

[ಹಾಳು (< ಪಾಟ್) + ಹರಿ?]

ಹಾಳುಹೊಟ್ಟೆ (ನಾ). ೧. ಬರಿದಾದ ಉದರ; ಖಾಲಿಹೊಟ್ಟೆ: ಗಿಡಗವು, ದೊರೆಯೇ ಆಹಾರವೇನೂ ಸಿಕ್ಕದೆ ಹಸಿವಿನಿಂದ ಈ ಒಂದು ಪಕ್ಷಿಯನ್ನಾದರೂ ತಿನ್ನೋಣವೆಂದು ಬಂದ ನನ್ನನ್ನು ಹಾಳುಹೊಟ್ಟೆಯಲ್ಲಿ ಕಳುಹಿಸುವುದು ಧರ್ಮವೂ . . . ಎಂದು ಕೇಳಿತು (ನೀತಿಚಂ. XIV. ೧೯). ೨. (ಆಲಂ) ಕೆಟ್ಟಹೊಟ್ಟೆ: ಈ ಹಾಳುಹೊಟ್ಟೆಯಿಂದ ಎಷ್ಟು ಮಾತುಗಳನ್ನು ಕೇಳಬೇಕೋ ? (ರೂಢಿ).

[ಹಾಳು (< ಪಾಟ್) + ಹೊಟ್ಟೆ (< ಪೊಟ್ಟೆ$_1$)]

ಹಾಳೂರು 'ಹಾಟೂರ್' ನೋ.

ಹಾಳೆ$_1$ 'ಪಾಳೆ$_1$' ನೋ.

ಹಾಳೆ$_2$ 'ಹಾಲೆ$_4$' ನೋ.

ಹಾಳೆಕಿಳ್ಳಿ (ನಾ). (ಕರಾ) ಅಡಕೆಯ ಗೊಂಚಲಿನ ಮೇಲಿರುವ ಪೊರೆ; ಅಡಕೆಪಟ್ಟೆ: ಅಡಕೆತೋಟದಲ್ಲಿ . . . ಮರದ ಬುಡಗಳಿಗೆ ಹಾಳೆಕಿಳ್ಳಿಯಿಂದ (ಅಡಿಕೆಮರದ ಎಲೆಯ ಬುಡದಲ್ಲಿರುವ ಹಾಳೆಯಿಂದ ತಯಾರಿಸಿದ ನೀರು ಹಾಯಿಸುವ ಸಾಧನ) ನೀರೆರಚುವುದನ್ನು ನೋಡಲು ನಮಗೆ ತುಂಬಾ ಆನಂದವಾಗುತ್ತಿತ್ತು. ಹಾಳೆಕಿಳ್ಳಿಗಳನ್ನು ಹಿಡಕೊಂಡು ನಾವೂ ಸಿಕ್ಕಿದತ್ತ ತಮಾಷೆಗಾಗಿ ಆಟಕ್ಕಾಗಿ ನೀರೆರಚುತ್ತಿದ್ದೆವು (ಕುರುಕಾ. ೨೮). [ಹಾಳೆ$_1$ (< ಪಾಳೆ$_1$) + ಕಿಳ್ಳಿ]

ಹಾಳೆಕೊಟ್ಟೆ (ನಾ). ಅಡಕೆಹಾಳೆಯಿಂದ ಮಾಡಿದ ದೊನ್ನೆ: ನಾಲ್ಕಾರು ಕಾರೇಡಿಗಳೂ . . . ಪೀಂಚಲು ಹಿಡಿದಿದ್ದ ಹಾಳೆಕೊಟ್ಟೆಗೆ ಬಿದ್ದುವು (ಮಲೆಮ. ೧೬೩).

[ಹಾಳೆ$_1$ (< ಪಾಳೆ$_1$) + ಕೊಟ್ಟೆ$_2$]

ಹಾಳೆಟೋಪಿ (ನಾ). ಅಡಕೆಹಾಳೆಯಿಂದ ಮಾಡಿದ ಟೋಪಿ: ಮಲೆನಾಡಿನಲ್ಲಿ ಹಾಳೆಟೋಪಿಗಳ ಉಪಯೋಗ ಹೆಚ್ಚು (ರೂಢಿ). [ಹಾಳೆ$_1$ (< ಪಾಳೆ$_1$) + ಟೋಪಿ]

ಹಾಳೆಹದ್ದು 'ಹಾಳಿಹದ್ದು' ನೋ.

ಹಾಳೇರಿಸು (ಕ್ರಿ). ಕೆಡಿಸು; ನಾಶಪಡಿಸು: ನೀಚಜಾತಿಯವರೊಡನೆ ಪಂತಿಯೂಟದ ಸವ್ಯವಹಾರವಾಗುವಂತೆ ಎಂತೋ ಏರ್ಪಡಿಸಿ ಮತಾಚಾರಗಳನ್ನು ಹಾಳೇರಿಸಿದ ಸೇನಾಪತಿ ಬಸವಲಿಂಗಣ್ಣನೂ ಉಂಟು (ಚಿಟ್ಟಅ. ೪೮-೨೧).

[ಹಾಳು (< ಪಾಟ್) + ಏರಿಸು (< ಏಱಿಸು)]

ಹಾಳೊಡಲ್ (ನಾ). ೧. ವ್ಯರ್ಥವಾದ ದೇಹ; ನಿರರ್ಥಕವಾದ ಶರೀರ. ೨. (ಆಲಂ) ವ್ಯರ್ಥವಾಗಿ ಜೀವಿಸುವ ವ್ಯಕ್ತಿ: ದೇವಬಾಳೆ . . . ಹಂಸ ಮಯೂರಾದಿಗಳ ಕಾಣ್ಕೆಯೆಂಬುದು ಶಿವಭಕ್ತಿಯಿಲ್ಲದ ಹಾಳೊಡಲ್ಗಳಂ ಕಂಡ ಶಿವಭಕ್ತನಂತೆ ಕಣ್ಗೆಱಬು (ನಂಬರ. ೧೬-೧೨). [ಹಾಳು (< ಪಾಟ್) + ಒಡಲ್]

ಹಾಳ್ಗರೆ, ಹಾಳುಗರೆ (ಕ್ರಿ). ಬರಿದಾಗಿರು; ಶೂನ್ಯವಾಗಿರು: ನಾಯಕತ್ವವಿಲ್ಲದೆ ಹಾಳ್ಗರೆಯತ್ತಿರುವ ಅಂಗಡಿಯಲ್ಲಿ . . . ಕಡುಕಾವಲ್ಗುಡುತ್ತಿರುವರು (ಬಿಡುಗಂ. ೧೨-೮). **ಹಾಳುಗರೆ** : ಮನೆ ಹಾಳುಗರೆಯುತ್ತಿದೆ (ಜಮೀನ್ದಾ. ೪೬).

[ಹಾಳ್ (< ಪಾಟ್) + ಕರೆ$_2$ (< ಕಱೆ$_1$)]

ಹಾಳ್ಗೆಯ್ 'ಪಾಳ್ಗೆಯ್' ನೋ.

ಹಾಳ್ಮನೆ 'ಪಾಟ್ಮನೆ' ನೋ.

ಹಾಱೂಟ 'ಪಾಱೂಟ' ನೋ.

ಹಾಱಿಕೆ, ಹಾರಿಕೆ (ನಾ). ೧. (ಪಕ್ಷಿಯಂತೆ) ಆಕಾಶದಲ್ಲಿ ಚಲಿಸುವಿಕೆ; ಹಾರಾಡುವಿಕೆ: ಏಱಿದುದು ಹಯವಮಮ ಗರುಡನ ಹಾಱಿಕೆಯ ಹವಣಿನಲಿ (ತೊರರಾ. ೬-೩೦-೧೩). ಹಾರಿಕೆ: ೧. ಪಕ್ಕಗಳು ಬಲಿತಿಲ್ಲ, ಹಾರಿಕೆ ಕಲಿತಿಲ್ಲ (ಸಮೀಗೀ. ೩೩-೬೨೭). ೨. ನೆಗೆತ; ಲಂಘನ: ನೋಟಕರಿಗಾಶ್ಚರ್ಯಮಾಗೆ ಹಾರಿಕೆಗಳೊಳು ನೀಟಿನಿಂದೆಡಬಲಕೆ ಸುತ್ತಿ (ಕೃಷ್ಣವಿ. ೫-೧೦೭); ವಿರಿಂಚಿಮಹಾರಾಜರು ಒಂದೇ ಹಾರಿಕೆಗೆ ಮನೆಯೊಳಗಿಂದ ಹೊರಗೆ ಬಂದರು (ಕುರುಹಿ. ೩೩). ೩. (ಆಲಂ) ವಿಷಯವನ್ನು ಮರೆಸುವಿಕೆ; ತೇಲಿಸುವಿಕೆ: ನೇರಪ್ರಶ್ನೆಗೆ ಅವರು ಕೊಟ್ಟ ಎವರಣೆ ಕೇವಲ ಹಾರಿಕೆಯದಾಗಿತ್ತು (ರೂಢಿ).

ಹಾರಿಕೆಯ ಉತ್ತರ = ವಿಷಯವನ್ನು ಮರೆಸಿ ಕೊಡುವ ಉತ್ತರ; ಅಸ್ಪಷ್ಟವಾದ ಉತ್ತರ: ಮೂಸಬ್ಬ ಹಾರಿಕೆಯ ಉತ್ತರ ಕೊಟ್ಟನೆ ಹೊರತು ನೇರ ಮಾತಾಡಲಿಲ್ಲ (ಒತ್ತಿಉ. ೮೩); ಅವರು ಹಾರಿಕೆಯ ಉತ್ತರ ಕೊಟ್ಟರು (ಗಂಮಾಯಿ. ೯೯೮). ಹಾರಿಕೆಯ ಮಾತು = ವಿಷಯವನ್ನು ಮರೆಸಿ ಆಡುವ ಮಾತು: ನನಗೆ ಹಾರಿಕೆಯ ಮಾತು ಬೇಕಾಗಿಲ್ಲ, ಸ್ಪಷ್ಟವಿಷಯವನ್ನು ತಿಳಿಸು (ರೂಢಿ). ಹಾರಿಕೆಯ ಸುದ್ದಿ = ಸ್ಪಷ್ಟವಲ್ಲದ ಸಮಾಚಾರ: ಹಾರಿಕೆಯ ಸುದ್ದಿಗಳಿಂದಲೆ ಸೇರಿಕೆಯ ಅಭಿಪ್ರಾಯಗಳನ್ನು ಪ್ರಸಾರ ಮಾಡುವ ಪ್ರಚಾರಕರೂ ಒಮ್ಮೊಮ್ಮೆ ವಾಚಕವರ್ಗದಲ್ಲಿ ಸೇರಿರುತ್ತಾರೆ (ಸಾಹಿಸಂ. ೧೯೭). [ಹಾಱು$_1$ (< ಪಾಱು$_1$) + - ಇಕೆ]

ಹಾಱಿಸು 'ಪಾಱಿಸು' ನೋ.

ಹಾಱು$_1$ 'ಪಾಱು$_1$' ನೋ.

ಹಾಱು$_2$ 'ಪಾಱು$_2$' ನೋ.

ಹಾಱುಗಣೆ (ನಾ). ಒಂದು ಬಗೆಯ ಬಾಣ; ಹಾರಿ ಬರುವ ಕಣೆ: ಹಾಱುಗಣೆಗಳ ಹರಸಿ ಹೆಮ್ಮೆಯ ಬೀಱೆ ಚದುರಿಗತನವ ಮೆಱೆದರೆ ನೀಱನೆಂಬರೆ ನಿನ್ನನೆನುತೆಚ್ಚನು ಧನಂಜಯನ (ಕುಮಾಕ. ೨೨-೩೦). [ಹಾಱು$_1$ (< ಪಾಱು$_1$) + ಕಣೆ$_1$]

ಹಾಱುಗುಪ್ಪೆ 'ಪಾಱುಂಗುಪ್ಪೆ' ನೋ.

ಹಾಱುವಲೆ (ನಾ). ಒಂದು ಬಗೆಯ ಬಲೆ: ಸಿಡಿವವಲೆ ಸಿಲುಕುವಲೆ ಹಾಱುವಲೆ ಜಾಱುವಲೆ . . . ಗೂಢವಲೆ ಮಡಿಕೆವಲೆ ಮಂದಸಿನವಲೆಯ ಹೊಱೆಗಳ ಬೇಡವಡೆ ನೆರೆದುದೇನೆಂಬೆನು (ಹಚಕಾ. ೫-೮). [ಹಾಱು$_1$ (< ಪಾಱು$_1$) + ಬಲೆ$_1$]

ಹಾಟಂಬಡು 'ಪಾಟಂಬಡು' ನೋ.

ಹಾಟು 'ಪಾಟ್' ನೋ.

ಹಾಟೂರ್, ಹಾಳೂರು (ನಾ). ಹಾಳುಬಿದ್ದ ಊರು; ನಾಶವಾದ ಹಳ್ಳಿ: ಈಕೆ . . . ಒಣಕುಟ್ಟಇತ್ತ ದೆ ಪತ್ತಿದ ಹಾಟೂರ ನಾಯಂತೆ ತೊನ್ನರ ತುಟಿಯಂತೆ . . . ತನ್ನ ದೌರ್ಭಾಗ್ಯಮಂ ಬೇಟದ ಮೇಲೆ ನೆವಮಿಕ್ಕಿದಪಳ್ (ಲೀಲಾವ. ೨-೧೧೬ ವ). ಹಾಳೂರು: ಮಾಟವಿಲ್ಲದವನ ಭಕ್ತಿ ಹಾಳೂರ ಮುಂದಿಟ್ಟಿಹ ಕೋಳದಲ್ಲಿ ಕಾಲನಿಟ್ಟು ಕೀಲ ಜಡಿಕೊಂಡಂತಾಯಿತ್ತು (ಶೂನ್ಯಸಂ. ೨೨೮-೩೦); ಧನಕನಕವುಳ್ಳನಕ ದಿನಕರನ ವೋಲಕ್ಕು ಧನಕನಕ ಹೋದ ಮಱುದಿನ ಹಾಳೂರ ಶುನಕನಂತಕ್ಕು (ಸರ್ವಜ್ಞ. ೧೨೩೭); ಹಾಳೂರಿಗೆ ಉಳಿದವನೇ ಗೌಡ (ಗಾದೆ). [ಹಾಟ್$_0$ (< ಪಾಟ್) + ಊರ್]

ಹಾಟ್ಮನೆ 'ಪಾಟ್ಮನೆ' ನೋ.

ಹಾಟ್ಮನೆಹಾಟ 'ಪಾಟ್ಮನೆಪಾಟ' ನೋ.

ಹಿಂ 'ಪಿನ್' ನೋ.

ಹಿಂಕಾರ (ನಾ). ೧. ಸಾಮಗಾನದ ಒಂದು ಪ್ರಭೇದ: ಉದ್ಗೀಥ, ಪ್ರಸ್ತಾವ, ಹಿಂಕಾರ, ಪ್ರತಿಹಾರ, ನಿಧನವೆಂಬ ೫ ಪ್ರಕಾರವಾಗಿ ಸಾಮಗಾನವು ಭಾಗಿಸಲ್ಪಟ್ಟಿರುವುದು (ಪಸಾರ. ೬-೧೪ ತಾತ್ಪರ್ಯ). ೨. ವಿಷ್ಣುವಿನ ಒಂದು ಹೆಸರು: ಗೋವುಗಳೊಳುದ್ಗೀಥನಿಹ ಪ್ರಸ್ತಾವ ಹಿಂಕಾರೆರಡು ರೂಪದಲಾವಿಯ ಜಗದೊಳಗಿಹನು ಪ್ರತಿಹಾರಂ ಹಯಗಳೊಳು (ಪಸಾರ. ೬-೧೪). [ಸಂ.]

ಹಿಂಕೋರೆ (ನಾ). ಖಡ್ಗಯುದ್ಧದ ಒಂದು ವರಸೆ; ಕತ್ತಿಯನ್ನು ಹಿಂದಕ್ಕೆ ಓರೆಯಾಗಿ ಬೀಸುವಿಕೆ: ತಳಸಂಚು ಮೇಲ್ಸಂಚು ಹಿಂಕೋರೆ ಮುಂಕೋರೆ ಬಲಸನ್ನೆಯೆಡದ ಸನ್ನೆಯೊಳು ಅಲಗ ನೀಡಿದರಲಗಿನೊಳಾಂತು ನೆಗೆದು ಮೈ ಹೊಳೆದು ತಪ್ಪಿಸಿದನೆಲ್ಲವನು (ಭರಚ. ೬೩-೨೭). 'ಮುಂಕೋರೆ' ಪರಾ.

[ಹಿಂ (< ಪಿನ್) + ಕೋರೆ$_1$]

ಹಿಂಗಚ್ಚೆ (ನಾ). ನಡುಪಟ್ಟಿಯ ಹಿಂಭಾಗಕ್ಕೆ ಸಿಕ್ಕಿಸಿದ ಪಂಚೆಯ ಅಥವಾ ಸೀರೆಯ ತುದಿ; ಹಿಂಭಾಗದಲ್ಲಿ ಸಿಕ್ಕಿಸಿದ ಕಚ್ಚೆ: ಇನ್ನು ಸಂಶಯವಿಲ್ಲೆನುತ ಚಿತ್ತಂ ನಲಿದು ಹಿಂಗಚ್ಚೆಯೊಳೆಸೆವ ತನ್ನ ಕುಡುಗೋಲಂ ತೆಗೆದು ಕೊರಳಂ ಪಱಿದುಕೊಳುತಿರಲು (ಬಸಪು. ೨೭-೧೮). [ಹಿಂ (< ಪಿನ್) + ಕಚ್ಚೆ]

ಹಿಂಗಟ್ಟು (ನಾ). ೧. (ಕೈಗಳನ್ನು ಶರೀರದ) ಹಿಂಭಾಗದಲ್ಲಿ ಸೇರಿಸಿ ಹಾಕುವ ಕಟ್ಟು,— ಬಂಧನ: ತೋಳ ಹಿಂಗಟ್ಟುಗಳ ಮೋಱೆಯ ಕಾಳಿಕೆಯ ಬಿಡುವಲೆಯ

ನೀರೊಜೆವಾಲಿಗಳ ಕುರುಭೂಪನಿದ್ದನು ತಮ್ಮದಿರುಸಹಿತ (ಕುವ್ಯಾಅ. ೨೧-೧); ಸದೆದ ಭಟರನೆಲ್ಲ ಕದುಬಿ ಹಿಡಿದುಕೊಂಡು ಒಡೆದು ಹಿಂಗಟ್ಟಿ ಕಟ್ಟಿದರು (ಸೌಂದಕಾ. ೮-೬೭). ೨. ಹಿಂದಿನ ಸ್ಥಳ; ಹಿಂಭಾಗ: ಬಕನ ಬಳಗದಂತೆ ನಿಂದ ಬಿಲ್ಲ ಬಲ್ಲಣಿಯ ಹಿಂಗಟ್ಟಿನೊಳೆ ಮುಂಕಣಿಸಿ ನೆಗೆಪದ ಸಬಳಂಗಳ . . . ಕೊಂತಕಾಡುರ ತಿಂತಿಣಿಯ ನಡುವೆ (ಗಿಅ. ೬-೨೫ ವ). ೩. ಕೊಳೆದ ಒಡ್ಡಿನ ಹೊರಭಾಗ: (ಪ). [ಹಿಂ (< ಪಿನ್) + ಕಟ್ಟು]

ಹಿಂಗಟ್ಟುಕಟ್ಟು (ಕ್ರಿ). (ಕೈಗಳನ್ನು ಶರೀರದ) ಹಿಂಭಾಗದಲ್ಲಿ ಸೇರಿಸಿ ಕಟ್ಟುಗಳನ್ನು ಹಾಕು; ಬಂಧಿಸು: ಶ್ರೀಕೃಷ್ಣನನ್ನು ಹಿಂಗಟ್ಟುಕಟ್ಟಿ ಅಲ್ಲಿಯೇ ಸೆರೆಯಲ್ಲಿ ಇಟ್ಟರೆ ಕೃಷ್ಣನ ಸಹಾಯ ಪಾಂಡವರಿಗೆ ತಪ್ಪಿ ಅವರು ಓಡಿ ಹೋಗುವರು (ನೀತಟಂ. ೧. ೧೧). [ಹಿಂಗಟ್ಟು + ಕಟ್ಟು]

ಹಿಂಗಟ್ಟುಮುರಿ (ನಾ). ಕೈಗಳನ್ನು ಶರೀರದ ಹಿಂಭಾಗದಲ್ಲಿ ಸೇರಿಸಿ ಕಟ್ಟಿರುವಿಕೆ: ಚಿತ್ರಸೇನಾದಿ ಗಂಧರ್ವರು ನಿನ್ನನ್ನು ಹಿಂಗಟ್ಟುಮುರಿಯನ್ನು ಕಟ್ಟಿಕೊಂಡು ಹೋಗುವಾಗ ಅರ್ಜುನನು ನಿಗ್ರಹಿಸಿಕೊಂಡುದು ತಿಳಿಯದೇ (ಕೃವಾಭಾ. ೧೫೩): ಆತನ ಹಿಂದೆ ಹಿಂಗಟ್ಟುಮುರಿಯುಳ್ಳ ಪುರುಷನನ್ನು ಹಿಡಿದುಕೊಂಡು ಇಬ್ಬರು ಕಾವಲುಗಾರರೂ ಬರುವರು (ಶಾಕುಂತ. ೭೫). [ಹಿಂಗಟ್ಟು + ಮುರಿ (< ಮುರಿವು)]

ಹಿಂಗಟ್ಟುಮುರಿಕಟ್ಟು 'ಹಿಂಗಟ್ಟುಮುರಿಗಟ್ಟು' ನೋ.

ಹಿಂಗಟ್ಟುಮುರಿಗಟ್ಟು, ಹಿಂಗಟ್ಟುಮುರಿಕಟ್ಟು (ಕ್ರಿ). = ಹಿಂಗಟ್ಟುಕಟ್ಟು: ಕಾಲನನು ಹಿಂಗಟ್ಟುಮುರಿಗಟ್ಟಿ ಸೆಳತಂದು ಅವನ ಕಣ್ಣಿಯಲವಗೆ ಉರುಲ ಹಾಕುವ ನಾನು (ಶಕಾಲ. ೭೭-೨೩); ಶಾಂತಿ ಇಲ್ಲದ ಹಗಲೂ,ನಿದ್ರೆ ಇಲ್ಲದ ಇರುಳೂ ನನ್ನನ್ನು ಹಿಂಗಟ್ಟುಮುರಿಗಟ್ಟಿ ಸರಪಣಿಯಿಂದ ಬಿಗಿಯುವುದಕ್ಕೆ ಮೊದಲುಮಾಡಿದವು (ನಿಬಂಧ.II.೨೧೬). **ಹಿಂಗಟ್ಟುಮುರಿಕಟ್ಟು**: ಅಫ್ಜಲ್‌ಖಾನನು ಸೇನಾಪತಿಯಾಗಿ . . . ಶಿವಾಜಿಯನ್ನು ಹಿಂಗಟ್ಟುಮುರಿಕಟ್ಟಿ ತರುವುದಕ್ಕೆ ಬಿಜಾಪುರದಿಂದ ಹೊರಟನು (ಭಶ್ರಪ್ರ. ೬೨); ಇಬ್ಬರು ಡಕಾಯಿತರು ಅವನ ಮೇಲೆ ಬಿದ್ದು . . . ಹಿಂಗಟ್ಟುಮುರಿಕಟ್ಟಿ ಹೊತ್ತುಕೊಂಡು ಮಧುರನ ಮನೆಯ ಹಿಂದೆ ಹೋಗಿ ಹಾಲಕ್ಕಿಯಂತೆ ಸಿಳ್ಳುಹಾಕಿದರು (ಬಂಕಿಮ.೧೪೦).

[ಹಿಂಗಟ್ಟುಮುರಿ + ಕಟ್ಟು]

ಹಿಂಗಡಿ (ನಾ). ೧. ಹಿಂದಿನ ಪ್ರದೇಶ,– ಸೀಮೆ. ೨. ಹಿಂಬದಿ; ಹಿಂಭಾಗ: ಹಿಂಗಡಿಯ ಬಲುಗಾರ ಖಿಳರ ಕರಾಂಗುಳಿಗಳಂತಿರುವನುಗಿದು ಶಿವಾಂಗನೆಯ ಮೇಲೆಚ್ಚಲು ಬಲು ಬಾಣವೃಷ್ಟಿಗಳ (ದೀವೀಮು.೩-೬). [ಹಿಂ (< ಪಿನ್) + ಗಡಿ]

ಹಿಂಗಡೆ 'ಪಿಂಗಡೆ' ನೋ.

ಹಿಂಗಣ (ನಾ). ಹಿಂಭಾಗ; ಹಿಂಬದಿ: ಅಂಗಾಲಿಗೆ ವಂಕಿಕ್ಕಿ ಮುಂಗಾಲಿಗೆ ಕಡಗವನಿಟ್ಟು ಉಂಗುಷ್ಠದಲ್ಲಿ ಉಂಗುರವ ಹಾಕಿ ಅಂಗಣಕ್ಕೆ ಬಂದು ನಿಂತು ಹಿಂಗಣಕ್ಕೆ ಮೊಲಕಟ್ಟುವಳು ಗಂಗಾಜನಕನ ಬಳಿಗೆ ಶೃಂಗರಿಸಿ ಬಂದು ನಿಂತಳು (ಪುರಂದ.೫-೪೩-೨).

[ಹಿಂ (< ಪಿನ್) + ಕಣ (< ಕಳ)]

ಹಿಂಗಣ್ಣು (ನಾ). ೧. ಡೊಂಬರು ಹಾಕುವ ಒಂದು ಬಗೆಯ ವರಸೆ; ಹಿಮ್ಮುಖವಾಗಿ ಹಾಕುವ ಲಾಗ: ಒಂದು ಗಣೇಮರದ ಸಮಾಪಕ್ಕೆ ಹೋಗಿ ಮೇಲಕ್ಕೆ ಹತ್ತಿ ಅಲ್ಲಿ ಲಾಗ, ಅಂತರಪರಟಿ, ಹಿಂಗಣ್ಣು, ಮುಂಗಣ್ಣು . . . ಮೊದಲಾದ ಸಾಹಸಗಳನ್ನೆಲ್ಲಾ ಮಾಡುತಿರಲಾಗಿ (ಅಡೂಟ. ೧೭೬). ೨. ಈಜುವಿಕೆಯ ಒಂದು ವಿಧಾನ; ಹಿಮ್ಮುಖವಾಗಿ ಈಜುವಿಕೆ: ದೊಡ್ಡನ ಕಲ್ಲಿನಲ್ಲಿ ಈಜುವುದೇ ನಮ್ಮ ಊರು ಹುಡುಗರಿಗೆ ದೊಡ್ಡ ಸಮಾರಂಭ. ಅಲ್ಲಿ ಹಿಂಗಣ್ಣು ಮುಂಗಣ್ಣು ಹಾಕುವುದರಲ್ಲಿ ನಿಸ್ಸೀಮನಾದವನಿಗೆ ಯಾವ ತುಂಬುಹೊಳೆಯಲ್ಲೂ ಭಯವಿಲ್ಲ (ಗಾಯುದಾ. ೧೭೨).

[ಹಿಂ (< ಪಿನ್) + ಕಣ್ಣು (< ಕಣ್)]

ಹಿಂಗತೆ 'ಪಿಂಗತೆ' ನೋ.

ಹಿಂಗರಣಿ (ನಾ). ಹಿಂದಕ್ಕೆ ಹೊಡೆಯುವ ಲಾಗ: ಕೆಲವು ಎತ್ತರಕ್ಕೆ ಹಾರಿ ಹಿಂಗರಣಿ ಹೊಡೆದು ಕಳಕ್ಕೆ ಇಳಿಯುವುವು. ಕೆಲವು ಬಲು ದೂರ ಸಾಗಬಲ್ಲವು (ಬಾಲಪ್ರ. III. ೧೪೩೫). [?./ ತುಳು. ಹಿಂಗರನೆ = ಹಿಂದಕ್ಕೆ, ಹಿಂದೆ]

ಹಿಂಗರ್ತರಿ (ನಾ). ಖಡ್ಗಯುದ್ಧದ ಒಂದು ವರಸೆ: ನಿಂತುಕೊಂಡು ಪಾದದಲ್ಲಿ ಪಾದಪ್ರಕ್ಷೇಪವು ಮುಂಗರ್ತರಿಯೆಂಬುದು ಇದನ್ನೆ ಹಿಂದಕ್ಕೆ ಮಾಡಿದರೆ ಅದು ಹಿಂಗರ್ತರಿಯೆಂಬುದು (ಖಡ್ಗಲ.೪ ೭೯). 'ಮುಂಗರ್ತರಿ' ಪರಾ.

[ಹಿಂ (< ಪಿನ್) + ಕರ್ತರಿ]

ಹಿಂಗಾರ 'ಪಿಂಗಾರ' ನೋ.

ಹಿಂಗಾರಿ 'ಹಿಂಗಾರು' ನೋ.

ಹಿಂಗಾರಿಮಳೆ 'ಹಿಂಗಾರುಮಳೆ' ನೋ.

ಹಿಂಗಾರು, ಹಿಂಗಾರಿ (ನಾ). ೧. ವರ್ಷದಲ್ಲಿ ಬೀಳುವ ಕಡೆಯ ಮಳೆ: 'ಹಿಂಗಾರುಮಳೆ' ಪರಾ. ೨. ವರ್ಷದ ಕಡೆಯ ಮಳೆಗಾಲದಲ್ಲಿ ಈಶಾನ್ಯದಿಕ್ಕಿನಿಂದ ಬೀಸುವ ಗಾಳಿ; ಈಶಾನ್ಯವಾಣಿಜ್ಯಮಾರುತ: ನಾವುಗಳಿಗೆ ಹಿಂದುಸ್ಥಾನದಲ್ಲಿ ಈಶಾನ್ಯ ಪರ್ಜನ್ಯ ಮಾರುತಗಳೆಂದೂ ಹಿಂಗಾರೆಂದೂ ಹೆಸರುಂಟು (ಭೂವಿವ. ೬೩). **ಹಿಂಗಾರಿ**: ೧. ಸಿಂಗಕ್ಕೆ ಗುರು ಬರಲು ಸಂಗರವು ಘನವಕ್ಕು . . . ಕಡೆಯ ಮಳೆ ಹಿಂಗಾರಿಯಕ್ಕು (ಸರ್ವಜ್ಞ.೧೫೪೪); ಒಕ್ಕಲಿಗರು ಹಿಂಗಾರಿಯ ಮಳೆಯನ್ನು ನಂಬಿದಮ್ಮ ಮುಂಗಾರಿಯ ಮಳೆಯನ್ನು ನಂಬುವುದಿಲ್ಲ (ಕಭಾಗ. ೨೨). [ಹಿಂ (< ಪಿನ್) + ಕಾರು (< ಕಾರ್)]

ಹಿಂಗಾರುಮಳೆ, ಹಿಂಗಾರಿಮಳೆ (ನಾ).= ಹಿಂಗಾರು ೧: ದೊಡ್ಡಮರಗಳಿರುವ ಅಂತಹ ಕಾಡುಗಳಿಗೆ '' ಮುಂಗಾರು, ಹಿಂಗಾರುಮಳೆಗಳ ಕಾಡುಗಳು'' ಎಂದು ಹೆಸರು (ಭೂವಿವ.೨೬೧). **ಹಿಂಗಾರಿಮಳೆ**: ಮುಂಗಾರಿಮಳೆಗಳು ಮುಗಿದು ಹಿಂಗಾರಿಮಳೆಗಳು ಪ್ರಾರಂಭವಾಗುವುವು (ಕನ್ನಚಾ. ೧೬೫). [ಹಿಂಗಾರು + ಮಳೆ (< ಮಳೆ)]

ಹಿಂಗಾಲ್ 'ಪಿಂಗಾಲ್' ನೋ.

ಹಿಂಗಾಲು 'ಪಿಂಗಾಲ್' ನೋ.

ಹಿಂಗಿಸು 'ಪಿಂಗಿಸು' ನೋ.

ಹಿಂಗು$_1$ 'ಪಿಂಗು$_1$' ನೋ.

ಹಿಂಗು$_2$ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹಾಲಿನಿಂದ ತಯಾರಾಗುವ (ಅಡುಗೆ ಮತ್ತು ಔಷಧಿಗಳಿಗೆ ಬಳಕೆಯಾಗುವ) ಒಂದು ಪದಾರ್ಥ: ''ಹಿಂಗು:, ರಾಮಠಂ-ಈ ೨ ಹಿಂಗು'' (ಪಲಾಯು. ೧೧೧-೪೬೭); ಹಿಂಗು ವಚಾದ್ವಯ ಮರಿಚ ವಿಳಂಗ . . . ಪಶುಮೂತ್ರದಿಂ ವೃಕ್ಷಗಳನಿಂಬಾಗಿ ಪೊರೆಯ ಕೀಟಾಪಹರಂ (ಲಘೋಪ. ೬-೧೧); ಕೊಡಸಿಗೆ ಚಿತ್ರಂ ಪಿಪ್ಪಲಿ ಒಡನತಿಬಚೆ ಶುಂಠಿ ಹಿಂಗು ಮುಸ್ತಗಳಂ ಕೂಡಿದಿದಿಟ್ಟದರ ಕಷಾಯಂ ಕುಡಿದೊಡೆ ವಾತಾತಿಸಾರಮಂ ಪಿಂಗಿಸುಗುಂ (ಕಲ್ಯಾಕಾ.೪-೧೦); ಬಿಂಗಿಗೆ ಬದಲಾಗಿ ಹಿಂಗು ಹಚ್ಚಿದಂತೆ (ಗಾದ). [ಸಂ.]

ಹಿಂಗುಕಣ್ಣು 'ಹಿಂಗುಗಣ್ಣು' ನೋ.

ಹಿಂಗುಗಣ್ಣು, ಹಿಂಗುಕಣ್ಣು (ನಾ). ಕಣ್ಣುಗಳು ಹಿಂಗಿ ಹೋಗುವ ಒಂದು ಬಗೆಯ ರೋಗ; ಕಣ್ಣಿನ ಒಂದು ರೋಗ: ''ಜೀವಸತ್ವ A'' ಯನ್ನು ಸರಿಯಾದ ಪ್ರಮಾಣದಲ್ಲಿ ಪಡುಗರ ಆಹಾರದಲ್ಲಿ ಸೇರಿಸುವುದರಿಂದ ಈ ಹಿಂಗುಗಣ್ಣನ್ನು ತಡೆಯಬಹುದು (ನಿಮ್ಮಪ್ಯ. ೧೧). **ಹಿಂಗುಕಣ್ಣು**: (ಹಿಂಗುಕಣ್ಣುಗಳು) ಇಂಡಿಯ ದೇಶದಲ್ಲಿ ಕೆಲವು ಕಡೆ ಚಿಕ್ಕಮಕ್ಕಳಲ್ಲಿ ಈ ರೋಗವು ಸಾಧಾರಣವಾಗಿ ಕಂಡುಬರುತ್ತದೆ (ನಿಮ್ಮಪ್ಯ. ೧೨೨). [ಹಿಂಗು$_1$ (< ಪಿಂಗು$_1$) + ಕಣ್ಣು (< ಕಣ್)]

ಹಿಂಗುಡಿ ' ಪಿಂಗುಡಿ' ನೋ.

ಹಿಂಗುಪತ್ರ (ನಾ).ಒಂದು ಬಗೆಯ ಸಸ್ಯ; ಇಂಗಳದ ಗಿಡ: ''ಪಿಂಡಾ – ಅರಿಸಿನ, ಕುಂದುರುಷ್ಕ, ಹಿಂಗುಪತ್ರ'' (ಓಷಧಿ. ೯೭). [ಸಂ.]

ಹಿಂಗುಪತ್ರಿ (ನಾ). ೧. ಇಂಗಿನ ಗಿಡದ ಎಲೆಗಳನ್ನು ಹೋಲುವ ಒಂದು ಬಗೆಯ ಎಲೆಯಿಂದ ತಯಾರಿಸಿದ ಔಷಧಿ: (ಪ). ೨. ಒಂದು ಬಗೆಯ ಸಸ್ಯ: ''ಕುವರೀ-ಹಿಂಗುಪತ್ರಿ'' (ಓಷಧಿ. ೩೫). [ಸಂ. ಹಿಂಗುಪತ್ರಿನ್]

ಹಿಂಗುಪತ್ರೆ (ನಾ). = ಹಿಂಗುಪತ್ರ: ''ನಾಳಃ-ನಾಳಲು, ತಾಳೀಸಪತ್ರ, ಗಂಧರ್ವದೂರ್ವ, ಹಿಂಗುಪತ್ರೆ, ಬಳ್ಳಿಸೊಂಡೆ'' (ಓಷಧಿ. ೮೫). [ಸಂ. ಹಿಂಗುಪತ್ರ]

ಹಿಂಗುರುಳು (ನಾ). ತಲೆಯ ಹಿಂಭಾಗದ ಕೂದಲು: ಹಡದವ್ವ ತನ್ಮಗಳ ಮಡಿಲಲ್ಲಿ ಕೂರಿಸಿಕೊಂಡು ಹಾರೀದ ಹಿಂಗುರಳ ಬಿಗಿಬಾಚಿ (ಜೀತ. ೧೧೧).

[ಹಿಂ (< ಪಿನ್) + ಕುರುಳು (< ಕುರುಳ್)]

ಹಿಂಗುಲ, ಹಿಂಗುಳ (ನಾ). ಪಾದರಸವನ್ನು ಗಂಧಕ, ಇಂಗಲೀಕಗಳೊಂದಿಗೆ ಬೆರಸಿ ಮಾಡಿದ ಒಂದು ಬಗೆಯ ದ್ರವ್ಯ,– ವಸ್ತ್ರ; ರಸಗಂಧಕ; ರಸಸಿಂಧೂರ: ಚಂದ್ರ, ಹಿಂಗುಲ, ಅರಿದಾಳ ಮುಂತಾದುವುಗಳಿಂದ ಬಣ್ಣದ ಮಸಿಗಳಾಗುತ್ತಿದ್ದುವು (ಕನ್ನಸಂ. ೪೪). **ಹಿಂಗುಳ**: "ಹಿಂಗುಳಂ, ಹಂಸಪಾದಂ, ಕುರುವಿಂದಂ - ಈ ೩ ಇಂಗುಲಿಕಂ" (ಪಲಾಯು. ೧೦೨-೪೬೭). [ಸಂ.]

ಹಿಂಗುಳ 'ಹಿಂಗುಲ' ನೋ.

ಹಿಂಗೂಡು (ಕ್ರಿ). ಹಿಂದಕ್ಕೆ ಸೇರಿಸು,– ಸಿಕ್ಕಿಸು: ನೀವಿಯನೆತ್ತಿ ಹಿಂಗೂಡಿ ನಗಿಪ ಹಾಸ್ಯಭಾವದ ವಿಟನೊರ್ವನೆಸೆದ (ಕಂಸಮ. ೭-೧೨೬). [ಹಿಂ (< ಪಿನ್) + ಕೂಡು]

ಹಿಂಗೆಜ್ಜೆ (ನಾ). ಹಿಂದಕ್ಕೆ ಕಟ್ಟಿರುವ ಗೆಜ್ಜೆ: ಜಘನವನಲೆವ ನಿಱಿಗಳ ಹಿಂಗೆಜ್ಜೆಯ ಬಗಸೆಗಂಗಳ . . . ವಾರಿದುಱುಬಿನ ಸೌಂದರ್ಯದ ತಿಗುಳನಾರಿಯರೊಪ್ಪಿದರು (ಕಂಸಮ. ೨೧-೮೪). [ಹಿಂ (< ಪಿನ್) + ಗೆಜ್ಜೆ]

ಹಿಂಗೆಯ್, ಹಿಂಗ್ಯೆ (ನಾ). ಕೈಯ ಹಿಂಭಾಗ, – ಹಿಂಬದಿ: (೬). **ಹಿಂಗ್ಯೆ**: "ಪೆಡಗ್ಯೆ, ಪೆಡಂಗ್ಯೆ, ಹಿಂದಿನ ಕೈ, ಹಿಂಗ್ಯೆ" (ಗಂಗಾಮ. ೨೧೫); ನೀರನ್ನು ಕುಡಿದಾಗ ತನ್ನ ತುಟಿಗಳನ್ನು ತನ್ನ ಹಿಂಗ್ಯೆಯಿಂದ ಒರೆಸಿಕೊಳ್ಳುತ್ತಿದ್ದ (ಮಪಾತ್ಮಾ. ೧೯). [ಹಿಂ (< ಪಿನ್) + ಕೆಯ್]

ಹಿಂಗ್ಯೆ 'ಹಿಂಗೆಯ್' ನೋ.

ಹಿಂಗೋಟು (ನಾ). (ಕರಾ) (ದೋಣಿಯ) ಹಿಂಭಾಗದ ತುದಿ,– ಕೊನೆ: ಐತಾಳರು . . . ಮೈತುಂಬ ಕೆಸರು ಬಳಿದವರಾಗಿ, ದೋಣಿಯ ಹಿಂಗೋಟಿನ ಮೇಲೆ ಸ್ಥಾಪಿತರಾಗಿದ್ದರು (ಮರಮ. ೧೧೧). [ಹಿಂ (< ಪಿನ್) + ಗೋಟು (< ಗೊಂಟು)]

ಹಿಂಗೋಲು (ನಾ). ೧. ಕಡಿಮೆ ತೂಕ: "ಹಿಂಗೋಲು- ಹಿಂಗಾಣಿತೂಕ; ಕಡಿಮತೂಕ" (ಚಾನಕೋ. ೫೬). ೨. ಗಾಡಿ, ನೇಗಿಲು ಮೊದಲಾದುವುಗಳನ್ನು ಎಳೆಯಲು ಎತ್ತುಗಳನ್ನು ಕಟ್ಟಿದಾಗ ಅವುಗಳಲ್ಲೊಂದು ಹಿಂದೆ ಬೀಳುವುದು: ಯಾವಾಗಲೂ ಹಿಂಗೋಲಾಗುವ ಈ ಎತ್ತನ್ನು ಬಿಟ್ಟು ಬೇರೆಯದನ್ನು ಗಾಡಿಗೆ ಕಟ್ಟು (ರೂಢಿ). [ಹಿಂ (< ಪಿನ್) + ಕೋಲು (< ಕೋಲ್)]

ಹಿಂಚನೂರು 'ಪಿಂಚನೂರ್' ನೋ.

ಹಿಂಚಾರಿ (ನಾ). ಯುದ್ಧದ ಒಂದು ವರಸೆ; ಹಿಂದಕ್ಕೆ ಚಲಿಸುವಿಕೆ: ಹಿಂಚಾರಿಯೊಳು ತೂಗಿ ತಿವಿದನಾ ಪಡಿ ಕೊಡೆ ಹಂಚದಂತೆರಡು ಹೋಳಾಯ್ತು (ಭರಚ. ೨೯-೬೯).

[ಹಿಂ (< ಪಿನ್) + ಚಾರಿ]

ಹಿಂಚಿಸು (ಕ್ರಿ). ಹಿಂದೆ ಉಳಿಯುವಂತೆ ಮಾಡು; ಹಿಂದೆ ಹಾಕು: ಉಕ್ಕಿನ ಯುಗದೊಳು ಯಾಂತ್ರಿಕಬಲವದ್ಧರ್ಮವ ಹಿರಿಚಿಸಿ ಮುಂಬರಿಯೆ (ಅಮತಂ. ೨೫-೮); ಪ್ರಾಣವ ತುಳಿಯುತ ಮನಂ ಮೂಡಿತೋ ಮನಮಂ ಹಿಂಚಿಸಿ ಜ್ಞಾನಂ ಕೂಡಿತೊ (ಗಣೇಶ. ೨೧-೫೪೦). [ಹಿಂಚು (< ಪಿಂಚು) + -ಇಸು]

ಹಿಂಚು$_1$ 'ಪಿಂಚು$_1$' ನೋ.

ಹಿಂಚು$_2$ 'ಪಿಂಚು$_2$' ನೋ.

ಹಿಂಚೂಣಿ (ನಾ). ಹಿಂಭಾಗ; ಹಿಂಬದಿ: ಸುತ್ತಲಿನ ವಾಯು ಒತ್ತಡಕ್ಕಿಂತ ರಕ್ಕೆಯ ಮುಂಚೂಣಿಯಲ್ಲಿನ ಒತ್ತಡ ಹೆಚ್ಚಾಗಿಯೂ ಹಿಂಚೂಣಿಯಲ್ಲಿ ಕಡಿಮೆಯಾಗಿಯೂ ಇರುವುದರಿಂದ (ಕವಿಕೋ. ೧. ೨೫೩). [ಹಿಂ (< ಪಿನ್) + ಚೂಣಿ (< ಚೂಳಿ)]

ಹಿಂಚೆ (ಅ). ಅನಂತರ; ತರುವಾಯ: ಮುಂಚೆ ಕಿನ್ನರ ಶರಣನಸುವಂ ಹಿಂಚೆ ಬಸವರಸನ ಹರಣವಂ ಪಂಚಮುಖಿಸಲಿ ಪಡೆದು ಮೆಱೆದನು ಮಾಚಿದೇವಯ್ಯ (ಬಸವ. ೩೬ ಸೂಚನೆ).

ಹಿಂಚೆಮುಂಚೆ = ಅನಂತರ ಮತ್ತು ಮೊದಲು: ಇರುಳಿನಂಚಿಗೆ ಹಿಂಚೆಮುಂಚೆಗೆ ನಲಿವ ಬೆಳ್ಳಿಯ ಬೆಳ್ಳಿಯೇ (ಮುತ್ತಕಂ. ೪೧-೧). [< ಹಿಂಚು$_1$ (< ಪಿಂಚು$_1$)]

ಹಿಂಜಗಿಸು (ಕ್ರಿ). ಹಿಮ್ಮೆಟ್ಟಿಸು; ಹಿಂದಕ್ಕೆ ಸರಿಸು: ಆ ಸಿಂಗರದ ನಿರ್ಮಲಿನ ರೂಹಿಗಾನಂಗನಂ ಹಿಂಜಗಿಸಿ ಪಡದ ಮಾಣಿಕ್ಯ ಜಿನಪುಂಗ ಮಾಂ ಪಾಹಿ ಪಾಹಿ (ಜಿನಮು. ೩೨-೧೫). [ಹಿಂ (< ಪಿನ್) + ಜಗಿಸು (< ಜಗ್ಗಿಸು)]

ಹಿಂಜರಿ. 'ಪಿಂಜರಿ$_1$' ನೋ.

ಹಿಂಜರಿಕೆ (ನಾ). ಹಿಂದೆ ಸರಿಯುವಿಕೆ; ಹಿಮ್ಮೆಟ್ಟುವಿಕೆ: ಯಾವ ಹಿಂಜರಿಕೆಯೂ ಇಲ್ಲದೆ ಮುಂದೆ ನುಗ್ಗುವ ಕೆಚ್ಚು ಅವರಲ್ಲಿದೆ (ರೂಢಿ).

[ಹಿಂಜರಿ (< ಪಿಂಜರಿ$_1$) + -ಇಕೆ]

ಹಿಂಜರಿತ (ನಾ). = ಹಿಂಜರಿಕೆ: ಅವರ ಹಿಂಜರಿತದಿಂದ ಪರಿಣಾಮ ಕೆಟ್ಟಿತು (ರೂಢಿ).

[ಹಿಂಜರಿ (< ಪಿಂಜರಿ$_1$) + -ತ$_3$]

ಹಿಂಜಾಪು (ನಾ). ಹಿಂದೆ ಇಟ್ಟು ಹೆಜ್ಜೆ: ಭಲೆ ಭಾಪು ಭಾಪು! ಹಿಂಜಾಪು ಕಿತ್ತಲೆ ಎತ್ತು, ಭಲೆ ಸಿದ್ಧಶಿಖರವನ್ನೇರು; ಹತ್ತು! (ಗಾ. ೨೦-೧೧).

[ಹಿಂ (< ಪಿನ್) + ಚಾಪು$_1$]

ಹಿಂಜಾವ (ನಾ). ರಾತ್ರಿಯ ಕಡೆಯ ಭಾಗ; ಪ್ರಾತಃಕಾಲದ ಹಿಂದಿನ ಜಾವ: ಹಾಲೊಳಗೆಯಂಚನೊಳು ಸುಣ್ಣದ ಕುಡುಹನಿಕ್ಕಿ ಮೇಲೆ ಹಪ್ಪಂ ಬಿಟ್ಟು ಹಿಂಜಾವದೊಳಗೆಯಾ ಹಾಲು ನುಪು ಹೆಱೆಯಾಗಲಾ ಹಪ್ಪ ತೆಗೆದು (ಸೂಪಶಾ. ೨-೯); ಮುಂಜಾವ ಧಾರೆಯಾಯ್ತೆರಡು ಜಾವದೊಳರ್ತಿ ರಂಜಿಸಿ ನಿದ್ರೆ ಹಿಂಗಿದುದು ಹಿಂಜಾವದೊಳು ಮತ್ತೆ ಹೊಸಬರಾಗಿದ್ದರದೇಂ ಜಾತಿಸುಖಿಗಳೊ ಜಗಕೆ (ಭರಚ. ೪೧-೧೬೯). [ಹಿಂ (< ಪಿನ್) + ಜಾವ$_1$]

ಹಿಂಜೆ 'ಪಿಂಜೆ$_2$' ನೋ.

ಹಿಂಜಿಕೆ (ನಾ). ೧. ವಿಂಗಡಣೆ. ೨. (ಆಲಂ) (ಸೂಕ್ಷ್ಮವಾದ) ಪರಿಶೀಲನೆ: ಈ ಹಿಂಜಿಕೆಯಲ್ಲಿ ಬೇರೆಯವರ ಅಭಿಪ್ರಾಯಗಳ ಚರ್ಚೆ ಕೆಲಮಟ್ಟಿಗೆ ಬರಬಹುದು (ಕಾಚ. ೫೨). [ಹಿಂಜು (< ಪಿಂಜು$_2$) +- ಇಕೆ]

ಹಿಂಜೀರ (ನಾ). ಆನೆಯ ಕಾಲನ್ನು ಕಟ್ಟಲು ಉಪಯೋಗಿಸುವ ಹಗ್ಗ ಅಥವಾ ಸರಪಣಿ: "ನಿಗಳಃ, ಪಾದಬಂಧಃ, ಹಿಂಜೀರಃ, ಶೃಂಖಲಾ, ಅಂದಕಃ- ಈ ೫ ಆನೆಯ ಕಾಲ್ಗಟ್ಟು" (ಪಲಾಯು. ೭೭-೭೦). [ಸಂ.]

ಹಿಂಜು 'ಪಿಂಜು$_1$' ನೋ.

ಹಿಂಜೋಲಿ (ನಾ). ಹಿಮ್ಮುಖವಾದ ಚಲನೆ, – ಅಲುಗಾಟ: ಈ ಮುಂಜೋಲಿ ಹಿಂಜೋಲಿಯ ದೆಸೆಯಿಂದ ನಾನು ಬರೆವುದಾದರೂ ಆಟಗೊಮ್ಮೆ ಸೋಣಕ್ಕೊಮ್ಮೆ (ಕಂನಾಸಾ. ೧೨). 'ಮುಂಜೋಲಿ' ಪರಾ. [ಹಿಂ (< ಪಿನ್) + ಜೋಲಿ$_3$]

ಹಿಂಡಲ, ಹಿಂಡಳಿ, ಹಿಂಡುಳಿ, ಹಿಂಡ್ಲಿ (ನಾ). (ಸೌತೆಜಾತಿಗೆ ಸೇರಿದ, ಕಹಿಯಾದ ಕಾಯಿಗಳನ್ನು ಬಿಡುವ) ಒಂದು ಬಗೆಯ ಬಳ್ಳಿ ಮತ್ತು ಅದರ ಕಾಯಿ: ಮತ್ತಂ ಬಹುವಧೆಯಂತೆನೆ ಹಸಿಯಲ್ಲ (ಶುಂಠಿ) ಹಸಿ ಅರಿಸಿನ ಉಳ್ಳಿ ಕಬ್ಬು ಹಿಂಡಲ ಶೂರಣಗಣನು ಕೆಸವು ನೆಯ್ದಲು ತಾವರೆಯ ಗಡ್ಡೆ ಮೊದಲಾದನಂತ ಕಾಯಂಗಳಂ (ಪಪಾರ. ೩೧೬). **ಹಿಂಡಳಿ** : "ಪೀತಪುಷ್ಪೀ - ಹಿಂಡಳಿ, ಸೌತೆ, ಸಣಬು, ಹಾವುಮೆಕ್ಕೆ" (ಓವಧಿ. ೯೯). **ಹಿಂಡುಳಿ**: "ಸೌರಾಷ್ಟ್ರಿಯೆನೆ ಹಿಂಡುಳಿ [ಪಾಠಾಂ. ಹಿಂಡು]"(ಮಂಗಧಾ. ೪೪-೪೫). **ಹಿಂಡ್ಲಿ**: (೬). [?]

ಹಿಂಡಲಕಾಯಿ (ನಾ).ಸೌತೆ ಜಾತಿಗೆ ಸೇರಿದ ಒಂದು ಬಗೆಯ ಕಾಯಿ: ನಮ್ಮ ಪಾರ್ವತಕ್ಕ (ಹಿಂಡಲಕಾಯಿ ಹೊಟ್ಟೆಯವಳು) (ಮೂರುದಾ. ೨೪೧).

[ಹಿಂಡಲ + ಕಾಯಿ$_1$ (< ಕಾಯ್$_1$)]

ಹಿಂಡಲು 'ಪಿಂಡಲು' ನೋ.

ಹಿಂಡಸೆ (ನಾ). (?): ಬೊಂಕೆಯ ಮಾದನ ಹಳ್ಳದಿಂ ತಂಕದಿಡಚಾರ್ಯ್ಯರ ಕಟ್ಟೆ ಮಸೆ ಕಲ್ಲ ಆಲದಿಂ ಊರ ಹತ್ತಿಲ ಹಿಂಡಸೆಯ ಕಟ್ಟು (ಎಕ. XIII, ಸುಬ್ಬ. ೭೦-೭೧; 1331). [?]

ಹಿಂಡಳಿ 'ಹಿಂಡಲ' ನೋ.

ಹಿಂಡಾಕಳು (ನಾ). ಹಸುಗಳ ಮಂದೆ ,– ಗುಂಪು: ಮರಳಿ ಹೊಡೆ ಹಿಂಡಾಕಳನು ಗೋವರನು ಬಿಡು . . . ಎಂದಬ್ಬರಿಸಿ ಕುರುಕುಲ ಬಾಯ ಬಿಟ್ಟುದು ರಾಯರಿದಿರಿನಲಿ (ಕುವ್ಯಾವಿ. ೭-೩೫); ಕೊಂಡು ಬರಿಸಿದನಖಿಳವಸ್ತುಗಳನಮಲಮಣಿಮಂಡನಾಳಿಗಳಂ ವಿವಿಧ ದುಕೂಲಂಗಳಂ ಹಿಂಡಾಕಳಂ ಮಹಿಷಿಗಳನುತ್ತಮಸ್ತ್ರೀಯರಂ ಗಜ ಹಯಾವಳಿಯನು (ಪ್ರಮಿಭಾ. ೯-೧೯). [ಹಿಂಡು$_2$ (< ಪಿಂಡು$_2$) + ಆಕಳು (< ಆಕಳ್)]

ಹಿಂಡಾನೆ 'ಪಿಂಡಾನೆ' ನೋ.

ಹಿಂಡಿ$_1$ 'ಪಿಂಡಿ$_1$' ನೋ.

ಹಿಂಡಿ$_2$ 'ಪುಂಡಿ' ನೋ.

ಹಿಂಡಿಕೆ 'ಪಿಂಡಿಗೆ' ನೋ.

ಹಿಂಡಿಗೆ 'ಪಿಂಡಿಗೆ' ನೋ.

ಹಿಂಡಿಲು 'ಪಿಂಡಲು' ನೋ.

ಹಿಂಡಿಲ್ಗಟ್ಟು (ಕ್ರಿ). ಒಟ್ಟಾಗಿ ಹೆಣೆದುಕೊಳ್ಳು; ಒಂದಾಗಿ ಕೂಡಿಕೊಳ್ಳು: ಎಳವುಲ್ಲಳಂ ಮೇದು ತಿಳಿನೀರನೀಂಟಿ ನೆಳಲೊಳ್ ಪಟ್ಟರ್ದು ಬೆಂಡೇಳ್ದ ಲೋಳೆ ಹಿಂಡಿಲ್ಗಟ್ಟಿ ಮೇವಂ ಮಗುಳ್ದಿ ಕಟ್ಟಿದಿರ ಪುಲಿಯಂ ತೊಟ್ಟನೆ ಕಂಡು ಭೋಂಕನೆಳ್ದು (ಗಿರಿಕ. ೮-೧೨೫ ಪ). [ಹಿಂಡಿಲ್$_0$ (< ಪಿಂಡಲು) + ಕಟ್ಟು$_1$]

ಹಿಂಡಿಸೊಪ್ಪು 'ಪಿಂಡಿಸೊಪ್ಪು' ನೋ.

ಹಿಂಡು$_1$ 'ಪಿಂಡು$_1$' ನೋ.

ಹಿಂಡು$_2$ 'ಪಿಂಡು$_2$' ನೋ.

ಹಿಂಡುಕೌಪ (ನಾ). ಅನೇಕವಾಗಿ ಹರಿದು ಚೂರುಚೂರಾದ ಬಟ್ಟೆ: ದಂಡಕೋಲಿನ ತುದಿಗೆ ಹಿಂಡುಕೌಪವ ಕಟ್ಟಿ ಮುಂಡೆಯರ ಕಂಡು ಮಿಡುಕುವ ಯೋಗಿಯ ಮಂಡೆ ಬೋಳೇಕೆ (ಸರ್ವಜ್ಞ. ೫೯೦). [ಹಿಂಡು$_3$ (< ಪಿಂಡು$_3$) + ಕೌಪ]

ಹಿಂಡುಗಂಕಣ 'ಪಿಂಡುಗಂಕಣ' ನೋ.

ಹಿಂಡುಗಟ್ಟಲೆ (ಅ). ಗುಂಪುಗುಂಪಾಗಿ; ಒಟ್ಟೊಟ್ಟಾಗಿ: ಬೆಳಗಾದರೆ ಮನೆಯ ಮುಂದೆ ಹಿಂಡುಗಟ್ಟಲೆ ಬಂದು ನಿಲ್ಲುತ್ತಾರೆ ಹಳ್ಳಿಯ ಜನ (ಮುರಳ. ೬).

[ಹಿಂಡು$_2$ (< ಪಿಂಡು$_2$) + ಕಟ್ಟಲೆ$_0$]

ಹಿಂಡುಗಟ್ಟಿಗೆ (ನಾ). ಸೌದೆಯ ಹೊರೆ,– ಕಟ್ಟು: ಮನವೊಲೆಯದಂತೆ ಅಸಲನ ತೊಲೆಯ ಹಾಕಿ ಮೊಳೆಯ ಗಳುವ ಬೀಸಿ ಕೆಂದದ ಹಂಜರಗಟ್ಟಿಂ ಕಟ್ಟಿ ಹಿಂಡುಗಟ್ಟಿಗೆ ಗಳುವಿನ ಸಂದಿಯಲ್ಲಿ ಅಡಗಿತ್ತು (ಚಿಕ್ಕವ. ೨೧೧-೧೨). [ಹಿಂಡು$_2$ (< ಪಿಂಡು$_2$) + ಕಟ್ಟಿಗೆ$_1$]

ಹಿಂಡುಗಟ್ಟು (ಕ್ರಿ). ಗುಂಪುಗಟ್ಟು; ಒಟ್ಟಾಗಿ ಸೇರು: ಅಡವಿಯಲ್ಲಿ ಹಿಂಡುಗಟ್ಟಿ ಕೊಂಡು ತಿರುಗುವ ಗೂಳಿ - ಆಕಳುಗಳ ಮಾಂಸದಿಂದ ಅವನು ಜೀವಿಸುತ್ತಿದ್ದನು (ಬಂಗಾಪ. ೨);ಹಿಂಡುಗಟ್ಟಿ ಜನವು ತಮ್ಮ ಕೈಕೆಲಸವನ್ನು ಬಿಟ್ಟು ಇವರ ಲಾವಣಿಗಳನ್ನು ಕೇಳುತ್ತಿರಲು ಸಾಕು (ಕನ್ನಬಾ. ೯೧). [ಹಿಂಡು$_2$ (< ಪಿಂಡು$_2$) + ಕಟ್ಟು$_1$]

ಹಿಂಡುಗಣೆ (ನಾ). ಬಾಣಗಳ ಗುಂಪು,– ಸಮೂಹ: ಕಣಕಣಗ ತೆರಳಿದವು ಕಣೆ ಮಾರ್ಗಣೆಯನಣೆದವು ಹಿಂಡುಗಣೆ ಸಂದಣಿಗಣೆಯಲಕ್ಕಾಡಿದವು (ಕುವ್ಯಾಕ. ೨೩-೭); ಹಿಂಡುಗಣೆಯಂ ಕವಿಸಿ ಮಂದಿಯಂ ಕೊಲುತಿರ್ದಂ . . . ಪುಂಡರೀಕಾಕ್ಷನೂನು (ಚಿಮುಭಾ. ೩೪-೨೦). [ಹಿಂಡು$_2$ (< ಪಿಂಡು$_2$)+ ಕಣೆ$_1$]

ಹಿಂಡುಗಲಕ (ನಾ). ಗುಂಪನ್ನು ಕಲಕುವವನು, – ಚದುರಿಸುವವನು: ವೀರಬಾಹು ಮಹಾಮದೋನ್ನತದ ಹಿಂಡುಗಲಕನು ವ್ಯುಗ್ರೇಶಿ . . . ಎಂಬತಿಬಲರು ಬಂದರು ರಾಯನೋಲಗಕೆ (ಕುವ್ಯಾವಿ. ೬೧೩. ೪-೮).

[ಹಿಂಡು$_2$ (< ಪಿಂಡು$_2$) + ಕಲಕು$_1$ (< ಕಲಂಕು$_2$) +– ಅ$_7$]

ಹಿಂಡುಗವರು (ನಾ). ಕುಡಿಗಳ ಸಮೂಹ :ಗಂಡುಮಗನಂ ಪಡೆವನೆಂಬಕ್ಕಳ್ದಿಂದಮಿಂ ಪುಂಡರೀಕಾಕ್ಷಿ ಮಿಗೆ ರಚಿಸಿದಲರ್ವಂದರದ ಹಿಂಡುಗವರುಗಳಿನಲು ರಂಜಿಸಿತು ಗುಣವತಿಯ ಕುರುಳು ಮೋಹನದ ತಿರುಳು (ಚೀರಮ. ೩-೨೧).

[ಹಿಂಡು$_2$ (< ಪಿಂಡು$_2$) + ಕವರು$_0$ (< ಕವರ್$_2$)]

ಹಿಂಡುಗೂಟ (ನಾ). ಒಟ್ಟಾಗಿ ಸೇರುವುದು; ಒಗ್ಗೂಡುವುದು: ದೈವವೀ ದ್ರೌಪದಿಗೆ ಸೀರೆಯನೀವುದಲ್ಲದೆ ಬಿಡಿಸಲಾಪುದೆ ದೈವ ತೊತ್ತಿರ ಹುರುಡುಗೆಲಸದ ಹಿಂಡುಗೂಟದಲಿ (ಕುವ್ಯಾಸ. ೧೫-೭). [ಹಿಂಡು$_2$ (<ಪಿಂಡು$_2$) + ಕೂಟ]

ಹಿಂಡುಗೂಡು 'ಪಿಂಡುಗೂಡು' ನೋ.

ಹಿಂಡುಗೊಳ್ 'ಪಿಂಡುಗೊಳ್' ನೋ.

ಹಿಂಡುದಲೆ (ನಾ). ತಲೆಗಳ ಗುಂಪು,– ಸಮೂಹ.

ಹಿಂಡುದಲೆಯವ = ಹೆಚ್ಚುಸಂಖ್ಯೆಯ ತಲೆಯುಳ್ಳವನು; ರಾವಣ: ಹಿಂಡುದಲೆಯವನಣುಗ ಹನುಮನ ಚಿಂಡಿಕೆಯ ಹಿಡಿದೆಳೆದು ಬಗ್ಗಿಸೆ ಗಂಡುಗಲಿ ಮುಳಿದವನ ಮುಡಿಯನು ಹಿಡಿದು ಬೀಸಿದನು (ಕಾಶಿರಾ. ೨೮-೫೯). [ಹಿಂಡು$_2$ (< ಪಿಂಡು$_2$) + ತಲೆ$_1$]

ಹಿಂಡುಮಾತು 'ಪಿಂಡುಮಾತು' ನೋ.

ಹಿಂಡುವಕ್ಕಿ (ನಾ). ಪಕ್ಷಿಗಳ ಗುಂಪು, – ಸಮೂಹ :ಹಿಂಡುವಕ್ಕಿಯನೊರಸಲೆರಗುವ ಗಂಡುಸಾಳುವನಂತೆ ಖಳನುದ್ದಂಡದರ್ಪದಿ ಗದೆಯಲಿಡೆ (ಆಸಂರಾ. ೧-೧೦-೨೨).

[ಹಿಂಡು$_2$ (< ಪಿಂಡು$_2$) + ಪಕ್ಕಿ]

ಹಿಂಡುವಲೆ (ನಾ). ಒಂದು ಬಗೆಯ ಬಲೆ: ಇದಂದಿವಲೆಗಳ ತೊಡಕುವಲೆಗಳ ಹಿಂಡುವಲೆಗಳ ಮಯದಂಟಿನ ಮಂಡವಿಗಬಲೆಗಳ ಕಿರಾತರು ಕೆದಱೆತಗಲದಲಿ (ಕುವ್ಯಾಅ. ೧೩-೨೩). [ಹಿಂಡು$_2$ (< ಪಿಂಡು$_2$) + ಬಲೆ$_1$]

ಹಿಂಡುಹೊಳಹು (ನಾ). ಅಧಿಕವಾದ ಕಾಂತಿ, – ಪ್ರಕಾಶ: ಕಂಡ ಮೃಗ ಮೈದೆಗೆಯದಿಕ್ಕೆಯ ಹಿಂಡುಹೊಳಹಿನ ಹುಲಿಯ ಮೇಕೆಯ ಮಿಂಡವಂದಿಯ ಲಾವಣಿಗೆಯ ಲುಲಾಯ ಲಾಲನೆಯ . . . ತೋಱಿಸುವನೇಳೆಂದನಿಲಜಗೆ ನುಡಿದ (ಕುವ್ಯಾಅ. ೧೩-೧೮).

[ಹಿಂಡು$_2$ (< ಪಿಂಡು$_2$) + ಹೊಳಹು (< ಪೊಳಿವು)]

ಹಿಂಡುಳಿಕೆ (ನಾ). ಒಂದು ಬಗೆಯ ಬಳ್ಳಿ: ಬಿಳಿಯ ಸಾಸುವೆ, ಹಾವಿನ ಹೆರ, ಹಿಂಡುಳಿಕೆಯ ಕಾಯಿ, ಹೀಲಿ, ಮಂಡೆಯ ನವಿರು, ಕಾಲುಗುರು, ಕೈಯುಗುರು . . . ಇವಂ ಧೂಪವಿಕ್ಕುವುದು (ಬಾಲಚಿ. ೧೩೮-೧೯). 'ಹಿಂಡಲಕಾಯಿ' ಪರಾ.

[< ಹಿಂಡುಳಿ?]

ಹಿಂಡುಳಿ 'ಹಿಂಡಲ' ನೋ.

ಹಿಂಡೆ 'ಪಿಂಡು$_2$' ನೋ.

ಹಿಂಡೆಕೂಳು 'ಪಿಂಡುಗೂಟ್' ನೋ.

ಹಿಂಡೆತ್ತು (ನಾ). ೧. ಎತ್ತುಗಳ ಮಂದೆ,– ಗುಂಪು: ''ಕಟ್ಟ ಹೇಱತ್ತುವಂ ದೌವರಿಕನೆನಿಕುಮಾ ಗಂಟಿಕ್ಕುವಂ ಶಣಗನಕ್ಕುಂ ಹಿಂಡೆತ್ತಾಗೆ ಕೊಟ್ಟಗೆಯೆನಿಕ್ಕುಂ''(ಮಂಗರಾ. ೧೦೨-೩); ಗಂಡನಾ ಗುಣವನ್ನು ಕಂಡೆನೆಂಬೊಳು ಜಾಣೆ ಹಿಂಡೆತ್ತಿನೊಳಗೆ ಬಸವಾನ ಪಾದಾವ ಕಂಡೆನೆಂಬೋಳು ಕಡುಜಾಣೆ (ಹಳ್ಳಿಯ. ೧೩೮). ೨. ಮಂದೆಯಲ್ಲಿ ಇರುವ ಎತ್ತು; ಹಿಂಡಿನೊಡನೆ ಇರುವ ಎತ್ತು: ಬಂಡೀಯ ತರಸೀರಿ ಹಿಂಡೆತ್ತ ಹಿಡಿಸೀರಿ ಬಂಡೀಗೆ ಬಟ್ಟ, ಇಡಸೀರಿ ಗಟ್ಟಾದ ಬಂದಿ ಹರಿದಾವು ಹೊರಕಾಗಿ (ಹಳ್ಳಿಯ. ೪೯).

[ಹಿಂಡು$_2$ (< ಪಿಂಡು$_2$) + ಎತ್ತು$_2$ (< ಎಬ್ತು$_1$)]

ಹಿಂಡೇಳ್ (ಕ್ರಿ). ಗುಂಪಾಗಿ ಏಳು, – ಮೇಲೇರು: ಹರಿಸದಿಂ ನಾರದಂ . . . ಹಿಂಡೇಳ್ದಾನಂದ ರೋಮಾಂಚದ ಪೊದಕೆಗಳಂ ತಾಳ್ದು ನಿಂದಿರ್ದು (ಗಿರಿಕ. ೪-೪೩).

[ಹಿಂಡು$_2$ (< ಪಿಂಡು$_2$) + ಏಳ್$_1$ (< ಏಬ್$_1$)]

ಹಿಂಡೊಡೆ (ಕ್ರಿ). ೧. ಗುಂಪು ಚದುರು; ಚಲ್ಲಾಪಿಲ್ಲಿಯಾಗು: ಕದಡಿತೀ ಬಲ ರೋಮಪುಳಕವ ಹೊದೆದುದಾ ಬಲ ಹಿಂಡೊಡೆದು ನೆಱೆ ಕದುಬಿತೀ ಬಲ ನೆರೆದುದಾ ಬಲ ನರನ ರಥ ಸುಳಿಯೆ (ಕುವ್ಯಾದ್ರೋ. ೩-೪೭); ಹಿಂಡೊಡದು ಗಜಸೇನೆ ಮುಮ್ಮುಳಿಗೊಂಡು ಮುರಿದುದು ಮುಳಿದು ಭೀಮನ ಗಂಡುಗಡಿಸುವರಲ್ಲ ಕೌರವದಳದ ಸುಭಟರಲಿ (ಕುವ್ಯಾಕ. ೧೦-೧೮). ೨. ಗುಂಪಿನಿಂದ ಬೇರೆಯಾಗು; ಪ್ರತ್ಯೇಕವಾಗು: ಬೆದರ್ದು ತಡವರಿಸುತ್ತೆ ಪುಲಿಸುಳುಹಿಗಂ ಹರಿಣಯೆದೆಗೆಟ್ಟು ಹಿಂಡೊಡದು ಚಲ್ಲವರಿದಂದದಿಂ (ನವಮೋ. ೬-೨೩); ಉದಕದಿಂದೆದ್ದು ಪೋಯಿಡೆ ಬಗ್ಗಧ್ವನಿಗೇಳಿ ಹುಲ್ಲೆ ಹಿಂಡೊಡೆದಂದದಿ ಬೆದರಿದವರುಗಳ ಬೆದರಿಸಲು (ನವಮೋ. ೧೦-೫೦); ಹಿಂಡೊಡೆದ ಆಕಳು ಕಂಡ ಕಡೆ (ಗಾಡ). [ಹಿಂಡು$_2$ (< ಪಿಂಡು$_2$) + ಒಡೆ$_1$]

ಹಿಂಡ್ಲಿ 'ಹಿಂಡಲ' ನೋ.

ಹಿಂತಲೆ 'ಹಿಂದಲೆ' ನೋ.

ಹಿಂತಾಲ, ಹಿಂತಾಳ (ನಾ). ಒಂದು ಬಗೆಯ ತಾಳೆ; ಕಿರುತಾಳೆ; ಕಿರೀಚಲು: ಅಶೋಕ ವಕುಳ ತಿಲಕ ಹಿಂತಾಲ ತಮಾಲ . . . ಅನೇಕಾನೋಕಹಾನೀಕ ಕಮನೀಯ ಮುಮಂ (ಅಜಪು. ೭-೨೦ವ); ಹಾಲೆ ಹೊಂಗೇತಕಿ ವನಸಂಪಿಗೆ ಹಿಂತಾಲ ಹೆಮ್ಮರ ಕಮ್ಮರಗಳು . . . ಬನ್ನಿಗಳ್ಮೇಲಕಡರಿ ಮುಸುಕಿಹುವು (ಕಂಪವಿ. ೧೪-೩೬); ಕರಗ ಸಂತಾಲ ಹಿಂತಾಲ ಮತ್ತಿ ತೇಗು . . . ಬಿಲ್ವಾದಿ ಬಹುವೃಕ್ಷಂಗಳಿಂದೆ ತುಂಬ (ಮಹಾವಿ. ೭-೧೪). ಹಿಂತಾಳ: ಫಳ ಕರ್ಪೂರ ಲವಂಗ ಲುಂಗ ಲವಳೀ ಹಿಂತಾಳ ಲಾಳೀ ತಮಾಳ ಳತಾಸುಂದರನಂದನಕ್ಕಳುರೆ ಮುಂ ತನ್ನರ್ಚಿಗಳ್ (ಪಂಪಭಾ. ೫-೬೬); ಹಿಂತಾಳ ತಾಳ ತಮಾಲ ತಡಸುಗಳ . . . ನಾನಾಭೂರಿಭೂಜಗಳಿಂದ ಹೊಯ್ದಾಡಿದರು ಸಮರದಲಿ (ತೊರರಾ. ೪-೪-೨೩). [ಸಂ.]

ಹಿಂತಾಲಿ, ಹಿಂತಾಳಿ (ನಾ). = ಹಿಂತಾಲ: "ಕರತಾಳ ಹಿಂತಾಲಿ [ಪಾಠಾಂ. ಳಿ] ತಾಳಿಯೆನಿಕ್ಕುಂ" (ಮಂಗರಾ. ೧೦೫-೧೫). **ಹಿಂತಾಳಿ**: "ನೀಲತಾಳ - ತಾಳಮರ, ಹಿಂತಾಳಿ" (ಓಷಧಿ. ೮೮). [< ಸಂ. ಹಿಂತಾಲ]

ಹಿಂತಾಳ 'ಹಿಂತಾಲ' ನೋ.

ಹಿಂತಾಳಿ 'ಹಿಂತಾಲಿ' ನೋ.

ಹಿಂತಾಳೆ (ನಾ). = ಹಿಂತಾಲ: "ತಾಳೀ - ತಾಮ್ರವಲ್ಲಿ, ಹಿಂತಾಳಿ, ಶ್ರೀತಾಳಿ" (ಓಷಧಿ. ೬೭). [ಸಂ. ಹಿಂತಾಲ]

ಹಿಂತಿಕ್ಕು 'ಪಿಂತಿಕ್ಕು' ನೋ.

ಹಿಂತಿರುಗು 'ಪಿಂದಿರುಗು' ನೋ.

ಹಿಂತುದಿ 'ಹಿಂದುದಿ' ನೋ.

ಹಿಂತೆ 'ಪಿಂತೆ$_2$' ನೋ.

ಹಿಂತೊಡೆ 'ಹಿಂದೊಡೆ' ನೋ.

ಹಿಂತೋಟ (ನಾ). ಹಿಂದುಗಡೆಯಲ್ಲಿ ಇರುವ ಉದ್ಯಾನವನ; ಹಿಂಬದಿಯ ತೋಟ: ಇಂತೆಂದು ಮರುಮರುಗಿ ಬೊಂಕುತಲೆ; ಪರತಂತ್ರ ತಾಂ ತೋರದಿರೆ,-ಕುತಂತ್ರಕೆ ಶರಣುಬಂದು, ಸಂತಸವ ತಳೆದು, ನೆರೆ ಸಂತೆಕಟ್ಟೆಯ ಬಳಿಯ ಹಿಂತೋಟ ಕೈದಿ ನೆರೆದರ್ಗೂರೆದುದಿಂತು (ಕಐಪು. ೪೨-೪).

[ಹಿಂ (< ಪಿನ್) + ತೋಟ$_1$ (< ತೋಂಟ)]

ಹಿಂದಟ್ಟು 'ಪಿಂತಟ್ಟು' ನೋ.

ಹಿಂದಡ (ನಾ). ಹಿಂಭಾಗ: ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಿಡುದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ ಹಿಂದಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು ಖಡ್ಗವ ಸೆಳೆದಂ ಜಡಿದು ನೋಡಿ (ಪಚಕಾ. ೧೩-೧೨).

[ಹಿಂ (< ಪಿನ್) + ದಡ$_3$ (< ತಡ$_2$)]

ಹಿಂದಡಿ (ನಾ). ಹಿಂದಕ್ಕೆ ಇಡುವ ಹೆಜ್ಜೆ: 'ಹಿಂದಡಿಯಿಡು' ಪರಾ. [< ಪಿಂತಡಿ]

ಹಿಂದಡಿಯಿಡು (ಕ್ರಿ). ಹಿಂದೆ ಸರಿ; ಹಿಮ್ಮೆಟ್ಟು: ತೊಲಗಿ ಹಿಂದಡಿಯಿಡಲು ಕೀಚಕನಳು ಕದ್ಮತಂದಬುಜವದನೆಯ ಬಳಿಗೆ ಬಂದನು (ಕುವ್ಯಾವಿ. ೨-೧೭). [< ಪಿಂತಡಿಯಿಡು]

ಹಿಂದಲು 'ಪಿಂತು' ಪರಾ.

ಹಿಂದಲೆ 'ಪಿಂದಲೆ' ನೋ.

ಹಿಂದವಿ (ನಾ). ಹಿಂದೀಭಾಷೆ: ಈಗ ಇಂಗ್ಲಿಷ್‌ಭಾಷೆ ಹೇಗೋ, ಆಗ ಮಹಾರಾಷ್ಟ್ರ ಅಥವಾ ಹಿಂದವಿಯು ಹಾಗ ರಾಜಭಾಷೆ ಎನ್ನಿಸಿಕೊಂಡಿತ್ತು (ಮಾಮರಾ. ೨೯): ದರಬಾರಿನ ಕಾಗದಪತ್ರಗಳೆಲ್ಲಾ ಹಿಂದವಿಯಲ್ಲಿ ವಿಶೇಷವಾಗಿ ನಡೆಯುತಾ ಇದ್ದ ಕಾರಣ ಪುಣ್ಯವಂತರಾದ ಮೇಲುತರದ ಜನರು ತಮ್ಮ ಮಕ್ಕಳಿಗೆ ಹಿಂದವಿಯನ್ನು ಕಲಿಸುತ್ತಿದ್ದರು (ಮುಸುಗ. ೧೫೫).

ಹಿಂದವೀದಪ್ತರ = ಹಿಂದೀಭಾಷೆಯಲ್ಲಿ ಬರೆಯಲಾಗಿರುವ ಕಾಗದಪತ್ರ: ಕೃಷ್ಣರಾಯನು ನವಾಬರ ಬಳಿಯಲ್ಲಿ ಬಹಳ ಚಾಲಾಕಾಗಿದ್ದುದರಿಂದ ಹಿಂದವೀದಪ್ತರದ ಕೆಲಸವು ಅವನಿಗೆ ನೇಮಕವಾಯ್ತು (ಪುಹಾಪಂ. I, ೨೨೨). [← ಪಾರ. ಹಿಂ. ಮರಾ. ಹಿಂದವೀ]

ಹಿಂದಳ 'ಪಿಂತು' ಪರಾ.

ಹಿಂದಾಡು 'ಹಿಂದೆಯಾಡು' ನೋ.

ಹಿಂದಿ (ನಾ). ಉತ್ತರಭಾರತದ ಕೆಲವು ಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿರುವ, ಭಾರತದ ರಾಷ್ಟ್ರಭಾಷೆಯೆಂದು ಪರಿಗಣಿತವಾಗಿರುವ ಒಂದು ಭಾಷೆ; IP ಅನೇಕ ಸಂಸ್ಕೃತಶಬ್ದಗಳು, ತದ್ಭವಗಳು, ಅರೆಬಿಕ್, ಪರ್ಷಿಯನ್ ಶಬ್ದಗಳನ್ನು ಈ ಭಾಷೆಯು ಒಳಗೊಂಡಿದೆ. ಉತ್ತರಭಾರತದ ವ್ರಜ, ಅವಧಿ ಮುಂತಾದ ಉಪಭಾಷೆಗಳಿಗೂ ಇದು ಅನ್ವಯವಾಗುತ್ತದೆ: ಸಂಸ್ಕೃತದ 'ಸಿಂಧು' ಅಥವಾ 'ಸಿಂಧಿ' ಶಬ್ದಗಳು ಪರ್ಷಿಯನ್ ಭಾಷೆಯಲ್ಲಿ 'ಹಿಂದ್' ಅಥವಾ 'ಹಿಂದಿ' ಆಗಿವೆ (ಭಾರದ. ೪೨೬). [← ಪಾರ. ಹಿಂ. ಮರಾ. ಹಿಂದೀ]

ಹಿಂದಿಕ್ಕು 'ಪಿಂತಿಕ್ಕು' ನೋ.

ಹಿಂದಿಡು (ಕ್ರಿ). ೧. (ಹೆಜ್ಜೆಯನ್ನು) ಹಿಂದಕ್ಕೆ ಇಡು; ಹಿಮ್ಮೆಟ್ಟು: ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ (ಸರ್ವಜ್ಞ. ೭೯). ೨. ಮರೆಮಾಡು; ಅಡಗಿಸು: ನಾನಿನ್ನು ಮುಂದೆ ಅಕ್ರಮಸಂಭಾವನೆಯನ್ನು ತೆಗದುಕೊಳ್ಳುವುದಿಲ್ಲ. ಲಂಚದ ಆಶೆಯಿಂದ ರಿಕಾರ್ಡುಗಳನ್ನು ಹಿಂದಿಡುವುದಿಲ್ಲ (ಪಂಡಪಂ. ೧೬೬).

[ಹಿಂದು$_1$ (< ಪಿಂತು) + ಇಡು$_1$]

ಹಿಂದಿರಿಸು 'ಪಿಂತಿರಿಸು' ನೋ.

ಹಿಂದಿರುಗಿಸು (ಕ್ರಿ). ೧. ಹಿಮ್ಮುಖವಾಗಿ ತಿರುಗಿಸು; ಹಿಂದಕ್ಕೆ ತೆರಳುವಂತೆ ಮಾಡು; ಮರಳಿಸು: ನದಿಯ ಪ್ರವಾಹವನ್ನು ಹಿಂದಿರುಗಿಸಿ ನದಿಮೂಲಕ್ಕೊಯ್ಯಲು ಸಾಧ್ಯವಿಲ್ಲ (ಪಾಗಸ. ೪). ೨. ಹಿಂದಕ್ಕೆ ಕೊಡು; ವಾಪಸ್ಸುಮಾಡು: ಕತ್ತೆಯ ಒದೆಯನು ಹಿಂದಿರುಗಿಸಿದರ ನೋವಿನ ಬಹು ಪಾಲು ನಿನಗೆ (ಇಂಚಾಪ. ೭೭-೭೪).

[ಹಿಂದಿರುಗು (< ಪಿಂದಿರುಗು) + - ಇಸು$_5$]

ಹಿಂದಿರುಗು 'ಪಿಂದಿರುಗು' ನೋ.

ಹಿಂದೀಯ (ನಾ). ಹಿಂದುದೇಶಕ್ಕೆ ಸೇರಿದವನು; ಹಿಂದೂಸ್ಥಾನದವನು: ಹಿಂದುಸ್ಥಾನವೇ ದಾಸ್ಯದಲ್ಲಿ ತೊಳಲಾಡುವವರೆಗೆ ಚಟಗಳಿಗೆ ದಾಸನಾಗದ ಹಿಂದೀಯನು ಯಾರು? (ಮುಂಗಾಪು. ೩೮). [< ಹಿಂದು$_2$]

ಹಿಂದು$_1$ 'ಪಿಂತು' ನೋ.

ಹಿಂದು$_2$, ಹಿಂದೂ (ನಾ). ಭಾರತದೇಶದಲ್ಲಿ ವಾಸಿಸುತ್ತಿದ್ದು, ಅಲ್ಲಿಯ ಸನಾತನಧರ್ಮವನ್ನು ಆಚರಿಸಿಕೊಂಡು ಬಂದಿರುವ ಜನಾಂಗಕ್ಕೆ ಸೇರಿದ ವ್ಯಕ್ತಿ; IP ಇದು ಮುಸ್ಲಿಮರು ಭಾರತವನ್ನು ಪ್ರವೇಶಿಸಿದಾಗ, ಇಲ್ಲಿನ ದೇಶೀಯರನ್ನು ನಿರ್ದೇಶಿಸಿ ಕರೆಯಲು ಬಳಸಿದ ಪದ: ಯದಕ್ಕೆ ಯಾವನಾನೊಬ್ಬ ತಪ್ಪಿದರೆ ಹಿಂದು ತಪ್ಪಿದರೆ ಕಾಸಿಯಲಿ ಅಕಳ ಕೊಂದ ಪಾಪಕೆ ಹೋಹರು (ಇಆ. IX. ೯೯-೫;?); ಹಿಂದು ಜೈನ ಮುಸ್ಲೀಮ ಕ್ರೈಸ್ತರಾವೊಂದೇ ಬಾಂಧವರೆಮ್ಮ ತಂದೆ ದೇವರೊಬ್ಬನೆ (ಗೀಎಂ. ೪೭-೪); ನಾವು ಹಿಂದೂಸ್ಥಾನದವರು; ನಾವು ಹಿಂದುಗಳು (ಮೀಬಪ್ರ. ೧೧). **ಹಿಂದೂ**: ಸರ್ವಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ. ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ (ಕೋಲು. ೧೦೭-೧೦): ಪುರಾತನಭಾರತದ ಹಿಂದೂವೈಭವಗಳನ್ನೂ ರಾಜ್ಯಭಾರವನ್ನೂ ಹಿಂದೂಗಳು ಮರೆಯಲಾರರಾಗಿದ್ದಾರೆ (ಇಸ್ಲಾಂಸಂ. ೨೭).

ಹಿಂದುರಾಯ ಸುರತ್ರಾಣ, ಹಿಂದೂರಾಯ ಸುರತ್ರಾಣ = ವಿಜಯನಗರದ ಕೆಲವು ರಾಜರು ಹೊಂದಿದ್ದ ಒಂದು ಬಿರುದು; IP 'ಸುರತ್ರಾಣ' ಎಂಬುದು ಮುಸ್ಲಿಮರ ರಾಜವಂಶದ 'ಸುಲ್ತಾನ' ಎಂಬುದಕ್ಕೆ ಬದಲಾಗಿ ಸ್ವೀಕಾರ ಮಾಡಿಕೊಂಡಿರುವ ಬಿರುದುಸೂಚಕಪದ: ಹಿಂದುರಾಯಸುರತ್ರಾಣ... ಶ್ರೀವೀರಪ್ರತಾಪ ಹರಿಹರರಾಯರು (ಸೌಶಾ. IX-ii. ೪೨೫-೪; 1401); ಹಿಂದುರಾಯಸುರತ್ರಾಣ ದುಷ್ಟಶಾರ್ದೂಲ ಮರ್ದ್ದನ; (ಎಕ. VI(R). ಕೃಷ್ಣರಾ. ೯೯-೬೩ ; 1508); ಮೂರು ರಾಯರ ಗಂಡಾಂಕ: ಪರರಾಯಭಯಂಕರ: ಹಿಂದೂರಾಯಸುರತ್ರಾಣ ಇತ್ಯಾದಿ ಬಿರುದೋನತ: (ಎಕ. III (R), ಗುಂಡ್ಲುಪೇ. ೧೪೭-೩೧: 1448). [< ಸಂ. ಸಿಂಧು, ಸಿಂಧೂ]

ಹಿಂದುಗಡೆ$_1$ 'ಪಿಂದುಗಡೆ' ನೋ.

ಹಿಂದುಗಡೆ$_2$ (ಅ). ನಂತರ; ತರುವಾಯ: ಅದರ ಮಾತು ಹಿಂದುಗಡೆ. ಮೊದಲು ಕಾರಣವನ್ನಂತೂ ತಿಳಿಸು (ದಾಸಪ್ರ. ೭೭). [< ಹಿಂದುಗಡೆ$_1$]

ಹಿಂದುಗಳೆ 'ಪಿಂದುಗಳೆ' ನೋ.

ಹಿಂದುಗೊಳ್ 'ಪಿಂದುಗೊಳ್' ನೋ.

ಹಿಂದುಟಪಿ (ನಾ). ಒಂದು ಬಗೆಯ ಸಸ್ಯ: "ಅಮರಾ - ದೊಡ್ಡ ನೀಲಿ, ಹಿಂದುಟಪಿ, (೧) ವಪ್ಪಿಕಾಳಿ" (ಓಷಧಿ. ೪). [?]

ಹಿಂದುದಿ, ಹಿಂತುದಿ (ನಾ). ಹಿಂಭಾಗದ ತುದಿ; ಹಿಂಬದಿಯ ಅಂಚು: ಈ ತೋಪಿನ ಅಳತೆ ಮಾಪುಗಳು ಹ್ಯಾಗಂದರೆ ಉದ್ದ ೨೧ ಫೂಟು ೨ ಇಂಚು, ಹಿಂದುದಿಯಲ್ಲಿ ಹೊರಸುತ್ತಿನ ವ್ಯಾಸ ೪ ಫೂಟು ೪ ಇಂಚು (ಕಭಾಗ. ೫೨೬). **ಹಿಂತುದಿ**: ಒಂದೆರಡು ನಿಮಿಷಗಳಲ್ಲಿ ಒಬ್ಬ ಗಂಡಸು ಒಬ್ಬ ಹೆಂಗಸು ಎಡಬದಿಯಿಂದ ನಡೆದು ಬಂದು ರಂಗಭೂಮಿಯ ಹಿಂತುದಿಯ ಕಡೆಗೆ ಸಾಗುವರು (ಅಶ್ಯಮೀ. ೨).

[ಹಿಂ (< ಪಿನ್) + ತುದಿ]

ಹಿಂದುದೇಶ , ಹಿಂದೂದೇಶ (ನಾ). ಭಾರತ; ಇಂಡಿಯಾ: ಹಿಂದುದೇಶದಲ್ಲಿ ಬೇಸಗೆಕಾಲದಲ್ಲಿ ಸೂರ್ಯ ನೇರವಾಗಿ ಕರ್ಕಾಟಕ ಸಂಕ್ರಾಂತಿವೃತ್ತದ ಮೇಲೆ ಇರುತ್ತಾನೆ (ಭೂವಿವ. ೬೩). **ಹಿಂದೂದೇಶ:** ಇವನ ಕಾಲದಲ್ಲಿ ಬ್ರಾಹ್ಮಸಮಾಜ ಹಿಂದೂದೇಶದ ಕ್ರೈಸ್ತವ್ಯಕ್ತಿಯಾಯಿತು (ಭಾರದ. ೬೨೦). [ಹಿಂದು + ದೇಶ]

ಹಿಂದುವ (ನಾ). = ಹಿಂದೀಯ: ನಮ್ಮ ರಾಣುವೆಯ ಧನ್ಯಗಳ ಭಂಗಿಸಲಂ ದುಮ್ಮಹದಿಂದ ಹಿಂದುವನು ನಮ್ಮಲ್ಲಿಗೀ ಬಿಲ್ಲನಟ್ಟಿದನೆಂದುಱೆ ದುರ್ಮಾನವ ತಾಳಿದನು (ಕುರಾಸಾಂ. ೧೮-೫೭).

ಹಿಂದುವರಾಯ ಸುಪುತ್ರ = ಹಿಂದುವರಾಯನೆಂಬ ಬಿರುದನ್ನು ಹೊಂದಿದ್ದ ವಿಜಯನಗರದ ಒಬ್ಬ ಅರಸನ ಪುತ್ರ: ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ಪೂರ್ವಪಶ್ಚಿಮ ದಕ್ಷಿಣೋತ್ತರ ಚತುಸ್ಸಮುದ್ರಾಧೀಶ್ವರ ಹಿಂದುವರಾಯ ಸುಪುತ್ರಾಣಾಂ (ಎಕ. III (R), ಗುಂಡ್ಲುಪೇ. ೭೮-೪; 1422). [< ಹಿಂದು$_3$]

ಹಿಂದುವರಾಳಿ (ನಾ). [ಸಂಗೀತ] ಕರ್ನಾಟಕಪದ್ಧತಿಯ ರಾಗಗಳಲ್ಲಿ ಒಂದು; ವರಾಳಿರಾಗದ ಒಂದು ಪ್ರಭೇದ: ಹಿಂದುವರಾಳಿಯನೊರ್ವನಾಲಾಪಿಸೆ ಹಿಂದುಳಿಯದ ವನವೆಲ್ಲ ಒಂದು ಘಳಿಗೆಯೊಳೆ ಪೂತಳಿರ್ಮಿಡಿಪಣ್ಗಳೊಂದುಗೂಡಿರ್ದುವೇನೆಂಬ (ಭರಚ. ೬೪-೧೦). [ಸಂ. ಹಿಂದುವರಾಲೀ]

ಹಿಂದುಸ್ತಾನಿ, ಹಿಂದುಸ್ಥಾನಿ, ಹಿಂದೂಸ್ತಾನಿ, ಹಿಂದೂಸ್ಥಾನಿ (ಗು). ೧. ಹಿಂದುಸ್ಥಾನದ; ಹಿಂದುದೇಶದ. (ನಾ). ೨. ಅನೇಕ ಸಂಸ್ಕೃತಶಬ್ದಗಳನ್ನೂ ಸಂಸ್ಕೃತದ ತದ್ಭವಗಳನ್ನೂ ಪರ್ಷಿಯನ್ ಮತ್ತು ಅರಬಿಕ್ ಶಬ್ದಗಳನ್ನೂ ಒಳಗೊಂಡಿರುವ (ಉರ್ದು) ಭಾಷೆ: ಅನಂತರ ಕನ್ನಡಕ್ಕೆ ಬಂದ ಸಂಬಂಧವೆಂದರೆ ಹಿಂದುಸ್ತಾನಿಭಾಷೆಯನ್ನಾಡುವ ಜನರದು (ಭಾಷಾಶಾ. ೧೬೭). ೩. ಉರ್ದುಮಿಶ್ರಿತವಾದ ಹಿಂದೀಭಾಷೆ. **ಹಿಂದುಸ್ತಾನಿ:** ೨. ಸಂಸ್ಕೃತಸಂಬಂಧಭಾಷೆಗಳಾದ - ಬಂಗಾಳಿ, ಉರಿಯ, ಹಿಂದಿ, ಪಂಜಾಬಿ, ಮರಾಠಿ, ಗುಜರಾಥಿ, ಸಿಂಧಿ, ಹಿಂದುಸ್ತಾನಿ, ಉತ್ತರ ಹಿಂದುಸ್ತಾನದ ಭಾಷೆಗಳು (ಭೂಗೋಳ . ೩೮). **ಹಿಂದೂಸ್ತಾನಿ:** ೨. ಹಿಂದೂಸ್ತಾನಿ ಭಾಷೆಯು ಈ ದೇಶದ ಎಲ್ಲ ಭಾಗಗಳಲ್ಲಿಯೂ ಇರುವುದಲ್ಲದೆ ಸಾಮಾನ್ಯವಾಗಿ ಮಹಮ್ಮದೀಯರಿಗೆ ಮಾತೃಭಾಷೆಯಾಗಿದೆ (ಭೂರಚ. II. ೧೭೭). **ಹಿಂದೂಸ್ಥಾನಿ:** ೨. ಹಿಂದೂಸ್ತಾನಿ ಅಥವಾ ಉರ್ದುಭಾಷೆಯು ಸಾಮಾನ್ಯವಾಗಿ ಈ ದೇಶದಲ್ಲಿರುವ ಮುಸಲ್ಮಾನರಿಗೆಲ್ಲ ಮಾತೃಭಾಷೆಯಾಗಿದೆ (ಭೂರಚ. I, ೧೧೬).

[← ಪಾರ. ಹಿಂ. ಹಿಂದೂಸ್ತಾನೀ]

ಹಿಂದುಸ್ಥಾನ, ಹಿಂದೂಸ್ಥಾನ (ನಾ). ೧. ಹಿಂದೂಗಳು ಇರುವ ಸ್ಥಳ,- ಪ್ರದೇಶ; ಭಾರತ: ಬಂಗಾಳದಲ್ಲಿಯೂ, ಮತ್ತು ಮಧ್ಯಹಿಂದುಸ್ತಾನದಲ್ಲಿಯೂ ಕಲ್ಲಿದ್ದಲೂ ಪಂಜಾಬ್‌ದೇಶದಲ್ಲಿ ಕಲ್ಲುಪ್ಪೂ, ಸಿಕ್ಕುತ್ತವೆ (ಭೂಗೋಳ. ೩೭). **ಹಿಂದೂಸ್ಥಾನ:** ೨. ಭಾರತದ ಉತ್ತರದಿಕ್ಕಿನ ಕೆಲವು ಪ್ರದೇಶ; ಉತ್ತರಭಾರತ: ಹಿಂದಿ ಶಬ್ದಕ್ಕೆ 'ಹಿಂದೂಸ್ಥಾನಕ್ಕೆ ಸಂಬಂಧಿಸಿದ' ಎಂದು ಅರ್ಥ. 'ಹಿಂದೂಸ್ಥಾನದಲ್ಲಿ ವಾಸಿಸುವವರು' ಮತ್ತು 'ಹಿಂದೂಸ್ಥಾನದವರು ಬಳಸುವ ಭಾಷೆ' ಎಂದೂ ಸಹ ಈ ಶಬ್ದಕ್ಕೆ ಅರ್ಥವಾಗುತ್ತದೆ (ಭಾರದ. ೪೫೭). [ಹಿಂದು$_3$ + ಸ್ಥಾನ]

ಹಿಂದುಸ್ಥಾನಿ 'ಹಿಂದುಸ್ತಾನಿ' ನೋ.

ಹಿಂದುಳಿ 'ಹಿಂದುಟಿ' ನೋ.

ಹಿಂದುಳಿಸು (ಕ್ರಿ). ಹಿಂದೆ ಉಳಿಯುವಂತೆ ಮಾಡು; ತಡೆ; ಪ್ರತಿಬಂಧಿಸು: ಅವಂತ್ತ ಶಾಪವ ಹಿಂದುಳಿಸಲ್‌ಬಾರದನುಭವಿಸಬೇಕೆಂದಂ (ದಶಾವ. ೪-೧೭).

[ಹಿಂದುಳಿ (< ಹಿಂದುಟಿ) + -ಇಸು]

ಹಿಂದುಳುಹು (ಕ್ರಿ). ಹಿಂದೆ ಉಳಿಯುವಂತೆ ಮಾಡು; ಹಿಂದುಳಿಸು: ಮುಂದೆ ಹರಿದರು ಪಾಂಡುತನಯರ ನಂದನರು ತಾವ್ಮೆವರೀತನ ಹಿಂದುಳುಹಿ ಹೇರಾಳದ ಚತುರ್ಬಲವ (ಕುವಾಕ. ೩-೧೭).

[ಹಿಂದು$_1$ (< ಪಿಂತು) + ಉಳುಹು (< ಉಟಿಪು)]

ಹಿಂದೂ 'ಹಿಂದು$_2$' ನೋ.

ಹಿಂದೂಡು (ಕ್ರಿ). ೧. ಹಿಂದೆ ಸರಿಯುವಂತೆ ಮಾಡು; ಸೋಲಿಸು: ಜಮಾನ್ವಾರನ ಲಾರಿಯನ್ನು ಹಿಂದೂಡಲು ಭಲೆ ಬಾಡಿಗೆಯ ಲಾರಿಗೆಲ್ಲಿ ಸಾಧ್ಯ(ಜಮಾನ್ವಾ. ೬): ನೀತಿಬಾಹಿರರಾದ ಅಧಿಕಾರಿಗಳು . . . ಅವನನ್ನು ಹಿಂದೂಡಿದರು (ಪುನರು. ೩೨೩). ೨.(ಪೂರ್ವಭಾವಿಯಾಗಿ ನಿಶ್ಚಿತವಾದ ಒಂದು ಕಾರ್ಯಕ್ರಮದ ಸಮಯವನ್ನು) ಹಿಂದಕ್ಕೆ ಹಾಕು: ಮುಂದಿನ ತಿಂಗಳಿಗೆ ಇದ್ದ ಸಾರ್ವಜನಿಕಸಭೆಯನ್ನು ಈ ತಿಂಗಳಿಗೇ ಹಿಂದೂಡಿದ್ದಾರೆ (ರೂಢಿ).

[ಹಿಂ (< ಪಿನ್) + ದೂಡು (< ದೂಂಟು$_1$)]

ಹಿಂದೂದೇಶ 'ಹಿಂದುದೇಶ' ನೋ.

ಹಿಂದೂಧರ್ಮ (ನಾ). ಭಾರತದೇಶದಲ್ಲಿ ಪ್ರಾಚೀನಕಾಲದಿಂದಲೂ ಆಚರಣೆಯಲ್ಲಿ ಉಳಿದುಕೊಂಡು ಬಂದಿರುವ ಒಂದು ಸನಾತನಧರ್ಮ: ಹಿಂದೂಧರ್ಮದ ಸತ್ತ್ವಪರೀಕ್ಷೆಯ ಕಾಲ ಅದು (ಭಾರದ. ೩೧೭).

[ಹಿಂದೂ (< ಹಿಂದು$_2$) + ಧರ್ಮ]

ಹಿಂದೂಮತ (ನಾ). = ಹಿಂದೂಧರ್ಮ: ಈ ದೇಶದಲ್ಲಿ ೨ ಭಾಗ ಜನರು ಹಿಂದೂಮತದವರು (ಭೂರಚ. II, ೧೭೯): ಹಿಂದೂಮತ ಪ್ರಪಂಚದ ಧರ್ಮಗಳಲ್ಲಿರುವ ಯಾವ ಅಂಶವನ್ನೂ ಬಿಟ್ಟಿಲ್ಲ (ಭಾರದ. ೩೨೯). [ಹಿಂದೂ (< ಹಿಂದು$_2$) + ಮತ]

ಹಿಂದೂಸ್ಥಾನ 'ಹಿಂದುಸ್ಥಾನ' ನೋ.

ಹಿಂದೂಸ್ಥಾನಿ 'ಹಿಂದುಸ್ತಾನಿ' ನೋ.

ಹಿಂದೆ 'ಪಿಂತೆ$_2$' ನೋ.

ಹಿಂದೆಗೆ 'ಪಿಂದೆಗೆ' ನೋ.

ಹಿಂದೆಯಾಡು, ಹಿಂದಾಡು (ಕ್ರಿ). ೧. ಹಿಂದೆ ಹೇಳು, - ನುಡಿ. ೨. ಪರೋಕ್ಷದಲ್ಲಿ ಆಡಿಕೊಳ್ಳು; ಮರೆಯಲ್ಲಿ ಆಕ್ಷೇಪಿಸು: ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲಿ ಮೆಟ್ಟಿ ಹುಡಿ ಹೊಯ್ದೆ ಮಾಣ್ಬನೆ ಕೂಡಲಸಂಗಮದೇವ (ಬಸವ. ೪೯೯). **ಹಿಂದಾಡು:** ೧. ದೂರನ್ನು ಎದುರಿಗೆ ಆಡು, ಹೊಗಳನ್ನು ಹಿಂದಾಡು (ಗಾಡ). ೨. ನನ್ನೀ ನುಡಿ ತೆರೆ ಎದೆ- ಗುಡಿ ದೇವರ ಬರಮಾಡಿ: ಕಡಿದಾಡುವಿರೇತಕ್ಕೆದು ದೆವ್ವನ ಮುಂದೂಡಿ, ನಾಗನ ನಾಲಿಗೆಯಾಡಿಸಿ ಅಣಗಿಸಿ ಹಿಂದಾಡಿ? (ಸೂರ್ಯಪಾ. ೩೭-೧೧).

[ಹಿಂದ (< ಪಿಂತೆ$_2$) + ಆಡು$_1$]

ಹಿಂದೆರಳು (ಕ್ರಿ). ಹಿಂದಕ್ಕೆ ಹೋಗು,- ತೆರಳು: ನೋಡ ಬಂದವರೆಲ್ಲ ಮಮ್ಮಲ ಮರುಗಿ ಒಬ್ಬೊಬ್ಬರೆ ಹಿಂದರಳಿದರು (ಗೊಲ್ಲೂಥಾ. VIII ಮುನ್ನುಡಿ): ಅವರು . . . ಅರಮನೆಗೆ ಹಿಂದರಳಿದರು (ಪುಗಸ. ೫೧). [ಹಿಂ (< ಪಿನ್) + ತೆರಳು (< ತರಳ್)]

ಹಿಂದೆಸೆ 'ಪಿಂದೆಸೆ' ನೋ.

ಹಿಂದೆಹೊನ್ನು (ನಾ). ಒಂದು ಬಗೆಯ ನಾಣ್ಯ; ಬಂಗಾರದ ನಾಣ್ಯವಿಶೇಷ: ಇದಲ್ಲದೆ ಇನ್ನೂ ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು ಯಾವುವೆಂದರೆ:- ೧ ಗಬರು ೧ ಪ್ರಿಯಕಾವೇರಿ . . . ೧ ಸಣ್ಣಗಿರಿ ೧ ಹಿಂದೆಹೊನ್ನು (ಚಿತ್ರಪಾ. ೧೦೩).

[ಹಿಂದೆ?.+ ಹೊನ್ನು$_1$ (< ಪೊನ್)]

ಹಿಂದೊಂಡೆ (ನಾ). ಗಂಟಲಿನ ಹಿಂಭಾಗ: ಬಿಸುನತ್ತರ್ ತೊಗಲಲ್ಲು ಕರ್ಬಸು ಕರುಳ್ ಹಿಂದೊಂಡೆ ಖಂಡಂ ಮಿದುಳ್ . . . ಮಳಂ ಮಜುಕಮುಗ್ರವ್ಯಾಧಿ ದುರ್ಗಂಧ ಮುರ್ವಿಸುಗುಂ ಪೇಸು ಪತಂ ಕರಂ ಕಿಸುಗುಳಂ ಕಾಯಂ ಶುಚಿಪ್ರಾಯಮೇ (ಪಾಪಸಂ. ೧೩-೪೯). [ಹಿಂ (< ಪಿನ್) + ತೊಂಡ್$_1$]

ಹಿಂದೋಲ, ಹಿಂದೋಳ (ನಾ). ೧. ಉಯ್ಯಾಲೆ; ಜೋಕಾಲಿ. ೨. [ಸಂಗೀತ] ಒಂದು ರಾಗದ ಹೆಸರು. **ಹಿಂದೋಳ:** ೧. ಮುಂದೊಂದು ಮಾಕಂದಮಹೀಜದ ತುಱುಂಗಿದ ಶಾಖಾಗ್ರದ ಮೆಱೆವ ಹಿಂದೋಳದೊಳ್ . . . ಉಯ್ಯಲಾಡಿದಳ್ (ಶಾಂತೀಶ್ವ. ೫-೧೧೪ ಪ). ೨. ಹಿಂದೋಳರವಕ್ಕೆ ಮಲ್ಲಿಗೆಗೆ ಬೆಳ್ದಿಂಗಳ್ಗೆ ತಣ್ಗಾಳಿಗಿನ್ನೆಸುಂ ಕ್ರೂರತೆಯಂ ನೆಗಳ್ಚುದಪನೋ ಅಕ್ರೂರನೆಂತಾದನೀತನತಿಕ್ರೂರನವೋಘಮೆಂದರಬಲಿಂದ ಕ್ರೂರನಂಗೋಪಿಯರ್ (ಜಗವಿ. ೫-೯೦): ಮಾಳವಿಯಾ . . . ಗುಜ್ಜರಿಯಾ ಹಿಂದೋಳಂ ವಸಂತಭೈರವಿ ಗೌಳಮನಾ ವೀಣೆಯಲ್ಲಿ ಮುನಿ ಬಾಜಿಸಿದಂ (ವೀರವಿ. ೬-೮೯); ಮಧು ಮಾಧವಿ ಶಂಕರಾಭರಣ ಹಿಂದೋ[ಪಾಶಾಂ. ದೂ]ಳ ಬಂಗಾಳ ಗುಂಡಕ್ರಿಯೆ . . . ಕರ್ನಾಟಕ ಬಂಗಾಳಮೆಂಬಿಪ್ಪತ್ತೆ ರಾಗಾಂಗದಿಂದಾದ ರಾಗಂಗಳು (ವಿವೇಕ. ೧೮೮). [ಸಂ.]

ಹಿಂದೋಳ 'ಹಿಂದೋಲ' ನೋ.

ಹಿಂದೋಳರಾಗ (ನಾ). = ಹಿಂದೋಲ ೨: ಮೃದುಳ ಹಿಂದೋಳರಾಗರವದೊಡನೆ ಲೀಲಾಂದೋಳ ಚೀತ್ಕಾರರವಮೊಗೆಯುಂ (ಚಂದ್ರಪು. ೭-೬೧ ವ); ಆರೋಹಣ ಅವರೋಹಣಕ್ರಮದಿಂದ . . . ಹಿಂದೋಳರಾಗವಂ ನುಡಿಯಿಸುವ ಸುಂದರಿಯಂ ನೋಡಿ (ಸೌಗಂಧಿ. ೧೯೨-೪). [ಸಂ. ಹಿಂದೋಲರಾಗ]

ಹಿಂಪಾರ್ಶ್ವ (ನಾ). ಹಿಂದಿನ ಪಾರ್ಶ್ವ, - ಬದಿ; ಹಿಂಬದಿ: ನಂಮ ಅಕ್ಕಾಜಿಯವರ ಅಗ್ರಹಾರಕ್ಕೆ ಹಿಂಪಾರ್ಶ್ವದಲ್ಲಿ ಯಿಪ್ಪತ್ತು ಮನೆಗಳು (ಎಕ. III, ಮೂಸೂರು. ೩-೭; 1822).

[ಹಿಂ (< ಪಿನ್) + ಪಾರ್ಶ್ವ]

ಹಿಂಬಗಲು 'ಪಿಂಬಗಲ್' ನೋ.

ಹಿಂಬಡ 'ಪಿಮ್ಮಡ' ನೋ.

ಹಿಂಬಡತಿ (ನಾ). (ಶಿಕ್ಷೆಯಲ್ಲಿ ಒಂದು ಅಂಗವಾಗಿ) ಸಂಬಳ, ಹುದ್ದೆ ಮೊದಲಾದುವುಗಳ ಬಡತಿಯಲ್ಲಿ ಖೋತಾ ಮಾಡುವಿಕೆ: ಹಿರಿಯ ಪೌಜದಾರರಿಗೆ ಎರಡು ರೂಪಾಯಿ ಹಿಂಬಡತಿಯಾಯಿತು (ಪಾನಕ. ೩೫); ಜೋಶಿ ರಾಮರಾಯನು . . . ಕಠೋರ ಸತ್ಯದ ಯಂತ್ರದಲ್ಲಿ ಸಿಕ್ಕು ಹೇಗೆ ಹಿಂಬಡತಿ ಪಡೆದನೆಂಬುದು ಇನ್ನೊಂದು ದೊಡ್ಡ ಕತೆ (ಗಂಮಾಯಿ. ೨೯೭). [ಹಿಂ. (< ಪಿನ್) + ಬಡತಿ]

ಹಿಂಬದಿ (ನಾ). ಹಿಂದಿನ ಭಾಗ; ಹಿಂಭಾಗ: ದೊಡ್ಡ ಒಲೆಯ ಹಿಂಬದಿಯಲ್ಲಿದ್ದ ಮಂಚ ಉದ್ದನೆಯ ಮನುಷ್ಯ ಮೈ ಚಾಚಿ ಮಲಗಿಕೊಳ್ಳಲು ಸಾಕಾಗುವಷ್ಟು ದೊಡ್ಡದಾಗಿರಲಿಲ್ಲ (ಪುನರು. ೨೮೨); ಸ್ವಾಮಿಜಿಯವರು ಹಿಂಬದಿಯಲ್ಲೇ ನಿಂತಿರುತ್ತಾರೆ (ವೀರಯೋ. ೩೪). [ಹಿಂ (< ಪಿನ್) + ಬದಿ$_1$]

ಹಿಂಬರಹ (ನಾ). ದಾಖಲೆ, ಪತ್ರ ಮುಂತಾದುವುಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಕ; ಹಿಂಬದಿಯ ಬರವಣಿಗೆ: "ಹಿಂಬರಹ ಷರಾ" (Endorsement. ಇಂಕನಿ).

[ಹಿಂ (< ಪಿನ್) + ಬರಹ (< ಬರೆಪ)]

ಹಿಂಬರಿಕೆ$_1$, ಹಿಮ್ಮರಿಕೆ (ನಾ). ೧. ಹಿಂದಕ್ಕೆ ಓಡುವಿಕೆ, - ಚಲಿಸುವಿಕೆ: ಅಸುರರಾಯನಜಾತಶತ್ರುವಿಗೆಱಗಿ ಹಿಂಬರಿಕೆಯಲಿ ಹಚ್ಚೆಗಳ ಆತು ನಿಲುತ್ತೈದಿದನು (ತೊರರಾ. ೬-೧೯-೫೩); ಹಿಂಬರಿಕೆಯಡಿಯಲ್ಲಿ ಸಿಕ್ಕು ತೊತ್ತಳಿಗೊಂಡು ಸಾವವರ ನರಳಿಕೆಯ ಕಿವುಡುಗೇಳಿ (ಉಯ್ಯಾಲ. ೮೫-೩). **ಹಿಮ್ಮರಿಕೆ**: ೨. ಹಿಂಬಾಲಿಸಿ ಓಡುವಿಕೆ: ಉತ್ತರನು . . . ಓಡುತಿರೆ ಬಿಟ್ಟ ಮಂಡೆಯಲ್ಲಿ ಕಲಿಪಾರ್ಥನಿದ ನೋಡಿದನು ಹಿಮ್ಮರಿಕೆಯಿಂ ಪೋಗಿ ಸೂಟಿಯಿಂ ಕೇಡುಗನ ಬೆಂಬತ್ತಿ ನಿಲ್ಲುನಿಲ್ಲೆಂದೆನುತ ಪಿಡಿದೆಳೆಯುತ್ತಲುತ್ತರನನು (ತುರಂಗ. ೩೬-೫೧). [ಹಿಂ (< ಪಿನ್) + ಪರಿಕೆ$_1$]

ಹಿಂಬರಿಕೆ$_2$ (ಅ). ಹಿಮ್ಮುಖವಾಗಿ; ಹಿಂಬದಿಗೆ: ಟಳಕರು ಈ ಎಲ್ಲ ಮಾತುಗಳನ್ನು ಕೇಳಿ ಹಿಂಬರಿಕೆ ನಡೆದು ಹಚ್ಚಡದ ಮುಸುಕು ಹಾಕಿಕೊಂಡು . . . ಮಲಗಿದರು (ಸೃಷಿಚಿ. ೮೮); ಕೆಳಸ್ವರಗಳ ಮೆದುವಾದ ಆಲಾಪನೆ ಸುರಳೆ ಸುರುಳಿಯಾಗಿ ಹಿಂಬರಿಕೆ ಹೊರಟ ನದಿಯಂತೆ ಹರಿಯತೊಡಗಿತ್ತು (ಗಂಮಾಯಿ. ೧೩೫). [< ಹಿಂಬರಿಕೆ$_1$]

ಹಿಂಬಳಿ 'ಪಿಂಬಳಿ' ನೋ.

ಹಿಂಬಳೆ (ನಾ). (ಹೆಂಗಸರು) ಕಡಗದ ಹಿಂದುಗಡೆಯಲ್ಲಿ ತೊಡುವ ಸಾದಾ ನಮೂನೆ ಬಳೆ: ಹರಡಿ ಹಿಂಬಳೆ ಸಾಲ್ಪೆರಳ್ಕೆದರ ಮೇಲೆ ಸುರಚಿರರೇಖೆ ಚಂದ್ರಮನ ಸೋಲಿಪ ನಖ (ವಿರಾಕ್ಷ. ೧೦೩-೧); ಕರದ ಕಂಕಣ ಚಳಿಕೆ ಹಿಂಬಳೆ ಕೊರಳ ಸರ . . . ಪಚ್ಚೆ ಪದಕಗಳು (ಜಿರಾಮಾ. ೮೫-೪೦); ಹಿಂಬಳೆ, ಮುಂಬಳೆ ದೋರ್ಯ ಪೌಂಚಿ . . . ಮೊದಲಾದ ಆಭರಣಗಳನ್ನು ಧರಿಸಿಕೊಂಡು (ಮಲೆಮ. ೩೮). 'ಮುಂಬಳೆ' ಪರಾ.

[ಹಿಂ (< ಪಿನ್) + ಬಳೆ$_2$]

ಹಿಂಬಳಿ 'ಪಿಂಬಳಿ' ನೋ.

ಹಿಂಬಾಗಿಲು (ನಾ). ಹಿಂಬದಿಗೆ ಇರುವ ಬಾಗಿಲು; ಹಿಂದಿನ ಬಾಗಿಲು: ಅವಳೇಕೋ ಮುಂಬಾಗಿಲಿಗಾಗಿ ಹೋದವಳು ಹಿಂಬಾಗಿಲಿನಿಂದ ಒಳಸೇರುತ್ತಿದ್ದಳು (ನವನೀ. ೮೯); ಹಿತ್ತಲು ಕಡೆಯ ಹಿಂಬಾಗಿಲು ತೆಗೆದು ಮಾಡಸಂದಿಯ ಕಡೆಗೆ ಕೈದೋರಿದಂತೆ ಮಾಡಿದಳು (ಮಲೆಮ. ೬೫೮). [ಹಿಂ (< ಪಿನ್) + ಬಾಗಿಲು (< ಬಾಗಿಲ್)]

ಹಿಂಬಾರ (ನಾ). ಹಿಂಬದಿಯ ಭಾರ, - ಒಜ್ಜೆ: ಮೂಗುತಿ ಮುಂಭಾರ ತುರುಬೀನ ಹಿಂಬಾರ ಸೇರಿನ ಒಂಕಿ ಕೈಭಾರ ನನ ಗೆಳತಿ ನಾ ಕೊಟ್ಟ ಸೀರೆ ನಿಲಿಭಾರ (ಹಳ್ಳಿಯ. ೮೭).

[ಹಿಂ (< ಪಿನ್) + ಬಾರ$_2$]

ಹಿಂಬಾಲ$_1$ (ನಾ). ೧. ಹಿಂಬದಿಯ ಬಾಲ. ೨. (ಆಲಂ) ಹಿಂದೆ ಹೋಗುವವನು; ಅನುಸರಿಸುವವನು: ತೀರ ಸಮೀಪಕ್ಕೆ ಹೋದಿರಿ, ನಾನು ಹಿಂಬಾಲವಾದೆ (ಸುವಸಂ. ೧೮). [ಹಿಂ (< ಪಿನ್) + ಬಾಲ$_1$]

ಹಿಂಬಾಲ$_2$ (ಅ). ಹಿಂಬದಿಯಲ್ಲಿ; ಹಿಂದುಗಡೆ: ಆಮೇಲೆ ಎಲ್ಲ ದನಗಳು ಆ ಕುದುರೆಯ ಹಿಂಬಾಲ ಬಂದು . . . ಬೇಲಿಯ ಮೇಲಿಂದ ಹಾರಿ ಹೊರಬಿದ್ದವು (ಮುಂಬಯಿ. ೫-೯೧). [< ಹಿಂಬಾಲ$_1$]

ಹಿಂಬಾಲಕ (ನಾ). ಹಿಂಬಾಲಿಸುವವನು; ಅನುಸರಿಸುವವನು; ಅನುಯಾಯಿ: ನಾನು ಯುವರಾಜನ ಹಿಂಬಾಲಕನಾಗಿ ಹೋಗುವುದೇ ಇಲ್ಲವೆಂದು ನಿಶ್ಚಯಿಸಿದ್ದೇನೆ (ಶ್ರೀರಾಯ. ೩೧೬); ಹ್ಯೂಂ ಮತ್ತು ಅವನ ಹಿಂಬಾಲಕರು ಇದನ್ನು ಸಂದೇಹವಾದಕ್ಕೆ ಗುರಿ ಪಡಿಸುವ ತನಕ ಅದು ಸತ್ಯವೇ ಸರಿ (ಜೀವಾತ್ಮ. ೧೮೩). [ಹಿಂ (< ಪಿನ್) + ಪಾಲಕ]

ಹಿಂಬಾಲತನ (ನಾ). ಹಿಂಬಾಲಿಸುವ ಸ್ವಭಾವ: ಇನ್ನು ಆಡಳಿತಗಾರರ ಹಿಂಬಾಲತನ, ಇದರಲ್ಲಿ ಫಲ ಬಲು ನಿಧಾನ (ಹುಚ್ಚಸ. ೧೮೭). [ಹಿಂಬಾಲ$_1$ + - ತನ]

ಹಿಂಬಾಲಿಸು, ಪಿಂಬಾಲಿಸು (ಕ್ರಿ). ಹಿಂದೆ ಬರು; ಅನುಸರಿಸು: ರಾಮನು ವಿಶ್ವಾಮಿತ್ರನನ್ನು ಹಿಂಬಾಲಿಸಿದನು (ವಾರಾಕ್ಷ. ೫೬); ಅವನು ಜಿಂಕೆಯನ್ನು ಹಿಂಬಾಲಿಸಿದನು (ಮಣಸ. ೯೩). Δ **ಪಿಂಬಾಲಿಸು**: ಸಂಭವಿಸಿತಾತನಂ ಪಿಂಬಾಲಿಪೊಂದುರುವ ತಿರ್ಸನೆಯ ತಿರಿವ ಸುಟ್ಟುರೆವೊನಲ ಭೋರಿಡುವ ಬಿರುಗಾಳಿ! (ಶ್ರೀರಾಮಾ. ೪೦೬-೧೧೩).

[ಹಿಂ (< ಪಿನ್) + ಪಾಲಿಸು]

ಹಿಂಬಾಲು (ನಾ). ಹಿಂಬದಿ; ಹಿಂಭಾಗ: ಸೋನಕ್ಕನ ಹಿಂಬಾಲಿಗೆ ನಡೆಯುವ ಮೃತ್ಯು ಕಾಮಿಜೀವಗಳ ವೀಥಿಯೇ ಇತ್ತು (ದೀಪಹ. II, ೩೮೧). [ಹಿಂಬಾಲ$_1$ + - ಉ$_4$]

ಹಿಂಬೆದೆ 'ಪಿಂಬೆದೆ' ನೋ.

ಹಿಂಬೆರಕು (ನಾ). ಹಿಮ್ಮುಖ; ಹಿಂಭಾಗ (?): ನಡೆನಡೆದು ತಿರುತಿರುಗಿ ಹಿಂಬೆರ [ಪಾಠಾಂ. ಹಿಂಬೆಱ]ಕಿನಿಂ ನಡೆದು (ಕರ್ಣಾ. ಹ. ೩೬-೮); ಅಂದಣದ ಸಂದಣಿಯ ದೊಂದಣಮಂದಿಯಿಬ್ಬಗಿಯಾಗಿ ಹಿಂಬೆರಕಿಂದ [ಪಾಠಾಂ. ಹೆಚ್ಚೆಱಗಿಂದ] ವಂದುಂ ತೊಳತೊಳಗುತುಚ್ಚಳಿಸಿ . . . ಬಂದು ಹೊಕ್ಕರು ರಾಜಮಂದಿರವ (ಬಸಪು. ೭೦-೨೮). [?]

ಹಿಂಬೆಱಗು (ನಾ). ದೇಹವು ಹಿಂದಕ್ಕೆ ಬಾಗಿ ಸೆಟೆದುಕೊಳ್ಳುವ ಒಂದು ಬಗೆಯ ಅಪಸ್ಮಾರ: ದೇಹವ ಬಿಲ್ಲಿನ ಹಾಗೆ ಹಿಂದಕ್ಕಾಗಿ ಬಗ್ಗಿಸಿ ನೋವ ಉಂಟುಮಾಡಿ ಕಷ್ಟಪಡಿಸುವುದು, ಇದು ಬಾಹ್ಯಾಯಾಮವೆನಿಸಿಕೊಂಬುದು. ಇದನೇ ಹಿಂಬೆಱಗು ಎಂಬರು (ವೃದ್ಧಸಾ. I, ೪೦೫). 'ಮುಂಬೆಱಗು' ಪರಾ. [ಹಿಂ (< ಪಿನ್) + ಬೆಱಗು]

ಹಿಂಬೊತ್ತು 'ಪಿಂಬೊಟ್ಟು' ನೋ.

ಹಿಂಭಾಗ (ನಾ). ಹಿಂದಿನ ಭಾಗ; ಹಿಂಬದಿ: ಈಡಿಱಿದನಂಬಿನಂ ಪಾರ್ಥನ ವರೂಥಮಂ ಕೂಡೆ ಹಿಂಭಾಗಕ್ಕೆನೂಱು ಬಿಲ್ಲಂತರಕೆ ಪೋದುದದು ಸಂಗರದೊಳು (ಚೈಮಿಭಾ. ೧೪-೨); ಅವಳು ಮಾರಿಯಮ್ಮನ ಮುಂದೆ ಅಡ್ಡ ಬಿದ್ದಿದ್ದಾಗ ಹಿಂಭಾಗದಿಂದ ನೋಡಿಯೆ ಭಾವವಶನಾಗಿದ್ದನು (ಮಲೆಮ. ೬೬೮). [ಹಿಂ (< ಪಿನ್) + ಭಾಗ]

ಹಿಂಭಾಗವಡೆ (ಕ್ರಿ). ಹಿಂದಿನ ಭಾಗವನ್ನು ಹೊಂದು; ಹಿಂಭಾಗದಲ್ಲಿರು: ಕುಂಭಗಳೊಳು ತಮ್ಮ ತೊಂಡಿಲು ಬಾಸಿಗ ಹಿಂಭಾಗವಡೆದ ಬೆನ್ನೊಳಗೆ ಶುಂಭಿತ ಮಿಥುನದ ತೊಂಡಿಲು ಭಾಸಿಗ ಸ್ತಂಭಿಸೆ ನಡೆದುವಾನೆಗಳು (ಭರಚ. ೪೦-೧೦೪).

[ಹಿಂಭಾಗ + ಪಡೆ$_1$]

ಹಿಂಸಕ (ಗು). ೧. ಪೀಡಿಸುವ; ನೋಯಿಸುವ. (ನಾ). ೨. ಪೀಡಿಸುವವನು; ನೋಯಿಸುವವನು: ಹಿಂಸ್ರಜಂತುವಿನ ರಕ್ಷಣೆಗಾಗಿ ಹಿಂಸಕನನ್ನೆ ಅನುಸರಿಬೇಕಾಯಿತು (ಪುನರು. ೩೪೪). ೩. ಕೊಲ್ಲುವವನು; ಕೊಲೆಗಾರ. ೨, ೩: "ಹಿಂಸಕಂ ಕೊಲ್ಲುವವನಕ್ಕುರುಂತುದಂ ನೋಯಿಸುವನಕ್ಕು" (ಮಂಗರಾ. ೭೦-೧೫). [ಸಂ.]

ಹಿಂಸನ (ನಾ). ೧. ಪೀಡಿಸುವಿಕೆ; ತೊಂದರೆ ಕೊಡುವಿಕೆ. ೨. ಕೊಲ್ಲುವಿಕೆ; ಕೊಲೆ: "ವಿಶಸನಂ . . . ಹಿಂಸನ ನಿಶುಂಭನಂ ವರ್ಜನಂ . . . ಪ್ರಮಾಪಣಂ ಕೊಲೆಗ ನಾಮಂ" (ಮಂಗರಾ. ೮೮-೩೯). [ಸಂ.]

ಹಿಂಸಾಕರ್ಮ (ನಾ). ಶತ್ರುವಿನ ನಾಶಕ್ಕಾಗಿ ಪ್ರಯೋಗಿಸುವ ಮಾಟ; (ವಿಶೇಷವಾಗಿ ಅಥರ್ವವೇದದ) ಮೂಲಾಕ್ಷರಗಳನ್ನೂ ರಹಸ್ಯವಾದ ಮೂಲಪಾಠಗಳನ್ನೂ ಶತ್ರುವಿಗೆ ಕೆಡುಕನ್ನುಂಟುಮಾಡುವುದಕ್ಕಾಗಿ ಪ್ರಯೋಗಿಸುವಿಕೆ. [ಸಂ. ಹಿಂಸಾಕರ್ಮನ್]

ಹಿಂಸಾಚಾರ (ನಾ). ಪೀಡಿಸುವ ಸ್ವಭಾವದಿಂದ ಕೂಡಿದ ನಡತೆ; ಕ್ರೂರವಾದ ಆಚಾರ: ಮದುವೆಯಾದ ಗಂಡನ ಕೈಯಲ್ಲಿ ಹೆಣ್ಣು ಹಿಂಸಾಚಾರಕ್ಕೆ ಎಡೆಯಾಗುತ್ತಾಳೆ (ಕಾವೇರಿ. ೧೯೪). . ೨.

ಹಿಂಸಾತ್ಮಕ (ಗು). ಕೆಡುಕಿನಿಂದ ಕೂಡಿದ; ಹಿಂಸೆಯನ್ನೊಳಗೊಂಡ: ಅವನು ಹಿಂಸಾತ್ಮಕಕೃತ್ಯಗಳಲ್ಲಿ ನಿಸ್ಸೀಮ (ಪುನೀ. ೩೩೫). [ಸಂ.]

ಹಿಂಸಾಪರ (ನಾ). ಕೆಡುಕನ್ನುಂಟುಮಾಡುವವನು; ಹಿಂಸಕ: ವರಗುಣಾಸೂಯಕನ ಹಿಂಸಾಪರನ ಹಿಸುಣನ ಶಠನ ಕೃಪಣನ ನರಕವಾಗಲಿ ಕೊಲ್ಲದಿದ್ದರೆ ನಾಳೆ ಸ್ಕಂಧವನ (ಕುವಾದ್ಯೂ. ೮-೩೭); ಹಿಂಸಾಪರನಹರ್ನಿಶವಾ ದುರಾತ್ಮನ ವರಿಸಿದರು ದೇವಾಂಗನೆಯರು (ಕುವ್ಯಾಕ. ೧೭-೧೭). [ಸಂ.]

ಹಿಂಸಾರತಿ (ನಾ). ಅನ್ಯರಿಗೆ ಕೇಡನ್ನುಂಟುಮಾಡುವುದರಲ್ಲಿ ಇರುವ ಆಸಕ್ತಿ, - ಪ್ರೀತಿ: ಕೃತವಿನಾಶನ ಡಂಭ ಹಿಂಸಾರತಿ ನಿಜಾನ್ಯಧರ್ಮಕರ್ಮಚ್ಯುತಿಗಳಿವು ದೋಷಾಂಕುರಂಗಳು (ಕುವ್ಯಾಅ. ೧೪-೧೪). [ಸಂ.]

ಹಿಂಸಾರುಚಿ (ನಾ). ೧. ಕೇಡನ್ನುಂಟುಮಾಡುವುದರಲ್ಲಿ ಇರುವ ಆಸಕ್ತಿ; ಪೀಡಿಸುವ ಬಯಕೆ: ಮಾಂಸ ಮಧು ಮದ್ಯಸೇವನೆ ಹಿಂಸಾರುಚಿ . . . ಎಂಬವಲ್ಲದ ಸಂಸಾರಭ್ರಮಣಕಾರಣಂ ಪೆಱವೊಳವೇ (ಆದಿಪು. ೫-೮೦). ೨. ಕೇಡನ್ನುಂಟುಮಾಡುವುದರಲ್ಲಿ ಆಸಕ್ತಿಯುಳ್ಳವನು; ಪೀಡಿಸುವ ಬಯಕೆಯುಳ್ಳವನು; ಹಿಂಸಕ. [ಸಂ.]

ಹಿಂಸಾಲು (ಗು). ೧. ಪೀಡಿಸುವ; ತೊಂದರೆಗೊಳಿಸುವ. ೨. ಕೊಲೆಮಾಡುವಂತಹ; ಕೊಲ್ಲುವ. [ಸಂ.]

ಹಿಂಸಾವಿರಹಿತ (ನಾ). ಕೇಡನ್ನು ಬಿಟ್ಟವನು; ಹಿಂಸೆಯನ್ನುಳಿದವನು: ಹಿಂಸಾವಿರಹಿತನೈ ನೀನಿಂ ಸಲೆ ಬಾಟ್ ಪಾಪಕರ್ಮನಂ ಪೆಱರಲಿವಂ ಹಿಂಸೆಯನೆ ಬಯಸಿ ಮಱುಗುವ ನಾಂ ಸತ್ತಪೆನೆಂದು ಪೂಣ್ದು ಬರ್ಪನ ತೆಱದಿಂ (ಧರ್ಮಾಮೃ. ೧೦-೨೦೦). [ಸಂ.]

ಹಿಂಸಿಸು (ಕ್ರಿ). ನೋಯಿಸು; ಪೀಡಿಸು: ಪುಡುಗರಿಗೆ ಹೇಗೆ ಹಿಂಸಿಸಿ ವಿದ್ಯಾ ಕಲಿಸುವುದಕ್ಕಾಗುತ್ತದೆಯೇ? (ಚಂಗಾಳ್ವ. ೬೮): ನನ್ನನ್ನು ಯಾಕೆ ಹಿಂಸಿಸುತ್ತೀರಿ? (ನೀತಿಬೋ. III. ೬). [ಹಿಂಸೆ + - ಇಸು]

ಹಿಂಸೆ (ನಾ). ೧. ನೋವು; ತೊಂದರೆ: "ಗೋಣ್ಮುಱಿಯೆನಲದು ಹಿಂಸೆಗಕ್ಕುಂ" (ಕವಿಕಂ. ೧೨೪); ಹಿಂಸಾನೃತಸ್ತೇಯಾಬ್ರಹ್ಮಪರಿಗ್ರಹಪರಿತ್ಯಾಗಮೆಂಬಯ್ವಂ ಮಹಾವ್ರತಂಗಳೊಳ್ ನೆರೆದು (ಆದಿಪು. ೬-೨೭ ವ); ಹಿಂಸೆ ಪುಸಿ ಕಳವು ರತಿ ರಾಗಂ ಸಕಳ ಪರಿಗ್ರಹಂಗಳಿಂಬುದನಱಿದರ್ಥಂ ಸಕಳಮೆಂದು ತೊಱೆವುದು (ಶಾಂತಿಪು. ೬-೪೯): ಹುಸಿ ಡಂಬು ಹಿಂಸೆ ಮೂರ್ಖತೆಯುಂಟು ಧರೆಯೊಳಗೆ (ಬಸರ. ೧-೭೧). ೨. ಕೊಲ್ಲುವಿಕೆ; ಕೊಲೆ: "ಮಾರಣಂ, ನಿಶರಣಂ, ನಿಬರ್ಹಣಂ. . . ಪ್ರಮಯಾ, ಹಿಂಸಾ, ಸಂಜ್ಞಪನಂ- ಈ ೨೧ ಕೊಲೆ" (ಪಲಾಯಿ. ೭೮-೩೨). ೩. ಕಳ್ಳತನ; ಕಳವು. ೨,೩: "ಅಸಮ ಕೊಲೆ ಕಳವಿನಲಿ ಹಿಂಸೆಯೆಂಬುದು" (ಮಂಗರಾ. ೧೪೦-೧೨). ೪. ಕತ್ತಿ; ಖಡ್ಗ: "ತಪ್ಕರಂ ನಿಸ್ತ್ರಿಂಶಂ ಕೊಲೆಯಿಂತು ಹಿಂಸೆಯನಿಕ್ಕುಂ" (ಪಾಸಾರ. ೧೧೯). [ಸಂ. ಹಿಂಸಾ]

ಹಿಂಸ್ರ (ಗು). ೧. ಕೆಡುಕನ್ನುಂಟುಮಾಡುವ; ತೊಂದರೆಯನ್ನು ಕೊಡುವ. ೨. ಕೊಲ್ಲುವ; ಸಾಯಿಸುವಂತಹ. ೩. ಉಗ್ರವಾದ; ಭೀಷಣವಾದ. ೪. ಕ್ರೂರವಾದ; ದುಷ್ಟ: 'ಹಿಂಸ್ರಜಂತು' ಪರಾ. (ನಾ). ೫. ಕೊಲ್ಲುವವನು; ಕೊಲೆಗಾರ: "ಶರಾರುಃ, ಘಾತುಕಃ, ಹಿಂಸ್ರಃ - ಈ ೩ ಕೊಲ್ಲುವಂ" (ಪಲಾಯಿ. ೬೧ - ೨೧೭). ೬. ಶಿವ. ೭. ಭೀಮ. [ಸಂ.]

ಹಿಂಸ್ರಪಶು (ನಾ). ಕ್ರೂರಪ್ರಾಣಿ; ದುಷ್ಟಮೃಗ: ಊರನ್ನು ಬಿಟ್ಟು ಹಿಂಸ್ರಜಂತುಗಳಿಗೂ ರಾಕ್ಷಸರಿಗೂ ಆವಾಸವಾದ ಕಾಡಿನಲ್ಲಿ ಆಸುರಜೀವನವನ್ನು ಜೀವಿಸುತ್ತಿರುವವರು (ಸಂನಾಬ. ೯೪). [ಸಂ.]

ಹಿಂಸ್ರಪಶು (ನಾ). = ಹಿಂಸ್ರಜಂತು. [ಸಂ.]

ಹಿಕಮತ್ತು (ನಾ). ಉಪಾಯ; ತಂತ್ರ; ಸಂಚು: ಆ ನೀಚ ಬಚ್ಚಪ್ಪನ ಜತೆಗೆ ಸೇರಿಕೊಂಡು ಈ ಧೂರ್ತ ಪಟೇಲ ಮಾಡಿರೋ ಹಿಕಮತ್ತು ಅದು (ಊಯಕ. ೩೯): ಇದು ಸುಬ್ಬಾಯರೇ, ನಿಮ್ಮ ಭಾವಯ್ಯನ ಹಿಕಮತ್ತು (ಕುಡುಕ. ೪೮): ದುಷ್ಟಾನನನ್ನು ಹಿಕಮತ್ತಿನಿಂದ ಜಯಿಸಬೇಕು (ಗಾದೆ). [← ಅರ. ಹಿಕ್ಮತ್; ಹಿಂ ಮರಾ. ಹಿಕಮತ್]

ಹಿಕಾಳಿ (ನಾ). ಬಡಬಡಿಕೆ; ಸನ್ನಿ: ನೀನು ಬರೋದಕ್ಕಿಂತ ಮುಂಚೆ ಎಷ್ಟು ಹರಟೆ ಹೊಡೆದರೋ! ಜ್ವರದ ಹಿಕಾಳಿಗೆ ಸಿಕ್ಕದ್ದೆಲ್ಲ ಮಾತಾಡೋರ (ಚಂಗಾಳ್ವ. ೧೪೭). [?]

ಹಿಕ್ಕ (ನಾ). ಬಿಕ್ಕಳಿಕೆ; ಬಿಕ್ಕು: ಹಿದ್ಮವೆಂದೂ ಹಿಕ್ಕವೆಂದೂ ಬಿಕ್ಕುಳಿನ ಹೆಸರು (ಸಕಪ್ಯ. ೨೪೦). [ಸಂ. ಹಿಕ್ಕಾ]

ಹಿಕ್ಕಟ್ಟು (ನಾ). ೧. ಹಿಂಭಾಗ; ಹಿಂಬದಿ: ಹಡಗಿನ ಹಿಕ್ಕಟ್ಟಿನಲ್ಲಿ ಸುಕಾಣಿ ಮುಕ್ಕಟ್ಟಿನಲ್ಲಿ ಗಡುತರವಾದ್ದೊಂದು ಕಬ್ಬಿಣ ಸರಪಳಿಯು ಇರುವವು (ಮುಂಬಯಿ. ೩-೧೧೨). ೨. (ಉಕ) ತಡವಾದುದು; ವಿಳಂಬವಾದುದು.

[< ಹಿಂದು$_1$ + ಕಟ್ಟು$_2$]

ಹಿಕ್ಕಣಿಕೆ. 'ಹಿಕ್ಕುಹಣಿಗೆ' ನೋ.

ಹಿಕ್ಕಲು (ನಾ). ಗದ್ದೆ, ತೋಟ ಮುಂತಾದ ಕಡೆಗಳಲ್ಲಿ ನೀರು ಹರಿಯಲು ಮಾಡಿರುವ ಸಣ್ಣ ತೋಡು, - ಕಾಲುವೆ: ಹಿಕ್ಕಲು, ಸಣ್ಣಕಾಲುವೆ. ಹಿರ್‌ಕಾಲ್, ಹಿರಿದ ಕಾಲ್; ಕಾಲ್ ಎಂದರೆ ಕಾಲುವೆ. ಕಾ ಹ್ರಸ್ವವಾಗಿದೆ (ಸಮ್ಮಸು. ೧೧೦).

[ಹಿಕ್ಕು$_1$ (ಪಿಕ್ಕು) + - ಅಲು (<- ಅಲ್$_2$)]

ಹಿಕ್ಕವತ್ತಿಗೆ (ನಾ). ಒಂದು ಬಗೆಯ ಔಷಧೀಸಸ್ಯ: ಪವಣಱಿದು ಮಧುವುಮಂ ಹಿಕ್ಕವತ್ತಿಗೆಯ ಬೇರ ರಸಮಂ ಶಶಿಯುಮನೊಂದುವಿನಂ ತೊಡದೊಡೆ ಪುಷ್ಪಂ ದ್ರವಮಂ ಮಾಟ್ಟುಂ (ಶೋಕೋಪ. ೭-೪೭). [?]

ಹಿಕ್ಕಾಡಲ್ಲಿಕೆ (ನಾ). = ಹಿಕ್ಕವತ್ತಿಗೆ: ಸಮಸ್ತಜ್ವರಗಳಿಗೆ ಹಿಪ್ಪಲಿ, ಹಿಡಿಹಿಡಿಕೆ, ನುಗ್ಗೆ, ಬಸಲೆ . . . ಚಿಟ್ಟ ಅವುಡಲ, ಹಿಕ್ಕಾಡಲ್ಲಿಕೆ, ಇವುಗಳ ಬೇರುಗಳು ಪ್ರತ್ಯೇಕ ೫ ತೂಕದ ಲಕ್ಪುದಲ್ಲಿ ಕೊಂಬುದು (ವೈವಿ. ೧೪೫). [?]

ಹಿಕ್ಕು$_1$ 'ಪಿಕ್ಕು' ನೋ.

ಹಿಕ್ಕು$_2$ (ನಾ). ೧. ಬಿಡಿಸುವಿಕೆ; ಹಿಂಜುವಿಕೆ: "ಪಿಂಜಯತಿ = ಹಿಕ್ಕಿದಪಂ; ಪಿಂಚಾರಃ- ಹಿಕ್ಕುವಂ . . . ಪಿಂಜನಂ, ಪಿಂಜನೀಯಂ, ಈ ೨ ಹಿಕ್ಕು" (ಕಾಶಕ್ಯ. ೨೪೦). ೨. (ಕೂದಲಿನ) ಸಿಕ್ಕು; ಗೋಜು: ಜಡೆಯ ಹಿಕ್ಕನು ಒಡದು ಎಣ್ಣೆಯ ತಡವಿ ದಿನಚರಿ ನೀರನೆರೆವುತ ಕೊಡುವ ಪಾಲ್ ಘೃತ ದಣಿಯುವಂದದಿ ಮೃಡನು ಸುತನಾಗೆ (ಶರಲೀ. ೩೯೦). [< ಪಿಕ್ಕು]

ಹಿಕ್ಕುಗೊಡು (ಕ್ರಿ). ಭೇದಿಸು: ಆತ್ಮತೇಜಕ್ಕೆ ತರ್ಕದ ಗೆಲ್ಲ ಸೋಲಕ್ಕೆ ಇಕ್ಕೆ ಹಕ್ಕೆಗೆ ಹಿಕ್ಕುಗೊಡದಿರ್ಪುದೇ ಅಱಿವು (ಮೋಳಮಾ. ೮೫-೩೩೬). [ಹಿಕ್ಕು$_2$ + ಕೊಡು$_1$]

ಹಿಕ್ಕುಹಣಿಗೆ, ಹಿಕ್ಕಣಿಕೆ (ನಾ). (ಸಣಬು ಮೊದಲಾದುವುಗಳನ್ನು) ಹಿಕ್ಕುವ ಸಾಧನ: "(ಸಣಬು ಮೊ.ಗಳನ್ನು ಹಿಕ್ಕುವ) ಉಕ್ಕಿನ ಪಿಕ್ಕುಹಣಿಗೆ; ಹಿಕ್ಕಣಿಕೆ" (Hackle. ಇಂಕಾ). **ಹಿಕ್ಕಣಿಕೆ**: (ಸಣಬನ್ನು) ಹಿಕ್ಕಣಿಕೆಯಿಂದ ಹಿಕ್ಕು (Hackle. ಇಂಕಾ).

[ಹಿಕ್ಕು$_1$ (< ಪಿಕ್ಕು$_1$) + ಹಣಿಗೆ (< ಪಣಿಗೆ)]

ಹಿಕ್ಕೆ$_1$ 'ಪಿಳ್ಕೆ' ನೋ.

ಹಿಕ್ಕೆ$_2$ (ನಾ). ಬಿಕ್ಕಲು; ಬಿಕ್ಕಳಿಕೆ; ಬಿಕ್ಕು: ಹಿಧ್ಮೆಯೆಂದರೂ, ಹಿಕ್ಕೆಯೆಂದರೂ, ಬಿಕ್ಕಟೆಂದರೂ, ಬಿಕ್ಕಳಿನ ಹೆಸರು (ವೈದ್ಯಸಾ. I. ೧೫೪). [ಸಂ. ಹಿಕ್ಕಾ]

ಹಿಕ್ಕೊಡೆ (ಕ್ರಿ). (ಕೂದಲಿನ) ಸಿಕ್ಕು ಬಿಡಿಸು; ಗೋಜನ್ನು ಬಿಡಿಸು: ತರುಣಿಯಳ ಕುರುಳ ಹಿಕ್ಕೊಡೆದು ಮದನನ ರಾಣಿ ನಾರಿಗಿರದೆ ಮಧುರಸವನುಣಿಪಂತೆ ತಿಳಿಘೃತವ ತಲೆಗಂ ಪೂಸಿ (ನವಮೋ. ೧೩-೪೧). [ಹಿಕ್ಕು$_2$ + ಒಡೆ$_1$]

ಹಿಗೆ (ನಾ). ಒಂದು ಬಗೆಯ ಗಿಡ: ಕುರಥ, ಹಿಗ, ತುಮಕಿ, ತಿಂಡುಕ, ಹೊಳೆತುಮ್ರಿ, ಬಾಧ (ಪ್ಯಟಿಗಿ. ೩೧-೬೦೩). [?]

ಹಿಗ್ಗಣ್ಣು (ನಾ). (ಸಂತೋಷದಿಂದ) ಹಿಗ್ಗಿದ ಕಣ್ಣು, - ಅಗಲವಾಗಿರುವ ಕಣ್ಣು: ಮಿಂಚಿನವನೆ ಹಿಗ್ಗಣ್ಣಿನವಳಿಗಾ ಬೆಳಕುಕಂಡಿಯಿಂದ ಮಾತನಾಡು ಗಂಭೀರವಾಗಿ

ನಸು ಗುಡುಗು ಬೆದಗಿನಿಂದ (ಮೇಘದೂ. ೨೭-೩೫).

[ಹಿಗ್ಗು$_1$ (< ಪಿಳ್ಗು$_1$) + ಕಣ್ಣು (< ಕಣ್)]

ಹಿಗ್ಗಲಿಕೆ (ನಾ). ದೊಡ್ಡದಾಗಿ ಮಾಡುವಿಕೆ; ವಿಸ್ತರಿಸುವಿಕೆ: ರಗಳೆ ಪಟ್ಟದಿಗಳ ಆಧಾರವಾದ ಮಾತ್ರಾಛಂದಸ್ಸು ಅಂಥ ಹಿಗ್ಗಲಿಕೆಯನ್ನು ಸುಲಭವಾಗಿ ತಡೆಯಬಲ್ಲದು (ಸಮಾಲೋ. ೧೭೯). [ಹಿಗ್ಗಲು + - ಇಕೆ]

ಹಿಗ್ಗಲಿಸು (ಕ್ರಿ). ಅಗಲವಾಗಿ ತೆರೆ; ಹಿಗ್ಗಿಸು; ದೊಡ್ಡದನ್ನಾಗಿ ಮಾಡು: ನಮ್ಮ ಆಚಾರ್ಯ ಮಾತ್ರ ಒಡವೆಗಳನ್ನು . . . ಬಿಗಿಯಾಗಿಯೇ ಮಾಡುತ್ತಿದ್ದರು. ಹೀಗೆ ಮಾಡಿದ ಒಡವೆಗಳನ್ನು ಹಿಗ್ಗಲಿಸಿ ಹೆಣ್ಣಿಗೆ ತೊಡಿಸಬೇಕಾದರೆ ಅದೊಂದು ದೊಡ್ಡ ಕೆಲಸವೇ ಆಗುತ್ತಿತ್ತು (ನನ್ನೂರು. ೧೯೦): ಧರ್ಮಾಧಿಕಾರಿಯ ಮಗಳು ಸಹ ಕ್ಷಣಕಾಲ ನಿಂತು ಮಾಸ್ಟೋವಳ ಕಡೆಗೆ ಕಣ್ಣು ಹಿಗ್ಗಲಿಸಿ ನೋಡಿದಳು (ಪುನರು. ೧೪೩); ಮಾನವನ ಭಾವವನ್ನು ಉನ್ನತೋನ್ನತವಾಗಿ ಹಿಗ್ಗಲಿಸುವುದೇ ಇದರ ಶಕ್ತಿ (ಸಮಾಲೋ. ೩೬).

[ಹಿಗ್ಗಲು + - ಇಸ್ಸು$_3$]

ಹಿಗ್ಗಲು (ನಾ). ದೊಡ್ಡದಾಗಿ ಆಗುವಿಕೆ; ಹಿಗ್ಗುವಿಕೆ: 'ಹಿಗ್ಗಲಿಕೆ', ಹಿಗ್ಗಲಿಸು ಪರಾ. [ಹಿಗ್ಗು$_1$ (< ಪಿಳ್ಗು) + - ಅಲು (< - ಅಲ್$_2$)]

ಹಿಗ್ಗಾಮುಗ್ಗ 'ಹಿಗ್ಗುಮುಗ್ಗು' ನೋ.

ಹಿಗ್ಗಾಮುಗ್ಗಾ 'ಹಿಗ್ಗುಮುಗ್ಗು' ನೋ,

ಹಿಗ್ಗಿಸು 'ಪಿಳ್ಗಿಸು' ನೋ.

ಹಿಗ್ಗು$_1$ 'ಪಿಳ್ಗು' ನೋ.

ಹಿಗ್ಗು$_2$ 'ಪಿರ್ಗು$_2$' ನೋ.

ಹಿಗ್ಗುದೆಗೆ (ಕ್ರಿ). ಸಂತೋಷವನ್ನು ತೊರೆ,—ಉಳಿ: ಲಗ್ಗೆಯೊಳಗೆ ನೊಂದು ಹಿಪುಭೂಪರ ಸೇನೆಯೊಗ್ಗೊಡೆದೋಡಿ ಹಿನ್ನಲೆಗೆ ಹಿಗ್ಗುದೆಗೆದು ದೂರ ಚೌದಿಕ್ಕಿನೊಳಾಗ ಬೊಗ್ಗನೆ ಪಾಳ್ಯವಿಳಿದರು (ಕಂನಪ. ೩-೬೧). [ಹಿಗ್ಗು$_2$ (< ಪಿರ್ಗು$_2$) + ತೆಗೆ$_1$]

ಹಿಗ್ಗುಮುಗ್ಗು, ಹಿಗ್ಗಾಮುಗ್ಗ, ಹಿಗ್ಗಾಮುಗ್ಗಾ (ಅ). ಹಿಂದಕ್ಕೆ ಮತ್ತು ಮುಂದಕ್ಕೆ ಎಂಬರ್ಥದಲ್ಲಿ ಬಳಕೆಯಾಗುವ ಒಂದು ಅವ್ಯಯ: ಮಾಳಿಗಗಳೊಲೆಗಾಡಿ ಹಿಗ್ಗುಮುಗ್ಗಾಗೆ . . . ಒಂದು ವರುಷದ ಕೆಳಗೆ ನನಗೆ ಮರವಣಿಗೆ (ಇಂಗೀಶ.೩೫--೩). ಹಿಗ್ಗಾಮುಗ್ಗ: ಆ ಪಿಶಾಚಿಗಳು ಅವನನ್ನು ಹಿಗ್ಗಾಮುಗ್ಗ ಎಳೆಯುತ್ತಿದ್ದಾರೆ (ಪುನರು.೨೦೯); ಅಂಬಿಕಾತನಯ ಕಟ್ಟಿದ ಕಗ್ಗಾ ಜಗ್ಗಬ್ಯಾಡ ನೀ ಹಿಗ್ಗಾಮುಗ್ಗಾ ಹುರಿ ಐತಿ ಒಳಗ ಬರಿದಲ್ಲಾ ಹಗ್ಗಾ (ಜೀವಲ. ೩೩-೧೪). ಹಿಗ್ಗಾಮುಗ್ಗಾ: ಅವಳ ಜೀವ ಹಿಗ್ಗಾ- ಮುಗ್ಗಾ ಎಳೆದಾಡಿತು (ಕತ್ತಬಿ.೮).

[ಹಿಗ್ಗು$_1$ (< ಪಿಳ್ಗು$_1$) + ಮುಗ್ಗು$_1$ (< ಮೊಣ್ಗು)]

ಹಿಚಕು 'ಪಿಸುಂಕು' ನೋ.

ಹಿಚಿಕೆ 'ಪಿಚಿಕೆ' ನೋ.

ಹಿಚಿಕು 'ಪಿಸುಂಕು' ನೋ.

ಹಿಚುಕಾಟ, ಹಿಜಿಗಾಟ (ನಾ). ೧. ಅದುಮುವಿಕೆ; ಒತ್ತಡ: ಆಂತರ್ಯದಲ್ಲಿ ಅವಳ ಹೃಪ್ರಿಂಡವು ಮತ್ತೆ ಹಿಚುಕಾಟಕ್ಕೆ ಹಿಂಸೆಗೆ ಗುರಿಯಾಗಿ ನುಚ್ಚುನುರಿಯಾಗ ತೊಡಗಿತು (ಇಪ್ರಕ. ೨೮೭). ಹಿಜಿಗಾಟ : ೨. ನೋವು ; ತೊಂದರೆ: ತೆಜಿಸಿವೀ ಸ್ಥಲವನುಂ ವಿಪ್ರರಾದವರ್ಗಳುರು ಹಿಜಿಗಾಟದಿಂ ಮನಂ ಮೇಣಲಸಿ (ಪರಶು.೪೧-೨೮).

[ಹಿಚುಕು (< ಪಿಸುಂಕು) + ಆಟ]

ಹಿಚುಕು 'ಪಿಸುಂಕು' ನೋ.

ಹಿಚ್ಚಗೆಗ್ರಾಮ (ನಾ). ಒಂದು ಹಳ್ಳಿಯ ಹೆಸರು: ತದ್ದಕ್ಷಿಣತಃ ಹಿಚ್ಚಗೆಗ್ರಾಮ (ಸೌಇಇ. XX, ೬-೨೧; 730). IP ಈ ಶಾಸನವನ್ನು ಹತ್ತನೆಯ ಶತಮಾನದಲ್ಲಿ ಪ್ರತಿ ಮಾಡಿರುವುದರಿಂದ, ಶಬ್ದವು ಹಕಾರರೂಪದಲ್ಲಿದೆ. [ಹಿಚ್ಚಗೆ ? + ಗ್ರಾಮ]

ಹಿಜಡ (ನಾ). ನಪುಂಸಕ. [<— ಹಿಂ. ಮರಾ. ಹಿಜಡಾ]

ಹಿಜರಾ 'ಹಿಜರೀ' ನೋ.

ಹಿಜರಿ 'ಹಿಜರೀ' ನೋ.

ಹಿಜರಿಲೆಕ್ಕ (ನಾ). ಹಿಜರಿಶಕೆಯ ಕಾಲದಲ್ಲಿ ಬಳಕೆಯಲ್ಲಿ ಇದ್ದ ಲೆಕ್ಕ (?): 'ರಾಜಾಚಿಕ್ಕದೇವರಾಜ್ ಮಹಮದ್‌ಷಾಯಿ' ಎಂಬ ಮಾತನ್ನು ಹಿಜರಿಲೆಕ್ಕವನ್ನು ಸಹ ಪಾರಸಿಯ ಅಕ್ಷರದಲ್ಲಿ ಕೆತ್ತಿರುವ ಮೊಹರನ್ನೂ . . . ಈ ಲಿಂಗಣ್ಣಯ್ಯನ ಸಂಗಡ ಕಳುಹಿಸಿಕೊಟ್ಟರು (ಮಹಾವಂ.೧, ೧೪೪). [ಹಿಜರಿ (< ಹಿಜರೀ) + ಲೆಕ್ಕ$_2$]

ಹಿಜರಿಶಕೆ (ನಾ). ಮಹಮ್ಮದ್ ಪೈಗಂಬರನು ಮಕ್ಕಾನಗರವನ್ನು ತೊರೆದು ಮದೀನಾಪಟ್ಟಣಕ್ಕೆ ಹೋದ, ಕ್ರಿಸ್ತಶಕ ಆರುನೂರ ಅರವತ್ತೆರಡನೆಯ ಇಸವಿ ಜುಲೈ ಹದಿನಾರನೆಯ ದಿನದಿಂದ ಮೊದಲಾಗುವ ಶಕವರ್ಷ; ಮಹಮ್ಮದೀಯರ ಒಂದು ಕಾಲಗಣನೆ: ಪಯಗಂಬರರು ಅಬುಬಕರನ ಮನೆಗೆ ಬಂದು ಆತನೊಡನೆ ಅದೇ ರಾತ್ರಿ ಕತ್ತಲೆಯಲ್ಲಿ ಮದಿನೆಗೆ ಹೊರಟರು . . . ಈ ಪ್ರವಾಸಕ್ಕೆ ಹಿಜರತ್ ಎಂದು ಹೆಸರು. ಆದ್ದರಿಂದ ಆ ಶಕಕ್ಕೆ ಹಿಜರಿಶಕೆ ಯೆನ್ನುವರು (ಹಮಪ. ೧೭). 'ಹಿಜರೀಶಕ' ಪರಾ. [ಹಿಜರೀ (< ಹಜರೀ) + ಶಕೆ]

ಹಿಜರೀ, ಹಿಜರಾ, ಹಿಜರಿ (ನಾ). = ಹಿಜರಿಶಕೆ: ಬ ತಾರೀಖು ಛಂದ್, ೨೧ ನೇ ಮಾಹೆ ಜಿಲ್ಲೆಜ್ ೧೧೯೭ ನೇ ಹಿಜರೀ ಮುತಾಬಕ್ ಛಂದ್ ೨೭ನೇ ಮಾಹೆ ನವೆಂಬರ್ ೧೭೮೨ನೇ ಇಸವಿ (ಚಾಮವಂ. ೨೨೭). ಹಿಜರಾ: (ಕ). ಹಿಜರಿ: 'ಹಿಜರಿಲೆಕ್ಕ' ಪರಾ.

[<— ಅರ. ಹಿಜ್ರಾ; ಹಿಂ. ಹಿಜರೀ; ಮರಾ. ಹಿಜರಾ, ಹಿಜರೀ]

ಹಿಜರೀಶಕ (ನಾ). = ಹಿಜರೀ: ಮಹಮ್ಮದ ಪೈಗಂಬರರಿಂದ ಆರಂಭವಾದ ಹಿಜರೀಶಕವು ಈವೊತ್ತಿನಿಂದಲೇ ಆರಂಭವಾಗುವುದು (ಹಮಪ.೧೭). [ಹಿಜರೀ + ಶಕ]

ಹಿಜಿಗಾಟ 'ಹಿಚುಕಾಟ' ನೋ.

ಹಿಜಿಗು 'ಪಿಸುಂಕು' ನೋ.

ಹಿಜ್ಜಲ (ನಾ). ಒಂದು ಬಗೆಯ ಗಿಡ; ನೀರಹಲಸು: "ಹಿಜ್ಜಲ - ತೊಜೆಗಣಿಗಿಲ್" (ನಾಚರಾ. ೫). [ಸಂ.]

ಹಿಟಕವಾಡು (ಕ್ರಿ). ಚೇಷ್ಟೆಮಾಡು; ಗೇಲಿಮಾಡು: ಅಂತಪುರಕ್ಕೆ ವೋಪ ವಾಚಾಳಿಯನೊರ್ವಳಂ ಚಟುಳ ಚೇಟಿಕೆಯಂ ವಸುದೇವವಲ್ಲಭಂ ಹಿಡಿದು ಹಿಟಕವಾಡ (ಅರ್ಧನೇ. ೫-೭ ವ). [ಹಿಟಕ$_2$ + ಆಡು$_1$]

ಹಿಟು 'ಪಿಟ್ಟು' ನೋ.

ಹಿಟುಕಾಱ 'ಪಿಟ್ಟುಕಾರ' ನೋ.

ಹಿಟ್ಟಗಾಣಿ (ನಾ). ಆಕಾಶನೀಲಿಯ ಬಣ್ಣದ ಹೂವುಗಳನ್ನು ಬಿಡುವ ಒಂದು ಬಗೆಯ ಬಳ್ಳಿ; ಗುಬ್ಬಚ್ಚಿ ಬಾಳೆ; ಕನ್ನೆಸೊಪ್ಪು: (ಕ). [?]

ಹಿಟ್ಟಡಿಗೆ (ನಾ). (ಜೋಳ, ಅಕ್ಕಿ, ಗೋಧಿ, ರಾಗಿ ಮೊದಲಾದ ಧಾನ್ಯಗಳ) ನಯವಾದ ಪುಡಿ ಅಥವಾ ಪಿಷ್ಟದಿಂದ ತಯಾರಿಸುವ ಆಹಾರ; ಹಿಟ್ಟಿನಿಂದ ಮಾಡುವ ದೋಸೆ, ಕಜ್ಜಾಯ, ಎರೆಯಪ್ಪ ಮುಂತಾದುವು: "ಪೂಪಃ, ಅಪೂಪಃ, ಪಿಷ್ಟಕಃ- ೩ ಹಿಟ್ಟಡಿಗೆ, ಅಂದರೆ ಹಿಟ್ಟುಕೃರಿಸಿ ಮಾಡುವ ದೋಸೆ, ಎರಿಯಪ್ಪ, ಕಜ್ಜಾಯ, ಹೋಳಿಗೆ, ಒಬ್ಬಟ್ಟು, ಕಡುಬು ಸಾರಸತ್ತು, ಇದ್ದಳಿಗೆ, ಉಪ್ಪಿಟ್ಟು ಮುಂತಾದ್ದಕ್ಕೆ ಹೆಸರು" (ಸಿದ್ಧಾಂತಿ. ೨೮೮). [ಹಿಟ್ಟು (< ಪಿಟ್ಟು) + ಅಡಿಗೆ (< ಅಡುಗೆ)]

ಹಿಟ್ಟಳಿಕ 'ಹಿಟ್ಟಳಿಕೆ' ನೋ.

ಹಿಟ್ಟಳಿಕೆ, ಹಿಟ್ಟಳಿಕ, ಹಿಟ್ಟುಳಿಕೆ, ಹಿಟ್ಟುಳಿಕ, ಹಿಟ್ಟುಳುಕ (ನಾ). ಒಂದು ಬಗೆಯ ಔಷಧೀಸಸ್ಯ: "ಆ ಶಿಲಾಬೇಧಿ ಹಿಟ್ಟಳಿಕೆ [ಪಾಠಾಂ. ಹಿಟ್ಟುಳಿ ಹಿಟ್ಟುಳಿಕೆ]ಯಕ್ಕುಂ" (ಮಂಗರಾ. ೩೯-೨೯); ಉತ್ತರಣೆಬೇರು ಹಿಟ್ಟಳಿಕೆಬೇರು ಈಶ್ವರಿಬೇರು (ಅಶ್ವಚಿ.೯೮-೧೦). ಹಿಟ್ಟಳಿಕೆ: ಹಿಡಿಹಿಡಿಕೆ ಬೀಜ ಹಿಟ್ಟಳಿಕನ ಬೀಜ ಹಂಗರಬೀಜ . . . ಚಿತ್ರಮೂಲ ಈ ೫೦ ಬಗೆಯನ್ನು ಸಮಾನಂಗೊಂಡು ಚೆನ್ನಾಗಿ ಕುಟ್ಟಿ ಚೂರ್ಣವಂ ಮಾಡಿ ಇರಿಸಿಕೊಂಡು ತೆಗೆದುಕೊಂಬುದು (ಎವೈವಿ.೪೨). ಹಿಟ್ಟುಳಿಕೆ: "ಅಶ್ಮಘ್ನಃ- ಹಿಟ್ಟುಳಿಕ; ದೊಡ್ಡೀಪತ್ರ" (ಓಷಧಿ. ೩). ಹಿಟ್ಟುಳಿಕೆ: "ಅರ್ಕಪುಷ್ಪಿ - ಚಿಟುಕೆ; ಹಾಲೆ; ಹಿಟ್ಟುಳಿಕೆ" (ಓಷಧಿ. ೬). ಹಿಟ್ಟುಳುಕ: ಕಡವದ ಬೇರು, ಚನ್ನೆಗ್ಗಿಲು, ಹಿಟ್ಟುಳುಕನ ಬೇರು, ಇವಂ ಹಸುವಿನ ಹಾಲೊಳರೆದು ಶರ್ಕರೆವೆರಸಿ ಮೂರುದಿನಂ ಕೊಳ್ಳಲು ಕಲ್ಲುಕಟ್ಟು, ಮೂತ್ರಕೃಚ್ಛ್ರ ಸಹ ಮಾಣ್ಗುಂ (ಸಕವೈ. ೩೭೯). [?]

ಹಿಟ್ಟು 'ಪಿಟ್ಟು' ನೋ.

ಹಿಟ್ಟುಂಗುಟ್ಟು 'ಪಿಟ್ಟುಗುಟ್ಟು' ನೋ.

ಹಿಟ್ಟುಕಾರ 'ಪಿಟ್ಟುಕಾರ' ನೋ.

ಹಿಟ್ಟುಕಾಱಿ 'ಪಿಟ್ಟುಕಾರ' ನೋ.

ಹಿಟ್ಟುಗಲ್ಲು (ನಾ). ಒಂದು ಬಗೆಯ ಮೃದುವಾದ ಕಲ್ಲು: ದಕ್ಷಿಣಭಾರತದ ಪಶ್ಚಿಮತೀರದಲ್ಲಿ ಕೆಲವು ಕಡೆ ಲ್ಯಾಟರೈಟ್ ಎಂಬ ಹಿಟ್ಟುಗಲ್ಲಿನ ಮಣ್ಣು ಆವರಿಸಿದೆ. ಇದು ನೀರಾವರಿಗೆ ಹೇಳಿಸಿದ್ದಲ್ಲ (ಶಿಲ್ಪನಾ. ೩೭೨). [ಹಿಟ್ಟು (< ಪಿಟ್ಟು) + ಕಲ್ಲು (< ಕಲ್[3])]

ಹಿಟ್ಟುಗಳೆ (ಕ್ರಿ). ಪುಡಿಯಾಗುವಂತೆ ಮಾಡು; ಹಿಟ್ಟಾಗಿಸು: ತಸ್ಮಂ ಮಟ್ಟವಿಸದಿದಿರಿಟ್ಟ ಮುಕುರವ ಹಿಟ್ಟುಗಳಿದುದಱಿಂದಲೇಂ ಫಲ (ಸದ್ಗುರು. ೯ ೫೫).

[ಹಿಟ್ಟು (< ಪಿಟ್ಟು) + ಕಳೆ[1]]

ಹಿಟ್ಟುಗುಟ್ಟು 'ಪಿಟ್ಟುಗುಟ್ಟು' ನೋ.

ಹಿಟ್ಟುದೆಱೆ (ನಾ). ಒಂದು ಬಗೆಯ ತರಿಗೆ: ಪಂಚಕ ಆರುವಣ ಹಿಟ್ಟುದೆಱೆ . . . ಯಿಂತಿನಿತುವಂ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಶಾಸಾ. XX, ೧೩೭-೩೭; 1186).

[ಹಿಟ್ಟು (< ಪಿಟ್ಟು) + ತೆಱೆ[3]]

ಹಿಟ್ಟುದೋಱು (ಕ್ರಿ). ಪುಡಿ ಪುಡಿಯಾಗು: ಹಿಟ್ಟುದೋಱಿತು ತೇರು ಬಳಿಕವನಿಟ್ಟು ನಿಟ್ಟಿ ಮುಸುಂಡಿ ಮುದ್ಗರ ಪಟ್ಟಿ ಪರಿಘ ಪರಶ್ವಧಾದಿ ಮಹಾಯುಧಂಗಳಲಿ (ತೂರಾ. ೫-೬-೨೬). [ಹಿಟ್ಟು (< ಪಿಟ್ಟು) + ತೋಱು]

ಹಿಟ್ಟುನೆಲ್ಲಿ (ನಾ). ಒಂದು ಬಗೆಯ ನೆಲ್ಲಿ; (ಹಿಟ್ಟಿನಂತೆ) ಮೃದುವಾಗಿರುವ ನೆಲ್ಲಿಯ ಕಾಯಿ : ಉದಕದೊಳು ಹಿಟ್ಟುನೆಲ್ಲಿಯ ಕಾಯ್ಗಳಂ ಪಾಕಿ ಕುದಿಗೊಳಿಸಿ ಬಸಿದು . . . ಮಂತೆಯದ ಚೂರ್ಣಸಹಿತ ಸಾಸುವೆಗಯರಿಸಿನವಿಕ್ಕಿ ಹದನಾಗಿಯರೆದದಂ ಕಲಸಿಯೆಣ್ಣೆಯ ಬಡಲು ಹಿರಿದಾಗಿ ಸವಿವಡೆದುದು (ಸೂವಶಾ. ೬-೨೦).

[ಹಿಟ್ಟು (< ಪಿಟ್ಟು) + ನೆಲ್ಲಿ]

ಹಿಟ್ಟುಬಳಪ (ನಾ). ಪಾತ್ರೆ ಮಾಡಲು ಉಪಯೋಗಿಸುವ ಒಂದು ಬಗೆಯ ಮೃದುವಾದ ಕಲ್ಲು; ಮೇಲ್ಮೈ ಕಣಕಣವಾಗಿರುವ ಒಂದು ಬಗೆಯ ಬಳಪದ ಕಲ್ಲು; ಮರಿಗೆಕಲ್ಲು: (ಪ). [ಹಿಟ್ಟು (< ಪಿಟ್ಟು) + ಬಳಪ]

ಹಿಟ್ಟುಮಟ್ಟಿ (ನಾ). (ಹಿಟ್ಟಿನಂತೆ) ಮೃದುವಾಗಿರುವ ಮಣ್ಣು: ನೆಲದ ಹೊಟ್ಟೆ ಬದುಕ ನೋಡು ಗಟ್ಟಿಕಲ್ಲು ಹಿಟ್ಟುಮಟ್ಟಿ ಪದರು ಗುಂಡು ದುಂಡಿ ಬಂಡೆ (ಪುರ್ವಕಾ. ೧೩-೨). [ಹಿಟ್ಟು (< ಪಿಟ್ಟು) + ಮಟ್ಟಿ[1]]

ಹಿಟ್ಟುಳಿಕ 'ಹಿಟ್ಟಳಿಕೆ' ನೋ.

ಹಿಟ್ಟುಳಿಕೆ 'ಹಿಟ್ಟಳಿಕೆ' ನೋ.

ಹಿಟ್ಟುಳುಕ 'ಹಿಟ್ಟಳಿಕೆ' ನೋ.

ಹಿಟ್ಟೆಲೆ (ನಾ). ಒಂದು ಬಗೆಯ ಸಸ್ಯ: ಹೆಜ್ಜಾಲ, ಹಿಟ್ಟೆಲೆ, ಗುನ್ನಾಮದ ಪಟ್ಟಿಬಳ್ಳಿ (ಮೃಡಿಗಿ.೩೩-೬೩೧). [? + ಎಲೆ[1]]

ಹಿಟ್ಟೆಸರು (ನಾ). ರಾಗಿಯ ಮುದ್ದೆಯನ್ನು ಮಾಡಲು ಕುದಿಯಲು ಇಡುವ ನೀರು: ಒಲೆಯ ಮೇಲೆ ಹಿಟ್ಟೆಸರಿಡು (ರೂಢಿ).

[ಹಿಟ್ಟು (< ಪಿಟ್ಟು) + ಎಸರು[2] (< ಎಸರ್)]

ಹಿಡ, ಹಿಡಿ[4] (ನಾ). ೧. ವೃಷಣ: 'ಹಿಡಬಡಿ' ಪರಾ. ೨. ವೀರ್ಯಗುಂದಿಸುವಿಕೆ; ಶಕ್ತಿಗುಂದಿಸುವಿಕೆ: ಹಿಡ (Castration) - ವಿಶಾಲದೃಷ್ಟಿಯಿಂದ ಹೇಳುವುದಾದರೆ ಒಂದು ಕೀಟದಲ್ಲಿ ವೃದ್ಧಿಹೊಂದಿದ ಜಂಪತಿಗಳ (Mature gametes) ಉತ್ಪತ್ತಿಯನ್ನು ಯಾವುದೇ ಕಾರಣದಿಂದ ಪೂರ್ತಿ ಅಥವಾ ಸ್ವಲ್ಪ ಪ್ರತಿಬಂಧಿಸುವುದು (ಕೀಜಿ. ೧೧೬). **ಹಿಡಿ[4]**: ೨. 'ಹಿಡಿಯಿಸು', 'ಹಿಡಿಹೋರಿ' ಪರಾ. [< ಹಿಡುಕು[1]]

ಹಿಡಗಲು, ಹಿಡಗಿಲು, ಹಿಡುಗಲು (ನಾ). ಕಸಬರಲು; ಕಸಬರಿಗೆ; ಪೊರಕೆ: ಹಿಡಗಲು ಕೂಡಾ ಯಾವನೂ ಹಿಡಿಯುತ್ತಿರಲಿಲ್ಲ (ಕಲಿಕ.೬). **ಹಿಡಗಿಲು**: "ಮಾರ್ಜನಿ-ಹಿಡಗಿಲು" (ಬಾಪಚೀ.೨-೬-೯). **ಹಿಡುಗಲು**: ಪರಿಮಳ ಹಿಡುಗಲಿನಿಂದ ಹಜಾರವನ್ನು ಗುಡಿಸುವುದಕ್ಕೆ ಬಂದಳು (ಚಂಗಾಳ್ವ. ೧೩೬). [< ಹಿಡಿ[2]]

ಹಿಡಗಿಲು 'ಹಿಡಗಲು' ನೋ.

ಹಿಡಹಿಡಕೆ 'ಹಿಡಿಹಿಡಿಕೆ' ನೋ.

ಹಿಡಿ[1] 'ಪಿಡಿ[1]' ನೋ.

ಹಿಡಿ[2] 'ಪಿಡಿ[2]' ನೋ.

ಹಿಡಿ[3] 'ಪಿಡಿ[3]' ನೋ.

ಹಿಡಿ[4] 'ಹಿಡ' ನೋ.

ಹಿಡಿಂಬಾಂತಕ (ನಾ). ಹಿಡಿಂಬನೆಂಬ ರಾಕ್ಷಸನನ್ನು ಕೊಂದವನು; ಭೀಮ: ಕುರುಕ್ಷೇತ್ರದೊಳ್ ಪ್ರಳಯೋಗ್ರಾಂತಕನಂತಗುರ್ವನೊಳಕೊಂಡಿರ್ದಂ ಹಿಡಿಂಬಾಂತಕಂ (ಗದಾಯು. ೧-೨೫). [ಸಂ.]

ಹಿಡಿಕಟ್ಟು 'ಪಿಡಿಗಟ್ಟು' ನೋ.

ಹಿಡಿಕಳ (ನಾ). ಒಂದು ಮುಷ್ಟಿಯಷ್ಟು ಆಹಾರ; ಹಿಡಿಕೂಳು: ಕಡ ತಂದನಲ್ಲದ ಹಿಡಿಕಳವ ಕದ್ದೆನೇ ತಡವಲುಱಿ ಬೈದು ತೆಗದಾನು ಸಾಲಿಗನು ನಡುವ ಜಗಳವನು (ಸರ್ವಜ್ಞ. ೧೪೦೦). [ಹಿಡಿ[2] (ಪಿಡಿ[2]) + ಕಳ, (IP < ಸಂ. ಕವಲ)]

ಹಿಡಿಕಿಸು 'ಪಿಡಿಕೆಯ್ಸು' ನೋ.

ಹಿಡಿಕು[1] 'ಹಿಡುಕು' ನೋ.

ಹಿಡಿಕು[2] (ನಾ). ೧. ಹಿಡಿತ; ಹಿಡಿಯುವಿಕೆ: ಹಿಡಿದಡೆ ಹಿಡಿಕಿಗ ಬಾರದ ಬಟ್ಟಡೆ ಹರವರಿಯಲ್ಲಿ ಹರಿಯದೆ . . . ಇಪ್ಪ ಉಭಯಸ್ಥಲವನು ಅಱಿತಲ್ಲಿ ವಿಶ್ವಸ್ಥಲ ನಾಶವಾಗಿ ಸದ್ಯೋಜಾತಲಿಂಗವು ವಿನಾಶವಾಗಬೇಕು (ವಚಶಾ. I. ೧೨೦). ೨. ಜಿಪುಣತನ; ಜೀನತನ: ಅಡವಿಯೊಳು ನೀನೆನಗೆ ಕಡುಕಷ್ಟಪಡಿಸುತಲಿ ಒಡನೆ ಕರತಂದೀಗ ಹಿಡಿಕ ಮಾಪುವೆಯಾ (ಪಮಚ. ೮೬). [ಹಿಡಿ[2] (< ಪಿಡಿ[2]) + -ಕ್ಕು]

ಹಿಡಿಕುಂಟೆ (ನಾ). ಪೊರಕೆ; ಕಸಬರಿಗೆ: ಒಂದು ಮನೆಯೊಳಗೆ ಅಮೂಲ್ಯವಾದ ಎಷ್ಟೋ ಒಡವೆಗಳಿರುತ್ತವೆ. ಆದರೆ ಒಂದು ಕಲಸಕ್ಕೆ ಹಿಡಿಕುಂಟೆಯೇ ಬೇಕಾಗುತ್ತದೆ (ಲೋಕಕ. ೨೫೫); ಹಿಡಿಕುಂಟೆ ಕೊಟ್ಟು ಗುಡಿಸು ಎನ್ನುತ್ತೇವೆ (ಕೋಲ್ಮಂಚು. ೩೨).

[ಹಿಡಿ[2] (< ಪಿಡಿ[2]) + ಕುಂಟೆ[1]]

ಹಿಡಿಕೂಳು (ನಾ). ಒಂದು ಮುಷ್ಟಿ ಅನ್ನ,—ಆಹಾರ: ಹಿಡಿಕೂಳು ಬಡವನಿಗೀಯುವೊಡದ ಸಾಕು ಮತ್ತಿನ ತಪವೇಕೆ ಬೇಕು (ಇಂಚಾಪ. ೧೫೫-೬೧).

[ಹಿಡಿ[2] (< ಪಿಡಿ[2]) + ಕೂಳು[2] (< ಕೂಟ್[1])]

ಹಿಡಿಕೆ 'ಪಿಡಿಕೆ' ನೋ.

ಹಿಡಿಕೆಮೊಲೆ (ನಾ). ಮುಷ್ಟಿಯ ಗಾತ್ರದ ಸ್ತನ: ಮೊಳೆಯ ಮೊಲೆಯಡಿಕೆ ಮೊಲೆಯಮಳಕಾEಯಾಮಳಕತಿಮೊಲ ನಿಂಬಿಮೊಲೆಯು ಬೆಳುಗಾಯ ಮೊಲೆ . . . ಹಿಡಿಕೆಮೊಲೆ ಹೊಚ್ಚುಮೊಲೆಯು (ಸವಮೋ.೨೪-೧೪). [ಹಿಡಿಕೆ (< ಪಿಡಿಕೆ) + ಮೊಲೆ[1]]

ಹಿಡಿಕೆಯ್ಸು 'ಪಿಡಿಕೆಯ್ಸು' ನೋ.

ಹಿಡಿಕ್ಕಿಸು 'ಪಿಡಿಕೆಯ್ಸು' ನೋ.

ಹಿಡಿಕೋಲು 'ಪಿಡಿಗೋಲ್' ನೋ.

ಹಿಡಿಖಂಡ 'ಪಿಡಿಖಂಡ' ನೋ.

ಹಿಡಿಖಂಡಂಗೊಯ್ 'ಪಿಡಿಖಂಡಂಗೊಯ್' ನೋ.

ಹಿಡಿಖಂಡಗೊಯ್ಯು 'ಪಿಡಿಖಂಡಂಗೊಯ್' ನೋ.

ಹಿಡಿಗಣ್ಣೆವಲೆ (ನಾ). ಹಿಡಿಯಿಂದ ಕೂಡಿದ ಹಗ್ಗದ ಬಲೆ: ಕೀಸುವಲೆ ಕೊಂಬುವಲೆ ಹಿಡಿಗಣ್ಣೆವಲೆಗಳಂ ಸೂಸುತೆಲ್ಲಿಡೆಯೊಳ್ಕಿತಪ್ಪ ಕಾಡೂಡೆಯರ ವಿಲಾಸಮಂ ಕಂಡು (ರುಕ್ಮಾಂಗ. ೧೦-೧೯). [ಹಿಡಿ[2] (< ಪಿಡಿ[2]) + ಕಣ್ಣೆವಲೆ]

ಹಿಡಿಗತ್ತಿಮಾನ್ಯ (ನಾ). ಬಿಚ್ಚುಗತ್ತಿಯ ಮನ್ನೆಯ,— ಬಂಟ: ಕಡಿದಾರ ಕಡಿದಾರ ಒಡಿಗತ್ತಿಮಾನ್ಯಾನ ಕಡಿಯ ಹುಬ್ಬಳ್ಳಿ ಸರಜ್ಯಾನ್ನ ಕೋ ಮಲ್ಲಪ್ಪ ಕಡಿದಾರ ಕಲ್ಲಗಸಿ ಇದರೀಗ (ಲೋಕಗೀ. ೨೫೫). [ಹಿಡಿಗತ್ತಿ[3] + ಮಾನ್ಯ]

ಹಿಡಿಗಲ್ಲು 'ಪಿಡಿಗಲ್' ನೋ.

ಹಿಡಿಗವಡಿಕೆ (ನಾ). ಒಂದು ಬಗೆಯ ಕವಡೆಯಾಟ: ಗೋಪನಂದನರನು ಕೂಡಿ ಹಿಡಿಗವಡಿಕೆ ಒಳ್ಳು ಲಗ್ಗೆ ಸಡುಗಡು ಮೊದಲಾದ ಮಕ್ಕಳಾಟವ ಕಡುಸಡಗರದಿಂವಾಡುತಿಹಸು (ನೇಮಿಸಂ. ೧೫-೧೧೭). [ಹಿಡಿ[2] (< ಪಿಡಿ[2]) + ಕವಡಿಕ್ಕೆ]

ಹಿಡಿಗವಡೆ (ನಾ). = ಹಿಡಿಗವಡಿಕೆ: ಬಾಲಕರು ನೂಱುಱು ಮಳ್ದರು . . . ಆಳನೇಱಿಕೆ ಹಿಡಿಗವಡೆ ಗುಱಿಯೊಳು ಚೆಂಡಿನ ಹೂಣಕೆ ಚಿಣಕೋಲಾಳು ಗೊತ್ತಿನ ದಂಡೆಯನೆ ನಾನಾವಿನೋದದಲಿ (ಕುವ್ಯಾಅ. ೬-೧); ಹಿಡಿಗವಡೆ ಸಡುಗುಡಂ

ಸಂಡು ಜಿಗಿಹಲ್ಲ ಬೊಹರಿಗಳಾಟದಲ್ಲಿ ಮನಗೊಂಡಾಡಿ ಬೆಳೆದು ಜವ್ವನನಾಗಿ ಬಾಳ್ತೆಯಿಲ್ಲದೆ ಕೆಟ್ಟು ಹೋದೆಯಲ್ಲಾ (ಸಮ್ಮೆ.೧೦-೯); ಬೊಗರಿ ಗದುಗು ಸಡುಗುಡು ಲಗ್ಗೆ ಪಡಿಗವಡೆಗಳವು ರಾಜಪುತ್ರರಿಗೆ ಬಗೆಯಲುಚಿತವೆ (ಕುರಾಸಾಂ. ೩೦-೧೭). [ಹಿಡಿ$_2$ (< ಪಿಡಿ$_2$) + ಕವಡೆ$_2$]

ಹಿಡಿಗುಟ್ಟು (ಕ್ರಿ). ಮುಷ್ಟಿಯಿಂದ ಕುಟ್ಟು: ಒಡಲೊಡೆದ ತರನಾಗ ಬೆದರಿ ಬೆಚ್ಚಳವೋಗಿ ಹಿಡಿಗುಟ್ಟುತೋಡಿದಂ ಕವಿಯ ಕಾಲ್ಮಾಡಿ (ಕಾಲೂರ. ೮೨-೧೫೪).

[ಹಿಡಿ$_2$ (< ಪಿಡಿ$_2$) + ಕುಟ್ಟು$_1$]

ಹಿಡಿಗುದಿಗೆ (ನಾ). ಹಿಡಿಕೆಯನ್ನುಳ್ಳ ದಪ್ಪನಾದ ಕೋಲು,—ದೊಣ್ಣೆ: ಹಿಡಿಗುದಿಗೆ ಕಲುಗುಂಡು ಭಲ್ಲೆಯ ಖಡುಗ ಕುಂತ ಕುಠಾರ ಮುಸಲದೊಳೊಡನೊಡನೆ ಬಡಿಬಡಿಸುತೆಬ್ಬಿಸಿದರು ರಣೋತ್ಸವಕೆ (ಅಸಂಶಾ. ೪-೫೫-೨೯).

[ಹಿಡಿ$_2$ (< ಪಿಡಿ$_2$) + ಗುದಿಗೆ]

ಹಿಡಿಗುದುರೆ 'ಪಿಡಿಗುದುರೆ' ನೋ.

ಹಿಡಿಗೂಟ (ನಾ). (ಬೀಸುವ ಕಲ್ಲಿನ ಮೇಲ್ಭಾಗಕ್ಕೆ ಇರುವ) ಹಿಡಿದು ಕೊಳ್ಳಲು ಅನುಕೂಲವಾಗುವಂತೆ ಇರುವ ಗೂಟ,— ಬೆಣೆ: ಬದಿರ ಬೆಟ್ಟದ ಮೇಲೆ ಚದುರ ರಾಗಿಕಲ್ಲು ಮದನಾರಿನೆಂಬೊ ಹಿಡಿಗೂಟ ಹಿಡುಕೊಂಡು ಶಿವನ ಪಾಡ್ಯಾಳೆ ಸಿರಿಗೌರಿ (ನಾಪದ. ೬೨). [ಹಿಡಿ$_2$ (ಪಿಡಿ$_2$) + ಗೂಟ (< ಗೂಂಟ)]

ಹಿಡಿಗೆ (ನಾ). ದೊಡ್ಡ ಬುಟ್ಟಿ; ಕುಕ್ಕೆ: ಹಿಡಿಗ ಜಲ್ಲಡಿ ಪಂಚಪಾತ್ರ ಸೋಟಕ ಬುರುಡೆ ಕಡುಬು ಮುಚ್ಚಳ ಮಿಳ್ಳೆ ಕುಡಿಕೆ . . . ಎಲ್ಲವುಂ ಪೊಡವಿಪತಿ ಬಂಡಿಕುದುರೆಗಳೆತ್ತುಗಳ ಮೇಲೆ ಬಿಡದೇರಿ ಕಳುಪಿದಂ (ಸಿದ್ಧಕಾ. ೧೩-೪೪).

[IP ಇದು 'ಹಡಿಗೆ' ಎಂಬುದರ ಅವಲಿಖಿತವಿರಬಹುದು]

ಹಿಡಿಗೆಯ್$_1$ (ಕ್ರಿ). ಮುಷ್ಟಿಯನ್ನು ಬಿಗಿಗೊಳಿಸು,— ಮುಚ್ಚು: ''ಹಿಡಿಗಯ್ದು [ಪಾಠಾಂ. ಹಿಡಿಕಿಸಿದ, ಹಿಡಿಗ್ಕೆದ] ಕೈ ಮುಷ್ಟಿಯೆನಿಸಿಕ್ಕು'' (ಮಂಗರಾ. ೯೫-೯).

[ಹಿಡಿ$_2$ (< ಪಿಡಿ$_2$) + ಕೆಯ್$_1$]

ಹಿಡಿಗೆಯ್$_2$, ಹಿಡಿಗ್ಕೆ (ನಾ).೧. ಮುಚ್ಚಿದ ಕೈ; ಬಿಗಿಹಿಡಿದ ಮುಷ್ಟಿ: (೬). ೨. (ಆಲಂ) ಅಧೀನ; ವಶ: ಹಿಡಿಗ [ಪಾಠಾಂ. ಗ] ಯ್ಕೊಳಿರ್ದಸುರರಿಪು ಪಾರ್ಥನಂ ಕರದು ತುಡು ಮಹಾಸ್ತ್ರವನೆಂದು ನೇಮಿಸಲ್ (ಜೈಮಿಭಾ. ೨೫-೫೪). **ಹಿಡಿಗ್ಕೆ**: ೩. ಹಿಡಿಯುವ ಸಾಧನ; ಹಿಡಿಕೆ; ಕಾವು: ''(ಕಡತದ ಯಂತ್ರದಲ್ಲಿ) ಕಡಯ ಬೇಕಾದ ವಸ್ತುವನ್ನು ಭದ್ರವಾಗಿ ಹಿಡಿದುಕೊಳ್ಳುವ ಸಲಕರಣೆ: ಹಿಡಿಗ್ಕೆ'' (chuck. ಇಂಕಸ).

[ಹಿಡಿ$_2$ (< ಪಿಡಿ$_2$) + ಕೆಯ್$_2$]

ಹಿಡಿಗ್ಕೆ 'ಹಿಡಿಗೆಯ್$_2$' ನೋ.

ಹಿಡಿಗೊಡು (ಕ್ರಿ). ವಶಕ್ಕೆ ಕೊಡು; ಸ್ವಾಧೀನಪಡಿಸು: ಧರೆಯೊಳೀ ಹೆಣ್ಣು ರಾಕ್ಷಸಿಯಲ್ಲದಿನ್ನುಂಟೆ . . . ನೋಡಿದರೆ ಮನವ ಮಾತಾಡಿದರೆ ಧನವನೊಡಗೂಡಿದರೆ ಪ್ರಾಣಗಳ ಸೆಳೆದುಕೊಳ್ಳುವುದು ಮಾಡಬಾರದನೆ ಮಾಡಿಸಿ ಕಡೆಗೆ ಯಮಭಟರ ತಾಡನೆಗೆ ಹಿಡಿಗೊಟ್ಟು ಕೊಲ್ಲಿಪುದರಿಂದ (ಕೃಕವ. ೨-೧೦-೧). [ಹಿಡಿ$_2$ (< ಪಿಡಿ$_2$) + ಕೊಡು$_1$]

ಹಿಡಿಗೋಲು 'ಪಿಡಿಗೋಲ್' ನೋ.

ಹಿಡಿಚಂಡು (ನಾ). (ಢಕ್ಕೆ ಮುಂತಾದ ವಾದ್ಯಗಳನ್ನು ಬಾರಿಸುವ)ತುದಿಯಲ್ಲಿ ಚೆಂಡಿನಾಕಾರವುಳ್ಳ ಕೋಲು,— ವಾದನದಂಡ: ಕಾಯವೆಂಬ ಢಕ್ಕೆಯ ಮೇಲೆ ಜೀವವೆಂಬ ಹಿಡಿಚಂಡು ಬೀಳೆ (ವಚಶಾ. I, ೧೪೪).

[ಹಿಡಿ$_2$ (< ಪಿಡಿ$_2$) + ಚಂಡು$_1$ (< ಸೆಂಡು)]

ಹಿಡಿಜೋಳ (ನಾ). ಒಂದು ಬಗೆಯ ಜೋಳ; ದೊಡ್ಡ ಜೋಳ: (೬).

[ಹಿಡಿ$_0$ + ಜೋಳ]

ಹಿಡಿತ 'ಪಿಡಿತ' ನೋ.

ಹಿಡಿತಡೆ (ನಾ). ಅಂಕೆ; ಹತೋಟಿ: ರೋಗಿ ಬಯಸಿತ್ತ ಪೈದ್ಯ ಕೊಡುವಂತೆ . . . ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ ಎನಿಸುವುದು ಹಿಡಿತ [ಪಾಠಾಂ. ದ] ಡೆ ಇಲ್ಲ (ಮಡಿಮಾ. ೨೫-೩೫); ಮುಚ್ಚಿ ಮುಚ್ಚಿ ಒಯ್ದು ಭಿಕ್ಷಾದವರಿಗೆ ಹಾಕಿದರ, ಸಂಸಾರ ಹಿಡಿತಡೆಯೊಳಗ ಬಾ ಅಂದ್ರ ಹ್ಯಾಂಗ ಬಂದೀತು (ಧರ್ಮಸಿ. ೧೩೩). [ಹಿಡಿ$_2$ (< ಪಿಡಿ$_2$) + ತಡೆ$_2$]

ಹಿಡಿತರ್ 'ಪಿಡಿತರ್' ನೋ.

ಹಿಡಿತರಿಸು 'ಪಿಡಿತರಿಸು' ನೋ.

ಹಿಡಿತರು 'ಪಿಡಿತರ್' ನೋ.

ಹಿಡಿತೆ 'ಪಿಡಿತೆ' ನೋ.

ಹಿಡಿದಪ್ಪಲೆ (ನಾ). (ಹಿಡಿಯಲು) ಅನುಕೂಲವಾಗುವಂತೆ ಹಿಡಿಕೆಯಿರುವ ತಪ್ಪಲೆ,— ಪಾತ್ರೆ: ಅವರ ಮನೆಯಲ್ಲಿ ಹಿಂದಿನ ಕಾಲದ ತೊಕವಾದ ಹಿಡಿದಪ್ಪಲೆಗಳು ತುಂಬಾ ಇವೆ (ರೂಢಿ). [ಹಿಡಿ$_2$ (< ಪಿಡಿ$_2$) + ತಪ್ಪಲೆ]

ಹಿಡಿನಾಯಿ (ನಾ). ಕ್ರೂರಪ್ರಾಣಿಗಳನ್ನು ಬೇಟೆಯಾಡಲು ತರಪೇತು ಪಡೆದಿರುವ ನಾಯಿ: ಹಿಡಿಯೆರಳೆ ಬೆಳ್ಳಾರ್ಪಟಂ ಹಿಡಿನಾಯಿಗಳು ಹೆಗಲ ಸಾಳುವಂ . . . ವರಿಪರಿಯ ಹಕ್ಕಿವೆರಸದವಿಗಂತಕರಂತೆ ನಡೆವ ಶಬರರ ಕಂಡನು (ಪೋಮಚ. ೩-೪).

[ಹಿಡಿ$_1$ (< ಪಿಡಿ$_1$) + ನಾಯಿ (< ನಾಯ್)]

ಹಿಡಿಬಂದಿ (ನಾ). ೧. ಸೆರೆಗೆ ಸಿಕ್ಕಿದವನು; ಸೆರೆಯಾಳು. ೨. ಸೆರೆಗೆ ಸಿಲುಕುವಂತಹುದು: ನೋಟ ಸುತ್ತಲು ಬೇಹುದೇ ಹರಿದಾಟವಗಲಕೆ ಬಳಕೆಯಲಿ ಮಾತಾಟ ಸುಳಿವಿನೊಳಗ್ಗಳದ ಹಿಡಿಬಂದಿ[ಪಾಠಾಂ. ಧಿ] ಹರಹಿನಲಿ . . . ಕೂಟದಲಿ ಕುಹುಪಾಗಿ ಮಿಗೆ ನಿರ್ಲೋಟಿಸುವ ನಿಜ ದಿಟ್ಟಿ ಬೊಮ್ಮವಿದು (ಕುವ್ಯಾಸ. ೯-೧೭); ಕಳವಳಿವು ಹಿಡಿಬಂದಿ ಜೂಜುಗಳಳೊಳಗವತೆಯನ್ಯಾಯವೆಂಬೀ ಬಳಕೆಯಲಿ ಕೀಳ್ಪೊಣ್ಮೊಳೊಂದಿರೆ ಕಾಮವಶತೆಯಲಿ ಕಳೆದವಂಭತ್ತೆಂಟು ವರ್ಷಂಗಳು (ನಭಾಗ. ೬-೧-೧೫).

[ಹಿಡಿ$_2$ (< ಪಿಡಿ$_2$) + ಬಂದಿ$_1$]

ಹಿಡಿಬಿಟ್ಟಿ (ನಾ). ಅಧೀನತೆಗೆ ಒಳಗಾಗಿಸುವುದು: ಕೊಡಬಹುದೇ ಮಗಳ ಹಿಡಿಬಿಟ್ಟಿಯನೆ ಮಾಡಿ ಹೀಗೆ ಸಮುದ್ರರಾಯ (ಪುರಂದ. ೩-೬೭ ಅನುಪಲ್ಲವಿ); ಕುಡೆನಂದುದಿಲ್ಲಮ್ಮ ಭರತೇಶ ತಾನಿಷ್ಟು ಪೊಡವಿಗಗ್ಗಳನಾದನೆಂದು ಹಿಡಿಬಿಟ್ಟಿಯೊಳು ಪೆಣ್ಣು ಬೇಡಿದರದಕೆ ನಾನೊಡಬುಟ್ಟುದಿಲ್ಲ (ಭರಚ. ೩೭-೪೪). [ಹಿಡಿ$_1$ (< ಪಿಡಿ$_1$) + ಬಿಟ್ಟಿ$_1$]

ಹಿಡಿಬುಗುರಿ (ನಾ). ಒಂದು ಬಗೆಯ ಬುಗುರಿ; ಮುಷ್ಟಿಗಾತ್ರದ ಬುಗುರಿ: ಸುಜನವಂದ್ಯನ ರಥವ ಹಿಡಿದನಿಲಜನು ಮುಂಗ್ಗೊಂಡು ಪಡೆ ಗಜಬಜಿಸೆ ನಭಕೀಡಾಡಿದನು ಹಿಡಿಬುಗುರಿಯಂದದಲಿ (ಕುವ್ಯಾದ್ಯೋ. ೧೩-೧೩).

[ಹಿಡಿ$_2$ (< ಪಿಡಿ$_2$) + ಬುಗುರಿ (< ಬವರಿ)]

ಹಿಡಿಬೂದಿ (ನಾ). ಮುಷ್ಟಿಯಲ್ಲಿ ಹಿಡಿಯಬಹುದಾದಷ್ಟು ಬೂದಿ; ಒಂದು ಹಿಡಿ ಬೂದಿ: ಇನಿತಾಯ್ತೆ, ಹಿಡಿಮಣ್ಣು, ಹಿಡಿಬೂದಿ, ಆಳ ಬಾಳು ? ಬಡವನೋ, ಬಲ್ಲಿದನೊ, ದೊರೆಯೊ, ಹುಳುವೋ ಇನಿತೆ ಈ ಬಾಳು ? (ಪೂಂಗಳು. ೨೮-೨೩).

[ಹಿಡಿ$_2$ (<ಪಿಡಿ$_2$) + ಬೂದಿ]

ಹಿಡಿಮಂದಿ (ನಾ). ಕೆಲವೇ ಮಂದಿ; ಸ್ವಲ್ಪಜನ: ಹಿಡಿಮಂದಿಯ ಮತ್ತು ಅರಸೊತ್ತಿಗೆಯ ಸ್ವತ್ತಾಗಿದ್ದು ಪರೋಪಜೀವಿಯಾಗಿದ್ದ ಸಾಹಿತ್ಯ ಸರ್ವಸಾಮಾನ್ಯರ ಆಸ್ತಿಯಾದದ್ದಲ್ಲದೆ, ತಾಯಿನೆಲದಲ್ಲಿ ಬಲವಾಗಿ ಬೇರುಬಿಟ್ಟಿತು (ನಂಜುಂಡ. ೩೯); ಹಿಡಿಮಂದಿಯ ಭೋಗ ವೈಭವಗಳ ರಕ್ಷಣೆಗಾಗಿ ಕೋಟ್ಯಂತರ ಜನರ ರಕ್ತಶೋಷಣೆ ದುಃಖ ಸಂಕಟಗಳನ್ನು ಜಾಗರೂಕತೆಯಿಂದ ಬಚ್ಚಿಡುತ್ತಿದ್ದ . . . ಶ್ರೀಮಂತರಿಗೆ ಆಶ್ರಯ ಕೇಂದ್ರವಾಗಿದ್ದ ಸಮಾಜದ ಬಗ್ಗೆ ಅವನಲ್ಲಿ ಜುಗುಪ್ಸೆ ಜನಿಸಿತು (ಪುನರು. ೩೨೬).

[ಹಿಡಿ$_2$ (< ಪಿಡಿ$_2$) + ಮಂದಿ]

ಹಿಡಿಮಣ್ಣು (ನಾ). ಒಂದು ಮುಷ್ಟಿ ಮಣ್ಣು: ನನ್ನ ಕೈಯಿಂದಲೇ ಹಿಡಿಮಣ್ಣು ಹಾಕಿಸಿದ ಮೇಲೆ, ಎಲ್ಲರೂ ನಿಮ್ಮ ಮೇಲೆ ಮಣ್ಣು ಹಾಕಿ ಮುಚ್ಚಿ ಹೂಳಿದರು (ನಿಶಲು. ೨೫೫); ಎದೆಯೊಲುಮೆಯ ಚಿಲುಮೆಯ ಹೆಣ್ಣು ಮುಕ್ತಿಯ ಕಣ್ಣಿಗೆ ಹಿಡಿಮಣ್ಣು (ಪಾಂಚಜ. ೫೯-೨). [ಹಿಡಿ$_2$ (< ಪಿಡಿ$_2$) + ಮಣ್ಣು (< ಮಣ್)]

ಹಿಡಿಮಿಗವಕ್ಕಿ (ನಾ). ಬೇಟೆಯಾಡಿ ಹಿಡಿದ ಪ್ರಾಣಿ ಮತ್ತು ಪಕ್ಷಿ: ಹಿಡಿಮಿಗ ವಕ್ಕಿಯ ತುಂಡು ತುಂಡುಗಳನು ಸಡಿಲದೆ ಸೊಪ್ಪಿನೊಳ್ಬುದುಗಿದಡಿಗಿಕ್ಕಿ ಹೊತ್ತಪರನಿತಿನಿತೆಂಬುದ ಪಡಿಗಾಣ್ಪೊಡೆ ಶಕ್ಯವಲ್ಲ (ಮೋಹತ. ೧೯-೮೬).

[ಹಿಡಿ$_1$ (< ಪಿಡಿ$_1$) + ಮಿಗ + ಪಕ್ಕಿ]

ಹಿಡಿಮೃಗ (ನಾ). ಕ್ರೂರಪ್ರಾಣಿಗಳನ್ನು ಬೇಟೆಯಾಡಲು ಬಳಸುವ ಪ್ರಾಣಿ;

ದೀಹದ ಪ್ರಾಣಿ: ಹೆಸರ ನಾಯ್ಗಳ ಹಾಸ ಹಱಿದುಬ್ಬಸದಲುಳಿಗದವದಿರ ಹಿಡಿಮ್ಯಗ ಮಸಗಿದವು ಹದವಿಲುಗಳೊದೆದವು ಹೆದೆಯ ಹರವಿನಲಿ (ಕುವ್ಯಾಅ.೧೩-೨೧).

[ಹಿಡಿ$_1$ (< ಪಿಡಿ$_1$) + ಮ್ಯಗ]

ಹಿಡಿಮೊಲ (ನಾ). ಬೇಟೆಯಲ್ಲಿ ಆಕರ್ಷಣೆಗಾಗಿ ಉಪಯೋಗಿಸುವ ಮೊಲ; ದೀಹದ ಮೊಲ: ಅಶನವನುಂಡು ವ್ಯಸನಕ್ಕೆ ಹರಿದು ವಿಷಯಂಗಳೆಂಬ ಹಿಡಿಮೊಲಕ್ಕೆ ಸಿಲ್ಕಿ ಪಂಚೇಂದ್ರಿಯಂಗಳೆಂಬ ನಾಯಿಗಳಿಚ್ಛೆಗೆ ಹರಿದು . . . ನಾಯ ಸಾವ ಸಾವ ಅದ್ಯೈತಿಗಳಿರಾ (ಚನ್ನವ. ೪. ೧೯೯-೪೪೪); ಜೀಯ ಕೊಡು ವೀಳೆಯವನಾ . . . ಹರನಾರಾಯಣರು ತಾವಾಗಲೊಂದೇ ಘಾಯದಲಿ ಹಿಡಿತಹೆನು ಹಿಡಿಮೊಲನಂತೆ ತಾನೆಂದ (ತೂರರಾ. ೫-೫-೧೦). [ಹಿಡಿ$_1$(< ಪಿಡಿ$_1$) + ಮೊಲ]

ಹಿಡಿಮೊಲಂಗೊಳ್ (ಕ್ರಿ). ಬೇಟೆಯಲ್ಲಿ ದೀಹದ ಮೊಲವನ್ನು ಹಿಡಿಯುವಂತೆ ಹಿಡಿ: ಬೇಟುವಡೆ ಕೂಡೆ . . . ಸೌಂದರನ ಬಲವನೊರ್ಬುಳಿಮಾಡಿ ಗರ್ವಂಗಡಿಸಿ ಕಂಗಡಿಸಿ ಶಕುತಿಗಡಿಸಿ ಹಿಡಿವೊ[ಪಾಠಾಂ. ಮೂ]ಲಂಗೊಂಡೊಡೆಯುಚ್ಚಕೊಂಡು ನಂಬಿಯುಂ ತುಂಬುರನುಮುಳಿಯೆ (ನಂಬರ. ೧೮-೨೩೭). [ಹಿಡಿಮೊಲ + ಕೊಳ್$_1$]

ಹಿಡಿಯಂಬು 'ಪಿಡಿಯಂಬು' ನೋ.

ಹಿಡಿಯಕ್ಕಿ (ನಾ). ಒಂದು ಹಿಡಿ ತುಂಬುವಷ್ಟು ಅಕ್ಕಿ,— ಅಕ್ಷತೆ: ಮುತ್ತೈದೆವಂಗಳು ಸಿರಿಮುಡಿಯ ಪೂದಂಡೆಗಳೊಡನೆ ಹಿಡಿಯಕ್ಕಿದಳಿದು ಬಂದರು (ಮೋಪತ. ೧೭-೪೮). [ಹಿಡಿ$_2$ (<ಪಿಡಿ$_2$) + ಅಕ್ಕಿ$_1$]

ಹಿಡಿಯಾನೆ 'ಪಿಡಿಯಾನೆ' ನೋ.

ಹಿಡಿಯಾಳು 'ಪಿಡಿಯಾಳ್' ನೋ.

ಹಿಡಿಯಿಸು (ಕ್ರಿ). ವೀರ್ಯಗುಂದಿಸು; ಶಕ್ತಿಗುಂದಿಸು: "ಅರ್ಷಭ್ಯಃಯೆಂಬುದು ಹಿಡಿಯಿಸಲ್ಪಕ್ಕ ಹೋ(ಜೀ)ರಿ" (ಪಲಾಯು.೪೪-೧೦೯). [ಹಿಡಿ$_2$ (< ಹಿಡ) + - ಇಸು$_1$]

ಹಿಡಿಯೆರಲೆ, ಹಿಡಿಯೆರಳೆ (ನಾ). ಇತರ ಪ್ರಾಣಿಗಳನ್ನು ಬೇಟೆಯಾಡಲು ಆಕರ್ಷಣೆಗಾಗಿ ಬಳಸುವ ಜಿಂಕೆ; ದೀಹದ ಮೃಗ: ಗಿಡಗ . . . ಕರಿಕೋಣ ಹಿಡಿಯೆರಲೆಯ ಮೊತ್ತವನು ತಡೆಯದೆ ಕೊಂಡೆಯ್ತಂದರು ಬೇಟೆಯ ಕಡುಗಲಿಗಳು (ಕುರಾಸಾಂ.೨೭-೪೪). **ಹಿಡಿಯೆರಳೆ:** ಹಿಡಿಯೆರಳೆ ಬೆಳ್ಬಾರ್ಪಟಂ ಹಿಡಿನಾಯಿಗಳು ಹೆಗಲ ಸಾಳುವಂ ಬಂಡಿಯ ಹುಲಿ . . . ಪರಿಪರಿಯ ಹಕ್ಕಿವೆರಸಡವಿಗಂತಕರಂತೆ ನಡೆವ ಶಬರರ ಕಂಡನು (ಪೋಪಚ. ೩-೪). [ಹಿಡಿ$_1$ (< ಪಿಡಿ$_1$) +ಎರಲೆ]

ಹಿಡಿಯೆರಳೆ 'ಹಿಡಿಯೆರಲೆ' ನೋ.

ಹಿಡಿವಡೆ 'ಪಿಡಿವಡೆ' ನೋ.

ಹಿಡಿವತ್ತಿ, ಹಿಡಿಹತ್ತಿ (ನಾ). ೧. ಒಂದು ಮುಷ್ಟಿ ತುಂಬುವಷ್ಟು ಹತ್ತಿ,- ಅರಳೆ: ಹತ್ತಿಯ ಪಸಾರಕ್ಕೆ ಹಿಡಿವತ್ತಿಯ ಕೊಟ್ಟರೆ (ಮುಂಬಾ. X, ೨೬೯-೭೪; 1229). **ಹಿಡಿಹತ್ತಿ:** ೨. (ಆಲಂ) ನಿಷ್ಪ್ರಯೋಜಕ: ಜಗದಿ ಮೂರುವಿಧದ ನರರಿಹರು; ಮೊದಲವರಕ್ಕದಂತೆ ಹೂವುಂಟು ಹಣ್ಣಿಲ್ಲ ಗಳಪವೆ ವಿನಾ ಕೆಲಸವನೆ ಹಿಡಿಹತ್ತಿ! (ಪಚ್ಚರ. ೭-೧೦೫). [ಹಿಡಿ$_2$ (< ಪಿಡಿ$_2$) + ಪತ್ತಿ$_1$(< ಪಲ್ತಿ)]

ಹಿಡಿವಸುಗೆ (ನಾ). ವಶಕ್ಕೊಳಪಟ್ಟ ವಿಭಾಗ (?): ಶ್ರೀ ಮಾರ್ಕ್ಕಣ್ಡೇಶ್ವರದೇವರ ಶ್ರೀಪಾದಸನ್ನಿಧಾನದಲು ಶಿವಾನನ್ತಯೋಗಿನಿವೇದ್ಯಶಾಲೆಯಂ ಮಾಡಿ [ಸೂ]ರಲಲು ತೊಳಹನ ಕಯ್ಯಲೂ ಬಿ[ಡಾ]ರ್ವ್ಯರ ಮಾಗ ಹಿಡಿವ[ಸುಗೆ] ಬತುವ ಬಿದಿರ ಗದ್ದೆಯ ಮೇಲಿಕ್ಕಿದ ಪಾಣ್ಮ್ಯಗದ್ಯಾಣಂ ಮುವತ್ತುಮಂ (ಸೌಇಇ.VII, ೩೮೧-೮೪; 1140).

[ಹಿಡಿ$_2$(< ಪಿಡಿ$_2$) + ಪಸುಗೆ]

ಹಿಡಿವಾಳ (ನಾ). (?): ಉಟ್ಟ ರೇಕೆಯ ಹಿಡಿವಾಳ ಕಡಗ ಅಳವಟ್ಟಹ ಬೆರಳ ಮುದ್ರಿಕೆಯು . . . ಎಡಪಣಿ ಚಿಂತಾಕದ ಸರಿಗೆಯ ತಂದಿರುವರಂಗನೆಗೆ ನಾರಿಯರು (ಚಂದ್ರಪ್ರಾ. ೪-೧೨). [?]

ಹಿಡಿಶಾಪ (ನಾ). (ಆಲಂ) ಇತರರಿಗೆ ಕೆಟ್ಟುದನ್ನು ಹಾರೈಸುವುದು; ಬಯ್ಯುವುದು.

ಹಿಡಿಶಾಪ ಹಾಕು = ಕೆಟ್ಟುದ್ದನ್ನೆಣಿಸು; ಕೇಡು ಬಗೆ: ಆಕೆ . . . ಅವನಿಗೂ ಹಿಡಿಶಾಪ ಹಾಕಿದಳು (ಯೋಧಪ. ೭೮); ಕವಿದ ಕತ್ತಲೆಯನು ಕಂಡು . . . ಹಿಡಿಶಾಪ ಹಾಕುವ ಬದಲು ಹಣತೆಯನೊಂದನು ಹೇಗಾದರೂ ತಂದು ಹಚ್ಚಿಡುವುದು ಮೇಲು ಮೊದಲು (ಇಂಚಾಪ. ೧೬೫-೧೨). [ಹಿಡಿ$_2$ (< ಪಿಡಿ$_2$) + ಶಾಪ]

ಹಿಡಿಸು 'ಪಿಡಿಯಿಸು' ನೋ.

ಹಿಡಿಸೂಡಿ (ನಾ). ೧. ಹುಲ್ಲಿನ ಸಣ್ಣ ಕಂತೆ: ಹೊಲವಲ್ಲ ಹಾಳಾಯಿತು. ಹಿಡಿಸೂಡಿಗೆ ಬಡಿದಾಟ (ಗಾದೆ). ೨. ಕಸಬರಿಗೆ; ಪೊರಕೆ: ಹಿಡಿಸೂಡಿ ತೆಗದು ಗುಡಿಸಲಾರಂಭಿಸಿದ (ಕೆಲಕ.೩); ಬದಿಯಲ್ಲೇ ಮಡಗಿದ ಹಿಡಿಸೂಡಿಯನೆತ್ತಿಕೊಂಡ (ತ್ಯಾಗಮ. ೭೭). [ಹಿಡಿ$_2$ (< ಪಿಡಿ$_2$) + ಸೂಡಿ$_1$(< ಸೂಟೆ)]

ಹಿಡಿಹ 'ಪಿಡಿಹ' ನೋ.

ಹಿಡಿಹಗ್ಗ (ನಾ). (ಎತ್ತು ಮೊದಲಾದುವುಗಳನ್ನು) ಕಟ್ಟಲು ಉಪಯೋಗಿಸುವ ಹಿಡಿಯಿರುವ ಹಗ್ಗ: ಬಂಗಾರ ಹಣಿಕಟ್ಟು ಬೆಳ್ಳಿಯ ಹಿಡಿಹಗ್ಗ ಹಳ್ಳದ ಹೊಲದಾಗ ಮೇಯೂವ ನಂಬಸವಗ ಒಳ್ಳೇವನೆಂದು ಶರಣಂದ (ಡೋಗಿ. ೧೯೬); ಹಿಡಿಹಗ್ಗ, ಮಿಣ ಜತ್ತಿಗೆ ಬಾರಕೋಲು ಮಕ್ಕಡ, ಮುಗುದಾಣ ಇವೆಲ್ಲ ಸಾಮಾನ್ಯವಾಗಿ ಎತ್ತು ಕಟ್ಟಿದವರ ಮನೆಯಲ್ಲಿ ಇರತಕ್ಕ ವಸ್ತುಗಳೇ (ಬೆಳಭಾ. ೧೭೭).

[ಹಿಡಿ$_1$ (< ಪಿಡಿ$_1$) + ಹಗ್ಗ (< ಪಗ್ಗ)]

ಹಿಡಿಹಡೆ 'ಪಿಡಿವಡೆ' ನೋ.

ಹಿಡಿಹಣ್ಣು (ನಾ). ಕೈಯಲ್ಲಿ ಹಿಡಿದು ಎತ್ತಬಹುದಾದಷ್ಟು ಗಾತ್ರದ ಹಣ್ಣು (?): ಹಿಡಿಹಣ್ಣು ಕುಂಬಳಕೆ ಮಿಡಿಹಣ್ಣು ಆಲಕ್ಕೆ ಅಡಿನೆಳಲೊಳಿಪ್ಪ ಪಾಂಥ ತಾ ಕೆಡದಂತೆ ಮೃದನು ಮಾಡಿಹನು (ಸರ್ವಜ್ಞ. ೧೯೨).

[ಹಿಡಿ$_1$(< ಪಿಡಿ$_1$) + ಹಣ್ಣು(< ಪಣ್$_1$)]

ಹಿಡಿಹತೆ (ನಾ). ಇನ್ನೊಬ್ಬರಿಗೆ ಕೊಡುವ ಹಣದಲ್ಲಿ ತನಗೆ ಬರಬೇಕಾದ ಹಣವನ್ನು ಮೊದಲೇ ಮುರಿದುಕೊಂಡು ಕೊಡುವಿಕೆ: ಪಟ್ಟಣಸ್ವಾಮಿಕೆಯ ಪದಕೆ ನೆರೆದು ಪಟ್ಟಂಗಟ್ಟಿ ಹಲರು ಕಾಣಿಕೆಗೊಟ್ಟು ಉಡಿಯ ಚೀಲಂಗಟ್ಟಿಸಿ ಒರೆಯಾಣ ಕೇಣ ನೋಟಂ ತೂಕ ಬಡ್ಡಿಯಾವರಿ ಉಭಯವಟ್ಟು ಹಿಡಿಹತೆ[ಪಾಠಾಂ. ತಿ]ಗನ್ನಗತಕ ಭಾಸುರರ ರತ್ನಪರೀಕ್ಷೆಗಳೊಳು ಪರಿಣತನ ವಾಡಿದನಯ್ಯನಾದಯ್ಯನ (ಸೋಮಚ. ೧-೯೩). [ಹಿಡಿಹ (< ಪಿಡಿಹ) + - ತ್ತೆ]

ಹಿಡಿಹತ್ತಿ 'ಹಿಡಿವತ್ತಿ' ನೋ.

ಹಿಡಿಹಾರ 'ಪಿಡಿಹಾರ' ನೋ.

ಹಿಡಿಹಿಂಡಿ$_1$ 'ಪಿಡಿ$_1$' ಪರಾ.

ಹಿಡಿಹಿಂಡಿ$_2$ 'ಪಿಡಿ$_2$' ಪರಾ.

ಹಿಡಿಹಿಂಡಿಕೆ, ಹಿಡಹಿಂಡಕೆ, ಹಿಡುಹಿಂಡಿಕೆ, ಹಿಂಡುಹಿಂಡುಕೆ (ನಾ). ಒಂದು ಬಗೆಯ ಔಷಧೀಸಸ್ಯ: "ವಾರುಳಿ ಬಲಿರ್ಬುಧ್ನಾಕ್ಷಿ ಹಾವುಮಕ್ಕೆ ಹಿಡಿಹಿಂಡಿಕೆ ತ್ರಿಪತ್ರಿಣಿಯೆಂದನಿಕ್ಕುಂ" (ಮಂಗರಾ. ೪೪-೪೪); ಹಿಡಿಹಿಂಡಿಕೆ ಯಾಚಕತ್ತರಿ ಮಡುವಾಗಲ್ . . . ಅಂಕೋಲದ ಗಿಡುದಳರುಪನಾಹಮಖಿಳವಿಷಮಂ ಕಳೆಗುಂ (ಏಮದ. ೧೬-೭೭); ಮಿನವಿಷಕ್ಕೆ . . . ಹಿಡಿಹಿಂಡಿಕೆಯ ಸೊಪ್ಪನಾದರೂ ಜಡೆಗಳ್ಳಿಯ ಸೊಪ್ಪನಾದರೂ ಗಾಯಕ್ಕೆ ಮುಚ್ಚಿ ಕಟ್ಟುವುದು (ವೈದ್ಯಸಾ. II, ೨೨೦). **ಹಿಡಹಿಂಡಕೆ:** "ಏಮುಕಾ - ಮುಳ್ಳು ಹಿಡಹಿಂಡಕೆ" (ಓಷಧಿ. ೪೩). **ಹಿಡುಹಿಂಡಿಕೆ:** "ಪ್ರಿಯಾ ಪ್ರಿಯಂಗು-ಹಿಡುಹಿಂಡಿಕೆ" (ಓಷಧಿ. ೯೮). **ಹಿಂಡುಹಿಂಡುಕೆ:** ಎಕ್ಕೆಯ ಹಿಡುಹಿಡುಕೆಯುಮಂ ತೆಕ್ಕನೆ ತೀವಿರ್ದ ಕಲೆಯೊಳರೆದಿಡು ಪುಣ್ಣೊಳ್ (ಏಮದ. ೧೦-೬೦). 'ಹಿಟ್ಟಳಿಕೆ' ಪರಾ. [?]

ಹಿಡಿಹು 'ಪಿಡಿಪು' ನೋ.

ಹಿಡಿಹುಗೊಡು (ಕ್ರಿ). ಅಂಕೆಗೆ ಒಳಪಡು; ವಶವಾಗು: ಲಲನೆಯರ್ಥಿಗ ರಾವನನುಜನ ನಿಲಿಸಿ ಮೃಗವಾರ್ಗದಲಿ ಸಂದನು ತೊಳಲಿ ವನದಲಿ ಹಿಡಿಹುಗೊಡದಿರಲೆಚ್ಚನಾ ಮೃಗವ (ನಭಾಗ. ೯-೧೦-೯); ಹಿಡಿಹುಗೊ[ಪಾಠಾಂ. ಗು]ಡ -ದಸುರಾರಿ ಕಾಲುಗಳೆಡೆಯಲಡಗಿದರಱಸಿ ಕಾಣದೆ ತುಡುಕುತಿರ್ದುದು ಕಂಡವರನಾ ಹಸ್ತಿ ಹರಿಹರಿದು (ನಭಾಗ. ೧೦-೩೮-೨೩). [ಹಿಡಿಹು (< ಪಿಡಿಪು) + ಕೊಡು$_1$]

ಹಿಡಿಹುಗೊಳ್ (ಕ್ರಿ). ತೆಗೆದುಕೊಳ್ಳು; ಸ್ವೀಕರಿಸು: ಕಡೆಯಲಿನ್ನರೆಜಾವದವಧಿಯಿದು ತಪ್ಪಿತಾದೊಡೆ ಬಳಿಕ್ಕೇಸುಮಡಿಯಿತ್ತೊಡಂ ಮೂರ್ಖಮುನಿಪ ತಾ ಹಿಡಿ[ಪಾಠಾಂ.ಡು]ಹು

ಗೊಂಬವನಲ್ಲ [ಪಾಠಾಂ. ಮೂರ್ಖಮುನಿ ಕೆಡೆನುಡಿವನೆನಲಿನ್ನು] ಮಾಳ್ಪುದೇನು (ಪಚಕಾ. ೧೧-೧೫). [ಹಿಡಿಹು (< ಪಿಡಿಪು) + ಕೊಳ್[1]]

ಹಿಡಿಹುಗೊಳಿಸು (ಕ್ರಿ). ಸ್ವೀಕರಿಸುವಂತೆ ಮಾಡು: ನುಡಿದು ತೋಱಲದೇಕೆ ನೀನೇ ನಡೆದು ತೋಱಿಸಿ ಲಿಂಗನಿಷ್ಠೆಯ ಹಿಡಿ[ಪಾಠಾಂ. ಡು]ಹುಗೊಳಿಸುವುದು (ಪ್ರಭುಲೀ. ೧೧-೬೫). [ಹಿಡಿಹುಗೊಳ್ + - ಇಸು]

ಹಿಡಿಹೊನ್ನು 'ಪಿಡಿಪೊನ್' ನೋ.

ಹಿಡಿಹೋರಿ (ನಾ). ಹಿಡಮಾಡುವ ವಯಸ್ಸಿಗೆ ಬಂದ ಹೋರಿ: "ಆರ್ಷಭ್ಯ ಮೆನಲು ಹಿಡಿಹೋರಿಯಕ್ಕುಂ" (ಮಂಗರಾ. ೫೩-೧).

[ಹಿಡಿ[1] (< ಹಿಡ) + ಹೋರಿ (< ಪೋರ್ದು[2])]

ಹಿಡುಕು, ಹಿಡಿಕು (ನಾ). ವೃಷಣ; ಹಿಡ: ಧೃತಿಗೆಡಿಸಿ ಹೋರಿಗಳ ಹಿಡು [ಪಾಠಾಂ. ಡಿ]ಕುಗಳ ಬಡಿವನು (ಲಶಬಂ. ೩೯೫-೨೧). **ಹಿಡಿಕು**: ಹಲವು ಜೀವಂಗಳ ಇಂದ್ರಿಯದರ್ಪವ ತೊಲಗಿಸಿ ಲಿಂಗಚ್ಛೇದನವ ಬಲುಹಿಂದ ಮಾಡಿ ಹಿಡಿಕ ಬಡಿವುದಱಿಂದ ಸಲೆ ತೀವ್ರ ಕ್ರೋಧಾದಿಗಳಿಂ (ದ್ರಾದಶಾ. ೮-೫೦).

[ದೇ. || ತಮಿ. ಪಿಟುಕ್ಕು, ಪುಟುಕ್ಕು; ಮಲ. ಪಿಡುಕ್ಕು]

ಹಿಡುಗಲು 'ಹಿಡಗಲು' ನೋ.

ಹಿಡುವಳಿ (ನಾ). ೧. ಒಡೆತನ; ಸ್ವಾಮ್ಯ: ನಮ್ಮ ಮಹಾರಾಜರಿಗೆ ಇನ್ನೂ ಮನೆಯನ್ನಾಳುವ ಹಿಡುವಳಿಯೊದಗಿಲ್ಲವೆಂದು ಭಾವಿಸಬೇಕಾಯಿತು (ವೀರಬಂ. ೧೬). ೨. ಒಕ್ಕಲುತನ; ಬೇಸಾಯ: ಯಾವುದೇ ಜಮೀನನ್ನು ಅದು ಹಿಡುವಳಿಯಲ್ಲಿರಲಿ ಅಥವಾ ಇಲ್ಲದಿರಲಿ, ಸಾರ್ವಜನಿಕಉದ್ದೇಶಗಳಿಗಾಗಿ ಕಡ್ಡಾಯವಾಗಿ ಆರ್ಜನೆ ಮಾಡಲು ಪ್ರಾಧಿಕಾರ ಕೊಡುವಂತೆ ತತ್ಕಾಲದಲ್ಲಿ ಜಾರಿಯಲ್ಲಿ ವಿಧಿಗೆ ಅನುಸಾರವಾಗಿ . . . ಅಡ್ಡಿಯನ್ನುಂಟುಮಾಡತಕ್ಕುದಲ್ಲ (ಭಾಧಾಸ. ೨೬೩).

[< ಹಿಡಿ[1] (< ಪಿಡಿ[1]) + - ವಳಿ]

ಹಿಡುವಳಿಗೆ (ನಾ). = ಹಿಡುವಳಿ ೨: ಈಗಿನ ಹಿಡುವಳಿಗೆಗಳ ಹಂಚಿಕೆ ವಿತರಣೆಯಿಂದ ನಡೆಯಬೇಕು ನಿಜ, ಆದರೆ ಅದು ನೀವಂದಂತೆ, ವರ್ಷಕ್ಕೆ ನಾಲ್ಕು ತಿಂಗಳ ಅನ್ನ ಕೊಟ್ಟೀತು (ಗೊಂಡಾರ. ೧೬೮). [ಹಿಡುವಳಿ + - ಗೆ]

ಹಿಡುವಳಿಜಮೀನು (ನಾ). ಬೇಸಾಯದ ಜಮೀನು; ಸಾಗುವಳಿಯ ಭೂಮಿ: ಪಾಶ್ಚಾತ್ಯದೇಶಗಳಲ್ಲಿಯೂ ಹೊಸದಾಗಿ ವಿರ್ಪಟ್ಟಿರುವ ಭೂಖಂಡಗಳಲ್ಲಿಯೂ ಹೊರತು ಇತರ ದೇಶಗಳಲ್ಲಿ ರೈತನ ಕೈಯಲ್ಲಿನ ಹಿಡುವಳಿಜಮೀನು ಅಲ್ಲಿಲ್ಲಿ ಚಿದುರಿರುವುದು ಸಾಮಾನ್ಯ (ಪಣಪ್ರ. ೧೫೩). [ಹಿಡುವಳಿ + ಜಮೀನು]

ಹಿಡುವಳಿದಾರ (ನಾ). ೧. (ಭೂಮಿಯ) ಒಡೆಯ,—ಯಜಮಾನ. ೨. ಬೇಸಾಯಮಾಡಲು ಜಮೀನನ್ನು ಪಡೆದವನು; ಸಾಗುವಳಿದಾರ: ನಮ್ಮ ಜಮೀನಿನ ಹಿಡುವಳಿದಾರ ತುಂಬಾ ನಂಬಿಕಸ್ಥ (ರೂಫಿ). [ಹಿಡುವಳಿ + - ದಾರ[1]]

ಹಿಡುಹಿಡಿಕೆ 'ಹಿಡಿಹಿಡಿಕೆ' ನೋ.

ಹಿಡುಹಿಡುಕೆ 'ಹಿಡಿಹಿಡಿಕೆ' ನೋ.

ಹಿಡುಹು 'ಪಿಡಿಪು' ನೋ.

ಹಿಣ 'ಪಿಣಿಲ್[3]' ನೋ.

ಹಿಣಕು 'ಹಣಿಕು' ನೋ.

ಹಿಣಿಲ್[1] 'ಪಿಣಿಲ್[2]' ನೋ.

ಹಿಣಿಲ್[2] 'ಪಿಣಿಲ್[3]' ನೋ.

ಹಿಣಿಲಿಱಿ 'ಪಿಣಿಲಿಱಿ' ನೋ.

ಹಿಣಿಲು[1] 'ಪಿಣಿಲ್[2]' ನೋ.

ಹಿಣಿಲು[2] 'ಪಿಣಿಲ್[3]' ನೋ.

ಹಿಣಿಲುಗರುಳು (ನಾ). ಒಂದಕ್ಕೊಂದು ಹೆಣೆದುಕೊಂಡಿರುವ ಕರುಳು,—ಅಂತ್ರ: ಕುಣಿವ ಕುಂತಾಗ್ರದಲಿ ಜೋಲುವ ಹಿಣಿಲುಗರುಳೊಪ್ಪಿದವು ಜವನೀ ರಣಕೆ ಬರೆ ಕಟ್ಟಿದವು ಗುಡಿ ತೋರಣವನೆಂಬಂತೆ (ಕುವ್ಯಾಭೀ. ೪-೪೪).

[ಹಿಣಿಲು[2] (< ಪಿಣಿಲ್[3]) + ಕರುಳು (< ಕರುಳ್[1])]

ಹಿತ (ಗು). ೧. ಇಟ್ಟ; ಇರಿಸಿದ ೨. ತೆಗೆದುಕೊಂಡ; ಹಿಡಿದ; ಸ್ವೀಕರಿಸಿದ. ೩. ಯೋಗ್ಯವಾದ; ಅರ್ಹವಾದ. ೪. ಉಪಯೋಗಕ್ಕೆ ಬರುವ; ಪ್ರಯೋಜನಕಾರಿಯಾದ. ೫. ಸತ್ಪರಿಣಾಮಕಾರಿಯಾದ; ಆರೋಗ್ಯದಾಯಕವಾದ. ೬. ಸ್ನೇಹದಿಂದ ಕೂಡಿದ; ವಿಶ್ವಾಸಪೂರ್ವಕವಾದ. (ನಾ). ೭. ಒಳ್ಳೆಯದು; ಪ್ರಯೋಜನಕಾರಿಯಾದುದು: ಹಿತಮಂ ಹಿತರಱಿಪಿದೊಡಂ ಮತಿಗೆಟ್ಟಿಲ್ಲಿಕೆಯ್ದುಂ (ಪಂರಾಮಾ. ೧೪-೧೨೫); ಹಿತವಿದು ಶಾಸ್ತ್ರವಿಹಿತವಿದು ಮನಕೆ ಸಮ್ಮತವಿದೆಂದೆಂಬ ಮರ್ಮವನು ಮತಿಯೊಳಿಣಿಸಿ (ಹದಿಬ. ೩-೧೯). ೮. ಇಚ್ಛಿಸುವಂತಹುದು; ಪ್ರಿಯಕರವಾದುದು: ಭೋಗಿಗೆ ಲೋಭಿಗ ಯೋಗಂ ತ್ಯಾಗಂ ಹಿತಮಾಗದೆಂದು ನುಡಿದಂ ಭೂಪಂ ತ್ಯಾಗಿಗೆ ಯೋಗಿಗೆ ಲೋಭಂ ಭೋಗಂ ಹಿತಮಾಗದೆಂದು ನುಡಿದಂ ಭೂಪಂ (ಪಮ್ಮಾರ. ೨-೫). ೯. ಒಳ್ಳೆಯದನ್ನು ಹಾರೈಸುವವನು; ಶುಭ ಕೋರುವವನು: ಹಿತನಪ್ಪ ಭೃತ್ಯನೆಂದುಂ ಪತಿಗಪಜಯಮಾಗದಂತು ನೆಗಟ್ಟುದು (ಪಂಚತಂ. ೯೪-೧); ಹಿತರೆನಗಿನ್ನಾರ್ ವಾಚಸ್ಪತಿ ನೀನೆಂದಂತಿರಹಹ ಹುಸಿಯಲ್ತಲ್ತುನ್ನತಸಂಗರದೊಳಗಱಿಯಯ್ ಹಿತರೆನ್ನ ನಿಶಾತಖಡ್ಗಮುಂ ನಿಡುದೋಳುಂ (ಗಿರಿಕ. ೬-೩೧).

ಹಿತಮಿತ = ೧. ಒಳ್ಳೆಯದಾಗಿಯೂ, ಮಿತವಾಗಿಯೂ ಇರುವಂತಹ: ಕದಳೀಗರ್ಭಶ್ಯಾಮಂ . . . ವ್ಯದುಮಧ್ಯಮತನು ಹಿತಮಿತವ್ಯದುವಚನಂ ಲಲಿತಮಧುರಸುಂದರವೇಷಂ (ಆದಿಪು. ೧-೨೫). ೨. ಒಳ್ಳೆಯದಾಗಿಯೂ, ಮಿತವಾಗಿಯೂ ಇರುವಂತಹುದು: ಗಂಡಿನಲ್ಲಿ ಸಹನೆ, ಹೆಣ್ಣಿನಲ್ಲಿ ಜಾಣತನ ಮತ್ತು ಸಮಯೋಚಿತ ಚಾಣಾಕ್ಷತನ ಎಷ್ಟು ಹಿತಮಿತವಾಗಿ ಬಂದಿವೆ (ಕನ್ನಜಾ. ೫೧).

ಹಿತವಾಗು = ಇಷ್ಟವಾಗು; ಪ್ರಿಯವಾಗು: ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು (ಬಸವ. ೨೧೯). [ಸಂ.]

ಹಿತಕರ (ಗು). ೧. ಒಳ್ಳೆಯದಾದ; ಉಚಿತವಾದ. (ನಾ). ೨. ಒಳ್ಳೆಯದು; ಉಚಿತವಾದುದು: ನಿಮ್ಮ ವಚೋಜಾಲಮಾಲವಾಲಜಲಕೃತವಿಲಾಸನ್ಯಪಭೂರುಹಕ್ಕೆ ಹಿತಕರವೆ ವಲಂ (ಶಾಂತಿಪು. ೧೦-೧೧೯); ತರುಣಿಯರ ಮಾತುಗಳು ಶಿವಭಕ್ತರಿಗರೋಚಕವಲ್ಲದೇ ಹಿತಕರಮೆ (ಬಸಪು. ೪೦-೭೯). ೩. ಒಳ್ಳೆಯದನ್ನು ಬಯಸುವ ವ್ಯಕ್ತಿ: ಪಶುಗಳಿಗೆ ಹಿತಕರಳೂ, ಸುಮುಖಳೂ, ವರ್ಚಸ್ಸುಳ್ಳವಳೂ ಆಗಿರು (ಋಶ್ಯಾರ. ೩೦೧). [ಸಂ.]

ಹಿತಕಾರಿ (ಗು). ೧. ಒಳ್ಳೆಯದಾದ; ಶ್ರೇಯಸ್ಸನ್ನುಂಟುಮಾಡುವ. (ನಾ). ೨. ಒಳ್ಳೆಯದು; ಶ್ರೇಯಸ್ಸನ್ನು ಉಂಟುಮಾಡುವಂತಹುದು: ಜಗತ್ತಿಗೆ ಹಿತಕಾರಿಯಾದ ತೇಜಸ್ಸುಳ್ಳ ಅಗ್ನಿಯೆ, ನಮ್ಮೊಡನೆ ಬಂಧುತ್ವನ್ನು ಪಾಲಿಸು (ಋಶ್ಯಾರ. ೧೮). ೪. ಒಳ್ಳೆಯದನ್ನು ಮಾಡುವ ವ್ಯಕ್ತಿ; ವಿಶ್ವಾಸಿ: ಮತ್ತವಾರಣಚರ್ಮಧಾರಿ ವಿಪತ್ತವೋವಾಸರರಮಣನುನ್ಮತ್ತಚಿತ್ತಭವಾರಿ ಗೌರಿ ಚಿತ್ತಹಿತಕಾರಿ (ಬಸಪು. ೧೬-೨೫); ಎಲೆಲೆ ಲಕ್ಷ್ಮಣ ದಿವ್ಯಬಾಣಾವಳಿಯ ಜಯಿಸಿದೆನೆಂದು ದಿಟ ಹೆಕ್ಕಳಿಸದಿರು ಹಿತಕಾರಿಗಳು ನಮಗಮರರಲ್ಲಾಗಿ (ತೊರಾ. ೬-೪೪-೩೩); ನಾರಿ ಸಕಲರಿಗೆ ಹಿತಕಾರಿ ಮುನಿದರೆ ನಾರಿಯೆ ಮಾರಿ (ಸರ್ವಜ್ಞ. ೧೭೭). [ಸಂ. ಹಿತಕಾರಿನ್]

ಹಿತಗೈ (ಕ್ರಿ). ಒಳ್ಳೆಯದನ್ನು ಮಾಡು; ಶುಭವನ್ನುಂಟುಮಾಡು: ಪಾಪಕ್ಷಯಕ್ಕೆಂದು ಗಂಗೆಯೊಳ್ಮಿಂದರೆ ಪಾಪಿಯ ಮೊಸಳೆ ತಿಂದಂತೆ ತಾಪಸ್ಯ ಸುರರಿಂಗೆ ಹಿತಗೈಯ ಬಂದ ಪ್ರಾಣೋಪನನುರಿಹಿದೆ ನೀನು (ಮೋಪತ. ೮-೩೩). [ಹಿತ + ಗೈ (< ಕೆಯ್[1])]

ಹಿತಗೊಳ್ (ಕ್ರಿ). ಒಳಿತನ್ನು ಲಕ್ಷಿಸು: ಭೀತಸ್ಥರಾದ ನಿರ್ಜರರಿಗೆ ಹಿತಗೊಂಡು ಭೂತೇಶ ತಾನಡ್ಡಬಂದು ಶ್ವೇತೋರಸ್ಥಲ ಬಲರಾಮ ತೊಲಗೆಂದು ಪೀತಾಂಬರಗೆ ಹೂಣಿಸಿದ (ಮೋಪತ. ೩೯-೨೧). [ಹಿತ + ಕೊಳ್[1]]

ಹಿತಚಿಂತಕ (ನಾ). ಒಳ್ಳೆಯದನ್ನು ಕುರಿತು ಚಿಂತಿಸುವವನು: ತಮ್ಮಂತಹ ಹಿತಚಿಂತಕರು ನನಗೆ ಮತ್ತೆ ಯಾರಿರುವರು ? (ರಾಮಜ. ೨೦). [ಸಂ.]

ಹಿತತನ (ನಾ). ಒಳ್ಳೆಯತನ; ಸದ್ಗುಣ: ಹಿಂದಣ ಹಿತತನದಿಂದೀ ವಿರಹದೊಳೊಂದಿದ ಬಲ್ಗಿರ್ಚಿಗೆ ವೇದನೆಯಂ ತಂದೆನ್ನಂ ಭಸ್ಮೀಕರಿಸದೆ ತಾಂ ನಿರ್ನಿರಮಿಹುದಲ್ಲ (ಜಯಕಾ. ೪-೩೦). [ಹಿತ + - ತನ]

ಹಿತವ (ನಾ). ಒಳ್ಳೆಯದನ್ನು ಬಯಸುವವನು; ಆಪ್ತ; ಸ್ನೇಹಿತ: "ಹಿತವಂ ತಕ್ಕನೆನಿಸಿರ್ಕು" (ಕಬ್ಬಿಗ. ೩೭); ಹಿತವನತಿಭಕ್ತನನ್ನಿತನಿವಂ ಸುಭೃತ್ಯಂ ಕೃತಕೃತ್ಯನೆನ್ನರ್ (ಪಂಚತಂ. ೫೨-೧); ಆರು ಹಿತವರು ನೀತಿಕೋವಿದರಾರು ಸುಜನರು ಬಹುಪರಾಕ್ರಮ ರಾರವರ ಹೊಱಬೀಸಿ ಕಾಬುದು ನಿನ್ನ ಮತವೆಂದ (ಕುವ್ಯಾದ್ರೂ. ೧-೬); ಆರು ಹಿತವರು ನಿನಗೆ ಮೂಱು ಮಂದಿಗಳೊಳಗೆ ನಾರಿಯೋ ಧಾರಿಣಿಯೊ ಬಲುಧನದ ಸಿರಿಯೋ (ಪುರಂದ. ೧-೧೩೨ ಪಲ್ಲವಿ); ಮುಂದಿನ ಕಾರ್ಯಗಳ ನಿರ್ಣಯಕ್ಕೂ ನೆರವಾಗುವ ಹಿತವ, ಭಾಗವತನು ಬಳಿಯಲ್ಲಿ ಇದ್ದೇ ಇರುತ್ತಾನೆ (ಯಕ್ಷಬ. ೪೫). [< ಹಿತ]

ಹಿತವಂತ (ನಾ). = ಹಿತವ: "ಆ ಭುಜಿಷ್ಯಂ ಚೇಟನಾ ಕಿಂಕರಂ ಹಿತವಂತನಕ್ಕುಂ" (ಮಂಗರಾ. ೭೧-೧೭); ಅರಸಿನಲ್ಲಿ ಹಿತವಂತರು ಅರ್ಥಪ್ರಾಣ ಅಭಿಮಾನಕ್ಕೆ ತಪ್ಪಿದವರನೇನ ಮಾಡಬೇಕು (ಭೃರಸೂ. ೧೭೧); ತಾಯಿಗಿಂತ ಹಿತವಂತರಿಲ್ಲ, ಸಕ್ಕರೆಗಿಂತ ಸವಿಯಿಲ್ಲ (ಗಾದ). [ಸಂ. ಹಿತವತ್]

ಹಿತವಂತಿಕೆ (ನಾ). ಒಳ್ಳೆಯದನ್ನು ಹಾರೈಸುವಿಕೆ; ಶುಭವನ್ನು ಕೋರುವಿಕೆ: ಯಂತು ಬಹನರಿವನಕ ಆ ಹಿತವಂತಿಕೆಯ ಬಿಡಲಳಿಯನಾಗಿರುವಂತನೊಳಗೀಗೇಕೆ ನಿಷ್ಠುರವು (ಜಿರಾಮಾ. ೪೨೦-೨೪). [ಹಿತವಂತ + - ಇಕೆ]

ಹಿತವಂತೆ (ನಾ). ಒಳ್ಳೆಯದನ್ನು ಬಯಸುವವಳು; ಶುಭವನ್ನು ಹಾರೈಸುವವಳು: (ಕಿ). [ಹಿತವಂತ + - ಎ$_2$]

ಹಿತವಂದಿಗ (ನಾ). = ಹಿತವ: ಮರುಗಳಿಗೆಗೆ ಪಾಪ, ಹಿತವಂದಿಗರು; ದೊಡ್ಡ ವಿಚಾರಗಳೋ ಸಮಸ್ಯೆಗಳೋ ಅವರ ತಲೆಯಲ್ಲಿ ಬಾರದ್ದಕ್ಕೆ 'ಊಟ, ಮದುವೆ, ಮಕ್ಕಳು, ಮರಿ' ಎಂಬುದರಲ್ಲಿಯೆ ತೇಲಾಡುತ್ತಾರೆ . . . ಎಂದುಕೊಳ್ಳುತ್ತಾನೆ (ಸ್ವಪ್ನಹೂ. ೩೦೧); ಆಕೆ ವಿಲಿಪಾರ್ಲಯಲ್ಲಿರುವಾಗಲೇ ಪತಿಯ ವಿಷಯದ ಕೆಲವು ಆರೋಪಗಳನ್ನು ತನ್ನ ಹಿತವಂದಿಗರನಿಸುವವರಿಂದ ಕೇಳಿದ್ದಳು (ಒಬಿದ. ೧೯೮). [ಹಿತ + ಒಂದಿಗ]

ಹಿತವಚಃಪ್ರಿಯ (ನಾ). ಒಳ್ಳೆಯ ಮಾತುಗಳನ್ನು ಬಯಸುವವನು,—ಇಚ್ಛಿಸುವವನು: ಕ್ಷಯವ್ಯಜಿನಂ ಜಿನಸಮಯಂ ಸ್ಮಯರಹಿತಂ ಹಿತವಚಃಪ್ರಿಯಂ (ಸುಕುಮಾ. ೧-೫೧). [ಸಂ.]

ಹಿತವಚನ (ನಾ). ಬುದ್ಧಿಮಾತು: ಹಿತವಚನವ ನಾನೇಸಾಡಿದೊಡವ ಹಿತವಾಡಿದಡೆಯನ್ನೊಳೆಂದು ಅತಿಕೋಪದಿಂದ ಮಹೋಪಸರ್ಗವನೀ ಮತಿವಂತೆಗೆ ಮಾಡಿದನು (ಶ್ರೀಪಾಲ. ೫-೯೦). [ಸಂ.]

ಹಿತವಾದಿ (ನಾ). = ಹಿತವ: ನೀವು ನನ್ನ ಹಿತವಾದಿ ಎನ್ನುವುದರಲ್ಲಿ ನಾನು ಸ್ವಲ್ಪವೂ ಸಂದೇಹವಿಟ್ಟಿಲ್ಲ (ಚಂಗಾಳ್ವ. ೬೧೯). [ಸಂ. ಹಿತವಾದಿನ್]

ಹಿತವಾರೆ (ನಾ). ಸ್ನೇಹಸಂಬಂಧ; ವಿಶ್ವಾಸ: ನನಗೂ ಅವನಿಗೂ ಮೊದಲಿನಿಂದಲೂ ಇರುವ ಹಿತವಾರೆ ಅಪ್ಪಕೃಷ್ಣ (ಕುಡಿಕೂ. ೨೩೩). [ಹಿತ + ವಾರ್ಗೆ]

ಹಿತವೆ (ನಾ). ಒಳ್ಳೆಯದನ್ನು ಬಯಸುವವಳು; ಶುಭವನ್ನು ಕೋರುವವಳು: ಇವಳಲ್ಲದೆಮಗಾರು ಹಿತವೆಯರೆಂದು ಮತ್ತವರು ಸಂತಸದೊಳಾಡಿದರು (ಭರಚ. ೪೦-೮೧). 'ಪತಿಹಿತವೆ' ಪರಾ. [ಹಿತವ + - ಎ$_2$]

ಹಿತವೇಳು (ಕ್ರಿ). ಒಳ್ಳೆಯದನ್ನು ಹೇಳು; ಶುಭವನ್ನು ನುಡಿ; ಹರಸು: ಹಿತವೇಳ್ದು . . . ವಪು ಚಾರುಧನ್ವಿಗಳನಾ ಪುತ್ರಯುಗ್ಮಮಂ ಬೀಳ್ಕೊಟ್ಟನ್ನೆ ನೃಪತಿ (ಶ್ರೀರಾಮಾ. ೩೧-೮೪). [ಹಿತ + ಪೇಳು (< ಪೇಟ್ಟು)]

ಹಿತಶತ್ರು (ನಾ). ತೋರಿಕೆಗೆ ಸ್ನೇಹಿತನಂತಿದ್ದು ಮರೆಯಲ್ಲಿ ಹಗೆ ಸಾಧಿಸುವವನು: ಹಿತಶತ್ರುವಾಗಿ ಪೊಂದುವುದು . . . ಕ್ಷಿತಿಯ ಪೂಜ್ಯತೆ ಕೆಡಿಸುವುದು ಮುಂದೆ ಶತಜನ್ಮಂಗಳಿಗೆ ಹೊಣೆಯಾಗಿ ನಿಲ್ಲುವುದು (ಪುರಂದ. ೧-೫೧-೨); ನಿಮಗಿಂದ Eತ3 ಹಿತಶತ್ರುಗಳ ಕಾಣೆನು (ನವಮೋ. ೮-೨೦). [ಸಂ.]

ಹಿತಶತ್ರುತ್ವ (ನಾ). ತೋರಿಕೆಗೆ ಸ್ನೇಹಿತರಂತಿದ್ದು ಮರೆಯಲ್ಲಿ ಸಾಧಿಸುವ ವೈರ. [ಸಂ.]

ಹಿತಸಖ (ನಾ). ಒಳ್ಳೆಯದನ್ನು ಬಯಸುವ ಸ್ನೇಹಿತ; ಶುಭವನ್ನು ಕೋರುವ ಗೆಳೆಯ: ಶ್ರೀರಾಮನಾಹ್ಲಾದರೂಪಿ . . . ಪ್ರಿಯಭಾಷಿ ಹಿತಸಖಂ (ಶ್ರೀರಾಮಾ. ೫೭-೯೪). [ಸಂ.]

ಹಿತಾರ್ಥಂ (ಅ). ಒಳ್ಳೆಯದಕ್ಕಾಗಿ: ಮಟೆಯಂ ಕಟೆವಂ ಹಿತಾರ್ಥಮಿಾ ಭೂವಳಯಕ್ಕೆ ಶಕ್ರನದುಕಾರಣಮರ್ಚಿಪುದಿಂದ್ರನಂ ಜನಂ (ಜಗವಿ. ೪-೭೭). [ಸಂ.]

ಹಿತಾವಹ (ನಾ). ಪ್ರಯೋಜನವನ್ನು ತರುವಂತಹುದು; ಹಿತಕರವಾದುದು: ಯಾವತ್ತು ತರದ ಅನ್ನ ಶರೀರಕ್ಕೆ ಸರಿಯಾಗಿ ಹಿತಾವಹವಾಗುವುದಿಲ್ಲ (ಮುಂಬಯಿ. ೪-೩೨); ಈ ಕೆಲಸವನ್ನು ಬೇಗ ಮುಗಿಸುವುದು ಎಲ್ಲರಿಗೂ ಹಿತಾವಹ (ಗಂಮಾಯಿ. ೨೨೮). [ಸಂ.]

ಹಿತಾಶಂಸೆ (ನಾ). ಒಳ್ಳೆಯದಾಗಲೆಂಬ ಮಾತು; ಆಶೀರ್ವಚನ: ಆರ್ಯಾಶ್ರಮಂಗಳಂ ನೋಡುವಾಶೆಗೆ ಮುನಿಯ ಹರಕೆಯ ಹಿತಾಶಂಸೆಯಂ ಪಡೆಯುತಲ್ಲಿಂದೆ ಪೊರಮಟ್ಟರವರು ಯಾತ್ರಿಕ ಮುನಿಗಣಂವೆರಸಿ (ಶ್ರೀರಾಮಾ. ೧೮೪-೨೨೭). [ಸಂ. ಹಿತಾಶಂಸಾ]

ಹಿತು (ನಾ). ೧. ಒಳ್ಳೆಯದು; ಪ್ರಯೋಜನಕಾರಿಯಾದುದು. ೨. ಸ್ನೇಹ; ವಿಶ್ವಾಸ: ಒಬ್ಬ ತಾಯ ಸಿರಿಮಕ್ಕಳು ಸಾಲದೊಂದು ದಿನ ಹೇಳಿ ಮುಗಿಸುವರೆ ಹಬ್ಬಿ ಹೆಣೆದವರ ಹಿತುವನು (ಇಂಗೀತ. ೬೯-೪). [< ಹಿತ ./ ತೆಲು. ಹಿತವು]

ಹಿತೇಚ್ಛು (ನಾ). ಒಳ್ಳೆಯದಾಗಲೆಂದು ಹಾರೈಸುವವನು; ಹಿತೈಷಿ: ಅವನು ಕೃಷ್ಣವರ್ಮನ ಹಿತೇಚ್ಛುವಾಗಿ ಪಲ್ಲವರನ್ನು ಸೋಲಿಸುವುದರಲ್ಲಿ ಭಾಗ ತೆಗೆದುಕೊಂಡಿರಬೇಕು (ಕರ್ನಾಅ. ೩೩). [ಸಂ.]

ಹಿತೈಷಿ (ನಾ). ಒಳ್ಳೆಯದನ್ನು ಹಾರೈಸುವವನು: ನೀವೆಲ್ಲರೂ ಈ ರಾಜ್ಯದ ಪರಮಹಿತೈಷಿಗಳು (ಶಾಂತಲಾ. ೮೭); ಗೋವಿಂದರಾಯರು ತನ್ನ ಹಿತೈಷಿಗಳೊಂದಿಗೆ ಜಯಪಡೆಯಲಿಕ್ಕಾಗಿ ದುಡಿದರು (ಕುರುಕಾ. ೧೩೫). [ಸಂ. ಹಿತೈಷಿನ್]

ಹಿತೈಷಿಣಿ (ನಾ). ಒಳ್ಳೆದನ್ನು ಹಾರೈಸುವವಳು: ಅವಳು ನನ್ನ ಹಿತೈಷಿಣಿ (ರೂಢಿ). [ಸಂ. ಹಿತೈಷಿಣೀ]

ಹಿತೋಪದೇಶ (ನಾ). ೧. ಒಳ್ಳೆಯ ಸಲಹೆ; ಯಥೋಚಿತವಾದ ಆಲೋಚನೆ: ಇದು ಪರಮಾರ್ಥ ಹಿತೋಪದೇಶದ ತಿರುಳಿದನು ಸತಿಯರೋದುವುದು (ಹದಿಬ. ೧-೬೦); ಮುದ್ದಿನಿಂದ, ವಾತ್ಸಲ್ಯದಿಂದ ಹಿತೋಪದೇಶ ಮಾಡಿ ಬೆಳೆಯಿಸಿದವರು ಅವರು (ಜಾರುದಾ. ೫). ೨. ವಿಷ್ಣುಶರ್ಮನೆಂಬ ಗ್ರಂಥಕಾರನಿಂದ ರಚಿತವಾದ, ನೀತಿಕತೆಗಳನ್ನೊಳಗೊಂಡ ಒಂದು ಗ್ರಂಥದ ಹೆಸರು. [ಸಂ.]

ಹಿತ್ತಲ್ 'ಪಿಂತಿಲ್' ನೋ.

ಹಿತ್ತಲವರೆ, ಹಿತ್ತಿಲವರೆ (ನಾ). (ಸಾಮಾನ್ಯವಾಗಿ) ಹಿತ್ತಲಿನಲ್ಲಿ ಚಪ್ಪರದ ಮೇಲೆ ಹಬ್ಬಿ ಬೆಳೆಯುವ ಒಂದು ಬಗೆಯ ಅವರೆಗಿಡ ಮತ್ತು ಅದರ ಕಾಯಿ: "ಶರ - ಅಂಬಟೆ, ಹಿತ್ತಲವರೆ, ಉಮ್ಮತ್ತ" (ಒಪಧಿ. ೧೫೯). ಹಿತ್ತಿಲವರೆ: "ಗುಚ್ಛಫಲಾ - ಬಾಳೆ, ದ್ರಾಕ್ಷೆ, ಹಿತ್ತಿಲವರೆ" (ಒಪಧಿ. ೪೯). [ಹಿತ್ತಲು (< ಪಿಂತಿಲ್) + ಅವರೆ$_1$]

ಹಿತ್ತಲು 'ಪಿಂತಿಲ್' ನೋ.

ಹಿತ್ತಳ 'ಪೆತ್ತಿಳ' ನೋ.

ಹಿತ್ತಳೆ 'ಪಿತ್ತಳೆ' ನೋ.

ಹಿತ್ತಾಳೆ 'ಪಿತ್ತಳೆ' ನೋ.

ಹಿತ್ತಿಲ್ 'ಪಿಂತಿಲ್' ನೋ.

ಹಿತ್ತಿಲವರೆ 'ಹಿತ್ತಲವರೆ' ನೋ.

ಹಿತ್ತಿಲು 'ಪಿಂತಿಲ್' ನೋ.

ಹಿದಯ 'ಹೆದೆಯ' ನೋ.

ಹಿದಿರೆ (ನಾ). ಹುಲ್ಲಿನ ಬಣವೆ: ಹಲವುಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು ಒಂದು ಮಿಡುಕುಱಲ್ಲಿ ಬೇವಂತೆ (ಬಸವ. ೨೧೩). [?]

ಹಿದುಕವರೆ (ನಾ). ೧. ನೀರಿನಲ್ಲಿ ನೆನೆಸಿ ಸಿಪ್ಪೆ ತೆಗೆದ ಅವರೆಕಾಳು: ಅವರೆಕಾಯಿಗೆ ಬದಲು ಹಿದುಕವರೆಯನ್ನೇ ತಂದರಾಯಿತು (ರೂಢಿ). ೨. ನೆನೆಸಿ ಸಿಪ್ಪೆತೆಗೆದ ಅವರೆ ಕಾಳಿನಿಂದ ಮಾಡುವ ಒಂದು ಬಗೆಯ ಮೇಲೋಗರ,—ಸಾರು: ನಮ್ಮ ಮನೆಯಲ್ಲಿ ಇವತ್ತು ದೋಸೆ, ಹಿದುಕವರೆ ಮಾಡಿದ್ದಾರೆ (ರೂಢಿ). 'ಚಿದಕವರೆ' ಪರಾ. [ಹಿದುಕು + ಅವರೆ$_1$]

ಹಿದುಕು (ಕ್ರಿ). (ಹಸಿಯ) ಕಾಳನ್ನು ನೀರಿನಲ್ಲಿ ನೆನೆಹಾಕಿ ಹಿಸುಕಿ ಸಿಪ್ಪೆಯಿಂದ ಬೇರ್ಪಡಿಸು; ಚಿದುಕು: ಹಿದುಕಿದ ಅವರೇಕಾಳಿನ ಸಾರು ಬಹಳ ರುಚಿಯಾಗಿತ್ತು (ರೂಢಿ). [ದೇ. ॥ ತಮಿ. ಪಿತುಜ್ಜು, ಪಿತುಕ್ಕು; ಮಲ. ಪಿತುಕ್ಕು, ಪಿತಜ್ಜು, ಪುತುಕ್ಕು; ತೆಲು. ಪಿತುಕು, ಪಿದುಕು; ಕೋರಾ. ಪಿದ್ಕ್]

ಹಿದೌತ (ನಾ). ಒಂದು ಬಗೆಯ ತೆರಿಗೆ: ಆ ಗಉಡಗಳಿಗೆ ಹಿದೌತಯಿಲ್ಲೆಂದು ಬಾಳಿಕೆಸೆಸ ಇಲ್ಲೆಂದು ಆ ಗೌಡುಗಳಿಗೆ ಮಕ್ಕಳು ಮಕ್ಕಳು ತೊತ್ತಿನ ಮಕ್ಕಳಿಂಗೆ ಸಲಪುದೆಂದು ಭೂಮಿಯಂ . . . ಸುಖದಿಂ ಬಾಳುಂತಾಗೆ ಕೊಟ್ಟ ಶಾಸನ (ಎಕ. VI. ಚಿಕ್ಕಮ. ೧೦೨-೧೯; 1343). [?]

ಹಿದ್ಮ, ಹಿಧ್ಮ (ನಾ). ಬಿಕ್ಕಳಿಕೆ; ಬಿಕ್ಕಲು: ಹಿದ್ಮವೆಂದೂ ಹಿಕ್ಕವೆಂದೂ ಬಿಕ್ಕುಳಿನ ಪಸರು (ಸಕಪ್ಯ. ೨೪೦). **ಹಿಧ್ಮೆ**: ಹಿಧ್ಮೆಯೆಂದರೂ, ಹಿಕ್ಕೆಯೆಂದರೂ, ಬಿಕ್ಕಟಿಂದರೂ, ಬಿಕ್ಕಳಿನ ಹೆಸರು. ಆ ಹಿಧ್ಮ ಎಂಬುದು ಅನ್ನಜೆ, ಕ್ಷುದ್ರ, ಯಮಳ, ಮಹತಿ, ವೇಗಿನಿ ಎಂದು ಐದು ತೆಱ (ವೈದ್ಯಸಾ. I, ೧೫೪). [?]

ಹಿಧ್ಮೆ 'ಹಿದ್ಮ' ನೋ.

ಹಿನ್ 'ಪಿನ್' ನೋ.

ಹಿನ್ನಡಿ (ನಾ). ಹಿಂದಕ್ಕೆ ತಿರುಗಿರುವ ಪಾದ,— ಅಡಿ: ಬೆನ್ನೊಳೊಗಡ ಮೊಗಗಳ ನತ್ತಿಗಣ್ಣಿನ ಕನ್ನೆಯೊಳೊಗೆದ ಪರ್ಬಾಯಿಗಳಾ ಹಿನ್ನಡಿಗಳ ಹೇರೊಡಲಿನೆದೆಯ ಭೂತನ್ನೆರದೂಡನೆಯ್ದುದವಾಗ (ಸೂಬಸೂ. ೯-೭೪). [ಹಿನ್ (< ಪಿನ್) + ಅಡಿ]

ಹಿನ್ನಡೆ$_1$ (ಕ್ರಿ). ಹಿಂದಕ್ಕೆ ಸರಿ,—ನಡೆ: ಕಳಿಯನೇ ಹಳಿಹಗೆಯೆಯೆಂಬವೋಲ್ ಮಳೆ ಕಡಗೆ ಮಲನಾಡುಗಳ ನೋಡಿ ಹಿನ್ನಡೆಯುತಿರಲು (ಕಾಲೂರ. ೪೭-೯೨).

[ಹಿನ್ (< ಪಿನ್) + ನಡೆ]

ಹಿನ್ನಡೆ$_2$ (ನಾ). ಹಿಮ್ಮೆಟ್ಟುವಿಕೆ; ಹಿಂಜರಿತ: ನೀವು ಯಾವುದನ್ನು ಹಿನ್ನಡೆ ಎನ್ನುತ್ತೀರೋ ಅದೇ ನನಗೆ ಮುನ್ನಡೆ ಎನಿಸುತ್ತದೆ (ದೂರಸ. ೧೧೩).

[< ಹಿನ್ನಡೆ$_1$ ./ ಹಿನ್ (< ಪಿನ್)+ ನಡೆ$_2$]

ಹಿನ್ನಿ 'ಪಿನ್ನೆ$_1$' ನೋ.

ಹಿನ್ನೀರು (ನಾ). (ಸಮುದ್ರದಲ್ಲಿ) ಹಿಂದಕ್ಕೆ ಮರಳಿದ ನೀರು: ಸಮುದ್ರದ ಹಿನ್ನೀರಿನಲ್ಲಿಯ ಪ್ರವಾಸವು ನೆನಪಾಗಿ ಅದನ್ನು ವರ್ಣಿಸಿದಳು (ಮೀಲಿಮ. ೯೯).

[ಹಿನ್ (< ಪಿನ್) + ನೀರು$_1$ (< ನೀರ್)]

ಹಿನ್ನುಡಿ (ನಾ). ಗ್ರಂಥದ ಉಪಸಂಹಾರಭಾಗ; ಕಡೆನುಡಿ: ಈ ಗ್ರಂಥದ ಹಿನ್ನುಡಿಯಲ್ಲಿ ಗ್ರಂಥದ ಬಗ್ಗೆ ಲೇಖಕರು ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ (ರೂಢಿ).

[ಹಿನ್ (< ಪಿನ್) + ನುಡಿ$_2$]

ಹಿನ್ನೆ 'ಪಿನ್ನೆ$_1$' ನೋ.

ಹಿನ್ನೆಗೆ (ಕ್ರಿ). ಹಿಂದಕ್ಕೆ ಹಾರು,—ಚಿಮ್ಮು: ತನ್ನುಬ್ಬಟಿಗೆ ನೆಲ ನಡುಗೆ ಹೆಬ್ಬುಲ್ಲ ತರೆದು ಹಬ್ಬುಲಿಯು ಹಿನ್ನೆಗೆದು (ಕಾಲೂರ. ೯೬-೧೧೧). [ಹಿನ್ (< ಪಿನ್) + ನಗ$_1$]

ಹಿನ್ನೆರಿಗೆ (ನಾ). ಹಿಂದಕ್ಕೆ ಮಡಿಸಿದ ನೆರಿಗೆ,—ಮಡಿಕೆ: ಅವಳು ಕೆದರಿದ ಹಿನ್ನೆರಿಗೆಯನ್ನು ಬೆರಳುಗಳಿಂದ ಸರಿಪಡಿಸಿಕೊಳ್ಳುತ್ತಾ ನಡುಮನೆಗೆ ಬಂದಳು (ಸಡದಾ. I, ೧೧೫೫). [ಹಿನ್ (< ಪಿನ್) + ನೆರಿಗೆ (< ನಿಱಿಗೆ)]

ಹಿನ್ನೆಲ (ನಾ). ೧. ಹಿಂಭಾಗ; ಹಿಂಬದಿ: ಬಲದೊಳು ಹೊಕ್ಕು ಬಲ್ಲಿದರ ನೆಗ್ಗೊತ್ತಿ ಹಿನ್ನಲಕಡರ್ಚಿದರು ಸೂರಿಯಲಿ (ಪೋಪತ. ೩೯-೧೪). ೨. (ಆಲಂ) ಪೂರ್ವಸಿದ್ಧತೆ; ಹಿನ್ನೆಲೆ: ಇಷ್ಟೆಲ್ಲ ಹಿನ್ನೆಲ ಸಜ್ಜಾಯಿತೆಂದರೆ ಮುಂದಿನ ಸಮ್ಮೇಲನದ ಅಧ್ಯಕ್ಷರಾಗಲು ಯತ್ನ ನಡಸಿರಿ (ಮುಂಗಾಪ್ರ. ೧೧೯). [ಹಿನ್ (< ಪಿನ್) + ನೆಲ]

ಹಿನ್ನೆಲೆ 'ಪಿನ್ನೆಲೆ' ನೋ.

ಹಿನ್ನೆಲೆಗಾಯಕ (ನಾ). ಚಲನಚಿತ್ರಗಳಲ್ಲಿ ಮೊದಲೇ ಧ್ವನಿಮುದ್ರಣ ಮಾಡಿಕೊಂಡು ಸಿದ್ಧಪಡಿಸಿಟ್ಟುಕೊಳ್ಳುವ ಹಾಡುಗಳನ್ನು ಹಾಡುವವನು: ಈ ಚಿತ್ರದಲ್ಲಿನ ಹಿನ್ನೆಲೆಗಾಯಕರು ಯಾರು ಯಾರು ? (ರೂಢಿ).

[ಹಿನ್ನಲೆ (< ಪಿನ್ನೆಲೆ) + ಗಾಯಕ]

ಹಿನ್ನೆಲೆಗಾಯಕಿ (ನಾ). ಚಲನಚಿತ್ರಗಳಲ್ಲಿ ಮೊದಲೇ ಧ್ವನಿಮುದ್ರಣ ಮಾಡಿಕೊಂಡು ಸಿದ್ಧಪಡಿಸಿಟ್ಟುಕೊಳ್ಳುವ ಹಾಡುಗಳನ್ನು ಹಾಡುವವಳು: ಪಿ.ಸುಶೀಲಾ ಈ ಚಿತ್ರದ ಹಿನ್ನೆಲೆಗಾಯಕಿ (ರೂಢಿ). [ಹಿನ್ನೆಲೆ (< ಪಿನ್ನೆಲೆ) + ಗಾಯಕಿ]

ಹಿನ್ನೆಲೆಗಾಯನ (ನಾ). ಚಲನಚಿತ್ರಗಳಲ್ಲಿ ಮೊದಲೇ ಧ್ವನಿಮುದ್ರಣ ಮಾಡಿಕೊಂಡು ಸಿದ್ಧಪಡಿಸಿಟ್ಟುಕೊಳ್ಳುವ ಸಂಗೀತ: ಹಿನ್ನೆಲಗಾಯನ ಕೊಟ್ಟರುವ ಬಾಲಮುರುಳಿಕೃಷ್ಣ ಅವರನ್ನು ವರ್ಷದ ಅತ್ಯುತ್ತಮ ಹಾಡುಗಾರರೆಂದು ರಾಷ್ಟ್ರಪಟ್ಟದಲ್ಲಿ ಗೌರವಿಸಲಾಗಿದೆ (ಕವಿ. ೫೩೩). [ಹಿನ್ನೆಲೆ (< ಪಿನ್ನೆಲೆ) + ಗಾಯನ]

ಹಿನ್ನೆಳಲು (ನಾ). ೧. ಹಿಂಭಾಗದ ನೆರಳು. ೨. (ಆಲಂ) ಆಶ್ರಯ; ಆಸರೆ; ಹಿನ್ನೆಲೆ: ಒಂದು ಅಪೂರ್ವ ಉತ್ಸಾಹದ ಹಿನ್ನೆಳಲಿನಲ್ಲಿ ಈ ಕಾರ್ಯ ನಡೆಯಿತು (ಸಪ್ಕಾ. ೨೪). [ಹಿನ್ (< ಪಿನ್) + ನೆಳಲು$_2$ (< ನೆಲಲ್)]

ಹಿಪ್ಪಣ (ನಾ). ತುಕ್ಕು; ಕಿಟ್ಟು: "ಕಿಟ್ಟಂ – ಮಲ, ಹಿಪ್ಪಣ" (ಓಷಧಿ. ೩೭). [?]

ಹಿಪ್ಪದಿಕೆ, ಹಿಪ್ಪರಿಕೆ, ಹಿಪ್ಪಲಿಕೆ (ನಾ). ಬೆಳಗಿನ ಜಾವ; ಮುಂಜಾವ: ಹಿಪ್ಪದಿಕೆ [ಪಾಠಾಂ. ಹಪ್ಪಳಿಕೆ, ಹಿಪ್ಪಲಿ] = ಬೆಳಗುಜಾವ (ಶಮದ. ೨. ೪೬ ಪ್ರಯೋ). **ಹಿಪ್ಪರಿಕೆ**: ಆ ಮಹೀಪಾಲನುದಿತೋದಯನ ಮೋಹಾಂಧಕಾರಮೇ ಹರಿವಂತಿರಾದುದಾ ಹರಿವ ಹಿಪ್ಪರಿಕೆಯಂದಿನ ದಿನದ ಬೆಳಗಪ್ಪ ಜಾವದಲ್ಲಿ (ಸಮ್ಮಕಾ. ೧೨-೧). **ಹಿಪ್ಪಲಿಕೆ**: ಧೀವರಂ ಮಱುದಿನದ ಹಿಂ [ಪಾಠಾಂ. ಪಿ] ಪ್ಪಲಿಕೆ ಹೊತ್ತು ಹರಿಯದ ಮುನ್ನಮಾ ಮರಕೆ ಬಳ್ಳವಿಡಿದು ಹರಿಸದಿಂ ಹತ್ತಿ (ಸಮ್ಮಕಾ. ೨-೩೭); ಹರಿವ ಹಿಪ್ಪಲಿಕೆಗೆ ಮುನ್ನೆಳ್ದಟ್ಟುಂಡು ಭರದಿಂದ ಹೊಱ ಹೂಡಗಟ್ಟಿ ಓರಿದು ಸಂದಣಿಗೊಂಡಾ ಕೂಳ ಪಾಳಿಯಮಿರದಲ್ಲಿ ಪೊಱಮಟ್ಟು ದಾಗ (ಶ್ರೀವಾಲ. ೧೩-೮೬). [?]

ಹಿಪ್ಪನೇರಿಳೆ, ಹಿಪ್ಪುನೇರಳೆ (ನಾ). ಒಂದು ಬಗೆಯ ಸಸ್ಯ; P ರೇಷ್ಮೆಹುಳುಗಳಿಗೆ ಇದರ ಎಲೆಗಳನ್ನು ಆಹಾರವಾಗಿ ನೀಡುತ್ತಾರೆ: ಹಿಪ್ಪನೇರಿಳೆ (Morus alba): ಇದನ್ನು ಮೈಸೂರು, ಕಾಶ್ಮೀರಗಳಲ್ಲಿ ಬೆಳಸುತ್ತಾರೆ. ರೇಷ್ಮೆಹುಳುಗಳಿಗೆ ಇದರ ಎಲೆಗಳು ಆಹಾರವಾಗಿವೆ (ಸಸ್ಯಶಾ. ೧೩೩). **ಹಿಪ್ಪುನೇರಳೆ**: ಹಿಪ್ಪುನೇರಳೆಯನ್ನು ಬೆಳಯುವುದಕ್ಕೆ ಅನುಕೂಲವಿರುವ ಕಡೆಗಳಲ್ಲೆಲ್ಲ ಮನೆಯಲ್ಲಿಯ ಹೆಂಗಸರೂ ಮತ್ತು ಹುಡುಗರೂ ಈ ಕೆಲಸವನ್ನು ಸುಲಭವಾಗಿ ಮಾಡಬಹುದು (ವ್ಯವಮ. ೬೮). 'ಉಪ್ಪುನೇರಳೆ' ಪರಾ.

[ಹಿಪ್ಪು + ನೇರಿಳೆ (< ನೇಱಿಲ್)]

ಹಿಪ್ಪರಿಕೆ 'ಹಿಪ್ಪದಿಕೆ' ನೋ.

ಹಿಪ್ಪಲಿ, ತಿಪ್ಪಲಿ (ನಾ). ಒಂದು ಬಗೆಯ ಮೆಣಸು; ಉದ್ದಮೆಣಸು: "ಕೃಷ್ಣಾ, ಉಪಕುಲ್ಯಾ, ವೈದೇಹೀ, ಮಾಗಧೀ, ಹಿಪ್ಪಲೀ, ಕಣಾ ಈ ೬ ಹಿಪ್ಪಲಿ" (ಪಲಾಯು. ೧೦೬-೪೬); ಉತ್ತರಣೆಯ ಬೇರು ಹಿಪ್ಪಲಿ ಚಿತ್ರಮೂಲ ಇವಂ ಸಮಾನಂಗೊಂಡು ಅರದು ಕೂಸಿನ ಮಯ್ಯಂ ಪೂಸುವುದು (ಜಾಲಚ. ೧೫೫-೧); ಹಿಪ್ಪಲಿ ಕರಂಜಿಗೆ ಬೆಲ್ಲವುದಿ ಬೆಲ್ಲವತ್ತ ಮಾಗುಳಿ ಬಿದಿರ ಕಳಿಲೆ ಪೊಸತದುಕಂಬಟೆಯ ಕಾಯ್ಗಳಿಂದ ಸಮೆದೊವ್ವುವುಪ್ಪಿನ ಕಾಯ್ಗಳಂ ಮಾಳ್ಪುದು (ಸೂವಕಾ. ೬-೧೬); ಹಿಪ್ಪಲಿ, ಬೆಲ್ಲ, ಅಳಲೆಕಾಯಿ ಇವನ್ನು ಬಿಸಿನೀರಿನಿಂದ ಅರೆದು, ಕುಡಿದರೆ ವಾತಜ್ವರ ಪರಿಹಾರವಾಗುವುದು (ಸಕಪ್ಯ. ೬೩). **ತಿಪ್ಪಲಿ**: (ಆ). [< ಸಂ. ಪಿಪ್ಪಲಿ]

ಹಿಪ್ಪಲಿಕೆ 'ಹಿಪ್ಪದಿಕೆ' ನೋ.

ಹಿಪ್ಪಿ 'ಹಿಪ್ಪೆ$_2$' ನೋ.

ಹಿಪ್ಪುನೇರಳೆ 'ಹಿಪ್ಪನೇರಿಳೆ' ನೋ.

ಹಿಪ್ಪೆ$_1$ 'ಇರ್ಪೆ' ನೋ.

ಹಿಪ್ಪೆ$_2$, **ಹಿಪ್ಪಿ** (ನಾ). ಸತ್ತ್ವವನ್ನು ತೆಗೆದನಂತರ ಉಳಿಯುವುದು; ನಿಸ್ಸಾರವಾದ ಚರಟ ,—ತೊಗಟೆ: ಹಿಪ್ಪೆಯಾದ ತಂಬುಲದಂತೆ [ಪಾಠಾಂ. ಪಲ್ಲ ಸಂದಿಯಡಕೆಯಂತೆ] (ಧರ್ಮಾಮೃ. ೯-೩೩ ಅವಿಪಾಠ); ಹಿಪ್ಪೆಗೆ ರುಚಿಯುಂಟೇ ಮಧುರಕ್ಕಲ್ಲದೆ (ಪೋಲಿಮಾ. ೧೨೦-೪೬); ಎನ್ನ ಹಿಪ್ಪೆಯ ಮಾಡಿ ಹಿಂಡದಿರು (ತೂರಾ. ೬-೪೬-೩೩). **ಹಿಪ್ಪಿ** : ತಿಲದ ಹಿಪ್ಪಿ ಹೋಜಗಾದುವನಱಿದು ನಿಶ್ಚಯವ ಕಂಡಲ್ಲಿ ಹೊಱಗಣ ಪೂಜೆ ಬೆಳಗಣ ದಿವ್ಯಪ್ರಕಾಶ ವಸ್ತುಭಾವದ ಕೂಟ ಇಷ್ಟವಿಲ್ಲದಿಲ್ಲ (ಮಡೇವ. ೨೭೦-೪).

[ದೇ. ॥ ತೆಲು. ಪಿಪ್ಪಿ, ಪಿಪ್ಪಿರಿ; ತುಳು. ಹಿಪ್ಪೆ]

ಹಿಪ್ಪೆಗ (ನಾ). (ಆಲಂ) ಶಕ್ತಿಗುಂದಿದವನು; ನಿತ್ರಾಣಿ: ಹಿಪ್ಪೆಗರ ಹರಗಡಿದು

ಹೊಗರಲಗೊಪ್ಪಿದವು ಕರುಳುಗಳ ನಿಮಿಷದೊಳೊಪ್ಪಗೆಡಿಸಿದವರಿಕದಂಬವನೀತ ನಂಬುಗಳು (ಕುವಾದ್ರೋ. ೨-೫೩) [ಹಿಪ್ಪೆ + - ಗ]

ಹಿಪ್ಪೆಯೆಣ್ಣೆ (ನಾ). ಇಪ್ಪೆಯ ಬೀಜದಿಂದ ತೆಗೆದ ಎಣ್ಣೆ: ಹಿಪ್ಪೆಯೆಣ್ಣೆಯನ್ನು ಅಭ್ಯಂಗವಂ ಮಾಡಿ ಅದರ ಹಿಂಡಿಯಲ್ಲಿ ಮೈ ತೊಳೆಯಲು (ವಾತಾಚಿ. ೧೫-೩). 'ಇಪ್ಪೆಯೆಣ್ಣೆ' ಪರಾ. [ಹಿಪ್ಪೆ (< ಇರ್ಪೆ) + ಎಣ್ಣೆ]

ಹಿಬುಕ (ನಾ). [ಜ್ಯೋತಿ] ಲಗ್ನದಿಂದ ನಾಲ್ಕನೆಯ ಸ್ಥಾನ,— ರಾಶಿ: ವ್ಯವಹರಿಪ ಸಂಜ್ಞೆ ಚತುರಸ್ರವದೆಂದಪ್ಪಮ ಚತುರ್ಥಗೃಹಕೆ ಚತುರ್ಥಕ್ಕೆ ವಲಂ ಮತ್ತಂ ಪಾತಾಳ ವೇಶ್ಮ ಸುಖ ಹಿಬುಕ ಬಂಧುವೆಂದ್ಕೆದು ಪೆಸರ್ (ಜಾತಕ. ೧-೩೪). [ಸಂ.]

ಹಿಮ (ಗು). ೧. ತಣ್ಣನೆಯ; ಶೀತಲವಾದ. ೨. ಇಬ್ಬನಿಯಿಂದ ಕೂಡಿದ; ಮಂಜಿನ. (ನಾ). ೩. ಚಳಿಗಾಲ; ಹೇಮಂತಋತು. ೪. ಚಂದ್ರ. ೫. ಹಿಮಾಲಯಪರ್ವತ: ಹಿಮದಿಂದಂ ಲವಣಾಂಬುರಾಶಿವರೆಗಂ ಷಟ್ಖಂಡ ಭೂಮಂಡಲಂ ನಿಮಿರ್ದಾಜ್ಞಾಪ್ರಸರಕ್ಕಗುರ್ವುಗೊಳೆಯುಂ . . . ಚಕ್ರೇಶ್ವರಂ ಕೀರ್ತಿ ವಿಭ್ರಮದಿಂ ಪಜ್ಜಳಿಪನ್ನಮುಜ್ಜಳಿಸಿದಂ ವ್ಯೋಮಾವನೀಭಾಗಮಂ (ಆದಿಪು. ೧೫-೪); ಹಿಮದಿಂ ಸೇತುವರಂ ಮತ್ತೆ ಮಗುಳ್ದಾ ಸೇತುವಿಂ ಹಿಮಂಬರೆಗಂ ವಿಕ್ರಮಕೇಳಿಯಿಂ ತೊಳ್ದುಂ (ಎಕ. V, ಹಾಸನ. ೧೩೦-೧೫; 1147 ?); ಯೋಗೇಶ್ವರ ದಂಣ್ಣನಾಯಕರು ಬನವಾಸೆ ಪಂನ್ನಿರ್ವ್ವಾಸಿರಮುವಂ(ಮಂ) ಸಾನ್ತಳಿಗೆ ಸಾಯಿರಮುಂ ಹಿಮಪರಿಯನ್ತ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿನಾಳುತ್ತಮಿರೆ (ಎಕ. V, ಹಾಸನ. ೧೧-೧೮; ಸು. 12ನಯ ಶತ). ೬. ಶ್ರೀಗಂಧದ ಮರ; ಚಂದನವೃಕ್ಷ. ೭. ಕರ್ಪೂರ: "ಘನಸಾರಂ ಪ್ರಾಲೇಯಾಂಶು ನಾಮಕಂ ಹಿಮಮೆನಿಪ್ಪುದದು ಕರ್ಪೂರಂ" (ವಸ್ತುಕೋ. ೭೬-೧೦); ಹಿಮ ಮಿಶ್ರಾಂಬುವನೊಯ್ಯನೋಪನಿದಿರೊಳ್ನಿಂದಂಗನಾಚಂದನಾಂಕಮನೋಜ್ಞಾಂಗದೊಳೊತ್ತ (ರಾಜಶೇ. ೧೦-೪೦). ೮. ಇಬ್ಬನಿ; ಮಂಜಿನ ಹನಿ: ಹಿಮಧವಳಾತಪತ್ರಮನೆ ಪೋಲ ಮುಪೇಂದುವ ಬೆಳ್ಪು ಪೂರ್ಣಕುಂಭಮನೆ ನಿರಂತರಂ ಗೆಲೆ ಕುಚಂಗಳ ತೋರ್ಪು . . . ಒಳಕೊಂಡುದವಳ್ಗೆ ಗರ್ಭಚಿಹ್ನಮೆ ಗಳ ಗರ್ಭದರ್ಭಕನ ಸೂಚಿಪ ಮುಂದಣ ರಾಜ್ಯಚಿಹ್ನಮಂ (ಪಂಪಭಾ. ೧-೧೨೦); ಇದಿರೊಳಾನುವುದರಿದು ಹಸುಳೆಯ ಕದನ ಹಂಗಿಗರಾದವಾಳ್ವನ ವದನಕಮಲಕೆ ನಮ್ಮ ಪೌರುಷವಿಂದು ಹಿಮವಾಯ್ತು (ಕುವಾದ್ರೋ. ೬-೨೮). ೯. ಮಂಜಿನ ಗಡ್ಡೆ; ಬರ್ಫ: 'ಹಿಮಗಡ್ಡೆ' ಪರಾ. ೧೦. ಚಳಿ; ಶೈತ್ಯ: ಹಿಮಮೆಂದಾತಪಬಾಧೆಯೆಂದು ಮಟ್ಟೆಯೆಂದಿಲ್ಲಾ ನೆಲಂ ಪಂಚರತ್ನವಮಯಂ ನಾಲ್ವೆರಲಲ್ಲದಾಗದೆಳವುಲ್ ನೀಲೋತ್ಪಲಾಬ್ಜಾಕರಾಲಿ ಮನಂಗೊಳ್ಳುದು (ಆದಿಪು. ೫-೨೯). ೧೧. ಹೊಸದಾದ ಬೆಣ್ಣೆ. ೧೨. ಮುತ್ತು. ೧೩. ಇರುಳು; ರಾತ್ರಿ. ೧೪. ತವರು. ೧೫. ಶಿವ; ಈಶ್ವರ. ೧೬. ದೊರೆ; ರಾಜ. ೧೭. ಅಮೃತ. ೧೮. ನೀರು; ಜಲ. ೧೯. ಬಿಳಿಯ ಬಣ್ಣ. ೨೦. ಕೆಂಪು ಬಣ್ಣ; ಕಾವಿ. ೨೧. ಕೀರ್ತಿ; ಯಶಸ್ಸು. ೨೨. ಮುಖ್ಯವಾದುದು; ಶ್ರೇಷ್ಠವಾದುದು: "ಶಂಕರ ನೃಪ ಕೀರ್ತಿ ಮುಖ್ಯ ಶಿಶಿರಾಮೃತ ಶುಭ್ರ ಹಿಮಾಚಲಂ ಸುಧಾಕರಜಲಗಳ್ ಹಿಮಾಹ್ವಯಂ" (ನಾನಾರ್ಥ. ೮೨); "ಜಾಜುಂ ಗಿರಿವುರ ನೀರ್ ಮಂಜು ಹಿಮವಿದಾಜು ಹಿಮಶಬ್ದಂ" (ನಾನಾರ್ಥ. ೧೧೧). [ಸಂ.]

ಹಿಮಂದಳೆ (ಕ್ರಿ). ಮಂಜನ್ನು ಧರಿಸು; ಇಬ್ಬನಿಯನ್ನು ಹೊತ್ತಿರು: ಇಂದುರುಚ ಬಂದುದೂ ಹರಸ್ಮೇರಂ ದಿವಿಯೊಳಾಕಾರಮಾಯ್ತೊ ಹಿಮಂದಳೆದುದೋ . . . ಏನೆ ರಜತಾದ್ರಿ ರಂಜಿಪುದು (ಬಸಪು. ೧-೩೮). [ಹಿಮ + ತಳೆ]

ಹಿಮಕರ (ನಾ). ೧. ತಂಪಾದ ಕಿರಣಗಳಿಂದ ಕೂಡಿರುವವನು; ಚಂದ್ರ: ಹಿಮಕರನಟಲಂ ಪಡೆವನೆಂಬುದಿದು ವಿಪರೀತಂ (ಕವಿಪಾ. ೩-೩೬); ಹಿಮಕರನಾತ್ಮ ಶೀತರುಚಿಯಂ ದಿನನಾಯಕನುಷ್ಣದೀಧಿತಿಕ್ರಮಮಂ . . . ಬಿಸುಟ್ಟೊಡಂ ಬಿಸು [ಬ್ಯೆಮ] ಬಿಸುಡೆಂ ಮದೀಯ ಪುರುಷವ್ರತಮೊಂದುಮನೀಗಳ್ (ಪಂಪಭಾ. ೧-೮೩); ಹರಿ ದಿಕ್ಕಣ ವಧು ಬರೆ ಹಿಮಕರ ಖರಕರರೊಂದೆ ತೆಱದೊಳನುರಕ್ತತೆಯಿಂ ನೆರೆವಳ್ಗಡ (ರಾಜಶೇ. ೧೨-೨೭). ೨. ಕರ್ಪೂರ: ಹಿಮಕರ ಮೃಗ ಕಾಳಾಗುರುತಮಾಳಜಾತೀಫಳಂಗಳೊಂದುಂಶಂ ತತ್ಸಮಮಾಗೆ ಪೂತಿಕರುಷಪ್ರಮಿತಾ ಗುರುವಾಗಿರರೆದು ಮಧುವಿಂದಮದಂ (ಶೋಕೋಪ. ೭-೬೪); ಕರಿದಂತಂ . . . ಚಂದನಂ ಹಿಮಕರಂ ಜಾತೀಫಳಂ ಪೂತಿ ಸೂಕರಮುಕ್ತಾಮಣಿ ಚೂಡಾರತ್ನಮೆಂಬೀ ವನಾಂತರಸಂಜಾತಮನಾತನೋಲಗಿಸಿದಂ ಸದ್ಯಸ್ಸುಸಂಘಾತಮಂ (ಪುಷ್ಪಪು. ೫-೧೦೨). ೩. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: ಶಶಿಯಿಂದು (ಹಿಮಗು ಹಿಮಕರ)ಶಶಾಂಕ ಸೋಮಂ . . . ರಸೆ ಧರೆ ಇಳೆ ರೂಪವೈಕಮೊಂದಱ ನಾಮಂ (ವ್ಯವಹಾ. ೯-೧).

ಹಿಮಕರಗಂಧ = ಒಂದು ಬಿರುದು: ಶ್ರೀ ವೀರಕೃಷ್ಣದೇವರಾಯದೇವ ಮಹಾರಾಯರವರು ನಮ್ಮ ವೃದ್ಧಪಿತಾಮಹರಾದ ಸಿಮ್ಮಗೋವಿನ್ದ ಹಿಮಕರಗನ್ಧ ಧವಲಾಂಕಭೀಮ . . . ಯರಕೃಷ್ಣಪ್ಪನಾಯಕರೈಯನವರಿಗೆ ಪಾಲಿಸ್ತ ಬೇಲೂರುಶೀಮೆಗೆ (ಎಕ. I (R), ೨೮-೮: 1693). [ಸಂ.]

ಹಿಮಕರಕುಲ (ನಾ). ಕ್ಷತ್ರಿಯರಲ್ಲಿ ಒಂದು ವಂಶ; ಚಂದ್ರನು ಮೂಲ ಪುರುಷನಾದ ವಂಶ; ಚಂದ್ರವಂಶ: ಹಿಮ[ಕರ]ಕುಲಲಲಾಮರು ಕಾಳಿಗಕೆ ಕೈದಟ್ಟಿ ಹರಿದುದು ಕಳನ ಚೌಕದಲಿ (ಕುವ್ಯಾಭೀ. ೬೧೩ ೩-೧, ಅಡಿಪದ್ಯ). [ಸಂ.]

ಹಿಮಕರಬಿಂಬ (ನಾ). ಚಂದ್ರನ ಆಕೃತಿ,—ಆಕಾರ; ಚಂದ್ರಬಿಂಬ: ಹಿಮಕರಬಿಂಬನಿಭಚ್ಛತ್ರಮನೀಶಾನೇಂದ್ರನೆತ್ತಿದಂ (ಆದಿಪು. ೬-೫೦); ಹಿಮಕರಬಿಂಬಮಂ ವಿಗತಲಾಂಛನಮಂ ಕಡೆದಬ್ಜಸಂಭವಂ ಪ್ರಮದದೆ ಮಾಡಿದಂ ಸುರನ ಸುಂದರರೂಪಮ ನೆಂಬಿನಂ . . . ತನೂದಯಮಾದುದು ಕೌತುಕಪ್ರದಂ (ವರ್ಧಪು. ೧೩-೨೮). [ಸಂ.]

ಹಿಮಕರಭೂಷಣ (ನಾ). ಚಂದ್ರನನ್ನು ಆಭರಣವಾಗಿ ಉಳ್ಳವನು; ಶಿವ: ಹಿಮಕರಭೂಷಣಾಜ್ಞಾಧಾರ ಬಸವಕುಮಾರ ಮಾಂ ತ್ರಾಹಿ (ಬಸಪು. ೨೦-೩೮). [ಸಂ.]

ಹಿಮಕರಮಂಡಲ, ಹಿಮಕರಮಂಡಳ (ನಾ). = ಹಿಮಕರಬಿಂಬ: ಹಿಮಕರಮಂಡಲದಿಂದೊಸರ್ವಮರ್ದನೆ ನಿಜಭಾಷೆ ಬೆಸಸಿದರ್ ಕೇವಲಿಗಳ್ (ಪಂರಾಮಾ. ೧೬-೭೧). **ಹಿಮಕರಮಂಡಳ**: ಹಿಮಕರಮಂಡಳ[ಪ್ರಾಕಾಂ. ಲ]ಮಿದು ಶತ್ರುಮಂಡಲಾಭಂ ನೃಪೇಂದ್ರ ಮಸುಳ್ದುದು ಬೇಗಂ (ಆದಿಪು. ೧೨-೫೨). [ಸಂ.]

ಹಿಮಕರಮಂಡಳ 'ಹಿಮಕರಮಂಡಲ' ನೋ.

ಹಿಮಕರಮೌಲಿ (ನಾ). ಚಂದ್ರನನ್ನು ಮುಡಿಯಲ್ಲಿ ಧರಿಸಿದವನು; ಶಿವ: ಹಿಮಕರಮೌಲಿ ಪೂರ್ವದೊಳುದಾರ ಭಗೀರಥನಂ ಪ್ರಮ್ಮುದದಿನಾಗಳೆ ಕಾಯ್ತುತೆನ್ನನೆ ಮನ್ನಿಸಿ ಬೇಳ್ಕೊಡಲ್ (ಹಾಲಾಸ್ಯ. ೧-೯-೧೨). [ಸಂ.]

ಹಿಮಕರೋಪಳ (ನಾ). ಚಂದ್ರಕಾಂತಶಿಲೆ; ಶಶಿಕಾಂತ: ಲಸತ್ಸಿತಸರೋಜಮಂ ಹಿಮಕರೋಪಳಾದರ್ಶಮಂ . . . ಬಿಸುಟ್ಟುಮವಿಕಾರದೊಳ್ ನೆಲಸಿದತ್ತು ತನ್ನಿಚ್ಛೆಯಿಂ ಪ್ರಸನ್ನತೆ ನಿಜಾಸ್ಯದೊಳ್ (ಚಂದ್ರಪು. ೧೪-೯೪). [ಸಂ. ಹಿಮಕರೋಪಲ]

ಹಿಮಕಿರಣ (ನಾ). ೧. ತಂಪಾದ ಕದಿರು,— ರಶ್ಮಿ. ೨. = ಹಿಮಕರ ೧: ವಿಮಲತರಗಗನತಲತಿಲಕ ಹಿಮಕಿರಣನಂ (ಆದಿಪು. ೬-೩೭ ರಗಳೆ); ಹಿಮಕಿರಣಂ ಸಂಧ್ಯಾರಾಗಮನುಲೀವಂತಾಗಳಂತೆ ಸುಗ್ರೀವಂ ರಾಗಮನುಬೀದು (ಪಂರಾಮಾ. ೧೦-೪೬); ಹರನವಸರಹನ್ನೆವರ ತಾವರೆಗಳಂ ಪಿಡಿದ ಹಿಮಕಿರಣಂ ತಿರುಗುತಿಪ್ಪಂ (ಬಸಪು. ೪೩-೪೩).

ಹಿಮಕಿರಣತಕಲಾಭರಣ = ಚಂದ್ರನ ಕಲೆಯನ್ನು ಆಭರಣವನ್ನಾಗಿ ಉಳ್ಳವನು; ಶಿವ: ಹಿಮಕಿರಣಶಕಲಾಭರಣನಜನವ್ಯತವಿಗ್ರಹನೀ ಪರಿಯೊಳಾಗಮನಪರಿತಾ ಪಪ್ರಶಮನವನಾಂತಿರಲು (ಬಸಪು. ೨೬-೪೫). [ಸಂ.]

ಹಿಮಕಿರಣಕಾಂತ (ನಾ). = ಹಿಮಕರೋಪಳ: ಸತತಮುಂ ಹಿಮಕಿರಣಕಾಂತ ಪ್ರತಿಮೆಯುದರದೊಳು ಜ್ವಲಿಸುವಪ್ರತಿಮದೀಪದವೊಲು . . . ಇರ್ದನು ತಾಯ ಬಸುಱಲಿ (ಬಸಪು. ೩-೧೨). [ಸಂ.]

ಹಿಮಕಿರಣಧರ (ನಾ). ಚಂದ್ರನನ್ನು ಧರಿಸಿದವನು; ಶಿವ: ಪರಿವಡೆದು ವಾಗ್ದೇವಿ ಕುಣಿವ ನಾಲಿಗೆಯ ಸರಸಿರುಹಸಂಭವರು ಸಾಸಿರಕೋಟಿ ಕುಳ್ಳಿರ್ದುದರರೆ ಬಲವಂತದೊಳಗೋಲ್ಕೆಸಿ ಹರನ ಶಂಕರನ ಹಿಮಕಿರಣಧರನ (ಸೌಂದಪು. ೧-೩೩). [ಸಂ.]

ಹಿಮಕೃತ್ತು (ನಾ). ೧. ಚಂದ್ರ: ಹಿಮಕೃದ್ವಂಶಜರಪ್ಪ ಪಾಂಡುಸುತರಂ ಕೆಯ್ಕೊಂಡು ನಿನ್ನಯ್ದು ಬಾಡಮನಿತ್ತುಂ ನಡೆಪೆಂದು ಸಾಮಮನೆ ಮುಂ ಮುಂತಿಟ್ಟೊಡೆ (ಪಂಪಭಾ. ೯-೮೮); ಹಿಮಕೃತ್ ಧರಾತ್ಮಕ ಸರಮರುತ್ ಧನಂಜಯರ ವಿಲಸತ್ ದೇಹ ಸರ್ವೇಶ್ವರಂ (ಗುರುಚಾ. ೮-೧). ೨. [ಛಂದ] ವರ್ಣಗಣಗಳಲ್ಲಿ ಒಂದು; ಭಗಣ (- UU):

ಕಾಂತಂ ಧಾತ್ರೀ ಹಿಮಕೃದಮರಾಕಾಶಯುಗ್ಮೇಶಯುಗ್ಮಂ ಮುಂತಂ ಬಂದಾ ಪದಭ ಕಡೆಯೊಳ್ಪೆಲ್ಲನಾಂತಿರ್ದೊಡಾ ವಿಶ್ರಾಂತಂ (ಛಂದೋಽಂಬು. ೨-೧೬೩). [ಸಂ. ಹಿಮಕೃತ್]

ಹಿಮಕೃದ್ಧರ (ನಾ). ಚಂದ್ರನನ್ನು ಧರಿಸಿದವನು; ಶಿವ: ಭದ್ರಗಾಯಕ ದೇವರಾದ್ಯರೊಲ್ ಮಿಗೆ ಹಿಮಕೃದ್ಧರನನು ಕೇಳಿಸಿದನು (ಭೈರವೇ. ೪-೯೮). [ಸಂ.]

ಹಿಮಕೃನ್ಮಂಡಲ (ನಾ). = ಹಿಮಕರಮಂಡಲ: ಶರದದ ಹಿಮಕೃನ್ಮಂಡಲದ ಮೇಲೆ ಚೆಲ್ವಂ ಕೊಂಡಿಸೆವ ಕಳಂಕದಂತಿರಿಸೆದಂ ಕೃಷ್ಣಂ (ಅರ್ಧನೇ. ೮-೩೬). [ಸಂ.]

ಹಿಮಗಡ್ಡೆ (ನಾ). ಮಂಜಿನ ಗಡ್ಡೆ; ನೀರ್ಗಲ್ಲು: ಸಮುದ್ರದ ಅಲೆ ಹೊಡೆದು ಮಾರುತ ಬೀಸಿ ಈ ಹಿಮಕ್ಷೇತ್ರ ಒಡೆದು ಸಣ್ಣ ಸಣ್ಣ ಹಿಮಗಡ್ಡೆಗಳ ರಾಶಿಗಳಾಗುತ್ತವೆ (ಭೂವಿಪ. ೮೯). [ಹಿಮ + ಗಡ್ಡೆ]

ಹಿಮಗದಿರ (ನಾ). ತಂಪಾದ ಕಿರಣಗಳನ್ನು ಉಳ್ಳವನು; ಚಂದ್ರ: ''ಜೊನ್ನೊಡಲಂ, ಸವಿಗಡಲಣುಗಂ . . . ಚಳಿಗದಿರಂ, ಹಿಮಗದಿರಂ, ಕಲ್ತಲೆವಣಿ, ತಿಂಗಳ್ - ಈ ೨೦ ಚಂದ್ರನ ಪೆಸರ್'' (ಕಶಸಾ. ೨೩). [ಹಿಮ + ಕದಿರ್$_2$ + - ಅ$_7$]

ಹಿಮಗಾಳಿ (ನಾ). ತಂಪಾದ ಗಾಳಿ; ತಂಬೆಲರು: ತೂರುವುದು ಹಿಮಗಾಳಿ ಹಣ್ಣೆಲೆಯನಾದು (ಇಂಗೀತ. ೧೮-೧೩). [ಹಿಮ + ಗಾಳಿ$_1$]

ಹಿಮಗಿರಿ (ನಾ). ೧. ಮಂಜಿನಿಂದ ಕೂಡಿದ ಪರ್ವತ; ಹಿಮವತ್ಪರ್ವತ: ಹಿಮಗಿರಿಯ ಮಧ್ಯಕೂಟದ ಹಿಮವದ್ವಿಜನುಮನೊತ್ತಿ ಕಪ್ಪಂಗೊಂಡಾ ಹಿಮಶೈಳದೊಳಮಲಂಪಿಂ ಹಿಮವತ್ತೇಜಮನುದಾತ್ತತೇಜಂ ಮೆಱೆದಂ (ಆದಿಪು. ೧೪-೫೯); ಸರಯೂತರಂಗಿಣಿಗೆ ಹಿಮಗಿರಿಯ ದೂರದಿಂದ್ಮೆತಂದುವೆಡಬಿಡದೆ ಕ್ರಾಂಚಸಾರಸಪಂಕ್ತಿ (ಶ್ರೀರಾಮಾ. ೧೫-೩೯). ೨. ಪರ್ವತರಾಜನಾದ ಹಿಮವಂತ: 'ಹಿಮಗಿರಿನಂದನೆ' ಪರಾ. [ಸಂ.]

ಹಿಮಗಿರಿನಂದನೆ (ನಾ). ಪರ್ವತರಾಜನ ಮಗಳು; ಗಿರಿಜೆ: ಹಿಮಗಿರಿನಂದನೆಗೆ ಮದ್ಭಿಮಳತತ್ವಾನಂದಬೋಧೆಯನಱುಹಿದದಱಿಂದಱುಹಿದನು ನಿನಗೆ (ಬಸಪು. ೨-೩೭). [ಸಂ. ಹಿಮಗಿರಿನಂದನಾ]

ಹಿಮಗಿರಿರಾಜ (ನಾ). ಪರ್ವತರಾಜ; ಪಾರ್ವತಿಯ ತಂದೆ: ಕರಸಿ ಬೇಕಾದ ಶಿಲ್ಪಿಗಳ . . . ಪಟ್ಟಣವ ಗುಡಿತೋರಣಂಗಳಲಲಂಕರಿಸಿ ಪೂರ್ವದಲಿ ಹಿಮಗಿರಿರಾಜನೆಂತು ಶಾಂಕರಿಯ ಕಲ್ಯಾಣಕುತ್ಸವಿಪಂತೆ ಭುಲ್ಲಿಸುತಿರ್ದನೀಶಾನಸೆಟ್ಟಿ (ಸೌಂದಪು. ೧೩-೨೭). [ಸಂ. ಹಿಮಗಿರಿರಾಜನ್]

ಹಿಮಗಿರಿಸುತೆ (ನಾ). = ಹಿಮಗಿರಿನಂದನೆ: ಸಜ್ಜಿಗ ಸೌವರಿಸಿ ಹಿಮಗಿರಿಸುತೆಯ ನಿದ್ರೆಯಿಚ್ಛೆಪಡಂತೆ ಮೆಲ್ಲನಾರ್ಸೆದೆದ್ದು (ಸೌಂದಪು. ೧-೭). [ಸಂ. ಹಿಮಗಿರಿಸುತಾ]

ಹಿಮಗು (ನಾ). ೧. ತಂಪಾದ ಕಿರಣಗಳನ್ನು ಉಳ್ಳವನು; ಚಂದ್ರ: ಪೊಂದುಗುಂ . . . ಅಚ್ಚಿಗಳ್ ದಿನಕರನಿಂ ತ್ವಚಂ ಹಿಮಗುವಿಂ (ಜಾತಕ. ೩-೩): ಅಭವಭಕ್ತಿ ಸಮಯವಾರ್ಧಿವಿವರ್ಧನೋಜ್ವಲ ಹಿಮಗು ಶಿವಕವಿದೇವನಾತ್ಮಜ ಸುಮತಿ ಭೀಮನುಭಯಕವಿತ್ವಸಮರ್ಥಸುಸುರುವೊಡೆ (ಬಸಪು. ೧-೧೭). ೨. ಚಂದ್ರಕಾಂತಶಿಲೆ; ಶಶಿಕಾಂತ: '' ಹಿಮಗು ಚಂದ್ರಕಾಂತಂ'' (ಮಂಗರಾ. ೩೧-೭). ೩. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: ಶಶಿಯಿಂದ (ಹಿಮಗು ಹಿಮಕರ) ಶಶಾಂಕ ಸೋಮಂ . . . ರಸೆ ಧರೆ ಇಳೆ ರೂಪಮೈಕಮೊಂದಱ ನಾಮಂ (ವ್ಯವಹಾ. ೯-೧). [ಸಂ.]

ಹಿಮಗೃಹ (ನಾ). ತಂಪಾದ ಮನೆ; ಶೈತ್ಯಾಲಯ: ಹಿಮಗೃಹಮಂ ವಿರಚಿಸುವುದ್ಯಮದಿಂ . . . ಚಿತ್ರಕೋದ್ಯಾನಮನಾಗಳ್ ಪೋಗಿ ಪೊಕ್ಕೆನತ್ಯಾತುರದಿಂ (ಕುಸುಮಾ. ೧೩-೪೩); ಎಲ್ಲಿ ಉಪವನ ವರಸರೋವರವೆಲ್ಲಿ ಕೇಳೀಶೈಲ ಹಿಮಗೃಹ . . . ಅಲ್ಲಿಗಲ್ಲಿಗೆ ಹರಿದು ಮೊರುತಿ ವಲ್ಲಭೆಯ ರಮಿಸಿದನು (ಕುದ್ಮಾಳ. ೯-೨೪). [ಸಂ.]

ಹಿಮಘರ್ಮ (ನಾ). ಶೀತದಿಂದ ಬರುವ ಜ್ವರ; ಚಳಿಜ್ವರ: ''ಹಿಮಘರ್ಮಮೆನೆ ಶೀತಜ್ವರಂ'' (ಮಂಗರಾ. ೧೧೪-೪). [ಸಂ.]

ಹಿಮಘೃಷ್ಟಿಶೇಖರ (ನಾ). ಚಂದ್ರನನ್ನು ಮುಡಿಯಲ್ಲಿ ಧರಿಸಿದವನು; ಶಿವ: ಹಿಮಘೃಷ್ಟಿಶೇಖರನೆನ್ನ ನೇಮವನೆಂತು ತಪ್ಪಿಸುವ (ಬಸಪು. ೫೩-೧೫೫). [ಸಂ.]

ಹಿಮಚೂರ್ಣ (ನಾ). ಕರ್ಪೂರದ ಪುಡಿ: ಅಸುವಯ ಕಲ್ಗಳಂತೊಳೆದು ಚಂದನಮಂ ಪನಿನೀರ್ಗಳಿಂದೆ ಚಾರಿಸಿ ಹಿಮಚೂರ್ಣಮಂ ತಳೆದು (ಗಿರಿಕ. ೨-೮೯). [ಸಂ.]

ಹಿಮಜಲ (ನಾ). ತಂಪಾದ ನೀರು; ತಣ್ಣೀರು: ಹಿಮಜಲದಿ ಕರವರಣಾಗ್ರಮುಖಪ್ರಕ್ಷಾಲನಂಗಳಂ ಮಾಡಿ . . . ಪಥಶ್ರಮಮಂ ಕಳೆದು ನೃಪಾಲತನಯಲಲಾಮಂ (ದಶಕು. ೬-೧೫). [ಸಂ.]

ಹಿಮತಾಂಬೂಲ (ನಾ). ಕರ್ಪೂರಮಿಶ್ರಿತವಾದ ತಾಂಬೂಲ: ಹಿಮತಾಂಬೂಲೋರುರಾಗಧರಮದ್ಯಧನಿತಂಬಾಂಬರಂ . . . ಚಂದನಾಪಾಂಡಿಮಗಾತ್ರಂ ಗ್ರೀಷ್ಮ ಸಾಯಂಸಮಯದೊಳಿಸೆದತ್ತಂದು ಬಾಲಾಕಲಾವಂ (ಚಂದ್ರಪು. ೯-೮೪); ಹಿಮತಾಂಬೂಲಮನಾಗಳಂತೆ ಕೆಲದೊಳ್ ತಾಂ ನಿಂದು ನೀಡುತ್ತುಂ (ಕುಸುಮಾ. ೧೦-೧೦೭). [ಸಂ.]

ಹಿಮದೀಧಿತಿ (ನಾ). ಚಂದ್ರನ ಕಾಂತಿ; ಬೆಳುದಿಂಗಳು: ಇದು ಕೊರಲಿಂತಿದಾರಮಿದು ಭೂಷ್ಯಮಿದರ್ಕಿದು ಭೂಷಣಂ ದಲೆಂಬುದನೆನವೇಡಳಂಕರಣಕಾರಣಮಾ ರಮಣಂ ಕೃತಾರ್ಥಮೆಂಬುದು ದೊರೆವೆತ್ತುಮಾ ವಿತತಹಾರಮಧ:ಕೃತತಾರಕಾಂತಿ ಪೋಲ್ತುದು ಖಚರಾನನಕ್ಕೆ ಹಿಮದೀಧಿತಿಯೆಂಬುದನುಂಟುಮಾಡುಗುಂ (ಶಾಂತಿಪು. ೩-೪೨). [ಸಂ.]

ಹಿಮದ್ಯುತಿ (ನಾ). ಚಂದ್ರನ ಬೆಳಕು,--ಕಾಂತಿ: ಒಳಿಯೊಳಿರ್ದ ವುಹೇಭ್ಯನ್ಮೌಳಿಯೊಳಿಸೆದಾನತಕಾರಿ ಸೊಗಯಿಸುಗುಂ ತಾರಾಳಿಯೊಳಿಸೆವ ಹಿಮದ್ಯುತಿಮಾಳಿವೊಲ್ (ಶಾಂತಿಪು. ೨-೪೪). [ಸಂ.]

ಹಿಮಧಾಮ (ನಾ). ತಂಪಾದ ಕಿರಣಗಳಿಗೆ ಆಶ್ರಯನಾದವನು; ಚಂದ್ರ: ಹಿಮಧಾಮಂ ನಿಲೆ ಜೀವ ವರ್ಜಿತ ಪರತ್ರಿಂಶಾಂಶದೊಳ್ . . . ಶುದ್ಧಾತ್ಮನಾ ಮಾನವಂ (ಜಾತಕ. ೪-೮). [ಸಂ.]

ಹಿಮನಗ (ನಾ). ೧. ಮಂಜು ಆವರಿಸಿದ ಪರ್ವತ; ಹಿಮಾಲಯ: ಹಿಮನಗದಂತೆ ಮೇಣದು ಸದಾ ಮಹಿಮಾನ್ವಿತಂ (ಶಬಶಂ. ೨-೩೫). ೨. ಹಿಮವಂತ. [ಸಂ.]

ಹಿಮನಗಸುತೇಶ (ನಾ). ಪರ್ವತರಾಜನ ಮಗಳಾದ ಪಾರ್ವತಿಯ ವಲ್ಲಭ; ಶಿವ: ಮುಗುಳುನಗೆ ಮೊಗದೊಳು ಮೊಳೆಯೆ ಹಿಮನಗಸುತೇಶನು ಮದಿಸಿದಾತನ ಬಗೆಯನಱಿದು (ಬಸಪು. ೨೪-೩೨). [ಸಂ.]

ಹಿಮನಗಾತ್ಮಜೆ (ನಾ). = ಹಿಮಗಿರಿನಂದನೆ: ಪ್ರಥಮರಾರೋ ಇವರೊಳಗ ಮದ್ರಮಣನಾವನೊಯೆನುತ ತಿಳಿಯದೆ ಹಿಮನಗಾತ್ಮಜೆ ನಿಂದಡೆ (ಬಸಪು. ೮-೩೦). [ಸಂ. ಹಿಮನಗಾತ್ಮಜಾ]

ಹಿಮನದಿ (ನಾ). ಮಂಜುಗೆಡ್ಡೆಗಳಿಂದ ಕೂಡಿದ ನದಿ; ನೀರ್ಗಲ್ಲ ನದಿ: ಶೀತದೇಶಗಳಲ್ಲಿ ಹಿಮನದಿ ಸಮುದ್ರಮಟ್ಟಕ್ಕಳಿಯುತ್ತದೆ (ಭೂವಿವ. ೧೧೫); ಹಿಮನದಿಗಳಷ್ಟು ಕೊರೆಯುವ ಶಕ್ತಿ ಇನ್ನಾವುದಕ್ಕೂ ಇಲ್ಲ (ಬಾಲಪ್ರ. ೧. ೭೭). [ಸಂ. ಹಿಮನದೀ]

ಹಿಮಪವನ (ನಾ). ತಂಪಾದ ಗಾಳಿ; ಶೀತಲವಾದ ಗಾಳಿ: ರೃಷ್ಟಿ ಕುಸುಮ ವರ್ಷಂ ದೇವರಹೋದಾನಘೋಷಣಂ ಹಿಮಪವನಂ ದೇವಾನಕರವವೊದವೆ ನೃಪಾವಾಸದೊಳೊಗೆದುದಿಂತು ಪಂಚಾಶ್ಚರ್ಯಂ (ಮಲ್ಲಿಪು. ೧೪-೧೧). [ಸಂ.]

ಹಿಮಪಿಕ (ನಾ). ೧. ಚಳಿಗಾಲದ ಕೋಗಿಲೆ. ೨. (ಆಲಂ) ಸಂತೋಷದಿಂದಿರದ ಕೋಗಿಲೆ; ದುಗುಡದಿಂದ ಕೂಡಿದ ಕೋಗಿಲೆ: ಬೆಳಗನುಳಿದಂತಿರುಳನಗಲಿದ ಕಳೆಯ ಕುಮುದಿನಿಯಂತೆ . . . ಹಿಮಪಿಕದಂತೆಯಸೆದಿರಲಾಗ ಕೌಸಲ್ಯೆ (ಪಠಾಮಾ. ೨೭-೩೯). [ಸಂ.]

ಹಿಮಪ್ರಭ (ನಾ). ಮಂಕಾದ ಕಾಂತಿಯಿಂದ ಕೂಡಿದವನು; ಚಂದ್ರ: ಸೆಡೆಯೆ ಹಿಮಪ್ರಭಂ ನಿಜಯಶಃಪ್ರಭೆಯಿಂದಿನನಂಶುಮಾಲೆ ಕೀಳ್ವಡೆ .. . . ರಾಹು ತನ್ನ ಹರಿನೀಳವಿಮಾನವುನೇಱುವಂತಿರಾಗಡೆ ಕಡುಕೆಯ್ದು ಪುಷ್ಪಕವಿಮಾನವುನೇಱಿದ ನಿಂದ್ರವಿದ್ವಿಷಂ (ಪಠಾಮಾ. ೯-೭೪). [ಸಂ.]

ಹಿಮಭಾನು (ನಾ). ಚಂದ್ರ: ವ್ಯಜನಕಂಜಾತಸಂಜಾತಹಿಮಭಾನುವಂ ಭವವನಕೃಶಾನುವಂ ಭಜಕಸುರಧೇನುವಂ ಚಿದ್ರತ್ನಸಾನುವಂ ಶಂಕರನ ಸೂನುವಂ ನಾ ನುತಿಸುವೆಂ (ಉದ್ಭವೇ. ೩-೫): ಭಾನುವಿಲ್ಲದ ದಿವಸಮುಂ ಹಿಮಭಾನುವಿಲ್ಲದ ರಾತ್ರಿಯುಂ ಸನ್ಮಾನವಿಲ್ಲದ ನಂಟನುಂ . . . ಸೂನೃತವಿಲ್ಲದಾಲಾಪ (ಬಸಪು. ೩೭-೩೧). [ಸಂ.]

ಹಿಮಮಣಿ (ನಾ). ಮಂಜಿನ ಹನಿ; ಇಬ್ಬನಿ: ಗಹಗಹಿಸಿ ಬೀರಿತು ಪಸುರ್ನಗೆಯ ವೀಚಿಯಂ. ಹಿಮಮಣಿವುರೀಚಿಗಳ ದಂತಪಂಕ್ತಿಯ ಕಾಂತಿ ದೇಸೆದೆಸೆಗೆಸೆಯೆ (ಚಿತ್ರಾಂಗ. ೫೦-೧೩೬೦). [ಸಂ.]

ಹಿಮರಶ್ಮಿ (ನಾ). ೧. ತಂಪಾದ ಕಿರಣ: ಜಗಕೆಲ್ಲ ತಂಪನೆಸಗುವ ಮೃಗಲಾಂಛನನಕಟ ತನ್ನ ಹಿಮರಶ್ಮಿಗಳಿಂ . . . ಅಗಲಿಕೆಯಾಂತೆನ್ನ ಸುಡುವನೇಗ್ಮೆದಪೆನಾಂ (ಶಾಂತಿಪು.೩೨ ಆದಿಬ). ೨. ತಂಪಾದ ಕಿರಣಗಳನ್ನು ಉಳ್ಳವನು; ಚಂದ್ರ: ಹಿಮರಶ್ಮಿ ರೋಹಣೀ ಕುಂಕುಮಮಸೃಣೋಲ್ಬಣರಸಂ ನಿಜಾಕೃತಿಯೊಳ್ ಸಂಕ್ರಮಿಸಿ ದೊಡದನವುರಾಪಗೆಯ ಮಡುವಿನೊಲ್ ಕರ್ಚಿದಂತೆ ಕೆಂಪಂ ಬಿಸುಟಂ (ಶಾಂತಿಪು.೮-೭೨). [ಸಂ.]

ಹಿಮರುಕ್ಷತ್ರ (ನಾ). ಚಂದ್ರನ ಮಗ; ಬುಧ: ಹಿಮರುಕ್ಷುತ್ರಂ ಷಡಾಯ ವ್ಯಯ ನವದಶಪಂಚತ್ರಿಗೇಹಂಗಳೊಳ್ . . . ಮಾಟ್ಟುಮೊಳ್ಕಂ (ಜಾತಕ.೧೦-೪). [ಸಂ.]

ಹಿಮರುಗ್ಮಿಂಬ (ನಾ). = ಹಿಮಕರಬಿಂಬ: ಹಿಮರುಗ್ಮಿಂಬಕಳಂಕಪಂಕಮನದಂ ಪ್ರಕ್ಷಾಳಿಸಲ್ಕೆಂದು . . . ವಿಳಸತ್ಕೀಯೂಷಮಂ ತಂದು ತನ್ನ ಮನಃಪ್ರೇಮದಿನಿಲ್ಲಿ ಪಂಕಜಭವಂ ತೀವಿಟ್ಟನೋ ತಾನೆನಲ್ ಕವುನೀಯಂಬಿಡಿದಿರ್ದುದಾ ಕೊಳಂ (ಕುಸುಮಾ. ೧೧-೧೪೨). [ಸಂ.]

ಹಿಮರುಗ್ಮೌಲಿ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಚಂದ್ರಶೇಖರ; ಶಿವ: ತ್ವಗ್ಭಾಂಸಾಸ್ಥಿಮುಖಾವಯವಮುಂ ಹಿಮರುಗ್ಮೌಲಿಗೆ ಧೂಪಾಮೋದಂಗುಡ (ಉದ್ಭಟ. ೩-೬೧). [ಸಂ.]

ಹಿಮರುಚಿ (ನಾ). ತಂಪಾದ ಕಿರಣಗಳಿಂದ ಕೂಡಿದವನು; ಚಂದ್ರ: ಹಿಮರುಚಿ ಕುಂದೆಕುಂದ ನೆರೆದೊಪ್ಪುವ ಚಂದ್ರಿಕೆ ಕುಂದುವಂತೆ (ಶಾಂತಿಪು.೭-೭೮); ಹಿಮರುಚಿ ತಾನಗಲ್ದಿರದೆ ಪೊಗೆ (ಕುಸುಮಾ.೧೦-೮೦). [ಸಂ.]

ಹಿಮರುಚಿಗ್ರಾವ (ನಾ). ಚಂದ್ರಕಾಂತಶಿಲೆ; ಶಶಿಕಾಂತ: ಪನಿಯಂ ಸೂಸುತ್ತ ದಿಂಬಾದುದಾ ಹಿಮರೋಚಿಷ್ಕರಪಾತದಿಂ ಹಿಮರುಚಿಗ್ರಾವಸ್ಫುರತ್ಪುತ್ರಿಕಾಂಗವೆ ತಾನೊಲ್ಪೊರ್ದಿಕ್ಕುವಂತೆ ವಿಳಸನ್ಮುಕ್ತಾಚ್ಛವಾರ್ಬಿಂದುವಂ (ರಾಜಶೇ. ೧೦-೪೧). [ಸಂ.]

ಹಿಮರೋಚಿ (ನಾ).= ಹಿಮರುಚಿ: ಪ್ರಾಚೀಪರ್ಯಂತರ ಹಿಮರೋಚಿಯವೋಲ್ ತಾಯ ಕೆಲದೊಳಿರ್ದಖಿಳಜಗಲ್ಲೋಚನನಂ ನೀಳೋತ್ಪಳಲೋಚನೆ ಕರಮೊಸೆದಳಾ ಚಕೋರಾಂಗನೆವೊಲ್ (ವರ್ಧಮಾ.೧೨-೭); ಪೊಗಳ್ವುದು ಜನಂ ವಿಬುಧೋತ್ಕರ ಕೈರವಪ್ರಬೋಧನಹಿಮರೋಚಿಯಂ ನೆಗರ್ದ್ದ ಬೂಚಿಯಂ (ಎಕ.II, ೧೨೬-೨೮; 1113).

[ಸಂ. ಹಿಮರೋಚಿಸ್]

ಹಿಮರ್ತು (ನಾ). ಚಳಿಗಾಲ; ಹೇಮಂತಋತು: ಕೋಕಿಲಗಲಂ ನುಣ್ಪೇಜೆ . . . ಹಿಮರ್ತುವಾಜೆ ತೃಣಸಂದೋಹಂ ಕರಂ ಬೀಜೆ ನಿರ್ಮಲಚಿತ್ತಂ ಮಿಗೆ ತೋಜೆ ಬಂದುದು ವಸಂತಂ (ದಶಾವ. ೬-೧೬). [ಹಿಮ + ಋತು]

ಹಿಮವಂತ (ನಾ).೧. ಮಂಜನ್ನು ಹೊಂದಿರುವುದು; ಇಬ್ಬನಿಯಿಂದ ಕೂಡಿದುದು. ೨. ಹಿಮಾಲಯಪರ್ವತ: ಭಿಕ್ಷುಗಳು ಬಹುವಾಗಿ ಹಿಮವಂತಕ್ಕೇ ಹೋಗುವರು (ಬುದ್ಧಪ. ಬಿಲಿಂದ. ೨೦). ೩. ಹಿಮಾಲಯಪರ್ವತದ ಅಭಿಮಾನ ದೇವತೆ; ಪರ್ವತರಾಜ: ಸಪ್ತಋಷಿಗಳು ಅಲ್ಲಿಗೆ ಬರಲು, ಬ್ರಹ್ಮದೇವನು ಅವರನ್ನು ಹಿಮವಂತನ ಬಳಿಗೆ ಕಳಿಸಿದನು (ತುಳಸೀ. ೩೦). [ಸಂ. ಹಿಮವತ್]

ಹಿಮವತ್ಕಾಳ (ನಾ).ಚಳಿಗಾಲ; ಮಾಘಮಾಸ: ಹಿಮವತ್ಕಾಳದೊಳಾ ವಿಶಾಳ ಗುಣನತ್ಯಾನಂದದಿಂ ಬೆಳ್ಳವಾಸಮನುದ್ಯಾಮನಿರಲ್ (ನೇಮಿಪು. ೨-೬೪).

[ಸಂ. ಹಿಮವತ್ಕಾಲ]

ಹಿಮವತ್ಕುಕ್ಷೀಲ (ನಾ). ಹಿಮಾಲಯಪರ್ವತ; ಹಿಮಾಚಲ: ಹಿಮವತ್ಕುಕ್ಷೀಲ ಲೀಲಾವನಪರಿಸರರಮ್ಯೋಪಕಂಠಗಳೊಳ್ಪಿಂ ಕ್ರೀಡಿಸುತುತ್ತಮ ಸೌಖ್ಯಾಧಾರನಾದಂ (ಆದಿಪು. ೨-೭೮). [ಸಂ.]

ಹಿಮವತ್ತಟ (ನಾ). ಹಿಮಾಲಯಪರ್ವತದ ಸುತ್ತುಮುತ್ತಿನ ಪ್ರದೇಶ: ಷಟ್ಖಂಡಭೂವಲ್ಲಭನುಂ ಹಿಮವತ್ತಟಂಬಿಡಿದು ಮೂಡಮೊಗದೆ ಪಯಣಂಬರೆ (ಶಾಂತಿಪು. ೧೦-೫೮ ವ). [ಸಂ.]

ಹಿಮವತ್ಪರ್ವತ (ನಾ). ಹಿಮಾಲಯಪರ್ವತ; ಹಿಮಾಚಲ: ಭರದೆ ಹಿಮವತ್ಪರ್ವತಕೆ ಮದನನ್ಯೆತರಲ್ (ಲಶಚಂ. ೧೪-೪೩). [ಸಂ.]

ಹಿಮವತ್ಸುತೆ (ನಾ). ಪರ್ವತರಾಜನ ಮಗಳು; ಗಿರಿಜೆ: "ಉಮ ಪಾರ್ವತಿ ಕಾತ್ಯಾಯನಿ ಹಿಮವತ್ಸುತೆ . . . ಮಹೇಶ್ವರಿ ಕಾಳಿಯೆಂಬಿವಂಬಕೆಯ ಪೆಸರ್" (ಮಪ್ರಕೋ. ೩-೧೬). [ಸಂ. ಹಿಮವತ್ಸುತಾ]

ಹಿಮವದ್ಗಿರಿ (ನಾ).= ಹಿಮವತ್ಪರ್ವತ: ಹಿಮವದ್ಗಿರಿಕಟಕದಿನೊಗವಮರಸರಿತ್ ಸ್ರೋತವೆಂಬ ಮಾತಂ ಪಡೆದೇಂ ಹಿಮಗೌರಹಾರಮೆಸೆದುದೂ ಹಿಮಶೈಲಶಿಲಾವಿಶಾಲ ವಕ್ಷಸ್ಥಳದೊಳ್ (ಆದಿಪು. ೪-೩೮). [ಸಂ.]

ಹಿಮವನ್ನಗ (ನಾ).೧. = ಹಿಮವತ್ಪರ್ವತ: ಹಿಮವತ್ಸಾರತೆಯಂಬುಂ ಹಿಮಮಂ ನೃಪನಱಿದನವನಿಪತಿಸಾರತೆಯಂ ಹಿಮವನ್ನಗಮಱಿದುದದೇನವೇಯಸಾರರೂ ಹಿಮಾದ್ರಿಯುಂ ಭೂಪತಿಯುಂ (ಶಾಂತಿಪು. ೧೧-೫೯). ೨. = ಹಿಮವಂತ ೩. [ಸಂ.]

ಹಿಮವನ್ನಗಜೆ (ನಾ). ಪರ್ವತರಾಜನ ಮಗಳು; ಗಿರಿಜೆ: ಭೋಗೋತ್ಸನ್ನ ನಾನಾ ವಸ್ತುಗಳನಭಿಮತಫಲಾದಿಗಳ ಮುನ್ನವೊಡನೊಡನೊದವಿಸುತ ಹಿಮವನ್ನಗಚಿಯರಲುಂ (ಬಸವ. ೪-೪೦). [ಸಂ. ಹಿಮವನ್ನಗಜಾ]

ಹಿಮವರ್ಷ (ನಾ). ಇಬ್ಬನಿಯ ಸುರಿತ: ಹಿಮವರ್ಷಬಿಂದುಗಳ್ ಸಂಕ್ರಮಿಸಿರೆ ವನತರುನಿಕಾಯದೊಳ್ ನವಮುಕುಳೌಘಮನಾಂತ ಸುರಭಿವಾತಂ ಭ್ರಮರಾಳಿಗೆ ಪರಿಮಳಾನುಮಿತಮಾಯ್ತತ್ತಂ (ಜಗಮ. ೧೪-೪). [ಸಂ.]

ಹಿಮವಾರವಾಣ (ನಾ). ಮಂಜನ್ನೇ ಕವಚವಾಗಿ ಉಳ್ಳುದು; ಹಿಮಾಲಯ ಪರ್ವತ: ಪ್ರಕಟಪ್ರೀಹಿಮವಾರವಾಣವಿಶದಂ ಗಂಗಾಂಶುಕನ್ಯಸ್ತಮಸ್ತಕನಗ್ರಸ್ಥನಮೇರು ಶೇಖರಂ (ಶಾಂತಿಪು. ೧೧-೬೦). [ಸಂ.]

ಹಿಮವಾರಿ (ನಾ).೧. ಮಂಜಿನ ನೀರು. ೨. ಅನೇಕ ವಿಧವಾದ ಹೂವುಗಳಿಂದ ತೆಗೆದ ಸಾರ; ಪನ್ನೀರು: "ಹಿಮವಾರಿ ಪನ್ನೀರೆನಿಕ್ಕುಂ" (ಮಂಗರಾ.೯೯ ೨೨). [ಸಂ.]

ಹಿಮವಾಲುಕ (ನಾ). ಕರ್ಪೂರದ ಪುಡಿ: "ಹಿಮವಾಲು [ಪಾಠಾಂ. ಳು] ಕಂ ಚೀನ ತುಹಿನಂ ಪನ್ನೆಯಕ್ಕು" (ಮಂಗರಾ. ೯೯-೨೨); ಸುಚಿಂದನ ಹಿಮವಾಲುಕಂ ಕಸ್ತೂರಿಗಳ ಪುಡಿಯಂದಂಗಜನಂಗವಿಭೂತಿಯ ತೊಡಕೊಂಡವನಲ್ಲ (ಭಕ್ತಿಸ. II, ೨೦-೨). [ಸಂ.]

ಹಿಮವಿಭವ (ನಾ). ಅಧಿಕ ಚಳಿಯಿಂದ ಕೂಡಿದುದು: ಹಿಮವಿಭವಂ ಪ್ರತೀತಶಿಶಿರಂ ಸಮಯಂ ಸಮಯಜ್ಞನಂದದಿಂದಮೆ ಪೆಱಪಿಂಗಿದತ್ತು (ಪಾರ್ಶ್ವಪು. ೮-೧೫೬). [ಸಂ.]

ಹಿಮವೆಟ್ಟ (ನಾ). ಮಂಜಿನಿಂದ ಕೂಡಿದ ಬೆಟ್ಟ; ಹಿಮಾಲಯ: ನಡಗೊಂಡು ಹಿಮವೆಟ್ಟವಂ ಕಂಡ ಮನ್ಮಥವೀರನಱಿವವರ ಚರಣಾಂಬುಜಕ್ಕೆ ಶರಣು (ಲಶಚಂ. ೧೪-೪೧). [ಹಿಮ + ಬೆಟ್ಟ]

ಹಿಮಶಿಖರಿ (ನಾ). ಮಂಜಿನಿಂದ ಕೂಡಿದ ತುದಿ ಅಥವಾ ಶಿಖರವನ್ನುಳ್ಳುದು; ಹಿಮಾಲಯಪರ್ವತ: ಅವಱೊಳುತ್ತರಶ್ರೇಣಿಯೊಳುದಗ್ರಹಿಮಶಿಖರಿಶೇಖರಶಾರದ ನೀರದಾಕಾರ ಸುಧಾಧವಲಿತೋತ್ತುಂಗಪ್ರಾಸಾದಕೂಟಕೋಟಿಸಂಕೀರ್ಣಮುಂ . . . ಆಗಿ (ಆದಿಪು. ೧-೭೦ ವ). [ಸಂ. ಹಿಮಶಿಖರಿನ್]

ಹಿಮಶೈಲ, ಹಿಮಶೈಳ (ನಾ). ಮಂಜಿನಿಂದ ಕೂಡಿದ ಪರ್ವತ; ಹಿಮಾಚಲ: ಹಿಮಶೈಲಾಗ್ರ ಸರಸ್ಸರೋರುಹರಜಃಪಿಂಗಾಂಗೆಯಂ . . . ನೋಡಿ ನಾಡೆ ಮನಂಗೊಂಡ ನೀಶ್ವರಂ (ಆದಿಪು. ೧೧-೫೪); ಹಿಮಶೈಲಪ್ರಮುಖಂಗಳಾದು ಕುಲಶೈಲಗಳ್ಕಿಯದ್ಯಾಹಿನೀ ಪ್ರಮುಖಂಗಳ್ ಪದಿನಾಲ್ಕು ಗೋತ್ರನದಿಗಳ್ . . . ನಿಜನಾನಾವರ್ಣದಿಂ ಮುತ್ತ ಚಿತ್ರಮನೇಂ ಚಿತ್ರಜ ಚಿತ್ರಶಾಲೆಯೆನೆ ಜಂಬೂದ್ವೀಪಮಿಂಬಾದುದೋ (ಮಲ್ಲಿಪು. ೧-೬೬). ಹಿಮಶೈಳ: ಹಿಮಶೈಳ[ಪಾಠಾಂ. ಲ]ದೊಳಂ ಜಳಧಿಯೊಳಮೆಂತಭಿನ್ನಾಂಗಿ ಗಂಗೆ ಸಂಗತೆ ಖಚರೋತ್ತಮನೊಳಮಾ ವಿದ್ಯಾಧರಕುಮಾರನೊಳಮಂತೆ ಲಕ್ಷ್ಮಿ ಸಂಗತೆಯಾದಳ್ (ಆದಿಪು. ೧-೭೭). [ಸಂ.]

ಹಿಮಶೈಲೇಂದ್ರ (ನಾ). ಮಂಜಿನಿಂದ ಕೂಡಿದ ಪರ್ವತಗಳ ಒಡೆಯ; ಹಿಮಾಚಲ: ಹಿಮಶೈಲೇಂದ್ರಮೆಱಂಕೆಯಂ ತಳೆದು ಬಂದಾಕಾಶದೊಳ್ ನೋಡೆ ಮೇರುಮಹಾಶೈಲಮನಾಂತು ಪಾಱಿದಪುದೆಂಬನ್ನಂ . . . ಅಬ್ಜಭವಹಂಸಂ ಪಾಱಿತಾಬ್ಜಾಧ್ವದೊಳ್ (ಜಗಮ. ೧-೪೦). [ಸಂ.]

ಹಿಮಶೈಳ 'ಹಿಮಶೈಲ' ನೋ.

ಹಿಮಸಮಯ (ನಾ). ಚಳಿಗಾಲ; ಹೇಮಂತಋತು: ಹಿಮಸಮಯದೊಳಾ ದೀಪಂ ಹಿಮದಿಂದೆಲುವಡೆಯೆ ಬಗೆಯ ಬಕ್ಕಂಬಯಲೊಳ್ ಹಿಮನಿಧಿಯೆಮನಿಧಿ XXX ಧೈರ್ಯಮಹಾಂಬುಧಿ ನೆಲಸಿ ಬೆಳ್ಳವಾಸದೊಳಿರ್ದಂ (ಅಜಪು. ೧೨-೩); ವನದೇವತೆ ಹಿಮ ಸಮಯಕ್ಕನುನಯದಿಂ ಸೇನೆದಳಿದ ಕಳಮಾಕ್ಷತಮಂ ನೆನೆಯಿಸಿದುವು ನೀಳ್ದಿನ ಬೆಳ್ದಿನ ಜಾದಿಯ ನನೆಗಳಳಿಕುಲೋಚ್ಚಲಿತಂಗಳ್ (ಪುಷ್ಪಪು. ೬-೪೩). [ಸಂ.]

ಹಿಮಸಮಯಪತಿ (ನಾ). ಚಳಿಗಾಲದ ಒಡೆಯ; ಚಂದ್ರ: ಹಿಮಸಮಯಪತಿಯ ರೂಪಂ ಕುಮುದಿನಿ ನೋಡಲ್ಕೆ ಪಲವು ಕಣ್ಗಡದಂತೇಂ ರಮಣೀಯಮಾಯ್ತೊ ವಿದಳಿತ ಕುಮುದಂಗಳ ಮಿಸುಗುವೆಸಟ ಮಸಕಂ ಕೊಳದೊಳ್ (ಪುಷ್ಪಪು. ೬-೪೪). IP ಋತುಗಳಿಗೆ ಅಧಿಪತಿಗಳನ್ನು ಎಲ್ಲಿಯೂ ಹೇಳಿರದಿದ್ದರೂ ಶೀತಕ್ಕೆ ಚಂದ್ರನನ್ನೂ ಉಷ್ಣಕ್ಕೆ ಸೂರ್ಯನನ್ನೂ ಹೋಲಿಸಿ ಹೇಳುವುದರ ಅನುರೂಪತೆಯ ಮೇಲೆ ಕವಿ ಈ ಶಬ್ದವನ್ನು ಬಳಸಿರಬಹುದು. [ಸಂ.]

ಹಿಮಾಂಬು (ನಾ). ತಂಪಾದ ನೀರು; ಹಿಮಜಲ: ಕಳದಿಯ ಮೇಲೆ ಹಿಮಾಂಬುವ ತುಳುಂಕಲೆಂದೊರ್ವಳ್ಬಿ ಮುಳುಗಿರೆ ಕೊಳದೊಳ್ ಜಳರುಹಮನವಳ ಮೊಗಮೆಂದಳಿಸಿ ಕರಂ ಪೊಯಿದಳಂಬುವಂ ಸಂಭ್ರಮದಿಂ (ರಾಜಶೇ. ೧೦-೮೩). [ಸಂ.]

ಹಿಮಾಂಶು (ನಾ).೧. ತಂಪಾದ ಕಿರಣ: ಹಿಮಕರನ ಹಿಮಾಂಶುಗಳುತ್ತಮಜಾತಿಗ ಮಂತ್ಯಜಾತಿಗಂ ತನ್ನೆಂದಂ ಸಮನಪ್ಪ ತೆಱದಿ ನರನುಂ ಸಮನಾಗಲೇವೇಱ್ಕುಮಾವ ಜಾತಿಗಮಂತುಂ (ಸಮುವ. ೧೫-೨). ೨. ತಂಪಾದ ಕಿರಣಗಳಿಂದ ಕೂಡಿದವನು; ಚಂದ್ರ: ಕೃಶತಾಪಾನ್ವಿತನಾ ಹಿಮಾಂಶು ಗುರುವಿಂ ಗೋತ್ರಾರಿಯನ್ಯಾಂಗನಾರತಿಯಿಂ . . . ದಶಕಂಠನಾ ಹರಿಶರಕ್ಕೀಡಾದಂ (ಸೋಮಚ. ೩೯); ಇನನುದಯಿಸಲಿ ಪಶ್ಚಿಮಾದ್ರಿಯೊಳ ನಲನೊಮ್ಮೆ ಹಿಮಾಂಶುವಾಗಲಿ . . . ಸದ್ಮನರುಗಳು ನುಡಿದರಡನಾಡರು ಮನವಚನ ಕಾಯದಲಿ (ಕುವಾಭಾ. ೩-೧೨೬). ೩. ಕರ್ಪೂರ. [ಸಂ.]

ಹಿಮಾಂಶುಗೃಹ (ನಾ). [ಜ್ಯೋತಿ]ಚಂದ್ರನು ಅಧಿಪತಿಯಾಗಿರುವ ಸ್ಥಾನ, — ರಾಶಿ; ಕರ್ಕಾಟಕ ರಾಶಿ: ಹಿಮಾಂಶುಗೃಹದೊಳ್ ಸುರೇಜ್ಯನಿರೆ ಪುತ್ರವಿತ್ತಾಂಗನಾ ಸಮುತ್ಕವಿಭವಂ ಸುಬುದ್ಧಿ ಸುಖಿ (ಜಾತಕ. ೧೭-೨೮). [ಸಂ.]

ಹಿಮಾಂಶುಮಂಡಲ (ನಾ). ಚಂದ್ರನ ಬಿಂಬ, — ಆಕೃತಿ; ಚಂದ್ರಮಂಡಲ: ಉದಯಾದ್ರಿಯೊಳ್ ಪದಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶು ಮಂಡಲಂ (ಪಂಪಭಾ. ೩-೮೧); ಆ ಹಲಗೆ ಸೋತುದು ಯುಧಿಷ್ಠಿರನೂಹೆ ಮುಱಿದುದು ಮುಂದುಗೆಟ್ಟನು ರಾಹು ಹಿಡಿದ ಹಿಮಾಂಶುಮಂಡಲದುಳಿದ ಕಳೆಯಂತೆ (ಕುವ್ಯಾಸ. ೧೪-೨೩). [ಸಂ.]

ಹಿಮಾಂಶುರಶ್ಮಿ (ನಾ). ಚಂದ್ರನ ಕಿರಣ: ಹಿಮಾಂಶುರಶ್ಮಿಗಳನುಜ್ಜಳಿಸಿರ್ದುಟಜಾಂಗಣಂಗಳೊಳ್ ಪರೆದಸಗಿತ್ತತಿಪ್ರಮದಕಾರಣನಂದು ನಿಶಾಸಮಿಾರಣಂ (ಕಾದಂಪು. ೨೪೩). [ಸಂ.]

ಹಿಮಾಂಶುವಂಶ (ನಾ). ಕ್ಷತ್ರಿಯರ ಒಂದು ವಂಶ; ಚಂದ್ರನು ಮೂಲಪುರುಷನಾದ ಒಂದು ವಂಶ; ಚಂದ್ರವಂಶ: ಆ ವಿನೇಯನಿಕಾಯಾಂಬುಜಭಾನುವಪ್ಪ ಹಿಮಾಂಶುವಂಶಲಲಾಮಂ (ಶಾಂತಿಪು. ೧೧-೬೫ ವ). [ಸಂ.]

ಹಿಮಾಂಶುಶೇಖರ (ನಾ).೧. ಚಂದ್ರನನ್ನು ಮುಡಿಯಲ್ಲಿ ಧರಿಸಿದವನು; ಶಿವ. ೨. [ಛಂದ] ಗುರುವನ್ನು ಸೂಚಿಸುವ ಒಂದು ಸಂಕೇತ, —ಪದ: ಸುರಪ ಶೀತಕರಾಗ್ನಿ ಮಾರುತ ಭಾನುಯುಗ್ಮಗಣಂಗಳಿಂ ಪರದೊಳೊಪ್ಪೆ ಹಿಮಾಂಶುಶೇಖರ ನಿರ್ದು ವಿಶ್ರಮಣಂ ದಿಶಾಕರಿಯೊಳಾಗಿರೆ . . . ನಾಮದಿಂ ತರಳಂ ಕವೀಂದ್ರಜನಸ್ತುತಂ (ಛಂದೋಂಬು. ೨-೧೭೧). [ಸಂ.]

ಹಿಮಾಗಜಾತೆ (ನಾ). ಪರ್ವತರಾಜನ ಮಗಳು; ಪಾರ್ವತಿ: ಹಿಮಾಗಜಾತೆ ನಿತ್ಯಪೂತೆ . . . ಪಾಲಿಸೆಮ್ಮನಂಬಿಕೇ (ಹಾಲಾಸ್ಯ. ೩-೯-೨೭). [ಸಂ. ಹಿಮಾಗಜಾತಾ]

ಹಿಮಾಚಲ, ಹಿಮಾಚಳ (ನಾ).೧. ಮಂಜಿನಿಂದ ಕೂಡಿದ ಪರ್ವತ; ಹಿಮಾಲಯ: ಹಿಮಾಚಲಕ್ಕೆ ತೆಂಕಣದೆಸೆಯೊಳ್ನೀಲಗಿರಿಯಿರ್ಪುದು (ಎಕ.IV. (R). ಎಳಂದೂ. ೧-೫; 1654). ೨. = ಹಿಮವಂತ ೩: 'ಹಿಮಾಚಲನಂದನೆ' ಪರಾ.

ಹಿಮಾಚಳ: ೧. ನಳನಳಿಸುತ್ತ ಸುತ್ತಿದಿದು ತೋರ್ಪ ಕದಂಬ ಕದಂಬದಿಂ . . . ಎತ್ತಲುಂ ತುಱುಗಿ ಪರ್ವಿದಗುರ್ವಿನ ಬಿಂಬ ಬಿಂಬದಿಂದಿಳೆಯೊಳಗೊಪ್ಪುತಿರ್ಪುದು ಹಿಮಾಚಳಂ (ಗಿರಿಕ. ೧-೫೨). [ಸಂ.]

ಹಿಮಾಚಲನಂದನೆ (ನಾ). ಪರ್ವತರಾಜನ ಮಗಳು; ಪಾರ್ವತಿ: ಬೆಸಸೆನೆ ಹಿಮಾಚಲನಂದನೆಗೆ ಶಿವನಾ ಮುನೀಂದ್ರನು ಕೇಳಲಿಂತೆಂದ (ಬಸಪು. ೧-೬೨).

[ಸಂ. ಹಿಮಾಚಲನಂದನಾ]

ಹಿಮಾಚಳ 'ಹಿಮಾಚಲ' ನೋ.

ಹಿಮಾದ್ರಿ (ನಾ). ಹತ್ತುಕುಲಪರ್ವತಗಳಲ್ಲಿ ಒಂದು; ಹಿಮಾಲಯಪರ್ವತ: "ಕುಳಿರ್ವೆಟ್ಟಿಕಿಲ್ವೆಟ್ಟುಂ ಚಳವೆಟ್ಟು ಹಿಮಾದ್ರಿ" (ಚತುಸಾ. ೧೦); ಗಜಶೈಲ ಪಿಶಾಚಶೈಲ . . . ಹಿಮಾದ್ರಿ[ಪಾಠಾಂ. ಹೇಮವಾನ್ನು]ಗಳೆಂಬ ದಶಕುಲಪರ್ವತಂಗಳೇ ಪೂರ್ವೋಕ್ತ ಗಂಧಮಾದನಮೆಂಬ ಕೀಲಕಪರ್ವತಕ್ಕೆ ತೆಂಕಣದಿಕ್ಕಿನಲ್ಲಿಹವು (ಎವೇಶ. ೧೭). [ಸಂ.]

ಹಿಮಾನಿ (ನಾ).೧. ಮಂಜಿನ ರಾಶಿ, — ಒಟ್ಟಿಲು: ಹಿಮಾನಿಯಿಂ ನಡುಗುತಿರ್ಪಾ ಪುಲ್ಲಿಯಂ ಕಂಡಿಸಲ್ ಪದನೆಂದೇಱಲೊಡರ್ಚಿಯುಂ ನಿಜವಪುಸ್ಸಂಕೋಚದಿಂ ಬರ್ಚಲಾಱದೆ ಪಟ್ಟಿರ್ದುದು ಕೂಡೆ ಬೇಡವಡೆ ದೇಹಸ್ತಂಭವಾದಂದದಿಂ (ಜಗವಿ. ೧೪-೧೪); ಲೀಲಾವಹಾಗಧಾಭೀಲಾವನತವಿತತಿ ಪೀಲಾ ಹಿಮಾನೀಕುತ್ಕೀಲಾತ್ಮಜಾತಾನು ಕೂಲಾ (ಉದ್ಭಟೇ. ೫-೨). ೨. ಒಂದು ಬಗೆಯ ಸಕ್ಕರೆ. [ಸಂ. ಹಿಮಾನೀ]

ಹಿಮಾನಿಲ, ಹಿಮಾನಿಳ (ನಾ). ತಂಪಾದ ಗಾಳಿ; ಶೀತಲಗಾಳಿ: ಸಖಿಯೆ ಹಿಮಾನಿಲ ಶಿಖಿಯವೊಲಾದನು ಸುಖಿಯೆ ನಾನೀ ತೆರನಿರಲು (ಇಂಚಾಪ. ೧೫೫-೬೨). **ಹಿಮಾನಿಳ**: ಎನಿಸೆದುದೂ ರೈವೃಷ್ಟಿ ಹಿಮಾನಿಳನಳಿಮಾಳಿತಕುಸುಮವರ್ಷಂ ಸುರಭೇರೀನಾದಂ . . . ನೆಗಟೆ ನೆಗಟ್ಟ ಪಂಚಾಶ್ಚರ್ಯಂ (ಪಂರಾಮಾ. ೯-೨). [ಸಂ.]

ಹಿಮಾನಿಳ 'ಹಿಮಾನಿಲ' ನೋ.

ಹಿಮಾಲಯ (ನಾ). ಮಂಜಿಗೆ ಆಶ್ರಯವಾದುದು; ಹಿಮವತ್ಪರ್ವತ: ಹಿಮಾಲಯದೊಳಿಸವ ರಜತಾದ್ರಿಯೊಳ್ಪೀಜೋಮಯಂ ಸದಾಶಿವನಿಪ್ಪನು (ಪ್ರಮಿಭಾ. ೫-೩೫); ಹಿಮಾಲಯಪರ್ವತಗಳು ಪ್ರಪಂಚದ ಎಲ್ಲಾ ಪರ್ವತಗಳಲ್ಲಿಯೂ ಅತ್ಯಂತ ಉನ್ನತವಾದವುಗಳು (ಭೂಗೋಳ. ೨೪). [ಸಂ.]

ಹಿಮೋಪಲ, ಹಿಮೋಪಳ (ನಾ). ಚಂದ್ರಕಾಂತಶಿಲೆ: ಚೂತಮನಪ್ಪ ಪುಷ್ಪವತಿಯಾದುದು ಮಲ್ಲಿಗೆ ಶೀತಕೃತ್ಕರವ್ಯಾತಮನಪ್ಪಿಯೊಪ್ಪೆ ಕರೆಗಿತ್ತು ಹಿಮೋಪಲಂ (ಗಿರಿಕ. ೪-೧೦೨). **ಹಿಮೋಪಳ**: ಹಿಮೋಪಳಮೊಸರ್ವವೊಲಿಂದುಕರಾವಳಿಗೆ ತೃಣಗ್ರಾಹಿ ನೀಳಮಣಿಯೊಸರ್ದಪುದೇ (ಚಂದ್ರಪು. ೧-೩೯). [ಸಂ.]

ಹಿಮೋಪಳ 'ಹಿಮೋಪಲ' ನೋ.

ಹಿಮ್ಮಗ್ಗಲು (ನಾ). ಹಿಂಭಾಗ; ಹಿಂಬದಿ: ಭೀಮಸೇನನನ್ನು ಕರೆಸಿ ಹಿಮ್ಮಗ್ಗಲಿನ ಕಿಡಿಕಿಯನ್ನು ಏರಿ ಪಣಕಿಹಾಕಲು ಹೇಳಿದರು (ಗಅಮಾಯಿ. ೨೮೨).

[ಹಿಂ (< ಪಿನ್) + ಮಗ್ಗಲು (< ಮಗ್ಗುಲ್)]

ಹಿಮ್ಮಡ 'ಪಿಮ್ಮಡ' ನೋ.

ಹಿಮ್ಮಡಿ 'ಪಿಮ್ಮಡ' ನೋ.

ಹಿಮ್ಮಡಿಕೆ (ನಾ). ಹಿಂದಕ್ಕೆ ಮಡಿಸಿದ ಮಡಿಕೆ, — ನಿರಿಗೆ: ಮುಂದ ಇಳಿಬಿಡುವ ವಸ್ತ್ರಗಳನ್ನ ಸ್ವಲ್ಪ ಹಿಂದಕ್ಕೆ ಹಿಮ್ಮಡಿಕೆ ಮಾಡಿ ಎಳೆದು . . . ಬಿಗಿಯುವುದು (ಚೋರಡೇ.೪೧). [ಹಿಂ (< ಪಿನ್) + ಮಡಿಕೆ]

ಹಿಮ್ಮಡಿಗೂಟ (ನಾ). "ಮಗ್ಗದಲ್ಲಿ ಕಾಲುಚಕ್ಕೆಗಳನ್ನು ಕಟ್ಟುವ ಗೂಟ" (ಅನಂನಾ). [ಹಿಮ್ಮಡಿ (< ಪಿಮ್ಮಡ) + ಗೂಟ (< ಗೂಂಟ)]

ಹಿಮ್ಮಡು 'ಪಿಮ್ಮಡ' ನೋ.

ಹಿಮ್ಮಣಿ 'ಹಮ್ಮಿಣಿ' ನೋ.

ಹಿಮ್ಮಣಿಚೀಲ, ಹಿಮ್ಮಣ್ಣಿಚೀಲ (ನಾ). ಹಣವನ್ನು ಹಾಕಿಟ್ಟುಕೊಳ್ಳಲು ಬಳಸುವ ಸಣ್ಣ ಚೀಲ; ಬಾಯಿಗೆ ಕಟ್ಟಿದ ದಾರವನ್ನು ಎಳೆಯುವುದರಿಂದ ಮುಚ್ಚಬಹುದಾದ ಹಣದ ಥೈಲಿ; ಹಮ್ಮಿಣಿ: "ಹಣ ಮೊ. ನ್ನು ತನ್ನೊಡನೆ ತೆಗೆದುಕೊಂಡು ಹೋಗುವುದಕ್ಕಾಗಿ, ತೊಗಲು, ಮೊ.ಗಳಿಂದ ಮಾಡಿದ ಸಣ್ಣ ಚೀಲ:

ಹಣದ, ದುಡ್ಡಿನ,- ಚೀಲ (ಹಿಂದೆ) ಬಾಯಿಗೆ ಕಟ್ಟಿದ ದಾರವನ್ನು ಎಳೆಯುವುದರಿಂದ ಮುಚ್ಚಬಹುದಾದದ್ದು; ಹಿಮ್ಮಣಿಚೀಲ; ಥೈಲಿ'' (Purse. ಇಂಕನ). ಹಿಮ್ಮಣ್ಣೆಚೀಲ: ನಾನು ಅವನ ಕೈಗೆ ನನ್ನ ಹಿಮ್ಮಣ್ಣೆಚೀಲದಿಂದ ಐದು ವರಹಗಳನ್ನು ತೆಗೆದುಕೊಟ್ಟೆ (ಚಂಗಾಳ್ವ. ೩೧೮). [ಹಿಮ್ಮಣಿ (< ಹಮ್ಮಿಣಿ) + ಚೀಲ]

ಹಿಮ್ಮಣ್ಣೆ 'ಹಮ್ಮಿಣಿ' ನೋ.

ಹಿಮ್ಮಣ್ಣೆಚೀಲ 'ಹಿಮ್ಮಣಿಚೀಲ' ನೋ.

ಹಿಮ್ಮತು 'ಹಿಮ್ಮತ್ತು$_2$' ನೋ.

ಹಿಮ್ಮತ್ತು$_1$ (ನಾ). ಬೆಂಬಲ; ಸಹಾಯ;''ರಕ್ಷಣೆ; ಆಶ್ರಯ'' (ಜಾನಕೋ. ೫೭.): ಹಿಮದ ಹಿಮ್ಮತ್ತಿನುರು ಬಲ್ಲಿನಿಂ ಹಿಮಕರಂ ದ್ಯುಮಣಿಯಂ ಜಡಿದಗ್ನಿಮೂಲೆ ಗಂದೊತ್ತಿದಂ (ಪರಶು. ೧೫-೨೯). [<– ಅರ. ಹಿಂ. ಹಿಮಾಯತ್; ಮರಾ. ಹಿಮಾಈತ್, ಹಿಮಾಯತ್, ಹಿಮಾಯತೀ]

ಹಿಮ್ಮತ್ತು$_2$, ಹಿಮ್ಮತು (ನಾ).೧. ಧೈರ್ಯ; ಸಾಹಸ: ಅದರಲ್ಲಿ ಕೆಲವು ಸೀಮೆ ಬಾಕಿ ಇದ್ದಂಥಾದ್ದನ್ನು ತಮ್ಮ ಹಿಮ್ಮತ್ತಿನಿಂದಲೇ ಸ್ವಾಧೀನ ಮಾಡಿಕೊಂಡರು (ರಾಜೇಂದ್ರ. ೫೩). ೨. ಉತ್ಸಾಹ; ಉಮೇದು: ನನ್ನ ಮೈಯಲ್ಲಿ ಅಷ್ಟು ಹಿಮ್ಮತ್ತಿತ್ತು (ಮಾರುದಾ. ೧೮೧). ಹಿಮ್ಮತು: ೨. ಹಿಮ್ಮತು ಬಾಳ ಹಿಡಿದಳು ಚನ್ನವ್ವ ಮೊಮ್ಮಗ್ಗ ಪಟ್ಟಗಟ್ಟಿ (ಲೋಕಗೀ. ೨೨೩). [<– ಅರ.ಹಿಂ. ಮರಾ. ಹಿಮತ್, ಹಿಮ್ಮತ್]

ಹಿಮ್ಮರಿಕೆ 'ಹಿಂಬರಿಕೆ' ನೋ.

ಹಿಮ್ಮಾಲು (ನಾ). ಹಿಂದಕ್ಕೆ ಬಾಗಿದುದು; ಹಿಮ್ಮುಖವಾದುದು.

ಹಿಮ್ಮಾಲಾಗು = ಹಿಂದಕ್ಕೆ ಸರಿ; ಹಿಮ್ಮುಖವಾಗು: ಕಾಲ ಪೈಸರಗೊಟ್ಟು ಸರಪಣಿವಿಡಿದು ಹಿಮ್ಮಾಲಾಗಿ ಪಡೆ ತೆಗವಾಗ ತೋಳ ಸಿಕ್ಕಿಗೆ ರಾಯ ನೀಡಿದನುಜೆ ಹೊಟ್ಟೆ ಮೇಲಾಗಿ ಕೆಡದರುರ್ವಿಯಾಳು (ಫರಚ. ೪೯-೧೧೯). [ಹಿಂ (< ಪಿನ್) + ಮಾಲ್ಲು$_2$]

ಹಿಮ್ಮುಖ (ನಾ).೧. ಹಿಂದೆ ಸರಿಯುವಿಕೆ; ಹಿಂದಾಗುವಿಕೆ: ಕ್ರಮವಾಗಿ ಶಾಲೆಗೆ ಬಾರದಿರುವುದು, ವೃತ್ತಿ ವಿಧಿಸಿರುವ ಕ್ರಮಾನುಸರಣೆಗೆ ಹಿಮ್ಮುಖವಾಗುವುದು - ಇವೆಲ್ಲ ಆರಂಭವಾಗುವುವು (ಶಕ್ತಿ. ೬೬೮): ಬೆಳಗಿನ ಜಾವ ಜ್ವರ ಹಿಮ್ಮುಖವಾಯಿತು (ಗಂಗಾಳ.೪). ೨. ಹಿಂದೆ ಸರಿದ ವ್ಯಕ್ತಿ; ಸೋತವನು: ಆಚಾರ್ಯರು ಹಿಮ್ಮುಖರಾದದ್ದನ್ನು ತಿಳಿದು ರಾಕ್ಷಸರು ದಂಡೆತ್ತಿ ಬಂದು ಅಮರಾವತಿಯಲ್ಲಿ ತಮ್ಮ ಧ್ವಜವನ್ನು ಊರಿ ಬಿಟ್ಟರು (ನೇಗಟ್ಟು. ೪೯). [ಹಿಂ (< ಪಿನ್) + ಮುಖ]

ಹಿಮ್ಮುಡಿ (ನಾ). (ಹಿಂಭಾಗದ) ಕೂದಲಿನ ರಾಶಿ,– ಸಮೂಹ: ''ಹಸ್ತ!, ಪಕ್ಷ!, ಪಾಶ! – ಈ.೩ ಹಿಮ್ಮುಡಿ'' (ಪಲಾಯು. ೮೭-೩೭೭).

[ಹಿಂ (< ಪಿನ್) + ಮುಡಿ$_2$]

ಹಿಮ್ಮುರಿ (ಕ್ರಿ). ಹಿಂದಕ್ಕೆ ತಿರುಗು,– ಬಾಗು: ಪಿರಿದಪ್ಪ ಕೋಪದೊಳವನಾರೆನುತ ಹಿಮ್ಮುರಿದು ನೋಡಿದುದು ಬೇತಾಳ (ಶ್ರೀಪಾಲ. ೮-೮೫). [ಹಿಂ (< ಪಿನ್)+ ಮುರಿ$_1$]

ಹಿಮ್ಮೆಟ್ಟಿಸು (ಕ್ರಿ). ಹಿಂದೆ ಸರಿಯುವಂತೆ ಮಾಡು; ಹಿಂದೆ ಉಳಿಸು: ತನ್ನ ಬಲವನ್ನು ಇನ್ನೂ ಸ್ವಲ್ಪ ಹಿಮ್ಮೆಟ್ಟಿಸಿ ರಾಣಿಯ ಸೈನ್ಯವು ಮುಂದೆ ಬರಲು ಅವಕಾಶವಿತ್ತನು (ಝೂರಾಣಿ. ೪೯೯). [ಹಿಮ್ಮೆಟ್ಟು (< ಪಿಮ್ಮೆಟ್ಟು) + - ಇಸು$_3$]

ಹಿಮ್ಮೆಟ್ಟು 'ಪಿಮ್ಮೆಟ್ಟು' ನೋ.

ಹಿಮ್ಮೆಯ್ 'ಪಿಮ್ಮೆಯ್' ನೋ.

ಹಿಮ್ಮೇಣಿ 'ಹಮ್ಮಿಣಿ' ನೋ.

ಹಿಮ್ಮೇಳ (ನಾ). ನೃತ್ಯ, ನಾಟಕ ಮುಂತಾದ ಕಾರ್ಯಕ್ರಮಗಳಲ್ಲಿ ಸಹಾಯಕವಾಗಿ ಹಿಂಭಾಗದಲ್ಲಿದ್ದು ಹಾಡುವವರ ಗುಂಪು,– ಗೋಷ್ಠಿ: ಸಂವಾದದ ಹಾಡುಗಳ ಎಡೆಯಲ್ಲಿ ಹಿಮ್ಮೇಳ ಹೇಳಬೇಕಾದ ಹಾಡುಗಳೂ ಇರುತ್ತವೆ (ಯಕ್ಷಪ. ೮೯): ಹಿಮ್ಮೇಳ ಇದ್ದರೆ ಮುಮ್ಮೇಳ, ಇಲ್ಲದಿದ್ದರೆ ಸಮ್ಮೇಳ (ಗಾದೆ).

ಹಿಮ್ಮೇಳದವರು = ಹಿನ್ನೆಲೆಯಲ್ಲಿ ಹಾಡುವವರು; ಹಿನ್ನೆಲೆಗಾಯಕರು: ಉಳಿದವರು ಗುಂಪಿನಲ್ಲಿ ಹಿಮ್ಮೇಳದವರಾಗಿ ಹಾಡಿ, ಕಣಿ, ಜಗ್ಜಲಗೆಗಳ ಇಳಿ ಹಾಗೂ ಏರುಗತ್ತಿನಲ್ಲಿ . . . ಒಟ್ಟಾಗಿ ಹೆಜ್ಜೆ ಹಾಕುವರು (ಕನ್ನಜಾ. ೩೧); ಹಿಮ್ಮೇಳದವರು ಹಾಡಿದರು (ಸವತಿ. ೨). [ಹಿಂ (< ಪಿನ್) + ಮೇಳ (= ಮೇಲ)]

ಹಿಮ್ಮೇಳಕಾರ (ನಾ). ನೃತ್ಯ, ನಾಟಕ ಮುಂತಾದ ಕಾರ್ಯಕ್ರಮಗಳಲ್ಲಿ ಸಹಾಯಕವಾಗಿ ಹಿಂಭಾಗದಲ್ಲಿದ್ದು ಹಾಡುವವನು; ಹಿನ್ನೆಲೆಗಾಯಕ: ರಾಸಪ್ರದರ್ಶನದ ಉದ್ದಕ್ಕೂ ಹಿಮ್ಮೇಳಕಾರರು ಸಂಗೀತವನ್ನು ಒದಗಿಸುತ್ತಾರೆ (ಭಾರದ. ೫೬೧). [ಹಿಮ್ಮೇಳ + - ಕಾರ$_1$ (<– ಕಾಱ)]

ಹಿಮ್ಮೇಳಗಾನ (ನಾ). ನೃತ್ಯ, ನಾಟಕ ಮುಂತಾದ ಕಾರ್ಯಕ್ರಮಗಳಲ್ಲಿ ಸಹಾಯಕವಾಗಿ ಹಿಂಭಾಗದಲ್ಲಿದ್ದು ಹಾಡುವ ಹಾಡು,– ಸಂಗೀತ: ಹಿಮ್ಮೇಳಗಾನಮುಕ್ಕಿದ ತೆರದಿ ತೆಕ್ಕನೆಯೆ ಮಾಧುರ್ಯ ಗಿರಿಶೃಂಗಮೆನಿಪ್ಪೊಂದು ಸುಂದರಂ ಕೇಳ್ದತ್ತು ತೌರ್ಯತ್ರಿಕಂ (ಶ್ರೀರಾಮಾ. ೪೮೮-೫೬). [ಹಿಮ್ಮೇಳ + ಗಾನ$_2$]

ಹಿಮ್ಮೊಗ (ನಾ).೧. = ಹಿಮ್ಮುಖ ೧ : ಬಯಲೊಳಗೆ ಬನವಾಯ್ತು ನಳಲೊಳಗೆ ರೂಪಾಯ್ತು, ಕಾಲ ಹಿಮ್ಮೊಗ ಹರಿದು ಗೋಕುಲವೆ ಕಣ್ಗೆಗಾಯ್ತು! (ಗೋಕುಸಾ.೧-೨೧); ನನ್ನ ಪಾಸಗಳ ಅಭ್ಯಾಸ ಏಕೆ ಪೂರ್ತಿ ಹಿಮ್ಮೊಗನಾಗಿತ್ತು ಎಂದು ಹಿಂದೆಯೇ ತಿಳಿಸಿದ್ದೇನೆ (ನಿಬಂಧ.II ೭೧). ೨. = ಹಿಮ್ಮುಖ ೨: ದಶಮುಖನು ಜಗುಳಿ ಹಿಮ್ಮೊಗನಾಗಲದ ಕಂಡು (ಆಸಂರಾ. ೧-೧೧-೪). [ಹಿಂ (< ಪಿನ್) + ಮೊಗ]

ಹಿಯರಿಂಗ್ (ನಾ). ಮೊಕದ್ದಮೆಯ ವಿಚಾರಣೆ: ಸದರಿ ಸಮನಿನಲ್ಲಿ ಪ್ರತಿವಾದಿಯ ಕಡೆ ಸಾಕ್ಷಿಗಳು ಯಾರಾದರೂ ಇದ್ದ ಪಕ್ಷದಲ್ಲಿ ಅವರನ್ನು ಹಿಯರಿಂಗ್ ತಾರೀಖಿನಲ್ಲಿ ಕರೆತರುವಂತೆ ನಮೂದಿಸಬೇಕು (ಗ್ರಾಮಾಕ. ೨೫). [<– ಇಂ. Hearing]

ಹಿಯ್ಯಾಳಿ 'ಹೀಹಾಳಿ$_2$' ನೋ.

ಹಿಯ್ಯಾಳಿಕೆ 'ಹೀಹಾಳಿಕೆ' ನೋ.

ಹಿಯ್ಯಾಳಿಸು 'ಹೀಹಾಳಿಸು$_1$' ನೋ.

ಹಿರಣೆ (ನಾ). ಬಲವಂತವಾಗಿ ವಸೂಲು ಮಾಡುವ ಒಂದು ಬಗೆಯ ತೆರಿಗೆ: ಕಾಣಿಕೆ, ಕಡ್ಡಾಯ, ಹಿರಣೆ ಈ ತೆರಿಗೆಗಳ ಸಂಬಂಧದಲ್ಲಿ ಜನರು ಅಸಮಾಧಾನ ಗೊಂಡಿದ್ದರು (ರೂಲೇಸಾ. ೧೮೨).

[<– ಮರಾ. ಹಿರಣೇ = ಬಲಾತ್ಕಾರದಿಂದ ಕಿತ್ತುಕೊಳ್ಳು; ಹರಣ ಮಾಡು]

ಹಿರಣ್ಮಯಿ (ನಾ). ಚಿನ್ನದಿಂದ ಮಾಡಿದ ಪ್ರತಿಮೆ: ''ಹರಿಣೇ, ಹಿರಣ್ಮಯಿ – ಈ ೨ ಹೊನ್ನ ಪ್ರತಿಮೆ'' (ಪಲಾಯು. ೨೨-೧೩೧). [ಸಂ. ಹಿರಣ್ಮಯಿ]

ಹಿರಣ್ಯ (ನಾ).೧. ಚಿನ್ನ; ಬಂಗಾರ: ವ್ರತಸಂಪನ್ನರ್ಗೆ ಕರಿತುರಗಮಣಿ ಭೂಷಣ ಹಿರಣ್ಯಭೂಮಿಕನ್ಯಾದಿವಸ್ತುಗಳಂ ಕುಡುವ ಸಮದತ್ತಿಯುಂ (ಸುಕುಮಾ. ೬-೨೫ ಪ): ಪುಣ್ಯಹೀನನ ಕೈಯಲಿದ್ದ ಹಿರಣ್ಯವೋಡಾಗಿಪ್ಪ ಪರಿಯೊಳಗಣ್ಣ ಶಿವನಾಕೃತಿಯೊಳೆಹ ಭಕ್ತನು ಭವಿಯ ಕಣ್ಗೆ ಗಣ್ಯಮಾನಸನಾಗಿ ತೋರ್ಪನು (ಬಸಪು. ೫೫-೨೧); ಸಮಸಪ್ತಕರು ತಮ್ಮೊಳಗಂದು ಶಪಥವ ಮಾಡಿ ವಿಪ್ರರ ಮುಂದಿಗಿತ್ತರು ಗೋ ಹಿರಣ್ಯ ಸಮಸ್ತವಸ್ತುಗಳ (ಕುಸ್ಯಾದ್ರೋ. ೨-೯). ೨. ಚಿನ್ನದ ಪಾತ್ರೆ. ೩. ಬೆಳ್ಳಿ; ರಜತ. ೪. (ಯಾವುದಾದರೊಂದು) ಅಮೂಲ್ಯವಾದ ಲೋಹ. ೫. ಸಂಪತ್ತು; ಐಶ್ವರ್ಯ: ''ರಿಕ್ಥಮಾ ಕನಕಂ ಹಿರಣ್ಯಮರ್ಥಂ ವಸ್ತು ಋಕ್ಥಮಾ ರೈ ಸ್ವಂ ಸುವರ್ಣಮೆನಲು'' (ಮಂಗರಾ. ೧೬-೧೬). ೬. ವೀರ್ಯ; ರೇತಸ್ಸು. ೭. ಕವಡೆ. ೮. ಒಂದು ಅಳತೆಯ ಪ್ರಮಾಣ. ೯. ದತ್ತೂರ ಫಲ. ೧೦. ಬಂಗಾರದಿಂದ ಮಾಡಿದ ನಾಣ್ಯ; ಚಿನ್ನದ ನಾಣ್ಯ: ಹುಟ್ಟುತ ದ್ರವ್ಯವನಱಿಯದವಂಗೆ ಐಶ್ವರ್ಯ ವಂತ ಮಗನಾದರೆ ಲಕ್ಷಸಂಖ್ಯೆಯ ಹಿರಣ್ಯವ ತಂದು ಸಂತೋಷಪಡಿಸುವಂತೆ (ಬಸಪು. ೭೦೫). ೧೧. ಒಬ್ಬ ಖೇಚರನ ಹೆಸರು: ಕೃತಸುಕೃತವೇಷದಿಂದೀ ಗತಿಯೊಳ್ ಸೂರ್ಯಚರನಾಂ ಹಿರಣ್ಯನೆನಾದೆಂ (ಚಂಪ್ರಪು. ೫-೮೯). ೧೨. ಬೆಂಕಿಯ ಜ್ವಾಲೆ, – ನಾಲಗೆ: ''ಬಹುರೂಪಪತಿರಕ್ತಪಾಪಿತರಕ್ತಂ ಸದಂಶು ಹಿರಣ್ಯಮಾ ಕನಕ ಮರ್ಚಿಯೆನಲಗ್ನಿಯಲ್ಲಿಹವೇಚು ನಾಲಗೆಗಳಕ್ಕು'' (ಮಂಗರಾ. ೧೪-೭). [ಸಂ.]

ಹಿರಣ್ಯಕ (ನಾ). ಒಬ್ಬ ರಾಕ್ಷಸನ ಹೆಸರು: ಹಿರಣ್ಯಕಶಿಪು : ದೇವ ಸಂದಾರಿತ ಹಿರಣ್ಯಕ ಶರೀರ ಜಯ (ಜಗವಿ. ೫-೧೧೩ ರಗಳೆ); ಸ್ವೈರಗೆಗೈದ ಪ್ರಹ್ಲಾದನ ರಕ್ಷಿಪಿದ ದುರುಳ ಹಿರಣ್ಯಕನುದರವ ಸೀಳಿದ (ಪುರಂದ. ೫-೮೫-೨). 'ಹಿರಣ್ಯಾಕ್ಷ' ಪರಾ. [ಸಂ.]

ಹಿರಣ್ಯಕಶಿಪು (ನಾ). ಚಿನ್ನದ ಆಸನವುಳ್ಳವನು; ಒಬ್ಬ ರಾಕ್ಷಸನ ಹೆಸರು; ಹಿರಣ್ಯಾಕ್ಷನ ಅವಳಿ ಸಹೋದರ; ☞ ಈತ ಪ್ರಹ್ಲಾದನ ತಂದೆ. ಈತನನ್ನು

ವಿಷ್ಣುವು ನರಸಿಂಹರೂಪವನ್ನು ಧರಿಸಿ ಸಭಾಮಂಟಪದ ಸ್ತಂಭದಿಂದ ಹೊರಬಂದು ಸಂಧ್ಯಾಸಮಯದಲ್ಲಿ, ಬಾಗಿಲ ಹೊಸ್ತಲ ಮೇಲೆ ಕುಳಿತು, ತನ್ನ ತೊಡೆಯ ಮೇಲಿಟ್ಟುಕೊಂಡು, ಹರಿತವಾದ ಉಗುರುಗಳಿಂದ ಎದೆಯನ್ನು ಸೀಳಿ ಕೊಲ್ಲುತ್ತಾನೆ: ನೃಸಿಂಹನನಿಪ್ಪಾಕೃತಿಯುಂ ಹಿರಣ್ಯಕಶಿಪು ಪ್ರಧ್ವಂಸಮಂ ಮಾಡಿದ್ಪೆ (ಜಗವಿ. ೧-೫೮); ಕನಕಲೋಚನ ಹಿರಣ್ಯಕಶಿಪುಗಳಂತಿರ್ವರುಂ ಪರಿವರಾಹ ನರಸಿಂಹರೂಪಿಂ ತಡೆಯದೆಳೆದು ಪೋಗಲ್ (ಚಿಃಪು. ೪೭-೮). [ಸಂ.]

ಹಿರಣ್ಯಕಹರ (ನಾ). ಹಿರಣ್ಯಕಶಿಪುವನ್ನು ಕೊಂದವನು: ವಿಷ್ಣು. [ಸಂ.]

ಹಿರಣ್ಯಕಾಮಧೇನುದಾನ (ನಾ). ಷೋಡಶಮಹಾದಾನಗಳಲ್ಲಿ ಒಂದು; ಚಿನ್ನದ ಹಸುವಿನ ಪ್ರತಿಮೆಯ ದಾನ: ಷೋಡಶಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ ಆಯಾ ಪುಣ್ಯಕಾಲದಲ್ಲಿ . . . ೧. ತುಲಾಪುರುಷದಾನ . . . ೬ ಹಿರಣ್ಯಕಾಮಧೇನುದಾನ, ಹಿರಣ್ಯಾಶ್ವದಾನ . . . ಮಾಡಿ ಸತ್ಕೀರ್ತಿಯಂ ಪಡೆದರು (ಮಹಾಪಂ. ೧. ೧೦೧). [ಸಂ.]

ಹಿರಣ್ಯಗರ್ಭ (ನಾ).೧. ಬ್ರಹ್ಮ; ಪ್ರಜಾಪತಿ: ನಾನುಮರದಂ ನುಡಿದೊಡ ಹರಿಹರ ಹಿರಣ್ಯಗರ್ಭರ್ ನಗರೇ (ಪಂಪಭಾ. ೧-೮೨); ಚತುರಾಸ್ಯನಾಗಿಯುಂ ಹಿರಣ್ಯಗರ್ಭನಲ್ತು (ಜಗವಿ. ೪-೧೦ ವ). ೨. ವಿಷ್ಣು. ೩. ಸೂಕ್ಷ್ಮಶರೀರ.೪. ಜೀವಾತ್ಮ; ಪ್ರಾಣ: ನವಮದೊಳು ಪರಿಪೂರ್ಣಸೂಕ್ಷ್ಮಮಪ್ಪಾ ಜೀವಚೇತದುರುಹಿರಣ್ಯಗರ್ಭ ಗುರು (ವೀಶಪು ೧-೧-೩೦). ೫. [ಜೈನ] "ಆದಿಬ್ರಹ್ಮನೆನಿಸಿದ ವೃಷಭತೀರ್ಥಂಕರ" (ಆದಿಪು. ೮. ಕೋಶ): ಧರೆ ರತ್ನಗರ್ಭಮಾದುದು ಸುರರೆಲ್ಲಂ ಹರ್ಷಗರ್ಭರಾದರ್ ಪೊಗಳ್ ಪಿರಿದೆನೆ ಹಿರಣ್ಯಗರ್ಭನ ನಿರುಪಮ ಗರ್ಭಾವತರಣಮಂಗಳವಿಧಿಯೊಳ್ (ಆಪು. ೭-೨೬). [ಸಂ.]

ಹಿರಣ್ಯಗರ್ಭದಾನ (ನಾ). ಷೋಡಶಮಹಾದಾನಗಳಲ್ಲಿ ಒಂದು: ಷೋಡಶ ಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ ಆಯಾಪುಣ್ಯಕಾಲದಲ್ಲಿ . . .೧) ತುಲಾಪುರುಷದಾನ ೨) ಹಿರಣ್ಯಗರ್ಭದಾನ . . . ಮಾಡಿ ಸತ್ಕೀರ್ತಿಯಂ ಪಡೆದರು (ಮಹಾವಂ.೧. ೧೦೧). [ಸಂ.]

ಹಿರಣ್ಯದಾನ (ನಾ). ಚಿನ್ನದ ದಾನ: ಅರಸನಿತ್ತ ಹಿರಣ್ಯದಾನವನಿರದ ಮೂವತ್ತೆರಡು ಕೋಟಿಯ ತುರಗ ಕರಿರಥ ವಸ್ತ್ರದಾನದಿ ದಣದರಾ ವ್ರಿಜರು (ಕೌಶಾ. ೪೪-೫೧); ವಸ್ತ್ರದಾನ, ಭೂದಾನ, ಗೋದಾನ, ಹಿರಣ್ಯದಾನ ಮುಂತಾದವುಗಳು ಯಥೇಚ್ಛವಾಗಿ ನಡೆದವು (ಶಾಂತಲಾ. ೧೧೫). [ಸಂ.]

ಹಿರಣ್ಯದಾನಿ (ನಾ). ಚಿನ್ನದ ದಾನವನ್ನು ಮಾಡುವವನು: ಹಿರಣ್ಯದಾನಿ ಗಜದಾನಿ ತುರಂಗದಾನಿ ದಿವ್ಯವಸ್ತ್ರನಿಕರದಾನಿಯೆಂದು ಮಹಿ ವಣ್ಣಿಪುದೀ ಜಗದೇಕದಾನಿಯುಂ (ಎಕ.VII. ಶಕಾಂ. ೧೪೧೯-೨೯: 1047). [ಸಂ. ಹಿರಣ್ಯದಾನಿನ್]

ಹಿರಣ್ಯಬಾಹು (ನಾ).೧. ಶಿವ. ೨. ಒಂದು ನದಿಯ ಹೆಸರು; ಶೋಣಾನದಿ: "ಶೋಣಃ, ಹಿರಣ್ಯಬಾಹುಃ— ಈ ೨ ಶೋಣನದಿ" (ಹಲಾಯು. ೧೧೧-೫೨). [ಸಂ.]

ಹಿರಣ್ಯಮೂರ್ತಿ (ನಾ).೧. ಚಿನ್ನದ ಮೂರ್ತಿ.೨. ಸುವರ್ಣವನ್ನೇ ಸ್ವರೂಪವಾಗಿ ಉಳ್ಳವನು: ಮಣ್ಣನಿತ್ತು ನಿಮ್ಮ ಕಂಡೆಹೆನೆಂದಡೆ ಜಗಭರಿತ ನೀನು ಹೊನ್ನನಿತ್ತು ನಿಮ್ಮ ಕಂಡೆಹೆನೆಂದಡೆ ಹಿರಣ್ಯಮೂರ್ತಿ ನೀನು (ಮದೇಪ. ೨೮೩-೫೨). [ಸಂ.]

ಹಿರಣ್ಯರೇತ (ನಾ).೧. ಅಗ್ನಿ: "ಸಪ್ತಾರ್ಚಿ:, ಬಹುಲ:, ಶಿಖೀ . . . ಹಿರಣ್ಯರೇತಾ, ತಪೋಘ್ನ. ಲೋಹಿತಾಶ್ಯ. ಹುತಾಶನ: - ಈ ೪೦ ಕಿಚ್ಚಿನ ಪೆಸರ್" (ಹಲಾಯು. ೧೫-೬೪); ನರದೂರ್ಧ್ವರೇತನೊಳ್ ಪು(ರು)ಹಿರಣ್ಯರೇ(ತೋ)ತಿ ತೀವ್ರನೊಳ್ಮನಿವರನೊಳ್ಪರಮ ಭಗಸಹಿತ ಮುದದಿರೆ ಪರಿಶ್ರಮಕ್ಕೆನ್ನ ನಿರ್ವಿಶೇಷನೊಳಾಗಳ್ (ಕವಿಕಾ. ೧-೬೩). ೨. ಸೂರ್ಯ; ರವಿ. ೩. ಶಿವ. [ಸಂ. ಹಿರಣ್ಯರೇತಸ್]

ಹಿರಣ್ಯಾಕ್ಷ (ನಾ).೧. ಚಿನ್ನದ ಕಣ್ಣುಗಳನ್ನು ಉಳ್ಳವನು; ಒಬ್ಬ ರಾಕ್ಷಸನ ಹೆಸರು. ಹಿರಣ್ಯಕಶಿಪುವಿನ ಅವಳಿ ಸಹೋದರ; ℙ ಈತನು ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ಅನೇಕ ವರಗಳನ್ನು ಪಡೆದು ದೇವತೆಗಳನ್ನು ಪೀಡಿಸಿ ಲೋಕಕಂಟಕನಾಗಿರುವಾಗ ವಿಷ್ಣುವು ವರಾಹಾವತಾರವನ್ನು ತಳೆದು ಈತನನ್ನು ಕೊಲ್ಲುತ್ತಾನೆ: ಹಿರಣ್ಯಾಕ್ಷನಂ . . . ತವೆ ಕೊಂದಾದಿವರಾಹರೂಪದೊಳೆ ನೀನಂದೆತ್ತಿದ್ಪೆ ಗೋಮಿನೀಧ್ವದಂಷ್ಟ್ರಾಗ್ರದ ನೀಲಜಾಲವಾಣಿಯಂಬಂತಾಗ ಭೂಗೋಳಮಂ (ಜಗವಿ. ೧-೫೭); ಮುತ್ತೈದೆಯರ ಪರಕೆ ಸೇಸೆಗಳನುಜ್ ಕೈಕೊಳುತ್ತ ಪೊಳಲೊಳ್ ಮೆಜ್ಜೆದು ಮಂದಿರಂಬೊಕ್ಕು ತನ್ನುತ್ತಮಾಂಗನೆಗಾ ಕುಮಾರಕನನಿತ್ತ ಹಿರಣ್ಯಾಕ್ಷನುತ್ಸವದೊಳು (ಚಿಃಪು ೪೭-೫). ೨. ಹಿರಣ್ಯಕಶಿಪು: ಹಿರಣ್ಯಾಕ್ಷನುರಮು ಪೋಟ್ಟ ನಾರಸಿಂಗನಂತೆ (ಪಂಪಭಾ. ೧೨-೧೩೨ ವ). ℙ 'ಹಿರಣ್ಯಕ', 'ಹಿರಣ್ಯಾಕ್ಷ' ಎಂಬ ರೂಪಗಳು 'ಹಿರಣ್ಯಕಶಿಪು' ಎಂಬರ್ಥದಲ್ಲಿಯೂ ಕಾವ್ಯಗಳಲ್ಲಿ ಬಳಕೆಯಾಗಿವೆ. [ಸಂ.]

ಹಿರಣ್ಯಾಶ್ವದಾನ (ನಾ). ಷೋಡಶಮಹಾದಾನಗಳಲ್ಲಿ ಒಂದು; ಚಿನ್ನದ ಕುದುರೆಯ ಪ್ರತಿಮೆಯದಾನ: ಷೋಡಶಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ ಆಯಾ ಪುಣ್ಯಕಾಲದಲ್ಲಿ ೧. ತುಲಾಪುರುಷದಾನ . . . (೭) ಹಿರಣ್ಯಾಶ್ವದಾನ (೮). ಹಿರಣ್ಯಾಶ್ವರಥದಾನ . . . ಮಾಡಿ ಸತ್ಕೀರ್ತಿಯಂ ಪಡೆದರು (ಮಹಾವಂ. ೧. ೧೦೧). [ಸಂ.]

ಹಿರಣ್ಯೆ (ನಾ). ಬೆಂಕಿಯ ಜ್ವಾಲೆ;—ನಾಲಗೆ; ಅಗ್ನಿಯ ಸಪ್ತಾರ್ಚಿಗಳಲ್ಲಿ ಒಂದು: "ಹಿರಣ್ಯಾ, ಕನಕಾ, ಕೃಷ್ಣ, ರಕ್ತಾ, ಸುಪ್ರಭಾ, ಅತಿರಕ್ತಾ, ಬಹುರೂಪಾ, ಈ ೭ . . . ಅಗ್ನಿಯ ನಾಲಗೆಗಳ್" (ಹಲಾಯು. ೧೫-೬೪). [ಸಂ. ಹಿರಣ್ಯಾ]

ಹಿರಣ್ಮೋತ್ಪತ್ತ್ಯಪ್ಪಜನ್ಮ (ನಾ). [ಜೈನ] ಐವತ್ತೊಂಭರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; "ಜಿನಜನನಿಯ ಗರ್ಭದಲ್ಲಿ ಅವತರಿಸುವುದು" (ಚ್ಛನಕೋ. ೮೬); ಹಿರಣ್ಮೋತ್ಪತ್ತ್ಯಪ್ಪಜನ್ಮಮುಂ ಪುಂದರಾಭಿಷೇಕಮುಂ ಗುರುಪೂಜೋವಳಂಬನಮುಂ . . . ಅಪ್ಪಯ್ತತ್ತುಮೂಱು ಗರ್ಭಾನ್ವಯಕ್ರಿಯೆಯೊಳ್ (ಚಾಪುರಾ. ೨೮೨). [ಸಂ. ಹಿರಣ್ಮೋತ್ಪತ್ತ್ಯಪ್ಪಜನ್ಮನ್]

ಹಿರಣ್ಮೋದಕದಾನ (ನಾ). (ಗೋದಾನ, ಭೂದಾನ ಇತ್ಯಾದಿ ದಾನಗಳಲ್ಲಿ) ಸುವರ್ಣಸಹಿತವಾಗಿ ನೀರೆರೆದು ಕೊಡುವ ದಾನ: ವಲಂಪಾಡು ಗ್ರಾಮ ೧ ವಂದ್ಯ ವುಳಯಂ ಗ್ರಾಮ ೨ ಯೆರಡನೂ ಸಹಿರಣ್ಮೋದಕದಾನ ಧಾರಾಪೂರ್ವಕವಾಗಿ ಧಾರೆಯನೆರದು (ಕಾಸ. ೧೧೨-೧೭-೩೮; 1521). [ಸಂ.]

ಹಿರಬಿ (ನಾ). ಒಂದು ಬಗೆಯ ಔಷಧ ವಸ್ತು: ಹಿರಬಿ ೪ ತೂಕ. ಹಿಪ್ಪಲಿ ೫ ತೂಕ, ಗಂಧಕ ೨ ತೂಕ, ಪತ್ಪನಾಭಿ ೨ ತೂಕ . . . ಹಿರಿಯ ಹಿರಬಿ ೨ನ್ನೂ ಗೋಮೂತ್ರದಲ್ಲಿ ೧ ದಿನ ನೆನೆಯಲಿರಿಸುವುದು (ವೈವೈ. ೧೦೧). [?]

ಹಿರಳಿ 'ಪೇರಳೆ' ನೋ.

ಹಿರಾಕಸ, ಹಿರಾಕಾಸ (ನಾ). ಕಬ್ಬಿಣ ಮತ್ತು ಗಂಧಕಾಮ್ಲಗಳ ಸಂಯೋಗದಿಂದ ಉಂಟಾಗುವ ಒಂದು ಬಗೆಯ ಲವಣ; ಕಾಸೀಸ; ಅನ್ನಭೇದಿ: ಹಿರಾಕಸವು ಗಂಧಕ ಧೃತಿಯಲ್ಲಿ ಕಬ್ಬಿಣದ ಜಂಗು ಮಿಶ್ರವಾಗಿ ಹುಟ್ಟುತ್ತದ (ಮುಂಬಯಿ. ೪-೪೮); ಅವರ ಗುಮಾಸ್ತರು ಇಂದಿಗೂ ಹಿರಾಕಸ ಅಣಲೆಕಾಯಿಗಳ ಶಾಯಿಗಳನ್ನು ಉಪಯೋಗಿಸುತ್ತಾರೆಯೇ ಹೊರತು ಪೊಟ್ಯಣದ ಶಾಯಿಯನ್ನು ಉಪಯೋಗಿಸುತ್ತಿಲ್ಲ (ಜಾಮದಾ. ೨೬). **ಹಿರಾಕಾಸ:** ಸುವರ್ಣಮುಖಿ ಹಿರಾಕಾಸ ಇವು ಗಂಧಕ ಕೂಡಿದ ಕಬ್ಬಿಣದ ರೂಪಾಂತರಗಳುಂಟು (ಮುಂಬಯಿ. ೬-೧೮).

[<— ಮರಾ. ಹಿರಾಕಸ]

ಹಿರಾಕಾಸ 'ಹಿರಾಕಸ' ನೋ.

ಹಿರಾವಳಿ (ನಾ). ಒಂದು ಬಗೆಯ ಔಷಧೀಸಸ್ಯ: "ಕುಷ್ಮಳಿ:- ಕಗ್ಗಲಿ; ಹಿರಾವಳಿ" (ಓಷಧಿ. ೩೫). [?]

ಹಿರಿ$_1$ 'ಪಿರಿ$_1$' ನೋ.

ಹಿರಿ$_2$ 'ಪಿರಿ$_2$' ನೋ.

ಹಿರಿಕೊಳ್ (ಕ್ರಿ). ಸೆಳೆದುಕೊಳ್ಳು: ಚಿಂದದಲಿ ಇಬ್ಬರೂ ಹೊಂದಿರುವುದೇ ಕಾಲ, ಆ ಕಾಲ ಹಿರಿಕೊಳಲಿ ಒಲುಮೆಸಿರಿಯ (ಇಂಗೀತ. ೫೮-೨೧). [ಹಿರಿ$_1$ (< ಪಿರಿ$_1$) + ಕೊಳ್$_1$]

ಹಿರಿಗನ್ನಡ (ನಾ). ಹಿರಿತನವನ್ನು ಪಡೆದ ಕನ್ನಡ: ಸಿರಿಗನ್ನಡಂ ಗೆಲ್ಗೆ ಹಿರಿಗನ್ನತಂ ಗೆಲ್ಗೆ (ಪೂಗಳು. ೨೧-೫). [ಹಿರಿ$_2$ (< ಪಿರಿದು$_1$) + ಕನ್ನಡ$_1$]

ಹಿರಿಜೇಕು (ನಾ). ಒಂದು ಬಗೆಯ ಜೇಕಿನ ಗಡ್ಡೆ: ಹಿರಿಜೇಕನು ಪುಡಿಮಾಡಿ ಹಾಗಲ

ಬೇರ ಕೆಂಡದಲ್ಲಿ ಈ ಚೂರ್ಣ ಹಾಕಿ ಕಾಸಲು ಮೂಲವ್ಯಾಧಿಯ ಮೊಳೆ ಕರಗುವುದು (ವೈಪಾ. ೧೯೩). [ಹಿರಿ$_2$ (< ಪಿರಿದು$_1$) + ಜೇಕು (< ಗೇಕು)]

ಹಿರಿತನ 'ಪಿರಿತನ' ನೋ.

ಹಿರಿದು$_1$ 'ಪಿರಿದು$_1$' ನೋ.

ಹಿರಿದು$_2$ 'ಪಿರಿದುಂ' ನೋ.

ಹಿರಿಪಿಲ್ಲಿ (ನಾ). ದೊಡ್ಡ ಪಿಲ್ಲಿ; ದೊಡ್ಡ ಕಾಲುಂಗುರ: ಹಿಂಪಿಲ್ಲಿ ಕಿರಿಪಿಲ್ಲಿ ಸುರಳಿ ಸಹಿತವಾಗಿ ಪರಿಪರಿ ವಸ್ತವ ಧರಿಸಿಕೊಂಡಿಹರು (ಜನಗೀ. ೪೪).

[ಹಿರಿ$_2$ (< ಪಿರಿದು$_1$)+ ಪಿಲ್ಲಿ$_1$]

ಹಿರಿಬೋಗಿ (ನಾ). ಒಂದು ಬಗೆಯ ಸಸ್ಯ: ಕಿರಲ್‌ಬೋಗಿ, ಬೋವುಮರ, ಹಿಂಬೋಗಿ, ಕರ್ಮರ (ಮುದಿಗ. ೪೪-೪೭). [ಹಿರಿ$_2$ (< ಪಿರಿದು$_1$) + ಬೋಗಿ?]

ಹಿರಿಮಣಿ (ನಾ).೧. ಶಾಲೆಯಲ್ಲಿ ತರಗತಿಯ ಶಿಸ್ತನ್ನು ನೋಡಿಕೊಳ್ಳುವವನು; ಮಾನೀಟರು: ಅಂದಿನ ಪೂಜೆಯನ್ನು ವರ್ಗದ ಹಿರಿಮಣಿಯು ಸಾಂಗವಾಗಿ ನೆರವೇರಿಸಿದನು (ಜಯಂತ. ೧೪). ೨. ಮುಖಂಡ; ನಾಯಕ: ಕಬಾಡಿಗರಿಗೆಲ್ಲ ಹಿರಿಮಣಿಯಾತ (ಶರಚ. ೨); ಊರಿನ ಹಿರಿಮಣಿಗಳು ಅವರ ಕುದುರೆಯ ಹಿಂದ ಹಿಂದ ಇಡೀ ದಿನ ಓಡುತ್ತಲೇ ಇದ್ದರು (ಪ್ರಮಾಶ್ರ. ೧). [<— ತುಳು. ಹಿರಿಮಣಿ]

ಹಿರಿಮದ್ದು (ನಾ). ಒಂದು ಬಗೆಯ ಔಷಧೀಸಸ್ಯ: ಅಶ್ವಗಂಧಿಳ್ಯತಃ- ಹಿರಿಮದ್ದು, ಕಳ್ಳಿಗಡಲೆ . . . ಕಚೋರ ಇವು ಸಮಾನ (ವೈಪಾ. ೧೧); ಹಿರಿಮದ್ದಿನ ಬೇರು ಬನ್ನಿ ಸೊಂಡೆಬೇರು . . . ವಾತಾರ್ಧಿಕಾ ಇವೆಲ್ಲವಂ ಪರಿಹರಿಸುವುದು (ಧ್ರಾಕ್ಷಾಚೂ. ೪-೯).

[ಹಿರಿ$_2$ (< ಪಿರಿದು$_1$) + ಮದ್ದು (< ಮರ್ದು)]

ಹಿರಿಮರ (ನಾ). ದೊಡ್ಡಮರ; ಮಹಾವೃಕ್ಷ: ಸ್ಥಿರವಾಗಿ ನಿಂತೀದಿ ಹಿರಿಮರವೆ ನೀ ಎನ್ನ ಹರಮಲ್ಲನನು ಕಂಡಿದೆಯಾ (ಸಿದ್ಧವ. ೫-೬). [ಹಿರಿ$_2$ (< ಪಿರಿದು$_1$) + ಮರ$_1$]

ಹಿರಿಮೆ 'ಪೆರ್ಮೆ' ನೋ.

ಹಿರಿಮೆಕ್ಕೆ (ನಾ). ಮೆಕ್ಕೆಯಲ್ಲಿ ಒಂದು ಬಗೆ: (ಕ).

[ಹಿರಿ$_2$ (< ಪಿರಿದು$_1$)+ ಮೆಕ್ಕೆ$_2$]

ಹಿರಿಯಏಲಕ್ಕಿ (ನಾ). ಒಂದು ಬಗೆಯ ಏಲಕ್ಕಿ: "ಗರ್ಭಸಂಭವ - ಹಿರಿಯ ಏಲಕ್ಕಿ" (ಓಷಧಿ. ೪೭). [< ಪಿರಿದು$_1$ + ಏಲಕ್ಕಿ]

ಹಿರಿಯಕಡವ (ನಾ). ಜಿಂಕೆಯಲ್ಲಿ ಒಂದು ಬಗೆ; ದೊಡ್ಡ ಸಾರಂಗ (?): "ಝಲ್ಲೀ - ಜೀರುಂಡೆಯ ಹುಳು, ಹಿರಿಯ ಕಡವ" (ಓಷಧಿ. ೬೪).

[< ಪಿರಿದು$_1$ + ಕಡವ$_2$ (< ಕಡವ$_2$)]

ಹಿರಿಯಕವಳಿ (ನಾ). ಒಂದು ಬಗೆಯ ಬತ್ತ: "ಮಹಾಶೌಂಡೀ— ಹಿರಿಯಕವಳಿ" (ಓಷಧಿ. ೧೧೬). [< ಪಿರಿದು$_1$ + ಕವಳಿ$_2$ (< ಕಬವೆ)]

ಹಿರಿಯಕಳವಿ (ನಾ). ಒಂದು ಬಗೆಯ ಮುಳ್ಳುಕಂಟಿ,— ಕಮರಿಕೆ: "ಮಹಾಕಟಭಿ: - ಹಿರಿಯ ಕಳವಿ" (ಓಷಧಿ. ೯೭).

[< ಪಿರಿದು$_1$ + ಕಳವಿ (< ಕಳವೆ$_1$)]

ಹಿರಿಯಕಿತ್ತೀಳೆ (ನಾ). ಈಳೆಜಾತಿಗೆ ಸೇರಿದ ಮರ ಮತ್ತು ಅದರ ಕಾಯಿ: "ಪಾರಿಖಂ - ಹಿರಿಯ ಕಿತ್ತೀಳೆ" (ಓಷಧಿ. ೯೭). [< ಪಿರಿದು$_1$ + ಕಿತ್ತೀಳೆ]

ಹಿರಿಯಕ್ಕ (ನಾ). ದೊಡ್ಡ ಅಕ್ಕ: ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ (ಗಾಪ).

[ಹಿರಿ$_2$ (< ಪಿರಿದು$_1$) + ಅಕ್ಕ$_1$]

ಹಿರಿಯಗಿಡು (ನಾ). ಒಂದು ಬಗೆಯ ಔಷಧೀಸಸ್ಯ: "ಮೃಣೇಲಕಃ -ಹರಿಯಗಿಡು" (ಓಷಧಿ. ೧೧೯). [< ಪಿರಿದು$_1$ + ಗಿಡು]

ಹಿರಿಯಚುಂಚು (ನಾ). ಒಂದು ಬಗೆಯ ಔಷಧೀಸಸ್ಯ: "ನಿಶಾರಿ:-ಹಿರಿಯ ಚುಂಚು" (ಓಷಧಿ. ೮೭). [< ಪಿರಿದು$_1$ + ಚುಂಚು$_1$]

ಹಿರಿಯಣ್ಣ 'ಪಿರಿಯಣ್ಣ' ನೋ.

ಹಿರಿಯದುಪ್ಪಿ (ನಾ). = ಹಿರಿಯಕಡವ: "ರಾಮಃ - ಹಿರಿಯ ದುಪ್ಪಿ, ಏಷಹರಮೃಗವು,ಇದನ್ನು ಹಿರಿಯ ಶರಭಮೃಗವೆನ್ನುವರು" (ಸಿದ್ಧಾಂತಿ. ೧೩೭).

[< ಪಿರಿದು$_1$+ ದುಪ್ಪಿ]

ಹಿರಿಯನೆಲದಾವರೆ (ನಾ). ಒಂದು ಬಗೆಯ ಔಷಧೀಸಸ್ಯ: "ಪದ್ಮಮೂಲ: - ಹಿರಿಯನೆಲದಾವರೆ" (ಓಷಧಿ. ೯೩). [< ಪಿರಿದು$_1$ + ನೆಲದಾವರೆ]

ಹಿರಿಯನೇಜಿಲ್ (ನಾ). ಒಂದು ಬಗೆಯ ನೇರಳೆ; ದೊಡ್ಡ ನೇರಳೆ; ಜಂಬುನೇರಳೆ: "ರಾಜಜಂಬೂ - ಹಿರಿಯ ನೇಜಿಲ್" (ಓಷಧಿ. ೧೩೭).

[< ಪಿರಿದು$_1$ + ನೇಜಿಲ್]

ಹಿರಿಯಪುಂಡರೀಕ (ನಾ). ಒಂದು ಬಗೆಯ ಔಷಧೀಸಸ್ಯ: "ಶ್ರೀವುಷ್ಕೀ-ಹಿರಿಯ ಪುಂಡರೀಕ, ಲವಂಗದ ಕುಸುಮ" (ಓಷಧಿ. ೧೭೭). [< ಪಿರಿದು$_1$ + ಪುಂಡರೀಕ]

ಹಿರಿಯಪ್ಪ (ನಾ). ತಂದೆಯ ಅಣ್ಣ; ದೊಡ್ಡಪ್ಪ: ಚಿತ್ರವಿಸು ಹಿರಿಯಪ್ಪ ರಾಳುವನೆತ್ತ ಹೋದನೋ (ಕಾಶಾ. ೩೨-೧೬). [< ಪಿರಿದು$_1$ + ಅಪ್ಪ$_1$]

ಹಿರಿಯಬೆಲ್ಲ (ನಾ). ಒಂದು ಬಗೆಯ ಔಷಧೀಸಸ್ಯ : ಇಂದ್ರಿಯಾ - ಹಿರಿಯ ಬೆಲ್ಲ" (ಓಷಧಿ. ೧೩). [< ಪಿರಿದು$_1$ + ಬೆಲ್ಲ?]

ಹಿರಿಯಮದ (ನಾ). ಒಂದು ಬಗೆಯ ಸಸ್ಯ : "ವರ - ವಿಳಂಗ . . . ಅಮರದುವಳ್ಳಿ ಮಡುವಾಗಲು, ಹಿರಿಯಮದ, ಸೀಸ" (ಓಷಧಿ. ೧೪೫). [< ಪಿರಿದು$_1$ + ಮದ]

ಹಿರಿಯಮದ್ದು 'ಹಿರಿಯಮರ್ದು' ನೋ.

ಹಿರಿಯಮರದವಲ್ಲಿ (ನಾ). ಒಂದು ಬಗೆಯ ಔಷಧೀಸಸ್ಯ: "ಮಧುಪಲಾಖರ್ಜೂರ, ಸಿಹಿಮಾದಲ, ಹಿರಿಯಮರದವಲ್ಲಿ, ಮೆದೆ, ಗುಂಜಿ" (ಓಷಧಿ. ೧೨೦).

[< ಪಿರಿದು$_1$ + ಅಮರದವಲ್ಲಿ (< ಅಮರ್ದುವಳ್ಳಿ)]

ಹಿರಿಯಮರ್ದು, ಹಿರಿಯಮದ್ದು (ನಾ). ಒಂದು ಬಗೆಯ ಔಷಧೀಸಸ್ಯ: "ಅಶ್ವಗಂಧಾ-ಹಿರಿಯ ಮರ್ದು, ಇಂಗು" (ಓಷಧಿ. ೫). **ಹಿರಿಯಮದ್ದು**: "ಕೃಷ್ಣಗಂಧಿಕಾ-ಹಿರಿಯಮದ್ದು" (ಓಷಧಿ. ೩೯). [< ಪಿರಿದು$_1$ + ಮರ್ದು]

ಹಿರಿಯಮೆಕ್ಕೆ (ನಾ). ಒಂದು ಬಗೆಯ ಮೆಕ್ಕೆ : "ಗೋದುಂಬಾ-ಹಿರಿಯ ಮೆಕ್ಕೆ" (ಓಷಧಿ. ೫೧). [< ಪಿರಿದು$_1$ + ಮೆಕ್ಕೆ$_2$]

ಹಿರಿಯಯ್ಯ 'ಪಿರಿಯಯ್ಯ' ನೋ.

ಹಿರಿಯರಸಿ 'ಪಿರಿಯರಸಿ' ನೋ.

ಹಿರಿಯಸಿವನ್ನಿ (ನಾ). ಒಂದು ಬಗೆಯ ಔಷಧೀಸಸ್ಯ :"ವರಾಂಗೀ - ಅರಿಸಿನ, ನಾಗದಂತಿ, ಹಿರಿಯಸಿವನ್ನಿ , ಹೆಗ್ಗುಳ್ಳ" (ಓಷಧಿ. ೧೪೫).

[< ಪಿರಿದು$_1$ + ಸಿವನ್ನಿ (< ಸೀವನ್ನಿ)]

ಹಿರಿಯಸಿಹಿಗೆಣಸು (ನಾ). ಒಂದು ಬಗೆಯ ಗೆಣಸು; ದೊಡ್ಡಗೆಣಸು: "ದೀರ್ಘವೃಂತಾ - ಹಿರಿಯ ಸಿಹಿಗೆಣಸು" (ಓಷಧಿ. ೭೭).

[< ಪಿರಿದು$_1$ + ಸಿಹಿಗೆಣಸು (< ಸೀಗೆಣಸು)]

ಹಿರಿಯಹಾಲುಗುಂಬಳ (ನಾ). ಒಂದು ಬಗೆಯ ಕುಂಬಳ; ದೊಡ್ಡ ಹಾಲುಗುಂಬಳ: "ಗೋರಕ್ಷೀ - ಹಿರಿಯ ಹಾಲುಗುಂಬಳ" (ಓಷಧಿ. ೫೦).

[< ಪಿರಿದು$_1$ + ಹಾಲುಗುಂಬಳ (< ಪಾಲ್ಗುಂಬಳ)]

ಹಿರಿಯಹಿಂಗುಳಪತ್ರ (ನಾ). ಒಂದು ಬಗೆಯ ಸಸ್ಯ: "ದೀರ್ಘಪತ್ರಿಕಾ - ಒಂದೆಲಹೊನ್ನೆ, ಬಳಿಯ ಬಜೆ, ಲೋಯಿಸರ, ಹಿರಿಯಹಿಂಗುಳಪತ್ರ" (ಓಷಧಿ. ೭೭).

[< ಪಿರಿದು$_1$ + ಹಿಂಗುಳಪತ್ರ?]

ಹಿರಿಯಿಸು, ಹಿರಿಸು (ಕ್ರಿ). ೧. ಹರಡುವಂತೆ ಮಾಡು; ಪಸರಿಸು: ಮೊಲ್ಲೆಯನರಳಿಸಿ ಕಂಪನು ಹಿರಿಯಿಸಿ ಮೆಲ್ಲನೆ ಬೀಸಿತು ಗಾಳಿ (ಚಂದ್ರಮೀ. ೭೩-೯೨). **ಹಿರಿಸು**: ೨. ಇಲ್ಲವಾಗಿಸು; ಪರಿಹರಿಸು; ನೀಗು: ಡಗೆಯ ಹಿರಿಸು [ಪಾಠಾಂ. ಹಿಂಗಿಸು] ಪಾರ್ಥ ನೀನೆಂದನಾಗ (ತುರಂಗ. ೪೭-೩೪). ೩. (ತಲೆಕೆಳಗಾಗುವಂತೆ) ಸೀಳಿಡು: ಹಿರಿಸಿದನು ಧರಣಿಯಲಿ ಕಾಲಿನಲೊರಸಿದನು ನೋಟಕರ ಧರಣೀಸುರಜನದ ಹಾಹಾರವದ ರಹಿ ಮಸಗೆ (ಶುವ್ಯಾಸ. ೬೫೫. ೨-೧೪೧). [ಹಿರಿ$_1$(< ಪಿರಿ$_1$) + -ಇಸು$_3$]

ಹಿರಿಯಿಾಚಲು 'ಪಿರಿಯಾಚಲ್' ನೋ.

ಹಿರಿಯುದ್ದರಿ (ನಾ). ದೊಡ್ಡ ಪ್ರತಿಸ್ಪರ್ಧಿ,— ಎದುರಾಳಿ: ಧರ್ಮಸೇವಾಧುರೀಣ ಸುಬ್ಬಶ್ರೇಷ್ಠಿಯವರು ಕಳ್ಳಪೇಟೆ ಹಿರಿಯುದ್ದರಿ, ಕೊಡುಗ್ಯೆ (ಹನ್ನೊಂದ. ೧).

[ಹಿರಿ$_2$ (< ಪಿರಿದು$_1$) + ಉದ್ದರಿ$_2$]

ಹಿರಿಯುಬ್ಬಣ 'ಪಿರಿಯುಬ್ಬಣ' ನೋ.

ಹಿರಿಯೆಲವ (ನಾ). ಒಂದು ಬಗೆಯ ಎಲವದ ಮರ; ದೊಡ್ಡದೂದಿಮರ: ''ಮರುವಕಾಪಃ - ಹಿರಿಯೆಲವ'' (ಓಷಧಿ. ೧೨೩). [ಹಿರಿ$_2$ (< ಪಿರಿದು$_1$) + ಎಲವ]

ಹಿರಿಯೇಲ (ನಾ). ಒಂದು ಬಗೆಯ ಸಸ್ಯ : ''ಮರುವಕಃ - ಮರುಗ, ಕಳಿಮಾವು, ಹಿರಿಯೇಲ'' (ಓಷಧಿ. ೧೧೮). [ಹಿರಿ$_2$ (< ಪಿರಿದು$_1$) + ಏಲ?]

ಹಿರಿಯೇಲಕ್ಕಿ (ನಾ). ಒಂದು ಬಗೆಯ ಏಲಕ್ಕಿ; ದೊಡ್ಡ ಏಲಕ್ಕಿ: ''ಘ್ನತಾಚೀ - ಹಿರಿಯೇಲಕ್ಕಿ'' (ಓಷಧಿ. ೫೨). [ಹಿರಿ$_2$ (< ಪಿರಿದು$_1$) + ಏಲಕ್ಕಿ]

ಹಿರಿಯೋಲಗ (ನಾ). ದೊಡ್ಡ ರಾಜಸಭೆ; ದೊಡ್ಡ ದರ್ಬಾರು : ದುಗುಡವೇಕೆ ಮಗನೆ ಹಿರಿಯೋಲಗವನೀಯೆ (ಕುವಾಸ. ೧೨-೨೫). [ಹಿರಿ$_2$ (< ಪಿರಿದು$_1$) + ಓಲಗ$_1$]

ಹಿರಿಸು 'ಹಿರಿಯಿಸು' ನೋ.

ಹಿರಿಹಿಗ್ಗು$_1$ (ಕ್ರಿ). ಹೆಚ್ಚು ಆನಂದ ಪಡು; ವಿಶೇಷವಾಗಿ ಸಂತೋಷಿಸು: ವಿಜಯದಿಂದ ಹಿರಿಹಿಗ್ಗಿದ ಬ್ರಿಟಿಷ್ ಸಾಮ್ರಾಜ್ಯವಾದಿಗಳ ಹೃದಯವು ಉನ್ಮತ್ತವಾಗಿತ್ತು (ರಾಜವ. ೬೯); ಮದುವೆಯೆನಲು ಹಿರಿಹಿಗ್ಗುವರಲ್ಲವೆ ನಿನ್ನೀ ಹರೆಯದ ಕನ್ನೆಗಳು? (ನಲ್ಮ. ೨೮-೧).

ಹಿರಿಹಿರಿಹಿಗ್ಗು (ದ್ವಿರುಕ್ತಿ) : ಗಂಗೆಯ ತಾಯಿ ಇದನ್ನು ಕಂಡು ಹಿರಿಹಿರಿಹಿಗ್ಗಿ (ಸುವರ್ಣ. ೨೮); ಬೆನ್ನು ಚಪ್ಪರಿಸಿಕೊಂಡು ಹಿರಿಹಿರಿಹಿಗ್ಗಿದ (ಹುಚ್ಚುಪಾ. ೧೭).

[ಹಿರಿ$_2$(< ಪಿರಿದು$_1$) + ಹಿಗ್ಗು$_1$ (< ಹಿಗ್ಗು)]

ಹಿರಿಹಿಗ್ಗು$_2$ (ನಾ). ಅತಿಶಯವಾದ ಆನಂದ; ಹೆಚ್ಚು ಸಂತೋಷ: ಮನಸ್ಸಿನಲ್ಲಿ ಗಾಳಿಗೋಪುರ ಕಟ್ಟಿಕೊಂಡು ಹಿರಿಹಿಗ್ಗಿನಲ್ಲಿ ಮರೆಯುವುದೂ ಉಂಟು (ಶಕ್ನದ. ೧೧೪).

[ಹಿರಿ$_2$ (< ಪಿರಿದು$_1$) + ಹಿಗ್ಗು$_2$ (< ಪಿಗ್ರ್ದು$_2$)]

ಹಿರಿಹುದ್ದರಿ (ನಾ). = ಹಿರಿಯುದ್ದರಿ: ಅಶೋಕನೂ ಕರೀಮನೂ ಹಿರಿಹುದ್ದರಿಗಳಾದರು (ಕಪವು. ೪-೪೭). [ಹಿರಿ$_2$ (< ಪಿರಿದು$_1$) + ಹುದ್ದರಿ$_2$]

ಹಿರೀಕ (ನಾ). ಹಿರಿಯವನು; ದೊಡ್ಡವನು: ಏನೋ ಹಿರೀಕರ ಪುಣ್ಯ . . . ನಿಮ್ಮ ಹೊಟ್ಟೆಯಲ್ಲಿ ಇಟ್ಟುಕೊಂಡು ಕಾಪಾಡುತಿದೀರಿ (ಪಲ್ಲಿ. ೨೬); ಒಳ್ಳೆ ಪ್ರಾಯದ ಮನುಷ್ಯ ಅನ್ಯಾಯವಾಗಿ ಕೆಟ್ಟು ಹಾಳಾಗಿ ಹೋಗುತಾನಲ್ಲಾ ಅಂತ ಕೇರಿಯ ಹಿರೀಕರಿಗೆ ತುಂಬ ವ್ಯಥೆಯಾಯಿತಂತೆ (ನಡದಾ. II, ೧೦೧೪). 'ಸರೀಕ' ಹೋ.

[ಹಿರಿ$_2$(< ಪಿರಿದು$_1$) + - ಕ$_3$]

ಹಿರೀಚಲು 'ಪಿರಿಯಾಚಲ್' ನೋ.

ಹಿರುಗ (ನಾ). ಲೂಟಿಮಾಡುವವನು: ಕುನ್ನಿ ಮರುಳಜೋಗಿ ಹೆಗ್ಗ ಹಿರುಗ ಬೊಮ್ಮಕನ್ನೆಕಸವ ಕಟಬಾಂಡ್ಕರೆನ್ನಿಸಿ ನಾಮವೆತ್ತಿಹಪರವಳಿದರ್ಗ ನಿನ್ನೊಲವುಂಟೆ ರಂಗೇಶ (ತತಸಾಂ. ೧೨-೬೫). [< ಹಿರಿ$_1$ (< ಪಿರಿ$_1$) + - ಗ$_3$]

ಹಿರುಡು (ನಾ). (?): ಓಟಕ್ಕೆ ನಾಣ್ಚುವನ ಒಂದಿಱಿವಾತನ್ ಹಿರುಡವನ್ (ಮೈಆರಿ. ೧೯೧೭, ೧೩-೧೦: ೩೦೦). [?]

ಹಿರೇಕಣಿಗಲು (ನಾ). ಒಂದು ಬಗೆಯ ದೊಡ್ಡ ಜಾತಿಯ ಕಣಿಗಲು: ದೇವಗರಿಗ, ಹಿರೇಕಣಿಗಲು, ನೇರಳಮಾವು, ದೀವರಿಗೆ, ಚಿಕ್ಕಕಮರಾಕ್ಮರ, ಕಾಡುಜೀರಕ (ಮೈಜಿಗ. ೭೮-೭೯೯). [< ಪಿರಿದು$_1$ + ಕಣಿಗಲು$_2$ (< ಕಣಗಿಲೆ$_1$)]

ಹಿರೇತಂಗಡಿ (ನಾ). ಒಂದು ಬಗೆಯ ತಂಗಡಿಗಿಡ : ಸೀಮೇತಂಗಡಿ, ಹಿರೇತಂಗಡಿ (ಮೈಜಿಗ. ೧೯೩೩೮). [< ಪಿರಿದು$_1$ + ತಂಗಡಿ]

ಹಿರೇಮುತ್ತುಕ (ನಾ). ಒಂದು ಬಗೆಯ ಮುತ್ತುಗದ ಮರ: ಆ ಚಕ್ರಂಗಳ ರೂಪು ಹಿರೇಮುತ್ತುಕದ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದು (ವಚಶಾ. II, ೧೭೮).

[< ಪಿರಿದು$_1$ + ಮುತ್ತುಕ (< ಮುಟ್ಟುಗ)]

ಹಿರ್ರನೆ 'ಹಿಜ್ಜನೆ' ನೋ.

ಹಿರ್ಗು 'ಪಿಗ್ರ್ದು$_2$' ನೋ.

ಹಿಲ, ಹೀಲ, ಹೀಲೆ (ನಾ). ಒಂದು ಬಗೆಯ ಮರ : ಚದುರನೌಡಲ ಕಾಯ ರುದ್ರಾಕ್ಷಿಯ ಮಾಡಿ ಬದನೆಯ ಕಾಯ ಲಿಂಗವನು ಮುದದಿಂ ಧರಿಸಿದ ಹಸ್ತಾವಡವೆಂದು ಅದಱೊಳು ಹಿಲದ ಕಾಯ (ನಿಜಸಾಂ. ೧-೯೮); ಅರನೆಲ್ಲಿ ಹಿಲ ತಾಳ ಗರಬಿಗಳ್ (ರುಕ್ಮಾಂಗ. ೧೦-೩). ಹೀಲ: ''ಬಂಗರಳಿಯನೆ ಹೀಲವಕ್ಕು'' (ಮಂಗಪಾ. ೩೬-೧೭). ಹೀಲೆ: ಸರಲಯಿಂ ಹೊರಲೆಯಿಂ ಹಾಲೆಯಿಂ ಹೀಲೆಯಿಂ ತೊರಲೆಯಿಂ ನೀಲಿಯಿಂ ಹೊಂಗಿಯಿಂ . . . ಕಾಡಸೆದುದು (ನಂದಿಮಾ. ೧೩-೧೨). [?]

ಹಿಲಮೋಚಿಕೆ (ನಾ). ಒಂದು ಬಗೆಯ ಸಸ್ಯ: ''ಕಲಂಬೀ, ಉಪೋದಕಾ, ಮೂಲಕಂ, ಹಿಲಮೋಚಿಕಾ, ವಾಸ್ತುಕಂ . . . ಬಿಲಿಕೆಸೊಪ್ಪು, ಚಕ್ರವರ್ತಿಕೆಸೊಪ್ಪು ಈ ತರಕಾರಿಗಳಿಗೆ ಹೆಸರುಗಳು'' (ಸಿದ್ಧಾಂತಿ. ೧೪೮). [ಸಂ. ಹಿಲಮೋಚಿಕಾ]

ಹಿಲಾಲು, ಇಲಾಲ್, ಇಲಾಲಿ, ಇಲಾಲು, ಹಿಲ್ಲಾಲು (ನಿಘ). ಬಟ್ಟೆಯನ್ನು ಎಣ್ಣೆಯಲ್ಲಿ ನೆನೆಯಿಸಿ ಮಾಡಿದ ದೀವಟಿಗೆ; ಛಂಜು; ಕಕ್ಕಡ: ಸೂರಿಯಪಾನ ಚಾಮರಸಾಲು ಪಂಜುಗಳು ಹಿಲಾಲು ಓಲಗಿಸುವ ನಾನಾವಾದ್ಯಭಸದಿಂ (ಗೋಮಟೇ. ೧೭-೨೯); ಕರದ ದಿವಟಿ ಹಿಲಾಲುಗಳ ಭಾಸುರ ಜಗಂಜ್ಯೋತಿಗಳ ಕಾಂತಿಸ್ಫುರಿತ ಸೂರ್ಯಜ್ಯೋತಿಗಳ ಸಾಲುಗಳು ಬೆಳಬೆಳಗೆ (ಅನಂತಾ. ೧-೨೪-೩೫); ದಕ್ಷಿಣಹಸ್ತದಿ ಪ್ರಜ್ವಲಿಸುತ್ತಿದೆ ಉರಿವ ಹಿಲಾಲು (ಕೋಗಿಲೆ. ೭೪-೧). ಇಲಾಲ್: (ಕ). ಇಲಾಲಿ: ತೇರಿನ ಮುಂದೆ ಇಲಾಲಿಗಳನ್ನು ಹಿಡಿದು ಹೋಗುತ್ತಾರೆ (ರೂಢಿ). ಇಲಾಲು: ಖಾನಾ ಓಲಗದವರು, ಒಂದು ಜೋಡಿ ತಾಫೆದವರು, ಇಲಾಲುಗಳು . . . ಕಳುಹಿಸಬೇಕೆಂದು ಅಪ್ಪಣೆಯಾಯಿತು (ಮಾಮರಾ. ೬೫). ಹಿಲ್ಲಾಲು: ಅದೇನು ಉತ್ಸವ . . . ಹತ್ತಿಪ್ಪತ್ತು ಹಿಲ್ಲಾಲುಗಳು ಉರಿಯುತ್ತಿವೆ (ಬೆಟ್ಟಪೂ. ೧೨). [<— ಅರ. ಮರಾ. ಒಲಾಲ್]

ಹಿಲುಕು, ಹಿಳುಕು$_2$ (ನಾ). ಭಾಗ; ಚೂರು: ಬೆಳ್ಳುಳ್ಳಿಯ ಹಿಲುಕುಗಳನ್ನು ಬಿಡಿಸಿ ಒಗ್ಗರಣೆಗೆ ಹಾಕು (ರೂಢಿ). ಹಿಳುಕು$_2$: ಬೀಜದ ಬೆಳ್ಳುಳ್ಳಿಯ ಹಿಳುಕುಗಳನ್ನು ಸೀಳಿದರೆ ಮೊಳಕೆ ಬಂದಿರುವುದು ಚೆನ್ನಾಗಿ ಕಾಣಿಸುತ್ತದೆ (ತರಚಿ. ೩೦). [?]

ಹಿಲ್ಲಾಲು 'ಹಿಲಾಲು' ನೋ.

ಹಿಲ್ಲುಗಾಜಿಕೆ (ನಾ). ವೇಸಗಾರಿಕೆ; ಕಪಟ: ಹದಿರು ಹೋರಚೆ ಠಕ್ಕು ಹಿಲ್ಲುಗಾಜಿಕೆ ಗನ್ನಗದುಳು . . . ವೇಶ್ಯಾಸುದತಿಯರೊಳಗಿರುತಿಹವು (ಚಂಪ್ರಸಾಂ. ೧೮-೮೫). [ಹಿಲ್ಲು$_2$ (IP <— ಮರಾ. ಹಿಲ್ಲಾ = ಯುಕ್ತಿ) + - ಕಾಜಿ + - ಇಕೆ]

ಹಿಲ್ಲೋಲ (ನಾ). ಹುಚ್ಚಾಟಿಕೆ; ವಿಚಿತ್ರವರ್ತನೆ: ಹೆಂಡತಿ ಮಕ್ಕಳ ಉಲ್ಲಾಸ ಹಿಲ್ಲೋಲದಲ್ಲಿಯೂ ವಿಚಾರಪರಮುಖಹೊತ್ತು ನೋಡಿದ ಪ್ರಥಮವೆ ವೈದ್ಯನಾಥ ಸಂಶಯಪರಿಚ್ಛೇದಮಾಡಿಬಿಡುವ ಹಾಗೆ . . . ಎಂದ (ಸುಖಿ. ೧೧೩). [ಸಂ.]

ಹಿಲ್ಲೋಲಿತ (ನಾ). ಸ್ವಚ್ಛಂದವಾಗಿ ಬೆಳೆಯುವ ವ್ಯಕ್ತಿ: ಶಕುಂತಲೆ ಅಲ್ಲಿಯ ತರುಲತೆಗಳ ಕೂಡಕೂಡ ನವಯೌವನದಲ್ಲಿ, ದೇಹಮನಗಳಲ್ಲಿ ಹಿಲ್ಲೋಲಿತಳಾಗಿ ಬೆಳೆಯುತ್ತಿದ್ದಳು (ನಬುಧ. I ,೩೮೧). [ಸಂ.]

ಹಿವ (ನಾ). ಹಿಮ; ಮಂಜು: ''ಹಿವಂ ಹಿಮಮಕ್ಕುಂ'' (ತರ್ಕಾನಿ. ೨೬); ಮಕಾರಕ್ಕೆ ವಕಾರಂ -- ಅಮರೀ -- ಅವರಿ . . . ಹಿಮ — ಹಿವ (ಶಮದ. ೨೬೩ ಪ್ರಯೋ); ಬಿಸಿಲ ಜಳಕ್ಕೆ ಬಾಡದ ಬಿಳ್ಪಂಗಳ ಹಿವಕ್ಕೆ ಕೋಡದೆ (ರಾಮಾಶ್ವ. ೧೦೧-೪). [< ಸಂ. ಹಿಮ]

ಹಿವಗದಿರ (ನಾ). ತಂಪಾದ ಕಿರಣಗಳುಳ್ಳವನು; ಚಂದ್ರ: ''ಜೊನ್ನಡಲಂ . . . ಹಿವಗದಿರಂ, ಕಲ್ತಲೆವಣಿ, ತಿಂಗಳ್ - ಈ ೨೦ ಚಂದ್ರನ ಪೆಸರ್'' (ಕಶಾ. ೨-೨೩); ಕಂದನೆರ್ದೆಯೊಳ್ ತಾಳ್ದಂ ಹಿವಗದಿರನೆಂದೊಡಿನ್ನುಳಿದವರೇನಂ ಪೊಗಲಲಾರ್ಪರ್ (ಕಬ್ಬಕಾ. ೧೨೨); ನಗೆಮೊಗವೆಂಬ ಹಿವಗದಿರನಂ ಸಾರ್ದು ಕಳೆದು (ಸೌಂದಪು. ೧೩-೩೮).

[ಹಿವ + ಕದಿರ್$_2$ + - ಅ$_7$]

ಹಿಶೆ 'ಹಿಸ್ಸೆ' ನೋ.

ಹಿಷಾರೆ 'ಇಷಾರೆ' ನೋ.

ಹಿಸಕು 'ಪಿಸುಂಕು' ನೋ.

ಹಿಸಿ 'ಪಿಸಿ$_1$' ನೋ.

ಹಿಸಿಕ, ಹಿಸುಕ (ನಾ). ಒಡೆಯುವವನು; ಸೀಳುವವನು: ಇಕ ಪ್ರತ್ಯಯಕ್ಕೆ - ಕರಿಕಂ, ಅಸಿಕಂ, (ರಸಿಕಂ) ಹಿಸಿಕಂ, ಬಾರಿಕಂ (ತಮದ. ೬.೨೦೩ ಪ್ರಯೋ). ಹಿಸುಕ: ಜ್ಞಾನಿಗಳು ಮೌನಿಗಳು ಪರಸಂಧಾನರಲ್ಲಿ ಹರಲ್ಲದೆ ಹೀನ ಹಿಸುಕರು ಹಿಂಸೆಪಾತಕರೇನು ಇಲ್ಲ (ಶರಲೀ. ೧೬೭-೫). [ಹಿಸಿ (< ಪಿಸಿ$_1$) + - ಕ$_3$]

ಹಿಸಿಕು 'ಪಿಸುಂಕು' ನೋ.

ಪಿಸಿತಿನ್ (ಕ್ರಿ). ಹರಿದು ತಿನ್ನು: ಈ ಉಭಯದ ಮಾರ್ಗ ಅಜೀವ ಅಜೀವಿಂಗ ಹಿಸಿ [ವಾಕಾಂ. ಹೇಸಿ]ತಿಂಬ ಕರಣಕ್ಕೆ ಒಡಗೂಡಿದ ಸ್ನೇಹ ಉಂಟೆ (ಸಕಪ.ಕ. II. ೬೭೭-೧೪೧೦); ಕಾಲ ಪಿಸಿತಿಂಬ ಶಂಕೆಯಿಂದಾ ಪಾದರಕ್ಷೆಗೆ ತೈಲಮಂ ಮೊದಲೆ ತೀಡುವಂತೆ (ಚೀರಮ. ೧-೨೩). [ಹಿಸಿ (< ಪಿಸಿ) + ತಿನ್]

ಹಿಸುಕ 'ಹಿಸಿಕ' ನೋ.

ಹಿಸುಕು$_1$ 'ಪಿಸುಂಗ' ನೋ.

ಹಿಸುಕು$_2$ (ನಾ). ಒಮುಕುವಿಕೆ; ಒತ್ತುವುದು: "ಮ್ರದ್,ಮ್ರದಿ. ಮ್ರದನಂ, ಮ್ರದನೀಯಂ, ಮ್ರಮ್ಯಂ, ಮ್ರಾದ್ಯಂ - ಈ ೬ ಹಿಸುಕು" (ಕಾಶಕ್ಯ. ೧೩೫). [< ಪಿಸುಂಕು]

ಹಿಸುಗು$_1$ 'ಪಿಸುಂಕು' ನೋ.

ಹಿಸುಣ$_1$ 'ಪಿಸುಣ್' ನೋ.

ಹಿಸುಣ$_2$ 'ಪಿಸುಣ್ಣ' ನೋ.

ಹಿಸುಣತೆ 'ಪಿಸುಣತ' ನೋ.

ಹಿಸುಣಾಡು 'ಪಿಸುಣಾಡು' ನೋ.

ಹಿಸುಣಿಕೆ (ನಾ). ಚಾಡಿಹೇಳುವುದು; ಚಾಡಿಕೋರತನ: ಹರಿಯ ಹಿಸುಣಿಕೆಯವರ ಚಿತ್ರವ ಬೆರಸಿ ಪೈರವ ಬೆಳಸಿ ಬಂದರು (ಕುವ್ಯಾಭೀ. ೧-೧೯).

[ಹಿಸುಣ (< ಪಿಸುಣ) + - ಇಕೆ]

ಹಿಸುಣಿಗ 'ಪಿಸುಣಿಗ' ನೋ.

ಹಿಸುಣು 'ಪಿಸುಣ್'ನೋ.

ಹಿಸೆ 'ಹಿಸ್ಸೆ' ನೋ.

ಪಿಸ್ಸೆ, ಹಿಂಶೆ, ಹಿಸೆ (ನಾ). ಪಾಲು; ಭಾಗ: ಕೆರ ಕೆಳಗಣ ಸರಕಾರದ ಹಿಸ್ಸೆ ಭೂಮಿಯಲ್ಲಿ ಕಂಠೀರಾಯ. ಯಿಂನೂರ ಐವತ್ತು ಪರಹಾದ ಭೂಮಿಯಂನ್ನು ನಿರುಪಾಧಿಕ ಸರ್ವಮಾನ್ಯವಾಗಿ ನಡಶಿಕೊಂಡು ಬರುವಂತೆ . . . ಅಪ್ಪಣೆ ಮಾಡಿಶಿಕೊಟ್ಟುಯಿದೆ (ಮೈಆರಿ. ೧೯೩೬.೩೮ ೫೪: 1628); ಒಂದು ಪಿಸ್ಸೆ ದವಸ ಎರಡು ಹಿಸ್ಸೆ ನಗದು ಸಹಾ ಕೊಡುವದು (ಮಹಾಪೂ. II. ೭೭); ನಿನ್ನ ಪಿಸ್ಸೆ ನೀ ತಗೊಂಡು ಹೋಗು (ಕಾನೂರು. ೨೭೩). **ಹಿಂಶೆ**: ನಮ್ಮೊಳಗೆ ಹಿಂಶೆಯಾಗಲೇಬೇಕೆಂದು ತೀರ್ಮಾನವಾಯಿತು (ಕುಕಾ. ೧೫೩). **ಹಿಸೆ**: ಪರಮೇಶ್ವರಯ್ಯನ ಮನೆ ಹಿಸೆಯಾಯಿತು (ಸ್ವಪ್ನೂ. ೫); ದನಕರುಗಳ ಹಿಸೆಯಾಯಿತು (ಅಲ್ಪಪ್ರ. ೯೯). [<— ಆರ.ಹಿಂ. ಮರಾ. ಪಿಸ್ಸಾ]

ಹಿಸ್ಸೆದಾರ (ನಾ). ಪಾಲುಗಾರ; ಭಾಗಸ್ಥ: ಇನ್ನು ಕೆಲವೇ ವರ್ಷಗಳಲ್ಲಿ ಆ ಕಂಪನಿಯ ಪಿಸ್ಸೆದಾರರು ದಿವಾಳಿಯಾಗುತ್ತಾರೆ (ಪಂಜಪಂ. ೨೦೫). [ಹಿಸ್ಸೆ + - ದಾರ]

ಹಿಳಕು 'ಪಿಳ್ಕು' ನೋ.

ಹಿಳಗು 'ಪಿಳ್ಗು' ನೋ.

ಹಿಳಲು 'ಪಿಣಿಲ್$_3$' ನೋ.

ಹಿಳಿ$_1$ 'ಪಿಟಿ' ನೋ.

ಹಿಳಿ$_2$ 'ಪಿಳಿ$_2$' ನೋ.

ಹಿಳಿಕು 'ಪಿಳ್ಕು' ನೋ.

ಹಿಳಿಲ್ 'ಪಿಣಿಲ್$_3$' ನೋ.

ಹಿಳಿಲು$_1$ 'ಪಿಣಿಲ್$_3$' ನೋ.

ಹಿಳಿಲು$_2$ (ನಾ). ದನಗಳಿಗೆ ತಿನ್ನಿಸುವ ಒಂದು ಬಗೆಯ ಮೇವು (?): ಹುರುಳಿ, ಹೊಟ್ಟು, ಹಿಳಲು, ಇಂಥ ಖರ್ಚಿನ ಬಾಬ್ತು ಇಲ್ಲದ ಬಿಟ್ಟಿ ದೊರೆಯುವ ಸರಾಯಿಯಿಂದಲೇ ಹೋರಿಗಳು ಬಿಂಡಗಟ್ಟುವುದಾದರೆ. . . ಧರ್ಮ, ನೀತಿ ಯಾರಿಗೆ ಬೇಕು? (ಪಳುಮ. ೧೬೭).

[?]

ಹಿಳಿಸು (ಕ್ರಿ). ಸುರಿಸು; ಸೂಸು: ಕೊಳಲಿನ ಸರಗಳು . . . ಹೃದಯದಲ್ಲಿ ನರ್ತಿಸುತ್ತಾ ಬಗೆಬಗೆಯ ರಸವನ್ನು ಹಿಳಿಸುತ್ತಿವೆ (ಗೋಕಾ. VI. ಮುಸ್ಸಡಿ).

[ಹಿಳಿ$_1$ (< ಪಿಟಿ) + - ಸು$_1$]

ಹಿಳುಕು$_1$ 'ಪಿಳ್ಕು' ನೋ.

ಹಿಳುಕು$_2$ 'ಹಿಲುಕು' ನೋ.

ಹಿಳುಕುಗಱಿ (ನಾ). ಬಾಣದ ತುದಿಗೆ ಕಟ್ಟಿರುವ ಗರಿ : ಪ್ರಳಯದಿವಸದ ಪಟುಪವನನೀ ಹಿಳುಕುಗಱಿಯೊಳುವಿಸಿದುದೊ (ಕುವ್ಯಾಭೀ. ೪ ೧೯); ಹಳಚುತಿರ್ದವಖಂಡಿತಾಸ್ರದ ಹಿಳುಕುಗಱಿಗಣೆಯಲಗು [ಪಾಶಾಂ. ಗಳುಗುಡಿಯಿಱಿದು, ಗಣೆ ಗಱಿಯಲಗು] ಹೊದಸಿದವವನಿಮಂಡಲವ (ತೆಖರಾ. ೬-೨೫ ೧೫). [ಹಿಳುಕು (< ಪಿಳ್ಕು) + ಗಱಿ]

ಹಿಳುಕುಗೆನ್ನೆ (ನಾ). ಶರಸಂಧಾನ ಮಾಡಿದಾಗ ಬಾಣದ ಗರಿಯ ಭಾಗ ಅಥವಾ ಹಿಂಭಾಗ ಸೋಕಿದ ಕೆನ್ನೆ (?): ಹಿಳುಕುಗೆನ್ನೆಯ ಹೂಗರುಮೋಱೆಯ ಬಿಗಿದ ಹುಬ್ಬಿಗಳ ಕಳಶಜನ ಸುತನೊಕಿದನು (ಕುವ್ಯಾತ. ೭ ೨೨).

[ಹಿಳುಕು$_1$ (< ಪಿಳ್ಕು) + ಕೆನ್ನೆ]

ಹಿಳುಗಾಡಿಸು 'ಪಿಳುಗಾಡಿಸು' ನೋ.

ಹಿಳುಹು (ಕ್ರಿ). ನಾಶಮಾಡು: ಧೀರ ವಿಟರು ಎಂಬ ನಾಮಮಾತ್ರವನೆಲ್ಲ ಹೀರಿ ಹಿಳುಹಿ ನಾವು ಬಿಸುಡೆ (ಅಮುಸಾಂ. ೩-೯೦). [< ಹಿಳಿ$_1$ + - ಹು$_1$ (< - ಪು$_1$)]

ಹಿಳ್ಕಂಬು (ನಾ). ಗರಿಯಿಂದ ಕೂಡಿದ ಬಾಣ: ಕಾಳ್ಕಿಚ್ಚು ಸುತ್ತುರಿಯ ಹಿ[ಪಾಶಾಂ. ಹೇ]ಳ್ಕಂಬು ತಾಗುತಿರೆ (ಕುಮುರಾ. ೧೩-೨೧). [ಹಿಳ್ಕು (< ಪಿಳ್ಕು) + ಅಂಬು]

ಹಿಳ್ಕು 'ಪಿಳ್ಕು' ನೋ.

ಹಿಳ್ಗು$_1$ 'ಪಿಳ್ಗು' ನೋ.

ಹಿಳ್ಗು$_2$ 'ಪಿರ್ಗು$_2$' ನೋ.

ಹಿಳ್ನೆ (ಅ). ಕೂಡಲೆ; ತಟ್ಟನೆ: (೫). [ಹಿಳ್$_0$ + - ಅನೆ$_1$]

ಹಿಳ್ಳಯಿಸು, ಹಿಳ್ಳಿಸು (ಕ್ರಿ). ಅಗಲಿಸು; ಬಿರಿಯಿಸು: ಆ ಪ್ರಶ್ನಮಾಲಿಕೆಗ ನಾಚಿಕೆಪಟ್ಟುಕೊಂಡು ತುಟಿ ಹಿಳ್ಳಯಿಸಿ ನಗುತ್ತಾ ಪೀಂಚಲು ಹೇಳಿದಳು (ಮಲಮ. ೨೭೩). **ಹಿಳ್ಳಿಸು**: ಹೇಷಾರವದಿ. . . ರೋಷಾಗ್ನಿ ನೇತ್ರ ಜ್ವಲಿಸಿ ಹಿಳ್ಳಿಸಿ ನಾಶಕದ್ಯಚ್ಚನಿಸಿ (ಪ್ರಸಪಾ. ೨೨-೩). [? + - ಇಸು]

ಹಿಳ್ಳಿ, ಹಿಳ್ಳಿ$_2$ (ನಾ). ಕೊಂಬೆ; ರೆಂಬೆ; ಟೊಂಗೆ: 'ಹಿಳ್ಳಿಯೊಡೆ' ಪರಾ. **ಹಿಳ್ಳಿ**$_2$: 'ಹಿಳ್ಳೊಡೆ' ಪರಾ. [?]

ಹಿಳ್ಳಿಯೊಡೆ, ಹಿಳ್ಳೊಡೆ (ಕ್ರಿ). ೧. ಕವಲೊಡೆ; ರೆಂಬೆಯೊಡೆ: "ಅಪ್ರಕಾಂಡ, ಸ್ಕಂಧ, ಗುಲ್ಮ - ಈ ೩ ಹಿಳ್ಳಿಯೊಡೆಮ ಬೆಳೆದ ತೃಣಧಾನ್ಯಂಗಳು" (ನಾಚರಾ. ೧೦೫). **ಹಿಳ್ಳೊಡೆ**: ೨. ಗುಂಪು ಚದುರು: ಸಿಗುಱಿದ್ದ ರೋಮಂ ಕೆದಱಿ ಮೆಳ್ಳಿಸುವ ಕಣ್ಣುವಾತೆಗಳಿಂದ ಕಿಡಿಯುದುರೆ ಹಿಳ್ಳೊಡೆದು ಹಿಂದ ಮರಳ್ಚಕ್ಕಲಂ ಬೀವಿವರಿದುದು ಬೇಂಟೆಕಾಱರೊಳಗೆ (ಪಚಕಾ. ೬-೧೧). [ಹಿಳ್ಳಿ + ಒಡೆ$_1$]

ಹಿಳ್ಳಿಸು 'ಹಿಳ್ಳಯಿಸು' ನೋ.

ಹಿಳ್ಳು 'ಪಿಳ್ಳೆ' ನೋ.

ಹಿಳ್ಳೆ$_1$ 'ಪಿಳ್ಳೆ' ನೋ.

ಹಿಳ್ಳೆ$_2$ 'ಹಿಳ್ಳಿ' ನೋ.

ಹಿಳ್ಳೆಗಾಲ್ 'ಪಿಳ್ಳೆಕಾಲು' ನೋ.

ಹಿಳ್ಳೆಗಾಲ (ನಾ). ಬಡಕಲಾದ ಕಾಲುಳ್ಳವನು: ಬಹುಪ್ರೀಂಗೆ - ಕಡುಚಾಗಿ ಹಿಳ್ಳೆ [ಪಾಶಾಂ. ಪೆಟ]ಗಾಲಂ, ನಿಡುಮೂಗಂ (ಶಮದ.ಮ. ೧೭೬ ಪ್ರಹೀ).

[ಹಿಳ್ಳೆಗಾಲ್ (< ಪಿಳ್ಳೆಕಾಲು) + - ಅ$_1$]

ಹಿಳ್ಳೆಗಾಲು 'ಪಿಳ್ಳೆಕಾಲು' ನೋ.

ಹಿಳ್ಳೊಡೆ 'ಹಿಳ್ಳಿಯೊಡೆ' ನೋ.

ಹಿಳ್ಳೊಡೆಯಿಸು (ಕ್ರಿ). ಕವಲೊಡೆಯುವಂತೆ ಮಾಡು: ಕುದುರೆಯ ಹಿಂಡ ಹಿಳ್ಳೊಡೆ [ವಾಶಾಂ. ಹಿಂಡೊಡೆ]ಯಿಸಿದನು ಬಂದು ಕದುಬುವ ಕಾಲುಪಾಯಕರ ಮೆದೆಗೆಡಪಿದನು (ಕುಪಾಸಾಂ. ೧೩-೧೩). [ಹಿಳ್ಳೊಡೆ (< ಹಿಳ್ಳಿಯೊಡೆ) + - ಇಸು$_1$]

ಹಿಜ್ಜನೆ, ಹಿರ್ರನೆ (ಅ). ಅತಿಶಯವಾಗಿ; ಹೆಚ್ಚಾಗಿ. **ಹಿರ್ರನೆ**.

ಹಿಜ್ಜನೆಹಿಜ್ಜನೆ (ದ್ವಿರುಕ್ತಿ): ಹಿಜ್ಜನೆಹಿಜ್ಜನೆ ಹೀರಿ ಮುನಿಸುತ ಸುಜ್ಜಸುಜ್ಜನೆ ಸುರಿದು ರುಧಿರವ ಡಜ್ಜಡಜ್ಜನೆ ತೇಗುತಿರ್ದವು ಡಾಕಿನಿವ್ರಾತ (ಪುದೇಪ. ೩ ೬೪). **ಹಿರ್ರನೆಹಿಗ್ಗು** = ಬಹಳವಾಗಿ ಸಂತೋಷಿಸು: ಕೊಂಡಾಡಿದಡೆ ಹಿರ್ರನೆ ಹಿಗ್ಗುವರು (ಪೋಪತ. ೨೭-೨೩). [? + - ಅನೆ$_1$]

ಹೀಬೀ 'ಪೀಬೀ' ನೋ.

ಹೀಂಗೆ 'ಇಹಗೆ' ನೋ.

ಹೀಕರಣೆ (ನಾ). ಜುಗುಪ್ಸೆ; ಹೇವರಿಕೆ: ಈ ಹುರುಳಿಸಾರು, ಹಲಸಿನ ಬೇಳೆ ಸೌತೆಕಾಯಿಹುಳಿ - ತಿಂದು ಹೀಕರಣೆ ಬಂದಿತು (ಮರಮ. ೧೨೪).

[ಹೀಕರಿಸು + - ಅಣ್ಣೆ]

ಹೀಕರಿಸು (ಕ್ರಿ). ಹೀಯಾಳಿಸು; ಅಲ್ಲಗಳೆ; ತಿರಸ್ಕಾರಮಾಡು: ಹೀಕರಿಸಿದಭಿಮನ್ಯುವರಿಘದಿಂ ಬಿಡ್ಕದಿಂ ಕೆಡಪಿದನು ರಿಪುಬಲಗಳ (ತುರಂಗ. ೫೨-೩೪); ನಾರಿಯರು ನಡನಡುಗಿ ಆಕರಿಸಿ ಹೀಕರಿಸಿ (ಜಿನಮು. ೧೫-೪೩); ನನ್ನನ್ನು ಕಂಡು ಹೀಕರಿಸುವುದಿಲ್ಲವೆ? (ದೇವಪಂ. ೧೯೧). [? + - ಇಸ್ಸು]

ಹೀಗಳೆ (ಕ್ರಿ). ಅಲ್ಲಗಳೆ; ತಿರಸ್ಕಾರಮಾಡು: ಸರಸದಿಂದಲಿ ತಪ್ಪುಯಿರ್ದೊಡೆ ಜರಿದು ಹೀಗಳೆಯದಲೆ ತಿದ್ದುತ ಕರುಣವಿಟ್ಟದನೋದಿ (ಯಚೋರ. ೬); ನನ್ನ ಮಾತನ್ನು ಹೀಗಳೆಯ ಬೇಡಿರಿ (ಚಟ್ಟಹಾ. ೫೪). [ಹೀ + ಕಳೆ]

ಹೀಗೆ 'ಇಹಗೆ' ನೋ.

ಹೀಚು$_1$, ಹೀಸು (ಕ್ರಿ). ೧.ಧ್ವಂಸ ಮಾಡು; ದಮನಮಾಡು: ಕೀಚಕ ಮೊದಲವನನುಜರನೆಲ್ಲ ಹೀಚಿ ಬಿಸಾಡಿದ ಮಹಿಮನೆ (ಪುರಂದ. ೪-೩೮-೨); ಉಚಿತಾಸ್ತ್ರದಿಂ ಗೋಚಿದಂ ಹೀಚಿದಂ ಯಸುರಾರಿಯಹಿತಾಸ್ತ್ರವ (ಜಿನಮು. ೨೯-೪೯); ಹೀಚಿದನು ಜನರಂಗವಾಲಯ ಗೋಚಿದನು (ಬಿಜ್ಜಪ್ಪ. ೬೭-೧೮). ೨. ನೀಳವಾಗಿಸು; ಹಿಗ್ಗಿಸು: ಕೈಗಳನ್ನು ಹೀಚಿದೆ, ಕಾಲುಗಳನ್ನು ಚಾಚಿದೆ (ಮೇದಿಮ. ೬೦); ವಸಂತ ಇಡೀ ಮೈಯನ್ನೇ ಹೀಚಿ ತುದಿಗಾಲ ಮೇಲೆ ನಿಂತನು (ಗಂಮಾಯಿ. ೭೦). ೩. ಪ್ರಯಾಸಪಡು; ಕಷ್ಟಪಡು: ಇನ್ನು ನಾನು ತಾಳಿಕಟ್ಟುವ ತನಕ ಅದನ್ನು ಹೀಚಿ ಕಾರ್ಯಗತ ಮಾಡ್ತೀನಿ (ಮಾಮನ. ೧೧೦). ಹೀಸು: ಚಂಚುಗಳಿಂದ ನಖದಿಂದಲುಭಯ ಪಕ್ಕಗಳಿಂದಲಿ ಬಾಸುತಂ ಹೀಸುತಂ ಮೂಸುತಂ ಮುಸುಕಲು (ಜಿನಮು. ೩೫-೧೫); ಹಾವ ಹಿಡಿದು ಹೀಸಿ ಕರಹುಸಿ ಹೂಜೆಯ ಹೇವಗೇಡಿ ಹೈಯೆಂದವರವೋವೂ ಹೊರೆದವೆ (ಶತಸಾಂ. ೨೮-೧೦೦). [< ಪಿಂಚು$_1$]

ಹೀಚು$_2$ 'ಪೀಚು$_2$' ನೋ.

ಹೀಚುಗಾಯಿ (ನಾ). ಬಲಿಯದಿರುವ ಕಾಯಿ; ಎಳೆಯ ಕಾಯಿ: ಹುಡುಗರು ಹೀಚುಗಾಯಿಗಳನ್ನೇ ಕಿತ್ತು ಹಾಳುಮಾಡಿದ್ದಾರೆ (ರೂಢಿ).

[ಹೀಚು$_2$ (< ಪೀಚು$_2$) + ಕಾಯಿ$_4$ (< ಕಾಯ್$_4$)]

ಹೀದೆ (ನಾ). ಸಾರವು ಹೀರಿಹೋದುದು; ಹಿಪ್ಪೆ; ಸಿಪ್ಪೆ: ಅವಳ ಬಾಳ ಹಿಂಡಿ ಹೀರಿ ಆಸೆ ಹೀದೆಯುಳಿಸಿತನ್ನೆ (ಗಣೇಶ. ೮೯-೧೦); ಅಗಿದು ಉಗಿದ ಕಬ್ಬಿನ ಹೀದೆಯಂತೆ ಕಾಣಿಸುತ್ತಿತ್ತಂತೆ (ಕರಿಕಂ. ೨೪). [< ಪೀರ್]

ಹೀನ (ಗು). ೧. ಕೀಳಾದ; ಅಲ್ಪವಾದ: ನಾನಾಪರಿಯಲಿ ಮೋಹ ಮಾಡದಿರು ಹೀನ ಮೂತ್ರದ ಕುಳಿಯಲ್ಲಿ (ಪುರಂದ.ಧಾ. ೨-೪೯-೧); ಪ್ರಭುಗಳೆ ನಾನು ಹೀನತಂತ್ರಗಳನ್ನು ಎಸಗುವುದಿಲ್ಲ (ತ್ರೀರಾಯ. ೨೦೫). ೨. ಕೆಟ್ಟ; ದುಷ್ಟ. ೩. ತೊರೆದ; ತ್ಯಜಿಸಿದ: 'ಹೀನಧ್ರುವ'ಪರಾ. ೪.ಇಲ್ಲದಿರುವ; ಊನವಾದ. (ನಾ). ೫. ಕೆಟ್ಟುದು: ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ (ಮಹಾದೇ. ಬ. ೨೮-೫೮); ಮನುಷ್ಯನು ಒಳಿತು ಹೀನಗಳನ್ನು ತಿಳಿಯಬಲ್ಲನು (ಮುಂಬಯಿ.೪-೧೪). ೬. ಕಳಪೆಯಾದುದು; ಕೀಳಾದುದು: ಗೆಡ್ಡೆಯ ಹೊಲ ಹೀನ ಗೊಡ್ಡುಹೆಂಡತಿ ಹೀನ (ಇಂಚಾಪ. ೯೭-೭೫). ೭. ಕೀಳುಮನುಷ್ಯ; ಅಲ್ಪವ್ಯಕ್ತಿ: ವನನಾಗಾರಿಯನಾಂತ ದಂತಿಶಿಶುಪೋಲ್ ದಿಗ್ಗಂತಿಯೊಳ್ ಪೋರ್ದ ಹೀನನವೋಲ್ . . . ನೀಡಿಲ್ಲದಳ್ಕಾಡುಗುಂ (ಶಾಂತಿಪು. ೫-೨೭); ಹೀನರೊಳ್ ನಾನತಿಹೀನನಾಗಿ ಅಭಿಮಾನಿಯಾಗಿ ಕಾಲಕಳೆದೆನಲ್ಲ (ಪುರಂದ.ಧಾ. ೨-೪೧-೧). [ಸಂ.]

ಹೀನಗುಣ (ನಾ). ನೀಚಸ್ವಭಾವ; ಕೆಟ್ಟಗುಣ: ಎನ್ನ ಹೀನಗುಣಗಳನೆಲ್ಲ ಮನ್ನಿಸಿ ಸಲಹೊ (ಪುರಂದ. ೪-೧೨೬-೩); ಹೀನಗುಣವಿನಿತಿರದ . . . ಶಿಷ್ಯನ ಶಿರದ ಮೇಲೆಯು ತಮ್ಮ ದಕ್ಷಿಣಕರವ ಚಾಚುತಲಿ (ಗಗಶಾ. ೨-೨೯). [ಸಂ.]

ಹೀನಜಾತಿ (ನಾ).೧. ಕೀಳುಜಾತಿ. ೨. ಕೀಳುಜಾತಿಯಲ್ಲಿ ಹುಟ್ಟಿದವನು: ಗತಿಗೆಟ್ಟು ಹೀನಜಾತಿಗಳೊಡನೆ ಕೂಡಿದೊಡೆ ಸೈರಿಸಂ (ಚೈಮಭಾ. ೧೦-೩೯). [ಸಂ.]

ಹೀನತನ (ನಾ). ಕೀಳುತನ; ಕೆಟ್ಟತನ: ದಾನಿಗೆ ದೀನತನವೇಕೆ ಜ್ಞಾನಿಗೆ ಹೀನತನವೇಕೆ (ಸರ್ವಜ್ಞ. ೪೪೩). [ಹೀನ + - ತನ]

ಹೀನತೆ (ನಾ).= ಹೀನತನ: ನಿನ್ನ ಪುಣ್ಯದಿಂದಂ ನೀರೇಜಾನನೆಯಾಂ ದೂರಕೊಂಡಂ ಹೀನತೆಯಂ ಬಿಸುಡು ಮೋಹದಿಂ ಕೂಡೆನ್ನೊಳ್ (ಧರ್ಮಾಮೃ. ೪-೨೫೬); ಹೆರರೆದುರ್ ಸ್ವಪ್ರಶಂಸೆಯ ಹೀನತೆಯನಿನಿತು ಲೆಕ್ಕಿಸದೆ ನೋಡುತಿರ್ದಳು ಕನ್ನೆ (ಚತ್ರಾಂಗ. ೧೯-೫೨೨).

[ಸಂ. ಹೀನತಾ]

ಹೀನತ್ವ (ನಾ). ಕೀಳುತನ: ನಾನಾ ಜನ್ಮದಿ ಬಹು ಯೋನಿಮುಖದಿ ಬಾಹೊ ಹೀನತ್ವವನು ನೀನು ಕಳೆಯಲಾಪೆಯ (ಕನಕ. ೯೩-೧). [ಸಂ.]

ಹೀನದೈವ (ನಾ).ಕ್ಷುದ್ರದೈವ; ಕೀಳುದೇವರು: ಹೀನದೈವಗಳ ನಂಬಿದ ಜನರಿಗೆ ತನ್ನ ಜ್ಞಾನದಿಂದಲಿ ಹರಿಯ ತೋಱಿದ (ಪುರಂದ.ಧಾ. ೧-೭-೧). [ಸಂ.]

ಹೀನಧ್ರುವ (ನಾ). ಮೈಮೇಲೆ ಧ್ರುವ ಎಂಬ ಸುಳಿಯಿಲ್ಲದ ಕುದುರೆ: ಹೀನಧ್ರುವನುಂ ಪ್ರೋಢಸ್ನಾನವಳಿತ್ರಯನುಂ. . . ಆಱುವರ್ಷದೊಳಱಿಗುಂ (ಅಶ್ವಶಾ. ೬-೭). [ಸಂ.]

ಹೀನನುಡಿ (ನಾ). ಕೆಟ್ಟಮಾತು; ಕೀಳುನುಡಿ: ಹರಿಕಥೆಯನ್ನು ಬಿಟ್ಟು ಹೀನನುಡಿ ನುಡಿಯುವರು (ಪುರಂದ. ೧-೨೮-೨). [ಹೀನ + ನುಡಿ$_2$]

ಹೀನಬಲ (ನಾ). ಕಡಿಮೆ ಶಕ್ತಿಯುಳ್ಳವನು: ಹೀನಬಲನನಧಿಕಬಲಂ ತೊತ್ತಲಿದುಳಿದ ನೆಂಬ ಲೋಕದ ಪಱಿಪೊರ್ದದೆ ಮಾಣ್ಕ (ಆದಿಪು. ೧೪-೧೦೨). [ಸಂ.]

ಹೀನಬುದ್ಧಿ (ನಾ). ಕೆಟ್ಟ ವಿಚಾರ; ದುರಾಲೋಚನೆ: ಧ್ಯಾನಿಸುವನೆನುತಲತಿ ಮೌನವನು ಪಿಡಿದು ಬಕಪಕ್ಷಿಯಂತೆ ಹೀನಬುದ್ಧಿಗಳ ಯೋಚಿಸಿ ಕುಳಿತು ಫಲವೇನು (ಪುರಂದ. ಧಾ. ೨-೪೫-೧). [ಸಂ.]

ಹೀನಯಾನ (ನಾ). [ಬೌದ್ಧ] ಬೌದ್ಧಮತದ ಒಂದು ಶಾಖೆ: ಈ ಮಾಧ್ಯಮಿಕ ಸಂಪ್ರದಾಯಕ್ಕೆ ಮಹಾಯಾನವೆಂದೂ, ಯೋಗಾಚಾರಸಂಪ್ರದಾಯಕ್ಕೆ ಹೀನಯಾನವೆಂದೂ ಹೆಸರು (ಹಿಂದಸಾ. ೨೫); ಐತಿಹಾಸಿಕಪುರುಷನಾದ ಬುದ್ಧನು ಬೋಧಿಸಿದ ಧರ್ಮಕ್ಕೆ ಮುಂದೆ ಹೀನಯಾನವೆಂಬ ಹೆಸರು ಬಂದಿತು (ಕಶಾಅ. ೧೧೮). 'ಮಹಾಯಾನ' ಪರಾ.

[ಸಂ.]

ಹೀನಯಿಸು 'ಹೀನಿಸು' ನೋ.

ಹೀನಲೋಹ (ನಾ). ಕೀಳುಲೋಹ; ಕೆಳದರ್ಜೆಯ ಲೋಹ: ಕಿರೀಟದೊಳಗ ಸೊನ್ನಗಾರನು ಹೀನಲೋಹವನ್ನು ಬೆರೆಸಿ ಚಿನ್ನವನ್ನು ತಕ್ಕೊಂಡನೆಂದು ಅರಸನಿಗೆ ಸಂಶಯ ಬಂತು (ಮುಂಬಯಿ. ೫-೬೫). [ಸಂ.]

ಹೀನವೃತ್ತಿ (ನಾ). ತುಚ್ಛ ಕೆಲಸ; ನೀಚಕಾರ್ಯ: ಎನಗಗ್ಗಳಿಕೆಯಲ್ಲದೆ ಹೀನ ವೃತ್ತಿಯ ಬಳಸಿ ನಡೆಸನು (ಕುಮಾಲಿ. ೧೦-೧೭); ಅರ್ಜನೆಗಾಗಿ ಸೇವಾದಿ ಹೀನವೃತ್ತಿಯನ್ನವಲಂಬಿಸುತ್ತಲೂ ಇರಲಿಲ್ಲ (ಆರ್ಯಧ. ೮೩). [ಸಂ.]

ಹೀನಸುಳಿ (ನಾ).೧. ಮೈಮೇಲೆ ಇರುವ ಅಶುಭಸೂಚಕವಾದ ಕೂದಲಿನ ಸುಳಿ: ದನಾ ಪರೀಕ್ಷೆ ಮಾಡೋವಾಗ ಹೀನಸುಳಿ, ಪಾತಾಳಸುಳಿ . . . ಕೊವ್ವಲ್ಲು ಇವೆಲ್ಲಾನೂ ಚಂದಾಗಿ ನೋಡಿ ಒಳ್ಳೆ ಸುಳಿ ಇರೋದ ತತ್ತಾಲಾ (ಹುಚ್ಚಪ್ಪ. ೧೬೫); ಹೀನಸುಳಿ ಬೋಳಿಸಿದರೆ ಹೋದೀತೆ? (ಗಾಡ). ೨. (ಆಲಂ) ಕೆಟ್ಟಚಾಳಿ; ದುಷ್ಟಸ್ವಭಾವ: ತಮ್ಮಾಜಿ ಹೀನಸುಳಿಯ ಪ್ರಾಣಿ (ದೀವಪ.೩ ೩೫).

[ಹೀನ + ಸುಳಿ$_2$ (< ಸುಟ್ಟಿ$_2$)]

ಹೀನಸ್ಥಿತಿ (ನಾ). ಕೆಟ್ಟಸ್ಥಿತಿ; ದುರ್ದೆಸೆ: ಅವನ ವ್ಯವಹಾರ ತುಂಬ ಹೀನಸ್ಥಿತಿಯಲ್ಲಿದ್ದುವು (ಪುನಾಪು. ೩೧೧). [ಸಂ.]

ಹೀನಾಂಗ (ನಾ). ಅಂಗಹೀನ; ಅಂಗವಿಕಲ: ಒರ್ವಂ ಹೀನಾಂಗನಂ ಕಂಡಾವುದು ಕಾರಣದಿಂತಪ್ಪ ರೂಪಾದುದೆಂದು ಸೆಟ್ಟಿ ಬೆಸಗೊಂಡೊಡೆ (ಚಾವುಂಪು. ೬೩). [ಸಂ.]

ಹೀನಾಧಿಕ (ನಾ). ಕಡಮೆ ಮತ್ತು ಅಧಿಕ: ಹೀನಾಧಿಕ ಗುಣದೋಷವಿತಾನ ಮುಮಂ ಲಿಂಗವಚನಭೇದಂಗಳುಮಂ ಮಾನಧನರಱಿದು ಪೇಟ್ಗೆ (ಕವಿರಾ. ೩-೮೬).

[ಸಂ.]

ಹೀನಾಧಿಕವಿನಿಮಾನ (ನಾ). [ಜೈನ] ಅಸ್ತೇಯಾಣುವ್ರತದ ಐದು ಬಗೆಯ

ಅತಿಚಾರಗಳಲ್ಲಿ ಒಂದು; ವಸ್ತುಗಳ ವಿಕ್ರಯವ್ಯವಹಾರಗಳಲ್ಲಿ ತೂಕ, ಮಾಪುಗಳನ್ನು ಹೆಚ್ಚು ಕಡಮೆಯಾಗಿ ಇಡುವುದು: ಹೀನಾಧಿಕವಿನಿಮಾನ ಸ್ತೇನಾ[ಹೃತ] ದಾನಸದೃಶ ಮಿಶ್ರ ವಿಲೋಪಸ್ತೇನಪ್ರಯೋಗಮೆಂದಿವು ತಾನಸ್ತೇಯ ವ್ರತಕೃತಿಕ್ರಮಮಕ್ಕುಂ (ಸುಕುಮಾ. ೬-೧೫); ತೂಕಮಾಡುವ ತಕ್ಕಡಿ ಕಲ್ಲುಗಳನ್ನು ಸರಿಯಾದವುಗಳನ್ನು ಇಡದೆ ಇರುವುದು, ಜೀನಸನ್ನು ಕೊಳ್ಳುವಾಗ ಹೆಚ್ಚಿಗೆ ಬರಬೇಕು ಮಾರುವಾಗ ಕಡಿಮೆ ಹೋಗಿರಬೇಕು — ಈ ಪ್ರಕಾರದ ವ್ಯವಹಾರ ಇಡುವುದು ಇದು ಹೀನಾಧಿಕವಿನಿಮಾನವೆನಿಸುತ್ತದೆ (ಶ್ರಾವಕಾ. ೧೫೪). [ಸಂ.]

ಹೀನಾಮಾನ (ಅ). ಅಪಮಾನವಾಗುವಂತೆ; ಹೀಯಾಳಿಕೆಯಿಂದ ಕೂಡಿ: ಯಾರಾದರೂ . . . ಸಹಾಯ ಕೋರಿ ಬಂದರೆ ಅವರಿಗೆ ಹೀನಾಮಾನ ಅಂದು ಕಳುಹಿಸುತ್ತಿದ್ದ (ಹೇಮಕೂ. ೧೨); ಅವರು ನಿಮ್ಮಿಬ್ಬರನ್ನೂ . . . ಮನಸ್ಸಿಗೆ ಬಂದಂತೆ ಹೀನಾಮಾನವಾಗಿ ಬೈದು, ಹೊರಗೆ ಕಳುಹಿಸಿದರು (ರಾಯಕ. ೬೨). [< ಸಂ. ಹೀನಮಾನ]

ಹೀನಾಯ (ನಾ). ೧. ಅವಮರ್ಯಾದೆ; ಅವಮಾನ: ಅವರಿಗೆ ತುಂಬಾ ಹೀನಾಯವಾಯಿತು (ವಿದ್ಯಾರ. ೨೬); ತನಗೆ ಒದಗಿದ ಹೀನಾಯವಾದ ಗತಿ (ವೀರಯೋ. ೧೧). ೨. ಕೀಳಾದುದು; ಅಲ್ಪವಾದುದು: ದಯವಿಟ್ಟು ಈ ಹೀನಾಯವಾದ ಕೆಲಸವನ್ನು ಮಾತ್ರ ಮಾಡಬೇಡಿ (ಸುಂದರಿ. ೩); ಆ ಕೆಲಸ ಹೀನಾಯದ್ದು (ಮುನಿಮಾ. ೯). ೩. ಕೊರತೆ; ನ್ಯೂನತೆ: ಯಾವ ಕಾಲಕ್ಕಂ ಪೂರಾಯಂ ಹೀನಾಯಮೆನ್ನದೆ ವರ್ಷನಿಬನ್ದಿಂ ಧರ್ಮವತ್ಕಳೆಯಾಗಿ (ಎಸ್. XI, ದಾವಾಗ. ೧೪೩-೨೫; 1062). [< ಹೀನ]

ಹೀನಾಯವಾಡು (ಕ್ರಿ). ಕೆಟ್ಟಮಾತನ್ನಾಡು; ತುಚ್ಛವಾಗಿ ನುಡಿ: ಹೀನಾಯ ವಾಡದಿರು ಪರರ ಗುಣಗಳ ಎಣಿಸಿ (ವಿದಾಕೃ. ೩೬ ಅನುವಲ್ಲವಿ). [ಹೀನಾಯ + ಆಡು$_1$]

ಹೀನಾಳಿ (ನಾ). ಕ್ಷುದ್ರವ್ಯಕ್ತಿ: ಅವಳಂ ಬೈದು ನಿಂದಿಸುತ ಹೀನಾಳಿಯಂ ಮಾಡುತ . . . ಕರತಂದು (ಹಮಚಿ. ೧೮೭). [ಹೀನ + - ಆಳ್ಳಿ]

ಹೀನಿಗ (ನಾ). ನೀಚ; ಅಲ್ಪ: ಹೀನಿಗನಾಗುವರೆ ದುರ್ದೋಷಿ ಖಗಪತಿಯಂದಳಿಂದು ಮುಖಿ (ಜಿನಭಾ. ೫೨-೫೦). [ಹೀನ + - ಇಗ]

ಹೀನಿಸು, ಹೀನಯಿಸು, ಹೀನೈಸು (ಕ್ರಿ). ೧. ಹೀನಾಯಮಾಡು; ಅವಮಾನಿಸು: ಅನ್ಯರ ಕೃತಿಯಂ ಹೀನಿಸಲಲ್ಲದೆ ಕುನ್ನಿಗಳೇನಱಿವರೆ ಕೃತಿರಹಸ್ಯಮಂ ಸುಕವಿಯವೋಲ್ (ಪುಣ್ಯಾಸ್ರ. ೧-೨೫); ಹೀನಿಸಿ ನುಡಿಯಲೇಕೆಮ್ಮ (ತೂರರಾ. ೬-೫-೫೩). ೨. ಅಲ್ಪವಾಗಿ ಪರಿಗಣಿಸು: ಆ ನಿಸಿತಶಸ್ತ್ರಗಳನಂತರದಿ ಕತ್ತರಿಸಿ ಹೀನಿಸುತ ಹಾನಿಸುತಲಿ (ಜಿನಮು. ೩೦-೪೩). ಹೀನಯಿಸು: ೧. ಬಡವರೆಂದು ತಾ ಹೀನಯಿಸಿದನ್ (ನನಲ್ಲ. ೧೦೦); ನಿನ್ನ ಒಳ್ಳೆಯತನ ಸಾಧ್ಯಿಯಾದ ಅತ್ತೆಯನ್ನು ಹೀನಯಿಸಿ ಬಯ್ಯುವಾಗ ತೋರಿಬಂದಿದೆ (ಬ್ರಿಛಾ. ೧೭೫). ಹೀನೈಸು: ೧. ತಾನು ಮೇಲೆಂದುಬ್ಬಿ ಹೀನೈಸುವವ ಹೊಲೆಯ (ಗಿಳಿಪಾ. ೧೬-೭); ಅವರ ಸಂಗಡ ಜಗಳವಾಡಿ ಅವರನ್ನು ಹೀನೈಸಿ ಬೈದಳು (ದೇವೀಚೌ. ೫).

[ಹೀನ + - ಇಸ್ಸು$_3$]

ಹೀನೇಂದು (ನಾ). ಕ್ಷಯಿಸುತ್ತಿರುವ ಚಂದ್ರ; ಕ್ಷೀಣಚಂದ್ರ: ಪಡೆಯೊ ಹೀನೇಂದು ವಿನಿರುಳ ಮುಂಗುಡಿಯೊ (ಕುವಾಭೀ. ೪-೨೩). [ಸಂ.]

ಹೀನೈಸು 'ಹೀನಿಸು' ನೋ.

ಹೀನೋತ್ಪಾತ (ನಾ). ಕೆಡುಕನ್ನುಂಟುಮಾಡುವ ಅಶುಭಸೂಚನೆ: ಹೀನೋತ್ಪಾತದ ಸೂಚನಾರ್ಥಮೋ ಮಹಾನಾಗಂ ಶಿರಂದೂಗೆ ಮೇಣ್ ಭೂನಾಕಂ ಗಳ ಧೀರಮಾದ ಬಗೆಯೋ (ಹಮ್ಮೀರ. ೭-೯). [ಸಂ.]

ಹೀನೋಪಮೆ (ನಾ). [ಕಾವ್ಯಮೀ] ಅಲ್ಪವಾದ ವಸ್ತುವಿನೊಂದಿಗೆ ಅತಿಶಯ ವಾದ ವಸ್ತುವನ್ನು ಹೋಲಿಸುವ ಒಂದು ಉಪಮೆ: ಹೀನೋಪಮೆಗೆ- ಎರಲೆಯ ಪಿಂಡುಗಳಂ ದಸೆವರಿವಿನಮಳಱ್ ತಗುಳ್ಳ ನಾಯಂತೆ ರಣಾಜಿರದೊಳಿದಿರ್ಚಿದ ಬಲವದ್ವಿರೋಧಿಸೈನಿಕಮನಾ ನೃಪಂ ಬೆಂಕೊಂಡಂ (ಕಾವ್ಯಾವ. ೬೮೧).

[ಸಂ. ಹೀನೋಪಮಾ]

ಹೀಯಾವಳಿ (ನಾ). ಒಂದು ಬಗೆಯ ಔಷಧೀಸಸ್ಯ: ನಿರ್ವಿಷ, ಚಂಗಲ್ಯಕೋಷ್ಟ, ಶುಂಠಿ. ಹೀಯಾವಳಿ, ಚಿತ್ರಮೂಲ . . . ಇವನ್ನೆಲ್ಲಾ ಕೂಡಿ . . . ಮಂದಾಗ್ನಿಯಿಂದ ಎಣ್ಣೆ ನಿಲುವ ತನಕ ಅಟ್ಟು (ಸಕವೃ. ೧೭೯). [?]

ಹೀಯಾಳ 'ಹೀಹಾಳಿ$_1$' ನೋ.

ಹೀಯಾಳಿಕೆ 'ಹೀಹಾಳಿಕೆ' ನೋ.

ಹೀಯಾಳಿಸು 'ಹೀಹಾಳಿಸು$_1$' ನೋ.

ಹೀಯು ? (ಕ್ರಿ). (?): ಮಾಯಲುಣ್ಣಲಿ ಪೀಳ್ಳ ಕೊಳ್ಳಲಿ ಹೀಯಲೊರಗಲಿ ಕಾಂತೆಯರ ಬಲು ಹೂಯಲನು ಮಾಡಲಿ ರಣದಲತಿಸುಕೃತದುಷ್ಕೃತವ (ನಿಭಾಗ. ೧೧-೩೪-೨೪).

[?]

ಹೀರ್ 'ಪೀರ್' ನೋ.

ಹೀರ (ನಾ). ೧. ನವರತ್ನಗಳಲ್ಲಿ ಒಂದು; ವಜ್ರ: "ಹೀರಮನೆ ವಜ್ರಂ" (ಕರ್ಣಾನಿ. ೩೭); ಮುತ್ತಿನ ನೀಲದ ಹೀರದ ಮಾಣಿಕದ ಪೊಳೆವ ಜೇರ್ಕೋಟವೆಗಳಂ (ಚಂದ್ರಪು. ೭-೧೨೯); ಚಂದನಮನಿಂದುವಂ ಹಾರಮಂ ಹೀರಮಂ ಘನಸಾರಮಂ ಹಿಂದುಗಳೆವಮಳಧವಲಾಂಗದಿಂ ಸೊಗಯಿಸುವನಂ . . . ಭಜಿಸುವೆಂ (ಉದ್ಯದೇ. ೧-೧೧); ಹೀರಪಟೀರ . . . ಗೌರರುಚಿಪೂರಿತ ಚಿತ್ರಶರೀರದಿಂದೆ . . . ವಿಮಳವಿಳಸಿತ ಧವಳಾತುಳಾಖಂಡಚಿತ್ರಿಂಡ ವೃಷಭೇಶ್ವರನಂ ಕಂಡು (ಹಮ್ಮೀರ. ೫-೪). ೨. ಸಿಡಿಲು. ೩. ಹಾವು. ೪. ಕೊರಳ ಹಾರ; ಸರ. ೫. ಹುಲಿ. ೬. ಶಿವ. ೭. ಒಂದು ಬಗೆಯ ಸಸ್ಯ: "ಕೇಶಫಲಃ - ಹೀ(ರೆ)ರ" (ಓಷಧಿ. ೪೦); ಹೀರ, ಕಿರಿಚರಿಪ್ಪೆ (ಮೃಜಿಗಿ. ೪೨-೧೩೮). [ಸಂ.]

ಹೀರಕ (ನಾ). ವಜ್ರ: ಅಂಗಿಯ ತೋಳಿಗೆ ಹಚ್ಚಿದ ಹೀರಕರತ್ನದ ಬಿರಡೆಗಳು ಕಾಣಿಸಿ ಕೊಳ್ಳುತ್ತವೆ (ಇಪ್ರಕ. ೩೧೯). [ಸಂ.]

ಹೀರರೇಖೆ (ನಾ). ವಜ್ರದ ಗುರುತು: ಪರಮಪಾದದಿ ಹೀರರೇಖೆಯಿರಲು ಕಂಡು (ಚಂದ್ರಾಪ. ೨೫). [ಸಂ. ಹೀರರೇಖಾ]

ಹೀರಾಯುಧ (ನಾ). ವಜ್ರಾಯುಧ: ಕವೀಂದ್ರಸಮಯಾಬ್ಧಿರಾಕಾಚಂದ್ರಕುಕವಿಗಿರಿ ಹೀರಾಯುಧಂ (ವಿಕೋಪು. ೨-೮೮). [ಸಂ.]

ಹೀರಾವಳಿ (ನಾ). ವಜ್ರದ ಹಾರ,— ಸರ: ಮುದ್ರಿಕೆಯುಂಗುರವನಳವಡಿಸಿದರು ಹಸ್ತಾಂಗುಲದೊಳುರವಲ್ಲಿ ಹೀರಾವಳಿಯನಿಕ್ಕಿದರು (ಬಸಪು. ೪-೩೭); ಮಿಗೆ ಹೊಳೆವ ಹೀರಾವಳಿಯ ಕೊರಳುಗಳ . . . ಭಾರವಣೆಯಲಿ ಬಂದನು ಕರ್ಣನೋಲಗಕೆ (ಕುವಾದ್ರೋ. ೧-೧೪); ಕಠಾರಿ ಮುಸುಂಡಿ ಮುದ್ಗರ ಕಡೆಯ ಸರವಳಿ ಹಾರ ಹೀರಾವಳಿಯ ಕುಂಡಲದ (ತೂರರಾ. ೬-೨೦-೯). [ಸಂ. ಹೀರಾವಲಿ]

ಹೀರಿಕೆ (ನಾ). ಹೀರಿಕೊಳ್ಳುವಿಕೆ; ಒಳಸೆಳೆದುಕೊಳ್ಳುವಿಕೆ: ಕೊರೆಕಂಬಿಗಳಲ್ಲಿನ ಆಹಾರನಾಳದಲ್ಲಿ ತುದಿಯವರೆಗೂ ಹೀರಿಕೆಯುಂಟಾಗುತ್ತದೆ (ಕೀಟಚಿ. ೭೮).

[ಹೀರು (< ಪೀರ್) + - ಇಕೆ]

ಹೀರಿಸು (ಕ್ರಿ). ಕುಡಿಸು; ಈಂಟಿಸು: ಎನ್ನ ಪರಾಕ್ರಮಾನಲವಾಡವನಿಂ ಮುನ್ನೀರ ಹೀರಿಸಿ ಹರಿಯ ಬನ್ನಬಡಿಪೆವು (ಸಂಮಿಸಾ. ೨೬-೮೮). [ಹೀರು (< ಪೀರ್) + - ಇಸ್ಸು$_3$]

ಹೀರು 'ಪೀರ್' ನೋ.

ಹೀರೆ$_1$ 'ಪೀರೆ' ನೋ.

ಹೀರೆ$_2$ (ನಾ). = ಹೀರ ೧ : ವರ ಜ್ಯೋತಿರ್ಮಾಲೆಯೆಂದಂಬ ಪದಕವ ಹೀರೆಯಂದದಿ ಪ್ರಜ್ವಲಿಪ ಕರ ಚೆಲುವಾದ ಮುತ್ತಿನ ಬೊಟ್ಟ ದೇವನು ಎರಕದೊಳಿತ್ತನೇನೆಂಬೆ (ಜ್ಞಾನಚಿ. ೩-೫೧). [ಸಂ. ಹೀರ]

ಹೀರೆಕಾಯಿ (ನಾ). ಒಂದು ಬಗೆಯ ತರಕಾರಿ ಕಾಯಿ: ಸೌತೆಯ ಕಾಯಿ ೧ . . . ಹೀರೆಕಾಯಿ ೫ (ಚೊಕಶಾ.೧೯೪೩, ಹುಬ್ಬಳ್ಳಿ.೬೩-೩೮; ?); ಹೀರೆಕಾಯಿ ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಬೆಳೆಯಾಗುತ್ತದೆ (ತರಚಿ. ೨೭).

[ಹೀರೆ$_1$ (< ಪೀರೆ) + ಕಾಯಿ$_4$ (< ಕಾಯ್$_4$)]

ಹೀಲ$_1$ (ನಾ). ವೀರ್ಯ; ರೇತಸ್ಸು. [ಸಂ.]

ಹೀಲ$_2$ 'ಹಿಲ' ನೋ.

ಹೀಲಗ (ನಾ). ಒಂದು ಬಗೆಯ ಸಸ್ಯ: ಕಾಡುಗುಂಬಳ, ಕಟಕಾಂಬ, ಹೀಲಗ (ಮೃಜಿಗಿ. ೭೫-೧೫೭೬). [< ಹೀಲ್$_2$?]

ಹೀಲಿ 'ಪೀಲಿ' ನೋ.

ಹೀಲಿಕರಗ 'ಪೀಲಿಗರಗ' ನೋ.

ಹೀಲಿಗರಿ (ನಾ). ನವಿಲುಗರಿ: ಮುಡಿಯಲಿ ಹೀಲಿಗರಿಗಳ ಸುತ್ತಿಕೊಂಡಿಹ ಗೋಪರಂದದಲಿ (ಯಾದವ. ೭-೬೩). [ಹೀಲಿ (< ಪೀಲಿ) + ಗರಿ (< ಗಱಿ)]

ಹೀಲಿಗೆದಱು (ಕ್ರಿ). ನವಿಲುಗರಿಯನ್ನು ಹರಡು.— ಬಿಚ್ಚು: ಮೇಲುಮೊಳಗಿನ ದನಿಯಸಾಲಿಸಿ ಹೀಲಿಗದಱುವ ನವಿಲವೊಲು . . . ಹಿಗ್ಗಿದನು (ಕುವ್ಯಾಕ. ೨೧-೧೭).

[ಹೀಲಿ (< ಪೀಲಿ) + ಕೆದಱು$_1$ (< ಕೆದಱ್$_1$)]

ಹೀಲಿಗೊಡೆ 'ಪೀಲಿಗೊಡೆ' ನೋ.

ಹೀಲಿದಳೆ 'ಪೀಲಿದಟೆ' ನೋ.

ಹೀಲೆ 'ಹಿಲ' ನೋ.

ಹೀವರ (ಗು). ಕೊಬ್ಬಿದ; ದಪ್ಪವಾದ: ಪೀವರ, ಹೀವರ . . . ದೀಪಿಕೆ, ದೀವಿಗೆ (ಶಬ್ದಾನು. ೧೪೫ ಪ್ರಯೋ). [< ಸಂ. ಪೀವರ]

ಹೀಸು 'ಹೀಚು$_1$' ನೋ.

ಹೀಹಂದಿ (ನಾ). ಹೇಯವಾದ ಹಂದಿ; ತುಚ್ಛವಾದ ಹಂದಿ; ಪೇಪಂದಿ: ಕಾಂತಾನಿವಾಸಾಂತರದೊಳ್ ಶ್ವಾನಂಗೆ ಹೀಹಂದಿಗೆ ಕಪಿಗಣ್ಣೆಯಾಗಿರ್ದು ಬೇಳಾಗುತುಂ (ರತ್ನಾಕ. ೫). [ಹೀ$_0$ + ಹಂದಿ (< ಪಂದಿ)]

ಹೀಹಾಳಿ$_1$, ಹೀಯಾಳ (ನಾ). ೧. ತೆಗಳಿಕೆ; ಅವಹೇಳನ: ಬೀಳಲವನೀಪತಿಗಳತಿ ಹೀಹಾಳಿಯಲಿ ಸಾತ್ಯಕಿ ಮುಳಿದು (ಕುವ್ಯಾಭಾ. ೬-೭); ಧೂಳಿ ಮುಸುಕಲ್ಕು ಹಳಚಿದುದು ಹೀಹಾಳಿಯಲಿ ಮೂದಲಿಸುವರೇನ್ಕೆಲಪ್ಪೆಲದ ಕಣಕೆಯವರೇ ರಾಯ (ಅಂಜಿಕಾ. ೩೯-೧೩). **ಹೀಯಾಳ**: ೨. ದೀನಭಾವ; ದೈನ್ಯತೆ: ಹೀಯಾಳದಿಂದಲಿ ಕರವ ಮುಗಿದು ನಿಂದು ಬಾಳುವ ಜೀವನು (ವಿಜಯ. ೧೦-೧೩). [< ಹೀ]

ಹೀಹಾಳಿ$_2$, ಹಿಯ್ಯಾಳಿ (ನಾ).೧. ಪ್ರತಿಜ್ಞೆ; ಪಂಥ: "ಹೀಹಾಳಿಯೆನಲ್ ವಾಶಿಯು" (ಭಾರನಿ. ೨೭). ೨. ಹಾರುಡು; ಪೈಪೋಟಿ: ನೆಲೆ ಹೀಹಾಳಿಯುಳ್ಳರ ಬರಲಿ ಕರ್ಣದ್ರೋಣ ಕೃಪರನುತ (ಕುವ್ಯಾದ್ರೋ. ೧೫-೭೦); ಶೂಲಿಯೊಳು ತಾ ಹೂಡಿಸಿದ ಹೀಹಾಳಿಯನು ಮಱುಕಳಿಸಿ (ಪ್ರಭುಲೀ. ೭-೨೬). ೩. ಸಂಭ್ರಮ; ಸಡಗರ: ಚಾಳ ನೂಕಿಸಿ ಹೊತ್ತುಗಳೆವರು ಹೇಳಿ ಫಲವೇನಿನ್ನು ರಣಹೀಹಾಳಿ ತಮಗಿಲ್ಲೆಂದು ಗಹಗಹಿಸಿದನು ಕಲಿಭೀಷ್ಮ (ಕುವ್ಯಾಭೀ. ೯-೧೭); ಕೇತುಳಲಿ ಮನದೊಳಗೆ ಕಡುಹೀಹಾಳಿ ಮಿಗಲೊಲೆದೊಲೆದು ತನುವನು ಮೌಳಿಗಳಲಾಂತರು ಮಹಾಭಾಗವತನಂಘ್ರಿಗಳ (ನಿಭಾಗ. ೭-೭-೧೧). **ಹಿಯ್ಯಾಳಿ**: ೨. ಮಧುಕೈಟಭರ ಹಿಯ್ಯಾಳಿ ಹಿಂಗಿತು ಪರಶುರಾಮನ ತೋಳ ಬಲುಹಿನಲಿ (ಸಂಭವ. ೨೬-೨೭); ಅಯ್ಕಂಗಿತ್ತ ಭಾಶಿತಕೆ ಖೂಳನಹೆನೆಂದಿಂದ್ರಜಿತು ಹಿಯ್ಯಾಳಿ[ಪಾಠಾಂ. ಹೀಹಾಳಿ]ಯಲಿ ತಮ್ಮನ್ನಯಾಗತದೇಳಿಗೆಯ ಮನೆದೇವತೆಯ ನೋಲ್ಕಲ್ಸೆತಂದ (ತೊರಾ. ೬-೪೨-೨). [?]

ಹೀಹಾಳಿಕೆ, ಹೀಯಾಳಿಕೆ, ಹಿಯ್ಯಾಳಿಕೆ, ಹೀಹೇಳಿಕೆ (ನಾ). ೧. ನಿಂದೆ; ತೆಗಳಿಕೆ; ಮೂದಲಿಕೆ: ಈ ವಿಧಿಗೆ ಬರಿಸಿದ ಹೀಹಾಳಿಕೆಗಾಗಿ ಕೊಂಡದ ಉರಿಯೊಳ್ ತನುವ ನೀಗಿದೆನು (ನೇಮಿಸಂ. ೮-೧೧೫); ಹೀಹಾಳಿಕೆಯ ಹೇವಗಳ ಮನದುಬ್ಬಾಳಿನಿಂದ ಚ್ಯಾಡಿದರು (ತೊರಾ. ೬ ೨೦-೧೨). ೨. ಅವಮಾನ; ಅಗೌರವ: ಆಳುವನಟ್ಟಿದೂಳಿಗ ಭಂಗವಾದ ಹೀಹಾಳಿಕೆಯೊಳು ಬರುತಿರ್ದ (ಭರಚ. ೪೯-೧೦). **ಹೀಯಾಳಿಕೆ**: ೧. ಬಸವಲಿಂಗಯ್ಯನ ಕುಹಕ ಹಾಗೂ ಹೀಯಾಳಿಕೆಯ ಮಾತಿನಿಂದ ಗುರುರಾಜರಾಯರು ತುಂಬಾ ನೊಂದುಕೊಂಡರು (ಮರಳಿ. ೧೦); ಹೀಯಾಳಿಕೆ ಮರಣಕ್ಕಿಂತ ಕ್ರೂರತರವೂ ವಿಷತಮವೂ ಆಗಿದೆ (ಪ್ರವಾತೂ. ೧೫೫). **ಹಿಯ್ಯಾಳಿಕೆ**: ೧. ತೇಳಿನ ಗದ್ವಿಗೆಯೊಳಗಣಾಲಯದಂತೆ ಹಿಯ್ಯಾಳಿಕೆಯಲ್ಲದ ಅಕಟಕಟ (ವಿದಾಕ್ಕ. ೪೦-೩); ಕಡೆಗೊಮ್ಮೆ ನಿಷ್ಕರಪಕ್ಷದ ಮುಖಂಡನ ಹೀಯ್ಯಾಳಿಕೆಯನ್ನು ಮಾಡಿದ್ದನು (ರಘಾರಾಣಿ. ೩೮). **ಹೀಹೇಳಿಕೆ**: ೧. ಹೀಹೇಳಿಕೆಯ ಮಾತ ನುಡಿದು ಭಂಗಿಸುವರೆಯಾಹವದೊಳು (ರಾಮವಿ. ೧೪-೧೭೪).

[ಹೀಹಾಳಿ$_1$ + - ಕೆ]

ಹೀಹಾಳಿಗೆಡಿಸು (ಕ್ರಿ). ೧. ಅವಮಾನಗೊಳಿಸು; ಅಗೌರವವನ್ನುಂಟುಮಾಡು: ಹಾಳಿಹಸುಗೆಯನಱಿಯದಾ ಹೀಹಾಳಿಗಡಿಸಿದನಂದು ಸಭೆಯಲಿ (ಕುವ್ಯಾದ್ರೋ. ೧-೨೬). ೨. ಹೀನಾಯಗೊಳಿಸು; ಸೋಲಿಸು: ಕುರುಭೂಪಾಲನ ಮದದಾನೆಯನು ಹೀಹಾಳಿಗೆಡಿಸಿ ತುರಂಗ ರಥ ಸಾರಥಿಯ ಖಂಡಿಸಿದ (ಕುವ್ಯಾದ್ರೋ. ೧೩-೨೫).

[ಹೀಹಾಳಿ$_1$ + ಕೆಡಿಸು$_1$]

ಹೀಹಾಳಿಗೆದು (ಕ್ರಿ). ಕುಗ್ಗು; ಸಂಕೋಚಗೊಳ್ಳು (?): ಕೇಳಿದ್ಯಮೆಲೆ ತಾತ ಮನ ಹೀಹಾಳಿಗಡದಿರು ಮೇಣದುರಗನ ಹೇಳಿಗಗೆ ಹೆದಱದಿರು . . . ಎಂದಿಂದ್ರಾರಿ ಗರ್ಜಿಸಿದ (ತೊರಾ. ೬-೪೧-೫). [ಹೀಹಾಳಿ$_1$ + ಕೆದು$_1$]

ಹೀಹಾಳಿತನ (ನಾ). ಉತ್ಸಾಹ: ಸುರಕದಂಬಕವ ಭಂಗಿಸಿದ ದುಂದುಭಿಯ ಜೀವವ ಹಿಂಗಿಸಿದ ಹೀಹಾಳಿತನದ ಭಟಾಂಗವೇನಾಯ್ತು (ತೊರಾ. ೪-೫೯-೯).

[ಹೀಹಾಳಿ$_2$ + - ತನ]

ಹೀಹಾಳಿಸು$_1$, ಹೀಯಾಳಿಸು, ಹಿಯ್ಯಾಳಿಸು (ಕ್ರಿ). ೧. ನಿಂದಿಸು; ತೆಗಳು; ಮೂದಲಿಸು: ಲಯಕಾಲಕೊದಱುವ ಸಿಡಿಲವೊಲು ಹೀಹಾಳಿಸುತ ತಮತಮಗೆ ಬಯ್ದುದು ಕೂಡೆ ಪರಿವಾರ (ಕುವ್ಯಾಕ. ೧೩-೧); ಹಳಿದು ಹೀಹಾಳಿಸಿದನಲ್ಲಮಲಿಂಗ ನವರುಗಳ (ಪ್ರಭುಲೀ. ೧೩-೧೧); ಮಾಯೆಯನು ಬಿಡು ಬಿಡು ಮರುಳಹನೆ ಕಲಿ ವೃಷಭ ನಿನ್ನಯ ಚರಣಸೇವಕನು ಎಂದು ಹೀಹಾಳಿಸುತ (ಅರ್ಜಾವಿ. ೧೦-೧೭). ೨. ಅವಮಾನಗೊಳಿಸು; ಅವಹೇಳನ ಮಾಡು: ಮಾರ್ಮಲೆಯೆ ನಿನ್ನನಾತಂ ಸದವನೆನೆ ಹೀಹಾಳಿಸಿದ ಮಳ್ಳೆಯಾಗಲು (ವೀಶ್ಯಪು. ೩-೨೧-೧೯). **ಹೀಯಾಳಿಸು**: ೧. ಗೂಳಿಯೊಳಿದಿರಾಗಿ ಕಾದಬೇಕೆಂದು ಹೀಯಾಳಿಸಿ ಬಿಟ್ಟುದಾ ನವಿಲ (ಮೋಪತ. ೩೮-೩೦); ಕುಟಿಲಾತ್ಮರಾಲಿಪಂತೆ ಕುದುಕುಳಿಗೊಳುತ್ತ ಹೀಯಾಳಿಸದೆ (ಕೊಟ್ಟೂಪು. ೧-೩೭); ನನ್ನನ್ನು ಬಹಳವಾಗಿ ಹೀಯಾಳಿಸಿದ್ದರಿಂದ ನನ್ನ ಪರಾಕ್ರಮವನ್ನು ಹೇಳುತ್ತೇನೆ ಕೇಳು (ಕೃವಾಉ. ೧೩೦). ೨. ಧನಾಧಿಪೇಶಾನರನು ಕದನಕೆ ಕರೆಕರೆದು ಹೀಯಾಳಿಸಿದನಮರಾರಿ (ಪ್ರಭಾಚ. ೩-೨೪). **ಹಿಯ್ಯಾಳಿಸು**: ೧. ಜವಾನ ಹಿಯ್ಯಾಳಿಸುವುದು ಬಿಡಲೇ ಇಲ್ಲ (ಚಂಗಾಳ್ವ. ೪೩); ಆಲೋಚಿಸಲಾರದವರನ್ನು ಹಿಯ್ಯಾಳಿಸದೆ . . . ಉಪಪ್ರಶ್ನೆಯನ್ನು ಹಾಕುವುದುತ್ತಮ (ವಿಕ್ಷದ. ೫೪೭). [ಹೀಹಾಳಿ$_1$ + - ಸು$_1$]

ಹೀಹಾಳಿಸು$_2$ (ಕ್ರಿ). ೧. ಸಂಭ್ರಮಗೊಳ್ಳು; ಸಡಗರಿಸು: ಮೌಳಿಯಸು ತೂಗುತ್ತ ಮುನಿ ಹೀಹಾಳಿಸುತ ಹರಿಯಾಗಮನವನು ಹೇಳುವೆನು ಪಾಂಡವರಿಗಿದನಾನೆನುತ ಹರುಷದಲಿ (ನಿಭಾಗ. ೧೦-೭೮-೫೧). ೨. ಧ್ಯಾನಿಸು; ಸ್ಮರಿಸು: ಶ್ರೀಲಲಾಮಪದಾಬ್ಜವನು ಹೀಹಾಳಿಸುತ ಮನದೊಳಗೆ ನಿಯಮಾಳಿಗಳನಾಚರಿಸುತ್ತಿರ್ದನು (ನಿಭಾಗ. ೮-೨೩-೮).

[ಹೀಹಾಳಿ$_2$ + - ಸು$_1$]

ಹೀಹೇಳಿಕೆ 'ಹೀಹಾಳಿಕೆ' ನೋ.

ಹೀಳು (ಕ್ರಿ). ಸೀಳು: ಸೆಳೆದ ಚಾಪವನಸ್ಯಸಂತತಿ ತಳರುಗಿಡಿಗಳನುಗುಳಿ ಕೋಪದಿ ತುಳಿಸಿದನು ತೂಳಿದನು ಹಿಡಿದನು ಹಿಂಡಿ ಹೀಳಿದನು (ಕಾಶಿರಾ. ೩೧-೧೪).

[IP ಛಂದಸ್ಸಿಗಾಗಿ 'ಹಿಳಿ' ಎಂಬುದನ್ನು 'ಹೀಳು' ಎಂದು ಮಾಡಿರಬಹುದು]

-ಹು$_1$ '-ಪು$_1$'ನೋ.

-ಹು$_2$ '-ಪ್ರು$_2$' ನೋ.

ಹುಂ (ಅ). ಸಂಶಯ, ಪ್ರಶ್ನೆ, ಅನುಮತಿ, ಕೋಪ, ತಿರಸ್ಕಾರ, ನಿಂದೆ, ಭಯ ಮೊದಲಾದ ಭಾವಗಳನ್ನು ಸೂಚಿಸುವಾಗ ಬಳಸುವ ನಿಪಾತಾವ್ಯಯ: ಕಥೆಯಂ ಕೇಳಿಲೆ ಕಂದ ಹುಂ ರಘುಜನೆಂಬಂ ಹುಂ (ಜಗಪ.೩-೬೧): ಹುಂ ಎನೆಯುಂ ಅಲ್ತಯಲ್ತೆಯೆನೆಯುಂ ಫಲಿಯಿಸುಗುಂ ಪ್ರಶ್ನಾರ್ಥೋದ್ಯಲಾನುಮಾನಾರ್ಥಯುಗಳಮವು ಶಾಬ್ದಿಕರಿಂ (ಶಮದ. ೩೧೩): ಎಲೆ ಚಂಡಾಮಹಾಚಂಡರಿರ ನೀವು ಹಿಡಿಕೊಳ್ಳಿ ಹುಂಯೆಂಬ ಪಾತ್ರದಿಂದೆದ್ದವರನಾ ಭಟರು ಗರ್ಜಿಸುತ್ತಾ ಎಡದ ಕಾಲಿಂದೊದೆದು (ವೀಶ್ಯಪು. ೪-೧೯ ೪). [ಸಂ.]

ಹುಂಕಣಿ (ನಾ).(?): ಗಜ ಹಯಾರೂಢ ಪ್ರಉಧರೇಖಾರೇಪಂತ ಜಯಾಂಗನಾಕಾಂತ ಬಲದ ಹುಂಕಣಿಯ ತೊಡಚುವ ನಾಯಕರ ಗಂ[ಡ] (ಸೌಂಗಾ. XV.೧೭೧-೧೨; 1225).

[?]

ಹುಂಕರಿಸು (ಕ್ರಿ). ಹುಂ ಎಂದು ಸದ್ದುಮಾಡು; ಅಬ್ಬರಿಸು: ಕೃಷ್ಣಾವತಾರದಲ್ಲಿ ನೀನು ಮರೆಯಾದಾಗ ಅವುಗಳು ನಿನ್ನನ್ನು ಕಾಣಲರಿಯದೆ ಹುಂಕರಿಸಿ ಒದರಿದವು (ಪರಪ. ೧೩೪). [< ಹುಂಕಾರ + - ಇಸು]

ಹುಂಕಾರ (ನಾ). ಹುಂ ಎಂಬ ಶಬ್ದ: ತ್ರಿಶಂಕುನರಾಧೀಶನ ಲಕ್ಷ್ಯ ಶಕ್ರನ ಮಹಾ ಹುಂಕಾರದಿಂ ಬರ್ದಳೆಂಬನೆಗಂ . . . ಬಂದಿರ್ದಪಳ್ ಬಾಗಿಲೊಳ್ (ಕಾದಂಪು. ೨೪); ಈಗ ನೀವು ಅನ್ನುತ್ತಿರುವ ಹುಂಕಾರ ಪ್ರಭುಗಳ ಬಾಯಿಂದಲೂ ಹೊರಟುಬಿಟ್ಟಳೆ ನಾವು ಧನ್ಯರು (ಶಾಂತಲಾ. ೬೯). [ಸಂ.]

ಹುಂಕೃತಿ (ನಾ). = ಹುಂಕಾರ: ಪೂರ್ವಮಂ ನೆನೆಯುತುಂ ಹುಂಕೊಳ್ಳದುತ್ಕೋಪ ಹುಂಕೃತಿಯಂ ಮಾಡುತುಮೊಂಡುಗರ್ಚ ಕಿಸುಗಣ್ಣಿಟ್ಟಚ್ಯುತಂ ರಂಜಿಸುಂ (ಜಗವಿ. ೩-೭೧).

[ಸಂ.]

ಹುಂಕೊಳ್ (ಕ್ರಿ). ೧. ಹೂಂಗುಟ್ಟು; ಒಬ್ಬರು ಹೇಳುವುದನ್ನು ಕೇಳು: ಹುಂಕೊಳ್ಳದುತ್ಕೋಪಹುಂಕೃತಿಯಂ ಮಾಡುತುಂ . . . ಅಚ್ಯುತಂ ರಂಜಿಸುಂ (ಜಗವಿ. ೩-೭೧); ಕಥೆಯ ಹುಂಕೊಳಲನ್ಯರಿಗೆ ಹೇಳುತಿರ್ದು (ಧರಚ. ೨-೪೪). ೨. ಒಪ್ಪಿಕೊಳ್ಳು; ಬಸವನ ಭಕ್ತಿ ಭಾರದ ಹೊಣಕೆಯನೆ ಹುಂಕೊಂಡು ಪೂರೈಸಲಿಕೆ ಬೇಕೆನುತ (ಪ್ರಭುಲಿಂ. ೨೨-೩೦).

[ಹುಂ + ಕೊಳ್]

ಹುಂಜ 'ಹುಂಜ$_2$' ನೋ.

ಹುಂಜ$_1$ 'ಪುಂಜ$_2$' ನೋ.

ಹುಂಜ$_2$, ಹುಂಚ, ಹುಂಜಿ, ಹುಂಜು (ನಾ). ಮಗ್ಗದ ಹಾಸಿನಲ್ಲಿರುವ ರೇಷ್ಮೆಯ ಅಥವಾ ನೂಲಿನ ಲಡಿ; ಎಪ್ಪತ್ತರಿಂದ ಎಂಬತ್ತು ಎಳೆಗಳ ಸಮೂಹ: ಪಟ್ಟಿಗೆ ಏಳು ಹುಂಜ (ಭಾಸ್ಕರ. ೭೭); ಹೊಯ್ದಂತ ಏಳ್ಬುಂಜ ಕೊರಳೇಗಿ ಹಾಯ್ದೊಂಡು ಮರನೇರಿ ಕುಂತಾದ ನೋಡ ನೀಲವ್ವಾ (ಮಲ್ಲಿಗೆ. ೧೦೪). **ಹುಂಚ:** ಎಂಟು ಹುಂಚದಡಿಸೀರೆ ಬಹು ಚೆನ್ನಾಗಿತ್ತು (ಮಾಮರಾ. ೯೮). **ಹುಂಜಿ:** ಭರದಿಂದ ಹುಂಜಿಯ ಹೊಸೆವಂತೆ ಹೊಸೆದು (ಜ್ಞಾನಚಿ. ೧೬-೧೦೩). **ಹುಂಜು:** ಹುಂಜು ದಡಿ (ಮುಂಬಾಯಿ. ಕಿ. ೩-೧೦೩). [< ಪಿಂಜಿ$_2$]

ಹುಂಜಿ 'ಹುಂಜ$_2$' ನೋ.

ಹುಂಜಿಕೆ 'ಪುಂಜಿಗೆ' ನೋ.

ಹುಂಜು 'ಹುಂಜ$_2$' ನೋ.

ಹುಂಟ (ನಾ). ಒಂದು ಬಗೆಯ ಭೂಮಿಯ ಅಳತೆ (?): ಶ್ರೀಯಳಹ ಪರುಮಾಳದೇವರ ನಿತ್ಯ ನಂದಾದೀಪಕ್ಕೆ ನಿವೇದ್ಯಕ್ಕಂ ಮೋದಗುಯ್ಯಲಲು ಹುಂಟ ೧. ಕೆಯ ೧೦ ಮಹಾಜನಂಗಳು ಕೊಟ್ಟರು (ಸೌಇ. IX-1, ೩೭೬-೩೦; 1225). [?]

ಹುಂಡ (ನಾ). ಹೆಡ್ಡ; ದಡ್ಡ; ಗಾಂಪ: ಹಾಗೆ ಬಜೆ ಹುಂಡರ ಅಚಾರಭ್ರಷ್ಟರ . . . ಅಪ್ರಮಾಣಪಾತಕರ ಭಕ್ತಿ ತೊಟ್ಟಲ್ಲಿ ಭಕ್ತರೆಂದರೆ ವಿರಕ್ತಿ ತೊಟ್ಟಲ್ಲಿ ಕರ್ತರೆಂದರೆ ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ ನಾನೀ ತಪ್ಪು ಕಂಡಲ್ಲಿ ಎತ್ತಿ ಕೂಱುವೆನು (ವಚಶಾ. ೧,೨೪೦); ಜೊಂಡ ಜೈನರ ಮಾತ ಹುಂಡ ಬಿಜ್ಜಳ ಕೇಳಿ ಕೊಂಡನರಮನೆಗೆ ಶಿವನುರಿಯ (ಕನ್ನಚಾ. ೨೩೪). ೨. ವಿಕಾರವಾದ ಆಕೃತಿ; ಕುರೂಪ: ಓಸರಿಸಧನ್ಯ ವಸ್ತುವನಾಸಕ್ತಿಯಿನೆನ್ನದೆಂದೊಡಕ್ಕುಮೆ ದಿಟದಿಂ ಹೂಸಿದೊಡೆ ಹುಂಡನಕ್ಕುಮೆ (ಉಸಾರ. ೩೨೮); ಮೆಟ್ಟುವ ನೆಲನಲ್ಲ ಕಾದ ಕಬ್ಬುನ ಬಜ್ಜರ ಸೂಜಿ (?)ಯೊಟ್ಟು ವಾಸನೆಯ ದುರ್ಗಂಧ ನೆಟ್ಟನೆ ತನು ಹುಂಡದಾಕೃತಿ ನೋವಿನ ಬಟ್ಟೆಯವನ ಬಗೆಯಲ್ಲ (ಪರ್ಧಚ. ೮-೮೩). [ಸಂ.]

ಹುಂಡಗರಡಿ 'ಪುಂಡುಗರಡ್ಡಿ' ನೋ.

ಹುಂಡಗುತ್ತಿಗೆ (ನಾ). (ಕರಾ) ಅಂದಾಜು; ಸೂಮಾರು: ಒಬ್ಬೊಬ್ಬರು ಹುಂಡ ಗುತ್ತಿಗೆ ಮೇಲೆ ಹೇಳಿದರೂ ಸಹ ಲೆಖ್ಖ ಮಾಡಿದ ಹಾಗೆ ಹೇಳುತ್ತಾರೆ (ರೂಢಿ). 'ಹುಂಬಗುತ್ತಿಗೆ' ಪರಾ. [?]

ಹುಂಡವಣ್ಣ (ನಾ). ಬಗೆಬಗೆಯ ಬಣ್ಣ; ಮಿಶ್ರವರ್ಣ: ನಿಶಿತಲಘುಕೀಲಪಟಕಿಯ ಖಂಡದಿಂದಿಟ್ಟಯಿಘುವಿಂದಳಿಸಿ ಕೆಂಗರಿಯ ಹುಂಡವಣ್ಣದ ಕೋಲ್ಲಳೆಳೆದು ಕರ್ನಾಂತರಕೆ ಹೊದ್ದಿಸುತೆಲುದ್ದಿಸುತಲಿ (ಜಿನಮು. ೧೯-೪೬). 'ಹಂಡಬಂಡ' ಪರಾ.

[ಹುಂಡ? + ಬಣ್ಣ]

ಹುಂಡಸಂಸ್ಥಾನ (ನಾ). [ಜೈನ] ಶರೀರದ ಅಂಗೋಪಾಂಗಗಳನ್ನು ಅತಿಕುರೂಪ ಗೊಳಿಸುವ ಕರ್ಮಗಳ ಉದಯ: ಅದೇಂ ನೆಱೆ ಪೋಲ್ತುದೊ ಪಂಡ ಹುಂಡ ಸಂಸ್ಥಾನದೆ ಗುಂಡುದೀವಿದ ತಡಂಗಮನಂಗದ ಪಾಂಗವಂದಿರ (ಆದಿಪು. ೫-೯೦); ನೋಡದೆ ಮಾಡಿದ ರೂಪಿನಂತೆ ನೇರ್ಪಿಲ್ಲದ ವಿಕಟಾಕೃತಿಯ ಹುಂಡಸಂಸ್ಥಾನಗಳುಂ (ಶ್ರಾವಕಾ. ೨೧-೧೨). [ಸಂ.]

ಹುಂಡಹಾಳತ (ನಾ). ವಿವೇಚನೆಯಿಲ್ಲದಿರುವಿಕೆ; ವಿವೇಕರಹಿತತೆ: ಕೋರ್ಟು ಮುಂದೆ ಬರಬೇಕೆಂದು ಅವರ ಹೆಸರನ್ನು ಕೂಗಿಸಿದ ಕೂಡಲೇ ಆ ಮಾತನ್ನು ಹುಂಡಹಾಳತವಾಗಿ ಥಟ್ಟನೆ ಆಡುತ್ತಿದ್ದರು (ಮುಸುಗಿ. ೧೬೭). [ಹುಂಡ? + ಹಾಳತ]

ಹುಂಡಾ (ನಾ). ಮದುವೆಯಲ್ಲಿ ಗಂಡಿಗೆ ಕೊಡುವ ಹಣ; ವರದಕ್ಷಿಣೆ: ತುಳಸಿ ನನಗ ತಂಗೀ ಹಾಂಗ, ಹುಂಡಾ ಅಂತ ಕೊಡತೇನಿ (ದೀಪಶ.II, ೪೨೦).

[<— ಮರಾ. ಹುಂಡಾ]

ಹುಂಡಾವಣಿ, ಹುಂಡಾವಳಿ (ನಾ). ಹಣದ ದಾಖಲೆಪತ್ರ; ಹುಂಡಿ: ಕೋಟ್ಯಂತರ ಧನದ ಹುಂಡಾವಣಿಗಳಂ (ಸೌಗಂಧಿ.೧೩೪-೨೦). **ಹುಂಡಾವಳಿ:** "ಹುಂಡಾವಳಿಯ ಕಾಯದೆ"ಯ ಪ್ರಕಾರ ಹುಂಡಿಯು ಪಟಾಯಿಸದಿದ್ದರೆ (ಮೋಹನೀ. ೩೦).

[< ಹುಂಡಿ./ ಹಿಂ. ಹುಂಡಾವನ = ಹುಂಡಿಯ ದರ]

ಹುಂಡಾವಸರ್ಪಿಣಿ (ನಾ). [ಜೈನ] ಅನೇಕ ಅವಸರ್ಪಿಣಿಗಳ ಕಾಲವಾದ ಮೇಲೆ ಬರುವ ಅವಧಿ: ಭಂಗಂ ದೊರೆಕೊಂಡುದಿಂತು ಭರತೇಶ್ವರಂಗೆ ಹುಂಡಾವಸರ್ಪಿಣೀ ವಿಳಸನದಿಂ (ಆದಿಪು. ೧೪-೧೧೪); ಹುಂಡಾವಸರ್ಪಿಣಿಯೊಳಿಂತು ದು(ಷ್ಪ)ಷ್ಮಸಮೀಪ ಮಕ್ಕುಮೆಂತಂತೆ ಸಮ್ಯಕ್ತ್ವಾದಿಗುಣಂಗಳ್ಗೆ ಪ್ರಾಣಿಗಳ್ಗೆಮುಖರಪ್ಪರ್ (ಚಾಸಂಪು. ೧೩೬).

[ಸಂ. ಹುಂಡಾವಸರ್ಪಿಣೀ]

ಹುಂಡಾವಳಿ 'ಹುಂಡಾವಣಿ' ನೋ.

ಹುಂಡಿ$_1$ (ನಾ). ಸಣ್ಣ ಹಳ್ಳಿ; ಚಿಕ್ಕಗ್ರಾಮ; ಕೊಪ್ಪಲು: ಆಲಗೂಡಿಗೆ ಸಲುವ ಮುದ್ದಬೀರನ ಹುಂಡಿ ಹಾಲುಹುಂಡಿ ಚನ್ನಗೌಡನ ಹುಂಡಿ (ಎಕ. III, ತಿರುಮ.೬೩-೨೪೭; 1748); ಕಿರಾತ ದಸ್ಯುಗಳಂ ಕಟ್ಟಿಕೊಂಡು . . . ಗ್ರಾಮ ಹುಂಡಿಗಳಿದ್ದರೆ ಕೊಳ್ಳೆಯಂ ಮಾಡಿ (ಮುದ್ರಾಮಂ. ೧೧೨).

ಹುಂಡಿ$_2$ (ನಾ). ಮಿಶ್ರವರ್ಣದ ಎತ್ತು: ಹಂಡಕೆಂದಗಳಿಲ್ಲ ಹುಂಡಿ ಕಾರಿಗಳಿಲ್ಲ ಗಂಡರಿದ್ದೊಬ್ಬ ಮಗನಿಲ್ಲ (ಸರ್ವಜ್ಞ. ೧೯೨೬). 'ಹುಂಡವಣ್ಣ' ನೋ.

ಹುಂಡಿ$_3$ (ನಾ). ೧. ಹಣ ಕೊಡುವಂತೆ ನಮೂದಿಸಿದ ಪತ್ರ; ಹಣದ ದಾಖಲೆಪತ್ರ: ವಿಧವಿಧದ ಪೊನ್ನ ಬೇಕೆಂದಪ್ಪಹುಂಡಿಯಿಂದೊದಗಿಸುವ ಸಾವಕಾರರ ಗುಂಪು (ಕೃಷ್ಣವಿ. ೫-೨೫); ದೇಶಾಂತರದ ಸಾಹುಕಾರರಿಂದ ಬರುವ ಹುಂಡಿಗಳಿಗೆ ಹಣವನ್ನು ಕೊಡುತ್ತಿದ್ದುದರಿಂದ ಆ ಹೆಸರಿನ ರೂಢಿ ದಾಸರಾದ ಮೇಲೂ ಕಡೆಯ ತನಕ ತಪ್ಪಲಿಲ್ಲ (ಕಭವಿ. ೬೦೬). ೨. ಬ್ಯಾಂಕುಗಳಿಂದ ಹಣ ಪಡೆಯಲು ಕೊಡುವ ಅದೇಶಪತ್ರ; ಚೆಕ್ಕು: ಮೂರುಸಾವಿರದ ಮುದ್ದತೀ ಹುಂಡಿ ಕಳಿಸಿರುತ್ತೇನೆ (ಸೂಜೀವ. ೯೪); ಬೇರೆ ಬೇರೆ ಬ್ಯಾಂಕುಗಳ ಮೇಲಿನ ಈ ಹುಂಡಿಗಳ ಒಟ್ಟು ಮೊತ್ತ ಸುಮಾರು ಒಂದುಕೋಟಿ ರೂಪಾಯಿಗಳಷ್ಟಾಗಬಹುದೆಂಬುದು ಶೇಟಜಿಗೆ ಅರಿವಾಯಿತು (ರತ್ನಗೋ. ೨೧). ೩. ಬೆಲೆಯನ್ನು ತೋರಿಸುವ ಪಟ್ಟಿ: "(ವ್ಯಾಪಾರ) ಸಲ್ಲಿಸಿದ ಸಾಮಾನುಗಳ ಅಥವಾ ಮಾಡಿರುವ ಕೆಲಸದ, ಬೆಲೆ ತೋರಿಸುವ ಪಟ್ಟಿ, ಬೆಲೆಪಟ್ಟಿ; ಹುಂಡಿ" (Rjll. ಸಾಂಕ). ೪. ಹಣವನ್ನು ಸಂಗ್ರಹಿಸುವ ಡಬ್ಬ; ಗೋಲಕ: ಬಳಾಪುರದ ಬಸವಣನ ವಪಿತಾ ಹುಂಡಿ (ಎಕ. X (S), ಕೋಲಾರ.೨೫೮-೬೩; 1761); ಒಂದು ರೂಪಾಯಿ ಇದೆ . . . ಅದನ್ನು ಅನಾಥಾಲಯದ ಹುಂಡಿಗೆ ಹಾಕಬಹುದು (ಭಾರದ. ೬). ೫. ಪ್ರಸ್ತಾಪ; ಸೂಚನೆ: ಕೆಲವು ಮದುವೆಯ ಹುಂಡಿಗಳೂ ಸಿದ್ಧಣ್ಣನಿಗೆ ಬಂದಿದ್ದವು (ಪಂಜಪಂ. ೫೪). ೬. ಜವಾಬ್ದಾರಿ; ಹೊಣೆಗಾರಿಕೆ: ಹೊರಿಸುವಂ ಹುಂಡಿಯಂ ನಿನ್ನಾತ ನಾನೆನುತ (ಪರಶು. ೩-೨೧). [<— ಹಿಂ. ಮರಾ. ಹುಂಡೀ./ ತುಳು. ಹುಂಡಿ]

ಹುಂಡಿಗಡಿಗೆ (ನಾ). ಹಣವನ್ನು ಸಂಗ್ರಹಿಸುವ ಡಬ್ಬ; ಗೋಲಕ: ದೇವಸ್ಥಾನ ದಲ್ಲಿರುವ ಹುಂಡಿಗಡಿಗೆಯಲ್ಲಿ ಹಣವನ್ನು ಹಾಕು (ರೂಢಿ). [ಹುಂಡಿ$_2$ + ಗಡಿಗೆ]

ಹುಂಡಿಗೆ (ನಾ). (?): ಸುಂಡಾ ನೀ ಮುಂದೆ ನಡೆಯಂದೆ ಬೀಗೂತಿ ಹುಂಡೀಗೆ ಮಾಡ್ಯಾಳೇ ಮದುವೇಯ (ಹುಟ್ಟಿಹ. ೧೮೫). [?]

ಹುಂಡಿಪತ್ರ (ನಾ). = ಹುಂಡಿ$_2$ ೨: ಅವನು ಆ ಹಣವನ್ನು ಅಲ್ಲಿನ ಒಂದು ಬ್ಯಾಂಕಿಗೆ

ಒಪ್ಪಿಸಿದರೆ, ಆ ಬ್ಯಾಂಕಿನವರು ಅವನಿಗೆ ಹಿಂದೂಸ್ತಾನದಲ್ಲಿ ತಮಗೆ ಲೆಕ್ಕವಿರುವ ಬ್ಯಾಂಕಿನ ಹೆಸರಿಗೆ ಒಂದು ಹುಂಡಿಪತ್ರ ಕೊಡುತ್ತಾರೆ (ಚಾಲಪ್ರ. III. ೧೫೫೮). [ಹುಂಡಿ$_2$ + ಪತ್ರ]

ಹುಂಡು (ನಾ). ೧. ಸಣ್ಣ ಚೂರು; ಕಣ: ಸೇದುತ್ತಿದ್ದ ಬೀಡಿಯ ತುದಿಯ ಬೆಂಕಿಯ ಹುಂಡುಗಳು ಕೆಂಪಗೆ ಮಿರುಗಿದವು (ಮಲಮ.೮೦೫). ೨. ಸಣ್ಣ ಬೊಟ್ಟು; ಚುಕ್ಕೆ: ಬಾನಲ್ಲಿ ಮುಗಿಲು ಅರ್ಧಮರ್ಧ ಕವಿದಿದ್ದುದರಿಂದ, ಆಗಾಗ ಬಿಸಿಲು ನೆರಳುಗಳು ಹಾಳೆಗಳಂತೆ ಹುಂಡುಗಳಂತೆ ಬೀಳುತ್ತಾ ಕಣವೆ, ಬೆಟ್ಟಗಳನ್ನು ಒಮ್ಮೆ ಮಿನುಗಿಸುತ್ತಿದ್ದವು (ಅಬೂಬು. ೮): ಅದರ ಮೈಮೇಲೆ ಹುಂಡುಹುಂಡುಬೊಟ್ಟು ನೋಡು. ಅದು ಕೋಗಿಲೆ (ಸ್ವಪ್ನಹೂ. ೫೧). ೩. ತೊಟ್ಟು; ಹನಿ: ಕೆರೆಯಲ್ಲಿ ಒಂದು ಹುಂಡೂ ನೀರಿಲ್ಲ (ರಾಷ್ಟ್ರ). ೪.(?): ಬಂಡ ಹುಂಡಿನ ಮೈಯ ಬಣ್ಣ ಬೆಳಕು ಮಾಡಿಕೊಂಡು ಕೈವಿಡಿದಿಹರುಂಟು ಗಂಡು ಗಂಡಿಗ ಮೋಹಿಸುವ ಚಿನ್ನಿಗರು ದೀಕ್ಷೆಗೊಂಡವರಾವಿವರಂತೆ (ಭರಚ. ೭೦-೧೧೪).

ಹುಂಡುಕೋಳಿ (ನಾ). ಒಂದು ಬಗೆಯ ಕೋಳಿ: ಅವುಗಳ ಮಧ್ಯೆ ಹುಂಡುಕೋಳಿಗಳು ಬೆಚ್ಚಿ ಬೆವರಿ ಚಲಿಸುತ್ತಿದ್ದವು (ಕಾನೂರು. ೫೧); ಹುಂಡುಕೋಳಿ ರೆಕ್ಕೆಯ ಹಾಗೆ ಕಾಣಿಸಿತು (ಸ್ವಪ್ನಹೂ. ೧೬). [ಹುಂಡು? + ಕೋಳಿ (< ಕೋಲ್ಲಿ)]

ಹುಂಡೆಕರಿ, ಹುಂಡೇಕಾರ, ಹುಂಡೇಕಾರಿ (ನಾ). ಸುಂಕವನ್ನು ಕೊಟ್ಟು ಪದಾರ್ಥಗಳನ್ನು ಬಿಡಿಸಿಕೊಂಡು ಅವುಗಳನ್ನು ಮಾಲೀಕನಿಗೆ ಮುಟ್ಟಿಸುವ ವ್ಯಕ್ತಿ ಹಾಗೂ ಆತನಿಗೆ ನೀಡುವ ಶುಲ್ಕ: ಸ್ಟೇಶನದ ಮೇಲೆ ಮಾಲವು ಏರಿಸುವದರ ದಶಯಿಂದ ಹುಂಡೆಕರಿ ಇಲ್ಲವೆ ಎರಡನೇ ಮನುಷ್ಯನು ಹೋಗಿ ಸ್ಟೇಶನದ ಮೇಲೆ ಮಾಲವು ಏರಿಸಿದ ಬಳಿಕ ರಶೀದಿಯ ಪರಭಾರೆ ಕಳಿಸುವದಿದ್ದರೆ ಆ ಹುಂಡೆಕರಿ ಇಲ್ಲವೆ ಮನುಷ್ಯನಿಗೆ ಮಾಲದ ಮಾರಾಟ ಮಾಡಬೇಕು (ಮುಂಬವ್ಯಾ.೪೪): ಕೂಲಿಯಲ್ಲಿ . . . ಬಂಡಿ ಇಳಿಸುವ ಕೂಲಿ ಮತ್ತು ಹುಂಡೆಕರಿ ಇವೆಲ್ಲದರ ಸಮಾವೇಶ ಆಗುತ್ತದೆ (ಮುಂಬವ್ಯಾ.೨೨೨). **ಹುಂಡೇಕಾರ:** ಸಾಹುಕಾರರುಗಳ, ಹುಂಡೇಕಾರರುಗಳ ಚಲನವಲನ ಸಂಪೂರ್ಣ ನಿಂತುಹೋಯಿತು (ಮಳಿ.೧೭೦); ಭಂಡೀಬಾಡಿಗೆ, ಹುಂಡೇಕಾರರ ವಗೈರೆ ಹಿಡಿದು . . . ಈ ಪ್ರಕಾರ ತಗದುಕೊಂಡೇವು (ಮುಂಬವ್ಯಾ.೧೦). **ಹುಂಡೇಕಾರಿ:** ಭಂಡೀಭಾಡಿಗ, ಹುಂಡೇಕಾರಿ ಮತ್ತು ಹೂಲಿಗೆ ಮುಂತಾದವುಗಳಿಗೆ ಹತ್ತುವ ರಕಮುಗಳಿಗೆ ಒಟ್ಟಿನಿಂದ 'ಮಜೂರಿ' ಎಂಬ ಶಬ್ದವನ್ನು ಉಪಯೋಗಿಸಿದ್ದೇವೆ (ಮುಂಬವ್ಯಾ.೮).

[<— ಮರಾ. ಹುಂಡೇಕರೀ]

ಹುಂಡೇಕಾರ 'ಹುಂಡೆಕರಿ' ನೋ.

ಹುಂಡೇಕಾರಿ 'ಹುಂಡೆಕರಿ' ನೋ.

ಹುಂತಕಾರ 'ಹೊಂತಕಾಱಿ' ನೋ.

ಹುಂಬ (ನಾ). ಅಸಂಸ್ಕೃತನಾದವನು; ಅವಿವೇಕಿ; ಉದ್ಧಟ: ನಿನ್ನಂತಹ ಹುಂಬನಿಂದ ಇದಲ್ಲವನ್ನು ನೋಡಿಕೊಳ್ಳಲಾಗುವದಿಲ್ಲ (ಬಂಗಾಹ.೬೯); ಯಾವ ಹಳ್ಳಿಯ ಹುಂಬನೋ ಇವನು (ಹೂಪ್ಟ. ೧೬೨). [<— ಮರಾ. ಹುಂಬ]

ಹುಂಬಗುತಿಗೆ 'ಹುಂಬಗುತ್ತಿಗೆ' ನೋ.

ಹುಂಬಗುತ್ತಿಗೆ, ಹುಂಬಗುತಿಗೆ, ಹುಂಬಗುದ್ದಿಕೆ, ಹುಂಬುಗುತ್ತಿಗೆ (ನಾ). ಏವೇಚನೆಯಿಲ್ಲದೆ ಮಾಡುವ ಕೆಲಸ; ದುಡುಕಿನ ಕೆಲಸ: ಸತ್ಯಸಂಗತಿಗೂ ಕಣ್ಣುಮುಚ್ಚುವುದರಲ್ಲಿ ಕ್ಯಾಂತಿ ಏನಿದೆ? ಬರಿಯೆ ಹುಂಬಗುತ್ತಿಗೆ (ಮೂರುದಾ.೧೩೫). **ಹುಂಬಗುತಿಗೆ:** ಇಂತಹ ಹುಂಬಗುತಿಗೆಯ ಕೆಲಸಕ್ಕೆ ಸ್ವಲ್ಪ ಛೀ ಹಾಕಿ (ವ್ಯನಿ.೨೩೭). **ಹುಂಬಗುದ್ದಿಕೆ:** ಇಂದು ಹೀಗೆ ಅಡದಾಂಡ ಬೆಳೆದ ಕೋಲ್ಹಾಪುರೀಪೇಟಾ ಸುರವರದಲ್ಲಿ ಪರಕಾಯಪ್ರವೇಶ ಮಾಡಿದ ಹುಂಬಗುದ್ದಿಕೆಯ ವಿಶ್ವಾನನ್ನು ತುಳಸಿ ಗುರುತಿಸುವದು ಸಾಧ್ಯವಾದೀತೆ? (ದೀಪಹ.II. ೪೦೦). **ಹುಂಬುಗುತ್ತಿಗೆ:** ಒಪ್ಪಿಕೊಳ್ಳಲಾರದ್ದಕ್ಕೆ ಅದು ಮಹತ್ವದ್ದೇ ಅಲ್ಲ ಎಂಬ ಹುಂಬುಗುತ್ತಿಗೆ ನ್ಯಾಯಕ್ಕೆ ಬಂದಿರುವುದರಿಂದಲೂ (ವಿಚಾಮಂ. ೩೩). [?]

ಹುಂಬಗುದ್ದಿಕೆ 'ಹುಂಬಗುತ್ತಿಗೆ' ನೋ.

ಹುಂಬತನ (ನಾ). ಒರಟುತನ; ಅವಿವೇಕ: ಬ್ರಟಿಶರು ದೇಶವನ್ನು ಮುಸಲ್ಮಾನರಂತೆ ಹುಂಬತನದಿಂದ ಸುಲಿಯಲಿಲ್ಲ (ಹಕ್ಕಪ್ರ.೧೯): ಹುಂಬತನದಿಂದಾಗಿ ಲಿಂಗಪ್ಪ . . . ತನ್ನ ಆಸಕ್ತಿಯನ್ನು ವ್ಯಕ್ತಪಿಸಿದ್ದ (ಗ್ರಾಮಾಯ. ೨೭೩). [ಹುಂಬ + - ತನ]

ಹುಂಬುಗುತ್ತಿಗೆ 'ಹುಂಬಗುತ್ತಿಗೆ' ನೋ.

ಹುಃ (ಅ). ಕೋಪ, ಧಿಕ್ಕಾರ, ಜುಗುಪ್ಸೆ ಮುಂತಾದ ಭಾವಗಳನ್ನು ಸೂಚಿಸುವ ಒಂದು ಅವ್ಯಯ: ತೊಟ್ಟನೆ ಮುನಿಸಾಗಿ ಹುಃ ಸವತಿಯಂ ನೆಚ್ಚಿ ತೋಜಿಪನೆಂದು ತನ್ನ ಕಾಮಿನಿಯ ಎದಗ್ಗವೃತ್ತಿಗಳನಕ್ಕಟ ನಾಳೆಯೆ ತಾನೆ ಕಾಣನೇ (ಧರ್ಮಾಮೃ.೭-೨೧): ತೊಟ್ಟನೆ ತಾಂ ಕಂಡೊಡೆ ಹುಃ ಬಬಾಪ್ಪುಲಿಕೆಂಬಲ್ಲೂಳಯಂ ನೆರ್ಕನೆರ್ಕನೆ ಬೇರ್ಕೈಯ್ದು (ಎಸ.VI. ತರೀಕೆ.೨೫-೩೭: 1196).

ಹುಕಮತು 'ಹುಕುಮತ್ತು' ನೋ.

ಹುಕಿ (ನಾ). ತಟ್ಟನೆ ಮನಸ್ಸಿಗೆ ಬರುವ ಲಹರಿ; — ಇಚ್ಛೆ; ಚಪಲ: ಇನ್ನೊಮ್ಮೆ ತಂಬಾಕಿನ ಖಾರುಮಾಡುವ ಹುಕಿ ಉಕ್ಕಿತು (ದೀಪಹ.IV ೧೪೫).

[<— ಮರಾ. ಹುಕೀ, ಹುಕ್ಕೀ]

ಹುಕುಂ 'ಹುಕುಮು' ನೋ.

ಹುಕುಂನಾಮೆ, ಹುಕುಮನಾಮೆ (ನಾ). ಲಿಖಿತಮೂಲಕವಾದ ಅಪ್ಪಣೆ; ಆಜ್ಞಾಪತ್ರ; ನಿರೂಪ: x ಸರಕಾರದ ಹುಕುಂನಾಮ ಪ್ರಕಾರಕ್ಕೆ (ಎಕ.IX. ಡಬ್ಲ್ಯು. ೧೨-೧; 1785); ಮುಲ್ಕಿ ಮುಂತಾದ ಬಾಬಿನಲ್ಲಿ ಖಾವಂದರವರಿಂದ ಅಪ್ಪಣೆಯಾದ ಹುಕುಂನಾಮ (ಮಹಾವಂ.II. ೫೭). **ಹುಕುಮನಾಮೆ:** ಹುಕುಮನಾಮೆಗಳನ್ನು ಹೊರಡಿಸಿ ಬೇರೆ ಬೇರೆ ದೇಶಗಳಿಗೆ ಕಳುಹಿಸಿದರು (ಇಂಗ್ಲಾ. ೪೩).

[<— ಅರ. ಹಿಂ. ಮರಾ. ಹುಕ್ಮನಾಮಾ]

ಹುಕುಮ 'ಹುಕುಮು' ನೋ.

ಹುಕುಮತ್ತು, ಹುಕಮತು (ನಾ). ಒಡೆತನ; ಅಧಿಕಾರ: ಮುಂಬಯಿಸಂಸ್ಥಾನದ ಕಡೆ ಫೌಜು ನಮ್ಮ ಹುಕುಮತ್ತಿನಲಿ ಇತ್ತು (ರಾಚೇಂದ್ರ.೫೩). **ಹುಕಮತು:** ಅವರೆಲ್ಲರ ಮೇಲೆ ಹುಕಮತು ಇಟ್ಟು ಒಳಿತಾಗಿ ವ್ಯವಸ್ಥೆಯನ್ನಿಡುವುದು (ಮುಂಬವ್ಯಾ.೨೮೦).

[<— ಅರ. ಹುಕ್ಮತ್; ಹಿಂ. ಹುಕೂಮತ್; ಮರಾ. ಹುಕಮತ್]

ಹುಕುಮನಾಮೆ 'ಹುಕುಂನಾಮೆ' ನೋ.

ಹುಕುಮು, ಹುಕುಂ, ಹುಕುಮ, ಹುಕ್ಕುಂ (ನಾ).೧. ಅಪ್ಪಣೆ; ಆಜ್ಞೆ: ಸರಕಾರದಿಂದ ಸ್ಪೆಷಲ್ ಹುಕುಮು ಹೊರಟಿತು (ಇಂದುಮು.೯೧). **ಹುಕುಂ:** ೧. ಬೇರೆ ಯಾರನು ಬಾದ್ಯತೆಯಿಲ್ಲವೆಂದು ಹುಕುಂ ಅನುಸರಿಸಿಯಿರುತ್ತೆ (ಮೈಅರಿ.೧೪೩೦,೨೪-೧೪; 1487 ?); ಆ ಅಮಲುದಾರನು ಅದೇ ಹುಕುಂ ಮೇರೆ (ರಾಚೇಂದ್ರ. ೧೬). **ಹುಕುಮು:** ೧. ಶಾಹುರಾಜನ ಹುಕುಮದಿಂ ಮೋಹರ ಸಹಿತ್ಯೆದಿ (ಕಳಸ್ಕ. ೧೦-೪೦). ೨. (ಆಲಂ) ಕೃತ್ರಿಮ; ಮೋಸ; ಕುಟಿಲತೆ: ಶಕುನಿ ಬೋಧೆಯ ಕೇಳ್ದು ಹಿತವಾಗಿ ಕ[illegible]ಪತಿ ಮುಕುತಿಯಹುದೆಂದು ನಿಶ್ಚೈಯಿಸಿದಂ ಪಾಂಡವರ ಹುಕುಮದಿಂ ಕೊಲ್ಲಬೇಕೆನುತ (ತುರಂಗ. ೧೩-೩). **ಹುಕ್ಕುಂ:** ೧. ಸಾಕ್ಷ್ಯವು ಅತ್ಯವಶ್ಯಕವೆಂದು ಸನ್ನಿಧಾನದಿಂದ ಹುಕ್ಕುಂ ಬಂದಿತ್ತು (ಶ್ರೀರಾಯ. ೨೪೭). [<— ಅರ. ಹಿಂ. ಹುಕುಮ್, ಹುಕ್ಮ್; ಮರಾ. ಹುಕ್ಮ್, ಹುಕೂಮ್]

ಹುಕ್ಕ 'ಹುಕ್ಕಾ' ನೋ.

ಹುಕ್ಕಾ, ಹುಕ್ಕ, ಹುಕ್ಕೆ (ನಾ). ತಂಬಾಕು ಸೇದುವ ಒಂದು ಸಾಧನ; ಗುಡಿಗುಡಿ: ಹುಕ್ಕಾ ಎಳೆಯುತ್ತಾ ಮಲಗುತ್ತಿದ್ದ ಜಹಾಂಗೀರ ಬಾದಷಹನಂತೆ (ಮುಂಗಾಮು.೫೫); ಬಾಯಿಯಲ್ಲಿ ಹುಕ್ಕಾದ ನಲಿಕೆ ಇದೆ (ಕುರಿಹಂ.೪೪). **ಹುಕ್ಕ:** ಅದಾದ ಮೇಲೆ ಸೇವಿಸಲು ಹುಕ್ಕವನ್ನು ಇರಿಸಿದನು (ಚಾಲಪ್ರ. I. ೧೫೫). **ಹುಕ್ಕೆ:** ಜಗಲಿಯ ಮೇಲೆ ಕುಳಿತು ಹುಕ್ಕೆಯನ್ನು ಸೇದುತ್ತಾ . . . ಗೋಡೆಗೆ ಒರಗಿದ್ದನು (ಎಧಿವ್ಯ. ೧೦); ಆ ವ್ಯಕ್ತಿಗಳು ಅದನ್ನು ಕುಡಿಯುವಷ್ಟರಲ್ಲಿ ಎರಡು ಹುಕ್ಕೆಗಳು ತಯಾರಾದುವು (ನಿಷ್ಕಾಮ. ೧).

[<— ಅರ. ಹಿಂ. ಹುಕ್ಕಾ; ಮರಾ. ಹುಕ್ಕಾ, ಹುಕಾ]

ಹುಕ್ಕುಂ 'ಹುಕುಮು' ನೋ.

ಹುಕ್ಕೆ 'ಹುಕ್ಕಾ' ನೋ.

ಹುಕ್ಕೇರಿ (ನಾ). ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ ಹದಿನಾರು ಬಗೆಯ ರೂಪಾಯಿನಾಣ್ಯಗಳಲ್ಲಿ ಒಂದು; IP ಹುಕ್ಕೇರಿಯೆಂಬ ಊರಿನಲ್ಲಿ ಟಂಕಿಸಿದ ನಾಣ್ಯ: ೧೩.ಹುಕ್ಕೇರಿ. ೧೪. ಉಡಪಿ. ೧೫. ಗೋವಿಂದಬಕ್ಷಿ. ೧೬. ಪೀರಖಾನಿ (ಕಛಾಗ. ೨೪೧). [?]

ಹುಗಲು 'ಪುಗಿಲ್[1]' ನೋ.

ಹುಗಿ (ಕ್ರಿ).೧. (ಹಣ, ಹಣ ಮುಂತಾದುವನ್ನು) ನೆಲದಲ್ಲಿ ಕುಳಿಮಾಡಿ ಮೆಟ್ಟಿಚ್ಚ ,— ಹೂಳು; ಹುದುಗಿಸು: ಹುಗಿದ ಹೆಣಗಳನ್ನು ಕೆದರಿ ತೆಗದು ತಿನ್ನುವವು (ಮುಂಬಯಿ. ೩-೭೫); ಈ ಪಾತ್ರೆಯಲ್ಲಿ ನಾಣ್ಯಗಳನ್ನು ತುಂಬಿ ನೆಲದಲ್ಲಿ ಹುಗಿದಿಡುವೆನು (ತಪಪ್ರ.೩-೧೦೧). ೨. ಏಳಿರು; ನೆಡು: ಮದುವೆಗೆ ಇನ್ನೂ ಹದಿನೈದು ದಿನಗಳಿರುವಾಗಲೇ . . . ಮೊದಲನೇ ಕಂಬವನ್ನು ಹುಗಿದು, ಅದನ್ನು ಮಾವಿನ ಟೊಂಗೆಗಳಿಂದ ಸಿಂಗರಿಸಿ (ಆಚೋಲೀ. ೩೮); ಯಾವ ಪಾತ್ರೆಯಲ್ಲಿ ಬೇಯಿಸುತ್ತೀರೋ ಆ ಪಾತ್ರೆಯನ್ನು ಉಸುಕಿನಲ್ಲಿ ಅರ್ಧ ಹುಗಿಯಬೇಕು (ಅಡುಪಾ.೧೯೯). ೩. ಮುಚ್ಚಿಹೋಗು; ಹುದುಗು: ಚತುರ್ದಶಲಕ್ಷಸಂಖ್ಯೆಯ ಸುದತಿಯರು ನಿನಗರುಣರಸದಂಗದಲಿ ಹುಗಿದುದು [ಪಾಕಾಂ. ಹುದುಗಿದು] ಹೊಳೆವ ಗಾಜಿನ ಮಣಿಯ ಸರದಂತೆ (ತೂರರಾ.೩-೭-೧೯); ಅವರ ವಿಚಾರಗಳೆಲ್ಲ ಹಾಳುಕೋಟೆಯಂತೆ ಹುಗಿದುಕೊಂಡಿವೆ (ಸಮುಜೀ.೬).

ಹುಗಿಯಭತ್ತ (ನಾ). ಒಂದು ಬಗೆಯ ಬತ್ತ (?): ಈ ಗ್ರಾಮಕ್ಕೆ ಸಲುವ ದುರ್ಗದೇವರಿಗೆ ಕೊಟುಬಹ ಕಡಿವಾಲಿ ನಾಡುದಳವಾಲಿಕೆ ಹುಗಿಯಭತ್ತ ಚಿನವಾದಿಯರಿಗೆ ಕೊಟುಬಹ ತಳವಾಲಿಕೆ ಉಪಾಜರ ಮೊಳೆಯ ರೊಕ ಸಹ (ಸೌಶಾ. IV, ೫೫೫-೧೪; 1513). 'ಹುಡಿಕ್ಕೆಬತ್ತ' ಪರಾ.

[? + ಭತ್ತ[1] (< ಬತ್ತ)]

ಹುಗಿಲಿಲಿ (ಕ್ರಿ). ಒಳಹೊಗುವಂತೆ ತಿವಿ ,— ಚುಚ್ಚು: ನಿನ್ನಯ ಕಣಿಗಳ್ಳಾಕಿದರೆ ತರಳುವನ ಅಭಿಮನ್ಯುವೆನುತಬ್ಬರಿಸಿ ಕರ್ಣನ ಕಾಯವನು ಹುಗಿಲಿಲಿದನೆಂಟಂಬಿನಲಿ (ಕುವ್ಯಾದ್ಯೂ. ೫-೫೯); ಮನಸಿಜಂ ಪರಿಮಳವ ಬೀಱುವರಳಂಬೊಂದ ತೊಟ್ಟು ಹುಗಿಲಿಲಿದನಾಕೆಯ ಮನವನಾತನಂತಃಕರಣವಂ ಚಿತ್ರವೆಂಬಂದದಿಂ (ಸೌಂದಪ್ರ. ೯-೧೪).

[ಹುಗಿಲು (< ಪುಗಿಲ್[1]) + ಇಲಿ[1]]

ಹುಗಿಲು 'ಪುಗಿಲ್[1]' ನೋ.

ಹುಗಿಲುಗಳೆ (ಕ್ರಿ). ಸೀಳು; ಭೇದಿಸು: ನಗವನೊಡ್ಡಿದರೊಂದು ಶರದಲಿ ಹುಗಿಲುಗಳೆವ ವಿದೂರಪಾತದಿ (ಪಂಭವ.೧೪-೩). [ಹುಗಿಲು (< ಪುಗಿಲ್[1]) + ಕಳೆ[1]]

ಹುಗಿಲುತೆಗೆ 'ಹುಗಿಲುದಗೆ' ನೋ.

ಹುಗಿಲುದೆಗೆ, ಹುಗಿಲುತೆಗೆ (ಕ್ರಿ). ಚಕ್ಕೆ ತೆಗೆ; ಕೆತ್ತು; ಪದರವನ್ನೆತ್ತು: ಆಸೆಯಜಿತ ಬಾಚಿಯಲ್ಲಿ ಭವಪಾಶವಿಲ್ಲದ ಜಂಗಮಕ್ಕಿತ್ತು, ರೋಷವಿಲ್ಲದ ಉಳಿಯಲ್ಲಿ ನಿಜವಾಸವ ನೋಡಿ ಹುಗಿಲುದೆಗೆವುತ್ತ (ಸರ್ವವ. ೧೨೦-೭೧೮). **ಹುಗಿಲುತೆಗೆ:** ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲೆಬಾಗಿ ಬಿದ್ದ ಮರನ ತಂದು ಬದ್ದಿಯ ಕಾರುಕನ ಕೈಯಲ್ಲಿ ಸುಬದ್ದಿಸಿ ಬಂಧಿಸಿ ಸುದ್ದಯಿಸಿ ಅನಾದಿ ಎಂಬ ಹುಗಿಲುತೆಗೆದು (ಸರ್ವವ. ೧೦೫-೫೬೭).

[ಹುಗಿಲು (< ಪುಗಿಲ್[1]) + ತೆಗೆ[1]]

ಹುಗಿಸು[1] 'ಪೊಗಿಸು' ನೋ.

ಹುಗಿಸು[2] (ಕ್ರಿ). ನೆಲದೊಳಗೆ ಮುಚ್ಚಿಸು; ಹೂಳಿಸು: ಅರಳಿಯ ಮರದಡಿಯಲ್ಲಿ ಕುಣಿ ತೋಡಿಸಿದ. ಅಲ್ಲಿ ಹುಗಿಸಿದ (ಜಮಾನ್ಯಾ.೧೪); ನಮ್ಮಿಬ್ಬರನ್ನೂ ಜೀವಂತ ಹುಗಿಸಿ ಬಿಡುವುದಾಗಿ ಹೇಳಿದನು (ಮೀದಿಮ. ೧೫೬). [ಹುಗಿ + - ಇಸು[3]]

ಹುಗು 'ಪೊಗು' ನೋ.

ಹುಗುತೆ 'ಪೊಗುತೆ' ನೋ.

ಹುಗುಲು 'ಪುಗಿಲ್[1]' ನೋ.

ಹುಗುಳು 'ಪುಗುಳ್[2]' ನೋ.

ಹುಗುಳೀಳು 'ಪುಗುಳೀಬು' ನೋ.

ಹುಗ್ಗಿ 'ಪುಬ್ಬಿ' ನೋ.

ಹುಗ್ಗಿಗ (ನಾ). ಸೊಕ್ಕಿನವನು; ಬಿಂಕದವನು: ಹೋಳುಗಳಿವನು ಹುಗ್ಗಿಗರನೆನು ತಾಳೊಳಗೆ ಬೆರಸಿದನು (ಕುವ್ಯಾದ್ಯೂ. ೧೦-೩೧); ಭರದಿಂದ ಮುಗ್ಗಿದ ಬಲಮಂ ಕಾಣುತ ಹುಗ್ಗಿಗರಾ ಕುರುಭೂಪಾಲನುಜರದಡಹಾಯ್ದರು (ಅಭಕಾ. ೩೩).

[ಹುಗ್ಗು[2](< ಪುಗ್ಗು[2]) + - ಇಗ]

ಹುಗ್ಗು[1] (ಕ್ರಿ). ೧. ತೆರು; ಬಿಡು; ತ್ಯಜಿಸು: ನೂರಂಟು ಜಗಳದೊಳ್ ಪೆಸರೊಡೆದ ನಾಯಕರು ಮುಗ್ಗಿದರು ಹು[ಪಾಕಾಂ. ಉ]ಗ್ಗಿದರು ಹರಣಮನಾಜಿಯೊಳಗೆ (ತುರಂಗ. ೭೩-೪೨). ೨. ಅಡಗು; ಹುದುಗು: ನಿಗ್ಗಿತವನಿ ಭಟರ ಹತಿಯ ಲಗ್ಗೆಗಮರರು ಹುಗ್ಗಿದರು (ಯಾದವಾ. ೬೦). [< ಪುಬ್ಬು?]

ಹುಗ್ಗು[2] 'ಪುಗ್ಗು[2]' ನೋ.

ಹುಗ್ಗೆ 'ಪುಬ್ಬಿ' ನೋ.

ಹುಚ್ಚ 'ಪುಚ್ಚ[1]' ನೋ.

ಹುಚ್ಚಕಬ್ಬು 'ಹುಚ್ಚುಕಬ್ಬು' ನೋ.

ಹುಚ್ಚತ್ತಿ (ನಾ). ಕೀಳುದರ್ಜೆಯ ಅತ್ತಿಮರ; ಕಾಡುಅತ್ತಿಯ ಮರ: "ಕಾಕೋದುಂಬರಿಕಾ—ಹುಚ್ಚತ್ತಿ, ಮಳಲತ್ತಿ" (ಓಷಧಿ. ೩೨). 'ಮಳಲಹುಚ್ಚತ್ತಿ' ಪರಾ.

[ಹುಚ್ಚು(< ಪುರ್ಚು) + ಅತ್ತಿ[1]]

ಹುಚ್ಚಮಲ್ಲಿ (ನಾ).೧. (ಉಕ) ಚದುರಂಗದಾಟದಲ್ಲಿ ಒಂದು ಬಗೆಯ ಪಟ್ಟು; IP ವೇದಮಾತಿನ ಒಂದು ಪ್ರಕಾರ. ೨. (ಆಲಂ) ನಿರುಪಾಯನಾದವನು; ಅಸಹಾಯಕನಾದವನು: ಹೈದರನು ಈ ಮೇರೆಗೆ ರಾಜಧಾನಿಯಲ್ಲೆಲ್ಲ ವ್ಯವಸ್ಥೆಯನ್ನು ಮಾಡಿ ಪೇಶ್ವೆಯನ್ನು ಹುಚ್ಚಮಲ್ಲಿಯಾಗಿ ಮಾಡಿ ಕೂಡ್ರಿಸಿದ (ಚಾಸಂ. ೧೩೪). [<— ಮರಾ. ಹುಚಮಲ್ಲೀ, ಹುಚಮುಲ್ಲೀ]

ಹುಚ್ಚಹತ್ತಿ 'ಹುಚ್ಚುಹತ್ತಿ' ನೋ.

ಹುಚ್ಚಾಟ (ನಾ). ೧. ಅವಿವೇಕದಿಂದ ವರ್ತಿಸುವುದು; ಬುದ್ಧಿಗೇಡಿತನ: ಹುಚ್ಚಾಟವನ್ನು ಆಡಿದವನು ತಾನು . . . ಆದರೆ ಇವಳಿಗೇನು ಅರಿಯಾಯಿತು? (ಬಾಳಪೂ. ೨೨೨). ೨. ಹಾಸ್ಯನಾಟಕ; ಪ್ರಹಸನ: ಈ ಪುಸ್ತಕದಲ್ಲಿ ಮೂರು ಹುಚ್ಚಾಟಗಳನ್ನು ಕೊಟ್ಟಿದೆ. ಹುಚ್ಚಾಟಗಳು ಹೆಸರಿಗೆ ಹುಚ್ಚಾಟಗಳಾಗಿದ್ದರೂ ಅವು ಒಳಹೊಡತದಲ್ಲಿರುವುದೇ ಹೆಚ್ಚು (ತಿಮಗು.೪ ಪೀಠಿಕೆ); ಸಾಮಾಜಿಕರನ್ನು ಸಾಹಿತ್ಯದ ಸೂತ್ರದಲ್ಲಿ ಸೇರಿಸಿಕೊಳ್ಳಬೇಕಾದರೆ 'ಹುಚ್ಚಾಟ'ವು ಒಂದು ಹಾದಿ (ಸಾಮಿ. ೧೨೦).

[ಹುಚ್ಚು(< ಪುರ್ಚು) + ಆಟ]

ಹುಚ್ಚಾಪಟ್ಟೆ 'ಹುಚ್ಚಾಬಟ್ಟೆ' ನೋ.

ಹುಚ್ಚಾಬಟ್ಟೆ, ಹುಚ್ಚಾಪಟ್ಟೆ (ಅ). ಮನಸ್ಸಿಗೆ ಬಂದಂತೆ: ಬಂದಿಯೊಡನೆ ಅವನು ಹುಚ್ಚಾಬಟ್ಟೆ ಕೂಗಾಡುತ್ತಿದ್ದನು (ಪುನರು.೧೫೬). **ಹುಚ್ಚಾಪಟ್ಟೆ:** ಹುಚ್ಚಾಪಟ್ಟೆ ಮಾತಾಡಬೇಡ (ರೂಢಿ). 'ಕಂಡಾಬಟ್ಟೆ', 'ಸಿಕ್ಕಾಬಟ್ಟೆ' ಹೋ. [< ಹುಚ್ಚು]

ಹುಚ್ಚಾಸ್ಪತ್ರೆ (ನಾ). ಬುದ್ಧಿಭ್ರಮಣೆಗೊಂಡ ರೋಗಿಗಳಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆ; ಮಾನಸಿಕರೋಗಿಗಳ ಚಿಕಿತ್ಸೆ ನಡೆಸುವ ಆಸ್ಪತ್ರೆ: ಹುಚ್ಚಾಸ್ಪತ್ರೇಲಿರೋಕೆ ನಮಗೇನು ಹುಚ್ಚೆ? (ಮುಚ್ಚಬಾ. ೩೨). [ಹುಚ್ಚು (< ಪುರ್ಚು) + ಆಸ್ಪತ್ರೆ]

ಹುಚ್ಚ[1] (ನಾ).೧. ಬುದ್ಧಿಪಲ್ಲಟವಾದವಳು; ಹುಚ್ಚು ಹಿಡಿದವಳು: ಆ ಹುಡುಗಿಗೆ ಪ್ರಜ್ಞೆಯು ಶಿಥಿಲವಾಗಿ ಮೂರುನಾಲ್ಕುದಿನ ಹುಚ್ಚಿಯಂತೆ ಕಾಣುತ್ತಿತ್ತು (ಹುಬ್ಬಹ. ೧೩); ಹುಚ್ಚಿಗೆ ಅತ್ತಮನೆಯೇನು ತವರುಮನೆಯೇನು? (ಗಾಡ). ೨. (ಆಲಂ) ಅವಿವೇಕದಿಂದ ವರ್ತಿಸುವವಳು: ಅವಳೊಬ್ಬಳು ಹುಚ್ಚಿ, ಎಲ್ಲ ವಿಷಯಕ್ಕೂ ಹಟಹಿಡಿಯುತ್ತಾಳೆ (ರೂಢಿ). [ಹುಚ್ಚು(< ಪುರ್ಚು) + - ಇ[2]]

ಹುಚ್ಚ[2] 'ಪುಚ್ಚಿ' ನೋ.

ಹುಚ್ಚಡು (ಕ್ರಿ). (ಆಲಂ) ದಿಗ್ಭ್ರಮೆಯಿಂದ ವಿಕಾರವಾಗು; ಗಾಬರಿಯಿಂದ ವಿವರ್ಣವಾಗು: ಅವರಿಬ್ಬರ ಮೋರೆಯೂ ಹುಚ್ಚಿಟ್ಟು ನೆಲ ನೋಡತೊಡಗಿದರು (ಪ್ರೇಮಾತ್ರ. ೨೧೫); ರಾಯರ ಮುಖ ಹುಚ್ಚಿಟ್ಟು ಹೋಗಿತ್ತು (ನಿರಾಭ. ೧೧೪).

[ಹುಚ್ಚು (< ಪುರ್ಚು) + ಇಡು[1]]

ಹುಚ್ಚು ಪುರ್ಚು' ನೋ.

ಹುಚ್ಚುಕಗ್ಗಲಿ (ನಾ). ಕೀಳುದರ್ಜೆಯ ಕಗ್ಗಲಿಮರ: "ಅಂಮೇದಃ, ಎಟ್ಟುದಿರಃ-೨ ದುರ್ಗಂಧವುಳ್ಳ ಕಗ್ಗಲೀಗಿಡ, ಹುಚ್ಚುಕಗ್ಗಲೀಮರ" (ಸಪ್ತಾಂ. ೧೩೩).

[ಹುಚ್ಚು(< ಪುರ್ಚು) + ಕಗ್ಗಲಿ[1]]

ಹುಚ್ಚುಕಬ್ಬು, ಹುಚ್ಚಕಬ್ಬು (ನಾ). ಕಬ್ಬಿನಂತೆಯೇ ಇರುವ ಒಂದು ಬಗೆಯ ಜೊಂಡು; ಕಾಗಬ್ಬು: ದರ್ಭೆ, ಹುಚ್ಚುಕಬ್ಬು, ಕಾಡುಕಬ್ಬು (ಮೃಡಿಗಿ

೬೭-೧೩೭೦). **ಹುಚ್ಚಕಬ್ಬು:** ಹೊಳೆಗೆ ಹೋದರೆ ಜೋಳದ ಬೆಂಡು, ಹುಚ್ಚಕಬ್ಬು ಇವುಗಳಿಂದ ದೋಣಿ ತೆಪ್ಪಗಳನ್ನು ಮಾಡಿ ತೇಲಿ ಬಿಡುತ್ತಿದ್ದರು (ಹುಚ್ಚಸ. ೧೫೪).

[ಹುಚ್ಚು(< ಪುರ್ಚು) + ಕಬ್ಬು(< ಕರ್ವು)]

ಹುಚ್ಚುಕುಣಿತ 'ಪುರ್ಚುಕುಣಿತ' ನೋ.

ಹುಚ್ಚುಕುನ್ನಿ 'ಪುಚ್ಚುಗುನ್ನಿ' ನೋ.

ಹುಚ್ಚುಕೆಲಸ (ನಾ). ವಿಚಾರಮಾಡದೆ ಮಾಡುವ ಕೆಲಸ: ನಮ್ಮ ಹುಡುಗ ಶುದ್ಧ ಹುಚ್ಚುಕೆಲಸ ಮಾಡಿಬಿಟ್ಟ (ರೂಢಿ). [ಹುಚ್ಚು(< ಪುರ್ಚು) + ಕೆಲಸ]

ಹುಚ್ಚುಗಟ್ಟು (ಕ್ರಿ). ಮರುಳಾಗು; ಹುಚ್ಚುಹಿಡಿ: ಕಾಲೇಜಿನ ಹುಡುಗಿಯರೆಲ್ಲ ಹುಚ್ಚುಗಟ್ಟಿ ಕಾಲಿಗೆ ಬೀಳಬೇಕು (ಕೆಲಕ.೯೩). [ಹುಚ್ಚು(< ಪುರ್ಚು) + ಕಟ್ಟು]

ಹುಚ್ಚುಗುಂಜಿ (ನಾ). ಒಂದು ಬಗೆಯ ಸಸ್ಯ: ಚಿರುಂಡಿ ಚಿಂಚು ಹುಚ್ಚುಗುಂಜಿ (ಅಕಾನಿ.೧೦-೨೭). [ಹುಚ್ಚು(< ಪುರ್ಚು) + ಗುಂಜಿ]

ಹುಚ್ಚುಗೊಳ್ 'ಪುರ್ಚುಗೊಳ್' ನೋ.

ಹುಚ್ಚುಗೊಳಿಸು 'ಪುಚ್ಚುಂಗೊಳಿಸು' ನೋ.

ಹುಚ್ಚುಚಕ್ಕೋತ (ನಾ). ಒಂದು ಬಗೆಯ ಚಕ್ಕೋತ: ಹುಚ್ಚುಚಕ್ಕೋತ, ಹುನ್‌ಚಿಕ್ (ಮೃಜಿಗಿ. ೧೦-೩೬೫). [ಹುಚ್ಚು(< ಪುರ್ಚು) + ಚಕ್ಕೋತ]

ಹುಚ್ಚುಜೋಳ (ನಾ). ಒಂದು ಬಗೆಯ ಸಸ್ಯ; ಕಾಡುಜೋಳ: ಕಾಡುಜೋಳ, ಹುಚ್ಚುಜೋಳ, ಕಾಡುಕಂಬುಹುಲ್ಲು (ಮೃಜಿಗಿ. ೭೦-೧೪೫೫).

[ಹುಚ್ಚು(< ಪುರ್ಚು)+ ಜೋಳ]

ಹುಚ್ಚುತನ 'ಪುಚ್ಚುತನ' ನೋ.

ಹುಚ್ಚುತುಂಬೆ 'ಹುಚ್ಚುದುಂಬೆ' ನೋ.

ಹುಚ್ಚುತೊಂಡೆ (ನಾ). ಒಂದು ಬಗೆಯ ತೊಂಡೆ; ಕಾಗೆದೊಂಡೆ: "ಕಾಕಾಂಗೀ, ಕಾಕನಾಸಿಕಾ - ೨ ಕಾಗಿತೊಂಡೇಗಿಡದ ಹೆಸರು, ಹುಚ್ಚುತೊಂಡೆ" (ಸಿದ್ಧಾಂತಿ. ೧೫೯).

[ಹುಚ್ಚು(< ಪುರ್ಚು) + ತೊಂಡೆ]

ಹುಚ್ಚುದುಂಬೆ, ಹುಚ್ಚುತುಂಬೆ (ನಾ). ಒಂದು ಬಗೆಯ ತುಂಬೆಗಿಡ; ಕಾಡುತುಂಬೆ: ಅಂಡಶೂಲೆಗೆ . . . ಹುಚ್ಚುದುಂಬೆಯ ಬೇರಂ ನಿಂಬೆಯಲ್ಲಿ ಅರೆದು ಅಂಡಕ್ಕೆ ಕಟ್ಟುವುದು (ವೈದ್ಯವಿ.೧೧೬). **ಹುಚ್ಚುತುಂಬೆ:** (ಮೃಜಿಗಿ.೫೦-೧೦೦೩).

[ಹುಚ್ಚು(< ಪುರ್ಚು) + ತುಂಬೆ]

ಹುಚ್ಚುನಗೆ (ನಾ). ತಡೆಯಲಾರದೆ, ಮೇರೆಮೀರಿ ಬರುವ ನಗು: ಜಗುಳ್ಳ ಹೆಂಗಳನೆತ್ತಿ ತಕ್ಕಿಸಿ ಮೊಗವಡ್ಡದೆಗೆಯ ಚುಂಬಿಸುತಿಹ ನಿನ್ನ ಬಗೆಯ ಕಂಡರೆ ಹುಚ್ಚುನಗೆ ಬರುತಿದೆ (ಭರಚ. ೯-೧೧೩). [ಹುಚ್ಚು(< ಪುರ್ಚು) + ನಗೆ]

ಹುಚ್ಚುನರವೆ (ನಾ). ಒಂದು ಬಗೆಯ ಸಸ್ಯ: ಕೂಲಿ, ಕುಮತಿ, ಕಾಶ್ಮೀರಿಮರ, ಹುಚ್ಚುನರವೆ (ಮೃಜಿಗಿ.೪೦-೭೮೨). [ಹುಚ್ಚು(< ಪುರ್ಚು) + ನರವೆ]

ಹುಚ್ಚುನಾಯಿ (ನಾ). ಹುಚ್ಚು ಹಿಡಿದಿರುವ ನಾಯಿ: ಹುಚ್ಚುನಾಯಿ ಕಚ್ಚಿದರೆ ಹುಚ್ಚುಹಿಡಿಯುತ್ತದೆ (ರೂಢಿ). [ಹುಚ್ಚು(< ಪುರ್ಚು) + ನಾಯಿ(< ನಾಯ್)]

ಹುಚ್ಚುನಿಂಬೆ (ನಾ). ಒಂದು ಬಗೆಯ ನಿಂಬೆ; ಕಾಡುನಿಂಬೆ: (ಮೃಜಿಗಿ. ೧೦-೧೭೪).

[ಹುಚ್ಚು(< ಪುರ್ಚು) + ನಿಂಬೆ]

ಹುಚ್ಚುನೆಲಬೇವು (ನಾ). ಒಂದು ಬಗೆಯ ಸಸ್ಯ: (ಮೃಜಿಗಿ.೪೮-೯೫೫).

[ಹುಚ್ಚು (< ಪುರ್ಚು) + ನೆಲಬೇವು]

ಹುಚ್ಚುಪಡವಲ (ನಾ). ಒಂದು ಬಗೆಯ ಪಡವಲಕಾಯಿ ಮತ್ತು ಅದರ ಬಳ್ಳಿ; ಕಹಿಪಡವಲ: "ಕುಲಕಂ, ಪಟೋಲ, ತಿಕ್ತಕಃ, ಪಟುಃ - ೪ ಬೈ ಪಡುವಲಗಿಡ; ಹುಚ್ಚು ಪಡವಲಗಿಡ" (ಸಿದ್ಧಾಂತಿ. ೧೪೭). [ಹುಚ್ಚು(< ಪುರ್ಚು) + ಪಡವಲ (< ಪಡಲ)]

ಹುಚ್ಚುಬಳ್ಳಿ (ನಾ). ಒಂದು ಬಗೆಯ ಬಳ್ಳಿ; ☞ ಇದು ಸೋಕಿದರೆ ದಾರಿ ತಪ್ಪಿ ಅಲೆಯಬೇಕಾಗುತ್ತದೆಂದು ಭಾವಿಸಲಾಗಿದೆ: ದಿಕ್ಕು ತಪ್ಪಿಬಿಟ್ಟೆನೆ? . . . ಅಥವಾ ಹುಚ್ಚುಬಳ್ಳಿ ಎಲ್ಲಿಯಾದರೂ ಕಾಲಿಗೆ ತಗುಲಿಬಿಟ್ಟಿತೆ? (ಮಲಮ. ೫೭೭).

[ಹುಚ್ಚು(< ಪುರ್ಚು) + ಬಳ್ಳಿ]

ಹುಚ್ಚುಬಿಡಿಸು (ಕ್ರಿ). (ಆಲಂ) ಅವಿವೇಕವನ್ನು ಹೋಗಲಾಡಿಸು; ವಿವೇಕಿಯನ್ನಾಗಿಸು: ಅವನು ನನ್ನ ಹತ್ತಿರ ಬರಲಿ, ಹುಚ್ಚುಬಿಡಿಸಿ ಕಳಿಸುತ್ತೇನೆ (ರೂಢಿ).

[ಹುಚ್ಚು(< ಪುರ್ಚು) + ಬಿಡಿಸು]

ಹುಚ್ಚುಬಿಡು (ಕ್ರಿ). ಮರುಳುತನ ನಿವಾರಣೆಯಾಗು: ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು (ಗಾದೆ).

[ಹುಚ್ಚು(< ಪುರ್ಚು) + ಬಿಡು]

ಹುಚ್ಚುಬೇವು (ನಾ). ಒಂದು ಬಗೆಯ ಬೇವು; ತುರುಕಬೇವು: "ಅರೆಬೇವು, ಹುಚ್ಚುಬೇವು . . . ಅಜಣಿ" (ಸಸ್ಯನಿ.೯೮). [ಹುಚ್ಚು(< ಪುರ್ಚು) + ಬೇವು]

ಹುಚ್ಚುಬ್ರಹ್ಮದಂಡಿ (ನಾ). ಒಂದು ಬಗೆಯ ಔಷಧೀಸಸ್ಯ: ದತ್ತೂರದ ಗಿಡ, ಹುಚ್ಚುಬ್ರಹ್ಮದಂಡಿ, ಅರಿಸಿನ ಉಮ್ಮತ್ತಿ (ಮೃಜಿಗಿ. ೮-೧೪೧).

[ಹುಚ್ಚು(< ಪುರ್ಚು) + ಬ್ರಹ್ಮದಂಡಿ]

ಹುಚ್ಚುಮಳೆ (ನಾ). (ಆಲಂ) ಹತೋಟಿಯಿಲ್ಲದೆ ಒಂದೇ ಸಮನೆ ಸುರಿಯುವ ಮಳೆ; ಅತಿವೃಷ್ಟಿ: ೧೬೬೩ನೇ ದುರ್ಮತಿ ಸಂ॥ ಆಶ್ವಿಜ ಶುದ್ಧ ೧೦ಯಿಂದ ಕಾರ್ತಿಕ ಶು॥ ೫ವರೆಗೆ ಹುಚ್ಚುಮಳೆ ಹೊಯಿತು (ಚತ್ರಪಾ.೮ ಉಪೋದ್ಘಾತ); ಅವನು ಬೇಸಾಯಕ್ಕೆ ಹೊರಟ ಸಮಯದಲ್ಲಿ ಗುರುತೇಟಿನಂತೆ ಹುಚ್ಚುಮಳೆ ಕರೆಯುವುದು (ಯೋಧಪು. ೭೪). [ಹುಚ್ಚು(< ಪುರ್ಚು) + ಮಳೆ(< ಮಳೆ)]

ಹುಚ್ಚುಮುಂಡೆ (ನಾ). (ಆಲಂ) ಅವ್ಯವಸ್ಥೆಯ ವ್ಯಕ್ತಿ: ಹುಚ್ಚುಮುಂಡೆಯ ಮದುವೆಯಲ್ಲಿ ಉಂಡವನೇ ಜಾಣ (ಗಾದೆ). [ಹುಚ್ಚು (< ಪುರ್ಚು) + ಮುಂಡೆ]

ಹುಚ್ಚುಮುಟ್ಟೇಗಿಡ (ನಾ). ಒಂದು ಬಗೆಯ ಸಸ್ಯ: ಮಂಗಮಾರಿಸೊಪ್ಪು ಹೆಣ್ಣುಕರೀತುಂಬೆ, ಹುಚ್ಚುಮುಟ್ಟೇಗಿಡ (ಮೃಜಿಗಿ. ೭-೧೧೬).

[ಹುಚ್ಚು (< ಪುರ್ಚು) + ಮುಟ್ಟೆ + ಗಿಡ (< ಗಿಡು)]

ಹುಚ್ಚುಮೆಣಸಿನಮರ (ನಾ). ಒಂದು ಬಗೆಯ ಸಸ್ಯ: ಕಾಡುಅಮಟೆ, ವಾಸನೆಮರ, ಹುಚ್ಚುಮೆಣಸಿನ ಮರ (ಮೃಜಿಗಿ. ೬೮-೧೫೯೨).

[ಹುಚ್ಚು (< ಪುರ್ಚು) + ಮೆಣಸು (< ಮೆಱಸು) + ಮರ]

ಹುಚ್ಚುಸಾಸುವೆ (ನಾ). ಒಂದು ಬಗೆಯ ಸಾಸುವೆ : "ಕ್ಷವಃ, ಕ್ಷುತಾಭಿಜನನಃ, ರಾಜಕಾ, ಏಷ್ಟಿಕಾ, ಅಸುರೀ - ೫ ಕರೀಸಾಸುವೆ, ದೊಡ್ಡಸಾಸುವೆ; ಹುಚ್ಚುಸಾಸುವೆ" (ಸಿದ್ಧಾಂತಿ. ೨೭೯). [ಹುಚ್ಚು (< ಪುರ್ಚು) + ಸಾಸುವೆ (< ಸಾಸಿವೆ)]

ಹುಚ್ಚುಸೊಂಡೆ (ನಾ). ಒಂದು ಬಗೆಯ ಸೊಂಡೆಗಿಡ: "ಕಾಡುಬದನೆ, ಹುಚ್ಚು ಸೊಂಡೆ, ಸವುಡಂಗಿ, ಸೊಂಡೆ" (ಸಸ್ಯನಿ. ೧೨೧); (ಮೃಜಿಗಿ. ೭೦-೧೪೪೬).

[ಹುಚ್ಚು (< ಪುರ್ಚು) + ಸೊಂಡೆ (< ಸುಂಡೆ)]

ಹುಚ್ಚುಹತ್ತಿ, ಹುಚ್ಚಹತ್ತಿ (ನಾ). ಒಂದು ಬಗೆಯ ಹತ್ತಿ: "ಭದ್ರೋದುಂಬರಿಕಾ- ಹುಚ್ಚುಹತ್ತಿ" (ಓಷಧಿ. ೧೧೦). **ಹುಚ್ಚಹತ್ತಿ:** "ಫಲಭದ್ರಃ- ಹುಚ್ಚಹತ್ತಿ" (ಓಷಧಿ. ೧೦೪).

[ಹುಚ್ಚು (< ಪುರ್ಚು) + ಹತ್ತಿ (< ಪಱ್ತಿ)]

ಹುಚ್ಚುಹತ್ತು (ಕ್ರಿ). ಹುಚ್ಚುಹಿಡಿ; ಬುದ್ಧಿಭ್ರಮಣೆಯಾಗು: ಅವನಿಗೆ ಹುಚ್ಚು ಹತ್ತಿತು (ಮುಂಬವ್ಯಾ. ೫-೨೦೯). [ಹುಚ್ಚು (< ಪುರ್ಚು) + ಹತ್ತು (< ಪತ್ತು)]

ಹುಚ್ಚುಹರಟೆ (ನಾ). (ಆಲಂ) ಮನಸ್ಸಿಗೆ ಬಂದಂತೆ ಆಡುವ ಮಾತು; ಅಸಂಬದ್ಧಪ್ರಲಾಪ: ಗುರಿಯೆ? ಹುರಿಯ? ಕಚ್ಚೆ? ನೆಚ್ಚೆ? ಅವರ ಹುಚ್ಚುಹರಟೆ (ಇಂಗೀತ. ೯೯-೯). [ಹುಚ್ಚು (< ಪುರ್ಚು) + ಹರಟೆ]

ಹುಚ್ಚುಹರಳು (ನಾ). ಒಂದು ಬಗೆಯ ಹರಳಿನ ಗಿಡ : ವಿಶಲ್ಯಾ ಜಾಪಾಳದ ಗಿಡ, ಅಪಿಶಬ್ದದಿಂದ ಹಾವುಮೆಕ್ಕೆಗಿಡ, ಎಲುಪುಸಂಭಗಿಡ, ಹುಚ್ಚು ಹರಳುಗಿಡ." (ಸಿದ್ಧಾಂತಿ. ೪೧೦). [ಹುಚ್ಚು (< ಪುರ್ಚು) + ಹರಳು (< ಪರಲ್)]

ಹುಚ್ಚುಹಿಡಿ (ಕ್ರಿ). = ಹುಚ್ಚುಹತ್ತು : ಹುಚ್ಚುಹಿಡಿಯಿತು ಎನಗೆ ಹುಚ್ಚುಹಿಡಿಯಿತು (ಪುರಂದ. ೩-೨೯ ಪಲ್ಲವಿ); ಏನು, ನಿಪುಣೆಕೆಗೆ ಹುಚ್ಚುಹಿಡಿಯಿತೇನು? (ಬಾಣಆ. ೨೨೦).

[ಹುಚ್ಚು (< ಪುರ್ಚು) + ಹಿಡಿ (< ಪಿಡಿ)]

ಹುಚ್ಚುಹೀರೆ (ನಾ). ಒಂದು ಬಗೆಯ ಹೀರೆ: ಹುಚ್ಚುಹೀರೆಕಾಯಿಬೀಜವನ್ನು ಮೊಲೆಹಾಲಿನಲ್ಲಿ ನೆನೆಯಿಕ್ಕಿ ನಸ್ಯಂಗೆಯ್ಯೆ ಸಕಲಸನ್ನಿದೋಷಗಳು ಗುಣಮಕ್ಕುಂ (ಸಕವೈ. ೧೮೧). [ಹುಚ್ಚು (< ಪುರ್ಚು) + ಹೀರೆ (< ಪೀರೆ)]

ಹುಚ್ಚುಹೊಳೆ 'ಪುರ್ಚುವೊಳೆ' ನೋ.

ಹುಚ್ಚೆಳ್ಳು (ನಾ). ಒಂದು ಬಗೆಯ ಎಳ್ಳು; ಗುರೆಳ್ಳು: "ತಿಲಪಿಂಜಃ, ತಿಲಪೇಜಃ-ಈ ೨ . . . ಹುಚ್ಚೆಳ್ಳಿಗೂ ಹೆಸರು. ಕೆಲವರು ಕಾಡೆಳ್ಳು ಎಂಬುವರು" (ಸಿದ್ಧಾಂತ. ೨೭೯); ಸಾಸಿವೆ, ಹುಚ್ಚೆಳ್ಳು ಮೊದಲಾದವುಗಳನ್ನು . . . ಬೆಳೆಯುತ್ತಾರೆ (ವ್ಯವಮ.೪೪).

[ಹುಚ್ಚು (< ಪುರ್ಚು) + ಎಳ್ಳು (< ಎಳ್)]

ಹುಚ್ಚೇಳು 'ಪುರ್ಚೇಟು' ನೋ.

ಹುಜರು 'ಹುಜೂರು$_1$' ನೋ.

ಹುಜರೆ (ನಾ). ಯಾವಾಗಲೂ ರಾಜನ ಸಮೀಪದಲ್ಲಿರುವ ಸೇವಕ; ಯಾವಾಗಲೂ ರಾಜನ ಖಾಸಾಸೇವೆಯಲ್ಲಿರುವ ನೌಕರ: ನಟ್ಟಗಿದ್ದರೆ ಯಾವಾಗೋ ನಮ್ಮ ವಿಮಲದೇವನು ಬಾದಶಹರ ಹುಜರೆ (ಕಂಚುಕಿ)ಯಾಗುತ್ತಲಿದ್ದನು (ಧರ್ಮಾಶೇ. ೧೩); ಓರ್ವ ಸಂಸ್ಥಾನಿಕನ ಹುಜರೆಯಾಗುತ ಬೆಳೆದು ನೀನೇ ಹುಜೂರೆಂದು ಭಾವಿಸಿರುವೆ (ನವ್ಯಕಾ. ೩೬). [<— ಹಿಂ. ಹಜೂರೀ, ಹುಜೂರೀ]

ಹುಜುರು 'ಹುಜೂರು$_1$' ನೋ.

ಹುಜೂರ್ 'ಹುಜೂರು$_2$' ನೋ.

ಹುಜೂರ್‌ಜಮಾಬಂದಿ 'ಹುಜೂರುಜಮಾಬಂದಿ' ನೋ.

ಹುಜೂರ 'ಹುಜೂರು$_2$' ನೋ.

ಹುಜೂರರಿಕೆ (ನಾ). ರಾಜನಿಗೆ ಮಾಡಿಕೊಳ್ಳುವ ಮನವಿ,— ವಿಜ್ಞಾಪನೆ: ಸೇನಬೋವರು ಹುಜೂರರಿಕೆ ಮಾಡಿಕೊಂಡದು (ಎಕ. VIII, ಸೊರಬ. ೨೭೬-೧೦; 1629?).

[ಹುಜೂರು$_2$ + ಅರಿಕೆ (< ಅಱಿಕೆ)]

ಹುಜೂರು$_1$, ಹಜೂರು$_1$, ಹುಜರು, ಹುಜುರು (ನಾ). ೧. ಸಮಕ್ಷಮ; ಎದುರು: ನೀಂ ಹುಜೂರೊಳಿರ್ಪುದೆಂದು ನಿಯಾಮಿಸಲಿಂತು ರಾಯರಾ ಸಮೀಪದೊಳ್ . . . ಕತಿಪಯವತ್ಸರಂ ವರ್ತಿಸುತ್ತುಂ (ಕಳಸ್ಥ. ೩-೩). ೨. ಖುದ್ದು; ಸ್ವತಃ: ಎವರಕೆ ಹುಜೂರು ಬರವದು (ಎಕ. VIII, ಸಾಗ. ೧೭-೧೫; 1672); ಲಿಂಗಾಭಟ್ಟನು ಹುಜೂರು ಬಂದು ಹಾರನ ಹಳ್ಳಿ ಕೋಟೆವಳಗಣ ನಾರಾಯಣದೇವರು . . . ಪೂಜೆಯನ್ನು (ಎಕ. IX (s), ಬೆಂಗಳೂ. ೧೫೦-೧; 1700). **ಹಜೂರು$_1$** : ೧. ಎಲ್ಲಿ ನೀ ಕಾದು ತಂದಿ ಹೇಳು ಕೃತಕದಿ ಇಲ್ಲಿ ನಮ್ಮ ಹಜೂರಿನೊಳಿರ್ದು (ಬಜ್ಜರಾ. ೬-೪೦); ಆ ಬಗ್ಗೆ ಶ್ರೀಸ್ವಾಮಿಗಳವರು ಹಜೂರಿಗೆ ಬಂದುಯಿದ್ದು (ಮೈಅರಿ. ೧೯೩೪, ೫೨-೧೨; 1812). **ಹುಜರು**: ೧. ಗಂಡಕೂಸ ಒಂದು ಆಗಲಿ ತಾಯಿ, ಮುದುಕಿ ಕಣ್ಣ ಹುಜರೆ! (ನಿಸರ್ಗ. ೩೦೭). **ಹುಜುರು**: ೧. ನಾನು ಏನನ್ನಾದರೂ ತಿನ್ನಬೇಕಾದರೆ ಎಲ್ಲರ ಹುಜುರು ತಿನ್ನುವವ (ರಕ್ತಧ್ವ. ೧೪೫). ೨. ಬೆಳ್ಳರೆ ಕುಡಿನಲ್ಲಿ ಚಂನ್ನಾಣನು ಹುಜುರು ಬಂದು (ಮೈಅರಿ. ೧೯೩೪, ೯-೨; 1690).

[<— ಅರ. ಹಿಂ. ಹುಜೂರ್; ಮರಾ. ಹುಜೂರ್, ಹುಜೀರ್, ಹುಜರಾಹುಜೂರ್, ಹುಜುರಾಹುಜೂರ್]

ಹುಜೂರು$_2$, ಹಜೂರು$_2$, ಹುಜೂರ್, ಹುಜೂರ (ನಾ). ೧. ರಾಜ; ಒಡೆಯ: ರಾಜಶ್ರೀ ದೊರೆಗಳು ತಮ್ಮ ಹುಜೂರು ಸಾಮದಿಕರು ಪಾರಪತೆಗಾರ ಕಸಬಿಗೌಡ (ಎಕ. XI, ಮೊಳಕಾ. ೨೫-೬೦; 1665); ಹುಜೂರ ಮೇಳದ ಪುಟ್ಟತಾಯಿ (ಎಕ. VIII, ತೀರ್ಥಹ. ೭೧-೧೩; 1671). **ಹಜೂರು$_2$**: ೧. ಬಹುಮಂದಿ ಪಟೇಲರುಗಳೂ . . . ಹಜೂರು ಅಪ್ಪಣೆಯನ್ನು ಜಾರೀ ಮಾಡುವುದಕ್ಕೆ ಉದ್ಯುಕ್ತರಾಗುವ ಅಮಾಲರನೇಕರನ್ನು ಹಂಸಿಸಿದರು (ಮಹಾವಂ. II, ೧೪). ೨. ದೊರೆ, ಅಧಿಕಾರಿ ಮುಂತಾದವರನ್ನು ಸಂಬೋಧಿಸುವ ಶಬ್ದ: ಶ್ರೀಕೃಷ್ಣರಾಜವಡೆಯರವರ ಪಾದಸೇವಕನಾದ ಹಜೂರು ವೋದೀಬಾನೆ ಸಾವಕಾರ (ಎಕ. XIV, ಹುಣಸೂ. ೧೪೫-೨; 1867). **ಹುಜೂರ್**: ೨. ಹುಜೂರ್, ದಯಮಾಡಿ ನಾಳಿನದೊಂದು ದಿವಸದ ಅವಧಿ ಕೊಟ್ಟರೆ ನಾನು ಆ ಕಳ್ಳರನ್ನು ಗೊತ್ತುಹಚ್ಚಿ ಕೊಡುವೆ (ಮುಂಬಯಿ. ೪-೨೦); ಹುಜೂರ್, ಅದಕ್ಕೆ ಅವಕಾಶ ಒದಗಲಿಲ್ಲ (ರಘರಾಜ. ೧೧). **ಹುಜೂರ**: ೨. "ಹುಜೂರ, ನನ್ನದೇ ಅಹುದು" ಎಂದು ದೃಢತೆಯಿಂದ ಉತ್ತರ ಕೊಟ್ಟ (ಜಮೀನ್ದಾ. ೧೧೯); ಅವು ಎಷ್ಟು ದಿವಸ ನೆರವಾಗುವುದು ಹುಜೂರ? (ಕೊತಡಾ. ೭೧). [<— ಅರ. ಹಿಂ. ಮರಾ. ಹುಜೂರ್]

ಹುಜೂರುಖಜಾನೆ (ನಾ). ಸರಕಾರದ ಬೊಕ್ಕಸ,— ಭಂಡಾರ: ಹುಜೂರು ಖಜಾನೆಗೆ ಐವಜು ಸಂದಾಯಮಾಡಿ ರಶೀದಿ ತರಿಸಿಕೊಳ್ಳುವದು (ಮುಖಾಪಂ. II, ೬೭).

[ಹುಜೂರು$_2$ + ಖಜಾನೆ]

ಹುಜೂರುಜಮಾಬಂದಿ, ಹುಜೂರ್‌ಜಮಾಬಂದಿ (ನಾ). ಕಂದಾಯ ವಸೂಲಿಯ ಅಧಿಕಾರಿಗಳ ಸಮಕ್ಷಮದಲ್ಲಿ ನಡೆಯುವ ಜಮಾಬಂದಿ: ಲೆಕ್ಕಗಳನ್ನು, ಅವುಗಳ ವಿಚಾರವಾಗಿ ಬರಬಹುದಾದ ತಕರಾರು ಅಹವಾಲುಗಳ ವಿಚಾರಣೆ ಮಾಡಿ, ಖಾಯಂ ಮಾಡುತ್ತಾರೆ. ಇದೇ ಹುಜೂರುಜಮಾಬಂದಿ (ಕೆಲನ. ೧೫೭); ಹುಜೂರು ಜಮಾಬಂದಿಯಲ್ಲಿ ಎಲ್ಲಾ ಶಾನುಬೋಗರ ಲೆಕ್ಕ ಚೆಕ್ಕಾದರೂ ನನ್ನೂರಿನ ಲೆಕ್ಕ ಇನ್ನೂ ಬಾಕಿ (ನಸನ್ನೂರು. ೧೫೨). **ಹುಜೂರ್‌ಜಮಾಬಂದಿ**: ಅವರು ಶಿವಮೊಗ್ಗಿಗೆ ಹುಜೂರ್‌ಜಮಾಬಂದಿಗೆ ಹೋಗಿದ್ದಾರೆ (ಎದರೇ. ೨೮). [ಹುಜೂರು$_2$ + ಜಮಾಬಂದಿ]

ಹುಜೂರುಶಿಕೆರೂಪಾಯಿ (ನಾ). ಹೈದರಾಬಾದುನಿಜಾಮಸರಕಾರದಲ್ಲಿ ಚಾಲ್ತಿಯಲ್ಲಿದ್ದ ನಾಣ್ಯ: ಹುಜೂರುಶಿಕೆರೂಪಾಯಿ ಅಂದರೆ (ಮೊಗಲಾಯಿ) ದಕ್ಷಿಣಹೈದರಾಬಾದನಿಜಾಮಸರಕಾರದವರ ನಾಣ್ಯಕ್ಕೆ ಅನ್ನುತ್ತಾರೆ (ಮುಂಬವ್ಯಾ. ೨೮೬ ಅಡಿಟಿ). [ಹುಜೂರು$_2$ + ಶಿಕೆ$_0$ (< ಸಿಕ್ಕಾ) + ರೂಪಾಯಿ]

ಹುಜ್ಜತ್ತಿ (ನಾ). ಒಂದು ಬಗೆಯ ಔಷಧೀಸಸ್ಯ: "ಕಾಚಂ-ಗೌಜು, ಹುಜ್ಜತ್ತಿ, ಕಾಡುಲವಣ" (ಓಷಧಿ.೨೮). [?]

ಹುಟಾರು (ನಾ). ತಡಿಕೆ; ತಟ್ಟಿ (?): ಮೆಳೆ ಸವರಿಸಿ ಮೆಳೆ ಒಳಗೆ ಒಂದು ಕೋಲನ್ನು ಕೋವಿ ಹೇರಿಕೊಳ್ಳುವ ಬಗ್ಗೆ ಕಟ್ಟಿ, ಅದರ ಮೇಲೆ ನನಗೂ, ಚನ್ನವೀರನಿಗೂ ಎರಡು ಸಲಾ ತಿರುಗಿಸಿ, ಎದೆ ಸಮಕ್ಕೆ ಹುಟಾರ ಕಟ್ಟಿ (ರಾಜೇಂದ್ರ. ೨೭೫). [?]

ಹುಟ್ಟಗೆ 'ಪುಟ್ಟಗೆ$_2$' ನೋ.

ಹುಟ್ಟಜೆ 'ಪುಟ್ಟಜ' ನೋ.

ಹುಟ್ಟಡಗಿಸು (ಕ್ರಿ). ಜನ್ಮವನ್ನೇ ನಾಶಮಾಡು; ಸಂಪೂರ್ಣವಾಗಿ ಧ್ವಂಸಮಾಡು: ನಾವು ಅವರನ್ನು ಹುಟ್ಟಡಗಿಸಬಹುದು (ದೌಲತ್. ೩೧೧); ಅವರ ಹುಟ್ಟಡಗಿಸುವುದೇ ತಮ್ಮ ಗುರಿ (ಯಕ್ಷಪ್ರ. ೧೫೦); ಈ ಅಪವಾದವನ್ನು ಹುಟ್ಟಡಗಿಸಲೇ ಬೇಕು (ಭೂರಾಣ. ೪೦). [ಹುಟ್ಟು$_2$ (< ಪುಟ್ಟು$_2$) + ಅಡಗಿಸು (< ಅಡಂಗಿಸು)]

ಹುಟ್ಟಡಗು (ಕ್ರಿ). ಹುಟ್ಟು ನಾಶವಾಗು,— ಸಂಪೂರ್ಣವಾಗಿ ಧ್ವಂಸವಾಗು: ಇವನನ್ನು ಶಿಕ್ಷಿಸಿದರೆ ವಿದ್ರೋಹದ ಹುಟ್ಟಡಗುತ್ತದೆ (ರಾಜ್ಯೋದ. ೧೮೭).

[ಹುಟ್ಟು$_2$ (< ಪುಟ್ಟು$_2$) + ಅಡಗು$_1$ (< ಅಡಂಗು$_1$)]

ಹುಟ್ಟಮೂಕ (ನಾ). ಹುಟ್ಟಿನಿಂದಲೇ ಮಾತನಾಡಲು ಆಗದವನು: ಹುಟ್ಟಮೂಕನೆಂದು ದಟ್ಟೀತು ಜನಮನ (ಸಿದ್ಧವು. ೪-೫೭). [< ಹುಟ್ಟು$_2$ + ಮೂಕ]

ಹುಟ್ಟರಿವು 'ಪುಟ್ಟಜಿವು' ನೋ.

ಹುಟ್ಟರೆ 'ಹುಟ್ಟಜೆ' ನೋ.

ಹುಟ್ಟಳಿ (ಕ್ರಿ).= ಹುಟ್ಟಡಗು: ಇಂಗ್ಲೀಷು ಹುಟ್ಟಳಿದು ಹೋಗುತ್ತದೆ (ದೇವೀಚಾ. ೨೨).

[ಹುಟ್ಟು$_2$ (< ಪುಟ್ಟು$_2$) + ಅಳಿ$_1$ (< ಅಲಿ$_1$)]

ಹುಟ್ಟಳಿಸು (ಕ್ರಿ). = ಹುಟ್ಟಡಗಿಸು: ಸರಯ ಹರಿ, ಅರಿಯನಿರಿ, ಹುಟ್ಟಳಿಸು ಹುಡಿಯಲ್ಲಿ (ಪಾಂಚಜ. ೫-೮). [ಹುಟ್ಟು$_2$ (< ಪುಟ್ಟು$_2$) + ಅಳಿಸು$_2$ (< ಅಲಿಯಿಸು)]

ಹುಟ್ಟಜೆ, ಹುಟ್ಟರೆ, ಹುಟ್ಟುಅರೆ (ನಾ). ಭೂಮಿಯ ಮೇಲಿರುವ ಸ್ವಾಭಾವಿಕವಾದ ಬಂಡೆ: ಕೊಟೂರ ದಾರಿಯ ಗುಡ್ಡದ ಹುಟ್ಟಜೆಯ ಮೇಲೆ ಹೋದ ವಾಮನಮುದ್ರೆಯ ಸರಿತದಲು (ಸೌಂಗಾ. IX,- ii, ೪೪೦-೧೯; 1419). **ಹುಟ್ಟರೆ**: ಬೆಟ್ಟದ ದಾರಿಗೆ ಬಡಗವತ್ತು ಹುಟ್ಟರೆ ಮೇಲೆ (ಎಕ. III, ತಿರುಮ. ೬೩-೪೫೮; 1748). **ಹುಟ್ಟುಅರೆ**: ತೆಂಕ ಹುಟ್ಟುಅರೆಗಳ ಮೇರೆಯ ಮಾಡಿಕೊಂಡು ನಡದು (ಎಕ. XII, ತುಮಕೂ. ೧೧-೬೦; 1426). [ಹುಟ್ಟು$_2$ (< ಪುಟ್ಟು$_2$) + ಅಜೆ$_1$]

ಹುಟ್ಟಾ (ಅ). ಹುಟ್ಟಿದಂದಿನಿಂದ; ಜನ್ಮಾರಭ್ಯ: ಹುಟ್ಟಾ ಊರು ಬಿಟ್ಟು ಗೊತ್ತಿಲ್ಲದ ಅವನು ಮಾಡುತ್ತಿದ್ದ ಸಾಹಸ ಆ ವಯಸ್ಸಿಗೆ ಸಾಮಾನ್ಯವೇನೂ ಅಲ್ಲ (ಹೂಸಕ್ಕ. ೩೨); ಕೆಲವೊಂದು ವಶುವಕ್ಷಿಗಳಿಗೆ ಕಲಾಕೃತಿಗಳಂತೆ ಕಾಣುವ ರಚನೆಗಳನ್ನು ಮಾಡುವ ಶಕ್ತಿಯು ಹುಟ್ಟಾ ಬಂದಿರುತ್ತದೆ (ಪ್ರಬುಧ. ೧೬). [< ಹುಟ್ಟು$_2$]

ಹುಟ್ಟಾಜ್ಯ (ನಾ). ಹುಟ್ಟುವಳಿ; ಉತ್ಪತ್ತಿ; ಆದಾಯ: ಈ ನಾಲ್ಕು ಠಾವಿನ ಹುಟ್ಟಾಜ್ಯದ ಅಯವತ್ತು ಹೊಂನನೂ ಪರ್ವತದ ಶ್ರೀಗಿರಿ ಮಲ್ಲಿಕಾರ್ಜುನದೇವರ XXX ಪ್ರೀತ್ಯರ್ಥವಾಗಿ (ಎಕ. VIII. ತೀರ್ಥಹ. ೩೩-೬೩; ಸು. 1430).

[ಹುಟ್ಟು$_2$ (< ಪುಟ್ಟು$_2$) + ಆಜ್ಯ$_0$ (< ಆದಾಯ)]

ಹುಟ್ಟಿ 'ಪುಟ್ಟಿ$_4$' ನೋ.

ಹುಟ್ಟಿಗೆ 'ಪುಟ್ಟಿಗೆ$_2$' ನೋ.

ಹುಟ್ಟಿಸು 'ಪುಟ್ಟಿಸು' ನೋ.

ಹುಟ್ಟು$_1$ 'ಪುಟ್ಟು$_1$' ನೋ.

ಹುಟ್ಟು$_2$ 'ಪುಟ್ಟು$_2$' ನೋ.

ಹುಟ್ಟು$_3$ 'ಪುಟ್ಟು$_3$' ನೋ.

ಹುಟ್ಟು$_4$ 'ಪುಟ್ಟಿ$_4$' ನೋ.

ಹುಟ್ಟುಅರೆ 'ಹುಟ್ಟಱೆ' ನೋ.

ಹುಟ್ಟುಕಟ್ಟಳೆ (ನಾ). ಆದಾಯದ ವಿಧಾನ; ಉತ್ಪನ್ನದ ವ್ಯವಸ್ಥೆ: ಆನೆವಳಿಯ ಸಿರಿಯಣನಾಯಕನು ತಂನ್ನ ಹುಟ್ಟುಕಟ್ಟಳೆಗೆ ಲೆಕ್ಕ ಮಾಡಿದ ಸ್ವಾಮಿಕಾರ್ಯ (ಕಾ. I. ೬೦-೮; 1462). [ಹುಟ್ಟು$_2$ (< ಪುಟ್ಟು$_2$) + ಕಟ್ಟಳೆ$_1$]

ಹುಟ್ಟುಕವಿ 'ಪುಟ್ಟುಂಗವಿ' ನೋ.

ಹುಟ್ಟುಕಸುಬು (ನಾ). ವಂಶಪಾರಂಪರ್ಯವಾಗಿ ಬಂದ ವೃತ್ತಿ: ಸಾಕ್ರಟೀಸನು ಹುಟ್ಟುಕಸುಬಿನಲ್ಲಿ ಬಹುಕಾಲವಿದ್ದಂತೆ ಕಾಣುವುದಿಲ್ಲ (ಸೋಕ್ರಮ. ೧೬).

[ಹುಟ್ಟು$_2$ (< ಪುಟ್ಟು$_2$) + ಕಸುಬು (< ಕಸಬು)]

ಹುಟ್ಟುಕಿವುಡ (ನಾ). ಹುಟ್ಟಿನಿಂದಲೇ ಕಿವಿ ಕೇಳಿಸದವನು; ಜನ್ಮಾರಭ್ಯ ಕಿವುಡಾಗಿರುವವನು: (ಕ). [ಹುಟ್ಟು$_2$ (< ಪುಟ್ಟು$_2$) + ಕಿವುಡ (< ಕಿವುಂಡ)]

ಹುಟ್ಟುಕಿವುಡಿ (ನಾ). ಹುಟ್ಟಿನಿಂದಲೇ ಕಿವಿ ಕೇಳಿಸದವಳು; ಜನ್ಮಾರಭ್ಯ ಕಿವುಡಾಗಿರುವವಳು: (ಕ). [ಹುಟ್ಟುಕಿವುಡ + - ಇ$_2$]

ಹುಟ್ಟುಕುರುಡ 'ಪುಟ್ಟುಂಗುರುಡ' ನೋ.

ಹುಟ್ಟುಕುರುಡಿ 'ಪುಟ್ಟುಂಗುರುಡಿ' ನೋ.

ಹುಟ್ಟುಕೂದಲು (ನಾ). ಮಗುವು ಹುಟ್ಟಿದಾಗ ಇರುವ ತಲೆಕೂದಲು.

ಹುಟ್ಟುಕೂದಲು ತೆಗೆಸು = ಮೊದಲ ಬಾರಿಗೆ ಮಗುವಿನ ತಲೆಕೂದಲನ್ನು ತೆಗೆಸು: ಮಗುವಿನ ಹುಟ್ಟುಕೂದಲು ತೆಗೆಸಲು ಅವರುಗಳು ಮನದೇವರಿರುವ ಹಳ್ಳಿಗೆ ಹೋಗಿದ್ದಾರೆ (ರೂಢಿ). [ಹುಟ್ಟು$_2$ (< ಪುಟ್ಟು$_2$) + ಕೂದಲು (< ಕೂಂದಲ್)]

ಹುಟ್ಟುಗಟ್ಟು (ಕ್ರಿ). ಉಂಟಾಗು; ಜನ್ಮ ತಾಳು: ಶೂನ್ಯದಲ್ಲಿ ಹುಟ್ಟುಗಟ್ಟಿತು ಹದುಳದೊಂದು ಹುಣ್ಣೆಮೆ (ಉಯ್ಯಾಲೆ. ೧೬-೧೧). [ಹುಟ್ಟು$_2$ (< ಪುಟ್ಟು$_2$) + ಕಟ್ಟು$_1$]

ಹುಟ್ಟುಗನ್ನಡ (ನಾ). ೧. ಹುಟ್ಟಿನಿಂದ ಬಂದ ಕನ್ನಡ; ತಾಯಿನುಡಿಯಾದ ಕನ್ನಡಭಾಷೆ: ಇವರ ಪ್ರಯತ್ನವನ್ನೂ ಇವರ ಪಾಂಡಿತ್ಯದ ಫಲವನ್ನೂ ಮೆಚ್ಚತಕ್ಕವರು ಯಾರು? . . . ಹುಟ್ಟುಗನ್ನಡವನ್ನೂ ಮರೆಯುತ್ತಾ ದೊಡ್ಡಮನುಷ್ಯರಾಗುವ ಇವರ ಸಹಪಾಠಿಗಳೇ ಅಲ್ಲವೇ? (ಕಲಿಸಾ.೫೫). ೨. ಅಚ್ಚಗನ್ನಡ; ಶುದ್ಧಕನ್ನಡ: ನಿನ್ನ ಹುಟ್ಟುಗನ್ನಡದ ಷಟ್ಪದೀಛಂದಸ್ಸು ನೂರಾರುವರ್ಷಗಳು ಅನುಕರಣೀಯವಾಗುತ್ತದೆ (ತುಂಗಭ. ೧೨೪). [ಹುಟ್ಟು$_2$ (< ಪುಟ್ಟು$_2$) + ಕನ್ನಡ$_1$]

ಹುಟ್ಟುಗಲ್ಲು (ನಾ). = ಹುಟ್ಟಱೆ: ವಾಮನಮುದ್ರೆ ತಿದ್ದಿಯಿರುವ ಹುಟ್ಟುಗಲ್ಲು (ಎಕ. XIV. ಮೈಸೂರು. ೧೧೫-೩೫೮; 1674); ಮೊರಟಿಯ ಪಡುವಣ ಪಾರ್ಶ್ವದಲ್ಲಿ ಹುಟ್ಟುಗಲ್ಲು (ಎಕ. III. ಶ್ರೀರಂಗ. ೧೪-೧೩೬; 1686).

[ಹುಟ್ಟು$_2$ (< ಪುಟ್ಟು$_2$) + ಕಲ್ಲು (< ಕಲ್$_3$)]

ಹುಟ್ಟುಗುಟ್ಟು (ಕ್ರಿ).= ಹುಟ್ಟಡಗಿಸು: ಕಾಲನನಟ್ಟಿ ಕಾಮನ ಮೆಟ್ಟಿ ದುಷ್ಕರ್ಮಜಾಲ ವೆಲ್ಲವ ಹುಟ್ಟುಗುಟ್ಟಿ (ಭರಚಿ. ೭೦-೬೫). [ಹುಟ್ಟು$_2$ (< ಪುಟ್ಟು$_2$) + ಕುಟ್ಟು$_1$]

ಹುಟ್ಟುಗುಣ (ನಾ).ಹುಟ್ಟಿನಿಂದಲೇ ಬಂದ ನೈಜಗುಣ,— ಸ್ವಭಾವ: ಮಕ್ಕಳ ಹುಟ್ಟುಗುಣಗಳಲ್ಲಿ ಹಲವನ್ನು ತಿದ್ದಿ ಮಾರ್ಪಡಿಸಬೇಕು (ಶಿಕ್ಷದ. ೩೨); ಹುಟ್ಟುಗುಣ ಸುಟ್ಟರೂ ಹೋಗದು (ಗಾದೆ). [ಹುಟ್ಟು$_2$ (< ಪುಟ್ಟು$_2$) + ಗುಣ]

ಹುಟ್ಟುಗುರುಡ 'ಪುಟ್ಟುಂಗುರುಡ' ನೋ.

ಹುಟ್ಟುಗೆ 'ಪುಟ್ಟಿಗೆ$_2$' ನೋ.

ಹುಟ್ಟುಗೆಡಿಸು (ಕ್ರಿ). ಸಂಪೂರ್ಣವಾಗಿ ನಾಶಮಾಡು: ದ್ರೋಣ ಅಶ್ವತ್ಥಾಮರು ಕೋಪಿಸಿಕೊಂಡರೆ ಈ ಭೂಮಂಡಲವೆಲ್ಲವನ್ನೂ ಹುಟ್ಟುಗೆಡಿಸಬಲ್ಲರು (ಭೀಷ್ಮಚಿ. ೧೦೦).

[ಹುಟ್ಟುಗೆಡು + - ಇಸು$_3$]

ಹುಟ್ಟುಗೆಡು (ಕ್ರಿ). ೧. ಜನ್ಮವಿಲ್ಲದಂತಾಗು; ಹುಟ್ಟು ಇಲ್ಲದಂತಾಗು: ಕೂಡಲ ಸಂಗಮದೇವಯ್ಯ ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು (ಬಸವ. ೫೨೨); ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯ (ಮಹಾದೇ. ಬ. ೮೮-೨೧೩). ೨. ಸ್ವರೂಪವು ಹಾಳಾಗು; ರೂಪ ಬದಲಾಗು: ಹುಟ್ಟುಗೆಟ್ಟ[ಪಾಠಾಂ. ಹುಟ್ಟಿಜಂಗೆಟ್ಟ, ಹುಟ್ಟಿದಂದುಟ್ಟ] ಹುಟ್ಟುಗೆಯಂತೆ (ಲೀಲಾವ. ೨-೧೧೬ ವ); ಬಿಸುಗದಿರನ ಹುಟ್ಟುಗೆಟ್ಟುದೊ ರೋಮಶಋಷಿಕಲ್ಪ ಕೋಟಿ ತೀರ್ವನಕ (ವೋಪತ. ೨೭-೬೩). ೩. ಇಲ್ಲದಂತಾಗು; ಹುಟ್ಟಡಗು: ಜಂಬ್ಯಾದಿಲೇಹ್ಯ . . . ತೆಗೆದುಕೊಳ್ಳಲು ಬಹುಮೂತ್ರವ್ಯಾಧಿ ಹುಟ್ಟುಗೆಟ್ಟು ಹೋಗುವುದು (ಸಕವೃ. ೩೯೨). [ಹುಟ್ಟು$_2$ (< ಪುಟ್ಟು$_2$) + ಕೆಡು$_1$]

ಹುಟ್ಟುಗೊಡ್ಡು (ನಾ). ಜನ್ಮದಿಂದಲೇ ಬಂಜೆ,— ಗೊಡ್ಡು: ಹುಟ್ಟುಗೊಡ್ಡು ಮಕ್ಕಳ ಗರ್ಭವ ಬಲ್ಲುದೆ (ಮೋಳಿಮಾ. ೨೩-೮೯).

[ಹುಟ್ಟು$_2$ (< ಪುಟ್ಟು$_2$) + ಗೊಡ್ಡು$_1$]

ಹುಟ್ಟುತನ (ನಾ). ಹುಟ್ಟಿನಿಂದಲೇ ಬಂದುದು: ಹುಟ್ಟುತನದ ಮೌನ ಬಿಟ್ಟನು ಕಂಡು ಮಲ್ಲಯ್ಯನ ತಟ್ಟನೆ ಅವನಡಿ ಹಿಡಕೊಂಡನು (ಸಿದ್ಧಪು. ೩-೬೮).

[ಹುಟ್ಟು$_2$ (< ಪುಟ್ಟು$_2$) + - ತನ]

ಹುಟ್ಟುದರಿದ್ರ (ನಾ). ಹುಟ್ಟಿನಿಂದಲೇ ಬಡವನಾದವನು: ಹುಟ್ಟುದರಿದ್ರಗೆ ಬಹಳ ಸಂಪದವರೆ ನೆಟ್ಟನೆ ಕೊರ್ವುವಂದದಲಿ (ಮೋಪತ. ೧೭-೫).

[ಹುಟ್ಟು$_2$ (< ಪುಟ್ಟು$_2$) + ದರಿದ್ರ]

ಹುಟ್ಟುಬಂಜೆ (ನಾ). ಜನ್ಮತಃ ಬಂಜೆಯಾದವಳು: ಹುಟ್ಟುಬಂಜೆಗೆ ಫಲವಾದೀತೆ (ಪುರಂದ. ೧-೧೫೭-೯); ಹುಟ್ಟುಬಂಜೆಯ ಮಕ್ಕಳೆವರೊಳು ನಾನೆ ಕಡೆಹುಟ್ಟಿನವನೆಂದು ಸುರುವವಿವೇಕಿಯಂತೆ (ಕೈಕವ. ೫-೨೪-೧). [ಹುಟ್ಟು$_2$ (< ಪುಟ್ಟು$_2$) + ಬಂಜೆ]

ಹುಟ್ಟುಬಣ್ಣ (ನಾ). ಜನ್ಮದಿಂದಲೇ ಬಂದ ಬಣ್ಣ: ಹುಟ್ಟುಬಣ್ಣ ಒಂದಱೊಳಗೆ ಕಟ್ಟುಬಣ್ಣ ಒಂದುಮಾಡಿ (ಕನಕ. ೨೩೧-೧); ಮಿಯದ ಕಾಗೆಗೆ ಮಿಂದೆದ್ದ ಕಾಗೆಗೆ ಅಂತರವಾವುದು . . . ತೋರ್ಪುದು ಕಪ್ಪಗೆ ಹುಟ್ಟುಬಣ್ಣವು ಗಟ್ಟಿ ಕೇಳಿ (ಇಂಚಾಪ. ೨೩೭-೭೫). [ಹುಟ್ಟು$_2$ (< ಪುಟ್ಟು$_2$) + ಬಣ್ಣ]

ಹುಟ್ಟುಬುದ್ಧಿ (ನಾ). ಜನ್ಮದಿಂದಲೇ ಉಂಟಾಗಿರುವ ಅರಿವು: ಅವುಗಳಿಗೆ ತಮ್ಮನ್ನು ತಮ್ಮ ತತ್ತಿಗಳನ್ನು ಸಂರಕ್ಷಿಸಿಕೊಳ್ಳುವಷ್ಟು ಹುಟ್ಟುಬುದ್ಧಿಯುಂಟು (ಮುಂಬಯಿ. ೪-೧೧೫). [ಹುಟ್ಟು$_2$ (< ಪುಟ್ಟು$_2$) + ಬುದ್ಧಿ]

ಹುಟ್ಟುಮಚ್ಚೆ (ನಾ). ಹುಟ್ಟಿದಾಗಿನಿಂದ ಇರುವ ಮಚ್ಚೆ; ಸಂಗಾತಿ: "ಚಟುಲಃ, ಕಾಲಕಃ, ಪಿಪ್ಪುಃ, ತಿಲಕಃ, ತಿಲಕಾಲಕಃ -೫ ತಿಲಕಾಕಾರಗಳಾದ ಕರೀಮಚ್ಚೆಗಳ ಹೆಸರು. ಸಂಗಾತಿಮಚ್ಚೆ, ಹುಟ್ಟುಮಚ್ಚೆ" (ಸಿದ್ಧಾಂತಿ. ೧೮೨). [ಹುಟ್ಟು$_2$ (< ಪುಟ್ಟು$_2$) + ಮಚ್ಚೆ$_1$]

ಹುಟ್ಟುಮನೆ (ನಾ). ಜನ್ಮ ತಳೆದ ಮನೆ; ತವರುಮನೆ: ರಾಮಪ್ಪನು ತನ್ನ ಹುಟ್ಟುಮನೆಯನ್ನು, ಹುಟ್ಟೂರನ್ನು ಬಿಟ್ಟುಬಂದುದು ಕುಟುಂಬದೊಳಗಿನ ಕಲಹ ದಿಂದಾಗಿಯೇ (ಒಡ್ಡಿಯ. ೧೬); ಹುಟ್ಟುಮನೆ ಏಕಾದಶಿ, ಕೊಟ್ಟ ಮನೆ ಗೋಕುಲಾಷ್ಟಮಿ (ಗಾದೆ). [ಹುಟ್ಟು$_2$ (< ಪುಟ್ಟು$_2$) + ಮನೆ]

ಹುಟ್ಟುಮರುಳ (ನಾ). ಜನ್ಮತಃ ತಿಳಿಗೇಡಿಯಾದವನು: ಕನಸಿನ ಅಂಜನದಿಂದ ಜೀವಿತದ ನಿಧಿಯನ್ನು ಕಂಡುಕೊಳ್ಳಬೇಕೆನ್ನುವ ಹುಟ್ಟುಮರುಳರ ಜಾತಿಯವರೆ ಸೈ (ವಿಚಾಮಂ. ೭೨). [ಹುಟ್ಟು$_2$ (< ಪುಟ್ಟು$_2$) + ಮರುಳ]

ಹುಟ್ಟುಮರುಳು (ನಾ). = ಹುಟ್ಟುಮರುಳ: ಹುಟ್ಟುಮರುಳಿವನೆಂದು ಮೂಕೋನ್ಮತ್ತ ಜಡನೆಂದು ಹೊಟ್ಟೆಗಿಕ್ಕುವರುಂಡು ಮಿಕ್ಕುದ (ನಿಭಾಗ. ೫-೬-೧೨).

[ಹುಟ್ಟು$_2$ (< ಪುಟ್ಟು$_2$) + ಮರುಳು (< ಮರುಳ್$_2$)]

ಹುಟ್ಟುವೆಟ್ಟು (ನಾ). ಪೂರ್ವಾಪರ; ಸಮಗ್ರವಿಷಯ: ಆ ಬಾಲಕನ

ಮುಖದಿಂದಲೇ ಅವನ ಹುಟ್ಟುಮೆಟ್ಟೂ ತಿಳಿದು ಚಿಂತಿಸಿ ವಿಚಾರಿಸದೇ ಅನ್ಯಾಯದಿಂ ತಂಗಿಯಂ ಕೊಂದೆನಲ್ಲಾ ಎಂದು ದುಃಖಿಸಿ (ಪುರುಚ. ೨೬೯).

ಹುಟ್ಟುಮೆಟ್ಟಾಗಿ = ಸಂಪೂರ್ಣವಾಗಿ; ಸಮಗ್ರವಾಗಿ: ದಂಣಾಯ್ಕರ ಮಕ್ಕಳು ಮಕ್ಕಳಿಗೆ ಸಲುವಂತಾಗಿ ಹುಟ್ಟುಮೆಟ್ಟಾಗಿ ಸರ್ವಮಾನ್ಯವಾಗಿ ಕೊಟ್ಟು (ಎಕ. X; ಹಾಸವ. ೧೮೨-೨೮; 1314). [ಹುಟ್ಟು$_2$ (< ಪುಟ್ಟು$_2$) + ಮೆಟ್ಟು$_2$]

ಹುಟ್ಟುವಣ (ನಾ). ಅಂಕುರಿಸುವಿಕೆ; ಮೊಳೆಯುವಿಕೆ: ಹುರಿದ ಚಣಕ ತಿನಲಿಕೆ ಬಾಹದಲ್ಲಾದೆ ಹುಟ್ಟುವಣಿಲ್ಲದ ಹಾಗೆ (ಚಿದಾವ. ೪೪-೩).

[ಹುಟ್ಟು$_2$ (< ಪುಟ್ಟು$_2$) + - ಅಣ]

ಹುಟ್ಟುವಳಿ (ನಾ). ಮೂಲಆದಾಯ; ಉತ್ಪತ್ತಿ; ವರಮಾನ: ನಾಯಕವಾಡಿಗಳು . . . ಅನುಭವಿಸಿ ಬಹ ಹುಟ್ಟುವಳಿ (ಎಕ. VII, ಶಿವಮೊ. ೭೧-೩೨; 1431); ಈ ಗ್ರಾಮಗಳಲ್ಲಿ ಯೆಮ್ಮ ಹೆಚ್ಚು ಹುಟ್ಟುವಳೀಯಾದಾಗ್ಯೂ ನಿರುಪಾಧಿಕ ಸರ್ವಮಾನ್ಯವಾಗಿ (ಎಕ. III, ಮೈಸೂರು. ೨-೧೪; 1822); ಗ್ರಾಮದ ಹುಟ್ಟುವಳಿ ವಸೂಲಿಹಣದಲ್ಲಿ ಸಂಬಳ ಬಟವಾಡೆ ಮಾಡುವ ಹುಕುಂ ಮಂಜೂರಾಗಿ (ಗ್ರಾಮಾಶ. ೭). [ಹುಟ್ಟು$_2$ (< ಪುಟ್ಟು$_2$) + - ವಳಿ$_3$]

ಹುಟ್ಟುಶ್ವಾಸ (ನಾ). ಶ್ವಾಸಕೋಶಕ್ಕೆ ಸಂಬಂಧಿಸಿದಂತೆ ಉಂಟಾಗುವ ಒಂದು ಬಗೆಯ ರೋಗ: ಭಾವನಾಲವಣ . . . ಸೇಮಿಸಲು ಹುಟ್ಟುಗೂರಲು, ಹುಟ್ಟುಶ್ವಾಸವು ಪರಿಹರ (ಸಚಿ. ೨೨೭). [ಹುಟ್ಟು$_2$ (< ಪುಟ್ಟು$_2$) + ಶ್ವಾಸ]

ಹುಟ್ಟುಹ 'ಪುಟ್ಟುಹ' ನೋ.

ಹುಟ್ಟುಹಬ್ಬ (ನಾ). ಜನ್ಮದಿನದಂದು ಆಚರಿಸುವ ಸಂತೋಷಸಮಾರಂಭ: ಸ್ವಾತಂತ್ರ್ಯದ ಹುಟ್ಟುಹಬ್ಬ ಕರೆವುದು ಸಾವಿರದ ಕಬ್ಬ (ಸೂರ್ಯಪಾ.೧೧೭-೧); ಅಂದು ಕಾರಹುಣ್ಣಿಮೆಯಾಗಿದ್ದಿತು. ಅಂದೆ ನನ್ನ ಹುಟ್ಟುಹಬ್ಬ (ಫಲಸಂ. ೧೨).

[ಹುಟ್ಟು$_2$ (< ಪುಟ್ಟು$_2$) + ಹಬ್ಬ (< ಪರ್ವ)]

ಹುಟ್ಟುಹಾಕು$_1$ (ಕ್ರಿ). ೧. ಬೀಜ ಅಥವಾ ಸಸಿಯನ್ನು ನೆಡು, — ಊರು: ಇಲ್ಲೊಂದು ಸೇಬಿನ ಗಿಡ ಹುಟ್ಟುಹಾಕಿ ಬರುತ್ತೇನೆ (ಯೋಧಪು. ೧೭). ೨. (ಆಲಂ) ಜಗಳವನ್ನು ತಂದುಹಾಕು, — ತೊಡಗಿಸು: ಅವನು ಎರಡು ಪಕ್ಷದವರಿಗೂ ಹುಟ್ಟುಹಾಕಿ ಮನಸ್ತಾಪ ಬೆಳೆಸಿದ್ದಾನೆ (ರೂಢಿ).

[ಹುಟ್ಟು$_2$ (< ಪುಟ್ಟು$_2$) + ಹಾಕು (< ಪಾಯ್ಕು$_1$)]

ಹುಟ್ಟುಹಾಕು$_2$ (ಕ್ರಿ). ದೋಣಿ ಚಲಿಸುವಂತೆ ಹುಟ್ಟುಗೋಲಿನಿಂದ ನೀರನ್ನು ತಳ್ಳು: ಹುಟ್ಟುಹಾಕಿ ಪಟ ಹಾರಿಸಿ ಯಾನ ಮಾಡುವ ದೋಣಿಯನ್ನೇ ಏರ್ಪಾಟು ಮಾಡಿಕೊಂಡೆವು (ಪಸುಪೂ. ೩೩೦). [ಹುಟ್ಟು$_2$ (< ಪುಟ್ಟು$_2$) + ಹಾಕು (< ಪಾಯ್ಕು$_1$)]

ಹುಟ್ಟುಹಾಡು (ನಾ). ಬದುಕಿನ ಗೀತೆ; ಜೀವನದ ಹಾಡು; ಜೀವನಗಾಥೆ: ಪಟ್ಟ ಪಾಡೆಲ್ಲವು ಹುಟ್ಟುಹಾಡಾಗುತ ಹೊಸದಾಗಿ ರಸವಾಗಿ ಹರಿಯುತಿವೆ (ಸಪೀಗೀ. ೧-೭). [ಹುಟ್ಟು$_2$ (< ಪುಟ್ಟು$_2$) + ಹಾಡು$_2$ (< ಪಾಡು$_2$)]

ಹುಟ್ಟೂರು (ನಾ). ಜನ್ಮ ತಳೆದ ಊರು; ಹುಟ್ಟಿದ ಊರು: ಮೈಸೂರೇ ನನ್ನ ಹುಟ್ಟೂರು ಎಂದು ಮಗದೊಬ್ಬರ ಅಭಿಮತ (ರೂಪಸಂ. ೨೯); ವೇಷ ಮರೆಯಿಸಿ ನಟ್ಟರುಳು ಹುಟ್ಟೂರನ್ನು ಬಿಟ್ಟಿನು (ಮುಣಸ. ೫). [ಹುಟ್ಟು$_1$ (< ಪುಟ್ಟು$_1$) + ಊರು$_2$ (< ಊರ್)]

ಹುಡಕೆ, ಹುಡಿಕೆ (ನಾ). ಕರಂಡ; ಭರಣಿ: ಚೈತ್ಯಾಲಯದ ತಾಮ್ರದ ಹುಡಕೆಯ ತುದಿನ್ನಿಲೆಯ ಆದಿನಾಥಸ್ವಾಮಿಗಳ ಪೂಜೆಗೆ (ಸೌಂವಿ. ೧೯೨, ಕಾರ್ಕಳ. ೫೨೯-೬೬; 1520).

ಹುಡಿಕೆ: ೧. 'ಹುಡಿಕೆಕಾರಕ' ಪರಾ. ೨. ಬುಟ್ಟಿ: 'ಹುಡಿಕೆವಲೆ' ಪರಾ.

[< ಪುಡಿಕೆ]

ಹುಡದಿ (ನಾ). (ಊಕ) ೧. ಗೊಂದಲ; ಗಲಾಟೆ: ಎಳೆಯ ಬಿಸಲಾಗ ಹುಡದೀಯ ಹಾಕೂವ ಕಂದ (ಗರಡಿ. ೯೮); ದಿನವೆಲ್ಲ ಮನೆಯಲ್ಲಿ ಅವರ ಹುಡದಿ ಇದ್ದದ್ದೇ (ಸ್ವತಚ. ೩೯೮). ೨. ಹುಡುಗಾಟಿಕೆ; ಚೆಲ್ಲಾಟ: ಹುಡದೀಯ ಬಿಟ್ಟು ಅಡಿಗಡಿ ಮುರಕದ ನಡಿಗೀಯ ಹಿಡಿದು ದಿನವೇಸ ಕೋಲ (ಮೂರ್ತಿಕಾ. ೪೧-೧೧).

ಹುಡದಿಯಾಡು = ಗದ್ದಲಮಾಡು; ಗೊಂದಲಮಾಡು: ಒಳಗೆಲ್ಲ . . . ಮಂಗ ಹುಡದಿಯಾಡಿದವು (ಜಸಗೀ. ೩೮). **ಹುಡದಿ ಹಾಕು** = ಹುಡದಿಯಾಡು: ನೀವು ಹೀಗೆ ಹುಡದಿ ಹಾಕುವದರೊಳಗೆ ಎಲ್ಲಿಯಾದರೂ ಬೆಂಕಿಯ ಕುಣಿಯಲ್ಲಿ ಬಿದ್ದು ಮೈಸುಟ್ಟು ಕೊಂಡೀರಿ (ಕಲಿಕು. ೧೩೫); ಹೀಂಗ ಹುಡದಿ ಹಾಕಿದರ ನಾಳೆ ಭರಮು ಹ್ಯಾಂಗ ಸುಮ್ಮನೆ ಇದ್ದಾನು? (ನಿಸರ್ಗ. ೧೭). [ದೇ. ‖ ಮರಾ. ಹುಡದೀ]

ಹುಡಹಾವು (ಕ್ರಿ). ಗಾಬರಿಯಿಂದ ಓಡಾಡು; ಪರದಾಡು: ಹೆಂಡರೀ ಮಕ್ಕಳೆಲ್ಲರುಂ ಸತ್ತುಹೋಹಂತಾಯಿತೆಂದೆನುತ ಬಾಯಂ ಬಿದುತ್ತೆ ಮದ್ದಳೆಯ ಹೊಕ್ಕಿಲಿಯಂತಿರತ್ತಿತ್ತ ಹುಡ [ಪಾಠಾಂ.ಡು]ಹಾವುತಿರ್ದರಾಗ (ಸಮ್ಮೇ. ೮-೫೩); ಕೊಲೆಗಳ್ಕಿ ತಡೆಯದಿರ್ದವರು ಮದ್ದಳೆಯ ಹೊಕ್ಕಿಲಿಯಂತೆ ಹುಡಹಾವುತ್ತಿರ್ದರಾಗ (ನೇಮಿಸಂ. ೨೮-೧೩೮). [?]

ಹುಡಾಯಿಸು (ಕ್ರಿ). ಚಡಪಡಿಸು (?): ಸ್ನಾನಕ್ಕೆಂದು ಸಿದ್ಧವಾಗಿದ್ದ ನೀರನ್ನು ವಿಜಯದಾಸರು ನೀರಿಗಾಗಿ ಹುಡಾಯಿಸುತ್ತಿದ್ದ ಒಂದು ಕತ್ತೆಗೆ ಕುಡಿಸಿಬಿಟ್ಟರು (ಕಛವಿ. ೪೧೭). [? + - ಇಸು$_5$]

ಹುಡಿ 'ಪುಡಿ' ನೋ.

ಹುಡಿಕೀಲುಗ (ನಾ). ಒಂದು ಬಗೆಯ ಪಕ್ಷಿ: ಲೊಕ್ಕಿಗನು ಹುಡಿಕೀಲುಗನು ಹಾಲ್ಕಕ್ಕಿ ಕೋಗಿಲೆ ಕೋದವನ ಕುಕ್ಕುಮಾಯಿಯ ಕೆಂಡವಕ್ಕಿಗಳವಜೊಳೊಪ್ಪಿದುದು (ಸಾಳ್ವಭಾ. ೫-೨೨). [?]

ಹುಡಿಕೆ 'ಹುಡಕೆ' ನೋ.

ಹುಡಿಕೆಕಾರಕ (ನಾ). ಭರಣಿ, ಕರಂಡ ತಯಾರಿಸುವ ಕೈಕೆಲಸಗಾರರ ಮೇಲೆ ಹಾಕುವ ತೆರಿಗೆ: ಹುಡಿಕೆಕಾರಕದಿಂದ ಜನ ೨ ಕ್ಕೆ ಗ ೧೧೨ ಹಂಬುಗಾರಕದಿಂದ ಜನ ೨ ಕ್ಕೆ ಗ ೧೮೩ (ಎಕ. VIII, ತೀರ್ಥಪ. ೯೫-೬೨; 1709).

[ಹುಡಿಕೆ (< ಹುಡಕೆ) + ಕಾರಕ$_1$]

ಹುಡಿಕೆವಲೆ (ನಾ). ಬುಟ್ಟಿಯಾಕಾರದ ಒಂದು ಬಗೆಯ ಬಲೆ: ಗಾಡವಲೆ ಗೂಢವಲೆ ಹು[ಪಾಠಾಂ. ಮು]ಡಿಕೆವಲೆ ಮಂದಾಸುವಲೆಯ ಹೊಱಗಳ ಮೊತ್ತಮಂ ಕಂಡನಾದಯ್ಯನು (ಅಸಪು. ೩-೧೩); (ಪಚಕಾ.೫-೬ ನೋ); ಎರಳೆವಲೆ ಹಂದಿವಲೆ ಹೊಯ್ಲೆ ಹರಹುವಲೆಗಳೆಳೆವಲೆ ಹುಡಿಕೆವಲೆ ಮರೆವಲೆಗಳು (ಸಾಳ್ವಭಾ. ೫-೧೯).

[ಹುಡಿಕೆ (< ಹುಡಕೆ) + ಬಲೆ$_1$]

ಹುಡಿಕ್ಕೆಬತ್ತ (ನಾ). ಒಂದು ಬಗೆಯ ಬತ್ತ: ಕೆಱೆಯ ಪಂಚವೇಸ್ವರದೇವರಿಗೆ ಬಿಟ್ಟ ಕಾಡಲಹಳ್ಳಿಯಲಿ ಅಂತು ಹುಡಿಕ್ಕೆಬತ್ತಕ್ಕೆ ಬಿಟ್ಟ ದೇವದಾನದ ಸೇವೆ (ಎಕ. VI, ಚಿಕ್ಕಮ. ೬೨-೪೨; 1058 ?). 'ಹುಡುಕಳನಿ' ಪರಾ. [ಹುಡಿಕ್ಕೆ? + ಬತ್ತ]

ಹುಡಿಗಲ್ಲು (ನಾ). ಸಣ್ಣ ಕಲ್ಲು; ಪುಡಿಗಲ್ಲು: ಹುಡಿಗಲ್ಲು ನಿಡುಗಲ್ಲು ಬಡಿಗಲ್ಲು ಭರಹಾಸರೆಗಲ್ಲು (ಸವಮೋ. ೬೨-೩೩). [ಹುಡಿ (< ಪುಡಿ) + ಕಲ್ಲು (< ಕಲ್$_3$)]

ಹುಡಿಗಳೆ (ಕ್ರಿ). ಪುಡಿಮಾಡು: ಗಿರಿತರುವ್ರಜಗಳನು ಹುಡಿಗಳೆದು ಬಿಡದೆ ಸೀಳುತ ಕೊಚ್ಚಿ ಬಿಸುಡುತ (ಕಾಖಿರಾ. ೩೫-೧೪). [ಹುಡಿ (< ಪುಡಿ) + ಕಳೆ$_1$]

ಹುಡಿಗುಟ್ಟು 'ಪುಡಿಗುಟ್ಟು' ನೋ.

ಹುಡಿಗೂಡಿಸು 'ಪುಡಿಗೂಡಿಸು' ನೋ.

ಹುಡಿಗೆ 'ಹುಡುಗೆ' ನೋ.

ಹುಡಿಗೆದಱು (ಕ್ರಿ). ಧೂಳೆಬ್ಬಿಸು: ತಪ್ಪಿ ಮೈಯಲಿ ಬಿದ್ದ ಗಿರಿ ಸಿಡಿದುಪ್ಪರಿಸಿ ಹುಡಿಗೆದಱಿದವು (ತೊರಾ. ೪-೪-೨೧). [ಹುಡಿ (< ಪುಡಿ) + ಕೆದಱು$_1$ (< ಕೆದಱ್$_1$)]

ಹುಡಿಗೆಯ್ 'ಪುಡಿಗೆಯ್' ನೋ.

ಹುಡಿಗ್ಗೆ 'ಪುಡಿಗೆಯ್' ನೋ.

ಹುಡಿಬಡಿ (ಕ್ರಿ). ಚೂರು ಚೂರಾಗುವಂತೆ ಹೊಡೆ; ಧ್ವಂಸಮಾಡು: ಕುಡಿವವು ಸಮುದ್ರಾದಿ ಸಕಲಾಂಬುಜಾಲಮಂ ಹುಡಿಬಡಿವೆವಮರಾಧರಾದಿ ಸಕಲಾದ್ರಿಗಳನು (ಚಿಬಪು. ೪೨-೮). [ಹುಡಿ (< ಪುಡಿ) + ಬಡಿ$_1$]

ಹುಡಿಬಿಡು (ಕ್ರಿ). ಕುಟ್ಟೆಹಳು ಹಿಡಿ; ಟೊಳ್ಳು ಬೀಳು: ವಾತಪಿತ್ತಶ್ಲೇಷ್ಮಗಳು ತಂತಮ್ಮ ಚೈತನ್ಯವ ಕಾಣಿಸದೆ ಆ ಶರೀರವಂ ಹುಡಿಬಿಟ್ಟ ಮರದ ಹಾಗೆ ಬೆರತು . . . ಮರಣವನ್ಮೆದುವನು (ಸಚಿ. ೬೫೮). [ಹುಡಿ (< ಪುಡಿ) + ಬಿಡು$_1$]

ಹುಡಿಮುಸಗು (ಕ್ರಿ). = ಹುಡಿಗೆದಱು: ಪದಹತಿಗೆ ಗಿರಿ ಹುಡಿಮುಸಗಿದವು (ತೊರಾ. ೪-೪-೨೧). [ಹುಡಿ (< ಪುಡಿ) + ಮುಸಗು]

ಹುಡಿಮಾತು (ನಾ). ಸಣ್ಣ ಸಣ್ಣ ಮಾತು; ಕಿರುನುಡಿ: ರಂಗಸ್ಥಳದಲ್ಲಿಯೂ ಅದೇ

ವಿಧವಾಗಿ ಹುಡಿಮಾತಿಗೂ ರಾಗವನ್ನು ಸೇರಿಸುತ್ತಿದ್ದರು (ಹುಬ್ಬಹ. ೮೨).

[ಹುಡಿ (< ಪುಡಿ) + ಮಾತು]

ಹುಡಿಮುಕ್ಕ (ನಾ). ಕ್ಷುದ್ರನಾದ ಮೂರ್ಖ: ತಕ್ಕ ವರವನು ನೆಲೆ ಪಡೆದು ಹುಡಿಮುಕ್ಕನೆದ್ದನು ಹರನಡಿಗೆ ಮೈಯಿಕ್ಕಿ (ನಿಭಾಗ. ೧೦-೪೧-೨೧).

[ಹುಡಿ(< ಪುಡಿ) + ಮುಕ್ಕ]

ಹುಡಿಯಾಟ 'ಪುಡಿಯಾಟ' ನೋ.

ಹುಡಿಯೇಳು 'ಪುಡಿಯೇಳು' ನೋ.

ಹುಡಿಹಾಱು (ಕ್ರಿ). ಧೂಳೇಳು; ಧೂಳಾಗು: ಎಡೆತೊಱೆಗಳ ಮುಂದೆ ನಡೆವವರ್ಕುಡಿದರು ನಡುವೆ ಪೋಪರಿಗರಿಲಾಯ್ತು, ಕಡೆಯೊಳೆಯ್ದುವರ ಕಾಲೊಳು ಹುಡಿಹಾಱಿತು ನಡೆದುದು ಚಕ್ರಿಯ ಕಟಕ (ಭರಚ. ೨೩-೪೦); ಅವೂರ ಕೆಲೆ ಬತ್ತಿ ಹುಡಿ ಹಾಱುತಿರೆ (ಗುರುಚಾ. ೧೦ ೩೫). [ಹುಡಿ (< ಪುಡಿ) + ಹಾಱು (< ಪಾಱು)]

ಹುಡಿಹುಚ್ಚುಗೊಳಿಸು (ಕ್ರಿ). ವಿಶೇಷವಾದ ಭ್ರಮೆಗೆ ಒಳಗಾಗುವಂತೆ ಮಾಡು: ಅಡವಿಯ ಹೊಗಸಿತ್ತು . . . ಹಿಡಿದೊತ್ತಿ ಕೇಶವ ಕೀಳಿಸಿತ್ತು ಹುಡಿಹುಚ್ಚುಗೊಳಿಸಿತ್ತು ಊರೊಳಗೆಲ್ಲ ಈ ಬೆಡಗಿನ ಮಾಯೆಯ ಬಡಿಹೋರಿ ಸಮಯಿಗಳ ನುಡಿಗೆ ನಾಚುವೆನು (ವಚಶಾ. I. ೨೫೮-೧೬). [ಹುಡಿ? + ಹುಚ್ಚುಗೊಳಿಸು (< ಪುಚ್ಚುಂಗೊಳಿಸು)]

ಹುಡಿಹುಲ್ಲು (ನಾ). ಚೂರುಚೂರಾದ ಹುಲ್ಲು:

ಹುಡಿಹುಲ್ಲ ಮಾಡು = (ಆಲಂ) ಹಾಳುಗೆಡವು; ನಾಶಮಾಡು: ಎಲ್ಲಿ ಕೋಡಗ ಬನವನುಜೆ ಹುಡಿಹುಲ್ಲ ಮಾಡಿದ ಮರ್ಕಟಾಧಮನೆಲ್ಲಿ (ತೂರರಾ. ೫-೬-೧೦).

[ಹುಡಿ (< ಪುಡಿ) + ಹುಲ್ಲು (< ಪುಲ್)]

ಹುಡುಕಪ್ಪ (ನಾ). ಬಚ್ಚಿಟ್ಟುಕೊಂಡವರನ್ನು ಹುಡುಕುವ ಒಂದು ಬಗೆಯ ಆಟ: ಚಂದಿರದೇವನು ಬೆಳುಮುಗಿಲ ಮರೆಯಲ್ಲಿ ಹೋಗುತ್ತ ಹೊರಗೆ ಬರುತ್ತ ತನ್ನ ನಲ್ಲೆಯೊಡನೆ 'ಹುಡುಕಪ್ಪ'ನನ್ನು ಆಡುತ್ತ ಬಂದ (ಸುವಸಂ. ೨೩); ನಾನೂ ನೀನೂ ಇಲ್ಲಿಯೇ ಅಲ್ಲವೆ 'ಹುಡುಕಪ್ಪ' ನನ್ನಾಡಿದ್ದು (ತುಂಗಭ. ೧೦೦). [< ಹುಡುಕು]

ಹುಡುಕಳನಿ (ನಾ). ಒಂದು ಬಗೆಯ ಬತ್ತ: ಕುಜುವಿನೊಳಗೆ ಬಯರಕಣಗಿ ಹಂನೆರಡು ಮೂಡೆ ಹುಡುಕಳನಿ ಹದಿನೆಂಟು ಮೂಡೆ ಅಂತು ಕಾತಿಗೆ ಮೂವತ್ತು ಮೂಡೆ (ಕಂಇ. III, ೬-೧೭; 1348). 'ಹುಡಿಕ್ಕೆಬತ್ತ' ಪರಾ. [ಹುಡು? + ಕಳನಿ (< ಕಟನಿ)]

ಹುಡುಕಾಟ (ನಾ). ಹುಡುಕುವ ಕೆಲಸ; ಶೋಧನಕಾರ್ಯ: ಈ ಭಾಷೆ . . . ಇತರ ಭಾಷಾಪರಿವಾರಕ್ಕೆ ಸೇರುವುದಿಲ್ಲ. ಇದರ ಬಗೆಗೂ ಹೆಚ್ಚು ಹುಡುಕಾಟ ಆಗಬೇಕು (ದ್ರಾವಿ. ೪೩೮). [ಹುಡುಕು (< ಪುಡುಂಕು) + ಆಟ]

ಹುಡುಕಾಡು (ಕ್ರಿ). ಪತ್ತೆಮಾಡಲು ತಡಕು; ಶೋಧಮಾಡು: ಹಂಡಿರು ಮಕ್ಕಳು ಹುಡುಕಾಡಿದರು (ಕವಸೋ. ೨-೬); ರತ್ನವನ್ನು ಕಳೆದುಕೊಂಡ ಕಾಲಪುರುಷನು ಅದನ್ನು ಹುಡುಕಾಡತೊಡಗಿದನು (ಉರ್ದುಪಾ. ೧೯೭). [ಹುಡುಕು (< ಪುಡುಂಕು) + ಆಡು]

ಹುಡುಕಿಸು (ಕ್ರಿ). ಹುಡುಕುವಂತೆ ಮಾಡು; ಅನ್ವೇಷಣೆ ಮಾಡಿಸು: ಊರುಗಳನ್ನು ತೋಪುಗಳನ್ನು ಕಾಡುಗಳನ್ನು ಹುಡುಕಿಸಿ ಹಣ್ಣುಮಾಡಿಬಿಟ್ಟೆಯಲ್ಲಾ (ಚಿಂಗಾಳ್ಳ. ೬೬).

[ಹುಡುಕು (< ಪುಡುಂಕು) + - ಇಸು]

ಹುಡುಕು 'ಪುಡುಂಕು' ನೋ.

ಹುಡುಕು (ನಾ). ಡಮರುವಿನ ಆಕಾರದ ಒಂದು ಬಗೆಯ ಚರ್ಮವಾದ್ಯ: ಕರಡ ಮದ್ದಳೆ ಹುಡುಕು ಡೋಳು ಮುಂತಾದುವುಂ ಪೃಥ್ವಿಸಂಬಂಧ (ಗುರುಚಾ. ೭-೬೬). 'ಉಡುಕು' ಪರಾ. [< ಸಂ. ಹುಡುಕ್ಕ]

ಹುಡುಕು (ನಾ).(?) : ಲತೆ ಪರ್ಣ ಮೊದಲಾದ ಪಚ್ಚೆಪೈರು ಗೆಣಸು ವಿದಳ ಹುಡುಕಂ ಮುಟ್ಟದೆ (ವಲೇಶ್ರ. ೧೯). [?]

ಹುಡುಕುದಿಟ್ಟಿ (ನಾ). ಹುಡುಕುವ ನೋಟ; ಶೋಧಕದೃಷ್ಟಿ: ಮಂಜಿನಲ್ ಕವಿದ ಧೂಮದ ಸಾಂದ್ರಜವನಿಕೆಯೊಳಡಗಿದಾ ಪಡಗುರಕ್ಕಸನಿರವನರಿಯಲೆಂದಾ ದೆಸೆಗೆ ಹುಡುಕುದಿಟ್ಟಿಯೊಳಿರ್ದ ಕಪಿಗಳ್ (ಶ್ರೀರಾಮಾ. ೫೯೫-೨೯೬).

[ಹುಡುಕು (< ಪುಡುಂಕು) + ದಿಟ್ಟಿ]

ಹುಡುಕುನೀರ್ 'ಪುಡುಕುನೀರ್' ನೋ.

ಹುಡುಕುನೀರದ್ದು 'ಪುಡುಕುನೀರಟ್ಟು' ನೋ.

ಹುಡುಕುನೋಟ (ನಾ).= ಹುಡುಕುದಿಟ್ಟಿ: ಕುಳಿಂದಕನು ಬಿಲ್ಲಿಡಿದು ಹುಡುಕುನೋಟ ಬೀರುತ್ತಾ ಪ್ರವೇಶಿಸುತ್ತಾನೆ (ಚಂದ್ರಸ.೩೬); ಅಮ್ಮನಂತೂ ಯಾವಾಗಲೂ ನನ್ನನ್ನು ಹುಡುಕುನೋಟದಿಂದಲೇ . . . ನೋಡುವರು (ಸುವಸಂ. ೧೩).

[ಹುಡುಕು (< ಪುಡುಂಕು) + ನೋಟ]

ಹುಡುಕುಪಡೆ (ನಾ). ಹುಡುಕಲು ಹೊರಟಿರುವ ಸೈನ್ಯ ; ಶೋಧಿಸಲು ಹೊರಟ ದಳ: ಸಾಗರೋಲ್ಲಂಘನಕೆ ಮುನ್ನಂದು ಹುಡುಕುಪಡೆ ಸಭೆ ನೆರೆದ ಸಾನುಪ್ರದೇಶಮಂ . . . ಬಣ್ಣಿಸುತಿರಲ್ (ಶ್ರೀರಾಮಾ. ೫೪೨-೭೪). [ಹುಡುಕು (< ಪುಡುಂಕು) + ಪಡೆ]

ಹುಡುಕೆ 'ಪುಡಿಕೆ' ನೋ.

ಹುಡುಕ್ಕ (ನಾ). = ಹುಡುಕು: ಅಘೋಷಣವೆಂಬ ಹುಡುಕ್ಕಂ (ವೀಕ. ೨೩೭). [ಸಂ.]

ಹುಡುಗ, ಪುಡುಗ (ನಾ). ಎಳೆಯ ವಯಸ್ಸಿನವನು; ಬಾಲಕ: ಮಡಿವಾಳಯ್ಯನ ಮನೆಯ ಕಡೆಯ ಬಾಗಿಲ ಕಾಯ್ದ ಹುಡುಗನಿವನೆಂದನ್ನ ಕರೆಯೊ ಗುರುವೆ (ಮಿಶ್ರಸೋ. ೯೯); ಶಿವಾಗಮದ ಸೇವೆಗೆ ನೇಮಿಸಿ ಹುಡುಗರು ಪೂಜಾಕರ್ತರೆಂದು ಇವರು ಉತ್ತ ಭೂಮಿಗೆ ತೆರಿಗೆ ಇಲ್ಲವೆಂದು ಮಾಡಿ (ಮೈಆರ. ೧೯೩೦, ೧೩-೩೧; 1345?). Δ ಪುಡುಗ: ಉಚ್ಚತರ ಶಾಖಾಗ್ರವಂ ಪತ್ತಿ ಪಾಡುಗಳನಾಯ್ದುತಿಹ ಪುಡುಗರುಗಳಂ ಅಚ್ಚಿಗಳನೀಕ್ಷಿಸುತ್ತಂ (ಮಹಾವಿ. ೫-೭). [?]

ಹುಡುಗತನ (ನಾ). ಬಾಲಸ್ವಭಾವ; ಮಕ್ಕಳ ರೀತಿ ನೀತಿ: ಮುಷ್ಟಿಯಿಂದ ಹಿಡಿದು ಹುಡುಗತನದಿಂದ ಇವನು ಬಾಧಿಸುವ ಸಿಂಹದ ಮರಿಯನ್ನು ಬಿಡಿಸು (ಶಾಕುಂತ. ೧೦೫-೨೨); ಮನುಷ್ಯಪ್ರಯತ್ನವಲ್ಲದೆ ದೈವಯತ್ನವೆಲ್ಲಿ ಬಂತು ಎಂದು ನನ್ನ ಹುಡುಗತನದ ವಾದ (ಚಿಂಗಾಳ್ಳ. ೧೧೪). [ಹುಡುಗ + - ತನ]

ಹುಡುಗಪಾಳ್ಯ (ನಾ). ಬಾಲಕರ ಗುಂಪು; ಚಿಕ್ಕಮಕ್ಕಳ ಸಮೂಹ: ಈ ಹುಡುಗಪಾಳ್ಯವಂ ಸೇರಿ (ಸೌಗಂಧಿ. ೫೦೯-೧೧); ಹುಡುಗಪಾಳ್ಯದ ಕೆಲದಾಟ ಬಹಳವಾಗಿದ್ದಾಗ್ಯೂ . . . ನಡತೆಯಲ್ಲಿ ಮರ್ಯಾದೆ ಚೆನ್ನಾಗಿದ್ದವು (ಕೆಲನ. ೨೦೬).

[ಹುಡುಗ + ಪಾಳ್ಯ (< ಪಾಳೆಯ)]

ಹುಡುಗಾಟ (ನಾ). ೧. ಮಕ್ಕಳ ಚೇಷ್ಟೆ, - ವಿನೋದ; ಚಿಣ್ಣಾಟ: ಮುಂ ಕುದುರೆಯಂ ಕಟ್ಟಿ ಹುಡುಗಾಟವೆಂದರಿತೆ ನೀನೀಗಳೇಂ? (ಚಿತ್ರಾಂಗ. ೮೦-೨೧೪); ನಿನಗಿನ್ನೂ ಹಿಂದಿನ ಹುಡುಗಾಟದ ಸ್ವಭಾವ ಹೋಗಿಲ್ಲ (ಶಾಲಮಿ.೮). ೨. ಕುಚೋದ್ಯ; ಕುಚೇಷ್ಟೆ: ಏನು ನಾನಾವಾಗಲಾದರೂ ಹುಡುಗಾಟವಾಡಿದ್ದೇನೆಯೆ (ಧೂರಾಸೆ.೪೮); ಓದಲಿಕ್ಕೆ ಕೂತಾಗ ಏನದು ಹುಡುಗಾಟ? (ಕುಂಕುಮ. ೭೦). [ಹುಡುಗ + ಆಟ]

ಹುಡುಗಾಟಿಕೆ (ನಾ).= ಹುಡುಗಾಟ ೧: ಏನಿದು, ಅತ್ತ ಹೋಗಿ, ಇನ್ನೂ ಹುಡುಗಾಟಿಕೆ (ತ್ಯಾಗಮ.೧); ಮಾಧವನ ಹುಡುಗಾಟಿಕೆಯೆ? ಅಥವಾ ನಾನು ಬರೋಡಾಕ್ಕೆ ತೆರಳುವಂತೆ ಏನಾದರೂ ಹಂಚಿಕೆ ಸೃಷ್ಟಿಸಲಾಗಿತ್ತೇ ಎಂದು ತಿಳಿದಿಲ್ಲ (ವಾತ್ಸಲ್ಯ. ೨೫೩).

[ಹುಡುಗಾಟ + - ಇಕೆ]

ಹುಡುಗಿ (ನಾ). ಚಿಕ್ಕವಯಸ್ಸಿನವಳು; ಬಾಲಕಿ; ಬಾಲೆ: ಹುಡುಗಿಯರ ಸಂಗ ಮಾಡುವನೆ ರಂಗ (ಪುರಂದ. ೨-೪೬-೩); ಕಂನನ ಹೆಂಡತಿ ಚಲುಡಿಯೆಂಬ ಹುಡುಗಿಯನ್ನು ನಿಮಗೆ ಕ್ರಯಕ್ಕೆ ಕೊಟ್ಟೆನಾಗಿ (ಮೈಆರ. ೧೯೨೮, ೬೭-೮; 1808); ಓಹೋಹೋ! ಅಂಥಾ ಸುಂದರಿಯೇನಯ್ಯ ನಿನ್ನ ಹುಡುಗಿ (ಅವಶಂ. ೨). [ಹುಡುಗ + - ಇ]

ಹುಡುಗು (ನಾ). ಬಾಲಸ್ವಭಾವದವನು; ವಿವೇಚನೆ ಇಲ್ಲದವನು.

ಹುಡುಗುಹುಡುಗು (ದ್ವಿರುಕ್ತಿ): ನಮ್ಮ ರಾಘವ ತುಂಬಾ ಹಟಮಾರಿ. ಇನ್ನೂ ಹುಡುಗುಹುಡುಗು (ತುಂಗಭ. ೧೧೩). [ಹುಡುಗ + - ಉ]

ಹುಡುಗುಚೇಷ್ಟೆ (ನಾ). ಹುಡುಗಾಟಿಕೆ; ವಿನೋದ: ಅವಳು ಮಾಡಿದ ಹುಡುಗು ಚೇಷ್ಟೆಯನ್ನು ಕೇಳಿ . . . ಕ್ಷಮೆ ಬೇಡಿದನು (ವಚಭಾ. ೧೪೮). [ಹುಡುಗು + ಚೇಷ್ಟೆ]

ಹುಡುಗುಬುದ್ಧಿ (ನಾ). ಬಾಲಸ್ವಭಾವ; ವಿವೇಚನೆ ಇಲ್ಲದಿರುವಿಕೆ: ಬರೀ ಹುಡುಗುಬುದ್ಧಿ ಇವಳದು (ಬದುಜ. ೧೭೮). [ಹುಡುಗು + ಬುದ್ಧಿ]

ಹುಡುಗೆ, ಹುಡಿಗೆ (ನಾ).= ಹುಡುಗಿ: ಹಗಲೆಲ್ಲ ನೀರಲ್ಲಿ ಆಟವಾಡಿ ಈ ಹುಡುಗೆ ನೆಗಡಿ ತಂದುಕೊಂಡರೆ (ದೇಚಿ. ೧೪); ದಿನವೂ ನಮ್ಮ ಮನೆಗೆ ಹೂವು ತರುವ ಹುಡುಗೆ

(ಆಚೂರೀ. ೧). **ಹುಡಿಗೆ:** ಬೊಗ್ಗಿದ ಸ್ತ್ರೀಯ ಹೋಹೊಲ್ಲ ಹುಡಿಗಯ ಕಿಗ್ಗಳವೆ ಹೊಲ್ಲ (ಸರ್ವಜ್ಞ. ೧೮೧೩); ಹಳ್ಳಿಯ ಊರಲ್ಲಿ ಹುಟ್ಟಿ ಬೆಳೆದ ಹುಡಿಗೆಯನ್ನು ಮದುವೆ ಮಾಡಿಕೊಂಡೆ (ಮೋಹನೀ. ೧೩). [ಹುಡುಗ + - ಎ$_2$]

ಹುಡುತುತು, ಹುಡುತುತ್ತು, ಹುತುತು, ಹೂತೂತು (ನಾ). ಒಂದು ಬಗೆಯ ಆಟ; ಕಬಡಿ ಆಟ: ನಡುನಡುವೆ ಗಡಿ ಕೊರೆದು ಆಡದಿರು 'ಹುಡುತುತು' (ನಲಮು. ೧೮-೧೬). **ಹುಡುತುತ್ತು:** ಹುಡುಗರು . . . "ಹುಡುತುತ್ತು" ತಿಳಿ ಮುಂತಾದ ಆಟಗಳನ್ನು ಆಡುತ್ತಿದ್ದರು (ನಿಠಾಭ. ೯೫). **ಹುತುತು:** ಆತ ಹುತುತು ಆಟದಲ್ಲಿ ಗಟ್ಟಿಗ (ರೂಢಿ). **ಹೂತೂತು:** ಸ್ವತಃ ಮಾಸ್ತರರೇ ವಿದ್ಯಾರ್ಥಿಗಳೊಡನೆ ಪೋಪೋ ಹೂತೂತು ಆಟವಾಡುವರು (ಸಜೂರ. ೨೦೯). [<— ಮರಾ. ಹುತುತು, ಹುದುದು]

ಹುಡುತುತ್ತು 'ಹುಡುತುತು' ನೋ.

ಹುಡುಪ (ನಾ). (?): ಹಸಿದ ಹಾವಿನ ಹೆಡೆಯಲ್ಲಿ ಇಲಿ ಬಲನ ತೋಡುತ್ತದೆ . . . ಮೂಗಿನ ವಾಸದಲ್ಲಿ ತಪ್ಪುದಾರಿ ಬಾಲದ ತುದಿಯಲ್ಲಿ ಹುಡುಪ ಹಾವ ಹಿಡಿದಲ್ಲಿಯೇ ಸಿಕ್ಕಿತ್ತು (ಅಲೆಮಾ.ಕ. ೧೪೫-೧೫೪). [?]

ಹುಡುವೆ (ನಾ). ಒಂದು ಬಗೆಯ ಸಸ್ಯ: ಬಲುಋಣಿಯ ಹುಡುವೆ ವಳುಳಂ (ಋಕ್ಕಾಂಗ. ೧೦-೨). 'ಹುಲುವೆ' ಪರಾ. [?]

ಹುಡುಹುಟ್ಟ (ನಾ). ನಿಷ್ಪ್ರಯೋಜಕನಾದವನು; ಅಲ್ಪ; ಕ್ಷುದ್ರ: ಮುದಗ ಯಲ್ಕಮ್ಮನೆಳಸಿದೊಡೆ ದಟ್ಟುಮಾಡುತ್ತೆನ್ನನೀ ಹುಡುಹುಟ್ಟನಂ ವೆತ್ತವಳು ಸುಡುಗಯ ಸುಟ್ಟಳೆನುತ್ತಾ ಕೈಯೊಳೆ ಹೆಟ್ಟುವಳು ಟೊಮ್ಮಯನು (ಮದೀಪ್ರ. ೫-೬೭).

[< ಹುಡಿ + ಹುಟ್ಟು (< ಪುಟ್ಟು$_1$) + - ಅ$_2$]

ಹುಡುಹುಡನೆ (ಅ). ಒಂದು ಅನುಕರಣಾವ್ಯಯ: ಬಸಿಲೊಳ್ ತಾನೆ ಹುಡುಹುಡನೆ ಮಗ್ಗಿ ಮಿಡುಮಿಡುಮಿಡುಕಿ (ಧರ್ಮಾಮೃ. ೧೦-೧೩.೨). 'ಪುಡಪುಡನೆ' ಪರಾ.

[ಹುಡುಹುಡು + - ಅನೆ$_1$]

ಹುಡುಹುಡು (ನಾ). ಒಂದು ಅನುಕರಣಶಬ್ದ: 'ಹುಡುಹುಡುಗುಟ್ಟು' ಪರಾ. 'ಪುಡುಪುಡು' ಹೋ.

ಹುಡುಹುಡುಗುಟ್ಟು (ಕ್ರಿ). ಹುಡುಹುಡು ಎಂದು ಸದ್ದುಮಾಡು: ಹಂದಿ ಹುಡುಹುಡು(ಗುಡುಗುಡು)ಗುಟ್ಟಿತ್ತೆಂದು ನಾಯಿ ಬಗುಳಿತೆಂದು ಸಂದೇಹಿಸಿದವರುಂಟೇ (ಪದ್ಮೇವ. ೯೬-೨೯೪). [ಹುಡುಹುಡು + ಕುಟ್ಟು$_1$]

ಹುಡೆ 'ಹೂಡೆಯ' ನೋ.

ಹುಡೆಯ 'ಹೂಡೆಯ' ನೋ.

ಹುಣ್ 'ಪುಣ್' ನೋ.

ಹುಣಚಿ 'ಪುಳಿಸೆ' ನೋ.

ಹುಣಸಿ 'ಪುಳಿಸೆ' ನೋ.

ಹುಣಸೆ 'ಪುಳಿಸೆ' ನೋ.

ಹುಣಸೆಕಾಯಿ, ಹುಣಿಸೆಕಾಯಿ (ನಾ). (ಅಡುಗೆಯಲ್ಲಿ ಹುಳಿರುಚಿಗಾಗಿ ಉಪಯೋಗಿಸುವ) ಹುಣಸೆಮರದಲ್ಲಿ ಬಿಡುವ ಕಾಯಿ: ಕಕ್ಕೆಹಣ್ಣು . . . ಹುಣಸೆಕಾಯಿಗಳನ್ನು ನಿವೇದನ ಮಾಡುವರು (ಹುಟ್ಟಿಪ. ೬೯); ಹುಣಸೆಕಾಯಿತೊಕ್ಕು ಬಹಳ ರುಚಿಯಾಗಿದೆ (ರೂಢಿ). **ಹುಣಿಸೆಕಾಯಿ:** "ತಿಂತ್ರಿಣೀಫಲಂ – ಹುಣಿಸೆಕಾಯಿ" (ಓಷಧಿ. ೬೯). [ಹುಣಸೆ (< ಪುಳಿಸೆ) + ಕಾಯಿ (< ಕಾಯ್$_1$)]

ಹುಣಸೆಮರ, ಹುಣಿಸೆಮರ (ನಾ). (ಹುಳಿರುಚಿಯ ಕಾಯಿ ಮತ್ತು ಹಣ್ಣುಗಳನ್ನು ಬಿಡುವ) ಒಂದು ಬಗೆಯ ಮರ: ಹುಣಸೆಮರ (Tamarindus indicus) ನಮ್ಮ ದೇಶದ್ದೇ ಎಂಬ ಪ್ರಶ್ನೆ ಇಂದಿಗೂ ಉಳಿದಿದೆ (ಶಾಸಗಿ. ೫೮). **ಹುಣಿಸೆಮರ:** ಊರ ಬಳಿಯ ಹತ್ತಿರಣ ಹುಣಿಸೆಮರ (ಎಕ. VII. ಶಕಾಂ. ೫೯-೨೫೧; 1524).

[ಹುಣಸೆ (< ಪುಳಿಸೆ) + ಮರ$_1$]

ಹುಣಸೆಸರಿ (ನಾ). ಹುಣಸೆಯ ಬೀಜದಿಂದ ತಯಾರು ಮಾಡುವ, ಬಣ್ಣ ಹಾಕಲು ಬಳಸುವ ಒಂದು ಬಗೆಯ ಅಂಟು: (ಕ).

[ಹುಣಸೆ (< ಪುಳಿಸೆ) + ಸರಿ$_1$ (< ಸಜ್ಜಿ$_2$)]

ಹುಣಸೆಸಾರು (ನಾ). ತೊಗರಿಬೇಳೆಯನ್ನು ಹಾಕದೆ, ಹುಣಸೆಹಣ್ಣಿನ ರಸದಿಂದ ಮಾಡುವ ಸಾರು; ಗೊಡ್ಡುಸಾರು: (ಕ).

[ಹುಣಸೆ (< ಪುಳಿಸೆ) + ಸಾರು$_1$ (< ಸಾಡು$_2$)]

ಹುಣಸೆಹಣ್ಣು 'ಪುಣಿಸೆವಣ್' ನೋ.

ಹುಣಾಬ (ನಾ). ಒಂದು ಬಗೆಯ ಮರ: ಹುಣಾಬ (ಕಿಂದಳ): ಮತ್ತಿಯಪ್ಪೇ ದೊಡ್ಡದಾಗುತ್ತದೆ. ಕಟ್ಟಿಗೆ ಮತ್ತಿಯಷ್ಟು ಕಪ್ಪಲ್ಲ (ಕಭಾಗ. ೫೦). [?]

ಹುಣೆ 'ಪುಣೆ' ನೋ.

ಹುಣೆಗು 'ಪಣುಂಕು' ನೋ.

ಹುಣೆಚಿ 'ಪುಳಿಸೆ' ನೋ.

ಹುಣೆಚೆ 'ಪುಳಿಸೆ' ನೋ.

ಹುಣೆಮೆ 'ಪುಣ್ಣಮೆ' ನೋ.

ಹುಣೆವೆ 'ಪುಣ್ಣಮೆ' ನೋ.

ಹುಣೆಸೆ 'ಪುಳಿಸೆ' ನೋ.

ಹುಣೆಸೆಕಾಯಿ 'ಹುಣಸೆಕಾಯಿ' ನೋ.

ಹುಣೆಸೆಮರ 'ಹುಣಸೆಮರ' ನೋ.

ಹುಣೆಸೆವಣ್ಣು 'ಪುಣಿಸೆವಣ್' ನೋ.

ಹುಣೆಸೆಹಣ್ಣು 'ಪುಣಿಸೆವಣ್' ನೋ.

ಹುಣುಗು 'ಪಣುಂಕು' ನೋ.

ಹುಣುಬು 'ಪುಳುಂಬು' ನೋ.

ಹುಣುಮೆ 'ಪುಣ್ಣಮೆ' ನೋ.

ಹುಣುಸೆ 'ಪುಳಿಸೆ' ನೋ.

ಹುಣ್ಣಮಿ 'ಪುಣ್ಣಮೆ' ನೋ.

ಹುಣ್ಣಮೆ 'ಪುಣ್ಣಮೆ' ನೋ.

ಹುಣ್ಣವೆ 'ಪುಣ್ಣಮೆ' ನೋ

ಹುಣ್ಣೆಮೆ 'ಪುಣ್ಣಮೆ' ನೋ.

ಹುಣ್ಣಿಮೆಯಿರುಳ್ (ನಾ). ಪೂರ್ಣಮಿಯ ರಾತ್ರಿ: ಹುಣ್ಣಿಮೆಯಿರುಳ್ . . . ಜ್ಯೋತ್ಸ್ನೆಯಂ ಪಾಲು ಪೊಯ್ದುಂದದಲಿ ಚೆಲ್ಲಿ ರಾರಾಜಿಸಿರೆ (ಶ್ರೀರಾಮಾ. ೧೨-೩೧೭).

[ಹುಣ್ಣಿಮೆ (< ಪುಣ್ಣಮೆ) + ಇರುಳ್]

ಹುಣ್ಣವೆ 'ಪುಣ್ಣಮೆ' ನೋ.

ಹುಣ್ಣು 'ಪುಣ್' ನೋ.

ಹುಣ್ಣುಬೇನೆ (ನಾ). ಗಾಯದಿಂದುಂಟಾಗುವ ರೋಗ,- ಖಾಯಿಲೆ; ವ್ರಣವ್ಯಾಧಿ: ವ್ರಣರುಜಂ-ಹುಣ್ಣುಬೇನೆಗಳು (ವೈದ್ಯ. ೧೬೨).

[ಹುಣ್ಣು (< ಪುಣ್) + ಬೇನೆ]

ಹುಣ್ಣುಮೆ 'ಪುಣ್ಣಮೆ' ನೋ.

ಹುಣ್ಣುವೆ 'ಪುಣ್ಣಮೆ' ನೋ.

ಹುತ (ಗು). ೧. ಅಗ್ನಿಯಲ್ಲಿ ಅರ್ಪಿಸಿದ; ಹೋಮಮಾಡಿದ: ಓತ ಪುರೋಹಿತ ಪ್ರಾಜ್ಞಾಜ್ಞಾಹುತಿಹುತಹುತವಹಸಮಕ್ಷದೊಳ್ ಕೆಯ್ನಾರೆಱೆದು ಪಾಣಿಗ್ರಹಂಗೆಯ್ದು (ಪಂಪಭಾ. ೩-೭೪ ವ). (ನಾ). ೨. ಯಜ್ಞ, ಯಾಗಾದಿಗಳಲ್ಲಿ ಅಗ್ನಿಗೆ ಅರ್ಪಿಸಿದುದು; ಹವಿಸ್ಸು: ಕ್ರಿದಶರಂಜದೆ ಹುತವನುಣ್ಣಲಿ ಕದನಕಾವಿಹೆವು (ಕೌಶಿರಾ. ೧-೯೧). [ಸಂ.]

ಹುತಭುಗ್ವಿನೇತ್ರ (ನಾ). ಅಗ್ನಿಯೇ ಕಣ್ಣಾಗುಳ್ಳವನು; ಶಿವ: ಹುತಭುಗ್ವಿ [ಪಾಠಾಂ. ಹುತವಾಹ]ನೇತ್ರನಾಗ ಖಿತಿ ಬೇಡ ಮಗಳೆ . . . ಸುಖದಿ ಬಾಳೆಂದು ಶಿವ ನುಡಿಯಲು (ಪ್ರೌಢರಾ. ೧೧-೧೮). [ಸಂ.]

ಹುತವಹ (ನಾ). ಹವಿಸ್ಸನ್ನು ದೇವತೆಗಳಿಗೆ ಒಯ್ದು ಮುಟ್ಟಿಸುವವನು; ಅಗ್ನಿ: ಅಮರಾಧಿರಾಜ ಹುತವಹ . . . ಯಕ್ಷೇಶಾನ ಕ್ರಮದಿನವರೆಣ್ಬರಂತುತ್ತಮನಯ್ ನೀಂ (ಕವಿರಾ. ೩-೯೬); ಹಿತಪುರೋಹಿತ ಪ್ರಾಜ್ಞಾಜ್ಞಾಹುತಿಹುತಹುತವಹಸಮಕ್ಷದೊಳ್

ಕಯ್ನೀರಲೆದು ಪಾಣಿಗ್ರಹಂಗಯ್ಸೆ (ಪಂಪಭಾ.೩-೭೪ ವ); ಕೊಂಡದಲಿ ನಿಜರೂಪವನು ಕೈಕೊಂಡು ಹುತವಹ ಚರುವ ನೀಡಲು ಕೊಂಡು (ಕಾರಾ. ೧-೬೩). [ಸಂ.]

ಹುತವಹನಯನ (ನಾ). ಬೆಂಕಿಯ ಕಣ್ಣುಳ್ಳವನು; ಅಗ್ನಿನೇತ್ರ; ಶಿವ: ಹುತವಹನಯನಂ . . . ಜಿತಭವ ಮರಣಂ ಕ್ಷಿತಿವರನಿದಿರೊಳೆ ನಿಂದಂ (ಹಮ್ಮೀ. ೨-೧೦). [ಸಂ.]

ಹುತವಹನೇತ್ರ (ನಾ).= ಹುತವಹನಯನ: ಹುತವಹನೇತ್ರನೆಂಬವನ ಗತಿಗಡಿಸಿಯೆ ಪಿಡಿತಂದು . . . ನಿಗಳವಿಕ್ಕುವೆವು (ತ್ರಿಪುಸಾಂ.೧೫-೧೭ಸಾ); ಹುತವಹನೇತ್ರನಿರ್ದಟವಿಯ ಕಂಡು ಮನ್ಮಥಮಹೀರಮಣ ಮುಂ ಕೊಂಡು (ಮೋಹತ. ೭-೮). [ಸಂ.]

ಹುತವಹಬಾಣ (ನಾ). ಅಗ್ನಿಬಾಣ; ಆಗ್ನೇಯಾಸ್ತ್ರ: ಹುತವಹಬಾಣದಿಂದಮಿಸ ತೂಳ್ದುದು ವಾನರಸೇನೆ (ಗದಾಯು. ೧೦-೨೪). [ಸಂ.]

ಹುತವಹಸಖ (ನಾ). ಅಗ್ನಿಯ ಸ್ನೇಹಿತ; ವಾಯು: ಶತಪತ್ರಮಿತ್ರಪುತ್ರ ಪತತ್ರಿ ಗೋತ್ರ ಪ್ರಧಾನಂಗ ಹುತವಹಸಖಂ ಸಹಾಯನಾಗಿ ಸುಲಿಸುಲಿದು ತಗುಳೆ ಬೀಸಲೊಡಂ (ವಂಚತಂ.೨೬೬-೪). [ಸಂ.]

ಹುತವಹಾರಾಧನೆ (ನಾ). ಅಗ್ನಿಯ ಪೂಜೆ; ಯಜ್ಞ,ಯಾಗ ಇತ್ಯಾದಿ: ಶ್ರುತಿಪಠನವೋ ತರ್ಪಣವೊ ಮೇಣತಿಥಿಪೂಚೆಯೊ ಭೂತಯಜ್ಞವೊ ಹುತವಹಾರಾಧನೆಯೊ ರಣವೀಯ್ಯೆಯ್ದಲೊಳಗೇನು (ಕುವಾಡ್ರೋ. ೧೪-೩೭).

[ಸಂ. ಹುತವಹಾರಾಧನಾ]

ಹುತವಹಾಹಾರ (ನಾ). ಅಗ್ನಿಯ ಆಹಾರ; ಕಟ್ಟಿಗೆ: ''ಹುತವಹಾಹಾರ ಮೇಧಸ್ಸಮಿಧ ಕಾಷ್ಠವಡುಗಬ್ಬಕ್ಕು'' (ಮಂಗರಾ.೧೫-೯). [ಸಂ.]

ಹುತಾಗ್ನಿ (ನಾ). ಹೋಮಮಾಡಿದ ಅಗ್ನಿಯುಳ್ಳವನು; ಅಗ್ನಿಹೋತ್ರಿ; ಯಜ್ಞದೀಕ್ಷಿತ: ಕುಮಾರನಂ ಮುನ್ನಂ ಹುತಾಗ್ನಿಯಾಗಿರ್ದ ಪುರೋಹಿತನನಿದಿರ್ಗೊಂಡು (ಶಾಂತಿಪು.೬-೧೨ ವ); ಮುನ್ನಮ ಹುತಾಗ್ನಿಯಾಗಿದ್ದ ಪುರೋಹಿತಂ ಪ್ರಣವ ಪೂರ್ವಕಮುಚ್ಚರಿಸಿದ ಪುಣ್ಯಾಹರವದೊಡನೆ . . . ಕೈನೀರೆಱೆದಂ (ಚಂದ್ರಪ್ರ. ೬-೭೦ ವ).

[ಸಂ.]

ಹುತಾತ್ಮ (ನಾ). ಧರ್ಮ, ದೇಶದ ಹಿತ ಇತ್ಯಾದಿ ಧ್ಯೇಯಸಾಧನೆಗೆ ತನ್ನ ಪ್ರಾಣವನ್ನು ಅರ್ಪಿಸಿದವನು: ನನಗೆ ಧರ್ಮವೀರರಾದ ಆ ಹುತಾತ್ಮರ ನೆನಪಾಯಿತು (ವೀರಯೋ. ೧೭). [ಸಂ. ಹುತಾತ್ಮನ್]

ಹುತಾಶ (ನಾ). ೧. ಹವಿಸ್ಸನ್ನು ಸೇವಿಸುವವನು; ಅಗ್ನಿ: ತ್ಕತ್ಕತಾಪಹುತಾಶಂ ಕತುದಣ್ಪನೇಱುಗುಮವೋಘಂ (ಜಗಪ. ೨-೪೯). ೨. ಒಂದು ಬಗೆಯ ಸಸ್ಯ: 'ಹುತಾಶರಸ' ಪರಾ. [ಸಂ.]

ಹುತಾಶನ (ನಾ).೧. ಹೋಮ ಮಾಡಿದುದನ್ನು ಆಹಾರವಾಗಿ ಸ್ವೀಕರಿಸುವವನು; ಹವಿಸ್ಸನ್ನು ಸೇವಿಸುವವನು; ಅಗ್ನಿ: ತನ್ಬಂ ಹುತಾಶನಂ ಮಂತ್ರಶಕ್ತಿಯಿಂ ತಾಳ್ದುವವೊಲ್ (ಪುಲ್ಲಿಪು.೧-೨೯); ಭಸ್ಮಾಂತರಿತ ಹುತಾಶನಂಬೊಲ್ (ಪಾರ್ಶ್ವಪು.೪-೨೪). ೨. [ಛಂದ] ಒಂದು ಅಕ್ಷರಗಣ; ರಗಣ. [ಸಂ.]

ಹುತಾಶನಕುಂಡ (ನಾ). ಹವನ, ಹೋಮಗಳಿಗಾಗಿ ಅಗ್ನಿಯನ್ನು ಇರಿಸಿಕೊಳ್ಳುವ ಕುಳಿ,- ಅಗ್ನಿ: ಅಪರದಿಗ್ಭಾಗದೊಳನಗಾರಕೇವಲಿ ಹುತಾಶನಕುಂಡಮಂ ಸ್ಥಾಪನಂಗಯ್ದು (ಆದಿಪು. ೧೬-೫೨ ವ). [ಸಂ.]

ಹುತಾಶನಪುತ್ರಿ (ನಾ). ಅಗ್ನಿಯ ಪುತ್ರಿ; ದ್ರೌಪದಿ: ಧಾತ್ರಿಯುಮನೀ ಹುತಾಶನ ಪುತ್ರಿಯುಮಂ ಬಿಱಿದ ಸೋಲ್ತನಲ್ಲಂ ಜೂದಿಂ (ಗದಾಯು.೧೦-೭೦). [ಸಂ. ಹುತಾಶನಪುತ್ರೀ]

ಹುತಾಶರಸ (ನಾ). ಒಂದು ಬಗೆಯ ಔಷಧಿ: ಹುತಾಶರಸ . . . ಮಣಿಸಿನ ಚೂರ್ಣದಲ್ಲಿ ಕೊಡಲು . . . ಕುಷ್ಠ, ಗುಲ್ಮ, ಸರ್ವವ್ಯಾಧಿ ಮಾಣುವುವು (ವೈಮ. ೨೮).

[ಸಂ.]

ಹುತುತು 'ಹುಡುತುತು' ನೋ.

ಹುತ್ತ 'ಪುತ್ತು₁' ನೋ.

ಹುತ್ತರಿ 'ಪುತ್ತರಿ' ನೋ.

ಹುತ್ತಿಡು 'ಪುತ್ತಿಡು' ನೋ.

ಹುತ್ತಿರಿಕೆ (ನಾ). (?): ನಖರೇಶ್ವರದ ಶ್ರೀಮಹಾದೇವರು ನಾರಣಸೆಟ್ಟಿಯ ಸುಹಸ್ತದ ಒಪ್ಪ ತೊಂಭತ್ತಿನ ಹುತ್ತಿರಿಕೆಯ ಬ್ರಹ್ಮರು (ಪೌಇ. IX-ii, ೪೪೯-೩೨; 1444). [?]

ಹುತ್ತು 'ಪುತ್ತು₁' ನೋ.

ಹುತ್ತುಗಾಲ್ 'ಪುತ್ತುಂಗಾಲ್' ನೋ.

ಹುತ್ತುಗಾಲು 'ಪುತ್ತುಂಗಾಲ್' ನೋ.

ಹುತ್ತೂರು (ನಾ). ಒಂದು ಊರಿನ ಹೆಸರು: ಬಱಕೋಡಿನ ಹಂಚೆಯದ ಹುತ್ತೂರ ತ್ರಿಸನ್ನ (ಇಆ. VIII, ೨೧೩-೩೩; 10ನೆಯ ಶತ). 'ಪುತ್ತೂರ್' ಪರಾ.

[ಹುತ್ತ (< ಪುತ್ತು₁)+ ಊರು₃ (< ಊರ್)]

ಹುತ್ತೇಳು (ಕ್ರಿ). (ಆಲಂ) ಹುತ್ತ ಏಳುವಂತೆ ಮೇಲಕ್ಕೆ ಏಳು; ಹೆಚ್ಚಾಗು: ಬಾಣಂಗಳನು ಪಿಡಿದು ಕೋಪಾಗ್ನಿ ಹುತ್ತೆದ್ದು ನಿಡುಗಂಗಳಲಿ ಕಿಡಿ ಸೂಸಿ (ನವವೋ. ೨೮ ೫೧). [ಹುತ್ತು (< ಪುತ್ತು₁) + ಏಳು₁ (< ಏಟ್₁)]

ಹುದಲು, ಹುದಿಲು, ಹುದುಲು (ನಾ). ೧. ಕೆಸರು; ಪಂಕ: ಎತ್ತುಗಳ ಕಾಲಿನಲ್ಲಿ ಮತ್ತು ಅವುಗಳು ಮಲಗುವ ಸ್ಥಳದಲ್ಲಿ ಕೆಸರು ಹುದಲು ರಾಡಿ ನೀರು ರೊಜ್ಜು ಆಗದ ಹಾಗೆ . . . ಹಸನ ಮಾಡುತ್ತಿರಬೇಕು (ಕೃಷಿಪ್ರ.೧೯); ನಿಂತತ್ತರೆ ನೆಲವೆ ಹುದಲು ಸಮರಸಕೂ ಸಮರ ಮೊದಲು (ಅರೂಭಾ.೪೬-೧೧). ೨. (ಆಲಂ) ಗೋಜು; ಗೊಂದಲ: ಸಂಪ್ರದಾಯ ಹೊಸರೀತಿಗಳ ಹುದಲಲ್ಲಿ ಅವರು ಸಿಕ್ಕುಬೀಳದೆ . . . ಹೆಜ್ಜೆಯಿಕ್ಕಬೇಕು (ಏಚಾಮು. ೧೧೬); ಈತನು ಆ ಜಡಶಕ್ತಿಗೇ ದೇವನನ್ನುವರು - ಎಂಬ ಹುದಲಿನೊಳಗಿಂದ ಪಾರಾಗಿ . . . ಬಂದನು (ಪೂರ್ವರಂ. ೧೨). **ಹುದಿಲು**: ೧. ಮಾಚದೇವನ ಕೆರೆಯು ಹುದಿಲಿನಿಂದ ಹುಗಿದಿದೆ (ಚಟ್ಟಸೂ.೪೯). ೩. ಕಳ್ಳುಸುಕು; ಕಳ್ಳುಸುಬು: ರುದ್ರಪ್ರತಾಪಭೂಪನ ಸಭೆಯು ಚದುರವಿದ್ಯಾಂಸರಿಗೆ ಫಣಿಯ ಹೇಳಿಗೆಯಾಯ್ತು ಹುದಿಲ ನೆಲೆಯಾಯ್ತು (ರಾಶಿಚ. ೧೭-೨೩). **ಹುದುಲು**: ೧. ಹುದುಲಿಲ್ಲದ ಉಪ್ಪಿನ ಮಾಳಿಗಳ ಹತ್ತಿರ ಮಹಾರಾಜರನ್ನು ಇಳಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು (ಗ್ರಾಪಾಯಿ. ೩೮೭). ೨. ವಿಚಾರ ಮಾಡಿದ ಹಾಗೆ ಜೀವವು ಹುದುಲಿನಲ್ಲಿ ಸಿಗುತಿತ್ತು (ಸಮಜೀ. ೫೭೮).

[< ಹುದಿ₁]

ಹುದಿ₁ 'ಪುದಿ₁' ನೋ.

ಹುದಿ₂ 'ಪುದಿ₂' ನೋ.

ಹುದಿಗೆ (ನಾ). ಸತ್ತವರನ್ನು ಹೂಳುವ ಸ್ಥಳ; ಸಮಾಧಿ: ನಮ್ಮೊಲುಮೆ ವೀರನ್ ನಮ್ಮೊಲುಮೆ ಹುದಿಗೆ ನಮ್ಮೊಲುಮೆ ಕುಪ್ಪೆ ಹಿಡಿಮಣ್ಣು! (ಪಾರಸಿ.೨೪-೫೫).

[ಹುದಿ₁ (< ಪುದಿ₁) + - ಗೆ]

ಹುದಿಗೊಳ್ಳು (ನಾ). ಒಂದು ಬಗೆಯ ಸಸ್ಯ: ಕುಂಪೋಲಿ, ಹುದಿಗೊಳ್ಳು, ಕಾಲ್ಮಧು, ಕಂಪಾಲೆ, ಕಬ್ಬುಣದ ಮರ (ಮೃಡಿಗಿ. ೭೦-೧೪೬ಸಾ). [?]

ಹುದಿಯೇರಿಸು (ಕ್ರಿ). ದಿಂಡುಕಟ್ಟು; ದಂಡೆಕಟ್ಟು: ಬೇರು ಸಡಲಿದ ಸಸಿಗಳಿದ್ದರೆ ಅವಕ್ಕೆ ಹುದಿಯೇರಿಸುತ್ತಾನೆ (ಬೆಳುಮ. ೧೦೬).

[ಹುದಿ₂ (< ಪುದಿ₂) + ಏರಿಸು (< ಏಱಿಸು)]

ಹುದಿರು (ನಾ). (?): ತೊಟ್ಟಿಯ ಹುದಿರಿ[ಪಾಠಾಂ. ಹುದಱು, ಹೊದಱು]ನಲ್ಲಿ ಕಲ್ಲು ಸಿಕ್ಕಿದಂತಾಯಿತು (ಕೋಲಶಾಂ.೯-೩೭); ಪ್ರಮಥರ ಕರೆದು ಗದಗದಿಸದಿರಿ ಬಾಗಿಲೊಳಗೆಂದು ಸೂಚಿಸುತ ಸದಮಳಾತ್ಮಕ ಮಾಚಿತಂದೆ ಬಜ್ಜಳನ ಹುದಿರಿನೊಳಿರುವ ಬಲು ಸಲುಗೆಯ (ಪ್ರಸುಪು.೯-೨೨೭). [?]

ಹುದಿಲು 'ಹುದಲು' ನೋ.

ಹುದಿಹೊಸಲು (ನಾ). ಹೊಸಲಿಗೆ ಅಭಿಮುಖವಾಗಿರುವ ಬಾಗಿಲ ಮೇಲ್ಭಾಗದ ಬೌಕಟ್ಟು: ಒಳಗಿಂದ ಹಂದರಕ್ಕೆ ಬರುವಾಗ ವಧುವಿನ ತಲೆ ಬಾಗಿಲಿನ ಹುದಿಹೊಸಲಿಗೆ ತಾಗಿ ಸೂಡಿದ್ದ ಬಾಸಿಂಗ ಸ್ವಲ್ಪ ಓರೆಯಾಯಿತು (ಸುವಸಂ. ೫೪).

[ಹುದಿ₂ (< ಪುದಿ₂) + ಹೊಸಲು (< ಪೊಸಂತಿಲ್)]

ಹುದು₁ 'ಪುದುವು' ನೋ.

ಹುದು₂ (ನಾ). ತಿರುಳು; ರಸ; ಸಾರ: ಪ್ರಾಚೀನಪದಗಳಲ್ಲಿಯೂ ಮಂತ್ರಗಳಲ್ಲಿಯೂ ಋಷಿಗಳು ಹುದುಗಿಸಿ ಇರಿಸಿದ ಅರ್ಥದ ಒಳಹುದುವನ್ನೇ ಅವರು ಹೇಗೆ ಸವಿದು

ನೋಡಬಲ್ಲರೆಂಬುದು ಅವರ ಗ್ರಂಥಗಳಿಂದ ಸ್ಪಷ್ಟವಾಗುತ್ತದೆ (ಮಹಾಯೋ. ೧೪೫).

[< ಪುದುಗು$_1$]

ಹುದುಂಗು 'ಪುದುಗು$_1$' ನೋ.

ಹುದುಕಾರ (ನಾ). ಪಾಲುಗಾರ: ಇವನು ಹುದುಕಾರರೊಂದಿಗೆ ಸೇರಿ ಫಸಲನ್ನು ಹೊಲದಿಂದ ಕಣಕ್ಕೆ ಸಾಗಿಸಿ ಒಕ್ಕಲು ಮಾಡಿ ಮುಗಿಸಿದ್ದ (ಬೆಳುಮ. ೧೧೬).

[ಹುದು$_1$ (< ಪುದುಗು$_1$) + - ಕಾರ$_1$ (< - ಕಾಱ)]

ಹುದುಗ (ನಾ). ಮುಸುಕು; ಆಚ್ಛಾದನೆ; "ಹೊದಿಕೆ" (ಜಾನಕೋ. ೫೮).

[< ಪುದುಗು$_2$]

ಹುದುಗಪಾವಡ (ನಾ). ಇಷ್ಟಲಿಂಗವನ್ನು ಆಚ್ಛಾದನೆ ಮಾಡಿ ಇಡುವ ಮಡಿಯ ವಸ್ತ್ರ. [ಹುದುಗು$_1$+ ಪಾವಡ$_1$ (< ಪಾವುಡ$_1$)]

ಹುದುಗಲು (ನಾ). ೧. ಕಡುಬು, ಕರ್ಜೀಕಾಯಿ ಮೊದಲಾದುವುಗಳ ಒಳಗೆ ತುಂಬವ ಸೂಸಲು, ಹೂರಣ ಇತ್ಯಾದಿ: ಕರ್ಜಿಕಾಯಿ ಒಳಗೆ ಹುದುಗಲು ತುಂಬ ಇದ್ದರೆ ರುಚಿಯಾಗಿರುತ್ತದೆ (ರೂಢಿ). ೨. ಅಡಕವಾಗಿರುವುದು; ತುಂಬಿರುವುದು: ಏಕೆಂದರೆ ಅದರ ಒದುಗ ಪುಟದ ಹುದುಗಲನ್ನೆಲ್ಲ ಮುದಿನಾಯಿ ಎಲುಬು ತಿಂದಂತೆ ಪ್ರಯಾಸದಿಂದ ಆಸ್ವಾದಿಸುವ ಪ್ರಯತ್ನದಲ್ಲಿ ಇರುತ್ತಾನೆ (ಗಾಳಿಪ. ೩೦).

[ಹುದುಗು$_1$ (< ಪುದುಗು$_1$) + - ಅಲು (< - ಅಲ್$_2$)]

ಹುದುಗಿಸು 'ಪುದುಗಿಸು' ನೋ.

ಹುದುಗು$_1$ 'ಪುದುಗು$_1$' ನೋ.

ಹುದುಗು$_2$ 'ಪುದುಗು$_2$' ನೋ.

ಹುದುನೆಲ (ನಾ). ಒಟ್ಟಿಗೆ ಸೇರಿ ಅನುಭವಿಸುವ ಭೂಮಿ: ಸುಯೋಧನನರಸಿಯಲ್ಲಾ ಧಾತ್ರಿ ನಿಮ್ಮೆಲ್ಲರಿಗೆ ಹುದುನೆಲನಲ್ಲವೆಂದನುತೆಚ್ಚನಾ ಶಲ್ಯ (ಕುಮಾಶ. ೨-೫೪).

[ಹುದು$_1$ (< ಪುದುವು) + ನೆಲ]

ಹುದುಭಾಗೆ (ನಾ). ಒಟ್ಟಿಗೆ ಸೇರಿ ಅನುಭವಿಸುವ ಭಾಗ: ಧಾರುಣಿಯ ಹುದುಭಾಗೆಗೋಸುಗಂ ಪಾಂಡವರ್ ಕಲಹಕುದ್ಯೋಗಿಸಿದರು (ಚಿಪಪು. ೫೪-೧೨).

[ಹುದು$_1$ (< ಪುದುವು) + ಭಾಗೆ]

ಹುದುಲು 'ಹುದ್ದಲು' ನೋ.

ಹುದುವನೆ 'ಪುದುಮನೆ' ನೋ.

ಹುದುವಾಳ್ 'ಪುದುವಾಟ್' ನೋ.

ಹುದುವಾಳಿಕೆ 'ಪುದುವಾಟ್ಕೆ' ನೋ.

ಹುದುವಾಳಿಗೆ 'ಪುದುವಾಟ್ಕೆ' ನೋ.

ಹುದುವು 'ಪುದುವು' ನೋ.

ಹುದೆ (ನಾ). ಒಂದು ಬಗೆಯ ಔಷಧೀಸಸ್ಯ: ಬಿಳಿಪಾದ್ರಿ, ಹುದೆ, ಬಿಲ್ಲ, ಹುವ್ವುಲವೆ, ಹುಲವೆ (ಕ್ಷುಡಿಗಿ. ೭೨-೧೪೭೬). 'ಉದೆಯ ಮರ' ಪರಾ. [?]

ಹುದ್ದರಿ (ನಾ). ೧. ಸ್ಪರ್ಧಿ; ಸ್ಪರ್ಧಾಳು: ನಿಮ್ಮ ವಸಂತನಂಥ ಹುದ್ದರಿಯನ್ನು ಹಿಡಿದುಕೊಂಡು ಆಟವಾಡುವ ನಾನೇ ಅವಿವೇಕಿ (ಗಂಮಾಯಿ. ೨೯೨); ನಿನಗೆ ಬೇಕಾದ ಹುದ್ದರಿ ನೀ ಆರಿಸಿಕೊ (ಆಮನಿ. ೩೨). ೨. ನಾಯಕ; ಮುಖಂಡ; ಮುಂದಾಳು: ಈಗ ಆ ವರ್ಗದಲ್ಲಿ ರಂಗನೇ ಹಿರಿಯ ಹುದ್ದರಿ (ರಂಗರೂ. ೨೮); ಸುಟ್ಟು ಅಂತರಕಾಲೇಜು ಟೆನಿಸ್ ಮತ್ತು ಬ್ಯಾಡ್‌ಮಿಂಟನ್ ಹುದ್ದರಿ ಎನ್ನಿಸಿಕೊಂಡ (ದಕ್ಷಿನ. ೬೮). 'ಉದ್ದರಿ$_2$' ಪರಾ. [?]

ಹುದ್ದೆ (ನಾ). ೧. ನೌಕರಿ; ಕೆಲಸ; ಉದ್ಯೋಗ: ನಮ್ಮಲ್ಲಿ ಒಂದು ಜಾಗಯೇನೋ ಖಾಲಿ ಅದೆ. ನಿನ್ನನ್ನು ಆ ಹುದ್ದೆಗೆ ನೇಮಿಸಿಕೊಳ್ಳಲಿಕ್ಕೇನೂ ಅಡ್ಡಿಯಿಲ್ಲ (ಹೇಮಂತ. ೧೭೮). ೨. ಅಧಿಕಾರ; ಪದವಿ: ನಿನ್ನ ಮಗನು ನಾಳೆ ಒಂದು ಭಾರಿ ಹುದ್ದೆಗೂ ಏರಬಲ್ಲನು (ಸುಂದರಿ. ೧೫). [← ಮರಾ. ಹುದ್ದಾ]

ಹುದ್ದೇದಾರ (ನಾ). ೧. ನೌಕರಿಯಲ್ಲಿರುವವನು; ಉದ್ಯೋಗಸ್ಥ: ಸಂಬಳ ಅದೃಷ್ಟದ ಮಾತು, ಮೇಲುಸಂಪಾದನೆ, ಹುದ್ದೇದಾರನ ಶಕ್ತಿಯ ಅಳತೆ (ಕೆಲನೆ. ೨೫೦). ೨. ಅಧಿಕಾರಿ: ಜಮಾದಾರರಾದ ನೀವೇ ಎಲ್ಲಾ ಕೆಲಸವನ್ನೂ ಮಾಡುವುದಕ್ಕೆ ಆದೀತೇ? ಏನಾದರೂ ವ್ಯತ್ಯಾಸ ನಡೆದರೆ ಹುದ್ದೇದಾರರ ತಲೆಗೆ ಬರುತ್ತೆ (ಮುಸುಗ. ೧೫೮); ಇಷ್ಟು ದೊಡ್ಡಸಿರಿವಂತರ ಮಗಳು, ದೊಡ್ಡ ಹುದ್ದೇದಾರರ ಹೆಂಡತಿ (ಆಚೋಲೀ. ೪೨); ಅವನನ್ನು ನೋಡಿದರೇನೇ ದೊಡ್ಡ ಹುದ್ದೇದಾರನಂತೆ ಕಾಣುತ್ತಿದ್ದನು (ಮಹಾಗ. ೧೦೫).

[ಹುದ್ದೆ + - ದಾರ್$_4$ ./ ಮರಾ. ಹುದ್ದೇದಾರ್]

ಹುನಗಲು (ನಾ). ಒಂದು ಬಗೆಯ ಮರ: ಹೊನಾಲ್, ಹುಲುವೆ, ಹುನಗಲು (ಮೃಡಿಗಿ. ೭೪-೧೫೧೪). 'ಹುನಿಗಿಲು' ಪರಾ. [?]

ಹುನಾರು 'ಹುನ್ನರು' ನೋ.

ಹುನಿಗಿಲು (ನಾ). ಒಂದು ಬಗೆಯ ಮರ: ಲವಂಗ, ಆನೆಯ ದಂತ, ತೋಟು ಹುನಿಗಿಲ ತಿಗುಡು ಇವಂ ಸಮಂಗೊಂಡು ಆಡಿನ ಮೂತ್ರದಲ್ಲಿ ಅರದು ಕೂಸಿನ ಮೆಯ್ಯಂ ಪೂಸುವುದು (ಬಾಲಚಿ. ೧೩೦-೨). 'ಪುಲಿಗಿಲ್' ಪರಾ. [?]

ಹುನಿಗಿಲೆಣ್ಣೆ (ನಾ). ಹುನಿಗಿಲು ಮರದ ತೈಲ: ಏರಂಡತೈಲವ ಸಾಸಿವೆಯನಂಕೋಲೆ ತೈಲವ ಹುನಿಗಿಲೆಣ್ಣೆಗಳ . . . ತೋದು ಸುತ್ತುತಿರೆ (ಕೌಶಿರಾ. ೧೨-೯).

[ಹುನಿಗಿಲು + ಎಣ್ಣೆ]

ಹುನ್ನರ 'ಹುನ್ನರು' ನೋ.

ಹುನ್ನರು, ಹುನಾರು, ಹುನ್ನರ, ಹುನ್ನಾರ, ಹುನ್ನಾರು (ನಾ). ೧. ಯುಕ್ತಿ; ಉಪಾಯ; ಸಂಚು: ಅದೆಲ್ಲಾ ಆ ಕಪಿತಾನ್‌ಸಾಹೇಬರ ಜಾಣತನದಿಂದಲೂ ಹುನ್ನರಿನಿಂದಲೂ ಆಗಿ ಇದೆ (ರಾಜೇಂದ್ರ. ೧೦೬); ಬಲವನ್ನು ಈ ಉದ್ಯಮದಲ್ಲಿ ಪ್ರಯೋಗಿಸುವ ಹುನ್ನರನ್ನು ಅರಿಯದವರು (ಕೆಲನೆ. ೧೯೧). ೨. ಚಾತುರ್ಯ; ಕುಶಲತೆ: ನಮ್ಮಿಂದಾ ಒಂದು ಪಾಲು ಕೆಲಸ ಆಗುವದಿದ್ದರೆ ಅವರ ಬುದ್ಧಿ ಹುನ್ನರಿನಿಂದಾ ಹತ್ತುಪಾಲು ಕೆಲಸ ಮಾಡಿದೆವು (ರಾಜೇಂದ್ರ. ೧೦೮). **ಹುನಾರು**: ೧. ಒಂದು ಪಕ್ಷ ತನ್ನ ಹುನಾರೇನಾದರೂ ವಿಫಲಗೊಂಡದ್ದಾದರೆ, ಸ್ತ್ರೀಶಕ್ತಿಸಾಧ್ಯವಾದ ಅಟಮಟ ತಟವಟಗಳಿಂದ ಅವನನ್ನು ವಂಚಿಸಬಹುದೆಂಬ ಕುಯುಕ್ತಿ . . . ಅನುಭವವೇದ್ಯವಾಗಿತ್ತು (ನಂಮುಂಡ. ೮೩); ತನ್ನ 'ಹುನಾರು' ವ್ಯರ್ಥವಾಗುತ್ತದೆಂಬ ಆಶಾಭಂಗದಿಂದ . . . ಎಂದನು (ಕಾನೂರು. ೩೬೫). **ಹುನ್ನರ**: ೧. ಈ ಹೆಸರು ಈ ಊರಿನಲ್ಲಿ ತಪ್ಪಿಹೋಗುವ ಹಾಗೆ ಏನಾದರೂ ಒಂದು ಹುನ್ನರ ಹುಡುಕಬೇಕೆಂದು ಯೋಚಿಸಿದನು (ಕಥಾಮಂ. IV, ೧೧೧). ೨. ತನ್ನ ಹುನ್ನರದಿಂದ . . . ಗಂಟನ್ನು ಬಿಚ್ಚಿ ರತ್ನವನ್ನು ಕದ್ದುಕೊಂಡು ಹೋದನು (ಕಥಾಮಂ. IV, ೧೩೧). **ಹುನ್ನಾರ**: ೧. ಭಾರತೀಯರ ಮೇಲೆಯೇ ತಪ್ಪುಹೊರಿಸಲು ಮಾಡಿದ ಫರಂಗಿ ಹುನ್ನಾರವದು (ಎಚ್ಚಸಾ. ೫೦). **ಹುನ್ನಾರು**: ೧. ಏನೋ ಹುನ್ನಾರು ನಡಸವರೇ (ಕೂಲಿ. ೧೫). ೨. ನನ್ನ ಕತ್ತನ್ನು ಅಮುಕುವುದಕ್ಕೆ ಪ್ರಾರಂಭಿಸಿದ . . . ಹುನ್ನಾರು ತಪ್ಪಿತೆಂದು ಅವನನ್ನು ಕೆಳಗೆ ಹಾಕಿಕೊಂಡು ಮುಂದಕ್ಕೆ ಬಿದ್ದೆ (ಚಿಂಗಾಳ್ಳ. ೪೫೬).

[← ಪಾರ. ಹಿಂ. ಹುನರ್; ಮರಾ. ಹುನರ್, ಹುನೇರ್]

ಹುನ್ನಲು (ನಾ). ಒಂದು ಬಗೆಯ ಮರ: ಮರಗಳು . . . ಅಳಲೆ, ಹುಲುವೆ, ಹುನ್ನಲು, ಮತ್ತಿ (ನಮ್ಮನು. ೨೩೬). 'ಹೊನಾಲ್' ಪರಾ. [?]

ಹುನ್ನಾರ 'ಹುನ್ನರು' ನೋ.

ಹುನ್ನಾರು 'ಹುನ್ನರು' ನೋ.

ಹುನ್ನಿಯ 'ಹೂಣ್ಯ' ನೋ.

ಹುಬೇಹೂಬ್, ಹುಬೇಹೂಬ, ಹೂಬೇಹೂಬ್, ಹೂಬೇಹೂಬ (ಅ). ತದ್ರೂಪವಾಗಿ; ಥೇಟು: ಮೊನ್ನೆ ಮೊನ್ನೆ ಮಾಸೆ ಮೂಡಿದ ಹುಡುಗ: ಹುಬೇಹೂಬ್ ಅಪ್ಪ ಅಕ್ಕಂದಿರದೇ ಅವತಾರನಾಗಿದ್ದಾನಲ್ಲ (ಮೂರುದಾ. ೧೪೧). **ಹುಬೇಹೂಬ**: ನಮ್ಮ ಶಾಂತಾಬಾಯಾರು ಹುಬೇಹೂಬ ನಮ್ಮ ಕಮಲಕ್ಕವರ ಹಾಂಗ ಆದಾರು (ವೃನ. ೧೬೯); ಮಾತಿನ್ಯಾಗ ಹುಬೇಹೂಬ ಹೋತಾನ ನೋಡು, ದಾದಲ್ಯಾನ್ನ (ದೀಪಹ. II, ೧೯೯). **ಹೂಬೇಹೂಬ್**: ನೀವು ಹೇಳಿದ ಹೊತ್ತಿಗೆ ಹೂಬೇಹೂಬ್ ನೀವು ಮಾಡಿದ ವರ್ಣನಾದ ಹುಡುಗ ಇಲ್ಲಿ ಬಂದಿದ್ದ (ಸಮಜೀ. ೩೨೪). **ಹೂಬೇಹೂಬ**: ಎಂತಾ ಚಂದ ತಗದೀಯೆ ಈ ಚಿತ್ರಾ, ಹೂಬೇಹೂಬ ನಮ್ಮ ಬೇಟೀ ಹಾಂಗ ಕಾಣತದ ನೋಡು (ಕನ್ನಕ. ೬೧). [← ಅರ. ಹುಬಹೂ; ಮರಾ. ಹುಬೇಹುಬ್, ಹುಬೇಹೂ, ಹುಬಹು; ಹಿಂ. ಹೂಬಹೂ]

ಹುಬೇಹೂಬ 'ಹುಬೇಹೂಬ್' ನೋ.

ಹುಬ್ಬ (ನಾ). (ಆಭರಣಾದಿಗಳನ್ನು ತೊಳೆಯಲು ಬಳಸುವ ಕುಂಚದಲ್ಲಿ ಉಪಯೋಗಿಸುವ) ಹಂದಿಯ ದಪ್ಪ ರೋಮ: ಹಂದಿಯ ಗಾತ್ರವಷ್ಟೆಂದು . . . ಅಂದಾಜುಮಾಡಿದ ನಾನು ಅದನ್ನು ಕೊಯಿಸಿಕೊಂಡು ಅದರ ಹುಬ್ಬವನ್ನು ಕೀಳಿಸುವಾಗ ಅದು ದಬ್ಬಣದಂತೆ ಗೇಣುದ್ದವಿತ್ತು (ಅಹುಲಿ. ೫೮).

[ಹುಬ್ಬು (< ಪುರ್ವು) + - ಅ್]

ಹುಬ್ಬಿಕ್ಕು 'ಪುರ್ವಿಕ್ಕು' ನೋ.

ಹುಬ್ಬಿಱಿ (ಕ್ರಿ). ಹುಬ್ಬನ್ನು ಏರಿಸು,— ಕೊಂಕಿಸು: ದೂರದಿಂದಿಡುವ ತಱಿಚುಗಳ ರವಗಳಿಗೆ ಮಿಗೆ ಹುಬ್ಬಿಱಿದು ಹಣುಗುತ (ತೊರಣಾ. ೫-೫-೨).

[ಹುಬ್ಬು (< ಪುರ್ವು) + ಇಱಿ$_1$]

ಹುಬ್ಬು 'ಪುರ್ವು' ನೋ.

ಹುಬ್ಬುಗಣ್ಣು (ನಾ). (ಆಲಂ) ಅಹಂಕಾರದ ದೃಷ್ಟಿ,— ನೋಟ: ನಿಬ್ಬಣವು ಎಕೆ ಕುರುಡಂಗೆ ಸೂಳಿಗ ಹುಬ್ಬುಗಣ್ಣೇಕೆ (ಸರ್ವಜ್ಞ. ೧೪೬).

[ಹುಬ್ಬು (< ಪುರ್ವು) + ಕಣ್ಣು (< ಕಣ್)]

ಹುಬ್ಬೆ 'ಪುಬ್ಬೆ' ನೋ.

ಹುಬ್ಬೇರಿಸು 'ಪುರ್ಬೇಱಿಸು' ನೋ.

ಹುಮ್ಮನ (ನಾ).(?): ಕವಣೆ ಮಿಡಿಬಿಲ್ಲು ಹುಮ್ಮನ ಪವಣನ ಗರಿಯಿಟ್ಟು ಪಚ್ಚೆ ಕಡಗವನೊಲವಿಂ ಸವುಳುಜಾಗಟೆ[ಯ] ಸಹಿತಂ ಭುವನೇಶ್ವರ ಘಂಟೆನ್ಯಪತಿಗಂದೊಲಿದಿತ್ತರ್ (ಬೀಳವಂ. ೧-೧೦೭). [?]

ಹುಮ್ಮಸ 'ಹುಮ್ಮಸ್ಸು' ನೋ.

ಹುಮ್ಮಸು 'ಹುಮ್ಮಸ್ಸು' ನೋ.

ಹುಮ್ಮಸ್ಸು , ಹುಮ್ಮಸ, ಹುಮ್ಮಸು (ನಾ). ಉತ್ಸಾಹ;ಹುರುಪು: ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುವ ಹುಮ್ಮಸ್ಸು ಬರಬೇಕು (ಶಕ್ಷದ. ೮೦); ಗ್ರಾಮಸ್ಥರು ಒಕ್ಕಟ್ಟಾಗಿ ಹುಮ್ಮಸ್ಸಿನಿಂದ ಈ ಕೆಲಸಗಳನ್ನೆಲ್ಲಾ ನೆರವೇರಿಸಿದರೆ ತಮಗೇ ಅನುಕೂಲವಾಗುತ್ತದೆ (ಪ್ಯವಮು. ೭೪). **ಹುಮ್ಮಸ:** ಕೇವಲ ಹರ್ಷ, ಸುಖ, ಹುಮ್ಮಸದಲ್ಲಿ ನಾವಿದ್ದುಬಿಟ್ಟರೆ ಅವುಗಳ ರುಚಿ ನಮಗೆ ಗೊತ್ತಾಗದೆ ಹೋಗಬಹುದು (ಗಾಳಿಗು. ೫೫೫); ನನಗೆ ಇನ್ನಾವುದರಲ್ಲೂ ಹುಮ್ಮಸವಿಲ್ಲ (ಚಿಟ್ಟಜೀ. ೧೯೭). **ಹುಮ್ಮಸು:** ರಾತ್ರಿ ತುಂಬಾ ಹುಮ್ಮಸಿನಲ್ಲಿ ನನ್ನ ಪತಿ ಕೇಳಿದರು (ತೇಮೋಡ. ೬೫). [?]

ಹುಯ್$_1$ 'ಪೊಯ್$_1$' ನೋ.

ಹುಯ್$_2$ 'ಪೊಯ್$_2$' ನೋ.

ಹುಯಲು 'ಪೊಯಲ್' ನೋ.

ಹುಯಸಲ 'ಪೊಯ್ಸಳ' ನೋ.

ಹುಯಿ$_1$ 'ಪೊಯ್$_1$' ನೋ.

ಹುಯಿ$_2$ 'ಪೊಯ್$_2$' ನೋ.

ಹುಯಿಗಡುಬು 'ಹೊಯ್ಗಡುಬು' ನೋ.

ಹುಯಿಲಿಡು 'ಪುಯ್ಯಲಿಡು' ನೋ.

ಹುಯಿಲುತಮಟೆ (ನಾ). ಕಾಳಗದ ಸಮಯದಲ್ಲಿ ಬಳಸುವ ಒಂದು ಬಗೆಯ ತಮಟೆ,—ರಣವಾದ್ಯ: ಕಾಲಾಳಿನ ಬೊಬ್ಬಾಟ ಹುಯಿಲುತಮಟೆಯ ಮುಂದೆ ಕೊಳಲು (ಸೌಂದಕಾ. ೯-೨೨).

[ಹುಯಿಲು (< ಪೊಯಿಲ್) + ತಮಟೆ (< ತಂಬಟ)]

ಹುಯಿಸು 'ಪೊಯಿಸು' ನೋ.

ಹುಯ್ಗಡುಬು 'ಹೊಯ್ಗಡುಬು' ನೋ.

ಹುಯ್ದು$_1$ 'ಪೊಯ್$_1$' ಪರಾ.

ಹುಯ್ದು$_2$ 'ಪೊಯ್$_2$' ಪರಾ.

ಹುಯ್ಯಲ್ 'ಪೊಯಲ್' ನೋ.

ಹುಯ್ಯಲಿಕ್ಕು 'ಪುಯ್ಯಲಿಕ್ಕು' ನೋ.

ಹುಯ್ಯಲಿಡು 'ಪುಯ್ಯಲಿಡು' ನೋ.

ಹುಯ್ಯಲು 'ಪೊಯಲ್' ನೋ.

ಹುಯ್ಯಲೇಳಿಸು (ಕ್ರಿ). ಗದ್ದಲವೆಬ್ಬಿಸು; ಗಲಾಟೆಮಾಡು: ಪಾಳಯವನೀಗಳೆ ಹೊಕ್ಕು ಹುಯ್ಯಲೇಳಿಸಿ ತುರುಕರನು ಕಯ್ಯಾರೆ ಕೊಂದು (ಕುರಾಸಾಂ. ೧೪-೫೭).

[ಹುಯ್ಯಲ್ (< ಪೊಯಲ್) + ಏಳಿಸು$_2$ (< ಏಟಿಸು)]

ಹುಯ್ಯಿ 'ಪೊಯ್$_2$' ನೋ.

ಹುಯ್ಯು$_1$ 'ಪೊಯ್$_1$' ನೋ.

ಹುಯ್ಯು$_2$ 'ಪೊಯ್$_2$' ನೋ.

ಹುಯ್ಲು 'ಪೊಯಲ್' ನೋ.

ಹುಯ್ಲುಗಳೆ (ಕ್ರಿ). ಗಲಭೆಯೆಬ್ಬಿಸು; ಗಲಾಟೆಮಾಡು: ಕಡುಕೋಪದಿಂದ ತಾ ರಿಪುಬಲವ ಹುಯ್ಲುಗಳೆವುತ ಬರುತಿರಲ್ಕೆ (ತುರಂಗ. ೬೨ ೩).

[ಹುಯ್ಲು (< ಪೊಯಲ್) + ಕಳೆ$_1$]

ಹುಯ್ಸು$_1$ 'ಪೊಯ್ಸು$_1$' ನೋ.

ಹುಯ್ಸು$_2$ 'ಪೊಯ್ಸು$_2$' ನೋ.

ಹುಯ್ಹಾಲು 'ಹೊಯ್ಹಾಲು' ನೋ.

ಹುರ್ (ನಾ). ಒಂದು ಅನುಕರಣಶಬ್ದ: ಸುರರ ಸಭೆ ಕಂಗಟ್ಟು ಬೆದರುತ ಅರೆ ಹುರೆಂದಬ್ಬರಿಸಿ ಓಡುತ ಭರದಿ ಬಂದರು ಹರಿಯಜೇಂದ್ರರು ಇರುವ ಸನ್ನಿಧಿಗೆ (ಶರಲೀ. ೯೫-೬).

ಹುರ$_1$ 'ಪುರ$_1$' ನೋ.

ಹುರ$_2$ (ನಾ). ಪಟ್ಟಣ; ನಗರ: ಕರುಳ ತೋರಣ ನೆತ್ತರ ಸಾರಣೆಯಿಂದ ಹುರವೆಸದುದು ಮಾಕಾಳಿಯಾ (ಸೂಬಸೋ. ೯-೩೦); ಎರಲೆಯ ಬೀಡೆಕ್ಕಲನ ಕೊ ಾರಂ . . . ಚಮರಿಪುರಂ ಹುರಂ (ಜಯಕಾ. ೧೫-೨೩). [< ಸಂ. ಪುರ]

ಹುರಕಲು 'ಹುರಿಕಲು' ನೋ.

ಹುರಕ್ಕಿ 'ಹುರಿಯಕ್ಕಿ' ನೋ.

ಹುರಗನಸೊಪ್ಪು (ನಾ). ಒಂದು ಬಗೆಯ ಸೊಪ್ಪು: ಒಂದು ಹರವಿ ಉದಕದಲ್ಲಿ ಒಂದು ಹಿಡಿ ಹುರಗನಸೊಪ್ಪ ಹಾಕಿ ಕಾಸಿ ಮೈಯಲ್ಲಿ ಎರೆಯಲು ಎಲ್ಲಾ ಮಾಣ್ಗುಂ (ವಿಷ್ಣು. ೧೦೯). [? + ಸೊಪ್ಪು]

ಹುರಗಲು, ಹುರಿಗಿಲು, ಹುರುಗಿಲು (ನಾ). ಒಂದು ಬಗೆಯ ಮರ: ಹುರಗಲು ಮರ, ಮಾಷೂಡ್ಲ, ಮಾಸಿ (ಮೃಡಿಗಿ. ೨೦-೩೭೩). **ಹುರಿಗಿಲು:** ಲೊಕ್ಕಿಯಮ್ಮೆಗುಡಿ ಮುಳ್ಳಿಯು ಸಾಸವೆ ಮುಪ್ಪು ಹುರಿಗಿಲುಂ ಕುರುಟೆನೆಲಾವ ಬೊಕ್ಕಳಿಕೆ (ಅಶ್ವಮೇ. ೯-೫೩). **ಹುರುಗಿಲು:** ಹುರುಗಿಲು ಬೇರು . . . ಕಷಾಯವಂ ಮಾಡಿ ತೆಗೆದುಕೊಳ್ಳಲು ಶ್ಲೇಷ್ಮಜ್ವರ ನಾಶವಾಗುವುದು (ಸಕವೈ. ೮೯). 'ಹುನಿಗಿಲು' , 'ಪುಲಿಗಿಲ್' ಪರಾ.

ಹುರಜಿ 'ಪೊರಜೆ' ನೋ.

ಹುರಪಳಿಸು , ಹುರುಪಳಿಸು (ಕ್ರಿ).(ಜ್ವಾಲೆ, ಶಾಖ ಮುಂತಾದುವುಗಳಿಂದ) ಸೀಯು; ಕರಿಕಾಗು: ತಂಗಿಯೂ ಅವ್ವನ ಹೆದರಿಕೆಯ ಝಳಕ್ಕೆ ಹುರವಳಿಸಿ ಬೆಳೆಯದೆ ಕ್ರಮಶಃ ಕಮರಿಹೋಗುತ್ತಿದ್ದಾಳೆ (ಹೂಸಕ್ಷ. ೧೯೭); ಬಿಸಿಲು ಬೇಗೆಗೆ ನೊಂದು ಹುರಪಳಿಸಿ ಪಾತಾಳಲೋಕವನ್ನು ಸೇರಲು ಪ್ರಯತ್ನಿಸುವ ಮಹಾಸರ್ಪವೊಂದರಂತೆ ಹೊಳೆ ನೆಲದೊಡಲನ್ನೇ ಸೀಳಹತ್ತಿತು (ಗ್ರಾಮಾಯ. ೫೫೩). **ಹುರುಪಳಿಸು:** ಬಿಸಿಲೇರಿತು, ಬಾಯಾರಿತು ಹುರುಪಳಿಸಿತು ನೆಲವು, ಗುಟುಕರಿಸಿತು ಜಲವು (ನೆಲಮು. ೭-೨).

[ಹುರಪಳ್$_0$ (IP <— ಮರಾ. ಹುರಪಳ) + - ಇಸು$_3$]

ಹುರಪು, ಹುರುಪು$_1$, ಹುರುಪೆ (ನಾ). ೧. (ಮರ, ಧಾನ್ಯ ಮುಂತಾದುವುಗಳ) ಸಿಪ್ಪೆ; ಹೊರಪದರ: ಬೂರಗಮರದ ಹುರಪನ್ನೂ ಅರಿಸಿನ ನೀಲೀಬೀಜ ತ್ರಿಫಲಂಗಳನ್ನೂ ಚೂರ್ಣವಂ ಮಾಡಿ (ಸೌಗಂಧಿ. ೪೩೬ - ೧೫೦). **ಹುರುಪ್ಪು:** ೧. ಹುಣಸೇಬೀಜದ ಹುರುಪು, ಮಾವಿನ ಬೀಜದ ತಿರುಳು . . . ಚೂರ್ಣವಂ ಮಾಡಿ ಹಾಕಿ ಬಿಸಿನೀರಿಂ ಕಲಸಿ ಗುಲಗಂಜಿ ಪ್ರಮಾಣ ಗುಳಿಗೆಯಂ ಮಾಡಿ (ಸಕವೈ. ೩೦೯). ೨. ಕವಚ; ಮೇಲ್ಪದರ: ಇದರಲ್ಲಿ ಮಾನಿನ ಹುರುಪೊಂದು (Scale) ಹಕ್ಕಿಯ ರೆಕ್ಕೆಯೊಂದು, ಕರಡಿಯ

ಕೂದಲೊಂದು ಇವೆ (ದೇಶಾಂಶ. ೮೧). **ಹುರುಪೆ:** ೩. ಪೊರೆ; ಹಕ್ಕಳೆ: ಅನೇಕ ಪಕ್ಷಿಗಳ ಮುಂಗೈ ಮತ್ತು ಬೆರಳುಗಳ ಮೇಲೆ ಸರೀಸೃಪಗಳಿಗಿರುವಂತಹ ಹುರುಪೆಗಳಿವೆ (ಪಕ್ಷಿ. ೫). 'ಹುರುಕು' ಪರಾ. [ದೇ. ‖ ತಮಿ. ಪುಱಮ್ಬು = ಹೊರಭಾಗ]

ಹುರಮಂಜ 'ಹುರಮುಂಜಿ' ನೋ.

ಹುರಮಂಜಿ 'ಹುರಮುಂಜಿ' ನೋ.

ಹುರಮಂಜು 'ಹುರಮುಂಜಿ' ನೋ.

ಹುರಮುಂಜಿ, ಸುರಮಂಜ, ಹುರಮಂಜಿ, ಹುರಮಂಜು, ಹುರಿಮಂಜು, ಹುರುಮಂಜಿ, ಹುರುಮಂಜು (ನಾ). ೧. ಒಂದು ಬಗೆಯ ಬಣ್ಣ; ಮಾಸಲು ಕಂದುಬಣ್ಣ; ಕಾವಿಬಣ್ಣ: ಕಾಳು ದೊಡ್ಡದಿದ್ದು ಜಡ ಮತ್ತು ತುಂಬಿದ್ದಿರಬೇಕು ಬಣ್ಣ ಹುರಮುಂಜಿಯಿದ್ದು . . . ಮಿಂಚುವದಿರತಕ್ಕದ್ದು (ಮುಂಬವ್ಯಾ. ೩೪). **ಹುರಮಂಜ:** ೧. ಕರಯೆಳ್ಳು ಅಚ್ಚಕರ ಇದ್ದು ಕೆಂಪಳ್ಳು ಹುರಮಂಜ ಬಣ್ಣದ್ದಿರಬೇಕು (ಮುಂಬವ್ಯಾ. ೩೫). ೨. ಕೆಮ್ಮಣ್ಣು; ಕೆಂಪುಮಣ್ಣು: ತರದಿರುವ ಕಟ್ಟಿಗೆಯ ಕಂಭಗಳಿಗೂ ಅಡ್ಡಹಲ್ಲುಗಳಿಗೂ ರಾಳವೆಣ್ಣೆ ಮೇಣ ಹುರಮಂಜನ್ನು ಕುದಿಸಿ ಹಚ್ಚಬೇಕು (ಕೃಷಿಪ್ರ. ೧೦೯). **ಹುರಮಂಜಿ:** ೧. ಮಳವನಿಯೊಳಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೆ (ವಚರ. ೮೮). ೨. "ಹುರಮಂಜಿ = ಕೆಂಪುಮಣ್ಣು" (ಜಾನಕೋ. ೫೮). **ಹುರಮಂಜು:** ೨. ಚಾವಡಿಗೆ ಸುಣ್ಣ ಹುರಮಂಜು ಹಚ್ಚಿಸುತ್ತಾರೆ (ಗಾಳಿಗು. ೪). **ಹುರಿಮಂಜು:** ೨. ಗೋಡೆಗೆಲ್ಲ ಸುಣ್ಣಬಿಡಿಯು ಪಟ್ಟಿಯಾಗಿ ಹುರಿಮಂಜನ್ನು ಇಳಿಬಿಟ್ಟಿದ್ದಾರೆ (ಪೂಪಕ್ಷ. ೧೯೦) **ಹುರುಮಂಜಿ:** ೧. ಹುರುಮಂಜಿಯ ಮುತ್ತಿನ ಕಂಠಮಾಲೆಯಂ . . . ತಳೆದೊಪ್ಪಿದನುನ್ನತೋತ್ಸವಂ (ಚಕ್ಕದೇ. ೧೨೦); ಕಂಗೊಳಿಸುವಾ ತೋರಾಯ ಹುರುಮಂಜಿನಾ ನಾಸಾಗ್ರಮಣಿಗಳಂ (ಪಠಶಂ. ೮-೮). **ಹುರುಮಂಜು:** ೧. ಮೂಗಿನಲಿನಲಿವ ಹುರುಮಂಜು ಮುತ್ತಿನ ಮುರುಕಲಾಡಿ (ಶ್ರೀಕೃವಾ. ೬೪).

[← ಮರಾ. ಹುರಮೂಜ್, ಹುರಮೋಜ್, ಪಾರ. ಹುರ್ಮುಂಝಿಯಾ]

ಹುರವಿನಮರಳು (ನಾ). ಒಂದು ಬಗೆಯ ಮಿಾನು: ಮಿಾನು: ಮರವೆ . . . ಮರಪಕ್ಕೆ, ಅರುಳಿ, ಹುರವಿನಮರಳು, ಕಂಚಿನಮರಲು (ನಮ್ಮನು. ೨೪೦). [?]

ಹುರಹುರ, ಹುರುಹುರು (ನಾ). ಒಳಗುದಿ; ತೀವ್ರಚಿಂತೆ; ಕಾಳಜಿ: ಇದಕ್ಕೆ ಏನನ್ನುವನೋ ಎಂಬ ಹುರಹುರ ಅವರ ಮನಸ್ಸಿನಲ್ಲಿ ಇದ್ದೇ ಇತ್ತು (ಅನ್ನ. ೨೧೭). **ಹುರುಹುರು:** ಬಳಕರ ಬಗ್ಗೆ ಮನಸ್ಸಿಗೆ ಹುರುಹುರು ಹತ್ತಿಬಿಟ್ಟಿತ್ತು (ಸ್ಮೃತಿ. ೧೫೫).

[← ಮರಾ. ಹುರಹುರ]

ಹುರಿ$_1$ 'ಪುರಿ$_1$' ನೋ.

ಹುರಿ$_2$ 'ಪುರಿ$_3$' ನೋ.

ಹುರಿಕಟಿಸು (ಕ್ರಿ). ಹುರುಪುಗೊಳ್ಳು; ಉತ್ಸಾಹಭರಿತವಾಗು: ಹುರಿಕಟಿಸಿ ರಕ್ಕಸರು ಹೊಕ್ಕರು . . . ನಡೆದಡರಿದರು ಖಳನ (ತೊರಠಾ. ೬-೨೬-೨೯); ಪಟುಭಟರು . . . ಹುರಿಕಟಿಸಿ ಬೊಬ್ಬಿರಿದು ಮಾರ್ಮಲೆತರು (ತುರಂಗ. ೨೬-೨೫).

[< ಹುರಿಗಟ್ಟು + - ಇಸು$_3$]

ಹುರಿಕಟ್ಟು (ನಾ). ೧. ಹೊಸೆದ ದಾರದ ಕಟ್ಟು: ನೀಲಿವರ್ಣದ ಹುರಿಕಟ್ಟುಗಳಿಂದ ಸಜ್ಜುಗೈದ ನಡುಪಟ್ಟಿಯ ಸಮವಸ್ತ್ರವನ್ನು ಧರಿಸಿದ್ದಳು (ಪುನರು. ೪) ೨. ಪುಷ್ಪವಾದುದು; ಕಟ್ಟುಮಸ್ತು: ಆತನ ನಿಲುವಿಕೆ ಎತ್ತರ, ಮೈಕಟ್ಟು ಹುರಿಕಟ್ಟಿನದು (ಕಗದ್ಯ. II, ೪೮); ಹುರಿಕಟ್ಟಾದ ಮೈ (ಜಮಾನ್ಯಾ. ೩೪). ೩. ದೃಢತೆ: ನನ್ನ ಸಂಸಾರದ ಹುರಿಕಟ್ಟಿನ ಪಕ್ಕವ್ಯವಸ್ಥೆಯ ಮಧ್ಯದಲ್ಲಿ ಸಣ್ಣದೊಂದು ಜೀವಕಣ ಎಲ್ಲಿಂದಲೋ ಹಾರಿ ಬಂದು ಬಿದ್ದಿತು (ಇಪ್ರಕ. ೪೩೨). [ಹುರಿ$_2$(< ಪುರಿ$_3$) + ಕಟ್ಟು$_2$]

ಹುರಿಕರಿ (ನಾ). ೧. ಕಂದಿಹೋಗುವಿಕೆ: ಹುರಿಕರಿಯಾಗಿ ಬಂಬಲುಬಾಡಿದವಳನು ಕರವ ಪಿಡಿದು . . . ಕುಳ್ಳಿರಲೊರಸಿದನು ಕಂಬನಿಯ (ನಾಗಚ. ೧೧-೬೨); ೨. ನಾಶ; ಹಾನಿ: ಡಂಭನು ಸಕಲಲೋಕವ ಹುರಿಕರಿಯ ಮಾಡಿದನು (ಕೋಗಯಾ. ೯-೮೦).

[ಹುರಿ$_1$ (< ಪುರಿ$_1$) + ಕರಿ$_2$]

ಹುರಿಕಲು, ಹುರಕಲು, ಹುರುಕಲು (ನಾ). ಹುರಿದು ಉಪ್ಪು, ಕಾರ ಹಾಕಿ ತಯಾರಿಸುವ ಕಡಲೆ, ಹುರುಳಿ, ಹೆಸರು ಮೊದಲಾದ ಕಾಳುಗಳ ಮಿಶ್ರಣ; ಹುರಿಗಾಳು: (ಪ). **ಹುರಕಲು:** ಚಳಿಗಾಲದಲ್ಲಿ ಉಪಯೋಗಿಸಲು ಹುರಕಲು ತಯಾರುಮಾಡಬೇಕು (ರೂಢಿ). **ಹುರುಕಲು:** ಕಡಲೆ ತಡುಗುಣ ಹೆಸರು ಕುಸುವ ಮೊದಲಾದ ಹುರುಕಲಂ ರುಚಿ ನೋಡಿ (ಸೌಗಂಧಿ. ೩೭-೧೧); ಹುರುಕಲ ಕುರುಕುತ್ತ (ಸೌಗಂಪ. ೨-೧೧). [ಹುರಿ$_1$ (< ಪುರಿ$_1$) + - ಕಲ್ಲು$_2$ (< - ಕಲ್$^*_4$)]

ಹುರಿಕಾತಿ (ನಾ). ಉತ್ಸಾಹಶೀಲೆ: ನನ್ನ ಮನದ ಮಚ್ಚಿನವಳಾ ವನಜವದನೆ ಹುರಿ [ಪಾಠಾಂ.ರು] ಕಾತಿ [ಪಾಠಾಂ. ರ್ತಿ] ನೆನೆಯೆ ಬಹಳು ನನ್ನ ಬಳಗೆ (ಕುರಾಸಾಂ. ೨೪-೩೩).

[ಹುರಿ$_2$(< ಪುರಿ$_3$) + - ಕಾತಿ$_3$]

ಹುರಿಕಾಯಿಸು (ಕ್ರಿ). ಹುರಿದುಂಬಿಸು; ಪ್ರಚೋದಿಸು: ನಾನು ನಾಗಯ್ಯನೆಟ್ಟರನ್ನು ಹುರಿಕಾಯಿಸಿಬಿಟ್ಟಿದ್ದೇನೆ. ನಾಗಯ್ಯನೆಟ್ಟರೂ! ಪಾತಾಳಗರುಡ ಅವರು (ಪಹಸ. ೬೫).

[ಹುರಿ$_2$ (< ಪುರಿ$_3$) + ಕಾಯ್$^*_2$ + ಇಸು$_3$]

ಹುರಿಕೊಳಿಸು 'ಪುರಿಗೊಳಿಸು' ನೋ.

ಹುರಿಗ (ನಾ). ಮಾಸಲುಕಂದುಬಣ್ಣದ ಹಸು; ಕಾವಿಬಣ್ಣದ ಹಸು: ಬಟ್ಟ ಗಡಸು ಕೆಂದ ಹುರಿಗ ಕಾರಿಯು ಬೆಳ್ಳ ನೆಟ್ಟ ಕೊಂಬಿನ ಕಾರಿ ಜಾಲೆ ದಿಷ್ಟಿಸಿ ನೋಡುವ ಪಶುಗಳು ಎಸೆದವು (ಮಾದೇಸಾಂ. ೧-೪೧). 'ಹುರಮುಂಜಿ' ಪರಾ. [?]

ಹುರಿಗಟ್ಟು (ಕ್ರಿ). ಉತ್ಸಾಹಗೊಳ್ಳು; ಹುರುಪು ಹೊಂದು: ಅಲಗನುಗಿದನು ಮದನ ಮಂದಾನಿಲನು ಹುರಿಗಟ್ಟಿದನು (ತೊರಠಾ. ೧-೫-೩೯): ಧೈರ್ಯದಿಂದೆ ಒಡನೊಡನೆ ಹುರಿಗಟ್ಟಿಯುರುಬುವಸುರಾಳಿಯಂ ತಡೆತಡೆದು ಕಾದುತಿರ್ದಂ (ಚಿಬಪ್ರ.೪೯-೪೦).

[ಹುರಿ$_2$ (< ಪುರಿ$_3$) + ಕಟ್ಟು$_1$]

ಹುರಿಗಡಲೆ 'ಪುರಿಗಡಲೆ' ನೋ.

ಹುರಿಗಡುಬು 'ಪುರಿಗಡುಬು' ನೋ.

ಹುರಿಗಾತಿ (ನಾ). ತೆಂಗಿನ ನಾರಿನಿಂದ ಮಾಡಿದ ಹುರಿ: ಅದಕ್ಕೆ ಬೆಲಗುಗಳೂ . . . ಹುರಿಗಾತಿಯೂ ಹಂಚುಗಳೂ ತಲೆಹಂಚುಗಳೂ ಬೇಕಾಗುತ್ತವೆ (ಮುಂಬಯಿ. ೪-೧೧೭). [ಹುರಿ$_2$ (< ಪುರಿ$_3$) + ಕಾತಿ$_2$ (< ಕತ್ತ$_1$)]

ಹುರಿಗಾವಲಿ (ನಾ). ಧಾನ್ಯಗಳನ್ನು ಹುರಿಯುವ ಓಡು,—ಬಾಣಲಿ: "ಅಂಬರೀಷಃ, ಭ್ರಾಷ್ಟ್ರಂ - ಈ ೨ ಹುರಿಗಾವಲಿ" (ಹಲಾಯು. ೩೨-೧೫೮); ಕಾಯ್ದು ಕರ್ಬುನದ ಹುರಿಗಾವಲಿಯೊಳಿಟ್ಟು ಹುರಿವುದುಂ (ಶಾಂತೀಶ್ವ. ೯-೧೧೦ ವ).

[ಹುರಿ$_1$ (< ಪುರಿ$_1$) + ಕಾವಲಿ$_2$]

ಹುರಿಗಾಳು (ನಾ). = ಹುರಿಕಲು: ತಂದಿದ್ದ ಬರೋಟಿಗಳನ್ನೂ ಹುರಿಗಾಳನ್ನೂ ಶಾರದಮ್ಮನವರು ಎಲ್ಲರಿಗೂ ಹಂಚಿದರು (ಮೂಶಾನ. ೧೨೩).

[ಹುರಿ$_1$ (< ಪುರಿ$_1$) + ಕಾಳು$_2$ (< ಕಾಟ್$^*_2$)]

ಹುರಿಗಿಲು 'ಹುರಗಲು' ನೋ.

ಹುರಿಗುಂದು (ಕ್ರಿ). ಬಲ ಕಡಿಮೆಯಾಗು; ಶಕ್ತಿಹೀನವಾಗು: ಬಿಂದ ನುಲಿಯಂತೆ ಹುರಿಗುಂದದಂತಿಪ್ಪೆನು (ಮಹಾದೇ. ಬ. ೯೯ ೨೩೦). [ಹುರಿ$_2$ (< ಪುರಿ$_3$) + ಕುಂದು$_1$]

ಹುರಿಗುಟ್ಟು (ಕ್ರಿ). ಉತ್ಸಾಹ ತೋರು; ವಿಜೃಂಭಿಸು: ಸಂದಣಿಯ ವಿಪ್ರರೆಲ್ಲರ್ ನೆರೆದು ಹುರಿಗುಟ್ಟಿ ಆಲಿ ಬೊಬ್ಬೆಯ ಕುಡುತಲಿದ್ದರು (ಶಿವಸಂ. ೨೬೨-೩೨೮); ಭೂತಗಣಂಗಳ್ ಕಂಡುಱೆ ಹುರಿಗುಟ್ಟಲ್ ಹೇವರಿಸಿದನು (ವೀರೇಶ. ೨-೩೭).

[ಹುರಿ$_2$ (< ಪುರಿ$_3$) + ಕುಟ್ಟು$_1$]

ಹುರಿಗೂಡು (ಕ್ರಿ). ೧. ಹೊಸೆದ ದಾರಗಳು ಒಟ್ಟಿಗೆ ಸೇರು; ಅನೇಕ ಎಳೆಗಳು ಕೂಡಿ ಬಲವಾಗು: ಆಜುಗೇಣಗಲದ ಗಾತ್ರದ ಕುಂಭವ ಬಿಟ್ಟು ಹುರಿಗೂಡವ ಕಣ್ಣಿಯಲ್ಲಿ ಸೇದುತ್ತಿರಲಾಗಿ (ಮೋಮಾ. ೧೯೮-೭೫೯): ಆಲಿಂಗಿಸಿದವು ಹೂಗಣೆಯಂ ಹುರಿಗೂಡಿದ ಸಮ್ಮೋಹನಪಾಶದ ತೆಱದಿ (ಜಯಿಕಾ. ೧೦-೨೮). ೨. ಹುರುಪುಗೊಳ್ಳು; ಬಲಗೊಳ್ಳು: ನಿಮಗೀ ಹುಗ್ಗಿಗರು ಹುರಿಗೂಡಿ ಗೆಲಿದಿನ್ನಿಳೆಯ ಕೊಡಿಸುವರ (ಕುವ್ಯಾಭ. ೧-೫೮): ಅನುಮಾನವೇತಕೀ ಕಾರ್ಯ ಹುರಿಗೂಡಿದೊಡೆ ಮುಂದಕ್ಕೆ ನಮಗಶಕ್ಯ (ಸಮ್ಯಕೌ. ೨-೧೬). [ಹುರಿ$_2$ (< ಪುರಿ$_3$) + ಕೂಡು$_1$]

ಹುರಿಗೆಜ್ಜೆ (ನಾ). ಹುರಿಯಲ್ಲಿ ಕಟ್ಟಿದ ಸಣ್ಣಸಣ್ಣ ಗೆಜ್ಜೆ: ಹುರಿಗೆಜ್ಜೆ ಸರಗೆಜ್ಜೆ ಸರಕೆ ಸಾವಿರಗೆಜ್ಜೆ (ನಾಪದ. ೨೨೦). [ಹುರಿ$_2$ (< ಪುರಿ$_3$) + ಗೆಜ್ಜೆ$_1$]

ಹುರಿಗೆಡು (ಕ್ರಿ). ಉತ್ಸಾಹ ಕುಂದು; ಹುರುಪು ಇಲ್ಲವಾಗು: ಹುರಿಗೆಡದೆ ಕದನದೊಳ್ ತರಿದರಿದು ಕೈದಣಿಯೆ (ತುರಂಗ. ೫೬-೪೮). [ಹುರಿ$_2$(< ಪುರಿ$_3$) + ಕೆಡು$_1$]

ಹುರಿಗೈ 'ಪುರಿಗೆಯ್' ನೋ.

ಹುರಿಗೊಳ್ 'ಪುರಿಗೊಳ್' ನೋ.

ಹುರಿಗೊಳಿಸು 'ಪುರಿಗೊಳಿಸು' ನೋ.

ಹುರಿಗೊಳ್ಳು 'ಪುರಿಗೊಳ್' ನೋ.

ಹುರಿಟ್ಟು 'ಹುರಿಹಿಟ್ಟು$_1$' ನೋ.

ಹುರಿತ (ನಾ). ಹುರಿಯುವಿಕೆ: ಋಜಿ, ಭೃಜ-ಭರ್ಜನೇ, ಹುರಿತದೊಳ್ (ಕಾಶಕೃ. ೯೬).

[ಹುರಿ$_1$ (< ಪುರಿ$_1$) + - ತ$_3$]

ಹುರಿದುಂಬಿಸು (ಕ್ರಿ). ಪ್ರೋತ್ಸಾಹಿಸು; ಉತ್ಸಾಹ ನೀಡು: ಇನ್ನೂ ಹೆಚ್ಚಿಗೆ ತಿಳಿಯಲೋಸುಗ ಅವನನ್ನು ಹುರಿದುಂಬಿಸಿದೆ (ಬಾಣಅ. ೮೦); ಸೈನಿಕರಿಗೆ ಹೇರಳವಾದ ಧನವನ್ನು ವಸ್ತ್ರಾಭರಣಗಳನ್ನು ಕೊಟ್ಟು ಹುರಿದುಂಬಿಸಿದನು (ಶ್ರೀರಾಯ. ೧೨೪).

[ಹುರಿದುಂಬು + - ಇಸು$_3$]

ಹುರಿದುಂಬು (ಕ್ರಿ). ಹುರುಪುಗೊಳ್ಳು; ಉಬ್ಬು: ಅತ್ಯಂತ ಉತ್ಸಾಹದಿಂದ ಹುರಿದುಂಬಿ ಹಾಡುತ್ತಾ ನರ್ತಿಸಲಾರಂಭಿಸಿದಳು (ಝಾಣಿ. ೬೬); ಅನುಯಾಯಿಗಳು ಉತ್ಸಾಹದಿಂದ ಹುರಿದುಂಬಿದರು (ಪೃಮಹ. ೫೦). [ಹುರಿ$_2$ (< ಪುರಿ$_3$) + ತುಂಬು$_1$]

ಹುರಿನೇಣು 'ಪುರಿನೇಣ್' ನೋ.

ಹುರಿಬಲಿ (ಕ್ರಿ). ದಾರವು ಚೆನ್ನಾಗಿ ನುಲಿಯಾಗು; ಹುರಿಗೊಳ್ಳು: ನೆಱೆ ಬಿಗಿಯೆ ಮೈ ಬಾಸುಳೇಳದ ಹುರಿಬಲಿದ ನೇಣ್ಗೋಂಕಿದೊಡೆ ಹೊಗಮಸಗದೆದೆಗಿಚ್ಚು (ಕುವ್ಯಾವಿ. ೩-೧೦). [ಹುರಿ$_2$ (< ಪುರಿ$_3$) + ಬಲಿ$_1$ (< ಬಲ್$_1$)]

ಹುರಿಬಾಡು (ನಾ). ಹುರಿದ ಮಾಂಸ; ಸುಟ್ಟ ಮಾಂಸ: ಒಬ್ಬಾಕೆ ಹಂದಿಯ ಹುರಿಬಾಡನ್ನೂ ಮಾರುತ್ತಿದ್ದಳು (ಪುನರು. ೪೮೭). [ಹುರಿ$_1$ (< ಪುರಿ$_1$) + ಬಾಡು$_2$]

ಹುರಿಬಿಡು (ಕ್ರಿ). ಉತ್ಸಾಹವನ್ನು ನೀಗು; ಹುರುಪು ಕಳೆದುಕೊಳ್ಳು: ಗಱಗಟ್ಟಿ ರಥಿಕರು ಹುರಿಬಿಡದೆ ಬಿಗುಹಿನಲಿ ಭಾಷೆಯ ಮಾಡಿ ತಮ್ಮೊಳಗೆ ಸರಳ ಸೂಸಿದರೆಡೆ ಬಲದಲಿ (ಕುವ್ಯಾದ್ರೋ. ೬-೧೮) [ಹುರಿ$_2$ (< ಪುರಿ$_3$) + ಬಿಡು$_1$]

ಹುರಿಬುತ್ತಿ (ನಾ). ಹುರಿದ ಅಕ್ಕಿಯಿಂದ ತಯಾರಿಸಿದ ತಂಬಿಟ್ಟು ಇತ್ಯಾದಿ ಪದಾರ್ಥ,— ಬುತ್ತಿ: ಹಸುರಂಬಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ . . . ಆಯ್ದು ಕುಱುಕುವ ಹೇಸಿದ್ಕೆವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ (ಬಸವ. ೫೫೬).

[ಹುರಿ$_1$ (< ಪುರಿ$_1$) + ಬುತ್ತಿ]

ಹುರಿಭಂಗಿ (ನಾ). ಹುರಿದ ಭಂಗಿಸೊಪ್ಪು; ಸುಟ್ಟಿರುವ ಗಾಂಜಾ: ಹುರಿಭಂಗಿಯ ಸೊಕ್ಕೇಱಿ . . . ಕದನವ ಬಱಿದೆ ಗಂಟಕ್ಕಿದ ಭಂಡೆ (ಕಂನವಿ. ೬-೧ ೮೫).

[ಹುರಿ$_1$ (< ಪುರಿ$_1$) + ಭಂಗಿ$_1$]

ಹುರಿಮಂಜು 'ಹುರಮುಂಜಿ' ನೋ.

ಹುರಿಮರಳು 'ಪುರಿವಳಲ್' ನೋ.

ಹುರಿಮಳಲು 'ಪುರಿವಳಲ್' ನೋ.

ಹುರಿಮೀಸೆ (ನಾ). ಹೊಸೆದು ತಿರುವಿದ ಮೀಸೆ; ಹುರಿಗೊಳಿಸಿದ ಮೀಸೆ: ಹುರಿಮೀಸೆಯ ಮೇಲೆ ಕೈಯಾಡಿಸುತ್ತಾ ದೊಪ್ಪನೆ ಮಂಚದ ಮೇಲೆ ಕುಳಿತು ಕಾಲು ಕುಣಿಸತೊಡಗಿದ್ದ (ದೇವಹಂ. ೧೫೩). [ಹುರಿ$_2$ (< ಪುರಿ$_3$) + ಮೀಸೆ]

ಹುರಿಮೆಣಸುಗಡಲೆ (ನಾ). ಹುರಿದು ಕಾರ ಹಚ್ಚಿರುವ ಕಡಲೆ: ಹುರಿಮೆಣಸು ಗಡಲೆ ಸಕ್ಕರೆ ಶುಂಠಿ ಕಬ್ಬುವಿಲ್ಲೆಗಳನುಱೆ ಮಾಱುವರ್ ಬರುತಿರ್ದರು (ಚೆಬಪು. ೪೭-೪೨). [ಹುರಿ$_1$ (< ಪುರಿ$_1$) + ಮೆಣಸು (< ಮೆಟಸು) + ಕಡಲೆ]

ಹುರಿಯಕ್ಕಿ, ಹುರಕ್ಕಿ (ನಾ). ಹುರಿದ ಅಕ್ಕಿ: ಹುರಿಯ[ಪಾಶಾಂ. ಯಿ]ಕ್ಕಿ ಹುರಿ ಗಡಲೆಗಳ ಹುಡಿಯನು ಒತ್ತರಿಸಿ . . . ಪರಿಮಳವಿಕ್ಕಿ ಕಟ್ಟಶನಮಂ ಮಾಳ್ಪುದು (ಸೂಪಶಾ. ೩-೧೭): ಹುರಿಯಕ್ಕಿಗಂಜಿಯಂ ಪಥ್ಯಮನಿಕ್ಕಿಸುವುದು (ಸಕವೃ. ೧೫೨). **ಹುರಕ್ಕಿ**: ಹುರಕ್ಕಿಯ ಹೋಳಿಗೆ, ಅಂಬೊಡೆ, ಗಾರಿಗೆ . . . ಮೊದಲಾದವುಗಳನ್ನು ಮಾಡಿಟ್ಟುಕೊಂಡು ಸಿದ್ಧಳಾದಳು (ಹೂಬಿಸಿ. ೭೪). [ಹುರಿ$_1$(< ಪುರಿ$_1$) + ಅಕ್ಕಿ$_1$]

ಹುರಿಯಳಿ (ಕ್ರಿ). ಬಿಗಿ ಕಳೆದುಕೊಳ್ಳು; ಸಡಿಲವಾಗು: ನೆನೆದಿಹೆನೆಂಬ ಭ್ರಾಂತು ಹುರಿಯಳಿದು ಆ ನೆನಹೇ ತಾನಾಗಿ (ಮೋಳಿಮಾ. ೧೧೦-೪೭೬).

[ಹುರಿ$_2$ (< ಪುರಿ$_3$) + ಅಳಿ$_1$(< ಅಱಿ$_1$)]

ಹುರಿಯಾಳು (ನಾ). ೧. ಕಟ್ಟಾಳು; ವೀರಭಟ: ವೀರಮಾಚಣ್ಣ ಕರವಾಳುಬಸವನಿಗೆ ಧೀರಕಾಯಕದ ಹುರಿಯಾಳು (ಕನ್ನಡಾ. ೨೪೬); ನಮ್ಮ ಪಡೆಯ ಹುರಿಯಾಳುಗಳು ಮದುವೆಯ ದಿವಸ ಪಡೆಗೆಲ್ಲ ಹಬ್ಬದೂಟ ಉಣಿಸಿದರು (ಸವಪ. ೧೩೧). ೨. ಸ್ಪರ್ಧೆಗೆ ನಿಂತಿರುವವನು; ಉಮೇದುವಾರ: ಚರ್ಚಾಕೂಟದ ಮಂತ್ರಿಪದಕ್ಕೆ ಹುರಿಯಾಳಾಗಿ ನಿಲ್ಲುವೆಯಾ? (ಸಂಜೀವಿ. ೪೬); ಸಸ್ಯವಿಜ್ಞಾನಪೀಠಕ್ಕೆ . . . ಹುರಿಯಾಳಾಗಿ ಆಯ್ಕೆಗೊಳ್ಳಬೇಕೆಂದು ಭಗೀರಥಪ್ರಯತ್ನ ಮಾಡಿದರು,(ಸಸ್ಯಕ. ೯).

[ಹುರಿ$_2$ (< ಪುರಿ$_3$) + ಆಳು$_3$ (< ಆಳ್$_3$)]

ಹುರಿಯಿಸು, ಹುರಿಸು (ಕ್ರಿ). ಹುರಿಯುವಂತೆ ಮಾಡು: ಬಿತ್ತಿದ್ದ ಬೀಜವ ನಾಯ್ದುದಕದಿಂದದ್ದಿ ತೊಳೆತಂದಾಗ ಹುರಿಯಿಸಿ ಮಿದಿಸಿ (ಬಸಪು. ೨೬-೪೯). **ಹುರಿಸು**: ಕಾವಲಿಯೊಳು ಹಾಕಿ ಹುರಿಸುವ ಯಮನು (ಪುರಂದ. ೧-೧೩೪-೪).

[ಹುರಿ$_1$ (< ಪುರಿ$_1$) + - ಇಸು$_3$]

ಹುರಿಯುರುಳು (ನಾ). ಹೊಸೆದ ನೇಣು,—ಹಗ್ಗ: ಹುರಿಯುರುಳೆ ಹಾವಲ್ಲ ವಾದೊಡಂ ಮಬ್ಬಿನಲಿ ಹರಿದಾಡಿದಂತಾಗೆ (ಮಂಕುಕ. ೩೯೧).

[ಹುರಿ$_2$(< ಪುರಿ$_3$) + ಉರುಳು$_3$ (< ಉರಿಲ್)]

ಹುರಿಯೇರಿಸು 'ಹುರಿಯೇಱಿಸು' ನೋ.

ಹುರಿಯೇರು 'ಪುರಿಯೇಱು' ನೋ.

ಹುರಿಯೇಱಿಸು, ಹುರಿಯೇರಿಸು (ಕ್ರಿ). ೧. ಉತ್ಸಾಹಗೊಳಿಸು; ಹುರಿದುಂಬಿಸು: ಸೇನೆಯ ಹಿಂಡೊಡೆಯದೋಜೆಯಲಿ ಹುರಿಯೇಱಿಸಿ . . . ಸಮರಕೆ ನಡೆದನಾ ಭೀಷ್ಮ (ಕುವ್ಯಾಭೀ. ೯-೮). **ಹುರಿಯೇರಿಸು**: ೨. ವೃದ್ಧಿಗೊಳಿಸು; ಹೆಚ್ಚಿಸು: ಮಹಾರಾಜರ ಸಂದೇಹವನ್ನು ಹುರಿಯೇರಿಸುವ ವಿಲಕ್ಷಣ ಸಂದರ್ಭವೇನಾದರೂ . . . ಸಂಭವಿಸಿತೆ? (ವೀರಬಂ. ೮೦). [ಹುರಿಯೇಱು (< ಪುರಿಯೇಱು) + - ಇಸು$_3$]

ಹುರಿಯೇಱು 'ಪುರಿಯೇಱು' ನೋ.

ಹುರಿಯೊಟ್ಟೆ, ಹೊರಿಯೊಟ್ಟೆ (ನಾ). (ಕರಾ) ಅಕ್ಕಿ, ಬತ್ತ, ಧಾನ್ಯ ಮುಂತಾದುವುಗಳನ್ನು ಹುರಿಯಲು ಬಳಸುವ ಹೆಂಚು, ಬಾಣಲೆ ಇತ್ಯಾದಿ. **ಹೊರಿಯೊಟ್ಟೆ**: ಹೊರಿಯೊಟ್ಟೆಯಲ್ಲಿ ಎರಡು ಮುಷ್ಟಿ ನೆನೆಹಾಕಿದ ಬತ್ತವನ್ನು ಚೆಲ್ಲಿ . . . ಹುರಿಯುವುದಕ್ಕೆ ಆರಂಭಿಸಿದಳು (ದೇವಹಂ. ೧೫೭).

[ಹುರಿ$_1$ (< ಪುರಿ$_1$) + ?]

ಹುರಿಯೊಡೆ (ಕ್ರಿ). ೧. ಹುರುಪು ಇಲ್ಲವಾಗು; ಎದೆಗುಂದು: ಪಾಂಚಾಲ ರೊಳ್ಗೆಗರವದಿರಂಬಿನ ಕೋಲ ಕಾಣದ ಮುನ್ನ ಹಮ್ಮೈಸುವರು ಹುರಿಯೊಡೆದು (ಕುವ್ಯಾದ್ರೋ. ೧-೫೯); ಹುರಿಯೊಡೆದು . . . ಕೈದುವ ಬಿಸುಟು ಪಡೆ ಮೊಗದಿರುಹಲೆಚ್ಚನು (ನಳಚ. ೯-೩೧). ೨. ನೆಟ್ಟಗೆ ನಿಲ್ಲು; ನಿಮಿರು: ನೆಗೆದ ಮೊಗವಿಡಿದುಸುರು ಹುರಿಯೊಡೆದ ರೋಮ ನಸುಮುಗಿದ ಕಣ್ (ಹಚಶಾ. ೫-೨೬); ಹುರಿಯೊಡೆದ ರೋಮ ಹೊಯ್ಯಳ್ಳೆ . . . ಎಳಲ್ಬ ಕಿವಿವೆರಸು ಕಂಗಟ್ಟೊಂದು ಹರಿಣನೆಯ್ತಂದು (ಸಿದ್ಧರಾ. ೪-೪೨).

[ಹುರಿ$_2$(< ಪುರಿ$_3$) + ಒಡೆ$_1$]

ಹುರಿಯೋಡು 'ಪುರಿಯೋಡು' ನೋ.

ಹುರಿಸಂಡಗೆ 'ಪುರಿಸಂಡಗೆ' ನೋ.

ಹುರಿಸಕ್ಕರೆ (ನಾ). ಒಂದು ಬಗೆಯ ಪುಡಿಸಕ್ಕರೆ: ಬಳಿಸಕ್ಕರೆ, ಹುರಿಸಕ್ಕರೆ, ಕಲ್ಲುಸಕ್ಕರೆ, ಗಡಿಗಿ ನಾಬತ್ತು ಮೊದಲಾದ ಸಕ್ಕರೆಗಳನ್ನು ಮಾಡುವದಕ್ಕೆ ಸ್ವಲ್ಪು ಶ್ರಮವಾದುದರಿಂದ (ಕೃಷಿಪ್ರ. ೧೮೬); ಪುಡಿಸಕ್ಕರೆಯಲ್ಲಿ ಚೆನ್ನೀ ರಾಜಪುರೀ ಎಳಗುಡೀ ಹುರಿಸಕ್ಕರೆ ಮಗುದುಮ್ಮ ಎಂದು ಹಲವು ತರವುಂಟು (ಮುಂಬಯಿ. ೬-೮೫).

[ಹುರಿ? + ಸಕ್ಕರೆ]

ಹುರಿಸು 'ಹುರಿಯಿಸು' ನೋ.

ಹುರಿಹಂಚು (ನಾ). = ಹುರಿಯೊಟ್ಟೆ: "ಅಂಬರೀಷ, ಭ್ರಾಷ್ಟ - ಹುರಿಹಂಚು"

(ನಾಟರಾ. ೫); ಕೈಗೆ ಹುರಿಹಂಚಿನ ಕಪ್ಪು ಹತ್ತಿಕೊಂಡಿದ (ಪೂಸಂಸಾ. ೭೫).

[ಹುರಿ$_1$ (< ಪುರಿ$_1$) + ಹಂಚು$_2$ (< ಹಂಚು)]

ಹುರಿಹಣ್ಣು (ನಾ). ಉಪ್ಪು, ಕಾರ ಹಾಕಿ ಒಗ್ಗರಿಸಿದ ನಿಂಬೆ ಮುಂತಾದ ಕಾಯಿಯ ಉಪ್ಪಿನಕಾಯಿ (?): ನಿಂಬೆಯ ಹಣ್ಣಿನ ಹುರಿಹಣ್ಣು ನೆಂಚುತ (ಜ್ಞಾನಚ. ೩೯-೧೪೫). [ಹುರಿ$_1$ (< ಪುರಿ$_1$) + ಹಣ್ಣು$_1$ (< ಪಣ್$_1$)]

ಹುರಿಹಿಟ್ಟು$_1$, ಹುರಿಟ್ಟು (ನಾ). ಅಕ್ಕಿ, ಗೋದಿ, ರಾಗಿ ಮೊದಲಾದ ಧಾನ್ಯಗಳನ್ನು ಹುರಿದು ಮಾಡಿದ ಹಿಟ್ಟು ಮತ್ತು ಹಾಗೆ ಹುರಿದ ಹಿಟ್ಟಿಗೆ ಬೆಲ್ಲ ಅಥವಾ ಸಕ್ಕರೆ, ತೆಂಗಿನ ತುರಿ, ಹಾಲು ಇತ್ಯಾದಿ ಹಾಕಿ ತಯಾರಿಸುವ ಒಂದು ಬಗೆಯ ತಿನಿಸು: ಎಳನೀರು, ಹುರಿಹಿಟ್ಟು, ಬೇಲದ ಹಣ್ಣು . . . ಇವೆಲ್ಲವು ವಮನಹರದ್ರವ್ಯವೆಂದರಿವುದು (ಸಚಿತ್ರ. ೨೬೪); ದಿನವಹಿ ಹುರಿಹಿಟ್ಟು ಒಂದೇನೇ, ಅವಸ್ಥೆ. ನನಗೇನೂ ಬೇಡ (ಪೂಗಳ್ಳು. ೩೨). **ಹುರಿಟ್ಟು**: ತಾಯಿ ಕೊಟ್ಟ ಹುರಿಟ್ಟನ್ನೋ ಅವಲಕ್ಕಿಯನ್ನೋ ರೊಟ್ಟಿಯನ್ನೋ ತಿಂದು . . . ಪಾಠಶಾಲೆಗೆ ಬರಬೇಕು (ಗುಣಸಾ. ೩); ಒಗ್ಗರಣೆ ಅವಲಕ್ಕಿ, ಮೊಸರು, ಹುರಿಟ್ಟು, ಅಕ್ಕೀತರಿ ಉಪ್ಪಿಟ್ಟು ಯಾವುದಾದರೊಂದು ಇರುತ್ತಿತ್ತು (ಮುಯ್ಯಿ. ೧೪). [ಹುರಿ$_1$ (< ಪುರಿ$_1$) + ಹಿಟ್ಟು (< ಪಿಟ್ಟು)]

ಹುರಿಹಿಟ್ಟು$_2$ (ನಾ). ಒಂದು ಬಗೆಯ ಸಸ್ಯ: "ಉತ್ಕಾರಿ ಹೆಗ್ಗುರುಟಿಗ ಹುರಿಹಿಟ್ಟು" (ಆಕಾನಿ. ೪-೯). [?]

ಹುರುಕ (ನಾ). ೧. ಒರಟಾದ ಚರ್ಮವುಳ್ಳವನು; ತರಿತರಿಯಾದ ಚರ್ಮವುಳ್ಳವನು: (೬). ೨. ಚರ್ಮರೋಗವುಳ್ಳವನು: ಕಾಡಿ ಬೇಡುವರಲ್ಲ ತಿರುಕ ಹುರುಕರಲ್ಲ ನಾಡಿಗೂಡೆಯರು ಧನಿಕರು (ಜ್ಞಾನಚ. ೩೮-೩೬).

[ಹುರುಕು + - ಅ$_7$]

ಹುರುಕಲು 'ಹುರಿಕಲು' ನೋ.

ಹುರುಕು, ಪುಱುಕು (ನಾ). ೧. ಒರಟಾದುದು; ತರಿಯಾಗಿರುವುದು: ತರಟುದಲೆಯಾ ಹುರುಕುಮ್ಮೆದೊಡದ ಹಿಮ್ಮಡ (ನನ್ನಕಾ. ೮-೮೭). ೨. ಗುಳ್ಳೆ; ಬೊಕ್ಕೆ: ಕರಕಾದ ಕೂಳನುಣಹೊಲ್ಲ ಸೂಳೆಗೆ ಹುರುಕಾಗ ಹೊಲ್ಲ (ಸರ್ವಜ್ಞ. ೧೯೦೧); ಹುರುಕು ಮುಂತಾದ ಚರ್ಮರೋಗಗಳಿಗೆ ಸಹಾಯಮಾಡುತ್ತವೆ (ಮುಂಬಯಿ. ೫-೧೭೦). ೩. ಕಾಳು, ಬೀಜ ಮುಂತಾದುವುಗಳ ಸಿಪ್ಪೆ, —ಹೊಟ್ಟು: ಹುಣಸೆಬೀಜದ ಹುರುಕು . . . ಬಿಸಿನೀರೊಳಿರೆದು ಸೇವಿಸೆ ರಕ್ತಾತಿಸಾರ . . . ಪರಿಹರಮಕ್ಕುಂ (ಸಚಿತ್ರ. ೩೧೧). 'ಹುರಪು' ಪರಾ. Δ **ಪುಱುಕು**: ೨. ಒಗವಾ ಸುಯ್ಯೆಂಕೆಯಿಂ ಕೋಮಳಾಧರ ಬಿಂಬಂ ಪುಱುEಱುತಿಕೆಯ್ದು ಪಕ್ಷ್ಮಪುಟಮಂ ಬೆಚ್ಚಂತೆ ಕಣ್ಮುಚ್ಚೆ ತಾನಿರುತಿರ್ದಂ ನಿಜಶಯ್ಯೆಯೊಳ್ ವಿರಹದಿಂ ಭೂನಾಥ ಮಾನಧ್ವಜಂ (ಕುಸುಮಾ. ೧೦-೧೪).

ಹುರುಬರಳು, ಹುರಬರಳು = (ಮೇಲ್ಮೈ) ಒರಟಾಗಿರುವುದು; ನುಣುಪಾಗಿಲ್ಲದಿರುವುದು: ಗಿಡದ ತೋಟೆ ಹೊರವಗ್ಗಲು ಹುರುಬರಳು ಇರುವುದು (ಮುಂಬಯಿ. ೪-೭೧); ಹುರುಬರಕಾದ ಕರೇಕಲ್ಲಿನ ದೊಡ್ಡ ದೊಡ್ಡ ಹಾಸಿಗೆಗಳು ಇರುತ್ತವೆ (ಮುಂಬಯಿ. ೬-೨೨೬); ಆ ಕಾಗದ ಬಹಳ ದಪ್ಪಾಗಿಯೂ ಹುರಬರಕಾಗಿಯೂ ಇರುತ್ತದೆ (ಮುಂಬಯಿ. ೧-೨೪).

ಹುರುಗಿಲು 'ಹುರಗಲು' ನೋ.

ಹುರುಡಾಳಿ (ನಾ). ಪೈಪೋಟಿಗೆ ನಿಂತವನು; ಸ್ಪರ್ಧಾಳು: ಹುರುಡಾಳಿಗಳಾದ ಅವರು ವಿಜಯಾದಿತ್ಯನನ್ನು ಪಟ್ಟದಿಂದ ತಳ್ಳಿದರು (ನಾಡೋಜ. ೩೩೧).

[ಹುರುಡು (< ಪುರುಡು) + - ಆಳಿ$_3$]

ಹುರುಡಿಗ 'ಪುರುಡಿಗ' ನೋ.

ಹುರುಡಿಸು 'ಪುರುಡಿಸು' ನೋ.

ಹುರುಡು$_1$ 'ಪುರುಡು$_1$' ನೋ.

ಹುರುಡು$_2$ 'ಪುರುಳ್' ನೋ.

ಹುರುಡುಕಟ್ಟು (ಕ್ರಿ). ಸ್ಪರ್ಧಿಸು; ಪೈಪೋಟಿ ನಡೆಸು: ಅವನು ಅರ್ಜುನನೊಡನೆ ಹುರುಡುಕಟ್ಟುತ್ತ . . . ಪಾಂಡವರನ್ನು ಧೋರಣೆಯಿಂದ ನೋಡುತ್ತಿದ್ದನು (ಪಚಿಭಾ. ೧೪). [ಹುರುಡು$_1$ (< ಪುರುಡು$_1$) + ಕಟ್ಟು$_1$]

ಹುರುಡುಕೆಲಸ (ನಾ). ಪೈಪೋಟಿಯ ವರ್ತನೆ, —ನಡವಳಿಕೆ: ದೈವವೀ ದ್ರೌಪದಿಗೆ ಸೀರೆಯನೀವುದಲ್ಲದೆ ಬಿಡಿಸಲಾವುದೆ ದೈವ ತೊತ್ತಿರ ಹುರುಡುಗೆಲಸದ ಹಿಂದು ಗೂಟದಲಿ (ಕುವ್ಯಾಸ. ೧೬-೭). [ಹುರುಡು$_1$ (< ಪುರುಡು$_1$) + ಕೆಲಸ]

ಹುರುಪಳಿಸು 'ಹುರಪಳಿಸು' ನೋ.

ಹುರುಪು$_1$ 'ಹುರಪು' ನೋ.

ಹುರುಪು$_2$ (ನಾ). ಉತ್ಸಾಹ; ಹುಮ್ಮಸ್ಸು: ಒಂದು ತರದ ಹೊಸ ಹುರುಪು ಮೂಡುವುದು (ಅಶೋಕ. ೧೭); ಕತೆಯೊಂದನ್ನು ಓದುವ ಹುರುಪು ಬಂತು (ಅಬೋಲೀ. ೧೫೮). [ಹುರಿ$_2$ (< ಪುರಿ$_3$) + - ಪು$_1$ ./ ಮರಾ. ಹುರೂಪ್]

ಹುರುಪುತುಂಬು (ಕ್ರಿ). ಉತ್ಸಾಹವನ್ನುಂಟುಮಾಡು: ಅಲ್ಲಿಯ ವಾತಾವರಣ ಸಾಮಾನ್ಯವಾಗಿ ಅವನ ಶರೀರಕ್ಕೆ ಸದಾ ಹುರುಪುತುಂಬುವಂತಿದ್ದರೂ, ಅವನ ಆತ್ಮಕ್ಕೆ ಮಬ್ಬು ಕವಿಸುವಂತಿತ್ತು (ಪುನರು. ೩೩೫). [ಹುರುಪು$_2$ + ತುಂಬು$_1$]

ಹುರುಪೆ 'ಹುರಪು' ನೋ.

ಹುರುಪೇರು (ಕ್ರಿ). ಹುಮ್ಮಸ್ಸು ಹೆಚ್ಚಾಗು: ಬುದ್ಧಿಗೆ ಹುರುಪೇರಲಾರಂಭಿಸಿತು (ನಾಡೋಜ. ೩೭೪). [ಹುರುಪು$_2$ + ಏರು$_1$ (< ಏಱ್$_1$)]

ಹುರುಮಂಜಿ 'ಹುರಮುಂಜಿ' ನೋ.

ಹುರುಮಂಡು 'ಹುರಮುಂಜಿ' ನೋ.

ಹುರುಲು (ನಾ). ಒಂದು ಬಗೆಯ ಸಸ್ಯ: (ಮೃಡಿಗಿ. ೪೫-೮೯೦). [?]

ಹುರುವಲ್ಲಿ 'ಪುರುವಳ್ಳಿ' ನೋ.

ಹುರುವಳ್ಳಿ 'ಪುರುವಳ್ಳಿ' ನೋ.

ಹುರುಹುರು 'ಹುರಹುರ' ನೋ.

ಹುರುಳ್ 'ಪುರುಳ್' ನೋ.

ಹುರುಳಿ 'ಪುರುವಳ್ಳಿ' ನೋ.

ಹುರುಳಿಕಟ್ಟು (ನಾ). ಹುರುಳಿಯ ಕಾಳನ್ನು ಬೇಯಿಸಿ ತೆಗೆದ ಸಾರ: ಬಿಸಿಯಾದ ಗಂಜಿ ಮಧ್ಯ ಬಿಸಿ ಹುರುಳಿಕಟ್ಟು . . . ನೆನಸಿದರೆ ಶಿಲೆ ವಡದು ಹೋಗುವುದು (ಪೌಗಂಧಿ. ೪೩೨-೨). [ಹುರುಳಿ (< ಪುರುವಳ್ಳಿ) + ಕಟ್ಟು$_1$]

ಹುರುಳಿಕಾಯಿ (ನಾ). ತರಕಾರಿಯಾಗಿ ಉಪಯೋಗವಾಗುವ ಒಂದು ಬಗೆಯ ಕಾಯಿ: ಹುರುಳಿಕಾಯಿ ಪಲ್ಯ ರುಚಿಯಾಗಿದೆ (ರೂಢಿ).

[ಹುರುಳಿ (< ಪುರುವಳ್ಳಿ) + ಕಾಯಿ$_4$ (< ಕಾಯ್$_4$)]

ಹುರುಳು 'ಪುರುಳ್' ನೋ.

ಹುರುಳುಗೆಡಿಸು 'ಪುರುಳುಗೆಡಿಸು' ನೋ.

ಹುರುಳುಗೆಡು 'ಪುರುಳುಗೆಡು' ನೋ.

ಹುರುಳುಗೊಳ್ಳು 'ಪುರುಳ್ಗೊಳ್' ನೋ.

ಹುರುಳುತಲೆ (ನಾ). ಸತ್ವಪೂರ್ಣವಾಗಿರುವಿಕೆ; ಧೀಮಂತಿಕೆ: ಮರುಳುತಲೆ ಹುರುಳು[ಪಾಲಾಂ. ಳ]ತಲೆ ನೀನೆ ದೇವಾ ಹೆಂಗೂಸು ಗಂಡುಗೂಸು ನೀನೇ ದೇವಾ (ಬಸವ. ೯೧೭). [ಹುರುಳು (< ಪುರುಳ್) + - ತಲೆ$_2$]

ಹುರ್ಜಿ 'ಪೊರಜೆ' ನೋ.

ಹುರ್ವು 'ಪುರ್ವು' ನೋ.

ಹುಲಗಲಿ 'ಪುಲಿಗಿಲ್' ನೋ.

ಹುಲಗಿಲ್ 'ಪುಲಿಗಿಲ್' ನೋ.

ಹುಲಗಿಲು 'ಪುಲಿಗಿಲ್' ನೋ.

ಹುಲಗೆಮ್ಮ, ಹುಲಿಗೆಮ್ಮ (ನಾ). ಒಬ್ಬ ಗ್ರಾಮದೇವತೆಯ ಹೆಸರು: ತೆಲಗುಒಕ್ಕಮರು . . . ಇವರ ಕುಲದೇವತೆಗಳು ಹನುಮಂತ, ಹುಲಗಮ್ಮ (ಕಭಾಗ. ೧೦೭). **ಹುಲಿಗೆಮ್ಮ**: (ಜಾನಪೋ. ೫೮). [? + ಅಮ್ಮ$_2$]

ಹುಲಬನ್ನಿ 'ಹುಲುಬನ್ನಿ' ನೋ.

ಹುಲವೆ 'ಹುಲುವೆ' ನೋ.

ಹುಲಶಿಗರಾಯ (ನಾ). ಒಬ್ಬ ದೇವತೆಯ ಹೆಸರು: ಕಲಬುರ್ಗಿಯ ಹತ್ತರ

ಗೋಬಾರವೆಂಬಲ್ಲಿ ಇರುವ ಹುಲಶಿಗರಾಯನೆಂಬ ದೇವತೆಯು ಮೇದಾರರ ಕುಲದೇವತೆ (ಕಭಾಗ. ೧೫೫). [ಹುಲಿ$_1$ (< ಪುಲಿ) + < ಸಿಂಗ$_1$ + ರಾಯ]

ಹುಲಸು 'ಪುಲಿಸು' ನೋ.

ಹುಲಹತ್ತಿ 'ಹುಲುಹತ್ತಿ' ನೋ.

ಹುಲಿ$_1$ 'ಪುಲಿ' ನೋ.

ಹುಲಿ$_2$ 'ಪೊಲಿ$_2$' ನೋ.

ಹುಲಿಕಲ್ಲು 'ಪುಲಿಕಲ್ಲು' ನೋ.

ಹುಲಿಗಣ್ಣು (ನಾ). ೧. ಹುಲಿಯ ಕಣ್ಣು. ೨. (ಆಲಂ) ಹೊಳೆಯುವ ನಾಣ್ಯ: ಊಟಾ ಹಾಕಿ ಒಂದು ಹುಲಿಗಣ್ಣು (ರೂಪಾಯಿ) ಕೊಟ್ಟು ಹೊರಗೆ ಹಾಕಬೇಕಾದರೆ ಅಶ್ವಮೇಧಯಜ್ಞವನ್ನು ಮಾಡಿದಂತಾಯಿತು (ಆವವಾ. ೬).

[ಹುಲಿ$_1$ (< ಪುಲಿ) + ಕಣ್ಣು (< ಕಣ್)]

ಹುಲಿಗರುಕೆ (ನಾ). ಒಂದು ಬಗೆಯ ಸಸ್ಯ: "ಹುಲಿಗರುಕೆ, ವುಲಿಮಿಸುಕುಡೆ" (ಸಸ್ಯನಿ. ೫೮). [ಹುಲಿ$_1$ (< ಪುಲಿ) + ಗರುಕೆ (< ಕಱುಂಕೆ)]

ಹುಲಿಗಾಹು (ನಾ). (ಆಲಂ) ಬಹಳ ಎಚ್ಚರವಾಗಿ ಮಾಡುವ ಪಹರೆ: ಏಲಯ್ಯಗಳು ಚಾಮಯ್ಯಗಳು ಕೋಟೆಯ ಹುಲಿಗಾಹು ಆ ವಿತ್ತಿಯನು ಮಾಳ್ದು (ಎಕ. XIV, ಶ್ರೀರಂಗ. ೧೫೨-೧೫೫; 1189). [ಹುಲಿ$_1$ (< ಪುಲಿ) + ಕಾಹು$_1$ (< ಕಾವು)]

ಹುಲಿಗಿಲ್ 'ಪುಲಿಗಿಲ್' ನೋ.

ಹುಲಿಗಿಲಿ 'ಪುಲಿಗಿಲ್' ನೋ.

ಹುಲಿಗಿಲು 'ಪುಲಿಗಿಲ್' ನೋ.

ಹುಲಿಗುಲಿ (ನಾ). ಹುಲಿಯನ್ನು ಕೊಂದವನು: ಒಸದು ಕಟ್ಟಿಕ್ಕಿ ಮೇಣಾರಯ್ಯು ಹುಲಿಗುಲಿಯ ಹೆಸರಿತ್ತಿ ಹೊಗಳಿದರ್ (ಕಾಲೂಶ . ೯೯-೧೯೯).

[ಹುಲಿ$_1$ (< ಪುಲಿ) + - ಕುಲಿ$_1$]

ಹುಲಿಗೆಮ್ಮ 'ಹುಲಗೆಮ್ಮ' ನೋ.

ಹುಲಿಗೆಜ 'ಪುಲಿಗೆಜ' ನೋ.

ಹುಲಿಗೋಣ (ನಾ). ಹುಲಿಯ ತಲೆಯನ್ನು ಹೊಂದಿದ ಒಬ್ಬ ದೇವತೆ: ಚೂಣಿಯ ಹೂಣಿಗರಂ ಮಾಣದೆ ಕಾಣಿಸೆ ಹುಲಿಗೋಣನ ತೂಣನ ತೋಳಂ ತುಂಡಿಸಿ (ವೀರಚ. ೨-೪೩). [ಹುಲಿ$_1$ (< ಪುಲಿ) + ಗೋಣು (< ಗೋಣ್) + - ಅ]

ಹುಲಿಗೌರಿ (ನಾ). ಒಂದು ಬಗೆಯ ಸಸ್ಯ: (ಮುಡಿಗಿ. ೪೩-೧೫೩).

[ಹುಲಿ$_1$ (< ಪುಲಿ) + ಗೌರಿ]

ಹುಲಿಚರ್ಮ 'ಪುಲಿಚರ್ಮ' ನೋ.

ಹುಲಿತೊರಡುಮರ (ನಾ). ಒಂದು ಬಗೆಯ ಮರ: ಜೀನುಕಾತಾಳ, ಹುಲಿತೊರಡು ಮರ (ಮುಡಿಗಿ. ೭೨-೧೪೭೩). [ಹುಲಿ$_1$ (< ಪುಲಿ) + ತೊಗಡು + ಮರ$_1$]

ಹುಲಿದೇವ (ನಾ). ಒಬ್ಬ ದೇವತೆಯ ಹೆಸರು: ಅತ್ತೀವೊಕ್ಕಲಿಗರು ಹುಲಿದೇವನನ್ನು ವಿಶೇಷವಾಗಿ ಪೂಜಿಸುವರು (ಕಭಾಗ. ೧೪೨). [ಹುಲಿ$_1$ (< ಪುಲಿ) + ದೇವ]

ಹುಲಿದೇವರು (ನಾ). = ಹುಲಿದೇವ: ತಾನು ಇನ್ನು ಕುಡಿಯುವುದಿಲ್ಲವೆಂದು ಹುಲಿದೇವರ ಆಣೆ ಕೂಡ ಹಾಕಿದ್ದ (ಹೂಸಕ್ಕ. ೬೯).

[ಹುಲಿ$_1$ (< ಪುಲಿ) + ದೇವರು (< ದೇವರ್)]

ಹುಲಿದೊಗಲು 'ಪುಲಿದೋಲ್' ನೋ.

ಹುಲಿದೊವಲು 'ಪುಲಿದೋಲ್' ನೋ.

ಹುಲಿನಖ 'ಪುಲಿನಖ' ನೋ.

ಹುಲಿನೀಲ (ನಾ). ಒಂದು ಬಗೆಯ ಸಸ್ಯ: ಹುಲಿನೀಲಬೀಜಮಂ ಗಿರಿಮಲ್ಲಿಗೆ ಜೀರಿಗೆ . . . ಸಾಸುವ ಶುಂಠಿಯ ತತ್ಸಮಾನದಿ (ಗೋವೈದ್ಯ . ೨೦೨-೨೯).

[ಹುಲಿ$_1$ (< ಪುಲಿ) + ನೀಲ]

ಹುಲಿಬಲೆ 'ಪುಲಿವಲೆ' ನೋ.

ಹುಲಿಬೆಕ್ಕು (ನಾ). ಒಂದು ಬಗೆಯ ಹುಲಿ: ಹುಲಿಜಾತಿ . . . ದೊಡ್ಡ ಇಬ್ಬ; ಹುಲಿಬೆಕ್ಕು, ಬೊಟ್ಟಿನ ಬೆಕ್ಕು (ನಮ್ಮನು. ೨೫೯). [ಹುಲಿ$_1$ (< ಪುಲಿ) + ಬೆಕ್ಕು (< ಬೆರ್ಕು)]

ಹುಲಿಮುಖ 'ಪುಲಿಮುಖ' ನೋ.

ಹುಲಿಮೊಗ 'ಪುಲಿಮೊಗ' ನೋ.

ಹುಲಿಯುಗುರ್ 'ಪುಲಿಯುಗುರ್' ನೋ.

ಹುಲಿಯುಗುರು 'ಪುಲಿಯುಗುರ್' ನೋ.

ಹುಲಿವಿರಿ (ಕ್ರಿ). (?): ಸುರೆಯ ಭಾಂಡಕ್ಕೆ ಹುಲಿವಿರಿದ ಬೂದಿಯನಿಟ್ಟಿಸಿರಬಹುದೆ ಇಲ್ಲಿಯೆಂಬರಸಂಗೆ ಬಸವರಸನೊರೆದನದು ಸುಧೆಯ ಹರವೆಯೆನುತ್ತ (ರಾಘಚ. ೯-೫೭). [?]

ಹುಲಿವಿಲಿ 'ಪುಲುವಿಲು' ನೋ.

ಹುಲಿವಿಲು 'ಪುಲುವಿಲು' ನೋ.

ಹುಲಿವೆ 'ಹುಲುವೆ' ನೋ.

ಹುಲಿವೇಷ (ನಾ). ಹುಲಿಯ ಹಾಗೆ ಹಾಕಿಕೊಂಡ ವೇಷ; ℙ ಮೊಹರಂ ಹಬ್ಬದ ಕೊನೆಯ ದಿನದ ಉತ್ಸವದಂದು ಹಾಕುವ ವೇಷ: ಹುಲಿವೇಷ ಧರಿಸಿದ ಕಲಾವಿದ ತಮಟೆಯ ಗತ್ತಿಗೆ ವಿವಿಧಭಂಗಿಗಳಲ್ಲಿ ಕುಣಿಯುತ್ತಾನೆ (ಕಜಕ. ೧೯೯).

[ಹುಲಿ$_1$ (< ಪುಲಿ) + ವೇಷ]

ಹುಲಿಸು$_1$ (ಕ್ರಿ). ಹೆಚ್ಚಾಗು; ಸಮೃದ್ಧವಾಗು: ಉಪವನದಲ್ಲಿ ವೃಕ್ಷಗಳಿವೆ. ಅವು ಬೆಳೆದು ಫಲಿಸಿ ಹುಲಿಸಲು ಅವಕ್ಕೆ ಸಂಬಂಧಪಟ್ಟ ತಮ್ಮ ಸ್ವಂತನಿಯಮಗಳಿವೆ (ಜೀವಾತ್ಮ. ೨೧೩). [< ಪುಲಿಸು]

ಹುಲಿಸು$_2$ 'ಪುಲಿಸು' ನೋ.

ಹುಲಿಹುಣ್ಣು (ನಾ). (ಆಲಂ) ಸುಲಭವಾಗಿ ವಾಸಿಯಾಗದ ಹುಣ್ಣು; ಮಾಯದ ಗಾಯ: ನಾಯಿಕೆಮ್ಮು . . . ಹುಲಿಹುಣ್ಣು, ಖಾಸ್‌ಬಂಗಲೆ ಖಾಯಿಲೆಗಳೆಲ್ಲಾ ನಮ್ಮ ಮನೆಲೇನೆ (ತುಟೂಸಾ. ೨೮).

[ಹುಲಿ$_1$(< ಪುಲಿ) + ಹುಣ್ಣು (< ಪುಣ್)]

ಹುಲೀಚಲಬಳ್ಳಿ (ನಾ). ಒಂದು ಬಗೆಯ ಸಸ್ಯ: (ಮುಡಿಗಿ. ೭೭ - ೧೫೫೯). 'ಹುಲ್ಲು ಈಚಲ' ಪರಾ. [ಹುಲೀಚಲ್ಲ + ಬಳ್ಳಿ]

ಹುಲೀಚೆಂಡು (ನಾ). ಒಂದು ಬಗೆಯ ಸಸ್ಯ: ಕುಂಕುಮದ ಮರ, ಕಪಿಲಾರಂಗು, ಹುಲೀಚೆಂಡು, ಚಂದ್ರಹಿಟ್ಟು, ಊರಬತ್ತಿ, ನ್ಯಾಮತಿ (ಮುಡಿಗಿ. ೫೨-೧೦೬೯). [?]

ಹುಲು 'ಪುಲ್' ನೋ.

ಹುಲುಕೂಲಿ (ನಾ). ಅಲ್ಪಮೊತ್ತದ ಕೂಲಿ,— ಮಜೂರಿ: ಮಂಣೆಯ ಕಬಲವದೆರೆ ಹುಲುಕೂಲಿ ಮರಗಾದ X ಕಿಱುಕುಳವೊಳಗಾದಂ (ಎಕ. IX, ಕಾನಕಾ. ೭೨-೨೯; 1277). [ಹುಲು (< ಪುಲ್) + ಕೂಲಿ$_1$]

ಹುಲುಗಚ್ಚು 'ಪುಲ್ಲರ್ಚು' ನೋ.

ಹುಲುಗಲ 'ಪುಲಿಗಿಲ್' ನೋ.

ಹುಲುಗಲಿ 'ಪುಲ್ಲಲಿ' ನೋ.

ಹುಲುಗಾಣ್ (ಕ್ರಿ). ಹುಲ್ಲಿಗೆ ಸಮವಾಗಿ ಕಾಣು; ಕೀಳಾಗಿ ನೋಡು: ಬಲುಸಿರಿವಂತರು ಬಡವರಿಟ್ಟೊಸಗೆಯ ಹುಲುಗಾಣ್ಬರಹುದಹುದು (ಧರಚ. ೪೩-೨೦).

[ಹುಲು (< ಪುಲ್) + ಕಾಣ್]

ಹುಲುಗಿಚ್ಚು 'ಪುಲ್ಲಿಚ್ಚು' ನೋ.

ಹುಲುಗಿಳಿ (ನಾ). ಸಾಮಾನ್ಯವಾದ ಗಿಳಿ: ನರವಿಂದ್ಯದೊಳಿನ್ನ ಪುಲು [ಪಾಠಾಂ. ಲಿ, ಲ್ಲು] ಗಿಳಿಯ ಮಾಡಿ ಸಲಹುತ್ತ ಶಿವಶಿವಾ ಎಂದೋದಿಸಯ್ಯಾ (ಬಸವ. ೫೮).

[ಹುಲು (< ಪುಲ್) + ಗಿಳಿ]

ಹುಲುಗುಡಿತೆ 'ಪುಲುಗುಡಿತೆ' ನೋ.

ಹುಲುಗುಡಿಲು 'ಹುಲ್ಲುಡಿಲು' ನೋ.

ಹುಲುಗುಡಿಸಿಲು 'ಪುಲ್ಲುಡಿಸಿಲ್' ನೋ.

ಹುಲುಗ್ಯೆದು (ನಾ). ಸಾಮಾನ್ಯವಾದ ಆಯುಧ; ಕ್ಷುಲ್ಲಕವಾದ ಆಯುಧ: ಮೈದುನನ ಮೈಸರಸಕೀ ಹುಲುಗ್ಯೆದು ಸಾಲದೆ (ಕುವ್ಯಾಅ. ೨೨-೨೫).

[ಹುಲು (< ಪುಲ್) + ಕೈದು$_1$ (< ಕೆಯ್ದು)]

ಹುಲುಚಲವ (ನಾ). ಒಂದು ಬಗೆಯ ಸಸ್ಯ: ಹುಲುಚಲವದ ಹಗಿನಂ ಎಕ್ಕೆಯ ಹಾಲಲ್ಲಿ ಅರೆದು ಕೊಡಲು ಮೈತ್ಯ ಹರ (ಎಚ್ಮಎ. ೧೯೩). [?]

ಹುಲುನರ (ನಾ). ಸಾಮಾನ್ಯ ಮನುಷ್ಯ; ಕ್ಷುಲ್ಲಕ; ನಾಡಾಡಿ: ಹುಲುನರರ ಸಂಸಾರವನು ಸುಡಲೆಂದಳಲಿತಖಿಳಜನ (ಜೀವಂಚಿ. ೫-೩); ಹುಲುನರರು ಗಣ್ಯವೆ ಕೇಳು ಭಾಷೆಯನೆಂದನಭಿಮನ್ಯು (ಕುಮ್ಯಾದ್ರೋ. ೪-೫೫). [ಹುಲು (< ಪುಲ್) + ನರ$_2$]

ಹುಲುನೊರಜು (ನಾ). ಸೊಳ್ಳೆಯ ಜಾತಿಯ ಸಣ್ಣಕೀಟ, — ಅಲ್ಪವಾದ ಕೀಟ: ಹುಲುನೊರಜು ಸಾಗರದ ಸಲಿಲವನಳಿವವೊಲು ನೊಣ ಹಾಱಿ ಗಗನದ ತಲೆಗಡೆಯ ಕಾಣಿಸುವುದೆಂಬವೊಲಾಯ್ತು (ಕುಮ್ಯಾಅ. ೧೪-೨೯).

[ಹುಲು (< ಪುಲ್) + ನೊರಜು$_1$ (< ನೊರಂಜು)]

ಹುಲುಪಱೆ (ನಾ). ಕೀಳಾದುದು; ನಿಂದ್ಯವಾದುದು; ಕ್ಷುದ್ರವಾದುದು: ಹುಲುಪಱೆಯ ದೇವಾಳಿ ತ್ರಿಪುರದ ನೆಲನ ಮೆಟ್ಟಿತು (ಕುಮ್ಯಾಕ. ೭-೨೭).

ಹುಲುಪಱೆಯತನ = ಕ್ಷುದ್ರವಾದ ವರ್ತನೆ: ಓಡಿ ಬದುಕುವ ಹುಲುಪಱೆಯ ತನ ಹೆಮ್ಮೆಯೇ ಕ್ಷತ್ರಿಯರ ಮಕ್ಕಳಿಗೆ (ಕುಮ್ಯಾದ್ರೋ. ೨-೩೮).

[ಹುಲು (< ಪುಲ್) + ಪಱೆ$_2$]

ಹುಲುಬಡು (ನಾ). ಸಾಮಾನ್ಯವಾದ ಸಣ್ಣ ಬಡು: ಗತಿ ಮತಿಯೆಂಬ ಇಕ್ಕೆಲದ ಸೂರಿಗೆ ನಿಶ್ಚಯವೆಂಬ ಹುಲುಬಡುವ ಹಾಕಿ (ಸಶವ.೪ I, ೧೩೬-೫೨೦).

[ಹುಲು (< ಪುಲ್) + ಬಡು$_2$]

ಹುಲುಬನ್ನಿ, ಹುಲಬನ್ನಿ, ಹುಲ್ಲುಬನ್ನಿ (ನಾ). ಹುಲ್ಲುಗಾವಲಿನ ಮೇಲೆ ಹಾಕುವ ತೆರಿಗೆ: ನಾಡ ದಳವಾರಿಕೆ ಹೊರಬಳಿ ಹುಲುಬನ್ನಿ ಬಣಜಿಗರ ಯೆತ್ತಿನ XXX (ಎಕ. XI, ತೊಳಹಾ.೧-೧೫; 1557). **ಹುಲಬನ್ನಿ**: ಕಾಂಗ್ರೆಸ್ಸಿನ ಆದೇಶದಂತೆ ಕರನಿರಾಕರಣೆಯ ಪೂರ್ವಭಾವಿಯಾಗಿ ಹುಲಬನ್ನಿಯನ್ನು ಕೊಡಬಾರದೆಂಬ ಆಂದೋಲನವನ್ನು ಕೂಡಲೆ ಸಂಘಟಿಸುವುದು . . . ಅಗತ್ಯವೆನಿಸಿತು (ಕರವೀ. ೩೧). **ಹುಲ್ಲುಬನ್ನಿ**: ಸ್ಥಳಸುಂಕ, ಹುಲ್ಲುಬನ್ನಿ . . . ಉಪ್ಪಿನ ಮೇಳೆ, ಆಚಾರ ಕಾಣಿಕೆ ಇವೇ ಮೊದಲಾಗಿ ಸರ್ಕಾರಕ್ಕೆ ಆದಾಯದ ಬಾಬುಗಳಾಗಿದ್ದವು (ಕಾಳಗಾ. ೫೧).

[ಹುಲು (< ಪುಲ್) + ಬನ್ನಿ$_2$ (< ಬನ್ನಿ$_1$)]

ಹುಲುಬೇಡ (ನಾ). ಅಲ್ಪನಾದ ಶಬರ; ಕ್ಷುಲ್ಲಕನಾದ ಕಿರಾತ: ಹುಲುಬೇಡಂ ಮುರವ್ಯರಿಯಂ . . . ಹತಮಾಡರೇ ಪಣೆಯೊಳಂ ಪೂರ್ವಾರ್ಜಿತಂ ಹಾಗಿರಲ್ (ಸೋಮೇಶ. ೩೧); ಧರಣಿಪತಿ ಹುಲುಬೇಡರನು ಸಂಹರಿಸಿ ಬಹುದಕೆ ನೀವು ಪರಿಯಂತೇಕೆ (ಜೀವಂಚಿ. ೬-೮). [ಹುಲು (< ಪುಲ್) + ಬೇಡ$_1$]

ಹುಲುಮನುಜ (ನಾ). = ಹುಲುನರ: ಅಲಸಿಕೆಯೊಳ್ಕನೂಱುಸಾವಿರ ನಳಿನಭವರಡೆಗೆಡೆವರೆಂಬಗ್ಗಳಿಕೆಯೆತ್ತಲು ಹುಲುಮನುಜ ನಾನೆತ್ತಲು (ಕುಮ್ಯಾಭೀ. ೬-೩೯); ಹುಲುಮನುಜರಾದ ನಮಗೆ ಇಂಥ ಸಾಮರ್ಥ್ಯವುಂಟೆ (ನೀತಿಚಂ. XI, ೨೬).

[ಹುಲು (< ಪುಲ್) + ಮನುಜ]

ಹುಲುಮನುಷ್ಯ (ನಾ). = ಹುಲುನರ: ದೇವಾಸುರರ ಗೆಲಿದವನು ಹುಲುಮನುಷ್ಯರ ಕೈಯಲಳಿದನೆ (ಕಾಶಿಕಾ. ೩೭-೨); ಇದನ್ನು ಸಹಿಸಿಕೊಂಡು ಬದುಕುವುದು ಸಾಧ್ಯವಿಲ್ಲ . . . ತಾನು ಹುಲುಮನುಷ್ಯ (ಅನಾಥ. ೧೩೧). [ಹುಲು (< ಪುಲ್) + ಮನುಷ್ಯ]

ಹುಲುಮಾನಿಸ 'ಪುಲ್ಮಾನಿಸ' ನೋ.

ಹುಲುಮಿನು, ಹುಲ್ಲುಮಿನು (ನಾ). ೧. ಚಿಕ್ಕಮೀನು; ಕ್ಷುದ್ರಮೀನು: ಮಿಗೆ ತಿಮಿಂಗಿಲನೊಡನೆ ಹುಲುಮಿನುಗಳು ಮಾಡುವುದೇನು (ಕುಮ್ಯಾದ್ರೋ. ೩-೪೨). **ಹುಲ್ಲುಮಿನು**: ೨. (ಜಂಬುಹುಲ್ಲಿನಲ್ಲಿರುವ) ಒಂದು ಬಗೆಯ ಸಣ್ಣ ಮಿನು: "ನಲಮಿನಃ, ಚಿಲಿಚಿಮಃ - ೨ ಕಾರಹುಲ್ಲಿನೊಳು ತಿರುಗುವ ಮಿನಿನ ಪೆಸರುಗಳು. ಅಂದರೆ ಜಂಬುಮಿನು, ಹುಲ್ಲುಮಿನು" (ಸಿದ್ಧಾಂತಿ. ೮೨).

[ಹುಲು (< ಪುಲ್) + ಮಿನು$_2$ (< ಮಿನ್$_2$)]

ಹುಲುಮೃಗ 'ಪುಲ್ಮೃಗ' ನೋ.

ಹುಲುಮೊರಡಿ, ಹುಲ್ಲುಮೊರಡಿ (ನಾ). ಕ್ಷುದ್ರವಾದ ಗುಡ್ಡ; ಸಣ್ಣಗುಡ್ಡ: ಗಿರಿಯಲಲ್ಲದೆ ಹುಲುಮೊರಡಿಯಲ್ಲಾಡುವುದೇ ನವಿಲು (ಮಹಾದೇ. ಬ. ೧೩೯-೩೧೫); ಹುಲುಮೊರಡಿ ಸೆಣಸುವುದೆ ಸುರಾದ್ರಿಯೊಳ್ (ಕುಮ್ಯಾಸ. ೯-೪೯). **ಹುಲ್ಲುಮೊರಡಿ**: ಅಯ್ಯ ಹುಲ್ಲುಮೊರಡಿಯೊಳಗೆ ಕಲ್ಪತರುವನಱಸುವರೆ (ಆದವ. ೧೩-೨೯).

[ಹುಲು (< ಪುಲ್) + ಮೊರಡಿ$_1$ (< ಮೊರಡು$_2$)]

ಹುಲುರಕ್ಕಸ (ನಾ). ಕ್ಷುದ್ರನಾದ ರಾಕ್ಷಸ: ಹರಗಿರಿಗೆ ಹುಲುರಕ್ಕಸರು ಮತ್ಸರಿಸುವಂತೆ (ಕುಮ್ಯಾಅ. ೧೪-೫); ಕೊಲವುದೇನಚ್ಚರಿ ರಣರಂಗದೊಳು ನೀವು ಹುಲುರಕ್ಕಸರೆ (ಮೋಹತ. ೧೨-೪೨). [ಹುಲು (< ಪುಲ್) + ರಕ್ಕಸ]

ಹುಲುವಟ್ಟೆ 'ಪುಲ್ವಟ್ಟೆ' ನೋ.

ಹುಲುವಿಡಿ 'ಪುಲ್ವಿಡಿ' ನೋ.

ಹುಲುವಿಲು 'ಪುಲುವಿಲು' ನೋ.

ಹುಲುವಿಲೆ 'ಪುಲುವಿಲು' ನೋ.

ಹುಲುವೂಟ (ನಾ). ಸಾಮಾನ್ಯವಾದ ಊಣಿಸು: ಹಿಂದೆ ಭಕ್ತದ್ರೋಹಿಯಂ ನೀ ಕೊಂದು ಬಂದೆಯಿತ್ತಲೂಟಕೆ ಬಂದೆಯಾ ಹುಲುವೂ[ಪಾಠಾಂ. ಊಟ]ಟವಿನ್ನೆಹಗಿಂಪಹುದು (ಬಸಪು. ೬೧-೧೯). [ಹುಲು (< ಪುಲ್) + ಊಟ]

ಹುಲುವೆ, ಹುಲವೆ, ಹುಲಿವೆ (ನಾ). ಒಂದು ಬಗೆಯ ಸಸ್ಯ: ಹೊನಾಲ್, ಹುಲುವೆ, ಹುನಗಲು (ಮೃಡಿಗ. ೭೪-೧೫೧೪). **ಹುಲವೆ**: ಬಿಳಪಾದ್ರಿ, ಹುದೆ, ಬಿಲ್ಲ, ಹುಪ್ಪುಲವೆ, ಹುಲವೆ (ಮೃಡಿಗ. ೭೨-೧೪೭೬). **ಹುಲಿವೆ**: "ಹೊನಾಲ್, ಹುಲಿವೆ, ಹುನಗಲು, ಮರವ, ಬಿಳಿಮತ್ತಿ" (ಸಸ್ಮನ. ೧೨೬). 'ಹುಡುವೆ' ಪರಾ. [?]

ಹುಲುವೆಟ್ಟು, ಹುಲುವೆಟ್ಟು (ನಾ). ಸಣ್ಣ ಬೆಟ್ಟು; ಚಿಕ್ಕ ಬೆಟ್ಟು: ಕುಲಿಶ ಪರಿಯಂತೇಕೆ ನೇಗಿಲ ಬಳಿಯ ಹುಲುವೆಟ್ಟಕೆ (ಕುಮ್ಯಾಭೀ. ೧-೮). **ಹುಲುವೆಟ್ಟು**: ಹಾಱಿದ ಹುಲುವೆಟ್ಟುಗಳಿಕ್ಕೈಸೆಯ ಮುನ್ನೂಱಿದುವೊಂದೊಂದು ಬಳಿಯ (ಮೋಹತ. ೩೬-೪೯).

[ಹುಲು (< ಪುಲ್) + ಬೆಟ್ಟು]

ಹುಲುವೆಟ್ಟು 'ಹುಲುವೆಟ್ಟು' ನೋ.

ಹುಲುವೊದಱು 'ಪುಲ್ಲೊದಱು' ನೋ.

ಹುಲುಸರವಿ 'ಪುಲ್ಸರವಿ' ನೋ.

ಹುಲುಸು 'ಪುಲಿಸು' ನೋ.

ಹುಲುಹತ್ತಿ, ಹುಲಹತ್ತಿ (ನಾ). ಒಂದು ಬಗೆಯ ಸಸ್ಯ: "ಫಲಾದಿನೀ - ಹುಲುಹತ್ತಿ" (ಓಷಧಿ. ೧೦೪). **ಹುಲಹತ್ತಿ**: "ನದೀಕಾಮು(ಕ ?)ಖಿ - ಹುಲಹತ್ತಿ" (ಓಷಧಿ. ೮೪). [ಹುಲು? + ಹತ್ತಿ$_1$ (< ಪಟ್ಟಿ)]

ಹುಲುಹೊರೆ (ಕ್ರಿ). ಹುಲ್ಲನ್ನು ಹರಡು: ತನ್ನೊಡಲೊಳನ್ಯಾಯಶತಮಂ ಮಡಗಿಕೊಂಡು ನೆಲೆ ತೊಡೆದು ಹುಲುಹೊರೆದು [ಪಾಠಾಂ. ಹುಲಿವರೆದು] ಮುಚ್ಚಿದ ಮಡಕೆಯಂದದಿ ಹೊಱಗೆ ಮೆಱೆಯುತಿರಲು (ಸಿದ್ಧರಾ. ೮-೨).

[ಹುಲ್ಲು (< ಪುಲ್) + ಹೊರೆ$_2$ (< ಪೊರೆ$_2$)]

ಹುಲ್ಲರಿ (ನಾ). ಹುಲ್ಲಿನ ಗರಿ; ಗರಿಕೆಯ ಎಸಳು: ಹುಲ್ಲರಿಯ ಬಳವಿಗೆಯ ಬಿಗಿದುಸಿರೊಳಾಲಿಸುತ ಮೇಲೆ ಬಾಂದಳದಾಳವಳೆಯೆ ಹವಣಿಸುತ (ಮಲೆದೇ. ೩೩-೧).

[ಹುಲ್ (< ಪುಲ್) + ಗರಿ (< ಗಱಿ)]

ಹುಲ್ಲಾವಲುಸುಂಕ (ನಾ). ಹುಲ್ಲುಗಾವಲಿನ ಮೇಲೆ ಹಾಕುವ ತೆರಿಗೆ; ಗೋಮಾಳದ ಮೇಲೆ ಹಾಕುವ ಸುಂಕ: (ಮೃಗಚ. IV, X, ೭೭೧).

[ಹುಲ್ಲಾವಲ್ಲು + ಸುಂಕ$_1$]

ಹುಲ್ಲುಡಿಲು, ಹುಲುಗುಡಿಲು (ನಾ). ಹುಲ್ಲಿನಿಂದ ಮಾಡಿದ ಗುಡಿಸಲು; ಹುಲ್ಲಿನ ಜೋಪಡಿ: ಕಣ್ಣಪ್ಪನೊಡರಿಚುವೆನೆಂಬ ಹುಲ್ಲುಡಿಲ ಮೋಹಂ ಶಂಭುಗಂ (ಎಶಿಪು. ೮-೨-೨೬). **ಹುಲುಗುಡಿಲು**: ಎನ್ನಯ ಪಳ್ಳಿಗೀತನನೀಗ ಕೊಂಡೊಯ್ದು ಬೇಸಱದೆ ಹುಲುಗುಡಿಲನಿ[ಪಾಠಾಂ. ಸಲಿ]ಕ್ಕುವೆನು (ಬಸಪು. ೧೮-೭). 'ಪುಲ್ಲುಡಿಸಿಲ್' ಪರಾ. [ಹುಲ್$_2$ (< ಪುಲ್) + ಗುಡಿಲು (< ಗುಡಿಲ್)]

ಹುಲ್ಮೆದೆ, ಹುಲ್ಲುಮೆದೆ (ನಾ). ಹುಲ್ಲಿನ ಒಟ್ಟಿಲು, — ರಾಶಿ: ಮೃತವಪ್ಪುದೆಂದು ಕರುವಿಗೆ ಗೋವು ಹುಲ್ಮೆದೆಯ ಜೊತೆಮಾಡುವುದೆ (ಕವಪು. ೫೦). **ಹುಲ್ಲುಮೆದೆ**: ಕಣದ ಸುತ್ತಲೂ ಹುಲ್ಲುಮೆದೆಗಳನ್ನು ಹಾಕಿದ್ದಾರೆ (ರೂಢಿ). [ಹುಲ್$_2$ (< ಪುಲ್) + ಮೆದೆ$_1$]

ಹುಲ್ಲಡಕ (ನಾ). ಹುಲ್ಲಿನ ಒಟ್ಟಿಲು,— ರಾಶಿ: ''ತೃಣ್ಯಾ- ತೃಣಾನಾಂ ಸಂಹತಿಃ - ಹುಲ್ಲು ವಾಮಿ, ಹುಲ್ಲುರಾಶಿ, ಹುಲ್ಲುಹೊರೆ, ಹುಲ್ಲಮೆದೆ, ಹುಲ್ಲುಮೂಟೆ, ಹುಲ್ಲಡಕ'' (ಸಿದ್ಧಾಂತ. ೧೫೨). [ಹುಲ್ಲು (< ಪುಲ್) + ಅಡಕ್]

ಹುಲ್ಲಾಳ್ (ನಾ). ಕ್ಷುದ್ರವ್ಯಕ್ತಿ; ಅಲ್ಪನಾದವನು: ಬಲ್ಲಾಳಂದಸಗಿದ ಪಾಪವಶದಿಂ ಹುಲ್ಲಾಳಾದನೆಂದೆನುತ (ನೇಮಿಸಂ. ೩೪-೧೪೬). [ಹುಲ್ + (< ಪುಲ್) + ಆಳ್]

ಹುಲ್ಲಾಳಿ (ನಾ). ಒಂದು ಬಗೆಯ ಸಸ್ಯ; ಲಾಳಿಕಡ್ಡಿ: ''ಏರಣಂ, ವೀರತರಂ -೨ ಮರಕಬ್ಬಿನ ಪೆಸರುಗಳು, ಕೆಲವರು ಲಾಳೀಕಡ್ಡಿಯೆನ್ನುವರು, ಕೆಲವರು ಹುಲ್ಲಾಳೀಕಡ್ಡಿಯೆನ್ನುವರು'' (ಸಿದ್ಧಾಂತ. ೧೫೦). [?]

ಹುಲ್ಲಿಜುಹೆ (ನಾ). ಸಣ್ಣ ಇರುವೆ: ಎಲ್ಲಿ ನೋಡಿದೊಡೆ ಊರೂರ ಬಟ್ಟೆಗಳೊಳಗೆ ಹುಲ್ಲಿಜುಹೆ ನುಸುಳಲೆಡೆಯಿಲ್ಲ (ಸಿದ್ಧರಾ. ೧-೫೯).

[ಹುಲ್ + (< ಪುಲ್) + ಇಜುಹೆ (< ಇಜುಂಪೆ)]

ಹುಲ್ಲು 'ಪುಲ್' ನೋ.

ಹುಲ್ಲುಈಚಲ (ನಾ). ಒಂದು ಬಗೆಯ ಸಸ್ಯ: (ಕ). 'ಹುಲೀಚಲಬಳ್ಳಿ,' ಪರಾ.

[ಹುಲ್ಲು (< ಪುಲ್) + ಈಚಲ (< ಈಂಚಲ್)]

ಹುಲ್ಲುಕಡ್ಡಿ , ಹುಲುಕಡ್ಡಿ (ನಾ). ೧. ಹುಲ್ಲಿನ ಎಸಳು. ೨. (ಆಲಂ) ಯಃಕಶ್ಚಿತ್; ನಿಕೃಷ್ಟ: ಮಲ್ಲಯ್ಯನ ತೋರಿರೆ ತಾಯಿಗಳಿರಾ ಅವನಡಿ ಹುಲ್ಲುಕಡ್ಡಿಯಾಗಿ ಬದುಕುವೆ (ಸಿದ್ಧಪು. ೫-೨೬). **ಹುಲುಕಡ್ಡಿ**: ೧. ಸುಲಿವಂದು ಹಲ್ಲನು ಕೆರೆವಂದು ಕವಿಯನು ಹುಲುಕಡ್ಡಿ ಕೆಲಸಕೆ ಬರದೆ (ಇಂಚಾಪ. ೧೩೯-೮೩).

ಹುಲ್ಲುಕಡ್ಡಿಗೆ ಬಗೆ = (ಆಲಂ) ನಿಕೃಷ್ಟವಾಗಿ ಕಾಣು; ಕೀಳಾಗಿ ಭಾವಿಸು: ಹನುಮನು ಹುಲ್ಲುಕಡ್ಡಿಗೆ ಬಗೆಯದಿದ್ದನು ನಿಖಿಳ ಕೈದುಗಳ (ತೊರಕಾ. ೫-೭-೨೦).

[ಹುಲ್ಲು (< ಪುಲ್) + ಕಡ್ಡಿ]

ಹುಲ್ಲುಖಾಣ (ನಾ). ದನಕರುಗಳ ಆಹಾರ; ಹುಲ್ಲು; ಮೇವು: ಕಲ್ಲನಂದಿಯನೆಬ್ಬಿಸುತಂ ಹು[ಪಾಠಾಂ. ಪು]ಲ್ಲುಖಾಣ[ಪಾಠಾಂ. ಕವಣ]ವನಿಕ್ಕಿ ಮೆಲಿಸಿದ ನೆಲ್ಲರಱಿಯಲು ಜೋಳವಂ ಶಿವಲಿಂಗವಂ ಮಾಡಿ (ಬಸವಪು. ೨೨-೨೭).

[ಹುಲ್ಲು (< ಪುಲ್) + ಖಾಣ]

ಹುಲ್ಲುಗದ್ದೆ (ನಾ). ಹುಲ್ಲು ಬೆಳೆಯುವ ಮೈದಾನ; ಗೋಮಾಳ: ಆ ಕುದುರೆಯು ಒಂದು ಹುಲ್ಲುಗದ್ದೆಯಲ್ಲಿ ಮೇಯುತ್ತ ನಿಂತಿರುವುದು ಅವನ ದೃಷ್ಟಿಗೆ ಬಿತ್ತು (ಮುಂಬಯಿ. ೪-೭೯). [ಹುಲ್ಲು (< ಪುಲ್) + ಗದ್ದೆ (< ಗಟ್ಟೆ)]

ಹುಲ್ಲುಗಬ್ಬು 'ಪುಲ್ಗರ್ಬು' ನೋ.

ಹುಲ್ಲುಗಾಬು (ನಾ). ತೆನೆಯ ಕಾಳಿನ ಮೇಲಿರುವ ಹೊಟ್ಟು: ಕಾಳು ತುಳಿಸಿಯಾಯಿತು. ಹುಲ್ಲುಗಾಬು ತೆಗೆದು ತೂರಬೇಕು (ರೂಢಿ).

[ಹುಲ್ಲು (< ಪುಲ್) + ಗಾಬು]

ಹುಲ್ಲುಗಾವಲು (ನಾ). = ಹುಲ್ಲುಗದ್ದೆ: ದಟ್ಟವಾದ ಹಚ್ಚಹಸುರು ಹುಲ್ಲುಗಾವಲಿನ ಮೇಲೆ ಬಹು ಎತ್ತರದಲ್ಲಿ ಹಾರಾಡುತ್ತಿದ್ದ ಬಾನಾಡಿಗಳು (ಪುನರು. ೨೬೩); ಸೂರ್ಯ ಮುಳುಗುವ ಹೊತ್ತಾಗಿ ಹುಲ್ಲುಗಾವಲಿನ ಬೆಳಸೆಲ್ಲ ಹೊಂಬಣ್ಣವನ್ನು ತಳೆದಿತ್ತು (ಯೋಧಪು. ೧೮). [ಹುಲ್ಲು (< ಪುಲ್) + ಕಾವಲು (< ಕಾವಲ್)]

ಹುಲ್ಲುಗುಂಚೆ (ನಾ). (ವೈದಿಕಾಚಾರದಲ್ಲಿ ಬಳಸುವ) ದರ್ಭೆಕಟ್ಟು,— ಕಂತೆ: ಚಂಚಲಮನವ ನಿನಗೆಮ್ಮು ಪೇಳದರೇನು ವಂಚನೆ ಬಡದಲೆ ಚರಿಸುತಿಪ್ಪೆ ಹಂಚು ನೋಡಿಕೊಂಡು ಮೊಗವ ತಿರುಹಿದಂತೆ ಕಿಂಚಿತ್ತುವಾದರು ಸುಖ ಬಪ್ಪುದೇ ಸಂಚಗಾರಕೆ ಭಕುತಿ ಸಂಪಾದಿಸು ಹುಲ್ಲುಗುಂಚೆಯಿಂದಲಿ ಮೋಕ್ಷವಾಗುವುದೇ (ವಿಸಾಸು. ೨೦-೩).

[ಹುಲ್ಲು (< ಪುಲ್) + ಗುಂಚೆ (< ಗುಚ್ಛ?)]

ಹುಲ್ಲುಗುಡಿಸಲು 'ಪುಲ್ಗುಡಿಸಿಲ್' ನೋ.

ಹುಲ್ಲುಗುದ್ದೆ , ಹುಲ್ಲುಗೊದ್ದೆ (ನಾ). ಹುಲ್ಲಿನ ರಾಶಿ; ಬಣವೆ: ಏನು ಮಾಡುತಿದ್ದ? ಹುಲ್ಲುಗುದ್ದೆಯ ಮರೆಗೆ ಆ ಹಾಳು ಕೀರ್ತನಕಾರ ಪ್ರಿಯಾಗಿಗೆ ಮಾಡಿದ್ದನ್ನು? (ಮೂರುದಾ. ೨೮೪). **ಹುಲ್ಲುಗೊದ್ದೆ**: ಮನೆಯ ಹಿಂದಿನ ಹುಲ್ಲುಗೊದ್ದೆಯ ಮರೆಯಲ್ಲಿ (ಮೂರುದಾ. ೨೪೨). [ಹುಲ್ಲು (< ಪುಲ್) + ಗುದ್ದೆ]

ಹುಲ್ಲುಗುರು (ನಾ). (ಕರಾ) ಮೈಮೇಲೆ ಉಂಟಾಗುವ ಸಣ್ಣಗಂಟು; ನರಹುಲಿ. [?]

ಹುಲ್ಲುಗೊದ್ದೆ 'ಹುಲ್ಲುಗುದ್ದೆ' ನೋ.

ಹುಲ್ಲುಚಾಪೆ (ನಾ). ಹುಲ್ಲಿನಿಂದ ಮಾಡಿದ ಚಾಪೆ: (ಕ).

[ಹುಲ್ಲು (< ಪುಲ್) + ಚಾಪೆ]

ಹುಲ್ಲುಪಾಚೆ (ನಾ). ಪಾಚಿಯ ಹುಲ್ಲು: 'ನಾನು' ಎಂಬುದರ ವಿಚಾರವಂತಿರಲಿ. ಒಂದು ಸಾಮಾನ್ಯ ಹುಲ್ಲುಪಾಚಿಯ ವಿಚಾರವನ್ನು ಕೂಡ ಸೋಮಾರಿಗಳಿಂದ ತಿಳಿಯಲು ಸಾಧ್ಯವಿಲ್ಲ (ಜೀವಾಶ್ಮ. ೭). 'ಪಾಚಿಹುಲ್ಲು' ಪರಾ.

[ಹುಲ್ಲು (< ಪುಲ್) + ಪಾಚಿ (< ಪಾವಸೆ)]

ಹುಲ್ಲುಬಂದಿಗ (ನಾ). ಒಂದು ಬಗೆಯ ಪಕ್ಷಿ (?): ಪಿಕ್ಕುಳಿಕ ಚೆಂಬೋತ ಗೀಜಗ ಕುಕ್ಕು ಕೋಗಿಲೆ ಕಾಮುರುಳಿ ಬೆಳ್ಕಕ್ಕಿಯಲಗೂಲೆ ಹುಲ್ಲುಬಂದಿ[ಪಾಠಾಂ ಹುಲ್ಲಭಂದಿ]ಗಳಿಬ್ಬ ನೀರ್ಮುಳುಕ (ಸಾಳ್ವಭಾ. ೫-೨೨). [?]

ಹುಲ್ಲುಬಣಬೆ 'ಹುಲ್ಲುಬಣವೆ' ನೋ.

ಹುಲ್ಲುಬಣವೆ , ಹುಲ್ಲುಬಣಬೆ (ನಾ). ಹುಲ್ಲಿನ ರಾಶಿ,—ಒಟ್ಟಿಲು: ಹುಲ್ಲುಬಣವೆ ಸುತ್ತ ಬೇಲಿಹಾಕುತ್ತಿದ್ದಾರೆ (ರೂಢಿ). **ಹುಲ್ಲುಬಣಬೆ**: (ಕ).

[ಹುಲ್ಲು (< ಪುಲ್) + ಬಣವೆ (< ಬಣಂಬೆ)]

ಹುಲ್ಲುಬನ್ನಿ 'ಹುಲುಬನ್ನಿ' ನೋ.

ಹುಲ್ಲುಭತ್ತ (ನಾ). ಒಂದು ಬಗೆಯ ಸಸ್ಯ: ''ನೀವಾರಃ- ಹುಲ್ಲುಭತ್ತ, ನೀರುಮಂಜು'' (ಓಷಧಿ. ೦೮). [ಹುಲ್ಲು (< ಪುಲ್) + ಭತ್ತ (< ಬತ್ತ)]

ಹುಲ್ಲುಮಣಿ (ನಾ). ಒಂದು ಬಗೆಯ ಮಣಿ; ನೀಲರತ್ನ (?): ಗಿರುಗಟಿ ತೊಡಕುವಳಿ ವಂಕಿ ಕಲ್ಲಮಣಿ ಪದ್ಮಮಣಿ ಪುತ್ರಜೀವಿಯ ಹುಲ್ಲುಮಣಿ ಪಟಿಕವಣಿ ಭೂಷಣಂ (ಗುಯಚಾ. ೩-೫೦). [ಹುಲ್ಲ (< ಪುಲ್) + ಮಣ್]

ಹುಲ್ಲುಮಣಿಯ (ನಾ). ಸಾರ್ವಜನಿಕ ಹುಲ್ಲುಗಾವಲಿನ ಅಧಿಕಾರಿ; ಗೋಮಾಳದ ಪಾಲಕ: (ಕ). [ಹುಲ್ಲು (< ಪುಲ್) + ಮಣಿಯ]

ಹುಲ್ಲುಮನೆ 'ಪುಲ್ಮನೆ' ನೋ.

ಹುಲ್ಲುಮಾನು 'ಹುಲುಮಾನು' ನೋ.

ಹುಲ್ಲುಮೆದೆ 'ಹುಲ್ಮೆದೆ' ನೋ.

ಹುಲ್ಲುಮೊರಡಿ 'ಹುಲುಮೊರಡಿ' ನೋ.

ಹುಲ್ಲುಸರಡು (ನಾ). ಒಂದು ಬಗೆಯ ಸಸ್ಯ: ''ಚೋರಕಂಡಿಕಮನಲು ಹುಲ್ಲುಸರಡನಿಸಿಕ್ಕು'' (ಮಂಗರಾ. ೪೩-೪೦). [ಹುಲ್ಲು (< ಪುಲ್) + ಸರಡು ?]

ಹುಲ್ಲುಸುಲ್ಲಿಗಿಡ (ನಾ). ಒಂದು ಬಗೆಯ ಗಿಡ: (ಮೃಡಿಗಿ. ೪೨-೬೩೭).

[ಹುಲ್ಲುಸುಲ್ಲಿ + ಗಿಡ (< ಗಿಡು)]

ಹುಲ್ಲುಹಕ್ಕಲು (ನಾ). ಹುಲ್ಲು ಬೆಳೆಯುವ ಮೈದಾನ; ಹುಲ್ಲುಗಾವಲು; ಗೋಮಾಳ: ಹಳ್ಳಿಪಳ್ಳಿಗಳಲ್ಲಿ ಹುಲ್ಲುಹಕ್ಕಲು ಬಳ್ಳಿಗಿಡ ಮರ ಸಿಕ್ಕಂತೆ ತಾವಾಗಿ ಹುಟ್ಟಿ ಬೆಳೆವಂತೆ (ಇಪ್ಪಕ. ೩೭೯).

[ಹುಲ್ಲು (< ಪುಲ್) + ಹಕ್ಕಲು (< ಹಕ್ಕಲ್)]

ಹುಲ್ಲುಹಣ (ನಾ). ಒಂದು ಬಗೆಯ ಸುಂಕ; ಹುಲ್ಲಿನ ಮೇಲೆ ಹಾಕುವ ತೆರಿಗೆ: ೧. ಮನೆದೆರಿಗೆ ೨. ಹುಲ್ಲುಹಣ . . . ೧೯. ಕೌದಿಯ ತೆರಿಗೆ - ಈ ಮೇರೆಗೆ ಹತ್ತೊಂಬತ್ತು ಬಾಬುಗಳನ್ನು ರೈತರಿಗೆ ನಿಷ್ಕರ್ಷೆಮಾಡಿಸಿ (ಮಹಾವಂ. I, ೧೨೪); ಈ ವೃತ್ತಿಗೆ ಸಲುವ . . . ಹುಲ್ಲುಹಣ ಚರಾದಾಯ ಹೊರಾದಾಯ (ಹುಬ್ಬಹ. ೩).

[ಹುಲ್ಲು (< ಪುಲ್) + ಹಣ (< ಪಣವು)]

ಹುಲ್ಲುಹಸಲೆ (ನಾ). ಅಚ್ಚಹಸಿರಾದ ಹುಲ್ಲು; ಹಸಿರುಹುಲ್ಲು: ಪಾಂಡವರು ಒಂದುದಿನ ಚಿಂತಾಕ್ರಾಂತರಾಗಿ ಹುಲ್ಲುಹಸಲೆಯ ಮೇಲೆ ಕುಳಿತಿದ್ದರು (ವಚಭಾ. ೧೩೭); ಅವರೆಲ್ಲರೂ ಮನೆಯ ಮುಂದಣ ಹುಲ್ಲುಹಸಲೆಯ ಮೇಲೆ ಆಡಲು ಹೋದರು (ಪುನರು. ೫೫೫). [ಹುಲ್ಲು (< ಪುಲ್) + ಹಸಲೆ (< ಪಸಲೆ)]

ಹುಲ್ಲುಹೊರೆ 'ಪುಲ್ಲೊಟ್ಟಿ' ನೋ.

ಹುಲ್ಲೆ 'ಪುಲ್ಲೆ$_1$' ನೋ.

ಹುಲ್ಲೆಕರು (ನಾ). ಜಿಂಕೆಯ ಮರಿ: ಆ ಮೃಗಶಾಲೆಯಲ್ಲಿ ಹುಲಿ, ಕರಡಿ . . . ಹುಲ್ಲೆಕರು, ಕಡವೆ . . . ಮುಂತಾದ ನಾನಾಬಗೆಯ ಮೃಗಗಳಿದ್ದುವು (ಒಡಿಕ. ೫೫).

[ಹುಲ್ಲೆ (< ಪುಲ್ಲೆ$_1$) + ಕರು$_1$ (< ಕಱು$_2$)]

ಹುಲ್ಲೆಗಣ್ 'ಪುಲ್ಲೆಗಣ್' ನೋ.

ಹುಲ್ಲೆಗಣ್ಣು 'ಪುಲ್ಲೆಗಣ್' ನೋ.

ಹುಲ್ಲೆನೆಗೆ (ನಾ). ಜಿಂಕೆಯ ನೆಗೆತ; ಚಿಗರೆಯ ಜಿಗಿತ: ಹುಲ್ಲೆನೆಗೆ ಯೌವನವು, ಹಳವು ಮುಪ್ಪು (ಇಂಗೀತ. ೪-೧೧). [ಹುಲ್ಲೆ (< ಪುಲ್ಲೆ$_1$) + ನೆಗೆ$_2$]

ಹುಲ್ಲೆಮರಿ 'ಪುಲ್ಲೆಮಱಿ' ನೋ.

ಹುಲ್ಲೆವಾಜು$_1$ (ಕ್ರಿ). ಜಿಂಕೆಯಂತೆ ನೆಗೆ, – ಹಾರು : ಬಿಲ್ಲಾರರು ಹುಲ್ಲೆವಾಜುವರು (ಭರಚ. ೨೩-೨೧). [ಹುಲ್ಲೆ (< ಪುಲ್ಲೆ$_1$) + ಪಾಜು$_1$]

ಹುಲ್ಲೆವಾಜು$_2$ (ನಾ). = ಹುಲ್ಲೆನೆಗೆ: ಹುಲ್ಲೆವಾಜುಗಿ ಸೋಪಾನವ ದಾಂಟುತ ಗೆಲ್ಲದಿಂ ಬರ್ಪನ ಕಂಡು (ಭರಚ. ೫೭-೯೦). [ಹುಲ್ಲೆ (< ಪುಲ್ಲೆ$_1$) + ಪಾಜು$_2$]

ಹುಲ್ಲೊಕ್ಕಲ್ (ನಾ). ಕೋಲಿನಿಂದ ಬಡಿದು ಅಥವಾ ದನಗಳ ಕಾಲಿನಿಂದ ತುಳಿಸಿ ತೆನೆಯಿಂದ ಕಾಳನ್ನು ಬೇರ್ಪಡಿಸುವುದು; ಒಕ್ಕಲಿಕ್ಕುವಿಕೆ: (೬).

[ಹುಲ್ಲು (< ಪುಲ್) + ಒಕ್ಕಲ್$_1$]

ಹುವ್ವಾಡಿಗ 'ಪೂವಡಿಗ' ನೋ.

ಹುವ್ವು 'ಪೂ$_2$' ನೋ.

ಹುವ್ವುಲವೆ (ನಾ). ಒಂದು ಬಗೆಯ ಸಸ್ಯ: ಬಳಪಾದ್ರಿ, ಹುದೆ, ಬಿಲ್ಲ, ಹುವ್ವುಲವೆ, ಹುಲವೆ (ಮೈಡಿಗ. ೭೨-೧೪೭೬). [?]

ಹುಷಾರ್ , ಹುಷಾರಿ, ಹುಷಾರು, ಹೋಷಿಯಾರ್ (ನಾ). ೧. ಎಚ್ಚರಿಕೆ; ಜಾಗರೂಕತೆ: ಒಂದಕ್ಕೊಂದು ಕಲೆಯದಂತೆ ಪ್ರತ್ಯೇಕಪ್ರತ್ಯೇಕವಾಗಿ ತೆಗೆದಿಡುವುದರಲ್ಲಿ ಬಹಳ ಹುಷಾರ್ ಆಗಿರಬೇಕು (ಗ್ರಾಮಾಶ. ೫೭). ೨. ಜಾಣತನ; ಬುದ್ಧಿವಂತಿಕೆ: ಹುಸೇನಿ ಹುಷಾರ್ ಹುಡುಗನಿದ್ದಾನೆ (ರಂಗರೂ. ೨೨). **ಹುಷಾರಿ:** ೧. ಹುಷಾರಿಯಿಂದ ತಮ್ಮ ಜಾಗ್ರತೆಯಲ್ಲಿ ಇರುವದಕ್ಕೆ ಬೇಕಾಗಿ ಇದೆ (ರಾಜೇಂದ್ರ. ೬೫); ನಿನ್ನ ಹುಷಾರಿ ಮೇಲೆ ನೀನಿರಬೇಡವೆ ! (ಚಿಂಗೂಲಿ. ೧೭); ಚಿಕ್ಕಪ್ಪನೇನೋ ಇಂದು ಹುಷಾರಿಯಾದಂತಿದೆ (ಮುಂಗಾಮು. ೧೨೩). **ಹುಷಾರು:** ೧. ನಿಮ್ಮ ಕುತ್ತಿಗೆ ಕೊಯ್ದುಬಿಟ್ಟಾರು, ಹುಷಾರಾಗಿರಿ ಎಂದನು (ಪರಿಣೇ. ೪೫); ನಿನ್ನ ಪುಸ್ತಕ ಹುಷಾರಾಗಿ ನೋಡಿಕೊಳ್ಳುತ್ತೇನೆ (ಶಾಲಿಮ. ೬೨); ಲಕ್ಕೋಟೆಯನ್ನು ಆದರದಿಂದ ಸ್ವೀಕರಿಸಿ ಹುಷಾರಾಗಿ . . . ಓದಿದರು (ಶ್ರೀರಾಯ. ೧೮೦). ೩. ಆರೋಗ್ಯ; ಸ್ವಸ್ಥವಾಗಿರುವಿಕೆ: ಅವಳ ಅಕ್ಕನ ವಿವಾಹಕ್ಕೂ ಮಂಗಳೆ ಹುಷಾರು ತಪ್ಪಿ ಬಾರದಹೋದುದರಿಂದ ಮಂಗಳೆಯ ಮುಖನೋಡುವ ಅವಕಾಶವೇ ಅವಳಿಗೆ ದೊರೆತಿಲಿಲ್ಲ (ಸರ್ವಮಂ. ೩೩೧); ಅಮ್ಮನಿಗೆ ಹುಷಾರಿಲ್ಲ (ನಡದಾ. II, ೧೧೦೪). **ಹೋಷಿಯಾರ್:** ೧. ಹೋಷಿಯಾರ್ ! ನೀರವದ ಇರುಳಿನಲಿ, ಆಗೊಮ್ಮೆ ಈಗೊಮ್ಮೆ ಎಚ್ಚರಿಕೆಯ ಕೂಗು . . . ಹೋಷಿಯಾರ್ (ಅತ್ಮಾಪ್ರ. ೧).

[← ಪಾರ. ಹುಶ್ಯಾರ್, ಹುಶ್ಯಾರು; ಮರಾ. ಹುಶಾರ್; ಹಿಂ. ಹೋಷಿಯಾರ್, ಹೋಷಿಯಾರಿ]

ಹುಷಾರಿ 'ಹುಷಾರ್' ನೋ.

ಹುಷಾರು 'ಹುಷಾರ್' ನೋ.

ಹುಸಿ$_1$ 'ಪುಸಿ$_1$' ನೋ.

ಹುಸಿ$_2$ 'ಪುಸಿ$_2$' ನೋ.

ಹುಸಿ$_3$ (ನಾ). (ಉಕ) ಮನೆಯ ಮುಂದಿನ ಭಾಗ; ಪಡಸಾಲೆ; ಮೊಗಸಾಲೆ: ಮಾವ ಅದೇ ಊಟ ಮುಗಿಸಿ ಹೊರಗಿನ ಹುಸಿಯಲ್ಲಿ ಕುಳಿತಿದ್ದರು (ಸ್ವತಿಚಿ. ೫೧); ಹೊರಗಿನ ಹುಸಿಯಲ್ಲಿ ಅಗಸರ ಸಂಗ . . . ಕುಳಿತಿದ್ದನು (ಗಂಗಾಸಾ. ೫೧). [?]

ಹುಸಿಕ 'ಪುಸಿಕ' ನೋ.

ಹುಸಿಕಾಳಗ 'ಪುಸಿಕಾಳೆಗ' ನೋ.

ಹುಸಿಗ 'ಪುಸಿಗ' ನೋ.

ಹುಸಿಗಾಯಿ (ನಾ). ಹಣ್ಣಾಗದೆ ಅಕಾಲದಲ್ಲಿ ಉದುರಿಹೋಗುವ ಕಾಯಿ; ಜೊಳ್ಳುಕಾಯಿ: ಆ ಗಿಡದಲ್ಲಿ ಹೆಚ್ಚಾಗಿ ಹುಸಿಗಾಯೇ ತುಂಬಿದೆ (ರೂಢಿ).

[ಹುಸಿ$_2$ (< ಪುಸಿ$_2$) + ಕಾಯಿ$_1$ (< ಕಾಯ್$_4$)]

ಹುಸಿಗುಂಡು (ನಾ). ಕೇವಲ ಎಚ್ಚರಿಕೆಗಾಗಿ ಹಾರಿಸುವ ಗುಂಡು: ರಾಗಿ ಕೂಡಿಸಿ ಹುಸಿಮದ್ದು . . . ಹಾರ್ಸಾವು ಹುಸಿಗುಂಡು (ಕನ್ನಜಾ. ೧೯).

[ಹುಸಿ$_2$ (< ಪುಸಿ$_2$) + ಗುಂಡು]

ಹುಸಿಡಂಭಕ (ನಾ). ಬೂಟಾಟಿಕೆಯವನು; ಸುಳ್ಳು ಸೋಗಿನವನು: ಇಂತಪ್ಪ ಹುಸಿಹುಂಡ ಹುಸಿಡಂಭಕ ದುರ್ಮತಿ ಬರುಕಾಯನಿಗೆ ಅಖಂಡೇಶ್ವರ ಎಂತು ಮಚ್ಚುವನು (ಅಖಂಡೇ. ೯೬-೧೫೫). [ಹುಸಿ$_2$ (< ಪುಸಿ$_2$) + ಡಂಭಕ (< ಡಂಬಕ)]

ಹುಸಿತನ (ನಾ). ಸುಳ್ಳುತನ; ಜೊಳ್ಳುತನ: ಜೀವಜಗದ ಕಡಲಿನಿಂದ ಮೂಡಿಬರದೆ ಹೊಸತನ ಮಣ್ಣುಗೂಡಿ ಹುಸಿತನ? (ಪಪಾಸ. ೩೩-೮). [ಹುಸಿ$_2$ (< ಪುಸಿ$_2$) + - ತನ]

ಹುಸಿನಗು (ನಾ). ೧. ಸುಳ್ಳುನಗೆ; ಕಪಟದ ನಗು. ೨. ಮೃದುನಗೆ; ಮಂದಹಾಸ: ಈಗ ಹುಸಿನಗು ನಕ್ಕ (ಮುಂಗಾಪ್ರ. ೭೩); ಒಲುಮೆ ಬೆರೆತ ಹುಸಿನಗುವಿನೊಂದಿಗೆ, ಪ್ರಶ್ನೆ ಕೇಳುವ ದನಿಯಲ್ಲಿ (ತುಂಗಭ. ೮೫೫). [ಹುಸಿ$_2$ (< ಪುಸಿ$_2$) + ನಗು$_2$]

ಹುಸಿನಗೆ (ನಾ). ೧. = ಹುಸಿನಗು ೧: ಸರ್ಕಾರಿ ವಕೀಲ ಅರೆಮುಚ್ಚಿದ ಕಣ್ಣುಗಳಲ್ಲಿ ಕುಯುಕ್ತಿಯ ಹುಸಿನಗೆಯನ್ನು ಪ್ರಕಟಿಸುತ್ತ ನುಡಿದನು (ಪುನರು. ೪೯). ೨. = ಹುಸಿನಗು ೨: ಹುಸಿನಗೆ ನಗುತ ಗಂಡನ ಕೂಡೆ ನುಡಿದರಾ ಹುಸಿನಡುವಿನ ಸೊಬಗೆಯರು (ಭರಚ. ೪-೫೧); ರಂಗಣ್ಣನವರೂ ಒಂದು ಹುಸಿನಗೆಯನ್ನು, ತೂರಿ ಕೈಜೋಡಿಸಿದರು (ಅಪನಾ. ೧೧೭). [ಹುಸಿ$_2$ (< ಪುಸಿ$_2$) + ನಗೆ]

ಹುಸಿನಡು 'ಪುಸಿನಡು' ನೋ.

ಹುಸಿನಿದ್ದೆ 'ಪುಸಿನಿದ್ದೆ' ನೋ.

ಹುಸಿನುಡಿ$_1$ 'ಪುಸಿನುಡಿ$_1$' ನೋ.

ಹುಸಿನುಡಿ$_2$ 'ಪುಸಿನುಡಿ$_2$' ನೋ.

ಹುಸಿಮಣ್ಣು (ನಾ). ಬಿಗಿಯಾಗಿ ಕೂರದಿರುವ ಮಣ್ಣು; ಸಡಿಲವಾದ ಮಣ್ಣು: ಕೊಳಾಯಿಸಾಲುಗಳನ್ನು ಹುಸಿಮಣ್ಣಿರುವ ಇಳಿಕಲ್ಲಿನಲ್ಲಿ ಭದ್ರವಾಗಿಡಲು ೧೩ ಭದ್ರ ಕಾಂಕ್ರೀಟಿನ ದಿಮ್ಮಿಗಳನ್ನೂ . . . ಕೊಟ್ಟಿದೆ (ಶಿಲ್ಪಸಾ. ೨೪೭).

[ಹುಸಿ$_2$ (< ಪುಸಿ$_2$) + ಮಣ್ಣು (< ಮಣಣ್)]

ಹುಸಿಮದ್ದು (ನಾ). ಕೇವಲ ಸದ್ದುಮಾಡುವ ಮದ್ದು; ಅಪಾಯಕಾರಿಯಲ್ಲದ ಮದ್ದು: ತಂದು ನಿಲಸ್ಯಾಳ ಸಾಲುಬುರುಕಿ ಹಾಕಿಸಿ ಹೊರಗಿನ ನಗರಿ ಮ್ಯಾಲೆ ಚಾಪಹಾಕಿ ಹುಸಿಮದ್ದು ಹಾಕಿ ಛರಂಗಿ ಜಡಿಸಿ (ಲೋಳಗೀ. ೨೨೩).

[ಹುಸಿ$_2$ (< ಪುಸಿ$_2$) + ಮದ್ದು (< ಮರ್ದು)]

ಹುಸಿಮಸಿ (ನಾ). ಮಿಥ್ಯೆ; ಮಾಯೆ (?): ಅಱಿದೆನೆಂಬುದಕ್ಕೆ ಕುಱುಹಿಲ್ಲದೆ ಕುಱುಹಿಂಗೆ ಅವಧಿಗೂಡಲಿಲ್ಲದೆ ಹುಸಿಮಸಿಯ ಮಣಿಮಾಡದಲ್ಲಿ ಒಱಗದೆ ಪರಿಣಾಮವೇ ಪಥ್ಯವಾಗಿ ಅಂತರಂಗಶುದ್ಧ ಪರಿಪೂರ್ಣವಾಗಿ ನಿಂದು (ಮೋಳಮಾ. ೧೦೦-೬೯೭).

[ಹುಸಿ$_2$ (< ಪುಸಿ$_2$) + ಮಸಿ?]

ಹುಸಿಮಾತು 'ಪುಸಿವಾತು' ನೋ.

ಹುಸಿಮುನಿಸು (ನಾ). ಸುಳ್ಳುಕೋಪ; ನಟನೆಯ ಸಿಟ್ಟು: ಕಕ್ಕಿಯ ಹುಸಿಮುನಿಸಿನ ಕಾರಣ ಒಮ್ಮಿಂದೊಮ್ಮೆಗೆ ಹೊಳೆಯಲಿಲ್ಲ (ವಾಹ್ಯಲ. ೮೩); ವಯ್ಯಾರದ ಮುನಿಸನ್ನು ಪ್ರದರ್ಶಿಸಿದಳು ನನ್ನ ರಾಜ್ಞಿ. ಅದು ಹುಸಿಮುನಿಸೆಂದು ನಾನರಿಯೆನೆ ? (ರೂಪಸಂ. ೬).

[ಹುಸಿ$_2$ (< ಪುಸಿ$_2$) + ಮುನಿಸು$_2$]

ಹುಸಿಯಾಡು 'ಪುಸಿಯಾಡು' ನೋ.

ಹುಸಿವೇಷ (ನಾ). ಕೃತ್ರಿಮವೇಷ; ಮಾರುವೇಷ: ಎಲ್ಲ ಬಂಧನಗಳನ್ನು ಹರಿದೊಗೆದು ಮಿಂಚಿ ನಿಂದು ಸತ್ಕದ ಹುಸಿವೇಷವನ್ನು ಅಸತ್ಕವನ್ನು ಭೇದಿಸಿ (ಮೋಳಮಾ. ೭೫ ಪ್ರಸ್ತಾವನೆ); ಹುಸಿವೇಷದ ಇಂದ್ರನು 'ಬರುತ್ತೇನೆ ಸ್ವಲ್ಪ ತಾಳು' ಎಂದು ಹೇಳಿ ನೀರುನಾಯಿಯ ಹತ್ತಿರ ಬಂದನು (ಕಪಪ್ರ. ೬-೯). [ಹುಸಿ$_2$ (< ಪುಸಿ$_2$) + ವೇಷ]

ಹುಸಿಸುತ್ತು (ನಾ). (ಮಾತಿನ) ವ್ಯರ್ಥವಾದ ಸುತ್ತುಬಳಕೆ: ಮತ್ತಿನ ಬಿಜು

ನುಡಿಗಳ ಹುಸಿಸುತ್ತಿನೊಳೇನವಳಿನೀವೊಡೀವುದು ಕುಡೆವೆಂಬುತ್ತರಮನೆ ಕುಡುವುದು (ಪುಷ್ಪಪು. ೭-೫೮). [ಹುಸಿ$_2$ (< ಪುಸಿ$_2$) + ಸುತ್ತು$_2$]

ಹುಸಿಹುಂಜ (ನಾ). ಸುಳ್ಳಿನ ಕಂತೆ: ಮಂಜಿನ ಮೊತ್ತ ಮಕ್ಕಳಿಗೊಂದು ಗಿರಿಯಾಗಿ ಅಂಜಿಸುವಂತೆ ಲೋಕದೊಳು ಜಂಜಡರಿಗೆ ವಜ್ರವಾಗಿರ್ದುದಿದು ಹುಸಿಹುಂಜಿಯ್ಮೆ ಕಂಡೆನಾನೆಂದ (ಭರಚ. ೨೯-೬೩). [ಹುಸಿ$_2$ (< ಪುಸಿ$_2$) + ಹುಂಜ (< ಹುಂಜ$_2$)]

ಹುಸಿಹುಂಡ (ನಾ). ಸುಳ್ಳು ಹೇಳುವ ದುಷ್ಟ: ಇಂತಪ್ಪ ಹುಸಿಹುಂಡ ಹುಸಿ ಡಂಭಕ ದುರ್ಮತಿ ಬರುಕಾಯನಿಗೆ ಅಖಂಡೇಶ್ವರ ಎಂತು ಮೆಚ್ಚುವನು ಎನಗೆ (ಅಖಂಡೇ. ೯೬-೧೫೫). [ಹುಸಿ$_2$ (< ಪುಸಿ$_2$) + ಹುಂಡ]

ಹುಸಿಹುಯಿಲು (ನಾ). ಸುಳ್ಳು ಗಲಾಟೆ, — ಗಲಭೆ: ತೋಳ ಬಂತಲೇ ತೋಳಬಂತು ಎಂದು ಹೆದರಿಸಿದ ಕುರುಬರ ಹುಡುಗನಂತೆ ನಾನೆಷ್ಟೋ ಸಲ ಮರಣದ ಹುಸಿ ಹುಯಿಲೆಬ್ಬಿಸಿದ್ದೆ (ನಿರಾಭ. ೧೩೬). [ಹುಸಿ$_2$ (< ಪುಸಿ$_2$) + ಹುಯಿಲು (< ಪೊಯಿಲ್)]

ಹುಸಿಹೂ (ನಾ). ಕಾಯಾಗದೆ ಬಿದ್ದುಹೋಗುವ ಹೂವು; ನಿಷ್ಫಲವಾಗಿ ಉದುರುವ ಹೂವು: (ಪ). [ಹುಸಿ$_2$ (< ಪುಸಿ$_2$) + ಹೂ$_2$ (< ಪೂ$_2$)]

ಹುಸಿಹೆದರಿಕೆ (ನಾ). ಸುಳ್ಳು ಬೆದರಿಕೆ; ಗೊಡ್ಡು ಬೆದರಿಕೆ: ಅವನು ಹುಸಿಹೆದರಿಕೆಗೆ ಜಗ್ಗುವಂತಿರಲಿಲ್ಲ (ರಂಗಿ). [ಹುಸಿ$_2$ (< ಪುಸಿ$_2$) + ಹೆದರಿಕೆ]

ಹುಸಿಹೋಗು 'ಪುಸಿವೋಗು' ನೋ.

ಹುಸೇನಿ (ನಾ). [ಸಂಗೀತ] ಒಂದು ರಾಗದ ಹೆಸರು: ಭೈರವಿ ವರಾಳಿ ಹುಸಾEಸೇತನಿ ಗುಂಡಾಕ್ರೀ . . . ವಸಂತರಾಗಂ ಇವಾದಿಯಾದ ರಾಗಂಗಳಂ ಪಾಡುತ್ತಿರೆ (ಹಮ್ಮೀ.ರಾ. ೨-೯೦); ಹುಸೇನಿ: ೨೨ನೇ ಮೇಳಕರ್ತ ಖರಹರಪ್ರಿಯದಲ್ಲಿ ಜನ್ಯ ಪ್ರಾಚೀನ ರಕ್ತಿರಾಗ 'ರಾಗಾಂಗ-ಭಾಷಾಂಗ' ರಾಗ . . . ಕರುಣಾರಸಪ್ರಧಾನ ರಾಗ ಎಲ್ಲಾ ವೇಳೆಯಲ್ಲೂ ಹಾಡಬಹುದು (ಸಂಗೀಚಂ. ೧೬೧); ಯಮುನಾ, ಕಲ್ಯಾಣಿ, ಹುಸೇನಿ . . . ಮುಂತಾದ ರಾಗಗಳು ಹಲವು ನಮ್ಮಲ್ಲಿ ನೆಲೆಗೊಂಡು ಕರ್ನಾಟಕ ಗೌರವವನ್ನು ಪಡೆದಿರುವುದು (ಗಾನಕ. ೫೫). [← ಮರಾ. ಹುಸೇನೀ]

ಹುಹುಧ್ವಾನ (ನಾ). ಚಳಿಯಿಂದುಂಟಾದ ನಡುಕವನ್ನು ಸೂಚಿಸುವ ಒಂದು ಅನುಕರಣಪದ: ನಡುಕಂ ಕೈಮಾಜಿ ದಂತಚ್ಛದಮೊಡೆದು ಹುಹುಧ್ವಾನಮುಂ ಪೊಣ್ಮೆ (ರಾಜಶೇ. ೯-೨೨).

ಹುಳ 'ಪುಳು' ನೋ.

ಹುಳಕ (ನಾ). ಒಂದು ಬಗೆಯ ಹಕ್ಕಿ: 'ದೊಡ್ಡಹುಳಕ', 'ಸಣ್ಣಹುಳಕ' ಪರಾ. [?]

ಹುಳಗ (ನಾ). (ಕರಾ) ಅನ್ನಕ್ಕೆ ಬಡಿಸಿಕೊಳ್ಳುವ ಸಾರಿನಂಥ ಒಂದು ಪದಾರ್ಥ; ಕುದಿಲ. [?]

ಹುಳಹಿಡಕಗಿಡ (ನಾ). ಒಂದು ಬಗೆಯ ಗಿಡ: ಹುಳುಹಿಡಕಗಿಡ, ಕ್ರಿಮಿಬಂಧ (ಮುಡಿಗಿ. ೩೨-೬೧೭). [ಹುಳಹಿಡಕ + ಗಿಡ (< ಗಿಡು)]

ಹುಳಿ$_1$ 'ಪುಟಿ' ನೋ.

ಹುಳಿ$_2$ 'ಪುಳಿ$_3$' ನೋ.

ಹುಳಿಆಚಲು (ನಾ). ಒಂದು ಬಗೆಯ ಸಸ್ಯ: ಬಸವನ ಪಾದ, ಹುಳಿಆಚಲು (ಮುಡಿಗಿ. ೧೨-೨೦೯). [ಹುಳಿ ? + ಆಚಲು]

ಹುಳಿಇಪ್ಪೆ (ನಾ). ಒಂದು ಬಗೆಯ ಇಪ್ಪೆಯ ಮರ: ಹುಳಿಇಪ್ಪೆ (ಮೋಹ): ತಕ್ಕಮಟ್ಟಿಗೆ ಎತ್ತರವಾಗುತ್ತದೆ. ಇದರ ಬೀಜದಿಂದ ಎಣ್ಣೆ ಹೊರಡುತ್ತದೆ. ಅದರಿಂದ ಮೇಣಬತ್ತಿಗಳಾಗಬಹುದು (ಕಥಾಗ. ೫೦). [ಹುಳಿ$_2$ (< ಪುಳಿ$_3$) + ಇಪ್ಪೆ$_1$ (< ಇರ್ಪೆ)]

ಹುಳಿಓಮ (ನಾ). ಒಂದು ಬಗೆಯ ಸಸ್ಯ: ಕಾಡುಓಮ, ಹುಳಿಓಮ (ಮುಡಿಗಿ. ೨೦-೩೭೭). [ಹುಳಿ? + ಓಮ$_1$]

ಹುಳಿಕುಡಿ 'ಹುಳಿಗುಡಿ' ನೋ.

ಹುಳಿಗ (ನಾ). ಒಂದು ಬಗೆಯ ಔಷಧೀಸಸ್ಯ: "ಅತ್ಮಮ್ಮ, - ತನೆಲೆ ? ಹುಳಿಗ, ತಾಹುಳಿ" (ಓಷಧಿ. ೩). 'ಪುಳಿಕೆ' ಪರಾ. [?]

ಹುಳಿಗಟ್ಟು (ಕ್ರಿ). ಹುಳಿಯಾಗು; ಕೆಡು: ಹಳಸದು ಕೊಳೆಯದು ಹುಳಿಗಟ್ಟಿಕೊಳ್ಳದು ಕಿಲುಬುಗಟ್ಟದು ರುಚಿಗೆಡದು (ಇಂಚಾಪ್ರ. ೨೨೨-೧೦೦); ಕೆಳಗೆ ಇಕ್ಕಿಟ್ಟಿಗೆ ಸಿಲುಕಿದ ಅಪಾರವಾದ ಸಸ್ಯಸಮೃದ್ಧಿಯು ಕೊಳೆತು ಹುಳಿಗಟ್ಟಿ ಸರಾಯಿಯಂತಿರುವ ಈ ಎಣ್ಣೆಯನ್ನುಂಟುಮಾಡಿತು (ಬಾಲಪ್ರ. I, ೩೫೧). [ಹುಳಿ$_2$ (< ಪುಳಿ$_3$) + ಕಟ್ಟು$_1$]

ಹುಳಿಗಲಸು (ಕ್ರಿ). ಹುಳಿಯನ್ನು ಬೆರಸು; ಅಮ್ಲವನ್ನು ಸೇರಿಸು: ಹುಳಿಗಲಸಿದರೆ ಕೊಡನ ಹಾಲವೊಲಳಿವುದೇ ಕ್ಷೀರಾಂಬುನಿಧಿ (ತೊರರಾ. ೩-೭-೪೧); ಕ್ಷೀರದೊಳು ಹುಳಿಗಲಸಿದಂದದಿ . . . ಪಾರಮಾರ್ಥಿಕವಪ್ಪ ಸುಖಸಾಕಾರ ಸಾಗರದೊಳಗೆ ಮಿಶ್ರಿತ ಘೋರತರ ಸಂಸಾರದುಃಖವಿದೆಂದನು (ಅಮೃತ. ೧೦-೧೭).

[ಹುಳಿ$_2$ (< ಪುಳಿ$_3$) + ಕಲಸು$_1$]

ಹುಳಿಗಾಯ್, ಹುಳಿಗಾಯಿ (ನಾ). ೧. ಹುಳಿರುಚಿಯಿಯವ ಕಾಯಿ. ೨. ಕಾಯಿಯು ಹಣ್ಣಾಗುವುದಕ್ಕೆ ಮುಂಚಿನ ಸ್ಥಿತಿ; ಪಾಡುಗಾಯಿ: ನನೆಮುಗುಳ್ ನನೆಕುಸುಮ ನಸುಗಾಯ್ ಕನರುಗಾಯ್ ಕಸುಗಾಯಿ ಹುಳಿಗಾಯ್ ತನಿರಸದ . . . ಫನತರದ ಸಹಕಾರ ಸಹ ಸುರವನ ಕದಂಬಕವೆಸೆದುದು (ತೊರರಾ. ೫-೩-೧೪). **ಹುಳಿಗಾಯಿ**: ೧. ಕಕ್ಕೆಯದು ಕಹಿಗಾಯಿ ಬಿಕ್ಕೆಯದು ಹುಳಿಗಾಯಿ (ಸರ್ವಜ್ಞ. ೧೭೯).

[ಹುಳಿ$_2$ (< ಪುಳಿ$_3$) + ಕಾಯ್$_1$]

ಹುಳಿಗಾಯಿ 'ಹುಳಿಗಾಯ್' ನೋ.

ಹುಳಿಗಿಡ (ನಾ). ಒಂದು ಬಗೆಯ ಗಿಡ: (ಮುಡಿಗಿ. ೬೦-೧೨೦೮).

[ಹುಳಿ$_2$ (< ಪುಳಿ$_3$) + ಗಿಡ (< ಗಿಡು)]

ಹುಳಿಗುಡಿ, 'ಹುಳಿಕುಡಿ' (ನಾ). ಒಂದು ಬಗೆಯ ಹುಳಿಸೊಪ್ಪನ್ನು ಬಿಡುವ ಸಸ್ಯ; ಪುಳ್ಚಿಂಪುರುಚೆ (?): ಹುಳಿಗುಡಿ ಹೆಮ್ಮಿಟಲಿ ಬಿಳಿಯ ಗುಂಜಿಯ ಬೇರಂ ಫಳಿಲನೆ ನಸ್ಯಂಗೆಯ್ಮೆ (ಖಮದ. ೫-೬೮). **ಹುಳಿಕುಡಿ**: "ಫೋರಾಮ್ಲಿ, [ಪಾಠಾಂ. ಮ್ರ, ವ್ರಿ] ಹುಳಿ [ಪಾಠಾಂ. ಳು] ಕು[ಪಾಠಾಂ. ಗು]ಡಿ" (ಮಂಗರಾ. ೪೪-೪೫).

[ಹುಳಿ$_2$ (< ಪುಳಿ$_3$) + ಕುಡಿ$_1$]

ಹುಳಿಗೂಡು (ಕ್ರಿ). = ಹುಳಿಗಲಸು: ಹುಳಿಗೂಡಿದ ಆಹಾರವನ್ನು ಹೆಚ್ಚಾಗಿ ತೆಗೆದುಕೊಂಡಿದ್ದರೆ . . . ವೇಗಗೂಡಿ ನಡೆವುದು (ಸಚಿ. ೧೨).

[ಹುಳಿ$_2$ (< ಪುಳಿ$_3$) + ಕೂಡು$_1$]

ಹುಳಿಚಕ್ಕವತ್ತ, ಹುಳಿಚೆಕ್ಕವತ್ತ (ನಾ). ಚಕ್ಕವತ್ತದಲ್ಲಿ ಒಂದು ಬಗೆ: "ಲಿಕುಚಂ-ಹುಳಿಚಕ್ಕವತ್ತ" (ಓಷಧಿ. ೧೪೩). **ಹುಳಿಚೆಕ್ಕವತ್ತ**: "ಆಮ್ಲವಾಸ್ತುಕಂ, ಹುಳಿಚಿಕ್ಕವತ್ತ" (ಓಷಧಿ. ೧೨). [ಹುಳಿ$_2$ (< ಪುಳಿ$_3$) + ಚಕ್ಕವತ್ತ (< ಚಕ್ಕವತ್ತಿ)]

ಹುಳಿಚಿಕ್ಕ, ಹುಳಿಚುಕ್ಕಿ, ಹುಳುಚಿಕ್ಕ (ನಾ). ಹುಳಿಯ ಸೊಪ್ಪನ್ನು ಬಿಡುವ ಒಂದು ಬಗೆಯ ಸಸ್ಯ; ಪುಳ್ಚಿಂಪುರುಚೆ: ಉಪ್ಪು ಉಪ್ಪಿನಸೊಪ್ಪು, ಪುಟ್ಚಿಂಪುರುಳಿ, ಪುಳ್ಚಿಂಪುರಚಿಸೊಪ್ಪು, ಹುಳಿಚಿಕ್ಕ (ಮುಡಿಗಿ. ೫೯-೧೦೭೭). **ಹುಳಿಚುಕ್ಕಿ**: ಕೇಸಿನದಡಿ, ಹುಳಿಚುಕ್ಕಿ, ಸೀಗೆಸೊಪ್ಪು - ಅಂದ್ರೇನು ಗೊತ್ತೆತಂತ ಆಕೆಗೆ (ಬೆಳುಮ. ೨೫೮). **ಹುಳುಚಿಕ್ಕ**: (ಪ). [ಹುಳಿ$_2$ (< ಪುಳಿ$_3$) + ಚಿಕ್ಕ ?]

ಹುಳಿಚುಕ್ಕಿ 'ಹುಳಿಚಿಕ್ಕ' ನೋ.

ಹುಳಿಚೆಕ್ಕವತ್ತ 'ಹುಳಿಚಕ್ಕವತ್ತ' ನೋ.

ಹುಳಿತೇಗು 'ಪುಳಿದೇಗು' ನೋ.

ಹುಳಿದಾಳಲು (ನಾ). ಹುಳಿಯಾದ ಒಂದು ವ್ಯಂಜನ, — ಪಲ್ಯ; ತಾಳಿದ: ಮೊಕಚಟ್ಟಿಯಾದೊಡೆ ಹುಳಿದಾಳಲುಗಳ ನಿಕರವ ಸವಿದರೇನೆಂಬೆ (ಜ್ಞಾನಚ. ೬೯-೧೨೪).

[ಹುಳಿ$_2$ (< ಪುಳಿ$_3$) + ತಾಳಲು (< ತಾಳಿಲು)]

ಹುಳಿದಾಳಿದ (ನಾ). = ಹುಳಿದಾಳಲು: ಹುಳಿದಾಳಿದ ಸಾಜು ಶಿಖರಿಣಿ ಬಹುಕೂಟದಳಿದ ನಿಂಬೆಯ ಹಣ್ಣ ಸವಿದು (ಮೋಹತ. ೩-೫೩).

[ಹುಳಿ$_2$ (< ಪುಳಿ$_3$) + ತಾಳಿದ]

ಹುಳಿದೇಗು 'ಪುಳಿದೇಗು' ನೋ.

ಹುಳಿನಾಣಲು (ನಾ). ಒಂದು ಬಗೆಯ ಸಸ್ಯ: "ಇಕ್ಷಿಕಾ - ಹುಳಿನಾಣಲು" (ಓಷಧಿ. ೧೩). [ಹುಳಿ$_2$ (< ಪುಳಿ$_3$) + ನಾಣಲು (< ನಾನಲ್)]

ಹುಳಿನೀರು (ನಾ). ಹುಳಿಯಾದ ನೀರು: ಈಳಿ ನಿಂಬೆ ಮಾವು ಮಾದಲಕ್ಕೆ

ಹುಳಿನೀರನೆಱೆದವರಾರಯ್ಯ (ಮಹಾದೇ. ೬. ೧೦-೩); ಮೆಣಸನ್ನು ಹುಳಿನೀರಿಗೆ ಬೆರಸಿ ಐದು ನಿಮಿಷ ಕುದಿಸಬೇಕು (ಅಡುಸಾ. ೧೧೦). [ಹುಳಿ$_2$ (< ಪುಳಿ$_3$) + ನೀರು (< ನೀರ್$_1$)]

ಹುಳಿಪದಾರ್ಥ (ನಾ). ಹುಳಿರುಚಿಯಿರುವ ತಿನಿಸು: ಅವನಿಗೆ ಹುಳಿಪದಾರ್ಥ ವೆಂದರೆ ಇಷ್ಟ (ರೂಢಿ). [ಹುಳಿ$_2$ (< ಪುಳಿ$_3$) + ಪದಾರ್ಥ]

ಹುಳಿಪಲ್ಯ (ನಾ). = ಹುಳಿದಾಳಲು: (೬). [ಹುಳಿ$_2$ (< ಪುಳಿ$_3$) + ಪಲ್ಯ$_1$]

ಹುಳಿಬಸಲೆ (ನಾ). ಹುಳಿಯಾಗಿರುವ ಬಸಲೆಸೊಪ್ಪು: ಹುಳಿಬಸಲೆ . . . ಬಿಸಿನೀರಿನಲ್ಲಿ ಪುಟವಿಕ್ಕಿ . . . ಸೇವಿಸೆ ಶ್ವಾಸಬಾಸ . . . ಮುಂತಾಗಿ ಗುಣಮಕ್ಕುಂ (ಸಕವೃ. ೨೩೫). [ಹುಳಿ$_2$ (< ಪುಳಿ$_3$) + ಬಸಲೆ$_1$]

ಹುಳಿಬಾಳೆ (ನಾ). ಹುಳಿರುಚಿಯ ಬಾಳೆ: ತೀವಿಹ ಸುರಸಬಾಳೆ ಹುಳಿಬಾಳೆ ಬಟಬಾಳೆ (ಸಪಮೋ. ೨೪-೪೯). [ಹುಳಿ$_2$ (< ಪುಳಿ$_3$) + ಬಾಳೆ$_1$ (< ಬಾಲೆ)]

ಹುಳಿಬೇಲ (ನಾ). ಒಂದು ಬಗೆಯ ಬೇಲ; ನಾಯಿಬೇಲ: "ಸ್ವಾದುಕಂಟಕಃ . . . ವ್ಯಾಘ್ರಿಪಾದ್ - ೫ ಹುಲುಮಾನಿಕಮರದ ಹೆಸರು. ನಾಯಿಬೇಲ, ಹುಳಿಬೇಲ" (ಸಿದ್ಧಾಂಶಿ. ೧೨೦). [ಹುಳಿ$_2$ (< ಪುಳಿ$_3$) + ಬೇಲ (< ಬೆಳಲ್)]

ಹುಳಿಬೇಳಲಕಾಯಿ (ನಾ). ಒಂದು ಬಗೆಯ ಬೇಳಲಕಾಯಿ: "ಆಮ್ಲಫಲಂ-ಹುಳಿಬೇಳಲಕಾಯಿ" (ಓಷಧಿ. ೧೧). [ಹುಳಿಬೇಳಲ್$_0$ + ಕಾಯಿ$_4$ (< ಕಾಯ್$_4$)]

ಹುಳಿಮಂಗರವಳ್ಳಿ (ನಾ). ಒಂದು ಬಗೆಯ ಬಳ್ಳಿ: ಹುಳಿಮಂಗರವಳ್ಳಿ, ತಳವಾರನ ಬಳ್ಳಿ (ಮೃಡಿಗಿ. ೨೨-೩೯). [ಹುಳಿ$_2$ (< ಪುಳಿ$_3$) + ಮಂಗರವಳ್ಳಿ (< ಮಂಗಱುವಳ್ಳಿ)]

ಹುಳಿಮಜ್ಜಿಗೆ (ನಾ). ೧. ಹುಳಿಯು ಹೆಚ್ಚಾಗಿರುವ ಮಜ್ಜಿಗೆ: ಅಂಬಲಿಗೆ ಹುಳಿಮಜ್ಜಿಗೆ ಸೇರಿಸಿ ಕುಡಿದರೆ ಒಳ್ಳೆಯದು (ರೂಢಿ). ೨. ಒಂದು ಬಗೆಯ ಸಸ್ಯ: "ಧಾಮನ-ಉತ್ತರಣೆ, ಹುಳಿಮಜ್ಜಿಗೆ" (ಓಷಧಿ. ೫೧). [ಹುಳಿ$_2$ (< ಪುಳಿ$_3$) + ಮಜ್ಜಿಗೆ]

ಹುಳಿಮಧುರ (ನಾ). ಹಿತವಾದ ಹುಳಿ: ಹೊಸ ಆಸೆ ಆಕಾಂಕ್ಷೆ ಆದರ್ಶಗಳು ನಾಲ್ಕಾರುವರ್ಷಗಳಲ್ಲಿ ತಲೆದೋರಿ ತಿಳಿಲಿನ ಕಸುಕನ್ನು ಮೆಲ್ಲನೆ ಹುಳಿಮಧುರ ಗೊಳಿಸತೊಡಗುತ್ತವೆ (ಗಂಮಾಯಿ. ೧೭೭). [ಹುಳಿ$_2$ (< ಪುಳಿ$_3$) + ಮಧುರ]

ಹುಳಿಮಾದಲ (ನಾ). ಮಾದಲದಲ್ಲಿ ಒಂದು ಬಗೆ: "ಅಧ್ಯಕೇಸರ:- ಹುಳಿ ಮಾದಲ" (ಓಷಧಿ. ೧೨). [ಹುಳಿ$_2$ (< ಪುಳಿ$_3$) + ಮಾದಲ]

ಹುಳಿಮಾವು 'ಪುಳಿಮಾವು' ನೋ.

ಹುಳಿಮೊಗ (ನಾ). (ಆಲಂ) ಅತೃಪ್ತಿ, ಅಸಮಾಧಾನ, ಅಸಹ್ಯಭಾವನೆಗಳನ್ನು ವ್ಯಕ್ತಪಡಿಸುವ ಮುಖ: ನಾನು ಹುಳಿಮೊಗ ಮಾಡಿಕೊಂಡು . . . ಬಾಗಿಲಲ್ಲಿ ನಿಂತಿದ್ದೆ (ಸ್ಮೃತಿಚಿ. ೨೩೫). [ಹುಳಿ$_2$ (< ಪುಳಿ$_3$) + ಮೊಗ]

ಹುಳಿಮೊಸರು 'ಪುಳಿಮೊಸರ್' ನೋ.

ಹುಳಿಯಂಬಳಕ (ನಾ). ಹುಳಿಯಾದ ಅಂಬಳಕ; ಹುಳಿಮಜ್ಜಿಗೆ ಸೇರಿಸಿದ ಗಂಜಿ: (೬). [ಹುಳಿ$_2$ (< ಪುಳಿ$_3$) + ಅಂಬಳಕ (< ಅಂಬಕಳ)]

ಹುಳಿಯಂಬಲಿ (ನಾ). ಹುಳಿಯಾದ ಅಂಬಲಿ: ರೈತರು ಬೆಳಗ್ಗೆ ಹುಳಿಯಂಬಲಿ ಕುಡಿದು ದುಡಿಮೆಗೆ ಹೋಗುತ್ತಾರೆ (ರೂಢಿ). [ಹುಳಿ$_2$ (< ಪುಳಿ$_3$) + ಅಂಬಲಿ$_1$]

ಹುಳಿಯನ್ನ 'ಪುಳಿಯನ್ನ' ನೋ.

ಹುಳಿಯೇರು (ಕ್ರಿ). (ಆಲಂ) ಬಾಯಲ್ಲಿ ನೀರೂರು: ಊರಲ್ಲಿ ಅವನಿಗೆ ಮಾನ ವೇನು! ಮರ್ಯಾದೆಯೇನು! ಮಕ್ಕಳಿದ್ದರೆ ಇಂಥವರಿರಬೇಕು ಎಂದು ಬಾಯಿ ಹುಳಿಯೇರು ವಂತೆ ಬಣ್ಣಿಸಿದರು (ಜಯಿಂತ. ೮೮). [ಹುಳಿ$_2$ (< ಪುಳಿ$_3$) + ಏರು$_1$ (< ಏಱು$^*_1$)]

ಹುಳಿಸಾರು 'ಪುಳಿಚಾಱು' ನೋ.

ಹುಳಿಸು (ಕ್ರಿ). ಹುಳಿಯಾಗುವಂತೆ ಮಾಡು: ಹುಳಿಸುವುದು, ಹಳಸುವುದು - ಇವುಗಳಲ್ಲಿ ಅಂತರವಿದೆ. ಪದಾರ್ಥವು ಹುಳಿಸುವುದರಿಂದ ಪಚನಕ್ಕೆ ಹಗುರಾಗುವುದು (ಗೋಗ್ರಾಸ. ೯೨). [ಹುಳಿ$_2$ (< ಪುಳಿ$_3$) + -ಸು$_3$]

ಹುಳಿಸೆ 'ಪುಳಿಸೆ' ನೋ.

ಹುಳಿಸೊಡಲಿ (ನಾ). ಒಂದು ಬಗೆಯ ಸಸ್ಯ: ಇಸುಬಿನ ಹುಣ್ಣಿಗೆ: ಹುಳಿಸೊಡಲಿಯ ತೊಪ್ಪೆಯಂ ನಿಂಬೆಯ ಹುಳಿಯಲ್ಲಿ ಅರೆದು ಪೂಸೆ ಮಾಣ್ಗುಂ (ಎಪ್ಪವಿ. ೭೫).

[ಹುಳಿ$_2$ (< ಪುಳಿ$_3$) + ಸೊಡಲಿ$_1$ (< ಸೊಡರಿ)]

ಹುಳಿಸೊಪ್ಪು (ನಾ). ೧. ಹುಳಿಯಾಗಿರುವ ಒಂದು ಬಗೆಯ ಸೊಪ್ಪು: ರಾಗಿರೊಟ್ಟಿಯ ಜೊತೆಗೆ ಹುಳಿಸೊಪ್ಪಿನ ಪಲ್ಯ ಬಹಳ ರುಚಿಯಾಗಿರುತ್ತದೆ (ರೂಢಿ). ೨. ಸೊಪ್ಪಿನಿಂದ ಮಾಡುವ ಒಂದು ಬಗೆಯ ಮೇಲೋಗರ: ನಮ್ಮ ಮನೆಯಲ್ಲಿ ಇವತ್ತು ಹುಳಿಸೊಪ್ಪು ಮಾಡಿದ್ದೆ (ರೂಢಿ).

[ಹುಳಿ$_2$ (< ಪುಳಿ$_3$) + ಸೊಪ್ಪು$_2$]

ಹುಳಿಸೌತೆ (ನಾ). ಸೌತೆಯಲ್ಲಿ ಒಂದು ಬಗೆ; ಹುಳಿಯಾಗಿರುವ ಸೌತೆ: ಕಾಯಿಗಳು . . . ಹೀರೇ, ತುಪ್ಪಹೀರೆ, ಹುಳಿಸೌತೆ, ಸೌತೆ (ನಮ್ಮನು. ೨೩೭).

[ಹುಳಿ$_2$ (< ಪುಳಿ$_3$) + ಸೌತೆ (< ಸವುಂತೆ)]

ಹುಳಿಹಣ್ಣು (ನಾ). ಹುಣಿಸೇಹಣ್ಣು: ತಿಂತ್ರಿಡೀಕಂ, ಚುಕ್ರಂ, ವ್ಯಕ್ಷಾಮ್ಲಂ - ೩, ಮರಹುಣಿಸೇಹಣ್ಣು, ಹುಳಿಹಣ್ಣು (ಸಿದ್ಧಾಂಶಿ. ೨೮೪).

[ಹುಳಿ$_2$ (< ಪುಳಿ$_3$) + ಹಣ್ಣು$_2$ (< ಪಣ್$_3$)]

ಹುಳಿಹತ್ತಿ (ನಾ). ಒಂದು ಬಗೆಯ ಹತ್ತಿ: "ಚಿಲ್ಮಕಾರ್ಪಾಸೀ - ಹುಳಿಹತ್ತಿ" (ಓಷಧಿ. ೬೨). [ಹುಳಿ? + ಹತ್ತಿ (< ಪಟ್ಟಿ)]

ಹುಳಿಹಪ್ಪೆ (ನಾ). ಒಂದು ಬಗೆಯ ಸಸ್ಯ: "ಸಹಸ್ರವೇಧಿ, ಚುಕ್ರ, ಆಮ್ಲವೇತಸ - ಹುಳಿಹಪ್ಪೆ" (ನಾಚರಾ. ೬); [ಹುಳಿ$_2$ (< ಪುಳಿ$_3$) + ಹಪ್ಪೆ$_1$]

ಹುಳಿಹರುಹೆ (ನಾ). ಒಂದು ಬಗೆಯ ಸಸ್ಯ : "ಕಪಿಕಚ್ಛೂ - ನಸುಗುನ್ನಿ, ಹುಳಿಹರುಹೆ" (ಓಷಧಿ. ೨೫). [ಹುಳಿ$_2$ (< ಪುಳಿ$_3$) + ಹರುಹೆ (< ಹಱುಹೆ)]

ಹುಳಿಹಿಂಡು (ಕ್ರಿ). ೧. ಹುಳಿಯನ್ನು ಹಿಂಡು: ಹುಳಿಹಿಂಡಿ ಚೊಟ್ಟೆಯನ್ನು ಎಸೆಯ ಬೇಡಿ (ರೂಢಿ). ೨. (ಆಲಂ) ಕೆಡಿಸು; ಹಾಳುಮಾಡು: ತಿಳಿದೂ ತಿಳಿದೂ ಅಪ್ಪಟ ಹಾಲಿನಂತಿರೋ ಕನ್ನಡಕ್ಕೆ ಹುಳಿಹಿಂಡ್ತೀರಿ (ಕಂಕಕೂ. ೧೧).

[ಹುಳಿ$_2$ (< ಪುಳಿ$_3$) + ಹಿಂಡು$_1$ (< ಪಿಂಡು$_1$)]

ಹುಳಿಹೀರೆ 'ಪುಳಿಹೀರೆ' ನೋ.

ಹುಳಿಹುಣಚಿ 'ಪುಳ್ಳುಂಪುಣಿಸೆ' ನೋ.

ಹುಳಿಹೊದ್ದು (ಕ್ರಿ). (ಆಲಂ) ಕಲುಷಿತಗೊಳ್ಳು: ನಿನ್ನಯ ಹುಳಿಹೊದ್ದ ದಿನಿವಾತುಗಳ ಗಳಿಲನೆ ಬಂದು ಕರ್ಣವ ಹೊಕ್ಕು ಮನವನಿರ್ಕುಳಿಗೊಳ್ಳಲುಸಿರು (ಮೋಹತ. ೨೪-೧). [ಹುಳಿ$_2$ (< ಪುಳಿ$_3$) + ಹೊದ್ದು$_1$ (< ಪೊರ್ದು)]

ಹುಳು 'ಪುಟು' ನೋ.

ಹುಳುಕ 'ಪುಟುಕ' ನೋ.

ಹುಳುಕಡ್ಡಿ (ನಾ). ಒಂದು ಬಗೆಯ ಚರ್ಮರೋಗ: ಶಶಂಕ್ತ ಚಿಗುರ ನಿಂಬೇಹುಳಿಯಲ್ಲಿ ಅರೆದು . . . ತೊಡೆಯೆ ಹುಳುಕಡ್ಡಿ ಮಾಣ್ಗುಂ (ಎಪ್ಪವಿ. ೭೦).

[ಹುಳು (< ಪುಟು) + ಕಡ್ಡಿ]

ಹುಳುಕು 'ಪುಟುಕು' ನೋ.

ಹುಳುಕುಡಿ (ನಾ). ಒಂದು ಬಗೆಯ ಹುಳಿಸಸ್ಯ: ನೀರುಹಾಕದೆ ಕಡಿದ ಮಜ್ಜಿಗೆಯಲ್ಲಿ ಎಂಟನೆಯ ಒಂದಂಶದಷ್ಟು ಹುಳುಕುಡಿಯ ಚೂರ್ಣವನ್ನು ಹಾಕಿ ಒದ್ದೆಯಾದ ಮರಳಿನಲ್ಲಿ ಹೂತಿಟ್ಟರೆ . . . ಮೊಸರಾಗುವುದು (ಭೀಮಕೂ. ೭ ಅಡಿಟಿ). 'ಹುಳಿಗುಡಿ', 'ಹುಟಿಗುಡಿ' ಪರಾ. [ಹುಳು? + ಕುಡಿ?]

ಹುಳುಕುನೀತಿ (ನಾ). ಕೆಟ್ಟನೀತಿ; ಕುತಂತ್ರ: ಹುಳುಕುನೀತಿಗಳಾ ಕೌರವೇಂದ್ರನು ಕಳಿಂಗನನೊಲಿದು ಕೇಳುವ (ಸಂಭವ. ೧೭-೭೪). [ಹುಳುಕು (< ಪುಟುಕು) + ನೀತಿ]

ಹುಳುಕುಬುದ್ಧಿ (ನಾ). ಕೆಟ್ಟಬುದ್ಧಿ; ದುರ್ಬುದ್ಧಿ: ಕರ್ಣನ ಹುಳುಕುಬುದ್ಧಿಯ ಕೇಳಿ ನಿನ್ನಯ ಕುಲವನದ್ದದಿರು (ಕುವ್ಯಾವಿ. ೬೧೨. ೫೫-೧೨). [ಹುಳುಕು (< ಪುಟುಕು) + ಬುದ್ಧಿ]

ಹುಳುಕುಮತ (ನಾ). ಕೆಟ್ಟ ಅಭಿಪ್ರಾಯ; ಕುಮತ: ಬಳಿಕ ಕೌರವನಾ ಕಳಿಂಗನ ಹುಳುಕುಮತವನು ಮನದಲಿಕ್ಕಿಯೆ (ಸಂಭವ. ೧೭-೧೭).

[ಹುಳುಕು (< ಪುಟುಕು) + ಮತ]

ಹುಳುಕುವಾಲೆ (ನಾ). ಹುಳು ತಿಂದಿರುವ ಓಲೆಗರಿ: ಎನಿತಿನ್ನುಮೆನ್ನ ಬಾಳ್ವೆಯ ಹುಳುಕುವಾಲೆ ಮಗಚುವುದೊ ನಾನರಿಯೆ - ಬರೆದವನೆ ಬಲ್ಲ (ಗಿಳಿಎಂ. ೫೯-೧).

[ಹುಳುಕು (< ಪುಟುಕು) + ವಾಲೆ]

ಹುಳುಕುಹಲ್ಲು (ನಾ). ಕ್ರಿಮಿ ತಿಂದಿರುವ ಹಲ್ಲು; ಹುಳುಕಾದ ದಂತ: ಓರ್ಮೆ ನೋಡಲು ಹುಳುಕುಹಲ್ಲಾತನಾರೆನಲು (ವೀಶ್ವಪು ೪-೨೨-೩೫).

[ಹುಳುಕು (< ಪುಳುಕು) ಹಲ್ಲು (< ಪಲ್)]

ಹುಳುಗಣ್ಣು (ನಾ). ಒಂದು ಬಗೆಯ ಕಣ್ಣಿನ ರೋಗ; ಕಣ್ಣಿನಲ್ಲಿ ಹುಳುಗಳು ಉಂಟಾದ ಕಣ್ಣು: ನೀರುಗಣ್ಣು, ಜಾರುಗಣ್ಣು, ಕೊಳೆಗಣ್ಣು, ಹುಳುಗಣ್ಣು (ಶುಕಸ. ೩೨೦). [ಹುಳು (< ಪುಳು) + ಕಣ್ಣು (< ಕಣ್)]

ಹುಳುಗಲಗುಹುಲ್ಲು (ನಾ). ಒಂದು ಬಗೆಯ ಸಸ್ಯ: (೫).

[ಹುಳುಗಲಗು + ಹುಲ್ಲು (< ಪುಲ್)]

ಹುಳುಗಿಲುಹುಲ್ಲು (ನಾ). ಒಂದು ಬಗೆಯ ಸಸ್ಯ: ಲಾಳದ ಕಡ್ಡಿ, ಹುಳುಗಿಲು ಹುಲ್ಲು (ಮೃಔಗಿ. ೧೦-೧೭೪). 'ಪುಲಿಗಿಲ್' ಪರಾ. [ಹುಳುಗಿಲು + ಹುಲ್ಲು (< ಪುಲ್)]

ಹುಳುಗೊಂಡ 'ಪುಳುಗೊಂಡ' ನೋ.

ಹುಳುಚಿಕ್ಕ 'ಹುಳಿಚಿಕ್ಕ' ನೋ.

ಹುಳುಬಾಳು (ನಾ). ಕ್ರಿಮಿಯ ಬದುಕು; ಕೀಳುಜೀವನ: ಮಣ್‌ಬದುಕಿನ ಹುಳುಬಾಳಿಗೆ ಸಂಕಟವನು ತಂದಿಕ್ಕಿ (ಅಸಾಕೀ. ೪೭-೭).

[ಹುಳು (< ಪುಳು) + ಬಾಳ್[2] (< ಬಾಟ್[3])]

ಹುಳುಹುಳು (ನಾ). (ಅಸಮಾಧಾನ, ಭಯ, ಸಂಶಯ ಮೊದಲಾದುವನ್ನು ಸೂಚಿಸುವ) ಒಂದು ಅನುಕರಣಪದ: ದಾರಿಯಲ್ಲಿ ಹುಳುಹುಳು ಇವನ ಮುಖ ನೋಡಿದವರೆಲ್ಲ ಇವನ ಶತ್ರುಗಳೇ (ಗಂಮಾಯಿ. ೭೨); ಕಳ್ಳರ ಜೀವ ಹುಳುಹುಳು ಅನ್ನುವದಂತೆ. ಈಗ ನನಗೆ ತಿಳಿಯುತ್ತಿದೆ (ಛಂಮಿತಾ. ೭೯). [?]

ಹುಳ್ಳಗೆ (ಅ). ಸಪ್ಪಗೆ; ಪೆಚ್ಚಾಗಿ: ಅವರು ಆಗಾಗ ನನ್ನ ಕಡೆ ನೋಡಿ ಮುಖವನ್ನು ಹುಳ್ಳಗೆ ಮಾಡಿಕೊಳ್ಳುತ್ತಿದ್ದರು (ಗಲಿತ್ರ. ೭೭).

ಹುಳ್ಳುಳ್ಳಗೆ (ದ್ವಿರುಕ್ತಿ): ಕಳ್ಳರನ್ನು ಹುಳ್ಳುಳ್ಳಗೆ ಮಾಡುವ ಸದ್ದೇವ (ನಿಗಾಘ. ೧೫೭).

[? + - ಅನ್[3]]

ಹುಳ್ಳನೆ (ಅ). = ಹುಳ್ಳಗೆ: ಹುಳ್ಳನೆ ಮನದೊಳು ಸುಳ್ಳನೆ ನೆನೆಯುವ (ಚಂದ್ರಮೀ. ೧೩೫-೪೦). [? + - ಅನೆ[1]]

ಹುಳ್ಳಿ 'ಪುಳ್ಳಿ' ನೋ.

ಹುಳ್ಳಿ 'ಹುಳ್ಳಿ' ನೋ.

ಹುಳ್ಳಿಗುಟ್ಟು (ಕ್ರಿ). (?): ಕಲೆಗಟ್ಟಿದ ಬಿಜ್ಜುಗೋಪದ ಮಜ್ಜಹಿಂದಂ ಮುಂದಜ್ಜಿಯದೆ ಪೊಜ್ಜಮಟ್ಟಿನೆನುತ್ತಂ ತನ್ನಂ ತಾಂ ಹುಳ್ಳಿಗುಟ್ಟಿಕೊಳುತ್ತಂ ಪೆಜ್ಜರ ಧನಿಯಾದರ. ಕರೆಯರಲಾ ಎಂದೆನುತ (ವೀಶಚ. ೧-೨೪). [ಹುಳ್ಳಿ ? + ಕುಟ್ಟು[1]]

ಹುಳ್ಳಿನ್ (ಕ್ರಿ). ಹುರ್ ಎಂದು ಶಬ್ದಮಾಡು: ಪುರ್ಬಿಕ್ಕಿ ಪಲ್ಲಿಜ್ಜಿದು ಹುಳ್ಳಿಂದು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರದಿಂ (ಗಿರಿಕ. ೧-೧೨೬ ವ). 'ಹುರ್' ಪರಾ. [ಹುಳ್ಳ್[1] + ಎನ್[1]]

ಹುಳಿ 'ಪುಳಿ' ನೋ.

ಹುಳಿಗುಡಿ (ನಾ). ಒಂದು ಬಗೆಯ ಸಸ್ಯ: ಕಲಿಯಿಂದರೆದಿರದೀಂಟಿಕೆ ಹುಳಿಗುಡಿ ಹೆಮ್ಮಿಟಿಲಿ ಬಿಳಿಯ ಗುಂಜೆಯ ಬೇರಂ . . . ಪೊಸ ಫಣಿವಿಷಮಟಿಗುಂ (ಖಮದ. ೫-೬೭). 'ಹುಳಿಗುಡಿ', 'ಹುಳುಕುಡಿ' ಪರಾ. [?]

ಹುಬು 'ಪುಬು' ನೋ.

ಹೂ[1] 'ಪೂ[1]' ನೋ.

ಹೂ[2] 'ಪೂ[2]' ನೋ.

ಹೂ[3] (ಅ). ಒಪ್ಪಿಗೆ, ಸಮ್ಮತಿ ಮೊದಲಾದ ಭಾವಗಳನ್ನು ಸೂಚಿಸಲು ಬಳಸುವ ಪದ: ಕೇಶವಂ ರಂಜಿಸಿ ಚಕ್ರವ್ಯೂಹವ್ಯತ್ಕ್ರಾಂತಮನೊಜೆಯಲಾ ಕಾಂತೆ ಕೇಳುತ್ತೆ ನಿದ್ರಾವಶದಿಂ ಕಣ್ಮುಚ್ಚೆ ಚಿತ್ತಂ ಮಱೆದಿರಲಜ್ಜಿದಾ ಪೊಟ್ಟೆಪೊಳ್ಕೂಸು ಹೂವೆಂದುಸಿರಲ್ಕಾಶಂಕೆಗೊಂಡೀ ಸುದತಿಯುದರದೊಳ್ಪುಟ್ಟುಗುಂ ದೈತ್ಯನೆಂದು (ಧವ್ಯ. ೭-೧೭); ಊಟ ಆದರೆ ಹೂ, ಓಟ ಎಂದರೆ ಊಹೂ (ಗಾದೆ). IP ಉಚ್ಚಾರದಲ್ಲಿ ಈ ಅವ್ಯಯ ಸಾನುಸ್ವಾರವಾಗಿರುವುದು ಸ್ವಾಭಾವಿಕೆ.

ಹೂಅಗಿಲು (ನಾ). ಶ್ರೀಗಂಧದ ಗುಂಪಿಗೆ ಸೇರಿದ, ಹಳದಿಬಣ್ಣದ ಒಂದು ಬಗೆಯ ಸುವಾಸನೆಯ ಅಗಿಲುಮರ ಮತ್ತು ಅದರಿಂದ ತಯಾರಿಸಿದ ಸುಗಂಧದ್ರವ್ಯ; ಜಾಪಕ: ''ಜಾಪಕಂ. ಕಾಲೇಯಕಂ. ತಾನುಶಯ್ಯ - ಈ ೩ ಕಪ್ಪಾಗಿ ಹೂಅಗಿಲು ಕಲ್ಲುಹೂವಿನ ಧೂಪವೆಂಮೂ ಎಂಬರು'' (ನಾಮಾ. ೧೭೪).

[ಹೂ + ಅಗಿಲು (< ಅಗಿಲ್)]

ಹೂಂ (ಅ). = ಹೂ[3]: ನಿಮ್ಮ ಮಗಳಿಗೆ ನೀವು ಬಂಗಾರ ಹಾಕಿರಿ, ಬಿಡಿರಿ, ಸಾವಿರ ರೂಪಾಯಿ ವರದಕ್ಷಿಣೆಗೆ ಹೂಂ ಅನ್ನಿರಿ (ಬಟ್ಟುಪೂ. ೪೭). [ಸಂ.]

ಹೂಂಕರಣೆ (ನಾ). ಕೋಪದಿಂದ ಮಾಡುವ ಧ್ವನಿ; ಹೂಂಕಾರ: ಕರುಣರಸದಲಿ ನನೆದು ನಗೆಯುಕುರಿಸಲಾಜ್ಞಾಹಸ್ತದಲಿ ಶಂಕರನ ಹೂಂಕರಣೆಯಲಿ ತಳಿತುರಿ ತಗ್ಗಿತಲ್ಲಲ್ಲಿ (ಕುವ್ಯಾ. ೭-೪೬). [ಸಂ. ಹೂಂಕರಣ]

ಹೂಂಕರಿತ (ನಾ). (ಕುದುರೆಗಳ) ಕೂಗು; ಕೆನೆತ: ಇಬ್ಬರೂ ಹುರುಳಿಯನ್ನು ಆರಿಸಿ ಒಳಕ್ಕೆ ತಂದು ಎರಡು ಕುದುರೆಗಳಿಗೂ ಕೊಟ್ಟೆವು. ಅವುಗಳ ಹೂಂಕರಿತವು ನಿಂತಿತು (ಬೊಗಾಳ್. ೧೦೫). [< ಸಂ. ಹೂಂಕೃತ]

ಹೂಂಕರಿಸು (ಕ್ರಿ). 'ಹೂಂ' ಎಂದು ರೋಷದಿಂದ ಕೂಗು; ಅಬ್ಬರಿಸು: ಆ ರಾಜಸುತಂ ಪಸಿದಂ ನೀರಡಿಪೆದೆನೆನಗಿವಲ್ಲದಲ್ಲೆನ್ನಂ . . . ಹೂಂಕರಿಸಂ ನಿರ್ವಿಸಿಸಂ ಜೀಂಕರಿಸಂ (ಆಜಪು ೫-೪೭); ಸಿರುಹಿ ವಾತೆಯ ಹಿಡಿದು ಹರಿ ಹೂಂಕರಿಸಿ ಬಿಟ್ಟನು ರಥವನು (ಕುವ್ಯಾ. ೧೪-೧೩); ಆ ಸುತಗೆ ಶತ್ರುಘ್ನನಿಸುಂ ಖಿತಿಗೋಡು . . . ತಾನೈದು ಕೂರ್ಗಣೆಗಳಿಂ ತೇರಂ ಬಿಲ್ಲ ನಾರಿಯಂ ತುಂಡಿಸಿ ಹೂಂಕರಿಸಿದಂ (ರಾಮಾಶ್ವ. ೧೫೪-೨೮). 'ಹುಂಕರಿಸು' ಪರಾ. [ಹೂಂಕರಣ್ + - ಇಸು[1]]

ಹೂಂಕಾರ (ನಾ). ಕೋಪದಿಂದ ಮಾಡುವ ಧ್ವನಿ; ರೋಷದಿಂದ ಮಾಡುವ ಗರ್ಜನೆ; ಆರ್ಭಟಿ: ಹೂಂಕಾರಪೂರ್ವಕಂ ಕಣ್ಣಂ ಕೆಚ್ಚನೆಗಯ್ದು ದಿಸೆಗಳಂ ನೋಟ್ಪುಳ್ (ಪಂಪಾಮ. ೧೦ ೧೪೨); ಒಂದೊಂದು ಮಾತನ್ನಾಡಿಯೇ, ಒಂದೊಂದು ಠೇಂಕಾರ ಹೂಂಕಾರಗಳಿಂದಲೇ ಉಗ್ರಕದನಕ್ಕೆ ಬೇಕಾದ ವಾತಾವರಣವನ್ನೂ ಹುಟ್ಟಿಸಬಹುದು (ಯಿಕ್ಷಪ್ರ. ೧೨೪). 'ಹುಂಕಾರ' ಪರಾ. [ಸಂ.]

ಹೂಂಕಾರಂಗೆಯ್ (ಕ್ರಿ). (ರೋಷದಿಂದ) ಆರ್ಭಟಿಸು; ಗರ್ಜಿಸು; ಹೂಂಕರಿಸು: ಪುಲಿ . . . ಇನ್ನಾನಾಮೊದಂ ಸರುಡೋಲಿ ನರಿಯಂ ಬರಿಸಿ ಕಿಂಬಿನೆಂಬಲಿವಗೆಯಂ ಬೇಡರಂತೆ ಬಗೆದು ಹೂಂಕಾರಂಗೆಯ್ವುದುಂ (ವಂಚತಂ. ೩೮-೧೬).

[ಹೂಂಕಾರ + ಕೆಯ್[1]]

ಹೂಂಕೃತ (ನಾ). ಹೂಂ ಎಂದು ಮಾಡುವ ಶಬ್ದ; ಹೂಂಕಾರ: ಗಣಬದ್ಧಾಮರ ಹೂಂಕೃತಂ ಜಯಶುಮಾರೋನ್ಮುಚ್ಯಮಾನೋಗ್ರಮಾರ್ಗಣಮೂ ವೀರನಿನಾದ ಸಿಂಹ ನಿನದಂ ತಮ್ಮಂ ಪಳಂಚಲ್ಕೆ (ಆರಿವ. ೧೦-೬೭); ಸೀತ್ಕೃತಂ ಹೂಂ[ವಾಕಾಂ. ಘೂ] ಕೃತಂ . . . ಶ್ವಸಿತಮುರುರಾತ್ಮತಂ ಎನಿಪೀ ಚಮತ್ಕೃತಿಯನಜಿದು ರಮಿಸುವನೆ ಚದುರಂ (ಜಸವ. ೮-೫೮); ಸಮರತಸೌಖ್ಯದೊಳ್ ಸತಿ ನಿಗಂಬರವೇಷಮನಾಂತು ಮುಕ್ತಕೇಶಮ ದೆಸೆಯಲ್ಕೆ . . . ಹೂಂಕೃತಪ್ರಣಾವಮೊಪ್ಪೆ ಶರೀರಮನೊಕ್ಕು ತನ್ನನೋರಮಣನ ಪ್ಪನ್ನಿಧಾನಮನುಪಾರ್ಜಿಪ ಯೋಗಿನಿಯಂತಿರೊಪ್ಪಿದಳ್ (ಕಾವ್ಯಕಾ. ೬೬೫). [ಸಂ.]

ಹೂಂಕೃತಿ (ನಾ). ಕೋಪದಿಂದ ಕೂಗಿ ಮಾಡುವ ಧ್ವನಿ; ಹೂಂಕಾರ; ಆರ್ಭಟ: ಉರಿ ಛಡಾಳಿಸಿ ಹೂಂಕೃತಿ[ಶಾಕಾಂ. ಘೂತ್ಕೃತಿ]ಯ ಪಂಜರದೊಳಗೆ ಪಲ್ಲವಿಸಿತುಬ್ಬಿದ ಹೊರಳಿ ಮೊಗೆಯಂಬರವ ತುಂಬಿತು (ಕುವ್ಯಾಕ. ೨೫-೬); ನಭದೊಳ್ ಇಳೆಯೊಳ್ ಸಿಡಿಲ್ ಮಿಂಚಿನೊಲ್ ಪೊಳೆದು ಮೊಳಗುತಿಹ ಛಲವಾಜಿರಾಜಿಯುಂ ಸೂತಹೂಂಕೃತಿಗಳಿಂ . . . ಒಗೆಯೆ ಬಂದತ್ತು ನಳಿನಸಖಿಸುರಪರ ರಥಂಗಳಂ ಕೀಳ್ಪಡಿಸಿ ರಥಸ್ಥನ್ಯಂ (ಚಿಪು ೪೭-೩೬). 'ಹೂಂಕೃತಿಗೆಯ್' ಪರಾ. [ಸಂ.]

ಹೂಂಕೃತಿಗೆಯ್ (ಕ್ರಿ). ಕೋಪದಿಂದ ಕೂಗು; ಆರ್ಭಟಿಸು: ನಿನಗೂಸದು ಸೇರಿದ ಸಕಲಸುರಿಸಹಿತ ಕಲಹುವೆನು ಕಡಲೊಳಗೆ ತಪ್ಪಿದ ಕೆಲಸಕಿನ್ನೇನೆಂದು ಹಲುಮೊರೆದುಲಿದು ಹೂಂಕೃತಿಗೆಯ್ದು [ಪಾಕಾಂ. ಗೈದು] ಕಿಡಿಕಿಡಿಯೋದನಾ ಹನುಮ (ತೀರಾ. ೫-೭೫).

[ಹೂಂಕೃತಿ + ಕೆಯ್[1]]

ಹೂಂಕೊಳ್ (ಕ್ರಿ). ಹೂಂಗುಟ್ಟು; ಸಮ್ಮತಿಯನ್ನು ಸೂಚಿಸು; ಒಪ್ಪು:

ತೀರ್ಥಂಗಳ ಪೆಸರಂ ಪೇಳಿಮೆಂದು ಬೆಸಗೊಳ್ಳುದತ್ತಲೀಗಳಾಂ ಪೇಳುತಿರ್ದೆಡೆಯೊಳು ವಾಸೀನಂಗೆಯ್ದು ಹೂಂಕೊಳದಿರ್ಪ ಕಾರಣಮೇನೆನೆ (ಪಂಚತಂ. ೩೦೩-೧೭).

[ಹೂಂ + ಕೊಳ್$_1$]

ಹೂಂಗುಟ್ಟು, ಹೂಗುಟ್ಟು (ಕ್ರಿ). ಸಮ್ಮತಿಯನ್ನು ಸೂಚಿಸು: ರಾಮಪ್ಪ ಹೂಂಗುಟ್ಟುತ್ತಾ ನಡೆಯುತ್ತಿದ್ದ (ಒಡ್ಡಿಉ. ೨೪). **ಹೂಗುಟ್ಟು:** ಧೈರ್ಯವಾಗಿ ನನ್ನ ಸಲ್ಲೇಖನಕ್ಕೆ ಹೂಗುಟ್ಟು ಎಂದು ಜಿನಚಂದ್ರರು ಧೈರ್ಯಹೇಳಿದರು (ದಾನಚಿಂ. ೨೧); ನನಗೆ ದಿನವೂ ಉಪದೇಶ ಮಾಡುತ್ತಾರೆ, ನಾನೋ ಹೂಗುಟ್ಟುತ್ತಿರುತ್ತೇನೆ ಅಷ್ಟೆ (ಸುವಸಂ. ೩). [ಹೂಂ + ಕುಟ್ಟು$_1$]

ಹೂಂಟೆ (ನಾ). (?): ಬನವಸೆಯ ಪನ್ನಿರ್ಚ್ಚಾಸಿರಕೆ ಸಲುವ ಚಂದ್ರಗುತ್ತಿಯ ವೇಂಟ್ಯದ ಚಿನಮಹಳಿಯ ನಾಡವಳಗಣ ಅಂದವಳಿಯ ಬೊಂಮಗೌಡಗಳ ಹೂಂಟೆಯಾಗಿ ಈ ಅಂದವಳಿಯ ಗ್ರಾಮವಂದಕ್ಕುಂ ಕುಳಗ ೨॥ ೦॥ ೭ (ಮೈಆರಿ. ೧೯೩೪, ೨೭-೧೪; 1430). [?]

ಹೂಕಟ್ಟು 'ಪೂಗಟ್ಟು' ನೋ.

ಹೂಕೊಯ್ 'ಪೂಗೊಯ್' ನೋ.

ಹೂಕೊಯ್ಯು 'ಪೂಗೊಯ್' ನೋ.

ಹೂಕೊಳಿಸು (ಕ್ರಿ). ಹೂ ಎನ್ನುವಂತೆ ಮಾಡು; ಒಪ್ಪಿಸು; ಒಡಂಬಡಿಸು: ಬಿಸಿಲಾಗಿ ಬಿರುಗಾಳಿಯಾಗಿ ಕತ್ತಲೆಯಾಗಿ ಮಸಗಿ ಘೋರಾರಣ್ಯವಾಗಿ ವಿಷಮಾಗ್ನಿಯಾಗಿ ನಾನಾ ಖಗಮೃಗವಾಗಿ ಹುಸಿಗೆ ಹೂಕೊಳಿಸು ಭೂಪತಿಯ (ಹರಿಸಾಂ. ೩-೧೩).

[ಹೂ$_3$ + ಕೊಳ್$_1$ + - ಇಸು$_3$]

ಹೂಕೋಸು, ಹೂವುಕೋಸು (ನಾ). ಒಂದು ಬಗೆಯ ತರಕಾರಿ; ಕೋಸಿನಲ್ಲಿ ಒಂದು ಬಗೆ: ಹೂಕೋಸಿನ ವ್ಯವಸಾಯ ಬಹಳಮಟ್ಟಿಗೆ ಕೋಸು ಗಡ್ಡೆಯ ತೋಟಗಾರಿಕೆಯನ್ನು ಹೋಲುತ್ತದೆ (ತರಚಿ. ೪೭). **ಹೂವುಕೋಸು:** "ದೊಡ್ಡ ಹೂವುತಲೆಯುಳ್ಳ ಒಂದು ಜಾತಿಯ ಕೋಸು: ಹೂವುಕೋಸು" (Cauli flower. ಇಂಕನಿ). [ಹೂ$_2$ (< ಪೂ$_2$) + ಕೋಸು$_4$]

ಹೂಗಂಪು 'ಪೂಗಂಪು' ನೋ.

ಹೂಗಣೆ 'ಪೂಗಣೆ' ನೋ.

ಹೂಗಣೆಯ 'ಪೂಗಣೆಯ' ನೋ.

ಹೂಗಣ್ಣು 'ಪೂಗಣ್' ನೋ.

ಹೂಗನಸು 'ಪೂಗನಸು' ನೋ.

ಹೂಗಲ್ಲು 'ಪೂಗಲ್ಲು' ನೋ.

ಹೂಗಾರ 'ಪೂಗಾರ' ನೋ.

ಹೂಗಿಡ 'ಪೂಗಿಡು' ನೋ.

ಹೂಗಿಡು 'ಪೂಗಿಡು' ನೋ.

ಹೂಗಿರಣ (ನಾ). ಪ್ರಾತಃಕಾಲದ ಕಿರಣ; ಎಳೆಯ ರಶ್ಮಿ: ಆಕೆ . . . ಹೂಗಿರಣದ ಮೃದುಚುಂಬನದಲ್ಲಿ ತುಟಿಯನ್ನು ಅರಳಿಸಲು ಬಲ್ಲವಳು (ಭಾವಗೀ. ೮).

[ಹೂ$_2$ (< ಪೂ$_2$) + ಕಿರಣ]

ಹೂಗುಟ್ಟು 'ಹೂಂಗುಟ್ಟು' ನೋ.

ಹೂಗೆನ್ನೆ (ನಾ). ಹೂವಿನಂತೆ ಮೃದುವಾದ ಕೆನ್ನೆ: ನಳನಳಿಪ ಹೂಗೆನ್ನೆಯಲಿ ಬೆಮರಿಳಿಯಿತೇಕೆ ? (ಚಂದ್ರಸ. ೭೨-೨೪). [ಹೂ$_2$ (< ಪೂ$_2$) + ಕೆನ್ನೆ]

ಹೂಗೆಲಸಿ (ನಾ). ೧. ಹೂವಿನಲ್ಲಿ ವ್ಯವಹರಿಸುವಂತಹುದು; ದುಂಬಿ: ಅಚ್ಚಹಸು ಕರೆದ ಈ ಇನಿದಾದ ಬೆಳ್‌ಪಾಲು, ಹೂಗೆಲಸಿ ಚಿಟ್ಟುಜೇನಿಳಿಸಿದೀ ಚೆಂಜೇನು (ಪಾರಿಸ. ೨೩-೫೦); ನೆಲದೆರಯ ಜನಕರಾಜನ ಹೃದಯದಿಂಗಿತಕೆ ಮನಮೊಪ್ಪಿ ಸೌಮಿತ್ರಿಯೂರ್ಮಿಳೆಯನೊಪ್ಪಿದನ್, ಹೂಗೆಲಸಿ ಸುಗ್ಗಿಮೊಗ್ಗನ್ನಪ್ಪುವಂತೆ (ಶ್ರೀರಾಮಾ. ೫೧-೬೩೦). ೨. ಹೂವಿನಲ್ಲಿ ವ್ಯವಹರಿಸುವವನು; ಹೂವಾಡಿಗ.

[ಹೂ$_2$ (< ಪೂ$_2$) + ಕೆಲಸಿ]

ಹೂಗೊಂಚಲು 'ಪೂಗೊಂಚಲ್' ನೋ.

ಹೂಗೊಳ 'ಪೂಗೊಳ' ನೋ.

ಹೂಚೆಂಡು 'ಪೂಚೆಂಡು' ನೋ.

ಹೂಜಡೆ (ನಾ). ಹೂವುಗಳಿಂದ ಅಲಂಕಾರ ಮಾಡಿದ ಜಡೆ; ಮೊಗ್ಗಿನ ಜಡೆ: ಮಲ್ಲಿಗೆಯು . . . ವಿಶೇಷವಾಗಿ ಬೆಳೆಯುವ ವಸಂತಕಾಲದಲ್ಲಿ ಹುಡುಗಿಯರಿಗೆ ಈ ಹೂಗಳಿಂದ ಹೂಜಡೆ ಕಟ್ಟಿ ಅಲಂಕರಿಸುತ್ತಾರೆ (ಕಪಪು. ೬-೧೧೦).

[ಹೂ$_2$ (< ಪೂ$_2$) + ಜಡೆ$_1$]

ಹೂಜಲ್ಲಿ 'ಪೂಜಲ್ಲಿ' ನೋ.

ಹೂಜಿ 'ಹೂಜೆ$_2$' ನೋ.

ಹೂಜೆ$_1$ (ನಾ). ಅಸೂಯೆ; ಹೊಟ್ಟೆಕಿಚ್ಚು: ಹಾವ ಹಿಡಿದು ಹೀಸಿ ಕರಹುಸಿ ಹೂ[ಜೆಯ] ಹೇವಗೇಡಿ ಹೈಯೆಂದವರ ವೋವೂ ಹೊರೆದಪೆ ಹೌವ್ವನೆ ಹಾರಲೆಹಂಗೆ ಶ್ರೀವರ ಹಸ್ತೀಂದ್ರರಕ್ಷ (ಶತಸಾಂ. ೭೮-೧೦೦); ಆ ಹೂಜೆ ಹೆಂಗುಸಿನ ಮಾತಂತಿರಲಿ; ಈ ಸಕಲಗುಣ ಸಂಪನ್ನನು ಆ ಮಾತಿಗೆ ಕಿವಿಗೊಡಬಹುದೆ ? (ಪಾರ್ಶ್ವಸಾ. ೫೮).

ಹೂಜೆ$_2$, ಹೂಜಿ (ನಾ). ೧. ಮಣ್ಣು ಅಥವಾ ಲೋಹದಿಂದ ಮಾಡಿದ ಉದ್ದವಾದ ಕಂಠವಿರುವ ಒಂದು ಬಗೆಯ ನೀರಿನ ಪಾತ್ರೆ; ಕೂಜ: ಗಂಗೋದಕ ಹೂಜೆ ಘನರತ್ನಕೀಲಿತ ಪಿಂಗಾಣಿಗಂದಲರ್ದಟ್ಟೆ ಹೊಂಗಾಳಾಂಜಿಯ ಹೊಳೆವ ಬಿಜ್ಜಣಿಗೆಯ ಹೆಂಗಳು ತಂದಿರಿಸಿದರು (ಮೋಹಶ. ೧೬-೨೮); ವೃಕೋದರಂ . . . ಭಾಜನದ ಕೆಲಬಲದ ರತ್ನದೀಪದ ಪೊನ್ನಹೂಜೆಗಳ ಪನ್ನೀರ ಪರಿವಿಡಿಯೊಳೆಡೆಯಾಗೆ ಭೋಜನಕೆ ಬೇಕಾದ ಭಕ್ಷಭೋಜ್ಯಾದಿಗಳನೊದವಿಸಿದನಾದರದೊಳು (ಪ್ರಮಿಭಾ. ೩೪-೩೩) **ಹೂಜೆ:** ೧. ಚನ್ನಕನ್ನೆಯರು ಥಣ್ಣಾನ ಜಲದ ಹೂಜೆಗೆ ವಸ್ತ್ರಗಳ ಸುತ್ತಿ ಸಣ್ಣಮಿಳ್ಳಿಗಳ ವೆರಸಿ ಪಿಡಿದವರು ಕೆಲರು (ಶ್ರೀಕೃಷಾ. ೩೭); ಕುಂಬಾರನು ಮಣ್ಣೆನಿಂದ ಗಡಿಗೆ, ಹೂಜೆ ಮುಂತಾದುವನ್ನು ಮಾಡುತ್ತಾನೆ (ಜೀವಾತ್ಮ. ೧೫೫). ೨. ಬತ್ತಕ್ಕೆ ಉಂಟಾಗುವ ಒಂದು ಬಗೆಯ ಬಿಳಿಯ ಹುಳು: ಹೆಚ್ಚುದಿನ ಬತ್ತವನ್ನು ಗೂಡೆಯಲ್ಲಿಡದೆ ಮೂಟೆಯಲ್ಲಿಟ್ಟರೆ ಹೂಜಿ ಬೀಳುತ್ತದೆ (ರೂಢಿ). 'ಕೂಜ', 'ಕೂಜೆ' ಪರಾ.

[? ./ ತುಳು. ಕೂಜೆ, ಹೂಜೇ]

ಹೂಜೆಗ (ನಾ). ಹೊಟ್ಟೆಕಿಚ್ಚುಳ್ಳವನು; ಅಸೂಯಾಪರ: ಗಾಳಿಸು ಗೆಲ್ವನಂ ಹರಹು ಹೂಜೆಗನಂ ಸುಲಿ ಸುತ್ತುಗಾಱನಂ (ಲೀಲಾವ. ೨-೧೦೭). [ಹೂಜೆ$_1$ + - ಗ$_3$]

ಹೂಜೆಗತನ (ನಾ). ಹೊಟ್ಟೆಕಿಚ್ಚುಪಡುವುದು; ಮತ್ಸರಿಸುವುದು: ಹೂಜೆಗತನಕ್ಕೆ ನಾಡೊಳಗೋಜಂ ಪುಸಿಯುತ್ತಮಿರ್ಪುದದೆ ತಮೆಗೆಂದುಂ ಸಾಜವೆನೆ ಸಂದ ಖಳನಂ ಯೋಜಿಸುವರ್ನಿರ್ವಿಕಾರಿಯಾಗಿರೆ ಋಷಿಯರ್ (ಸಮಪ. ೭-೩೫); ಹೂಜೆಗತನದಿಂ ಮೆಯ್ಯ ನಾಗಳೆ ಸಮಳುತ್ತುಮಿರ್ಪುದತಿಪ್ರಸಾಧನಂ (ರತ್ನಕ. ೩-೧೩ ವ). [ಹೂಜೆಗ + - ತನ]

ಹೂಜೆಗಾರ್ತಿ (ನಾ). ಹೊಟ್ಟೆಕಿಚ್ಚು ಪಡುವವಳು; ಮತ್ಸರಿಸುವವಳು: "ಹೂಜೆಗಾರ್ತಿಯೆಂದು ಹುರುಡಿಸುವಾಕೆ" (ಕಶಾಸಾ. ೬-೩೭೭); ಒಳವುಗೊಟ್ಟು ಕಾದಲನಂ ಮೂದಲಿಪ ಹೂಜೆಗಾರ್ತಿಯೊಂದಾಯತಿಯಂ ಮೆಱವ ನಿನಗೆ ನಳ್ಳೆಳದಿಗಲ್ಲದೆ ಪೆಱಳಾವಳ್ಗಿಂ ಕತೆಯಂ ಬಿತ್ತರಂ ಬಿತ್ತರಿಪಂ . . . ಮುದ್ದಣಂ (ರಾಮಾಶ್ವ. ೧೫೨-೪).

[ಹೂಜೆ + - ಕಾಱ + - ತಿ$_1$ (< - ಇತ್ತಿ)]

ಹೂಟ 'ಪೂಟ' ನೋ.

ಹೂಟಗಾರ (ನಾ). ಸಂಚುಗಾರ; ಮೋಸಗಾರ: ಅಟ್ಟಹನು ತಿರಿದುಂಬ ಕಣಿಗಾರನನು ದ್ರೋಹಿಯನು ಹೂಟಗಾರನನು (ಮೂರುನಾ. ೧೧೧-೪೪೧).

[ಹೂಟ (< ಪೂಟ) + - ಗಾರ (<- ಕಾಱ)]

ಹೂಟೆ 'ಪೂಟ' ನೋ.

ಹೂಟೆಗುಣಕು (ನಾ). ಬಂಡಿಯ ನೊಗಕ್ಕೆ ಕಟ್ಟುವ ಮಿಣಿಯಲ್ಲಿ ಸೇರಿಸಿದ ಕಟ್ಟಿಗೆಯ ತುಂಡು: (ಕ). [ಹೂಟೆ (< ಪೂಟ) + ಗುಣಕು (< ಗುಣುಕು)]

ಹೂಟೆ 'ಪೂಟ' ನೋ.

ಹೂಡ (ನಾ). (ಎಣ್ಣೆಯ) ಅಳತೆ; ಪ್ರಮಾಣ (?): ಕೇರಿ ದೆವಸ್ಥಾನದಿಂದಲು ಮೂಡಕೇರಿ ಸೋಮನಾಥದೇವರ ಸ್ವಾಸ್ತಿಯಿಂದಲು ಯೆಂಣೆ ಹೂಡ ೨ ಕೆ ೧ ಗ ೧ (ಎಕ. VIII, ತೀರ್ಥಹ. ೯೨-೩೯; 1664). [?]

ಹೂಡಗ (ನಾ). ಒಂದು ಬಗೆಯ ಮರ: ಹುಣಸೆ, ಹೂಡಗ, ಮುತ್ತುಗ . . . ಮೊದಲಾದ ವೃಕ್ಷಗಳಿಂದಲೂ (ಕೃವಾಸ. ೫೧). [?]

ಹೂಡಿಸು 'ಪೂಡಿಸು' ನೋ.

ಹೂಡು 'ಪೂಡು' ನೋ.

ಹೂಡುಗೋಲು (ನಾ). ಹೂಡುವುದಕ್ಕೆ ಉಪಯೋಗಿಸುವ ಒಂದು ಬಗೆಯ ಕೋಲು: ಕದಿರು ಸೂತ್ರದಾರ ಬಲುಗಣಿಕೆಯ ಪೆಂಡಿ ಹೂಡುಗೋಲುಗಳನು ಒಲಿದು ಕಟ್ಟಿದನು ಆ ಶರಣ (ಅಮುಸಾಂ. ೫-೫).

[ಹೂಡು (< ಪೂಡು) + ಕೋಲು$_1$ (< ಕೋಲ್$_1$)]

ಹೂಡೆ 'ಹೂಡೆಯ' ನೋ.

ಹೂಡೆಯ, ಹುಡೆ, ಹುಡೆಯ, ಹೂಡೆ (ನಾ). ಕೋಟೆಯ ಮೇಲ್ಭಾಗ; ಬುರುಜು; ದಾಳಿಕಾರರ ಅನಿರೀಕ್ಷಿತ ಆಕ್ರಮಣದಿಂದ ರಕ್ಷಿಸಿಕೊಳ್ಳಲು, ಊರಿನ ತುಸುದೂರದಲ್ಲಿ ಕಟ್ಟಿಕೊಳ್ಳುವ ಕೊತ್ತಲ ಅಥವಾ ಬುರುಜಿನ ರೀತಿಯ ವೃತ್ತಾಕಾರದ ಕಲ್ಲಿನ ಕಟ್ಟಡ: ಹುಸಿಯೆಂಬ ಹೂಡೆಯ [ಪಾಕಾಂ. ಹಗಡಯ] ವೆಸದಿಹವಾ ಮೂಜಸಮಪುರದ ಸುತ್ತುವಿಡಿದು (ಕ್ರಿಪುಸಾಂ. ೪-೪೫); ಇಡುವ ಡೆಂಕಣಿಗಯ್ಯ ಮುಜಿವ ಹೂಡೆಯಗಳಂ ಹುಡಿಹುಡಿಯ ಮಾಳ್ಪ . . . ಕಡೆಯ ಕಾಲದ ಸಿಡಿಲ ದಂಡು ನಡೆತಂದು ಪೊಱಗಡೆ ವಾಳೆಯಂ ಬಿಟ್ಟತೋ (ಸಮ್ಮೇ. ೮-೬೯); ಸಾಲಿಟ್ಟು ಮುಟ್ಟಿಜಿದಾಡುವ ಹೂಡೆಯಗಳು ಮುಂದಿಟ್ಟಣಿಸಿದವು ದುರ್ಗದೊಳು (ಕುರಾಸಾಂ. ೪೨-೪೦). **ಹುಡೆ:** ನಾಲ್ಕುಮೂಲೆಗಳಲ್ಲಿ ಅತ್ಯುನ್ನತವಾದ ಹುಡೆಗಳಿದ್ದವು (ದೇಯಾಸಾ. ೪೯); ದುಷ್ಟಾತ್ಮನು ಇಡಿಯ ದಿವಸ ಹುಡೆಯ ಮೇಲೆಯೇ ಕುಳಿತುಬಿಟ್ಟನು (ಪವನ. ೭೪). **ಹುಡೆಯ:** ಅತ್ಯಮದವೆಂಬ ಕೋಟೆಯನೊಡೆದು ಪಂಚೇಂದ್ರಿಯವೆಂಬ ಹುಡೆಯವ ಕಿತ್ತು . . . ಹಾಯಿಕೆ ಹಾಯಿತ್ತು (ಮೋಳಮಾ. ೮೬-೩೩೯). **ಹೂಡೆ:** ಬಿಡದೆ ಬಳಸಿದ ಕಾವಲ ಹೂಡೆಯ ಮೇಲಿಡುವ ಪಿರಂಗಿಯ ತವಗ ಒಡನೆ ಬೌದೆಸೆಯೊಳೊಪ್ಪುವ ಸುರಂಗದ್ವಾರ ಕಡು ಭಯಾಂಕುರವ ಬೀರಿದುವು (ಕಂನವಿ. ೧೮-೭೪); ಆ ಪ್ರದೇಶಗಳ ಬಳಿಯಲ್ಲಿ ಎತ್ತರವಾದ ಹೂಡೆಯು ಈಗಲೂ ಇದೆ (ಕಪಪು. ೬-೩).

[ದೇ. ॥ ತಮಿ. ಊಟ್ಕೆಯಮ್; ತೆಲು. ಊಡೆ]

ಹೂಡೇವು 'ಹೂಡೆಯ' ನೋ.

ಹೂಣ (ನಾ). ೧. ವಿದೇಶದಿಂದ ಭಾರತಕ್ಕೆ ಬಂದ ಏಷ್ಮದ ಒಂದು ಅಲೆಮಾರಿ ಜನಾಂಗ, ಆ ಜನಾಂಗಕ್ಕೆ ಸೇರಿದ ವ್ಯಕ್ತಿ ಮತ್ತು ಭಾಷೆ: ವಂಗಾಸ್ಫಂಗರಭೀರವಃ ಕರಗಲದ್ಭಾಣಾಬಭೂವುರ್ಭಶಂ ಹೂಣಾಃ ಕೊಂಕಣ ಭೂಭುಜೋ (ಎಕ. VI (R), ಪಾಂಡವಪುರ. ೨೧೪-೪೭; 1647); ಹೂಣರು ಮಕ್ಕಳ ಚೆಂಡಾಟ ಮಾಡಿ, ಹೆಂಗಸರ ಬೆನ್ನಿನ ಮೇಲೆ ನಗಾರಿ ಬಾರಿಸಿದಾಗ ಭಾರತೀಯರು ಎಚ್ಚರಾದರು (ಭಾರತಿ. ೧೩೮). ೨. ಒರಟು; **ಅನಾಗರಿಕ:** ''ಹೂಣ- ಕಾಡುಮನುಷ್ಯ'' (ಗಂಗಾಮಾ. ೬೫೧). [ಸಂ.]

ಹೂಣಭಾಷೆ (ನಾ). ಹೂಣಜನಾಂಗಕ್ಕೆ ಸೇರಿದ ಭಾಷೆ: ಒಂದೊಂದು ಭಾಷೆಯವರೂ ತಮ್ಮ ಭಾಷೆಯೇ ಶ್ರೇಷ್ಠವಾದುದು, ದೇವಭಾಷೆ: ಮಿಕ್ಕೆಲ್ಲರ ಭಾಷೆಗಳೂ ಮ್ಲೇಚ್ಛಭಾಷೆಗಳು, ಹೂಣಭಾಷೆಗಳು ಎಂದು ಕರೆದಿದ್ದಾರೆ (ಕಒಸಾ. ೭೧).

[ಸಂ. ಹೂಣಭಾಷಾ]

ಹೂಣೆ 'ಪೂಟು' ಪರಾ.

ಹೂಣೆಕೆ 'ಪೂಣ್ಕೆ' ನೋ.

ಹೂಣೆಗ 'ಪೂಣೆಗ' ನೋ.

ಹೂಣೆಗತನ 'ಪೂಣೆಗತನ' ನೋ.

ಹೂಣೆಸು$_1$ 'ಪೂಣೆಸು$_1$' ನೋ.

ಹೂಣೆಸು$_2$ 'ಪೂಣೆಸು$_2$' ನೋ.

ಹೂಣೆಸು$_3$ (ನಾ). ಪ್ರತಿಜ್ಞೆ; ಶಪಥ: ''ಹೂಣೆಸೆಂದು ಪ್ರತಿಜ್ಞೆಗೊಪ್ಪಿರ್ಪ ನಾಮಂ'' (ಕಬ್ಬಕ್ಕೆ. ೪೦). [< ಪೂಣೆಸು$_2$]

ಹೂಣು$_1$ 'ಪೂಣ್' ನೋ.

ಹೂಣು$_2$ 'ಪೂಟು' ನೋ.

ಹೂಣೆ 'ಪೂಣು$_2$' ನೋ.

ಹೂಣೆಗ 'ಪೂಣೆಗ' ನೋ.

ಹೂಣ್ಮವೆ 'ಪುಣ್ಮೆಮೆ' ನೋ.

ಹೂಣ್ಯ, ಹುಣ್ಣಿಯ, ಹೂಣ್ಯ (ನಾ). ಪುಣ್ಯ: ಎಟನೆ ಕೇಳ್ ನಿನ್ನನ್ನ ಹೂಣ್ಯವುಳ್ಳವನಾವನ್ಯ (ಪ್ರಭಪು. ೩-೮೮). **ಹುಣ್ಣಿಯ:** ಹುಣ್ಣಿಯವುಳ್ಳಡೀಂ ಜಗದೊಳೊರ್ವ್ಯಳೆ ಭಾಗಿಯೆ (ಎಕ. VII. ಶಿವಮೊ. ೬೪-7; 1112). **ಹೂಣ್ಯ:** ''ಸೈಪೆಂದುಂ ಹೂಣ್ಯಮೆಂದು ಪುಣ್ಯಂ'' (ಕಶಸಾ. ೫೭-೨೫೫); ಅಂಚೆಗಳು ಮಾಡಿದ ಹೂಣ್ಯಕೆ ನಾ ಕಡೆಗಾಣೆನು (ಸೂಬುಸೋ. ೨-೮); ಶಿವಭಕ್ತರನಮಳಾಂತಃಕರಣರ ಹೂಣ್ಯವೆ ಪರಿಜಾಂತಂ ತೆಸೆವರ ಕೀರ್ತಿ ಕಾಂತರನಂತರನೊಳಕೊಂಡಿರ್ಪುದು (ಉದ್ಭದೇ. ೨-೧೭). [< ಸಂ. ಪುಣ್ಯ]

ಹೂತ$_1$ 'ಪೂ$_1$' ಪರಾ.

ಹೂತ$_2$ 'ಪೂಟು' ಪರಾ.

ಹೂತಕದುಂಬೆ (ನಾ). ಒಂದು ಬಗೆಯ ಸಸ್ಯ: ''ನರ್ತಕಣಿಕಾ – ಹೂತಕದುಂಬೆ'' (ಓಷಧಿ. ೮೪). [?]

ಹೂತಿ$_1$ (ನಾ). ಪೂತಿಬೆಕ್ಕು; ಪುನುಗುಬೆಕ್ಕು: ಮೃಗದ ಹೊರಜೀನ ಕಂಬಿಗಳ ಹೆಮ್ಮಡಿಲ ಹೂತಿಗಳ ಬೆಕ್ಕಡಗುಗಳ ಹೆಡಿಗೆ ಹೆಬ್ಬುಲಿಯ ಭಂಡಿಗಳ ಹೇಱಿದ ಕೋಣವೆರಸಿ ನಡೆದುದು ಬೇಡವಡೆಗಳಟ್ಟಡವಿಯೊಳಗೆ (ಹಚಕಾ. ಪರಿ. ೨೧೩-೫೪); ಪುಲಿಗಳ ಪರವರಿ ಹೂತಿಯ ನೆಲೆ ಬಲ್ಲೂಕಂಗಳಕ್ಕೆದಾಣಂ ವೃಕ್ಷಾವಳಿಗಳ ಕಣಿಯೆಂದೆನೆ ಕತ್ತಲಿಸುತ್ತಿಹ ವಿಂಧ್ಯದವಿ ಪಡೆದುದಗುರ್ವಂ (ಪುಣ್ಯಾಸ್ರ. ೧-೯೪).

ಹೂತಿಯ ಬೆಕ್ಕು = ಪೂತಿಯ ಬೆಕ್ಕು; ಪುನುಗುಬೆಕ್ಕು: ಮುಳ್ ಪುಣಿಸೆ ಪಣ್ಗಳು ಹೂತಿ[ಪಾಕಾ. ಹುತ್ತಿ]ಯ ಬೆಕ್ಕು ಸೀಳ್ದ ಮುತ್ತದ ಪೊಸನಾರ್ ಸೆಣಂಬು ಪಲವುಂ ಮೃಗವಕ್ಕಿಗಳಿಂದಮೊತ್ತಿ ಕಟ್ಟಿದ ಮರಗಂಬ ಜೀರ್ಗರೆವಿನಂ ಗುದುಕಿಂ ಮಗುಳ್ದರ್ ವನೇಚರರ್ (ಸೂಕ್ತಿಸು. ೩-೧೬೯); ಪೀಲಿವೊಜೆ ಹೂತಿಯ ಬೆಕ್ಕುಳುವಂದಿಮುಳ್ವರಾಹಂಗಳ ದಾಡೆ ಕತ್ತುರಿಯ ಹುಲ್ಲೆಗಳೊರ್ಮೊದಲಾದ ವನ್ಯಸಾರಂಗಳ ಭಾರದಿಂ ನಡೆದು ಬಂದನದೊರ್ವ ಪುಳಿಂದನಾಯಕಂ (ದಶಕು. ೨-೧೦೬). [← ತೆಲು. ಪೂತಿ]

ಹೂತಿ$_2$ (ನಾ). ೧. ಬಿನ್ನಹ; ಪ್ರಾರ್ಥನೆ. ೨. ಆಮಂತ್ರಣ; ಆಹ್ವಾನ: ವತ್ರಿಯಿಡುತಿಹ ಇಚ್ಛಾ ಕೊಂತ ಚಕ್ರಗಳ ಹನ್ನೆತ್ತಿತೆ ತ್ರೈತ್ರಲುಂ ಹೇತಿಗಳ ಹೂತಿಗಳು ವತ್ತುತಿಹ ಘಾತಕಂ (ಜನಮು. ೧೯-೧೧). [ಸಂ.]

ಹೂತಿಡು 'ಪೂಟು' ಪರಾ.

ಹೂತು 'ಪೂ$_1$' ನೋ.

ಹೂತ್ತು 'ಪೂಟು' ಪರಾ.

ಹೂತೂತು 'ಹುಡುತುತು' ನೋ.

ಹೂದಂಬುಲ (ನಾ). (ಮದುವೆ ಮೊದಲಾದ) ಶುಭಕಾರ್ಯಗಳಲ್ಲಿ (ಒಪ್ಪಿಗೆಯನ್ನು ಸೂಚಿಸುವುದಕ್ಕಾಗಿ) ಆಚರಿಸುವ ಒಂದು ಮಂಗಳ ಕಾರ್ಯ: ಮೋಟರ ಮದುವಗ ಭಂಡರು ಹಳೆಯ ಹೊಯ್ದು ಮೂಕೊಱತಿಯರೆಲ್ಲಾ ಕಳಶವ ಹೊತ್ತರಲ್ಲಾ ಉಳೇ ಚಾಂಗು ಭಲಾ ಎಂದು ನಿಬ್ಬಣ ನೆಱೆದು ಹೂದಂ [ಪಾಕಾಂ. ತಂ]ಬುಲಕ್ಕೆ ಮುನಿವರಿದೇನಯ್ಯ (ಅಮಚಂ. ೧೦೨-೪೭೧).

[ಹೂ$_3$ (< ಪೂ$_3$) + ತಂಬುಲ]

ಹೂದಳ (ನಾ). ಹೂವಿನ ಪಕಳೆ,— ರೇಕು: ಬಿಗುರು ಗೊಂಚಲಿನಿಂದ ಅರಳ್ವ ಹೂದಳದಿಂದ ಬರಿದ ಹಣ್ ಬೆಡಗಿಂದ ಮೆರೆವ ಮೂಯತಿಯೆ ಚೆಲುವ ನೀ ತಾರ್ಕೆಯ ಬಣ್ಣಗೆಟ್ಟಹೆನು (ಎಱೀಗೀ. ೪೪-೧೪). [ಹೂ$_3$ (< ಪೂ$_3$) + ದಳ (= ದಲ)]

ಹೂದಾನಿ (ನಾ). ಹೂವುಗಳನ್ನು ಅಂದವಾಗಿ ಜೋಡಿಸಿಡುವ ಕುಂಡ; ಪುಷ್ಪಕರಂಡ: ಮೇಜಿನ ಮೇಲಿನ ಹೂದಾನಿಯಲ್ಲಿ ಹೂಗೊಂಚಲು ತಲೆಬಾಗಿಸಿ ನವವಧುವಿನಂತೆ ನಿಂತಿತ್ತು (ದೂಬಟ್ಟು. ೨೬); ಹೂದಾನಿಯಲ್ಲಿ ಬಣ್ಣಬಣ್ಣದ ಡೇಲಿಯಾ ಹೂವುಗಳಿದ್ದವು (ಕೀಲುಗೊ. ೨೪); ಮೇಜಿನ ಮೇಲೆ ಹೂದಾನಿಯೊಂದು ಕಣ್ಣು ಸೆಳೆಯುವ ಬಣ್ಣಬಣ್ಣದ ಹೂಗಳನ್ನು ಮೆರೆದು . . . ಮಾದಕ ಸುಗಂಧವನ್ನು ಹತ್ತುದಿಕ್ಕಿಗೆ ಬೆಲ್ಲಿತ್ತು (ಏಳಜೀ. ೧೭೨). [ಹೂ$_3$ (< ಪೂ$_3$) + ದಾನಿ]

ಹೂದಾಳೆ (ನಾ). ಹೂವುಳ್ಳ ತಾಳೆಗರಿ: ಸದಮಲರ ಸತ್ಕಾರವೆಂತೆನಲ್ ಕಚ್ಚನಾ ತುದಿಯಿಂದ ತಾಳುತನಕಂ ಮೆದ್ದುಕೊಂಡು ಬರಲದು ಗೆಣ್ಣುಗೆಣ್ಣಿಂಗೆ ಎಗಿರೆನಿಸಿದಿನಿದೀವುದಂತೆ ಸಜ್ಜನರ ವೋಹಾ ಅಧ್ವಮಾಪ್ರರು ಬರಲು ಸಂತೈಸುತಿರ್ಪರಾ ಮೊದಲದಿನವಿಕ್ಕುವಂ ತಾಳಿಂದ ಸವಿಯಲಗ್ರದ ಪರ್ವ ಪರ್ವದೊಳು ರುಚಿಗೆಟ್ಟು ಹೂದಾಳೆಯಪ್ಪಂತಲಾ ಭಾವಿಸೆ (ವೀಶ್ವಪು. ೪-೧-೧೪).

[ಹೂ$_2$ (< ಪೂ$_2$) + ತಾಳೆ$_1$ (< ತಾಟೆ)]

ಹೂದಿಂಗಣ (ನಾ). ಒಂದು ಬಗೆಯ ಸಸ್ಯ: ಕ್ಯಾನ್ನಾಗಿಡ, ಚರಗುಂಡಿನ ಗಿಡ, ಸರ್ವಜಯ, ಹೂದಿಂಗಣ (ಮೈಡಿಗಿ. ೧೭-೨೯). [?]

ಹೂದಿಂಗಳ್ 'ಪೂದಿಂಗಳ್' ನೋ.

ಹೂದಿಱಿ 'ಪೂದಿಱಿ' ನೋ.

ಹೂದು 'ಪೊಯ್$_2$' ನೋ.

ಹೂದುದಿಗೆ 'ಪೂದೊಡಿಗೆ ' ನೋ.

ಹೂದುಱುಗಲು 'ಪೂದುಱುಗಲ್' ನೋ.

ಹೂದುಱುಬು 'ಪೂದುಱುಂಬು' ನೋ.

ಹೂದೇರ್ 'ಪೂದೇರ್ ' ನೋ.

ಹೂದೊಡಬೆ 'ಪೂದೊಡಂಬೆ$_2$' ನೋ.

ಹೂದೊಡಿಗೆ 'ಪೂದೊಡಿಗೆ ' ನೋ.

ಹೊದೋಂಟ 'ಪೂದೋಂಟ' ನೋ.

ಹೂದೋಟ 'ಪೂದೋಂಟ' ನೋ.

ಹೂದೋರಣ (ನಾ). ಹೂವುಗಳಿಂದ ಅಲಂಕೃತವಾಗಿರುವ ತೋರಣ: ಕಲ್ಲಿನ . . . ಕೆಳಗೆ ಬಳ್ಳಿಯೂ ಮೇಲೆ ಹೂದೋರಣವೂ ಮಧ್ಯೆ ಸಣ್ಣ ಎಗ್ರಹಗಳೂ ಕೆತ್ತಲ್ಪಟ್ಟಿವೆ (ಮೈವಾಸ್ತು. ೧೧೨). [ಹೂ$_2$ (< ಪೂ$_2$) + ತೋರಣ]

ಹೂನೀರು 'ಪೂನೀರ್' ನೋ.

ಹೂನ್ಯ 'ಹೂಣ್ಯ' ನೋ.

ಹೂನ್ಯವಂತ (ನಾ). ಪುಣ್ಯವಂತ: ಧರೆಯೊಳ್ ಪ್ರದೋಷಕಾಲದೊಳಿರಲಾರ್ವರೆ ಹೂನ್ಯವಂತರೀ ಧಾರಿಣಿಯೊಳ್ (ವೀರವಿ. ೬-೨೧).

[ಹೂನ್ಯ (< ಹೂಣ್ಯ) + - ವಂತ]

ಹೂಪೊಡೆಯ 'ಪೂಪೊಡೆಯ' ನೋ.

ಹೂಬಣ್ಣ (ನಾ). ಹೂವುಗಳ ಚಿತ್ರಗಳಿಂದ ಕೂಡಿದ ಸೀರೆ: ತಾಯಿ ದೊಡ್ಡಮ್ಮ ಏನುಟ್ಟು ಮೆರೆದಾಳು ಕಾಗುಟ್ಟು, ಕರಿದು ಪನಕುಟ್ಟು, ಹಾರುವರ ಹೂಬಣ್ಣನುಟ್ಟು ಮೆರೆದಾಳು (ಹಕ್ಕಿಯ. ೬೫) [ಹೂ$_2$ (< ಪೂ$_2$) + ಬಣ್ಣ]

ಹೂಬತ್ತಿ (ನಾ) ೧. ದೇವರ ದೀಪಕ್ಕಾಗಿ ಹತ್ತಿಯನ್ನು ಹೊಸೆದು ಹೂವಿನ ಆಕಾರದಲ್ಲಿ ಮಾಡಿದ ಬತ್ತಿ; ದೀಪವರ್ತಿ: ಕಳೀವರದ ನೀರಲ್ಲಿ ಶಾರದೆಯ ದೀಪ್ತಿ ತೊಳಗುತಿಹುದು ಹಣತೆ ತುಂಬ ನೇಹದಲಿ ನಗೆಯ ಹೂಬತ್ತಿ ಬೆಳಗುತಿಹುದು (ಹೃದಸ. ೯-೧೮); ವಯಸ್ಸಾದ ಮಡಿಹೆಂಗಸರೊಬ್ಬರು ಹೂಬತ್ತಿ ಮಾಡುತ್ತಾ ಭಕ್ತಿಯಿಂದ ಅರೆಕಣ್ಣುಮುಚ್ಚಿ ಕುಳಿತಿದ್ದಾರೆ (ದೂಬಿಬ್ಬ. ೧೫೫); ಅದರ ಮೇಲೆಯೇ ತುಪ್ಪದಲ್ಲಿ ತೋಯಿಸಿದ ನಾಲ್ಕಾರು ಹೂಬತ್ತಿಗಳಿದ್ದವು (ಗಂಗಾಸಾ. ೬). ೨. ಒಂದು ಬಗೆಯ ಪಟಾಕಿ; ಸುರುಸುರುಬತ್ತಿ: ಎಡವೂರ ತಳದಲ್ಲಿ ಏನೇನ ಶಡಗರ ಎಡಕನಂದಿಕೊಲ ಬಲಕ ಪಲ್ಲಕಿ ಪಂಕ . . . ಹಾರೂವ ಹೂಬಾಣ ಹೂಬತ್ತಿ ಕಂಡಿರಿ (ಕನ್ನಜಾ. ೯). [ಹೂ$_2$ (< ಪೂ$_2$) + ಬತ್ತಿ]

ಹೂಬಾಣ 'ಪೂಬಾಣ' ನೋ.

ಹೂಬಿಡು 'ಪೂಬಿಡು' ನೋ.

ಹೂಬಿಸಿಲು (ನಾ). ಎಳೆಯ ಬಿಸಿಲು; ಹಿತವಾದ ಬಿಸಿಲು : ಮಂಜಕ್ಕ ತಂದೆಯ ಬಾಳ್ವೆಯ ಸಂಜೆಯಲ್ಲಿ ಹೂಬಿಸಿಲಿನಂತೆ ಕಂಗೊಳಿಸುತ್ತಿದ್ದಳು (ಹಾಪುತ್ರ. ೬೬); ಹೂಬಿಸಿಲು ಹೊಂಬಿಸಿಲು ಚೆಂಬಿಸಿಲು ಬೆಂಬಿಸಲು ಎದೆಯನ್ನೆ ತುಂಬಿಸಲು ಬೀಬಿಸುತಿರೆ (ಭಾವಮೇ. ೨೧-೪೦೫). [ಹೂ (< ಪೂ$_2$) + ಬಿಸಿಲು (< ಬಿಸಿಲ್)]

ಹೂಬುಗುಡಿ (ನಾ). ಹೂವಿನ ಚಿತ್ರವಿರುವ ಒಂದು ಬಗೆಯ ಕವಿಯ ಆಭರಣ: ನಾಲ್ಕ್ಪರಹದ್ಯಾಲೆ ಹೂಬುಗುಡಿ ಗೆಜ್ಜೆಟೀಕೆ ಸಾಕು ತವರವರು ಬಡವಾರೆ (ಹಳ್ಳಿಸ. ೭೩). [ಹೂ$_2$ (< ಪೂ$_2$) + ಬುಗುಡಿ]

ಹೂಬುಟ್ಟಿ 'ಪೂವುಟ್ಟಿ' ನೋ.

ಹೂಬೇಹೂಬ್ 'ಹುಬೇಹೂಬ' ನೋ.

ಹೂಬೇಹೂಬ 'ಹುಬೇಹೂಬ' ನೋ.

ಹೂಮಂಚ (ನಾ). ಒಂದು ಬಗೆಯ ಮಂಚ; ವಿಶೇಷವಾಗಿ ಹೂವುಗಳನ್ನು ಕೆತ್ತಿರುವ ಚಿತ್ರವುಳ್ಳ ಮಂಚ: ಚಿಪ್ಪರಮಂಚ ಗುಜ್ಜರಿಗಾಲಮಂಚ ಮೇಲುಪ್ಪರಮಂಚ ಹೂಮಂಚ ನಿಪ್ಪಟ್ಟೆ ಶಕುನ ತೂಗುವ ಮಂಚ ಸೆಳೆಮಂಚವೊಪ್ಪವಾಂತೆಸದುವಲ್ಲಲ್ಲಿ (ಭರಚ. ೧೫-೨೬). [ಹೂ$_2$ (< ಪೂ$_2$) + ಮಂಚ]

ಹೂಮಡು (ಕ್ರಿ). ಹೂವುಗಳನ್ನು ಹಾರವಾಗಿ ಕಟ್ಟು; ಹೂಮಾಲೆ ಕಟ್ಟು: ಹೂಗಳನ್ನಾಯ್ದು ಬಂದಳಿಂದರೆ ಅವನ್ನು ಕ್ರಮದಂತೆ ಮಡಚೇಕು, ಅನುಕೂಲವಾದ ಗಿಡದ ನಾರುಗಳನ್ನು ತಂದು ಹೂಮಡುತ್ತಾಳೆ (ಕುಡಿಕೂ. ೧೭).

[ಹೂ$_2$ (< ಪೂ$_2$) + ಮಡು$_1$]

ಹೂಮರಿ (ನಾ). ಆಗ ತಾನೇ ಜನಿಸಿದ ಮರಿ; ಎಳೆಯ ಮರಿ: ಅವುಗಳಲ್ಲಿ ಒಂದು ಹೊರತು ಬಾಕಿಯವುಗಳು ಹೂಮರಿಗಳಾಗಿದ್ದವು (ಚಿಂಗಾಳ್ಳ. ೪೨೩); ಚಿನ್ನಕ್ಕಾ, ಎಲ್ಲಾ ಮಚ್ಚೀನೂ ಮರಿ ಆಗ್ಯವೆ! ಹೂಮರಿ! (ನುಲಿಮ. ೨೬೯).

[ಹೂ$_2$ (< ಪೂ$_2$) + ಮರಿ (< ಮಱಿ)]

ಹೂಮಳೆ 'ಪೂವಟೆ' ನೋ.

ಹೂಮಳೆಗಱೆ 'ಪೂವಟೆಗಱೆ' ನೋ.

ಹೂಮಾರು 'ಪೂಮಾಱು' ನೋ.

ಹೂಮಾಲೆ 'ಪೂಮಾಲೆ' ನೋ.

ಹೂಮಿಡಿ 'ಪೂಮಿಡಿ' ನೋ.

ಹೂಮುಡಿ$_1$ 'ಪೂಮುಡಿ$_1$' ನೋ.

ಹೂಮುಡಿ$_2$ 'ಪೂಮುಡಿ$_2$' ನೋ.

ಹೂಮುಡಿಸು, ಹೂವುಮುಡಿಸು (ಕ್ರಿ). ೧. (ಬೇರೆಯವರ ತಲೆಗೆ) ಹೂವನ್ನು ಸೆಕ್ಕಿಸು, — ಸೂಡು: ತಂಗಿ ಬಾರೆಂದಪ್ಪಿದೊಡನಂ ಕಯ್ಯಿಡಿದ ಮುಂಗುರುಳ ಚೆಲ್ವಯಂನುಡಿಸಿ ಹೂಮುಡಿಸಿ (ಕಾಲೂರ. ೧೯೦-೪೩೩); ಹೂಸದಿದ್ದರೆ ಹೂಮುಡಿಸಿದ್ದಕ್ಕಿಂತ ಹೆಚ್ಚು (ಗಾದ). ೨. ಗರ್ಭಿಣಿಯರಿಗೆ ಐದು, ಏಳು, ಅಥವಾ ಒಂಬತ್ತನೆಯ ತಿಂಗಳಲ್ಲಿ ಶುಭವನ್ನು ಕೋರಲು ಸೀಮಂತಕಾರ್ಯವನ್ನು ಮಾಡು: ಗರ್ಭಿಣಿಯರಿಗೆ ಐದನೆಯ ತಿಂಗಳಲ್ಲಿ ಹೂಮುಡಿಸುವ ಕಾರ್ಯ ಮಾಡುತ್ತಾರೆ (ಕೂಡಿ). **ಹೂವುಮುಡಿಸು**: ೨. ಗಂಡನ ಮನೆಯಲ್ಲಿ ನಡೆಯಬೇಕಾದ ಹೂವುಮುಡಿಸುವುದು ಎಂಬ ಮಂಗಳಕಾರ್ಯಕ್ಕೆ ಅವಕಾಶವಾಗಿಲಿಲ್ಲ (ಮಹಾಗ.೪).

[ಹೂಮುಡಿ$_1$ (< ಪೂಮುಡಿ$_1$) + - ಸು$_1$]

ಹೂಮೂಡಿಗೆ (ನಾ). ಹೂವಿನ ಬತ್ತಳಿಕೆ: ನೋಡನೋಡಲಿಕಂಗಡನ ಹೂಮೂಡಿಗೆಯ ಸರಳಂಗದೊಳಗಕ್ಕಾಡಿದವು ಮೈಮಜ್ಜಿದಳೊಂದೆರಡೆಂಬವಸ್ಥಗಳ (ತೂರಾ. ೩-೪-೪). [ಹೂ$_2$ (< ಪೂ$_2$) + ಮೂಡಿಗೆ]

ಹೂಯಲು 'ಪೊಯಲ್' ನೋ.

ಹೂರ$_1$ 'ಪುರ$_1$' ನೋ.

ಹೂರ್ವ (ನಾ). ಒಂದು ಬಗೆಯ ಮರ: ಕಕ್ಕೆ ಹೂರಂ [ಪಾಕಾ. ಬೂರಂ] ಬೆಳಲ್ ಮಾವರುಬಾಳಂ . . . ಬ್ರಹ್ಮವೃಕ್ಷಂ ಕಱಿಕೆ ತಱಿಯದಿಂದೊಪ್ಪುತಿರ್ದತ್ತರಣ್ಯಂ (ಗಿರಿಕ. ೧-೭೨); ತೇಗ ಕಗ್ಗಲಿ ಸರಳ ನಿಂಬ ಹೂರಂ . . . ಸಲ್ಲಲಿತ ಚಂದನಂಬೆತ್ತ ಪೇರ್ಮಳಿಗಳೊಳು ವಲ್ಲಂಗಳುಂ ಪರ್ವ ಜೆರ್ರೆಂಬ ಕಾನನವ ಕಂಡು ವಿಸ್ಮಿತರಾದರು (ಪ್ರಭುಪು.೩-೧೩೦); ಹೂರದ ಚೆಕ್ಕೆ ಗರಿಕೆಯ ಬೇರು . . . ಚೂರ್ಣವ ಹಾಕಿ ಕದಡಿ ಪಾಕಮಾಡಿ ಹದದಲ್ಲಿ ಇಳುಹಿ ಮೈಗೆ ಲೇಪಿಸಲು ಸ್ಫೋಟಕ, ಮಸೂರಿಕೆಗಳು ಶಮನವಪ್ಪವು (ವೈದ್ಯಸಾ. I, ೩೭೭). [?]

ಹೂರಣ (ನಾ). ೧. ತುಂಬುವುದು; ಭರ್ತಿಮಾಡುವುದು: "ಹೂರಣ (ಹೂರ್ಣ) = ಪೂರ್ಣ" (ತದ್ಭವೋ.ಗ್ರ). ೨. ಕಡುಬು, ಹೋಳಿಗೆ ಮೊದಲಾದುವುಗಳಲ್ಲಿ ತುಂಬುವ ಹುದುಗಲು: ಪೊಂಗಿರ್ದಂಗರವೋಲ್‌ಗೆಯಂ ಗರಗರಮಪ್ಪ ತುಪ್ಪಮಂ ಶರ್ಕರೆಯಂ ಪಿಂಗದೆ ಹೂರಣಮೆನಿಸಿ ಮನಂಗೊಳಿಪುವನಪ್ಪ ತಪೂರಮಂ (ಶಾರ್ದೂಲ. ೮-೫೩); ಬೆಂದ ಕಡಲೆಯ ಬೇಳೆಯಂ ಬೆಲ್ಲಗೂಡಿಯರೆದು ಹೂರಣವ ಮಾಡಿ . . . ಸೂರಿಗೆಯಡುವುದು (ಸೂಪಶಾ.೧-೨೬); ಕತ್ತೆಗೆ ಪೂರಣದ ರುಚಿ ತಿಳಿಯಲಿಲ್ಲ ತೊತ್ತಿಗೆ ಪತಿವ್ರತೆಗುಣ ಬರಲಿಲ್ಲ (ಪುರಂವಿ.೨-೫೭-೩). ೩. (ತೆಲುಗು) ಸತ್ಯ; ನಿಜಗು; ಸಾರ: ಸುರವಿರೋಧಿಯ ಮುಂಡ ಕೊಂದುದು ಹೂರಳಿ ಕಪಿಗಳ ಹೊರಳಿಯನು ಬಲವರದ ಹೂರಣದಂತೆಯಜಿಗಿಜಿಯಾದುದಗಲದಲಿ (ತೊರಾ. ೬-೨೮-೬೨). ೪. ಗುಟ್ಟು; ಮರ್ಮ; ರಹಸ್ಯ: ಭಿಕ್ಷುಕನು ಇನ್ನು ವಾತಾವರಣ ತೀರ ಹದಗೆಡಬಹುದೆಂದೂ, ತನ್ನ ಹೂರಣ ಹೊರಬೀಳಬಹುದೆಂದೂ ಮನವರಿಕೆ ಮಾಡಿಕೊಂಡು . . . ಹೋದ (ಫಲಸಂ. ೭೪). ನಾವು ಗಂಡಹೆಂಡಿರು ಬಹಳ ಪ್ರೀತಿಯಿಂದಲೇ ಇರಬೇಕೆಂದು ತಿಳಿದ ಅಣ್ಣನಿಗೆ ಆನಂದವಾಗುತ್ತದೆ. ಪಾಪ! ಅವನಿಗೇನು ಗೊತ್ತು ಒಳಗಿನ ಹೂರಣವೆಂಥಾದ್ದು ಅಂತ! (ನಾಪೋಲೀ. ೨೩೩); ಶೆಟ್ಟಿ ಸತ್ತ ಮೇಲೆ ಅವನ ಲೆಕ್ಕ ಹೊರಗೆ ಬಿತ್ತು, ಕಳ್ಳ ಸತ್ತ ಮೇಲೆ ಅವನ ಹೂರಣ ಹೊರಗೆ ಬಿತ್ತು (ಗಾದೆ).

ಹೂರಣದೊಡೆ = ಹುದುಗಲನ್ನಿಟ್ಟು ಮಾಡುವ ಒಂದು ಬಗೆಯ ವಡೆ: ಹೂರಣವನು ಬಿಳಿಯುದ್ದಿನಿಂದ ಚಾರಿಸಿಕೊಂಡ ಸಣ್ಣ ಸಂಪಳಿಯೊಳಗೆ ತುಂಬಿ ತುಪ್ಪದೊಳು ಪಾಕಂ ಮಾಡಿಯಿಳುಹಿದುದು ತಾನೆ ಹೂರಣದೊ[ಪಾಶಾಂ. ವೊ]ಡೆಯನಿಸಿಕೊಂಡು ಹಿರಿದು ಸವಿಯಂ ಪಡೆದುದು (ಸೂಪಶಾ. ೧-೬೫). [< ಸಂ. ಪೂರಣ]

ಹೂರಣಗಡುಬು (ನಾ). ಕೊಬ್ಬರಿ, ಕಡಲೆ, ಸಕ್ಕರೆ ಮೊದಲಾದ ಹುದುಗಲನ್ನು ತುಂಬಿಸಿ ಮಾಡಿದ ಕಡುಬು: ಸಣ್ಣ ಸೇವಗೆ ಹಾಲುಂಡೆ ಜೇನ್ನೊಡ ಶುಭ್ರವಣ್ಣದುದ್ದಿನ ಸವಿಗಡುಬು ಬಣ್ಣಿಸೆ ಹೂರಣಗಡುಬು ಭೂಪಗೆ ಮುದ್ದುವೆಣ್ಣುಗಳೆಡಮಾಡಿದರು (ಕಾನವಿ.೨-೮೭); ಹುಗ್ಗಿ ಹೂರಣಗಡುಬು ಮಗ್ಗಿ ತಾಳಲಗಾಯಿ (ಜಪಗೀ. ೫೭).

[ಹೂರಣ + ಕಡುಬು (< ಕಡುಂಬು)]

ಹೂರಣಬದನೆಗಾಯ್ (ನಾ). ಬದನೆಕಾಯಿಗೆ ಸಾಂಬಾರಪದಾರ್ಥವನ್ನು ತುಂಬಿ ಮಾಡಿದ ಒಂದು ಬಗೆಯ ಅಡುಗೆ: ಕೆಲವಕ್ಕೆ ಬದನೆಯ ಬಜ್ಜಿ ಕೆಲವಕ್ಕೆ ಕತ್ತರಿಸಿದೆಳೆಕೀರೆ . . . ಉಳಿದವಕ್ಕೆ ಹಸಮಾಡಿ ಬಿಟ್ಟು ತ್ರಿವದನಿತ್ತು ಒಗ್ಗರಿಸಿಕೊಂಡವಲವಲ ಹೆಸರ ಹೂರಣ[ಪಾಶಾಂ. ರು ಸೂರಣದ]ಬದನೆಗಾಯಿಂಬುದು (ಸೂಪಶಾ.೪-೨೧).

[ಹೂರಣ + ಬದನೆಗಾಯ್]

ಹೂರಣು (ನಾ). ಒಂದು ಬಗೆಯ ತೆರಿಗೆ (?): ಇಂತಿವರು ಮುಖ್ಯವಾಗಿ ಸಮಸ್ತ ವೃತ್ತಿಮಂತರು ತಂಮು ಬ್ರಾಹ್ಮಣವೃತ್ತಿಯೋಪಾದಿಯಲು ಅದಱಳಿಕೆ ಹೂರಣು ದಂಡದೋಷದಿಂ ಪಾದ ತಿಱುಗೆಯಂ ಕೊಂಬುದಿಲ್ಲೆಂದು [ಒ]ಂದು ಹೊನ ಪಾದಪೂಜೆಯಂ ಕೊಂಡು ಸಿದ್ಧೇಶ್ವರ ಗದ್ದ ಭಂಡಿ ೯ . . . ಅಂತು ಭಂಡಿ ೧೯೬೦ ಹಡಿಕೆ [ಹೂ]ರಣು ವೊದಲಾಗಿದ್ದುವಕ್ಕೆ ಸರ್ವ್ವಾಬಾಧ ಪರಿಹಾರವೆಂದು ಕೊಟ್ಟರು (ಕ್ರಾ. V. ೭೦-೪; 1221). [?]

ಹೂರಿಗೆ 'ಪೂರಿಗೆ' ನೋ.

ಹೂರಿಗೆದೋರಣ (ನಾ). ಪೂರಿಗೆಗಳನ್ನು ಕಟ್ಟಿ ಮಾಡಿದ ತೋರಣ: ಹೊಳವ ಮಣಿದರ್ಪಣದ ಕಾಂತಿಯ ಕಲಶ ಹೂರಿಗೆದೋರಣದ ಥಳಥಳಿಪ ಕದಳೀಸ್ಥಂಬ ಮಿಂಚುವ ಸಾಲುದೀಪಗಳ . . . ಧಾರಾನಿಳಮಂಟಪವೆಸದುದಾಕ್ಷಣ ನವವಿಳಾಸದಲಿ (ಅಂಬಿಕಾ. ೪೮-೪೯). [ಹೂರಿಗೆ (< ಪೂರಿಗೆ) + ತೋರಣ]

ಹೂರುಂಡೆ (ನಾ). ಒಂದು ಬಗೆಯ ಭಕ್ಷ್ಯ: ಹಾಲುಂಡೆ ಹೂರುಂಡೆಯನು ತೆಱಹಿಲ್ಲೆನಿಸಿ ಗಡಣಿಸುತ್ತ ಗುದ್ದುರುಗಳಿಗೆ ಕಜ್ಜಿಕಂಠನಾರೋಗಿಸಿದಡೆ ಇನಿದಾವರಿಸಿ ಗರಳಸುಧೆಯಂತಿರ್ದುದು (ಸಿದ್ಧರಾ. ೮-೮೫). [? + ಉಂಡೆ]

ಹೂರ್ಣ (ಗು). ಸಂಪೂರ್ಣವಾದ; ಸಮಗ್ರವಾದ: ಯಾವಡೆ ಹೂರ್ಣವಲ ಮಾಡಬೇಕು (ಎಪಿ.VI. ಶೃಂಗೇರಿ. ೯-೭೪; 1652). [< ಸಂ. ಪೂರ್ಣ]

ಹೂಲಿ$_1$ 'ಪೂಲಿ$_1$' ನೋ.

ಹೂಲಿ$_2$ 'ಪೂಲಿ$_2$' ನೋ.

ಹೂಲ್$_3$ 'ಪ್ಪೂಯಲ್' ನೋ.

ಹೂಲಿಕುಂಟೆ 'ಪೂಲಿಕುಂಟೆ' ನೋ.

ಹೂಲಿಬೆಂಡು (ನಾ). ನೀರಿನಲ್ಲಿ ಜೊಂಡಿನಂತೆ ಬೆಳೆಯುವ ಒಂದು ಬಗೆಯ ಗಿಡ; ಆವು; ತನಕಲಿ; **P** ಇದರಿಂದ ಬಸಿಲಿಗೆ ತಲೆಯನ್ನು ಮರೆಮಾಡಿಕೊಳ್ಳುವ ಪರಂಗಿ ಟೋಪಿಗಳನ್ನು ಮಾಡುತ್ತಾರೆ: (ಪ).

[ಹೂಲಿ$_1$ (< ಪೂಲಿ) + ಬುಡು]

ಹೂವಕ್ಕಿ 'ಪೂವಕ್ಕಿ' ನೋ.

ಹೂವಡಿಗ 'ಪೂವಡಿಗ' ನೋ.

ಹೂವರಸಿ 'ಹೂವರ್ಚಿ' ನೋ.

ಹೂವರಸೆ 'ಹೂವರ್ಚಿ' ನೋ.

ಹೂವರಳಿ (ನಾ). ಒಂದು ಬಗೆಯ ಮರ: ಹೂವರಳಿ ಬೇರು, ಪಾರಿವಾಣದ ಬೇರು . . . ಕಗ್ಗಲಿಬೇರು, ಗರಿಕೆಬೇರು ಇವು ಪ್ರತ್ಯೇಕ ೩೦ ಹಲವಂ ೧೬ ಕೊಳಗ ನೀರಿನಲ್ಲಿ ಹಾಕಿ ಕಷಾಯವ ಕಾಸಿ (ಸಕವ್ಯ. ೩೯೧). [ಹೂ$_2$ (< ಪೂ$_2$) + ಅರಳಿ$_1$]

ಹೂವರ್ಚಿ, ಹೂವರಸಿ, ಹೂವರಸೆ (ನಾ). ಒಂದು ಬಗೆಯ ಮರ: ಸೊಗದೇಬೇರು, ಹೂವರ್ಚಿ ಚಿಕ್ಕೆ, ಬೇಲದ ಚಿಕ್ಕೆ . . . ಎಲ್ಲವನ್ನೂ ಒಣಗಿಸಿ (ಸಕವ್ಯ. ಪರಿ.೫೦೨). **ಹೂವರಸಿ**: ಮರಗಳು . . . ಬಿಲ್ಲು, ಹೂವರಸಿ, ಬೆಪ್ಪಾಲೆ, ಹಾಲೆ (ನಮ್ಮಸು.೨೩೬). **ಹೂವರಸೆ**: (ಪ). [ದೇ. ॥ ತಮಿ. ಮಲ. ಪೂವರಚು]

ಹೂವಲಿ 'ಪೂವಲಿ' ನೋ.

ಹೂವಳ 'ಪೂವಳ' ನೋ.

ಹೂವಾಡಗಿತ್ತಿ 'ಪೂವಡಿಗಿತಿ' ನೋ.

ಹೂವಾಡಿಗ 'ಪೂವಾಡಿಗ' ನೋ.

ಹೂವಿಲ್ಲು 'ಪೂವಿಲ್' ನೋ.

ಹೂವಿಸು (ಕ್ರಿ). ಹೂವಾಗುವಂತೆ ಮಾಡು: ಚಿಗುರಿಸಿ ಹೂವಿಸಿ ಕಾಯಿಸಿ ಪಣ್ಣಿಸಿ ಬಣ್ಣಿಸುವೊಲು (ಸಪೀಗೀ.೨೮-೧೩); ಹೂವಿನಾಸೆಯೇ? ಪ್ರೇಮದ ಮೊಗಸನೆ ಸೂಸಿ ಹೂವಿಸೇಕೆದೆಯನ್ನೆ? (ಗೀವಿಂ. ೪೪-೨). [ಹೂ$_2$ (< ಪೂ$_2$) + - ಇಸು]

ಹೂವೀಳಯ, ಹೂವೀಳ್ಯ (ನಾ). (ಮದುವೆ ಮೊದಲಾದ) ಶುಭಕಾರ್ಯಗಳಲ್ಲಿ (ಒಪ್ಪಿಗೆಯನ್ನು ಸೂಚಿಸುವುದಕ್ಕಾಗಿ) ಆಚರಿಸುವ ಒಂದು ಮಂಗಳ ಕಾರ್ಯ: ನಿಮ್ಮ ಗೇಹದೊಳಸಂತಸಂಭ್ರಮದಿಂದನೇಕಜಂಗಮ ಉಂಡಿತಂತಜಿದು ನಾವಿಕ್ಕುವರ್ಥ ನಿಮಗೊಂದುದಿನ ಹೂವೀಳಯಕೆ ನೆರೆಯದು (ಸಿಂಗಿರಾ.೩೧-೧೨). **ಹೂವೀಳ್ಯ**: ನನ್ನ ಪತಿಯ ಅಜ್ಜಿ ನನ್ನ ಕೈಯಿಂದ ಹೂವೀಳ್ಯ ಮಾಡಿಸಿದರು (ಸ್ವಚಿ. ೩೧); ಪಕ್ಷಕ್ಕೆ ಒಂದಾವರ್ತಿಯಾದರೂ ಹೂವೀಳ್ಯ ಮಾಡದಿದ್ದರೆ ಆಕೆಗೆ ಬಿಡುಗಡೆಯಿರಲಿಲ್ಲ (ನಿರಾತ. ೧೫೫). [ಹೂ$_2$ (< ಪೂ$_2$) + ವೀಳಯ (< ವೀಳೆಯ)]

ಹೂವೀಳ್ಯ 'ಹೂವೀಳಯ' ನೋ.

ಹೂವು 'ಪೂ$_2$' ನೋ.

ಹೂವುಕಟ್ಟು$_1$ 'ಪೂಗಟ್ಟು' ನೋ.

ಹೂವುಕಟ್ಟು$_2$ (ನಾ). ಹೂವಿನ ಹೆಣಿಗೆ,— ಕಟ್ಟು: ಎಳಹಸುರು ಹೊಂದಳಿರ ಸೊಂಪೆಲೆಯ ಪಿಪ್ಪೆಯಲಿ ಪಿಳಿದ ಈ ಕಮ್ಮಗ್ಗಿ, ಈ ಹೂವುಕಟ್ಟುಗಳು, ಎಲ್ಲ ಹೆರುಪೇ ನಮ್ಮ ಭೂತಾಯ ಪುಟ್ಟಮಕ್ಕಳು (ಪಾರಸಿ. ೨೩-೫೫೫). [ಹೂವು (< ಪೂ$_2$) + ಕಟ್ಟು$_2$]

ಹೂವುಕೋಸು 'ಹೂಕೋಸು' ನೋ.

ಹೂವುಗಣೆ 'ಪೂಗಣೆ' ನೋ.

ಹೂವುಗಣ್ಣು 'ಪೂಗಣ್' ನೋ.

ಹೂವುತನ (ನಾ). ಹೂವಾಗಿರುವಿಕೆ; ಮೃದುವಾಗಿರುವುದು: ಮೂಗಿಗಿದರ ಕಂಪು ಬರದು ಮೈಗೆ ಇದರ ತಂಪು ಅರಿದು ಸುರರ ಬನದ ಹೂವುತನದ ತಿಳಲು, ಮನದ ಅರಿವಿದು (ನಾದಲೀ. ೨೨-೧೫೫). [ಹೂವು (< ಪೂ$_2$) + - ತನ]

ಹೂವುಮುಡಿ 'ಪೂಮುಡಿ$_1$' ನೋ.

ಹೂವುಮುಡಿಸು 'ಹೂಮುಡಿಸು' ನೋ.

ಹೂವೆತ್ತು 'ಪೂವೆತ್ತು' ನೋ.

ಹೂಸ 'ಪೂಸ$_1$' ನೋ.

ಹೂಸಕ, ಹೂಸಿಕೆ, ಹೂಸುಕ (ನಾ). ೧. ಸುಳ್ಳು; ಹುಸಿ: "ಹೂಸಕವೆನೆ ತೊಡಹಂ"(ಭಾರಸಿ. ೩೫); ಗುರುಜಕೃಪ ಕೃತವರ್ಮ ಶಲ್ಯಾದ್ಯರಿಗೆ ಹೂಸಕದೊಲಹು ಮಿಗಿಲಾಯ್ತಿರುಳು ಕರ್ಣಗೆ ಪಟ್ಟವಾಯಿತು (ಕುಮಾಕ. ೧-೩೦); ಸುರನದೀಸುತನಂಧನೃಪ . . . ಕೌರವನು ಹೂಸಕದ ಕರುಣರಸವನು ಮೆಲ್ದರು (ಸಾಸ್ಭಾ. ೩೫-೧೨); ಹೂಸಕವನಾಡದಿರ್ ನಿನ್ನ ವೆಸರಾವುದಾವಾಸವಾವೆಡೆ ವೇಳ್ಕುದೆನೆ ದನುಜಪತಿ ಮಂದಹಾಸದಿಂ (ಚಿಬಪು. ೨೫-೧೪). ೨. ಆಡಂಬರ; ಸೋಗು: ಆಸೆಗೆ ಮೊದಲಬಳಾವಳಿ ಮೋಸಕ್ಕೆ ಮೊದಲ್ ಜಡತ್ವಮೆಂಬೆರಡುಂ ಗೆಲ್ವೊಡೆ ಹೂಸಕಮಿಲ್ಲದೆ ಭಜಿಪುದು ಮೈಸಿರಿಯುಳ್ಳವಳನಬ್ಜಸದೃಶಾನನೆಯಂ (ಅನುಮು. ೧೫); ಬೆಡಂಗುವಾತು ನಾಣುಡುಗಿದದ ತೋಟಿ ಹೂಸಕದ ಕಾತುರವಿಲ್ಲದ ಸೊರ್ಕು . . . ಆದಿಯಾಗೊಡರಿಪ ವೈಶಿಕಂಗಳಿವು ವೇಶ್ಯೆಗೆ ಭೂಷಣಮಾಗಿ ರಂಜಿಕುಂ (ಮುನ್ನ.ವಿ. ೧೭-೩); ಹೂಸಕದ ಶೌರಿಯದ ಬಾಳಿಕೆಯೇಸು ದಿನಮ್ಮೆ ಕರ್ಣ (ಕುಮಾದ್ರೋ. ೬-೨೦); ನಿಜವಿರಕ್ತರಂತೆ ದೇಶಮಧ್ಯದಲ್ಲಿ ಸುಳಿದು ವಿರಕ್ತರ ಕಂಡಲ್ಲಿ ಸಟೆಯ ಭಕ್ತಿಯ ಹೂಕ್ಕು ಹೂಸಕದುವಚಾರಮಂ ನುಡಿದು (ಘನವ. ೩೪-೨೬). ೩. ವ್ಯರ್ಥ; ಹಾಳು: ಅವನ ಮೈಗಂವು ಸುಯ್ಲಂಪುಗಳನು ಕೊಳ್ಳದವಳ ನಾಸಿಕವು ಹೂಸಕವು (ನಾಗಚಂ. ೨೫-೫೩). ೪. ಅಲಂಕಾರ; ಬೆಡಗು: ಹುಸಿಯ ಹಸರ ಹುರುಡಿನ ಮನೆ ಹೂಸ[ಪಾಠಾಂ. ನ]ಕವೆಸವ ಹೊಳಲು ಹೋರಟೆಯ ಕುಶಲದಿ ಕುಹರದಾಗರವೊಯೆಂಬಂತೆ ರಾಜಿಸಿದುದಾ ವೇಶ್ಯಾಲಂಬ (ವೋಳಿಪು ೧-೫೭). ೫. ನಿಸ್ಸತ್ತ್ವವಾದುದು; ಸತ್ತ್ವವಿಲ್ಲದುದು: ಉಳ್ಳವುಮಱವೆಗಾದ ಬಗೆ ಹೂಸಕದ ಬಾಯಿದೆಱೆಗೂಟ ಜೊಂಪಿಸುವಂಗ ತುಱುಬಿದ ರೋಮಾಳಿ ಬೆಂಡೇಳ್ವ ಕಂಗಳು ಮೆಱೆದವವರ ಕೂಟದಲ್ಲಿ (ವರ್ಧಚ. ೫-೯೦). ೬. ತೋರಿಕೆಯ ವೇಷದವನು; ಸುಳ್ಳುಗಾರ; ಹುಸಿಕ: ಆಶಯಟುಮಟುದುದರಪೋಷಣಕೆ ಕೆಲವಿಕೃತವೇಷಗಳ ನಟಿಸಿ ಬಹಿರಂಗ ಬಳಕೆಯ ಬಯಲ ಹೂಸಕರನೊಲ್ದ (ಶಿವಗೀ. ೫೫-೩೦); ನಿರಾಲಂಬಿಗಳಾದ ನಿಜಶರಣರು ಮಚ್ಚರು ಕಾಣಾ ಹೊರವೇಷದ ಹೂಸಕರ (ಸಿದ್ಧೇಶ್ವ. ೧೫೮-೪೭೪). **ಹೂಸಿಕೆ**: ೨. ವಿಗಡತನವನು ವಹಿಲದಲಿ ಕೈಮಗುಚಿ ಕಳಿದರು ಹೂಸಿಕದ ಹೂಗತನವ (ಕುಮಾದ್ರೋ. ೧೭-೨೫). **ಹೂಸುಕ**: ೨. ಪುಸಿಯ ಭೀಮನ ಮಾತು ಹೂಸುಕದೆಸುಗೆ ತಾನೇಕಿನ್ನು ರಿಪು ನಿಪ್ಪಸರದಲಿ ಕಲಿಯೇಱಿದರೆ ಕೈಕೊಳ್ಳಲು (ಕುಮಾಕ. ೨೩-೪೪). [< ಪೂಸು$_1$ + - ಕ]

ಹೂಸಣಂಬ 'ಪೂಸಣಂಬ' ನೋ.

ಹೂಸಣೆ (ನಾ). ಬಳಿಯುವಿಕೆ; ಲೇಪನ: ತನುವೆಂಬ ಮನೆಗೆ ಅಸ್ಥಿಂಗಳು ಚಮ್ಮದ ಹಂಜರ . . . ಮಾಂಸದ ಭಿತ್ತಿಗೆ ರಸದ ಹೂಸಣೆ (ಅದಮ. ೧೫-೩೩). [< ಪೂಸು$_1$]

ಹೂಸತನ 'ಪೂಸತನ' ನೋ.

ಹೂಸಿಕ 'ಹೂಸಕ' ನೋ.

ಹೂಸಿರೆ (ನಾ). ದುರ್ಗೆ ಅಥವಾ ಲಕ್ಷ್ಮಿಯ ವಿಗ್ರಹಕ್ಕೆ ಉಡಿಸುವ ಹೂವಿನ ಚಿತ್ರದಿಂದ ಕೂಡಿದ ಸೀರೆ: (ಕ). [ಹೂ$_2$ (< ಪೂ$_2$) + ಸೀರೆ$_1$]

ಹೂಸು$_1$ 'ಪೂಸು$_1$' ನೋ.

ಹೂಸು$_2$ 'ಪೂಸು$_2$' ನೋ.

ಹೂಸು$_3$ (ನಾ). ಅಪಾನವಾಯು; ಅಧೋವಾಯು: ತಂಗಳ ಕಿಚ್ಚಡಿಯುಂಡು ಹೂಸು ಬಿಡುವಿರಿ (ಬಚ್ಚರಾ. ೯-೧೦೧); ಇದ್ದಕ್ಕಿದ ಹಾಗೆ ಗುತ್ತಿ ಡುರುಕ್ಕೆಂದು ಹೂಸು ಕೊಟ್ಟು, ನಿಂತನು! (ಮಲಮ. ೫೪೨). [< ಪೂಸು$_2$]

ಹೂಸುಕ 'ಹೂಸಕ'ನೋ.

ಹೂಸುದಗ್ಗಿ (ನಾ).ಒಂದು ಬಗೆಯ ಗಿಡ; ತಕ್ಕಿಲೆ: (ಕ). [?]

ಹೂಸುಬುರುಕ (ನಾ).ಅಪಾನವಾಯುವನ್ನು ಬಿಡುವವನು; ಹೂಸುಬಿಡುವವನು: "ಕರ್ದಕಃ ಕರ್ದಮಾನಃ, ಈ ೨ ಹೂಸುಬುರುಕಂ " (ಕಾಶಕ್ಯ. ೮೫).

[ಹೂಸು$_2$ (< ಪೂಸು$_2$) + - ಪುರುಕ]

ಹೂಹಗುರ (ನಾ). ಹೂವಿನಷ್ಟು ಹಗುರವಾದುದು: ಮಲ್ಲಿಗೆಯ ಹೂಹಗುರ ಈ ಹಸುಳೆ (ಚಂದ್ರಸ. ೨೨-೧೪); ಸುಖ ಸಂತೋಷಗಳಿಂದ ಎದೆಯನ್ನು ಹಣಿಸಬೇಕು ಎಂಬುದು ಅವರ ಹೂವಿನಂಥ ಮನಸ್ಸಿನ ಹೂಹಗುರವಾದ ಹಾರ್ಯಕೆ (ಬದ್ಮಪ್ರ. xlix. ನಾಟಕದ ಸಮಸ್ಯೆ).

[ಹೂ$_2$ (< ಪೂ$_2$) + ಹಗುರ]

ಹೂಹತ್ತಿ (ನಾ).ಒಂದು ಬಗೆಯ ಸಸ್ಯ: "ರಕ್ತಮಂಜರೀ – ಹೂಹತ್ತಿ , ಕಡವ" (ಓಷಧಿ. ೧೩೫). [ಹೂ$_2$ (< ಪೂ$_2$) + ಹತ್ತಿ$_1$ (< ಪಟ್ಟಿ)]

ಹೂಹುಟ್ಟು (ಕ್ರಿ). (ಕಣ್ಣಿನಲ್ಲಿ) ಹೂವು ಉಂಟಾಗು; ಹೂಬೀಳು: ಅಲಿ ನೊಂದುದೊ ಕಣ್ಣ ಬೇನೆಯೊ ಮೈಲಗೆಯೊ ಹೂಹುಟ್ಟಿದುದೊ ಕಣುಶೂಲೆಯೋ (ಬಸಪು. ೧೮-೬೬). [ಹೂ$_2$ (< ಪೂ$_2$) + ಹುಟ್ಟು$_1$ (< ಪುಟ್ಟು$_1$)]

ಹೂಹೆ (ನಾ).೧. ಹಸುಳೆ; ಶಿಶು: "ಹೂಹೆಯನೆ ಹಸುಳೆಯಕ್ಕುಂ" (ಭಾರಸಿ. ೩೧); ಹೂಹೆಗಳಳಿವ ಹರೆಯವೆ ಶಿವಶಿವಾಯೆಂದಳಲುದೊಱೆಯಲಿ ಮುಳುಗಿ ಮೂಡುವ ದ್ರುಪದಪತಿಯೆಂದ (ಕುಮಾಳ. ೧೧-೧೧); ಆಹ ತಿಂಬೆನು ಕರುಳನೀಗಳೆ ಹೂಹೆಗಕ್ಕಟ ತನ್ನೊಡನೆ ಹೇಳಾಹವಕೆ ನಿಲುವಂತೆ . . . ಎನುತ ಖಳ ಬಾಯ್ದೆಱೆದು ಹರಿತಂದ (ನಿಭಾಗ.೧೦-೩೨-೧೫). ೨. ಮರಿ; ಪೋತ: ಹುಲ್ಲೆಯ ಹೂಹೆಗಳು ಹೆಬ್ಬುಲಿಗೆ ಹಾಯ್ವವೆನುತ್ತ ಗರ್ಜಿಸಿದ (ಕುಮಾಳ. ೨೦-೩೨). ೩. ಗೊಂಬೆ; ಪುತ್ತಳಿ: ಯಂತ್ರ ಸೂತ್ರದ ಹೂಹೆಯಂತಿರೆ ನೃಪತಿ ತತ್ತ್ರನು ಹಗೆಗ ತನುಧನವ (ಕುಮಾಸ. ೧೪-೨೩); ಯಂತ್ರಮಯಹೂಹೆಗಳು ನೃಪರೀ ಯಂತ್ರಸೂತ್ರದ ಕುಣಿಕೆ ನಿನ್ನ ನಿಯಂತ್ರಣವ ಹೇಳೊ ನಿಧಾನವನೆಂದಳು (ಕುಮಾಳ. ೧೫-೨೨). ೪. (ಆಲಂ) ಹೇಡಿ; ಕ್ಷುದ್ರ; ಅಲ್ಪ: ಉರಗನಿಕ್ಕಡಿಗಾಱಿ ಹುಲ್ಲಿನ ಸರವಿಗಂಜುವುದುಂಟೆ ಕರ್ಣಾದ್ಯರನು ಕಡ್ಡಿಗೆ ಬಗೆಯನೀ ಹೂಹೆಗಳ ಗಣಿಸುವನೆ (ಕುಮಾದ್ರೋ. ೫-೭೮); ಕಾದು ಸಾಕೆಲೆ ಹೂಹೆ ಹೆಂಗೂಸಾದಡೀಕ್ಷಿಸೆನುತ್ತ ಕೆನ್ನೆಗೆ ಸೇದಿ ಶರಮೈದಱಲಿ ಧನದನ ಬಹಳ ಜಠರವನು ಭೇದಿಸಿದಳು (ನಿಭಾಗ. ೧೦-೭೧-೫); ಆಹರಿಯೊಳವಗಡಿಸಿ ಬಳಿಕೀ ಹೂಹೆಯನು ಕೈವಿಡಿದು ಮುಂದಣ ದೇಹ ಸುಖಸಾಮ್ರಾಜ್ಯವೆಲ್ಲವ ಕಿಡೆಯೊಸೆದು ಮತ್ತೆ ಐಹಿಕಾಮುಷ್ಮಿಕದ ಪದವಿಗೆ ಬಾಹಿರನು ನೀನೆನಿಸುವುದು ಮಿಗೆ ಸಾಹಸವೆ ಹೇಳೆಂದು ನುಡಿದನು ಹನುಮನರ್ದುನಗೆ (ತೋಗಯು. ೧೮-೪೪). 'ಪಾಪೆ' ಪರಾ. [?]

ಹೂಹೊಮ್ಮೆ (ನಾ). ಒಂದು ಬಗೆಯ ಮರ: ಸುರಹೊನ್ನೆ, ಪಿನ್ನೇಕಾಯಿ, ಪುನ್ನಾಗ, ಸುಡಾಟು, ಹೂಹೊಮ್ಮೆ (ಮೃಪಿಗಿ. ೧೭-೨೪೭). [ಹೂ$_2$ (< ಪೂ$_2$) + ಹೊಮ್ಮೆ$_2$]

ಹೂಹೊಱೆ (ನಾ). ಹೂವಿನ ರಾಶಿ ,— ಗುಚ್ಛ,— ಕಟ್ಟು: ಕುಂತಳಗುಣನಾಮಂ ಮೆಱೆಯಲುಕೆ ಕುಂತಳೋರ್ವರ್ಗೆಯೆಸೆಗುಂ ಹೂಹೊಱೆಯವೊಲಿರೆ ತೇಜೋಬ್ಜೂಹವದಾ ಕುಂತಳಕ್ಕೆ ರಾಜಾವಳಿಯುತ್ಸಾಹದಿನಾಳ್ದುದು ಮುನ್ನಂ ಬಾಹಾಬಳದಿಂದೆ ಸೋಮ ವಂಶಪ್ರಭವಂ (ಎಪಿ. VII, ಶಿಕಾಂ. ೨೩೭-೧೪; 1174).

[ಹೂ$_2$ (< ಪೂ$_2$) + ಹೊಱೆ (< ಪೊಱೆ)]

ಹೂಳ್ 'ಪೂಟು' ನೋ.

ಹೂಳಜೆ (ನಾ). ಒಬ್ಬ ಗ್ರಾಮದೇವತೆಯ ಹೆಸರು: ಇಪ್ಪರಿಂಗದ ಮೇಲೆ ಇಟ್ಟ ಭಕ್ತಿಯು ಮಿಗಿಲು ಕಟ್ಟರಿಂಗಿಗಳ ಮನೆದೇವ ಹೂಳಜೆಯ ಶಿಷ್ಯ ಸೋವೇಶ ದಯಮಾಡಿ (ಕನ್ನಜಾ. ೨೯೮). [?]

ಹೂಳಿ 'ಪೂಟು' ಪರಾ.

ಹೂಳಿಡು 'ಪೂಟು' ಪರಾ.

ಹೂಳಿಯ (ನಾ). ಕೋಟೆಯ ಒಂದು ಭಾಗ (?): ಹೂಳಿಯಗಳಂ ಹುಲ್ಲ ಹಾಕಿ ಡೆಂಕಣಿಗಳಂ ಮೇಳ್ಕೆಸಿ ನಡೆಚಪ್ಪರವನು ನಡೆಯಿಸಿ . . . ದೂಳಿಗೋಂಟೆಯ ಕೊಳ್ಳ ಬೇಕೆಂಬ ಪಡಿಯಱರ ಕಲಕಲಂ ಕರಮೊಪ್ಪಿತು (ಸಮ್ಮಕಾ. ೮-೩೦). [< ಹೂಡೆಯ]

ಹೂಳಿಸು 'ಪೂಣಿಸು$_2$' ನೋ.

ಹೂಳು$_1$ 'ಪೂಟು' ನೋ.

ಹೂಳು$_2$ (ನಾ). (ಬಾವಿ, ಕೆರೆ ಮೊದಲಾದುವುಗಳಲ್ಲಿ ಬಹುದಿನಗಳಿಂದ ತುಂಬಿಕೊಂಡ) ಬುರುದೆ; ಬದಿ; ಕೆಸರುಮಣ್ಣು: ಎಂತಹ ಹೂಳಿನ ಮೇಲೆಯೂ ಕಾಲಕ್ರಮೇಣ ಹುಲ್ಲು ಬೆಳೆಯುತ್ತದೆ (ಮಲಮ. ೫೬೧); ಕುಡಿಯಬಾರದ ಬಾವಿ, ಕಸ

ಕವಿದ ಹೂಳು! (ಇಂಗೀತ. ೮೩-೧೨); ಗೋಡೆ ಸರಿಮಾಡುವುದಕ್ಕೆ, ಕಂದಕದ ಹೂಳು ತೆಗೆಯುವುದಕ್ಕೆ . . . ಊರಿನ ಬಟ್ಟೆ ಆಳುಗಳನ್ನು ಒದಗಿಸಬೇಕು (ಪ್ರವಾಸ. II, ೪೭೯).

[< ಹೂಳು (< ಪೂಟ್).]/ ತಮಿ. ಮಲ. ಪೂಟು]

ಹೂಳ್ದ 'ಪೂಟ್' ಪರಾ.

ಹೂಳ್ದು 'ಪೂಟ್' ಪರಾ.

ಹೂಜೆಗದ್ದೆ (ನಾ). ನೀರಾವರಿಪ್ರದೇಶ; ಗದ್ದೆ (?): ಮಲ್ಲಿಕಾರ್ಜುನದೇವರಿಂ ಬಡಗಣ ಉರಿಗೊಂಡನ ಕೆಱೆ ಕೆಳಗಣ ಹೂಜೆಗದ್ದೆ (ಎಕ. III, ತಿರುಮ. ೩೭-೧೩; 1513).

[ಹೂಜ್ಜೆ + ಗದ್ದೆ (< ಗಟ್ಟೆ)]

ಹೃಚ್ಛಯ (ನಾ). ೧. ಹೃದಯದಲ್ಲಿ ಅಡಗಿರುವಂತಹುದು; ಪ್ರೀತಿ; ಪ್ರೇಮ. ೨. ಕಾಮ; ಮನ್ಮಥ: "ಪ್ರದ್ಯುಮ್ನಃ, ಮಕರಧ್ವಜಃ, ಮನಸಿಜಃ, ಸಂಕಲ್ಪಜನ್ಮಾ . . . ಶ್ರೀನಂದನಃ, ಹೃಚ್ಛಯಃ, ಕಾಮಃ . . . ಪುಷ್ಪಧನ್ವಾ, ಮನೋಭವಃ - ಈ ೨೮ ಕಾಮ(ದೇವ)ನ ಪೆಸರ್" (ಪಲಾಯು. ೭-೩೩). [ಸಂ.]

ಹೃಚ್ಛಯ್ಯ (ನಾ). ಹೃದಯದಲ್ಲಿ ನೆಲೆಸಿರುವವನು: ಸ್ಥಿರ ಸುಧೀರಾ ಕಿನ್ನರಯ್ಯಾ ವಿರಸದೂರಾ ಕಿನ್ನರಯ್ಯಾ ಸರಸಸಾರಾ ಕಿನ್ನರಯ್ಯ ಮದೀಯ ಹೃಚ್ಛಯ್ಯ (ಬಸವ. ೩೫-೪). [ಸಂ.]

ಹೃಚ್ಛಲ್ಯ (ನಾ). ೧. ಎದೆಗೆ ನಾಟಿರುವ ಈಟಿ,—ಭರ್ಜಿ. ೨. (ಆಲಂ) (ಹೃದಯದ) ವ್ಯಥೆ; ನೋವು: ಕುರುಕುಲಚೂಡಾಮಣಿ ಶಲ್ಯನ ಹೃಚ್ಛಲ್ಯ ಮೆಲ್ಲಮುಂ ಕಟಲೆ ನುಡಿದೊಡಂ (ಪಂಪಭಾ.೧೨-೯೯ ವ); ಕೆಲರುರದೊಳ್ ನಟ್ಟಂ ಬನಾಳ್ದಂ ಮುನ್ನಂ ಮೂದಲಿಸಿದೊಡಾ ಹೃಚ್ಛಲ್ಯಮಂ ಕಳೆವಂತೆ ಕಿಟ್ಟು ಕಳೆದು ಸತ್ತರ್ (ಶಾಂತಿಪು. ೪-೩೦ ವ). [ಸಂ.]

ಹೃಚ್ಛೂಲ (ನಾ).೧. ಹೃದಯಕ್ಕೆ ನಾಟಿರುವ ಶೂಲ. ೨. ಹೃದಯದಲ್ಲಿ ಉಂಟಾದ ನೋವು; ಮನೋವ್ಯಥೆ; ದುಃಖ: ಅನುಜರಾಡಿದ ನುಡಿಗೆ ತಲೆವಾಗಿ ತರಣಿಕುಲತಿಲಕನೊಯ್ಯನೆ ದೈನ್ಯಭಾವದಿಂ ತರಹರಿಸಬಾರದವವಾದ ಹೃಚ್ಛೂಲಮಂ ತನಗೆ ಚಾನಕಿಯನುಳಿದು ಪೂರೆಯುರ್ಬಿದುರಗನಂತಿರ್ದಪೆಂ (ಕೃಷ್ಣಿಭಾ. ೧೮-೫೭). [ಸಂ.]

ಹೃಜ್ಜನನ (ನಾ). ಹೃದಯದಲ್ಲಿ ಹುಟ್ಟಿದವನು; ಕಾಮ; ಮನ್ಮಥ: "ಮನಸಿಜಂ ಮನ್ಮಥಂ ಕಂದರ್ಪನಂಗಜಂ . . . ಮಧುಪ್ರೇಮಿ ಹೃಜ್ಜನನಂ ರತಿಪ್ರಭು ಪ್ರದ್ಯುಮ್ನನಾ ಕಂತುವೆನೆ ಮಾರನೆನೆ ಮದನನಕ್ಕು" (ಮಂಗರಾ.೭-೨೨). [ಸಂ.]

ಹೃಜ್ಜಾತ (ನಾ). = ಹೃಜ್ಜನನ: ಏತಱ ಸೋಂಕುಂ . . . ಎಂತುಟಪ್ಪ ರಸಮುಂ ತನಗೆಂತುಮಸಹ್ಯಮಾಗೆ ಹೃಜ್ಜಾತನ ಮಾಯೆ ಮೋಹಿಸುವುದುಂ ಬಗೆಯಂ ವಿಗತಾನ್ಯಚಿಂತನಾ ಸೀತೆಯ ಚಿಂತೆಯಿಂ ದಶಮುಖಂ ಮರವಾನಸನಂತೆ ತೋಱಿದಂ (ಶರಾಮಾ. ೯-೧೫೫). [ಸಂ.]

ಹೃತ (ಗು).೧. ತೆಗದುಕೊಂಡು ಹೋದ. ೨. ಕಿತ್ತುಕೊಳ್ಳಲ್ಪಟ್ಟ; ಸೆಳೆದುಕೊಂಡ. (ನಾ). ೩. ತೆಗದುಕೊಂಡುದು. ೪. ಪಾಲು; ಭಾಗ. ೫. ಆಕರ್ಷಿಸಲ್ಪಟ್ಟವನು; ಸೆಳೆಯಲ್ಪಟ್ಟವನು: ಅಂಗನೆ ಹೃತನಾದಂ ಹೃದಯಂಗೊಳ್ಳೇ ನಿನ್ನ ಗೀತರಾಗದೊಳೀಗಳ್ ತುಂಗತರವೇಗಶಾಲಿ ಕುರಂಗದೆ ಹೃತನಾದ ತೆರದೊಳೀ ದುಷ್ಯಂತಂ (ಶಾಕುಂತ.೩-೫). [ಸಂ.]

ಹೃತಿ (ನಾ). ೧. (ಸ್ವಾಧೀನಕ್ಕೆ) ತೆಗದುಕೊಳ್ಳುವುದು. ೨. ಅಪಹರಿಸಲ್ಪಡುವುದು; ಕಿತ್ತುಕೊಳ್ಳಲ್ಪಡುವುದು. ೩. ಕಳವು; ಕಳ್ಳತನ. ೪. ನಾಶ; ಹಾನಿ.

[ಸಂ.]

ಹೃತ್ಕಂಪ (ನಾ). ಮನಸ್ಸಿನ ಆತುರ,— ಕಾತರ: "ಹೃತ್ಕಂಪಮನಲಾತುರಂ" (ಮಂಗರಾ.೧೩೨-೨೪). [ಸಂ.]

ಹೃತ್ಕರ್ಣ (ನಾ). ದೇಹದ ರಕ್ತಪರಿಚಲನಾಕ್ರಮಕ್ಕೆ ಸಹಾಯವಾಗುವ ಹೃದಯದ ಮೇಲ್ಭಾಗ: ಹೃದಯದ ಮೇಲ್ಭಾಗದ ಕುಹರಕ್ಕೆ ಹೃತ್ಕರ್ಣವೆಂದು ಹೆಸರು (ರೂಢಿ). [ಸಂ.]

ಹೃತ್ಕಲ್ಮಷ (ನಾ). ಪಾಪ: ಇದು ಕಣಾ ಪುರುಷಾರ್ಥಮೆಂಬುದು . . . ಇದುವೆ ಹೃತ್ಕಲ್ಮಷವನುಳಿಸದು ಇದುವೆ ಕರ್ಮದ ಸಸಿಯ ಬೆಳಸದು (ಗಗಾ. ೧೭-೪೮). [ಸಂ.]

ಹೃತ್ಕುಕ್ಷಿ (ನಾ). ದೇಹದ ರಕ್ತಪರಿಚಲನಾಕ್ರಮಕ್ಕೆ ಸಹಾಯವಾಗುವ ಹೃದಯದ ಕೆಳಭಾಗ: ಹೃದಯ ನಿಶ್ಶಕ್ತಿಯುತವಾಗಿ ಅದರಲ್ಲೂ ಬಲಹೃತ್ಕುಕ್ಷಿ ದೊಡ್ಡದಾಗಬಹುದು (ಕೆಲರೂ. ೩೧). [ಸಂ.]

ಹೃತ್ಕ್ಲೇಶ (ನಾ). ಹೃದಯದ ನೋವು; ಮನಸ್ಸಿನ ಸಂಕಟ; ದುಃಖ: ತಾರಾಪತಿವತ್ಕೀರ್ತಿ ವಿಹಾರಾ[ಹಾರ]ಪ್ರಭಯಾ ನಿಜತನುಪೂರ ಪೂರಾಪ್ರಿತ ಹೃತ್ಕ್ಲೇಶ ವಿದೂರಾ ದೂರೀಕೃತಬಲವಿಸ್ತಾರಾ (ಕವಿರಾ. ೩-೨೩೬). [ಸಂ.]

ಹೃತ್ತಾಪ (ನಾ). ಹೃದಯದ ತಾಪ; ಮನಸ್ಸಿನ ಬೇಗ[illegible]: ಸಖಿಯ ಸುಭಾಷಿತ ರವದಿನದಂಗಿದುದು ದೇವಕೀಹೃತ್ತಾಪಂ (ಜಗವಿ. ೨-೭೦); [illegible]ಳಂ ಕಾಣದೀ ಕಣ್ ಹೃತ್ತಾಪದಿಂ ಸೀದು ಕುರುಡಾಯ್ತಲಾ (ಶ್ರೀರಾಮಾ. ೯-೨೧೮). [ಸಂ.]

ಹೃತ್ತಾಮಸ (ನಾ). ಮನಸ್ಸಿನ ಅಂಧಕಾರ; ಅಜ್ಞಾನ: ಭೂಮಿಲಂಬದ ನಿಖಿಲ ಭೂಪಸ್ತೋಮಸಹಿತ ಸುಯೋಧನನು ಹೃತ್ತಾಮಸದ ಚಾವಡಿಯ ಝಾಡಿಯ ರೋಷಪಾವಕದ ಧೂಮಮುಖನ್ನೆತಂದು ಗಜಪುರ ಸೀಮೆಯಲಿ ಪಾಳಯವ ಬಿಡಿಸಿದ (ಕುವ್ಯಾಸ. ೧೧-೩೬). [ಸಂ.]

ಹೃತ್ತಿಮಿರ (ನಾ). ಮನಸ್ಸಿನಲ್ಲಿ ಉಂಟಾದ ಕತ್ತಲೆ; ಹೃದಯದಲ್ಲಿ ಉಂಟಾದ ಅಂಧಕಾರ: ತರಣಿಪ್ರಭನರ್ಘಕನೀ ತರುಣಿಯ ಹೃತ್ತಿಮಿರಮಂ ನಿರಾಕರಿಸಿ ಬಹಿಷ್ಕರಿಸಿದನೆನಲೆಸೆಗುಂ ಕುಚಭರಚೂಚುಕಯುಗಳಕಾಳಿಮಂ ದೇವಕಿಯಾ (ಜಗವಿ. ೨-೯೨). [ಸಂ.]

ಹೃತ್ಪಿಂಡ (ನಾ). ಹೃದಯ; ಎದೆಗುಂಡಿಗೆ: ನನ್ನ ಹೃತ್ಪಿಂಡಮಂ ಪಿಂಡಿ ನೆತ್ತರ್ ಕುಡಿಯಲೆಳಸಿದೆ: ನಿಶಾಚರಿಯೆ ನೀಂ ದಿಟಂ! (ಶ್ರೀರಾಮಾ. ೭೧-೪೫೪); ಕರುಳ ಮಾಲೆಯು ತೊಗಲ ಚೀಲ, ಅಟ್ಟೆಯ ಬುಟ್ಟಿ ಹೃತ್ಪಿಂಡ ಬೆಂ[illegible], ಬೆನ್ನಲಬು ದಾಂಡು (ನಡಬಂ. ೧೦೨-೨೦). [ಸಂ.]

ಹೃತ್ಪೂರ್ವಕ (ನಾ). ತುಂಬುಹೃದಯ: ಸಾವಿರಾರುವರ್ಷಗಳ ಕಾಲದಲ್ಲಿ ಅನೇಕ ಹೊಸಸಂಸ್ಕೃತಿಗಳು ಭಾರತಕ್ಕೆ ಪ್ರವಹಿಸಿ ಬಂದಿವೆ. ಅವನ್ನೆಲ್ಲ ಭಾರತ ಹೃತ್ಪೂರ್ವಕವಾಗಿ ಸ್ವಾಗತಿಸಿ ಎಲ್ಲವನ್ನೂ ತನ್ನದನ್ನಾಗಿಯೆ ಮಾಡಿಕೊಂಡಿದೆ (ಕುಸ್ವಾರ. ೧೨೪ ಪೀಠಿಕೆ). [ಸಂ.]

ಹೃತ್ಪಾಂಶ (ನಾ). ಭಾಗ; ಅಂಶ; ಪಾಲು: ಹೃತ್ಪಾಂಶ . . . ಸೆಳೆ, ಉಳ್ಳೆಂದುಂ ಇಂತಿನಿತುಂ ಭಾಗಂಗೊಂಬುದಕ್ಕೆ ಪೆಸರು (ವ್ಯವಹಾ. ೧೨-೧೨). [ಸಂ.]

ಹೃತ್ಸಂತಾಪ (ನಾ). ಎದೆಯಳಲು; ದುಃಖ; ಖೇದ: ಕುತ್ಸಿತಮಿದಂಬಿನಂ ಪ್ರತಿವತ್ಸರಮೀ ಕ್ರಮದೆ ಶಿಶುಗಳಾಱುಮನಳಿದಂ ಹೃತ್ಸಂತಾಪದೆ ನಯನಗಳತ್ಸಲಿಲಂ ಕುಚದೊಳಿಟ್ಟೆಯೆ ದೇವಕಸುತೆಯಾ (ಜಗವಿ. ೨-೫೫). [ಸಂ.]

ಹೃತ್ಸಂವಾದ (ನಾ). ತನ್ನೊಳಗಿನ ವಿಚಾರದ್ವಂದ್ವ: ಆದುದಾಗಲಿ ಬಳಿಕ ಮಾಡುವ ಭೇದ ಬೇಱೆಲ್ಲನುತ ಹೃತ್ಸಂವಾದವನು ಬೀಳ್ಕೊಟ್ಟು ಗಂಗಾಸೂನು ಪವಡಿಸಿದ (ಕುವ್ಯಾಭೀ. ೧-೨೬). [ಸಂ.]

ಹೃತ್ಸಮುದ್ಭೂತ (ನಾ). ಮನಸ್ಸಿನಲ್ಲಿ ಜನಿಸಿದವನು; ಮನ್ಮಥ; ಕಾಮ: ಆತನಿನಾದ ಬೇಟಮಭಿಜಾತತೆಯಿಂ ನೆಗೞ್ದೊಂದು ಧೈರ್ಯವಂತಾತನಿನಾದ ಭೀತಿ ನಿಜಬಾಲ್ಯದೊಳುಣ್ಮೆದ ಲಜ್ಜೆ ಹೃತ್ಸಮುದ್ಭೂತನಿನಾದ ಸೊರ್ಕು ಸುಚರಿತ್ರತೆಯಿಂ ಸಮಸಂದ ಸೌಷ್ಠವಂ ಚೇತನದೊಳುಣ್ಮೆ ಕನ್ನೆ ತಳೆದಳ್ ಕಿಲಿಕಿಂಚಿತಭಾವಚೇಷ್ಟೆಯಂ (ಚಂದ್ರಪ್ರ. ೫-೧೨೨) [ಸಂ.]

ಹೃದಯ (ನಾ). ೧. ಎದೆ; ವಕ್ಷಸ್ಥಳ: ನಾಭಿ ಚುಬುಕಂ ಹೃದಯಂ ತಲೆ . . . ಪುರ್ಬುಗಳೆಂಬೆಡೆಯಂ ಮಹಾಹಿ ಕೊಂಡೊಡೆ ಗರುಡಂಗಮೆತ್ತಲರಿದೆಂದೊಡೆ ಪೇಱುಬಿದಂಗೆ ಸಾಧ್ಯಮೇ (ಲೋಕೋಪ. ೧೦-೪); ವಸ್ತು ಹೃದಯದಲುಂಟೆಂದು ನೆನೆಯದಿರೋ ವಸ್ತು ಭ್ರೂಮಧ್ಯದಲುಂಟೆಂದು ಭ್ರಮಿಸದಿರೋ (ಅಪಚಿ. ೨೧೬-೯೨೮). ೨. ಮನಸ್ಸು; ಅಂತಃಕರಣ: ಹೃದಯದೊಳೊದವಿದ ಕತ್ತಲೆ ಚೆದಱುವಿನಂ ಮಂಗಳಪ್ರದೀಪದವೋಲಭ್ಯುದಯಕರನೆನಿಪ ನಂದನನದೆಂದು ತೊಳಗುವನೊ ಕಾಂತೆಯರ ಕರತಳದೊಳಾ (ಕಾಂಡಾಪ್ರ. [illegible]); ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ (ಬಸವ. ೪೯೯) ಆತನ ಹೃದಯದಲ್ಲಿ ಇಷ್ಟು ತೀವ್ರವಾದ ಭಾವನೆ ಬರದಿದ್ದರೆ . . . ತಪಸ್ಸಿಗೆ ತೆರಳುವುದೆಂತು (ಮಹಾಂ. ೨೪); ೩. ದಯೆ;

ಕರುಣೆ: ಯಾರಿಗೆ ಗೊತ್ತಿತ್ತು, ಇಷ್ಟೊಂದು ಬೆಲೆಯ ಬಲ್ಲವನಲ್ಲಿ ಹೃದಯ ಎಳ್ಳಷ್ಟೂ ಇಲ್ಲವೆಂದು (ಇಪ್ರಕ. ೨೭೧); ೪. (ಆಲಂ) ಸಾರವತ್ತಾದ ಭಾಗ; ತಿರುಳು: ಇದು ಸಕಲ ಪೌರಣವೇದದ ಹೃದಯ ಮುನಿ ವಾಲ್ಮೀಕಿರಚಿತವು (ಕೌಶಾ. ೪೪-೫೮). ೫. ಗುಟ್ಟು; ರಹಸ್ಯ: ಅದು ನಿಮಿತ್ತದಲಾತ್ಮವಿದ್ಯಾಹೃದಯಾದೀ ಗ್ರಂಥವನು ಪೇಳಿದನು (ಅಮೃತ ೧-೧೨). [ಸಂ.]

ಹೃದಯಂಗಮ (ಗು) ೧. ಹೃದಯಸ್ಪರ್ಶಿಯಾದ; ರಮಣೀಯವಾದ: (ನಾ). ೨. ಹೃದಯಸ್ಪರ್ಶಿಯಾದುದು; ರಮಣೀಯವಾದುದು: ವಿಷಯಾಸಕ್ತಿ ಯೊಳಾಯಾಸ್ಯಕಿರಿತರಾಗಿರ್ಪ ಪ್ರಾಕೃತಜನಂಗಳ ಗಮನಮೇ ಸಮಸ್ತವೇದಿಗೆ ಹೃದಯಂಗಮಮಾಗದುದುಮಂ ನೀಮೆ ಪೇಳೆಮೆಂದವರೊಳ್ ಪರೀಕ್ಷಾಕ್ಷಮೋದಾರ ವೀರವಾಕ್ಯಂಗಳಂ ನುಡಿಯುತ್ತುಂ (ಶಾಂತಿಪು. ೪-೧೦೨ ವ); ಹೃದಯಂಗಮಮಪ್ಪಿನೆಗಂ ತದೀಯವಚನಾಮೃತಂಗಳಮೃತವಧೂಗಾಸ್ಪದಮಂ ಪೊರ್ದುವ ಬಗೆಯಂ ತದಸ್ತುವೆಂದಂ ಜಿನೇಂದ್ರಚಂದ್ರನತುಂದ್ರಂ (ಅಜಿಪು. ೬-೮೫); ಆಗಮಶಾಸ್ತ್ರದ ಪ್ರತಿಮಾಲಕ್ಷಣದಲ್ಲಿ ಎಲ್ಲಾ ಮೂರ್ತಿಗಳ ಲಕ್ಷಣವನ್ನೂ ಹೃದಯಂಗಮವಾಗಿ ವರ್ಣಿಸಿದ್ದಾರೆ (ಭಾರದ. ೭೭). ೩. ಹೃದಯ ಸ್ಪರ್ಶಿಯಾದ ಮಾತು; ಮನಮುಟ್ಟುವ ವಚನ: "ಹೃದಯಂಗಮಂ ನಟ್ಟನೆ ಮನಂಬುಗುವ ನುಡಿಯಕ್ಕುಂ" (ಮಂಗರಾ. ೨೬-೨). [ಸಂ.]

ಹೃದಯಂಗುಡು, ಹೃದಯಗೊಡು (ಕ್ರಿ). ಮನಸ್ಸನ್ನು ಕೊಡು: ಹೃದಯಂಗುಡದುದನಱಿಯದೆ ಪದುಮಿನಿಗರಿದುಳಿಪಿ ಕೈಯ್ಯನಿಕ್ಕುವ ಶಶಿಯಂ ಪದ ದೀಕ್ಷಿಸಿ ಮಗೆ ನಗುವಂದದಿನಲರ್ದುದು ನೋಡೆ ನಾಡೆ ಕುವಲಯನಿವಹಂ (ಕುಸುಮಾ. ೮-೪೪). **ಹೃದಯಗೊಡು:** ಸಾವಿಗಱಿಸರು ಮನದಿ ಸತ್ಯವ ಭಾವಿಸರು ಹುಸಿಯೊಲುಮದೋಱುವರಾವ ಪರಿಯಲಿ ಹೃದಯಗೊಡದನೃತಗಳನಾಡುವರು (ನಳಚ. ೩ ೨೫). [ಹೃದಯ + ಕುಡು (< ಕೊಡು)]

ಹೃದಯಂಗೊಳ್ (ಕ್ರಿ). ಹೃದಯವನ್ನು ತಾಗು; ಮನಸ್ಸನ್ನು ಮುಟ್ಟು: ಅಂಗನೆ ಹೃತನಾದಂ ಹೃದಯಂಗೊಳ್ಳೇ ನಿನ್ನ ಗೀತರಾಗದೊಳೀಗಳ್ ತುಂಗತರವೇಗಶಾಲಿ ಕುರಂಗದೆ ಹೃತನಾದ ತೆರದೊಳೇ ದುಷ್ಯಂತಂ (ಶಾಕುಂತ. ೩-೫). [ಹೃದಯ + ಕೊಳ್]

ಹೃದಯಂಬುಗಿಸು (ಕ್ರಿ). ಮನಮುಟ್ಟುವಂತೆ ಮಾಡು; ಹೃದಯಸ್ಪರ್ಶಿಯಾಗಿಸು: ಹೃದಯಂಬುಗಿಸಿ ಮನೋಜ್ಞಾಗ್ನಿದಗ್ಧಿಯಪ್ಪವಳನೆನಗಮನುತಾಪಮನಿಂತೂದವಿಸಿದ ನಿನ್ನ ಸಂಸರ್ಗದೊಳಿನ್ನಿರಲಾಗದೆಂದು ನಸುನಗೆನಗುತುಂ (ವರ್ಧಪು. ೪-೮೮).

[ಹೃದಯಂಬುಗು + - ಇಸ್ಸು]

ಹೃದಯಕ್ರಿಯೆ (ನಾ). ಹೃದಯದ ಚಟುವಟಿಕೆ,— ಕಾರ್ಯ; ಉಸಿರಾಟ: ಅಂತರಂಗದಲ್ಲೇ ತುಂಬಿದ ದುಃಖದ ತೀವ್ರತೆ ಕಣ್ಣೀರಾಗಿ ಹೊರಗೆ ಹರಿದು ಬರಬೇಕು, ಇಲ್ಲವಾದರೆ ಅಷ್ಟೂ ದುಃಖದ ಭರವನ್ನು ಭರಿಸಲಾರದೆ ಹೃದಯಕ್ರಿಯೆ ನಿಂತು ಹೋದೀತು (ಹೇಮಕೂ. ೪೮); ವಿಷಮತೆ ದೇಹದಲ್ಲಿ ಹೆಚ್ಚಾದಾಗ ಹೃದಯಕ್ರಿಯೆ ನಿಲ್ಲುತ್ತದೆ (ಕೆಲರೋ. ೨೧). [ಸಂ. ಹೃದಯಕ್ರಿಯಾ]

ಹೃದಯಗಾಣ್ (ಕ್ರಿ). ತಿರುಳನ್ನು ಕಾಣು,— ತಿಳಿ: ಬಹಳ ಶಾಸ್ತ್ರದ ಹೃದಯ ಗಂಡಾಗಿಹ ಸುಖವು ತಾನಾಗಿ ಮತ್ತೆಯು ಕುಹಕಬುದ್ಧಿಯ ಚಿಂತೆಯನು ತ್ಯಜಿಸುವನುದಲ್ಲವನು (ನಿಭಾಗ. ೧೧-೨೦-೩೫). [ಹೃದಯ + ಕಾಣ್]

ಹೃದಯಗೊಡು 'ಹೃದಯಂಗುಡು' ನೋ.

ಹೃದಯಜ್ವರ (ನಾ). ಮನಸ್ಸಿನಲ್ಲಿ ಉಂಟಾಗುವ ತಾಪ; ಪ್ರೇಮಜ್ವರ: ಅವಳ ಆರಾಧನೆಗಾಗಿ ನನ್ನನ್ನು ಸೆಳೆದೊಯ್ದ ಈ ಉದ್ರೇಕ ಪಾದಾಕ್ರಾಂತನಾಗಿ ಕಣ್ಣೀರು ಕರೆಯುವಂತೆ ಮಾಡಿದ ಉನ್ಮಾದ, ಪಂಚಪ್ರಾಣಗಳನ್ನೂ ಸುಡುತ್ತಿದ್ದ ಹೃದಯಜ್ವರ ಇದಲ್ಲಿ, ಆ ಕಣವೆಯ ಹುಡುಗಿಯ ಮೇಲಿನ ಪ್ರೇಮವಲ್ಲಿ? (ಯೋಧಪು. ೪೯). [ಸಂ.]

ಹೃದಯದಟ್ಟು (ಕ್ರಿ). ಅಂತಃಕರಣಕ್ಕೆ ಗೋಚರವಾಗು; ಮನವರಿಕೆಯಾಗು; ಮನದಟ್ಟು: ಹೃದಯದಟ್ಟಿತೆ ಮೂಱುಜಗದಂದ ಲಾಲಿಸಿನ್ನದರುದ್ದವಗಲವಿಪ್ಪೆಂದು ಸದರದೊಳೆಱಿವಂತೆ ರಜ್ಜುವೆಂಬಳತೆಯೊಳೊದವಿ ಸೂಚಿಸಿದವೆವೀಗ (ಭರಚ. ೭೭-೭೯).

[ಹೃದಯ + ತಟ್ಟು]

ಹೃದಯದಾರಿದ್ರ್ಯ (ನಾ). ಅಂತಃಕರಣವಿಲ್ಲದಿರುವಿಕೆ; ಕಟುಕತನ: ಈ ಬಗೆಯಾದ ಹೃದಯದಾರಿದ್ರ್ಯಕ್ಕೂ ಒಂದು ಮಿತಿಯಿರಬೇಡವೆ ? (ಹೂಸಕ್ತಿ. ೪೫); ಶ್ರೀಸಾಮಾನ್ಯನ ಹೃದಯದಾರಿದ್ರ್ಯ, ಕರ್ತವ್ಯದಾರಿದ್ರ್ಯ, ಬುದ್ಧಿದಾರಿದ್ರ್ಯಗಳು ಕರುಣೆಯ ದಾರಿಯನ್ನು, ಕಾಯುತ್ತ ಅನಿರ್ವಾಹದ ಬದುಕಿಗೆ ಅಳಾಗಿರುವವರೆಗೆ ಕಾದಂಬರಿಗಳು ಏನು ಕೆಲಸ ಮಾಡಿಯಾವು ? (ಪಂಜಪಂ. ೭ ಮುನ್ನುಡಿ). [ಸಂ.]

ಹೃದಯದೌರ್ಬಲ್ಯ (ನಾ). ೧. ಹೃದಯದ ಕಾರ್ಯಚಟುವಟಿಕೆಯಲ್ಲಿ ಕಾಣಿಸಿಕೊಳ್ಳುವ ದುರ್ಬಲತೆ,—ಅಶಕ್ತಿ: ಅವರಿಗೆ ಚಿಕ್ಕವಯಸ್ಸಿನಲ್ಲಿಯೇ ಹೃದಯದೌರ್ಬಲ್ಯ ಕಾಣಿಸಿಕೊಂಡಿತ್ತು (ರೂಫ). ೨. ಮನಸ್ಸಿನ ಅಶಕ್ತತೆ: ಕ್ಷುದ್ರವೂ ದರಿದ್ರವೂ ಆದ ಹೃದಯದೌರ್ಬಲ್ಯವೆನ್ನು ತೆಗೆದೂಗದು ಕ್ಲೈಬ್ಯಮನೋಭಾವವನ್ನು ಕಿತ್ತೂಗದು ಸ್ಥಿರಚಿತ್ತನಾಗಿ ಎದ್ದು ನಿಲ್ಲು (ಭಾರದ. ೧೧೨). [ಸಂ.]

ಹೃದಯದ್ರಾವಕ (ಗು). ೧. ಹೃದಯವನ್ನು ಕರಗಿಸುವಂತಹ; ಮನಕರಗಿಸುವ: ನೀರಿನಲ್ಲಿ ನಡೆದ ಹೃದಯದ್ರಾವಕಚಿತ್ರವು ಕಣ್ಣೆದುರಿಗೆ ಕಟ್ಟಿತು (ಮೇದಿಮ. ೧೬೨). (ನಾ). ೨. ಹೃದಯವನ್ನು ಕರಗಿಸುವಂತಹುದು; ಮನಸ್ಸನ್ನು ಕರಗಿಸುವಂತಹುದು: ಇದರಲ್ಲಿಯ 'ಮನುವಿನ ರಾಣಿ' ಎಂಬ ಕಥೆಯು ಹೃದಯದ್ರಾವಕವಾಗಿದೆ (ಕುಂಕುಮ. ೭೦). [ಸಂ.]

ಹೃದಯಪರಿವರ್ತನೆ (ನಾ). ಅಂತಃಕರಣದ ಮಾರ್ಪಾಟು; ಮನಸ್ಸಿನ ಬದಲಾವಣೆ: ಅಗ್ರಜನ ಹೃದಯಪರಿವರ್ತನೆಯನರಿಯದಾ ಸುಗ್ರೀವನಿಕ್ಕಿದರೆ ಬಂಡೆಗಳನಂಗೈಯ ದಾಂಡಿನಿಂ ಪೊಡೆಸಂದನಾಡುತ ಕೆಲಕ್ಕಡೆದು . . . ಶಾರ್ದೂಲಮಂ ಭೇರುಂಡನೆತ್ತುವೋಲ್ ತಮ್ಮನಂ ಪೊತ್ತು, ತಾಯೂರ್ಗೆ ಧಾವಿಸಿದನ್ನೆ (ಶ್ರೀರಾಮಾ. ೩೧೧-೨೬೭). [ಸಂ. ಹೃದಯಪರಿವರ್ತನ]

ಹೃದಯಪ್ರಮೋದ (ನಾ). ಮನಸ್ಸಿಗೆ ಉಂಟಾಗುವ ಸಂತೋಷ: ಹೃದಯಪ್ರಮೋದಮದಿರಾಮದದಿಂ ಮೆಯ್ಮಱೆದು ಮೇಲುದಂ ಮಱೆದಿರ್ದಾಡಿದುದು ಪಱೆ ಮಾಣ್ದೊಡಂ ಮಾಣದೆ ಮೆಚ್ಚದ ತೆಱದಿನಾಪ್ತವೃದ್ಧಕದಂಬಂ (ಪುಷ್ಪಪು. ೪-೩೭).

[ಸಂ.]

ಹೃದಯಪ್ರಿಯ (ಗು). ೧. ಮನಸ್ಸಿಗೆ ಹತ್ತಿರವಾದ,—ಇಷ್ಟವಾದ. (ನಾ). ೨. ಮನಸ್ಸಿಗೆ ಬೇಕಾದವನು: ಹೃದಯಪ್ರಿಯನ ಸಮಾಗಮನ ದೃಢಪ್ರತ್ಯಾಶೆಯಿಂದೆ ಘೋರತಪಃಕ್ಲೇಶದಿನೊಂದಿ ನಿಂದಗೆಡೆಯಲ್ಲದ ನಿನ್ನಂ ನೀನಿದೇಕೆ ನಿಂದಿಸಿದಪ್ಪೇ (ಕಾದಂಉ. ೬೨೨). [ಸಂ.]

ಹೃದಯಬಂಧ (ನಾ). ಎದೆಯ ಕಟ್ಟುಳ್ಳವನು; ವಕ್ಷಸ್ಥಲವುಳ್ಳವನು: ಅಂತು ದೃಢಕಠಿನಹೃದಯಬಂಧನಂ ಜರಾಸಂಧನಂ ಕೊಂದುಮಾತನ ಮಗಂ ಕ್ಷೇಮಧೂರ್ತಿಯಂ ರಾಜ್ಯದೊಳ್ ನಿಱಿಸಿ (ಪುಪಭಾ. ೬-೨೬ ವ). [ಸಂ.]

ಹೃದಯಭವ (ನಾ). ಮನಸ್ಸಿನಲ್ಲಿ ಜನಿಸಿದವನು; ಮನ್ಮಥ; ಕಾಮ: ಹೃದಯಭವ ಪ್ರಯಾಣಪಟಹಧ್ವನಿಯೆಂಬಿನಮೆತ್ತಲುಂ ಪೊದಟ್ಟೊದವಿದ ರತ್ನನೂಪುರಕಲಾವಕಲಧ್ವನಿಗಂಚಿವಿಂಡು ತಂಡದಿನುಲಿವುತ್ತಿರಲ್ . . . ಏಱಿದಳ್ ತರುಣಿ ತನ್ನಯ ರನ್ನದ ಕನ್ನೆಮಾಡಮಂ (ಕಾದಂಉ. ೧೯೮). [ಸಂ.]

ಹೃದಯಭಾರ (ನಾ). ಮನಸ್ಸಿನ ತಳಮಳ; ಮನೋದುಃಖ: ಅಂತೆ ಮೇಣ್ ಇರುಳೊಳುಂ ಘೋರಾಂಧಮದ್ಯಮಂ ಪೀರ್ದು ಮೂರ್ಛೆಗೆ ಸಂದ ಮೌನಮತಿ ನಿಷ್ಠುರಂ, ಕಠಿನಂ, ಭಯಾನಕಂ ಹೃದಯಭಾರಂ, ಮಹಾಕ್ರೂರಂ! (ಶ್ರೀರಾಮಾ. ೮೯-೨೯೫). [ಸಂ.]

ಹೃದಯರೋಗ (ನಾ). ಹೃದಯದ ವ್ಯಾಧಿ: ತಮಗೆ ಹೃದಯರೋಗ ಕಾಣಿಸಿ ಕೊಂಡ ಸಂಗತಿ ಅವಳಿಗೆ ತಿಳಿದಿರಲಾರದು (ವಂಶವೃ. ೪೫೨). [ಸಂ.]

ಹೃದಯವಂತಿಕೆ (ನಾ). ಸಹೃದಯತೆ; ಕಾರುಣ್ಯ: ದುಃಖದಲ್ಲಿದ್ದವರನ್ನು ಸಮಾಧಾನಪಡಿಸುವ ಹೃದಯವಂತಿಕೆ ಇರುವುದು ಒಳಿತಲ್ಲವೆ ? (ಗಾಳಿಗು. ೬೦); ತಾಯ್ಗುರುಳನ್ನೂ ಅಕ್ಕನ ಅಕ್ಕರತೆಯನ್ನೂ ಅವನು ಕುಸುಮಾನ ಹೃದಯವಂತಿಕೆಯಲ್ಲಿ ಕಂಡಿದ್ದ (ಸಮಾಜೀ. ೪೪೭). [ಹೃದಯವಂತ + - ಇಕೆ]

ಹೃದಯವಲ್ಲಭ (ನಾ). = ಹೃದಯಪ್ರಿಯ ೨: ಹೃದಯವಲ್ಲಭ ಕನ್ನಡಿಯ ಮಧ್ಯದಲ್ಲಿ ಉದ್ದಿನ ಬೀಜವನು ಹಾಯ್ದಿದಡೆ ಬೀಳುವುದೆನಿತು ತಳುವಿಂತನಿತು ಮಾತ್ರದಲಿ . . . ಶಿವನಂ ಕೀರ್ತಿಸಾ ಪ್ರತ್ಯಕ್ಷವಾದಹನು (ಬಸಪು. ೪೨-೩೫). [ಸಂ.]

ಹೃದಯವಿದ್ರಾವಕ (ಗು). ೧. ಎದೆಯನ್ನು ಕರಗಿಸುವ; ಮನಸ್ಸನ್ನು ಕಲಕುವ: ನನ್ನ ಚಿಕ್ಕತಮ್ಮ ಒಂದು ಕಥೆ, ಅಲ್ಲ ನಡೆದ ಸಂಗತಿ ಹೇಳಿದ. ದುರಂತ ಹೃದಯವಿದ್ರಾವಕ ಸಂಗತಿ (ಸುಪಸಂ. ೧೫೫). (ನಾ). ೨. ಮನಸ್ಸು ಕರಗುವಂತಹುದು; ಎದೆಯನ್ನು ಕಲಕುವಂತಹುದು: ವಿಧಿ ತನ್ನ ಸಖ್ಯಕ್ಕೆ ಬಹಳ ಸುಲಭವಾದ, ಆದರೂ ಹೃದಯವಿದ್ರಾವಕವಾದ ಉತ್ತರಕೊಟ್ಟುಬಿಡುತ್ತಾಯಿತು (ಯೋಧಪು. ೧೩). [ಸಂ.]

ಹೃದಯವೈಶಾಲ್ಯ (ನಾ). ಉದಾರವಾದ ಮನೋಭಾವನೆ: ಹಿರಿಯಣ್ಣನಂ ಚರಿಸಿನಂ ಬೆಂಬಿಡದಿರ್ದ ಲಕ್ಷ್ಮಣದೇವನಸದನಯ್ ರಾಗಾನುರಾಗದಲಿ, ವೇಗದಲಿ, ರಭಸದಲಿ ಹೃದಯವೈಶಾಲ್ಯದಲಿ (ಶ್ರೀರಾಮಾ. ೨೬-೬೩೭). [ಸಂ.]

ಹೃದಯಶೂನ್ಯ (ನಾ). ಅನುಕಂಪವಿಲ್ಲದವನು; ಮರುಕವಿಲ್ಲದವನು; ಕಠಿನಾತ್ಮ: ಕುದಿಯದ ಕೂಳಿಂದ ಹದುಳದಂಬಲಿ ಲೇಸು ಹೃದಯಶೂನ್ಯರುಗಳೊಲಪಿಂದ ಅರಿದರಲಿ ಕದನವೇ ಲೇಸು (ಸರ್ವಜ್ಞ. ೪೦೧). [ಸಂ.]

ಹೃದಯಶೂಲೆ (ನಾ). ೧. ಮನೋವ್ಯಥೆ; ದುಃಖ; ಖೇದ: ಮಹರ ಉನ್ನೀಸೆಯ ಮೇಲೆ ಸೆಲಿಮನು ತೋರುತಿದ್ದ ಅನುರಾಗದ ಲಕ್ಷಣಗಳನ್ನು ನೋಡಿ, ಉತ್ಕಉನ್ನೀಸೆಗೆ ಎಷ್ಟೊಂದು ಹೃದಯಶೂಲೆಯಾಗಿದ್ದಿತೋ ಬೇಗಂಗೂ ಅಷ್ಟೇ ಹೃದಯಶೂಲೆಯಾಗಿದ್ದಿತು (ಕಪಾಕು. ೬೬). ೨. ಹೃದಯಕ್ಕೆ ಸಂಬಂಧಿಸಿದ ರೋಗ; ಹೃದ್ರೋಗ: ಮೆಣಸು ಗ ೧, ಶುಂಠಿ, ಇದರ ಚೂರ್ಣವಂ ಮಾಡಿ ಗ ೩ ಘನ್ ಬಿಸಿನೀರಲ್ಲಿ ಕೊಳ್ಳಲು ವೀರ್ಯವರ್ಧನ ಕಾಸ, ಶ್ವಾಸ, ಹೃದಯಶೂಲೆ ಇವ್ಮು ಮಾಣುವುವು (ವಿಷವೈ.೯೮).

[ಹೃದಯ + ಶೂಲೆ]

ಹೃದಯಸಂಪನ್ನತೆ (ನಾ). ಮನಸ್ಸಿನ ಹೆಚ್ಚಳತೆ; ಉದಾರತೆ: ಬುದ್ಧಿನಿಷ್ಠತ ಹೃದಯಸಂಪನ್ನತೆ, ಸಾತ್ವಿಕತೆ . . . ಕ್ರಿಯಾಶಕ್ತಿ — ಈ ಐದು ಶಕ್ತಿಗಳನ್ನು ಮಾನವನು ತನ್ನಲ್ಲಿ ಬೆಳಸಿಕೊಳ್ಳಬೇಕಾಗಿದೆ (ಸಮ್ಮಕಾ. ೧೨). [ಸಂ. ಹೃದಯಸಂಪನ್ನತಾ]

ಹೃದಯಸಂವಾದ (ನಾ). ಮನಸ್ಸಿನಲ್ಲಿ ಉಂಟಾಗುವ ಚರ್ಚೆ,---ವಾದ: ಕಥೆಯಲ್ಲಿ ತೋರುವ ರತಿ, ಉತ್ಸಾಹ, ಶೋಕ ಮೊದಲಾದವಕ್ಕೆ ಸಂವಾದಿಯಾದ ವಾಸನೆಗಳು ಯಾವ ವಿಳಂಬವೂ ಇಲ್ಲದೆ ಇವನಲ್ಲಿ ಉಕ್ಕಿ ಅನುಭವವಿಷಯವಾಗುತ್ತದೆ. ಇದಕ್ಕೆ ''ಹೃದಯಸಂವಾದ'' ಎಂದು ಹೆಸರು (ಭಾರಮಾ. ೩೭೬). [ಸಂ.]

ಹೃದಯಸ್ಥ (ಗು). ಹೃದಯದಲ್ಲಿ ಇರುವ; ಮನಸ್ಸಿನಲ್ಲಿ ನೆಲಸಿದ: ಚಿರಶೈಕಿಲಿಂ ಮುರುಂಟಿರೆ ವಿರಹಿಯ ಹೃದಯಸ್ಥ ವಿರಹವಹ್ನಿಗೆ ಕೈಯಂ ಸ್ಮರನೊಡ್ಡಿ ಕಾಸಿ ಬಿಲ್ಲಂ ತಿರುವೊಯ್ದಿಸುತಿರ್ಪನಸಿತಶರರುಹಶರದಿಂ (ರಾಜಶೇ. ೯-೨೧). [ಸಂ.]

ಹೃದಯಸ್ಥಿತ (ಗು). ಹೃದಯದಲ್ಲಿ ನೆಲಸಿದ,—ಸ್ಥಾಪಿತವಾದ: ಹೃದಯಸ್ಥಿತ ನೃಪರುಮನುರುಪಿದಪುದೆನಲ್ ಪತಿವಿಯೋಗ[ಖಿದ್ಯದ್ಯನಿತಾ]ಹೃದಯಂಗಳೊಳಾವಗ ಮುರಿವುದು ಕಡುಪಿನೊಳಾ ನೃಪಪ್ರತಾಪಜ್ವಲನಂ (ಕಾದಂಪು. ೧೪); ಹೃದಯಸ್ಥಿತಮದನಂ ಸಂಮದದಿಂ ಜಳಕೇಳಿಗೆಳಸಿ ತಾನುಂ ಪಿಡಿದೆತ್ತಿದ ಪೊನ್ನ ಕಳಶಮೆನಿಸಿದುದ ದಱೊಳಿರ್ಚಿದ ವಧೂಜನದ ಕಳಶಕುಚಂ (ರಾಜಶೇ. ೧೦-೮೮). [ಸಂ.]

ಹೃದಯಸ್ಪರ್ಶಿ (ಗು). ೧. ಮನಮುಟ್ಟುವ; ಹೃದಯಂಗಮವಾದ. (ನಾ). ೨. ಮನಮುಟ್ಟುವಂತಹುದು; ಹೃದಯಂಗಮವಾದುದು: ಅದು ನಿಜವಾಗಿಯೂ ಹೃದಯಸ್ಪರ್ಶಿಯಾದ ಸಂಗತಿ (ಪುನರು. ೩೪೯); ಅವರು ಅವನ ಮಸ್ತಕವನ್ನು ನೇವರಿಸುತ್ತ ಬೀಳ್ಕೊಡುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು (ಹೂಸಕ್ಷ. ೪೧). [ಸಂ. ಹೃದಯಸ್ಪರ್ಶಿನ್]

ಹೃದಯಹಾರಿ (ಗು). ಮನಸ್ಸನ್ನು ಸೂರೆಗೊಳ್ಳುವ; ಮನೋಹರವಾದ: ಬಹಳ ಮಧುಪಾನಕಂ ಹೃದಯಹಾರಿ ವಿರುತಾಳಿಮಾಳಿಕಾಕಮನೀಯಂ (ವಸ್ತುಕೋ. ೩೨-೧೨). [ಸಂ. ಹೃದಯಹಾರಿನ್]

ಹೃದಯಾಂತರಾಳ (ನಾ). ಒಳಮನಸ್ಸು; ಅಂತರಂಗ: ತನ್ನ ಹೃದಯಾಂತರಾಳದಲ್ಲೆದ್ದ ಭಾವನೆಯನ್ನು . . . ಮುಂದುವರಿಸಿದಳು (ಪುನರು. ೨೧೬). [ಸಂ.]

ಹೃದಯಾಂಧಕಾರ (ನಾ). ಮನಸ್ಸಿಗೆ ಆವರಿಸಿದ ಅಂಧಕಾರ,—ಅಜ್ಞಾನ: ಕುಲದವನ ಹೃದಯಾಂಧಕಾರವ ಕಳಚಲೆಂದು ಹಿಮಾಂಶು ಹರಹಿದನೆಳೆಯ ಬೆಳುದಿಂಗಳನೆನಲು ಸುರರಿಪುಕುಲಾಂತಕನು ತೊಳಪ ದಶನಮಯೂಖತತಿ ಹೊಳೆಹೊಳೆಯೆ ನುಡಿದನು (ಕುವ್ಮಾಉ. ೮-೭೨). [ಸಂ.]

ಹೃದಯಾಗ್ನಿ (ನಾ). (ಪ್ರಣಯದ) ಅಂತರಂಗದ ತಾಪ,—ಬೇಗೆ: ಹೃದಯಾಗ್ನಿ ಪೆರ್ಚಿ ವನತತಿಗೆ ದವಾಗ್ನಿವೊಲಾಯ್ತದೆಂತು ಹರಿಯಿರ್ದಪನೀ ಹೃದಯಾಗ್ನಿಯೊಳಗ್ನಿ ಸ್ತಂಭನ ವಿದ್ಯೆಯನೀಗಳಿಂತು ಕಲ್ತನೊ ಸಖಿಯೇ (ಜಗವಿ. ೧೧-೪೮). [ಸಂ.]

ಹೃದಯಾಧೀಶ (ನಾ). ಪ್ರಾಣಕಾಂತ; ಹೃದಯೇಶ್ವರ: ಹೃದಯಾಧೀಶಂ ಕರುಳ್ಗವ್ವಳಿಸೆ ನುಡಿಸೆ ಮೇಲ್ಯಾಯೆ ಲಲ್ಲೈಸೆ ಮೆಲ್ಸಿಂ ಮೊದಲೊಳ್ ಸರ್ವಾಕ್ಷಿಪಾತಂ ಬಲಿಕದು ನಯನಾರ್ಘಾವಲೋಕಂ . . . ಬಲಿಕ್ಕಾವದುಮಿರ್ಪ್ಪನ್ತುಗ್ಗಳಂ ಕಾಮದಮಿನಿಯಳ ಸನ್ಮಾನದಿಂ ಮಾನಮಲ್ತೇ (ಅರ್ಧನೇ. ೩-೧೦೫). [ಸಂ.]

ಹೃದಯಾಲು, ಹೃದಯಾಳು (ಗು). ೧. ಪ್ರೀತಿಯುಳ್ಳ; ಒಲವುಳ್ಳ. **ಹೃದಯಾಳು**: (ನಾ). ೨. ಪ್ರೀತಿಯುಳ್ಳವನು; ಒಲವುಳ್ಳವನು: ''ಸುಹೃದಯಂ ಹೃದಯಾಳು'' (ವಸ್ತುಕೋ. ೧೦೧-೧೪). [ಸಂ.]

ಹೃದಯಾವೇಶ (ನಾ). ಅಂತರಂಗದ ಪರವಶತೆ; ಭಾವಾವೇಶ: ಅದೇ ತಾವು, ತಾವೇ ಅದು ಎಂಬ ಆತ್ಮೀಯತೆಯಿಂದ, ಅದನ್ನು ಎಸಗುವ ಚಿತ್ತ ನೈರ್ಮಲ್ಯ, ಮನೋದಾರ್ಢ್ಯ, ಹೃದಯಾವೇಶ ಅವರಲ್ಲಿ ತುಂಬಿತ್ತು (ಕಒಸಾ. XV.೬೯೫). [ಸಂ.]

ಹೃದಯಾಳು 'ಹೃದಯಾಲು' ನೋ.

ಹೃದಯಿಸು (ಕ್ರಿ). ಆಸ್ವಾದಿಸು; ಅನುಭವಿಸು: ಕುಳ್ತು ಗಿರಿಶಿರಶ್ಶಿಲೆಯ ಪೀಠದಿ, ಉಷಾನಿಶ್ಯಬ್ದಸುಪ್ತಿಯಿಂ ವಿಶ್ವಮೆಳ್ಚರ್ಪುದಂ ಧ್ಯಾನಿಸುತೆ ಹೃದಯಿಪನು ರವಿಯುದಯದವತಾರಮಂ (ಶ್ರೀರಾಮಾ. ೪೪೬-೨೬). [ಹೃದಯ + -ಇಸು]

ಹೃದಯೇಶ (ನಾ). ೧. ಪ್ರಾಣಕಾಂತ; ನಲ್ಲ. ೨. ವಿಷ್ಣು; ಕೃಷ್ಣ. ೩. [ಛಂದ] ವಿಷ್ಣುಗಣದ ಒಂದು ಪ್ರಕಾರ: ವಿಷ್ಣುಗಣಮಂತೆಂದೊಡೆ:- ೧. ಗೋವಿನ್ದಂ, ೨. ಹೃದಯೇಶಂ [ಪಾಶಾಂ. ಜಲಜಾಕ್ಷಂ, ನಯದಾಳ್ಯಂ] . . . ೬. ಶ್ರೀಪತಿ,೮. ಮುರರಿಪು (ಛಂದೋಂಬು. ೫-೨೪೦ ವ). [ಸಂ.]

ಹೃದಯೇಶ್ವರ (ನಾ). ಪ್ರಾಣಕಾಂತ; ಪ್ರಿಯ; ನಲ್ಲ: ತಾನು ಹೃದಯೇಶ್ವರನ ಪ್ರಾಣವಲ್ಲಭೆಯಾಗಿ, ರಾಣಿಯಾಗಿ ಬಾಳ ಸುಖಿಸುವೆನೆಂದಾಶಿಸಿದಳು (ಧರ್ಮಸಾ. ೭೧).

[ಸಂ.]

ಹೃದ್ಗತ (ಗು). ೧. ಮನವರಿಕೆಯಾದ; ಮನದಟ್ಟಾದ. (ನಾ). ೨. ಮನಸ್ಸಿಗೆ ಬರುವುದು; ಮನವರಿಕೆ; ಮನದಟ್ಟು: ಊರ್ಧ್ವಾಧೋಮಧ್ಯಗತಾಸಮವಸ್ಥಿತಿ ಸ್ಮರಣವರಿಣತಸಂಸ್ಥಾನವಿಚಯಮುಮಂ ಬೇಱೆವೇಱೆ ಹೃದ್ಗತಂ ವಾಡಿ ಧರ್ಮಧ್ಯಾನಮಯನಾದಂ (ಶಾಂತಿಪು. ೯-೧೧೮ ವ); ಮನಸಿಜವಿಜಯರ್ ತಾಪಸರನು ನಯದಿಂ ಪೇಳ್ದರೊಲ್ಲು ಹೃದ್ಗತದಿರವಂ (ಹಾಶಾಸ್ಮ. ೧-೧-೨೫); ಶಕುಂತಲೆ ಎಲೆಯ ಮೇಲೆ ಯಾವುದೋ ರಸದಿಂದ ಬರೆದು ದುಷ್ಮಂತನೆದುರು ತನ್ನ ಹೃದ್ಗತವನ್ನು ಬಿಚ್ಚಿಟ್ಟಳು (ಕರ್ನಾಕ. ೨). [ಸಂ.]

ಹೃದ್ಗತಿ (ನಾ). ಮನಸ್ಥಿತಿ; ಮನಸ್ಸಿನ ಇರವು: ಏಕೆಯೊ ಪಲವುಂ ನುಡಿಗಳ ನಾಕುಲಮೆನೆ ನುಡಿವೆನೀತನಱಿವಿನ ಬೆಲೆಯಂ ಈ ಕೈಯ ನೆಲ್ಲಿಯಾದುದು ಲೋಕಜನೋದಂತಮೆಲ್ಲಮುಂ ಹೃದ್ಗತಿಯುಂ (ವಸ್ತವಂ. ೬-೪೫). [ಸಂ.]

ಹೃದ್ಗದ (ನಾ). ಹೃದಯಕ್ಕೆ ಸಂಬಂಧಿಸಿದ ಕಾಯಿಲೆ; ಎದೆಬೇನೆ: ಒದವಂ ಭವ್ಯಮುಖಾಂಬುಜಕ್ಕೆ ಮುದಮಂ ಸದ್ಧರ್ಮಚಕ್ರಕ್ಕೆ . . . ಹೃದ್ಗದಮಂ ದುರ್ಮತಕೌಶಿಕಕ್ಕೆ ಪಡೆಯುತ್ತಿಕ್ಕ್ವಾಕುವಂಶೇಂದ್ರಶ್ಮಲದಿನತ್ಯೂರ್ಜಿತತೇಜನುದ್ಧರಿಸಿದಂ ತ್ರೈಲೋಕ್ಯನಾಥಂ ಜಿನಂ (ಪುಷ್ಪಪು. ೧೦-೨). [ಸಂ.]

ಹೃದ್ಗಮ್ಯ (ನಾ). ಹೃದಯಸ್ಪರ್ಶಿಯಾದುದು; ಮನಮುಟ್ಟುವಂತಹುದು: ಗಿರಿವನ ಪ್ರೀತಿ ತಾಂ ದೈವಕೃಪೆ ದಲ್ . . . ಉಪನಿಷತ್ತಿನ ಮಹಾಮಂತ್ರಾನುಭವಗಳುಂ ಹೃದ್ಗಮ್ಯವಿಲ್ಲಿ (ಶ್ರೀರಾಮಾ. ೩೨-೧೧೯); [ಸಂ.]

ಹೃದ್ಗೋಚರ (ನಾ). ಮನಸ್ಸಿಗೆ ತಿಳಿಯುವಂತಹುದು; ಹೃದಯಕ್ಕೆ ಗೋಚರಿಸುವಂತಹುದು: ಯತಿಪತಿ ಮುಖಾರವಿಂದೋದ್ಗತ ಋತವಚನಂ ಸ್ವಕೀಯ ಹೃದ್ಗೋಚರಮಾಗೆ ತನೂದರಿಗಾ ವೇಗದೊಳತಿ ಹರ್ಷವಿಷಾದಮಾದಮೇನೊದವಿದುವೋ (ಸುಕುಮಾ. ೯-೧೧೨). [ಸಂ.]

ಹೃದ್ಬಲ್ಲ (ನಾ). ಹೃದಯಕ್ಕೆ ಈಟಿಯಂತೆ ತೊಂದರೆಯನ್ನುಂಟು ಮಾಡತಕ್ಕುದು: ಬಗೆಗೊಳ್ವ ತೋಳ್ವಳ್ಳಿ ಕೋವಿದರ ಕಾಲ್ವಳ್ಳಿ ನುಣ್ಗಲ್ಲ ಮುನಿಜನದ ಹೃದ್ಬಲ್ಲವು . . . ಎನೆ ವಿಲಾಸಿನಿಯರುಗಳೊಳ್ವರೆಯದೆಸಕದಿಂ ಬಂದರ್ (ಉಷಾಪ. ೫-೨೪). [ಸಂ.]

ಹೃದ್ಭವ (ನಾ). ಮನಸ್ಸಿನಲ್ಲಿ ಹುಟ್ಟಿದವನು; ಮನ್ಮಥ ; ಕಾಮ: ಈಕೆ ಶೃಂಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವಿಯಾದಳೆಂದು ಕಣ್ಗಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಗಱೆದಾರೆ ಮನ್ಮಥಂ (ಪಂರಾಮಾ. ೯-೮೨). [ಸಂ.]

ಹೃದ್ಯ (ಗು). ೧. ಮನೋಹರವಾದ; ಸುಂದರವಾದ: ಹೃದ್ಯವ್ಯಾಕರಣಪ್ರಸನ್ನತರ ಪೂರ್ವಾಭ್ಯಾಸವಿನ್ಯಾಸ ತದ್ವಿದ್ಯಸಂಪದಮಾಗಳಾಕ್ಷಣದೊಳಾದಾಶ್ಚರ್ಯಮಪ್ಪನ್ನಮೇಂ ಸದ್ಯಂ ಸಾರ್ದುದೊ ತತ್ಕುಮಾರಿಕೆಗೆ ಸಯ್ದಿಂ (ಸುಕುಮಾ. ೭-೫೨); ಬಿದ್ದು ಪದದಲಿ ದಂಡದಂತಿರಲೆದ್ದು ನಿಂದಿರ್ದಚ್ಚುತನ ಮುನಿ ಹೃದ್ಯಮೂರ್ತಿಯ ನೋಡಿ ಪುಳಕಾಮ್ಯತದಲೋಲಾಡಿ (ನಿಭಾಗ. ೧೦-೧೪-೮). ೨. ಒಳ್ಳಿತಾದ; ಪ್ರಿಯವಾದ: ಹೃದ್ಯಗುಣನಿಳಯನಾ ವಿಭುಸದೃಶನಿರೆ ಕನ್ನೆ ನಿನ್ನ ಪತಿಗೆಳಸುವಳೇ ಪ್ರದ್ಯೋತದ್ಯುತಿ ಗಲ್ಲದೆ ಖದ್ಯೋತದ್ಯುತಿಗೆ ನಳಿನಿ ಮೊಗಮಿತ್ತಪಳೇ (ಪುಷ್ಪಪು. ೭-೭೪). ೩. ಮನಸ್ಸಿನಲ್ಲಿ ಹುಟ್ಟುವ. ೪. ಮನಮುಟ್ಟುವ; ಚೆನ್ನಾಗಿ ತಿಳಿಯುವ. (ನಾ). ೫. ಮನೋಹರ ವಾದುದು; ಸುಂದರವಾದುದು: ಪದ್ಯಂ ಸಮಸ್ತಜನತಾಹೃದ್ಯಂ (ಕವಿಗಾ. ೧-೩೦); ಅವಿಚಲಮಪ್ಪ ಲಕ್ಷ್ಮಿ ವಿವಿಧೋತ್ಕರ ಹೃದ್ಯಮೆನಿಪ್ಪ ವಿದ್ಯೆ ನೋಟ್ಬವರನುರಾಗಮಂ ಪಡೆವ ರೂಪು . . . ಆ ನೃಪನಲ್ಲಿ ತೋಱಲಾಱವು (ಮಲ್ಲಿಪು. ೩-೨೦); ಪದ್ಯಂ ವಧ್ಯಂ; ಗದ್ಯಂ ಹೃದ್ಯಂ ಹೃದ್ಯಮಪ್ಪ ಗದ್ಯದೊಳ್ ಪೇಳ್ದುದು (ರಾಮಾಶ್ವ. ೫-೧೪). ೬. ಒಳ್ಳಿತಾದುದು; ಪ್ರಿಯವಾದುದು: "ಪ್ರಾಗ್ಭಂ, ಪ್ರಾಗ್ಹರಂ . . . ಮಂಜುಳಂ, ಹೃದ್ಯಂ, ಹಾರಿ . . . ಶುಭಂ, ಪೇಶಲಂ - ೨೯ ಒಳ್ಳಿತು" (ಹಲಾಯು. ೧೧೪-೪). [ಸಂ.]

ಹೃದ್ಯತೆ (ನಾ). ಮನಸ್ಸಿಗೆ ತಟ್ಟುವಂತಹುದು; ಅಂತಃಕರಣವನ್ನು ಮುಟ್ಟುವಂತಹುದು: ಕಾವ್ಯಕ್ಕೆ ಹೃದ್ಯತೆಯೆ ಒರೆಗಲ್ಲೆಂದೂ ಅದರ ಹಿರಿಮೆಯ ಅರಿವು ಅತಿ ಸುಲಭವೆಂದೂ ಹೇಳಲಾಗಿದೆ (ಕಸಾಚ. ೬೦). [ಸಂ. ಹೃದ್ಯತಾ]

ಹೃದ್ಯವಿದ್ಯ (ನಾ). ೧. ಹೃದಯಂಗಮವಾದ ವಿದ್ಯೆಗಳೆನ್ನು ಬಲ್ಲವನು,—ತಿಳಿದವನು: ಸಿರಿಯೊಲ್ಪಳೆ ಹೃದ್ಯವಿದ್ಯರಂ (ಶಮದ. ೮೮ ಪ್ರಯೋ). ೨. ಸ್ವಾಧೀನವಾದ ವಿದ್ಯೆ: ಕಡಲೇಱಂ ಮಗುಚಟ್ಟೊಡಂ ಕಲಿಯೆ ನಾನಾ ಹೃದ್ಯವಿದ್ಯಂಗಳಂ ಪಡೆದಪ್ಪಲ್ಲದೆ ಬರ್ಪುದೇ (ಸೋಮೇಶ್ವ. ೨೮). [ಸಂ.]

ಹೃದ್ಯವಿದ್ಯೆ (ನಾ). = ಹೃದ್ಯವಿದ್ಯ ೨: ಗುಣರತ್ನವಾರ್ಧಿ ನಾನಾವಿಧಸೌಖ್ಯ ಭಾಜನನುಪಾರ್ಜಿತಖೇಚರರಾಜಹೃದ್ಯವಿದ್ಯಾವಿಭವಂ ಮಗಂ ಜಿತವಿರೋಧಿನರೇಂದ್ರ ಬಳಂ ಮಹಾಬಳಂ (ಆದಿಪು. ೧-೭೩). [ಸಂ. ಹೃದ್ಯವಿದ್ಯಾ]

ಹೃದ್ಯಾಂಗಿ (ನಾ). ಮನೋಹರವಾದ ಅಂಗವುಳ್ಳವಳು; ಸುಂದರಾಂಗಿ; ಚೆಲುವೆ: ನೇತ್ರಾಂಬುಜಂ ಪಾಟಳಕಾಂತಿಶ್ರೀಯಿನೊಪ್ಪುತ್ತಿರೆ ತನುಲತೆ ಸೌರಭ್ಯಮಂ ಬೀಱೆ . . . ಲೀಲೆಯಿಂದುಪ್ಪವಡಿಸಿದಳ್ ಹೃದ್ಯಾಂಗಿ [ಪಾಶಾ. ನಿದ್ರಾಂಗಿ, ನೀರ್ದ್ಯಾಂಗಿ] ಶಯ್ಯಾಗ್ರದಿಂದ (ಜಗಿ. ೨-೭೮). [ಸಂ. ಹೃದ್ಯಾಂಗಿನ್]

ಹೃದ್ಯೋಗ (ನಾ). ಮನಸ್ಸಿನ ಆಸೆ; ಇಷ್ಟಾರ್ಥ; ಬಯಕೆ: ಆತಂ ಬಾಲಿದೇವಂ ಮತ್ತೋರ್ವಂಗೆಱೆಗೆಂಬ ಪ್ರತಿಜ್ಞೆಯಂ ಪಲಂಬರಿಂ ಕೇಳ್ದು ಮನದೊಳು ಹೃದ್ಯೋಗಮಂ ತಾಳ್ದು (ಪುಣ್ಯಾಸ್ರ. ೫-೫೩ ವ); ಈಗಳುದಾತ್ತನಪ್ಪ ಪುರುಷೋತ್ತಮಸೂನುಗೆ ಭಾನುಗೀವ ಹೃದ್ಯೋಗದಿನರ್ದರ್ಪಿನೆಗಮಾ ಖಳಚೌರ್ಯನುಮಿಂತು ತಂದನಿನ್ನೇಗುವೆನಿಲ್ಲಿ ಸಾವೆನೆನುತುಂ ತನುಮಧ್ಯೆ ವಿಮಾನದಿಂ ನೆಲಕ್ಕಾಗಳೆ ಜೋಲೆ (ನೇಮಿಪು. ೭-೧೭೦). [ಸಂ.]

ಹೃದ್ಯೋಗಂಬಡು (ಕ್ರಿ). ಇಷ್ಟಪಡು; ಬಯಸು: ಸುರೇಂದ್ರದತ್ತನೆಂಬೊಂ ಕಂಡು ನಿಜನಿವಾಸಕ್ಕೈಯ್ದು ಸ್ನಾನಾನ್ನ ಪಾನಾದಿಗಳಿಂ ತಣಿಪಿ ತತ್ಪ್ರವಂಪಚಮೆಲ್ಲಮಂ ಬೆಸಂಗೊಂಡು ಹೃದ್ಯೋದಂಬಟ್ಟು ಸಿದ್ಧಾರ್ಥಂಗಿಂತೆಂದಂ (ಬಂಹರಿ. ೪-೧೨ ವ).

[ಹೃದ್ಯೋಗ + ಪಡ್ಬು]

ಹೃದ್ರೋಗ (ನಾ). ೧. ಹೃದಯಕ್ಕೆ ಸಂಬಂಧಿಸಿದ ರೋಗ; ಹೃದಯದ ವ್ಯಾಧಿ: ದಶಮೂಲ . . . ಶಿವಪ್ಯುತ, ತೈಲಾನ್ನ ಸಹ ಎರಡು ಉಕ್ಕುಬರುವ ತನಕ ಕಾಸಿ ಸೇರು ಸಕ್ಕರೆ ಹಾಕಿ ಪ್ರಾತಃಕಾಲ ಆಮಲಕಪ್ರಮಾಣ ಸಿಂದೂರವನ್ನು ಹಾಕಿಕೊಳ್ಳಲು ಅರತಿ, ಹೃದ್ರೋಗಂ ಗುಣ (ವೈದ್ಯವಿ. ೫೮); ಅಜೀರ್ಣಜ್ವರ, ಖಾಸರೋಗ . . . ಕರ್ಣರೋಗ, ಹೃದ್ರೋಗ, ವಾತರೋಗ, ಇವೇ ಮುಂತಾದ ರೋಗಗಳಿಂದ ಕೂಡಿದವರು ದಂತಧಾವನಕ್ಕೆ ಅನರ್ಹರೆಂದರಿವುದು (ಸಕಪೈ. ೨೯). ೨. ಮನೋವ್ಯಥೆ; ದುಃಖ; ಖೇದ: ಭೋಗಂಗಳ್ ಸಲೆ ಮನದೊಳ್ ರಾಗಮನೊದವಿಸುಗುಮಪ್ಪೊಡನುಭವಿಕೆ ಮನೋರಸಜ್ಞನನುಭವಿಸುಗುಮೇ ರಾಗಮನೊದವಿಸದವು ಹೃದ್ರೋಗಮನೊದವಿಸೆ (ಆದಿಪು. ೩-೭೦); ತತುಪುತ್ರಂ ನೆಗೞ್ದಂ ನಿಜಾರಿಭಳವೊನಲ್ಲು ಬನ್ನಮಂ ಕಂನಮಂ ತತುಪುತ್ರಂ ನೆಗೞ್ದಂ ನಿಜಾರಿ ತಳೆ[ಯ]ಲು ಹೃದ್ರೋಗಮಂ ಜೋಗಮಂ (ಕಾಆ. ೭೪-೧೨-೮; 1170); ಈ ಎಲ್ಲ ಪ್ರಕಾರಗಳಿಂದ ಕಿಟ್ಟಿಗೆ ಹೊಸ ಹೃದ್ರೋಗವು ಪ್ರಾರಂಭವಾಯಿತು (ಗಂಮಾಯಿ. ೧೨೨). [ಸಂ.]

ಹೃದ್ರೋಗಗಜಕೇಸರಿ (ನಾ). ಹೃದಯದ ಬೇನೆಗೆ ಉಪಯೋಗಿಸುವಂಥ ಒಂದು ಬಗೆಯ ಔಷಧಿ: ಹೃದ್ರೋಗಗಜಕೇಸರಿ:- ದಶಮೂಲ, ಪಂಚಲವಣ . . . ಸಹ ಎರಡು ಉಕ್ಕುಬರುವ ತನಕ ಕಾಸಿ ಸೇರು ಸಕ್ಕರೆ ಹಾಕಿ ಪ್ರಾತಃಕಾಲ ಆಮಲಕಪ್ರಮಾಣ ಸಿಂದೂರವನ್ನು ಹಾಕಿಕೊಳ್ಳಲು ಅರತಿ, ಹೃದ್ರೋಗಂ ಗುಣ (ವೈದ್ಯವಿ. ೫೮).

[ಹೃದ್ರೋಗ + ಗಜಕೇಸರಿ]

ಹೃದ್ರೋಗಿ (ನಾ). ಹೃದಯರೋಗವುಳ್ಳವನು; ಹೃದಯದ ಬೇನೆಯುಳ್ಳವನು: ಅರಿಪುತ್ರ ಕಳತ್ರ ಧನಾಗ್ನಿರಾಜಬಾಧೋಪಹತನುದಾರಗುಣಂ ಪಾಪರತಂ ಸ್ವಭೃತ್ಯಕಲಹಂಸರುಜಂ ಹೃದ್ರೋಗಿ ದಿನಪನವರೋಹಿಣಿಯೊಳ್ (ಜಾತಕ. ೯ ೧೮).

[ಸಂ. ಹೃದ್ರೋಗಿನ್]

ಹೃದ್ವಲ್ಲಭ (ನಾ). ಹೃದಯವಲ್ಲಭ; ಪ್ರಾಣಕಾಂತ; ನಲ್ಲ: ನಲ್ಲರಗಲ್ಕೆಯಿಲ್ಲದೆಡೆಯಸ್ತಪಯಕ್ಕೆ ದಿನಾಧಿನಾಯಕಂ ಸಲ್ಲದ ಶಾಣಮಂಗಜಶರಾಹತಿ ಪೊರ್ದದ ದೇಶಮುಳ್ಳೊಡಂತಲ್ಲಿಯೆ ಮಾಳ್ಕೆ ಮಜ್ಜನನಮಂ ಬಿದಿಯೆಂದು ರಥಾಂಗಕಾಂತೆ ಹೃದ್ವಲ್ಲಭವಿಪ್ರಯುಕ್ತೆ ಬಗೆಗೆಟ್ಟು ನೆಱಲ್ದುದು ಪದ್ಮಪತ್ರದೊಳ್ (ಚಂದ್ರಪು. ೯-೭).

[ಸಂ.]

ಹೃಲ್ಲಾಸ (ನಾ). ಚಿಂತೆ; ಖೇದ: ಕೊಲೆಯಿಂದೊಂದಂ . . . ಅನಾಕುಲ ಮೆಂದಯ್ದನನಾಕುಳಂ ತೊಱೆದೊಡೇಂ ಹೃಲ್ಲಾಸಮೇ ಮಲಮೇ ತಲ್ಲಣಮೇ ಕೃತಾಂತಭಯಮೇ ಸಂತಾಪಮೇ ಬೇವಸಂ (ಶಾಂತಿಪು. ೭-೫). [ಸಂ.]

ಹೃಲ್ಲೇಖ (ನಾ). ೧. ಜ್ಞಾನ. ೨. ಚಿಂತೆ. ೩. ಮನೋವ್ಯಥೆ; ದುಃಖ. ೪. ವಿರಹ; ವಿಯೋಗ: "ಆಯಲ್ಲಕಂ, ಉತ್ಕಂಠಾ . . . ಹೃಲ್ಲೇಖ, ವಿರಹಃ, ವಿಯೋಗಃ - ಈ ೯ ವಿರಹಂ" (ಹಲಾಯು. ೧೨೨-೫೭). [ಸಂ.]

ಹೃಷೀಕ (ನಾ). ೧. ಜ್ಞಾನೇಂದ್ರಿಯ: "ಖಂ, ಅಕ್ಷಂ, ಇಂದ್ರಿಯಂ, ಸ್ರೋತಃ, ಹೃಷೀಕಂ, ಕರಣಂ — ಈ ೬ ಇಂದ್ರಿಯಂಗಳ್" (ಹಲಾಯು. ೮೮-೩೮೧); ಕಲ್ಪೋದ್ಭೂತ ದೇವರ್ ದಿವ್ಯಾಂಗನಾಶೃಂಗಾರಾಕಾರವಿಲಾಸಚತುರಮನೋಜ್ಞವೇಷ ರೂಪಾವಲೋಕನ ಮಾತ್ರದಿಂದಮೆ ಹೃಷೀಕಜನಿತವರಮಸುಖಮನೆಯ್ದುವರ್ (ತತ್ತ್ವಪ್ರ. ೧೮೨). ೨. ಏಳು ಬಗೆಯ ನರಕಗಳಲ್ಲಿ ಒಂದು: ಕ್ರಮದೊಳಸಂಜ್ಞೆಯಂ ಸರಿಸೃಪಾವಳಿಯುಂ . . . ಮನುಷ್ಯಮಸ್ತಿಮಿಕುಳಮುಂ ಹಿಮಾಂಶುನಯನಾಗ್ನಿಕಷಾಯಹೃಷೀಕ ಷಣ್ಮುನಿಕ್ರಮ ನರಕಂಗಳೊಳ್ ನೆಲಸುಗುಂ ದಿವಿಜೋತ್ತಮ ನಂಬು ನೀನಿದಂ (ಆದಿಪು. ೫-೯೪). [ಸಂ.]

ಹೃಷೀಕೇಶ (ನಾ). ೧. ಜ್ಞಾನೇಂದ್ರಿಯಗಳ ಒಡೆಯ; ಪರಮಾತ್ಮ. ೨. ವಿಷ್ಣು; ಕೃಷ್ಣ: "ವಿಷ್ಣುಃ, ಕೃಷ್ಣಃ, ಕೇಶವಃ . . . ಹರಿಃ, ಹೃಷೀಕೇಶಃ . . . ವನಮಾಲೀ, ಗದಾಧರಃ - ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೪); ಶ್ರೀ ಸರಸ್ವತೀ ಶ್ರೀ ನರನಾರಾಯಣ . . . ಶ್ರೀ ಹೃಷೀಕೇಶ (ಶಕ. VI (R), ಪಾಂಡವಪುರ.೩೭-೨೬; ಸು. 14ನೆಯ ಶತ). ೩. ಉತ್ತರ ಭಾರತದಲ್ಲಿರುವ ಒಂದು ಪುಣ್ಯಕ್ಷೇತ್ರ,—ಯಾತ್ರಾಸ್ಥಳ. [ಸಂ.]

ಹೃಷ್ಟ (ಗು). ೧. ಸಂತೋಷಗೊಂಡ; ಆನಂದಿಸಿದ: ಅಂತು ನೋಡಿ ವಿಸ್ಮಯಾಕ್ರಾಂತಚಿತ್ತನತ್ಯಂತಹೃಷ್ಟೋತ್ಕೃಷ್ಟಸಂತುಷ್ಟಾಂತರಂಗನವರ ನವಯೌವನಕ್ಕೆ ನೆಱಮಾದ ರೂಪಾತಿಶಯಕ್ಕಂ . . . ಬೆಕ್ಕಸಂಬಟ್ಟು (ಶಾಂತಿಪು. ೩-೫೩ ವ); ಅದಱಿಂದಿಲ್ಲಿ

ವಸಿಷ್ಠನಂದನರಿರಾ ನೀವೆಲ್ಲರುಂ ವಾಸಮಂ ಮುದದಿಂ ಮಾಡೆ ವಿಶುದ್ಧರಪ್ಪಿರೆನೆ ತಾಮಾ ರೋಮಶವ್ಯೋಕ್ತಿಯಂ ಪಡೆದಂತಾಲಿಸಿ ಹೃಷ್ಟಚಿತ್ರರವರಾ ಸುಕ್ಷೇತ್ರದಲ್ಲಿರ್ದು (ಯಾದಚಂ. ೧೫-೨೯). ೨. ರೋಮಾಂಚಿತಗೊಂಡ; ಪುಳಕಗೊಂಡ. (ನಾ). ೩. ಆಹ್ಲಾದ; ಸಂತೋಷ: "ಪ್ರತಂ ಹೃಷ್ಟಂ ಸಮುದಿತ(ಮುತಂ)" (ಮಪ್ರಕೋ. ೧೦೬-೪೯). ೪. ಸಂತೋಷಗೊಂಡವನು: ನಾನು ಗೌರಿದೇವಿಯೊಡನೆ ವೃಷಭ ರೂಢನಾಗಿ ಅಲ್ಲಿಗೆ ವಂದು ನಿಶ್ಚಲನಾದ ಮುನಿಯಂ ಕಂಡು ಹೃಷ್ಟನಾದೆನು (ಕಉಮಾ. ೨೪೮-೭). ೫. [ನಾಟ್ಯ] ಎಂಟು ಬಗೆಯ ಸ್ಥಾಯಿಭಾವನೋಟ ಗಳಲ್ಲಿ ಒಂದು ವಿಧ: ಬಿನ್ನದ ಗಲ್ಲಂಗಳ್ ಮಿಗೆ ನುಣ್ಪೊದವಿದ ದಿಟ್ಟಿಯಾಳ್ಕು ನಸು ಮುಚ್ಚೆವೆಯಂ ತನ್ಪಡರ್ದು ನಗೆಯನಾಂತುಂ ಕಣ್ಪೊಂದಿರೆ ಕಾಂತೆ ಕೇಳ್ ಹೃಷ್ಟಮೆನಿಕ್ಕು (ಲಾಸ್ಯರಂ. ೩-೧೯). [ಸಂ.]

ಹೃಷ್ಟತೆ (ನಾ). ಸಂತೋಷ; ಆನಂದ: ಹೃಷ್ಟತೆಯಿಂದ ಕ್ರೂರಂ ಸಾಷ್ಟಾಂಗಪ್ರಣತನಾಗೆ ಕಾರುಣ್ಯಸುಧಾವೃಷ್ಟಿ ಪಸರಿಸಿದಂತೆನೆ ನಿಜದೃಷ್ಟಿಪ್ರಭೆ ನಿಮಿರೆ ನೋಡಿದಂ ಕಮಳಾಕ್ಷಂ (ಜಗವಿ. ೫-೮೦); ಹೃಷ್ಟತೆಯಿನಾ ಕುಮಾರನರಿಷ್ಟಪುರಾಂತರದೊಳಿರ್ದು (ನೇಮಿಪು. ೫-೬೯).

[ಸಂ ಹೃಷ್ಟತಾ]

ಹೆಂ 'ಪೆಣ್' ನೋ.

ಹೆಂಗತ್ತೆ 'ಪೆಣ್ಗತ್ತೆ' ನೋ.

ಹೆಂಗರಿಗ (ನಾ). ಒಂದು ಬಗೆಯ ಮಿಾನು: ಕಾಗೆಂಡೆ ಹೆಗ್ಗುರ್ಬು ಹೆಂಗರಿಗಂ . . . ಮುಡಿಲುಂ ಪಂದಿಗನೆಂಬ ಮಿನ್ನೆಗೆದನಾ ಭಕ್ಷಂ ಮಹಾಲೀಲೆಯಿಂ (ಕ್ರಿಪು. ೫೭-೮). [?]

ಹೆಂಗರುಳು 'ಹೆಣ್ಗರುಳು' ನೋ.

ಹೆಂಗಸು 'ಪೆಣ್ಣೂಸು' ನೋ.

ಹೆಂಗಳ್ಳ 'ಪೆಣ್ಗಳ್ಳ' ನೋ.

ಹೆಂಗಳ್ಳವಿದ್ಯೆ (ನಾ). ಹಣ್ಣನ್ನು ಕದ್ದೊಯ್ಯುವ ವಿದ್ಯೆ; ನಾರೀಚೋರವಿದ್ಯೆ: ಕೌರವೇಂದ್ರನ ಮತವೂ ನಿನ್ನ ವಿಕಾರವೋ ಹೆಂಗಳ್ಳವಿದ್ಯೆಯನಾರು ಕಲಿಸಿದರೆನುತ ತಂದರು ಧರ್ಮಜನ ಹೊರಗೆ (ಕುವಾಭಾ. ೨೨-೬೬). [ಹೆಂಗಳ್ಳ (< ಪೆಣ್ಗಳ್ಳ) + ವಿದ್ಯೆ]

ಹೆಂಗುದುರೆ 'ಪೆಣ್ಗುದುರೆ' ನೋ.

ಹೆಂಗುರಿ 'ಹೆಂಗುಱಿ' ನೋ.

ಹೆಂಗುರು 'ಪೆಂಗುರು' ನೋ.

ಹೆಂಗುಸು 'ಪೆಣ್ಣೂಸು' ನೋ.

ಹೆಂಗುಸುತನ (ನಾ). ಹೆಣ್ಣುತನ; ಹೆಣ್ಣಿನ ಸ್ವಭಾವ: ನರನ ಬಲುಗ್ಗೆತನವನೀ ಮೋಹರದ ಹೆಂಗುಸುತನವ ನೀವವಧರಿಸಿದಿರೆ ಜಗಭ್ರಂಡಂವರಿಗೆ ಮತ್ತೆ ಬರುದುಗಳೆ (ಕವ್ಯಾದ್ರೋ. ೧೦-೪೩). [ಹೆಂಗುಸು (< ಪೆಣ್ಣೂಸು) + - ತನ]

ಹೆಂಗುಸುವ್ರಿತ್ತಿ (ನಾ). ಹೆಂಗಸು ಕೊಟ್ಟ ದಾನ (?): ಕಂದರ್ಪೇಶ್ವರ ದೇವರತ್ರಂಣ್ಣಾಯ ಕೊಳೆಯಂಗೆ ತಂಣ್ಣೇಸ್ವರ ಮತ್ತರು ಅಱು ಸರ್ವ್ವಬಾಧಪರಿಹಾರ ಹೆಂಗುಸುವ್ರಿತ್ತಿ (ಕಾ. II, ೧೬೫; ೫೬; 1122). [ಹೆಂಗುಸು (< ಪೆಣ್ಣೂಸು) + ವ್ರಿತ್ತಿ]

ಹೆಂಗುಱಿ, ಹೆಂಗುರಿ (ನಾ). ಹೆಣ್ಣುಕುರಿ; ಮೇಷ: ಕಾಡುಗುಱಿ ತನೆಯಾಗಿ ಬಂದು ಊರೊಳಗೆ ಮೂಱು ಮಱಿಯನೀಯಿತ್ತು ಅದಱ ವರ್ಷ ಒಂದೆಡೆ ಒಂದು ಕಾಡ ಒಂದು ಎಲ್ಲರ ಕೂಡಿದ ಬಣ್ಣ ಹೆಂಗುಱಿ ಸತ್ತಿತ್ತು ಮಱಿಗೆ ಒಡೆಯರಿಲ್ಲ (ಸಕವ. I, ಕ. ೨೬೮-೧೦೦೬). **ಹೆಂಗುರಿ:** ಇದರ ಗಂಡಿಗೆ (Ram) (ಟಗರು) ಎಂದೂ, ಹೆಣ್ಣಿಗೆ (ಹೆಂಗುರಿ) ಎಂದೂ . . . ಹೆಸರು (Sheep. ಇಂಕನ). [ಹೆಂ (< ಪೆಣ್) + ಕುಱ್ಱಿ]

ಹೆಂಗೂಸು 'ಪೆಣ್ಣೂಸು' ನೋ.

ಹೆಂಗೆ 'ಎಹಗೆ' ನೋ.

ಹೆಂಗೊಲೆ 'ಪೆಣ್ಗೊಲೆ' ನೋ.

ಹೆಂಚು, ಹಂಚು$_2$ (ನಾ). ೧. ಮೇಲ್ಛಾವಣಿಗೆ ಹಾಕಲು ಬಳಸುವ ಮಣ್ಣಿನ ಚದುರಬಿಲ್ಲೆ: ಅಂಬರವಸರ ಸುದತಿ ಸುಲೋಕವೆಂದೆಂಬ ಹೆಂಚಿನೊಳಂಜನವನು ಅಂಬಿನೊಳಿಡಲೆಂದಿಟ್ಟ ಹಜ್ಜೊಡರೆಂದೆಂಬಂತೆ ಮೇರುವೊಪ್ಪಿದುದು (ನೇಮಿಸಂ. ೧-೫೦); ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡಮನೆ . . . ಏಕಾಂತವಾಗಿತ್ತು (ಕಾನೂರು ೩೫); ಒಡೆದ ಹೆಂಚುಗಳ ಬದಲು ಹೊಸ ಹೆಂಚುಗಳನ್ನಿರಿಸಿದ (ರಂಗವ. ೧೨೦). ೨. ಮಡಕೆಯ ಚೂರು; ಬೋಕಿ: ಹಣ ಹೊನ್ನು ಪರಹೆಣ್ಣು ಹೆಂಚೆಂದು ನೋಡು (ಪುರಂದ. ೨-೫ ಅನುಪಲ್ಲವಿ). **ಹಂಚು**$_2$: ೧. ಮನೆಗಳ ಮಾಳಿಗೆಗಳು ಹಂಚಿನವು (ಕಭಾಗೆ. ೫); ಮಣ್ಣುಗೋಡೆಗಳ ಮಣ್ಣುಮನೆಗಳಿಗೆ ಬೇಕು ಮಣ್ಣು ಹಂಚು (ಅರಳು. ೬೮೩). ೨. ಪಂಚಮಹಾಪಾತಕವ ಮಾಡಿ(ದನಾ)ದೊಡೆ ಒಮ್ಮೆ ಹಂಚಿನಲ್ಲಿ ತಿರಿದುಂಡಡೆ . . . ಸದುಗುರು ಸೊಡ್ಡಳಿ ತಿರಿದುಂಡ ಪರಿ (ಸರ್ವಜ್ಞ. ೧೬೪-೭೭೯); ತೂಬ್‌ದ ಬೂದಿಯ ಹಿಟ್ಟುಗುಟ್ಟಿ ಬೊಟ್ಟಿಡುವುದು ಮಿಕ್ಕುದಂ ಕದಡಿ ಕುಂಟಣಿಗೀವುದು ತೀವಿ ಹಂಚಿನೊಳ್ (ಅನಂಪು. ೮-೫೭); ಲೋಹಂಗಳಾಗಲುವಳಿವವ್ವೆ ಪರುಸಕ್ಕೆ ಸೋಂಕಲು . . . ಅಳಿವುದೇ ಹಂಚಾಗ ಪರುಸವು ಬಳಸಿದರೆ ತಾನಬ್ಬಲಕ್ಷಗಳೊಳಗೆ (ಸಂಭವ. ೮-೧೩೬); ಪಂಚಮದ ಶನಿ ಹಂಚಿನಲ್ಲಿ ಉಣಿಸ್ಯಾನು (ಗಾದ). ೩. (ದೋಸೆ, ರೊಟ್ಟಿ, ಹೋಳಿಗೆ ಮುಂತಾದುವುಗಳನ್ನು ಬೇಯಿಸಲು ಬಳಸುವ) ಕಾವಲಿ: ಇಪ್ಪತ್ತ ಹಂಚು ಇಟ್ಟಿದೀರಿ, ಐದು ಸೇರಿನ ಹೋಳಿಗೆಯಾದರೂ ಆಗಲಿಲ್ಲ (ಆಕೋಶ. ೨). ೪. "ಒಣಗಿಸಿ ಸುಟ್ಟ ಬಿರುಸಾದ ಮಣ್ಣಿನ ಪದಾರ್ಥ" (ಕಪ್ರಾಕೋ. ೯೨೬). ೫. ಚೂರು; ತುಂಡು: ಗುರುಲಿಂಗಪೂಜೆಯಂ ನರನಾವನುಳಿದಮರ ನೆರವಿಯಂ ಯಜಿಸಿ ಪಡೆವಾ ಬಗೆಯದು ವರರತ್ನವಂ ಬಿಸುಟು ಪಿರಿದು ಗಾಜಿನ ಹಂಚ ನೆರೆದರ್ಚಪಂತೆಂದ (ಪಾನಂಚ. ೩-೧೪).

ಹೆಂಚಿನ ಪಾತ್ರೆ = ಮಣ್ಣಿನ ಪಾತ್ರೆ; ಮಡಕೆ: ಹೋಳಿಗೆ, ಕಡುಬು, ಸೂಸಲುಂಡಲಿಗೆ . . . ಇರೆ ಹೊಸ ಹೆಂಚಿನ ಪಾತ್ರೆಯಲು ಯಿರಿಸಿ (ಬಾಲಚ. ೧೨೯-೨೦). **ಹೆಂಚಿನ ಮನೆ** = ಮೇಲ್ಛಾವಣಿಗೆ ಮಣ್ಣಿನ ಚದುರಬಿಲ್ಲೆಯನ್ನು ಹೊದಿಸಿರುವ ಮನೆ: ಅದು ಪೂರ್ವಕಾಲದ ಹೆಂಚಿನ ಮನೆ (ರಾಮಾನ. ೧೦೧).

[ದೇ. ॥ ಕೊಡ. ಹಂಚ್; ತುಳು. ಹಂಚು; ತೆಲು. ಪೆಂಚು, ಪೆಂಚಿಕ]

ಹೆಂಜಱಿ 'ಪೆಂಜಱುವು' ನೋ.

ಹೆಂಜೆಱು 'ಪೆಂಜಱುವು' ನೋ.

ಹೆಂಟೆ$_1$ 'ಪೆಂಟೆ$_1$' ನೋ.

ಹೆಂಟೆ$_2$ 'ಪೆಂಟೆ$_2$' ನೋ.

ಹೆಂಟೆಗೊಡತಿ, ಹೆಂಡೆಗೊಡತಿ (ನಾ). (ಹೊಲಗದ್ದೆಗಳಲ್ಲಿ) ಮಣ್ಣಿನ ಗಟ್ಟಿಗಳನ್ನು ಒಡೆಯಲು ಉಪಯೋಗಿಸುವ ಒಂದು ಬಗೆಯ ಉಪಕರಣ: "ಹೆಂಟೆಗೊಡತಿ-ಲೋಷ್ಟಭೇದನ, ಕೋಟಶ" (ನಾಚಿಕಾ. ೬). **ಹೆಂಡೆಗೊಡತಿ:** (ಅ).

[ಹೆಂಟೆ$_1$ (< ಪೆಂಟೆ$_1$) + ಕೊಡತಿ (< ಕೊಡಂತಿ)]

ಹೆಂಟೆಗೊದ್ದ, ಹೇಂಟೆಗೊದ್ದ (ನಾ). ಉಡುವಿನ ಜಾತಿಗೆ ಸೇರಿದ ಒಂದು ಬಗೆಯ ಸಣ್ಣ ಪ್ರಾಣಿ; ಓತಿಕೇತ; ಗೋಸುಂಬೆ: ಹೆಂಟೆಗೊದ್ದ ಗೃಧ್ರ ಗೂಬೆ ಮೊದಲಾದ ಪಕ್ಷಿಗಳಿಗೆ ಸಮಾನವಾದ ರೀಪೆಯು ಯಿದ್ದರೆ ಶುಭವಲ್ಲ (ಪಾಗಂಧಿ. ೨೬೨-೧೦); ಆ ಬ್ರಾಹ್ಮಣರು . . . ದೊರೆಯನ್ನು ಹೆಂಟೆಗೊದ್ದನಾಗೆಂದು ಶಪಿಸಿದರು (ನೀತಿಚಂ. II, ೨೭). **ಹೇಂಟೆಗೊದ್ದ:** ನೀನು ಹೀಗೆ ಮೋಸಮಾಡಿದುದರಿಂದ ನೀನು ಹೇಂಟೆಗೊದ್ದವಾಗಿ ಹುಟ್ಟು (ಸುಧಾ. ೫೫೫). [ಹೆಂಟೆ$_1$ + ಗೊದ್ದ$_1$ (< ಗೋದ$_1$)]

ಹೆಂಟೆಹೊಡೆ, ಹೆಟ್ಟಿಹೊಡೆ (ಕ್ರಿ). ಹೊಲ, ಗದ್ದೆಗಳಲ್ಲಿ ಉಳುವುದಕ್ಕೆ ಮೊದಲು ಮಣ್ಣಿನ ಗಡ್ಡೆಗಳನ್ನು ಒಡೆ; ಹಲುಬೆಹೊಡೆ; ಕುಂಟೆಹೊಡೆ: (ಅ). **ಹೆಟ್ಟಿಹೊಡೆ:** ಹೊಲದಲ್ಲಿ ಕೊಯಿಲಿ, ಕಸ, ರವದಿ ಮೊದಲಾದ ಮಲಿನಗಳು ಇಲ್ಲದ ಹಾಗೆ ಹೆಟ್ಟಿ ಹೊಡೆದು . . . ಮಳೆಯು ಬರುವದರೊಳಗೆ ಸಿದ್ಧಮಾಡಿ ಇಟ್ಟಿರಬೇಕು (ಕೃಪಪ್ರ. ೫೧).

[ಹೆಂಟೆ$_1$ (< ಪೆಂಟೆ$_1$) + ಹೊಡೆ$_1$ (< ಪೊಡೆ$_1$)]

ಹೆಂಡ 'ಪೆಂಡ' ನೋ.

ಹೆಂಡಗಾಱಿ (ನಾ). ಮದ್ಯದಲ್ಲಿ ವ್ಯವಹರಿಸುವವನು: ಕಣ್ಣ ಗುಡ್ಡಿಯ ಮೆಟ್ಟಿ ನೆತ್ತಿಯ ಮೇಲೆ ಮೂಱುಪಟ್ಟಿಯನೆ ಕೆತ್ತಿ ಅವನ ಮುಖದ ಮೇಲೆ ಹೆಂಡಗಾಱಿನ ಮುಖದಿಂದೆ ಲೊಟ್ಟಲೊಟ್ಟನೆ ಉಗುಳಿಸಿ ಪಡುವಲ ದಿಕ್ಕಿಗೆ ಅಟ್ಟಿಂದ ಕಾಣಾ (ವಚಶಾ. I, ೨೫೨-೨೬).

[ಹೆಂಡ (< ಪೆಂಡ) + - ಕಾಱಿ]

ಹೆಂಡತಿ 'ಪೆಂಡಿತಿ' ನೋ.

ಹೆಂಡತ್ತಿ 'ಪೆಂಡಿತಿ' ನೋ.

ಹೆಂಡಬಾಕ (ನಾ). ಅತಿಯಾಗಿ ಮದ್ಯವನ್ನು ಸೇವಿಸುವವನು: ಹೆಂಡಬಾಕನವನು. ರೊಕ್ಕ ಕೊಟ್ಟು ಕೊಟ್ಟು ನೀನೇ ಅವನಿಗೆ ಇಂಥ ವ್ಯಸನಗಳನ್ನು ಕಲಿಸಿದವಳು (ಎವಶೀ. ೧೬). [ಹೆಂಡ (< ಪೆಂಡ) + - ಬಾಕ]

ಹೆಂಡಯ್ಸು (ಕ್ರಿ). ಮದ್ಯವನ್ನು ಸುರಿದುಕೊಳ್ಳು: ಬೀಮಣ್ಣನು ಹೆಂಡದ ಪಾತ್ರೆಯನ್ನು ಹಿಡಿದು ಹಾಡುತ್ತ ಪ್ರವೇಶಿಸುತ್ತಾನೆ . . . ರಾಗವೇ ಸರಿಯಾಗಿಲ್ಲ, ಮಸಣದಲ್ಲಿ ಅತ್ತಂತಿದೆ. ಕೊರಳಿಗೆ ಒಂದಿಸಿತು ಹೆಂಡಯ್ಸುವೆನ್' (ಕುಡಿಯುತ್ತಾನೆ) (ಬಿಗಾಳಿ. ೪೯). [ಹೆಂಡ (< ಪೆಂಡ) + - ಇಸ್ಸು$_3$]

ಹೆಂಡಿ 'ಹೆಂಡೆ$_2$' ನೋ.

ಹೆಂಡಿಕಸ (ನಾ). ದನದ ಸಗಣಿ ಮೊದಲಾದ ಕಸ: ಎದ್ದಿದ್ದ ಹಾಗಯೇ 'ಹೆಂಡಿಕಸ' ಮಾಡಿ ಮುಗಿಸಿ ಹಾಲು ಕರೆದು ಪಕ್ಕದ ಎರಡು ಮೈಲಿನ ಮೇಲಿನ ಶಹರಕ್ಕೆ ಹೋಗಿ ಹಾಲನ್ನು ಮಾರಿ ಬರುತ್ತಿದ್ದಳು (ಗಂಗಾಗೌ. ೪೦).

[ಹೆಂಡಿ (< ಹೆಂಡೆ$_2$ + ಕಸ]

ಹೆಂಡಿತಿ 'ಪೆಂಡಿತಿ' ನೋ.

ಹೆಂಡೆ$_1$ 'ಪೆಂಟೆ$_1$' ನೋ.

ಹೆಂಡೆ$_2$, ಹೆಂಡಿ (ನಾ). (ಉಕ) ಸಗಣಿ; ಗೋಮಯ: ಕಂಡಾ ಕಂಡ ಮನೆಯ ತಿರಿಗಿ ಕಾಲ್ಮರಿ ನಾಯಿ ಬೆದಕಿದಂತೆ ಹೆಂಡೆಯ ಜೊಂಡನು (ಚಿದಾಕೋ. ೪೬-೬). **ಹೆಂಡಿ:** ಹೆಂಡಿಲಿ ಹೊಯ್ದು ಮೆರಸಿ ಕೈಕಾಲ್ಗಳ ತುಂಡಿಸಿ ತಂದು ನೇಮಿಸಿದ (ಬಿಜ್ಜಾರಾ. ೩-೪೫); ಹಿಂಡಿಗನ ಹಾಳಲ್ಲಿ ಹೆಂಡಿಯಂ ಹಾಕಿ . . . ಅಲ್ಲಿಂದ ನಂದೀಶನತಿಹರುಷದಿಂದ ಮೆಲ್ಲನೆ ಮಲೆದೇಶದಲ್ಲಿಗೈತಂದ (ಶರಲೀ. ೧೦೦-೧೫). [← ತೆಲು. ಪೆಂಡ, ಪೇಂಡ]

ಹೆಂಡೆಗೊಡತಿ 'ಹೆಂಟೆಗೊಡತಿ' ನೋ.

ಹೆಂಡೆಮೂಗಕ್ಕಿ (ನಾ). ಒಂದು ಬಗೆಯ ಪಕ್ಷಿ: "ಪರೋಷ್ಣೀ, ತೈಲಪಾಯಿಕಾ-೨ ಹೆಂಡೆಮೂಗಕ್ಕಿಯ ಹೆಸರುಗಳು" (ಸಿದ್ಧಾಂತಿ. ೧೫೧). [? + ಹಕ್ಕಿ (< ಪಕ್ಕಿ)]

ಹೆಂದ (ನಾ) ಹಿರಿದು; ದೊಡ್ಡದು: 'ಹೆಂದಗತ್ತಲೆ', 'ಹೆಂದವೆಳಗು' ಪರಾ. 'ಪೆದ್ದ$_1$' ಹೋ. [? ./ ತೆಲು. ಪೆನು]

ಹೆಂದಗತ್ತಲೆ (ನಾ). ಹೆಚ್ಚಾದ ಕತ್ತಲೆ; ಅಧಿಕವಾದ ಕತ್ತಲೆ: ಹೆಂದಗತ್ತಲೆಯೊಳ್ಪ್ರವರ್ತಿಸುವಂದು ಕೆಲವು ಮೃಗದ್ವಿಜಾತಿಗೆ ಮುಂದಿರುತಿಪ್ಪನೇ ರವಿ ಕೇಳು ಸಚ್ಛಿಷ್ಯ (ಸದ್ಗುರು. ೭-೧೬). [ಹೆಂದ + ಕತ್ತಲೆ$_1$ (< ಕಟ್ಟಲೆ)]

ಹೆಂದವೆಳಗು (ನಾ). ಅಧಿಕವಾದ ಕಾಂತಿ,– ಪ್ರಕಾಶ: ಭಕ್ತರ ಹೃದಯಕಮಲದೆಸಳ್ಗಳ ಹಸೆಯ ಮೇಲೆ ಚಿತ್ತಿನ ಸೊಡರಿನ ಹೆಂ[ಪಾಕಾಂ. ಚಂ]ದವೆಳಗಿನೊಳು (ಸಿದ್ಧರಾ. ೭-೪೨). [ಹೆಂದ + ಬೆಳಗು$_2$]

ಹೆಂದು, ಹಂದು (ಕ್ರಿ). ೧. ಕುಂದು; ಕುಗ್ಗು; ಕಡಮೆಯಾಗು: ಪುರವ ರಚಿಸುವೆನೆಂದಡೆ ಹೆಂದದ ಧನಂ ಬೇಕು (ಸಿದ್ಧರಾ. ೩-೪೧); ಹೆಂದದೀಶ್ವರನೊಲುಮೆ ಗಡ ನಿಜದಿಂದ ನಿಚ್ಚಂ ಕೊಡುವುದದು ಹೊನ್ನೊಂದು ಗಡ (ಬಸವ. ೨೯-೧೫). ೨. ಹಿಂಜರಿ; ಅನುಮಾನಿಸು; ಹಿಂದು ಮುಂದು ನೋಡು: ಇಂದುಶೇಖರಸದೃಶಯೆನ್ನ ರಕ್ಷಿಪೆನೆಂದು ಹೆಂದದಡವಿಗೆ ಬಂದು ಪ್ರತ್ಯಕ್ಷವಾದ (ಪ್ರಭುಪು. ೮-೧೫೦); ಹೆಂದದಾಟವಿಗೆಯ್ದಿ ಸುಸ್ಥಲದಿ ಕುಳ್ಳಿರಿಸುತೆಂದರು (ಗುರುಚಾ. ೧೩-೪೫). ೩. ಅಲುಗಾಡು; ಚಲಿಸು: (ಕ). **ಹಂದು:** ೩. ಖಗಮಿರ್ಕೆ ಹಂದಲಿಲ್ಲರೆಯ ಮೇಲೊರಗಿರ್ದದರ ನೀಳ್ಪಛಾಯೆಯುಂ! (ಶ್ರೀರಾಮಾ. ೩೮೫-೬೩೦); ಹೆದರಬೇಡ, ಹಂದದೆ ಸುಮ್ಮನೆ ನಿಂತುಕೊ (ಮಲೆಮ. ೨೪೯).

ಹಂದಾಡು = ಅಲುಗಾಡು; ಅಲ್ಲಾಡು: ಏ ಹುಡುಗಾ ಎಷ್ಟೊಂದು ಹಂದಾಡ್ತೀಯೊ? ಕೂತಲ್ಲಿ ಒಂದುಗಳಿಗೆ ಸರೀ ಕೂಡ್ರಲಿಕ್ಕೆ ಬರೂದಿಲ್ಲವೋ? (ಮೂರುದಾ. ೯೨).

[ದೇ. ॥ ತುಳು. ಪಂದು, ಪಂದ್]

ಹೆಂದುಂಬೆ (ನಾ). ಒಂದು ಬಗೆಯ ಔಷಧೀಸಸ್ಯ: ನುಗ್ಗೆಯ ಬೇರಿನ ರಸ. ಹೆಂದುಂಬೆಯ ರಸ . . . ಕೊಗ್ಗಿಯ ಬೇರು ಇಷ್ಟನ್ನೂ ಎಕ್ಕೆಯ ಹಾಲಲ್ಲಿ ಅರೆದು ಪೂಸಲು ಸರ್ವಾಂಗವಾತಂ ಮಾಂಬುದು (ಎವೃವಿ. ೧೫೯). 'ಹೆದ್ದುಂಬೆ' ಪರಾ. [?]

ಹೆಂದುರು (ನಾ). ಒಂದು ಬಗೆಯ ಸಸ್ಯ: "ನಲ್ವಲಃ, ನಟ್ಟಾಂಗಃ - ಈ ಯೆರಡುಂ ಹೆಂದುರು" (ಓಷಧಿ. ೮೩). [?]

ಹೆಂಪರಿ (ನಾ). (?) : ಅರಮನೆಗೆ ಹೆಂಪರಿಯಾಗಿ ಬಂದ ಭೂಮಿ (ಸೌಇಂ. IX-ii, ೬೦೯-೩೪; 1544). [?]

ಹೆಂಪಳಿ (ಕ್ರಿ). ಕಾಂತಿಗುಂದು; ಕಂಗೆಡು: ಕರಡಿ ಗರ್ಜಿಸಲಂಜಿಯುಸುರಿಕ್ಕದಿರ್ಪನೋ ಉರಗ ಸಾರಲು ಹೆದಱ ಹೆಂಪಳಿವುತಿರ್ಪನೋ (ಶಕ್ಲಾ. ಹ. ೩೯-೪); ಹೆಂಪಳಿದ ತನುಲತೆಯ ಹರುಷದ ಸೊಂಪು ಸಡಿಲಿದ ಮುಖದ . . . ಅಂಬುಜವದನೆ ಮೈಯಿಕ್ಕಿದಳು ನಿಜಪತಿಗೆ (ತೂರರಾ. ೬-೫೩-೬೭). [ಹೆಂಪು (< ಪೆಂಪು) + ಅಳಿ$_1$ (< ಅಟ್ಟಿ$_1$)]

ಹೆಂಪು 'ಪೆಂಪು' ನೋ.

ಹೆಂಬಳ (ನಾ). (?): ಆ ಗದ್ದೆಗೆ ಸಿದ್ಧಾಯ ಕಮ್ಬವೊನ್ದಕೆ ಪಾಗವೊನ್ದನೂ ತೆಱುವರು ಆ ತೋಣ್ಬದ ಫಲಂಗಳು ಆಧಿಕ್ರಯದಾನಕ್ಕೆ ಸಲುವುದು ಕ್ರಿಷಿಬ್ಯವಸಾಯವ ಮಾಡದಿದ್ದರಾದಡೆ ಅವರ ಪಡಿ ಜೀವಿತದಲೆಯಿಕ್ಕಿ ಮಾಡಿಸುವರು ಹೆಮ್ಬಳ ಸಲುವುದು (ಎಕ. XV. ಅರಸೀ. ೨೧೦-೭; 1244). [?]

ಹೆಂಬಳಿ (ನಾ). ಹೆಣ್ಣಿನ ಸಂಬಂಧ: ದಿನದಿನಕೆ ಬೆಳೆದುದು ವೈರವಣ್ಣಂಗೆನಗೆ ಹೆಂಬಳಿಯಿಂದ (ತೂರರಾ. ೪-೨-೪೦); ಬಂದು ನಿಂದಿದನಿಂದ್ರಸುತನಿನನಂದನನ ಸರಿಸದಲಿ ಹೆಂಬಳಿಯಿಂದ ಹೆಚ್ಚಿದ ಮನದ ಮಸಕದ ಮತ್ಸರಂಗಳಲಿ (ತೂರರಾ. ೪-೩-೬).

[ಹೆಂ (< ಪೆಣ್) + ಬಳ್ಳಿ$_2$ (< ಬಟ್ಟಿ$_3$)]

ಹೆಂಬೆಡಿಗ (ನಾ). (?): ಹೆಂಬೆಡಿಗ ಹಿಡಿಯಬಹುದೇ ಹೆಡಿಗೆಯೊಳಗಣ ಹಾವ ತೆಱೆಯಬಹುದೇ (ದೇದಾವ. ೩೮-೭೪); "ಒಂದು ಬಗೆಯ ವಿಷದ ಹಾವು" (ದೇದಾವ. ಟೀಕೆ). [?]

ಹೆಂಬೆಳೆ, ಹೆಬ್ಬೆಳೆ (ನಾ). ಆಧಿಕ್ಯ; ಸಮೃದ್ಧಿ: ದ್ರುಪದನ ಹೆಂಬೆಳೆಯ ತನಿಹರುಷ ಹೊರಯೇಱಿತ್ತು ನಿಮಿಷದಲಿ (ಸಂಭಪ. ೩೩-೫೯). **ಹೆಬ್ಬೆಳೆ:** ಭಕ್ತರ ಭಾಗ್ಯದ ಹೆಬ್ಬೆಳೆಯೊ ಹೊಸರಾಶಿಯೊ (ವೀರೇಶ. ೧-೧೧). [< ಪಿರಿದು$_1$ + ಬೆಳ್ಳೆ$_1$]

ಹೆಂಬೇಡಿ, ಹೆಬ್ಬೇಳಿ (ನಾ). ಅತ್ಯಂತ ಪುಕ್ಕಲು ಸ್ವಭಾವದವನು; ದೊಡ್ಡ ಹೇಡಿ: ಹೆಣ್ಣ ಬಡದೆ ಹೆಂಬೇಡಿ ನೀನೋಡಿ, ಮುಕ್ಕಣ್ಣನ ಮಱೆಯೊಗೆ ಬಳಸಂದು ಅಣ್ಣನಡಿಗಳಾಣೆ ನಿನ್ನ ತಲೆಯ ತಱಿದಣ್ಣೆಕಲ್ಲಾಡದೆ ಬಿಡೆನೆಂದ (ಸೂಬಸೂ. ೫-೨೧); ಜಂಬುಕಂ ಜನಿಸುವುದೆ ಸಿಂಗದುದರದೊಳಕಟಾ ಹೆಂಬೇಡಿ ನೀನೆಲವೊ ಕುಲಗೇಡಿ ತನ್ನ ಬಸಱಿಂ ಬಂದವನೆ (ಕೃಮಿಭಾ. ೧೭-೫೪). **ಹೆಬ್ಬೇಳಿ:** ಛಾಂದಸರು ವೇದಜಡರು ಮಟ್ಟಿಯ ಮರುಳ್ಗಳು ವೃಥೋತ್ಸಾಹಿಗಳು ಹೆಬ್ಬೇಳಿಗಳು ದರ್ಭೆಯ ನಿರ್ಭಾಗ್ಯರೆಲ್ಲಂ ನೆರೆದರಮನೆಗೆ ಬಂದು (ಬಸರ. ೧೦-೨೬). [< ಪಿರಿದು$_1$ + ಪೇಡಿ$_1$]

ಹೆಂಬೇಡಿತನ (ನಾ). ಅತಿಯಾದ ಅಂಜುಬುರುಕುತನ: ನಾಡೆ ಕರೆಯಿಸಿ ಕೊಂಡದೆನೆ ಹೆಂಬೇಡಿತನದಿಂ ಪಲಸುಗಳ ಮೈಗೂಡೆ ಗುಗ್ಗುರಿಗಟ್ಟಿದವು ನಿಜವೆನಲು ಭಾವಿಪಡೆ (ಮದೇಪು. ೨-೩೨); ಕ್ಷಿತಿಯೊಳತಿಶೂರಧನದಾನುಜನೆನುತ್ತೊರೆವೆ ಹೆಂಬೇಡಿತನವ ಪಳೆದೆ (ವಂಕಾರಾ. ೬-೫೪-೨೧). [ಹೆಂಬೇಡಿ + - ತನ]

ಹೆಕ್ಕತ್ತು 'ಹೆಗ್ಗತ್ತು' ನೋ.

ಹೆಕ್ಕಬ್ಬು 'ಹೆಗ್ಗಬ್ಬು' ನೋ.

ಹೆಕ್ಕಳ 'ಪೆಕ್ಕಳ$_1$' ನೋ.

ಹೆಕ್ಕಳಂಗೊಳ್ 'ಪೆರ್ಕಳಂಗೊಳ್' ನೋ.

ಹೆಕ್ಕಳಂಗೊಳು 'ಪೆರ್ಕಳಂಗೊಳ್' ನೋ.

ಹೆಕ್ಕಳಗೊಳ್ 'ಪೆರ್ಕಳಂಗೊಳ್' ನೋ.

ಹೆಕ್ಕಳಗೊಳು 'ಪೆರ್ಕಳಂಗೊಳ್' ನೋ.

ಹೆಕ್ಕಳದೋಱು (ಕ್ರಿ). ಹೆಮ್ಮೆಯನ್ನುಂಟುಮಾಡು: ಮಕ್ಕಳಾಟದಿ ತನ್ನ ಹಡೆದ ತಾಯ್ತಂದೆಗೆ ಹೆಕ್ಕಳದೋರ್ಪ ಸಂತಸದಿ (ಮೋಹಕ್ಕ ೧೭-೭೫).

[ಹೆಕ್ಕಳ (< ಪೆಕ್ಕಳ$_1$) + ತೋಱು]

ಹೆಕ್ಕಳಬಡು (ಕ್ರಿ). ಮದಿಸು; ಉಬ್ಬು: ಹೆಣ್ಣ ಕಂಡು ಹೆಜ್ಜೆ ಹೆಕ್ಕಳಬಡುವಂತೆ ಕಣ್ಣಿಟ್ಟು ನೋಡದಿರಾ (ದೇದಾವ. ೩೫-೬೪). [ಹೆಕ್ಕಳ (< ಪೆಕ್ಕಳ$_1$) + ಪಡು$_1$]

ಹೆಕ್ಕಳವೆರಸು (ಕ್ರಿ). ಘನತೆಯಿಂದ ಕೂಡಿರು; ಗಾಂಭೀರ್ಯದಿಂದಿರು: ಗೋಪಾಲವೇಷಧಾರಿಗಳಾದ ಬಲಕೃಷ್ಣರಿರ್ವರು ಕೇಳಿ ಹೆಕ್ಕಳವೆರಸಿ ನಡೆತಂದು (ಕಗವಿ. ೭೬ ಎಮ್ಮಪುರಾಣಂ). [ಹೆಕ್ಕಳ (< ಪೆಕ್ಕಳ$_1$) + ಬೆರಸು$_1$ (< ಬೆರೆಯಿಸು)]

ಹೆಕ್ಕಳಿಕೆ 'ಪೆರ್ಕಳಿಕೆ' ನೋ.

ಹೆಕ್ಕಳಿಸು 'ಪೆಕ್ಕಳಿಸು' ನೋ.

ಹೆಕ್ಕು$_1$ 'ಪಿಕ್ಕು' ನೋ.

ಹೆಕ್ಕು$_2$ 'ಪೆಱುಕು' ನೋ.

ಹೆಕ್ಕುಳಿ 'ಪೆರ್ಗುಟಿ' ನೋ.

ಹೆಕ್ಕೆರಕಲು (ನಾ). ಒಂದು ಬಗೆಯ ಸಸ್ಯ: ಮದ್ರೆ, ಹೆಜ್ಜೆಕರಕಲು, ಹೆಕ್ಕೆರಕಲು, ಸಡ್ರಿ (ಮ್ಯಾಪಿಗ. ೫೮-೧೧೫೬). [?]

ಹೆಕ್ಕೌಡಲ (ನಾ). ದೊಡ್ಡ ಜಾತಿಯ ಹರಳು ಗಿಡ: ಗಣಜಿಲ ಬೇರು . . . ಹೆಕ್ಕೌಡಲದ ಬೇರು, ಶುಂಠಿ, ಇವ ಕಷಾಯಮಂ ಕುಡಿಯೆ ೮೦ ತೆಱದ ವಾತ ತೀರ್ಗುಂ (ವೈದ್ಯವಿ. ೮೬). [< ಹೆರ್ (< ಪಿರಿದು$_1$) + ಔಡಲ (< ಅವುಡಲ)]

ಹೆಗಡಿ 'ಪೆರ್ಗಡೆ$_1$' ನೋ.

ಹೆಗಡಿಕೆ 'ಹೆಗ್ಗಡಿಕೆ' ನೋ.

ಹೆಗಡೆ 'ಪೆರ್ಗಡೆ$_1$' ನೋ.

ಹೆಗಲ್ 'ಪೆಗಲ್' ನೋ.

ಹೆಗಲು 'ಪೆಗಲ್' ನೋ.

ಹೆಗಲುಗೇಡು (ನಾ). (ಆಲಂ) ವ್ಯರ್ಥವಾದುದು; ನಿಷ್ಪ್ರಯೋಜಕವಾದುದು: ಮಗನೆ ನೀ ಮನ್ಮಥರಿಪುವಿನ ಮಱೆಹೊಕ್ಕು ಪಗೆಯಾದೆ ನೀ ಜಗವಱಿಯೆ ಹೆಗಲುಗೇಡಾಗಿ ಹೊತ್ತಿರ್ದೆ ಲಿಂಗವನೆಂದು ಜಗದ ಜನನಿ ಮಱುಗಿದಳು (ನಿಜಸಾಂ. ೪-೮೨).

[ಹೆಗಲು (< ಪೆಗಲ್) + ಕೇಡು]

ಹೆಗಲುಗೇಣಿ (ನಾ). ಒಂದು ಬಗೆಯ ಗುತ್ತಿಗೆ: ಆಱುವಾರ ಮೂಲ ಹೆಗಲುಗೇಣಿ ಆಣಿ [ಪ]ಡಿ ಸಲ್ಲದು (ಸೌಂವಿ. ೧೯೩೧, ಉಡುಪಿ. ೨೬೬-೨೮; 1350).

[ಹೆಗಲು$_1$ + ಗೇಣಿ (< ಕೇಣ್$_3$)]

ಹೆಗಲುಚೀಲ (ನಾ). ಭುಜಕ್ಕೆ ತೂಗಿಹಾಕಿಕೊಳ್ಳುವ ಚೀಲ: ಹೆಗಲಿಗೆ ಒಂದು ಖಾದಿ ಹೆಗಲುಚೀಲ (Shoulder-bag); ಅದರಲ್ಲಿ ಅವಳ ಸಂಸಾರ ಅಡಗಿತ್ತು! (ಉಷಾಕ. ೨೦). [ಹೆಗಲು (< ಪೆಗಲ್) + ಚೀಲ]

ಹೆಗಲುಬಡಿಕ (ನಾ). (ಆಲಂ) ಭುಜ ತಟ್ಟಿಕೊಳ್ಳುವವನು; ಗರ್ವಿಸುವವನು: ಹಗೆಗಳಮಗಿನ್ನಾರು ನಿರ್ಜರನಗರಪತಿ ನಮ್ಮಯ್ಯನುಳಿದರಸುಗಳು ಪಾಡಲ್ಕೆಮಗೆ ದಿವದಲಿ ಧರಣಿಯಲಿ ನೃಪರು ಹೆಗಲುಬಡಿಕರ ಹೇಳದಿರು (ತೊರರಾ. ೪-೩-೩). [ಹೆಗಲು (< ಪೆಗಲ್) + ಬಡಿಕ$_1$]

ಹೆಗಲೆಣೆ 'ಪೆಗಲ್' ಪರಾ.

ಹೆಗಲೇರು 'ಪೆಗಲೇಱು' ನೋ.

ಹೆಗಲೇಱು 'ಪೆಗಲೇಱು' ನೋ.

ಹೆಗಲೊಡ್ಡು (ಕ್ರಿ). ಹೆಗಲು ಕೊಡು; ಭಾರ ಹೊರು; ನೇರವಾಗು: ಅನುರೂಪಳಾದ ವಧುವೊಬ್ಬಳನ್ನು ನಿಶ್ಚಯಿಸಿ ವಿವಾಹ ಮಗನಿಗೆ ಮಾಡಿಸಿದರೆ ತನ್ನಿಂದ ತಾನೇ ಆತ ಸಂಸಾರಭಾರಕ್ಕೆ ಹೆಗಲೊಡ್ಡುವವನಾಗುತ್ತಾನೆ (ಕುರುಕಾ. ೧೨೪).

[ಹೆಗಲು (< ಪೆಗಲ್) + ಒಡ್ಡು$_1$]

ಹೆಗಲ್ಮೊಳಿಸು (ಕ್ರಿ). ಎತ್ತಿನ ಹೆಗ್ಗತ್ತಿನ ಮೇಲೆ ನೊಗವನ್ನು ಹೂಡು: ಬಲ್ದೆತ್ತುಗಳನೇ ಹೆಗಲ್ಮೊಳಿಸಿ ಬಂಡಿಯೊಳಗ್ರದಲಿ ಕೇಳಿಕೆಗಳೊಡಗೂಡಿ (ಬಸಪು. ೫೬-೬೨).

[ಹೆಗಲ್(< ಪೆಗಲ್) + ಕೊಳ್$_1$ + - ಇಸು$_3$]

ಹೆಗಳು (ನಾ). ಒಂದು ಬಗೆಯ ರೋಗ: ಕಮ್ಮಾರರ ಮನೆಯ ಇಲ್ಲಣ . . . ಸೊಲ್ಲಗೆ ಎಣ್ಣೆ, ಇವಂ ಕೂಡಿ ಎರಡು ದಿನ ನೀರಲ್ಲಿ (ಅರೆದು) ಮೂಱುದಿನ, ಆಱುದಿನ, ಒಂಭತ್ತುದಿನ ಕೊಳ್ಳೆ ಯವಾಗುಗಂಜಿ ಬೆರೆಯೆ ಹೆಗಳು ಮಾಣ್ಗುಂ (ವೈದ್ಯವಿ ೭೩). 'ತೇಮಳು' ಹೋ. [?]

ಹೆಗುಂಜಿ 'ಪೆರ್ಗುಂಜಿ' ನೋ.

ಹೆಗೆಡೆ 'ಪೆರ್ಗಡೆ$_1$' ನೋ.

ಹೆಗ್ಗ$_1$ 'ಪೆಂಗ$_1$' ನೋ.

ಹೆಗ್ಗ$_2$ (ನಾ). ಹಿರಿಯವನು (?): ಅಗ್ಗಿಸಿದೊಡೆ ದಿಟವೆಂದೆಗ್ಗಱಿಯದ ನಗ್ಗದ ಹೆಗ್ಗರು ನುಗ್ಗುಗಳಂ ಬಗ್ಗಿಸಿ ಕರೆದೊಗ್ಗಿಂ ಮೊಗ್ಗರವಾಯಿತು (ವೀರೇಚ. ೨-೨೭). [< ಪಿರಿದು$_1$]

ಹೆಗ್ಗ$_3$ (ನಾ). ಹರಳುಗುಳಿಯ ಮಣೆಯಲ್ಲಿ ಹೆಚ್ಚು ಹರಳುಗಳಿಂದ ತುಂಬಿದ ಗುಳಿ: ಈ ಕಾಳನ್ನು ಎತ್ತಿದರೆ ನನಗೆ ಎರಡು ದೊಡ್ಡ ಹೆಗ್ಗ ಬರುತ್ತೆ (ರೂಢಿ). [ದೇ. ॥ ತುಳು. ಪೆರ್ಗ, ಪೇರ್ಗ]

ಹೆಗ್ಗಂಬ (ನಾ). ದೊಡ್ಡ ಕಂಬ: ಅವರಿಬ್ಬರೂ ಪವಿತ್ರಪುರತಾಲ್ಲೂಕಿನ ಹೆಗ್ಗಂಬಗಳಂತೆ ಇರುವ ನಾಯಕರೆಂದು ಹೇಳಿದನು (ಪಂಜಪಾ. ೨೧೫). [< ಪಿರಿದು$_1$ + ಕಂಬ$_1$ (< ಕಂಭ)]

ಹೆಗ್ಗಂಬಳಿ (ನಾ). ದೊಡ್ಡ ಕಂಬಳಿ: ಚಾಪಗಳ ಮೇಲೆ ಜಮಖಾನೆಯನ್ನೂ ಜಾಡಿಯನ್ನೂ ಹೆಗ್ಗಂಬಳಿಯನ್ನೂ ಬಿಚ್ಚಿ ಹರಡಿದರೆ ಅದೇ ಹಾಸಗೆಯಾಗಿ . . . ಜನರು ಒಟ್ಟೊಟ್ಟಿಗೆ ಮಲಗುತ್ತಿದ್ದುದು ರೂಢಿ (ಮಲೆಮ. ೬೨೮). [< ಪಿರಿದು$_1$ + ಕಂಬಳಿ]

ಹೆಗ್ಗಟ್ಟವತ್ತಿಗೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು; ಶಂಖಪುಷ್ಪಿ: "ಅಮ್ಮಂಗೊಡಲಿಯೆಂದು ಹೆಗ್ಗಟ್ಟವತ್ತಿಗೆ" (ಕಶಪಾ. ೬೭-೫೨೫).

[< ಪಿರಿದು$_1$ + ಕಟ್ಟವತ್ತಿಗೆ]

ಹೆಗ್ಗಡಜ (ನಾ). ಜೇನುಹುಳುವಿನ ಜಾತಿಗೆ ಸೇರಿದ ಒಂದು ಬಗೆಯ ಕೀಟ; ದೊಡ್ಡ ಕಣಜ: "ಆಲಿ, ದ್ರುಣ, ವೃಶ್ಚಿಕ ಎಂದೊಡೆ ಚೇಟು; ಹೆಗ್ಗಡಜನೆಂದು ಸುಬೋಧೆಯಲ್ಲಿ ಇದ್ದುದು" (ನಾಚರಾ ೫); ಜಡವೆ ತನುವಾಗಿರುತಿರುವ ಹೆಗ್ಗಡಜ ಪುಳುವಂ ತಂದು ತನ್ನವೊಡಲದಕೆ ಕೈಗಟ್ಟಿ ಬಹುದಂತಾರ್ಯರಾದವರು (ವಿವೇಧ. ೧೮-೨೫).

[< ಪಿರಿದು$_1$ + ಕಡಜ$_1$ (< ಕಡಂಜ)]

ಹೆಗ್ಗಡತಿ 'ಪೆರ್ಗಡಿತಿ' ನೋ.

ಹೆಗ್ಗಡಲು 'ಪೆರ್ಗಡಲ್' ನೋ.

ಹೆಗ್ಗಡವ (ನಾ). ದೊಡ್ಡ ಕದಂಬವೃಕ್ಷ: "ಕಡಂಬರಃ- ನಾಭಿ, ಹೆಗ್ಗಡವ" (ಓಪಧಿ. ೨೫). [< ಪಿರಿದು$_1$ + ಕಡವ$_1$ (< ಕಡಂಬ)]

ಹೆಗ್ಗಡಿ 'ಪೆರ್ಗಡೆ$_1$' ನೋ.

ಹೆಗ್ಗಡಿಕೆ, ಹೆಗಡಿಕೆ (ನಾ). ಮುಂದಾಳುತನ; ಮುಖಂಡತ್ವ: ಬಳ್ಳಿಗಾವೆಯ ಮೂಲಸ್ಥಾನದ ಭೇರುಂಡಸ್ವಾಮಿದೇವರ್ಗೆ ಹೆಗ್ಗಡಿಕೆಯಷ್ಟಭೋಗತೇಜಸ್ವಾಮ್ಯಸಹಿತ ವಯಿದ್ಯ ದಾಸಣ್ಣಂಗೆ . . . ಕೊಟ್ಟ ಭೂಮಿ (ಮೃಅರಿ. ೧೯೨೯, ೫೭-೧೦; 1294). **ಹೆಗಡಿಕೆ:** ಹೆಗಡಿಕೆ ಸೇನಬೋವಿಕೆ ಕೆಱೆಗೆ ಊರ ಸಾಲಕೆ ಅಳಿಉ ಅಂನ್ಯಾಯ ಏನು ಬಂದಡೆಉ . . . ಪರಿಹರಿಸಿ ಕೊಡುವರು (ಎಕ. VII (R), ಕೃಷ್ಣರಾ. ೯೦-೮; 1299).

[ಹೆಗ್ಗಡೆ (< ಪೆರ್ಗಡೆ$_1$) + - ಇಕೆ]

ಹೆಗ್ಗಡಿತಿ 'ಪೆರ್ಗಡಿತಿ' ನೋ.

ಹೆಗ್ಗಡೆ 'ಪೆರ್ಗಡೆ$_1$' ನೋ.

ಹೆಗ್ಗಡೆಗದ್ಯಾನ 'ಪೆರ್ಗಡೆಗದ್ಯಾಣ' ನೋ.

ಹೆಗ್ಗಡೆತನ 'ಪೆರ್ಗಡೆತನ' ನೋ.

ಹೆಗ್ಗಣ್, ಹೆಗ್ಗಣ್ಣು (ನಾ). ೧. ದೊಡ್ಡದಾದ ಕಣ್ಣು; ವಿಶಾಲವಾದ ಅಕ್ಷಿ: ತನ್ನ ಹೆಗ್ಗಣ್ಣಳಂ ಹಿರಿದು ತೆರೆದು, ಇಂಗಿತವರಿತು ನಿಸ್ತಬ್ಧಮಾಗಿರ್ದ ರಾವಣಸಭಾಸಮುದ್ರವನಿಕ್ಕದೆವೆಯಿಂ ಸಮೀಕ್ಷಿಸುತೆ (ಶ್ರೀ ರಾಮಾ. ೫೭೧-೨೫೭). **ಹೆಗ್ಗಣ್ಣು:** ೧. ತನಗೆ ಒಂದು ಮಾರು ದೂರದಲ್ಲಿ ಕುಳಿತು, ತನ್ನ ಕಡೆಗೇ ನೋಡುತ್ತಿದ್ದ ಹುಲಿಯನ ಹೆಗ್ಗಣ್ಣುಗಳನ್ನು ನೋಡತೊಡಗಿದನು (ಮಲೆಮ. ೨೦). ೨. ಅರಳಿದ ಕಣ್ಣು; ಬಿರುಗಣ್ಣು: ದುಷ್ಟಬುದ್ಧಿ ಓಡೋಡಿ ಬಂದು ಏದುತ್ತಾ . . . ನಿಲ್ಲುತ್ತಾನೆ. ಬುದ್ಧಿಗೆಟ್ಟವನಂತೆ ಉನ್ಮಾದವೇರಿದವನಂತೆ ಹೆಗ್ಗಣ್ಣಾಗಿ ಮುಖ ವಿಕಾರವಾಗಿದೆ (ಚಂದ್ರಸ. ೧೧೨-೧೯). ೩. (ಆಲಂ) ವಿರಾಟ್‌ದರ್ಶನದ ಕಣ್ಣು: ತರಣಿಯೆ ಕರ್ಮಸಾಕ್ಷಿ ಸ್ವರೂಪನಾಗಿ ರ್ಪನ್ನೆ ಜಗದ ಹೆಗ್ಗಣ್ಣಾತನು (ಎಕೃಪು ೪-೬-೪೪). [< ಪಿರಿದು$_1$ + ಕಣ್]

ಹೆಗ್ಗಣ₁ 'ಪೆರ್ಗಣ' ನೋ.

ಹೆಗ್ಗಣ₂ (ನಾ). [ವೀಶೈ] ಪ್ರಮಥರಲ್ಲಿ ಹಿರಿಯನಾದವನು: ಗಣಬಲದೊಳು ಹೆಗ್ಗಣನಹೆ (ಕುಮಾವ್ಯ. ೪೬). [< ಪಿರಿದು₁ + ಗಣ]

ಹೆಗ್ಗಣ್ಣು 'ಹೆಗ್ಗಣ್' ನೋ.

ಹೆಗ್ಗತ್ತಲೆ 'ಪೆರ್ಗತ್ತಲೆ' ನೋ.

ಹೆಗ್ಗತ್ತಿ (ನಾ). ದೊಡ್ಡ ಕತ್ತಿ: ಸಾಮಾನ್ಯವಾಗಿ ಹೆಗ್ಗತ್ತಿಯ ತುದಿಯಿಂದ ಬೆತ್ತಲೆ ಹೊಟ್ಟೆಗೆ ತಿವಿದುಕೊಳ್ಳುವುದರಿಂದ ತಾನು ನಿಜವಾಗಿಯೂ ಗುಡ್ಡ ಎಂಬುದನ್ನು ಅಂದೇ ಜನರಿಗೆ ತೋರಿಸುತ್ತಾನೆ (ಬೋರಡೆ. ೧೪). [< ಪಿರಿದು₁ + ಕತ್ತಿ]

ಹೆಗ್ಗತ್ತು, ಹೆಕ್ಕತ್ತು (ನಾ). ೧. ಕತ್ತಿನ ಹಿಂಭಾಗ; ಹೆಡಕು; ಹೆಡತಲೆ: ನೆರಳಂತೆ ಹೆಗ್ಗತ್ತಿನಲಿ ಮರಣವಿಹುದೆ (ಕಎಪು. ೧೧-೭); ಅನೆಯ ಹೆಗ್ಗತ್ತಿನಿಂದ ಉತ್ತರನು ಹೆಣವಾಗಿ ಕೆಳಗೆ ಬಿದ್ದನು (ವ್ಯಾಪಕಿ. ೬೨). **ಹೆಕ್ಕತ್ತು**: ೧. ದಾಪೀಜನರಿಂದ ಹೆಕ್ಕತ್ತಿನ ಮೇಲೆ ತಿವಿದು ಹೊರಡಿಸುತ್ತಲಿದ್ದೇನೆ (ಕ್ಷವಾಳ. ೧೧೫); ಹೆಕ್ಕತ್ತಿನಲ್ಲಿರುವ ಸುಳಿಗಳೆರಡು ಕೂಡ ಸ್ವಾಮಿಗೆ ರೋಗಪ್ರದಗಳಾಗುವವು (ಸೌಗಂಧಿ. ೩೧-೧೯). ೨. ಹೆಗಲು; ಭುಜಾಗ್ರ: ಹೆಕ್ಕತ್ತು ಯರಡು ಮುಂಗೈಗಳು ಯಿಂತು ಹದಿನೈದು ಸ್ಥಾನಂಗಳಲ್ಲಿ ಪ್ರತಿನಿತ್ಯದಲ್ಲಿಯು ತ್ರಿಪುಂಡ್ರವಂ ಧರಿಸಬೇಕು (ಸೌಗಂಧಿ. ೩೦೩-೧೧). 'ಹೆಡಕತ್ತು' ಹೋ. [ಹೆಜಗು (< ಪೆಜಗು) + ಕತ್ತು (< ಕಟ್ಟು)]

ಹೆಗ್ಗದ ' ಪೆರ್ಗದಹು' ನೋ.

ಹೆಗ್ಗದಿರ್ (ನಾ). ದೊಡ್ಡ ಕಿರಣ: ರೇಣುಕೆಗೆ ತಗ್ಗಿ ನಡೆಯಲ್ಕೇಳ್ಕು ಭಳಿರೆಂದು ದಿನಪನುಂ ಹೆಗ್ಗದಿರ್ಗಳ ಸೆಳೆದು ಪಶ್ಚಿಮಾಂಬುಧಿಗಿಳಿಯೆ (ಪರಶು. ೧೪-೬). [< ಪಿರಿದು₁ + ಕದಿರ್₂]

ಹೆಗ್ಗದ್ದೆ 'ಪೆಗ್ಗಟ್ಟಿ' ನೋ.

ಹೆಗ್ಗನ (ನಾ). ರಥವು ಸರಿಯಾಗಿ ಚಲಿಸುವಂತೆ ಮಾಡಲು ಉಪಯೋಗಿಸುವ ಒಂದು ಬಗೆಯ ಸಾಧನ: ಗಗ್ಗರಿಫಲಿರೆಂಬ ಗಾಲಿಯ ಬಲುರವ ಹೆಗ್ಗನ ಮಿಂಟೆ ಝಂಕಿಸುವ ಒಗ್ಗಿನ ವೀರಮಕ್ಕಳ ಮೊತ್ರದಲಿ ತೇರು ಬೊಗ್ಗನೆ ನಡೆದುದರ್ತಿಯಲಿ (ಕಂಪಾ. ೨೫-೧೦೭). 'ಹೆದ್ನ' ಹೋ. [?]

ಹೆಗ್ಗನಸು (ನಾ). ಹಿರಿಯ ಕನಸು; ದೊಡ್ಡ ಕನಸು: ಮುಂದೆ ಸೊಗವಹುದೆಂಬ ಹೆಗ್ಗನಸಿನಡಿಗಳಲಿ ಕನಸಿನಾ ಹಗೆಗಳೆಲ್ಲರು ಕುರಿಗಳಂತೆ ಬಲಿ! (ಕೋಗಿಲ. ೧-೧೫). [< ಪಿರಿದು₁ + ಕನಸು]

ಹೆಗ್ಗಬ್ಬು, ಹೆಕ್ಕಬ್ಬು (ನಾ). ಒಂದು ಬಗೆಯ ದೊಡ್ಡ ಜಾತಿಯ ಕಬ್ಬು: ''ಕರಂಕಮಾಲಃ- ಹೆಗ್ಗಬ್ಬು'' (ಓಷಧಿ. ೨೭). **ಹೆಕ್ಕಬ್ಬು**: ಹಾಗಲದ ಕಾಯ ಬೀಜವ ತೆಗೆದು ಬಿಳಿಪಾಷಾಣವ ತುಂಬಿ . . . ಹೆಕ್ಕಬ್ಬಿನ ರಸದಲ್ಲಿ ನೀರಳಿಪ್ರಮಾಣದಲ್ಲಿ ಗುಳಿಗೆಯಂ ಊಟದಲ್ಲಿ ಇಕ್ಕೆ ವಶ್ಯ (ವಪ್ಯಮ. ೨೧೧). [< ಪಿರಿದು₁ + ಕಬ್ಬು₂ (< ಕರ್ಬು₁)]

ಹೆಗ್ಗರ (ನಾ). ದೊಡ್ಡ ಗರ , – ಗ್ರಹ: ಆ ನುಡಿಗೇಳಿ ಹೆಗ್ಗರ ಹೂಡದಂತಾ ಮಾನಿನಿ ಸವ್ಯೆಅಗಾಗಿ (ನೇಮಿಸಂ. ೩-೫೨); ಕೊಬ್ಬಿ ಕೊಚ್ಚೆದು ಬಿದ್ದಾಡಿ ಹೆಗ್ಗ[ಪಾಕಾಂ. ಗ]ರಗಳ ಗುಚ್ಚಿಸುತಿರ್ಪವಂತಲ್ಲಿ (ಶಪ್ರಪಾಲ. ೮-೩೫). [< ಪಿರಿದು₁ + ಗರ₃]

ಹೆಗ್ಗರಗಸ (ನಾ). ದೊಡ್ಡ ಗರಗಸ: ನಡುನೆತ್ತಿಯಲ್ಲಿ ಹೆಗ್ಗರಗಸವನಿಟ್ಟಲ್ಲಿದೆರಡು ಭಾಗಮಂ ಮಾಡಿ (ವೀಶಿಪು. ೪-೧೪-೩೧). [< ಪಿರಿದು₁ + ಗರಗಸ₁ (< ಕರಗಸ₁)]

ಹೆಗ್ಗರಡಿ 'ಪೆರ್ಗರಡಿ' ನೋ.

ಹೆಗ್ಗರಿಲು (ನಾ). ಒಂದು ಬಗೆಯ ಮಿಸು: ಬಾಳೆ ಹೆಗ್ಗರಿಲುಂ ಕಲ್ಲಡಿ . . . ಪಂದಿಗನೆಂಬ ಮಿನ್ನೆಗದನಾ ಭಕ್ತಂ ಮಹಾಲೀಲೆಯಿಂ (ತ್ರಿಪುವಿ. ೫೭-೮). 'ಅರಿಲುಂಬ' ಪರಾ. [?]

ಹೆಗ್ಗರುಳು 'ಪೆರ್ಗರುಳ್' ನೋ.

ಹೆಗ್ಗಲ್ಲು 'ಪೆರ್ಗಲ್' ನೋ.

ಹೆಗ್ಗವಣೆ (ನಾ). ಒಂದು ಬಗೆಯ ಮರ: ಹೆಗ್ಗವಣೆ [ಪಾಕಾಂ. ಣ]ಮುಂಗಾರೆ ಬಡಿತ್ತಿ . . . ಹೊನ್ನೆ ಮೊದಲಾದ ವೃಕ್ಷಂಗಳಂ ಗಿರಿಯ ತಪ್ಪಲದರಣ್ಯಂ ತೋರಿದತ್ತರುಣರುಚಿ ನುಸುಳಲೀಯದಂತೆ (ಮಹಾವಿ. ೧೭-೨೬). [?]

ಹೆಗ್ಗವಿ (ನಾ). ದೊಡ್ಡ ಗುಹೆ; ವಿಶಾಲವಾದ ಗವಿ: ಆ ಹಿಮಾಲಯದ ಹೆಗ್ಗವಿ ಕಗ್ಗಾಡುಗಳನ್ನು ಆಡುಂಬೊಲಗಳನ್ನಾಗಿ ಮಾಡಿಕೊಂಡ ಆರ್ಯರಿಗೆ ಈ ವಿಂಧ್ಯವನ್ನೇಕ್ಷಿಸಿ ಭಯಜ್ವರವುಂಟಾಗಬಹುದೇನು? (ನಾಡೋಜ. ೧೧೧). [< ಪಿರಿದು₁ + ಗವಿ₂]

ಹೆಗ್ಗಹಳೆ , ಹೆಗ್ಗಾಣೆ , ಹೆಗ್ಗಾಳೆ (ನಾ). ದೊಡ್ಡ ಕಹಳೆ: ಸಾಲ ಹೆಗ್ಗಹಳೆಗಳು ರಿಪುಭೂಪಾಲಕರ ಬೈಬೈದು ಗಜಬ್ಬಿದವು (ಕುವ್ಯಾದ್ರೋ. ೪-೫೨); ಹೆಗ್ಗಹಳೆ ಚಿನ ಕಹಳೆ ಕರಣೆಯ ನಾದ ಶಂತಿವು ಮೊದಲಾದ ನಾನಾತೆಱದ ನಾದಂಗಳನು ಕಿವಿದುಂಬಿ ಕೇಳಿ (ಅಖಂಡೇ. ೨೦೬-೪೬). **ಹೆಗ್ಗಾಣೆ**: ಮೃದಂಗ ತಮ್ಮಟೆ ಸಂಭ್ರಮದ ಹೆಗ್ಗಾಣೆ ಗಿಡಿವಿಡಿ ಕರದೆ ಕೌಂಸಾಳೆ (ದೇವೀಮ. ೨-೯೯). **ಹೆಗ್ಗಾಳೆ**: ಘುಡುಘುಡಿಪ ಹೆಗ್ಗಾಳೆ ಮೊಳಗುವ ಬೆಡಗು ಜಾಗಟೆ ಬೊಬ್ಬೆಯಲಿ ಜಗ ನಡುಗೆ (ಕುವ್ಯಾವಿ. ೬೧೧. ೪-೧೪); ಶಂಖಿ ಹೆಗ್ಗಾಳೆ ವೀರತಂಬಟ ತುಡುಮುಗಳಾ ಭೋರನೊಂದೇ ಬಾರಿ ಸದೆದರು (ಭರಚ. ೨೨-೬೮). [< ಪಿರಿದು₁ + ಕಹಳೆ]

ಹೆಗ್ಗಳ 'ಪೆಕ್ಕಳ₁' ನೋ.

ಹೆಗ್ಗಳಂಗಡಲೆ 'ಹೆಗ್ಗಳ್ಕಂಗಡಲೆ' ನೋ.

ಹೆಗ್ಗಳಪಿ 'ಹೆಗ್ಗಳವಿ' ನೋ.

ಹೆಗ್ಗಳವಿ, ಹೆಗ್ಗಳಪಿ (ನಾ). ಒಂದು ಬಗೆಯ ಕವ್ಚುಹಣ್ಣುಗಳನ್ನು ಬಿಡುವ ಮುಳ್ಳುಕಂಟಿ ಗಿಡ: ''ಕರಮಾರಃ- ಹೆಗ್ಗಳವಿ'' (ಓಷಧಿ. ೨೪). **ಹೆಗ್ಗಳಪಿ**: ಕಡಸು ಕಾರೆ ಬೋರೆ ಗುಳವತ್ತಿ ತುಂಬುರು ನಗರೆ ಮುಂತಾದ ಪಣ್ಗಳ ತಂದರಾಳ್ದನ ಬಳಿಗೆ (ಮೋಹತ. ೧೪-೫೬) [< ಪಿರಿದು₁ + ಕಳವಿ (< ಕಳವೆ₁)]

ಹೆಗ್ಗಳಿಕೆ 'ಪೆರ್ಕಳಿಕೆ' ನೋ.

ಹೆಗ್ಗಳೆ (ನಾ). ಉದ್ದವಾದ ಕೋಲು,– ದಂಡ: ಮುತ್ತಿನ ಸತ್ತಿಗೆ ಮುತ್ತಿನ ಹೆಗ್ಗ[ಪಾಕಾಂ. ಗ್ಗಾ]ಳೆ ಮುತ್ತಿನ ಬಲುಪಂಜರಗಳ . . . ಅಂದಿತ್ತನಾ ರಾಯ ಮಗಳಿಗೆ (ರಾಮವಿ. ೮-೫೦). 'ಪೆರ್ಗಳೆ' ಪರಾ. [< ಪಿರಿದು₁ + ಗಳೆ (< ಗಟೆ)]

ಹೆಗ್ಗಳ್ಕಂಗಡಲೆ, ಹೆಗ್ಗಳಂಗಡಲೆ (ನಾ). ದೊಡ್ಡ ಜಾತಿಯ ಕಳ್ಳಂಗಡಲೆ: ಹೆಗ್ಗಳ್ಕಂಗಡಲೇಬೇರು, ಕಿರುಗಳ್ಳಂಗಡಲೇಬೇರು . . . ನಾಗಕೇಸರ ಇವಿಷ್ಟನೂ ಪ್ರತ್ಯೇಕ ಎರಡು ವರಹ ತೂಕ ಆಡಿನ ಹಾಲಿಂದ ಅರೆದು ಕುಡಿಯ ಕೊಡಿಸಲು ಶ್ಲೇಷ್ಮಯುಕ್ತವಾದ ಯೋನಿ ಶುದ್ಧವಹುದು (ಪ್ರಧ್ಯಸಾ. II, ೪೧). **ಹೆಗ್ಗಳಂಗಡಲೆ**: ''ಅತಿಬಲ-ಹೆಗ್ಗಳಂಗಡಲೆ'' (ಅಕಾವಿ. ೧-೨೪). [< ಪಿರಿದು₁ + ಕಳ್ಳಂಗಡಲೆ]

ಹೆಗ್ಗಱಿ 'ಪೆರ್ಗಱಿ' ನೋ.

ಹೆಗ್ಗಾಡು 'ಪೆರ್ಗಾಡು' ನೋ.

ಹೆಗ್ಗಾಣೆ 'ಹೆಗ್ಗಹಳೆ' ನೋ.

ಹೆಗ್ಗಾರ (ನಾ). ೧. ಒಂದು ಬಗೆಯ ಪಕ್ಷಿ; ಟಿಟ್ಟಿಭ: ''ಹೆಗ್ಗಾರಂ ಭರದ್ವಾಜಮೆಂದನಿಕ್ಕುಂ'' (ಮಂಗರಾ. ೫೧-೪). ೨. ಗಿಣಿ; ಶುಕ: ಮದನ ಹೆಗ್ಗಾರನನೇಱಿದಂತಾ ರಾಯ ಕುದುರೆಯನೇಱಿ ಮೋಹಿಸಿದ (ಭರಚ. ೨೪-೧೪); ಮೊಗ್ಗೆಗೋಲನ ಸಭೆಗಿನಿಸು ತಗ್ಗಿ ಬಾ ಮೆಲ್ಲನೆ ಬಾರೆಂದು ಹೆಗ್ಗಾರ ನುಡಿದುವಲ್ಲಲ್ಲಿ (ಭರಚ. ೪೭-೬೦). 'ಕಾರೆ₂' ಪರಾ. [?]

ಹೆಗ್ಗಾರೆ (ನಾ). ಒಂದು ಬಗೆಯ ಮರ: ಹೆಗ್ಗಾರೆ ಕಿರಿದಾಲ ಹೆದ್ದಾಲ . . . ಹೊನ್ನೆ ಮೊದಲಾದ ವೃಕ್ಷಂಗಳಿಂ (ಮಹಾವಿ. ೧೭-೨೬). [< ಪಿರಿದು₁ + ಕಾರೆ₂]

ಹೆಗ್ಗಾಲುವೆ (ನಾ). (ನೀರು ಹಾಯಿಸಲು ಮಾಡಿರುವ) ದೊಡ್ಡದಾದ ನಾಲೆ,– ಕಾಲುವೆ: ಬಡಗಣ ಮೇರೆ ಪಡುವ ಮುಂದಾಗಿ ತೋಟಕ್ಕೆ ಹರಿದ ಹೆಗ್ಗಾಲುವೆ (ಸೌಗಾ. IX-i, ೨೬೩-೯೫; 1179); ಹೆಗ್ಗಾಲುವೆಗಳಿಂದ ಉಪಶಾಖೆಗಳನ್ನು ತೆಗೆಯುತ್ತಾರೆ (ಭೂವಿವ. ೨೪೪). 'ಪೆರ್ಗಾಲ್'' ಪರಾ.

[< ಪಿರಿದು₁ + ಕಾಲುವೆ (< ಕಾಲ್ವಾಯ್)]

ಹೆಗ್ಗಾವಲಿ 'ಪೆರ್ಗಾವಲಿ' ನೋ.

ಹೆಗ್ಗಾಳ (ನಾ). ದೊಡ್ಡ ಕಪ್ಪುನಾಯಿ: ತರವೇಟ್ ಸಾಳುವವೇಗನಂ ತೊಗರನಂ ಹೆಗ್ಗಾಳನಂ ಜೂಗನಂ (ನಳಚಂ. ೬೬). [< ಪಿರಿದು₁ + ಕಾಳ್₄]

ಹೆಗ್ಗಾಳಿ 'ಹೆಗ್ಗಹಳೆ' ನೋ.

ಹೆಗ್ಗಿಡ (ನಾ). ದೊಡ್ಡ ಗಿಡ; ಎತ್ತರವಾದ ಗಿಡ: ಕಾಡೆಲ್ಲ ಕಸುಗಾಯಿ ನಾಡೆಲ್ಲ ಹೆಗ್ಗಿಡವು ಆಡಿದ ಮಾತು ನಿಜವಿಲ್ಲ ಮಲೆನಾಡ ಕಾಡು ಸಾಕೆಂದ (ಸರ್ವಜ್ಞ. ೧೬೨೧). [< ಪಿರಿದು$_1$ + ಗಿಡ (< ಗಿಡು)]

ಹೆಗ್ಗಿಡಿ 'ಪೆರ್ಗಿಡಿ' ನೋ.

ಹೆಗ್ಗಿಡುಗ 'ಪೆರ್ಗಿಡುಗ' ನೋ.

ಹೆಗ್ಗಿರಿ (ನಾ). ದೊಡ್ಡ ಬೆಟ್ಟ: ಹೆಗ್ಗಿರಿಯೊಂದ ಕಿತ್ತೆತ್ತಿ ಡೆಂಡಣಿಸಿ ಬಲುಹಿಂದ ಕಪಿಭಟ ಮಂಡೆಯಲಿ ಹೊತ್ತೆತ್ತಿ ತಂದನು (ಕೌಶಾ. ೧೬-೭); ನಿಡುದೊರೆಗಳ ಹೇರಾಸಿ ಹೆಗ್ಗಿರಿ ನುಗ್ಗಿದಸ್ಥಿಗಳ ಸರಿಬೆರಕೆಯಲಿ ಭೂತಕೋಟಿಯ ನೆರವಿಗುಣ ಬಡಿಸಿದವೊಲಿರ್ದುದು ಖರವಿರೋಧಿಯ ಕದನಕರ್ಕಶಭ್ರಾಣಪರ್ವದಲಿ (ತೊರಾ. ೬-೪೫-೬೧). [< ಪಿರಿದು$_1$ + ಗಿರಿ$_1$]

ಹೆಗ್ಗಿವಿ (ನಾ). ದೊಡ್ಡ ಕಿವಿ; ಅಗಲವಾದ ಕಿವಿ: ಗುಂಜುರುದಲೆಯ ಹೆಗ್ಗಿವಿಯ ಬಸುಱ ಹೊದ್ದಿದ ತೋರಮೊಲೆಗಳ ವಿಷಯರಕ್ತಾಸಕ್ತಮಯ ರಾಕ್ಷಸವಧೂನಿಕುರುಂಬವಿದ್ದುದದೊಂದು ತಾಣದಲಿ (ತೊರಾ. ೫-೨-೭೦). [< ಪಿರಿದು$_1$ + ಕಿವಿ$_3$]

ಹೆಗ್ಗುಂಟೆ (ನಾ). ದೊಡ್ಡ ಹಳ್ಳ; ಭಾರಿ ಹಳ್ಳ: ಬೆಂಕಿಯ ಉರಿ ಆರಿದ್ದರೂ ಹೆಗ್ಗುಂಟೆಗಳಲ್ಲಿ ಕೆಂಡ ನಿಗಿನಿಗಿ ಝಗಿಸುತ್ತಿತ್ತು (ಮಲೆಮ. ೬೮೧). [< ಪಿರಿದು$_1$ + ಕುಂಟೆ$_2$]

ಹೆಗ್ಗುಂಡು 'ಪೆರ್ಗುಂಡು' ನೋ.

ಹೆಗ್ಗುಡ್ಡ (ನಾ). ದೊಡ್ಡ ಗುಡ್ಡ; ಹೆಗ್ಗುಡ್ಡದೊಳ್ಪಿಂದ ಪೆಟಲ ಮದ್ದ ಸುಡಲ್ಕಗ್ಗಿ ಗಿಡಿಯಿಂದಳಿದ ಹೆಗ್ಗನಂತಂಗಜಂ ಬುಗ್ಗಿಯಾದಂ (ಮದೇಪು. ೧೨-೧೮).

[< ಪಿರಿದು$_1$ + ಗುಡ್ಡ$_2$]

ಹೆಗ್ಗುದಿಗೆ (ನಾ). ದೊಡ್ಡ ದೊಣ್ಣೆ: ನೆಲ್ಲಿಯ ಕಾಯ್ಗಳ ಹೆಗ್ಗುದಿಗೆಯೊಳಿಡೆ ಚಲ್ಲವರಿದು ಬೀಳುವಂತೆ ಬಲ್ಲಿದ ಪಾನರು ಚಿಗಿದು ಬಿಟ್ಟಾಕ್ಷಣ ಹಲ್ಲ ಕಿರಿದರಗಳೊಳಗೆ (ಕಂನವಿ. ೧೪-೭೯). [< ಪಿರಿದು$_1$ + ಗುದಿಗೆ]

ಹೆಗ್ಗುನ್ನಿ (ನಾ). ದೊಡ್ಡ ಬೇಟೆನಾಯಿ: ಬಸುಱ ಬಗಿ ಕರುಳನುಗಿ ಕೆಡಹು ತಿನ್ನು ತಿದಿಗಳ ಮೂಳೆಯಂ ಮುಱಿಯೆನುತ್ತ ಹೆಗ್ಗುನ್ನಿಗಳ ತಲೆದಡವಿ ಹಾಸಮಂ ತಿವಿದು ಕವಿದರು ಬೇಡರೆಣ್ಣೆಸೆಯೊಳು (ಹಚಕಾ. ೬-೨೪). [< ಪಿರಿದು$_1$ + ಕುನ್ನಿ]

ಹೆಗ್ಗುರಂಟಿಕೆ 'ಪೆರ್ಗುರುಂಟಿಗೆ' ನೋ.

ಹೆಗ್ಗುರಟಿಗೆ 'ಪೆರ್ಗುರುಂಟಿಗೆ' ನೋ.

ಹೆಗ್ಗುರಿ (ನಾ). ಹಿರಿಯ ಗುರಿ,- ಧ್ಯೇಯ ,- ಉದ್ದೇಶ: ಜನರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವುದೇ ಕಾವ್ಯದ ಹೆಗ್ಗುರಿ (ಭಾರದ. ೪೪೫).

[ಪಿರಿದು$_1$ + ಗುರಿ$_1$ (< ಕುಱ್$_2$)]

ಹೆಗ್ಗುರುಟಗೆ 'ಪೆರ್ಗುರುಂಟಿಗೆ' ನೋ.

ಹೆಗ್ಗುರುಟಿಕೆ 'ಪೆರ್ಗುರುಂಟಿಗೆ' ನೋ.

ಹೆಗ್ಗುರುಟಿಗೆ 'ಪೆರ್ಗುರುಂಟಿಗೆ' ನೋ.

ಹೆಗ್ಗುರುತು (ನಾ). ಮುಖ್ಯವಾದ ಗುರುತು , — ಚಿಹ್ನೆ: ಲಿಂಗವು ಶೈವಮತದ ಹೆಗ್ಗುರುತು (ಭಾರದ.೨೦೮); ಅವು ಮಕ್ಕಳಿಗೆ ಕಥೆಯನ್ನು ಜ್ಞಾಪಕದಲ್ಲಿ ನಿಲ್ಲಿಸುವ ಹೆಗ್ಗು ರುತುಗಳಾಗುತ್ತವೆ (ಸಮಾಲೋ. ೧೨೪). [ಪಿರಿದು$_1$ + ಗುರುತು (< ಗುಱುತು)]

ಹೆಗ್ಗುರ್ಬು (ನಾ). ಒಂದು ಬಗೆಯ ಮೀನು: ಕಾಗಂಡೆ ಹೆಗ್ಗುರ್ಬು ಹೆಂಗರಿಗಂ . . . ಪಂದಿಗನೆಂಬ ಮೀನ್ಗೆಗದನಾ ಭಕ್ತಂ ಮಹಾಲೀಲೆಯಿಂ (ಶ್ರಿಪುವಿ. ೫೭-೮). [?]

ಹೆಗ್ಗುಳ 'ಹೆಗ್ಗುಳ್ಳ' ನೋ.

ಹೆಗ್ಗುಳ್ಳ, ಹೆಗ್ಗುಳ (ನಾ). ಒಂದು ಬಗೆಯ ದೊಡ್ಡ ಜಾತಿಯ ಬದನೆ,— ಗುಳ್ಳದ ಕಾಯಿ: ಹೆಗ್ಗುಳ್ಳ, ನೆಲಗುಳ್ಳ, ಇವ ತೈಲದಲ್ಲಟ್ಟು ಹೊಟ್ಟೆಗೆ ಕುಡಿಯೆ ಬಾಣಂತಿರೋಗ ಹರ (ಎಷ್ಟವಿ. ೮೧); ಹಾಗಲ ಬದನೆ ಹೆಗ್ಗುಳ್ಳ ಪಡವಲ (ಆನಂರಾ. ೬-೨೫-೩೯). **ಹೆಗ್ಗುಳ:** ಅಗ್ಗ ಸುಗ್ಗಿಗಳುಂಟು ದೊಗ್ಗೆ ಮಜ್ಜಿಗೆಯುಂಟು ಹೆಗ್ಗುಳದ ಕಾಯಿ ಮೆಲಲುಂಟು (ಸರ್ವಜ್ಞ. ೧೬೦೯); ಹೆಗ್ಗುಳದ ಬೇರು . . . ಕಷಾಯವಿಟ್ಟು . . . ಸೇವಿಸಿದರೆ ವಾತಜ್ವರಂ ತೀರ್ಗುಂ (ಸಕೃ. ೬೪). 'ಹೆಬ್ಬುಗುಳ್ಳ' ಹೋ.

[< ಪಿರಿದು$_1$ + ಗುಳ್ಳ]

ಹೆಗ್ಗುಱಿ 'ಪೆರ್ಗುಱಿ' ನೋ.

ಹೆಗ್ಗುಱುಹು 'ಪೆರ್ಗುಱುಪು' ನೋ.

ಹೆಗ್ಗೂಗಟೆ (ನಾ). ಒಂದು ಬಗೆಯ ದೊಡ್ಡ ಜಾತಿಯ ಅಂಟುವಾಳ: "ಮಂಡೂಕಪರ್ಣಃ, ಪತ್ರೋರ್ಣಃ, ನಟಃ . . . ಕುಟನ್ನಟಃ, ಶೋಣಕಃ, ಅರಳುಃ - ೧೨ ಹೆಮ್ಮರನ ಹೆಸರುಗಳು. ದೊಡ್ಡಮರ, ತಿಗಡುಮರ, ಇದನ್ನು ಹೆಗ್ಗೂಗಟೇಮರವೆಂದು ಕೆಲವರನ್ನುವರು" (ಸಿದ್ಧಾಂಶಿ. ೧೨೫). [< ಪಿರಿದು$_1$ + ಕೂಗಟೆ$_1$]

ಹೆಗ್ಗೂರಿಡು 'ಪೆರ್ಗೂರಿಡು' ನೋ.

ಹೆಗ್ಗೂರು 'ಪೆರ್ಗೂರು' ನೋ.

ಹೆಗ್ಗೂಳಿ (ನಾ). ದೊಡ್ಡ ಗೂಳಿ: ನಲಿನಲಿದು ಹೆಗ್ಗೂಳಿ ಹಿಗ್ಗಲು ನೆಲನು ಮಿಬ್ಬಗಿಯಾಗಿ ವಟಕುಜವಲೆಯ ಬೇರ್ಗಳು ಛಿಟಛಿಟೆನುತಂ ಕೀಳೆ ಪುಟನೆಗೆದು (ಬಸಪು. ೩೨-೨೪). [< ಪಿರಿದು$_1$ + ಗೂಳಿ$_1$]

ಹೆಗ್ಗೆ (ನಾ). ೧. ಮರದ ಎಳೆಯ ಗೆಲ್ಲು,— ರೆಂಬೆ: ಮನೆಗಳ ಅಂಗಳದಲ್ಲಿ ಕಪ್ಪಾಗಿ ಬೆಳೆದ ಹಲಸಿನ ಮರ. ಇದಿರಿನ ಹಿತ್ತಲಿಗೂ ಹೆಗ್ಗೆ ಚಾಚಿ ರಸ್ತೆಗೆ ತೋರಣ ಕಟ್ಟಿದೆ (ಮೂಯದಾ. ೨೦೩). 'ಎಗೆ' ಪರಾ. ೨. ಒಂದು ಬಗೆಯ ಸಸ್ಯ: ಹೆಗ್ಗೆ,ಮಲೆಹೆಗ್ಗೆ (ಮೃಪಿಗಿ. ೪೪-೮೭೫). 'ಮಲೆಹೆಗ್ಗೆ' ಪರಾ. [ದೇ. ॥ ತುಳು. ಎಗ್ಗೆ]

ಹೆಗ್ಗೆಚ್ಚಲು 'ಪೆರ್ಗಚ್ಚಲ್' ನೋ.

ಹೆಗ್ಗೆಡೆ 'ಪೆರ್ಗಡೆ$_1$' ನೋ.

ಹೆಗ್ಗೆಣಸು (ನಾ). ದೊಡ್ಡ ಜಾತಿಯ ಗೆಣಸು: ಕುಂಟಗೆಣಸು, ಹೆಗ್ಗೆಣಸು (ಮೃಪಿಗಿ. ೩೧-೫೯೪); ದಣಿದು ಬಂದ ಕರಿಯನಿಗೆ ಹೆಗ್ಗೆಣಸು ಸುಟ್ಟುಕೊಟ್ಟು ಔತಣ ಮಾಡಿಸಿದ್ದೂ ಆಯಿತು (ಕುಡಿಕೂ. ೨೬೯). 'ಹೆಬ್ಬುಗೆಣಸು' ಹೋ.

[< ಪಿರಿದು$_1$ + ಗೆಣಸು (< ಗೆಬಸು)]

ಹೆಗ್ಗೆರೆ$_1$ 'ಪೆರ್ಗೆಱೆ$_1$' ನೋ.

ಹೆಗ್ಗೆರೆ$_2$ (ನಾ). ತಲೆಪಂಕ್ತಿ; ಮೇಲ್ಪಂಕ್ತಿ: ಈ ತನಕ ಮಾನವನು ಸಾಧಿಸಿರುವುದನ್ನು ಹೆಗ್ಗೆರೆಗಳಲ್ಲಿ ತಿಳಿದೆವು (ಮನೋಸಂ. ೨೫೩); ಆಯಾ ವ್ಯಕ್ತಿಯ ಭವಿಷ್ಯಜೀವನದ ರೂಪುರೇಖೆಗಳೂ ವ್ಯಕ್ತಿತ್ವದ ಹೆಗ್ಗೆರೆಗಳೂ ಈ ಕಾಲದಲ್ಲಿ ರೂಪುಗೊಳ್ಳಬೇಕು (ಶಿಕ್ಷದ. ೧೦೩). [ಪಿರಿದು$_1$ + ಗೆರೆ (< ಗೆಱೆ)]

ಹೆಗ್ಗೆಸಱು 'ಪೆರ್ಗಸಱು' ನೋ.

ಹೆಗ್ಗೆಱೆ 'ಪೆರ್ಗೆಱೆ' ನೋ.

ಹೆಗ್ಗೊಂಚಿ (ನಾ). ಒಂದು ಬಗೆಯ ಆಯುಧ: ಕೊಂಕುಸರಳಿಂ ಹೊಸೆವ ಚಕ್ರದಿಂದಿಡುವ ಕುರುಪಿಂ ಕೆರೆವ ಕಾದಂಬನಿಂದೆಸುವ ಹೆಗ್ಗೊಂಚಿ[ಪಾಕಾಂ. ಗ್ಗೊಂಚಿ] ಯಿಂ ಕೊಯ್ಯ . . . ರೌರವದ ನರಕಂ ಭಯಂಕರವಾದುದು (ಸಿದ್ಧರಾ. ೮-೨೮). [?]

ಹೆಗ್ಗೊಂಬು 'ಪೆರ್ಗೊಂಬು' ನೋ.

ಹೆಗ್ಗೊಡ (ನಾ). ದೊಡ್ಡ ಬಿಂದಿಗೆ: ಈ ಹೊನ್ನಪೀಠವೇಕೆಮಗಯ್ಯ ಕಿಸುವೊನ್ನ ಹೆಗ್ಗೊಡನೊ . . . ಚರುವಿಗೆಯೊ ಸಟ್ಟುಗವೊ (ಸಿದ್ಧರಾ. ೯-೩). [< ಪಿರಿದು$_1$ + ಕೊಡ$_2$]

ಹೆಗ್ಗೊಡೆ (ಕ್ರಿ). (?): ರುಜುಮತಿಗಳ ಧ್ಯಾವಾ[ನಾ]ಗ್ನಿಮುಖದಿ ನಿಂದ ವೃಜಿನ ಹೆಗ್ಗೊಡೆವಂತಾಯ್ತು (ಗೊಮ್ಮಟ. ೨-೭). [?]

ಹೆಗ್ಗೊನಮರ (ನಾ). ದೊಡ್ಡ ಜಾತಿಯ ಗೋನುಮರ: "ಮಹಾವೃಕ್ಷಃ- ಮುಂಡುಗಳ್ಳಿ, ಹೆಗ್ಗೊನಮರ" (ಓಷಧಿ. ೧೧೬). [< ಪಿರಿದು$_1$ + ಗೋನಮರ (< ಗೋನುಮರ)]

ಹೆಗ್ಗೊರವ 'ಪೆರ್ಗೊರವ' ನೋ.

ಹೆಗ್ಗೊಲೆ (ನಾ). ಭೀಕರವಾದ ಕೊಲೆ: ದಳವಾಯಿ ನಂಜರಾಜಯ್ಯನ ರಾಕ್ಷಸ ಪ್ರಕರಣದ ಹೆಗ್ಗೊಲೆಯಿಂದ ಆ ಶಿಬಿರದ ನರನಾಮಧಾರಕರೆಲ್ಲರೂ ಹತರಾಗಿ ಹೋಗಿ (ಮಂತ್ರಶ. ೪೮-೬). [< ಪಿರಿದು$_1$ + ಕೊಲೆ$_2$]

ಹೆಗ್ಗೊಳ್ಳಿ (ನಾ). ದೊಡ್ಡ ಕೊಳ್ಳಿ: ಉರಿವ ಮನೆಗಳನುರಿಗೊಳದ ಮಂದಿರಕೆ ನೂಕಿದನೊಡೆದು ಕೆಲವನು ಹಿರಿದು ಹೆಗ್ಗೊಳ್ಳಿಗಳಲಿಟ್ಟನು ಹೊಗೆಯದಾಲಯವ (ತೊರಾ. ೫-೮-೫೬). [< ಪಿರಿದು$_1$ + ಕೊಳ್ಳಿ$_1$]

ಹೆಗ್ಗೋರಂಟೆ (ನಾ). ದೊಡ್ಡ ಜಾತಿಯ ಮದರಂಗಿ ಗಿಡ: "ಕುರವಕಃ , ಶೋಣೇ

ತತ್ರ ಕೆಂಪು ಹುವ್ವುಗಳುಳ್ಳ ದೊಡ್ಡಗೋರಂಟಿ, ಹೆಗ್ಗೋರಂಟಿ'' (ಒಡ್ಡಾಂತಿ. ೧೨೯).

[< ಪರಿದು$_1$ + ಗೋರಂಟಿ]

ಹೆಗ್ಗೋರಟೆ (ನಾ). ದೊಡ್ಡ ಜಾತಿಯ ಗೋರಂಟೆ ಗಿಡ: ಹಿರೀಮದ್ದಿನ ಬೇರು, ಓಮ, ಹೆಗ್ಗೋರಟೆಯ ಬೇರು, ಕೊಳವಳಿಕೆಯ ಬೇರು, ಇವಿಷ್ಟನ್ನು ಪ್ರತ್ಯೇಕ ಒಂದು ವರಹ ತೂಕವನು ಕೂಡಿಸಿ . . . ಕುಡಿಯಕೊಡಿಸಲು (ವೈದ್ಯಸಾ. II, ೨೧೮).

[< ಪರಿದು$_1$ + ಗೋರಟೆ (< ಗೋರಂಟಿ]

ಹೆಗ್ಡೆ 'ಪೆರ್ಗಡೆ$_1$' ನೋ.

ಹೆಚ್ಚಪ್ಪಣೆವೃತ್ತಿ (ನಾ). ವಿಶೇಷವಾದ ತೆರಿಗೆಯ ರಿಯಾಯಿತಿ: ಉಭಯಂ ದ್ವಿತೀಯ ಶತಕದ ಅಗ್ರಹಾರಕ್ಕೆ ಈ ಹೆಚ್ಚಪ್ಪಣೆವೃತ್ತಿ ಸಹಾ ವೃತ್ತಿ ೮೧ ಯೆಂಮ್ಮತ್ತೊನ್ದು (ಎಕ. XIV, ಮ್ಯಸೂತು. ೧೧೫-೪೭; 1674).

[ಹೆಚ್ಚು$_2$ (< ಪೆರ್ಚು$_2$) + ಅಪ್ಪಣೆ + ವೃತ್ತಿ)]

ಹೆಚ್ಚಳ, ಪೆಚ್ಚಳ$_1$ (ನಾ).೧. ಅಧಿಕವಾಗಿರುವುದು; ಅಧಿಕ್ಯ: ಆ ನಿರ್ಜರರು ಭುವನದ ಲಲನೆಯರು ಮಾಯೆಯಲಿ ನೆಲೆ ಹೆಚ್ಚಳವೆನಿಸಿ ಕಾವದಕೆ ವಶವಿಲ್ಲೆನಿಸಿಕೊಂಡಿಹರು (ತಿಮ್ಮಅ. ೫-೪೮); ಹಣದ ಹೆಚ್ಚಳದಲ್ಲಿ ಅವನ ವ್ಯಾಪಾರ ವಿಸ್ತಾರವಾಗುತ್ತಿತ್ತು (ನಿಜತ. ೨೧). ೨. ಹಿರಿಮೆ; ವೈಶಿಷ್ಟ್ಯ: ಬೆಚ್ಚುವರು ಬಲಹೀನರವರಲಿ ಹೆಚ್ಚಳವ ಮೆಜೆಯೆಂದು (ಉತ್ತರಾ. ೧೫-೩೬); ಪ್ರಭುವು ಅದನ್ನು ಸ್ವೀಕರಿಸುವುದೇ ನಮಗೊಂದು ಹೆಚ್ಚಳ (ಸಪತಿ. ೨೦೮). ೩. ಸಂತೋಷ; ಹಿಗ್ಗು: ರಾಜ್ಯಭಾರಮಂ ಧರಿಸುವನೆಮ್ಮ ಚಾಮನ್ಯಪನೆಂದಖಿಲಪ್ರಚೆಗಾಯ್ತು ಹೆಚ್ಚಳಂ (ಮರಾಚ. ೬-೫). ೪. ಗರ್ವ; ಅಹಂಕಾರ: ತಪಸ್ಸಿನ ಹೆಚ್ಚಳದೊಳಿಂದ್ರನ ಸಮೃದ್ಧಿಯ ತುಚ್ಛವಾಗಿಯೇ ಮಾಡಿದನು ದುರ್ವಾಸ (ಅಮೃತ. ೨-೨೬). Δ **ಪೆಚ್ಚಳ$_2$**: ೧. 'ಪೆಚ್ಚಳಿಸು' ಪರಾ.

[< ಪೆಚ್ಚು$_1$ ./ತುಳು. ಹೆಚ್ಚಳ]

ಹೆಚ್ಚಳವಡಿಸು (ಕ್ರಿ). ಸಂತೋಷವುಂಟಾಗುವಂತೆ ಮಾಡು: ಕಾಂತನಿಗೆ ಹೆಚ್ಚಳವಡಿಸಲ್ಕೆ ಕೊಂಬು ಜೇರ್ಕೊಳವಯೊಳೆಚ್ಚಾಡುತಿರ್ದರೋಕುಳಿಯ (ಮೋಹತ. ೧೪-೬೪). [ಹೆಚ್ಚಳ + ಪಡು$_1$ + - ಇಸು$_1$]

ಹೆಚ್ಚಳಿಕೆ (ನಾ) ೧. ವೈಶಿಷ್ಟ್ಯ; ಹಿರಿಮೆ: ನಿನ್ನಮಲನಗರಿಯ ಹೆಚ್ಚಳಿಕೆಯನು ನೋಡಬೇಕೆಂಬಾಶೆ ತನಗೆ (ರಾಮಾಸಂ. ೬-೧೧೩). ೨. ಸಂತೋಷ; ಹಿಗ್ಗು: ಅದು ಊರಿನವರಿಗೂ ಅವರ ಬಂಧುವರ್ಗಕ್ಕೂ ಹೆಚ್ಚಳಿಕೆಯೇ ಆಗಿದ್ದಿತು (ಅನಾಮಿ. ೬೪). [ಹೆಚ್ಚಳ + - ಇಕೆ]

ಹೆಚ್ಚಳಿಸು, ಪೆಚ್ಚಳಿಸು (ಕ್ರಿ). ೧. ಉತ್ಸಾಹಗೊಳ್ಳು: ಅಚ್ಚಬೆಳ್ದಿಂಗಳೊಲ್ಮತ್ತೊರ್ವನಿನಿಯಳಂ ನಿಚ್ಚಟದೊಳುಳಿವಂತೆ ನೀವಿಯಂ ಬರೆಸಳೆದು ಹೆಚ್ಚಳಿಸಿ (ಚೆನುಭಾ. ೨೬-೧೯). Δ **ಹೆಚ್ಚಳಿಸು**: ೨. ಅಧಿಕವಾಗು; ಹೆಚ್ಚು: ಕೂರ್ಮ ಪೆಚ್ಚಳಿಸಿರ್ಪಂಗನೆಯೊಳ್ ಕರಂ ಸರಸಸಲ್ಲಾಪಂಗಳಿಂ ಪೆಂಪನೊಬ್ಬುಳಿಗೊಂಡು (ಕಮಮಾ. ೬-೧೪೯). [ಹೆಚ್ಚಳ + - ಇಸು$_1$]

ಹೆಚ್ಚಾಳು 'ಪೆರ್ಚಾಳ್' ನೋ.

ಹೆಚ್ಚಾಳುತನ (ನಾ). ೧. ಹಿರಿಮೆ; ವೈಶಿಷ್ಟ್ಯ; ಹೆಚ್ಚಳಿಕೆ: ಮೌಳಿ ಹತ್ತಲಿ ರಕ್ಕಸಗೆ ತನ್ನೊಳಿಗವನೆಚ್ಚಲಿಸದಿರೆ ಹೆಚ್ಚಾಳುತನಕತಿಕುಂಧನುತ ಮನದಂದನಾ ಹನುಮ (ತೊರರಾ. ೫-೪-೪). ೨. ಗರ್ವ; ಅಹಂಕಾರ: ಧಾಳಿಯಲಿ ಬಂದರಿಬಲದ ಹೆಚ್ಚಾಳುತನವನು ಮುಱಿದು ಸಂಧಿಯ ಮೇಲೆ ಧರ್ಮಜ ಬಂದು ಹೊಕ್ಕನು ಹಸ್ತಿನಾಪುರವ (ಕುವ್ಯಾಳ. ೧೭ ಸೂಚನೆ). [ಹೆಚ್ಚಾಳು (< ಪೆರ್ಚಾಳ್) + - ತನ]

ಹೆಚ್ಚಿಕೆ (ನಾ). ಹೆಚ್ಚುಗಾರಿಕೆ; ಮೇಲ್ಮೆ: ಹೆಚ್ಚಿಕೆಯ ನುಡಿಗೇಳ್ದು ಮಾಳ್ದನೊ ಮಚ್ಚರವ ಮಾರ್ಮಲೆತನೊ ಮನದಿಚ್ಛೆಯಱಿಯದೆ ನಡೆದನೊ ಬಿಡುನುಡಿದನೊ ರತಿಗೆ (ಮದೇವು. ೬-೨೪); ಎಲ್ಲರ ಬಯಕೆಗೂ ಮೆಚ್ಚಿಕೆಗೂ ಅವಕಾಶ ಕೊಟ್ಟು ಚಿನ್ನ ಬೆಳ್ಳಿ ಲೋಕದಲ್ಲಿ ಹೆಚ್ಚಿಕೆ ಪಡೆದಿವೆ (ಹಣಪ್ರ. ೧೭). [ಹೆಚ್ಚು (< ಪೆರ್ಚು$_1$) + - ಇಕೆ]

ಹೆಚ್ಚಿಗೆ$_1$ 'ಪೆರ್ಚುಗೆ' ನೋ.

ಹೆಚ್ಚಿಗೆ$_2$ (ಅ). ಹೆಚ್ಚಾಗಿ; ಅಧಿಕವಾಗಿ: ಎಷ್ಟು ನೋಡಿದಾಗ್ಯೂ ಸಾಕಾಗದೆ ಮತ್ತೂ ಹೆಚ್ಚಿಗೆ ನೋಡಬೇಕೆಂದು ಅವೇಕ್ಷೆ ಹುಟ್ಟಿಸುವ ಒಡವೆ (ಗಂಗಾಮ. ೨೦). [< ಪೆರ್ಚುಗೆ]

ಹೆಚ್ಚಿಸು 'ಪೆರ್ಚಿಸು' ನೋ.

ಹೆಚ್ಚು$_1$ 'ಪೆರ್ಚು$_1$' ನೋ.

ಹೆಚ್ಚು$_2$ 'ಪೆರ್ಚು$_2$' ನೋ.

ಹೆಚ್ಚುಗಟ್ಟಲೆ, ಹೆಚ್ಚುಗಟ್ಟೆ (ನಾ). ೧. ವಿಶೇಷವಾದ ಸಂದರ್ಭ: ದಿನಂ ಪ್ರತಿ ಉಡುಗೆಗೋ ಅಥವಾ ಹೆಚ್ಚುಗಟ್ಟಲೆ ಉಡಿಗೆಗೋ ಎಂಬುದನ್ನು ನಿಶ್ಚಯ ಮಾಡಿಕೊಳ್ಳಬೇಕು (ಗೃಹವಿ. ೭೮); ಊಟದ ತಟ್ಟೆ, ಬಟ್ಟಲು ಮತ್ತು ಹೆಚ್ಚುಗಟ್ಟಲೆಗೆ ಉಪಯೋಗಿಸುವ ಸಣ್ಣ ಪಾತ್ರೆಗಳು ಮತ್ತು ದೇವರ ವಿಗ್ರಹಗಳನ್ನು ಬೆಳ್ಳಿಯಿಂದ ಮಾಡಿಸುತ್ತಾರೆ (ಗೃಹವಿ. ೧೭೫). ೨. ಶ್ರಾದ್ಧ; ತಿಥಿ: ಹೆಚ್ಚುಗಟ್ಟಲೆಯ ದಿವಸ ಮನೆಯ ಮುಂದೆ ರಂಗೋಲಿ ಹಾಕಬಾರದು (ರೂಢಿ). **ಹೆಚ್ಚುಗಟ್ಟೆ**: ೧. ''ಇವತ್ತೇನ್ರೋ ಹೆಚ್ಚುಗಟ್ಟೆ?'' (ಮಲಿಮ. ೨೧); ಈ ದಿನ ಸಾಯಂಕಾಲ ದೇವಸ್ಥಾನದಲ್ಲಿ ಹೆಚ್ಚುಗಟ್ಟೆ (ಸುಬ್ಬಾ. ೭೫).

[ಹೆಚ್ಚು$_2$ (< ಪೆರ್ಚು$_2$) + ಕಟ್ಟಲೆ (< ಕಟ್ಟಳೆ$_1$)]

ಹೆಚ್ಚುಗಟ್ಟೆ 'ಹೆಚ್ಚುಗಟ್ಟಲೆ' ನೋ.

ಹೆಚ್ಚುಗಾರಿಕೆ 'ಹೆಚ್ಚುಗಾಱಿಕೆ' ನೋ.

ಹೆಚ್ಚುಗಾಱಿಕೆ, ಹೆಚ್ಚುಗಾರಿಕೆ (ನಾ). ದೊಡ್ಡಸ್ತಿಕೆ; ಹಿರಿಮೆ: ಮೆಚ್ಚರು ತಿಹಳು ಭಾವನ ರೂಪು ಕುಲ ಶೀಲ ಹೆಚ್ಚೆಂದು ತನ್ನೆದೆಯೊಳಗೆ ಒಚ್ಚೆಯಗೊಡದಾಗ ತವರೂರ ಮೇಲಣ ಹೆಚ್ಚುಗಾಱಿಕೆಗಾಡುತಿಹಳು (ಭರಚ. ೯-೪೪). **ಹೆಚ್ಚುಗಾರಿಕೆ**: ಅವನ ಮಾತಿನಲ್ಲೇನೂ ಹೆಚ್ಚುಗಾರಿಕೆಯಿರಲಿಲ್ಲ (ಅಲಹೂ. ೧೧೬); ಇವರಿಗೆ ಕೊಡವ ನಾನು ತಿಂದುಹಾಕಿದರಲ್ಲವೇ ಇರುವುದು ಹೆಚ್ಚುಗಾರಿಕೆ! (ಪಂಚಾಮೃ. ೭೬).

[ಹೆಚ್ಚು$_1$ (< ಪೆರ್ಚು$_1$) + ಗಾಱ + - ಇಕೆ]

ಹೆಚ್ಚುಗುಣಿಸು (ಕ್ರಿ). [ಗಣಿತ] ಗುಣಾಕಾರಮಾಡು: (ಕ).

[ಹೆಚ್ಚು$_1$ (< ಪೆರ್ಚು$_1$) + ಗುಣಿಸು]

ಹೆಚ್ಚುಗೆ 'ಪೆರ್ಚುಗೆ' ನೋ.

ಹೆಚ್ಚುಕೊಳ್ಳು (ಕ್ರಿ). ಅಧಿಕವಾಗು; ಹೆಚ್ಚಾಗು: ಹಗಲುದರೋಡೆ ಈಚೀಚೆಗೆ ಹೆಚ್ಚುಗೊಳ್ಳುತ್ತಿದೆ (ರೂಢಿ). 'ಪೆರ್ಚುಗೊಳ್' ಪರಾ.

[ಹೆಚ್ಚು$_2$ (< ಪೆರ್ಚು$_2$ + ಕೊಳ್ಳು$_1$ (< ಕೊಳ್$_1$)]

ಹೆಚ್ಚುಬೇಡಿಗೆ (ನಾ). ಹೆಚ್ಚಿನ ತೆರಿಗೆ; ವಿಶೇಷವಾದ ತೆರಿಗೆ: ದೇವರಾಯವಟ್ಟ ಹೆಚ್ಚುಬೇಡಿಗ ಗ್ರಾಮಾದಾಯ ಚರಾದಾಯ ಹೊರಾದಾಯ ಯಿವು ಮೊದಲಾದ ಸಕಲಸ್ವಾಮ್ಯವನ್ನು . . . ಸುಖದಿಂದನುಭವಿಸಿಕೊಂಡಿಹರು (ಎಕ. IV(s), ಪಾಂಡವ. ೯೯-೬೭; 1722). [ಹೆಚ್ಚು$_1$ (< ಪೆರ್ಚು$_1$) + ಬೇಡಿಗೆ]

ಹೆಚ್ಚುಮಗ್ಗಿ (ನಾ). ಹತ್ತರಿಂದ ಮುಂದಿನ ಮಗ್ಗಿ; ೧೧ x ೧೧ ಎಂದು ಪ್ರಾರಂಭವಾಗುವ ಮಗ್ಗಿ: (ಕ). [? + ಮಗ್ಗಿ]

ಹೆಚ್ಚುಲಿಹುಲ್ಲು (ನಾ). ಒಂದು ಬಗೆಯ ಹುಲ್ಲು: ''ಹೆಚ್ಚುಲಿಹುಲ್ಲು, ಬಲ್ಲಜ, ಗಂಜಳದ ಹೂ'' (ಸಪ್ತ. ೫೪). [? + ಹುಲ್ಲು (< ಪುಲ್)]

ಹೆಚ್ಚುವರಿ (ಗು). ೧. ಅಧಿಕವಾದ; ಹೆಚ್ಚಳವಾದ. (ನಾ). ೨. ಅಗತ್ಯಕ್ಕಿಂತ ಹೆಚ್ಚಾಗಿ ಮಿಕ್ಕುದು: ''ಹೆಚ್ಚುವರಿ; ಉಳಿತಾಯ'' (Surplus. ಸತ್ರಿನಿ. ೪೦).

[ಹೆಚ್ಚು$_1$ (< ಪೆರ್ಚು$_1$) + - ವರಿ$_2$]

ಹೆಚ್ಚೆ (ನಾ). (?): ಅಚ್ಚುತಾನಂತನೆ ತೋರೋ ಶ್ರೀರೂಪವ ಸಚ್ಚಿದಾನಂದ ತೋರೆನಗೆ ಹೆಚ್ಚೆಯು ಮಾಡದೆ ನಿನ್ನ ವನವೆಲ್ಲ ತಿರುಗಿ ಹುಚ್ಚುಮಾಡುವೆನಯ್ಯ ಕ್ಷಿತಿಪತಿಸೇವ್ಯ (ವಾದಿಕೀ. ೪೬-೨). [?]

ಹೆಜೀಬು 'ಹೇಜೀಬ' ನೋ.

ಹೆಜುಂಕ 'ಪೆರ್ಜುಂಕ' ನೋ.

ಹೆಜ್ಜ 'ವೆಜ್ಜ' ನೋ.

ಹೆಜ್ಜವಿಡು (ಕ್ರಿ). ತೂತುಮಾಡು; ರಂಧ್ರಮಾಡು: ಮಸದು ಒಪ್ಪವ ಇಟ್ಟು ಮಾಣಿಕರ ಸುಮಸೂತ್ರವು ಆಡುವಂದದಿ ಹೊಸಮುತ್ತುಗಳ ಹೆಜ್ಜವಿಟ್ಟು ಪೋಣಿಗಿಯ ತೆರದಿ (ಸಂದರೀ. ೧-೨೬). [ಹೆಜ್ಜ (< ವೆಜ್ಜ) + ಇಡು$_1$]

ಹೆಜ್ಜಾಜಿ (ನಾ). ಒಂದು ಬಗೆಯ ಜಾಜಿಹೂವಿನ ಗಿಡ ಮತ್ತು ಅದರ ಹೂವು:

''ಸಪ್ತಲಾ, ನವಮಾಲಿಕಾ - ೨ ವೀರಜಾಜೀಹುವ್ವಿನ ಗಿಡ, ಹೆಜ್ಜಾಜೀ ಗಿಡ'' (ಸದ್ಗಾಂತ. ೧೨೮). [< ಪಿರಿದು$_1$ + ಜಾಜಿ$_1$ (< ಜಾದಿ$_1$)]

ಹೆಜ್ಜಾರಿಗೆ (ನಾ). ಒಂದು ಬಗೆಯ ಮರ: ಕರಂಡಹಣ್ಣಿನ ಗಿಡ, ಕಬಳಿಗಿಡ, ಕಳಾಗಿಡ, ದೊಡ್ಡಕಾವಲಿ, ಹೆಜ್ಜಾರಿಗೆ (ಮೃಡಿಗ. ೧೮-೩೨೨). [< ಪಿರಿದು$_1$ + ಜಾರಿಗ]

ಹೆಜ್ಜಾಲ (ನಾ). ಒಂದು ಬಗೆಯ ಮರ; ಕದಂಬವೃಕ್ಷ: ಹೆಜ್ಜಾ[ಪಾಕಾಂ. ಬ್ಯಾ]ಲ ಹೆದ್ದುಂಬರೌದುಂಬುರಂಗಾಲವದನಿಸಿ ನಾನಾಭೂಜದೊಗ್ಗಿನಿಂ ಕಾನನಂ ಕಣ್ಗೆಸದುದು (ಸೋಮಚ. ೩-೨). [< ಪಿರಿದು$_1$ + ಜಾಲ$_1$]

ಹೆಜ್ಜಾಲೆ (ನಾ). ಒಂದು ಬಗೆಯ ಸಸ್ಯ: ''ಚತಃ- ಹೆಜ್ಜಾಲೆ, ಶಬಾಂಗಾರ'' (ಓಷಧಿ. ೫೬). [< ಪಿರಿದು$_1$ + ಜಾಲೆ$_4$]

ಹೆಜ್ಜಿಗಣಿ (ನಾ). ದೊಡ್ಡ ಜಿಗಣಿ, - ಜಿಗಳೆ: ''ದುರ್ನಾಮಾ, ದೀರ್ಘಕೋಶಿಕಾ - ೨ ಆನೆಗಳ ರಕ್ತವನ್ನು ಹೀರಲುಳ್ಳ ದೊಡ್ಡ ಜಿಗಣೆ ಪೆಸರುಗಳು ಅಂದರೆ ಹೆಜ್ಜಿಗಣೆ'' (ಸದ್ಗಾಂತ. ೯೪). [< ಪಿರಿದು$_1$ + ಜಿಗಣೆ$_1$ (< ಜಿಗುಚೆ)]

ಹೆಜ್ಜೀಬ 'ಹೇಜೀಬ' ನೋ.

ಹೆಜ್ಜುಂಕ 'ಪೆರ್ಜುಂಕ' ನೋ.

ಹೆಜ್ಜುಗ್ಗಿ 'ಹೆರ್ಜುಗ್ಗಿ' ನೋ.

ಹೆಜ್ಜೆ 'ಪಜ್ಜೆ' ನೋ.

ಹೆಜ್ಜೆಕರಕಲು (ನಾ). ಒಂದು ಬಗೆಯ ಸಸ್ಯ: ಮದ್ದೆ, ಹೆಜ್ಜೆಕರಕಲು, ಹೆಕ್ಕೆರಕಲು, ಸಡ್ಡಿ (ಮೃಡಿಗ. ೫೮-೧೧೫೬). [?]

ಹೆಜ್ಜೆಕೀಳು (ಕ್ರಿ). ಅಡಿಯಿಡು; ಮುಂದೆ ಸಾಗು: ಬಯಲುದಾರಿಯುತ್ತ ಹೆಚ್ಚಕಿತ್ತರು (ದೀವಪಂ. ೨೦೪); ಬೇರೆ ಯಾವ ಅಪ್ಪ ಹೇಳಿದ್ದರೂ ನಾನು ಮುಂದೆ ಹೆಜ್ಜೆಕೀಳುತ್ತಿರಲಿಲ್ಲ (ಹಳ್ಳಹಾ. ೪೦). [ಹೆಜ್ಜೆ (< ಪಜ್ಜೆ) + ಕೀಳು$_1$ (< ಕೀಱ್$_1$)]

ಹೆಜ್ಜೆಕುಣಿತ (ನಾ). ಒಂದು ಬಗೆಯ ನೃತ್ಯ: 'ರಾವುತರ ದಾಳಿಯ' ನುಗ್ಗಾಟ, 'ಕಾಳಗದ ಪದ'[ನಾಟ್ಯ]ದ ಹೆಜ್ಜೆಕುಣಿತ, ತಮ್ಮಟದ ತಾಳ, - ಇವು ಒಂದೊಂದೂ ಒಂದೊಂದು ಗತ್ರನ್ನು ತೋರಿಸುವುವು (ವೀಭಾಮಂ. ೧೨೬). [ಹೆಜ್ಜೆ (< ಪಜ್ಜೆ) + ಕುಣಿತ]

ಹೆಜ್ಜೆಗಾಣ್ (ಕ್ರಿ). ನೆಲೆಯನ್ನು ಕಾಣು, - ಕಂಡುಕೊಳ್ಳು: ನಿಗಮವೀತನ ಹೆಜ್ಜೆಗಾಣವು (ಕುವ್ಯಾಳ. ೬೦೨. ೧೫-೨೧). [ಹೆಜ್ಜೆ (< ಪಜ್ಜೆ) + ಕಾಣ್]

ಹೆಜ್ಜೆದೆಗಹು (ನಾ). ಅಡಿಯಿಡುವುದು; ನಡಿಗೆ: ಮನುಕುಲಲಲಾಮರ ಮುಂದೆ ಸೂಚಿಸಿ ಸುಳಿದವ್ಕೆ ಹರಿಣಾಳಿ ಸೀತೆಯನೊಯ್ದ ಪಥವಿಡಿದು ಹೊಲಬುಗಾಱರ ಹೆಜ್ಜೆದೆಗಹಿನ ಚಲಿತ ಚಪಳದ ಚಾಳಿಯವೊಲ್ (ತೊರಕಾ. ೩-೧೨-೨).

[ಹೆಜ್ಜೆದಗ + - ಹ್ಮ$_3$ (< - ಪ್ಮು$_3$)]

ಹೆಜ್ಜೆದೆಗೆ (ಕ್ರಿ). ಅಡಿಯಿಡು; ನಡೆ: ಗುಜ್ಜರ ಗರುವಿಕೆಗಟ್ಟನು ಲಾಟನು ಲಜ್ಜೆಯೋದನು ದ್ರಾವಿಡನು ಹೆ[ಪಾಕಾಂ. ಹ]ಜ್ಜೆದೆಗೆದ ಹಿಂದಕೆ (ಜೀವಂಸಾಂ. ೧೭-೪೭).

[ಹೆಜ್ಜೆ (< ಪಜ್ಜೆ) + ತೆಗ$_1$]

ಹೆಜ್ಜೆನಮಸ್ಕಾರ (ನಾ). ಹರಕೆ ಹೊತ್ತವರು ಮಾಡುವ ಒಂದು ಬಗೆಯ ಸೇವೆ; ಪ್ರತಿಯೊಂದು ಹೆಜ್ಜೆ ಇಟ್ಟಾಗಲೂ ಬಗ್ಗಿ ಮಾಡುವ ನಮಸ್ಕಾರ; ಬಾವಿ ಅಥವಾ ಕಲ್ಯಾಣಿಯಲ್ಲಿ ಸ್ನಾನಮಾಡಿ ಆ ಜಾಗದಿಂದ ದೇವರ ಗುಡಿಯವರೆಗೂ ಒದ್ದೆಬಟ್ಟೆಯಲ್ಲಿಯೇ ನಡೆಯುತ್ತ ನಮಸ್ಕಾರ ಸಲ್ಲಿಸುವ ಸೇವೆ: ತೋಪಿನಲ್ಲಿಯ ಮೂರ್ತಿಗೆ ಹಣ್ಣುಕಾಯಿ ಮಾಡಿಸಿ, ಅಲ್ಲಿಂದಲೇ ಹೆಜ್ಜೆ-ನಮಸ್ಕಾರ ಸುರುವು ಮಾಡಿದಳು (ಗಂಗಾಸಾ. ೭೪). [ಹೆಜ್ಜೆ (< ಪಜ್ಜೆ) + ನಮಸ್ಕಾರ]

ಹೆಜ್ಜೆಪಾಡು (ನಾ). ಜಾಡಿನ ರೀತಿ; ಮಾರ್ಗದ ರೀತಿ: ತಿರುವಯ್ಯಾರಿನ ಸಂತ ತ್ಯಾಗರಾಜರು ತುಳಿದ ಹೆಜ್ಜೆಪಾಡನ್ನು ದಿಟ್ಟು ಹೊಸ ರೀತಿಯಲ್ಲಿ ಇದನ್ನು ರಚಿಸಿದ್ದಾರೆ (ಸಂಗೀತ. ೩೭). [ಹೆಜ್ಜೆ (< ಪಜ್ಜೆ) + ಪಾಡು$_3$]

ಹೆಜ್ಜೆಯಿಡು 'ಪಜ್ಜೆಯಿಡು' ನೋ.

ಹೆಜ್ಜೆವಿಡಿ 'ಪಜ್ಜೆವಿಡಿ' ನೋ.

ಹೆಜ್ಜೆಹಾಕು 'ಪಜ್ಜೆಹಾಕು' ನೋ.

ಹೆಜ್ಜೇನ್, ಹೆಜ್ಜೇನು (ನಾ). ೧. ದೊಡ್ಡಜಾತಿಯ ಜೇನುನೊಣ; ದೊಡ್ಡಜಾತಿಯ ಜೇನುಹುಳು: ಶಿಲೆಯೋವರಿಯೊಳ್ ಹೆಜ್ಜೇನ ಹುಟ್ಟ ಸೊಗಯಿಸಿ ತೋರ್ಕುಂ (ಸೂಕ್ತಿಸು. ೩-೮೪). **ಹೆಜ್ಜೇನು**: ೧. ಜೊತೆಗೆ ಅವೆಲ್ಲಾ ಹೆಜ್ಜೇನುಗಳು (ಕಳಹ. ೬೪). ೨. ಉತ್ತಮ ಮಟ್ಟದ ಜೇನುತುಪ್ಪ; ಉತ್ಕೃಷ್ಟವಾದ ಜೇನುತುಪ್ಪ: ಸಜ್ಜನರ ಸಂಗವದು ಹೆಜ್ಜೇನು ಕೊಡದಂತೆ ದುರ್ಜನರ ಸಂಗದೊಡನಾಟ ಬಚ್ಚಲಿನ ರೊಚ್ಚಿನಂತಿಹುದು (ಸರ್ವಜ್ಞ. ೦೧೯). [< ಪಿರಿದು$_1$ + ಜೇನ್$_1$]

ಹೆಜ್ಜೇನು 'ಹೆಜ್ಜೇನ್' ನೋ.

ಹೆಜ್ಜೇನ್ನೊಣ (ನಾ). = ಹೆಜ್ಜೇನ್ ೧: ಮೊರೆದುಲಿವ ನಸರಿ ಮೇಣ್ ತುದುವೆ ಮೇಣ್ ಹೆಜ್ಜೇನ್ನೊಣಂ (ಶ್ರೀರಾಮಾ. ೧೫೯-೧೧೮). [< ಪಿರಿದು$_1$ + ಜೇನ್ನೊಣ$_1$]

ಹೆಜ್ಜೊಡರ್ 'ಪೆರ್ಜೊಡರ್' ನೋ.

ಹೆಜ್ಜ್ವರ (ನಾ). ತೀವ್ರವಾದ ಜ್ವರ: ಹೆಜ್ಜ್ವರಕ್ಕೆ ಶುಂಠೀರಸ . . . ತ್ರಿಕಟುಕ, ಬಿಳಿಗಾರವರೆದು (ಕೊಡುವುದು) (ವೈಸಾ. ೨೩). [< ಪಿರಿದು$_1$ + ಜ್ವರ]

ಹೆಟ್ಟಿ$_1$ 'ಪೆಂಟೆ$_1$' ನೋ.

ಹೆಟ್ಟಿ$_2$ (ಗು). ಸಂತೋಷಪಟ್ಟ: ಋತ್ಪಕ್ಕೆತ್ಪಂ - ಹೃದಯ-ಹೆದೆಯ; ಹೃಷ್ಟ-ಹೆಟ್ಟ (ಶಮದ. ೨೬೨ ಪ್ರಯೋ). [< ಸಂ. ಹೃಷ್ಟ]

ಹೆಟ್ಟಿಗೆ 'ಪೆಟ್ಟಿಗೆ' ನೋ.

ಹೆಟ್ಟಿವೆಳಸು 'ಪೆಟ್ಟಿಮೆಟಸು' ನೋ.

ಹೆಟ್ಟಿಹೊಡೆ 'ಹೆಂಟೆಹೊಡೆ' ನೋ.

ಹೆಟ್ಟಿಗೆ$_1$ 'ಪೆಟ್ಟುಗೆ' ನೋ.

ಹೆಟ್ಟಿಗೆ$_2$ (ನಾ). ದೊಡ್ಡಗಾತ್ರದ ತೊಲೆ; ದೊಡ್ಡ ದಿಮ್ಮಿ: ಬಟ್ಟತಲೆಯವನಾದರೆ ಹೆಟ್ಟಿಗೆ ಹೊತ್ತಾನೇ? (ಗಾಡ). [< ಹೆಟ್ಟಿ$_1$]

ಹೆಟ್ಟಿಸು 'ಪೆಟ್ಟಿಸು' ನೋ.

ಹೆಟ್ಟು 'ಪೆಟ್ಟು$_1$' ನೋ.

ಹೆಟ್ಟುಗೆ 'ಪೆಟ್ಟುಗೆ' ನೋ.

ಹೆಟ್ಟೆ 'ಪೆಂಟೆ$_1$' ನೋ.

ಹೆಡ್‌ಗುಮಾಸ್ತ, ಹೆಡ್‌ಗುಮಾಸ್ತೆ (ನಾ). ಲೆಕ್ಕ ಬರೆಯುವವರಲ್ಲಿ ಮುಖ್ಯ ಗುಮಾಸ್ತ: ಆಚೆ ಮನೆ ತಾಲ್ಲೂಕುಹೆಡ್‌ಗುಮಾಸ್ತ್ರು, - ಅವರ ಸಂಬಳ ನಲವತ್ತು ರೂಪಾಯಂತೆ (ನವಾ. ೪೧); ಹೆಡ್‌ಗುಮಾಸ್ತರು ಕತ್ತೆತ್ತಿ ನೋಡಲಿಲ್ಲ (ಸುಬಾ. ೧). **ಹೆಡ್‌ಗುಮಾಸ್ತೆ**: ಶ್ರೀನಿವಾಸರಾಯರು . . . ಹೆಡ್‌ಗುಮಾಸ್ತೆಯರಾಗಿ ಉಳಿದರು (ಮುಪಾಗ. ೩); ಹೆಡ್‌ಗುಮಾಸ್ತೆ ರಾಮಣ್ಣನವರು . . . ಹರಟೆ ಹೊಡೆಯುತ್ತಿದ್ದರು (ಕಳಹ. ೧೦೩). [ಹೆಡ್$_0$ (P ← ಇಂ. Head) + ಗುಮಾಸ್ತ]

ಹೆಡ್‌ಗುಮಾಸ್ತೆ 'ಹೆಡ್‌ಗುಮಾಸ್ತ' ನೋ.

ಹೆಡ್‌ಮುನಶಿ, ಹೆಡ್ಮುನಶಿ (ನಾ). = ಹೆಡ್‌ಗುಮಾಸ್ತ: ನೀವೂ ಒಬ್ಬರು ಹೆಡ್‌ಮುನಶಿ ಆಗಿದೀರಲ್ಲ ಯಾಕೇಂತ? (ನವಾ. ೪೦). **ಹೆಡ್ಮುನಶಿ**: 'ಹೆಡ್ಮುನಶೀತನ' ಪರಾ. [ಹೆಡ್$_0$ (P ← ಇಂ. Head) + ಮುನಶಿ]

ಹೆಡ 'ಪೆಡ' ನೋ.

ಹೆಡಕಟ್ಟು$_1$ (ಕ್ರಿ). ಕೈಗಳನ್ನು ಬೆನ್ನಿನ ಹಿಂದೆ ಸೇರಿಸಿ ಕಟ್ಟು; ಹೆಡಮುರಿಗೆ ಹಾಕು: ಬಂದೆಯ ಕಲಿಕಾಮನ ಹೆಡಕಟ್ಟಿ ತಂದೆಯ (ತ್ರಿಭು. ೧೯-೫).

[ಹೆಡ (< ಪೆಱಗು$_1$) + ಕಟ್ಟು$_1$]

ಹೆಡಕಟ್ಟು$_2$ 'ಪೆಡಗಟ್ಟು' ನೋ.

ಹೆಡಕತ್ತು (ನಾ). ಕತ್ತಿನ ಹಿಂಭಾಗ; ಹೆಡಕು: ಎರಡುಗಯ್ಯ ನಾಲ್ಕೆರಲ ನಡನಡುವೆ ಪೆಣಕೆಯೊಳ್ಬುಹೆಡಕತ್ತಿಲಿರದಿಟ್ಟು ತೂನೆ ಬಾರದೊಡೆ ಶುಧವವು (ವೀಶ್ಕಪು. ೪-೨೪-೨೪); ಮದ್ದು ಸಂಕಟವ ಹೆಚ್ಚಿಸಲು ಹೆಡಕತ್ತ ಗುದ್ದಿಕೊಳುತಿಹನು (ಸರ್ವಜ್ಞ. ೧೨೯). 'ಹೆಗ್ಗತ್ತು' ಹೋ. [ಹೆಡ (< ಪೆಱಗು) + ಕತ್ತು$_3$ (< ಕಱ್ತು)]

ಹೆಡಕು 'ಪೆಡಕು' ನೋ.

ಹೆಡಗಟ್ಟು 'ಪೆಡಗಟ್ಟು' ನೋ.

ಹೆಡಗಯ್ 'ಪೆಡಂಗೆಯ್' ನೋ.

ಹೆಡಗಿಚು(?). (?) (?): ನಡುಚವುಕಿಗೆಗೆ ಬಿಗಿದ ತೊಲೆಯ ಪೊಜವಳಸಿನುಗ್ಗಡದ ನಾನಾವರ್ಣ ಚಿತ್ರಪತ್ರಿಕೆಗಳಂ ಹೆಡಗಿಚಿದ ತನ್ನ ಸುತ್ತಿದ ಪಳುಕುವಿತ್ತಿಯೊಳು ಮೂರ್ಪೊಳೆಯಲು (ಚೀರಮ. ೫-೧೨). [?]

ಹೆಡಗಡಿ 'ಪೆಡಗುಡಿ' ನೋ.

ಹೆಡಗುಡಿಗಟ್ಟು 'ಪೆಡಗುಡಿಗಟ್ಟು' ನೋ.

ಹೆಡಗೆ 'ಪೆಟ್ಟಿಗೆ' ನೋ.

ಹೆಡಗೆಗೋಂಟೆ (ನಾ). ಬುಟ್ಟಿಯಾಕಾರದ ಕೋಟೆ: ಕೋಂಟೆಗೆ -ತಬಗೋಂಟೆ, ಧೂಳಿಕೋಂಟೆ, ಹತ್ತುಗೋಂಟೆ, ಹೆಡಗೆಗೋಂಟೆ (ಶಮದ. ೨೯೫ ಪ್ರಯೋ): ಮಿಸುಗುವ ಹೆಡಗೆ [ಪಾಠಾಂ. ಮಿಸುಗುವೆಡ, ಮಿಸುಪ ಹೆದೆ]ಗೋಂಟೆ ತಳಿಗೋಂಟೆಯು ಸುತ್ತು ಗೋಂಟೆ (ಕಬ್ಬಿಕೈ. ೯೮). [ಹೆಡಗೆ (< ಪೆಟ್ಟಿಗೆ) + ಕೋಂಟೆ]

ಹೆಡಗೆಬಳ್ಳಿ 'ಹೆಡಗೆವಳ್ಳಿ' ನೋ.

ಹೆಡಗೆವಳ್ಳಿ, ಹೆಡಗೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: ಹೆಡಗೆವಳ್ಳಿಯ ಸೀಳಿ ಸಲಕಂ ಬಿಗಿದು ಕಟ್ಟಿ . . . ವಿರಚಿಸಿದರಾಶ್ರಮವನು (ಶ್ರೀರಾಮಾ. ೧೯೬-೬೦). **ಹೆಡಗೆಬಳ್ಳಿ:** ತಾನು ಹೆಡಗೆಬಳ್ಳಿ ಹುಡುಕುತ್ತಾ . . . ಬಂದಿದ್ದನೆಂದೂ ತಿಳಿಸಿ (ಮಲೆಮ. ೫೭೯).

[ಹೆಡಗೆ ? + ಬಳ್ಳಿ]

ಹೆಡಗೈ 'ಪೆಡಂಗೆಯ್' ನೋ.

ಹೆಡತಲೆ 'ಪೆಡಂದಲೆ' ನೋ.

ಹೆಡದಲೆ 'ಪೆಡಂದಲೆ' ನೋ.

ಹೆಡಮಂಡೆ (ನಾ). ತಲೆಯ ಹಿಂಭಾಗ; ಹೆಡತಲೆ: ತೊಡರ್ದೊಡರಾತಿಭೂಭುಜರ ಬೆಂದೊವಲಂ ಹೆಡಮಂಡೆಗೆತ್ತಿ (ಎಕ. XI. ದಾವಣ. ೩೫-೨೬; ಸು. 1160); ಗಂಡುಗಲಿ ಕೈ ಮುರಿದವೊಲು ಹೆಡ[ಪಾಠಾಂ. ಡೆ]ಮಂಡೆಯನು ತುಱಿಸುತ್ತ . . . ಸುಯ್ದನಡಿಗಡಿಗೆ (ನಿಭಾಗ. ೮-೧೦-೫೧). [ಹೆಡ (< ಪೆಱಗು) + ಮಂಡೆ]

ಹೆಡಮುಡಿ (ನಾ). ೧. ಕೈಗಳನ್ನು ಹಿಂದಕ್ಕೆ ಸೇರಿಸಿ ಹಾಕುವ ಕಟ್ಟು, – ಗಂಟು; ಹಿಂಗಟ್ಟು: ಅಡವಿಯೊಳು ಪಾಂಡವರ ಬೇಟೆಗೆ ನಡೆದು ಬಂದೊಡೆ ಮುನಿದು ಖಚರನು ಹೆಡಮುಡಿಯ ಬಿಗಿದಡರಿದನು (ಕುವ್ಯಾಉ. ಓರಿಗ. ೯-೪೩); ಝುಡಿದು ಸೆಳೆದನು ಬಾಲದಲಿ ಹೆಡಮುಡಿ ಬಿಗಿದನು (ಕೌಶಾ. ೧೫-೬). ೨. ತಲೆಯ ಹಿಂಭಾಗದಲ್ಲಿರುವ ಕೂದಲು: ಹೆಡಮುಡಿ ಹೆಳಲ್ಮಾಕಿ (ಕನ್ನಡಾ. ೩೭೮).

[ಹೆಡ (< ಪೆಱಗು) + ಮುಡಿ$_2$ ./ ತುಳು. ಹೆಡಮುಡಿ]

ಹೆಡಮುಡಿಕಟ್ಟು (ಕ್ರಿ). ಕೈಗಳನ್ನು ಹಿಂದಕ್ಕೆ ಸೇರಿಸಿ ಕಟ್ಟು: ಹಡೆದವರ ನುಡಿಗೆ ಬಯ್ಯುತಲಿಪ್ಪ ಕಡುಪಾಪಿಗಳ ಹೆಡಮುಡಿಕಟ್ಟಿ ತಾ (ಕರ್ನಾಕ. ೧೯೫); ಹೆಡಮುಡಿ ಕಟ್ಟಿದರು (ಈಶಪ್ರ. ೧೦). [ಹೆಡಮುಡಿ + ಕಟ್ಟು$_1$]

ಹೆಡಮುಡಿಬಿಗಿ (ಕ್ರಿ). ಕೂದಲನ್ನು ಒಟ್ಟುಗೂಡಿಸು, – ಸೇರಿಸು: ಕನ್ನೇಗ ಕುರುಳು ಮುತ್ತಿಟ್ಟು ದಿನವೇಸು ಹೆಡಮುಡಿಬಿಗಿದು ಹೆಳಲ್ಮಾಕಿ (ಮೂರ್ತಿಕಾ. ೪೧ - ೧೬).

[ಹೆಡಮುಡಿ + ಬಿಗಿ$_1$]

ಹೆಡಮುರಿ (ನಾ). ಹೆಡಮುಡಿ; ಹಿಂಗಟ್ಟು: (ಅನಂನಾ).

[ಹೆಡ (< ಪೆಱಗು) + ಮುರಿ$_3$ (< ಮುರಿವು)]

ಹೆಡಮುರಿಕೆ 'ಹೆಡಮುರಿಗೆ' ನೋ.

ಹೆಡಮುರಿಕೆಕಟ್ಟು (ಕ್ರಿ). = ಹೆಡಮುಡಿಕಟ್ಟು: ಹಿಡಿಯಿರಿ ಹಿಡಿಯಿರಿ ಅವನನ್ನು ಹೆಡಮುರಿಕೆಕಟ್ಟಿರಿ (ಮುಂಬಯಿ. ೩-೧೨೨). [ಹೆಡಮುರಿಕೆ (< ಹೆಡಮುರಿಗೆ) + ಕಟ್ಟು$_1$]

ಹೆಡಮುರಿಕೆಬಿಗಿಸು (ಕ್ರಿ). = ಹೆಡಮುಡಿಕಟ್ಟು: ನಮ್ಮ ಹೆಸರು ತೆಗದರೆ ನಿಮ್ಮ ಹೆಡಮುರಿಕೆ ಬಿಗಿಸೇವು (ಹಬ್ಬಿಬ. ೨೧೨).

[ಹೆಡಮುರಿಕೆ (< ಹೆಡಮುರಿಗೆ) + ಬಿಗಿಸು (< ಬಿಗಿಯಿಸು)]

ಹೆಡಮುರಿಗೆ, ಹೆಡಮುರಿಕೆ (ನಾ). = ಹೆಡಮುಡಿ ೧: 'ಹೆಡಮುರಿಗೆಕಟ್ಟು' ಪರಾ. **ಹೆಡಮುರಿಕೆ:** ಶಾನುಭೋಗರಿಗೆ ಹೇಳಿ ಅವನ ಹೆಡಮುರಿಕೆ ಯಾಕೆ ಬಿಗಿಸಬಾರದು ಅಂತೀನಿ (ಬೆವಾ. ೮೬). [ಹೆಡ (< ಪೆಱಗು) + ಮುರಿಗೆ$_1$]

ಹೆಡಮುರಿಗೆಕಟ್ಟು (ಕ್ರಿ). ೧. = ಹೆಡಮುಡಿಕಟ್ಟು: ಹೆಡಮುರಿಗೆಕಟ್ಟಿ ಹೊಡೆದರೂ ಅವರಿಗೆ ನಾಚಿಕೆ ಬರುವದಿಲ್ಲ (ಎಹಹ. ೯೬); ನೀನು ಮತ್ತೆ ಚೀರಿದೆಯಾದರೆ ಹೆಡಮುರಿಗೆ ಕಟ್ಟುತ್ತೇವೆ (ದಲಿಕು. ೩೬). ೨. ಅಡ್ಡಿಬರು; ತಡೆಯುಂಟಾಗು (?): ನೂರು ಜಂಜಾಟಗಳು ಹೆಡಮುರಿಗೆಕಟ್ಟಿದರು ಗೆಳೆತನವೆ ಬಾ ಬಾರ ಎಂದುಸುರುವೆ! (ಭಾವಚಿ. ೨೦-೩೯೧). [ಹೆಡಮುರಿಗೆ + ಕಟ್ಟು$_1$]

ಹೆಡಮೆಟ್ಟು 'ಪೆಡಂಮೆಟ್ಟು$_2$' ನೋ.

ಹೆಡಲಿಗೆ 'ಪಡಲಿಗೆ' ನೋ.

ಹೆಡಲು (ನಾ). ೧. ತೆಂಗಿನ ಗರಿ, – ಸೋಗೆ: ತೆಂಗಿನ ಹೆಡಲು ಅಡಕೆಸೋಗೆ ಮೊದಲಾದವು ನೊರೆಗರೆಯುತ್ತಿದ್ದ ನೀರಿನಲ್ಲಿ ಭಯಂಕರವೇಗದಿಂದ ಓಡುತ್ತಿರುವ ನೋಟ ಹೆದರಿಕೆ ಹುಟ್ಟಿಸಿತ್ತು (ಮಲೆಮ. ೭೨೧). ೨. ಬಾಳೆಯ ಎಲೆ: ಬಾಳೆಯ ಹೆಡಲು ಆಘಾತಕ್ಕೆ ತತ್ತರಿಸಿ ಮೇಲಕ್ಕೂ ಕೆಳಕ್ಕೂ ಉಯ್ಯಾಲೆಯಂತೆ ತೂಗಿತ್ತು (ಕಾನೂರು. ೩೪); ಹೆಡಲನ್ನು ಬೀಸಿ ನಿಂತಿರುವ ಬಾಳೆಯ ಗಿಡಗಳು . . . ಅವನ ಮನಸ್ಸನ್ನು ಸ್ವಲ್ಪ ಹರ್ಷಗೊಳಿಸುವುದು (ದುಂದಿಕ. ೪೨). [< ಹೆಡೆ$_1$]

ಹೆಡವೆಣ್ಣೆ (ನಾ). (?): ಸಿದ್ಧಿವಿನಾಯಕದೇವರ ಪೂಜೆ ನೇವೇದ್ಯ ಹೆಡವೆಣ್ಣೆ ಸಾರಣೆಯಿಂತಿನಿತುಂ ನಡೆವಂತಾಗಿ (ಕೊಲ್ಹಾಶಾ. ೧೩-೪೮; 1166). [?]

ಹೆಡಶಿರ (ನಾ). = ಹೆಡಮಂಡೆ: ಗಗನದಿಂದುರವಣಿಸಿ ಬಂದು ಹೆಡಶಿರಕೆ ವದೆಯಲು (ಸವಮೋ. ೧೨-೯೨). [ಹೆಡ (< ಪೆಱಗು) + ಶಿರ$_2$]

ಹೆಡಸು 'ಪೆಡಸು' ನೋ.

ಹೆಡಳಗೆ 'ಪಡಲಗೆ' ನೋ.

ಹೆಡಿಗೆ 'ಪೆಟ್ಟಿಗೆ' ನೋ.

ಹೆಡಿಗೆಜಾತ್ರೆ (ನಾ). ಬಗೆಬಗೆಯ ಭಕ್ಷ್ಯಗಳನ್ನು ದೊಡ್ಡ ದೊಡ್ಡ ಬುಟ್ಟಿಗಳಲ್ಲಿಟ್ಟುಕೊಂಡು ದೇವರ ಉತ್ಸವದೊಂದಿಗೆ ಒಯ್ದು, ದೇವಾಲಯದಲ್ಲಿ ನೈವೇದ್ಯ ಮಾಡುವ ಒಂದು ಹಬ್ಬ: ಸಪ್ತಾಹದ ಕೊನೆಯ ದಿವಸ ಹೆಡಿಗೆಜಾತ್ರೆ (ಕಪಪು. ೬-೧೭). [ಹೆಡಿಗೆ (< ಪೆಟ್ಟಿಗೆ) + ಜಾತ್ರೆ]

ಹೆಡೆ 'ಪೆಡೆ' ನೋ.

ಹೆಡೆಗಳ್ಳಿ (ನಾ). ಅಗಲವಾದ ಎಲೆಗಳುಳ್ಳ ಒಂದು ಬಗೆಯ ಕಳ್ಳಿಗಿಡ: ಮೊಂಗಳ್ ಕಡಿದಾಯೆಡೆಗಂ . . . ಹೆಡೆಗಳ್ಳಿಯಯೆಲೆಯನಿಕ್ಕಿ ಕಟ್ಟುವುದು (ಖಮದ. ೧೩-೧೦೧). [ಹೆಡೆ (< ಪೆಡೆ) + ಕಳ್ಳಿ$_2$]

ಹೆಡೆದೂಗು (ನಾ). ಹೆಡೆಯ ಓಲಾಟ; ಹೆಡೆಯು ಅತ್ತಿಂದಿತ್ತ ಚಲಿಸುವಿಕೆ: ಸರ್ಪನು ಹಕ್ಕಿಯನ್ನು ತನ್ನ ಹೆಡೆದೂಗಿನ ವಿಷಮೋಹನಕ್ಕೆ ಸಿಕ್ಕಿಸಿಕೊಂಡು, ಕಡೆಗೆ ನುಂಗಿಕೊಳ್ಳುವಂತೆ (ಮಂತ್ರಪ್ರ. ೭೬-೧). [ಹೆಡೆ (< ಪೆಡೆ) + ತೂಗು$_2$ (< ತೂಂಕು$_2$)]

ಹೆಡೆನಲಿ (ಕ್ರಿ). (ಆಲಂ) ತಲೆಯನ್ನು ಓಲಾಡಿಸು, – ತೂಗು: ಆ ಚಂದ್ರನಖಿ, ಹೂವಿನಾಕೃತಿವೆತ್ತ ಹಾವಿನಂದದಿ ನಿಂತು ಹೆಡೆನಲಿಯುತಿರೆ (ಶ್ರೀರಾಮಾ. ೨೦೮-೩೧೭).

[ಹೆಡೆ (< ಪೆಡೆ) + ನಲಿ$_1$]

ಹೆಡೆನಾಗ (ನಾ). ಹೆಡೆ ಎತ್ತಿರುವ ನಾಗರಹಾವು: ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗ ಹೊಡಮರಳಿ ಕಟ್ಟುವ ಹೆಡೆನಾಗ ನೋಡ (ಸರ್ವಜ್ಞ. ೧೧೬). [ಹೆಡೆ (< ಪೆಡೆ) + ನಾಗ]

ಹೆಡೆಬಿಡು (ಕ್ರಿ). ಹೆಡೆಯನ್ನು ಅಗಲವಾಗಿ ತೆರೆ, – ಬಿಚ್ಚು: ಹೆಡೆಬಿಟ್ಟ ಹಾವುಗಳಂತಿದ್ದ ಆ ಬಿಲ್ಲುಗಳನ್ನು ನೋಡಿ ಉತ್ತರನು ಭಯಚಕಿತನಾಗಿ . . . ಕೇಳುತ್ತ ಬಂದನು (ವಚಭಾ. ೨೦೭). [ಹೆಡೆ (< ಪೆಡೆ) + ಬಿಡು$_1$]

ಹೆಡೆಮಟ್ಟೆ (ನಾ). ತೆಂಗಿನ ಗರಿಯ ಬುಡದಲ್ಲಿರುವ ಹಾವಿನ ಹೆಡೆಯಾಕಾರದ ಭಾಗ; ಗೊದಮೊಟ್ಟೆ: ತೆಂಗಿನ ಹೆಡೆಮಟ್ಟೆಗಳನ್ನು ತಂದು ಚೀಲದ ಮೇಲೆ ಹೇರಿದರು (ನನ್ನೂರು. ೨೧೧). [ಹೆಡೆ (< ಪೆಡೆ) + ಮಟ್ಟೆ$_1$]

ಹೆಡೆಮಣಿ 'ಪೆಡೆವಣಿ' ನೋ.

ಹೆಡೆಮುಚ್ಚು (ಕ್ರಿ). ೧. ಹೆಡೆಯನ್ನು ಅಡಗಿಸಿಕೊಳ್ಳು, – ಮುದುರಿಸು: ಹಾವು ಹೆಡೆಮುಚ್ಚಿಕೊಂಡು ಸರಸರನೆ ಹೊರಟುಹೋಯಿತು (ರೂಢಿ). ೨. (ಆಲಂ) ಪ್ರಕಟಿಸದಿರು; ತೋರಗೊಡದಿರು: ಪ್ರತಿಭಾನದೃಷ್ಟಿಯಲ್ಲಿ ವಸ್ತುವಿನ ಸೌಂದರ್ಯ

ವನ್ನು ಪರಿಭಾವಿಸಿದಾಗ ನಮ್ಮ ಬಯಕೆಗಳು ಹೆಡೆಮುಚ್ಚುತ್ತವೆ (ಸೌಂದಸ. ೬೪).

[ಹೆಡೆ (< ಪೆಡೆ) + ಮುಚ್ಚು1]

ಹೆಡೆಯೆತ್ತು 'ಪೆಡೆಯೆತ್ತು' ನೋ.

ಹೆಡೆವಣಿ 'ಪೆಡೆವಣಿ' ನೋ.

ಹೆಡ್ಡ1 (ನಾ). ೧. ತಿಳಿಗೇಡಿ; ಮೂರ್ಖ: ಎಡೆಯಂತರದಲ್ಲಿ ಮಲಿನವ ಧರಿಸಿ ಹೆಡ್ಡರಾದಿರಿ (ಉಂಬ. ೨೨೪); ಹೆತ್ತನನಜಿಯದ ಹೆಡ್ಡರಿರಾ . . . ನಿಮ್ಮೊಡನೆ ನುಡಿವುದೆ ಕಷ್ಟಂ (ವಾಗೀಶ. ದೇ. ೨೬೫-೬); ಜಾಣೆ ಹೆಡ್ಡನು ಕೂಡಲಿಹುದದು ವೀಣೆಗೆ ನೇಣ ಬಿಗಿದು ಮಿಡಿದಂತೆ (ಭರಚ. ೭-೧೪). (ಗು). ೨. ತಿಳಿಗೇಡಿಯಾದ; ಬುದ್ಧಿಯಿಲ್ಲದ: ಈ ಪಟ್ಟ ಬ್ರಾಹ್ಮಣನನೀ ಹೆಡ್ಡವೃದ್ಧನಂ ತಂದವರಾರೊ ನೂಂಕು ನೂಂಕೆನಲ್ (ನಂದಿ. ೬-೧೦೦). [< ಎಡ್ಡ. / ತುಳು. ಹೆಡ್ಡ]

ಹೆಡ್ಡ2 (ನಾ). ಒಂದು ಬಗೆಯ ಸಸ್ಯ: ಹೆತ್ತೇಗ . . . ದೊಡ್ಡ ಕಡಗ, ಹೆಡ್ಡ (ಮೃಡಿಗಿ. ೩-೪೦). [?]

ಹೆಡ್ಡತನ (ನಾ). ತಿಳಿಗೇಡಿತನ; ಮೌಢ್ಯ: ದುರ್ಬೋಧರಂ ಕೂಡಿಕೊಂಡು ಸುತ್ತಂ ಸುಳಿದು . . . ಹೆಡ್ಡತನದಿಂ ಪರಿದು ನಾಯ್ಗಾಲನುಂಬಂತೆ (ಏಂಡೋಸ. ಹ. ೫೦೨-೨೬); ಹೆಡ್ಡತನ ದುಶ್ಚಿಂತಾನಲಜ್ವಾಲೆಗೀಡಾಗಲೇಕೆ (ಕೊಟ್ಟೂರು. ೧೨-೩೯). [ಹೆಡ್ಡ1 + - ತನ]

ಹೆಡ್ಡಯಿಸು 'ಹೇಡ್ಯಿಸು2' ನೋ.

ಹೆಡ್ಡವೆಣ್ (ನಾ). ದಡ್ಡ ಹೆಂಗಸು; ದಡ್ಡಿ.

ಹೆಡ್ಡವೆಂಗಳು, ಹೆಡ್ಡಹೆಂಗಳು (ಬಹುವ): ಹೆಡ್ಡವೆಂಗಳ ನೃತ್ಯವೇನೆಂದು ಮಂತ್ರಿಯ ಗಡ್ಡವೊಂದನೆ ನೋಡುತಿದ್ದ (ಭರಚ. ೧೪-೩೭); ಅವರೇನು ಲೋಕದ ಹೆಡ್ಡಹೆಂಗಳೆ (ಭರಚ. ೪-೫೯). [ಹೆಡ್ಡ1 + ಪೆಣ್]

ಹೆಡ್ಡಾಟ (ನಾ). ಮೂರ್ಖತನ; ತಿಳಿಗೇಡಿತನ: ನೋಡಿರೆ ನಮ್ಮ ಕಂಸನ ಹೆಡ್ಡಾಟವನಾಡ ಕೊಲುವ ಮಾಳ್ಕೆಯೊಳು ರೂಢಿಸಿದೀ ದ್ವಿರದವ ಕೊಂದಗೆ ಮಲ್ಲರೀಡೆಯೆಂದೆಲ್ಲರುಲಿಯಲು (ಸೇಮಿಪಂ. ೧೭-೧೦೬); ಭಂಡೀ ಭಂಡಾಟ ಹೇರು ಹೆಡ್ಡಾಟ ತಲೆಹೊರೆ ಪರಮ ಸುಖ (ಗಾದ). [ಹೆಡ್ಡು + ಆಟ]

ಹೆಡ್ಡಾಳು (ನಾ). ತಿಳಿಗೇಡಿಯಾದ ವ್ಯಕ್ತಿ: ಹೆಡ್ಡಾಳಾದರೂ ಒಡ್ಡಾಳಾಗಿರಬೇಕು (ಗಾದ). [ಹೆಡ್ಡು + ಆಳ್3 (< ಆಳ್2)]

ಹೆಡ್ಡಿ (ನಾ). = ಹೆಡ್ಡವೆಣ್: ಉತ್ತಮವಸ್ತುವನ್ನು ಆಯ್ಕೆ ಮಾಡಲಾರದ ಹೆಡ್ಡಿಯೇ ಅವಳು? (ಸ್ಪಷ್ಟಹೂ. ೨೬೫); ಅಷ್ಟೂ ತಿಳಿಯದ ಹೆಡ್ಡಿಯೇನಾಕೆ? (ತ್ಯಾಗಮ. ೭೦).

[ಹೆಡ್ಡ1 + - ಇ3]

ಹೆಡ್ಡು (ನಾ). ೧. = ಹೆಡ್ಡತನ: ಎಷ್ಟು ಕಾದಿದನೆನಲ್ಕೆಯಾ ಹೆಡ್ಡುಂಟೆ ವೀರೇಶಗಣಕೆಯ ಹರಿಯಕಟ . . .ಎನಲ್ಕೆ (ವೀಶೈಪು. ೭-೧೭-೧೩); ದಡದೇಹಿಗಳಂತೆ ಮಾತಾಡುವ ಹೆಡ್ಡು ಬಡದಿದೆ ನಿಮಗೆ (ಮೋಹತ. ೩೭-೨೦೩). ೨. ಏನೂ ತಿಳಿಯದ ವ್ಯಕ್ತಿ; ಮೂರ್ಖ ವ್ಯಕ್ತಿ: ನೀನು ಬರಿ ಹೆಡ್ಡು. ಪೂರ್ವಾಪರವಿಚಾರವನ್ನರಿತು ಸ್ಮತಿಗತಿಯನ್ನೂಹಿಸುವ ಸಾಮರ್ಥ್ಯ ಎಳ್ಳಷ್ಟೂ ನಿನ್ನಲ್ಲಿಲ್ಲ! (ಕುರುಕಾ. ೧೭). [ಹೆಡ್ಡ1 + - ಉ4]

ಹೆಡ್ಡುತನ (ನಾ). = ಹೆಡ್ಡತನ: ನನ್ನ ಈ ಹೆಡ್ಡುತನವು ನನ್ನ ಯಜಮಾನರಿಗೆ (ಪತಿದೇವರಿಗೆ) ಮೆಚ್ಚುಗೆಯಾಗುತ್ತಿರಲಿಲ್ಲ (ಕೆಲಕ. ೪೮); ಪರೋಪಕಾರವೆಂಬುದು ಒಳ್ಳೆಯ ಶೀಲವೆನಿಸುವ ಬದಲು ಹೆಡ್ಡುತನ, 'ಭೋಳೆತನ' ಆಗಿಬಿಡುತ್ತದೆ (ಜಾಯುದಾ. ೭೨).

[ಹೆಡ್ಡು + - ತನ]

ಹೆಡ್ಡುಬುದ್ದಿ (ನಾ). = ಹೆಡ್ಡತನ: ಮತಾಂತರದ ಮಹತ್ವ ಅವನ ಹೆಡ್ಡುಬುದ್ದಿಗೆ ಹೊಳೆದಿರಲಿಲ್ಲ (ಕುಡಿಕೂ. ೨೧೪). [ಹೆಡ್ಡು + ಬುದ್ಧಿ]

ಹೆಡ್ಡೆ (ನಾ). = ಹೆಡ್ಡವೆಣ್: ಬೆಳ್ಳಿ, ಹೆಡ್ಡೆ, ಎಗ್ಗೆ (ಶಬ್ದಾನು. ೧೫೭ ಪ್ರಯೋ); ದಡ್ಡತನದಿ ಹೀಗೆ ಹೆಡ್ಡೆಯಾಗಿರುವಂತ ಮಡ್ಡಿಯಾದರೆ ನಿನ್ನ ನೆನೆಯೆ (ಕಪೋಸ. ೧೪-೫೦).

[ಹೆಡ್ಡ1 + - ಎ2]

ಹೆಡ್ಡೆಸು1 'ಹೇಡ್ಯಿಸು1' ನೋ.

ಹೆಡ್ಡೆಸು2 'ಹೇಡ್ಯಿಸು2' ನೋ.

ಹೆಡಾ.ಸ.ರು 'ಹೆಡ್ಮಾಸ್ತರು' ನೋ.

ಹೆಡ್ಮಾಸ್ಕು 'ಹೆಡ್ಮಾಸ್ತರು' ನೋ.

ಹೆಡ್ಮಾಸ್ತರು, ಹೆಡ್ಮಾಸ್ಟರು, ಹೆಡ್ಮಾಸ್ಟ್ರು, ಹೆಡ್ಮೇಷ್ಟ್ರು (ನಾ). ಮುಪ್ಪೋಪಾಧ್ಯಾಯ: ಬಂದ ಕೂಡಲೇ ನಿಲ್ಲಲಿಕ್ಕೆ ನೀವೇನು ಹೆಡ್ಮಾಸ್ತರೇ? (ಹಸ್ನೊಂದ. ೫೭). **ಹೆಡ್ಮಾಸ್ಟರು:** ದಿನಬೆಳಗೆದ್ದರೆ ರಜಾ ಎಂದರೆ ಆ ಹೆಡ್ಮಾಸ್ಟರು ಸುಮ್ಮನೆ ಬಡಕೊಳ್ಳುತ್ತಾನೆ (ರಾಗಿಚ. ೨). **ಹೆಡ್ಮಾಸ್ಟ್ರು:** ಹೆಡ್ಮಾಸ್ಟ್ರು ಒಂದು ಸರ್ಟಿಫಿಕೇಟನ್ನ ಕೊಡಬೇಕು (ಮುಂಗಾಮು. ೩೪). **ಹೆಡ್ಮೇಷ್ಟ್ರು:** ಆ ಶಾಲೆಯ ಹೆಡ್ಮೇಷ್ಟ್ರು ನಿವೃತ್ತರಾದರು (ರೂಢಿ). [← ಇಂ. Head Master]

ಹೆಡ್ಮುನಶಿ 'ಹೆಡ್ಮುನಶಿ' ನೋ.

ಹೆಡ್ಮುನಶಿತನ (ನಾ). ಮುಖ್ಯಗುಮಾಸ್ತೆಯ ಹುದ್ದೆ: ಏನಾಗಿದೆ ನನ್ನ ಹೆಡ್ಮುನಶಿತನಕ್ಕೆ? (ನವಾನ. ೪೧). [ಹೆಡ್ಮುನಶಿ (< ಹೆಡ್ಮುನಶಿ) + - ತನ]

ಹೆಡ್ಮೇಷ್ಟ್ರು 'ಹೆಡ್ಮಾಸ್ತರು' ನೋ.

ಹೆಣ್ 'ಪೆಣ್' ನೋ.

ಹೆಣ 'ಪೆಣ' ನೋ.

ಹೆಣಕು 'ಪೆಣಗು' ನೋ.

ಹೆಣಗ (ನಾ). (ಆಲಂ) ಹೆಣದಂತಿರುವವನು; ಜೀವಚ್ಛವ: ಎಲ್ಲೆ ಮೂರ್ಖಾ, ಭೀಷ್ಮಾ, ನೀನು ಮೊದಲೇ ಮುದುಕನು, ಮೇಲೆ ಹೆಣಗನು (ಮಭಾಂ. ೬೬).

[ಹೆಣ (< ಪೆಣ) + - ಗ4]

ಹೆಣಗಂಪು (ನಾ). ಹೆಣದ ನಾತ, – ದುರ್ವಾಸನೆ: ಹೆಣಗಂಪು ಸೂಸುತಿದೆ ನಿನ್ನ ಮೈಯ್ಯಂ (ಚಂದ್ರಪ್ರ. ೯೧-೨೩). [ಹೆಣ (< ಪೆಣ) + ಕಂಪು]

ಹೆಣಗಾಟ 'ಪೆಣಗಾಟ' ನೋ.

ಹೆಣಗಾಡು (ಕ್ರಿ). ೧. ಸೆಣಸು; ಕಾದು; ಹೋರಾಡು: ಶರೀರವಿರುವ ತನಕ ಹೆಣಗಾಡುವೆವು (ದೇವೀಭಾ. ೧೪೦). ೨. ಸ್ಪರ್ಧೆಹೂಡು; ಪೈಪೋಟಿ ಮಾಡು: ಮೋಹಿನಿಯ ಮುಖದಲ್ಲಿ ಒಂದೆಡೆ ಭೀತಿ, ಒಂದೆಡೆ ಕಠೋರವಾದ, ನಿರ್ದಯವಾದ ನಿಶ್ಚಯ ಹೆಣಗಾಡುತ್ತಿದ್ದವು (ಕಮಸ. ೧೫೮); ಜೀವನದ ಚದುರಂಗದಾಟದಲ್ಲಿ ಸೋಲು ಗೆಲುವುಗಳಿಗಾಗಿ . . . ಹೆಣಗಾಡುವರು (ಮುರುಹ. ೧೦೧). ೩. ಒದ್ದಾಡು; ಕಷ್ಟಪಡು; ಶ್ರಮಿಸು: ಹೆಂಡಿರಿಗೆ ಮಕ್ಕಳಿಗೆ ಹೆಣಗಾಡುವರು (ಕಾಕ. ೩, ೧೦೬-೬); ಭಕ್ತರಾದವರು . . . ತಮ್ಮ ಇಷ್ಟಾರ್ಥಸಿದ್ಧಿಗಾಗಿ ಬಹಳ ಹೆಣಗಾಡಬೇಕಾಗಿ ಬಂತು (ಜೀವಾತ್ಮ. ೧೮೫).

[ಹೆಣಗು (< ಪೆಣಗು) + ಆಡು1]

ಹೆಣಗಿಸು 'ಪೆಣಗಿಸು' ನೋ.

ಹೆಣಗು 'ಪೆಣಗು' ನೋ.

ಹೆಣಗೆಡಹು 'ಪೆಣಗೆಡಹು' ನೋ.

ಹೆಣದಿನಿ 'ಪೆಣದಿನಿ' ನೋ.

ಹೆಣದಿನಿಹಿ, ಹೆಣದಿನುಹಿ (ನಾ). ಹೆಣವನ್ನು ತಿನ್ನುವಂತಹುದು; ಭೂತ, ಪಿಶಾಚಿ ಮುಂತಾದುವು: ಮುಂದೆ ಹೆಣದಿನಿಹಿಗಳು ಖಗಮೃಗವೃಂದ ಚೆಲ್ಲಿತು (ಕುವ್ಯಾಗ. ೧೨-೪); ಹೆಣದಿನಿಹಿಗಳಿಗುಚಿತವೀ ಮಾತೆಂದಳಾ ಸೀತೆ (ತೊರರಾ. ೫-೩-೫೨). **ಹೆಣದಿನುಹಿ:** ನೋಡುವನು ಹೆಣದಿನು[ಹಾಕಾ. ನಿ]ಹಿಗಳ ಹೇರಾಳ ರಕ್ಕಸರ (ಕುವ್ಯಾಗ. ೩-೧೦). [ಹೆಣ (< ಪೆಣ) + ತಿನಿಹಿ]

ಹೆಣದಿನಿಹಿಂಕಾಱ (ನಾ). = ಹೆಣದಿನಿಹಿ: ಬರಹೇಳು ಮಾರಿಯ ಬಳಗವನು ಹೆಣದಿನಿಹಿ[ಹಾಕಾ. ದಿನ್ನಿ]ಕಾಱರ ಕರೆಯಿ ರಕ್ಕಸರ (ಕುವ್ಯಾಭೀ. ೯-೯).

[ಹೆಣದಿನಿಹಿ + - ಕಾಱ]

ಹೆಣದಿನುಹಿ 'ಹೆಣದಿನಿಹಿ' ನೋ.

ಹೆಣದೆಱಹು (ನಾ). ಹೆಣಗಳ ನಡುವೆ ಬಿಟ್ಟಿರತಕ್ಕ ಜಾಗ, – ಎಡೆ: ಗಡಣಹೆಣದೆಱಹುಗಳೊಳಗೆ ಕಾಲಿಡುತ ಸೋದಿಸಿ ಮುಂದೆ ಹೆಜ್ಜೆಯನಿಡುತ ಪೈಸರವೋಗಿ ಮಾರ್ಗಶ್ರಮೆಗೆ ಬೆಮರುವನ (ಕುವ್ಯಾಗ. ೩-೧೩).

[ಹೆಣ (< ಪೆಣ) + ತೆಱಹು (< ತೆಱವು)]

ಹೆಣನುಂಗಿ (ನಾ). = ಹೆಣದಿನಿಹಿ: ಕುನ್ನಿಗಳ ಕೆಡೆ ಬಡಿ ಸೀಳು ಹೆಣನುಂಗಿಗಳ ಹೊಯ್

ಹೊಯ್ ರಣಕೆ ಹೆದಱುವ ಕೌರವಾನುಜರ (ಕುವಾದ್ರೋ. ೧೨-೧೧).

[ಹೆಣ (< ಪೆಣ) + ನುಂಗು$_1$ + - ೞ]

ಹೆಣಮಯ 'ಪೆಣಮಯ' ನೋ.

ಹೆಣಮೂಳ (ನಾ). (ಆಲಂ) ಕೆಲಸಕ್ಕೆ ಬಾರದವನು; ಅಪ್ರಯೋಜಕ: ಹಣಮೂಳ[ಪಾಠಾಂ. ಲ]ನು ನಾನು . . .ಕ್ಷಣ ಹದುಳವಿರದೆ ಬಾಯ ಟೋಕದೇ ಹೋಯಿತ್ತೆನ್ನ ಭಕ್ತಿ (ಬಸವ. ೨೬೧). [ಹೆಣ (< ಪೆಣ) + ಮೂಳ$_1$ (< ಮೂಱ)]

ಹೆಣಮೆದೆ (ನಾ). ಹೆಣಗಳ ರಾಶಿ, – ಒಟ್ಟಿಲು: ಇದೆ ರಥದ ಪದಘಾತದಲಿ ಹೆಣಮದೆಯ ಪಾಯದಳೌಘಭೀಮನ ಕದನಪಥವಿದೆಯೆನುತ ನಗುತ್ಕತಂದನಾ ದ್ರೋಣ (ಕುವಾದ್ರೋ. ೧೩-೨). [ಹೆಣ (< ಪೆಣ) + ಮೆದೆ$_1$]

ಹೆಣಮೋರೆ (ನಾ). (ಆಲಂ) ನಿಸ್ತೇಜವಾದ ಮುಖ; ತೇಜೋಹೀನವಾದ ಮುಖ: ನಾನಂತೂ ಕೋಟೆ ವಟ್ಟಿಸಿ ಹೆಣಮೋರೆಯಿಂದಾ ಖಾವಂದಿರಯೆದುರಿಗೆ ಬರತಕ್ಕದಿಲ್ಲಾ (ಹೃದಶ. ೪೧); ಬಿಸಿಲಿನಿಂದ ಕಂದಿಹೋದ ಹೆಣಮೋರೆಯ ಮುದುಕರಿದ್ದರು (ಪುನಶ. ೪೭೮). [ಹೆಣ (< ಪೆಣ) + ಮೋರೆ (< ಮೋಱೆ)]

ಹೆಣಲು$_1$ 'ಪೆಣಲ್' ನೋ.

ಹೆಣಲು$_2$ 'ಪಿಣಿಲ್$_3$' ನೋ.

ಹೆಣಲುಭಂಗಾರ, ಹೆರಳುಬಂಗಾರ, ಹೆರಳುಭಂಗಾರ, ಹೆಳಲುಬಂಗಾರ (ನಾ). ಹೆಣೆದುಕೊಂಡ ಜಡೆಯಲ್ಲಿ ಧರಿಸುವ ಜಡೆಯಾಕಾರದಲ್ಲಿ ಮಾಡಿದ ಒಂದ ಬಗೆಯ ಚಿನ್ನದ ಆಭರಣ; ಜಡೆಬಂಗಾರ: ಹೆಣಲುಭಂಗಾರಗಳ ಕಾಂತಿಯು ಅಣೆದುದ್ಕೆ ಶತಕೋಟಸೂರ್ಯರ (ದೀವೀಮ. ೨-೧೦). **ಹೆರಳುಬಂಗಾರ:** ಹೆರಳುಬಂಗಾರ ನಡಪಟ್ಟಗಳಿಲ್ಲವಾದರೂ ಮನೆಯಲ್ಲಿಯ ನತ್ತನ್ನಾದರೂ ಹಾಕಲಿಲ್ಲ (ಸ್ವತಿಚ. ೨೨೮); ಹೆರಳುಬಂಗಾರದ ಬೆಳ್ಳಿ ಸೇವಂತಿಗೆಯ ಬಳಿಯಾಕೆ (ಗಂ. ೧೦೬-೫). **ಹೆರಳುಭಂಗಾರ:** ಹರಿದಾಸರ ಪಾದರಜ ಹೆರಳುಭಂಗಾರ (ಪುರಂದ. ೧-೩೪-೨); ಇನ್ನೂ ವಿರಾಜಿಪಿರುಳಿನ ಹೆರಳುಭಂಗಾರ (ಸಖೀಗೀ. ೬೮-೧). **ಹೆಳಲುಬಂಗಾರ** : (ಪ).

[ಹೆಣಲು$_1$ (< ಪೆಣಲ್) + ಭಂಗಾರ (< ಬಂಗಾರ)]

ಹೆಣವಿಸರ (ನಾ). = ಹೆಣಮೆದೆ.

ಹೆಣವಿಸರವಾಗು = ಹೆಣಗಳ ರಾಶಿಬೀಳು : ಬಿಸಿದು ಬೀಳ್ವ ಕಬಂಧದಲಿ ಹೆಣವಿ[ಪಾಠಾಂ. ವ]ಸರವಾದುದು ನೆಲನು (ತೊರಶಾ. ೧-೧೧-೧೪). [ಹೆಣ (< ಪೆಣ) + ವಿಸರ]

ಹೆಣಸಾಲು (ನಾ). ಹೆಣಗಳ ಓಳಿ, – ಪಂಕ್ತಿ: ಹೆಣಸಾಲುಗಳು ಹರಿದವು ರಕುತ ದರವೊನಲುಗಳು ಹರಿದವು (ಕುವಾಭೀ. ೪-೧೦); ಬಸಿದೊಡೆವ ಹೆಣಸಾಲುಗಳ ಸಂದಣಿ 'ಯಡವಿಯನು ಕಂಡು (ತೊರಶಾ. ೩-೮-೪). [ಹೆಣ (< ಪೆಣ) + ಸಾಲು$_3$ (< ಸಾಲ್$_3$)]

ಹೆಣಹಕ್ಕಲು (ನಾ). ಹೆಣಗಳನ್ನು ಚೆಲ್ಲಾಪಿಲ್ಲಿಮಾಡುವಿಕೆ, – ತೂರಾಡುವಿಕೆ: ಹೊಕ್ಕು ರಿಪುಬಲದೊಳಗೆ ಕಲಶಜಂ ಮುರಿದು ಹೆಣಹಕ್ಕಲಂ ಮಾಡ್ದನು (ತುರಂಗ. ೫೮-೧೧). [ಹೆಣ (< ಪೆಣ) + ಹಕ್ಕಲು (< ಹಕ್ಕಲ್)]

ಹೆಣಕೆ 'ಪೆಣಕೆ$_1$' ನೋ.

ಹೆಣಗೆ$_1$ (ನಾ). ೧. ಬಣ್ಣದ ದಾರ, ಉಲ್ಲನ್ನು ಮುಂತಾದುವುಗಳನ್ನು ಹೆಣೆದು ಮಾಡುವ ಒಂದು ಬಗೆಯ ಕಸೂತಿಕೆಲಸ: ನನ್ನ ತಾಯಿ . . . ಹೆಣಗೆ ಮತ್ತು ಕಸೂತಿ ಕೆಲಸಗಳನ್ನು ನಯವಾಗಿ ಮಾಡಿಕೊಡುತ್ತಾಳೆ (ಮಹಾತ್ಮಾ. ೮೬). ೨. ಹೆಣೆದುದು; ನೆಯ್ದುದು: ಗಳುವಿನ ಪಟ್ಟಿಯ ಎರಡು ತುದಿಗಳಿಗೂ ಕಟ್ಟಿದ ಹಗ್ಗದ ಹೆಣಗೆಗಳಲ್ಲಿ ಕೊಡಗಳನ್ನಿಟ್ಟು ನೀರನ್ನು ಹೊತ್ತು ತರುವ ವಿಧಾನ (ಸರ್ವಮಂ. ೯).

[< ಹೆಣ್$_1$ (< ಪೆಣ್$_1$) + - ಗೆ]

ಹೆಣಗೆ$_2$ 'ಪಣಿಗೆ' ನೋ.

ಹೆಣಗೆಕೆಲಸ (ನಾ). ೧. ಹೆಣೆಗೆಯ ಕಾರ್ಯ: ಆ ರತ್ನಗಂಬಳಿಯ ಹೆಣಗೆಕೆಲಸ ಸುಂದರವಾಗಿದೆ (ರೂಢಿ). ೨. ಹೆಣೆಯುವ ಕಲೆ, – ವಿದ್ಯೆ: ಅವಳಿಗೆ ಹೆಣಗೆ ಕೆಲಸದಲ್ಲಿ ಬಹಳ ಆಸಕ್ತಿಯಿದೆ (ರೂಢಿ). [ಹೆಣಗೆ$_1$ + ಕೆಲಸ]

ಹೆಣ್$_1$ 'ಪೆಣ್$_1$' ನೋ.

ಹೆಣ್$_2$ 'ಪೆಣ್$_2$' ನೋ.

ಹೆಣೆಕಟ್ಟು (ಕ್ರಿ). ತೆನೆಯಿಂದ ಧಾನ್ಯವನ್ನು ಒಕ್ಕುವುದಕ್ಕಾಗಿ ಎತ್ತುಗಳನ್ನು ಮೇಟಿಗೆ ಸಾಲಾಗಿ ಕಟ್ಟು: ಕಪ್ಪಪಟ್ಟು ಕಣದಲ್ಲಿ ಹೆಣೆಕಟ್ಟಿ ಎತ್ತಿನಿಂದ ತುಳಿಸಿದ ಬತ್ತದ ಹುಲ್ಲಿನ ಹೊರೆ ಕಟ್ಟುವ ಹಾಗೆ ಕಟ್ಟಿ, ಮುಗಿಸಿದ (ನನ್ನೂರು. ೨೬೪).

[ಹೆಣೆ$_2$ (< ಪೆಣೆ$_2$) + ಕಟ್ಟು$_1$]

ಹೆಣೆತ (ನಾ). ಹೆಣೆಯುವಿಕೆ; ಸೇರಿಸುವಿಕೆ: "ಜಟ . . . ಸಂಘಾತೇ, ಹೆಣೆತದೊಳ್" (ಶಾಶ್ಯ. ೧೬). [ಹೆಣೆ$_1$ (< ಪೆಣೆ$_1$) + - ತ$_3$]

ಹೆಣ್ಣರುಳು, ಹೆಂಗರುಳು, ಹೆಣ್ಣುಗರುಳು (ನಾ). ೧.. ಹೆಂಗಸಿನ ಮನಸ್ಸು; ಹೆಣ್ಣಿನ ಹೃದಯ. ೨. (ಆಲಂ) ಮೃದುವಾದ ಮನಸ್ಸು; ಕರುಣೆ, ಮಮತೆಗಳಿಂದ ಕೂಡಿರುವ ಹೃದಯ: ಶಂಕರರಾಯರು ಸೌಮ್ಯಗುಣದವರು, ಹೆಣ್ಣರುಳಿನವರು (ಕುಂಕುವ. ೫೮). **ಹೆಂಗರುಳು:** ೧. ಹೆಂಗರುಳು ನಿಂಗ್ಹೇಗೆ ತಿಳೀಬೇಕು! (ಶಂಕೂ. ೧೨); ನನ್ನ ಹೆಂಡತಿಗೆ ಅವಳ ತಾಯಿ ಹೇಳುತ್ತಿದ್ದರಂತೆ, ಹೆಂಗರುಳು ನೋಡಿ! (ಹುಚ್ಚುಪ. ೯೩). ೨. ಪ್ರಮಿತ್ಯೊಸ್ಸೆ ಅವರ ಹೆಂಗರುಳು ಮಿಡಿದಂತೆ ಸ್ಯೊಸ್ಸೆ ಸಿಡಿಮಿಡಿಗೊಂಡಿತು (ಬದ್ಧವ್ರ. XI.viii. ನಾಟಕದ ಸಮಸ್ಯೆ); ದಂಗೆಯನ್ನು ಅಡಗಿಸಬೇಕಾದರೆ ಇಂಥ ಹೆಂಗರುಳಿನಿಂದ ಪ್ರಯೋಜನವಿಲ್ಲ (ಕೃಷ್ಣಭೂ. ೨೧೬). **ಹೆಣ್ಣುಗರುಳು:** ೧. ಹೆಣ್ಣುಗರುಳ ನಲುಮೆಸೊದೆಯನೀಂಟ ಅಮೃತನಾದನು ಕವಿಯು (ಪಯೂಗೀ. ೫-೧೩). ೨. ಹೆಣ್ಣುಗರುಳಿನಲಿ ತೂಗಿ ನೋಡಿದಿರಿ ಹೊನ್ನು ಮಣ್ಣುಗಳನು (ಹೃದಪ. ೭೪-೧೮).

[ಹೆಣ್ (< ಪೆಣ್) + ಕರುಳು (< ಕರುಳ್)]

ಹೆಣ್ಗಳಿ 'ಪೆಣ್ಗಳಿ' ನೋ.

ಹೆಣ್ಣಂಚೆ 'ಪೆಣ್ಣಂಚೆ' ನೋ.

ಹೆಣ್ಣಗೆ 'ಪೆಣ್ಣಗೆ' ನೋ.

ಹೆಣ್ಣಾನೆ 'ಪೆಣ್ಣಾನೆ' ನೋ.

ಹೆಣ್ಣಾಯಿ 'ಪೆಣ್ಣಾಯ್' ನೋ.

ಹೆಣ್ಣಾವೆ, ಹೆಣ್ಣುಆಮ, ಹೆಣ್ಣುಆವೆ (ನಾ). ಆಮೆಯಲ್ಲಿ ಹೆಣ್ಣುಜಾತಿಗೆ ಸೇರಿದುದು: "ಢುಳಿಯೆನಲು ಹೆಣ್ಣಾವೆಯಕ್ಕುಂ" (ಮಂಗರಾ. ೧೨೧-೮). **ಹೆಣ್ಣುಆಮೆ:** "ಕಮಠೀ, ಢುಲೀ-೨ ಹೆಣ್ಣುಆಮ ಪೆಸರುಗಳು ಅಂದರೆ ಸ್ತ್ರೀಕೂರ್ಮ" (ಸಿದ್ಧಾಂತಿ. ೮೪). **ಹೆಣ್ಣುಆವೆ:** (ಪ). [ಹೆಣ್ (< ಪೆಣ್) + ಆವೆ$_1$ (< ಆಮೆ$_1$)]

ಹೆಣ್ಣಾಳ್ 'ಪೆಣ್ಣಾಳ್' ನೋ.

ಹೆಣ್ಣಾಳು 'ಪೆಣ್ಣಾಳ್' ನೋ.

ಹೆಣ್ಣಿಗ (ನಾ). ೧. ಹೇಡಿ; ಅಂಜುಕುಳಿ: ಶಾಸ್ತ್ರಿ "ಏನೋ ಹೆಣ್ಣಿಗ" ಎಂದು ನನ್ನನ್ನು ವಿಚಾರಿಸಿದ (ಪ್ರಶ್ನೆ. ೧೫೯). ೨. ಷಂಡ; ನಪುಂಸಕ: ನಾನು ಹೆಣ್ಣಿಗನ ವೇಷವನ್ನು ಹಾಕಿಕೊಂಡಿರೋಣವೆಂದು ಮಾಡಿದ್ದೇನೆ (ವಚಭಾ. ೧೮೫). [ಹೆಣ್ಣು (< ಪೆಣ್) + - ಇಗ]

ಹೆಣ್ಣಿಗತನ (ನಾ). ೧. ಹೇಡಿತನ; ಅಂಜುಕುಳಿಸ್ವಭಾವ: (ಪ). ೨. ಷಂಡತನ: (ಪ). [ಹೆಣ್ಣಿಗ + - ತನ]

ಹೆಣ್ಣು 'ಪೆಣ್' ನೋ.

ಹೆಣ್ಣುಆಮೆ 'ಹೆಣ್ಣಾವೆ' ನೋ.

ಹೆಣ್ಣುಆವೆ 'ಹೆಣ್ಣಾವೆ' ನೋ.

ಹೆಣ್ಣುಕಣೆ (ನಾ). ಕಬ್ಬಿನ ಗಾಣದಲ್ಲಿರುವ ಸಣ್ಣ ಕೊರಡು, – ಪಟ್ಟಿ: (ಪ). 'ಗಂಡುಕಣೆ' ಪರಾ. [ಹೆಣ್ಣು (< ಪೆಣ್) + ಕಣೆ$_2$ (< ಗಟೆ)]

ಹೆಣ್ಣುಕರಟ (ನಾ). ತೆಂಗಿನಕಾಯಿಯನ್ನು ಒಡೆದಾಗ ಬರುವ ಕೆಳಭಾಗದ ಚಿಪ್ಪು; ಕಣ್ಣಿರುವ ಚಿಪ್ಪು: ಮಾಲಕ್ಷ್ಮಿ, ಎರಡು ಹೆಣ್ಣುಕರಟ ಕೊಡು (ಮುಗಿಯು. ೧೬೦). 'ಗಂಡುಗರಟ' ಪರಾ. [ಹೆಣ್ಣು (< ಪೆಣ್) + ಕರಟ$_1$ (< ಕರಂಟ)]

ಹೆಣ್ಣುಕರಿತುಂಬೆ (ನಾ). ಕರಿಯತುಂಬೆಗಿಡದಲ್ಲಿ ಒಂದು ಬಗೆ: ಮಂಗ ಮಾರಿಸೊಪ್ಪು, ಹೆಣ್ಣುಕರೀತುಂಬೆ, ಹುಚ್ಚುಮುಟ್ಟೇಗಿಡ (ಮೃಔಗಿ. ೬-೧೧೬).

[ಹೆಣ್ಣು (< ಪೆಣ್) + ಕರಿತುಂಬೆ]

ಹೆಣ್ಣುಕಾಳಿಂಗ (ನಾ). ಒಂದು ಬಗೆಯ ಸಸ್ಯ: (ಮೃಔಗಿ. ೪೮-೯೬೨). 'ಗಂಡುಕಾಳಿಂಗ' ಪರಾ. [ಹೆಣ್ಣು (< ಪೆಣ್) + ಕಾಳಿಂಗ (= ಕಾಲಿಂಗ)]

ಹೆಣ್ಣುಕುಣಕೆ (ನಾ). ಕೊಂಡಿ ಅಥವಾ ಕೊಕ್ಕೆಯ ಒಂದು ಭಾಗ, – ತಗುಲು ಹಾಕುವ ಕುಣಕೆ : (ಕ). [ಹೆಣ್ಣು (< ಪೆಣ್) + ಕುಣಕೆ$_2$ (< ಕುಳಕ$_1$)]

ಹೆಣ್ಣುಕುದುರೆ 'ಪೆಣ್ಣುದುರೆ' ನೋ.

ಹೆಣ್ಣುಕೂಸು 'ಪೆಣ್ಣೂಸು' ನೋ.

ಹೆಣ್ಣುಗ 'ಪೆಣ್ಣುಗ' ನೋ.

ಹೆಣ್ಣುಗತ್ತೆ 'ಪೆಣ್ಣುತ್ತೆ' ನೋ.

ಹೆಣ್ಣುಗರುಳು 'ಹೆಣ್ಣರುಳು' ನೋ.

ಹೆಣ್ಣುಗವಡೆ (ನಾ) ಕವಡೆಯಲ್ಲಿ ಒಂದು ಬಗೆ: ಹೆಣ್ಣುಗವಡೆಯನು ತೊಂಡು ಪಚ್ಚೆಕರ್ಪೂರವ ಅದಜೊಳಗೆ ತುಂಬ . . . ಕಣ್ಣಿಗೆ ಹಚ್ಚೆ, ಹೂವು ಕರಗುವುದು (ಎಸ್ವಿ. ೧೮೧). [ಹೆಣ್ಣು (< ಪೆಣ್) + ಕವಡೆ$_2$]

ಹೆಣ್ಣುಗಿಳಿ 'ಪೆಣ್ಗಿಳಿ' ನೋ.

ಹೆಣ್ಣುಗುದುರೆ 'ಪೆಣ್ಣುದುರೆ' ನೋ.

ಹೆಣ್ಣುಗೂಸು 'ಪೆಣ್ಣೂಸು' ನೋ.

ಹೆಣ್ಣುಗೊಡ್ಡ (ನಾ). ಒಂದು ಬಗೆಯ ಮರ: ಉಡಿಮರ, ಗೊಡ್ಡ . . . ಹೆಣ್ಣುಗೊಡ್ಡ (ಮೃಡಿಗಿ. ೩೭-೧೫೫೦). [ಹೆಣ್ಣು (< ಪೆಣ್) + ಗೊಡ್ಡ?]

ಹೆಣ್ಣುಗೊರವಿ, ಹೆಣ್ಣುಗೊರಿವಿ (ನಾ). ಒಂದು ಬಗೆಯ ಮರ: ಹೆಣ್ಣುಗೊರವಿ (ಮರ) ಸುಂದರವಾದ ಸಣ್ಣಗಿಡ, ದೀವಟಿಗೆಗೆ ಬರುತ್ತದೆ (ಕಭಾಗ. ೫೦). **ಹೆಣ್ಣುಗೊರಿವಿ:** ಮರಗಳು: ಹಸವ, ಹಬ್ಬಲಸು . . . ಗೊರವಿ, ಹೆಣ್ಣುಗೊರಿವಿ (ನಮ್ಮನು. ೨೩೬). [ಹೆಣ್ಣು (< ಪೆಣ್) + ಗೊರವಿ$_2$]

ಹೆಣ್ಣುಗೊರಿವಿ 'ಹೆಣ್ಣುಗೊರವಿ' ನೋ.

ಹೆಣ್ಣುಜನ್ಮ 'ಪೆಣ್ಣನ್ಮ' ನೋ.

ಹೆಣ್ಣುಡುಗೆ (ನಾ). ಹೆಂಗಸಿನ ವೇಷ,– ವಸ್ತ್ರ: ಹೆಣ್ಣುಡುಗೆಯನ್ನುಟ್ಟು ಹರೆಯದ ಹೆಣ್ಣು ಚಾಮಲೆ . . . ಚೆಲುವನ್ನು ತಳೆಯುತ್ತಿದ್ದಳು (ಸವಚ. ೫೬).

[ಹೆಣ್ಣು (< ಪೆಣ್) + ಉಡುಗೆ]

ಹೆಣ್ಣುಡೆ 'ಪೆಣ್ಣುಡೆ' ನೋ.

ಹೆಣ್ಣುತನ 'ಪೆಣ್ತನ' ನೋ.

ಹೆಣ್ಣುದೆವ್ವ 'ಹೆಣ್ದೆವ್ವ' ನೋ.

ಹೆಣ್ಣುದೇವತೆ (ನಾ). ಸ್ತ್ರೀದೇವತೆ: (ಕ). [ಹೆಣ್ಣು (< ಪೆಣ್) + ದೇವತೆ]

ಹೆಣ್ಣುನಾಯಿ 'ಪೆಣ್ನಾಯ್' ನೋ.

ಹೆಣ್ಣುನೀಲಿ (ನಾ). ನೀಲಿಗಿಡದಲ್ಲಿ ಒಂದು ಬಗೆ: (ಕ).

[ಹೆಣ್ಣು (< ಪೆಣ್) + ನೀಲಿ]

ಹೆಣ್ಣುನೋಡು (ಕ್ರಿ). ೧. ವಧುವನ್ನು ಹುಡುಕು: ಅವರ ಮಗನಿಗೆ ಹೆಣ್ಣು ನೋಡುತ್ತಿದ್ದಾರೆ (ರೂಢಿ). ೨. ವಧುಪರೀಕ್ಷೆ ಮಾಡು; ವಧುವನ್ನು ನೋಡು: ಸಾಮಾನ್ಯವಾಗಿ ನನ್ನೂರಿವನರು ಹೆಣ್ಣು ನೋಡಲು ಗೌಡರನ್ನೇ ಕರೆದುಕೊಂಡು ಹೋಗುವುದುಂಟು (ನಸ್ಸೂರು. ೭೦). [ಹೆಣ್ಣು (< ಪೆಣ್) + ನೋಡು]

ಹೆಣ್ಣುಮಕ್ಕಳು 'ಪೆಣ್ಮಗು' ಪರಾ.

ಹೆಣ್ಣುಮಗಳು 'ಪೆಣ್ಮಗಳು' ನೋ.

ಹೆಣ್ಣುಮಗು 'ಪೆಣ್ಮಗು' ನೋ.

ಹೆಣ್ಣುಮಣಿ 'ಪೆಣ್ಮಣಿ' ನೋ.

ಹೆಣ್ಣುಮತ್ತಿ (ನಾ). ಒಂದು ಬಗೆಯ ಮತ್ತಿಮರ: ಗೌಜಲ್‌ಮರ, ಕವಲು ಮರ . . . ಕಾವಲ್, ಹೆಣ್ಣುಮತ್ತಿ (ಮೃಡಿಗಿ. ೧೮-೩೧೯).

[ಹೆಣ್ಣು (< ಪೆಣ್) + ಮತ್ತಿ$_1$ (< ಮಟ್ಟಿ$_1$)]

ಹೆಣ್ಣುಮರಿ 'ಹೆಣ್ಣುಮಜಿ' ನೋ.

ಹೆಣ್ಣುಮರುಳ 'ಹೆಣ್ಮರುಳ' ನೋ.

ಹೆಣ್ಣುಮಜಿ, ಹೆಣ್ಣುಮರಿ (ನಾ). ೧. (ಯಾವುದಾದರೂ ಪ್ರಾಣಿಯ) ಚಿಕ್ಕ ಹೆಣ್ಣು ಪ್ರಾಣಿ: ಚಟಕೆ- ಗುದ್ದಿಗೆ ಹುಟ್ಟಿದ ಹೆಣ್ಣುಮಜಿ (ನಾಚಾ. ೬); ನೋಡುವುದಕ್ಕೆ ಹುಲ್ಲಿಯ ಹೆಣ್ಣುಮಜಿಗಳ ಜೋಡಿಸಿಕೊಟ್ಟರುತ್ಸವದಿ (ಮೋಹತ. ೧೯-೭೭). **ಹೆಣ್ಣುಮರಿ:** ೨. ಸಣ್ಣಹುಡುಗಿ: ಡೊಂಬರ ಹೆಣ್ಣುಮರಿ ಗರಗರನೆ ಎತ್ತರಭರದಲ್ಲಿ ತಿರುಗುವಾ ತೆರ ಹುಡಿಯು ಅರಸಿನ ಎರಚಿತೆರಚಿತು ಕಣ್ಣಿಗೆ (ಕವಪು. ೩೯-೧೭). [ಹೆಣ್ಣು (< ಪೆಣ್) + ಮಜಿ]

ಹೆಣ್ಣುಮಾನ್ 'ಪೆಣ್ಮೀನ್' ನೋ.

ಹೆಣ್ಣುಮಾನು 'ಪೆಣ್ಮೀನ್' ನೋ.

ಹೆಣ್ಣುಮೊಲ 'ಪೆಣ್ಮೊಲ' ನೋ.

ಹೆಣ್ಣುವೇಷ (ನಾ). ೧. = ಹೆಣ್ಣುಡುಗೆ: ಕೆಲವರು ಗಂಡುಮಕ್ಕಳಿಗೆ ಹೆಣ್ಣುವೇಷ ಹಾಕಿ ಫೋಟೊ ತೆಗೆಸುವುದುಂಟು (ರೂಢಿ). ೨. ಸ್ತ್ರೀಪಾತ್ರ; ಹೆಂಗಸಿನ ಪಾತ್ರ: ಹಿಂದಿನ ಕಾಲದ ನಾಟಕಗಳಲ್ಲಿ ಗಂಡಸರೇ ಹೆಣ್ಣುವೇಷ ಹಾಕುತ್ತಿದ್ದರು (ರೂಢಿ).

[ಹೆಣ್ಣು (< ಪೆಣ್) + ವೇಷ]

ಹೆಣ್ಣುಸಂಪಿಗೆ (ನಾ). ಒಂದು ಬಗೆಯ ಮರ: ಹೆಣ್ಣುಸಂಪಿಗೆ (ಚಂಪರ)-ಮಧ್ಯಮ ಆಕಾರದ್ದು (ಕಭಾಗ. ೫೦). [ಹೆಣ್ಣು (< ಪೆಣ್) + ಸಂಪಿಗೆ (< ಸಂಪಗೆ)]

ಹೆಣ್ಣುಸೆಜ್ 'ಪೆಣ್ಣೆಜ್' ನೋ.

ಹೆಣ್ಣುಸೋಗು (ನಾ). ಹೆಂಗಸಿನ ರೀತಿಯ ನಟನೆ; ಹೆಣ್ಣಿನ ನಡವಳಿಕೆಯ ತೋರಿಕೆ: ನೀ ಈ ಹೆಣ್ಣುಸೋಗು ಬಿಟ್ಟುಬಿಡು (ಗಂಮಾಯಿ. ೨೫೧).

[ಹೆಣ್ಣು (< ಪೆಣ್) + ಸೋಗು]

ಹೆಣ್ಣುಹಕ್ಕಿ 'ಪೆಣ್ಹಕ್ಕಿ' ನೋ.

ಹೆಣ್ಣುಹುಲಿ 'ಪೆಣ್ಹುಲಿ' ನೋ.

ಹೆಣ್ಣುಹೂವು (ನಾ). ಅಂಡಾಶಯ, ಶಲಾಕೆ ಮತ್ತು ಶಲಾಕಾಗ್ರಗಳ ನ್ನೊಳಗೊಂಡಿರುವ ಹೂವು: ಅಂಡಾಶಯವುಳ್ಳ ಹೂವು ಹೆಣ್ಣುಹೂವು . . . ಬಲಿತು ಕಾಯಾಗುವದು (ಪ್ಯಶಾ. ೫೩). [ಹೆಣ್ಣು (< ಪೆಣ್) + ಹೂವು (< ಪೂ$_2$)]

ಹೆಣ್ಣುಳಿ (ನಾ). ಒಂದು ಬಗೆಯ ತೆರಿಗೆಯ ರೂಪದ ಆದಾಯ (?): ಅರಮನೆಗೆ ತೆಱುವ ಪ್ರಾಕು ಸಿಧಾಯ ಹೊದಕೆ ಹೆಂಣುಳಿ ಕಾಣಕೆ . . . ಮುಂತಾಗಿ ಏನು ಬಂದಹನೂ (ಎಕ. VIII, ತೀರ್ಥಹ. ೧೧೪-೪೦: 1379). [?]

ಹೆಣ್ಣೆದೆ 'ಪೆಣ್ಣೆರ್ದ' ನೋ.

ಹೆಣ್ಣೊಡಲ್ 'ಪೆಣ್ಣೊಡಲ್' ನೋ.

ಹೆಣ್ತಾಳೆ (ನಾ). ಒಂದು ಬಗೆಯ ತಾಳೆಮರ: (ಮೃಡಿಗಿ. ೭೧-೧೩೭).

[ಹೆಣ್ (< ಪೆಣ್) + ತಾಳೆ$_2$ (< ತಾಳ್$_3$)]

ಹೆಣ್ದೆವ್ವ, ಹೆಣ್ಣುದೆವ್ವ (ನಾ). ಹೆಣ್ಣುಪಿಶಾಚಿ: "ಪಿಶಾಚೀ, ಪಿಶಾಚಿಕಾ, ಈ ೨ ಹೆಣ್ದೆವ್ವ" (ಕಾಶಕ್ಕ. ೨೧೪). **ಹೆಣ್ಣುದೆವ್ವ:** ಆ ಹಳಿಮನೆಯಲ್ಲಿ ಹೆಣ್ಣುದೆವ್ವವೊಂದು ವಾಸವಾಗಿದೆಯೆಂದು ಕೆಲವರು ಹೇಳುತ್ತಾರೆ (ರೂಢಿ).

[ಹೆಣ್ (< ಪೆಣ್) + ದೆವ್ವ (< ದಯ್ಯ)]

ಹೆಣ್ಪುಯ್ಯಲು 'ಪೆಣ್ಪುಯ್ಯಲ್' ನೋ.

ಹೆಣ್ಮಕ್ಕಳು 'ಪೆಣ್ಮಗು' ಪರಾ.

ಹೆಣ್ಮರುಳ, ಹೆಣ್ಣುಮರುಳ (ನಾ). ಹೆಣ್ಣಿನಲ್ಲಿ ಬಹಳ ಆಸಕ್ತನಾದವನು; ಕಾಮುಕ: ಐತಾಳರೋ . . . ಹೆಂಡತಿಯೊಡನೆ ಪಟ್ಟಾಂಗ ಹೊಡೆಯುವ ಹೆಣ್ಮರುಳರೇ! (ಪುರಂ. ೧೭). **ಹೆಣ್ಣುಮರುಳ:** ಪಕ್ಕಾ ಹೆಣ್ಣುಮರುಳ! (ಪಚಿ. ೮೫).

[ಹೆಣ್ (< ಪೆಣ್) + ಮರುಳ]

ಹೆಣ್ಮೀನ್ 'ಪೆಣ್ಮೀನ್' ನೋ.

ಹೆತ್ತ$_1$ 'ಪೆಱು$_1$' ನೋ.

ಹೆತ್ತ$_2$ 'ಪೆಱು$_2$' ಪರಾ.

ಹೆತ್ತರಾಣಿಕೆ (ನಾ). ಒಂದು ಬಗೆಯ ಸಸ್ಯ: ಹೆತ್ತರಾಣಿಕೆ . . . ತೆರಣಿ, ಕಕೋರ್ಲ (ಮೃಡಿಗಿ. ೭೩-೧೨೮೯). [?]

ಹೆತ್ತರಿಮುಳ್ಳು (ನಾ). ಒಂದು ಬಗೆಯ ಸಸ್ಯ: ಕುಡವಲೆ, ಹೆತ್ತರಿಮುಳ್ಳು, ಮುಳ್ಳುತಾರೆ, ಗಜದೀರ (ಮೃಡಿಗಿ. ೩೭-೭೫೯). [? + ಮುಳ್ಳು (< ಮುಳ್)]

ಹೆತ್ತಲೆ (?). (ನಾ). ಮುಖ್ಯವಾದ ವರಮಾನ (?): ಸೇನಬೋವನ ವರ್ತನೆಯಿಂದ ಗ ೨॥ ೪ ಹೆತ್ತಲೆವರಾಡದಿಂದ ಗ ೮॥ ೨ (ಎಕ. VIII. ತೀರ್ಥಹ. ೧೧೦-೨೦; 1702). [?]

ಹೆತ್ತಿಳ 'ಪೆತ್ತಿಳ' ನೋ.

ಹೆತ್ತು$_1$ 'ಪೆಜ್ಜು$_1$' ನೋ.

ಹೆತ್ತು$_2$ 'ಪೆಜ್ಜು$_2$' ನೋ.

ಹೆತ್ತುತ್ತಿ (ನಾ). ಒಂದು ಬಗೆಯ ಸಸ್ಯ: (ಮೃಡಿಗ. ೭೦-೧೪೯೯). [?]

ಹೆತ್ತೇಗ 'ಹೆದ್ದೇಗು' ನೋ.

ಹೆದರಿಕೆ (ನಾ). ಭಯ; ಅಂಜಿಕೆ: ಗೌಡರ ಗರ್ಜನೆ . . . ಹೆದರಿಕೆ ಹುಟ್ಟಿಸುತ್ತದೆ (ಗಾಳಿಗು. ೩); ಅವಳನ್ನು ಕಂಡರೆ ಒಂದೊಂದು ದಿನ ಹೆದರಿಕೆಯೂ ಆಗುತ್ತಿತ್ತು (ಅಲಹೂ. ೩೭). [ಹೆದರು (< ಹೆದಱು$_1$) + - ಇಕೆ ./ ತುಳು. ಹೆದರಿಕೆ]

ಹೆದರಿಗಟ್ಟಿ (ನಾ). ಒಂದು ಸ್ಥಳದ ಹೆಸರು: ಗೊಗ್ಗಿಯ ದೇಗುಲದ ಧಮ್ಮರಾಸಿಭಟ್ಟಾರರ ಕಾಲಂ ಕರ್ಬ ಕೊಟ್ಟ ಸ್ಥಿತಿ ಯಾವದೆನ್ನೊಡೆ ಹೆದರಿಗಟ್ಟುವುಂ . . . ಇಟ್ಟಗೆಯುಮನ್ನು ನಾಲ್ಕುಂ ಬಾಡುವುಮಂ (ಎಕ. IX, ಚಿತ್ರದು. ೭೭-೨೨; 937). [ಹೆದರಿ$_0$ + ಗಟ್ಟಿ$_1$]

ಹೆದರಿಸು 'ಹೆದಱಿಸು' ನೋ.

ಹೆದರು 'ಹೆದಱು$_1$' ನೋ.

ಹೆದರುಗಣ್ಣು (ನಾ). ಭಯಭೀತವಾದ ಕಣ್ಣು: ಕುಳಿತು ಕಣ್ಣುಜ್ಜಿಕೊಂಡು ಸುತ್ತಲೂ ನೋಡಿ ಕಂಡು, ಹೆದರುಗಣ್ಣಾಗಿ (ಚಂದ್ರಪ್ರ. ೨೪).

[ಹೆದರು (< ಹೆದಱು$_1$) + ಕಣ್ಣು (< ಕಣ್)]

ಹೆದರುಗುಳಿ (ನಾ). ಅಂಜುವುದೇ ಸ್ವಭಾವವಾಗಿರುವ ವ್ಯಕ್ತಿ; ಅಂಜುಕುಳಿ; ಭೀರು: ನಾವು ಹೊರಗೆ ಸ್ವತಂತ್ರವಾಗಿದ್ದಾಗ ಸದಾ ಹೆದರುಗುಳಿಯಾಗಿರುತ್ತೇವೆ (ಪುನರು. ೫೪೬). [ಹೆದರು (< ಹೆದಱು$_1$) + - ಗುಳಿ$_2$ (< - ಕುಳಿ$_3$)]

ಹೆದರುಪುಕ್ಕ (ನಾ). = ಹೆದರುಗುಳಿ: ಅವನೊಬ್ಬ ಹೆದರುಪುಕ್ಕ (ರೂಢಿ).

[ಹೆದರು (< ಹೆದಱು$_1$) + ಪುಕ್ಕ$_1$]

ಹೆದರೆದೆ 'ಹೆದಱೆದೆ' ನೋ.

ಹೆದಱಿಸು, ಹೆದರಿಸು (ಕ್ರಿ). ಭಯಪಡಿಸು; ಅಂಜಿಸು: ನರನ ಕಡುದುಮ್ಮಾನ ನೆಱೆ ಹೆದಱಿಸಿತು ಮೂಜಗವ (ಕುವಾದ್ರೋ. ೮-೧೧). **ಹೆದರಿಸು:** ಬಾಯಿ ಬಿಟ್ಟುಕೊಂಡು ಗೊರ್ ಗೊರ್ ಎಂದು ಹೆದರಿಸುತ್ತಲೇ ಇತ್ತು (ಚಿಂಗಾಳ್ಳ. ೬೧೩); ಅತ್ತು ಹೆದರಿಸ್ತೀಯೇನು! (ಮರಳಿ. ೧೦೧). [ಹೆದಱು$_1$ + - ಇಸು$_3$]

ಹೆದಱು$_1$, ಪೆದರು, ಹೆದರು (ಕ್ರಿ). ಭಯಪಡು; ಅಂಜು: ಸಿದ್ಧರ ದೇವನೆಱಗಿದಡೆ ಹೆದಱೆ ಕೇಳ್ದಳು ರಾಣಿ ಹೊಡವಂಟ ಕಾರಣವನು (ಸಿದ್ಧರಾ. ೧-೩೯); ಹೆದಱಿದರು ನಾಯಕರು ಪಾಂಡವರದಟು ಮುಱಿದುದು (ಕುವಾಭೀ. ೬-೧೭). Δ **ಹೆದರು:** ಹೆಣ್ಣಿನ ಬಣ್ಣ ನೋಡಿ ಕಣ್ಣಾಗೆದಿರಿ . . . ಪಿನ್ನವಿಲ್ಲದಂತೆ ವಿಟಪುರುಷನಿಗೆ ಅನುಗುಣ್ಯವಾಗಿ ಇಪ್ಪಳೂ ಪೆದರದಂತೆ (ವಿಜಾಸು. ೫೫-೧); ವುದಿಸಬಾರದು ಕರುಣ ಪೆದರಿಯಪಕೃತಿಯೆಸಗೆ ಮದಕಲಿತನಂದದೆ ಭವತ್ಪಾತ್ರಗತಿಯುದಿಸುವಂದದೆ (ವಂಕಾರಾ. ೬-೨೬-೧೨). **ಹೆದರು:** ಹೆದರಿತು ಸೇನೆ ಕಂಪಿಸಿತು ಚಂಡಮರೀಚಿ (ಚಂದ್ರಹಾ. ೧೩೯); ಅಷ್ಟು ಹೆದರಿಕೊಳ್ಳುವಂತಹ ಘಟನೆ ಏನು ನಡೆಯಿತು (ರನವಹಂ. ೧೦೧). 'ಬೆದಱು$_1$' ಪರಾ.

ಹೆದಱು$_2$ (ನಾ). ಭಯ; ಅಂಜಿಕೆ: ವಿಷಯ ಷಡುವರ್ಗಕ್ಕೆ ಹೆದಱು ದುಷ್ಕರ್ಮಕ್ಕೆ ನಡುಕವಜ್ಞಾನಕ್ಕೆ ತಲ್ಲಣಂ ತಲೆದೋಱಲು (ಸಿದ್ಧರಾ. ೧-೪೭); ಹೆದಱು ಹಿಂಗಿತು (ಕುವಾಗ. ೭-೧೧). [< ಹೆದಱು$_1$]

ಹೆದಱೆದೆ, ಹೆದರೆದೆ (ನಾ). ಭಯಪಡುವ ಮನಸ್ಸು; ಅಂಜುವ ಹೃದಯ: ಹೆದಱೆದೆಯ ಹೇರಾಳಶೋಕದ . . . ಗರುವಾಯಳಿದ ಭೀಮನ ಕಂಡನಾ ಭೂಪ (ಕುವಾಳ. ೧೩-೩೮). **ಹೆದರೆದೆ:** ಓದುತಿರ್ದಿನಿಯನಂ ಕರೆದು ತೋರಿದಳು ಹೆದರೆದೆಯ ಹೆಣ್ (ಶ್ರೀರಾಮಾ. ೧೪೭-೧೦೬). [ಹೆದಱು$_1$ + ಎದೆ (< ಎರ್ದೆ)]

ಹೆದಾರಿ 'ಪೆರ್ದಾರಿ' ನೋ.

ಹೆದೆ 'ಪೆದೆ' ನೋ.

ಹೆದೆಕಟ್ಟು 'ಹೆದೆಗಟ್ಟು' ನೋ.

ಹೆದೆಗಟ್ಟು, ಹೆದೆಕಟ್ಟು (ಕ್ರಿ). ಬಿಲ್ಲಿನ ಹಗ್ಗವನ್ನು ಇನ್ನೊಂದು ಕೊಪ್ಪಿಗೆ ಕಟ್ಟು; ಹೆದೆಯನ್ನು ಬಿಗಿ; ಹೆದೆಯೇರಿಸು: ನಾರಿಯಂ ಕೀಸಿ ನರಮಂ ಸೀಳಿ ಹೆದಗಟ್ಟು . . . ಗಣೆಗೆ ಗಱಿಗಳನು ಹಸನಾಗಿ ಕಟ್ಟು (ಸಮ್ಮಕಾ. ೧೦-೬೨). **ಹೆದೆಕಟ್ಟು:** ಯಾರು ಈ ಬಿಲ್ಲನ್ನು ಬಗ್ಗಿಸಿ ಅದಕ್ಕೆ ಹೆದೆಕಟ್ಟಿ ಲಕ್ಷ್ಯವನ್ನು ಭೇದಿಸುತ್ತಾನೆಂಬ ಅವನು ನನ್ನ ಮಗಳನ್ನು ಪಡೆಯುತ್ತಾನೆ (ವಚಭಾ. ೫೦). [ಹೆದೆ (< ಪೆದೆ) + ಕಟ್ಟು$_1$]

ಹೆದೆಗೊಳಿಸು (ಕ್ರಿ). = ಹೆದೆಗಟ್ಟು: ಬಾಣವ ಹೆದೆಗೊಳಿಸು ರಕ್ಕಸಿಯ ಜೀವವ ನೊದೆದು ಹಾಯ್ದು (ತೊರಾ. ೧-೧೦-೮). [ಹೆದ (< ಪೆದ) + ಕೂಳ್$_1$ + - ಇಸು$_3$]

ಹೆದೆಯ, ಹಿದಯ (ನಾ). ಹೃದಯ; ಮನಸ್ಸು: ಹೃದಯ - ಹೆದೆಯ (ಕಮದ. ೨೬೮ ಪ್ರಯೋ); ಹೆದೆಯದೊಳೆಯ್ದೆ ಮಿಳಿಯುತಿರೆ ಭೀತಿ . . . ಪೋಗುತಿರ್ದರ್ (ಆರಾಚ. ೫-೬-೨೯). ಹಿದಯ: ಹೃದಯ, ಹಿದಯ-ಎರ್ದೆ (ಶಬ್ದಾನು. ೧೬೦ ಪ್ರಯೋ). [< ಸಂ. ಹೃದಯ]

ಹೆದೆಯೇರಿಸು 'ಹೆದೆಯೇಱಿಸು' ನೋ.

ಹೆದೆಯೇಱಿಸು, ಹೆದೆಯೇರಿಸು (ಕ್ರಿ). = ಹೆದೆಗಟ್ಟು: ಎಡಗೈಯೊಳೆತ್ತಿ ಧನುವಂ ಹೆದೆಯೇಱಿಸಿ [ಪಾಕಾಂ. ನಿಮಿರ್ದೇಱಿಸಿ] ನೀಳ್ದ ಬಾಹುಯುಗ್ಮದ ತೆಗೆಯಲ್ಕೆ (ಜಗವಿ. ೬-೩೧). **ಹೆದೆಯೇರಿಸು:** ನನ್ನ ಸಾರಂಗಧನುಸ್ಸು ಹೆದೆಯೇರಿಸು ಪಿನಾಕಧನುಸ್ಸು ಮುರಿದ ಹಾಗಲ್ಲ (ತಾಷ್ಟಸಿ.೩-೨೩). [ಹೆದೆ (< ಪೆದೆ)+ ಏಱಿಸು]

ಹೆದ್ದ, ಹೆದ್ನ (ನಾ). ೧. ರಥವು ಮುಂದಕ್ಕೆ ಸರಾಗವಾಗಿ ಚಲಿಸುವಂತೆ ಮತ್ತು ಆಗಾಗ ವೇಗವನ್ನು ತಡೆಯುವಂತೆ ಮಾಡಲು, ರಥದ ಹಿಂಭಾಗದ ಚಕ್ರಗಳಿಗೆ ಪ್ರಯೋಗಿಸುವ (ಉದ್ದವಾದ ಮತ್ತು ದಪ್ಪವಾದ) ಮಿಟುಗೋಲು,– ಸನ್ನೆಕೋಲು: ಮದ್ದಾನೆಗಳಿಂದ ಹಿಂದೆ ನೂಕಿಸುವನು ಹೆದ್ದಗಳಿಂದಲೊತ್ತಿಸುವ (ಗೋಮಟೇ.೩-೫೪). ೨. ರಥದ ಅಚ್ಚುಮರ: "ಹೆದಮದ-ಇರಸು" (ಜಾನಕೋ. ೫೯). **ಹೆದ್ನ:** ೧. ಹಿಂದೆ ತ್ರಾಣವುಳ್ಳ ಇಪ್ಪತ್ತುನಾಲ್ಕು ಜನರು ಒಂದೊಂದು ಕಡಗೂ ಹೆದ್ನ ಕೊಡದೆ ಹೋದರೆ ಈ ತೇರು ಮುಲುಕುವುದಿಲ್ಲ (ಗಡುದಾ. ೬೧); ಅವರು ಹಿಂದುಗಡೆ ದೊಡ್ಡ ದೊಡ್ಡ ತೊಲೆಗಳ ಸಹಾಯದಿಂದ ಹೆದ್ನ ಹಾಕಿದರೆ ತೇರು ಮುಂದಕ್ಕೆ ಸರಿಯುತ್ತೆ (ಭೈಸರ್ವ. ೬೩). ೩. (ಆಲಂ) ಅಡಚಣೆ; ಅಡ್ಡಿ; ವಿಘ್ನ: ಅವರು . . . ನಮ್ಮ ವ್ಯಾಪಾರದ ಪ್ರಮಾಣಕ್ಕೂ ವೇಗಕ್ಕೂ ಹೆದ್ನ ಹಾಕಿ ತಡಕಟ್ಟುವುದು ಸ್ವಾಭಾವಿಕವೇ ಆಗಿತ್ತು (ರಾಜ್ಯಶಾ. ೧೭೨). [?]

ಹೆದ್ದಂಗಡಿ (ನಾ). ಒಂದು ಬಗೆಯ ತಂಗಡಿಗಿಡ; ದೊಡ್ಡ ಆವರಿಕೆ: ಹೆದ್ದಂಗಡಿ ಬೀಜ . . . ಗಾಳಿಗೆದ್ದೆ ಸ್ವರಸದಲ್ಲಿ ಮರ್ದಿಸಿ ಅಡಿಕೆಗಾತ್ರ ಗುಳಿಗೆ ಮಾಡಿ ಒಂದನ್ನು ಕೊಟ್ಟರೆ ದಾಹ ಪರಿಹಾರವಾಗುವುದು (ಸಚಿತ್ರ. ೪೭೫ ಪಂ). [< ಪಿರಿದು$_1$ + ತಂಗಡಿ]

ಹೆದ್ದಂಷ್ಟ್ರ (ನಾ). ನಿಡಿದಾದ ಕೋರೆಹಲ್ಲು,– ದಾಡೆ: ತುಂಗತರನಾಸಿಕಂ ಹೆದ್ದಂಷ್ಟ್ರ ಭೀಕರಬಿಡಂಗಿನ . . . ಯಮನಾಳ್ಗಳಂತಮಮ ಮೈದೋರಿತು (ವಂಕಾರಾ. ೧-೧೭-೪೬). [< ಪಿರಿದು$_1$ + ದಂಷ್ಟ್ರ]

ಹೆದ್ದಟ್ಟು$_1$ (ನಾ). ೧. ಸಮತಟ್ಟು; ಸಮತಲ: (ಕ). ೨.ತೋರಿಕೆ; ಥಳುಕು: (ಕ).

[< ಪಿರಿದು$_1$ + ತಟ್ಟು$_3$ (< ತಟ್ಟೆ)]

ಹೆದ್ದಟ್ಟು$_2$ (ನಾ). ಪ್ರಮುಖವಾದುದು; ಪ್ರಧಾನವಾದುದು: ಅವರ ವಾಕ್ಯಗಳಲ್ಲಿ ವಿಪುಲಾರ್ಥವು ಹೆದ್ದಟ್ಟಾಗಿ ಹಣೆದುಕೊಂಡು ಬರುತ್ತದೆ (ಸಾಹಿಸಂ.೯ ಮುನ್ನುಡಿ); ಉಪಮಾನವಾಗಬಹುದಾದ ವಿಷಯವು ಕವಿಕಲ್ಪಿತವಾಗಿದ್ದಲ್ಲಿ ಉತ್ಪ್ರೇಕ್ಷಾಲಂಕಾರವಾಗುವುದೆಂಬದಾಗಿಯೂ ಹೆದ್ದಟ್ಟಾಗಿ ಗ್ರಹಿಸಬಹುದು -(ಕೃಪಡಿ.೨೬೮).

[< ಪಿರಿದು$_1$ + ತಟ್ಟು?]

ಹೆದ್ದರಣ, ಹೆದ್ದರಣೆ (ನಾ). ಒಂದು ಬಗೆಯ ಮರ: ವಾಲೆ ಹೆದ್ದರಣ ತ್ಯಾರಣ . . . ಮೊದಲಾದ ಗಗನಮಂ ತುಡುಕುವ ವೃಕ್ಷಂಗಳೊಳ್ (ಸಾಗಂಧಿ.೫೪-೫). **ಹೆದ್ದರಣೆ:** ಗೊರವಿ, ಕಿಸ್ಸರ, ಹೆದ್ದರಣೆ . . . ಹೆಣ್ಣುಗೊರವಿ (ಮೃಡಿಗ. ೪೭-೯೨೫). [?]

ಹೆದ್ದರಣೆ 'ಹೆದ್ದರಣ' ನೋ.

ಹೆದ್ದಲೆ 'ಪೆರ್ದಲೆ' ನೋ.

ಹೆದ್ದಳಕಲು (ನಾ). ಬಹಳ ತೆಳುವಾದುದು; ಸಾಂದ್ರವಾಗಿಲ್ಲದುದು: ಅವನು

ನಡೆಯುತ್ತಿದ್ದ ದಾರಿಯ ಕಾಡು ಮೊದಮೊದಲು ತುಸು ಹೆದ್ದಳಕಲಾಗಿ ಅಷ್ಟೇನೂ ನಿಬಿಡವಾಗಿರಲಿಲ್ಲ (ಮಲಮು.೬೪). [< ಪರಿದು$_1$ + ಅಳಕಲು]

ಹೆದ್ದಾರಿ 'ಪೆರ್ದಾರಿ' ನೋ.

ಹೆದ್ದೀನಿ 'ಪೆರ್ದಿನಿ' ನೋ.

ಹೆದ್ದುಂಡಿ (ನಾ).ದಪ್ಪವಾದ ಕಲ್ಲುಗುಂಡು: ತಣ್ಣೀರಿನ ಮಣ್ಣುಹರವಿಯಲ್ಲ ಕಾದ ಕಬ್ಬುನದ ಕೆಂಡದ ದುಂಡಿ ! ಕೆಂಗೆಂಡದ ಹೆದ್ದುಂಡಿ!! (ತುಂಗಭ. ೧೦೯).

[< ಪರಿದು$_1$ + ದುಂಡಿ$_2$]

ಹೆದ್ದುಂಬೆ (ನಾ). ೧. ದೊಡ್ಡಜಾತಿಯ ತುಂಬೆಗಿಡ ಮತ್ತು ಅದರ ಹೂವು: ಪ್ರಸಾದಮಂತ್ರವ ಭೋಗಿಸಿ ಹೆದ್ದುಂಬೆಪುಷ್ಪದ ಹಾಗೆ . . . ಇರ್ಪವು (ವಚಶಾ. II, ೧೫೧); ಅಂಬಟೆತೊಕ್ಕು ಕಾಡುಬಾಳೆಯ ಮೋತೆ, ಹೆದ್ದುಂಬೆಸೊಪ್ಪು . . . ಕಷಾಯವಿಕ್ಕಿ ಸೇವಿಸೆ ಶ್ಲೇಷ್ಮಾತಿಸಾರ ಪರಿಹರ (ಸಕ್ಕ. ೩೨೧). ೨. ಒಂದು ಬಗೆಯ ಮರ: ಹೆಜ್ಜಾಲ ಹೆದ್ದುಂಬೆ ಬಿ[ಪಾಠಾಂ. ಹೆದ್ದುಂಬರೆ]ದುಂಬುರಂಗಾಲಯವದೆನಿಸಿ ನಾನಾಭೂಜ ದೊಗ್ಗಿನಿಂ ಕಾನನಂ ಕಣ್ಗೆಸೆದುದು (ಸೋಮಚ. ೩-೨). 'ಹೆಂದುಂಬೆ' ಪರಾ

[< ಪರಿದು$_1$ + ತುಂಬೆ$_2$]

ಹೆದ್ದುರಚೆ 'ಹೆದ್ದುಱುಚೆ' ನೋ.

ಹೆದ್ದುರುಹೆ (ನಾ). ಒಂದು ಬಗೆಯ ಸಸ್ಯ: "ಜಾಂಗಲೀ-ಹೆದ್ದುರುಹೆ" (ಓಷಧಿ. ೬೨). [?]

ಹೆದ್ದುಱಿ (ನಾ).ಅಧಿಕವಾದ ತುರಿಕೆ,– ನವೆ: ಎಕ್ಕದ ಹಾಲು, ಎಲೆಕಳ್ಳಿಯ ಹಾಲು, ಶುಂಠಿ,ಮಣಿಶಿಲೆ ಎಂಬವನ್ನು ಅಂಬಲದಲ್ಲಿ ಅರೆದು ಪೂಸೆ ದದ್ರುಗಳನ್ನೂ ತೊನ್ನನ್ನೂ ಕೆಡಿಸುವುದು ಹೆದ್ದುಱಿಯನ್ನು ಪೊಸಲಾಕ್ಷಣವೇ ಕೆಡಿಸುವುದು (ಫಮ್ಮ. ೧೫೯).

[< ಪರಿದು$_1$ + ತುಱಿ]

ಹೆದ್ದುಱುಚೆ, ಹೆದ್ದುರಚೆ (ನಾ).ತುರುಚೆಗಿಡದಲ್ಲಿ ಒಂದು ಬಗೆ; ದೊಡ್ಡ ಜಾತಿಯ ನಸುಗುನ್ನಿ : "ವಿಷಪತ್ರಿಕಾ - ಹೆದ್ದುಱುಚೆ" (ಓಷಧಿ.೧೫೪). **ಹೆದ್ದುರಚೆ** : ಹೆದ್ದುರಚೆ, ಕಟುಕರೋಹಿಣಿ . . . ನೆಲಬೇವು ಇವುಗಳನ್ನು ಕಷಾಯವಿಕ್ಕಿ ಸೇವಿಸೆ ಶೇಷ್ಮಜ್ವರ ನಾಶವಾಗುವುದು (ಸಕ್ಕ. ೯೦). [< ಪರಿದು$_1$ + ತುಱುಚೆ]

ಹೆದ್ದೆರೆ 'ಪೆರ್ದೆರೆ' ನೋ.

ಹೆದ್ದೆವರು 'ಪೆರ್ದೆವರ್' ನೋ.

ಹೆದ್ದೇಗು, ಹೆತ್ತೇಗ (ನಾ). ದೊಡ್ಡ ಜಾತಿಯ ಒಂದು ಬಗೆಯ ತೇಗದ ಮರ: ಇಲ್ಲಿ ಹುಟ್ಟುವ ತೊಲಿಗಳಲ್ಲಿ ತೇಗು, ಹೆದ್ದೇಗು, ಮತ್ತಿ . . . ಮೊದಲಾದವುಗಳೇ ಮುಖ್ಯ (ಮುಂಬಯಿ.೫-೨೧೦). **ಹೆತ್ತೇಗ** : ಹೆತ್ತೇಗ, ಎಟ್ಟಿಗ . . . ಹೆದ್ದ (ಮೈಡಿಗ. ೩-೪೦).

[< ಪರಿದು$_1$+ ತೇಗು$_1$]

ಹೆದ್ದೈವ (ನಾ). ಸರ್ವೋತ್ತಮನಾದ ದೇವರು; ಹಿರಿಯ ದೇವರು: ಪರಮ ಶಾಂತಿಯ ತೋಱಿ ಲೋಕಕ್ಕೆ ಹೆದ್ದೈವವಾದೆಯೆನ್ನೊಡೆಯ (ಮೋಹತ. ೩೩-೧೩); ಅಬ್ಧಿಶಯನ ಕರುಣಾಬ್ಧಿಯೆ ಹೆದ್ದೈವ ಇದ್ದರಿಯೊಳಗೆ ನೀನಲ್ಲದೋರ್ವ ಉದ್ಧರಿಸುವನೇನೋ (ಮೋಸ್ವದೀ. ೨೮-೨). [< ಪರಿದು$_1$+ ದೈವ]

ಹೆದ್ದೊಡೆ 'ಪೆರ್ದೊಡೆ' ನೋ.

ಹೆದ್ದೊರೆ$_1$ 'ಪೆರ್ದೊಱೆ' ನೋ.

ಹೆದ್ದೊರೆ$_2$ (ನಾ). ೧. ರಾಜಾಧಿರಾಜ; ಶೇಷ್ಠನಾದ ಅರಸು: ಹೆದ್ದೊರೆಗಳ ಕೈಗಾಣಿಕೆಯಿತ್ತಡ್ಡಬಿದ್ದರು ಬಂಕವ ಬಿಸುಟು (ಮೋಹತ. ೨೨-೫೪). ೨. ಅತ್ಯಂತ ಪರಾಕ್ರಮಶಾಲಿ : ದೊದ್ದಗರೇಕೆ ಹೊಕ್ಕರು ಕೊಲ್ಲು ಕೊಲ್ಲೆಂದು ಹೆದ್ದೊರೆದೈತ್ಯರೆಯ್ದಿದರು (ಮೋಹತ. ೩೫-೧೮). [< ಪರಿದು$_1$ + ದೊರೆ$_3$]

ಹೆದ್ದೊಱೆ 'ಪೆರ್ದೊಱೆ' ನೋ.

ಹೆದ್ದ 'ಹೆದ್ದ' ನೋ.

ಹೆದ್ವಾರ (ನಾ). ಹೆಬ್ಬಾಗಿಲು; ಮಹಾದ್ವಾರ: ರಮ್ಯತರವೆತ್ತುದಾ ಪುರದ ಹೆದ್ವಾರವು (ಸವಮೋ. ೨-೨೯). [< ಪರಿದು$_1$ + ದ್ವಾರ]

ಹೆನೆಯಕುಳ (ನಾ). ಒಂದು ಬಗೆಯ ಆದಾಯ,– ತೆರಿಗೆ: ಲವಣ ಪಣ್ಯಿಕಾರುಕ ಕಳು ಕೈ ಬಣ್ಣ ನೂಲು ಕರ್ಬುನ ದಳಮಿಡಿ ಹೆನೆಯ ಕುಳ ಮುಖ್ಯವಾದ ಸರ್ವ್ವಾಯವನು ಆ ಚೂಡಾನಾಥದೇವರಿಗೆ ಸರ್ಬ್ಬಮಾನ್ಯಂ ಮಾಡಿ (ಎಕ. IX, ಚನ್ನಪ. ೬೬-೧೫; 1288).

[? + ಕುಳ$_2$]

ಹೆನ್ನರ 'ಪೆರ್ನರ' ನೋ.

ಹೆನ್ನೆ$_1$ 'ಪೆಣ್ಣೆ' ನೋ.

ಹೆನ್ನೆ$_2$ (ನಾ). ಮುಟ್ಟಿಗೆ ಸಂಬಂಧಿಸಿದ ಒಂದು ಬಗೆಯ ರೋಗ; ಅಧಿಕವಾಗಿ ರಕ್ತಸ್ರಾವವಾಗುವುದು: ಅಳಲೇಕಾಯಿ, ನೆಲ್ಲಿಚಟ್ನಿ ಇವಂ ಪಥ್ಯಾನಂಗೊಂಡು ಸಕ್ಕರೆ ಬೆರಸಿ ಕೊಳ್ಳೆ ಹೆನ್ನೆ ಗುಣ (ಎಷ್ಟಎ.೧೦೪). [?]

ಹೆನ್ನೆತ್ತರು (ನಾ). = ಹೆನ್ನೆ$_2$: ಹಲಸಿನ ಗೊಟ್ಟೆಯ ಗ ಜೀನ ಕೊಳ್ಳಲು ಹೆನ್ನೆತ್ತರು ಮಾಣ್ಗುಂ (ಎಷ್ಟಎ.೯೦); ಎಮ್ಮೆಮಜ್ಜಿಗೆಯಲ್ಲಿ ರಾಜಾನ್ನದಕಿ ಅಂಬಲಿಯನಟ್ಟು ಎಕ್ಕೆಯ ಬಟ್ಟು ಉಣ್ಣಲು ಹೆನ್ನೆತ್ತರು ಪರಿಹರ (ಸಕ್ಕ. ೧೯೭).

[< ಪರಿದು$_1$ + ನೆತ್ತರು (< ನೆತ್ತರ್)]

ಹೆನ್ನೆರೋಗ (ನಾ). = ಹೆನ್ನೆ$_2$: ಬಳದಾಸವಾಳದ ಹೂವು, ಕೆಂಪುದಾಸವಾಳದ ಹೂವು, ಕರಿಹತ್ತಿಯ ಹೀಚು ಈ ೩ನ್ನೂ ನೀರಲ್ಲಿ ಕುದಿಸಿ . . . ೊಡೆ ಎಲ್ಲಾ ತೆಱದ ಹೆನ್ನೆರೋಗಗಳು ಗುಣ (ಎಷ್ಟಎ. ೧೦೪). [ಹೆನ್ನೆ$_2$ + ರೋಗ]

ಹೆಪ್ಪರಿಗೆ (ನಾ). ಒಂದು ಬಗೆಯ ಸಸ್ಯ: ಹೆಪ್ಪರಿಗೆ, ಕಂಬಿಹೂ, ಬೀಳಕಂಚುವಾಳ (ಮೈಡಿಗ. ೧೨-೨೧೪). [?]

ಹೆಪ್ಪಳಿ$_1$ (ಕ್ರಿ). ೧. ಹೆಪ್ಪು ಕಟ್ಟದಿರು; ಘನೀಭೂತವಾಗದಿರು: ಚಿಪ್ಪಿನಲ್ಲಿ ಅಪ್ಪು ನಿಂದು ಹೆಪ್ಪಳಿಯದೆ ದೃಷ್ಟವ ಕಂಡೆ (ಪ್ರಭೋಗ. ೨೨); ಬಂಬಿಸುವುದಕ್ಕೆ ಪ್ರತಿರೂಪಿಲ್ಲದೆ ಆನಂದಾಶ್ರುಗಳು ನಿಂದು ಮುತ್ತಿನೊಳಗಣ ಅಪ್ಪುವಿನಂತೆ ಹೆಪ್ಪಳಿಯದೆ ನಿಂದುದು ಜ್ಞಾನಭಕ್ತಿ (ಮೋಶಮಾ. ೧೭-೬೩). [ಹೆಪ್ಪು$_2$ (< ಪೆಪ್ಪು) + ಅಳಿ$_1$(< ಅಲಿ$_1$)]

ಹೆಪ್ಪಳಿ$_2$ (ಕ್ರಿ). ಗಾಬರಿಗೊಳ್ಳು; ಬೆದರು; ಭಯಪಡು . . ಉಱಿ ಬಿಗಿಯಪ್ಪೆ ಕೆಲರ ಕಾಲ್ಕಿಡಿದು ಅಪ್ಪಳಿಸುತ ಕೆಲಬರ ಕಂಸನೃಪನೆದೆ ಹೆಪ್ಪಳಿವಂತೆ ಮರ್ದಿಸಿಗ (ನೇಮಿಸಂ. ೧೭-೧೨೬). [< ಪೆಳ್ಪಳಿ]

ಹೆಪ್ಪಳಿಸು 'ಪೆಳ್ಪಳಿಸು' ನೋ.

ಹೆಪ್ಪಿಕ್ಕು (ಕ್ರಿ). ಹೆಪ್ಪಾಗಲು ಹಾಲಿಗೆ ಮೊಸರನ್ನು ಬೆರಸು; ಹೆಪ್ಪುಹಾಕು: ಕಾಡಮ್ಮೆಯ ಧುಡುಮಿಸಿ ಕರದೆ ಹೆಪ್ಪಿಕ್ಕಿ ದಧಿಯಂ ಕಡವುತ (ತ್ರಿಪುಮೋ. ೩-೩೨).

[ಹೆಪ್ಪು$_2$ (< ಪೆಪ್ಪು) + ಇಕ್ಕು]

ಹೆಪ್ಪಿಡಿಸು (ಕ್ರಿ). ಹೆಪ್ಪು ಹಾಕುವಂತೆ ಮಾಡು; ಹೆಪ್ಪು ಹಾಕಿಸು: ಗಂಡುಮಱಿ ಸಹಿತ ಪೆಣ್ಬುಲಿಯ ತರೆ ನೃಪವನವಂ ಕಂಡಿವಂ ಕಪಿಲೆ ಬಸವಂಗಳಂ ಮಾಡೆನ್ನು ದಂಡನಾಯಕನವಂ ಪಾಲ್ಗಡಿಸಿ ಹೆಪ್ಪಿಡಿಸಿ ಕರಸಿ ಬೆಣ್ಣೆಯ ತೋಱಿದಂ (ವೀಕ್ಷಣ. ೮-೪-೧೭). [ಹೆಪ್ಪು$_2$ (< ಪೆಪ್ಪು) + ಇಡಿಸು$_1$]

ಹೆಪ್ಪಿಡು 'ಪೆಪ್ಪಿಡು' ನೋ.

ಹೆಪ್ಪು$_1$ (ಕ್ರಿ). ಹಾಲು ಮೊಸರಾಗಿ ಪರಿವರ್ತನೆ ಹೊಂದು; ಹೆಪ್ಪಾಗು: ಕಾಸಿಟ್ಟ ಹಾಲ ಬಟ್ಟಲಲಿ ಹುಳಿಯ ಹನಿ ಸಿಡಿದು ಹಾಲು ಒಡೆದಿದೆ, ಈಗ ಹೆಪ್ಪುವನಕವೂ ಕಾಯಬೇಕು (ಮೂಲದಾ. ೧೯೭). 'ಪೆಪ್ಪು' ಪರಾ. [ದೇ. ॥ ತುಳು. ಪೆರ್ಪುನಿ]

ಹೆಪ್ಪು$_2$ 'ಪೆಪ್ಪು' ನೋ.

ಹೆಪ್ಪುಕೊಡು 'ಹೆಪ್ಪುಗೊಡು' ನೋ.

ಹೆಪ್ಪುಗಟ್ಟು (ಕ್ರಿ). ೧. ಹೆಪ್ಪಾಗು; ಗಡ್ಡೆಕಟ್ಟು; ಗರಣೆಯಾಗು: ದಟ್ಟ ಮಂಜಿನ ಗಡ್ಡೆ ಹೆಪ್ಪುಗಟ್ಟಿದೆ (ಆನೇ. ೨-೫); ರೂಪಾನ ಹೃದಯದ ರಕ್ತವೆಲ್ಲ ಹೆಪ್ಪುಗಟ್ಟಿ ಹೋದಂತೆನಿಸಿತು (ಜಯಂತ. ೪೬೮). ೨. ದಟ್ಟವಾಗು; ಸಾಂದ್ರವಾಗು: ಎಲ್ಲೆಲ್ಲಿ ಆನಂದ ಹೆಪ್ಪುಗಟ್ಟುತ್ತದೆಯೋ ಅದೇ ಸೌಂದರ್ಯ (ಸೌಂದಸ. ೧೬); ಹೆಪ್ಪುಗಟ್ಟಿದ್ದ ಕತ್ತಲು . . . ಲೋಕವನ್ನೇ ಅಣಕಿಸುವಂತಿದೆ (ಚಿಕಸ. ೩೪).

[ಹೆಪ್ಪು$_2$ (< ಪೆಪ್ಪು)+ ಕಟ್ಟು$_1$]

ಹೆಪ್ಪುಗೊಡು, ಹೆಪ್ಪುಕೊಡು (ಕ್ರಿ). ಹೆಪ್ಪುಹಾಕು; ಹೆಪ್ಪಿಡು: ಭಕ್ತಿಯೆಂಬ ಪಾಲನ್ನು ಮನದಲ್ಲಿ ಹೆಪ್ಪುಗೊಟ್ಟು . . . ತತ್ವವೆಂಬ ಮಂತುಗೋಲಿನಿಂ ಮಥಿಸಲು

(ವಚಶಾ. II. ೧೫೪). **ಹೆಪ್ಪುಕೊಡು:** ಅಂಗನೆ . . . ಮೊಸರು ಕಾಸಿ ಹೆಪ್ಪು ಕೊಡುತ್ತಿದ್ದಳು (ಪುರಂದ. ೧-೧೧೧-೬). [ಹೆಪ್ಪು$_2$ (< ಪೆಪ್ಪು) + ಕೊಡು$_1$]

ಹೆಪ್ಪುಗೊಳ್, ಹೆಪ್ಪುಗೊಳ್ಳು (ಕ್ರಿ). ಹೆಪ್ಪಾಗು; ಹೆಪ್ಪುಗಟ್ಟು: ಚಪ್ಪಿನೊಳುದಕ ಬಿದ್ದು ಬಲಿದು ಮುತ್ತಾದಂತೆ ಹೆಪ್ಪುಗೊಂಡವು ಬಿಂದುಗಳು (ದೀಕ್ಷಾಮೂ. ೩೮-೭೬೨). **ಹೆಪ್ಪುಗೊಳ್ಳು:** ಮನವು ಮೌನದಲಿ ಹೆಪ್ಪುಗೊಂಡಿರಲು ಮಂಜುದಿಣ್ಣೆಯಂತೆ (ಅರಳು. ೪೦೪-೧೧ [ಹೆಪ್ಪು$_2$ (< ಪೆಪ್ಪು) + ಕೊಳ್$_1$]

ಹೆಪ್ಪುಗೊಳಿಸು ( ). (ಆಲಂ) ಭಯಗೊಳಿಸು; ಬೆಪ್ಪುಗೊಳಿಸು: ಸುಭಟರಂ ಹೆಪ್ಪುಗೊಳಿಸುಬ್ಬ ತು ಕಣಗಳಿಂ (ಪರಶು. ೨೮-೧೦). [ಹೆಪ್ಪುಗೊಳ್$_2$ + - ಇಸು$_3$]

ಹೆಪ್ಪುಗೊಳ್ಳು 'ಹೆಪ್ಪುಗೊಳ್' ನೋ.

ಹೆಪ್ಪುಣ್ಣು (ಕ್ರಿ). ಹೆಪ್ಪನ್ನು ಒಳಗೊಳ್ಳು; ಹೆಪ್ಪಾಗು: ಹೆಪ್ಪುಂಡ ಹಾಲು ತುಪ್ಪವಾಗುವದೊಂದು ಕ್ರಮ. ತಪ್ಪಲಿ, ಒಡೆದ ಹಾಲನು ಕಡೆದು ನೋಡುವ ಶ್ರಮ (ನಲಮು. ೬೭-೧೩). [ಹೆಪ್ಪು$_2$ (< ಪೆಪ್ಪು) + ಉಣ್ಣು (< ಉಣ್ಣ್)]

ಹೆಬಗ (ನಾ). ದಡ್ಡ; ತಿಳಿಗೇಡಿ: ಹೆಬಗನೆನಿಸಿ ಜಾಣನೆನಿಸಿ ವಿಬುಧ ನಾರಕ ನರ ತಿರಿಯಂಚನೆನಿಸುತ ಪ್ರಬಲಹಂಸನ ಕಾಡುತಿಹುವು (ಭರಚಿ. ೬೮-೧೦೯); ಮಗ ವೃದ್ಧ ಪಾರ್ಥಿವಂ ಹೆಬಗನಾಗೇರೊಡದು ಚೆಂಗಿದಂ ತಲೆಗೆದರಿ ಶಾಕಿನಿಯ ಕೈ ಸಿಲ್ಕದೆ (ಪರಶು. ೩೧-೪೨). [?]

ಹೆಬಾರು 'ಪೆರ್ವಾರ್ವ' ನೋ.

ಹೆಬಾರುವ 'ಪೆರ್ವಾರ್ವ' ನೋ.

ಹೆಬ್ಬಂಡೆ (ನಾ). ದೊಡ್ಡ ಗಾತ್ರದ ಬಂಡೆ,— ಶಿಲೆ: ಈ ಮೂವರೂ . . . ಕಡಿದಾಗಿರುವ ಹೆಬ್ಬಂಡೆಗಳಿಂದ ದುರ್ಗಮವಾಗಿರುವ ಕಮರಿಯೊಂದರ ಬಳಿಗೆ ಬಂದು ಸೇರಿದರು (ಬದ್ಧವ್ರ. XIII. ೭೦೦೯); ಹೆಬ್ಬಂಡೆಯ ಸೆರಗು ಬೆಟ್ಟದ ಗೋಡೆಯಿಂದ ಮುಂದಕ್ಕೆ ಚಾಚಿದ್ದು ಕಾಣಿಸಿತು (ಮೂಕಜ್ಜಿ. ೫೬). [< ಪಿರಿದು$_1$ + ಬಂಡೆ$_1$]

ಹೆಬ್ಬಂದಿ 'ಪೆರ್ವಂದಿ' ನೋ.

ಹೆಬ್ಬಕ್ಕಿ 'ಪೆರ್ವಕ್ಕಿ' ನೋ.

ಹೆಬ್ಬಗೆತನ (ನಾ). ಉತ್ತಮವಾದ ರೀತಿ,— ನಡವಳಿಕೆ; ದೊಡ್ಡತನ; ಹಿರಿಮೆ: ನಿಬ್ಬರಕರ್ಮದಲಿ ತಬ್ಬಿಬುಗೊಳಿಸುತ ಉರ್ಬಿಯೊಳಗೆ ಎನ್ನ ಇಬ್ಬಗೆ ಮಾಡುವದು ಹೆಬ್ಬಗೆತನವೇನೋ ಅಬ್ಬನಾಭ (ಮೋಕ್ಷದೀ.೫೭-೧೪). [< ಪಿರಿದು$_1$ + ಬಗೆ$_2$ + - ತನ]

ಹೆಬ್ಬಚ್ಚು (ನಾ). ಅಧಿಕವಾದ ಪ್ರೀತಿ; ಅತಿಶಯವಾದ ಒಲವು: ಕಳ್ಳಚ್ಚುಗಳು ಹೆಬ್ಬಚ್ಚುಗಳು . . . ಒಚ್ಚೆಯಂಗಳು ಮಚ್ಚುಗಳ ಜನರಚ್ಚರಿಗಳೆದಗಿಚ್ಚುಗಳು ವಿಟರ (ಬಸಪು. ೪೦-೬೧). [< ಪಿರಿದು$_1$ + ಅಚ್ಚು$_2$]

ಹೆಬ್ಬಟೆ 'ಪೆರ್ವಟ್ಟೆ' ನೋ.

ಹೆಬ್ಬಟ್ಟೆ 'ಪೆರ್ವಟ್ಟೆ' ನೋ.

ಹೆಬ್ಬಡಿಕೆ 'ಪೆರ್ವಡುಕೆ' ನೋ.

ಹೆಬ್ಬಣಬೆ (ನಾ). ದೊಡ್ಡ ಬಣವೆ: ನೆಲ್ಲ ರಾಶಿಗಳಷ್ಟು ಹೊನ್ನ ರಾಶಿಗಳುಂಟು ಹುಲ್ಲ ಹೆಬ್ಬಣಬೆಗಳಷ್ಟು ಜಲ್ಲಿಪಟ್ಟೆಗಳ ಬಲ್ಲೆದೆಯಿದ್ದುವು (ಭರಚಿ. ೮೦-೧೨).

[< ಪಿರಿದು$_1$ + ಬಣಬೆ (< ಬಣಂಬೆ)]

ಹೆಬ್ಬದಣೆ 'ಹೆಬ್ಬದನೆ' ನೋ.

ಹೆಬ್ಬದನೆ, ಹೆಬ್ಬದಣೆ (ನಾ). ದಪ್ಪ ಜಾತಿಯ ಬದನೆಕಾಯಿಗಳನ್ನು ಬಿಡುವ ಗಿಡ ಮತ್ತು ಅದರ ಕಾಯಿ: "ಬೃಹತೀ-ಹೆಬ್ಬದನೆ, ಗುಳ್ಳ, ನೆಲಗುಳ್ಳ" (ಓಷಧಿ. ೧೦೯). **ಹೆಬ್ಬದಣೆ** : "ಗೋಧೀ-ಹೆಬ್ಬದಣೆ" (ಓಷಧಿ. ೫೦). [< ಪಿರಿದು$_1$ + ಬದನೆ]

ಹೆಬ್ಬದು (ನಾ). ಎತ್ತರವಾದ ಮಣ್ಣಿನ ಒಡ್ಡು,— ಕಟ್ಟೆ: ಹಳ್ಳಿಯ ಬಚ್ಚಲಿಂದಂ ಪಡುವಲು ಹೆಬ್ಬದುವಿಂದಂ ಬಡಗಲು[ಸಂ]ದ ಕೊಳನ ಕೆಳಗೆ (ಕಾ. V. ೪೨-೮೬; 1239).

[< ಪಿರಿದು$_1$ + ಬದು (< ಬದುವು)]

ಹೆಬ್ಬದ್ದು 'ಪೆರ್ವರ್ದು' ನೋ.

ಹೆಬ್ಬನ (ನಾ). ದೊಡ್ಡ ಉದ್ಯಾನ: ಒಬ್ಬಳು ಕೆಳದಿಯ ಕೂಡಿ ನಿಬ್ಬರದಲಿ ಕಾಮ ನರ್ಧಾಂಗಿ ನಡೆದಳು ಹೆಬ್ಬನವನು ನಿಟ್ಟಿಸುತೆ (ಮೋಹತ.೯-೨೨). [< ಪಿರಿದು$_1$ + ಬನ$_1$]

ಹೆಬ್ಬಯಕೆ 'ಪೆರ್ಬಯಕೆ' ನೋ.

ಹೆಬ್ಬಯಲು 'ಪೆರ್ವಯಲ್' ನೋ.

ಹೆಬ್ಬಯ್ಯ (ನಾ). ಒಂದು ಕ್ಷುದ್ರದೇವತೆಯ ಹೆಸರು: ತೋಟದ ಹೆಬ್ಬಯ್ಯಾ ಬುಳ್ಳನು ಸುಂಕ್ಕಾಯಿ ಹಾದಿ ಬೀದಿ ಒಡಿಯಾ (ಏಸಾಸು. ೫೮-೨).

[< ಪಿರಿದು$_1$ + ಅಯ್ಯ$_1$]

ಹೆಬ್ಬರಗ (ನಾ). ಒಂದು ಬಗೆಯ ದೊಡ್ಡ ಕಾಡುಪ್ರಾಣಿ: ಕೊಬ್ಬಿಯಬ್ಬರಿಸುತ್ತಲಾ ಘನ ಹೆಬ್ಬರಗ ಪೊಕ್ಕಂತೆ (ನಾಗಚ. ೭-೮). " ಹೆಬ್ಬುಲಿ" (ನಾಗಚ.ಕೋಶ).

[< ಪಿರಿದು$_1$ + ಬರಕ$_1$ (< ಬರ್ಕ)]

ಹೆಬ್ಬರಿ (ನಾ). ದೊಡ್ಡ ನೀರಿನ ಕಾಲುವೆ: ಶ್ರೀ ಬಂಟ್ಟೇಸ್ವರದೇವರ ನಿವೇದ್ಯಕ್ಕಂ ಚೈತ್ರಪವಿತ್ರಕ್ಕಂ ತಪೋಧನರ ಗ್ರಾಸಕ್ಕಂ ತನ್ನ ಬಡಗಣ ತೋಟದ ಹಿರಿಯ ಏತದ ಹೆಬ್ಬರಿಯಂ ಸರ್ವ್ಯಾಬಾಧೆ ಪರಿಹಾರಮಾಗಿ ಬಿಟ್ಟ (ಕಾ. II. ೨೦-೧೧; 1131). [< ಪಿರಿದು$_1$ + ಪರಿ$_3$]

ಹೆಬ್ಬಲ್, ಹೆಬ್ಬಲ್ಲು (ನಾ). ದೊಡ್ಡದಾಗಿ ಚಾಚಿರುವ ಹಲ್ಲು: ಹೆಬ್ಬಲ್ಲ ಬಿಡುವಾಯ ಜೋಲ್ಯ ಕೆನ್ನಾಲಗೆಯ ಗಬ್ಬನಾಯ್ಗಳ ಹಾಸನುಗಿದು ಬಿಡೆ ಪಂದಿಗಳ ನಬ್ಬರಿಸಿ ತುಡುಕಿದವು (ಚೈಮಿಭಾ. ೨೮-೪೬). **ಹೆಬ್ಬಲ್ಲು** : ಹೆಬ್ಬಲ್ಲ ತೆರದು ಹೆಬ್ಬುಲಿಯು ಹೆನ್ನೆಗೆದು ದೊಡ್ಡನಂ . . . ಕಚ್ಚಿದುದು (ಕಾಲೂರ. ೯೬-೧೯೧). [< ಪಿರಿದು$_1$ + ಪಲ್]

ಹೆಬ್ಬಲ 'ಪೆರ್ವಲ' ನೋ.

ಹೆಬ್ಬಲಸು (ನಾ). ಒಂದು ಬಗೆಯ ಹಲಸಿನ ಮರ: ಹೆಬ್ಬಲಸು (ಪಾಟಫಣಸ) - ಬಹು ಸುಂದರವಾದ ಉನ್ನತವೃಕ್ಷವು . . . ಹಲಸಿನ ಹಣ್ಣು ಪ್ರಸಿದ್ಧ (ಕಭಾಗೆ. ೫೦); ತೋಟದ ಹೆಬ್ಬಲಸಿನ ಮರದಿಂದ ಹಣ್ಣು ಉದುರುವ ಸಪ್ಪಳ ಕೇಳಿಸಿತು (ದೇವಹಂ. ೫೭).

[< ಪಿರಿದು$_1$ + ಹಲಸು (< ಪಲಸು)]

ಹೆಬ್ಬಲೆ 'ಪೆರ್ವಲೆ' ನೋ.

ಹೆಬ್ಬಲ್ಲು 'ಹೆಬ್ಬಲ್' ನೋ.

ಹೆಬ್ಬಸಲೆ (ನಾ). ಬಸಲೆ ಸೊಪ್ಪಿನಲ್ಲಿ ಒಂದು ಬಗೆ: "ರಾಜಮಾತಂಗೀ- ಹೆಬ್ಬಸಲೆ" (ಓಷಧಿ. ೧೩೮). [< ಪಿರಿದು$_1$ + ಬಸಲೆ$_1$]

ಹೆಬ್ಬಸುರಿ (ನಾ). ಬಸುರಿ ಮರದಲ್ಲಿ ಒಂದು ಬಗೆ : (ಮೃಚಿಗಾ. ೩೭-೭೩೦).

[< ಪಿರಿದು$_1$ + ಬಸುರಿ$_2$ (< ಬಸರಿ)]

ಹೆಬ್ಬಳ (ನಾ). ಒಂದು ಜಾತಿಯ ಬೆಕ್ಕು; ಪುನುಗಿನ ಬೆಕ್ಕು: ಕಾಡಲ್ಲಿ ಬೇಟೆ ಆಡಿದಲ್ಲಿ, ಬಿದ್ದ ಮೃಗಗಳ ವಿವರಾ . . . ಕಾಟೆ ಒಂದು, ಕಡವೆ ಆರು, ಹೆಬ್ಬಳ ಒಂದು (ರಾಜೇಂದ್ರ. ೨೮೩). [?]

ಹೆಬ್ಬಳಬೆಕ್ಕು (ನಾ) = ಹೆಬ್ಬಳ: ಹೆಬ್ಬಳಬೆಕ್ಕಿನ ವಿಷಕ್ಕೆ - ಪುಣುಗಿನ ಬೆಕ್ಕಗಿದೊಡೆ . . . ಕುಬೇರಾಕ್ಷಿ ತಿಗುಡೆ ಮಡುವಾಗಲಿವಂ ಕ್ಷಣತಂ ಗ್ರಾವದೆ ಹಿಂಗಿಂ ಕಣಯುತ ವಗ್ಗರಣೆಯಿಂ ಕೊಳಲ್ವಿಷಮಟಿಗುಂ (ಏಮದ. ೧೩-೫೫). [ಹೆಬ್ಬಳ + ಬೆಕ್ಕು (< ಬೆರ್ಕು)]

ಹೆಬ್ಬಳಿ 'ಪೆರ್ವಳಿ' ನೋ.

ಹೆಬ್ಬಳುವ 'ಪೆರ್ವಟು' ನೋ.

ಹೆಬ್ಬಱ (ನಾ). ಭೀಕರವಾದ ಕ್ಷಾಮ,— ದುರ್ಭಿಕ್ಷ: ಕಾಲಕಾಲದೊಳು ಮಳೆಗಳು ಹೊಯ್ಯದಿರಲು . . . ಮಹಾಭೀಲವೆನೆ ಬಂದುದಾ ಹೆಬ್ಬಱಂ (ವೀಶೃಪು.೪-೧-೭); ಜನರು ಕಾಕು ಹೆಬ್ಬಱದಧಿಕನಿಬ್ಬರದೊಳತಿನೊಂದು (ಚತುಪು. ೪-೧೨-೧೧).

[< ಪಿರಿದು$_1$ + ಬಱ]

ಹೆಬ್ಬಱೆ 'ಪೆರ್ವಱೆ' ನೋ.

ಹೆಬ್ಬಾಗಿಲ್ 'ಪೆರ್ವಾಗಿಲ್' ನೋ.

ಹೆಬ್ಬಾಗಿಲು 'ಪೆರ್ವಾಗಿಲ್' ನೋ.

ಹೆಬ್ಬಾಜಾರು (ನಾ). ದೊಡ್ಡ ಪೇಟೆ,— ಅಂಗಡಿಬೀದಿ: ಮಂತ್ರಿಯನು ಕರೆದು ಪುರದ ಕೋಟೆಯನು ಹೆಬ್ಬಾಜಾರ ಕೇರಿಗಳ . . . ಅಲಂಕರಿಸ ನೇಮಿಸಿ ಕಳುಹಲು (ನವಮೋ. ೧೩-೩೦). [< ಪಿರಿದು$_1$ + ಬಾಜಾರು (< ಬಾಜಾರ)]

ಹೆಬ್ಬಾಯ್ (ನಾ). ಅಗಲವಾದ ಬಾಯಿ: ಮೃತ್ಯು ಬರೆ ಬಾಗಿಲಿಗೆ, ತೆರೆದದರ ಹೆಬ್ಬಾಯ್ಗೆ ಬಿಸುಡುವಂ! (ಕೋಗಿಲೆ. ೬೨-೨೩). [< ಪಿರಿದು$_1$+ಬಾಯ್]

ಹೆಬ್ಬಾರ 'ಪೆರ್ವಾರ್ವ' ನೋ.

ಹೆಬ್ಬಾರುವ 'ಪೆರ್ವಾರ್ವ' ನೋ.

ಹೆಬ್ಬಾಲೆ (ನಾ). ಹಾಲೆಜಾತಿಗೆ ಸೇರಿದ ಒಂದು ಬಗೆಯ ಮರ: "ಪ್ರಿಯಂಕರೀ-ಹೆಬ್ಬಾಲೆ, ಬಿಳಿಯ ನೆಲಗುಳ್ಳ" (ಓಷಧಿ. ೯೯). [< ಪಿರಿದು$_1$ + ಹಾಲ್$_2$ (< ಪಾಲ್$_2$)]

ಹೆಬ್ಬಾವಲ್ (ನಾ). ದೊಡ್ಡ ಬಾವಲಿ: "ಹೆಬ್ಬಾವಲ್ ಜತುಕೆ, ಅಜಿನಪತ್ರೆ" (ನಾಚಂಗಾ. ೬). [< ಪಿರಿದು$_1$ + ಬಾವಲ್ (< ವಾವಲ್)]

ಹೆಬ್ಬಾವಿ (ನಾ). ದೊಡ್ಡ ಬಾವಿ; ಆಳವಾದ ಬಾವಿ: ಇರುಳು ನಿಟ್ಟಿಸಿದ ಹೆಬ್ಬಾವಿಗೆ ಹಗಲೆ ಬಿದ್ದಂತಾದುದು (ಮೋಹತ. ೩೯-೨೦). [< ಪಿರಿದು$_1$ + ಬಾವಿ]

ಹೆಬ್ಬಾವು 'ಪೆರ್ವಾವು' ನೋ.

ಹೆಬ್ಬಾಳಿಕೆ (ನಾ). ಉತ್ತಮವಾದ ಆಳ್ವಿಕೆ,— ರಾಜ್ಯಭಾರ: ನಾವು - ನೀವೆಂಬ ಹಳಭೇದಗಳನುಳಿದು . . . ಐಕ್ಯಮತ್ಯದಿಂ ಬಾಳುವುದೆ ತಾಯಿಳೆಯ ಹೆಬ್ಬಾಳಿಕೆಯ ಮರ್ಮ! (ತಚ್ಚರ. ೫೦-೨೭೮). [< ಪಿರಿದು$_1$ + ಆಳಿಕೆ (< ಆಳ್)]

ಹೆಬ್ಬಾಳು$_1$ (ಕ್ರಿ). ಹಿರಿದಾಗಿ ಬಾಳು; ಉತ್ತಮವಾಗಿ ಬದುಕು: ಜಗದೊಳಗಿವಂ ಹೆಬ್ಬಾಳಲಿದನಿವಗೆ ನೀಡಿ ದೀರ್ಘಾಯುಷ್ಯಮಂ ಜಗತ್ಪತಿ ಸಲಹಬೇಕು ನಾರಾಯಣಂ (ಹಚ್ಚರ. ೪೯-೨೬೯). [< ಪಿರಿದು$_1$ + ಬಾಳು$_1$ (< ಬಾಳ್$_1$)]

ಹೆಬ್ಬಾಳು$_2$ 'ಪೆರ್ಬಾಟು' ನೋ.

ಹೆಬ್ಬಾಳೆ (ನಾ). ದೊಡ್ಡ ಜಾತಿಯ ಒಂದು ಬಗೆಯ ಬಾಳೆ ಮರ: ಹೊನ್ನ ಸೂಗಡಗಿಲು ಕಿತ್ತಾಳೆ ಹೆಬ್ಬಾಳೆಯೊಂದುಂಬರಂ ತುಂಬುರಿಂಗಾಲಯವೆನಿಪ್ಪ ನಾನಾಭೂಜದೊಗ್ಗಿನಿಂ ಕಾನನಂ ಕಣ್ಗೆಸದುದು (ಪಚಕಾ.೫-೧೫).

[< ಪಿರಿದು$_1$ + ಬಾಳೆ$_1$ (< ಬಾಳೆ)]

ಹೆಬ್ಬಿದರು 'ಪೆರ್ವಿದಿರ್' ನೋ.

Δ ಹೆಬ್ಬಿದಱು 'ಪೆರ್ವಿದಿರ್' ನೋ.

ಹೆಬ್ಬಿದಿರ್ 'ಪೆರ್ವಿದಿರ್' ನೋ.

ಹೆಬ್ಬಿದಿರು 'ಪೆರ್ವಿದಿರ್' ನೋ.

ಹೆಬ್ಬಿಬ್ಬಿ 'ಹೆಬ್ಬುಬ್ಬು'ನೋ.

ಹೆಬ್ಬಿಬ್ಬಿಗೊಳು (ಕ್ರಿ). ಅತಿಯಾಗಿ ಸಂತೋಷಪಡು: ಕೊಂಕಿದ ಹುಬ್ಬಿನ ಪೆಣ್ಗಂದರದಕೆ ಹಬ್ಬಿಬ್ಬಿಗೊಂಬವರುಂಟಾತ್ಮಕಲೆಗೆ ಮೈಯುಬ್ಬುವರಾರು ನಿನ್ನಂತೆ (ಭರಚ. ೨-೪೮). [ಹೆಬ್ಬಿಬ್ಬಿ (< ಹೆಬ್ಬುಬ್ಬು)+ ಕೊಳು (< ಕೊಳ್$_1$)]

ಹೆಬ್ಬಿಸಿಲು 'ಪೆರ್ವಿಸಿಲ್' ನೋ.

ಹೆಬ್ಬು (ನಾ). ಒಂದು ಬಗೆಯ ಗೆಣಸು: ದುಪ್ಪೆಗೆಣಸು, ಹೆಬ್ಬು (ಮೃಡಿಗಿ. ೩೧-೫೯೩). 'ಹೆಬ್ಬುಗೆಣಸು' ಪರಾ. [?]

ಹೆಬ್ಬುಗುಳ್ಳ (ನಾ). ಒಂದು ಬಗೆಯ ಬದನೆ,— ಗುಳ್ಳ: ಹೆಬ್ಬುಗುಳ್ಳ ನೆಲಗುಳ್ಳಗಳು ಪಿತ್ತಕರ (ಅಷ್ಟಾಂಗ. ೧೩೪-೭೭). 'ಹೆಗ್ಗುಳ್ಳ' ಹೋ. [ಹೆಬ್ಬು + ಗುಳ್ಳ]

ಹೆಬ್ಬುಗೆಣಸು (ನಾ). ಒಂದು ಬಗೆಯ ಗೆಣಸು: (೬). 'ಹೆಗ್ಗೆಣಸು' ಹೋ.

[ಹೆಬ್ಬು + ಗೆಣಸು (< ಗೆಟಸು)]

ಹೆಬ್ಬುಚ್ಚೆ (ನಾ).ಸ್ವಲ್ಪವೂ ತಿಳಿವಳಿಕೆಯಿಲ್ಲದವನು; ಬಹಳ ಮೂರ್ಖ: ಎನಗೆ ಸಂಶಯ ಪುಟ್ಟುತಿದೆ ನೀ ವಿಸ್ತುತತತ್ಪಜ್ಞಾನನಿಷ್ಠನೊ ಘನತರದ ಹೆಬ್ಬುಚ್ಚನೋ ಪೇಳ್ (ನಭಾಗ. ೧೧-೧೩-೧೧). [< ಪಿರಿದು$_1$ + ಪುಚ್ಚ$_1$]

ಹೆಬ್ಬುಡ (ನಾ). ದೊಡ್ಡದಾಗಿರುವ ಬುಡ; ವಿಶಾಲವಾದ ಬುಡ: ತಡೆದ ಬಾಗಿಲುಗಳುಗ್ಗಡದ ಖಿಳರನು ಹೆಮ್ಮರನ ಹೆಬ್ಬುಡದಲೆಱಗುತ ಹೊಕ್ಕನೋಲಗವನು ಸರಾಗದಲಿ (ತೂರಾ.೬-೧೦-೨೮). [< ಪಿರಿದು$_1$ + ಬುಡ]

ಹೆಬ್ಬುಬ್ಬು, ಹೆಬ್ಬಿಬ್ಬಿ, ಹೆಬ್ಬುಬ್ಬೆ (ನಾ). ೧. ಅಧಿಕವಾದ ಉತ್ಸಾಹ,— ಹುರುಪು: ನಮ್ಮ ಕನ್ನಡವನ್ನು ಮುಂದಕ್ಕೆ ತರುವುದಕ್ಕೆ ಬೇಕಾದ ಹೆಮ್ಮೆಯೂ ಹೆಬ್ಬುಬ್ಬೂ ನಮ್ಮಲ್ಲಿ ಉಂಟು (ಕಒಸಾ.೮); ಮಗನ ಭುಜ ಸುಪುಷ್ಟವಾಗುತ್ತಿದ್ದಂತೆ . . . ಕಂಪಿಲನ ಹೆಮ್ಮೆ ಹೆಬ್ಬುಬ್ಬುಗಳಿಗೆ ಕೈಕಾಲು ಮೂಡುತ್ತವೆ (ನಂಜುಂಡ.೮೨). **ಹೆಬ್ಬಿಬ್ಬಿ**: ೨.ಅತಿಯಾದ ಸಂತೋಷ: 'ಹೆಬ್ಬಿಬ್ಬಿಗೊಳು' ಪರಾ. **ಹೆಬ್ಬುಬ್ಬೆ**: ೧. ಹೆಬ್ಬುಬ್ಬೆಗೆ ಎತ್ತಿಕೊಂಡು ಬರುತ್ತೇನೆ ಎಂದು ಒಪ್ಪಿಕೊಂಡದ್ದೇನೋ ಆಯಿತು! ಈಗೇನು ಮಾಡುವುದು? (ಮಲಮ. ೧೮೦). ೩. ಅತಿಶಯವಾದ ಹೆಮ್ಮೆ,— ಗರ್ವ: ಮುದುಕ . . . ದಿಟ್ಟತನದ ಹೆಬ್ಬುಬ್ಬೆಯಿಂದ ನುಡಿದನು (ಪುನರು. ೫೫೯).

[< ಪಿರಿದು$_1$ + ಉಬ್ಬು$_2$ (< ಉರ್ವ್$_2$)]

ಹೆಬ್ಬುಬ್ಬೆ 'ಹೆಬ್ಬುಬ್ಬು'ನೋ.

ಹೆಬ್ಬುರಿ 'ಪೇರುರಿ' ನೋ.

ಹೆಬ್ಬುಲಿ$_1$ 'ಪೆರ್ವುಲಿ' ನೋ.

ಹೆಬ್ಬುಲಿ$_2$ (ನಾ).ಒಂದು ಬಗೆಯ ಸಸ್ಯ: ಹೆಬ್ಬುಲಿ, ಕರುಬುಲಿ, ಸುರುಸುರಿಗೆ ಈ ಸೊಪ್ಪುಗಳ ರಸ ಒಂದು ಮಾನವಂ ಹಿಂಡಿ . . . ಹಿಮ್ಮಡಿಪರ್ಯಂತವೂ ತೊಡೆಯಲು ಮೂರುದಿನಕ್ಕೆ ಶೀತಜ್ವರಂ ಗುಣಮಕ್ಕುಂ (ಸಕವ್ಯ. ೭೦). [< ಪಿರಿದು$_1$ + ಪುಲಿ]

ಹೆಬ್ಬುಸಿ 'ಪೆರ್ಬುಸಿ' ನೋ.

ಹೆಬ್ಬೆ (ನಾ). ಹೆಚ್ಚು; ಆಧಿಕ್ಯ.

ಹೆಬ್ಬೆಯಾಡು = ಅಧಿಕವಾಗಿ ತೂಗಾಡು: ಕೋಗಿಲೆಯ ಬಾಗಿಲ್ಗಾಪಿನವರಂತೆ ಪುಗಿಲ್ ಪುಗಿಲೆನೆ ಉಯ್ಯಲು ಹೆಬ್ಬೆಯಾಡುವರಂತೆ ತಿಟ್ಟಿಯೊಳಾಡೆ (ಬಂಷಪಾ.೫-೫೪).

[< ಪಿರಿದು$_1$]

ಹೆಬ್ಬೆಟ್ಟ 'ಪೆರ್ಬೆಟ್ಟ' ನೋ.

ಹೆಬ್ಬೆಟ್ಟು$_1$ 'ಪೆರ್ಬೆಟ್ಟ' ನೋ.

ಹೆಬ್ಬೆಟ್ಟು$_2$ 'ಪೆರ್ಬೊಟ್ಟು' ನೋ.

ಹೆಬ್ಬೆಡೆ 'ಪೆರ್ವೆಡೆ' ನೋ.

ಹೆಬ್ಬೆರಳು 'ಪೆರ್ವೆರಲ್' ನೋ.

ಹೆಬ್ಬೆಳಕು 'ಪೆರ್ವೆಳಗು' ನೋ.

ಹೆಬ್ಬೆಳಸು 'ಪೆರ್ವೆಳಸು' ನೋ.

ಹೆಬ್ಬೆಳೆ ' ಹೆಂಬೆಳೆ' ನೋ.

ಹೆಬ್ಬೆಳೆಸು 'ಪೆರ್ವೆಳಸು' ನೋ.

ಹೆಬ್ಬೆಱಗು (ನಾ).ಅತಿಯಾದ ಆಶ್ಚರ್ಯ; ಬಹಳ ಸೋಜಿಗ: ಹಳಚುವಚ್ಚಾಳುಗಳನುಂ ಕಳೆದು ಅಂದಣದ ಸಂದಣಿಯ ದೊಂದಣವುಂದಿಯಬ್ಬಗಿಯಾಗಿ ಹೆಬ್ಬೆಱಗಿಂದಪ್ಪೊದುಂ[ಪಾಠಾಂ. ಹಿಂಬೆರಕಿಂದವಂದುಂ] ತೊಳತೊಳಗುತುಚ್ಚಳಿಸಿ ನಡತರುವ (ಬಸವ. ೭೧-೨೮). [< ಪಿರಿದು$_1$ + ಬೆಱಗು]

ಹೆಬ್ಬೇಗ (ನಾ). ದೊಡ್ಡ ಉರಿ,— ಜ್ವಾಲೆ: ಉತ್ತರದ ದಿಕ್ಕಿನಲ್ಲಿ ಹತ್ತೀತು ಹೆಬ್ಬೇಗ ಸುತ್ತ ಒರಕೊಂಡು ಬರುವಾಗ ಜಗವೆಲ್ಲ ಕತ್ತಲಾದೀತು (ಸರ್ವಜ್ಞ. ೧೦೭೭).

[< ಪಿರಿದು$_1$ + ಬೇಗ]

ಹೆಬ್ಬೇರು (ನಾ).ನಿಡಿದಾದ ಬೇರು: ಒಬ್ಬನ ನೋಡಿದ ಕಣ್ಣು ಮತ್ತೊಬ್ಬಗೆ ಹಬ್ಬವು ಹಬ್ಬದ ಮೇಲೆ ಹೆಬ್ಬೇರು ಬೀಡುವವಲ್ಲಿಯ ತೆಗೆದರೆ ಬಾರದು (ಭರಚ. ೫೮-೪೦).

[< ಪಿರಿದು$_1$ + ಬೇರು (< ಬೇರ್$_1$)]

ಹೆಬ್ಬೇವು (ನಾ).ಒಂದು ಬಗೆಯ ಬೇವಿನ ಮರ ಮತ್ತು ಅದರ ಸೊಪ್ಪು; ದೊಡ್ಡಜಾತಿಯ ಬೇವು: ಬೇಲ ಹೆಬ್ಬೇವು [ವಾಹಾಂ. ಬ್ಯಾಲೆ, ಬ್ಯಾಲಸು] ಮೊಳಗುವ ಮುತ್ತುಗೆ ಮೊದಲಾದ ಮರಗಳ ಬಳಗದಿಂದದು ಕಣ್ಗೆಸೆದುದು (ಕುರಾಪಾಂ. ೪-೬); ಹೆಬ್ಬೇವಿನ ಬೇರುಗಳನ್ನು ತಂದು . . . ತೋಟದ ಸುತ್ತಲೂ ಹಚ್ಚಬೇಕು (ಕೃಪ್ರಪ್ರ. ೧೩೨). [< ಪಿರಿದು$_1$ + ಬೇವು$_1$]

ಹೆಬ್ಬೇಳೆ 'ಹೆಂಬೇಡಿ' ನೋ.

ಹೆಬ್ಬೊಗೆ 'ಪೆರ್ಬೊಗೆ' ನೋ.

ಹೆಬ್ಬೊಟ್ಟು 'ಪೆರ್ಬೊಟ್ಟು' ನೋ.

ಹೆಬ್ಬೊಟ್ಟೆ (ನಾ). ದೊಡ್ಡ ಹೊಟ್ಟೆ: ಹೊಟ್ಟೆಯ ಕಕ್ಕುಲತೆಗೆ ಕಪ್ಪಜೀವವ ಹೊರೆವ ಹೆಬ್ಬೊಟ್ಟೆಯ ಡೊಂಬರ ಕಂಡು ಬಟ್ಟಬಯಲಾದೆಯೋ (ಮೋಳಮಾ. ೪೩-೧೮೦).

[< ಪಿರಿದು$_1$ + ಪೊಟ್ಟೆ$_1$]

ಹೆಬ್ಬೊತ್ತಗೆ (ನಾ). ದೊಡ್ಡ ಪುಸ್ತಕ; ಬೃಹದ್ಗ್ರಂಥ: ಅವರ ದಿನಚರಿ ಮತ್ತು

ಕಾಗದಗಳು 'ಸಮುದ್ರದಾಚೆಯಿಂದ' ಎಂಬ ಹೆಬ್ಬೊತ್ತಗೆಯಾಗಿ ಬಂತು (ಹಕ್ಕನೋ. ೩೦).

[< ಪರಿದು$_1$ + ಪೊತ್ತಗೆ]

ಹೆಬ್ಬೊತ್ತಿಗೆ (ನಾ). = ಹೆಬ್ಬೊತ್ತಗೆ: ಚೆನ್ನಬಸವಪುರಾಣ ಸಂಪೂರ್ಣವಾಗಿ ಸುಮಾರು ಮೂರುಸಾವಿರಷಟ್ಪದಿಗಳಿರುವ ಹೆಬ್ಬೊತ್ತಿಗೆ (ಕಸಾಹಿ. ೧೨೨).

[< ಪರಿದು$_1$ + ಪೊತ್ತಿಗೆ]

ಹೆಬ್ಬೊಳಲ್ 'ಪೆರ್ವೊಟಲ್' ನೋ.

ಹೆಬ್ಬೋನು (ನಾ). ದೊಡ್ಡ ಬೋನು,– ಪಂಜರ: ಹೆಬ್ಬೋನು ಕಲ್ಲಿಗಳಿಡುಕು ಬಿಗುರಂಟುಗಳಿಯುರುಳ್ಗಳ ಕಿಡಿದು ಕಾರ್ಮುಗಿಲಂತೆ ಕವಿದುದು ಶಬರಸಂದೋಹ (ಆಸಂರಾ. ೩-೩-೧೫). [< ಪರಿದು$_1$ + ಬೋನು]

ಹೆಬ್ಬೇರಿ (ನಾ).ಒಂದು ಬಗೆಯ ದೊಡ್ಡ ಚರ್ಮವಾದ್ಯ; ದೊಡ್ಡನಗಾರಿ: ಸದ್ಬ್ರಾಹ್ಮಣರು ಸಂದ್ಯನೀಯಾವಮ ಚಿತ್ತಶುದ್ಧದಿ ಮಾಡತೊಡಗಿದರು ಹೆಬ್ಬೇರಿ ಕಾಳಿನಿಚಯಂ ಮೊಳಗಲು (ಸಪಮೋ. ೧೭-೧೨). [< ಪರಿದು$_1$ + ಭೇರಿ]

ಹೆಮ್ಮ 'ಪೆರ್ಮ$_1$' ನೋ.

ಹೆಮ್ಮಕ್ಕಳು 'ಪೆಣ್ಮಗು' ಪರಾ.

ಹೆಮ್ಮಗ 'ಪೆರ್ಮಗ' ನೋ.

ಹೆಮ್ಮಗಳು 'ಪೆಣ್ಮಗಳು' ನೋ.

ಹೆಮ್ಮಗಾರೆ 'ಹೆಮ್ಮಗ್ಗಾರೆ' ನೋ.

ಹೆಮ್ಮಗು 'ಪೆಣ್ಮಗು' ನೋ.

ಹೆಮ್ಮಗ್ಗಾರೆ, ಹೆಮ್ಮಗಾರೆ (ನಾ). ದೊಡ್ಡ ಜಾತಿಯ ಕಾರೆಗಿಡ: ''ಮಹಾಪಿಂಡತರುಃ- ಹೆಮ್ಮಗ್ಗಾರೆ'' (ಓಷಧಿ. ೧೨೨). **ಹೆಮ್ಮಗಾರೆ**: ''ಮಹಾನ್ - ಹೆಮ್ಮಗಾರ'' (ಓಷಧಿ. ೧೧೪). [< ಪರಿದು$_1$ + ಮಗ್ಗಾರೆ]

ಹೆಮ್ಮಟ್ಟಬೀಜ, ಹೆಮ್ಮೊಟಬೀಜ (ನಾ). ಇಟ್ಟಿಯ ಬೀಜ: ಹೆಮ್ಮಟ್ಟಬೀಜ (ಕುಚಲ) (ಮುಂಬವ್ಯಾ. ೧೭೯). **ಹೆಮ್ಮೊಟಬೀಜ**: ಕುಚಲ,(ಕಾಜರ, ಹೆಮ್ಮೊಟಬೀಜ) (ಮುಂಬವ್ಯಾ. ೧೫೦). [? + ಬೀಜ]

ಹೆಮ್ಮಡದಿ (ನಾ). ಹಿರಿಯ ಹೆಂಡತಿ: ವಿಭು ಜಕ್ಕನ ಹೆಮ್ಮಡದಿವೊಡವುಟ್ಟಿದಂ (ಕಾ. IV. ೧೦-೪೨: 1121). [< ಪರಿದು$_1$ + ಮಡದಿ]

ಹೆಮ್ಮಡು 'ಪೆರ್ಮಡು' ನೋ.

ಹೆಮ್ಮನೆ 'ಪೆರ್ಮನೆ' ನೋ.

ಹೆಮ್ಮಮತೆ (ನಾ). ಹೆಚ್ಚಾದ ವಿಶ್ವಾಸ,– ಪ್ರೀತಿ: ಹೆಮ್ಮಮತೆಯನು ಮಿಕ್ಕು ಲೋಕದ ಗತಿಗಳನು ಸಂಪರ್ಕ ವಿರಹಿತನಾಗಿ (ನಿಭಾಗ. ೯-೧೯-೩೪).

[< ಪರಿದು$_1$ + ಮಮತೆ]

ಹೆಮ್ಮಯ್ 'ಹೆಮ್ಮೈ' ನೋ.

ಹೆಮ್ಮಯ್ಯು (ಕ್ರಿ). ಗರ್ವಿಸು; ವಿಜೃಂಭಿಸು: ನಿನ್ನನ್ನು ನುಂಗಿ ನೊಣೆಯುವುದಕ್ಕೋಸ್ಕರವಾಗಿ ಆ ಹೆಸರ ಹೆಮ್ಮಾನಾಗಿ ಹೆಮ್ಮಯ್ಯುವೆನು (ಮಂತ್ರಶ. ೫೬-೯).

[ಹೆಮ್ಮ (< ಪೆರ್ಮೆ)+ - ಇಸು$_3$]

ಹೆಮ್ಮರ 'ಪೆರ್ವರ' ನೋ.

ಹೆಮ್ಮರಚಕ್ಕೆ (ನಾ). ತಿಗಡು ಮರದ ಚಕ್ಕೆ: ಹೆಮ್ಮರಚಕ್ಕೆ, ಲಾಮಂಚ, ಲವಂಗ . . . ಒಂದಲಗ ಇವೆಲ್ಲವನ್ನು ಬಿಸಿನೀರಿನಲ್ಲಿ ಹಾಕಿ ಶೋಧಿಸಿಕೊಂಡು (ಸಚಿತ್ರ. ೭೭).

[ಹೆಮ್ಮರ (< ಪೆರ್ವರ) + ಚಕ್ಕೆ (< ಸಕ್ಕೆ$_1$)]

ಹೆಮ್ಮರೆ 'ಪೆರ್ಮರೆ' ನೋ.

ಹೆಮ್ಮರೆವಾಲು (ನಾ). ದೊಡ್ಡ ಹೆಣ್ಣುಜಿಂಕೆಯ ಹಾಲು: ಮಿಕ್ಕ ಹೆಮ್ಮರೆವಾಲುಮಂ ಹೂಡಯಕ್ಕಿದುಯ್ಯಲು . . . ಉಡುವಿನ ತುಪ್ಪವುಂಟಲ್ಲಿ (ಒಸಪು ೧೪-೧೭). [ಹೆಮ್ಮರೆ(< ಪೆರ್ಮರೆ) + ಪಾಲು$_1$(< ಪಾಲ್$_1$)]

ಹೆಮ್ಮಲಗು (ನಾ).ಒಂದು ಬಗೆಯ ದೊಡ್ಡ ಮಿಾನು: ಬಿಳಿಚ ಚಿಪ್ಪಲು ಮಲಗು ಹೆಮ್ಮಲಗು . . . ಗಿಱಿಲುಗಳೆಂಬ ಹೊಳೆವಳಿಯ ಮಿನ್ನಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು (ಹಚಕಾ.೫-೪೬). [< ಪರಿದು$_1$ + ಮಲಗು$_3$]

ಹೆಮ್ಮಲೆ 'ಪೆರ್ಮಲೆ' ನೋ.

ಹೆಮ್ಮಳಿ 'ಪೆರ್ಮಟೆ' ನೋ.

ಹೆಮ್ಮಾಡ (ನಾ).ಎತ್ತರವಾದ ಭವನ: ಕಾಗೆ ಹೆಮ್ಮಾಡಮನೇಱದೇ (ಸೂಕ್ತಿಸು. ೧೭-೨೩). [< ಪರಿದು$_1$ + ಮಾಡ$_1$]

ಹೆಮ್ಮಾಡಿ 'ಪೆರ್ಮಾನಡಿ' ನೋ.

ಹೆಮ್ಮಾಡಿಯಣ್ಣ (ನಾ).ಒಬ್ಬಾತನ ಹೆಸರು: ಕೊಂಗಳೀಶ್ವರದೇವರಿಗೆ ಸುಂಕದ ಹೆಮ್ಮಾಡಿಯಣ್ಣ ಅರಿಸ XXX ಸಂಜೆದೀವಿಗೆಗೆ ಕೊಟ್ಟ ಗದ್ಯಾಣ ೧ (ಎಕ. IV, ಕೃಷ್ಣರಾ. ೪೧-೩; ಸು. 950). [ಹೆಮ್ಮಾಡಿ (< ಪೆರ್ಮಾನಡಿ)+ ಅಣ್ಣ$_1$]

ಹೆಮ್ಮಾತು 'ಪೆರ್ವಾತು' ನೋ.

ಹೆಮ್ಮಾರಿ 'ಪೆರ್ಮಾರಿ' ನೋ.

ಹೆಮ್ಮಾರಿಮೊಗ (ನಾ). (ಆಲಂ) ರೌದ್ರವಾಗಿರುವ ಮುಖ; ಭಯಂಕರವಾದ ಮುಖ: ಒರೊರ್ವರಂ ಮುಂಚಿ ಬಂದುದವನೋಲಗಕೆ ಕಾರೊಡಲ ಕಿಮ್ಮಾಸೆಗಳ ಕೆಂಡಗಣ್ಣ ಹೆಮ್ಮಾರಿಮೊಗಗಳ ಬಿಗಿದ ಹುಬ್ಬುಗಳ . . . ಅಹಂಕಾರದುದ್ದಿನ ದಡಿಗರಕ್ಕಸರ್ (ಚಿಬಿಪ್ರ. ೪೭-೧೪). [ಹೆಮ್ಮಾರಿ (< ಪೆರ್ಮಾರಿ) + ಮೊಗ]

ಹೆಮ್ಮಿಗಿಲು (ನಾ). ಬಹಳ ಶ್ರೇಷ್ಠ; ಉತ್ತಮಿಕೆ: ಬಾಳಿದವು ಮೈತ್ರಿಯಲಿ ಬೆಸೆದು ಹೆಮ್ಮಿಗಿಲಾಗಿ, ಮಿಥ್ರದೇವನ ಕಣ್ಗೆಗಾನಂದವಾಗಿ! (ಪಾರಿ. ೩೩-೬೫೯).

[< ಪರಿದು$_1$ + ಮಿಗಿಲು (< ಮಿಗಿಲ್)]

ಹೆಮ್ಮಿಟಲಿ, ಹೆಮ್ಮಿಟಿಲ, ಹೆಮ್ಮಿಟಿಲಿ (ನಾ). ಒಂದು ಬಗೆಯ ಔಷಧೀ ಸಸ್ಯ: ಹೆಮ್ಮಿಟಲಿ ಪೇರಕ್ಕೆ ರಮ್ಮದ ರಸದಾಳಿ ಒಮ್ಮಾನದರ್ಧ ಉದಕಕಷಾಯದಿಂ ಕೆಮ್ಮಲ್ಲ ಕೆಡುಗು (ಸರ್ವಜ್ಞ. ೨೮೨೪). **ಹೆಮ್ಮಿಟಿಲ**: ''ಮರಾಳಿಕಾ- ಹೆಮ್ಮಿಟಿಲ ಹಂಸೆ'' (ಓಷಧಿ. ೧೧೪). **ಹೆಮ್ಮಿಟಿಲಿ**: ಹೆಮ್ಮಿಟಿಲಿ ಬಿಳಿಯ ಗುಂಜಿಯ ಬೇರಂ ಫಟಿಲಿನೆ ನಸ್ಯಂಗೆಯ್ಯಲ್ ಕಳೇವರಕ್ಕೆಯ್ದಿ ಪೂಸೆ ಫಣಿವಿಷಮಬಿಗುಂ (ಖಮದ. ೫-೬೮). [< ಪರಿದು$_1$ + ಮಿಟಲಿ]

ಹೆಮ್ಮಿಟಿಲ 'ಹೆಮ್ಮಿಟಲಿ' ನೋ.

ಹೆಮ್ಮಿಟಿಲಿ 'ಹೆಮ್ಮಿಟಲಿ' ನೋ.

ಹೆಮ್ಮಿಣಿ 'ಪೆರ್ಮಿಳಿ' ನೋ.

ಹೆಮ್ಮಿನ್ 'ಪೆರ್ಮಿನ್' ನೋ.

ಹೆಮ್ಮಿನು 'ಪೆರ್ಮಿನ್' ನೋ.

ಹೆಮ್ಮುಗಿಲ್ 'ಪೆರ್ಮುಗಿಲ್' ನೋ.

ಹೆಮ್ಮುಟ್ಟುಪಡ (ನಾ). ಅತಿಯಾದ ಮಲಿನತೆ; ಅಧಿಕವಾದ ಮಾಲಿನ್ಯ: ಹೆಮ್ಮುಟ್ಟುಪಡಂ ವೊದಲಾದ ಮುಟ್ಟುಪಡಂಗಳಾದೊಡಮನಶನಾದಿಗಳಂ ಬದಲಾಗದೆಂಬುದುಂ (ಪಸಾರ. II, ೪೮೧).

[< ಪರಿದು$_1$ + ಮುಟ್ಟುಪಡ (< ಮುಟ್ಟುಪಡು)]

ಹೆಮ್ಮುಷ್ಟಿ, ಹೆಮ್ಮುಷ್ಟೆ (ನಾ). ಒಂದು ಬಗೆಯ ಔಷಧೀಸಸ್ಯ: ''ಮರುಧ್ರುಮಃ - ಹೆಮ್ಮುಷ್ಟಿ'' (ಓಷಧಿ. ೧೧೪). **ಹೆಮ್ಮುಷ್ಟೆ**: ಬಜೆ, ಹೆಮ್ಮುಷ್ಟೆ . . . ಕೊಡನಾರಿ ಬೇರು ಇವಂ ಬೆಣ್ಣೆಯಲ್ಲಿ ಅರೆದು ಪೂಸಲು ಸ್ತನಗಳು ಬರುವುವು (ವೈಮ. ೧೦೭).

[< ಪರಿದು$_1$ + ಮುಷ್ಟಿ$_1$]

ಹೆಮ್ಮುಷ್ಟೆ 'ಹೆಮ್ಮುಷ್ಟಿ' ನೋ.

ಹೆಮ್ಮೊಳೆ (ನಾ). ದೊಡ್ಡ ಮೊಳೆ; ನಿಡಿದಾದ ಎಲುಬು: ಹೆಮ್ಮೊಳೆಯ ಬಣಬೆಯಡಗಿನ ಹೆಗ್ಗುಡ್ಡೆ (ಶ್ರೀಪಾಲ.೮-೧೩). [< ಪರಿದು$_1$ + ಮೊಳೆ$_1$]

ಹೆಮ್ಮೆ 'ಪೆರ್ಮೆ' ನೋ.

ಹೆಮ್ಮೆಕಾಱಿ 'ಹೆಮ್ಮೆಗಾರ' ನೋ.

ಹೆಮ್ಮೆಕಾಱಿಕೆ (ನಾ). ಗರ್ವ; ಜಂಬ: ಹೆಣ್ಣುಗಳೊಳು ಹೆಮ್ಮೆಕಾಱಿಕೆ ಸತ್ಯ ಕಣ್ಣುಕಟ್ಟಲ್ಲ ಕವಿಗಳ ಕವಡಲ್ಲ (ಕನಕ. ೧೨೯ ವಲ್ಲವ).

[ಹೆಮ್ಮೆಕಾಱಿ (< ಹೆಮ್ಮೆಗಾರ) + - ಇಕೆ]

ಹೆಮ್ಮೆಕ್ಕೆ (ನಾ).ಒಂದು ಬಗೆಯ ಬಳ್ಳಿ ಮತ್ತು ಅದರ ಕಾಯಿ : ''ಹೆಮ್ಮೆಕ್ಕೆ-ಚಿತ್ರಗವಾಕ್ಷಿ, ಗೋದುಂಬೆ'' (ನಾಚಿಕಾ. ೬). [< ಪರಿದು$_1$ + ಮೆಕ್ಕೆ$_1$]

ಹೆಮ್ಮೆಗಾಣ್ (ಕ್ರಿ). ಹಿರಿಮೆಯನ್ನು ಕಾಣು: ಗಂಡಸುತನವೆತ್ತು ನುಡಿದ ಪಂತದ ಹೆಮ್ಮೆಗಂಡು ವ್ಯಂದಾರಕರುಗಳ ಏಂಡು ಬದುಕಿತ್ತು (ಮೋಹತ. ೫-೬೨).

[ಹೆಮ್ಮೆ (< ಪೆರ್ಮೆ) + ಕಾಣ್]

ಹೆಮ್ಮೆಗಾರ, ಹೆಮ್ಮೆಕಾಱ (ನಾ). ೧. ಅಹಂಕಾರಿ; ಜಂಬಗಾರ: (೬). **ಹೆಮ್ಮೆಕಾಱ**: ೧.'ಹೆಮ್ಮೆಕಾಱಿಕೆ' ಪರಾ. ೨. ಹಿರಿಮೆಯುಳ್ಳವನು; ಶ್ರೇಷ್ಠನಾದವನು: ಆದಿಯವನಿಯ ಹೆಮ್ಮೆಕಾಱರು ಸತ್ಯಮಾರ್ಗವ ನೆಮ್ಮಿದವರೇ ನಪ್ಪುದ್ದರ (ತೊಡಾ. ೨-೬-೬೧). [ಹೆಮ್ಮೆ (< ಪೆರ್ಮೆ) + - ಕಾರ[1](< - ಕಾಱ)]

ಹೆಮ್ಮೆಗೆಡಿಸು (ಕ್ರಿ).ಗರ್ವವನ್ನು ನಾಶಮಾಡು; ಮುಖಭಂಗಮಾಡು: ಎಲ್ಲರ ಮುಂದೆ ಭಂಗಿಸಿ ಹೆಮ್ಮೆಗೆಡಿಸುವ ಪರಿಯ ನೋಡಾ (ಪ್ರಭುಲೀ. ೭-೭೦).

[ಹೆಮ್ಮೆ (< ಪೆರ್ಮೆ) + ಕೆಡಿಸು[1]]

ಹೆಮ್ಮೆಗೊಳಿಸು (ಕ್ರಿ). ಸಂತೋಷಪಡಿಸು; ಹಿಗ್ಗುವಂತೆ ಮಾಡು: ತನ್ನುವ ನಾಡಿಸುವ ತರುಣಿಯರ ತಂಡವನು ಹೆಮ್ಮೆಗೊಳಿಸುತ ಸುಖಮುಖವ ಹೊಱ ಹೊಮ್ಮಿಸುತ . . . ಇರ್ದಳು ಮಾಯೆ (ಪ್ರಭುಲೀ. ೩-೩೦).

[ಹೆಮ್ಮೆ (< ಪೆರ್ಮೆ) + ಕೊಳ್[1] + - ಇಸು[3]]

ಹೆಮ್ಮೆದೆ (ನಾ). ದೊಡ್ಡ ರಾಶಿ,– ಒಟ್ಟಿಲು: ಅಡಗಿನ ಹೆಗ್ಗುಡ್ಡೆ ನೆಣದ ಹೆಮ್ಮೆದ ನೆತ್ತರ ಕೊಳನಿವ ಹೊಕ್ಕು (ಶ್ರೀವಾಲ. ೮-೧೩). [< ಪಿರಿದು[1] + ಮೆದೆ[1]]

ಹೆಮ್ಮೆಪಡು (ಕ್ರಿ). ೧. ಜಂಬಪಡು; ಗರ್ವಿಸು: ಅವಳು ಆ ವ್ಯಕ್ತಿಯಿಂದ ತೃಪ್ತಿಗೊಂಡದ್ದಂತೆ ಮಾತ್ರವಲ್ಲ ಹೆಮ್ಮೆಪಡುತ್ತಿದ್ದಂತೆ ಕಂಡಳು (ಪುನರಾ. ೧೯೭). ೨. ಅಭಿಮಾನಪಡು: ಪ್ರಾಚೀನಕಾಲದಲ್ಲಿ ಭಾರತೀಯ ಸಾಮಾಜಿಕಜೀವನವು ಗಣ್ಯವಾಗಿ ಮುಂದುವರಿದು ಇಂದು ನಾವು ನೆನೆದರೂ ಹೆಮ್ಮೆಪಡುವಂತಿದ್ದುದು ಗೊತ್ತಾಗುತ್ತದೆ (ಭಾರದ. ೩೭೬). [ಹೆಮ್ಮೆ (< ಪೆರ್ಮೆ) + ಪಡು[1]]

ಹೆಮ್ಮೆವಂತ (ನಾ). ಗರ್ವಿಷ್ಠ; ಅಹಂಕಾರಿ: ತಮ್ಮನಗ್ಗಳನಾದೊಡಣ್ಣನಿಗಿದಿರಾದ ಹೆಮ್ಮೆವಂತರ ಹಿಡಿತಂದು ಸಮ್ಮುಖಗ್ಗಿಸಬೇಕಲ್ಲಣ್ಣಗೆ ತಾನೆ ಮುಮ್ಮೊನೆದೋರ್ಪುದು ಚದುರೆ (ಭರಚ. ೫೦-೧೦). [ಹೆಮ್ಮೆ (< ಪೆರ್ಮೆ) + - ವಂತ]

ಹೆಮ್ಮೆಳೆ 'ಪೆರ್ಮೆಳೆ' ನೋ.

ಹೆಮ್ಮೊ, ಹೆಮ್ಮಯ್ (ನಾ). ೧. ದೊಡ್ಡ ದೇಹ; ಮಹಾಕಾಯ: ಇಮ್ಮು ಸಣ್ಣ ಮೆದುಳಿನ ಪೆಡಂಭೂತ ಹೇಗೆ ತಾನೆ ವಿಷಮಸ್ಥಿತಿಯನ್ನು ಎದುರಿಸಿ ತನ್ನ ಹೆಮ್ಮೊಯನ್ನು ಕಾಪಾಡಿಕೊಂಡೀತು? (ಪ್ರಪಂಚ. ೫೭). **ಹೆಮ್ಮಯ್**: ೨. ಹಿರಿದಾದ ಜನ್ಮ; ಉತ್ತಮವಾದ ಜನ್ಮ: ಮುಮ್ಮಯ್ಯಂ, ಹೆಮ್ಮಯ್ಯಂ ಕಮ್ಮದೊಳೊಮ್ಮಿಸಿ ಕಿಱುಮಯ್ಯಂ ಜೊಮ್ಮಿನ ಜಾನಮ್ಮಚ್ಚಿಸಿ (ಉದ್ಭವೇ. ೭-೪೬). 'ಮುಮ್ಮಯ್' ಪರಾ.

[< ಪಿರಿದು[1] + ಮೈ[1] (< ಮೆಯ್[2])]

ಹೆಮ್ಮೊಟಬೀಜ 'ಹೆಮ್ಮಟ್ಟಿಬೀಜ' ನೋ.

ಹೆಮ್ಮೊರಡಿ (ನಾ). ದೊಡ್ಡ ಗುಡ್ಡ: ಕರುಳ ಕುಪ್ಪಳಿ ಕಾಳಿಜದ ಹೆಮ್ಮೊರಡಿ ಕೆನ್ನೆತ್ತರಿನ ಮಡು . . . ಅಸ್ಥಿಗಳ ಸರಿಬೆರಕೆಯಲಿ ಭೂತಕೋಟಿಯ ನೆರವಿ ಗುಣಬಡಿಸಿದವೊಲಿರ್ದುದು (ತೊರಡಾ. ೬-೪೫-೬೧).

[< ಪಿರಿದು[1] + ಮೊರಡಿ[1] (< ಮೊರಡು[2])]

ಹೆಮ್ಮೊಲೆ 'ಪೆರ್ಮೊಲೆ' ನೋ.

ಹೆರ್ 'ಪಿರಿ[4]' ನೋ.

ಹೆರ 'ಪೆಱ[2]' ನೋ.

ಹೆರಂಡ 'ಹೇರಂಡ' ನೋ.

ಹೆರಕು 'ಪೆಱಕು' ನೋ.

ಹೆರತನ (ನಾ). ಹೊರಗಿನವನು ಎಂಬ ಭಾವನೆ; ಪರಕೀಯತೆ: ಹರತನದ ಹೆದರಿಕೆಯು ಹೃದಯದೊಳು ಹೊಕ್ಕಿಹುದು (ಗರಿ. ೨೨-೩).

[ಹೆರ್[0] (< ಪೆಱತು) + - ತನ]

ಹೆರತು 'ಪೆಱತು' ನೋ.

ಹೆರದೆಗೆ 'ಪೆಱದೆಗೆ' ನೋ.

ಹೆರಪೌಳಿ (ನಾ). ಸುತ್ತಲೂ ಇರುವ ಗೋಡೆ; ಹೊರಪ್ರಾಕಾರ: ಎಡಬಲ ದೊಳೊಪ್ಪಿಹುದು ಕೈಶಾಲೆ ಗೋಶಾಲೆ ಹೆರಪೌಳಿ ಕೆರೆ ಭಾವಿ ರಂಜಿಸಿಹುದು (ನವಮೋ. ೧-೯). [ಹೆರ್[0] (< ಪೆಱತು) + ಪೌಳಿ[1]]

ಹೆರಮಚ್ಚು (ನಾ). ಒಂದು ಬಗೆಯ ಔಷಧದ್ರವ್ಯ: ಕಷಾಯದ್ರವ್ಯಗಳು - ಬಜೆ, ಗೇರುಬೀಜ, ಅತಿಬಜೆ, ಹೆರಮಚ್ಚು, ವಾಯುವಿಳಂಗ (ಸಕವೈ. ೪೩೭ ಪಂ). [?]

ಹೆರಮಣೆ 'ಹೆರಮಣ್' ನೋ.

ಹೆರಸು (ಕ್ರಿ). ಜೋಳಿಸು; ಕೆತ್ತು: ಸ್ಕಂಧವಂ ದ್ರೌಪದಿಯನು ಸೆರಗ ಪಿಡಿದಳವುತರೆ ಪಿಡಿದು . . . ಮಂಡೆ ಹರ[ಶಾಕಾಂ. ರೆ]ಸಿ ಬಿಟ್ಟರು ಮೂರು ಪಟ್ಟೆಯಂ (ತುರಂಗ. ೩೭-೧೦). [ಹೆರೆ[2] + - ಸು[1]]

ಹೆರಹಿಂಗು 'ಪೆಱಪಿಂಗು' ನೋ.

ಹೆರಳು[1] 'ಪೆಣಲ್' ನೋ.

ಹೆರಳು[3] 'ಪಿಣಿಲ್[3]' ನೋ.

ಹೆರಳುಬಂಗಾರ 'ಹೆಣಲುಭಂಗಾರ' ನೋ.

ಹೆರಳುಭಂಗಾರ 'ಹೆಣಲುಭಂಗಾರ' ನೋ.

ಹೆರಳೆ 'ಪೇರಿಳೆ' ನೋ.

ಹೆರಿಗೆ 'ಹೆಱಿಗೆ' ನೋ.

ಹೆರಿಗೆಆಸ್ಪತ್ರೆ (ನಾ). ಗರ್ಭಿಣಿಗೆ ಹೆರಿಗೆಕಾಲದಲ್ಲಿ ಬೇಕಾದ ಚಿಕಿತ್ಸೆಗಳ ಸೌಲಭ್ಯವಿರುವ ಆಸ್ಪತ್ರೆ: ಈ ಹೆರಿಗೆಆಸ್ಪತ್ರೆಯನ್ನು ದಾನಿಗಳೊಬ್ಬರು ಕಟ್ಟಿಸಿದರು (ತೂಫಿ). [ಹೆರಿಗೆ (< ಹೆಱಿಗೆ) + ಆಸ್ಪತ್ರೆ]

ಹೆರಿಸು 'ಪೆಱಿಸು' ನೋ.

ಹೆರು[1] 'ಪೆಱು[1]' ನೋ.

ಹೆರು[2] 'ಪೆಱು[2]' ನೋ.

ಹೆರುಗೆ 'ಹೆಱಿಗೆ' ನೋ.

ಹೆರೆ[1] 'ಪೆಱು[2]' ನೋ.

ಹೆರೆ[2] (ಕ್ರಿ). ೧. ತೆಂಗಿನಕಾಯಿ ಮೊದಲಾದುವನ್ನು ತುರಿ: ಬೆಂದಾಗ ತೆಂಗಾಯನು ಹೆರೆದದಱ ಮೇಲಿಕ್ಕಿ ಕಲ್ಲ ಮುಚ್ಚುಳ ಮುಚ್ಚಿಯಿರಿಸಿ (ಸೂಪಶಾ. ೩-೪); ತೆಂಗಿನಕಾಯಿಯನ್ನು ಹೆರೆದು . . . ಪ್ರತ್ಯೇಕ ತೆಗೆದಿಡಿರಿ (ಅಡುಸಾ. ೯೪). ೨. (ತರಕಾರಿಯ ಸಿಪ್ಪೆ, ಸೀಸದ ಕಡ್ಡಿ, ಮರದ ಸಾಮಾನು ಮುಂತಾದುವುಗಳ) ಮೇಲ್ಪಾಗವನ್ನು ಒರೆದುಹಾಕು,– ತೆಗೆದುಹಾಕು,– ಕೀಸು: ಕೀಲ ತೆಗೆಯಚ್ಚುಗಳ ಹೆರೆ ಬಲುಗಾಲಿಗಳ ಚೋಡಿಸು (ಕುವ್ಯಾಕ. ೮-೧೨); ಸರಳ್ಗಳಂ ತಿದ್ದಿ ಗಱಿಗಟ್ಟುತುಂ ಬಿಲ್ಲಳಂ ಹೆರೆದು ಹೆದೆಯಂ ಹೂಡುತುಂ (ಚಿಟಪ. ೫೩-೨೧); ನೀರಿನ ಹಂಡೆಯ ಹತ್ತಿರ ಚಿನ್ನಮ್ಮನ ಅಜ್ಜಿ ತೊಂಡಕಾಯಿ ಹೆರೆಯುತ್ತಾ ಕುಳಿತಿದ್ದರು (ಮಲಮ. ೨೬೮). ೩. ಗೆಬರು; ಕೆರೆ: ಪಲ್ಲಿಂ ನಾಲಗೆಯಂ ಹೆರೆದಪಂ (ಕಾಶಕ್ಕ. ೧೪೨). ೪. ಕೆರೆತವುಂಟಾಗು; ನವೆಯಾಗು: ಇದು ತುಪ್ಪದಲ್ಲಿ ಕರಿದದ್ದು, ಎಣ್ಣೆಯಲ್ಲಲ್ಲ. ತಿಂದರೆ ಗಂಟಲು ಹೆರೆಯುವುದಿಲ್ಲ (ಒಂಟಿದ. ೧೭೧). ೫. ಕ್ವೌರಮಾಡು: (೬). ೬. ಹುಲ್ಲನ್ನು ಅಗೆ: (೬). [ದೇ. ತುಳು. ಪೆರೆ , ಪಿರೆ]

ಹೆರೆ[3] 'ಹೆಱೆ' ನೋ.

ಹೆರೆ[4] 'ಪೊರೆ[4]' ನೋ.

ಹೆರೆ[6] 'ಪೆಱೆ' ನೋ.

ಹೆರೆ[5] 'ಪೊರೆ[5]' ನೋ.

ಹೆರೆ[7] (ನಾ). (ಗಾಡಿಯ ಚಕ್ರಕ್ಕೆ ಹಾಕುವ) ಕಪ್ಪಾದ ಎಣ್ಣೆ; ಕೀಲೆಣ್ಣೆ: 'ಹೆರೆಯೆಣ್ಣೆ' ಪರಾ. 'ಎರೆ[3]' ಹೋ. [?]

ಹೆರೆಗಟ್ಟು (ಕ್ರಿ). ೧. ಹೆಪ್ಪಾಗು; ಗಟ್ಟಿಯಾಗು; ಹೆಪ್ಪುಗಟ್ಟು: ಮಾಚ ಕೊಟ್ಟುಹೋದ ಫರಮಾಶಿ ತುಪ್ಪವು ಕಾವು ಇಳಿದ ಮೇಲೆ ಹೆರೆಗಟ್ಟಲೇ ಇಲ್ಲ (ಜಾರುದಾ. ೨೬೦). ೨. (ಆಲಂ) ಬಿರುಸಾಗು; ಒರಟಾಗು: ಸಾಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸುತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಅವಳದು (ಮೂಕಜ್ಜಿ. ೩ ಮುನ್ನುಡಿ). [ಹೆರೆ[3] (< ಹೆಜ್[2]) + ಕಟ್ಟು[1]]

ಹೆರೆಗತ್ತಿ (ನಾ). ನಯಮಾಡುವುದಕ್ಕಾಗಿ ಬಳಸುವ ಕತ್ತಿ: ಅದನ್ನು ಹರಿಗತ್ತಿಗಳಿಂದ ಹರದು . . . ಚಾಪೆಯ ಮೇಲೆ ಸುರಿಯುತ್ತಾರೆ (ನಸ್ಸೂರು. ೨೮೭). [ಹೆರೆ$_2$ + ಕತ್ತಿ]

ಹೆರೆಗಳೆ 'ಪೆರಗಳೆ' ನೋ.

ಹೆರೆಗೆಹಾಲೆ (ನಾ). ಒಂದು ಬಗೆಯ ಔಷಧೀಸಸ್ಯ: "ಶೃಂಗೀ, ವೃಷಭಃ, ವೃಷಃ - ಹೆರಗಹಾಲೆಯ ಹೆಸರು. ವೃಷಭವೆಂಬುವ ಮೂಲಿಕೆ" (ಧನ್ವಂತ. ೧೩೮).

[ಹೆರಗ್$_0$ + ಹಾಲೆ$_2$ (< ಪಾಲೆ$_2$)]

ಹೆರೆಗೊಂಬು (ನಾ). ಹೆಗಲೆಮಣ್ಣಿಯನ್ನು ತುಂಬಿಡಲು ಬಳಸುವ, ಕೊಂಬಿನಿಂದ ಅಥವಾ ಬಿದಿರಿನಿಂದ ಮಾಡಿದ ಕೊಳವೆ: (ಕ).

[ಹೆರೆ$_2$ + ಕೊಂಬು$_1$]

ಹೆರೆಗೊಳು (ಕ್ರಿ). (ಆಲಂ) ನಶಿಸು (?): ಉರಗನ ಬಾಯ ಕಪ್ಪೆಯಂತೆ ಸಂಸಾರ ಹೆರೆಗೊಳುತ್ತಿರ್ದುದಲ್ಲಾ (ಲಿಂಗಲೀ. ೯೭-೫). [ಹೆರೆ$_2$ + ಕೊಳು (< ಕೊಳ್$_1$)]

ಹೆರೆತುಪ್ಪ 'ಹೆಜ್ಜುದುಪ್ಪ' ನೋ.

ಹೆರೆದುಪ್ಪ 'ಹೆಜ್ಜುದುಪ್ಪ' ನೋ.

ಹೆರೆನಾಮ (ನಾ). ಅರ್ಧಚಂದ್ರಾಕೃತಿಯಲ್ಲಿಟ್ಟುಕೊಳ್ಳುವ ಬೊಟ್ಟು ,— ತಿಲಕ: ಕಸ್ತೂರಿ ತಿಲಕ ಕಣ್ಗಂಜನ ಹೆರೆನಾಮ ಸಿಸ್ತಾವ ನೀಟು ಮೈಸಿರಿಯು (ಸೌಂದಕಾ. ೩-೩೬).

[ಹೆರ್$_3$ (< ಪೆಱೆ) + ನಾಮ]

ಹೆರೆನೊಸಲು 'ಪೆಱೆನೊಸಲ್' ನೋ.

ಹೆರೆಮಣೆ, ಹೆರಮಣೆ (ನಾ). ಕೊಬ್ಬರಿ ಮುಂತಾದುವನ್ನು ತುರಿಯುವ, ಸಣ್ಣ ಸಣ್ಣ ಕಣ್ಣುಗಳಿರುವ ಲೋಹದ ಸಾಧನ: ಆ ಹೆರೆಮಣೆಯಿಂದ ಕೊಬ್ಬರಿ ತುರಿಯುತ್ತಾರೆ (ಡೂಢ). **ಹೆರಮಣೆ**: ಅತ್ತ - ಹೆರಮಣೆಯಲ್ಲಿ ಕಾಯಿ ತುರಿಯುತ್ತ ಅವರ ಅತೀವ ಸಂತೋಷವನ್ನು . . . ವ್ಯಕ್ತಪಡಿಸಿದರು (ಹೊಸಕ್ಷ. ೭೭).

[ಹೆರೆ$_2$ + ಮಣೆ$_1$]

ಹೆರೆಯಂಬು 'ಪೆಱೆಯಂಬು' ನೋ.

ಹೆರೆಯಲಗು (ನಾ). ಅರ್ಧಚಂದ್ರಾಕೃತಿಯ ತುದಿಯನ್ನು ಹೊಂದಿರುವ ಒಂದು ಬಗೆಯ ಬಾಣ; ಹೆರೆಯಂಬು: ಹರೆಯಲಘುEಗುತಿಮುಳ್ಳಲಘುEಗುತಿಗಾಣದ ತರದಲಘುEಗುತಿ . . . ಮೊದಲಾದ ಶರಗಳನು ತೊಟ್ಟು (ಜರಾಮಾ. ೨೮೦-೩೭).

[ಹೆರ್$_3$ (< ಪೆಱೆ) + ಅಲಗು$_2$]

ಹೆರೆಯುಚ್ಚು 'ಪೊರೆಯುರ್ಚು$_1$' ನೋ.

ಹೆರೆಯುರ್ಚು 'ಪೊರೆಯುರ್ಚು$_1$' ನೋ.

ಹೆರೆಯೆಣ್ಣೆ (ನಾ). ಗಾಡಿಯ ಚಕ್ರಕ್ಕೆ ಹಾಕುವ ಎಣ್ಣೆ; ಎರೆ; ಕೀಲೆಣ್ಣೆ: ಅಸುಗುನ್ನುವೊ ಪುರಿ ಹರೆಯಣ್ಣ ತೀದುದೂ ಅಸವಾಶ್ವಗಳು ಬಾಂದೂಳೆಯ ಕೆಸಱೊಳು ಬಿದ್ದೇಳಲಾಜಿದಾದುವೊ (ಪೋಷಪ. ೨೭-೧೯); ಚಿಮಣಿಎಣ್ಣೆ, ಕೀಲದೆಣ್ಣೆ, ಹೆರೆಯೆಣ್ಣೆ (ಭಾಷಾಶಾ. ೧೭೫). [ಹೆರೆ$_2$ + ಎಣ್ಣೆ]

ಹೆರೆಹೆಚ್ಚು (ಕ್ರಿ). ೧. ಅತಿಶಯವಾಗು; ಅತಿಶಯಿಸು: ಹದಿನ ಗೊಟ್ಟ ಹಂಗಿಸುವ ನಾಣ್ಣುಡಿ . . . ಹೆರೆಹEಹೆತೆಚ್ಚದ ಮೋಹಮಸತ್ಯದಾಣೆ (ದಶಕು. ೧-೪೪); ಆ ಗುರುವರ ಭಾವದೊಳು ಹೆರೆಹೆಚ್ಚಿಯಿಂತಪ್ಪ ಸತ್ಪುರುಷನಾವ ಕಾರ್ಯಕ್ಕೆ ಕಳುಹಲು ಮಾರುವನಲ್ಲ . . . ಎನುತ ನಿಶ್ಚಯಿಸಿ (ನವಮೋ. ೫-೭). ೨. ಅತಿಶಯವಾಗಿ ಉಕ್ಕು: ಕಾರುಣ್ಯನಿಧಿ ವೊಗವತ್ತಿಯತಿ ದಯವಾರಾಸಿ ಹೆರೆಹೆಚ್ಚಿದಂತೆ . . . ನುಡಿಸಿದನು ಜಡಜಭವನಾ (ನವಮೋ. ೪-೧೨). [< ಪರಿದು$_1$ + ಹೆಚ್ಚು$_1$ (< ಪೆರ್ಚು$_1$)]

ಹೆಕ್ಕುಳಿ 'ಪೆರ್ಗುಟಿ' ನೋ.

ಹೆರ್ಗಡಲ್ 'ಪೆರ್ಗಡಲ್' ನೋ.

ಹೆರ್ಗಡಿತಿ 'ಪೆರ್ಗಡಿತಿ' ನೋ.

ಹೆರ್ಗಡೆ 'ಪೆರ್ಗಡೆ$_1$' ನೋ.

ಹೆರ್ಗೆಱೆ 'ಪೆರ್ಗೆಱೆ' ನೋ.

ಹೆರ್ಜುಂಕ 'ಪೆರ್ಜುಂಕ' ನೋ.

ಹೆರ್ಜುಗ್ಗಿ, ಹೆಜ್ಜುಗ್ಗಿ (ನಾ). ಹಿರಿಯ ಸುಗ್ಗಿಯ ಕಾಲ: ಹೆರ್ಜುಗ್ಗಿಯ ಪುಣ್ಣಮಿ ಸೋಮವಾರದನ್ದಿನ ಶುಭಲಗ್ನದೊಳ್ (ಇಆ X. ೨೫೨-೬೯; 1108). **ಹೆಜ್ಜುಗ್ಗಿ**: ಹೆಜ್ಜುಗ್ಗಿಯ ಹಬ್ಬವೊ[ಂ]ಭತ್ತುದಿನ ಸುಂಕ ನೂಱೆತ್ತಿನ ಪರಿಹಾರಯಿಂತಿನಿತುಮಂ ಸರ್ವಾಬಾಧಿ ಸರ್ವನಮಸ್ಯಂ ಮಾಡಿ ಕೊಟ್ಟರು (ಎಇ XXI. ೧೪-೬೨; 1260).

[< ಪರಿದು$_1$ + ಸುಗ್ಗಿ]

ಹೆರ್ತ 'ಪೆಱ್ತು$_2$' ಪರಾ.

ಹೆರ್ತು 'ಪೆಱ್ತು$_2$' ಪರಾ.

ಹೆರ್ದೆಸೆ 'ಪೆಱ್ದೆಸೆ' ನೋ.

ಹೆರ್ದೊಡೆ 'ಪೆರ್ದೊಡೆ' ನೋ.

ಹೆರ್ಬಟ 'ಪೆರ್ಬಟ್ಟ' ನೋ.

ಹೆರ್ಮಗ 'ಪೆರ್ಮಗ' ನೋ.

ಹೆರ್ಮಾಗೆ (ನಾ). ಒಂದು ಊರಿನ ಹೆಸರು: ಕರ್ವೂರ ತುಜುವಂ ನೊಱಮ್ಮನ ಪರಿಬನ್ದು ಹೆರ್ಮಾಗೆಯ ಪಳಿಯೊಳಿಕ್ಕೆ (ಎಕ. XII. ತಿಪ್ಟೂ. ೧೦-೬; ಸು. 930 ?). [?]

ಹೆರ್ಮಾಡಿ 'ಪೆರ್ಮಾನಡಿ' ನೋ.

ಹೆರ್ವಾರುವ 'ಪೆರ್ವಾರ್ವ' ನೋ.

ಹೆಲೆಯಬ್ಬೆ (ನಾ). ಒಬ್ಬಾಕೆಯ ಹೆಸರು: ತನ್ನ ಮನೋನಯನವಲ್ಲಭೆಯರಪ್ಪ ನಾಗಿಯಬ್ಬೆಗಂ ಹೆಲೆಯಬ್ಬೆಗ . . . ಕಟ್ಟಿಸಿದ ನೈರುತಿ ಭಾಗದ ಮುಟ್ರದ ಕೆರೆಯ (ಎಕ. XII. ಸಿರಾ. ೬೯-೨೯; 920). [? + ಅಬ್ಬೆ$_1$]

ಹೆಲ್ಲ$_1$ (ನಾ). ಒಂದು ಬಗೆಯ ಆಯುಧ: ಹೆಲ್ಲಮಂ ಹೆಲ್ಲಮನೋರೊಂದಂ ಪಿಡಿವುದಾವ ಯುದ್ಧದೊಳದು, ಹೆಲ್ಲಾಹೆಲ್ಲಿ (ಶಬ್ದಾನು. ೩೧೨ ಪ್ರಯೋ). 'ಹೆಲ್ಲಾಹೆಲ್ಲಿ' ಪರಾ. [?]

ಹೆಲ್ಲ$_2$ (ನಾ). ಚದುರುವಿಕೆ (?): ಮತ್ತಮಲ್ಲಿ ಹುಲ್ಲೆಡೆ ಹೆಲ್ಲವಾಗಿ ತಾಜುಂತಟ್ಟುಂ ಬೀಡುತ್ತಿರೆ ಪೋದ ಮಲೆವಿಂಡಿನ ತಂಡವಜ್ಜೆಗಳುಮಂ . . . ಮಯೂರಂಗಳ ವೃಂದವಜ್ಜೆಗಳುಮಂ ಕಂಡು (ಕುಸುಮಾ. ೧೪-೨೯ ವ). [?]

ಹೆಲ್ಲಣ 'ಹೆಲ್ಲಣ್$_2$' ನೋ.

ಹೆಲ್ಲಣ್$_1$ 'ಪೆಲ್ಲಣೆ' ನೋ.

ಹೆಲ್ಲಣ್$_2$ 'ಪೆಲ್ಲಣೆ' ನೋ.

ಹೆಲ್ಲಣೆ 'ಪೆಲ್ಲಣೆ' ನೋ.

ಹೆಲ್ಲಣ್$_3$, ಹೆಲ್ಲಣ, ಹೆಲ್ಲಣ್$_2$ (ನಾ). ನಿಷ್ಠುರತೆ; ಕಾಠಿಣ್ಯ: "ಹೆಲ್ಲ [ಪಾಠಾಂ. ಹೆಲ್ಲ]ಣ ನಿಟ್ಟುರ ನಿಷ್ಠುರಂ" (ಕವಿಕಂ. ೨೦೩); ಇನಿತು ಹೆಲ್ಲಣೆಯೊ ಬಡಭಲ್ಲನೊಳಕಟ ದೇವ! (ಹಚ್ಚಡ. ೧೨-೬೬). **ಹೆಲ್ಲಣ**: "ನಿಟ್ಟುರ ಹೆಲ್ಲಣ [ಪಾಠಾಂ. ಹೆಲ್ಲಣೆ, ಹೊಲ್ಲೆಹ] ಮೆನಲ್ಕೆ ನಿಟ್ಟುರಮೆನಿಕ್ಕುಂ" (ಕಬ್ಬಕ್ಕ. ೫೬). **ಹೆಲ್ಲಣ್$_2$**: "ಹೆಲ್ಲಣಿಯೆಂದುಂ ನಿಟ್ಟುರಮೆಂದುಂ ನಿಷ್ಠುರಂ" (ಕಶಸಾ. ೬೬-೪೯೯). [?]

ಹೆಲ್ಲಣಿಗುಡು (ಕ್ರಿ). ಕೊಳಲನ್ನು ಒಂದು ನಿರ್ದಿಷ್ಟವಾದ ಗತ್ತಿನಲ್ಲಿ ನುಡಿಸು: ಲಲ್ಲೆಗೊಡುವ ಕೌಸಳದ ಹEಹೆತೆಲ್ಲಣಿಗುಡುವ ವಾಸದ . . . ಸಂಗೀತದ ಸಂದಣಿಯೊಳ್ (ಮಲುರ. ಪ. ೧೬೯-೧೧). [ಹೆಲ್ಲಣಿ$_1$ (< ಪೆಲ್ಲಣೆ) + ಕುಡು$_1$ (< ಕೊಡು$_1$)]

ಹೆಲ್ಲರ (ನಾ). ಒಂದು ಬಗೆಯ ಮಿಾನು: ನಗಲು ಹೆಲ್ಲರಂ ಬಂಕುರುಂ . . . ಗಿಱಿಲುಗಳೆಂಬ ಹೊಳೆವಳೆಯ ಮಿನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು (ಹಚಕಾ. ೫-೪೬). [?]

ಹೆಲ್ಲವಣೆ 'ಪೆಲ್ಲಣೆ' ನೋ.

ಹೆಲ್ಲಾಹೆಲ್ಲಿ, ಪೆಲ್ಲಾಪೆಲ್ಲಿ (ನಾ). ಒಂದು ಬಗೆಯ ಆಯುಧದಿಂದ ಮಾಡುವ ದ್ವಂದ್ವಯುದ್ಧ (?): ಮುಟ್ಟಾಮುಟ್ಟಿ, ಹೆಲ್ಲಾಹೆಲ್ಲಿ, ದಾಬೂದಾಬೆ (ಕಮದ. ೧೪೫ ಪ್ರಯೋ); ಕೂಡೆ ಕೇಶಾಕೇಶಿ ಪರಿದು ಹಾಣಾಹಾಣಿಯಂತೆ ಹೆಲ್ಲಾಹೆಲ್ಲಿಯುದ್ಧಮಾದುದು (ಸಾಳ್ವಭಾ. ೨೫-೧೪); ಹೆಲ್ಲಮಂ ಹೆಲ್ಲಮನೋರೊಂದಂ ಪಿಡಿವುದಾವ ಯುದ್ಧದೊಳದು ಹೆಲ್ಲಾಹೆಲ್ಲಿ (ಶಬ್ದಾನು. ೩೧೨ ಪ್ರಯೋ); ಭರದೆ ಕೇಶಾಕೇಶಿಯಿಂದ ಹಾಣಾಹಾಣಿಯಿಂದ ಹೆಲ್ಲಾಹೆಲ್ಲಿಯಿಂ ಮೊರೆವುತುಂ (ಚತುವಿ. ೪-೬-೭). Δ **ಪೆಲ್ಲಾಪೆಲ್ಲಿ**: ಸೇನಾನಾಯಕಂ ನಾಯಕನಾಗಿ . . . ವಜ್ರದ [ಗುದಿ]ಗೆಗಳಂ ಪಿಡಿದು ಕಿಡಿಗುಟ್ಟಿದಂತೆ

ಮೇಘಮುಖದೊಳ್ ತಾಗೆ ಪೆಲ್ಲಾಪೆಲ್ಲಿಯಿಂ ಭರಂಗೆಯ್ದು ಕಾದುವಲ್ಲಿ (ವರ್ಧಮಾ. ೯-೫೫ ವ); ಪಲವುಂ ಶಸ್ತ್ರಂಗಳಿಂ ಕಾದುತಂ ಪೆಲ್ಲಾಪೆಲ್ಲಿಯೊಳಗ್ಗಿ ತಗ್ಗಿ ಪೊರ್ದರ್ದೆರ್ದೆಯ್ತಂದು ಮತ್ತಂ ಕರಂ ಮಲ್ಲಾಮಲ್ಲಿ ತಗುಳ್ದುರುಳ್ತರೆ ಪಡಲ್ಪಟ್ಟತ್ತು [ತ]ತ್ಕಾಧನಂ (?) (ಬಂಹರಿ. ೭-೫). [< ಹೆಲ್ಲ$_1$]

ಹೆಸರಣಿ 'ಹೆಸರಣೆ' ನೋ.

ಹೆಸರಣೆ, ಹೆಸರಣಿ, ಹೆಸರೆಣೆ (ನಾ). ಒಂದು ಬಗೆಯ ಬಳ್ಳಿ: "ಸಾರಿಣಿ, ಪ್ರಸಾರಿಣಿ, ಕಟಂಭರಾ, ರಾಜಬಲಾ, ಭದ್ರಬಲಾ - ಈ ೫ ಹೆಸರಣೆ. ಕಳ್ಳನ ಚವಲಿಯೆಂಬರು" (ನಾಚರಾ. ೧೧೨). **ಹೆಸರಣಿ**: "ಚಾರುಪರ್ಣಿ - ಹೆಸರಣಿ" (ಅಕಾನಿ. ೧೦-೨೫). **ಹೆಸರೆಣೆ**: "ಕಟುಂಭರಾ - ಹೆಸರೆಣೆ" (ಓಷಧಿ. ೨೩); "ಭದ್ರಪರ್ಣೀ - ಹೆಸರೆಣೆ" (ಓಷಧಿ. ೧೧೦).

[< ಸಂ. ಪ್ರಸಾರಿಣೀ]

ಹೆಸರಾನು 'ಪೆಸರಾನ್' ನೋ.

ಹೆಸರಿಡು 'ಪೆಸರಿಡು' ನೋ.

ಹೆಸರಿಸು 'ಪೆಸರಿಸು' ನೋ.

ಹೆಸರು$_1$ 'ಪೆಸರ್' ನೋ.

ಹೆಸರು$_2$ 'ಪೆಸಱ್' ನೋ.

ಹೆಸರುಂಡೆ (ನಾ). ಹೆಸರುಹಿಟ್ಟಿಗೆ ಬೆಲ್ಲ ಅಥವಾ ಸಕ್ಕರೆ, ತುಪ್ಪ ಮುಂತಾದುವುಗಳನ್ನು ಸೇರಿಸಿ ಮಾಡುವ ಒಂದು ಬಗೆಯ ಸಿಹಿ ಉಂಡೆ: ತಂಬಿಟ್ಟು, ಹೆಸರುಂಡೆ, ಚಕ್ಕುಲಿ ತಯಾರಿಸಿದರು (ಕಪಪು. ೩-೮೭). [ಹೆಸರು$_2$ (< ಪೆಸಱ್) + ಉಂಡೆ]

ಹೆಸರುಕೆಡು 'ಪೆಸರ್ಗೆಡು' ನೋ.

ಹೆಸರುಗೊಳ್ 'ಪೆಸರ್ಗೊಳ್' ನೋ.

ಹೆಸರುಗೊಳ್ಳು 'ಪೆಸರ್ಗೊಳ್' ನೋ.

ಹೆಸರುವಡೆ 'ಪೆಸರ್ವಡೆ' ನೋ.

ಹೆಸರುವಾಸಿ 'ಪೆಸರ್ವಾಸಿ' ನೋ.

ಹೆಸರುಹಿಡಿ 'ಪೆಸರ್ವಿಡಿ' ನೋ.

ಹೆಸರೆಣೆ 'ಹೆಸರಣೆ' ನೋ.

ಹೆಸರ್ಗೊಳ್ 'ಪೆಸರ್ಗೊಳ್' ನೋ.

ಹೆಸವ (ನಾ). ಒಂದು ಬಗೆಯ ಮರ: ಹಲಸು ಹೆಸವಂ ಬಿಳಿಲ್ ಬದರಿ ಸಾಲಮಾಹೊನ್ನೆ ಚೆನ್ನಂಗಿ ಮೊದಲಾದ ವೃಕ್ಷಂಗಳಿಂ ವನಮೆಸೆದುದು (ಚಿಬಪು. ೫೩-೧೮); ಮರಗಳು: ಹೆಸವ, ಹೆಬ್ಬಲಸು . . . ದೇವದಾರು (ನಮ್ಮನು. ೨೩೭). [?]

ಹೆಸಱ್ 'ಪೆಸಱ್' ನೋ.

ಹೆಸಱು 'ಪೆಸಱ್' ನೋ.

ಹೆಸೆ (ಕ್ರಿ). ಹಿಂಜು; ಹಿಸಿ (?): ಹೊಸೆಯಿರೋ ಕಾಲೊಳು ಹಂಜಿಯ ಹೊಸೆವಂತೆ ಎಸೆಯಿರೊ ತಲೆ ಪಱಿವಂತೆ ಹೆಸೆಯಿರೊ ಹತ್ತಿಯ ಹೆಸೆವಂತೆ ದುಷ್ಟನ ಕುಸುರಿದಱಿಯಿರೊ ಬಾಳುಗಳಿಂ (ಜ್ಞಾನಚಿ. ೩೫-೧೦೯). [?]

ಹೆಸ್ಸರಿ 'ಹೆಸ್ಸರೆ' ನೋ.

ಹೆಸ್ಸರೆ, ಹೆಸ್ಸರಿ (ನಾ). ಒಂದು ಬಗೆಯ ಸಸ್ಯ: ಹೆಸ್ಸರೆ, ಅಂಚೆ (ಮೃಚ್ಛಿ. ೫೪-೧೦೭೮). **ಹೆಸ್ಸರಿ**: ಕರಿಹೆಸ್ಸರೆಮರ, ಹೆಸ್ಸರಿ (ಮೃಚ್ಛಿ. ೬೭-೧೫೭೪). [?]

ಹೆಳಕೆ 'ಪೆಳಕೆ' ನೋ.

ಹೆಳಲು 'ಪೆಣಲ್' ನೋ.

ಹೆಳಲುಬಂಗಾರ 'ಹೆಣಲುಭಂಗಾರ' ನೋ.

ಹೆಳವ 'ಪೆಟವ' ನೋ.

ಹೆಳವಿ 'ಪೆಟವಿ' ನೋ.

ಹೆಳವು$_1$ (ಕ್ರಿ). ೧. ವಕ್ರವಾಗಿ ನಡೆ; ಕುಂಟು: "ಖಂಜತಿ - ಹೆಳವಿದಪಂ; ಖಂಜಃ - ಹೆಳವಂ" (ಕಾಶಕ್ರ. ೧೪). ೨. ನಿಧಾನಗತಿಯಲ್ಲಿ ಸಾಗು: ಮೊದಲಿಂದ ಕೊನೆಯ ತನಕ ಕತೆ ಅಡ್ಡದಾರಿ ಹಿಡಿಯದೆ, ಹೆಳವದೆ, ಕಪಾಟಕಟ್ಟಿದ ಕುದುರೆಯಂತೆ ನಾಯಕನ ಗತಿಯನ್ನು ಹಿಂಬಾಲಿಸುತ್ತದೆ (ನಂಜುಂಡ. ೧೫೧). [< ಪೆಟವು]

ಹೆಳವು$_2$ 'ಪೆಟವು' ನೋ.

ಹೆಳಹು (ಕ್ರಿ). ೧. ಹೆಳವುಮಾಡು; ಕುಂಟುಮಾಡು. ೨. (ಆಲಂ) ಚಲಿಸದಿರುವಂತೆ ಮಾಡು; ಸ್ಥಿರಗೊಳಿಸು: ಮೇದಿನಿಯ ಭಾರವನಿಳುಹಿದನು ಸುರಲೋಕಲಕ್ಷ್ಮಿಯ ಹೆಳಹಿದನು ಹೇರಾಳ ಹೆಸರಿನ ಹೆಮ್ಮೆ ಪೂರೈಸೆ (ನಿಧಾಗ. ೮-೨೧-೫೬). [< ಹೆಳವು$_1$]

ಹೆಳೆ$_1$ (ನಾ). ನೆಪ; ನೆವ: ಬೂದನ ಕೆಲಸ ಅದು. ಈಗ ಮಕ್ಕಳ ಹೆಳೆ ಹೇಳುತ್ತಾನೆ (ಕುಡಿಕೂ. ೯೮). [?]

ಹೆಳೆ$_2$ (ನಾ). (?): ತೆಂಕಣಂ ಬಂಡ(ದ) ಮುಗುಳಿಯ ಹಳ್ಳವದರ್ಕ್ಕೆ ತೆಂಕಣ ಹೆಳೆ ಪಡುವಲಾ ಹಳ್ಳಂ (ಎಇ. XIII, ೩೧-೫೪; 1024). [?]

ಹೆಳೆಯ (ನಾ). ಪರಿಚಾರಕ (?): ಬಳೆದಂತಾ ಬಿಜ್ಜಳಂಗೇನದಟೆಸೆದುದೊ ಪೇಱ್ ಸಿಂಹಳಾಧೀಶ್ವರಂ ಬೆತ್ತಳಿಗಂ . . . ಹೆಳೆಯಂ ಪಾಂಡ್ಯಂ ಕಳಿಂಗಂ ಕರಿಪರಿಚರನಾಗಾಳ್ಕೆಸಂಗೆಯ್ಯೆ ನಿಚ್ಚಂ (ಎಕ. VII, ೨೫೧. ೧೯೭- ?; 1182). [?]

ಹೆಳ್ಳೆ (ನಾ). ಮಣ್ಣಿನ ಹೆಂಟೆ,— ಮುದ್ದೆ: "ಹೆಳ್ಳೆ = ಹೆಂಟೆ" (ಗಂಗಾಮ. ೩೫೨). [?]

ಹೆಱ 'ಪೆಱ$_2$' ನೋ.

ಹೆಱಗು 'ಪೆಱಗು' ನೋ.

ಹೆಱಗೆ 'ಪೆಱಗೆ' ನೋ.

ಹೆಱತೆಗೆ 'ಪೆಱದೆಗೆ' ನೋ.

ಹೆಱತೊಲಗು (ಕ್ರಿ). ಹಿಂದಕ್ಕೆ ಸರಿ; ಹಿಮ್ಮೆಟ್ಟು; ಹಿಂಜರಿ: ವೇದ ನಡನಡುಗಿತ್ತು . . . ಆಗಮ ಹೆಱತೊಲಗಿ ಅಗಲಿ ಇದ್ದಿತ್ತಯ್ಯಾ (ಬಸವ. ೭೪೯).

[ಹೆಱ (< ಪೆಱಗು) + ತೊಲಗು$_1$]

ಹೆಱದೆಗಹ (ನಾ). ಹಿಂದೆ ಉಳಿಯುವುದು; ಹಿಂದಕ್ಕೆ ಸರಿಯುವುದು: ಅಗಲಲಾದುದೆ ನನಗೆ ಭರತಾದಿಗಳನಯ್ಯನ ಮರಣದಲಿ ಹೆಱದೆಗಹ [ಪಾಶಾಂ. ಹೆಱತೆಗಹ] ವಾದುದೆ ಜನನಿಯಂಘ್ರಿಸರೋಜಸೇವೆಯಲಿ (ತೊರರಾ. ೩-೨-೧೨).

[ಹೆಱ (< ಪೆಱಗು) + ತೆಗೆ$_1$ + - ಹ$_2$ (< - ಪ$_2$)]

ಹೆಱದೆಗೆ 'ಪೆಱದೆಗೆ' ನೋ.

ಹೆಱಮೆಟ್ಟು 'ಪೆಱಮೆಟ್ಟು' ನೋ.

ಹೆಱಸಾರ್ 'ಪೆಱಸಾರ್' ನೋ.

ಹೆಱಸಾರು 'ಪೆಱಸಾರ್' ನೋ.

ಹೆಱಹಿಂಗು 'ಪೆಱಪಿಂಗು' ನೋ.

ಹೆಱೊಗೆ, ಹೆರಿಗೆ (ನಾ). ಹಡೆಯುವಿಕೆ; ಪ್ರಸವಿಸುವಿಕೆ; ಪ್ರಸವ: ಹೆಱೊಗೆಗ - ಕೊಡಸಿಗನನರದು ಕಿಬ್ಬೊಟ್ಟೆಯ ಪೂಸಲು ಬೇಗ ಹೆಱಲಕ್ಕು (ವಿವೃವಿ. ೯೧). **ಹೆರಿಗೆ**: ಜನ್ನಯ್ಯ ತಮ್ಮ ಹೆಂಡತಿಯನ್ನು ಹೆರಿಗೆಗಾಗಿ ತಾಯಿಮನೆಗೆ ಕಳುಹಿಸಿದಾಗ (ಪದ್ಮಸ. ೨೨೦); ಅವರ ಮೂರನೆಯ ಹೆರಿಗೆ ತೊಂದರೆಯಿಂದಲೇ ಆಯಿತು (ಹಬ್ಬಿಬ. ೨೯).

ಹೆರಿಗೆಯಾಗು = ಪ್ರಸವವಾಗು; ಮಗು ಹುಟ್ಟು: ಹೆರಿಗೆಯಾದ ಮೇಲೆ ಮಗುವು ಅತ್ತುದನ್ನು ಕೇಳಿ . . . ತಾಯಿಯ ಮನಸ್ಸಿಗೆ ನೆಮ್ಮದಿಯಾಗುತ್ತದೆ (ಗೃಹವಿ. ೧೦೩).

[ಹೆಱು$_1$ (< ಪೆಱು$_1$) + - ಇಗ್ಗೆ]

ಹೆಱೊಸು 'ಪೆಱೊಸು' ನೋ.

ಹೆಱು$_1$ 'ಪೆಱು$_1$' ನೋ.

ಹೆಱು$_2$ 'ಪೆಱು$_2$' ನೋ.

ಹೆಱುಗೆ, ಹೆರುಗೆ (ನಾ). ಹೆರಿಗೆ; ಪ್ರಸವ: ಹೆಱುಗೆಯ ಹೊತ್ತಿನೊಳಗಣ ಕಪೋತಿ ಪೆತ್ತರಗಿಳಿ ಕುಟುಕೀವ ಪರಮೆವಱಿ ಒತ್ತಾಡಿ ಸೋಗೆಯೊಪ್ಪಿದುವು (ಶ್ರೀಪಾಲ. ೨-೨೫). **ಹೆರುಗೆ**: "ರುಹ-ಜನ್ಮನಿ, ಹೆರುಗೆಯೊಳ್" (ಕಾಶಕ್ರ. ೧೫೦). 'ಹೆಱೊಗೆ' ಪರಾ.

ಹೆಱುಗೆಯ ಮನೆ = ಹೆರಿಗೆಯನ್ನು ಮಾಡಿಸುವ ಮನೆ; ಸೂತಿಕಾಗೃಹ: ಹೊದ್ದಿದನೊಲವಿಂದ ಹೆಱುಗೆಯ ಮನೆಯನು ಮುದ್ದಿನ ಮಗನ ನೋಡಿದನು (ಭರಚ. ೨೫-೯೩). [ಹೆಱು$_1$ (< ಪೆಱು$_1$) + - ಗೆ]

ಹೆಱುದುಪ್ಪ, ಹೆರೆತುಪ್ಪ, ಹೆರೆದುಪ್ಪ, ಹೆಱೆದುಪ್ಪ (ನಾ). ಹೆಪ್ಪುಗಟ್ಟಿದ ತುಪ್ಪ;

ಗಟ್ಟಿಯಾದ ತುಪ್ಪ: ನಿಷ್ಕಲಲಿಂಗಸ್ಥಲವನೆಯ್ದಿದ ಪರವಸ್ತು ತಿಳಿದುಪ್ಪವೆ ಗಟ್ಟಿಗೊಂಡು ಹೆಱುದುಪ್ಪವಾದ ಹಾಗೆ . . . ಮಹಾಲಿಂಗಸ್ಥಲವನೆಯ್ದಿತ್ತು (ಸಿದ್ಧೇ. ೧೦-೩೨). **ಹೆರೆತುಪ್ಪ**: ಹೊಸಬತ್ತಿಯನ್ನು ಹೆರೆತುಪ್ಪದಲ್ಲಿ ತೋಯಿಸಿ, ದೀಪ ಹಚ್ಚಿದಳು (ಬಾಳೆವ. ೬೩). **ಹೆರೆದುಪ್ಪ** : ತಿಳಿದುಪ್ಪ. ಹೆರೆದುಪ್ಪವಾದಂತೆ ಈ ಸ್ವಯಂಜ್ಯೋತಿಲಿಂಗವೇ ಗಟ್ಟಿಗೊಂಡು . . . ರೂಹುಗೊಂಡಿದೆಯಲ್ಲದೆ ಬೇರಲ್ಲ (ತೋಳಮಾ. ೯ ಪ್ರಸ್ತಾವನೆ). **ಹೆಱೆದುಪ್ಪ**: ವಾರಿ ಶರಧಿಯ ಕೂಡಿದ ಹಾಗೆ ಹೆಱೆದು[ಪಾಠಾಂ. ತು]ಪ್ಪದ ಹಾಗೆ (ಮಡಿವಾ. ೪೧-೫೭); ಹೆಱೆದುಪ್ಪ ಸಕ್ಕರೆಯ ಬೆರಸಿದಾ ಹೂರಣವನಿರದಿಕ್ಕಿದೊಡೆ (ಸೂಪಶಾ. ೧-೨೭); ತಿಳಿದುಪ್ಪ ಗಟ್ಟಿಗೊಂಡು ಹೆಱೆದುಪ್ಪವಾದಂತೆ (ಅಖಂಡೇ. ೧೦೯-೫೧).

[ಹೆಱು$_2$ (< ಪೆಱು$_2$) + ತುಪ್ಪ]

ಹೆಱುಹ (ನಾ). ಹಡೆಯುವಿಕೆ; ಪ್ರಸವಿಸುವಿಕೆ; ''ಪ್ರಸೂತಿ, ಪ್ರಸವ'' (ನಾಚೂಾ. ೬). [ಹೆಱು$_1$ (< ಪೆಱು$_1$) + - ಹ$_3$ (< - ಪ್ಯ$_3$)]

ಹೆಱೆ$_1$ 'ಪೆಱು$_2$' ನೋ.

ಹೆಱೆ$_2$, ಹೆರೆ$_3$ (ನಾ). ಹೆಪ್ಪುಗಟ್ಟಿರುವುದು; ಗಡ್ಡೆ; ಗಟ್ಟಿಯಾದುದು: ಸತಿಯರು ಹೆಱೆಯ ತುಪ್ಪವನವನಿಪತಿಗಳಿಗೆಱೆದರಕ್ಕರದಿ (ಕಾಶಾ. ೨-೬೬). **ಹೆರೆ$_3$**: 'ಹೆರೆದುಪ್ಪ' ಪರಾ.

ಹೆಱೆಯಾಗು, ಹೆರೆಯಾಗು = ಹೆಪ್ಪುಗಟ್ಟು; ಗಟ್ಟಿಯಾಗು: ಹಾಲೊಳಗೆ . . . ಹೆಪ್ಪಂ ಬಿಟ್ಟು ಹಿಂಜಾವದೊಳಗೆಯಾ ಹಾಲು ನಸುಹೆಱೆಯಾಗಲಾ ಹೆಪ್ಪ ತೆಗೆದು (ಸೂಪಶಾ. ೨-೯); ಚಳಿಯಿಂದ ಹೆರೆಯಾದ ಎಣ್ಣೆಯು, ಸೆಕೆ ಹೆಚ್ಚಲು ಕರಗಿ ತಿರುಗಿ ದ್ರವವಾಗುವುದು (ಬಾಲಪ್ರ. I. ೪೦೩). [< ಪೆಱು$_2$]

ಹೆಱೆ$_3$ 'ಪೆಱೆ' ನೋ.

ಹೆಱೆ$_4$ (ನಾ). (?): ಶೋಭಕೃತುಸಂವತ್ಸರದ ಮಸೆಯ ಹೆಱೆಯ ಅಂಗಾರವಾರದ ಬಿದ್ದ ಕೇತಗವುಂಡನ ಅಣ್ಣ . . . ಹೊಯಿಸಿದ ಕಲ್ಲು (ಎಕ. III. ಮಳವ. ೯೨-೬; 1183). [?]

ಹೆಱೆಗಾಣು (ಕ್ರಿ). ಚಂದ್ರನನ್ನು ನೋಡು ,– ಈಕ್ಷಿಸು: ಉಕ್ಕಿದುದು ಹೆಱೆಗಂಡ ಕಡಲಿನ ಹೆಕ್ಕಳದವೊಲು ಹರುಷರಸ (ತೊರಾ. ೧-೧೫-೪೩).

[ಹೆಱೆ$_3$ (< ಪೆಱೆ) + ಕಾಣು (< ಕಾಣ್)]

ಹೆಱೆತೆಗೆ 'ಪೆಱೆದೆಗೆ' ನೋ.

ಹೆಱೆದಲೆ 'ಪೆಱೆದಲೆ' ನೋ.

ಹೆಱೆದಲೆಗ (ನಾ). ಚಂದ್ರನನ್ನು ತಲೆಯಲ್ಲಿ ಧರಿಸಿದವನು; ಚಂದ್ರಚೂಡ; ಶಿವ: ಅಸುರರ ತಲೆದು ಹೆಱೆದಲೆಗನ ಸಿಕ್ಕ ಬಿಡಿಸಿದೊಡೆನಗುಡುಗೊಱೆಯಿತ್ತುದೆನುತೆ ಕೈಮುಗಿದ (ತೋಹಾ. ೬೭-೫೪). [ಹೆಱೆ$_3$ (< ಪೆಱೆ) + ತಲೆ$_1$ + - ಗ$_3$]

ಹೆಱೆದಲೆಯ 'ಪೆಱೆದಲೆಯ' ನೋ.

ಹೆಱೆದುಟಿ (ನಾ). ಅರ್ಧಚಂದ್ರಾಕೃತಿಯಲ್ಲಿರುವ ತುಟಿ; ಸುಂದರವಾದ ಅಧರ: ಸಣ್ಣ ಚಿಂದಳಿರುದುಟಿಯ ಹೆಱೆದುಟಿಯೆಳೆವೆಣ್ಣ ತಿಂತಿಣ ಬಂದುದಾಗ (ನೇಮಿಸಂ. ೨೩-೨೫೩). [ಹೆಱೆ$_3$ (< ಪೆಱೆ) + ತುಟಿ]

ಹೆಱೆದುಪ್ಪ 'ಹೆಱುದುಪ್ಪ' ನೋ.

ಹೆಱೆನೊಸಲು 'ಪೆಱೆನೊಸಲ್' ನೋ.

ಹೆಱೆಯಂಬು 'ಪೆಱೆಯಂಬು' ನೋ.

ಹೆಱೆಸರಳು (ನಾ). ಅರ್ಧಚಂದ್ರಾಕೃತಿಯ ಅಲುಗುಳ್ಳ ಒಂದು ಬಗೆಯ ಬಾಣ; ಹೆರೆಯಂಬು: ಎಸವ ಹೆಱೆಸರಳೊಡನೆ ಮುಮ್ಮೊನೆಯ ಕಣೆ ಬತ್ತರದ ಭಲ್ಲೆಯ . . . ಬತ್ತಳಿಕೆಗಳು ನೆರದಿರ್ದುವವರಲ್ಲಿ (ಶಾಳ್ಕಥಾ. ೫-೧೪).

[ಹೆಱೆ$_3$ (< ಪೆಱೆ) + ಸರಳು$_1$ (< ಸರಲ್$_1$)]

ಹೆಱೆವ 'ಪೆಱವ' ನೋ.

ಹೆಱೆವು 'ಪೆಱವು' ನೋ.

ಹೆಱೆವುಗೊಳಿಸು (ಕ್ರಿ). (ಆಲಂ) ಚಲಿಸದಂತೆ ಮಾಡು: ಹೆಱವುಗೊಳಿಸಿತ್ತು ಜನಮಂ ಮಱೆಗಾಲಂ ತೀವ್ರಪವನನಿಂ . . . ಕೆಸಱಿಂ (ಸೂಕ್ತಿಸು. ೧೦-೨೦೯).

[ಹೆಱವು (< ಪೆಱವು) + ಕೊಳ್$_1$ + - ಇಸು$_5$]

ಹೇ (ಅ). ೧. ಸಂಬೋಧನೆಯಲ್ಲಿ ಬಳಸುವ ಒಂದು ಅವ್ಯಯ: ಹೇ ಸೋದರ ಅಶೋಕ, ನೀನು ರಕ್ತಾಂಬರ ರಾಜವೇಷಧಾರಿ. ನಾನು ತೃಣಮಾತ್ರ! (ಇಷ್ಟಸ. ೨೩೬). ೨. ನಿಕೃಷ್ಟಾರ್ಥದಲ್ಲಿ ಬಳಸುವ ಒಂದು ಅವ್ಯಯ. [ಸಂ.]

ಹೇಂಗೆ 'ಎಹಗೆ' ನೋ.

ಹೇಂಟೆ 'ಪೆಂಟೆ$_2$' ನೋ.

ಹೇಂಟೆಗೊದ್ದ 'ಹೆಂಟೆಗೊದ್ದ' ನೋ.

ಹೇಕಣಕೆ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಸೊಪ್ಪು: ಭಂಗಿಸೊಪ್ಪಿನ ರಸ, ಹೇಕಣಕೆ ರಸ . . . ನುಗ್ಗೆಯ ರಸ ಇವೆಲ್ಲ ಸೊಪ್ಪಿನ ರಸವನ್ನೂ ಸಮಾನಂಗೊಂಡು ಅರೆದು ಕೊಳ್ಳಿ ವಾತ ಮಾಣ್ಗುಂ (ವೈವಿ. ೧೫೫). [?]

ಹೇಕರಿಸು (ಕ್ರಿ). (ಕುದುರೆಯಂತೆ) ಕೂಗು; ಕೆನೆ: ''ಹೇಷತೆ ಹೇಕರಿಸಿದವುದು'' (ಕಾಶಕ್ಯ. ೧೫೧); ಕುದುರೆಗಳು ಒದರಿದರೆ ಹೇಕರಿಸುತ್ತವೆ ಅನ್ನುತ್ತಾರೆ (ಮುಃಬಯಿ. ೩-೫೭); ಮೇಕೆಗಳು ಹೇಕರಿಸಿದವು (ಜೀವರಂ. ೧೧). [ಹೇಕರಣ್ಯ + - ಇಸು$_5$]

ಹೇಕುಳಿ 'ಪೆಂಕುಳಿ' ನೋ.

ಹೇಕುಳಿಗೊಳ್ 'ಪೆಂಕುಳಿಗೊಳ್' ನೋ.

ಹೇಕೆತನ (ನಾ). ಗರ್ವ; ಸೊಕ್ಕು (?) : ಶ್ರೀಕಾಂತನ ಸ್ಮರಣೆ ಮರೆದಾರೆ ಮಡಿ ಅಲ್ಲ ಹೇಕೆತನ ಕಲಿತವಗೆ ಮಡಿ ಅಲ್ಲ (ಎಸಾಪು. ೫೭-೪).

[ಹೇಕೆ$_3$ (IP ← ಮರಾ. ಹೇಕಾ = ಗರ್ವ) + - ತನ]

ಹೇಗ 'ಪೆಂಗ' ನೋ.

ಹೇಗತನ (ನಾ). ದಡ್ಡತನ; ಮರುಳುತನ: ಮತ್ತೆ ದುರಿತಂಗಳ ಹೊಱುವ ಹೇಗತನವೇಕಯ್ಯಾ (ಬಸವ. ೧೫೯); ನಿನ್ನ ಹೇಗತನವನ್ನು ಬಿಟ್ಟು ಕೇಳು (ಪ್ರಭುಪು. ೫-೧೦೮). 'ಎಗ್ಗತನ' ಪರಾ. [ಹೇಗ (< ಪೆಂಗ) + - ತನ]

ಹೇಗೆ 'ಎಹಗೆ' ನೋ.

ಹೇಜಿಬ 'ಹೇಜೀಬ' ನೋ.

ಹೇಜೀಬ, ಹೆಜೀಬು, ಹೆಜ್ಜೀಬ, ಹೇಜಿಬ (ನಾ). ೧. ದೂತ; ರಾಯಭಾರಿ: ಹೇಜೀಬರ ಮುಖವಚನದ ಸೋಜಿಗವಾರ್ತೆಯನು ಕೇಳಿ (ಬೀಳವಂ. ೧-೧೩೫). ೨. ಆಳು; ಸೇವಕ: ಬಾದಶಹನು ಉದಯಭಾನುವಿನ ಬೆನ್ನ ಹಿಂದಯೇ ಆತನನ್ನು ಕರತರುವುದಕ್ಕಾಗಿ ಒಬ್ಬ ಹೇಜೀಬನನ್ನು ಕಳಿಸಿದ್ದನು (ಕಮಲ. ೬೨). **ಹೆಜೀಬು**: ೧. ರಾಜಭೂವರರ ಹೆಜೀಬು ತಿಮ್ಮಾಜಿ ಭೀಮಾಜಿಯು ಜಹಲ್ನಾಪುರದಲ್ಲಿ ಮೊಕ್ಕಾಂ ಇದ್ದನು (ಬಿಮ್ಮಯ. ೬). **ಹೆಜ್ಜೀಬ**: ೧. ಪುರದೊಳ್ . . . ಪರದರಿಂದಂ ಹೆಜ್ಜೀಬರಿನುರು ಭಕ್ಷವನಾಗಿಸಿ ನೆರೆ ಸಂತಸವಡಿಸಿದಳ್ ದಲಾ ಯತಿವರನಂ (ಕಳಸ್ಥ. ೧೨-೯). **ಹೇಜಿಬ**: ೧. ಅಲ್ಲಿರ್ದ ಕೂರ್ಮಪಾತ್ಸಾವಿನ ಹೇಜಿಬರೆಲ್ಲವನರಿದು ಬೇಗದಲಿ ನಿಲ್ಲದೆ ಕಾಗದವನು ತಮ್ಮ ದಾತಾರನಲ್ಲಿಗಟ್ಟಿದರು (ಕಂಗವಿ. ೧೩-೭೦); ಹೇಜಿಬರನು ಹೊಂತಕಾರಿ ನಿಯೋಗಿಗಳಾಗ ಬೇಗದಿ ಕಳಿಸುಮೆ (ಸೌಂದಕಾ. ೪-೧೧).

[← ಅರ. ಹಿಂ. ಹಾಜಿಬ್; ಮರಾ. ಹೇಜೀಬ್]

ಹೇಟಗಾಲು (ನಾ). (ಉಕ) ೧. ಊನವಾಗಿರುವ ಕಾಲು; ಒಂದು ಪಕ್ಕಕ್ಕೆ ಸೆಳೆದುಕೊಂಡಿರುವ ಕಾಲು. ೨. ಕಾಲೆಳೆದುಕೊಂಡು ನಡೆಯುವುದು; ಊನವಾದ ನಡಗೆ: ಅವನು ಹೇಟಗಾಲಿನಿಂದ ದೂರ ನಡೆಯುವುದು ಸಾಧ್ಯವಿಲ್ಲ (ರೂಢಿ). [ಹೇಟ? + ಕಾಲು$_1$ (< ಕಾಲ್$_1$)./ಸಂ. ಹೇಠ = ಅಡ್ಡಿ, ತೊಂದರೆ, ಗಾಯ./ ಮರಾ. ಹೇಟ = ಕೆಳಗೆ]

ಹೇಟೆ 'ಪೆಂಟೆ$_2$' ನೋ.

ಹೇಟೆ 'ಪೆಂಟೆ$_2$' ನೋ.

ಹೇಡ (ನಾ). ದಡ್ಡ; ತಿಳಿಗೇಡಿ (?): ರೂಢಿಪತಿ ಸರಿದ ಸುರನಗರಿಗಂ ಬಾಲಕರು ಹೇಡರಾದರು ರಾಜ್ಯಮನ್ನಾಳಲಾರದೆ (ತುರಂಗ. ೧೨-೯); ವಿಪ್ರರೆಲ್ಲರು ಕೂಡಿ ಹೇಳಿದರು ನೋಡಿ ನಗುವರು ನಮ್ಮನು ಹೇಡನಾ[ಪಾಠಾಂ. ಹೇಡಿಯಾ]ಗಲು ಬೇಡ (ತುರಂಗ. ೧೩-೬೫). [< ಹೆಡ್ಡ$_1$./ಸಂ. ಹೇಡ = ಅನಾದರ, ತಿರಸ್ಕಾರ]

ಹೇಡನ (ನಾ). ಅನಾದರ; ತಿರಸ್ಕಾರ: 'ಹೇಡ್ಯೆಸು$_2$' ಪರಾ. [ಸಂ.]

ಹೇಡವಿಸು 'ಹೇಡೈಸು$_1$' ನೋ.

ಹೇಡಾಡು (ಕ್ರಿ). ಹೆದರು; ಎದೆಗುಂದು; ಭಯಪಡು: ಪೋಡಿವೋಗದೆ ನಿರ್ವಹಿಸಿ ಹೇಡಾಡದವರನು ಕಾಂಬೆವು (ಪ್ರಭುಲೀ. ೧೮-೩೫); ಹೆಪ್ಪಳಿಸಿ ಹೇಡಾಡಿ ಹಿಮ್ಮೆಟ್ಟಿದನೆ ಮನದ ದರ್ಪಗುಂದಿದನೆ (ಸಿಂಗಿರಾ. ೪೧-೮); ಅಭವಶತ್ರುವನಿತ್ತ ಬಳಿಕ ಹೇಡಾಡಿ ಹಿಂಜರಿದು ಸಂಧಾನದಿಂ ಬಾಳುವೆನೆ (ನವಮೋ. ೩೦-೨೮).

[< ಹೇಡಿ (< ಪೇಡಿ$_1$) + ಆಡು$_1$]

ಹೇಡಿ 'ಪೇಡಿ$_1$' ನೋ.

ಹೇಡಿಗ (ನಾ). ಅಂಜುಕುಳಿ; ಭೀರು: ಓಡಿ ಕೈದುವ ಹಾಯ್ಕೆ ಕಳನೊಳು ಹೇಡಿಗರ ಹಿಡಿದಳುಕಿ ಬದುಕಿದ ಗೂಡಿಹುದೆ (ಕುವ್ಯಾಗ. ೫-೨೧). [ಹೇಡಿ (< ಪೇಡಿ$_1$) + - ಗ$_2$]

ಹೇಡಿಗರ (ನಾ). ಹೇಡಿಯಾಗುವಂತೆ ಮಾಡುವ ಗ್ರಹ,– ಪಿಶಾಚಿ: ಮರುಳೆ ರಕ್ಕಸರಂಜುವರೆ ಫಡ ನರರಿಗೆತ್ತಣ ಹೇಡಿಗರವಿದು ಬೆರಸಿ ನಿನ್ನನು ಹಿಡಿಯುತೆಂದನು ನಕ್ಕು ಗಹಗಹಿಸಿ (ಕೌಶಿರಾ. ೧೪-೧೬). [ಹೇಡಿ (< ಪೇಡಿ$_1$) + ಗರ$_3$]

ಹೇಡಿಗಳ್ಳ (ನಾ). ಅಂಜುಕುಳಿಯಾದ ಕಳ್ಳ; ಹೆದರುವ ಸ್ವಭಾವದ ಚೋರ: ಈತನು ಇತರರಂತೆ ಹೇಡಿಗಳ್ಳನಾಗಿರಲಿಲ್ಲ (ಬೆನ್ನಬೇ. ೪).

[ಹೇಡಿ (< ಪೇಡಿ$_1$) + ಕಳ್ಳ$_1$]

ಹೇಡಿಗೊಳ್, ಹೇಡಿಗೊಳು (ಕ್ರಿ). ಹಿಂಜರಿ; ಹಿಮ್ಮೆಟ್ಟು: ರಕ್ಕಸ ರೂಪುದಾಳಿ . . . ಬರಲು ತಾಳಲಾಱದೆ ಹೇಡಿಗೊಂಡೋಡಿ (ಸಮ್ಯಕೌ. ೪-೫೧); ಓಡುವಾಳೋಚನೆಯ ಹಾರುವರಾಡಿದೊಡೆ ಹಿರಿಯಯ್ಯ ನಿಮ್ಮಡಿ ಹೇಡಿಗೊಂಡವೊಲೊಪ್ಪುವುದೆ (ಸಾಳ್ವಭಾ. ೨೩-೩೨). **ಹೇಡಿಗೊಳು:** ತುರುವ ಮರಳಿಚುವೆನು ಹೇಡಿಗೊಳದಿರು (ಯವಿಪ. ೪೭).

[ಹೇಡಿ (< ಪೇಡಿ$_1$) + ಕೊಳ್$_1$]

ಹೇಡಿಗೊಳು 'ಹೇಡಿಗೊಳ್' ನೋ.

ಹೇಡಿತನ 'ಪೇಡಿತನ' ನೋ.

ಹೇಡಿತರ (ನಾ). ಹೇಡಿಯ ರೀತಿ,– ಬಗೆ: ನಿನ್ನನು ಪಡೆಯದೆ ಆ ಹೇಡಿತರದ ಸನ್ಯಾಸವನ್ನಂಗೀಕರಿಸಿ (ಸುಗುಗಂ. ೩-೨). [ಹೇಡಿ (< ಪೇಡಿ$_1$) + ತರ$_4$ (< ತರಹ)]

ಹೇಡಿಮಣ್ಣು (ನಾ). "ಜಿಗುಟಿಲ್ಲದ ಮಣ್ಣು" (ಹೃದಸ. ಕೋಶ): ಕಾಂಬುವನ ನಂಬೆ, ಹುಸಿ ಚಿಗುರ ಕೊಂಬೆ, ಓ ಹೇಡಿ - ಮಣ್ಣ ಗೊಂಬೆ! (ಹೃದಸ. ೬೬-೮); ಹೇಡಿಮಣ್ಣ ಕಂಬದಂತೆ ಗಾಡಿಯಳಿದು ಬಿದ್ದೆನೋ - ಗಾಡಿಯಳಿದು ಬಿದ್ದೆನು (ನಾದಲೀ. ೭-೧೫).

[ಹೇಡಿ (< ಪೇಡಿ$_1$) + ಮಣ್ಣು (< ಮಣ್)]

ಹೇಡೈಸು$_1$, ಹೆಡ್ಡೈಸು$_1$, ಹೇಡವಿಸು (ಕ್ರಿ). ಹಿಮ್ಮೆಟ್ಟು; ಹಿಂದೆಗೆ; ಹಿಂಜರಿ: ಪಾಪಕ್ಕೆ ಹೇಡೈಸಿ ಪುಳುವೆಲ್ಲವಂ ಪೊಱಕ್ಕೆ ಚೆಲ್ಲಿಸಿ (ಚೂಮ್ಮರ. ಹ. ೩೩೮-೧೫); ಹೇಡೈ[ಪಾಠಾಂ. ಹೆಡ್ಡಯಿ, ಹಮ್ಮೈ]ಸದಿರು ಧೈರ್ಯದಲಿ (ತೊರರಾ. ೬-೪೧-೫). **ಹೆಡ್ಡೈಸು$_1$:** ಬಾದಣವಾದ ಹುಣ್ಣ ಹೆಡ್ಡೈಸದೆದ್ದು . . . ಹೊರಳ್ದುರುಳ್ದು ಹೋಗುತಿರ್ದನಂದಾದಯ್ಯನು (ಸೋಮಚ. ೩-೬೩); ಐಸೆ ಮತ್ತೇನಿದು ಪುರಾಕೃತದೋಷಫಲದುದ್ಭವವಲಾ ಹೆಡ್ಡೈಸಿ [ಪಾಠಾಂ. ಹೆಡ್ಡಯ್ಸಿ] ಮಾಡುವುದೇನು (ತೊರರಾ. ೩-೩-೨೩). **ಹೇಡವಿಸು:** ಕುಟ್ಮಳಿತಚಂಪಕಪ್ರಚಯಮಂ ಕಾಮನಿಸುವ ಕಾದ ಪುಳುಂಬಿನಂಬುಗಳ ಪೊದೆಯೆಂದು ಹೆEಹೇತಿಡವಿಸುತ್ತುಂ (ಕಾಂಶೀಪ್ರ. ೧೧-೬೫ ವ); ಓಡುತದೆ ಕಪಿ ಹಿಡಿಯಿರೋ ಹಿಡಿ ಹೇಡವಿಸದಿರಿಯೆನುತ ನಗೆಮೊಗಗೂಡಿದಕ್ಷಕುಮಾರ ಸಂಧಿಸಿದನು ಸಮಿಾರಜನ (ತೊರರಾ. ೫-೫-೨೦). [ಹೇಡಿ (< ಪೇಡಿ$_1$) + - ಇಸು$_3$]

ಹೇಡೈಸು$_2$, ಹೆಡ್ಡಯಿಸು, ಹೆಡ್ಡೈಸು$_2$ (ಕ್ರಿ). ಜುಗುಪ್ಸೆಗೊಳ್ಳು; ಹೇವರಿಸು; ಅಸಹ್ಯಪಡು: ಬಿಸಿಯ ಬೆಳಗೆಂದು ಬೆಳ್ದಿಂಗಳಿಗೆ ಹೇಡೈಸಿ ಪಸಿಯ ಕಿಚ್ಚೆಂದು ಪೊಸಪಲ್ಲವಕೆ ತಲ್ಲಣಿಸಿ (ಮಲುರ. ಹ. ೧೭೩-೨); ಬಾಡಿದ ಮೊಗ ಬಸವಳಿದ ತನುವ ಕಂಡು ಹೇಡೈಸಿದ ಮನದೊಳಗೆ (ಅಂಜಚ. ೯-೯೧); ಮಾಡದುದಂ ಮಾಡಿದನೆನೆ ಹೇಡೈಸಳೆ ಕಮಲೆಯವರ್ಗೆ (ನೀತಿಸಾ. ೨೪೯). **ಹೆಡ್ಡಯಿಸು:** ಪಿಂತಣಘವಶದ ಸಂಸಾರಕ್ಕೆ ಹೆಡ್ಡಯಿಸಿ [ಪಾಠಾಂ. ಹೇಡೈಸಿ] . . . ತಪಸಿನೊಂದುದ್ಯೋಗಕೆ ಚಿಂತೆಯಂ ಮಾಳ್ಪುದೆ (ಸಮ್ಯಕೌ. ೧೨-೨೦). **ಹೆಡ್ಡೈಸು$_2$:** ಹುಸಿಗೆ ಹೆಡ್ಡೈಸುವಾತನಲ್ಲೆಂದಱಿಯಲಾಯ್ತು (ಹಚಕಾ. ೮-೪೨); ಉತ್ತಮಶಿವನರ್ಚಕನಾಗಿ ಹೊಲಸಿಗೆ ಚಿತ್ತ ಹೆಡ್ಡೈಸದೆ ಇಹರೆ ಮತ್ತಾ ಸಿರಿಭಾಗ್ಯವು ಹೋದರೆ ನಿನ್ನ ಉತ್ತಮಿಕೆಯು ಹೋಗಬಹುದೆ (ಹರಿಸಾಂ. ೭೨-೮).

[ಹೇಡನ + - ಇಸು$_3$]

ಹೇತಿ (ನಾ). ೧. ಆಯುಧ; ಶಸ್ತ್ರ: ಹೇತಿ ಮುಕ್ತಭಟದೋರ್ದಂಡಾಗ್ರಶುಂಭದ್ಧ್ವಜೋತ್ಕರ ಸಂದೋಹಮುಮಂ ಬಿಸುಟ್ಟು (ಆದಿಪು. ೧೨-೬೮); ಇದು ರತೀಶನ ಹೇತಿ ಇದು ಕುಸುಮಶರನಲಗು (ವೆಂಕಾರಾ. ೧-೬-೧೫). ೨. ಪ್ರಕಾಶ; ಹೊಳಪು: "ವರ್ಚಃ, ತೇಜಃ, ತ್ವಿಟ್, ಜ್ಯೋತಿಃ, ಹೇತಿಃ . . . ರಶ್ಮಿಃ - ಈ ೧೧ ದೀಪ್ತಿ" (ಹಲಾಯು. ೧೨-೬೫); ಘನಹೇತಿಯಿಂದಂ ದ್ವಿಜೋಪಹತಿಗೆಯ್ದು . . . ಸೂರ್ಯನುಳ್ಳನಿತು ಕಿರಣಮನುಳಿದು ತವೆ ದಿಗಂಬರನಾಗುತಸ್ತಗಿರಿಯಂ ಸಾರ್ದನು (ಚಿಬುಪ್ರ. ೯-೩). ೩. ಬೆಂಕಿಯ ಜ್ವಾಲೆ, – ಉರಿ. ೪. (ಸೂರ್ಯನ) ಕಿರಣ,– ಕದಿರು. [ಸಂ.]

ಹೇತಿವಿದಾರಿಣಿ (ನಾ). [ಜೈನ] ಶಸ್ತ್ರವನ್ನು ಸೀಳುವ ಒಂದು ಬಗೆಯ ವಿದ್ಯೆ (?): ಸೌಜನ್ಯಕಂದಾಂಕುರಂ ಶ್ರೀವಿಜಯಂಗೆ ಹೇತಿವಿದಾರಿಣಿಯುಂ ಬಂಧವಿಮೋಚನಿಯುಮೆಂಬಿವೆರಡುಂ ವಿದ್ಯೆಗಳಂ ಕೊಟ್ಟು (ಶಾಂತಿಪು. ೬-೩೭ ವ).

[ಸಂ. ಹೇತಿವಿದಾರಿಣೀ]

ಹೇತು$_1$ 'ಪೇಲ್$_1$' ಪರಾ.

ಹೇತು$_2$ (ನಾ). ೧. ನಿಮಿತ್ತ; ಕಾರಣ; ಉದ್ದೇಶ: ಧವಲಾಪಾಂಗವಿಲೋಕನಾಮೃತಮಯಂ ಭ್ರೂಲಕ್ಷ್ಯರಮ್ಯಂ ಮನೋಭವರಾಜ್ಯೋದಯಹೇತು (ಆದಿಪು. ೬-೮೮); ಜಾತಿಸ್ಮರತೆ ವಿರಕ್ತಿಗೆ ಹೇತುವೆನುತ್ತಿರ್ಪರ್ (ಕಾದಂಬ. ೬೯೩); ಇಂದಿನಿಷ್ಟಮೆಯೆ ಮುಂದನಿಷ್ಟಕೆ ಹೇತುವಪ್ಪಂದದಿಂ, ಇಂದಿನ ಅನಿಷ್ಟಮೆಯೆ ತೊಟ್ಟಲಾಗದೆ ಮುಂದಣುಭ್ಯುದಯಶಿಶುಗೆ? (ತ್ರೇರಾಮಾ. ೮೧-೯೨). ೨. ಮೂಲ; ಉಗಮಸ್ಥಾನ: ವರಪುಣ್ಯೋದಯಹೇತು ಶಾಶ್ವತಮಹಿಂಸಾಲಕ್ಷಣಂ ಸದ್ಗುಣಾಕರಂ (ಸುಕುಮಾ. ೧-೬); ನಮ್ಮ ಜ್ಞಾನ ನಮ್ಮ ವರ್ತನೆಗೆ ಹೇತುವೆನಿಸಿರುತ್ತದೆ (ಶಿಕ್ಷದ. ೬೩೦). ೩. ತರ್ಕಶಾಸ್ತ್ರ: ಆತನು ಪಂಡಿತನು . . . ಮಾಯಾ, ಹೇತು, ಮಂತ್ರಣ, ಯುದ್ಧ, ಛಂದಸ್ಸು, ಮುದ್ರಾ ಎಂಬ ಅನೇಕ ಶಾಸ್ತ್ರಗಳನ್ನು . . . ಗ್ರಹಿಸಿದ್ದನು (ಬುದ್ಧಪ. ಮಿಲಿಂದ. ೧೯). ೪. [ಕಾವ್ಯಮೀಮಾ] ಒಂದು ಬಗೆಯ ಅರ್ಥಾಲಂಕಾರ; ಹೇತೂಕ್ತಿ: ನುತ ಪರಿವೃತ್ತಿ ವ್ಯಾಜಸ್ತುತಿ ಹೇತು ವಿಭಾವನಾಲಪೋದಾತ್ತಾಪಹ್ನುತಿ ರಸವದೂರ್ಜಿತವ್ಯಾವೃತಿಪ್ರಿಯತರಾಶಿಗಳ್ ಕ್ರಮಾದ್ಯುತ್ಕರಂಗಳ್ (ಕವಿರಾ. ೩-೪); ಹೇತುಮದಾಖ್ಯಾನಂ ಸಹಹೇತುಕಮದು ಹೇತುವೆಂಬಲಂಕೃತಿಯಕ್ಕುಂ (ಕಾವ್ಯಾವ. ೬೨೫). ೫. [ತರ್ಕಶಾ] 'ಅನುಮಾನ'ದ ಐದು ಅಂಗಗಳಾದ ಪ್ರತಿಜ್ಞಾ, ಹೇತು, ದೃಷ್ಟಾಂತ, ಉಪನಯ ಮತ್ತು ನಿಗಮನ ಎಂಬುವುಗಳಲ್ಲಿ ಒಂದು; ಒಂದು ವಿಷಯವನ್ನು ಸಾಧಿಸಲು ಕೊಡುವ ಕಾರಣ: ಆಯನುಮಾನಪ್ರಮಾಣಕ್ಕೆ ಪ್ರತಿಜ್ಞೆ ಹೇತು ದೃಷ್ಟಾಂತಗಳೆಂಬ ಅಂಗತ್ರಯಮುಂಟದಱೊಳು ಪರಪ್ರತಿಪ್ರತ್ಯರ್ಥಮಾಗಿ ಪ್ರಯೋಗಿಸುವಾಗ ಪರ್ವತವಗ್ನಿವುಳ್ಳದ್ದೆಂಬುವದೇ ಪ್ರತಿಜ್ಞಾವಾಕ್ಯವು ಧೂಮವುಂಟಾದ ಕಾರಣವೆಂಬುವದೇ ಹೇತು (ವಿವೇಕ. ೨೦); ಪರಾರ್ಥಾನುಮಾನವು ಪ್ರತಿಜ್ಞಾ, ಹೇತು, ಉದಾಹರಣ, ಉಪನಯ, ನಿಗಮನ ಎಂದು ಐದು ಅಂಗವುಳ್ಳದು (ಭಾತತ್ತ್ವ. ೨೭೩). [ಸಂ.]

ಹೇತುಕ (ಗು). ೧. ಚೋದನೆಗೆ ಕಾರಣವಾದ; ಉದ್ದೇಶಕ್ಕೆ ಸಂಬಂಧಿಸಿದ. (ನಾ). ೨. ಕಾರಣ; ನಿಮಿತ್ತ: ಪೂರ್ವಪೂರ್ವಹೇತುಕಂಗಳುಂ ಉತ್ತರೋತ್ತರ ಸೂಕ್ಷ್ಮವಿಷಯಂಗಳುಂ ಕ್ರಿಯಾಕಾರಿಗಳುಮಪ್ಪುದಱಿಂ ಸಮ್ಯಗ್ದರ್ಶನಹೇತುಕಂಗಳಪ್ಪುವು (ತತ್ತ್ವಪ್ರ. ೭೬). ೩. ಸಾಧನ. ೪. ತರ್ಕಶಾಸ್ತ್ರಜ್ಞ. ೫. = ಹೇತು$_2$ ೪: ಹೇತುಮದಾಖ್ಯಾನಂ ಸಹಹೇತುಕಮದು ಹೇತುವೆಂಬಲಂಕೃತಿಯಕ್ಕುಂ (ಕಾವ್ಯಾವ. ೬೨೫).

[ಸಂ.]

ಹೇತುಕ್ರಿಯೆ (ನಾ). [ವ್ಯಾಕ] ಪ್ರಯೋಜಕ ಕ್ರಿಯಾಪದ: ಸತತಂ ಮಧ್ಯಮಪುರುಷ ಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾಶ್ರಿತ ಹೇತುಕ್ರಿಯೆಯೊಳಮನ್ವಿತಮಲ್ಪಿಯೆ ತಾಂ ಕ್ರಿಯಾರ್ಥಮಪ್ಪೆಡೆಗಳೊಳಂ (ಶಮದ. ೨೩೪). [ಸಂ. ಹೇತುಕ್ರಿಯಾ]

ಹೇತುಜ್ಞಾನ (ನಾ). [ತರ್ಕಶಾ] ಕಾರಣದ ಅರಿವು; ತಿಳಿವಳಿಕೆ: ಹೇತುಜ್ಞಾನವು ಭ್ರಾಂತಿಯಾದರೆ ಸಾಧ್ಯಜ್ಞಾನವೂ ಭ್ರಾಂತಿಯಾಗಬೇಕಾಗುವುದು (ಹಿಂದಸಾ. ೧೩೪).

[ಸಂ.]

ಹೇತುತ್ವ (ನಾ). ಕಾರಣದಿಂದ ಕೂಡಿರುವುದು: ಅದು ಶರೀರಬಳಾಯುರ್ದೇಹ ಪ್ರಮಾಣೋಪಚಯಾಪಚಯ ಹೇತುತ್ವದಿಂದಮುತ್ಸರ್ಪಿಣನಾಮಮಂ ಪಡೆದುದದೊಂದು ಪತ್ತುಕೋಟಿ ಕೋಟಿ ಸಾಗರೋಪಮಸಂಖ್ಯೆಯಂ ತಾಳ್ದಿ (ಆದಿಪು. ೬-೪೮ ವ). [ಸಂ.]

ಹೇತುದೋಷ (ನಾ). [ತರ್ಕಶಾ] ತರ್ಕಬದ್ಧವಾದ ಅನುಮಾನದಲ್ಲಿ ಯಾವ ನಿಮಿತ್ತವನ್ನು (ಉದಾ. ಹೊಗೆ) ಆಧರಿಸಿ ಸಾಧ್ಯವನ್ನು (ಉದಾ. ಬೆಂಕಿ) ಊಹಿಸಲಾಗುವುದೋ ಆ ನಿಮಿತ್ತದಲ್ಲಿಯೇ ಒದಗುವ ದೋಷ,- ಉಂಟಾಗುವ ತರ್ಕದೋಷ: ℙ ಇದರಲ್ಲಿ ವ್ಯಭಿಚಾರ, ವಿರೋಧ, ಸತ್ಪ್ರತಿಪಕ್ಷ, ಅಸಿದ್ಧಿ ಮತ್ತು ಬಾಧಗಳೆಂದು ಐದು ವಿಧಗಳಿವೆ: 'ಹೇತ್ವಾಭಾಸ' ಪರಾ. [ಸಂ.]

ಹೇತುಪದ (ನಾ). ಕಾರಣದ ಸ್ಥಾನ: ಸಮರಕ್ಕಿದೆ ಹೇತುಪದಂ ಸುಕೃತಮಹೀರುಹ ವಿಪಕ್ವಫಲ ಭುಕ್ತಿಗಿಂತು ನೋಂತರುಮೊಳರೇ (ಶಾಂತಿಪು. ೪-೭೫). [ಸಂ.]

ಹೇತುಪ್ರಯೋಗ (ನಾ). [ವ್ಯಾಕ] ಧಾತುವಿಗೆ ಸೇರುವ ಪ್ರೇರಣಾರ್ಥಕ ಪ್ರತ್ಯಯದ ಬಳಕೆ,– ಪ್ರಯೋಗ: ಧಾತುಗಳನೇಕಾಕ್ಷರಕಾಖ್ಯಾತವಿಭಕ್ತಿಗಳ ಮೊದಲೊಳಿಸು ತಾನಕ್ಕುಂ ಹೇತುಪ್ರಯೋಗದೊಳ್ ತಜ್ಜಾತಿಯೆ ಕರ್ಣಾಟಧಾತುಗಳ್ಗ ಮರ್ದಿರ್ಕುಂ (ಕಾವ್ಯಾವ. ೪೧೭). [ಸಂ.]

ಹೇತುಭೂತ (ನಾ). ಕಾರಣ; ನಿಮಿತ್ತ: ಅಂತು ಶುಭಾಶುಭಂಗಳೆಂಬೆರಡುಮಾಸ್ರವಂಗಳ್ಗೆ ಹೇತಭೂತಮಕ್ಕುಂ (ಶಾಂತಿಪು. ೧೨-೫ ವ). [ಸಂ.]

ಹೇತುರೂಪಕ (ನಾ). [ಕಾವ್ಯಮೀ] ರೂಪಕಗಳಲ್ಲಿ ಒಂದು ಬಗೆ; ಸಕಾರಣವಾದ ಸಾಧಾರಣಧರ್ಮದ ಮೂಲರೂಪಕ: ಕುಲಗಿರಿಯ್ಯೆ ಗೌರವದಿಂ . . . ಆ ಜಲನಿಧಿಯ್ಯೆ ಗುಣ್ಪಿಂದೆಂದಲಸದೆ ಪೇಟ್ಲಿಂತು ಹೇತುರೂಪಕವಿಧಿಯಂ (ಕವಿರಾ. ೩-೨೦); ಹೇತುರೂಪಕಕ್ಕೆ - ಮೃಗರಾಜಂ ವಿಕ್ರಮದಿಂ ಖಗರಾಜಂ ಸ್ವಾಮಿಭಕ್ತಿಯಿಂ ನಗರಾಜಂ ಮಿಗಿಲಾದ ಪೆಂಪಿನಿಂ ಪನ್ನಗರಾಜಂ ಧೈರ್ಯಗುಣದಿನಾಹವಸಿಂಹಂ (ಕಾವ್ಯಾವ. ೬೯೩). [ಸಂ.]

ಹೇತೂಕ್ತಿ (ನಾ). [ಕಾವ್ಯಮೀ] "ಕಾರಣವಾಗಿರುವ ಅಲಂಕಾರವು ಹೇತೂಕ್ತಿ. ಯಾವುದಾದರೂ ಒಂದು ಕಾರ್ಯಕ್ಕೆ, ಪರಿಣಾಮಕ್ಕೆ ಅಥವಾ ಫಲಕ್ಕೆ ಕಾವ್ಯೋಚಿತವಾಗಿ ಕಾರಣವನ್ನು ಕಲ್ಪಿಸಿ ಹೇಳುವುದು" (ಕವಿರಾ. ೬೫೫); ಕಾರಣಮಾಗಿರ್ಪುದಳಂಕಾರಂ ಹೇತೂಕ್ತಿಯೆಂಬುದದು ತಾಂ ನಾನಾಕಾರಂ ಜ್ಞಾಪಕಸದಳಂಕಾರ ಸುಮಾರ್ಗಪ್ರಯೋಗಮಿಾ ತೆಱನದಱಾ (ಕವಿರಾ. ೩-೧೬೩). 'ಹೇತ್ವಲಂಕಾರ' ಪರಾ. [ಸಂ.]

ಹೇತೂತ್ಪ್ರೇಕ್ಷೆ (ನಾ). [ಕಾವ್ಯಮೀ] ಕಾರಣವಲ್ಲದುದನ್ನು ಕಾರಣವಾಗಿ ಕಲ್ಪಿಸಿ ಹೇಳುವ ಒಂದು ಉತ್ಪ್ರೇಕ್ಷಾಲಂಕಾರ: "ರಕ್ತವಾದವೊ ಭೂಮಿಯಲ್ಲಡಿಯಿಡೆ" ಎಂಬ ಪದಕ್ಕೆ ಸ್ವತಃ ಸಿದ್ಧವಾದ ಚರಣಗಳ ರಕ್ತತ್ವದಲ್ಲಿ ಪಾದವಿನ್ಯಾಸವು ಹೇತುವಲ್ಲ ಆ ರಕ್ತತ್ವ ಹೇತುತ್ವರೂಪದಿಂದ ಸಂಭಾವನೆ ಮಾಡಲ್ಕೆ ಹೇತೂತ್ಪ್ರೇಕ್ಷಾ (ಕುವಲ. ೨೮). [ಸಂ. ಹೇತೂತ್ಪ್ರೇಕ್ಷಾ]

ಹೇತೂಪಮೆ (ನಾ). [ಕಾವ್ಯಮೀ] ಉಪಮಾನ, ಉಪಮೇಯಗಳ ಸಾದೃಶ್ಯಕ್ಕೆ ಕಾರಣಭೂತವಾದ ಸಮಾನಧರ್ಮವನ್ನು ಎತ್ತಿ ತೋರಿಸುವ ಉಪಮೆ: ಸುರಗಿರಿವೋಲ್ ಧೈರ್ಯದಿಂ . . . ಶಶಾಂಕಬೋಲ್ ಬಂಧುರಕಾಂತಿಗುಣದಿನೆಂದಿಂತಿರೆ ಪೇಟ್ಟುದನಱಿದುಕೊಳ್ಗೆ ಹೇತೂಪಮೆಯಂ (ಕವಿರಾ. ೩-೮೫); ಹೇತೂಪಮೆಗೆ: ಪರಿವೃತ್ತತೆಯಿಂ ನುಣ್ಪಿಂ . . . ಪರಿಪಕ್ವತಾಫಳದೊಳ್ ದೊರೆಯೆನಿಸುಗುಮವಳ ಘನಪಯೋಧರಯುಗಳಂ (ಕಾವ್ಯಾವ. ೬೬೮). [ಸಂ. ಹೇತೂಪಮಾ]

ಹೇತ್ವಲಂಕಾರ (ನಾ). = ಹೇತೂಕ್ತಿ: ಕಾರ್ಯದಿಂದ ಕೂಡಿ ಕಾರಣವ ಪೇಳಲ್ಕೆ ಹೇತ್ವಲಂಕಾರವೆನಿಪುದು (ಕುವಲ. ೧೭೯). [ಸಂ.]

ಹೇತ್ವಲಂಕೃತಿ (ನಾ). = ಹೇತೂಕ್ತಿ: ಕಾರಣಮೆ ಹೇತ್ವಲಂಕೃತಿ ಸಾರಂ ದಕ್ಷಿಣಸಮೀರಣಂ ಮಲಯಕುಭೃದ್ಭೂರುಹವನದಿಂ ತೀಡುವ ಕಾರಣದಿಂ ರಾಜಸುಕವಿ ರತ್ನಾಭರಣಾ (ಉದಯಾ. ೯). [ಸಂ.]

ಹೇತ್ವಾಕ್ಷೇಪ (ನಾ). [ಕಾವ್ಯಮೀ] ಕಾರಣದೊಡನೆ ಕೂಡಿರುವ ಒಂದು ಬಗೆಯ ಆಕ್ಷೇಪಾಲಂಕಾರ: ಮಾನಧನಾ ಪೊಗೞಿಸಲೇಂ ದಾನಿಯೆ ನೀನುಂತೆ ನಿನ್ನ ಕಸವರಮೆಂದುಂ ದೀನಾನಾಥರ ಕೆಯ್ಯದು ದಾನಿಯದೆಂತೆಂಬುದಿಂತು ಹೇತ್ವಾಕ್ಷೇಪಂ (ಕವಿರಾ. ೩-೧೦೫). [ಸಂ.]

ಹೇತ್ವಾಭಾಸ (ನಾ). = ಹೇತುದೋಷ: ಹೇತುವಿಗೆ ಐದಂಶಗಳಿರಬೇಕೆಂದು ನಿರ್ಣಯಿಸಿರುವರು. ಇಂತಹ ಐದು ಅಂಶಗಳಲ್ಲಿ ಯಾವುದೊಂದಂಶವು ಕಡಮೆಯಾದರೂ ಹೇತ್ವಾಭಾಸವೆಂದು ಹೆಸರು (ಹಿಂದಸಾ. ೧೪೧); ಯಾವಾಗಲೂ ಉಪಾಯಗಳಿಗೆ ಗಮನ ಮೊದಲು; ಆದರೆ ಉಪೇಯದ ಲಾಭವೇ ಗುರಿ. ಆದ್ದರಿಂದ ಉಪಾಯಗಳು ಅಪ್ರಧಾನವೆಂದೇ ಆಗುತ್ತದೆ. ಅವನ್ನು ಪ್ರಧಾನವೆನ್ನುವುದು 'ವಿರುದ್ಧ'ವೆಂಬ ಹೇತ್ವಾಭಾಸ (fallacy) (ಧ್ವನ್ಯಾಲೋ. ೨೩ ಅಡಿಟಿ). [ಸಂ.]

ಹೇದಂಡ (ನಾ). (?): ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾರಚನೆಗಳಿಂದ ಮಾತಿನ ಮಾಲೆಯ ಎಷ್ಟು ನುಡಿದಡೇನು ಹೇ[ಪಾಶಾಂ. ಹೆ] ದಂಡದಂತೆ ಮೃತಘಟದಂತೆ ಸಿಥಿಳಫಳದಂತೆ ಅದಾರಿಗೆ ಯೋಗ್ಯ (ಸಕವ. ಕ. II, ೫೫೩-೧೫೬೬). [?]

ಹೇದೆ 'ಪೇತ' ನೋ.

ಹೇನು 'ಪೇನ್' ನೋ.

ಹೇನುಕುರುವಿನ ಗಿಡ (ನಾ). ಒಂದು ಬಗೆಯ ಸಸ್ಯ: ಹೇನುಕುರುವಿನ ಗಿಡ, ಪುರುಚಲಿ ಗಿಡ, ಪುಲ್ಲಾರೆ (ಮೃಚಿಗಿ. ೫೫-೧೧೦೬). [? + ಗಿಡ (< ಗಿಡು)]

ಹೇಪ, ಹ್ಯಾಪ (ನಾ). ಬುದ್ಧಿಯಿಲ್ಲದವನು; ತಿಳಿಗೇಡಿ; ಮಂಕ: ಅವನು ಇದುವರೆಗೆ ಯಾರನ್ನೂ ಇಟ್ಟುಕೊಂಡವನಲ್ಲ . . . ಹಾಗಾದರೆ ಹೇಪನಾಗಿರಬೇಕು (ಮುಸುಗ. ೧೨೧). **ಹ್ಯಾಪ:** ಹಣ್ಣುಮೊಗ್ಗುಗಳನ್ನು ಉತ್ತರೀಯದ ತುದಿಯಲ್ಲಿ ಕಟ್ಟಿಕೊಂಡು ಹ್ಯಾಪನಂತೆ ತಿರುಗುತ್ತ (ನಿಬಂಧ. II, ೧೯); ಆಸ್ತಿಪಾಸ್ತಿಯೆಲ್ಲಾ ಹ್ಯಾಪಕಿಟ್ಟಿಂದು (ಮಾಮರಾ. ೧೫೭). [?]

ಹೇಮ$_1$ (ನಾ). ೧. ಚಿನ್ನ; ಬಂಗಾರ: ಅಂಬರಚರಾಂಗನಾಕರತಲಪಲ್ಲವೋಲ್ಲಸಿತ ಹೇಮಚಾಮರಸವನವಿಲೋಲದುಕೂಲವಸನಪರಿವೃತಪಂಚರತ್ನಪ್ರಭಾಭಾಸುರ ವಿವಿಧ ವಿಭೂಷಣವಿರಚಿತಸುರಶರಾಸನನೊಡ್ಡೋಲಂಗಗೊಟ್ಟಿರೆ (ಆದಿಪು. ೨-೨ ವ); ನಿನ್ನ ಮಂದಿರದ ಮೇಲೆರಡು ಯೋಜನದೊಳೆನ್ನಯ ಕೀರ್ತಿಪುರ ಹೇಮವಿರಚಿತದೊಳಿರ ಬೇಹುದೆಂದು ಬೇಡಿದಡದಂ ಕೊಟ್ಟನಂದಗಜೇಶನು (ಹಚಕಾ. ೧೪-೧೫). ೨. ಚಿನ್ನದ ಒಂದು ನಿರ್ದಷ್ಟಪ್ರಮಾಣದ ತೂಕ; ಮಾಷಕ. ೩. ಕಂದು ಅಥವಾ ಕಪ್ಪುಬಣ್ಣದ ಕುದುರೆ: "ಕರಿಯ ವರ್ಣದ ಕುದಿರೆ ಹೇಮನೆಂಬುದು" (ಹಲಾಯು. ೭೪-೨೮೩). ೪. ದತ್ತೂರ; ಉಮ್ಮತ್ತಿ. ೫. ಒಂದು ಬಗೆಯ ಸಸ್ಯ ಮತ್ತು ಅದರ ಹೂವು; ನಾಗಸಂಪಗೆ: ಒಡಗೂಡಿ ಹೇಮ ಗೈರಿಕ ಗುಡ ಸೈಂಧವ ಸರ್ಜಸಿಕ್ಥಕಂ ಗಳನಿಂಬಾಗಡುಗೆ ತಿಳತೈಳದಿಂದಂ ಕಿಡಿಸುಗುಮದು ಬಿಡದೆ ತೊಡೆದೊಡಧರವ್ರಣಮಂ (ಲೋಕೋಪ. ೯-೮೨). ೬. ಚಳಿಗಾಲ; ಮಾಗಿ. ೭. ಹಿಮ; ಮಂಜು. ೮. ನೀರು; ಜಲ. ೯. ನವಗ್ರಹಗಳಲ್ಲಿ ಒಂದು; ಬುಧ. [ಸಂ. ಹೇಮನ್]

ಹೇಮ$_2$ (ನಾ). "ಹೇವ, ಜಿಗುಪ್ಸೆ" (ಹಾಲಾಸ್ಯ. ಕೋಶ) : ದಾರಿಯನಲ್ಲಿ ತಾಂ ಹೇಮಮಾಗಿ ಪುಡುಂಕಿ ಕಾಣದೆ ಸುತ್ತುತಿರ್ಪಿನವಾಗಳಾ ಸೋಮಸುಂದರ ಹರ್ಮ್ಯಮಿಾಕ್ಷಿಸಲಾದುದಾತನ ದಿಟ್ಟಿಗೆ (ಹಾಲಾಸ್ಯ. ೧-೪-೧೧).

[< ಹೇವ. / ℙ ಇಲ್ಲಿ 'ಮ' ಕಾರವು ಪ್ರಾಸಸ್ಥಾನಲ್ಲಿದೆ]

ಹೇಮಂತ (ನಾ). ೧. ಆರು ಋತುಗಳಲ್ಲಿ ಒಂದು; ಮಾರ್ಗಶಿರ ಪುಷ್ಯಮಾಸಗಳು; ಚಳಿಗಾಲ: ಸಮನಿಸೆ ಹೇಮಂತಂ ಶಿಶಿರಮುಂ ಶರತ್ಸಮಯಮಲ್ಲಿ ಬರೆ ಕೊಳ್ಗೆ ವಸಂತಮನಂಬುದರ್ತುಗಾ ಗ್ರೀಷ್ಮಮನಂತೆ ವಿಲೋಮಕಥ್ಯಮಯ ನದ್ಯಯದೊಳ್ (ಜಾತಕಿ. ೨೪-೭); ಹೇಮಂತಂ ಬರಲಿರ್ದನೆಂಬ ಭಯದಿಂದೆಟ್ಟೂ ಶರನ್ನೀರದಸ್ತೋಮಂ ಪೋ ಬರುತಿರ್ದುದೀಗಳೆನಲ್ (ಕುಸುಮಾ. ೬-೪೮). ೨. (ಆಲಂ) ಮುದುಕ; ವೃದ್ಧ: ಮದುವೆಯ ಯೋಚನೆ ಮನದೊಳು ಬಂದಾಗ ಪುರುಷರು ಚೈತ್ರರಾಗುವರು ಮದುವೆಯ ಆದಾಗ ಅವರೆಯ ಬಹು ಬೇಗ ಮುದಿಯಾಗಿ ಹೇಮಂತರಹರು (ಇಂಚಾಪ. ೨೦೪-೭). [ಸಂ.]

ಹೇಮಕಂಕುಷ್ಠ (ನಾ). ಒಂದು ಬಗೆಯ ಔಷಧೀಯಗುಣವುಳ್ಳ ಮಣ್ಣು: "ತಿಕ್ತರೂಢಃ – ಹೇಮಕಂಕುಷ್ಠ" (ಓಷಧಿ. ೬೮). [ಸಂ.]

ಹೇಮಕಂಕೋಷ್ಮ (ನಾ). = ಹೇಮಕಂಕುಷ್ಮ: ''ಕನಕಕ್ಷೀರಿ - ಹೇಮಕಂಕೋಷ್ಮ'' (ಓಷಧಿ. ೨೭). [ಸಂ.]

ಹೇಮಕಾರಕ (ನಾ). ಚಿನ್ನದ ಕೆಲಸ ಮಾಡುವವನು; ಅಕ್ಕಸಾಲೆ: ದೀಕ್ಷಾನಲ ನಿನಾತ್ಮಕನಕಮಲಿನಮನಪೋಹಿಪ ಹೇಮಕಾರಕನುಂ (ಯಶವಿ. ೧೨-೨೬ ವ). [ಸಂ.]

ಹೇಮಕುಂಭ (ನಾ). ಚಿನ್ನದ ಕೊಡ; ಹೊನ್ನಿನ ಕಲಶ: ಕಠಿನಸ್ತನಮಂಡಲ ಮಂಗಜಗೃಹಂ ಪರಮವಿಳಾಸಮೆಂಬುದು ಸುಧಾರಸಮಂ ನೆಜೆ ತುಂಬಿ ಬಯ್ಕೆಯಾಗಿರಿಸಿದ ಹೇಮಕುಂಭದವೊಲೊಪ್ಪಮನಾಳ್ದುದು (ಬಾಧಪು. ೨-೪೨); ಪಾದೋದಕವ ಹೇಮಕುಂಭದೊಳು ತುಂಬಿರಿಸಿ ಸಾದರದಿ ಅಷ್ಟವಿಧದಿಂದ ಪೂಜೆಯ ಮಾಡಿ (ಪ್ರಾಥರಾ. ೧೮-೧೪). [ಸಂ.]

ಹೇಮಕುಕ್ಷಿ (ನಾ). ಹಿರಣ್ಯಗರ್ಭ; ಬ್ರಹ್ಮ: ''ಪಿತಾಮಹಂ ಸ್ವಭು . . . ಹೇಮಕುಕ್ಷಿ ಸುರಜ್ಯೇಷ್ಠಂ ವಿರಂಚಿಯೆನೆ ಬ್ರಹ್ಮನಕ್ಕುಂ'' (ಮಂಗರಾ. ೩-೯). [ಸಂ.]

ಹೇಮಕುತ್ಕೀಳ (ನಾ). ಚಿನ್ನದ ಬೆಟ್ಟ; ಮೇರುಪರ್ವತ: ಮಹಿಮೆವಡೆದಿಂತು ಸೊಗಯಿಸುವ ಹೇಮಕುತ್ಕೀಳದಿಂದೆ ತೆಂಕಣದೆಸೆಯೊಳ್ ಮಹಿಭರತಂ ಷಟ್ಖಂಡಾವಹಮಲ್ಲಿ ಶುಭಾವಹಂ ಎನೀತಾಖಂಡಂ (ಸುಕುಮಾ. ೧-೬೮). [ಸಂ. ಹೇಮಕುತ್ಕೀಲ]

ಹೇಮಕೂಟ (ನಾ). (ಚಿನ್ನದ ಶಿಖರದಿಂದ ಕೂಡಿರುವುದೆಂದು ಭಾವಿಸಲಾದ) ಹಿಮಾಲಯಪರ್ವತದ ಉತ್ತರಭಾಗದಲ್ಲಿರುವ ಪರ್ವತಪಂಕ್ತಿ: ಕಾದಂಬರಿಯೊಲವಿನೊಳಂ ಹೇಮಕೂಟಕ್ಕದೊವ್ಮೊಮ್ಮೆ ವಿಶೇಷಸ್ನೇಹಮಂ ಮಾಡುವನನು ದಿನಮೇಟ್ರಂದು ರಾಜೇಂದ್ರಚಂದ್ರಂ (ಕಾದಂಉ. ೬೨೦); ಹೇಮಕೂಟದ ತುದಿಗೆ ಆ ಮಹಾಗಜವೇಱಿ . . . ಕಾಮನ ಪಿಡಿದು ಬಡಿಯಿತ್ತು (ಮಹಾದೇ. ಬ. ೨೨೦-೨೬); ಇದು ತಪಸ್ಸಿದ್ಧಿಕರವಾದ ಹೇಮಕೂಟವಂಬ ಕಿಂಪುರುಷಪರ್ವತವಲ್ಲವೆ? (ಶಾಕುಂತ. ೧೦೧-೧೬). [ಸಂ.]

ಹೇಮಗರ್ಭ (ನಾ). = ಹೇಮಕುಕ್ಷಿ: ಪ್ರೇಮದಿಂದಂ ತನ್ನ ತಲೆಯಂ ಹೇಮಗರ್ಭಂ ಕಾಯ್ದನೇ ಮದಸಾಮಜಾಸುರನಂ ಮುನಿದು ತಾಂ ಕೊಂದನೇ ಮುನ್ನ (ಬಿಷ್ಣು. ೪೬-೧೪); ಮಿಗೆ ಪರಿವಚ್ಚ ಪೊಚ್ಚಪೊಸಜೊನ್ನದ ಬಲ್ಲಿರಿ ಹೇಮಗರ್ಭನೊಲ್ದುಗಿಸುವ ಪಾದ್ಮದೋಜೆಯನೊಡಂಬಡೆ (ಚಚವಿ. ೬-೨೨). [ಸಂ.]

ಹೇಮಗಿರಿ (ನಾ). = ಹೇಮಕುತ್ಕೀಳ: ಆ ಹೇಮಗಿರಿಯ ನಿಕಟಸಮೂಹದೊಳಿರದೋಡಿದುವು ಪೊನಲ್ಗಳ್ (ಪುಷ್ಪಪು. ೧೧-೪೧). [ಸಂ.]

ಹೇಮಗೈರಿಕ (ನಾ). ಕೆಂಪುಬಣ್ಣದ ಒಂದು ಬಗೆಯ ಔಷಧದ್ರವ್ಯ: ''ರಕ್ತಧಾತು - ಹೇಮಗೈರಿಕ'' (ಓಷಧಿ. ೧೩೪). [ಸಂ.]

ಹೇಮಚೋರ (ನಾ). ೧. ಚಿನ್ನವನ್ನು ಕದಿಯುವವನು. ೨. (ಆಲಂ) ಅಕ್ಕಸಾಲಿಗ: ವ್ಯಾಧನಂತೆ ಜಾಲಗಾರನಂತೆ ಹೇಮಚೋರನಂತೆ ಇಂತೀ ಗಾಹುಗಳ್ಕರಂತೆ ಮಾತಿನಲ್ಲಿ ಬ್ರಹ್ಮವ ನುಡಿದು . . . ಬೇವುತ್ತ ನೋವುತ್ತ ಮತ್ತೆ ಬ್ರಹ್ಮದ ಸುಮ್ಮಾನದ ಸುಖಿಗಳೆಂತಪ್ಪರೊ (ಪಚರ. ೧೦೧-೪೫೦). [ಸಂ.]

ಹೇಮಜಾಳ (ನಾ). ಚಿನ್ನದ ತೋರಣ: ಅರಸಿಯರ್ಕಳುಂ ಗಣಿಕೆಯರ್ಕಳುಂಬೆರಸು ಸುರತ್ನಮಯಮಪ್ಪ ದಿವ್ಯವಿಮಾನಮುಂ ಘಂಟಾಜಾಳ ಮುಕ್ತಾಜಾಳ ಹೇಮಜಾಳಂಗಳಿಂದೊಪ್ಪುವ ವಿಮಾನಮನೇಱಿ . . . ಬರ್ಪನ್ನೆಗಂ (ವಡ್ಡಾರಾ. ೮೩-೨೦). [ಸಂ. ಹೇಮಜಾಲ]

ಹೇಮಣಂಬಿ (ನಾ). ಅರವತ್ತು ಸಂವತ್ಸರಗಳಲ್ಲಿ ಒಂದು; ಹೇವಿಳಂಬಿ: ಹೇಮಣಂಬಿ ಸಂವತ್ಸರದ ಆಸಾಡ ಸು ೧೫ . . . ಮಲೆಯನಾಯಕನವರು ತುಱುವ ಕೊನ್ದು ಹೋಹಲ್ಲಿ (ಎಕ. XI, ಹೊಳಲ್ಕೆ. ೧೩೧-೪; 1237). [< ಸಂ. ಹೇಮಲಂಬ]

ಹೇಮತಾಟಕ (ನಾ). ಅಕ್ಕಸಾಲಿಗ: ಹೇಮದಾಭರಣಮಂ ಮಾಳ್ಪ ನೆವದಿಂ ಕಳುವ ಹೇಮತಾಟಕ [ಪಾಠಾಂ. ತಾಡಕ] ನಂತೆ . . . ಕಾಮಾರಿವೇಷ ನೆವದಿಂದಕೃತ್ಯಕೆ ಪೊಗಲ್ ಶರಣರೊಪ್ಪರ್ (ಪಚಲ. ೧೩-೩೬); ಶಿಲ್ಪಿಗ ಹೇಮತಾಟಕ ಕಾಂಸ್ಯಕೃತ್ಯಕರ . . . ಕೇರಿಗಳರವ ಚಿತ್ರ ಸೆನುತರಸ ನಡೆದ (ಶಂಕದಾ. ೯-೨೮). [ಸಂ.]

ಹೇಮದುಗ್ಧ (ನಾ). ೧. ಹಳದಿಬಣ್ಣದ ರಸವನ್ನುಳ್ಳ ಒಂದು ಬಗೆಯ ಸಸ್ಯ; ಹಾಲುತೊಟ್ಟಿನ ಗಿಡ: ''ಅಕ್ಕಿಹೆಡೆ ಹೇಪುದುಗ್ಪಂ ಚುಕುಳವೆಂದೆನಿಕ್ಕುಂ'' (ಮಂಗರಾ. ೩೯-೨೭). 'ಸ್ವರ್ಣಕ್ಷೀರಿ' ಪರಾ. ೨. ಅತ್ತಿಮರ. [ಸಂ.]

ಹೇಮದುಗ್ಧಕ (ನಾ). = ಹೇಮದುಗ್ಧ ೨. [ಸಂ.]

ಹೇಮದೊಡವು (ನಾ). ಚಿನ್ನದ ಆಭರಣ; ಹೊನ್ನಿನ ಒಡವೆ: ತರುಣಿಯರುಗಳಬ್ಬಣಿಸಿ ಮೈಮ್ಮಸೋಂಕುಲುರು ಹೇಮದೊಡವುಗಳ್ಕಸೆದು ವರರಜವಿಳೆಯೊಳೊಪ್ಪಿತು (ಕಂನಮಿ. ೨೪-೪೮). [ಹೇಮ + ತೊಡವು]

ಹೇಮನಗ (ನಾ). ಚಿನ್ನದ ಬೆಟ್ಟ; ಮೇರುಪರ್ವತ: ನಿರ್ಜರಸ್ತೋಮಲಲಾಮ ಹೇಮನಗಧಾಮ ಜಗತ್ತ್ರಯಸಾರ್ವಭೌಮ (ಶಬಶಂ. ೫-೨೫). 'ರಜತಗಿರಿ' ಪರಾ. [ಸಂ.]

ಹೇಮಪಟ್ಟಕ (ನಾ). ಚಿನ್ನದ ಪೀಠ; ಬಂಗಾರದ ಆಸನ: ವಿಶಾಲಹೇಮಪಟ್ಟಕದೊಳಾತ್ಮಹೃತ್ಪದ್ಮಸದ್ಮೆಯಂ ಸರಸ್ವತಿಯಂ ಪೂಜಾಪೂರ್ವಕಮಧಿವಾಸಿಸಿ (ಆದಿಪು. ೮-೫೮ ವ); ಸುರಕೋಟಿಯುಂ ಕಂಡು ಸೌಧರ್ಮೆಂದ್ರಂ ಜಿನಾಭೀಷೇಕಕ್ಕೆ ನಿಂದಕೃತ್ರಿಮ ಹೇಮಪಟ್ಟಕಾಕಾರದಿಂ ಪವಿತ್ರವಾದವುರಗಿರೀಂದ್ರಕ್ಕೆ ನಡೆಯಿವೆಂದು . . . ಸನ್ನಗೆಯ್ದು (ಶಾಂತಿಪು. ೧೦-೨೩ ವ). [ಸಂ.]

ಹೇಮಪದ್ಮ (ನಾ). ಚಿನ್ನದ ಕಮಲ; ಹೊಂದಾವರೆ: ಮೇದಿನಿಯ ಹಸ್ತವಿಳಾಸದ ಹೇಮಪದ್ಮಮುತ್ತರಕುರುಭೂಮಿಯೆಂದಿನಿತನಲ್ಲದೆ ಬಣ್ಣಿಪನೆಂತು ಬಣ್ಣಿಪೊಂ (ಶಾಂತಿಪು. ೬-೧೨೧). [ಸಂ.]

ಹೇಮಪರ್ವತ (ನಾ). = ಹೇಮನಗ. [ಸಂ.]

ಹೇಮಪುಷ್ಪ (ನಾ). ೧. ಕೋಲುಸಂಪಿಗೆ; ದೊಡ್ಡಸಂಪಿಗೆ. ೨. ನಾಗಸಂಪಿಗೆ; ನಾಗಕೇಸರ: ''ಹೇಮಪುಷ್ಪಂ, ನಾಗಕೇಸರಂ - ಈ ೨ ನಾಗಕೇಸರಂ'' (ಹಲಾಯು. ೩೪-೫೩). ೩. ಅಶೋಕವೃಕ್ಷ. ೪. ಲೋಧ್ರವೃಕ್ಷ. [ಸಂ.]

ಹೇಮಪುಷ್ಪಕ (ನಾ). ೧. = ಹೇಮಪುಷ್ಪ ೧. ೨. = ಹೇಮಪುಷ್ಪ ೪. [ಸಂ.]

ಹೇಮಪುಷ್ಪಿಕೆ (ನಾ). ೧. ಚಿನ್ನದ ಬಣ್ಣದ ಮಲ್ಲಿಗೆ; ಹೊಂಬಣ್ಣದ ಜಾಜಿ. ೨. ಹೊಂಬಣ್ಣದ ಸೇವಂತಿಗೆ: ''ಸೇವಂತಿಗೆ ಹೊಂಬಣ್ಣಮಾದೊಡೆ ಹೇಮಪುಷ್ಪಿಕೆ ಎನಿಸುಗು'' (ನಾಚರಾ. ೬). [ಸಂ. ಹೇಮಪುಷ್ಪಿಕಾ]

ಹೇಮಪ್ರಭ (ನಾ). ಒಂದು ಪೌರಾಣಿಕಪರ್ವತದ ಹೆಸರು: ಶಂಖಕೂಟ ಮಹಾನಗ . . . ಹೇಮಪ್ರಭ ವರಾಹಗಿರಿ ಮಯೂರನಗ ಶೈಲೇಂದ್ರಮೆಂಬ ಹದಿನೇಳು ಕುಲಗೋತ್ರಂಗಳೇ ಪೂರ್ವೋಕ್ತ ಸುಪಾರ್ಶ್ವವೆಂಬ ಕೀಲಕಪರ್ವತಕ್ಕೆ ಬಡಗಣದಿಕ್ಕಿನಲ್ಲಿಹವು (ವಿವೇಶ. ೨೩೧). [ಸಂ. ಹೇಮಪ್ರಭಾ]

ಹೇಮಭೂಧ್ರ (ನಾ). = ಹೇಮನಗ: ಅಭಿಷೇಕಾಮೃತದಿಂ ಹೇಮಭೂಧ್ರಮಂ ಮುನ್ನ ಮುಟುಗಿಸಿದವೋಲಮರಪ್ರಭು ಮುಟುಗಿಸಿದಂ ತದ್ರಾಜಭವನಮಂ ಮತ್ತೆ ಲಲಿತ ನೃತ್ಯಾಮೃತದಿಂ (ಚಂದ್ರಪು. ೧೨-೧೪೫). [ಸಂ.]

ಹೇಮಮಯಿ (ನಾ). ಚಿನ್ನದಿಂದ ಮಾಡಿದ ಪುತ್ಥಳಿ; ಬಂಗಾರದ ಪ್ರತಿಮೆ: ''ನೆಗಟ್ಟುಂ ನಾನಾವಿಧ ಲೋಹಮಯ ಪ್ರತಿಮಾವಳಿಗಳ್ ಹರಿಣಿ ಹೇಮಮಯಿ ತಾನಕ್ಕುಂ'' (ಮಪ್ರತೋ. ೨೦-೧೬). [ಸಂ. ಹೇಮಮಯೀ]

ಹೇಮಮಾಕ್ಷಿಕ (ನಾ). ಚಿನ್ನವು ಸೇರಿದ ಒಂದು ಬಗೆಯ ಸಂಯುಕ್ತಧಾತು: ಹೇಮಾಮಾಕ್ಷಿಕ ತಾಳಕ . . . ಪಾದರಸ ಇವಿಷ್ಟನು ಸಮಾಂಶವಾಗಿ ಎಮ್ಮೆಯ ಹಾಲಿಂದ ಮರ್ದಿಸಿ ಏಳುದಿನ ಮುಖಕ್ಕೆ ಲೇಪವಂ ಮಾಡಲು ಮುಖದ ಕಪ್ಪು ತಿಳಿವದು (ವೈದ್ಯಸಾ. II. ೧೪೭). [ಸಂ.]

ಹೇಮಲಂಬ (ನಾ). ಅರವತ್ತುಸಂವತ್ಸರಗಳಲ್ಲಿ ಮೂವತ್ತೊಂದನೆಯದು: 'ಹೇವಿಳಂಬಿ' ಪರಾ. [ಸಂ.]

ಹೇಮವಸನ (ನಾ). ೧. ಚಿನ್ನದ ಬಣ್ಣದ ಜರತಾರಿವಸ್ತ್ರ; ಪೀತಾಂಬರ. ೨. ಪೀತಾಂಬರವನ್ನು ಧರಿಸಿದವನು; ಕೃಷ್ಣ: ವಸುದೇವಾತ್ಮಜ ವನಮಾಲಿಸರ ಹೇಮವಸನ . . . ಸಲಹೆನ್ನ (ಶತಸಾಂ. ೭೩-೭೧). [ಸಂ.]

ಹೇಮಸರೋಜ (ನಾ). = ಹೇಮಪದ್ಮ: ಹೇಮಸರೋಜದೊಳ್ಕಳಿದು ಮಾಣಿಕಮಂ . . . ಒರ್ವಳುತ್ಪಲಶ್ಯಾಮಳೆ ಮಂಗಳಾಭರಣಭೂಷಿತೆ ತಂದದನೀವುದಂ ಲತಾಕೋಮಳೆ ಕಂಡಳಭ್ಯುದಯಕಾರಣಮಂ ಕನಸಂ ನಿಶಾಂತ್ಯದೊಳ್ (ಮಲ್ಲಿಪು. ೪-೫೬). [ಸಂ.]

ಹೇಮಸ್ತೇಯ (ನಾ). ಚಿನ್ನವನ್ನು ಕದ್ದವನು: ತಸ್ಕರಿಸಿ ಪದಬಂಧಮಂ ರಚಿಸಿ ಲವಣಿಯಿಂದೀ ಕಾವ್ಯವಂ ಮಾಡಲಾನವರ ಕುವರನಲ್ಲವರ ಹೇಮಸ್ತೇಯನೀಶ ಕವಿಸಮಯಕತಿದೂರಸ್ತನು (ವಿಕ್ರೋಪು. ೩-೫). [ಸಂ.]

ಹೇಮಳರೇಖೆ (ನಾ). [ಸಾಮುದ್ರಿ] ಕೈಯ ಮಣಿಕಟ್ಟಿನ ಮೇಲಿರುವ ರೇಖೆ (?): ಮಣಿಬಂಧದಲ್ಲಿ ಹೇಮಳರೇಖೆಯಿರಲು ಆತನು ಬಹು ಅಲಂಕಾರವಂತನಾಗುವನು (ಸಾಮುಲ. ೧೦೨-೧೫). [ಸಂ. ಹೇಮಲರೇಖಾ]

ಹೇಮಾಂಗ (ನಾ). ೧. ಚಿನ್ನದ ಶರೀರ; ಬಂಗಾರದ ದೇಹ. ೨. ಚಿನ್ನದ ಶರೀರವನ್ನು ಹೊಂದಿದವನು. ೩. ಗರುಡ. ೪. ಸಿಂಹ. ೫. ಮೇರುಪರ್ವತ. ೬. ಬ್ರಹ್ಮ. ೭. ವಿಷ್ಣು. [ಸಂ.]

ಹೇಮಾಂಬರ (ನಾ). ಹೊಂಬಣ್ಣದ ರೇಷ್ಮೆವಸ್ತ್ರ; ಪೀತಾಂಬರ: ಹೇಮಾಂಬರದ ಲಲಿತಕಾಂತಿ ಹೊಳಹೊಳೆವ ಸೌದಾಮಿನಿಯೊಲಿರೆ . . . ಕೃಷ್ಣನಂ ಕಂಡು ಪುಳಕಿತನಾದನು (ಚೈಮಿಭಾ. ೨೩-೬೯). [ಸಂ.]

ಹೇಮಾಂಬುಜ (ನಾ). = ಹೇಮಪದ್ಮ: ಅವರ್ದಿಸೆವ ಪುರ್ವುವಂ ನೊಸಲುಮನೊರ್ವಳ್ ಸಮಱುವಮರಿ ಹೇಮಾಂಬುಜದೊಳ್ ಸಮನಿಸಿದ ಶ್ವೇತಪ್ರಸರ ಮನೋಸರಿಸುವ ಚಳೋರ್ಮಿಯಂ ಪೊಲ್ರ್ದಿರ್ಪ್ (ಶಾಂತಿಪು. ೯-೧೦೮); ಹೇಮಾಂಬುಜಮಂ ತರಲುದ್ದಾಮಭುಜಂ ವಿಜಯನಿರದೆ ಪೋದಂ (ನೇಮಿನಾ. ೧೦-೬೩). [ಸಂ.]

ಹೇಮಾಂಬುರುಹಾಸ್ಯೆ (ನಾ). ಹೊಂದಾವರೆಯಂತೆ ಮುಖವುಳ್ಳವಳು; ಸುಂದರಿ: ಅಂಗರಾಜನೊಳಿದಿರ್ಚಿದ ಭಾವನೆ ಪೊಚ್ಚಮಾಗೆ ಹೇಮಾಂಬುರುಹಾಸ್ಯೆ ಸೋಲ್ವುದೆನೆ ಕನ್ನಿಕೆ ಜನ್ಮೆಯನೊತ್ತೆ ಪೋಯ್ತು ಯಾನಂ (ಶಾಂತಿಪು. ೫-೧೧೬).

[ಸಂ. ಹೇಮಾಂಬರುಹಾಸ್ಯಾ (ಹೇಮ + ಅಂಬುರುಹ + ಆಸ್ಯ + -)]

ಹೇಮಾಚಲ, ಹೇಮಾಚಳ (ನಾ). = ಹೇಮನಗ: ಭೂಮಂಡಲಮಂ ತಳದಂ ಕ್ಷೇಮಾಸ್ಪದಮಾಗೆ ನಾಮಮಹಿಮೋನ್ನತಿಯಿಂ ಹೇಮಾಚಲಮಂ ಮೆಚ್ಚಂ ಹೇಮರಥಂ ಶ್ರುತಿಮುಖಂ ಚತುರ್ಮುಖತನಯಂ (ಪಂಡಾಮಾ. ೨-೬೪); ಅಬ್ಜಾಸನಂ ಪ್ರೀತಿ ಕೈಮಿಗೆ . . . ಲಕ್ಷ್ಮೀವಲ್ಲಭಂಗೆತ್ತಿದಾ ಗಗನಚ್ಛತ್ರದ ಹೇಮದಂಡಮೆನಿಸಲ್ ಸಾಲ್ದತ್ತು ಹೇಮಾಚಲಂ (ಜಗವಿ. ೧-೨೫). **ಹೇಮಾಚಳ**: ಗಜೇಂದ್ರಾರಿವರಾಕ್ರಮಂ ಜನನುತಂ ಶ್ರೀಮಾನ ಹೇಮಾಚಳಂ (ಕೊಲ್ಹಾಶಾ. ೧೨-೫; 1165); ಹೇಮಾಚಳಶ್ರೀಶಿಲಾತಳಮಂ ಮಚ್ಚಯುಮಂದು ಮೆಚ್ಚದೆ ಬೃಹದ್ಭಕ್ಷಂ ಮಹಾಪದ್ಮನಾ (ಪುಷ್ಪಪು. ೪-೬೭). [ಸಂ.]

ಹೇಮಾಚಳ 'ಹೇಮಾಚಲ' ನೋ.

ಹೇಮಾದ್ರಿ (ನಾ). = ಹೇಮನಗ: ವಕ್ಕಾರುಣಂ ಸಂಜೆಯಂ ಗೆಲೆ ಪೋಲ್ತತ್ತು ತಳಪ್ರಹಾರಿಯ ಶರಂ ಹೇಮಾದ್ರಿಯಾಕಾರಮಂ (ಕಾವ್ಯಸಾ. ೫೨೫ ಕೂದ್ರಶ); ಆ ಮಂದರದಿಂ ತಂಕಿಣ ಹೇಮಾದ್ರಿಯ ವಾರಿನಿ XXX ನಡುವಣ ಭರತೋರ್ವೀಮಧ್ಯದೊಳಿಪ್ಪ . . . ಕುಂತಳದೇಶಂ (ಕೊಲ್ಹಾಶಾ. ೧೩-೯; 1166). [ಸಂ.]

ಹೇಮಾದ್ರಿಧನ್ವ (ನಾ). ಮೇರುಪರ್ವತವನ್ನು ಬಿಲ್ಲನ್ನಾಗಿ ಉಳ್ಳವನು; ಶಿವ: ಹೇಮಾದ್ರಿಧನ್ವನುತನಾಮಾ . . . ಗೌರೀಮಾನಸೇಷ್ಟಪ್ರದಾ ಮಾರಮದಮರ್ದನ (ಉಪ್ಪದೇ. ೨-೬೯). [ಸಂ. ಹೇಮಾದ್ರಿಧನ್ವನ್]

ಹೇಮಾವತಿ (ನಾ). ಕರ್ನಾಟಕದಲ್ಲಿ ಹರಿಯುವ ಒಂದು ನದಿಯ ಹೆಸರು: ಒಡನೆ ಕಪ್ಪಿನ ಕೌಂಡಿನಿ ಹೇಮಾವತಿವಿಡಿದು ಸಮಸ್ತನದಿಗಳ ಸಡಗರದೊಳಗೊಳಕೊಂಡು ಮುಕ್ತಿಸ್ನಾನಕೆಡೆಯಾಗಿಪಳು ಕಾವೇರಿ (ಕಂನವಿ. ೨-೧೯). [ಸಂ. ಹೇಮಾವತೀ]

ಹೇಮಾಸನ (ನಾ). ಬಂಗಾರದ ಪೀಠ; ಚಿನ್ನದ ಆಸನ: ಕುಮಾರನಂ ಸಾರೆವಂದು ಯಥೋಚಿತಹೇಮಾಸನದೊಳ್ ಕುಳ್ರಿರ್ದು ನಾಭಿರಾಜಂ (ಆದಿಪು. ೮-೮ ವ); ಕಂಡೆರ್ದೆ ಪವ್ವನೆ ಪಾಱಿದತ್ತು ನಿಜನಂದನನಿಲ್ಲದ ಬಲದ ಕೆಲದ ಹೇಮಾಸನಮಂ (ಚಂದ್ರಪು. ೫-೭). [ಸಂ.]

ಹೇಮಾಹೇಮಿ (ನಾ). ಅತಿಸಮರ್ಥ; ಸಾಮರ್ಥ್ಯಶಾಲಿ: ಒಬ್ಬರಲ್ಲಾ ಅಂತಾ ಇಬ್ಬರು ಇದ್ದೀರಿ ಹೇಮಾಹೇಮಿಗಳು! (ಮರಳಿ. ೫೭).

[?/ತೆಲು. ಹೇಮಾಹೇಮಿ = ಹಿರಿಯ, ಶ್ರೇಷ್ಠ]

ಹೇಮಿಸು (ಕ್ರಿ). ನಿಂದಿಸು; ತೆಗಳು; ಮೂದಲಿಸು: ಕಂಡನಾ ಕುರುನೃಪತಿ ಭಟರು ಸರಿವುದನು ಖತಿಗೊಂಡು ನುಡಿದನು . . . ತನ್ನವರ ಕೋವದಿಂ ಹೇ[ಪಾಠಾಂ. ಹೋ]ಮಿಸಿದನು (ತುರಂಗ. ೫೨-೨೩); ನುಡಿದಿರ್ದ ಭಾಷೆಗಂ ತಪ್ಪಲರಿಯದೆ ಶರವ ತೊಡದಿರ್ದ ಕಾರಣಂ ಹೇ [ಪಾಠಾಂ. ನೇ] ಮಿಸಲ್ಮಾದ್ರೀಶಂ (ತುರಂಗ. ೭೦-೫). [ಹೇಮ್ಯ + - ಇಸು]

ಹೇಯ (ಗು). ೧. ಬಿಡಲು ಯೋಗ್ಯವಾದ; ತ್ಯಾಜ್ಯವಾದ: ನಿನ್ನ ಬೆಸಗೊಂಡ ತತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ (ಆದಿಪು. ೧೦-೬೩ ವ). ೨. ಅಲ್ಪವಾದ; ಕ್ಷುದ್ರವಾದ. (ನಾ). ೩. ಬಿಡಲು ಯೋಗ್ಯವಾದುದು; ತ್ಯಜಿಸಲು ಅರ್ಹವಾದುದು: ಹೇಯಂ ಸಾಮ್ರಾಜ್ಯಮುಪಾದೇಯಂ ಪ್ರವ್ರಜ್ಯಮೆಂದು ಮಾಣದೆ ರಾಜ್ಯಶ್ರೀಯಂ ಕೊಟ್ಟಂ ಮುಕ್ತಿಶ್ರೀಯಂ ಬಗೆದರ್ಕಕೀರ್ತಿಗಾಗಳ್ ಭರತಂ (ಆದಿಪು. ೧೭-೬೨); ಭಕ್ತರ ದ್ರವ್ಯವೆನಗೆ ಹೇಯ (ಸರ್ವಜ. ೬೩-೩೩೩). ೪. ಕೀಳಾದುದು; ಕ್ಷುದ್ರವಾದುದು: ಹೇಯಮಾದುದು ತನ್ನ ಬಾಳ್ಕೆ ಪಿತೃವಧೆಯೋೀ ಕಾಯಮಂ ಬಿಡುವೆನೀಗಳೆ (ಚೈಮಿಭಾ. ೨೩-೬೨); ಮನೋರೋಗದಿಂದ ತೊಂದರೆಪಡುವ ಶಿಕ್ಷಕರಲ್ಲಿ . . . ಮಕ್ಕಳನ್ನು ಹೇಯವಾಗಿ ಬೈಯುವುದೂ ದಂಡಿಸುವುದೂ ಮೊದಲಾಗುವುವು (ಶಿಕ್ಷದ. ೬೬೭). ೫. ಕಷ್ಟ; ದುಃಖ; ಅಳಲು: ಹಿಂದೆ ನಾನಾಯೋನಿಯಲ್ಲಿ ಬಂದೆನೆಂಬ ಹೇಯ[ಪಾಠಾಂ. ಹ]ವಿಲ್ಲ (ಬಾಪ್ರ. ೧೭); ಯೌವನವಿಕಳತೆಯಂ ಮುಪ್ಪಿನಾ ಹೇಯಮಂ ಸಾವ ನಿರೋಧಸ್ಕೋವಮುಮಂ ಕಂಡಲಸಿದೆಂ (ರಕ್ಷಾಶ. ೪೨). ೬. ದುಃಖಕ್ಕೆ ಕಾರಣವಾದುದು; ಕಷ್ಟಕ್ಕೆ ಮೂಲವಾದುದು: ಲಲನೆಯರ ಮಾತುಗಳು ನಟನಾವಳಿಗಳುಂ ದೃಷ್ಟಿಗಳ ಭಾವಂಗಳು ಬಱಿಯ ಹೇಯಂಗಳಲ್ಲದೆ ಸೌಖ್ಯತರವಹುದೆ (ಬಾಪ್ರ. ೪೦-೬೭). ೭. ಜುಗುಪ್ಸೆ; ಅಸಹ್ಯ; ಹೇಸಿಕೆ: ಹೇಯಂ ಮಾಯವಾಗೆ ಸತ್ಯಂ ಸತ್ಯಂಗಿಡೆ . . . ಪಾಸಜೆಯೊಳ್ ಕೂಸನಪ್ಪಳಿಸಿ (ಜಗವಿ. ೨-೫೩); ಹೇಯವಿದು ದೈತ್ಯರಿರ ತನು ಪರಕೀಯ್ಯದಶುಚಿಯಶುದ್ಧದಾಗರ (ನಭಾಗ. ೭-೬-೯). ೮. ಲಜ್ಜೆ; ನಾಚಿಕೆ: ಹಡದವ್ವ ಹೇಯ ಇಲ್ಲೇನ ನಿನಗೇಟ (ಕುವಪಾಂ. ೨೫೩); ಆ ನಾಯಕ ಬ್ರಹ್ಮನ್ ಅನುಯಾಯಿಗಳು ನಾವೆಲ್ಲ ಹೇಯವದರೊಳಗೇನೊ (ಮಂಕುಕ. ೬೦೨). ೯. ಬಹುದೂರ; ಬಹಳ ಅಂತರವಿರುವುದು. ೧೦. ಕೋಪ; ಸಿಟ್ಟು. ೧೧. ದೃಷ್ಟಿಗೆ ಗೋಚರವಾದುದು. ೧೨. ಹತ್ತಿರ; ಸಮೀಪ. ೧೩. ಮನೋವಿಕಲ್ಪ; ಚಿತ್ತಚಾಂಚಲ್ಯ. ೧೪. ನಿಮ್ನರ; ಕಠಿಣ: "ದುಃಖಮಾಸನ್ನ ನಿಮ್ನರ ಪ್ರತ್ಯಕ್ಷ ಮನೋವಿಕಲ್ಪಮತಿ ದೂರಂಗಳ್ಗೆ ಹೇಯಾಹ್ಯಯಂ" (ಸಾನಾರ. ೧೩೮). [ಸಂ.]

ಹೇರ್$_1$ 'ಪಿರಿ$_4$' ನೋ.

ಹೇರ್$_2$ 'ಪೇಱು$_2$' ನೋ.

ಹೇರ (ನಾ). ಚಾರ; ಸೇವಕ: 'ಗುಪ್ತಹೇರ' ಪರಾ. [< ಸಂ. ಹೇರಕ]

ಹೇರಂಡ (ನಾ). ಹರಳುಗಿಡ; ಪೆಡಲದ ಗಿಡ: ಹೇರಂಡದ ಬಿತ್ತವ ತುಳಿದು ವಾರಿಯ ಕಲಸಿ ಬೇಯಿಸಿದಲ್ಲಿ ವಾರಿ ಬೇಱೆ ತಾ ಬೇಱಾದ ಭೇದವೆ ಬಲ್ಲರೆ ಇಷ್ಟಲಿಂಗ ಸಂಬಂಧಿ (ವೀಸಾಮಾ. ೧೩೦-೫೦೫): ಹೇರಂಡದ ಫಟ ಫಲವ ಗ್ರಹಿಸಿ ಫಲ ಪಕ್ಕಕ್ಕೆ ಬಂದಲ್ಲಿ ಭಿನ್ನವಾಗುತಲೆ ಬಿಣ್ಣುವ ತೆಱದಂತೆ (ಸಕಪ. ಕ. ೩. ೧೯-೪೬). [< ಸಂ. ಏರಂಡ]

ಹೇರಂಬ (ನಾ). ೧. ಗಣಪತಿ; ವಿನಾಯಕ: "ಹೇರಂಬಃ, ಲಂಬೋದರಃ . . . ಏಳ್ನೆರಾಜಃ - ಈ ೯ ಬೆನಕನ ಪೆಸರ್" (ಹಲಾಯು. ೪-೧೯); ಇಂದುಶಿಲೆಮಂಟಪದಿ ಹೇರಂಬ ರೋದಿಸಲ್ ಕಂದ ಬಾಬಾ ಎನಲ್ (ಭಾವಚಿಂ. ೩-೧); ಹೇರಂಬನಾದಿ ಯಾಗಿರ್ಪ ನಾನಾಪ್ರಮಥವೀರರೆಲ್ಲಂ ಶಾಬರವನುಳಿದು ನಿಜರೂಪಿನಿಂ ಹರನ ಬಳಸಿರಲ್ಕೆ (ಚಿಬಪು. ೫೩-೬೧). ೨. ಎಮ್ಮೆ. [ಸಂ.]

ಹೇರಂಬಜನಕ (ನಾ). ಗಣಪತಿಯ ತಂದೆ; ಶಿವ: ತ್ರ್ಯಂಬಕ ಜಯಜಯ . . . ಹೇರಂಬಜನಕ ಜಿತಕುಸುಮಶರಾ (ಶಬಶಂ. ೪-೧೦೨); ಕುಂಭಸಂಭವ ಚಂಡಿಕಾಧವ ಸ್ಕಂದಹೇರಂಬಜನಕಾಂಬುಜಾರಿ (ವಿಕ್ರೋಪು. ೧-೫). [ಸಂ.]

ಹೇರಂಬಪಿತ (ನಾ). = ಹೇರಂಬಜನಕ: ಹೇರಂಬಪಿತನಂ ಪ್ರದಕ್ಷಿಣಗೆಯ್ದವಂ ಗಲ್ಲದೇ . . . ಸೌಖ್ಯವನ್ಯರ್ಗೆ ದೊರೆಯಲಹುದೇ (ಗುಶುಚಾ. ೭-೯೭).

[ಸಂ. ಹೇರಂಬಪಿತೃ]

ಹೇರಂಬು (ನಾ). ನಿಡಿದಾದ ಬಾಣ; ದೊಡ್ಡ ಸರಳು: ಹೇಱಿದ ಹೇರಂಬುಗಳನಿಕ್ಕಡಿ ಮಾಡಿ (ಮೋಹತ. ೩೮-೪೭). [ಹೇರ್$_1$ (< ಪಿರಿದು$_1$) + ಅಂಬು$_2$]

ಹೇರಕ (ನಾ). ಗೂಢಚಾರ; ಬೇಹುಗಾರ. [ಸಂ.]

ಹೇರಡವಿ 'ಪೇರಡವಿ' ನೋ.

ಹೇರಣಿ (ನಾ). ದೊಡ್ಡಸೈನ್ಯ: ವನಿತೆಯರಿರ್ದ್ದರ್ . . . ಕಾಮನಂಬು ಕಾಮನ ಧನು ಕಾಮನಿರ್ಪ್ಪ ಕಾಮನ ಹೇರಣಿ ಕಾಮಪಾಶ[ಮಾ] ನೆನೆಯಿಪ ಕಾಮಮಂತ್ರಮೆನೆ (ಸೌಂದ. XVIII. ೨೯೬-೫೫; 1188). [< ಪೇರಣಿ$_1$]

ಹೇರಣಿಲ್ 'ಪೇರಣಿಲ್' ನೋ.

ಹೇರಣಿಲೆ 'ಪೇರಣಿಲೆ' ನೋ.

ಹೇರಳ 'ಹೇರಾಳ$_1$' ನೋ.

ಹೇರಳೆ 'ಪೇರೀಳೆ' ನೋ.

ಹೇರಱಿಕೆ 'ಪೇರಱಿಕೆ' ನೋ.

ಹೇರಾಚ (ನಾ). ಒಂದು ಬಗೆಯ ಮರ: "ಕುದ್ದಾಲಕಃ - ಹೇರಾಚ" (ಓಷಧಿ. ೩೬); "ಚರ್ಮರಿಕ - ಹೇರಾಚ, ಕಂಚಿವಾಳ" (ಓಷಧಿ. ೫೫). [?]

ಹೇರಾಟ 'ಹೇಱೂಟ' ನೋ.

ಹೇರಾನಂದ 'ಪೇರಾನಂದ' ನೋ.

ಹೇರಾನೆ 'ಪೇರಾನೆ' ನೋ.

ಹೇರಾಲ 'ಪೇರಾಲ' ನೋ.

ಹೇರಾಸಡಿ (ನಾ). ದೊಡ್ಡಜಾತಿಯ ಶತಾವರಿಗಿಡ: "ತುಂಗಿನೀ - ಹೇರಾಸಡಿ" (ಓಷಧಿ. ೭೧). [ಹೇರ್$_1$ (< ಪಿರಿದು$_1$) + ಆಸಡಿ]

ಹೇರಾಸಿ (ನಾ). ದೊಡ್ಡ ರಾಶಿ; ಒಟ್ಟಿಲು: ಕತ್ತಲೆಯ ಸೂರ್ಯನನೊತ್ತಿ ತಹ ದಿನವಾಯ್ತಲಾ (ಕುವ್ಯಾಧ್ರೋ. ೨-೬೯). [ಹೇರ್$_1$ (< ಪಿರಿದು$_1$) + ರಾಸಿ$_2$]

ಹೇರಾಸೆ 'ಪೇರಾಸೆ' ನೋ.

ಹೇರಾಳ$_1$, ಪೇರಾಳ$_1$, ಹೇರಳ (ಗು). ೧. ಅಧಿಕವಾದ; ಅತಿಶಯವಾದ: ಹೊತ್ತಿತೆದೆ ಹೇರಾಳತಮದಲಿ ಕೆತ್ತಿದುವು ಮೀಸೆಗಳು (ಕುವ್ಯಾಸ. ೮-೧೨); ಪೌರುಷಾಂಗದ ನಿರತಿಶಯವನು ನೋಡು ನೀನೆನುತುರುಪರಾಕ್ರಮಿ ಹೆಚ್ಚಿದನು ಹೇರಾಳರೋಷದಲಿ (ತೊರಾ. ೪-೧೦-೨೬); ನಿನಗೆ ಕೇಳಾರಂಭ ಬೇಡೆಂದು ವಿಘ್ನೇಶ ಹೇರಾಳಂಬ ಕಱೆದು ಬೊಬ್ಬಿಱಿದ (ಮೋಪತ. ೩೮-೪೮). (ನಾ). ೨. ಆಧಿಕ್ಯ; ಹೆಚ್ಚಳ: ಇಂದು ಏನುವ ನಮಗೆ ತಾರದೆ ಬಂದ ಹೇರಾಳದ ಕಡವರಂ ಬಂದುದದು ತಾನೆತ್ತ ಹೋಯಿತು (ಬಸಪು. ೨೨-೩೩); ಬಿರಿದ ಬತ್ತಳಿಕೆಗಳ ಸೀಳಿದ ಹರಿಗೆಗಳ ಹೇರಾಳದಲಿ ರಂಜಿಸಿತು ರಣಭೂಮಿ (ಕುವ್ಯಾಕ. ೧೫-೩೨); ಸೈನಿಕರಿಗೆ ಹೇರಾಳವಾದ ಧನವನ್ನು ವಸ್ತ್ರಾಭರಣ ಗಳನ್ನು ಕೊಟ್ಟು ಹುರಿದುಂಬಿಸಿದನು (ಶ್ರೀರಾಯ. ೧೨೪). ೩. ಶೌರ್ಯಾಡಂಬರ; ವಿಜೃಂಭಣೆ: ಹೇರಾಳದಲಿ ಹೊಕ್ಕೆಚ್ಚನಾ ಪಾರ್ಥ (ಕುವ್ಯಾರ್ಜೂ. ೧-೬೯); ರಾಯನ ಬಲದ ಮನ್ನೆಯರ ಪಾಯಿದಳದ ಹೇರಾಳವನಂದಾ ರಾಯಕುವರ ನೋಡಿದನು (ಕುರಾಸಾಂ. ೧೩-೫೧). Δ **ಹೇರಾಳ$_1$**: ೨. ಸುಭಟರ ಪೆಣದ ಪೇರಾಳದಿಂ [ಪಾಶಾಂ. ಳಿಂದ] ಭೀಕರಮಾದುದಾ ರಣಭೂಮಿ ನೋಳ್ಪರ ಕಣ್ಗೆ (ಕುರಾಸಾಂ. ೧೨-೮೪). **ಹೇರಳ**: ೨. ನಿನಗೆ ಹೇರಳವಾಗಿ ಮುನಿಯೆ ತಿಳಿಪುವನೆ ಜಾಣಂ (ಚಟಪು. ೧೦-೫೨); ಸಕಲ ಭೂಮಂಡಲವನ್ನು ಜಯಿಸಿ . . . ಹೇರಳವಾದ ಧನಗಳನ್ನು ಸಂಪಾದಿಸಿದೆನು (ಕೃವಾಸ. ೫೮). 'ಪಿರಿದು$_1$', 'ಹೆಚ್ಚಳ' ಪರಾ.

[ದೇ. ॥ ತಮಿ. ಏರಾಳಮ್; ತುಳು ಹೇರಳ; ತೆಲು. ಏರಾಳ]

ಹೇರಾಳ$_2$ (ಅ). ಹೆಚ್ಚಾಗಿ; ಅಧಿಕವಾಗಿ; ಅತಿಶಯವಾಗಿ: ಹೇರಾಳ ಉಣಲುಡಲುಳ್ಳವರ ಕೊಡಲುಳ್ಳವರಿಗೆಱಿಗಿ ಬಾಳು (ಬಸಪು. ೨೩-೩೮); ಮೊಗದೋಱುಗಳ ಪೂರಾಯಘಾಯದ ತಾಱುಥಟ್ಟಿನ ಹೆಣನ ಮೆದೆ ಹೇರಾಳ ರಂಜಿಸಿತು (ಕುವ್ಯಾರ್ಜೂ. ೧೦ ೬); ಕಂತುಕೇಳಿಯನೊಲಿದಿತ್ತು ಸಂತಸವನು ಪುಟ್ಟಿಸಿ ಹಣವನು ಹೇರಾಳೋರಂತೆ ತೆಗೆದಳವನಿಂದ (ಕಂನವಿ. ೨-೧೦೬). [< ಹೇರಾಳ$_1$]

ಹೇರಾಳಿಸು (ಕ್ರಿ). ಅಧಿಕವಾಗು; ಮಿತಿಮೀರು: ರುಧಿರದ ಹರಹು ಹೇರಾಳಿಸಿತು (ಕುವ್ಯಾಭೀ. ೪-೧೬); ಕಲಿಶಲ್ಯ . . . ರಥವೇಱಿದನು ನೆಲ ಹಿಳಿಯೆ ಹೇರಾಳಿಸಿತು ಬಹುವಿಧವಾದ್ಯನಿರ್ಘೋಷ (ಕುವ್ಯಾಕ. ೮-೨೪). [ಹೇರಾಳ$_1$ + - ಇಸು$_3$]

ಹೇರಾಳು 'ಪೇರಾಳ್' ನೋ.

ಹೇರಿಕ (ನಾ). = ಹೇರಕ: "ಯಥಾರ್ಥವರ್ಣಃ, ಮಂತ್ರಜ್ಞಃ, ಸ್ವಶಃ, ಹೇರಿಕಃ - ಈ ೪ ಹೇರಿಗಂ" (ಹಲಾಯು. ೭೦-೨೭೧). [ಸಂ.]

ಹೇರಿಗ (ನಾ). = ಹೇರಕ: "ಯಥಾರ್ಥವರ್ಣಃ, ಮಂತ್ರಜ್ಞಃ, ಸ್ವಶಃ, ಹೇರಿಕಃ - ಈ ೪ ಹೇರಿಗಂ" (ಹಲಾಯು. ೭೦-೨೭೧); ಹೇರಿಗ ಲಾಳ ಸಂಧಿವಿಗ್ರಹದ ಮಹಾಪದವಿಯ ಸಿರಿಕರಣದ . . . ಕೇಶವದೇವಂ (ಎಗ. XVI. ೪೭-೨೧; 1147); ಚರರಿಂ ಹೇರಿಗರಿಂ ಸ್ವಕೀಯ ಪರಕೀಯ ಪ್ರಾಜ್ಞಮಂ ರಾಜ್ಯಮಂ ಪರಿಕಿಪ್ಪಂತುಟೆ (ಅನಂಪು. ೬-೬೭); ಹೇರಿಗರು ಸೇನಬೋವರು ಮಂತ್ರಜೀವಿಗಳು . . . ಬಹು ಸೇವಕರಿರ್ದರಲ್ಲಲ್ಲಿ (ಭರಚ. ೧-೬೫). [< ಸಂ. ಹೇರಿಕ]

ಹೇರಿಗಿತ್ತಿ (ನಾ). ಗೂಢಚಾರಿಣಿ; ಬೇಹುಗಾತಿ: ಕುಱಿತ ತಾಣದೊಳು ತವಕದೆ ಜೋಡರೊಳ್ಪೆರೆವ ಹರಳೆಗಿತ್ತಿಯರು ಮದನನ ಹೇರಿಗಿತ್ತಿಯರು ಕಾಣಿಸಿದರು (ಸೌಂದಪು. ೧೭-೪೬). [ಹೇರಿಗ + - ಇತ್ತಿ]

ಹೇರಿಜೆ (ನಾ). ಒಂದು ಬಗೆಯ ಮರ: ಹೇರಿಜೆಯೆಲಚಿ ತಂಡಸಿ ಮುಳ್ಳುಬೇಲಿಗಳ್ ಸೇರಿ ಮುಟ್ಟಿಹುವಾಗಸವನು (ಕಂನವಿ. ೧೮-೩೫). [?]

ಹೇರಿಟ್ಟಿ 'ಪೇರಿಟ್ಟಿ' ನೋ.

ಹೇರಿಲ್ (ನಾ). [ಗಣಿತ] (?): ಧಾರುಣಿಯ ನಾಲ್ಕು ಭುಜಗಳು ಸೇರದೆ ಕಿಱಿದಾಗಿ ಬೇಱೆ ಹೋಗಿಹ ಕೆಯ್ಯಂತಾರ್ಕೆಯೆ ಹೇರಿಲೆನಿಪುದು (ವ್ಯವಹಾ. ಕ್ಷೇತ್ರ. ೧೫). [?]

ಹೇರಿಸು 'ಪೇಱಿಸು' ನೋ.

ಹೇರಿಳೆ 'ಪೇರೀಳೆ' ನೋ.

ಹೇರೀಚಲು (ನಾ). ದೊಡ್ಡ ಜಾತಿಯ ಈಚಲುಮರ: ನೆಲದಾಳ್ ದಾಗುಡಿ ಹೇರೀಚಲು . . . ಸತಕ್ರಪಾನಂ ವಿಷಹಂ (ಖಮದ. ೫-೯೬).

[ಹೇರ್$_1$ (< ಪಿರಿದು$_1$) + ಈಚಲು$_1$ (< ಈಂಚಿಲ್)]

ಹೇರೀಟಿ 'ಪೇರಿಟ್ಟಿ' ನೋ.

ಹೇರೀಳೆ 'ಪೇರೀಳೆ' ನೋ.

ಹೇರು$_1$ 'ಪೇಱು$_1$' ನೋ.

ಹೇರು$_2$ 'ಪೇಱು$_2$' ನೋ.

ಹೇರುಕಾರ 'ಹೇಱುಕಾಱ' ನೋ.

ಹೇರುಡು 'ಪೇರುಡು' ನೋ.

ಹೇರುದ್ದು (ನಾ). ಒಂದು ಬಗೆಯ ದಪ್ಪಜಾತಿಯ ಉದ್ದು: "ರಾಜಮಾಷಃ - ಅಲಸಂದೆ, ಹೇರುದ್ದು" (ಓಷಧಿ. ೧೩೮).

[ಹೇರ್$_1$ (< ಪಿರಿದು$_1$) + ಉದ್ದು$_2$ (< ಉಱ್ದು)]

ಹೇರುರ 'ಪೇರುರ' ನೋ.

ಹೇರೂರ್ 'ಪೇರೂರ್' ನೋ.

ಹೇರೆಕೈ (ನಾ). ಎಕ್ಕೆಗಿಡದಲ್ಲಿ ಒಂದು ಬಗೆ; ದೊಡ್ಡಎಕ್ಕೆ: ಹೆಮ್ಮಿಟಲಿ ಹೇರೆಕೈ ರಮ್ಯದ ರಸದಾಳಿ ಒಮ್ಮಾನದರ್ಧ ಉದಕಕಷಾಯದಿಂ ಕೆಮ್ಮೆಲ್ಲ ಕೆಡುಗು (ಸರ್ವಜ್ಞ. ೨೦೨೪). [ಹೇರ್$_1$ (< ಪಿರಿದು$_1$) + ಎಕ್ಕೆ$_2$]

ಹೇರೆತ್ತು (ನಾ). ಭಾರವನ್ನು ಹೊರುವ ಎತ್ತು: ಹೇರೆತ್ತುಗಳ ಮೇಲೋ ಕತ್ತೆಗಳ ಮೇಲೋ ದಿನಸುಗಳನ್ನು ದೂರದೂರ ಸಾಗಿಸುವುದು ಹಿಂದಿನ ರೂಢಿಯಾಗಿತ್ತು (ಬಾಲಪ್ರ. I. ೨೭೪); ಹೇರೆತ್ತಿನ ವ್ಯಾಪಾರಮಾಡುತ್ತಿದ್ದ ಹೆಂಗಸೊಬ್ಬಳು . . . ಹರಕೆ ಮಾಡಿಕೊಂಡಳು (ನನ್ನೂರು. ೧). [ಹೇರು$_1$ (< ಪೇಱು$_1$) + ಎತ್ತು$_2$ (< ಎಱ್ತು$_1$)]

ಹೇರೊಡಲ್ 'ಪೇರೊಡಲ್' ನೋ.

ಹೇರೊಡಲ (ನಾ). ದೊಡ್ಡ ಹೊಟ್ಟೆಯುಳ್ಳವನು; ಗಣಪತಿ: ಕಡುಕರುಣಿ ನೀನೆಂದರಿತು ಹೇರೊಡಲ ನಮಿಸುವೆ ನಿನ್ನಡಿಗೆ (ಜಗದಾ. ೨೮೬).

[ಹೇರೊಡಲ್ (< ಪೇರೊಡಲ್) + - ಅ$_7$]

ಹೇರೊಡಲು 'ಪೇರೊಡಲ್' ನೋ.

ಹೇರೊಬ್ಬೆ 'ಪೇರೊಟ್ಟೆ' ನೋ.

ಹೇರೊಲೆ (ನಾ). ದೊಡ್ಡ ಒಲೆ; ಭಾರಿಯಾದ ಒಲೆ: ಹೇರೊಲೆಗೆ ಶಾಶ್ವತವಾಗಿ ಹೂಳಿಬಿಟ್ಟದ್ದ ಭಾರಿಯ ಹಂಡೆಯಲ್ಲಿ . . . ಮುರು . . . ಕುದಿಯುತ್ತಿತ್ತು (ಮಲೆಮ. ೮೪೯). [ಹೇರ್$_1$ (< ಪಿರಿದು$_1$) + ಒಲೆ$_1$]

ಹೇರೌಡಲ (ನಾ). ದೊಡ್ಡಜಾತಿಯ ಹರಳುಗಿಡ: "ಮಹೇರಂಡಃ - ಹೇರೌಡಲ" (ಓಷಧಿ. ೧೧೮). [ಹೇರ್$_1$ (< ಪಿರಿದು$_1$) + ಔಡಲ (< ಅವುದಲ)]

ಹೇಲನ, ಹೇಳನ (ನಾ). ೧. ತಿರಸ್ಕಾರ; ಅನಾದರ; ಅಲ್ಲಗಳೆಯುವಿಕೆ. ೨. ಶೃಂಗಾರಚೇಷ್ಟೆ ,– ವಿಲಾಸ. **ಹೇಳನ:** ೧. ಕೋಳುಹೋದುದು ನಿಮ್ಮ ಶಿರ ಮುನಿಹೇಳನಕೆ ಕಾಲೂಱಿದಡೆ ಸುರಪಾಲಪದವಿಯಲಹಿತರವಧರಿಸಿದೆನು ತಾನು (ನಿಭಾಗ. ೮-೬-೧೨); ಕೊಟ್ಟುದ ಕೊಂಡುದ ಹೇಳನ ಮಾಡೊ ಕನಿಷ್ಠನ ಸೇರಿದರೇನುಂಟು (ಪುರಂದ. ೧-೧೨೪-೨); ದೊರೆಯು . . . ಅವಳ ನಡತೆಯನ್ನು ಹೇಳನದಲ್ಲಿಯೂ ಹಾಸ್ಯದಲ್ಲಿಯೂ ಕೊನೆಗಾಣಿಸುತಾ ಇದ್ದರು (ಚೆಚಮಾ. ೧೯). ೩. ಅಪಹಾಸ್ಯ; ಅಣಕ; ಚೇಷ್ಟೆ: ದೃಷ್ಟಿಚುಕ್ಕೆಯದೊಂದನೆಲ್ಲ ಚೆಂದಂಗಳ್ಗಮಿಟ್ಟಿಹನು ಪರಮೇಷ್ಠಿ, ಶಶಿಗೆ ಮಶಿಯವೊಲು ಗುಟ್ಟೇನೊ? ರಕ್ಷೆಯೋ? ಸಿಂಗರವೊ? ಹೇಳನವೊ? ಮಷ್ಟು ಸೃಷ್ಟಿಗೆ ಬೊಟ್ಟು (ಮಂಕಿಕ. ೪೪೭). [ಸಂ.]

ಹೇಲಾಗತಿ (ನಾ). ಲೀಲೆ; ವಿನೋದ; ವಿಲಾಸ: ದ್ಯೋತಾಲಂಕೃತಕೌಸ್ತುಭನಂ ಹೇ[ಪಾಠಾಂ. ಲೀ]ಲಾಗತಿರುಚಿರಪೀತಪಟನಂ ಕಂಡಳ್ (ಜಗಿ. ೧೧-೩೦). [ಸಂ.]

ಹೇಲಾಸಾಧ್ಯ, ಹೇಳಾಸಾಧ್ಯ (ನಾ). ೧. (ಆಟದಂತೆ) ಅನಾಯಾಸವಾಗಿ ಜಯಿಸಲು ಸಾಧ್ಯನಾದವನು: ಅಣುವಂ ಬಂದು ವನಭಂಗಮುಮಂ ಲಂಕಾದಹನಮುಮಂ ಮಾಟ್ಟುದಂತಾದೊಡೆ ರಾವಣಂ ಪೂಱಮಡುಗುಮಾತಂ ಹೇಲಾ [ಪಾಠಾಂ. ಪೇಟೂ] ಸಾಧ್ಯನಕ್ಕುಂ (ಕಗವಿ. ೩೫-೨೪); (ಚಾವುಂಡ. ೩೧೨ ನೋ). **ಹೇಳಾಸಾಧ್ಯ:** ೨. ಆಟದಷ್ಟು ಸುಲಭಸಾಧ್ಯವಾದುದು: ಆ ವಿರಾಟನ ಮಂಡಲಂ ಗೋಮಂಡಲದಂತೆ ಹೇಳಾಸಾಧ್ಯಮಾಗಿ ಕೈಗೆ ವರ್ಕುಂ (ಪಂಪಭಾ. ೮-೮೩ ಎ); ಶಶಿಪಾಳನೊ ತಾನೆನಿಸಿ ನೆಗಟ್ಟ ನರಗನ ತಲೆ ತನ್ನಾಳಾಳ ಕಯ್ಗೆ ವನ್ದುದು ಹೇಳಾಸಾಧ್ಯದೊಳ್ ಗಂಗಚೂಡಾಮಣಿಯಾ (ಎಕ. II, ೫೯-೯೬; 974). [ಸಂ.]

ಹೇಲಿ (ನಾ). ಸೂರ್ಯ; ನೇಸರು. [ಸಂ.]

ಹೇಲು$_1$ 'ಪೇಲ್$_1$' ನೋ.

ಹೇಲು$_2$ 'ಪೇಲ್$_2$' ನೋ.

ಹೇಲುಕಸ (ನಾ). ಒಂದು ಬಗೆಯ ಸಸ್ಯ: (ಕ). [?]

ಹೇಲುಸುಂಡೆ (ನಾ). ಒಂದು ಬಗೆಯ ಸಸ್ಯ: (ಮೃಡಿಗಿ. ೭೭-೧೫೮೬). [?]

ಹೇಲೆ, ಹೇಳೆ (ನಾ). ೧. ತಿರಸ್ಕಾರ; ಅನಾದರ. ೨. ಶೃಂಗಾರಚೇಷ್ಟೆ. ೩. ಸಂತೋಷ; ವಿಲಾಸ; ವಿನೋದ. ೪. ಸಂಪತ್ತು; ಐಶ್ವರ್ಯ. ೫. ಅವಕಾಶ; ಆಸ್ಪದ. **ಹೇಳೆ:** ೧. "ಹೇಳಾ, ಅವಹೇಳಾ, ಲೀಢಾ, ಅವಜ್ಞಾ, ಅವಲೀಢಾ - ಈ ೫ ಲೀಲೆ" (ಹಲಾಯು. ೧೧೮-೩೦). ೨. "ಹೇಳಾ, ವಿಲಾಸಃ, ಬಿಬ್ಬೋಕಃ, ಲೀಲಾ, ಲಲಿತಂ, ವಿಭ್ರಮಃ- ಇವು ಮೊದಲಾದುವು ಸ್ತ್ರೀಯರ ಭಾವಂಗಳ್" (ಹಲಾಯು. ೧೫-೮೯); ಶೃಂಗಾರ ಮನೊಲ್ದಾಂತು ದ್ಯೋತಿಸಿದೊಡೆ ಸಲೆ ಕಾಂತಂ ಪೆಸರಿಂದೆ ಹೇಳೆಯೆಂಬುದು ಸಲ್ಗುಂ (ರಸರ. ೧-೨೧ ಸೂತ್ರ). ೩. "ಅವಲೀಲೆ ಲೀಲೆಯವಜ್ಞೆ ಹೇಳಾವಹೇಳಾಖ್ಯ ಮದು ಹರುಷಮಕ್ಕುಂ" (ಮಂಗರಾ. ೧೨೯-೧೩); ಭಿಕ್ಷಾಯೆನಲು ಖೂಳ ಕುದುರೆಗೆ ಕುದಿವ ಮಡ್ಡಿಯಂ ನೀಡಿಸಲು ಹೇಳೆಯೊಳು ಸವಿದು (ಗುರುಚಾ. ೨-೭); ಅಣ್ಣ ಬೊಮ್ಮಣ್ಣನು ಹೇಳೆಯೊಳು ತನ್ನೊಡನೆ ಬರಲು (ರಾಘಚಿ. ೧೫-೨೬). ೪. "ಸಿರಿ ಸಿಂಗರಂ ಪಳಿವು ಮುರಿ ಪ್ರಸ್ತಾವ ಹೇಳಾಂಕಿತಂ" (ನಾನಾರ. ೧೦೯). ೫. "ಪ್ರಸ್ತಾವದಲ್ಲಿಯುಂ ಹೇಳಾಯೆಂಬುದು" (ಹಲಾಯು. ೧೩೪-೧೯). [ಸಂ. ಹೇಲಾ]

ಹೇವ, ಹೇವೆ, ಹೇಹ (ನಾ). ೧. ಜುಗುಪ್ಸೆ; ಅಸಹ್ಯ: ಶ್ರಾವಕರಾದೊಡೆ ಸಾಲ್ಗುಂ ಹೇವಂ ತನಗಿಲ್ಲ (ಸಮಪ. ೧೩-೨೬); ಧ್ರುವನು ಮಲತಾಯೆನಿಪ್ಪಾ ಸುರುಚಿ ಬಯ್ಯೆ ಹೇವವ ತಾಳ್ದು ಶಿವನ ಮೆಚ್ಚಿಸಿ ಬೇಱೆ ಲೋಕವಂ ಪಡೆದು (ಹಚಕಾ. ೧೦-೧೯); ಕೊನೆಗೆ ನನಗೆ ಫಕ್ಕನೆ ವಿವೇಕ ಮೂಡಿ ಎಚ್ಚರವಾಯಿತು. ನನ್ನ ಬಗೆಯು ನನಗೇನೆ ಹೇವವಾಯಿತು (ನಾಗಕಾ. ೨೮). ೨. ವ್ಯಥೆ; ದುಃಖ; ಅಳಲು: ಕದನಮುಖದಲ್ಲಿ ಹೇವ ವೀರರೊಳಿಲ್ಲಲಾ (ಕುವ್ಯಾಭೀ. ೩-೩೪); ದೇವನೆ ನಿಮ್ಮಿಂದೆನ್ನಯ ಹೇವಂ ಹರಿದತ್ತು (ದಶಾವ. ೮-೧೪೦); ಆವಾವ ಜೀವವನು ಹೇವವಿಲ್ಲದೆ ಕೊಂದು ಸಾವಾಗ ಶಿವನ ನೆನೆದಿಹರೆ ಅವ ಬಂದು ಕಾವನೇ (ಸರ್ವಜ್ಞ. ೯೫೨). ೩. ಹಗೆತನ; ವೈರ; ದ್ವೇಷ: ತರುಣಿಯರ ಮೋಹಕದಲುಱೆ ಮತ್ಸರಿಸದವರಾರರಸ ಹೇವದ ಹುರಿ ಬಲಿದುದೀತಂಗೆ (ತೊರರಾ. ೪-೨-೨೫); ಭಸ್ಮನೆಂಬ ಖಳ ಹೇವದಿಂ ಬಿಡದೆ ಬೆನ್ನಟ್ಟಲವನಂ ಮುಱಿದು (ನಂದಿಮಾ. ೧೦-೪೯). ೪. ರೋಷ; ಕೋಪ: ಹೇವದಲಿ ಕೆಡಹಲ್ಕೆ ಬೀಳ್ವರು (ಕೋಗಯ. ೨೧-೬); ಕಾಲನೀ ಪುರುಹೂತ ಹಿಂಗಿದನೆಂಬ ಹೇವದೊಳಾತುನಿಂದ್ಕೆ ಕಾಲುಝುಂಭನ ಗೆಲಿದ ಗರ್ವದಲಿ (ಅಂಬಿಕಾ. ೧೭-೩೭); ದ್ವಾರಪಾಲಕನ ಮಾತು ಕೇಳಿ ವೇಣುಗೋಪಾಲರ ಹೇವ ಕೆರಳಿತು (ಇಪ್ಪಕ. ೩೦೧). ೫. ನಾಚಿಕೆ; ಲಜ್ಜೆ: ತಾವು ಷಡುರಥರೊಬ್ಬ ಹಸುಳೆಯ ಹೇವವಿಲ್ಲದೆ ಕೊಂದರೋ (ಕುವ್ಯಾದ್ರೋ. ೬-೬೩); ಹೇವವೆಲ್ಲಿಹುದಯ್ಯ ವೈಕುಂಠಪತಿಗೆ (ಪುರಂದ. ೧-೧೦೬-೧); ಈ ಲೋಕಮಂ ರಕ್ಷಿಸುವನೆಂಬ ನುಡಿ ಹೇವವಲ್ಲವೆ ತನಗೆ (ಚೆಬಪು. ೩೫-೩೨). ೬. ಸ್ವಾಭಿಮಾನ; ಆತ್ಮಗೌರವ: ಹೇವವುಳ್ಳರೆ ಭೀಮಪಾರ್ಥರ ನೀವು ಕೊಲುವುದು ಮೇಣು ರಣದಲಿ ಸಾವುದು (ಕುವ್ಯಾದ್ರೋ. ೧೫-೧೨); ಜಾವಕ್ಕೆ ಬದುಕುವರೆ ಹೇವಕ್ಕೆ ಬದುಕುವದು (ಸರ್ವಜ್ಞ. ೨೯೨); ಕಿಟ್ಟಿಯಿಂದ ಅಗಲಿದರೆ, ತನ್ನ ಹೇವವೇನು ಉಳಿಯಿತು? (ಗಂಮಾಯಿ. ೧೫೫). ೭. ಹುರುಡು; ಸ್ಪರ್ಧೆ; ಪೈಪೋಟಿ: ಸತ್ಯವಚೋವಿಲಾಸನು ಕಲಿಹರಿಶ್ಚಂದ್ರಾವನಿಪನೆನಲವನಸತ್ಯದ ಕುಲತಿಲಕನೆಂದು ಹೇವವಿಬ್ಬರಿಗಾ ಪ್ರತಿಜ್ಞಾಭಾವದಲಿ ಬಲುಹಾಯ್ತು (ತೊರರಾ. ೩-೨-೨೬); ಆಟ ಬಂದರೆ ತಾನೇ ಹೇವ, ಹೀಗಾಗಿ ಆಟದಲ್ಲಿ ನನಗೆ ಶ್ರದ್ಧೆ ಕಡಿಮೆ (ಹಾಸುಹೊ. ೨೨). ೮. ಅವಮಾನ; ಹೀನಾಯ: ಪೋಯೆಂದು ತಱುಬಿದರ್ ಖಳರಜೇಂದ್ರಾದ್ಯರ ಪಲಾಯನದ ಹೇವಮಂ ಕಂಡನೀ ವಿಷ್ಣು . . . ಮಾಱೂಂತನು (ಚೆಬಪು. ೪೯-೪೦). ೯. ರೋಗ; ವ್ಯಾಧಿ. **ಹೇವೆ:** ೨. ದೇವನಿವರನು ಕಾವ ಭರದಲಿ ನಾವು ಒಱಲಿದೊಡಾವ ಪರಿಯಲಿ ಹೇವೆ ತಪ್ಪುವುದೆನುತ ಚಿಂತಿಸುತಿರ್ದ ಮನದೊಳಗೆ (ಕುವ್ಯಾಸ. ೫-೪೦). **ಹೇಹ:** ೧. ಸಿದಲಿಂಗೇಶ್ವರಂ ಸಮ್ಯಗ್ಜ್ಞಾನೋದಯವಾಗಿ ಸಂಸಾರಹೇಹಮಂ ಮಾಡಿ ಶರಣುಹೊಕ್ಕ ಸಿಷ್ಯಜನಂಗಳ ನಾಮಪರಿಕ್ರಮಂಗಳಂತೆಂದಡೆ (ಎಕ. XVI. ಕುಣಿಗ. ೪೯-೨೦; ಸು. 1480); ಅಂತಕನ ಕೈಯಿಂದ ಅರೆದು ಸಣ್ಣಸಿಕೊಂಡು ಭವಕ್ಕೆ ನೂಂಕಿಸಿಕೊಂಬುದೇ ಅವಸಾನ ಇದನಱಿದು ಇವಕ್ಕೆ ಹೇಹವಂ ಮಾಡು (ಘನವ. ೧೦-೭); ಅಂಬುಧಿಯೊಳಗೆ ಸಕಲಮೃಗವಿರಲದ ಕೊಂಬವರಿಗೆ ಹೇಹವುಂಟೆ (ಹರಿಸಾಂ. ೩೩-೬೬). ೧೦. ಆಹ್ವಾನ. ೧೧. ಮೂಢ; ತಿಳಿಗೇಡಿ. ೧೨. ಬಾವುಟ; ಧ್ವಜ : "ಆಹ್ವಾನ ಮೂರ್ಖ ಗದಾ ಹೇಯ ಪತಾಕೆ ದುಃಖಮಿನಿತುಂ ಹೇಹಾ[ಪಾಠಾಂ. ಯಾ]ಭಿಧಾನಂ" (ನಾನಾರ. ೯೬). ೧೩. ತ್ಯಜಿಸುವಿಕೆ: (ಕ). [< ಏವ$_1$]

ಹೇವಗೆಡಿಸು (ಕ್ರಿ). ಅವಮಾನಗೊಳಿಸು; ಮುಖಭಂಗ ಮಾಡು: ನಾವಲೇ ಹೊಱಗವರ ಹೆಂಡರ ಹೇವಗೆಡಿಸಿದೆವು (ಕುವ್ಯಾಸ. ೧೬-೧೦); ತಾವು ಭಟರಾದರೆ ವಿಭಾಡಿಸಿ ಹೇವಗೆಡಿಸುವುದುಚಿತ (ಕುವ್ಯಾದ್ರೋ. ೧೫-೯). [ಹೇವ + ಕೆಡಿಸು$_1$]

ಹೇವಗೇಡಿ (ನಾ). ನಾಚಿಕೆಯಿಲ್ಲದ ವ್ಯಕ್ತಿ; ಭಂಡವ್ಯಕ್ತಿ: ಹಾವ ಹಿಡಿದು ಹೀಸಿ ಕರ ಹುಸಿ ಹೂ[ಜೆಯ] ಹೇವಗೇಡಿ ಹೈಯೆಂದವರವೋವೊ ಹೊರೆದವೆ (ಶತಸಾಂ. ೭೮-೧೦೦); ಹೇವಗೇಡಿಗಳಿಗೆ ವಾವಿಯೇನು? ವರಸೆಯೇನು? (ಗಾದೆ).

[ಹೇವ + ಕೇಡಿ$_1$]

ಹೇವಗೊಳಿಸು (ಕ್ರಿ). = ಹೇವಗೆಡಿಸು: ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್ (ಶಾಕುಂತ. ೫೬-೯೬). [ಹೇವ + ಕೊಳ್$_1$ + - ಇಸು$_3$]

ಹೇವಣಿಗ (ನಾ). ಕಬ್ಬಿಣದ ಕೆಲಸ ಮಾಡುವವನು; ಲೋಹಕಾರ; ಕಮ್ಮಾರ: ಹದನೇಱೆ ಕಾಯ್ದುರಿವ ಲೋಹದ ಬಟ್ಟಂ ನಿಱಿಸಿ ಹೇವಣಿಗನಡೆಗಲ್ಲಾಗ್ರದೊಳಿಕ್ಕುಟಿಂದೆ ಪಿಡಿದೊಡ್ಡಿದನೆನೆ ರವಿಯೆಸೆದನಸ್ತಗಿರಿಮಸ್ತಕದೊಳ್ (ಧರ್ಮಪ. ೭-೪೩). [?]

ಹೇವಮಾರಿ (ನಾ). (ಮೂರ್ಖತನದಿಂದ) ಹಟಮಾಡುವ ವ್ಯಕ್ತಿ; ಹಟಮಾರಿ: ನೀನಿಂದುವರೊಲಿದೀಗಗಲ್ದರೆ ಹಿಂದುಳಿದೊಡಲ್ಬಿಡಿದಿಹ ಹೇವಮಾರಿ ತಾನೆಂದಿನಿಯನೆ ಬಗೆಗೊಂಡೆಯೊ (ಸೊಬಸೋ. ೧೫-೧೧೬); ಅದಟು ಕೊಳ್ಳದು ರಾಜಸೇವೆಯ ಪದವಿ ಪಾತಕ ಫಲವೆನುತ ನೂಕಿದರು ರಥವನು ಹಳಿವು ದರ್ಪದ ಹೇವಮಾರಿಗಳು

(ಕುವಾದ್ರೋ. ೬-೨೫); ಹೇಡಿಗಳು ಒರಿ ಹೇವಮಾರಿಗಳು ಬಿರಿಸಾದ ರೋಡಿಗರು ನಿಮ್ಮ ಸೇನೆಯೊಳಿರ್ದ ಭಟರು (ತುರಂಗ. ೭೩-೧೩). [ಹೇವ + - ಮಾರಿ]

ಹೇವಯಿಸು, ಪೇವಯ್ಸು, ಹೇವಯ್ಸು (ಕ್ರಿ). ಅಸಹ್ಯಪಡು; ಜುಗುಪ್ಸೆಗೊಳ್ಳು: ಮುಳಿಸಿಂದ XXX ದಿಂ ಮೂಡಿದನೆನಿಸಿದಡೊಮ್ಮಿಂಗೆ ಹೇವಯಿಸಿ (ಎಕ. IV. ಕೃಷ್ಣರಾ. ೧೮-೧೪: 1306). Δ **ಹೇವಯ್ಸು**: ಎಲೆ ಕಾವೇರಿಯ ವಾರಿ ಕೂಡ ಪೊಲಸಾದತ್ತೆಂದು ಪೇವಯ್ಸುತುಂ (ಎಕ. V. ಬೇಲೂರು. ೫೮-೨೭; 1117). **ಹೇವಯ್ಸು**: ಎಲೆ ಕಾವೇರಿಯ ವಾರಿ ಕೂಡ ಪೊಲಸಾದತ್ತೆಂದು ಹೇವಯ್ಸುತುಂ (ಮೈಆರ ೧೯೬೬. ೨೮-೨೫: 1148).

[ಹೇವ + - ಇಸು]

ಹೇವಯ್ಸು 'ಹೇವಯಿಸು' ನೋ.

ಹೇವರ (ನಾ). ಜುಗುಪ್ಸೆ; ಅಸಹ್ಯ: ಹೇ [ಪಾಠಾಂ. ಹೀ] ವರಮಂ ಕ್ಷಣಾಂತರಕೆ ತೋರ್ಪ ಸುಖಕ್ಕೊಲವಿಂದೊ ನಾಳೆಯೋ ಸಾವ ಜನಂಗಳೊಳ್ಮತೆ ಮತ್ಸರವೀಗಳೊಬ್ಬೆಗಿನಾಗಳೋ . . . ಆತ್ಮತತ್ವಮಂ ಭಾವಿಸಿ ಮುಕ್ತನಾಗಲರಿದಾಯ್ತು (ಅವಶ. ೬೬-೨೯). 'ಹೇವರಿಕೆ', 'ಹೇವರಿಸು' ಪರಾ. [< ಹೇವ]

ಹೇವರಿಕೆ (ನಾ). ೧. = ಹೇವರ: ನೋವು ಸಮ ಜೀವ ಸಮ ಸಲೆ ಸಾವು ಸಮಂ ನಿನಗೆ ಸಕಲಜೀವಕ್ಕೆಂಬುದ ಭಾವಿಸಿ ಕೊಲಲುಂ ತಿನಲುಂ ಹೇವರಿಕೆಯ [ಪಾಠಾಂ. ಅವಕರಣೆಯ] ಮಾಡು ಮನದೊಳಂ ಶಬರೇಶ (ಸನ್ನಚಾ. ೫-೧೭); ಹಳ್ಳಿಗೆ ಹೋಗಿ ಬಂದನಂತರ ತಾನು ಬಾಳಿ ಬದುಕಿದ್ದ ಸಮಾಜದ ಬಗ್ಗೆ ನಿಕ್ಕುದೋವನಲ್ಲಿ ಅಸಾಧ್ಯ ಹೇವರಿಕೆ ತಲೆದೋರಿತು (ಪುಸರು. ೩೨೬). ೨. ತಿನ್ನುವ ಅಪೇಕ್ಷೆಯಿಲ್ಲದಿರುವುದು; ಅರುಚಿ: ಬಾಯಿ ಹೇವರಿಕೆ, ಮಲದಲ್ಲಿ ಕಾರಿಣ್ಯ . . . ಅಗ್ನಿವೈಷಮ್ಯ ಇವಿಷ್ಟು ವಾತಪ್ರಕೋಪಲಕ್ಷಣ (ಷಡ್ಗಸಾ. ೧. ೨೧). [ಹೇವರ + - ಇಕೆ]

ಹೇವರಿಸು (ಕ್ರಿ). ೧. ಜುಗುಪ್ಸೆ ತಾಳು; ಹೇಸು: ಅವರ ಸುಡುನುಡಿಗೆಲ್ಲ ನಾಚಿ ಹೇವರಿಸಿ ನಡೆತಂದೊಂದು ಶಿವನಿಳಯಮಂ ಪೊಕ್ಕು (ಸಿದ್ಧರಾ. ೮-೧೧); ಆ ವೃತ್ತಾಂತ ಮನಾತಂಗಳ್ಪಿದೊಡವಂ ಹೇವರಿಸಿ (ಪುಣ್ಯಾಸ್ರ. ೧-೧೦೯ ವ); ದೇವ ರಾಕ್ಷಸಭವದ ಬದುಕಿಗೆ ಹೇವರಿಸಿದುದು ಚಿತ್ರ (ತೊರರಾ. ೩-೧೨-೨೧). ೨. ಹಿಂಜರಿ; ಅಳುಕು; ಹಿಂದೆಗೆ: ಆ ಬೆಕ್ಕು ಬೆರ್ಚಿ ರತಿವರನ ಕೊರಲಂ ಬಿಟ್ಟು ಪಿಣ್ಣಿಂ ಪೇವರಿಸದೆ [ಪಾಠಾಂ. ಯಿಸದೆ] ಪಿಡಿವುದುಂ (ಪುಣ್ಯಾಸ್ರ. ೧೧-೧೨ ವ); ಉರುಳಿಗಡಿದನು ಶಲ್ಯನನು ಹೇವರಿಸಲಿಚ್ಛನು ಕೌರವನ (ಕುವಾಭೀ. ೬-೧೪); ಭೂವನಿತೆ ದಾನವರ ಭಾರಕೆ ಹೇವರಿಸಿ ಬ್ರಹ್ಮಂಗೆ ಮೊರೆಯಿಡಲು (ಅಕ್ರೂಚ. ೧-೯).

[ಹೇವರ + - ಇಸು. /ತೆಲು. ಏವಗಿಂಚು]

ಹೇವಹಜುಕ (ನಾ). ಸ್ವಾಭಿಮಾನವಿಲ್ಲದ ಕೀಳುವ್ಯಕ್ತಿ: ಹಿಂದುಗಳೆವರು ಮರಳಿ ಮನೆಗಳ ಹಿಂದಣಾಸೆಯ ಹೇವಹಜುಕರಿಗಿಂದು ಮಹನವಮಿ (ಕುವಾಕ. ೮-೨೯).

[ಹೇವ + ಹಜುಕ (< ಪಜುಕ)]

ಹೇವಿಲಂಬಿ, ಹೇವಿಳಂಬಿ (ನಾ). ಅರುವತ್ತು ಸಂವತ್ಸರಗಳಲ್ಲಿ ಮೂವತ್ತೊಂದನೆಯ ಸಂವತ್ಸರ. **ಹೇವಿಳಂಬಿ**: ಮತ್ತಮಾ ವರುಷವೇ ಪ್ರಭವ . . . ಹೇವಿ[ಪಾಠಾಂ. ವು]ಳಂಬಿ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೬೨೧); ಹೇವಿಳಂಬಿಯಲುದಿಸಿ, ಅರಳಿದ ವಿಳಂಬಿಯಲಿ (ಅನೇಕ. ೨೨-೮). [ಸಂ.]

ಹೇವಿಳಂಬಿ 'ಹೇವಿಲಂಬಿ' ನೋ.

ಹೇವೆ 'ಹೇವ' ನೋ.

ಹೇಷ (ನಾ). ಕುದುರೆಯು ಕೆನೆತ: 'ಹೇಷಧ್ವನಿ' ಪರಾ. [ಸಂ.]

ಹೇಷಧ್ವನಿ (ನಾ). ಕುದುರೆಯ ಕೆನೆಯುವ ಶಬ್ದ; **ಹೇಷಾರವ**: ಗಜದ ಬೃಂಹಿತರವದ ವಾಜಿವ್ರಜದ ಹೇಷಧ್ವನಿಯ . . . ಗಜಬಜಿಕೆ ಗಾಢಿಸಿತು (ಕುವಾಉ. ೧೧-೪೧). [ಸಂ.]

ಹೇಷಾಕೃತ (ನಾ). = ಹೇಷಧ್ವನಿ: "ಹೇಷಾಕೃತಂ [ಪಾಠಾಂ. ಹೇಷಾಂಕಿತಂ] ವಾಜಿತತಿಯಲ್ಲಿ ವರ್ತಿಸಿರ್ಕುಂ" (ಮಂಗರಾ. ೨೭-೬). [ಸಂ.]

ಹೇಷಾಘೋಷ (ನಾ). = ಹೇಷಾಧ್ವನಿ: ಬಂದಿರ್ದುವು ಹೇಷಾಘೋಷ ವಿದ್ರಾವಿತರಿಪು ಮಹಿಭೃಚ್ಚಾತುರಂಗಂ ತುರಂಗಂ (ಪುಷ್ಪಸ್ರ. ೫-೧೦). [ಸಂ.]

ಹೇಷಾಧ್ವನಿ (ನಾ). = ಹೇಷಧ್ವನಿ: ದಿನಕರನ ರಥದಶ್ವದೊಲ್ಮೇದಿನಿಯ ಮೆಟ್ಟದಳಿಟ್ಟ ಹೇಷಾಧ್ವನಿಗಳಿಂದೊಡೆಹಾಯ್ದು (ಪಶುಭಾ. ೨೨-೫೨). [ಸಂ.]

ಹೇಷಾರವ (ನಾ). = ಹೇಷಧ್ವನಿ: ಇಂದ್ರಾಯುಧಮಂ ಚಂದ್ರಾಪೀಡನೇಱಿ ದಿಗಂತರಂಗಳೆಲ್ಲಮನಂತಹಯಹೇಷಾರವಂಗಳಿಂ ತೆಕ್ಕನೆ ತೀವೆ (ಕಾದಂಉ. ೫೧೧); ಮೇಲುಲಿಯೆ ಹೇಷಾರವಂ ಗತಿಗಮಕವೇ ಪಂಚಧಾರಾವಿಶೇಷಮಾಗೆ . . . ನಡೆಗೊಳ್ಳಗಿಳಿಗುದುರೆಗಳ ಹಿಂಡು ರಂಜಿಸಿದುವು (ಚಬಪ್ರ. ೩೫-೯). [ಸಂ.]

ಹೇಷಾರಸಿತ (ನಾ). = ಹೇಷಧ್ವನಿ: ಸದ್ವಾಜಿಬ್ಯೂಹದ ಹೇಷಾರಸಿತಕ್ಕೆ ಭಾನುರಥದಶ್ವಂ ಬೆಚ್ಚಿ (ವೀರವಿ. ೫-೨೨). [ಸಂ.]

ಹೇಷಿ (ನಾ). ಕೆನೆಯುವ ಪ್ರಾಣಿ; ಕುದುರೆ. [ಸಂ. ಹೇಷಿನ್]

ಹೇಷಿತ (ನಾ). = ಹೇಷಧ್ವನಿ: ತುರಂಗಮಹೇಷಿತಘೋಷನಾದಮೊರ್ಮೊದಲೆ ಪಯೋಧಿಮಂಥನಮಹಾರವಮಂ ಗೆಲೆ (ಪಂಪಭಾ. ೩-೩೮); ಪ್ರಣವನಾದಾಹತಿಗೆ ಗತಿಯಲಿ ಕುಣಿದವಗ್ಗದ ವೇದಹಯ ಹಲ್ಲಣೆಯ ಹೇಷಿತರವಕೆ ಹೆದಱಿತು ರಾಕ್ಷಸವ್ರಾತ (ಕುವ್ಯಾಕ. ೭-೨೩). [ಸಂ.]

ಹೇಷಿಸು (ಕ್ರಿ). ಕುದುರೆಯಂತೆ ಕೂಗು,— ಕೆನೆ: ತುರಗಕ್ಕೆ ಮಧ್ಯದಶನೋತ್ಕರ ಮುದಯಿಸುಗುಂ ವಿಭಕ್ತಪದನಕ್ಕುಂ ಸುಸ್ವರದಿಂ ಹೇಷಿಸುಗುಂ (ಅಶ್ವಶಾ. ೫-೫).

[ಹೇಷ + - ಇಸು]

ಹೇಷೆ (ನಾ). = ಹೇಷ: ಹೇಷಾಬ್ಯೂಹಿತಂಗಳ್ ವಿಲಯಜಲನಿಧಿಧ್ವಾನಮಂಬನ್ನೆಗಂ ಭೋಂಕನೆ ಕರ್ಣಾಭ್ಯರ್ಣಮಂ ಸಾರ್ತರೆ (ಪಂರಾಮಾ. ೧೩-೨). [ಸಂ. ಹೇಷಾ]

ಹೇಷ್ಯ (ನಾ). ಅಪಶಕುನ; ದುರ್ನಿಮಿತ್ತ: ಧರ್ಮಕ್ಕೆ ವಿರೋಧವಾಗಿ ನಡೆದವನಾದ ಕಾರಣ ಅವನು ಗಣೇ ಮೇಲಿನಿಂದ ಬಿದ್ದ . . . ಅವನನ್ನು ಎಂಟು ಸೀಳಾಗಿ ಕಡಿದು ನಮ್ಮ ದೇವರಿಗೆ ಬಲಿ ಕೊಡುತ್ತೇನೆ. ನಮಗೆ ದೊಡ್ಡ ಹೇಷ್ಯವಾಯಿತು (ಅದೂಉ. ೧೭೮).

[ಸಂ. ?./ ತೆಲು. ಏಷ್ಯ = ಅನಾದರ, ತಿರಸ್ಕಾರ]

ಹೇಸರ, ಪೇಸರು, ಹಾಸರ, ಹೇಸರು (ನಾ). ಒಂದು ಜಾತಿಯ ಕತ್ತೆ: ಕರ್ತನ ಪೂಜಿಸಿ ಕುತ್ಸಿತದೈವಕ್ಕೆಱಗುವದು ಕತ್ತೆಗೆ ಕುದುರೆಗೆ ಹುಟ್ಟಿದ ಹೇಸರನಂತೆ (ವಚಕಾ. I. ೩೨೯-೨); ಹೇಸರನೆಮ್ಮ ದೊಡ್ಡದಾದಡೇನು ತೇಜಿಯಾಗಬಲ್ಲುದೆ (ಚನ್ನವ. ೪. ೨೦೦-೪೪೫). Δ **ಹೇಸರು**: ದೇಹಪೋಷಣದೊಳಾಸಕ್ತನಾಗಿ ಮತಿಹೀನನೆಂದೆನಿಸಿರ್ಪೆ ಪೇಸರುಂ ತನ್ನೊಡಲ ಹೊರೆಯದೇ (ಕಷರಾ. ೫-೪೦). **ಹಾಸರ**: 'ಹಾಸರಗತ್ತೆ' ಪರಾ. **ಹೇಸರು**: ಬಾಳೆಯ ಕೇಡದರ ಗೊನೆಯೆ, ಹೇಸರ ಕೇಡದರ ತೆನೆಯೆ (ಗೀಪಂ. ೮೫-೬೯).

[< ಸಂ. ವೇಸರ]

ಹೇಸರಕತ್ತೆ 'ಹೇಸರಗಳ್ತೆ' ನೋ.

ಹೇಸರಗತ್ತೆ 'ಹೇಸರಗಳ್ತೆ' ನೋ.

ಹೇಸರಗಳ್ತೆ, ಪೇಸರಗತ್ತೆ, ಹಾಸರಗತ್ತೆ, ಹೇಸರಕತ್ತೆ, ಹೇಸರಗತ್ತೆ (ನಾ). = ಹೇಸರ: ಶ್ವೇತಾಶ್ವತರಮಾಚಷ್ಟೆ = ಬಿಳಿಯ ಹೇಸರಗಳ್ತೆಯಂ ಪೇೞ್ದಪಂ (ಕಾಶಕ್ಯ. ೫೧). Δ **ಪೇಸರಗತ್ತೆ**: "ಚಕ್ರಿಪತಿ ವಾಜಿತರಮೆನಲು ಪೇ[ಪಾಠಾಂ. ಹೇ] ಸರಗತ್ತೆಯಕ್ಕು" (ಮಂಗರಾ. ೫೫-೯). **ಹಾಸರಗತ್ತೆ**: ತಿರುಗಿದೆನು ಸರಿಸರಿದು ಹಾಸರಗತ್ತಿ E೭೯ತೆಯಂತೆ ಸಾರಡಿಯ ಪೊತ್ತು ನಿಸ್ಸಾರರವನಾದೆನೊ (ಎಸಾಪು. ೩೦-೧). **ಹೇಸರಕತ್ತೆ**: ಸುಪ್ಪತ್ರಿಗೆಯಲ್ಲಿ ಹಗಲು ಇರುಳು ಹೇಸರಕತ್ತೆಯಂತೆ ಹೊರಳಿ (ಪುಕಂದ. ೧-೬೬-೧). **ಹೇಸರಗತ್ತೆ**: ಒರ್ವನೆರಡು ಹೇಸರಗತ್ತೆಯೊಳ್ಪೂಡಿದ ಬಂಡಿಯುಮಂ ಪೊಡೆದುಕೊಂಡು ಪೋಗುತ್ತಿರಲ್ (ಪುಣ್ಯಾಸ್ರ. ೫-೬೬ ವ); ಹೇಸರಗತ್ತೆಯ ಮೇಲೆ ಬಂಗಿಯ ಹೇಡು . . . ಲೆಕ್ಕ ವೀಸೆಂದು ಪೇೞ್ದರಾರದನು (ಕಂನಮ. ೧೧-೩೮); ಸುತ್ತಮುತ್ತಲು ನೋಡಿ ಹೇಸರಗತ್ತೆಗಳು ಸತ್ತಿಹುದ ಕಂಡು (ರಾಮಾಸಂ. ೩-೫-೩೫). [ಹೇಸರ + ಕಳ್ತೆ (< ಕಟ್ತೆ)]

ಹೇಸರು 'ಹೇಸರ' ನೋ.

ಹೇಸಾಟ (ನಾ). ಜುಗುಪ್ಸೆಯನ್ನುಂಟುಮಾಡುವಂತಹುದು; ಅಸಹ್ಯಕರವಾದುದು: "ಹೇಸಾಟ = ನಿರಿಚ್ಛೆ, ಹೇಸಿಕೆ ಬರುವಂತಹುದು, ಓಕರಿಕೆ" (ಡಾನಕೋ. ೬೦); ವಾಗ್ದೇವಿಯನ್ನು ಇಂಥ ಸಮೂಹದ ಮಧ್ಯದಿಂದ ತಕ್ಕೊಂಡು ಬಂದದ್ದು ದೊಡ್ಡ ಹೇಸಾಟವಾಯಿತು (ವಾಗ್ದೇವಿ. ೫೩). [ಹೇಸು$_1$ (< ಪೇಸು$_1$) + ಆಟ]

ಹೇಸಿ (ಗು). ೧. ಅಸಹ್ಯಕರವಾದ; ಜುಗುಪ್ಸೆಯನ್ನುಂಟು ಮಾಡುವ: ಪುರದ ರಮಣಿಯರೀಕ್ಷಿಸಿಯೆ ನೋಡಿರೆ ವಿಕಾರದ ಹೇಸಿರೂಹಿನ ನರನನೆನೆ (ಶಾಲ್ವಭಾ. ೩೦-೩೭): ಸಾಕು ಸಾಕ್ಕಾಡು ಇಂತಹ ಹೇಸಿ ವಿಚಾರ! (ಅಶ್ವಮೇ. ೧೯). ೨. ಕೆಟ್ಟ; ಕೆಡುಕನ್ನುಂಟು ಮಾಡುವ: ವಿಷಮಯವಾದ ನಗೆಯು ಹೇಸಿ ನಗೆ (ಸಾಹಿ. ೧೧೭); ನನಗೇನ ಬ್ಯಾಡ ಅಂಥ ಹೇಸಿಕೆಲಸ (ಮಣ್ಣುಹ. ೫೮). ೩. ಅಲ್ಪವಾದ; ಕೀಳಾದ; ಕ್ಷುದ್ರ: ಹೇಸಿದ್ಯವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ (ಬಸವ. ೫೫೭); ಹೇಸಿಮಾನವ ನಾನು ಭಾಷೆವಂತನಲ್ಲ (ಸುಸಾರ. ೧೧-೧). (ನಾ). ೪. ಜುಗುಪ್ಸೆ; ಅಸಹ್ಯ: 'ಹೇಸಿಗೊಳ್ಳು' ಪರಾ. ೫. ಕೊಳಕು; ಹೊಲಸಾದುದು: "ಹೇಸಿ – ಹೇಸಿಕೆ, ಹೇಸಿಗೆ" (ಜಾನಪೋ. ೬೦). ೬. ಕೊಳಕು ವಸ್ತು; ಕೆಟ್ಟ ಪದಾರ್ಥ: ಜಂಬುಕದೆಡೆಯನು ಹೊಕ್ಕರೆ ಸಿಗುವುದು ಗೊರಸಿನ ಚರ್ಮದ ಹೇಸಿ (ಇಂಚಾವ. ೧೨೯-೩೪). ೭. ಅಸಹ್ಯಕರನಾದ ವ್ಯಕ್ತಿ; ಜುಗುಪ್ಸೆಯನ್ನುಂಟುಮಾಡುವ ವ್ಯಕ್ತಿ: ಶರಣರ ಆಸೆ ರೋಷಪಾಶಕ್ಕೊಳಗಾದ ಈ ಜಗದ ಹೇಸಿಗಳೆತ್ತ ಬಲ್ಲರು (ಲಿಂಗವ. ೪೪-೭); ಹೇಸಿಯಾದವಳ ಮನೆವಾರ್ತೆ ಕತ್ತೆಯ ಹೂಸಿನಂತಕ್ಕು (ಸರ್ವಜ್ಞ. ೧೭೩೦); ಕೇಳಿದ ಕೂಡಲೆ ಕೊಟ್ಟು ಬದುವವನು ಸಭ್ಯನೇನೂ ಅಲ್ಲ. ಅದರೆ ಕೊಡದಿರುವವನು ಮಾತ್ರ ಪಕ್ಕಾ ಹೇಸಿ (ಗಾಳಿ. ೨೯). [ಹೇಸು + -ಇ]

ಹೇಸಿಕೆ 'ಹೇಸಿಕೆ' ನೋ.

ಹೇಸಿಕೆಪಡು (ಕ್ರಿ). ಅಸಹ್ಯಗೊಳ್ಳು; ಜುಗುಪ್ಸೆಹೊಂದು: ಇದೆಲ್ಲವನ್ನು ನೋಡಿ ಹೇಸಿಕೆಪಟ್ಟು ಅವರೇ ನಡೆದುದರ ಸುದ್ದಿಯನ್ನು ವಿಶ್ವನಾಥರ ಕವಿಯ ಮೇಲೆ ಹಾಕಿದರು (ಮೂಯಾದಾ. ೬೮). [ಹೇಸಿಕೆ (< ಹೇಸಿಕೆ) + ಪಡು]

ಹೇಸಿಗೆ (ನಾ). ೧. ಅಸಹ್ಯ; ಜುಗುಪ್ಸೆ: ಆ ನೋಟ ನೆನೆಸಿಕೊಂಡರೂ ಹೇಸಿಗೆಯಾಗುತ್ತದೆ (ರೂಢಿ). ೨. ಹೊಲಸುವದಾರ್ಥ; ಕೊಳಕು ವಸ್ತು: ಜಗತ್ತು ಹೇಸಿಗೆಯ ನರಕವಾಗಲು ಇದೇ ಕಾರಣ (ಮುರುಳು. ೩). ೩. ಕೆಟ್ಟುದು; ಕೆಡುಕನ್ನುಂಟು ಮಾಡುವಂತಹುದು: 'ಹೇಸಿಗೆಗನಸು' ಪರಾ.

ಹೇಸಿಗೆಗೊಳಿಸು = ಕೊಳೆ ಮಾಡು; ಹೊಲಸನ್ನುಂಟು ಮಾಡು: ಇಲ್ಲಿ ಹೇಸಿಗೆ ಗೊಳಿಸಬಾರದು (ರೂಢಿ). ಹೇಸಿಗೆಮಾಡು = ಹೇಸಿಗೆಗೊಳಿಸು: ಇಲ್ಲಿ ಹೇಸಿಗೆ ಮಾಡಿದರೆ ಶಿಕ್ಷೆಗೆ ಗುರಿಪಡಿಸಲಾಗುತ್ತದೆ (ರೂಢಿ).

[ಹೇಸು + -ಇಗೆ / ತುಳು. ಪೇಸಿಗೆ; ತೋದ. ಹೇಸಿಗೆ]

ಹೇಸಿಗೆಗನಸು (ನಾ). ಕೆಟ್ಟಕನಸು; ದುಸ್ವಪ್ನ: ವನಿತ ಮಲಗಿಹಳೋ . . . ಹೇಸಿಗೆಗನಸ [ವಾಕಾಂ. ನಿದ್ರೆಯ ಕನಸ] ಕಂಡೇಳುವಳೋ (ನಳಚ. ೬-೨). [ಹೇಸಿಗೆ + ಕನಸು]

ಹೇಸಿಗೆಗಿಡ (ನಾ). ಒಂದು ಬಗೆಯ ಮುಳ್ಳುಪೊದೆ: (೫).

[ಹೇಸಿಗೆ + ಗಿಡ (< ಗಿಡು)]

ಹೇಸಿಗೆಹೂ, ಹೇಸಿಗೆಹೂವು (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು: ಲಂಟವಾಣಿಗಿಡ, ಹೇಸಿಗೆಹೂ, ಕಾಡುಜೋಳ, ಚದುರಂಗ (ಮೃಡಿಗಿ. ೪೯-೪೭೦).

ಹೇಸಿಗೆಹೂವು: ಹೇಸಿಗೆಹೂವ ಬಳಿಗೆ ಹೋಗಿ ಒಂದು ಗಳಿಗೆ (ಗಡ. ೯೭-೫). 'ಹೇಸಿಹೂವು' ಹೋ. [ಹೇಸಿಗೆ + ಹೂ (< ಪೂ)]

ಹೇಸಿಗೆಹೂವು 'ಹೇಸಿಗೆಹೂ' ನೋ.

ಹೇಸಿಗೊಳ್ಳು (ಕ್ರಿ). ಅಸಹ್ಯಪಡು; ಜುಗುಪ್ಸೆಗೊಳ್ಳು: ಕೇಶವರಾಯ ಕಾತರಗೊಂಡು ಬಂದುದೂ ಆಯಿತು, ಹೇಸಿಗೊಂಡು ಹೋದುದೂ ಆಯಿತು (ಬೆಂಗಬು. ೧೨೯).

[ಹೇಸಿ + ಕೊಳ್ಳು (< ಕೊಳ್)]

ಹೇಸಿತನ (ನಾ). ೧. ಕೆಟ್ಟತನ; ಕೇಡಿಗತನ; ದುಷ್ಟಬುದ್ಧಿ: ಮುದುಕ ಕೂಡ ದಿನಕರರಾಯನ ಹೇಸಿತನಕ್ಕೆ ಬೇಸರಪಟ್ಟು . . . ಒಪ್ಪುವಂತಾಯಿತು (ಕಮನೆ. ೯೯); ಮಾಡೋ ಕೆಲಸದ ಹೇಸಿತನದ ನಾತ ಮಾತ್ರ ನಿನಗಿಲ್ಲಲ್ಲ? (ಹೂಸಂಪಾ. ೫೧). ೨. ಹಿಂಜರಿಕೆ; ಅಳುಕು: ದುಃಖದಿಂದ . . . ಆ ಹೆಂಗರುಳಿನ ಹೇಸಿತನಕ್ಕೆ ಅಸಹ್ಯಪಟ್ಟನು (ಜಯಂತ. ೬೦೫). [ಹೇಸಿ + -ತನ]

ಹೇಸಿಯ (ನಾ). ಹೊಲಸುವ್ಯಕ್ತಿ; ಕೊಳಕುಮನುಷ್ಯ: ಹೇಸಿಯನ ಗಂಡ ನೆಂಬುವಳು ಹಾದರದ ಹಾಸು ಕಾಣಯ್ಯ (ಸರ್ವಜ್ಞ. ೧೭೪೪). [ಹೇಸಿ + -ಅ]

ಹೇಸಿಹೂವು (ನಾ). ಒಂದು ಬಗೆಯ ಹೂವು; "ಮಲೆನಾಡಿನಲ್ಲಿ ಒಂದು ಪ್ರಸಿದ್ಧ ಹೂ" (ಬಾಸಾಗ. ೧೦. ನಿರವು) : ಹೇಸಿ ಹೂವ ಬೈವ ಜನವ ಸುಳ್ಳು ಮಾಡಿತು ಲೇಸು ಇದರ ಮಾಟ ನೋಡಿರಯ್ಯ ಎಂದು ತೂರಿ ತೋರಿತು (ಬಾಸಾಗ. ೪೧-೧೬). 'ಹೇಸಿಗೆಹೂ' ಹೋ. [ಹೇಸಿ + ಹೂವು (<ಪೂ)]

ಹೇಸು$_1$ 'ಪೇಸು$_1$' ನೋ.

ಹೇಸು$_2$ 'ಪೇಸು$_2$' ನೋ.

ಹೇಸೇಳ್ 'ಪೇಸೇಟು' ನೋ.

ಹೇಹ 'ಹೇವ' ನೋ.

ಹೇಹದೋಜು (ಕ್ರಿ). ಜುಗುಪ್ಸೆಗೊಳ್ಳು; ಅಸಹ್ಯಪಡು: ಕಾಹುರಂಗಳ ಬಿಡಿಸು ಕಮಲಾಕ್ಷಿಯೆಂದವಂ ಬಾಹ್ಯರಂಗದಿ ದೈನ್ಯಮಂ ನುಡಿವುದಂ ಕೇಳಿ ಹೇಹದೋಜುತ್ತ ಮನದೊಳು ಮಹಾದೇವಿ ಚೋದ್ಯಂ ಬಡುತಮಿಂತೆಂದಳು (ಪ್ರಭುಪು. ೮-೫೮).

[ಹೇಹ (< ಹೇವ) + ತೋಜು]

ಹೇಳ್ 'ಪೇಟು' ನೋ.

ಹೇಳನ 'ಹೇಲನ' ನೋ.

ಹೇಳನಂಗೈ (ಕ್ರಿ). ಅಣಕಿಸು; ಅಪಹಾಸ್ಯ ಮಾಡು: ಹೇಳನಂಗೈವನೀ ಕಪಿಯೆನುತ ಘುಡುಘುಡಿಸಿ ಕಾಳರಕ್ಕಸಿ ಪೊಡೆದಳು (ವೆಂಕಾರಾ. ೫-೩-೧೫೫).

[ಹೇಳನ (= ಹೇಲನ) + ಕೈ$_1$ (< ಕೆಯ್$_1$)]

ಹೇಳಾಂಚಿತ (ನಾ). = ಹೇಲಾಸಾಧ್ಯ ೨: ಈ ಮಹಿಯೊಳ್ ಮಾನಕೀಟಕೋಟಿಯು ಮಿದೇಂ ಕಾಳಂಗೆ ಹೇಳಾಂಚಿತಂ (ಪುಷ್ಪಸ. ೧೩-೪೨). [ಸಂ. ಹೇಲಾಂಚಿತ]

ಹೇಳಾಟ (ನಾ). ಹೇಳುವಿಕೆ; ಅಪ್ಪಣೆ ಮಾಡುವಿಕೆ: ದಣಿ ಹೇಳಾಟ, ಬಡಗಿ ಮಾಡಾಟ (ಗಾಡ). [ಹೇಳು (< ಪೇಟು) + ಆಟ]

ಹೇಳಾಡಂಬರ (ನಾ). = ಹೇಲಾಸಾಧ್ಯ ೨: ಹೇಳಾಡಂಬರದಂಬುದೊಟ್ಟು ತೆಗೆದಾಕರ್ಣಾಂತಮಂ ತಾಗೆ ಭೂಪಾಲವ್ಯಾಳನಡುರ್ತಿಸುತ್ತಮಿರೆ (ಮಹಾನೇ. ೫-೪೭).

[ಸಂ. ಹೇಲಾಡಂಬರ]

ಹೇಳಾಣಿಕೆ (ನಾ). ಮಾತು; ವಿಚಾರ; ಸುದ್ದಿ: ಮಂತ್ರಿಯಾಗಿರುವ ಒಬ್ಬ ಮನುಷ್ಯ ತನ್ನ ದೊರೆಯಾದವನಿಗೆ . . . ಈ ಹೇಳಾಣಿಕೆಯನ್ನು ಕಳುಹಿಸುವುದು ದೊರೆಯ ಕೈಯ ಆಳಿನ ಮೂಲಕ! (ಚಕಾ. ೪೨೫). [< ಹೇಳಿಕೆ$_1$]

ಹೇಳಾವಲೋಕನ, ಹೇಳಾವಳೋಕನ (ನಾ). ವಿಲಾಸದಿಂದ ಕೂಡಿದ ದೃಷ್ಟಿ. — ನೋಟ: ಹೇಳಾವಲೋಕನಾಮೃತ ನಿಷಿಚ್ಯಮಾನತರುಲತಾಪ್ರತಾನನುಂ ವನಮಹತ್ತರ ಪುರಸ್ಸರನುಮಾಗಿ ಬರ್ಪಾಗಳ್ (ಚಂದ್ರಪ್ರ. ೭-೧೩ ವ). ಹೇಳಾವಳೋಕನ: ಬಹಿಃ ಪುರಶ್ರೀಯಂ ಹೇಳಾವಳೋಕನದಿನಳಂಕರಿಸುತ್ತುಮಿರ್ಪನ್ನೆಗಂ (ಚಂದ್ರಪ್ರ. ೨-೨೬ ವ).

[ಸಂ. ಹೇಲಾವಲೋಕನ]

ಹೇಳಾವಳೋಕನ 'ಹೇಳಾವಲೋಕನ' ನೋ.

ಹೇಳಾಸಾಧ್ಯ 'ಹೇಲಾಸಾಧ್ಯ' ನೋ.

ಹೇಳಿಕೆ$_1$ 'ಪೇಟ್ಕೆ' ನೋ.

ಹೇಳಿಕೆ$_2$ 'ಪೇಳಿಕೆ' ನೋ.

ಹೇಳಿಗೆ 'ಪೆಟ್ಟಿಗೆ' ನೋ.

ಹೇಳಿತ 'ಹೇಳಿತು' ನೋ.

ಹೇಳಿತು, ಹೇಳಿತ (ನಾ). ೧. ಹೇಳಿದುದು; ಹೇಳಿಕೆ; ವಿವರಣೆ: ನಾಚುವಳು ಗಡ ಮಾಯೆಯಾವನ ಗೋಚರಕೆ ಬರಲಂಜಿ ಹೇಳಿತನಾಚರಿಸಿ ಬದುಕುವಳು (ನಿಭಾಗ. ೨-೨-೧೯). ಹೇಳಿತ: ೧. ಮಹಾಪುರುಷರು ಹುಟ್ಟಿದ ವಂಶದ ಸಂತಾನವು ನಷ್ಟವಾಗುವುದೆಂಬ ಲೋಕಾನುಭವದ ಹೇಳಿತವು ಒಂದುಂಟು (ಯಕ್ಷಪ್ರ. ೧೩೦); ಉಲ್ಲೇಖವು ಮೇಲಿನ ಹೇಳಿತಕ್ಕೆ ಬೆಂಬಲವನ್ನು ಕೊಡುತ್ತದೆ (ತವನಿ. ೬೭). ೨. ಆಜ್ಞೆ; ಅಪ್ಪಣೆ: ಹೇಳಿತ ಮಾಡಿ ಬೇಗದಲಿ ಆಯುಧಂಗಳ ಬಿಸುಟು ಕರಿರಥಜಾಯಿಲಂಗಳನಿಳಿದು ಬದುಕುವುಪಾಯವೆಂದಸುರಾರಿ ಸಾರಿದನು (ಕುವಾಮ್ರೋ. ೧೯-೪೭).

[ಹೇಳು (< ಪೇಟು) + ?]

ಹೇಳಿಸು 'ಪೇಱಿಸು' ನೋ.

ಹೇಳು 'ಪೇಱ್' ನೋ.

ಹೇಳುಗಳೆ (ಕ್ರಿ). ಧಿಕ್ಕರಿಸು; ತಿರಸ್ಕಾರ ಮಾಡು (?): ಆಳಿಗಾಳಂ ಸೀಳ್ದು . . . ಸುಭಟಾಳಿಯ ಹೇ[ಪಾಶಾಂ. ಹೋ]ಳುಗಳೆದನು (ತುರಂಗ. ೫೦-೪೮). [< ಹೀಗಳೆ]

ಹೇಳೆ 'ಹೇಲೆ' ನೋ.

ಹೇಳ್ಮೆ (ನಾ). ಹೇಳಿದುದು; ಹೇಳಿಕೆ: ಕೇಳ್ಮೆ ಹೇಳ್ಮೆಯ ನಿನ್ನ ಲೆಕ್ಕಿಸ ತಾಳ್ಮೆಯಿಂತಿರ ಸಲ್ಲ (ಶರಲೀ. ೨೩೫-೧೩). [ಹೇಳ್ (< ಪೇಱ್) + - ಮ್$_1$]

ಹೇಱ್ 'ಪೇಱು$_2$' ನೋ.

ಹೇಱೂಟ, ಹೇರಾಟ (ನಾ). ಹೊರೆಯನ್ನು ಹೊರುವಂತಹುದು: ಸಾಯಿರ ಸಾಯಿರ ಲೆಕ್ಕದ ಹೇಱೂಟದಾನೆಗಳೊಟ್ಟೆಗಳೆಟ್ಟುಗಳ ಸಾಲ ಮುಂಗುಡಿಯೊಳ್ . . . ನಡೆಯುತಿರಲೊಡಂ (ರಾಮಾಶ್ವ. ೧೦೯-೧೮). **ಹೇರಾಟ:** ಅವು ಹೇರಾಟದ ಹೇಸರಗತ್ತೆಗಳ ಹಾಗೆ ಕಾಣಹತ್ತಿದವು (ಮುಂಬಯಿ. ೫-೨೬೮).

[ಹೇಱು$_1$ (< ಪೇಱು$_1$) + ಆಟ]

ಹೇಱೂಳ (ನಾ). ಹಿಂಸಿಸುವಿಕೆ; ಪೀಡಿಸುವಿಕೆ (?): ಮುದನು ತಗರ್ತ್ತಿಕೊಳೆಯ ಹತ್ತಿ ಹೆಂಗಳಿರ್ಕ್ಕೂಡೆ ಹೇಱೂಳವ ಮಾಡುತ್ತವಿರಲು (ಮೈಅರಿ. ೧೯೨೯, ೧೫-೪; 12ನೆಯ ಶತ). [?]

ಹೇಱಿಸು 'ಪೇಱಿಸು' ನೋ.

ಹೇಱು$_1$ 'ಪೇಱು$_1$' ನೋ.

ಹೇಱು$_2$ 'ಪೇಱು$_2$' ನೋ.

ಹೇಱುಕ (ನಾ). ಹೊರೆ; ಮೂಟೆ: ಕುದುರೆಯ ಕವಳ ಕಡಲೆ ಬೆಲ್ಲಗಳ ಹೇಱುಕದಲಿ ಬರಲು ಸಹಣಿಗಳು (ಚಂಪ್ರಸಾಂ. ೧೫-೮೨). [ಹೇಱು$_1$ (< ಪೇಱು$_1$) + - ಕ್$_1$]

ಹೇಱುಕಾಱ, ಹೇರುಕಾರ (ನಾ). ಹೊರೆಯನ್ನು ಸಾಗಿಸುವವನು; ವ್ಯಾಪಾರಿ: ಹೋರಿಗಳ ಬೀಱುಹಗ್ಗವ ಬೆನ್ನಿಗಿಕ್ಕೆಂಬಾ ಹೇಱುಕಾಱರ ನುಡಿಯುಣ್ಮೆತಲ್ಲಿ (ಶ್ರೀಪಾಲ. ೧೩-೯೦). **ಹೇರುಕಾರ:** ಹೇರುಕಾರರ ಕೂಟೆ ಓಡಿ ಬಂದ ಮಲ್ಲಯ್ಯ (ನಾಪದ. ೧೦೦).

[ಹೇಱು$_2$ (< ಪೇಱು$_2$) + - ಕಾಱ]

ಹೇಱುವೇಱು (ಕ್ರಿ). ಹೊರೆಯನ್ನು ಹೊರು: ಮಿಗೆ ಹೇಱುವೆತ್ತನಡ್ಪಸಹಿತಮಾ ವನಸ್ಥಳಮನೆಯ್ದಿದನೊರ್ವ ಮಹಾವಣಿಗ್ವರಂ (ದಶಕು. ೪-೭೭).

[ಹೇಱು$_2$ (< ಪೇಱು$_2$) + ಪೆಱು$_1$]

ಹೇಱಿಸು 'ಪೇಱಿಸು' ನೋ.

ಹೇಱು 'ಪೇಱ್' ನೋ.

ಹೇಱುಹ (ನಾ). ತಿಳಿಸುವುದು; ಹೇಳುವುದು: ಕಿವುಡಂಗೇಕಾಂತವಂ ಹೇಱುಹವುಂ . . . ಎಂಬ ನೀತಿಕಾಱನ ಮಾತದೇಕೆ ತಪ್ಪುಗುಂ (ಪಂಚತಂ. ೧೩೬-೯).

[ಹೇಱು (< ಪೇಱ್) + - ಹ$_2$ (< - ಪ$_2$)]

ಹೈ (ಅ). ಸಂಬೋಧನೆ ಮುಂತಾದ ಸಂದರ್ಭಗಳಲ್ಲಿ ಬಳಸುವ ಒಂದು ಅವ್ಯಯ: ಲಿಂಗಾರ್ಚನೆಯೆಡೆಗಾಗಿಸುವೈ ಹೈ ಯಜ್ಞದ ಕರ್ಮಗಳಿಗೆ ಮೊದಲಿದೆನಿಸುವೈ (ವೀರೇಚ. ೨-೪೨); ಹಲಗೆಯಾಚಾರ್ಯ ಪೇಳೆನಲು ಹೈ ಮಗನೆ . . . ಕೇಳು (ವೀಶೈಪು. ೩-೧೧-೩೯).

ಹೈಹಸಾದ = ತಮ್ಮ ದಯೆ, ತಮ್ಮ ಕರುಣೆ ಎಂದು ಮುಂತಾಗಿ ವಿಧೇಯತೆಯನ್ನು ಸೂಚಿಸುವಾಗ ಬಳಸುವ ಒಂದು ಅವ್ಯಯ: ಹೈ ಹಸಾದ ಭವತ್ ಕೃಪಾಸನ್ನಾಹವೇ ಸಾಮ್ರಾಜ್ಯವಾವುದನೂಹಿಸಿದೊಡಾ ಸ್ಥಿತಿಯೊಳಡಗಿಹೆವು (ಕುವ್ಯಾಅ. ೮-೭೮); ಅಲಘುಬಲ ಮಕರಾಕ್ಷ ಹೈಹಸಾದಮೆನುತ್ತ ಕೈಮುಗಿದು (ವೆಂಕಾರಾ. ೬-೩೮-೧೯). [ಸಂ.]

ಹೈಂದವ (ಗು). ಹಿಂದೂದೇಶಕ್ಕೆ ಸಂಬಂಧಿಸಿದ: ಹಿಂದುಮುಂದರಿವ ಹೈಂದವ ಧರ್ಮಕೆ ಶಬ್ದಶಿಲ್ಪದಿಂ ನಿಗಮದ ಗಂಗೆಗಾಗಮದ ಕಟ್ಟೆಯ ಕಟ್ಟಿದ ಬುದ್ಧಿಶಕ್ತಿಯಂ ಪೊಗಳ್ವೆನೆ ? (ಗಿಳಿವಿಂ. ೫೨-೮). [ಸಂ.]

ಹೈಕಳು 'ಹೈದ' ಪರಾ.

ಹೈಕೊಳ್ (ಕ್ರಿ). ಒಪ್ಪು; ಸಮ್ಮತಿಸು; ಅಂಗೀಕರಿಸು: ನಾ ಮಾಳ್ಪ ಚಿತ್ರವ ಭಾವ ಮೇಲ್ನೋಡೆಂದೆ ಹೈಕೊಂಡನು ಕಾಟಿಯ ಬೀಳ್ಕೊಟ್ಟನು (ಸೂಬಸೋ. ೧೯-೭೯); ಲಿಂಗಮಂ ಧರಿಸಿದಾಕ್ಷಣವೆ ಮುಡುಹಿನ ಮುದ್ರೆ ಪೋದಪುದದು ಕುಱುಹೆನಲು ಹೈಕೊಂಡು ಶಿವಭಕ್ತನಾಗಲು (ಗುರುಚಾ. ೧೦-೩೪). [ಹೈ + ಕೊಳ್$_1$]

ಹೈಗ$_1$ 'ಹವಿಕ' ನೋ.

ಹೈಗ$_2$ (ನಾ). ಒಂದು ಬಗೆಯ ಮರ: ಹೈಗ, ಉನ್ನಿಮರ, ಕಲ್‌ಬೋವು ದೊಡ್ಡೆಲೆಭೋಗಿ (ಮೈಔಗಿ. ೪೪-೮೭೪); ಹೈಗ (ಕವಸಿ) - ದೊಡ್ಡ ಮರ . . . ಬಹಳ ಕೆಲಸಗಳಿಗೆ ಬರುತ್ತದೆ (ಕಭಾಗ. ೫೦). [?]

ಹೈಗನುಡಿ (ನಾ). ಹವ್ಯಕರ ಭಾಷೆ: ಅವರು ಹವ್ಯಕರು. ಮಗೆ ಸಹಜವಾದ ಹೈಗನುಡಿಯಲ್ಲೇ ಸಲ್ಲಪಿಸುತ್ತಿದ್ದರು (ಚುಟ್ಟುಜೀ. ೧೨). [ಹೈಗ$_1$ (< ಹವಿಕ) + ನುಡಿ$_2$]

ಹೈಗೈ (ನಾ). ೧. ನಿರ್ಲಕ್ಷ್ಯ; ಅನಾದರ: ಅವನು ಬಾರದಿದ್ದರೆ ನೀನೇ ಬಂದು ಹೇಳಬೇಕು ನೋಡು ಇದರೊಳಗೆ ಹೈಗೈ ಆಗಬಾರದು (ಜಮೀನ್ದಾ. ೪೭). ೨. ಕೊರತೆ; ಕುಂದು; ನ್ಯೂನತೆ: ಏತರಲ್ಲಿಯೂ ಯಾರಿಗೂ ಹೈಗೈ ಆಗಲಿಲ್ಲ (ದೀಪಹ. II, ೩೬೬); ರೊಕ್ಕಕ್ಕೇನು ಹೈಗೈ ಇಲ್ಲ (ಪಡತೋ. ೧೭).

ಹೈಗೈ ಮಾಡು = ೧. ಅಸಡ್ಡೆ ಮಾಡು; ತಿರಸ್ಕರಿಸು: ಅವನು ಇವುಗಳ ವ್ಯವಸ್ಥೆಯ ವಿಷಯದಲ್ಲಿ ಹೈಗೈ ಮಾಡುವ ಜಾತಿಯಲ್ಲ (ದೀಪಹ. II, ೮); ಆಗ ಹೀಗ ಹೈಗೈ ಮಾಡಿದನೇನ ಕೇಳಿರಿ? (ನಡಬಾ. I, ೩೦೧). ೨. ಹೆಚ್ಚು ಕಡಿಮೆ ಮಾಡು; ಏರುಪೇರು ಮಾಡು: ಲೆಕ್ಕದಲ್ಲಿ ಏನಾದರೂ ಹೈಗೈ ಮಾಡಿದಿರೊ, ನಿಮ್ಮನ್ನೂ ಕೊಂದಾನು (ಗಾಳವ. ೧೮೮). ೩. ಹಿಂದೆ ಮುಂದೆ ನೋಡು; ಅಳುಕು (?): ಕಾಜಿ ಬೆಂಕಿ ಹಚ್ಚಲು ಹೈಗೈ ಮಾಡಲಿಲ್ಲ (ಕೊಕಶಾ. ೩೩); ತಾವು ತಮ್ಮ ಅಭಿಪ್ರಾಯ ತಿಳಿಸಲಿಕ್ಕೆ ಹೈಗೈಮಾಡದೆ ಬೇಗನೆ ತಿಳಿಸಬೇಕು (ಗಂಮಾಯಿ. ೨೨೮).

[← ಮರಾ. ಹೈಗಈ, ಹೈಗಯ, ಹಯಗಈ, ಹಯಗಯಾ]

ಹೈಡಿಂಬ (ಗು). ೧. ಹಿಡಿಂಬನಿಗೆ ಸೇರಿದ: ಹೈಡಿಂಬರಾಜ್ಯದಪಡೆತನವ ನೆಱೆ ಮಾಡಿ ನಿಲಿಸಿದನಾ ಘಟೋತ್ಕಚನ (ಕುವ್ಯಾಅ. ೯-೨೫). (ನಾ). ೨. ಹಿಡಿಂಬೆಯ ಮಗ; ಘಟೋತ್ಕಚ: ಬಲದ ಮುಂಗುಡಿ ಭೀಮನದು . . . ಬಲಮಹಾಂಬುಧಿಯೊಳಗಿರುಳ ತರವಳಿಕೆ ಹೈಡಿಂಬಂಗೆ (ಕುವ್ಯಾಉ. ೧೧-೪೯); ಹೈಡಿಂಬನ ಆಡಂಬರ ಅಸದಳವಾಗಲು ರಾಜರಾಜನು ಅಂಗರಾಜನಿಗೆ ಬೆಸಸಿದನು (ಭಾಮಿಣಿ. ೧೮). [ಸಂ.]

ಹೈಡಿಂಬಿ (ನಾ). ೧. ಘಟೋತ್ಕಚನ ಮಗ; ಮೇಘನಾದ: ಅರಸನಿತ್ತಂ ಭೀಮಹೈಡಿಂಬಿ ಕರ್ಣಜರ್ಗನುಮತಿಯನು (ಪೃಮಿಭಾ. ೨-೪೪). ೨. ಹಿಡಿಂಬೆಯ ಮಗ: ಘಟೋತ್ಕಚ. [ಸಂ.]

ಹೈತಕ 'ಪೈತಿಕ' ನೋ.

ಹೈತಿಕೆ 'ಹೈತಿಗ' ನೋ.

ಹೈತಿಗ, ಹೈತಿಕೆ, ಹೈತಿಗ್ಗೆ$_2$ (ಗು). ೧. ಪಿತೃವಿಗೆ ಸಂಬಂಧಿಸಿದ. (ನಾ). ೨. ಪಿತೃವಿಗೆ ಮಾಡುವ ಶ್ರಾದ್ಧ ,– ತಿಥಿ: "ಪೈತೃಕ - ಹೈತಿಗ, ಹೈತಿಗ" (ಶಮಾದ. ೨೫೫ ಪ್ರಯೋ). **ಹೈತಿಕೆ:** ೨. ಶಬ್ದಮಣಿದರ್ಪಣದ ಮೂಲೆಯಲ್ಲಿದ್ದು ಸಾಮಾನ್ಯಕಾವ್ಯರೂಢಿಯಲ್ಲಿ ಇಲ್ಲದ ಹೈತಿಕೆ (ಪೈತೃಕ) ಮೊದಲಾದ ಅನೇಕ ತದ್ಭವಗಳು ಕಾರಣವಾಗಿವೆ (ತವನ. ೧೯೭). **ಹೈತಿಗ್ಗೆ:** ೨ ಸತ್ತ ಮುತ್ತಯ್ಯನ ಹೈತಿಗೆಯನಿಂದ ಸಡ್ಡೆಯಿನಾಗಿಸಿ ಬಂದ ಬೊಮ್ಮರಕ್ಕಸಿಯರ್ಗೆ ನಿಮ್ಮಡಗಿನೆಡೆಗೆಯ್ವೆಂ (ರಾಮಾಶ್ವ. ೧೧೨-೧೨); ಕನ್ನಡದಲ್ಲಿ ಈ ಪದಗಳು ಸಂಸ್ಕೃತಮೂಲದವೆಂದು ಗುರುತಿಸದಷ್ಟು . . . ಸೇರಿಬಿಟ್ಟಿವೆ. ಉದಾಹರಣೆಗೆ . . . ಹರೆಯ, ಹೈತಿಗೆ (ಭಾಷಾಶಾ. ೨೯೪). [< ಸಂ. ಪೈತೃಕ]

ಹೈತಿಗ್ಗೆ$_1$ 'ಪೈತಿಕ' ನೋ.

ಹೈತಿಗ್ಗೆ$_2$ 'ಹೈತಿಗ' ನೋ.

ಹೈತಿಗ್ಗೆ$_3$ (ನಾ). "ಒಂದು ವಿಧ ಕಬ್ಬು" (ಸೂಪಶಾ. ಕೋಶ): ರಸದಾಳಿ ಹೈತಿಗೆ ಬಿಳಿಯ ಕರಿಯ ಮರಗಬ್ಬಿನೊಸರ್ವ ರಸಮಂ ಹಿಳಿದು (ಸೂಪಶಾ. ೨-೩೦). [?]

ಹೈದ, ಹಯ್ದ (ನಾ). ಹುಡುಗ; ಬಾಲಕ: ಹಿಡಿಯಾಳಾಗಿ ಸಿಕ್ಕಿದ ಚಿಕ್ಕ ಹೈದನ ಕಡಿದಡೆ ಕಲಹವಿಲ್ಲನುತ ಬಿಡಿಸಿಕೊಂಡಡೆ ನೋಡುವೆನೆಂದು ನಿಗಳವ ಜಡಿಸಿದ

ಪದಯುಗಳಕ್ಕೆ (ಮೋಹತ. ೬೬-೧೯); ನಾವವನರ್ತಿಯ ಹೈದಗಳು (ಗೋಕುನಿ. ೫೭-೧೦); ಅಲ್ಲಿಗೊಬ್ಬ ಜಪಾನೀನ ನೇಮಿಸಿಕೊಂಡಿದ್ದ . . . ಬಲು ಕುಳ್ಳ ಹೈದ (ಟಿಂಗೂಚಿ. ೧೦೩). ಹಯ್ದು: ನಾವೇನು ಕಮ್ಮಾರನ ಹಯ್ದುಂದಿರಾ, ಬುದ್ದಿ, ಮೂರು ಹೊತ್ತೂವೆ ಕೀಸಲಿಕ್ಕೆ ? (ಮಂತ್ರಶ. ೮೦-೨).

ಹೈಕಳು (ಬಹುವ): ಏನೂ ಅರೀದ ಹೈಕಳೂ ದೇವರ ಹಂಗೇ (ಅಡೂಬು. ೧೬); ಓದಿಸುವಾಗ ಹೈಕಳನ್ನು ಹೊಡೆಯಬೇಡ (ಮಾಮರಾ. ೧೯೧).

[ದೇ. ಹೈ: ಪೈಚಲ್; ಮಲ. ಪೈಕಲ್ - ಮಗು; ತೆಲು. ಪಯಿದ, ಪೈದ]

ಹೈದರಾಬಾದಿ (ನಾ). ಹೈದರಾಬಾದಿನಲ್ಲಿ ಟಂಕಿಸಿದ ಒಂದು ಬಗೆಯ ನಾಣ್ಯ: ಬೆಳ್ಳಿಯ ನಾಣ್ಯಗಳು . . . ೭ ಧಾರವಾಡೀ, ೮ ಹೈದರಾಬಾದಿ (ಕಭಾಗ. ೨೮೧).

[< ಹೈದರಾಬಾದ್]

ಹೈದರಿ (ನಾ). ಒಂದು ಬಗೆಯ ನಾಣ್ಯ: ನೂರು ಆರುವರಹ ಹೈದರಿ ಮೂರು ಹಣ ಹೈದರಿ ನಡಸುಕೊಂಡು ಬರುವುದು (ಮೈಲಿ. ೧೯೩೪, ೫೨-೨೦; 1812). [< ಹೈದರ್]

ಹೈದಲು (ನಾ). ಒಂದು ಬಗೆಯ ಮೀನು: ಪವಳವಾಯಂ ಹೈದಲುಂ ಬಾಳೆ . . . ಪಂದಿಗನೆಂಬ ಮೀನ್ಬೆಗದನಾ ಭಕ್ಷಂ (ತ್ರಿಪುವಿ. ೫೭-೮). [?]

ಹೈನ 'ಪಯನ್' ನೋ.

ಹೈನು 'ಪಯನ್' ನೋ.

ಹೈಮ (ಗು). ೧. ಚಿನ್ನದಿಂದ ಮಾಡಿದ; ಬಂಗಾರದ: ಕುಸುಮ ಸ್ವರ್ಣಾರ ಶೂನ್ಯೋದ್ಧತಕಚಭರಮುದ್ದಾಮ ಹೈಮ ಪ್ರಕಾಂಚೀಪ್ರಸರಾಪೇತಪ್ರಶುಂಭದ್ಧನಜಘನತಟಂ (ಎಕ. VII. ೫ಕಾಂ. ೧೦೩-೧೭; 1149). ೨. ಚಿನ್ನದ ಬಣ್ಣದ; ಹಳದಿ ಬಣ್ಣದಿಂದ ಕೂಡಿದ. ೩. ತಂಪಾದ; ತಣ್ಣನೆಯ. ೪. ಚಳಿಗಾಲಕ್ಕೆ ಸಂಬಂಧಿಸಿದ; ಹೇಮಂತಋತುವಿಗೆ ಸೇರಿದ. (ನಾ). ೫. ಚಿನ್ನ; ಬಂಗಾರ: ವಿನತ ನಾಗೇಂದ್ರ ಹಸ್ತಾರುಣಾಚ್ಛಂ ಹೈಮಂ ಕರ್ಣಾವತಂಸಂ ತನಗೆನೆ (ಅಜಪು. ೧-೧); ಹೈಮಂ ರಾಜತಮೆಂಬ ಲೋಹ ಯುಗ ಸಂಸಿದ್ಧಾದಿ ವಾದಕ್ರಿಯಾಸ್ವಾಮಿತ್ವಂ . . . ತಮಗೆಕ್ಕಲಾವಣಮನಲ್ (ಮಹಾನೇ. ೧-೧೩). ೬. ಚಿನ್ನದಿಂದ ಮಾಡಿದುದು. ೭. ತಂಪು; ಶೀತಲವಾದುದು: ತಳೆದುದ್ಯಾನಭವಾನಿಳಂ ಸರಸಿದಂ ಹೈಮಂ ವನಂ (ಶಾಂತಿಪು. ೬-೧೦೨). ೮. ಚಳಿಗಾಲ; ಹೇಮಂತಋತು: ಜನಪಾಂತಃಪುರಕಾಂತಾಜನವದನಸರೋಜವಮಶ್ರಾಜಲಕಣಮುಮನಾಂತನುಳರಿಸಿರ್ದುದು ಹಿಮಬಿಂದುನಿಚಿತಹೈಮಂ ಸರೋಜವನವಿಭ್ರಮಂ (ಅಜಪು. ೧೦-೪೩). ೯. ಮಂಜು; ಇಬ್ಬನಿ: 'ಹೈಮನಗ' ಪರಾ. [ಸಂ.]

ಹೈಮಂತ (ಗು). ೧. ಹೇಮಂತಋತುವಿಗೆ ಸಂಬಂಧಿಸಿದ. (ನಾ). ೨. ಚಳಿಗಾಲ; ಹೇಮಂತಋತು. [ಸಂ.]

ಹೈಮಕಂಕಣ (ನಾ). ೧. ಹಿಮದ ಹನಿ,– ಕಣ; ಹಿಮಬಿಂದು. ೨. ಬಂಗಾರದ ಬಳೆ. ೧, ೨ : ಲೋಕಪಾವನೆಯೊರ್ಮೆ ಬಲಿಯೊಳ್ ಸುಟಿಸುಟಿದುಮೊರ್ಮೆ ಹೈಮಕಂಕಣದಿನೊಪ್ಪುವ ತೆರೆಗೈಗಳಿನಪ್ಪಲ್ಕೆಂದು ಮೇಲ್ಯಾಯ್ದುಂ (ರಾಮಾಶ್ವ. ೩೦-೨೬).

[ಸಂ.]

ಹೈಮಕ್ಷ್ಮಾಭೃತ್ (ನಾ). ಹಿಮಾಲಯಪರ್ವತ: ಹೈಮಕ್ಷ್ಮಾಭೃತೇಂದ್ರಂ [ಪಾಕಾಂ. ಧರೇಂದ್ರಂ] ಬರೆಗವುಪಿಳಷಟ್ಪಂಡಭೂಭಾಗಮಂ . . . ದಿಗ್ವಿಜಯದೊಳಿಗೆ ದಾನಂದಭೇರೀರವಂ ಘರ್ಣಿಸೆ (ಆದಿಪು. ೧೪-೧೪೮). [ಸಂ. ಹೈಮಕ್ಷ್ಮಾಭೃತ್]

ಹೈಮನ (ಗು). ೧. ಚಳಿಗಾಲಕ್ಕೆ ಸಂಬಂಧಿಸಿದ. (ನಾ). ೨. ಚಳಿಗಾಲ: "ಹಿಮಸಮಯಭವಂ ಹೈಮನಂ" (ಮಸ್ತುಕೋ. ೧೧೬-೭೧). [ಸಂ.]

ಹೈಮನಗ (ನಾ). = ಹೈಮಕ್ಷ್ಮಾಭೃತ್: ಅಮರಾಪಗಾಪಯಃಪೂರಮನಾಂತ ಹೈಮ [ಪಾಕಾಂ. ಹರ್ಮ್ಯ] ನಗದಂತಿರೆ ದೇವಕುಲಂಗಳೊಪ್ಪುಗುಂ (ಕಾದಂಪೂ. ೨೯೫); ಅನಲನನವಪ್ರಂಭಮೋದಿತ್ತು . . . ಈ ಲೋಕಮಂ ಹೈಮನಗಂ ಕೈಕೊಂಡುದೆಂಬನ್ನೆಗ ಮೊದವಿದವಶ್ಯಾಯದೊಳ್ ನಿಂದನೇಕಾಂತನಿವಾಸಂ . . . ಯೋಗಿನಾಥಂ (ಸುಖುಮಾ. ೪-೧೧). [ಸಂ.]

ಹೈಮವತ (ಗು). ೧. ಹಿಮದಿಂದ ಆವೃತವಾದ. ೨. ಹಿಮಾಲಯಪರ್ವತಕ್ಕೆ ಸಂಬಂಧಿಸಿದ. (ನಾ). ೩. ಭಾರತದೇಶ. ೪. ಒಂದು ಬಗೆಯ ವಿಷ. ೫. [ಜೈನ] ಏಳು ಜನಪದಗಳಲ್ಲಿ ಒಂದು; ℙ "ಈ ಕ್ಷೇತ್ರದ ದಕ್ಷಿಣಕ್ಕೆ ಹಿಮವತ್ಪರ್ವತವೂ ಉತ್ತರಕ್ಕೆ ಮಹಾಹಿಮವತ್ಪರ್ವತವೂ ಪೂರ್ವಪಶ್ಚಿಮಗಳಲ್ಲಿ ಸಮುದ್ರಗಳೂ ಇರುತ್ತವೆ. ಇದು ಜಘನ್ಯಭೋಗಭೂಮಿಯು" (ಆದಿಪು. ಜೈನಪಾರಿಭಾಷಿಕಶಬ್ದಕೋಶ): ಜಂಬೂದ್ವೀಪದ ಹೈಮವತಮೆಂಬ ಜಘನ್ಯಭೂಮಿಯೊಳ್ . . . ಪುಟ್ಟಿದೊಂ (ವರ್ಧಮಾ. ೧೭೪-೫); ಆ ತಿರ್ಯಗ್‌ಲೋಕದ ನಟ್ಟನಡುವೆ ಲವಣಜಲಧಿಪರಿವೃತವಾಗಿ ಭರತ ಹೈಮವತ . . . ಐರಾವತಂಗಳೆಂಬೀಯುಂ ಜನಪದಂಗಳಿಂ ಎಸೆದು (ಆದಿಪು. ೧-೪೮ ವ). [ಸಂ.]

ಹೈಮವತಿ (ನಾ). ೧. ಹಿಮವಂತನ ಮಗಳು; ಪಾರ್ವತಿ: "ರುದ್ರಾಣೀ . . . ಹೈಮವತೀ, ಪಾರ್ವತೀ . . . ಮೇನಕಾತ್ಮಜಾ - ಈ ೨೧ ಗೌರೀದೇವಿಯ ಪೆಸರ್" (ಪಲಾಯು. ೪-೧೫೫); ಅನಘನು ನಲ್ಮೆಯೊಳಿರಿಭಕ್ತನ ಗುಣಮಂ ಹೈಮವತಿಗೆ ಪೇಳುತ್ತ (ತ್ರಿಪುವಿ. ೨೨-೬೨); ಮನದಿಷ್ಟವಿತ್ತೆನ್ನ ಪಾಲಿಪುದು ಹೈಮವತಿಯೇ (ವ್ಯಾಧರಾ. ೧-೬). ೨. ಒಂದು ಬಗೆಯ ಸಸ್ಯ ಮತ್ತು ಅದರ ಬೇರು; ಬಿಳಿಯ ಬಜೆ. ೩. ಹಳದಿ ರಸವಿರುವ ಒಂದು ಬಗೆಯ ಸಸ್ಯ; ಸ್ವರ್ಣಕ್ಷೀರಿ. ೪. ಅಣಲೆ; ಹರೀತಕಿವೃಕ್ಷ: "ಚೇತಕಿ ಶಿವೆ ಹೈಮವತಿ ಹರೀತಕಿಯಭಯಾಖ್ಯೆ" (ವಸ್ತುಕೋ. ೬೫-೧೨). ೫. ಗಂಗಾನದಿ. ೬. ಹೊಂಬಣ್ಣದ ಒಂದು ಬಗೆಯ ದ್ರಾಕ್ಷೆ.

[ಸಂ. ಹೈಮವತೀ]

ಹೈಮಶೈಲ (ನಾ). = ಹೈಮಕ್ಷ್ಮಾಭೃತ್: ನಿಧಿರತ್ನವ್ಯಾತಮಂತಃಪುರಮೆಸವ ಪಡಂಗಂ ಬಲಂ ಹೈಮ [ಪಾಕಾಂ. ಹಿಮ್ಯ, ಹಿಮ, ಹರ್ಮ್ಯ] ಶೈಲಾವಧಿ ಷಟ್ಖಂಡಂ ಮಹೀಮಂಡಲಂ (ಆದಿಪು. ೪-೭೮). [ಸಂ.]

ಹೈಮಾಂಬರ (ನಾ). ಪೀತಾಂಬರವನ್ನು ಧರಿಸಿರುವವನು; ಕೃಷ್ಣ: ಹೈಮಾಂಬರಂ ಸಕಲದಳಸಹಿತ ಮೈದುನನ ಮೈಮಚ್ಚಿಕೆಗೆ ಮುಖತುರಂಗದೊಡನೈದಿದಂ (ಜೈಮಭಾ. ೨೫-೨). [ಸಂ.]

ಹೈಮಾಂಬುಜ (ನಾ). ಚಿನ್ನದ ಬಣ್ಣದ ತಾವರೆ; ಹೊಂದಾವರೆ: ಕೀಟಂ . . . ತುಂಬಿವೊಲೀಂಟೆ ರಾಗಿಸುಗುಮೇ ಹೈಮಾಂಬುಜಾಮೋದಮಂ (ಮಲ್ಲಿಪು. ೧-೨೬). [ಸಂ.]

ಹೈಮಾಚಳ (ನಾ). = ಹೈಮಕ್ಷ್ಮಾಭೃತ್: ಹೈಮಾಚಳಮಿರ್ಪಂತಾಗಳಿರ್ದ[೦] . . . ಯೋಗಿನಾಥಂ (ಸುಖುಮಾ. ೪-೯). [ಸಂ. ಹೈಮಾಚಲ]

ಹೈಮಾದ್ರಿ (ನಾ). = ಹೈಮಕ್ಷ್ಮಾಭೃತ್: ತೋಱಿದನಾ ತನ್ನೊಡವರ್ಪ ಭೂಪನಿಕರಕ್ಕುತ್ತುಂಗಹೈಮಾದ್ರಿಯಂ (ಆದಿಪು. ೧೩-೭೯); ಮಹಿಪಂ ಹೈಮಾದ್ರಿಯಂ ನೋಡಿದಂ (ಶಾಂತಿಪು. ೧೧-೭೦). [ಸಂ.]

ಹೈಯಂಗವೀನ (ನಾ). ೧. ಹಿಂದಿನ ದಿನ ಕರೆದ ಹಾಲನ್ನು ಹೆಪ್ಪು ಹಾಕಿ, ತೆಗೆದ ಬೆಣ್ಣೆ; ಹೊಸ ಬೆಣ್ಣೆ; ನವನೀತ: ಅತಿದೂರೋಚ್ಚ್ವಾಸ ವಿಕಾಸನಾಸಾಂಜಲಿ ಪುಟಪೇಯಮಾನದುಗ್ಧಹೈಯಂಗವೀನಮಂ . . . ಭರತೇಶನಾರೋಗಿಸಿದಂ (ಆದಿಪು. ೧೧-೨೬ ವ); ಸುರಭಿತರ ನವೀನ ಹೈಯಂಗವೀನಕ್ಷೀರದಧಿಪೂರಿತೋದಾರಕುಂಭಂಗಳೊಳಂ . . . ಅಭಿಷೇಕಂಗೆಯ್ದು (ವರ್ಧಮಾ. ೮-೪೫ ವ). ೨. ಹೊಸ ತುಪ್ಪ. [ಸಂ.]

ಹೈರಣ್ಯ (ಗು). ೧. ಚಿನ್ನದ; ಬಂಗಾರದಿಂದ ಮಾಡಿದ. (ನಾ). ೨. ಚಿನ್ನ; ಬಂಗಾರ: ಕರ್ಣ ಗಂಗಾಸುತ ಹೈರಣ್ಯಮಯೂರಧ್ವಜಧವಳಮಿವಿಂತೈದು ಗಾಂಗೇಯನಾಮಂ (ನಾನಾರ. ೪೫). [ಸಂ.]

ಹೈರಣ್ಯಬಾಣ (ನಾ). ಚಿನ್ನದ ಗರಿಗಳಿಂದ ಕೂಡಿದ ಬಾಣ: ಭೀತಿಗೊಳುತಿರಲು ಭಯಮೋಹರ ಘಾತುಕನು ಹೈರಣ್ಯಬಾಣವ ಬೇಗ ತೆಗೆದೆಚ್ಚ (ಕಾಶಾ. ೨೧-೬೦). [ಸಂ.]

ಹೈರಣ್ಯವತ (ನಾ). [ಜೈನ] ಏಳು ಜನಪದಗಳಲ್ಲಿ ಒಂದು; ℙ "ರುಕ್ಮಿ ಮತ್ತು ಶಿಖರಿಪರ್ವತಗಳ ಮತ್ತು ಪೂರ್ವಪಶ್ಚಿಮಸಮುದ್ರಗಳ ನಡುವಿನ ಕ್ಷೇತ್ರ. ಇದು ಜಘನ್ಯಭೋಗಭೂಮಿ" (ಆದಿಪು. ಜೈನಪಾರಿಭಾಷಿಕಶಬ್ದಕೋಶ): ಆ ತಿರ್ಯಗ್‌ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ . . . ಹೈರಣ್ಯವತೈರಾವತಂಗಳೆಂಬೀಯುಂ ಜನಪದಂಗಳಿಂ . . . ಮಹಾವಾಹಿನಿಗಳಿಂದಮೆಸೆದು

(ಆದಿಪು. ೧-೪೦ ವ); ಹೈಮವತ ಹೈರಣ್ಯವತಂಗಳೆಲ್ಲಂ ಜಘನ್ಯಭೋಗಭೂಮಿಗಳಕ್ಕುಂ (ಚಂದ್ರಪ್ರ. ೩-೩೨ ವ). 'ಹೈಮವತ' ಪರಾ. [ಸಂ. ಹೈರಣ್ಯವತ್]

ಹೈರಾಣ, ಹೈರಾನು (ನಾ). ೧. ದಣಿವು; ಬಳಲಿಕೆ; ಆಯಾಸ: ಹಗಲೆಲ್ಲ ಹೈರಾಣ, ಮಾತೆಂಬುದೇ ಮರಣ (ಭಾವಜೀ. ೨-೨೭); ವೈನಿ ಹೈರಾಣವಾಗಿ ಹಾಸಿಗೆಯ ಮೇಲೆ ಮಲಗಿಕೊಂಡರು (ವೈನ. ೬೨). ೨. ಕಂಗಾಲುಸ್ಥಿತಿ; ಕಂಗಟ್ಟಿರುವಿಕೆ: ಈಗರಡು ವರುಷಗಳಿಂದ ನೌಕರಿಗಾಗಿ ಅಲೆದು ನನ್ನ ಜೀವ ಹೈರಾಣವಾಗಿ ಹೋಗಿದೆ (ಚಿವಾಂ. ೩೩); ಗೋಪೆಂದರಾಯರಿಗೆ ತಾವೊಂದು ಅನಿರೀಕ್ಷಿತಪ್ರಸಂಗವನ್ನು ಎದುರಿಸಬೇಕಾದ ಸಂದರ್ಭ ಬಂದಂತಾಗಿ ಬಹಳ ಹೈರಾಣಾದರು (ಮುಗಿಮ. ೧೩೪). ೩. ಕಷ್ಟ; ತೊಂದರೆ: ಅವರು ಮೈಮೇಲೆ ಕಂಬಳಿಯ ಮುಸುಕು ಹಾಕಿಕೊಂಡಿದ್ದಾಗ್ಯೂ ನೊಣಗಳು ಅವರನ್ನು ಕಡಿದು ಹೈರಾಣ ಮಾಡುತ್ತವೆ (ಕಭಾಗ. ೬೬). **ಹೈರಾನು**: ೨. ನಮ್ಮ ಕುಟುಂಬ ಮಕ್ಕಳು ಯಾವತ್ತು ಖರ್ಚಿಗೆ ಇಲ್ಲದೆ, ಹೈರಾನು ಆಗುತ್ತದೆ (ರಾಚೀಂದ್ರ. ೬೯). ೩. ಅಲ್ಲಿ ರೈತರ ನಿಲ್ಲುವದಕ್ಕೆ ಬಿಡದೆ ಲೂಟಮಾಡಿ ಶೀಮೆ ಹೈರಾನುಮಾಡುತ್ತ ಇದ್ದಲ್ಲಿ (ರಾಚೀಂದ್ರ. ೫).

[← ಆರ. ಹಿಂ. ಹೈರಾನ್; ಮರಾ. ಹೈರಾಣ]

ಹೈರಾಣಗೊಳ್ಳು (ಕ್ರ). ಕಂಗೆಡು; ಕಂಗಾಲಾಗು: ಭಾರತೀಯರ ಈ ಹೈರಾಣಗೊಂಡ ಜೀವನ ಮಾರ್ಪಾಟಾಗಬೇಕು (ಎಚ್ಚಸಾ. ೧೫೦).

[ಹೈರಾಣ + ಕೊಳ್ಳು$_1$ (< ಕೊಳ್$_1$)]

ಹೈರಾನು 'ಹೈರಾಣ' ನೋ.

ಹೈಲಾಟ (ನಾ). ಹುಡುಗಾಟ; ಚೆಲ್ಲಾಟ; ಚಿನ್ನಾಟ: ನೀವು ಹೈಲಾಟಕ್ಕೆ ಶುರು ಮಾಡಿ ತಲೆ ಮೇಲೆ ಮನೆ ಕೆಡವಿಕೋಬೇಡಿ (ಕಲನ. ೨೮೪); ನನ್ನ ಹತ್ತಿರವಾ ಹೈಲಾಟ! ಎಂದು ಘರ್ಜಿಸಿದ (ಸರ್ವಮಂ. ೫೨). [ಹೈಲು + ಆಟ]

ಹೈಲು (ನಾ). ಹುಡುಗಾಟ; ಹುಚ್ಚಾಟ; ಚೇಷ್ಟೆ: ನಿನ್ನ ಹೈಲಿಗೆ ಕಿಟ್ಟು ಹಾಕಿತು (ಮರಮ. ೨೮); ಇದಲ್ಲಿಯ ಪೋಲಿರಕ್ಕಸ! ಬರಿಯ ಹೈಲು (ಬಿಗಾ. ೫೨-೨೬).

ಹೈಲಾಗು = ೧. ಕುಚೇಷ್ಟೆಗೆ ಗುರಿಯಾಗು; ನಗೆಗೀಡಾಗು: ವಂತಿಗೆ, ವಡಾರಮಾಡಿ, ನಡೆಯಿಸುವ ಕೆಲಸವನ್ನು ಈ ಉಳ್ಳೂರು ಹೆಬ್ಬಾರ ತಾನು ಮಾಡಿ ಹೈಲಾಗಲಿಕ್ಕುಂಟು (ಸ್ವಪ್ನಕೂ. ೫೮). ೨. (ಆಲಂ) ಹಾಳಾಗು; ಕೆಟ್ಟುಹೋಗು: ವ್ಯಾಪಾರ ಹೈಲಾಯಿತಲ್ಲ (ಹಹಸ. ೬೬); ಇತರ ನಾಯಿಗಳೂ ಅಲ್ಲಿಗೆ ವೇಗವಾಗಿ ಓಡಿ ಬಂದುವು. ಸರಿ. ವ್ಯಾಪಾರ ಹೈಲಾಯಿತು (ಮಲಚ. ೧೦). **ಹೈಲುಕೆಲಸ** = (ಆಲಂ) ದಡ್ಡತನದ ಕಾರ್ಯ: ಬೇಡುವುದೇ? ಛೀ, ಹೈಲುಕೆಲಸ . . . ಈ ಜೀವವನ್ನೇ ಕೊಟ್ಟವನ ಹತ್ತಿರ, ಅದನ್ನು ಕೊಡು, ಇದನ್ನು ಕೊಡು - ಎಂದು ಬೇಡಿದರೆ ನಮಗೆ ಬುದ್ಧಿ ಉಂಟು ಎಂದ ಹಾಗಾಯಿತೇ? (ಮೂಕಜ್ಜಿ. ೧೦೪). [< ಏಲು]

ಹೈವ, ಹೈವೆ (ನಾ). ೧. ಉತ್ತರಕರ್ನಾಟಕದ ಒಂದು ಪ್ರದೇಶದ ಹೆಸರು; ಹೈಗನಾಡು: ಆಂಧ್ರ ದ್ರಾವಿಡ ಹೈವ ತುಳು ಮಲಯ (ಎಕ. VII. ಶಿವಮೊ. ೭೯-೨೦; 1154?); ರಾಮಚಂದ್ರದೇವ ಒಡರು . . . ಹೈವ ತುಳು ಕೊಂಕಣ ಮುಂತಾದ ರಾಜ್ಯಂಗಳನು ಪ್ರತಿಪಾಳಿಸುತ್ತಿದ್ದು (ಮೈಅರಿ. ೧೯೩೪, ೩೦-೪; 1447); ಆವಗಂ ತನ್ನೀರ ಮಿಾವ ನಿರ್ಲಜ್ಜೆಯವಳೀ ವನಿತೆ ಹೈವೆ[ಪಾಕಾಂ. ಗ]ನಾಡವಳೆನಿಪಳು (ಜನವ. ೬-೨೬). ೨. ಹೈವದೇಶಕ್ಕೆ ಸೇರಿದವನು: "ಹೈವ ಹೈವಳನಕ್ಕು" (ಮಂಗರಾ. ೧೧೨-೭). ೩. ಹೈವದೇಶದ ಭಾಷೆ: ಪ್ರಾಕೃತಚಂದ್ರಿಕಾಕಾರನು 'ಕರ್ಣಾಟ', 'ಹೈವ', 'ಕಾಂತಲ', ಭಾಷೆಗಳು ಬೇರೆ ಬೇರೆ ಎನ್ನುತ್ತಾನೆ! (ಕರ್ನಾಟ. ೧೬೬). ೪. ಒಂದು ಜನಾಂಗದ ಹೆಸರು: (೫). 'ಹೈಗ$_1$' ಪರಾ. **ಹೈವೆ**: ೧. ಹೈವೆಯು ಸಪ್ತಕೊಂಕಣಗಳೊಳಗಿನ ಒಂದು ಪ್ರಾಂತವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ (ಸಾಹಸ. ೫೯). [?]

ಹೈವಳ (ನಾ). = ಹೈವ ೨ : "ಹೈವ ಹೈವಳನಕ್ಕು" (ಮಂಗರಾ. ೧೧೨-೭). [< ಹೈವ]

ಹೈವಿಗ (ನಾ). = ಹೈವ ೧ : ಹೈವಿಗ ತೆಲುಂಗ ಗುರ್ಜರ . . . ಕಾಂಬೋಜದೇಶದ ಸಕಲಶರಣಾರ್ಥಿತರುತಿರ್ದರು (ಚಿಲುಪು. ೬-೪೯). [< ಹೈವ]

ಹೈವೆ 'ಹೈವ' ನೋ.

ಹೈಹಯ (ನಾ). ೧. ಒಂದು ರಾಜವಂಶದ ಹೆಸರು: ಬಾದಾಮಿಚಳುಕ್ಯ ವಿಕ್ರಮಾದಿತ್ಯನ ಇಬ್ಬರು ಮಡದಿಯರು ಹೈಹಯವಂಶದ ಕಲಚೂರಿ ಮನೆತನದವರು (ಕರ್ನಾಟ. ೧೩೫). ೨. ಹೈಹಯವಂಶದ ಒಬ್ಬ ದೊರೆ; ಕಾರ್ತವೀರ್ಯ: ದೇವ ಹೈಹಯ ಬಾಹುಗಹನದವದಹನ ಜಯ (ಜಗವಿ. ೫-೧೦೨ ರಗಳೆ). [ಸಂ.]

ಹೊಂ 'ಪೊನ್' ನೋ.

ಹೊಂಕಿಡಿ 'ಹೊಂಗಿಡಿ' ನೋ.

ಹೊಂಕುಂದ 'ಪೊಂಕುಂದ' ನೋ.

ಹೊಂಗಂಟೆ 'ಪೊಂಗಂಟೆ' ನೋ.

ಹೊಂಗಂಬಿ (ನಾ). ಚಿನ್ನದ ಕೋಲು; ಸುವರ್ಣದ ದಂಡ,— ಸಲಾಕೆ: ಸಂದಣಿಸಿ ನೃಪರಾಣಿವಾಸದ ಗೊಂದಣದ ದಂಡಿಗೆಗಳಿಳಿದವು ಮುಂದೆ ಹೊಂಗಂಬಿಗಳ ಜೋದರ ಜನಪಲಾಯನದ (ಕುವ್ಯಾಳ. ೭-೧೬). [ಹೊಂ (< ಪೊನ್) + ಕಂಬಿ$_1$]

ಹೊಂಗಂಬುಗೆ (ನಾ). ಚಿನ್ನದಿಂದ ತಯಾರಿಸಿದ (ಆಯುಧಗಳನ್ನು ಇಡುವ) ರಥದ ಒಂದು ಭಾಗ: ಹೊಗರೊಗುವ ಸೂನಿಗೆಯ ಸುಪತಾಕೆಗಳ ಸಿಂಧದ ಹೊಳೆವ ಹೊಂಗಂಬುಗೆಯ ಹೂಡಿದ ಹಯದ ಸೂತರ ಗಳಹ ಗರ್ಜನೆಯ . . . ರಥವಾಜಿಗಳ ನೋಡ್ಕೆ ಪಾರ್ಥ (ಕುವ್ಯಾಭೀ. ೩-೧೯). [ಹೊಂ (< ಪೊನ್) + ಕಂಬುಗೆ]

ಹೊಂಗಗ್ಗರ (ನಾ). ಚಿನ್ನದ ಕಿರುಗೆಜ್ಜೆಗಳನ್ನುಳ್ಳ ಒಂದು ಬಗೆಯ ಆಭರಣ: ತೊಟ್ಟಿಲಿಗೆ ಕೈಗೆಯ್ದ ಹೊಂಗಗ್ಗರದ ಸರಂ ಫಲಿರೆನಲ್ ಬೆಚ್ಚುತೆಳ್ದರ್ತಳುತ್ತಿರ್ದನಂ, ಕಂದನಂ, ವಜ್ರಾರಿಯಂ ವಕ್ಷಕವುಂಚಿದಳ್ ಲಂಕೇಶ್ವರನ ಸೊಸೆ! (ಶ್ರೀರಾಮಾ. ೭೩೨-೭೩೦).

[ಹೊಂ (< ಪೊನ್) + ಗಗ್ಗರ$_1$ (< ಗರ್ಗರ$_1$)]

ಹೊಂಗಟ್ಟಿಗೆ 'ಪೊಂಗಟ್ಟಿಗೆ' ನೋ.

ಹೊಂಗಟ್ಟಿಸು (ಕ್ರ). (ಕನ್ಯಾಶುಲ್ಕವಾಗಿ) ಹೊನ್ನನ್ನು ಕಟ್ಟಿಸು; ತೆರವನ್ನು ಕೊಡುವಂತೆ ಮಾಡು: ಪಟ್ಟರ್ಕೆವು ಕುಳ್ಳರ್ಕೆವು ನೆಟ್ಟನೆ ನಿಂದಿರ್ಕೆ ವೊಡಲದೆಂತಿರ್ದೊಡಮೇಂ ದಿಟ್ಟ ನಿಜದಲ್ಲಿ ನಿಲೆ ಹೊಂಗಟ್ಟಿಸನೇ ಮುಕ್ತಿಕನ್ನೆಗಾ ಮುನಿಮಾನ್ಯಂ (ಪಾಶಾ. ೬೭೦). [ಹೊಂ (< ಪೊನ್) + ಕಟ್ಟು$_1$ + - ಇಸು$_3$]

ಹೊಂಗಟ್ಟು$_1$ (ನಾ). ಚಿನ್ನದ ಕಟ್ಟು,— ಅಣಸು; ಸುವರ್ಣದ ಚೌಕಟ್ಟು: ಕಟ್ಟ ಮೆಜೆವ ಕಠಾರಿಗಳ ಹೊಂಗಟ್ಟುಗಳೊಳಿಸವ ಇಟ್ಟ ಕಬ್ಬುನ ಕೋಲುಗಳ ಪಿಡಿದು (ಬುಸಪು. ೬೧-೨೬); ಹಲವು ಫಲಭರದ ಕಟ್ಟಿದಿರ ಕಳವಣ್ಣುಗಳ ಕಡಲಿಟ್ಟು ಸುರಿವ ಸುಧಾರಸದ ಹೊಂಗಟ್ಟುಗಳ ಫಲಭೂಜರಾಜಿಯ ಕಿತ್ತನಾ ಹನುಮ (ತೊರಾ. ೫-೪-೫).

[ಹೊಂ (< ಪೊನ್) + ಕಟ್ಟು$_1$]

ಹೊಂಗಟ್ಟುಬೆತ್ತ (ನಾ). ಚಿನ್ನದ ಕಟ್ಟು ಹಾಕಿರುವ ಬೆತ್ತ; ಸುವರ್ಣದ ಅಣಸು ಹಾಕಿರುವ ದಂಡ: ಪಡಿಗ ಪಾವುಗೆ ಬಜ್ಜಣಿಗೆ ಹೊಂಗಟ್ಟುಬೆತ್ತಗಳಾ ಪಿಡಿದು ಸೇವಕಜನರು . . . ಕಟ್ಟಳೆಯೊಳಿಗಳೆ ಸನ್ನದ್ಧರಾಗಿಹರು (ಆನಂದಾ. ೧-೩-೪೨).

[ಹೊಂಗಟ್ಟು + ಬೆತ್ತ]

ಹೊಂಗಠಾರಿ (ನಾ). ಚಿನ್ನದ ಕಠಾರಿ; ಸುವರ್ಣದ ಕಠಾರಿ: ಹೊಂಗಠಾರಿಯ ಕೋಲುವಿಡಿದುಲ್ಲಂಘಿಸುತ ಜಡಿಜಡಿದು ಚಿಮ್ಮುತ . . . ನಂಬಿಯಣ್ಣಂ ಪರಮಲೀಲೆಯೊಳುದ್ಧಚಮ್ಮಾವುಗೆಗಳಂ ಮೆಟ್ಟಿ ಸರಸರನೆ ನಡೆತಂದು (ಬುಸಪು. ೨೭-೧೨). [ಹೊಂ (< ಪೊನ್) + ಕಠಾರಿ (< ಕಟಾರ್ಯ)]

ಹೊಂಗಡಗ 'ಪೊಂಗಡಗ' ನೋ.

ಹೊಂಗಡಲು 'ಪೊಂಗಡಲು' ನೋ.

ಹೊಂಗಡಲೆ (ನಾ). ಒಂದು ಬಗೆಯ ಕಡಲೆ: "ಚಣಗೌಳಃ - ಹೊಂಗಡಲೆ" (ಓಷಧಿ. ೫೪). [ಹೊಂ (< ಪೊನ್) + ಕಡಲೆ]

ಹೊಂಗಣಜಿಲು, ಹೊಂಗಣಜಿಲು, ಹೊಂಗಣಜಿಲೆ (ನಾ). ಒಂದು ಬಗೆಯ ವನೌಷಧಿ; ಗಣಜಿಲೆಯಲ್ಲಿ ಒಂದು ಬಗೆ: "ಶಿವಮಲ್ಲಿಕಾ - ಹೊಂಗಣಜಿಲು, ಉಮ್ಮತ್ತ" (ಓಷಧಿ. ೧೬೬). **ಹೊಂಗಣಜಿಲು**: "ಪಾಶುಪತಃ, ಪಾಶುಪತಾ - ಈ ಯೆರಡುಂ ಹೊಂಗಣಜಿಲು" (ಓಷಧಿ. ೯೫). **ಹೊಂಗಣಜಿಲೆ**: "ವಸೋದಃ - ಹೊಂಗಣಜಿಲೆ" (ಓಷಧಿ. ೧೪೭). [ಹೊಂ (< ಪೊನ್) + ಗಣಜಿಲು (< ಗಣಜಿಲೆ$_1$)]

ಹೊಂಗಣಜಿಲು 'ಹೊಂಗಣಜಿಲು' ನೋ.

ಹೊಂಗಣಜೆಲೆ 'ಹೊಂಗಣಜಿಲು' ನೋ.

ಹೊಂಗಣೆ 'ಪೊಂಗಣೆ' ನೋ.

ಹೊಂಗದಳಿ 'ಪೊಂಗದಳಿ' ನೋ.

ಹೊಂಗದಿರು 'ಪೊಂಗದಿರ್$_2$' ನೋ.

ಹೊಂಗದ್ದುಗೆ (ನಾ). ಚಿನ್ನದ ಆಸನ; ಸುವರ್ಣದ ಪೀಠ: ಬಿಗಿದ ಕೂರಂಕುಶದ ಮಾವಂತಿಗನ ಸನ್ನೆಗೆ ಕುಸಿದ ದಂತಿಯ ಹೆಗಲ ಹೊಂಗದ್ದುಗೆಗೆ ಬಿಜಯಂಗೈದನಾ ಭೂಪ (ಕುಮಾಸ. ೧೨-೯೭); ಅಡರಿದನು ನಿಜಸತಿಸಹಿತ ಹೊಂಗದ್ದುಗೆಯ ಹೊಂಬೆಸೆದ ಆಂಚೆಯದ ರತುನಲಹರಿಯ ಲಳಿಯ ಭದ್ರಾಯತಮತಂಗದ ಕಂಧರವ (ತೊರರಾ. ೨-೨-೨೧). [ಹೊಂ (< ಪೊನ್) + ಗದ್ದುಗೆ$_2$ (< ಗರ್ದುಗೆ$_2$)]

ಹೊಂಗನಸು (ನಾ). (ಆಲಂ) ಸುಂದರವಾದ ಸ್ವಪ್ನ; ಹಿತಕರವಾದ ಕನಸು: ಬಯಕೆ ಕೈಗೂಡದಾ ಬಾಲೆ ಹನಿಗಣ್ಣಾಗಿ ನಿಡುಸುಯ್ದು ನಿಲ್ಲುವಳ್, ಕಂಬನಿಯೊಳೆನ್ನೊಂದು ಹೊಂಗನಸು ಕಾಂಬಳೆಂಬಂತೆ (ಚಿತ್ರಾಂಗ. ೪-೯೭); ಹೊಂಗನಸುಗಳು ಎಂದಿಗೂ ನನ್ನವೆ (ಮುರುಕು. ೭೮). [ಹೊಂ (< ಪೊನ್) + ಕನಸು]

ಹೊಂಗರಗ 'ಪೊಂಗರಗ' ನೋ.

ಹೊಂಗರಡಿಗೆ 'ಪೊಂಗರಡಿಗೆ' ನೋ.

ಹೊಂಗರಿ$_1$ 'ಪೊಂಗಱಿ' ನೋ.

ಹೊಂಗರಿ$_2$ 'ಪೊಂಗುರು' ನೋ.

ಹೊಂಗರುಗ (ನಾ). ಒಂದು ಬಗೆಯ ಸಸ್ಯ; ಗರುಗದಲ್ಲಿ ಒಂದು ಬಗೆ: "ಕೃಷ್ಣನಾಳ:-ಹೊಂಗರುಗ" (ಓಷಧಿ. ೬೯). [ಹೊಂ (< ಪೊನ್) + ಗರುಗ]

ಹೊಂಗರೆ 'ಪೊಂಗರೆ' ನೋ.

ಹೊಂಗರೆಯಂಬರ (ನಾ). ಬಂಗಾರದ ಅಂಚುಳ್ಳ ಬಟ್ಟೆ; ಜರತಾರಿಯ ಅಂಚುಳ್ಳ ವಸ್ತ್ರ: ಭಂಗಾರ ಹಲವುಂಟು ದೇವರ ಗೃಹದೊಳೀವುಂಗುರ ತೊಂಡಿಲು ಬಂದಿ ಹೊಂಗರೆಯಂಬರವೀ ನಾಲ್ಕು ಹೆಚ್ಚು ಪುಣ್ಯಾಂಗನೆಗಿವು ಸಲಲೆಂದ (ಭರಚ. ೩೮-೭೭). [ಹೊಂಗರೆ (< ಪೊಂಗರೆ) + ಅಂಬರ]

ಹೊಂಗಲಶ 'ಪೊಂಗಳಶ' ನೋ.

ಹೊಂಗಲಸ 'ಪೊಂಗಳಸ' ನೋ.

ಹೊಂಗಲ್ಲು 'ಪೊಂಗಲ್$_1$' ನೋ.

ಹೊಂಗಳಶ 'ಪೊಂಗಳಶ' ನೋ.

ಹೊಂಗಳಸ 'ಪೊಂಗಳಸ' ನೋ.

ಹೊಂಗಱಿ 'ಪೊಂಗಱಿ' ನೋ.

ಹೊಂಗಱಿಯಂಬು (ನಾ). ಚಿನ್ನದ ಗರಿಯುಳ್ಳ ಬಾಣ: ನಿಮರ್ದ ಹೊಂಗಱಿಯಂಬು ಹೊಳೆಹೊಳೆದು ಮುರಹರನ ಪಾದಾರವಿಂದದ ಹೊರೆಯೊಳಡಗಿತು (ಕುಮಾದ್ರೂ. ೧೯-೫೦). [ಹೊಂಗಱಿ (< ಪೊಂಗಱಿ) + ಅಂಬು$_2$]

ಹೊಂಗಱಿವೂ (ನಾ). ಚಿನ್ನದ ಗರಿಯಂತಿರುವ ಹೂ; ಕೇದಗೆ; ತಾಳೆ: ಹೀಲಿಗಳನೊಲಿದುಟ್ಟು . . . ಹೊಂಗಱಿವೂವಿನೆಸಳುಗಳಾ ಓಲೆಗಳನಿಕ್ಕಿವಿಯೊಳಿಕ್ಕಿ ವಿಶಾಲಗುಂಜಾಭರಣವಾಂತಾ ಲೀಲೆಯಿಂ ಶಬರಿಯರೆಸೆದರಾ ಪೆಕ್ಕಣದೊಳಂದು (ಸಾಳ್ವಭಾ. ೫-೮). [ಹೊಂಗಱಿ (< ಪೊಂಗಱಿ) + ಪೂ$_2$]

ಹೊಂಗಾಗೆ (ನಾ). ಒಂದು ಬಗೆಯ ಪಕ್ಷಿ,– ಶಕುನದ ಹಕ್ಕಿ; ಹಂಗನ ಹಕ್ಕಿ: "ಚಾಷಃ, ಕೀಕೀದಿವಿಃ, ಈ ೨ ಹೊಂಗಾಗೆ" (ನಾಚರಾ. ೧೧೪). 'ಹಂಗ$_2$' ಪರಾ.

[ಹೊಂ (< ಪೊನ್) + ಕಾಗೆ]

ಹೊಂಗಾಜು 'ಪೊಂಗಾಜು' ನೋ.

ಹೊಂಗಾಣ (ನಾ). ಚಿನ್ನದಿಂದ ತಯಾರಿಸಿದ ಗಾಳ,– ಮೀನು ಹಿಡಿಯುವ ಕೊಕ್ಕೆ: ಅಂಗಜನೆಂಬ ದೀವರ ಮೋಹಿಗಳ ದಿಟ್ಟಮೀಂಗಳ ಸೆಳೆಯಲು ಪಿಡಿದ ಹೊಂಗಾಣದ ಕಡ್ಡಿಯೊಯೆನಲಾ ಲತೆಗಳು ದಾಂಗುಡಿಗಳಿಂದೊಪ್ಪಿದವು (ಶ್ರೀಪಾಲ. ೪-೧೧೪). [ಹೊಂ (< ಪೊನ್) + ಗಾಣ$_2$ (< ಗಾಳ)]

ಹೊಂಗಾಯಕ (ನಾ). ಚಿನ್ನದ ಕೆಲಸ,– ಕಾಯಕ; ಅಕ್ಕಸಾಲಿಗ ವೃತ್ತಿ: ಹೊಂಗಾಯಕದ ನಾಗಪ್ಪನೆಸೆವ ಕಿಕ್ಕೇರಿಯಲಿ ಚಾಕನೂರೊಳ್ ಕೇತಿದೇವಗಳ ಚರಣಾಂಬುಜಕ್ಕೆ ಶರಣು (ಲಶಿಂ. ೩೮-೧೧೨); ಚಾರು ಸಜ್ಜನಶೀಲ ಜಂಗಮದ ದಾಸೋಹಿ ಮಾರಾರಿಪದಭಕ್ತ ಹೊಂಗಾಯಕದ ದಿಂಡನೂರ ನಾಗಾಭಕ್ತ (ಗುರುಚಾ. ೧೩-೬೬). [ಹೊಂ (< ಪೊನ್) + ಕಾಯಕ]

ಹೊಂಗಾರೆ (ನಾ). ಒಂದು ಬಗೆಯ ಮರ: ಹಂಗರಬೀಜ ಹೊಂಗಾರೆಬೀಜ . . . ಚಿತ್ರಮೂಲ ಈ ೫೦ ಬಗೆಯನ್ನು ಸಮಾನಂಗೊಂಡು ಚೆನ್ನಾಗಿ ಕುಟ್ಟಿ ಚೂರ್ಣವಂ ಮಾಡಿ ಇರಿಸಿಕೊಂಡು ತೆಗೆದುಕೊಂಬುದು (ವೈದ್ಯಾ. ೪೨).

[← ತುಳು. ಪೊಂಗಾರೆ, ಪೊಂಗರೆ, ಹೊಂಗರೆ]

ಹೊಂಗಾಲ್ವಣೆ (ನಾ). ಚಿನ್ನದ ಕಾಲುಮಣೆ; ಬಂಗಾರದ ಕಾಲ್ಮಣೆ,– ಪೀಠ: ಲಲಿತಾಂಗಕೆ ನವಚಂದನಪಂಕವನೊಲವಿಂ ತಿಮಿರಿ ಬಳಿಕ ಹೂವಿನ ಹೊಂಗಾಲ್ವಣೆಯೊಳಗಿರಿಸಿ ಲಲನೆಗೆ ನೀರೆಱೆದರ್ ಮದವತಿಯರ್ (ಜಯಕಾ. ೫-೪).

[ಹೊಂ (< ಪೊನ್) + ಕಾಲ್$_1$ + ಮಣೆ$_1$]

ಹೊಂಗಾಸೆ (ನಾ). ಚಿನ್ನದ ಬಣ್ಣದ ಕಾಸೆ; ಬಂಗಾರದ ಕಟಿವಸ್ತ್ರ: ಮಿಱುಮಿಱನಾದ ಮೈಹೊಳಹಿಂದ ತೆರೆಗಟ್ಟಿ ನಿಱೆದೇಳ್ವ ಹೊಂಗಾಸೆಯಿಂದ ಕುರುಕುರಮೆಟ್ಟಿ ರಂಗದೊಳು ತಂಪಿನ ಬಯಲ್ದೊಱೆ ಹೊಳೆವಂತೆ ಹೊಳೆವರು (ಭರಚ. ೧೩-೧೦೧); ವನಜಲೋಚನೆಯರು ಹೊಂಗಾಸೆಗಳನುಟ್ಟು (ಆಪ್ರಭು. ೨೨).

[ಹೊಂ (< ಪೊನ್) + ಕಾಸೆ$_1$]

ಹೊಂಗಾಳಾಂಜಿ (ನಾ). ಚಿನ್ನದ ಡವಕೆ; ಸುವರ್ಣದ ಪೀಕದಾನಿ: ರಂಜಿಪ ರತಿಯೊಳು ಗುಟುಕುತಂಬುಲರುಚಿ ಸಂಜೀವನವೆಂದು ತಿಳಿದು ಭುಂಜಿಸಲಾರಿಗೆ ಕುಡೆನೆಂದು ಹೊಂಗಾಳಾಂಜಿಯ ಪಿಡಿದೊರ್ವೆಯಿಹಳು (ಮೋಹಶ. ೪-೧೦); ಹೊಂಗಾಳಾಂ[ಪಾಶಾಂ. ೪೦]ಜಿಯ ಹೊಳೆವ ಬಿಜ್ಜಣಗೆಯ ಹೆಂಗಳು ತಂದಿರಿಸಿದರು (ಮೋಹಶ. ೧೬-೨೮). [ಹೊಂ (< ಪೊನ್) + ಕಾಳಾಂಜಿ$_2$]

ಹೊಂಗಿಂಡಿ 'ಪೊಂಗಿಂಡಿ' ನೋ.

ಹೊಂಗಿಡಿ, ಹೊಂಕಿಡಿ (ನಾ). ಹೊಂಬಣ್ಣದ ಕಿಡಿ; ಬೆಂಕಿಯ ಕಣ: ಹೊಗೆ ಮಕರಂದಂ ಬೆರಸಿ ನೆಗೆವ ಸೀರ್ಪನಿ ಹೊಂಗಿಡಿ ನೀರ್ವಕ್ಕಿಗಳ ಸಂದಣಿಯಲಿ ಮಂತ್ರಮದಾಗಲ್ಕದಱಿಂದ ಕೊಳಂ ಮದನಾಧ್ವರಿ ವಿರಹಿಯ ಬಿಂದಕ್ಕೆಸಗಿದ ಮಾರಣ ಮಖಕುಂಡದವೋಲ್ ತೊಳಗಿದುದು (ಜಯಕಾ. ೧೧-೩೨). **ಹೊಂಕಿಡಿ:** ಜಡಿದು ನುಡಿವ ಝಳಪಿಸಿ ಕೂರಸಿಯ ಮೆಯ್ಯಿಡುವ ತನ್ನಯ ವಿದ್ಯದಿಂದ ಸಿಡಿಲು ಸುಟ್ಟುಱೆ ಕಲ್ಲುಮಳೆಯರಳುವ ಹೊಂಕಿಡಿಯ ತಂದಲ ಸೂಸಿದವು (ಶ್ರೀಪಾಲ. ೫-೯೧).

[ಹೊಂ (< ಪೊನ್) + ಕಿಡಿ]

ಹೊಂಗಿರಣ (ನಾ). ಚಿನ್ನದ ಬಣ್ಣದ ಕಿರಣ; ಹೊಂಬಣ್ಣದ ರಶ್ಮಿ: ದಿನದಿನದ ಬೆಳಗು ಹೊಂಗಿರಣದ ಕಿರೀಟ ನೂರುಬಣ್ಣದ ಹೂವ ನರುಗಂಪನೊಮ್ಮೆಲೇ ಚಿಮ್ಮಿಸುವ ತೋಟ (ನಲಮು. ೫-೮). [ಹೊಂ (< ಪೊನ್) + ಕಿರಣ$_1$]

ಹೊಂಗಿರಿ (ನಾ). ಚಿನ್ನದ ಬೆಟ್ಟ; ಮೇರುಪರ್ವತ: ಜಂಬೂದ್ವೀಪವೆಂದೆಂಬ ಮಹಾನೃಪನಿಂಬುವಡೆದ ಕಾರ್ಮುಕವೊ ಎಂಬಂದದೆ ಭರತಾವನಿ ಹೊಂಗಿರಿ ಎಂಬುದಱಿಂ ತೆಂಕಲಿಹುದು (ಅಂಜಚ. ೨-೧೬). [ಹೊಂ (< ಪೊನ್) + ಗಿರಿ$_1$]

ಹೊಂಗಿಸು 'ಪೊಂಗಿಸು' ನೋ.

ಹೊಂಗಿಱುಗೆಜ್ಜೆ (ನಾ). ಚಿನ್ನದ ಕಿರುಗೆಜ್ಜೆ; ಬಂಗಾರದ ಕಿಂಕಿಣಿ: ಕಂಕಣದ ದನಿ ಕೇವಣದ ಹೊಂಗಿಱುಗೆಜ್ಜೆಗಳ ರಭಸ ಗಣಿಕೆಯರ ಕೆಳದಿಯರ ಹಾಹಾರಣಕಿವು ನೆರವಾದವಾ ಪಟ್ಟಣವ ತುಂಬಿತು ಶೋಕ (ಕುಮಾಸ. ೧೪-೬೮); ಜಡಿವ ಹೊಂಗಿಱು ಗೆಜ್ಜೆಯಂದುಗೆ ತೊಡಱುಗಳ ಸೆಳೆಗೊಂಬು ಕೊಳಲ್ಗಳ ಗಡಣದಲಿ ಹೊಱವಂತಿರೊಪ್ಪಿರೆ ರಾಮ ಕೇಶವರು (ನಿಭಾಗ. ೧೦-೧೨-೨).

[ಹೊಂ (< ಪೊನ್) + ಕಿಱುಗೆಜ್ಜೆ]

ಹೊಂಗ್ಯು$_1$ 'ಪೊಂಗ್ಯು$_1$' ನೋ.

ಹೊಂಗ್ಯು$_2$ 'ಪೊಂಗ್ಯು$_2$' ನೋ.

ಹೊಂಗ್ಯು$_3$ 'ಹೊಂಗೆ' ನೋ.

ಹೊಂಗುತ್ತಗೆ (ನಾ). ಹೊನ್ನಿನ ರೂಪದಲ್ಲಿ ಕೊಡುವ ಗುತ್ತಗೆ: ಶ್ರೀ ಚೆನ್ನಕೇಶವದೇವರ ಸ್ಥಾನಿಕ ನಾಗನಂಬಿಯರ ಮಕ್ಕಳು . . . ಮುಖ್ಯವಾದ ಸಮಸ್ಥನಿಬಂಧಿಕಾಱರಿಗೆ ಹೊಂಗುತ್ತಗೆಯಾಗಿ ನೆರ್ತ್ರವುರುಗಳ ಮರ್ಯ್ಯಾದೆಯಲು ಕಮ್ಮಟಂದಕ್ಕೆ ಪಣಮೊಂದಱ ಮರ್ಯ್ಯಾದೆಯ ಕೆಱುತ ಬಹರು (ಎಕ. XV. ಅರಸೀ. ೨೧೦-೩; 1244). [ಹೊಂ (< ಪೊನ್) + ಗುತ್ತಗೆ]

ಹೊಂಗುಬ್ಬಿ, ಹೊನ್ನುಗುಬ್ಬಿ (ನಾ). ೧. ಬಂಗಾರದ ಗುಬ್ಬಿಯಾಕಾರದ ಅಲಂಕಾರಸಾಧನ: ಹೊಂಗುಬ್ಬಿಯ ನಿಕರ ಸೀಗುರಿಗಳಿಂದೆಸೆವ ಅಕಳಂಕ ಮುತ್ತಿನ ಚಾವಡಿ ಕಣ್ಣ ಕೌತುಕವ ಬೀಱುತು ನೋಟಕರ (ಮೋಹ. ೩-೬೫). **ಹೊನ್ನುಗುಬ್ಬಿ:** ೨. ಬಾಲಕರು ಆಡುವ ಒಂದು ಬಗೆಯ ಆಟ: ಬಾಲಕ್ರೀಡೆಯಲಜಾಂಡವನಾಳುವ ಶ್ರೀಲಲನೆಯ ವಲ್ಲಭನು ತಾ ಓಲಾಡಿ . . . ಹೊನ್ನುಗುಬ್ಬಿಯಾಡುವನು (ಪ್ರಸಭಾ. ೧೩-೧೩). [ಹೊಂ (< ಪೊನ್) + ಗುಬ್ಬಿ$_2$]

ಹೊಂಗುರು 'ಪೊಂಗುರು' ನೋ.

ಹೊಂಗುಲಾಬಿ (ನಾ). ಬಂಗಾರದ ಬಣ್ಣದ ಗುಲಾಬಿಯ ಹೂವು: ಅಲ್ಲಿ ಹೊಂಗುಲಾಬಿ ಹಂತಿ; ಇಲ್ಲಿ ಚಿನ್ನವೂ ಮಳೆ . . . ಹೊಸತೆ ಬಂತೊ ತಾಯ ಹರಕೆ ಹೂವ ರೂಪ ತಾಳಿ! (ಅನಿಕೇ. ೨೦-೧೦). [ಹೊಂ (< ಪೊನ್) + ಗುಲಾಬಿ]

ಹೊಂಗೆ, ಹೊಂಗು$_3$ (ನಾ). ೧. ಒಂದು ಬಗೆಯ ಮರ; ತಮಾಲವೃಕ್ಷ; ಹುಲಿಗಿಲು: ನೀರುವರಿಯ ಹೊಂಗೆಯ ವತ್ತಿನ ಹೊಳೆಯ ದಡದ ಕೆಂಗಳ XX ನಲೂ ನಟ್ಟ ವಾಮನಮುದ್ರೆಯ ಕಲ್ಲು ೧ (ಎಕ. VIII. ಶಿಕಾಹ. ೧೯೦-೩೧; 1407); ಹುಲುವೆ ಸುಜ್ಜಲು ಹೊಂಗೆ ತಾರೆ ತವಸಿ ಕಗ್ಗಲಿ . . . ಬಿಲುವರ ಮೊಳಗಿನ ಮರಗಳಲ್ಲಿಹವು (ಚಂಪ್ರಸಾಂ. ೬-೮೫); ಹೊಂಗೆ ನೇಱಿಲು ಹೆಬ್ಬಿದಿರುಗಳು ಕಾರಾಚ ಕಗ್ಗಲಿ ಕಂಚಿವಾಳದ ಮರ ಸೂರಮಾರ್ಗವ ತಡೆದಿಹವು (ಕಂನವಿ. ೧೮-೩೭); ಹೊಂಗೆಹೂವ ತೊಂಗಲಲ್ಲಿ ಭೃಂಗದ ಸಂಗೀತಕೇಲಿ ಮತ್ತೆ ಕೇಳಬರುತಿದೆ (ಗಂ. ೧೧೭-೫). ೨. ಹೊಂಗೆಯ ಮರಗಳಿರುವ ಭೂಮಿ: ಶ್ರೀಮತು ರಾಜಗುರು ವಾಮರಾಸಿದೇವರು ವೋರಿಂಗೆಱೆಯ ಬೋವರ್ಸನ ಬಾವಿಗೆ ಯಲೆಯ ಮತ್ತರು ೪ ಹೊಂಗೆ ೪ ಕೆಂಗಾಡು ೪ ಅನ್ತು ಮತ್ತರು ೧೨ ಸ [ಮ] ನಿವೆಲ್ಲಮ (ಸೌಇಇ. IX-i, ೧೫೧-೪; 1082). **ಹೊಂಗು$_3$:** ೩. ಹುಲಿಗಿಲು ಮರದ ಕಾಯಿ; ಹೊಂಗೆಬೀಜ; ಇ ಇದರಿಂದ ಎಣ್ಣೆ ತೆಗೆಯುತ್ತಾರೆ: ಬಿಸಿಲಿಗೆ ಹಾಕದ ಹೊಂಗಿನಿಂದ ಎಣ್ಣೆ ಸಮನಾಗಿ ಬಂದೀತೆ? (ಮರಮ. ೨೬).

[ದೇ. ಇ ತಮಿ. ಪುಜ್ಜ, ಪುಜ್ಜು, ಪುನ್ನ; ಮಲ. ಪುಣ್ಣು; ತುಳು. ಪುಂಗು]

ಹೊಂಗೆಜ್ಜೆ 'ಪೊಂಗಜ್ಜೆ' ನೋ.

ಹೊಂಗೆತಾಳು (ನಾ). ಹೊಂಗೆಯ ಮರದ ಬುಡ: ಅಲ್ಲಿಂದಂ ಬಡಗ ನಡದು ಹೊಂಗೆತಾಳಲ್ಲಿ ಮೂಡಮುಖದ ಲಿಂಗಮುದ್ರೆಯ ಕಲ್ಲು ಅಲ್ಲಿಂದಂ ಪಡುವಲಾಗಿ ಕೊತ್ತಲೆ ಗೋಣತಾಳಲ್ಲಿ ಮೂಡಮುಖವಾದ ಲಿಂಗಮುದ್ರೆಯ ಕಲ್ಲು (ಎಕ. IV(R). ಕೊಳ್ಳೇಗಾ. ೭-೩೬; 1512). [ಹೊಂಗೆ + ತಾಳ್ಳು$_2$ (< ತಾಳ್$_2$)]

ಹೊಂಗೆತೊಕ್ಕು (ನಾ). ಹೊಂಗೆಯ ಮರದ ತೊಗಟೆ: ಗಂಟುಭಾರಂಗಿ, ಹಿಪ್ಪಲಿ, ಹೊಂಗೆತೊಕ್ಕು, ಹಿಪ್ಪಲೀಮೂಲ, ದೇವದಾರು ಇವನು ಚೂರ್ಣಿಸಿ ಎಳ್ಳ ಕಷಾಯದಲ್ಲಿ ಹಾಕಿ ಕೊಡಿಸಲು ರಕ್ತಗುಲ್ಮಹರ (ವೃಕ್ಷಸಾ. I. ೩೦೯).

[ಹೊಂಗೆ + ತೊಕ್ಕು$_2$]

ಹೊಂಗೆಬೀಜ (ನಾ). ಹೊಂಗೆಮರದ ಬೀಜ,– ಬಿತ್ತ: ಗಂಟುಭಾರಂಗಿ . . . ಹೊಂಗೆಬೀಜ . . . ಬಿದುರು, ಇವಂ ಸಮತೂಕ ಹಾಕಿ ಕಷಾಯ ಕಾಯಿಸಿಕೊಟ್ಟಲ್ಲಿ ಶೀತಜ್ವರ, ವಿಷಮಜ್ವರ, ದೋಷಜ್ವರವೂ ಸಹ ಮಾಣ್ಗುಂ (ಸಕವೈ. ೬೮).

[ಹೊಂಗೆ + ಬೀಜ]

ಹೊಂಗೆಯೆಣ್ಣೆ (ನಾ). ಹೊಂಗೆಬೀಜದಿಂದ ತೆಗೆದ ಎಣ್ಣೆ,– ತೈಲ: ಹೊಂಗೆಯೆಣ್ಣೆಯನ್ನು ದೀಪ ಉರಿಸುವುದಕ್ಕೆ ಬಳಸುತ್ತಾರೆ (ರೂಢಿ).

[ಹೊಂಗೆ + ಎಣ್ಣೆ]

ಹೊಂಗೆರೆ (ನಾ). ಚಿನ್ನದ ಬಣ್ಣದ ಗೆರೆ; ಹೊಂಬಣ್ಣದ ರೇಖೆ: ಕೆಂಗಿಡಿ ಬಣ್ಣದ ಹೊಂಗೆರೆಮಿಂಚಿಗೆ ಆಸ್ಮಾನದ ಹಾಸ್ಯದ ಹುರುಪಿಲ್ಲ (ಪಾಂಚಜ. ೩೬-೧೭).

[ಹೊಂ (< ಪೊನ್) + ಗೆರೆ (< ಗೆಱೆ)]

ಹೊಂಗೆಲಸ 'ಪೊಂಗೆಲಸ' ನೋ.

ಹೊಂಗೇತಕಿ (ನಾ). ಚಿನ್ನದ ಬಣ್ಣದ ಕೇದಗೆ: ಹೊಂಬಬಣ್ಣದ ತಾಳೆ: ಹಾಲೆ ಹೊಂಗೇತಕಿ ವನಸಂಪಿಗೆ ಹಿಂತಾಲ . . . ಬನ್ನಿಗಳ್ಮೇಲಕಡರಿ ಮುಸುಕಿಹುವು (ಕಂಸವಿ. ೧೮-೩೬). [ಹೊಂ (< ಪೊನ್) + ಕೇತಕಿ]

ಹೊಂಗೇದಗೆ 'ಪೊಂಗೇದಗೆ' ನೋ.

ಹೊಂಗೇರು (ಕ್ರಿ). ಉತ್ಸಾಹವು ಏರು; ಸಂತೋಷವು ಹೆಚ್ಚಾಗು: ಭೃಂಗಗಳು ಹೊಂಗೇರಿ ಸಂಗೀತ ಸುರಿಯುವುವು, ಕೋಗಿಲೆಯು ಕರೆಯುವುದು (ಕಶಾಸ್ತ್ರಾ. ೩೦-೨೩).

[ಹೊಂಗು$_2$ (< ಪೊಂಗು$_2$) + ಏರು$_1$ (< ಏಱ್$_1$)]

ಹೊಂಗೇಸರ (ನಾ). ಚಿನ್ನದ ಬಣ್ಣದ ಕೇಸರ; ಹೊಂಬಣ್ಣದ ಪರಾಗ: ಮೇಲೆ ಕಂಗೊಳಿಪ ಹೊಂಗೇಸರದ ಕಾಂತಿಯಿಂದೆಱಗುವಸಿತಾಳಿಯ ಮರೀಚಿಯಿಂದ ಹೊಳೆಹೊಳೆವ ಕೋಕನದ ಪಂಕ್ತಿಗಳ ಬಣ್ಣಂ (ಚೈಮಿಭಾ. ೧೫-೧೦).

[ಹೊಂ (< ಪೊನ್) + ಕೇಸರ]

ಹೊಂಗೈಪಿಡಿ (ನಾ). ಚಿನ್ನದ ಕಟ್ಟುಳ್ಳ ಕನ್ನಡಿ: ಸಿಂಗರಿಸದೆ ಸಿರಿಮುಡಿಗಟ್ಟದೆ ಮೊಗದಿಂಗಳ ತೊಳೆದೊಪ್ಪವಿಡದೆ ಹೊಂಗೈಪಿಡಿಗಲ್ಲದೊಳು ಚಂದಳಿರ್ಗಯ್ಯ ನಂಗನೆಯಿಟ್ಟಣಿಸಿದಳು (ಶ್ರೀಪಾಲ. ೨-೩೦).

[ಹೊಂ (< ಪೊನ್) + ಕೈಪಿಡಿ$_2$ (< ಕೆಯ್ಪಿಡಿ)]

ಹೊಂಗೊಂಬು (ನಾ). ಚಿನ್ನದ ಅಲಂಕಾರ ಮಾಡಿರುವ ಕೊಂಬು; ಬಂಗಾರದ ಅಣಸು ಹಾಕಿರುವ ಕೋಡು: ಕುದುರೆ ತೇರಾನೆ ಕಾಲಾಳ್, ಹೊಂಗೊಂಬೆಸೆವ ಗೋವು ಗೂಳಿಗಳ್ . . . ಸಮನಿಸಿತು ತುಂಬುವೋಲ್ ಕೋಸಲ ರಾಜಧಾನಿ (ಶ್ರೀರಾಮಾ. ೫೮-೧೨೦). [ಹೊಂ (< ಪೊನ್) + ಕೊಂಬು$_1$]

ಹೊಂಗೊಡ 'ಪೊಂಗೊಡ' ನೋ.

ಹೊಂಗೊಡಗಂಬಿ (ನಾ). ಚಿನ್ನದ ಕೊಡವನ್ನುಳ್ಳ (ಬಿದಿರಿನ) ಅಡ್ಡೆ: ಕುಂಭಿನಿ ಬೆಸಲಾದುದೆಂಬಂತೆ ಹೊಂಗೊಡಗಂಬಿಯೊಳ್ ತೈಲಹರಿದ್ರ ತುಂಬಿದ ಪರಿಯಣದಬಲೆಯರ್ಪಾಡುತ ಮುಂಬರಿದರು ಬೀದಿಯೊಳಗೆ (ಮೋಹ. ೧೭-೩೯).

[ಹೊಂಗೊಡ (< ಪೊಂಗೊಡ) + ಕಂಬಿ$_1$]

ಹೊಂಗೊಪ್ಪರಿಗೆ (ನಾ). ಚಿನ್ನದ ಕಡಾಯಿ; ಬಂಗಾರದ ಕಟಾಹ: ಕರವತಿಗೆ ಹೊಂಗಳಸ ಹೊಂಗೊಪ್ಪರಿಗೆ ದೀಪಸ್ತಂಭ ಹೇಮದ ಸರಪಣಿಯ . . ಚರರು ತಂದೊಟ್ಟಿದರು (ಕುವ್ಯಾಗ. ೪-೧೫); ಬೆರಸಿದರು ಪನ್ನೀರ ಹೊಂಗೊಪ್ಪರಿಗೆಯಲಿ ಮೊಗಮೊಗದು ನಾರಿಯರೆಱೆದರಂಗನೆಗಮಳಚಂದನಗಂಧಪರಿಮಳದಿ ತರುಣಿಯರು ಲೇಪಿಸಿದರರಸಿಗೆ (ನಳಚ. ೩-೫೪). [ಹೊಂ (< ಪೊನ್) + ಕೊಪ್ಪರಿಗೆ (< ಕೊಪ್ಪರಿಕೆ)]

ಹೊಂಗೊಳವೆ (ನಾ). ಚಿನ್ನದ ಕೊಳವೆ; ಬಂಗಾರದ ನಳಿಕೆ: ರತಿಪತಿ ಪಿಡಿದ ಪೇಟಲ ಹೊಂಗೊಳವೆಯೋ ಅತಿರಂಜಿಸುವೆಳ್ ನನೆಯೋ ಹಿತವಳಿಗಾದರೆ ಮುಗುಳ ಸಂಪಗೆಯೋ ಸತಿಯ ನಾಸಿಕದ ಚಲ್ಲಿಕೆಯೋ (ನೇಮಿಸಾ. ೨೩-೨೦೦).

[ಹೊಂ (< ಪೊನ್) + ಕೊಳವೆ (< ಕೊಟವಿ)]

ಹೊಂಗೋಂಟೆ 'ಪೊಂಗೋಂಟೆ' ನೋ.

ಹೊಂಗೋಟೆ 'ಪೊಂಗೋಂಟೆ' ನೋ.

ಹೊಂಗೋಡೆ (ನಾ). ಚಿನ್ನದ ಗೋಡೆ: ಚಕ್ರನಾಥನ ಬೆನ್ನ ಹೊಂಗೋಡೆಯೊಳು ಧರ್ಮಚಕ್ರನಾಥನ ಪುರುಜಿನನ ವಿಕ್ರಾಂತರೂಪಿಸೆದುದು (ಭರಚ. ೧೨-೨೪).

[ಹೊಂ (< ಪೊನ್) + ಗೋಡೆ]

ಹೊಂಗೋಪುರ (ನಾ). ಚಿನ್ನದ ಗೋಪುರ: ಹೊಂಗೋಪುರ ಶಿಖರಕೆ ಪೋಪ ನಡೆ (ಮೋಹತ. ೨೮-೨೮). [ಹೊಂ (< ಪೊನ್) + ಗೋಪುರ]

ಹೊಂಗೋರಟೆ (ನಾ). ಹೊಂಬಣ್ಣದ ಹೂವುಗಳನ್ನು ಬಿಡುವ ಒಂದು ಬಗೆಯ ಗೋರಂಟೆ: "ಕುರಂಟಕಃ- ಹೊಂಗೋರಟೆ" (ಓಷಧಿ. ೩೬).

[ಹೊಂ (< ಪೊನ್) + ಗೋರಟೆ (< ಗೋರಂಟೆ)]

ಹೊಂಚಿಕೆ (ನಾ): ೧. ಅಡಗಿಕೊಂಡಿರುವಿಕೆ; ಗುಪ್ತವಾಗಿರುವಿಕೆ: (೬). ೨. ಹಂಚಿಕೆ; ಸಂಚು; ಉಪಾಯ: ಯುದ್ಧ ಮೊದಲಾದ ಒಂದು ತಿಂಗಳೊಳಗೆ, ವಿಷ್ಣುವರ್ಧನಪ್ರಭುವಿನ ಸೈನ್ಯಶಿಬಿರಗಳಲ್ಲಿ ಸಾಂಕ್ರಾಮಿಕ ಉಪಟಳ ಒಂದು ಕಾಣಿಸಿಕೊಂಡಿತು. ಶತ್ರುಗಳ ಹೊಂಚಿಕೆಯಿಂದಲೆ ಹೀಗಾಯಿತು (ಶಾಂತಲಾ. ೪೦೦). ೩. ಹೊಂದಿಸುವಿಕೆ; ಒಡಗಿಸುವಿಕೆ; ಅಣಿಗೊಳಿಸುವಿಕೆ: ಆ ಮಹಾಸನ್ನಿಧಾನವು ಈ ಹೊಂಚಿಕೆಯ ಬವಣೆಯಿಂದ ಅರಮನೆಯೊಳಗೆ ಎತ್ತೆತ್ತಲೂ ತೊಳಲುತ್ತ . . . ಕಲವರಿಗೆ ಶ್ರೀಚಾಮುಣ್ಡೇಶ್ವರಿಯ ಕರಾಳಾವತಾರವಾಗಿದ್ದಾರೆ (ಚಿಟ್ಟಿಮ. ೪೯).

[ಹೊಂಚು೧ (< ಪೊಂಚು೧) + - ಇಕೆ]

ಹೊಂಚು೧ 'ಪೊಂಚು೧' ನೋ.

ಹೊಂಚು೨ 'ಪೊಂಚು೨' ನೋ.

ಹೊಂಚುಕಾವಲು (ನಾ). ಅಡಗಿಕೊಂಡಿದ್ದು ಮಾಡುವ ಕಾವಲು; ರಹಸ್ಯವಾಗಿ ಮಾಡುವ ರಕ್ಷಣೆ: ಆ ದಿವಸದ ಹೊಂಚುಕಾವಲಿನಲ್ಲಿ ಶತ್ರುಗಳನ್ನು ಕೊಂದನು (ಮಲಸಾ. ೬೬). [ಹೊಂಚು೧ (< ಪೊಂಚು೧) + ಕಾವಲು೧ (< ಕಾವಲ್೧)]

ಹೊಂಚುಗಾರ (ನಾ). ೧. ಸಮಯವನ್ನು ಕಾಯುವವನು,– ಎದುರು ನೋಡುವವನು: (೬). ೨. ಬೇಹುಗಾರ; ಗೂಢಚಾರ: (೬).

[ಹೊಂಚು೧ (< ಪೊಂಚು೧) + - ಗಾರ (< - ಕಾಜಿ)]

ಹೊಂಜಬಳ (ನಾ). ಚಿನ್ನದ ಈಟಿ,– ಸಬಳ: ಕಿಂಜಲ್ಕದ ಹುರಿಮಳಲಿಂದೆಸಳ್ದ ಹೊಂಜಬಳದ ಫಣಿತತಿಯಿಂ ಕಂಜಾಸ್ತ್ರನ ವನದುರ್ಗದಂತಾಯ್ತಪರಂಜಿಗೇದಗೆಯ ಬಲ್ವೇಲಿ (ಶ್ರೀಪಾಲ. ೧-೬೫). [ಹೊಂ (< ಪೊನ್) + ಸಬಳ]

ಹೊಂಜಾವಡಿ (ನಾ). ಚಿನ್ನದ ಚಾವಡಿ; ಬಂಗಾರದ ಕಟ್ಟೆ,– ಜಗಲಿ: ಎಡಬಲದ ಚಿತ್ರ ಹೊಂಜಾವಡಿಗಳೊಳಗೆ ಎಡೆವಿಡದೆ ಕಿಕ್ಕಿರಿದು ಕುಳುತಿರ್ಪ ಭೈರವರ ಗಡಣ ತೆರತರದಿ ನಿಖಿಳಾಯುಧಮನಾಂತು ಕಾಯ್ದುಹರು (ಸಮಮೋ. ೨೪-೬೭).

[ಹೊಂ (< ಪೊನ್) + ಚಾವಡಿ]

ಹೊಂಜಾಳಿಗೆ 'ಪೊಂಜಾಳಿಗೆ' ನೋ.

ಹೊಂಜುರಿಗೆ 'ಪೊಂಜುರಿಗೆ' ನೋ.

ಹೊಂಜೆಳೆ 'ಪೊಂಜೆಳೆ' ನೋ.

ಹೊಂಜೆಳೆಗ (ನಾ). ಚಿನ್ನದ ಬೆತ್ತವನ್ನು ಹಿಡಿದವನು: ನಗರಿಯ ರಾಜಬೀದಿಯೊಳು . . . ಪರಾಕವಧಾನ ಜತನವೆಂದೆಂಬ ಹೊಂಜೆಳೆಗರ ನೋಡುತೆಯಿದ್ದನು (ಭರಚ. ೬೨-೮೬). [ಹೊಂಜೆಳೆ (< ಪೊಂಜೆಳೆ) + - ಗ೩]

ಹೊಂಜೆಳೆವಿಡಿ (ಕ್ರ). ಚಿನ್ನದ ಸೆಳೆಯನ್ನು ಹಿಡಿ; ಬಂಗಾರದ ಬೆತ್ತವನ್ನು ಹಿಡಿದುಕೊಳ್ಳು: ಇಳೆಯಾಣ್ಮನ ಮನದಿಂಗಿತವಱಿತು ಹೊಂಜೆಳೆವಿಡಿದಬ್ಜನೇತ್ರೆಯರು ಎಳವೆಣ್ಗುಗಳ ಚಿತ್ರಿಸೆಂದು ಸತಿಯರ ನಿಳಯಕೆ ಬೀಳ್ಕೊಡಿಸಿದರು (ಮೋಹತ. ೨೨-೧೫೫).

[ಹೊಂಜೆಳೆ (< ಪೊಂಜೆಳೆ) + ಪಿಡಿ೧]

ಹೊಂಟು 'ಪೊಱಮಡು' ಪರಾ.

ಹೊಂಡ (ನಾ) ೧. ಹಳ್ಳ; ತಗ್ಗು; ಕುಣಿ: ಈ ಮನುಷ್ಯನು ಕುಂಬಾರನಾಗಿದ್ದುದರಿಂದ ರತ್ನವನ್ನು ಅಡಗಿಸಿಡಲು ತಕ್ಕ ಸ್ಥಳವು ಆವೆಮಣ್ಣಿನ ಹೊಂಡವೇ ಆಗಿರಬೇಕಲ್ಲವೇ? (ಮಣಸ. ೧೬); ಒಂದು ಭದ್ರವಾದ ತಾವನ್ನು ಅರಸಿ, ಹೊಂಡ ತೋಡಿ, ಗೂಡು ಸಿದ್ಧಪಡಿಸಿದುವು (ಜಾಸಾಗೀ. ೬೧). ೨. ಹಳ್ಳದ ಪ್ರದೇಶ ,– ಭೂಮಿ: ಆ ಮುಂದಿನ ಗುಡ್ಡೆ ಕಾಣುತ್ತದಲ್ಲಾ ಅಲ್ಲಿಯವರೆಗಿನ ಭೂಮಿ ಸೀಮೆಯೆಲ್ಲಾ ನನ್ನ ಪೂರ್ವಜರು ಬಿಟ್ಟುಹೋಗಿದ್ದಾರೆ. ಒಟ್ಟಾರೆ ಕೆಳಗಿನ ಹೊಂಡವೆಲ್ಲಾ ನನ್ನದೇ (ಗಂಗಾವ. ೫೫). ೩. ಚಿಕ್ಕ ಕೊಳ; ಸಣ್ಣ ಕೆರೆ: ಶರಣರ ಸದಾಚರಣೆಗೆ ನದಿ ಕೂಪಂಗಳಲ್ಲವು, ಹಳ್ಳ ಹೊರಡಂಗಳಲ್ಲವು ಕೆಜೆಯೊಜತೆಗಳಲ್ಲವು (ಸಿದ್ಧೇವ. ೪. ೬೭೩-೧೨೦೪); ದೈವೆಜ್ಞನಾ ವರುಣ ಕಂಡನಾಗಳೆ ಕಣ್ಣ ನೀರಿನ ಹೊಂಡವನು ಹಸರಿಸುತ ನಿನಗುದ್ದಂಡವೈರಿಯು ಪುಟ್ಟಿ ಬೆಳೆದಪನತ್ತಲೊಂದೆಡೆಯ ಎಂದೊಡೆ (ಶಾಳ್ವಭಾ. ೨೧-೩೭).

ಹೊಂಡತೊಣಕು = (ಮೈನು ಹಿಡಿಯುವುದಕ್ಕಾಗಿ) ಹೊಂಡದಲ್ಲಿರುವ ನೀರನ್ನು ಹೊರಕ್ಕೆ ತುಳುಕಿಸು,– ಚೆಲ್ಲು: ತಂದೆಮಕ್ಕಳಿಬ್ಬರೂ 'ಹೊಂಡ ತೊಣಕ' ಲು (ಹೊಂಡದಲ್ಲಿರುವ ನೀರನ್ನು ತುಳುಕಿ, ಬತ್ತಿಸಿ, ಮೀನು ಹಿಡಿಯುವುದು ಎಂದರ್ಥ) ಪ್ರಾರಂಭಿಸಿದರು (ಕಾಸೂರು. ೨೨೪). [?]

ಹೊಂಡೆಮರ (ನಾ). ಒಂದು ಬಗೆಯ ಮರ : ಚಿಂಡೇ, ಹೊಂಡೇಮರ (ಮೃಡಿಗಿ. ೨೦-೩೫೮). [ಹೊಂಡೆ೦ + ಮರ೧]

ಹೊಂತ೧, ಹೊಂತು (ನಾ). ೧. ಬಲ; ಪರಾಕ್ರಮ. ೨. ಚಾತುರ್ಯ; ಜಾಣ್ಮೆ: ಅವರ ಪ್ರಶ್ನೆಯು ವಿಚಿತ್ರವಾಗಿತ್ತು. ಅಲ್ಲದೆ ಕೇಳುವ ಅವರ ಹೊಂತ ತಿಳಿಯದೆ ನಾನು ಉತ್ತರಿಸಿದರೆ ಹೆಡ್ಡು ಬಿದ್ದೇನೆಂದು . . . ಇನ್ನೊಂದು ಪ್ರಶ್ನೆ ಸೇರಿಸಿದೆ (ಚಿಟ್ಟಜೀ. ೧೬೬). **ಹೊಂತು**: ೩. ಮರ್ಮ; ರಹಸ್ಯ: ಅಂತೆ ಚಿಂತಿಸುತ ಕುಳಿತಿರಲು ಆಂತರ್ಯದಲಿ ಅವರ ಮನಸಿಗೆ ಸಮಾಧಾನವನು ತಹದೊಂದು ಹೊಂತು ಮೊಗದೋರಿ ಬೆಳೆಯಿತು (ನವಶಾ II. ೬೨-೧೪): ಆ ದಿನ ಆ ಬ್ರಾಹ್ಮಣನಿಗೆ ಮಾತ್ರ ನನ್ನ ಹೊಂತು ತಿಳಿಯಲಿಲ್ಲ (ಚಿಟ್ಟಜೀ. ೪೦). ೪. ಮೋಸ; ವಂಚನೆ: 'ಹೊಂತಕಾಜಿ', 'ಹೊಂತಕಾಜಿ' ಪರಾ. [ದೇ. ॥ ತುಳು. ಕೊಂತ, ಹೊಂತ]

ಹೊಂತ೨ 'ಪಂತ೧' ನೋ.

ಹೊಂತ೩ 'ಪಂತ೨' ನೋ.

ಹೊಂತಕ (ನಾ). ಮೋಸಗಾರ; ವಂಚಕ; ಕುತಂತ್ರಿ: ಸಂತತ ನಿಸ್ಪೃಹರಾಗಿಹೆವೂ ಪರಿಯಂತಲೆ ಅನುಸರಿಸಿದೆವು ಹೊಂತಕರಲ್ಲಾನಂತಾದ್ರೀಶನ ಚಿಂತಿಪರೇ ಸರಿಯಲ್ಲ ಹೊರ್ತು (ಕರ್ನಾಶ. ೩.೨೯). [ಹೊಂತ೧ + - ಕ೩]

ಹೊಂತಕಾತಿ (ನಾ). ಚತುರೆ; ಚದುರೆ: ವ್ಯಂತರಕಾಮಿನಿಯಿಂದ ಕೀರ್ತಿಸಿಕೊಂಡ ಹೊಂತಕಾಂತಿಯ ನಿಟ್ಟಿಸರಸ (ಭರಚ. ೮-೪೧). [ಹೊಂತ೧ + - ಕಾತಿ೩]

ಹೊಂತಕಾರ೧ 'ಹೊಂತಕಾಜಿ' ನೋ.

ಹೊಂತಕಾರ೨ 'ಪಂತಗಾಜಿ' ನೋ.

ಹೊಂತಕಾರಿ೧ 'ಹೊಂತಕಾಜಿ೧' ನೋ.

ಹೊಂತಕಾರಿ೨ 'ಹೊಂತಕಾಜಿ೨' ನೋ.

ಹೊಂತಕಾಜಿ, ಹೊಂತಕಾರ೧, ಹೊಂತಗಾರ (ನಾ). ೧. ಬಲಶಾಲಿ; ಪರಾಕ್ರಮಿ; ಸಮರ್ಥ: ವಿಷ್ಣು ಬಾಲಿಯಂ ಕೊಂದ ಪಾಪದ ಕೃಷ್ಣನಾದಾಗಳಾ ಹೊಂತಕಾಜಿನ ಜರಕನಂಬಿನಿಂ ಮಡಿಯನೇ (ವೀಶ್ಯಪು. ೪-೫-೫೯). ೨. ವಂಚಕ; ಮೋಸಗಾರ; ಕಪಟಿ: ಸಂತತಂ ನಿಜಜಂಗಮಪ್ರಾಣಾಂತರಂಗಪ್ರಾಣ ಭಾಷೆಯ ಹೊಂತಕಾಜಿನು ಬಸವನಿರ್ದಡೆ ಬಾರೆವಾಯೆಡೆಗೆ (ಬಸವು. ೩೭-೧೯); ಬಾಲಿ ಸುಗ್ರೀವರೊಂದು ಕಡೆಯಾ ಹೊಂತಕಾಜಿಂ ಪಂಚಮೇಧ್ಯನೆಂದಂಬಸುರಸಂತಾನದೊಡೆಯನೊಂದೆಶೆಯ ಹಾಣಾಹಾಣಿಯಿಂ ತಳ್ತು ಕಾದುತಿರ್ದರು (ವಿಶ್ಯಪು. ೩-೮-೧೯). ೩. ಚತುರ; ಕುಶಲಮತಿ: ಜಗದಲಿ ಹವಣಸಜಿಯದ ಹೊಂತಕಾಜಿನ ನಿಜವ ಕೇಳು (ಕೃಷ್ಣಾಶ್ವ. ೬-೫೦). **ಹೊಂತಕಾರ೧**: ೧. ದಂತವಕ್ತ್ರಾದಿಯ ಕೊಂದ ಬಲವಂತನೊ ಹೊಂತಕಾರನೊ ಜಗದಂತರಿಯಾಮನೊ (ವೀರ್ಥಮ. ೨೩-೧). **ಹೊಂತಗಾರ**: ೧. ತೌಡಪ್ಪನ ಮನೆಯೊಳಗೆ ನಾಲ್ಕಾರು ಮಂದಿ ಹೊಂತಗಾರರಿದ್ದರು (ದೀವಮ. ೬೫). [ಹೊಂತ೧ + - ಕಾಜಿ]

ಹೊಂತಕಾಜಿ೧, ಹೊಂತಕಾರಿ೧ (ನಾ). ೧. ಚಾತುರ್ಯವುಳ್ಳವಳು; ಚತುರೆ: ಇಂಥಾ ಹೆಣ್ಣಿನ ನಾನೆಲ್ಲೂ ಕಾಣೆನೊ ಹೊಂತಕಾಜಿ ಕಾಣರೋ ಸಂತತ ಸುರರಿಗೆ ಅಮೃತವನುಣಿಸಿದ ಪಂಕ್ತಿಯೊಳಗೆ ಪರವಂಚನೆ ಮಾಡಿದ (ಪುರಂದ. ೧-೧೩೦ ಪಲ್ಲವಿ); ಲಕ್ಷಣಾಪೂರಿಯರು ಬಲು ಹೊಂತಕಾಜಿಯರು ಕಾಮವ್ಯವಹಾರಿಯರು . . . ರಾಜಿಸುವ ಚಾರುಯೌವನದ ವಾರಾಂಗನೆಯರತಿಸೊಬಗ ವರ್ಣಿಸುವದರಿದು (ಪ್ರಾಥ್ಥಾ. ೬-೧೬) ೨. ಪ್ರತಿಸ್ಪರ್ಧಿ: ನಾರಿ ಪತಿಧರ್ಮದಾ ಭೇರಿ ಮಾರನ ಹೊಂತಕಾಜಿ ನಡತೆಂದು ಭೂವರನ ಮಂಚವ ಸಾರೆ (ಪ್ರಾಥ್ಥಾ. ೬-೧೩). ೩. (ಪ್ರಾಯದಿಂದ) ಮದಿಸಿದವಳು; ಸೊಕ್ಕಿದವಳು: ಎಳವರೆಯದಿ ಮೆಜ್ಜಿವಾ ಹೊಂತಕಾಜಿಯನೆಳಸಿ ನೋಡುವ ಕಣ್ಗಳಿಗೆ ಬಳಲಿಕೆ ಇಲ್ಲ (ಚಂಪ್ರಸಾಂ. ೯-೧೦೭); ಹೊನ್ನ ಹೂವಿನ ಹೊಂತಕಾಜಿಯ ಬಂದಿಯ ಬಿನ್ನಾಣವತೆಯ ತಿಸರದ ಚೆನ್ನೆಯ ರಂಗರಂಗಾಯೆಂಬ ಮುದ್ದು ಮೋಹನ್ನೆಯ ನೆರೆವುದಿನ್ನೆಂತೊ (ಶತಸಾಂ. ೨೭-೩೮). **ಹೊಂತಕಾರಿ೧**: ೨. ತಪೋನಿಧಿಯಾದ ವಿಶ್ವಾಮಿತ್ರನಂ ನಾನಾಪ್ರಕಾರಮಾಗಿ ನಾಟ್ಯವನ್ನಾಡಿಸಿ . . .

ಇಂದ್ರನ ಸಭೆಗೆ ಹೊಂದಿಸಿದ ಹೊಂತಕಾರಿ ಒಬ್ಬಳು (ಸೌಗಂಧಿ. ೫೧೯-೪). [ಹೊಂತಕಾಜ + - ಇ$_2$]

ಹೊಂತಕಾಜಿ$_2$, ಪೊಂತಕಾರಿ, ಪೊಂತಕಾಜಿ, ಹೊಂತಕಾರಿ$_2$ (ನಾ). ೧. ಬಲಶಾಲಿ; ವೀರ; ಪರಾಕ್ರಮಿ: ಬೆರಸಿದವು ಬಲವೆರಡು ಹೊಕ್ಕವು ಕರಿ ಘಟೆಗಳೇಜಿದವು ಕುದುರೆಗಳುರವಣಿಸಿದವು ತೇರ ತಿವಿದರು ಹೊಂತಕಾಜಿಗಳು (ಕುವ್ಯಾಕ. ೧೦-೯); ತವಕಿಸಿದುದಾ ದಂತಿ ದಂತಿಯ ಜವಗತಿಗೆ ಜವಗುಂದಿದರು ಬಲುಭುವನ ಕೋಶದ ಹೊರೆಯ ಹೊಜಿಗೆಯ ಹೊಂತಕಾಜಿಗಳು (ತೊರಕಾ. ೬-೩೨-೧೫೫); ಸಂತತಿ ಸಹಿತ ರಾವಣಬಲವ ತಜಿದ ಹೊಂತಕಾಜಿ ಹನುಮಂತ ನಮ್ಮ ಗುರು ಕಾಣರೊ (ಪುರಂದ. ೩-೮೬-೧). ೨. ಪ್ರತಿಸ್ಪರ್ಧಿಯಾದವನು: ಮಾರನ ಮದವನಂಡಲೆವ ಬಿಲ್ಲಿನ ಹೊಂತಕಾಜಿ ನೋಡೆಂದು ಮುದ್ದಿಪಳು (ಭರಚ. ೧೫-೫೪). ೩. ವಂಚಕ; ಠಕ್ಕ: ಹೋದನದಕೋ ಹೊಮ್ಮೃಗ ಹೊಂತಕಾಜಿ ನಮ್ಮಾ ದಿನದ ಗಾಯಗಳಿಗೆ ವೇಧೆಯಿಕ್ಕಿದ ಗಾಡಿಕಾಜ ಸಿಕ್ಕದೆ ಬಿಟ್ಟುಹೋದನದಕೊ ಹುಸಿಯಲ್ಲ (ನಿಜಸಾಂ. ೨-೧೦೦). Δ **ಪೊಂತಕಾರಿ**: ೧. ಪೋಗಲೀಯದೆ ಬಲವ ಪೊಂತಕಾರಿಗಳು ಮೊಗಗಡಿಸಿ (ಕರಿಕ. ೧೭-೯). Δ **ಪೊಂತಕಾಜಿ**: ೧. ಆ ಪಂದಿಗಳೊಳ್ ಕೆಲಂಬ ಪಂದಿಗಳ್ ಪೊಂತಕಾಜಿಗಳ ನಿಡುಸರಲ್ಗಳ್ ತಾಗೆ . . . ಮಡಿದವು (ಹಾಲಾಸ್ಯ. ೩-೧೩-೩೬ ಪ). **ಹೊಂತಕಾರಿ$_2$**: ೧. ರಥಿಕರು ಶರಚಮತ್ಕಾರಿಗಳು ಪದಚರ ಹೊಂತಕಾರಿಗಳು . . . ತರತರದಿ ನಿಂದಿಹರು (ಕೋಗಯು. ೩-೪೬); ಹೊಂತಕಾರಿಗಳಿವರು ಕಲಿಯಾಗಿ ಕಾಳಗಕೆ ನಿಂತು ಹಿರಿಯುಬ್ಬಣದಿ ಪರಿಘದಿಂ ಸುರಗಿಯಿಂ ಕುಂತದಿಂ ಕಠಾರಿಯಿಂ ಮುಸಲದಿಂ ಪರಶು ತೋಮರದಿಂದ ತಿವಿದಾಡ್ದರು (ತುರಂಗ. ೧೮-೪). ೩. ಅಲ್ಲಿಂದ ಪೋಲೀಸರಿಗೆ ಹೊಂತಕಾರಿಗಳನ್ನು ಹುಡುಕುವ ಕೆಲಸವಾಯಿತು (ಗೂಂಡಾರ. ೩೧). ೪. (ಪ್ರಾಯದಿಂದ) ಮದಿಸಿದವನು; ಸೊಕ್ಕಿದವನು: ಹೊಸ ಹರೆಯದ ಹೊಂತಕಾರಿ ಮೈಸಿರಿಯಿಂದ ಅಸಹಾಯ ಶೂರನಂಗದನು . . . ಬಂದನು ರಾಜನಾಸ್ಥಾನಕ್ಕೆ (ಸೌಂದಕಾ. ೧-೭೬). [ಹೊಂತಕಾಜ + - ಇ$_3$]

ಹೊಂತಕಾಜಿತನ (ನಾ). ಚಾತುರ್ಯ; ಕೌಶಲ: ರಣದ ಮೇಲಭಿಲಾಷೆಯುಳ್ಳವ ಕಣಕಿ ನೋಡಿದಡಜಿಯಬಹುದುಬ್ಬಣ ಶರಾಸನ ಸರಳ ಹೊಜಿಗೆಯ ಹೊಂತಕಾಜಿತನ (ತೊರಕಾ. ೪-೪-೩೭). [ಹೊಂತಕಾಜಿ$_2$ + - ತನ]

ಹೊಂತಗಾರ 'ಹೊಂತಕಾಜ' ನೋ.

ಹೊಂತಗಾರಿಕೆ, ಹೊಂತುಗಾರಿಕೆ (ನಾ). ಸಂಚು; ವಂಚನೆ; ಮೋಸಗಾರಿಕೆ: ಪರ್ಸಿಯ, ತುರ್ಕಿಸ್ಥಾನದಂಥ ಸ್ಥಳಗಳಲ್ಲಿ ಅರಸುತನ ಪ್ರಾಪ್ತಿಯು ಕೇವಲ ಕಪಟ, ಹೊಂತಗಾರಿಕೆಗಳಿಂದ ಲಭಿಸುತಿತ್ತು (ಬಾಲಪ್ರ. II, ೧೧೩೬); ಅವನಿಗೆ ಗೌಡನ ಹೊಂತಗಾರಿಕೆ ತಿಳಿಯಿತು (ಮುಗಿಯು. ೨೪೨). **ಹೊಂತುಗಾರಿಕೆ**: ಏನೋ ಹೊಂತುಗಾರಿಕೆ ಇರಬೇಕು (ಕಡಿಹೂ. ೨೭೭). [ಹೊಂತಗಾರ (< ಹೊಂತಕಾಜ) + - ಇಕೆ]

ಹೊಂತತನ (ನಾ). = ಹೊಂತಕಾಜಿತನ: ಇಂತು ಬಲುಬಗೆಯಿಂದ ತಮ್ಮಯ ಪಂತಪೌರುಷ ಮೆರೆಯೆ ಮೂದಲೆ ಹೊಂತತನ ಕಡುಜಾಣ ಜಾಗ್ರತೆ ಚಾಪದಗ್ಗಳಿಕೆ ನಿಂತು ಕಾದುವ ಚಲವ ಸಕಲದಿಗಂತದರಸರು ಮೆಚ್ಚೆ ಖಳದನುಜಾಂತಕರು ಕಾದಿದರು (ಕೋಗಯು. ೧೦-೫೦). [ಹೊಂತ$_1$ + - ತನ]

ಹೊಂತಲೆ (ನಾ). ಸೇನೆಯ ಅಗ್ರಭಾಗ; ಮುಂಚೂಣಿ: ಕಡಗುವ ಜವಚೂಣಿಯ ಮನೆಯೊಳು ಭಗಪೂಷರು . . . ಬಳಿಕುಳಿದ ಪಡೆಸಹಿತಬುಜೋದರ ಹೊಂತಲೆಯೊಳು ಮುಂತೊಗ್ಗೊಡೆಯದ ನೆರೆದು (ವೀರೇಶ. ೨-೩೨); ಅವರಿರ್ವರುಂ ತಂತಮ್ಮ ಹಸ್ತಶ್ವರಥಪದಾತಿಬಲಂಬೆರಸು ಹೊಂತಲೆಯೊಳಾಂತಿರ್ದರ್ (ಮಹಾನೇ. ೧೨-೬೦ ವ). [? + ತಲೆ]

ಹೊಂತು 'ಹೊಂತ' ನೋ.

ಹೊಂತುಗಾರಿಕೆ 'ಹೊಂತಗಾರಿಕೆ' ನೋ.

ಹೊಂದಂಡಿಗೆ 'ಪೊಂದಂಡಿಗೆ' ನೋ.

ಹೊಂದಂಬಿಗೆ 'ಹೊಂದಂಬುಗೆ' ನೋ.

ಹೊಂದಂಬುಗೆ, ಹೊಂದಂಬಿಗೆ (ನಾ). ಚಿನ್ನದ ತಂಬಿಗೆ; ಬಂಗಾರದ ಸಣ್ಣ ಕೊಡ: ತೋರ ಹೊಂದಂಬು[ಪಾಕಾಂ. ಬಿ]ಗೆಯಲಿ ತುಂಬಿ ತರಿಸಿ ಪನ್ನೀರಿಂದ ಕಾಲ್ಗಳ ತೊಳೆದು ಮಾರಕುಮಾರ ಮಂತ್ರೀಶಸುತಗೆ ರನ್ನದಾರತಿಗಳನೆತ್ತಿದಳು (ಮೋಹತ. ೩೧-೩೫). **ಹೊಂದಂಬಿಗೆ**: ಹೊಂದಂಬಿಗೆಯುದಕವ ತಂದು ಚರಣಾರವಿಂದವ ಪಡಿಗದೆ ತೊಳೆದು ಗಂಧಕತ್ತುರಿಯಿಂದೆ ತಿಗುರಿಕ್ಕಿ (ಮೋಹತ. ೨೦-೩). [ಹೊಂ (< ಪೊನ್) + ತಂಬುಗೆ]

ಹೊಂದಗಡು 'ಪೊಂದಗಡು' ನೋ.

ಹೊಂದಟ್ಟೆ 'ಪೊಂದಟ್ಟೆ' ನೋ.

ಹೊಂದವಗ (ನಾ). ಚಿನ್ನದ ಆಸನ; ಸುವರ್ಣಪೀಠ: ಬಂದ ನಾರದ ಮುನೀಶ್ವರಗುವಚರಗ್ಗೆದು ಹೊಂದವಗದೊಳು ಕುಳ್ಳಿರಿಸಿ ಗಂಧಕತ್ತುರಿಯ ಲೇಪವನಿಕ್ಕಿ ದೇವಕಿನಂದನ ಮಾತನಾಡಿಸಿದ (ಮೋಹತ. ೧೩-೩೩); "ಅಗಲವಾದ ಚಿನ್ನದ ಜಗಲಿ" (ನೋಹತ. ಅಡಿಟಿ). [ಹೊಂ (< ಪೊನ್) + ತವಗ (< ತವಂಗ)]

ಹೊಂದಳಿಗೆ 'ಪೊಂದಳಿಗೆ' ನೋ.

ಹೊಂದಾಣಿಕೆ (ನಾ). ಹೊಂದಿಕೆ; ಸಾಮರಸ್ಯ: ಅಜಂತಾ ಮತ್ತು ರಜಪೂತ ಕಲಾವಿದರು ತಮ್ಮ ಕಲೆ, ಜೀವನ, ಧರ್ಮಗಳಿಗೆ ಸಮರಸವಾದ ಹೊಂದಾಣಿಕೆಯಿದ್ದ ಆದರ್ಶವಾತಾವರಣದಲ್ಲಿ ದಿವ್ಯವಾದ ಕಲೆಯನ್ನು ನಿರ್ಮಿಸಿದರು (ಭಾರದ. ೫೩೪); ಹೂವು ಹಣ್ಣೂ ಗಿಡದ ಎಡೆಬಿಡದ ಕಾಣಿಕೆ. ಸಾವು-ನೋವೂ ನಮ್ಮ ದಿನದ ಹೊಂದಾಣಿಕೆ (ನಲಮು. ೬೮-೧೪); ಹೊರಗಿನಿಂದ ಪಡೆದುಕೊಂಡ ಜ್ಞಾನ ಲೇಖಕನ ರಕ್ತದಲ್ಲಿ ಬೆರೆಯದೆ, ಕೃತಿ ಎರಡು ಭಾಷೆಗಳ ಹೊಂದಾಣಿಕೆಯಾಗುತ್ತದೆ (ಹೊಸಕ್ಷ. ೨೮೦). [ಹೊಂದು$_1$ (< ಪೊರ್ದು) + - ಅಣ್ಕೆ + - ಇಕೆ]

ಹೊಂದಾಲಿ (ನಾ). ಚಿನ್ನದ ಚೊಂಬು; ಬಂಗಾರದ ಥಾಲಿ: ಹೊಂದಾಲಿಯ ಮಾಳ್ಕೆಯೊಳು . . . ಎಸೆದುದು ಚಂದ್ರಂ (ಜಯಣ. ೧೪-೬). [ಹೊಂ (< ಪೊನ್) + ತಾಲಿ$_2$]

ಹೊಂದಾವರೆ 'ಪೊಂದಾಮರೆ' ನೋ.

ಹೊಂದಾಳ 'ಪೊಂದಾಳ' ನೋ.

ಹೊಂದಾಳೆ (ನಾ). ಚಿನ್ನದ ಬಣ್ಣದ ತಾಳೆ; ಹೊಂಗೇದಗೆ: ತಾಳ ಹೊಂದಾಳೆಯಕ್ಕೆಯು ಕಕ್ಕೆ ಪಚ್ಚಾರಿ ಮೇಲಾದ ಬಿದಿರು . . . ಕಿಕ್ಕಿರಿಪ ಕಾನನದೊಳು (ನವಮೋ. ೮-೯). [ಹೊಂ (< ಪೊನ್) + ತಾಳೆ$_1$ (< ತಾಳ)]

ಹೊಂದಿಕೆ 'ಪೊಂದಿಕೆ' ನೋ.

ಹೊಂದಿಕೆಗೆಡು (ಕ್ರಿ). ಹೊಂದಾಣಿಕೆಯನ್ನು ಕಳೆದುಕೊಳ್ಳು; ಸಾಮರಸ್ಯವಿಲ್ಲದಾಗು: ಮಹಮ್ಮದೀಯರು . . . ಬಂದಾಗ್ಗೆ ಹೊಂದುಗೂಡಿ ಒಂದಾಗಿದ್ದರೂ ಹಿಂದುಗಡೆ ಹೊಂದಿಕೆಗೆಟ್ಟರು (ಎಚಾಮಂ. ೨೫). [ಹೊಂದಿಕೆ (< ಪೊಂದಿಕೆ) + ಕೆಡು$_1$]

ಹೊಂದಿಗೆ 'ಪೊರ್ದುಗೆ' ನೋ.

ಹೊಂದಿಸು 'ಪೊರ್ದಿಸು' ನೋ.

ಹೊಂದು$_1$ 'ಪೊರ್ದು' ನೋ.

ಹೊಂದು$_2$ 'ಪೊಂದು$_2$' ನೋ.

ಹೊಂದು$_3$ 'ಪೊಂದು$_3$' ನೋ.

ಹೊಂದು$_4$ 'ಪೊಂದು$_4$' ನೋ.

ಹೊಂದುಗೂಡಿಕೆ (ನಾ). ಹೊಂದಿಕೊಂಡು ಒಟ್ಟಾಗಿರುವಿಕೆ; ಸಾಮರಸ್ಯ; ಮೇಳ: ವಿದ್ಯಾರಣ್ಯರೂ . . . ಶಿವಾಜಿಮಹಾರಾಜರೂ ಧರ್ಮಸಂಸ್ಥಾಪನೆ ಪರಿಪಾಲನೆಗಳನ್ನು ಹೊಂದುಗೂಡಿಕೆಯ ಬಾಳುವೆಗೆ ಹಾದಿಯನ್ನು ಮಾಡಿಯೇ ಕೊನೆಗಾಣಿಸಿದರು (ಎಚಾಮಂ. ೨೫); ಹೊಂದುಗೂಡಿಕೆ ಇರದ ಜನಕೆ ನೊಂದೆ (ನಾದಲೀ. ೬೬-೧೬). [ಹೊಂದುಗೂಡು + - ಇಕೆ]

ಹೊಂದುಗೂಡಿಸು (ಕ್ರಿ). ಹೊಂದಿಕೆಯನ್ನುಂಟುಮಾಡು; ಸಾಮರಸ್ಯವನ್ನುಂಟುಮಾಡು; ಒಂದುಗೂಡಿಸು: ಬೇರೆಬೇರೆಯಾದವರನ್ನು ಹೊಂದುಗೂಡಿಸಿ ಒಂದು ಮಾಡುವನು (ಎಚಾಮಂ. ೨೫). [ಹೊಂದುಗೂಡು + - ಇಸ್ಸು]

ಹೊಂದುಗೂಡು (ಕ್ರ). ಹೊಂದಾಣಿಕೆಯನ್ನು ಪಡೆ; ಸಾಮರಸ್ಯವನ್ನು ಹೊಂದು; ಒಂದುಗೂಡು: ಒಳ್ಳೆಯ ಮನಸ್ಸಿನಿಂದ ಹೊಂದುಗೂಡಿರುವುದೆ ಧರ್ಮ (ಏಚಾಮಂ. ೨೪); ಹೊಸಕಾಲದ ಪರಿಸ್ಥಿತಿಗೆ ಹೊಂದುಗೂಡಿರುವಂತೆ ಆ ಭಾಷೆಯನ್ನು ಮಾರ್ಪಡಿಸಬೇಕಾಗುವುದು (ತಿಮುಗು. ೮ ಪೀಠಿಕೆ).

[ಹೊಂದು$_2$ (< ಪೊಂದು$_2$) + ಕೂಡು$_1$]

ಹೊಂದುಗೆ 'ಪೊರ್ದುಗೆ' ನೋ.

ಹೊಂದುಗೆಡು (ಕ್ರ). ಸಾವು ಇಲ್ಲವಾಗು: ಹುಟ್ಟು ಹೊಂದುಗೆಟ್ಟುದೆ ನಿರ್ವಾಣ (ಆದಪ. ೫೧-೧೪೯). [ಹೊಂದು$_4$ (< ಪೊಂದು$_4$) + ಕೆಡು$_1$]

ಹೊಂದುಡಿಗೆ 'ಪೊಂದುಡಿಗೆ' ನೋ.

ಹೊಂದೂಂಬು (ನಾ). (ಕೆರೆ, ಕಟ್ಟೆಗಳಲ್ಲಿ ನೀರನ್ನು ಬಿಡಲು ಮಾಡಿರುವ) ಸುವರ್ಣದ ಕಂಡಿ,— ದ್ವಾರ; ಚಿನ್ನದ ತೂಬು: ಲೀಲೆಗಾರ್ತಿಯರಚ್ಯುತ ನಾಜ್ಞೆಯಿಂದ ಪರ್ಗಾಲ ಹೊಂದೂಂಬನು ನಿಗಹಿ ಕೀಲಣಿಗೆಯ್ದು ಸುವರ್ಣ ವೇತಂಡಶುಂಡಾಲದ ಸುರಿದುದು ಸಲಿಲ (ಮೋಹತ. ೧೪-೬೫).

[ಹೊಂ (< ಪೊನ್) + ತೂಂಬು]

ಹೊಂದೆನೆ 'ಪೊಂದೆನೆ' ನೋ.

ಹೊಂದೆರೆ 'ಪೊಂದೆರ್$_2$' ನೋ.

ಹೊಂದೇರು 'ಪೊಂದೇರು' ನೋ.

ಹೊಂದೊಟ್ಟಲು 'ಪೊಂದೊಟ್ಟಲು' ನೋ.

ಹೊಂದೊಡರು 'ಪೊಂದೊಡರ್' ನೋ.

ಹೊಂದೊಡವು 'ಪೊಂದೊಡವು' ನೋ.

ಹೊಂದೊಡಿಗೆ 'ಪೊಂದೊಡಿಗೆ' ನೋ.

ಹೊಂದೋಣಿ (ನಾ). ಚಿನ್ನದ ದೋಣಿ; ಬಂಗಾರದ ನಾವೆ: ಅಡರಿ ತುಂಬುವ ಹೇಮಘಟದುಗ್ಗಡದ ಹೊಂದೋಣಿಗಳ ಹಂತಿಯ ಸಡಗರದ ಸೌರಂಭವೆಸೆದುದು ಸುತ್ತುವಳಯದಲಿ (ತೂರಾ. ೧-೧೩-೧೦). [ಹೊನ್ (< ಪೊನ್) + ದೋಣಿ$_2$]

ಹೊಂದೋರಣ (ನಾ). ಚಿನ್ನದ ತೋರಣ; ಬಂಗಾರದ ತೋರಣ: ಇತ್ತ ಹೊಂದೋರಣದ ತೊಳೆಯಲಿ ಅತ್ತಲಿತ್ತಲು ಹನುವು ತಿರುಗಲು ಮುತ್ತಿತಮರಾರಿಗಳು ಶಿವಿಯನು ಶಲಭ ಕವಿವಂತೆ (ಶಾಶಾ. ೧೧-೨೬).

[ಹೊನ್ (< ಪೊನ್) + ತೋರಣ]

ಹೊಂಪಿಡಿ (ಕ್ರ). ಬೆಲುವು ತುಂಬಿರು; ಸೊಗಸಾಗಿರು: ಬಡನಡುವಿನ ಬಾವನ್ನ ಗಂಪಿನ ಹೊಂಪಿಡಿದ ಹೊಂಬಳ್ಳಿಯೊಳಿಸವ ಕಡುಬಿನ್ಪಿನ ಜಘನದ ಕಾಮಿನಿಗಿಂದು ಪಡಿಗಟ್ಟಿ ಪೇಳುವೆನೇನ (ಜೀವಂಸಾಂ. ೧೦-೨೫). [ಹೊಂಪು (< ಪೊಂಪು) + ಇಡ್$_3$]

ಹೊಂಪು 'ಪೊಂಪು' ನೋ.

ಹೊಂಪುಣಿ 'ಪೊಂಪುಟಿ' ನೋ.

ಹೊಂಪುಳಿ 'ಪೊಂಪುಟಿ' ನೋ.

ಹೊಂಪುಳಿಯೋಗು 'ಪೊಂಪುಟಿವೋಗು' ನೋ.

ಹೊಂಪುಳಿವೋಗು 'ಪೊಂಪುಟಿವೋಗು' ನೋ.

ಹೊಂಪುಳಿಹೋಗು 'ಪೊಂಪುಟಿವೋಗು' ನೋ.

ಹೊಂಬಟ್ಟ 'ಪೊಂಬಟ್ಟ' ನೋ.

ಹೊಂಬಟ್ಟಲು 'ಪೊಂಬಟ್ಟಲ್' ನೋ.

ಹೊಂಬಟ್ಟೆ 'ಪೊಂಬಟ್ಟೆ' ನೋ.

ಹೊಂಬಣ್ಣ 'ಪೊಂಬಣ್ಣ' ನೋ.

ಹೊಂಬರಹ 'ಪೊಂಬರಹ' ನೋ.

ಹೊಂಬರಿಯಣ 'ಪೊಂಬರಿಯಾಣ' ನೋ.

ಹೊಂಬರಿವಾಣ 'ಪೊಂಬರಿಯಾಣ' ನೋ.

ಹೊಂಬಸಿ (ನಾ). ಆಗತಾನೇ ಹಸಿಯಾದುದು: ಈ ಪ್ರಕಾರ ಬೇಸಿಗೆಯಲ್ಲಿ ಮೂರು ಸಾಲು ಮಳೆಯಾದ ಮೇಲೆ ಸಮಯವನ್ನರಿತು ಹೊಂಬಸಿ ಒಳಗೆ ಮೂರು ಸಾಲು ನಾಲ್ಕು ಸಾಲು ಹರಗಿದ ಮೇಲೆ . . . ಗೋದಿಯನ್ನು ಬಿತ್ತಬೇಕು (ಕೃಪ್ರ. ೮೨).

[< ಹೊಚ್ಚ? + ಪಸಿ$_2$]

ಹೊಂಬಳದಿ (ನಾ). ಚಿನ್ನದ ಬಣ್ಣದ ಹಳದಿ; ಹೊಂಬಣ್ಣ: ಚಂದ್ರೋದಯದ ಛಂದದಿಂ ಶಾಂತಿಯಿಂದೈತಂದನಾಂಜನೇಯಂ, ಪವನಸೂನು, ಅದೊ ಜಾಂಬವಾನಂತರಂ ಹೊಂಬಳದಿ ಹೊಳಹಿನಂಗದ, ವಜ್ರಸಮತನುಬಲಿಷ್ಠತೆಯ, ವನಲತಾಶೋಭಿತಶಿರತ್ರನಂ (ಶ್ರೀರಾಮಾ. ೩೫೭-೪೬೯). [ಹೊಂ (< ಪೊನ್) + ಪಳದಿ$_1$]

ಹೊಂಬಳಯಿಗೆ 'ಪೊಂಬಳಯಿಗೆ' ನೋ.

ಹೊಂಬಳಿ$_1$ (ಕ್ರ). ಸುವರ್ಣದ ಲೇಪವನ್ನು ಮಾಡು; ಬಂಗಾರದ ಮೆರುಗನ್ನು ಕೊಡು: ಉಲಿವ ಗೆಜ್ಜೆಯ ಚೆಲ್ಲಣದ ಹೊಂಬಳಿದ ಹರಿಗೆಯ ಹೊಳಿವ ಕಡಿತಲೆಗಳ ವಿಲಾಸದೊಳಿಂದು ಹೊಕ್ಕುದು ತುಳುವ ಪಡೆ ಕಡುಗಿ (ಕುವ್ಯಾಭೀ. ೪-೩೩).

[ಹೊಂ (< ಪೊನ್) + ಬಳಿ$_1$ (< ಬಟ್ಟಿ$_1$)]

ಹೊಂಬಳಿ$_2$ (ನಾ). ಚಿನ್ನದ ಕೆಲಸ ಮಾಡಿರುವ ಒಂದು ಬಗೆಯ ಬಟ್ಟೆ; ಜರತಾರಿಯ ನಕಾಸೆಯುಳ್ಳ ವಸ್ತ್ರ: ಬಳಿಯ ಚೌರಿಯ ಹೊರೆಯ ಚಿತ್ರಾವಳಿಯ ವಿಧಾನದ ಹಾಸುಗಳ ಹೊಂಬಳಿಯ ತೆರೆಸೀರೆಗಳ . . . ಹೊಂಗೆಲಸದೊಳು ಝರಿಗೆಗಳ ಸುವರ್ಣಾವಳಿಯ ದಿಂಡುಗಳೊಟ್ಟಿದವು ಬಂಡಿಗಳ ಜವ ಜಡಿಯೆ (ಕುವ್ಯಾಗ. ೪-೧೪).

[ಹೊಂ (< ಪೊನ್) + ಪಳಿ$_4$ (< ಪಟ್ಟಿ$_5$)]

ಹೊಂಬಳಿ$_3$ (ನಾ). ಹೊನ್ನಿನ ರೂಪದಲ್ಲಿ ಕೊಡುವ ತೆರಿಗೆ ,— ಸುಂಕ: ಸಮಸ್ತ ಗವುಂಡುಗಳುಂ ಭುಜಗೇಶ್ವರದೇವರಿಂಗೆ ನೀರು ಕೂಲಿ ನಿಚಂಡಿ ಹೊಂಬಳಿ . . . ಯಾದೇವರಯೊಕ್ಕಲು ಏಸುವುಳ್ಳದಕ್ಕುವುಂ ಸರ್ವಮಾನ್ಯವಾಗಿ ಬಿಟ್ಟ ದತ್ತಿ (ಎಕ. IV (R). ಚಾಮರಾ. ೪-೧೧; 1201): ಶ್ರೀರಾಮನಾಥದೇವರ ಶ್ರೀಕಾರ್ಯ್ಯಕ್ಕೆ ಆ ನರಸಿಂಹ ಮಂಗಲವನು ಸಿದ್ಧಾಯ ಹೊದಕೆ ಹೊಂಬಳಿ . . . ಎಲ್ಲ ಕಿಱುಕುಳವನು ಬಿಟ್ಟು . . . ಧಾರೆಯನೆಱದು (ಎಕ. IV(R). ಚಾಮರಾ. ೨೯೫-೩೦; 1337).

[ಹೊಂ (< ಪೊನ್) + ಬಳಿ$_2$ (< ಬಟ್ಟಿ$_3$)]

ಹೊಂಬಳೆ (ನಾ). ೧. ಚಿನ್ನದ ಬಳೆ,— ಕಂಕಣ: ಹಸ್ತಕಟಕ ಹರಳುಂಗುರ ಹೊಂಬಳೆ ವಿಸ್ತಾರ ನವರತ್ನಹಾರ (ಶಾಂತೀಚ. ೩-೭೮); ಕಾಲುಂಗುರ ಪಿಲ್ಲಿ . . . ಹೊಂಬಳೆಗಳ ಬಾಲವೆಣ್ಣುಗಳ್ಕಿದಿರು (ಕಂನವ. ೨೧-೧೬). ೨. (ಆನೆಯ ಕಾಲಿಗೆ ತೊಡಿಸುವ) ಚಿನ್ನದ ಬಳೆಯಂತಹ ಒಂದು ಆಭರಣ: ಮೇಲೇಱುವ ಬಗೆ ಮಿಗೆ ತಿವುರಿನ ಹೊಂಬಳೆಗಳ ಭಾಳದ ಚಂದ್ರದ ಚಿತ್ರದ ಮೊಗರಂಬದ ಕೈದಾಳಿನ ಕಾಲ್ಗಾಪಿಂ ಪಡೆಯಂ ಹಣ್ಣಿದ ಕರಿಘಟೆ ನೆರೆದುವು ಬಲದೊಳಗೆ (ವೀರೇಚ. ೨-೨೮).

[ಹೊಂ (< ಪೊನ್) + ಬಳೆ$_2$]

ಹೊಂಬಳ್ಳಿ 'ಪೊಂಬಳ್ಳಿ' ನೋ.

ಹೊಂಬಾಗೆ (ನಾ). ಒಂದು ಬಗೆಯ ಬಾಗೆಮರ,— ಶರೀಷವೃಕ್ಷ: ಬಾಗ, ಕಲ್ಬಾಗೆ, ಹೊಂಬಾಗೆ, ಶರೀಷ (ಮೃಡಿಗ. ೪-೬೪). 'ಕಲ್ಬಾಗೆ' ಪರಾ.

[ಹೊಂ (< ಪೊನ್) + ಬಾಗೆ$_1$]

ಹೊಂಬಾಳು (ನಾ). ಚಿನ್ನದ ಕತ್ತಿ; ಸುವರ್ಣದ ಖಡ್ಗ: ಹೊಂಬಾಳಿಂದೊಡಲಿಂಬು ಗೊಡಲು ಬಲುಸಂಭ್ರಮವಕ್ಕುದೆ ಲಕುಮಿಶ (ಪ್ರಸೀ. ೭೫-೧).

[ಹೊಂ (< ಪೊನ್) + ಬಾಳು$_3$ (< ಬಾಳ್$_3$)]

ಹೊಂಬಾಳೆ$_1$ 'ಪೊಂಬಾಳೆ$_1$' ನೋ.

ಹೊಂಬಾಳೆ$_2$ 'ಪೊಂಬಾಟೆ' ನೋ.

ಹೊಂಬಾಳೆ$_3$ (ನಾ). ಒಂದು ಬಗೆಯ ಸಸ್ಯ (?): "ಕಬರಿ ೨ ಹೊಂಬಾಳೆ" (ಆಕಾ. ೫-೧); "ಜೀವಂತೀ - ಸಿಹಿಪಾಲೆ, ಮೆದೆ, ಹೊಂಬಾಳೆ, ಅಣಕೆ, ಶ್ರೇಷ್ಠಶಾಕ" (ಓಷಧಿ. ೬೩). [?]

ಹೊಂಬಾಳೆಹುಲ್ಲು (ನಾ). ಒಂದು ಬಗೆಯ ಹುಲ್ಲು: ಗಂಡು ಅಕ್ಕುಹುಲ್ಲು, ತಪ್ಪರಿಹುಲ್ಲು, ಹೊಂಬಾಳೆಹುಲ್ಲು, ಸಣ್ಣಕ್ಕಿಹುಲ್ಲು (ಮೃಡಿಗ. ೩೦-೫೮೫).

[ಹೊಂಬಾಳೆ$_3$ + ಹುಲ್ಲು (< ಪುಲ್)]

ಹೊಂಬಾಟೆ 'ಪೊಂಬಾಟೆ' ನೋ.

ಹೊಂಬಿತ್ತಾಳೆ (ನಾ). ಚಿನ್ನದ ಗಿಲೀಟು ಮಾಡಿದ ಹಿತ್ತಾಳೆ; ಬಂಗಾರದ ಲೇಪ ಮಾಡಿದ ಹಿತ್ತಾಳೆ: ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತ (ಬಸವ. ೬೩೭); ಹೊಂಬಿತ್ತಾಳೆಯ ಕೆಲಸದಂತೆ [ಪಾಠಾಂ. ಹೊನ್ನು ಕೆಂಚೆಂದಡೆ, ಹಿತ್ತಾಳೆ ಕೆಂಚೆಂಬ] ಸಿಂಹದ ನಡು ಸಣ್ಣದೆಂದಡೆ ನಾಯ ನಡು ಸಣ್ಣದೆಂಬ ಪಂಚಮಹಾಪಾತಕರ ನುಡಿಯ ಕೇಳಲಾಗದು (ಚನ್ನವ. ಕ. ೬೯೯-೭೪೨).

[ಹೊಂ (< ಪೊನ್) + ಹಿತ್ತಾಳೆ (< ಪಿತ್ತಳೆ)]

ಹೊಂಬಿಸಿಲು 'ಪೊಂಬಿಸಿಲ್' ನೋ.

ಹೊಂಬೀಸಣಿಗೆ (ನಾ). ಬಂಗಾರದ ಬೀಸಣಿಗೆ: ಗಿಣಿನುಡಿಯಬಲೆಯ ಕೂಟದಿ ಮುತ್ತಿನ ಮಣಿಯಂತೆ ಬೆಮರಾಂತಿರುವ ಹಣೆಯ ನಿವಾರಿಸಬೇಕೆಂದು ಹೊಂಬೀಸಣಿಗೆಯ ಹಿಡಿದೊರ್ವಳಿಹಳು (ಮೋಹತ. ೪-೧೧). [ಹೊಂ (< ಪೊನ್) + ಬೀಸಣಿಗೆ]

ಹೊಂಬು$_1$ 'ಪರಪ್ಪು' ನೋ.

ಹೊಂಬುಗುರಿ 'ಪೊಂಬೊಗರಿ' ನೋ.

ಹೊಂಬುಚ 'ಪೊಂಬುಟ್ಟಿ' ನೋ.

ಹೊಂಬುಚ್ಚ 'ಪೊಂಬುಟ್ಟಿ' ನೋ.

ಹೊಂಬುತ್ತಳಿ 'ಪೊಂಬುತ್ತಳಿ' ನೋ.

ಹೊಂಬುರ್ಚ 'ಪೊಂಬುಟ್ಟಿ' ನೋ.

ಹೊಂಬುಳಿ 'ಹೊಂಬಳ್ಳಿ' ನೋ.

ಹೊಂಬುಳ್ಚಿ 'ಪೊಂಬುಟ್ಟಿ' ನೋ.

ಹೊಂಬೆಟ್ಟ 'ಪೊಂಬೆಟ್ಟಿ' ನೋ.

ಹೊಂಬೆಸ 'ಪೊಂಬೆಸ' ನೋ.

ಹೊಂಬೆಸರು 'ಪೊಂಬೆಸಱು' ನೋ.

ಹೊಂಬೆಸಱು 'ಪೊಂಬೆಸಱು' ನೋ.

ಹೊಂಬೆಸಱು 'ಪೊಂಬೆಸಱು' ನೋ.

ಹೊಂಬೆಸೆ 'ಪೊಂಬೆಸ' ನೋ.

ಹೊಂಬೆಳಕು 'ಪೊಂಬೆಳಗು' ನೋ.

ಹೊಂಬೆಳಗು 'ಪೊಂಬೆಳಗು' ನೋ.

ಹೊಂಬೆಳೆ (ನಾ). ಚಿನ್ನದಂತಹ ಬೆಳೆ; ಉತ್ತಮವಾದ ಫಸಲು: ದ್ರುಪದನ ಹೊಂಬೆಳೆಯ ತನಿಹರುಷ ಹೊಡೆದೋಱಿದುದು ಪುಳಕದಲಿ (ಕುವಾಅ. ೧೭-೬೪); ಬಣಗು ತೊರೆಯೆಡೆ ಹಿಂಡಿ ಹರಿಯದೆ ಬಾರದೇ ಹೊಸ ಹೊಂಬೆಳೆ? (ನಡಬೂ. ೮೩-೧೪); ಎಲ್ಲ ಬಗೆಯೊಡವೆಗಳಿಗೊಡಲ ನೋಡುವೆವಿಲ್ಲಿ ಚಿಲ್ಲಿರ್ಪ ಸವಿಯ ಹೊಂಬೆಳೆಯ ಹೊಲದಲ್ಲಿ (ಕಾಲೂರ. ೨೭-೧೭). [ಹೊಂ (< ಪೊನ್) + ಬೆಳೆ]

ಹೊಂಬೊಂಬೆ 'ಪೊಂಬೊಂಬೆ' ನೋ.

ಹೊಂಬೊಗರಿ 'ಪೊಂಬೊಗರಿ' ನೋ.

ಹೊಂಬೊಗರು 'ಪೊಂಬೊಗರ್' ನೋ.

ಹೊಂಭರಣ (ನಾ). ಚಿನ್ನದ ಭರಣಿ; ಬಂಗಾರದ ಕರಂಡಕ ,— ಡಬ್ಬಿ: ತರಿಸಿ ಸಾದು ಜವಾಜಿಗಳ ಹೊಂಭರಣಿಯಲಿ ಮೊಗಮೊಗದು ಶಲ್ಯಗೆ ಸುರಿದು . . . ಹೊಸ ಮಡಿವರ್ಗದಲಿ ಎಗ ಮೆಱೆದು ರಣಸುಮ್ಮಾನದಲಿ ಹೊಗರೇಱಿದನು ಕರ್ಣ (ಕುವಾಕ. ೫೧-೩). [ಹೊಂ (< ಪೊನ್) + ಭರಣಿ]

ಹೊಂಭುಳ (ನಾ). ಹೊನ್ನೆಹುಳು; ಮಿಣುಕುಹುಳು: ವಿರತಿಜ್ಞಾನಾನ್ಯತರ ವರಸದಂಧಕನಾದ ತರಣಿಯೊಳು ಹೊಂಭುಳವು ಗರುವಿಸಿದ ತರದಿ (ಪ್ರಸಕೀ. ೫೭-೪).

[ಹೊಂ (< ಪೊನ್) + ಪುಳ (< ಪುಳು)]

ಹೊಕು (ನಾ). ಪ್ರವೇಶ: ಗುರುರಾಯವೊಡೆಯರು ಸಿಕುವಲಿ ತನಗೆ ಹೊಕುಯಿಲ್ಲದ ಯಿಸರದೇವನಾಯಕನ ತೀರ[ಕೆ] ಬಂದುಪಜೀವಿಸಲಾಗಿ (ಕ್ಯಾ. III.೮-೧೨; 1530).

[< ಪೊಗು]

ಹೊಕ್ಕ 'ಪೊಗು' ಪರಾ.

ಹೊಕ್ಕರಣೆ 'ಪೊಕ್ಕರಣೆ' ನೋ.

ಹೊಕ್ಕರಣೆ 'ಪೊಕ್ಕರಣೆ' ನೋ.

ಹೊಕ್ಕಳು 'ಪೊಕ್ಕುಟ್' ನೋ.

ಹೊಕ್ಕಳುಬಳ್ಳಿ 'ಹೊಕ್ಕುಳುಬಳ್ಳಿ' ನೋ.

ಹೊಕ್ಕು$_1$ 'ಪೊಗು' ಪರಾ.

ಹೊಕ್ಕು$_2$ 'ಪೊಕ್ಕು$_2$' ನೋ.

ಹೊಕ್ಕುನೂಲು (ನಾ). ಮಗ್ಗದ ನೆಯ್ಗೆಯಲ್ಲಿ ಅಡ್ಡವಾಗಿ ಹಾಕುವ ಎಳೆ: ನೀಟವಾಗಿ ಸಮವಾಗಿರುವ ಹಾಸುನೂಲುಗಳು ಹೊಕ್ಕುನೂಲುಗಳಿಗೆ ಆಧಾರವಾಗಿರುವ ಹಾಗೆ ಸತ್ಪುರುಷರಿಗೆ ಸತ್ಪುರುಷರೇ ಆಧಾರವಾಗಿರುವರು (ಕೃವಾಭಾ. ೫೯).

[ಹೊಕ್ಕು$_2$ (< ಪೊಕ್ಕು$_2$) + ನೂಲು$_2$ (< ನೂಲ್$_2$)]

ಹೊಕ್ಕುಬಳಕೆ (ನಾ). (ಆಲಂ) ಗಾಢಪರಿಚಯ; ನಿಕಟವರ್ತಿತ್ವ: ಅಂದಿನ ಜನರಿಗೆ ಮಹಮ್ಮದೀಯ ಸಂಸ್ಕೃತಿಯ ಹೊಕ್ಕುಬಳಕೆ ಸಾಕಷ್ಟು ಆದುದರಿಂದ. ಅವರ 'ಷಾಯರ್‌ನಾಮಾ'ಗಳ ಅನುಕರಣ ಮಾಡಬೇಕೆಂಬ ಬುದ್ಧಿಯೂ ಉಂಟಾಗಿರಬಹುದು (ಕರ್ನಾಚ. ೧೧೭). [ಹೊಕ್ಕು$_2$ (< ಪೊಕ್ಕು$_2$) + ಬಳಕೆ (< ಬಲಿಕೆ)]

ಹೊಕ್ಕುಳ್ 'ಪೊಕ್ಕುಟ್' ನೋ.

ಹೊಕ್ಕುಳ 'ಪೊಕ್ಕುಟ್' ನೋ.

ಹೊಕ್ಕುಳಿ 'ಪೋರ್ಕುಳಿ' ನೋ.

ಹೊಕ್ಕುಳಿಗೊಳ್ 'ಪೋರ್ಕುಳಿಗೊಳ್' ನೋ.

ಹೊಕ್ಕುಳು 'ಪೊಕ್ಕುಟ್' ನೋ.

ಹೊಕ್ಕುಳುಕುಡಿ (ನಾ). ಭ್ರೂಣ ಮತ್ತು ಗರ್ಭಾಶಯದಲ್ಲಿರುವ ಪೋಷಕಾಂಗ ಗಳೆರಡನ್ನೂ ಸಂಬಂಧಿಸುವ ನಾಳ ; ನಾಭಿನಾಳ: ಕರೀಕಾಗಕಣ್ಣು, ಗೂಬೆಕಣ್ಣು . . . ಚೊಚ್ಚಲುಮಗುವಿನ ಹೊಕ್ಕುಳುಕುಡಿ . . . ಇವನೆಲ್ಲ ಸಮಾನವಾಗಿ ತೂಗಿ ವಣಗಿಸಿ (ಕಾತುಬಂ. ೨೧-೨). [ಹೊಕ್ಕುಳು (< ಪೊಕ್ಕುಟ್) + ಕುಡಿ$_4$]

ಹೊಕ್ಕುಳುಗಂಟೆ (ನಾ). ಆನೆ, ಕುದುರೆ, ಎತ್ತು ಮುಂತಾದವುಗಳ ಹೊಟ್ಟೆಗೆ (ಹೊಕ್ಕಳಿನ ಭಾಗಕ್ಕೆ ಬರುವಂತೆ) ಕಟ್ಟುವ ಒಂದು ಬಗೆಯ ಗಂಟೆ: ಈ ಹಬ್ಬಕ್ಕಾಗಿಯೆ ಹೇಳಿ ಮಾಡಿಸಿದ ಬಾಸಿಂಗ ಹಣೆಯ ಮೇಲೆ ಮೆರೆಯುತ್ತಿದ್ದುವು. ಕರ್ಣಪತ್ರ, ಹೊಕ್ಕುಳುಗಂಟೆ ಕಾಲುಗಳಲ್ಲಿ ಗೆಜ್ಜೆಪಾಡಗಗಳು. ಮೈಮೇಲೆಲ್ಲ ಬಣ್ಣಬಣ್ಣದ ಹೂಮಾಲೆಯ ಹಸರ (ಪಳುಮ. ೧೭೮). 'ಪೊಕ್ಕುಳುಘಂಟೆ' ಪರಾ.

[ಹೊಕ್ಕುಳು (< ಪೊಕ್ಕುಟ್) + ಗಂಟೆ$_3$]

ಹೊಕ್ಕುಳುಬಳ್ಳಿ, ಹೊಕ್ಕಳುಬಳ್ಳಿ (ನಾ). = ಹೊಕ್ಕುಳುಕುಡಿ: (ಅನಂಸಾ). ಹೊಕ್ಕಳುಬಳ್ಳಿ: ಮಕ್ಕಳು ಚೆನ್ನಾಗಿ ಅತ್ತು ಹೊಕ್ಕಳುಬಳ್ಳಿಯಲ್ಲಿ ನಾಡಿ ಹೊಡೆಯುವುದು ಪೂರಾ ನಿಂತುದನ್ನು ಕೈಸ್ಪರ್ಶದಿಂದ ಖಾತರಿ ಮಾಡಿಕೊಂಡು . . . ಕತ್ತರಿಸಬೇಕು (ಮನಮ. ೬೭). [ಹೊಕ್ಕುಳು (< ಪೊಕ್ಕುಟ್) + ಬಳ್ಳಿ]

ಹೊಕ್ಕುಳುಶೂಲೆ (ನಾ). ಒಂದು ಬಗೆಯ ಶೂಲೆ; ಹೊಕ್ಕಳಿನ ಭಾಗದಲ್ಲಿ ಬರುವ ನೋವು: ಖರ್ಜೂರ, ಹಿಪ್ಪಲಿ, ಇವ ಚೂರ್ಣವ ಮಾಡಿ ಸಕ್ಕರೆಯಲ್ಲಿ ಕೊಳ್ಳಲು ಹೊಕ್ಕುಳುಶೂಲೆ ಮಾಣ್ಗುಂ (ವಿಷವಿ. ೧೭೬). [ಹೊಕ್ಕುಳು (< ಪೊಕ್ಕುಟ್) + ಶೂಲೆ]

ಹೊಕ್ಕುಟ 'ಪೊಕ್ಕುಟ್' ನೋ.

ಹೊಕ್ಕುಟು 'ಪೊಕ್ಕುಟ್' ನೋ.

ಹೊಕ್ಕರಣೆ 'ಪೊಕ್ಕರಣೆ' ನೋ.

ಹೊಕ್ಕರಣೆ 'ಪೊಕ್ಕರಣೆ' ನೋ.

ಹೊಗದೆಸೆ 'ಪುಗುದೆಸೆ' ನೋ.

ಹೊಗರ್$_1$ 'ಪೊಗರ್$_1$' ನೋ.

ಹೊಗರ್$_2$ 'ಪೊಗರ್$_2$' ನೋ.

ಹೊಗರಂಬು 'ಪೊಗರಂಬು' ನೋ.

ಹೊಗರಲಗು 'ಪೊಗರಲಗು' ನೋ.

ಹೊಗರಳಿ 'ಪೊಗರಳಿ' ನೋ.

ಹೊಗರಾನ್ 'ಪೊಗರಾನ್' ನೋ.

ಹೊಗರಿಡು (ಕ್ರಿ). ೧. ಕಾಂತಿಯನ್ನು ಸೂಸು; ಹೊಳೆ; ಪ್ರಕಾಶಿಸು: ಆ ಮನುಜ ಲಲಾಮನ ತೋಳ್ ಕಾಮನ ಬಾಳಿನಿಸಿ ಹೊಗರಿಡಲ್ ತಕ್ಕುವು ನಿನ್ನೀ ಮೃಗಮದ ನವಲಿಖಿತ ಲತಾಮಳಿನ ಕಪೋಲಘರ್ಷಿತಕ್ರೀಡಿತದಿಂ (ವರ್ಧಪು. ೪-೫೫); ತೊಲತೊಲಗು ಮನ್ಮಥನ ಹೊಗರಿಟ್ಟಲಗು ಬರುತಿದೆ (ಕುವಾಅ. ೧೫-೩೩); ಹೊಡಕರಿಸುವುದು ರಜನಿ . . . ಕಡೆದ ಕರುವಾಡದ ಕವಾಟದ ಕಡವಿಡಿದು ಹೊಂಬೆಸೆದಲುಱೆ ಹೊಗರಿಡುವ ನೀಲದ ಮೌಕ್ತಿಕದ ಮಾಣಿಕದ ಲಹರಿಯಲಿ (ತೂರಾ. ೫-೨-೬೪). ೨. ಗರ್ವಪಡು; ಸೊಕ್ಕು; ಬೀಗು: ಮಿಗ ದಳ್ಳಿಸುತ ಹೊಗರಿಡುತೊಡುಗಚ್ಚುತ ಹುಬ್ಬುಗಳ ಬಲಿದು ಹೊಸ ಮಸಯ ಬಾಯ್ನೂರೆಗಳ ಶರವಿಸರವನು ತೊಡಚಿದನು (ಕುವಾಭೀ. ೯-೩೯). ೩. ಹೆಚ್ಚಾಗು; ಅಧಿಕವಾಗು; ಅತಿಶಯವಾಗು: ಹೊಗರಿಡುವ ಹರುಷದಲಿ ರೋಮಾಳಿಗಳ ಗುಡಿಯಲಿ ತನ್ನ ನಿಳಯಕೆ ಮುಗುದೆ ಬಂದಳು ಸೂರ್ಯನಡರಿದನುದಯ ಪರ್ವತವ (ಕುವಾಪಿ. ೩-೧೦೫); ಹೊಗರಿಡುವ ಜವ್ವನದೊಳಿಂತು ರಂಜಿಸುವ ಪರವೆಗೆ ಪೆಂಪಿನಿಂ ಪ್ರಥಮಾಖ್ಯತು ಸಂಭವಿಸಲು (ಸೌಂದಪು. ೭-೧೩); ಹೊಗರಿಡುತಿರೆ ಮನ ಮನದೊಳು ಪ್ರೀತಿ (ಪಾಸದ. ೨೩೭-೪). [ಹೊಗರ್ (< ಪೊಗರ್) + ಇಡು1]

ಹೊಗರು1 (ಕ್ರಿ). ೧. ಪ್ರಕಾಶಿಸು; ಕಾಂತಿಯನ್ನು ಬೀರು; ಹೊಳೆ: ಬಗೆಯ ನಸುಧೂಮಲಿಸಿ ಹೊಗರುವೀ ಸಂಜೆ ನಿನ್ನೆಗರಿಕೆಯ ಪುತ್ರಲು ಕರಂಗುತಿಹುದು (ಗಿಳಿವಿ. ೪-೨೦); ಬಾನ್ ಹೊಗರಲುಂಟು ಮರ ಬಿಗುರಲುಂಟು ಬರಲುಂಟೆ ಸುಗ್ಗಿ ಮತ್ತ? (ಆರಳು. ೧೧೭-೧೩); ಒಂದು ದೀಪಕೆ ಲಕ್ಷದೀಪ ಹೊತ್ತಿಸಿ ಹೊಗರಿ ಬೆಳಗಲಿದೆ ಇನ್ನೇನು ಕಣ್ಣ ತುಂಬ! (ನಲಮು. ೪-೧೮). ೨. (ಆಲಂ) ಸಿಡಿಮಿಡಿಗುಟ್ಟು; ಕ್ರೋಧವನ್ನು ತಾಳು; ಕಿಡಿಕಾರು: ನೋಡು ಪತಿದ್ರೋಹಿಯನೆನೆ ಹೊಗರುತ್ತ ಕೋಪದೊಳು ಭೂವರಂ ತಾನದ್ದು ಬಿಗಿದು ಪೆಡಗೆಯ್ಯ ಕಟ್ಟುರುಳಿಸುತ . . . ಅಜುಹಲು (ಪ್ರಭುವಿ. ೭-೧೬೬). [< ಪೊಗರ್]

ಹೊಗರು2 'ಪೊಗರ್' ನೋ.

ಹೊಗರುಗಣೆ 'ಪೊಗರ್ಗಣೆ' ನೋ.

ಹೊಗರುಗಣ್ಣು 'ಪೊಗರ್ಗಣ್' ನೋ.

ಹೊಗರುಗಿಡಿ (ನಾ). ಹೊಳೆಯುವ ಕಿಡಿ: ಹೊಗರುಗಿಡಿಗಳ ಬಾಯಿಧಾರೆಯಲೊಗವ ಹೊಗೆಗಳ ಹೊದಱಿನುರಿಜಾಳಿಗೆಯ ಭೋಂಕಾರದ ಭಯಂಕರಶೂಲವೈತರಲು (ಕುವಾದ್ರೋ. ೧೭ ೪೦). [ಹೊಗರು1 + ಕಿಡಿ]

ಹೊಗರುಗು 'ಪೊಗರುಗು' ನೋ.

ಹೊಗರುಗೆಡು (ಕ್ರಿ). ಕಾಂತಿಹೀನವಾಗು; ತೇಜಸ್ಸನ್ನು ಕಳೆದುಕೊಳ್ಳು; ಮಂಕಾಗು: ಹೊಗರುಗಟ್ಟುದು ಕುಮುದ ಕಮಳದ ಬಿಗುಹು ಬಿಟ್ಟುದು ಚಕ್ರವಾಕದ ತಗಹು ಕೆಟ್ಟುದು ಹೇಳೆನಲು ರಂಜಿಸಿತು ದೀಪಾಳಿ (ಕುವಾದ್ರೋ. ೧೫-೩೪). [ಹೊಗರು2 (< ಪೊಗರ್) + ಕೆಡು1]

ಹೊಗರುವೊಗ (ನಾ). ಕಾಂತಿಯುಕ್ತವಾದ ಮುಖ; ತೇಜಸ್ಸಿನಿಂದ ಕೂಡಿದ ಮುಖ: ಹೊಗರುವೊಗಕೆ ಪೆಣ್ಗಳ ದಿಟ್ಟಿ ತಾಕದೊಲ್ತಗದ ಕತ್ತುರಿ ರೇಪೆಯಂತೆ ಸೊಗಸುವ ಬವರಿಯ ಸವಿಗಾಱಸವನಾರು (ಕಂನವಿ. ೯-೧೧೪). [ಹೊಗರು1 + ಮೊಗ]

ಹೊಗರುಮೋಱೆ (ನಾ). = ಹೊಗರುಮೊಗ: ಹೊಗರುಮೋಱೆಯ ಹಿಣಿಲ ಮಂಡೆಯ ಜಿಗಿಯ ರಕುತದ . . . ವಿಕ್ರಮಾಗ್ನಿಯ ತಗಹುಬಿಡದಭಿಮನ್ಯು ಮೆಱೆದನು ಶಸ್ತ್ರಶಯನದಲಿ (ಕುವಾದ್ರೋ. ೬-೬೨); ಹೊಳೆವ ದಾಡೆಯ ಹೊಗರುಮೋಱೆಯ ತಳಿತ ಹೋಮದ ತೋಳ ಬಿಗುಹಿನ ಕಲಿಗಳೆದ್ದುದು ಕಲಿತ ಘನರೌದ್ರಾತಿರೇಕದಲಿ (ತೂರಾ. ೬-೧೦-೬೨). [ಹೊಗರು1 + ಮೋಱೆ]

ಹೊಗರೆತ್ತು (ಕ್ರಿ). ೧. (ಸಾಣೆ ಹಿಡಿದಂತೆ) ಕಾಂತಿಯನ್ನು ಹೊಂದು; ಹೊಳಪನ್ನು ಪಡೆ: ಹೊತ್ತಿತಡೆ ಹೇರಾಳ ತಮದಲಿ . . . ರೋಷ ಮಿಗ ಹೊಗರೆತ್ತಿತ್ತೆ ಶಿಶುಪಾಲವೀರನ ವಚನಮಯಖಿಡುಗ (ಕುವಾಸ. ೮-೧೨); ಹತ್ತುಸಾವಿರ ಪಾಯದಳ ಹೊಗರೆತ್ತಿದಲಿಗಿನ ಹೊಳಹಿನಂತಿರೆ ಮುತ್ತಿತವನೀಪತಿಯ ಮೋಹರದೆರಡು ಬಾಹೆಯಲಿ (ಕುವಾಗ. ೧-೪೬). ೨. (ಸಾಣೆ ಹಿಡಿದು) ಹೊಳಪು ಕೊಡು; ಕಾಂತಿಗೊಳಿಸು: ಸ್ಮರನಲಗನು ಹೊಗರೆತ್ತುವನಂದದಿ ಸರಸಿರುಹವುಖಿಯರು ಕುಂಕುಮದ ವರಕರ್ದಮವ ಭಾವೆಯ ಮೋಹನಾಂಗಕೆ ಹರುಷದಿಂ ತಿಗುರನಿಕ್ಕಿದರು (ಜೀವಂಸಾಂ. ೧೦-೪). ೩. ಅಧಿಕ್ಯವುಂಟಾಗು; ಹೆಚ್ಚಳವುಂಟಾಗು: ಕಳ್ಪಪುಟವಲ್ಲಿ ಕತ್ತುರಿಯ ಹೊಗರೆತ್ತುತಿರೆ ಅಕ್ಷಿಗಳು ಕರುಣಾರಸವಂ ಹೊತ್ತು ಬಳಲುತಿರೆ (ಬಸರ. ೧-೧೧೩). [ಹೊಗರು2 (< ಪೊಗರ್) + ಎತ್ತು1]

ಹೊಗರೇರು 'ಪೊಗರೇಱು' ನೋ.

ಹೊಗರೇಳ್ 'ಪೊಗರೇಟು' ನೋ.

ಹೊಗರೇಳು 'ಪೊಗರೇಟು' ನೋ.

ಹೊಗರೇಱು 'ಪೊಗರೇಱು' ನೋ.

ಹೊಗರೇಱಿಕೆ (ನಾ). ಕಾಂತಿಯ ಆಧಿಕ್ಯ; ತೇಜಸ್ಸಿನ ಹೆಚ್ಚಳ. – ಅತಿಶಯ: ಏಱಿಳಿಯ ನೋಡಿದನು ಹೊಸಹೊಗರೇಱಿಕೆಯ ಹೊದಱಿದ್ದ ದರ್ಪದ ತೋಱಿಕೆಯ ತನಿರಸದ ಮೊಗವನು (ತೂರಾ. ೫-೧-೨೭). [ಹೊಗರ್2 (< ಪೊಗರ್) + ಏಱಿಕೆ]

ಹೊಗರೇಱು 'ಪೋಗರೆಱು' ನೋ.

ಹೊಗರೊಗು 'ಪೊಗರೊಗು' ನೋ.

ಹೊಗರೊಡೆ (ಕ್ರಿ). ಕಾಂತಿಯನ್ನು ಹೊಂದು; ಪ್ರಕಾಶಿಸು: ಹೊಗರೊಡದ ಬಿಗುರಿಂದೆ . . . ಕಾಯ ಪದಗಾಯ ದೋರೆವಣ್ಣುಗಳಿಂದೆ . . . ಒಪ್ಪಿರ್ದುದಾ ಬನಂ (ನವಮೋ. ೮-೨೭); ಹೊಗರೊಡದ ಕೆಮ್ಮಿಸೆ ಕೆಂಗಣ್ಣು ಪೊದರ್ಗಡವಗೆ ಮಾಳವ ಕಜ್ಜಳಂ ಗೆಲುವ ದೇಹರುಚಿ . . . ಮೆರೆವುತಿರೆ (ನವಮೋ. ೧೬-೧೩). [ಹೊಗರು2 (< ಪೊಗರ್) + ಒಡೆ1]

ಹೊಗರ್ಗರೆ (ಕ್ರಿ). ಕಾಂತಿಯನ್ನು ಸೂಸು; ಪ್ರಕಾಶವನ್ನು ಹೊರಹೊಮ್ಮು: ಹೊಗರ್ಗರೆವ ತನುಕಾಂತಿಯಿಂದೆ ತವಕದೊಳ್ಕೆದಿ ಅರ್ಘ್ಯವಸುಪಾತ್ರಮುಖಿಯುತಿ ಮನಿಯ್ಕಲಸುರೇಂದ್ರ ಲಿಂಗಕ್ಕೆಯರ್ಘ್ಯಮನಿತ್ತನು (ನವಮೋ. ೧೯-೧೫). [ಹೊಗರ್ (< ಪೊಗರ್) + ಕರ್ಚ್ (< ಕಱ್1)]

ಹೊಗರ್ತೆ 'ಪೊಗಱ್ತೆ' ನೋ.

ಹೊಗವಣೆ (ನಾ). ಒಳಹೊಗುವಿಕೆ; ಪ್ರವೇಶ: ಒಳಹೊಗುವೆ ನಾನೆಂತು ಕಟಕವ . . . ಕಾಣೆನು ಪಥವನೆನುತಾ ಖಳನು ಚಿಂತಿಸಿ ನೋಡಿದನು ಪಾಳೆಯದ ಹೊಗವಣೆಯ (ಮೃರಾಕಾ. ೩-೨೨). [< ಹೊಗು (< ಪೊಗು) + - ಅಣೆ2]

ಹೊಗಳ್ 'ಪೊಗಟ್1' ನೋ.

ಹೊಗಳತೆ 'ಪೊಗಟ್ತೆ' ನೋ.

ಹೊಗಳಿಕೆ 'ಪೊಗಟ್ಕೆ' ನೋ.

ಹೊಗಳಿಸು 'ಪೊಗಟಿಸು' ನೋ.

ಹೊಗಳು1 'ಪೊಗಟ್1' ನೋ.

ಹೊಗಳು2 'ಪೊಗಟ್2' ನೋ.

ಹೊಗಳುಭಟ್ಟ (ನಾ). ರಾಜರು ಮೊದಲಾದವರನ್ನು ಹೊಗಳುವ ಊಳಿಗದವನು; ಸ್ತುತಿಪಾಠಕ; ವಂದಿ: ಹೊಗಳುಭಟ್ಟರ ಸಾಲ ಕೈದೀವಿಗೆಯ ಕಹಳಾರವದ ಲಗ್ಗೆಯ ಬಿಗುಹಿನಲಿ ಕುರುರಾಯ ಬಂದನು ರಾಜಮಂದಿರಕೆ (ಕುವಾಕ. ೫-೨); ಕೋರದಾಡೆಯ ದನಿಯ ಖಗಗಳೆಂಬುವ ಹೊಗಳುಭಟ್ಟರಾ ಗಾನದಲಿ ಮುಳುಗುವಂದದಿ ಮಾಡಿ, ಉರುಳುರುಳು ಹಗಲಿರುಳು ಸುಂದರ ವಸುಂಧರಾ! (ಪಾಂಚಜ. ೨೮-೭); ದ್ವಾರಸಮುದ್ರದಲ್ಲಿ ಹೊಗಳುಭಟ್ಟರಿಗಾಗಿಯೇ ಒಂದು ದೊಡ್ಡ ಕೇರಿಯಿದೆ (ತುಂಗಭ. ೭). [ಹೊಗಳು1 (< ಪೊಗಟ್1) + ಭಟ್ಟ]

ಹೊಗಳ್ಕೆ 'ಪೊಗಟ್ಕೆ' ನೋ.

ಹೊಗಳ್ತೆ 'ಪೊಗಟ್ತೆ' ನೋ.

ಹೊಗಿಸು 'ಪೊಗಿಸು' ನೋ.

ಹೊಗು 'ಪೊಗು' ನೋ.

ಹೊಗುತರು 'ಪೊಗುತರ್' ನೋ.

ಹೊಗುತೆ 'ಪೊಗುತೆ' ನೋ.

ಹೊಗುಮನೆ (ನಾ). ಹೆಣ್ಣು ಮದುವೆಯಾಗಿ ಸೇರುವ ಮನೆ; ಗಂಡನ ಮನೆ: ತವರುಮನೆಯಾಯ್ತಮಗೆ ಹೊಗುಮನೆಯುಯೆಮಗಾಯ್ತು ಪ್ರಮಥರಿಗೆ ಸೋಡಿ ಹರುಷವನೆಯ್ದುವಂತಾಯ್ತು (ಮಡಿಕ್ಕಾ. IV. ೧೧೦೩, ಮೃದುನರಾಮಯ್ಯನ ರಗಳೆ).

[ಹೊಗು (< ಪೊಗು) + ಮನೆ]

ಹೊಗುಳು 'ಪುಗಿಲ್$_1$' ನೋ.

ಹೊಗೆ$_1$ 'ಪೊಗ$_1$' ನೋ.

ಹೊಗೆ$_2$ 'ಪೊಗ$_2$' ನೋ.

ಹೊಗೆಕಂಡಿ (ನಾ). ಹೊಗೆ ಹೊರಗೆ ಹೋಗಲು ಮಾಡಿರುವ ಚಿಮಣಿ: ಮನೆಗಳ ಹೊಗೆಕಂಡಿಗಳಿಂದ ಹೊಗೆ ಎದ್ದು ಮಂಜಿನೊಂದಿಗೆ ಬೆರೆದು ಹಳ್ಳಿಯ ಮೇಲೆ ಹರಡಿತು (ಮಲನಾ. ೧೯೪). [ಹೊಗೆ$_2$ (< ಪೊಗೆ$_2$) + ಕಂಡಿ$_1$]

ಹೊಗೆಕಡ್ಡಿ (ನಾ). (ಎಲೆಯಡಕೆಯೊಂದಿಗೆ ಸೇವಿಸುವ) ಹೊಗೆಸೊಪ್ಪಿನ ಕಡ್ಡಿ: ಎಲೆ, ಅಡಕೆ, ಹೊಗೆಕಡ್ಡಿ, ಕಾಚು . . . ಇತ್ಯಾದಿ ಸರಕು ತುಂಬಿದ ತಾಂಬೂಲದ ಚಂಚಿಯನ್ನು ಅವರ ಕೈಗೆ ಕೊಟ್ಟು ತಾನೂ . . . ಕುಳಿತಳು (ಬಳುಮ. ೩೨).

[ಹೊಗೆ$_2$ (< ಪೊಗೆ$_2$) + ಕಡ್ಡಿ]

ಹೊಗೆಕಾಣಿಕೆ (ನಾ). ಹೊಗೆಸೊಪ್ಪಿನ ಮೇಲೆ ಹಾಕುವ ಒಂದು ಬಗೆಯ ತೆರಿಗೆ (?): ಅಷ್ಟತೇಜಸ್ಸಾಮ್ಯಂಗಳನು ಸಕಲ ಸುವರ್ಣಾದಾಯ ದವಸಾದಾಯ ಹೊಗೆಕಾಣಿಕೆ ಮುಂತಾದ ಬಲುವಾನ ಕಾಣಿಕೆಗಳು . . . ಮುಂತಾದ ಸಮಸ್ತಕಾಣಿಕೆಗಳು ಸಹಾ ನೀವೇ ಆಗುವಾಡಿ ಅನುಭವಿಸಿಕೊಣ್ಮು (ಎಕ. XV. ಅರಕ. ೧೦೬-೧೨೯; 1665); ಹುಲ್ಲುಹಣ ಹೊಗೆಹಣ ಹೊಗೆಕಾಣಿಕೆ ಕುಲಿದೆಲೆಗೆ ಜಾತಿಗೂಟ . . . ಚರಾದಾಯ ಹೊರಾದಾಯ ಇವು ಮೊದಲಾದ ಆ ಸಕಲಸ್ಯಾಮ್ಯವನೂ . . . ಅನುಭವಿಶಿಕೊಂಡು ಬಹರು (ಎಕ. XIV ಮೈಸೂರು. ೧೧೫-೪೧೩; 1674); ಹುಲ್ಲುಹಣ ಹೊಗೆಕಾಣಿಕೆ ಕುಲಿದಲೆಗೆ . . . ಹೊರಾದಯ ಇವು ಮೊದಲಾದ ಆ ಸಕಲಸ್ಯಾಮ್ಯವನ್ನು . . . ನಿರಾಬಾಧವಾಗಿ ಸುಖದಿಂದನುಭವಿಸಿಕೊಂಡಿಹರು (ಎಕ. VI(R). ಪಾಂಡವ. ೯೯-೬೭೫; 1722). 'ಪೊಗೆವಣ', 'ಹೊಗೆದೆಲೆ' ಪರಾ.

[ಹೊಗೆ$_2$ (< ಪೊಗೆ$_2$) + ಕಾಣಿಕೆ (< ಕಾಣ್ಕೆ)]

ಹೊಗೆಕೊಡು (ಕ್ರಿ). ೧. ಹೊಗೆಯ ಶಾಖವನ್ನು ಕೊಡು: ಎಳೆಯ ಮಕ್ಕಳಿಗೆ ಸ್ನಾನಮಾಡಿಸಿದ ನಂತರ ಶೀತವಾಗದಿರಲೆಂದು ಹೊಗೆಕೊಡುತ್ತಾರೆ (ರೂಢಿ). ೨. (ರಾಸಾಯನಿಕಕ್ರಿಯೆಯಿಂದ) ಚಿನ್ನ ಅಥವಾ ಬೆಳ್ಳಿಯ ತೆಳುಲೇಪವನ್ನು ಕೊಡು: (ಕ). [ಹೊಗೆ$_2$ (< ಪೊಗೆ$_2$) + ಕೊಡು$_1$]

ಹೊಗೆಕೊಳವಿ, ಹೊಗೆಕೊಳವೆ (ನಾ). ೧. ಹೊಗೆ ಹೊರಗೆ ಹೋಗಲು ಮಾಡಿರುವ ಕೊಳವೆ,— ನಳಿಕೆ; ಚಿಮಣಿ. ೨. ತಂಬಾಕು ಸೇದಲು ಮಾಡಿರುವ ಮಣ್ಣಿನ ನಳಿಕೆ; ಚಿಲುಮೆ: ಹೊಗೆಕೊಳವಿಗೆ ಸೊಪ್ಪು ತುಂಬಿ ತೃಪ್ತಿಯಾಗುವವರೆಗೂ ಸೇದಿ ಹೊರಟ (ಎಳಜ. ೯೫). **ಹೊಗೆಕೊಳವೆ**: ೧. ಅದರ ಹೊಗೆಕೊಳವೆ ದಕ್ಷಿಣದ ಕಡೆಗೆ ಸ್ವಲ್ಪ ಬಾಗಿತ್ತು (ಯೋಧವ. ೨೪). [ಹೊಗೆ$_2$ (< ಪೊಗೆ$_2$) + ಕೊಳವಿ (< ಕೊಬವಿ)]

ಹೊಗೆಕೊಳವೆ 'ಹೊಗೆಕೊಳವಿ' ನೋ.

ಹೊಗೆಗಟ್ಟು (ಕ್ರಿ). ಹೊಗೆಯು ಕಟ್ಟಿಕೊಳ್ಳು; ಧೂಮವು ತುಂಬಿಕೊಳ್ಳು: ಉಸಿರಾಡುವುದು ಹೇಗೆ ಹೊಗೆಗಟ್ಟಿದೀ ಗೂಡಿನೊಳಗೆ (ಇಜಾಪ. ೫೬-೬೬).

[ಹೊಗೆ$_2$ (< ಪೊಗೆ$_2$) + ಕಟ್ಟು$_1$]

ಹೊಗೆಗಣ್ಣು (ನಾ). ಒಂದು ಬಗೆಯ ಕಣ್ಣಿನ ರೋಗ: ಕಲ್ಯಾಣ ಅಂಜನ . . . ಹೊಗೆಗಣ್ಣಿಗೆ ಹೊನಗೊನ್ನೆಯ ರಸದಿಂ, ಮಹಾದುಷ್ಟರೋಗಕ್ಕೆ ಪುಳ್ಳಪುಣಸೆಯ ರಸದಿಂ, ವಿಕಾರವಾದ ಹೂವಿಗೆ ಜಾಜಿಯ ಹೂವಿನ ರಸದಿಂ ಹಚ್ಚೆ ಕಣ್ಣುರೋಗ ಮಾಣ್ಗುಂ (ವೈವಿ. ೧೭). [ಹೊಗೆ$_2$ (< ಪೊಗೆ$_2$) + ಕಣ್ಣು (< ಕಣ್)]

ಹೊಗೆಗಾಡಿ (ನಾ). ಉಗಿಬಂಡಿ; ರೈಲು: ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟವೆನ್ನುವುದು ಅಧಮ (ಕುಸಾ. ೧೭). [ಹೊಗೆ$_2$ (< ಪೊಗೆ$_2$) + ಗಾಡಿ$_3$]

ಹೊಗೆಗುಡಿ 'ಪೊಗೆಗುಡಿ' ನೋ.

ಹೊಗೆಗೂಡು (ನಾ). = ಹೊಗೆಕೊಳವಿ ೧: ಸಾಧ್ಯವಾದ ಮಟ್ಟಿಗೂ ಬೆಂಕಿಯಿಂದ ಉಕ್ಕಿಗೂ ಉಕ್ಕಿನಿಂದ ನೀರಿಗೂ ಸಂಬಂಧವು ಹೆಚ್ಚಿದರೆ ಹೊಗೆಗೂಡಿನಲ್ಲಿ (Chimney) ಪೋಲಾಗುವ ಶಾಖವು ಕಡಮೆಯಾಗುತ್ತದೆ (ಶಿಲ್ಪಶಾ. ೨೦೭).

[ಹೊಗೆ$_2$ (< ಪೊಗೆ$_2$) + ಗೂಡು]

ಹೊಗೆಗೊಳಿಸು 'ಪೊಗೆಗೊಳಿಸು' ನೋ.

ಹೊಗೆದಟ್ಟಿ (ನಾ). (ಅಡಕೆ ಮುಂತಾದುವನ್ನು) ಹೊಗೆಯ ಸಹಾಯದಿಂದ ಒಣಗಿಸಲು ಅನುಕೂಲವಾಗಿರುವ ಬಿದಿರಿನ ತಟ್ಟಿ,— ತಟ್ಟಿ: ಆ ರಾತ್ರಿ ಬೇಯಿಸಿದ ಅಡಕೆಯನ್ನು ಒಣಗಿಸಲು 'ಹೊಗೆದಟ್ಟಿ'ಯೂ ಸಿದ್ಧವಾಗಿದ್ದಿತು (ಕಾನೂರು. ೩೯೫).

[ಹೊಗೆ$_2$ (< ಪೊಗೆ$_2$) + ತಟ್ಟಿ$_1$]

ಹೊಗೆದೆಗೆ (ಕ್ರಿ). ಹೊಗೆಯನ್ನು ತೆಗೆ: ಸೇನೆಯಲಱಸಿ ತೆಗೆದಾಯತ ಚತುರ್ಬಲ ಹೊಱಗೆ ನಿಂದುದು ಹೊಗೆದೆಗೆದ ಕೇಸುರಿಯ ತಿರುಳಂತೆ (ಕುವ್ಯಾಶ. ೨-೬).

[ಹೊಗೆ$_2$ (< ಪೊಗೆ$_2$) + ತೆಗೆ$_1$]

ಹೊಗೆದೆಱೆಗೆ (ನಾ). = ಹೊಗೆಕಾಣಿಕೆ: ತಳವಾಱಿಕೆಯಿಂದ ಗ ೨೬ ಹೊಗೆದೆಱೆಗೆಯಿಂದ ಗ ೩ ಉಭಯಂ ಗ ೨೯ (ಎಕ. VI(R). ಪಾಂಡವ. ೧೩೪-೫; 1528).

[ಹೊಗೆ$_2$ (< ಪೊಗೆ$_2$) + ತೆಱೆಗೆ]

ಹೊಗೆದೆಲೆ (ನಾ). = ಹೊಗೆಕಾಣಿಕೆ: ಆ ಸ್ಥಳಂಗಳಿಗೆ ಹೊಗದಲೆ ಮಗ್ಗದಲೆ ಕಾ XXXಆಡುದಲೆ . . . ಆಚಂದ್ರಾರ್ಕಸ್ಥಾಯಿ ಆಗಿ ಸಲುವಂತಾಗಿ ಧಾರಾಪೂರ್ವಕಂ ಮಾಡಿ ಕೊಟ್ಟರು (ಎಕ. III. ಶ್ರೀರಂಗ. ೧೦೪-೪೧; ಸು. 1200); ಸೋಮೆಯ ದಣ್ಣಾಯ್ಕರು ಕೇಶವನಾಥಂಗೆ ಅಂಗಭೋಗ ಅಮ್ಮಿತಪಡಿಗ ಬಿಟ್ಟ ಸೀಗೆನಾಡಸೆಟ್ಟಿಯ ಹಳ್ಳಿ ಕುಳದ ಸಿದ್ಧಾಯಂ ಗ ೩೬೧ . . . ಹೊಗೆದೆಲೆ ಮಗ್ಗದೆಲೆ . . .ಗುತ್ತಗೆಯ ಸಿದ್ಧಾಯ ಗದ್ಯಾಣ ನೂಱು ಗ ೧೦೦ (ಎಕ. XV. ಬೇಲೂರು. ೫೫೨-೬; 1298). [ಹೊಗೆ$_2$ (< ಪೊಗೆ$_2$) + ತೆಲೆ$_3$]

ಹೊಗೆದೋಱು (ಕ್ರಿ). ೧. ಹೊಗೆಯಾಡು; ಹೊಗೆಯುಗುಳು. ೨. (ಆಲಂ) ಸಿಟ್ಟನ್ನು ಪ್ರದರ್ಶಿಸು; ಕೋಪವನ್ನು ತೋರ್ಪಡಿಸು: ಇತ್ತ ದುಗುಡವ ಹಿಡಿದ ರಾಯನ ಕೆತ್ತ ಮುಖವನು ಕಂಡು ಭಟರೆದೆ ಹೊತ್ತಿದವು ಹೊಗೆದೋಱಿ [ಪಾಶಾಂ. ಹೊಗರೇಱಿದವು] ಮೋಱಿಗಳು ಪಟುಭಟರ (ಕುವ್ಯಾದ್ರೋ. ೧೫-೫).

[ಹೊಗೆ$_2$ (< ಪೊಗೆ$_2$) + ತೋಱು]

ಹೊಗೆನಳಿಗೆ (ನಾ). = ಹೊಗೆಕೊಳವಿ ೧: ಯಾವ ರೀತಿಯ ಒಲೆ ಅಥವಾ ಉರುವಲನ್ನೇ ಉಪಯೋಗಿಸಲಿ, ವಿದ್ಯುಚ್ಛಕ್ತಿಯಲ್ಲದಿದ್ದರೆ, ಹೊಗೆಯನ್ನು ಹೊರಬಿಡಲು ಒಲೆಯಿರುವಲ್ಲಿ ಒಂದು ಹೊಗೆನಳಿಗೆ ತೀರ ಅವಶ್ಯ (ಅಡುಪಾ. ೧೫); ಬೆಂಕಿಗೂಡಿನಿಂದ ಹೊರಟ ಹೊಗೆಯು ಕೂಡಾ ಆ ನಳಿಗೆಗಳ ಮುಖಾಂತರವೇ ಹೊಗೆಪೆಟ್ಟಿಗೆಗೆ ಬಂದು ಅಲ್ಲಿಂದ ಹೊಗೆನಳಿಗೆಯ ಮೂಲಕ ಹೊರಹೋಗುವುದು (ವಿಜ್ಞಾವಿ. ೪೭).

[ಹೊಗೆ$_2$ (< ಪೊಗೆ$_2$) + ನಳಿಗೆ (< ನಳಿಕೆ)]

ಹೊಗೆಪೆಟ್ಟಿಗೆ (ನಾ). ಉಗಿಬಂಡಿಯ ಎಂಜಿನಿನ ಒಂದು ಭಾಗ; ಹಬೆಯು ಸಂಗ್ರಹವಾಗುವ ಭಾಗ: ಬೆಂಕಿಗೂಡಿನಿಂದ ಹೊರಟು ಕಡಾಯಿಯ ನೀರಿನ ನಡುವಿನಿಂದ ಹೊಗೆಪೆಟ್ಟಿಗೆಗೆ ಹೋಗುವ ಐದಾರು ದಪ್ಪವಾದ ಲೋಹನಳಿಗೆಗಳಿರುತ್ತವೆ (ವಿಜ್ಞಾವಿ. ೪೭). [ಹೊಗೆ$_2$ (< ಪೊಗೆ$_2$) + ಪೆಟ್ಟಿಗೆ]

ಹೊಗೆಬಂಡಿ 'ಪೊಗೆವಂಡಿ' ನೋ.

ಹೊಗೆಬತ್ತಿ (ನಾ). ಹೊಗೆ ಸೇದಲು ಹೊಗೆಸೊಪ್ಪಿನಿಂದ ಮಾಡಿದ ಸುರುಳಿ; ಚುಟ್ಟಾ, ಸಿಗರೇಟು ಮುಂತಾದುವು: ನಾನು ಹೊಗಬತ್ತಿ ಎಳೆಯುವವನು. ಸಿಗರೆಟ್ ಪ್ಯಾಕ್ ಸದಾ ನನ್ನ ಬಳಿ ಇದ್ದು ತೀರಬೇಕು (ಜೀವಾತ್ಮ. ೨೬೫); ಹೊಗಬತ್ತಿಯ ಚಟದಿಂದ ಜನತೆಯಲ್ಲಿ ಸಖ್ಯ-ಪ್ರೇಷ್ಯಗಳು ಹೊಗೆಗಿಂತಲೂ ಬಹುವೇಗನೆ ಪ್ರಸಾರವಾಗುತ್ತಲಿವೆ (ಕೃತಕ್ಕೆ. ೧೬೫). [ಹೊಗೆ$_2$ (< ಪೊಗೆ$_2$) + ಬತ್ತಿ]

ಹೊಗೆಭಂಡಿ 'ಪೊಗೆವಂಡಿ' ನೋ.

ಹೊಗೆಮೊಗ 'ಪೊಗೆಮೊಗ' ನೋ.

ಹೊಗೆಯಲೆ (ಕ್ರಿ). ಹೊಗೆಯು ತಾಗು,— ಸುತ್ತಿಕೊಳ್ಳು: ಹೊಗೆಯಲೆಲೆತೆದ ಪುತ್ತಳಿಯವೊಲು . . . ಗೂಢದರ್ಥವ ತೆಗೆಯಬಾರದ ಕಾವ್ಯದವೊಲಿರ್ದಗಣತಾಮಲ

ಪುಣ್ಯಚರಿತೆಯ ಕಂಡನಾ ಹನುಮ (ತೊರರಾ. ೫-೩-೨೪). 'ಹೊಗೆಸುತ್ತು' ಹೋ.

[ಹೊಗ್ಗೆ$_2$ (< ಪೊಗ್ಗೆ$_2$) + ಅಲೆ$_1$]

ಹೊಗೆಯಾಡು (ಕ್ರಿ). ೧. (ಕಾಯ್ದ ಎಣ್ಣೆ, ತುಪ್ಪ ಮೊದಲಾದುವು ಹಾಗೂ ಬೆಂಕಿಯು) ಹೊಗೆಯನ್ನು ಸೂಸು; ಹೊಗೆಯುಗುಳು: ಕವಿಯುತ್ತಿದ್ದ ಮಂಜಿನ ನಡುವೆ ಹೊಗೆಯಾಡುವ ಬೆಂಕಿಯಂತೆ ಪದ್ಮರಾಗವು ಉರಿಯುತ್ತಿತ್ತು (ಯೋಧಪು. ೬೯): ಎಲ್ಲರ ಮನಸ್ಸಿನಲ್ಲೂ ಅತೃಪ್ತಭಾವನೆಗಳ ಕಿಡಿಗಳು ಒಳಗಿಂದೊಳಗೇ ಹೊಗೆಯಾಡುತ್ತಿದ್ದವು (ಚತಸ. ೮೫); ಎಣ್ಣೆಯನ್ನು ಉಪಯೋಗಿಸುವಾಗ ಅದು ತುಂಬಾ ಹೊಗೆಯಾಡುವ ತನಕ ಕಾಯಿಸಕೂಡದು (ಗೃಹವಿ. ೫೧). ೨. (ಕೋಪ, ರೋಷ, ದ್ವೇಷ ಮುಂತಾದುವು) ಒಳಗೊಳಗೇ ಹೆಚ್ಚಾಗು,— ವೃದ್ಧಿಯಾಗು: ಅಪ್ಪನ ಬಾಯಿಂದ ಮಾತು ಕೇಳಿಸಿದ್ದೇ ಒಳಗೊಳಗೇ ಹೊಗೆಯಾಡುತ್ತಿದ್ದ ಸಿಟ್ಟು ಭುಗ್ಗನೆ ಹೊತ್ತಿಕೊಂಡಿತ್ತು (ಮೂಯಿದಾ. ೫೨೪); ಭೀಮನಿಗೂ . . . ಮನಸ್ಸಿನಲ್ಲಿಯೇ ರೋಷವು ಹೊಗೆಯಾಡುತ್ತಿತ್ತು (ವಚಭಾ. ೩೭೭). ೩. (ಆಲಂ) ಕ್ಷೋಭೆಯಾಗು; ಶಾಂತಿಯನ್ನು ಕಳೆದುಕೊಳ್ಳು: ದರಬಾರವೆಲ್ಲವೂ ಹೊಗೆಯಾಡುತ್ತಲಿದೆ (ದೌಲತ್. ೩೯೫). [ಹೊಗ್ಗೆ$_2$ (< ಪೊಗ್ಗೆ$_2$) + ಆಡು$_1$]

ಹೊಗೆಸು (ಕ್ರಿ). ಹೊಗೆಯಾಡುವಂತೆ ಮಾಡು; ಜ್ವಲಿಸುವಂತೆ ಮಾಡು: ನಂದಬಾರದ ಹೋಮದಗ್ನಿಯ ನಂದಲೀಯದೆ ಶುಷ್ಕ ಸಮಿಧೆಯ ತಂದು ನೆಜ್ ಹೊತ್ತಿಕ್ಕಿ ಹೊಗೆಸುವ ವೃದ್ಧಕಪಿಗಳಲಿ . . . ಒಪ್ಪಿತಾ ವನವು (ಪ್ರಭುಲೀ. ೨೦-೨೫).

[ಹೊಗ್ಗೆ$_1$ (< ಪೊಗ್ಗೆ$_1$) + - ಸು$_1$]

ಹೊಗೆಸುತ್ತು (ಕ್ರಿ). ಹೊಗೆಯಿಂದ ಮಸಕಾಗು: ಚಾತುರಂಗಮಂ ಜಾನಿಸಿ ನೋಡಿ ನೋಡಿ ಹೊಗೆಸು[ಪಾಶಾಂ. ಹ]ತ್ತಿದ ಪುತ್ತಳಿಯಂತೆ ಬಂದನುದ್ಯಾನವನೊಪ್ಪದಿಂ ಕಳೆದು ರಾಜಕುಮಾರನಪಾರಚಿಂತೆಯಿಂ (ನಂಬಿಲ. ೭ ಪೀಠಿಕಾಪದ್ಯ).

[ಹೊಗ್ಗೆ$_2$ (< ಪೊಗ್ಗೆ$_2$) + ಸುತ್ತು$_1$]

ಹೊಗೆಸೊಪ್ಪು (ನಾ). ಒಂದು ಬಗೆಯ ಗಿಡ ಮತ್ತು ಅದರ ಎಲೆ; ತಂಬಾಕು; ಇದರ ಒಣಗಿದ ಸೊಪ್ಪನ್ನೂ ಮತ್ತು ಇದರ ಕಡ್ಡಿಯನ್ನು ಒಣಗಿಸಿ ಮಾಡಿದ ಕಡ್ಡಿಪುಡಿಯನ್ನೂ ಕೆಲವರು ತಾಂಬೂಲದ ಜೊತೆಗೆ ಸೇವಿಸುತ್ತಾರೆ. ಇದರ ಒಣಗಿದ ಎಲೆಯಿಂದ ನಶ್ಯವನ್ನು ತಯಾರಿಸುತ್ತಾರೆ. ಇವಲ್ಲದೆ ಮುಖ್ಯವಾಗಿ ಬೀಡಿ, ಸಿಗರೇಟು, ಚುಟ್ಟಾ ಮುಂತಾದ ಹೊಗೆಬತ್ತಿಗಳನ್ನು ಇದರಿಂದ ತಯಾರಿಸುತ್ತಾರೆ. ಇದೊಂದು ಅತ್ಯುತ್ತಮವಾದ ವಾಣಿಜ್ಯ ಬೆಳೆ: ಯಾ ಯೆತ್ತಿನಲು ತಾವು ಜಿನಿಸು ಅಡಕೆ ಮೆಣಸು . . . ಕತ್ತ ಹೊಗೆಸೊಪ್ಪು ಜವಳಿ ಮುಂತಾಗಿ . . . ಹೇರಿಕೊಣ್ಡು ಪಡ್ಡರುಸನ XXX ಧರ್ಮವನು ನಡಸಿಕೊಣ್ಡು . . . ಬಹುದು (ಎಕ. VII. ಶಿವಮೊ. ೨೮-೧೬; 1670); ಮಾನ್ಯದ ಯೆತ್ತು ನಡ್ತೆರ ಮೇಲೆ . . . ಜವಳಿ ಕಬುನ ಹೊಗೆಸೊಪ್ಪು, ಉತ್ತುತೆ ಖರ್ಜೂರ . . . ಮುಂತ್ತಾದ ಜಿನಿಸನು ಹೇರಿಕೊಂಡು (ಮೈಆರಿ. ೧೯೩೬, ೨೬-೩೭; 1708); ಹೊಗೆಸೊಪ್ಪಿನಲ್ಲಿ ನಿಕೋಟಿನ್ ಅನ್ನುವ ವಿಷದ ಪದಾರ್ಥವಿದೆ (ಮಗಮಾ. ೫೫).

ಹೊಗೆಸೊಪ್ಪಿನ ಪೊಮ್ಮು = ಹಿಂದೆ ಹೊಗೆಸೊಪ್ಪಿನ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ: ಆ ಸಕಲ ಪೈರು ಪೊಂಮಿಗ ಸಲುವ ಜವಳಿ ಲಾಭಾದಾಯದ ಪೊಂಮು ಕಬ್ಬಿನದ ಪೊಂಮು ಹೊಗೆಸೊಪ್ಪಿನ ಪೊಂಮು ಮುಂತ್ತಾದ ಆ ಸಕ[ಲ]ಸ್ವಾಮ್ಯ (ಎಕ. VI(R). ಪಾಂಡವ. ೨೧೫-೧೬೯; 1724). [ಹೊಗ್ಗೆ$_2$ (< ಪೊಗ್ಗೆ$_2$) + ಸೊಪ್ಪು$_2$]

ಹೊಗೆಹಣ 'ಪೊಗೆವಣ' ನೋ.

ಹೊಗೆಹಿಡಿ (ಕ್ರಿ). ಹೊಗೆಯು ಕವಿ,— ಮುತ್ತು: ಆ ಕೊಠಡಿಯ ಚಾವಣಿ ಹೊಗೆಹಿಡಿದು ಕಪ್ಪಾಗಿದೆ (ರೂಢಿ). [ಹೊಗ್ಗೆ$_2$ (< ಪೊಗ್ಗೆ$_2$) + ಹಿಡಿ$_1$ (< ಪಿಡಿ$_1$)]

ಹೊಗೆಹುಡಿ (ನಾ). (ತಾಂಬೂಲದೊಂದಿಗೆ ಕೆಲವರು ಸೇವಿಸುವ) ಹೊಗೆಸೊಪ್ಪಿನ ಅಥವಾ ಅದರ ಕಡ್ಡಿಯ ಪುಡಿ: ಬೇಗನೆ ತಾರೆ ಗೊಂಗಟೆ ಗೊರಗ ಕೋಲ್ಹೊಗೆಹುಡಿಯಡಿಕೆಯಲೆಯ (ಅರ್ಜಾವಿ. ೩೧-೩೩).

[ಹೊಗ್ಗೆ$_2$ (< ಪೊಗ್ಗೆ$_2$) + ಹುಡಿ (< ಪುಡಿ)]

ಹೊಗ್ಗು (ಕ್ರಿ). (ತಮಟೆ ಮೊದಲಾದ ವಾದ್ಯಗಳನ್ನು) ಹೊಡೆ; ಬಾರಿಸು: ಅಂಣನೊಡವೆ ತಂಮಂಗೆ ತಂಮನೊಡವೆ ಅಣ್ಣಂಗೆ ಆರು ಇಲ್ಲದಿದವ ಕಲಿಗೆ ಸಿವಾಲಯಕೆ ತಪ್ಪು ತಬುಡಿ ಇಲ್ಲ ಗಂಡನು ಹೋದ ಹೆಂಡತಿ (ನೇಡು?) ತಿಂದುಕೊಂಡು ಸತ್ತಡೆ ಹಜ್ಜೆಯ ಹೊಗ್ಗಿ ನಡೆಸುವುದು ತೊತ್ತು ಸತ್ತಡೆ ಎಳೆದು ಬಿಸಾಡು (ಎಕ. IX (S). ಕಾನಕಾ. ೬೯-೧೮; 1319). [?]

ಹೊಚ್ಚ 'ಪೊಚ್ಚ$_1$' ನೋ.

ಹೊಚ್ಚನೆ (ಗು). ಹೊಸದಾದ; ತಾಜಾ: ಕಣ್ಣನು ಮುಚ್ಚುತ ಹುಲ್ಲನು ಕಚ್ಚುತ ಹೊಚ್ಚನೆ ಸೊಗವನನುಭವಿಸು (ಇಂಚಾಪ. ೧೧೦-೧೦).

[ಹೊಚ್ಚ (< ಪೊಚ್ಚ$_1$) + - ಅನ್ನೆ$_2$ (< - ಅನೆಯ್ಯ$_2$)]

ಹೊಚ್ಚಲ 'ಪೊಸಂತಿಲ್' ನೋ.

ಹೊಚ್ಚು 'ಪೊದೆಯಿಸು' ನೋ.

ಹೊಚ್ಚುಮೊಲೆ (ನಾ). (?): ಚೆಂಡುಮೊಲೆ ದುಂಡುಮೊಲೆ ಹಿಡಿಕೆಮೊಲೆ ಹೊಚ್ಚುಮೊಲೆಯೂ ಪೊಳೆವ ತೆಂಗಾಯ ಮೊಲೆ . . . ಬಟ್ಟಮೊಲೆ ಪುರುಷಮೃಗ ಕುಲಗಳಿಗೆವಡ್ಡಿದಂತಾ ಬಲೆಯ ಮೊಲೆವರು ವಪ್ಪಿರ್ದರು (ನವಮೋ. ೨೪-೧೪).

[ಹೊಚ್ಚು$_2$ + ಮೊಲೆ$_1$]

ಹೊಟಾರ 'ಹೋಟಾರ' ನೋ.

ಹೊಟೇಲು 'ಹೋಟಲು' ನೋ.

ಹೊಟ್ಟ (ನಾ). ಕಿವುಡುಮನುಷ್ಯ; ಕಿವುಡ: (ಕ).

[ದೇ. ॥ ತಮಿ. ಪೊಟ್ಟೆ$_2$= ಕುರುಡುತನ; ತುಳು. ಪೊಟ್ಟೆ]

ಹೊಟ್ಟಳಿಸು 'ಪೊಟ್ಟಳಿಸು' ನೋ.

ಹೊಟ್ಟೆ 'ಪೋಟೆ$_1$' ನೋ.

ಹೊಟ್ಟೆಗ (ನಾ). ಹೊಟ್ಟೆಬಾಕ; ತಿಂಡಿಪೋತ: ದಿಟ್ಟರಾದವರೆನ್ನ ಜತೆಯೊಳು ಬಿಟ್ಟು ಸಕಲವನೀಗಳೈದುವುದಟ್ಟು ಬೋನವ ಬಿಟ್ಟು ಕಡೆಯದ ಹೊಟ್ಟೆಗರು ನಿಲಲಿ (ರಾಮಾಸಂ. ೬-೮-೭); ಈ ಹೊಟ್ಟೆಗನಿಗೆ ಅಷ್ಟು ಧೈರ್ಯ ಬಂತಾ ನಂಜಣ್ಣ (ಶನಿಸಂ. ೨೧೦). 'ಹೊಟ್ಟೆಗ' ಪರಾ. [ಹೊಟ್ಟೆ (< ಪೊಟ್ಟೆ$_1$) + - ಇಗ]

ಹೊಟ್ಟೆಹೋಗು 'ಪೋಟೆಹೋಗು' ನೋ.

ಹೊಟ್ಟು$_1$ (ಕ್ರಿ). ಒಡೆದು ಹೋಗು; ಸಿಡಿ: ಕೋಟಿ ಡಿಂಡಿಮಗಳನು ಬಾರಿಸೆ ಗೋಟು ತುಂಬಿತು ಜಗದ ಕಿವಿಗಳ ಪಾಟೆ ಹೊಟ್ಟಿತು ಕೇಳನಾ ಬಿಳಗೊರದು ತೆಕ್ಕುತಿರೆ (ಕಾಶಿರಾ. ೨೪-೪); ದೇವರಿಗೆ ಕಿವಿ ಇದೆಯೋ ಇಲ್ಲವೋ! ಇದ್ದರೆ ಹೊಟ್ಟೆಯೇ ಹೋದೀತು ಈ ಪಾಟೆ ಗದ್ದಲಕ್ಕೆ (ಸ್ವಪ್ನಹೊ. ೧೫). [ದೇ. ॥ ತಮಿ. ಮಲ. ಪೊಟ್ಟು; ತುಳು. ಪೊಟ್ಟು, ವುಡಪು, ಪುಡಾವು; ತೆಲು. ಪೂಟ್ಟು, ಪೊಟ್; ಕೊಡ. ಪೊಟ್ಟ್]

ಹೊಟ್ಟು$_2$ 'ಪೊಟ್ಟು' ನೋ.

ಹೊಟ್ಟುಕುಟ್ಟು 'ಹೊಟ್ಟುಗುಟ್ಟು' ನೋ.

ಹೊಟ್ಟುಗ 'ಪೊಟ್ಟುಗ' ನೋ.

ಹೊಟ್ಟುಗುಟ್ಟು, ಹೊಟ್ಟುಕುಟ್ಟು (ಕ್ರಿ). ೧. (ಆಲಂ) ಹುಡಿಗುಟ್ಟು; ಧೂಳೀಪಟಮಾಡು: ಇಟ್ಟಣಿಸಿ ಬಹ ತೇಜಿಗಳ ನೆಜ್ಜೆಯಟ್ಟಿ ಬಂಡಿಸಿ ಸುಭಟರನು ಬೆನ್ನಟ್ಟಿ ತಿವಿದರು ಮನ್ನೆಯರು ಹದವಜ್ಜಿದು ನಾಯಕರ ಹೊಟ್ಟುಗುಟ್ಟಿದರು (ನಳಚ. ೯-೨೫); ಪವನಜನೆಜಗಿ ಬಂಡೆಗಳಿಂದಮವರನು ಹೊಟ್ಟುಗುಟ್ಟುತೆ (ರಾಮಾಸಂ. ೫-೩-೪೧). ೨. ಹರಟು; ಗಳಹು; ಸಂಬಹೊಡೆ : ದಿಟ್ಟತನ ಮಿಗೆ ಹೆಂಗಳಿದಿರಲಿ ಹೊಟ್ಟುಗುಟ್ಟದೆ ಹಗಗಳಿದಿರಲಿ ಬಿಟ್ಟು ಕೊಂಡೆ ದುರಾತ್ಮ ಮುಜ್ಜಿದೆ ವಿರಾಟನನ್ನಯವ (ಕುವ್ಯಾವಿ. ೬-೧೭). **ಹೊಟ್ಟುಕುಟ್ಟು**: ೩. ವ್ಯರ್ಥವಾದ ಕೆಲಸದಲ್ಲಿ ತೊಡಗು; ಉಪಯೋಗವಿಲ್ಲದ ಕೆಲಸಕ್ಕೆ ಕೈಹಾಕು: ಹೊಟ್ಟುಕುಟ್ಟೋ ಕೈಗೆ ದಣಿವು; ಹೋಗಿಬನ್ನಿ (ಚಕರಾ. ೩೯೯). [ಹೊಟ್ಟು$_2$ (< ಪೊಟ್ಟು) + ಕುಟ್ಟು$_1$]

ಹೊಟ್ಟುಗೆಜೆ (ನಾ). ನೀರಿಲ್ಲದೆ, ಹಾಳುಬಿದ್ದ ಕೆರೆ: ಇನಿಯಳ್ಳೋದ ಬಟ್ಟೆಕ್ಕಮನ್ನಿರವು . . . ತೀವಿರ್ದ ಜೀವನಮೆಲ್ಲಂ ನೆಜ್ ಪೋದ ಹೊಟ್ಟು [ಪಾಶಾಂ. ಪೊಟ್ಟು] ಗೆಜೆ ತಾನಿರ್ಪಂತೆ (ಅನಂಪು. ೧೨-೨೪; ಕಾವ್ಯಸಾ. ೫೭೩ ನೋ).

[ಹೊಟ್ಟು$_2$ (< ಪೊಟ್ಟು) + ಕೆಜೆ]

ಹೊಟ್ಟುಬಾವಿ 'ಪೊಟ್ಟುಬಾವಿ' ನೋ.

ಹೊಟ್ಟುಹಂಬು (ನಾ). ಒಂದು ಬಗೆಯ ಬಳ್ಳಿ: (ಮುಡಿಗಿ. ೨೨-೪೧೪).

[ಹೊಟ್ಟು + ಹಂಬು (< ಪರಪು)]

ಹೊಟ್ಟೆ 'ಪೊಟ್ಟೆ' ನೋ.

ಹೊಟ್ಟೆಉರಿ$_1$ 'ಹೊಟ್ಟೆಯುರಿ' ನೋ.

ಹೊಟ್ಟೆಉರಿ$_2$ 'ಹೊಟ್ಟೆಯುರಿ' ನೋ.

ಹೊಟ್ಟೆಉರಿಸು 'ಹೊಟ್ಟೆಯುರಿಸು' ನೋ.

ಹೊಟ್ಟೆಕಟ್ಟು (ಕ್ರ). ೧. ಮಲಬದ್ಧತೆಯುಂಟಾಗು: ಪಚ್ಚ ನೀರು ಕುಡಿಯದಿದ್ದರೆ ಹೊಟ್ಟೆಕಟ್ಟುತ್ತದೆ (ರೂಢಿ). ೨. (ಆಲಂ) ಅರೆಹೊಟ್ಟೆ ತಿಂದು ಬದುಕು,— ಜೀವಿಸು: ಹೊಟ್ಟೆಕಟ್ಟಿ ಮಕ್ಕಳಿಗೆ ವಿದ್ಯೆ ಕಲಿಸುತ್ತಾನೆ (ಭಾರದ. ೬); ಮೊಟ್ಟೆ ಕಟ್ಟಲಿಕೆ ತಿಳಿಯದವ ಹೊಟ್ಟೆ ಕಟ್ಟಾನೆ ? (ಗಾದ).

[ಹೊಟ್ಟೆ (< ಪೊಟ್ಟೆ) + ಕಟ್ಟು]

ಹೊಟ್ಟೆಕಡಿತ (ನಾ). ೧. ಹೊಟ್ಟೆ ನುಲಿಯುವಿಕೆ: ಕಾಲುಧೂಳು ಹಾಕಿಸಿಕೊಂಡ ಮೇಲ ಹೊಟ್ಟೆಕಡಿತ ನಿಂತಿತು (ರೂಢಿ). ೨. ಹೊಟ್ಟೆನೋವು; ಹೊಟ್ಟೆಶೂಲೆ: ಒಂದು ದಿನ ಹೊಟ್ಟೆಕಡಿತ ಎದ್ದು ಆ ಸೆಟ್ಟಿಯು ಒಮ್ಮೆಂದೊಮ್ಮೆ ಸತ್ತನು (ಮುಂಬಬು. ೨-೩೨); ಸಿಕ್ಕಾಬಟ್ಟೆ ತಿಂದು ಈ ಮನುಷ್ಯನಿಗೆ ಹೊಟ್ಟೆಕಡಿತ ಎಂದು ಔಷಧ ಎಣ್ಣೆಯ ಆಶ್ರಯ ಪಡೆಯುವ ಅವಸ್ಥೆ ಬಂದಿರಬೇಕು (ಪ್ರಹಾಸ. ೨೭). ೩. (ಆಲಂ) ಚಿಂತೆ; ಕಳವಳ: ಬಳಕರ ಹೊಟ್ಟೆ ಕಡಿಯಹತ್ತಿತು. ಆದರೆ ಹೊಟ್ಟೆಕಡಿತದಿಂದೇನಾಗುವಂತಿದೆ? (ಸ್ವಪಿಚ. ೩೪೭). ೪. ಹೊಟ್ಟೆಕಿಚ್ಚು; ಅಸೂಯೆ: ಅವರವರ ಹೊಟ್ಟೆಕಡಿತ ಅವರವರನ್ನೇ ಸುಡುತ್ತದೆ (ರೂಢಿ). [ಹೊಟ್ಟೆ (< ಪೊಟ್ಟೆ) + ಕಡಿತ]

ಹೊಟ್ಟೆಕಡುಬು (ನಾ). ಒಳಗೆ ಹೂರಣವನ್ನು ತುಂಬಿ ಮಾಡುವ ಕಡುಬು: ಸಂಜೆಯ ತಿಂಡಿಗೆ ಹೊಟ್ಟೆಕಡುಬನ್ನೇ ಮಾಡಿಬಿಡು (ರೂಢಿ).

[ಹೊಟ್ಟೆ (< ಪೊಟ್ಟೆ) + ಕಡುಬು (< ಕಡುಂಬು)]

ಹೊಟ್ಟೆಕಳೆ (ಕ್ರ). ಭೇದಿಯಾಗು; ವಿರೇಚನವಾಗು: ಕೊಳವಳಿಕೆ ಬೀಜ, ಹಂಗರೇಬೀಜ ೧ ಸೊಲ್ಲಗ ಪುರುಷರತ್ನ . . . ಇವೆಲ್ಲವನ್ನು ಅರೆದು ರೊಟ್ಟಿಯಂ ಸುಟ್ಟು ಅಡಿಕೆಗಾತ್ರವ ಮೆದ್ದು, ಹೊಟ್ಟೆಕಳೆದವರಿಗೆ . . . ಸರಿಯಾಗಿ ಕೊಡುವುದು (ವೈದ್ಯವಿ. ೬೭); ನಾಯಿಬೇಲದ ಬೇರು, ಬಿಲ್ವದ ಬೇರು, ಹಿಪ್ಪಲಿಮೂಲ ಇವನ್ನೂ ಸಮಾಂಶ ಸೇರಿಸಿ ಕಷಾಯ ಕಾಯಿಸಿ ಕೊಟ್ಟರೆ ಹೊಟ್ಟೆಕಳೆಯುವುದು ಗ್ರಹಣಿ ಸಹ ಮಾಣುವುದು (ಸಙ್ಗ್ರ. ೪೭೮ ಪಂ). [ಹೊಟ್ಟೆ (< ಪೊಟ್ಟೆ) + ಕಳೆ]

ಹೊಟ್ಟೆಕಿಚ್ಚು 'ಪೊಟ್ಟೆಕಿಚ್ಚು' ನೋ.

ಹೊಟ್ಟೆಕುಟ್ಟು (ನಾ). ಹೊಟ್ಟೆಯು ನುಲಿಯುವಿಕೆ: ಈ ಲೋಹಸಿಂಧೂರದ ಹತ್ತು ತೂಕಕ್ಕೆ ಶುಂಠಿ, ಹಿಪ್ಪಲಿ . . . ಲವಂಗ ಇವುಗಳನ್ನು ಪ್ರತ್ಯೇಕ ಹನ್ನೆರಡು ವರಹಾ ತೂಕ ಮಾಡಿ. ಜೇನುತುಪ್ಪದಿಂದ ಮರ್ದಿಸಿ, ಅಡಿಕೆ ಪ್ರಮಾಣ ಗುಳಿಗೆಯನ್ನು ಮಾಡಿ ನಿತ್ಯವೂ ಸೇವಿಸೆ ವಾತಪಿತ್ತಜ್ವರ, ಶ್ಲೇಷ್ಮ, ಹೊಟ್ಟೆಕುಟ್ಟು . . . ವಾತರೋಗಗಳು ಸಹ ಗುಣವಾಗುವುವು (ಸಙ್ಗ್ರ. ೯೫). [ಹೊಟ್ಟೆ (< ಪೊಟ್ಟೆ) + ಕುಟ್ಟು]

ಹೊಟ್ಟೆಕೋಲು (ನಾ). = ಹೊಟ್ಟೆಕಡಿತ ೨: ಹೊಟ್ಟೆಹೋಗುತ್ತ ಇದ್ದುದಕ್ಕೆ:- ಸಜ್ಜರಸವನ್ನು ಪುಡಿಮಾಡಿ ಗಟ್ಟಿಮೊಸರಲ್ಲಿ ಕೊಡಲು ಹೊಟ್ಟೆಕೋಲು, ಆಮರಕ್ತ, ಇವು ಗುಣವಾಗುವುವು (ವೈದ್ಯವಿ. ೧೦೦). [ಹೊಟ್ಟೆ (< ಪೊಟ್ಟೆ) + ಕೋಲ್ಮು (< ಕೋಳ್)]

ಹೊಟ್ಟೆಗ (ನಾ). ದೊಡ್ಡದಾದ ಹೊಟ್ಟೆಯನ್ನು ಉಳ್ಳವನು: "ಪಿಚಂಡಿಳಃ, ಬೃಹತ್ಕುಕ್ಷಿಃ, ತುಂಡಿಳಃ, ಉದರಿಳಃ - ಈ ೪ ಹೊಟ್ಟೆಗಂ" (ಹಲಾಯು. ೯೯-೪೫೪). 'ಹೊಟ್ಟೆಗ' ಪರಾ. [ಹೊಟ್ಟೆ (< ಪೊಟ್ಟೆ) + - ಗ]

ಹೊಟ್ಟೆಗಟ್ಟು (ನಾ). ಮಲಬದ್ಧತೆ: ಆದಿತ್ಯಭಕ್ತ:- ಈ ಸಮೂಲವನ್ನು ಅಕ್ಕಿಗಚ್ಚಿನಲ್ಲಿ ಕುಡಿಯಲು ಹೊಟ್ಟೆಗಟ್ಟು ಮಾಣ್ಗುಂ (ವೈದ್ಯವಿ. ೧). [< ಹೊಟ್ಟೆಕಟ್ಟು]

ಹೊಟ್ಟೆಗಿಚ್ಚು 'ಪೊಟ್ಟೆಕಿಚ್ಚು' ನೋ.

ಹೊಟ್ಟೆಗೋದಿ (ನಾ). ದಪ್ಪನಾಗಿರುವ ಒಂದು ಬಗೆಯ ಉತ್ತಮಜಾತಿಯ ಗೋದಿ: (ಕ). [ಹೊಟ್ಟೆ (< ಪೊಟ್ಟೆ) + ಗೋದಿ$_1$ (< ಗೋದುವೆ)]

ಹೊಟ್ಟೆಜಾಡಿಸು (ಕ್ರ). ಭೇದಿಯಾಗು; ಹೊಟ್ಟೆಕಳೆ: ಹೊಟ್ಟೆಜಾಡಿಸುವುದು ನಿಲ್ಲುವುದಕ್ಕಾಗಿ ಔಷಧವೆಂದು ತುಸು ಅಫು ತಕ್ಕೊಂಡರೆ ಅಡ್ಡಿಯಿಲ್ಲ (ಮುಂಬಬು. ೪-೪೧). [ಹೊಟ್ಟೆ (< ಪೊಟ್ಟೆ) + ಜಾಡಿಸು]

ಹೊಟ್ಟೆಜಾಲಿ (ನಾ). ಒಂದು ಬಗೆಯ ಜಾಲಿಮರ: ಬಟ್ಟೆಬಟ್ಟೆಯೊಳಿಲ್ಲ ಹೊಟ್ಟೆಜಾಲಿಯ ಮುಳ್ಳು ಹುಟ್ಟಿದವರೆಲ್ಲ ಗಿಜವಾಯಿ ಮೂಡಲ ಬಟ್ಟೆ ಬೇಡೆಂದ (ಸರ್ವಜ್ಞ. ೧೬೦೪); ಹೊಟ್ಟೆಜಾಲಿ, ದೊಡ್ಡಮುಳಿನ ಜಾಲಿ, ಆನೆಗೊಬ್ಬಿ, ಗಬ್ಬುಜಾಲಿ (ಮುಡಿಗಿ. ೧-೧೫). 'ಹೊದೆಜಾಲಿ' ಪರಾ. [ಹೊಟ್ಟೆ + ಜಾಲಿ]

ಹೊಟ್ಟೆತುಂಬು (ಕ್ರ). ೧. ಉದರವು ಭರ್ತಿಯಾಗು: ಬಟ್ಟರೊಳಗಿದ ಹುಗ್ಗಿಯಂ ಕೈಯಿಟ್ಟು ಕೊಳ್ಳ್ ಎನುತ ನೀಡಿದಡಟ್ಟಹಾಸಂ ಸೂಸೆ ಭೀಮೇಶ್ವರನದಂ ಕೊಂಡು ಹೊಟ್ಟೆತುಂಬಲು ಸವಿದು . . . ತಟ್ಟೆಯಂ ದೇಗುಲದ ಹೊಜಯಿಕೆ ಹಾಯಿಕಿದನು (ಬಸಪು. ೭೬-೧೪). ೨. (ಆಲಂ) ಹೊಟ್ಟೆಹೊರೆ; ಹೊಟ್ಟೆಪಾಡು ನೋಡಿಕೊಳ್ಳು: ಎಲ್ಲಿಯಾದರೂ ಕೂಲಿ-ನಾಲಿ ಮಾಡಿ ನಾನೂ ಗೌರಿಯೂ ಹೊಟ್ಟೆತುಂಬಿಕೊಂಡೇವು (ತೇತೋಡ. ೪೨). ೩. ಊಟ, ತಿಂಡಿ ಮುಂತಾದುವು ದೊರಕಿ ಸಾಕೆನಿಸು; ಸಂತೃಪ್ತಿಯಾಗು: ದೇವರು ನಮಗೆ ಹೊಟ್ಟೆತುಂಬುವಷ್ಟು ಅನುಕೂಲ ಮಾಡಿ ಕೊಟ್ಟಿದ್ದಾನೆ (ರೂಢಿ). [ಹೊಟ್ಟೆ (< ಪೊಟ್ಟೆ) + ತುಂಬು]

ಹೊಟ್ಟೆತೊಳಸು (ಕ್ರ). ಓಕರಿಕೆ ಬರುವಂತಾಗು: ಬೆಳ್ಳಗಿದ್ದದ್ದೆಲ್ಲ ಹಾಲೆಂದು ಕುಡಿದವೋ-ಹೊಟ್ಟೆ ತೊಳಸುತ್ತಿಹುದು (ನಲಮು. ೬೬-೨); ಮನೆಯಿಂದ ಹೊರಟು ತೋಟದ ಸುತ್ತಿಗೆ ಬಂದಾಗ ಏಕೋ ಹೊಟ್ಟೆತೊಳಸಿತು (ದೇವಹಂ. ೧೬೧).

[ಹೊಟ್ಟೆ (< ಪೊಟ್ಟೆ) + ತೊಳಸು (< ತೊಬಸು)]

ಹೊಟ್ಟೆನುಲಿ$_1$ (ಕ್ರ). ಹೊಟ್ಟೆಯೊಳಗೆ ತಿರುಚಿದಂತಾಗು,— ಹಿಂಡಿದಂತಾಗು: ಹೊಟ್ಟೆನುಲಿಯುವುದಕ್ಕೆ: - ದೇವಗಂಟೆಯ ರಸದಲ್ಲಿ ಉಳ್ಳಿ, ಮೆಣಸು ಅರೆದು . . . ಮೂಜು ದಿನ ಕೊಳ್ಳಲು ಹೊಟ್ಟೆಕಚ್ಚುವುದು ಮಾಣ್ಗುಂ (ವೈದ್ಯವಿ. ೭೬).

[ಹೊಟ್ಟೆ (< ಪೊಟ್ಟೆ) + ನುಲಿ]

ಹೊಟ್ಟೆನುಲಿ$_2$ (ನಾ). ಹೊಟ್ಟೆಯೊಳಗೆ ತಿರುಚಿದಂತಾಗುವಿಕೆ,— ಹಿಂಡಿದಂತಾಗುವಿಕೆ: ಅಫೀಮನ್ನು ಸೇರಿಸಿಕೊಂಡು ಒಂದು ಗುಳಿಗೆಯನ್ನು ಅನುಪಾನವರಿತು ತೆಗೆದುಕೊಂಡರೆ ರಕ್ತಗ್ರಹಣೀ, ಹೊಟ್ಟೆನುಲಿ, ಸಂಗ್ರಹಣಿ ಸಹ ನಿಲ್ಲುವುವು (ಸಙ್ಗ್ರ. ೪೮೪ ಪಂ). [ಹೊಟ್ಟೆ (< ಪೊಟ್ಟೆ) + ನುಲಿ]

ಹೊಟ್ಟೆನೆತ್ತರು (ನಾ). ರಕ್ತಭೇದಿ; ರಕ್ತಾತಿಸಾರ: ಸುಣ್ಣ ಒಂದು ಭಾಗ, ಬೆಲ್ಲ ಎರಡು ಭಾಗ, ಇವಂ ಎಣ್ಣೆಯಲ್ಲಿ ಕಲಸಿ ಲೇಪನಂ ಮಾಡೆ ಹೊಟ್ಟೆನೆತ್ತರು ಮಾಣ್ಗುಂ (ವೈದ್ಯವಿ. ೧೨೨). [ಹೊಟ್ಟೆ (< ಪೊಟ್ಟೆ) + ನೆತ್ತರು (< ನೆತ್ತರ್)]

ಹೊಟ್ಟೆನೊಳೆ (ನಾ). ಒಂದು ಬಗೆಯ ಸಸ್ಯ: ಹೊಟ್ಟೆನೊಳೆ, ತೊಟ್ಟರೆ (ಮುಡಿಗಿ. ೬-೧೯). [?]

ಹೊಟ್ಟೆನೋಯು (ಕ್ರ). ೧. ಹೊಟ್ಟೆಯಲ್ಲಿ ನೋವುಂಟಾಗು,— ಶೂಲೆಯೇಳು: ಇಕ್ಕಲಾಜೆ ಕೈ ಎಂಜಲು ಬಿಕ್ಕ ಮಕ್ಕಳು ಅಳುತಾರೆ ಹೋಗೋ ದಾಸಯ್ಯ . . . ಹೊಟ್ಟೆನೋಯುತಲಿದೆ ಹೋಗೋ ದಾಸಯ್ಯ (ಪುರಂದ. ೧-೧೩೧-೨); ಹೊಟ್ಟೆನೋಯುವುದಕ್ಕೆ:- ಮಾವಿನ ಬೀಜದ ತಿರುಳಂ ಪುಡಿಮಾಡಿ ಅಂಬಿಲ, ಮಜ್ಜಿಗೆಯಲ್ಲಿ ಅರೆದು ಕುಡಿಯೆ ಆಗಲೇ ನಿಲ್ಲುವುದು (ವೈದ್ಯವಿ. ೧೫೯). ೨. (ಆಲಂ) ಅಸೂಯೆಯುಂಟಾಗು; ಹೊಟ್ಟೆಯುರಿಯುಂಟಾಗು: ಒಬ್ಬರ ಏಳಿಗೆಯನ್ನು ಕಂಡು ಹೊಟ್ಟೆನೋಯುವುದಾದರೆ ಮನಸ್ಸಿನ ಆರೋಗ್ಯಹಾಳು (ರೂಢಿ).

[ಹೊಟ್ಟೆ (< ಪೊಟ್ಟೆ) + ನೋಯು (< ನೋ)]

ಹೊಟ್ಟೆನೋವು (ನಾ). ೧. = ಹೊಟ್ಟೆನುಲಿ$_2$: ಹರಳ ಬೇರನ್ನು ಹಾಲಿನಲ್ಲಿ ಹಾಕಿ ಕಾಯಿಸಿ, ಆ ಹಾಲಂ ಕುಡಿಯಲು ವಾತಜ್ವರ, ಹೊಟ್ಟೆನೋವು ಸಹ ಮಾಣ್ಗುಂ (ಸಙ್ಗ್ರ. ೬೬); ಹೊಟ್ಟೆನೋವಿಳಿಯುತಿರೆ ರಟ್ಟೆ ನೋವೆನ್ನುವುದು ಮಟ್ಟಸವೆ ತಿರಿಹರವು? (ಮಂಕುಶ. ೩೫೯). ೨. (ಆಲಂ) ಹೊಟ್ಟೆಯುರಿ; ಅಸೂಯೆ: ಮತ್ತೊಬ್ಬರ ಏಳಿಗೆಯನ್ನು ಕಂಡು ಹೊಟ್ಟೆನೋವನ್ನು ತಂದುಕೊಂಡರೆ ಅವರ ಮನಸ್ಸಿನ ನೆಮ್ಮದಿಗೇ ಭಂಗ (ರೂಢಿ). [ಹೊಟ್ಟೆ (< ಪೊಟ್ಟೆ) + ನೋವು]

ಹೊಟ್ಟೆಪಾಡು (ನಾ). (ಲಾಂ) ಊಟಕ್ಕಾಗಿ ಪಡುವ ಪಾಡು; ಜೀವನೋಪಾಯ; ಬದುಕು: ಹೊಟ್ಟೆಪಾಡಿಗೆ, ನಾನು ಕೈಹಾಕಿದ ಕಸಬಿಗ ಲಕ್ಕವಿಲ್ಲ! (ವೀರಭೋ. ೮೪); ಅವರು ಹೊಟ್ಟೆಪಾಡಿಗಾಗಿ ವಿದ್ಯ ಹೇಳಿಕೊಡೋ ನಾಡಾಡಿ ಗುರುಗಳಲ್ಲ (ಹೇಮಾಕೂ. ೧೦); ಹೊಟ್ಟೆಪಾಡಿಗೋಸ್ಕರ ನಾನು ಗುಮಾಸ್ತೆಗಿರಿಯ ಶಿಖರವನ್ನೇರಿದ್ದೆ (ರಾಯಿಕ. ೩೭). [ಹೊಟ್ಟೆ (< ಪೊಟ್ಟೆ) + ಪಾಡು]

ಹೊಟ್ಟೆಬಾಕ (ನಾ). ಮಿತಿಮೀರಿ ತಿನ್ನುವವನು; ತಿನ್ನಾಳಿ: ಗಟ್ಟಿಯಾಗಿ ಎರಡು ಮೂರು ಬಾರಿಯುಂಡರೆ ಹೊಟ್ಟೆಬಾಕನೆಂದು ತೆಗಳಾಡುವರಯ್ಯ (ಪುರಂದ. ಧಾ. ೨-೪೮-೩); ಹೊಟ್ಟೆಬಾಕರು ಸುಳ್ಳುಮಾತುಗಳಿಂದಲೇ ಹೊಟ್ಟೆಹೊರೆದುಕೊಳ್ಳುವರು (ತಥಾಮಂ. IV, ೩). [ಹೊಟ್ಟೆ (< ಪೊಟ್ಟೆ) + - ಬಾಕ]

ಹೊಟ್ಟೆಬಾಕತನ (ನಾ). ಮಿತಿಮೀರಿ ತಿನ್ನುವಿಕೆ: ಹೋಟೆಲ್‌ಗಳಲ್ಲಿ ಊಟಮಾಡುತ್ತ ಹೋದಲ್ಲಿ ಹೊಟ್ಟೆಬಾಕತನ ಕಡಿಮೆಯಾಗುತ್ತೆ (ಸಾಡಿಗೇ. ೨೦೦).

[ಹೊಟ್ಟೆಬಾಕ + - ತನ]

ಹೊಟ್ಟೆಬಾಗೆ (ನಾ). ಒಂದು ಬಗೆಯ ಸಸ್ಯ: ಹೊಟ್ಟೆಬಾಗೆ, ಕಲ್ಲಾಗೆ (ಮೃಡಿಗಿ. ೪-೬೫). [ಹೊಟ್ಟೆ + ಬಾಗೆ]

ಹೊಟ್ಟೆಬೇನೆ 'ಪೊಟ್ಟೆಬೇನೆ' ನೋ.

ಹೊಟ್ಟೆಮರ (ನಾ). ಗಾಡಿಯ ಚಕ್ರದ ಸುತ್ತ ಇರುವ ಮರದ ಪಟ್ಟಿ: ಗಾಡಿಯ ಚಕ್ರದ ಹೊಟ್ಟೆಮರ ಸೀಳಿಹೋಯಿತು (ರೂಢಿ). [ಹೊಟ್ಟೆ (< ಪೊಟ್ಟೆ) + ಮರ]

ಹೊಟ್ಟೆಯಂಬಲಿ (ನಾ). ೧. ಹೊಟ್ಟೆಗೆ ಬೇಕಾಗುವ ಅಂಬಲಿ. ೨. (ಆಲಂ) ಜೀವಿಸಲು ಬೇಕಾಗುವ ಊಟ,– ಆಹಾರ: ಕಟ್ಟಕಡೆಯಲಿ ಭೀಮನಿಕ್ಕುವ ಹೊಟ್ಟೆಯಂಬಲಿ ತಪ್ಪಲರಿಯದೆನುತ್ತ ಹೊಜವಂಟ (ಸಭಾಗ. ೩-೧-೨೧).

[ಹೊಟ್ಟೆ (< ಪೊಟ್ಟೆ) + ಅಂಬಲಿ]

ಹೊಟ್ಟೆಯಿಳಿ (ಕ್ರಿ). ಗರ್ಭಸ್ರಾವವಾಗು; ಮೈಯಿಳಿ: "ಅಪತೋಕಾ, ಸ್ರವದ್ಗರ್ಭಾ- ಹೊಟ್ಟೆಯಿಳಿದ ಆಕಳು, ಗರ್ಭಸ್ರಾವವಾದ ಆಕಳು, ಕಂದು ಹಾಕಿದ ಹಸುವು" (ಸದ್ಧಾಂತ. ೨೯೪). [ಹೊಟ್ಟೆ (< ಪೊಟ್ಟೆ) + ಇಳಿ (< ಇಟ್ಟಿ)]

ಹೊಟ್ಟೆಯುಬ್ಬರ (ನಾ). ಉದರವು ಊದಿಕೊಳ್ಳುವಿಕೆ; ಹೊಟ್ಟೆಯ ಊತ: ಚಿತ್ರಮೂಲದ ರಸದಿಂ ಇಂಗು, ಗರುಗದ ರಸದಲ್ಲಿ ಕೊಡಲು, ಹೊಟ್ಟೆಯುಬ್ಬರ, ಸರ್ವಶೂಲೆಗಳು ಮಾಣುವುವು (ವಿಷವೈ. ೪೬); ಕ್ಷೀರಧಾರಾ(ನೊರೆಹಾಲು) ಗುಣ- ಇದನ್ನು ಸೇವಿಸಲು . . . ಹೊಟ್ಟೆಯುಬ್ಬರ, ಉದರಶೂಲೆ, ಅತಿಸಾರ, ಗುಲ್ಮ ಮೊದಲಾದ ವ್ಯಾಧಿಗಳು ಗುಣವಾಗಿ ಅಗ್ನಿಯುಂಟಾಗುವುದು (ಸಕಮ. ೨೦).

[ಹೊಟ್ಟೆ (< ಪೊಟ್ಟೆ) + ಉಬ್ಬರ (< ಉರ್ವರ)]

ಹೊಟ್ಟೆಯುರಕ (ನಾ). ಹೊಟ್ಟೆಯುರಿಪಡುವವನು; ಕರುಬುವವನು: ಹೊಟ್ಟೆಯುರಕರು ಅವರನ್ನು ನಿಂದಿಸತೊಡಗಿದರು (ರೂಢಿ).

[< ಹೊಟ್ಟೆಯುರಿ + - ಕ]

ಹೊಟ್ಟೆಯುರಿ, **ಹೊಟ್ಟೆಉರಿ** (ಕ್ರಿ). ೧. (ಅನಾರೋಗ್ಯದಿಂದ) ಹೊಟ್ಟೆಯೊಳಗೆ ಸಂಕಟ ಅಥವಾ ಉರಿಯುಂಟಾಗು: ಬೆಳಗಿನಿಂದ ಯಾಕೋ ಹೊಟ್ಟೆಯುರಿಯುತ್ತಿದೆ (ರೂಢಿ). ೨. (ಆಲಂ) ಕರುಬು; ಅಸೂಯೆಪಡು: ಆ ದಿನ ಅವನ ರೂಪನ್ನು ಕಂಡು ಕಾಲೇಜಿನ ಹುಡುಗಿಯರೆಲ್ಲ ಹೊಟ್ಟೆಯುರಿದುಕೊಂಡರು (ಆಲಹೂ. ೯). **ಹೊಟ್ಟೆಉರಿ** : ೧. ಹೊಟ್ಟೆಉರಿಯುವುದಕ್ಕೆ:- ಈಶ್ವರೀಬೇರು, ಅಗಳುಶುಂಠಿಯ ಬೇರು, ಇವಂ ನೀರಲ್ಲಿ ಅರೆದು ಕುಡಿಯೆ ಹೊಟ್ಟೆಉರಿ ಮಾಣ್ಗುಂ (ವಿಷವೈ. ೧೨೫). [ಹೊಟ್ಟೆ (< ಪೊಟ್ಟೆ) + ಉರಿ]

ಹೊಟ್ಟೆಯುರಿ, **ಹೊಟ್ಟೆಉರಿ** (ನಾ). ೧. (ಅನಾರೋಗ್ಯದಿಂದ) ಹೊಟ್ಟೆಯೊಳಗೆ ಉಂಟಾಗುವ ಉರಿ,– ಸಂಕಟ: ಯಾವ ಔಷಧವೂ ಅವರ ಹೊಟ್ಟೆಯುರಿಯನ್ನು ಗುಣಮಾಡಲಿಲ್ಲ (ರೂಢಿ). ೨. (ಆಲಂ) ಅಸೂಯೆ; ಹೊಟ್ಟೆಕಿಚ್ಚು: ಮತ್ತೊಬ್ಬರು ಏನಾದರೂ ಹೆಸರು ಮಾಡಿಕೊಂಡರೆ ಸಾಕು. ಅವರ ವಿಷಯಕ್ಕೆ ಇಲ್ಲದ ಹೊಟ್ಟೆಯುರಿ ಬಂದುಬಿಡುತ್ತೆ (ಆಲಹೂ. ೪೫). **ಹೊಟ್ಟೆಉರಿ** : ೧. ಈಶ್ವರೀಬೇರು, ಅಗಳು ಶುಂಠಿಯ ಬೇರು, ಇವಂ ನೀರಲ್ಲಿ ಅರೆದು ಕುಡಿಯೆ ಹೊಟ್ಟೆಉರಿ ಮಾಣ್ಗುಂ (ವಿಷವೈ. ೧೨೫). ೨. ಅಲ್ಲಿ ಮೇಷ್ಟ್ರುಗಳಿಗೆಲ್ಲಾ ನನ್ನ ಮೇಲೆ ಹೊಟ್ಟೆಉರಿ (ನಿರಾತ. ೮೯). [ಹೊಟ್ಟೆ (< ಪೊಟ್ಟೆ) + ಉರಿ]

ಹೊಟ್ಟೆಯುರಿಸು, **ಹೊಟ್ಟೆಉರಿಸು** (ಕ್ರಿ). (ಆಲಂ) ನೋಯುವಂತೆ ಮಾಡು; ನೋಯಿಸು: ಎಷ್ಟು ಸಲ ನನ್ನ ಕಣ್ಣ ಮುಂದೆಯೆ ಅವಳು . . . ಶ್ರೀಪತಿಯ ಸಂಗಡ ಬಿನ್ನಾಣ ಬೀರುತ್ತ ನಡದು ಹೋಗಿಲ್ಲ! ಬರೀ ನನ್ನ ಹೊಟ್ಟೆಯುರಿಸುವುದಕ್ಕಾಗಿಯೆ (ಹೂಸಕ್ರಿ. ೧೩). **ಹೊಟ್ಟೆಉರಿಸು**: ಅವರ ಹೊಟ್ಟೆಉರಿಸುವುದು ಹೊರತು ನಮಗೆ ದೈತವನದಲ್ಲಿ ಬೇರೆ ಕೆಲಸವಿಲ್ಲ (ವಚಭಾ. ೧೫೯). [ಹೊಟ್ಟೆ (< ಪೊಟ್ಟೆ) + ಉರಿಸು]

ಹೊಟ್ಟೆಶೂಲೆ (ನಾ). ಉದರದೊಳಗೆ ಉಂಟಾಗುವ ತೀವ್ರವಾದ ನೋವು,– ವೇದನೆ; ಹೊಟ್ಟೆನೋವು: ಸುಣ್ಣವನ್ನು ಬೆಣ್ಣೆಯನ್ನು ಕೂಡಿ ಕಲಸಿ ನುಂಗಲು ಹೊಟ್ಟೆಶೂಲೆ ಹರ (ವಿಷವೈ. ೧೨೫). [ಹೊಟ್ಟೆ (< ಪೊಟ್ಟೆ) + ಶೂಲೆ]

ಹೊಟ್ಟೆಸಂಕಟ (ನಾ). ತನ್ನ ಸ್ವಂತ ಮಕ್ಕಳು ಹಾಗೂ ತನಗೆ ಸಂಬಂಧಿಸಿದವರ ಬಗ್ಗೆ ಉಂಟಾಗುವ ದುಃಖ,– ಅಳಲು: ನಾನು ನನ್ನ ಹೊಟ್ಟೆಸಂಕಟಕ್ಕೆ ಅಂದರೆ, ಇವರಿಬ್ಬರು ನನ್ನ ಮೇಲೆ ಉರಿದು ಬಿದ್ದಿದ್ದಾರೆ (ಮರಮ. ೧೪೬).

[ಹೊಟ್ಟೆ (< ಪೊಟ್ಟೆ) + ಸಂಕಟ]

ಹೊಟ್ಟೆಹರಿ 'ಹೊಟ್ಟೆಹಱಿ' ನೋ.

ಹೊಟ್ಟೆಹಱಿ, **ಹೊಟ್ಟೆಹರಿ** (ಕ್ರಿ). ಉದರವನ್ನು ಸೀಳಿದಂತಾಗು; ಹೊಟ್ಟೆಯಲ್ಲಿ ತೀವ್ರವಾದ ವೇದನೆಯಾಗು,–ಸಂಕಟವಾಗು: ಸಾಲ್ಕುವರುಷದ ಕೂಸಂ ಶಂಕನಿಯೆಂಬ ದೇವತೆ ಪಿಡಿದೊಡೆ . . . ನಾಲಗೆ ಪೊಣಗುಗುಂ ಹೊಟ್ಟೆಹಱಿವುದುಂ ಮೂಗನೊರಸಿ ಕೊಳ್ಳುಗುಂ (ಬಾಲಚಿ. ೧೩೨-೭). **ಹೊಟ್ಟೆಹರಿ**: ಮೈಭಾರವು . . . ಬಾಡ್ಕವು, ಹೊಟ್ಟೆಹರಿವುದು ಇವು ಮುಂತಾದುಪದ್ರವಂಗಳಿಂದೊಡಗೂಡಿದುದೆ ಶ್ಲೇಷ್ಮಜನ್ಯ ವಿಷೂಚಿಯೆಂದರಿವುದು (ಸಕಪ್ರ. ೩೫೮).

[ಹೊಟ್ಟೆ (< ಪೊಟ್ಟೆ) + ಹಱಿ (< ಪಱಿ)]

ಹೊಟ್ಟೆಹೊರಕ, **ಹೊಟ್ಟೆಹೊರಕ** (ನಾ). ೧. ತನ್ನ ಹೊಟ್ಟೆಯನ್ನು ತುಂಬಿಕೊಳ್ಳುವುದರಲ್ಲಿಯೇ ಆಸಕ್ತನಾದವನು: ಚಕ್ರವರ್ತಿಗೆ ಸೇರಿದ ಕಾಡುಗಳಲ್ಲಿ ಹುಲ್ಲುಪುಳ್ಳಿಗಳನ್ನು ಶೇಖರಿಸಿಕೊಳ್ಳುತ್ತಿದ್ದ ಹೊಟ್ಟೆಹೊರಕರು. ಗುಡ್ಡಗಾಡಿನ ದರೋಡೆಕೋರರು (ಪುನರು. ೪೧೩). ೨. (ಆಲಂ) ಸ್ವಾರ್ಥಿ: ಮೆಟ್ಟಿ ನಡೆದು ಬಹ ಪಗೆವಡೆಗಂಡು ಕಣ್ಗೆಟ್ಟಿಡಬಲಕೆ ತೊಲಗುವ ಹೊಟ್ಟೆಹೊರಕ ರಾವುತರ ಗಂಡನಾ ದೇವಿಸೆಟ್ಟಿಯ ಲಿಂಗನೆಯ್ದಿದನು (ಕುರಾಸಾಂ. ೧೧-೫೬). **ಹೊಟ್ಟೆಹೊರೆಕ**: ೨. ರಾಯ ನೊಂದನು ಹರಿಬಕಿಲ್ಲದ ನಾಯಕರ ಸುಡು ಹೊಟ್ಟೆಹೊರಕರ ವಾಯಿವದಿರ ಸಂತವಿಟ್ಟನು ಸ್ವಾಮಿಕಂಟಕರ (ಕುವಾದ್ಯೋ. ೧೦-೫೮).

[ಹೊಟ್ಟೆಹೊರೆ + - ಕ]

ಹೊಟ್ಟೆಹೊರೆ (ಕ್ರಿ). (ಆಲಂ) ಜೀವನಕ್ಕೆ ಮಾರ್ಗವನ್ನು ಕಂಡುಕೊಳ್ಳು; ಬದುಕು: ಕೂಳಿನಾಸೆಗೆ ಹೊಟ್ಟೆಹೊರೆವತಲಿರ್ದರು (ಅಭಿಲೂ. ೩-೧೨೨); ಚಂದ್ರನ ಅಳಿಯನ ಮಗನ ಮಾವನ ದ್ವಾರ ಹೊಂದಿ ಕಾಯಿದು ಹೊಟ್ಟೆಹೊರೆದು ಚಂದ್ರಗುಪ್ತನ ಮಗಳಿಗೆ ಪೊಲಿದವ (ಸೌಂದಕಾ. ೬-೨); ಒಂದು ಗುಡಿಸಿಲಿನಲ್ಲಿ ಮಗಳೊಡನೆ ವಾಸ ಮಾಡಿಕೊಂಡು ಕೂಲಿಯಿಂದ ಹೊಟ್ಟೆಹೊರೆದುಕೊಳ್ಳುತ್ತಿದ್ದಳು (ಬಂಕಿಮ. ೧೩೨).

[ಹೊಟ್ಟೆ (< ಪೊಟ್ಟೆ) + ಹೊರೆ (< ಪೊರೆ)]

ಹೊಟ್ಟೆಹೊರೆಕ 'ಹೊಟ್ಟೆಹೊರಕ' ನೋ.

ಹೊಟ್ಟೆಹೋಗು (ಕ್ರಿ). ಭೇದಿಯಾಗು; ವಿರೇಚನವಾಗು: ಬಾಯಾರಿಕೆಯು, ಜ್ವರವು, ಒಳತಾಪವು, ಮೂರ್ಛೆಯು ವೆಗ್ಗಳವಾಗಿ ಹೊಟ್ಟೆಹೋಗುವುದು, ಪ್ರಲಾಪವು ಇನಿತು ಉಂಟಾಗಿರ್ಪುದೇ ಪಿತ್ತಜವಿಷೂಚಿಯೆಂದು ತಿಳಿವುದು (ಸಕಪ್ರ. ೩೫೮).

[ಹೊಟ್ಟೆ (< ಪೊಟ್ಟೆ) + ಹೋಗು (< ಪೋ)]

ಹೊಟ್ಟೇಳು (ಕ್ರಿ). (ಆಲಂ) ನಾಶವಾಗು; ಹಾಳಾಗು: ಏಕಾದಶಕ್ಕೋಹಿಣ ಜನಪದಂ ನಿನ್ನನುಜರಾತ್ಮಜರು ಗಜಹಯರಥಂ ಬಿದಿದು ಬಾವುಲಿಗಳು ಹೊಟ್ಟೆದ್ದು ಪೆಗಲ ಗದಯಿಂದೋರ್ವನಾಗಿ ಕುಗಟ್ಟು ಕಾಲ್ವಡೆಗಳಿಂದೈತಂದೆ (ತುರಂಗ. ೭೩-೩೨).

[ಹೊಟ್ಟು (< ಪೊಟ್ಟು) + ಏಳು (< ಎೞ್)]

ಹೊಟ್ಟು (ನಾ). ಬೀಡು; ನೆಲೆ (?): ಭದ್ರಪ್ಪನಾಯಕರ ಪುತ್ರರಾದ ವೀರಭದ್ರ ನಾಯಕರು ಕೊಟ್ಟ ಭೂದಾನ ಧರ್ಮದ ತಾಮ್ರಶಾಸನದ ಕ್ರಮವಂತ್ತಿಂದರ ಮಂತಸಾಲೆಯ ಸೀಮೆವಳಗಣ ಬ್ರಾಂಹ್ಮಣವಾಡದ ಹೊಟ್ಟ ಸರುಹನ ಗ್ರಾಮ ೧ ಕೆ . . . ಅಯಿವತ್ತು ವಂದು ವರಹನು . . . ಪ್ರಾಕು ಮರಿಯಾದೀಲಿ ಅಗುಮಾಡಿಕೊಂಡು . . . ಮಠಧರ್ಮಕೆ ನಡಸಿಕೊಂಡು ಸುಖದಿಂ ಅನುಭವಿಸಿ ಬಹಿವ ಎಂದು ಕೊಟ್ಟ ಧರ್ಮಶಾಸನ (ಎಕ. VIII. ಶಿಕಾರಿಪು. ೫೮-೧೨; 1630). [?]

ಹೊಡಕಣೆ (ನಾ). ಹೊಚೆತ; ಏಟು; ಪೆಟ್ಟು: ಈತಗಳ್ಳೋಡಿದರು ಭೀಮಸೇನನ ಗದಾಘಾತದೋಳ್ಮೊಡೆಯುಡಿದು ರಕ್ತಪ್ರವಾಹದೋಳ್ಮುತಳಂ ಕೆಸರೆದ್ದಿರಲ್ಕದರ ಮೇಲ್ವಿದ್ದ ನರಳುತಂ ಹೊಡಕಣೆಯೊಳು ಧಾತುಗಳ್ಪಸ್ಪರ್ದ ನೃಪತಿ ಕೆಲಬಲದಿ ಖಗಜಾತಗಳ್ಗುಂಬುಕಾದಿಗಳು ತಿನ್ನಲಿಕೆ ಬಂದಾತುಕೊಂಡಿಹ ಕಾಲಮಂ ನೋಡಿ ಶೋಕಮಂ ಮಾಡಿದರು (ತುರಂಗ. ೭೭-೨೧). [ಹೊಡಕು$_1$ + - ಅಣೆ$_1$]

ಹೊಡಕರಿಸು 'ಪೊಡಕರಿಸು' ನೋ.

ಹೊಡಕಿಸು (ಕ್ರಿ). ಹೊಡೆದು ಬೀಳಿಸು: ಹೊಡಕಿಸಿದನೊಂಭತ್ತುಶರದಿ ಸಹದೇವನಂ . . . ಕಲಿಕರ್ಣನು (ತುರಂಗ. ೬೨-೧೭). [ಹೊಡಕು$_1$ + - ಇಸು$_1$]

ಹೊಡಕು$_1$ (ಕ್ರಿ). ೧. ಹೊಡೆ; ಬಡಿ: ಒತನ ಧೀರವರಾಹನಸುರನ ತುಡುಕೆ ಮೇಲ್ಕರಿದಾರ್ದು ನತ್ತಿಯ ಹೊಡಕಿದರೆ ಧಿಮ್ಮಿಟ್ಟು ಬಿದ್ದನು ಶೈಲಸದೃಶದಲಿ (ಆಸಂಧಾ. ೧೪-೩೦). ೨. ಪೆಟ್ಟಿನಿಂದ ನರಳು: ಕಡಿದ ಕಾಲ್ಗಳು ಉಡಿದ ಮುಂಡಗಳು ಮಿಡಿಮಿಡಿದು ಮಿಡಿಕುತಿರ್ದವು ಕೆಲವು ಖಂಡಿಯದ ಘಾಯದಿಂ ಹೊಡಕುತಿರ್ದವು ಕೆಲವು (ತುರಂಗ. ೪೬-೩೦); ಒಡದ ಮೈರಕ್ತದಿಂ ಬಿಡುದಲೆಯ ಕೇಶದಿಂ ಹೊಡಕುತಿರ್ದುದು ಬಲಂ (ತುರಂಗ. ೭೧-೩೮). [ಹೊಡೆ$_1$ + - ಕ್ಕು$_1$]

ಹೊಡಕು$_2$ (ನಾ). ಹೊಡೆದಾಟ; ಜಗಳ: "ಹೊಡಕೆಂದೊಡೆ [ಪಾಠಾಂ. ತೊಡರೆಂದೊಡೆ] ತೋಟಿಯಕ್ಕುಂ" (ಭಾರತ. ೨೨). [< ಹೊಡಕು$_1$]

ಹೊಡಕೆ, ಹೊಡ್ಕೆ$_5$ (ನಾ). ಒಂದು ಬಗೆಯ ಜೊಂಡುಹುಲ್ಲು: ಳಟ್ಟವಾಳಯ್ಯಗಳು ಅಲ್ಲಿಂದ ಪೋಗಿ ಒಂದು ಪಿಂದಪ್ಪ ಗುಂಡಂ ತಂದು ಬಸವರಾಜದೇವರ ಮಠದ ಬಾಗಿಲಲ್ಲಿ ನಿಲಿಸ ಹೊಡಕೆಯ ಕಣ್ಣಿಯಿಂದ ತಮ್ಮ ಕೊರಳಿಗೆ ಧರಿಸಿಕೊಂಡು ಆ ಜಂಗಮದೇವರುಗಳ ಮರಳಿ ವಿಡಂಬಿಸುವ ಪ್ರಸ್ತಾವದ ವಚನ (ಶೂನ್ಯಸಂ. ೨೬೮-೧೮); ಮದ್ವಾನೆಯು ಹೊಡಕೇಮಡುವನ್ನು ಹೊಕ್ಕು ತುಳಿಯುವ ಚಂದದಿಂದ (ಕ್ಷಾವಿ. ೧೦೭). **ಹೊಡ್ಕೆ**: ಹೂಡೆ, ಹೂಡಕೆ (ಪ್ರಪ್ರಿಗಿ. ೪೭-೧೧೪೦). [?]

ಹೊಡಕೆಹುಲ್ಲು (ನಾ). ಜೊಂಡುಹುಲ್ಲು: ಮುಂಜಿಹುಲ್ಲು, ಹೊಡಕೆಹುಲ್ಲು (ಪ್ರಪ್ರಿಗಿ. ೭೭-೧೩೭೭). [ಹೊಡಕೆ + ಹುಲ್ಲು (< ಪುಲ್)]

ಹೊಡಗೆಡಹು 'ಹೂಡಗೆಡಹು' ನೋ.

ಹೊಡಚು (ಕ್ರಿ). (ಹತ್ತಿ ಮೊದಲಾದುವನ್ನು ಬಡಿದು) ಶುದ್ಧಿಗೊಳಿಸು: ಕರಣಾದಿ ಗುಣ ಕಸವ ಕಳೆದು ಭೂರುಹ ಹಿಂಜಿ ಅರಳೆಯಂ ಹೊಡಚಿ ಹೊಸೆದನು ಮಾಡಿದಾ ಹಂಜಿ (ತರಚ. ೪೭); ಎಡೆಗೆಡೆಗೆ ಹತ್ತಿಗಳ ಹೊಜೆಗಳ ಹೊಡಚಿದರಳೆಯ ಸುತ್ತಿದರು (ತೂರಾ. ೫-೬-೮). [ಹೊಡೆ$_1$ (< ಪೊಡೆ$_1$) + - ಚು$_1$]

ಹೊಡಬಾಳು 'ಹೂಡಬಾಳು' ನೋ.

ಹೊಡಮಗುಚು 'ಪೊಡೆಮಗುಚು' ನೋ.

ಹೊಡಮಡು 'ಪೊಡೆವಡು' ನೋ.

ಹೊಡಮರಳು 'ಪೊಡೆಮರಳ್' ನೋ.

ಹೊಡಮೊಗೆ (ನಾ). ಹೊಟ್ಟೆಯನ್ನು ಕೆಳಗೆ ಮಾಡುವಿಕೆ; ಬೋರಲು ಬೀಳುವಿಕೆ: ಹೊಡಮೊಗಿE ಗತಿಯ ಕಲಿಯೆ ಜತಿಗಳಿಗೆ ದೃಢವಾಯ್ತು ಮನ (ಪ್ರಭುವ. ೪-೧೨).

[< ಪೊಡೆ$_3$ + ಮೊಗೆ$_1$]

ಹೊಡಯ್ಸು 'ಪೊಡೆಯಿಸು' ನೋ.

ಹೊಡಲು (ನಾ). ಬೀಡು; ನೆಲೆ (?): ಒಡಲಂ . . . ಸುಖಮುಖಮುದ್ರೆಯ ಹೊಡಲಂ ಬಿಡಲಱಿಯದಂಗೆ ನಿರ್ವ್ಯತಿಯುಂಟೇ (ಪುಸ್ತ. ೧೩-೩೩). 'ಹೊಟ್ಟು' ಪರಾ.

[< ಪೊಟ್ಟಳ ?]

ಹೊಡವಂಡಿಸು 'ಪೊಡೆವಡಿಸು' ನೋ.

ಹೊಡವಂಡು 'ಪೊಡೆವಡು' ನೋ.

ಹೊಡವಡಿಸು 'ಪೊಡೆವಡಿಸು' ನೋ.

ಹೊಡವಡು 'ಪೊಡೆವಡು' ನೋ.

ಹೊಡಸೆಂಡು 'ಪೊಡೆಸೆಂಡು' ನೋ.

ಹೂಡಹು (ಕ್ರಿ). ಹೊಡೆ; ಬಡಿ: ಕಾರುಕನ ಬುದ್ಧಿಯಂತೆ ಅಡಿಗೆ ನೀನಾಗಿ ಹೊಡಹುದಕ್ಕೆ ನೀನಾಗಿ ಎರಡಱ ನಡುವೆ ಹೊಡಿಸಿಕೊಂಬುದಕ್ಕೆ ನೀನಾಗಿ ತನ್ನ ವಂಶ ತನಗೆ ಹಗೆಯಾಗಿ ಕೊಡಲಿಯ ಕಾವು ಕುಲಕ್ಕೆ ಮೃತ್ಯುವಾದಂತೆ ಇವೆಲ್ಲವು ನಿನಗಾಗಿ (ಮೋಳಮಾ. ೧೨-೪೫). [ಹೊಡೆ$_1$ (< ಪೊಡೆ$_1$) + - ಹು$_1$ (<- ಪು$_1$)]

ಹೊಡಹೊಮ್ಮು (ಕ್ರಿ). (ಸಾಷ್ಟಾಂಗವಾಗಿ) ನಮಸ್ಕರಿಸು; ವಂದಿಸು: ಅರಳೆಯ ಮರನು ವಿಷ್ಣುಕಾಂತಿ ಬನ್ನಿ ಮುತ್ತಕ ತೊಳಚಿ ಹರಿಹರಿಯೆಂದು ಹೊಡಹೊಮ್ಮು [ಪಾಠಾಂ. ಹೊಡಹೊಂಡು]ವಿರಿ (ಸಕವ. ಕ. ೬, ೪೦೭-೧೫೪೦).

[ಹೊಡೆ$_3$ + ಹೊಮ್ಮು$_1$ (< ಪೊಣ್ಮು$_1$)]

ಹೊಡಿಸು 'ಪೊಡೆಯಿಸು' ನೋ.

ಹೊಡೆ$_1$ 'ಪೊಡೆ$_1$' ನೋ.

ಹೊಡೆ$_2$ 'ಪೊಡೆ$_2$' ನೋ.

ಹೊಡೆ$_3$ 'ಪೊಡೆ$_3$' ನೋ.

ಹೊಡೆ$_4$ (ನಾ). ೧. ಮೇಲ್ಭಾವಣೆಯ ಮುಖ್ಯವಾದ ತೊಲೆ: (ಪ). ೨. ಪಕ್ಕ; ಬದಿ: (ಪ). [?./ ತುಳು. ಪುಡೆ = ಅಂಚು]

ಹೊಡ್ಕೆ$_5$ 'ಹೊಡಕೆ' ನೋ.

ಹೊಡೆಕುಚುಕ (ನಾ). ೧. ತೆನೆ ಬಿಟ್ಟ ಹುಲ್ಲು. ೨. (ಆಲಂ) ವ್ಯರ್ಥವಾದುದು; ನಿಷ್ಪ್ರಯೋಜಕವಾದುದು: ಮೃಡರೂಪ ಜಂಗಮನ ದಿವ್ಯಕಾರುಣ್ಯಮಂ ಪಡದು ಬಿತ್ತಿದ ಬೆಳೆಯು ಕನಕವಹುದಲ್ಲದೇ ಹೊಡೆಕುಚುಕವಾಗುತಿಹುದುಂಟೆ (ಮಲ್ಲಚ. ೧೭-೧೩). [ಹೊಡೆ$_3$ (< ಪೊಡೆ$_3$) + ಕುಚುಕ ? (P ← ಸಂ. ಕೂರ್ಚಕ)]

ಹೊಡೆಕೆಡೆ 'ಪೊಡೆಗೆಡೆ' ನೋ.

ಹೊಡೆಗಚ್ಚು (ಕ್ರಿ). ತೆನೆಯಾಗು; ತೆನೆತುಂಬು: ಗೋದಿ ಹೊಡೆಗಚ್ಚರಲು ಕಡಲೆಯ ಮಡಿಲು ಹೂಮಿಡಿ ತುಂಬಿತು (ನಲಮು. ೧೨-೧೨).

[ಹೊಡೆ$_3$ (< ಪೊಡೆ$_3$) + ಕಚ್ಚು$_1$ (< ಕರ್ಚು$_1$)]

ಹೊಡೆಗಣೆ (ನಾ). ಒಂದು ಬಗೆಯ ಬಾಣ: ತಿರು ಗರಿಗಟ್ಟುವ ಹೊಡ ಹೊಡೆಗಣೆ ಗಾಜನಿರದೆ ಮಾಡುವ ಬಿಲ್ಲನೊರೆವ ಸರಳ ತಿದ್ದುವ ಪಳ್ಳುಗೊಯ್ವ ಸಂದಣ ಕೂಡೆ ಕರಮೆಸೆದುದು ದುರ್ಗದೊಳಗೆ (ಹರಾಸಾಂ. ೩೭-೫೭)).

[P ಇದು 'ಹೊದೆಗಣೆ' ಎಂಬುದರ ಅಪಲಿಖಿತವಿರಬಹುದು]

ಹೊಡೆಗಲ್ಲು 'ಪೊಡೆಗಲ್ಲು' ನೋ.

ಹೊಡೆಗಳ್ಳ (ನಾ). ತೆನೆಯ ಕಾಳನ್ನು ಕದಿಯುವ ಒಂದು ಬಗೆಯ ಹಕ್ಕಿ (?): ಹರಡೆ ಬಲುಮಿಲಿಗನು ಬಿಲುವೆ ಗಿಜುಗಿರಳೆ ಕಮ್ಮರನಸಗ ಕೊಟ್ಟುಳೆ ಹೊರಸು ಹೂಡಗಳ್ಳಂಬ ಪಕ್ಕಿಗಳವಜೊಳೊಪ್ಪಿದವು (ಸಾಳ್ವಭಾ. ೫-೨೧).

[ಹೊಡೆ$_3$ (< ಪೊಡೆ$_3$) + ಕಳ್ಳ$_1$]

ಹೊಡೆಗಾಳಿ (ನಾ). ಬಲವಾಗಿ ಬೀಸುವ ಗಾಳಿ: ಹೊಡೆಗಾಳಿಗುದುರ್ವ ಬಿದಿರ ಮುತ್ತು ಹಾವಿನ ಹೆಡೆವಣಿವೆಳಗಾ ಬನದ ಒಡತಿ ನೃಪತಿಗೆ ಸೇಸೆಯ ತಳಿದಾರತಿವಿಡಿದೆತ್ತುವ ತೆಜನಾಯ್ತು (ಶ್ರೀಪಾಲ. ೭-೨೬). [ಹೊಡೆ$_1$ (< ಪೊಡೆ$_1$) + ಗಾಳಿ$_1$]

ಹೊಡೆಗಿಚ್ಚು 'ಪೊಡೆಗಿರ್ಚು' ನೋ.

ಹೊಡೆಗುಳು (ನಾ). ೧. ಏಟು; ಹೊಡೆತ. ೨. ಧಾಳಿ; ಆಕ್ರಮಣ: ನಡುಗಿತವನಿಯಜಾಂಡ ಖರ್ಪರವೊಡೆಯಲವನಿಯ ಲಗ್ಗೆ ಸೂಳಿನ ಹೊಡಗುಳಿ ನೊಳಬ್ಬರಿಸಿದವು ನಿಸ್ಸಾಳಕೋಟಿಗಳು (ಕುವ್ಯಾಉ. ೧೧-೩೯). 'ತಿವಿಗುಳು' ಪರಾ.

[ಹೊಡೆ$_1$ (< ಪೊಡೆ$_1$) + - ಗುಳು$_2$ (< - ಗುಳ್$_2$)]

ಹೊಡೆಗೆಡಹು, ಹೊಡಗೆಡಹು (ಕ್ರಿ). ಹೊಡೆದು ಬೀಳಿಸು: ಅರರೆ ಕವಿ

ಕವಿದಂಬು ಕಡಿದವು ಕೊರಳನುಗಿದವು ಹೋಡನೊಡಲೊಳು ಹೊರಳಿದವು ಹೊಡೆಗೆಡಹಿದವು ಹೊಕ್ಕೆಸೆವ ಹೂಣಗರ (ಕುವ್ಯಾಭೀ. ೪-೧೩). **ಹೊಡಗೆಡಹು:** ಅಲುಗಾಡಿ ತುಂಬಿದ ಕೊಡನ ಹೊಡಗೆಡಪ[ಪಾಠಾಂ. ಹೊಡೆಗೆಡಹ]ಲೇತಕ್ಕೆ (ಮದೇವ. ೨೪೮-೨೭); (ರಾಸ್ಯಸಂ. ೨೪೬-೨೭ ನೋ). ಒಡಿದು ಹೊಡಗೆಡಹಿ ಕಡಿ ಕೊಲ್ಲೆಂಬ ಧನಿಗಳು ಪೊಡವಿಯೊಳಗಿಲ್ಲ (ಬಸಪು. ೩೭-೭೦); ತುಡುಕುವಾನೆಗಳ ಸುಂಡಿಲ ಕಡಿಯೆಚ್ಚನು ಬಿಡದೆ ಮೇಲ್ಕಾಯ್ದು ಕುದುರೆಯ ಹೊಡಗೆಡಹಿದನು (ಕುರಾಸಾ. ೨೦-೫೧).

[ಹೊಡೆ$_1$ (< ಪೊಡೆ$_1$) + ಕೆಡಹು (< ಕೆಡಪು)]

ಹೊಡೆಗೆಡಿಸು (ಕ್ರಿ). ೧. ಹೊಡೆದು ಬೀಳಿಸು. ೨. (ಆಲಂ) ಹಾಳುಮಾಡು: ಹೊರಗಣ್ಣನು ಮುತ್ತಿದ ಮಾಯೆ ಕಾಡಿಸಿ ಹೊಡೆಗೆಡಿಸುತ್ತು (ಅಂಶರಾ. ೧೮).

[ಹೊಡೆ$_1$ (< ಪೊಡೆ$_1$) + ಕೆಡೆ$_1$ + - ಇಸು$_3$]

ಹೊಡೆಗೆಡೆ 'ಪೊಡೆಗೆಡೆ' ನೋ.

ಹೊಡೆಗೊಳಿಸು (ಕ್ರಿ). ಸೀಳು; ಭೇದಿಸು: ಸಿಡಿಲ ಹೆತ್ತುದೊ ಜಡಿವ ನಿಸ್ವನ ಕಡುಹೊಗರು ಬೆಸಲಾಯ್ತೊ ನಭವನು ಹೊಡೆಗೊಳಿಸಲುಚ್ಚಳಿಪ ಕಿಡಿ ವಡಬಂಗೆ ಪಿತನೆನಲು . . . ಕೃಪಾಣದ ಕಡುಹು ಕೌತುಕಮಾಯ್ತು ಖಂಡಯಕಾಱ ಮೋಹರದ (ಕುವ್ಯಾಭೀ. ೪-೨೭). [ಹೊಡೆ$_2$ (< ಪೊಡೆ$_2$) + ಕೊಳಿಸು]

ಹೊಡೆಗೊಳು 'ಪೊಡಗೊಳ್' ನೋ.

ಹೊಡೆಚಂಡು 'ಪೊಡೆಸಂಡು' ನೋ.

ಹೊಡೆಚೆಂಡಾಡು 'ಪೊಡೆಸೆಂಡಾಡು' ನೋ.

ಹೊಡೆಚೆಂಡು 'ಪೊಡೆಸಂಡು' ನೋ.

ಹೊಡೆಜಾಲಿ (ನಾ). ಒಂದು ಬಗೆಯ ಜಾಲಿಮರ; ದೊಡ್ಡ ದೊಡ್ಡ ಬಿಳಿಯ ಮುಳ್ಳುಗಳಿಂದ ಕೂಡಿದ, ಕುಳಾಳದ ಮರ ಅಥವಾ ಕುರುಚಲು: ಬುಡ್ಡೆಜಾಲಿ, ಕೊಡಮುಳ್ಳುಜಾಲಿ, ಹೊಡೆಜಾಲಿ (ಮೃಚಿಗಿ. ೨-೧೮). 'ಹೊಟ್ಟೆಜಾಲಿ' ಪರಾ.

[ಹೊಡೆ$_1$ + ಜಾಲಿ$_1$]

ಹೊಡೆತ 'ಪೊಡೆತ' ನೋ.

ಹೊಡೆತರ್ (ಕ್ರಿ). ಹೊಡೆದುಕೊಂಡು ತರು: ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ (ಅವಚಂ. ೭-೨೩).

[ಹೊಡೆ$_1$ (< ಪೊಡೆ$_1$) + ತರ್]

ಹೊಡೆಪ (ನಾ). ಹೊಡೆತ; ಬಡಿತ: ಸಿಡಿಲ ಹೊಡೆಪಕಂಚಿ [ಪಾಠಾಂ. ಹೊಡೆಯಲಂಜಿ] . . . ಸುಗಿವಂತಾ ಹಂದೆ ಕಡು ಬೆರ್ಚ ಬೆಬ್ಬಳವೋದ (ಶ್ರೀಪಾಲ. ೮-೬೧).

[ಹೊಡೆ$_1$ (< ಪೊಡೆ$_1$) + - ಪ$_2$]

ಹೊಡೆಬಳ್ಳಿ (ನಾ). ಒಂದು ಬಗೆಯ ಬಳ್ಳಿ: ಹೊಡೆಬಳ್ಳಿಯೊಂದರ ಗಂಟುಗಂಟ ಕುಡಿಯೊಡೆದೆಂಟುದೆಸೆಗೆ ಪೋಪಂತೆ ನಿಡುಸರಪಣಿಯೊಂದು . . . ಹಬ್ಬಿತು ಕಂಡ ಕಡೆಗೆ (ಧರಚ. ೪೯-೧೧೦). [ಹೊಡೆ$_1$ + ಬಳ್ಳಿ]

ಹೊಡೆಬಾಳು, ಹೊಡಬಾಳು (ನಾ). ಹೋರಾಟದ ಬದುಕು; ಜಂಜಾಟದ ಬದುಕು: ಅನ್ನ ಕೊಡುವ ಧನಿಗೆ ದೊರೆಗೆ ಹೀಗೆ ಅನ್ನಾಯ ಮಾಡಿ ಹೊಡೆಬಾಳು ಬದುಕಬೇಕಾ (ಬೆಟ್ಟಅ. ೧೦೬-೧೩). **ಹೊಡಬಾಳು:** ಕಲ್ಲು ಪೊಟ್ಟರೆ, ಗುಹೆ, ದೊಡ್ಡ ದೊಡ್ಡ ಮರಗಳ ಪೊಟರೆಗಳು ಅವುಗಳ ವಾಸಸ್ಥಳಗಳಾದುವು. ಹೀಗೆ ಜೀವನದ ಹೊಡಬಾಳು ಹೆಚ್ಚಾಯಿತು (ಪ್ರಪಂಚ. ೬೬); ನಮ್ಮ ಹೊಡಬಾಳು ಸಾಯೋವರ್ಗೂ ತಪ್ಪಿದ್ದಲ್ಲ (ಅವತಂ. ೧೯೨); ಇನ್ನೇನು ದೇವರ ಮೇಲೆ ಭಾರ ಹಾಕಿ ಈ ಪ್ರಪಂಚದ ಹೊಡಬಾಳನ್ನು ತಳ್ಳಬೇಕು (ಚಂಗಾಳ್ಳ. ೨೬೩). [ಹೊಡೆ$_1$ (< ಪೊಡೆ$_1$) + ಬಾಳ್ವು$_2$ (< ಬಾಳ್ವ್$_2$)]

ಹೊಡೆಮಂಚ (ನಾ). (ಕರಾ) ಕಾಳು ಮತ್ತು ಹುಲ್ಲುಗಳನ್ನು ಬೇರೆ ಬೇರೆಯಾಗಿ ಮಾಡುವ ಸಾಧನ; IP ಬತ್ತದ ಪೈರನ್ನು ಕತ್ತರಿಸಿದ ಬಳಿಕ, ಮಂಚದ ಆಕಾರದ ಈ ಸಾಧನದ ಮೇಲೆ ತೆನೆಸಹಿತವಾದ ಹುಲ್ಲನ್ನು ಸೂಡಿಮಾಡಿ ಬಡಿಯುತ್ತಾರೆ. ಈ ಕಾರಣದಿಂದ ಇದಕ್ಕೆ 'ಹೊಡೆಮಂಚೆ' ಎಂಬ ಹೆಸರು ಬಂದಿದೆ. ಇದಕ್ಕೆ ಹಿಂದೆ ಹೊಡೆಮಣೆಯೆಂಬ ಹೆಸರೂ ರೂಢಿಯಲ್ಲಿ ಇತ್ತು. ಬಯಲಾಟ ನೋಡಲು ದೂರದಲ್ಲಿ ಇಂಥ ಮಂಚ ಇರಿಸಿ ಕುಳಿತುಕೊಳ್ಳುತ್ತಿದ್ದರು: ಆ ಶಾಲೆಯವರ ಹಾಗೆ ಒಂದು ಹೊಡೆಮಂಚ ನನಗೂ ತಂದುಹಾಕಲಿಕ್ಕೆ ಬರುವುದಿಲ್ಲವೆ? ಹೊಡೆಮಂಚದ ಮೇಲೆ ಕುಳಿತು, ತಮಾಷೆ ನೋಡಲಿಕ್ಕೆ ಅದೇನು ದಶಾವತಾರದ ಆಟವೇ? (ಮರಮ. ೧೮೯).

[ಹೊಡೆ$_3$ (< ಪೊಡೆ$_3$) + ಮಂಚ]

ಹೊಡೆಮಗುಚು 'ಪೊಡೆಮಗುಚು' ನೋ.

ಹೊಡೆಮಗ್ಗು (ಕ್ರಿ). ಹೊಟ್ಟೆಕೆಳಗಾಗುವಂತೆ ಬೀಳು; ಬೋರಲು ಬೀಳು: ತೊಡೆಗಿಕ್ಕಿ ಬಿಲ್ಲಳನೇಱಿಸಿ ಹೆದೆಯ ಚೇಪೊಡೆಯಲ್ಲೆ ಮಿಗವಿಂಡು ಬೆದಱಿ ಹೊಡೆಮಗ್ಗಿದೊಡಲನಡ್ಡೈಸಿ ಕೂರ್ಗಣಿಯಿಂದೆ ಕೆಡೆಯೆಂದು ಬೀಳಲಿಕ್ಕಿದರು (ಮೋಹತ. ೧೯-೨೨); ಒಡಮುರಿದೊಳವೊಕ್ಕು ಬಿಜುಗಾಳಿ ಬೀಸಲು ಮೃಡನಾಸ್ಥಾನದಿಂ ಸುರರು ಹೊಡೆಮಗ್ಗಿದರು ಗದ್ದುಗೆಯಿಂದೆ (ಮೋಹತ. ೩೬ ೫೮).

[ಹೊಡೆ$_3$ (< ಪೊಡೆ$_3$) + ಮಗ್ಗು$_1$ (< ಮಱ್ಗು$_1$)]

ಹೊಡೆಮರಳ್ 'ಪೊಡೆಮರಳ್' ನೋ.

ಹೊಡೆಮರಳು 'ಪೊಡೆಮರಳ್' ನೋ.

ಹೊಡೆಮುರಿ (ಕ್ರಿ). (ತೆನೆಯಂತೆ) ಹೊರಹೊಮ್ಮು; ಕಾಣಿಸಿಕೊಳ್ಳು: ಗಳಬಳಿಪ ಗದ್ದದಂ ದಳವರಿವ ಮೋಹಲತೆ ತುಳುಕಿ ತುಂತುರುಗೆದರ್ವ ಘರ್ಮಂ ಮಾನವಾ ಕಳೆಯೇಱುತಿಹ ಕರಣವಿಳಿವಶ್ರುಜಳದ ಝರಿ ಸುಳಿದಿರುಗಿ ಹೊಡೆಮುರಿವ ಪುಳಕಂ (ಕೈಕವ. ೧-೫-೪). [ಹೊಡೆ$_3$ (< ಪೊಡೆ$_3$) + ಮುರಿ$_1$]

ಹೊಡೆಯಕ್ಕಿದುಯ್ಯಲು (ನಾ). ಪೂರ್ಣವಾಗಿ ಬಲಿಯದ (ಅಕ್ಕಿ) ಕಾಳಿನ ತಿರುಳಿನಿಂದ ಮಾಡುವ ಒಂದು ಬಗೆಯ ಭಕ್ಷ್ಯ,— ಪಾಯಸ: ಮಿಕ್ಕ ಹೆಮ್ಮರವಾಲುವಂ ಹೊಡೆಯ [ಪಾಠಾಂ. ಯಿ]ಕ್ಕಿದುಯ್ಯಲುವಾಯ್ದೆಯದ ಬಿದಿರಕ್ಕಿಯೋಗರವೊಲಿಬಡುಡುವಿನ ತುಪ್ಪವುಂಟಲ್ಲಿ (ಬಸಪು. ೧೮-೧೭).

[ಹೊಡೆ$_3$ (< ಪೊಡೆ$_3$) + ಅಕ್ಕಿ$_1$ + ತುಯ್ಯಲು (< ತುಯ್ಯಲ್)]

ಹೊಡೆಯಿಸು 'ಪೊಡೆಯಿಸು' ನೋ.

ಹೊಡೆಯುರ್ಚು (ಕ್ರಿ). ತೆನೆಯು ಕಾಣಿಸಿಕೊಳ್ಳು; ತೆನೆ ಹೊರಡು: ಮೊದಲು ಬಿತ್ತಿದ ಬೆಳೆಯು ಹೊಡೆಯುರ್ಚದನಿತಕೊಣಗಲ್ಕರುಗಿ ದಂಪತಿಗಳಾ ಶರಣೆಯನು ಕೇಳ್ವರದರ ಕಾರಣವಾವುದೆಂದು (ಮಲ್ಲಚ. ೧೨-೧೨). [ಹೊಡೆ$_3$ (< ಪೊಡೆ$_3$) + ಉರ್ಚು]

ಹೊಡೆವಡು 'ಪೊಡೆವಡು$_2$' ನೋ.

ಹೊಡೆವಲೆ (ನಾ). ಒಂದು ಬಗೆಯ ಬಲೆ: ಕಣ್ಣವಲೆ ಹೊಡವಲೆ ಹೊಸೆದ ಹಾಲ್ಗಣ್ಣವಲೆ ತಳ್ಳುವಲೆ . . . ಪೇರ್ವಲೆಯ ಪೊಱೆಗಳು ವಿಂಧ್ಯಕನ ಕೂಡೆ (ಸಾಳ್ವಧಾ. ೫-೧೮). [ಹೊಡೆ$_1$ (< ಪೊಡೆ$_1$) + ಬಲೆ$_1$]

ಹೊಡೆಸು 'ಪೊಡೆಯಿಸು' ನೋ.

ಹೊಡೆಸೆಂಡಾಡು 'ಪೊಡೆಸೆಂಡಾಡು' ನೋ.

ಹೊಡೆಸೆಂಡು 'ಪೊಡೆಸೆಂಡು' ನೋ.

ಹೊಡೆಹು (ನಾ). ೧. ಪೆಟ್ಟು; ಹೊಡೆತ. ೨. ವಾದ್ಯದ ಹೊಡೆತ. ೧, ೨: ಜಡತೆ ವಾರಿಯೊಳಗ್ರವೀಶನೊಳುದಿತ ರಂಭಾವನದಿ ಸಂತತ ಹೊಡೆಹು ವಾದ್ಯದ ರವದೊಳ[ಪಾಠಾಂ. ಹೊಡಗುಳಾ ವಾದ್ಯದೊಳಗ]ಲ್ಲದೆ ನಾಡೊಳೆಲ್ಲೆಂದ (ಜೀವಂಚ. ೨-೧೩). [ಹೊಡೆ$_1$ (< ಪೊಡೆ$_1$) + - ಹು$_2$ (< - ಪು$_2$)]

ಹೊಡೆಹುಲ್, ಹೊಡೆಹುಲ್ಲು (ನಾ). ೧. (ಕಾಡುನವಣೆ ಅಥವಾ ಕಾಡು ನೆಲ್ಲಿನ) ತೆನೆಯ ಹುಲ್ಲು. ೨. ಕಾಡುನವಣೆ; ಕಾಡುನೆಲ್ಲು: "ತೃಣಧಾನ್ಯಂ, ನೀವಾರಃ - ಈ ೨ ಹೊಡೆಹುಲ್" (ಹಲಾಯು. ೯೬-೪೫೦). **ಹೊಡೆಹುಲ್ಲು:** ೧. ಕಾಡಮರಂಗಳ ನೆಳಲೊಳ್ನಿಂದು ಫಲಂಗೊಳ್ಳುತುಂ ಹೊಡೆಹುಲ್ಲ ಬತ್ತಮ ನುಣುತುಂ (ಓಹಿರ. ಹ. ೨೧೦-೯); ಧರಣಿ ಬೋಯಿತಿ ಧರೆಯೊಳು ಹೊಡೆಹುಲ್ಲ ಬೀಸಿ ಪೂಡಿಸಿ ಪಡೆದಳು ತುಂಗಭದ್ರಮಧ್ಯದ ಮೊಱನಂ (ಎಕ. VII. ಹೊನ್ನಾಳಿ. ೮-೧೫; 1228); ಈತನೇ ಡೋಹಾರ ಕಕ್ಕಯ್ಯನೆಂಬಾತನೀತನೇ ಹೊಡೆಹುಲ್ಲ ಬಂಕಯ್ಯನು (ಚಿಬಪು. ೫೭-೫೭)

ಹೊಡೆಹುಲ್ಲಾಗು = (ಆಲಂ) ಚೂರುಚೂರಾಗು; ಧ್ವಂಸವಾಗು: ಲಯದಿಂದು

ಮುಂದುಗೆಟ್ಟೆಂ ಸ್ಥಿತಿಯೊಳು ಹೊಡೆಹುಲ್ಲಾದೆನುತ್ತತ್ತಿಯೊಳ್ನಿಶ್ಚಯಮಂ ಹೋಗಾಡಿ ನಾನಾ ಭವರುಜೆಯೊಳು ಬಿದ್ದೆಂ (ಶಂಕಶ. XV. ೭೮೮೯).

[ಹೊಡ್ಡೆ$_3$ (< ಪೊಡ್ಡೆ$_3$) + ಹುಲ್$_0$ (< ಪುಲ್)]

ಹೊಡೆಹುಲ್ಲು 'ಹೊಡೆಹುಲ್' ನೋ.

ಹೊಡ್ಡೆಲೆನಗೆ (ನಾ). ಒಂದು ಬಗೆಯ ಸಸ್ಯ: ಆದಿರಾಜ, ಹೊಳೆತುಂಬೆ . . . ಹೊಡ್ಡೆಲೆನಗೆ (ಮೃಡಿಗಿ. ೨೫-೧೬೬). [?]

ಹೊಣಕಿಗ (ನಾ). ಯುದ್ಧವೀರ; ಕಲಿ: ಹೊಣಕಿಗರು ರಣದವಕಿಗರು ಬಿಜುಗಣ ಸವೆಯಲೆಚ್ಚಾಡಿದರು (ಕುಮಾಭೀ. ೪-೨೦). 'ಹೊಳಕೆಗ' ಪರಾ.

[ಹೊಣಕೆ (< ಪೊಣರ್ಕೆ) + - ಇಗ]

ಹೊಣಕಿಸು (ಕ್ರಿ). ತಿನ್ನು; ಅಗಿ: ದ್ರಾಕ್ಷಿಹಣ್ಣಿನ ಗುಣವನ್ನು ತಕ್ಷಣವೇ ಬಾಯಿಗೆ ಹಾಕಿಕೊಂಡು ಹೊಣಕಿಸಿ ಹೇಳಬಹುದು, ಹಲಸಿನ ಹಣ್ಣನ್ನು ರುಚಿಯೂ ತೆಂಗಿನಕಾಯಿಯ ರುಚಿಯೂ ಸ್ವಲ್ಪಕಾಲ ವ್ಯವಧಾನದಿಂದ ಹೊರತು ಹೇಳುವುದಕ್ಕಾಗುವುದಿಲ್ಲ (ಕಾಂಪೂಚ. ೩೭). [ಹೊಣಕು (< ಪೊಳಂಕು) + - ಇಸು$_3$]

ಹೊಣಕು 'ಪೊಳಂಕು' ನೋ.

ಹೊಣಕೆ 'ಪೊಣರ್ಕೆ' ನೋ.

ಹೊಣಕೆಗಾರ, ಹೊಳಕೆಗಾಱ (ನಾ). = ಹೊಣಕಿಗ: ಹೊಣಕೆಗಾರರು ಹೆಣಗಿಯಿರಿದರು ಕಠಾರಿಯಿಂ ತಿವಿತಿವಿದು ಕಾಲ್ಬಲವನು (ತುರಂಗ. ೫೯-೧೬). **ಹೊಳಕೆಗಾಱ:** ಹೊಳಕೆಗಾಱರು ನಾವು ನಮ್ಮಗ್ಗಳಿಕೆಯನು ಸುರರೀಕ್ಷಿಸಲಿ (ತೊರರಾ. ೬-೨೩-೯).

[ಹೊಣಕೆ (< ಪೊಣರ್ಕೆ) + - ಗಾರ (< - ಕಾಱ)]

ಹೊಣಕೆಗೈ (ಕ್ರಿ).ಸಮನಾಗು; ಸಾಟಿಯಾಗು: ರಣದೊಳಾ ಗಾಂಗೇಯಗಿಮ್ಮಡಿ ಗುಣವ ತೋಱುವೆನು . . . ಮಾದ್ರರಾಜನ ಹೊಣಕೆಗೈದು ಸುಶರ್ಮ ಶಕುನಿ ಗಳಣಿಸುವಡೆ ಪಾಡಲ್ಲ ನೋಡೇಳೆಂದನಾ ದ್ರೋಣ (ಕುಮಾಗ. ೪-೩೮).

[ಹೊಣಕೆ (< ಪೊಣರ್ಕೆ) + ಗೈ (< ಕೆಯ್$_1$)]

ಹೊಣಕೆವಿಡಿ (ಕ್ರಿ). ಹಟತೊಡು; ಶಪಥ ಹಿಡಿ: ಹರಿವಿರಿಂಚಗಳಿಣಿಕೆಗಡಿಮುಡಿ ದೋಱದಾ ಮಹಿಮಾವಲಂಬಂಗೆ ಉಣಿಸುಗಳ ತಂದೊಟ್ಟಿ ಮುಟ್ಟಿಸಿ ತಣಿಸುವೆನು ನೋಡನುತ ಪುನರಪಿ ಹೊಣಕೆವಿಡಿದನು ತಾನೆ ತನ್ನಲಿ ಮತ್ತ ಬಸವಣ್ಣ (ಪ್ರಭುಲಿಂ. ೨೩-೩೬). [ಹೊಣಕೆ (< ಪೊಣರ್ಕೆ) + ಪಿಡಿ$_1$]

ಹೊಣಚು 'ಪಳಂಚು$_1$' ನೋ .

ಹೊಣತಿ (ನಾ). ಸಮವಾದುದು; ಸಾದೃಶ್ಯತೆಯನ್ನು ಹೊಂದಿರುವಂತಹುದು: ಫಣಿಯ ತರಕ್ಕುವ ಕುಕ್ಕುರದ ದರಕ್ಕೆಣಯಕ್ಕೆಂಬುದು ಸರಿಯೆಂದಂಬರು ಹೊಣತಿಗಳೆಂಬರು ಕುಟಿಲತೆಯಿಂ ಕಲುಷತೆಯಿಂ ವಿಷಮತೆಯಿಂ ಕೆಣಕಿದೊಡಲ್ಲದೊಡೇಂ ಗಳ ಪಿಡಿವುದೆ (ಕುಮುರಾ. ೧-೩೬). [P ಇದು 'ಹೊಣಕೆ' ಯೆಂಬುದರ ಅಪಲಿಪಿತ]

ಹೊಣರು 'ಪೊಣರ್$_1$' ನೋ.

ಹೊಣಿಕೆ 'ಪೊಣರ್ಕೆ' ನೋ.

ಹೊಣೆ 'ಪೊಣೆ$_2$' ನೋ.

ಹೊಣೆಕಾರ 'ಪೊಣೆಕಾಱ' ನೋ.

ಹೊಣೆಕಾಱ 'ಪೊಣೆಕಾಱ' ನೋ.

ಹೊಣೆಗಾರ 'ಪೊಣೆಕಾಱ' ನೋ.

ಹೊಣೆಗಾರಿಕೆ (ನಾ). ಜವಾಬ್ದಾರಿಯನ್ನು ವಹಿಸುವಿಕೆ; ಜವಾಬ್ದಾರನಾಗುವಿಕೆ: ನನ್ನ ದಾಂಪತ್ಯಜೀವನದ ರೂಪರೇಖೆಯನ್ನು ರೂಪಿಸಿಕೊಳ್ಳುವುದು ನನ್ನ ಸ್ವಂತ ಹೊಣೆಗಾರಿಕೆಯ ವಿಷಯವು (ಹೇಮಾಂತ. ೪೬೪); ಈ ಶಾಂತಿಪಾಠವನ್ನು ಜಗತ್ತಿಗೆ ಬೋಧಿಸುವ ಗುರುತರ ಹೊಣೆಗಾರಿಕೆ ಪ್ರತಿಯೊಬ್ಬ ಭಾರತೀಯನ ಮೇಲೂ ಇದೆ (ಭಾರದ.೫೮೧). [ಹೊಣೆಗಾರ (< ಪೊಣೆಕಾಱ) + - ಇಕೆ]

ಹೊಣೆಗಾಱ 'ಪೊಣೆಕಾಱ' ನೋ.

ಹೊಣೆಗುಂಡು 'ಪೊಣೆಗುಂಡು' ನೋ.

ಹೊಣೆಗೆಡು (ಕ್ರಿ). ಜವಾಬ್ದಾರಿಯನ್ನು ಹೊರದಿರು, –ಪೂರೈಸದಿರು: ಹೊಣೆಗೆಟ್ಟ ಸಮಾಜದ ಮಕ್ಕಳು ಹೊಣೆಗೇಡಿಗಳಾಗಲು ಈ ಹಬ್ಬ ಒಂದು ಅನುಕೂಲವೇ ಅಲ್ಲವೇ (ರಂಗರೂ. ೪೫). [ಹೊಣೆ (< ಪೊಣೆ$_2$) + ಕೆಡು$_1$]

ಹೊಣೆಗೇಡಿ (ನಾ). ೧. ಬೇಜವಾಬ್ದಾರಿ ಮನುಷ್ಯ; ಜವಾಬ್ದಾರಿಯನ್ನು ಪೂರೈಸದೆ ಇರುವವನು: ಹೊಣೆಗೆಟ್ಟ ಸಮಾಜದ ಮಕ್ಕಳು ಹೊಣೆಗೇಡಿಗಳಾಗಲು ಈ ಹಬ್ಬ ಒಂದು ಅನುಕೂಲವೇ ಅಲ್ಲವೇ (ರಂಗರೂ. ೪೫). ೨. ಬೇಜವಾಬ್ದಾರಿ ಯಾದುದು; ಜವಾಬ್ದಾರಿಯನ್ನು ಪೂರೈಸದೆ ಇರುವಂತಹುದು: ತನಗ ಅಧಿಕಾರ ಸಿಗಲಾರದೆಂದು ನಿಶ್ಚಿತವಾದ ಪಕ್ಷವು ಹೊಣೆಗೇಡಿಯಾಗಿ ವರ್ತಿಸ ತೊಡಗಿರುತ್ತದೆ (ಅಮಗಾಂ.೬೩). [ಹೊಣೆ(< ಪೊಣೆ$_2$) + ಕೆ$_1$]

ಹೊಣೆಗೊಡು (ಕ್ರಿ). ಹೊಣೆಗಾರನನ್ನಾಗಿ ಮಾಡು; ಹೊಣೆ ನಿಲ್ಲುವಂತೆ ಮಾಡು: ನಿಮ್ಮ ನಂಬುವರಮ್ಮೆಯೆಂದರೆ ಮುನ್ನ ನೊಂದವರಳುಕುವರು ದಿಟ ಎನ್ನ ಪತಿ ತರಣಿಜನ ನುಡಿಸುವೆ ಹರನ ಹೊಣೆಗೊಡುವೆ (ಶಾಶಿರಾ. ೭-೬).

[ಹೊಣೆ (< ಪೊಣೆ$_2$) + ಕೊಡು$_1$]

ಹೊಣೆಗೊಳ್ (ಕ್ರಿ). ಜವಾಬ್ದಾರಿಯನ್ನು ಹೊರು; ಹೊಣೆಯಾಗು: ಕೊಂದೆ ನಾನೆನಗಾಯ್ತು ಪಾತಕವೆಂದು ಮನದಲಿ ಮಱುಗುವಾತನ ಬಂದಿಯಲಿ ಹೊಣೆಗೊಂಬ ವಾಹಂಕಾರ ಮಮಕಾರ (ಕುಮಾಭೀ. ೩-೪೯). [ಹೊಣೆ (<ಪೊಣೆ$_2$) + ಕೊಳ್$_1$]

ಹೊಣೆಹೊರು (ಕ್ರಿ). ಜವಾಬ್ದಾರಿಯನ್ನು ವಹಿಸು: ಮುಂದಿನ ಶಿಕ್ಷಣಸಂಸ್ಥೆಗಳಲ್ಲಿ ತೋರಬಹುದಾದ ಅಶಿಸ್ತಿಗೆ ಪ್ರಾಥಮಿಕಶಾಲೆ ಸ್ವಲ್ಪಮಟ್ಟಿಗಾದರೂ ಹೊಣೆಹೊರ ಬೇಕಾಗುತ್ತದೆ (ಶಕ್ತಿದ. ೩೧೦). [ಹೊಣೆ (< ಪೊಣೆ$_2$) + ಹೊರು (< ಪೊಱು)]

ಹೊಣ್ಮು 'ಪೊಣ್ಮು' ನೋ.

ಹೊತ್ತ 'ಪೊಱು' ಪರಾ.

ಹೊತ್ತಗೆ 'ಪೊಸ್ತಕ' ನೋ.

ಹೊತ್ತರು 'ಪೊಟ್ಟಱು' ನೋ.

ಹೊತ್ತಲು, ಹೊತ್ತಲೆ, ಹೊತ್ತಳ (ನಾ). ೧. (ವೀಳ್ಯದ) ಎಲೆಯ ಕಟ್ಟು,–ಪಿಂಡಿ: ಚಿಕ್ಕರಸನ ಎಲೆಯ ಸುಂಕ ಹೇಱೊಂಗೆ xxx ಹೊಱೆಗೆ ನೂಱು ಹೊತ್ತಲಿಂಗೆ ಅಯವತ್ತು ಮಾನಕ್ಕೆ ಗದ್ಯಾಣಂ ನಾಲ್ವತ್ತಯಿದು ಹೊನ್ನಂ ಕೊ xxx (ಎಇ.XVIII, ೧೮೬-೫೫; 1097); ಎಲೆಯ ಹೇಱೊಂಗೆ ನೂಱೆಲೆಯ ಕೊಟ್ಟರು [ಹೊ]ತ್ತಲಿಂಗಯ್ಯತ್ತಲೆಯ ಕೊಟ್ಟರು (ಸೌಇಇ. XX.೨೪೮-೭೨; 1228). **ಹೊತ್ತಲೆ:** ೧. 'ಹೊತ್ತಲೆವರಾಡ' ಪರಾ. **ಹೊತ್ತಳ:** ೧. ಕಲ್ಲಿದೇವಸ್ವಾಮಿಗಂ ಮಾದೇಸ್ವರದೇವರ್ಗ್ಗಂ ಕಾಮೇಸ್ವರ ದೇ[ವ]ರ್ಗ್ಗಂ ಅ(ಂ)ನ್ತು ಮೂಱುಸ್ಥಾನಕಂ ಸಾಸಿರ್ವ್ವರುಂ ಬಿಟ್ಟ ಧರ್ಮ ಎಲೆಯ ಹೇಱೊಂಗೆ ಬೇಳೆ ಹೊಱೆಗೆ ಬೇಳೆ ಹೊತ್ತಳಕ್ಕೆ ವೀಸಂ ಕಾಣಿ ಸೊಪ್ಪಿಂಗೆ ಆರವೀಸ (ಸೌಇಇ. XI-ii. ೧೨೨-೧೨; 1072); ಹೇಱೊಂಗೆ ೧೦೦ ಎಲೆಹೊತ್ತಳಕ್ಕೆ ೫೦ ಮಂ ಬಿಟ್ಟರು (ಕಾ.ಇ. ೪೬-೫; 1288); ಬಿಳಿಯೆಲೆಯ ಹೇಱುಗಳ ಬಲು ಹೊತ್ತಳವನಾ ರಜನೀಚರನ ಬಾಯೊಳಗೆ ಸುರಿದರು ಲಕ್ಕಲಿಕ್ಕದಲಱೆದ ಸುಣ್ಣಗಳ ಹಲವು ಮುದ್ದೆಯ ಹಾಯ್ಕಿದರು (ತೊರರಾ. ೬-೨೬ ೬೧). ೨. ಮೊತ್ತ; ರಾಶಿ: ಪ್ರಳಯಾಗ್ನಿ ನರರೂಪ ತಾಳ್ದುದೊ ಸಿಡಿಲ ಹೊತ್ತಳಮೆ ಮಾನವನಾಗಿ ಬಂದುದೋ (ನಸಮೋ. ೧೯-೩೭). [?]

ಹೊತ್ತಲೆ 'ಹೊತ್ತಲು' ನೋ.

ಹೊತ್ತಲೆವರಾಡ (ನಾ). (ವೀಳ್ಯದ) ಎಲೆಗಳ ಕಟ್ಟು ಅಥವಾ ಪಿಂಡಿಯ ಮೇಲೆ ಹಾಕುವ ತೆರಿಗೆ,–ಸುಂಕ: ನಷ್ಟವರಾಡದಿಂದಲ್ಲೂ ಗ ೭ ॥೦ ಹೊತ್ತಲೆ ವರಾಡದಿಂದ ಗ ೪ ॥೦ ॥೦ . . . ಗೋಪಾಲಕ್ರುಷ್ಣದೇವರಿಗೆ ಯೀ ಅಕಲಾಪುರದ ಗ್ರಾಮದಿಂದ ಪ್ರಾಕಾರಭ್ಯ ನಡದು ಬಾಹ ಉತ್ತಾರ ಭತ್ತ ೩ ೩೬ ನೂ (ಎಇ.VIII, ತೀರ್ಥಹ. ೧೧೭-೨೬; 1702). [ಹೊತ್ತಲೆ (< ಹೊತ್ತಲು) + ವರಾಡ]

ಹೊತ್ತಳ 'ಹೊತ್ತಲು' ನೋ.

ಹೊತ್ತಱು 'ಪೊಟ್ಟಱು' ನೋ.

ಹೊತ್ತಱ 'ಪೊಟ್ಟಱು' ನೋ.

ಹೊತ್ತಾರೆ 'ಪೊಟ್ಟಱು' ನೋ.

ಹೊತ್ತಾಜೆ 'ಪೊಟ್ಟಜು' ನೋ.

ಹೊತ್ತಿಕ್ಕು (ಕ್ರಿ). (ಬಂಕಿ ಮೊದಲಾದುವನ್ನು) ಹತ್ತಿಸಿ ಇಡು; ಪುಟಗೊಳಿಸು; ಉರಿಸು: ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು ಅಟ್ಟುಣ್ಣಲಿಲ್ಲ (ಅವಚಂ. ೧೧-೪೪); ನಂದಬಾರದ ಹೋಮದಗ್ನಿಯ ನಂದಲೀಯದೆ ಶುಷ್ಕ ಸಮಿಧೆಯ ತಂದು ನೆಱೆ ಹೊತ್ತಿಕ್ಕಿ ಹೊಗೆಸುವ ವೃದ್ಧ ಕಸಿಗಳಲಿ ಬಂದು ಪಕ್ಕವ ಬೀಸಿ ಮಾರುತನಿಂದಲಗ್ನಿಯ ಪಟುವ ಮಾಡುತ ನಿಂದು ನರ್ತಿಸಿ ನಲಿವ ನವಿಲಿನಲೊಪ್ಪಿತಾ ವನವು (ಪ್ರಭುಲಿಂ. ೨೦-೨೫).

[ಹೊತ್ತು$_1$ (< ಪೊತ್ತು$_1$) + ಇಕ್ಕು]

ಹೊತ್ತಿಗೆ 'ಪೊತ್ತಿಗೆ' ನೋ.

ಹೊತ್ತಿಡು (ಕ್ರಿ). = ಹೊತ್ತಿಕ್ಕು : ನೋಡ ಬನ್ನಿರೊ ಜನರು . . . ಹೊತ್ತಿಟ್ಟ ಆರತಿ ಶ್ರೇಷ್ಠರತ್ತುವುದನ್ನು (ಪುರಂದ. ೨-೪೨-೪). [ಹೊತ್ತು$_1$ (< ಪೊತ್ತು$_1$) + ಇಡು$_1$]

ಹೊತ್ತಿರುಗ, ಹೊತ್ತುತಿರುಗ (ನಾ). ಸೂರ್ಯನಿರುವ ಕಡೆಗೆ ಅರಳುವ ಹೂವು; ಸೂರ್ಯಕಾಂತಿ; ಸೂರ್ಯಪಾನ: ಸೂರ್ಯನಿದ್ದ ಕಡೆಗೆ ತಿರುಗಿ ನಿಲ್ಲುವ ಹೊತ್ತಿರುಗನ ಗಿಡದಂತೆ ಮನ ಮೈ ಕಣ್ಣುಗಳು ಆಕೆಯ ಕಡೆಗೆ ತಿರುಗಿದುವು (ಚಳುಮ. ೧೭೫).

ಹೊತ್ತುತಿರುಗ: ಸೂರ್ಯಕಾಂತಿ, ಹೊತ್ತುತಿರುಗಹೂ, ಅರ್ಕಪುಷ್ಪ (ಮೃಷಿಗಿ. ೪೨-೮೨೯).

[ಹೊತ್ತು (< ಪೊಟ್ಟು) + ತಿರುಗು$_1$ + - ಅ$_7$]

ಹೊತ್ತಿಸು 'ಪೊತ್ತಿಸು' ನೋ.

ಹೊತ್ತು$_1$ 'ಪೊತ್ತು$_1$' ನೋ.

ಹೊತ್ತು$_2$ (ಕ್ರಿ). ಏರಿ ನಿಲ್ಲು; ಹೊರೆಯಾಗು: ನಿಂದೆಯು ವಧೂವರರ ತಲೆಯ ಮೇಲೆ ಹೊತ್ತಿತು (ದೇವಿಚಾ ೧೭೭). 'ಹೊತ್ತುಗಲ್ಲು' ಪರಾ. [< ಪೊಱು]

ಹೊತ್ತು$_3$ 'ಪೊಱು' ಪರಾ.

ಹೊತ್ತು$_4$ 'ಪೊತ್ತು$_3$' ನೋ.

ಹೊತ್ತು$_5$ 'ಪೊಟ್ಟು' ನೋ.

ಹೊತ್ತುಕಳೆ 'ಪೊಟ್ಟುಗಳೆ' ನೋ.

ಹೊತ್ತುಗಲ್ಲು (ನಾ). ೧. ಭಾರವಾದ ಕಲ್ಲು. ೨. (ಆಲಂ) ಅತಿಶಯವಾಗಿ ಹೊರಿಸುವ ನಿಂದ,—ದೂರು: ನೀನೊಲಿದಡೆ ಜಗವೆಲ್ಲ ಕೊಂಡಾಡುತಿರ್ಪುದು ನೋಡಾ ನೀನೊಲಿಯದಿರ್ದಡೆ ಜಗವೆಲ್ಲ ಹೊತ್ತುಗಲ್ಲ ಹೊತ್ತಿರ್ಪುದು ನೋಡಾ (ಅಖಂಡೇ. ೭೮-೫೯). 'ಎತ್ತುಗಲ್ಲು' ಹೋ.

ಹೊತ್ತುಗಲ್ಲು ಹಾಕು = (ಆಲಂ) ಅಡ್ಡಿಯನ್ನುಂಟು ಮಾಡು: ನಮ್ಮ ತರಲ ಅವಳನ್ನು ಮದುವೆಯಾಗುತ್ತೇನಂದರೆ ಸಿಟ್ಟಿಗದ್ದು ಹಾಗೇಕೆ ಎತ್ತುಗಲ್ಲು ಹೊತ್ತುಗಲ್ಲು ಹಾಕಿದಿರಿ? (ಎರಸ. ೭೪.). [ಹೊತ್ತು$_2$ + ಕಲ್ಲು (< ಕಲ್$_3$)]

ಹೊತ್ತುಗಳೆ 'ಪೊಟ್ಟುಗಳೆ' ನೋ.

ಹೊತ್ತುಗಳ್ಳ (ನಾ). ಸಮಯವನ್ನು ವ್ಯರ್ಥವಾಗಿ ಕಳೆಯುವವನು; ಕಾಲಹರಣ ಮಾಡುವವನು: ಕಲವರು ಹೊತ್ತುಗಳ್ಳರು ಜಗಲಿಯ ಹಾಸುಹಲಗೆಗಳ ಮೇಲೆ ರಪರಪನೆ ಶಬ್ದಮಾಡುತ್ತ ಗಡಿಬಿಡಿಯಿಂದ ಭೋಗಿಗಳೊಳಗೆ ನುಗ್ಗುತ್ತಿದ್ದರು (ಪುನರು. ೪೭೩). [ಹೊತ್ತು$_5$ (< ಪೊಟ್ಟು) + ಕಳ್ಳ$_1$]

ಹೊತ್ತುತಿರುಗ 'ಹೊತ್ತಿರುಗ' ನೋ.

ಹೊತ್ತುಹೋಕ 'ಪೊತ್ತುಪೋಕ' ನೋ.

ಹೊತ್ತುಹೋಕು (ನಾ). (ವ್ಯರ್ಥವಾಗಿ) ಸಮಯವನ್ನು ಕಳೆಯುವಿಕೆ; (ವೃಥಾ) ಕಾಲಹರಣ ಮಾಡುವಿಕೆ: ಸತ್ತಮರಾಂಗನೆಯರ ಕೂಡುವೆನೆಂಬ ಹೊತ್ತು ಹೋಕಿನ ಮಾತು ಬೇಡ (ಕುರಾಸಾಂ. ೪೩-೪೯).

[ಹೊತ್ತುಹೋಕ (< ಪೊತ್ತುಪೋಕ) + - ಉ$_4$]

ಹೊತ್ತುಹೋಗು (ಕ್ರಿ). ೧. ಸಮಯ ಕಳೆ,— ತೀರು: "ನಂಗೇನು ಕೆಲಸ, ಹೊತ್ತು ಹೋಗ ಬೇಕೋ ಇಲ್ಲವೋ?" ಎನ್ನುತ್ತಿದ್ದಳು (ರಂಗನಾ. ೭೭)..೨. (ಆಯುಷ್ಯದ) ಸಮಯವು ತೀರು,— ಮುಗಿ: ಹೊತ್ತುಹೋಗದ ಮುನ್ನ ಮೃತ್ಯುವೊಯ್ಯದ ಮುನ್ನ ತೊತ್ತುಗೆಲಸವ ಮಾಡು ಕೂಡಲಸಂಗಮದೇವನ (ಬಸವ. ೧೭೨).

[ಹೊತ್ತು (< ಪೊಟ್ಟು) + ಪೋಗು$_1$ (< ಪೋ$_1$)]

ಹೊತ್ತೇರು 'ಹೊತ್ತೇಱು' ನೋ.

ಹೊತ್ತೇಱು, ಹೊತ್ತೇರು (ಕ್ರಿ). (ಆಕಾಶದಲ್ಲಿ) ಸೂರ್ಯನು ನಟ್ಟ ನಡುವಿಗೆ ಏರು; ಮಧ್ಯಾಹ್ನವಾಗು: ನಟ್ಟದಂತರಿಸಿನ ಇಚ್ಛೆಯಂತಿರುವುದು ಒಚ್ಚೊತ್ತಿ ತಪ್ಪಿ ನಡೆದಿಹರೆ ಹೊತ್ತೇಱೆ [ಪಾಠಾಂ. ಹೊತ್ತಾಜೆ] ಕಿಚ್ಚು ಕಾದಂತೆ (ಸರ್ವಜ್ಞ. ೭೩೦). **ಹೊತ್ತೇರು:** ರಾತ್ರಿ ಮಲಗುವುದು ತೀರಾ ತಡವಾಗಿ. ಬೆಳಗ್ಗೆ ಎಚ್ಚರವಾದಾಗ ಹೊತ್ತೇರಿಬಿಟ್ಟಿತು (ರೂಢಿ). [ಹೊತ್ತು (< ಪೊಟ್ಟು) + ಏಱು$_1$ (< ಏಱ್$_1$)]

ಹೊದಕ (ನಾ). (?): ಗರಗರನಾದುದು ಕೂಱ್ ನೆಯ್ ಸುರಯಿಯ ಕಂಪಾಯ್ತು ಸಟ್ಟುಗಕ್ಕಂ ಮೊಸರ್ಗಂ ಪಿರಿದು ಪೋರ್ಕುಳಿಯಾದುದು ಕರಮಿನಿದಾಯ್ತಱಕೆ ಹೊದಕ ನಲ್ಲದ ಹೊರಕಂ (ಸೂಕ್ತಿಸು. ೧೧-೯೦). [?]

ಹೊದಕುಳ 'ಪೊದಕುಳಿ' ನೋ.

ಹೊದಕುಳಿ 'ಪೊದಕುಳಿ' ನೋ.

ಹೊದಕುಳಿಗುಟ್ಟು (ಕ್ರಿ). ಸಂಕಟಪಡು; ತಾಪವನ್ನು ಹೊಂದು: ಕೊಟ್ಟ ವರವೆರಡುಂಟು ಬೇಡಲು ಕೊಟ್ಟರವರಿಂದೀಗ ಹೊದಕುಳಿಗುಟ್ಟುತಿಹರಿದನಱಿಯೆ ನೀ ಕೇಳೆಂದಳಾ ಕೈಕೆ (ತೊರರಾ. ೨-೨-೩೯). [ಹೊದಕುಳಿ (< ಪೊದಕುಳಿ) + ಕುಟ್ಟು$_1$]

ಹೊದಕುಳಿಗೊಳ್ 'ಪೊದಕುಳಿಗೊಳ್' ನೋ.

ಹೊದಕುಳಿಗೊಳಿಸು (ಕ್ರಿ). ದುಃಖಪಡಿಸು; ಸಂತಾಪಗೊಳಿಸು : ತೂರಲಿರಿವುದನಂತ ಕಾಲವು ಹೋರಿ ಹೊದಕುಳಿಗೊಳಿಸುತಿದೆ ತಾನಾರೆ ಧರ್ಮವ ತಿಳಿದು ಸ್ವಸ್ಥವ ಮಾಡು (ಉತ್ತಕ. ೪೮-೧೭). [ಹೊದಕುಳಿ (< ಪೊದಕುಳಿ)+ ಕೊಳ್$_1$ + - ಇಸು$_3$]

ಹೊದಕುಳಿಗೊಳು 'ಪೊದಕುಳಿಗೊಳ್' ನೋ.

ಹೊದಕುಳಿಸು (ಕ್ರಿ). ದುಃಖಕ್ಕೀಡಾಗು; ಸಂತಾಪಪಡು: ಮರಣವಿಧಿಕೃತ ಜನನವಿದನಾದರಿಸಲಱಿಯದೆ ಬಯಲ ಹಮ್ಮಿನ ಹರುಹಿನಲಿ ಹೊದಕುಳಿಸುವುದು ಜನವೆಂದನಾ ರಾಮ (ತೊರರಾ. ೪-೫-೨೪). [ಹೊದಕುಳಿ (< ಪೊದಕುಳಿ)+ - ಇಸು$_3$]

ಹೊದಕುಳು (ಕ್ರಿ). ಸಂಕಟಪಡು: ಅಱಿದು ಮಱೆದೊಮ್ಮೊಮ್ಮೆ ಘಾಸಿಯಲುರಿದು ಬೇವುತ ಹೊದಕುಳುತ್ತಱೆ ಮಱುಗಿ ಮನದಲಿ ಹೊರಳಿ ಕೆಡವುತಲಿ . . . ಬಱಸಿಡಿಲ ಮಾಯಾಂಗನೆಯ ಮೈಗೊಱಗುವನು ಬಲೆಯಲ್ಲಿ ಕಂಟಕಪ್ರಾಣಗತನಾಗಿ (ನಿಘಾಗ. ೫-೮-೧೮). [< ಹೊದಕುಳಿ ?/ ಈ ಕವಿಯು ಈ ಪ್ರಯೋಗದಲ್ಲಿ 'ಹೊದಕುಳಿಗೊಳ್' ಎಂಬುದನ್ನು ಹ್ರಸ್ವಗೊಳಿಸಿ 'ಹೊದಕುಳ' ಎಂದು ಮಾಡಿಕೊಂಡಂತೆ ತೋರುತ್ತದೆ]

ಹೊದಕೆ$_1$ 'ಪೊದಕೆ$_1$' ನೋ.

ಹೊದಕೆ$_2$ 'ಹೊದ್ದಿಕೆ' ನೋ.

ಹೊದಕೆ$_3$ 'ಪೊದಕೆ$_2$' ನೋ.

ಹೊದಕೆ$_4$ (ನಾ). ವಿಜ್ಞಾಪನೆ (?): ಶ್ರೀಮನುಮಹಾಪ್ರಧಾನಂ ಅದ್ದುರೆಯ ಅಲ್ಲಪ್ಪ ದಂಣ್ಣಾಯಕರು ಶ್ರೀವೀರಬಲ್ಲಾಳದೇವರಿಗೆ ಹೊದಕೆಯನು ಮಾಡಿ ಶ್ರೀವೀರಬಲ್ಲಾಳ ದೇವರು ಹುಳಿಯಱ ನಾಡೊಳಗಣ ಚಳ್ಳಕೆಱೆಯನು ಕಲ್ಲಗೌಡಂಗೆ ಕೊಡಗಿಯಾಗಿ ಕೊಟ್ಟು (ಎಕ.XI ಹಿರಿಯೂ. ೮೭-೧೧; 1313); ಶ್ರೀಮನುಮಹಾಮಂಡಳೇಶ್ವರಂ . . . ವೀರಬಲ್ಲಾಳದೇವರಿಗೆ ಹೊದಕೆಯ ಮಾಡ್ಸಿದಲ್ಲಿ ಶ್ರೀಬೀರಬಲ್ಲಾಳದೇವರು ಹುಳಿಯಱನಾಡೊಳಗಣ ಬರಿಗೆಯ ಹಳ್ಳಿಯನು ಕಲ್ಲಗೌಡಂಗೆ ಕೊಡಗಿಯಾಗಿ ಕೊಟ್ಟು (ಎಕ.XVI. ಚಿಕ್ಕನಾ. ೬೮-೧೨; 1318). [?]

ಹೊದಟು, ಹೊದಡು (ಕ್ರಿ). (ತರಕಾರಿಪದಾರ್ಥಗಳನ್ನು, ಮಸಾಲೆಪದಾರ್ಥ ಗಳಲ್ಲಿ) ಹೊರಳಿಸಿ ಬೇಯಿಸು — ತಾಳಿಸು: ಮೊದಲು ತುಪ್ಪದೊಳು[ವು]ಕ್ಕರಿಸಿ ಹದನಾದ ಬದನೆಯ ಕಾಯ ಹೊದಟಿಯಗ್ಗರಣೆಯಂ ಮಾಡಿ ಪರಿಮಳವಿಕ್ಕಲದು ತುಳುವ ಬದನೆಕಾಯ್ಯೆಸರಾದುದು (ಸೂಪಶಾ. ೪-೭); ಕೆಲ ಹೋಳುಗಳ ಚಂದಗೆಡಿಸದೆ ಶುಂಠಿಯುಳ್ಳಿಗಳನಿಕ್ಕಿ ಯೇಲಕ್ಕಿಯಂ ತಳಿದುಕೊಂಡು ಮಂದನಪ್ಪಂತಕ್ಕಿಯರೆದು ಕಾಯಂ ಹೊದಟಿಯೊಂದಿನಿಸು ಕೆಂಪಾಗುವಂತಟ್ಟು (ಸೂಪಶಾ. ೪-೭೯). **ಹೊದಡು:** ಉಂಡೆಹಲಸಿನ ಕಾಯ ಮೇಲಣಕೋಟೆಯ ಕೆತ್ತಿ . . . ಹಸನಾಗಿ ಮುಳ್ಳಿಱಿದುಕೊಂಡದಕೆ ಮೊಸರ ಸಂಭಾರಮಂ ತುಂಬಿ ಮತ್ತದಟೊಳಗೆ ಹೊದಡಿಕೊಂಡು (ಸೂಪಶಾ. ೫-೪೩).

[< ಪೊದಟು?]

ಹೊದಡು 'ಹೂದಟು' ನೋ.

ಹೊದನಾಡು 'ಪೂದಲ್ನಾಡು' ನೋ.

ಹೊದಪು 'ಪೂದಪು' ನೋ.

ಹೊದರ್ 'ಪೊದಱ್' ನೋ.

ಹೊದರು$_1$ 'ಪೊದಱ್' ನೋ.

ಹೊದರು$_2$ 'ಪೂದರು$_2$' ನೋ.

ಹೊದಸು 'ಪೊದೆಯಿಸು' ನೋ.

ಹೊದಳು$_1$ 'ಪೊದಟು' ನೋ.

ಹೊದಳು$_2$ (ನಾ). ಹುರಿದು ಅರಳಿಸಿದ ಕಾಳು; ಅರಳು: ಬತ್ತ ಜೋಳ ಮುಂತಾದವನ್ನು ಹುರಿದಾಗ, ಅದು ವಿಸ್ತೃತವಾಗಿ "ಹೊದಳು" ಆಗುತ್ತದೆ (ಸಂಶೋಧ. ೧೮೧). [< ಪೊದಟು]

ಹೊದಱ್ 'ಪೊದಱ್' ನೋ.

ಹೊದಱಿಡಸು (ಕ್ರಿ). ರಾಶಿಯಾಗು; ಗುಂಪಾಗು: ಹೊದಱಿಡಸಿ ಕಿಡಿಯೆದ್ದು ದೆಸೆಗಳ ಹೊದಿಸಿದವು ಹೊಳೆದರ್ಜುನನ ಮುತ್ತಿದವು ಕೆತ್ತಿದವರಿಯ ಸೀಸಕ ಜೋಡು ಮೊಚ್ಚಿಯವ (ಕುವ್ಯಾಭೀ. ೯-೩೭). [ಹೊದಱು (< ಪೊದಱ್) + ಅಡಸು]

ಹೊದಱೂನ್ (ಕ್ರಿ). ದಟ್ಟವಾಗು; ಒತ್ತಾಗು: ಹೊದಱೂಂತ ಕೊನೆಮಾಸೆಯಲ್ಲಿ ಪವಳವ ಪೋಲ್ಕಧರವದೆಲ್ಲಿ (ಮೋಪತ. ೮-೧೧).

[ಪೊದಱು$_2$ (< ಪೊದಱ್)+ ಅನ್$_1$]

ಹೊದಱಿಕ್ಕು (ಕ್ರಿ). ಗುಂಪಾಗು; ಗುಂಪುಗೂಡು: ಏಳಿ ಲೂಲಾಯ ಸಾರಂಗ ಮದದ ರಹಿಯಲಿ ಮಾನಿಸರು ಸೋಂಕಿದೊಡೆ ಸಡೆಯವು ಹೊಲಸ ಹೊದಱಿಕ್ಕಿದವು ದೀಹದ ಹಿಂಡಿನಂತಿರೆ (ಕುವ್ಯಾಅ. ೧೩-೧೬).

[ಹೊದಱು (< ಪೊದಱ್)+ ಇಕ್ಕು]

ಹೊದಱು 'ಪೊದಱ್' ನೋ.

ಹೊದಱುಗಂಕಣ (ನಾ). ಹಲವು ಬಳೆಗಳನ್ನು ಒತ್ತಾಗಿ ಸೇರಿಸಿದ ಬಳೆ: ಹೊದಱು [ಪಾಠಾಂ.ಹದರು] ಗಂಕಣ ಖಡೆಯ ಪಂಡೆಯದೂದವಿನಿಂ ನಿಗ್ಗವದ ಬಡಿಕೋಲ್ಕಡೆದ ಬಲ್ಲಂಬು ಬಲೆವಿಡಿದಿಹರು ಬಯದರು (ಪಾಳ್ಕಭಾ.೫-೭).

[ಹೊದಱು (< ಪೊದಱ್) + ಕಂಕಣ]

ಹೊದಱುಗಟ್ಟು 'ಪೊದಱುಗಟ್ಟು' ನೋ.

ಹೊದಱುಗಣ್, ಹೊದಱುಗಣ್ಣು (ನಾ). (ಪೊದೆಯಂತಿರುವ) ಹುಬ್ಬಿನಿಂದ ಆವೃತವಾದ ಕಣ್ಣು: ಮನದ ಝೂಮ್ಮಿನ ಜಡಿವ ರೋಮಾಂಚನದ ಹುದುಗುವ ಹೊದಱುಗಂಗಳ ಜಿನುಗುವಾತಿನ ಹೂತ ಹರುಷದ ಹೊಂಗಿದುತ್ಸವದ . . . ರಾಗ ರಸದುಬ್ಬಿನಲಿ ಪೊಂಪುಳಿಹೋದನಿವರನು ಕಂಡು ಪಾಂಚಾಲ (ಕುವ್ಯಾಅ. ೧೬-೬೨). **ಹೊದಱುಗಣ್ಣು**: ಹೊದಱುಗಣ್ಣಿನ ತೆಕ್ಕುಹಿಹ ಕಿಬ್ಬದಿಯ . . . ಬತ್ತಿದ ಬಸುಱ ಚಿಂತಾ ಹೃದಯ ನೋಡುತ ಮಱೆಯ ಹೊಕ್ಕನು ದೈತ್ಯದಲಪತಿಯ (ಕಾಶಿರಾ. ೬೨-೨೮).

[ಹೊದಱು (< ಪೊದಱ್) + ಕಣ್]

ಹೊದಱುಗಣ್ಣು 'ಪೊದಱುಗಣ್' ನೋ.

ಹೊದಱುಗಿಡಿ (ನಾ). ದಟ್ಟವಾಗಿ ಹೊರಸೂಸುವ ಕಿಡಿ: ಹೊದಱುಗಿಡಿಗಳ ಹೊಗೆಯ ಹೇರಾಳದಲಿ ಬಹ ದಿವ್ಯಾಯುಧಕೆ ಚಾಚಿದನು ವಕ್ಷಸ್ಥಳವನಸುರಾರಾತಿಯಡಹಾಯ್ದು (ಕುವ್ಯಾದ್ರೋ. ೩-೬೦); ಉದುರಿದವು ತಾರೆಗಳು ಕೆಂಇಕಂತಿಗಳ ಹೊದಱುಗಿಡಿಗಳ ಹೊಯ್ದನಲಿ ಕೊಇಕೂತಿಳ್ದುದಿವವೇಳಂಬುಧಿಗಳು (ನಿಭಾಗ. ೭-೮-೪).

[ಹೊದಱು (< ಪೊದಱ್)+ ಕಿಡಿ]

ಹೊದಱುಗೊಳ್ 'ಪೊದಱುಗೊಳ್' ನೋ.

ಹೊದಱುದಲೆ 'ಪೊದರ್ದಲೆ' ನೋ.

ಹೊದಱುದಿವಿ (ನಾ).(ಆಲಂ) ಭಾರಿಯಾದ ಹೊಡೆತ,- ಪೆಟ್ಟು: ಸುಯ್ದ ಹೊಗೆಗಳ ಹೊದಱುದಿವಿಗ[ಪಾಠಾಂ. ಗು]ಳ ಮಯ್ಯುಳಿಯ ಮುಱಿವುಗಳ ದೃಢ ವೇಗಾಯ್ದುರಿಕ್ಕಿದ ಗಾಯ ಗಾಯಕೆ ಮುಚ್ಚಿ ಕಿಡಿಯೇಳೆ (ಕುವ್ಯಾಅ.೭-೩೩); ಹಬ್ಬುಗಿಡಿಗಳ ಹೊದಱುದಿವಿಗಳ [ಪಾಠಾಂ. ತಿವಿಗುಳ, ತಿವಿಗುಳಿ, ದಿವಿಗುಳ, ದಿವಿಗುಳಿ] ಗುಬ್ಬರದ ಸಬುದದಲಿ ತಾಯ್‌ಮಳಲುಬ್ಬುತಿರ್ದುದು ಶರಧಿಯಲಿ (ತೊರಾ. ೪-೩-೯).

[ಹೊದಱು (< ಪೊದಱ್) + ತಿವಿ$_2$]

ಹೊದಱುದುಱುಗಲು (ನಾ). ಪೊದೆಗಳ ಗುಂಪು, – ಸಮೂಹ: ಮಳೆಯ ಮಂಟಪ ಹೊದಱುದುಱುಗಲು ನಳಲ ಚೌಕಿಗೆ ವಿಪುಳ ವಟಸಂಕುಲದೊಳೋಲಗಶಾಲೆ ಮೆಱೆದುದು ಧರ್ಮನಂದನನ (ಕುವ್ಯಾಅ. ೧-೩೫).

[ಹೊದಱು (< ಪೂದಱ್) + ತುಱುಗಲು (< ತುಱುಂಗಲ್)]

ಹೊದಱುದೆಗೆ (ಕ್ರಿ).ಗುಂಪಾಗು; ಗುಂಪುಗೂಡು: ಸುತ್ತುಝುಲ್ಲಿಯ ಬಲು ಹತ್ತುಗಯ ಬಿಱುಬುಗಳ ತೇರಿನ ಹತ್ತುಸಾವಿರ ಹೊದಱುದೆಗೆದವು ಶಲ್ಯನೆಡಬಲಕೆ (ಕುವ್ಯಾಶ. ೨-೨೬).

[ಹೊದಱು (< ಪೊದಱ್) + ತಗ$_1$]

ಹೊದಱುದೇಗು (ನಾ).ಭಾರಿಯಾದ ತೇಗು: ತ್ರಿದಶರುಱಿ ಬಾಯಾಡಿಸಿದರಗ್ಗದ ಧ್ರುವಾದಿಗಳನು ಸುತೃಪ್ತಿಯ ಹೊದಱುದೇಗಿನ ಹೊಟ್ಟೆ ನೂಕಿತು ಹರಿಹಯಾದಿಗಳ (ಕುವ್ಯಾಸ. ೭-೩೪). [ಹೊದಱು (< ಪೊದಱ್) + ತೇಗು$_1$]

ಹೊದಱುವನೆ 'ಪೊದರ್ವನೆ' ನೋ.

ಹೊದಱುವೆಳಗು 'ಪೊದಱುವೆಳಗು' ನೋ.

ಹೊದಱೆಡೆ (ನಾ). ಪೊದೆಗಳಿರುವ ಸ್ಥಳ,– ಜಾಗ: ಮಾರ್ದನಿಗೊಡುವ ಗುಹೆಗುಹೆಗಳ ನಡುವೆ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ ಹೊದೆಱೆಡೆಯ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ . . . ಎಂದೊದಱೆ ಕರೆಕರೆದತ್ತನು (ಸಿದ್ಧರಾ. ೨-೫೯).

[ಹೊದಱು (< ಪೊದಱ್) + ಎಡೆ$_1$]

ಹೊದಱೇಳ್ 'ಪೊದಱೇಳ್' ನೋ.

ಹೊದಱೊಡೆ 'ಪೊದಱೊಡೆ' ನೋ.

ಹೊದಿ$_1$ 'ಪೊದೆ$_1$' ನೋ.

ಹೊದಿ$_2$ 'ಪುದಿ$_2$' ನೋ.

ಹೊದಿಕೆ$_1$ 'ಪೊದಕೆ$_1$' ನೋ.

ಹೊದಿಕೆ$_2$ 'ಪೊದಕೆ$_2$' ನೋ.

ಹೊದಿಕೆದೆಱೆ (ನಾ).ಒಂದು ಬಗೆಯ ತೆರಿಗೆ: ತಳಸಾರಿಗ ಆಲದಱೆ ತೋಟದಱೆ ಹೊದಿಕೆದಱೆ ಮೊದಲಾದಯನೆನುಳ್ಳ ಸುಂಕ ಕಾರುಕವನೂ ನಂಮ ನಾಡುಗಳ ಮೇಲುವದಿಕೆಯಾಗಿಯಿಕ್ಕಿಕೊಂಡು . . . ವಿಶಪ್ರಗಳಿಗೆ ಧಾರೆಯನೆಱೆದು ಕೊಟ್ಟೆವಾಗಿ (ಎಇ.VIII. ತೀರ್ಥಹ. ೧೩೩-೨೫; 1414). [ಹೊದಿಕೆ$_2$ (<ಪೊದಕೆ$_2$) + ತೆಱೆ$_3$]

ಹೊದಿಯಿಸು 'ಪೊದೆಯಿಸು' ನೋ.

ಹೊದಿಸು 'ಪೊದೆಯಿಸು' ನೋ.

ಹೊದುಸು 'ಪೂದಯಿಸು' ನೋ.

ಹೊದೆ$_1$ 'ಪೊದೆ$_1$' ನೋ.

ಹೊದೆ$_2$ 'ಪೊದೆ$_2$' ನೋ.

ಹೊದೆಗಡಿ (ಕ್ರಿ). ಪೊದರನ್ನು ಕತ್ತರಿಸು: ಹೊದಗಡಿದು ಹತ್ತಿ ಹುತ್ತವ ಸುತ್ತಿದಳ ಹುಲ್ಲ ಹೊದಱ ಹಿಡಿದಡಸಿ ಬಿಡದರಿದು ಸಳಿಯಲ್ ಕಯ್ಯ ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು ಹೆದಱಿ . . . ಕೊರಳಡಿಯಾಗಿ ಕೆಡದನು (ಪಚಕಾ. ೧೨-೯). [ಹೊದೆ$_2$ (< ಪೊದೆ$_2$) + ಕಡಿ$_2$]

ಹೊದೆಗೆದಱು 'ಪೂದಗೆದಱು' ನೋ.

ಹೊದೆಗೋಲು (ನಾ). ಬತ್ತಳಿಕೆಯಲ್ಲಿರುವ ಬಾಣ: ಭೂಲತೆಯ ಹದವಿಲ್ಲುಗಳ ಹೊಳೆವಾಲಿಗಳ ಹೊದೆಗೋಲುಗಳ ನಳತೋಳ ಬಡಿಗೋಲುಗಳ ಸೆಳ್ಳುಗುರ್ಗೊನೆಗಳಂಟುಗಳ . . . ಬೇಟೆಕಾತಿಯರ್ಕೆದಿಹರು ವನವ (ತೊರಾ. ೧-೫೫-೩೯); ಹೊದೆಗೋಲಿನಿಂದ ಮನ್ಮಥನೆಚ್ಚ ಮಾತ್ರದೆ ಸೊದೆಗೊಳು ಶೋಧಿಸಿತವಗೆ (ಮೋಪತ. ೨೫-೩೯).

[ಹೊದ್ದೆ$_2$ (< ಪೊದೆ$_2$) + ಕೋಲು$_1$ (< ಕೋಲ್$_1$)]

ಹೊದೆನಾಡು 'ಪೊದಲ್ನಾಡು' ನೋ.

ಹೊದೆಪು 'ಪೊದಪು' ನೋ.

ಹೊದೆವುಡೆ (ನಾ). ಹೊದೆಯುವ ವಸ್ತ್ರ: ಹಾಸಲರುವೆಗಳಿಲ್ಲಿ? ಚಳಿವೊಳ್ತು ತಾನಡಿಯಿಡಲ್ ಹೊದವುಡೆಗಳಿಲ್ಲಿ? (ಶ್ರೀರಾಮಾ. ೮೯-೩೦೫).

[ಹೊದೆ$_1$ (< ಪೊದೆ$_1$) + ಉಡ$_2$]

ಹೊದೆಸು 'ಪೊದೆಯಿಸು' ನೋ.

ಹೊದ್ದ 'ಪೊದೆ$_1$' ಪರಾ.

ಹೊದ್ದಿಕೆ$_1$ 'ಪೊದಕೆ$_1$' ನೋ.

ಹೊದ್ದಿಕೆ$_2$,ಹೊದಕೆ$_2$ (ನಾ). ಸೇರುವಿಕೆ;ಕೂಡುವಿಕೆ;ಹೊಂದಾಣಿಕೆ: ಪಾರ್ತಿಸುಬ್ಬನ ಕಾಲವಾದರೂ . . . ಸುಬ್ಬನಾಯನ ಕಾಲಕ್ಕೆ ಹೊದ್ದಿಕೆಯಾಗುತ್ತದೆ(ಪಾರ್ತಿಸು.೬). **ಹೊದಕೆ$_2$** : ನಿಷ್ಕತಿ ಬಂದು ಒಳಕೊಂಡಲ್ಲಿ ನಿರಾಶ್ರಯ ಬಂದು ಹೊದಕೆಯಾದಲ್ಲಿ ನಿರಾಲಂಬನವಾಯಿತಲ್ಲಾ ಎನ್ನ ಬಹುರೂಪು (ಸರ್ವಜ್ಞ.೪೪-೨೬೭). 'ಪೊರ್ದುಗೆ' ಪರಾ.

[ಹೊದ್ದು$_1$ (< ಪೊರ್ದು) + - ಇಕೆ]

ಹೊದ್ದಿಗ (ನಾ). ಹತ್ತಿರದವನು; ಬಂಧು: ಇದ್ದರೆಯು ರಣವಿಜಯವನಿತೆಗೆ ಹೊದ್ದಿಗರು ದ್ರುಪದಾದಿರಾಯರ ಹೊದ್ದಿಸಲು ಬೇಡವರಿಗಂದುವೆವೆನುತ ನೂಕಿದರು (ಅಷ್ಟಾಭೀ. ೮-೩೧). [ಹೊದ್ದು (< ಪೊರ್ದು) + - ಇಗ]

ಹೊದ್ದಿಗೆ 'ಪೊರ್ದುಗೆ' ನೋ.

ಹೊದ್ದಿಸು$_1$ 'ಪೊರ್ದಿಸು' ನೋ.

ಹೊದ್ದಿಸು$_2$ 'ಪೊದೆಯಿಸು' ನೋ.

ಹೊದ್ದು$_1$ 'ಪೊರ್ದು' ನೋ.

ಹೊದ್ದು$_2$ 'ಪೊದೆ' ನೋ.

ಹೊದ್ದುಗೆ 'ಪೊರ್ದುಗೆ' ನೋ.

ಹೊದ್ದು (ನಾ). ಸ್ಥಳ; ಪ್ರದೇಶ: ಯಾ ಪೂರ್ವದಿಕ್ಕಿಗೆ ವೇದಾವತೀನದೀತೀರದ ಹೊದ್ದು ದಕ್ಷಿಣದಿಕ್ಕಿಗೆ ಭಾತ್ತದ ರಾಸೆಯಾ ಬೆಟ್ಟದ ಹೊದ್ದು ಯಾ ಪಶ್ಚಿಮದಿಕ್ಕಿಗೆ ದೊಡ್ಡಕಾವ್ಹೆ ಮುಂದಣ ಗುಡದ ಹಂಬಗೆಯ ಹೊದ್ದು ಉತ್ತರದಿಕ್ಕಿಗೆ ಕದೂವುರ ಕಾವ್ಹೆ ಹುಲಿಹೊದ್ದು (ಎಕ. VI. ಕಡೂರು. ೧೬೯-೧೪; 1813). 'ಹೊಟ್ಟು' ಪರಾ. [< ಪುದ್ದಿ]

ಹೊನ್ 'ಪೊನ್' ನೋ.

ಹೊನಗನೆ 'ಪೊನ್ನಗನ್ನೆ' ನೋ.

ಹೊನಗನ್ನೆ 'ಪೊನ್ನಗನ್ನೆ' ನೋ.

ಹೊನಗ, ಹೊನಗ್ಯಾ, ಹೊನಿಗ್ಯಾ (ನಾ). ಮಾಂಸಾಹಾರಿಯಾದ ಒಂದು ಕಾಡುಪ್ರಾಣಿ; ಚಿರತೆ: ಅಡವೀ ಚಂಚೀರು . . . ಇವರು ಒಮ್ಮೊಮ್ಮೆ ಹೊನಗಗಳನ್ನು ಸಹ ತಮ್ಮ ಬಲೆಯಲ್ಲಿ ಜೀವದಿಂದ ಹಿಡಿದು ತಂದು ಮಾರಿಕೊಳ್ಳುವರು (ಕಭಾಗ. ೨೦೯). **ಹೊನಗ್ಯಾ:** ಚಿರ್ಟು, ಹೊನಗ್ಯಾ, ತೋಳ, ಮೊಲ, ಅಷ್ಟೇ ಬೇಟೆಯಾಡಿದ್ದರು (ದೀಪಹ. I .೧೫). **ಹೊನಿಗ್ಯಾ:** ಹಳ್ಳಿಗೆ ಬರುವ ಸರ್ಕಸ್ ಎಂಥದಿರಬೇಕು? ಸಿಂಹ ಅನಿಸಿಕೊಳ್ಳುವ ಒಂದು ಹೊನಿಗ್ಯಾ, ಸಾಯಲಾರದ ಒಂದು ಹುಲಿ . . . ತಟ್ಟೂ ಕೆಲವು ಇದ್ದವು (ನಿನಾಭ . ೭೪). [?]

ಹೊನಗೊನೆ 'ಪೊನ್ನಗನ್ನೆ' ನೋ.

ಹೊನಗೊನ್ನೆ 'ಪೊನ್ನಗನ್ನೆ' ನೋ.

ಹೊನಗೋನೆ 'ಪೊನ್ನಗನ್ನೆ' ನೋ.

ಹೊನಗ್ಯಾ 'ಹೊನಗ' ನೋ.

ಹೊನರು (ನಾ). ೧. ಚರ್ಚೆ; ಮೇಲಾಟ: ಆನತನುಜ ಗುರು ಭೀಷ್ಮ ಗುರುಸುತ ಕೃಪರು ಮೊದಲಾದ ಘನರಥಿಕರಧಿಕಪ್ರತಾಪರು ಹೊನರಿನಲಿ ರಣರಂಗಕ್ಕೆದಿದರನುಗೊಳಿಸಿ ಸಕಲಾಯುಧದ ಸಂವರಣೆಯಲಿ ನಡೆದು (ಕೋಗಯ.೧೮-೧೩). ೨. (?): ಹೊನರಲ್ಲಿ ಹೋಗುವನು ಅನಸವಿಲ್ಲದೆ ಮೊನೆಗೊಂಡು ಕಲ್ಲಹಕೊರೆಯೋ ಬಸವಲಿಂಗ (ಗುಬಸ. ೬೬-೧೨). [< ಪೊಣರ್$_2$]

ಹೊನಲ್ 'ಪೊನಲ್' ನೋ.

ಹೊನಲಿಡು 'ಪೊನಲಿಡು' ನೋ.

ಹೊನಲು 'ಪೊನಲ್' ನೋ.

ಹೊನಲುಗಿಡಿ (ನಾ). ಪ್ರವಾಹದಂತೆ ಸೂಸಿ ಬರುವ ಕಿಡಿ: ಉರಿಮುಖದ ಕಾರ್ಬೊಗೆಯ ಮೊಬ್ಬಿನಲಿ ಹೊನಲುಗಿಡಿಗಳ ತಗಡುರಿಯ ಕೊಂಡಿನಲಿ ಮುತ್ತಿತು ರಥವನಾತನ ಧನುವನಾತನ ತನುವನಾತನ ಸರಳ ಸಾರಥಿಯ (ಕುವ್ಯಾಆ. ೧೧-೩೩).

[ಹೊನಲು (< ಪೊನಲ್) + ಕಿಡಿ]

ಹೊನಲುಲಿ (ನಾ). ನದಿಯ ಮೊರೆತ, - ಸದ್ದು: ಪ್ರಕೃತಿಯ ಅಳಲಿನಲ್ಲಿ ತಮ್ಮ ಅಳಲ ಹಾಡನ್ನು ಹೊನಲುಲಿಯಂತೆ ಬೆರಸುತ್ತಾರೆ (ಬದ್ಧಪ್ರ. XLVIII).

[ಹೊನಲು (< ಪೊನಲ್) + ಉಲಿ$_2$]

ಹೊನಲುವರಿ 'ಪೊನಲ್ವರಿ$_1$' ನೋ.

ಹೊನಲೇರು 'ಹೊನಲೇಱು' ನೋ.

ಹೊನಲೇಳು 'ಪೊನಲೇಳ್' ನೋ.

ಹೊನಲೇಱು, ಹೊನಲೇರು (ಕ್ರಿ). ಪ್ರವಾಹ ಉಕ್ಕಿ ಹರಿ, -ಹೊರಸೂಸು: ಒಡೆಯ ತಟಾಕರಾಜಿ ಹೊನಲೇಱಿ ಧರಿತ್ರಿಸಮಸ್ತಸಿಂಧುಗಳ್ ತಡಿಯನೆ ಮೀಱಿ ತಾಂ ಪರಿಯೆ ಬೆಂಚಿಗಳುರ್ವಿರೆ ನಿರ್ಝರಾಳಿ ಭೋರಿಡುತೆ ಮಹೀಧ್ರದಿಂ ಜಗುಳಿ . . . ಕಟ್ಟಿ ಕಜ್ಜದತ್ತು ಸುವೃಷ್ಟಿ (ಉದ್ಭಟ. ೯-೧೪೦). **ಹೊನಲೇರು:** ಕೋಪಾಗ್ನಿ ಒಡಲೊಳಂ ಯಿರದೆ ಹೊತ್ತುತ್ತ ಹೊನಲೇರಿ ಭುಗಿಭುಗಿಸುತ್ತೆ (ನವಮೋ. ೬-೪೪).

[ಹೊನಲ್ (< ಪೊನಲ್) + ಏಱು$_1$ (< ಏಱ್$_1$)]

ಹೊನಹು (ನಾ). ಒನಪು; ಒಯ್ಯಾರ: ಈ ನನ್ನ ಕಟ್ಟುಗಡಸಿನ ಮೈಯ್ಕಂಬ ಹೊನಹಿನ ಪಾತರದಲ್ಲಿ ಎಸರಿಟ್ಟಿರುವ ರೂಪ ಸೌಂದರ್ಯ ಯೌವನ ಶೃಂಗಾರ ಕಲೆಗಳೆಂಬ ಪಂಚಾಸವಗಳನ್ನು (ಮಂತ್ರಶ. ೨೯-೧೫). 'ಕೊನಬು' ಪರಾ.

[< ಒನಪು?]

ಹೊನಹುಗಾರ್ತಿ (ನಾ). ಒನಪುಗಾರ್ತಿ; ಒಯ್ಯಾರಿ: '' ಪದಹುಗಾರ್ತಿಯೆಂದುಂ ಹೊನಹುಗಾರ್ತಿಯೆಂದು ಸಂರಂಭವತಿ'' (ಕಶಸಾ. ೧೯-೩೮೨); ಆ ಹೊನಹುಗಾರ್ತಿ ಬಾಂಗುರುಳನ ಮುಂಗುರುಳನೊಪ್ಪದಿಂ ಸೈತು ನೇವರಿಸಿ (ರಾಮಾಶ್ವ. ೧೩೧-೭); ಪರಮ ಸುಂದರಿಯರಾದ ಹೊನಹುಗಾರ್ತಿಯರು . . . ನಾನಾ ಅವಸ್ಥೆಗಳಲ್ಲಿರುವರು (ವಿಗಡ. ೭-೧೬). 'ಕೊನಬುಗಾರ್ತಿ' ಪರಾ. [< ಒನಪುಗಾರ್ತಿ ?]

ಹೊನಾಲ್ (ನಾ). ಒಂದು ಬಗೆಯ ಔಷಧೀಸಸ್ಯ: ಹೊನಾಲ್,ಹುಲುವೆ, ಹುನಗಲು (ಪ್ರಜ್ಞಿಗ. ೭೪-೧೫೧೪). [?]

ಹೊನಿಗ್ಯಾ 'ಹೊನಗ' ನೋ.

ಹೊನ್ನಂಡೆ 'ಪೊನ್ನಂಡೆ' ನೋ.

ಹೊನ್ನಂಡೆಗಾತಿ (ನಾ). ಚಿನ್ನದ ಜೇರ್ಕೊಳವಿಯನ್ನು ಹಿಡಿದು ಓಕುಳಿ ಯಾಡುವವಳು: ನಿಡಯವಿಲ್ಲದ ಹೊನ್ನಂಡಗಾತಿಯರು ಬೆಂಗಡೆಯ ಸಾರಿದರು ರುಕ್ಮಿಣಿಯ (ಮೋಹತ.೧೪-೬೧). [ಹೊನ್ನಂಡೆ (< ಪೊನ್ನಂಡೆ) + - ಕಾತ್ತಿ]

ಹೊನ್ನಂಡೆದಳೆ (ಕ್ರಿ) .ಚಿನ್ನದ ಜೇರ್ಕೊಳವಿಯನ್ನು ಹಿಡಿದಿರು: ವರವಿಲಾಸಿನಿಯರು ಹೊನ್ನಂಡೆದಳೆದು ತನಿಮೋಹರಸವೊಸರ್ವಂತೆ ಪೊಯ್ದಾಡಿದರನಿಬರು (ಮೋಹತ. ೧೪-೮೪). [ಹೊನ್ನಂಡೆ (< ಪೊನ್ನಂಡೆ) + ತಳೆ$_1$]

ಹೊನ್ನಂದಣ 'ಪೊನ್ನಂದಳ' ನೋ.

ಹೊನ್ನಂಬು 'ಪೊನ್ನಂಬು' ನೋ.

ಹೊನ್ನಗನ್ನೆ 'ಪೊನ್ನಗನ್ನೆ' ನೋ.

ಹೊನ್ನಗಸೆ (ನಾ). ಚಿನ್ನದ ಹೆಬ್ಬಾಗಿಲು; ಸುವರ್ಣದ ಮಹಾದ್ವಾರ : ಕುಂಭಣಿ ಬೆಸಲಾದುದೆಂಬಂತೆ ಜನರು ತುಱುಂಬಿತು ಹೊನ್ನಗಸೆಯೊಳು (ಮೋಹತ.೪೧-೩೯).

[ಹೊನ್ನು (< ಪೊನ್) + ಅಗಸೆ (< ಅಗುಸೆ)]

ಹೊನ್ನಗಾಲೆ (ನಾ). ಒಂದು ಬಗೆಯ ಪಕ್ಷಿ: ಹೊನ್ನಗಾಲೆ ಶಕುನಿ ಶುನಿಗಿಲು . . . ಸಕಲಖಗಕಧಿಕ ನಾಗರಪಕ್ಷಿಮುಖ್ಯಗಳ್ ಸುಖಮಿಪ್ಪವಾ ವನದೊಳು (ವಿತೋಪು . ೧೦-೩೧). [?]

ಹೊನ್ನಗೊನ್ನೆ 'ಪೊನ್ನಗನ್ನೆ' ನೋ.

ಹೊನ್ನಣಗೌಡ (ನಾ). ಒಬ್ಬಾತನ ಹೆಸರು: ಆತನ ತಮ್ಮ ಚಿಕ್ಕತಂಮ್ಮಗೌಡರು

ಆತನ ಅನುಜ ಹೊಂನಣಗೌಡರು (ಎಕ. Vii.ಶಿವಮೊ. ೧೧೪-೧೭ ; 950 ?).

[ಹೊನ್ (< ಪೊನ್) + < ಅಣ್ಣ$_1$ + ಗೌಡ (< ಗಾಮುಂಡ)]

ಹೊನ್ನಣೆ (ನಾ). ಚಿನ್ನದ ಆಣೆ,-ಕಾಸು (?): ವಾದ್ಯತಾಳ ೧ ಕೊಳಹರ ಬಳಿಯ ಚಿಮ್ಮಣಗೆ ಮು ೮ ಗದ್ದೆ ಹೊನ್ನಣೆ ೧ ಕೆ ಮಕ್ಕಿಯ ಒಳಗೆ ಮು ೩ ಗದ್ದೆಯಿಂದ ನಿತ್ಯ ನಾಲ್ಕಾನ ಅಕ್ಕಿ ನೈವೇದ್ಯ (ಸೌಇ.IX-II. ೪೭೦-೫೬; 1482).

[IP ಇದು 'ಹೊನ್ನಾಣೆ' ಎಂದಿರಬಹುದೆ ?]

ಹೊನ್ನಯ್ಯ 'ಪೊನ್ನಯ್ಯ' ನೋ.

ಹೊನ್ನರಮನೆ (ನಾ). ಚಿನ್ನದ ಅರಮನೆ; ಸುವರ್ಣಭವನ: ಹೊನ್ನರಮನೆಯೊಳೆಲ್ಲರಿಗೆ ನಿನ್ನನುಜರ್ಗೆ ಸನ್ನುತ ಸಂತೋಷವೆಂದ (ಭರತ. ೫೭-೨೧).

[ಹೊನ್ನು (< ಪೊನ್) + ಅರಮನೆ]

ಹೊನ್ನರಳಿ (ನಾ). ಒಂದು ಬಗೆಯ ಅರಳಿಮರ: ಕರಿ ಬೆಂದು ಗಿರಿ ಬೆಂದು ಹೊನ್ನರಳಿಯ ಮರನುಳಿದು ಹಿರಿಯತನಗೆಡಿಸಿ ನೆರೆವನು (ಹರಿಹರ.ಬ.೧೪೭-೬೨೫); ಉನ್ನತಚರಿತನಾಗ ಹೊನ್ನರಳಿಯ ಮರಕ್ಕೆ ಮಿಗೆ ಚಿನ್ನದುಯ್ಯಾಲೆಯನ್ನು ಬಂಧಿಸುತೆ (ಮಹಾಪ. ೧೩-೪೨).

[ಹೊನ್ನು (< ಪೊನ್) + ಅರಳಿ$_1$]

ಹೊನ್ನಾಂಬರ (ನಾ). ಪೀತಾಂಬರಧಾರಿ; ಕೃಷ್ಣ: ಚಿನ್ನದ ಕಾಲ ಬೆಳ್ಳಿಯ ಕಾಲ ಮಂಚ ಸುವರ್ಣದಡ್ಡಣ ಸುಪ್ಪತಿಗೆ . . . ಹೊನ್ನಾಂಬರನಿತ್ತ ಮಗಗೆ (ಮೋಹತ. ೧೫-೧೭).

IP ಇದು 'ಪೀತಾಂಬರ' ಎಂಬ ಶಬ್ದದ ಸಾದೃಶ್ಯದ ಮೇಲೆ ಮಾಡಿಕೊಂಡಿರುವ ರೂಪ. [ಹೊನ್ನು (< ಪೊನ್) + ಅಂಬರ]

ಹೊನ್ನಾಗರ (ನಾ). ಚಿನ್ನದ ನಗರ; ಲಂಕೆ: ಸಾಗರವ ದಾಂಟಿ ಹೊನ್ನಾಗರಕೆ ಹಾಱಿದ ರಾಘವನ ಬಂಟ ಹನುಮಂಗೆ ಕಟ್ಟುಟಿಯು ಹೋಗದೇಕೆಂದ (ಸರ್ವಜ್ಞ. ೮೫೫).

[IP ಇಲ್ಲಿ ಛಂದಸ್ಸಿಗಾಗಿ 'ಹೊನ್ನಗರ' ಎಂಬುದನ್ನು 'ಹೊನ್ನಾಗರ' ಎಂದು ಮಾಡಿಕೊಳ್ಳಲಾಗಿದೆ]

ಹೊನ್ನಾಯುಗ 'ಪೊನ್ನಾಯುಗ' ನೋ.

ಹೊನ್ನಾಯುಧ (ನಾ). ಚಿನ್ನದ ಹಿಡಿಕೆಯುಳ್ಳ ಆಯುಧ: ತೆಗೆಸಿದನು ಭಂಡಾರದಲಿ ಬಗೆಬಗೆಯ ವಸ್ತುವ ಸುಭಟರಿಗೆ ಝಗಝಗಿಪ ಹೊನ್ನಾಯುಧವ ನವರತ್ನಗಳ ತೊಡಿಗೆಗಳ ಸುಗುಣಿಯರು ಮೊದಲಾದ ಪರಿವಾರಗಳಿಗಿತ್ತನು (ನಳಚ. ೯-೫೬).

[ಹೊನ್ನು (< ಪೊನ್) + ಆಯುಧ]

ಹೊನ್ನಾರತಿ (ನಾ). ಚಿನ್ನದ ತಟ್ಟೆಯಲ್ಲಿಟ್ಟು ಬೆಳಗುವ ಆರತಿ: ಹೊನ್ನಾರತಿಗಳಂ ತರತರದ ಪರಿಯಾಣಂಗಳಂ ನೀಡುವ ಸಮಯದಲ್ಲಿ (ಬಸಪು. ೧೨-೩೫).

[ಹೊನ್ನು (< ಪೊನ್) + ಆರತಿ$_1$]

ಹೊನ್ನಾರಿ (ನಾ). ಒಂದು ಬಗೆಯ ಔಷಧೀಸಸ್ಯ : ಹೊನ್ನಾರಿಯ ಬೇರ ತಿಗಡು ವಜ್ರನೀಲಿಯ ಸೊಪ್ಪು ಇವಂ ಚೂರ್ಣವಂ ಮಾಡಿ (ವೈದ್ಯವಿ. ೨೦೦). 'ಹೊನ್ನಾವರೆ' ಪರಾ. [ಹೊನ್ನು (< ಪೊನ್) + ?]

ಹೊನ್ನಾರು (ನಾ). ಮುಂಗಾರಿನ ಮೊಟ್ಟಮೊದಲಿನ ಉಳುಮೆ; ಮೊದಲು ಕಟ್ಟುವ ಆರು : ಬುದ್ಧೀ ಹೊನ್ನಾರು ಕಟ್ಟುವುದಕ್ಕೆ ದಿನ ಯಾವತ್ತು ಚಂದಾಗದೆ? (ಹುಟ್ಟಹ.೬೧); ಹೊನ್ನಾರು ಕಟ್ಟುವ ಚರ್ಚೆ ಬಂತು (ನಮ್ಮೂರ. ೧೫೯).

[ಹೊನ್ನು (< ಪೊನ್) + ಆರ್ತು$_5$ (< ಆರ್$_3$)]

ಹೊನ್ನಾವರಿಕೆ (ನಾ). ೧. ಹಳದಿ ಹೂಗಳನ್ನು ಬಿಡುವ ಒಂದು ಬಗೆಯ ಗಿಡ; ತಂಗಡಿಗಿಡ: ನದಿಯ ಗುಂಪ ತಾವರೆ ಬಲ್ಲುದಲ್ಲದೆ ತಡಿಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯ (ಮಹಾದೇ.ಬ.೩೬-೭೭). ೨. ಒಂದು ಬಗೆಯ ಎತ್ತರವಾದ ಮರ: (ಕ).

[ಹೊನ್ನು (< ಪೊನ್) + ಆವರಿಕೆ]

ಹೊನ್ನಾವರೆ (ನಾ) = ಹೊನ್ನಾವರಿಕೆ. "ಕಾಂಚನಪುಷ್ಪಕಂ - ಹೊನ್ನಾವರೆ" (ಓಷಧಿ .೩೨). [ಹೊನ್ನು (< ಪೊನ್) + ಆವರೆ]

ಹೊನ್ನಾಳ (ನಾ). ಚಿನ್ನದ ಹಿಡಿ,— ಹಿಡಿಕೆ: ಮಿಸುನಿಯ ಕರು ತೊಟ್ಟನೆ ಹೊನ್ನಾಳದ ಕೈದಂ ಪಿಡಿವಂದದಿನಮರ್ದಟ್ಟಿ . . . ಕೂಡಿದರು (ಜಯಕಾ.೨-೫೩); ಲಲನೆಯಲ್ಲವರಿರ್ದಂತಿಭ್ಯಕೇತುವಿಗಳಸಿ ಮಾಲೆಯನಿಕ್ಕಿದಳು ಉಳಿದ ಲೋಹವ ಬಿಟ್ಟು ಹೊನ್ನಾಳ ದಸಿ ಪಜ್ಜಳಿಸುವ ಪಣವಿಡಿವಂತೆ (ನೇಮಿಸಂ.೨-೧೨೧).

[ಹೊನ್ನು (< ಪೊನ್) + ನಾಳ$_1$ (= ನಾಲ$_1$)]

ಹೊನ್ನಿಗ 'ಪೊನ್ನಿಗ' ನೋ.

ಹೊನ್ನೀರು 'ಪೊನ್ನೀರ್' ನೋ.

ಹೊನ್ನು 'ಪೊನ್' ನೋ.

ಹೊನ್ನುಂಗುರ (ನಾ). ಚಿನ್ನದ ಉಂಗುರ : ತಾಳಿ ಹೊನ್ನುಂಗುರದವ ಬರೆ . . . ಮೇಲಾದೊಡವೆಯ ಸೆಳೆಕೊಂಡಾತನ ಚಾಳಿಸಿ ಬಿಡು ನೀ ಮಗಳೆ (ಕುಸವಿ.೬-೧೫೬).

[ಹೊನ್ನು (< ಪೊನ್) + ಉಂಗುರ]

ಹೊನ್ನುಗುಬ್ಬಿ 'ಹೊಂಗುಬ್ಬಿ' ನೋ.

ಹೊನ್ನುಡೆನೂಲು (ನಾ). ಚಿನ್ನದ ಉಡಿದಾರ: ಮಿಗಿಲು ಶೋಭಿಸುವ ಹೊನ್ನುಡೆನೂಲು ಕಾಲಂದುಗೆ ಗಜ್ಜೆ ಘಣಿರೆಂಬ ರವದಿ ಪಗೆವನೆಯೊಳಗೆ ನರ್ತಿಸುತಿಹ ಬಾಲನ ಬಗೆ ಲೇಸಾಯ್ತು ನೋಳ್ಪರಿಗೆ (ಮೋಹತ. ೧೧-೬೦).

[ಹೊನ್ನು (< ಪೊನ್) + ಉಡೆನೂಲು (< ಉಡೆನೂಲ್)]

ಹೊನ್ನುಬಾಕಿ (ನಾ). ಹಣದ ಮೇಲೆ ವಿಪರೀತ ಲೋಭವುಳ್ಳವಳು: ಹಾದರಗಿತ್ತಿಯರು ಬ್ರಹ್ಮೇತಿಕಾತಿಯರನವರತಮುಂ ಹೊನ್ನುಬಾಕಿಯರು (ಬಸಪು . ೪೦-೫೫).

[ಹೊನ್ನು (< ಪೊನ್) + - ಬಾಕ + - ಇ$_2$]

ಹೊನ್ನುಮ್ಮತ (ನಾ). ದತ್ತೂರದಲ್ಲಿ ಒಂದು ಬಗೆ: ದಿವಿಜಾಲಯಂ ಮೂಱು ನೆಲೆಯ ಹೊನ್ನುಮ್ಮತದ ಕುಸುಮದಾಕಾರದಲ್ಲಿ . . . ಮೆಱೆವ ಮೇರುವಿನ ದಕ್ಷಿಣ ದಿಶಾಭಾಗ ಭಾರತಖಂಡದವನಿಯೊಪ್ಪುತ್ತಿಹುದು (ಗುರುಚಾ. ೧-೧೪).

[ಹೊನ್ನು (< ಪೊನ್) + ಉಮ್ಮತ (< ಉಮ್ಮತ್ತ)]

ಹೊನ್ನುಯ್ಯಲ್ 'ಪೊನ್ನುಯ್ಯಲ್' ನೋ.

ಹೊನ್ನುಹಾವಿಗೆ 'ಪೊಂಬಾವುಗೆ' ನೋ.

ಹೊನ್ನೆ 'ಪೊನ್ನೆ' ನೋ.

ಹೊನ್ನೆದೆಱೆ (ನಾ). ಒಂದು ಸ್ಥಳದ ಹೆಸರು: ಹೊನ್ನೆದೆಱೆ ಅಳಗನ ಹಳ್ಳ ಎತ್ತುರುಳಿ ನರಿಗನ ಗಟ್ಟ ಮತ್ತರನಱೆ ನಿಱೆಯಿಂಗಲು (ಎಕ.VI. ತರೀಕೆ. ೬೭-೧೧; 888).

[IP ಇದು 'ಹೊನ್ನೆಗೆಱೆ' ಎಂಬುದರ ಅಪಲಿಖಿತವಿರಬಹುದು]

ಹೊನ್ನೆಹೂಹುಲ್ಲು (ನಾ). ಒಂದು ಬಗೆಯ ಹುಲ್ಲು: (ಮೃಚಿಗಿ. ೨೮-೫೩೮).

[ಹೊನ್ನೆ? + ಹೂ$_2$ (< ಪೂ$_2$) + ಹುಲ್ಲು (< ಪುಲ್)]

ಹೊನ್ನೊಡಲ (ನಾ). ಹಿರಣ್ಯಗರ್ಭ; ಬ್ರಹ್ಮ: ಹೊನ್ನೊಡಲನ ಪುತ್ರ ಕೇಳು ಖೇಚರದಿಂದಲೇನಾತ್ಮಜ ಬಂದ ಮನೆಗೆ ನಿನ್ನಿಂದೆ ಕೈಸಾರಿದುದು ನಿಶ್ಚಯವೆಂದು ಬಿನ್ನಯಿಸಿದಳು ನಾರದಗೆ (ಮೋಹತ .೧೩-೭೬).

[ಹೊನ್ನು (< ಪೊನ್) + ಒಡಲ್ + -ಅ$_7$]

ಹೊನ್ನೊಡ್ಡಿಯಾಣ (ನಾ). ಚಿನ್ನದ ನಡುಕಟ್ಟು: ಎತ್ತಿದ ಭುಜಕೀರ್ತಿ ಹೊನ್ನೊಡ್ಡಿಯಾಣ ಸುಚಿತ್ರಗೊಪ್ಪಿದುವು ಶೋಭೆಯೊಳು (ಭರತ. ೧೬-೧೬).

[ಹೊನ್ನು (< ಪೊನ್) + ಒಡ್ಡಿಯಾಣ$_0$ (< ಒಡ್ಯಾಣ)]

ಹೊನ್ನೊರಲು (ನಾ). ಬಂಗಾರದ ಒರಳು: ಬಾಲೆಯ ಕೊರಲು ಹೊನ್ನೊರಲು ಸುಸ್ವರ ಕಣ ಲೀಲೆಗತ್ತರಿ ಕುರುಳ್ಮೊಂಕು ಪಾಲಿರ್ದು ಕುಚ ಕೊಪ್ಪರಿಗೆ ನಿಟ್ಟೆಸಳ್ಗಣ್ಣಾಲೆಯ ಮನೆಗಳೊಪ್ಪಿದುವು (ಮೋಹತ . ೨-೫೦).

[ಹೊನ್ನು (< ಪೊನ್) + ಒರಲು$_3$ (< ಒರಲ್$_1$)]

ಹೊನ್ನೊಱೆ 'ಪೊನ್ನೊಱೆ' ನೋ.

ಹೊನ್ನೋಲೆ 'ಪೊನ್ನೋಲೆ' ನೋ.

ಹೊಪ್ಪಳಿಕೆ (ನಾ). ಉಷ್ಣ ಅಥವಾ ಶಾಖವು ತಾಗಿ, ಚರ್ಮದ ಮೇಲುಂಟಾಗುವ ಬೊಬ್ಬೆ, — ಗುಳ್ಳೆ: ಕಾಲಿನ ಮೇಲೆ ಬಿಸಿನೀರು ಬಿದ್ದು ಕಾಲುಪೂರ್ತಿ ಹೊಪ್ಪಳಿಕೆ ಯೆದ್ದಿದ್ದವು (ರಾಘ). [< ಹೊಪ್ಪಳಿ]

ಹೊಪ್ಪಳಿಸು (ಕ್ರಿ). ೧. ತೀವ್ರವಾದ ಉಷ್ಣಬಾಧೆಯಿಂದ ಅಥವಾ ಬೆಂಕಿ, ಬಿಸಿನೀರು ಮೊದಲಾದುವು ಚರ್ಮದ ಮೇಲೆ ಬಿದ್ದು ಬೊಬ್ಬೆಯೇಳು,—

ಗುಳ್ಳೆಯೇಳು: ಬೆನ್ನೊಣಗಿ ಚರ್ಮಂ ಹೊಪ್ಪಳಿಸಿ ಸೀಳ್ದು ಬೀಡೆ ನಾಡೆ ನೋಯಿಸಿ ನೀರಡಿಕೆ ನೆರೆದು (ಗಿರಿಕ.೯-೨೭ವ); ಬಿಸಿಯ ಹುಡಿಯಿಂದ ಹೊಪ್ಪಳಿಸಿ ಪದತಳದ ರಕ್ತಂ ದಾರಿಯೊಳು ವ್ರಣದ ಚಳೆಯಗೊಡುವಂತೆ ನೆಱೆ ಸುರಿದೊಡಂ ಬಗೆಯದಾದಯ್ಯ ನೈತರುತಿರ್ದನು (ಸೋಮಚ.೭-೫೪) . ೨. ಪದರಪದರವಾಗು; ಬಿರುಕುಬಿಡು: ಖರಕರತಾವದಿಂದವನಿ ಹೊಪ್ಪಳಿಸಿ (ದಶಕು. ೪-೨೨). [ಹೊಪ್ಪಳೆ + - ಇಸು$_3$]

ಹೊಪ್ಪಳೆ (ನಾ). ಉಷ್ಣತೆಯು ತಾಗಿ ಚರ್ಮದ ಮೇಲೇಳುವ ಗುಳ್ಳೆ; ಬೊಬ್ಬೆ: ''ಸ್ಫೋಟಾ - ಹೊಪ್ಪಳೆ'' (ಕಾಶಕೃ.೨೫೩); ಚರ್ಮದ ಮೇಲೆ ವಿವಿಧಾಕಾರದ ಹೊಪ್ಪಳೆಗಳೆದ್ದಿದ್ದವು (ಪುನರು. ೮೮); ದೇಹದ ಯಾವ ಭಾಗವಾದರೂ ಬೆಂಕಿಯಿಂದ ಸುಟ್ಟು ಹೊಪ್ಪಳೆಗಳುಂಟಾದರೆ . . . ಹಸುರು ಅಗಸೀತೈಲವನ್ನು ಲೇಪಿಸಬೇಕು (ಬಿಚಿಕಿ. ೫೨).

[ದೇ. ॥ ತಮಿ. ಕೊಪ್ಪಳ, ಕೊಪ್ಪುಳ್, ಕೊಪ್ಪುಳ; ಮಲ. ಕೊಪ್ಪುಳ; ಗೊಂಡಿ . ಪೊಪ್ಪುಲ್./ ಸಂ.ಸ್ಫೋಟಕ].

ಹೊಪ್ಪೆ (ನಾ). ಹಣ್ಣಿನ ಅಥವಾ ಕಾಯಿಯ ಹೋಳು : (ಕ). [?]

ಹೊಮ್ಮಂಚಗಾಱ (ನಾ). ಅಕ್ಕಸಾಲಿಗ: ಕಂಚಗಾಱರು ಕೈದುಗಾಱರು ಹೊಳೆವ ಹೊಮ್ಮಂಚಗಾಱರು ಶಿಲ್ಪಿಗರು . . . ಪಾಂಚಾಳರಿರ್ದರಿಕ್ಕೆಲದಿ (ಮೋಹತ.೩-೨೨). 'ಮಚ್ಚಗಾಱ' ಪರಾ. [P ಇದು 'ಹೊಮ್ಮಚ್ಚಗಾಱ' ಎಂಬುದರ ಅಪಲಿಖಿತ]

ಹೊಮ್ಮಚ್ಚು (ನಾ). ಕುದುರೆಯ ನಡಗೆಗಳಲ್ಲಿ ಒಂದು : ದಾಟು ದೀಟು ಹೊಳಹು ಹೊಮ್ಮಚ್ಚುವೆಡೆಮೋಡಿ ಭವರಿ ಭಂಜನೆ ಅಳಿಲುಳಿತ ವರತರಹಮೆಂಬ ನವೀನ [ಪಾಠಾಂ. ನವ] ಗತಿಗಳೊಳು ತನ್ನ ಮನಮ ಹಯದ ತನುಗತಿಗಳಾದಂತೆ ವಾಹಕವಿನ್ನಾಣಂಗಳಂ ತೋಱುತ (ವುಣ್ಯಾಸ್ರ. ೭-೫೧ ವ). [?]

ಹೊಮ್ಮಣ್ಣು (ನಾ). ಚಿನ್ನದ ಹುಡಿ; ಚಿನ್ನದಿಂದ ಕೂಡಿದ ಮಣ್ಣು : ಈ ಮಿಸುಪ ಹೊಮ್ಮಣ್ಣನಾದಡೆ ಕಾಮಿಪಡೆ ಕೆಲ ಹೇಱುಗಳನುದ್ದಾಮಮತಿ ನೀಂ ಕೊಂಡು ಹೋಗ್ಕೆ (ಬಸಪು. ೨೩-೩೯). [ಹೊಂ (< ಪೊನ್) + ಮಣ್ಣು (< ಮಣ್)]

ಹೊಮ್ಮತ್ತಿ (ನಾ). ಒಂದು ಬಗೆಯ ಮತ್ತಿಮರ: ''ಸರ್ಜಕ - ಹೊಮ್ಮತ್ತಿ'' (ಓಷಧಿ. ೧೭೪). [ಹೊಂ (< ಪೊನ್) +ಮತ್ತಿ$_1$ (< ಮಚ್ತಿ$_1$)]

ಹೊಮ್ಮರ (ನಾ). ಒಂದು ಬಗೆಯ ವೃಕ್ಷ : ಬೆಲ್ಲವತ್ತದ ಬೇರು, ನರುವಲದ ಬೇರು, ಹೊಮ್ಮರದ ಬೇರು . . . ಕಷಾಯವಿಕ್ಕಿ ಕೊಡಲು ಶೀತಜ್ವರಂ ಕೆಡುಗುಂ (ಸಕವೈ.೬೬).

[ಹೊಂ (ಪೊನ್) ? + ಮರ$_1$]

ಹೊಮ್ಮರಾಲ (ನಾ). ೧. ಚಿನ್ನದ ವರ್ಣದ ಹಂಸ. ೨. ಹಂಸವಾಹನ; ಬ್ರಹ್ಮ: ಕರ್ಮದಿಂದವೆ ಹರನು ಚರ್ಮವನು ತಾನುಟ್ಟ ಹೊಮ್ಮರಾಲನಜನಾದ ಗೋವಿಂದನೆಮ್ಮೆಯನು ಕಾದ (ಸರ್ವಧ.೮೪೪). [ಹೊಂ (< ಪೊನ್) + ಮರಾಲ]

ಹೊಮ್ಮರೆ 'ಪೊಮ್ಮರೆ' ನೋ.

ಹೊಮ್ಮಳೆ 'ಪೊಮ್ಮಟೆ' ನೋ.

ಹೊಮ್ಮಳೆಗಱೆ (ಕ್ರಿ). ಚಿನ್ನದ ಮಳೆಯನ್ನು ಸುರಿಸು; ಸುವರ್ಣವೃಷ್ಟಿಯನ್ನು ಮಾಡು: ದುಸ್ತರಗೀತ ಶಬ್ದವ ಕೊಂಬ ಪಾತ್ರಸಮಸ್ತ ವಿದ್ವಜ್ಜನರಿಂಗೆ ಹಸ್ತದಿ ಹೊಮ್ಮಳೆಗಱೆದನು ಯಾದವಮಸ್ತಕಮಣಿ ಕೃಷ್ಣನೊಲಿದು (ಮೋಹತ . ೧೫-೨೯).

[ಹೊಮ್ಮಳೆ (< ಪೊಮ್ಮಟೆ)+ ಕಱೆ$_1$]

ಹೊಮ್ಮಾಡ (ನಾ). ಚಿನ್ನದ ವಿಮಾನ : ಹೊಮ್ಮಾಡದಲಿ ರಜತಾಚಲಕೆ ಕಾಯಂವೆರಸಿ ನಡೆದಣುಮೂರ್ತಿಯರ ಬಂಟ (ಬಸಪು. ೨೭-೬). [< ಪೊಮ್ಮಾಡ]

ಹೊಮ್ಮಿ (ನಾ). ರಥದ ಒಂದು ಭಾಗ: ವಜ್ರದ ಘಾಲಿಗೆ ವಜ್ರದ ಚಂಕಿಲು ವಜ್ರದ ನೊಗ ಹೊಮ್ಮಿಗಳು ವಜ್ರದಾಯುಧನ ವಾಹನದಂತೆ ವಾಜಿಯು (ದೇವಾಂಪು.೩-೧೭೯).

[?]

ಹೊಮ್ಮಿಂಚು (ನಾ). ಹೊಂಬಣ್ಣದ ಮಿಂಚು: ಕೆಮ್ಮಿಂಚು ಹೊಮ್ಮಿಂಚು ಕುಡುಮಿಂಚು ಕುಡಿಮಿಂಚು ಗೆರಬೆಳ್ಳಿಮಿಂಚುಗಳ ಗೊಂಚಲ್ಗಳೆತ್ತಲುಂ . . . ರಂಜಿಸಿದುವು (ಚತ್ರಾಂಗ. ೪೮-೧೩೨೩); ಬಾನ ಬರಸಿಡಿಲಲ್ಲಿ ಕೆಮ್ಮಿಂಚು ಹೊಮ್ಮಿಂಚು ಅಬ್ಬ! ವಜ್ರದ ಮಿಂಚು, ನೇತ್ರಪಲ್ಲವಿಯ ಈ ತಂತ್ರ ಬಲ್ಲವರಾರು? (ಸೂರ್ಯಪಾ. ೧೧೧-೧).

[ಹೊಂ (< ಪೊನ್) + ಮಿಂಚು$_2$]

ಹೊಮ್ಮಿಗ 'ಪೊಮ್ಮಿಗ' ನೋ.

ಹೊಮ್ಮಿಗಮಱಿ (ನಾ). ಹೊಂಬಣ್ಣದ ಜಿಂಕೆಮರಿ; ಕಾಂಚನಮೃಗದ ಮರಿ: ಪಡೆದೊಡನೆಸದ ಹೊಮ್ಮಿಗಮಱಿ ಮುಸುಡಿನೊಳ್ ಮಡಶೃಂಗದೇಳ್ಗೆ ತತ್ಪರಡು ಜಡಗಂಧರಹಿತ ಕಮ್ಮಿನ್ನಳಂದದಿ ಕಿಱುದೊಡೆ ಮೆಱೆದುವು ಕುಮಾರತಿಯ (ಮೋಹತ. ೨೩-೧೫). [ಹೊಮ್ಮಿಗ (< ಪೊಮ್ಮಿಗ) + ಮಱಿ]

ಹೊಮ್ಮಿಗಾಜಿನ (ನಾ). ಚಿನ್ನದ ಬಣ್ಣದ ಜಿಂಕೆಯ ಚರ್ಮ: ಮದಗಜದ ಮುತ್ತಿನೇಕಾವಳಿಯ ಹೊಮ್ಮಿಗಾಜಿನದ ಱವಕೆಯ ದಂತದ ಹದವಿಲ್ಲ ಬೆನ್ನ ಬತ್ತಳಿಕೆಗಳ . . . ಜವ್ವನದ ಶಬರಿಯರು (ಹಚಕಾ. ೫-೪೭). [ಹೊಮ್ಮಿಗ (< ಪೊಮ್ಮಿಗ)+ ಅಜಿನ]

ಹೊಮ್ಮಿಟಿಲ (ನಾ). ಒಂದು ಬಗೆಯ ಗಂಧದ್ರವ್ಯ: ''ಚರ್ಮಕಸಾ-ಮಾದಿಗಾವರ, ಹೊಮ್ಮಿಟಿಲ'' (ಓಷಧಿ. ೫೫). [ಹೊಂ (< ಪೊನ್) + ಮಿಟಿಲ (< ಮಿಟಲಿ)]

ಹೊಮ್ಮಿಣಿ 'ಪೊಮ್ಮಿಣಿ' ನೋ.

ಹೊಮ್ಮಿಸು 'ಪೊಣ್ಮಿಸು' ನೋ.

ಹೊಮ್ಮಿಳಿ 'ಪೊಮ್ಮಿಣಿ' ನೋ.

ಹೊಮ್ಮಿಱಿ (ಕ್ರಿ). (ದುಃಖ, ಸಂತೋಷ ಮುಂತಾದುವುಗಳ ಆಧಿಕ್ಯವನ್ನು ಸೂಚಿಸುವುದಕ್ಕಾಗಿ ಅಥವಾ ಪ್ರಕಟಿಸಲು) ಹೊಮ್ಮೆಂದು ಕೂಗು: ಅಲರಂಬ ಹೊತ್ತು ಹೊಮ್ಮಿಱಿದು ಬಿಳ್ದೆಳ್ದು ನಿಜನಿಲಯಕ್ಕೆ ಬಂದು . . . ವಿರಹದಿಂದಾದ ವಸ್ಥೆಯೊಳ್ ಪೊರಳುತುಮಿರ್ದನು (ಸಮ್ಮಕೌ. ೯-೧೩); ಖೇಟಕನೆಂಬ ಗಂಧರ್ವ ತೋಹಿನೊಳ್ ನಿಂದೊಂದು ಹುಲ್ಲೆಯನೆಸಲು ನೊಂದು ಹೊಮ್ಮಿಱಿದೋಡಿ ಪಿಂದೈದಿ ಬರಲವನಂದು ಬಿದ್ದುದು ಮುನಿಯಿದಿರ (ಭೈರವೇ.೩-೧೪೩); ಎಱೆಯನಿದಿರೊಳಿಷ್ಟು ನಾಣ್ಚುತ ನಗುತ ಹೊಮ್ಮಿಱಿದಾಡುತಿರ್ದಳು ತರುಣಿ (ಭರಚ. ೮-೩೯). [ಹೊಮ್ಮ್$_0$ + ಇಱಿ$_1$]

ಹೊಮ್ಮು$_1$ 'ಪೊಣ್ಮು' ನೋ.

ಹೊಮ್ಮು$_2$ 'ಪೊಮ್ಮು$_1$' ನೋ.

ಹೊಮ್ಮುಗಳು 'ಹೊಮ್ಮುಗುಳ್' ನೋ.

ಹೊಮ್ಮುಗುಳ್, ಹೊಮ್ಮುಗಳು, ಹೊಮ್ಮುಗುಳು (ನಾ). ೧. ಚಿನ್ನದ ಮೊಗ್ಗು: 'ಹೊಮ್ಮುಗುಳ್ಮಾಲೆ' ಪರಾ . ೨. ಹಳದಿಯ ಬಣ್ಣದ ಹೂವುಗಳನ್ನು ಬಿಡುವ ಒಂದು ಬಗೆಯ ಔಷಧೀಸಸ್ಯ ಮತ್ತು ಅದರ ಬೇರು: ಬೆಳುಗಾರ ಹೊಮ್ಮುಗುಳ್ಗಳ . . . ಮಧುವಿಂದೆ ಕಲಸಿ (ಜನವ. ೧೩-೪೬). **ಹೊಮ್ಮುಗಳು:** ೨. ಮಣಸು ಹೊಮ್ಮುಗಳ ಬೇರು ಇವೆರಡನೂ ಕೂಡಿಸಿ ನೀರಿಂದ ಅರೆದು ನೊಣ ಕಚ್ಚಿದ ಠಾವಿಗೆ ಹಚ್ಚಲು ಅದರ ವಿಷ ಶಮನವಹುದು (ವೃದ್ಧಸಾ. II,೨೨೨); ಹೊಮ್ಮುಗಳು ಇದಂ ನಿಂಬೇಹುಳಿಯಲ್ಲಿ ತೇದು ತೊಡೆಯಲು ಬಾಯಬಸಲೆ(?) ಮಾಣ್ಗುಂ (ವಿವೃವಿ. ೮). **ಹೊಮ್ಮುಗುಳು:** ೨. ''ವಸುಜಾಲಕಂ ಹೊಮ್ಮುಗುಳು'' (ಮಂಗರಾ. ೪೨-೩೯); ಹೊಮ್ಮುಗುಳಿನ[ಪಾಠಾಂ.ಯ] ಪಂಚಾಂಗಸಮೇತಂ ಕಟುತ್ರಿಕಮಂ ತತ್ಸಂಚಿತ ಚೂರ್ಣಮನೂದುಗೆ ಸಂಚಳನಾಸಿಕದೊಳಹಿವಿಷಾಪಹಮಕ್ಕುಂ (ಏಪುದ. ೭-೪೫); ಹೊಮ್ಮುಗುಳು, ವಿಷ್ಣುಕ್ರಾಂತಿ ಸಹ ಕಷಾಯವಿಕ್ಕಿ . . . ತೆಗೆದುಕೊಳ್ಳಲು ಜ್ವರಂ ಮಾಣ್ಗುಂ (ಸಕವೈ. ೧೦೯). [ಹೊಂ (< ಪೊನ್) + ಮುಗುಳ್$_2$]

ಹೊಮ್ಮುಗುಳು 'ಹೊಮ್ಮುಗುಳ್' ನೋ.

ಹೊಮ್ಮುಗುಳ್ಮಾಲೆ (ನಾ). ಚಿನ್ನದ ಮೊಗ್ಗುಗಳಿರುವ ಸರ ,– ಹಾರ: ಪೊಮ್ಮಡಿ ಬೆಳ್ಳಿಯ ಪೂಮಾಲೆ ಮಿಸುನಿಯ ಹೊಮ್ಮುಗುಳ್ಮಾಲೆಯ ನಿನ್ನ ತಮ್ಮಂದಿರೇನು ಕಳುಹಿದರೂ (ಭರಚ. ೧೦-೭). [ಹೊಮ್ಮುಗುಳು + ಮಾಲೆ]

ಹೊಮ್ಮುಗೆ (ನಾ). ಅಭಿವೃದ್ಧಿ; ಏಳಿಗೆ: ಹೊಸಹೊಸತು ಕಣ್ಣಾಗಿ, ಬೆಳಕಾಗಿ, ಬೆಳೆಯಾಗಿ ಕೂಡುತಿಹ ಕನ್ನಡದ ಹೊಮ್ಮುಗೆಯ ಕಾವಾಗಿ . . . ಬಾಳು ಎಲೆ ಬಾವುಟ! (ಹೊಂಗಳು. ೨೪-೨೩). [ಹೊಮ್ಮು$_2$ (< ಪೊಮ್ಮು$_1$)+ - ಗೆ]

ಹೊಮ್ಮುಡಿ 'ಪೊನ್ಮುಡಿ' ನೋ.

ಹೊಮ್ಮುನುಡಿ (ಕ್ರಿ). ಜಂಬದ ಮಾತನ್ನಾಡು; ಸೊಕ್ಕಿನ ಮಾತನ್ನಾಡು: ಈ ಮಾತುಗಳ್ಯಾವತ್ತು ನೀನು ಯೋಚಿಸಿ ಹೊಮ್ಮುನುಡಿಯದೆ ಯಮ್ಮ ರಮಣಿಯ ಬಿಟ್ಟು ಆ ಕಡೆಗೆ ಸಾರೋ (ದುಶ್ಶಾಕ. ೪೬). [ಹೊಮ್ಮು$_2$ (< ಪೊಮ್ಮು$_1$) + ನುಡಿ$_1$]

ಹೊಮ್ಮೂಡಿಗೆ 'ಪೊಮ್ಮೂಡಿಗೆ' ನೋ.

ಹೊಮ್ಮೃಗ (ನಾ). ಕಾಂಚನಮೃಗ; ಸುವರ್ಣಮೃಗ: ಹೊಮ್ಮೃಗವೆತ್ತ ವಾನರರ ಸೇರುಪಡಿ ತಾನೆತ್ತ ದೈವಪ್ರೇರಣೆಯದ್ದೆ ಸಲ್ಲದಿದು (ತೂರರಾ. ೬-೫೧-೮೪). 'ಹೊಮ್ಮಿಗ' ಪರಾ. [ಹೊಂ (< ಪೊನ್) + ಮೃಗ]

ಹೊಮ್ಮೇಳ (ನಾ). ಚಿನ್ನದಿಂದ ಕೂಡಿದುದು; ಸ್ವರ್ಣಖಚಿತವಾದುದು: ಹೊಂಗಂಟೆ ಹೊಮ್ಮೇಳದ ಕಠಾರಿಗಳು . . . ಬೇಡರಿಮ್ಮೆಯ್ಯೊಳಿದವಿತ್ತೊಗ್ಗಿನಲಿ (ವೋಹತ. ೧೯-೧೧). [ಹೊಂ (< ಪೊನ್) + ಮೇಳ (= ಮೇಲ)]

ಹೊಮ್ಮೇಱು (ಕ್ರಿ). ಉತ್ಸಾಹ ಅಧಿಕವಾಗು: ಹೊಗರೇಱೆ ಹೊಮ್ಮೇಱೆದೊಡನೆ ಹಾಡುವಳಾಕೆ (ಭರತ. ೧೧-೪೭). [ಹೊಮ್ಮು$_2$ (< ಪೊಮ್ಮು$_1$) + ಏಱು$_1$ (< ಏಱ್$_1$)]

ಹೊಮ್ಮೊನೆ (ನಾ). ಹೊಂಬಣ್ಣದ ತುದಿ,– ಕೊನೆ: ಹಸುರಂಗಿಯು ಮೊಗ್ಗೆಯ ಮೈಮುಚ್ಚಿ ತುದಿಮೊಗದಾ ಹೊಮ್ಮೊನೆಯನೆ ಬಿಚ್ಚಿ ಮೆರೆವೊಲೆ, ಹಸಿಹೊದಿಕೆಯು ಮೈಹೊಚ್ಚಿ ಮೆರೆದಿದೆ ಮಗುಮೊಗದಿನಿವಾಯಿ! (ಕೋಗಿಲೆ. ೫೬-೧೪).

[ಹೊಂ (< ಪೊನ್) + ಮೊನೆ]

ಹೊಯ್$_1$ 'ಪೊಯ್$_1$' ನೋ.

ಹೊಯ್$_2$ 'ಪೊಯ್$_2$' ನೋ.

ಹೊಯ್$_3$ 'ಪೊಯ್$_3$' ನೋ.

ಹೊಯ್‌ಕಯ್ 'ಹೊಯ್ಕೈ' ನೋ.

ಹೊಯ್‌ಕಯ್ಯಿ 'ಹೊಯ್ಕೈ' ನೋ.

ಹೊಯ್‌ಕೈ 'ಹೊಯ್ಕೈ' ನೋ.

ಹೊಯಲು 'ಪೊಯಲ್' ನೋ.

ಹೊಯಸಣ 'ಪೊಯ್ಸಳ' ನೋ.

ಹೊಯಸಳ 'ಪೊಯ್ಸಳ' ನೋ.

ಹೊಯಿ$_1$ 'ಪೊಯ್$_1$' ನೋ.

ಹೊಯಿ$_2$ 'ಪೊಯ್$_2$' ನೋ.

ಹೊಯಿಕಯ್ 'ಹೊಯ್ಕೈ' ನೋ.

ಹೊಯಿಕುಟ್ಟು (ನಾ). ಕಾದಾಟ; ಯುದ್ಧ; ಹೋರಾಟ: ಮಸಣತಂಮ್ಮನ ಮಗ ವೀರಮಸಣನು ಹೊಯಿದು ಹೊಯಿಕುಟ್ಟಾಡಿ ಉಭಯ ಬಿಲ್ಲಣ ಬಹರಿಯಯೇಱಿದ ಕುದುರೆಯನುಮಿಱಿದ ಕಾಲಾಳನು ತಿವಿದು ಸುರಲೋಕಪ್ರಾಪ್ತನಾದನು (ಎಕ.VI. ಚಕ್ರಮ. ೩೬-೧೦; 1292). [ಹೊಯಿ$_1$ (< ಪೊಯ್$_1$) + ಕುಟ್ಟು$_2$]

ಹೊಯಿಕೆಯ್$_1$ 'ಹೊಯ್ಕೈ' ನೋ.

ಹೊಯಿಕೆಯ್$_2$ (ನಾ). ಎರಕ ಹೊಯ್ಯುವಿಕೆ: (ಕ).

[ಹೊಯಿ$_2$ (< ಪೊಯ್$_2$) + ಕೆಯ್$_2$?]

ಹೊಯಿಕೈ 'ಹೊಯ್ಕೈ' ನೋ.

ಹೊಯಿಗಡುಬು 'ಹೊಯ್ಗಡುಬು' ನೋ.

ಹೊಯಿಗಲ, ಹೊಯಿಗಿಲ (ನಾ). ೧. ಒಂದು ಬಗೆಯ ಭಕ್ಷ್ಯ: "ತುಪ್ಪ ಹಾಲೆರಡಱಲಿ ತಾಳಿದ ಹೊಯಿಗಲ [ಪಾಠಾಂ.ಯ್ಗಲಿ ನಿಲ]ವು ಕ್ಷೀರಸಂ ಕೀಲಸಾಖ್ಯಂ" (ಮಂಗರಾ. ೬೪-೩); ಹೊಯ್ದುರಿಸಿದ ಹೊಯಿಗಲದಂತೆ ಭೋಗಿಸಿಹೆನೆಂದಡೆ ಕರ್ತೃತ್ವವಿಲ್ಲ (ವೋಳಮಾ. ೧೯೩-೭೨೬). **ಹೊಯಿಗಿಲ:** ೨. (?): ಬೀಜ ಹುಟ್ಟುವ ತತ್ಕಾಲವೆಂತೆಂದಡೆ ಹೊಯ್ದಿದ್ದ ಹೊಯಿಗಿ[ಪಾಠಾಂ.ನಿ]ಲದಲ್ಲಿಯೆ ಬೇರು ಬಿಟ್ಟು ಸಸಿ ಬೆಳೆದು ಎಲೆ ನೀಡಿ ಫಲ ಬೆಳೆದುದುಂಟೆ (ಸಕಪ.ಕ. II. ೫೫೪-೧೫೬೯). [?]

ಹೊಯಿಗಿಲ 'ಹೊಯಿಗಲ' ನೋ.

ಹೊಯಿಗೆ$_1$ (ನಾ). ಕಾಯಿಸಿದ ಲೋಹದ ದ್ರವವನ್ನು ಅಚ್ಚಿಗೆ ಎರೆದುದು,– ಎರಕಕ್ಕೆ ಹಾಕಿದುದು: ಗೋಕಾವಿಯಲ್ಲಿ ಸಮಯಿ, ಪಂಚಪಾತ್ರೆ ಮುಂತಾದ ಹೊಯಿಗೆಯ ಪಾತ್ರೆಗಳು ಸರಸಾಗಿ ಹುಟ್ಟುತ್ತವೆ (ಕಭಾಗ. ೩೧೨).

[ಹೊಯಿ$_2$ (< ಪೊಯ್$_2$) + - ಗೆ]

ಹೊಯಿಗೆ$_2$, ಹೊಯ್ಗೆ (ನಾ). ಮರಳು; ಉಸುಕು; ಉಸುಬು: ಮನೆಯ ಹಿಂದಿನ ಹೊಯಿಗೆದಿನ್ನೆ ಕಳೆದರೆ ವಿಶಾಲವಾದ ಬೆಟ್ಟು ಬರುತ್ತದೆ (ಮರಮ. ೨೪); ಮಂಗಳೂರ ಕಡೆಯ ಸಮುದ್ರತೀರದಲ್ಲಿ ಹೊಯಿಗೆ, ಹಾಯಿ, ಬಹು ಸಾಮಾನ್ಯವಾಗಿ ಕೇಳಬರುವ ಪದ (ನಮ್ಮಸು. ೧೯೯); ಹೊಯಿಗೇಲಿ ಬರೆದು ಉಡೇಲಿ ಹಾಕಿಕೊಂಡ ಹಾಗೆ (ಗಾದೆ). **ಹೊಯ್ಗೆ:** ಹೊಯ್ಗೆಯಲ್ಲಿ ಒದ್ದಾಡಿ ಅವನ ಕೈಕಾಲೆಲ್ಲಾ ಧೂಳಿನಿಂದ ತುಂಬಿತ್ತು (ಪತಂಗ. ೪೩).

ಹೊಯಿಗೆಕೊತ್ತಳ = ಮರಳಿನ ಕೋಟೆ: ಬನ್ನಿರೋ ಬನ್ನಿ ತೆರೆತೆರೆಯಾಗಿ ಭೋರ್ಗರೆದು ನುಗ್ಗಿ ಕೊಚ್ಚಿರಿ ಹೊಯಿಗೆಕೊತ್ತಳಗಳ (ನಡಬಂ. ೬೪-೧೫). **ಹೊಯ್ಗೆಹಿಡಿಯಿಸು** = (ವಿದ್ಯಾಭ್ಯಾಸದ ಪ್ರಾರಂಭದಲ್ಲಿ) ಮರಳಿನ ಮೇಲೆ ಅಕ್ಷರವನ್ನು ಬರೆಯಿಸು; ಓನಾಮ ಹಾಕಿಸು: ಐದು ವರ್ಷ ತುಂಬಿ ಪ್ರಾಪ್ತವಾಗುವ ವಿದ್ಯಾದಶಮಿಯ ದಿನದಲ್ಲಿ ಹುಡುಗರಿಗೆ 'ಹೊಯ್ಗೆ ಹಿಡಿಯಿಸುವ' ಎಂದರೆ - ಕೈಹಿಡಿದು ಮರಳಿನಲ್ಲಿ ಬಳ್ಳಿ ಬರೆಯಿಸುವ ವಿದ್ಯಾರಂಭವನ್ನು ಮಾಡಿಸುತ್ತಾರೆ (ಕನ್ನಇ. ೧೨೪). [← ತುಳು. ಪೊಯ್ಯೆ]

ಹೊಯಿತ 'ಹೊಯ್ತ$_1$' ನೋ.

ಹೊಯಿಲ್ 'ಪೊಯಿಲ್' ನೋ.

ಹೊಯಿಲು$_1$ 'ಪೊಯಿಲ್' ನೋ.

ಹೊಯಿಲು$_2$ (ನಾ). (ಸೂಸಿದಂತೆ) ಹರಡಿರುವಿಕೆ, - ಹಬ್ಬಿರುವಿಕೆ: ಕಾಣರುಳಿದವರೀತನೊಬ್ಬನ ಕಾಣಿಕೆಗೆ ಕೌತುಕವ ಕಱೆದನು ಶೋಣತಾಮಲಬಹಳತೇಜದ ಹೊದಱ ಹೊಯಿಲಿನಲಿ (ಕುಮಾಧೀ. ೩-೬೬).

[ಹೊಯ್ಯಿ$_2$ (< ಪೊಯ್$_2$) + - ಅಲು (< - ಅಲ್$_2$)]

ಹೊಯಿಸಣ 'ಪೊಯ್ಸಳ' ನೋ.

ಹೊಯಿಸಳ 'ಪೊಯ್ಸಳ' ನೋ.

ಹೊಯಿಸು$_1$ 'ಪೊಯಿಸು$_1$' ನೋ.

ಹೊಯಿಸು$_2$ (ಕ್ರಿ). ಹೊಯ್ಯುವಂತೆ ಮಾಡು; ಸುರಿಸು: ಗುರುಹಿರಿಯರ ನಿಂದೆಯಿಲ್ಲಿ ಬಾಯೊಳೆಱೆದು ಸೀಸವ ಕಾಸಿ ಹೊಯಿಸುವರಲ್ಲಿ (ಪುರಂದ. ೨-೩೯-೧). 'ಪೊಯ್ಸು$_2$' ಪರಾ. [ಹೊಯ್$_2$ (< ಪೊಯ್$_2$) + - ಇಸು$_3$]

ಹೊಯಿಸೆಂಡು 'ಪೊಯ್ಸೆಂಡು' ನೋ.

ಹೊಯ್ಕ (ನಾ). (ಉಕ) ಬಡಿವಾರ; ಒಣಜಂಬದ ಮಾತು: ಇಂಥಾ ಹೊಯ್ಕದ ಮಾತು ನಾ ಎಲ್ಲಿ ಕೇಳಿಲ್ಲವ್ವ (ನಿಸರ್ಗ. ೩೪೮); ನನ್ನುಂದ ಹೇಳಬ್ಯಾಡ ಇಂಥಾ ಹೊಯ್ಕಾ (ಕನ್ನಚಾ. ೫೯). [ಹೊಯ್$_1$ (< ಪೊಯ್$_1$) + - ಕ$_3$]

ಹೊಯ್ಕಂಬಿ (ನಾ). (ಜನಸಮೂಹವನ್ನು) ನಿಯಂತ್ರಿಸುವ ದಂಡ ಮತ್ತು ಆ ದಂಡವನ್ನು ಹಿಡಿದವನು: ಸಂದಣಿಸಿ ನೃಪರಾಣವಾಸದ ಗೊಂದಣದ ದಂಡಿಗೆಗಳಿಳಿದವು ಮುಂದೆ ಹೊಯ್ಕಂಬಿ[ಪಾಠಾಂ.ಕೈಗಂಬಿ]ಗಳ ಜೋಡಿಯ ಜನಪಲಾಯನದEದ3 (ಕುಮಾಅ. ೭-೧೬). [ಹೊಯ್$_1$ (< ಪೊಯ್$_1$) + ಕಂಬಿ$_1$]

ಹೊಯ್ಕಯ್ 'ಹೊಯ್ಕೈ' ನೋ.

ಹೊಯ್ಕೈ, ಹೊಯ್‌ಕಯ್, ಹೊಯ್‌ಕಯ್ಯಿ, ಹೊಯ್‌ಕೈ, ಹೊಯಿಕಯ್, ಹೊಯಿಕೆಯ್$_1$, ಹೊಯಿಕೈ, ಹೊಯ್ಕಯ್ (ನಾ). ೧. ಎಣೆ; ಸರಿಸಮಾನ; ಸಾಟಿ: "ಪಡಿ ದೊರೆ . . . ಹೊಯ್ಕೈ ಹೋಟೆಯು ಸಂಗಡಮುಂ ಪಟಿ ಚೋಳಿ ಬುಧರಿನಕ್ಕುಂ ಸಮನುಂ" (ಕವಿಕಂ. ೧೩೬); ಸತ್ಯಸಾಹಿತ್ಯಗುಣಗಾಂಭೀರ್ಯವಿಸ್ತರಂ ಆ ಪ್ರವರಸೇನರಾಜಂಗೆ ಹೊಯ್ಕೈಯೆ [ಪಾಠಾಂ.ಹೊಯಿಕಯ್ಯೆ]ನಿಸಿ ವಿಪ್ರನೊಪ್ಪುವನಾ ಪುರಕ್ಕೆ ಧನಪತಿಯೆನಿಸಿ (ಸುಲುರ. ಹ. ೧೬೩-೪). ೨. ಸಮಾನವಾದ ವ್ಯಕ್ತಿ; ಸರಿಸಾಟಿಯಾದ ವ್ಯಕ್ತಿ: ಕಡುಚಲುವಿಕೆಯೊಳಚ್ಚರಿಯರಿಗೆ ಹೊಯ್ಕೈಗಳೆನಿಸುವ ತರಳನಯನೆಯರೊಪ್ಪಿದರು ಕರ್ಣಾಟವನಿತೆಯರು (ಕುಮಾಉ.ಓರಿಗ.೮-೫೦). ೩. ಸ್ಪರ್ಧೆ; ಪೈಪೋಟಿ: ಹಗೆಗಳಲ್ಲಿಯ ಇತ್ತಂಡಕ್ಕೂ ಹೊಯ್ಕೈಯಾಗಿ, ಎರಡೂ ನಾಮಾವಶೇಷವಾದಂತೆಯೆ ಆಯಿತು (ಹಗಲಿ. ೩೯). **ಹೊಯ್‌ಕಯ್:** ೧. ಕುರುಸಭೆಯು ವೈಭವದಲ್ಲಿ ಪಾಂಡವಸಭೆಗೆ ಹೊಯ್‌ಕಯ್ ಆಗಿ ಪರಿಶೋಭಿಸುತ್ತಿತ್ತು (ರಾಜಸೂ. ೮೮). **ಹೊಯ್‌ಕಯ್ಯಿ:** ೧. ಕಾವ್ಯಕಲಾಪ್ರಪ್ಪಿಯಿಂದ ಪಂಪಭಾರತಕ್ಕೆ ಹೊಯ್‌ಕಯ್ಯಾಗಿ ನಿಲ್ಲಲಾರದು ಆತನ ಆದಿಪುರಾಣ ಬಹುವಿಷಯಗಳಲ್ಲಿ (ಕಸಾಚಿ. ೯೨). **ಹೊಯ್‌ಕೈ:** ೧. ತನಗೆ ಹೊಯ್‌ಕೈ [ಪಾಠಾಂ.ಹೊಯ್ಕೈ]ಯಪ್ಪ ಭೂಭುಜರನೋಲ್ಮೆಸಿ ಧನವನಾರ್ಜಿಸಿ ಸೆಱೆಯ ಬಿಡಿಸುವನೆಮ್ಮ

ಜನಪನು (ಪಚಿಕಾ.೧.೨-೪೭); ಸುರಪನ ಗಜದ ಹೊಯ್ಕೈಯಾನೆ ಹಣಗಿತು ಭೀಮಸೇನನಲಿ (ಕುವ್ಯಾದ್ರೋ. ೩-೩೪); ನಿಮ್ಮ ಮುತ್ತಯ ದಶರಥನು ಮಾಡಿದ ಮಹಾಧ್ವರದೆಸಕಿದು ಹೊಯ್ಕೈಯೆನಲು ಮಾಡಿದನು ಸತ್ಯತುವ (ತೊರಡಾ .೧-೧೨-೨೭); ಸಾರ್ವಜನಿಕರೊಂದಿಗೆ ಸರಕಾರವೂ ಹೊಯ್ಕೈಯಾಗಿ, ಕ್ಷಾಮನಿವಾರಣೆಗಾಗಿ ದುಡಿದಿದ್ದರೆ ಬರಗಾಲದ ಬೇಗುಯಿಂದ ಜನರಿಗೆ ಮುಕ್ತಿ ದೊರೆಯುತ್ತಿತ್ತೋ ಏನೋ (ಎದ್ಕಾರ.೧೪೯). **ಹೊಯಿಕಯ್**: ೧. ನುಡಿ ಹೊಯಿಕಯ್ಯಿ XXX ಕಲಿತನಕ್ಕೆಂಬಂತು (ಮೃಆರಿ. ೧೯೩೭, ೩೭-೩೯: 1196). **ಹೊಯಿಕೆಯ್**$_1$: (ಪ). **ಹೊಯಿಕ್ಕೆ**: ೧. ಇವರಜುವರ ಕೂಡಿ ಹೊಯಿಕ್ಕೆಯಾಗಿಪ್ಪವನ ಕಂಡು (ಶೂನ್ಯಸಂ .೨೮೪-೭೩೦); ವರರೂಪಿನೊಳು ರತಿಗೆ ಹೂಣಕೆ ಸೌಭಾಗ್ಯದೊಳು ಸಿರಿಗೆ ಹೊಯಿಕ್ಕೆ . . . ಎನಿಸಿ ಮೆಲ್ವಳು ಹರಿಶ್ಚಂದ್ರನೃಪನರಸಿ (ಪಚಿಕಾ. ೧-೪೪). **ಹೊಯ್ಯುಯ್**: ೧.''ಸರಿ ದೊರೆ . . . ಹೊಯ್ಯ [ಪಾಠಾಂ.ಯ್ಕೆ]ಯ್, ಹೋಟ, ಸಂಗಡಂ.- ಈ ೧೮ ಸಮಾನಕ್ಕೆ ಪೆಸರ್''(ಕಶಸಾ. ೫೯-೨೯೧); ಗಂಗೆಗೆ ಪವಿತ್ರತೆಯೊಳಿಕೆಮಿಗಿಲರುಂಧತಿಗೆ ಹೊಯ್ಯುಯ್ ಪತಿವ್ರತದೊಳ್ (ಪದ್ಮರಾ. ೩-೭೯).

[ಹೊಯ್$^{}_1$(< ಪೊಯ್$^{}_1$) + ಕೈ$_1$ (< ಕೆಯ್$_2$)]

ಹೊಯ್ಗಡುಬು, ಹುಯಿಗಡುಬು, ಹುಯ್ಗಡುಬು (ನಾ). ೧. (ಹೂರಣ ಅಥವಾ ಮಸಾಲೆಯನ್ನು ಕಣಕದ ಹಾಳೆಯಲ್ಲಿಟ್ಟು) ಇಡ್ಲಿಯಂತೆ ಹಬೆಯಲ್ಲಿ ಬೇಯಿಸಿ ಮಾಡುವ ಒಂದು ಬಗೆಯ ಸಿಹಿ ಅಥವಾ ಖಾರದ ಭಕ್ಷ್ಯ. ೨. ಹುದುಗನ್ನು ತಟ್ಟೆಯಲ್ಲಿ ಹೊಯ್ದು ಆವಿಯಲ್ಲಿ ಬೇಯಿಸಿ ಮಾಡುವ ಇಡ್ಲಿ; ತಟ್ಟೆ ಇಡ್ಲಿ: ಅಡುಗೂಳವರ್ ದೋಸೆ ಕಜ್ಜಾಯ ರೊಟ್ಟಿ ಹೊಯ್ಗಡು [ಪಾಠಾಂ. ಹೊಯಿಗಡು] ಬತಿರಸಂಗಳುಪ್ಪಿನಕಾಯಿ . . . ಮಾಜುವರ್ ಬರುತಿರ್ದರು (ಚಲಪು. ೪೭-೪೨). **ಹುಯಿಗಡುಬು**: ೨. ಬಿಳಿಗಣಜಲಬೇರಂ ನೆಳಲಲ್ಲಿ ಒಣಗಿಸಿ . . . ಹುಯಿಗಡುಬ ಬೇಯಿಸುವಂತೆ ಬೇಯಿಸಿ (ಸಕವ್ಯ. ೧೩೪). **ಹುಯ್ಗಡುಬು**: ೨. ಅವರು ಹುಯ್ಗಡುಬು ಮಾಡುವುದರಲ್ಲಿ ಎತ್ತಿದ ಕೈ (ರೂಢಿ).

[ಹೊಯ್$^{}_2$ (< ಪೊಯ್$^{}_2$) + ಕಡುಬು (< ಕಡುಂಬು)]

ಹೊಯ್ಗುಳ್, ಹೋಗುಳು (ನಾ). ಹೊಡೆತ; ಏಟು; ಪ್ರಹಾರ: ಬರಬರಲು ರಿಪುಭಟನ ಹೊಯ್ಗುಳ ಧರಧುರಕೆ ಕಲಿ ಸಾತ್ಯಕಿಯ ತರಹರಣೆ ತಗ್ಗಿತು (ಕುವ್ಯಾದ್ರೋ. ೧೪-೧೦); ಆಮರಾಳಿ ಹೊಗಳಲು ಹೊಯ್ಗುಳಿನ ಪೊಸನಾಟಕವನಭಿನಯಿಸಿ ಕಾದಿದರು (ಕುವ್ಯಾಕ. ೧೯-೧೫); ಎಡದ ದಂಡೆಯೊಳೊತ್ತಿ ಹೊಯ್ಗುಳ ಕಡುಹ ತಪ್ಪಿಸಿ ಕೌರವೇಂದ್ರನ ಮುಡುಪ ಹೊಯ್ದನು ಭೀಮ (ಕುವ್ಯಾಗ. ೭-೨೪). 'ಹೊಡೆಗುಳ್', 'ತಿವಿಗುಳ್' ಪರಾ. **ಹೋಗುಳು** : ಇಬ್ಬರ ಬಿಟ್ಟು ಒಬ್ಬನ ಹಿಡಿದು ಅಬ್ಬರಿಸಲಾಗಿ ಅವನೆದ್ದುಬ್ಬಿ ಹೊರುವ ಹೊಯಿದ ಹೋಗುಳಿನಲ್ಲಿ ಅತ್ತೆ ತಂದ ಅಳಿಯನ ನಾಮ ನಷ್ಟವಾಯಿತ್ತು (ತೋಳಮಾ. ೧೭೭-೭೭೮). [ಹೊಯ್$^{}_1$ (< ಪೊಯ್$^{}_1$) + - ಗುಳ್$_2$]

ಹೊಯ್ಸೆ 'ಹೊಯಿಗೆ$_2$' ನೋ.

ಹೊಯ್ಕೆಂಡಾಡು 'ಪೊಯ್ಸೆಂಡಾಡು' ನೋ.

ಹೊಯ್ಕೆಂಡು 'ಪೊಯ್ಸೆಂಡು' ನೋ.

ಹೊಯ್ತ, ಹೊಯಿತ (ನಾ). ೧. ಹೊಡೆತ; ಏಟು; ಪ್ರಹಾರ: ಅವರೆಲ್ಲರು ಕಾಲನ ಭಯಂಕರವಾದ ಹೊಯ್ತದಲ್ಲಿ ನುಣ್ಣುಗೂಡಿಹೋಗಿ ಕೀರ್ತಿರೂಪದಿಂದ ಮಾತ್ರ ಉಳಿದಿರುವರು (ಭಾಮೃತ. ೫೧೦). ೨. ಕತ್ತರಿಸುವಿಕೆ (?): ಛೋಟನಂ, ಛೋಟನೀಯಂ, ಈ ೨ ಹೊಯ್ತಂ (ಕಾಶಕ್ಯ. ೨೨೮) . **ಹೊಯಿತ**: (ಪ).

[ಹೊಯ್$^{}_1$(< ಪೊಯ್$^{}_1$) + - ತ$_2$]

ಹೊಯ್ದಲೆ (ನಾ). ಕತ್ತರಿಸಿದ ತಲೆ; ಕಡಿದ ಶಿರಸ್ಸು: ಹೊಯ್ದಲೆ ಚಿಗಿತು ಹೊಸತಾದುದು (ಶಿವಗೀ. ೧೯೩-೯೭೦). [ಹೊಯ್$^{}_1$ (< ಪೊಯ್$^{}_1$) + ತಲೆ$_1$]

ಹೊಯ್ದಾಣೆ (ನಾ). ಹೊಡೆಯುವ ದೊಣ್ಣೆ,- ಬಡಿಗೆ: ಐನೂಟಲ ಹೊಯ್ದಾಣೆಗಳ ಬಿಜುಗಿಡಿಯ ಹಿರಿಯಬ್ಬಣದ ಹೊಯ್ಗುಗಳ ಹೂಣಿಕೆಯ ಸಬಳಿಗರ . . . ಧಾಳಾಧೂಳಿ ಬಲುಹಾಯ್ತು (ಕುವ್ಯಾಶ. ೨-೧೪).

[ಹೊಯ್$^{}_1$ (< ಪೊಯ್$^{}_1$) + ದಾಣೆ$_3$ (< ಧಾಣೆ$_1$)]

ಹೊಯ್ದು$_1$ 'ಪೊಯ್$^{}_1$' ನೋ.

ಹೊಯ್ದು$_2$ 'ಪೊಯ್$^{}_2$' ಪರಾ.

ಹೊಯ್ನಾರು 'ಪೊಯ್ನಾರ್' ನೋ.

ಹೊಯ್ಮಳೆ (ನಾ). (ಧಾರಾಕಾರವಾಗಿ) ಸುರಿಯುವ ಮಳೆ: ಸ್ವಲ್ಪ ಕಾಲ ಎರಮಿಸಿದ್ದ ಮಳೆಗಾಲದ ಹೊಯ್ಮಳೆ ಮತ್ತೆ ಸುರಿಯತೊಡಗಿದಾಗ ಗುತ್ತಿ ಎದ್ದು ಹೊರಟನು (ಮಳಮ. ೨೭೬). [ಹೊಯ್$^{}_2$ (< ಪೊಯ್$^{}_2$) + ಮಳೆ (< ಮೞೆ)]

ಹೊಯ್ಮಾಲಿ 'ಹೊಯ್ಮಾಲೆ' ನೋ.

ಹೊಯ್ಮಾಲಿತನ (ನಾ). ೧. ಸೋಗಲಾಡಿತನ: ವಾಡಿಕೆಯಾಗಿ ಹಂಗಸರಲ್ಲಿರತಕ್ಕ ಹೊಯ್ಮಾಲಿತನದ ಗಂಧವು ಕೂಡ ಆಕೆಯಲ್ಲಿ ಇದ್ದಿಲ್ಲ (ಕಮುದಿ. ೩೩). ೨. ಮನ ಬಂದಂತೆ ನಡೆಯುವಿಕೆ; ಸ್ವಚ್ಛಂದಪ್ರವೃತ್ತಿ: ಮೈಮರತು ಮಲಗುವುದೆ ಧರಣಿಗೆ ನಮಸ್ಕಾರ . . . ಹೊಯ್ಮಾಲಿತನವೆಲ್ಲ ಹರಿಯ ವಿಹಾರ (ಎದಾಕ್ಕ. ೨೫-೩).

[ಹೊಯ್ಮಾಲಿ (< ಹೊಯ್ಮಾಲೆ) + - ತನ]

ಹೊಯ್ಮಾಲೆ, ಹೊಯ್ಮಾಲಿ (ನಾ). ೧. ಸೋಗು; ಒಯ್ಯಾರ; ವಿಲಾಸ: ಹೊಯ್ಮಾಲೆಯ ಪೊಳಲು ಹದಿರಿನ ಹಕ್ಕೆಯನ್ಯಾಯದಂಗಡಿಯನೆಲೆಡೆಗೊಂಡುದಾ ಸೂಳೆಗೇರಿ (ಕರಾಶಾಂ. ೨೮-೨೫); ಏನಾದರೂ ಹೊಯ್ಮಾಲೆಯ ಮಾತನ್ನಾಡಿ ಆಕೆಯನ್ನು ರೇಗಿಸದಿದ್ದರೆ ಇವನಿಗೆ ಸಮಾಧಾನವಿರದು (ಬೆಳಮು. ೧೨೮). ೨. ಗೊಂದಲ; ಕ್ಷೋಭೆ: ನಿನ್ನಿಂದ ನನಗೆ ನನ್ನಿಂದ ನಿನಗೆ ತಾಪ ಮುನ್ನುಕ್ಕಿ ಹೊಯ್ಮಾಲೆಯಾಯ್ತು ಇನ್ನಿಲ್ಲ ಹೊಯ್ಮಾಲೆ ಹೂಮಾಲೆಯಾಯ್ತೆಂಬ ಗನ್ನಡೊಳ್ಮಾಲೆಯಿಕ್ಕಿದಳು (ಧಾಚ. ೪೧-೨೫); ನಮಗೊದಗಿಹುದು ಕಲಹವ ಮಾಡಲಿವನಲ್ಲಿ ಯಾತಕೀ ಹೊಯ್ಮಾಲೆ . . . ಎಂದು ಖಚರವ್ರಾತ ತಿರುಗಿದರು (ಜನಭಾ. ೫೦-೫೯); ಎಲ್ಲವೂ ಸರಿಗಟ್ಟಾದರೆ ಹೊಯ್ಮಾಲೆ ತಪ್ಪಿದ ಹಾಗಾಯಿತಲ್ಲ (ಕರಾಕಾ.೧೭). ೩. ಹೊಡೆತದ ಸರಣಿ: ಕಾಲದ ಹೆಚ್ಚು ಕುಂದಲ್ಲದೆ ಮೃತಿಯ ಹೊಯ್ಮಾಲೆ [ಪಾಠಾಂ. ಹೊಯಿಮಾಲೆ] ಬಿಡದು ಬೊಮ್ಮನನು (ಕರಾಶಾಂ. ೩೩-೧೦೨). ೪. ಸ್ವೇಚ್ಛಾಪ್ರವೃತ್ತಿ; ಸ್ವಚ್ಛಂದವರ್ತನೆ: ಪ್ರತಾಪರಾಜ ಇಂಥ ಹೊಯ್ಮಾಲೆಗಳಿಗೆ ತಕ್ಕವನಲ್ಲವೆಂಮ ಅವನನ್ನು ಬಲ್ಲ ಜನರು ನುಡಿಯುತ್ತಾರೆ (ಗೊಂಡಾರ. ೪). **ಹೊಯ್ಮಾಲಿ**: ೫. ಸೋಗಲಾಡಿ; ಒಯ್ಯಾರಿ; ಒನಪುಗಾತಿ: ಒಮ್ಮೊಮ್ಮೆ ಹಣ್ಣು ಹೊಯ್ಮಾಲಿಯಾಗಿ ಒಣಸೋಗು ಮಾಡಿ ಹಾಸ್ಯಕ್ಕೆ ಗುರಿಯಾಗುವುದೂ ಉಂಟು (ಕನ್ನಚಾ. ೫೯). ೬.ಜಾರೆ; ಹಾದರಗಿತ್ತಿ: ಹೋದರ್ಹೋದಳು ಆ ಹೊಯ್ಮಾಲಿ (ನಡದಾ.I, ೬೨೦); ಆ ಹೊಯ್ಮಾಲಿಯಿಂದ ನನಗೆ ಅಂಜಿಕೆ ಏನು (ಮುತ್ತರಾ. ೧೬೯).

[← ತುಳು. ಒಯ್ಮಾಲೆ, ಒಯಿಮಾಲೆ]

ಹೊಯ್ಯಲು 'ಪೊಯಲ್' ನೋ.

ಹೊಯ್ಯಿ 'ಪೊಯ್$^{}_2$' ನೋ.

ಹೊಯ್ಯು$_1$ 'ಪೊಯ್$^{}_1$' ನೋ.

ಹೊಯ್ಯು$_2$ 'ಪೊಯ್$^{}_2$' ನೋ.

ಹೊಯ್ಯಾಟ (ನಾ). ಅಲುಗಾಟ; ಹೊಯ್ದಾಟ: ಓಟ ಭರತದ ಭರವಸದ ಹೊಯ್ಯಾಟ ದುರುಲಹರಿಗಳ . . . ರೌದ್ರದಿಂದ ಸಮುದ್ರ ರಂಜಿಸಿತು (ತೊರಡಾ. ೪-೧೨-೨). [ಹೊಯ್ಯು (< ಪೊಯಲ್) + ಆಟ]

ಹೊಯ್ಯಿಡು 'ಪುಯ್ಯಲಿಡು' ನೋ.

ಹೊಯ್ಯು 'ಪೊಯಲ್' ನೋ.

ಹೊಯ್ಯಡೆ 'ಪೊಯ್ಯಡೆ' ನೋ.

ಹೊಯ್ಯಲೆ (ನಾ). ಬೀಸಿ ಒಗೆಯುವ ಬಲೆ: ಹೊಯ್ಯಲೆ [ಪಾಠಾಂ. ಹೊಯಿವಲೆ] ಹರಹುವಲೆಗಳೆಳೆವಲೆ . . : ಮೊಕರವಲೆ ಬೇಡರ ಸಿರದೊಳೊಪ್ಪಿದುದು (ಸಾಳ್ವಭಾ. ೫-೧೯).

[ಹೊಯ್$^{}_1$ (< ಪೊಯ್$^{}_1$) + ಬಲೆ$_1$]

ಹೊಯ್ಯಣ 'ಪೊಯ್ಯಳೆ' ನೋ.

ಹೊಯ್ಯಳೆ 'ಪೊಯ್ಯಳೆ' ನೋ.

ಹೊಯ್ಯು$_1$ 'ಪೊಯ್ಯು$_1$' ನೋ.

ಹೊಯ್ಯು$_2$ 'ಪೊಯ್ಯು$_2$' ನೋ.

ಹೊಯ್ಹಾಲು, ಹುಯ್ಹಾಲು (ನಾ). ತಾಯಿಹಾಲು ಸಾಲದೆ ಇದ್ದಾಗ

ಎಳೆಮಗುವಿಗೆ ಹಾಕುವ ಹಸುವಿನ ಹಾಲು ಮುಂತಾದುವು; ಮೇಲುಹಾಲು: ಮೊಲೆದುಂಬರುವ ಹಾಲು ನಿನಗಾಗಿ ಸುರಿಯುತಿವೆ: ಅಲ್ಲ! ಹೊಯ್ಹಾಲಲ್ಲ! ಎದ್ದುಏಳು! (ಚಿಂತನ. ೭-೨೧); ತಮ್ಮಮಗುವಿಗೆ ತಾವೇ ಹೊಯ್ಹಾಲು ಹಾಕಿದರೂ ಸರಿ; ಸವತಿಯ ಮೊಲೆ ಬೇಡ ಎಂದರು (ಗಳಗ. ೫೨). **ಹುಯ್ಹಾಲು** : ತನಗೆ ಎದೆ ಹಾಲಿರದೆ ಮಕ್ಕಳಿಗೆ ಹುಯ್ಹಾಲು (ಎಳೆಜೀ. ೧೭೧). [ಹೊಯ್ $_2$ (< ಪೊಯ್ $_2$) + ಹಾಲು $_1$ (< ಪಾಲ್ $_1$)]

ಹೊರ 'ಪೊಱ' ನೋ.

ಹೊರಅಂಕ (ನಾ). ಖಡ್ಗಯುದ್ಧದಲ್ಲಿ ಒಂದು ವರಸೆ: ಮೇಲುಕಡೆಯಲ್ಲಿ ಹೊರಗೆ ವಳಗೂ ವಂದು ಏಟು ಕೆಳಗಡೆಯಲ್ಲಿ ಹೊರಗೆ ವಳಗೂ ಯರಡು ಏಟು ಮೇಲಗಡೆಯಲ್ಲಿ ಹೊರಗೆ ವಳಗೆ ಯರಡು ಏಟು ಆವುದಕ್ಕೆ ಉಂಟು ಅದು ಹೊರಅಂಕಯಂದು ನುಡಿಯಲ್ಪಡುವುದು (ಖಡ್ಗಚಿ. ೫-೪೩). 'ಒಳಅಂಕ' ಪರಾ.

[ಹೊರ (< ಪೊಱಗು) + ಅಂಕ $_2$]

ಹೊರಕ $_1$ (ನಾ). ಪೋಷಿಸಿಕೊಳ್ಳುವವನು; ಕಾಪಾಡಿಕೊಳ್ಳುವವನು: ಮಾಡಿ ಮಱುಗುವ . . . ಕೊಟ್ಟು ಹೊಟ್ಟೆರೋಗವಿಕ್ಕುವ ಘಟ್ಟಗನಿರವು ಬಟ್ಟೆಯ ಬಡಿದುಂಬ ಹೊಟ್ಟೆಯ ಹೊರಕರಂತೆ (ವೊಳಿಮಾ. ೪೮-೧೯೬).

[ಹೊರೆ $_1$ (< ಪೊರೆ $_1$) + - ಕ $_3$]

ಹೊರಕ $_2$ (ನಾ). ನಂಜಿಕೊಳ್ಳುವ ಪದಾರ್ಥ,- ಉಪ್ಪಿನಕಾಯಿ(?): ಗರಗರನಾದುದು ಕೂಟ್‌ನೆಯ್ ಸುರಯಿಯ ಕಂಪಾಯ್ತು ಸಟ್ಟುಗಕ್ಕಂ ಮೊಸರ್ಗಂ ಪಿರಿದುಂ ಪೋರ್ಕುಳಿಯಾದುದು ಕರಮಿನಿದಾಯ್ತಱಕೆ ಹೊದಕನಲ್ಲದೆ ಹೊರಕಂ (ಸೂಕ್ತಿಸು. ೧೧-೯೦); ಬೆಣ್ಣೆಕಾಸಿದ ತುಪ್ಪ ಹಪ್ಪಳಂ ನಸುನಿಂಬೆವಣ್ಣನಿಕ್ಕಿದ ಹಲವು ಪರಿಯ ಹೊರಕಂ ಶಾಕ ಬಾಳು ಕದಳಿಯ ಪಳಿದ್ಯ . . . ಕೊಳ್ಳುತ್ತಿರ್ದುದಾ ಭೂಸುರಾಳಿ (ಸಮ್ಯಕ್ತ. ೭-೨೪). [?]

ಹೊರಕಟ್ಟು 'ಹೊಱಕಟ್ಟು' ನೋ.

ಹೊರಕಡೆ 'ಪೊಱಗಡೆ' ನೋ.

ಹೊರಕಾಲು 'ಪೊಱಕಾಲ್' ನೋ.

ಹೊರಕೆಡವು 'ಹೊರಗೆಡಹು' ನೋ.

ಹೊರಕೆಯ್ಮೆ (ನಾ). ಸುತ್ತಮುತ್ತಲಿನ ಕೆಲಸ; ಹೊರಗಿನ ಕೆಲಸ: ಸುಡುವಳು ತಣಿಸಲೆನ ಮಾಳ್ಪ ಹೊರಕೆಯ್ಮೆಯೆನೆ ಕಂಬನಿಯ ಬೇಳ್ಪಂ . . . ಪಡೆದರ್ (ಕಾಲೂರ. ೧೫೫-೩೪೧). [ಹೊರ (< ಪೊಱಗು) + ಕೆಯ್ಮೆ (< ಕೈಮೆ $_1$)]

ಹೊರಕೆಲಸ 'ಹೊಱಗೆಲಸ' ನೋ.

ಹೊರಕೋಟೆ 'ಪೊಱಗೋಟೆ' ನೋ.

ಹೊರಕೋಣೆ (ನಾ). ಮನೆಯ ಹೊರಭಾಗದಲ್ಲಿ (ಪ್ರತ್ಯೇಕವಾಗಿರುವ) ಕೊಟಡಿ: ಬಲಗಡೆ ಗಂಡಸರ ಹೊರಕೋಣೆ ಇರಬಹುದು (ಬಾಣಾ. ೩೪). 'ಒಳಕೋಣೆ' ಪರಾ. [ಹೊರ (< ಪೊಱಗು) + ಕೋಣ್ $_2$ (< ಕೋಣ್)]

ಹೊರಗಟ್ಟು $_1$ (ಕ್ರಿ). ಹೊರಗೆ ಕಳುಹಿಸು, —ದೂಡು: ಅವಳ ತಂದೆಯು ವಿರಕ್ತನಾಗಿ ಅವಳನ್ನು ತನ್ನ ಮನೆಯಿಂದ ಹೊರಗಟ್ಟಿ ಬಿಟ್ಟನು (ಕಪಾಟಂ. ೬೪).

[ಹೊರಗೆ (< ಪೊಱಗೆ) + ಅಟ್ಟು $_1$]

ಹೊರಗಟ್ಟು $_2$ 'ಹೊಱಕಟ್ಟು' ನೋ.

ಹೊರಗಡೆ 'ಪೊಱಗಡೆ' ನೋ.

ಹೊರಗಣ 'ಪೊಱಗು' ಪರಾ.

ಹೊರಗಣಿಸು (ಕ್ರಿ). ಅಲಕ್ಷಿಸು: ಸುತೆಯ ನೋಡುವಡರಮನೆಗೆ ಮುನಿಪತಿಯ ಕಳುಹಲು . . . ಆತನ ರೂಹೀಕ್ಷಿಸುತ ಭಯದುದ್ಧತದಿ ತಗುಲೆನಲಾಳಿಯರು ನೂಕುತಲಿ ಹೊರಗಣಿಸಿದರು ಸೀತೆಯ ಬೆಸದಿ ನಾರದನಾ (ಜಿರಾಮಾ. ೧೩೮-೧೭).

[ಹೊರ (< ಪೊಱಗು) + ಗಣಿಸು]

ಹೊರಗಲು 'ಪೊಱಗು' ಪರಾ.

ಹೊರಗು 'ಪೊಱಗು' ನೋ.

ಹೊರಗೆ 'ಪೊಱಗೆ' ನೋ.

ಹೊರಗೆಡವು 'ಹೊರಗೆಡಹು' ನೋ.

ಹೊರಗೆಡಹು, ಹೊರಕೆಡವು, ಹೊರಗೆಡವು (ಕ್ರಿ). ೧. ಹೊರನೂಕು; ಆಚೆಗೆ ತಳ್ಳು. ೨. ಹೊರಬೀಳುವಂತೆ ಮಾಡು; ಪ್ರಕಟಿಸು; ಬಹಿರಂಗಗೊಳಿಸು: ಮಹಾವ್ಯಕ್ತಿಗಳು . . . ರಂಗಭೂಮಿಯ ಕುಶಲತೆಯನ್ನು ಯಾತಕ್ಕೆ ಹೊರಗೆಡಹ ಬಾರದು? (ರಾಯಿಕ. ೬೫); ಅವಳು ತನ್ನ ಭಾವಾಲೋಚನೆಗಳನ್ನು ಹೊರಗೆಡಹ ಲಾರಳೊ? ಅಥವಾ ಹೊರೆಗೆಡಹಲು ಅವಳಿಗಿಷ್ಟವಿಲ್ಲವೊ? (ಪುನರು. ೩೨೨). **ಹೊರಕೆಡವು**: ೨. ಉತ್ತಮ ಬರಹಗಳನ್ನು ಹೊರಕೆಡವಿ ಕನ್ನಡ ನುಡಿ ಸೇವೆ ಸಲ್ಲಿಸಲು ನಿರ್ಧರಿಸಿ (ಜೀವನ . ೧ ಅರಿಕೆ). **ಹೊರಗೆಡವು**: ೨. ನಿಮ್ಮ ಸೋಗನ್ನು ಇಂದು ಹರಿದು ಸುಟ್ಟು ನಿಮ್ಮ ಆಟವನ್ನು ಹೊರಗೆಡವಬೇಕಾಗಿದೆ (ಕಮನಿ. ೨೨೨); ಈ ರೀತಿಯ ಭಾವನೆಯನ್ನು . . . ಹೊರಗೆಡವಿದ್ದಾನೆ (ತತ್ವಪ್ರಾ. ೫೦೧).

[ಹೊರ (< ಪೊಱಗು) + ಕೆಡಹು (< ಕೆಡಪು)]

ಹೊರಗೆಲಸ 'ಹೊಱಗೆಲಸ' ನೋ.

ಹೊರಗೇರಿ 'ಹೊಱಗೇರಿ' ನೋ.

ಹೊರಗೋಡೆ (ನಾ). ಗೋಡೆಯ ಹೊರಭಾಗ,- ಹೊರಪಾರ್ಶ್ವ: ಪಡ ಸಾಲೆಯ ಬಾಗಿಲು ದಡಾರನೆ ಹೊರಗೋಡೆಗೆ ಅಪ್ಪಳಿಸಿದ ಸದ್ದು ಕೇಳಿ . . . ಹೆದರಿದಳು (ದೇವಹಂ. ೩೩). [ಹೊರ (< ಪೊಱಗು) + ಗೋಡೆ]

ಹೊರಚಕ್ರಮಂಡಿಗಾಲು (ನಾ). ಖಡ್ಗಯುದ್ಧದಲ್ಲಿ ಒಂದು ವರಸೆ,- ಭಂಗಿ: ಮೊಳಕಾಲ್ಗಳ ಪಾರ್ಶ್ವಗಳ ಬಾಹ್ಯಪ್ರದೇಶಗಳು ಭೂಮಿಯನ್ನು ಬೇರೆ ಬಾಹ್ಯಪ್ರದೇಶ ಹೊಂದಿದ್ದಾದರೆ ಅದರ ಹೆಸರು ಹೊರಚಕ್ರಮಂಡಿಗಾಲುಯಂದೂ ಹೇಳುವರು (ಖಡ್ಗಚಿ. ೪-೬೪). 'ಚಕ್ರಮಂಡಿಗಾಲು' ಪರಾ.

[ಹೊರ (< ಪೊಱಗು) + ಚಕ್ರ $_1$ + ಮಂಡಿ $_1$ + ಕಾಲು $_1$ (< ಕಾಲ್ $_1$)]

ಹೊರಚಾಚು (ಕ್ರಿ). ಹೊರಕ್ಕೆ ನೀಡು: ಕೊರಳನ್ನು ಹೊರಚಾಚಿ ಮೇವಿಗಾಗಿ ದಂಡೆಯ ಮೇಲಿದ್ದ ಒಣಹುಲ್ಲನ್ನು ಎಳೆಯುವಾಗ ಕಪಿಲೆಯ ಕೊಡು ತಾಗುವ ಸಪ್ಪಳ ಮಾತ್ರ ಚೆನ್ನಾಗಿ ಕೇಳಿಸುತ್ತಿತ್ತು (ದೇವಹಂ. ೧೩). [ಹೊರ (< ಪೊಱಗು) + ಚಾಚು $_1$]

ಹೊರಚಾವಡಿ 'ಹೊಱಚಾವಡಿ' ನೋ.

ಹೊರಚಾಳಿ (ನಾ). ೧. ಹೊರಗಿನ ನಡವಳಿಕೆ; ವರ್ತನೆ. ೨. (ಆಲಂ) ವ್ಯಭಿಚಾರ: ಮಾವನ ಹೊರಚಾಳಿಯ ಸಂಗತಿ ನಿಮ್ಮ ಗಮನಕ್ಕೆ ಬರುವುದೇ ಇಲ್ಲ (ಒಡ್ಡಉ. ೮೦). [ಹೊರ (< ಪೊಱಗು) + ಚಾಳ್ $_2$ (< ಚಾಲು)]

ಹೊರಚಿಮ್ಮು (ಕ್ರಿ). ಹೊರಕ್ಕೆ ಪುಟಿದು ಬರು; ಹೊರಹೊಮ್ಮು: ಭೂಮಿ ಮತ್ತಿತರ ಗ್ರಹಗಳು . . . ಸೂರ್ಯನಿಂದ ಅಗಾಧವಾಗಿ ಹೊರಚಿಮ್ಮಿದ ವಸ್ತುವೊಂದು ತಂಪಾಗುತ್ತಿರುವಾಗ ಉತ್ಪತ್ತಿಯಾದವು (ಭೂಹುಟ್ಟು. ೨೭).

[ಹೊರ (< ಪೊಱಗು) + ಚಿಮ್ಮು $_1$]

ಹೊರಚೆಲ್ಲು (ಕ್ರಿ). ೧. ಹೊರಗೆ ಸುರಿ, - ಎರೆ: ಈ ಪಾತ್ರೆಯಲ್ಲಿರುವ ನೀರನ್ನು ಹೊರಚೆಲ್ಲು (ರೂಢಿ). ೨. ಹೊರಸೂಸು; ವ್ಯಕ್ತಗೊಳಿಸು: ರಾಜಣ್ಣನ ಮಾತಿಗೆ ಗದ್ಗದಿತನಾಗಿ ಉತ್ತರಕೊಟ್ಟ ಆನಂದ - ಹೃದಯದ ಮಾರ್ದವತೆಯನ್ನೆಲಾ ಹೊರಚೆಲ್ಲಿ (ಮಾರಳಿ. ೧೬೧); ಆ ವಿಷಜ್ವಾಲೆಯನ್ನು ಆತ ನಾಲಗೆತುದಿಯಲ್ಲಿ ಕುಣಿಸಿ, ಹೊರ ಚೆಲ್ಲಬೇಕಾಗಿತ್ತು (ನವನೀ. ೧೫). [ಹೊರ (< ಪೊಱಗು) + ಚೆಲ್ಲು $_1$ (< ಚಲ್ಲು $_1$)]

ಹೊರಚ್ಚು (ನಾ). ೧. ಬೇರೆ; ಪ್ರತ್ಯೇಕ: ಸ್ವಸ್ಥಾನಗಳಲ್ಲಿಯೂ ಸ್ಥಾನವಂ ಬಿಟ್ಟು ಹೊರಚ್ಚಾಗಿಯೂಯಿರುವ ಧ್ರುವಗಳೆಂಬ ಹತ್ತು ಸುಳಿಗಳು ನಿರೂಪಿಸಲ್ಪಟ್ಟವು (ಸೌಂದಿ. ೩೧೯-೧೦); ಯಾವ ಶಾಸ್ತ್ರಜ್ಞನೂ . . . ಹೊರಚ್ಚಾಗಿದ್ದುಕೊಂಡು ತನ್ನದೇ ಆದ ಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸಿರುವ ಉದಾಹರಣೆಯು ಸಿಕ್ಕಲಾರದು (ಭೌತಿ. ೬೦); ಅದು ಹೆಚ್ಚುಕಡಮೆ ಕಾವ್ಯದಿಂದ ಹೊರಚ್ಚಾಗಿ ನಿಲ್ಲುತ್ತದೆ (ನಂಜುಂಡ. ೮೦). ೨. ದೂರ; ಅಂತರ: ವಿರಾಟನು . . . ದ್ರೋಣನ ಕಣ್ಣುಮುಂದೆ ನಿಲ್ಲಲಾರದೆ ಹೊರಚ್ಚಾಗಿ ಹೋದನು (ಕೃವಾಭೀ. ೧೨೫); ತಾನು ಲೋಕಕ್ಕೆ ಹೊರಚ್ಚಾಗಿರಬೇಕೆಂದು ಯುಧಿಷ್ಠಿರನು ಅರಣ್ಯವಾಸವನ್ನು ಬಯಸುತ್ತಿದ್ದನು (ಭೀಷ್ಮಚ. ೨೦೭). ೩. ಹೊರಗಡೆ: (ಕ).

ಹೊರಚ್ಚಾಸೆ = ಬೇರೆಯ ದಿಕ್ಕಿನಿಂದ; ಹೊರಗಿನ ಮಾರ್ಗವಾಗಿ: ಬೆಂಗಳೂರಿಗೆ

ಹೋಗದ ಹೊರಚ್ಚಾಸೆ ಹೊಸಕೋಟೆಯಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ೪೦ ಜನ ಸವಾರರಿಂದ ಅಡಗಿಯಿದ್ದು (ಹೃದರ. ೪೦).

[ಹೊರ (< ಪೊಱಗು) + ಅಚ್ಚು$_3$?]

ಹೊರಜಿ 'ಪೊರಜೆ' ನೋ.

ಹೊರಜಿಹಗ್ಗ, ಹೊರ್ಜಿಹಗ್ಗ (ನಾ). ಹೊಸೆದ ದಪ್ಪವಾದ ಹಗ್ಗ: ಸುವರ್ಣಮಯವಾದ ಹೊರಜಿಹಗ್ಗಗಳೂ . . . ಒಂದೊಂದು ಸಾವಿರವನ್ನು ತಂದು ಬಾಗಿಲಲ್ಲಿರುವ ಅಧಿಕಾರಿಗಳ ಸಮೀಪದಲ್ಲಿ ಕಾದಿದ್ದರು (ಕೃವಾಸ. ೧೨೦). **ಹೊರ್ಜಿಹಗ್ಗ:** ಗೌಡರು ಹೊಸದಾಗಿ ಭಾರಿ ಹೊರ್ಜಿಹಗ್ಗ ಬಿಗಿಸಿದರು (ನನ್ನೂರು. ೧೧೯); ಅವರ ಮೈಕಟ್ಟು ತೇರಿನ ಹೊರ್ಜಿಹಗ್ಗದಂತೆ ಗಟ್ಟಿಯಾಗಿಯೂ . . . ಪುಷ್ಟವಾಗಿಯೂ ಇತ್ತು (ಹುಟ್ಟಿಹ. ೭).

[ಹೊರಜಿ (< ಪೊರಜೆ) + ಹಗ್ಗ (< ಪಗ್ಗ)]

ಹೊರಜೀಬಿ (ನಾ). ಊರಿನ ಹೆಬ್ಬಾಗಿಲಿನ ಆಚೆಯ ಪ್ರದೇಶದ ಭಾಗ: ಮೇಲೆ ಹೇಳಿದವುಗಳಲ್ಲಿ ಮೊದಲಿನ ೧೧ ಒಳಕೋಟೇ ಕೊತ್ತಲಗಳಲ್ಲಿಯೂ ಆಮೇಲೆ ೧೯ ಹೊರಜೀಬಿಯಲ್ಲಿಯೂ ಇರಿಸಿ ಇದ್ದವುಗಳು (ಚಾಮವಂ. ೧೦೬).

[ಹೊರ (< ಪೊಱಗು) + ಜೀಬಿ$_2$]

ಹೊರಜೆ 'ಪೊರಜೆ' ನೋ.

ಹೊರಜೆಗಟ್ಟು (ನಾ). ದಪ್ಪವಾಗಿರುವ ಸರಪಳಿಯನ್ನು ಕಟ್ಟು: ಬಂದುದವನ ವರೂಥ ಕಬ್ಬಿಣದಿಂದ ರಚಿಸಿದ ಹೊರಜೆಗ[ಪಾಠಾಂ. ಕ]ಟ್ಟುಕ್ಕಿಂದ ಕೀಲಿಚಿದಚ್ಚ ಲೋಹದ ಘಾಲಿ (ತೊರರಾ. ೬-೨೬-೪). [ಹೊರಜೆ (< ಪೊರಜೆ) + ಕಟ್ಟು$_2$]

ಹೊರಟು 'ಪೊಱಮಡು' ಪರಾ.

ಹೊರಡಿಸು 'ಪೊಱಮಡಿಸು' ನೋ.

ಹೊರಡು$_1$ 'ಪೊಱಮಡು' ನೋ.

ಹೊರಡು$_2$ 'ಪೊರಳ್' ನೋ.

ಹೊರಣಿ 'ಹೊರಣೆ' ನೋ.

ಹೊರಣೆ, ಹೊರಣಿ (ನಾ). ಒಂದು ಬಗೆಯ ತೆರಿಗೆ: ಆ ಸೋಮನಾಥಪುರಕ್ಕೆ ಉರುತ್ಯವಾಗಿ ಬಂದ ಹದಿಕೆ ಹೊರಣೆ ಹೊದಿಕೆ ಮಳಬ್ರಯವೊಳಗಾಯಿತ್ತು (ಎಕ. III,ತಿರುಮ.೯೮-೧೭: 1300). **ಹೊರಣಿ:** ಹೊರಣಿ ಕೋಳು ಖಾಣವೆಂದು ಬೇಡಿದಂತಾಗಿ ಆ ನಾರಸಿಂಹದೇವರಸರು ಆ ಮಹಾಜನಂಗಳಿಗೆ ಕಾರುಣ್ಯಂ ಮಾಡಿ ದಾನವಾಗಿ ಧಾರೆಯ ನೆಱದು ಬರಸಿಕೊಟ್ಟ ಶಿಲಾಶಾಸನ (ಎಕ.XIV. ತಿರುಮ. ೩೦-೧೩: 1288). [?]

ಹೊರತನ (ನಾ). ಅನ್ಯತನ; ಪರಕೀಯತೆ: ಹೊರತನದ ಹದರಿಕೆಯು ಹೃದಯದೊಳು ಹೊಕ್ಕಿಹುದು . . . ಹೊರತನದ ಬಲೆಯೊಳಗೆ ಬುದ್ಧಿ ಬಳಲಾಡುವದು (ಗರಿ. ೨೨-೫).

[ಹೊರ (< ಪೊಱಗು) + - ತನ]

ಹೊರತರ (ನಾ). (ದೇವಾಲಯದ) ಸುತ್ತು ಗೋಡೆ; ಪ್ರಾಕಾರ: ಹಸುಕಲಿಯ ಮಂಚ ಮರಡಿಯ ಮಗ ಕಲಿ ರಾಮನಾಥದೇವರ ಗುಡಿಯ ಶ್ರೀ ಹೊರತರದ ಕಲುಗೆಲಸಕೆ ಕೊಟ್ಟ ಗ ೧ (ಮೈಆರಿ. ೧೯೩೫,೨೪-೭; 1287).

[ಹೊರ (< ಪೊಱಗು) + ತರ$_4$ (< ಥರ$_3$)]

ಹೊರತರು (ಕ್ರಿ).ಪ್ರಕಾಶಕ್ಕೆ ಬರುವಂತೆ ಮಾಡು; ಪ್ರಕಟಿಸು: ಅನೇಕ ಉಪಯುಕ್ತ ಪ್ರಕಟಣೆಗಳನ್ನೂ ಹೊತ್ತಗೆಗಳನ್ನೂ ಹೊರತಂದಿದೆ (ಕವಿಕೋ. I,೧೬೬).

[ಹೊರ (< ಪೊಱಗು) + ತರು$_1$ (< ತರ್)]

ಹೊರತು$_1$ 'ಪೊಱತು' ನೋ.

ಹೊರತು$_2$, ಹೊರ್ತು (ಅ). ೧. ಅಲ್ಲದೆ; ವಿನಾ: ಆ ಕಾಲದ ಸ್ವಾತಂತ್ರ್ಯವೆನ್ನುವುದು ಪಾರತಂತ್ರಕ್ಕೆ ಬೇರೆ ಹೆಸರೇ ಹೊರತು ಬೇರೆಯಲ್ಲ (ಸಾಹಿಜೀ. ೯೮); ದಾಸ-ವ್ಯಾಸಕೂಟಗಳ ಸಾಮರಸ್ಯದ ಸಮಾವೇಶವಾಗದ ಹೊರತು ನಿಜವಾದ ಭಕ್ತಿ ಬರಲಾರದು (ಜಗದಾ. ೫೯). ೨. ಬಿಟ್ಟು; ಉಳಿದು; ಬೇರೆಮಾಡಿ: ಅವನು ಹೊರತು ಇನ್ನೊಬ್ಬರು ಈ ಕೊಠಡಿಗೆ ಕಾಲಿಟ್ಟಿಲ್ಲ (ಮಧ್ಯಮ. ೧೫೯). **ಹೊರ್ತು:** ೧. ಹೊಸದಾಗಿ ಬಹವೊಕ್ಕಲುಗಳಿಗೆ . . . ಬಿಟ್ಟು ಹೋಹ ವೊಕ್ಕಲಿಗೆ ಹೊರ್ತು ಹಾದಿಗೊಳವೊಕ್ಕಲಿಗೆ (ಎಕ.IX(ಸ),ಕಾನಕಾ. ೧೨೬-೨೦: 1370); ನೂರು ಜನರಲ್ಲಿ ಶೂರನಾದವನು ಒಬ್ಬನೇ ಹೊರ್ತು ಎಲ್ಲರಿಗೂ ಪೂರ್ಣಪಾಂಡಿತ್ಯವಿರಲಾರದು (ಕಥಾಮಂ. IV.೭). ೨. ಕಿರಾಣಿಯ ಹೊರ್ತು ಇತರ ಮಾಲಿನ ದೆಶೆಯಿಂದ ಅಡತಿ ಮಜೂರಿಯ ನಿಯಮವು ಈ ಭಾಗದ ಎರಡನೇ ಪ್ರಕರಣದಲ್ಲಿ ದಾಖಲು ಅವೆ (ಮುಂಬವ್ಯಾ. ೧೮೫). [< ಪೊಱತು]

ಹೊರತೆಗೆ 'ಪೊಱತೆಗೆ' ನೋ.

ಹೊರತೆರಿಗೆ (ನಾ). ಒಂದು ಬಗೆಯ ತೆರಿಗೆ: ತ್ರಿಯಂಬಕದೇವರಿಗೆ ಸಲುವ ಗ್ರಾಮಗಳ ಹೊರತೆರಿಗೆಯ ಬಿಟ್ಟು (ಎಕ. XIV. ಗುಂಡ್ಲುಪೇ. ೧೨೯-೮೩; 1521).

[ಹೊರ$_7$+ ತೆರಿಗೆ (< ತೆಱಿಗೆ)]

ಹೊರತೋಟಿ (ನಾ). ಹೊರಗೆ ಆಗುವ ಕಲಹ - ಸಂಘರ್ಷ: ಬೇವಿನಹಳ್ಳಿ ಮತ್ತು ಇಂಚಲಾಪುರ-ಇವುಗಳ ನಡುವಿನ ಸಂಘರ್ಷಣವು ನಾಟಕದಲ್ಲಿಯ ಹೊರತೋಟಿಯನ್ನು ಸೂಚಿಸುತ್ತದೆ (ಜನನಾ.XX. ಪ್ರಸ್ತಾವನೆ). 'ಒಳತೋಟಿ' ಪರಾ.

[ಹೊರ (< ಪೊಱಗು) + ತೋಟಿ$_1$]

ಹೊರತೋರಿಕೆ (ನಾ). ಹೊರನೋಟ; ಮೇಲುನೋಟ: ಹೊರತೋರಿಕೆಗೆ ತತ್ತ್ವಗಳನ್ನು ಎತ್ತಿಕೊಂಡು ವಾದಮಾಡುವ ಕೆಲವರು . . . ವಿಮರ್ಶೆ ಮಾಡುವುದುಂಟು (ವ್ಯಾಸಜಿ. ೧೪೦). [ಹೊರ (< ಪೊಱಗು) + ತೋರಿಕೆ (< ತೋಱಿಕೆ)]

ಹೊರದೂಡು (ಕ್ರಿ). ಹೊರಕ್ಕೆ ದಬ್ಬು,-ನೂಕು: ಅವಳು . . . ಹೊಟ್ಟೆಯನ್ನು ಹೊಸೆದುಕೊಂಡು ಗರ್ಭವನ್ನು ಹೊರದೂಡಿದಳು (ವಚಭಾ. ೧೨); ಆ ವಜ್ರವ್ಯಾಪಾರಿಯು ಅಲಿಕಾದರನನ್ನು ಮನೆಯಿಂದ ಹೊರದೂಡಿದನು (ಮಣಿಸ. ೨೮). 'ಒಳದೂಡು' ಪರಾ.

[ಹೊರ (< ಪೊಱಗು) + ದೂಡು (< ದೂಂಟು$_1$)]

ಹೊರದೆಗೆ 'ಪೊಱತೆಗೆ' ನೋ.

ಹೊರದ್ವಾರ 'ಹೊಱದ್ವಾರ' ನೋ.

ಹೊರನಾಡು (ನಾ). ಹೊರದೇಶ; ಬೇರೆಯ ಪ್ರಾಂತ: ಅಶೋಕನ ಕಾಲದಲ್ಲಿ ಹೊರನಾಡುಗಳೊಡನಿದ್ದ ಸಂಬಂಧವು ಕಳೆಗೊಂಡಿತು (ಕಪಪ್ರ. ೬-೮೩). 'ಒಳನಾಡು' ಪರಾ. [ಹೊರ (< ಪೊಱಗು) + ನಾಡು]

ಹೊರನಿಲ (ನಾ). ರಾಜ್ಯದ ಹಣವನ್ನು ಹೊರಗೆ ಇಟ್ಟಿರುವುದು(?): ನೆರವರಿ ವರಾಡ ಕಡುಮಸವರಿ ವಂಚನೆ ವಟ್ಟ ಲಂಚ ಹೊರನಿಲ ಹಸ್ತಾಂತರ ಸಂಜಾಯಿತನಿಲಗಳ ಪರಿವಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ (ಕಳನ. ೭-೨೯).

[ಹೊರ (< ಪೊಱಗು) + ನಿಲ ?]

ಹೊರನುಡಿ (ನಾ). ೧. ಹೊರಗಿನ ಮಾತು; ಬಹಿರಂಗದ ನುಡಿ: ನೀನು ಅವರ ಹೊರನುಡಿ ಕೇಳುತ್ತೀಯೆ (ಇಪ್ಪಾಂಸಂ. ೫೯೦). ೨. ಪರಭಾಷೆ: ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ, ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ! (ಕೋಗಿಲೆ. ೪೧-೩); ನೆವವು ಏನಾದರೇನ್, ಹೊರನುಡಿಯು ಹೊರೆಯ್ಯೆ . . . ಕನ್ನಡದ ನಾಡಿನಲಿ ಕನ್ನಡವ ಮೆರೆಸ್ಯೆ (ಕಪಪ್ರ. ೬-೧೪೪). 'ಒಳನುಡಿ' ಪರಾ. [ಹೊರ (< ಪೊಱಗು) + ನುಡಿ$_2$]

ಹೊರನೂಕು 'ಹೊಱನೂಂಕು' ನೋ.

ಹೊರನೋಟ 'ಪೊಱನೋಟ' ನೋ.

ಹೊರಪಡಿಸು (ಕ್ರಿ). ಬಹಿರಂಗಪಡಿಸು; ಪ್ರಕಟಗೊಳಿಸು: ದೇವವ್ರತನು . . . ವಿಷಯವನ್ನು ಒಂದು ಸ್ವಲ್ಪ ಹೊರಪಡಿಸುವಂತೆ ಮಾಡಿದನು (ವ್ಯಾಸಜಿ. ೧೧). 'ಒಳಪಡಿಸು' ಪರಾ. [ಹೊರಪಡು + - ಇಸು$_3$]

ಹೊರಪಡು (ಕ್ರಿ). ಪ್ರಕಟಗೊಳ್ಳು; ಬಹಿರಂಗವಾಗು: ಮುಕ್ತಾಂಬೆಯ ಮೂಲಕ ನಮ್ಮ ಗುಟ್ಟು ಹೊರಪಟ್ಟಿತು (ರಾವಿಜ. ೧೪); ಸೂರ್ಯನು ಪೃಥ್ವೀಸಮೇತನಾಗಿ . . . ಓಡುತ್ತಿರುವನೆಂಬ ವಿಷಯವು ಹೊರಪಡುತ್ತದೆ (ಜ್ಯೋಕಿರ್ವಿ. ೬೯).

[ಹೊರ (< ಪೊಱಗು) + ಪಡು$_1$]

ಹೊರಪದರ ' ಹೊರಪದರು' ನೋ.

ಹೊರಪದರು, ಹೊರಪದರ (ನಾ). ಮೇಲಿನ ಪೊರೆ; ಹೊರಗಿನ ಮಡಿಕೆ: ಈ ಒಳಚರ್ಮದ ಜೀವಕಣಗಳ ಸ್ರವಣಗಳಿಂದ(Secretions) ಚರ್ಮದ ಹೊರಪದರುಗಳು ಮತ್ತು ಪೊರೆಬಿಡುವ ದ್ರವಗಳಾಗುತ್ತವೆ (ಕೀಚಿಪ. ೮). **ಹೊರಪದರ:** ಸಿಂಹಾವಲೋಕನ ಕ್ರಮದಿಂದ ಹೊರಪದರವನ್ನು ನೋಡಿದಾಗ . . .ಅಮೂಲ್ಯವಾದ ಆಧಾರಸಾಮಗ್ರಿಗಳು

ದೊರಕಿವೆ ಎಂಬುದನ್ನು ತೋರಿಸುವುದೇ ಈ ಉಪನ್ಯಾಸದ ಮುಖ್ಯೋದ್ದೇಶ (ಶಾಸಾಗಿ. ಒನ್ನುಡಿ). 'ಒಳಪದರು' ಪರಾ. [ಹೊರ (< ಪೊಱಗು) + ಪದರು]

ಹೊರಪು₁ (ನಾ). ಮಳೆಯ ಮೋಡಗಳಿಲ್ಲದೆ ಆಕಾಶವು ನಿರ್ಮಲವಾಗಿ ಕಾಂತಿಯುಕ್ತವಾಗಿರುವುದು: ಬಹಳ ದಿವಸ ಹೊರಪಾಯಿತೆಂದರೆ, ಬೆಳಿಗಳು ಒಣಗಹತ್ತುತ್ತವೆ (ಬಳವ. ೨೬); ಹೊದ್ದ ಮೋಡ ಹೊರಪಾಗಿ ಬಿದ್ದ ಬೆಳದಿಂಗಳಿಂದ ಕುಸುರಿಚಿಕ್ಕಿ ಚುಕ್ಕಿ ಸುರಿದಂತೆ (ಕಮೀಫ. ೨೦-೭). 'ಪೊರಪು', 'ಪೊರೆಪು' ಪರಾ.

[ಹೊರ್ಕ (< ಪೊರ್ಕ) + - ಪು]

ಹೊರಪು₂ (ನಾ). ಪದರ; ಮಡಿಕೆ: ಮುತ್ತುಗಳಿಗೆ . . . ಚಿಪ್ಪಿನ ಹೊರಪಾಗಿಂ ಕರಡಾಗಿಯು . . . ಪ್ರಬಲದೋಷಂಗಳು (ಸೌಗಂಧಿ. ೩೬೫-೨೮).

[ಹೊರ್ಕ (< ಪೊರ್ಕ) + - ಪು]

ಹೊರಬದಿ (ನಾ). ಹೊರಮಗ್ಗುಲು; ಹೊರಪಾರ್ಶ್ವ: ಇಬ್ಬರು ಹೋಗಿ ಹೊರಬದಿಯಲ್ಲಿಯ . . . ಮೇಜಿನ ಎದುರಿನಲ್ಲಿ ಕುಳಿತರು (ಚಂದುಬ. ೬೫). 'ಒಳಬದಿ' ಪರಾ. [ಹೊರ (< ಪೊಱಗು) + ಬದಿ₁]

ಹೊರಬರು 'ಪೊಱವರ್' ನೋ.

ಹೊರಬಾಗಿಲು 'ಹೊಱಬಾಗಿಲು' ನೋ.

ಹೊರಬಿಗ 'ಪೊಱಬಿಗ' ನೋ.

ಹೊರಬೀಳು 'ಹೊಱಬೀಳ್' ನೋ.

ಹೊರಬುದ್ಧಿ (ನಾ). = ಹೊರಚಾಳಿ ೨: ಕುಡಿತ ಹೊರಬುದ್ಧಿ ಮೊದಲಾದವು ಒಳಗೊಳಗೆ ಪಸರಿಸುತ್ತಿದ್ದವೆಂದು ಹೇಳಬೇಕಾದುದಿಲ್ಲ (ಬಚ್ಚಸೂ .೩೦).

[ಹೊರ (< ಪೊಱಗು) + ಬುದ್ಧಿ]

ಹೊರಬೆದ್ದಲೆ (ನಾ). (ಊರಿನ) ಹೊರಭಾಗದಲ್ಲಿರುವ ಹೊಲ: ಅನ್ನು ಗಟ್ಟಿ ಮತ್ತ ೧ ಊರಿಂ ಹೊರಬೆದ್ದಲೆ ಮತ್ತ xxx ರ ೫ ಹುಡುವರ್ಗ್ಗಂ ಪಜೆಕೆಜೆಗೆ ತಂಕಣ ಕೋಡಿಯಲಿ ಗಟ್ಟಿ ಮತ್ತರ್ ೧ (ಎಕ. VII,ಹೊನ್ನಾಳಿ. ೧೦೭-೧೬; 1048).

[ಹೊರ (< ಪೊಱಗು) + ಬದ್ದಲೆ (< ಬೆದ್ದಲ್)]

ಹೊರಮಗ್ಗಲು 'ಹೊರಮಗ್ಗುಲು' ನೋ.

ಹೊರಮಗ್ಗುಲು, ಹೊರಮಗ್ಗಲು (ನಾ). ೧. ಹೊರಗಿನ ಪಾರ್ಶ್ವ,— ಬದಿ: ಅವರ ಮನೆಯ ಹೊರಮಗ್ಗುಲಿನಲ್ಲಿಯೇ ದೊಡ್ಡದೊಂದು ಆಲದ ಮರವಿದೆ (ರೂಢಿ). **ಹೊರಮಗ್ಗಲು**: ೧. ಹೊರಮಗ್ಗಲಿಗೆ ಅರಬ ಜನರ ಪಹಾರೆಯದೆ (ಮಂಜುಕ. ೪). ೨. ಹೊರಮೈ; ಮೇಲುಭಾಗ: ಗಿಡದ ತೋಟ ಹೊರಮಗ್ಗಲು ಹುರುಬರಕು ಇಗುವದು (ಮುಂಬಯಿ. ೪-೭೧). 'ಒಳಮಗ್ಗುಲು' ಪರಾ.

[ಹೊರ (< ಪೊಱಗು) + ಮಗ್ಗುಲು (< ಮಗ್ಗುಲ್)]

ಹೊರಮಡು 'ಪೊಱಮಡು' ನೋ.

ಹೊರಮಾಟ (ನಾ). ಇತರರ ಕೈವಾಡ,— ಹಸ್ತಕ್ಷೇಪ: ಬೊಮ್ಮಿದೇವರಸರು ಕ[ಳ್ಯೋ]ಗು ನಡಿಸಿದ ಮರ್ಯ್ಯಾದೆ [ಯಂದಿಂದ]ಗಂ ಹೊರಮಾಟವಿಲ್ಲದಿದ x ಸಿಗೆ ಕೆಜೆ ನೇಜಿಲ ಕೆಜೆಯ ನಡುಸ್ಥಳಕಂ . . . ಕೊಂಡ ಮರ್ಯಾದೆಯಱುವಣಗದ್ಯಾಣಂ ನಾಲ್ಕು (ಕ್ರಾ. IV, ೪೮-೪೩; 1247). [ಹೊರ (< ಪೊಱಗು) + ಮಾಟ₁]

ಹೊರಮಾರು 'ಪೊಱಮಾಱು₃' ನೋ.

ಹೊರಮುಖ (ನಾ). ಹೊರಭಾಗ; ಹೊರಆವರಣ: ಮಡಕೆಯಂ ಶುದ್ಧೋದಕದಿಂದ ಒಳಮುಖವಂ ಚೆನ್ನಾಗಿ ತೊಳೆದು . . . ಹೊರಮುಖವಂ ಪಾವಡೆಯಿಂದೊರಸಿ (ಸಚಿತ್ರ. ೩೯೩). 'ಒಳಮುಖ' ಪರಾ. [ಹೊರ (< ಪೊಱಗು) + ಮುಖ]

ಹೊರಮುಚುಕ 'ಹೊರಮುಚ್ಚಗ' ನೋ.

ಹೊರಮುಚ್ಚಗ, ಹೊರಮುಚುಕ (ನಾ). ಮುಚ್ಚಿದ ಕೂಡಲೇ ಎಲೆಗಳನ್ನು ಮುಚ್ಚಿಕೊಳ್ಳುವ ಒಂದು ಬಗೆಯ ಗಿಡ; ಮುಟ್ಟಿದರೆ ಮುನಿ: ಹೊರಮುಚ್ಚಗ ಒಳಮುಚ್ಚಗಗಳೆಂಬ ವನಸ್ಪತಿಗಳು ಕೈಹಚ್ಚಿದ ಕೂಡಲೆ ಎಲೆಗಳನ್ನು ಮುಚ್ಚಿಕೊಳ್ಳುತ್ತವೆ (ಮುಂಜಾಮು. ೬-೨೬೫). **ಹೊರಮುಚುಕ**: ಹೊರಮುಚುಕವು ಹಳ್ಳಿಗಳ ನುಡಿಯಲ್ಲಿ 'ಅಂತರ್ದರ್ಶನ'; ಕೇವಲ ಸ್ಪರ್ಶದಿಂದ ಒಳಮ್ಮೆ ತೋರಿಸುವ ಒಂದು ಗಿಡಮೂಲಿಕೆ (ತೋಳಿಗೀ. ೧೧೫ ಅಡಿಟಿ). 'ಒಳಮುಚ್ಚಿಗ' ಪರಾ.

[ಹೊರ (< ಪೊಱಗು) + ಮುಚ್ಚಗ್ಗ (< ಮುಚುಗ)]

ಹೊರಮುನಿ (ನಾ). = ಹೊರಮುಚ್ಚಗ: (ಮೃಜಿಗಿ. ೧೩-೨೨೩). 'ಒಳಮುನಿಗಿಡ' ಪರಾ. [ಹೊರ (< ಪೊಱಗು) + ಮುನಿ₂]

ಹೊರಮೈ 'ಪೊಱಮೈಯ್' ನೋ.

ಹೊರಮೊಳೆ (ನಾ). ಮೂಲವ್ಯಾಧಿಯಲ್ಲಿ ಗುದಪ್ರದೇಶದ ಹೊರಗೆ ಕಾಣಿಸಿಕೊಳ್ಳುವ ಮುಳ್ಳು,—ಮೊಳಕೆ: ಮೃಲತುತ್ವಂ ಬೋಗುದಿಚೆಸೊಪ್ಪಿನ ರಸದಲ್ಲಿ ತೇದು ಹೊರಮೊಳೆಗೆ ತೊಚೆಯ ಮೊಳೆ ಮಾಣುವುದು (ಸಚಿತ್ರ. ೨೯೬). 'ಒಳಮೊಳೆ' ಪರಾ. [ಹೊರ (< ಪೊಱಗು) + ಮೊಳೆ₂]

ಹೊರಯಿಂಕೆ 'ಪೊಱಯಿಂಕೆ' ನೋ.

ಹೊರಯಿಕೆ 'ಪೊಱಯಿಂಕೆ' ನೋ.

ಹೊರಲಂಚ (ನಾ). ಬಹಿರಂಗವಾಗಿ ಪಡೆಯುವ ಲಂಚ: ಸ್ವಾಮಿಕಾರ್ಯಕೊಂಚನೆಯ ಮಾಡಿ ಹೊರಲಂಚಮಂ ಕೊಂಡು (ಕೃಷ್ಣವಿ. ೨-೯೮). 'ಒಳಲಂಚ' ಪರಾ.

[ಹೊರ (< ಪೊಱಗು) + ಲಂಚ]

ಹೊರಲಿಗ (ನಾ). ಒಂದು ಬಗೆಯ ಮೂಲಿಕೆ: ಹೊರಲಿಗ, ಚಿಕ್ಕ ಹೊರಲಿಗನ ಸಮೂಲ,ಭಂಗಿಯ ಪುಡಿ . . . ಇಷ್ಟನ್ನೂ ಕೂಡಿ ಅರೆದು (ವೈದ್ಯವಿ. ೨೧೫). [?]

ಹೊರವಡು 'ಪೊಱಮಡು' ನೋ.

ಹೊರವಯ್ಯ (ನಾ). ಒಬ್ಬಾತನ ಹೆಸರು: ಕುಬುವರ ಗಾಯಿಗ ಹೊರವಯ್ಯಂ ಸತ್ತು ಸುರಲೋಕಕ್ಕೆ ಪೋದ (ಎಕ. VIII,ಸೊರಬ. ೪೫೪-೫; 973). [ಹೊರವ, + ಆಯ್ಯ₁]

ಹೊರವಲಯ 'ಪೊಱವಲಯ' ನೋ.

ಹೊರವಳಯ 'ಪೊಱವಲಯ' ನೋ.

ಹೊರವಾಗಿಲು 'ಪೊಱಬಾಗಿಲು' ನೋ.

ಹೊರವಾಱು 'ಪೊಱಮಾಱು₃' ನೋ.

ಹೊರವು (ನಾ). ಸೊಂಪು; ಹುಲುಸು: ಕೊಬೆಕೊಂಬೆಗು ಹೂವು,ಹಣ್ಣನ್ನು ಹೊತ್ತು ಹೊರವಾಗಬೇಕು (ನಡದಾ I, ೩೮೪); ತೋಟ ಮಾತ್ರ ಪಾಳುಬೀಳದೆ ದಟ್ಟವಾಗಿಯೂ ಹೊರವಾಗಿಯೂ ಬೆಳೆದಿತ್ತು (ಪುನರು. ೨೮೩). [ಹೊರ್ (< ಪೊರ್) + - ವು]

ಹೊರಸಂಚಾರ (ನಾ). ಹೊರಗಿನ ತಿರುಗಾಟ; ವಾಯುವಿಹಾರ: ಒಂದು ಭಾನುವಾರ ನದಿಯ ಬಳಿಗೆ ಹೊರಸಂಚಾರ ಹೋಗೋಣ ಎಂದು ಗುರುಗಳು ಹೇಳಿದರು (ಕಪಪು. ೨-೪೦). [ಹೊರ (< ಪೊಱಗು) + ಸಂಚಾರ]

ಹೊರಸರಿ (ಕ್ರಿ). ಹೊರಕ್ಕೆ ಹೋಗು,— ಸಾಗು: ಹೃದಯಕ್ಕಾದ ತೃಪ್ತಿಯ ಭಾವನೆ ತುಳುಕಿ ಹೊರಸರಿದಂತೆ ನದಿಯ ಜಲ . . . ಹರಿಯುತ್ತಿದೆ (ಚಾಂಬಾ. ೧). 'ಒಳಸರಿ' ಪರಾ. [ಹೊರ (< ಪೊಱಗು) + ಸರಿ₁]

ಹೊರಸಲು (ನಾ). ೧. ಹಗ್ಗವನ್ನು ಹೆಣೆದು ಮಾಡಿದ ಮಂಚ; ಹೊರಸು: ಬಾಣಂತಿಯು ಹೊರಸಲ ಮೇಲೆ ಮಲಗಿದ್ದಾಳೆ (ರೂಢಿ). ೨. ಬಿದಿರಿನ ಬುಟ್ಟಿ; ಹೆಡಗೆ: ಆ ಪಡಸಾಲೆಯೊಳಗೆ ಎಂಟೇ ಒಲೆ ಹೂಡಿರುವರಂದರ ಈಗ ಒಂದು ಹೊರಸಲು ತುಂಬ ಹೋಳಿಗೆ ಮಾಡಿದರು(ಆಶೋಕ. ೨).

[ಹೊರಸು₃ (< ಪೊರಸು) + - ಅಲು (<- ಅಲ್₂)]

ಹೊರಸಲುಹಕ್ಕಿ (ನಾ). ಪಾರಿವಾಳ; ಹೊರಸು: ಪಕಳಾರಗಳ ಸಿಳ್ಳುಲಿಯಾಗಲಿ ಹೊರಸಲು ಹಕ್ಕಿಗಳ ಗುಬ್ಬಳಿಕೆಗಳಾಗಲಿ. . . ಅವನಿಗೆ ಕೇಳಿಸುತ್ತಿರಲಿಲ್ಲ (ಮಲಿಮ. ೬೪). [< ಹೊರಸು₂ (< ಪೊಱಸು) + ಹಕ್ಕಿ (< ಪಕ್ಕಿ)]

ಹೊರಸೀರೆ (ನಾ). ಒಂದು ಬಗೆಯ ಔಷಧದ ಮೂಲಿಕೆ,— ಬೇರು: ಒಳಸೀರೆ ೩, ಹೊರಸೀರೆ ೩, ಜೋಳ, ಮೂಜುಹಿಡಿ ಬನ್ನಿಸೊಪ್ಪು ಇವನ್ನು ಕೂಡಿಹಾಕಿ ಇಡಿದು . . ಮೂಜುದಿನ ಮೆಲ್ಲಲು ಕಣ್ಣು ಕಾಂಬದು (ವೈದ್ಯವಿ. ೬೩). 'ಒಳಸೀರೆ' ಪರಾ.

[ಹೊರ, + ಸೀರೆ,]

ಹೊರಸು₁ (ಕ್ರಿ). ಲೇಪಿಸು; ಬಳಿ: ಆ ಬೆಂದ ಕಾಯಿ ಮೇಲೆ ಹೊರಸಿ ತುಪ್ಪವನೆಱೆದು ಸಲಗೆಯಿಂದವೆ ಚುಚ್ಚಿ (ಸೂಪಶಾ. ೫೫-೪೫). [ಹೊರ್ (< ಪೊರ್) + - ಸು₁]

ಹೊರಸು$_2$ 'ಪೊಱಿಸು' ನೋ.

ಹೊರಸು$_3$ 'ಪೊರಸು'ನೋ.

ಹೊರಸುತ್ತು 'ಹೊಱಿಸುತ್ತು' ನೋ.

ಹೊರಸೂರು (ನಾ). (ಮನೆಯ ಸುತ್ತಲೂ) ಹೊರಚಾಚಿಕೊಂಡಿರುವ ಛಾವಣಿಯ ಭಾಗ: ಗರಡಿಮನೆ ಹೊರಸೂರಿನಲ್ಲಿ ಬೆಂಕಿ ಉರಿ ಎದ್ದದ್ದ ಕಂಡು ಪುಕಾರು ಮಾಡಿದ್ದರಿಂದಾ ಬೆಂಕಿ ಹಾಕಿದವನು ಕಾಡ ಒಳಗೆ ಓಡಿಹೋದ (ರಾಜೇಂದ್ರ. ೨೬೫).

[ಹೂರ (< ಪೊಱಗು) + ಸೂರು$_2$(< ಸೂರ್)]

ಹೊರಸೂಸು 'ಪೊಱಿಸೂಸು' ನೋ.

ಹೊರಸೆಳತ (ನಾ). ಹೊರಗಿನಿಂದುಂಟಾಗುವ ಆಕರ್ಷಣೆ,— ಎಳೆತ : ಇಂಗ್ಲೀಷು ಬೆಂಗಾಲೀ ಮರಾಠೀ ತೆಲಗು ಮುಂತಾದ ಸಾಹಿತ್ಯಗಳ ಹೊರಸೆಳತದಿಂದಲೂ . . . ನಮ್ಮ ಸಾಹಿತ್ಯವು ಇದೀಗ ಹೊಸದಾಗಿ ಹೊಳಪುಗೊಳ್ಳುತ್ತಲಿದೆ (ತಿಮ್ಮ. ೮ ಪೀಠಿಕೆ). 'ಒಳಸೆಳತ' ಪರಾ. [ಹೂರ (< ಪೊಱಗು) + ಸೆಳತ (< ಸೆಳತ$_1$)]

ಹೊರಹಾಕು 'ಹೊಱಿಹಾಕು' ನೋ.

ಹೊರಹಾಯು 'ಪೊಱಿವಾಯ್' ನೋ.

ಹೊರಹು 'ಪೊರೆಪ್ಪು' ನೋ.

ಹೊರಹುಂಡಿ (ನಾ). ಊರ ಹೊರಗಿನ ಸಣ್ಣ ಹಳ್ಳಿ,— ಗ್ರಾಮ: ಗೋವುಯಿಲ್ಲದವಂಗೆ ಹೊರಹುಂಡಿಯುಂಟೆ (ಕಂಕ. ೧೦೨-೫). [ಹೂರ (< ಪೊಱಗು)+ ಹುಂಡಿ$_1$]

ಹೊರಹೊಂಚು (ಕ್ರಿ). ಹೊರಭಾಗವನ್ನು ಲಕ್ಷಿಸಿ ನೋಡು: ಮುಚ್ಚದ ಕೋಳಿ ಹೊರಹೊಂಚಿ ಮುಂಬೆಳಕೊಳಂತ ಕೂಗಿತು (ಗೂಳೂಥಾ. ೧೪-೨).

[ಹೂರ (< ಪೊಱಗು) + ಹೊಂಚು$_1$(< ಪೊಂಚು$_1$)]

ಹೊರಹೊಂಡು 'ಪೊಱಿಮಡು' ನೋ.

ಹೊರಹೊಮ್ಮಿಸು 'ಹೊಱಿಹೊಮ್ಮಿಸು' ನೋ.

ಹೊರಹೊಮ್ಮು 'ಪೊಱಿಪೊಣ್ಮು' ನೋ.

ಹೊರಹೊರಡಿಸು 'ಹೊಱಿಹೊಱಿಡಿಸು'ನೋ.

ಹೊರಹೊರಡು 'ಹೊಱಿಹೊಱಿಡು' ನೋ.

ಹೊರಳ್ 'ಪೊರಳ್' ನೋ.

ಹೊರಳಾಟ (ನಾ). ಉರುಳಾಡುವುದು: ಸಕಿಯಿಂದಾಗಿ ರಾತ್ರಯಲ್ಲಾ ನಿದ್ದೆ ಬರದ ಬರಿ ಹೊರಳಾಟವೇ ಆಯ್ತು (ಠೂಫಿ). [ಹೊರಳು$_1$ (< ಪೊರಳ್)+ ಆಟ]

ಹೊರಳಾಡಿಸು (ಕ್ರಿ). ೧. ಹೊರಳುವಂತೆ ಮಾಡು; ಉರುಳಿಸು: ಮಗು ತನ್ನ ಗೊಂಬೆಯನ್ನು ಮಣ್ಣಿನಲ್ಲಿ ಹೊರಳಾಡಿಸುತ್ತಾ ಆಡುತ್ತಿತ್ತು (ಠೂಫಿ). ೨. ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳು,— ತಿರುವಿಹಾಕು: ಚಿಲುವಾಂಬಾ ಗುಣದೋಷಗಳನ್ನು ನನ್ನ ಮನಸಿನಲ್ಲಿ ಹೊರಳಾಡಿಸಿದೆ (ಚಂಗಾಳ್ಳ. ೪೬೯). [ಹೊರಳಾಡು + - ಇಸು$_5$]

ಹೊರಳಾಡು (ಕ್ರಿ). (ಹಸಿವು, ನೋವು, ದುಃಖ ಮುಂತಾದುವುಗಳನ್ನು ಸಹಿಸಲಾರದೆ) ಉರುಳು; ಅತ್ತಿಂದಿತ್ತ ದೇಹವನ್ನು ತಿರುಗಿಸು; ಹೊರಳು: ಆ ಬಚ್ಚೆ ಬೇಗ ಕಳಯಲಿಕ್ಕೆ ಬಾರದಿದ್ದರ ನೆಲದ ಮೇಲೆ ಬದ್ದು ಹೊರಳಾಡಬೇಕು (ಮುಂಬಾಯಿ.೪-೬೧); ನಾನೂ ಬರಿಯ ಹೊಟ್ಟೆಯಲ್ಲಿ ಹೊರಳಾಡಿದೆ (ನಂಬಣ್ಣ. ೩೮).

[ಹೊರಳು$_1$ (< ಪೊರಳ್) + ಆಡು$_1$]

ಹೊರಳಿ 'ಪೊರಳಿ' ನೋ.

ಹೊರಳಿಗಟ್ಟು$_1$ (ಕ್ರಿ). ಗುಂಪಾಗು; ಒಟ್ಟಾಗು: ಗಿರಿಯ ಮುತ್ತಿದ ಮುಗಿಲವೊಲು ಹೊಗ ಹೊರಳಿಗಟ್ಟಿತು ಮೇಲೆ ದಳ್ಳುರಿ ಧರಧುರದಲೊಳಬೀಳುತಿದ್ದವು ಕಿಡಿಯ ಚೂಣಿಯಲಿ (ಕುವ್ಯಾದೂಸ್ಯ. ೧೯-೪೫). [ಹೊರಳಿ (< ಪೊರಳಿ) + ಕಟ್ಟು$_1$]

ಹೊರಳಿಗಡಿ, ಹೊರಳಿಗಡಿ (ಕ್ರಿ). ಗುಂಪುಗುಂಪಾಗಿ ಕತ್ತರಿಸು; ಒಟ್ಟಿಗೆ ಬೀಳುವಂತೆ ಕಡಿ: ಎಡಬಲವಂಕದವರನು ಹೊರಳಿ [ಪಾಠಾಂ.ಳಿ]ಗಡಿದಸುರಾರಿ ಶಂಖೋತ್ತಮವ ಮೊಳಗಿಸಿದ (ನಭಾಗ.೧೦-೮೯-೩೩). **ಹೊರಳಿಗಡಿ:** ಅನಿಬರ ಕೊರಳುಗಳ ಕಾನನದ ಕುಮ್ಮರಿಯ ಹೊರಳಿಗಡಿವಂದದಲಿ ತಲೆಗಳ ಗಿರಿಗಳನು ಮಾಡಿದನು (ನಭಾಗ. ೯-೧೫೫-೩೫). [ಹೊರಳಿ (< ಪೊರಳಿ) + ಕಡಿ$_1$]

ಹೊರಳಿಗಳೆ (ಕ್ರಿ). ಮುದ್ದೆಯನ್ನು ದಾಟು: ಸೊರಕುತ ಲುಳಿಮಸಗಿ ಮಿದುಳಿನ ಹೊರಳಿಗಳೆದು . . . ಶಿರದ ತಡಿಗಳಲಡಸಿ ಹರಿದುದು ವೈರಿಸೇನೆಯಲಿ (ಕುವ್ಯಾದೂಸ್ಯ. ೨-೨೭). [ಹೊರಳಿ (< ಪೊರಳಿ) + ಕಳ್ಳು$_1$]

ಹೊರಳಿಗಿಡಿ (ನಾ). ಗುಂಪುಗುಂಪಾಗಿ ಸಿಡಿಯುವ ಕಿಡಿ: ಭೀಮಸೇನನ ಧರಧುರದ ಹೊಯ್ಲುಗಳ ಗದೆಯಲಿ ಹೊರಳಿಗಿಡಿ ರ್ಧೂಪಿಸಿದುಪುರು ಖದ್ಯೋತಮಂಡಲವ (ಕುವ್ಯಾಗ. ೭-೧೭); ಹೊರಳಿಗಿಡಿ ಹೊದಳ್ದು ವಿಕ್ರಾಲರ ಪುರಂಗಳ ಸರಹುವೆಗಸಿದವು (ತೊರಠಾ. ೪-೪-೧೯). [ಹೊರಳಿ (< ಪೊರಳಿ)+ ಕಿಡಿ]

ಹೊರಳಿಚು 'ಪೊರಳ್ಚು' ನೋ.

ಹೊರಳಿದೆಗೆ (ಕ್ರಿ). ಒಟ್ಟಾಗು; ದಟ್ಟೈಸು: ತರಳಿದುದು ಕಪಿಸೇನೆ ಸಾಗರ ಹೊರಳಿದೆಗ ವಂದದಲಿ ನಾಲ್ದೆಸೆಗೆ (ತೊರಠಾ. ೪-೮-೨೦). [ಹೊರಳಿ (< ಪೊರಳಿ) + ತೆಗ$_1$]

ಹೊರಳಿಮಂಡಿ (ನಾ). ಖಡ್ಗಯುದ್ಧದಲ್ಲಿಯ ಒಂದು ಭಂಗಿ,— ವರಸೆ: ಪಾದವನ್ನು ಮುಂದೆ ಶೀಘ್ರವಾಗಿ ಚಾಚಿ ಹಿಂದಕ್ಕೆ ಪುನಃ ತಿರುಗಿ ಭೂಮಿಯಲ್ಲಿ ಇಡಬೇಕು ಕಡಮಪಾದಕ್ಕೂ ಯಾ ಪ್ರಕಾರವನ್ನೆ ಮಾಡಿದರ ಹೊರಳಿಮಂಡಿ ಮುರಿವಮಯಂಬುದು (ವಿಕ್ರಮಾ. ೪-೩೩). [ಹೊರಳಿ$_1$ + ಮಂಡಿ$_1$]

ಹೊರಳಿಯೊಡ (ಕ್ರಿ). ಗುಂಪು ಚೆದರು; ಚೆಲ್ಲಾಪಿಲ್ಲಿಯಾಗು: ಹೊರಳಿಯೊಡದು ಮಹಾಪ್ರಧಾನರು ಮರಳಿದರಲಾ (ಕುವ್ಯಾಭಾ.೪-೬೫); ರಘುನಾಥ ಕೈಯಿಕ್ಕಿದನು ಕಾರ್ಮುಕಕೆ ತೆಜವೆಯಾದುದು ಭೀತಿ . . . ಹೊರಳಿಯೊಡೆದುದು ಮಿಕ್ಕ ರಕ್ಕಸರ (ತೊರಠಾ. ೩-೬-೨೯). [ಹೊರಳಿ (< ಪೊರಳಿ)+ಒಡ$_1$]

ಹೊರಳಿಯೊಡೆಯಿಸು (ಕ್ರಿ). ಗುಂಪನ್ನು ಚೆದರಿಸು; ಗುಂಪು ಚೆಲ್ಲಾಪಿಲ್ಲಿಯಾಗುವಂತೆ ಮಾಡು: ಹೊಕ್ಕನು ಹೊರಳಿ[ಪಾಠಾಂ.ಳಿ]ಯೊಡಯಿಸಿದನಾ ಪೌಜಿನಕ್ಕತುಳದ ರಾವುತರನು ಒಕ್ಕಲಿಕ್ಕಿದನು (ಕುರಾಸಾ. ೪೦-೨೮).

[ಹೊರಳಿಯೊಡ + - ಇಸು$_5$]

ಹೊರಳಿವೆಣ (ನಾ). ರಾಶಿರಾಶಿಯಾಗಿರುವ ಹಣ: ಮುರಿಯಲಾಗದು ಕೊಂದ ಹಚ್ಚಗಳ ಹೊರಳಿವಣಸುಪ್ಪರಿಸಿದುದು ತಾಳೇಳಲುದ್ದದಲಿ (ತೊರಠಾ. ೬-೩೦-೮).

[ಹೊರಳಿ (< ಪೊರಳಿ) + ಪೆಣ]

ಹೊರಳಿವೆಳಗು (ನಾ). ದಟ್ಟವಾದ ಬೆಳಕು; ಸಾಂದ್ರವಾದ ಕಾಂತಿ: ಹೊರಳಿವೆಳಗಿನ ಹೊಗರ ಧಾರೆಯ ಸುರುಚಿರದ ಮೋಹರದ ಮಣಿಬಂಧುರದ ಖಂಡೆಯವಿರಲು ಕೈಯಿಕ್ಕಿದನು ಕಲಿಹನುಮ (ತೊರಠಾ. ೫-೨-೪೪). [ಹೊರಳಿ (< ಪೊರಳಿ) + ಬೆಳಗು$_1$]

ಹೊರಳಿಸು 'ಪೊರಳಿಸು' ನೋ.

ಹೊರಳು$_1$ 'ಪೊರಳ್' ನೋ.

ಹೊರಳು$_2$ (ನಾ). ೧. ತಿರುವು; ಬಾಗು: ಬಾಬೂ ದಾರಿಯ ಹೊರಳನ್ನು ಸುತ್ತಿ ಮರೆಯಾದನು (ರಕ್ತಪ್ಪ. ೩೪೩). ೨. ಬದಲಾವಣೆ; ಮಾರ್ಪಾಡು: ೧೯೦೫ ರಿಂದ ಇತ್ತೀಚಿನ ಚಾಗ್ಯತ ಹಿಂದುಸ್ತಾನದ ಹೊರಳುಗಳನ್ನೂ ಚೆನ್ನಾಗಿ ಅಭ್ಯಾಸಮಾಡಿದನು (ಪಟ್ಟಾಪ್ರ. ೬೭). ೩. ಒಂದು ಬಗೆಯ ತಿರುಗುವ ಯಂತ್ರ: ಹೆಪ್ಪಾದ ಸೊನೆಯನ್ನು ಬೇರೆ ಬೇರೆ ವೇಗದಿಂದ ತಿರುಗುವ ಎರಡು ಹೊರಳುಗಳ (Rollers) ಎಡಗೆ ಕೊಡುತ್ತಾರೆ (ಪಾಲಪ್ರ. ೧. ೫೧). [< ಪೊರಳ್]

ಹೊರಳಿ$_1$ (ನಾ). ೧. ಚಕ್ರಾಕಾರವಾದ ಚಲನೆ; ಸುತ್ತಾಟ; ತಿರುಗಾಟ: ಆಪಡೆಯೊಳುಮಿಲ್ಲ ಸುಖಂ ಕೈವಲ್ಯದೊಳಲ್ಲದನ್ನೆಗಂ ದೇಹಿಗಳಂ ತೀವುವ ಕೆಡಹುವ ಯಂತ್ರ ಘಟಾವಳಿಗಳ ಹೊರಳಿಯಂತೆ ವಿಧಿ ತಿರಿಗಿಸುಗುಂ (ಅನಂಪು. ೯-೩೪). ೨. ಒಂದು ಲೆಕ್ಕದ ಹಣವನ್ನು ಇನ್ನೊಂದು ಲೆಕ್ಕಕ್ಕೆ ಮರುಪಾವತಿಯ ಆಧಾರದ ಮೇಲೆ ವರ್ಗಾಯಿಸುವುದು: (ಕ).

ಹೊರಳಿಯಮಾತು = (ವಿಷಯವನ್ನು) ಹೊರಳಿಸಿ ಆಡುವ ಮಾತು: ನೆಚ ತಿಳಿದವರುಗಳೆಲ್ಲ ಹೊರಳಿಯ ಮಾತನಾಡುವುದಕೆ ಬಾರದು ಅಯ್ಯರು ತಾ ಲೌಕಿಕವನು (ಪ್ರಾಸಚ. ೯-೧೩೪). [ಹೊರಳ್ (< ಪೊರಳ್) + - ಇ$_4$]

ಹೊರಳಿ$_2$ 'ಪೊರಳಿ' ನೋ.

ಹೊರಳಿ$_3$ 'ಹೊಳ್ಳಿ$_1$' ನೋ.

ಹೊರಳೆ4 'ಹೊಳ್ಳೆ' ನೋ.

ಹೊರಳೆಗಡಿ 'ಹೊರಳಿಗಡಿ' ನೋ.

ಹೊರಳ್ಚು 'ಪೊರಳ್ಚು' ನೋ.

ಹೊರಾಂಗಣ (ನಾ). (ಕಟ್ಟಡದ) ಬಾಹ್ಯ ಆವರಣ,– ಬಯಲು ಜಾಗ.

ಹೊರಾಂಗಣಕ್ರೀಡೆ = (ಕಟ್ಟಡದ) ಹೊರಗಿನ ಆವರಣದಲ್ಲಿ ಆಡುವ ಆಟ,– ಬಯಲುಜಾಗದಲ್ಲಿ ಆಡುವ ಆಟ: ಈ ಹುಡುಗನಿಗೆ ಹೊರಾಂಗಣ ಕ್ರೀಡೆಯಲ್ಲಿ ಬಹಳ ಆಸಕ್ತಿಯಿದೆ (ರೂಢಿ). [ಹೊರ (< ಪೊಱಗು) + ಅಂಗಣ]

ಹೊರಾದಾಯ (ನಾ). ಹೊರಗಿನಿಂದ ಬರುವ ಆದಾಯ: ಗ್ರಾಮಾದಾಯ ಚರಾದಾಯ ಹೊರಾದಾಯ ಕೂಳಿಗಮಾನ್ಯ ಇವು ಮೊದಲಾದ ಸಕಲ ಸ್ವಾಮ್ಯವನು . . . ಅನುಭವಿಸಿಕೊಂಡು ಬಹರು (ಎಕ. XIV, ನಂಜನ. ೨೯೫ , ಪುಟ ೧೫೧; 1756); ಹುಲ್ಲು ಹಣ ಚರಾದಾಯ ಹೊರಾದಾಯ ಶೀಗೇಮಡಿ . . . ರೂಢಿಸಿಕ್ಕೊಂಡು (ಹುಟ್ಟಿಪ. ೩).

[ಹೊರ (< ಪೊಱಗು) + ಆದಾಯ]

ಹೊರಿಗೆ 'ಪೊಜಿಗೆ' ನೋ.

ಹೊರಿಗೆವಾಳ 'ಹೊಜಿಗೆವಾಳ' ನೋ.

ಹೊರಿಯೊಟ್ಟೆ 'ಹುರಿಯೊಟ್ಟೆ' ನೋ.

ಹೊರಿಸು 'ಪೊಜಿಸು' ನೋ.

ಹೊರು 'ಪೊಜು' ನೋ.

ಹೊರೆ1 'ಪೊರ1' ನೋ.

ಹೊರೆ2 'ಪೊರ2' ನೋ.

ಹೊರೆ3 'ಪೊರ3' ನೋ.

ಹೊರೆ4 'ಪೊರ4' ನೋ.

ಹೊರೆ5 'ಪೊರ5' ನೋ.

ಹೊರೆ6 'ಪೊಜ' ನೋ.

ಹೊರೆಕಟ್ಟು 'ಪೊಜಗಟ್ಟು' ನೋ.

ಹೊರೆಕಾರ 'ಪೊಜಕಾಜ' ನೋ.

ಹೊರೆಕಾಱ (ನಾ). ೧. ಪಕ್ಕದಲ್ಲಿರುವವನು; ಸಮಾಪದಲ್ಲಿರುವವನು. ೨. ಪರಿಚಾರಕ; ಆಜ್ಞಾಧಾರಕ: ನಮಸ್ಕಾರಕುಳಿದ ದೇವವ್ರಾತಮರುಹಮಲ್ಲಂ ಮಮ ಕರ್ತು ಶಿವನ ಹೊರೆಕಾಱರೆನಲರ್ಪರು ಕಮಲಾಕ್ಷಮುಖ್ಯರು (ಎಱೃಪು. ೩-೨೧-೩೬).

[ಹೊರ್ (< ಪೊರ್) + - ಕಾಱ]

ಹೊರೆಗಳೆ 'ಪೊರೆಗಳ' ನೋ.

ಹೊರೆಗಾಣ್ (ಕ್ರಿ). ಸಲಿಗೆಯಿಂದಿರು; ಲಘುವಾಗಿರು: ಹೊರೆಗಾಣದಿಹ ನೇಹಗಲಹದ ಮೊಗಂಗೊಡದ ಗಿರಿಸುತೆಯ ಬೆಂಗಡೆಗೆ ಸೊಪ್ಪುಳಾಗದ ತೆಱದೊಳಿರದೆ ಬಳಸಂದು . . . ಆಲಿಂಗನಂಗೆಯ್ದು ಪಂಪಾವಿರೂಪಾಕ್ಷ ಸಲಹೆಮ್ಮನು (ಚಿಪು. ೩೮-೧).

[ಹೊರ್ (< ಪೊರ್) + ಕಾಣ್]

ಹೊರೆಗುಂದು (ಕ್ರಿ). ಉತ್ಸಾಹವನ್ನು ಕಳೆದುಕೊಳ್ಳು; ನಿರುತ್ಸಾಹವನ್ನು ತಾಳು: ಭಾವಿಧನುವಿವೆ ಭಾಮಿನಿಯ ಮುಂದೆ ಎವಗೆ ತವಗಿದು ವಶವೆ ಬಾವನ್ನವನು ವೇಷ್ಟಿಸಿ ಭುಜಗವಿದಯೆಂದವನಿಪರು ಹೊರ [ಪಾಠಾಂ.ರ] ಗುಂದಿದರು ಭಯಮುಖದ ದುಗುಡದಲಿ (ಕುಪ್ಪಾಱ. ೧೪-೨೫). [ಹೊರ್4(< ಪೊರ್4) + ಕುಂದು1]

ಹೊರೆಗೆಲಸ (ನಾ). ರಾಶಿಕೆಲಸ; ಹೆಚ್ಚುಕೆಲಸ: ಹೊತ್ತಾರೆ ಹೊರೆಗೆಲಸ ಮಿಕ್ಕರೆ ಮಿಗಲಿ ಘಕ್ಕಾದ ನೆರಹೊರೆ ನಕ್ಕರೆ ನಗಲಿ (ಗೋಳು. ೪-೧೦).

[ಹೊರ್6 (< ಪೊಜ) + ಕೆಲಸ]

ಹೊರೆಗೊಳಿಸು (ಕ್ರಿ). ಬೆರಸು; ಸೇರಿಸು: ಕಂಡಧೂಪವ ಕೊಟ್ಟು ಹುರಿದ ನೆಲ್ಲಿಯಕಾಯನು ಬಳಿಕದಱೊಳಿಕ್ಕಿಯೊಗ್ಗರಿಸಿ ಪರಿಮಳವ ಹೂ [ಪಾಠಾಂ. ದಹೋ] ರಗೊಳಿಸಿ ಮಾಡುವುದು (ಸೂಪಶಾ. ೬-೧೪).

[ಹೊರ್4 (< ಪೊರ್4) + ಕೊಳ್1 + - ಇಸ್ವ್]

ಹೊರೆದೋಱು 'ಪೊರೆದೋಱು' ನೋ.

ಹೊರೆಬಿಡು 'ಪೊರೆವಿಡು' ನೋ.

ಹೊರೆಯ (ನಾ). ಬಳಿ; ಸಮಾಪ; ಹತ್ತಿರ: ಬರಲು ಕಂಡಳು ಹರುಷ ಪುಳಕದಿ ವರಸುತೆಯನಾ ಪತಿಯ ಹೊರೆಯಕ್ಕಿರುಳು ಕಳುಹಲು ಕಂಡು ಪತಿಯಾ ಚರಣಕೆಱಗಿದಳು (ಸಂಭವ. ೨೫-೪೬). [< ಹೊರ್4 (< ಪೊರ್4)]

ಹೊರೆಯಾಲ (ನಾ). ಒಂದು ಊರಿನ ಹೆಸರು: ಅಯ್ಯಪಯ್ಯ Xನರ ಸತ್ರಹಾಲೆಯರ ಕಣವೊಂಗೆ ಕೊಟ್ಟ ಮಣ್ಣ ಖ ೧ ಹೊರೆಯಾಲದೇವವರಿಯರು (ಎಕ. III(R). ಗುಂಡ್ಲುಪೇ. ೫೯-೧೩; 975). [?]

ಹೊರೆಯಾಳ್ 'ಪೊಟೆಯಾಳ್' ನೋ.

ಹೊರೆಯಿಡು 'ಪೊರೆಯಿಡು' ನೋ.

ಹೊರೆಯೆತ್ತು 'ಪೊರೆಯೆತ್ತು2' ನೋ.

ಹೊರೆಯೇರು 'ಪೊರೆಯೇಜು' ನೋ.

ಹೊರೆಯೇಜು 'ಪೊರೆಯೇಜು' ನೋ.

ಹೊರೆವೆಣ್ಣು (ನಾ). ಪಕ್ಕದಲ್ಲಿರುವ ಹೆಣ್ಣು,– ಸ್ತ್ರೀ: ಉಜುಬಿ ಹೇಳುವ ಮಂತ್ರಿ ಸಖಿರನಂಜಿಸಿ ಹೊರೆಕೆರೆತೆವೆಣ್ಣುಗಳ ಮೇಲೆ ಮುನಿದು (ಭರಚ. ೪೮-೯೩).

[ಹೊರ್4 (< ಪೊರ್4) + ಪೆಣ್ಣು (< ಪೆಣ್)]

ಹೊರೆಹ (ನಾ). ಹೊರಸೂಸುವಿಕೆ; ಬೀರುವಿಕೆ: ಪ್ರಬೋಧನ, ಅನುಬೋಧ-ಕೆಟ್ಟ ಗಂಧವ ಹೊರೆಹ (ನಾಚರಾ. ೮). [ಹೊರ್3 (< ಪೊರ್2)+ - ಹ3 (< - ಪ3)]

ಹೊರೆಹುಟ್ಟು (ಕ್ರಿ). ಭೇದಭಾವವುಂಟಾಗು; ವ್ಯತ್ಯಾಸ ಉಂಟಾಗು: ಲಿಂಗವ ಜಂಗಮ ಜಂಗಮವ ಲಿಂಗವೆಂದು ನಂಬಿದಲ್ಲಿ ಹೊರೆಹುಟ್ಟಿದ ಬಳಿಕ ಹಾಲ ಹರವಿಯೊಳಗೆ ಹುಳಿ ಹೊಕ್ಕಂತೆ ನೋಡಯ್ಯಾ (ಚನ್ನವ.ಶ.೧೩೪-೩೦೩); ಆ ಸ್ಪಪಂ ಮಂತ್ರಿಗಂ ತಮ್ಮೊಳಗೆ ಹೊರೆಹುಟ್ಟದಂತೆ . . . ತರುಣೀ ನೀಲಾಂಬಿಕೆಯನೊಲಿದಿತ್ತು ಬಸವಗಂ ಹಿರಿದು ವಿಭವದಿ ಮದುವೆಯ ಮಾಡಿ (ಲಶಚಂ. ೩೧-೬೭).

[ಹೊರ್3 (< ಪೊರ್2) + ಹುಟ್ಟು1 (< ಪುಟ್ಟು1)]

ಹೊರೆಹೆಚ್ಚು (ಕ್ರಿ). ಉತ್ಸಾಹಗೊಳ್ಳು; ಹಿಗ್ಗು: ಹರಭಕ್ತರಂ ಕಂಡು ಹೊರೆಹೆಚ್ಚಿ ಭಕ್ತಿಯಿಂದಿರದೆದ್ದು ವಂದಿಸುತ ಮಧುರವಾಕ್ಯಂಗಳಿಂದಿರುಳು ಪಗಲೆನ್ನದತಿ ಸೇವೆಯಂ ಮಾಡುವವನಜ್ಞಾನಿ ತಾನಾದಡು ಪರದೊಳಗೆ ಮುಕ್ತನಹ (ಲಶಚಂ. ೪೩-೨೪); ನನೆದು ದಂತಃಕರಣ ರೋಮಾಂಚನದಲಾನಂದಾಶ್ರುಜಲದಲಿ ನನೆದು ಹೊಂಪುಳಿಯೋಗಿ ಕಣ್ಮೆವೆ ಮುಚ್ಚಿ ಹೊರೆಹೆಚ್ಚಿ ನೆನೆದನು (ಕುವ್ಯಾದ್ಯೋ. ೧೮-೬೦); ದಶಕಂಧರನು ಹೊರೆಹೆಚ್ಚಿದನು ಮೊನೆಗಣೆಗಳಿಂದವೆ ಮುಚ್ಚಿದನು ಬೊಬ್ಬಿಱಿದು ಭೂಪಾಲನನು (ಉತ್ತರಾ. ೧೭-೩೫).

[ಹೊರ್4 (< ಪೊರ್4) + ಹೆಚ್ಚು1 (< ಪೆರ್ಚು1)]

ಹೊರೆಹೊಗು (ಕ್ರಿ). ೧. ಮೋಸಕ್ಕೆ ಒಳಗಾಗು; ವಂಚಿತವಾಗು: ಎರಡು ಭಾಗವ ಮಾಡಿ ವಿಶ್ವಂಭರೆಯ ರಾಜ್ಯವನುಭಯರಾಯರು ಹೊರೆಹೊಗದೆ ಪಾಲಿಸಲಿ ಪಂಥದೊಳೆಂದನಂಧನೃಪ (ಕುವ್ಯಾಉ. ೧೪-೨). ೨. ಮರೆಮಾಚು: ಮಚ್ಚಿದುದ ನುಡಿಪೇಡತನವೇಕೆ ಹೊರೆಹೊಗದೆ ಹೇಳೆನಲು ನಗೆಮೊಗವರಳಿ ಹೊಂಪುಳಿಯೋಗಿ ಕೌರವರರಸ ನುಡಿದನು (ಕುವ್ಯಾದ್ಯೋ. ೧೦-೩೯); ಹೊರೆಹೊ[ಪಾಠಾಂ.ಹು]ಗದೆ ಬಳಿಕರಸ ವಾನರರರಸಗೆಂದನು ರವಿಜನೆಂಬೀ ದೊರೆವೆಸರು ಬಂದಂದವಾವುದು (ತೊರಾ. ೪-೨-೧೨). [ಹೊರ್3(< ಪೊರ್3) + ಹೊಗು (< ಪೊಗು)]

ಹೊರೆಹೊರು (ಕ್ರಿ). ಭಾರವನ್ನು ಹೊರು,– ಸಾಗಿಸು: ನೆರಮಿಾವ ಮಿತ್ರನ್ಗೆ ಜೊತೆದುಡಿವ ಪುತ್ರನ್ಗೆ, ಯಜಮಾನನಿಗೆ ನೀನು ಹೊರೆಹೊರುವ ಕತ್ತೆಯೊಲು ದಾಸನಲ್ಲ ! (ಪಾಂಚಜ. ೪೩-೩). [ಹೊರ್6 (< ಪೊಜೆ)+ ಹೊರು (< ಪೊಜು)]

ಹೊರ್ಕುಳಿ 'ಪೋರ್ಕುಳಿ' ನೋ.

ಹೊರ್ಜೆ 'ಪೊರಜೆ' ನೋ.

ಹೊರ್ಜೆಹಗ್ಗ 'ಹೊರಜೆಹಗ್ಗ' ನೋ.

ಹೊರ್ತು 'ಹೊಱತು2' ನೋ.

ಹೊಲ 'ಪೊಲ' ನೋ.

ಹೊಲಗಾಹಿ 'ಪೊಲಗಾಹಿ' ನೋ.

ಹೊಲಗುಲ (ನಾ). ಹೀನಕುಲ; ಚಂಡಾಲಜಾತಿ: ಎಲವೊ ತ್ರಿಶಂಕು ನೀ ಗುರುವಿನಾಜ್ಞೆಯ ಮೀಱಿ ಬಲುಪಿಂದ ಬಂದ ಕಾರಣದಿ ಹೊಲಗುಲವಾಗಿ Eಗುತಿ ನೀನೆಂದು ಶಾಪವನಿತ್ತು ಇಳೆಗೆ ನೂಕಿದರು ಪೀಠದಿಂದ (ನನ್ನಕಾ. ೯-೯೭).

[< ಹೊಲೆ (< ಪೊಲೆ) + ಕುಲ]

ಹೊಲಗೆಡು 'ಪೊಲಗೆಡು' ನೋ.

ಹೊಲಗೆಯ್ಮೆ (ನಾ). ಹೊಲದ ಕೆಲಸ; ವ್ಯವಸಾಯ: ಎಳೆಮುದಿಯರೊಂದಾಗಿ ಕಲೆತು ಹೊಲಗೆಯ್ಮೆಯೊಳು ನಲಿದುಲಿವ ನಗಮಾತು ಕಿವಿಗೆಸೆವುದು (ಇಂಗೀತ. ೬-೧೪).

[ಹೊಲ (< ಪೊಲ) + ಗೆಯ್ಮೆ (< ಕೈಮೆ$_1$)]

ಹೊಲಗೇರಿ 'ಪೊಲೆಗೇರಿ' ನೋ.

ಹೊಲತಿ 'ಪೊಲತಿ' ನೋ.

ಹೊಲಥರ (ನಾ). (ದೇವಾಲಯದ) ಸುತ್ತುಗೋಡೆ; ಪ್ರಾಕಾರ: ಚಿಕ್ಕಬೇರುಂಟನ ಮಾಠದ ಸಮಸ್ತ ಕೂಸುಗಳು ಸೋಮನಾಥದೇವರ ದೇವಾಲ್ಯದ ಹೊಲಥರದ ಕಲಕೆಲಸಕೆ ಗದ್ಯಾಣ ಹತ ಕೊಟರು (ಮೃಅರಿ. ೧೯೪೨. ೪೬-೮; 1228).

[IP ಇದು 'ಹೊರತರ' ಎಂಬುದರ ಅಪಲಿಖಿತ]

ಹೊಲದಕೊಗ್ಗೆಬೇರು (ನಾ). ಔಷಧೀಯ ಗುಣವುಳ್ಳ ಒಂದು ಬಗೆಯ ಬೇರು: ಹೊಲದಕೊಗ್ಗೆಬೇರು, ಕೆಂಪುಸೀಗೆಬೇರು, ಮಂಜಿಷ್ಠೆ ಇವು ಪ್ರತ್ಯೇಕ ಸಮತೂಕ ಹಾಕಿ ಚೂರ್ಣಮಾಡಿ . . . ಕೊಡಬೇಕು (ಸಕವೃ. ೪೦೫ ಪರಿ).

[< ಹೊಲ (< ಪೊಲ) + ಕೊಗ್ಗೆ (< ಕೊಗ್ಗಿ$_1$) + ಬೇರು (< ಬೇರ್$_1$)]

ಹೊಲದಪುಂಡ್ರಿಕೆ (ನಾ). ಒಂದು ಬಗೆಯ ಸಸ್ಯ; ಪುಂಡಿಸೊಪ್ಪು: ಹೊಲದಪುಂಡ್ರಿಕೆ, ಪುಂಡ್ರಿಕೆ, ಗೋಗು, ಪುಂಡಿ (ಮೃಔಗಿ. ೪೩-೮೫೦). [< ಹೊಲ (< ಪೊಲ) + ಪುಂಡ್ರಿಕೆ]

ಹೊಲದಬಟಾಣಿ (ನಾ). ಒಂದು ಬಗೆಯ ಬಟಾಣಿ: "ಬಟ್ಟಗಡಲೆ, ಕಡಲೆ, ಹೊಲದಬಟಾಣಿ" (ಸಸ್ಯನಿ. ೧೦೭); (ಮೃಔಗಿ. ೬೨-೧೨೬೦).

[< ಹೊಲ (< ಪೊಲ) + ಬಟಾಣಿ]

ಹೊಲದಮೆಣಸಿನಗಿಡ (ನಾ). ಒಂದು ಬಗೆಯ ಮೆಣಸಿನ ಗಿಡ: (ಮೃಔಗಿ. ೧೭-೩೧೨). [< ಹೊಲ (< ಪೊಲ) + ಮೆಣಸಿನಗಿಡ$_0$]

ಹೊಲದವರೆ (ನಾ). ಒಂದು ಬಗೆಯ ಅವರೆ: ಹೊಲದವರೆಯ ನೆಟ್ಟು ಸೊಡಗೆಯ ಸುಲಿದಲ್ಲಿ ತಳಲು ಬಲಿದು ಒಡೆದುದಿಲ್ಲ (ಮೋಳಿಮಾ. ೨೬೫-೮೧೭).

[< ಹೊಲ (< ಪೊಲ) + ಅವರೆ$_1$]

ಹೊಲದೆಱೆ (ನಾ). ಹೊಲದ ಮೇಲೆ ಹಾಕುವ ಒಂದು ಬಗೆಯ ತೆರಿಗೆ: ತಂಮ್ಮ ಸೆಳಱಕುಲದ ಮನೆಯ ಸಂ[ತ]ವಣ ಆಯದಾಯ ಕಾಣಿಕೆ ಹೊಲದೆಱೆ ಕುಱೆದೆಱೆ ಸಮಸ್ತ ಕೊಳ್ಳಿ ಇನ್ನು ಹುಟ್ಟುವ ಸಂತವಣ ಇಂತಿನಿತು ಸಮಸ್ತಾಯವೆಲ್ಲಮ ಹುಗದಂತಾಗಿ ಹೊಲೆಗೆಱೆ ಮಾಡಿ . . . ಕೊಟ್ಟ ಶಿಳಾಸಾಸನ (ಸೌಇಇ. XX, ೯೧-೪೫; ?).

[ಹೊಲ (< ಪೊಲ) + ತೆಱೆ$_3$]

ಹೊಲಬಳಿ (ಕ್ರಿ). ದಾರಿ ತಪ್ಪು; ದಿಕ್ಕುಗೆಡು: ಉಬ್ಬದನು ಹರುಷದಲಿ ಕಂಗಳ ಗಬ್ಬ ಮುಱಿದುದು ಮದದ ನಿಗುರಿನ ಹಟ್ಟುಗೆಯ ಹೊಲಬಳಿಯೆ ನಾಲಗೆಯುಡುಗೆ . . . ಬೆಱಗಾದ (ಕುಪ್ಪಾಭೀ. ೩-೬೭); ಬೆಳಗಹನ್ನೆಗ ಕತ್ತಲೆಯ ಮಳೆಗಳ ಮಹಾವಾತಾಂಬುಪೂರದ ಹಳುವದಲಿ ಹೊಲಬಳಿದು ಕೈವಿಡಿದೊಬ್ಬರೊಬ್ಬರನು ತಿಳಿಯಬಾರದ ಮರದ ಕಳೆವರದಳತೆಯಲಿ ಮತಿನಿಂದುದಜ್ಜರ ಕಳವಳಿಕೆಯಂತೇಕದೇಶನಿಜಾತ್ಮಭಾವದಲಿ (ನಿಭಾಗ. ೧೦-೯೬-೧೫); ಸಲೆ ಮಿಡುಗುವ ಬಾಯ್ಮಡುಗುವ ತೊಡೆ ಬಿಡದೊಲವದಟಿಳಿಯದ ಸಾಸವಳಱುವೆರ್ದೆ ಹೊಲಬಳಿದಿರವೆಸೆಯಲ್ ಸುಸಿಲಿಂ ನಱುಜೋಡೆಯರಗಲಿದರು (ಉದ್ಯದೇ. ೪-೧೮); ಶಾಂತಿರಾಜ್ಯದ ಬಹಿಷ್ಕೃತ ನಾಗರಿಕನಂತೆ ಚಿಂತೆಗಳ ಹಳುವದಲಿ ಹೊಲಬಳಿದನು (ಭಾರಂಗ. ೭೦-೧೨). [ಹೊಲಬು (< ಪೊಲಂಬು) + ಅಳಿ$_1$ (< ಅಱಿ$_1$)]

ಹೊಲಬಿಗ 'ಪೊಲಂಬಿಗ' ನೋ.

ಹೊಲಬು 'ಪೊಲಂಬು' ನೋ.

ಹೊಲಬುಕೆಡು 'ಪೊಲಂಬುಗೆಡು' ನೋ.

ಹೊಲಬುಗಾಱ (ನಾ). ದಾರಿಯನ್ನು ತಿಳಿದವನು; ಮಾರ್ಗವನ್ನು ಅರಿತವನು: ಹೊಲಬುಗಾಱರ ಹೆಜ್ಜೆದೆಗಹಿನ ಚಲಿತ ಚಪಳದ ಚಾಳಿಯವೊಲಗ್ಗಳ ಬಲಾನ್ವಿತ ರೈದಿದರು ಬಳಿಕವರ ಬಳಿವಿಡಿದು (ತೂರರಾ. ೩-೧೨-೨).

[ಹೊಲಬು (< ಪೊಲಂಬು) + - ಗಾಱ (<- ಕಾಱ)]

ಹೊಲಬುಗಿಡು 'ಪೊಲಂಬುಗೆಡು' ನೋ.

ಹೊಲಬುಗೆಡಿಸು 'ಪೊಲಂಬುಗಿಡಿಸು' ನೋ.

ಹೊಲಬುಗೆಡು 'ಪೊಲಂಬುಗೆಡು' ನೋ.

ಹೊಲಬುಗೇಡಿ (ನಾ). ಮಾರ್ಗ ತಪ್ಪಿದವನು; ದಾರಿ ತಪ್ಪಿದವನು: ಹಲಬರು ಛಲವಿಡಿದುವಿಡಿದು ಹೊಲಬುಗೇಡಿಯಾದರು ನೋಡಾ (ಸಿದ್ಧವ. ೯. ೧೭೨-೫೭೨).

[ಹೊಲಬು (< ಪೊಲಂಬು) + ಕೇಡಿ$_1$]

ಹೊಲಬುಗೊಳ್ (ಕ್ರಿ). ಮಾರ್ಗವನ್ನು ಹಿಡಿ; ದಾರಿಯನ್ನು ಅನುಸರಿಸು: ಹೊಲಬುಗೊಂಡಱಸ ಬೇಡ ಬಲಿತು ತರಬೇಡ ಒಲಿದೊಮ್ಮೆ ಶಿವಶರಣನ್ನಿರಯ್ಯಾ ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ (ಬಸವ. ೧೮೦). [ಹೊಲಬು (< ಪೊಲಂಬು) + ಕೊಳ್$_1$]

ಹೊಲಬುತಪ್ಪು ' ಪೊಲಂಬುದಪ್ಪು' ನೋ.

ಹೊಲಬುದಪ್ಪು 'ಪೊಲಂಬುದಪ್ಪು' ನೋ.

ಹೊಲಮದ್ದು (ನಾ). ಗಿಡಮೂಲಿಕೆಗಳಿಂದ ತಯಾರಿಸಿದ ಮದ್ದು; ಹಸಿರೌಷಧಿ: ಅಜ್ಜಿ ತನಗರಿತ ಹೊಲಮದ್ದುಗಳನ್ನು ರೋಗಪೀಡಿತರಾದ ಹಲವಾರು ಹಳ್ಳಿಗರಿಗೂ ಕೊಡುತ್ತಿದ್ದಳು (ಕುರುಕಾ. ೩೦). [ಹೊಲ (< ಪೊಲ) +ಮದ್ದು (< ಮರ್ದು)]

ಹೊಲಮೇರೆ 'ಪೊಲಮೇರೆ' ನೋ.

ಹೊಲಪೆರೆ 'ಪೊಲಮೇರೆ' ನೋ.

ಹೊಲವೇರಿ 'ಪೊಲಮೇರೆ' ನೋ.

ಹೊಲವೇರೆ 'ಪೊಲಮೇರೆ' ನೋ.

ಹೊಲಸು$_1$ 'ಪೊಲಸು$_1$' ನೋ.

ಹೊಲಸು$_2$ 'ಪೊಲಸು$_2$' ನೋ.

ಹೊಲಸುಜೀವನ (ನಾ).ಕೊಳಕು ಜೀವನ; ಮಲಿನವಾದ ಜೀವನ: ರಾಯರು ತಮ್ಮ ಹಿಂದಿನವರ ಹೊಲಸುಜೀವನಕ್ಕೆ ಹೇಗೆ, ಉತ್ತಮಜೀವನವನ್ನು ಆಚರಣೆಯಲ್ಲಿ, ನಡೆಯಲ್ಲಿ, ನುಡಿಯಲ್ಲಿ ಮತ್ತೆಲ್ಲದರಲ್ಲೂ ತಂದಿದ್ದರು (ಮರಗಿ.೫).

[ಹೊಲಸು$_1$ (< ಪೊಲಸು$_1$) + ಜೀವನ]

ಹೊಲಸುದೋಱು (ಕ್ರಿ). ಕೊಳಕಾಗಿ ತೋರು; ಮಲಿನವಾಗಿರು: ಹೊಲಸು[ಪಾಠಾಂ. ಬು] ದೋಱಿದೆ ಮಗನೆ ಜಲವೆಮಗಲಸಿದೆಯಲಾ ಸೇವೆಯಲಿ . . . ಎನುತೊಕ್ಕರಾ ಜಲವ (ತೂರರಾ. ೨-೫-೨೩). [ಹೊಲಸು$_1$ (< ಪೊಲಸು$_1$) + ತೋಱು]

ಹೊಲಸುನಾತ (ನಾ). ಕೆಟ್ಟವಾಸನೆ; ದುರ್ಗಂಧ: ಮಲ್ಲಿನಾಥನನಡರಿ ನೋಡಿ ನಮಿಸಿ ಉರದ ಮೀನಂ ಹೊಲಸುನಾತಮಂ ನೀಗಿ ಹೊಸಪರಿಮಳದ ಕರುವಾಗಿ ನಡೆತಂದು (ಸಿದ್ಧರಾ. ೪-೪೮); ಎಲ್ಲ ಜಾತಿಯ ಅಡಿಕೆಗಳಲ್ಲಿ . . . ಹುಳಕ ಮತ್ತು ತಿನ್ನುವಾಗ್ಗೆ ಹೊಲಸುನಾತ ಬರೋಣ ಇಂಥಾ ಪ್ರಕಾರಗಳಿರಲಿಕ್ಕೆ ಬಾರದು (ಮುಂಬಪ್ರಾ. ೫೦).

[ಹೊಲಸು$_1$ (< ಪೊಲಸು$_1$) + ನಾತ]

ಹೊಲಸುನಾರು 'ಪೊಲಸುನಾಱು' ನೋ.

ಹೊಲಸುನಾಱು 'ಪೊಲಸುನಾಱು' ನೋ.

ಹೊಲಸುಮಾತು (ನಾ). ಅಸಭ್ಯವಾದ ನುಡಿ; ಕೀಳುನುಡಿ: ಹೊಲಸುಮಾತುಗಳನ್ನು ಕೇಳಲು ಅಸಹ್ಯವಾಗುತ್ತದೆ (ರೂಢಿ). [ಹೊಲಸು$_1$ (< ಪೊಲಸು$_1$) + ಮಾತು$_1$]

ಹೊಲಸೂಳೆ (ನಾ). ಕೀಳಾದ ಸೂಳೆ: ಬೀದಿನಾಯಿ ರಾಧಿಯು ಮೊನ್ನೆ ಹೇಗೊ ಸತ್ತಳು. ದುರುಳನೊಬ್ಬ ಏಕೊ ನಕ್ಕ, ಹೊಲಸೂಳೆಯು ಅತ್ತಳು (ಸರ್ಯನಾ. ೬೫-೧೨).

[< ಹೊಲೆ (< ಪೊಲೆ) + ಸೂಳೆ$_1$]

ಹೊಲಸೇಳ್ 'ಪೊಲಸೇಳು' ನೋ.

ಹೊಲಸೇಳು 'ಪೊಲಸೇಳು' ನೋ.

ಹೊಲಿ$_1$ 'ಪೊಲ್' ನೋ.

ಹೊಲಿ$_2$ 'ಪೊಲಿ$_2$' ನೋ.

ಹೊಲಿಗೆ 'ಪೊಲ್ಗ' ನೋ.

ಹೊಲಿಗೆಯಂತ್ರ (ನಾ). (ಬಟ್ಟೆ ಮೊದಲಾದುವುಗಳನ್ನು) ಹೊಲಿಯುವ ಯಂತ್ರ: ಅವಳು ಕಂತಿನ ಮೇಲೆ ಹೊಲಿಗೆಯಂತ್ರ ತೆಗದುಕೊಂಡಿದ್ದಾಳೆ (ರೂಢಿ).

[ಹೊಲಿಗೆ (< ಪೊಲ್ಗ) + ಯಂತ್ರ]

ಹೊಲಿಗೆರಾಟಿ (ನಾ). = ಹೊಲಿಗೆಯಂತ್ರ: ನನ್ನನ್ನು ಸಿಂಪಿಗನ ಕಡಿಗೆ ಒಯ್ದರು . . . ನನ್ನನ್ನು ಹೊಲಿಗೆರಾಟಿಯ ಬಾಯಿಗೆ ಕೊಟ್ಟನು. ಸೂಜಿಯಿಂದ ಚುಟ್ಟಿ ಚುಟ್ಟಿ ಹೊಲಿದು, ನನ್ನನ್ನು ಈ ರೂಪಕ್ಕೆ ತಂದನು (ಕವಪ್ರ. ೪-೨೮).

[ಹೊಲಿಗೆ (< ಪೊಲ್ಗ) + ರಾಟಿ (< ಊಟ್ಟಿ)]

ಹೊಲಿಸು 'ಪೊಲಿಸು' ನೋ.

ಹೊಲೆ 'ಪೊಲ' ನೋ.

ಹೊಲೆಗಂಪು (ನಾ). ಹೊಲಸುನಾತ; ದುರ್ವಾಸನೆ: ದೇಹವನು . . . ಇಂಪಾಗಿದೆಯೆಂದು ಹಿಗ್ಗುದಿರೆಲವೊ ಹೊಲೆಗಂಪು ನಾರುವುದು ತೊಳೆಯದೆ ಇರಲು (ವಿದಾಕ್ಯ. ೪೮-೧).

[ಹೊಲೆ (< ಪೊಲ) + ಕಂಪು]

ಹೊಲೆಗಲಸು 'ಪೊಲೆಗಲಸು' ನೋ.

ಹೊಲೆಗಾಣ್ (ಕ್ರಿ). ರಜಸ್ವಲೆಯಾಗು; ಮುಟ್ಟಾಗು: ಹೊಲೆಗಂಡಲ್ಲದ ಪಿಂಡದ ನೆಲೆಗಾಶ್ರಯವಿಲ್ಲ (ಬಸವ. ೫೯೧); ಗುರು ಕರುಣಿಸಿ ಪ್ರತ್ಯಕ್ಷಲಿಂಗವ ಪರುಷವ ಮಾಡಿ ತೋಱಿದ ಬಳಿಕ ಹೊಲೆಗಂಡನೆಂದು ತೊಲಗಲಾಗದು (ಸರ್ವಜ್ಞ. ೨೧೧-೯೪೮).

[ಹೊಲ (< ಪೊಲ) + ಕಾಣ್]

ಹೊಲೆಗೆಡಿಸು 'ಪೊಲೆಗೆಡಿಸು' ನೋ.

ಹೊಲೆಗೆಡು 'ಪೊಲೆಗೆಡು' ನೋ.

ಹೊಲೆಗೆಲಸ (ನಾ). ಕೆಟ್ಟಕೆಲಸ; ನೀಚಕಾರ್ಯ: ಜಲದೊಳಗೆ ಮುಳುಗಿದರೆ ತೊಲಗದು ಹೊಲೆಗೆ[ಪಾಶಾಂ. ೪]ಲಸವೀ ದೇಹದೊಳು ನೀ ನೆಲಸಿರಲು ಹೊಲೆಯುಂಟೆ (ಹರಿಪಾ. ೯೯).

[ಹೊಲೆ (< ಪೊಲೆ) + ಕೆಲಸ]

ಹೊಲೆಗೆಸರು (ನಾ). ಹೊಲಸಾದ ರಾಡಿ,— ಕೊಚ್ಚೆ: ಶ್ರೀಗಂಧದನುಲೇಪನಕ್ಕೆಣೆ ರಘೂದ್ವಹಂ; ಹೊಲಗಸರಿಗೆಣೆ ನೀನ್! (ಶ್ರೀರಾಮಾ. ೨೪೬-೪).

[ಹೊಲೆ (< ಪೊಲೆ) + ಕೆಸರು (< ಕೆಸಱ್)]

ಹೊಲೆಗೆಱೆ (ನಾ). ಒಂದು ಬಗೆಯ ತೆರಿಗೆ: ದೊನ್ನವಟ್ಟಿಯೂರೊಡೆಯ ಪಾಲಿಮಯ್ಯ ದೊನ್ನವಟ್ಟಿಯಲು . . . ಧಾರಾಪೂರ್ವಕಂಗೆಯ್ದು ಚಂದ್ರಾರ್ಕ ತಾರಬರಂ ಸಿನ್ದರ ಹೊಲೆಗೆಱೆಯೆನ್ದು ಬಿಟ್ಟು ಕೊಟ್ಟರ್ (ಸೌಣಾ. IX-i, ೧೦೦-೨೦; 1045); ಸಮಸ್ತಾಯವೆಲ್ಲಮ ಹುಗದಂತಾಗಿ ಹೊಲೆಗೆಱೆ ಮಾಡಿ ಸರ್ವನಮಸ್ಯವಾಗಿ ಧಾರಪೂರ್ವಕವಾಗಿ ಬಿಟ್ಟ ಶಮತು ಗೋವಣದೇವ ಕೊಟ್ಟ ಶಿಲಾಸಾಸನ (ಸೌಣಾ. XX, ೯೧-೪೭; ?). 'ಹೊಲೆಗೊಱೆ', 'ಪೊಲೆತೆಱೆ' ಪರಾ. [?]

ಹೊಲೆಗೇರಿ 'ಪೊಲೆಗೇರಿ' ನೋ.

ಹೊಲೆಗೊಱೆ (ನಾ). ಒಂದು ಬಗೆಯ ತೆರಿಗೆ: ತಿಪ್ಪೆಸುಂಕ ಮನೆದೆಱೆ ಪಾರಿಖಾಯ ಹೊಲೆಗೊಱೆ ಮಱವ ಈಂತಿನಿತುವಂ ಸರ್ವನಮಶ್ಯವಾಗಿ . . . ಧಾರಾಪೂರ್ವ್ವಕಂ ಮಾಡಿ ಕೊಟ್ಟನು (ಸೌಣಾ. XX. ೧೫೮-೪೩; 1176). 'ಹೊಲೆಗೆಱೆ', 'ಪೊಲೆತೆಱೆ' ಪರಾ. [?]

ಹೊಲೆಜೋಗಿ (ನಾ). ಕೀಳಾದ ಜೋಗಿ,— ಬೈರಾಗಿ: ಶಿವನೇ ನಿಮ್ಮನಱಿಯದ ಮನುಜನ ಒಡಲೆಂಬುದು ಹೊಲೆಜೋಗಿಯ ಕೆಯ್ಯ ಒಡೆದ ಸೋರೆಯಂತೆ ಕಾಣಾ (ಮಡಿವಾ. ೧೩-೧೬). [ಹೊಲೆ (< ಪೊಲೆ) + ಜೋಗಿ]

ಹೊಲೆತಡೆ (ಕ್ರಿ). ಮುಟ್ಟಾಗದಿರು; ಗರ್ಭಿಣಿಯಾಗು: ನಿನ್ನೀ ತಂಗಿ ದೇವಕಿ ಹೊಲೆತಡದೆಂತಪ್ಪ ಮಗನ ಪಡೆವಳೆನಲು (ನೇಮಿಪು. ೧೪-೧೫); ಓಡಾಡಿ ಸೌರಣಿಯನ್ನು ಮಾಡುವ ಗಂಡನನ್ನು ಅದೇ ತಿಂಗಳ ಹೊಲೆತಡೆದ ಹೆಂಡತಿಯು . . . ಎಂದು ಗಾಬರಿಯಾಗಿ (ಕೃಷ್ಣಜಾ. ೬೦). [ಹೊಲೆ (< ಪೊಲೆ) + ತಡೆ]

ಹೊಲೆತನ (ನಾ). ನೀಚತನ; ಕೀಳುತನ: ಹುಟ್ಟು ಬ್ರಾಹ್ಮಣಜಾತಿಯಾದರೂ ನಡತೆ ಹೊಲೆತನವನ್ನು ಮಿರಿಸಿತ್ತು (ಮಂಗಳ. ೪).

[ಹೊಲೆ (< ಪೊಲೆ) + - ತನ]

ಹೊಲೆದೆಱೆ 'ಪೊಲೆತೆಱೆ' ನೋ.

ಹೊಲೆಪಾಟು 'ಹೊಲೆಪಾಡು' ನೋ.

ಹೊಲೆಪಾಡು, ಹೊಲೆಪಾಟು (ನಾ). ಕೆಟ್ಟಪರಿಸ್ಥಿತಿ; ಕಠಿಣಾಸ್ಥಿತಿ: ಸರ್ವ ಕಾಯ್ಯ ಧನಮುಂ ಲುಬ್ಧಾರ್ಜ್ಜನೈಶ್ವರ್ಯಮುಂ ಹೊಲೆಪಾಡಿಂದಲೆ ಕೂಡಲಿಕ್ಕಿ ಪೆಱರ್ಗಂ ಕಾನಾಗದೇ ಪೋಗುವೊಲ್ ಗಱಿಸೇನುನ್ನಿದೆ ಪೋಪುದೈ (ಸೋಮೇಶ. ೯೧). ಹೊಲೆಪಾಟು: ಇಲ್ಲಿ ಸಾಕಷ್ಟು ಸ್ವಳವಿದ್ದರೆ . . . ಅಡುಗೆಮನೆಯೊಳಗಿನ ಹೊಲೆಪಾಟನ್ನು ಬಚೆಳವಾಗಿ ಕಡಿಮೆ ಮಾಡಬಹುದು (ಆಡುಸ್. ೨೪). [ಹೊಲೆ (< ಪೊಲೆ) + ಪಾಡು]

ಹೊಲೆಬೊಟ್ಟು (ನಾ). ಅವಲಕ್ಷಣವಾದ ಲಾಂಛನ,— ಗುರುತು: ನೋಡವರ ಹಣೆಯ ಹೊಲೆಬೊಟ್ಟನೆಂತೀಕ್ಷಿಪೆಂ ನೋಡವಂದಿರು ಮಾಳ್ಪ ತಪ್ಪನೇನೆಂದಪೆಂ (ಇಜೀರ. ಪ್ರ. ೧೦೯-೯). [ಹೊಲೆ (< ಪೊಲೆ) + ಬೊಟ್ಟು (< ಬಟ್ಟು)]

ಹೊಲೆಮಗ್ಗ (ನಾ). ಮಗ್ಗದ ಮೇಲೆ ಹಾಕುವ ಒಂದು ಬಗೆಯ ತೆರಿಗೆ: ತೊರೆಮಗ್ಗ ಹೊಲೆಮಗ್ಗಯಿನಿತುಮಂ ಧಾರಾಪೂರ್ವಕ ಮಾಡಿ ಕೊಟ್ಟ ದತ್ತಿ (ಎಕ. VI.(S), ಕೃಷ್ಣರಾ. ೧೦೬-೯; 1165). [ಹೊಲೆ + ಮಗ್ಗ]

ಹೊಲೆಮನ (ನಾ). ಕೆಟ್ಟ ಮನಸ್ಸು; ಅಶುದ್ಧವಾದ ಮನಸ್ಸು: ಹೊಲೆಮನ ಬಡದವರಿಗೆ ಗುರುಲಿಂಗವಿಲ್ಲೆಂದ ಬಸವಪ್ರಿಯಕೂಡಲಚೆನ್ನಸಂಗಮದೇವ (ಸರ್ವಜ್ಞ. ೨೧೧-೯೪೮); ಭ್ರಮೆಯೊಳೆಂದಿದ ಹೊಲೆಮನಕೆ ಹೋಲಿಕೆಯ ಪೇಳುವೆ (ಅಮೃತ. ೨-೬೨).

[ಹೊಲೆ (< ಪೊಲೆ) + ಮನ]

ಹೊಲೆಮನೆ 'ಪೊಲೆಮನೆ' ನೋ.

ಹೊಲೆಮಾತು 'ಪೊಲೆವಾತು' ನೋ.

ಹೊಲೆಯ 'ಪೊಲೆಯ' ನೋ.

ಹೊಲೆಯಕುದುರೆ (ನಾ). ಒಂದು ಜಾತಿಯ ಕುದುರೆ (?): ಹೊಲೆಯ ಕುದುರೆ ಪೆಡಿಲೆಯ ಕುದುರೆ ನಾಡ ಕುದುರೆಗೆ ಪ್ರತಿಗದ್ಯಾಣ ಒಂದಕ್ಕಂ ಬೇಳೆ ಆನೆಗೆ ಪ್ರತಿಗದ್ಯಾಣ ಒಂದಕ್ಕಂ ಹಾಗೆ (ಎಕ. V. ಬೇಲೂರು. ೭೫-೧೧೧;1382). [ಹೊಲೆಯ? + ಕುದುರೆ]

ಹೊಲೆಯಮ 'ಪೊಲೆಯಮ್ಮ' ನೋ.

ಹೊಲೆಯರಸು (ನಾ). ಚಾಂಡಾಲರ ಅಧಿಪತಿ, — ಒಡೆಯ: ಓಹೋಹೊ ದೂರ ದೂರಿರು ಬಾಹದೆ ನೀನಿಲ್ಲಿಗಿಂದು ಯೆಲೆ ಹೊಲೆಯರಸೆ . . . ವೀರಬಾಹು ದೂರದಿ ನಿಲ್ಲೆ (ಪಮಚ. ೧೧೭). [ಹೊಲೆಯ (< ಪೊಲೆಯ) + ಅರಸು$_2$ (< ಅರಸ$_1$)]

ಹೊಲೆಯಾಳು (ನಾ). ಕೀಳುವರ್ಗದ ಸೇವಕ: ಆ ಬಾಳಿಂಗೆ ಉಳ್ಳ ಹೊಲೆಯಾಳು ಹೆಂಣಾಳು ಗಂಡಾಳು ಕುಱುಟಗ[ಳು] ಸಹ. . . ಆ ಬಾಳ ಸ್ಥಾನಕ್ಕೆ ಉಳ್ಳಂಥಾ ಮಾ[ಂ]ನ್ಯ ದೀಪಮಾಲೆಯ ಕಂಭ ಹೊಲೆಯರ XX ಬಳೆ (ಸೌಣಾ IX-ii, ೪೭೬-೧೦; 1377); ಹೊಲೆಯಾಳಿಗೆ ಒಂದು ಮನೆಯಾಳು ಸೆರೆಯಾಯಿತು (ಗಾದೆ).

[ಹೊಲೆ (< ಪೊಲೆ) + ಆಳು$_3$ (< ಆಳ್$_3$)]

ಹೊಲೆಯಿಸು (ಕ್ರಿ). ಕೊಳಕುಮಾಡು; ಮಲಿನಗೊಳಿಸು: ನಿಮ್ಮ ಪಟ್ಟೆಯ ಬಟ್ಟೆಯನ್ನವನ ನೆತ್ತರಲಿ ನನಸಿ ಹೊಲೆಯಿಸದಿರ್ಮೆ! (ಹಚ್ಚರ. ೪೦-೧೩೬).

[ಹೊಲೆ (< ಪೊಲೆ) + - ಇಸು]

ಹೊಲೆಯೊಡಲು (ನಾ). ಮಲಿನವಾದ ಶರೀರ; ಅಶುದ್ಧವಾದ ದೇಹ: ಹೊಲೆಯೊಡಲೊಳ್ ಮಲರಹಿತ ಸಕಲಗುಣಗಣನಿಲಯಂ ಶುದ್ಧಾತ್ಮನಿಪ್ಪುದೆಂಬುದೆಯುಕ್ತಂ (ಉಸಾರ. ೨೪೫).

[ಹೊಲೆ (< ಪೊಲೆ) + ಒಡಲು (< ಒಡಲ್)]

ಹೊಲೆವನೆ 'ಪೊಲೆಮನೆ' ನೋ.

ಹೊಲೆವೆಣ್ 'ಪೊಲೆವೆಣ್' ನೋ.

ಹೊಲೆಸುಂಕ (ನಾ). ಒಂದು ಬಗೆಯ ತೆರಿಗೆ: ಒಳವಾಜು ಹೊರವಾಜು ಹೊಲೆಸುಂಕ ಮಗ್ಗತೆಂ ಚನ್ದ್ರಾರ್ಕ್ಕಂಬರಂ ಸಲುವಂತಾಗಿ ಧಾರಾಪೂರ್ವಕಂ XXX ಸುಂಕಗಳಂ ಸಲಿಸುವರು (ಎಕ. VI.(R), ಪಾಂಡವ. ೮೧-೩; 1223). 'ಹೊಲೆದೆಱೆ', 'ಹೊಲೆಮಗ್ಗ' ಪರಾ. [ಹೊಲೆ + ಸುಂಕ]

ಹೊಲೆಹಲಸು (ನಾ). ಒಂದು ಬಗೆಯ ಹಲಸು: ಉಬಲು, ಹೆಸ್ಸರೆ, ಹೊಲೆಹಲಸು, ಅನವು (ಮೈಡಿಗ. ೨೬-೧೧೨೩). [ಹೊಲೆ + ಹಲಸು (< ಪಲಸು)]

ಹೊಲೆಹುಟ್ಟು (ಕ್ರಿ). ರಜಸ್ಸು ಕಾಣಿಸಿಕೊಳ್ಳು; ಮುಟ್ಟಾಗು: ಹೊಲೆಹುಟ್ಟಿದ ಮೂಱುದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು (ಚೆನ್ನವ. ಕ. ೧೮೧-೩೯೭).

[ಹೊಲೆ (< ಪೊಲೆ) + ಹುಟ್ಟು$_1$(< ಪುಟ್ಟು$_1$)]

ಹೊಲೆಹೊರೆ (ಕ್ರಿ). ಮಲಿನತೆಯುಂಟಾಗು; ಅಶುದ್ಧಿಯನ್ನು ಹೊಂದು: ಸೂರ್ಯನ ಕಿರಣ ಹೊಲೆಯನ ಚರಿಸಿದರ ಹೊಲೆಹೊರೆ[ಪಾಠಾಂ. ರು]ವುದೇ (ಕುವ್ಯಾಧಿ. ೩-೪೮). [ಹೊಲೆ (< ಪೊಲೆ) + ಹೊರೆ$_2$ (< ಪೊರೆ$_2$)]

ಹೊಲ್ಲ 'ಪೊಲ್ಲ' ನೋ.

ಹೊಲ್ಲತೆ (ನಾ). ಕೆಟ್ಟತನ; ಕ್ಷುಲ್ಲಕಸ್ವಭಾವ: ಶಿಕ್ಷೆ ಕೊಟ್ಟದ್ದು ಹೀರೋವಿಗಲ್ಲ. ಅವಳಲ್ಲಿ ಕಂಡಂತೆ ತೋರಿದ ಹೊಲ್ಲತೆಗೆ ಎಂದು ಸಮಾಧಾನ ಹೇಳುವುದು ಕಷ್ಟ (ಷೇಕ್ಸ್‌ಪಿ. ೫೨೨). [ಹೊಲ್ಲ (< ಪೊಲ್ಲ) + - ತೆ$_3$]

ಹೊಲ್ಲದು 'ಪೊಲ್ಲದು' ನೋ.

ಹೊಲ್ಲದೈವ (ನಾ). ಕೆಟ್ಟದೇವತೆ; ಕ್ಷುದ್ರದೇವತೆ: ಪ್ರಹ್ಲಾದದೇವನು ಜನಕಗೆಂದನು ಹೊಲ್ಲದೈವವನಿನಿತು ನೀ ನೋಡುವೆನದೆಂದರೆ ಕರವ ನಾನೀಗ (ಸಂಭವ. ೮-೬೫).

[ಹೊಲ್ಲ (< ಪೊಲ್ಲ) + ದೈವ]

ಹೊಲ್ಲನಡೆ (ನಾ). ಕೆಟ್ಟನಡತೆ; ಹೀನವಾದ ನಡವಳಿಕೆ: ಅವಳ ಪಾಪಗಳೇನೊ, ಹೊಲ್ಲನಡೆಯೇನೊ, ಅದರೆಣಿಕೆಗಿದೆ ಹೊತ್ತು? (ಇಂಗಿತ. ೭೧-೨೩).

[ಹೊಲ್ಲ (< ಪೊಲ್ಲ) + ನಡೆ$_2$]

ಹೊಲ್ಲನುಡಿ 'ಪೊಲ್ಲನುಡಿ' ನೋ.

ಹೊಲ್ಲಮನುಜ (ನಾ). ಕೀಳಾದ ಮನುಷ್ಯ; ಕ್ಷುಲ್ಲಕ ವ್ಯಕ್ತಿ: ಕಲ್ಲಿನಲ್ಲಿ ವಲ್ಲಭನ ಕಂಡೆವೆಂದು ಬಡಿದಾಡುತ್ತಾರೆ ನೋಡಾ ಅಲ್ಲಯ್ಯಾ ಈ ಹೊಲ್ಲಮನುಜರು (ಸಿದ್ಧವ. ಕ. ೨೦೩-೬೮೧). [ಹೊಲ್ಲ (< ಪೊಲ್ಲ) + ಮನುಜ]

ಹೊಲ್ಲಮೆ 'ಪೊಲ್ಲಮೆ' ನೋ.

ಹೊಲ್ಲಯಿಸು, ಹೊಲ್ಲೈಸು (ಕ್ರಿ). ಕೆಟ್ಟುದನ್ನು ಮಾಡು: ಐಕಾರಕ್ಕೆ . . . ಹೊಲ್ಲಯಿಸಿದಂ, ಹೊಲ್ಲೈಸಿದಂ (ಶಮದ. ೧೫೭ ಪ್ರಯೋ). **ಹೊಲ್ಲೈಸು**: ಮೇಲಿನ 'ಶಮದ' ಪ್ರಯೋಗವನ್ನು ನೋಡಿ. [ಹೊಲ್ಲ (< ಪೊಲ್ಲ) + - ಇಸು$_3$]

ಹೊಲ್ಲವೆ (ನಾ). ೧. ಕೆಟ್ಟುದು; ಹೀನವಾದುದು: (ಕ). ೨. ಅಪಕಾರ; ಕೆಡುಕು: "ಅಪಕಾರಃ, ದ್ರೋಹಃ - ಈ ೨ ಹೊಲ್ಲವೆ" (ಹಲಾಯು. ೧೨೬-೮೬). 'ಹೊಲ್ಲಮೆ' ಪರಾ. [ಹೊಲ್ಲ (< ಪೊಲ್ಲ) + - ವೆ]

ಹೊಲ್ಲಹ (ನಾ). ೧. ಕೆಟ್ಟುದು; ಕೆಡುಕು: (ಕ). ೨. ದೂರು; ನಿಂದೆ: "ಮಿಥ್ಯಾಭಿಶಂಸನ, ಅಭಿಶಾಪ - ಇಲ್ಲದ ಹೊಲ್ಲಹಂ ಮೇಲಿಕ್ಕಿ ನುಡಿಹ" (ನಾಟಿಕಾ. ೬). ೩. ಕಾಠಿಣ್ಯ; ಕಠಿಣತೆ: 'ಹೊಲ್ಲಹಂದೋಱು' ಪರಾ. ೪. ಕೆಟ್ಟವನು; ದುಷ್ಟ: ಆರಾರ ಮನದಲ್ಲಿ ಏನೇನಿಹುದೆಂದಱಿಯೆ ಒಳಿಹರೆಂದೆನಲಮ್ಮೆ ಹೊಲ್ಲಹರೆಂದೆನಲಮ್ಮೆ (ಬಸವ. ೪೦೨); ನಿಮ್ಮ ಪಟ್ಟಣದಲ್ಲಿ ಹೊಲ್ಲಹನಸಗನೊಬ್ಬನು ಬಲ್ಲ ಭಕ್ತನೆನುತ್ತೆ ಗರ್ವಿಸಿ ತೊಲಗನಾರಿಗೆಯು (ಬಸಪು. ೨೧-೧೪); ಹೊಲ್ಲಹನು ಒಳ್ಳಿದನು ಎಲ್ಲ ಠಾವಿನೊಳುಂಟು ಹೊಲ್ಲಹನ ಹೊಲ್ಲನೆನಬೇಡ (ಸರ್ವಜ್ಞ. ೧೪೪೦). 'ಹೊಲ್ಲೆಹ' ಪರಾ. [ಹೊಲ್ಲ (< ಪೊಲ್ಲ) + - ಹ$_2$(< - ಪ$_2$)]

ಹೊಲ್ಲಹಂದೋಱು (ಕ್ರಿ). ಕಾಠಿಣ್ಯವನ್ನು ತೋರು: ಎಂದುವುಂ ಹೊಲ್ಲಹಂ ದೋಱನಾತನ ಕಣ್ಗೆ ಎಂದುವುಂ ಚೆಲ್ವನಾಗಿರ್ಪನಾತನ ಕಣ್ಗೆ (ರುದ್ರರ.ಹ. ೧೭-೧೭).

[ಹೊಲ್ಲಹ + ತೋಱು]

ಹೊಲ್ಲಿ (ನಾ). (?): ಹೊಲ್ಲಿ[ಪಾಠಾಂ. ವಹಿಲಿ]ಯ ಭಂಡಿ ಕೊಲ್ಲಾರಿ ರಥಂಗಳು ಮೇಲಾನೆ ಕುದುರೆ ವೈಯಾಳಿ ಬಾಲಕರೇಱೆ ಕೊಂಡಾಡುವೆಳಗಿನಿಂದ ಮಾಲೆಗಾರ್ತಿಯರ ಕೇರಿಗಳು (ಅಮುಸಾಂ. ೧-೮೧). [?]

ಹೊಲ್ಲೆ (ನಾ). ೧. ಕೆಟ್ಟುದು; ಕೆಡುಕುಂಟುಮಾಡುವಂತಹುದು: ಬ್ರಾಹ್ಮಣರ ಶಾಪ ಹೊಲ್ಲೆಯದು (ಸಂಭವ. ೫-೬೭); ಬಗೆಯಲಾತನು ಹೊಲ್ಲೆಯನು ಹೊಲ್ಲೆಗೆ ಮಹಾಸಲ್ಲಕನು (ನಿಘಾಗ. ೧೨-೧-೧೫). ೨. ಅಡ್ಡಿ; ತೊಡಕು: ಸಂತೋಷವೇ ಸುತಲಾಭವಾದರೆ ಹೊಲ್ಲೆಯೇ[ಪಾಠಾಂ. ಲ್ಲವೇ]ನಿದಕೆ (ಕುವ್ಯಾಸ. ೨-೪೦). ೩. ದುಃಸ್ಥಿತಿ; ದುರವಸ್ಥೆ: ಇತ್ತಲಾ ದ್ವಾರಕೆಯೊಳಗೆ ವರಸತ್ಯಭಾಮಾಭವನದೊಳು ನರವೃತ್ತಿಯಿಂದಿರುತ ಕೇಳಿದ ಸತಿಯ ಹೊಲ್ಲೆಯನು ಕೆತ್ತ ದುಮ್ಮಾನದಲಿ (ಕುವ್ಯಾಸ. ೬೧೧. ೧೫-೧೩೪). ೪. ಹೀನತೆ: 'ಹೊಲ್ಲೆತನ' ಪರಾ.

ಹೊಲ್ಲೆಯಾಗು = ವ್ಯರ್ಥವಾಗು; ನಿಷ್ಫಲವಾಗು: ತಪವ ಮಾಡಿದುದು ಹೊಲ್ಲೆಯಾಯಿತು ತನಗೆ ಕಮಲಜನಲ್ಲಿ (ಸಂಭವ. ೧೪-೧೭). [< ಪೊಲ್ಲ]

ಹೊಲ್ಲೆತನ (ನಾ). ಕೀಳುತನ; ಹೀನವೃತ್ತಿ: ಹೊಲ್ಲೆತನವ ಪೆರ್ಮೆಯೆಂದು ಎಲ್ಲ ಗುಣವ ಹೇಳಿಕೊಂಡು ಕಳ್ಳನಂತೆ ಅಡಗಿಕೊಂಡು ಕೈಗೆ ಸಿಕ್ಕದೆ. . . ಗೋಚರಿಸದ ತಿರುಗುತಿರುವೆ ಲೋಕವರಿಯಲು (ಕಮೊ. ೩೫-೫). [ಹೊಲ್ಲೆ + - ತನ]

ಹೊಲ್ಲೆಯ 'ಹೊಲ್ಲೆಹ' ನೋ.

ಹೊಲ್ಲೆಹ, ಹೊಲ್ಲೆಯ (ನಾ). ೧. ಕೆಟ್ಟುದು; ಕೆಡುಕು: ಆವನಾವನೊರ್ವಂಗೆ ಹೊಲ್ಲೆಹಮಂ ಬಯಸುವಾತನಾತಂಗನುಕೂಲಮಾಗಿಯೆ ಪೇಳ್ವುದು (ಪಂಚತಂ. ೯೪-೮); ಲಿಂಗವ ಕುಱಿತಲ್ಲಿ ಒಳಿತು ಹೊಲ್ಲೆಹ ಉಂಟೇ ಜಂಗಮನ ಕುಱಿತಲ್ಲಿ ಒಳಿತು ಹೊಲ್ಲೆಹ ಉಂಟೇ (ಮೋಮಾ. ೪೦-೧೭೬); ಆತನಿಂದೇನಹುದು ಹೊಲ್ಲೆಹವಾತನಿಂದೇನಹುದು ಲೇಸುಗಳ್ (ಕುವ್ಯಾಉ. ೨-೪೪). ೨. ತಪ್ಪು; ದೋಷ; ಅಪರಾಧ: ಈಶ್ವರ ಮೂರ್ತಿಯೆನ್ನಲ್ಲಿ ಹೊಲ್ಲೆಹವನಱಿದಿಂತು ಬಡಿದಹನು (ಬಸಪು. ೩೮-೩೨); ನಾವು ಮಾಡಿದ ಹೊಲ್ಲೆವಾಹಾತವುದು ನೀವು ನಮ್ಮನು ಕಟ್ಟಿ ಕೊಲುವುದಿದಾವ ರಾಯರ ರಾಜಪದ್ಧತಿಯೆಂದನಾ ಹನುಮ (ತೊರರಾ. ೫-೭-೨೨); ಪುಲ್ಲದಳಾಕ್ಷ ನೀನತಿದೈವವೆಂಬುದ ಬಲ್ಲ ಮತ್ರಿತನು ನಾನಱಿಯೆ ಹೊಲ್ಲೆಹವನು ತೀರ್ಕಣಿಸೆಂದುಭಯಪಾಣಿಪಲ್ಲವದಿಂದ ವಂದಿಸಿದ (ಮೋಹತ. ೪೦-೯೦). ೩. ತುಚ್ಛವಾದುದು; ಕೀಳಾದುದು: ನೀನು ಕುವರನ ಕೈಯಾಱ ಕೊಲ್ಲದೆ ಕಡಲೊಳು ಬಿಸುಟೆ ಹೊಲ್ಲೆಹದೊಂದು ಪೆಣ್ಣೇನು ಕಂಡಱಿಗಿ ಪುವಿಲ್ಲನ ನೆಱ ನುಂಗಿತಾಗ (ಮೋಹತ. ೧೨-೬). ೪. ನಿಷ್ಠುರತೆ; ಕಠಿಣತೆ: "ನಿಟ್ಟುರ ಹೊಲ್ಲೆಹ[ಪಾಠಾಂ. ಪೊಲ್ಲಣ, ಹೆಲ್ಲಣ, ಹೊಲ್ಲಿಯ]ಮನಲ್ಕೆ ನಿಟ್ಟುರಮನಿಕ್ಕು" (ಕಬ್ಬಿಕ್ಕ. ೫೭). **ಹೊಲ್ಲೆಯ**: ೧. ಆ ಕೆಱೆಗೆ ಲೇಸು ಹೊಲ್ಲೆಯವಾದರೆ (ಸೌಂದ. ೧೯೩೪. ಪುಂಗನೂರು. ೧೫೬-೧೩; 1419); ಹೊಲ್ಲೆಯಕಳುಕಿ ಸೈರಿಸಲೀ ವಿಕಲ್ಪವು ಕಡೆಗೆ ತೋಱಿತು ತಾನೆ ಹಗೆಯಿಂದ (ಅಂಬಿಕಾ. ೩೬-೭). ೪. "ಹೊಲ್ಲೆಯಮನಲ್ ನಿಷ್ಠೂರಕಭಿಧಾನವು" (ಕಶರ. ೧೧೬). ೫. ಕೆಟ್ಟವನು; ದುಷ್ಟ: ಬಗೆಯಲಾತನು ಹೊಲ್ಲೆಯನು ಹೊಲ್ಲೆಗೆ ಮಹಾಸಲ್ಲಕನು (ನಿಘಾಗ. ೧೨-೧-೧೫). 'ಹೊಲ್ಲಹ' ಪರಾ.

[ಹೊಲ್ಲೆ + - ಹ$_2$(< - ಪ$_2$)]

ಹೊಲ್ಲೆಹಂಗೆಯ್, ಹೊಲ್ಲೆಹಗೆಯ್ (ಕ್ರಿ). ಕೆಟ್ಟದ್ದನ್ನು ಮಾಡು; ಕೇಡನ್ನು ಮಾಡು: ಇಂತಪ್ಪ ಸೇವಾಧರ್ಮಮನಾಂ ಮುನ್ನಱಿವಾತನಾಗಿಯುಮೇನಾನುಮೊಂದು ತೆಱದಿಂ ಹೊಲ್ಲೆಹಂಗೆಯ್ದೆನಕ್ಕುಂ (ಪಂಚತಂ. ೧೩೮-೨). **ಹೊಲ್ಲೆಹಗೆಯ್**: ನೃಶಂಸಃ, ಕ್ರೂರಕರ್ಮಕೃತ್ - ಈ ೨ ಹೊಲ್ಲೆಹಗೆಯ್ವವಂ (ಹಲಾಯು. ೬೧-೨೧೭).

[ಹೊಲ್ಲೆಹ + ಕೆಯ್$_1$]

ಹೊಲ್ಲೆಹಗೆಯ್ 'ಹೊಲ್ಲೆಹಂಗೆಯ್' ನೋ.

ಹೊಲ್ಲೈಸು 'ಹೊಲ್ಲಯಿಸು' ನೋ.

ಹೊವಿಸಳ 'ಪೊಯ್ಸಳ' ನೋ.

ಹೊಸ 'ಪೊಸ' ನೋ.

ಹೊಸಇಕ್ಕೇರಿ (ನಾ). (ಬ್ರಿಟಿಷರ ಆಳ್ವಿಕೆಯು ಆರಂಭವಾಗುವ ಮುನ್ನ ಈ ದೇಶದಲ್ಲಿ ಬಳಕೆಯಾಗುತ್ತಿದ್ದ) ಹದಿನೆಂಟು ಬಗೆಯ ಚಿನ್ನದ ನಾಣ್ಯಗಳಲ್ಲಿ ಒಂದು; ಇಕ್ಕೇರಿಯ ನಾಡಿನಲ್ಲಿ ಬಳಕೆಯಿದ್ದ ಒಂದು ನಾಣ್ಯ: ಮಲಾಪಹಾರಿಯ ದಕ್ಷಿಣದಲ್ಲಿ, ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ - ೧. ಗಜಪತಿ . . . ೩. ಹೊಸಇಕ್ಕೇರಿ (ಇಕ್ಕೇರಿ ಅರಸರದು) ರೂ. ೪, ಆ. ೮ (ಕಘಾಗ. ೨೮೦). 'ಇಕ್ಕೇರಿವರಹ' ಪರಾ.

[ಹೊಸ (< ಪೊಸ) + ಇಕ್ಕೇರಿ$_0$]

ಹೊಸಂತಿಲ್ 'ಪೊಸಂತಿಲ್' ನೋ.

ಹೊಸಂತಿಲು 'ಪೊಸಂತಿಲ್' ನೋ.

ಹೊಸಕಳೆ (ನಾ). ನವೀನವಾದ ಕಾಂತಿ, – ತೇಜಸ್ಸು: ಅವನ ಕುಲುಮಗೆ ಬಿದ್ದ ಶಾಕುಂತಲೋಪಾಖ್ಯಾನಕ್ಕೆ ಅಭೂತಪೂರ್ವವಾದ ಹೊಸಕಳೆ ಬಂದಿತು (ಕಾವ್ಯಸ. ೪೦). [ಹೊಸ (< ಪೊಸ) + ಕಳೆ (= ಕಲೆ)]

ಹೊಸಕಾಡು (ಕ್ರಿ). ಹೊಸೆ; ಹೊರಳಾಡು: ದುಃಶಾಸನನ ತೋಳು ಕತ್ತರಿಸಿ ಬಿದ್ದು ಧೂಳಿನಲ್ಲಿ ಹೊಸಕಾಡುವುದನ್ನು ನೋಡದೇ ಹೋದರೆ ನನ್ನ ಹೊಟ್ಟೆ ಹೇಗೆ ತಣ್ಣಗಾದೀತು? (ಪಚಭಾ. ೨೪೬). [ಹೊಸಕು + ಆಡು]

ಹೊಸಕಾಲ 'ಹೊಸಗಾಲ' ನೋ.

ಹೊಸಕು, ಹೊಸಗು (ನಾ). ಉಜ್ಜು; ತಿಕ್ಕು; ತೀಡು: ಲಿಂಗಗಳ ಕೀಳಿಸಿ ಚರಣದಸಿಯೊಳು ಹೊಸಕಿ ತಿಪ್ಪೆಯೊಳಗಸಿ ತುಳಿಸುತಲಿ (ಬಿಚ್ಚಪು. ೬೫-೧೦); ಕೆಲವು ಸೊಪ್ಪುಗಳನ್ನು ಕಿತ್ತು ಹೊಸಕಿ ತನ್ನ ಸೆರಗಿನಲ್ಲಿ ಕಟ್ಟಿಕೊಂಡಳು (ಚಿಕರಾ. ೪೩೬); ನೀವು ನಮ್ಮನ್ನು ಕಾಲಿನಿಂದ ಹೊಸಕಿ ಹಾಕುವ ಕೀಟಗಳೆಂದೇನಾವರೂ ಭಾವಿಸಿರುವಿರಾ ಹೇಗೆ? (ಪನ್ನಶಿ. ೫೬). **ಹೊಸಗು:** ಸರ್ಪಗಳು ಎಷ್ಟು ಇದ್ದರೂ ತನ್ನ ಕೈಗಳಿಂದ ನಿದ್ರೆಯಲ್ಲಿ ಹೊಸಗಿ ಬಿಟ್ಟನು (ತಾತ್ರಸಿ. ೪೯-೫); ಆ ಗಜವು ತನ್ನಯ ಪದದಿಂದ ಹೊಸಗಿತಾ ಸರವ (ಸೌಗಂಪ. ೩-೩); ಅವನು ಕಣ್ಣನ್ನು ಹೊಸಗಿಕೊಳ್ಳುತ್ತಾ ಎದ್ದನು (ಚತ್ರಪಾ. ೧೧).

[< ಪೊಸ ?/ ತಮಿ. ಪೂಚಿಜ್ಜು; ತೆಲು. ಪೊಸಗು]

ಹೊಸಕೆರೆ 'ಪೊಸಗೆಱೆ' ನೋ.

ಹೊಸಕೆಱೆ 'ಪೊಸಗೆಱೆ' ನೋ.

ಹೊಸಕೈದು (ನಾ). ನವೀನವಾದ ಆಯುಧ: ಬಿಗಿದ ಝಲ್ಲರಿ ಮುಗಿಲ ಹೊಸಕೈದುಗಳ ಮಿಂಚಿನ . . . ವಿಗಡಕುಂಭಜ ಮೇಘಯುತು ತನಿಹೊಗರಿಂದಿ ಪರಬಲದ ಕಡುವೇಸಗಗೆ ಕವಿದುದು ರಾಜಹಂಸಪ್ರಕರವೋಸರಿಸೆ (ಕುಮಾದ್ಯೋ. ೧-೪೮).

[ಹೊಸ (< ಪೊಸ) + ಕೈದು (< ಕೆಯ್ದು)]

ಹೊಸಗಣೆ (ನಾ). ಹೊಸತಾಗಿ ಮಸೆದ ಬಾಣ: ಇಕ್ಕೆಲದ ಸೇಸಯಂ ಸವರಿದುವು ಹೊಗರುಗುವ ಹೊಸಗ[ಪಾಶಾಂ. ೫]ಣೆಗಳು (ಚೃಮಿಭಾ. ೧೩-೨೦).

[ಹೊಸ (< ಪೊಸ) + ಕಣೆ]

ಹೊಸಗನ್ನಡ 'ಪೊಸಗನ್ನಡ' ನೋ.

ಹೊಸಗವಲು 'ಪೊಸಗವಲು' ನೋ.

ಹೊಸಗಾಲ, ಹೊಸಕಾಲ (ನಾ). ನವೀನವಾದ ಸಮಯ; ನವಯುಗ: ಈ ಧಾರ್ಮಿಕ ಚಳುವಳಿಯ ಹೊಸಗಾಲದಲ್ಲಿ . . . ಅನೇಕ ಜಾತಿಯವರು ವಿರಕ್ತರಾಗಿ ಮಠಗಳಲ್ಲಿ ವಾಸಮಾಡುತ್ತಿರುವಾಗ (ಕರ್ನಾಸಂ. ೯೬). **ಹೊಸಕಾಲ:** ಕುಣಿವುದು ಹಗಲಿರುಳು ಬೆಳೆಗಾಲದ ಕುರುಹು ಹೊಸಕಾಲದ ನವಿಲು (ಬಾಹಿಗ. ೩೦-೨೧); ಹೋಗುತಿದ ಹಳೆಕಾಲ, ಹೊಸಕಾಲ ಬರುತಲಿದೆ (ಕೋಗಿಲೆ. ೨೬-೧). [ಹೊಸ (< ಪೊಸ) + ಕಾಲ]

ಹೊಸಗು 'ಹೊಸಕು' ನೋ.

ಹೊಸಗೆ (ನಾ). ನವೀನತೆ; ನಾವೀನ್ಯ: ದಿನದಿನವು ಒಸಗೆ ಚಂದಿರನ ಹೊಸಗೆ, ಪೂರ್ಣಮಯ ಚಂದ್ರ ಬೇರೆ (ಅರಳು. ೧೦೩-೧೭); ಹೊಸ ಹೊಸಗೆಯಂತ ಹೊಸ ಚಂದ್ರನುದಯಿಸಿದಂತೆ ಸತ್ಯಸ್ವರೂಪ ಪ್ರೇಮಾ! (ಕೃಷ್ಣಾಕು. ೮-೧೯).

[ಹೊಸ (< ಪೊಸ) + - ಗೆ]

ಹೊಸಗೆಯ್, ಹೊಸಗೈ (ಕ್ರಿ). ಹೊಸತುಗೊಳಿಸು; ನವೀಕರಿಸು: ಬೆಳಗಿ ಊರ, ನಾಡ, ಹಸಗೆಯ್ಯೆ ಹೊಸಗೆಯ್ಯೆನೆಂಬೊಲುವೆ (ಹೊಂಗಳು. ೬-೧೪). **ಹೊಸಗೈ:** ಹೊಸಲೋಕದೊಳು ಹೊಗಿಸುತನ್ನನೀ ಜಗವನ್ನು ಹೊಸದಾಗಿಸುತ, ಜನರನೆಲ್ಲ ಹೊಸಗೈಯುತ್ತ (ಕೃಷ್ಣಾಕು. ೮-೨೨). [ಹೊಸ (< ಪೊಸ) + ಕೆಯ್]

ಹೊಸಗೆಱೆ 'ಪೊಸಗೆಱೆ' ನೋ.

ಹೊಸಗೈ 'ಹೊಸಗೆಯ್' ನೋ.

ಹೊಸಚಟ್ಟ (ನಾ). (?): ಅದು ಹೊಸಚಟ್ಟ ಹೊಸಸೀರೆ ತೆಗೆದುಕೊಂಡು ಸುಮಾರು ಒಂದು ತಿಂಗಳಾಗಿತ್ತು (ಪಾಮೂಲಾ. ೯೮). [?]

ಹೊಸಜವ್ವನ 'ಪೊಸಜವ್ವನ' ನೋ.

ಹೊಸಜೀವ (ನಾ). (ಆಲಂ) ಹೊಸ ಉತ್ಸಾಹ; ನವಚೈತನ್ಯ: ಮಿತ್ರರು ತಂದೆಯ ಜತಗೂಡಿ ನಿಂತು ಯಕ್ಷಗಾನದ ಒಂದು ಮೇಳವ ತರೆದರು ತಂದೆಗೆ ಹೊಸಜೀವ ಬಂತು (ಇಂಚಾಪ. ೧೧-೪೨). [ಹೊಸ (< ಪೊಸ) + ಜೀವ]

ಹೊಸತನ (ನಾ). = ಹೊಸಗೆ: ಈ ಕೃತಿಗೆ ಒಂದು ಹೊಸತನವೂ ಸೊಗಸೂ ಬಂದಿವೆ (ಸಮಾಲೋ. ೬೬); ಅವನ ಉಳಿದ ಸಂಪ್ರದಾಯವಂತಿಕೆಯನ್ನು ಈ ಹೊಸತನದಿಂದ ಬೆಳಗಿದಂತಾಯಿತು (ತವನಾ. ೩೧). [ಹೊಸ (< ಪೊಸ) + - ತನ]

ಹೊಸತಳಿರು 'ಪೊಸದಳಿರ್' ನೋ.

ಹೊಸತಿಡು (ಕ್ರಿ). (?): ಆದಿತ್ಯವಾರ ಸೋಮವಾರ ಮಂಗಳವಾರವ ಹೊಸತಿಟ್ಟು ನುಡಿವರು ನಾವಿದನಱಿಯೆವು (ಅವಚಂ. ೧೯೩-೮೭೫); "ಬಣ್ಣದನ್ನವನ್ನು ಬಲಿಯಾಗಿ ಬೆಲ್ಲು" (ಅವಚಂ. ಕೋಶ). 'ಪೊಸತಿಕ್ಕು' ಪರಾ. [?]

ಹೊಸತಿಲ್ 'ಪೊಸಂತಿಲ್' ನೋ.

ಹೊಸತಿಲು 'ಪೊಸಂತಿಲ್' ನೋ.

ಹೊಸತಿಲುಗನ್ನ (ನಾ). ಹೊಸ್ತಿಲ ಬಳಿ ಕೊರೆದು ಬಾಗಿಲು ತೆಗೆಯಲು ಅನುಕೂಲವಾಗುವಂತೆ ಹಾಕುವ ಕನ್ನ: ಘನದ ಹೊಸತಿಲುಗನ್ನವಂ ಘಮ್ಮನೆಯಗಿದಗುಳಿಗನ್ನವಂ ಸುಮ್ಮನೆಯಗಿದು ನೆಲಗನ್ನವಂ ಬಲುಗೋಡೆಗನ್ನವನು ತೋಡಿ (ಬಸಪು. ೩೧-೫). [ಹೊಸತಿಲು (< ಪೊಸಂತಿಲ್) + ಕನ್ನ]

ಹೊಸತಿಲುವಣ (ನಾ). ಒಂದು ಬಗೆಯ ತೆರಿಗೆ: ಬಸದಿಯ ಕೇರಿಯ ಮನ್ನೆಯದ ಹೊಸತಿಲುವಣಂ ಧಾರಾಪೂರ್ವಕಂ ಮಾಡಿ (ಸೌಇಇ. XV. ೧೦೮-೬; 1167).

[ಹೊಸತಿಲು + ಪಣ]

ಹೊಸತು 'ಪೊಸತು' ನೋ.

ಹೊಸತುಪ್ಪ 'ಪೊಸತುಪ್ಪ' ನೋ.

ಹೊಸದು 'ಪೊಸೆ' ಪರಾ.

ಹೊಸದು 'ಪೊಸತು' ನೋ.

ಹೊಸದೇವಾರ (ನಾ). ಹೊಸ ದೇವಾಲಯ: ಹೊಸದೇವಾರಕ್ಕೆ ಬಿಜಯ ಮಾಡಿದಾಗ ನಾನು ಗರುಡಗಂಬದ ನೆರೆಯ ಜನಸಂದಣಿಯ ಚೂಣಿಯಲ್ಲಿ . . . ಪರಿರಂಜಿಸುತ್ತಿದ್ದೆನು (ಮಂತ್ರಶ. ೨೮-೧೮). [ಹೊಸ (< ಪೊಸ) + ದೇವಾರ]

ಹೊಸದೇಸೆ 'ಪೊಸದೇಸಿ' ನೋ.

ಹೊಸನೀರು 'ಪೊಸನೀರ್' ನೋ.

ಹೊಸನೋಟ 'ಪೊಸನೋಟ' ನೋ.

ಹೊಸಪರಿ (ನಾ). ನವವಿಧಾನ; ಹೊಸರೀತಿ: ಹೊಸಪರಿಯ ಗತಿಗಳಂ ನಟಿಸಿ ತೋಱುತ್ತಮಿರೆ (ಬಸರ. ೧-೨೫); ಭುಜಪ್ರತಾಪದ ಹೊಗರು ಹೊಸಪರಿ (ಕುಮಾದ್ಯೋ. ೫-೩೬). [ಹೊಸ (< ಪೊಸ) + ಪರಿ)]

ಹೊಸಪರಿಮಳ 'ಪೊಸಪರಿಮಳ' ನೋ.

ಹೊಸಪಾಕ 'ಪೊಸಪಾಕ' ನೋ.

ಹೊಸಪುರ 'ಪೊಸವುರ' ನೋ.

ಹೊಸಪೊಡೆ 'ಪೊಸಪೊಡೆ' ನೋ.

ಹೊಸಬ 'ಪೊಸಂಬ' ನೋ.

ಹೊಸಬಗೆ 'ಪೊಸವಗೆ' ನೋ.

ಹೊಸಬಟ್ಟೆ 'ಪೊಸವಟ್ಟೆ' ನೋ.

ಹೊಸಬಣ್ಣ 'ಪೊಸಬಣ್ಣ' ನೋ.

ಹೊಸಬತನ (ನಾ). ಹೊಸಬನಾಗಿರುವಿಕೆ; ಪರಿಚಯವಿಲ್ಲದಿರುವಿಕೆ: ತನ್ನ ಕಾಲುರಿಚನ ಹೊಸಬತನವನ್ನಿಲ್ಲಿ ಡಂಗುರಿಸಿಕೊಳ್ಳುತ್ತಿರುವ ಈತನಿಗೆ ಮೊತ್ತಮೊದಲು ಓಲಗದ ಉಚಿತಾಚರಣಪದ್ಧತಿಗಳ ಬಾಲಬೋಧೆಯಾಗಲಿ (ಚಟ್ಟಅ. ೪೩-೧೧).

[ಹೊಸಬ (< ಪೊಸಂಬ) + - ತನ]

ಹೊಸಬಿ (ನಾ). (ಒಂದು ಸ್ಥಳಕ್ಕೆ ಅಥವಾ ಪರಿಸರಕ್ಕೆ) ಹೊಸಬಳಾಗಿರುವವಳು: ಈ ಹೊಸಬಿ ಇದೆ ತಾನೆ ಹಳ್ಳಿಯಿಂದ ಬಂದಿದ್ದಾಳೆ (ಪುನರು. ೧೦); ಆ ಹೊಸಬಿ ಅಪ್ಪಯ್ಯನ ಹೆಂಡತಿಯೇ! (ಕಾನೂರು. ೧೮೦). [ಹೊಸಬ (< ಪೊಸಂಬ) + - ಇ]

ಹೊಸಬಗ (ನಾ). ಅಪರಿಚಿತ; ಹೊಸಬ: ಕೃತಾಂತನ ಹೋಲುವೆಯ ಹೊಸಬಗನು ಹೊಕ್ಕನು ಭೀಮನುರವಣಿಸಿ (ಕುವ್ಯಾದ್ರೋ. ೨೦ ೭೯). [ಹೊಸಬ (< ಪೊಸಂಬ) + -ಗ]

ಹೊಸಬಿರುದು (ನಾ). ನವೀನವಾದ ಬಿರುದು.

ಹೊಸಬಿರುದರ ಗಂಡ = ನವೀನವಾದ ಬಿರುದುಗಳನ್ನು ತಾಳಿದವರನ್ನು ಸದೆ ಬಡಿಯುವವನು; ಒಂದು ಬಿರುದು: ಹೊಸಬಿರುದರ ಗಂಡೋ ರಾಯರಾಹುತ್ತ ಮಿಂಡ: (ಎಕ. XII. ಸುಮಕೃ. ೧-೮೪; 1571). [ಹೊಸ (< ಪೊಸ) + ಬಿರುದು]

ಹೊಸಬೆಣ್ಣೆ 'ಪೊಸಬೆಣ್ಣೆ' ನೋ.

ಹೊಸಬೆಳುವಟ್ಟಿ (ನಾ). ನವೀನವಾದ ಬಿಳಿಬಟ್ಟೆ: ಉಟ್ಟ ಹೊಸಬೆಳುವಟ್ಟಿ ಹೊಮ್ಮಿ ಮುಟ್ಟಲಿಸೆ ಹೊಂಬಣ್ಣವಾದುದು (ತೂರರಾ. ೩-೮-೩೦).

[ಹೊಸ (< ಪೊಸ) + ಬೆಳುವಟ್ಟಿ[1] (< ಬೆಳ್ವಟ್ಟೆ)]

ಹೊಸಬೇಟ 'ಪೊಸವೇಟ' ನೋ.

ಹೊಸಭಂಗಿ (ನಾ). ಹೊಸತಾದ ಭಂಗಿಸೊಪ್ಪು: ಹುರಿದ ಹೊಸಭಂಗಿ ಹದ ಗೆಯ್ದಪಿನಿಕೂಟದೊಳ್ ಬರೆದಮಲ್ ಜಾಯಿಕಾಯ್ ಪತ್ರೆ . . . ಪರಿಪರಿಯ ಭೋಜನ ದ್ರವ್ಯಂಗಳಿಡಿದ ಭಂಡಿಗಳ್ಕೆದ ಬರುತಿರ್ದುವು (ಚಿಬಪು. ೪೭-೪೫).

[ಹೊಸ (< ಪೊಸ) + ಭಂಗಿ[1]]

ಹೊಸಮಡಿ (ನಾ). ಅದೆ ತಾನೆ ಒಗೆದು ಮಡಿ ಮಾಡಿದುದು: ಮುಂಗಡೆಯ ಬೀದಿಯಲಿ ಭವಿಗಳು ಲಿಂಗವಂತರ ಹೊಸಮಡಿಯ ವಸ್ತ್ರಂಗಳಂ ಸಂಧಿಸಿದರಾದಡೆ ಇಱಿದು ಕೆಡಹುವೆನು (ಬಸಪು. ೫೧-೯). [ಹೊಸ (< ಪೊಸ) + ಮಡಿ]

ಹೊಸಮದ 'ಪೊಸಮದ' ನೋ.

ಹೊಸಮನೆ 'ಪೊಸಮನೆ' ನೋ.

ಹೊಸಮಸೆ 'ಪೊಸಮಸೆ' ನೋ.

ಹೊಸಮಾಟ (ನಾ). (?): ಯಾ ನಾಲುಕು ಗಡಿಯಿಂದೊಳಗುಳ ಹೊಸಮಾಟದ ಬಾಳು ನಾಳಂಡುಗದಲು (ಪಾರ್ಶ್ವ. IX-ii, ೫೧೧-೧೬; 1519). 'ಹೊರಮಾಟ' ಹೋ. [?]

ಹೊಸಮಾತು (ನಾ). ೧. ಹಿಂದೆ ಬಳಕೆಯಲ್ಲಿ ಇಲ್ಲದೆ ಈಗ ರೂಪುಗೊಂಡ ಮಾತು; ಹೊಸತಾಗಿ ಬಂದ ನುಡಿ: ಆಧುನಿಕ ನಾಗರಿಕತೆಯ ಪರಿಣಾಮವಾಗಿ ಭಾಷೆಯಲ್ಲಿ ಎಷ್ಟೊ ಹೊಸಮಾತುಗಳು ಬರುವುದುಂಟು (ರೂಢಿ). ೨. ಹಿಂದೆ ಹೇಳಿದ ಮಾತಿಗೆ ವಿರುದ್ಧವಾದ ಮಾತು; ಬದಲಾದ ಮಾತು: ಇದೇನು ಹೊಸಮಾತು ಹೇಳುತ್ತಿರುವೆ? ಹಿಂದೆ ಮಾತು ಕೊಟ್ಟುದು ಮರೆತುಹೋಯಿತೆ? (ರೂಢಿ).

[ಹೊಸ (< ಪೊಸ) + ಮಾತು[1]]

ಹೊಸಮಾದರಿ (ನಾ). ನವೀನ ರೀತಿ; ಹೊಸದಾದ ನಮೂನೆ: ರತ್ನನ ಪದಗಳು ನಾಗನ ಪದಗಳು ಕಾವ್ಯದ ಹೊಸಮಾದರಿಗಳು (ಅಂಚಾಪ. ೪-೮).

[ಹೊಸ (< ಪೊಸ) + ಮಾದರಿ]

ಹೊಸಮಿಸುನಿ 'ಪೊಸಮಿಸುನಿ' ನೋ.

ಹೊಸಮುತ್ತು 'ಪೊಸಮುತ್ತು' ನೋ.

ಹೊಸಮೆಳೆ (ನಾ). ಹೊಸದಾದ ಗಿಡಗಳ ಗುಂಪು: ಮುಱಿದರರಿಗಳ ಹೊದಱ ಹೊಸಮಳೆಯ (ಕುವ್ಯಾದ್ರೋ. ೨ ೭೦): ಆ ಹಂಸೆ . . . ಹೊಕ್ಕುದು ಹೊದಱ ಹೊಸಮೆಳೆಯ (ಸಳಚ. ೨-೩೩). [ಹೊಸ (< ಪೊಸ) + ಮೆಳೆ[1]]

ಹೊಸಮೋಹ (ನಾ). ಹೊಸದಾಗಿ ಹುಟ್ಟಿದ (ಪ್ರಣಯದ) ಮರುಳು: ಮಲ್ಲಿಗೆಯರಳ ತನಿಗಂಪು ಹೊಸಮೋಹ ನಿಲ್ಲವಿವು ನೋಡ (ಸರ್ವಜ್ಞ. ೧೫೨೭).

[ಹೊಸ (< ಪೊಸ) + ಮೋಹ]

ಹೊಸರಕ್ಕ 'ಪೊಸರಕ್ಕ' ನೋ.

ಹೊಸಲು 'ಪೊಸಂತಿಲ್' ನೋ.

ಹೊಸವರಿ (ನಾ). ಹೊಸತಾಗಿ ಹಾಕಿರುವ ತೆರಿಗೆ; ಹೊಸ ತೆರಿಗೆ: ಎನುಳ್ಕಂತಾ ಹೊಸವರಿ ಹಳೆವರಿ ಮುಂತಾದ ಸಕಲಸುವರ್ನಾದಾಯ ಸಕಲಭತಾದಾಯ . . . ಸೇರಿಸಿ ಕೊಟೆವಾಗಿ (ಎಇ. XVII, ೧೧೫-೬೭; 1427). [ಹೊಸ (< ಪೊಸ) + ವರಿ[1]]

ಹೊಸವರು (ಕ್ರಿ). ಹೊಸತಾಗಿ ಬರು; ಆಗ ತಾನೇ ಬರು: ಗೌತಮಕ್ಷೇತ್ರವೀ ಪಟ್ಟಣಕ್ಕೆ ಹೊಸವಂದಿರುವ ನಿಮಗೆ ಕಾವೇರಿಯ ಜಲಪಾನದಿಂದ ಪಿತ್ತಪ್ರಕೋಪವಾಗಿ ತಲೆದಿರುಗಿಯೋ, ಮದವೇರಿಯೋ, ಕುಣಿಯಿಸುತ್ತಿರುವಂತಿದೆ! (ಚಿಬ್ಬಿಅ. ೫೫-೨೦).

[ಹೊಸ (< ಪೊಸ) + ಬರು[1] (< ವರ್)]

ಹೊಸವಸುಗೆ (ನಾ). ಹೊಸಬಗೆಯ ತೆರಿಗೆ,—ಸುಂಕ: ಧಾರಾಪೂರ್ವ್ವಕಂ ಮಾಡಿ ಬಿಟ್ಟ ಹೊಸವಸುಗೆಯ XXX ವಿನ ಮೂಡಲ ತೋಂಟ ಕಮ್ಮ ೪೦ (ಪಾರ್ಶ್ವ. IX-i, ೧೪೨-೫; 1110). [ಹೊಸ (< ಪೊಸ) + ಪಸುಗೆ]

ಹೊಸವಳಿ 'ಪೊಸವಳ್ಳಿ' ನೋ.

ಹೊಸವಳ್ಳಿ 'ಪೊಸವಳ್ಳಿ' ನೋ.

ಹೊಸವೂರು 'ಪೊಸವೂರ್' ನೋ.

ಹೊಸವೆಣ್ 'ಪೊಸವೆಣ್' ನೋ.

ಹೊಸಸಕ್ಕರೆ 'ಪೊಸಸಕ್ಕರೆ' ನೋ.

ಹೊಸಸುಣ್ಣ 'ಪೊಸಸುಣ್ಣ' ನೋ.

ಹೊಸಹರೆಯ 'ಪೊಸವರೆಯ' ನೋ.

ಹೊಸಹರೆಯಂಬಡೆ (ಕ್ರಿ). ನವಯೌವನವನ್ನು ಹೊಂದು; ನವತಾರುಣ್ಯವನ್ನು ತಾಳು: ಹೊಸಹರೆಯಂಬಡೆದ ಕೆಳೆಯರಿಂ ಕುಕ್ಕುಟ ಮಲ್ಲ ಮಹಿಷ ಮೇಷಂಗಳನು ಗಡಣದಿ ಕಾದಿಪ ಬಿನದದಿಂ . . . ದಿನಮಂ ನೂಂಕುತ್ತಿಹನು (ಜಯಕಾ. ೨-೭೬).

[ಹೊಸಹರೆಯ (< ಪೊಸವರೆಯ) + ಪಡೆ[1]]

ಹೊಸಹಸೆ 'ಪೊಸವಸೆ' ನೋ.

ಹೊಸಹಳಿ 'ಪೊಸವಳ್ಳಿ' ನೋ.

ಹೊಸಹಳ್ಳಿ 'ಪೊಸವಳ್ಳಿ' ನೋ.

ಹೊಸಹುಟ್ಟು 'ಪೊಸಪುಟ್ಟು' ನೋ.

ಹೊಸಹೂ 'ಪೊಸವೂ' ನೋ.

ಹೊಸಹೊಗರು 'ಪೊಸವೊಗರ್' ನೋ.

ಹೊಸಹೊನ್ನು 'ಪೊಸವೊನ್' ನೋ.

ಹೊಸಳ್ಳಿ 'ಪೊಸವಳ್ಳಿ' ನೋ.

ಹೊಸಿಲು 'ಪೊಸಂತಿಲ್' ನೋ.

ಹೊಸೂರು 'ಪೊಸವೂರ್' ನೋ.

ಹೊಸೆ 'ಪೊಸೆ[1]' ನೋ.

ಹೊಸೆಬಡು (ಕ್ರಿ). (ಆಲಂ) ಘರ್ಷಿಸುವಂತೆ ಮಾಡು: ಹರಿತಿಂದುಳ್ಳ ಸುವಸ್ತುವಂ ಕಡೆಯೊಳೊರ್ವಂಗಿತ್ತು ತಾಂ ಭಾಷೆಯಂ ಬಜೆ ಗಂಟಿಕ್ಕುವನೆಂದು ತಾಯ ಹೊಸೆಬಟ್ಟೆಳ್ಪಟ್ಟಿ ಕೊಂಡಾಡುತಂತಿರುವಳ್ ತಾಂ ನೆಜೆ ಸೂಳೆಯ್ಮೆ (ಸೋಮೇಶ. ೭೩).

[ಹೊಸೆ (< ಪೊಸೆ[1]) + ಬಿಡು[1]]

ಹೊಸೆಹ (ನಾ). ಹೊಸೆಯುವಿಕೆ; ಹುರಿಗೊಳಿಸುವಿಕೆ: ಧಾನ್ಯದಂತೆ ಹಗೇವಕ್ಕೆ ವಂದು ನಾರಂತೆ ಹೊಸೆಹಕ್ಕೆ ವಂದು (ಧರ್ಮಾಮೃ. ೩-೭೭).

[ಹೊಸೆ (< ಪೊಸೆ[1]) + -ಹ[2] (< -ಪ[2])]

ಹೊಸ್ತಲು 'ಪೊಸಂತಿಲ್' ನೋ.

ಹೊಸ್ತಿಲ್ 'ಪೊಸಂತಿಲ್' ನೋ.

ಹೊಸ್ತಿಲ 'ಪೊಸಂತಿಲ್' ನೋ.

ಹೊಸ್ತಿಲು 'ಪೊಸಂತಿಲ್' ನೋ.

ಹೊಸ್ತು 'ಪೊಸತು' ನೋ.

ಹೊಳಕಿಸು 'ಪೊಳಕಿಸು' ನೋ.

ಹೊಳಕು[1] 'ಪೊಳಂಕು' ನೋ.

ಹೊಳಕ್ಕು[2] (ನಾ). ಪ್ರಕಾಶ; ಹೊಳಪು: ಬೆಳಕು ಇಲ್ಲದ ಹೊಳಕು ಕಂಡೀತೆ? (ಗಾದ).

[< ಪೊಳಂಕು]

ಹೊಳಕ್ಕೆ[1] 'ಪೊಣರ್ಕೆ' ನೋ.

ಹೊಳಕ್ಕೆ[2] (ನಾ). ಹೋಳು; ಚೂರು: ಅಗಿವ ವಜ್ರದ ಹೊಳಕೆಗಳೊ ದಿಟ ಹಗಲ

ತಗಡೋ ಮೇಣು ಮಿಂಚಿನ ಬಗೆಯ ಸೆಕ್ಕೆಯೊ (ಕುವ್ಯಾಭೀ. ೧-೪೭); ಗೊಂಗಡಿಯ ಮೂಲಿಯ ಕುಂಬಗೆಯಲ್ಲಿ ತೆಂಗಿನ ಕಾಯಿಯ ಹೊಳಕೆಗಳನ್ನು ಹಾಕಿಕೊಂಡು ಊರಿಗೆ ಮರಳಿದ್ದ (ಗಂಗಾಪಾ. ೧೦೭). [< ಹೋಳ್ಕು]

ಹೊಳಕೆಗಟ್ಟು (ಕ್ರಿ). ಪೈಪೋಟಿ ಮಾಡು; ಸ್ಪರ್ಧಿಸು: ತಳತುದೋ ಪರಿಮಳತ ಧೂಮಾವಳಿ ಎಯದ್ಬಾಗದಲಿ . . . ಧ್ರುವನ ನಿಳಯದಲಿ ಲಂಬಿಸಿತು ಸುಧೆಯಲಿ ಹೊಳಕೆಗಟ್ಟಿತು ಸುರಕುಜದ ಹಂಬಲನು ಬಿಡಿಸಿತು (ತೊರಾ. ೧-೭-೫೦).

[ಹೊಳಕೆ[1] (< ಪೊಣರ್ಕೆ) + ಕಟ್ಟು[1]]

ಹೊಳಕೆಗಾಱ 'ಹೊಣಕೆಗಾರ' ನೋ.

ಹೊಳಚಿಕೆ (ನಾ). ತುಂಡುಮಾಡುವುದು; ಚೂರುಮಾಡುವುದು: "ಹೋ-ಅವಖಂಡನೇ, ಹೊಳಚಿಕೆಯೊಳ್" (ಕಾಶಕ್ಕ. ೧೮೬).

[ಹೊಳಚು (< ಪೊಳಚು) + - ಇಕೆ]

ಹೊಳಚು 'ಪೊಳಚು' ನೋ.

ಹೊಳಪಿಸು (ಕ್ರಿ). ೧. ಮಿಂಚುವಂತೆ ಅಲುಗಿಸು; ಹೊಳೆಯುವಂತೆ ಮಾಡು: ಈ ಶಸ್ತ್ರಧಾರಿಗಳು ಖಡ್ಗಗಳನ್ನು ಹೊಳಪಿಸುತ್ತಾ ನಿನ್ನನ್ನು ಬೆದರಿಸುತ್ತಾರೆ (ಉರಾಚ. ೧೫೬). ೨. ಪ್ರಕಟಪಡಿಸು: ಆಂಗ್ಲಸಂತತಿಯು ಶೇಕ್ಸಪೀಯರನಿಂದ ತುಂಬಿ ತುಳುಕುತ್ತಲಿದೆ ಎಂಬ ವರ್ಣನೆಯನ್ನು ಕಾರ್ಲಾಯಿಲನು . . . ಹುಮ್ಮಸದಿಂದ ಹೊಳಪಿಸಿರುವನು (ಪ್ರಬುಂಧ. ೪೩). [ಹೊಳಪು (< ಪೊಳಪು) + - ಇಸು]

ಹೊಳಪು 'ಪೊಳಪು' ನೋ.

ಹೊಳಪುಗುಂದು (ಕ್ರಿ). ಕಾಂತಿಯು ಕಡಮೆಯಾಗು; ಪ್ರಕಾಶವು ಕ್ಷೀಣಿಸು: ಅಷ್ಟುದೂರದಲ್ಲಿ ವರ್ಷಿಸುವ ಹೊಳಪುಗುಂದಿದ ಮತ್ತು ಚುರುಕು ಕಡಿಮೆಯಾದ ಸೂರ್ಯರಶ್ಮಿಯಲ್ಲಿ ಈ ಪ್ರಪಂಚವು ಮುಣಿಗಿ . . . ಸೂರ್ಯನ ಸುತ್ತಲೂ ಮೆಲ್ಲನೆ ಸುತ್ತುತ್ತಲಿರುವುದು (ಜ್ಯೋತಿರ್ವ. ೧೫೬). [ಹೊಳಪು (< ಪೊಳಪು) + ಕುಂದು[1]]

ಹೊಳಪೇರು 'ಪೊಳಪೇಱು' ನೋ.

ಹೊಳಲಿಡು (ಕ್ರಿ). ಪ್ರತಿಧ್ವನಿಸು; ಮಾರ್ದನಿ ಕೊಡು: ಚೆಲುವು ಮುನ್ನ ಹೊಳಲಿಟ್ಟಿತು ನನ್ನ ಇಂದು ಚೆಲುವು ಹ್ಮೊಳಲಿಡುವುದು ನಿನ್ನ (ಗೋಋನಾ. ೨೫-೧೫); ಈ ಕೂಗು ಕಾಡಿನಲ್ಲೆಲ್ಲ ಮತ್ತೆಮತ್ತೆ ಹೊಳಲ್ದಿಟ್ಟಿತ್ತು (ಪುಟ್ಟರ. ೪೪); ಮಲೆದಾಣಮಾವುದು ತಾನೆ ಹೊಳಲಿಟ್ಟು ಮಾರ್ದನಿಸದಾ ನಿನ್ನ ಹುಯಿಲುಗಳ (ಮೂಱುನಾ. ೧೧೨-೪೭೬).

[ಹೊಳಲ್ಕು + ಇಡು[1]]

ಹೊಳಲು[1] 'ಪೋಟಿಲ್' ನೋ.

ಹೊಳಲು[2] 'ಪೊಟಿಲ್' ನೋ.

ಹೊಳಲು[3] (ನಾ). ಪ್ರತಿಧ್ವನಿ; ಮಾರ್ದನಿ: ತೆಂಗಿನ ಮರ್ಮರಗಳಲ್ಲಿ ವೇದಘೋಷದ ಹೊಳಲಿದೆ (ಈಚಿಕ. ೩); ಕೂಗಿದರೆ ಆ ಶಬ್ದದ ಪ್ರತಿಧ್ವನಿ ಮನೆಯಲ್ಲೆಲ್ಲ ಸುತ್ತಿ ಮತ್ತೆ ಇವಳ ಕಿವಿಗೇ ಬಂದಿತು . . . ಅದೇ ಹೊಳಲೇ ಉತ್ತರ (ರಂಗನಾ. ೧೩೩); ಕ್ರಮಕ್ರಮವಾಗಿ ಆ ಹೊಳಲು ನಿಲ್ಲುವುದು (ತುಂಗಭ. ೬೯). 'ಹೊಳಲುಗೊಡು' ಪರಾ. [?]

ಹೊಳಲುಕೊಡು 'ಹೊಳಲುಗೊಡು' ನೋ.

ಹೊಳಲುಗೊಡು, ಹೊಳಲುಕೊಡು (ಕ್ರಿ). ಪ್ರತಿಧ್ವನಿಯನ್ನುಂಟುಮಾಡು; ಮಾರ್ದನಿಗೊಡು: ಸ್ವಗತವಿಲ್ಲದ ಮೋಡ ಹೊಳಲುಗೊಡದು (ಸೂರ್ಯಪಾ. ೨೫-೧೦); ದಂಡೆಮಳಲಿಗೆ ಹೊಳಲುಗೊಟ್ಟವೆ ನೂರು ನೆನಪಿನ ಝರಿಗಳು (ನಲಮು. ೫೩-೪). **ಹೊಳಲುಕೊಡು:** ಕೂಗಿದರೆ ಹಾಗೇ ಹೊಳಲುಕೊಡುವ ಧ್ವನಿಯಂತೆ . . . ಹೌದು ಬುದ್ಧೀ ಎಂದು ನುಡಿವರು (ಮುದ್ರಾಮಂ. ೨೯). [ಹೊಳಲ್ಕು + ಕೊಡು[1]]

ಹೊಳಲೇಳು (ಕ್ರಿ). ಡೊಗರು ಬೀಳು; ಪೊಳ್ಳು ಬೀಳು: ರುಧಿರವಾರ್ಧಿಯ ಕಟ್ಟೆವೊಡವಂತಾಯ್ತು ಹೋರಲು ಕೆಡೆದ ಭಟರುಗಳು ಅಟ್ಟೆಗಳು ಹೊಳಲೇಳಿ ಪಡೆ ನಡೆಗಟ್ಟು ಕಾಡುವ ಭರವು ನಿಂದುದು (ಕಾಶಕಾ. ೩೪-೮).

[ಹೊಳಲು[1] (< ಪೋಟಿಲ್) + ಏಳು[1] (< ಏಲ್ಪು)]

ಹೊಳವಳಿ (ನಾ). ಚಟುವಟಿಕೆ: ಸತ್ತ ಹೆಣಕ್ಕೆ ಎವೆಹಳಚುವ ಹೊಳವಳಿಯುಂಟೇ (ಸರ್ವವ. ೩೬-೧೭೮). [?]

ಹೊಳವು[1] (ಕ್ರಿ). ಹೊಳವಾಗು; ನಿರ್ಮಲವಾಗು: ಕಿಡಕಿಯೊಳಗಿಂದ ಚೆನ್ನಾಗಿ ಬಿಸಿಲು ಬಿದ್ದದ್ದು ಕಂಡು, ಇಂದು ಹಗಲೆಲ್ಲ ಹೀಗೇ ಹೊಳವೀತೆಂದು ಹಿಗ್ಗಿದನು (ಮುಂಬಯಿ. ೫-೪೯). [< ಹೊಳವು]

ಹೊಳವು, ಹೊಳುವು (ನಾ). ೧. ತೇಜಸ್ಸು; ಕಾಂತಿ: ವಜ್ರಗಳಲ್ಲಿ . . . ಹೊಳವು ನಾಲ್ಕು ಬಗೆಯಾಗಿಯಿರುವುದು (ಸಾಗಂಧಿ. ೩೭೪-೨೬); ಸಾಲವೆನ್ನುತ್ತಲೂ ಅಜ್ಜನ ಮುಖದಲ್ಲಿನ ಹೊಳವೇ ಮಾಯುವಾದಂತಾಯಿತು (ಮಣ್ಣುಹ. ೧೧೬). ೨. ಸ್ವರೂಪ; ಲಕ್ಷಣ: ಚಿತ್ರದ ನೆಲೆಯಲ್ಲಿದು ನೆಮ್ಮುವುದು ಮುರಿವಿನ ಹೊಳವಲ್ಲಿದು ಹಿಂಗುವದು (ಉವ್ಯಾಅ. ೧೫-೨೪); ಈ ಪುನರ್ಘಟನೆಯ ರೀತಿ ಯಾವುದು? ಅದರ ಹೊಳವೇನು? (ನವ್ಯಕಾ. ೧೬). ೩. ಮಳೆ ನಿಂತ ನಂತರ ಉಂಟಾಗುವ ಬೆಳಕು; ಹೊರಪು: ಈಗೇನೋ ಎರಡು ದಿನ ಹೊಳವು ಬಿದ್ದಿದೆ, ನಾಳೆ ಮಳೆ ಬಂದರೆ ನಿಮ್ಮ ಗತಿಯೇನು? (ಬಳುಮ. ೪೭). **ಹೊಳುವು:** ೪. ಸೂಚನೆ; ಸುಳಿವು: ಕಳ್ಳರಿಗೆ ಹೊಳುವಿಲ್ಲ ಸುಳ್ಳರಿಗೆ ತಳವಿಲ್ಲ ಗೊಳ್ಳುಮಾತಿಗದು ಸದರಲ್ಲ, (ಕನ್ನಜಾ. ೨೭೩). 'ಪೊಳಪು' ಪರಾ.

[ಹೊಳೆ[1] (< ಪೊಳೆ[1]) + - ವು]

ಹೊಳವ್ಯ (ನಾ). ರಂಧ್ರ; ತೂತು: ತನ್ನ ಕರವರಿದು ಹೊಳವಂ ಮಾಡಿ ತತ್ತಲೆಗಡಿದು ಬುರುಡೆ ನರ ತಂತಿ ಬೆರಳ್ಗಿರಡಿ ಸಪ್ತಸ್ವರವಿಡಿದು ನುಡಿಸೆ (ಪ್ರಾಢರಾ. ೪-೪೬); ಹಲಸಿನ ಮರದ ದಿಮ್ಮಿಯನ್ನು ಕೊರೆದು ಹೊಳವು ಮಾಡಿ, ಅದರ ಎರಡೂ ಕಡೆಗೂ ಚರ್ಮದ ಪೊರೆಗಳನ್ನು ಚರ್ಮದ ಪಟ್ಟಿಯಿಂದ ಬಿಗಿದು (ಸಂಗೀಚಂ. ೧೨೦). [?]

ಹೊಳಸು 'ಪೊಳೆಯಿಸು' ನೋ.

ಹೊಳಹು 'ಪೊಳಪು' ನೋ.

ಹೊಳಹುಗಳಿ (ಕ್ರಿ). ಬೆಳಕು ಇಲ್ಲವಾಗು; ಮಬ್ಬಾಗು: ಹೊಳಹುಗಳಿದುದು ಕಾಲವಿಸ್ಮರಿಪಳಗೆ ಸೈರಿಸಿ ಶಿವಶಿವಾಯೆಂದೊಳಗೊಳಗ ಮೂದಲಿಸುತಿರ್ದರು ಭಟರು ತಮ್ಮೊಳಗೆ (ಕುವ್ಯಾಪ್ರೋ. ೧೪-೨೪). [ಹೊಳಹು (< ಪೊಳಪು) + ಕಳಿ[1] (< ಕಲ್ಪಿ[1])]

ಹೊಳಹುಗಾಣು (ಕ್ರಿ). ಗೋಚರವಾಗು; ಪ್ರಕಟವಾಗು: ಪ್ರಳಯಕೋಟಿ ಪ್ರಾಣಗಳಿಗೆ ಹೊಳಹುಗಾಣಲೀಸದಂತೆ ಬೆಳೆದು (ಕನಕ. ೨೦೮-೭).

[ಹೊಳಹು (< ಪೊಳಪು) + ಕಾಣು (< ಕಾಣ್)]

ಹೊಳಹುದೋಱು (ಕ್ರಿ). ೧. ಕಾಂತಿಯನ್ನು ಹೊಮ್ಮಿಸು; ಬೆಳಕು ಬೆಲ್ಲು: ಬೆರಳ ಮುದ್ರಿಕೆಯ ಹೊಳಹುದೋಱುತ ಶುಭ್ರಚಮರವ ಜಾಳಿಸುತಳವೆಂಗಳಸದರರ್ತಿಯಲಿ (ಕಂಸವ. ೮-೨೪). ೨. ಪ್ರಕಟಿಗೊಳ್ಳು ; ಕಾಣಿಸಿಕೊಳ್ಳು: ಪೃಥ್ವಿ ಅಪ್ಪುವಿನ ಸಂಗದಲ್ಲಿ ಅನಲ ಅನಿಲನೆಂಬ ಪುತ್ರಳಿ ಹುಟ್ಟಿತ್ತು . . . ಅದು ನಾದಪೀತ ಬಿಂದುಲಿಂಗ ಕಳವಸ್ತುವಾಗಿ ಹೊಳಹುದೋಱುತ್ತದೆ (ಮೋಮಾ. ೮-೨೬).

[ಹೊಳಹು (< ಪೊಳಪು) + ತೋಱು]

ಹೊಳೆ (ನಾ). ಒಂದು ಬಗೆಯ ಗೋಧಿ: ಗೋಧಿ . . . ಕೆಂಪು, ಏಪಲಿ, ಹೊಳೆಯೆಂಬ ಮೂರು ಜಾತಿಗಳು ಈ ಜಿಲ್ಲೆಯಲ್ಲಿ ಬೆಳೆಯುತ್ತವೆ (ಕಛಾಗ. ೨೭೧). [?]

ಹೊಳುವು 'ಹೊಳವ್ಯ' ನೋ.

ಹೊಳೆ[1] 'ಪೊಳೆ[1]' ನೋ.

ಹೊಳೆ[2] 'ಪೊಳೆ[2]' ನೋ.

ಹೊಳೆ[3] 'ಪೊಟೆ' ನೋ.

ಹೊಳೆಇಪ್ಪೆ (ನಾ). ಒಂದು ಬಗೆಯ ಇಪ್ಪೆಮರ: ಹೊಳೆಇಪ್ಪೆ, ಹುಳನಾನೆಲೆ (ಮೃಚಿಗಿ. ೧೨-೨೦೬). [ಹೊಳೆ[3] (< ಪೊಟೆ[2]) + ಇಪ್ಪೆ[1] (< ಇರ್ಪೆ)]

ಹೊಳೆಕೌವ (ನಾ). ಒಂದು ಬಗೆಯ ಮರ: ಹೊಳೆಕೌವಮರ, ಧಾತ್ರೀಫಲ, ನೀರುಗಣಗಲು (ಮೃಚಿಗಿ. ೧೨-೨೦೦). [ಹೊಳೆ[3] (< ಪೊಟೆ[2]) + ಕೌವ[1]]

ಹೊಳೆಗಣ್ಣು (ನಾ). ಹೊಳೆಯುವ ಕಣ್ಣು; ಕಾಂತಿ ಸೂಸುವ ನೇತ್ರ: ಅವನನ್ನು ಹೊಳೆಗಣ್ಣುಗಳಿಂದ ನೋಡಿ, ಮುಗುಳ್ನಗೆಯನ್ನು ನಕ್ಕುದುಂಟು (ಸ್ಪಹೂ. ೧೮೨).

[ಹೊಳೆ[1] (< ಪೊಳೆ[1]) + ಕಣ್ಣು (< ಕಣ್)]

ಹೊಳೆಗರ (ನಾ). ಒಂದು ಬಗೆಯ ಮರ: ಹೊಳಿಗರ (ಶೂದ್ರಬಿಮೊ)-ದೊಡ್ಡವೃಕ್ಷ. ಕಟ್ಟಿಗೆ ಮಿದು (ಕಛಾಗ. ೫೧).

ಹೊಳೆಗಾಲುವೆ (ನಾ). ನದಿಯಿಂದ ನೀರು ಹಾಯಿಸುವ ಕಾಲುವೆ: ಕೋಸಲದ ರುಂಹರಿ ವಿರಾಜಿಸಿತಮಮ ಹರಿಹಿನ ಹರಿವ ಹೊಳೆಗಾಲುವೆಯ ಕೆಲದುಂಬುಗಳ ನೀರುಗಳ . . . ಧವಳೇಕ್ಷುಗಳಿನನುಪಮನಂದನಂಗಳಲಿ (ತೊರರಾ. ೧-೯-೫೫).

[ಹೊಳ್ಳಿ (< ಪೊಟೆ) + ಕಾಲುವೆ (< ಕಾಲ್ಯಾಯ್)]

ಹೊಳೆಚುಳ್ಳಿ (ನಾ). ಒಂದು ಬಗೆಯ ಮುಳ್ಳುಪೊದೆ: ಹೊಳಿಚುಳ್ಳಿ, ಮುಳ್ಳಿಚುಳ್ಳಿ, ಹರಿಕುಶ. ತುಡಚುಳ್ಳಿ (ಮ್ಯಡಿಗಿ. ೨-೨೪). [ಹೊಳ್ಳಿ (< ಪೊಟೆ) + ಚುಳ್ಳಿ]

ಹೊಳೆತುಂಬೆ (ನಾ). ಒಂದು ಬಗೆಯ ತುಂಬೆಗಿಡ: ಆದಿರಾಜ, ಹೊಳೆತುಂಬೆ, ನೆರ್ವಾಳ . . . ದೊಡ್ಡಲೆನಗೆ (ಮ್ಯಡಿಗಿ. ೨೫-೪೬೬). [ಹೊಳ್ಳಿ (< ಪೊಟೆ) + ತುಂಬೆ]

ಹೊಳೆತುಮ್ರಿ (ನಾ). ಒಂದು ಬಗೆಯ ಸಸ್ಯ: ಕುಷರಥ, ಹಿಗೆ, ತುಮಕಿ, ತಿಂಡುಕ, ಹೊಳೆತುಮ್ರಿ, ಬಂಧ (ಮ್ಯಡಿಗಿ. ೩೧-೪೬೬).

[ಹೊಳ್ಳಿ (< ಪೊಟೆ) + ತುಮ್ರಿ (< ತುಂಬುರ್)]

ಹೊಳೆದಾಸವಾಳ (ನಾ). ಒಂದು ಬಗೆಯ ಸಸ್ಯ: ಚೆಲ್ಲ, ಚಿಳ್ಳಿ, ಮರವಾಚಲುಮರ, ಹೊಳೆದಾಸವಾಳ (ಮ್ಯಡಿಗಿ. ೪೯-೧೭೩).

[ಹೊಳೆ (< ಪೊಟೆ) + ದಾಸವಾಳ (< ದಾಸವಣ)]

ಹೊಳೆನಗೆ (ನಾ). ಒಂದು ಬಗೆಯ ಸಸ್ಯ: ಹೊಳೆನಗೆ, ನೀರಗನಿಗಲು (ಮ್ಯಡಿಗಿ. ೪೪-೪೭೨). [ಹೊಳ್ಳಿ (< ಪೊಟೆ) + ನಗೆ?]

ಹೊಳೆನೆಕ್ಕಿ 'ಹೊಳಲಕ್ಕಿ' ನೋ.

ಹೊಳೆಬೋಸಿ (ನಾ). ಒಂದು ಬಗೆಯ ಸಸ್ಯ: ನೀರವಂಜಿ, ನೀರಂಬಿ, ಹೊಳೆಬೋಸಿ (ಮ್ಯಡಿಗಿ. ೭೭-೧೫೭೭). [ಹೊಳ್ಳಿ (< ಪೊಟೆ) + ಬೋಸಿ?]

ಹೊಳೆಮತ್ತಿ (ನಾ). ಒಂದು ಬಗೆಯ ಮತ್ತಿಮರ: ಹೊಳೆಮತ್ತಿ . . . ಬಹುದೊಡ್ಡ ಮರ, ಹೊಳಿಗಳಲ್ಲಿ ಹುಟ್ಟುತ್ತದೆ (ಕಫಾಗ. ೫೧).

[ಹೊಳ್ಳಿ (< ಪೊಟೆ) + ಮತ್ತಿ೧ (< ಮಟ್ಟಿ)]

ಹೊಳೆಮೆಟ್ಟು 'ಪೊಟೆಮಟ್ಟು' ನೋ.

ಹೊಳೆಯಿಸು 'ಪೊಳೆಯಿಸು' ನೋ.

ಹೊಳೆಲಕ್ಕಿ, ಹೊಳೆನೆಕ್ಕಿ (ನಾ). ಒಂದು ಬಗೆಯ ಔಷಧೀಸಸ್ಯ: ಹೊಳಲಕ್ಕಿ, ಸಂಗನಿ (ಮ್ಯಡಿಗಿ. ೭೮-೧೫೭೭). **ಹೊಳೆನೆಕ್ಕಿ**: ಆದಿರಾಜ, ಹೊಳೆತುಂಬೆ . . . ಹೊಳೆನೆಕ್ಕಿ, ನೆರವಂಬಳೆ (ಮ್ಯಡಿಗಿ. ೨೫-೪೬೬). [ಹೊಳ್ಳಿ (< ಪೊಟೆ) + ಲಕ್ಕಿ೧ (< ಲೊಕ್ಕಿ೧)]

ಹೊಳೆವಳಿಗೆ 'ಪಳವಳಿಗೆ' ನೋ.

ಹೊಳೆಸಾಲು (ನಾ). ಹೊಳೆಯ ದಂಡೆ; ನದಿಯ ತೀರ: ತಾಮ್ರಪರ್ಣಿಯ ಹುಡುಕಿ ಹೊಳೆಸಾಲಿನಲಿ ತಿರುಗಿತು ಬಲವು ಬಲಿಮುಖರ (ತೊರರಾ. ೪-೧೦-೫೫): ಹೊಳೆಸಾಲಿನೆತ್ತಿಂಬ ಕೃಷ್ಣಾತೀರದ ಯಿತ್ತುಗಳಿಗಾದರೂ ಧಾರವಾಡಬೆಲ್ಲೆಯಲ್ಲಿ ತಕ್ಕಮಟ್ಟಿಗೆ ಮಾನವಿರುತ್ತದೆ (ಕಫಾಗ. ೫೭). [ಹೊಳ್ಳಿ (< ಪೊಟೆ) + ಸಾಲು೨ (< ಸಾಲ್೨)]

ಹೊಳೆಸು 'ಪೊಳೆಯಿಸು' ನೋ.

ಹೊಳೆಹೊನ್ನೆ (ನಾ). ಒಂದು ಬಗೆಯ ಹೊನ್ನೆಮರ: ಹೊಳೆಹೊನ್ನೆ, ಶ್ರೀಹೊನ್ನೆ ಕೂವೆ. ಬೊಳ್ಳೆ (ಮ್ಯಡಿಗಿ. ೧೭-೨೦೮). [ಹೊಳ್ಳಿ (< ಪೊಟೆ) + ಹೊನ್ನೆ (< ಪೊನ್ನೆ)]

ಹೊಳ್ಳ (ನಾ). ೧. ಡೊಗರು; ಪೊಟರೆ (?): ಹೊಳ್ಳದೊಳೊರಗಿ ಇಳ್ಳುಗಳವಗ ಜಗವು ಸುಳ್ಳಿಂದ ಗುರುವ ಕೃಪೆಯಾಗಿ (ಮೃಠಾ. ೭೧-೨೪೧). ೨. ನಿಷ್ಪ್ರಯೋಜಕತೆ; ಹುರುಳಿಲ್ಲದಿರುಪಿಕೆ (?): ಹೊಳ್ಳದ ಬಚ್ಚೇರು ತಾವು ಸುಳ್ಳರೆಲ್ಲರ ಕೂಡಿಕೊಂಡು ದೆಳ್ಳನ ಬೆಳತನಕ ನೀರ ತಡಿಯಲ್ಲಿ ಕುಳಿತು ಗುಳ್ಳ ಗೊರಜೆ ಕೂಡಿ ತಿಂದು (ಕನಕ. ೧೪೨-೪). 'ಹೊಳ್ಳು' ಪರಾ. [< ಪೊಳ್ಳು?]

ಹೊಳ್ಳಿಸು (ಕ್ರಿ). ೧. ಟೊಳ್ಳುಮಾಡು; ಪೊಳ್ಳಾಗಿಸು: ವಿರಾಟನ ತನುವ ಹೊಳ್ಳಿಸಿ ರಕುತವನು ಶಾಕಿನಿಯರಿಗೆ ಹೊಯಿಸುವೆನು (ಕುವ್ಯಾವಿ. ೯-೩೫); ಹೊಳ್ಳಿಸಿದನಂಗಮಂ . . . ಬಾಯ್ತೆರದು ರಕ್ತಗಳ ಹಳ್ಳದಿಂ ಸೇದಿದನು ಮನದಣಿಯೆ ಭೀಮ (ತುರಂಗ. ೬೬-೩೮). ೨. ಚೂರುಮಾಡು; ಹೋಳುಮಾಡು: ಹರಿಗೆ ಹೊಳ್ಳಿಸೆ ಖಡುಗ ಖಂಡಿಸೆ ಕೊರಳರಿಯೆ . . ., ತವಿದರು (ಕುವ್ಯಾಭೀ. ೪-೩೨). ೩. ಬರಿದುಮಾಡು; ಖಾಲಿಮಾಡು: ಕಲಿಯಿಲ್ಲದ ಮನ್ನಿಪ ಸೂಳಿಗೇನನಾದೊಡವಟೆನೇಹಮಂ ಮೆಱೆದು ಹೊಳ್ಳಿಸಿ ಬಿಟ್ಟಪನೆಂಬ ಡಾಳಿಯಂ ಸುಡುವುದು (ಅನಂಪ್ರ. ೮-೫೬); ನಾನಾಮುಖದ ದಾನಕೆ ತಂದ ಪಸ್ತುವ ಬಾಚಿ ಹೊಳ್ಳಿಸಿ ತಿಂದು ಕೊಬ್ಬಿದ ನಿಮಗ ಸುಭಟರ ಮಾತದೇಕೆಂದ (ಕುವ್ಯಾವಿ. ೭-೧೩); ಕುಡುವುದು ಕೂರ್ಮಯುಳ್ಳವಳಿಗೇನನು ಬೇಡ ಕುಡದೆ ಹೊಳ್ಳಿಸಿ ಬಿಟ್ಟವಳ ಸುಡುವುದು (ಅನಂಚ. ೧೧-೧೩೩). ೪. ನಾಶಮಾಡು (?): ಒಳಗೆ ಹೊಳ್ಳಿಸಿಯನಲ ತನ್ನನು ಬೆಳಗಿ ಕುಡಿವುತ್ತಿರ್ದಡಾ ತಾನಳುಕದಿಹ ಜಲನಿಧಿ ಸಕಲಸತ್ಕಗಳ ರಕ್ಷಿಸುತ (ನಿಭಾಗ. ೧೧-೧೪-೭); ಡಿಳ್ಳಿಯ ಖಾನರೆಂದೆಂಬ ಮೆದಗೆ ಬಲುಗೊಳ್ಳಿಯೆಂದೆಂಬ ಬಿರುದನು ಹೊಳ್ಳಿಸುವರ ಗಂಡನೆನಿಸಿಕೊಳುತ ಬೇಗ ಕೊಳ್ಳಿಯ ನಾಗನೆಯ್ದಿದನು (ಕುರಾಸಾಂ. ೧೧-೫೫೫).

'ಪೊಳ್ಳಿಯಿಸು' ಪರಾ. [ಹೊಳ್ಳು (< ಪೊಳ್ಳು) + - ಇಸ್ಕು]

ಹೊಳ್ಳಿಜಿತ (ನಾ). (ಆಲಂ) ಪೊಳ್ಳಾದ ಆಲಾಪ; ವ್ಯರ್ಥಾಲಾಪ: ಹೋರೆಗರ ಹೊಳ್ಳಿಜಿತ ಜೋಯಿಸರಾರುಭಟೆಗಳ ಬಿಂಕ ಮಾಂತ್ರಿಕರೋರೆಮುಸುಕಿನ ಜಾಳುಜಪವೀನ್ಯಪರ ಚಾಳ್ಕಿಸೆ (ಕುವ್ಯಾಆ. ೧೩-೫). [ಹೊಳ್ಳು (< ಪೊಳ್ಳು) + ಇಜಿತ]

ಹೊಳ್ಳು 'ಪೊಳ್ಳು' ನೋ.

ಹೊಳ್ಳುಗ (ನಾ). ನಿಷ್ಪ್ರಯೋಜಕನಾದವನು: ಈ ಹೊಳ್ಳುಗರ ಮಾತಿಗೆ ಬಲ್ಲವನಲ್ಲಿ ಸಿಕ್ಕುವನೆ (ವೀಂಪಿಮಾ. ೧೭೩-೬೫೩); ಕೊಂತದ ಹೊಳ್ಳುಗರೆನಗಾಂತು ನಿಲ್ಲುದಚ್ಚರಿ (ಉದ್ಭಟ. ೪-೭೩); ಹೊದಱಿನ ಹೊಳ್ಳುಗರನೊಡಹಾಯ್ಸಿ . . . ರಥವ ಪರಿಸೆಂದ (ಕುವ್ಯಾದ್ರೋ. ೨-೩೦). [ಹೊಳ್ಳು (< ಪೊಳ್ಳು) + - ಗ೨]

ಹೊಳ್ಳುಗಣೆ (ನಾ). ನಿಷ್ಪ್ರಯೋಜಕವಾದ ಬಾಣ; ಹುಸಿಬಾಣ: ಸೂತತನಯನ ತಲೆಯ ಬಿಸುಗೆಯ ಬಿಡಿಸುವಂಬಿನ ಹಿಳುಕನುಗಿಯಾ ಹೊಳ್ಳುಗಣೆಯೇಕೆ (ಕುವ್ಯಾಕ. ೭೩-೪೩). [ಹೊಳ್ಳು (< ಪೊಳ್ಳು) + ಕಣೆ೧]

ಹೊಳ್ಳುಗಳೆ 'ಪೊಳ್ಳುಗಳೆ' ನೋ.

ಹೊಳ್ಳುಧೂಳಿ (ನಾ). ಒಣ ಧೂಳು; ಶುಷ್ಕವಾದ ಧೂಳು: ಬಿಜುಗಾಳಿ ಬೀಸಿತ್ತು ವನದ ತಲಗಲ ಹೊಳ್ಳುಧೂಳಿಯಂ ನೆಗಪಿತ್ತು (ಅರಿ. ದೇ. ೧೭೬-೧೫೫).

[ಹೊಳ್ಳು (< ಪೊಳ್ಳು) + ಧೂಳಿ (= ಧೂಲಿ)]

ಹೊಳ್ಳುಸುಡಿ 'ಪೊಳ್ಳುನುಡಿ' ನೋ.

ಹೊಳ್ಳುಮಾನಸ (ನಾ). ಕ್ಷುಲ್ಲಕಮನುಷ್ಯ; ಹುಲುಮನುಜ: ನಾನೆ ಧನ್ಯ ಹೊ[ಪಾಕಾಂ. ಡೊ]ಳ್ಳುಮಾನಸನಲ್ಲ ಬಂದ ಕಾರ್ಯವ ನೀವು ತಳ್ಳನೆ ತಿಳಿವೊಲು ಪೇಳಿ (ಪಧಚ. ೬-೧೪). [ಹೊಳ್ಳು (< ಪೊಳ್ಳು) + ಮಾನಸ೧ (< ಮಾನುಸ)]

ಹೊಳ್ಳುವಾತು 'ಪೊಳ್ಳುಮಾತು' ನೋ.

ಹೊಳ್ಳುವಾಱಿಸು (ಕ್ರಿ). ಜೊಳ್ಳನ್ನು ಹಾರಿಸುವಂತೆ ತೂರು: ದ್ರೋಹಿ ರಕ್ಕಸನ ಎಳ್ಳಿಸಿತು ಕಡಿಖಂಡಮಾಡಿಯೆ ಹೊಳ್ಳುವಾಱಿಸಲೂದುವನು (ತೊರರಾ. ೫-೭-೩೭).

[ಹೊಳ್ಳುವಾಱು + - ಇಸ್ಕು]

ಹೊಳ್ಳುವಾಱು, ಹೊಳ್ಳುಹಾಱು (ಕ್ರಿ). ವಿಫಲವಾಗಿ ಹೋಗು; ನಿಷ್ಪ್ರಯೋಜಕವಾಗು: ಕೊರಳಿಗೊಡ್ಡಲು ಹೊಳ್ಳುವಾಱಿದ ಸರಳು ಮಕುಟವ ತಾಗುವುದು (ಕುವ್ಯಾಕ. ೨೫-೧೩). **ಹೊಳ್ಳುಹಾಱು**: ತಲಹಿಲ್ಲದ ಕೋಲು ಹೊಳ್ಳುಹಾಱುವುದಲ್ಲದೆ ಗುಱಿಯ ತಾಗಬಲ್ಲುದೆ (ಬಸವ. ೨೦೨). [ಹೊಳ್ಳು (< ಪೊಳ್ಳು) + ಪಾಱು೧]

ಹೊಳ್ಳುಹಾಱು 'ಹೊಳ್ಳುವಾಱು' ನೋ.

ಹೊಳ್ಳುಹೊಟ್ಟೆ (ನಾ). ಒಂದು ಬಗೆಯ ಸಸ್ಯ: ತುಂದಿಲ: - ಮಲೆಸೌತೆ, ಹೊಳ್ಳುಹೊಟ್ಟೆ (ಓಷಧಿ. ೭೧). [?]

ಹೊಳ್ಳೆ೧, ಹೊರಳ್ಳೆ೩ (ನಾ). ಮೂಗಿನ ಸೊಳ್ಳೆ; ನಾಸಾರಂಧ್ರ: ಮೂಗಿನ ಹೊಳ್ಳೆಯರಳಿ ಬುರುಬುರು ಬುಸಟಾಗಿ ತೇಜಿಗಳು ತೆಗೆದುವು (ಭರಚ. ೨೪-೭೭); ಮೂಗಿನ ಹೊಳ್ಳೆಗಳಲ್ಲಿ . . . ಹಾಲಿನಂತೆಯು ವಾಸನೆಯುಳ್ಳ ಕುದುರೆಗಳು (ಸೌಗಂಧಿ. ೩೧೩- ೧೩). **ಹೊರಳ್ಳೆ೩**: ಸೊಂಡೆಯ ತುದಿಗೆ ಎರಡು ಹೊರಳೆಗಳು ಇರುವವು (ಮುಂಬಯಿ. ೪-೨೨); ಸಿಟ್ಟಿನಿಂದ ಮೂಗಿನ ಹೊರಳೆಗಳೂ ಅರಳಿದ್ದುವು (ಅತೋಕ. ೭೭).

[< ಪೊಳ್ಳು]

ಹೊಳ್ಳೆ೨, ಹೊರಳ್ಳೆ೪ (ನಾ). ನೀರುಹಾವು; ಒಳ್ಳೆ: ಗರುತ್ಮಂತನೇಂ ಪೋಗುವನೆ ಹೊಳ್ಳೆಗಳನಿಕ್ಕುವುದಕೆ (ಶ್ರೀರಾಚ. ೨-೨೭). **ಹೊರಳೆ** .

ಹೊರಳೆಯ ಹಾವು = ನೀರುಹಾವು: ದೇಶಗಟ್ಟವರೆಲ್ಲ ಸೇರುವ ವಾಸ ಸರಿ ವಾರಾಶಿ ಮಧ್ಯದಿ ಲೇಸಿನೊಳಗೊಪ್ಪಿಹರ ಹೊರಳೆಯ ಹಾವಿನಂದದಲಿ (ಜನಭಾ. ೬೩-೧೪). [< ಒಳ್ಳೆ]

ಹೊಳ್ಳೆದೆ (ನಾ). ಸತ್ವಹೀನವಾದ ಹೃದಯ; ಅಳ್ಳೆದೆ: ಹೊಳ್ಳೆದಯ ಹೊಱಬಿಗರೊಳಿಂಬುದೀ ನುಡಿಗಳಂ ತಳ್ಪಂಕದಿಂದೆ ನೀನಾಹವದೊಳಿಂತೆಣಿಕೆಗೊಳ್ಳ ಲೇಕಿವನ ಬಿಂಕವನೀಗ ಮುಱಿವೆನೆನ್ನಂ ಕಳುಹಿ ನೋಡು (ಚಿಮಿಭಾ. ೨೪-೧೦).

[ಹೊಳ್ಳೆ (< ಪೊಳ್ಳು) + ಎದೆ (< ಎರ್ದೆ)]

ಹೊಱ 'ಪೊಱ' ನೋ.

ಹೊಱಂಗ (ನಾ). ಹೊರಗಿನ ಪ್ರದೇಶ; ಬಹಿರಂಗ: ಮಿಸುಗುವಾಧಾರಚಕ್ರದ ವಿಶುದ್ಧಿಗಳಾದಿಯಸಕದ ಹೊಱಂಗದೊಳಗಿರ್ಪವೊಂದೊಂದು ಸಂತಸ ಕಂಕಣಂ ತೋಱಿದಾ ಮೇರುವಳಹೊಱಗನಂತಕೋಟಿಗಣಂಗಳು (ವೀಶ್ವಪ್ರ. ೮-೨೦-೪೬).

[ಹೊಱ (< ಪೊಱಗು) + ಅಂಗ]

ಹೊಱಂಡು 'ಪೊಱಮಡು' ನೋ.

ಹೊಱಕಂಪಣ (ನಾ). ನಾಡಿನ ಒಂದು ಭಾಗದ ಹೊರಗಿನ ಪ್ರದೇಶ; ಕಂಪಣದ ಹೊರಭಾಗ: ನಾಡೊಳಗೆ ವೊಳಕಂಪಣ ಹೊಱಕಂಪಣವೆಂಬನದೆ ಏನು ನಾಡೊಳಗೆ ಹುಟ್ಟಿದಡೆಯು ಸಮಾನಭಾಗೆಯಲು ಹಚ್ಚುಕೊಂಡುಂಬರ ಮಂಗಳಮಹಾಶ್ರೀ (ವಿಕ್ರ. VI. ಕರ್ನಾಲ. ೧೫೭-೭೪; 1191). [ಹೊಱ (< ಪೊಱಗು) + ಕಂಪಣ]

ಹೊಱಕಟ್ಟು, ಹೊರಕಟ್ಟು, ಹೊರಗಟ್ಟು (ನಾ). ೧. ಪ್ರವೇಶದ್ವಾರ; ತಲೆಬಾಗಿಲು: ತುಂಟ ಮನೆಯ ಪೊಱಮಟ್ಟು ಹೊಱಕಟ್ಟು ಕಟ್ಟಿ ಮತ್ತಾ ಮನೆಯವರಾರಱಿಯದಂದದಿನಾ ಗೃಹದ ಹೊಱಗಣ ಬಯಲಿಗೆ ಬಲುಗಿಚ್ಚನಿಕ್ಕಿ (ಪ್ರಭಂಜ. ೩-೧೧೪). **ಹೊರಕಟ್ಟು**: ೨. ಬಾಹ್ಯದ ಆವರಣ: ನೂರಾರು ಲಕ್ಷೋಪಲಕ್ಷ ಒತ್ತಡ ಸಂಮರ್ದದಲ್ಲಿ, ಪರಮಾಣುಗಳ ಋಣವಿದ್ಯುತ್ಕಣದ ಹೊರಕಟ್ಟು ಸಂಪೂರ್ಣವಾಗಿ ಸುಟ್ಟುಸೊರಗಿರುತ್ತದೆ (ಪೊಪುಟ್ಟು. ೭೦). ೩. ಪುಸ್ತಕದ ಹೊರಕವಚ,— ಮೇಲುಹೊದಿಕೆ: ಮುಂಬಯಿಸರಕಾರದವರ ಸಹಾಯಕಧನದಿಂದ ಪ್ರಕಟವಾದ ಉದ್ಗ್ರಂಥಗಳು ಕಾಗದ, ಅಚ್ಚು, ಹೊರಕಟ್ಟು ಇವುಗಳಲ್ಲಿಯೂ ಶ್ರೇಷ್ಠತರಗತಿಯವಾಗಿವೆ (ಸಾಸಮಾ. ೪೯). **ಹೊರಗಟ್ಟು**: ೨. ದರ್ಶನದ ಹೊರಗಟ್ಟು ಹೇಗಿದ್ದರೂ ಕಾವ್ಯದ ಪ್ರಧಾನಶಕ್ತಿ ಇದ್ದ ಹಾಗೇ ಇರುತ್ತದೆ (ನವ್ಯಕಾ. ೧೧೪).

[ಹೊಱ (< ಪೊಱಗು) + ಕಟ್ಟು]

ಹೊಱಕತ್ತರ 'ಪೊಱಕತ್ತರ' ನೋ.

ಹೊಱಕಯ್ 'ಪೊಱಕೆಯ್' ನೋ.

ಹೊಱಕಾಲ್ 'ಪೊಱಕಾಲ್' ನೋ.

ಹೊಱಕಾಲು 'ಪೊಱಕಾಲ್' ನೋ.

ಹೊಱಕಾಲುಗೊಳ್ 'ಪೊಱಕಾಲ್ಗೊಳ್' ನೋ.

ಹೊಱಕಾಲ್ಗೊಳು 'ಪೊಱಕಾಲ್ಗೊಳ್' ನೋ.

ಹೊಱಕಾಹು (ನಾ). (ಕೋಟೆ, ಪಟ್ಟಣ ಮುಂತಾದುವುಗಳ) ಹೊರಗಿನ ಆವರಣದಲ್ಲಿರುವ ಕಾವಲು: ಖಿಲರ ವಿಭಾಡಿಸಿ ತಲೆಗಳ ಹೊಯ್ದು ಕೂಡೆ ಬೊಬ್ಬಿಟ್ಟಿದಾಗ ಹೊಱಕಾಹಿನಧಟರು ಪಾಡುಪಂಥಗಳ ಮೆಟ್ಟಿದರು (ಕಂನಪ. ೧೪-೯೪).

ಹೊಱಕಾಹಿನವರು = (ಕೋಟೆ, ಪಟ್ಟಣ ಮುಂತಾದುವುಗಳ) ಹೊರಗಿನ ಆವರಣದಲ್ಲಿ ಕಾವಲು ಕಾಯುತ್ತಿರುವವರು,— ಕಾವಲುಪಡೆ: ಸಲೆ ಸುರಂಗಗಳ ಘಾತವ ಹೂಳಿದರಾಗ ತಳುವದೆ ಹೊಱಕಾಹಿನವರು (ಕಂನಪ. ೧೪-೬೩).

[ಹೊಱ (< ಪೊಱಗು) + ಕಾಹು (< ಕಾವು)]

ಹೊಱಕುಳಿ 'ಪೊಱಕುಳಿ' ನೋ.

ಹೊಱಕೂಟ (ನಾ). ಹೊರಗಿನ ಸಂಬಂಧ; ಬಹಿರ್ಯೋಗ:"ಮಱಹಿನಲಿ ಒಳಗುಡುಪ ಸೀರೆಯಲಿ . . . ಹೊಱಕೂಟದಲಿ . . . ಅಂತರಾಹ್ಯಯಮೆನಿಕ್ಕುಂ" (ಮಂಗರಾ. ೧೫೦-೬೭). [ಹೊಱ (< ಪೊಱಗು) + ಕೂಟ]

ಹೊಱಕೆಯ್ 'ಪೊಱಕೆಯ್' ನೋ.

ಹೊಱಕೇರಿ 'ಹೊಱಗೇರಿ' ನೋ.

ಹೊಱಕ್ಕೆ 'ಪೊಱಕೆಯ್' ನೋ.

ಹೊಱಕೋಟೆ 'ಪೊಱಗೋಟೆ' ನೋ.

ಹೊಱಗಡೆ 'ಪೊಱಗಡೆ' ನೋ.

ಹೊಱಗಣ 'ಪೊಱಗು' ಪರಾ.

ಹೊಱಗಾಡು (ಕ್ರಿ). ಬಾಹ್ಯದಲ್ಲಿ ವರ್ತಿಸು; ಬಹಿರಂಗದಲ್ಲಿ ವ್ಯವಹರಿಸು: ಹೊಱಗಾಡಿ ಬಂದನೆಂದು ನುಡಿಸಲೊಲ್ಲದ ಸುಮ್ಮನಿದ್ದನು (ಆವಚಂ. ೭೧೬-೯೭೨); ಹೂವಿನ ಕನ್ನಡಿ ಕೈಯೊಳಿರ್ದು ನೋಡದ ನೀರ ನೆಳಲಲ್ಲಿ ಮೊಗವ ನೋಳ್ಪಂತೆ ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ ಬಳಲುತಿಹುದು ಹೊಱಗಾಡಿ (ಭರಚ. ೧-೧೦೩).

ಹೊಱಹೊಱಗಾಡು(ದ್ವಿರುಕ್ತಿ): ಆರು ಬಲ್ಲರು ಹಂಸತತ್ವವ ತಮ್ಮ ಶರೀರ ತುಂಬಿರುತಿಹುದದನು ಹಾಱದೆ ಸಾಱದೆ ಹೊಱಹೊಱಗಾಡಿ ಸಂಸಾರದುಃಖವನುಣುತಿಹರು (ಭರಚ. ೧-೧೦೨). [ಹೊಱಗೆ (< ಪೊಱಗೆ) + ಆಡು]

ಹೊಱಗು 'ಪೊಱಗು' ನೋ.

ಹೊಱಗುಂಡ 'ಪೊಱಗುಂಡ' ನೋ.

ಹೊಱಗುಡ್ಡಿ (ನಾ). (ಆಲಂ) ಹೊರಹೊಮ್ಮುವಿಕೆ; ಪ್ರಕಟಣೆ: ಘುಡುಘುಡಿಸಿ ರೋಮಾಂಚನದ ಹೊಱಗುಡಿಯ ಸೊಂಪಿನ ಮೆಯ್ಯ ಕಡುಗಲಿ ತಡೆದನೇಕಾಂಗದಲಿ ಸಾತ್ಯಕಿ ಶಲ್ಯಭೂಪತಿಯ (ಅವ್ಯಾಕ. ೪-೧). [ಹೊಱ (< ಪೊಱಗು) + ಗುಡ್ಡಿ]

ಹೊಱಗುಡ್ಡಿ (ನಾ). (ಯುದ್ಧ ಮುಂತಾದ ಕಾರಣದಿಂದ ಪಟ್ಟಣ ಅಥವಾ ಕೋಟೆಯ) ಹೊರಭಾಗದಲ್ಲಿ ರಚಿತವಾಗಿರುವ ಡೇರೆ,—ಶಿಬಿರ; ಹೊರವಲಯದಲ್ಲಿ ನಿರ್ಮಿತವಾಗಿರುವ ಪಾಳೆಯ: ಬಳಿಕ ಸುಮುಹೂರ್ತದಲಿ ಹೊಱಗುಡಿ ಬಳಸಿ ಹೊಯಿದವು (ಅವ್ಯಾಖ. ೧೮-೭). [ಹೊಱ (< ಪೊಱಗು) + ಗುಡ್ಡಿ]

ಹೊಱಗೂಲಿ (ನಾ). ಹೊರಗಿನ ಕಾರ್ಯ,—ಕೆಲಸ: ಅಕ್ಕ ಮೂ ೭೦ ಹೊಱಗೂಲಿಗೆ ಅಡಿಗೆಯ ಬ್ರಾಹ್ಮಣಗೆ (ಪೌಣಾ. ೧೫೩, ಉಡುಪಿ. ೨೬೩-೧೭; 1359).

[ಹೊಱ (< ಪೊಱಗು) + ಕೂಲಿ]

ಹೊಱಗೆ 'ಪೊಱಗೆ' ನೋ.

ಹೊಱಗೆಲಸ, ಹೊರಕೆಲಸ, ಹೊರಗೆಲಸ (ನಾ). ಹೊರಗಿನ ಕಾರ್ಯ; ಸುತ್ತುಕೆಲಸ: ಧರಣಿಪತಿ ಕೇಳವರ ತೊತ್ತಿರ ಹೊಱಗೆಲಸದವದಿರ ಪಸಾಯಿತೆಯರಿಗೆ ಪಡಿಗವ ನೀಡ ಸಲ್ಲರು ಸೋಮಯಾಜಿಗಳು (ಅವ್ಯಾಆ. ೮-೯). **ಹೊರಕೆಲಸ**: ನಿನಗೂ ಹೊರಕೆಲಸಕ್ಕೆ ಬೇರ ಜನರಿರಲಿಲ್ಲ . . . ಇವನ್ನೆಲ್ಲಾ ಯೋಚಿಸಿದ ಮೇಲೆ . . . ಈ ವ್ಯವಸ್ಥೆ (ದೇವಪಂ. ೧೩೫). **ಹೊರಗೆಲಸ**: ಹೊರಗೆಲಸಕ್ಕೆ ಹೆಣ್ಣಾಳೊಬ್ಬಳನ್ನು ಗೊತ್ತು ಮಾಡಬೇಕು (ರೂಢಿ). [ಹೊಱ (< ಪೊಱಗು) + ಕೆಲಸ]

ಹೊಱಗೇರಿ, ಹೊರಗೇರಿ, ಹೊಱಕೇರಿ (ನಾ). (ಊರಿನ) ಹೊರಭಾಗದಲ್ಲಿರುವ ಬೀದಿ; (ಪಟ್ಟಣದ) ಹೊರಪ್ರದೇಶಕ್ಕೆ ಸೇರಿರುವ ದಾರಿ: ಊರ ನೋಡುವೆನೆಂದು ಹೊಱಗೇರಿಗೆಯ್ತಂದು ಊರೆತುತಿಹುದೊಯೆಂಬಂತೆ (ಭರಚ. ೬೬-೧೨). **ಹೊರಗೇರಿ**: ಹೊರಗೇರಾಗ್ಹಾದ ಬರಬ್ಯಾಡೋ ನೆರಮನಿಯ ಹರಲಿ ಏನೇನ ಹೊತಬ್ಯಾಡೂ (ಕಜಾಗೀ. ೬೪). **ಹೊಱಕೇರಿ**: ಅದಕ್ಕಿಮ್ಮಿಗಿಲಾದ ಒಳಕೇರಿ ಹೊಱಕೇರಿಗೆ ಗಣನೆ ಇಲ್ಲ (ಶೂನ್ಯಸಂ. ೧೪-೧೪); ಯಮನವರಾಜಿದೊಯ್ಯಲು ನಾಕದಲಿ ಹೊಱಕೇರಿಗಟ್ಟಿದುದೆನಲು ಕೊಂದನು ರಿಪುಚತುರ್ಬಲವ (ಅವ್ಯಾಪ್ರೋ. ೧೪-೫೧).

[ಹೊಱ (< ಪೊಱಗು) + ಕೇರಿ]

ಹೊಱಚಾವಡಿ, ಹೊರಚಾವಡಿ (ನಾ). ೧. ಅರಮನೆಯ ಹೊರಭಾಗದಲ್ಲಿರುವ ಓಲಗಶಾಲೆ,— ಸಭಾಮಂದಿರ: ಇದಿರಾಗಿ ಹೋಗು ಜಯಂತಾಂಕಯೆಂದಟ್ಟಿ ಪದದಿರ್ದ ಹೊಱಚಾವಡಿಯೊಳು (ಭರಚ. ೩೯-೫). **ಹೊರಚಾವಡಿ**: ೨. ಮನೆಯ ಹೊರಭಾಗದಲ್ಲಿರುವ ಜಗುಲಿ: ಹೊರಚಾವಡಿಯಲ್ಲಿ ಮಕ್ಕಳೆಲ್ಲ ಸೇರಿಕೊಂಡು ಗದ್ದಲ ಮಾಡುತ್ತಿದ್ದಾರೆ (ರೂಢಿ). [ಹೊಱ (< ಪೊಱಗು) + ಚಾವಡಿ]

ಹೊಱಟು 'ಪೊಱಂಡು' ನೋ.

ಹೊಱಡಿಸು 'ಪೊಱಮಡಿಸು' ನೋ.

ಹೊಱಡು$_1$ 'ಪೊಱಮಡು' ನೋ.

ಹೊಱಡು$_2$ 'ಪೊಱಂಡು$_2$' ನೋ.

ಹೊಱಡುಬೆನ್ನು (ನಾ). ಬಾಗಿದ ಬೆನ್ನು; ಗೂನುಬೆನ್ನು: ಹೊಱಡುಬೆನ್ನಿನ ಹೊಲತಿ ಹೋಗದಿರೆನುತ ಬರೆ ದೂರದಲಿ ಬಲವೈರಿ (ನಿಭಾಗ. ೬-೧೨-೯).

[ಹೊಱಡು$_2$ (< ಪೊಱಂಡು$_2$) + ಬೆನ್ನು (< ಬೆನ್)]

ಹೊಱಡುಮೈ (ನಾ). ಗೂನುದೇಹ; ವಕ್ರವಾದ ಶರೀರ: ಹೊಱಡುಮೈಗಳ . . . ಭೀಕರಾಂಗದ ಕಿತ್ತ ಬಡುಗದ ಕರಕಪಾಲದಲೊತ್ತರಿಸಿದುದು ಮುಂದ ಶಾಕಿನಿ ಡಾಕಿನೀನಿವಹ (ನಿಭಾಗ. ೩-೯-೨೫).

[ಹೊಱಡು$_2$ (< ಪೊಱಂಡು$_2$) + ಮೈ (< ಮೆಯ್$_2$)]

ಹೊಱತು 'ಪೊಱತು' ನೋ.

ಹೊಱತೆ (ನಾ). ಹೊರತು; ಹೊರಗಾದುದು: ಪ್ರೇತಾಂಗಕ್ಕೆ ವಿಭೂತಿ ರುದ್ರಾಕ್ಷಿಯ ಕಟ್ಟಬಹುದೇ ಶಿವಲಿಂಗ ಹೊಱತೆಯಾಗಿ (ಮೋಳಮಾ. ೧೭೬-೬೨೧); ಸಾರಸ್ಯಾದು ಲೇಸಂದಡ ಜಿಹ್ವೆ ಹೊಱತೆಯಾಗಿ ಕುಱುಹುಗೊಂಡಿತ್ತೆ (ಮದೇವ. ೨೮೨-೪೯). [< ಪೊಱತು]

ಹೊಱದೆಗೆ 'ಪೊಱತೆಗೆ' ನೋ.

ಹೊಱದ್ವಾರ, ಹೊರದ್ವಾರ (ನಾ). ಹೊರಗಿನ ಬಾಗಿಲು; ಮುಂಬಾಗಿಲು: ಹೊಱದ್ವಾರ ಒಂಬತ್ತು ಒಳದ್ವಾರ ಸರ್ವಾಂಗಮಯ (ಸರ್ವಜ. ೨೩-೧೦೬). **ಹೊರದ್ವಾರ:** ಅರಮನೆಯ ಹೊರದ್ವಾರದಲ್ಲಿ ಜನರು ಗುಂಪುಗೂಡಿದ್ದಾರೆ (ರೂಢಿ).

[ಹೊಱ (< ಪೊಱಗು) + ದ್ವಾರ]

ಹೊಱನಿವಾಳಿ (ನಾ). (ಮನೆ, ಭವನ ಮುಂತಾದುವುಗಳ) ಹೊರಆವರಣದಲ್ಲಿ ತೆಗೆಯುವ ನಿವಾಳಿ: ವಾದ್ಯಕುಳ ನಾದ ಸೂಸುತಿರ್ದವು ಹೊಱನಿವಾಳಿ ಮಂಗಳವುಪ್ಪೆಯಲಿಡಿದಿಡಿದು ಚಲುವು ಮಿಗಲು (ಸಿದ್ರಾ. ೮-೭೮).

[ಹೊಱ (< ಪೊಱಗು) + ನಿವಾಳಿ]

ಹೊಱನೂಂಕು, ಹೊರನೂಕು (ಕ್ರಿ). ಹೊರಗೆ ಹೋಗುವಂತೆ ತಳ್ಳು,—ದೂಡು: ಕೊಳುವ ಕೊಡುವೆಡೆಯಲಿಯಱಿಯದ ಮೊಳೆಗಳಂ ಹೊಱ[ಪಾಠಾಂ. ಹೆಱ, ಹೆಱ್, ಹೊಱ್]ನೂಂಕಿ ಪೊಳ್ಳಿದ ಮೊಳೆಯನೊಳಕೊಂಬಕ್ಕಸಾಲೆಯು ತಾನೆ (ಬಸಪು. ೨೧-೩೦). **ಹೊರನೂಕು:** ಆ ಬಂಗಲೆಯ ಜವಾನನು ಬಾಗಿಲಲ್ಲಿ ನಿಂತ ಭಿಕ್ಷುಕನನ್ನು ಹೊರನೂಕಿದನು (ರೂಢಿ). [ಹೊಱ (< ಪೊಱಗು) + ನೂಂಕು$_1$]

ಹೊಱಪ? (ನಾ). (?): ಹರಿಯಂ [ತ]ಱುವರ್ಸ್ಸಾಲಿಗವನೆಯರ್ಬ್ಬಿಡ ಹರಸಲ್ಲ ಹೊಱಪ ತೆಗೆಯ ಸಲ್ಲ (ಕಾಆ. ೨೬-೩೯-೩೮: 1110). [?]

ಹೊಱಪಾಳೆಯ 'ಪೊಱಪಾಳೆಯ' ನೋ.

ಹೊಱಬಾಗಿಲು, ಹೊರಬಾಗಿಲು, ಹೊರವಾಗಿಲು (ನಾ). = ಹೊರದ್ವಾರ: ಹೊಱಬಾಗಿಲುಪ್ಪರಿಗೆಯ ಚಂದ್ರಶಾಲೆಗೆ ಪಿರಿದು ಚಿಕ್ಕೞಿಗದವರ ನೆರವಿಯೊಳರಸನ್ನೆ ತರುತಿರೆ (ಕಂನಮಿ. ೨೫-೨).**ಹೊರಬಾಗಿಲು:** ತೋಟದ ಹೊರಬಾಗಿಲವರೆಗೆ ಬಂದು ಪಂಡಿತನು ಆಕೆಯನ್ನು ಕಳಿಸಿಕೊಟ್ಟ (ಚಿದೇವ. ೧೪೯); ಗುರುರಾಜರಾಯರು ಹೊರಬಾಗಿಲಲ್ಲಿ ಸದ್ದಾದುದು ತಿಳಿದು ಕತ್ತತ್ತಿ ನೋಡಿದರು (ಮರಳಿ. ೯). **ಹೊರವಾಗಿಲು:** ಹೊರವಾಗಿಲ ಕಾವಲ ಪಡೆಯ ನಾಯಕನಿಗೆ ಹೇಳು (ಸವಿ. ೨೧).

[ಹೊಱ (< ಪೊಱಗು) + ಬಾಗಿಲು (< ಬಾಗಿಲ್)]

ಹೊಱಬಾಡಗೆ(?). (?). (?): ಅಕ್ಕಿಯ ಹೊಱಬಾಡಗೆ ಉತ್ತರಿಸಿದನಂ (ಚೌಂಶಾ. ೧೯೪೦, ಕುಮಟ. ೧೧೩-೩೦; 1475). [?]

ಹೊಱಬಾಹೆ (ನಾ). ಹೊರಗಡೆ; ಹೊರಭಾಗ: ಪುರದ ಹೊಱಬಾಹೆಯಲಿ ತಾವೈವರು ಮಹಾಸನ್ನಾಹಚಾಪಸ್ಫುರಿತತೂಣೀಬದ್ಧಕಂಪಿತಖಡ್ಗಪಾಣಿಗಳು ಗುರುಸಹಿತಲಿವರಿದ್ದರು (ಚಿಪ್ರಾಆ. ೭-೭೫); ಪುರದ ಹೊಱಬಾಹೆಯಲಿ ಶಂಖವನಿರದೆ ಮೊಳಗಿಸಿ . . . ನೃಪನನು ಕರೆದರು (ನಿಭಾಗ. ೧೦-೬೫-೨೦). [ಹೊಱ (< ಪೊಱಗು) + ಬಾಹೆ]

ಹೊಱಬಿಗ 'ಪೊಱಬಿಗ' ನೋ.

ಹೊಱಬೀಡು 'ಪೊಱವೀಡು' ನೋ.

ಹೊಱಬೀಸು (ಕ್ರಿ.). ೧. ಹೊರಗೆ ಎಸೆ; ಆಚೆಗೆ ಒಗೆ: ಮುಸುಕುವರಿಶರವೀಧಿಯನು ಖಂಡಿಸುವನೀ ರಘುನಾಥನವ ನಿಪ್ಪಸರದಲಿ ಹೂಳುವನು ಹೊಱಬೀಸು [ಪಾಠಾಂ. ಳು]ವನು ರಘುನಾಥ (ತೊರಾ. ೬-೨೦-೩೩); ಮೂಱಂಬಿನಲಿ ಹೊಱಬೀಸಿದನು ಬಹುಬಾಣ ನಿಕರವನು (ನಿಭಾಗ. ೧೦-೭೧-೩೮). ೨. ದೂರಮಾಡು; ನಿವಾರಿಸು: ಸುಜನರು ಬಹುಪರಾಕ್ರಮರಾರವರ ಹೊಱಬೀಸಿ ಕಾಬುದು ನಿನ್ನ ಮತವೆಂದ (ಕ್ರಿಯಾಕ್ರಿಯಾ. ೧-೬); ವಾಸುದೇವಾಖ್ಯರನು ತಾ ಹೊಱಬೀಸುವೆನು ಗಡ ಮರುಳೆ (ನಿಭಾಗ. ೮-೧೯-೩೬). ೩. ಹೊರಗೆ ಎಸೆಯಲಾಗು; ಬೇರೆ ಕಡೆಗೆ ಒಗೆಯಲ್ಪಡು: ಬೀಸಿದುದು ಬಱುಗಾಳಿ ರಾಮಶರಾಸನದ ಸರಳೋಟದಲಿ ಹೊಱಬೀಸೆ[ಪಾಠಾಂ. ಸೂಸಿ]ಬಿದ್ದವು ಬಿರುದಿನಸುರರ ಸಾಲುದಲೆ ನೆಲಕೆ (ತೊರಾ. ೩-೬-೧೦).

[ಹೊಱ (< ಪೊಱಗು) + ಬೀಸು$_2$]

ಹೊಱಬೀಳ್, ಹೊರಬೀಳು, ಹೊಱಬೀಳು (ಕ್ರಿ). ೧. ಹೊರಗಡೆಗೆ ಬೀಳು; ಹೊರಭಾಗಕ್ಕೆ ಕೆಡೆ: ಉಸುರ ಬಿಡೆ ಹೊಱಬೀಳ್ವನೊಳದಗದುಸುರಿನಲಿ ಮುಳುಗುವನು (ತೊರಾ. ೫-೨-೪೪). **ಹೊರಬೀಳು:** ೨. ಆಚೆಗೆ ನಡೆ; ಹೊರಗೆ ಹೊರಡು: ಇದನ್ನು ಕಟ್ಟಿಕೊಂಡು ಹೊರಬೀಳು ಇಲ್ಲಿಂದ (ಕಂಬಹಾ. ೫೪). ೩. ಹೊರಹೊಮ್ಮು; ಹೊರಸೂಸು: ಮಾತಿನ ಭರದಲ್ಲಿ ಒಮ್ಮೊಮ್ಮೆ ಅಸತ್ಯವೂ ಕೀಳುನುಡಿಗಳೂ ಹೊರಬೀಳುವವು (ಮುಂಬಯಿ. ೪-೪೯). **ಹೊಱಬೀಳು:** ೪. ಪಾರಾಗು; ತಪ್ಪಿಸಿಕೊಳ್ಳು: ಕಱುಬರಹ ಪಾಂಡವರಿಗೀಗಲೆ ಹಱುವ ನೆನೆ ಹೊಱಬಿದ್ದರಾದೊಡೆ ತಱಿದು ಬಿಸುಡದೆ ಮಾಣ್ಬರೇ (ಚಿಪ್ರಾಆ. ೮-೨೧).

[ಹೊಱ (< ಪೊಱಗು) + ಬೀಳ್$_1$ (< ಬೀಱ್$_1$)]

ಹೊಱಬೀಳು 'ಹೊಱಬೀಳ್' ನೋ.

ಹೊಱಮಟ್ಟ (ನಾ). ಒಂದು ಅಳತೆ (?): ಸರ್ವನಮಶ್ಯವಾಗಿ ಹೊಱಮಟ್ಟದ ಕೋಲಲೊಂದು ಮತ್ತರು (ಇಎ. ೧೯೪೬, ಚೈಲ್‌ಹಾನಗಲ್. ೩೪೯-೩೯; 1086). [?]

ಹೊಱಮಡಿಸು 'ಪೊಱಮಡಿಸು' ನೋ.

ಹೊಱಮಿಂಚು 'ಪೊಱಮಿಂಚು' ನೋ.

ಹೊಱಮೈ 'ಪೊಱಮೆಯ್' ನೋ.

ಹೊಱಮೊಳೆ (ನಾ). (?): ನೆರವಿ ನಗದೇನಮ್ಮನಿಹಪರವೆರಡಱಲಿ ಹೊಱಮೊಳೆಯಹುದು[ಪಾಠಾಂ. ಕೇಡಹುದು ಕಷ್ಟವು] ನಿಷ್ಕರುಣೆಯಕಟಾ ತಾಯೆ ನೀ ದಿಟ ಮನುಜೆಯಲ್ಲೆಂದ (ಸಂಭಾಪ. ೨೩-೪೨). [?]

ಹೊಱಯಿಂಕೆ 'ಪೊಱಯಿಂಕೆ' ನೋ.

ಹೊಱಯಿಕೆ 'ಪೊಱಯಿಂಕೆ' ನೋ.

ಹೊಱವಂಡಿಸು 'ಪೊಱಮಡಿಸು' ನೋ.

ಹೊಱವಂಡು 'ಪೊಱಮಡು' ನೋ.

ಹೊಱವಡಿಸು 'ಪೊಱಮಡಿಸು' ನೋ.

ಹೊಱವಡು 'ಪೊಱಮಡು' ನೋ.

ಹೊಱವಳಯ 'ಪೊಱವಲಯ' ನೋ.

ಹೊಱವಳಸು 'ಪೊಱಬಳಸು' ನೋ.

ಹೊಱವಾಱ್ 'ಪೊಱಮಾಱು$_2$' ನೋ.

ಹೊಱವಾಱು 'ಪೊಱಮಾಱು$_3$' ನೋ.

ಹೊಱವೇಲಿ (ನಾ). ಹೊರಭಾಗಕ್ಕೆ ಹಾಕಿರುವ ಬೇಲಿ; ಹೊರಗಿನ ಆವರಣಕ್ಕೆ ಹಾಕಿರುವ ಬೇಲಿ: ಒಳಕೋಂಟೆ, ಹೊಱವೇಲಿ (ಶಮದ. ೧೭೬ ಪ್ರಯೋ).

[ಹೊಱ (< ಪೊಱಗು) + ಬೇಲಿ$_1$]

ಹೊಱವೇಷ (ನಾ). ಬಾಹ್ಯಾಲಂಕಾರ; ಬಹಿರಂಗದ ಅಲಂಕಾರ: ಹೊಱವೇಷದಲ್ಲಿ ವಿಭೂತಿ ರುದ್ರಾಕ್ಷಿಯನಳವಡಿಸಿಕೊಂಡು . . . ಹೊನ್ನ ದಾನವನೀವನ ಬಾಗಿಲ ಮುಂದೆ ಮಣ್ಣ ಪುತ್ಥಳಿಯಂತಿಹರು (ಚನ್ನವ. ಕ. ೩೪೪-೭೨೧); ಟೊಪ್ಪಿಗೆಯ ಹೊಱವೇಷದಿಹಪರದ ಲೆಕ್ಕಿಗಂ ನಡೆನಡೆದು ಕರಣಸಾಲೆಗೆ ಬಂದು ಕುಳ್ಳಿರ್ದು (ಬಸರ. ೫-೬೦).

[ಹೊಱ (< ಪೊಱಗು) + ವೇಷ]

ಹೊಱವೊಳಲು 'ಪೊಱವೊಱಲ್' ನೋ.

ಹೊಱವೃತ್ತಿ (ನಾ). ಒಂದು ಬಗೆಯ ತೆರಿಗೆ, — ವೃತ್ತಿ: ಪುರದ ಸ್ಥಳದ ಹೊಱವೃತ್ತಿಯ ಹಟ್ಟಿ XXX ಳಿ ಮುದಸಮುದ್ರದ ಗ್ರಾಮವನೂ ಕೊ XXX (ಎಕ.XIV. ನಾಗಮಂ. ೧೧೪-೧೦: ಸು 1444). [ಹೊಱ (< ಪೊಱಗು) + ವೃತ್ತಿ]

ಹೊಱಶೂಲ (ನಾ). (ಊರಿನ) ಹೊರಗಿರುವ ವಧಾಸ್ಥಾನದಲ್ಲಿ ನೆಡಿಸಿರುವ ದಸಿ, — ಶೂಲ: ಹೊಳಲು ಹೊಱಶೂಲದಲಿ ರಿಪುಗಳ ಸೆಳಸುವೆನು (ಕುಮಾಭೀ. ೧-೭).

[ಹೊಱ (< ಪೊಱಗು) + ಶೂಲ]

ಹೊಱಸು 'ಪೊಱಸು' ನೋ.

ಹೊಱಸುತ್ತು, ಹೊರಸುತ್ತು (ನಾ). ಹೊರಭಾಗ; ಹೊರವಲಯ: ಇಡಿದ ತಳಪಟವರಿಗೆ ಹೊಱಸುತ್ತಡಿಸಿ ಕವಿವಾ ಬಿಲ್ಲು (ಕುಮಾದ್ರೋ. ಪರಿ. ೨೭೫); ಹೊಱಸುತ್ತು ಪ್ರಾಕಾರವ ಸುತ್ತಿ ನಾ ಬರುವೆ (ಕನಕ. ೨೨-೧). **ಹೊರಸುತ್ತು**: ಹೊರಸುತ್ತು ಕೆಂಪಾಗಿ ನಡುವು ಬೆಳ್ಳಗಾಗಿ ಹಬ್ಬುತ್ತಿರುವುದಕ್ಕೆ ಲಿಂಬೆಹಣ್ಣಿನ ರಸ ಆಗಾಗ ಹಚ್ಚುವುದು ಒಳ್ಳೆಯ ಗುಣಕಾರಿ (ಮನಮ. ೧೩೫). [ಹೊಱ (< ಪೊಱಗು) + ಸುತ್ತು]

ಹೊಱಸೂಸು 'ಪೊಱಸೂಸು' ನೋ.

ಹೊಱಸೊಪ್ಪು (ನಾ). ಮರದ ಹೊರಭಾಗದಲ್ಲಿರುವ ತೊಗಟೆ: "ತ್ಯಕ್, ವಲ್ಕಾ, ವಲ್ಕಲಂ - ಈ ೩ ಮರದ ಹೊಱಸೊಪ್ಪು" (ಶಲಾಯು. ೩೧-೨೯).

[ಹೊಱ (< ಪೊಱಗು) + ಸೊಪ್ಪು]

ಹೊಱಹಚ್ಚ 'ಪೊಱಪಚ್ಚ' ನೋ.

ಹೊಱಹಾಕು, ಹೊರಹಾಕು (ಕ್ರಿ). ಹೊರಕ್ಕೆತಳ್ಳು; ಹೊರಗೆದೂಡು: ಬೆರಸುವಡೆ ಬೇಗತೋಱ ಹೊಱಹಾಕದಿರಯ್ಯ (ಮಹಾದೇ.ಬ.೩.೨-೭೦); ಒಳ್ಳಿದನಾದೊಡೊಳಕೊಳ್ಳಬೇಕು ದುರ್ಜನನಾದೊಡೆ ಓವದೇ ಹೊಱಹಾಕಬೇಕು (ಸಮ್ಮೇ. ೧೧-೫೧). **ಹೊರಹಾಕು**: ಅವನ ಸಹೋದ್ಯೋಗಿಗಳು ಹೇಡಿಯೆಂದು ಭಂಗಿಸಿ, ಅವನನ್ನು ಸೈನ್ಯದಿಂದ ಹೊರಹಾಕುತ್ತಿದ್ದರೆಂದೂ ವಾದಿಸಿದನು (ಪುನರು. ೩೪೪).

[ಹೊಱ (< ಪೊಱಗು) + ಹಾಕು (< ಪಾಯ್ಮು)]

ಹೊಱಹುಯ್ಯಲ್ (ನಾ). ಹೊರಗಿನ ಆವರಣದಲ್ಲಿ ನಡೆಸುವ ಸೂರೆ, — ಲೂಟಿ: ಧರಣೇಧರಂ ದ್ರುಹಿಣನಷ್ಟದಿಕ್ಪಾಲಕರ್ ಭರದಿಂದ ಬಂದು ಹೊಱಹುಯ್ಯಲಂತಾಗೆ (ಲಶಿಂ. ೧೭-೧೪). [ಹೊಱ (< ಪೊಱಗು) + ಹುಯ್ಯಲ್ (< ಪೊಯಲ್)]

ಹೊಱಹೊಮ್ಮಿಸು, ಹೊರಹೊಮ್ಮಿಸು (ಕ್ರಿ). ಹೊರಸೂಸುವಂತೆ ಮಾಡು; ಹೊರಕ್ಕೆ ಬರುವಂತೆ ಮಾಡು: ಸುಖಮುಖವ ಹೊಱಹೊಮ್ಮಿಸುತ ನೆಱೆ ಬಾಲಲೀಲೆಯ ಸೊಮ್ಮು ಸೂಱೆಯ ಕೊಡುತಲಿರ್ದಳು ಮಾಯೆ ಮಹಿಯೊಳಗೆ (ಪ್ರಭುಲೀ. ೩-೩೦). **ಹೊರಹೊಮ್ಮಿಸು**: ಯಾರ ರಾಗದ ಕುಲಿಮೆಯೆನ್ನ ಹೊರ ಹೊಮ್ಮಿಸಿತೊ, ಅದು ಆರಿ ತಣ್ಣಗಿಹುದು? (ನಲಮು. ೧೬-೧೯).

[ಹೊಱಹೊಮ್ಮು (< ಪೊಱಪೊಣ್ಮು) + -ಇಸು]

ಹೊಱಹೊಮ್ಮು 'ಪೊಱಪೊಣ್ಮು' ನೋ.

ಹೊಱಹೊಱಿಡಿಸು, ಹೊರಹೊರಡಿಸು (ಕ್ರಿ). ೧. ಹೊರಗೆ ಬರುವಂತೆ ಮಾಡು; ಆಚೆಗೆ ಬರಿಸು: ನಿನ್ನ ಬಿಸಿಬಿಸಿಖಂಡವ ಹೊಱಹೊಱಿಡಿಸಿ ಹಸಿಯ ನೆತ್ತರು ಬಸಿದು ಹೋಗುವಾಗ ಕುಸುಮನಾಭನ ನಾಮ ನೆನೆಗೊಡದೆಲೆ ಮನ (ಪುರಂದ. ೧-೧೪೨-೪). **ಹೊರಹೊರಡಿಸು**: ೨. ಹೊರಗೆ ಕಳುಹಿಸು; ಆಚೆಗೆ ಕಳುಹಿಸು: ಅವರನು ಬಂಧನದಿ ಹೊರಹೊರಡಿಸಲು (ಬಿಜ್ಞಪ್ತಿ. ೧೮೪-೭೭).

[ಹೊಱ (< ಪೊಱಗು) + ಹೊಱಡಿಸು (< ಪೊಱಮಡಿಸು)]

ಹೊಱಹೊಱಿಡು, ಹೊರಹೊರಡು (ಕ್ರಿ). ಹೊರಗೆ ನಡೆ; ಹೊರಬೀಳು: ಪುರದ ಲಗ್ಗೆಗೆ ನೂಂದ ಬಲವೆಂದು ಹೊಱಹೊಱಟರದೆ ನೀವೆಮ್ಮ ಮೇಲುಱುಬೆ ನೆಱೆ ತಲೆ ಪಱಿದೊಡಟ್ಟೆಯಲಿ ಕಾದುವ ಕಲಿತುರುಕರೆಂದುಱೆ ಗರ್ಬಿಸಿದರು (ಕಂನವ. ೧೫-೭೭). **ಹೊರಹೊರಡು**: ಹೀಗೆ ಮುಚ್ಚದಿದ್ದರೆ ಕೆಲವು ವಿಟಮಿನ್ನುಗಳು ಹಬೆಯೊಡನೆ ಹೊರಹೊರಟು ನಷ್ಟವಾಗುವುವು (ಗೃಹವಿ. ೫೧).

[ಹೊಱ (< ಪೊಱಗು) + ಹೊಱಡು, (< ಪೊಱಮಡು)]

ಹೊಱಿಗೆ$_1$ 'ಪೊಱಿಗೆ' ನೋ.

ಹೊಱಿಗೆ$_2$ (ನಾ). ಸಂಬಂಧ; ಸಂಪರ್ಕ: ನಂಟು: ಮಱೆಯ ಮಾತೇಕಿನ್ನು ದೈತ್ಯರ ಹೊಱಿಗೆಯನು ನೀ ವಾಱೆದೆ ನಿನ್ನವರಱಿಯೆಲಾ ಜಯವಿಜಯರೆಂಬವರು (ಕಾಶಿರಾ. ೮೩-೫೧). ℙ ಪ್ರಾಸಸ್ಥಾನದಲ್ಲಿ 'ಱ' ಬಂದಿರುವುದರಿಂದ ಈ ಶಬ್ದವನ್ನು 'ರ' ರೂಪಕ್ಕೆ ತಿದ್ದಿಕೊಂಡಿರುವುದಿಲ್ಲ. [< ಪೊರ್ಕೆ]

ಹೊಱಿಗೆಕಾಱ (ನಾ). ಹೊಣೆಯನ್ನು ಹೊರುವವನು; ಜವಾಬ್ದಾರಿಯನ್ನು ವಹಿಸಿಕೊಳ್ಳುವವನು: ಬಱಿಯ ನುಡಿಯೇಕಕಟ ನಿಮ್ಮಯ ಹೊಱಿಗೆಕಾಱ [ಪಾಕಾಂ. ವಾಳ]ನು ಕೃಷ್ಣನು (ಕುವ್ಯಾಳ. ೧೬-೧೪).

[ಹೊಱಿಗೆ (< ಪೊಱಿಗೆ) + - ಕಾಱ]

ಹೊಱಿಗೆವಾಳ, ಹೊರಿಗೆವಾಳ (ನಾ). ೧. ಭಾರವನ್ನು ಹೊರುವವನು; ಹೊರೆಯನ್ನು ಹೊತ್ತುಕೊಳ್ಳುವವನು: ಎಂತು ಹೊತ್ತುದೂ ಧರಣಿ ದಿಗ್ಗಜವೆಂತು ತಾಳ್ವವೊ ಭಾರಕರಲಿ ಮಹಾಂತನ್ಯೆ ಭುಜಗೇಂದ್ರ ಕೂರ್ಮನು ಹೊಱಿಗೆವಾಳನಲೆ (ತೊರರಾ. ೪-೭-೨೬). ೨.= ಹೊಱಿಗೆಕಾಱ: ಆತನಲ್ಲದೆ ಕಾರ್ಯದ ಹೊಱಿಗೆವಾಳರೆಲ್ಲರೂ . . . ಧರ್ಮಸಚಿವರೆನಿಸುಗುಂ (ನಾಚರಾ. ೧೫೧); ಮಱೆ ಮಱೆಯಲಿಱಿಗಾಱ ನಸುರರ ಮುಱಿದನೆಂಬರು ಕುಹಕತಂತ್ರದ ಹೊಱಿಗೆವಾಳನ ಸಂಗದಲಿ ನೀವ್ ಕೆಟ್ಟಿರಕಟ (ಕುವ್ಯಾದ್ರೋ. ೧೪-೧೬); ಕಪಿಕದಂಬದ ಹೊಱಿಗೆವಾಳನು ಸಿಕ್ಕಿದನು (ತೊರರಾ. ೬-೩೬-೧೪); ಕಪಟದ ಹೊಱಿಗೆವಾಳನ ಮಾತಿನಲಿ ದಿಟ ಸಾರವೇನುಂಟು (ನಭಾಗ. ೧೦-೪೩-೨೯). **ಹೊರಿಗೆವಾಳ**: ೨. ನರನ ಕೂಡಣ ಹಾಡಿ ಹರಿಯದ ಹೊರಿಗೆವಾಳರು ಧರ್ಮನಂದನ ಮರುತಸುತ ಮಾದ್ರೀಕುಮಾರರು (ಕೋಗಯ. ೧೭-೨೪); ಹೊರಿಗೆವಾಳನು ಕೃಷ್ಣನಿರಲು ಮರೆಹೊಕ್ಕವರಿಗುಂಟೆ ದೋಷ ದಾರಿದ್ರ್ಯ ಮೃತ್ಯುಗಳು (ತುರಂಗ. ೩೩-೯).

[ಹೊಱಿಗೆ$_1$ (< ಪೊಱಿಗೆ) + - ವಾಳ (< - ವಳ)]

ಹೊಱಿಸು 'ಪೊಱಿಸು' ನೋ.

ಹೊಱು 'ಪೊಱು' ನೋ.

ಹೊಱುಗಡೆ (ನಾ). ಒಂದು ಬಗೆಯ ತೆರಿಗೆ: ಆ ಖಂಡಿಕದ ವೃತ್ತಿಗೆ ತೆಱುಗಡೆ ಹೊಱುಗಡೆ ನಿಮಿತ್ತವಾಗಿ ಆ ಮಹಾಜನಂಗಳು ಕೊಟ್ಟ, ನಾಗಣ್ಣಂಗ ಗದ್ದೆ (ಎಕ. XII, ಚಿಕ್ಕನಾ. ೨-೨೦; 1261). 'ತೆಱುಗಡೆ' ಪರಾ. [?]

ಹೊಱೆ 'ಪೊಱೆ' ನೋ.

ಹೊಱೆಕಾಱ 'ಪೊಱೆಕಾಱ' ನೋ.

ಹೊಱೆಗಟ್ಟು 'ಪೊಱೆಗಟ್ಟು' ನೋ.

ಹೊಱೆಗಾಱ 'ಪೊಱೆಕಾಱ' ನೋ.

ಹೊಱೆತಲೆ 'ಹೊಱೆದಲೆ' ನೋ.

ಹೊಱೆದಲೆ, ಹೊಱೆತಲೆ (ನಾ). ೧. ಅಧಿಕವಾದ ಕೂದಲಿರುವ ತಲೆ: ಅರದಲೆಯು ಮೂಡಲೊಳು ಹೊಱೆದಲೆಯು ಬಡಗಲೊಳು ಸರಿದಲೆಯುದ್ದ ಪಡುವಲೊಳು ತೆಂಕಲಲಿ ಬಱೆದಲೆಯಲಿಹರು (ಸರ್ವಜ್ಞ. ೧೬೧೬). **ಹೊಱೆತಲೆ**: ೨. ಭಾರವನ್ನು ಹೊತ್ತಿರುವ ತಲೆ: ವಿಪತ್ತಿನೊಳೊಡೆಯನಿರೆ ಕೈದುಗಳ ಹೊಱೆತಲೆಯೊಡನೆ ಬಿಟ್ಟಿಯ ಭಂಡರಾನೆಂದುದು ಭಟವ್ರಾತ (ಕುಮಾಕ. ೧೩-೫).

[ಹೊಱೆ (< ಪೊಱೆ) + ತಲೆ]

ಹೊಱೆಯಾಳು 'ಪೊಱೆಯಾಳ್' ನೋ.

ಹೋ 'ಅಹೋ' ನೋ.

ಹೋಕ 'ಪೋಕ' ನೋ.

ಹೋಕಾಯಂತ್ರ (ನಾ). ೧. (ನಾವಿಕರು ಸಮುದ್ರದಲ್ಲಿ) ಹಡಗನ್ನು ನಡೆಸುವಾಗ ಮಾರ್ಗ ಅಥವಾ ದಿಕ್ಕನ್ನು ತಿಳಿಯಲು ಉಪಯೋಗಿಸುವ ಒಂದು ಬಗೆಯ ಯಂತ್ರ, — ಉಪಕರಣ; ದಿಕ್ಸೂಚಿ: ಸಮುದ್ರದಲ್ಲಿ ಹಡಗುಗಳನ್ನು ನಡಿಸುವದಕ್ಕೋಸ್ಕರ ಒಂದು ದಿಕ್ಕು ತೋರಿಸುವ ಯಂತ್ರವನ್ನು ಮಾಡಿಕೊಳ್ಳುತ್ತಾರೆ. ಅದೇ ಹೋಕಾಯಂತ್ರವು (ಮುಂಬಯಿ. ೫-೩೩೦); ಹೋಕಾಯಂತ್ರವು ೧೨೬೦ರಲ್ಲಿ ಉಪಯೋಗದಲ್ಲಿ ಬಂದುದರಿಂದ ಜನರಿಗೆ ಸಮುದ್ರಗಳಲ್ಲಿ ದಿಕ್ಕುಗಳನ್ನು ತಿಳಿಕೊಳ್ಳಲು ಮಾರ್ಗವಾಗಿ ದೂರದೂರದೇಶಗಳಿಗೆ ಪ್ರವಾಸ ಮಾಡಲಿಕ್ಕೂ

ಸುಲಭವಾಯಿತು (ಇಂಗ್ಲಾ. ೫). ೨. (ಆಲಂ) ಮಾರ್ಗದರ್ಶಿ: ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವನ್ನು ಹೇಗಾದರೂ ಕಾಪಾಡಿ ಕೆಟ್ಟಕಣ್ಣು ತಪ್ಪಿಸಿ ಒಯ್ಯುವಂತೆ, ನಾವು ಬುದ್ಧಿಯ ಈ ಪುಟ್ಟ ಸೂಜಿಗಲ್ಲನ್ನು – ಹೋಕಾಯಂತ್ರವನ್ನು – ಭದ್ರವಾಗಿ ಉತ್ತಮವಾಗಿ ಇಟ್ಟುಕೊಂಡು ಸಾಗಬೇಕಾಗಿದೆ (ವಿಚಾವಾ. ೬೮). [<– ಮರಾ. ಹೋಕಾಯಂತ್ರ]

ಹೋಕು (ನಾ). ೧. ಹೋಗುವುದು; ನಿರ್ಗಮನ; ಹೋಗುವಿಕೆ: ನಿಮ್ಮ ನಟ್ಟುಮಟ್ಟಿನ ಶರಣರನಗಲುವ ಅಗಲಿಕೆ ಎನ್ನ ಪ್ರಾಣದ ಹೋಕು ನೋಡಯ್ಯಾ (ಚನ್ನವ.ಕ. ೬೧೪-೧೩೭೮). ೨. ತೆರಳುವಿಕೆ; ಚಾಲನೆ: ಗುರು ಬಸವೇಶ ನಿಮ್ಮನಘಮಾಂಗಲ್ಯ ನಾಮಾಂಕಿತಾತ್ಮಜನ ಪೊಳೆ ಹೋಕಡಂಗಿ ನುಂಗುತ್ತಲಿದೆ . . . ಪಾಲಿಸುವುದೆನ್ನ ಕುವರನ (ಕೊಟ್ಟೂರು. ೧೨-೨೨); ಅದಕಿದಕೆ ಜೋತು ಸಂಶಯವ ಸೋತು ತಿಳಿಯಿತೋ ಕಣ್ಣ ಹೋಕು (ಪಲಾನ. ೯೨-೧೫). ೩. ನಿವಾರಣೆ; ನೀಗುವಿಕೆ: "ಕಿತ - ನಿವಾಸೇ, ರೋಗಾಪನಯೇ ಚ, ಮನೆಯೊಳ್, ಬೇನೆಯ ಹೋಕಿನೊಳಂ" (ಕಾಶಕೃ. ೮೦); ನೋಕರ್ಮ ಗಾಣವಂತಾ ದ್ರವ್ಯಕರ್ಮವಾಲೋಕಿಸೆ ಹಿಂಡಿಯಂತಿಹುವು ಹೋಕಿನ ಭಾವಕರ್ಮಗಳೆಣ್ಣೆಯಂತೊಳಗಾಕಾಶದಂತಾತ್ಮನಿಹನು (ಭರಚ. ೬೭-೧೧೨). ೪. ಇಲ್ಲವಾಗುವುದು; ಶೂನ್ಯ: ಆ ಠಾವಿನಲ್ಲಿಯೊಗೆದಾ ಗಣನೆಗಳ ಸುಖದುಃಖ ದನುಭವವದೇ ಹೋಕು (ವೀಶೃಪು. ೫-೫-೨೩). 'ಪೋಗ್ರು$_2$' ಪರಾ. [< ಪೋ$_1$]

ಹೋಕುಳಿ 'ಪೋರ್ಕುಳಿ' ನೋ.

ಹೋಕುಳಿಸು (ಕ್ರಿ). ಕಾದಾಡು; ಹೋರಾಡು: ಕುಲಿಶದೇಹಿಗಳು ನೀವಿಬ್ಬರಿನ್ನಂಕದ ತಳದಲ್ಲಿ ಕಾಲಿಕ್ಕುವಾಗ ಬಳಿಗಾಱವಸರದೊಳರಡಾನೆ ಹೊಕ್ಕು ಹೋಕುಳಿಸಿದಂತಹುದು (ಭರಚ. ೫೧-೧೧). [ಹೋಕುಳಿ (< ಪೋರ್ಕುಳಿ) + - ಇಸು$_3$]

ಹೋಕೆ (ನಾ). ೧. ಹೋಗುವುದು; ಹೋಗುವಿಕೆ: (ಕ). ೨. ದಾರಿ; ಮಾರ್ಗ: ಹೋದ ದಾರಿಯ ಹೋಕೆ! (ಹಚ್ಚರ. ೧೭-೪೨). ೩. ಯುಕ್ತಿ; ತಂತ್ರ; ಕಪಟ: ಲೋಕ ಡಾಂಭಿಕನಾಗಿ ಇಲ್ಲದ ಹೋಕೆಗಳನೇ ಕಲಿತು . . . ಶೋಕ ಮೋಹಂಗಳಲಿ ಬಳಲಿ (ಗಗತಾ. ೧೮-೩೪); ಈಕೆ ಅಷ್ಟೊಂದು ಹೋಕೆಯನ್ನು ಅರಿತ ಪ್ರಾಣಯಲ್ಲ (ಮಾಮರಾ. ೭೮); ಇವನ ವಿನಯ . . . ಹೋಕೆ ಇಲ್ಲದೆ ಧಾರಾಳವಾದ ಮನಸ್ಸುಳ್ಳ ಹನುಮಂತರಾಯನ ಮನಸ್ಸನ್ನು ಜೈಸಿತು (ಮುಸುಗ. ೭೪). 'ಪೋಗ್ರು$_2$' ಪರಾ.

[ದೇ. ॥ ತಮಿ. ಪೋಕ್ಕೆ; ತೆಲು. ಪೋಕ]

ಹೋಕೆತನ (ನಾ). ಠಕ್ಕು; ಕಪಟತನ: ಗೋಕುಲದೊಳು ಪುಟ್ಟಿ ಆಕಾರವಡಗಿಸಿ, ಹೋಕೆತನದಲ್ಲಿ ಹಾಕ್ಕಾಡುತ ಗೊಲ್ಲರ ಕೂಡಲಿ ಬೆಳದು (ಮೋಕ್ಷದೀ. ೨೧-೨).

[ಹೋಕೆ + - ತನ]

ಹೋಗಾಡಿಸು (ಕ್ರಿ). ೧. ಕಳೆದುಕೊಳ್ಳು; ನಷ್ಟಹೊಂದು: ಉಭಯತರು ಹೆಂಡರ ಹೋಗಾಡಿಸಿಕೊಂಡು ರಾಜ್ಯ ಐಶ್ವರ್ಯ ಕಳಕೊಂಡು (ತಾಶ್ರನಿ. ೩೧-೨೩); ಮಕ್ಕಳ್ಕೆ ಹೋದ, ಮದೀನಕ್ಕೆ ಹೋದ, ಇದ್ದ ಮಕ್ಕಳನ್ನು ಹೋಗಾಡಿಸಿ ಬಂದ (ಗಾದೆ). ೨. ಇಲ್ಲವಾಗಿಸು; ನಾಶಗೊಳಿಸು: ಧುರದಿ ತಾ ಮೈದೆಗದು ಹಗೆಗಳ ಶಿರವ ಹೋಗಾಡಿಸುವ ನೀತಿಯನೊರೆದು ನಮ್ಮನು ಕರೆಯ ಬಂದಿಹನಣ್ಣ ಕೇಳೆಂದ (ಕೃಷ್ಣಾಕಾ. ೧೬-೫೪). [ಹೋಗಾಡು (< ಪೋಗಾಡು) + - ಇಸು$_3$]

ಹೋಗಾಡು 'ಪೋಗಾಡು' ನೋ.

ಹೋಗಿಪ್ಪಣ (ನಾ). ಒಂದು ಬಗೆಯ ತೆರಿಗೆ (?): ಹೋಗಿಪ್ಪಣ ಹೊಬಳಿ ಹೊದಕೆ ಕಾಣಿಕೆ ಪೊಸಗೆ ಉತ್ಸಾಹವಟ್ಟು . . . ತೆತ್ತು ಪರಿಹರಿಸಿ ಕೊಟ್ಟು . . . ಯಾ ಧರ್ಮವ ನಡೆಸಿಕೊಡುವರು (ಎಕ. III, ತಿರುಮ. ೨೬-೪೬; 1290). 'ಪೊಗೆವಣ' ಪರಾ.

[?]

ಹೋಗಿಸು 'ಪೋಗಿಸು' ನೋ.

ಹೋಗ್ರು$_1$ 'ಪೋ$_1$' ನೋ.

ಹೋಗ್ರು$_2$ 'ಪೋಗ್ರು$_2$' ನೋ.

ಹೋಗ್ರು$_3$ 'ಪೋ$_2$' ನೋ.

ಹೋಗ್ರು$_4$ (ನಾ). ಒಂದೇ ಜಗಲಿಯಲ್ಲಿ ಮೂರು ಅಥವಾ ನಾಲ್ಕು ಒಲೆಗಳಿದ್ದು ಮಧ್ಯದ ಒಲೆಯ ಮೂಲಕ ಉಳಿದ ಒಲೆಗಳಿಗೆ ಉರಿ ಹೋಗುವಂತೆ ಮಾಡಿರುವ ಒಲೆ: ಕೋಣೆಯಲ್ಲಿ ಹೋಗಿನ ಮೇಲೆ ಎರಡು ಚಟ್ಟಿಗಳಿದ್ದವು (ಚಿಂಗಾಳ್ವ. ೧೬). [?]

ಹೋಗುಎಳೆ (ನಾ). ನೇಯ್ಗೆಯಲ್ಲಿ ಅಡ್ಡಡ್ಡವಾಗಿ ಬರುವ ನೂಲು: ಈ ನೆಯ್ಗೆಯ ಬಟ್ಟೆಗಳಲ್ಲಿ . . . ಹೋಗುಎಳೆಗಳು ೩ ಅಥವಾ ೪ ಹಾಸುಎಳೆಗಳ ಕೆಳಗಾಗಲೀ ಮೇಲಾಗಲೀ ತೂರಿ ಹೋಗುತ್ತವೆ (ಗೃಹವಿ. ೭೪).

[ಹೋಗ್ರು$_1$ (< ಪೋ$_1$) + ಎಳೆ$_2$ (< ಎಟ್ಟೆ$_2$)]

ಹೋಗುಳು 'ಹೊಯ್ಗುಳ್' ನೋ.

ಹೋಗೊಳಿಸು 'ಪೋಗೊಳಿಸು' ನೋ.

ಹೋಟಲು, ಹೊಟೇಲು, ಹೋಟೆಲು, ಹೋಟ್ಲು (ನಾ). (ಪ್ರಯಾಣಿಕರು ಮುಂತಾದವರಿಂದ) ಹಣ ಪಡೆದು ಊಟ, ತಿಂಡಿ, ವಸತಿಗಳನ್ನು ಒದಗಿಸುವ ಸ್ಥಳ; ಭೋಜನಗೃಹ; ಉಪಹಾರಮಂದಿರ: ಹೋಟಲು ಬಾಗಿಲು ಹಾಕಿ ಮನೆಯ ಕಡೆ ಹೊರಟರು (ಮುಂಗಾಮು. ೨); ಆ ಊರಿಗಾ ಕಾಲಕಂಚೆಯ ಮನೆ ಬಂತು . . . ಹೋಟಲು ಸಹ ಬಂತು ಕೊನೆಗೆ (ಇಂಚಾಪ. ೭-೨೪). **ಹೊಟೇಲು**: ತನ್ನ ಹೊಟೇಲಿನಿಂದಾಗಿ ಅಣ್ಣನ ಹೊಟೇಲಿಗೆ ನುಸಿಗಳು ಸಹ ಹೋಗುವುದಿಲ್ಲವೆಂದೂ ಅವನು ಬಡಾಯಿ ಕೊಚ್ಚುತ್ತಿದ್ದನು (ಮರಮ. ೩೩೩). **ಹೋಟೆಲು**: ಮುಂಬಯಿಯಲ್ಲಿ ತೀರ ಅಗ್ಗಕ್ಕೆ ಹೊಟ್ಟೆ ತುಂಬಿಸುವಂಥ ನೂರಾರು ಹೋಟೆಲುಗಳಿವೆ (ಒಬದ. ೧). **ಹೋಟ್ಲು**: ಹೊಸದಾಗಿ ಆರಂಭವಾಗಿರುವ ಈ ಹೋಟ್ಲಿನಲ್ಲಿ ತಿಂಡಿಗಳು ರುಚಿಯಾಗಿವೆ (ರೂಢಿ).

[<– ಇಂ. Hotel]

ಹೋಟಾರ, ಹೊಟಾರ (ನಾ). "ಗಿಡದ ಹೊದರು" (ಮೋಳಿಮಾ. ಕೋಶ): ಘಟವೆಂಬ ಹೋಟಾರ ಜೀವನವೆಂಬ ವೇತಾಳ ಅಜೀವೆಂಬ ಶಿಶು ಅದಜೀಂದುದಿಸಿದ ದಿವ್ಯಜ್ಞಾನ ಕುಜುಹುಗೊಂಡು ತ್ರಿವಿಧ ಕುಜುಹುಗೆಟ್ಟಿತ್ತು (ಮೋಳಿಮಾ. ೧೮೬-೭೦೦); ಹೋಟಾರದಲ್ಲಿ ಒಂದು ವೇತಾಳ ಹುಟ್ಟಿತ್ತು (ಮೋಳಿಮಾ. ೨೦೩-೨೫೬). **ಹೊಟಾರ**: ಹುಟ್ಟಿ ಹೊಟಾರದಲ್ಲಿ ಒಂದಾವೆ ಕೋಟಿಮಜೀಯನಿಕ್ಕಿತ್ತು (ಸಕವ.ಕ. II, ೬೨೬-೧೭೭೩).

[< ಪೊಟ್ಟರೆ?]

ಹೋಟಿ 'ಪೋಟಿ$_1$' ನೋ.

ಹೋಟಿಗ (ನಾ). ಪೈಪೋಟಿಗೆ ನಿಂತವನು; ಸ್ಪರ್ಧಿಸುವವನು: ಓಪೂ! ಹೋಟಿಗರಿತ್ತಲಿರ್ಪರೆ! ಬವರಿಗರ ಬಲ್ಪುಳ್ಳರ್ ನಿಮಗಮಿಾಗಡೆಯೆಡೆಯಾಯ್ತೇ (ರಾಮಾಶ್ವ. ೧೪೫-೧೦). [ಹೋಟಿ (< ಪೋಟಿ$_1$) + - ಗ$_2$]

ಹೋಟೆ$_1$ 'ಪೋಟೆ$_1$' ನೋ.

ಹೋಟೆ$_2$ (ನಾ). ಹೆಣ್ಣು ಮತ್ತು ಗಂಡು ಇಬ್ಬರ ಲಕ್ಷಣಗಳನ್ನೂ ಹೊಂದಿರುವ ವ್ಯಕ್ತಿ; ಉಭಯಲಿಂಗಿ: ನೋಟಬೇಟಗಳಿಂದ ಹೋಟೆ ಸಂಗವು ಲೇಸು (ಸರ್ವಜ್ಞ. ೧೮೦೯).

ಹೋಟೆಹೋಗು = ಉಭಯಲಿಂಗಿಯೊಂದಿಗೆ ಸಂಬಂಧವನ್ನು ಬೆಳೆಸು: ಗೋಟುಹೋಹುದಜೀಂದ ಹೋಟೆಹೋಹುದು ಲೇಸು (ಸರ್ವಜ್ಞ. ೧೮೧೧).

[< ಸಂ. ಪೋಟಾ]

ಹೋಟೆಲು 'ಹೋಟಲು' ನೋ.

ಹೋಟ್ಲು 'ಹೋಟಲು' ನೋ.

ಹೋಡ (ನಾ). ನಾವೆ; ದೋಣಿ: ಬಾಲ, ಹೋಡ, ಪಾಕ, ವತ್ಸ, ಮಂದಾ ಇತ್ಯಾದಿಗಳು ಅಜಾದಿಗಳು (ಹೊನಗ. ೧೦೯). [ಸಂ.]

ಹೋಡು (ನಾ). ಈಡು; ಜೋಡು; ಸಮಾನ: "ಹೋಡುಃ = ಹೋಲು" (ಕಾಶಕೃ. ೧೦೨); ಹೋಡಿನವ ನಾನಲ್ಲ ಪಡಿಹೊತ್ತಿನ ತೊತ್ತಿನ ದಾಸ (ವಿಸ್ತೋಸು. ೬೨-೩); ಉರಗನಿಕರಾ ವಾಸುಕೀಗೆ ಹೋಡೆ (ಶ್ರೀಕೃಪಾ. ೧೦೧). [< ಪೋಟ$_1$]

ಹೋತ್ರ$_1$ 'ಪೋಲ್$_1$' ಪರಾ.

ಹೋತ್ರ$_2$ 'ಪೋಂತು' ನೋ.

ಹೋತ್ರ$_3$ (ನಾ). ಹೋಮಕಾಲದಲ್ಲಿ (ದೇವತೆಗಳನ್ನು ಆಹ್ವಾನಿಸಲು) ಋಗ್ವೇದವನ್ನು ಪಠಿಸುವ ಯಜ್ಞಪುರೋಹಿತ; ಹೋತೃ: "ಅಧ್ವರ್ಯುಃ, ಉದ್ಗಾತಾ, ಹೋತಾ . . . ಋಗ್ವೇದಪ್ರಯೋಗಜ್ಞನೆ ಹೋತೃ" (ಸಿದ್ಧಾಂತಿ. ೨೧೭);

ಯಾಗದಲ್ಲಿ ನಾಲ್ಕು ಋತ್ವಿಕ್ಕುಗಳು ಮುಖ್ಯವಾಗಿರಬೇಕು. ಹೋತನೆಂಬವನು ಋಗ್ವೇದವನ್ನು ಹೇಳುತ್ತಾನೆ (ಒಂಬಸಾ. ೧೫೭). [< ಸಂ. ಹೋತೃ]

ಹೋತಕರಿ (ನಾ). ಪ್ರಗತಿಪರನಾದವನು; ಏಳಿಗೆಯಾಗುವವನು: ಆ ಮಗಾ ಏನು ಹೋತಕರೀ ಅಂತ ಅವಗ ಕೊಡಬೇಕಂತಾರ ನಿಮ್ಮ ತಂಗಿನ್ನ? (ಸಮಜೀ. ೨೪೭).

[<— ಮರಾ. ಹೋತಕರ್]

ಹೋತವ್ಯ (ನಾ). ಯಜ್ಞಕಾಲದಲ್ಲಿ ಅರ್ಪಿಸುವ ಹವಿಸ್ಸು; ಹೋಮದಲ್ಲಿ ಅರ್ಪಿಸುವ ತುಪ್ಪ ಮೊದಲಾದ ವಸ್ತು: ಹೋತವ್ಯನುಮಗ್ನಿಯುಮಾ ಹೋತೃವು ಮುದ್ದೇಶ್ಯನಾಗಿಯುಂ ನೀನೆ ಪರಂಜ್ಯೋತಿ (ವಂಕಮ. ೯-೧೫೫). [ಸಂ.]

ಹೋತಾರ (ನಾ). = ಹೋತೃ: ದಾತಾರಂ, ದಾತೃ, ಹೋತಾರಂ. ಹೋತೃ (ಭಾಷಾಭೂ. ೧೦೩); ಆರಾದೇಶಕ್ಕೆ - ಸವಿತಾರ . . . ಹೋತಾರ, ದುಹಿತಾರ (ಶಮದ. ೮೪ ಪ್ರಯೋ); ಋಷಿಗಳ್ ಅಧ್ವರ್ಯೂದ್ಗಾತೃ ಹೋತಾರರುಂ ಋತ್ವಿಜರುಂ ಸಾಮಾಜಿಕರುಮಾಗೆಸೆದರ್ (ರಾಮಾಶ್ವ. ೪೬-೨೬). [ಸಂ. ಹೋತೃ]

ಹೋತು$_1$ 'ಪೋಲ್$_1$' ಪರಾ.

ಹೋತು$_2$ 'ಪೋಂತು' ನೋ.

ಹೋತುದಜ್ಜಿಹಿ (ನಾ). (ಹೋತವನ್ನು ಕತ್ತರಿಸುವಂತೆ) ತುಂಡುತುಂಡಾಗಿ ತರಿಯುವವನು: ಹೊಳ್ಳುವಾತಿನ ಹೋತುದಜ್ಜಿಹಿ[ವಾಕಾಂ. ಹೇತುದರುಹಿ]ಗಳಿವರು ಪಾಧ್ಯರು ನಾವು ಸೂಳೆಯರು (ಕುವ್ಯಾಕ. ೨೨-೨೫).

[ಹೋತು$_2$ (< ಪೋಂತು) + ತಜ್ಜಿಹ + - ಇ$_3$]

ಹೋತೃ (ನಾ). ೧. ಹೋಮದ್ರವ್ಯವನ್ನು ಅರ್ಪಿಸುವವನು; ಹವಿಸ್ಸನ್ನು ನೀಡುವವನು. ೨. ಹೋಮಕಾಲದಲ್ಲಿ (ದೇವತೆಗಳನ್ನು ಆಹ್ವಾನಿಸಲು) ಋಗ್ವೇದವನ್ನು ಪಠಿಸುವ ಯಜ್ಞಪುರೋಹಿತ; ಋತ್ವಿಕ್ಕುಗಳಲ್ಲಿ ಒಬ್ಬ: ಹೋತೃ ಜಮದಗ್ನ್ಯಾದಿಗಳಪ್ಪ ಷೋಡಶರ್ತ್ವಿಜರ್ಕಳಿಂ ಬೇಳಲ್ಕೇಟ್ಟು ಧರ್ಮಪುತ್ರಂ ಸಪತ್ನಿಯಜಮಾನನಾಗಿರ್ದಾಗಳ್ (ಪಂಪಭಾ. ೬-೩೩ ವ); ಹೋತೃವೆ ನಾನಧ್ವರಿಯಯ್ ಭ್ರಾತೃವೆ ನೀನು (ಕಾವ್ಯಾವ. ೧೭೭); ಕರೆಸಿದರು ಋತ್ವಿಕ್ಕುಗಳನಧ್ವರಿಯನಾದನು ಯಾಜ್ಞವಲ್ಕ್ಯನು ವರಸುಮಿತ್ರಾಂಗಿರಸರುಗಳುದ್ಗಾತೃಹೋತೃಗಳು (ಕುವ್ಯಾಸ. ೭-೨೩). [ಸಂ.]

ಹೋತ್ರ (ನಾ). ೧. ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ತುಪ್ಪ ಮೊದಲಾದುವು; ಹವಿಸ್ಸು; ಹೋಮದ್ರವ್ಯ. ೨. ಹೋಮ; ಯಜ್ಞ: ಗೋತ್ರ ಹೋತ್ರವು ನಮ್ಮ ಗೋವಿಂದ ಪುಣ್ಯಕ್ಷೇತ್ರಯಾತ್ರೆಗಳೆಲ್ಲ ಗೋವಿಂದ (ಶರಚ. ೭೮೭). 'ಅಗ್ನಿಹೋತ್ರ' ಪರಾ.

[ಸಂ.]

ಹೋತ್ರಿ (ನಾ). ಹೋಮಕಾಲದಲ್ಲಿ ಹವಿಸ್ಸನ್ನು ಅರ್ಪಿಸುವ ಯಜ್ಞಪುರೋಹಿತ: 'ಅಗ್ನಿಹೋತ್ರಿ' ಪರಾ. [ಸಂ. ಹೋತ್ರಿನ್]

ಹೋಪುರೆ (ಅ). ಹೊಗಳಿಕೆಯನ್ನು ಸೂಚಿಸುವ ಒಂದು ಅವ್ಯಯ: ಸಂತುಷ್ಟರಾದರೆಲ್ಲರು ಮಂತ್ರಿ ಮಿತ್ರರೋರಂತೆ ಹೋಪುರೆ ಸ್ವಾಮಿಯೆಂದು ಮುಂತೆ ನಿವಾಳಿಯಿಟ್ಟಡಿಗೆಱಗಿದರು (ಭರಚ. ೭೦-೭೮). 'ಪುರೆ$_4$' ಪರಾ.

ಹೋಬಳಿ$_1$ 'ಪೋಬಲಿ' ನೋ.

ಹೋಬಳಿ$_2$, **ಹೋಬ್ಳಿ** (ನಾ). (ಕೆಲವು ಹಳ್ಳಿಗಳನ್ನು ಹೊಂದಿರುವ) ತಾಲ್ಲೂಕಿನ ಒಂದು ಮುಖ್ಯ ಉಪವಿಭಾಗ, — ಕೇಂದ್ರ ಕಾರ್ಯಸ್ಥಾನ, - ಆಡಳಿತಘಟಕ: ಲಕುಮರಸನಾಯಕ್ಕನ ಮಳಿಗಯ ಹೋಬಳಿಗೆ ಸಲುವ ಆ ಮಳಿಗೆಯ ಹಿಂದಣ ಗದ್ದೆ ಸ್ಥಳ (ಸೌಇ. IV, ೨೪೫-೨೪; 1541); ಕೊಪ್ಪದ ಹೋಬಳಿ ಸರಕಾರ . . . ಬರಸಿ ಕಳುಹಿಸ್ದ ನಿರೂಪ (ಎಕ. VI, ಕೊಪ್ಪ, ೪೮-೨೨; 1811); ಇವಳು ಲಿಂಗರಾಜನ ಕಾಲದಿಂದ ಈ ಹೋಬಳಿಯ ಯಜಮಾನತಿ (ಚಕರಾ. ೧೦೯). **ಹೋಬ್ಳಿ**: (ರೈಸ್ಗ. II, ೫೪೯).

[ದೇ. ॥ ತಮಿ. ಓಮ್ಪಟ್ಟಿ = ರಕ್ಷಣೆ, ರಕ್ಷಣೆಯ ಸ್ಥಳ; ಮಲ. ಹೋಬಳಿ]

ಹೋಬಳಿದಾರ (ನಾ). ಹೋಬಳಿಯ ಅಧಿಕಾರಿ: ಕಳ್ಳರು ಮುಂತಾದ ತುಂಟಜನರುಗಳಿಗೆ ಅವಕಾಶವಿಲ್ಲದಂತೆ ಠಾಣೆದಾರ ಹೋಬಳಿದಾರ ಓಲೆಕಾರ ಮುಂತಾದ ಜನರನ್ನೂ ನೇಮಿಸಿ . . . ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡುತ್ತಿದ್ದರು (ಮಹಾವಂ. I, ೪೫).

[ಹೋಬಳಿ$_2$ + - ದಾರ$_4$]

ಹೋಬ್ಳಿ 'ಹೋಬಳಿ$_2$' ನೋ.

ಹೋಮ (ನಾ). ೧. (ದೇವತೆಗಳ ಪ್ರೀತ್ಯರ್ಥವಾಗಿ) ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ತುಪ್ಪ, ಮುಂತಾದ ಹವಿಸ್ಸು ಹಾಗೂ ಸಮಿತ್ತುಗಳನ್ನು ಅರ್ಪಣೆಮಾಡುವುದು; ಯಜ್ಞ; ಯಾಗ: ಹೋಮದ ನೆವದಲ್ಲಿ ಹೋತನ ತಿಂಬ ಅನಾಮಿಕರೂಡನಾಡಿ ಗೆಲುವುದೇನು (ಬಸವ. ೫೭೮); ಹೋಮದ ಧೂಮಲೇಖೆ ನೆಗೆಯುತ್ತಿರೆ (ಮಹಾನೇ. ೩-೧೦೩). ೨. (ತುಪ್ಪ ಮೊದಲಾದ); **ಹೋಮದ್ರವ್ಯ**; ಹವಿಸ್ಸು. ೩. ಬಲಿ; ಆಹುತಿ: ಒಬ್ಬ ನಾಯಕನ ಸಹನೆಯೇ ಮೊದಲಾದ ಸಾತ್ವಿಕ ಗುಣ ಜನಾಂಗವೊಂದರ ದಾರುಣಹೋಮವನ್ನು ನಿವಾರಿಸಬಹುದು (ಶಿಕ್ಷದ. ೬೪೪). 'ಹೋಮಂಗೊಳ್' ಪರಾ. [ಸಂ.]

ಹೋಮಂಗೊಳ್ (ಕ್ರಿ). ಆಹುತಿಯಾಗಿ ಹೊಂದು; ಬಲಿಯಾಗಿ ಪಡೆ: ರಾಮನಂ ರಣಕೆ ಹೋಮಂಗೊಳ್ವೆವದು ದಿಟಂ ನಾಳಿನ ಮಹೋಗ್ರಸಂಗ್ರಾಮಯಜ್ಞದಲಿ! (ಶ್ರೀರಾಮಾ. ೭೧೦-೨೭). [ಹೋಮ + ಕೊಳ್$_1$]

ಹೋಮಕುಂಡ (ನಾ). ಯಜ್ಞ'ಯಾಗಾದಿಗಳಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಲು ನೆಲದಲ್ಲಿ ಮಾಡಿದ ಕುಳಿ; ಹೋಮಕಾರ್ಯಕ್ಕಾಗಿ ಭೂಮಿಯಲ್ಲಿ ನಿರ್ಮಿಸಿದ ತಗ್ಗು; **ಅಗ್ನಿಕುಂಡ**: ಹೋಮಕುಂಡದಲ್ಲಿ ಧಗಧಗಿಸುವ ಜ್ವಾಲಾಮಾಲೆಗಳೊಳ್ . . . ಧೃಷ್ಟದ್ಯುಮ್ನನೆಂಬ ಮಗನುಮಂ . . . ಪಡೆದಂ (ಪಂಪಭಾ. ೩-೩೨ ವ). [ಸಂ.]

ಹೋಮದ್ರವ್ಯ (ನಾ). ಯಜ್ಞದಲ್ಲಿ ಅಗ್ನಿಗೆ ಆಹುತಿ ಕೊಡುವ ಹಾಲು, ತುಪ್ಪ ಮೊದಲಾದ ವಸ್ತು; ಹವಿಸ್ಸು: "ಬರ್ಹಿಸ್ - ಹೋಮದ್ರವ್ಯಂ" (ಕಾಶಕ್ಕ. ೬೭).

[ಸಂ.]

ಹೋಮಧೇನು (ನಾ). ಯಜ್ಞಕಾರ್ಯಗಳಿಗಾಗಿ ಮಾತ್ರ ಉಪಯೋಗಿಸುವ ಹಾಲಿಗಾಗಿ ಸಾಕಿರುವ ಹಸು; ಹೋಮಸಾಧನವಾದ ಹಸು: "ಹೋಮ [ಪಾಠಾಂ. ಹೆಮ್ಮ]ಧೇನು ಮಾಹೇಯಿಯಿಂಬುದು" (ಹರಾಯು. ೪೫-೧೧೩); ಹೋಮ ಧೇನುವಿನೊಡನೆ ಕೂಡಿದ ಹೋಮಶಾಲೆಯ ಹೊಸಲು . . . ಶೋಭಿಸುತ್ತಿರುವುದು (ಶಾಕುಂತ. ೬೩-೧೫). [ಸಂ.]

ಹೋಮಾಗ್ನಿ (ನಾ). ೧. ಯಜ್ಞ ಯಾಗಾದಿಗಳನ್ನು ನೆರವೇರಿಸಲು ಸಿದ್ಧಪಡಿಸಿದ ಬೆಂಕಿ: ಹೋಮಾಗ್ನಿಯೊಳ್ ಪುಟ್ಟಿದೊಂದು ದಿವ್ಯಚಾಪಮುಂ (ಪಂಪಭಾ. ೩-೩೨ ವ). ೨. (ಆಲಂ) ಉಜ್ವಲಿಸುವ ಸ್ಫುರಣೆ: ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿಮನ ತಾನುರಿದೇಳೆ . . . ಸ್ಪಂದಿಸುತಿದೆ ಭಾವಜ್ವಾಲೆ! (ಪಕ್ಷಿಕಾ. ೨೪-೯). [ಸಂ.]

ಹೋಮಾತು (ನಾ). "ಆಗದ ಮಾತು" (ಅವಚಂ. ಕೋಶ): ಆ ಮಾತು ಈ ಮಾತು ಹೋಮಾತೆಲ್ಲವು ನೆರದುಹೋಯಿತ್ತಲ್ಲಾ (ಅವಚಂ. ೩೧-೧೩೬). [ಹೋ., + ಮಾತು$_1$]

ಹೋಮಾನಲ (ನಾ). = ಹೋಮಾಗ್ನಿ ೧: ಸುಳಿದರಾ ದಂಪತಿಗಳುರುಮಂಜುಳದ ಮಣಿವೇದಿಕೆಗ ಹೋಮಾನಲನ ಬಲವಂದೆಡಕೆ ಸಾರಿದರವರ ಪತ್ನಿಯರು (ತೂಂರಾ. ೧-೧೬-೪೭). [ಸಂ.]

ಹೋಮಿಯೋಪತಿ (ನಾ). [ವೈದ್ಯಶಾ] ನಿರ್ದಿಷ್ಟವಾದ ಒಂದು ರೋಗದ ಚಿಕಿತ್ಸೆಯಲ್ಲಿ, ಯಾವ ಔಷಧವಸ್ತುವನ್ನು ಆರೋಗ್ಯವಾಗಿರುವವನಿಗೆ ಕೊಟ್ಟರೆ ಆತನಲ್ಲಿ ಆ ರೋಗವು ಕಂಡುಬರುವುದೋ ಅದೇ ಔಷಧವನ್ನು ಅತ್ಯಲ್ಪಪ್ರಮಾಣದಲ್ಲಿ ಆ ನಿರ್ದಿಷ್ಟ ರೋಗವಿರುವವನಿಗೆ ಕೊಟ್ಟು ಚಿಕಿತ್ಸೆ ಮಾಡುವ ಒಂದು ಬಗೆಯ ವೈದ್ಯಪದ್ಧತಿ: ಅಲೋಪತಿ . . . ಹೋಮಿಯೋಪತಿ . . . ಯುನಾನಿ . . . ಇದು ತಿನ್ನಬೇಡಿ . . . ಅದು ತಿನ್ನಬೇಡಿ (ವಿಜ್ಞ. ೫೧).

[<— ಇಂ. Homoeopathy]

ಹೋಮಿಸು (ಕ್ರಿ). ೧. ಯಜ್ಞಕಾಲದಲ್ಲಿ ಹವಿಸ್ಸನ್ನು ಮಂತ್ರಪೂರ್ವಕವಾಗಿ ಅರ್ಪಣೆ ಮಾಡು; ಹೋಮ ಮಾಡು: ಭೂಮಿಸುರರೀತನ ನಿದೇಶವ ನೇಮದಲಿ ಕೈಕೊಳ್ಳದಾಪನು ಹೋಮಿಸುವನಾ ದ್ವಿಜನ ಹೋಮವು ಹೋಮವಲ್ಲ (ಸಂಭವ. ೨೫-೫೪); ಇಂದ್ರನನು ಕೊಲುವ ಪುತ್ರನನು ಬೇಡಿದನು ಮಾರಣಕೃತ್ಯದಲಿ ಹೋಮಿಸಲು ಭುಗಿಭುಗಿಸುತ್ತ ಜನಿಸಿದನೊಬ್ಬ ಸುತನಾ ಕುಂಡವನು ಬಗಿದು (ನಿಘಾಗ. ೬-೯-೬).

೨. (ಆಲಂ) ಬಲಿಕೊಡು; ಆಹುತಿಮಾಡು: ಆ ಮಹಾಸಮ್ಮೋಹನಾಸ್ತ್ರವ ನೇಮಿಸಿಯೆ ಕಲಿಭೀಷ್ಮ ಭಾರ್ಗವ ರಾಮಚಂದ್ರಂಗಾಗ ಭಾರ್ಗವನದಕೆ ನಾಭಿಯನು ಹೋಮಿಸಿದಂ (ಸಂಭವ. ೧೩-೪೪); ಬಹುಸಂಶಯವು ನಿರ್ನಾಮವಾಗಲಿ ಜನ್ಮ ಬರೆ ಮರಣಾದಿಗಳು ಸಹಿತ ಹೋಮಿಸುವೆ ಜ್ಞಾನಾಗ್ನಿಯಲಿ (ಜ್ಞಾನಸಿಂ. ೧೩-೨); ನಿನ್ನನ್ನು ಹೋಮಿಸಿದರೆ ಕುಸುಮಸುಕುಮಾರಕುವರಿಯೇ ಕಾಮಾಗ್ನಿಹೋತ್ರದಲ್ಲಿ (ಕೃಷ್ಣಾಕು. ೧೧-೧೪). ೩. ಆಹುತಿ ತೆಗೆದುಕೊಳ್ಳು; ಬಲಿ ತೆಗೆದುಕೊಳ್ಳು: ನನ್ನನ್ನು ನೀನು ಹೀಗೆಯೇ ತಿರಸ್ಕರಿಸಿದರೆ ನಿನ್ನ ಜೀವನವನ್ನೇ ನಾನು ಹೋಮಿಸಬಲ್ಲೆ (ಸಮಜೀ. ೨೬೫); ಅವನ ಕೈಯಲಿದೆ ಅಂಗೈಹುಣ್ಣು ,— ಅವನ ಬಾಳನೇ ಹೋಮಿಸಿದ ಒಗಟು, ದೈವ ತೊಡಿಸಿರುವ ಮುಳ್ಳಿನ ಮುಕುಟ (ಚಂತನ. ೭೪-೭). [ಹೋಮ + - ಇಸು]

ಹೋಯಿ (ಅ). (ಮಕ್ಕಳನ್ನು ಮಲಗಿಸಲು) ಜೋಗುಳ ಹಾಡುವಾಗ ಬಳಸುವ ಒಂದು ಮಾತು: ಹೋಯಿ ಹೋಯಿ ಹಸುಳೆ ಮುದ್ದು . . . ಹೋಯಿ ಹೋಯಿ ಶ್ರೀಪ್ರಸನ್ನೆಂಕಟ ದೊರೆಯೆ (ಪ್ರಸಬಾ. ೧೪-೪). 'ಜೋ' ಪರಾ.

ಹೋರ್₁ 'ಪೋರ್₁' ನೋ.

ಹೋರ್₂ 'ಪೋರ್₃' ನೋ.

ಹೋರಟೆ 'ಪೋರಟೆ' ನೋ.

ಹೋರಟೆಗುಟ್ಟು (ಕ್ರಿ). ೧. ಘರ್ಷಣೆಯಾಗು; ತಾಕಲಾಡು: ಹೊಸ ನೋಟಂ ಹೋರಟೆಗುಟ್ಟ ತೃತಿಕ್ಕಿ ತಳರದೆ ತಂತಮ್ಮೊಳಪೊಕ್ಕ ರೂಪು ಮಗುಳಲಾಱದೆ ನಟ್ಟು ನೋಡುತ್ತಿರಲ್ (ಸಂಬರ. ೧೨-೫೩). ೨. ಪ್ರಯಾಸಪಡು; ಶ್ರಮಪಡು: ಹುಲುವೊದ ಱುಗಳೊಳಗಲಕೆ ಹರಿದು ಹೋರಟೆಗುಟ್ಟಿದನು ಹೊಮ್ಮರೆಯ ಬೆನ್ನಿನಲಿ (ತೂರಾ. ೬-೮-೫೭). [ಹೋರಟೆ (< ಪೋರಟೆ) + ಕುಟ್ಟು.]

ಹೋರಟೆಗೊಳ್, ಹೋರಟೆಗೊಳ್ಳು (ಕ್ರಿ). ಹೋರಾಡು; ಕಲಹಮಾಡು: ಮಕ್ಕಳ ಮದುವೆಯ ಚಿಕ್ಕಲ್ಲಿ ಮಾಡಿದಡೆ ಯೌವನ ತೋಱೆ ಆ ವಿಷಯಕ್ಕೆ ಹೊಕ್ಕು ಹೋರಟೆ ಗೊಂಬುದ ಮಱೆದಡೆ ಇಷ್ಟವ ಮಱೆಯಬೇಕು (ಮೋಹಮಾ. ೮೧-೩೧೯); ನೀನಾ ವಿಧಿಯ ಪರಿಗಳಲಿ ಹೊಕ್ಕು ಹೋರಟೆಗೊಂಡು ಕಾಮದಲುಕ್ಕಿ ಬಳಿಕಿನ್ನೇನ ಕೃಪೆಯನು ಲೆಕ್ಕಿಸಲು ಕೈಸಾರಬಲ್ಲುದೆ (ಪ್ರಭುಲೀ. ೭-೬೫). **ಹೋರಟೆಗೊಳ್ಳು:** ಮುನಿದೊಡೆ ತಿದ್ದಬಲ್ಲತಿ ರಸಿಕನೊಳು ಹೊದ್ದಿ ಹೋರಟೆಗೊಳ್ಳದವಳಿಗೆ ಲಾವಣ್ಯವಿದ್ದೇನು ಫಲ (ಕುರಾಸಾಂ. ೨೨-೩೭). [ಹೋರಟೆ (< ಪೋರಟೆ) + ಕೊಳ್₁]

ಹೋರಟೆಗೊಳ್ಳು 'ಹೋರಟೆಗೊಳ್' ನೋ.

ಹೋರಾಟ 'ಪೋರಾಟ' ನೋ.

ಹೋರಾಟಗೆಯ್ (ಕ್ರಿ). ಹೋರಾಡು; ಸೆಣಸು : ಕುರಿಯ ಹಿಂಡಿನಲ್ಲಿ ಮೇಷಗಳಾಗಿ ಜನಿಸಿ ಬಲ್ಲಿದವಾಗಿ ಬೆಳೆದು ತಂತಮ್ಮೊಳು ನಿಲ್ಲದ ಹೋರಾಟಗೆಯ್ದು (ನೇಮಿಸಂ. ೬-೨೦). [ಹೋರಾಟ (< ಪೋರಾಟ) + ಕೆಯ್₁]

ಹೋರಾಟಗೊಳ್ (ಕ್ರಿ). ಹೆಣಗಾಡು; ಒದ್ದಾಡು: ರುದ್ರನ ದೇವರೆಂದಾರಾಧಿಸಿ ಶಿಲೆಯೊಳಗೆ ಹೋರಾಟಗೊಂಡು ಕೆಟ್ಟರಲ್ಲಾ ಭಕ್ತಜನಂಗಳು (ಮೋಹಮಾ. ೧೦೪-೪೧೬).

[ಹೋರಾಟ (< ಪೋರಾಟ) + ಕೊಳ್₁]

ಹೋರಾಡು (ಕ್ರಿ). ಸೆಣಸು; ಹೋರಾಟ ಮಾಡು: ಕಾಲದೊಡನೆ ಸ್ಪರ್ಧೆ ಕಟ್ಟಿ, ಅದರೊಡನೆ ಹೋರಾಡಿ . . . ನಾಡಿನ ಪ್ರಗತಿಕಾರ್ಯಗಳು ನಡೆಯುತ್ತಿವೆ (ಪಣಪ್ರ. V, ಮುನ್ನುಡಿ); ಸಾವು ಬರುವದು ಎಲ್ಲರಿಗೂ ಸಮನಾಗಿ ಸಂಧ್ಯಾರಾಗದಿ ಜೀವ ಹೋರಾಡುವದು ತನ್ನಯ ಗುರಿಯ ಮುಟ್ಟುವ ಜಾವದಿ (ನೆಲಮು. ೫೨-೨೨).

[ಹೋರ್₁ (< ಪೋರ್₁) + ಆಡು₁]

ಹೋರಾಯಂತ್ರ (ನಾ). ಸಮಯವನ್ನು ಸೂಚಿಸುವ ಒಂದು ಬಗೆಯ ಯಂತ್ರ; ಗಡಿಯಾರ: ಎದುರಿಗಿದ್ದ ಹೋರಾಯಂತ್ರವು ಫಲಹಾರದ ಸಮಯವನ್ನು ಸೂಚಿಸಿದ್ದರಿಂದ ಎಲ್ಲರೂ ಕೂತಿಕೊಂಡು ಆನಂದದಿಂದ ಫಲಹಾರ ಮಾಡಿದರು (ದೇವೀಪ್ರ. ೧೮೩).

[ಸಂ.]

ಹೋರಾಶಾಸ್ತ್ರ (ನಾ). [ಜ್ಯೋತಿ] ಗ್ರಹ, ನಕ್ಷತ್ರಗಳ ಚಲನೆ, ಅವುಗಳ ಸ್ಥಾನ, ಅವುಗಳಿಂದುಂಟಾಗುವ ಫಲ ಇತ್ಯಾದಿಗಳನ್ನು ತಿಳಿಸುವ ಶಾಸ್ತ್ರ; ಜ್ಯೋತಿಶ್ಶಾಸ್ತ್ರ: ಹೋರಾಶಾಸ್ತ್ರ ಸರ್ವಜ್ಞಕಂ ನಯಯುಕ್ತಂ . . . ಪುಸ್ತಕಗಚ್ಛ ಪೂರ್ಣತಿಳಕಂ ಶ್ರೀಕೊಂಡಕುಂದಾನ್ವಯಂ (ಬಾಧಪು. ೧-೪೫). [ಸಂ.]

ಹೋರಾಹೋರಿ (ನಾ). ರಭಸ; ವೇಗ: ಹೋರಾಹೋರಿಯಲಿ ಬಲಸಹಿತ ಬಂದು ಕುಠಾರ ಸೆಣಸಿದನು (ಉತ್ತರಾ. ೧೧-೫೮).

[< ಪೋರ್₁ ./ ತೆಲು. ಹೋರಾಹೋರಿ = ಜಗಳ]

ಹೋರಾಳು 'ಪೋರಾಳ್' ನೋ.

ಹೋರಿ 'ಪೋರಿ₂' ನೋ.

ಹೋರಿಕ (ನಾ). ಜ್ಯೋತಿಷಿ: ಹೋರಿಕ - ಹೋರಿಗ (ಶಮದ. ೨೫೫ ಪ್ರಯೋ). [ಸಂ.]

ಹೋರಿಕೆ (ನಾ). ಹೋರಾಟ; ಯುದ್ಧ: ಅಕಟ ನೀನೇಕಾಂಗದಲಿ ಹೋರಿಕೆ [ಪಾಕಾಂ. ವಾರುವ, ಬಾಳಿಕೆ]ಗೆ ಬಂದೆ ಗರುವ ಗುರುಸುತ ಭೋಜ ಗೌತಮರು ಸಕಲಬಲ ನುಗ್ಗಾಯ್ತೆ (ಕುವ್ಯಾಗ. ೧-೭೪). 'ಪೋರ್ಕೆ' ಪರಾ.

[ಹೋರ್₁ (< ಪೋರ್₁) + - ಇಕೆ]

ಹೋರಿಗ₁ (ನಾ). = ಹೋರಿಕ: ಹೋರಿಕ - ಹೋರಿಗ (ಶಮದ. ೨೫೫ ಪ್ರಯೋ).

[< ಹೋರಿಕ]

ಹೋರಿಗ₂ (ನಾ). ಆಳು; ಕಿಂಕರ: ಕೌಸಲೆಯ ಚರಣದೊಳ್ ತಲೆಯಿಕ್ಕಿ ಹೋರಿಗಂ ತಾನಾಗುತನಿಬರಂ ಬೆರಸಿ ಬನಕಿಂದೆ ನಡೆದಂ ಭರತನು (ಪರಶು. ೨-೨೮).

[ಹೋರ್₂ + - ಇಗ]

ಹೋರಿಗೋಡು (ನಾ). ಗಂಡು ಜಿಂಕೆಯ ಕೊಂಬು: ವಿಣಶಾಬಮಂ ಪುಟ್ಟಿ ತೋಳಿಂದಪ್ಪಿ ಸುತ್ತಿ ಪೊತ್ತದರ ತಾಯ್ ಹೋರಿಗೋಡುಗಳಿಂದೆ ಮಯ್ಯ ಕಂಡೂತಿಯಂ ತೀರ್ಚಿಕೊಳುತಿರ್ಪ ತಾಣಕೆ ನಡೆದು (ಶ್ರೀರಾಮಾ. ೧೩೨-೧೫೪).

[ಹೋರಿ (< ಪೋರಿ₂) + ಕೋಡು₂]

ಹೋರಿಮಿಗ (ನಾ). ಗಂಡು ಜಿಂಕೆ; ಸಾರಂಗ: ಬಿಡುಗಣ್ಣಾಗಿ ನೋಡುತ್ತಿದ್ದಂತೆಯ ಒಂದು ಹೋರಿಮಿಗ ಮರಗಳ ಸಂದಿ ಹಳುವಿನಲ್ಲಿ ಕವಣೆಕಲ್ಲಸೆದಂತೆ ಹಾರಿ ಬಂದು . . . ಕಣ್ಮರೆಯಾಯಿತು (ಮಲಮ. ೭೭). [ಹೋರಿ (< ಪೋರಿ₂) + ಮಿಗ]

ಹೋರಿಯಡೆ (ನಾ). ಗೋಮಯ; ಸಗಣಿ: ''ಹೋರಿಯಡೆಯೆಂದನಲ್ಕಱೆ ಗೋಮಯವದೆಂದು'' (ಶಬ್ದಮ. ೩೪). [ಹೋರಿ (< ಪೋರಿ₂) + ಅಡೆ]

ಹೋರಿಸು 'ಪೋರಿಸು' ನೋ.

ಹೋರು₁ 'ಪೋರ್₁' ನೋ.

ಹೋರು₂ 'ಪೋರ್₂' ನೋ.

ಹೋರು₃ 'ಪೋರ್₃' ನೋ.

ಹೋರುಗಳೆ (ಕ್ರಿ). ತೂತು ಮಾಡು; ರಂಧ್ರ ಕೊರೆ: ಕೂರಲಗು ಸೀಸಕವ ಕವಚವ ಹೋರುಗಳೆದವು (ಕುವ್ಯಾಶ. ೩-೩೮). [ಹೋರು₃ (< ಪೋರ್₃) + ಕಳ್₁]

ಹೋರುಗೆಡವು (ಕ್ರಿ). = ಹೋರುಗಳೆ: ತನ್ನ ಮಹಾಧನುವಿಗೆ ವಜ್ರಾಸ್ತ್ರವನ್ನು ಹೂಡಿ ಹೊಡೆದು ನೆಲವನ್ನು ಹೋರುಗೆಡವಿದ (ಬದುರ. ೧೦೬).

[ಹೋರು₃ (< ಪೋರ್₃) + ಕೆಡವು (< ಕೆಡವು)]

ಹೋರೆ₁ (ನಾ). ೧. [ಜ್ಯೋತಿ] ಮೇಷ, ವೃಷಭ ಮುಂತಾದ (ಹನ್ನೆರಡು) ರಾಶಿಗಳ ಉದಯ ; ಲಗ್ನ: ತಿಥಿ ವಾರ ನಕ್ಷತ್ರಯೋಗ ಕರಣ ಹೋರೆಗಳನಾರ್ಕೆದು ನಿಶ್ಚಯಿಸಲು (ಪಾಂಡಪು. ೩-೩೯). ೨. ಲಗ್ನದ ಅರ್ಧಭಾಗ; ಲಗ್ನದ ಎರಡನೆಯ ಒಂದು ಭಾಗ: ಗೃಹಮೆರಡು ಹೋರೆ ಸಮದಾದಿ ಹೋರೆಗುಡುನಾಥನಿತರ ಹೋರೆಗೆ ಪಂಕೇರುಹಮಿತ್ರನಸಮಗೃಹದಾದಿ ಹೋರೆ[ಗಿನನಿತರ ಹೋರೆ] ಗುರುಪತಿಯಧಿಪಂ (ಜಾತಕ.೧-೨೮); ಮಾಸದ ಬಹುಳ ತದಿಗೆಯ ಕರ್ಕಾಟಕಲಗ್ನ ಶಶಿ ಹೋರೆ ವೇಳೆಯದಿ ಈ ಸೇವ್ಯ ವರ್ಧಮಾನೇಶಚರಿತ್ರನಿವಾಸ ಮತ್ಯತಿ ನೆಲೆಯಾಯ್ತು (ವರ್ಧಚ. ೧೨-೧೫೫). ೩. ಅಹೋರಾತ್ರಿಯ ಇಪ್ಪತ್ತನಾಲ್ಕನೆಯ ಒಂದು ಭಾಗ; ಎರಡೂವರೆ ಘಳಿಗೆಯಷ್ಟು ಕಾಲ; ಒಂದು ಘಂಟೆ,— ತಾಸು. ೪. ಜ್ಯೋತಿಶ್ಶಾಸ್ತ್ರದ ಗುಣಿತ. ಹೋರೆ, ಸಂಹಿತೆ ಎಂಬ ಮೂರು ಭಾಗಗಳಲ್ಲಿ ಒಂದು; ಫಲಭಾಗವನ್ನು ಹೇಳುವ ವಿಭಾಗ; ಹೋರಾಶಾಸ್ತ್ರ: ಪಾದಚ್ಛಾಯೆಯನಿಟ್ಟು ಜೋಯಿಸದ

ಭಿಪ್ರಾಯಂಗಳಿಂ ಹೋರೆಯಿಂದೋದಿಂ . . . ಭೋಂಕನೆ ಬೇಟ್ಟು ಜೋಯಿಸಮದಾರ್ಗಂ ಮರ್ತ್ಯರೊಳ್ ದುರ್ಲಭಂ (ಸುಕುಮಾ. ೩-೨೦); ನ್ಯಾಯ ವೈಶೇಷಿಕ . . . ಹೋರಾ . . . ಧರ್ಮವೇದಾಂತಸಿದ್ಧಾಂತಗಳಲ್ಲಿ ಪ್ರಮಾಣ ಪ್ರಮೇಯೋಪನ್ಯಾಸದೃಷ್ಟಾಂತ ಸಮನ್ವಯಾದಿಸದ್ಯುಕ್ತಿನಿರೂಪಕರಾದ ವಾದಿಗಳಿಂ (ವಿವೇಕ. ೨೨೬). [ಸಂ. ಹೋರಾ]

ಹೋರೆ$_3$ (ನಾ). ೧. ಉದ್ಯೋಗ; ಕಸುಬು: ದನಕಾರಿಕೆಯೇ ಒಮ್ಮೆ ಮನುಷ್ಯ ಸಮಾಜದ ಮುಖ್ಯ ಹೋರೆಯಾಗಿತ್ತು (ಕರ್ಣಾಪು. ೩); ಕಳ್ಳತನವೇ ಅವನ ಹೆಸರಾದ ಹೋರೆಯು (ಕಳ್ಳಾ. ೨೨). ೨. ಕೆಲಸ; ದುಡಿತ; ದುಡಿಮೆ: ಹೊಲದ ಹೋರೆಯನ್ನು ಮುಗಿಯಿಸಿ ದೀಪ ಹಚ್ಚುವ ಹೊತ್ತಿಗೆ . . . ಮನೆಯನ್ನು ಸೇರಿದನು (ಮೊಹಾಸಾ. ೮); ಒಕ್ಕುವುದು ಮೊದಲಾದ ಒಕ್ಕಲತನದ ಹೋರೆಗಳಲ್ಲಿ ಗಂಡು ಹೆಣ್ಣು ಕೂಡಿಯೇ ದುಡಿಯಬೇಕಾಗುವುದು (ಕನ್ನಜಾ. ೧೧೫). ೩. ಕ್ರಿಯೆ; ವ್ಯವಹಾರ; ಚಟುವಟಿಕೆ: ಆರು ಬಲ್ಲರು ನಾರಿಯರಂತರಂಗದ ಹೋರೆಯನು (ಕುರಾಸಾಂ. ೩೨-೯೨). [?]

ಹೋರೆಗ (ನಾ). ಹೋರಾಶಾಸ್ತ್ರವನ್ನು ಬಲ್ಲವನು; ಜ್ಯೋತಿಷಿ: ಹೋರೆಗರ ಹೊಳ್ಳಿಂತ ಜೋಯಿಸರಾರುಭಟೆಗಳ ಬಿಂಕ (ಕುಮ್ಮಾಆ. ೧೩-೫). [ಹೋರೆ$_1$ + - ಗ$_2$]

ಹೋರ್ಕೆ 'ಪೋರ್ಕೆ' ನೋ.

ಹೋಲ್ 'ಪೋಲ್$_1$' ನೋ

ಹೋಲಿಕೆ (ನಾ). ಸಾದೃಶ್ಯ; ಸಾಮ್ಯ: ಯಮನಂದನನ ಭಾಗ್ಯದ ಹೋಲಿಕೆಗೆ ಬಹರುಂಟೆ ನಳ ನಹುಷಾದಿ ರಾಯರಲಿ (ಕುಮ್ಮಾಸ. ೪-೧); ಈಗ ಅಸ್ತಿತ್ವದಲ್ಲಿರುವ ಎಲ್ಲ ದ್ರಾವಿಡಭಾಷೆಗಳಲ್ಲಿನ ಪದಗಳ ಹೋಲಿಕೆಯಿಂದ . . . ಊಹಿಸಬಹುದು (ದ್ರಾವಿಭಾ. ೩೨). 'ಪೋಲ್ಕೆ' ಪರಾ. [ಹೋಲು$_1$ (< ಪೋಲ್$_1$) + - ಇಕೆ]

ಹೋಲಿಸು 'ಪೋಲಿಸು' ನೋ.

ಹೋಲು$_1$ 'ಪೋಲ್$_1$' ನೋ.

ಹೋಲು$_2$ 'ಪೋಲು$_2$' ನೋ.

ಹೋಲುವೆ 'ಪೋಲ್ವೆ' ನೋ.

ಹೋಲ್ವೆ 'ಪೋಲ್ವೆ' ನೋ.

ಹೋಷಿಯಾರ್ 'ಹುಷಾರ್' ನೋ.

ಹೋಸ 'ಪೋಸ' ನೋ

ಹೋಸಣ 'ಪೊಯ್ಸಳ' ನೋ

ಹೋಸಲ 'ಪೊಯ್ಸಳ' ನೋ.

ಹೋಸಳ 'ಪೊಯ್ಸಳ' ನೋ.

ಹೋಸಾಲ 'ಪೊಯ್ಸಳ'ನೋ.

ಹೋಹು$_1$ 'ಪೋಪು$_1$' ನೋ

ಹೋಹು$_2$ 'ಪೋಪು$_2$' ನೋ.

ಹೋಳ್ 'ಪೋಟ್ಟು$_1$' ನೋ.

ಹೋಳಕ (ನಾ). ಒಂದು ಬಗೆಯ ಪಕ್ಷಿ: (ಹ). 'ಕಲ್ಲುಹೋಳಕ' ಪರಾ.

[? ./ ಮರಾ. ಹೋಲಗಾ, ಹೋಲಾ ./ ತೆಲು. ಪೋಲಕ, ಪೋಲಂಕ, ಪೋಲ್ಕ, ಪೋಲುಕ]

ಹೋಳಿ (ನಾ). ೧. ಮನ್ಮಥನ ಪ್ರೇಯಸಿ, — ಉಪಪತ್ನಿ: (ಹ). ೨. ಕಾಮದಹನವನ್ನಾಚರಿಸುವ ಫಾಲ್ಗುಣಮಾಸದ ಹುಣ್ಣಿಮೆಯ ಮೂರು ಅಥವಾ ನಾಲ್ಕು ದಿನಗಳ ಹಿಂದೆ, ಕಾಮನ ಉಪಪತ್ನಿಯ ಸಾವಿನ ಸಂಕೇತವಾಗಿ ಆಚರಿಸುವ ಹಬ್ಬ ಮತ್ತು ಆ ಉತ್ಸವಕಾಲದಲ್ಲಿ ಪರಸ್ಪರ ಮೈಮೇಲೆ ಎರಚುವ (ಕೆಂಪು) ಬಣ್ಣದ ನೀರು; ಓಕುಳಿ: (ಹ). ೩. ಶಿವನು ಮನ್ಮಥನನ್ನು ಸುಟ್ಟುದರ ಸಂಕೇತವಾಗಿ ಫಾಲ್ಗುಣಪೌರ್ಣಮೆಯಂದು ಮನ್ಮಥನ ಪ್ರತಿಮೆಯನ್ನು ಸುಡುವ ಸಾಂಪ್ರದಾಯಿಕವಾದ ಕ್ರಿಯೆ ಮತ್ತು ಅಂದು ಆಚರಿಸುವ ಓಕುಳಿಯನ್ನು ಪರಸ್ಪರ ಎರಚುವ ಹಬ್ಬ: ಹೋಳಿಯು ಕನ್ನಡಿಗರಿಗೆ ಆರ್ಯಸಂಸ್ಕೃತಿಯ ಸಂಸ್ಕಾರ. ಹೋಳಿಯನ್ನು ಆಚರಿಸಿ, ಹಾಡಿ ಕುಣಿಯುವುದೇ ಹೆಚ್ಚು (ಕನ್ನಜಾ. ೩೧). 'ಕಾಮದಹನ' ಪರಾ. ೪. (ಆಲಂ) ಏಸೆಯುವಿಕೆ; ತೂರಾಟ: ಸುಮಾರು ಅರ್ಧತಾಸು ಮಿಠಾಯಿಯ ಹೋಳಿ ನಡೆಯಿತು (ಜಮಿನ್ನಾ. ೨೨). ೫. ಬೆಂಕಿ; ಜ್ವಾಲೆ: ಹೇಗೆ . . . ಕಾಮದ ಹೋಳಿಯಲ್ಲಿ ಪ್ರೇಮವೂ ಬೂದಿಯಾಗುವುದೋ, ಹಾಗೆಯೇ ಶಬ್ದಜನಿತವಾದ ವಿಕಲ್ಪದಿಂದಲೂ ವಿತರ್ಕದಿಂದಲೂ ವಿಚಾರದಲ್ಲಿ ಪ್ರಳಯವುಂಟಾಗುವುದು (ಪ್ರಬಂಧ. ೫೦); ತಿರುಕರ ಕುಲವು . . . ಧರ್ಮದ ಹೋಳಿಯನ್ನು ಹೊತ್ತಿಸುತ್ತಿತ್ತು (ರಕ್ತಧ್ವ. ೩೨೨). ೬. ಬಲಿ; ಆಹುತಿ: ಇದು ನನ್ನ ಜೀವನದ ಹೋಳಿ ಮಾಸ್ಟರರೆ! (ರಂಗರೋಲ. ೧೨೩); ಸಮಾಜಭಯಕ್ಕೆ ಪ್ರೇಮದ ಹೋಳಿಯಾಗಬೇಕು (ರಕ್ತಧ್ವ. ೨೫೪).

ಹೋಳಿಯ ಹಬ್ಬ= (ಶಿವನು ಮನ್ಮಥನನ್ನು ಸುಟ್ಟ ಸಂಕೇತವಾಗಿ) ಫಾಲ್ಗುಣದ ಹುಣ್ಣಿಮೆಯಂದು ಆಚರಿಸುವ ಹಬ್ಬ, — ಉತ್ಸವ; ಕಾಮನ ಹಬ್ಬ: ಆ ಕಾಲದಲ್ಲಿ ಭರತಖಂಡದ ರಾಜಮನೆತನಗಳು ಆಡಿದ ಹೋಳಿಯ ಹಬ್ಬದ ಚಿತ್ರಗಳನ್ನು ಸಂಸ್ಕೃತಕವಿಗಳ ನಾಟಕಗಳ 'ವಸಂತಮಹೋತ್ಸವ' ವರ್ಣನೆಗಳಲ್ಲಿ ಕಾಣಬಹುದಾಗಿದೆ (ಕನ್ನಜಾ. ೧೭೨); ಹೋಳಿಯ ಹುಣ್ಣಿಮೆ, ಹೋಳಿಯ ಹುಣ್ಣವೆ, ಹೋಳಿಹುಣ್ಣಿಮೆ= (ಕಾಮದಹನದ ಹಬ್ಬವನ್ನು ಆಚರಿಸುವ) ಫಾಲ್ಗುಣ ಮಾಸದ ಹುಣ್ಣಿಮೆ; ಕಾಮನ ಹುಣ್ಣಿಮೆ: ಹೋಳಿಯ ಹುಣ್ಣಿಮೆಯ ದಿವಸ ಕಾಮನ ಸುಂದರವಾದ ಪ್ರತಿಮೆಯನ್ನು ಮಾಡಿಸಿ . . . ಹಂದರದಲ್ಲಿ ಬಲುಡೊಲಿನಿಂದ ಕಾಮನನ್ನಿಡುವ ವಾಡಿಕೆಯಿದೆ (ಕನ್ನಜಾ. ೧೭೨); ಫಾಲ್ಗುಣಶುದ್ಧ ೧೫ನೆಯ ತಿಥಿಗೆ ಹುತಾಶನೀಪೌರ್ಣಮಾ ಎಂದು ಹೆಸರಿಸಿದೆ . . . ಇದನ್ನೇ ಹೋಳಿಯ ಹುಣ್ಣವೆ, ಕಾಮನ ಹುಣ್ಣವೆ, ವಸಂತಪೌರ್ಣಮಾ ಎಂದು ಹೇಳುವುದೂ ಉಂಟು (ಭಾಹಬ್ಬ. ೧೮೬); "ಹೋಳಿಹುಣ್ಣಿಮೆ = ಕಾಮದಹನದ ಹುಣ್ಣಿಮೆ" (ಸಿರಿಕೂ. ೫೬೦).

[ಸಂ. ಹೋಲೀ, ಹೋಲಾ./ ಹಿಂ. ಹೋಲೀ; ಮರಾ. ಗುಜ. ಹೋಳೀ]

ಹೋಳಿಗೆ$_1$ 'ಪೋಳಿಗೆ$_1$' ನೋ.

ಹೋಳಿಗೆ$_2$ 'ಪೋಳಿಗೆ$_2$' ನೋ.

ಹೋಳಿಗೆವಡೆ (ಕ್ರಿ). ಹೊಪ್ಪಳೆಯುಂಟಾಗು; ಬೊಕ್ಕೆಯೇಳು: ಕೂರ್ಮನ ಬೆನ್ನು ಹೋಳಿಗೆವಡದುದು ಬಲುಬಿಸಿಲೊಂದು ಚಡಾಳಿಕೆ ಜಗವ ಭಂಗಿಸಿತು (ಮೋಹತ. ೧೯-೪೬). [ಹೋಳಿಗೆ$_2$ (< ಪೋಳಿಗೆ$_2$) + ಪಡೆ$_1$]

ಹೋಳಿಸು 'ಪೋಟಿಸು' ನೋ.

ಹೋಳಿಹಬ್ಬ (ನಾ).= ಹೋಳಿ ೩: ಹೋಳಿಹಬ್ಬದ ಓಕುಳಿ ಚೆಲ್ಲುವುದಕ್ಕೆ ಆಳಿನಿಂದ ಅರಸರವರೆಗೂ, ಎಳೆಯರಿಂದ ಹಳೆಯರವರೆಗೂ ಎಲ್ಲರೂ ಕೂಡುತ್ತಾರೆ (ಭಾಹಬ್ಬ. ೧೮೯).

[ಹೋಳಿ + ಹಬ್ಬ (< ಪರ್ಬ)]

ಹೋಳು$_1$ 'ಪೋಟ್ಟು$_1$' ನೋ

ಹೋಳು$_2$ 'ಪೋಟ್ಟು$_2$' ನೋ.

ಹೋಳುಕರ್ಪೂರ (ನಾ). ಕರ್ಪೂರದ ಹಳುಕು, — ಹರಳು: ಹೋಳು [ಪಾಕಾಂ. ೪] ಕರ್ಪೂರವಿಮಿಶ್ರಿತ ವೀಟಕಾವಳಿಯನಿತ್ತನೊಲವಿಂದಲಿ (ಸಂದಿಮಾ. ೧೭-೫೧).

[ಹೋಳು$_2$ (< ಪೋಟ್ಟು$_2$) + ಕರ್ಪೂರ (< ಕಪ್ಪುರ)]

ಹೋಳುಗಡಿ 'ಪೋಟ್ಗಡಿ' ನೋ

ಹೋಳುಗಳೆ 'ಪೋಳ್ಗಳೆ' ನೋ.

ಹೋಳುಗುಟ್ಟು 'ಪೋಳ್ಗುಟ್ಟು' ನೋ.

ಹೋಳುಶರ್ಕರೆ (ನಾ). ಸಕ್ಕರೆಯ ಹಳುಕು, — ಹರಳು: ಹುಣಿಸೆಸೊಪ್ಪು . . . ಮೊಸರಿಂದರೆದು ಮೊಸರಲ್ಲಿ ಹೋಳುಶರ್ಕರೆವೆರಸಿ ಮೂರು ದಿನ ಕೊಳ್ಳಲು ಪ್ರಮೇಹದ ಕಲ್ಲುಕಟ್ಟು ಬೀಳುವುದು (ಸಕಪ್ರ. ೩೭೯). [ಹೋಳ್ವು$_2$ (< ಪೋಟ್ಟು$_2$) + ಶರ್ಕರೆ]

ಹೋಳುಸೇರೆ (ನಾ). ಅರ್ಧಬೊಗಸೆ: ಬೂರುಗದ ಮೇಣ, ದಾಳಿಂಬದ ವಾಟೆ ಇವಂ ಸಮಾನವಾಗಿ ಎಮ್ಮೆಯ ಮಜ್ಜಿಗೆಯೊಳರೆದು ಅದರಲ್ಲೆ ಕದಡಿ ಪ್ರಾತಃಕಾಲ ಹೋಳುಸೇರೆಯ ತೆಗೆದುಕೊಂಡು . . . ಊಟವ ಮಾಡಲು ಸರ್ವಾತಿಸಾರಂ ಮಾಣುವುದು (ಸಕಪ್ರ. ೩೨೪). [ಹೋಳ್ವು$_2$ (< ಪೋಟ್ಟು$_2$) + ಸೇರೆ$_1$]

ಹೌತ್ರ (ನಾ). ಯಜ್ಞ, ಯಾಗಾದಿಗಳಲ್ಲಿ (ಋಗ್ವೇದದ)ಮಂತ್ರಪೂರ್ವಕವಾಗಿ ಹೋಮ ಮಾಡುವಿಕೆ; ಋತ್ವಿಜತನ: ಪ್ರಾಣದೇವನು 'ಹೌತ್ರವನ್ನು ಒಪ್ಪಿಕೊಳ್ಳಬಹುದು' ಎಂದು ಅಪ್ಪಣೆ ಕೊಟ್ಟುದ್ದಾನೆ (ಮಹಾಗ. ೨೪೭). [ಸಂ.]

ಹೌದ₁ 'ಹೌದು₂' ನೋ.

ಹೌದ₂ 'ಹೌದಾ' ನೋ.

ಹೌದಪ್ಪ (ನಾ). ಎಲ್ಲಕ್ಕೂ ಹೌದೆಂದು ಹೇಳುವವನು: ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪ, ಹೌದಪ್ಪನ ಚಾವಡಿಯಲ್ಲಿ ಹೌದಪ್ಪ (ಗಾದೆ). 'ಅಲ್ಲಪ್ಪ' ಪರಾ.

[ಹೌದು₁ (< ಅಹುದು₂) + ಅಪ್ಪ₁]

ಹೌದಾ, ಹೌದ್ದ, ಹೌದೆ (ನಾ). ಆನೆಯ ಮೇಲೆ ಕುಳಿತುಕೊಳ್ಳಲು ಬಳಸುವ ಮಂಟಪದಂತಹ ಆಸನ; ಅಂಬಾರಿ: ಹೌದಾಸಮೇತವಾದ ಆನೆಗಾಗಿ ರುಸುಮೂ ವಿರ್ಪಟ್ಟು (ಮಹಾಪಂ. ೧, ೧೬); ಪಟ್ಟದಾನೆಯು ಭರದಿಂದ ಬಂದಿತು . . . ಹೌದಾದಲ್ಲಿ ಮಹಾಪುರುಷನೊಬ್ಬನು ಕುಳಿತಿದ್ದಾನೆ (ಪೌಲಸ್ತ. ೮೬). **ಹೌದ್ದ:** ರನ್ನದ ಹೌದ ರಂಜಿಪ ಮದಗಜವೇರಿ ಚೆನ್ನೆಯರಿಕ್ಕೆ ಚಾಮರವ (ಗೂಢಾಚ. ೩-೧೧೬); ಅಂಬಾರಿ, ಹೌದ, ಲಗಾಮು ಮುಂತಾದವುಗಳನ್ನು ಬೆಳ್ಳಿ ಭಂಗಾರದಿಂದ ತಯಾರಿಸಿದನು (ಝೂರಾಣಿ. ೭೬). **ಹೌದೆ:** ಎಸೆದೊಪ್ಪವೆತ್ತ ಸಿಂಹನ ಮಿಸುನಿಯ ಚೂಡಾಲ ಹೌದೆಯಂ ಪಾ[ವುಡ]ಮಂ . . . ಇತ್ತರ್ (ಬೀಳವಂ. ೧- ೧೧೦); ಸೌದೇ ಹೊರೆ ಹೊತ್ತುಕೊಂಡು ಹೌದೇಲಿ ಕೂತ ಹಾಗೆ (ಗಾದೆ). [<— ಅರ. ಪಾರ. ಹೌದಜ್; ಹಿಂ. ಹೌದಾ; ಮರಾ. ಹೌದಾ, ಹವದಾ]

ಹೌದು₁ 'ಅಹುದು₂' ನೋ.

ಹೌದು₂, ಹವುದ, ಹೌದ₁ (ನಾ). (ನೀರನ್ನು ಸಂಗ್ರಹಿಸಲು ಕಲ್ಲು, ಗಚ್ಚು ಇತ್ಯಾದಿಗಳಿಂದ ನಿರ್ಮಿಸಿದ) ದೊಡ್ಡ ಬಾನಿ; ತೊಟ್ಟಿ: ಪೂರ್ವದಿಕ್ಕಿನ ಮಹಾದ್ವಾರದ ಮೊಳಮ್ಮೆಯಲ್ಲಿ ವಿಸ್ತಾರವಾದ ಅಂಗಳಿನೊಳಗೆ ಕಾರಂಜಿಯ ಹೌದು ಇರುವದು (ಕಭಾಗೆ. ೫೩೬); ಪಡಸಾಲೆಯ ಅಂಚಿನಲ್ಲಿ ಘನವಾದ ನೀರಿನ 'ಹೌದು' ನೀರು ತುಂಬಿಕೊಂಡು ನಿಂತಿದೆ (ಪಜ್ಜಿಪ. ೧೯); ಉದ್ಯಾನದಲ್ಲಿ ಕಟ್ಟಿದ ಒಂದು ಗಚ್ಚಿನ ಹೌದಿನೊಳಗೆ ಮೀನಗಳಿದ್ದವು (ಇಪ್ಪಕ. ೭೦೬). **ಹವುದ:** ಒಳ್ಳಿತಹ ಮಿಸುನಿ ರಜತ ಹವುದಗಳ ಬಹಳ ವಲ್ಲಿವಲ್ಲಿಗೆ ರಮ್ಯಗೂಳಿಸಿರಿಸಿರಿ (ಕೃಷ್ಣವಿ. ೩-೧೬). **ಹೌದ₁:** ಆಶಯ - ನೀರಿನ ಹೌದ ಮುಂತಾದುವು (ಗಂಗಾಮಂ.ಕಿ). [<— ಹಿಂ. ಹೌದ್, ಹೌಜ್, ಹೌದೀ; ಮರಾ. ಹೌದ]

ಹೌದೆ 'ಹೌದಾ' ನೋ.

ಹೌರಿ (ನಾ). "ಮಹಮದೀಯಸ್ವರ್ಗದ ಅಪ್ಸರೆ" (ನಗಹೂ. ೧೭೫ ಅಡಿಟಿ): ಹೌರಿಯರಿಂದ ಸುತ್ತುವರಿಯಲ್ಪಟ್ಟೇ ಸದಾಕಾಲವೂ ಕೂತಿರುವುದೆಂದರೆ ಆ ಸ್ವರ್ಗದಲ್ಲಿ ಬೇಜಾರು ಹಿಡಿದುಬಿಡುತ್ತದೆ (ನಗಹೂ. ೩೨೭). [?]

ಹೌವನೆ 'ಪವ್ವನೆ' ನೋ.

ಹೌಸ₁ 'ಪೋಸ' ನೋ.

ಹೌಸ₂ 'ಹೌಸು' ನೋ.

ಹೌಸು, ಹೌಸ₂ (ನಾ). (ಉಕ) ೧. ಉತ್ಸಾಹ; ಸಡಗರ; ಹುರುಪು: ಅವನಿಗೆ ಮನ ತುಂಬಿ ಹೌಸಾದರೆ ಚಿಮ್ಮಿ ಚಿಮ್ಮಿ ರಾಗವು ಹರಿದೇ ಬಿಡುವುದು (ಕನ್ನಡಾ. ೧೮೦); ಹೌಸೆಲ್ಲಾ ಕುಸಿದು ಅಪ್ರತಿಭನಾದೆ! (ಮುಂಗಾಪು. ೧೦೫); ಯಜಮಾನರಾದರೂ ಅವಳ ಹೌಸಿಗೆ ಒಂದಿಷ್ಟೂ ಅಡ್ಡ ಬರಲಿಲ್ಲ (ಗಂಮಾಯಿ. ೧೩೩). ೨. ತೀವ್ರವಾದ ಆಸೆ; ಹೆಬ್ಬಯಕೆ: ಹೀಗೆ ಎಲ್ಲರು ಎಂತೋ ತಮ್ಮ ಮನದ ಹೌಸುಗಳನ್ನೆಲ್ಲ ತೀರಿಸಿಕೊಂಡರು (ಭದ್ರಾಯು. ೫೬); ಅವನ ತಂದೆಯಾಗುವ ಹೌಸು ಬಲ್ಲ ಅವಳಿಗೆ ನಿಜವಾಗಿಯೂ ದುಃಖ ಒತ್ತರಿಸಿ ಬಂತು (ಅಪನಾ. ೧೯೪). **ಹೌಸ₂:** ೧. ಅಪ್ಪೊಂದು ಹೌಸವಿದ್ದರೆ ಆಗಲಿ ನಮ್ಮ ಪರೀಕ್ಷೆ (ಉದವೃ. ೬೦). ೨. ಹಂತೀಯ ಕಟ್ಟವನ, ಹೌಸ ಹುರುಪನು ನೋಡೊ (ಕನ್ನಡಾ. ೨೬). ೩. ಲಾಲಸೆ; ಕಾಮನೆ: (ಕಿ).

[<— ಪಾರ. ಹೋಸ್; ಅರ. ಹವಸ್ ; ಹಿಂ. ಹವಸ್, ಹೌಸ್; ಮರಾ. ಹೌಸ್]

ಹೌಹಾರು (ಕ್ರಿ). ಬೆದರು; ಗಾಬರಿಯಾಗು: ಆಗ ಬಗೆಯೊಳ್ಪದರಿ ಹೌಹಾರಿ (ಮಹಾಂತೇ. ೫-೪); ಚಿತ್ತದುದ್ವೇಗದೊಳನ್ನಪಾನಗಳನು ಮರೆತಳು ಈಕೆ ಹೌಹಾರಿ (ಇಂಚಾಪ. ೪೩-೪); ಚಿದಾನಂದನ ಪತ್ರವನ್ನು ಓದಿ ಮಾಸ್ತರರು ಹೌಹಾರಿದರು (ಮುತ್ತೆದ. ೧೧). 'ಪವ್ವನೆಪಾಟು' ಪರಾ. [?]

ಹೌಳಿಗೆ (ನಾ). ಒಂದು ಬಗೆಯ ಸಸ್ಯ: ನಾರುಬೇರು, ಹಾವುಲಿಗೆ, ಹಂಟಗೆ, ಹೌಳಿಗೆ, ಬೆಳಂಗಿ (ಮೃಡಿಗಿ. ೨-೩೨). [?]

ಹ್ಯಸ್ತನ (ಗು). ಹಿಂದಿನ ದಿನಕ್ಕೆ ಸಂಬಂಧಪಟ್ಟ: 'ಹ್ಯಸ್ತನದಿನ' ಪರಾ. [ಸಂ.]

ಹ್ಯಸ್ತನದಿನ (ನಾ). ಹಿಂದಿನ ದಿನ; ನೆನ್ನೆ. [ಸಂ.]

ಹ್ಯಾಪ 'ಹೇಪ' ನೋ.

ಹ್ಯಾಪು (ನಾ). ಪೆಚ್ಚುತನ; ಮಂಕುತನ: 'ಹ್ಯಾಪುಮೋರೆ' ಪರಾ.

[ಹ್ಯಾಪ (< ಹೇಪ) + - ಉ]

ಹ್ಯಾಪುಮೋರೆ (ನಾ). ಪೆಚ್ಚುಮುಖ; ಜೋಲುಮೋರೆ: ಹ್ಯಾಪುಮೋರೆ ಹಾಕಿ ಕೈಹಾಕಿದ್ದರಲ್ಲಿ ಜಯ ಸಂಪಾದಿಸಿದ ಖದೀಮ ಪ್ರಾಣೇಶ (ವೃದ್ಧವಿ. ೮೧).

[ಹ್ಯಾಪು + ಮೋರೆ (< ಮೋಱೆ)]

ಹ್ರದ (ನಾ). ೧. ಆಳವಾದ ನೀರಿರುವ ಪ್ರದೇಶ; ಮಡು: ಅತಿಮನೋಹರ ಮಾದ ಯಮುನಾಹ್ರದಪರಿಸರಪ್ರದೇಶದೊಳಕ್ರೂರಂ ನಿಜವರೂಥಮಂ ನಿಲಿಸಿ (ಜಗನ್ನಾ. ೫-೧೦೨ ವ); ಹ್ರದದೊಳೆ ಮಿಂದಲಂಕರಿಸಿ . . . ಕಮಳೋದರಸಭೆಯ ಸಂಪದದಿಂದ ಪೊಕ್ಕನಾ ಸುರನು (ವರ್ಧಚಿ. ೯-೩೩). ೨. ಬೆಳಕಿನ ಕಿರಣ. [ಸಂ.]

ಹ್ರದಿನಿ (ನಾ). ೧. ತೊರೆ; ನದಿ: ಹ್ರದಿನೀಸರ್ವಾಂಬುವಂ ಪೀರ್ದನಿತನೆ ದಿವದೊಳ್ ಕಾಣಿಸುತ್ತುಂ . . . ಪೊದಳ್ಚೆಗೆಯಂ ಬಂದುದು ತಾಂ ಸಂತಪ್ತತಿಗ್ಮಾತಪವಿಪುಳ ತರಜ್ವಾಲಮಾ ಗ್ರೀಷ್ಮಕಾಲಂ (ಕುಸುಮಾ. ೮-೧೧೩). ೨. ಮಿಂಚು; ವಿದ್ಯುತ್ತು.

[ಸಂ. ಹ್ರದಿನೀ]

ಹ್ರಸ್ವ (ಗು). ೧. ಚಿಕ್ಕದಾದ; ಪುಟ್ಟದಾಗಿರುವ; ಕಿರಿದಾದ: ವಿನುತಸುಜಾತ ಹ್ರಸ್ವಸ್ವನಚೂಚಕನಂ . . . ಸಂಪದುಬೇತಮಂ ತರಿಸಿ ದಿಗ್ವಿಜಯಕ್ಕೆ ಜಿನೇಂದ್ರಚಂದ್ರ ದೇವಂ ಪೊಱಮಟ್ಟನೇಱೆ ಜಯಮಂ ಜಯಪರ್ವತಯಾನನಾಗಮಂ (ಶಾಂತಿಪು. ೧೦-೧೧೩). (ನಾ). ೨. ಚಿಕ್ಕದು; ಪುಟ್ಟದಾಗಿರುವುದು; ಕಿರಿದು: "ಸೂಕ್ಷ್ಮಃ, ಲೇಶಃ . . . ಹ್ರಸ್ವಃ, ಅಲ್ಪಃ, ತ್ರುಟಿಃ- ಈ ೧೫ ಕಿಱಿದು" (ಹಲಾಯು. ೧೧೪-೩). ೩. ಕುಳ್ಳಾಗಿರುವುದು; ಗಿಡ್ಡಾಗಿರುವಿಕೆ: "ಖರ್ವಂ ಕುಬ್ಜಮಾನತಂ ತಾನದೆಂಬುದಕ್ಕುಂ ಹ್ರಸ್ವಂ" (ವಸ್ತುಕೋ. ೧೧೪-೩೭). ೪. ಚಿಕ್ಕದಾದ ಆಕೃತಿಯುಳ್ಳವನು; ಕುಳ್ಳ; ಕುಬ್ಜ. ೫. [ಛಂದ]ಒಂದು ಮಾತ್ರೆಯ ಅವಧಿಯಲ್ಲಿ ಉಚ್ಚರಿಸುವ ಅಕ್ಷರ; ಒಂದು ಮಾತ್ರೆಯನ್ನು ಹೊಂದಿರುವ ಸ್ವರ; ಲಘು: ಸ್ವರದೊಳಗಮೇಕ ಮಾತ್ರಾಸಿರತಂ ಹ್ರಸ್ವಂ (ಕಾವ್ಯಾ. ೧೦); ಸ್ವರವ್ಯಂಜನದಿನೇಕಮಾತ್ರಮಾದೊಡೆ ಹ್ರಸ್ವಂ (ಶಮದ. ೧೦ವೃತ್ತಿ). 'ಹ್ರಸ್ವಾಕ್ಷರ' ಪರಾ. [ಸಂ.]

ಹ್ರಸ್ವಕಾಕು (ನಾ). [ಛಂದ]ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸಂಬೋಧನೆಯ ಸ್ವರ: ಹ್ರಸ್ವಕಾಕುವಿಂಗೆ - ಎಲೆ ಗಣಪ . . . ಎಲೆ ಎಲೆ ರಂಭೆ (ಶಮದ. ೧೨೩ ಪ್ರಯೋ). [ಸಂ.]

ಹ್ರಸ್ವಗ್ರೀವ (ನಾ). ೧. ಚಿಕ್ಕದಾಗಿರುವ ಕತ್ತು. ೨. ಚಿಕ್ಕದಾದ ಕೊರಳನ್ನುಳ್ಳದು: [ಋಜು]ಪರಿಪೂರ್ಣಹ್ರಸ್ವಗ್ರೀವನುಂ ಮಹಾವ್ಯೂಢೋರಸ್ಕನುಂ . . . ಸಪ್ತದ್ವಾಸ್ಥಿತ ನುಮಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ (ಆದಿಪು. ೧೨-೫೬ವ). [ಸಂ.]

ಹ್ರಸ್ವಚೂಚುಕ (ನಾ). ಚಿಕ್ಕದಾಗಿರುವ ಚೂಚುಕವನ್ನುಳ್ಳದು: ಮೋಹಜಘನಾಪರನುಮನಿಮ್ನನಾಭಿಯುಂ ಹ್ರಸ್ವಚೂಚುಕನುಂ . . . ಸಪ್ತದ್ವಾಸ್ಥಿತನುಮಪ್ಪ ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ (ಆದಿಪು. ೧೨-೫೬ ವ). [ಸಂ.]

ಹ್ರಸ್ವತೆ (ನಾ).೧. ಚಿಕ್ಕದಾಗಿರುವಿಕೆ; ಸಂಕ್ಷೇಪವಾಗಿರುವಿಕೆ; ಅಡಕ: ಕಥೆಯ ನಿರೂಪಣೆಯಲ್ಲಿ ಎಂತಹ ಹ್ರಸ್ವತೆಯನ್ನು ಸಾಧಿಸಿದ್ದಾರೆ ಕವಿ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ (ಭಾವಗೀ. ೩೫೯). ೨. [ಛಂದ] ಸ್ವರದ ಹ್ರಸ್ವತ್ವ; ಲಘುವಾಗಿರುವಿಕೆ : ಪರದೊಳ್ ಪ ಬ ಮಂಗಳ್ ನೆಲಸಿರೆ ವತ್ವಂ ಪೀನಮಾ ಪಕಾರಮ ದೂತ್ವಂ ಬೆರಸಿರೆ ತಾಂ ಹ್ರಸ್ವತೆಯಂತರೆಂಬ ಶಬ್ದಾಂತರೇಳೆಗಕ್ಕುಂ ಲೋಪಂ (ಶಮದ. ೨೯೨). [ಸಂ. ಹ್ರಸ್ವತಾ]

ಹ್ರಸ್ವಮತಿ (ನಾ). ಬುದ್ಧಿ ಕಡಮೆಯಾದವನು; ಮಂದಮತಿ: ನಂಜುದಿಸಲೇನು ಗತಿ? ಅಂಜುವರೆ ಹ್ರಸ್ವಮತಿ? (ಪಾಂಚಜ. ೪೪-೫). [ಸಂ.]

ಹ್ರಸ್ವಸ್ವರ (ನಾ).= ಹ್ರಸ್ವ ೫: ಹ್ರಸ್ವಸ್ವರಗಳಿಗೆ ಲಘುವೆಂತಲೂ . . . ಸಂಜ್ಞೆ

(ಕಟಿ. ೬೯); ಉಚ್ಚಾರಣೆಗೆ ಕಡಮೆ ಕಾಲ ಬೇಕಾಗುವ ಅ, ಇ, ಉ, ಋ, ಎ, ಒ, ಎಂಬುವಕ್ಕೆ ಹ್ರಸ್ವಸ್ವರಗಳೆಂದೂ . . . ಹೆಸರು (ಮಧ್ಯಮ. ೧೩). 'ದೀರ್ಘಸ್ವರ' ಪರಾ. [ಸಂ.]

ಹ್ರಸ್ವಾಕ್ಷರ (ನಾ). = ಹ್ರಸ್ವ ೫: ಸ್ವರಮಮರ್ದಿರೆ ಮುಂದೇಕಸ್ವರದೊಳ್ ನಣಲಯಳಕಾರಮನಿತುಂ ಹ್ರಸ್ವಾಕ್ಷರಪೂರ್ವಪೂಗೆ ಪೀನಂ ಸ್ವರೂಪದಿಂ ದ್ವಿತ್ವ ವೃತ್ತಿಯಂ ತಾಳ್ದರ್ಕುಂ (ಕಾವ್ಯಾವ. ೬೯); ಪರಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರಮಾಗ ಸಂಧಿದೋಷಂ ಸರೇಫಮಿದಿರಾಗೆ ಶಿಥಿಲಮೆಂದನುಸರಿಪರ್ (ಶಮದ. ೫೯). 'ದೀರ್ಘಾಕ್ಷರ' ಪರಾ. [ಸಂ.]

ಹ್ರಸ್ವಿ (ನಾ). ಬಹಳ ಸಣ್ಣದೇಹದ ಒಂದು ಬಗೆಯ ಪಕ್ಷಿ: ''ಹ್ರಸ್ವಿ ಕಿಱುಪಕ್ಷಿಯಕ್ಕುಂ'' (ಮಂಗರಾ. ೩೨-೯). [ಸಂ. ಹ್ರಸ್ವಿನ್]

ಹ್ರಾದ (ನಾ). ಧ್ವನಿ; ಶಬ್ದ: ''ನಾದಂ ಶಬ್ದಂ ಧ್ವನಂ ಹ್ರಾದಂ . . . ಘೋಷಂ'' (ವಸ್ತುಕೋ. ೭೯-೨೭). [ಸಂ.]

ಹ್ರಾದಿನಿ (ನಾ). ೧. ಮಿಂಚು; ವಿದ್ಯುತ್ತು: ''ಉದ್ಯತ್ಪೌದಾಮಿನಿಯೊಳಭಿದ್ಯೋತಿಸುಗುಂ . . . ಶತಹ್ರದಾ ಹ್ರಾದಿನಿಗಳ್'' (ವಸ್ತುಕೋ. ೧೧-೫೯). ೨. ಸಿಡಿಲು; ಅಶನಿ. ೧,೨: ''ಹ್ರಾದಿನಿ ಮಿಂಚುಂ ಸಿಡಿಲುಂ'' (ವಸ್ತುಕೋ. ೧೩೧-೨೨). ೩. ಇಂದ್ರನ ವಜ್ರಾಯುಧ; ಕುಳಿಶ: ''ಹ್ರಾದಿನೀ, ವಜ್ರಂ, ಕುಲಿಶಂ, ಭಿದುರಂ, ಪವಿ: . . . ವಜ್ರಾಯುಧದ ಹೆಸರುಗಳು'' (ಸಿದ್ಧಾಂತಿ. ೫೧). ೪. ನದಿ; ಹೊಳೆ; ತೊರೆ: ಸಲೆ ಕಲ್ಯಾಣದ ತೀರ್ಥದೊಳ್ ನಿಜವಿಶೇಷಹ್ರಾದಿನೀಸಂಚಯಕ್ಕಲ ವಿಪ್ರೋತ್ಪವು ಸನ್ನಿಧಾನಮೆಸಗುಂ (ಯಾದಚಂ. ೯-೨೪). ೫. ಒಂದು ಬಗೆಯ ಮರ; ಆನೆಬೇಲ: ''ಗಜಭಕ್ಷ್ಯಾ, ಸುವಹಾ . . . ಸಲ್ಲಕೀ, ಹ್ರಾದಿನೀ - ಈ ೪ ತದುಕು'' (ನಾಚಕಾ. ೧೧೦). [ಸಂ. ಹ್ರಾದಿನೀ]

ಹ್ರಾಸ (ನಾ). ೧. ಶಬ್ದ; ಸದ್ದು. ೨. ಕಡಮೆಯಾಗುವಿಕೆ; ಕ್ಷೀಣವಾಗುವಿಕೆ: ನಿರುತಂ ವೃದ್ಧಿ ಹ್ರಾಸಾ[ಪಾಕಾಂ. ಹ್ರಸ್ವಾ]ದಿರಹಿತನಾದ್ಯಾದಿ ಶೂನ್ಯನಭಯಕ್ರೋಧಂ (ವಿಷ್ಣುಪು. ೪-೧೦-೬೨); ಅದರ ವೃದ್ಧಿ ಮತ್ತು ಹ್ರಾಸಗಳಿಗೆ ಅವರು ನೇರವಾಗಿ ಸಂಬಂಧ ಪಟ್ಟವರು (ಕಾವ್ಯಕ. ೬). ೩. ಕೊರತೆ; ಅಭಾವ: ರಾಜಕೀಯಭಾಂಡಾರದಲ್ಲಿ ದ್ರವ್ಯವು ಹೆಚ್ಚುತ್ತ ಹೋಗದಿದ್ದರೆ ರಾಜನ ವೈಭವವೂ ಅಧಿಕಾರವೂ ಹೆಚ್ಚದ ಅವಕ್ಕೆ ಹ್ರಾಸವು ಒದಗುವ ಸಂಭವವಿರುವದು (ಮಭಾಗ. ೧೭); ನಮ್ಮ ಈ ಭೀಷಣವತನದ ಮುಖ್ಯಕಾರಣವು ನಮ್ಮ ಬ್ರಹ್ಮಚರ್ಯದ ಹ್ರಾಸವೇ ಸರಿ (ಬ್ರಹ್ಮಚೆ. ೧೫). [ಸಂ.]

ಹ್ರಾಸನ (ನಾ). ಕಡಮೆಯಾಗುವುದು: ಶಶ್ವದ್ಭಿಕಾಸನಹ್ರಾಸನಕ್ರಮಗಳಂ . . . ಸ್ವಸ್ವರೂಪವನರಸುವಾಟ ಪರಚೇತನದ ಹೃಷ್ಯದ್ಭಿಲಾಸವೆಲೊ (ಮಂಜಿಕ. ೨೩೧). [ಸಂ.]

ಹ್ರಿದ್ದೇಶ (ನಾ). ಮನಸ್ಸು; ಅಂತರಂಗ: ತಂನ ಹ್ರಿದ್ದೇಶದೊಳ್ ಹರಿಯಿರ್ಕುಂ (ಕ್ರಾ. IV, ೧೧೦: 1204). [< ಸಂ. ಹೃದ್ದೇಶ]

ಹ್ರೀ (ನಾ). ೧. ಲಜ್ಜೆ; ಸಂಕೋಚ: ಸುದತೀಸಂತತಿ ಪೊರ್ದಿಯುಂ ತ್ರಿದಿವಮಂ ದೇವೇಂದ್ರನಿರ್ಪಲ್ಲಿಗೆಯ್ದದ ತನ್ನಂದನಮಧ್ಯದಲ್ಲಿ ನೆಲಸಿರ್ದಹ್ರೀಸಮಾಯುಕ್ತೆಯರ್ (ಯಾದಚಂ. ೧೪-೩೯); ಹ್ರೀ ಎಂದರೆ ಅಕಾರ್ಯವನ್ನು ಮಾಡುವುದರಲ್ಲಿ ಲಜ್ಜೆ (ಧಾತತ್ತ್ವ. ೧೪೦). ೨. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು: ಎಲೆ ಚಂದ್ರ ನಿನ್ನ ಕಲೆಯೆಲ್ಲ ಸವದುಹೋಹುದಕೆ ಬಗೆದಯನೆ ಸವವುಕಿರ್ದವು ಕಣಾ ಬೇಹಸುತ ಕೇಳವರ ಪೆಸರಮೃತಮಾನಸಿ . . . ಹ್ರೀ ಶ್ರೀಯೊಳಾ ಕಾಂತಿಯಾ (ವೀಪ್ರಪು. ೨-೧-೩೧). ೩. [ಜೈನ]ಒಬ್ಬ ದೇವತೆಯ ಹೆಸರು: ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಉವರುಮನಾತ್ಮೀಯಗುಣಗಣಮಣಿವಿಭೂಷಣಂಗಳಿಂ ಜಿನಜನನಿಯನಲಂಕರಿಸಲುಂ . . . ಸೌಧರ್ಮೇಂದ್ರಂ ಬೆಸಸುವುದುಂ (ಆದಿಪು. ೭-೩ ವ); ಶ್ರೀ ಹ್ರೀ . . . ಲಕ್ಷ್ಮಿಯರೆಂಬ ದೇವಿಯರಂ ತೀರ್ಥಂಕರಜನನಿಗೆ ಪಸದನಮಂ ಪುದುಂಗೊಳಿಸಲುಂ . . . ಯೋಚಿಸಿ (ಪುಣ್ಯಾಸ್ರ. ೧೦-೧೪ ವ). [ಸಂ.]

ಹ್ರೀಂ (ನಾ). ಒಂದು ಬೀಜಾಕ್ಷರ: ಹ್ರೀಮೆಂಬೇಕಾಕ್ಷರಂ ತಾಂ ಪರತರಗುಣ ಗೌರೀಮಹಾದೀಜಮೇ ತತ್ಕೇಮಾಂಚನ್ಮಂತ್ರಕಂ ಪಿದ್ಧರ ವರದದಯ್ಯಂ (ಹಾಲಾಸ್ಯ. ೨-೭-೨೨). [ಸಂ.]

ಹ್ರೀಂಕಾರಿ (ನಾ). ಹ್ರೀಂಕಾರವೆಂಬ ಮಂತ್ರಸ್ವರೂಪಳಾದವಳು; ಹ್ರೀಂಕಾರವೆಂಬ ಮಂತ್ರದ ಅಧಿದೇವತೆ: ಓಂಕಾರರೂಪಿಣಿಗೆ ಹ್ರೀಂಕಾರಿ ವಾಣಿಗೆ ಸೌಂಕಾರಸದನೆ ಶಾಂಭವಿಗೆ ನೈಯಕ್ಕೆ ತಾಂಕರಿಗೆ ಹಚ್ಚಲು ಬನ್ನೀರೆ (ಸಿದ್ಧಪು. ೧೪-೧೪ ನೈಯಕ್ಕಪದ). [ಸಂ.]

ಹ್ರೀಣ (ಗು). ೧. ನಾಚಿದ; ಸಂಕೋಚಗೊಂಡ. (ನಾ). ೨. ನಾಚಿಕೊಂಡವನು; ಲಜ್ಜಿತನಾದವನು: ''ಹ್ರೀಣಂ ಹ್ರೀತಂ ವಿಲಜ್ಜಿತಂ ತಾನಕ್ಕುಂ'' (ವಸ್ತುಕೋ. ೧೦೫-೪೩). [ಸಂ.]

ಹ್ರೀತ (ಗು). ೧.= ಹ್ರೀಣ ೧. (ನಾ). ೨. = ಹ್ರೀಣ ೨: ''ಹ್ರೀಣಂ ಹ್ರೀತಂ ವಿಲಜ್ಜಿತಂ ತಾನಕ್ಕುಂ'' (ವಸ್ತುಕೋ. ೧೦೫-೪೩). [ಸಂ.]

ಹ್ರೀಬೇರ (ನಾ). ಒಂದು ಬಗೆಯ ಸುಗಂಧದ್ರವ್ಯ; ಕರಿಯ ಬಾಳದ ಬೇರು: ''ಹ್ರೀಬೇ[ಪಾಕಾಂ. ವೇ] ರಂ, ಬಾಳಕಂ, ಜಳಂ - ಈ ೩ ಕರಿಯ ಬಾಳಂ'' (ಹಲಾಯು. ೧೦೨-೪೬); ''ಬಾಳಮಾ ಹ್ರೀಬೇರಮೆನಲು ಲಾಮಂಚಮಕ್ಕುಂ'' (ಮಂಗರಾ. ೩೯-೫೯). [ಸಂ.]

ಹ್ರೀವೇರ (ನಾ). = ಹ್ರೀಬೇರ. [ಸಂ.]

ಹ್ರೇಷ (ನಾ). ಕುದುರೆಯ ಕೆನೆತ; ಹೇಷಾರವ: ''ಹೇಷಾ, ಹ್ರೇಷಾ - ಈ ೨ ಕುದುರೆಗಳ ಧ್ವನಿ'' (ಹಲಾಯು. ೨೪-೧೫೦). [ಸಂ. ಹ್ರೇಷಾ]

ಹ್ಲಾದ (ನಾ). ಸಂತೋಷ; ಆನಂದ. [ಸಂ.]

ಹ್ಲಾದಿನಿ (ನಾ). ೧. ಇಂದ್ರನ ವಜ್ರಾಯುಧ; ಕುಲಿಶ. ೨.ಮಿಂಚು; ವಿದ್ಯುತ್ತು. ೩. ಸಲ್ಲಕೀವೃಕ್ಷ; ಆನೆಬೇಲ. ೪. ಸಂತೋಷವನ್ನು ಕೊಡುವವಳು; ಆಹ್ಲಾದವನ್ನು ನೀಡುವವಳು: ನೆರೆಮಗಳ ಸೊಸೆಯಾದರೆ ಹ್ಲಾದಿನಿಯಾಗಬಾರದೇ? (ಪೂಸಕ್ಕ. ೧೭೫). ೫. [ವೇದಾಂತ] ವೈಷ್ಣವಮತದ ಒಂದು ತತ್ತ್ವ: ಭಕ್ತನಿಗೆ ಸುಖ ಕೊಡಲು ಹ್ಲಾದಿನಿ ಸೃಷ್ಟಿಯಾಗಿದೆ. ಹ್ಲಾದಿನಿಯ ತಿರುಳೇ ಪ್ರೇಮ (ಭಾರದ. ೨೯೯). [ಸಂ. ಹ್ಲಾದಿನೀ]

*

ಳ

ಳ (ನಾ). ೧. ಕನ್ನಡವರ್ಣಮಾಲೆಯ ಐವತ್ತುನಾಲ್ಕನೆಯ **ಅಕ್ಷರ**; **P** ವೇತೀಯವಾದಾಗ ಇದಕ್ಕೆ 'ಕುಳ' ಮೆದೂ ಸಂಸ್ಕೃತ ಲಕಾರಕ್ಕೆ ವಿಕಲ್ಪವಾಗಿ ಬಂದಾಗ 'ಕ್ಷಳ'ವೆಂದೂ ಹೆಸರು . ೨. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ: ''ಅಱಿ ಱು ಧ ಳಮೊಂಬತ್ತು'' (ಮಂಗರಾ. ೧೦೪-೧೦).

ಳಕಾರ (ನಾ). 'ಳ' ಎಂಬ **ಅಕ್ಷರ**: ವರ್ಣಂಗಳಕಾರಾದ್ಯಾಪೂರ್ಣತೆಯಂ ಪಡೆವುವಾ ಳಕಾರಂಬರೆಗಂ (ಶಮದ. ೪). [ಳ + ಕಾರ]

ಳತಾಂಗಿ 'ಲತಾಂಗಿ' ನೋ.

ಳತಾನೀಕ (ನಾ). ಬಳ್ಳಿಗಳ ಗುಂಪು : ತದ್ಯನಾಂತ ಳತಾನೀಕದಿನುಣ್ಮುತಿರ್ಪ ಕಳಕಂಠಧ್ವಾನ ಸಂತಾನಮಂದಿಲೆಕೆಯ್ದೆಂತುಮಗಲ್ದು ಪೋಗವು ರುವತ್ಕೀರಾಳಿ ಕೇದಾರದಿಂ (ಜಗವಿ.೨-೬). [ಸಂ. ಲತಾನೀಕ]

ಅ

ಅ (ನಾ). ಕನ್ನಡ ವರ್ಣಮಾಲೆಯ ಐವತ್ತೈದನೆಯ **ಅಕ್ಷರ**; **P** ಈ ಅಕ್ಷರದ ಆಕಾರವನ್ನು ಗಮನಿಸಿ ಇದನ್ನು 'ಶಕಟರೇಫ' ಎಂದೂ 'ಬಂಡಿಯ ರ' ಎಂದೂ ಹೇಳುತ್ತಾರೆ: ಯರಲಣನಳ ಱಬ ವರ್ಣೋತ್ಕರಮೆ ವಲಂ ಪದದ ಕಡೆಯೊಳಸ್ವರವಿಧಿಯುಂ ಪಿರಿದುಂ ತಾಳ್ದುಗುಂ (ಶಮದ. ೪೩).

ಅಂಚಿಕ್ಕ, ಅಂಚಿಗೆ, ಅಂಜಿಕ್ಕೆ (ನಾ). ಸವಾರಿಗಾಗಿ ಆನೆಯ ಮೇಲೆ ರಚಿಸಿದ ಪೀಠ; ಅಂಬಾರಿ; ಹೌದ: ''ಅಂಚಿಕೆ ಮಹಾಸನಮಕ್ಕುಂ'' (ಮಂಗರಾ. ೪೭-೬); ವಿಧಿವಶದಿಂದಾನ ಹೊಱುವ ಅಂಚಿಕೆಯ ಸನ್ನಿಧಿಯಶ್ವ ಹೊತ್ತು ಹೋಯ್ತನಲು ಅಧಿಕರು ಧರಿಸುವ ಚೈನಧರ್ಮವ ಕಡೆಗಧಮರೆ ಧರಿಸುವರೆಂದ (ಭರಚ. ೬೧-೪೧); ವಾಜಿಗಳನಿರದೆ ಹಲ್ಲಣಿಸಿದರ್ ಮತ್ತಗಜರಾಜಿಗಂ ಅಂಚಿಕೆಯನಿಕ್ಕಿದರ್ (ಚಿಬಪು. ೨೩-೨೫); ಓಂಚಿತು ಮಾತು ಮುಂಚಿದವಾಗ ಮದಗಜ ಅಂಚಿಕೆ ಸೂನಂಗಿ ಸಿರಿಯ ಕಂಚಿನ ತೊಟ್ಟಲು ಕೈಗತ್ತಿ ಸರಪಣಿ ಅಂಚೆಯಂಚೆಯಲೊದಗಿದವು (ಅಮುಸಾಂ. ೬-೭೮). **ಅಂಚಿಗೆ**: ಗಗನಕರಟಿಯು ಛಲ್ಲೂಕ ಚರ್ಮಗಳ ಅಂಚಿಗೆಯೊ ಭೂದೇವಿಗೆ ಪಿಡಿದು ನೆಗಪಿದ ಪೀಲಿದಳೆಯೊ ಪಗಲ್ಗತ್ತಲೆ ಸೊಗಸೊ ಕಾರಿನ ಮುಗಿಲೊಡ್ಡೊ (ವರ್ಧಚ. ೯-೬೬). **ಅಂಜಿಕ್ಕೆ**: ಭೇರಿಗೆ ಅಂಜಿಕೆಯಿಕ್ಕಿಯಂಕುಶದೊಳು ವಾರಣವೆಂದು ಕಡಿದರು ವಾರಣಗಳ ಹಿಂಭಾಗವ ಕುಡುಹೆತ್ತಿ ಭೇರಿಯನುತ ಬಾರಿಸಿದರು (ನಾಗಕು. ೧೬-೩೯); ಸೀಸಕ ತನುತ್ರ ಜಂಜಿಕೆ . . . ಯುಗಾಕ್ಷಂಗಳುರಿಗೊಳೆ ಪಾಂಡುಪುತ್ರಸೇನೆಯೊಳೆಲ್ಲರುಂ ಬೆದಱಿದರ್ (ಪ್ರಮಿಭಾ. ೬-೩೮); ಸಕಲಾತಿಯ ಅಂಜಿಕೆಯ ನಿಕರದ ಕರಿ ಕಾಲಾಳುಗೂಡಿದ ಪೌಜ ಯಕಲಾಸಖಾನ ತೋಜಿದನು (ಕಂನವಿ. ೧೧-೮೮).

ಅಂಚಿಕ್ಕೆ, ರಂಜಿಕೆ, ಱಂಜಿಕ್ಕೆ, ಱಂಜಿಗೆ (ನಾ). ಒಂದು ಬಗೆಯ ಸಸ್ಯ: ಮುಸಲಫಲಪತ್ರಸಂಭವ ಹಾಲಾಹಲ ಮುಖ್ಯಜಾತಿಯಂ ಸಂಹರಿಸಲ್ ನೀಲಿ ಹಯಗಂಧಿ ಱಂEಱಂಚಿಕೆ ಸಾಲದೆಯೊಂದೊಂದೆ ಧರೆಯೊಳಂ (ಖಮದ. ೨-೧೫). **ರಂಜಿಕೆ**: ತಾವರೆ ಯಲಿ, ರಂಜಿಕೆ . . . ಬಜೆ ಇವಂ ಸಮಭಾಗ ಕಷಾಯವಿಕ್ಕಿ ಸೇವಿಸೆ, ರಕ್ತಗತಜ್ವರ ಗುಣವಹುದು (ಸಕವ್ಯ. ೧೦೭). **ಅಂಜಿಕ್ಕೆ**: ''ನಂಜು ಅಂ[ಪಾಕಾಂ. ಅಂ] ಜಿಕೆ ತೊಟ್ಟು ತುಪ್ಪೆಯಕ್ಕುಂ'' (ಮಂಗರಾ. ೪೨ ೩೭); ''ಶಕುಲಾಕ್ಷಕಃ- ಗಂಧರ್ವದೂರ್ವೆ, ಅಂಜಿಕೆ, ಬಳೆಯ ಗಱುಕೆ'' (ಓಷಧಿ. ೧೬೨); ನಲದಾಱು(ದೊಳು) ಅಂಜಿಕೆ ಕಕ್ಕೆಯುಂ ಬಗೆಯೆ ನೀರ್ಗಡರಿ(ವಿ)ನ ಪೊದಱಿಂ ಪುತ್ತಿನ ಮೇಗೊಂದುತ್ತರದೊಳ್ ಬಗೆದು ಮೂಗೆಯ್ಯಂ ಮಾಣ್ದಾಗುಱು ಬಾವಿಯಂ ಮೂಱಾಳ ಮಟ್ಟದೊಳ್ ನೀರ ಧಾರೆಗಳಕ್ಕುಂ (ಱುವಾ. ೧೧-೫೫). **ಅಂಜಿಗೆ**: ಗಿರಿ (ಪಿರ) ಕರ್ಣ ನೀಲಿ ಅಂಜಿಗೆ ಸುರದಾಳಿಯ ಬಿತ್ತು ಗುರ್ದುಗಿ ನೆಲೆಯೆಂಬವನೊಂದಿರೆ ಕೂಡಿ ತಿಂದೊಡಾತನೆ ಗರುಡನವಂಗಟ್ಟಿ ಬಳ್ಳ ಮನೆಗುಂ ಫಣಿಗಳ್ (ಱೋಕೋಪ. ೧೦-೧೭); ಸುರದಾಳಿ ನೀಲಿ ಅಂ(ಚ)ಜಿಗೆ ಕ(ಖ)ರ ಕರ್ಣಕೆಯೆಂಬಿನಿತಱೊಳೊಪ್ಪುವ ಬೇರಂ ಬೆರಸಂಬಿಲದಿಂದರೆದೀಗರಿದನಿಸುವ ಫಣಿವಿಷಂಗಳಂ ಪರಿಹರಿಕುಂ (ಖಮದ. ೫-೬೦). [?]

ಅಂಜಿಗೆ 'ಅಂಚಿಕ್ಕೆ' ನೋ.

ಅಂಚೆ, ರಂಚೆ, ಱಂಚೆ, ಅಂಚೆಯ, ಱೆಂಚೆ, ಱೆಂಚೆಯ (ನಾ). ಆನೆ, ಕುದುರೆಗಳ ಪಕ್ಕರಕ್ಕೆ; ಜೂಲು: ''ಅಂಚೆ ಗುಟಗಳು ಕುದುರೆಯಾನೆಗಳ ಪಕ್ಕರಿಕೆ'' (ಶಬ್ದಮಂ. ೪೨); ಪೊಸಪೊಸಬಣ್ಣದಿಂದಂಚಿತ ಅಂಚೆಯಂ ಪಣ್ಣಿದ ಪಟ್ಟವರ್ಧನಗಜೇಂದ್ರಮನೇಱಿ (ದಾಧಪು. ೧೦-೩೧ ವ); ಹಣ್ಣಿದ ಅಂಚೆಯ ಹರಹಿದ ರನ್ನಗಂಬಳಿಯ ಕಟ್ಟಿದ ಕೊಂಬುಗತ್ತಿಯ ಕರದ ಸರಪಳಿಯ ಒಟ್ಟಿದ ನಟ್ಟನಡುನೆತ್ತಿಯ ನಮಸಿಂಧೂರದ ಗಂಡಸ್ಥಳದೊಳ್ (ಹಮ್ಮಾರ. ೩-೩೩ ವ). **ರಂಚೆ**: ಆನೆಗಳ ರಂಚೆಗಳಪಿಲ ಪಟಿಗಳಾ ಸಲ್ಲಲಿತ ರಥಪಾಶಗಳನುಂ ನಿಲ್ಲದೇ ಭೇರ್ಯಾದಿ ವಾದ್ಯಗಳಲ್ಲಿ ನೋಡಿದರೊಂದುಮಿಲ್ಲದ ತೆರದಿ ಖಂಡಿಸುತ (ಆರ್ಜುವಿ. ೯-೫೫). **ರೆಂಚೆ**: ''ರೆಂಚೆ - ಜೂಲ; ಆನೆಯ ಜೂಲ'' (ಪಾನೋ. ೪೦). **ಅಂಚೆಯ**: ಮಣಿಯ ಅಂ[ಪಾಕಾಂ. ಅಂ]ಚೆಯದಂಜನದ್ವಿವದಂತೆ ಹಗೆಗಳ ನಂಜು ಪುಗುತಂದಂ . . . ಲಕ್ಷ್ಮಣನು (ಕುಮುರಾ. ೬-೩). **ಱಂಚೆ**: ''ಗುಟಮೆಂದು ಱಂಚೆಯೆಂದೊಡಮಾನೆಗಳ ಕುದುರೆಗಳ ಪಕ್ಕರಿಕೆ'' (ಕಬ್ಬಿಕ್ಕ. ೪೧); ಸಿಂಧುರದೊಳ್ ಱಂಚೆಯುಮಂ ಮಲಂಗಿ ಜಿನನಾಥಂಗಿಕ್ಕಿದರ್ ಚಾರುಚಾಮರಮಂ ನಿಂದು ಸನತ್ಕುಮಾರನುಂ . . . ಮಾಹೇಂದ್ರನುಂ (ಅನಂಪು. ೫-೬೫); ಬಿಡು ಗಜವ ಬಿಗಿ ಱಂಚೆಗಳ ತೆಗೆ ದಡಿಯ ಹಾಯಿಕು ಗುಳವ (ಕುವ್ಯಾ. ೮-೧೧); ಮೇಳವಿಸಿದನು ಬಲವ ಮನೆಗಣದೋಳಿವೆಳಗಿನ ಱಂಚೆ [ಪಾಕಾಂ. ಚೆ] ಹಣ್ಣಿದ . . . ಮದೇಭವ ಜೋದರೋಜೆಯಲಿ (ತೊರಾ. ೬-೨೦-೭); ಕೊರಲೊಳ್ ಸ್ವರ್ಣದ ಱಂಚೆಗಳ್ ಮಿನುಗೆ ಘಂಟಾಧ್ವಾನಮಿಂಬಾಗೆ . . . ಸಿಂಧುರಯೂಥಂ ಚಳದೇವರಾಯ ನಿದಿರೊಳ್ ಕಣ್ಗೊಪ್ಪುಗುಂ ಚೆಲ್ವಿನಿಂ (ಯಾದಚಂ. ೪-೧೭). **ಱೆಂಚೆಯ**: ಹಮ್ಮಿದ ಗುಳದ ಹೂಡಿದ ಱೆಂಚೆಯದ . . . ನಿಂದ ಗಜಘಟಾಪಟಲದೊಳಂ (ಗಿರಿಕ. ೬-೫೫ ವ);

ಅವರಿದನು ನಿಜಸತಿಸಹಿತ ಹೊಂಗದ್ದುಗೆಯ ಹೊಂಬೆಸದ ಅಂಚೆಯದ . . . ಮತಂಗದ ಕಂಧರವ (ತೂರರಾ. ೨-೨-೨೧).

ಅಂಚೆಯ 'ಅಂಚೆ' ನೋ.

ಅಂಜಿಕೆ$_1$ 'ಅಂಚಿಕೆ$_1$' ನೋ.

ಅಂಜಿಕೆ$_2$ 'ಅಂಚಿಕೆ$_2$' ನೋ.

ಅಂಜಿಗೆ 'ಅಂಚಿಕೆ$_2$' ನೋ.

ಅಕಾರ (ನಾ). 'ಅ' ಎಂಬ ಅಕ್ಷರ: ಪಲ್ಲಟಿಸಿ ಡಕಾರದ ನೆಲೆಯಲ್ಲಿ ಟಕಾರಂ ಅಕಾರದೊಳ್ ರೇಫಂ ತಾನೆಲ್ಲಿಯುಮಕ್ಕುಂ ಪದವಿಧಿಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ (ಕಾವ್ಯಾವ. ೫೬೬); ಪದದ ಕಡೆಯಣ ಡಕಾರಕ್ಕುದಯಿಪುದು ಟಕಾರಮಾ ಅಕಾರಕ್ಕೊದವಿರ್ಪುದು ರೇಫಂ ವ್ಯಂಜನಪದಮಿದಿರೊಳ್ ಸಂದಿಸೆ ಸಮಾಸದೊಳ್ ಬಹುಳತೆಯಿಂ (ಶಮಪ. ೧೪೩). [ಅ + ಕಾರ್ಮ]

ಅಕ್ಕೆ (ನಾ). (ಹಾರುವುದಕ್ಕೆ ಸಹಾಯವಾಗುವ ಪಕ್ಷಿಗಳ) ರೆಕ್ಕೆ; ಪಕ್ಕ: ಅಲ್ಲಿಂ ತಳರ್ದು ಹಿಮವದ್ಗಿರಿಯ ಸಮೀಪಕ್ಕೆ ಪೋಗೆವೋಗೆ ಮುನ್ನ ಪರ್ವತಂಗಳ್ಗೆ ಅಕ್ಕೆಯುಳ್ಳುದಱಿಂದಖಿಳಧಾತ್ರಿಯಂ ತೊಲ್ಲು (ಧರ್ಮಪ. ೩-೫೭ ವ); ಆ ನೃಸಿಂಹನಂ ಹೊಡದೆತ್ತಿ ಅಕ್ಕೆಯಿಂದೌಂಕಿ ಪಾಱಿದನಹೋಧ್ವಮಂಡಲಕ್ಕೆ ವೀರಂ (ವೀಶ್ಯಪು. ೩-೬-೧೯); ಅಕ್ಕೆಗಳನುಱಿ ಜೋಲಿಸುತ್ತ ಜೊಂಪಿಪುದೊಮ್ಮೆ . . . ಪತಿವಿರಹದಿಂದಮಾ ಪೆಣ್ಗಳ್ಗೆ (ಚಿಬಪು. ೪೬-೬); ಅಕ್ಕೆಯಂ ಬಿದಿರ್ಚಿ ಮೊರೆದೆಲ್ದು ಮೇಣುಂ ಮುಂಬರಿವ ಬವರಿವಿಂಡಿಂ . . . ಬನಂ ಮನಂಗೊಂಡುದು (ರಾಮಾಶ್ವ. ೫೪-೪). 'ಎಱಂಕೆ' ಪರಾ. [< ಎಱಂಕೆ]

ಅಚ್ಚಿ, ರಚ್ಚು, ರಚ್ಚಿ$_1$, ರೊಚ್ಚು, ರೊಚ್ಚಿ, ರೊಜ್ಜು, ಜೊಜ್ಜು (ನಾ). ೧. ಕೆಸರು: ಪಂಕಃ ತಿರಿದುಂಡು ಕಚ್ಚುಟವನುಟ್ಟು ಅಚ್ಚಿಯೊಳ್ಪಟ್ಟು ಮುಟ್ಟುಗಟ್ಟುಚ್ಚೆಗಮುಬ್ಬರಿಸಿ ನಮೆದುದನದಂ ಮಱೆದಿರೆ (ಸುಬುಮಾ. ೪-೩೦). ೨. (ಆಲಂ) ಮಾತ್ಸರ್ಯ; ದ್ವೇಷ; ಹಗೆ: ನೆಲಗಡೆಯೊರ್ವಳ್ ಅಚ್ಚಿಗೆ ಬಂದರ ಕಂಡುಡುಪಾನನೆಯೊರ್ವಳ್ ತನ್ನೋರಗೆಯಬಲೆಯೊಳುಸಿರಿದಳು (ಜಯಕಾ. ೧೪-೪೪); ಲವಮಾತ್ರ ಅಚ್ಚೆಯಿಕ್ಕಿದಗೆ ಬಹುಹುಚ್ಚಿಂಬುದಂ ಈಗ ನಿಚ್ಚಯದಿ ತಿಳಿಯಬಂದಿತ್ತು (ಪ್ರಭುಪು. ೯-೨೯); ಅಚ್ಚು ಇಲ್ಲದ ಬಂಡಿ ಮೆಚ್ಚು ಇಲ್ಲದ ದೊರೆಯು ಅಚ್ಚೆಯಲಿಹನ ಚ್ಛಸವಿಮಾತು ಎಂದಿಗು ನಚ್ಚಬೇಡಂದ (ಸರ್ವಜ್ಞ. ೧೫೮೬). ೩. ದೂಷಣೆ; ನಿಂದೆ; ಅಪವಾದ: ಮಾತಿನಂತುಟಲ್ಲ ಶಿವಾಚಾರದ ಸರಿದೊಡಕು ಕಾಣರಣ್ಣಾ ಅಚ್ಚೆಯ ಮಾತಲ್ಲ ಬೀದಿಯ ಮಾತಲ್ಲ ಏಕೋರಾತ್ರಿಯ ಬಂದು ನೋಡಣ್ಣಾ (ಅಪಚಂ.ಕ. ೧೪೩-೫೦೦); ಮರ್ತ್ಯದೊಳಗೆ ಈಶಲಾಂಛನವ ಹೊತ್ತವರಿಗೆಲ್ಲ ನಿತ್ಯತ್ಯ ಉಂಟೀ ಇದಱ ಅಚ್ಚೆಯ ಹೊಱಲಾಱದೆ ಮರ್ತ್ಯಕ್ಕೆ ಹೊಱಗೆಂದ (ಮೋಳಮಾ. ೧೪೭-೭೦೩). 'ಅಚ್ಚಿವಾತು' ಪರಾ. ೪. ರಗಳೆ; ಹಗರಣ; ಗೊಂದಲ: ಕೊಱಚಾಡಿಲ್ಲರ ಮುಂದೆ ಅಚ್ಚಿಗೆಳೆಯುತ್ತಂ ಕಿತ್ತು ಮೆಯ್ಕೆಲ್ಲವಂ ಹಱಿತಿಂದು (ಸೋಮೇಶ. ೭೩); ಹಱಲೆಯೊಳು ತಂದಿಕ್ಕಿತೆನ್ನ ಡಂಬಿನ ಭಕ್ತಿ . . . ಅಚ್ಚಿಗಂ ಬೀದಿಗಂ ಬರಿಸಿತೆನ್ನಯ ಭಕ್ತಿ (ತಿರುಗ. ದೇ. ೫೧-೧೯). ೫. ಚಂಡಿ; ಛಲ; ಹಟಮಾರಿತನ: ಬಾರದುದಂ ಕಡುಬಯಸಿ ವ್ರತಂಗೆಟ್ಟೀ ಅಚ್ಚೆಯೊಳಿರ್ದೊಡೆ ನಿನ್ನಾತಂ ಕೂರಿದಂ (ಜಯಕಾ. ೧೦-೬೦). ೬. (?): ಮಚ್ಚರಿಸುವಂ ಪಳಿದು ಬಚ್ಚೆಯಪ್ಪಂ ಬಿಡದೆ ಅಚ್ಚೆಯ ವಿದೂಷಕನದೊರ್ವ ಕೆಳೆಯಂ (ಜನವ. ೮-೯); ಅಚ್ಚೆಯ ವಿಟರೆದೆಯೊಡೆವಂತೆ ಸ್ತ್ರೀಯರು ಮೆಚ್ಚನುಯ್ಕಲೆಯಾಡಿದರು (ಆಮುಸಾ. ೩-೭೭). **ರಚ್ಚು**: ೭. ಸೇಡು; ಮುಯ್ಯಿ: ಮಹಾಬಲ ಮೋಸ ಮಾಡಿದ – ನಾರಣಪ್ಪ ರಚ್ಚು ತೀರಿಸಿಕೊಂಡ (ಸಂಶ್ಕಾರ. ೧೩೨); ಹಾವಿಗೆ ಹನ್ನೆರಡು ವರ್ಷ ರಚ್ಚಿರುತ್ತದೆ (ಪ್ರಶ್ನ. ೧೭೩). ೮. ರೋಷ; ಕೋಪ: ಹುಲಿಯ ರಚ್ಚನು ತಾಳಲಾಪುದೆ ಮೊಲನು (ಅಂಬಿಕಾ. ೬-೪೧); ರಚ್ಚನೋಳ್ ಗಿರಿಗೆ ವಜ್ರ ಪೊಡೆದಂತೆ ರಿಪುಬಲ ಬೆಚ್ಚಿದುದು (ತುರಂಗ. ೫೦-೪೫). **ರಚ್ಚಿ$_1$**: ೩. ಶ್ರೀರಾಮಾನುಜರ ದೃಷ್ಟಾಂತಗಳು ಸಮಸ್ಯೆಯನ್ನು ವುತ್ತಿಷ್ಟು ಕ್ಲಿಷ್ಟ ಮಾಡಿದುವು. ಕಕವಿಕ ಹಿಡಿಸಿದವು, ರಚ್ಚಿಗೆಳೆದವು (ಜೀವಾತ್ಮ.೩೦೬). **ರೊಚ್ಚು**: ೧. ಧ್ಯಾನಕ್ಕೆ ಕುಳಿತಾಗಲೆಲ್ಲ ಅವರ ಮೇಲೆ ಕಸವನ್ನೂ ಕೊಚ್ಚೆಯನ್ನೂ ರೊಚ್ಚನ್ನೂ ತಂದು ಸುರಿಯುವರು (ಪ್ರಗಂಬ. ೨೨).

೭. ಕಲಿ ಬಬ್ರುವಾಹನಂ ಬಿಲ್ದೋಡು ರೊಚ್ಚನೋಳ್ ತೆಗೆದೆಸೆಯಲಾ ತರಂ ಫಲುಗುಣನ ಹೃದಯದೋಳ್ ಥಟ್ಟುಚ್ಚಿತು (ತುರಂಗ. ೮೨-೨೮). ೮. ರೋಹಿಣಿಯ ಮೇಲೆ ಆ ಗುಂಡನಿಗೆ ಬಹಳ ರೊಚ್ಚು (ರಂಗರೋ. ೧೦೯); ಎಷ್ಟು ದಿವಸ ರೊಚ್ಚು, ಏನು ನಿಷ್ಕಾರಣ ದ್ವೇಷ! (ಗಂಮಾಯಿ. ೧೧೦). **ರೊಚ್ಚೆ**: ೯. ಬಗ್ಗಡ; ರಾಡಿ: ಬಚ್ಚಲಲ್ಲಿ ಕೊಚ್ಚೆಯು ರೊಚ್ಚೆಯೋ ರೊಚ್ಚೆಯು ಕೊಚ್ಚೆಯು! (ಸಡಬಂ. ೪-೬). **ರೊಜ್ಜು**: ೯. ಎತ್ತುಗಳ ಕಾಲಿನಲ್ಲಿ ಮತ್ತು ಅವುಗಳು ಮಲಗುವ ಸ್ಥಳವಲ್ಲಿ ಕಸರು ಹುದಲು ರಾಡಿನೀರು ರೊಜ್ಜು ಆಗದ ಹಾಗೆ . . . ಸಗಣಿಯನ್ನು ಮೂತ್ರವನ್ನು ಬಳದು ಹಸನು ಮಾಡುತ್ತಿರಬೇಕು (ಕೃಪಪ್ರ. ೧೯). **ಜೊಜ್ಜು**: ೧. ಸಜ್ಜನರ ಸಂಗವದು ಹೆಚ್ಚೀನುಕೊಡದಂತೆ ದುರ್ಜನರ ಸಂಗದೊಡನಾಟ ಬಚ್ಚಲಿನ ಜೊಜ್ಜಿನಂತಿಹುದು (ಸರ್ವಜ್ಞ. ೪೧೯).

ರಚ್ಚೆಗಿಕ್ಕು = ರಗಳೆ ಮಾಡು; ರಂಪಮಾಡು; ಗೊಂದಲವನ್ನುಂಟುಮಾಡು: ತುಚ್ಛದಾನವನ ದುರ್ಮತಿಯಿಂದಮಿವರೆಲ್ಲ ರಚ್ಚೆಗಿಕ್ಕುವರಲ್ಲದೇನುಂಟು (ವಂಕಾರಾ. ೬-೬೨-೪೨); ಮೆಚ್ಚಿ ಸೂಳೆಯ ಮನೆಯ ಹೆಂದಿರ ರಚ್ಚೆಗಿಕ್ಕುವ ರಾಪುಮಾಡುತ (ಕಂಕ. ೮೬-೨). **ರಚ್ಚೆಹಿಡಿ** = ಹಟಹಿಡಿ; ಚಂಡಿಮಾಡು: ನರಸಿಂಹ ರಚ್ಚೆಹಿಡಿದು ಅಳುತ್ತಿದ್ದರೆ . . . ಸಮಾಧಾನ ಮಾಡುತ್ತಿದ್ದರು (ತಾಯಿಕ. ೭೯); ರಚ್ಚೆ ಹಿಡಿದ ಮಗುವನ್ನು ಸಮಾಧಾನಗೊಳಿಸುವುದು ಎಷ್ಟು ಕಷ್ಟವೆಂದು ನನಗೆ ಆಗ ಗೊತ್ತಾಯಿತು (ಸನ್ನಕ. ೧೦೬). **ರೊಚ್ಚಿಗೆಬ್ಬಿಸು** = ರೇಗಿಸು; ಕೆರಳಿಸು: ಪ್ರಜೆಗಳನ್ನು ಕೆಣಕಿ ರೊಚ್ಚಿಗೆಬ್ಬಿಸಿದಂತಾಗುವುದು (ಕೃಷ್ಣಭೂ. ೨೧೮); ತಾನು ಹಿಂದೆ ಪಟ್ಟ ಸುಖದ ನೆನಪು ಬಂದು ದೇಹವನ್ನು ರೊಚ್ಚಿಗೆಬ್ಬಿಸಿದರೂ ಸೋಜಿಗವೇನಿಲ್ಲ (ಭೀವಾಕಾ. ೨೩೧). **ರೊಚ್ಚಿಗೇಳಿಸು** = ರೊಚ್ಚಿಗೆಬ್ಬಿಸು: ನನ್ನ ಮನಸ್ಸನ್ನು ರೊಚ್ಚಿಗೇಳಿಸಬೇಡಿ (ದೇವಪಂ. ೨೦೪). **ರೊಚ್ಚಿಗೇಳು** = ರೇಗು; ಕೆರಳು; ವ್ಯಗ್ರವಾಗು: ಜನನಾಯಕರನ್ನು ಬಂಧಿಸಿದುದರಿಂದಾಗಿ ಜನತೆ ರೊಚ್ಚಿಗೆದ್ದಿತು (ಕುರುಕಾ. ೧೪೯); ರೊಚ್ಚಿಗೆದ್ದ ಹುಡುಗರು ಮಚ್ಚರವಿಟ್ಟ ಸರ್ಪದ ಹಾಗೆ (ಮರಳಿ. ೧೪೭). **ಅಚ್ಚಿಮಾಡು, ರಚ್ಚಿಮಾಡು, ರೊಚ್ಚಿ ಮಾಡು** = ರಗಳೆ ಮಾಡು; ರಂಪಮಾಡು: ಅಚ್ಚ ಪಾಲ್ಗೊಸರು ನವನೀತವು ಮಜ್ಜಿಗೆ ಅಚ್ಚಿಮಾಡಿ ಕುಡಿವ (ಪುರಂದ. ೨-೯೩-೫); ಪದಗಳನ್ನು ಹೇಳದಿದ್ದರೆ ಮಗು ತೊಟ್ಟಿಲಲ್ಲಿ ಸುಖವಾಗಿ ಮಲಗಿ ನಿದ್ರಿಸುವುದಿಲ್ಲ, ರಚ್ಚಿಮಾಡುತ್ತದೆ (ಹಳ್ಳಿಬಾ. ೧೧); ತನ್ನ ತಾಯಿಯ ಕೈಗಾಗಲಿ ಅಜ್ಜಿಯ ಕೈಗಾಗಲಿ ಹೋಗಲೊಲ್ಲದೆ ರೊಚ್ಚಿಮಾಡುತ್ತಿರಲು . . . ಎಳೆದೆತ್ತಿಕೊಂಡಾಗ ಅವನು ಅಳತೊಡಗಿದನು (ಮರಮ. ೩೨೬). [ದೇ. ತೆಲು. ಜೊಚ್ಚು, ರೊಚ್ಚು, ರೊಚ್ಚಿ]

ಅಚ್ಚಿಗೆಯ್ (ಕ್ರಿ). ಹಟಹಿಡಿ; ಚಂಡಿಮಾಡು: ಇದಿರ್ಗ ಬಾರಳು ಬೆಚ್ಚ ನೋಳ್ಪಳೊತ್ತಿನಿಂದೆ ಮಚ್ಚಿ ವೆಱನ ನಡವಳುಲಿದು ಅಚ್ಚಿಗೆಯ್ಯಳ್ (ಜಸವ. ೧೧-೬೨). [ಅಚ್ಚಿ + ಕೆಯ್$_1$]

ಅಚ್ಚಿವಾತು (ನಾ). ನಿಂದೆಯ ಮಾತು; ಅಪವಾದ: "ವಿಗಾನಂ, ವಚನೀಯತಾ – ಈ ೨ ಅಚ್ಚಿವಾತು" (ಹಲಾಯು. ೨೪-೧೪೬). [ಅಚ್ಚಿ + ಮಾತು$_1$]

ಅಟ್ಟ 'ರಟ್ಟ' ನೋ.

ಅಟ್ಟಕುಳ 'ರಟ್ಟಕುಳ' ನೋ.

ಅಟ್ಟಡಿ (ನಾ). ಬಯ್ಗುಳು; ನಿಂದೆ: 'ಅಟ್ಟಡಿಕಾತಿ' ಪರಾ.

[← ತೆಲು. ಅಟ್ಟಡಿ, ರಟ್ಟಡಿ]

ಅಟ್ಟಡಿಕಾತಿ (ನಾ). ಮಾತಿನಲ್ಲಿ ಗಡುಸುತನ ತೋರುವವಳು; ಗಡುಸುಗಾತಿ: ಪತಿಭಕ್ತೆ ಧೀರೆ ಶೃಂಗಾರೆ . . . ಅಟ್ಟಡಿಕಾತಿ ನುಡಿದಳು ರತಿದೇವಿರಮಣನೊಳಾಗ (ಭರಚ. ೫೦-೫೦). [ಅಟ್ಟಡಿ + – ಕಾತಿ$_3$]

ಅಟ್ಟಡಿಕಾರ್ತಿ (ನಾ). = ಅಟ್ಟಡಿಕಾತಿ: ಮೇಲ್ಕಾಯ್ದುಂ ವಿಟನ ಕೇಶಾಗ್ರಮಂ ಪಿಡಿವುತಡಿಕಿಲ್ಕಾಸಿನೊಳ್ಕೆಡಂಪುತ್ತೆ . . . ಬಲ್ಸಿನ್ನಡದ ಗಳರವಂಗಳಿಂ ಝಂಕಿಸುತರಲ್ವ ಪೂಮಾಲೆಯಿಂ ಪೊಯ್ವುತ್ತಲೊರ್ವೆ ಅಟ್ಟಡಿಕಾರ್ತಿಯೆಸೆದಿರ್ದಳು (ಚೀರಮ. ೮-೫೨). [ಅಟ್ಟಡಿಕಾಱಿ + – ತಿ$_1$ (<– ಇತ್ತಿ)]

ಅಟ್ಟಡಿಕಾಱಿ (ನಾ). ಶತ್ರುಗಳನ್ನು ಮೂದಲಿಸುವವನು: ಬಟ್ಟರ್ಲಿ ಬಿಡದೆ ದಂಡತ್ತಿ ನಡೆದು ರಿಪು ಅಟ್ಟಡಿಕಾಱಿಗಳೆಯ್ತಂದು . . . ಬೆಳ್ಳಿಯ ಬೆಟ್ಟವ ಕಂಡನಿದಿರೊಳು (ಭರಚ. ೨೮-೬೧). [ಅಟ್ಟಡಿ + – ಕಾಱಿ]

ಅಟ್ಟಡಿತನ (ನಾ). ಗಡುಸುತನ; ದಿಟ್ಟತನ: ಅಡಿ ಮುಡಿ ಸಂಚು ವಂಚನೆ ವಿಡಾಯಮಾಡರ್ಪ್ ತೊಡರ್ಪು ತೋಟಿ ಅಟ್ಟಡಿತನಂ . . . ಮಸುಳ್ಗಣಿಕಾಂಗನೆಯರ್ಗೆ ಶಾಶ್ವತಂ (ವೃಷಪ. ೨೮-೬೩). [ಅಟ್ಟಡಿ + - ತನ]

ಅಟ್ಟೆ, ರಟ್ಟೆ, ರಟ್ಟೆ (ನಾ). ೧. ಪಕ್ಷಿಯ ರೆಕ್ಕೆ, - ಪಕ್ಕ: "ಎಱಂಕೆಯೊಳು ಅಟ್ಟೆ" (ಶಬ್ದಮಂ. ೩೧); ಮೂಱುವರ್ಣದ ಗಿಣಿ ಮಱಿಯನಿಕ್ಕಿತ್ತು ಅಟ್ಟೆ ಬಲಿದು ಹಾಱಲಾಱದು (ಕಲ್ಯಾಶಾ. ೩೬); ಅಟ್ಟೆ ಮುಱಿದು ಪಕ್ಷಿ ಹಾಱಿತ್ತು ಹಾಱುವ ಪಕ್ಷಿಯ ಮಾಱಿ ನುಂಗಿತ್ತು ಬಯಲು (ಮೋಳಮಾ. ೨೨೨-೨೭೪); ಸುರಪತಿ ಶಮ್ಮ ಅಟ್ಟೆಯ ಕಡಿವಂದಂಜಿ ಶರಧಿಯ ಹೊಕ್ಕ ಶೈಲಗಳು ಇರದಲ್ಲಿಂ ಪೊಱಮಡುವಂತೆಯ್ದಿ ದವುರುತರಮೆಂಬು ಭೇರುಂಡ (ನೇಮಿಸಂ. ೧೦-೨೩೨). ೨. ತೋಳು; ಬಾಹು: ದೈತ್ಯ ಬಂದಡಹಾಯ್ದು ಅಟ್ಟೆಯ ಹಿಡಿದಿಡಲಾಗಿ ಕಂದರ್ಪ ನಿಂದನಾಗಸದೆ (ವೋಪತ. ೧೨-೬೩); ಕುಟ್ಟುವ ನೆವದಿಂದ ಅಟ್ಟೆಯನು ತಿರುಹುವಳು (ಸರ್ವಜ್ಞ. ೧೭೪೧). **ರಟ್ಟೆ**: ೨. ವಿದೂಷಕನು . . . ರಟ್ಟೆಗಳಿಗೆ ಹಿಂಗಟ್ಟುಗಳಂ ಕಟ್ಟುತ್ತ (ಸೌಗಂಧಿ. ೫೦೩-೧೭); ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಯಲ್ಲಿಲ್ಲ (ಕಗದ್ಯ. II, ೫೧); ರಟ್ಟೆ ಮುರಿಯಬೇಕು, ರೊಟ್ಟಿ ತಿನ್ನಬೇಕು (ಗಾದೆ). **ರೆಟ್ಟೆ**: ೨. ಮೃದುವಾಗಿ ರಟ್ಟೆಯ ಮೇಲೆ ಕೈಯಾಡಿಸಿದಳು (ದೀಪದ. ೧೦೫); ಮೊಂಡಕೊಡಲಿ ರೆಟ್ಟೆಗೆ ಮೂಲ (ಗಾದೆ).

[ದೇ. ॥ ತುಳು. ಕೊಡ. ರಟ್ಟೆ; ತೆಲು. ರೆಟ್ಟು]

ಅಟ್ಟೆಗಡಿ (ಕ್ರಿ). ರೆಕ್ಕೆಗಳನ್ನು ಕತ್ತರಿಸು, - ತುಂಡರಿಸು: ಸುರಪತಿ ಅಟ್ಟೆಗಡಿಯೆ ನಭದಿಂ ನೆಲಕುರುಳುವ ಬೆಟ್ಟುಗಳಂತೆ ಭರದಿ ತಿರುಗುವ ಡೊಂಕಣಿಯ ಬಲ್ಲುಂಡುಗಳರಿಗಳ ಮೇಲುದುರಿದುವು (ಚಂತ್ರಸಾಂ. ೮-೬೧). [ಅಟ್ಟೆ + ಕಡ್ತಿ]

ಅತ್ತ (ನಾ). = ಐಕಾರ: ಐಕಾರಕ್ಕೆ = ಅತ್ತಕ್ಕೆ (ತಮದ. ೬೬ ಟೀಕೆ). [ಐ + - ತ್ತ]

ಅಪಱಪಱನೆ, ರಪರಪನೆ (ಅ). ಒಂದು ಅನುಕರಣ ಶಬ್ದ: ಪಟಪಟನಿಕ್ಕುವ ಪಕ್ಕಗಳಿಂದಂ ಅಪಱಪಱನದಿರ್ಗುಂ ಬಾನ್ ಬಯಲೆಲ್ಲಂ (ಬದ್ಧಪ್ರ. ೮-೧೬.೨). **ರಪರಪನೆ**: ಆತನಿಗೆ ಬಂದ ಕೋಪದಲ್ಲಿ ಜಗಳವಾಡುತ್ತಿದ್ದವನ ಕೆನ್ನೆಗೆ ರಪರಪನೆ ಬಾರಿಸಿದನು (ರೂಢಿ). [ಅಪಱಪಱ + - ಅನೆ]

ಅಪ್ಪು 'ಜೊಬ್ಬು' ನೋ.

ಅವಕೆ 'ಅವಿಕೆ' ನೋ.

ಅವಿಕೆ, ರವಕೆ, ರವಿಕೆ, ಱವಕೆ (ನಾ). ೧. ಹೆಂಗಸರು ತೊಡುವ ಕುಪ್ಪಸ: ಕಿಱಿಗೆ ಱವಿಕೆಯುಂ ಬೊಂಬೆದೊಟ್ಪಲು ಮೊದಲಿವೆಲ್ಲವನು ತಂದುಕೊಡುವರು ನಾಳೆ (ಬಸವ. ೧೪-೧೫); ಮುಸುಕಿ ಅವಿಕೆಯೊಳಡಸಿ ಜೋಲ್ವ ಪೆರ್ಮೊಲೆಗಳಂ . . . ಲೋಲೆಯರ್ ಮೆಱೆದರ್ (ಚಿಬಪು. ೧೦-೭೫); ಎನಗಱಕವಾಗಿರುವನ ಕರೆತಂದರೆ ನೀಱೆ ನಿನಗೆ ಪರಿಪರಿ ಸೀರೆ ಅವಿಕೆಯಿತ್ತು ಪೊರವನು (ಕಂಸವಿ. ೯-೪೩). **ರವಕೆ**: ೧. ರವಕೆಯಂದೊಟ್ಟು ಕುಂಕುಮಬೊಟ್ಟನಿಟ್ಟು (ಪುಷಾವಿ. ೨೨-೫೪); ಬೆಳ್ಳುಡೆಯನುಡಿಸಿದರ್ ರವಕೆಯಂ ತೊಡಿಸಿ (ಕಾಲೂರ. ೧೪೩-೪೧೪); ಇಂದುಮತಿ . . . ಸಿಲ್ಕ ರವಕೆ ತೊಟ್ಟುಕೊಂಡು ತಯಾರಾದಳು (ಅವನಾ. ೨೪೮). ೨. ಮೈಜೋಡು; ಕಪಚೆ: (ಪ). **ರವಿಕೆ**: ೧. ಬಿಗಿಯಾಗಿ ರವಿಕೆಗಳಂ ತೊಟ್ಟು (ಸೌಗಂಧಿ. ೧೯೧-೧೫೫); ಸುನಂದೆಳ ತಾಯಿ ಸುಂದರಮ್ಮ . . . ರವಿಕೆಯೊಂದಕ್ಕೆ ಗುಂಡಿ ಹಾಕುತ್ತಾ ಹೊರಗೆ ಬಂದರು (ಮೂಬಿಟ್ಟಿ. ೧); ಉಟುಕೊಳ್ಳೆ ಸೀರೆಯ ತೊಟುಕೊಳ್ಳೆ ಸಣ್ಣರವಿಕೆಯ (ನಾಪದ. ೨೩). **ಱವಕೆ**: ೧. ಜಾಜಿ ಬೀಳುವ ಮೊಲೆಗಳನು ಸೇರಿಸಿ ಱವಕೆಯಿಂದೆತ್ತಿ ಕಟ್ಟಿಯ ಪೃದ್ವಾವನಿತೆಯರೊಪ್ಪಿದರು (ಜೀವಂಸಾಂ. ೧೯-೬೩); ಅಂಜನವರ್ಣದ ಸಣ್ಣ ಱವಕೆಯಪರಂಜಿಯಂದದ ಮೈಗೆ ಮೆಱೆಯೆ ಮಂದುವಸ್ತ್ರದ ಮೇಲುಸೆಱಗು ಬೆಡಂಗಿಳಿದೇಂ ಚಾಣೆ ದಿಟ್ಟಗೊಪ್ಪಿದಳೊ (ಭರಚ. ೪೦-೬೩); ಬೆಮರ್ದಂಗಂ ಪತ್ತಿದತ್ತೀ ಱವಕೆಯನುಗಿ ನೀಂ (ರಾಜಶೇ. ೧೧-೧೪೧).

[ದೇ. ॥ ತಮಿ. ರವಿಕ್ಕೈ, ಇರವಿಕ್ಕೈ; ತುಳು. ರವಕೆ; ತೆಲು. ಜವಿಕ, ರವಿಕ, ಱಯಿಕ, ಜ್ಯೆಕ]

ಅಳ 'ಱಟ' ನೋ.

ಱಟ, ರಳ, ಱಳ (ನಾ). 'ಟ' ಎಂಬ ಅಕ್ಷರವನ್ನು ಗುರುತಿಸಲು ಉಪಯೋಗಿಸುವ ಸಂಜ್ಞೆ; IP ಕುಳ, ಕ್ಷಳಗಳಿಂದ ಬೇರೆಯಾದ 'ಟ' ಕಾರವನ್ನು ಅದರ ತಕಾರದಿಂದ ಈ ರೀತಿ ಗುರುತಿಸುತ್ತಾರೆ: ಸ್ಫಟಿಕಂ ಪೇಟಕೆ . . . ಲಂಪಟ ಶಬ್ದಯುಗಂ ಱಟಕ್ಕೆ ನೆಲೆ ಸಂದೇಹಂ (ಶಮದ. ೨೨); ಕುಳ ಱಟಂಗಳೊಳ್ಳರ್ತಿಸಿರ್ಕುಂ (ಸಂಜೀವ. ೧೦). **ರಳ**: 'ಟ' ಕ್ಕೆ ರಳ ಎಂದೂ 'ಱ' ಕ್ಕೆ ಶಕಟರೇಫ ಅಥವಾ ಬಂಡಿಯ ರ ಎಂದೂ ಹೆಸರಾಯಿತು (ಕೃಪಿಡಿ. ೪); ಹನ್ನೊಂದನೆಯ ಶತಮಾನದವರೆಗೂ ಈ ರಳ (< ಱಟ) ಅದು ಹೇಗೋ ಉಸಿರಾಡುತ್ತಿದ್ದು . . . ಈಚೆಗೆ ನಶಿಸತೊಡಗಿತು (ದ್ರಾವಿಪ್ರ. ೩೨೬). **ಱಳ**: ಕವಿತತಿ ವಿಚಾರಿಸಬೇಡದಱಂ ಱಳ ಕುಳ ಕ್ಷಳಂಗಳನಿದಱೊಳ್ (ಗಿಂಕ. ೧-೩೨); ಱಳ ಕುಳ ಶಿಥಿಲಸಮಾಸ ಮುಂತಾದವಱೊಳಗಿಲ್ಲಿ ಕೆಲವುಳ್ಳರುಂಟು (ಭರಚ. ೧-೪).

ಱಟುಂತ (ನಾ). 'ಟ'ಕಾರದಿಂದ ಕೊನೆಯಾಗುವ ಶಬ್ದ: ಱಟುಂತಕ್ಕೆ - ಆಗಟ್ಟಳ್, ಎಸಟ್ಟಳ್ (ಶಮದ. ೪೨ ಪ್ರಯೋ). [ಱಟ + ಅಂತ್ಯ]

ಱಂತ (ನಾ). 'ಱ'ಕಾರದಿಂದ ಕೊನೆಯಾಗುವ ಶಬ್ದ: ಱಂತದೊಳಂ ಮೃತಿದಾನಾರ್ಥಾಂತದೊಳಂ ವ್ಯಂಜನದ ತಕಾರಂ ದೀರ್ಘಂ ಪಿಂತಿರೆ ಬರ್ಕುಂ ಹ್ರಸ್ವತೆ ಱಂತಕ್ಕಂ ರೇಫಮೊರ್ಮೆ ತವುಗೆ ಪಕಾರಂ (ಶಮದ. ೨೪೦). [ಱ + ಅಂತ್ಯ]

ಜೂಟಣ, ರಾಟಣ, ರಾಟಣೆ, ರಾಟವಾಣ, ರಾಟವಾಳ, ರಾಟವಾಳೆ, ರಾಟಳ, ರಾಟಾಣ, ರಾಟಾಲ, ರಾಟಾಳ, ರಾಟೆವಾಳೆ, ಜೂಟವಳ, ಜೂಟಳ, ಜೂಟಾಳ (ನಾ). ೧. ಬಾವಿಯಿಂದ ನೀರೆತ್ತುವ ಗಾಲಿಯ ಯಂತ್ರ; ಚಕ್ರ; ಅರಘಟ್ಟಕ: "ಉದ್ಘಾಟಕಂ, ಘಟೀಯಂತ್ರಂ, ಪಾದಾವರ್ತಃ, ಅರಘಟ್ಟಕಃ- ಈ ೪ ಜೂಟಾಣಂ" (ಪಲಾಯು. ೧೧೩-೬೩); ನಿನಗೀ ಖಿಳಸಂಸೃತಿಯೆಂಬುದೊಂದು ಜೂಟಣದೊಳಗಮ್ಮ ನೀಂ ಮೊಗವೆಯಾಗದೆ ತಾಳ್ದವರ್ಗಮಾರ್ಗಮಂ (ಆದಿಪು. ೩-೭೧); ಜೂಟಣದ ಮೊಗವೆಯಂತೆ ಕಡವ ಕಡೆಗೋಲಂತೆ . . . ಮಾಣದೆ ತಿರುಗುವ ಬಾಬುಮಂ ನಂಬಿ ಮೆಯ್ಯಱಿಯದೆ ಭೋಗಕಾಂಕ್ಷೆಯಿಂದಿರ್ದಂ (ಧರ್ಮಾಮೃ. ೯-೨೩); ಜೂಟಣದ ಗುಂಡಿಗೆಯೊಲಾದಂ ಧರ್ಮಮನಱಿಯದೆ (ಕುಮುರಾ. ೬-೧೧). **ರಾಟಣ**: ೧. ಅಯ್ನೂರ್ವರುಂ ರಾಟಣದ ಬಾವಿಯ ಧರ್ಮೋದಕ್ಕೆ . . . ಕೊಣ್ಮು ದಿಟ್ಟ ಎರೆ ಮತ್ತರರಡು (ಪೌಣಾ. XX, ೫೫-೪೨; 1082); ಅಲ್ಲಿಯ ನೀರ್ಗಿಕ್ಕಿದ ರಾಟಣಂಗಳೊಳಂ ಮತ್ತಱೊಳ್ಪತ್ತುಕೊಳಗ ಭತ್ತವಾಗೆ ಮತ್ತರ ಲೆಕ್ಕದಿಂ (ಕಾಇ. ೮೮-೧೯-೩೪; ಸು. 12ನಯ ಶತ). **ರಾಟಣೆ**: ೨. ಯಂತ್ರದಲ್ಲಿ ಉಪಯೋಗಿಸುವ ಚಕ್ರ,—ಗಾಲಿ: ಹಡಗಿನ ಪಟ, ಪಟದ ಅಡ್ಡದಿಮ್ಮಿ, ಮೊ.ವನ್ನು ಎತ್ತುವ . ಅಥವಾ ಇಳಿಸುವ ಹಗ್ಗ, ರಾಟಣೆಯ ಸಲಕರಣೆ (Halyard. ಇಂಕಸ). **ರಾಟವಾಣ**: ೧. "ರಾಟಣ - ನೀರೆಳೆಯುವ ಗಾಳಿರಾಟೆ (ರಾಟವಾಣ; ರಾಟವಾಳ; ರಾಟಾಳ)" (ಜಾನಪೋ. ೪೦). **ರಾಟವಾಳ**: ೧. ರಾಟವಾಳದ ಭಾಂಡದಂತೆ ಲೆಕ್ಕವಿಲ್ಲದೆ ತಿರುಗುತ್ತ (ತತ್ಪಚಂ. ೨-೧೨); ಮಾಯಾಬದ್ಧನಾಗಿ ರಾಟವಾಳಕ್ಕೆ ಬಿಗಿದ ಭಾಂಡದೋಪಾದಿಯಲ್ಲಿ ತಿರುಗುತ್ತ (ನಾನಾಗು. ೧೪-೪). ೩. ಮರದ ಕುದುರೆಗಳೂ ತೊಟ್ಟಿಲುಗಳೂ ಇದ್ದು ಚಕ್ರಾಕಾರವಾಗಿ ತಿರುಗುವ ಆಟದ ಯಂತ್ರ: ಹಣ್ಣು ಗಂಡು ಹುಡುಗರೆಲ್ಲಾ ಒಂದೊಂದು ಪೈಸಾ ಕೊಟ್ಟು ರಾಟವಾಳದಲ್ಲಿ ಸುತ್ತಿದುವು (ನಬಂಧ. II, ೧೧೯). **ರಾಟವಾಳೆ**: ೩. ರಾಟವಾಳಿಗೆ ಪುರುಸತ್ತೇ ಇಲ್ಲ. ತೆಪ್ಪೋತ್ಸವದ ದಿನವೂ ಅದು ತಿರುಗಿತು (ದಿನಾ. ೮೫). **ರಾಟಳ**: ೧. ಎಸಗುವದು ರಾಟಳದಂತೆ ಸೂಕ್ಷ್ಮತನುವು (ಚಿದಾವ. ೧೩೭-೬). **ರಾಟಾಣ**: ೧. "ರಾಟಣ(ಳ, ರಾಟಾಣ), ರಾಟಾಳ, ರಾಟೆ - ಅರಘಟ್ಟ= ಜಲಯಂತ್ರ" (ತದ್ಭಕೋ. ೩೮). **ರಾಟಾಲ**: ೧. ತೊಟ್ಟಲ ಜೀಕವ ತೂಗಿ ಕೈಬಿಟ್ಟರೆ ಗಾಳಿಯ ರಾಟಾಲದೊಳು ಪ್ರಾಣವು ತಿರುತಿರುಗಿ ಬಂದರು ತಳಗೆ ಮೇಲೆಂದರು ಮುಂದಿಲ್ಲ ಹಿಂದಿಲ್ಲ ಹಾಗೆ ಇದೆ (ಸಪೀಗೀ. ೩೧-೫೮೮). **ರಾಟಾಳ**: ೧. ಸೋಜಿಗದ ರಾಟಾಳ ಸೂತ್ರದ ವಿವಿಧ ನೂತನದ ಭೋಜನದ ಶಾಲೆಗಳ . . . ಪುರ ರವಿತೇಜದಲಿ ಜಗಜಗಿಸುತಿರ್ದುದು (ಅಂಬಿಕಾ. ೬-೧೩); ಜೀವ ಹಂಕಾರದೊಡವೆರದು ಜನನಮರಣಾದಿಗಳನನುಕರಿಸಿದವನಂತೆ . . . ರಾಟಾಳದೊಳ್ ತಿರುಗುವಂ (ವಂಕಾರಾ. ೪-೮-೩೨); ಈ ರಾಟಾಳವು ಎಂದೆಂದಿಗೂ ಸುತ್ತುತ್ತಲಿದೆ (ವಿಜಾಮಂ. ೫೩). **ರಾಟೆವಾಳೆ**: ೩. ಒಂದು ರಾಟೆವಾಳ! ಒಂದೇ ರಾಟೆವಾಳೆಯಾದರೆ ಆಯಿತು! ಕುದುರೆ ಇರುತ್ತೆ; ಆನೆ ಇರುತ್ತೆ; ಕುರ್ಚಿ ಇರುತ್ತೆ (ದಿನಾ. ೮೨). **ಜೂಟವಳ**: ೨. ಹತ್ತಿ ನೋಡಿದೊಡಿನ್ನೆರಡು ಸುತ್ತಿನ ಕೋಟೆಯೊತ್ತಿನಲಗಳು ಕಂದುಕವ ಮತ್ತೆ ಜೂಟವಳ ಸೂತ್ರದ ಯಂತರಗಳ ಬಿತ್ತರವನು ಕಂಡರಾಗ (ಕಂಸವಿ. ೧೪-೩೬). **ಜೂಟಳ**: ೧. ಜೂಟಳದಂದದಿಂ ತಿರಿವ ಸಂಸೃತಿದುಃಖದಿಂ ಪೊಱಮಟ್ಟು ಶಾಶ್ವತಸೌಖ್ಯದೊಳ್ ನೆರೆವುಪಾಯಮನಲ್ತಿಯಂ

ಬೆಸಸಲ್ಕೆವೇಟ್ಟು (ಧರ್ಮಾಮೃ. ೧-೬೫); ಊಟಳ ಮುಱಿದು ಸೂತ್ರ ಹಱಿದು ನಿಶ್ಶೂನ್ಯವಾದಡೆ ಕೂಡಲಚನ್ನಸಂಗಯ್ಯನಲ್ಲಿ ಮಹಾಪ್ರಸಾದಿಯೆಂಬೆ (ಚನ್ನವ.ಕ. ೫೭೧-೧೨೫೮); ವಸಂತರಾಜಂ . . . ಗಿಡುವಂ ನಟ್ಟು ಊಟಳಮನೆತ್ತಿ ಬೆಳೆಯಿಸಿದಂ (ಗಿಂಕ. ೨-೭೧ ವ); ಜ್ಯೋತಿಶ್ಚಕ್ರಂ ತುದಿಯೊಳ್ ಮಾತೇಂ ಊಟಳದ ತೆಱದೆ ತಿರುಗುತ್ತಿರ್ಕುಂ (ದಶಕು.೭-೨೦); ರಿಪು ಕೌರವರ ರಕುತದ ಊಟಳವನೆತ್ತುವೆನು (ಸುವ್ರಾಅ. ೮-೪೯). ೩. ಸಿಂಗಾರವಡೆದ ಊಟಳದುಯ್ಯಾಲೆಯ ಮಂಗಳವಿಭವದಿನಡರ್ದು . . . ತುಂಗಯೌವನೆಯರಾಡಿದರು (ಮೋಹತ. ೧೪-೮೮). ಊಟಾಳ: ೧. "ಅರಘಟ್ಟ ಮುದ್ಗಾಟಕಂ ಘಟೀಯಂತ್ರಮೆನೆ ತಿರಿಗಿ ಬಹ ಊಟಾಳಮೆನಿಕು" (ಮಂಗರಾ. ೧೨೫-೧೯); ಅಖಂಡಮಂಡಲವೆಂಬ ಭಾವಿಪ ವನವೆ ಊಟಾಳ (ಅವಚಂ. ೧೮೦-೮೧೨); ಪರುಶವಿಸಿದರು . . . ಕೊಪ್ಪರಿಗೆ ಯಂತ್ರದ್ಧೋಣಿಗಳ ಊಟಾಳಸೂತ್ರಗಳ (ತೂರರಾ. ೧-೭-೮). ೩. ಸುರುಚಿರ ದಿವ್ಯವಿಮಾನಗಳೆನಲಾಗ ಮೆಱೆದುವು ಊಟಾಳಗಳು (ಕಂನವಿ. ೨೦-೩೫).

[ದೇ. ॥ ತಮಿ. ಇರಾಟ್ಟಿನಮ್; ತೆಲು. ರಾಟನ, ರಾಟ್ನ]

ಊಟವಳ 'ಊಟಣ' ನೋ.

ಊಟಳ 'ಊಟಣ' ನೋ.

ಊಟಾಳ 'ಊಟಣ' ನೋ.

ಊಟ್ಟು, ಅರಟೆ, ರಹಟ, ರಹಾಟ, ರಾಟೆ (ನಾ). ೧.= ಊಟಣ ೧: "ಅಂಧುಃ, ಕೂಪಃ- ಈ ೨ ಬಾವಿ. ಪ್ರಧೀಃ, ನೇಮಿಃ, (ಅದಱ ಊಟ್ಟು) [ಪಾಶಾಂ. ಊ್ಯಾಟ]" (ಪಲಾಯು. ೧೧೩-೬೨). ಅರಟೆ: ೨. ನೂಲು ತೆಗೆಯುವ ಸಾಧನ; ಚರಕ: "ತ್ರಸರಃ, ಸೂತ್ರವೇಷ್ಟನಂ - ೨ ನೇಯಿಗೆಯವರು, ನೂಲುಸುತ್ತುವ ಅರಟೆ Eಟೆ3 "(ಸಿದ್ಧಾಂತಿ. ೩೭೪). ರಹಟ: ೧. 'ರಹಟಘಟಿಕಾನ್ಯಾಯ', 'ರಹಟಘಟೀಯಂತ್ರ' ಪರಾ. ರಹಾಟ: (ಕ). ರಾಟೆ: ೧. ರಾಯರು . . . ಹಿತ್ತಿಲಲ್ಲಿದ್ದ ಬಾವಿ ತೋರಿಸಿದರು. ಹೊಸತಾದ ಹುರಿಹಗ್ಗ ರಾಟೆಯ ಕೊರಳಿಗೆ ಆತುಕೊಂಡಿತ್ತು (ಬಸಶಾಂ. ೧೪೭). ೨. ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವ ಕೆಡುಗು (ಸರ್ವಜ್ಞ. ೧೩೫೭); ಎಲ್ಲೋ ಒಂದೊಂದು ಮನೆಯ ಅಟ್ಟದ ಮೇಲೆ ಓಬೀರಾಯನ ಕಾಲದ ರಾಟೆಗಳಿದ್ದವು (ಹುಟ್ಟಿಹ.೭). ೩. ಯಂತ್ರದಲ್ಲಿ ಉಪಯೋಗಿಸುವ ಚಕ್ರ, — ಗಾಲಿ: ಈತನು . . . ರಾಟೆ (Wheel and Axle), ಕಪ್ಪಿ (Pulley), ತಿರುವು (Screw), ಈ ಸರಳಯಂತ್ರಗಳ ಉಪಯೋಗವನ್ನು ವಿಸ್ತಾರವಾಗಿ ತಿಳಿಸಿದ್ದಾನೆ (ಶಿಲ್ಪನಾ. ೯೦).

[ದೇ. ॥ ತಮಿ. ರಾಟ್ಟೈ; ತುಳು. ರಾಟೆ; ತೆಲು. ರಾಟ್ನ./ ಸಂ. ಅರಘಟ್ಟ./ ಪ್ರಾ. ರಹಟ್ಟ, ಅರಹಟ್]

ಊಮಡಿ (ನಾ). ಒಂದು ಊರಿನ ಹೆಸರು (?): ಶ್ರೀಚೋಟಮಹಾರಾಜಜ್ಗೆ ಚಾತೆಯಪರಸಿನ XX ಕಣ್ಣ ಕೊಟ್ಟ ಊಮಡಿಯ ತಳಾಉಮಿಣ್ಣಪೋದಿಯ ಪಿಳ್ಳಯತಲೆದ್ XX ಗಾರಮುಂ (ಎಕ.X. ಗೂರೀಪಿ. ೭೩-೩; ಸು. 900). [?]

ಱೆಂಚೆಯ 'ಱುಂಚೆ' ನೋ.

ಱೆಕ್ಕಟ್ಟ$_1$ (ನಾ). ೧. ಬರಿದಾದುದು; ವ್ಯರ್ಥವಾದುದು; ಪ್ರಯೋಜನ ವಿಲ್ಲದುದು: "ಱೆಕ್ಕಟಮೊದನಲ್ಕ ಬಱೆದೆಂಬುದು" (ಕರ್ಣಾನಿ.೫೦); ಮರುಳಾಗಿ ಕೆಮ್ಮನೀತನನುರಿಯಂ ಕಾಣ್ಬಂತೆ ಕಂಡು ಱೆಕ್ಕಟಮುನಿಸಿಂ ಹರಿಯಿಸುವೆನೆಂದು ಪಾಪದ ಭರದಿಂ ನರಕಕ್ಕೆ ಜಗುಟ್ಟನೆನ್ನಾತ್ಮಶಂ (ಧರ್ಮಾಮೃ. ೧೦-೨೧೭); ಱೆಕ್ಕಟದ ಶಕ್ತಿಯಂ ಮುಂದಿಕ್ಕಿಯುಮಾತ್ಮಾಂತರಂಗದೊಳ್ ಮುಳಿಸಂ ಪಿಂದಿಕ್ಕಿಯುಮಿಾ ಘಣಿಯಂ ಕೊಂದಿಕ್ಕದಿರ್ (ಜಗವಿ. ೩-೧೧೧); ಱೆಕ್ಕಟಮಾದುದೀ ಬಟೆಯೇಟ್ಟೆ (ರಾಮಾಶ್ವ. ೧೬-೨೫). ೨. ಮೌನ: "ಱೆಕ್ಕಟಮೆಂದುಂ ಮೂಗುವಟ್ಟುದೆಂದುಂ ಮೌನಂ" (ಕಶಸಾ. ೫೮-೨೮೬). [?]

ಱೆಕ್ಕಟ್ಟ$_2$ 'ಱೆಕ್ಕಟಂ' ನೋ.

ಱೆಕ್ಕಟಂ, ಱೆಕ್ಕಟ್ಟ$_2$ (ಅ). ನಿಷ್ಕಾರಣವಾಗಿ; ಸುಮ್ಮನೆ: "ಱೆಕ್ಕಟಂ, ಬಿನ್ನನೆ, ಬಿನ್ನಗೆ- ಈ ೩ ಸುಮ್ಮನೆಯೆಂಬರ್ಥಂ" (ಕಶಸಾ. ೫೮-೨೮೫); ಆ ದೆಸೆಯನಣಂ ನೋಡಲ್ಸಂಕಿಸುವೆನಗೆ ಮದಾಳಿ ಱೆಕ್ಕಟಂ ಪಲ್ಮೋರೆವಾ (ಮಲ್ಲಿಪು. ೩-೪೧); ಪೊಲ್ಲಮೆಯಿಲ್ಲದೆ ಕಳವಿನಿಸಿಲ್ಲದೆ ಱೆಕ್ಕಟಮದೇಕೆ ಭೂಪಾಲಂ ನಮ್ಮೆಲ್ಲರುಮಂ ಸಱೆವೊಯ್ದಪಂ (ಧರ್ಮಾಮೃ. ೨-೫೦); ಱೆ [ಪಾಶಾಂ. ಅ] ಕ್ಕಟಮೆ ನಿಂದಿಸದೊರ್ಮೆ ಪರಿಕಿಸುವುದು (ಪದ್ಮರಾ. ೮-೩೩). ಱೆಕ್ಕಟ್ಟ$_1$: "ಱೆಕ್ಕಟ ಬಿನ್ನನೆಯೆನೆ ಸುಮ್ಮನೆಂಬ ಪರಿ" (ಕವಿಕಂ. ೧೩೧); ಘಟಕುಚಯುಗ ವಲ್ಲಭನುಂಗುಟದೊಳ್ ತನ್ನಕ್ಷಿಯುಗಳವುಂ ಕಂಡೊರ್ಬಳ್ ಜಟಿಮಾನ್ಗಳಿಲ್ಲಿಗೇಕಕ್ಕಟ ಱೆಕ್ಕಟ ಬಂದುವೆಂದು ನೋಡುತ್ತಿರ್ದಳ್ (ಧರ್ಮಾಮೃ. ೭-೨೧೯). [< ಱೆಕ್ಕಟ್ಟ$_1$]

ಱುಂಚೆ, ರಂಜೆ, ಱೆಂಚೆಯ, ಱುಂಜೆ (ನಾ). ಒಂದು ಬಗೆಯ ಚರ್ಮವಾದ್ಯ: ಪೊಯ್ಕೆಕ್ಕವ ಕೈಯೆಯ ದನಿಯುಂ ಉದ್ದುವ ಱುಂಚೆ [ಪಾಶಾಂ. ಜೆ] ಯ ರವಮುಂ ಬಾಜಿಪ ಜಿಂಕರಮುಂ ರವಳಿಯಂ ನೆರವೆ (ಅರ್ಥನೇ. ೮-೭೫ ವ); ಱುಂಚೆ ಹತ್ತು ಬೀರಣವಱೆ ಹತ್ತು ಹತ್ತು ಡಮರು . . . ಇನಿತು ವಾದ್ಯಂಗಳ ವೃಂದ ಮೊಱೆವವು (ಕುರಾಸಾಂ. ೪೧-೬೭); ಗೋವಳರು ಬಾಜಿಪ ತಿತ್ತಿರಿಯ ಕೊಂಬುಗಳ . . . ಱುಂಚೆಯ ಎಕ್ಕತ್ತಿದ್ದಳೆಯೂ ಒತ್ತರಿಪ ದನಿಗೇಳುತಾ ಪುರುಷೋತ್ತಮನು . . . ಬರುತ (ಸಾಳ್ವಧಾ. ೨೨-೫೮). ರಂಜೆ: ಬೀರಿದುವು ನಿಸ್ಸಾಳತತಿ; ಅಂಜೆ ಗಜಘಟೆ ಗಜರಿದುವು ರಂಜೆ (ಶ್ರೀರಾಮಾ. ೬೦-೮೬). ಱೆಂಚೆಯ: ಡೌಡೆ ಕುಕ್ಕುರು ತುಡುಮು ಱೆಂಚೆಯವಾ . . . ಕೇಳಿಸಿದರು (ಭರಚಿ. ೧೨-೪೦). ಱುಂಜೆ: ಱುಂಜೆಯ ದನಿ ದಿಕ್ಪಾಲರನಂಜಿಸೆ . . . ನಭಮಂ ಜೇವೊಡೆಯುಲಿವು ಸುತ್ತಿ ಮುತ್ತಿತ್ತಾಗಳ್ (ಪಂರಾಮಾ. ೪-೫೬); ಒತ್ತುವ ಕೋಡ ಕಾಳ ಕುಣಿವೋಜೆಗೆ ಬಾಜಿಪ ಱುಂಜೆ . . . ಮತ್ತೊತ್ತುವ ಗರ್ಜಿತಂ ಮೆಱೆವ ಬೆಟ್ಟದ ಬೇಡರ ಪಳ್ಳಿಪಳ್ಳಿಯೊಳ್ (ಸೂತ್ರಿಸು. ೩-೨೦೧); ಕರಿಯ ಬೃಂಹಿತ ಹರಿ ಹೇಷಾರವ ಜೇಂಕರಣ ಬಾಜಿಸಿ ಱುಂಜೆಗಳ ಅರದ ಚೀತ್ಕೃತ ನುಡಿಸುವ ವಾದ್ಯಕಾ ಸಿಂಗ ಕೆರಳ್ದು ಮೇಲೆಯ್ತಂದುದಾಗ (ಪರ್ಧಚ. ೪-೪೧); ಕೊಳಲು ತಪ್ಪಟೆ ಱುಂಜೆ ಚಿನ್ನಗಾಳೆಯು ಭೇರಿ . . . ಭೋರೆಂದು ಮೊಱೆಯೆ (ಜ್ಞಾನಚಿ. ೪-೪೮). [ದೇ. ॥ ತೆಲು. ರುಂಜೆ]

ಱುಂಜೆ 'ಱುಂಚೆ' ನೋ.

ಱುಂಜೆಯುರ್ದು (ಕ್ರಿ). 'ಱುಂಜೆ' ವಾದ್ಯವನ್ನು ಬಾರಿಸಿದಂತೆ ಬಾರಿಸು, — ಏಟು ಹಾಕು: ರಾಜಕುಮಾರರ್ ಪಲರುಂ . . . ಕಲ್ಲೆಲೆ ನಿಂದ ಮುನಿಯಂ ಕಂಡು ಮುನಿದು ಗುಂಡುಗಳಂ ಕೊಂಡಿಟ್ಟು ತಣಿಯದೆ ಕಲ್ಲುಗಳನಡಕಿ ತಂದೊಟ್ಟಿ ಕೊರಳ್ಳರಂ ಪೂಜ್ದಿರ್ದಡದನೇಱಿ ತಲೆಯಂ ಱುಂಜೆಯುರ್ದಿ ಬಾಜಿಸಿ ಪಾಡುತ್ತಿರೆ (ಬಂಕಾ. ೧೪-೨೫ ವ); ಆ ಪೊಬಲ ಪೊಲೆಯನೊರ್ವಂ . . . ಮಹರ್ಷಿಯಂ ಱೋಡಾಡಿ ಕಾಡಿ ಪೆಗಲನೇಱಿರ್ದು ತಲೆಯಂ ಱುಂಜೆಯುರ್ದುತ್ತುಂ ಬಾಜಿಸಿದೊಡೆ (ಜೀವಸಂ. ೧೪೪-೨೧ ವ).

[ಱುಂಜೆ (< ಱುಂಚೆ) + ಉರ್ದು$_1$]

ಱುಂಜೆವಾರಿಸು (ಕ್ರಿ). = ಱುಂಜೆಯುರ್ದು: ಅವಂದಿರ್ . . . ಆ ಮುನಿಯ ತಲೆಯನಂಜದೆ ಱುಂಜೆವಾರಿಸಿ [ಪಾಶಾಂ. ವಾಸಿ] ಪೋಪುದುಂ (ನೇಮಿಪು. ೧೪-೭೦ ವ); ಆ ತಪಸ್ವಿಯಂ ಕೈಗಲ್ಗಳಿಂದಿಟ್ಟು . . . ತಲೆಯೊಳ್ ತಳಂಗಳಿಂ ಱುಂಜೆವಾರಿಸಿ ಪೋಪುದುಂ (ಮಹಾನೇ. ೧೬-೩೬ ವ). [ಱುಂಜೆ (< ಱುಂಚೆ) + ಬಾರಿಸು$_1$]

ಱೆಂಕೆ 'ಎಱಂಕೆ' ನೋ.

ಱೆಂಚೆ$_1$ 'ಱಂಚೆ' ನೋ.

ಱೆಂಚೆ$_2$ (ನಾ). ಒಂದು ಬಗೆಯ ವಿಲಾಸಗೃಹ (?): ಮಾಡಮಂ ಪತ್ತಿ ಸುತ್ತಿಱೆದ ಕರಗದಡಪದ ಡವಕೆಯ ಮಡಿಯ ಪರಿಯಾಣದ ಬಾಣಸಿನ ಗುಣನೆಯ ಮಜ್ಜನದ ದೇಹಾರದ ಱೆಂ[ಪಾಶಾಂ. ರೆಂ]ಚೆಯ ಕೊಂಚೆಯದ . . . ಮಂಡವಿಗೆಯ ವಿಳಾಸ ನಿವಾಸಂಗಳಿಂದಂ (ಶಾಂತಿಪು. ೧೦-೧೪೭ ವ). [?]

ಱೆಂಚೆಯ 'ಱಂಚೆ' ನೋ.

ಱೆಕ್ಕೆ 'ಎಱಂಕೆ' ನೋ.

ಱೆಪ್ಪು, ರೆಪ್ಪು (ಕ್ರಿ). ೧. ಹೊಡೆ; ಬಡಿ: "ಱೆಪ್ಪು- ಪ್ರಹರಣೇ" (ಶಮಧಾ); ಮಱೆಯುಗೆ ಕಾವನುಂ ತಪ್ಪೆ ತಪ್ಪುವನುಂ ಮಗಳುದಡೆ ಱೆಪ್ಪುವನುಂ ಅದೆಂತು ಮೊಪ್ಪುವನುಂ (ಎಕ.VI, ತರೀಕೆ. ೬೧-೩೭; 1154?); ತಗುರ್ದಟ್ಟಿ ಱೆಪ್ಪುವ ಮಾಱೆಯನಾಯಕ (ಮೃಅರಿ. ೧೯೩೭, ೧೭-೨೯; 1198); ದೈತ್ಯರಂ ಱೆಪ್ಪಿ ಸೊಪ್ಪಿ ಸೋವಿದ ಶ್ರೀರಾಮಂ ಬೇಳ್ಪ ಜನ್ನದ ಹಸುವಂ ಕಳ್ಳುಯ್ದುಂ ಬಾಟ್ಟೆನೆಂದು ಬಗೆವ ನೀನಾವೊಂ? (ರಾಮಾಶ್ವ.

೧೧೨-೨೦). **ರೆಪ್ಪು**: ೨. ಹಾಕು; ಎಸೆ: ಕಣ್ಣಾ ರೆಪ್ಪೆ ತೆರೆಯದಲಿರಲು ಹೇಲನು ರೆಪ್ಪುವರು ದೇಹಕ್ಕೆ ನೊಸಲಿಗೆ ಕಸವ ತೆಗತೆಗದು ಕುಪ್ಪಳಿಸುವರು (ಜ್ಞಾನಬ�o. ೪೨-೩೮).

[ದೇ. ॥ ತೆಲು. ಱೊಪ್ಪು; ಗೊಂಡಿ. ರೇಹ್]

ಱೆಪ್ಪೆ, ರಪ್ಪೆ, ರೆಪ್ಪೆ₁ (ನಾ). ಕಣ್ಣಿನ ಎವೆ, — ಎಮೆ: ಱೆಪ್ಪೆಯಂ ತೆಗದೀಕ್ಷಿಪಂ ಕಣ್ಣಪ್ಪುವಂ ತೊಡವಂ ಬಿಡದೆ ಕಣ್ಣಪ್ಪದೇವನು (ಬಸವ. ೧೪-೫೭); ಲೋಚನಯುಗಳಕ್ಕೆ ಹೂಗಸುತ್ತಿ ಱೆಪ್ಪೆ ಮುಚ್ಚಿದುವೇ (ಮೋಹತ. ೯-೧೪). **ರಪ್ಪೆ**: ರಪ್ಪೆ ಬಡಿಯದೆ ಒಂದೇ ಸಮನೆ ಅವಳನ್ನು ನೋಡಿದಳು (ರೂಢಿ). **ರೆಪ್ಪೆ**₁: ಥಳಥಳನೆ ಹೊಳೆಯುವುದನ್ನು ರೆಪ್ಪೆ ಮುಚ್ಚದೆ ನೋಡಲು ಧೈರ್ಯವಿರಬೇಕು (ಆರ್ಯಾ. ೪೪); ರೋಗಿಗೆ . . . ಮೇಲಿನ ರೆಪ್ಪೆಯನ್ನು ಸ್ವತಃ ಮೇಲಕ್ಕೆತ್ತಲಾಗುವುದಿಲ್ಲ (ಕಲಯೋ. ೨೨); ಕಣ್ಣಿನ ಕಡೆ ಕೈಬೀಸಿದಾಗ ತಕ್ಷಣ ರೆಪ್ಪೆಗಳು ಮುಚ್ಚಿಕೊಳ್ಳುತ್ತವೆ (ಶಿಪ್ರದ. ೭೩). [ದೇ. ॥ ತಮಿ. ರೆಪ್ಪೈ, ರಪ್ಪೈ, ಇರಪ್ಪೈ; ತುಳು. ರೆಪ್ಪೆ, ರಂಪೆ; ತೆಲು. ಱೆಪ್ಪ, ರೆಪ್ಪ; ಕುವಿ. ರೆಪ್ಪು]

ಱೊಂಕಿಡು 'ಱೌಂಕಿಡು' ನೋ.

ಱೊಂಕು 'ಱೌಂಕು' ನೋ.

ಱೊಂಪೆ, ಱೊಬ್ಬೆ₂ (ನಾ). ೧. ಕೆಸರು; ರಾಡಿ: ಕಾಮಸಂಗಮಂ ಬಿಟ್ಟು ಕ್ರೋಧಕಂಬದ ಕೆಚ್ಚ ಮುಱಿದು ಲೋಭಱೊಂಪೆಯ ಕೆದಱಿ ಮೋಹದ ಮುಳ್ಳಿನ ಮನೆಯ ಮೆಟ್ಟಿ (ಗಣಭಾ. ೩೪೦-೭); ಗುಡುಬೆ ಕಾಳವ್ವೆ ಕಪಿಲೇಶ್ವರನನೊರ್ವ ತಾಪಸಿಯಾದಿನಂ ಒಗುಮಿಗೆಯ ಹಾಲ ಮಜ್ಜನಗೆಯ್ಯೆ ಸೂಸಿ ಬೀದಿಗಳಲ್ಲಿ ಪರಿದು ಜೌಗೇಱಿಯಾ ಱೊಂಪೆಯೊಳಗಗಣಿತಮಹಿಮ ಬಸವಯೆಂದು ಬೀಳಲ್ (ಪಾಸೋಪು. ೪-೧೭). **ಱೊಬ್ಬೆ**₂: ೨. ಹೊಲಸು: ಸೋಱುವ ಜೊಲ್ಲೊಸರರ್ಬಿಯ ಮೊದಲಾಗೆ, ಱೊಬ್ಬೆಯ ನೀಟದ ತಳರ್ನಾಲಗೆ ಕೀಲಿಲಾಗೆ . . . ಪೇರೊಡಲ ಗೋರರೂವಿನ ದಾನವಂ . . . ಬೊಬ್ಬಿಱಿದು (ರಾಮಾಶ್ವ. ೧೧೧-೫೯). [<— ತೆಲು. ರೊಂಪ]

ಱೊಜ್ಜು ' ಱಚ್ಚೆ' ನೋ.

ಱೊಟ್ಟಿ (ನಾ). ಒಬ್ಬಾತನ ಹೆಸರು (?): ಮಹಾಸಾಮನ್ತ ಬಿಯದರ ಱೊಟ್ಟಿ ಬಿಯದರ ಮೈಕುತ್ತಿ ಶ್ರೀಮತ್ ಬಜ್ಜ . . . ಆಳುತ್ತಿರೆ (ಸೌಇ. IX, - i,೫೭-೬; ಸು. 922); ಒಡ್ಡವಡಬ್ಲೆಲ ಅಮೃತ ಅಜವರ್ಮ್ಮ ಱೊಟ್ಟಿ ಭುವಣ್ಣ ಅಜವರ್ಮ್ಮ ಱೂರ್ಗ್ಗೆ ಪಡದೊರ್ (ಸೌಇ. IX-i, ೬೪-೧೦; 944).

[IP ಇದು ' ಱುಟ್ಟಿ' ಶಬ್ದಕ್ಕೆ ಸಂಬಂಧಿಸಿರಬಹುದೇ?]

ಱೊಟ್ಟಿಯ್ಯ (ನಾ). ಒಬ್ಬಾತನ ಹೆಸರು: ನುಡಿದನ್ತೆ ಗಣ್ಣ ಕೃತಯುಗಗಳ್ಗಂ ಶ್ರೀಮತ್ ಱೊಟ್ಟಿಯ್ಯಂ (ಸೌಇ. IX-i, ೬೬-೭; ಸು. 956). [ಱೊಟ್ಟಿ + ಅಯ್ಯ₁]

ಱೊಟ್ಟು (ನಾ). ರಭಸ; ಜೋರು; ವೇಗ: 'ಱೊಟ್ಟುವಾಯ್' ಪರಾ.

[< ಒಱಂಟು]

ಱೊಟ್ಟುವಾಯ್ (ಕ್ರಿ). ರಭಸದಿಂದ ಹಾಯು; ಜೋರಿನಿಂದ ಮುನ್ನುಗ್ಗು: ಮುಳಿದಿದಿರಾದುದಾದೊಡಿದಿರಂ ಮುಳಿಸಿಂದಮನನ್ತಪಾಳನಾಗಳೆ . . . ತಱುಂಪುಗು ಮಾಗಳೆ ಱೊಟ್ಟುವಾಯ್ಗುಮಾಗಳೆ ಪಡೆ ಪೊಯ್ಗುಮಾಗಳೆ ಪೊರಳ್ಚುಗುಮಾಗಳೆ ಕೊಂದು ಕೂಗುಗು (ಸೌಇ. XI-ii, ೧೪೫-೭; 1099). [ಱೊಟ್ಟು + ಪಾಯ್₁]

ಱೊಪ್ಪ, ರೊಪ್ಪ, ಱೊಪ್ಪು₂ (ನಾ). ೧. ಪ್ರಾಣಿಗಳು ಇರುವ ನೆಲೆ; ಹಕ್ಕೆ: ಕುಪ್ಪಳಿಸಿ ತುಱುಗಿ ಪರ್ವಿದ ಱೊಪ್ಪವನಿರದಂಡುಗೊಂಡು ಪಂದಿಯ ಬಳಿಯೊಳ್ ನೊಪ್ಪು ನೆಗೆದುರ್ಬ ಪಾಯುತೆ ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ (ಗಿರಿಕ. ೧-೧೦೩); ಹಳ್ಳದೊತ್ತಿನ ಹೊದಱ ಹೊಸಮೆಳೆಯ ಱೊಪ್ಪದಿಂ . . . ಎಕ್ಕಲಂ ಬೀದಿವರಿದುದು ಬೇಂಟೆಕಾಱರೊಳಗೆ (ಹಚಕಾ. ೬-೧೧); ಪೆರ್ಬುಲಿ ಱೊಪ್ಪವನೊತ್ತುಗೊಂಡವಲ್ಲಲ್ಲಿ ಮೃಗಂಗಳುಂ ಮಿಡುಕುಗಟ್ಟಿರುತಿರ್ದುದು ಕೂಡೆ ಬೇಂಟೆಯೊಳ್ (ಸೂಕ್ತಿಸು. ೩-೧೧೭). ೨. ಗಲಭೆ: "ಱೊಪ್ಪಂ = ಗಲಭೆ" (ಶಮದ. ಸ.೪೬ ವ್ಯಕ್ತಿ). **ರೊಪ್ಪ**: ೩. ಕುರಿ, ಹಂದಿ ಮುಂತಾದುವುಗಳನ್ನು ಕೂಡುವ ಜಾಗ; ದೊಡ್ಡಿ: ಬಂದರೆ ನುಡಿಸದೆ ರೊಪ್ಪದ ಹಂದಿಯವೋಲಿಪ್ಪರೆಡೆಗೆ ಪೋಗದೆ ಎನಯಂಗುಂದದೆ ಸಜ್ಜನರೆಡೆಗಾನಂದದಿ ಪೋಗುವದು ತಿಳಿದು ಬುಧಜನರೊಲವಿಂ (ನೀತಿಸಾ. ೧೪೭); ಕುರಿಗಳೆಲ್ಲಾ ರೊಪ್ಪದಲ್ಲಿ, ದನಗಳೆಲ್ಲಾ ತೊಟ್ಟಿಯಲ್ಲಿ, ಜನಗಳೆಲ್ಲಾ ಹಟ್ಟಿಯಲ್ಲಿ ಬಳಲಿ ಕೆಡದರು ತಪ್ಪಗೆ (ಇಂಗೀತ. ೫೨-೧); ಮೇಯುವ ತುರುಗಳು ಬಾಲವನೆತ್ತಿ ರೊಪ್ಪಕೆ ಭರದಲಿ ಹಾರುವುವು (ಕದಕೆ.೬-೪). ೪. "ದನ ಕುರಿಗಳ ಕೊಟ್ಟಿಗೆಯ ಬಳಿ ಕಾವಲ ಜನ ಹಾಕಿಕೊಂಡ ಕೆಲವು ಮನೆಗಳ ಗುಂಪು" (ನಮ್ಮನು. ೨೪೧): ಮೂರುಜನ ನಾಯಕರೂ ಬಿಳಿಚೋಡಿಗೆ ಬಂದು ರೊಪ್ಪ ಹಾಕಿಕೊಂಡು ಮೂರು ತಿಂಗಳು ಇದ್ದರು (ಚಿತ್ರಪಾ. ೪). **ಱೊಪ್ಪು**₂: ೧. 'ಱೊಪ್ಪುಗೊಳ್' ಪರಾ.

ಱೊಪ್ಪಂಗೊಳ್, ಱೊಪ್ಪುಗೊಳ್ (ಕ್ರಿ). ಆಶ್ರಯಹೊಂದು; ನೆಲಸು: ಬಿಱಿಲ ಕುತ್ತದಂತೆ ನಮೆಯಿಸುವುದು ಪಂದಿಯಂತೆ ಱೊಪ್ಪಂಗೊಳ್ಳುದು . . . ಬಗೆವಂದೀ ಶರೀರಂ ಕಷ್ಟಂ (ಧರ್ಮಾಮೃ. ೪-೧೭೫). **ಱೊಪ್ಪುಗೊಳ್**: ಮೂರ್ತಿಗೊಂಡುದು ಸಿರಿ [ಱೊಪ್ಪು] ಗೊಂಡುದು ನಯಂ (ಸೌಇ. XV. ೨೧೭-೧೪; 1205); ಅಟ್ಟಿ ಕುನುಂಗಿ ಪೊಂಗಿ ಮೆಳೆಯಂ ಸಂರಂಭದಿಂ ಱೊಪ್ಪುಗೊಂಡಿರುತಂ ಗರ್ಜಿಸಿ ದಾಡೆಗುಟ್ಟಿದುದು . . . ಸೂಕರಂ (ಪುಷ್ಪಸು. ೫-೭೪). [ಱೊಪ್ಪ + ಕೊಳ್₁]

ಱೊಪ್ಪವಿಡಿ (ಕ್ರಿ).= ಱೊಪ್ಪಂಗೊಳ್: ದರಿಗಡಹು ಕರಿಯಂ ಱೊಪ್ಪವಿಡಿದ ಹಂದಿಗೆ ತಡವಿ ಬಿಡು ನಾಯನು . . . ಎಂಬ ಬೇಡರ ಬೊಬ್ಬೆಯಿಂದಡವಿ ಱೀಳಿಟ್ಟುದು (ಹಚಕಾ.೫-೨೩). [ಱೊಪ್ಪ + ಪಿಡಿ₁]

ಱೊಪ್ಪು₁ (ಕ್ರಿ). ಗುರುಗುಟ್ಟು; ಗರ್ಜಿಸು: ಮಲೆವ ಮರಳ್ಗ ಱೊಪ್ಪುವ ಮಲಂಗುವ ಪೊಂಗುವ ತಳ್ತು ಪಾಯ್ವ . . . ಧರಿತ್ರಿಯಂ ಟೊಣೆವ ಸೂಕರನಾಟಮದೇನಳುಂಬಮೋ (ಶಬಶಂ. ೪-೧೨). [ದೇ. ॥ ತಮಿ. ಉಱುಮ್ಬು, ಉಱುಮು; ಮಲ. ಉಱುಮ್ಬು; ತೆಲು. ಱೊಪ್ಪು, ರೊಪ್ಪು; ಕುಯಿ. ರೂಂಬ]

ಱೊಪ್ಪು₂ 'ಱೊಪ್ಪ' ನೋ.

ಱೊಪ್ಪುಗೊಳ್ 'ಱೊಪ್ಪಂಗೊಳ್' ನೋ.

ಱೊಬ್ಬು, ರಬ್ಬು, ಱುಪ್ಪು, ಱೊಬ್ಬೆ₁ (ನಾ). ೧. ಹಳುಕು; ಚೂರು: ಕರ್ಪೂರ ರಜದೊಳ್ ಪೊರೆದ ಹಿಮದ ಱೊಬ್ಬುಗಳೊಳಮುರದೊಳಿಕ್ಕಿದಾಲಿಗೋಡುವ ಹಾರಂಗಳೊಳಂ . . . ಜಲಮಂಟಪಂಗಳೊಳಮೆಂತುಮಾ ಸಂತಾಪಮಂ ಸಂತ ಯಿಸಲಾಱದೆ (ಕಾದಂಬ. ೬೭೩); ಕಪ್ಪುರದ ಱೊಬ್ಬಿನೊಳುರ್ವಿದ ಜಗತಿಯೊಳಸುಕೆಯ ಪೊಸದಳಿರ ಪಾಸಿನೊಳ್ ಪಸರಿಸಿದ ಕುಸುಮಸಂಚಯದೊಳ್ (ಸುರಾ) ಸುರೇಂದ್ರವಂದ್ಯನನಿರಿಸಿ (ನೇಮಿಪು. ೧೩-೨೦ ವ); ಘನಸಾರದ ಱೊಬ್ಬಿನ ಮೃಗಜನಿತದ ಘಟಿಕೆಗಳ ಪುಷ್ಪದಾಮಂಗಳ ಬಾಯನಮಂ . . . ಇತ್ತು ಸಂಭ್ರಮದಿಂದಂ (ಮಹಾನೇ ೧೪-೬೬). ೨. ಪ್ರಕಾಶ; ಕಾಂತಿ: ಱೊಬ್ಬಿನ ಸೊಡರಿಂ ಚರುವಿಂ ಚಿಬ್ಬಂಬೊಯ್ದಲೆಯಿನಲರಿನಕ್ಷತೆಯಿಂ . . . ಜಿನರನರ್ಚಿಸೆ ನಿಬ್ಬರಮಾಗಿರ್ದ ನರಕಗತಿಯೊಳ್ ಬೀಱಂ (ಜಿನಾಲ. ೩೭); ಱೊಬ್ಬಿನ ಸೊಡರ್ಗುಡಿಯಿಂ ಕಾಳಾಗರುವಿನ ಧೂಪದ ಕರ್ಬೊಗೆಯಿನೆಸೆವ ದಿವ್ಯಶಯನಗೃಹದ ವೈಡೂರ್ಯಪರ್ಯಂಕದೊಳ್ ಪವಡಿಸಿರ್ದು (ಅಜಪು. ೩-೧೧ ವ). ೩. (ಆಲಂ) ಪರಾಕ್ರಮ; ಶೌರ್ಯ: ಱೊಬ್ಬಿನ ದನುಜನ ಬಿಲ್ಲಂ ತಿಱ್ಪಂ ಮುಱಿದಸುವನಂತಕಂಗಿತ್ತು ಸುರರ್ಗುಬ್ಬನೆಸಗಿದನುದಾರಂ (ಕಮಚ. III, ೨೬೮. ಪರ್ಯತ್ನರಮಾಲೆ). **ರಬ್ಬು**: ೪. ಆಡಂಬರ; ವೈಭವ: ರಬ್ಬಿಲಿ ಬಂದನು ನೋಡುವೆನೆ ನುತಲಿ ರವಿ ಶಶಿನೇತ್ರ ಸಮಾಪದಲಿ (ಚದಾವ. ೧೧೦-೭); ಪೋಪಾಕಿನ ರಬ್ಬು ಮನಸ್ಸನ್ನು ಆವರಿಸಿದ್ದ ಮಬ್ಬಿಗೆ ಮದ್ದಾಗಲು ಸಾಧ್ಯವೇ? (ದಾಶೂಪು. ೭೩). **ಱುಪ್ಪು**: ೧. ಸುಳಿದವಾರತಿ ಕರ್ಪೂರದ ಪ್ರಜ್ವಲಿಪ ಮಾಣಿಕದೀಪ್ತಿಗಳ ಪಸ್ಪುಗಳವೆಗೊಳಿನ ಬಳುವೆಗಳ ಅ[ಪಾಠಾ. ಲು]ಪ್ಪುಗಳ ಸೂಸಿಕೆಯ ಕಳಕಳದೊಳೊಪ್ಪಿದುದು (ತೊರಾ. ೬-೫೫-೧೭). **ಱೊಬ್ಬೆ**₁: ೧. "ಱೊಬ್ಬೆ (ಱಣಬ್ಬೆ)– ಹಟಕು" (ಶಮದ. ಪರಿ.೨); "ಱೊಬ್ಬೆಯೆನಲ್ ಹಳುಕು" (ಕಬ್ಬಕ್ಕೆ. ೯೦). ೨. "ಹಳುಕು ಱೊಬ್ಬೆಯೆನಲ್ಕದು ತಾಂ ಪ್ರಕಾಶದೊಳ್" (ಕರ್ನಾನಿ. ೨೨).

ರಬ್ಬುರಬ್ಬು (ದ್ವಿರುಕ್ತಿ): ಅಲ್ಲಿಯ ಮಾತಿನ ಶಕ್ತಿಗಾಗಿ, ಚಿತ್ರಗಳ ರಬ್ಬು ರಬ್ಬು ಬಣ್ಣಕ್ಕಾಗಿ, ಲಯಕ್ಕಾಗಿ ಕವಿತೆಗಳನ್ನೇನೊ ಮೆಚ್ಚುತ್ತೇವೆ (ಸುವರ್ಣ. ೧೯೨).

ಱೊಬ್ಬೆ₁ 'ಱೊಬ್ಬು' ನೋ.

ಱೊಬ್ಬೆ₂ 'ಱೊಂಪೆ' ನೋ.

ಜೋಂಕಿಡು 'ಜೌಂಕಿಡು' ನೋ.

ಜೋಂಕು 'ಜೌಂಕು' ನೋ.

ಜೋಡಗ, ರೋಡಿಗ, ರೋಡೆಗ, ಜೋಡೆಗ (ನಾ). ೧. ಪರಿಹಾಸಕ; ವಿದೂಷಕ: ಕೋಡಗಂಗಳೆ ಜೋಡಗವಾEರಾತೆಗ ಹರಿಣಂಗಳೆ ಹರಿಕಾಱರಾಗೆ ಪರ್ವತಂಗಳೆ ಪ್ರತಿಗಜಂಗಳಾಗುರುಳೆ ನೂಂಕಿಯುಂ ಸುರುಳಿ ನೂಂಕಿಯುಂ . . . ಅಳವಡಿಸಿದ ರಾಜಪುತ್ರನ ಬಲ್ಗಿಂಗಂ ಬಿನ್ನಣಕಂ ಬೆಕ್ಕಸಂಬಟ್ಟು (ಅರ್ಧನೇ. ೫-೧೧೩ ವ); ಪಟಗಬ್ಬಗರ್ನುಡಿದ ಮಾತನೆ ಪಲ್ಲಟವಿಟ್ಟು ಕಟ್ಟುವಂ ಕವಿಗಳ ವೇಷದಿಂದೆ ಕುಣಿದೇಡಿಪ ಜೋಡಗನೆಂದು ನಕ್ಕಪೆಂ (ಅನಂಪು. ೧-೪೬). ೨. ದಡ್ಡ; ಅವಿವೇಕಿ; ಮೂರ್ಖ: ವಿರಹಿಯೆಂಬ ಜೋಡಗಂಗಮಗುರ್ವಿನವಮಗುರ್ವವ್ವನಂಗಮಾತಂಗದ ದೆವಸ ಮಿದೆಂದಪೂರ್ವೋಕ್ತಿಯಂ ನುಡಿವುತ್ತುಂ ಪೋಗಿ (ಶಾಂತಿಪು. ೮-೮೯ ವ); ಕೋಡಗದರ್ದೆ ಮರ್ದಂದೆಲೆ ಜೋಡಗ ನೀನೆನಗೆ ವೇಟ್ಟೆಯಾಗಳಿ ದೆಸೆಗಟ್ಟೋಡಿತ್ತೆನ್ನೆರ್ದಯುಂ ನೀಂ ಮಾಡ್ಕೆ ನಿನ್ನೆರ್ದಯನೆನ್ನ ತಂಗಿಗೆ ಮರ್ದಂ (ಪಂಚತಂ. ೨೮೧-೧೭); ಕೂಡಿರಿಸಿ ಮರ್ದನೆಲ್ಲವ ಬೇಡಿದ ಪದದೊಳಗಮೊಲಿದು ಕುಡು ಹಯಕುಲಕಂ ಜೋಡಗನಕ್ಕಲ್ಲದೊಡಂ ಕಾಡೊಳ್ ತಿರಿಕಿಂಬೆನೆಂಬ ಹೆಡ್ಡನ ತೆಱದಿಂ (ಆಶ್ವಶಾ. ೧೦-೧೦). ೩. ನಾಚಿಕೆಗೆಟ್ಟವನು; ಲಜ್ಜೆಗೇಡಿ: ಬಡಿದೊಡೆ ನೀರೇಱುವನೊದದೊಡೆ ನಲಿವಂ ಪೊಯ್ದೊಡೊಂದು ರೂಪಪ್ಪಂ ನಾಣ್ಗೆಡೆ ನುಡಿಯೆ ರಾಗಿಯಕ್ಕುಂ ಕಡುಜೋಡಗನಬ್ಪೆ ಗಂಡರೊಳ್ ಕವಿಕಾಮಂ (ಶೃಂಗಾರ.೩-೧೭). **ರೋಡಿಗ:** ೩. ಹೇಡಿಗಳು ಬರಿಹೇವಮಾರಿಗಳು ಬರಿಸಾದ ರೋಡಿ [ಪಾಶಾಂ. ಡು]ಗರು ನಿಮ್ಮ ಸೇನೆಯೊಳಿರ್ದ ಭಟರು (ತುರಂಗ. ೭೩-೧೩). **ರೋಡೆಗ:** ೪. ವಿಕಾರವಾದ ದೇಹವುಳ್ಳವನು: ಪುರುಷಂ ವಣ್ ಮುದುಗಣ್ಣನಂ ಶಿಶುತೆಯೇಱುಂಜವ್ವನಂ ಪಾಪಿ ಸಚ್ಚರಿತಾತ್ಮಂ ಧನಿ ದೀನ ರೋಡಗ ಶುಭಾಂಗಂ ಬಿತ್ತ್ರಗಂ ಪಾಮರಂ (ಸಂಸಪ. ೪೪-೮೧). **ಜೋಡೆಗ:** ೪. ''ಜೋಡೆಗಂ ವಿಕೃತದೇಹಿಯೊಳಂ''(ಕರ್ನಾಸಾ.೧೩); ಜನಕರಾಜಂ. . .ವೇಷಿಕೆಯ ಜೋಡೆಗರ ಪಾಪಾತ್ಮರ ಬಾಲ್ಯನೆಯೆನಿಪ್ಪ ಯಮಲೋಕಮಂ ಮುಟ್ಟಯಿಸಿ ಬರ್ಪುದುಂ (ರಾಮಾಶ್ವ. ೧೦೫-೨೬). [< ಜೋಡು + - ಗ್$_2$]

ಜೋಡಗತನ (ನಾ). ಪರಿಹಾಸ್ಯ: 'ಜೋಡಗತನಂಗೆಯ್' ಪರಾ.

[ಜೋಡಗ + - ತನ]

ಜೋಡಗತನಂಗೆಯ್ (ಕ್ರಿ). ಪರಿಹಾಸ್ಯ ಮಾಡು; ಅಪಹಾಸ್ಯ ಮಾಡು: ಏಗಡ ಭಾವಾ ನೀನಿದೇಂ ನಿಂದಿಲ್ಲಿ ಜೋಡಗತನಂಗೆಯ್ವಾಡುತ್ತಿರ್ಪೆ ಅತ್ತ ನಿನ್ನ ತಂಗಿಗವಸ್ಥೆ ಪಿರಿದು (ಪಂಚತಂ. ೨೮೧-೧೧). [ಜೋಡಗತನ + ಕೆಯ್$_1$]

ಜೋಡಗವಂತ (ನಾ). ನಾಚಿಕೆಯಿಲ್ಲದವನು; ಲಜ್ಜೆಗೇಡಿ: ಜೋಡಗವಂತನಂತೆ ಕಂಡ ಕಂದವರಲ್ಲಿ ಹಿಂದಿನೊಳಗೆ ಹೊಕ್ಕು ಭಂಡುಗೆಲೆಯಲೇತಕ್ಕೋ (ಮೋಮಾ. ೪. ೬೧೭-೬೪೬); ಕಾಡಿ ಬೇಡಿ ಉಂಬರೆಲ್ಲರೂ ಜಗದ ಜೋಡಗವಂತರು (ಗುಪ್ರಮಂ. ೧೩).

[ಜೋಡಗ + - ವಂತ]

ಜೋಡಾಡಿಸು, ರೋಡಾಡಿಸು (ಕ್ರಿ). ಅಪಹಾಸ್ಯಮಾಡು; ಹೀಯಾಳಿಸು: ಸಿಂಹಮಂ ನಾಯ್ ಕೆಣಕಿತೆಂಬ ಶರಭನನೆರಲೆ ಜೋಡಾಡಿಸಿತೆಂಬ ಮಾತಿನಂತೆ ಬಟ್ಟೆವೋಪ ತಿರಿಕನೊರ್ವಂ . . . ಗಂಡಿಂಗಾನೆ ಪಿರಿಯನೆಂದಿರ್ದವಂ (ಧರ್ಮಾಮೃ. ೧೩-೧೨೨); ವನಜಭವಲೋಕಮಂ ಕಂಡವಲ್ಲಿಯ ಪುಣ್ಯಜನರೆಮ್ಮನೆತ್ತಣ ವಿಕಾರಿಗಳ್ಗೀವೆಂದು ನಗುತೆ ಜೋಡಾಡಿಸಿದರು (ಚೈಮಿಭಾ. ೩೨-೪೨). **ರೋಡಾಡಿಸು:** ನರನಿಂದಂ ಘನಶೌರ್ಯನಂಗಭವನಂ ರೋಡಾಡಿಪಂ ರೂಪಿನಿಂ ಪಿರಿಯಾಳ್ . . . ಕಲಿಗಜ್ಜನ್ (ಎಕ. XII. ಕುಮಾರೂ.೯-೩೪; 1151); ಕರಿಪತಿ ಕಪಿಲೇಶ್ವರನನ್ನು ರೋಡಾಡಿಸಿ, ತಾರಾಡಿಸಿ, ಬಂದ ದಾರಿಗೆ ಸುಂಕವಿಲ್ಲದ ಹಾಗೆ ಹಿಮ್ಮೆಟ್ಟುವಂತೆ ರಾಮ ಕಾದಾಡಿದನು (ನಂಜುಂಡ. ೪೫). [ಜೋಡಾಡು + - ಇಸು$_5$]

ಜೋಡಾಡು, ರೋಡಾಡು (ಕ್ರಿ). ಹೀಯಾಳಿಸು; ಅಪಹಾಸ್ಯಮಾಡು: ''ಜೋಡಾಡು -ವಿಕೃತಾಂಗಾಪಹಸನೇ (ಮುಖವಿಕಾರ ಮೊದಲಾದುವುಗಳಿಂದ ಹಿಯ್ಯಾಳಿಸು)'' (ಶಮಭಾ); ನಿನ್ನೊಡನೆನಗೇಗಟ್ಟಿಪುದಿದೆಂದು ಜೋಡಾಡಲ್ ಕಿಮ್ಮನೆ ನುಡಿದೊಡೆನ್ನ ಕಣ್ಗಂ ಮನಕ್ಕೆವಂದಿರ್ದ ನಿನ್ನೊಳೆನಗೆರಡುಂಟೇ (ಪಂಪಭಾ. ೮-೬೮); ಒಂದು ಸಿಂಹಂ . . . ನಿಮ್ಮಡಿಯನನೇಕಪ್ರಕಾರದಿಂ ಜೋಡಾಡಿ ಬಯ್ಯುತೆನ್ನಂ ಬರಲೀಯದೆ ಕಾಡುತ್ತಿರ್ದ ಕಾರಣದಿನಿನ್ನೆಗಂ ತಡೆದೆಂ (ಪಂಚತಂ. ೯೦-೯); ಎಳಲತೆಯಾ ಜೋಡಾಡುವ ನಳಿತೋಳ್ (ಗಿರಿಕ.೯-೧೦೪); ಜೋಡಾಡಿ ಹೋದಿರಿ ನಿನ್ನೆ ನೀವಿಂದೇನ ಮಾಡಬೇಕೆಂದೆನಿಸಿದಿರಿ ನೋಡ ಬಂದಿರೊ ಕಾಡ ಬಂದಿರೊ ಹೇಳಿರಿ (ಭರಚ. ೪೨-೧೫). **ರೋಡಾಡು:** ಧಿಕ್ಕರಿಸಿ ಕೆಣಕಿ ರೋಡಾಡಿ ಹಗರಣವಡಿಸುತ್ತಿದ್ದುದನ್ನು ಶ್ರೀಮನ್ತರು ಕಂಡು (ಚಿಟ್ಟಿಪ. ೧೪-೧೫); ಮಾತೆಲ್ಲಮಂ ಬರೆದು ಅರದ ಪೊಸನೇಣ್ಗಳಿಗೆ ಪೊಸೆಯಾಯದವರಿರವ ರೋಡಾಡುತಿಹುದು (ಕಾಲೂರ. ೪೮-೧೪).

[ಜೋಡು + ಆಡು$_1$]

ಜೋಡಿಸು, ರೋಡಿಸು (ಕ್ರಿ).= ಜೋಡಾಡು: ಅಂತುವೂರುವಾಯ್ದುಂ ಕುಂಬಕಂಬಾಯ್ದುಮೇಡಿಸಿಯುಂ ಜೋಡಿಸಿಯುಂ ಎಬೆಸಿಯುಂ ಬಂದಾಡಿಯುಂ ಮಿಡುಕಾಡಿಯುಂ ಪಾಱುಗೆಡೆವ ಕಾಳ ಮಹಾಕಾಳರ ಗೆಡವೊಕ್ಕಿರೆ (ಶಾಂತಿಪು. ೯-೮೦ ವ); ರಾಜ್ಯಾರ್ಧಮನಾಂ ಬೇಡಿಯವರಲ್ಲಿಗಟ್ಟಿದೊಡೇಡಿಸಿ ಜೋಡಿಸನೆ ಪವನನಂದನನೆನ್ನಂ (ಗದಾಯು. ೫-೫೦); ಓಡಿಸಿದಾತನೀತನಿದಿರಾದ ವಿರೋಧಿಗಳಂ ವಿಲಾಸದಿಂ ಜೋಡಿಸಿದಾತನೀತನಸಮಾಯುಧನಂ (ಪಂರಾಮಾ. ೩-೬೧); ಮೇಳದೊಡನಾಡಿಗಳೆನ್ನ ಮರುಳ್ತನಕ್ಕೆ ಜೋಡಿಸಿ ನಗುವಂತುಟಾದುದು ಮನಃಪ್ರಿಯ ನೀಂ ಮುನಿದಿರ್ದ ದೂಸಱಿಂ (ರಸರ. ೨-೭೭). **ರೋಡಿಸು:** ಎಸವೆನ್ನುನ್ನತಿ ನಿನ್ನುದುಂಟೆ ಪುದಿದೆನ್ನೀ ಸೌಧಶುಂಭತ್ಪ್ರಭಾಪ್ರಸರಶ್ರೀ ನಿನಗುಂಟೆ ಬೆಲ್ಲು ನಿನಗೆನ್ನಂತುಂಟೆ ಪೇಳೆಂದು ರೋಡಿಸಿ ರೌಪ್ಯಾಚಲಕೂಟಮಂ . . .ಅಗಡುಂ ನಗುವವೋಲಿರ್ಕ್ಕುಂ ತದೀಶಾಲಯಮ್ (ಎಸಾ. XII. ೨೮೨-೧೯೧; 1077); ಇಂದ್ರುವರೆಗೀ ತ್ರಿಶೂಲಮಂ ವ್ಯರ್ಥಂಗೈದ ಸಮರ್ಥರಂ ಕಂಡರಿಯೆನಾಂ . . . ಗೆಲ್ದುದು ಕುಬೇರನಂ ಯಮನನೋಡಿಸಿತಮರರಾಜನಂ ರೋಡಿಸಿತು ಬರ್ದಿಲನಾಡಿನ ಪಸಲೆಯಲಿ ಮೂರು ಸೂಳಿಟ್ಟ (ಶ್ರೀರಾಮಾ. ೪೦೬-೧೬೨).

[ಜೋಡು + - ಇಸು$_5$]

ಜೋಡು (ಕ್ರಿ). ಅಪಹಾಸ್ಯಮಾಡು; ಅವಹೇಳನಮಾಡು: 'ಜೋಡಾಡು' ಪರಾ. [< ಪ್ರಾ. ರೋಡ]

ಜೋಡೆಗ 'ಜೋಡಗ' ನೋ.

ಜೌಂಕಿಡು, ಜೌಂಕಿಡು, ಜೋಂಕಿಡು (ಕ್ರಿ). ಗುಟುರು ಹಾಕು; ಡುರುಕಿಡು: ಕೋಡಂ ಜಡಿದು ತನುವ ಝಾಡಿಸಿ ಹಿಂಡ ಬಿಟ್ಟು ಜೌಂ[ಶಾಂ. ಜೌಯ]ಕಿಟ್ಟು ಹರಿಯಿತ್ತು ಕಾನನದೊಳು (ಹಚಕಾ. ೫-೪೦). **ಜೌಂಕಿಡು:** ಅದಿರದಿದಿರಾಂತು ಜೌಂಕಿಟ್ಟೊದಱುತ್ತುಂ ಬರ್ವ ಕಾಡ ಕೋಣನ ಗೋಣಂ ಮದಯುತನೊರ್ವಂ ತಱಿದಿಕ್ಕಿದಂ (ಶಬಿಶಂ. ೩-೫೬). **ಜೋಂಕಿಡು:** ದಿಟ್ಟಿಸುವ ಕಣ್ ನಟ್ಟು ಕವಿ ಮರಳ್ದ ಮುಸುಡು . . . ಕೋಡಂ ಜಡಿದು ತನುವ ಝಾಡಿಸಿ ಹಿಂಡ ಬಿಟ್ಟು ಜೋಂಕಿಟ್ಟು ಹರಿಯಿತ್ತು ಕಾನನದೊಳು (ಅಸಪು.೩-೨೮); (ಸೋಮಚ. ಪರಿ.೨೧೪ ನೋ).

[ಜೌಂಕು + ಇಡು$_1$]

ಜೌಂಕು, ರಂಕೆ, ರೊಂಕೆ, ರೋಂಕು, ಜೊಂಕು, ಜೋಂಕು (ನಾ). ೧. ಗೂಳಿ, ಕೋಣ ಮೊದಲಾದ ಪ್ರಾಣಿಗಳ ಗುಟುರು,—ಡುರುಕು: 'ಜೌಂಕಿಡು' ಪರಾ. **ರಂಕೆ :** (೬). **ರೊಂಕೆ :** (ಪ್ರಭಾ). **ರೋಂಕು:** ೨. ಆರ್ಭಟ; ಗರ್ಜನೆ: 'ರೋಂಕಿಸು' ಪರಾ. **ಜೊಂಕು:** ೧ 'ಜೊಂಕಿಡು' ಪರಾ. **ಜೋಂಕು:** ೧. 'ಜೋಂಕಿಡು' ಪರಾ. [ದೇ. ॥ ತೆಲು. ಉಂಕೆ, ರಂಕೆ]

✱